"Sadhvi"

Newspaper

Contd.

Roll No: 5

"Sadhvi"

Newspaper

Contd.

Roll No: 5

"Sadhvi"

Newspaper

Contd.

Roll No: 5

"Sadhvi"

Newspaper

Contd.

Roll No: 5

"Sadhvi"

Newspaper

Contd.

Roll No: 5

"Sadhvi"

Newspaper

Contd.

Roll No: 5

"Sadhvi"
Newspaper
Contd.
Roll No: 5

KARNATAKA

STATE ARCHIVES

BANGALORE

KARNATAKA

STATE ARCHIVES

BANGALORE

KARNATAKA

STATE ARCHIVES

BANGALORE

ಫೋನ್ : 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೪] ಭಾನುವಾರ ೨೧—೭—೪೬ [ಸಂಚಿಕೆ ೨೬೪

ಜುಲೈ ೧ರಿಂದ ಶೇ|| ೫೦ ತುಟ್ಟಿಭತ್ಯ ಹೆಚ್ಚಿತು

ಸರ್ ಮೊದಲಿಯಾರರ ನೇಮಕದ ಬಗ್ಗೆ ವಿರೋಧ

ಎಂ. ಎಸ್. ಜೋಯಿಸರ ಹೇಳಿಕೆ

ಪ್ರಜಾಪ್ರತಿನಿಧಿಸಭೆಯ ಮತ್ತು ರಾಜಧಾನಿಯ ಪುರಸಭೆಯ ಸದಸ್ಯರಾದ ಶ್ರೀ ಎಂ. ಎಸ್. ಜೋಯಿಸರು ಸರ್. ಎ. ರಾಮಸ್ವಾಮಿ ಮೊದಲಿಯಾರರ ನೇಮಕದ ಬಗ್ಗೆ ಈರೀತಿ ಹೇಳಿಕೆ ಇತ್ತಿದ್ದಾರೆ—

ಮೈಸೂರು ಅಧಿಕಾರಕ್ಕೆ ಸರ್ ಮೊದಲಿಯಾರರು ಬರುವುದು ಖಂಡಿತವಾದಂತಾಗಿದೆ. ಆದರೆ ದಿವಾನರಾಗಿ ಬರುವರೋ ಅಥವಾ ಸಲಹೆಗಾರರಾಗಿ ಬರುವರೋ ಗೊತ್ತಿಲ್ಲ. ತಮ್ಮ ಸೂಚನೆಯಂತೆ ಈ ನೇಮಕ ನಡೆದಿಲ್ಲವಾದ್ದರಿಂದ ಸರ್ಕಾರದವರು ಈ ಬಗ್ಗೆ ಕಾಟಕ್ಕೆ ದಂಡಿದ್ದಾರೆ ನನಗೆ ತಿಳಿದಿರುವ ಮಟ್ಟಿಗೆ ಶ್ರೀಮನ್ಮಹಾರಾಜರಿಗೆ ಈ ಬಗ್ಗೆ ಈಗಿನ ಮೈಸೂರು ಅಧಿಕಾರಿಗಳ್ಯಾರೂ ಸಲಹೆ ಕೊಟ್ಟಿಲ್ಲ. ಮೈಸೂರಿನಲ್ಲಿ ಪ್ರಜಾಪ್ರತಿನಿಧಿಗಳಿಗೂ, ಸರ್ಕಾರಕ್ಕೂ ಇರುವ ತೀವ್ರವಾದ ಭಿನ್ನಾಭಿಪ್ರಾಯ ಮತ್ತು ಪ್ರಕೃತ ರಾಜಕೀಯ ಪರಿಸ್ಥಿತಿ ಇವುಗಳನ್ನು ಗಮನಿಸಿ, ಭಾರತ ರಾಜಕೀಯದ ಮುನ್ನೋಟ ಸಾಗುತ್ತಿರುವ ಈ ಸಮಯದಲ್ಲಿ ಈ ನೇಮಕವು ದೆಹಲಿಯಿಂದ ಸೂಚಿಸಲ್ಪಟ್ಟಿದೆ ಇಂ... ದ್ದರೆ ಅವರು ಕಮೀಷನರನ್ನು ನೇಮಿಸುತ್ತಿದ್ದರು ಆದರೆ ಈಗ ೨೦ ನೇ ಶತಮಾನವಾದ್ದರಿಂದ ಈರೀತಿ ಸೂಚನೆಯ ನೇಮಕ ಸಾಗಿದೆ ಸರ್ ಮೊದಲಿಯಾರರಿಗೆ ಮಾಹೆಯಾನ ೬೫೦೦ ರೂ ಸಂಭಾವನೆ ಅವರು ಆಗಸ್ಟ್ ಮೊದಲನೇ ವಾರದಲ್ಲಿ ಅಧಿಕಾರ ವಹಿಸಿಕೊಳ್ಳುವರು ಅವರ ಅಧಿಕಾರಾವಧಿಯಲ್ಲಿ ಮೈಸೂರು ಮತ್ತು ಬೆಂಗಳೂರು ಎರಡು ಕಡೆಯೂ ಕಛೇರಿಯನ್ನು ತೆರೆಯುವರು. ಒಟ್ಟಿನಲ್ಲಿ ಈ ನೇಮಕವು ಮೈಸೂರು ಸಂಸ್ಥಾನದಲ್ಲಿ ಪ್ರಜೆಗಳಿಗೂ ಸರ್ಕಾರಕ್ಕೂ ಉಂಟಾಗಿರುವ ಭಿನ್ನತೆಯ ಕಂದಕವು ಭಿನ್ನಾಭಿಪ್ರಾಯಗಳೂ, ಬಿಕ್ಕಟ್ಟುಗಳೂ ಅವಿಶ್ವಾಸಗಳೂ ಏನೇ ಇದ್ದಾಗ್ಯೂ ಸರ್ ಮೊದಲಿಯಾರರನ್ನು ಸರ್ಕಾರಿ ನೌಕರರಾಗಲೀ, ಪ್ರಜೆಗಳಾಗಲೀ ಸ್ವಾಗತಿಸುವುದಿಲ್ಲ.

ಹರ್ಡೀಕರ್-ದಿವಾಕರ್‌ರವರ ಆಗಮನ

ಮೈಸೂರು ೨೧

ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿ ಮಾಜಿ ಅಧ್ಯಕ್ಷರಾದ ಶ್ರೀ ಆರ್ ಆರ್ ದಿವಾಕರ್‌ರವರೂ, ಹುಬ್ಬಳಿ ಗೆಜೆಟ್ ಪತ್ರಿಕಾ ಸಂಪಾದಕರೂ, ಹಿಂದೂಸ್ಥಾನೀ ಸೇವಾದಳದ ಸಂಸ್ಥಾಪಕರೂ ಆದ ಡಾ|| ಹಾರ್ಡೀಕರ್‌ರವರೂ ಈ ದಿನ ಬೆಳಗ್ಗೆ ಹುಬ್ಬಳ್ಳಿಯಿಂದ ರಾಜಧಾನಿಗೆ ಆಗಮಿಸಿದರು. ಶ್ರೀಯವರುಗಳನ್ನು ಶ್ರೀ ಹಗ... ರಂಗಯ್ಯನವರೂ, ವಿದ್ಯಾರ್ಥಿ ಕಾಂಗ್ರೆಸ್ ಮತ್ತು ಇತರ ಸಂಘದ ಪ್ರತಿನಿಧಿಗಳೂ ಸ್ಟೇಷನ್ನಿನಲ್ಲಿ ಎದುರುಗೊಂಡರು ಶ್ರೀ ದಿವಾಕರ್‌ರವರು ಮುಂದಿನ ತಿಂಗಳಲ್ಲಿ ದಾವಣಗೆರೆಯಲ್ಲಿ ನಡೆಯಲಿರುವ ಅಖಿಲ ಕರ್ನಾಟಕ ಪ್ರಜಾಪ್ರತಿನಿಧಿಗಳ ಸಮ್ಮೇಳನದ ವಿಚಾರದಲ್ಲಿ ಪೂರ್ವಭಾವಿ ವ್ಯವಸ್ಥೆಗಾಗಿ ಇಲ್ಲಿನ ಪ್ರಮುಖರುಗಳೊಂದಿಗೆ ಮಾತುಕತೆ ನಡೆಸುವರು. ನಾಳೆ ಬೆಳಗ್ಗೆ ೧೦ ಗಂಟೆಗೆ ರಾಜಧಾನಿಯ ಪತ್ರಿಕೋದ್ಯೋಗಿಗಳ ಸಂಘಕ್ಕೆ ಭೇಟಿ ಕೊಡುವರು.

ಹೊಟ್ಟೆಯೇ ಇಲ್ಲದ ಮನುಷ್ಯರು

ಜಾನ್ಸನ್ ನಗರದಲ್ಲಿ ೮೦ ಮಂದಿ ಹೊಟ್ಟೆಯೇ ಇಲ್ಲದೆ ಇದ್ದಾರೆಂದು ಡಾ|| ಫ್ರಾಂಕ್ ಲಾಹರವರು ವೈದ್ಯ ಸಮ್ಮೇಳನವೊಂದರಲ್ಲಿ ತಿಳಿಸಿದ್ದಾರೆ. ಅನ್ನ ಕೋಶವನ್ನು ಕೆಡು ಬಿಡುವುದರಿಂದ, ಅಜೀರ್ಣ ರೋಗ... ಜೀವಮಾನದ ಬೆಳವಣಿಗೆ ನಿಂತು ಹೋಗುವುದೆಂದು ಅವರು ತಿಳಿಸಿದ್ದಾರೆ ಅನ್ನ ಕೋಶಕ್ಕೆ ಬದಲಾಗಿ ಕರುಳುಗಳಲ್ಲಿಂದು ಮಾಡಿ ಉಪಯೋಗಿಸಲಾಗುತ್ತಿದೆ. ಈ ರೀತಿ ಇರುವ ಒಬ್ಬಾತನು ಕಳೆದ ವರ್ಷಗಳಿಂದ ಜೀವಿಸಿದ್ದಾನೆಂದೂ ಅವರು ಹೇಳಿದರು

ರಾಜ್ಯಾಂಗ ಸಭೆಯಲ್ಲಿ ಸಿಖ್ಖರು ಭಾಗ ವಹಿಸುವರೇ?

ಸಿಖ್ ಜನಾಂಗಕ್ಕೆ ಬ್ರಿಟಿಷ್ ಸರ್ಕಾರ ಮಾಡಿರುವ ಅನ್ಯಾಯವನ್ನು ತೊಡೆದು ಹಾಕಲು ಕಾಂಗ್ರೆಸ್ ಪ್ರಯತ್ನ ಮಾಡಿ, ಬ್ರಿಟಿಷ್ ಸರ್ಕಾರದ ಪ್ರತಿನಿಧಿಗಳೊಡನೆ ಇದು ತನ್ನ ತೀವ್ರ ವಿರೋಧವನ್ನು ಸೂಚಿಸುವುದಾದರೆ ಆಗ್ಗೆ ಸಿಖ್ಖರು ರಾಜ್ಯಾಂಗ ರಚನಾ ಸಭೆಯಲ್ಲಿ ಭಾಗ ವಹಿಸಲು ಅವಕಾಶ ಒದಗ ಬಹುದೆಂದು ಸರ್ದಾರ್... ಗಿಲ್‌ರವರು ತಿಳಿಸಿದ್ದಾರೆ.

ಸೂತ್ರ ಯಜ್ಞ

ಗಾಂಧಿ ಸೇವಾ ಸಂಘದ ಆಶ್ರಯದಲ್ಲಿ ೧೭ನೆ ತಾರೀಖಿನಿಂದ ಸೂತ್ರ ಯಜ್ಞವು ಆರಂಭವಾಗಿದೆ. ರಾಜಧಾನಿಯ ಮಾಧವರಾಯ... ಸೂತ್ರ ಯಜ್ಞದ ಸಹಾಯಾರ್ಥವಾಗಿ 'ಪ್ರೇಮ ಲೀಲಾ' ಎಂಬ ನಾಟಕವನ್ನು ಕಳೆದ ೧೪ ನೇ ತಾ|| ಪ್ರದರ್ಶಿಸಿ ಅದರಿಂದ ಬಂದ ಉತ್ಪತ್ತಿಯಲ್ಲಿ ... ರೂ. ೨೦೦ ರೂ ಗಳನ್ನು ಗಾಂಧಿ ಸೇವಾ ಸಂಘಕ್ಕೆ ಒಪ್ಪಿಸಿದರು. ಇದಕ್ಕೆ ಸಂಘದವರಿಗೂ, ಮಾಧವರಾಯ ಮಂಡಳಿಯವರಿಗೂ ಸಂಘದ ಕಾರ್ಯದರ್ಶಿಗಳು ವಂದನೆ ಸಲ್ಲಿಸಿದ್ದಾರೆ

ಅಂಜಿದ ಮನುಷ್ಯರ

ಮೈಸೂರು ೨೧

ಅಂಜಿ ಮನುಷ್ಯರ ಆರಂಭವಾಗಿ ಇಂದಿಗೆ ೬ ದಿನಗಳಾದುವು ಈ ದಿನದಲ್ಲಿ ಶ್ರೀಮತಿ ಜನಾಬಿ ಎಂಬ ಮುಸ್ಲಿಂ ಮಹಿಳೆಯ ... ನಿಧಿಗೆ ೧೦ ರೂಗಳನ್ನಿತ್ತರು ... ನಾಳೆ ಬೆಳಗ್ಗೆ ... ಹೋಗಿದರು

ನಾನ್ ಗೆಜೆಟೆಡ್ ಅಧಿಕಾರಿಗಳ ತುಟ್ಟಿಭತ್ಯ ಹೆಚ್ಚಿತು

ಮೈಸೂರು ೨೧

೧೯೪೬ನೇ ಜುಲೈ ೧ ರಿಂದ ಸಂಸ್ಥಾನದ ನಾನ್ ಗೆಜೆಟೆಡ್ ಅಧಿಕಾರಿಗಳ ತುಟ್ಟಿ ಮತ್ತು ಯುದ್ಧ ಭತ್ಯವನ್ನು ಶೇಕಡ ೫೦ರಷ್ಟು ಹೆಚ್ಚಿಸಿರುವುದಾಗಿ ಸರ್ಕಾರೀ ಆಜ್ಞೆ ಆಗಿದೆ

ಹೋಟೆಲು ಕೆಲಸಗಾರರ ಸಂಘ

ನಾಳೆ ರಾತ್ರಿ ೮|| ಗಂಟೆಗೆ ಮೇಲ್ಕಂಡ ಸಂಘದ ಕಾರ್ಯಾಲಯದಲ್ಲಿ ... ಶ್ರೀ ರಂಗನಾಥ ದಿವಾಕರ್‌... ಭಾಷಣ ಮಾಡುವರು ಕೆಲಸಗಾರರೆಲ್ಲರೂ ದಯಮಾಡಿಸಬೇಕಾಗಿ ಕಾರ್ಯದರ್ಶಿಗಳು ಕೋರಿದ್ದಾರೆ

ಕರ್ನಾಟಕ ಸಂಘ

ಶ್ರೀ ರಂಗನಾಥ ದಿವಾಕರ್ ಮತ್ತು ಡಾ|| ಹರ್ಡೀಕರ್‌ರವರು ಸಹಕಾರ ಭವನದಲ್ಲಿ ನಾಳೆ ಬೆಳಗ್ಗೆ ೮-೩೦ಕ್ಕೆ ಮೇಲ್ಕಂಡ ಸಂಘದ ಆಶ್ರಯದಲ್ಲಿ ರಾಜ್ಯಾಂಗ ರಚನಾ ಸಭೆ ಮತ್ತು ಕರ್ನಾಟಕ ಪ್ರಾಂತ ರಚನೆ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು. ಸಾರ್ವಜನಿಕರಿಗೂ ಅವಕಾಶವುಂಟು

ಶಿವಗಂಗೆ ಹರಿಜನರಿಗೆ ದೇವಾಲಯಪ್ರವೇಶಾಧಿಕಾರ

ಶಿವಗಂಗೆಯಲ್ಲಿರುವ ದೇವಸ್ಥಾನಗಳಿಗೆ ಹರಿಜನರು ಪ್ರವೇಶಿಸುವ ಅಧಿಕಾರವನ್ನು ಕೊಡುವುದಾಗಿ ಅಲ್ಲಿನ ರಾಜಾಸಾಹೇಬರು ಘೋಷಿಸಿದ್ದಾರೆ ಕಳೆದ ಸಲ ಮಧುರೆಗೆ ಮಹಾತ್ಮಾ ಗಾಂಧೀಜಿಯವರು ಭೇಟಿ ಇತ್ತಿದ್ದಾಗ, ಅವರು ಈ ರಾಜರ ಅತಿಥಿಗಳಾಗಿ ತಂಗಿದ್ದರು

ಪಂಜಾಬಿನ ಲೀಗಿನ ಪರಾಭವ

ಪಂಜಾಬ್ ಶಾಸನ ಸಭೆಯಲ್ಲಿ ವಿರೋಧ ಪಕ್ಷದವರು (ಲೀಗ್) ಮಂತ್ರಿ ಪಕ್ಷದವರನ್ನು ಸೋಲಿಸುವುದಾಗಿ ಸನಾಬು ಹಾಕಿದ್ದರು. ಶಾಸನ ಸಭೆ ನಿನ್ನೆ ಸೇರಿ ರಾಜ್ಯಾಂಗ ರಚನಾ ಸಭೆಗೆ ಉಮೇದುವಾರರನ್ನು ಚುನಾಯಿಸಿದ ನಂತರ ಸಭೆಯನ್ನು ಮುಂದ ಹಾಕಬೇಕೆಂದು ಮಂತ್ರಿ ಮಂಡಲದವರು ಸೂಚಿಸಿದ ಸಲಹೆ ೮೭ ೮೦ ಓಟುಗಳಿಂದ ಅಂಗೀಕಾರವಾಗಿ ಲೀಗು ಪರಾಭವ ಹೊಂದಿತು.

* ಅಸ್ಸಾಂ, ... , ಬೆಲೂಚಿಸ್ಥಾನ, ಮದ್ರಾಸ್ ಪ್ರಾಂತ್ಯ, ಮಧ್ಯಪ್ರಾಂತವೂ ಬಿಹಾರ ... ಗಳಲ್ಲಿ ... ಸ್ಪರ್ಧೆ...

ಶ್ರೀ ಸಾಧ್ವೀಚತುರ್ಥವರ್ಷೋತ್ಸವ ಶುಭಾಶಂಸನ ಪದ್ಯಮಾಲಿಕಾ

ಶ್ರೀಮಾನ್ ಯಾದವ ವಂಶಮೌಕ್ತಿಕ
ಮಣಿ ರ್ಜಯತ್ಯಸ್ತದಾಕಾರಯೋ ।
ಧೀರೋದಾತ್ತ ಗುಣೋಮಹೋನ್ನತ
ಯುತ ಶ್ರೀ ಕೃಷ್ಣರಾಜಾನ್ವಿತಃ ।
ಭೂಗೋವಿಪ್ರಗವಿಪ್ರಸೇವನರತೋ
ದುರ್ದಾಂತ ... ಸ್ವರ್ಯಂ ।
ಯೋ ನಿತ್ಯಂ ಜಯತು ಪ್ರಭುಸ್ಸಭಗವಾನ್
ಸಾಧ್ವೀ ಸದಃ ಪಾತ್ವಿದಮ್ ‖ ೧ ‖
ನಾನಾದೇಶ ನಿವಾಸಿ ದೂರಜನತಾ
ವೃತ್ತಾಂತ ಸಂದರ್ಶನೈಃ ।
ನೇತ್ರದ್ವಂದ್ವಯುತಾ ಜನಾನ್ ಶತಗುಣಾಂ
ಚಕ್ಷು ಸ್ಮೃತ ... ।
... ದೃಶಃ ... ‖ ೨ ‖
... ‖ ೩ ‖
... ಜಯತು ಶ್ರೀಮತ್ಕೃಷ್ಣಭೂ
ಜಯತು ಜಯತು ಸಾಧ್ವೀಪತ್ರಿಕಾ
ರಂಗನಾಥ ... ।
ಜಯತು ಜಯತು ಮಾನ್ಯಶ್ರೀ
ಜಯಾ... ।
ಜಯತು ಜಯತು ಭವ್ಯಾ
... ‖ ೫ ‖
ಇತಿ ರಾಮಾನುಜಸುಧಿಯಾ ರಚಿತಾ
ಶುಭಶಂಸಿ ಪದ್ಯ ಮಾಲೀಯಂ ।
... ‖ ೬ ‖
‖ ಶುಭಮಸ್ತು ‖

ಪತ್ರಿಕೋದ್ಯೋಗಿಗಳ ಸಂಘ

ಮೈಸೂರು ೨೧

ಡಾ|| ಹರ್ಡೀಕರ್‌ರವರೂ, ಶ್ರೀ ಆರ್ ಆರ್ ದಿವಾಕರ್‌ರವರ ನಾಳೆ ಬೆಳಗ್ಗೆ ೧೦ ಗಂಟೆಗೆ ಪತ್ರಿಕೋದ್ಯೋಗಿಗಳ ಸಂಘಕ್ಕೆ ಭೇಟಿ ಕೊಡುವರು ಸಂಘದ ಸದಸ್ಯರೆಲ್ಲ ತಪ್ಪದೆ ದಯಮಾಡಿಸಬೇಕೆಂದು ಕಾರ್ಯದರ್ಶಿಗಳು ಕೋರಿದ್ದಾರೆ.

● ... ಮೊಹಲ್ಲಾದಲ್ಲಿರುವ ... ಸಂಘದಾಶ್ರಯದಲ್ಲಿ ಶ್ರೀ ಸಾ. ಸು. ... ಮತ್ತು ರಂಗನಾಥ ... ದಿವಾಕರ್‌ರವರೂ ನಾಳೆ ... ಗಂಟೆಗೆ ... ಸಭೆಯಲ್ಲಿ ಭಾಷಣ ಮಾಡುವರು ಎಲ್ಲರಿಗೂ ಸ್ವಾಗತ ಉಂಟು

* ... ದಲ್ಲಿರುವ ಶ್ರೀ ... ಅವರ ... ದಲ್ಲಿ ನಾಳೆ ಬೆಳಗ್ಗೆ ... ಗಂಟೆಗೆ ... ಸಭೆಯ ... ಬೇಕಾಗಿ ಕೋರಿದೆ.

ಫೋನ್: 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೪] ಭಾನುವಾರ ೩೧—೭—೪೭ [ಸಂಚಿಕೆ ೨೬೪.

ಜುಲೈ ೧ರಿಂದ ಶೇ॥ ೫೦ ತುಟ್ಟಿಭತ್ಯ ಹೆಚ್ಚಿತು

ಸರ್ ಮೊದಲಿಯಾರರ ನೇಮಕದ ಬಗ್ಗೆ ವಿರೋಧ

ಎಂ. ಎನ್. ಜೋಯಿಸರ ಹೇಳಿಕೆ

ಪ್ರಜಾಪ್ರತಿನಿಧಿಸಭೆಯ ಮತ್ತು ರಾಜ ಪ್ರತಿನಿಧಿ ಪರಿಷತ್ತಿನ ಸದಸ್ಯರಾದ ಶ್ರೀ ಎಂ. ಎನ್. ಜೋಯಿಸರು ಸರ್. ಎ. ರಾಮಸ್ವಾಮಿ ಮೊದಲಿಯಾರರ ನೇಮಕದ ಬಗ್ಗೆ ಕೆಳಗಿನ ಹೇಳಿಕೆ ಇತ್ತಿದ್ದಾರೆ—

ಮೈಸೂರು ಅಧಿಕಾರಕ್ಕೆ ಸರ್ ಮೊದಲಿಯಾರರು ಬರುವುದು ಖಂಡಿತವಾದಂತಾಗಿದೆ. ಆದರೆ ದಿವಾನರಾಗಿ ಬರುವರೋ ಅಥವಾ ಸಲಹೆಗಾರರಾಗಿ ಬರುವರೋ ಗೊತ್ತಿಲ್ಲ. ತಮ್ಮ ಸೂಚನೆಯಂತೆ ಈ ನೇಮಕ ನಡೆದಿಲ್ಲವಾದ್ದರಿಂದ ಸರ್ಕಾರದವರು ಈ ಬಗ್ಗೆ ಕಾಟಸ್ಥರಾಗಿದ್ದಾರೆ. ನನಗೆ ತಿಳಿದಿರುವ ಮಟ್ಟಿಗೆ ಶ್ರೀಮನ್ಮಹಾರಾಜರಿಗೆ ಈ ಬಗ್ಗೆ ಈಗಿನ ಮೈಸೂರು ಅಧಿಕಾರಿಗಳ್ಯಾರೂ ಸಲಹೆ ಕೊಟ್ಟಿಲ್ಲ. ಮೈಸೂರಿನಲ್ಲಿ ಪ್ರಜಾಪ್ರತಿನಿಧಿಗಳಿಗೂ, ಸರ್ಕಾರಕ್ಕೂ ಇರುವ ತೀವ್ರವಾದ ಭಿನ್ನಾಭಿಪ್ರಾಯ ಮತ್ತು ಪ್ರಕೃತ ರಾಜಕೀಯ ಪರಿಸ್ಥಿತಿ ಇವುಗಳನ್ನು ಗಮನಿಸಿ, ಭಾರತ ರಾಜಕೀಯದ ಮುನ್ನೋಟ ಸಾಗುತ್ತಿರುವ ಈ ಸಮಯದಲ್ಲಿ ಈ ನೇಮಕವು ದೆಹಲಿಯಿಂದ ಸೂಚಿಸಲ್ಪಟ್ಟಿದೆ. ಇ... ನನ್ನ ದೃಷ್ಟಿ ಅವರು ಕಮೀಷನರನ್ನು ನೇಮಿಸುತ್ತಿದ್ದರು. ಆದರೆ ಈಗ ೨೦ನೇ ಶತಮಾನವಾದ್ದರಿಂದ ಈರೀತಿ ಸೂಚನೆಯು ನೇಮಕ ಸ್ವಾಗತ. ಸರ್ ಮೊದಲಿಯಾರರಿಗೆ ಮಾಹೆಯಾನ ೬,೦೦೦ ರೂ ಸಂಭಾವನೆ. ಅವರು ಆಗಸ್ಟ್ ಮೊದಲನೇ ವಾರದಲ್ಲಿ ಅಧಿಕಾರ ವಹಿಸಿಕೊಳ್ಳುವರು. ಅವರ ಅಧಿಕಾರಾವಧಿಯಲ್ಲಿ ಮೈಸೂರು ಮತ್ತು ಬೆಂಗಳೂರು ಎರಡು ಕಡೆಯೂ ಕಛೇರಿಯನ್ನು ತೆರೆಯುವರು. ಒಟ್ಟಿನಲ್ಲಿ ಈ ನೇಮಕವು ಮೈಸೂರು ಸಂಸ್ಥಾನದಲ್ಲಿ ಪ್ರಜೆಗಳಿಗೂ ಸರ್ಕಾರಕ್ಕೂ ಉಂಟಾಗಿರುವ ಭಿನ್ನತೆಯ ಪರಿಣಾಮ. ಭಿನ್ನಾಭಿಪ್ರಾಯಗಳನ್ನೂ, ಕಷ್ಟಗಳನ್ನೂ ಅವಿಶ್ವಾಸಗಳೂ ಏನೇ ಇದ್ದಾಗ್ಯೂ ಸರ್ ಮೊದಲಿಯಾರರನ್ನು ಸರಕಾರಿ ನೌಕರರಾಗಲೀ, ಪ್ರಜೆಗಳಾಗಲೀ ಸ್ವಾಗತಿಸುವುದಿಲ್ಲ.

ಹರ್ಡೀಕರ್-ದಿವಾಕರ್‌ರವರ ಆಗಮನ

ಮೈಸೂರು ೩೧

ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಆರ್. ಆರ್. ದಿವಾಕರ್‌ರವರೂ, ಹುಬ್ಬಳ್ಳಿ ಗೆಜೆಟ್ ಪತ್ರಿಕಾ ಸಂಪಾದಕರೂ, ಹಿಂದೂಸ್ಥಾನೀ ಸೇವಾದಳದ ಸಂಸ್ಥಾಪಕರೂ ಆದ ಡಾ॥ ಹಾರ್ಡಿಕರ್‌ರವರೂ ಈ ದಿನ ಬೆಳಗ್ಗೆ ಹುಬ್ಬಳ್ಳಿಯಿಂದ ರಾಜಧಾನಿಗೆ ಆಗಮಿಸಿದರು. ಶ್ರೀಯುತರುಗಳನ್ನು ಶ್ರೀ ಆರ್. ರಂಗಯ್ಯನವರೂ, ವಿದ್ಯಾರ್ಥಿ ಕಾಂಗ್ರೆಸ್‌ನವರೂ ಕೆಲವು ಸಂಘದ ಪ್ರತಿನಿಧಿಗಳೂ ಸ್ಟೇಷನ್ನಿನಲ್ಲಿ ಎದುರುಗೊಂಡರು. ಶ್ರೀ ದಿವಾಕರ್‌ರವರು ಮುಂದಿನ ತಿಂಗಳಲ್ಲಿ ದಾವಣಗೆರೆಯಲ್ಲಿ ನಡೆಯಲಿರುವ ಅಖಿಲ ಕರ್ನಾಟಕ ಪ್ರಜಾಪ್ರತಿನಿಧಿಗಳ ಸಮ್ಮೇಳನದ ವಿಚಾರದಲ್ಲಿ ಪೂರ್ವಭಾವಿ ವ್ಯವಸ್ಥೆಗಾಗಿ ಇಲ್ಲಿನ ಪ್ರಮುಖರುಗಳೊಂದಿಗೆ ಮಾತು ಕತೆ ನಡೆಸುವರು. ನಾಳೆ ಬೆಳಗ್ಗೆ ೧೧ ಗಂಟೆಗೆ ರಾಜಧಾನಿಯ ಪತ್ರಿಕೋದ್ಯೋಗಿಗಳ ಸಂಘಕ್ಕೆ ಭೇಟಿ ಕೊಡುವರು.

ಹೊಟ್ಟೆಯೇ ಇಲ್ಲದ ಮನುಷ್ಯರು

ಬೋಸ್ಟನ್ ನಗರದಲ್ಲಿ ೪೦ ಮಂದಿ ಹೊಟ್ಟೆಯೇ ಇಲ್ಲದೆ ಇದ್ದಾರೆಂದು ಡಾ॥ ಫ್ರಾಂಕ್ ಲಾಹೆರವರು ವೈದ್ಯ ಸಮ್ಮೇಳನವೊಂದರಲ್ಲಿ ತಿಳಿಸಿದ್ದಾರೆ. ಅನ್ನ ಕೋಶವನ್ನು ಕಿತ್ತು ಬಿಡುವುದರಿಂದ, ಅಜೀರ್ಣ ರೋಗಗಳು, ಜೀವನಾಶಕ ಬೆಳವಣಿಗೆ ಗಳು ಹೋಗುವುದೆಂದು ಅವರು ತಿಳಿಸಿದ್ದಾರೆ. ಅನ್ನ ಕೋಶಕ್ಕೆ ಬದಲಾಗಿ ಕರುಳುಗಳಲ್ಲಿಂದು ಮಾಡಿ ಉಪಯೋಗಿಸಲಾಗುತ್ತಿದೆ. ಈ ರೀತಿ ಇರುವ ಒಬ್ಬಾತನು ಕಳೆದ ವರ್ಷಗಳಿಂದ ಜೀವಿಸಿದ್ದಾನೆಂದೂ ಅವರು ಹೇಳಿದರು.

ರಾಜ್ಯಾಂಗ ಸಭೆಯಲ್ಲಿ ಸಿಖ್ಖರು ಭಾಗ ವಹಿಸುವರೇ?

ಸಿಖ್ ಜನಾಂಗಕ್ಕೆ ಬ್ರಿಟಿಷ್ ಸರ್ಕಾರ ಮಾಡುವ ಅನ್ಯಾಯವನ್ನು ತಿಳಿಸಿದ. ಅಕಾಲಿಯು ಕಾಂಗ್ರೆಸ್ ಪ್ರಮುಖ ಮತ್ತು ಬ್ರಿಟಿಷ್ ಸರ್ಕಾರದ ಪ್ರತಿನಿಧಿಗಳೊಡನೆ ಇರುವ ತಮ್ಮ ತೀವ್ರ ವಿರೋಧವನ್ನು ಸೂಚಿಸುವುದಾದ ಆಗ್ಗೆ ಸಿಖ್ಖರು ರಾಜ್ಯಾಂಗ ರಚನಾ ಸಭೆಯಲ್ಲಿ ಭಾಗ ವಹಿಸಲು ಅವಕಾಶ ಒದಗ ಬೇಕಾಗಿ ಸರ್ವಾಧಿಕಾರಿಗಳಿರುವರು ತಿಳಿಸಿದ್ದಾರೆ.

ಸೂತ್ರ ಯಜ್ಞ

ಗಾಂಧಿ ಸೇವಾ ಸಂಘದ ಆಶ್ರಯದಲ್ಲಿ ಈ ದಿನ ಬೆಳಗ್ಗಿನಿಂದ ಸೂತ್ರ ಯಜ್ಞ ಆರಂಭವಾಯಿತು. ರಾಜಧಾನಿಯ ಮಾಧವಶಕಲಾ ಮಂದಿರದವರು ಸೂತ್ರ ಯಜ್ಞದ ಪ್ರಯೋಜನ ಮಾಡಿ ಇಂದು ಮಾನಾಟಿ ಕವನ್ನು ಕಳೆದ ೧೪ನೇ ತಾ॥ ಪ್ರದರ್ಶಿಸಿ ಅದರಿಂದ ಬಂದ ಉತ್ಪತ್ತಿಯಲ್ಲಿ ಒಟ್ಟು ರೂ. ೨೦೦ ರೂ ಗಳನ್ನು ಗಾಂಧಿ ಸೇವಾ ಸಂಘಕ್ಕೆ ಒಪ್ಪಿಸಿದರು. ಇದಕ್ಕೆ ಸೇವಾ ದಳದವರೂ, ಮಾಧವಶಕಲಾ ಮಂದಿರದವರ ಸಂಘದ ಕಾರ್ಯದರ್ಶಿಗಳು ವಂದನೆ ಸಲ್ಲಿಸಿದ್ದಾರೆ.

ಅಂಚೆ ಮುಷ್ಕರ

ಮೈಸೂರು ೩೧

ಅಂಚೆ ಮುಷ್ಕರ ಆರಂಭವಾಗಿ ಇಂದಿಗೆ ೬ ದಿನಗಳಾದುವು. ಈ ದಿನವೂ ಶ್ರೀಮತಿ ಜನಾಬಾಯಿ ಎಂಬ ಮುಖ್ಯ ಮಹಿಳೆಯು ಪರಿಹಾರ ನಿಧಿಗೆ ೧೧ ರೂಗಳನ್ನಿತ್ತರು. ಅಂಚೆ ನೌಕರರು ನಿನ್ನೆ ಬೆಳಗ್ಗೆ ಚಾಮುಂಡಿ ಬೆಟ್ಟಕ್ಕೆ ಹೋಗಿದ್ದರು.

ನಾನ್, ಗೆಜೆಟೆಡ್ ಅಧಿಕಾರಿಗಳ ತುಟ್ಟಿಭತ್ಯ ಹೆಚ್ಚಿತು

ಮೈಸೂರು ೩೧

೧೯೪೭ನೇ ಜುಲೈ ೧ ರಿಂದ ಸಂಸ್ಥಾನದ ನಾನ್‌ಗೆಜೆಟೆಡ್ ಅಧಿಕಾರಿಗಳ ತುಟ್ಟಿ ಮತ್ತು ಯುದ್ಧ ಭತ್ಯವನ್ನು ಶೇಕಡ ೫೦ರಷ್ಟು ಹೆಚ್ಚಿಸಿರುವುದಾಗಿ ಸರ್ಕಾರೀ ಆಜ್ಞೆ ಆಗಿದೆ.

ಹೋಟೆಲು ಕೆಲಸಗಾರರ ಸಂಘ

ನಾಳೆ ಸಂಜೆ ೫॥ ಗಂಟೆಗೆ ಮೈಲ್ಯಾಂಡ ರಂಗಮಂದಿರದಲ್ಲಿ ಡಾ॥ ಹಾರ್ಡಿಕರ್, ಶ್ರೀ ರಂಗನಾಥ ದಿವಾಕರ್ ಇವರುಗಳು ಭಾಷಣ ಮಾಡುವರು. ಕೆಲಸಗಾರರೆಲ್ಲರೂ ದಯಮಾಡಿಸಬೇಕಾಗಿ ಕಾರ್ಯದರ್ಶಿಗಳು ಕೋರಿದ್ದಾರೆ.

ಕರ್ನಾಟಕ ಸಂಘ

ಶ್ರೀ ರಂಗನಾಥ ದಿವಾಕರ್ ಮತ್ತು ಡಾ॥ ಹರ್ಡೀಕರ್‌ರವರು ಸಹಕಾರ ಭವನದಲ್ಲಿ ನಾಳೆ ಬೆಳಗ್ಗೆ ೮-೩೦ಕ್ಕೆ ಮೈಲ್ಯಾಂಡ ಸಂಘದಾಶ್ರಯದಲ್ಲಿ ರಾಜ್ಯಾಂಗ ರಚನಾ ಸಭೆ ಮತ್ತು ಕರ್ನಾಟಕ ಪ್ರಾಂತ ರಚನೆ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು. ಸಾರ್ವಜನಿಕರಿಗೂ ಪ್ರವೇಶವುಂಟು.

ಶಿವಗಂಗೆ ಹರಿಜನರಿಗೆ ದೇವಾಲಯ ಪ್ರವೇಶಾಧಿಕಾರ

ಶಿವಗಂಗೆಯಲ್ಲಿರುವ ದೇವಸ್ಥಾನಗಳಿಗೆ ಹರಿಜನರು ಪ್ರವೇಶಿಸುವ ಅಧಿಕಾರವನ್ನು ಕೊಡುವುದಾಗಿ ಅಲ್ಲಿನ ರಾಜಾಸಾಹೇಬರು ಘೋಷಿಸಿದ್ದಾರೆ. ಕಳೆದ ಸಲ ಮಧುರೆಗೆ ಮಹಾತ್ಮಾ ಗಾಂಧೀಜಿಯವರು ಭೇಟಿ ಇತ್ತಿದ್ದಾಗ, ಇವರು ಈ ರೀತಿ ಭರವಸೆ ನೀಡಿದ್ದರು.

ಪಂಜಾಬಿನ ಲೀಗಿನ ಪರಾಭವ

ಪಂಜಾಬ್ ಶಾಸನ ಸಭೆಯಲ್ಲಿ ವಿರೋಧ ಪಕ್ಷದವರು (ಲೀಗ್) ಮಂತ್ರಿ ಮಂಡಲದ ಮೇಲೆ ಅವಿಶ್ವಾಸ ಸೂಚಿಸುವುದಾಗಿ ಸೂಚನೆ ಕೊಟ್ಟಿದ್ದರು. ಶಾಸನ ಸಭೆ ನಿನ್ನೆ ಸೇರಿ ರಾಜ್ಯಾಂಗ ರಚನಾ ಸಭೆಗೆ ಉಮೇದುವಾರರನ್ನು ಚುನಾಯಿಸಿದ ನಂತರ ಸಭೆಯನ್ನು ಮುಂದೆ ಹಾಕಬೇಕೆಂದು ಮಂತ್ರಿಮಂಡಲದವರು ಸೂಚಿಸಿದ ಸಲಹೆ ೮೬-೮೦ ಓಟುಗಳಿಂದ ಅಂಗೀಕಾರವಾಗಿ ಲೀಗು ಪರಾಭವ ಹೊಂದಿತು.

* ಅಸ್ಸಾಂ, ಸಿಂಧ್, ಬಲೂಚಿಸ್ಥಾನ, ವಾಯುವ್ಯಪ್ರಾಂತ್ಯ, ಮಧ್ಯಪ್ರಾಂತ್ಯ, ಬಿಹಾರ ಮತ್ತು ಒರಿಸ್ಸಾಗಳಲ್ಲಿ ಅಂಚೆಮುಷ್ಕರವನ್ನು...

ಶ್ರೀ ಸಾಧ್ವೀ ಚತುರ್ಥ ವರ್ಷೋತ್ಸವ ಶುಭಾಶಂಸನ ಪದ್ಯಮಾಲಿಕಾ

ಶ್ರೀನಾಥ ಯಾದವ ವಂಶಪುಷ್ಕರ
ಮಣಿ ವರ್ಗಶ್ರುತದಾತಾಕರಯೋ।
ಧೀರೋದಾತ್ತ ಗುಣೋನ್ನತೋನ್ನತ
ಯುತ ಶ್ರೀರಸಿಕ್ತಭಾಮಾನ್ವಿತಃ।
ಭೂ ಗೋಪಿತ್ವರವಿಸ್ತ್ರಸೇವನರ್ಪಿತೇ
ದುರ್ದಾನ್ತ ಶಾಸಾ ಸ್ವಲಂ।
ಯೋಗ್ಯೈಸ್ತ್ವತ್ವ ಜಯಪ್ರಭೃತ ಭಗವಾನ್
ಸಾಧ್ವೀ ಸದಾಪಾತ್ವಿದಂ ॥ ೧ ॥
ನಾನಾದೇಶ ನಿವಾಸಿ ದೂರಜನತಾ
ವೃತ್ತಾನ್ತ ಸಂದರ್ಶನೈಃ।
ನೇತ್ರಶ್ರೋತ್ರಯುತಾರ್ಜನಾರ್ ಶಶಗುಣಂ
ಚಕ್ರೇನ್ನಶೀಕಾರಯಾ।
ಸನ್ನೀತ್ಯಾದ್ಯುಪದೇಶವಾಗ್ಭಿಕರ್ಷಮ್ಸ್ವರ
ಧ್ವಕಃ ಪ್ರಾಣ್ವತಿಪ್ರಸ್ನೇನಯಸೂರ್ಗ
ವಿನಶಕಾಂಕ್ಷಾನ್ನಪ್ನಕ್ರೇಯಸೇ ॥ ೨ ॥
ಸತ್ಸ್ವತ್ತ ಕುಪತ್ರಕಾಂಚನಸನ್ನಿಸ್ಪತ್ರಿ
ರತ್ನ ಪ್ರಾಕ್ಸಯಶ್ಚ ಪ್ರಾವೇ ಶಟಕ್ಷನ್ನ
ನಾನಾ ಸುಗ್ರಹೀತಾಖ್ಯಸ್ವಸ್ತಾಂ ವಲ್ಲಭಃ।
ಕ್ಲಿಗಾರ್ ಕನ್ನವಿಧಾತ್ವಕೋಃವಿಲಸಿತ್ವಸ್ಸಾ
ಧ್ವಸ್ತಾಸಿತೋಶ್ರೈರ್ಜನಾ ಸ್ವಾರಾಜ್ಯಾ
ದಿಸುಬೋಧಿತಾವ್ಯತನುತಸ್ವದ್ಧ
ನೃಪದಸ್ವೋತ್ತಕೇ ॥ ೩ ॥
ಜನ್ಮಾಥ ಗತಿವಯನ್ನತೋಽವಧನಮ್ನ
ಕ್ರಿಷ್ನಸ್ವೈತಲ್ಲನನ್ನಾಕ್ಷಾಕ್ಷರಾಮಾಬದ್ಧ
ಮಾಶ್ರಸಾದುತ ಏನೇಸ್ವದಾಸ್ವ ಕುಪೋ
ಕ್ರನೇ। ವಸೇಸ್ವಸ್ನವಿವಾದ ಬುಧಸದ
ಸ್ವತ್ರಿಧ್ವಗಾನೈಕಾ
ಸಾಗ್ರಸಿ ಡಾಲಕಸಾ
ಸಾರ್ವೇಕರಂಜ್ಯಸ್ವದೀ ॥ ೪ ॥
ಜಯ ಜಯತು ಶ್ರೀಮಂತ್ರಸ್ಸನಾಧು
ಮಾರ್ಗಪ್ರಭೂಮೀ।
ಜಯತು ಜಯತು ಸಾಧ್ವೀ ಪತ್ರಿಕಾ
ರಂಗನಾಥ್ಯಾ।
ಜಯತು ಜಯತು ಪೂರ್ವಸ್ಸ್ಥೀ
ಜಯಾಸ್ತ್ಯೇನ್ಯವಾಲ।
ಜಯತು ಜಯತು ಭವ್ಯೋ
ನೀತಿಸಕ್ತಪ್ರಲಪ್ತಃ ॥ ೫ ॥
ಇತಿ ರಾಮಾನುಜಸುಧಿಯಾ ರಚಿತಾ
ಶುಭಶಂಸಿ ಪದ್ಯಮಾಲೇಯಂ।
ಸಾಧ್ವ್ಯಾಸ್ತಸ್ವಪ್ರಚಯಾಶರ್ಯಾ
ಪಯುಸಿತುಸ್ತ್ರಕೇಜಯಃತಾತ್ ॥ ೬ ॥
॥ ಶುಭಮಸ್ತು ॥

ಪತ್ರಿಕೋದ್ಯೋಗಿಗಳ ಸಂಘ

ಮೈಸೂರು ೩೧

ಡಾ॥ ಹರ್ಡೀಕರ್‌ರವರೂ, ಶ್ರೀ ಆರ್. ಆರ್. ದಿವಾಕರ್‌ರವರೂ ನಾಳೆ ಬೆಳಗ್ಗೆ ೧೧ ಗಂಟೆಗೆ ಪತ್ರಿಕೋದ್ಯೋಗಿಗಳ ಸಂಘಕ್ಕೆ ಭೇಟಿ ಕೊಡುವರು. ಸಂಘದ ಸದಸ್ಯರೆಲ್ಲಾ ತಪ್ಪದೆ ಹಾಜರಾಗಬೇಕೆಂದು ಕಾರ್ಯದರ್ಶಿಗಳು ಕೋರಿದ್ದಾರೆ.

ವಾಣೀವಿಲಾಸ ಮೊಹಲ್ಲಾದಲ್ಲಿರುವ ಮೈಲ್ಯಾಂಡ ಪಥಪ್ರಾಯದಲ್ಲಿ ಶ್ರೀ ನಾ. ಸು. ಹಾರ್ಡೀಕರ್‌ರವರೂ ಮತ್ತು ರಂಗನಾಥ ದಿವಾಕರ್‌ರವರೂ ನಾಳೆ ಮಧ್ಯಾಹ್ನ ೪ ಗಂಟೆಗೆ ಬಹಿರಂಗ ಸಭೆಯಲ್ಲಿ ಭಾಷಣ ಮಾಡುವರು. ಸಾರ್ವಜನಿಕರ ಸ್ವಾಗತವುಂಟು.

* ವಾಣೀವಿಲಾಸ ರಸ್ತೆಯಲ್ಲಿರುವ ಶ್ರೀ ನಂಜನಗೂಡ ಅರಸನವರ ಸ್ಥಳದಲ್ಲಿ ನಾಳೆ ಬೆಳಗ್ಗೆ ೯ ಗಂಟೆಗೆ ಹಿಂದೂಸ್ಥಾನ ಸೇವಾದಳದ ಸಭೆಯೊಂದು ಜರುಗುವುದು. ಸೇವಾದಳದ ಸ್ವಯಂಸೇವಕರೆಲ್ಲಾ ಹಾಜರಾಗಬೇಕಾಗಿ ಕೋರಿದೆ.

ಸಾಧ್ವಿ

ಜೂಲೈ ೧೧ ೧೯೪೬ ಭಾನುವಾರ

ನಮ್ಮ ಕೃತಜ್ಞತೆ

'ಸಾಧ್ವಿ' ದಿನ ಪತ್ರಿಕೆಯು ಹನ್ನೆರಡು ವರ್ಷಗಳಾದುವು. ಇಂದಿನಿಂದ ಹದಿಮೂರನೇ ವರ್ಷದಲ್ಲಿ ಅಡಿಯಿಡುತ್ತಿದೆ. ನಮ್ಮ ಕೆಲಸದಲ್ಲಿ ನೆರವು ನೀಡಿದ ಹಿತೈಷಿಗಳೆಲ್ಲರಿಗೂ ನಮ್ಮ ಕೃತಜ್ಞತಾಪೂರ್ವಕವಾದ ಧನ್ಯವಾದಗಳನ್ನು ಸಲ್ಲಿಸುತ್ತೇವೆ. ಮುಂದೆಯೂ ಮಹಾಜನರ ಸಹಕಾರ ಪ್ರೋತ್ಸಾಹಗಳನ್ನು ಬೇಡುತ್ತೇವೆ.

ಇಪ್ಪತ್ತೈದು ವರ್ಷಗಳ ಹಿಂದೆ ಸ್ವರ್ಗಸ್ಥ ಶ್ರೀ ತಾತಯ್ಯನವರು 'ಸಾಧ್ವಿ'ಯನ್ನು ಹುಟ್ಟಿಸಿದರು. ಪತ್ರಿಕೋದ್ಯಮದ ಗಂಧವೇ ತಿಳಿಯದ ಕಾಲದಲ್ಲಿ ತಾತಯ್ಯನವರು ಸಾಧ್ವಿ, ಸಂಪದಭ್ಯುದಯ, ಮೈಸೂರು ಪೇಟ್ರಿಯಟ್, ವೆಲ್ತ್ ಆಫ್ ಮೈಸೂರು, ಪೌರ ಸಾಮಾಜಿಕ ಪತ್ರಿಕೆ 'ಮುಂತಾದ ಹಲವಾರು ಪತ್ರಿಕೆಗಳನ್ನು ಏಕ ಕಾಲದಲ್ಲಿ ನಡೆಸುತ್ತಿದ್ದರು. ಇದಲ್ಲದೆ ಬೆಂಗಳೂರಿನ, ಮೈಸೂರು ಸ್ಟಾರ್ ಎಂಬ ಪತ್ರಿಕೆಗಳೊಡನೆಯೂ ನಿಕಟ ಸಂಪರ್ಕವನ್ನಿಟ್ಟುಕೊಂಡಿದ್ದರು. ಜನ ಜೀವನದಲ್ಲಿ ಸಂಘ ಸಂಸ್ಥೆ ಸಭೆಗಳಿಗಿರುವಂತೆಯೇ ಪತ್ರಿಕೋದ್ಯಮಕ್ಕೂ ಒಂದು ಮಹತ್ವವಾದ ಸ್ಥಾನವಿರುವುದೆಂಬುದನ್ನು ತೋರಿಸಿಕೊಟ್ಟರು.

ಮೈಸೂರಿನ ಸಾರ್ವಜನಿಕ ಇತಿಹಾಸದಲ್ಲಿ ತಾತಯ್ಯನವರ ಪಾತ್ರವು ಅತ್ಯಂತ ಗಣನೀಯವಾದುದು. ಅವರ ಪ್ರಭಾವವು ಸಮಾಜದ ಸಕಲ ಭಾಗಗಳಲ್ಲಿಯೂ ಪ್ರಕಾಶಿಸುತ್ತಿತ್ತು. ಪ್ರಜಾ ಜಾಗೃತಿಯೇ ಪ್ರಗತಿಯ ಆಧಾರವೆಂದರಿತು ಜ್ಞಾನ ಪ್ರಸಾರದ ಹಲವಾರು ಸಂಸ್ಥೆಗಳನ್ನು ಅವರ ಸ್ಥಾಪಿಸಿದರು. ಅವರಿಂದ ಸ್ಥಾಪಿತವಾದ ಸಂಸ್ಥೆಗಳೂ ಪತ್ರಿಕೆಗಳೂ ಜ್ಞಾನ ಸಾಧನೆಗೆ ಸಹಾಯಕವಾಗುವ ಜಾಗರೂಕ ಸಂಸ್ಥೆಗಳೆಂದು ಅವರು ಹೇಳುತ್ತಿದ್ದರು. ಅವರ ಆಶೋತ್ತರಗಳ ಸೇವೆಗೆ ಅಲ್ಪ ಕಾಣಿಕೆಯನ್ನು ಸಲ್ಲಿಸುವುದಾಗಿ ಇಂದು 'ಸಾಧ್ವಿ'ಯು ಹೇಳಬಯಸುತ್ತಿದೆ.

ಪತ್ರಿಕೋದ್ಯಮದ ಘನತೆ ಗೌರವಗಳು ಎಷ್ಟು ಉನ್ನತವಾದುವೋ ಅದರ ಕಷ್ಟ ನಿಷ್ಠುರಗಳೂ ಅಷ್ಟೇ ಮಹತ್ತರವಾಗಿವೆ. ಪ್ರಜಾತಂತ್ರ್ಯದಲ್ಲಿ ತೋರುವ ದೇಶಗಳಲ್ಲಿಂತೂ ಅವುಗಳ ಸ್ಥಿತಿಯು ಶೋಚನೀಯ. ರಾಜ್ಯಾಂಗ, ಶಾಸನಾಂಗಗಳೊಡನೆ ಸಮಾನ ಸ್ಥಾನವನ್ನು ಹೊಂದಿ ಸ್ವತಂತ್ರ ದೇಶಗಳಲ್ಲಿ ರಾಜ್ಯದ ನಾಲ್ಕನೇ ಅಂಗವೆಂದು ಅದು ಹೆಸರುಗೊಂಡಿದೆ. ಇಡೀ ಭಾರತದಲ್ಲಿ ರಾಜ್ಯಾಂಗವು ಅದರ ಮೇಲೆ ಧಾಳಿ ನಡೆಸಿ ಸಮಾಜದ ವಿಕಾಸಕ್ಕೆ ಹಾನಿ ತರುತ್ತಿದೆ.

ಸ್ವಾತಂತ್ರ್ಯ ಸಾಧನೆಗಾಗಿ ಸಾರ್ವಜನಿಕರು ದಬ್ಬಾಳಿಕೆಯನ್ನು ಪ್ರತಿಭಟಿಸುವುದನ್ನು ಗುರ್ತಿಸುವಂತೆಯೇ ನಮ್ಮ ಸ್ವಾತಂತ್ರ್ಯ ಸಾಧನೆಗಾಗಿ ಪತ್ರಿಕೆಗಳ ಸಹಕಾರ ಪ್ರತಿಭಟನೆಗಳನ್ನು ಪ್ರತಿಭಟಿಸುವಂತೆ ಕಾಣುತ್ತಿವೆ. ಇಂತಹ ಸಮೋದ್ಯೋಗಿಗಳೆಲ್ಲರಿಗೂ ನಮ್ಮ ಅಭಿನಂದನೆಗಳು. ನೆರವು ನೀಡಿದವರೆಲ್ಲರಿಗೂ ವಂದನೆಗಳು. ದೇಶ ಬಾಂಧವರೆಲ್ಲರಿಗೂ ಶುಭಾಶಯಗಳು.

ಅಖಿಲ ಕರ್ಣಾಟಕ ಪ್ರಜಾ ಪ್ರತಿನಿಧಿಗಳ ಸಮ್ಮೇಳನ

ದಾವಣಗೆರೆಯಲ್ಲಿ ಆಗಸ್ಟ್ ವರೆಗೆ ನಡೆದ ಪ್ರತ್ಯೇಕ ಕರ್ಣಾಟಕ ಪ್ರಾಂತ ನಿರ್ಮಾಣದ ವಿಷಯವನ್ನು ಪರಿಶೀಲಿಸಲು ಅಖಿಲ ಕರ್ಣಾಟಕ ಪ್ರಜಾ ಪ್ರತಿನಿಧಿಗಳ ಸಮ್ಮೇಳನವು ನಡೆಯುವುದೆಂದು ಗೊತ್ತಾಗಿದೆ. ಇದರ ಅಧ್ಯಕ್ಷತೆಯನ್ನು ವಹಿಸಲು ಬಾಬು ರಾಜೇಂದ್ರ ಪ್ರಸಾದರಿಗೆ ಆಹ್ವಾನವನ್ನು ಕಳಿಸಲಾಗಿದೆ.

ಭಾರಿ ಸ್ವತ್ತು ಬಿಕರಿಗಿದೆ

ಮೈಸೂರು ಸಿಟಿ ದೊಡ್ಡ ಪೇಟೆ ಸರ್ಕಲ್ ಹತ್ತಿರ ಸಂದಿಯಲ್ಲಿ ದರ್ವಾಜ ಉಳ್ಳ ಭಾರಿ ಸ್ವತ್ತು. ವಿಶಾಲವಾದ ಜಾಗ, ಮನೆ, ಭಾವಿ, ನಲ್ಲಿ, ದೀಪ, ಸಹ ಉಳ್ಳ ಸ್ವತ್ತು.

ವಿವರಗಳಿಗೆ ಕೂಡಲೆ ವಿಚಾರಿಸಿ —

ಆರ್. ಗುಂಡೂರಾವ್,

ಮೈಸೂರು ಬಿಸಿನೆಸ್ ಬ್ಯೂರೊ, ಮೈಸೂರ ಬ್ಯಾಂಕ್ ಹತ್ತಿರ, ಮೈಸೂರು

ಆತ್ಮ ಗೌರವಕ್ಕೇ ಸವಾಲ್ ಹಾಕಿದಂತೆ

ಸ್ಥಾನಗಳು ಪೂರ್ಣ ಜವಾಬ್ದಾರಿ ಸರ್ಕಾರ ಬೇಕೆಂಬ ಸಂಯುಕ್ತ ಬೇಡಿಕೆಯನ್ನು ಒತ್ತಾಯ ಪಡಿಸುತ್ತಿರುವುದು, ಎದುರಿಸಿ ನಿಂತಿರುವ ಈಗಿನ ಬೇಜವಾಬ್ದಾರಿ ಮಂತ್ರಿ ಮಂಡಲವನ್ನು ಮುಂದುವರಿಸಬೇಕೆಂದು ಸೂಚಿಸುವ ಈ ನಾಮಕ ಪ್ರಗತಿ ಪ್ರಜಾಸತ್ತಾತ್ಮಕ ಮನೋಭಾವನೆ ಮತ್ತು ಆತ್ಮ ಗೌರವಕ್ಕೇ ಸವಾಲ್ ಹಾಕಿದಂತಿದೆ ಎಂದು ಸರ್ ಎ ರಾಮಸ್ವಾಮಿ ಮೊದಲಿಯಾರರ ನೇಮಕದ ಬಗ್ಗೆ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಹೊಸಹಳ್ಳಿ ನಿಜಲಿಂಗಪ್ಪನವರು ಹೇಳಿಕೆ ಕೊಟ್ಟಿದ್ದಾರೆ.

ದಕ್ಷಿಣ ಆಫ್ರಿಕಾದಲ್ಲಿ ಪ್ರಬಲ ಸತ್ಯಾಗ್ರಹ

ಭಾರತೀಯರು ದ. ಆಫ್ರಿಕದಲ್ಲಿ ಹೂಡಿರುವ ಸತ್ಯಾಗ್ರಹವು ಹೊನ್ನಿರದ ಮತ್ತು ಪ್ರಬಲಗೊಂಡಿದೆ. ಡರ್ಬನ್‌ನಲ್ಲಿ ಪಿಡುಗು ಶಾಸನಗಳಿದ್ದರೂ ಭಾರತೀಯರು ಗಳಿಸಿದ ಮನೆ, ಮಠಗಳನ್ನು ಆಕ್ರಮಿಸಿಕೊಳ್ಳಲು ಆರಂಭಿಸಿ ತೊಡಗಿದೆ. ಹಿಂದೆ ಗಾಂಧೀಜಿ ನಡೆಸಿದಂತೆ ನಡೆಸಿದಂತೆ ಭಾರತೀಯರು ಈ ಸಲವೂ ಟ್ರಾನ್ಸ್‌ವಾಲಿಂದ ದಂಡಯಾತ್ರೆ ನಡೆಸಬೇಕಾಗಿದೆ.

ಪರ್ಶಿಯನ್ ಕೊಲ್ಲಿಯಲ್ಲಿ ಬ್ರಿಟಿಷ್ ಸೈ

ಆಂಗ್ಲೋ ಇರಾನಿಯನ್ ಕಂಪೆನಿಯ ಮುಷ್ಕರದ ಸಂಬಂಧವಾಗಿ ವ್ಯಕ್ತಿಯನ್ನು ಕಾಯಲು ಬ್ರಿಟನ್ನಿನಿಂದ ಸಜ್ಜಿತ ಸೈನೀಕರನ್ನೊಳಗೊಂಡ ಎರಡು ಬ್ರಿಟಿಷ್ ಕ್ರೂಸರ್ ಹಡಗುಗಳು ಪರ್ಶಿಯನ್ ಕೊಲ್ಲಿಗೆ ತೆರಳಿವೆಯೆಂದು ಗೊತ್ತಾಗಿದೆ.

ಸ್ವಾತಂತ್ರ್ಯ ದಿನಾಚರಣೆ

ರಾಜಧಾನಿಯ ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲು ನಾಳೆ ಸಂಜೆ ೬ ಘಂಟೆಗೆ ಟೌನ್ ಹಾಲ್ ಮೈದಾನದಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿದೆ.

ಅಂಚೆ ಮುಷ್ಕರ

ರಾಜಾಧ್ಯಕ್ಷರ ತೀರ್ಪಿನ ಬಗ್ಗೆ ಶ್ರೀ ದಳವಿಯವರು ಅಭಿಪ್ರಾಯ ಸೂಚಿಸುತ್ತಾ ಅಂಚೆ ನೌಕರರು ಈಗ ಮುಷ್ಕರ ಹೂಡಿರುವುದನ್ನು ಇದರಿಂದಾಗಿ ನಿಲ್ಲಿಸಲಾಗುವುದಿಲ್ಲವೆಂದೂ ತಮ್ಮ ಬೇಡಿಕೆಗಳನ್ನು ಪಂಚಾಯಿತರ ಪರಿಶೀಲನೆಗೆ ಒಪ್ಪಿಸಿಯೇ ಇಲ್ಲವೆಂದು ತಿಳಿಸಿದ್ದಾರೆ. ದಿವಾನ್ ಚಮನ್‌ಲಾಲರು ಅಂಚೆ ನೌಕರರಿಗೆ ದ್ರೋಹ ಮಾಡುತ್ತಿದ್ದಾರೆಂದು ಅವರು ತಿಳಿಸಿದ್ದಾರೆ. ಬೊಂಬಾಯಿಯಲ್ಲಿ ಮುಷ್ಕರ ಎಂದಿನಂತೆ ಸಾಗುತ್ತಿದೆ. ಹೊಸದಾಗಿ ಕೆಲಸಕ್ಕೆ ಬರುವವರನ್ನು ತಡೆಗಟ್ಟಲು ಪಿಕೆಟಿಂಗ್ ನಡೆಯುತ್ತಿದೆ.

ಚೀನಾದಲ್ಲಿ ನಾಲ್ಕು ಕ್ಷೇತ್ರಗಳಲ್ಲಿ ಕದನ

ಕಮ್ಯೂನಿಸ್ಟ್ ಸೈನ್ಯಗಳಿಗೂ ಸರ್ಕಾರಿ ಸೈನ್ಯಗಳಿಗೂ ಚೀನಾದ ನಾಲ್ಕು ಕ್ಷೇತ್ರಗಳಲ್ಲಿ ಅಂತರ್ಯುದ್ಧ ನಡೆಯುತ್ತಿರುವುದಾಗಿ ವರದಿಯಾಗಿದೆ. ಕಮ್ಯೂನಿಸ್ಟ್ ಪಡೆಗಳು ಕ್ಯಾಮ್ರ್ ನಗರವನ್ನು ಆಕ್ರಮಿಸಿವೆಯೆಂದೂ ಗೊತ್ತಾಗಿದೆ.

ರತ್ಲಾಂ ಸಂಸ್ಥಾನದಲ್ಲಿ ಗುಂಡಿನ ಪ್ರಕರಣ

ರತ್ಲಾಂ ಸಂಸ್ಥಾನದ ಮಜದೂರ್ ಸಭೆಯವರು ವ್ಯವಸ್ಥೆ ಮಾಡಿದ್ದ ಸಭೆ ಮತ್ತು ಮೆರವಣಿಗೆಯ ಮೇಲೆ ಪ್ರತಿಬಂಧಕಾಜ್ಞೆ ಹಾಕಿದ್ದನ್ನು ಪ್ರತಿಭಟಿಸುವ ಸಲುವಾಗಿ ಪ್ರದರ್ಶನ ನಡೆದಾಗ ಪೊಲೀಸರು ಗುಂಪಿನ ಮೇಲೆ ಗುಂಡು ಹಾರಿಸಿದರೆಂದೂ, ತತ್ಪರಿಣಾಮವಾಗಿ ೯ ಜನ ಸತ್ತು ೩೩ ಜನರಿಗೆ ಗಾಯಗಳಾಗಿವೆಯೆಂದೂ ವರದಿ ಬಂದಿದೆ.

ಅರ್ಜೆಂಟೈನಾಕ್ಕೆ ಭಾರತದ ಆಹಾರ ನಿಯೋಗ

ದಿವಾನ ಚಮನಲಾಲರ ನಾಯಕತ್ವದಲ್ಲಿ ಭಾರತದ ಆಹಾರ ನಿಯೋಗವು ಅರ್ಜೆಂಟೈನಾಕ್ಕೆ ಇದೇ ೨೦ನೇ ತಾರೀಖು ತೆರಳುವುದು.

Edited, printed and published by A K Nagarajan at the Sadhvi Press D Subbiah Road Mysore

ರಾಜ್ ಕಮಲ್ ಟಾಕೀಸ್, ಮೈಸೂರು

1946 ನೇ ಜುಲೈ 17 ನೇ ಬುಧವಾರದಿಂದ ೨ನೇ ವಾರ

ರಾಜಾ ಕಮಲಾ ರವರ

- ಪರ್ಬತ್ ಪೆ ಅಪ್‌ನ ಡೇರ -

ಮುಖ್ಯ ಭೂಮಿಕೆಯಲ್ಲಿ ವನಮಾಲ, ಉಲ್ಲಾಸ್

ದಿಗ್ದರ್ಶಕರು ಶ್ರೀ|| ಶಾಂತಾರಾಮ್

ಮುಂದಿನ ಚಿತ್ರ —

ಬನ್ ಮಾಲ್

ಪಾತ್ರ:—ಕಿಶನ್ ದೇವ

ವಿಜಯಾ ಪ್ರೆಸ್ ಮೈಸೂರ್

ಚಾಮುಂಡೇಶ್ವರಿಯಲ್ಲಿ

ಜಯಪ್ರದವಾದ ೨ನೇ ವಾರ

ಯತೀಂ

೧೨-೭-೪೬ ನೇ ತಾರೀಖಿನಿಂದ

→ YATEEM ←

ಇದುವರೆಗೆ ಯಾಕೂಬ ನಟಿಸಿರುವ ಚಿತ್ರಗಳಲ್ಲೆಲ್ಲಾ ಅತಿ ಶ್ರೇಷ್ಠವಾದದು

A Sri Shanti Films Release, Mysore.

ಫೋ ನಂ. 2 WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಂಪುಟ ೧೧] ಸೋಮವಾರ ೨೨—೭—೪೬ [ಸಂಚಿಕೆ ೧

ಆಗಸ್ಟ್ ೧ರಿಂದ ಬೆಂಕಿ ಪೊಟ್ಟಣಕ್ಕೆ ಅರ್ಧಾಣೆ

ಮಂಗಳಾಚರಣೆ

(ನಿನ್ನೆ ನಡೆದ ಸಾಧ್ವಿ ಪತ್ರಿಕೆಯ ವಾರ್ಷಿಕೋತ್ಸವದಲ್ಲಿ ಆಶುಕವಿರತ್ನಂ ವೇ॥ ಬ್ರ॥ ಜಿ ಆರ್ ವೆಂಕಟಸುಬ್ಬಶಾಸ್ತ್ರಿ ಭಾರತಿಯವರು ರಚಿಸಿ ಪಠಿಸಿದ ಪದ್ಯ ಪಂಚರತ್ನ ಮಾಲಿಕೆ.)

(ಭಾಮಿನೀ ಷಟ್ಪದಿ)

ಶ್ರೀರಮಾವರ ನಂದಗೋಪನ
ಕೋರ ಧೃತಕುಮುದಾರ ವಿಶ್ವಾ
ಧಾರ ಮೋಹಾಕಾರ ಕರುಣಾಗಾರ
ದಧಿ ಚೋರ ||

ಧೀರ ಪಿಷ್ಯಾಸಾರ ರಾಕ್ಷಸ
ಘೋರ ರಿಪುಸಂಹಾರ ರಾಘವ
ಕೋರಿದಿಷ್ಟವ ಜಗಕೆ ನೀಡುತ ರಕ್ಷಿಸೈ
ಮುದದೇ ||೧||

ಧೀರ ವಿದ್ಯಾ ನಿಪುಣ ಭಾಷಣ
ಶೂರ ಘನಗುಣಸಾರ ಮೈಸೂರ್
ವೀರನೆಂಬುವ ಜನರ ಪೊಗಳಿಕೆಯಿಂದ
ರಂಜಿಸಿದ ||

ಚಾರು ವೆಂಕಟ ಕೃಷ್ಣನಾಮರು
ಮೀರಿ ಸೇವೆಯ ಸಲಿಸಿ ಮೆರೆದಾ
ಪಾರ ಕೀರ್ತಿಯ ಸಾರವೇನರ ಸಾಧ್ವಿ
ಪಿಜಮಾಗಿ ||೨||

ತುಲಿವ ಸಾಧ್ವಿಯು ತನ್ನ ಗುಣದಿಂ
ಧರೆಯೊಳಗೆ ಕೀರ್ತಿಯನು ಪೊಂದುತ
ಪರಿಪರಿಯ ಬೋಧೆಯೊಳು ಜನಗಳ
ನಡೆಯ ನುಡಿಗಳನು ||

ಸರಿಪಡಿಸಿ ರಾಜ್ಯಾಂಗ ರಚನೆಯ
ನಾಂತ ಲೇಖನದಿಂದ ತೋರಿಸಿ
ಸರ್ವ ಮನೆಸಾರಕರ ವಿಷಯಾವಳಿಗೆ
ನೆಲೆಯುಲ್ಲೆ ||೩||

ಇಂದು ನಮ್ಮಯ ಬೇಡಿಕೆಗೆ ಮುದ
ಹೊಂದಿ ಸಿರಿಯುತ ಪಾರ್ಡಿಕರ ವರ
ನಂದ ನಾಮರುದೇಶ ಸೇವಾವಳಿಗೆ,
ನೇತೃಗಳು ||

ಅಂದ ವೆನಲಧ್ಯಕ್ಷ ಪದವಿಯ
ಬಂಧುರದ ಕಾವೇರಿ ಭಾಷಣ
ದಿಂದ್ಯ ಮುದ ಹೊಂದಿಪರು ಸಿಜನೆನು
ಶೀಗ ತಿಳಿದಿಹೆವು ||೪||

ಮಂಗಳವು ನಲಿ ಸಾಧ್ವಿ ಪತ್ರಿಕೆ
ಮಂಗಳವು ಜನಗಣಕೆ ನಿರುತವು
ಮಂಗಳವು ಪಾರ್ಡಿಕರ ಕೀರ್ತಿಗೆ, ಕಾರ್ಯ
ನಿನವಕ್ಕೆ ||

ಮಂಗಳವು ನೆರೆದಿರ್ಪ ಸಭೆಗುರಿ
ಮಂಗಳವು ಭಾರತಕೆ ಸಂತತ |
ಮಂಗಳವು ಸಿರಿ ರಾಮಚಂದ್ರನ ಚರಣ
ಯುಗಳಕ್ಕೆ ||೫||

—: ಮಂಗಳಂ :—

ದ್ವಾರಂ ವೆಂಕಟಸ್ವಾಮಿ ನಾಯ್ಡುರವರ ಪಿಟೀಲು

ಮೈಸೂರು ೨೨

ಮೈಸೂರು ಆಕಾಶವಾಣಿಯಲ್ಲಿ ಈ ದಿನ ರಾತ್ರಿ ೮॥ ಗಂಟೆಯಿಂದ ೧೦ ಗಂಟೆ ವರೆಗೆ ಪ್ರೊ॥ ದ್ವಾರಂ ವೆಂಕಟಸ್ವಾಮಿನಾಯ್ಡುರವರ ಪಿಟೀಲು ಕಛೇರಿಯ ವಿಶೇಷ ಏರ್ಪಾಡನ್ನು ಮಾಡಲಾಗಿದೆ

ಅಂಚೆ ಕೆಲಸಗಾರರಿಗೆ ಬೆಂಬಲ

ಈ ದಿನ ಬೆಳಗ್ಗೆ ೮॥ಗಂಟೆಗೆ ಕಾಂಗ್ರೆಸ್ ಕಾರ್ಯಾಲಯದಲ್ಲಿ ಅಂಚೆ ಕೆಲಸಗಾರರ ಸಭೆ ಸೇರಿತ್ತು. ಶ್ರೀಗಳಾದ ದಿವಾಕರ್, ಪಾರ್ಡಿಕರ್ ಮತ್ತು ಜೋಯಿಸ್‌ರವರೂ ಭಾಷಣ ಮಾಡಿದರು. ಶ್ರೀ ಎ ರಾಮಣ್ಣನವರು ಮುಖಂಡರನ್ನು ಪರಿಚಯ ಮಾಡಿದರು. ಶ್ರೀ ಅನಂತ್ಯಾ... ವಂದನೆ ಸಲ್ಲಿಸಿದರ

ಬಿರುದುಗಳು

ಮೈಸೂರು ೨೨

ನೆನ್ನೆ ರಾತ್ರಿ ಮೈಸೂರಿನ ಅರಮನೆಯಲ್ಲಿ ನಡೆದ ದರ್ಬಾರಿನಲ್ಲಿ ಸಾರ್ವಜನಿಕ ಸೇವೆಸಲ್ಲಿಸಿ ಜನವಿಶ್ವಾಸ ಗಳಿಸಿದ ೨೨ ಮಹನೀಯರುಗಳಿಗೆ ಮಹಾಸ್ವಾಮಿಯವರು ದಯಪಾಲಿಸಿರುವ ಬಿರುದುಗಳಿವು:—

ದೇಶೋಪಕಾರಿಣಿ
ಸತೀ ಸಜ್ಜನಚೆಟ್ಟಿಯವರು

ರಾಜಧರ್ಮಪ್ರಸಕ್ತ
ಜಸ್ಟಿಸ್ ಎಸ್. ವೆಂಕಟರಂಗಯ್ಯಂಗಾರ್ಯರು

ರಾಜಕಾರ್ಯಪ್ರಸಕ್ತ
ಶ್ರೀ॥ಪು॥ ಪ್ರ॥ ಬಿ. ಎಂ.
ಶ್ರೀನಿವಾಸಯ್ಯನವರು.
ಶ್ರೀ॥ ಎಂ. ನರಸಿಂಹಯ್ಯನವರು.

ಮೋತಾಸುದ್-ಉಲ್-ಮುಲ್ಕ್
ಪ॥ ಅಬ್ದುಲ್ ಅಸೀಸ್ ಖಾನ್

ರಾಜಸೇವಾಪ್ರಸಕ್ತ
ಶ್ರೀ ಎಂ. ಎಸ್. ರಾಮಚಂದ್ರರಾವ್.

ಧರ್ಮರತ್ನಾಕರ
ಶ್ರೀ॥ ಸಿ. ಪೆರುಮಾಳ್ ಚೆಟ್ಟಿಯವರು.
,, ಕೆ ಸಂಪಿಗೆಪ್ಪನವರು.
,, ಬಿ ಎಗ್. ಗೋಪಾಲರಾಯರು
ದಾನದಾನಿ ಶ್ರೀ॥ ಮುದ್ದುರಾಯಪ್ಪನವರು

ಧರ್ಮಪ್ರವರ್ತ
ಪಾಟೀಲ ಎಸ್ ಸಿದ್ದಪ್ಪನವರು.

ರಾಜಸೇವಾಸಕ್ತ
ಶ್ರೀ ಎಂ ಪಿ ಸುಬ್ರಹ್ಮಣ್ಯರಾಜ
ಅರಸಿನವರು,
,, ಎಸ್ ವೆಂಕಟೇಶಯ್ಯನವರು.
,, ಸಿ ನರಸಿಂಹಯ್ಯನವರು, ಮೈಸೂರು

ಗಾಯಕ ಶಿಖಾಮಣಿ
ಶ್ರೀ॥ ಚಕ್ರಯಾಕನ್ನಡಿ ರಾಮಾನುಜ
ಅಯ್ಯಂಗಾರ್ಯರು.

ಸಂಗೀತ ವಿಶಾರದ
ವೈ॥ ಪ್ರ॥ ವಿ॥ ವೆಂಕಟಗಿರಿಯಪ್ಪನವರು

ಸಂಗೀತ ರತ್ನಾಕರ
ಪಿ॥ ದ್ವಾರಂ ವೆಂಕಟಸ್ವಾಮಿ ನಾಯ್ಡುರವರು

ಗಾನವಿಶಾರದ
ವಿ॥ ಚಿಟ್ಟಿ ಕೃಷ್ಣಯ್ಯಂಗಾರ್ಯರು
,, ಬಿ ದೇವೇಂದ್ರಪ್ಪನವರು

ಸಾಹಿತ್ಯರತ್ನಂ
ವ॥ ಪಿ॥ ಜಗ್ಗು ವೆಂಕಟಾಚಾರ್ಯರು

ಪಂಡಿತರತ್ನಂ
ವ॥ ಪಿ॥ ನ್ಯಾಯ ತೀರ್ಥ ರಾಜಶಾಸ್ತ್ರಿಗಳು

ವಸ್ತುಕಲಾಸೇವಾಸಕ್ತ
ಶ್ರೀ॥ ...

ವಿದ್ಯಾರ್ಥಿನಿಯರ ಸೌಕರ್ಯ

ಮೈಸೂರು ೨೨

ಶಾಸನ ಸಭಾ ಸದಸ್ಯರಾದ ಶ್ರೀಮತಿ ಎಂ. ಆರ್ ಲಕ್ಷಮ್ಮನವರೂ, ಪ್ರಜಾಪ್ರತಿನಿಧಿ ಸಭಾ ಸದಸ್ಯರಾದ ಶ್ರೀ ಎಗ್ ಶ್ರೀನಿವಾಸವರ್ತಿಯವರೂ ನಿನ್ನೆ ಜಯಲಕ್ಷ್ಮೀವಿಲಾಸ ಭವನಕ್ಕೆ ಭೇಟಿಯಿತ್ತು ಅಲ್ಲಿ ಮಹಾರಾಣಿ ಇಂಟರ್‌ಮೀಡಿಯೇಟ್ ಕಾಲೇಜು ವಿದ್ಯಾರ್ಥಿನಿಯರಿಗೆ ಏರ್ಪಡಿಸಿರುವ ವ್ಯವಸ್ಥೆಗಳನ್ನು ಪರಿಶೀಲಿಸಿದರು.

ಕಸ್ತೂರಿ ಬಾ ಶಿಬಿರಕ್ಕೆ ಭೇಟಿ

ಕರ್ನಾಟಕದ ಮುಖಂಡರುಗಳಾದ ಶ್ರೀಗಳಾದ ಆರ್. ಆರ್. ದಿವಾಕರ್ ಮತ್ತು ಎಗ್ ಎಸ್. ಪಾರ್ಡಿಕರ್‌ರವರು ನಿನ್ನೆ ದಿನ ಬೆಳ್ವಾಡಿಯಲ್ಲಿ ನೆರೆಯಲಾಗಿರುವ ಕಸ್ತೂರ್ ಬಾ ಶಿಕ್ಷಣ ಶಿಬಿರಕ್ಕೆ ಭೇಟಿಕೊಟ್ಟರು ಶಿಬಿರದ ವ್ಯವಸ್ಥಾಪಕರಾದ ಶ್ರೀಮತಿ ಯಶೋಧರಾದಾಸಪ್ಪನವರು ಶಿಬಿರದ ಕೆಲಸಗಳನ್ನು ವಿವರಿಸಿದರು. ಮಾನ್ಯ ಮುಖಂಡರುಗಳು ಅವರಿಗೆ ಹಿತವಚನಗಳನ್ನಿತ್ತರು

ಗಾಂಧಿ ಸೇವಾ ಸಂಘ

ತಾ॥ ೨೪-೭-೪೬ ನೇ ಬುಧವಾರ ಬೊಂಬಾಯಿನ ನ್ಯಾಯ ವಿಧಾಯಕಸಭೆ ಮಾನ್ಯ ಸದಸ್ಯರಾದ ಶ್ರೀಮತಿ ಮಗನ್ ಲಾಲ್ ಹೀರಾಚಂದ್ ಷಾರವರು ಮೈಸೂರಿಗೆ ಆಗಮಿಸುವರು. ಅಂದು ಸಂಜೆ ೫॥ ಗಂಟೆಗೆ ಗಾಂಧಿ ಸೇವಾ ಸಂಘಕ್ಕೆ ಭೇಟಿ ಕೊಡುತ್ತಾರೆ ಆವೇಳೆಗೆ ಸಂಘದ ಸದಸ್ಯರು ಹಾಗೂ ಸೂತ್ರ ಯಜ್ಞದಲ್ಲಿ ಭಾಗವಹಿಸುವ ಮಹನೀಯರೆಲ್ಲರೂ ತಪ್ಪದೆ ಬರಬೇಕಾಗಿ ಪ್ರಾರ್ಥನೆ. ಅಲ್ಲಗೆ ಕಾಂಗ್ರೆಸ ಕೆಲಸಗಾರರಿಗೂ ಆಹ್ವಾನವುಂಟು

ಅರ್ಧಾಣೆಗೆ ಬೆಂಕಿಪೊಟ್ಟಣ

ಆಗಸ್ಟ್ ೧ನೇ ತಾರೀಖಿನಿಂದ ಬೆಂಕಿಪೊಟ್ಟಣ ಒಂದಕ್ಕೆ ಅರ್ಧಾಣೆಯಂತೆ ಮಾರಲಾಗುವುದು ಎಂದು ಇಂಡಿಯಾ ಸರ್ಕಾರವು ಪ್ರಕಟಿಸಿ ಸಾರ್ವಜನಿಕರು ಅರ್ಧಾಣೆಗಿಂತ ಹೆಚ್ಚು ಬೆಲೆಯನ್ನು ಕೊಡಕೂಡದೆಂದು ಕೋರಿದೆ

ಕ್ರಿಕೆಟ್ ಟೆಸ್ಟ್

ಇಂಗ್ಲೆಂಡಿಗೂ ಭಾರತಕ್ಕೂ ನಡೆಯುತ್ತಿರುವ ಎರಡನೇ ಕ್ರಿಕೆಟ್ ಟೆಸ್ಟ್ ನ ಪಂದ್ಯದಲ್ಲಿ ಇಂಗ್ಲೆಂಡಿನ ತಂಡ ೮ ವಿಕೆಟ್ಟುಗಳಿಗೆ ... ರನ್ನುಗಳನ್ನು ಹೊಡೆದಿದ್ದಾರೆ ಹಟ್ಟೆನ್ ... ಪಾರ್ಡ ... ಕಾಂಪ್ಟನ್ ... ಇನ್ನೂ ಆಡುತ್ತಿದ್ದಾರೆ. ... ತಂಡದವರು ... ಮಾಡಿದ್ದಾರೆ

"ಸಾಧ್ವಿ" ವಾರ್ಷಿಕೋತ್ಸವ

ಮೈಸೂರು ೨೨

"ಪತ್ರಿಕೋದ್ಯಮವು ಪವಿತ್ರವೃತ್ತಿ. ಆಳುವ ಮತ್ತು ಆಳಿಸುವ ಶಕ್ತಿಯು ಈ ವೃತ್ತಿಯಲ್ಲಿದೆ; ಆಳುವ ಕಾರ್ಯಕ್ರಮಗಳನ್ನು ಕೈಗೊಳ್ಳದ ಪತ್ರಿಕೆಗಳು 'ದೇಶಾಭ್ಯುದಯ ಕಾರ್ಯದಲ್ಲಿ ಮುಂದುವರಿದಲ್ಲಿ ಪ್ರಜಾವರ್ಗಕ್ಕೆ ಅನುಕೂಲವುಂಟಾಗಿ ದೇಶೋನ್ನತಿಯಾಗುವುದರಲ್ಲಿ ಸಂದೇಹವಿಲ್ಲ', ಎಂಬ ಭಾವಾರ್ಥಗಳಿಂದ ಕೂಡಿದ ಮಾತುಗಳನ್ನು ಸಾಧ್ವಿ ಸಾಪ್ತಾಹಿಕ ವಾರ್ಷಿಕ ಸಮಾರಂಭದಲ್ಲಿ ಅಧ್ಯಕ್ಷ ಭಾಷಣ ಮಾಡುತ್ತಾ, ಕಾಂಗ್ರೆಸ್ ಪ್ರಮುಖರಾದ ಡಾ॥ ನಾ. ಸು. ಪಾರ್ಡಿಕರ್‌ರವರು ನೆನ್ನೆ ಸಾಯಂಕಾಲ ಹೇಳಿದರು.

ಮಂಗಳಾಚರಣೆ ... ಸಾಹಿತ್ಯವಿದ್ವಾನ್ ಶೇಷ ... ರವರು ಸಂಸ್ಕೃತದಲ್ಲಿಯೂ, ಪಠಿಸಿದ ಭಾರತಿ ವಿದ್ವಾನ್ ವೆಂಕಟಸುಬ್ಬಶಾಸ್ತ್ರಿಗಳು ಕನ್ನಡದಲ್ಲಿಯೂ ಪಠಿಸಿದರು.

ಶ್ರೀ॥ ಡಿಗರಾ ರಂಗಯ್ಯನವರು ಅತಿಥಿಗಳನ್ನು ಸ್ವಾಗತಿಸಿದರು.

ನಂತರ ವಿದ್ವಾನ್ ದೇಶಿಕಾಚಾರ್ಯರ ಕುಮಾರ್ಯನಾದ ವೇಣುಗಾನವು ನಡೆಯಿತು.

ದೇಶಭಕ್ತ ರಂಗನಾಥ ದಿವಾಕರ್‌ರವರು ಮಾತನಾಡುತ್ತಾ ತಮ್ಮ ಪತ್ರಿಕೋದ್ಯಮದ ಅನುಭವಗಳನ್ನು ತಿಳಿಸಿ, ಮಾತೃಭೂಮಿಯ ಸೇವೆಯನ್ನು ಸಲ್ಲಿಸಲು ಪ್ರಜಾಬೆಂಬಲವು ಅಗತ್ಯವೆಂದೂ, ಅದನ್ನು ಪಡೆಯುವ ಸಲುವಾಗಿ ವೃತ್ತಿ ಪತ್ರಿಕೋದ್ಯಮವನ್ನು ಆರಂಭಿಸಿ ತಾವು ನಡೆಸುತ್ತಿದ್ದುದಾಗಿಯೂ ತಿಳಿಸಿದರು.

ಕರ್ನಾಟಕ ಬಾಂಧವರೆಲ್ಲರೂ ಕೂಡಿ ಒಂದು ಪ್ರಾಂತವನ್ನು ನಿರ್ಮಿಸುವುದರ ಮೂಲಕ ಕರ್ನಾಟಕ ಏಕೀಕರಣವು ನಡೆಯಬೇಕೆಂದು ಹೇಳಿದರು.

ನಂತರ ಡಾ॥ ಪಾರ್ಡಿಕರರು ಮಾತನಾಡಿದರು. ಭಾರತವು ಕಳೆದ ನೂರಾರು ವರ್ಷಗಳಿಂದ ಹೋರಾಡಿ ಸ್ವಾತಂತ್ರ್ಯವು ಹಸ್ತಗತವಾಗುವ ಸನ್ನಿವೇಶಗಳು ಕಾಣಬರುತ್ತಿವೆ ಕಾಲಚಕ್ರ ಬದಲಾಯಿಸಿದಂತೆಯೇ ಜನರ ಆಲೋಚನೆಗಳೂ ಬದಲಾಯಿಸುತ್ತಿವೆ ಅದೇ ರೀತಿಯಲ್ಲಿ ವೃತ್ತಪತ್ರಿಕಾ ವ್ಯವಹಾರಗಳಲ್ಲೂ ಮಾರ್ಪಾಟುಗಳಾಗುವುದು ಅವಶ್ಯವಾಗಿದೆ. ಆಂಗ್ಲ ಪತ್ರಿಕೆಗಳೇ ವೇಲೆಂಬ ಭಾವನೆಯನ್ನು ಜನರು ದೂರಮಾಡಿ, ಆಯಾ ಪ್ರಾಂತೀಯ ಭಾಷಾ ಪತ್ರಿಕೆಗಳಿಗೆ ಪ್ರೋತ್ಸಾಹನ ಕೊಟ್ಟು ಭಾಷಾಜ್ಞಾನ, ಪ್ರಾಂತೀಯ ತಿಳುವಳಿಕೆ ಹೆಚ್ಚುವಂತೆ ಮಾಡ ಬೇಕು ವೃತ್ತಪತ್ರಿಕೆಯು ಸರ್ಕಾರವೆಂದು ತಿಳಿಸಿದರು ಸಾಧ್ವಿ ಪತ್ರಿಕೆಯು ಇನ್ನೂ ಹೆಚ್ಚು ಆ ಕಾರ್ಯವನ್ನು ಸಾಧಿಸಿ ಪ್ರಜಾ ಸೇವೆಯನ್ನು ಮಾಡಲೆಂದು ಹಾರೈಸಿದರು.

ವಿದ್ವಾನ್ ಟಿ ಪುಟ್ಟಸ್ವಾಮಯ್ಯನವರ ಗಾನ, ಪಿ॥ ಎ. ಪಿ. ಕೃಷ್ಣಮಾಚಾರ್ಯರ ಪಿಟೀಲು, ಪಿ॥ ಟಿ ಎಸ್. ಗೋಪಾಲರಾಯರ ಮೃದಂಗ, ಪಿ॥ ಪಿ ಪಿ ರಂಗನಾಥರವರ ಘಟ, ... ಎಸ್. ಎಸ್. ... ರಾಯರ ... ವೆ... ಯವರ ... ನಡೆಯಿತು

... ...

ಸಾಧ್ವಿ

೨೨-೭-೪೬ ಸೋಮವಾರ

ಕರ್ನಾಟಕ ಪ್ರಾಂತ ರಚನೆ

ಹಲವು ಆಧಿಪತ್ಯಗಳಿಗೆ ಹಂಚಿ ಹಂಚಿ ಚೂರು ಚೂರಾಗಿರುವ ಕನ್ನಡ ನಾಡನ್ನು ಒಂದುಗೂಡಿಸಿ ಒಂದು ಪ್ರತ್ಯೇಕ ಪ್ರಾಂತವನ್ನಾಗಿ ಮಾಡುವ ಪ್ರಯತ್ನವು ಕಾರ್ಯರೂಪಕ್ಕೆ ಬರುವ ಕಾಲವು ಸನ್ನಿಹಿತವಾಗಿದೆ. ಭಾಷಾವಾರು ಪ್ರಾಂತ ರಚನೆಯ ತತ್ವಕ್ಕೆ ಸಕಲರ ಪುರಸ್ಕಾರವೂ ದೊರೆತಿದೆ. ಸ್ವತಂತ್ರ ಭಾರತದ ನಿರ್ಮಾಣ ಕಾರ್ಯದಲ್ಲಿ ಪ್ರತ್ಯೇಕ [illegible] ರಚನೆಯು ಅತ್ಯಂತ ಪ್ರಾಮುಖ್ಯ ಪ್ರಕರಣ. ಇದಕ್ಕೇ ಮೊದಲು ಗಮನ ಕೊಡಬೇಕಾಗುವುದೆಂದು ರಾಷ್ಟ್ರ ನಾಯಕರು ಭರವಸೆ ಇತ್ತಿರುವರು.

ಸಧ್ಯದಲ್ಲಿ ಸೇರಲಿರುವ ರಾಜ್ಯಾಂಗ ಶಾಸನ ಸಭೆಯಲ್ಲಿ ಈ ವಿಷಯವು ಅತಿ ಮುಖ್ಯವಾಗಿ ಪ್ರಸ್ತಾಪಿಸಲ್ಪಡುವುದು. ದೀರ್ಘಕಾಲದ ರಾಜ್ಯಾಂಗ ಯೋಜನೆಗಳು ಸಿದ್ಧವಾಗಲಿರುವ ಈ ಸಮಯದಲ್ಲಿ ಕರ್ನಾಟಕ ಪ್ರಾಂತ ರಚನೆಯನ್ನೂ ಒತ್ತಾಯಪಡಿಸಲು ಅತ್ಯಂತ ಪಿಹಿತವಾಗಿದೆ. ಈ ಬಗ್ಗೆ ಕಾರ್ಯಕ್ರಮವು ಕೈಗೊಳ್ಳಲು ಬರುವ ತಿಂಗಳಲ್ಲಿ ದಾವಣಗೆರೆಯಲ್ಲಿ ಕರ್ನಾಟಕ ಪ್ರತಿನಿಧಿಗಳ ಸಮ್ಮೇಳನವೊಂದು ನಡೆಯುವುದು. ಇದಕ್ಕೆ ನಾಯಕರುಗಳು ಈಗಾಗಲೇ ಸಿದ್ಧತೆಗಳನ್ನು ಮಾಡುತ್ತಿದ್ದಾರೆ. ಇವರ ಪ್ರಯತ್ನಕ್ಕೆ ಕನ್ನಡಿಗರೆಲ್ಲರೂ ನೆರವಾಗಬೇಕೆಂದು ಬೇಡುತ್ತೇವೆ.

ಭಾಷಾವಾರು ಪ್ರಾಂತ ರಚನೆ ಮತ್ತು ಕರ್ನಾಟಕ ಪ್ರಾಂತ ನಿರ್ಮಾಣದ ಬಗ್ಗೆ ರಾಜ್ಯಾಂಗ ಸಭೆಯ ಮೇಲೆ ಒತ್ತಾಯ ಮಾಡಬೇಕು; ಕೂಡಲೇ ಕರ್ನಾಟಕ ಪ್ರಾಂತ ರಚನೆಯು ಆಗದಿದ್ದರೆ ಬ್ರಿಟಿಷ್ ಕರ್ನಾಟಕವನ್ನಾದರೂ ಸಧ್ಯಕ್ಕೆ ಒಂದುಗೂಡಿಸಬೇಕೆಂಬ ಪ್ರಯತ್ನವು ಬಲವಾಗಿ ನಡೆಯುತ್ತಿದೆ. ಇದನ್ನು ತೀವ್ರವಾಗಿ ಮುಂದುವರಿಸಬೇಕು. ಬೊಂಬಾಯಿನಲ್ಲಿ ನಡೆದ ಏಕೀಕರಣ ಸಭೆಯಲ್ಲಿ ಈ ಬಗ್ಗೆ ಒಂದು ನಿರ್ಣಯವು ಆಯಿತು. ಅದರಿಂದ ಕರ್ನಾಟಕ ಪ್ರಾಂತ ನಿರ್ಮಾಣಕ್ಕೆ ಇದು ಪೂರ್ವ ಪೀಠಿಕೆಯಾಗುವುದು.

ಈಗ ಕನ್ನಡನಾಡು ಮೈಸೂರು, ನೈಜಾಂ, ಬ್ರಿಟಿಷ್ ಮತ್ತು ಇತರ ಸಣ್ಣ ಪುಟ್ಟ ರಾಜ್ಯಗಳಲ್ಲಿ ಇಪ್ಪತ್ತಕ್ಕೆ ಮೇಲ್ಪಟ್ಟು ಚೂರಾಗಿ ಹಂಚಲ್ಪಟ್ಟಿವೆ. ಬ್ರಿಟಿಷ್ ಪ್ರಾಂತದಲ್ಲಿರುವ ಭಾಗವನ್ನಾದರೂ ಕೂಡಲೇ ಒಂದುಗೂಡಿಸಿದರೆ ಏಕೀಕರಣಕ್ಕೆ ಬಹುಮಟ್ಟಿಗೆ ಸಹಾಯವಾಗುವುದು. ಸಂಸ್ಥಾನಗಳಲ್ಲಿರುವ ಪ್ರದೇಶಗಳನ್ನು ಸೇರಿಸಲು ಹಲವು ರಾಜಕೀಯ ತೊಡಕುಗಳಿರಬಹುದು. ಮುಂದೆ ನೇಮಕವಾಗುವ ಸಂಧಾನ ಸಮಿತಿಯವರು ಈ ಬಗ್ಗೆ ಸೂಕ್ತಕ್ರಮಗಳನ್ನು ಕೈಗೊಂಡು ಪರಸ್ಪರ ಸಮ್ಮತವಾಗುವ ಸಲಹೆಗಳನ್ನು ಕೊಡುವರೆಂದು ನಂಬೋಣ. ಪ್ರಕೃತದಲ್ಲಿ ನಡೆಯಲಿರುವ ಸಮ್ಮೇಳನಕ್ಕೆ ಕನ್ನಡಿಗರೆಲ್ಲರೂ ಸಂಪೂರ್ಣ ಸಹಕಾರವನ್ನು ನೀಡಬೇಕೆಂದು ಮತ್ತೊಮ್ಮೆ ಬೇಡುವೆವು.

Edited, printed and published by J. R. Nagarajan at the Sadhvi Press D Subbiah Road Mysore

ವಾರ ಭವಿಷ್ಯ

೨೧-೭-೪೬ ರಿಂದ ೨೮-೭-೪೬ ರ ವರೆಗೆ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ಮೇಷ— ಈ ವಾರವೂ ನಿಮ್ಮ ಸ್ಥಿತಿ ಸುಧಾರಿಸುವುದಿಲ್ಲ. ಆರೋಗ್ಯ ಸಹ ಉತ್ತಮವಿಲ್ಲ. ಕೆಲಸಕಾರ್ಯಗಳಲ್ಲಿ ಅನಾವಶ್ಯಕ ವಿಘ್ನಗಳು. ಪ್ರವಾಸ ನಿಲ್ಲಿಸಿ.

ವೃಷಭ—ತೊಂದರೆಗಳು ಅಧಿಕವಾಗಿ ಆಸಹನ ಹೆಚ್ಚಾಗುವುದು. ಧೈರ್ಯದಿಂದ ಮುಂದುವರಿಯಬೇಕಾಗಿದೆ. ಮನೆಯಲ್ಲಿ ವೃಥಾ ಕಲಹ. ವ್ಯಾಪಾರ, ಉದ್ಯೋಗಗಳಲ್ಲಿ ನಷ್ಟ.

ಮಿಥುನ— ಅನೇಕ ಮಿತ್ರರಿಂದ ನಿಮ್ಮಿಂದ ಉಪಕಾರವಾಗಬೇಕಾಗಿ. ಆರೋಗ್ಯ ಉತ್ತಮ. ಮಾನಸಿಕ ಸ್ಥಿತಿ ಸಮಾಧಾನಕರ. ಅತಿಥಿಗಳ ಆಗಮನ. ಔತಣಕ್ಕಾಗಿ ಖರ್ಚು. ಪ್ರವಾಸ ಉತ್ತಮ.

ಕಟಕ—ನಿಮ್ಮ ಮೇಲಿನ ಜವಾಬ್ದಾರಿಯು ಬಗ್ಗೆ ಯೋಚನೆಗೆ ಒಳಗಾಗುವಿರಿ. ಆರೋಗ್ಯ ಉತ್ತಮವಿಲ್ಲ. ಮನೆ ವ್ಯವಹಾರಗಳಿಗಾಗಿ ಖರ್ಚು. ಮಿತ್ರರ ಸಹಾಯದಿಂದ ಅನುಕೂಲ.

ಸಿಂಹ—ಕೋಪದಿಂದ ಅನರ್ಥಗಳು ಸಂಭವಿಸುವುವು. ಆದಾಯಕ್ಕಿಂತ ಖರ್ಚು ಅಧಿಕ. ವ್ಯಾಪಾರ, ವ್ಯವಹಾರಗಳಲ್ಲಿ ಶತ್ರುಗಳ ಕಾಟ ಹೆಚ್ಚಾಗುವುದು. ಆಪ್ತೇಷ್ಟರಿಂದ ಸಹಾಯ.

ಕನ್ಯಾ—ಆರೋಗ್ಯ ಉತ್ತಮವಾಗಿದ್ದರೂ, ಮನಸ್ಸಿಗೆ ನೆಮ್ಮದಿ ಇಲ್ಲ. ಉದ್ಯೋಗ, ವ್ಯಾಪಾರಗಳಲ್ಲಿ ಮೇಲಧಿಕಾರಿಗಳಿಂದ ಕಿರುಕುಳ. ಪ್ರವಾಸದಲ್ಲಿ ಸುಖವಿಲ್ಲ. ನಿಷ್ಕಾರಣ ಕಲಹ.

ತುಲಾ—ಉದ್ದೇಶಪೂರ್ವಕವಾಗಿಯೇ ಹಲವರು ನಿಮಗೆ ತೊಂದರೆ ಕೊಡುವರು. ಆರೋಗ್ಯವೇನೋ ಚೆನ್ನಾಗಿರುವುದು. ಶತ್ರುಗಳು ವಿಫಲರಾಗುವರು. ಆದಾಯ ಉತ್ತಮ. ಮಿತ್ರರ ಭೇಟಿ.

ವೃಶ್ಚಿಕ—ಆರೋಗ್ಯ ಉತ್ತಮ. ವ್ಯಾಪಾರ, ಉದ್ಯೋಗ, ವ್ಯವಹಾರಗಳಲ್ಲಿ ಯಶಸ್ಸು. ಆದಾಯ ಹೆಚ್ಚುವುದು. ಪ್ರಮುಖರ ಆದರಾತಿಥ್ಯ ಪಡೆಯುವಿರಿ. ವೆಚ್ಚವನ್ನು ಹಿಡಿತದಲ್ಲಿಡಿ.

ಧನುಸ್ಸು—ಪ್ರಯತ್ನಪಟ್ಟಷ್ಟೂ ಫಲ ದೊರಕುವುದು. ಆರೋಗ್ಯ ಉತ್ತಮ. ಮನಸ್ಸಿಗೆ ಸಮಾಧಾನ. ಆರ್ಥಿಕ ಸ್ಥಿತಿ ಸುಧಾರಿಸುವುದು. ಶುಭವಾರ್ತೆ ಕೇಳುವಿರಿ. ಮಿತ್ರರ ಭೇಟಿ.

ಮಕರ—ಆರೋಗ್ಯದ ಕಡೆ ಮೊದಲು ಗಮನಕೊಡಿ. ಆರ್ಥಿಕ ಸ್ಥಿತಿ ಉತ್ತಮ. ಕಷ್ಟವಾಗ ಕೆಲಸಕ್ಕೆ ಕೈಹಾಕಬೇಡಿ. ವ್ಯಾಪಾರ ವ್ಯವಹಾರದಲ್ಲಿ ಜಾಗರೂಕರಾಗಿ ಯೋಚಿಸಿದ ಕಾರ್ಯಗಳಲ್ಲಿ ಯಶ್ಸು ಒದಗಬಹುದು.

ಕುಂಭ—ಆರೋಗ್ಯ ಉತ್ತಮವಿಲ್ಲ. ಅಪ್ರಿಯ ಸುದ್ದಿ ಕೇಳಿ ಚಪಲಚಿತ್ತರಾಗುವಿರಿ. ಸಾಂಸಾರಿಕ ಸ್ಥಿತಿಯು ಕ್ಲೇಶಕರವಾಗಿರುವುದು. ಶತ್ರುಗಳಿಂದ ತೊಂದರೆ. ಸ್ತ್ರೀ ವಿಷಯದಲ್ಲಿ ಚಿಂತೆ.

ಮೀನ—ಆರೋಗ್ಯ ಚೆನ್ನಾಗಿರುವುದು. ಹೊಸಬಾಬಿನಲ್ಲಿ ಆದಾಯ ಹೆಚ್ಚುವುದು. ಮನಸ್ಸು ಆನಂದವಾಗಿ ಕೆಲಸಕಾರ್ಯಗಳಲ್ಲಿ ಯಶಸ್ಸು. ಪ್ರವಾಸದಲ್ಲಿ ಲಾಭ. ಇದ್ದಕ್ಕಿದ್ದಂತೆಯೇ ಮನಸ್ಸಿನಲ್ಲಿ ಚಿಂತೆ ಒದಗುವುದು.

ಚಾಮುಂಡೇಶ್ವರಿಯಲ್ಲಿ

22—7—46ರಿಂದ

ಯಶಸ್ವಿಯಾದ 2 ನೇ ವಾರ

ಯಾಕೂಬ್ ಮತ್ತು ಚಂದ್ರಪ್ರಭೆ

ನಟಿಸಿರುವ

ಯತೀಂ

(YATEEM)

ಇದುವರೆಗೂ ನೋಡದಿದ್ದರೆ ಇಂದೇ ನೋಡಿ ಆನಂದಿಸಿ

A Sri Shanti Film's Release

ರಾಮಸ್ವಾಮಿ ಮೊದಲಿಯಾರರ ನೇಮಕ ಖಂಡನೆ

ಬಿ ನಾರಾಯಣಸ್ವಾಮಿಯವರ ಹೇಳಿಕೆ

ರಾಜಧಾನಿಯ ಪುರದ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ನಾರಾಯಣಸ್ವಾಮಿಯವರು ಈ ರೀ ಹೇಳಿಕೆ ಇತ್ತಿದ್ದಾರೆ:—

ಸರ್ ರಾಮಸ್ವಾಮಿ ಮೊದಲಿಯಾರ್‌ರವರು ಮೈಸೂರು ದಿವಾನರಾಗುವರೆಂದು ವದಂತಿ ಹಬ್ಬಿದೆ. ಇದು ಸ್ವಲ್ಪವೂ ಸರಿ ಸಮಾಪ್ತಿಯಾಗಲೆಂಬುದ ಎಲ್ಲರ ಅಭೀಷ್ಟ. ಇದು ತಪ್ಪಿ ಸರ್ ಆರ್ಕಾಟ್‌ರವರನ್ನು ನಮ್ಮ ದೇಶದ ಆಡಳಿತದ ಮುಖ್ಯಾಧಿಕಾರಿಗಳನ್ನಾಗಿ ನೇಮಿಸಿದರೆ ಇದಕ್ಕಿಂತ ನಮ್ಮ ದೌರ್ಭಾಗ್ಯ ಬೇರೊಂದಿಲ್ಲ. ಮಹಾಜನಗಳ ಕಡೆಯಿಂದ ಇವರ ನೇಮಕದ ವಿಷಯ ವಿಲ್ಲಿ ತೋರಬೇಕುತ್ತಿರುವ ಪ್ರತಿಭಟನೆ ಮತ್ತು ಪ್ರಜೆಗಳ ರಾಜಕೀಯ ಆಕಾಂಕ್ಷೆಯನ್ನು ನಿರಾಕರಿಸಿದಂತೆಯೇ ಆಗುತ್ತದೆ. ಸರ್ ಮೊದಲಿಯಾರ್‌ರವರ ಸಾಮ್ರಾಜ್ಯಶಾಹಿಯ ರಾಜಕೀಯ ವೃತ್ತದಲ್ಲಿ ದೊಡ್ಡವರಿರಬಹುದು. ಇದಕ್ಕಾಗಿ ಅವರಿಗೆ ಸಮುದ್ರದಾಚೆ ಒಂದು ಸ್ಥಾನವನ್ನು ಕಲ್ಪಿಸಲಾಗಿದೆ. ಬ್ರಿಟಿಷ್ ಪ್ರಾಂತಗಳಲ್ಲಿ ಜಾಗವಿಲ್ಲದ ಸರ್ ಮೊದಲಿಯಾರರಿಗೆ ದೇಶೀಯ ಸಂಸ್ಥಾನದಲ್ಲಿ ಅವಕಾಶವಲ್ಲಿ ಏತು? ಸರ್ ಮೊದಲಿಯಾರರ ರಾಜಕೀಯ ಸಾಮ್ರಾಜ್ಯಷಾಹಿ, ಕೋಮುವಾರು, ಮುಕ್ತ ರಾಷ್ಟ್ರ ವಿರೋಧಕವಾದ ಎಲ್ಲ ಅವತಾರವನ್ನೂ ತಾಳಿದೆ. ಇವರ ರೀತಿಯ ರಾಜಕೀಯಕ್ಕೆ ಮೈಸೂರು ಫಲವತ್ತಾದ ಸ್ಥಳವಲ್ಲ. ಮೈಸೂರಿನ ಪ್ರಜೆಗಳು ಪ್ರತ್ಯುತ್ತರ ಕೊಡುತ್ತಿದ್ದಾರೆ. ಭರತ ಖಂಡದ ಇತರ ಪ್ರಾಂತ್ಯಗಳೊಡನೆ ಸಂಸಮಾನತೆಯನ್ನು ಯಾವುದೇ ರಾಷ್ಟ್ರ ವಿರೋಧಕವಾದ ಶಕ್ತಿಯನ್ನೂ ಎದುರಿಸಿ ಪ್ರಾಂತ್ಯಗಳ್ಳಿರುವಂತೆ

ಕಾಶ್ಮೀರದ ಪ್ರವೇಶಕ್ಕೆ ನೆಹರೂರವರಿಗೆ ಅವಕಾಶ

ಶೇಖ್ ಅಬ್ದುಲ್ಲಾರವರ ವಿಚಾರಣೆ ಸಂಬಂಧವಾಗಿಯೇ ನೆಹರೂರವರು ಕಾಶ್ಮೀರಕ್ಕೆ ಬರುವುದಾದರೆ, ಅವರ ಮೇಲೆ ಇದ್ದ ಪ್ರತಿಬಂಧಕಾಜ್ಞೆಯನ್ನು ರದ್ದುಗೊಳಿಸುವದಾಗಿ ಅಧಿಕಾರಿ ವರ್ಗದಿಂದ ಸುದ್ದಿ ಹೊರಬಿದ್ದಿದೆ. ಸರ್ಕಾರದ ನಿರ್ಧಾರವನ್ನು [illegible] ನೆಹರೂರವರಿಗೆ ಈಗ ತಿಳಿಸಿಕೊಡಲಾಗಿದೆ [illegible] ಯೆಂದೂ ಹೇಳಲಾಗಿದೆ

ಕನ್ನಡನಾಡು ಒಂದೇ ಆಡಳಿತಕ್ಕೊಳಪಡಬೇಕು

ಮೈಸೂರು ೨೨

ರಾಜಧಾನಿಯ ಪತ್ರಿಕೋದ್ಯೋಗಿಗಳ ಸಂಘಕ್ಕೆ ಈ ದಿನ ಬೆಳಗ್ಗೆ ಶ್ರೀ ರಂಗನಾಥ ದಿವಾಕರರೂ, ಹರ್ಡೀಕರರೂ ಭೇಟಿಇತ್ತಿದ್ದರು. ಅಧ್ಯಕ್ಷರಾದ ಶ್ರೀ ಆಗರಂ ರಂಗಯ್ಯನವರು ಅವರನ್ನು ಸ್ವಾಗತಿಸಿದರು. ಶ್ರೀ ದಿವಾಕರರು ಹರಿದು ಹಂಚಿಹೋಗಿರುವ ಈ ಕನ್ನಡ ನಾಡನ್ನು ರೂಪುಗೊಳಿಸಿ ಒಂದೇ ಆಡಳಿತಾಧಿಕಾರಕ್ಕೊಳಪಡಿಸುವ ವಿಷಯವನ್ನು ಪರಿಶೀಲಿಸಲು ದಾವಣಗೆರೆಯಲ್ಲಿ ಮುಂದಿನ ತಿಂಗಳು ಅಖಿಲ ಕರ್ನಾಟಕ ಪ್ರಜಾಪ್ರತಿನಿಧಿಗಳ ಸಮ್ಮೇಳನವನ್ನು ಸೇರಿಸಬೇಕೆಂದಿರುವ ವಿಷಯವನ್ನು ವಿವರಿಸಿದರು. ಪತ್ರಿಕಾ ಪ್ರತಿನಿಧಿಗಳು ಹಲವು ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದರು. ಕೊನೆಯಲ್ಲಿ ಕಾರ್ಯದರ್ಶಿಗಳಾದ ಶ್ರೀ ಹೆಚ್. ಕೆ. ಕುಮಾರಸ್ವಾಮಿಯವರು ವಂದನೆಗಳನ್ನರ್ಪಿಸಿದನಂತರ ಸಮ್ಮೇಳನ ಮುಕ್ತಾಯವಾಯಿತು.

ಪ್ರಜಾ ಸರ್ಕಾರವನ್ನು ಪಡೆಯಲು ಮೈಸೂರಿನ ಮಕ್ಕಳು ತಯಾರಾಗಿರುತ್ತಾರೆಂಬುದನ್ನು ಮತ್ತೆ ಹೇಳಬೇಕಾಗಿಲ್ಲ.

ವರ್ಧಂತಿ ಮಹೋತ್ಸವ

ಶ್ರೀಮನ್ಮಹಾರಾಜರವರ ವರ್ಧಂತಿ ಉತ್ಸವವನ್ನು ಸಂಸ್ಕೃತ ಪಾಠಶಾಲೆಯಲ್ಲಿ ಶ್ರೀ ವಿದ್ಯಾಗಣಪತಿಯವರ ಸನ್ನಿಧಿಯಲ್ಲಿ ನೆನ್ನೆ ದಿನ ಬೆಳಗ್ಗೆ ನಡೆಸಲಾಯಿತು. [illegible] ಶ್ರೀ ಪಿ. ಚಂದ್ರಶೇಖರಭಟ್ಟರವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಮನ್ಮಹಾರಾಜರಿಗೂ, ಅವರ ಬಂಧುವರ್ಗಕ್ಕೂ ಶ್ರೀ ವಿದ್ಯಾಗಣಪತಿಸ್ವಾಮಿಯವರು ದೀರ್ಘಾಯು, ಆರೋಗ್ಯ ಸಸ್ಸಂತಾನಾದಿ ಸಮಸ್ತ ಕಲ್ಯಾಣಗಳನ್ನೂ ಅನುಗ್ರಹಿಸಲೆಂದು ಪ್ರಾರ್ಥಿಸಿ ಮಹಾ ಗಣಪತಿ ಮಂಗಳಾರತಿಯೊಡನೆ ಸಕ್ಕರೆ ಹಂಚಿದ ನಂತರ ಸಭೆ ಮುಕ್ತಾಯವಾಯಿತು.

University of Mysore

No. A.1-150 46 47

Office of the University of Mysore
Mysore Dated 16th July 1946

NOTIFICATION

Back-ward Community candidates possessing the minimum qualification for appointment on the tutorial staff of the University may apply to the Registrar for temporary appointments pending compliance with the rules of recruitment.

Minimum qualification for appointment on the tutorial staff of the University is M A, M. Sc B A Hons or B Sc (Hons), in I or II Class or B A or B. Sc in I Class

D. S. GORDON.

ಫೋನ್ ನಂ. 312 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಮಂಗಳವಾರ ೨೩—೭—೪೬ [ಸಂಚಿಕೆ ೨

– ಬೊಂಬಾಯಿಯಲ್ಲಿ – ಸಾರ್ವತ್ರಿಕ ಮುಷ್ಕರ

ಪಬ್ಲಿಕ್ ಸರ್ವಿಸ್ ಮೆಡಲುಗಳು

ಮೈಸೂರು ೨೩

ನಿನ್ನೆ ಸಾಯಂಕಾಲ ನಡೆದ ದರ್ಬಾರಿನಲ್ಲಿ ಶ್ರೀಮನ್ಮಹಾರಾಜರವರು ಈ ಕೆಳಗೆ ಕಂಡ ಮಹನೀಯರುಗಳಿಗೆ ಪಬ್ಲಿಕ್ ಸರ್ವಿಸ್ ಮೆಡಲುಗಳನ್ನು ದಯಪಾಲಿಸಿದರು.

ಫಸ್ಟ್ ಕ್ಲಾಸ್ ಮೆಡಲ್

ಶ್ರೀಗಳಾದ—

ಕೆ ಎ. ವೀರಣ್ಣ ಕುದೇರು. ಗುಂಡ್ಲುಪೇಟೆ ಭೋಗಪ್ಪ ಬೆಂಗಳೂರು ಎನ್. ರುದ್ರಯ್ಯ. ಮಧುಗಿರಿ ಜಿ ಎಸ್. ಸುಬ್ಬರಾವ್. ಮಧುಗಿರಿ ದೇವಪ್ಪಗೌಡ. ಕೋಲಾರ ಜಿ ಗಿರಿಮಾಜಿರಾಯರು ವೇಮಗಲ್ ವಿ. ಎಸ್. ರಾಮಶೆಟ್ಟಿ ಟಿ ಈಶ್ವರಪ್ಪ. ಕೊಂಡಜ್ಜಿ ಬಸಪ್ಪ ಮತ್ತು ಬೆಂಗಳೂರು ಪಿ. ಎಸ್ ಶಂಕರಪ್ಪಶೆಟ್ಟಿ.

ಸೆಕೆಂಡ್ ಕ್ಲಾಸ್ ಮೆಡಲ್

ಶ್ರೀಗಳಾದ—

ಕೆ. ಗುರುಶಾಂತಪ್ಪ ಕೆ ಎಸ್. ನಂಜಪ್ಪ ನಾಡಿಗ್. ಎಸ್. ಅಬ್ದುಲ್ ಅಜೀಜ್, ಬೇಳೂರು ವೈ. ಎಸ್. ಲಕ್ಷ್ಮಣಶೆಟ್ಟಿ ನಂಜನಗೂಡು. ಸಿ ಡಿ ನಾರಾಯಣರಾವ್, ಚಾಮರಾಜನಗರ. ಎನ್. ಸಿ ಮಹದೇವಸ್ವಾಮಿ, ಮ್ಯಾನೇಜರ್, ಗುಬ್ಬಿ ಕಂಪನಿ. ಬಿ. ಮಲ್ಲಪ್ಪ, ತುಮಕೂರು. ಜಿ. ಕೆಂಚಪ್ಪ, ಚಿಕ್ಕನಾಯಕನಹಳ್ಳಿ. ಪಟೇಲ್ ವೆಂಕಟಸ್ವಾಮಿಗೌಡ, ವಕ್ಕಲೇರಿ. ಎಸ್. ಚನ್ನೇಗೌಡ, ಅರಸೀಕೆರೆ ತಾಲ್ಲೂಕು. ಡಿ ದೊಡ್ಡಪ್ಪ, ಬಗಳೂರು. ಲಚ್ಚಮನ ನಾಯಕ್, ಚನ್ನಗಿರಿ. ಎ ದೇವಯ್ಯ, ಮಂಡ್ಯ ಎಂ. ಜೆ ಮಹಮದ್ ಯಾಕೂಬ್, ಟಿಂಬರ್ ವ್ಯಾಪಾರಿ, ಮೈಸೂರು.

ಸ್ಟೇಟ್ ಸರ್ವಿಸ್ ಮೆಡಲ್

ಶ್ರೀಗಳಾದ—

ಜಿ. ಸಿ ಎಲ್ಲಿಂಗ್ ಡಾಕ್ಟರ್ ಬೆಳಗಾಂ ಸೀತಾರಾಮ್, ಮಂಡ್ಯ.

ಸರ್ದಾರ್‌ಗಳು

ಶ್ರೀಗಳಾದ—

ರಾಜಸೇವಾಭೂಷಣ, ಎ. ಪಿ ಸುಬ್ರಹ್ಮಣ್ಯರಾಜೆ ಅರಸ್ ಕೆ ನರಸರಾಜೆ ಅರಸ್, ಕುರುವೆಕೆರೆ ಬಸವರಾಜೆ ಅರಸ್, ಈ ಮೂವರನ್ನೂ ಶ್ರೀಮನ್ಮಹಾರಾಜರು ಸರ್ದಾರ್‌ರಾಗಿ ನೇಮಿಸಿದ್ದಾರೆಂದು ತಿಳಿದು ಬಂದಿದೆ.

ಬಿರುದಾಂಕಿತರಿಗೂ, ಪ್ರಶಸ್ತಿಪಡೆದವರಿಗೂ ನಮ್ಮ ಅಭಿನಂದನೆಗಳು.

ವರ್ಧಂತಿ ಉತ್ಸವಗಳು

ರಾಜಧಾನಿಯ ಕಣಿಯರ ಸೇವಾ ಸಮಾಜದಲ್ಲೂ, ಮೈಸೂರು ಲಿಟರರಿ ಯೂನಿಯನ್ನಿನಲ್ಲಿ, ಶ್ರೀಮನ್ಮಹಾರಾಜರವರ ವರ್ಧಂತಿ ಸಮಾರಂಭವು ವೈಭವದಿಂದ ಮೊನ್ನೆ ದಿನ ಜರುಗಿತು

ಶಾಂತಿ ಸಮ್ಮೇಳನಕ್ಕೆ ಭಾರತ ಪ್ರತಿನಿಧಿಗಳು

ಜುಲೈ ೨೯ ನೇ ತಾ॥ ಪ್ಯಾರಿಸ್ಸಿನಲ್ಲಿ ನಡೆಯುವ ಶಾಂತಿ ಸಮ್ಮೇಳನಕ್ಕೆ ಭಾರತದ ಪ್ರತಿನಿಧಿಗಳಾಗಿ ಸರ್ ಸಿ. ಮೊಹಮದ್ ಅಲಿ [illegible] ಸರ್ ಜೋಸೆಫ್ ಭೋರ್ [illegible] ಪಡೆದ [illegible]

ಭಾವಚಿತ್ರ ಅನಾವರಣ

ಮೈಸೂರು ೨೩

ದಿವಂಗತ ಅಡ್ವೋಕೇಟ್ ಕೆ ರಾಮಸ್ವಾಮಿಯವರ ಭಾವಚಿತ್ರ ಅನಾವರಣೋತ್ಸವವು ಮೈಸೂರು ಲಾಯರುಗಳ ಸಂಘದ ಆಶ್ರಯದಲ್ಲಿ ಜಿಲ್ಲಾ ಜಡ್ಜರವರ ಕೋರ್ಟಿನ ಹಾಲಿನಲ್ಲಿ, ನಿನ್ನೆ ಸಂಜೆ ಅದಲ್-ಉಲ್ ಮುಲ್ಕ್ ಜಸ್ಟಿಸ್ ಸಿ. ಅಬ್ದುಲ್ ಘನಿಯವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರುಗಿತು ಪ್ರೇಮಾನಂದ ಪಾರ್ಟಿಯವರಿಂದ ಸಂಗೀತವಾದ ನಂತರ ಸಂಘದ ಅಧ್ಯಕ್ಷರಾದ ಶ್ರೀ ಪಿ ಲಕ್ಷ್ಮೀನಾರಾಯಣರಾಯರು ದಿವಂಗತ ರಾಮಸ್ವಾಮಿಯವರ ಗುಣ ಕಥನ ಮಾಡಿ, ಆಹ್ವಾನಿತರನ್ನೆಲ್ಲಾ ಸ್ವಾಗತಿಸಿದರು. ಅಧ್ಯಕ್ಷ ಘನಿಯವರು ಭಾವಚಿತ್ರವನ್ನು ಅನಾವರಣ ಮಾಡಿ, ದಿವಂಗತರ ಪಾಂಡಿತ್ಯ, ನ್ಯಾಯಶಾಸ್ತ್ರ ಪರಿಶ್ರಮ, ಸರಳ ಸ್ವಭಾವ, ಇವುಗಳನ್ನು ಕೊಂಡಾಡಿದರು. ಶ್ರೀ ಟಿ ಪಿ. ಕೃಷ್ಣರಾಯರು ದಿವಂಗತರನ್ನು ಪ್ರಶಂಸಿಸಿ ಒಂದು ಭಾಷಣ ಮಾಡಿದರು. ಸಂಘದ ಕಾರ್ಯದರ್ಶಿಗಳಾದ ಶ್ರೀ ಎಂ. ಆರ್. ನರಸಿಂಹಮೂರ್ತಿಯವರು ವಂದನೆಗಳನ್ನರ್ಪಿಸಿದ ನಂತರ ಉತ್ಸವವು ಮುಕ್ತಾಯವಾಯಿತು

ಸತ್ಕಾರ ಕೂಟ

ಮೈಸೂರು ೨೩

"ಸಾಧ್ವಿ" ಪತ್ರಿಕೆಯ ನಾಲ್ಕನೇ ವಾರ್ಷಿಕೋತ್ಸವದ ಅಂಗವಾಗಿ ನಿನ್ನೆ ಸಂಜೆ ಪತ್ರಿಕಾ ಕಛೇರಿಯಲ್ಲಿ ಸತ್ಕಾರ ಕೂಟವೊಂದು ಏರ್ಪಡಿಸಲಾಗಿತ್ತು. ರಾಜಧಾನಿಯ ಪತ್ರಿಕೋದ್ಯೋಗಿಗಳೂ, ಪ್ರಜಾ ಸಭಾ ಸದಸ್ಯರೂ ಮತ್ತು ನಗರದ ಗಣ್ಯ ಮಹನೀಯರೂ ಆಹ್ವಾನಿತರಾಗಿದ್ದರು ಶ್ರೀ ರಂಗನಾಥ ದಿವಾಕರರು ಒಂದು ಭಾಷಣ ಮಾಡಿ ಕನ್ನಡ ನಾಡಿನ ಏಕೀಕರಣದ ಬಗ್ಗೆ ಮೈಸೂರು ಜನರ ಕರ್ತವ್ಯವನ್ನು ವಿವರಿಸಿ, ಸಹಕಾರವನ್ನು ಕೋರಿದರು. ಶ್ರೀ ಜಿಗಳಿ ರಂಗಯ್ಯನವರು ಎಲ್ಲರಿಗೂ ವಂದನೆಗಳನ್ನರ್ಪಿಸಿದರು ಪತ್ರಿಕೋದ್ಯೋಗಿ ಸಂಘದ ಉಪಾಧ್ಯಕ್ಷರಾದ ಶ್ರೀ ಟಿ ಆರ್ ಗೋಪಾಲಕೃಷ್ಣರಾಯರು ಸಾಧ್ವಿ ಪತ್ರಿಕೆಗೆ ಶುಭಾಶಯಗಳನ್ನು ಕೋರಿದರು

ರಾಜಧಾನಿಗೆ ದಯಮಾಡಿಸಿದ್ದ ಶ್ರೀ ದಿವಾಕರರೂ ಮತ್ತು ರಾ॥ ಪಾಟೀಲಕರರೂ ನಿನ್ನೆ ರಾತ್ರಿ [illegible] ಬೆಂಗಳೂರಿಗೆ ಪ್ರಯಾಣ ಬೆಳೆಸಿದರು ಅವರನ್ನು [illegible] ನಿಲ್ದಾಣದಲ್ಲಿ ಶ್ರೀಗಳಾದ ಎಂ ಎಸ್ [illegible], [illegible] ಎಂ. [illegible] ನರಸಿಂಹಯ್ಯ ಮತ್ತು [illegible] [illegible]

ಶುಭ ಸಂದೇಶಗಳು

'ಸಾಧ್ವಿ' ಪತ್ರಿಕೆಯ ೪ ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಈ ಕೆಳಗೆ ಕಂಡ ಮಹನೀಯರುಗಳು ಶುಭ ಸಂದೇಶಗಳನ್ನು ಕಳಿಸಿದ್ದರು.

ಮೈಸೂರು ಪತ್ರಿಕೋದ್ಯೋಗಿ ಸಮ್ಮೇಳನದ ಅಧ್ಯಕ್ಷರಾದ ಶಲಿವರ್-ಉಲ್-ಮುಲ್ಕ್ ಎಸ್. ಜಿ ಮೊಹಿಯುದ್ದೀನ್‌ರವರು:– ತಮಗೂ ತಮ್ಮ ದಿನ ಪತ್ರಿಕೆಗೂ ಪರಮಾತ್ಮನು ದೀರ್ಘ ಆಯಸ್ಸು ಶ್ರೇಯಸ್ಸನ್ನು ಕರುಣಿಸಿ, ದೇಶಕ್ಕೆ ಶಾಶ್ವತ ಸೇವೆ ನಡೆಯುವಂತೆ ಮಾಡಲಿ"

ರಾಜಸೇವಾಸಕ್ತ ವೈ ಕೆ ರಾಮಚಂದ್ರರಾಯರು:—ಜನಾದರ ಪೂರಿತವಾದ ತಮ್ಮ ದಿನ ಪತ್ರಿಕೆಗೆ ದೀರ್ಘವೂ, ಉಪಯುಕ್ತವೂ ಆದ ಬಾಳು ಉಂಟಾಗಲೆಂದು ಹಾರೈಸುತ್ತೇನೆ.

ನ್ಯಾಷನಲಿಸ್ಟ್ ಪಕ್ಷದ ಅಧ್ಯಕ್ಷರಾದ ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್:- 'ಸಾಧ್ವಿ'ಗೆ ಎಲ್ಲ ವಿಧವಾದ ಶ್ರೇಯಸ್ಸು ದೊರಕಲಿ'

ಶ್ರೀ ಎಸ್ ಸಿ. ದೇವರಾಜೇ ಅರಸಿನವರು:– ತಮ್ಮ ಮತ್ತು 'ಸಾಧ್ವಿ' ಪತ್ರಿಕೆಯ ವಿಷಯದಲ್ಲಿ ನಾನು ಯಾವಾಗಲೂ ವಿಶೇಷ ಗೌರವವನ್ನಿಟ್ಟಿದ್ದೇನೆ. ತಮ್ಮ ಪತ್ರಿಕೆಯು ಆಕಾರದಲ್ಲಿ ಇನ್ನು ದೊಡ್ಡದಾಗಲಿ, ತಾವು ಉದ್ದೇಶಿಸಿರುವ ಧ್ಯೇಯ ಸಾಧನೆಗಾಗಿ ದುಡಿಯುವುದನ್ನು ಮುಂದುವರಿಸಲಿ ಮಂಗಳವಾಗಲಿ

ಚಾಂಪಿಯನ್ ರೆಟ್ರೋಪಾಲಿಟನ್ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಪಿ. ಸುಬ್ಬರಾಯ ಶಾಸ್ತ್ರಿಯವರು 'ಸಾಧ್ವಿ' ಚಿರಾಯುವಾಗಿ, ಸೇವೆ ಸಲ್ಲಿಸಲಿ'

ಶ್ರೀ ಎಸ್ ಜೀವರಾಜ ಅರಸಿನವರು:- ಸರ್ವಶಕ್ತನಾದ ಭಗವಂತನು ತಮಗೂ, ತಮ್ಮ ಪರಿವಾರಕ್ಕೂ ಮತ್ತು ತಮ್ಮ "ಸಾಧ್ವಿ" ಪತ್ರಿಕೆಗೂ ಶುಭವನ್ನುಂಟುಮಾಡಲಿ

ಶ್ರೀ ಎಚ್ ಕೃಷ್ಣಮೂರ್ತಿಯವರು:- ತಮ್ಮ ಪತ್ರಿಕೆಯು ಇನ್ನೂ ಹೆಚ್ಚು ಹೆಚ್ಚಾಗಿ ಸಾರ್ವಜನಿಕ ಸೇವೆ ಮಾಡಲು ಅವಕಾಶವನ್ನೂ, ಶಕ್ತಿಯನ್ನೂ, ದೀರ್ಘ ಆಯುಸ್ಸನ್ನು ಕರುಣಿಸಲೆಂದು ಭಗವಂತನನ್ನು ಪ್ರಾರ್ಥಿಸುತ್ತೇನೆ

ಸ್ಮಾರಕ ದಿನಾಚರಣೆ

ದಿವಂಗತ [illegible]

[illegible]

ಬೊಂಬಾಯಿಯಲ್ಲಿ ಸಾರ್ವತ್ರಿಕ ಮುಷ್ಕರ

ಬೊಂಬಾಯಿಯಲ್ಲಿ ಬೇರೆ ಬೇರೆ ಕೈಗಾರಿಕೆ ಮತ್ತು ಇತರ ಕಾರ್ಖಾನೆಗಳ [illegible] ಲಕ್ಷ ಕೆಲಸಗಾರರು ಅಂಚೆ ನೌಕರರಿಗೆ ಸಹಾನುಭೂತಿ ತೋರಿಸಲು ನಿನ್ನೆ ಮುಷ್ಕರ ಹೂಡಿದ್ದರು. ಶಾಲಾ ಕಾಲೇಜುಗಳೂ ಖಾಲಿಯಾಗಿದ್ದುವು. ಕೆಲವು ಮಾರ್ಗಗಳಲ್ಲಿ ಸಂಚಾರವನ್ನು ವಜಾ ಮಾಡಲಾಗಿತ್ತು. ನಗರದಲ್ಲೆಲ್ಲಾ ಪೋಲೀಸ್ ಮತ್ತು ಮಿಲಿಟರಿ ಕಾವಲು ಬಲವಾಗಿದೆ. [illegible] ಹತ್ತಿ ಗಿರಣಿಗಳೂ ೭ ಛಾಪಖಾನೆಗಳೂ, ಮತ್ತು ೬೦೦ ಸಣ್ಣ ಕೈಗಾರಿಕಾ ಕಾರ್ಖಾನೆಗಳೂ, ಪ್ರಮುಖವಾದ ಮಾರುಕಟ್ಟೆಗಳೂ ಮುಚ್ಚಲ್ಪಟ್ಟಿದ್ದುವು.

ಕಾಶ್ಮೀರದ ದಿನಾಚರಣೆ

ನಿನ್ನೆ ಸಂಜೆ ಟೌನ್ ಹಾಲ್ ಮೈದಾನದಲ್ಲಿ ಶ್ರೀ ವೆಂಕಟರಾವ್ ಕರ್ಪೂರರವರ ಅಧ್ಯಕ್ಷತೆಯಲ್ಲಿ ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ ಬಹಿರಂಗ ಸಭೆಯೊಂದು ನಡೆದು ಕಾಶ್ಮೀರದ ಸರ್ಕಾರದ ದಬ್ಬಾಳಿಕೆಯನ್ನು ಖಂಡಿಸಲಾಯಿತು.

ಅಧಿಕಾರಿಗಳ ವರ್ಗಾವರ್ಗಿ

ಸ್ವಂ ಸು ಪ್ರೆ.] ಬೆಂಗಳೂರು ೨೩

ಶ್ರೀಗಳಾದ ಎ. ಎಸ್ ಶಂಕರರಾಯರು ನಿನ್ನೆ ಆಹಾರ ಸರಬರಾಜು ಇಲಾಖೆಗೆ, ಸಿ ಎಸ್ ನಾರಾಯಣರಾಯರನ್ನು ವ್ಯವಸಾಯದ ಅಸಿಸ್ಟೆಂಟ್ ಡೈರೆಕ್ಟರಾಗಿಯೂ ನೇಮಿಸಲಾಗಿದೆ

ಕರ್ನಾಟಕ ಸಂಘ

ಸ್ವಂ ಸು] ಚಾಮರಾಜನಗರ ೨೩

ಇಲ್ಲಿಯ ಪ್ರೌಢ ಶಾಲೆಯ ಕರ್ನಾಟಕ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೪॥ ಘಂಟೆಗೆ ಸರಿಯಾಗಿ ಪ್ರಸಿದ್ಧ ಬರಹಗಾರರಾದ ಶ್ರೀ ನಾಡಿಗ ಕೃಷ್ಣಮೂರ್ತಿಯವರು 'ಬಾಪೂದರ್ಶನ' ಎಂಬ ವಿಷಯವನ್ನು ಕುರಿತು ಜನತ ಮಂಟಪದಲ್ಲಿ ಭಾಷಣ ಮಾಡುತ್ತಾರೆ

ದಿನಾಚರಣೆ ಪ್ರಯುಕ್ತ ಇಂದು ರಾತ್ರಿ ೯ ಘಂಟೆಗೆ ಶಿವರಾಮಪೇಟೆ ಶ್ರೀ ವಿಠ್ಠಲರಾಮರ ರಾಮಮಂದಿರದಲ್ಲಿ 'ಭಕ್ತಸುಧನ್ವ' ಎಂಬ ಕಥೆಯು ಯಕ್ಷಗಾನ ರೂಪದಲ್ಲಿ ಜರುಗುವುದು.

ಘನವಾದ ಸಂಗೀತ ಕಚೇರಿ !

ಗಾನ ಪಿತಾಮಹ ವಿದ್ವಾನ್ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮ ಮಂದಿರ, ಮೈಸೂರು

೨೫-೭-೪೬ ನೇ ಗುರುವಾರ

ಸಾಯಂಕಾಲ ೬॥ ಘಂಟೆಗೆ

ಗಾಯಕ ಶಿಖಾಮಣಿ,ಆಸ್ಥಾನ ವಿದ್ವಾಂಸರಾದ

ರಾಮಾನುಜಯ್ಯಂಗಾರ್‌ರ

ಹಾಡುಗಾರಿಕೆ,

ಸಂಗೀತರತ್ನ ಟಿ॥ ಪಿ॥

ಟಿ. ಚೌಡಯ್ಯನವರ ಪಿಟೀಲು

ಆಸ್ಥಾನ ವಿದ್ವಾನ್

ಟಿ. ಎಂ. ಪುಟ್ಟಸ್ವಾಮಯ್ಯ

[illegible] ಏರ್ಪಡಿಸಿರುತ್ತೆ

[illegible]

[illegible]

ಸಾಧ್ವಿ

ತಾ॥ ೨೩-೭-೪೬ ಮಂಗಳವಾರ

ಅಂಚೆ ನೌಕರರಿಗೆ ಸಹಾನುಭೂತಿ

ಹಿಂದೂಸ್ಥಾನದ ನಾನಾ ಭಾಗಗಳಿಂದ ಅಂಚೆ ನೌಕರರ ಮುಷ್ಕರದ ವಿಚಾರವಾಗಿ ಬರುತ್ತಿರುವ ಸುದ್ದಿಗಳು ವಿಸ್ಮಯವನ್ನುಂಟುಮಾಡುತ್ತಿವೆ, ಚಳುವಳಿಯು ದಿನೇ ದಿನೇ ಪ್ರಬಲಿಸುತ್ತಿದೆ. ತಂತೀ ಇಲಾಖೆಯವರೂ ಸಹ ಮುಷ್ಕರವನ್ನಾರಂಭಿಸಿದ್ದಾರೆ. ದೊಡ್ಡ ದೊಡ್ಡ ನಗರಗಳಲ್ಲಿ ವ್ಯಾಪಾರ ವ್ಯವಹಾರಗಳಿಗೆ ಬಹಳ ಧಕ್ಕೆ ಉಂಟಾಗಿದೆ.

ಬೊಂಬಾಯಿನ ಸುಮಾರು ಐದು ಲಕ್ಷ ಜನ ಕೆಲಸಗಾರರು ಅಂಚೆಯವರಿಗೆ ಸಹಾನುಭೂತಿ ತೋರಲು ತಾವೂ ಮುಷ್ಕರ ಹೂಡುವುದಾಗಿ ತಿಳಿಸಿದ್ದಾರೆ. ರೈಲ್ವೆ ನೌಕರರೂ ಸಹ ತಮ್ಮ ಕೋರಿಕೆಗಳು ಈಡೇರಲಿಲ್ಲವೆಂದು ಮುಷ್ಕರ ಹೂಡುವ ಸೂಚನೆ ಕೊಟ್ಟಿದ್ದಾರೆ. ಹೀಗೆ ಆಂದೋಳನವು ಕಾಡುಕಿಚ್ಚಿನಂತೆ ಹಬ್ಬಿ ದೇಶದಲ್ಲೆಲ್ಲಾ ಕ್ರಾಂತಿಯನ್ನು ಹುಟ್ಟಿಸುವ ಸಂಭವವು ಕಂಡುಬರುತ್ತಿದೆ.

ಇತ್ತಲಾಗಿ ಪಂಚಾಯಿತರ ವರದಿಯನ್ನು ಸರ್ಕಾರದವರು ಪೂರ್ಣವಾಗಿ ಅಂಗೀಕರಿಸಿದ್ದರೂ ಸಹ ತಮ್ಮ ಬೇಡಿಕೆಗಳೆಲ್ಲವೂ ಈಡೇರಲಿಲ್ಲವೆಂಬ ಕಾರಣದ ಮೇಲೆ ಕೆಲಸಗಾರರು ಅಸಮಾಧಾನಗೊಂಡಿದ್ದಾರೆ. ಈ ವಿಷಯದಲ್ಲಿ ಅಂಚೆ ಯೂನಿಯನ್ನಿನವರಿಗೂ ಫೆಡರೇಷನ್ನಿನವರಿಗೂ ಭಿನ್ನಾಭಿಪ್ರಾಯ ಉಂಟಾಗಿದೆ. ಇದು ವಿಷಾದಕರ. ಆದರೂ ಸಹ ದೇಶದ ಜನರೆಲ್ಲರೂ ಬಡ ನೌಕರರ ವಿಷಯದಲ್ಲಿ ಸಂಪೂರ್ಣ ಸಹಾನುಭೂತಿಯುಳ್ಳವರೇ ಇರುವರು. ಮುಷ್ಕರವು ಹೀಗೆಯೇ ಮುಂದುವರಿದರೆ ಜನ್ನ ಥಾವಗ ಳು ತೊಳಗಿ ಏಕಮುಖ್ಯವು ಮೂಡಿ ಎಲ್ಲರೂ ಒಪ್ಪುವಸ್ಸಿನಿಂದ ಚಳುವಳಿ ನಡೆಸುವ ಸಂಭವವಿದೆ.

ಅಂಚೆ ಇಲಾಖೆಯ ಮುಖ್ಯಾಧಿಕಾರಿಗಳು ಬೊಂಬಾಯಿಗೆ ಬಂದು ಪ್ರಮುಖರೊಡನೆ ಸಂಧಾನ ನಡೆಸುತ್ತಿದ್ದಾರೆ. ಮುಷ್ಕರಕಾರರ ಮುಖಂಡರಾದ ಶ್ರೀ ದಳ್ವಿಯವರೂ ಸಹ ಸಂಧಾನಕ್ಕೆ ಸಿದ್ಧರಿರುವುದಾಗಿ ತಿಳಿಸಿದ್ದಾರೆ. ಇಂತಹ ಕಠಿಣ ಪರಿಸ್ಥಿತಿಯಲ್ಲಿ ಕೆಲಸಗಾರರ ಮುಖಂಡರೂ, ಸರ್ಕಾರದ ಸೂತ್ರಧಾರಿಗಳೂ ಪರಸ್ಪರ ಕಲೆತು ಮಾತನಾಡಿ ನಿಷ್ಪಕ್ಷಪಾತವಾದ ವಿಚಾರ ವಿಮರ್ಶೆಯಿಂದ ಈ ಸಮಸ್ಯೆಯನ್ನು ಬಗೆಹರಿಸಿ, ಒಂದು ಸೂಕ್ತವಾದ ನಿರ್ಧಾರಕ್ಕೆ ಬಂದು ಈಗ ಒದಗಿರುವ ಬಿಕ್ಕಟ್ಟನ್ನು ಬಿಡಿಸುವುದು ಅತ್ಯಂತ ಶ್ರೇಯಸ್ಕರವಾದುದು.

ಚಾಮುಂಡೇಶ್ವರಿಯಲ್ಲಿ
22—7—46ರಿಂದ
ಯಶಸ್ವಿಯಾದ 2 ನೇ ವಾರ
ಯಾಕೂಬ್ ಮತ್ತು ಚಂದ್ರಪ್ರಭ
ನಟಿಸಿರುವ
ಯತೀಂ
(YATEEM)
ಇದುವರೆಗೂ ನೋಡದಿದ್ದರೆ ಇಂದೇ
ನೋಡಿ ಆನಂದಿಸಿರಿ
A Sri Shanu Film's Release.

ಜಿಲ್ಲಾ ಮೋಟಾರು ಕೆಲಸಗಾರರ ಸಂಘ

ಮೈಸೂರು ೨೨

ನಿನ್ನೆ ರಾತ್ರಿ ೭ ಗಂಟೆಯಲ್ಲಿ ಕಾಂಗ್ರೆಸ್ ಕಛೇರಿಯಲ್ಲಿ ಮೋಟಾರು ಕೆಲಸಗಾರರು ಒಂದು ಸಂಘವನ್ನು ಮಾಡಿಕೊಂಡರು. ಶ್ರೀ ಟಿ ಎಸ್ ಸುಬ್ಬಣ್ಣನವರು ಸಂಘದ ಉದ್ದೇಶವನ್ನು ವಿವರಿಸಿ ಎಲ್ಲರೂ ಸಂಘಕ್ಕೆ ಪ್ರೋತ್ಸಾಹ ಕೊಡಬೇಕೆಂದು ಕೇಳಿಕೊಂಡರು.

Edited, printed and published by
R. Nagarajan at the Sadhvi Press
D Subbiah Road, Mysore

ಸಿಂಧ್‌ನಲ್ಲಿ ಸತ್ಯಾಗ್ರಹವೇ?

ಸತ್ಯಾರ್ಥ ಪ್ರಕಾಶದ ಮೇಲೆ ಹಾಕಿರುವ ನಿರ್ಬಂಧವನ್ನು ಪ್ರತಿಭಟಿಸುವ ಸಲುವಾಗಿ ಸಧ್ಯದಲ್ಲೇ ಭಾರಿ ಸತ್ಯಾಗ್ರಹವು ಆರಂಭವಾಗಲಿದೆಯೆಂದು ಗೊತ್ತಾಗಿದೆ. ಈಗಾಗಲೇ ೫೦ ಸಹಸ್ರ ಸತ್ಯಾಗ್ರಹಿಗಳು ಇದಕ್ಕಾಗಿ ಸಿದ್ಧರಿದ್ದಾರೆಂದೂ, ೭ ಲಕ್ಷ ರೂ. ಗಳ ವಸೂಲಿ ನಡೆದಿದೆಯೆಂದೂ ಗೊತ್ತಾಗಿದೆ.

" " ಭಾರತ ರಾಜ್ಯಾಂಗ ರಚನಾ ಸಭೆಗೆ ಬಂಗಾಳದಿಂದ ಡಾ॥ ಅಂಬೇಡ್ಕರ್‌ರವರು ಚುನಾಯಿತರಾದರು. ಬಲೂಚಿಸ್ಥಾನದಿಂದ ಜಮಗೀರ್‌ದಾರರ ಉಮೇದುವಾರರಾದ ನವಾಬ್ ಮಹಮುದ್‌ಖಾನರು ಚುನಾಯಿತರಾದರು.

26-7-46ರಿಂದ ಅಪೋಘವಾದ ಪ್ರಾರಂಭ
ಮೂವಿಲ್ಯಾಂಡ್, ಬೆಂಗಳೂರು : ಪ್ರತಿ ದಿನ ಮೂರು ಆಟಗಳು
ಪ್ರತಿಭಾ ರವರ
"ಮುಗ್ಗುರು ಮರಾಟಿಲು"
(ತೆಲುಗು ಚಿತ್ರ)
ಭೂಮಿಕೆ:- ಕನ್ನಾಂಬ, ಡಾ॥ ಸುಬ್ಬರಾವ್ ಮೊದಲಾದವರು
ಮೈಸೂರು ಮೋತಿಲಾಲ್‌ನಲ್ಲಿ
ಮುಂದಿನ ಬದಲಾವಣೆ
— Released Through :-
Sri Mahaveer Film Exchange,
Ashoka Road, Mysore.
ವಿಜಯಾ ಪಿಕ್ಚರ್ಸ್, ಮೈಸೂರು.

ಘನವಾದ ಫಿಡಲ್ ಸೋಲೋ
ಇದೇ ಜುಲೈ 24 ನೇ ಬುಧವಾರ ಸಂಜೆ ಆರು ಘಂಟೆಗೆ
ಡಾ॥ ಘಾ॥ ಡಿ. ಬನುಮಯ್ಯನವರ ಹೈಸ್ಕೂಲಿನಲ್ಲಿ
ಸಂಗೀತ ರತ್ನಾಕರ
ದ್ವಾರಂ ವೆಂಕಟಸ್ವಾಮಿ ನಾಯ್ಡುರವರ
ಫಿಡಲ್ ಸೋಲೋ
ಆ॥ ವಿದ್ವಾನ್
ಟಿ. ಎಂ. ಪುಟ್ಟಸ್ವಾಮಯ್ಯನವರ ಮೃದಂಗ
-:ಮೆಂಬರುಗಳಲ್ಲದವರಿಗೆ ಟಿಕೆಟ್ ದರ:
ಗಂಡಸರಿಗೆ ರೂ. 2 6, 1-8 ಮತ್ತು 0 ಆಣೆ, ಹೆಂಗಸರಿಗೆ 1-8 ಮತ್ತು 0 ಆಣೆ
ಮೆಂಬರುಗಳಿಗೆ ಸೂಚನೆ:- ಅನಿವಾರ್ಯವಾಗಿ ಮೆಂಬರುಗಳಿಗೆ ಪತ್ರಗಳಲ್ಲಿ ಬಾಕಿ ಕಳುಹಿಸದಿದ್ದಲ್ಲಿ ದಯಮಾಡಿ ಈ ಪ್ರಕಟನೆಯನ್ನೇ ಆಹ್ವಾನವೆಂದು ಭಾವಿಸಬೇಕಾಗಿ ಪ್ರಾರ್ಥನೆ
ಎಸ್ ಕೆ ರಾಮಾಚಾರ್, ವಿ ಎಲ್ ರಾಮಚಂದ್ರರಾವ್.
ಕಾರ್ಯದರ್ಶಿಗಳು

ರಾಜಾ ಕಮಲ್ ಟಾಕೀಸ್, ಮೈಸೂರು
೧೯೪೬ ನೇ ಜುಲೈ ೨೪ ನೇ ಬುಧವಾರದಿಂದ ೩ನೇ ವಾರ
ರಾಜಾ ಕಮಲ್ ರವರ
- ಪರ್ಬತ್ ಪೆ ಅಪ್‌ನ ಡೇರಾ -
ಪ. ಪ್ರ ಭೂಮಿಕೆಯಲ್ಲಿ
ವನಮಾಲ, ಉಲ್ಹಾಸ್
ನಿರ್ದೇಶಕರು:
ಶ್ರೀ॥ ಶಾಂತಾರಾಮ್
ಮುಂದಿನ ಬದಲಾವಣೆ.
ಬಿ ಸ್ ಸ್ರೀ ಲ್
ಭೂ :—ಶಾಸ್ತ್ರಿನಾ ದೇ.

ಮೈಸೂರು ವಿಶ್ವವಿದ್ಯಾನಿಲಯ

ನಂ ೩ ೫ ೧೬೭ ೪೭-೪೬

ವಿಶ್ವವಿದ್ಯಾನಿಲಯ ಕಛೇರಿ,
ಮೈಸೂರು : ತಾ॥ ೧೭-೭-೪೬

ಪ್ರಕಟಣೆ

ವಿಶ್ವವಿದ್ಯಾನಿಲಯದ ವಿವಿಧ ಉದ್ಯೋಗಗಳಿಗೆ ಕನಿಷ್ಠ ಅಕ್ಷರ ವಿದ್ಯಾ ಅರ್ಹತೆ ಯುಳ್ಳ ಹಿಂದುಳಿದ ಸಂಗಡದವರ ರಿಕ್ರೂಟ್‌ಮೆಂಟ್ ಬೋರ್ಡಿನ ನಿಬಂಧನೆ ಪ್ರಕಾರ ಅರ್ಜಿಗಳನ್ನು ಸ್ವೀಕರಿಸಲಾಗುತ್ತದೆ.

ಮಿನಿಸ್ಟೀರಿಯಲ್ ಉದ್ಯೋಗಗಳಿಗೆ ಕನಿಷ್ಠ ಪಕ್ಷ ಇರಬೇಕಾದ ವಿದ್ಯಾ ಅರ್ಹತೆ ಗಳು ಕೆಳಕಂಡಂತೆ ಇವೆ: —

ಟೈಪಿಸ್ಟುಗಳಿಗೆ:- ಎಸ್ ಎಸ್ ಎಲ್ ಸಿ ಯಲ್ಲಿ ಪಾಸಾಗಿರಬೇಕು. ಟೈಪ್‌ರೈಟಿಂಗಿನಲ್ಲಿ ಸೀನಿಯರ್ ಅಥವಾ ಅದಕ್ಕೆ ಸಮನಾದ ಇನ್ನಾವುದಾದರೂ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

ಸ್ಟೆನೊ ಟೈಪಿಸ್ಟ್:- ಎಸ್ ಎಸ್ ಎಲ್. ಸಿ. ಯಲ್ಲಿ ಪಾಸಾಗಿರಬೇಕು. ಸೀನಿಯರ್ ಟೈಪ್‌ರೈಟಿಂಗ್ ಮತ್ತು ಶಾರ್ಟ್‌ಹ್ಯಾಂಡ್ ಜೂನಿಯರ್ ಅಥವಾ ಅದಕ್ಕೆ ಸಮನಾದ ಇನ್ನಾವುದಾದರೂ ಪರೀಕ್ಷೆಯಲ್ಲಿ ಪಾಸಾಗಿರಬೇಕು.

೧ನೇ ದರ್ಜೆ ಗುಮಾಸ್ತರಿಗೆ:- ಮೈಸೂರು ಯೂನಿವರ್ಸಿಟಿ ಪದವೀಧರರಾಗಿರಬೇಕು, ಅಥವಾ ಇನ್ನಾವುದಾದರೂ ಅನುಮೋದಿತವಾದ ವಿಶ್ವವಿದ್ಯಾನಿಲಯದ ಪದವೀಧರರಾಗಿರಬೇಕು.

೨ನೇ ದರ್ಜೆ ಗುಮಾಸ್ತರಿಗೆ:- ಎಸ್ ಎಸ್ ಎಲ್ ಸಿ ಪರೀಕ್ಷೆ, ಅಥವಾ ಅದಕ್ಕೆ ಸಮನಾದ ಇನ್ನಾವುದಾದರೂ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. (ಇಂಟರ್ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಮೊದಲು ಗಮನ ಕೊಡಲಾಗುತ್ತದೆ)

೩ನೇ ದರ್ಜೆ ಗುಮಾಸ್ತರಿಗೆ:- ಮೈಸೂರು ಮಿಡಲ್ ಸ್ಕೂಲ್ ಪರೀಕ್ಷೆಯಲ್ಲಿ ಪಾಸಾಗಿರಬೇಕು, ಅಥವಾ ೫ ನೇ ಫಾರಂ ವರೆಗೆ ಯಾವುದಾದರೂ ಅನುಮೋದಿಸಲ್ಪಟ್ಟ ಸ್ಕೂಲಿನಲ್ಲಿ ಓದಿದ ಸರ್ಟಿಫಿಕೇಟು ಪಡೆದಿರಬೇಕು.

ಅಪ್ಪಣೆಯಂತೆ,
ಡಿ. ಎಸ್ ಗೌಡರ್
ರಿಜಿಸ್ಟ್ರಾರ್

ಫೋನ್ ನಂ. 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಬುಧವಾರ ೨೪—೭—೪೬ [ಸಂಚಿಕೆ ೩

ಮದ್ರಾಸಿನಲ್ಲೂ ನಿನ್ನೆ ಸಾರ್ವತ್ರಿಕ ಮುಷ್ಕರ

ಅಂಚೆ ಮುಷ್ಕರದ ಬಗ್ಗೆ ದಳವಿ-ಪ್ರಸಾದ್ ಭೇಟಿ

ಅಂಚೆ ಕೆಲಸಗಾರರ ಸಂಘದ ಕಾರ್ಯದರ್ಶಿ ಶ್ರೀ ದಳವಿಯವರನ್ನು ನೆನ್ನೆ ಪೋಸ್ಟಲ್ ಡೈ॥ ಜನರಲ್ ಆದ ಶ್ರೀ ಕೃಷ್ಣಪ್ರಸಾದರು ಭೇಟಿಮಾಡಿ - ಮುಷ್ಕರವನ್ನು ನಿಲ್ಲಿಸುವ ಬಗ್ಗೆ-ಸಂಧಾನ ನಡೆಸಿದರು - ಮುಷ್ಕರದ ಸಮಿತಿ ಸಭೆ ನಿನ್ನೆ ಬೊಂಬಾಯಿಯಲ್ಲಿ ಸೇರಿದೆ ಫಲಿತಾಂಶ ಇನ್ನು ಹೊರಬಿದ್ದಿಲ್ಲ ಬಹು ಜಾಗ್ರತೆ ಮುಷ್ಕರ ಮುಕ್ತಾಯವಾಗ ಬಹುದೆಂದು ಶ್ರೀ ಮೇರ್‌ರವರೂ, ಶ್ರೀ ಮಂಗಳದಾಸಪಕ್ವಾಸರವರೂ ಅಭಿಪ್ರಾಯ ಪಟ್ಟಿದ್ದಾರೆ

ಅಂಚೆ ಫೆಡರೇಷನ್ನಿನ ಬೆದರಿಕೆ

ಪಂಚಾಯಿತರ ತೀರ್ಮಾನದಿಂದ ಅಂಚೆ ಫೆಡರೇಷನ್ನಿನ ಬೇಡಿಕೆಗಳ್ಯಾವುವೂ ಈಡೇರಿಲ್ಲ. ಅದನ್ನು ಕೂಡಲೇ ನೆರವೇರಿಸದಿದ್ದರೆ ದೇಶದಾದ್ಯಂತವೂ, ಅಂಚೆ, ತಂತಿ, ರೈಲ್ವೆ ಮತ್ತು ಟೆಲಿಫೋನ್ ಕೆಲಸಗಾರರ ಸಾರ್ವತ್ರಿಕ ಮುಷ್ಕರ ನಡೆಯುವಂತೆ ಮಾಡಲಾಗುವುದು-ಎಂದು ಅಧ್ಯಕ್ಷ ಥಿರ್ವಾ. ಚನು ಸಲಾಲರು ಎಚ್ಚರಿಕೆ ಇತ್ತಿದ್ದಾರೆ. ಮೌಲಾನ ಆಜಾದ್ ಮತ್ತು ಸ॥ ಪಟೇಲರ ಸಹಕಾರವನ್ನು ಸ್ವೀಕರಿಸುವುದಾಗಿ ತೀರ್ಮಾನಿಸಲಾಗಿದೆ. ಗುರುವಾರದೊಳಗೆ ತೃಪ್ತಿಕರವಾಗದಿದ್ದರೆ ಮುಷ್ಕರ ಆರಂಭಿಸಬೇಕೆಂದು ಫೆಡರೇಷನ್ ನಿರ್ಧರಿಸಿದೆ.

ರಾಜ್ಯಾಂಗ ಸಭೆಗೆ ಮದ್ರಾಸಿನಿಂದ ಆಯ್ಕೆ

ಕಾಂಗ್ರೆಸ್ಸಿನಿಂದ ಸೂಚಿಸಲ್ಪಟ್ಟಿದ್ದ ೪೯ ಮಂದಿ ಪೈಕಿ, ೪೪ ಮಂದಿ ನಿನ್ನೆ ಮದ್ರಾಸ್ ಶಾಸನ ಸಭೆಯಿಂದ ಭಾರತ ರಾಜ್ಯಾಂಗ ರಚನಾ ಸಭೆಗೆ ಚುನಾಯಿತರಾದರು ಸ್ವತಂತ್ರರ ಪೈಕಿ ಶ್ರೀ ಶಿವರಾಜರು ಮಾತ್ರ ಆರಿಸಿ ಬಂದರು.

ಹೈಸ್ಕೂಲ್ ಆರಂಭೋತ್ಸವ

ಸ್ವಂ ಸು] ಶ್ರೀರಂಗಪಟ್ಟಣ ೨೪

ಮಂಡ್ಯದ ಜಿಲ್ಲಾಧಿಕಾರಿಗಳಾದ ಶ್ರೀ ಕೆ. ತಿಪ್ಪೇರುದ್ರಯ್ಯನವರು ಈದಿನ ಬೆಳಗ್ಗೆ ಶ್ರೀರಂಗಪಟ್ಟಣದ ಹೈಸ್ಕೂಲಿನ ಪ್ರಾರಂಭೋತ್ಸವವನ್ನು ನೆರವೇರಿಸಿದರು ಈ ಸಮಾರಂಭಕ್ಕೆ ಶ್ರೀರಂಗಪಟ್ಟಣದ ಮುನಿಸಿಪಲ್ ಕೌನ್ಸಿಲರ್‌ಗಳು ಮತ್ತು ತಾಲ್ಲೂಕಿನ ಗಣ್ಯ ಮಹನೀಯರುಗಳೂ ದಯಮಾಡಿಸಿದ್ದರು ಹೈಸ್ಕೂಲನ್ನು ತೆರೆಯುವ ಬಗ್ಗೆ ಒಂದು ಪುಟ್ಟ ವರದಿಯನ್ನು ಶ್ರೀಗಳಾದ ಎಸ್. ವಿ ಚಂದ್ರಶೇಖರಯ್ಯ ಮತ್ತು ಎಂ. ಸುಬ್ಬಯ್ಯನವರು ಸಭೆಯಲ್ಲಿ ಓದಿದರು ಮತ್ತು ಹೈಸ್ಕೂಲ್ ನಿಧಿಗೆ ಸಹಾಯಮಾಡಿದ ಮಹನೀಯರನ್ನು ಅಭಿನಂದಿಸಿದರು. ನಂತರ ಸಭೆಯು ಶ್ರೀಮನ್ಮಹಾರಾಜರ ಶ್ರೇಯಃಪ್ರಾರ್ಥನೆಯೊಡನೆ ಮುಕ್ತಾಯವಾಯಿತು

ಮೈಸೂರು ೨೩

ಈ ತಾಲ್ಲೂಕಿನ ಉಪಾಧ್ಯಾಯರ ಸಂಘದ ಸಭೆ ನಡೆದು, ವಿದ್ಯಾ ಮಂತ್ರಿಗಳಾದ ಡಾ॥ ರಾಯ್‌ರವರಿಗೆ ದಿವಾನ್ ಬಹದ್ದೂರ್ ಪ್ರಶಸ್ತಿ ದೊರೆತದ್ದಕ್ಕಾಗಿಯೂ, ಹ॥ ಸುಲ್ತಾನ್ ಮೊಹಿದ್ದೀನ್‌ರವರಿಗೆ ಸ್ಥಾನಿಕ ಅಧಿಕಾರ ದೊರೆತದ್ದಕ್ಕಾಗಿಯೂ, ಡಾ॥ ರಸಯ್ಯನವರು ಕ್ಷೇತ್ರಾಧಿಕಾರಿಗಳಾಗಿ ನೇಮಕ ಮಾಡಲ್ಪಟ್ಟದ್ದಕ್ಕಾಗಿಯೂ, ಅಭಿನಂದಿಸ ವ ರ ಪ್ರ ಅಂಗೀಕರಿಸಲ್ಪಟ್ಟಿತು.

ಬರೋಡಾ ದಿವಾನರ ಭರವಸೆ

ಭಾರತ ರಾಜ್ಯಾಂಗ ರಚನಾ ಸಭೆಗೆ ತಮ್ಮ ಸಂಸ್ಥಾನಕ್ಕೆ ಪ್ರಾತಿನಿಧ್ಯ ಸಿಕ್ಕಿದರೆ ಪ್ರಜೆಗಳಿಗೆ ಪ್ರಾತಿನಿಧ್ಯ ಒದಗಿಸಿಕೊಡುವ ಭರವಸೆ ಕೊಡುತ್ತೇನೆ, ಸಂಸ್ಥಾನದ ಪ್ರತಿನಿಧಿಗಳನ್ನು ಆರಿಸುವ ನೋಡಲು ಅಗತ್ಯವಾದರೆ ಪ್ರತಿನಿಧಿ ಸಭೆಯ ವಿಶೇಷ ಅಧಿವೇಶನ ಕರೆಸಿ, ಅದರ ಸಮಾಲೋಚನೆ ಪಡೆಯಲಾಗುತ್ತದೆ-ಎಂದು ಬರೋಡಾ ದಿವಾನರು ನೆನ್ನೆ ಶಾಸನ ಸಭೆಯಲ್ಲಿ ಆಶ್ವಾಸನವಿತ್ತಿದ್ದಾರೆ

ಜೆರೂಸಲಮಿನಲ್ಲಿ ಭಾರಿ ಅನಾಹುತ

ಜೆರೂಸಲಂನಲ್ಲಿ ಬ್ರಿ॥ ಪ್ರಧಾನ ಸೇನಾ ಶಿಬಿರ ಮತ್ತು ಸೆಕ್ರೆಟರಿಯೇಟ್ ಇರುವ ಪ್ರದೇಶದಲ್ಲಿ ಭಾರಿ ಆಸ್ಫೋಟನೆ ಆಗಿ ೩೭ ಮಂದಿ ಸತ್ತಿದ್ದಾರೆ, ೬೯ ಮಂದಿ ಪತ್ತೆಯಿಲ್ಲ, ೫೩ ಮಂದಿ ಆಸ್ಪತ್ರೆಗೆ ದಾಖಲಾಗಿದ್ದಾರೆ-ಎಂದು ವರದಿಯಾಗಿದೆ ಈ ಕೃತ್ಯವನ್ನು ಯೆಹೂದಿ ಸಂಸ್ಥೆ ಖಂಡಿಸಿದೆ. ಇದರ ಪರಿಶೀಲನೆಗಾಗಿ ಬ್ರಿಟಿಷ್ ಮಂತ್ರಿ ಮಂಡಲದ ತುರ್ತು ಸಭೆ ಸೇರಿದ್ದಿತು.

ಅಣುಬಾಂಬು ಪ್ರಯೋಗ

ಬಿಕಿನಿಯಲ್ಲಿ ನಾಳೆ ಬೆಳಿಗ್ಗೆ ನಡೆಯಬೇಕಾಗಿದ್ದ ಎರಡನೇ ಅಣುಬಾಂಬಿನ ಪ್ರಯೋಗವನ್ನು ಹವಾಮಾನದ ಪರಿಸ್ಥಿತಿಯ ಪ್ರಯುಕ್ತ ಒಂದು ವಾರ ಕಾಲ ಮುಂದುವರಿಸಲಾಗುವುದೆಂದು ತಿಳಿದುಬಂದಿದೆ.

ಇಂಡಿಯನ್ ಫುಟ್‌ಬಾಲ್ ಕ್ಲಬ್

ಮೇಲ್ಕಂಡ ಕ್ಲಬ್ಬಿನ ವಾರ್ಷಿಕ ಸಭೆಯು ಸೂರ್ಯನಾರಾಯಣ ಶೆಟ್ಟರ ಛತ್ರದಲ್ಲಿ ೨೧ ನೇ ತಾ॥ ಜರುಗಿ ಶ್ರೀಗಳಾದ ಇ ಕೆ. ಸಚ್ಚಿದಾನಂದ ಗಿರಿಯವರು ಅಧ್ಯಕ್ಷರಾಗಿಯೂ, ಎಂ ಪಿ ದೇವದಾಸಪ್ಪನವರನ್ನು ಉಪಾಧ್ಯಕ್ಷರಾಗಿಯೂ, ಪಿ ಮಂಜಯ್ಯ ಮತ್ತು ಸಿ ವೆಂಕಟಪ್ಪನವರುಗಳು ಕಾರ್ಯದರ್ಶಿಗಳಾಗಿಯೂ ಚುನಾಯಿತರಾದರು. ಈ ಕ್ಲಬ್ಬನ್ನು ಮೈಸೂರು ಅಸೋಸಿಯೇಷನ್ನಿನಲ್ಲಿ ರಿಜಿಸ್ಟರ್ ಮಾಡಿಸಲಾಗಿದೆ

ಬೂಕನಕೆರೆ ೨೩

ಇಲ್ಲಿಗೆ ಮಂಡ್ಯದಿಂದ ಸಚಿವರಿಂದ ಶ್ರೀ ಸಿದ್ದಪ್ಪನವರು ಭೇಟಿ ಇತ್ತಿದ್ದರು ಗ್ರಾಮಸ್ಥರು ತಮ್ಮ ಕುಂದುಕೊರತೆಗಳನ್ನು ಅರಿಕೆ ಮಾಡಿಕೊಂಡರು ಮಳೆ ಇಲ್ಲದೆ ಬೆಳೆಯದ ಫಸಲು ನಷ್ಟವಾಗಿದೆ

ಕಾಂಗ್ರೆಸ್ ಅಧ್ಯಕ್ಷ ಚುನಾವಣೆ

ಮೈಸೂರು ೨೪

ಮೈಸೂರು ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಇದೇ ಮಾಹೆ ೩೧ ನೇ ತಾ॥ ಬುಧವಾರ ಬೆಳಗ್ಗೆ ೯ ಗಂಟೆಯಿಂದ ೧೨ ಗಂಟೆ ವರೆವಿಗೂ, ಮಧ್ಯಾಹ್ನ ೩ ಗಂಟೆಯಿಂದ ಸಂಜೆ ೬ ಗಂಟೆ ವರೆವಿಗೂ ಚುನಾವಣೆಯು ಕಾಂಗ್ರೆಸ್ ಕಛೇರಿಯಲ್ಲಿ ಜರುಗುವುದು ಮಹಾಧಿವೇಶನದ ಈ ಜಿಲ್ಲೆಯ ಎಲ್ಲ ಪ್ರತಿನಿಧಿಗಳೂ ಇದನ್ನೇ ಆಹ್ವಾನವೆಂದು ಪರಿಗಣಿಸಿ ಅಂದಿನ ಚುನಾವಣೆಯಲ್ಲಿ ಭಾಗವಹಿಸಬೇಕೆಂದು ಜಿಲ್ಲಾ ಚುನಾವಣಾಧಿಕಾರಿಗಳಾದ ಶ್ರೀ ಎಂ ಶಂಕರಯ್ಯನವರು ಪ್ರಾರ್ಥಿಸಿದ್ದಾರೆ.

ಕರುಣಾಪುರಕ್ಕೆ ಭೇಟಿ

ವಿದ್ಯಾ ಸಚಿವರಾದ ಡಾ॥ ರಾಯ್‌ರವರು ನೆನ್ನೆ ದಿನ ಕರುಣಾಪುರಕ್ಕೆ ಭೇಟಿ ಇತ್ತಿದ್ದರು ಅಲ್ಲಿನ ಮಹಾಜನರೆಲ್ಲಾ ಮಂತ್ರಿಗಳನ್ನು ಸ್ವಾಗತಿಸಿದರು. ದೇವಾಲಯದಲ್ಲಿ ಸೇರಿದ್ದ ಸಭೆಯಲ್ಲಿ ರೆವರೆಂಡ್, ತಿರುಮಲೆಯವರು ಅಲ್ಲಿನ ಕುಂದುಕೊರತೆಗಳನ್ನು ಮಂತ್ರಿಗಳಲ್ಲಿ ಅರಿಕೆ ಮಾಡಿಕೊಂಡರು. ಮಂತ್ರಿಗಳು ಪರಿಶೀಲಿಸುವ ಭರವಸೆ ಇತ್ತರು

ಮೊಹಲ್ಲಾ ಸಮಿತಿಗಳ ರಚನೆ

ರಾಜಧಾನಿಯಲ್ಲಿ ಮೊಹಲ್ಲಾ ಕಾಂಗ್ರೆಸ್ ಸಮಿತಿಗಳನ್ನು ಇದೇ ೩೧ನೇ ತಾರೀಖಿನೊಳಗೆ ಸ್ಥಾಪಿಸಿ, ತಮಗೆ ವರದಿ ಒಪ್ಪಿಸಬೇಕೆಂದು ಈ ಕೆಳಗೆ ಕಂಡವರನ್ನು ಸಂಚಾಲಕರುಗಳನ್ನಾಗಿ ನಗರ ಚುನಾವಣಾಧಿಕಾರಿಗಳಾದ ಶ್ರೀ ಬಿ ನಾರಾಯಣಸ್ವಾಮಿಯವರು ಚುನಾಯಿಸಿರುತ್ತಾರೆ

ಕೃಷ್ಣರಾಜ-ಶ್ರೀಗಳಾದ ಟಿ. ನರಸಿಂಹ ಅಯ್ಯಂಗಾರ್, ದೇವರಾಜ-ಟಿ. ಎಸ್ ಸುಬ್ಬಣ್ಣ, ಬಿಲ್ಲಿ ಎ. ಕೃಷ್ಣಮೂರ್ತಿರಾವ್, ನಜರ್‌ಬಾದ್-ಎಸ್. ಚನ್ನಯ್ಯ, ಮಂಡಿ-ಟಿ ಮರಿಯಪ್ಪ, ಲಷ್ಕರ್-ಸಿ. ಎಲ್. ದಾಸಪ್ಪ, ದೇವರಾಜ-ಗೌಡಯ್ಯ

ವಿಶೇಷ ಪೂಜೆ

ಶ್ರೀಮನ್ಮಹಾರಾಜರವರ ವರ್ಧಂತಿ ಸಲುವಾಗಿ ರಾಜಧಾನಿಯ ಕುಂಚಿಟಿಗರ ರಾಮಮಂದಿರದಲ್ಲಿ ನಾಳೆ ಬೆಳಗ್ಗೆ ೧೦॥ ಗಂಟೆಗೆ ಶ್ರೀ ಸೀತಾರಾಮ ಸ್ವಾಮಿಯವರಿಗೆ ... ಮಹಾ ಮಂಗಳಾರತಿ ಮತ್ತು ... ನಡೆಯುವುದು. ಮಹಾಜನರು ದಯಮಾಡಿಸಬೇಕಾಗಿ ಕೋರಲಾಗಿದೆ

ಅಂಚೆ ಮುಷ್ಕರ

ಮೈಸೂರು ೨೪

ರಾಜಧಾನಿಯಲ್ಲಿ ಕೇಂದ್ರದ ಅಂಚೆ ನೌಕರರ ಮುಷ್ಕರ ಪ್ರಾರಂಭವಾಗಿ ಇಂದಿಗೆ ೯ ದಿವಸಗಳಾದುವು ಬೆಳಗ್ಗೆ ಮುಷ್ಕರಗಾರರು ಕಾಂಗ್ರೆಸ್ ಕಾರ್ಯಾಲಯದಲ್ಲಿ ಸಭೆ ಸೇರಿದ್ದರು. ಮೆರವಣಿಗೆ ಹೊರಟು ಸಂತೆಪೇಟೆ, ನೂರಡಿರಸ್ತೆ, ಡಿ ಸುಬ್ಬಯ್ಯರಸ್ತೆ ದಿವಾನ್‌ರಸ್ತೆ, ಶಿವರಾಂಪೇಟೆ ಮಾರ್ಗವಾಗಿ ಕಾಂಗ್ರೆಸ್ ಕಛೇರಿಗೆ ಬಂದರು ಮಳೆ ಪ್ರಯುಕ್ತ ನಿನ್ನೆ ಮೆರವಣಿಗೆ ಹೋರಡಲಿಲ್ಲ

ಶುಭ ಸಂದೇಶ

ಪ್ರಜಾಪ್ರತಿನಿಧಿ ಸಭೆಯ ಮಾಜಿ ಸದಸ್ಯರೂ, ಜಮೀನ್‌ದಾರರೂ ಆದ ಶ್ರೀ ಸಿ. ವೆಂಕಟಸುಬ್ಬಯ್ಯನವರು ಈ ರೀತಿ ಬರೆಯುತ್ತಾರೆ:—ತಮ್ಮ ಪತ್ರಿಕೆಯು ಎರಡನೇ ವರ್ಷವನ್ನು ಪ್ರವೇಶಿಸುತ್ತಿರುವುದನ್ನು ನೋಡಿ ಪರಮಾನಂದವಾಯಿತು. ಪತ್ರಿಕೆಯು ಚೊಕ್ಕದಾದದೂ, ಉಪಯುಕ್ತವೂ, ಅಗತ್ಯವೂ ಆದ ಸಮಾಚಾರಗಳನ್ನೊಳಗೊಂಡಿರುತ್ತಲ್ಲದೆ ಮುಖ್ಯ ವಿಷಯಗಳ ಅಗ್ರಲೇಖನ ದಿಂದೊಡಗೂಡಿರುತ್ತದೆ. ನಿಗರ್ವಿಗಳೂ, ಒಳ್ಳೆ ಸಂಪ್ರದಾಯಸ್ಥರೂ ಆದ ತಮ್ಮ ಯಜಮಾನ್ಯದಲ್ಲಿ ಪತ್ರಿಕೆಯು ಪ್ರವರ್ಧಮಾನಕ್ಕೆ ಬರಲಿ ಎಂದು ನನ್ನ ಪ್ರಾರ್ಥನೆ.

ಮದ್ರಾಸಿನಲ್ಲಿ ಸಾರ್ವತ್ರಿಕ ಮುಷ್ಕರ

ಅಂಚೆ ಮುಷ್ಕರಕ್ಕೆ ಸಹಾನುಭೂತಿ ತೋರಿಸಲು ಮದ್ರಾಸಿನ ಪ್ರಾಂತ್ಯ ಟ್ರೇಡ್ ಯೂನಿಯನ್ ಸೂಚನೆಯಂತೆ, ಕಾರ್ಮಿಕರೆಲ್ಲಾ ನಿನ್ನೆ ಮುಷ್ಕರ ಹೂಡಿದ್ದರು. ನಗರದ ಎಲ್ಲಾ ಸಂಚಾರ ಸೌಕರ್ಯಗಳೂ ಬರಿದಾಗಿದ್ದುವು ಟ್ರಾಂವೆ ಮತ್ತು ಸಿಟಿ ಬಸ್ಸುಗಳ ಪೈಕಿ ಇರಲಿಲ್ಲ. ಕಾಲೇಜುಗಳ ವಿದ್ಯಾರ್ಥಿಗಳೆಲ್ಲಾ ಹರತಾಳ ಆಚರಿಸಿದರು ಎಲ್ಲಾ ಅಂಚೆ ಕಛೇರಿಗಳೂ ಮುಚ್ಚಲ್ಪಟ್ಟಿದ್ದುವು ೩೦ ಟ್ರೇಡ್ ಯೂನಿಯನ್‌ಗಳು ಈ ಮುಷ್ಕರದಲ್ಲಿ ಭಾಗವಹಿಸಿದ್ದುವು.

ಕರಿಂಬಿದ್ ಆಕ್ರಮಿಸಲು ಇಂಡೋನೇಷಿಯನ್ನರ ಯತ್ನ

ಸಿಂಗಪುರಕ್ಕೆ ೬೦ ಮೈಲಿ ದೂರದಲ್ಲಿರುವ ಕರಿಂಬಿದ್ ದ್ವೀಪವನ್ನು ಇಂಡೋನೇಷಿಯನ್ ಸೈನ್ಯಗಳು ಮೋಟಾರ್ ಬೋಟುಗಳಿಂದ ಆಕ್ರಮಿಸಲು ಪ್ರಯತ್ನಪಟ್ಟವೆಂದೂ, ಆದರೆ ಡಚ್ ಸೈನ್ಯಗಳು ಅವರನ್ನು ಓಡಿಸಿಬಿಟ್ಟುವೆಂದೂ ವರದಿಯಾಗಿದೆ. ಇಂಡೋನೇಷಿಯನ್ ಸೈನ್ಯದಲ್ಲಿ ೧೧೦ ಮಂದಿ ಮಡಿದರೆಂದು ಹೇಳಲಾಗಿದೆ

ಹೈದರಾಬಾದಿನಲ್ಲಿ ಹೊಸ ಸುಧಾರಣೆ

ಹೈದರಾಬಾದ್ ಸಂಸ್ಥಾನದಲ್ಲಿ ಶಾಸನ ಸಭೆಯನ್ನು ಪುನರ್ ಘಟಿಸಲಾಗಿದೆ ಶಾಸನ ಸಭೆಗಳ ಚುನಾವಣೆ ಆದ ನಂತರ ಚುನಾಯಿತ ಪ್ರತಿನಿಧಿಗಳ ಪೈಕಿ ಒಬ್ಬ ಹಿಂದೂ, ಒಬ್ಬ ಮುಸ್ಲಿಮರನ್ನು ಮಂತ್ರಿಗಳನ್ನಾಗಿ ನೇಮಿಸಿಕೊಳ್ಳಲಾಗುವುದು ... [illegible]

ಸಾಧ್ವಿ

ತಾ|| ೨೪-೭-೪೬ ಬುಧವಾರ

ಮೈಸೂರು ಕಾಂಗ್ರೆಸ್ ಅಧ್ಯಕ್ಷತೆ

ಉಮೇದುವಾರರಾಗಿ ನಿಂತಿರುವ ಯಾರೊಬ್ಬ ಮಹನೀಯರೂ ತಮ್ಮ ಉಮೇದವಾರಿಕೆಯನ್ನು ಹಿಂದಕ್ಕೆ ತೆಗೆದುಕೊಂಡಿಲ್ಲವಾದುದರಿಂದ ಮೈಸೂರು ಕಾಂಗ್ರೆಸ್ಸಿನ ಮುಂದಿನ ಅಧಿವೇಶನಕ್ಕೆ ಅಧ್ಯಕ್ಷರನ್ನು ಚುನಾಯಿಸುವ ಕಾರ್ಯದಲ್ಲಿ ಸ್ಪರ್ಧೆಯು ಉಂಟಾಗಿರುತ್ತದೆ, ಸ್ಪರ್ಧೆಯಿಂದಲೇ ಯಾವ ಅನರ್ಥವೂ ಸಂಭವಿಸುವುದಿಲ್ಲ. ಆದರೆ ಅದು ಉದಾತ್ತ ಧ್ಯೇಯ ಸಾಧನೆಗಾಗಿ ಉನ್ನತ ಮಟ್ಟದಲ್ಲಿ ತಕ್ಕುದ ಆಧಾರದ ಮೇಲೆ ನಡೆಯಬೇಕು. ಈ ಚುನಾವಣೆಯು ಅದೇ ಕ್ರಮದಲ್ಲಿ ಜರುಗಲೆಂದು ನಾವು ಹಾರೈಸುತ್ತೇವೆ.

ಸ್ಪರ್ಧೆ ಇಲ್ಲದೆ ಸರ್ವ ಸಮ್ಮತವಾದ ಒಬ್ಬರನ್ನು ಅಧ್ಯಕ್ಷಸ್ಥಾನಕ್ಕೆ ಚುನಾಯಿಸುವ ಉದ್ದೇಶದಿಂದ ಹಿಂದೆ ಇದೇ ಸ್ಥಾನಕ್ಕೆ ಉಮೇದುವಾರರಾಗಿದ್ದವರೆಲ್ಲರೂ ಪರಸ್ಪರ ಸಮ್ಮತಿಯಿಂದ ತಮ್ಮ ಹೆಸರುಗಳನ್ನು ಹಿಂದಕ್ಕೆ ತೆಗೆದುಕೊಂಡರು. ಆದರೆ ಆ ಉದ್ದೇಶವು ಈಡೇರುವಂತೆ ಕಾಣುವುದಿಲ್ಲ ಆದುದರಿಂದಲೇ ಮತ್ತೆ ಸ್ಪರ್ಧೆಯು ಏರ್ಪಟ್ಟಿದೆ ಇದಕ್ಕಾಗಿ ಯಾರೂ ವಿಷಾದಿಸಬೇಕಾಗಿಲ್ಲ. ಸ್ಪರ್ಧೆಯ ದ್ವಾರೇನೇ ಮತದಾರರಲ್ಲಿ ತುಲನಾತ್ಮಕ ರೂಪವಾದ ವಿಮರ್ಶೆಗೆ ಅವಕಾಶ ಉಂಟಾಗುವುದು. ಮತ್ತು ಒಂದೊಂದು ಪಂಗಡದವರ ಕಾರ್ಯನೀತಿಯು ಖಚಿತವಾಗಿ ವೇದ್ಯವಾಗುವುದು. ಸಂಸ್ಥೆಯು ಮುಂದೆ ಅನುಸರಿಸಬೇಕಾದ ಮಾರ್ಗವು ನಿರ್ಧರಿಸಲ್ಪಡುವುದು ಆದ್ದರಿಂದ ಈ ಚುನಾವಣೆಯಲ್ಲಿ ಸ್ಪರ್ಧೆಯು ಇರುವುದಕ್ಕಾಗಿ ಯಾರೂ ವಿಸ್ಮಯಗೊಳ್ಳಬೇಕಾಗಿಲ್ಲ ಚುನಾವಣೆಯು ಸ್ವಚ್ಛವಾಗಿಯೂ, ನಿರ್ಮಲವಾಗಿಯೂ ಇರುವ ವಾತಾವರಣದಲ್ಲಿ ನಡೆಯಲೆಂದು ಎಲ್ಲರೂ ಆಶಿಸುವರು.

ಉಮೇದವಾರರಾಗಿರುವ ಮಹನೀಯರುಗಳ ಅರ್ಹತೆಯ ವಿಷಯದಲ್ಲಿ ಯಾರೂ ಎರಡನೆಯ ಮಾತನ್ನು ಹೇಳಲಾರರು ಎಲ್ಲರೂ ಅರಿತು ನುರಿತು, ದೇಶಕ್ಕಾಗಿ ತ್ಯಾಗ ಮಾಡಿದ ಮಹನೀಯರುಗಳೇ. ಆದರೆ ಚುನಾವಣೆಯಲ್ಲಿ ಯಾವ ನೀತಿಯನ್ನು ಅನುಸರಿಸಬೇಕೆಂಬುದು ಮುಖ್ಯ ಪ್ರಶ್ನೆ. ಹಿಂದೆ ಅಧ್ಯಕ್ಷರಾಗಿದ್ದ ಹಲವರೂ ಈಗ ನಿಂತಿದ್ದಾರೆ. ಇದರ ಬಗ್ಗೆ ನಾವು ಹೇಳುವುದಿಷ್ಟೆ ಅಖಿಲ ಭಾರತ ಕಾಂಗ್ರೆಸ್ಸಿಗೆ ಪಂಡಿತ ಜವಹರಲಾಲರೇ ಮುಂತಾದವರು ಎರಡು ಮೂರು ಬಾರಿ ಅಧ್ಯಕ್ಷರಾಗಿದ್ದಾರೆ. ಆದರೆ ಮೈಸೂರಿನ ಸ್ಥಿತಿಯೇ ಬೇರೆ ಇದುವರೆಗೆ ಅಧ್ಯಕ್ಷರಾಗಿದ್ದವರಿಗೆ ಸರಿ ಸಮಾನರಾದವರು ಇನ್ನೂ ಅನೇಕರಿದ್ದಾರೆ. ಅವರುಗಳ ಸರದಿಯು ಮುಗಿದನಂತರ ಹಳಬರನ್ನೇ ಪುನಃ ಚುನಾಯಿಸುವ ವಿಷಯವನ್ನು ಪರಿಶೀಲಿಸಬಹುದು ಕಾಂಗ್ರೆಸ್ಸಿನಲ್ಲಿ ಹೊಸ ರಕ್ತವು ಪ್ರವಹಿಸುವಂತೆ ಮಾಡಬೇಕೆಂದು ಪಂಡಿತ ನೆಹರುರವರು ಹೇಳಿರುವ ಅಭಿಪ್ರಾಯದ ಅರ್ಥವೇ ಇದು.

ಪ್ರಕೃತದಲ್ಲಿ ಅಧ್ಯಕ್ಷಸ್ಥಾನಕ್ಕೆ ಸರ್ವರೀತಿಗಳಿಂದಲೂ ಅನುರೂಪರಾದವರೆಂದರೆ ಶ್ರೀ ಬಂಗಲರಾಯ ರೆಡ್ಡಿಯವರೇ ಇವರ ವಿಷಯವಾಗಿ ಹಿಂದೆಯೇ ನಾವು ಬರೆದಿದ್ದೇವೆ ಅವರನ್ನೇ ಚುನಾಯಿಸುವುದು ಅತ್ಯಂತ ಸಾಧುವಾಗಿದೆಯೆಂದು ಮತ್ತೊಮ್ಮೆ ಸೂಚಿಸುವೆವು

ಬಡವರಿಗೆ ಅನ್ನದಾನ

ನಮ್ಮನ್ನಾಳುವ ಮಹಾಸ್ವಾಮಿಯವರಿಗೂ ಮತ್ತು ಅವರ ಕುಟುಂಬವರ್ಗಕ್ಕೂ ಶ್ರೇಯೋಭಿವೃದ್ಧಿಯನ್ನು ಹಾರೈಸುವುದಕ್ಕಾಗಿಯೂ, ಮಹಾಸ್ವಾಮಿಯವರ ೬೩ನೇ ವರ್ಧಂತ್ಯುತ್ಸವದ ಸಂತೋಷಾರ್ಥವಾಗಿಯೂ, ದೇಶದ ಹಿತಕ್ಕಾಗಿಯೂ ತಾ|| ೨೫-೭-೪೬ ನೇ ಗುರುವಾರ ರಾಜಧಾನಿಯ ವರ್ತಕರ ಪರವಾಗಿಯೂ ಮತ್ತು ಮಹಾಜನಗಳ ಪರವಾಗಿಯೂ, ಕುಂಚಟಿಗರ ಶ್ರೀರಾಮಮಂದಿರದ ಮೂಲಕ ಬಡವರಿಗೆ ಅನ್ನದಾನ ಮಾಡಲು ಏರ್ಪಾಡು ಮಾಡುತ್ತಿರುವುದಾಗಿ ಈ ಮಹತ್ಕಾರ್ಯಕ್ಕೆ ಧರ್ಮಿಷ್ಠರಾದ ಮಹನೀಯರುಗಳು ಉದಾರ ಮನಸ್ಸಿನಿಂದ ಧನ, ಧಾನ್ಯರೂಪವಾಗಿ ಸಹಾಯಮಾಡುವುದಲ್ಲದೆ, ಕಾರ್ಯದ ದಿವಸ ಸರ್ವರೂ ಸಹಕರಿಸಬೇಕೆಂದು ಕಾರ್ಯದರ್ಶಿಗಳಾದ ಶ್ರೀ ಎ. ಹೆಚ್. ಕರಿಯಣ್ಣನವರೂ ಸಮಿತಿಯ ಸದಸ್ಯರಾದ ಶ್ರೀ ಬಿ. ಬಾಲದಾಸಪ್ಪನವರೂ ಪ್ರಾರ್ಥಿಸಿದ್ದಾರೆ.

ಮೈಸೂರು ಸೀಮೆಯ ಗ್ರಾಮ ನೌಕರಿ

ಮೈಸೂರು ಸೀಮೆಯಲ್ಲಿ ಕೆಳ ದರ್ಜೆಯ ನೌಕರಿ ಎಂದರೆ, ಪಟೇಲ, ಶ್ಯಾನುಭೋಗ, ಮತ್ತು ಚಕ್ರ ಕೆಲಸಗಳು. ಈ ಮೂರು ಸ್ಥಾನಗಳ ಅವ್ಯವಸ್ಥೆ ಅಷ್ಟಿಷ್ಟೆಂದು ಹೇಳಿ ಬರೆಯುವುದಕ್ಕೆ ಸಾಧ್ಯವಿಲ್ಲ. ಶ್ಯಾನುಭೋಗರಿಗೆ ಮತ್ತು ಪಟೇಲರಿಗೆ ಮೈಸೂರು ಸರ್ಕಾರ ಸ್ಥಾಪಿತವಾದಾಗ ವಿಧಾಯಕವಾದ ವರ್ಷಕ್ಕೊಂದುವೇಳೆ ಕೊಡತಕ್ಕ ಪೋಟಿಗೆ ತಸ್ತೀಕ್ ವರಿವಿಗೂ ಯಾವುದೊಂದು ವಿಧದಲ್ಲೂ ಸರಿಯಾದ ಉತ್ತಮ ಸ್ಥಿತಿಯಲ್ಲಿ ಬದಲಾವಣೆ ಹೊಂದಲೇ ಇಲ್ಲ. ಚಕ್ರರುಗಳ ಕಷ್ಟಸುಖವನ್ನಂತೂ ಅರಿತಂಥ ಅಧಿಕಾರಿಗಳು ಅಥವಾ ತಿಳಿದುಕೊಳ್ಳಬೇಕೆಂತ ಕುತೂಹಲವುಳ್ಳ ಅಧಿಕಾರಿಗಳು ಯಾರೂ ಈ ಸರ್ಕಾರದಲ್ಲಿ ಇಲ್ಲವೇ ಇಲ್ಲವೆಂತ ಹೇಳಿದರೆ ತಪ್ಪಾಗಲಾರದು. ಹಾಲಿ ಯುದ್ಧ ಸಂಭವಿಸಿಂದೀಚೆಗೆ ಉಂಟಾದ ಪರಿಸ್ಥಿತಿಯಿಂದ ಸರ್ಕಾರದ ನೌಕರರುಗಳಿಗೆ ಸಂಬಳ ಮತ್ತು ಭತ್ಯವನ್ನು ಇನ್ನೂ ಇತರ ಸೌಕರ್ಯಗಳನ್ನು ಯಥೋಚಿತವಾಗಿ ಸರ್ಕಾರದವರು ಅನುಕೂಲಪಡಿಸಿಕೊಟ್ಟಂತೆ ಈ ಕೆಳ ದರ್ಜೆಯ ನೌಕರರುಗಳಿಗೆ ಯಾವ ವಿಧದಲ್ಲೂ ಅನುಕೂಲ ಉಂಟು ಮಾಡಿ ಕೊಡದೆ ಸರ್ಕಾರಕ್ಕೆ ಆಗಿಂದಾಗ್ಗೆ ಆಗಬೇಕಾದ ಅನೇಕ ವಿಧವಾದ ಲೆಕ್ಕಪತ್ರಗಳ ಕೆಲಸದ ಹೊರೆಯನ್ನು ಕ್ಷಣ ಪುರಸತ್ತಿಲ್ಲದಂತೆ ಹೊರಿಸಿ ಮಾಡಿಸಿಕೊಳ್ಳುತ್ತಿರುವುದು ಬಹಳ ವಿಷಾದನೀಯ ವಿಷಯವಾಗಿರುತ್ತೆ. ಯುದ್ಧ ಪರಿಸ್ಥಿತಿಯಿಂದ ಸರ್ಕಾರಕ್ಕೆ ಹೊಂದಿದ ಹೆಚ್ಚಿಗೆ ಕೆಲಸಗಳಿಗೆಲ್ಲಾ ಹೆಚ್ಚು ಹೆಚ್ಚು ಕಲಾಸಿಗಳನ್ನು ಏರ್ಪಡಿಸಿ ಕೆಲಸದವರನ್ನು ಏರ್ಪಡಿಸಿ ಕೆಲಸ ಮಾಡಿಕೊಂಡು ಸಂಬಳ ಅಲೋಯನ್ಸು ಇವನ್ನು ಖರ್ಚು ಮಾಡಿರುವ ಸಂದರ್ಭದಲ್ಲಿ ಗ್ರಾಮ ನೌಕರರ ವಿಚಾರದಲ್ಲಿ ಯಾವುದೊಂದು ಕೆಲಸಕ್ಕೂ ಅವರನ್ನೇ ಗುರಿ ಮಾಡಿ ಅವರಿಂದಲೇ ಮಾಡಿಸಿ ದುಡಿಸಿ ಕೆಲಸ ತೆಗೆದುಕೊಳ್ಳುತ್ತಿರುತ್ತಾರೆ ಹೀಗಿದ್ದು ಇವರಲ್ಲಿ ಘನ ಸರ್ಕಾರದವರು ಕರುಣೆ ತೋರಿಸದಿರುವುದು ಬಹಳ ಅನ್ಯಾಯವಾಗಿರುತ್ತೆ. ಈ ಗ್ರಾಮ ನೌಕರರುಗಳಿಗೆ ವರ್ಷಕ್ಕೊಂದು ವೇಳೆ ಕೊಡತಕ್ಕ ಪೋಟಿಗೆಯಿಂದ ಮತ್ತು ಚಕ್ರರುಗಳಿಗೆ ಬಿಟ್ಟಿರತಕ್ಕ ಇನಾಂತಿಯಿಂದ ಎಷ್ಟರ ಮಟ್ಟಿಗೆ ಇವರ ಜೀವನವನ್ನು ನಡೆಸಬಹುದೆಂಬುದನ್ನು ಘನ-ಸರ್ಕಾರದವರು ತಿಳಿದುಕೊಳ್ಳಲಿ. ಈ ಬಡ ನೌಕರರುಗಳಿಗೆ ಸರಿಯಾದ ರೀತಿಯಲ್ಲಿ ಈಗಿನ ಕಾಲಸ್ಥಿತಿಗೆ ತಕ್ಕಂತೆ ಭತ್ಯವನ್ನು ಕೊಟ್ಟು ಕಾಪಾಡುತ್ತಾರೆಂತ ನಂಬಲಾಗಿದೆ

೨೨-೭-೪೬ ಎ. ಶ್ರೀನಿವಾಸಮೂರ್ತಿ,
ಹೊನ್ನಹಳ್ಳಿ ಶ್ಯಾನುಭೋಗ್,
ಚಾಮರಾಜನಗರದ ತಾಲ್ಲೂಕು

ಐರೋಪ್ಯ ಪಾದ್ರಿಗೆ ಶಿಕ್ಷೆ

ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರು ನಡೆಸುತ್ತಿರುವ ಸತ್ಯಾಗ್ರಹದಲ್ಲಿ ಸಹಾನುಭೂತಿ ತೋರಿಸಿದ ಐರೋಪ್ಯ ಪಾದ್ರಿ ರೆ|| ಮೈಕೇಲ್ ಸ್ಕಾಟರವರಿಗೆ ೫ ಪೌನುಗಳ ಜುಲ್ಮಾನೆ ವಿಧಿಸಲಾಗಿದೆ. ಇವರು ಜುಲ್ಮಾನೆ ಕೊಡಲು ನಿರಾಕರಿಸಿದ್ದರಿಂದ ೩ ತಿಂಗಳ ಸಕ್ರಮ ಶಿಕ್ಷೆಗೆ ಗುರಿಯಾದರು

ಬೊಲಿವಿಯಾದಲ್ಲಿ ಕ್ರಾಂತಿ

ಬೊಲಿವಿಯಾ ಅಧ್ಯಕ್ಷರ ಕೊಲೆಯಾಗಿದೆ ಈಗ ಪ್ರಜಾ ಪಕ್ಷದ ಪ್ರಮುಖರು ಆಡಳಿತಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಸೇನೆಯ ಸಹಾಯ ಪಡೆದು ಹೊಸ ಸರ್ಕಾರ ರೂಪುಗೊಳ್ಳಲು ಪ್ರಯತ್ನ ನಡೆಯುತ್ತಿದೆ

Edited printed and published by A. S. Nagarajan at the Sadhvi Press D. Subbiah Road Mysore

ಚಾಮುಂಡೇಶ್ವರಿಯಲ್ಲಿ
22—7—46ರಿಂದ
ಯಶಸ್ವಿಯಾದ 2 ನೇ ವಾರ
ಯಾಕೂಬ್ ಮತ್ತು ಚಂದ್ರಪ್ರಭ
ನಟಿಸಿರುವ
ಯತೀಂ
(YATEEM)
ಇದುವರೆಗೂ ನೋಡದಿದ್ದರೆ ಇಂದೇ
ನೋಡಿ ಆನಂದಿಸಿ
A Sri Shanti Film's Release

ಟಿ. ಸಿ. ನಟರಾಜ್
ಔಷಧಾಲಯ
ನೇತ್ರ ಪರೀಕ್ಷೆಯು ಉಚಿತವಾಗಿ
ಮಾಡಲ್ಪಡುತ್ತದೆ.
ಅಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.
ಧುಂಡೂರವರ ಆಯುರ್ವೇದೀಯ ಔಷಧಗಳೆಲ್ಲವೂ ದೊರೆಯುತ್ತವೆ.

ರಾಜ್ ಕಮಲ್ ಟಾಕೀಸ್, ಮೈಸೂರು
೧೯೪೬ ನೇ ಜುಲೈ ೨೪ ನೇ ಬುಧವಾರದಿಂದ ೩ನೇ ವಾರ
ವನಮಾಲ, ಉಲ್ಲಾಸ್, ಪರ್ಬತ್ ಪೆ ಅಪ್ನಾ ಡೇರಾ
ಶ್ರೀ ಶಾಂತಾರಾಮರವರ ದಿಗ್ದರ್ಶಕತ್ವ
—: ಮುಂದಿನ ಬದಲಾವಣೆ: —
" ಜನ್‌ಸ್ವಾಲ್ " ಕನ್ನಡದೇಶಿ ಚಿತ್ರ.

೨೬-೭-೪೬ರಿಂದ ೪ ದಿವಸಗಳು ಮಾತ್ರ
ಪ್ರಾತಃಕಾಲ ೧೦-೩೦ಕ್ಕೆ
ನ್ಯೂ ಥಿಯೇಟರ್ಸ್ ರವರ
" ಹಾವಾಡಿಗ "
(ಸಪೇರಾ)
ಪಾತ್ರ—ಕಾನನ್ ಮತ್ತು ನವಾಬ್

Rajkamal Talkies, Mysore

Due to constant enquiries and requests from our benign patrons to have **Morning Shows**, we have decided to start the same from **Friday** the 26th **July** 1946, with such of those out standing pictures of **New Theatres**, **Bombay Talkies**, and other selected ones that were shown long time back in the city. Our object is only to exhibit to our esteemed patrons those programmes which are best to refresh and to recreate their happy memories, projected perfectly with the latest R. C. A. High Fidelity Sound System with High Intensity Arc Lamp. "An hour happily spent is worth its weight in gold."

Dated 24th July 46 The Management

ಶಾಸನ ಸಭೆಯಲ್ಲಿ ಆಫ್ರಿಕನ್ನರ ಬಹುಮತ

ದಕ್ಷಿಣ ಆಫ್ರಿಕದ ಗೋಲ್ಡ್‌ಕೋಸ್ಟ್ ಶಾಸನಸಭೆಗೆ ಆಫ್ರಿಕನ್ನರೇ ಬಹುಮತದಿಂದ ಆರಿಸಿ ಬಂದಿದ್ದಾರೆ. ಆ ಶಾಸನ ಸಭೆಯಲ್ಲಿ ಅಲ್ಲಿನ ದೇಶೀಯರು ಬಹುಮತ ಗಳಿಸುತ್ತಿರುವುದು ಇತಿಹಾಸದಲ್ಲಿ ಇದೇ ಮೊದಲು. ಇಲ್ಲಿನ ಆಫ್ರಿಕನ್ನರ ಆಡಳಿತದಲ್ಲಿ ಭಾಗವಹಿಸುವುದು ತಮಗೆ ಸಂತೃಪ್ತಿಯ ಸಂಗತಿಯಾಗುವುದಾಗಿ ಇಂಗ್ಲೆಂಡಿನ ದೊರೆ ಜಾರ್ಜ್‌ರವರು ಸಂದೇಶ ಕಳಿಸಿದ್ದಾರೆ. ಸಭೆಯು ೩೧ ಸ್ಥಾನಗಳಲ್ಲಿ ೨೧ ಸ್ಥಾನಗಳು ಆಫ್ರಿಕನರಿಗೆ ದೊರೆತಿದೆ. ಈ ಪೈಕಿ ೧೮ ಚುನಾಯಿತರಾಗಿ ಬಂದದ್ದು.

ಶಿವರಾಜರು ಸೋತರು

ಮದ್ರಾಸಿನಿಂದ ರಾಜ್ಯಾಂಗ ರಚನಾ ಸಭೆಗೆ ಮೊನ್ನೆ ನಡೆದ ಚುನಾವಣೆಯಲ್ಲಿ ಮೇಯರ್ ಶ್ರೀ ಶಿವರಾಜರು ಚುನಾಯಿತರಾದರೆಂದೂ, ಕಾಂಗ್ರೆಸ್ ಪಕ್ಷದ ಶ್ರೀಮತಿ ವೇಲಾಯುಧನ್‌ರವರು ಪರಾಜಿತರಾದರೆಂದೂ, ತಿಳಿಸಲಾಗಿದ್ದಿತು. ಆದರೆ ಈ ಬಗ್ಗೆ ಪುನಃ ಎಣಿಕೆ ನಡೆಯಿತು. ಶ್ರೀಮತಿ ವೇಲಾಯುಧನ್‌ರವರಿಗೆ ೨೬೬ ವೋಟುಗಳೂ ಶ್ರೀ ಶಿವರಾಜರಿಗೆ ೨೪೪ ವೋಟುಗಳೂ ಬಂದು ಶ್ರೀ ಶಿವರಾಜರು ಪರಾಜಿತರಾದರು. ಕಾಂಗ್ರೆಸ್ಸಿನ ಎಲ್ಲಾ ೪೫ ಮಂದಿಯೂ ಜಯ ಶೀಲರಾದಂತಾಯಿತು.

ಎರಡಾಣೆಗೆ ೫ ಲಕ್ಷ ಕೋಟಿ ರೂ.ಗಳ ನೋಟು!

ಹಂಗೇರಿಯಲ್ಲಿ ಇನ್‌ಫ್ಲೇಷನ್ ಪರಿಣಾಮವಾಗಿ ಯುದ್ಧಾತ್ಪೂರ್ವ ೫ ಲಕ್ಷ ಕೋಟಿ ರೂ.ಗಳ ಬೆಲೆ ಬಾಳುತ್ತಿದ್ದ ನೋಟುಗಳಿಗೆ ಕೇವಲ ಎರಡಾಣೆ ದೊರಕುವುದೇ ಮಹಾ ಪ್ರಯಾಸವಾಗಿ ಹೋಗಿದೆ. ಅಲ್ಲಿ ಆಗಸ್ಟ್ ೧ ನೇ ದಿನದಿಂದ ಹೊಸನಾಣ್ಯ ಚಲಾವಣೆಗೆ ಬರಲಿದೆ.

ಸಿಂಗಪುರದಲ್ಲಿ ಮುಷ್ಕರ

ಸಿಂಗಪುರದ ನೌಕಾ ನಿಲ್ದಾಣದಲ್ಲಿ ಕೆಲಸ ಮಾಡುವ ೧೫ ಸಾವಿರ ಕೆಲಸಗಾರರು ತಮ್ಮ ಸಂಬಳ ಸಾರಿಗೆಗಳನ್ನು ಹೆಚ್ಚಿಸಬೇಕೆಂದು ಅಧಿಕಾರಿಗಳೊಡನೆ ನಡೆಸಿದ ಸಂಧಾನ ವಿಫಲವಾದದ್ದರಿಂದ ನೆನ್ನೆಯಿಂದ ಮುಷ್ಕರ ಹೂಡಿದ್ದಾರೆ.

ಶ್ರೀ|| ಎಂ. ಎಚ್. ಷಾರವರ ಆಗಮನ

ಮೈಸೂರು ೨೫

ಬೆಂಗಳೂರಿನ ಹಿಂದೂಸ್ಥಾನ್ ವಿಮಾನ ಕಾರ್ಖಾನೆಯ ಜನರಲ್ ಮ್ಯಾನೇಜರಾಗಿದ್ದ ಶ್ರೀ|| ಎಂ.ಎಚ್. ಷಾರವರು ಇಂದು ಬೆಳಿಗ್ಗೆ ಇಲ್ಲಿಗೆ ಆಗಮಿಸಿದರು. ಇಂದು ಬೆಳಿಗ್ಗೆ ಗಾಂಧಿ ಸೇವಾ ಸಂಘಕ್ಕೆ ಭೇಟಿ ಇತ್ತು ಅಲ್ಲಿ ಉಪಹಾರ ಸ್ವೀಕರಿಸಿ ಪಲವು ಪ್ರಶ್ನೋತ್ತರಗಳಾದ ನಂತರ ನಗರ ಕಾಂಗ್ರೆಸ್ ಕಛೇರಿಯಲ್ಲಿ ಅಂಚೆ ಕೆಲಸಗಾರರನ್ನು ಕುರಿತು ಭಾಷಣ ಮಾಡಿದರು. ಬೆಳವಾಡಿ ಗ್ರಾಮದಲ್ಲಿರುವ ಕಸ್ತೂರಿ ಬಾ ಶಿಕ್ಷಣ ಶಿಬಿರಕ್ಕೆ ಭೇಟಿಕೊಟ್ಟು ಅಲ್ಲಿನ ಕೆಲಸ ಕಾರ್ಯಗಳ ಬಗ್ಗೆ ತಮ್ಮ ಮೆಚ್ಚಿಗೆಯನ್ನು ಸೂಚಿಸಿದರು.

—

* ಪೂನಾ ನಗರದಲ್ಲಿ [illegible]

ಫೋ: ನಂ. 302 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಗುರುವಾರ ೨೫—೭—೪೬ [ಸಂಚಿಕೆ ೪

ಅಂಚೆ ಮುಷ್ಕರದ ಬಗ್ಗೆ ವೈಸರಾಯರ ಸಂಧಾನ

ಕಾಂಗ್ರೆಸ್ ಅಧ್ಯಕ್ಷ ಚುನಾವಣೆ

ಮೈಸೂರು ೨೫

ಮೈಸೂರು ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಇದೇ ಮಾಹೆ ೩೧ ನೇ ತಾ|| ಬುಧವಾರ ಬೆಳಿಗ್ಗೆ ೯ ಗಂಟೆಯಿಂದ ೧೨ ಗಂಟೆ ವರೆವಿಗೂ, ಮಧ್ಯಾಹ್ನ ೩ ಗಂಟೆಯಿಂದ ಸಂಜೆ ೬ ಗಂಟೆ ವರೆವಿಗೂ ಚುನಾವಣೆಯು ಕಾಂಗ್ರೆಸ್ ಕಛೇರಿಯಲ್ಲಿ ಜರುಗುವುದು. ಮಹಾಧಿವೇಶನದ ಈ ನಗರದ ಎಲ್ಲ ಪ್ರತಿನಿಧಿಗಳೂ ಇದನ್ನೇ ಆಹ್ವಾನವೆಂದು ಪರಿಗಣಿಸಿ ಅಂದಿನ ಚುನಾವಣೆಯಲ್ಲಿ ಭಾಗ ವಹಿಸಬೇಕೆಂದು ನಗರದ ಚುನಾವಣಾಧಿಕಾರಿಗಳಾದ ಶ್ರೀ ಬಿ. ನಾರಾಯಣಸ್ವಾಮಿಯವರು ಪ್ರಾರ್ಥಿಸಿದ್ದಾರೆ.

ಕವಿ ದೇವೋತ್ತಮ ಜೋಯಿಸರ ನಿಧನ

ಕನ್ನಡ ಕವಿಗಳಾದ ವೇ|| ಬ್ರ|| ಶ್ರೀ ದೇವೋತ್ತಮ ಜೋಯಿಸರು ತಮ್ಮ ೯೦ ನೇ ವಯಸ್ಸಿನಲ್ಲಿ ನಿನ್ನೆ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಶ್ರೀ ಸರಸ್ವತೀ ಸಂಗೀತ ಸಮಾಜ

ಮೇಲ್ಕಂಡ ಸಮಾಜದ ಆಶ್ರಯದಲ್ಲಿ ರಾ ಜ ಘಾ ಸಿ ಯ ಡಿ ಜನುಮ [illegible] ಹೈಸ್ಕೂಲಿನಲ್ಲಿ ತಾ|| ೨೬ ನೇ ಶುಕ್ರವಾರ ಸಂಜೆ ೬|| ಗಂಟೆಗೆ [illegible] ಶ್ರೀಮತಿ ಗೋಪಿ [illegible] ಸಂಗೀತ ವಿದ್ವಾಂಸರವರ ಸಂಗೀತ ಏರ್ಪಡಿಸಿದ್ದಾರೆ. ಮೆಂಬರ ಗಳಲ್ಲದವರಿಗೆ ಟಿಕೆಟ್ ಮೂಲಕ ಪ್ರವೇಶ.

ಪ್ರಮೋದ ಸಂಗೀತ

ಕೃಷ್ಣರಾಜಮೊಹಲ್ಲಾ [illegible] ಯಲ್ಲಿರುವ ಶ್ರೀ [illegible] ರಾಮಮಂದಿರದಲ್ಲಿ ನಾಳೆ ಸಂಜೆ ೬|| ಗಂಟೆಗೆ [illegible] ಪ್ರದೋಷದ ಪ್ರಯುಕ್ತ ಸಂಗೀತ ಕಛೇರಿ ನಡೆಯುವುದು. ಸರ್ವರಿಗೂ ಪ್ರವೇಶವುಂಟು.

—

ಆಗ್ರ-ಮೂಂಬಳ್ಳಿ ೨೫

ಒಪ್ಪಿ ಆಗಿರುವ ವಿವೇಚನೆ [illegible] ಕ್ರಮ [illegible]

ಚನ್ನರಾಯಪಟ್ಟಣ ೨೫

[illegible]

ಅಂಚೆ ನಾಯಕರೊಡನೆ ವೈಸರಾಯರ ಸಂಧಾನ

ವೈಸರಾಯರು ತಾವೇ ಖುದ್ದಾಗಿ ಅಂಚೆ ಮುಷ್ಕರದ ಬಗ್ಗೆ ಸಂಧಾನ ಆರಂಭಿಸುವರೆಂದು ಡೆ ಹ ಲಿ ಯಿಂ ದ ಸುದ್ದಿ ಬಂದಿದೆ. ಅರ್ಧಾಂತ್ಯವಾಕ್ಕೆ ತೆರಳಲಿದ್ದ ಡಿವಾನ್ ಚಮನಲಾಲರನ್ನು ತಮ್ಮ ಪ್ರಯಾಣವನ್ನು ಮುಂದುವರಿಸಬೇಕೆಂದು ವೈಸರಾಯರು ಪ್ರಾರ್ಥಿಸಿದ್ದಾರೆ. ಚಮನಲಾಲರು ನಿನ್ನೆ ಸಂಜೆ ವೈಸರಾಯರನ್ನು ಭೇಟಿಮಾಡಿ ಪರಿಸ್ಥಿತಿಯನ್ನು ವಿವರಿಸಿದರೆಂದು ಹೇಳಲಾಗಿದೆ. ಅಂಚೆ ಫೆಡರೇಷನ್ನಿನವರು ತಮ್ಮ ಬೇಡಿಕೆಗಳು ೨೬ ನೇ ತಾ|| ನೊಳಗೆ ಸಲ್ಲಿಸಲ್ಪಡದಿದ್ದರೆ ತಾವೂ ಮುಷ್ಕರ ಹೂಡುವುದಾಗಿ ನೋಟೀಸ್ ಇತ್ತಿದ್ದಾರೆಂದು ಗೊತ್ತಾಗಿದೆ. ಈ ಮಧ್ಯೆ ಬೊಂಬಾಯಿಯಲ್ಲಿ ಅಂಚೆ ಮುಷ್ಕರದ ಸಮಿತಿಯು ಜರೂರು ಸಭೆಸೇರಿ ಮುಷ್ಕರ ನಿಲ್ಲಿಸುವ ಬಗ್ಗೆ ಆಲೋಚನೆ ನಡೆಸುತ್ತಿದೆಯೆಂದೂ ವರದಿಯಾಗಿದೆ. ಪರಿಸ್ಥಿತಿಯನ್ನು ನೋಡಿದರೆ ಒಂದು ಎರಡು ಮೂರು ದಿನಗಳಲ್ಲಿ ಮುಷ್ಕರವು ಮುಕ್ತಾಯವಾಗಬಹುದೆಂಬ ನಂಬಿಕೆ ಹುಟ್ಟಿದೆ.

ಸಿಂಧ್‌ನಲ್ಲಿ ಹೆಚ್ಚು ಸಂಬಳ

ಜೀವನದ ಖರ್ಚು ಹೆಚ್ಚಿರುವ ಸಲುವಾಗಿ ಸಿಂಧ್ ಪ್ರಾಂತ್ಯದ ೨೫ ಸಾವಿರ ಸರ್ಕಾರಿ ನೌಕರರ ಸಂಬಳವನ್ನು ಹೆಚ್ಚಿಸುವ ಆಜ್ಞೆ ಹೊರಬಿದ್ದಿದೆ. ಮ್ಯಾಟ್ರಿಕ್ಯುಲೇಷನ್ ಆಗಿರುವವರಿಗೆ ೫೦ ರೂ ಪದವೀಧರರಿಗೆ ೬೦ ರೂ ಗಳ ಆರಂಭದ ಸಂಬಳವನ್ನು ಆರಂಭಿಸಲಾಗುವುದು. ಈ ಹೆಚ್ಚಳದಿಂದ ಸರ್ಕಾರಕ್ಕೆ ವರ್ಷಕ್ಕೆ ೪೦ ಲಕ್ಷ ರೂಗಳ ಖರ್ಚಾಗುವುದು.

ಟರ್ಕಿಯಲ್ಲಿ ಚುನಾವಣಾ ಫಲಿತಾಂಶ

ಟರ್ಕಿ ಶಾಸನ ಸಭೆಗೆ ನಡೆದ ಮಹಾ ಚುನಾವಣೆಯ ಫಲಿತಾಂಶ ಹೊರಬಿದ್ದಿದೆ. ರಿಪಬ್ಲಿಕನ್ (ಸರ್ಕಾರಿ ಪಕ್ಷ) ೩೯೫, ಪ್ರಜಾಪಕ್ಷ ೬೫ ಮತ್ತು ಸ್ವತಂತ್ರರು ೪.

ಸಂಯುಕ್ತ ರಾಷ್ಟ್ರಗಳಿಂದ ಭಾರತಕ್ಕೆ ಆಹಾರ

[illegible]

ಪೌರಸಭಾ ಸದಸ್ಯರ ಸಂಖ್ಯೆ ಹೆಚ್ಚಿಸಬೇಕು

ಸ್ವಂ ವರದಿಗಾರ] ಬೆಂಗಳೂರು ೨೫

ನಿನ್ನೆಯ ದಿನ ಬೆಂಗಳೂರಿನ ಕೆಲವು ಮಂದಿ ಪೌರಸಭಾ ಸದಸ್ಯರುಗಳು ಆರೋಗ್ಯ ಮಂತ್ರಿಗಳಾದ ಡಾ|| ಟಿ. ಸಿ. ಎಂ. ರಾಯನ್‌ರವರನ್ನು ಭೇಟಿಮಾಡಿ ಈಗ ಬೆಂಗಳೂರು ಪೌರಸಭಾ ಸದಸ್ಯರ ಸಂಖ್ಯೆಯಲ್ಲಿ ಇನ್ನೂ ಹತ್ತು ಸ್ಥಾನಗಳನ್ನಾದರೂ ಹೆಚ್ಚಿಸಬೇಕೆಂದು ಕೇಳಿಕೊಂಡರೆಂದೂ, ಸಚಿವರು ಪರಿಶೀಲಿಸುವುದಾಗಿ ಉತ್ತರವನ್ನು ಕೊಟ್ಟರೆಂದೂ ಗೊತ್ತಾಗಿದೆ.

ಯುದ್ಧನಿಧಿ ಸಭೆ

ಮೈಸೂರು ಸಂಸ್ಥಾನದ ಯುದ್ಧನಿಧಿಯ ಕಡೇ ಸಭೆಯು ಇಂದಿನ ದಾ|| ಸಿ. ಬಿ. ರಾಮರಾವ್ ಅಧ್ಯಕ್ಷತೆಯಲ್ಲಿ ನೆರವೇರಿತು.

೦ ೦ ೦ ೦

ಸಂಸ್ಥಾನದ ವೃತ್ತಪತ್ರಿಕೋದ್ಯೋಗಿಗಳ ಸಂಘಕ್ಕೆ ಪ್ರಮುಖರಾದ ದಿವಾಕರ್, ಡಾ|| ಕೇಸ್ಕರ್ ಮತ್ತು ಶ್ರೀಮತಿ ಕಮಲಾದೇವಿಯವರುಗಳು ಭೇಟಿ ಇತ್ತಿದ್ದರು. ಉಪಹಾರನಂತರ ಅತಿಥಿಗಳು ಕರ್ನಾಟಕ ಪ್ರಾಂತದ ಬಗ್ಗೆ ಮಾತುಕಥೆ ನಡೆಸಿದರು.

೦ ೦ ೦ ೦

ನಿನ್ನೆಯ ದಿನ ಸಂಜೆ ಬಸವನಗುಡಿಯ ಮಿತ್ರ ಸಂಘದಾಶ್ರಮದಲ್ಲಿ ಕರ್ನಾಟಕ ಪ್ರಾಂತ ರಚನೆಯ ವಿಷಯವಾಗಿ ಡಾ|| ಕೇಸ್ಕರ್, ಶ್ರೀ ದಿವಾಕರ್ ಮತ್ತು ಶ್ರೀಮತಿ ಕಮಲಾದೇವಿಯವರು ಭಾಷಣ ಮಾಡಿದರು.

೦ ೦ ೦ ೦

ಕೆ. ಜಿ. ಎಫ್. ಸ್ಕೂಲಿನ ಬೋರ್ಡಿನ ಶ್ರೀ ಸಿ. [illegible] ಅವರನ್ನು ಮಂತ್ರಿಯ [illegible] ಬೆಂಗಳೂರಿನ [illegible] ಶ್ರೀ ಎಸ್. ಜಿ. ನಾರಾಯಣಗೌಡರನ್ನು ಕೆ. ಜಿ. ಎಫ್‌ಗೂ, ಶ್ರೀಯುತ [illegible] ರವರನ್ನು [illegible] ದವನ್ನಾಗಿ ಬೆಂಗಳೂರಿಗೂ ಮಿ|| ಎಂ. ಎಸ್. [illegible] ರವರನ್ನು ಕೋಲಾರ ಡಿಸ್ಟ್ರಿಕ್ಟಿನ [illegible] ವರ್ಗಾಯಿಸಲಾಗಿದೆ.

೦ ೦ ೦ ೦

ಮೈಸೂರು ಡೈರೆಕ್ಟರ್‌ರವರ [illegible] ಲ್ ಅಸಿಸ್ಟೆಂಟರಾದ ಶ್ರೀ ಟಿ. ಎಂ. [illegible] ರವರಿಗೆ ೫ ತಿಂಗಳು ೨೫ ದಿನ ಫರ್ಲೋ ರಜ ಮಂಜೂರಾಗಿದೆ.

೦ ೦ ೦ ೦

ವಿಶ್ವಕರ್ನಾಟಕ ಪತ್ರಿಕೆಗೆ ಸರ್ಕಾರದವರು ಕೊಟ್ಟಿದ್ದ ಮೊಹರಾ ನೋಟೀಸಿಗೆ ಮೇಲ್ಕಂಡ ಪತ್ರಿಕೆಯು ಉತ್ತರವನ್ನು ನಿನ್ನೆ ಕೊಟ್ಟಿತೆಂದು ಗೊತ್ತಾಗಿದೆ.

—

ಸಂಗೀತ ವಿದ್ವಾಂಸರುಗಳಿಗೆ ಸನ್ಮಾನ

ಶ್ರೀ [illegible] ಪ್ರಶಸ್ತಿಯನ್ನು ಪಡೆದ ಸಂಗೀತ ವಿದ್ವಾಂಸರುಗಳನ್ನು ಗೌರವಿಸಲು ಮತ್ತು [illegible] ಶ್ರೀ [illegible]

ಸಾಧ್ವಿ

ತಾ|| ೨೫-೭-೪೬ ಗುರುವಾರ

ವಕೀಲರ ಅನರ್ಹತೆಗಳ ರದ್ದು

ಶಾಸನ ಸಭೆಗಳಿಗೆ ಉಮೇದುವಾರರಾಗಿ ನಿಲ್ಲುವವರಿಗೆ ಇದ್ದ ಅನರ್ಹತೆಗಳನ್ನು ತಿದ್ದುಪಡಿ ಮಾಡಿ ಸರ್ಕಾರದವರು ವಿಶೇಷ ಶಾಸನವನ್ನು ಪ್ರಕಟಿಸಿದ್ದಾರೆ. ಸನ್ನದುಗಳನ್ನು ಕಳೆದುಕೊಂಡ ವಕೀಲರುಗಳು ಉಮೇದುವಾರರಾಗಲು ಇರುವ ಅಡ್ಡಿಯನ್ನು ತೆಗೆದು ಹಾಕಲಾಗಿದೆ. ಆರು ತಿಂಗಳಿಗೆ ಮೇಲ್ಪಟ್ಟು ಸಜಾ ಅನುಭವಿಸಿದವರು ಚುನಾವಣೆಗೆ ಅನರ್ಹರಾಗುವರೆಂಬ ಇದ್ದ ಪ್ರತಿಬಂಧಕವನ್ನು ಎರಡು ವರ್ಷದ ಮೇಲ್ಪಟ್ಟ ಶಿಕ್ಷೆಯವರಿಗೆ ಅನ್ವಯಿಸಲಾಗಿದೆ. ಸಿವಿಲ್ ಮತ್ತು ಮಿಲಿಟರಿ ಕೆಲಸಗಳಿಂದ ವಜಾ ಆದವರು ಚುನಾವಣೆಗೆ ನಿಲ್ಲದಂತೆ ಇದ್ದ ಅಡ್ಡಿಯನ್ನು ಸಹ ತೆಗೆಯಲಾಗಿದೆ. ಈ ಬದಲಾವಣೆಯು ಸಕಲರಿಂದಲೂ ಸ್ವಾಗತಿಸಲ್ಪಡುವುದರಲ್ಲಿ ಸಂದೇಹವಿಲ್ಲ. ಕಳೆದ ಚುನಾವಣೆಗಳು ನಡೆಯುವುದಕ್ಕೆ ಮುಂಚೆಯೇ ಹೀಗೆ ಮಾಡಿದ್ದರೆ ಇನ್ನೂ ಚೆನ್ನಾಗಿತ್ತು.

ಮುಖ್ಯವಾಗಿ ವಕೀಲರುಗಳ ಮೇಲೆ ಇದ್ದ ಪ್ರತಿಬಂಧಕವು ಎಲ್ಲರಿಗೂ ಅತ್ಯಂತ ಅಸಮಾಧಾನವನ್ನುಂಟುಮಾಡುತ್ತಿತ್ತು. ಸಮಾಜದಲ್ಲಿ ಅತ್ಯಂತ ಹೀನವೆಂದು ಹೇಳಲ್ಪಟ್ಟಿರುವ ಕೃತ್ಯಗಳನ್ನು ಮಾಡಿ ಕಾರಾಗೃಹವನ್ನು ಅನುಭವಿಸಿ ಹೊರಗೆ ಬಂದ ಜನರೆಲ್ಲರಿಗೂ ಕೆಲವು ಕಾಲದ ನಂತರ ಚುನಾವಣೆಗೆ ನಿಲ್ಲಲು ಅರ್ಹತೆಯುಂಟಾಗುವುದು. ಆದರೆ ರಾಜಕೀಯ ಅಭಿಪ್ರಾಯಗಳಿಗಾಗಿ ಸನ್ನದ್ದನ್ನು ಕಳೆದುಕೊಂಡ ವಕೀಲರುಗಳಿಗೆ ಜೀವಾವಧಿ ಈ ಅವಕಾಶ ದೊರೆಯುವುದಿಲ್ಲ. ಇದು ಇದುವರೆಗೆ ಇದ್ದ ಕಾನೂನಿನ ನಿರ್ಬಂಧ; ಈಗ ಅದು ಹೋಗಿದೆ. ಸನ್ನದ್ದುಗಳನ್ನು ಕಳೆದುಕೊಂಡ ವಕೀಲರುಗಳು ಯಾವ ಆತಂಕವೂ ಇಲ್ಲದೆ ಇನ್ನು ಮುಂದೆ ಚುನಾವಣೆಗೆ ನಿಲ್ಲಬಹುದು. ಈ ರೀತಿ ಸರ್ಕಾರದವರು ಇಷ್ಟು ಸಾವಕಾಶವಾಗಿಯಾದರೂ ಏರ್ಪಡಿಸಿದುದನ್ನು ಎಲ್ಲರೂ ಸ್ವಾಗತಿಸುವರು.

ರಾಜಕೀಯ ಕಾರಣಗಳಿಗಾಗಿ ನೌಕರಿಗಳಿಂದ ವಜಾ ಆಗಿರುವ ಅನೇಕ ಮಹನೀಯರುಗಳಿದ್ದಾರೆ. ಅಲ್ಲದೆ ಐ. ಎನ್. ಎ. ಮುಂತಾದ ಸೈನಿಕ ದಳಗಳಿಂದ ವಜಾ ಮಾಡಲ್ಪಟ್ಟ ಸಿಪಾಯಿಗಳೂ ಇದ್ದಾರೆ. ಇವರುಗಳು ಯಾವ ಹೇಯವಾದ ನೀತಿ ಪತನದ ಕಾರ್ಯವನ್ನೂ ಮಾಡಿದವರಲ್ಲ. ಅಂತಹವರ ಮೇಲೆ ಚುನಾವಣಾ ಅನರ್ಹತೆಯನ್ನು ಹೊರಿಸುವುದೂ ಸರಿಯಲ್ಲ. ಅಂತಹವರ ಮೇಲಿನ ನಿರ್ಬಂಧವನ್ನು ತೆಗೆದು ಹಾಕಿರುವುದು ನ್ಯಾಯವಾಗಿದೆ.

ಕಾರಾಗೃಹಕ್ಕೆ ಒಳಗಾದವರ ವಿಚಾರದಲ್ಲಿ ಸ್ವಲ್ಪ ಔದಾರ್ಯವನ್ನು ತೋರಲಾಗಿದೆ. ಆದರೆ ಈ ಪ್ರತಿಬಂಧಕವನ್ನು ಸಂಪೂರ್ಣವಾಗಿ ರದ್ದು ಮಾಡಿದ್ದರೆ ಮತ್ತೂ ಚೆನ್ನಾಗಿರುತ್ತಿತ್ತು. ಉಮೇದುವಾರರ ಯೋಗ್ಯತಾಯೋಗ್ಯತೆಗಳನ್ನು ನಿರ್ಧರಿಸುವ ಅಧಿಕಾರವು ಸಂಪೂರ್ಣವಾಗಿ ಮತದಾರರಿಗೆ ಇರುವುದು ಉಚಿತವಾಗಿದೆ.

ಒಟ್ಟಿನಲ್ಲಿ ಅನೇಕ ವಿದ್ಯಾವಂತರೂ, ಮೇಧಾವಿಗಳೂ, ಅನುಭವಶಾಲಿಗಳೂ ಆಗಿರುವ ದೇಶಾಭಿಮಾನಿಗಳಾದ ನಾಯಕರುಗಳು ಉಮೇದುವಾರರಾಗಲು ಇದ್ದ ಅಡ್ಡಿಯು ಇದರಿಂದ ಹೋಗುವುದು. ಪ್ರಕೃತದಲ್ಲಿ ಶ್ರೀಗಳಾದ ಕೆ. ಟಿ. ಭಾಷ್ಯಂ, ಹೆಚ್. ಸಿ. ದಾಸಪ್ಪ, ಎಸ್. ನಿಜಲಿಂಗಪ್ಪ, ಎಸ್. ರಂಗರಾಮಯ್ಯ, ಎಂ. ಗೋವಿಂದರೆಡ್ಡಿ ಇವರುಗಳಿಗೆ ಈ ಆಜ್ಞೆಯು ಅನ್ವಯಿಸುತ್ತದೆ. ಇಂತಹ ಅಂಕ ನುರಿತ ಮಹನೀಯರುಗಳು ಇಲ್ಲದ ಶಾಸನ ಸಭೆಗಳು ಸಭೆಗಳೇ ಅಲ್ಲ. ಅಂತಹ ಸಭೆಗಳಿಗೆ ಕಳೆಯೇ ಇರುವುದಿಲ್ಲ. ಈ ಅವಕಾಶವು ಕಲ್ಪಿತವಾಗಿರುವುದರಿಂದ ಈಗಲೂ ಅವರು ಶಾಸನ ಸಭೆಗಳ ಸದಸ್ಯರಾಗುವಂತೆ ಕಾಂಗ್ರೆಸ್ಸಿನ ಚಾಲಕರು ಏರ್ಪಡಿಸುವುದು ಅಗತ್ಯವಾಗಿದೆ. ಈಗಿರುವ ಸದಸ್ಯರುಗಳಲ್ಲಿ ಕೆಲವರಿಂದ ರಾಜೀನಾಮೆಯನ್ನಾದರೂ ಕೊಡಿಸಿ ಉಪಚುನಾವಣೆಗಳಲ್ಲಿ ಅವರು ಬರುವಂತೆ ಮಾಡಬೇಕು.

ಈ ಮಹನೀಯರುಗಳು ಸಂಸ್ಥಾನದ ಮಂತ್ರಿ ಪದವಿಗಳನ್ನೂ ಸಹ ವಹಿಸಿ ಆಡಳಿತ ಯಂತ್ರವನ್ನು ನಿರ್ವಹಿಸಲು ಸಮರ್ಥರಾಗಿದ್ದಾರೆ. ನಮ್ಮ ಮಂತ್ರಿಮಂಡಲದಲ್ಲಿಯೂ ಬದಲಾವಣೆಗಳಾಗುವ ಸೂಚನೆಗಳವೆಯೆಂಬ ಸುದ್ದಿಯು ಅಲ್ಲಲ್ಲಿ ಕೇಳಿ ಬರುತ್ತಿದೆ. ಇದು ನಿಜವಿದ್ದರೆ ಸದ್ಯಕ್ಕೆ ಈಗಿನ ಶಾಸನದಲ್ಲಿ ಅವಕಾಶವಿರುವ ಮಟ್ಟಿಗಾದರೂ ಮೈಸೂರಿನಲ್ಲಿ ಚುನಾಯಿತ ಪ್ರಜಾಪ್ರತಿನಿಧಿಗಳ ಮೂಲಕ ಪ್ರಧಾನಾಂಗವುಳ್ಳ ಮಂತ್ರಿಮಂಡಲವನ್ನು ರಚಿಸುವುದು ಅತ್ಯಂತ ಶ್ರೇಯಸ್ಕರವಾಗಿದೆ. ಈ ಬಗ್ಗೆ ಸೂಕ್ತ ಕಾರ್ಯಕ್ರಮಗಳು ಕೈಗೊಳ್ಳಲ್ಪಡಲೆಂದು ಹಾರೈಸುತ್ತೇವೆ.

ಶ್ರೀ ಜಗದಂಬಾ ಶಿಶು ವಿಹಾರ

ರಾಜಧಾನಿಯ ದಿವಾನ್ಸ್ ರಸ್ತೆಯಲ್ಲಿರುವ ಮೇಲ್ಕಂಡ ಶಿಶುವಿಹಾರದಲ್ಲಿ ಕಳೆದ ಸೋಮವಾರ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಮಕ್ಕಳ ಆಟಪಾಟಗಳು, ಶ್ರೀಮನ್ಮಹಾರಾಜರ ಶ್ರೇಯಃ ಪ್ರಾರ್ಥನೆ ನಡೆದು, ನಂತರ ಬಾಲಕರಿಗೆ ಸಿಹಿ ತಿಂಡಿ ಹಂಚಲಾಯಿತು.

ಜೈ ಪ್ರಕಾಶ ನಾರಾಯಣ್

ನಾವು ನಮ್ಮ ರಕ್ತದಿಂದಲೇ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸವನ್ನು ಬರೆದಿದ್ದೇವೆ; ಸಂಪೂರ್ಣ ಸ್ವಾತಂತ್ರ್ಯವು ಉದಯವಾಗುವವರೆಗೂ ಬರೆಯಲೇಬೇಕು—ಎಂದು ರಣ ಘೋಷಣೆ ಮಾಡಿದ ವೀರ ಜೈಪ್ರಕಾಶ ನಾರಾಯಣ್‌ರವರ ಜೀವನ ಚರಿತ್ರೆಯನ್ನು ಶ್ರೀ ನಾಡಿಗ ಕೃಷ್ಣಮೂರ್ತಿಯವರು ಕನ್ನಡನಾಡಿಗೆ ಕಾಣಿಕೆಯಾಗಿ ಅರ್ಪಿಸಿದ್ದಾರೆ. ಭಾರತದ ಆಶಾ ಕಿರಣ, ರಕ್ತ ಕಿರೀಟ, ರಣ ಧುರಂಧರ ಶ್ರೀ ಜಯಪ್ರಕಾಶರ ಜೀವನದ ಸೂಕ್ಷ್ಮ ಚರಿತ್ರೆಯನ್ನು ಪ್ರತಿ ಕನ್ನಡಿಗನೂ ಓದಲೇಬೇಕೆಂದು ನಮ್ಮ ಬಿನ್ನಹ. ಈ ಶ್ವೇತ ಕುಸುಮ ಮಾಲೆಯ ಪ್ರಕಾಶಕರು ಶ್ರೀ ಜಿ. ಹೆಚ್. ರಾಮರಾವ್‌ರವರು. ಬೆಲೆ ಕೇವಲ ಹತ್ತಾಣೆ ಮಾತ್ರ.

ಕಾಶ್ಮೀರಕ್ಕೆ ನೆಹರು

ಪಂ|| ನೆಹರೂರವರು ನಿನ್ನೆ ಕಾಶ್ಮೀರಕ್ಕೆ ಲಾಹೋರ್ ಮಾರ್ಗವಾಗಿ ಪ್ರಯಾಣ ಬೆಳೆಸಿದರು. ಅವರು ಶ್ರೀನಗರದಲ್ಲಿ ೩ ದಿನಗಳಿರುವರೆಂದು ಗೊತ್ತಾಗಿದೆ. ಮಧ್ಯ ಮಾರ್ಗದಲ್ಲಿ ಅವರ ಆಗಮನದ ಉದ್ದೇಶವನ್ನು ಕಾಶ್ಮೀರದ ಅಧಿಕಾರಿಗಳು ಕೇಳಿದರೆಂದೂ, ಅಲ್ಲಿನ ಜನರಿಗೆ ಉಪಕಾರ ಮಾಡುವ ಉದ್ದೇಶದಿಂದಲೇ ಎಂದು ಉತ್ತರವಾಗಿ ನೆಹರೂರವರು ಹೇಳಿದರೆಂದೂ ಗೊತ್ತಾಗಿದೆ.

ಜರೂಸಲಂ ಕೃತ್ಯದ ಬಗ್ಗೆ ಅಟ್ಲಿಯವರ ಖಂಡನೆ

೨೨ ನೇ ತಾ|| ಜರೂಸಲಂನಲ್ಲಿ ನಡೆದ ಆಸ್ಫೋಟನೆ ಬಗ್ಗೆ ಕಾಮನ್ಸಿನಲ್ಲಿ ಪ್ರಧಾನಿ ಅಟ್ಲಿಯವರು ಒಂದು ಹೇಳಿಕೆ ಇತ್ತು, ಈ ಕೃತ್ಯವನ್ನು ತೀವ್ರವಾಗಿ ಖಂಡಿಸಿ, ಅದಕ್ಕೆ ಯಹೂದ್ಯರ ಗುಪ್ತ ತಂಡವೇ ಕಾರಣವೆಂದು ತಿಳಿಸಿದರು. ಇದುವರೆವಿಗೆ ಅದರ ಪರಿಣಾಮವಾಗಿ ೪೭ ಮಂದಿ ಬ್ರಿ|| ಅಧಿಕಾರಿಗಳು ಪ್ರಾಣಬಿಟ್ಟಿದ್ದಾರೆ. ೫೫ ಮಂದಿಗೆ ಗಾಯಗಳಾಗಿವೆ. ೭೨ ಮಂದಿ ಪತ್ತೆಯೇ ಇಲ್ಲ.

26-7-46ರಿಂದ ಅನೋಘವಾದ ಪ್ರಾರಂಭ

ಮೂವಿಲ್ಯಾಂಡ್, ಬೆಂಗಳೂರು : ಪ್ರತಿ ದಿನ ಮೂರು ಆಟಗಳು

ಪ್ರತಿಭಾ ರವರ

"ಮುಗ್ಗುರು ಮರಾಟಿಲು"

(ತೆಲುಗು ಚಿತ್ರ)

ಭೂಮಿಕೆ:- ಕನ್ನಾಂಬ, ಡಾ|| ಸುಬ್ಬರಾವ್ ಮೊದಲಾದವರು

ಮೈಸೂರು ಮೋತಿಲಾಲ್‌ನಲ್ಲಿ

ಮುಂದಿನ ಬದಲಾವಣೆ

—: Released Through :—

SRI MAHAVEER FILM EXCHANGE

Asoka Road, Mysore.

ವಿಜಯಾ ಏಜನ್ಸೀಸ್, ಮೈಸೂರು.

ಜೈನಹಳ್ಳಿಯ ಅವಶ್ಯಕತೆಗಳು

ಕೃಷ್ಣರಾಜಪೇಟೆ ತಾ|| ಜೈನಹಳ್ಳಿಯ ಅವಶ್ಯಕತೆಗಳನ್ನು ಕುರಿತು ರಾಜಧಾನಿಯಲ್ಲಿರುವ ಜಮೀನುದಾರರಾದ ಶ್ರೀ|| ಸಿ. ವೆಂಕಟಸುಬ್ಬಯ್ಯನವರು ಈ ರೀತಿ ಬರೆಯುತ್ತಾರೆ:—

ಜೈನಹಳ್ಳಿಗೆ ಕೂಡಲೇ ಕುಡಿಯುವ ನೀರಿನ ಬಾವಿ ಅವಶ್ಯಕ; ಈ ಗ್ರಾಮವನ್ನು ಹೆಲ್ತ್ ಯೂನಿಟ್ಟಿಗೆ ಸೇರಿಸಿ ನೆಲಸಿರುವ ರೋಗವನ್ನು ನಿರ್ಮೂಲ ಮಾಡಬೇಕಾಗಿದೆ; ಊರ ಮುಂದಿರುವ ಹಳ್ಳವನ್ನು ಮುಚ್ಚಿಸಬೇಕಾಗಿದೆ; ಅಕ್ಕಿಹೆಬ್ಬಾಳು ಡಾಕ್ಟರು ಈ ಗ್ರಾಮಕ್ಕೆ ವಾರಕ್ಕೊಂದಾವರ್ತಿಯಾದರೂ ದಯಮಾಡಿಸಿ ಸಂಚರಿಸಲಾರದ ರೋಗಿಗಳನ್ನು ಇಲಾಜು ಮಾಡಬೇಕಾಗಿದೆ; ಅಕ್ಕಿಹೆಬ್ಬಾಳಿಗೆ ಹೋಗುವ ಗಾಡಿ ರಸ್ತೆಯನ್ನು ಗ್ರಾಮಾಂತರ ರಸ್ತೆ ಅಭಿವೃದ್ಧಿ ಫಂಡಿನಿಂದ ಉತ್ತಮಪಡಿಸಬೇಕಾಗಿದೆ; ಇವುಗಳ ಕಡೆ ಸರ್ಕಾರದವರು ಗಮನಕೊಟ್ಟು ಅಲ್ಲಿನ ಪ್ರಜೆಗಳನ್ನು ಕಾಪಾಡಬೇಕಾಗಿದೆ.

ಅಂಚೆ ಮುಷ್ಕರ

ಸ್ವಂ ವ] ಚಿಕ್ಕಮಗಳೂರು ೨೩

ಕಳೆದ ಸೋಮವಾರದಿಂದ ಅಂಚೆ ನೌಕರರು ಮುಷ್ಕರ ಹೂಡಿದ್ದಾರೆ. ಪೋಸ್ಟ್ ಗುಮಾಸ್ತರುಗಳು ಅಂಚೆ ಕಾಗದಗಳನ್ನು ಹಂಚುತ್ತಿದ್ದಾರೆ. ಇದೇ ೨೯ ರಿಂದ ಈ ಗುಮಾಸ್ತರುಗಳೂ ಮುಷ್ಕರ ಹೂಡುವರೆಂದು ತಿಳಿದುಬಂದಿದೆ.

ಭಾರತದಲ್ಲಿ ಪೋರ್ಚುಗೀಸ್ ಆಡಳಿತ

ಗೋವಾ, ಡಯೂ ಮತ್ತು ಡಾಮನ್ ಕ್ಷೇತ್ರಗಳಿಂದ ಪೋರ್ಚುಗೀಸ್ ಆಡಳಿತವು ಹೋಗಬೇಕಾದ್ದೇನೂ ಇಲ್ಲವೆಂದೂ ಅವು ಪೋರ್ಚುಗಲ್ಲಿನ ಕಾಲೋನಿ ಅಲ್ಲವೆಂದೂ, ಬ್ರಿಟನ್ನಿನ ಕಾಲೋನಿಗಳ ಮಂತ್ರಿ ತಿಳಿಸಿದ್ದಾರೆ.

ಮೊಹಲ್ಲಾ ಕಾಂಗ್ರೆಸ್ ಸಮಿತಿ

ಚಾಮರಾಜ ಮೊಹಲ್ಲಾ ಕಾಂಗ್ರೆಸ್ ಸಮಿತಿಯನ್ನು ರಚಿಸುವ ಸಲುವಾಗಿ ಇದೇ ೨೬ ನೇ ತಾ|| ಸಂಜೆ ೭ ಘಂಟೆಗೆ 'ಸಾಧ್ವಿ' ಕಛೇರಿ ಮಹಡಿಮೇಲೆ ಪ್ರತಿನಿಧಿಗಳ ಸಭೆ ಸೇರುವುದು. ಮೊಹಲ್ಲಾ ಪ್ರತಿನಿಧಿಗಳೆಲ್ಲಾ ತಪ್ಪದೆ ಬರಬೇಕೆಂದು ಸಂಚಾಲಕರಾದ ಶ್ರೀ ಸುಬ್ಬಣ್ಣನವರು ಪ್ರಾರ್ಥಿಸಿದ್ದಾರೆ.

ಚಾಮುಂಡೇಶ್ವರಿಯಲ್ಲಿ

೨೫—೭—೪೬

ಯಾಕೂಬ್ ಮತ್ತು ಚಂದ್ರಪ್ರಭ

ನಟಿಸಿರುವ

ಯತೀಂ

(YATEEM)

ಇದುವರೆಗೂ ನೋಡದಿದ್ದರೆ ಇಂದೇ

ನೋಡಿ ಆನಂದಿಸಿರಿ

ಕಡೇ ಪ್ರದರ್ಶನ.

A Sri Shanti Film's Release.

Edited printed and published by A. K. Nagarajan at the Sadhvi Press D Subbiah Road, Mysore.

ಫೋನ್ ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಆಣೆ

ಸಂಪುಟ ೫] ಶುಕ್ರವಾರ ೨೬—೭—೪೬ [ಸಂಚಿಕೆ ೫

ಮುಷ್ಕರವು ಬೇಗ — ಮುಗಿಯಬಹುದು

ಆಗಸ್ಟ್ ತಿಂಗಳಲ್ಲಿ ಹೊಸ ಸರ್ಕಾರವೇ?

ರಾಜ್ಯಾಂಗ ರಚನಾಸಮಿತಿಯ ಚುನಾವಣೆಗಳು ಮುಗಿದನಂತರ ಕೇಂದ್ರದಲ್ಲಿ ತಾತ್ಕಾಲಿಕ ಸರ್ಕಾರವನ್ನು ಸ್ಥಾಪಿಸುವ ಸಲುವಾಗಿ ವೈಸರಾಯರು ಪ್ರಯತ್ನಗಳನ್ನು ಮಾಡುತ್ತಿರುವರು. ಪಂಡಿತ ನೆಹರು ಮತ್ತು ಮಿ॥ ಜಿನ್ನಾ ರವರೊಡನೆ ಆವರು ಈಗಾಗಲೇ ಪತ್ರವ್ಯವಹಾರವನ್ನು ನಡೆಸುತ್ತಿರುವರು. ಒಂದು ವೇಳೆ ಆಗಸ್ಟ್ ತಿಂಗಳ ಮಧ್ಯಭಾಗದಲ್ಲಿ ಹೊಸ ಸರ್ಕಾರ ಸ್ಥಾಪಿಸಲ್ಪಡಬಹುದೆಂದು ವರದಿಯಾಗಿದೆ.

ರಾಜ್ಯಾಂಗ ರಚನಾ ಸಮಿತಿ ಚುನಾವಣೆ

ಬೊಂಬಾಯಿ ಪ್ರಾಂತದಿಂದ ರಾಜ್ಯಾಂಗ ರಚನಾ ಸಮಿತಿಯ ೧೯ ಸ್ಥಾನಗಳಿಗೂ ಕಾಂಗ್ರೆಸ್ಸಿನವರೇ ಚುನಾಯಿತರಾಗಿದ್ದಾರೆ. ಇವರುಗಳಲ್ಲಿ ಶ್ರೀಗಳಾದ ಸರ್ದಾರ್ ಪಟೇಲ್ ಶಂಕರರಾವ್ ದೇವ್, ಮುನ್ಷಿ, ಡಾ॥ ಅಂಬೇಡ್ಕರ್ ಡಿ ಸೌಜ, ಗಾಡ್ಗಿಲ್ ಮತ್ತು ಮಸಾನಿ ಇವರುಗಳು ಇದ್ದಾರೆ. ಲೀಗ್ ಪರವಾಗಿ ಮೌಂಟಿ ಗರ್ ಮತ್ತು ಶೇಕ್ ಅಬ್ದುಲ್ ಖಾದರ್ ರವರು ಚುನಾಯಿತರಾಗಿದ್ದಾರೆ.

ಕಾಶ್ಮೀರದಲ್ಲಿ ಪಂಡಿತ್ ನೆಹರೂ

ಕಾಶ್ಮೀರದಲ್ಲಿ ರಾಜದ್ರೋಹದ ವಿಚಾರಣೆಗೆ ಗುರಿಯಾಗಿರುವ ಶೇಕ್ ಅಬ್ದುಲ್ಲಾರವರಿಗೆ ಡಿಫೆನ್ಸ್ ಏರ್ಪಡಿಸುವ ಸಲುವಾಗಿ ಕಾಂಗ್ರೆಸ್ಸಿನ ಅಧ್ಯಕ್ಷರಾದ ಪಂಡಿತ ಜವಹರಲಾಲ್ ನೆಹರೂರವರು ಅಲ್ಲಿಗೆ ತೆರಳಿರುವರು. ಇವರು ಲಾಹೋರಿನ ವಿಮಾನ ನಿಲ್ದಾಣದಲ್ಲಿ ಸ್ವಲ್ಪಹೊತ್ತು ತಂಗಿದ್ದಾಗ ಅಲ್ಲಿನ ಜನರು ವೈಭವದಿಂದ ಸ್ವಾಗತವನ್ನು ನೀಡಿದರು.

ಕಾಂಗ್ರೆಸ್ ಕಾರ್ಯಕಾರೀ ಸಮಿತಿ

ಕೇಂದ್ರದಲ್ಲಿ ತಾತ್ಕಾಲಿಕವಾಗಿ ಏರ್ಪಡಿಸಲಿರುವ ಸರ್ಕಾರದ ಬಗ್ಗೆ ವೈಸರಾಯರು ಕೊಟ್ಟಿರುವ ಸಲಹೆಗಳನ್ನು ಪರಿಶೀಲಿಸುವ ಸಲುವಾಗಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಸಭೆಯು ವಾರ್ಧದಲ್ಲಿ ಮುಂದಿನ ತಿಂಗಳು ಎಂಟನೇ ತಾ॥ ಸೇರಲಿರುವುದು. ಮಾಜೀ ಕಾರ್ಯಕಾರೀ ಸಮಿತಿ ಸದಸ್ಯರನ್ನೂ ಸಹ ಈ ಸಭೆಗೆ ಆಹ್ವಾನಿಸಲಾಗಿದೆ.

ಗಾಂಧೀಜೀ ಬಳಿ ದಕ್ಷಿಣ ರಾಜರುಗಳು

ಸಮೀಪದಲ್ಲಿಯೇ ಏರ್ಪಡಿಸಲಿರುವ ಕರ್ನಾಟಕದ ಸಂಸ್ಥಾನಗಳ ಯೂನಿಯನ್ನಿನ ಯೋಜನೆಯನ್ನು ಮಹಾತ್ಮ ಗಾಂಧೀಜಿಯವರಿಗೆ ತಿಳಿಸುವ ಸಲುವಾಗಿ ದಕ್ಷಿಣದ ರಾಜರುಗಳು ಮತ್ತು ಅವರ ಮಂತ್ರಿಗಳು ಇತ್ತೀಚೆಗೆ ಪೂನಾದಲ್ಲಿ ಗಾಂಧೀಜಿಯವರನ್ನು ಭೇಟಿ ಮಾಡಿರುವರು.

ಜಯಂತಿ

ಬಾಣಸವಾಡಿ ರಸ್ತೆಯ ಬಳಿಯಿರುವ ಶ್ರೀ ವೀರಾಂಜನೇಯ ಸ್ವಾಮಿಯವರ ಜಯಂತಿ ಮಹೋತ್ಸವವು ಅತಿ ವಿಜೃಂಭಣೆಯಿಂದ ನಡೆಯಿತು. ಬಾಲಕರ ಆಟಪಾಟಗಳು ನಡೆದವು. ಸಭೆಯಲ್ಲಿ ಸಮಾರಂಭಕ್ಕೆ ಶ್ರೀ ... ಅಧ್ಯಕ್ಷತೆ ವಹಿಸಿದ್ದರು.

ಆಟಂಬಾಂಬ್ ೨ ನೇ ಪ್ರಯೋಗ

ಪೆಸಿಫಿಕ್ ಸಾಗರದ ಬಿಕಿನಿ ದ್ವೀಪದ ಬಳಿ ನೀರಿನೊಳಗೆ ಮೊನ್ನೆ ರಾತ್ರಿ ೩ ಗಂಟೆಯಲ್ಲಿ ಆಟಂಬಾಂಬಿನ ೨ ನೇ ಪ್ರಯೋಗ ಪರೀಕ್ಷೆಯು ನಡೆಯಿತು. ನೀರಿನ ಮಟ್ಟದಿಂದ ಸುಮಾರು ೧೦೦ ಗಜಗಳ ಆಳದಲ್ಲಿ ಆಸ್ಫೋಟನೆಯುಂಟಾಯಿತು. ಹೊಗೆಯೂ ನೀರೂ ನಭಕ್ಕೆ ಏರಿಯೂ ೮೦೦೦ ಅಡಿ ಎತ್ತರದವರೆಗೆ ಹಾರಿದವು ಕಂಡುಬಂದಿತು. ಆಸ್ಫೋಟನೆ ಶಬ್ದವು ಹತ್ತು ಮೈಲಿಗಳ ದೂರದವರೆಗೂ ಕೇಳಿಸಿತು. ಇದರ ಪರಿಣಾಮವಾಗಿ ೩೬೦೦೦ ಟನ್ನಿನ ಒಂದು ಅಮೇರಿಕ ಯುದ್ಧನೌಕೆ ಮುಳುಗಿತು ... ಯುದ್ಧನೌಕೆ ... ಯುದ್ಧನೌಕೆ ... ವಿವರ ತಿಳಿದುಬಂದಿಲ್ಲ.

ಶಾಸನ ಸಭಾ ಸದಸ್ಯರ ಸಮ್ಮೇಳನ

ದಕ್ಷಿಣ ಭಾರತದ ಸಂಸ್ಥಾನಗಳಿಂದ ಚುನಾಯಿತರಾಗಿರುವ ಶಾಸನ ಸಭಾ ಸದಸ್ಯರ ಮತ್ತು ಪ್ರತಿನಿಧಿಗಳ ಸಮ್ಮೇಳನವು ಮುಂದಿನ ತಿಂಗಳು ಮೂರನೇ ವಾರದಲ್ಲಿ ... ಸಂಸ್ಥಾನದಲ್ಲಿ ನೆರವೇರುವುದು. ಶ್ರೀ ಶಂಕರರಾವ್ ದೇವ್ ರವರು ಅಧ್ಯಕ್ಷತೆ ವಹಿಸುವರು. ಸರ್ದಾರ್ ಪಟೇಲರು ಇದರ ಆರಂಭೋತ್ಸವವನ್ನು ನೆರವೇರಿಸುವರು.

ಕೊಳಲು ಕಛೇರಿ

ಗಾನ ವಿಶಾರದ ಬಿಡಾರಂ ಕೃಷ್ಣಪ್ಪನವರ ಶ್ರೀ॥ ಪ್ರಸನ್ನ ಸೀತಾರಾಮಮಂದಿರದಲ್ಲಿ ಪ್ರದೋಷದ ಪ್ರಯುಕ್ತ ಈ ದಿನ ಸಾಯಂಕಾಲ ೭ ಗಂಟೆಯಿಂದ ವಿ॥ ಡಿ. ರಂಗನಾಯಕರ ಕೊಳಲು, ವಿ॥ ರಾಜಯ್ಯಂಗಾರ್ಯರ ಪಿಟೀಲು ಮತ್ತು ವಿ॥ ಶಂಕರ ನಾರಾಯಣರಾಯರ ಮೃದಂಗವನ್ನೂ ಏರ್ಪಡಿಸಿದೆ. ಸರ್ವರಿಗೂ ಆಹ್ವಾನವಿದೆ.

ಹರಿಕಥಾ ಕಾಲಕ್ಷೇಪ

ಮೈಸೂರು ಹೊಸ ಸಂತೇಪೇಟೆ ಶ್ರೀ ಬಿ. ಪುಟ್ಟಯ್ಯನವರ ಮನೆಯಲ್ಲಿ ತಾ॥ ... ನೇ ಭಾನುವಾರ ಸಂಜೆ ೫ ಗಂಟೆಯಿಂದ ... ಆಸ್ಥಾನ ವಿದ್ವಾನ್ ಕೀರ್ತನ ಶಿರೋಮಣಿ ... ದಾಸರವರಿಂದ "ಮಯೂರಧ್ವಜ" ಎಂಬ ಕಥೆ ಸಪ್ರಸಂಗವಾದ ಕಥೆ ... ಡನೆ ನಡೆಸಲ್ಪಡುತ್ತೆ. ಆಸಕ್ತ ಮಹಾಶಯರು ... ಆಹ್ವಾನ ಇದೆ.

ಮುಷ್ಕರ ಕೊನೆಗಾಣಬಹುದು

ಅಂಚೆ ಮುಷ್ಕರದ ಪರಿಸ್ಥಿತಿಯು ಈಗ ಬಹಳಮಟ್ಟಿಗೆ ತಿಳಿಯಾಗಿರುವುದರಿಂದಲೂ ಮುಷ್ಕರ ಸಮಿತಿಯವರು ಒಪ್ಪಂದದ ಮನೋಭಾವವನ್ನು ತೋರಿ ಅದನ್ನು ಕೊನೆಗಾಣಿಸಲೆಳಸುವುದರಿಂದಲೂ ಅಂಚೆ ಇಲಾಖೆಯ ಪೈರೆಕ್ಟರ್ ಜನರಲ್ಲರವರಾದ ಶ್ರೀ ಕೃಷ್ಣಪ್ರಸಾದರವರು ಹೇಳಿರುವರು. ಅಂಚೆ ಕೆಲಸಗಾರರ ಪ್ರಧಾನ ಕಾರ್ಯದರ್ಶಿ ಶ್ರೀ ದಳವಿಯವರೂ ಸಹ ಇತ್ತೀಚೆಗೆ ಆಭಿಪ್ರಾಯಪಟ್ಟಿರುವರು. ಮುಷ್ಕರ ಸಮಿತಿ ಸದಸ್ಯರ ಪೈಕಿ ಐದು ಜನರು ಮಾತ್ರ ಬೊಂಬಾಯಿಗೆ ವಿಶೇಷ ವಿಮಾನದಲ್ಲಿ ಬಂದಿದ್ದಾರೆ. ಉಳಿದವರು ಬಂದನಂತರ ಅವರು ತೀರ್ಮಾನವನ್ನು ತಿಳಿಸುವರು. ಪಂಚಾಯಿತಿಯವರು ಕೊಟ್ಟಿರುವ ಸಲಹೆಗಳಿಗಿಂತಲೂ ಹೆಚ್ಚಿನ ಪರಿಹಾರವನ್ನು ಅಂಚೆ ನೌಕರರಿಗೆ ಒದಗಿಸುವಂತೆ ಸರ್ಕಾರದವರು ನಿರ್ಧರಿಸಿರುವುದಾಗಿ ಇಂಡಿಯಾ ಸರ್ಕಾರದ ಸಚಿವರಾದ ಸರ್ ಜಾನ್ ಥಾರ್ನ್ ಸ್ಪೀಕರ್‌ರವರು ಹೇಳಿರುವರು.

ಆಹಾರದ ತೊಂದರೆ

ಸ್ವಂ ಸು.] ಶ್ರೀರಂಗಪಟ್ಟಣ ೨೫

ಶ್ರೀರಂಗಪಟ್ಟಣ-ಗಂಜಾಂಗಳಲ್ಲಿ ಸಾಕಷ್ಟು ಅಕ್ಕಿ ದಾಸ್ತಾನು ಇದ್ದರೂ ಗಂಜಾಂನಲ್ಲಿ ಮಾತ್ರ ತಿಂಗಳಿಗೆ ಒಂದುಸಾರಿ ಮಾತ್ರ ಅಕ್ಕಿಯನ್ನು ಕೊಟ್ಟು ಮಿಕ್ಕ ಕಾಲದಲ್ಲಿ ವೈನಾಹಿಟ್ಟು ರಾಗಿ ಮುಂತಾದವುಗಳನ್ನೇ ತಮಗೆ ಇಷ್ಟಬಂದ ಹಾಗೆ ಕೊಡುತ್ತಲಿದ್ದಾರೆ. ಈ ವಿಚಾರವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಎಷ್ಟು ತಿಳಿಸಿದಾಗ್ಯೂ ಉಪೇಕ್ಷೆಯೇ ಮಿಡುಕ್ತಾರೆ. ಆದ್ದರಿಂದ ಮೇಲಿನ ಅಧಿಕಾರಿಗಳು ಗಮನ ಕೊಡಬೇಕೆಂದು ಕೋರಲಾಗಿದೆ.

ಬಟ್ಟೆ ಅಭಾವ

ಶ್ರೀರಂಗಪಟ್ಟಣದಲ್ಲಿ ಈಗ್ಗೆ ಎರಡು ಮೂರು ತಿಂಗಳಿಂದಲೂ ಬಟ್ಟೆಯಿಲ್ಲದೆ ಜನಗಳಿಗೆ ತುಂಬಾ ತೊಂದರೆಯಾಗಿದೆ. ಈ ಊರಿನಲ್ಲಿ ಎರಡು ಜವಳಿ ಅಂಗಡಿಗಳಿವೆ. ಈ ಪೈಕಿ ಒಂದಂಗಡಿಗೆ ಮಾತ್ರ ಬಟ್ಟೆ ಬಿಟ್ಟಿದೆ. ... ಅದರಲ್ಲಿ ... ಬಸವನಗುಡಿ ... ಮೊದಲಿನ ... ಒಂದು ... ತಿಂಗಳಲ್ಲಿ ... ಮಾತ್ರ ... ಬಟ್ಟೆ ...

೦ ... ನಾಲ್ಕು ... ಶ್ರೀ ... ದೊಡ್ಡ ... ಕಾಲೆಯಲ್ಲಿ ... ಕಾರಂಜಿ ... ಬಟ್ಟೆಯನ್ನು ... ನಡೆಸಿತು.

ಮುಷ್ಕರದಿಂದ ಸರ್ಕಾರಕ್ಕೆ ೧ ಕೋಟಿ ರೂಪಾಯಿ ನಷ್ಟ

ಅಖಿಲ ಭಾರತ ಅಂಚೆ ಫೆಡರೇಷನ್ನಿನ ಬೆಂಗಳೂರು ಶಾಖೆಯ ಕಾರ್ಯದರ್ಶಿ ಶ್ರೀ ಕೆ. ಬಿ. ಶ್ರೀನಿವಾಸರಾಯರು ಒಂದು ಪ್ರೆಸ್ ಹೇಳಿಕೆಯನ್ನು ಹೊರಡಿಸಿ ಈಗ ನಡೆಯುತ್ತಿರುವ ಅಂಚೆ ಮುಷ್ಕರದ ಜೊತೆಗೆ ಆರ್. ಎಮ್. ಎಸ್., ರೇಡಿಯೋ, ಟೆಲಿಫೋನ್, ಪೋಸ್ಟ್ ಸರ್ವೀಸ್ ಮುಂತಾದವುಗಳಿಗೆ ಸೇರಿದ ಒಂದೂವರೆ ಲಕ್ಷ ನೌಕರರೂ ಸೇರಿದರೆ ಆಗ ಸರ್ಕಾರಕ್ಕೆ ದಿನ ಒಂದಕ್ಕೆ ಒಂದು ಕೋಟಿ ರೂಪಾಯಿ ನಷ್ಟವಾಗುವುದೆಂದು ತಿಳಿಸಿರುವರು.

ವಿದ್ಯಾರ್ಥಿಗಳ ಮುಷ್ಕರ

ಸ್ವಂ ಸು ಫೋ.] ಬೆಂಗಳೂರು ೨೫

ಸೆಂಟ್ರಲ್, ಇಂಜನಿಯರಿಂಗ್ ವಿಜಯಾ ಮುಂತಾದ ಕಾಲೇಜಿನ ವಿದ್ಯಾರ್ಥಿಗಳು ಈ ದಿನ ಮುಷ್ಕರ ನಡೆಸಿ ಶ್ರೀ ಪಿ. ಎಸ್. ಕೃಷ್ಣಯ್ಯಂ ರವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯನ್ನು ಮಾಡಿದರು. ಸರ್ ರಾಮಸ್ವಾಮಿ ಮೊದಲಿಯಾರ್ ರವರು ಮೈಸೂರಿನ ದಿವಾನರಾಗುವುದು ಖಂಡನೆ, ಕಾಶ್ಮೀರದ ದಬ್ಬಾಳಿಕೆಯ ಪ್ರತಿಭಟನೆ, ಅಂಚೆ ನೌಕರರಿಗೆ ಸಹಾನುಭೂತಿ, ಜವಾಬ್ದಾರಿ ಸರ್ಕಾರಕ್ಕಾಗಿ ಒತ್ತಾಯ, ಚುನಾಯಿತ ಮಂತ್ರಿಗಳ ಆವಶ್ಯಕತೆ, ರಾಜ್ಯಾಂಗ ಸಮಿತಿಗೆ ಪ್ರಜಾಪ್ರತಿನಿಧಿಗಳನ್ನು ಚುನಾಯಿಸುವುದು-ಇವೇ ಮುಂತಾದ ವಿಷಯವಾಗಿ ನಿರ್ಣಯವನ್ನು ಮಾಡಿದರು.

* ಸರ್ ಎ. ರಾಮಸ್ವಾಮಿ ಮೊದಲಿಯಾರ್ ರವರು ಆಗಸ್ಟ್ ಎಂಟನೇ ತಾರೀಖು ದಿವಾನ್ ಗಿರಿಯನ್ನು ವಹಿಸುವರೆಂದು ಅಧಿಕಾರ ಆವರಣದಲ್ಲಿ ಹೇಳಲಾಗಿದೆ.

* ಶ್ರೀ ಬಿ. ಎಂ. ಶ್ರೀನಿವಾಸಯ್ಯನವರ ಇಂಜನಿಯರಿಂಗ್ ಕಾಲೇಜಿಗೆ ಪ್ರಿನ್ಸಿಪಾಲ್ ಇಂಜನಿಯರಾದ ಶ್ರೀ ಗಣೇಶ ಅಯ್ಯಂಗಾರ್ ರವರು ಪ್ರಿನ್ಸಿಪಾಲರಾಗಿ ನೇಮಕವಾಗಿರುತ್ತಾರೆ.

* ಹೈದರಾಬಾದಿನಿಂದ ಒಂದು ಸ್ಥಾವರ ಟನ್ ಕಲ್ಲಿದ್ದಲು ಎಣ್ಣೆಯನ್ನು ಮೈಸೂರಿಗೆ ತರಿಸಿಕೊಳ್ಳಲು ಇಂಡಿಯಾ ಸರ್ಕಾರದವರು ಅಪ್ಪಣೆ ಇತ್ತಿದ್ದಾರೆ.

* ನಾಗಪುರದಲ್ಲಿ ನಡೆಯುವ ಅಖಿಲ ಭಾರತ ಸಮ್ಮೇಳನಕ್ಕೆ ಶ್ರೀಗಳಾದ ಡಿ. ಎಲ್. ನಾರಾಯಣ ಮತ್ತು ಕೆ. ಕೃಷ್ಣಸ್ವಾಮಿಯವರು ಮೈಸೂರಿನ ಪ್ರತಿನಿಧಿಗಳಾಗಿ ಹೋಗುವರು.

* ಶ್ರೀ ಕೆ. ಪಿ. ಪುಟ್ಟಣ್ಣನವರಿಗೆ ಇನ್ನೆರಡು ತಿಂಗಳು ರಜಾ ಕೊಡಲಾಗಿದೆ. ಶ್ರೀ ಡಿ. ಎಲ್. ನರಸಿಂಹಮೂರ್ತಿಯವರು ಅವರ ಕೆಲಸವನ್ನು ನೋಡುವರು.

ಶ್ರೀ ಎಚ್. ಕೆ. ವೀರಣ್ಣಗೌಡರವರು ನಿನ್ನೆ ಮೈಸೂರಿಗೆ ತೆರಳಿದರು. ಗಾಂಧೀ ... ಸಂಘದ ಸದಸ್ಯರೊಡನೆ ಮಾತನಾಡುತ್ತಾ ... ಕಾರ್ಯಕಾರೀ ಸಮಿತಿಯಲ್ಲಿ ... ನ್ನು ... ವಿಷಯವಾಗಿ ಪ್ರಸ್ತಾಪ ಮಾಡುವುದಾಗಿ ತಿಳಿಸಿರು.

ಮೈಸೂರಿನ ... ಕಾಲೇಜಿನ ... ಸಮಿತಿಯೊಂದನ್ನು ರಚಿಸಲಾಗಿದೆ. ... ಅಧ್ಯಕ್ಷರು ಶ್ರೀಗಳಾದ ... ಎಸ್. ಸಿ. ... ನವರು ಸದಸ್ಯರು.

* ... ಸಂಸ್ಥಾನದ ... ಮಂತ್ರಿಗಳಾದ ...

ಸಾಧ್ವಿ

ತಾ|| ೨೬-೭-೪೬ ಶುಕ್ರವಾರ

ಇನ್ನೊಂದು ಅನರ್ಹತೆ ಯನ್ನೂ ತೆಗೆಯಬೇಕು

ಶಾಸನ ಸಭೆಗಳ ಚುನಾವಣೆಗೆ ಉಮೇದುವಾರರಾಗುವ ವಕೀಲರಿಗೆ ಮುಂತಾದವರ ಅನರ್ಹತೆಗಳ ವಿಚಾರದಲ್ಲಿ ಸರ್ಕಾರದವರು ಈಚೆಗೆ ಹಲವು ತಿದ್ದುಪಡಿಗಳನ್ನು ಮಾಡಿರುವರಷ್ಟೆ. ಪೌರಸಭೆಯ ಚುನಾವಣೆಗೂ ಇದೇ ರೀತಿ ತಿದ್ದುಪಡಿಯನ್ನು ಮಾಡುವುದು ಅಗತ್ಯವಾಗಿದೆ. ಸನ್ನದುಗಳನ್ನು ಕಳೆದುಕೊಂಡ ವಕೀಲರುಗಳು ಪೌರಸಭೆಯ ಚುನಾವಣೆಗಳಲ್ಲಿ ಭಾಗ ವಹಿಸಲು ಈಗ ಪ್ರತಿಬಂಧಕವು ಇರುತ್ತದೆ. ಇದು ನಾಲ್ಕು ವರ್ಷದಿಂದೀಚೆಗೆ ಬಂದ ಅನರ್ಹತೆ. ಮೈಸೂರಿನಲ್ಲಿ ಹೊಸ ಸುಧಾರಣೆಯು ಬಂದ ವೇಳೆ ಈ ಪ್ರಗತಿ ವಿರೋಧದ ಏರ್ಪಾಡು ಆದುದು ಒಂದು ವಿಚಿತ್ರವೇ ಸರಿ.

ದೀರ್ಘಕಾಲದ ಕಾರಾಗೃಹವನ್ನು ಅನುಭವಿಸಿದವರಿಗೆ ಮಾತ್ರ ಅನರ್ಹತೆಯು ಹಿಂದೆ ಇರುತ್ತಿತ್ತು. ಅಂತಹವರಿಗೂ ಸಹ ವಿನಾಯಿತಿಯನ್ನು ಕೊಡುವ ಅಧಿಕಾರವನ್ನು ಸರ್ಕಾರದವರು ಇಟ್ಟುಕೊಂಡಿದ್ದರು. ಈ ತಿದ್ದುಪಡಿಯು ಆದಾಗ ಆ ಅಧಿಕಾರವನ್ನು ಸರ್ಕಾರದವರು ಇಟ್ಟುಕೊಳ್ಳಲಿಲ್ಲ. ಸನ್ನದುಗಳನ್ನು ಕಳೆದುಕೊಂಡ ವಕೀಲರು ಆಜೀವ ಪರ್ಯಂತವೂ ಅನರ್ಹರಾಗಿಯೇ ಉಳಿಯುವಂತಾಯಿತು. ಇಂತಹ ಕ್ರೂರ ಪ್ರತಿಬಂಧಕವು ಭರತಖಂಡದ ಯಾವ ಪ್ರಾಂತದಲ್ಲಿಯೂ ಇರಲಿಲ್ಲ. ಇದನ್ನು ಪರರೂ ಘಂಟಾ ಘೋಷವಾಗಿ ಹಿಂದಿಸಿದರು. ಆದರೂ ಇದುವರೆಗೆ ಸರ್ಕಾರದವರ ಕಡೆಯಿಂದ ಯಾವ ಪರಿಣಾಮವೂ ಬಂದಂತೆ ತೋರುವುದಿಲ್ಲ. ಇದ್ದಕ್ಕಿದ್ದಂತೆ ಶಾಸನ ಸಭೆಗಳ ಬಗ್ಗೆ ಈ ಅನರ್ಹತೆಗಳನ್ನು ತೆಗೆದು ಹಾಕಿದ್ದಾರೆ.

ಸಧ್ಯದಲ್ಲಿಯೇ ಪೌರ ಸಭೆಗಳ ಚುನಾವಣೆಗಳೂ ಬರಲಿವೆ. ಅವುಗಳಿಗೆ ಎಲ್ಲ ವಕೀಲರುಗಳೂ, ಶಿಕ್ಷೆಗೆ ಒಳಗಾದ ದೇಶ ಸೇವಕರೂ ನಿಲ್ಲಲು ಅವಕಾಶವನ್ನು ಕಲ್ಪಿಸುವುದು ಉಚಿತವಾಗಿದೆ. ಶ್ರೀಮನ್ಮಹಾರಾಜರವರ ಇತ್ತೀಚಿನ ಘೋಷಣೆಯಿಂದ ಮೈಸೂರು ರಾಜ್ಯಾಂಗ ಶಾಸನದಲ್ಲಿ ಮಾರ್ಪಾಟಾಗಿ ವಕೀಲರುಗಳ ಉಮೇದುವಾರಿಕೆಗೆ ಅವಕಾಶ ಕಲ್ಪಿಸಲ್ಪಟ್ಟಿರುವಂತೆ ಅದೇ ನೀತಿಯನ್ನೇ ಮುಂದುವರಿಸಿ ಪೌರ ಸಭೆಗಳ ಚುನಾವಣೆಗಳಲ್ಲಿಯೂ ಅವರುಗಳಿಗೆ ಸರ್ಕಾರದವರು ಅವಕಾಶವನ್ನು ಕಲ್ಪಿಸಿಕೊಡಬೇಕು. ಈ ಬಗ್ಗೆ ಪೌರಸಭೆಯ ಶಾಸನದಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಿ ಕೂಡಲೇ ವಿಶೇಷ ಪ್ರಕಟಣೆಯನ್ನು ಹೊರಡಿಸಬೇಕು. ಶಾಸನ ಸಭೆಗಳಿಗೆ ಇಲ್ಲದ ಅನರ್ಹತೆಯು ಸ್ಥಳೀಯ ಸಂಸ್ಥೆಗಳಿಗೆ ಇರುವುದು ಸ್ವಲ್ಪವೂ ಸಮಂಜಸವಲ್ಲ.

ಲೀಗಿನ ಆಟ ನಡೆಯದು

ಪಂಜಾಬಿನಲ್ಲಿರುವ ಮಿಶ್ರ ಮಂತ್ರಿಮಂಡಲವನ್ನು ಉರುಳಿಸಲು ಲೀಗಿನವರು ಹೂಡಿರುವ ಆಟ ನಡೆಯದೆಂದೂ ಈ ಮಂತ್ರಿಮಂಡಲ ಎಂದೂ ಇಲ್ಲದಷ್ಟು ಪ್ರಬಲವಾಗಿದೆಯೆಂದೂ, ವಿಶ್ವದ ಕೋಮುವಾರು ಪ್ರಶ್ನೆ ಸ್ಥಾಪಿಸಬೇಕೆಂದಿರುವ ಲೀಗಿನ ಲೀಡರ ಯದೆಂದೂ ಸರ್ ... ಹೇಳಿದ್ದಾರೆ.

ಆ|| ಕಮೀಷನರುಗಳಾಗಿ ನೇಮಕ

ಬೆಂಗಳೂರು ೨೪

(ಸ್ವಂತ ಬಾತ್ಮೀದಾರರಿಂದ)

ಆ|| ಕಮೀಷನರುಗಳಾದ ಶ್ರೀ ಜಿ ಎ. ನಾರಾಯಣರೆಡ್ಡಿ, ಡಿ ಆರ್ ಚಿನ್ನಯ್ಯ, ಬಿ. ರಾಚಪ್ಪ, ಕೆ ರಂಗಪ್ಪ, ಮಹಮದ್ ಸಿರಾಜುದ್ದೀನ್ ಶೇಖ್, ಸೈಯದ್ ಫೀರೋಸ್ ಮೊಹಿಯುದ್ದೀನ್, ಎಂ ಶ್ರೀನಿವಾಸಲುನಾಯ್ಡು, ಎಸ್. ಪಿ. ಗುಂಡಶೆಟ್ಟಿ, ಆರ್ ವರದರಾಜಶೆಟ್ಟಿ, ಬಿ ಸೂರ್ಯನಾರಾಯಣರಾವ್, ಹೆಚ್. ಕೆ ಹನುಮಂತರಾವ್, ಬಿ. ಎಸ್ ಸೂರ್ಯನಾರಾಯಣ, ಅರ್ಥರ್ ಡಿಸೋಜ, ಕೆ ನರಸಿಂಹಅಯ್ಯಂಗಾರ್, ಸದರ್ ಅಹಮದ್ ಶೇಖ್, ಹೆಚ್. ಎಸ್ ಸಂಪಂಗಿ ರಾಮಯ್ಯ, ಎಂ. ಮಲ್ಲೇರಯ್ಯ, ಕೆ. ಆರ್. ಮರುದೇವ ಗೌಡ, ಸೈಯದ್ ಅಬ್ದುಲ್ ಘನಿ, ಮತ್ತು ಹೆಚ್ ಎಂ. ಶ್ರೀನಿವಾಸಯ್ಯ, ಇವರುಗಳನ್ನು ಆ ಹುದ್ದೆಯಲ್ಲಿ ಖಾಯಂ ಮಾಡಲಾಗಿದೆ.

ಹರಿಕಥೆ

ಆಡಿ ಶುಕ್ರವಾರದ ಪ್ರಯುಕ್ತ ಮೈಸೂರು ಮಂಡಿಮೊಹಲ್ಲಾ ಶ್ರೀ ಚಾಮೇಶ್ವರೀಗುಡಿ ಬೀದಿಯಲ್ಲಿರುವ ಶ್ರೀರಾಮಲಿಂಗೇಶ್ವರ ಚಾಮೇಶ್ವರೀ ಅಮ್ಮನವರ ದೇವಸ್ಥಾನದಲ್ಲಿ ಈ ದಿವಸ ಸಾಯಂಕಾಲ ೬ ಗಂಟೆಗೆ ಬೆಂಗಳೂರಿನ ವೇ|| ಬ್ರ|| ಶ್ರೀ ಹರಿದಾಸನಂದ ಭಾರತಿ ಸ್ವಾಮಿಗಳವರಿಂದ ಭಕ್ತ ಪ್ರಹ್ಲಾದ ಎಂಬ ಹರಿಕಥೆ ನಡೆಸಲ್ಪಡುತ್ತೆ. ಎಲ್ಲರೂ ದಯಮಾಡಿಸಬೇಕಾಗಿ ಪ್ರಾರ್ಥಿಸಲಾಗಿದೆ

ಅವಮಾನದ ಸೊಸೈಟಿ

ಸ್ವಂ ವ] ಗುಳೇದಗುಡ್ಡ ೨೪

ನಮ್ಮ ತಾಲ್ಲೂಕಿಗೆ ಲ್ಯಾಂಡ್ ಮಾರ್ಟ್‌ಗೇಜ್ ಕೋ ಆಪರೇಟಿವ್ ಸೊಸೈಟಿಯನ್ನು ಮಂಜೂರ್ಮಾಡಿರುವುದು ಸರಿಯಷ್ಟೆ. ಅದನ್ನು ಚಾಮರಾಜನಗರದಲ್ಲಿ ಅಲ್ಲಿನ ಸೊಸೈಟಿಗೆ ಬಗೆಹಾಗಿ ಸ್ಥಾಪಿಸುವುದು ಈ ತಾಲ್ಲೂಕಿನ ಪ್ರಜೆಗಳಿಗೆ ತಕ್ಕಷ್ಟು ಉಪಯುಕ್ತವಾಗಿರುವುದಿಲ್ಲ. ಯಳಂದೂರು ಟವನ್ನಿನಲ್ಲೇ ಆ ಸೊಸೈಟಿಯನ್ನು ಸ್ಥಾಪಿಸಿಕೊಡಬೇಕಾಗಿದೆ. ಸಂಬಂಧಪಟ್ಟವರು ಇದಕ್ಕಾಗಿ ತಕ್ಕ ಏರ್ಪಾಡನ್ನು ತಕ್ಷಣದಲ್ಲಿಯೇ ನಡೆಸಿಕೊಡಬೇಕೆಂದು ಕೋರಲಾಗಿದೆ. ಈ ಸಂಗತಿಯನ್ನು ಇಲಾಖೆಯ ಅಧಿಕಾರಿಗಳಿಗೂ ಅರ್ಜಿ ಮೂಲಕ ತಿಳಿಯಪಡಿಸಿದೆ

ವರ್ಧಂತಿ ಉತ್ಸವ

ಶ್ರೀ ಮನ್ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್‌ರವರ ವರ್ಧಂತ್ಯುತ್ಸವವು ಮೊನ್ನೆ ದಿವಸ ಬಹಳ ವಿಜೃಂಭಣೆಯಿಂದ ಜರುಗಿತು. ಅವರ ಭಾವಚಿತ್ರವನ್ನು ವಾದ್ಯದೊಡನೆ ಎಲ್ಲಾ ಮುಖ್ಯ ಬೀದಿಗಳಲ್ಲೂ ಸಹಸ್ರಾರು ಜನಗಳೊಡನೆ ಮೆರವಣಿಗೆ ನಡೆಸಲಾಯಿತು. ನಂತರ ಉಪನ್ಯಾಸಗಳು ಜರುಗಿ ಸಿಹಿತಿಂಡಿಯನ್ನು ಹಂಚಲಾಯಿತು

ಅರ್ಧಾಣೆಗೆ ೫೦ ಕಡ್ಡಿ

ಆಗಸ್ಟ್ ೧ ರಿಂದ ಜಾರಿಗೆ ಬರುವ ಆರ್ಡರಿನ ಬೆಂಕಿ ಪೊಟ್ಟಣದಲ್ಲಿ ೫೦ ಕಡ್ಡಿಗಳು ಮಾತ್ರ ಇರುತ್ತವೆ. ಆದರೆ ಇವು ಈಗಿರುವುದಕ್ಕಿಂತ ಉತ್ತಮವಾದುವು.

ಅಪೂರ್ವ ನಾಗಸ್ವರ

ಸ್ವಂ ವ] ಚಾಮರಾಜನಗರ ೨

ಶ್ರೀ ನಾರಾಯಣಸ್ವಾಮಿ ಶೆಟ್ಟರ ಉತ್ಸವ ಸಲುವಾಗಿ ಇದೇ ೨೮ ನೇ ಸೋಮವಾರ ಸಂಜೆ ೬ ಗಂಟೆಗೆ ಮಾಯಾವರಂನ ವಿದ್ವಾಂಸರಾದ ಸುಂದರಂರವರ ಶಿಷ್ಯರಿಂದ ಬೆಂಗಳೂರು ಶಿ ಪಾ ಮ ನಿ ಬ್ರದರ್ಸ್ ರವರ ಅಪೂರ್ವ ನಾಗಸ್ವರ ಕಚೇರಿಯು ಜರುಗುವುದು. ಮುನಿಸ್ವಾಮಿ ಮತ್ತು ಮುರಾಮಸ್ವಾಮಿಯವರ ವಿಖ್ಯಾತ ಜೋಡಿ ಸಹ ಏರ್ಪಾಟಾಗಿದೆ. ಅನೇಕ ಊರುಗಳಿಂದ ಈ ಸಂಗೀತದ ಸವಿಯೂಟಕ್ಕೆ ಮಹಾಜನರು ಬರುವ ನಿರೀಕ್ಷಣೆ ಇದೆ

ವರ್ಧಂತ್ಯುತ್ಸವ

ಮೈಸೂರು ಬ್ರದರ್ಸ್‌ರವರ ಶ್ರೀ ವಲಕ್ಷ್ಮೀ ಸಂಗೀತ ವಿದ್ಯಾ ಮಂದಿರದ ಆಶ್ರಯದಲ್ಲಿ ತಾ|| ೨೮-೭ ೧೯೪೬ ನೇ ರವಿವಾರ ಸಾಯಂಕಾಲ ರಾವ್ ಬಹದ್ದೂರ್ ಎ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಅವರ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರ ೨೮ ನೇ ವರ್ಷದ ವರ್ಧಂತ್ಯುತ್ಸವವನ್ನು ಆಚರಿಸಲೇರ್ಪಡಿಸಿದೆ. ಈ ಸಂದರ್ಭದಲ್ಲಿ ಅಳುವ ಮಹಾಸ್ವಾಮಿಯವರ ಸ್ವಹಸ್ತದಿಂದ ಬಿರುದುಗಳನ್ನು ಹೊಂದಿರುವ ಸಂಗೀತ ವಿದ್ವಾಂಸರುಗಳಾದ, ವೈಣಿಕ ಪ್ರವೀಣ, ವೈಣಿಕ ಶಿಖಾಮಣಿ, ಸಂಗೀತ ವಿಶಾರದ ವಿ. ವೆಂಕಟಗಿರಿಯಪ್ಪನವರು, ಸಂಗೀತ ರತ್ನಾಕರ, ಗಾಯಕ ಶಿಖಾಮಣಿ ಅರಿಯಾಕುಡಿ ರಾಮಾನುಜಯ್ಯಂಗಾರ್, ಸಂಗೀತರತ್ನಾಕರ ದ್ವಾರಂ ವೆಂಕಟಸ್ವಾಮಿನಾಯ್ಡುರವರು, ಗಾನವಿಶಾರದ, ಟಿ ಕೃಷ್ಣಯ್ಯಂಗಾರ್‌ರವರು, ಮತ್ತು ಗಾನವಿಶಾರದ ಬಿ. ದೇವೇಂದ್ರಪ್ಪನವರು, ಇವರುಗಳಿಗೆ ಸನ್ಮಾನ ಕೊಡಲೇರ್ಪಡಿಸಿದೆ. ಇದರ ಜೊತೆಗೆ ಆಸ್ಥಾನ ವೈಣಿಕ ವಿದ್ವಾನ್ ವಿ. ಸ್ವಾಮಿ ಅಯ್ಯಂಗಾರ್ಯರವರ ವೀಣಾ ವಾದನವೂ, 'ವಿದ್ವಾನ್ ವಿ ದೇಶಿಕಾಚಾರ್ಯರ' ಕೊಳಲು ವಾದನವೂ ನಡೆಯುತ್ತವೆ

ಲಷ್ಕರ್ ಕಾಂಗ್ರೆಸ್ ಸಮಿತಿ

ಲಷ್ಕರ್ ಮೊಹಲ್ಲ ಕಾಂಗ್ರೆಸ್ ಸಮಿತಿಯನ್ನು ರಚಿಸುವ ಸಲುವಾಗಿ ಇದೇ ೨೮ ತಾ|| ಸಂಜೆ ೭ ಗಂಟೆಗೆ ಕಾಂಗ್ರೆಸ್ ಆಫೀಸಿನಲ್ಲಿ ಪ್ರತಿನಿಧಿಗಳ ಸಭೆ ಸೇರುವುದು; ಎಲ್ಲ ಪ್ರತಿನಿಧಿಗಳೆಲ್ಲರೂ ಇದೇ ಅಹ್ವಾನವೆಂದು ಮನ್ನಿಸಿ ತಪ್ಪದೆ ಬರಬೇಕೆಂದು ಚಾಲಕರಾದ ಶ್ರೀ ಬಿ ಎನ್ ದಾಸಪ್ಪನವರು ಪ್ರಾರ್ಥಿಸಿರುತ್ತಾರೆ.

ರಾಜ್ ಕಮಲ್ ಟಾಕೀಸ್, ಮೈಸೂರು

೧೯೪೬ ನೇ ಜುಲೈ ೨೪ ನೇ ಬುಧವಾರದಿಂದ ೩ನೇ ವಾರ

ವನಮಾಲ, ಉಲ್ಹಾಸ್. **ಪರ್ಬತ್ ಪೆ ಅಪ್‌ನ ಡೇರ**

ಶ್ರೀ ರಾಂತಾಂರಾಂರವರ ನಿರ್ದೇಶಕತ್ವ

—: ಮುಂದಿನ ಬದಲಾವಣೆ :—

" ಬನ್‌ಫೂಲ್ " ಕರ್ಣಾದೇವಿ ಪಾತ್ರ.

೨೬-೭-೪೬ರಿಂದ ೪ ದಿನಗಳು ಮಾತ್ರ

ಪ್ರಾತಃಕಾಲ ೧೧-೩೦ಕ್ಕೆ

ನ್ಯೂ ಥಿಯೇಟರ್ಸ್ ರವರ

" ಹಾ ವಾ ಡಿ ಗ "

(ಸಪೇರಾ)

ಪಾತ್ರ—ಕನನ್ ಮತ್ತು ನವಾಬ್

ವಿಜಯಾ ಪಿಕ್ಚರ್ಸ್, ಮೈಸೂರು

ಅಪೂರ್ವವಾದ ಪ್ರಾರಂಭ

ಚಾ ಮುಂ ಡೇ ಶ್ವ ರಿ ಯ ಲ್ಲಿ

26—7—46 ರಿಂದ ಪ್ರತಿದಿನ ೩ ಆಟಗಳು

ಸಾಮ್ರಾಟ್ ★ ★ ★ ★ ಚಂದ್ರಗುಪ್ತ

(ಹಿಂದಿ)

ಮುಖ್ಯ ಭೂಮಿಕೆ: ರೇಣುಕಾದೇವಿ, ಈಶ್ವರಲಾಲ್, ನಾರಾಯಣಿಪಲ್ಲಿ, ಸುರಯ್ಯ

ಇತಿಹಾಸದಲ್ಲಿನ ಸುವರ್ಣಯುಗ ಪ್ರಕರಣ

ಅಪೇರಾ ಟಾಕೀಸ

27—7—46 ರಿಂದ

ನಾಲ್ಕನೇ ವಾರ

ಲವಂಗಿ

ಮುಂದಿನ ಚಿತ್ರ :—

ಭಕ್ತ ಕಲಾತಿ

(ತಮಿಳು)

ತಾರಾಗಣ :—ಹೊನ್ನಪ್ಪ ಭಾಗವತರ್, ತವಮಣಿ, ಕುಮುದಿನಿ, ಎಸ್ ಎಸ್ ಕೃಷ್ಣನ್, ಟಿ. ಎ ಮಧುರ

Edited, printed and published by A. K. Nagarajan at the Sadhvi Press, D Subbiah Road, Mysore.

ಫೋನ್ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೫] ಶನಿವಾರ ೨೭—೭—೪೬ [ಸಂಚಿಕೆ ೬

ಅಂಚೆ ಸಂಧಾನವು — — ಮುರಿದು ಬಿದ್ದಿತು

ಸ್ಥಾಪಕರ ದಿನಾಚರಣೆ

ಮೈಸೂರು ೨೭

ಡಿ. ಬನುಮಯ್ಯನವರ ಶಾಲೆಯ ದಿನಾಚರಣೆಯು ರಾ॥ ಬ॥ ಎಂ. ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ನೆನ್ನೆ ಸಂಜೆ ನಡೆಯಿತು ಪ್ರಾರ್ಥನೆಯಾದನಂತರ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ॥ ಶ್ರೀನಿವಾಸ ಮೂರ್ತಿಯವರು ವರದಿಯನ್ನೋದಿ ಅತಿಥಿಗಳನ್ನು ಸ್ವಾಗತಿಸಿದರು ಅಧ್ಯಕ್ಷರು ಮಾತನಾಡುತ್ತಾ, ಶಾಲೆಯ ಸ್ಥಾಪನೆಗೆ ಕಾರಣಭೂತರಾದ ಶ್ರೀ ಬನುಮಯ್ಯನವರ ಗುಣಕಥನಮಾಡಿದರು ಶ್ರೀ॥ ಬನುಮಯ್ಯನವರ ದೇಶಭಕ್ತಿ, ಪ್ರಜಾವಾತ್ಸಲ್ಯ, ದೈವಭಕ್ತಿ ಇವುಗಳನ್ನು ವಿವರಿಸಿದರು ಬನುಮಯ್ಯನವರಿಗೆ ಮೇಲು ಕೀಳು, ಮುಂದುವರಿದ ಅಥವ ಹಿಂದುಳಿದ ಪಂಗಡಗಳು ಎಂಬ ಭಾವನೆ ಇರಲಿಲ್ಲ, ಮೈಸೂರು ಪ್ರಜೆಗಳಾದ ಎಲ್ಲ ವಿದ್ಯಾರ್ಥಿಗಳಿಗೂ ಉಪಯೋಗವೆಂಬ ಕಾರಣದಿಂದ ಈ ಶಾಲೆಯನ್ನು ತೆರೆದು ವಿದ್ಯಾರ್ಥಿವೃಂದಕ್ಕೆ ಅಪಾರ ಸೌಕರ್ಯಗಳನ್ನುಂಟುಮಾಡಿದ್ದಾರೆ ಶಾಲೆಯಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಬನುಮಯ್ಯನವರ ಸ್ಮರಣೆಮಾಡುವ ದಿನವು ಸುದಿನವೆಂದು ತಿಳಿಸಿದರು ಶಾಲೆಯು ಇನ್ನೂ ಪ್ರವರ್ಧಮಾನಕ್ಕೆ ಬಂದು, ಸ್ವಯಂಪೂರಿತ ಶಾಲೆಯಾಗಿ ವಿದ್ಯಾರ್ಥಿವೃಂದಕ್ಕೆ ಮತ್ತಷ್ಟು ಪ್ರಯೋಜನಕಾರಿಯಾಗಲೆಂದು ಹಾರೈಸಿದರು

ಪ್ರಭುಗಳಿಗೆ ಶಾಸನ ಸಭಾ ಸದಸ್ಯರ ವಿನಂತಿ

ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಯನ್ನು ಮಾಡಬೇಕೆಂದೂ, ಭಾರತ ರಾಜ್ಯಾಂಗ ರಚನಾ ಸಭೆಗೆ ಸಂಸ್ಥಾನದಿಂದ ಪ್ರಜಾಪ್ರತಿನಿಧಿಗಳನ್ನು ಆರಿಸಿ ಕಳುಹಿಸುವಂತೆ ಏರ್ಪಾಟಾಗಬೇಕೆಂದೂ, ಪ್ರಾತಿನಿಧಿಕ ನ್ಯಾಯವಿಧಾಯಕ ಸಭೆಯ ೨೪ ಮಂದಿ ಸದಸ್ಯರು ಶ್ರೀಮನ್ಮಹಾರಾಜರವರಿಗೆ ದಿವಾನರ ಮೂಲಕ ವಿಜ್ಞಾಪನ ಪತ್ರವನ್ನು ಕಳುಹಿಸಿದ್ದಾರೆ

ಮಹಾ ಶಾಂತಿ ಸಮ್ಮೇಳನ

ಇದೇ ೨೯ ನೇ ಸೋಮವಾರ ಮಧ್ಯಾಹ್ನ ಲಕ್ಸೆಂಬರ್ಗ್ ಅರಮನೆಯಲ್ಲಿ ವಿಶ್ವಶಾಂತಿ ಸಮ್ಮೇಳನವು ಆರಂಭವಾಗುವುದು. ಇದರಲ್ಲಿ ೨೧ ರಾಷ್ಟ್ರಗಳು ಭಾಗವಹಿಸುವುವು ಫ್ರೆಂಚ್ ಮುಖ್ಯ ಮಂತ್ರಿ ಮಿ॥ಬಿಡಾಲ್‌ರವರು ಇದರ ಆರಂಭೋತ್ಸವವನ್ನು ನೆರವೇರಿಸುವರು.

ಹೊಸ ಬಸ್ ಸರ್ವಿಸ್

—

ಚಾಮರಾಜನಗರದಿಂದ ಯಳಂದೂರು ಮಾರ್ಗವಾಗಿ ಮಾಂಬಳ್ಳಿಗೆ ಒಂದು ಬಸ್ ಸರ್ವಿಸ್ಸು ಸಧ್ಯದಲ್ಲಿಯೇ ಪ್ರಾರಂಭವಾಗುತ್ತಿದೆಯೆಂದು ತಿಳಿದುಬಂದಿರುತ್ತದೆ. ಇದರಿಂದ ಮಾಂಬಳ್ಳಿ, ಯಳಂದೂರು ಕಡೆಗಳಿಂದ ರೈಲಿಗೆ ಹೋಗಲು ತುಂಬಾ ಅನುಕೂಲವಾಗುತ್ತದೆ.

ಚೀನಾದಲ್ಲಿ ಹೊಸ ಧಾಳಿ

—

ಯಾಂಗ್ಸಿ ನದಿಯ ಪ್ರದೇಶದಲ್ಲಿ ೧೩೦ ಮೈಲಿಗಳಷ್ಟು ವಿಸ್ತಾರವಾದ ರಣ ಕ್ಷೇತ್ರದಲ್ಲಿ ಚೀಣೀ ಸರ್ಕಾರಿ ಸೈನ್ಯಗಳು ಧಾರಿ ಧಾಳಿ ಪ್ರಾರಂಭಿಸಿವೆ ಎಂಬುದಾಗಿ ಚೀಣೀ ಕಮ್ಯೂನಿಸ್ಟರು ತಿಳಿಸುತ್ತಾರೆ ಅದೇ ಕ್ಷೇತ್ರದಲ್ಲಿ ಸರ್ಕಾರಿ ಸೈನ್ಯಗಳು ೫೦ ಮೈಲಿ ಮುನ್ನುಗ್ಗಿ ಹೋಗಿರುವುದಾಗಿ ತಿಳಿಸಲಾಗಿದೆ

ಸೂಚನೆ

ಭೀಮನ ಅಮಾವಾಸ್ಯೆ ಪ್ರಯುಕ್ತ ನಾಳೆ ದಿನ "ಸಾಧ್ವಿ" ಪತ್ರಿಕೆಗೆ ರಜಾ ಕೊಡಲಾಗಿದೆ.

ವ್ಯವಸ್ಥಾಪಕ—

ಮೈಸೂರು ಹಿಂದೂ ಮಹಾ ಸಭೆ

ಬೆಂಗಳೂರು, ೨೫

ಮೇಲ್ಕಂಡ ಸಭೆಯ ಕಾರ್ಯಕಾರಿ ಸಮಿತಿಯ ಸಭೆಯು ತಾ॥ ೩೧-೭-೪೬ ನೇ ಬುಧವಾರ ಬೆಳಿಗ್ಗೆ ೯ ಗಂಟೆಗೆ ಮಹಾಸಭಾ ಆಫೀಸಿನಲ್ಲಿ ನಡೆಯುತ್ತದೆ ಸಮಿತಿಯ ಸದಸ್ಯರೆಲ್ಲರೂ ತಪ್ಪದೆ ದಯಮಾಡಿಸಬೇಕಾಗಿ ಕೋರಲಾಗಿದೆ

ರೈಲ್ವೆ ಸೌಕರ್ಯ

ಮುಂದಿನ ಆಗಸ್ಟ್ ೧ ರಿಂದ ರೈಲ್ವೆ ಇಲಾಖೆಯವರು ಬೆಂಗಳೂರಿನಿಂದ ಬರುವ ಮೇಲ್ ಅನ್ನು ಸರಿಯಾಗಿ ೧॥ ಗಂಟೆಗೆ ಚಾಮರಾಜನಗರಕ್ಕೆ ಮೈಸೂರಿನಿಂದ ರೈಲು ಹೊರಡುವ ವ್ಯವಸ್ಥೆ ಮಾಡಿದ್ದಾರೆ. ಅಲ್ಲದೆ ಮೈಸೂರಿನಿಂದ ಬೆಳಿಗ್ಗೆ ೬-೫೦ ಕ್ಕೆ ಚಾಮರಾಜನಗರಕ್ಕೆ ಹೋಗುವ ಗಾಡಿಯು ಮತ್ತೆ ಅಲ್ಲಿಂದ ೧೦-೫೦ ಕ್ಕೆ ವಾಪಸ್ ಹೊರಟು ಮೈಸೂರಿನಿಂದ ಬೆಂಗಳೂರಿಗೆ ಹೋಗುವ ಮೇಲ್ ಗಾಡಿಗೆ ಕನೆಕ್ಟ್ ಕೊಡುವಂತೆ ಏರ್ಪಡಿಸಲಾಗಿದೆ

ಡಾ॥ ರಾಯರ ಪ್ರವಾಸ

ಸಚಿವರಾದ ಡಾ॥ ರಾಯರು ೨೬ ನೇ ತಾ॥ ರಾತ್ರಿ ಚಿತ್ರದುರ್ಗಕ್ಕೆ ಪ್ರಯಾಣ ಮಾಡಿ, ಅಲ್ಲಿ ೨೭ ಮತ್ತು ೨೮ ನೇ ತಾ॥ ಗಳಲ್ಲಿ ಇನ್ಸ್‌ಪೆಕ್ಷನ್ ನಡೆಸುವರು. ೨೯ ಮತ್ತು ೩೦ ರಲ್ಲಿ ದಾವಣಗೆರೆಯಲ್ಲಿ ಇನ್ಸ್‌ಪೆಕ್ಷನ್ ನಡೆಸಿ, ಆಗಸ್ಟ್ ೧ ನೇ ತಾ॥ ಪ್ರಾತಃಕಾಲ ಬೆಂಗಳೂರಿಗೆ ವಾಪಸು ಬರುವರು.

ಬಂಗಾಳದಲ್ಲಿ ಸಾರ್ವತ್ರಿಕ ಮುಷ್ಕರ

ಅಂಚೆ ಮುಷ್ಕರಗಾರರಿಗೆ ಸಹಾನುಭೂತಿ ತೋರಿಸುವ ಸಲುವಾಗಿ ನಾಳಿದ್ದು ಬಂಗಾಳದಲ್ಲೆಲ್ಲಾ ಸಾರ್ವಜನಿಕ ಮುಷ್ಕರವನ್ನು ನಡೆಸಬೇಕೆಂದು ಅಲ್ಲಿನ ಟ್ರೇಡ್ ಯೂನಿಯನ್ ಕಾಂಗ್ರೆಸ್ಸು ನಿರ್ಧರಿಸಿದೆ

ಬೂದಿಯ ಮಳೆ

ಮಾಲೂಕ್ಸ್ ದ್ವೀಪದ ಬಳಿ ಇರುವ ಹಾಲ್‌ಮೇಹರ ದ್ವೀಪದಲ್ಲಿ ಉಂಟಾದ ಜ್ವಾಲಾಮುಖಿಯಿಂದ ಅದರ ಸಮೀಪದಲ್ಲಿರುವ ಮೊರೊಟಾಯ್ ದ್ವೀಪದ ಮೇಲೆಲ್ಲಾ ಮೊನ್ನೆ ದಿನ ಬೂದಿಯ ಮಳೆಯಾಯಿತೆಂದು ಹಾಲೆಂಡಿನ ಕಮಾಂಡರ್ ಫೀಲ್ಡ್‌ರವರು ತಿಳಿಸಿರುತ್ತಾರೆ.

ಸೆಪ್ಟೆಂಬರ್ ೧ ರೊಳಗೆ ತಾತ್ಕಾಲಿಕ ಸರ್ಕಾರ

ಬ್ರಿಟಿಷ್ ಮಂತ್ರಿಮಂಡಲದ ಸಲಹೆಯಂತೆ ಆಗಸ್ಟ್ ೧೫ರ ಒಳಗಾಗಿಯಾಗಲಿ ೩೧ ನೇ ತಾ॥ ಒಳಗೆ ಭಾರತದ ಕೇಂದ್ರದಲ್ಲಿ ತಾತ್ಕಾಲಿಕ ಸರ್ಕಾರವನ್ನು ರಚಿಸಲೇಬೇಕೆಂದು ಇಂಡಿಯಾ ಸೆಕ್ರೆಟರಿ ಲಾರ್ಡ್ ಪೆಥಿಕ್ ಲಾರೆನ್ಸರು ಲಾರ್ಡ್ ವೇವಲ್ಲರಿಗೆ ಸೂಚನೆ ಕೊಟ್ಟಿದ್ದಾರೆಂದು ಗೊತ್ತಾಗಿದೆ. ಸೆಪ್ಟೆಂಬರ್ ೧ನೇ ತಾ॥ ಕೇಂದ್ರದಲ್ಲಿ ಪ್ರಮುಖ ರಾಜಕೀಯ ಪಕ್ಷಗಳಿಂದ ಮಾಡಿದ ತಾತ್ಕಾಲಿಕ ಸರ್ಕಾರ ರಚನೆ ಆಗುವುದು ಖಂಡಿತ ಆ ಸರ್ಕಾರದಲ್ಲಿ ೧೪ ಮಂದಿ ಇರುವರು ಈ ಪೈಕಿ ೬ ಕಾಂಗ್ರೆಸ್, ೫ ಲೀಗ್, ೧ ಸಿಖ್, ೧ ಭಾರತೀಯ ಕ್ರೈಸ್ತರು ಮತ್ತು ೧ ಅಲ್ಪಸಂಖ್ಯಾತ ಕೋಮಿನ ಪ್ರತಿನಿಧಿಗಳಿರುವರು ಕಾಂಗ್ರೆಸ್ ಮತ್ತು ಲೀಗುಗಳು ತಮ್ಮ ಸಂಖ್ಯೆಯಲ್ಲಿ ತಮಗಿಷ್ಟ ಬಂದವರನ್ನು ಸೂಚಿಸಲು ಹಕ್ಕು ಕೊಡಲಾಗುವುದು ಈ ಸಂಬಂಧವಾಗಿ ಜುಲೈ ೩೦ನೇ ತಾ॥ ದೆಹಲಿಯಲ್ಲಿ ಒಂದು ಸಭೆಯನ್ನು ವೈಸರಾಯರು ಕರೆದಿದ್ದಾರೆಂದೂ, ಈಗಾಗಲೇ ಪಂ॥ ನೆಹರು, ಮೌ॥ ಆಜಾದ್, ಸ॥ ಪಟೇಲ್, ಮಿ॥ ಜಿನ್ನಾ, ಲಿಯಾಕತ್, ಅಲಿಖಾನ್ ಮೊದಲಾದವರನ್ನು ಈ ಸಭೆಗೆ ಆಹ್ವಾನಿಸಲಾಗಿದೆಯೆಂದೂ ಗೊತ್ತಾಗಿದೆ. ಈ ಸಲ ಅವೈರು ತೀರ್ಮಾನ ಮಾಡಲಾಗುವುದೆಂದೂ ತಿಳಿದುಬಂದಿದೆ

ಅಂಚೆ ಖೈದಿಗಳ ಉಪವಾಸ

ಅಲಹಾಬಾದಿನಲ್ಲಿ ದಸ್ತಗಿರಿಯಾಗಿ ಸೆರೆಯಲ್ಲಿರುವ ೧೩ ಮಂದಿ ಅಂಚೆ ನೌಕರರನ್ನು ಬಿ ತರಗತಿಯಲ್ಲಿ ಇಡಲು ನಿರಾಕರಿಸಿದ ದರ ಫಲವಾಗಿ ಅವರೆಲ್ಲರೂ ಉಪವಾಸ ಆರಂಭಿಸುತ್ತಿರುವರು ಅವರಲ್ಲೊಬ್ಬನ ಪರಿಸ್ಥಿತಿಯು ಚಿಂತಾಜನಕವಾಗಿದೆಯೆಂದು ವರದಿಯಾಗಿದೆ

ಬಡಬಗ್ಗರಿಗೆ ಅನ್ನ ದಾನ

ಶ್ರೀಮನ್ಮಹಾರಾಜರವರ ೬೪ನೇ ವರ್ಷದ ವರ್ಧಂತ್ಯುತ್ಸವದ ಸಂತೋಷಾರ್ಥವಾಗಿ ಸಂತೇಪೇಟೆಯ ವರ್ತಕ ಮಹಾಶಯರು ಮೊನ್ನೆ ದಿನ ಕುಂಚಿಟಿಗರ ಶ್ರೀ ರಾಮಮಂದಿರದಲ್ಲಿ ವಿಶೇಷ ಪೂಜೆಯನ್ನು ಮಾಡಿ ಶ್ರೀಮನ್ಮಹಾರಾಜರವರ ಭಾವಚಿತ್ರದ ಉತ್ಸವವನ್ನು ಸಹ ನಡೆಸಿದರು. ಈ ಸಮಾರಂಭಕ್ಕೆ ಆರವ ಸೇಯ ಅಧಿಕಾರಿಗಳೂ ನಗರದ ಗಣ್ಯ ಮಹನೀಯರೂ ಮತ್ತು ವರ್ತಕರೂ ಸಹ ದಯಮಾಡಿಸಿದ್ದರು. ನಂತರ ಸಾವಿರಾರು ಜನ ಬಡಬಗ್ಗರಿಗೆ ಅನ್ನದಾನವು ನಡೆಯಿತು.

ಅಂಚೆ ಸಂಧಾನ ಮುರಿದು ಬಿತ್ತು

ಅಂಚೆ ಮುಷ್ಕರವನ್ನು ನಿಲ್ಲಿಸುವ ಸಲುವಾಗಿ ಅಧಿಕಾರಿಗಳಿಗೂ ನೌಕರರ ಪ್ರತಿನಿಧಿಯಾದ ಶ್ರೀ ದಳವಿಯವರಿಗೂ ಬೊಂಬಾಯಿಯಲ್ಲಿ ಸಂಧಾನವು ನಡೆಯುತ್ತಿತ್ತು. ಅಂಚೆಯ ಅಧಿಕಾರಿಗಳು ಮುಷ್ಕರಗಾರರ ಬೇಡಿಕೆಯನ್ನು ಈಡೇರಿಸಲು ಸಾಧ್ಯವಿಲ್ಲವೆಂದ ತಿಳಿಸಿದುದರ ಫಲವಾಗಿ ನೌಕರರಿಗೂ ಅಧಿಕಾರಿಗಳಿಗೂ ನಡೆಯುತ್ತಿದ್ದ ಸಂಧಾನವು ಮುರಿದುಬಿದ್ದಿತು ಲೇಬರ್ ಕಮೀಷನರವರು ಅಂಚೆ ನೌಕರರಿಗೆ ಕೊಟ್ಟಿದ್ದ ರಿಯಾಯಿತಿಗಳಲ್ಲಿ ಪಂಚಾಯಿತರು ಬಹಳವಾಗಿ ಕಡಿಮೆ ಮಾಡಿರುವರು ಈ ತೀರ್ಮಾನವನ್ನು ಸರ್ಕಾರವು ಒಪ್ಪಿಕೊಂಡರೆ ಅದು ಕೊಟ್ಟ ಮಾತಿಗೆ ತಪ್ಪಿದಂತಾಗುವುದಲ್ಲದೆ ಪೂರ್ಣವಾಗಿ ನೌಕರರ ವಿಶ್ವಾಸವನ್ನು ಕಳೆದುಕೊಳ್ಳುವುದೆಂದು ಅಂಚೆ ನೌಕರರ ಫೆಡರೇಷನ್ನಿನ ಕಾರ್ಯದರ್ಶಿಯಾದ ಮಿ॥ ಸಿನೋಯಿರವರ ಒಂದು ಹೇಳಿಕೆಯಲ್ಲಿ ತಿಳಿಸಿರುವರು

ಪಾರ್ಲಿಮೆಂಟಿನಲ್ಲಿ ಭಾರತದ ಕ್ರಿಕೆಟ ಆಟಗಾರರು

ಬ್ರಿಟನ್ನಿನಲ್ಲಿ ಪ್ರವಾಸ ಮಾಡುತ್ತಿರುವ ಭಾರತೀಯ ಕ್ರಿಕೆಟ್ ಆಟಗಾರರು ೨೪ನೇ ತಾ॥ ಬುಧವಾರ ಸ್ಥಾನಿಕ ಆಟ್ಲಿಯವರ ಆಹ್ವಾನದ ಮೇರೆ ಪಾರ್ಲಿಮೆಂಟಿಗೆ ಭೇಟಿ ಇತ್ತರು ಮಹಾದ್ವಾರದ ಬಳಿ ಸಭಾನಾಯಕರಾದ ಮಿ॥ ಮಾರಿಸನರವರು ಅವರನ್ನು ಸ್ವಾಗತಿಸಿದರು. ಭಾರತೀಯ ಆಟಗಾರರನ್ನು ಸಭೆಯು ಎಲ್ಲ ಪಕ್ಷಗಳವರೂ ಅಭಿನಂದಿಸಿ ಭಾಷಣ ಮಾಡಿದರು ಭಾರತದ ಟೀಮಿನ ಮ್ಯಾನೇಜರ್ ಶ್ರೀ ಗುಪ್ತರವರು ಕೃತಜ್ಞತಾವಂದನೆಗಳನ್ನ ಸಲ್ಲಿಸಿದರು. ಅದೇ ರಾತ್ರಿ ಅವರೆಲ್ಲರನ್ನೂ ಪ್ರಧಾನಿಗಳು ಸತ್ಕರಿಸಿದರು

ಷೇಕ್॥ಅಬ್ದುಲ್ಲಾ-ನೆಹರು ಭೇಟಿ

ಶ್ರೀನಗರದಲ್ಲಿ ಷೇಕ್ ಅಬ್ದುಲ್ಲಾರವರ ವಿಚಾರಣೆಯು ನಿನ್ನೆ ದಿನ ಆರಂಭವಾಯಿತು ನ್ಯಾಯಾಸ್ಥಾನದಲ್ಲಿ ಪಂ॥ ನೆಹರುರವರು ಹಾಜರಿದ್ದು ವಿಚಾರಣೆಯನ್ನು ಆಸಕ್ತಿಯಿಂದ ಪರಿಶೀಲಿಸಿದರು. ಪಂ॥ ನೆಹರುರವರು ಮೊನ್ನೆ ಸಂಜೆ ಮತ್ತು ನಿನ್ನೆ ಬೆಳಿಗ್ಗೆ ಅಬ್ದುಲ್ಲರವರನ್ನು ಭೇಟಿಮಾಡಿ ಮಾತುಕತೆ ನಡೆಸಿದರು.

ಚಾಮರಾಜಮೊಹಲ್ಲಾ ಕಾಂಗ್ರೆಸ್ ಸಮಿತಿ

ಮೈಸೂರು ೨೭

ನಿನ್ನೆ ಸಂಜೆ 'ಸಾಧ್ವಿ' ಕಛೇರಿಯಲ್ಲಿ ಚಾಮರಾಜಮೊಹಲ್ಲಾ ಕಾಂಗ್ರೆಸ್ ಪ್ರತಿನಿಧಿಗಳು ಸಭೆಸೇರಿ ತಮ್ಮ ಮೊಹಲ್ಲಾ ಸಮಿತಿಯನ್ನು ಸ್ಥಾಪಿಸಿದರು ಶ್ರೀಗಳಾದ ಆಗರ ರಂಗಯ್ಯನವರು ಅಧ್ಯಕ್ಷರಾಗಿಯೂ, ಬಿ ಎಸ್. ಸುಬ್ಬಣ್ಣನವರು ಕಾರ್ಯದರ್ಶಿಯಾಗಿಯೂ, ಕೆ ಎಸ್. ಸತ್ಯನಾರಾಯಣರಾಯರು ಕೋಶಾಧಿಕಾರಿಗಳಾಗಿಯೂ ಆರಿಸಲ್ಪಟ್ಟರು. ಸಮಿತಿ ಕಛೇರಿಯನ್ನು 'ಸಾಧ್ವಿ' ಪತ್ರಿಕಾ ಕಛೇರಿ ಮಹಡಿಮೇಲೆ ತೆರೆಯಲಾಯಿತು

ಭಾರತವನ್ನು ಆಕ್ರಮಿಸಿ ಪ್ರಪಂಚಗಿಟ್ಟಿ ಲೆ ಷ್ಟ್ರಾ ಭಯಪಡಿಸಿಯ ಎನ ಸೊಡಿದ್ದನೆಂದ ಈಗಿತನೆ ಎಕ್ಕರಿಸ ಅವನೀಗಲೇ ಶಮಾಗಿನಿತ್ತ ಸ್ವಾಂತ್ಯ ಎಂದ ಗೊತ್ತಾಗಿದೆ. ಈ ಸಂದತ್ತ ಅಂ ದ ಸ್ವ ಪತ್ರಿಕೆಯೊ ಪ್ರಕಟವಾದೆ

ಸಾಧ್ವಿ

ತಾ॥ ೨೭-೭-೪೬ ಶನಿವಾರ

ದಿವಾನಗಿರಿ ಪ್ರಶ್ನೆ

ಸಂಸ್ಥಾನದ ದಿವಾನಗಿರಿಯ ವಿಚಾರವು ದಿನೇ ದಿನೇ ತೀಕ್ಷ್ಣವಾದ ಸ್ವರೂಪವನ್ನು ತಾಳುತ್ತಿದೆ. ಸರ್ ರಾಮಸ್ವಾಮಿ ಮೊದಲಿಯಾರರು ಬರುವ ವಿಚಾರದಲ್ಲಿ ಎಲ್ಲಾ ಕಡೆಗಳಿಂದಲೂ ಪ್ರತಿಭಟನೆಗಳು ಒದಗುತ್ತಿವೆ. ವಿದ್ಯಾರ್ಥಿಗಳೂ ಸಹ ಇದಕ್ಕೆ ತೀವ್ರವಾದ ವಿರೋಧವನ್ನು ಸೂಚಿಸಿ ನಿನ್ನೆ ಬೆಂಗಳೂರಿನಲ್ಲಿ ಭಾರಿ ಹರತಾಳವನ್ನು ನಡೆಸಿದರು. ಇವೆಲ್ಲವೂ ಸರ್ ಮೊದಲಿಯಾರರ ಕಿವಿಗೆ ಮುಟ್ಟದೆ ಇರುವುದಿಲ್ಲ.

ಅವರು ಬರುವುದಕ್ಕೆ ಮುಂಚೆಯೇ ಇಷ್ಟೊಂದು ವಿರೋಧವಿರುವಾಗ ಬಂದ ಮೇಲೆ ಇನ್ನೆಷ್ಟು ಪ್ರತಿಭಟನೆಯಾಗುವುದೋ ತಿಳಿಯದು. ಅಂತು ಒಟ್ಟಿನಲ್ಲಿ ಸುಗಮವಾಗಿ ಅವರ ಅಧಿಕಾರವು ನಡೆಯುವಂತೆ ಕಾಣುವುದಿಲ್ಲ. ಈ ಪ್ರತಿಭಟನೆಗಳನ್ನು ಅವರು ಎದುರಿಸಲು ನಿರ್ಧರಿಸುವುದಾದರೆ ಅದೂ ಒಂದು ವಿಷಾದ ಪ್ರಕರಣವಾಗಿ ಪರಿಣಮಿಸಬಹುದು. ಇದನ್ನೆಲ್ಲಾ ಅರಿತು ಅವರೇ ಈ ಕೆಲಸಕ್ಕೆ ಬಾರದಿದ್ದರೆ ಸರ್ವ ಕ್ಷೇಮ. ಅವರ ಹಿತೈಷಿಗಳೂ, ಮಿತ್ರರೂ ಈ ಬಗ್ಗೆ ಅವರಿಗೆ ಸೂಕ್ತ ಸಲಹೆಗಳನ್ನು ಕೊಡಬೇಕೆಂದು ನಾವು ಹಾರೈಸುತ್ತೇವೆ.

ಸರ್ ಮೊದಲಿಯಾರರ ನೇಮಕಕ್ಕೆ ಅನೇಕ ಬಗೆಯಾಗಿ ಪ್ರತಿಭಟನೆಯು ಸೂಚಿಸಲ್ಪಟ್ಟಿದೆ. ಅವರು ಹೊರಗಿನವರು, ಕೋಮುವಾದಿ ಭಾವನೆಯವರು, ಸಾಮ್ರಾಜ್ಯವಾದಿಗಳು, ಪ್ರತಿಗಾಮಿಗಳು ಎಂಬವೇ ಮುಂತಾದ ವಾದಗಳು ಮುಂದಿಡಲ್ಪಟ್ಟಿವೆ. ಇವುಗಳಲ್ಲಿ ಬಹಳಮಟ್ಟಿಗೆ ಸತ್ಯಾಂಶವಿದೆ. ಇವೆಲ್ಲಕ್ಕಿಂತಲೂ ಮಿಗಿಲಾದ ಕಾರಣವು ಸೇರಿಕೊಂಡಿದೆ. ವ್ಯಕ್ತಿ, ದೇಶ, ರಾಜಕೀಯ ಮುಂತಾದುವುಗಳಿಗೆ ಈಗ ಪ್ರಾಧಾನ್ಯವಿಲ್ಲ. ಪ್ರಜಾನುರಾಗವೇ ಪ್ರಾಮುಖ್ಯವಾದುದು. ಮಂತ್ರಿ ಪದವಿಗೆ ಪ್ರಜಾ ವಿಶ್ವಾಸವೇ ಅಸ್ತಿಭಾರ. ಪ್ರಜೆಗಳ ನಂಬಿಕೆಯನ್ನು ಪಡೆಯದವರಿಗೆ ಮಂತ್ರಿ ಮಂಡಲಗಳಲ್ಲಿ ಸ್ಥಾನವಿರಕೂಡದೆಂಬುದು ಈಗಿನ ವಾದ.

ಸರ್ ರಾಮಸ್ವಾಮಿ ಮೊದಲಿಯಾರರು ನಮ್ಮ ದೇಶದ ಪ್ರಜೆಗಳ ವಿಶ್ವಾಸಕ್ಕೆ ಪಾತ್ರರಾಗಿಲ್ಲವೆಂಬ ಅಂಶವು ಈಗಾಗಲೇ ಸಕಲ ರೀತಿಗಳಿಂದಲೂ ವ್ಯಕ್ತವಾಗಿದೆ. ಇಂತಹವರು ಇಲ್ಲಿಗೆ ದಿವಾನರಾಗಿ ಬರುವಂತಹ ಸನ್ನಿವೇಶವು ಏಕೆ ಏರ್ಪಟ್ಟಿದೆಯೋ ದೇವರೇ ಬಲ್ಲ. ಮೈಸೂರಿನ ಪ್ರಜಾವರ್ಗದ ಮನೋಭಾವನೆಯನ್ನು ಈಗಲಾದರೂ ಅವರು ಮನಗಂಡು ಇಲ್ಲಿಗೆ ಬರದಿರುವಂತೆ ಅವರೇ ಮನಸ್ಸು ಮಾಡುವುದು ಮೇಲು.

ಕ್ರೈಸ್ತ ಪಾದ್ರಿಗಳಿಗೆ ಅಧಿಕಾರಿಗಳು ಬೆಂಬಲಕೊಡುವುದು ಸರಿಯಲ್ಲ

ಪಾದ್ರಿಗಳು ಬೇಕಾದರೆ ಕೋರ್ಟಿಗೆ ಹೋಗಲಿ

ಚಾಮರಾಜನಗರದ ತಾಲ್ಲೂಕು ಹಂಗಳ ಆದಿಕರ್ನಾಟಕರಿಗಾಗಿ ಮನೆ ಕಟ್ಟಿಕೊಳ್ಳಲು ಸದರಿ ಗ್ರಾಮದ ಸರ್ವೆ ನಂ ೧೪೦ ನೇ ನಂಬರು ಜಮೀನನ್ನು ಸರ್ಕಾರದವರು ೧೭-೮-೪೩ನೇ ಮುನ್ಸಿ... ಆರ್ಡರು ಅನುಸರಿಸಿ ಅಕ್ವೈರ್ ಮಾಡಿಕೊಂಡಿದ್ದಾರೆ. ರೆವಿನ್ಯೂ ಇನ್ಸ್‌ಪೆಕ್ಟರವರು ನಂಜನಗೂಡು ಸಬ್ ಡಿವಿಜನ್ ಸಾಹೇಬರವರ ...ನೇ ಮತ್ತು ...ನೇ ನಂಬರು ಹುಕುಂ ಪ್ರಕಾರ ಸದರಿ ನಂಬರನ್ನು ೩೪ ಸೈಟುಗಳಾಗಿ ವಿಂಗಡಿಸಿ ಗ್ರಾಮಪಂಚಾಯಿತಿಗೆ ೬-೬-೪೫ ರಲ್ಲಿ ವಹಿಸಿಕೊಟ್ಟಿದ್ದಾರೆ.

೧೬-೧-೪೪ ರಲ್ಲಿ ಗ್ರಾಮಪಂಚಾಯಿತಿ ಸಭೆ ಸೇರಿ ಸದರಿ ಜಾಗಕ್ಕಾಗಿ ಪ್ರಾರಂಭದಿಂದಲೂ ದುಡ್ಡು ಕೊಟ್ಟಿದ್ದಂತೆ ಪ್ರತಿಯೊಬ್ಬರಿಗೂ ಒಂದರಂತೆ ಎರಡು ಸೈಟನ್ನು ವೆಸ್ಲಿಯನ್ ಮಿಷನ್ ಸಂಗಡದ ಕ್ರೈಸ್ತರಿಗೂ ಹತ್ತು ಸೈಟನ್ನು ಆದಿಕರ್ನಾಟಕರಿಗೂ ಪ್ರತಿಯೊಂದು ಸೈಟಿಗೂ ೨೦ ರೂಗಳಂತೆ ತೆಗೆದುಕೊಂಡು ಛೇರ್‌ಮನ್‌ರವರು ರಶೀದಿಕೊಟ್ಟು ಖಾತಾ ಕಾಗದದಲ್ಲಿ ಬರೆದುಕೊಟ್ಟಿದ್ದಾರೆ. ಈ ಮೊಬಲಗನ್ನು ಟ್ರೆಜರಿಗೂ ಸಹ ಕಟ್ಟಿದ್ದಾರೆ. ಮಧ್ಯೆ ಎರಡು ವರ್ಷಗಳ ಕಾಲ ಉಳಿದ ಒಂಭತ್ತು ಸೈಟುಗಳಿಗೆ ಯಾರ ಅರ್ಜಿಯೂ ಬರಲಿಲ್ಲವಾದ್ದರಿಂದ ಹಾಗೇ ಉಳಿದಿತ್ತು. ೩-೧-೪೬ ರಲ್ಲಿ ಒಂಭತ್ತು ಜನ ಆದಿಕರ್ನಾಟಕರು ಅರ್ಜಿಯನ್ನು ಕೊಟ್ಟರು. ಸದರಿ ಪಂಚಾಯಿತಿ ಛೇರ್‌ಮನ್‌ರವರು ಹಿಂದೆ ಕೊಟ್ಟಿದ್ದ ಪ್ರಕಾರ ಸೈಟು ಒಂದಕ್ಕೆ ೨೦ ರೂಗಳಂತೆ ತೆಗೆದುಕೊಂಡು ರಶೀತಿಯನ್ನು ಕೊಟ್ಟು ಖಾತಾ ಕಾಗದದಲ್ಲಿ ಬರೆದುಕೊಟ್ಟಿದ್ದಾರೆ. ಮೊಬಲಗನ್ನು ಟ್ರೆಜರಿಗೆ ಕಟ್ಟಿದ್ದಾರೆ.

ಹಿಂದೆ ೪೪ ನೇ ಇಸವಿಯಲ್ಲಿ ಸೈಟು ತೆಗೆದುಕೊಂಡವರಿಗೆ ಆ ಸೆಕ್ರೆಟರಿ ಛೇರ್‌ಮನ್‌ರವರು ಲೈಸೆನ್ಸ್ ಕೊಟ್ಟಿದ್ದಾರೆ. ಅಲ್ಲಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ೪೬ ರಲ್ಲಿ ಕೊಂಡುಕೊಂಡ ಆದಿಕರ್ನಾಟಕರು ಮನೆ ಕಟ್ಟಿಕೊಳ್ಳಲು ಲೈಸೆನ್ಸ್ ಕೇಳಲು ಅರ್ಜಿ ಹಾಕಿದರು. ಈ ಸಮಯವನ್ನೇ ಕಾದಿದ್ದ ರೋಮನ್ ಕ್ಯಾಥೋಲಿಕ್ ಸಂಗಡದ ನಾಗವಳ್ಳಿ ಮತ್ತು ದೊಡ್ಡರಾಯಪೇಟೆಯ ಪಾದ್ರಿಗಳೂ ಮತ್ತು ಉಪದೇಶಿಗಳೂ ಡೆಪ್ಯೂಟೀ ಕಮೀಷನರವರಲ್ಲಿ ಹೋಗಿ ಅವರಿಗೆ ತೋರಿದಂತೆ ಹೇಳಿಕೊಂಡು ತಡೆ ಅಪ್ಪಣೆಯನ್ನು ಬರುವಂತೆ ಮಾಡಿದರು. ನಾಲ್ಕಾರು ತಿಂಗಳುಗಳು ಮೌನವಾಗಿದ್ದರು.

೧೦-೬-೪೬ ರಲ್ಲಿ ಶ್ರೀ॥ ಅಮಲ್ದಾರ್ರವರು ಗ್ರಾಮಕ್ಕೆ ಬಂದು ಸ್ಥಳ ಅಜಮಾಯಿಷಿ ಮಾಡಿದ ಹಾಗೆ ಮಾಡಿ ಎಂಟು ಸೈಟನ್ನು ಕ್ರೈಸ್ತರಿಗೆ ಕೊಟ್ಟುಬಿಡಬೇಕೆಂದು ಗ್ರಾಮದ ಛೇರ್‌ಮನ್‌ರವರಿಗೆ ಬರೆದರು. ಆದಿಕರ್ನಾಟಕರಿಗೆ ಮೊದಲೇ ಕ್ರಯಕ್ಕೆ ಕೊಟ್ಟಿರುವುದರಿಂದ ಛೇರ್‌ಮನ್‌ರವರು ಹಾಗೆ ಮಾಡಲು ಆಗಲಿಲ್ಲ. ಇತ್ತೀಚೆಗೆ ಒಂದು ದಿವಸ ರೆವಿನ್ಯೂ ಇನ್ಸ್‌ಪೆಕ್ಟರವರು ಗ್ರಾಮಕ್ಕೆ ಬಂದು ಎಂಟು ಸೈಟನ್ನು ಕ್ರೈಸ್ತರ ವಶಕ್ಕೆ ಒಪ್ಪಿಸಿರುವ ಹಾಗೆ ಮಹಜರು ಮಾಡಿಕೊಂಡರು. ಛೇರ್‌ಮನ್ ಮತ್ತು ಪಟೇಲರು ಇದನ್ನೆಲ್ಲಾ ಓದಿ ತಿಳಿದುಕೊಂಡು ಪಂಚಾಯಿತಿ ತೀರ್ಮಾನದಂತೆಯೇ ಆಗಬೇಕೆಂದು ಮಹಜರು ಕಾಗದದ ಮೇಲೆಯೇ ಬರೆದಿದ್ದಾರೆ.

ಆದಿಕರ್ನಾಟಕರು ತಮ್ಮ ಹಕ್ಕಿಗೆ ಲೋಪ ಬಂದೀತೆಂದು ತಿಳಿದುಕೊಂಡು ಅವರವರ ಸ್ಥಳದಲ್ಲಿ ಹಕ್ಕಿಗಾಗಿ ಒಂದೊಂದು ಗುಡಿಸಲನ್ನು ಹಾಕಿಕೊಂಡರು. ಪಾದ್ರಿಗಳು ಪೋಲೀಸರ ಸಹಾಯವನ್ನು ಪಡೆದು ಗ್ರಾಮಕ್ಕೆ ಬಂದರು. ಪೋಲೀಸರು ಗುಡಿಸಲುಗಳನ್ನು ಕೀಳಿಸಿಬಿಟ್ಟರು. ಆದಿಕರ್ನಾಟಕರು ಅವರವರ ಸ್ಥಳದಲ್ಲಿ ಆಯಾಯ ಸಾಮಾನುಗಳನ್ನು ಇಟ್ಟುಕೊಂಡು ಕಾದುಕೊಂಡಿದ್ದಾರೆ. ಈ ವ್ಯವಹಾರವನ್ನು ಉಪಯೋಗಿಸಿಕೊಂಡು ಈ ಪಾದ್ರಿಗಳೂ ಮತ್ತು ಉಪದೇಶಿಗಳೂ ನಮಗೆ ಬೇಕಾದಷ್ಟು ಬೆಂಬಲವಿರುವುದಾಗಿ ಗ್ರಾಮಾಂತರಗಳಲ್ಲಿ ಪ್ರಚಾರ ಮಾಡತೊಡಗಿದ್ದಾರೆ. ಈ ಪಾದ್ರಿಗಳ ... ಸಿವಿಲ್ ಆಡಳಿತವು ಪಾದ್ರಿಗಳ ದಾಕ್ಷಿಣ್ಯಕ್ಕೆ ಒಳಗಾಗಿರುವುದೆಂಬ ಅಭಿಪ್ರಾಯ ಬರುವ ಹಾಗೆ ಪ್ರಚಾರ ಮಾಡತೊಡಗಿದ್ದಾರೆ. ಈ ರೀತಿಯಾದ ಪ್ರಚಾರವು ಯೋಗ್ಯವಾದದ್ದಲ್ಲ. ಅದಕ್ಕೆ ಅಧಿಕಾರಿಗಳು ಬೆಂಬಲ ಕೊಡುವುದು ಸರಿಯಲ್ಲ.

ಪಾದ್ರಿಗಳಿಗೂ ಉಪದೇಶಿಗಳಿಗೂ ಅಧಿಕಾರಿಗಳು ಬೆಂಬಲಕೊಟ್ಟು ಪಕ್ಷಪಾತ ಮಾಡುವುದು ಸರಿಯಲ್ಲ. ಪಾದ್ರಿಗಳಿಗೆ ಅನ್ಯಾಯವಾಗಿದ್ದರೆ ಕೋರ್ಟಿಗೆ ಹೋಗಿ ನ್ಯಾಯವಿದ್ದಂತೆ ತೀರ್ಮಾನವಾಗಲಿ. ಅದು ಬಿಟ್ಟು ಪ್ರಬಲ ಪಕ್ಷವನ್ನು ಅಬಲರ ಮೇಲೆ ಪ್ರಯೋಗಿಸುವುದು ಸರಿಯಲ್ಲ. ಇದು ಮುಂದೆ ಹಾಗೆ ಮಾಡದಂತೆ ವ್ಯವಸ್ಥೆ ಮಾಡಬೇಕಾಗಿ ಸಂಬಂಧಪಟ್ಟ ಎಲ್ಲ ಅಧಿಕಾರಿಗಳನ್ನೂ ಪ್ರಾರ್ಥಿಸುತ್ತೇನೆ.

ತಗಡೂರ ರಾಮಚಂದ್ರರಾ...

ಮೈಸೂರು ಸಿಟಿ ರೇಷನಿಂಗ್

No. R 6-81/1946-47

೧೯೪೬ ನೇ ಇಸವಿ ಜುಲೈ ಮಾಹೆ ೩೧ನೇ ತಾರೀಖು ಬುಧವಾರದ ದಿವಸ ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರೀ ಡಿಪೋ, ಹೋಟಲ್ಸ್, ಗೋಡೌನ್, ಪರ್ಮಿಟ್ ಡಿಪೋ ಮತ್ತು ಸಹಕಾರ ಸಂಘಗಳಲ್ಲಿರುವ ದಿನಸಿಗಳ ಎಣಿಕೆ ಮಾಡಬೇಕಾಗಿರುವುದರಿಂದ ಆ ದಿವಸ ಡಿಪೋಗಳು ಮುಚ್ಚಿರುತ್ತವೆ.

(ಸಹಿ) ಅಬ್ದುಲ್ ರಹಮಾನ್,

ಆಪೇರಾ ಟಾಕೀಸ್

೨೭—೭—೪೬ ರಿಂದ

ನಾಲ್ಕನೇ ವಾರ

ಲವಂಗಿ

ಮುಂದಿನ ವಿನೋದ :—

ಭಕ್ತ ಕಲಾತ್ರಿ

(ತಮಿಳು)

ತಾರಾಗಣ :—ಹೊನ್ನಪ್ಪ ಭಾಗವತರ್, ತವಮಣಿ, ಕುಮುದಿನಿ, ಎನ್.ಎಸ್. ಕೃಷ್ಣನ್, ಟಿ. ಎ. ಮಧುರಂ

26-7-46ರಿಂದ ಅಘೋಷವಾದ ಪ್ರಾರಂಭ

ಮೂವಿಲ್ಯಾಂಡ್, ಬೆಂಗಳೂರು : ಪ್ರತಿ ದಿನ ಮೂರು ಆಟಗಳು

ಪ್ರತಿಭಾರವರ

"ಮುಗ್ಗುರು ಮರಾಟಿಲು" (ತೆಲುಗು ಚಿತ್ರ)

ಭೂಮಿಕೆ :- ಕನ್ನಾಂಬ, ಡಾ॥ ಸುಬ್ಬರಾವ್ ಮೊದಲಾದವರು

ಮೈಸೂರು ಮೋತಿಲಾಲ್‌ನಲ್ಲಿ ಮುಂದಿನ ಬದಲಾವಣೆ

-:Released Through:-

SRI MAHAVEER FILM EXCHANGE

Asoka Road, Mysore.

ರಾಜ್ ಕಮಲ್ ಟಾಕೀಸ್, ಮೈಸೂರು.

೨೪ ನೇ ಬುಧವಾರದಿಂದ ೩ನೇ ವಾರ!

ಪರ್ಬತ್ ಪೆ ಅಪ್‌ನ ಡೇ...

ಪಾತ್ರ-ವನಮಾಲ, ಉಲ್ಹಾ...

ಅಪ್ಪಟ ಉಲ್ಲನ್

ಸ್ವೆಟ್ಟರುಗಳು

ಒಬ್ಬೊಬ್ಬರಿಗೆ ಒಂದೊಂದು ಮಾತ್ರ ಕೊಡಲಾಗುತ್ತದೆ

ಬೆಲೆ ಒಂದಕ್ಕೆ ರೂ. 4-6

ಸ್ವಲ್ಪವೇ ಇರುವುದರಿಂದ ಬೇಗನೆ ವಿಚಾರಿಸಿರಿ.

ಜಿ. ಎ. ಸೂರ್ಯನಾರಾಯಣರಾ... ಅಂಡ್ ...

... ಬೆಂಗ... ಸಂಸ್ಕೃತಿ ಕೋಆಪರೇಟಿವ್ ಕೋರ್ಟ್ (?), ಮೈಸೂ...

Edited printed and publishe[d] ... A. P. Nagaraiau at the Sadhvi ... D. Subbaiah Road, Mysore.

ಫೋ. ನಂ. 302 WEEKLY EDITION ಇಂದಿನ ಪತ್ರಿಕೆ 6 ಪುಟ

ಸಂಪುಟ ೧೧] ಸೋಮವಾರ ೨೯—೭—೫೬ [ಸಂಚಿಕೆ ೨

– ಗೋವಾ ಚಳುವಳಿ – ತಡೆಯಲು ಸಮರನೌಕೆ

ಸ್ಮಶಾನವನ್ನು ವರ್ಗಾಯಿಸಲಾಗದು

ಪುರ ಸಭೆಯಲ್ಲಿ ನಿರ್ಣಯ

ಮೈಸೂರು ೨೮

ಮೈಸೂರು ಪುರ ಸಭೆಯ ಸಾಧಾರಣ ಅಧಿವೇಶನವು ಮೊನ್ನೆ ಸಂಜೆ ಶ್ರೀ ರಾಮಚಂದ್ರನ್ ಬೊಂಬೋರಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಕನ್ನೇಗೌಡನಕೊಪ್ಪಲು ಅಭಿವೃದ್ಧಿ ಸಂಬಂಧದಲ್ಲಿ ಕೇಳಿದ್ದ ಶ್ರೀ ಎಸ್. ಸತ್ಯನಾರಾಯಣರಾಯರ ಪ್ರಶ್ನೆಗೆ, ಅಲ್ಲಿ ೪೪-೪೫ ಮತ್ತು ೪೫-೪೬ರ ರೂ ೪೪೬೨೦-೧೨-೩ ಕಂದಾಯ ವಸೂಲಿಯಾಗಿದೆಯೆಂದೂ, ನಗರಾಭಿವೃದ್ಧಿ ಸಭೆಯು ೨ ರೂ ೬೬೧-೧೧-೦ ರಸ್ತೆ ದುರಸ್ತು ಮೊದಲಾದವುಗಳಿಗೆ ವೆಚ್ಚ ಮಾಡಿರುವರೆಂದೂ ಪುರಸಭೆಯವರು ೪೫-೪೬ರಲ್ಲಿ ೨೪೪೦ ರೂಗಳನ್ನು ಖರ್ಚು ಮಾಡಿರುವರೆಂದೂ ಉತ್ತರವಾಗಿ ತಿಳಿಸಲಾಯಿತು.

ಸ್ಮಶಾನವನ್ನು ಈಗ ಇರುವ ಸ್ಥಳದಿಂದ ಇನ್ನೂ ದಕ್ಷಿಣಕ್ಕೆ ಬೆಟ್ಟದ ಬುಡದ ಬಳಿಗೆ ವರ್ಗಾಯಿಸಬೇಕೆಂಬ ವಿಷಯದಲ್ಲಿ ನಗರದ ಪ್ರಗತಿಗೆ ಈ ಸ್ಮಶಾನದ ಬದಲಾವಣೆಯಿಂದ ಅನೇಕ ತೊಂದರೆಗಳುಂಟಾಗುವ ಕಾರಣ ನಗರಾಭಿವೃದ್ಧಿ ಸಭೆಯವರ ಈ ಸಲಹೆಯು ಪುರ ಸಭೆಯವರು ಪುರಸ್ಕರಿಸಲು ಸಾಧ್ಯವಿಲ್ಲವೆಂದೂ, ಆದ್ದರಿಂದ ಈ ಕಾರ್ಯಕ್ರಮವನ್ನು ಬಿಟ್ಟುಬಿಡಬೇಕೆಂದು ನಗರಾಭಿವೃದ್ಧಿ ಸಭೆಯವರನ್ನು ಪ್ರಾರ್ಥಿಸಿಕೊಳ್ಳಬೇಕೆಂದೂ ನಿರ್ಣಯ ಮಾಡಲಾಯಿತು.

ಇಂಜನಿಯರ್ ಮತ್ತು ಪಬ್ಲಿಕ್ ಆಫೀಸರವರಿಗೆ ಸಹಾಯಧನ ೧೦೦ ರೂ ಅಲೋಯನ್ಸ್ ಕೊಡಬಹುದೆಂದು ಸಭೆ ಶಿಫಾರಸಿಸಿತು.

ಪುರ ಸಭೆ ಕೈಪಿಡಿಯನ್ನು ಕಟ್ಟುವ ವಿಚಾರದಲ್ಲಿ ಸೂಕ್ತ ಕ್ರಮ ಕೈಗೊಳ್ಳುವ ಸಲುವಾಗಿ ಅಧ್ಯಕ್ಷರು ಶ್ರೀ॥ ಗೋವಿಂದರಾಯಣಸ್ವಾಮಿ, ಟಿ. ನರಸಿಂಹಯ್ಯಂಗಾರ್, ಬಗರು ರಂಗಸ್ವಾಮಿ, ಎ. ಎಸ್. ಸತ್ಯನಾರಾಯಣರಾವ್ ಮತ್ತು ಮಹಮದ್ ಇಸ್ಮಾಯಿಲ್ ಇವರುಗಳಿಂದ ಕೂಡಿದ ಒಂದು ಉಪಸಮಿತಿಯನ್ನು ರಚಿಸಲಾಯಿತು. ಪೂರ್ವಭಾವಿ ವೆಚ್ಚಕ್ಕಾಗಿ ೫೦೦ ರೂ. ಮಂಜೂರು ಮಾಡಲಾಯಿತು.

ಚಲನ ಚಿತ್ರ ಮಂದಿರ ಮತ್ತು ನಾಟಕ ಮಂದಿರಗಳಿಗೆ ಕಟ್ಟಿದ ಕಟ್ಟಲು ಲೈಸನ್ಸ್ ಫೀ ಕೊಡಲು ಇನ್ನು ಮುಂದೆ ಪುರ ಸಭೆಯ ಅನುಮತಿ ಅವಶ್ಯಕವೆಂಬ ಶ್ರೀ॥ ಚೌಡಪ್ಪನವರ ನಿರ್ಣಯಕ್ಕೆ ಸಭೆಯು ಅಂಗೀಕಾರ ದೊರಕಿತು.

ನಗರದಲ್ಲಿ ಆಧುನಿಕ ರೀತಿಯಲ್ಲಿ ನೂರು ಉಪಹಾರ ಮತ್ತು ಊಟದ ಮಂದಿರವನ್ನು ತೆರೆಯಬೇಕೆಂದು ಬಂದಿದ್ದ ಶ್ರೀ॥ ಚೌಡಯ್ಯನವರ ನಿರ್ಣಯದ ವಿಚಾರದಲ್ಲಿ ಚರ್ಚೆಯಾಗಿ, ನಗರದಲ್ಲಿ ಎಲ್ಲರಿಗೂ ಅನುಕೂಲವಾಗುವಂತೆ ಮಧ್ಯ ಭಾಗದಲ್ಲಿ ಒಂದು ನಿವೇಶನವನ್ನು ಕೊಡಬೇಕೆಂದು ನಗರಾಭಿವೃದ್ಧಿ ಸಭೆಯನ್ನು ಪ್ರಾರ್ಥಿಸಿಕೊಳ್ಳಬೇಕೆಂದು ನಿರ್ಣಯವಾಯಿತು.

೬೫,೦೦೦ ರೂ.ಗಳ ವರೆಗೆ ಸಭೆ ಅನುಮತಿ ಪಡೆದಿದ್ದ ಮೋರಿ ಮತ್ತು ರಸ್ತೆ ಕಾಮಗಾರಿಗಳಿಗೆ ಸಭೆ ಅನುಮತಿ ದೊರಕಿತು.

ನಗರದ ಮಧ್ಯದಲ್ಲಿರುವ ಮಾರಾಟ ಸ್ಥಳವನ್ನು ವಿಸ್ತರಿಸುವುದನ್ನು ಬದಲಾಯಿಸುವುದು ನೂತನ ಭವನಕ್ಕೆ ಬದಲಾಯಿಸುವುದು ... [illegible]

ಗೋವಾಕ್ಕೆ ಸಮರ ನೌಕೆ

ಪೋರ್ಚುಗೀಸ್ ಇಂಡಿಯಾದಲ್ಲಿರುವ ಗೋವಾದಲ್ಲಿ ಅಲ್ಲಿನ ಕಾಂಗ್ರೆಸ್ ಸಮಿತಿಯವರು ಹೂಡಿರುವ ಸತ್ಯಾಗ್ರಹವನ್ನು ಎದುರಿಸಲು ಪೋರ್ಚುಗೀಸ್ ಸರ್ಕಾರದವರು ಶಸ್ತ್ರ ಸಜ್ಜಿತವಾದ ಸಮರ ನೌಕೆಯೊಂದನ್ನು ಕಳುಹಿಸಿರುವುದಾಗಿ ಪೋರ್ಚುಗೀಸ್ ಕಾಲೊನಿಗಳ ಮಂತ್ರಿಯು ತಿಳಿಸಿದ್ದಾರೆ. ಗೋವಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಟ್ರಿಸ್ಟಾಂ ಬ್ರಗಾಂಜಾ ಕುನ್ಹಾರವರಿಗೆ ೮ ವರ್ಷಗಳ ದ್ವೀಪಾಂತರ ವಾಸದ ಶಿಕ್ಷೆಯನ್ನು ಕೋರ್ಟ್ ಮಾರ್ಷಲ್ಲಿನವರು ವಿಧಿಸಿರುತ್ತಾರೆ.

...ನ ವಿದ್ಯಾರ್ಥಿನಿಯರಿಗೆ ತುಂಬಾ ತೊಂದರೆಯಾಗುವುದನ್ನು ತಪ್ಪಿಸಲು ವಾಹನ ಸೌಕರ್ಯವನ್ನು ಕಲ್ಪಿಸಿಕೊಡಬೇಕೆಂಬ ಶ್ರೀ॥ ಕೆ. ಎಸ್. ಸತ್ಯನಾರಾಯಣರಾಯರ ನಿರ್ಣಯದ ವಿಚಾರದಲ್ಲಿ ಸೂಕ್ತ ಕಾರ್ಯಕ್ರಮಗಳನ್ನು ಈಗಾಗಲೇ ಕೈಗೊಳ್ಳಲಾಗಿದೆಯೆಂದೂ, ಸಂಬಂಧಪಟ್ಟವರೊಡನೆ ಪತ್ರ ವ್ಯವಹಾರ ನಡೆಸಲಾಗಿದೆಯೆಂದೂ ಅಧ್ಯಕ್ಷರು ತಿಳಿಸಿದರು. ನಿರ್ಣಯವು ಮುಂದಾಯಿತು.

ಸರ್ಕಾರಿ ಗೆಜೆಟೆಡ್ ನೌಕರರಿಗೆ ತುಟ್ಟಿ ಭತ್ಯೆಯನ್ನು ಶೇ ೫೦ ರಷ್ಟು ಹೆಚ್ಚಿಸಿ ಸರ್ಕಾರದಿಂದ ಒಂದಿದ್ದ ಪತ್ರದ ವಿಚಾರದಲ್ಲಿ ನಗರ ಸಭೆಯಲ್ಲಿ ಕೆಲಸ ಮಾಡುತ್ತಿರುವ ಸರ್ಕಾರಿ ನೌಕರರಿಗೆ ಕೊಡುವ ಹೆಚ್ಚು ತುಟ್ಟಿ ಭತ್ಯವನ್ನು ಕೊಡಲು ಪುರಸಭೆಯ ಹಣಕಾಸಿನ ಸ್ಥಿತಿ ಉತ್ತಮವಾಗಿಲ್ಲವೆಂದು ತಿಳಿಸಿ, ಆ ಮೊಬಲಗನ್ನು ಸರ್ಕಾರದವರೇ ಕೊಡುವಂತೆ ಪ್ರಾರ್ಥಿಸಿಕೊಳ್ಳಬೇಕೆಂದು ನಿರ್ಣಯ ಮಾಡಲಾಯಿತು.

ಮೈಸೂರು ನಗರದಲ್ಲಿರುವ ಟಾರು ರಸ್ತೆಗಳನ್ನು ದುರಸ್ತು ಮಾಡಿ, ಸುಸ್ಥಿತಿಯಲ್ಲಿಡಲು ತಗಲುವ ವೆಚ್ಚದಲ್ಲಿ ಅರ್ಧ ಭಾಗವನ್ನು ಸರ್ಕಾರದವರು ವಹಿಸಿಕೊಳ್ಳಲು ಪ್ರಾರ್ಥಿಸಿಕೊಳ್ಳಬೇಕೆಂಬ ಅಂಶವನ್ನು ತಿಳಿಸಬೇಕೆಂದ ಪತ್ರ ರವಾನೆಯಾಯಿತು.

ದೇವರಾಜ ಮಾರ್ಕೆಟ್ಟಿನಲ್ಲಿ ಕಟುಕರ ಶ್ರೀ॥ ... ಮಳಿಗೆಯಿಂದ ಅವರನ್ನು ಖಾಲಿ ಮಾಡಬೇಕೆಂಬುದಾಗಿ ಅಧ್ಯಕ್ಷರು ತಂದಿದ್ದ ಸಲಹೆಯು ಬಹಳವಾಗಿ ಚರ್ಚಿಸಲ್ಪಟ್ಟಿತು. ಸರ್ಕಾರ ನೂತನ ಮಳಿಗೆಯಲ್ಲಿ ಮಧ್ಯ ಭಾಗದ ಅಂಗಡಿಯನ್ನು ಅವರಿಗೆ ಕೊಡತಕ್ಕ ಅಂಗಡಿ ... ಕೊಡಬೇಕೆಂದು ... ಇತರ ವರ್ತಕರುಗಳಿಗೆ ಕೊಡಬೇಕೆಂದ ... ಯಿತು.

ಜವಾಬ್ದಾರಿ ಸರ್ಕಾರಕ್ಕಾಗಿ ಒತ್ತಾಯ

ಸ್ವಂ. ಸು. ಫ್ರೋ] ಬೆಂಗಳೂರು ೨೮

ಪದೇ ಪದೇ ಜವಾಬ್ದಾರಿ ಸರ್ಕಾರಕ್ಕಾಗಿ ಪ್ರಜೆಗಳು ಒತ್ತಾಯಪಡಿಸುತ್ತಿದ್ದಾರೆ. ಈ ಬಗ್ಗೆ ಆಳರಸರು ಕೂಡಲೇ ಕ್ಷಿಪ್ರವಾದ ಕಾರ್ಯಕ್ರಮವನ್ನು ಕೈಗೊಳ್ಳಬೇಕು; ತಪ್ಪಿದರೆ ಅದರ ಸಾಧನೆಗೆ ತಕ್ಕ ಚಳುವಳಿ ಹೂಡಬೇಕಾಗ ಬಹುದು ಎಂಬ ಅಂಶವನ್ನು ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯು ಸಭೆಯಲ್ಲಿ ಅಂಗೀಕರಿಸಲ್ಪಟ್ಟ ದೀರ್ಘವಾದ ನಿರ್ಣಯದಲ್ಲಿ ನಮೂದಿಸಲಾಗಿದೆ. ರಾಜ್ಯಾಂಗ ರಚನಾ ಸಮಿತಿಗೆ ಪ್ರಜೆಗಳ ಪ್ರತಿನಿಧಿಗಳನ್ನು ಕಳಿಸುವ ವಿಚಾರದಲ್ಲಿಯೂ ನೆರೆಯ ಸಂಸ್ಥಾನಗಳು ತಮ್ಮ ನೀತಿಯನ್ನು ಸ್ಪಷ್ಟಪಡಿಸಿವೆ; ಆದರೆ ಮೈಸೂರಿನವರು ಮಾತ್ರ ಮೌನವಾಗಿದ್ದಾರೆ; ಇದು ಬಹಳ ಅತೃಪ್ತಿಕರವಾಗಿದೆ. ಸರ್ ಎ. ರಾಮಸ್ವಾಮಿ ಮೊದಲಿಯಾರರನ್ನು ದಿವಾನರನ್ನಾಗಿ ನೇಮಿಸುವ ವಿಚಾರವೂ ಸಹ ಅತೃಪ್ತಿಯಿಂದ ಬಂದಿರುವುದಾಗಿದೆ ಎಂಬ ಅಂಶಗಳನ್ನು ಸಹ ಸದರಿ ನಿರ್ಣಯದಲ್ಲಿ ಸೂಚಿಸಲಾಗಿದೆ.

೦ ೦ ೦ ೦

ಕ್ಯಾಪ್ಟನ್ ಎಸ್. ಪಿ. ಪ್ಯಾಟ್ಸನ್ ಹಾಸ್ ರವರು ಪಿ ಡಬ್ಲ್ಯು ಡಿ ಯಲ್ಲಿ ... ದ ಹುದ್ದೆಯಿಂದ ಮೇಲೆ ಬಾಣಾವರದ ಆಸ್ಪತ್ರೆಗೆ ವರ್ಗಾಯಿಸಲ್ಪಡುವರು.

೦ ೦ ೦ ೦

ಸಹಜವಾಗಿದ್ದ ಸರ್ ಎಸ್ ಪಿ ರಾಜಗೋಪಾಲಾಚಾರಿಯವರ ಮಗನನ್ನು ಸಿವಿಲ್ ಸರ್ವಿಸ್ ಪರೀಕ್ಷೆಗಾಗಿ ನಾಮಕರಣ ಮಾಡಲಾಗುವುದೆಂದು ಹೇಳಬಹುದಾಗಿದೆ.

೦ ೦ ೦ ೦

ಮುಂದಿನ ತಿಂಗಳ ೯ ಮತ್ತು ೧೦ ನೇ ತಾರೀಖುಗಳಲ್ಲಿ ದೆಹಲಿಯಲ್ಲಿ ನಡೆಯುವ ಭಾರತದ ನಾನಾ ಪ್ರದೇಶಗಳ ಆಹಾರ ಸಚಿವರ ಸಭೆಯಲ್ಲಿ ಭಾಗವಹಿಸಲು ನಮ್ಮ ಸಂಸ್ಥಾನದ ಪರವಾಗಿ ಸಚಿವರಾದ ಶ್ರೀ॥ ... ಪ್ರಯಾಣ ಮಾಡುವರು.

೦ ೦ ೦ ೦

ಸಂಸ್ಥಾನದ ಯುದ್ಧ ಪ್ರತಿನಿಧಿಯಿಂದ ... [illegible]

ಮುಷ್ಕರ ಮುಂದುವರಿಸಬೇಕೆಂಬ ತೀರ್ಮಾನ

ಮೈಸೂರು ೨೮

ಅಂಚೆ ಪ್ರಜೆಗಳ ಮತ್ತು ಕೆಳ ದರ್ಜೆಯ ನೌಕರರ ಮುಷ್ಕರ ಪ್ರಾರಂಭವಾಗಿ ಇದು ೧೪ ನೇ ದಿನ. ಈ ದಿನ ಮುಷ್ಕರಕಾರರು ಮೆರವಣಿಗೆ ಹೊರಟು ಸಯ್ಯಾಜಿರಾವ್ ರಸ್ತೆ ರಾಮಾನುಜ ರಸ್ತೆ ಶ್ರೀನಿವಾಸನ್ ಅಗ್ರಹಾರ, ದೇವಾಂಗ ಬೀದಿ, ಹಳೆ ಅಗ್ರಹಾರ, ಸಂತೇಪೇಟೆಗಳ ಮೂಲಕ ಕಾಂಗ್ರೆಸ್ ಕಾರ್ಯಾಲಯಕ್ಕೆ ತಲುಪಿದರು. ಹಳೆ ಅಗ್ರಹಾರದಲ್ಲಿ ಶ್ರೀಮತಿ ಕಮಲಮ್ಮ ಎಂಬುವರು ಎಲ್ಲರಿಗೂ ಪಾನಕ ಕೊಟ್ಟು ಪರಿಹಾರ ನಿಧಿಗೆ ೫ ರೂ. ಕೊಟ್ಟರು.

ನಿನ್ನೆ ರಾತ್ರಿ ಕಾಂಗ್ರೆಸ್ ಕಾರ್ಯಾಲಯದಲ್ಲಿ ಮುಷ್ಕರಗಾರರ ಸಭೆ ಸೇರಿ ಸಂಘದ ಕಾರ್ಯದರ್ಶಿಗಳಾದ ಶ್ರೀ ದಳ್ವಿಯವರಿಂದ ಸುದ್ದಿ ಬರುವ ತನಕ ಮುಷ್ಕರವನ್ನು ಮುಂದುವರಿಸಬೇಕೆಂಬ ನಿರ್ಣಯವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು.

ಶ್ರೀ ಮಧ್ವ ಸಂಘ

ಈ ಸಂಘದ ಆಶ್ರಯದಲ್ಲಿ ತಾ॥ ೩೧-೭-೪೬ ನೇ ಬುಧವಾರ ಸಾಯಂಕಾಲ ೬-೩೦ಕ್ಕೆ ಕೃಷ್ಣಮೂರ್ತಿಪುರಂ ಶ್ರೀ ರಾಮದೇವರ ದೇವಸ್ಥಾನದಲ್ಲಿ ವಿದ್ವಾನ್ ವೇ॥ ಬ್ರ॥ ಶ್ರೀ ಮಾಧವ ಮಧ್ವಾಚಾರ್ಯರು ಶ್ರೀ ವಾದಿರಾಜರ "ಯುಕ್ತಿಮಲ್ಲಿಕಾ" ಗ್ರಂಥವನ್ನು ಉಪನ್ಯಾಸ ಮಾಡುವರು. ಸರ್ವ ಭಕ್ತಮಂಡಲಿಯವರಿಗೆ ಆಹ್ವಾನವಿರುವುದು.

ಬಿಲ್ಲೆ ಮೊಹಲ್ಲ ಕಾರ್ಯ ಸಮಿತಿ

ಮೇಲ್ಕಂಡ ಸಮಿತಿಯ ಪದಾಧಿಕಾರಿ ವರ್ಗವನ್ನು ಚುನಾಯಿಸಲು ತಾ॥ ೩೧-೭-೪೬ ನೇ ಬುಧವಾರ ಸಂಜೆ ೬ ಗಂಟೆಗೆ ಸಮಿತಿ ಸದಸ್ಯರುಗಳ ಸಭೆಯು ಸಿಟಿ ಕಾಲ॥ ಆಫೀಸಿನಲ್ಲಿ ಸೇರಲೇರ್ಪಟ್ಟಿರುತ್ತದೆ. ಸದಸ್ಯರುಗಳೆಲ್ಲರೂ ತಪ್ಪದೆ ದಯಮಾಡಬೇಕಾಗಿ ಸಂಚಾಲಕರಾದ ಶ್ರೀ ಎ. ಕೃಷ್ಣಮೂರ್ತಿರಾಯರು ಕೋರಿರುತ್ತಾರೆ.

ಹರಿಕಥೆ

ಮೈಸೂರು ನಾರಾಯಣಶಾಸ್ತ್ರಿ ರೋಡ್ ವಿಶ್ವೇಶ್ವರ ಭವನದ ಮೇಲ್ಭಾಗದ ಚಪ್ಪರದಲ್ಲಿ ಈ ದಿನ ರಾತ್ರಿ ೯-೩೦ಕ್ಕೆ ಶ್ರೀ ಶಿವಲಿಂಗಸ್ವಾಮಿ (ಹಿರೇಮಠ) ಇವರಿಂದ "ಸತ್ಯವಾನ ಸಾವಿತ್ರಿ" ಎಂಬ ಕಥೆ ನಡೆಯುತ್ತದೆ.

ಸನ್ಮಾನ ಸಭೆ

ಶ್ರೀಮನ್ಮಹಾರಾಜರಿಂದ ಪ್ರಶಸ್ತಿ ಪಡೆದಿರುವ ರಾಜಸೇವಾಸಕ್ತ ಶ್ರೀ ಸಿ. ನರಸಿಂಹಯ್ಯನವರು ಸ್ವರ್ಣ ಧರ್ಮ ರತ್ನಾಕರ ಶ್ರೀ ನಂದೀಬಸಪ್ಪನವರನ್ನು ಸತ್ಕರಿಸಲು ಮೊನ್ನೆ ದೇವಾಂಗದ ಹೈಸ್ಕೂಲಿನಲ್ಲಿ ಅಲ್ಲಿನ ಉಪಾಧ್ಯಾಯರುಗಳು ಶ್ರೀ ಟಿ. ಸುಬ್ರಹ್ಮಣ್ಯಯ್ಯನವರ ಅಧ್ಯಕ್ಷತೆಯಲ್ಲಿ ಸಭೆಯೊಂದನ್ನು ಏರ್ಪಡಿಸಿದ್ದರು. ಅಧ್ಯಕ್ಷರು ಅತಿಥಿಗಳ ಗುಣಗಾನ ಮಾಡಿದರು. ಸದರಿ ಹೈಸ್ಕೂಲಿನಲ್ಲಿ ಒಂದು ಬ್ಲಾಕ್ ಕಟ್ಟಡವನ್ನು ಕಟ್ಟಿಸಿಕೊಟ್ಟದ್ದಕ್ಕಾಗಿ ಶ್ರೀ ನಂದೀಬಸಪ್ಪನವರ ಗುಣಗಾನ ಮಾಡಿದರು.

ಅಗ್ರಹಾರ ಮೊಹಲ್ಲಾ ಕಾಂಗ್ರೆಸ್ ಸಮಿತಿ

ನಿನ್ನೆ ಸಾಯಂಕಾಲ ಕಾಂಗ್ರೆಸ್ ಕಚೇರಿಯಲ್ಲಿ ... [illegible]

ಸಾಧ್ವಿ

ಜುಲೈ ೨೯ ೬-೪೬ ಸೋಮವಾರ

ಕಾಂಗ್ರೆಸ್ ಅಧ್ಯಕ್ಷತೆ

ಮೈಸೂರು ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ನಾಳೆಯನ್ನು ಚುನಾವಣೆ ನಡೆಯಲಿದೆ ಇದುವರೆಗೆ ಶ್ರೀ॥ ಪಾಳ್ಯವೇ ವೀರಪ್ಪನವರು ಮಾತ್ರ ಉಮೇದವಾರಿಕೆಯನ್ನು ವಾಪಸು ತೆಗೆದುಕೊ[illegible] ಉಳಿದವರೆಲ್ಲರೂ ಸ್ಪರ್ಧಿಸುತ್ತಿದ್ದಾರೆ ಆದುದರಿಂದ ಪ್ರತಿನಿಧಿಗಳು ಯಾರಾದರೊಬ್ಬರಿಗೆ ತಮ್ಮ ಓಟನ್ನು ಕೊಡಲೇ ಬೇಕಾಗಿದೆ ಯಾರನ್ನು ಚುನಾಯಿಸಬೇಕೆಂಬ ಬಗ್ಗೆ ನಾವು ಹಿಂದೆಯೇ ಪ್ರಸ್ತಾಪಿಸಿದ್ದೇವೆ ಹೊಸಬರು ಅಧ್ಯಕ್ಷರಾಗಿ ಬರುವುದು ಇಂದಿನ ಸನ್ನಿವೇಶದಲ್ಲಿ ಅತ್ಯಂತ ಶ್ರೇಯಸ್ಕರವಾಗಿದೆ ಅಧ್ಯಕ್ಷ ಸ್ಥಾನಕ್ಕೆ ಅರ್ಹರಾದ ಹೊಸಬರು ಇರುವಲ್ಲಿ ಪ[illegible] [illegible] ಸರಿ ಸಾಕವಲ್ಲ. ಆದುದರಿಂದ ಮಾಜಿ ಅಧ್ಯಕ್ಷರುಗಳಿಗೆ ಮತ್ತೆ ಅವಕಾಶ ಕೊಡಬೇಕಾದ ಅಗತ್ಯವು ಅಷ್ಟಾಗಿ ಕಾಣುವುದಿಲ್ಲ

ಶ್ರೀ॥ ಟಿ ಸಿದ್ದಲಿಂಗಯ್ಯನವರು ಕೆಳಗಿನ [illegible] ಸ್ಥಾನವು [illegible] ತಮ್ಮ ತಕ್ಕಕ್ಕೆ ಬೆಂಬಲ ಕೊಟ್ಟ ಇತರ ಉಮೇದುವಾರರು ವಾಪಸು ತೆಗೆದುಕೊಳ್ಳಬೇಕೆಂದು ಅವರು ಹೇಳುತ್ತಿರುವುದು [illegible] [illegible] ಬೆಂಬಲ ಕೊಡಬೇಕಾದವರು ಪ್ರತಿನಿಧಿಗಳು; ಉಮೇದುವಾರರಲ್ಲ. ತಮ್ಮ ಸಹೋದ್ಯೋಗಿಗಳ ಉಮೇದುವಾರಿಕೆಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳುವುದರ ಬದಲು ಮತದಾರರು ತಮಗೇ ಬೆಂಬಲ ಕೊಡಬೇಕೆಂದು ಹೇಳುವುದು ಹೆಚ್ಚು ಸಮಂಜಸವಾದೀತು ಅವರು ಅವರು ಎರಡು ಮೂರು ವರ್ಷಗಳಿಂದ ಮೈಸೂರು ರಾಜಕೀಯದಲ್ಲಿ ನಿಕಟ ಸಂಬಂಧವನ್ನು ಇಟ್ಟುಕೊಳ್ಳದಿದ್ದ ಪ್ರಯುಕ್ತ ಅವರಿಗೆ ಹೆಚ್ಚಿನ ಬೆಂಬಲ ದೊರೆಯುವುದು ಅಸಂಭವ

ಶ್ರೀ॥ ರಾಮಪ್ಪನವರೂ, ಅವರ ಪತ್ನಿಯವರೂ ಸಹ ಉಮೇದುವಾರರಾಗಿದ್ದಾರೆ. ಇಬ್ಬರಲ್ಲಿ ಯಾರಿಗೆ ಓಟು ಕೊಡಬೇಕೆಂಬುದೂ ಒಂದು ಸಮಸ್ಯೆ. ಇವರಿಬ್ಬರಲ್ಲಿ ಒಬ್ಬರು ಉಮೇದುವಾರಿಕೆಯನ್ನು ವಾಪಸು ತೆಗೆದುಕೊಂಡಿದ್ದರೆ ಸ್ವಲ್ಪ ನುಚ್ಚಿಗೆ ಸಮಸ್ಯೆಯು ಸರಳವಾಗುತ್ತಿತ್ತು. ಇವರಿಬ್ಬರಲ್ಲಿ ಓಟುಗಳು ಹಂಚಿಹೋಗಿ ಇಬ್ಬರೂ ಸೋಲಬೇಕಾಗುವ ಸಂಭವವಿದೆ.

ಶ್ರೀ॥ ತಿಮ್ಮಾರೆಡ್ಡಿ ಯವರು, ಕಾರ್ಯಗ್ರಹದಲ್ಲಿದ್ದಾರೆ ಅವರು ಚುನಾಯಿತರಾದರೂ ಕೆಲಸಕ್ಕೆ ಸದ್ಯದಲ್ಲಿ ಉಪಯೋಗವಾಗುವುದಿಲ್ಲ ಉಳಿದಿರುವವರೆಂದರೆ ಶ್ರೀ॥ ಟಿ.

ಟಿ. ಸಿ. ನಟರಾಜ್

ಟಿ ಸಿ ಧಾ ಉ ರು

ನೇತ್ರ, ಬಲ್ಲಿದ ಯಾ ಉಚಿತವಾಗಿ

ನಾರಳ್ಳಿಸುತ್ತದೆ

[illegible]

ವಾರ ಭವಿಷ್ಯ

(ಶ್ರೀ ಸಿತ್ಯಾನಂದ ಸ್ವಾಮಿಗಳವರಿಂದ)

೨೯-೭-೪೬ ರಿಂದ ೪-೮-೪೬ ರ ವರೆಗೆ

ಮೇಷ— ನಿಮ್ಮ ಬಹಳ ದಿನಗಳ ಆಸೆ ನೆರವೇರುವುದು. ಕೈ ಹಿಡಿದ ಕೆಲಸಗಳನ್ನೆಲ್ಲಾ ಸಿದ್ಧಿಸುವುವು ಆರೋಗ್ಯ ಉತ್ತಮವಿರುವುದು ಪ್ರವಾಸದಲ್ಲಿ ಯಶಸ್ಸು.

ವೃಷಭ ಈ ವಾರ ನಿಮ್ಮ ಸಾಂಪತ್ತಿಕ ವರಮಾನ ಉತ್ತಮಗೊಳ್ಳುವುದು. ಮನಸ್ಸಿಗೆ ಆನಂದ, ವ್ಯಾಪಾರ ಉದ್ಯೋಗಗಳಲ್ಲಿ ಲಾಭ ಪ್ರವಾಸ ಬೇಡಿ. ಆರೋಗ್ಯ ಸಾಧಾರಣ

ಮಿಥುನ— ಆರೋಗ್ಯ ಉತ್ತಮವಿಲ್ಲದೆ ಮನಸ್ಸಿಗೆ ಆತಂಕ ಆದಾಯಕ್ಕಿಂತ ಖರ್ಚು ಹೆಚ್ಚು ಉದ್ಯೋಗದಲ್ಲಿ ಕಿರುಕುಳ ದುಃಖಕರವಾದ ವಾರ್ತೆ ಬರಲಿದೆ; ಚಿಂತೆ.

ಕಟಕ—ಕೆಲಸಗಾರರುಗಳು ಈ ವಾರ ತಮ್ಮ ಬಂದಿಗೆ ಬಂದು ಸಿಮಗನುಕೂಲರಾಗುವರು. ಆರೋಗ್ಯ ಉತ್ತಮ ಮಹತ್ವಪೂರ್ಣವಾದ, ಪ್ರಿಯ ಜನರ ಭೇಟಿಯಾಗಲಿದೆ.

ಸಿಂಹ ಆರೋಗ್ಯ ಚೆನ್ನಾಗಿರುವುದು, ಸಂಸಾರದ ಬಗ್ಗೆ ಖರ್ಚು ಅಧಿಕ, ವ್ಯಾಪಾರದಲ್ಲಿ ಸಾಧಾರಣ ಲಾಭ, ನೌಕರಿ ವ್ಯವಹಾರಗಳಲ್ಲಿ ಜವಾಬ್ದಾರಿ ಹೆಚ್ಚುವುದು, ಪ್ರಯಾಣ ಕೈಗೊಳ್ಳಬೇಡಿ.

ಕನ್ಯಾ— ಶರೀರ ಸ್ಥಿತಿ ಚೆನ್ನಾಗಿರುವುದಿಲ್ಲ, ಹಣ ಕಾಸಿಗೆ ಮುಗ್ಗಟ್ಟು, ಪ್ರವಾಸದಲ್ಲಿ ಕಷ್ಟ, ಕೈಗೊಂಡ ಕಾರ್ಯಗಳಿಗೆ ವಿಘ್ನ, ಅನ್ಯಥಾ ಕಲಹ, ಶತ್ರುಗಳ ಕಿರುಕುಳ ಅಧಿಕವಾಗುವುದು.

ತುಲಾ— ಬರಬೇಕಾದ ವರಮಾನವೆಲ್ಲ ಬರದೆ ತೊಂದರೆಗೊಳಗಾಗುವಿರಿ. ಶರೀರ ಪ್ರಕೃತಿ ಚೆನ್ನಾಗಿರುವುದಿಲ್ಲ ವ್ಯಾಪಾರ ವ್ಯವಹಾರಗಳಲ್ಲಿ ನಷ್ಟ ಪ್ರವಾಸದಲ್ಲಿ ಹಾನಿ. ಶರೀರಕ್ಕೆ ಅಪಾಯ ಆಗಲಿದೆ.

ವೃಶ್ಚಿಕ—ಆರೋಗ್ಯ ಮತ್ತು ಸಾಂಪತ್ತಿಕ ಸ್ಥಿತಿ ಪ್ರವರ್ಧಮಾನಕ್ಕೆ ಬರುವುದು. ಮೇಲಧಿಕಾರಿಗಳ ಪ್ರೀತಿ, ವಿಶ್ವಾಸಕ್ಕೆ ಪಾತ್ರರಾಗುವಿರಿ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಈ ವಾರ ಫಲದಾಯಕವಾಗಿರುವುದು.

ಧನುಸ್ಸು— ಕೆಲಸಕಾರ್ಯಗಳಲ್ಲಿ ಜಯ ಆರೋಗ್ಯ ಉತ್ತಮ ವ್ಯಾಪಾರ ವ್ಯವಹಾರಗಳಲ್ಲಿ ಜಯ, ಪ್ರವಾಸದಲ್ಲಿ ಲಾಭ, ವಿದ್ಯಾಭ್ಯಾಸದಲ್ಲಿ ಅಭಿರುಚಿ ಸಜ್ಜನರ ಸಹವಾಸ ಶುಭವಾರ್ತೆ ಬರಲಿದೆ.

ಮಕರ— ನಿಮ್ಮ ಎದುರಾಳಿಗಳು ಶರಣಾಗುವರು, ಆರೋಗ್ಯವು ಚೆನ್ನಾಗಿರುವುದು, ಹಣ ಕಾಸಿನ ಸ್ಥಿತಿ ಉತ್ತಮಗೊಳ್ಳುವುದು, ಪ್ರವಾಸ ಕೈಗೊಳ್ಳುವಿರಿ, ಶುಭವಾರ್ತೆ ಶ್ರವಣ ಬರಲಿದೆ

ಕುಂಭ— ಈ ವಾರ ನೀವು ಎಚ್ಚರಿಕೆಯಿಂದಿದ್ದಷ್ಟೂ ಉತ್ತಮ, ಆರೋಗ್ಯದ ಕಡೆ ಗಮನ ಕೊಡಿ, ಹೆಚ್ಚಿಗೆ ಜವಾಬ್ದಾರಿ ವ[illegible]

[illegible] ಪ್ರತಿಷ್ಠೆ [illegible] [illegible] ಸ್ಥಾನಕ್ಕೆ [illegible] ಪ್ರತಿನಿಧಿಗಳು [illegible] ನಾವು [illegible] [illegible]

ಹಿಸಿಕೊಳ್ಳಬೇಡಿ, ಪ್ರವಾಸವನ್ನು ರದ್ದು ಮಾಡಿ

ಮೀನ—ಸಣ್ಣ ಪುಟ್ಟ ಖಾಯಿಲೆಗಳಿಗೆ ಗುರಿಯಾಗುವಿರಿ, ಆದಾಯಕ್ಕಿಂತ ಖರ್ಚು ಅಧಿಕ, ವ್ಯಾಪಾರ ವ್ಯವಹಾರಗಳಲ್ಲಿ ವ್ಯರ್ಥ ಶ್ರಮ, ಮಾನಸಿಕ ತೊಂದರೆ ಸಂಭವಿಸಬಹುದು.

ಸಾಧ್ವಿ

ಆ

ರಾಜಧಾನಿಯ ರಾಷ್ಟ್ರೀಯ
ದಿನ ಪತ್ರಿಕೆ

ಅಮೃತ

ನಿತ್ಯದ ಜ್ವರ ಮಲೇರಿ[illegible]
ಜ್ವರ, ಜ್ವರದ ಗಡ್ಡೆ ಇವ[illegible]
ಮೇಲೆ ಬಹಳ ಚನ್ನಾಗಿ ಕೆ[illegible]
ಮಾಡುತ್ತದೆ.

ಕೆ. ವಿ. ವೆಂಕಟರಾಮ[illegible]
ಡಿಸ್ಟ್ರಿಕ್ಟ್ ಬೋರ್ಡ್ ವೈದ್ಯಶಾ[illegible]
ಅರಕಲವಾಡಿ.

University of Mysore

NOTIFICATION

No. G 4—1393/45-46 Dated the 16th July [illegible]

It is hereby notified that the Twenty-eighth An[illegible] Convocation of the University of Mysore for confer[illegible] degrees will be held in the Jaganmohan Palace, Mys[illegible] on Saturday the 12th October 1946 at 9 A M.

The following rules are published for the guid[illegible] of candidates eligible for degrees:—

1 Candidates who have been declared to be e[illegible] for any of the degrees of the Mysore University [illegible] receive their respective degrees in Person or in Abse[illegible] at a Convocation to be held after such declaration.

2. Candidates who wish to take the degree at [illegible] Convocation to be held on 12th October 1946 must [illegible] in their application in the form A or B appended he[illegible] to the Registrar, University of Mysore, Mysore so [illegible] reach him on or before 11th September 1946. Cop[illegible] these forms may be obtained from the Head of the [illegible]lege in which the Candidate studied last for the de[illegible] Examination.

3 A candidate who wishes to take the degr[illegible] Absentia may apply in the prescribed form B so [illegible] reach the Registrar, University of Mysore, Mysore, [illegible] before 11th September 1946 on payment of a fee of Rs [illegible]

4 A candidate who having applied under ru[illegible] above fails to appear at the Convocation, may take [illegible] degree in Person or in Absentia at a subsequent Con[illegible]tion If the wishes to take the degree in person he [illegible] pay a fee of Rs 5. If the wishes take the degree in [illegible]tia he must not only pay Rs. 5, the fee prescribed in [illegible] rule, but also Rs 10 the fee prescribed in rule 3 abo[illegible]

5. The prescribed fee or fees may be remited t[illegible] Registrar, University of Mysore, along with the app[illegible]tion or be paid into a [illegible]ysore Government Treasury [illegible] the treasury receipt attached to the application.

6 A woman candidate for degree who is precl[illegible] by custom from appearing in public may, by order [illegible] University Council, be permitted to the degree in abs[illegible] without payment of any fee, provided that she appl[illegible] the Registrar in the prescribed form B so as to reach on or before 11th September 1946.

7 The application of a candidate for the [illegible] degree Examination in Person or in Absentia shou[illegible] accompanied by a certificate from the Principal s[illegible] that he has completed the prescribed practical [illegible] satisfactorily

8 Specification regarding academic rob[illegible] [illegible]

By Orde[illegible]
D. S. GORI[illegible]
Registrar

[illegible] Printed and published by [illegible] Sadhvi Press [illegible] Mysore

ರೋ. ನಂ. 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಮಂಗಳವಾರ ೩೦—೭—೪೬ [ಸಂಚಿಕೆ ೭

ಬ್ರಿಟಿಷ್ ಬಿರುದುಗಳಿಗೆ ಮುಸ್ಲಿಮರ ಬಹಿಷ್ಕಾರ

ಸತ್ಯಾಗ್ರಹಿಗಳಿಗೆ ಛಡಿ ಏಟು

ದಕ್ಷಿಣ ಆಫ್ರಿಕದಲ್ಲಿ ಭಾರತೀಯರು ಆಚರಿಸುತ್ತಿರುವ ಸತ್ಯಾಗ್ರಹದಲ್ಲಿ ಭಾಗವಹಿಸುವ ತರುಣರಿಗೆ ಇನ್ನು ಮೇಲೆ ಛಡಿ ಶಿಕ್ಷೆ ವಿಧಿಸುವುದಾಗಿ ಡರ್ಬಾನಿನ ನ್ಯಾಯಾಧೀಶರು ಎಚ್ಚರಿಕೆ ಇತ್ತಿದ್ದಾರೆ.

ಅಂಚೆ ಮುಷ್ಕರ ಪ್ರಬಲವಾಗುವುದು

ಶ್ರೀ ಕೃಷ್ಣ ಪ್ರಸಾದರಿಗೂ ಶ್ರೀ ದಳವಿಯವರಿಗೂ ನಡೆಯುತ್ತಿದ್ದ ಸಂಧಾನ ವಿಫಲವಾದಂತೆಯೇ ಆಗಿದೆ. ಈ ಬಗ್ಗೆ ಶ್ರೀ ದಳವಿಯವರು ಹೇಳಿಕೆ ಇತ್ತು ಪ್ರಸಾದರು ದೆಹಲಿಗೆ ತೆರಳಿ ಅಂಚೆ ಇಲಾಖಾ ಮಂತ್ರಿಗಳೊಡನೆ ಸಮಾಲೋಚನೆ ನಡೆಸಿ ಏನಾದರೂ ಏರ್ಪಾಟನ್ನು ಮಾಡಲು ಪ್ರಯತ್ನಿಸಬಹುದೆಂದು ಕೆಲಸಗಾರರ ಬೇಡಿಕೆ ಈಡೇರುವ ವರೆಗೆ ಮುಷ್ಕರವು ಮತ್ತಷ್ಟು ಪ್ರಬಲತೆಯಿಂದ ಸಾಗುವುದೆಂದೂ ತಿಳಿಸಿದ್ದಾರೆ.

ಇನ್ನು ಆರು ತಿಂಗಳಲ್ಲಿ ಮತ್ತೊಂದು ಹೋರಾಟ

ಬ್ರಿಟಿಷರು ಭಾರತವನ್ನು ಬಿಟ್ಟುಹೋಗಲು ಇನ್ನು ೬ ತಿಂಗಳು ಅಥವಾ ಒಂದು ವರ್ಷದ ಅವಧಿಯ 'ಅಲ್ಟಿಮೇಟಂ' ಕೊಟ್ಟು ಆ ಅವಧಿಯಲ್ಲಿ ಬ್ರಿಟಿಷ್ ಸೇನೆಗಳನ್ನು ಪ್ರತ್ಯೇಕಿಸಿ ಬಂಧನ ಶಿಬಿರಗಳಲ್ಲಿಟ್ಟು ಅಲ್ಲಿಂದ ಅವನ್ನು ಅವರ ರಾಷ್ಟ್ರಕ್ಕೆ ಕಳುಹಿಸಲು ಏರ್ಪಾಟು ಮಾಡಬೇಕು ಎಂದು ಶ್ರೀ ಜಯಪ್ರಕಾಶ ನಾರಾಯಣರು ಲಾಹೋರಿನಲ್ಲಿ ಭಾಷಣ ಮಾಡುತ್ತಾ ತಿಳಿಸಿದ್ದಾರೆ. ಈಗ ನಡೆಯುತ್ತಿರುವ ಸಂಧಾನಗಳು ವಿಫಲವಾದಲ್ಲಿ ಇನ್ನು ಆರು ತಿಂಗಳೊಳಗೆ ಇನ್ನೊಂದು ದೊಡ್ಡ ಹೋರಾಟ ಹೂಡಲು ನಾವು ಈಗಿನಿಂದಲೇ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು ಎಂದು ಹೇಳಿ ಗಾಂಧಿಜಿಯವರ ಅಹಿಂಸೆ ನಮ್ಮಂತಹ ಬಲಹೀನರಿಗಲ್ಲ; ಅದು ಧೈರ್ಯಶಾಲಿಗಳಿಂದ ಮಾತ್ರ ಸಾಧ್ಯ; ಆದ್ದರಿಂದ ಜನರಿಗೆ ಅರ್ಥವಾಗುವ ಮಾರ್ಗದಿಂದ ನಾವು ನಮ್ಮ ಹೋರಾಟವನ್ನು ಮುಂದುವರಿಸಬೇಕಾಗಿದೆಯೆಂದು ಶ್ರೀ ಜೈಪ್ರಕಾಶರು ಆ ಸಭೆಯಲ್ಲಿ ಘೋಷಿಸಿದರು. "ಮುಂದಿನ ಹೋರಾಟ ಆರಂಭವಾದಾಗ ಜನರು ಪೋಲೀಸ್ ಠಾಣೆಗಳನ್ನು ಮುತ್ತಿ ವಶಪಡಿಸಿಕೊಳ್ಳಬೇಕು; ಕಾಂಗ್ರೆಸ್ ಮಂತ್ರಿಗಳು ರಾಜೀನಾಮೆ ಕೊಡದೆ ಗವರ್ನರುಗಳನ್ನೇ ಬಂಧಿಸಬೇಕು" ಎಂದು ಸೂಚಿಸಿ, ಪಾಕೀಸ್ಥಾನ ಸ್ಥಾಪಿತವಾದರೆ ಗುಲಾಮಗಿರಿ ಶಾಶ್ವತ, ಆದ್ದರಿಂದ ಅದರ ಸೊಲ್ಲೇ ಇಲ್ಲದಂತಾಗಬೇಕು, ಲಾಹೋರಿನ ಕೋಟೆ ನೆಲಸಮವಾಗಬೇಕು, ಎಂದೂ ಸಹ ಅವರು ತಿಳಿಸಿದರು. ಭಾರತದ ಕಮ್ಯೂನಿಸ್ಟ್ ಪಂಗಡ ನಮ್ಮ ರಾಷ್ಟ್ರಕ್ಕೆ ಶಾಶ್ವತವಾದ ಪೀಡೆಯೆಂದು ಹೇಳಿ ಅವರು ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು.

ಕಾಂಗ್ರೆಸ್ಸಿಗೆ ಕಾಣಿಕೆ

ಸ್ವಂ.ಸು.] ಚಿಕ್ಕಮಗಳೂರು ೨೮

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಸಿದ್ದವನಹಳ್ಳಿ ನಿಜಲಿಂಗಪ್ಪನವರು ಮೊನ್ನೆ ದಿನ ಇಲ್ಲಿಗೆ ಆಗಮಿಸಿದ್ದಾಗ ಅವರನ್ನು ಸ್ವಾಗತಿಸಿ ಭಾರಿ ಮೆರವಣಿಗೆ ನಡೆಸಲಾಯಿತು. ... ತರ ಆಜಾದ್ ಮೈದಾನದಲ್ಲಿ ಶ್ರೀ ಜನಪ್ನಪ್ಪ[illegible] ಅಧ್ಯಕ್ಷತೆಯಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಕಾಂಗ್ರೆಸ್ ಅಧ್ಯಕ್ಷರಿಗೆ [illegible] ನಿಧಿಯನ್ನು ಅರ್ಪಿಸಲಾಯಿತು.

ಲೀಗಿನವರಿಂದ ಬಿರುದು ಬಾವಲಿಗಳ ತ್ಯಾಗ

ಪಾಕೀಸ್ಥಾನದ ಸ್ಥಾಪನೆಗಾಗಿಯೂ ಈಗ ಬ್ರಿಟಿಷರ ಅಧೀನದಲ್ಲಿರುವ ಮತ್ತು ಮುಂದೆ ಸವರ್ಣ ಹಿಂದೂಗಳ ಅಧೀನಕ್ಕೊಳಗಾಗಬಹುದಾದ ಗುಲಾಮಗಿರಿಯನ್ನು ಎದುರಿಸುವ ಸಲುವಾಗಿಯೂ, ಮುಸ್ಲಿಂ ಲೀಗು ಹೋರಾಟ ಆರಂಭಿಸಬೇಕೆಂದು ನಿನ್ನೆ ಬೊಂಬಾಯಿಯಲ್ಲಿ ಲೀಗ್ ಕೌನ್ಸಿಲ್ ಸಭೆ ನಿರ್ಣಯಿಸಿತು. ಹೋರಾಟದ ಪ್ರಥಮ ಸೂಚನೆಯಾಗಿ ಪ್ರತಿ ಮುಸ್ಲಿಂ ಲೀಗಿನವರೂ ಬ್ರಿ|| ಸರ್ಕಾರದಿಂದ ಬಂದ ತನ್ನ ಬಿರುದು ಬಾವಲಿಗಳನ್ನು ತ್ಯಜಿಸಬೇಕೆಂದು ಅದೇ ಸಭೆಯಲ್ಲಿ ತೀರ್ಮಾನಿಸಲಾಯಿತು. ಅದರಂತೆ ಸರ್ ಗುಲಾಂ ಹುಸೇನ್ ಹಿದಯತುಲ್ಲಾ, ಸರ್ ನಾಜಿಮುದ್ದೀನ್, ಸರ್ ಫಿರೋಜ್ ಖಾನ್ ನೂನ್, ಸರ್ ಸಾದುಲ್ಲ, ರಾಜಾ ಗಜ಼್‌ನಾಫರ್ ಅಲಿಖಾನ್, ಖಾನ್ ಬಹದ್ದೂರ್ ಖುರೇಷಿ, ನವಾಬ್‌ಜಾದ ಲಿಯಾಖತ್ ಆಲಿಖಾನ್, ಮತ್ತು ಇತರ ಗಣ್ಯ ಮುಂದಿನ ಪ್ರಮುಖರು ಸಭಾ ವೇದಿಕೆಯ ಮೇಲೆ ನಿಂತು ತಮ್ಮ ಬಿರುದುಗಳನ್ನು ತ್ಯಜಿಸಿರುವುದಾಗಿ ಘೋಷಿಸಿದರು.

ನಿಮ್ನ ವರ್ಗದವರ ಸತ್ಯಾಗ್ರಹ ನಿಂತಿತು

ಬ್ರಿಟಿಷ್ ನಿಯೋಗದವರ ಸಲಹೆಗಳನ್ನು ಪ್ರತಿಭಟಿಸಿ ನಿಮ್ನ ವರ್ಗದ ಫೆಡರೇಷನ್ನಿನವರು ಹೂಡಿದ್ದ ಸತ್ಯಾಗ್ರಹವನ್ನು ಈಗ ನಿಲ್ಲಿಸಬೇಕೆಂದು ಫೆಡರೇಷನ್ನಿನ ಕಾರ್ಯಕಾರಿ ಸಮಿತಿ ತೀರ್ಮಾನಿಸಿದೆ.

ರೈಲ್ವೆ ಅನಾಹುತದಿಂದ ೨೩ ಮಂದಿ ಮರಣ

ಲಾಹೋರ್ ಪ್ಯಾಸೆಂಜರ್ ರೈಲು ಮೊನ್ನೆ ಕಟ್ನಿ ರೈಲ್ವೆ ಜಂಕ್ಷನ್ನಿನಲ್ಲಿ ಇನ್ನೊಂದು ರೈಲಿಗೆ ಡಿಕ್ಕಿ ಹೊಡೆದುದರಿಂದ ೨೩ ಜನರು ಸತ್ತರೆಂದು ಗೊತ್ತಾಗಿದೆ.

ಅಭಿನಂದನಾ ಸಭೆ

ಮೈಸೂರು ೩೦

ಶಾರದಾವಿಲಾಸ ವಿದ್ಯಾ ಸಂಸ್ಥೆಗಳ ಕಾರ್ಯ ನಿರ್ವಾಹಕ ಮಂಡಲಿಯವರು ನಾಳೆ ಸಾಯಂಕಾಲ ೫ ಗಂಟೆಗೆ ಶ್ರೀಮಾನ್ ಫರ್ಸ್ಟ್ ಕ್ಲಾಸ್ ಆರ್ ಕೆ ನಾರಾಯಣಸ್ವಾಮಿಯವರಿಗೆ ಅಭಿನಂದನ ಪತ್ರಿಕೆಯನ್ನು ಕೊಡಲು ಸಭೆ ಏರ್ಪಡಿಸಿದ್ದಾರೆ. ಅಭಿಮಾನಿಗಳೆಲ್ಲಾ ದಯಮಾಡಿಸಬೇಕಾಗಿ ಗೌರವ ಕಾರ್ಯದರ್ಶಿಗಳು ಕೋರಿರುತ್ತಾರೆ.

ಮೈಸೂರು ಕಾಂಗ್ರೆಸ್ ಅಧ್ಯಕ್ಷ ಚುನಾವಣೆ

ಮೈಸೂರು ೩೦

ನಾಳೆ ಬೆಳಗ್ಗೆ ೯ ಗಂಟೆಯಿಂದ ೧೧ ಗಂಟೆವರೆವಿಗೂ ಮಧ್ಯಾಹ್ನ ೩ ರಿಂದ ೬ ಗಂಟೆವರೆವಿಗೂ ಕಾಂಗ್ರೆಸ್ ಕಛೇರಿಯಲ್ಲಿ ಮೈಸೂರು ಕಾಂಗ್ರೆಸ್ ಅಧ್ಯಕ್ಷ ಚುನಾವಣೆ ನಡೆಯಲಿದೆ. ಮೈಸೂರು ನಗರದ ಮತ್ತು ಜಿಲ್ಲೆಯ ಎಲ್ಲ ಪ್ರತಿನಿಧಿಗಳೂ ಆ ಕಾಲಕ್ಕೆ ದಯಮಾಡಿಸಿ ಚುನಾವಣೆಯಲ್ಲಿ ಭಾಗವಹಿಸಬೇಕೆಂದು ಚುನಾವಣಾಧಿಕಾರಿಗಳಾದ ಶ್ರೀ ಬಿ ನಾರಾಯಣಸ್ವಾಮಿಯವರು, ಶ್ರೀ ಎಂ ಶಂಕರಯ್ಯನವರೂ ಪ್ರಾರ್ಥಿಸಿದ್ದಾರೆ.

ಶುಭ ಸಂದೇಶ

ಶ್ರೀ ಕಂಬಳಿ ರಾಮಸ್ವಾಮಿ ಐಯ್ಯಂಗಾರರವರು ಈ ರೀತಿ ಬರೆಯುತ್ತಾರೆ:-'ಸಾಧ್ವಿ'ಯ ನಾಲ್ಕನೇ ವಾರ್ಷಿಕೋತ್ಸವದ ಆಹ್ವಾನ ಪತ್ರಿಕೆ ತಲುಪಿ ಸಮಾಧಾನವಾಯಿತು. 'ಸಾಧ್ವಿ' ಯು ಮಹಾ ಪುರುಷರಾದ ತಾತಯ್ಯನವರ ಸಹೋದ್ಯೋಗಿಯಾಗಿ ೪೦ ವರ್ಷಗಳ ಹಿಂದೆಯೇ ಕೆಲಸಮಾಡಿರತಕ್ಕ ನನಗೆ ಆ ಪತ್ರಿಕೆಯ ವಿಚಾರದಲ್ಲಿ ಹೆಚ್ಚು ಬರೆಯಬೇಕಾದ್ದೇ ಇಲ್ಲ. 'ಸಾಧ್ವಿ' ಯು ಸಾಧ್ವಿಯಾಗಿಯೇ ಬಾಳಲಿ! ಇದೇ ನನ್ನ ಹಾರೈಕೆ ಇದೇ ನನ್ನ ಪ್ರಾರ್ಥನೆ.

ಮದ್ರಾಸಿನಲ್ಲಿ ಹೊಸ ತೆರಿಗೆ ಇಲ್ಲ

ಮದ್ರಾಸ್ ಪ್ರಾಂತ್ಯದಲ್ಲಿ ಈ ಸಾಲಿನಲ್ಲಿ ಯಾವ ಹೊಸ ತೆರಿಗೆಯನ್ನು ವಿಧಿಸುವವಿಲ್ಲವೆಂದೂ, ಹಾಲಿ ಇರುವ ತೆರಿಗೆಗಳನ್ನು ಹೆಚ್ಚಿಸುವುದಿಲ್ಲವೆಂದೂ, ಪ್ರಧಾನಿ ಶ್ರೀ ಪ್ರಕಾಶಂರವರು ತಿಳಿಸಿದ್ದಾರೆ. ಪ್ರಾಂತ್ಯದ ಪೂರ್ತಿಯಾಗಿ ಪಾನ ನಿರೋಧವನ್ನು ಈ ಸಲ ಜಾರಿಗೆ ತರಲು ಸಾಧ್ಯವಿಲ್ಲವೆಂದೂ, ಸದ್ಯಕ್ಕೆ ಸೇಲಂ, ಚಿತ್ತೂರು, ಉತ್ತರ ಆರ್ಕಾಟ್ ಮತ್ತು ಕಡಪ ಜಿಲ್ಲೆಗಳಲ್ಲಿ ಮಾತ್ರ ಅದನ್ನು ಜಾರಿಗೆ ತರುವುದಾಗಿಯೂ ಅವರು ತಿಳಿಸಿದ್ದಾರೆ.

ಪ್ಯಾಲೆಸ್ಟೈನಿಗೆ ನಿಯೋಗ

ಭಾರತ ಸರ್ಕಾರದ ಪರವಾಗಿ ಪ್ಯಾಲೆಸ್ಟೈನಿಗೆ ಐದು ಜನರ ನಿಯೋಗ [illegible] ದಿವಾನ್ ಚಮನ್‌ಲಾಲ್‌ರವರ ನಾಯಕತ್ವದಲ್ಲಿ ಮೊನ್ನೆ ದಿನ ವಿಮಾನದಲ್ಲಿ ತೆರಳಿ[illegible]

ಕಾಂಗ್ರೆಸ್ ಅಧ್ಯಕ್ಷತೆ

ಮೈಸೂರು ಕಾಂಗ್ರೆಸ್ ಅಧ್ಯಕ್ಷರ ಹೇಳಿಕೆ ಸತ್ಯಾಂಶಕ್ಕೆ ದೂರವಾಗಿದೆ. ೧೭-೭-೪೬ ನೇ ತಾರೀಕಿನ ಮುಖಂಡರ ಸಭೆಯಲ್ಲಿ ಶ್ರೀ ಟಿ. ಸಿದ್ದಲಿಂಗಯ್ಯನವರನ್ನು ಏಕಮತದಿಂದ ಅಧ್ಯಕ್ಷರನ್ನಾಗಿ ಆರಿಸಬೇಕೆಂದೂ, ತಕ್ಷಣವೇ ಎಲ್ಲ ಮುಖಂಡರ ಸಹಿ ಹಾಕಿದ ಹೇಳಿಕೆಯನ್ನು ಹೊರಡಿಸಬೇಕೆಂದೂ ಒಪ್ಪಲಾಗಿತ್ತು. ಅದೇ ರೀತಿ ನಾನೂ ಮೈಸೂರು ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ೨೩-೭-೪೬ ರ ದಿವಸ ಕರೆಸಿಕೊಂಡು ಈ ತೀರ್ಮಾನವನ್ನು ಅವರಿಗೆ ತಿಳಿಸಿದ್ದೇನೆ.

ಕಾರ್ಯಕಾರಿ ಸಮಿತಿಗಾಗಲಿ ಅಧ್ಯಕ್ಷರಿಗಾಗಲಿ ಪುನಃ ಈ ತೀರ್ಮಾನದ ಮೇಲೆ ಹಿಂದೆ ಹೋಗಲು ಅಧಿಕಾರವಿಲ್ಲ. ಆ ದಿವಸ ಸಭೆಗೆ ಬಂದಿದ್ದ ಶ್ರೀ ಕೆ ಎಸ್. ಕುಮಾರನ್‌ರವರು ೨೬-೭-೪೬ ರಲ್ಲಿ ಹೊರಡಿಸಿರುವ ಹೇಳಿಕೆ ಅಸ್ಪಷ್ಟವಾಗಿದೆ. ಈ ದೃಷ್ಟಿಯಿಂದ ಶ್ರೀ ಟಿ. ಸಿದ್ದಲಿಂಗಯ್ಯನವರೇ ಸರ್ವಾನುಮತದಿಂದ ಅಧ್ಯಕ್ಷರಾಗಿ ಚುನಾಯಿತರಾಗಬೇಕಾದದ್ದು ನ್ಯಾಯವಾಗಿದೆ.

ಯಂ ಎಲ್ ಸಂಜೀವರಾಜ ಅರಸು.

ಸರ್ ಮಿರ್ಜಾರವರು ಹೈದರಾಬಾದಿನ ಪ್ರಧಾನಿಗಳಾದರು

ಹೈದರಾಬಾದಿನ ಮಂತ್ರಿ ಮಂಡಲದ ಅಧ್ಯಕ್ಷರಾಗಿ ಸರ್ ಮಿರ್ಜಾರವರು ನೈಜಾಮ್ ರಾದ ಬಳಿಕ ನಿಜಾಮರಿಂದ ನೇಮಕ ಮಾಡಲ್ಪಟ್ಟಿದ್ದಾರೆ. ಆಗಸ್ಟ್ ಮೊದಲನೇ ವಾರದಲ್ಲಿ ಅಧಿಕಾರ ವಹಿಸಿಕೊಳ್ಳುವರು.

ಜಿಲ್ಲಾ ಅಕ್ಷರ ಪ್ರಚಾರಕರ ದಸ್ತಗಿರಿ

ಹಣದ ದುರುಪಯೋಗದ ಆಪಾದನೆ

ಮೈಸೂರು ೩೦

ಮೈಸೂರು ಜಿಲ್ಲಾ ಅಕ್ಷರ ಪ್ರಚಾರ ಸಮಿತಿ ವ್ಯವಸ್ಥಾಪಕರಾದ ಶ್ರೀ ಎಚ್. ವಿ. ರಂಗಸ್ವಾಮಿಯವರು, ವಯಸ್ಕರ ವಿದ್ಯಾಭ್ಯಾಸ ಸಮಿತಿಯ ಕೌನ್ಸಿಲಿಗೆ ಸೇರಿದ ಸುಮಾರು ೨೧೩೫ ರೂ. ಗಳನ್ನು ದುರುಪಯೋಗ ಪಡಿಸಿಕೊಂಡಿರುವರೆಂಬ ಆಪಾದನೆ ಮೇಲೆ ನಿನ್ನೆ ದಿನ 'ಬಿ' ಡಿವಿಜನ್ ಪೋಲೀಸ್ ಇನ್ಸ್‌ಪೆಕ್ಟರವರಿಂದ ದಸ್ತಗಿರಿ ಮಾಡಲ್ಪಟ್ಟಿದ್ದಾರೆ.

ಮುಂದಿನ ತನಿಖೆ ಕ್ರಮ ನಡೆಯುತ್ತಿದೆ. ಇವರನ್ನು ಕಳೆದ ನಂಜನಗೂಡು, ಹುಣಸೂರು ಮತ್ತು ಚಾಮರಾಜನಗರಗಳಲ್ಲಿಯೂ ಹಣ ಅಪಹರಿಸಿರುವುದರಿಂದ ಅಲ್ಲಿಗೆ ಕರೆದೊಯ್ದು ಕೇಳಿಸಲಾಗುವುದೆಂದು ತಿಳಿದು ಬಂದಿದೆ.

ಬಿರುದುಗಳನ್ನು ತ್ಯಜಿಸಲು ನಿಮ್ನ ವರ್ಗದವರ ನಿರ್ಣಯ

ಬ್ರಿ|| ಸಲಹೆಗಳಿಗೆ ವಿರೋಧ ಸೂಚಿಸಲು ನಿಮ್ನ ವರ್ಗದ ನಾಯಕರುಗಳು ಬ್ರಿಟಿಷ್ ಸರ್ಕಾರದಿಂದ ಕೊಡಲ್ಪಟ್ಟಿರುವ ಬಿರುದುಗಳನ್ನು ತ್ಯಜಿಸಬೇಕೆಂದು ಪ್ರಿನ್ಸ್ ನಿಮ್ನ ವರ್ಗದ ಫೆಡರೇಷನ್ನಿನವರು ನಿರ್ಧಾರ ಮಾಡಿದ್ದಾರೆ. ರಾವ್ ಸಾಹೇಬ್ ... [illegible]

ಸಾಧ್ವಿ
ತಾ|| ೩೦-೭-೪೬ ಮಂಗಳವಾರ

ಚೆಂಗಲರಾಯ ರೆಡ್ಡಿಯವರಿಗೆ ಓಟು ಕೊಡಿ!

ನಾಳೆ ದಿನ ನಡೆಯಲಿರುವ ಮೈಸೂರು ಕಾಂಗ್ರೆಸ್ ಅಧ್ಯಕ್ಷ ಚುನಾವಣೆಗೆ ವಾತಾವರಣವು ಈಗ ಸ್ಪಷ್ಟವಾಗಿರುವುದು. ಶ್ರೀ ಹೆಚ್. ಸಿ. ದಾಸಪ್ಪನವರು ತಮ್ಮ ಉಮೇದುವಾರಿಕೆಯನ್ನು ವಾಪಸು ತೆಗೆದುಕೊಂಡಿರುವರು. ಉಳಿದ ಉಮೇದುವಾರರುಗಳ ವಿಷಯವು ಖಚಿತವಾಗಿ ಗೊತ್ತಾಗಿಲ್ಲ. ಶ್ರೀ ಸಿದ್ದಲಿಂಗಯ್ಯನವರು ಮಾತ್ರ ತಮ್ಮ ಉಮೇದುವಾರಿಕೆಯ ವಿಷಯದಲ್ಲಿ ಇದುವರೆಗೆ ಬಿಗ್ಗಾದರಂತಾಗಿದ್ದರು. ಈಗ ಅವರೂ ಸ್ವಲ್ಪ ಸಡಿಲವಾಗಿರುವಂತೆ ಕಂಡುಬರುತ್ತದೆ. ತಮ್ಮ ತತ್ವಕ್ಕೆ ಬೆಂಬಲಕೊಡಲು ಇತರರಲ್ಲದೂ ಉಮೇದವಾರಿಕೆಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಇವರು ಹೇಳುತ್ತಿದ್ದರು. ಶ್ರೀ ದಾಸಪ್ಪನವರಿಗೆ ಬೆಂಬಲವನ್ನು ಕೊಡಲು ತಾವು ತಮ್ಮ ಬೇಡಿಕೆಯನ್ನು ಹಿಂದಕ್ಕೆ ತೆಗೆದುಕೊಳ್ಳುವುದಾಗಿ ಈಗ ಹೇಳುತ್ತಿದ್ದಾರೆ. ಅವರೆ ಶ್ರೀ ದಾಸಪ್ಪನವರೇ ಚುನಾವಣೆಗೆ ಈಗ ನಿಂತಿಲ್ಲವಾದುದರಿಂದ ಶ್ರೀಸಿದ್ದಲಿಂಗಯ್ಯನವರ ಪ್ರಯತ್ನವು ವಿಫಲವಾಗುತ್ತದೆ.

ಅಧ್ಯಕ್ಷ ಚುನಾವಣೆಯ ವಿಷಯದಲ್ಲಿ ನಡೆಯುವ ಪ್ರಯತ್ನಗಳ ಬಗ್ಗೆ ಈಗ ಹಲವಾರು ಪ್ರಕಟಣೆಗಳು ಹೊರಬಿದ್ದಿವೆ. ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯವರೂ ಹಲವು ನಾಯಕರುಗಳೂ ಮಾಡಿಕೊಂಡಿರುವ ಹೇಳಲಾದ ಒಪ್ಪಂದವನ್ನು ಕುರಿತಿದ್ದ ಒಟ್ಟಿನ ಪರಸ್ಪರ ಟೀಕೆಗಳೂ ನಡೆದಿವೆ. ಇವುಗಳಿಗೆ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರು ಉತ್ತರವನ್ನು ಕೊಟ್ಟಿದ್ದಾರೆ. ಇವೆಲ್ಲವೂ ನಾಯಕರುಗಳಲ್ಲಿ ಆಗಿರಬಹುದಾದ ಒಡಂಬಡಿಕೆಗಳ ಪ್ರಸಂಗಗಳು. ಆದರೆ ಚುನಾವಣೆಗೆ ಮೂಲ ಕರ್ತರಾದ ಪ್ರತಿನಿಧಿಗಳ ವಿಚಾರವನ್ನು ಇವರಲ್ಲಿ ಸರಿಯಾಗಿ ಗಮನಿಸಿದಂತೆ ಕಾಣುವುದಿಲ್ಲ. ಚುನಾವಣೆಗೆ ನಿಂತಿರುವ ಉಮೇದುವಾರರಲ್ಲಿ ತಮಗೆ ಬೇಕಾದವರನ್ನು ಆರಿಸಿಕೊಳ್ಳುವ ಹಕ್ಕು ಪ್ರತಿನಿಧಿಗಳಿಗೆ ಇದ್ದೇ ಇರುತ್ತದೆ. ನಾಯಕರುಗಳಲ್ಲಿ ಆಗಿರಬಹುದಾದ ಒಪ್ಪಂದಗಳು ಪ್ರತಿನಿಧಿಗಳನ್ನು ಬಂಧಿಸಿದ್ದವಿಲ್ಲ. ಆದ ಪರಿಂದ ಪ್ರತಿನಿಧಿಗಳು ತಮಗೆ ಬೇಕಾದವರನ್ನು ಚುನಾಯಿಸುವ ಅವಕಾಶವು ದೊರೆತಿರುವುದು ಉಚಿತವಾಗಿಯೇ ಇದೆ.

ವಿಶಾಲಭಾವನೆಯಿಂದ ಒಬ್ಬರನ್ನು ಅಧ್ಯಕ್ಷರನ್ನಾಗಿ ಚುನಾಯಿಸುವ ಪ್ರಯತ್ನದ ವಿಷಯವಾಗಿ ಅನೇಕ ಅಂಶಗಳು ತೋರಬಿದ್ದಿವೆ. ಆದರೆ ಶ್ರೀ ಸಿದ್ದಲಿಂಗಯ್ಯನವರು ಕೊಟ್ಟಿರುವ ಹೇಳಿಕೆಯು ಮಾತ್ರ ಸಮರ್ಪಕವಾಗಿಯೂ, ಗಾಂಭೀರ್ಯಯುಕ್ತವಾಗಿಯೂ ಇಲ್ಲದಿರುವುದನ್ನು ಒಪ್ಪಬೇಕಾಗಿದೆ. ತಮ್ಮ ಚುನಾವಣೆಗೆ ಇರುವ ಅವಕಾಶಗಳನ್ನು ಬಹಿರಂಗಪಡಿಸುವುದರಲ್ಲಿ ಇವರು ಕಾಂಗ್ರೆಸ್ ಸಂಸ್ಥೆಗೇ ನ ... ಉಂಟು ಮಾಡಿ... ಸಾರ್ವಜನಿಕ ... ತಮ್ಮ ... [illegible]

ಲೀಗು ಹೋರಾಟವನ್ನು ಆರಂಭಿಸುವುದೇ?

ಬ್ರಿ|| ನಿಯೋಗದವರ ಸಲಹೆಗಳನ್ನು ಅಂಗೀಕರಿಸಿ ಮಾಡಿದ್ದ ನಿರ್ಣಯವನ್ನು ಮೊನ್ನೆ ಬೊಂಬಾಯಿಯಲ್ಲಿ ಸೇರಿದ್ದ ಲೀಗ್ ಕಾರ್ಯಕಾರೀ ಸಮಿತಿ ವಾಪಸು ತೆಗೆದುಕೊಂಡು ಅದನ್ನು ಲೀಗ್ ಕೌನ್ಸಿಲ್ ಮುಂದೆ ಮಂಡಿಸಿತ್ತು. ನಿಯೋಗದವರ ಸಲಹೆಯನ್ನು ಮುಸ್ಲಿಂ ಲೀಗು ಅಪ್ಪಿರಾಗಿ ತಿರಸ್ಕರಿಸಿ ನಿನ್ನೆ ದಿನ ತೀರ್ಮಾನಮಾಡಿದೆ. ಅಲ್ಲದೆ ಹೋರಾಟವನ್ನು ಆರಂಭಿಸಬೇಕೆಂದೂ ನಿರ್ಣಯಿಸಿ ಈ ಬಗ್ಗೆ ಸೂಕ್ತಕ್ರಮ ಕೈಗೊಳ್ಳಲು ಮಿ|| ಜಿನ್ನಾರವರಿಗೆ ಅಧಿಕಾರವನ್ನು ಕೊಡಲಾಗಿದೆ.

o o o o

ಕೇಂದ್ರಸರ್ಕಾರದ ರೆವಿನ್ಯೂಬೋರ್ಡಿನ ಮಿ|| ಹೆಚ್. ಗ್ರೀನ್‌ಫೀಲ್ಡ್‌ರವರೂ ಮತ್ತು ಮದರಾಸ್ ಎಕ್ಸೈಜ್ ಬೋರ್ಡಿನ ಶ್ರೀ ಕೆ ಎನ್ ಚೇಕಬ್‌ರವರೂ ಇಂದೇ ತಾ|| ಬೆಂಗಳೂರಿಗೆ ಬಂದು ಅಬಕಾರಿ ಸಂಬಂಧ ವಿಷಯವಾಗಿ ಪರಿಶೀಲನೆ ನಡೆಸುವರು.

ಬಹುದು. ಯಾವ ಸಂಸ್ಥೆಯ ಮೂಲ ನಾಯಕರೆಂದೂ, ಮಾಜಿ ಅಧ್ಯಕ್ಷರೆಂದೂ, ಸೂತ್ರಧಾರಿಗಳೆಂದೂ ತಾವು ಹೇಳಿಕೊಳ್ಳುವರೋ ಆ ಸಂಸ್ಥೆಯು ಇಂದು ಅಧೋಗತಿಗೆ ಬಿದ್ದಿದೆಯೆಂದು ಹೇಳುವುದಕ್ಕಿಂತ ಆತ್ಮಖಂಡನೆಯು ಬೇರೊಂದಿಲ್ಲ. ಸಂಸ್ಥೆಯ ಶೀಲಪತನವಾದ ಲೋಪದೋಷಗಳಿಗೆ ಅವರೂ ಬಾಧ್ಯರು. ಅವುಗಳನ್ನು ಕ್ರಮಪಡಿಸಲು ಅವರೂ ಹೊಣೆಗಾರರು; ಸಂಸ್ಥೆಯನ್ನೂ, ಸಹೋದ್ಯೋಗಿಗಳನ್ನೂ ನಿಂದಿಸುವುದು ಆತ್ಮನಿಂದನೆ ಎಂಬುದನ್ನು ಅವರು ಅರಿಯದಿರುವುದು ವಿಷಾದಕರ. ತಮ್ಮ ಉಮೇದವಾರಿಕೆಗೆ ಇದರಿಂದ ತಾವೇ ಕುಠಾರವನ್ನು ಪ್ರಯೋಗಿಸಿದಂತಾಗಿದೆ.

ನಾಳೆಯ ಚುನಾವಣೆಯಲ್ಲಿ ಕಾಂಗ್ರೆಸ್ ಪ್ರತಿನಿಧಿಗಳು ಯಾರಿಗೆ ಓಟು ಕೊಡಬೇಕೆಂಬುದನ್ನು ಮತ್ತೆ ಹೇಳಬೇಕಾಗಿಯೇ ಇಲ್ಲ. ಮೈಸೂರು ಕಾಂಗ್ರೆಸ್ಸಿನಲ್ಲಿರುವ ಈಗಿನ ಎಲ್ಲಾ ನಾಯಕರುಗಳಿಗೂ ಸಕಲ ವಿಧಗಳಲ್ಲಿಯೂ ಸಮಾನಸ್ಪಂದರಾಗಿದ್ದು ತಮ್ಮ ಸತತ ಸೇವೆ, ತ್ಯಾಗ ಮತ್ತು ಲೋಕಾನುಭವಗಳಿಂದ ಕಾಂಗ್ರೆಸ್ ನಾಯಕತ್ವಕ್ಕೆ ಸಂಪೂರ್ಣವಾದ ಅರ್ಹತೆಯನ್ನು ಪಡೆದಿರುವ ಚೆಂಗಲರಾಯ ರೆಡ್ಡಿಯವರನ್ನೇ ಮುಂದಿನ ಅಧ್ಯಕ್ಷರನ್ನಾಗಿ ಚುನಾಯಿಸುವುದು ಅತ್ಯಂತ ಶ್ರೇಯಸ್ಕರವಾಗಿದೆ ಎಂಬುದನ್ನು ಮತ್ತೊಮ್ಮೆ ಸೂಚಿಸುತ್ತೇವೆ.

Edited printed and published by A. V. Nagarajan at the Sadhvi Press D Subbiah Road, Mysore.

ಮೈಸೂರು ದಿವಾನಗಿರಿ

ಶ್ರೀ ಬಿ ಸುಬ್ಬರಾವ್ ಉಪಾಧ್ಯರು ಈ ರೀತಿ ಹೇಳಿಕೆಯಿತ್ತಿದ್ದಾರೆ:--

ಮೈಸೂರು ದಿವಾನಗಿರಿ ವಿಷಯದಲ್ಲಿ ಇತ್ತೀಚೆಗೆ ಬಹುವಾಗಿ ಸಾರ್ವಜನಿಕ ಚರ್ಚೆಯಾಗುತ್ತಿದೆ. ಭಾ|| ಸರ್ಕಾರದಲ್ಲಿದ್ದು ಸದಸ್ಯರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್‌ರವರು ಆ ಪದವಿಗೆ ಒರುವ ಸಂಬಂಧವಾಗಿ ಪುಂಖಾನುಪುಂಖವಾಗಿ ಲೇಖನಗಳೂ ಅಭಿಪ್ರಾಯಗಳೂ ಬರುತ್ತಿವೆ. ರಾಜಕಾರಣ ಕ್ಷೇತ್ರರೂ, ಮೈಸೂರಿನ ಅಭಿಮಾನಿಗಳೂ ಈ ನೇಮಕವನ್ನು ಕುರಿತು ವಿಷಾದಪಟ್ಟಿದ್ದಾರೆ. ಶ್ರೀ ಹೆಚ್. ಸಿ. ದಾಸಪ್ಪನವರು ಸರ್ ಆರ್ಕಾಟರವರಿಗೆ ಸ್ನೇಹಪೂರಿತ ಬುದ್ಧಿವಾದ ಹೇಳಿ ಇಲ್ಲಿಗೆ ಬರಬೇಡವೆಂದು ತಿಳಿಸಿದ್ದಾರೆ. ಯಾರೂ ಈ ನೇಮಕವನ್ನು ಪುರಸ್ಕರಿಸಿಲ್ಲ.

ಆದರೆ ಈ ವಿಷಯ ವಿರಕ್ತವಾಗಿ ಇಷ್ಟೊಂದು ಮಹತ್ವರವಾಯಿತೆಂಬುದು ಅರ್ಥವಾಗದ ಪ್ರಶ್ನೆ. ಭಾರತದಲ್ಲಿ ಕ್ರಾಂತಿಯ ಸ್ವರೂಪದ ಬದಲಾವಣೆಯ ಚಿತ್ರವು ಎದ್ದು ಕಾಣುತ್ತಿರುವಾಗ ಈ ಒಂದು ನೇಮಕವು ಅಷ್ಟೇನೂ ಪ್ರಾಮುಖ್ಯವಲ್ಲ. ಇವರು ಇಲ್ಲಿಗೆ ಬಂದರೆ ಕೋಪವುಂಟಾಗಿ ಜಾಡ್ಯ ಪುನಃ ಹರಡುವುದೆ ಬ ಭೀತಿಗೆ ಅಸ್ಪದ ಕಾಣದು. ಬಹುಶಃ ಹಲವಾರು ವ್ಯಕ್ತಿಗಳು ಇವರ ಆಗಮನದಿಂದ ಹಳೆಯ, ತ್ಯಕ್ತ ಜಾತ್ಯಾಭಿಮಾನವನ್ನು ಮುಂದು ಮಾಡಿಕೊಂಡು ಅಧಿಕಾರ ಲಾಲಸೆಯಿಂದ ಸ್ವಾರ್ಥಸಾಧನೆಗಾಗಿ ಪ್ರಯತ್ನಿಸಬಹುದು. ಕೋಮುವಾರು ಜಾಡ್ಯವನ್ನು ಹರಡಲೆತ್ನಿಸುವವರು ನಿರಾಶರಾಗಬೇಕಾಗುವ ಪ್ರಸಂಗವು ಬರುವುದು. ಸ್ವಯಂ ಸರ್ ಆರ್ಕಾಟರಿಗೆ ಅಸಾಧ್ಯವಾಗದ ಪ್ರಶ್ನೆ. ಚಕ್ರಾಧಿಪತ್ಯಗಳು ನಶಿಸುವ ಕಾಲವಿದು. ಜೀವನ ಮನೋನ್ನತ ವ್ಯತ್ಯಾಸಗಳಾಗುತ್ತಿರುವಾಗ ಇಲ್ಲಿ ಹಳೆಯ ಪದ್ಧತಿ ಮತ್ತೆ ಉದ್ಭವಿಸಲಾರದು.

ಜೊತೆಗೆ ಸರ್ ಆರ್ಕಾಟರು ಮದ್ರಾಸ್ ವಾತಾವರಣ ಬಿಟ್ಟು ವರ್ಷಗಳಾದುವು. ರಾಷ್ಟ್ರೀಯ ಅಂತರ ರಾಷ್ಟ್ರೀಯ ಪರಿಸ್ಥಿತಿಗಳ ಸೂಕ್ಷ್ಮ ಪರಿಚಯ ಅವರಿಗೆ ಆಗಿರಬೇಕು. ಅವುಗಳ ಅನುಭವ ಸಾರವನ್ನು ಅವರು ಸವಿದಿರಬೇಕು. ಇಲ್ಲದಿದ್ದರೆ ಇಷ್ಟು ವರ್ಷಗಳ ಸಂಸರ್ಗವೂ ವ್ಯರ್ಥ. ಈ ಕಾರಣದಿಂದ ಅವರು ಹಳೆಯ ದೃಷ್ಟಿಯನ್ನು ಹೊಂದಲಾರರೆಂದೇ ನನ್ನ ನಂಬಿಕೆ. ಕೋಮುವಾರು ವ್ಯಕ್ತಿಗಳ ಪ್ರಭಾವ ಅವರಲ್ಲಿ ಕೆಂದಲಾರದೆಂದೇ ನನ್ನ ಅಭಿಮತ.

ಆದ್ದರಿಂದ ಅವರ ಬರುವಿಕೆಯಿಂದ ನಮಗೆ ಅಷ್ಟೇನೂ ಭಯವಿಲ್ಲ. ಆದರೆ ಪ್ರಜಾ ಸ್ವಾತಂತ್ರ್ಯವನ್ನೂ, ಪ್ರಜಾಧಿಕಾರವನ್ನೂ ಕುಂಠಿತ ಮಾಡಲು ಅವರು ಯತ್ನಿಸಿದರೆ ಅದು ನಡೆಯಲಾರದು. ಅವರ ವೈಯಕ್ತಿಕ ಮನೋಗತವೇನೇ ಇರಲಿ, ಸ್ವತಂತ್ರ ಕ್ರಾಂತಿಕಾರ ಚಳುವಳಿಯ ಪ್ರವಾಹವು ಇವರ ಅಡ್ಡಗಟ್ಟೆಯನ್ನು ಕೊಚ್ಚಿ ಬಿಡುವುದು. ಇವರ ಬರುವಿಕೆಯು ಸ್ವಾತಂತ್ರ್ಯ ಚಳುವಳಿಯನ್ನು ಮುರಿಯುವುದಕ್ಕಾಗಿಯಾಗಲಿ, ಅವರಲ್ಲಿ ಒಡಕನ್ನು ತರಲು ಸಹಾಯವಾಗುವುದೆಂದು ನಂಬಿಕೆಯಿದ್ದರೆ ಅದನ್ನು ಮರೆತು ಬಿಡುವುದು ಉತ್ತಮ.

ಆದರೆ ಈ ನೇಮಕದ ಹಿಂದೆ ಬೇರೊಂದು ಪ್ರತಿಗಾಮಿ ಮನೋಭಾವವಿರಬೇಕು. ಬ್ರಿಟಿಷರು ಇವರನ್ನು ತಾತ್ಕಾಲಿಕ ಸರ್ಕಾರದಲ್ಲಿ ಇಟ್ಟುಕೊಳ್ಳಲು ಬಹುವಾಗಿ ಶ್ರಮಿಸಿದರು. ಆದರೆ ಅದು ಸಾಧ್ಯವಾಗಲಿಲ್ಲ. ಇವರನ್ನು ಮೈಸೂರಿಗೆ ಕಳುಹಿಸಿ ಇಲ್ಲಿಂದ ಬರಲಿರುವ ಕಾನ್‌ಸ್ಟಿಟ್ಯುಯೆಂಟ್ ಅಸೆಂಬ್ಲಿಗೆ ನಾಮಕರಣದ ಮೂಲಕ ಆರಿಸಿಕೊಳ್ಳಬೇಕೆಂಬ ಉದ್ದೇಶವಿದ್ದರೂ ಇರಬಹುದು. ಅಲ್ಲಿ ಇವರು ಬ್ರಿಟಿಷ್ ಹಿತರಕ್ಷಕರಾಗಲೆಂಬ ಉದ್ದೇಶವಿದೆಯೋ ಏನೋ? ಈ ಮನೋಗತವಿದ್ದರೆ ಸರ್ವರೂ ಈ ನೇಮಕವನ್ನು ವಿರೋಧಿಸಬೇಕು.

ಅಪ್ಪಟ ಉಲ್ಲನ್
ಸ್ವೆಟ್ಟರುಗಳು
ಒಬ್ಬೊಬ್ಬರಿಗೆ ಒಂದೊಂದು ಮಾತ್ರ ಕೊಡಲಾಗುತ್ತದೆ
ಬೆಲೆ ಒಂದಕ್ಕೆ ರೂ 4-6-8
ಸ್ವಲ್ಪವೇ ಇರುವುದರಿಂದ ಶೀಘ್ರ ನಮಗೆ ನಿರೀಕ್ಷಿಸುತ್ತೇವೆ
ಜಿ. ವಿ ಸೂರ್ಯನಾರಾಯಣಸೆಟ್ಟಿ ಅಂಡ್ ಸನ್ಸ್,
ರೆಡಿಮೇಡ್ ಮತ್ತು ಜವಳಿ ಅಂಗಡಿ,
ಸಯ್ಯಾಜಿರಾವ್ ರೋಡ್, ಮೈಸೂರು.

ಟಿ. ಸಿ. ನಟರಾಜ್
ಔಷಧಾಲಯ
ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.
ಅಗತ್ಯವಾಗಿ ಬೇಕಾದ ಎಲ್ಲಾ ಇಂಗ್ಲೀಷ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಧಾರ್ಜಿನಿಂದ ಮಾಡಲ್ಪಡುತ್ತದೆ.
ಝಂಡೂರವರ ಆಯುರ್ವೇದೀಯ ಔಷಧಗಳೆಲ್ಲವೂ ದೊರೆಯುತ್ತವೆ.

ಅಮೃತ
ನಿತ್ಯದ ಜ್ವರ ಮಲೇರಿಯಾ ಜ್ವರ, ಜ್ವರದ ಗಡ್ಡೆ ಇವುಗಳ ಮೇಲೆ ಬಹಳ ಚನ್ನಾಗಿ ಕೆಲಸ ಮಾಡುತ್ತದೆ.
ಕೆ. ವಿ. ವೆಂಕಟರಾಮಯ್ಯ, ಡಿಸ್ಟ್ರಿಕ್ಟ್ ಬೋರ್ಡ್ ವೈದ್ಯಶಾಲಾ, ಅರಕಲಗೂಡು.

ರಾಜ್‌ಕಮಲ್ ಟಾಕೀಸ್, ಮೈಸೂರು
31-7-46 ನೇ ಬುಧವಾರದಿಂದ
ಮಧುರ ಗಾಯನದ ಸವಿ! ಸಂತೋಷದ ಸುರಿ ಮಳೆ!!
ಕನನ್ ಬಾಲ ಮುಖ್ಯಪಾತ್ರವಹಿಸಿರುವ
"ಬನ್ ಪ್ಹೂಲರ್"

ಫೋ. ನಂ. 302 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಬುಧವಾರ ೩೧—೭—೪೬ [ಸಂಚಿಕೆ ೮

ದಿವಾನಗಿರಿ ಬಗ್ಗೆ — — ಅಧಿಕೃತ ಪ್ರಕಟಣೆ

ಸಂಸ್ಥಾನದಲ್ಲಿ ವಯಸ್ಕರ ಶಿಕ್ಷಣ

ಸಂಸ್ಥಾನದಲ್ಲಿ ಅಕ್ಷರ ಪ್ರಚಾರದ ಸಲುವಾಗಿ ಹಲವು ವರ್ಷಗಳ ಹಿಂದೆ ಸ್ಥಾಪಿತವಾದ ಸಮಿತಿಯು ಈಗ ವಯಸ್ಕರ ಶಿಕ್ಷಣ ಸಮಿತಿ ಎಂಬ ಬದಲಾವಣೆಯಿಂದ ಮತ್ತಷ್ಟು ಉತ್ಸಾಹ ಮತ್ತು ಬಲದೊಡನೆ ಕಾರ್ಯೋನ್ಮುಖವಾಗಿದೆ. ಅದರ ೪೫-೪೬ನೇ ಸಾಲಿನ ವರದಿ ನಮ್ಮ ಹಸ್ತಗತವಾಗಿದೆ. ಕಳೆದ ಸಾಲಿನಲ್ಲಿ ೪೫೩೦ ತರಗತಿಗಳನ್ನು ಆರಂಭಿಸಿ ೮೪೪೯೬ ಮಂದಿಗೆ ಓದು ಬರಹ ಕಲಿಸಲಾಗಿದೆ. ೮೭೫ ಹೊಸ ಪುಸ್ತಕ ಭಂಡಾರಗಳು ಪ್ರಾರಂಭವಾದುವು. ಈಗ ಒಟ್ಟು ೧೩೬೦ ಭಂಡಾರಗಳಿವೆ. ಈ ಭಂಡಾರಗಳ ಒಟ್ಟು ಸದಸ್ಯರ ಸಂಖ್ಯೆ ೧೩೮೫೨ ರ ವರೆವಿಗೆ ಏರಿದೆ. ಇವೆಲ್ಲದರ ಜೊತೆಗೆ ಜ್ಞಾನ ಪ್ರಸಾರ ಕಾರ್ಯವನ್ನೂ ನಡೆಸಲಾಗುತ್ತಿದೆ. ಚಲನ ಚಿತ್ರಗಳ ಮೂಲಕ ಜ್ಞಾನ ಪ್ರಸಾರ ಕಾರ್ಯವನ್ನು ಕೈಗೊಳ್ಳುವ ಯೋಜನೆಯು ಪರಿಶೀಲಿಸಲ್ಪಡುತ್ತಿದೆ. ಗ್ರಾಮಾಂತರಗಳಲ್ಲಿ ವಾಸಿಸುವ ವಯಸ್ಕರಿಗೆ ಶಿಕ್ಷಣ ಕೊಡಲು ನಂಜನಗೂಡಿನ ಬಳಿ ವಿದ್ಯಾಪೀಠವೊಂದನ್ನು ಸ್ಥಾಪಿಸಲಾಗಿದೆ. ವಯಸ್ಕರ ಶಿಕ್ಷಣ ಪುಸ್ತಕಮಾಲೆ ಬಂದ್ಕೆ ಮುಟ್ಟಿದೆ. ಇವೆಲ್ಲಾ ವರದಿಯಲ್ಲಿ ಅಡಕವಾಗಿರುವ ಅಂಶಗಳು. ವರದಿಯ ಮುಕ್ತಾಯದಲ್ಲಿ ಕಾರ್ಯದರ್ಶಿಗಳು ಏನ ಪ್ರಾರ್ಥಕ ಟೀಕೆಗಳಿಂದ ಸಮಿತಿಯ ಕಾರ್ಯವು ಯಶಸ್ವಿಯಾಗಲು ನೆರವಾದ ಎಲ್ಲರಿಗೂ ವಂದನೆಗಳನ್ನು ಇತ್ತಿದ್ದಾರೆ.

ಪುದುಕೋಟೆ ರಾಜರ ಬಳಿಗೆ ಕಾಂಗ್ರೆಸ್ ನಿಯೋಗ

ಪುದುಕೋಟೆ ಸಂಸ್ಥಾನದಲ್ಲಿ ಸಭೆಗಳ ಮೇಲಿರುವ ಪ್ರತಿಬಂಧಕಗಳನ್ನು ರದ್ದು ಮಾಡುವುದು; ವಿದ್ಯಾರ್ಥಿಗಳ ಮೇಲೆ ಕೆಲವು ದಿನಗಳ ಹಿಂದೆ ಧಾಳಿ ನಡೆಸಿದ ಅಧಿಕಾರಿಗಳ ವಿಚಾರಣೆ ನಡೆಸುವುದು; ವಯಸ್ಕರಿಗೆಲ್ಲಾ ಮತ ಚಲಾಯಿಸುವ ಹಕ್ಕನ್ನು ಕೊಡುವುದು; ಲಂಚ ನಿರ್ಮೂಲ ಮಾಡುವುದು; ಮತ್ತು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆ ಮಾಡುವುದು-ಈ ವಿಚಾರಗಳನ್ನು ಅಲ್ಲಿನ ಕಾಂಗ್ರೆಸ್ಸಿನವರು ಅಂಗೀಕಾರ ಮಾಡಿಕೊಳ್ಳಲು ಮಹಾರಾಜರು ಭೇಟಿಗೆ ಅವಕಾಶ ಕೊಟ್ಟಿದ್ದಾರೆ.

ಸಿಂಧ್ ಶಾಸನ ಸಭೆ

ವಿರೋಧ ಪಕ್ಷದ ನಾಯಕರಾದ ಮಿ॥ ಜಿ. ಎಂ. ಸೈಯದ್‌ರವರ ಕೋರಿಕೆಯಂತೆ ಸಿಂಧ್ ಶಾಸನ ಸಭೆಯನ್ನು ಗವರ್ನರರು ಸೆಪ್ಟೆಂಬರ್ ೩ನೇ ತಾ॥ಗೆ ಕರೆದಿದ್ದಾರೆ. ಅಂದು ಲೀಗ್ ಮಂತ್ರಿಮಂಡಲದ ಮೇಲೆ ಅವಿಶ್ವಾಸ ನಿರ್ಣಯವನ್ನು ವಿರೋಧ ಪಕ್ಷದವರು ಮಂಡಿಸಲಿದ್ದಾರೆ. ಮತ್ತೆ ಇಬ್ಬರು ಲೀಗಿಗೆ ರಾಜೀನಾಮೆ ಇತ್ತು ವಿರೋಧ ಪಕ್ಷಕ್ಕೆ ಸೇರಿದ್ದಾರೆಂದೂ ಈಗ ವಿರೋಧ ಪಕ್ಷದ ಬಲ ೩೩. ಲೀಗಿನ ಸಂಖ್ಯೆ ೨೭ ಇವೆಯೆಂದೂ ಹೇಳಲಾಗಿದೆ.

ಪ್ಯಾಲೆಸ್ಟೈನ್ ವಿಭಜನೆಗೆ ಅರಬ್ಬರ ವಿರೋಧ

ಪ್ಯಾಲೆಸ್ಟೈನನ್ನು ಸಮಾರ್ಥವಾಗಿ ವಿಭಜಿಸುವುದನ್ನು ಅರಬ್ ಲೀಗಿನವರು ವಿರೋಧಿಸಿದ್ದಾರೆ. ಆದರೆ ಈ ಸಲಹೆಯನ್ನು ಯೆಹೂದಿಗಳು ಸ್ವೀಕರಿಸಿ ಆ ಪ್ರದೇಶಗಳಲ್ಲಿ ಅವರಿಗೆ ಸಂಪೂರ್ಣ ಅಧಿಕಾರವಿರಬೇಕೆಂದು ವಾದಿಸುವವರು ಅದಕ್ಕೆ ಒಪ್ಪುವವರಾಗಿ ತೀರ್ಮಾನಿಸಿದ ವರದಿಯಾಗಿದೆ.

ಪ್ಯಾಲೆಸ್ಟೈನಿನ ಬಗ್ಗೆ ಅಮೆರಿಕಾದ ನಿರ್ಧಾರ

ಪ್ಯಾಲೆಸ್ಟೈನನ್ನು ಅರಬ್ ಮತ್ತು ಯೆಹೂದಿ ಪ್ರಾಂತ್ಯಗಳಾಗಿ ವಿಂಗಡಿಸಿ ಅರಬ್ ಪ್ರಸಂಚವನ್ನು ಕಟ್ಟಲು ೩೦೦ ಲಕ್ಷ ಡಾಲರಗಳನ್ನು ಖರ್ಚುಮಾಡಲು ಅಮೆರಿಕಾವು ಒಪ್ಪಿಗೆ ಕೊಡುವ ಬಗ್ಗೆ ವಿದೇಶಾಂಗ ಸಚಿವ ಮಿ॥ ಬೈರನ್ಸ್‌ರವರು ಪ್ರೆಸಿಡೆಂಟ ಟ್ರೂಮನ್ನರಿಗೆ ಶಿಫಾರಸು ಮಾಡಲು ಒಪ್ಪಿರುವರೆಂದು ವರದಿಯಾಗಿದೆ.

ಹೋರಾಟದ ದಿನಾಚರಣೆ

ಆಗಸ್ಟ್ ೧೬ ನೇ ತಾ॥ ಭಾರತಾದ್ಯಂತ 'ಹೋರಾಟದ ದಿನ ಚರಣೆ' ನಡೆಸಬೇಕೆಂದು ಮುಸ್ಲಿಂ ಲೀಗು ಸೂಚನೆ ಇತ್ತಿದೆ. ಅಂದು ಯಾವ ವ್ಯವಹಾರವನ್ನೂ ನಡೆಸದೆ ಪ್ರದರ್ಶನಗಳನ್ನೂ, ಬಹಿರಂಗ ಸಭೆಗಳನ್ನೂ ನಡೆಸಿ, ಹೋರಾಟದ ಬಗ್ಗೆ ಬೆಂಬಲ ಕೊಡುವ ನಿರ್ಣಯ ಮಾಡಬೇಕೆಂದು ಹೇಳಲಾಗಿದೆ.

ನೆಹರು-ವೈಸರಾಯ್ ಭೇಟಿ

ನಿನ್ನೆ ಪಂಡಿತ್ ಜವಹರಲಾಲ್ ನೆಹರುರವರು ವೈಸರಾಯರನ್ನು ಭೇಟಿ ಮಾಡಿದ್ದರು. ಮುಸ್ಲಿಂ ಲೀಗಿನವರು ಬ್ರಿ॥ ನಿಯೋಗದವರ ಸಲಹೆಯನ್ನು ತಿರಸ್ಕರಿಸಿ ಹೋರಾಟ ಮಾಡಬೇಕೆಂದು ನಿರ್ಧರಿಸಿರುವ ವಿಚಾರವನ್ನು ಚರ್ಚಿಸಲಾಯಿತೆಂದು ಗೊತ್ತಾಗಿದೆ.

ಗಾಂಧೀಜಿಯವರೊಡನೆ ದಕ್ಷಿಣ ರಾಜರುಗಳು

ದಕ್ಷಿಣ ಸಂಸ್ಥಾನದ ರಾಜರುಗಳೂ, ಪ್ರತಿನಿಧಿಗಳೂ ೨೮ ನೇ ತಾ॥ ಮಹಾತ್ಮ ಗಾಂಧಿಯವರನ್ನು ಪೂನಾದಲ್ಲಿ ಭೇಟಿಮಾಡಿ ದಕ್ಷಿಣ ಸಂಸ್ಥಾನಗಳ ಸಂಘಟನೆ ಬಗ್ಗೆ ಗಾಂಧೀಜಿಯವರ ಅಭಿಪ್ರಾಯ ತಿಳಿದು ಕೊಂಡರೆಂದು ಗೊತ್ತಾಗಿದೆ.

ತಾವೇ ಜುಲ್ಮಾನೆ ವಿಧಿಸಿಕೊಂಡ ನ್ಯಾಯಾಧೀಶರು

ಮಾರ್ಸಲ್ಸ್ ದ್ವೀಪದ ಮುನಿಸಿಪಲ್ ಜಡ್ಜರಾದ ಎ. ಎಲ್. ಹೂಸಿಯವರು ನಿಗದಿಯಾದ ವೇಗಕ್ಕಿಂತ ಹೆಚ್ಚಾಗಿ ತಮ್ಮ ಕಾರನ್ನು ರಸ್ತೆಯ ಬಾಜುವಿನಲ್ಲಿ ಸಿಲ್ಲಿಸಿಕೊಂಡಿದ್ದರೆಂದು ತಮಗೆ ತಾವೇ ೧ ಡಾಲರ್ ಜುಲ್ಮಾನೆ ವಿಧಿಸಿಕೊಂಡರು. ನ್ಯಾಯಾಸ್ಥಾನದಲ್ಲಿ ಜಡ್ಜರು "ಹೂಸಿ ಓವರ್ ಸ್ಪೀಡ್ ಪಾರ್ಕಿಂಗ್" ಎಂದು ಕೂಗಿದರು. ಸ್ವಲ್ಪ ಕಾಲ ನಿಲ್ಲಿಸಿ "ನಾನೇ ಅವನು" ಎಂದು ಹೇಳಿ ಜಡ್ಜರ ೧ ಡಾಲರ್ ಜುಲ್ಮಾನೆಯನ್ನು ತಮ್ಮ ಗುಮಾಸ್ತರಿಗೆ ಪಾವತಿಮಾಡಿದರು.

ಶ್ರೀ ನಂಜರಾಜ ಅರಸಿನವರ ಹೇಳಿಕೆ ಸರಿಯಲ್ಲ

ನಿನ್ನೆ ದಿನ ತಮ್ಮ ಪತ್ರಿಕೆಯಲ್ಲಿ ಶ್ರೀ ಎಂ.ಎಲ್. ನಂಜರಾಜ ಅರಸಿನವರು ಇತ್ತಿರುವ ಹೇಳಿಕೆಯಲ್ಲಿ ೨೩-೬-೪೬ರಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿ ಸದಸ್ಯರುಗಳನ್ನು ಕರೆಸಿಕೊಂಡು, ಬೆಂಗಳೂರಿನಲ್ಲಿ ೧೬ ನೇ ತಾ॥ ನಡೆದ ಮುಖಂಡರ ಸಭೆಯಲ್ಲಿ ಶ್ರೀ ಟಿ. ಸಿದ್ದಲಿಂಗಯ್ಯನವರನ್ನು ಒಮ್ಮತದಿಂದ ಅಧ್ಯಕ್ಷರಾಗಿ ಆರಿಸಬೇಕೆಂದು ಒಪ್ಪಲಾಗಿತ್ತೆಂಬ ಅಂಶವನ್ನು, ಅವರಿಗೆ ತಿಳಿಸಿದ್ದಾರೆಂದು ನಮೂದಾಗಿದೆ.

ನಾನು ಜಿಲ್ಲಾ ಕಾಂಗ್ರೆಸ್ ಸಮಿತಿಯ ಸ್ಥಾನಿಗಿ ಅವರ ಆಹ್ವಾನವನ್ನು ಮನ್ನಿಸಿ ಅಂದು ಕಾಂಗ್ರೆಸ್ ಕಛೇರಿಗೆ ತೆರಳಿದ್ದೆ. ನಾನು ಅಲ್ಲಿಗೆ ಹೋದಾಗ ಶ್ರೀಗಳಾದ ಬಿ. ದೊಡ್ಡಪ್ಪ, ಎನ್. ನಾಗರಾಜ್, ಸಿ. ಆರ್. ಲಕ್ಷ್ಮೀನಾರಾಯಣ್, ಮತ್ತು ಶಿವನಂಜೇಗೌಡರೂ ಶ್ರೀ ಅರಸಿನವರೂ ಅಲ್ಲಿ ಇದ್ದರು. ಆಗ ಅರಸಿನವರು ತಿಳಿಸಿದ್ದೇನೆಂದರೆ ಬೆಂಗಳೂರಿನಲ್ಲಿ ಬಹಳ ಕಾಲ ವಾದ, ಚರ್ಚೆ ನಡೆದ ನಂತರ ಶ್ರೀ ಚೆಂಗಲರಾಯ ರೆಡ್ಡಿ ಅಥವಾ ಶ್ರೀ ಟಿ. ಸಿದ್ದಲಿಂಗಯ್ಯನವರಲ್ಲಿ ಒಬ್ಬರನ್ನು ಒಮ್ಮತದಿಂದ ಆರಿಸಬೇಕೆಂದು ಎಲ್ಲರೂ ಒಪ್ಪಿ ನಿರ್ಧಾರಕ್ಕೆ ಬಂದಿದ್ದಾರೆ. ಇವರಿಬ್ಬರಲ್ಲಿ ಯಾರು? ಎಂಬ ಬಗ್ಗೆ ನಾಳೆ ನಾಡಿದ್ದರಲ್ಲಿ ಅಧಿಕೃತ ಪ್ರಕಟಣೆ ಹೊರಬೀಳಬಹುದು. ಅಲ್ಲದೆ ಹೊಸ ವೇಳಾ ಪಟ್ಟಿ ಸಹ ಹೊರಬೀಳಲಿದೆ" ಎಂದು ಇಷ್ಟು ಮಾತ್ರ ಹೇಳಿದರು. ನಾನು ಅಲ್ಲಿಂದ ತೆರಳಿದೆ. ಶ್ರೀ ಅರಸಿನವರ, ಅಂದು ಶ್ರೀ ಸಿದ್ದಲಿಂಗಯ್ಯನವರನ್ನು ಆರಿಸಲಾಗಿದೆ ಎಂದು ನನ್ನ ಕೂಡ ಹೇಳಲಿಲ್ಲವೆಂಬುದಕ್ಕೆ ಶ್ರೀ ಶಿವನಂಜೇಗೌಡರು ೨೬ ನೇ ತಾ॥ ಶ್ರೀ ಹಿರಿಯಣ್ಣಯ್ಯನವರ ಹೆಸರನ್ನು ಸೂಚಿಸಿರುವುದೂ, ಶ್ರೀ ಬಿ. ದೊಡ್ಡಪ್ಪನವರು ೯-೭-೪೬ ರಲ್ಲಿ ಶ್ರೀ ರೆಡ್ಡಿಯವರ ಹೆಸರನ್ನು ಸೂಚಿಸಿರುವುದೂ, ಸಾಕ್ಷಿಗಳು. ಶ್ರೀ ಹಿರಿಯಣ್ಣಯ್ಯನವರು ೨೬-೭-೪೬ ರಲ್ಲಿ ಕಾಂಗ್ರೆಸ್ ಕಾರ್ಯದರ್ಶಿಗಳಿಗೆ ಬರೆದ ಪತ್ರದಿಂದ ಯಾವ ನಿರ್ಧಾರವಾಗಿಲ್ಲವೆಂಬುದಕ್ಕೆ, ಅದಕ್ಕಿಂತ ಸಾಕ್ಷಿ ಬೇರೆ ಏನು ಬೇಕು? ಶ್ರೀ ಅರಸಿನವರು ನನ್ನ ಕೂಡ ಹೇಳಿದ್ದುದನ್ನು ಹೇಳಿದ್ದೇನೆ. ತಿಳಿಸಿರುವುದನ್ನು ವಿಷಾದಿಸುತ್ತೇನೆ.

ಪಟೇಲ್ ಕುಮಾರಸ್ವಾಮಿ

ಮೊದಲಿಯಾರರು ೭ನೇ ತಾ॥ ನಿಂದ ದಿವಾನರು

ಶ್ರೀ ಮಾಧವರಾಯರು ಅಧಿಕಾರದಿಂದ ನಿವೃತ್ತರಾಗುವರು

ಸ್ವಂ ಸು ಪ್ರೇ॥] ಬೆಂಗಳೂರು ೩೧ ಪ್ರಧಾನಶಿರೋಮಣಿ ಎನ್. ಮಾಧವರಾಯರು ಆಗಸ್ಟ್ ೭ರಿಂದ ಕೆಲಸದಿಂದ ನಿವೃತ್ತರಾಗಲು ಶ್ರೀಮನ್ಮಹಾರಾಜರು ಅನುಮತಿ ಇತ್ತಿದ್ದಾರೆ. ಅದೇ ದಿನ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರು ದಿವಾನರ ಅಧಿಕಾರವನ್ನು ವಹಿಸಿಕೊಳ್ಳುವರೆಂದು ಅಧಿಕೃತ ಪ್ರಕಟಣೆ ಹೊರಟಿದೆ.

ರೈಲ್ವೆನೌಕರರಿಗೆ ೧ ತಿಂಗಳ ಬೋನಸ್

ಮೈಸೂರು ರೈಲ್ವೆಯಲ್ಲಿ ನಾನ್‌ಗೆಜೆಟೆಡ್ ಹುದ್ದೆಯಲ್ಲಿರುವ ಎಲ್ಲರಿಗೂ ಒಂದು ತಿಂಗಳ ಸಂಬಳವನ್ನು ಹೆಚ್ಚಿಗೆ ಬೋನಸ್ ಕೊಡಲಾಗುವುದೆಂದು ಸರ್ಕಾರ ಆಜ್ಞೆ ಹೊರಟಿದೆ.

° ° ° °

ಶ್ರೀ ಎಚ್. ತಂಬೂಚೆಟ್ಟಿಯವರನ್ನು ಮೈಸೂರು ಸರ್ಕಾರದ ಜೀವನಿವಾರಣೆಯ ಕಾರ್ಯದರ್ಶಿಗಳನ್ನಾಗಿ ನೇಮಿಸಲಾಗಿದೆ.

° ° ° °

ಮಿ॥ ಸಾ॥ ಶ್ರೀ ಎ. ಡಿ. ಆನಂದರಾವ್‌ರನ್ನು ಕೋಲಾರದ ಎ. ಎಸ್. ಪಿ. ಗಳನ್ನಾಗಿ ನೇಮಕಲಾಗಿದೆ.

° ° ° °

ಕಾಂಗ್ರೆಸ್ ಅಧ್ಯಕ್ಷರ ಚುನಾವಣೆ ಬರುತ್ತಿರುವ ನಾಗುತ್ತಿದೆ. ೫೫ ಪ್ರತಿನಿಧಿಗಳ ಪೈಕಿ ೨೫ ಮಂದಿ ಮಧ್ಯಾಹ್ನದ ವೇಳೆಗೆ ಓಟು ಕೊಟ್ಟಿದ್ದರು.

ಸರ್ ಮಿರ್ಜಾರವರ ಪ್ರಶಂಸೆ

ಹೈದರಾಬಾದಿನ ಪ್ರಧಾನಿಗಳನ್ನಾಗಿ ಸರ್ ಮಿರ್ಜಾರವರನ್ನು ನೇಮಕ ಮಾಡಿರುವ ಬಗ್ಗೆ ನಿಜಾಮರು ಹೊರಡಿಸಿರುವ ರಾಜಪ್ರಕಟಣೆಯಲ್ಲಿ ಈ ರೀತಿ ತಿಳಿಸಿದ್ದಾರೆ "ಮಿರ್ಜಾರವರು ಮೈಸೂರು ಮತ್ತು ಜಯಪುರ ಸಂಸ್ಥಾನಗಳಲ್ಲಿ ಸಲ್ಲಿಸಿರುವ ಸೇವೆ ಅಮೋಘವಾದದ್ದು. ಅದಕ್ಕಿಂತಲೂ ಮಿಗಿಲಾದ ಪ್ರಶಂಸೆಗೆ ಅವರು ಹೈದರಾಬಾದಿನಲ್ಲಿ ಪಾತ್ರರಾಗುವರೆಂದು ಆಶಿಸಲಾಗಿದೆ. ಈ ಸಂಸ್ಥಾನದ ಸೇವೆಯು ಅವರ ಉದ್ದೇಶ. ಅವರ ಉದ್ದೇಶದ ಸಫಲತೆಯನ್ನು ಭವಿಷ್ಯವೇ ತೋರಿಸಬೇಕಾಗಿದೆ"

ಚಕ್ರವರ್ತಿ ದಂಪತಿಗಳ ಪ್ರತಿಮೆ ತೆಗೆಯಬೇಕು

ದೇವಕೋಟೆ ಆಸ್ಪತ್ರೆ ಬಳಿ ಇರುವ ಬ್ರಿ॥ ಚಕ್ರವರ್ತಿ ದಂಪತಿಗಳ ಪ್ರತಿಮೆಗಳನ್ನು ತೆಗೆದು ಹಾಕಬೇಕೆಂದು ಪುರಸಭೆಯ ಅಧ್ಯಕ್ಷರು ಒಂದು ನಿರ್ಣಯವನ್ನು ಪುರಸಭಾಧಿವೇಶನದಲ್ಲಿ ಸೂಚಿಸಿದ್ದಾರೆ.

ರಾಜ್ಯಾಂಗ ಸಭೆಗೆ ಕೊಚ್ಚಿ ಪ್ರತಿನಿಧಿಗಳು

ಕೊಚ್ಚಿ ಸಂಸ್ಥಾನಕ್ಕೆ ಭಾರತ ರಾಜ್ಯಾಂಗ ರಚನಾ ಸಭೆಯಲ್ಲಿ ದೊರೆಯಬಹುದಾದ ಸ್ಥಾನಗಳಿಗೆ ಪ್ರಜೆಗಳ ಪ್ರತಿನಿಧಿಗಳೇ ಸಂಸ್ಥಾನದ ಶಾಸನ ಸಭೆಯಿಂದ ಆರಿಸಲ್ಪಡುವರೆಂದೂ, ಶಾಸನ ಸಭೆಯ ಪ್ರತಿನಿಧಿಗಳು ಅಲ್ಲಿಗೆ ಕಳುಹಿಸಲ್ಪಡುವರೆಂದೂ, ಅಲ್ಲಿನ ಮಹಾರಾಜರು ಪ್ರಕಟಿಸಿದ್ದಾರೆ.

ನಿಧನ

ಬೇದಮಂಗಲ ನಿವಾಸಿಗಳಾದ ವೇ॥ ಬ್ರಂ॥ ಶ್ರೀ॥ ರಂಗನಾಥ್ ... ನೇಮರಾ ... ಯವರ ... [illegible]

ಸಾಧ್ವಿ

ತಾ|| ೩೧-೭-೪೬ ಬುಧವಾರ

ಲೀಗಿನವರ ರಣಭೇರಿ

ಮುಸ್ಲಿಂ ಲೀಗಿನವರು ಸಂಗ್ರಾಮದ ಹಾದಿಯನ್ನು ಹಿಡಿದಿದ್ದಾರೆ ಕತ್ತಿಯನ್ನು ಹಿಡಿದಾದರೂ ಹೋರಾಡಲು ಸಿದ್ಧರಿರುವು ದಾಗಿ ಸೂಚಿಸಿದ್ದಾರೆ. ಪೂರ್ವಭಾವಿಯಾಗಿ ತಮ್ಮ ಅಸಮಾಧಾನವನ್ನು ತೋರಿಸಲು ಬಿರುದು ಬಾವಲಿಗಳಿಗೆ ಬಹಿಷ್ಕಾರ ಹಾಕಿದ್ದಾರೆ. ಬ್ರಿಟಿಷ್ ನಿಯೋಗದವರ ಸಲಹೆಗಳಿಗೆ ಕೊಟ್ಟಿದ್ದ ಪುರಸ್ಕಾರವನ್ನು ರದ್ದುಗೊಳಿಸಿದ್ದಾರೆ. ಮುಂದೆ ಉಗ್ರ ಕಾರ್ಯಕ್ರಮವನ್ನು ಕೈಗೊಳ್ಳಲು ಒಂದು ಯೋಜನೆಯನ್ನೂ ಸಹ ನಿರ್ಧರಿಸಲಿದ್ದಾರೆ ಇದರಿಂದ ಹಿಂದೂಸ್ಥಾನದ ಸಾರ್ವಜನಿಕ ಜೀವನದಲ್ಲಿ ಸ್ವಲ್ಪಮಟ್ಟಿಗೆ ಕೋಲಾಹಲ ಉಂಟಾಗುತ್ತದರಲ್ಲಿ ಸಂದೇಹವಿಲ್ಲ.

ಹಂಗಾಮಿ ಸರ್ಕಾರವನ್ನು ಸ್ಥಾಪಿಸುವುದಾಗಿ ಭರವಸೆ ಇತ್ತು ಬ್ರಿಟಿಷ್ ಸರ್ಕಾರದವರು ಮಾತಿಗೆ ತಪ್ಪಿದರೆಂಬುದೇ ಇದಕ್ಕೆ ಕಾರಣ ಬ್ರಿಟಿಷ್ ನಿಯೋಗದವರು ಅಪ್ರಾಮಾಣಿಕರೆಂದೂ ಸಹ ಲೀಗಿನವರು ತಮ್ಮ ನಿರ್ಣಯದಲ್ಲಿ ಸಾರಿದ್ದಾರೆ. ಬ್ರಿಟಿಷ್ ಸರ್ಕಾರದವರು ಒಂದೂಕಡೆ ಒಲಿದೀಪಲೂ ಕಾಂಗ್ರೆಸ್ಸಿನವರುಸತ್ಯಾಗ್ರಹದ ಬೆದರಿಕೆಯಿಂದಲೂ ಇದುವರೆಗೆ ಮುಸಲ್ಮಾನರ ಅಭಿವೃದ್ಧಿಗೆ ಅಡಚಣೆಯನ್ನು ಉಂಟುಮಾಡುತ್ತಿದ್ದರೆಂದೂ, ಇನ್ನು ಮುಂದೆ ಲೀಗಿನವರು ಶಾಸನ ಬದ್ಧವಾದ ಮಾರ್ಗಗಳನ್ನು ಬಿಡಿಗೊಟ್ಟು ಪ್ರತ್ಯಕ್ಷ ಕಾರ್ಯಕ್ರಮವನ್ನು ಕೈಗೊಳ್ಳುವುದಾಗಿಯೂ ಹೇಳಿರುವರು. ಅಗತ್ಯಬಿದ್ದರೆ ಸಿಕ್ಖರಂತೆ ಹಿಡಿದಾದರೂ ತಮ್ಮಗರಿಯಾದ ಪಾಕೀಸ್ಥಾನವನ್ನು ಸಾಧಿಸಿಕೊಳ್ಳುವುದಾಗಿ ಸೂಚಿಸಿರುವರು

ಮುಸ್ಲಿಂ ಲೀಗು ರಾಜಕೀಯ ವ್ಯವಹಾರದಲ್ಲಿ ಇದುವರೆಗೆ ಅನೇಕ ಪವಾಡಗಳನ್ನು ತೋರಿಸಿರುತ್ತದೆ ಆದರೆ ಈ ಸಾರಿ ಎಲ್ಲ ಕ್ಕಿಂತಲೂ ಒಂದು ಹೆಜ್ಜೆ ಮುಂದೆ ಹೋಗಿದೆ. ಹಂಗಾಮಿ ಸರ್ಕಾರದ ರಚನೆಯಾಗಿ ತಮ್ಮ ಇಷ್ಟದಂತೆ ಆಡಳಿತವು ನಡೆಯಲು ಅವಕಾಶ ದೊರೆಯುವುದೆಂದು ನಂಬಿದ್ದ ಅವರ ಆಸೆಯು ಭಂಗವಾದುದರಿಂದ ಅವರು ಈ ರೀತಿ ನಿರ್ಣಯವನ್ನು ಮಾಡಿರುವುದರಲ್ಲಿ ಆಶ್ಚರ್ಯವಿಲ್ಲ. ಆದರೆ ಅವರ ಈದಿನ ನಿರ್ಧಾರವು ಒಣ ಕಣ್ಣು ಹುಟ್ಟೆ ಬೆದರಿಕೆಗಳಲ್ಲಿ ಪರ್ಯವಸಾನವಾಗುವುದೋ ಅಥವಾ ಏನಾದರೂ ಅಲ್ಲೋಲಕಲ್ಲೋಲವನ್ನುಂಟು ಮಾಡುವುದೋ ನೋಡಬೇಕು ಸ್ವಲ್ಪ ಮಟ್ಟಿನ ಗಲಭೆಗಳು ನಡೆದರೆ ಆಶ್ಚರ್ಯ ವೇನೂ ಇಲ್ಲ ಆದರೆ ಶಾಂತಿ ರಕ್ಷಣೆಗೆ ಜವಾಬ್ದಾರರಾದ ಅಧಿಕಾರಿಗಳು ಇದನ್ನು ಹತೋಟಿಯಲ್ಲಿಡುವುದು ಅವರ ಕರ್ತವ್ಯ ಬ್ರಿಟಿಷ್ ಆಳರಸರು ಸಂಧಾನದಲ್ಲಿ ಹೊಸ ಪರ್ವವನ್ನು ಉದಕ್ರಮಿಸಿದರೆಂದು ಹೇಳಲಾಗಿರುವ ಈ ಸಮಯದಲ್ಲಿ ಇಂತಹ ಘಟನೆಯು ಆಗುವುದು ವಿಷಾದಕರ

ಭಾರತದ ಆಹಾರ ಸ್ಥಿತಿ

ಭಾರತದ ಆಹಾರ ಪರಿಸ್ಥಿತಿ ಇನ್ನೂ ಕ... ವಾಗಿಲ್ಲವೆಂದು ... ಸಭೆಯಲ್ಲಿ ಇಂಡಿಯನ್ ಕಾನ್ಫರೆನ್ಸ್ ... ಸದಸ್ಯರು ತಿಳಿಸಿದ್ದಾರೆ

ಮೊದಲಿಯಾರರ ದಿವಾನ ಗಿರಿಗೆ ವಿದ್ಯಾರ್ಥಿಗಳ ವಿರೋಧ

ಮೈಸೂರು ೩೧

ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರು ಮೈಸೂರು ದಿವಾನರಾಗಿ ಬರುವುದನ್ನು ವಿರೋಧಿಸುವ ಸಲುವಾಗಿ ರಾಜಧಾನಿಯ ಶಾರದಾವಿಲಾಸ ಕಾಲೇಜ್, ಮೈಸೂರಿನ ವ್ಯಾತಃಕಾಲದ ತರಗತಿಗಳ ವಿದ್ಯಾರ್ಥಿಗಳೂ, ನ್ಯಾಷನಲ್ ಇಂಜನಿಯರಿಂಗ್ ಸ್ಕೂಲ್ ವಿದ್ಯಾರ್ಥಿಗಳೂ ಇಂದು ಬೆಳಗ್ಗೆ ಶಾಲೆಗಳಿಗೆ ಹಾಜರಾಗದೆ ಮುಷ್ಕರ ಹೂಡಿದ್ದರು ವಿದ್ಯಾರ್ಥಿಗಳೆಲ್ಲ ಶಾಲೆಯ ಮುಂಭಾಗದಲ್ಲಿರುವ ಮೈದಾನದಲ್ಲಿ ಸಭೆಸೇರಿ ಸರ್ ಆರ್ಕಾಟರು ದಿವಾನರಾಗಿ ಬರುವುದಕ್ಕೆ ತಮ್ಮ ವಿರೋಧ ಸೂಚಕವಾದ ನಿರ್ಣಯವನ್ನು ಅಂಗೀಕರಿಸಿದರು. ಶ್ರೀಗಳಾದ ಇ.ಡಿ ಮಥುರಾನಾಥ್, ಕೆ. ಶ್ರೀಕಂಠಯ್ಯ ಮತ್ತು ಎಂ ರಾಜಣ್ಣ ಮುಂತಾದವರು ಭಾಷಣಗಳನ್ನು ಮಾಡಿದರು. ಅಂಚೆ ನೌಕರರಿಗೂ ದಕ್ಷಿಣ ಆಫ್ರಿಕದ ಭಾರತೀಯರಿಗೂ ಸಹಾನುಭೂತಿ ಸೂಚಿಸುವ ನಿರ್ಣಯಗಳಾದವು,

ಸಂಗೀತ ವಿದ್ವಾಂಸರುಗಳಿಗೆ ಸನ್ಮಾನ

ನೂರಡಿ ರಸ್ತೆಯಲ್ಲಿರುವ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾ ಮಂದಿರದಲ್ಲಿ ಶ್ರೀ ಮನ್ಮಹಾರಾಜರಿಂದ ಸನ್ಮಾನಿಸಲ್ಪಟ್ಟ ಸಂಗೀತ ವಿದ್ವಾಂಸರುಗಳಾದ ವೈಣಿಕ ಪ್ರವೀಣ, ವೈಣಿಕ ಶಿಖಾಮಣಿ, ಸಂಗೀತ ವಿಶಾರದ ವಿ ವೆಂಕಟಗಿರಿಯಪ್ಪ, ಗಾಯಕ ಶಿಖಾಮಣಿ, ಸಂಗೀತ ರತ್ನಾಕರ ಚಿಂತಲಪಲ್ಲಿ ರಾಮಾನುಜಯ್ಯಂಗಾರ್, ಸಂಗೀತ ರತ್ನಾಕರ ದ್ವಾರಂ ವೆಂಕಟಸ್ವಾಮಿ ನಾಯ್ಡು ಗಾನ ವಿಶಾರದ ತಿಟ್ಟೆ ಕೃಷ್ಣಯ್ಯಂಗಾರ್, ಗಾನ ವಿಶಾರದ ಬಿ ದೇವೇಂದ್ರಪ್ಪ ಇವರುಗಳನ್ನು ಸತ್ಕರಿಸಲಾಯಿತು ಈ ಸಮಾರಂಭದ ಅಧ್ಯಕ್ಷತೆಯನ್ನು ಲಾಯರ್ ಬಹದ್ದೂರ್ ಎಂ ರಾಮಸ್ವಾಮಿಯವರು ವಹಿಸಿದ್ದರು. ವಿದ್ವಾಂಸರುಗಳು ಮೈಸೂರು ಬ್ರದರ್ಸ್‌ರ ವರ ಕಲಾಸೇವೆಯನ್ನು ಪ್ರಶಂಸಿಸಿದರು.

ಅಂಚೆ ಫೆಡರೇಷನ್ನಿನ ಮುಷ್ಕರ ಸೂಚನೆ

೩೦ ನೇ ತಾ|| ಸೊಳಗಾಗಿ ತಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ಅಂಚೆ ಫೆಡರೇಷನ್ನಿನವರು ಆಗಸ್ಟ್ ೩ ನೇ ತಾ|| ಮಧ್ಯ ರಾತ್ರಿಯಿಂದ ಮುಷ್ಕರ ಆರಂಭಿಸುವುದಾಗಿ ನೋಟೀಸು ಕೊಡಲಾಗಿತ್ತೆಂದು ಅಂಚೆ ಫೆಡರೇಷನ್ನಿನ ಹಂಗಾಮಿ ಅಧ್ಯಕ್ಷರಾದ ಬಿಹಾರಿ ಚೌಧುರಿಯವರು ಪ್ರಕಟಿಸಿದ್ದಾರೆ ನಿನ್ನೆ ಸಂಜೆ ಸರ್ಕಾರಿ ಪ್ರಕಟಣೆ ಹೊರಬೀಳಬಹುದೆಂದು ಹೇಳಲಾಗಿತ್ತು.

Edited printed and published by A. S. Nagarajan at the Sadhvi Press D Subbiah Road Mysore.

ಲೀಗ ನಿರ್ಧಾರದ ಬಗ್ಗೆ ಪ್ರತಿಕ್ರಿಯೆಗಳು

ಬ್ರಿ|| ನಿಯೋಗದವರ ಸಲಹೆಗಳನ್ನು ಮುಸ್ಲಿಂ ಲೀಗು ನಿರಾಕರಿಸುವಂತೆ ಜಿನ್ನಾ ಹೂಡಿರುವ ತಂತ್ರ ಮತ್ತು ಅವರು ಹೂಡಿರುವ ತಂತ್ರಗಳಲ್ಲೆಲ್ಲಾ ತೀರಾ ಅನರ್ಥಕಾರಿಯಾದದ್ದೆಂದು ಲಂಡನ್ನಿನ ಟೋರಿಪಂಗಡದವರು ಅಭಿಪ್ರಾಯ ಪಟ್ಟಿದ್ದಾರೆಂದು ಗೊತ್ತಾಗಿದೆ ಬ್ರಿ|| ಮಂತ್ರಿ ಮಂಡಲದವರೂ, ವೈಸರಾಯರೂ ಲೀಗಿನ ಈ ತೀರ್ಮಾನಗಳನ್ನು ನಿರ್ಧಾರವನ್ನು ಪರಿಶೀಲಿಸಲು ತೊಡಗಿದ್ದಾರೆ ಪಾರ್ಲಿಮೆಂಟಿನ ಲೇಬರ್ ಸದಸ್ಯರು ಲೀಗಿನ ಈ ನಿರ್ಧಾರದ ಬಗ್ಗೆ ವಿಷಾದ ಸೂಚಿಸಿದ್ದಾರೆ

ಕೊಚ್ಚಿಯಲ್ಲಿ ರಾಜ್ಯಾಂಗ ಸುಧಾರಣೆಗಳು

ಕೊಚ್ಚಿ ಸಂಸ್ಥಾನದಲ್ಲಿರುವ ಆಡಳಿತ ಪದ್ಧತಿಯನ್ನು ಪುನರ್ವಿಮರ್ಶಿಸಿ ಜವಾಬ್ದಾರಿ ಸರ್ಕಾರದ ಗುರಿಯನ್ನು ಮುಟ್ಟಲು ಮತ್ತಷ್ಟು ಹೊಸ ಸುಧಾರಣೆಗಳನ್ನು ಜಾರಿಗೆ ತರಲು ಅಲ್ಲಿನ ಶ್ರೀ ಮನ್ಮಹಾರಾಜರು ಆಲೋಚಿಸಿದ್ದಾರೆಂದು ಕೊಚ್ಚಿಯ ಶಾಸನ ಸಭೆಯಲ್ಲಿ ದಿವಾನರು ತಿಳಿಸಿದ್ದಾರೆ.

ಭಾರತದ ಭವಿಷ್ಯ ರಾಜ್ಯಾಂಗದಲ್ಲಿ ಕೇರಳೀಯರು ತಮ್ಮ ಪಾತ್ರವನ್ನು ನಿರ್ವಹಿಸಲು ಪ್ರತ್ಯೇಕ ಕೇರಳ ಪ್ರಾಂತ್ಯದ ರಚನೆಯು ಅವಶ್ಯಕವೆಂಬ ಅಭಿಪ್ರಾಯ ಸೂಚಿಸಿ ಮಹಾರಾಜರು ಕಳಿಸಿದ್ದ ಸಂದೇಶವನ್ನು ಸಭೆಯಲ್ಲಿ ದಿವಾನರು ಓದಿದರು

ವಿಶ್ವ ಶಾಂತಿ ಸಮ್ಮೇಳನ

ಮೊನ್ನೆ ದಿನ ಪ್ಯಾರಿಸ್ಸಿನಲ್ಲಿ ವಿಶ್ವಶಾಂತಿ ಸಮ್ಮೇಳನವು ಆರಂಭವಾಯಿತು ೨೧ ರಾಷ್ಟ್ರಗಳ ಪ್ರತಿನಿಧಿಗಳು ಭಾಗ ವಹಿಸಿದ್ದಾರೆ ಶಾಂತಿ ಸಮ್ಮೇಳನದ ಪ್ರಥಮಾಧ್ಯಕ್ಷರಾಗಿ ಫ್ರಾನ್ಸಿನ ಎಂ. ಬಿಡಾಲ್ಟರು ಚುನಾಯಿತರಾದರು ಬ್ರಿ|| ಪ್ರಧಾನಿ ಅಟ್ಲೀ, ರಷ್ಯದ ಮೊಲಟೋಫ್, ಅಮೆರಿಕದ ಮಿ|| ಬೈರ್ನ್ಸ್ ಮುಂತಾದ ಮಹಾ ಮುಖಂಡರು ಸಮ್ಮೇಳನದಲ್ಲಿ ಸೇರಿದ್ದಾರೆ

ಟಿ. ಸಿ. ನಟರಾಜ್
ಔಷಧಾಲಯ

ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ

ಝಂಡೂರವರ ಆಯುರ್ವೇದೀಯ ಔಷಧಗಳೆಲ್ಲವೂ ದೊರೆಯುತ್ತವೆ.

ಸರ್ ಮೊದಲಿಯಾರರಿಂದ ಅಧಿಕಾರ ಸ್ವೀಕಾರ

ಸ್ವಂ ಸು.] ಬೆಂಗಳೂರು ೩೦

ಸರ್ ಮೊದಲಿಯಾರರು ದಿವಾನರಾಗಿ ಬರುವುದು ಖಂಡಿತ ಅವರು ಆಗಸ್ಟ್ ೭ ನೇ ತಾ|| ಅಧಿಕಾರ ವಹಿಸಿಕೊಳ್ಳುವರೆಂದು ಅಧಿಕಾರಿ ವರ್ಗದಲ್ಲಿ ಹೇಳಲಾಗುತ್ತಿದೆ. ಪ್ರಧಾನ ಶಿರೋಮಣಿ ಶ್ರೀ ಮಾಧವರಾಯರು ಆಗಸ್ಟ್ ೧ ರಿಂದ ರಜಾ ಪಡೆದು ಕ್ರೆಸೆಂಟ್ ಭವನಕ್ಕೆ ತೆರಳಿ ಅಲ್ಲಿ ಸ್ವಲ್ಪ ಕಾಲ ಇದ್ದು ನಂತರ ಬಸವನಗುಡಿಯಲ್ಲಿರುವ ತಮ್ಮ ಭವನಕ್ಕೆ ತೆರಳುವರೆಂದು ಗೊತ್ತಾಗಿದೆ

ಡಿ. ಎಸ್. ಪಿ, ಗಳ ವರ್ಗಾವರ್ಗಿ

ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರಾದ ಶ್ರೀ ಕೆ ಎಸ್. ಕೃಷ್ಣಮೂರ್ತಿಯವರನ್ನು ಶಿವಮೊಗ್ಗ ಡಿ ಎಸ್ ಪಿ ಆಗಿಯೂ, ಕೋಲಾರದ ಡಿ ಎಸ್ ಪಿ ಗಳಾದ ಶ್ರೀ ಬಿ. ಎಸ್ ನಂಜುಂಡಯ್ಯನವರನ್ನು ಸೆಂ|| ಜೈಲ್ ಸೂ|| ಆಗಿಯೂ, ಶ್ರೀ ಜಾಂಡಿಯವರನ್ನು ಕೋಲಾರದ ಡಿ.ಎಸ್ ಪಿ ಗಳನ್ನಾಗಿಯೂ, ವರ್ಗ ಮಾಡಲು ಸಲಹೆ ಆಗಿದೆ ಸದ್ಯದಲ್ಲೇ ಸರ್ಕಾರದಾಜ್ಞೆಯಾಗುವುದು.

ಶ್ರೀ ಅಪ್ಪಾಜಿಗೌಡರ ಸಹಾಯಕ್ಕೆ ಇಬ್ಬರು ಜಿಲ್ಲಾಧಿಕಾರಿಗಳು

ದಕ್ಷತೆಯ ತನಿಖೆ ಡೈರೆಕ್ಟರಾದ ಶ್ರೀ ಅಪ್ಪಾಜಿಗೌಡರ ಸಹಾಯಕ್ಕೆ ಲಂಚ ನಿರೋಧ ಸಮಿತಿಯವರು ಶಿಫಾರ್ಸು ಮಾಡಿರುವಂತೆ ಇಬ್ಬರು ಜಿಲ್ಲಾಧಿಕಾರಿಗಳನ್ನು ನೇಮಕ ಮಾಡುವುದಾಗಿ ಗೊತ್ತಾಗಿದೆ ಈ ಸಂಬಂಧದಲ್ಲಿ ಮಂಡ್ಯ ಜಿಲ್ಲಾಧಿಕಾರಿಗಳಾದ ಶ್ರೀ ತಿಪ್ಪೆರುದ್ರಯ್ಯ ಮತ್ತು ಆಹಾರ ಇಲಾಖಾ ಡೈರೆಕ್ಟರಾದ ಶ್ರೀ ಎಲ್. ಪುಟ್ಟರಂಗಸ್ವಾಮಿ ಇವರುಗಳ ಹೆಸರನ್ನು ಹೇಳಲಾಗುತ್ತಿವೆ.

ಉದಾರ ಸಹಾಯ

ಸ್ವಂ ಸು] ಶ್ರೀರಂಗಪಟ್ಟಣ ೩೦

ಇಲ್ಲಿಯ ಮುನಿಸಿಪಲ್ ಹೈಸ್ಕೂಲಿಗೆ ಶ್ರೀ ಸುಬ್ರಹ್ಮಣ್ಯಂರವರು ಮತ್ತು ಅವರ ಸೋದರರಾದ ಶ್ರೀ ಸಿದ್ದಪ್ಪನವರು, ತಲಾ ೫೦೦ ರೂ. ಗಳ ಉದಾರ ಸಹಾಯವಿತ್ತಿದ್ದಾರೆ.

ಅಕ್ಕಿ ಪತ್ತೆ

ನಿನ್ನೆ ದಿನ ಶಿವಣ್ಣ ಎಂಬ ಹುಡುಗನು ಸೋಸಿಗೌಡನ ಬೀದಿಯಲ್ಲಿರುವ ಕೆಂಪಮ್ಮ ಎಂಬಾಕೆಯು ರೂಪಾಯಿಗೆ ಒಂದೂವರೆ ಸೇರಿನಂತೆ ಅಕ್ಕಿಯನ್ನು ಮಾರುತ್ತಿದ್ದನ್ನು ಲಿಂಗಯ್ಯ ಎಂಬ ಪೋಲೀಸ್ ನೌಕರನು ಪತ್ತೆ ಹಚ್ಚಿದ್ದಾನೆ. ಮುಂದಿನ ಕ್ರಮ ಸಾಗುತ್ತಿದೆ

ಪ್ಲೇಗ್ ಉಪದ್ರವ

ಸ್ವಂ.ಸು] ಚಿಕ್ಕಮಗಳೂರು ೩೦

ಈ ಊರಿನಲ್ಲಿ ಪುನಃ ಪ್ಲೇಗ್ ಉಪದ್ರವವು ತಲೆದೋರಿದೆ ದಿನವೂ ಎರಡು ಮರಣಗಳಾಗುತ್ತಿವೆ. ಪಟ್ಟಣಕ್ಕೆ ನಿಸಿವ ಮತ್ತು ಸಂಖ್ಯೆಯನ್ನು ನಿಗದಿಸಲಾಗಿದೆ ಅಂಚೆ ಮುಷ್ಕರ ಸಾಗುತ್ತಿದೆ.

ಸಾಧ್ವಿ

ಬೆಂಗಳೂರು ... ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ

ಕೂಡಲೇ ಚಂದಾದಾರರಾಗಿರಿ

(ತಿಂಗಳಿಗೆ ಚಂದಾ ಒಂದೂವರೆ ಮಾತ್ರ

ಜಾಹಿರಾತಿನ ದರಗಳಿಗೆ

ವಿಚಾರಿಸಿರಿ

ರಾಜ್ ಕಮಲ್ ಟಾಕೀಸ್, ಮೈಸೂರು

31-7-46 ನೇ ಬುಧವಾರದಿಂದ

ಮಧುರ ಗಾಯನದ ಸವಿ! ಸಂತೋಷದ ಸುರಿ ಮಳೆ!!

ಕನನ್ ಬಾಲ ಮುಖ್ಯಪಾತ್ರವಹಿಸಿರುವ

"ಬನ್‌ಫೂಲ್"

ಪ್ರತಿ ... ತರಗಳು

ವಿಜಯಾ ಪಿಕ್ಚರ್ಸ್, ಮೈಸೂರು.

ಫೋ. ನಂ. 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಗುರುವಾರ ೧—೮—೪೭ [ಸಂಚಿಕೆ ೯

ಮದ್ರಾಸ್ ಪ್ರಾಂತ್ಯದಲ್ಲಿ ಪೂರ್ಣ ಪಾನ ನಿರೋಧ

ಜಿಲ್ಲಾ ಕಾಂಗ್ರೆಸ್ ಸಮಿತಿ ಚುನಾವಣೆ

ಮೈಸೂರು ೧

ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಕಾರ್ಯವರ್ಗದ ಚುನಾವಣೆಯು ಸಯ್ಯಾಜಿರಾವ್ ರಸ್ತೆಯಲ್ಲಿರುವ ಕಾಂಗ್ರೆಸ್ ಕಛೇರಿಯಲ್ಲಿ ನಿನ್ನೆ ದಿನ ಶ್ರೀ॥ ಎಂ. ಶಂಕರಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ಶ್ರೀಗಳಾದ ಜರಾಜ ಅರಸಿನವರು ಅಧ್ಯಕ್ಷರಾಗಿಯೂ, ಸೂರ್ಯನಾರಾಯಣ ಪಂಡಿತರು ಉಪಾಧ್ಯಕ್ಷರಾಗಿಯೂ, ಹೆಚ್.ಕೆ. ಕುಮಾರಸ್ವಾಮಿಯವರು ಮತ್ತು ಶಿವನಂಜೇಗೌಡ ಕಾರ್ಯದರ್ಶಿಗಳಾಗಿಯೂ ಚುನಾಯಿಸಲ್ಪಟ್ಟರು

ಉಪನ್ಯಾಸ

ಫ್ರೆಂಚ್‌ರಾಕ್ಸ್‌ನಲ್ಲಿರುವ ಆಂಡಾಳ್ ಮಂದಿರದಲ್ಲಿ, ಸಾಹಿತ್ಯರತ್ನ ಮಹಾವಿದ್ವಾನ್ ಗ್ಗ ವೆಂಕಟಾಚಾರ್ಯರು "ಆಂಡಾಳ್ ಭಾವ" ಎಂಬ ವಿಷಯವಾಗಿ ನಿನ್ನೆ ದಿನ ಸ್ವಾರಸ್ಯವಾದ ಭಾಷಣ ಮಾಡಿದರು. ಈ ಸಂದರ್ಭದಲ್ಲಿ ಶ್ರೀಮತಿ ಕೆ. ಆರ್. ಲಕ್ಷ್ಮಿ ಮತ್ತು ಪಾರ್ಟಿಯವರಿಂದ ಸಂಗೀತ ನಡೆಯಿತು

ಉದಾರ ದಾನ

ಮೈಸೂರು ನಗರದ ರಾಮಕೃಷ್ಣಾಶ್ರಮದವರು ಕಟ್ಟಿಸುತ್ತಿರುವ ವಿದ್ಯಾರ್ಥಿನಿಲಯದ ಸಹಾಯಾರ್ಥವಾಗಿ ಶ್ರೀ ಧರ್ಮರತ್ನಾಕರ ನಂದೀಬಸಪ್ಪನವರು ಕಳೆದವಾರ ಬಂಟಿಕೊಪ್ಪಲಿನಲ್ಲಿ ೧೫೦೦೦ ರೂ ಬೆಲೆಬಾಳುವ ೫ ಎಕರೆ ಜಮೀನನ್ನು ಕೊಟ್ಟಿರುತ್ತಾರೆಂದು ತಿಳಿದುಬಂದಿದೆ.

ಉದಾರ ದಾನ

ಶ್ರೀಗಳಾದ ಮಹಮದ್ ಸಿದ್ದಿಕ್ ಸೇಟ್ ನೂರ್ ಅಹಮದ್ ಸೇಟ್, ಅದಂಹಾಜಿ ಅಮ್ಮರ್ ಸೇಟ್, ಹಾಜಿ ತಯಾಬ್ ಅಬ್ದುಲ್ ಕರೀಂಸೇಟ್, ಅಜೀಜ್ ಇಸ್ಮಾಯಿಲ್ ಸೇಟ್ ಮತ್ತು ಹಾಜಿ ಹಬೀಬ್ ಹಾಜರ್ ಮಹಮದ್ ಸೇಟ್‌ರವರುಗಳು ೧೦೦೦ ರೂಗಳನ್ನು ರಾಜಧಾನಿಯ ಆಯುರ್ವೇದ ಶಾಲೆಯು ಕಟ್ಟಡದ ನಿಧಿಗೆ ಧರ್ಮರತ್ನಾಕರ ಕೆ. ನಂದೀಬಸಪ್ಪನವರ ಮೂಲಕ ಉದಾರವಾಗಿ ದಾನವಿತ್ತಿದ್ದಾರೆ

ರೈಲ್ವೆ ಕೆಲಸಗಾರರ ಸಭೆ

ಮೈಸೂರು ಸ್ಟೇಟ್ ರೈಲ್ವೆ ಕೆಲಸಗಾರರ ಸಭೆಯೊಂದು ಕಳೆದ ೨೭ ನೇ ತಾ॥ ರೈಲ್ವೆ ನಿಲ್ದಾಣದ ಪಕ್ಕದ ಮೈದಾನದಲ್ಲಿ ಮಿ॥ ಎ. ಹೆಚ್. ಎಡನ್‌ರವರ ಅಧ್ಯಕ್ಷತೆಯಲ್ಲಿ ಸೇರಿ ಕೆಲಸಗಾರರಿಗೆ ಹೆಚ್ಚು ತುಟ್ಟಿ ಭತ್ಯವನ್ನು ೭-೪೬ ರಿಂದಲೇ ಕೊಡಬೇಕೆಂದೂ ಆಹಾರ ಪದಾರ್ಥಗಳನ್ನು ಕಡಿಮೆ ಬೆಲೆಗೆ ಒದಗಿಸಿಕೊಡಬೇಕೆಂದೂ, ಹಿಂದೆ ಯೋಗ್ಯಾನ ಮಾಡಿದ್ದಂತೆ ೩ ತಿಂಗಳ ಸಂಬಳವನ್ನು ಬೋನಸ್ಸಾಗಿ ಕೊಡಬೇಕೆಂದೂ ಅಧಿಕಾರಿಗಳನ್ನು ಪ್ರಾರ್ಥಿಸುವ ನಿರ್ಣಯಗಳನ್ನು ಮಾಡಲಾಯಿತು

ಮೊಹಲ್ಲಾ ಕಾಂಗ್ರೆಸ್ ಸಮಿತಿಗಳು

ಮಂಡಿ ಮೊಹಲ್ಲ ಕಾಂಗ್ರೆಸ್ ಸಮಿತಿ ರಚನೆಯಾಗಿ ಶ್ರೀಗಳಾದ ಟಿ. ಮರಿಯಪ್ಪನವರು ಅಧ್ಯಕ್ಷರಾಗಿಯೂ, ಬಿ. ಬಾಲಯ್ಯನವರು ಕಾರ್ಯದರ್ಶಿಗಳಾಗಿಯೂ ಜಿ. ಆರ್. ರಂಗಸ್ವಾಮಯ್ಯನವರು ಖಜಾಂಚಿಗಳಾಗಿಯೂ ಆರಿಸಲ್ಪಟ್ಟಿದ್ದಾರೆ

ಬಿಲ್ಡ ಮೊಹಲ್ಲ ಸಮಿತಿ ರಚನೆ ನಿನ್ನೆ ನಡೆದ. ಶ್ರೀಗಳಾದ ಎ. ಕೃಷ್ಣಮೂರ್ತಿರಾವ್‌ರು ಅಧ್ಯಕ್ಷರಾಗಿಯೂ, ಎ ಎಸ್. ಕೃಷ್ಣ...

ಕಾಂಗ್ರೆಸ್ ಅಧ್ಯಕ್ಷ ಚುನಾವಣೆ

ಮೈಸೂರು ಕ್ಷೇತ್ರ

ರಾಜಧಾನಿಯ ಕಾಂಗ್ರೆಸ್ ಕಛೇರಿಯಲ್ಲಿ ನಿನ್ನೆ ಅಧ್ಯಕ್ಷ ಚುನಾವಣೆಯು ಬಹಳ ಹುರುಪಿನಿಂದ ಸಾಗಿತು ಕಾಂಗ್ರೆಸ್ ಕಛೇರಿ ಬಳಿ ಶ್ರೀ ಸಿದ್ದಲಿಂಗಯ್ಯನವರಿಗೆ ಓಟು ಕೊಡಿ ಎಂಬ ಬೋರ್ಡುಗಳು ನೇತು ಹಾಕಲ್ಪಟ್ಟಿದ್ದುವು ಮೈಸೂರು ನಗರದ ೪೯ ಓಟುದಾರರ ಪೈಕಿ ೪೩ ಮಂದಿ ಮತ ಚಲಾಯಿಸಿದ್ದಾರೆ ಶ್ರೀ ಚಂಗಲರಾಯ ರೆಡ್ಡಿಯವರಿಗೆ ೩೦, ಶ್ರೀ ಸಿದ್ದಲಿಂಗಯ್ಯನವರಿಗೆ ೧೧ ಓಟುಗಳೂ, ಮೈಸೂರು ಜಿಲ್ಲೆಯಿಂದ ಶ್ರೀ ರೆಡ್ಡಿಯವರಿಗೆ ೧೨, ಶ್ರೀ ಸಿದ್ದಲಿಂಗಯ್ಯನವರಿಗೆ ೧೫ ಓಟುಗಳೂ ಬಂದಿವೆ.

ಬೆಂಗಳೂರ ನಗರದಿಂದ ಶ್ರೀ ರೆಡ್ಡಿ ೫, ಶ್ರೀ ಸಿದ್ದಲಿಂಗಯ್ಯ ೪೭.

ಬೆಂಗಳೂರು ಜಿಲ್ಲೆ-ಶ್ರೀ ರೆ... ೯, ಶ್ರೀ ಸಿದ್ದಲಿಂಗಯ್ಯ ೫೭.

ಕೋಲಾರ ಜಿಲ್ಲೆ-ಶ್ರೀ ರೆಡ್ಡಿ ೫೭, ಶ್ರೀ ಸಿದ್ದಲಿಂಗಯ್ಯ ೪.

ಮಂಡ್ಯ ಜಿಲ್ಲೆ-ಶ್ರೀ ರೆಡ್ಡಿ ೪೭, ಶ್ರೀ ಸಿದ್ದಲಿಂಗಯ್ಯ ೧೫

ಅಂಚೆ ಮುಷ್ಕರ

ಅಂಚೆ ನೌಕರರ ಮುಷ್ಕರ ಪ್ರಾರಂಭವಾಗಿ ಇಂದಿಗೆ ೧೭ ನೇ ದಿನ ಈ ದಿನ ಮುಷ್ಕರಗಾರರು ಕಾಂಗ್ರೆಸ್ ಕಾರ್ಯಾಲಯದಿಂದ ಮೆರವಣಿಗೆ ಹೊರಟು ಸಯ್ಯಾಜಿರಾವ್ ರಸ್ತೆ, ಮೋಚಿ ಬೀದಿ, ಚಿಂಕೆ ನವಾಬರ ಬೀದಿ, ಸಾಡೆ ರಸ್ತೆ ಈದಿಗ ಸುತ್ತಿಕೊಂಡು ಕಾಂಗ್ರೆಸ್ ಕಾರ್ಯಾಲಯಕ್ಕೆ ಬಂದರು. ಈದಿಗದಲ್ಲಿ ಶ್ರೀಯುತರುಗಳಾದ ವರದಯ್ಯ, ದಾಸಪ್ಪ ಮತ್ತು ಗುರುಸ್ವಾಮಿಯವರುಗಳು ಅವರನ್ನು ತಮ್ಮ ತಮ್ಮ ಮನೆಗಳಿಗೆ ಬರಮಾಡಿಕೊಂಡು ಉಪಹಾರದ ಮತ್ತು ಪುಷ್ಪ ತಾಂಬೂಲ ಕೊಟ್ಟು ಸತ್ಕರಿಸಿದರು. ಅಲ್ಲದೆ ಪರಿಹಾರ ನಿಧಿಗೆ ೧೦, ೫, ೫, ರೂ. ಗಳನ್ನು ಕ್ರಮವಾಗಿ ಕೊಟ್ಟರು. ಕಂಟ್ರ್ಯಾಕ್ಟರ್ ನಾರಾಯಣಸ್ವಾಮಿಯವರು ೫, ಕೊಟ್ಟರು.

ಅಂಚೆ ನೌಕರರಿಗೆ ಬಳಿಗಳ ಬಹುಮಾನ

ಅಂಚೆ ಮುಷ್ಕರಕ್ಕೆ ಸೇರದೆ ಇರುವ ಬೆಂಗಳೂರಿನ ಪಪ್ಪತ್ತರಷ್ಟು ಜನ ಅಂಚೆ ...

ಸೂಚನೆ

"ಗರುಡ ಪಂಚಮಿ" ಪ್ರಯುಕ್ತ ನಾಳಿನ "ಸಾಧ್ವೀ" ಪತ್ರಿಕೆಗೆ ರಜಾ ಕೊಡಲಾಗಿದೆ.

ವ್ಯವಸ್ಥಾಪಕ.

ಮದ್ರಾಸಿನಲ್ಲಿ ಅಕ್ಕಿ ರೇಷನ್ ಖೋತಾ

ಸದ್ಯದಲ್ಲಿರುವ ಅಕ್ಕಿದಾಸ್ತಾನನ್ನು ಸಂಗ್ರಹಿಸಿ ಹೊಸ ಬೆಳೆ ಬರ ವರೆಗೂ ಇರುವ ದಾಸ್ತಾನನ್ನೇ ಉಪಯೋಗಿಸುವ ಸಲುವಾಗಿ ಮದ್ರಾಸಿನಲ್ಲಿ ಈಗ ಕೊಡುತ್ತಿರುವ ೧೦ ಔನ್ಸ್ ಅಕ್ಕಿಯ ಪ್ರಮಾಣವನ್ನು ೮ ಔನ್ಸ್‌ಗೆ ಇಳಿಸಲಾಗುವುದೆಂದು ಮದ್ರಾಸಿನ ಮುಖ್ಯ ಮಂತ್ರಿಗಳು ತಿಳಿಸಿರುವರು

ಬಿಕನೀರಿನಲ್ಲಿ ಖುಲಾಸೆ

ಬಿಕನೀರ್ ಸಂಸ್ಥಾನದ ಮಹಾರಾಜರು ತಮ್ಮ ದೇಶದಲ್ಲಿದ್ದ ಎಲ್ಲಾ ಜನ ರಾಜಕೀಯ ಬಂದಿಗಳನ್ನು ಬಿಡುಗಡೆಮಾಡಲು ಆಜ್ಞೆ ಇತ್ತಿದ್ದಾರೆ ಮತ್ತು ತಾವು ಭರವಸೆ ಇತ್ತಿದ್ದಂತೆ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಲು ಈ ತಿಂಗಳು ೩೧ ನೇ ತಾರೀಕ ಒಂದು ಘೋಷಣೆ ಹೊರಡಿಸಲಿದ್ದಾರೆ

ರಾಜಾ ಮಹೇಂದ್ರ ಪ್ರತಾಪರ ಗಡೀಪಾರು ರದ್ದು

ಮೊದಲನೇ ಮಹಾ ಯುದ್ಧ ಸಮಯದಲ್ಲಿ ಭಾರತದಿಂದ ತಪ್ಪಿಸಿಕೊಂಡು ಆಫ್ಘಾನಿಸ್ಥಾನದ ಮೂಲಕ ಜರ್ಮನಿಗೆ ಹೋಗಿ ಅಲ್ಲಿನ ಚಕ್ರವರ್ತಿ ಕೈಸರರ ಮೂಲಕ ಹಿಂದೂಸ್ಥಾನದ ಮೇಲೆ ದಂಡಯಾತ್ರೆ ನಡೆಸುವ ದೊಡ್ಡ ಯೋಜನೆಯನ್ನು ಹೊಂದಿ ವಿಫಲರಾಗಿ ಅನಂತರ ಜಪಾನಿನಲ್ಲಿ ನೆಲಸಿ ಸ್ವತಂತ್ರ ಹಿಂದೂಸ್ಥಾನ ಸಂಘವನ್ನು ಸ್ಥಾಪಿಸಿ ಎರಡನೇ ಮಹಾ ಯುದ್ಧದ ನಂತರ ಜಪಾನ್ ಸರ್ಕಾರದವರ ಆಜ್ಞೆಯಂತೆ ಬಂಧನಕ್ಕೊಳಗಾಗಿ ಈಗ ಬಿಡುಗಡೆ ಹೊಂದಿರುವ ರಾಜಾ ಮಹೇಂದ್ರ ಪ್ರತಾಪರು ಹಿಂದೆ ಗಳು ಇದ್ದ ಗಡೀಪಾರು ಆಜ್ಞೆಯನ್ನು ಈಗ ಇಂಡಿಯಾ ಸರ್ಕಾರದವರು ರದ್ದು ಮಾಡಿರುವರೆಂದು ವರದಿಯಾಗಿದೆ.

ಶ್ರೀ ಚೆನ್ನಯ್ಯನವರ ಹೇಳಿಕೆ

ಕಾಂಗ್ರೆಸ್ ಅಧ್ಯಕ್ಷ ಚುನಾವಣಾ ಸಂಬಂಧವಾಗಿ ...

೩ ವರ್ಷದೊಳಗೆ ಮದ್ರಾಸಿನಲ್ಲಿ ಸಂಪೂರ್ಣ ಪಾನ ನಿರೋಧ

ಸೇಲಂ, ಕಡಪ, ಚಿತ್ತೂರು ಉತ್ತರ ಆರ್ಕಾಟು ಜಿಲ್ಲೆಗಳಲ್ಲಿ ಪಾನ ನಿರೋಧವನ್ನು ಕೂಡಲೇ ಜಾರಿ ಮಾಡಲಾಗುವುದ, ಇನ್ನು ಮೂರು ವರ್ಷಗಳಲ್ಲಿ ಇಡೀ ಪ್ರಾಂತದಲ್ಲೆಲ್ಲಾ ಮದ್ಯ ಪಾನವನ್ನು ಪೂರ್ಣವಾಗಿ ತಪ್ಪಿಸಲಾಗುವುದೆಂಬದಾಗಿ ಮದರಾಸಿನ ಪ್ರಧಾನಿಗಳಾದ ಶ್ರೀ ಟಿ. ಪ್ರಕಾಶಂರವರು ತಿಳಿಸಿರುವರು. ಕೆಳ ದರ್ಜೆಯ ನೌಕರರ ಸಂಬಳ ಹೆಚ್ಚುವುದು, ಗ್ರಾಮಾಭಿವೃದ್ಧಿಗೆ ಹೆಚ್ಚು ಹಣವನ್ನು ಒದಗಿಸಲಾಗುವುದು; ಇದರಿಂದ ಆಗುವ ನಷ್ಟದ ಪೈಕಿ ಸ್ವಲ್ಪ ಭಾಗವನ್ನು ವ್ಯಾಪಾರದ ತೆರಿಗೆಯಿಂದಲೂ, ಉಳಿದುದನ್ನು ಜಮೀನು ಕಂದಾಯದ ಭರ್ತಿ ಮಾಡಲಾಗುವುದೆಂದು ಅವರು ಹೇಳಿರುವರು.

ಕೃಷ್ಣಾ ನದಿಯ ಪ್ರವಾಹ

ಕೃಷ್ಣಾ ನದಿಯಲ್ಲಿ ಅಸಾಧ್ಯ ಪ್ರವಾಹ ಬಂದಿದೆಯೆಂದೂ, ಸೀಪು ಗಡ್ ನಗರವೂ ಕರ್ಮ್ಯಾ ಸಹ ಮುಳುಗಿದೆಯೆಂದು ಸುದ್ದಿ ಬಂದಿದೆ. ಆ ಊರಿನಲ್ಲಿ ಜನರನ್ನೆಲ್ಲಾ ಮುಳ್ಟ

ಸೈಕಲ್ ಕಳವು

ಮೊನ್ನೆಯ ದಿನ ಗ್ರಾಜುಯೇಟ್ಸ್ ಸೊಸೈಟಿ ಬಳಿ ಇಟ್ಟಿದ್ದ ಸೊಸೈಟಿಯ ಮ್ಯಾನೇಜರವರ ಬೈಸಿಕಲ್ಲನ್ನು ಯಾರೋ ಅಪಹರಿಸಿದ್ದಾರೆ ಪತೆ ಮಾಡಿಕೊಟ್ಟವರಿಗೆ ಉಚಿತ ಬಹುಮಾನ ಕೊಡಲಾಗುವುದೆಂದು ತಿಳಿಸಿರುತ್ತಾರೆ.

ರಾಜ್ಯಾಂಗ ಸಭೆಗೆ ಮೈಸೂರಿನವರು

ಸ್ವಂ ಸು ಫೋ] ಬೆಂಗಳೂರು ೧

ಮೈಸೂರು ಸಂಸ್ಥಾನದಿಂದ ಭಾರತ ರಾಜ್ಯಾಂಗ ರಚನಾ ಸಭೆಗೆ ಏಳು ಜನ ಪ್ರತಿನಿಧಿಗಳನ್ನು ಕಳುಹಿಸಲಾಗುವುದೆಂದೂ ಅವರ ಪೈಕಿ ನಾಲ್ಕು ಪ್ರತಿನಿಧಿಗಳು ಅಧಿಕಾರೀ ವರ್ಗದಿಂದಲೂ ಮೂರು ಪ್ರತಿನಿಧಿಗಳನ್ನು ಜಾನಗೀಯವರಿಂದಲೂ ಆರಿಸಲಾಗುವುದೆಂದೂ ಹೇಳಲಾಗಿದೆ ಜಾನಗೀಯವರನ್ನು ಆರಿಸುವ ವಿಧಾನವನ್ನು ಸರ್ ಎ ರಾಮಸ್ವಾಮಿ ಮೊದಲಿಯಾರ್‌ರವರು ದಿವಾನರಾಗಿ ಅಧಿಕಾರ ವಹಿಸಿಕೊಂಡ ನಂತರ ಪ್ರಕಟಿಸಲಾಗುವುದೆಂದು ಹೇಳಲಾಗಿದೆ

ರಂಭಾಪುರಿ ಸ್ವಾಮಿಗಳ ನಿಧನ

ಸ್ವಂ. ಸು ಫೋ] ಬೆಂಗಳೂರು ೧

ಬಾಳೆ ಹೊನ್ನೂರಿನ ರಂಭಾಪುರಿ ಸ್ವಾಮಿಗಳು ತಮ್ಮ ೫೭ ನೇ ವಯಸ್ಸಿನಲ್ಲಿ ನಿನ್ನೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ ಅವರು ಬಹಳ ದಿನಗಳಿಂದಲೂ ಖಾಯಿಲೆಯಿಂದಿದ್ದರು. ದಿವಂಗತರ ಕಳೇಬರವನ್ನು ಬಾಳೆಹೊನ್ನೂರಿಗೆ ಕಳುಹಿಸಲಾಯಿತು ನಾಳೆ ಅಲ್ಲಿ ಅಂತ್ಯಕ್ರಿಯೆಗಳು ಜರುಗುವುವು.

° ° • °

ಮಹಿಳೆಯರಿಗೆ ಮುನಿಸಿಪಲ್ ಸ್ಥಾನಗಳನ್ನು ಮಂಜೂರು ಮಾಡಲಾಗಿದೆ.

° ° ° °

ಮೇಯರ್‌ಗೆ ಪ್ರಜಾಸಭೆಗೆ ಜಾನಗೀ ಅಧ್ಯಕ್ಷರನ್ನು ... ಅಧಿಕಾರ ಕೊಡಲಾ...

ಶ್ರೀ ಪುಟ್ಟರೆಡ್ಡಿ ಮರಣ

... ಶ್ರೀ ಪುಟ್ಟರೆಡ್ಡಿ ...

ಸಾಧ್ವಿ

೩೦॥ ೮ ೪-೪೬ ಗುರುವಾರ

ಪ್ರಜಾಭಿಪ್ರಾಯಕ್ಕೆ ಬೆಲೆಯಿಲ್ಲ

ಕಡೆಗೂ ಸರ್ ರಾಮಸ್ವಾಮಿ ಮೊದಲಿಯಾರರು ಮೈಸೂರು ಸಂಸ್ಥಾನದ ದಿವಾನರಾಗಿಯೇ ನೇಮಿಸಲ್ಪಟ್ಟರು. ಪ್ರಧಾನ ಶಿರೋಮಣಿ ಮಾಧವರಾಯರು ನಿವೃತ್ತರಾದರು. ಅಧಿಕಾರಿ ಪ್ರಕಟನೆಯೂ ಹೊರಬಿತ್ತು. ಹಳೆಯ ದಿವಾನರು ಹೋಗಿ ಹೊಸಬರು ಬರಲು ಇನ್ನು ಒಂದುವಾರ ಮಾತ್ರ ಉಳಿದಿದೆ. ಪ್ರಧಾನ ಶಿರೋಮಣಿಗಳೇ ತಮ್ಮ ಕೆಲಸದಿಂದ ನಿವೃತ್ತರಾಗಲು ಬಯಸಿದುದರಿಂದ ಅವರಿಗೆ ವಿಶ್ರಾಂತಿ ಹೊಂದಲು ಅನುಮತಿ ಕೊಡಲಾಯಿತೆಂದು ಪ್ರಕಟಿಸಲಾಗಿದೆ. ಅವರು ಇಂದಿನ ಪರಿಸ್ಥಿತಿಯಲ್ಲಿ ನಿವೃತ್ತರಾಗಲು ಬಯಸಿದುವರಲ್ಲಿ ಆಶ್ಚರ್ಯವೇನೂ ಇಲ್ಲ. ಸಿವಿಲ್ ಸರ್ವಿಸ್ಸಿನ ಮೊದಲನೇ ಪಂತವನ್ನು ಹತ್ತಿ ಆಡಳಿತ ಯಂತ್ರದ ಅಷ್ಟೂ ಮೆಟ್ಟಿಲನ್ನು ಮುಟ್ಟಿ ನಿರ್ವಂಚನೆಯಿಂದ ಸಂಸ್ಥಾನದ ಸೇವೆಯನ್ನು ಗೈದು ಪ್ರಧಾನ ಶಿರೋಮಣಿಗಳು ವಿರಾಮವನ್ನು ಹೊಂದಲಿರುವರು.

ಆದರೆ ಮುಂದೆ ಬರಲಿರುವವರ ವಿಚಾರ ಮಾತ್ರ ಕುತೂಹಲಕ್ಕೆ ಕಾರಣವಾದ ಪ್ರಸಂಗವಾಗಿದೆ. ಸಂಸ್ಥಾನದ ದಿವಾನರಾಗಿ ಬರುವ ಹೊರಗಿನ ವ್ಯಕ್ತಿಯ ವಿಚಾರದಲ್ಲಿಯೂ ಮೌನವಾಗಿಯೇ ಇದ್ದು ಒಂದು ಪ್ರತಿಭಟನೆಯೂ ಪ್ರದರ್ಶಿತವಾಗಿರಲಿಲ್ಲ. ಈಗ ಸಭೆಗಳೂ, ನಿರ್ಣಯಗಳೂ, ಖಂಡನೆಗಳೂ ಪ್ರತಿಭಟನೆಗಳೂ, ಮುಷ್ಕರಗಳೂ ನಡೆಯುತ್ತಿವೆ. ಇನ್ನೂ ನಡೆಯುತ್ತಲೇ ಇವೆ. ಇಷ್ಟಾದರೂ ಅವರ ನೇಮಕದ ಆಜ್ಞೆಯು ಹೊರಬೀಳದೆ ಬಿಟ್ಟಿದೆ. ಆದುದರಿಂದ ಅವರನ್ನು ನೇಮಕ ಮಾಡುವ ವಿಚಾರವಾಗಿ ಖಂಡನಾ ಪ್ರದರ್ಶನಗಳು ಇನ್ನು ಮುಂದೆ ನಿಲ್ಲುವುವು. ಆದರೆ ಅವರನ್ನು ನೇಮಿಸಿದುದಕ್ಕಾಗಿ ಅಸಮಾಧಾನವನ್ನು ಸೂಚಿಸುವ ಪ್ರಕರಣಗಳು ಮಾತ್ರ ಇನ್ನೂ ಕಾದಿರುತ್ತವೆ. ಇದರಿಂದ ಬರುವ ನವರಾತ್ರಿಯಲ್ಲಿ ನಡೆಯುವ ಪ್ರಜಾ ಪ್ರತಿನಿಧಿ ಸಭೆಯ ಅಧಿವೇಶನದವರೆಗೆ ಈ ಖಂಡನಾ ಪ್ರದರ್ಶನಗಳು ನಡೆಯುತ್ತಲೇ ಇರುತ್ತವೆ.

ಆದರೆ ಈ ಖಂಡನೆಗಳ ಬೆಲೆ ಏನೆಂಬುದೇ ಈಗ ಪ್ರಜೆಗಳ ಮುಂದಿರುವ ಪ್ರಶ್ನೆ. ಒಬ್ಬ ವ್ಯಕ್ತಿಯನ್ನು ಒಂದು ಸ್ಥಾನಕ್ಕೆ ತರುವ ವಿಚಾರವು ಅಷ್ಟು ಮಹತ್ವದ್ದಲ್ಲ. ಆದರೆ ನಮ್ಮ ಸಂಸ್ಥಾನದಲ್ಲಿ ಮಹಾ ಜನರ ಅಭಿಪ್ರಾಯಕ್ಕೆ ಇರುವ ಪುರಸ್ಕಾರ ಅಥವಾ ತಿರಸ್ಕಾರಗಳೇ ಸಾರ್ವಜನಿಕ ಸಂಸ್ಥೆಗಳ ಒರೆಗಲ್ಲುಗಳು. ಈ ದೃಷ್ಟಿಯಿಂದ ನೋಡಿದರೆ ಈ ಸಂದರ್ಭದಲ್ಲಿ ಮಹಾಜನರ ಅಭಿಪ್ರಾಯಕ್ಕೆ ಎಳ್ಳಷ್ಟು ಮನ್ನಣೆ ದೊರೆತಿರುವುದಿಲ್ಲ.

೪೦ ಸಾವಿರ ಪೋಸ್ಟಲ್ ಗುಮಾಸ್ತರ ಮುಷ್ಕರ?

ಭಾರತದಾದ್ಯಂತ ಕೆಲಸಮಾಡುತ್ತಿರುವ ೪೦ ಸಹಸ್ರ ಪೋಸ್ಟಲ್ ಅಕೌಂಟ್ಸ್ ಗುಮಾಸ್ತರುಗಳು ಆಗಸ್ಟ್ ೧೫ ನೇ ತಾ॥ ನೊಳಗೆ ತಮ್ಮ ಬೇಡಿಕೆಗಳನ್ನು ಸಲ್ಲಿಸದಿದ್ದರೆ ಮುಷ್ಕರ ಹೂಡುವುದಾಗಿ ನೋಟೀಸು ಇತ್ತಿದ್ದಾರೆ. ಮಧ್ಯದಲ್ಲೇ ಈ ಷೈಕಿ ೩೫ ಸಾವಿರ ಮಂದಿಯನ್ನು ನಿವೃತ್ತಿ ಮಾಡಿಸಬೇಕೆಂದಿರುವುದನ್ನು ರದ್ದು ಮಾಡಬೇಕೆಂಬುದೇ ಅವರ ಮುಖ್ಯ ಬೇಡಿಕೆ.

ನೆಹರೂರವರಿಗೆ ಬಿಕನೀರ್ ರಾಜರ ಆಹ್ವಾನ

ಬಿಕನೀರ್ ಸಂಸ್ಥಾನದ ಶ್ರೀಮನ್ಮಹಾರಾಜರು ಪಂ॥ ಜವಹರಲಾಲರನ್ನು ತಮ್ಮ ಸಂಸ್ಥಾನಕ್ಕೆ ಬರಬೇಕೆಂದು ಆಹ್ವಾನಿಸಿದ್ದಾರೆ. ಸಂಸ್ಥಾನದಲ್ಲಿ ಪ್ರಜಾಮಂಡಲವನ್ನು ಸ್ಥಾಪಿಸಲು ರಾಜಪುತ್ರ ಸ್ಥಾನ ಪ್ರಾದೇಶಿಕ ಸಮಿತಿಯ ಕಾರ್ಯದರ್ಶಿಗಳಿಗೆ ರಾಜರೇ ಪತ್ರ ಬರೆದಿದ್ದಾರೆ.

ಸಮುದ್ರದಲ್ಲಿ ಎಣ್ಣೆ ಶೋಧನೆ

ಅಮೇರಿಕಾದ ಸ್ಟ್ಯಾಂಡರ್ಡ್ ಆಯಿಲ್ ಕಂಪನಿಯ ಇಂಜನಿಯರುಗಳು ಫ್ಲಾರಿಡಾ ಮತ್ತು ಬಹಮಾ ದ್ವೀಪಗಳ ಮಧ್ಯ ಭಾಗದ ಅಟ್ಲಾಂಟಿಕ್ ಸಾಗರದಲ್ಲಿ 'ಡೈವಿಂಗ್ ಛೇಂಬರು' ಗಳನ್ನು ಬಿಟ್ಟು ನೀರಿನೊಳಗೆ ಎಣ್ಣೆ ಕಣಗಳನ್ನು ಪತ್ತೆ ಹಚ್ಚಲು ಪ್ರಯತ್ನಿಸುತ್ತಿರುವುದಾಗಿ ವರದಿಯಾಗಿದೆ

ಶಾಲಾ ಬಾಲಕ ಬಾಲಿಕೆಯರು ಮೊದಲುಗೊಂಡು ಕಾಂಗ್ರೆಸ್ ಸಂಸ್ಥೆಯವರಿಗೆ ಸಕಲ ನಾಯಕರುಗಳೂ, ಸಂಘಗಳೂ ಮೊದಲಿಯಾರರ ನೇಮಕವನ್ನು ಖಂಡಿಸಿವೆ. ಕೆಲವರು ತತ್ವದ ದೃಷ್ಟಿಯಿಂದಲೂ, ಕೆಲವರು ಪ್ರಾಂತೀಯ ಕಾರಣಗಳಿಂದಲೂ, ಇನ್ನು ಕೆಲವರು ಕೋಮುವಾರು ದೃಷ್ಟಿಯಿಂದಲೂ ಮತ್ತೆ ಕೆಲವರು ಮೊದಲಿಯಾರರ ಪೂರ್ವೋತ್ತರ ಇತಿಹಾಸದ ಪರಿಜ್ಞಾನದಿಂದಲೂ ವಿರೋಧಿಸಿರುವರು. ಆದರೂ ಅವರನ್ನು ದಿವಾನರಾಗಿ ತರಲಾಗಿದೆ.

ಸರ್ ಮೊದಲಿಯಾರರು ಮೈಸೂರಿನ ಪ್ರಜೆಗಳಿಗೆ ಬೇಡವಾಗಿದ್ದಾರೆ; ಸಾರ್ವಜನಿಕ ಸಂಸ್ಥೆಗಳಿಗೆ ಬೇಡವಾಗಿದ್ದಾರೆ. ಇಂಡಿಯಾ ಸರ್ಕಾರದವರು ಅವರನ್ನು ಇಲ್ಲಿಗೆ ಒತ್ತಾಯದಿಂದ ಕಳುಹಿಸುತ್ತಿರುವರೆಂಬ ವಾರ್ತೆಯೂ ಇದೆ. ಆದರೆ ಇದಕ್ಕೆ ಆಧಾರವು ದೊರೆತಿಲ್ಲ. ಆದುದರಿಂದ ಅವರ ನೇಮಕವು ಯಾವ ದೇವರಿಗೆ ಪ್ರೀತಿಯಾಗುತ್ತದೋ ಗೊತ್ತಿಲ್ಲ. ಇಷ್ಟೊಂದು ಪ್ರತಿಭಟನೆ ಇರುವ ಈ ಸ್ಥಾನಕ್ಕೆ ಅವರು ಬಂದು ಯಾವ ಪುರುಷಾರ್ಥವನ್ನು ಸಾಧಿಸಿ ಕೊಡುವರೋ ಭವಿಷ್ಯವೇ ನುಡಿಯಬೇಕಾಗಿದೆ.

ಬಟ್ಟೆ ಹಂಚಿಕೆ

ಸ್ವಂ ವ] ಚನ್ನರಾಯಪಟ್ಟಣ ೩೦

ಬಟ್ಟೆಯನ್ನು ಪಡೆಯಲು ಅಮಲ್ದಾರರಿಂದ ಚೀಟಿ ತರಬೇಕು. ಅವರಿಗೆ ಆಹಾರದ ಇಲಾಖೆಯ ಕೆಲಸವೇ ಅಸಾಧ್ಯವಾಗಿದೆ. ಸುಲಭವಾಗಿ ಜನರು ಅವರಿಂದ ಚೀಟಿ ತರಲು ಸಾಧ್ಯವಾಗುತ್ತಿಲ್ಲ. ಅನೇಕ ದಿನಗಳು ಅಮಲ್ದಾರರು ತಾಲ್ಲೂಕಾಮುಖ ಸಂಚರಿಸುತ್ತಿರುತ್ತಾರೆ. ಆದ್ದರಿಂದ ಬೊಗಳೂರು ಮುಂತಾದೆಡೆ ಇರುವಂತೆ "ರೇಷನ್ ಕಾರ್ಡು" ಗಳ ಮೇಲೆ ಬಟ್ಟೆ ಹಂಚಿಕೆ ಆಗುವಂತೆ ವ್ಯವಸ್ಥೆ ಮಾಡಬೇಕಾಗಿದೆ

ವಿಶ್ವದ ಹೋಟೆಲಲ್ಲಿ ಪತೋಟಿ ಇಡಲು ಅಮೆರಿಕದ ಪ್ರಯತ್ನ

ಜಮೀಂದಾರ ವಿಶ್ವದ ಒಡೆತನವನ್ನು ಹೊಂದಲು ಪ್ರಯತ್ನಿಸುತ್ತಿರುವುದಾಗಿ ಬ್ರಿಟನ್ನಿನ ಸ್ವತಂತ್ರ ಲೇಬರ್ ಪಕ್ಷದ ಅಧ್ಯಕ್ಷ ಜಾನ್ ಎಡ್ವರ್ಡ್ಸರವರು ತಿಳಿಸಿದ್ದಾರೆ. ಇದನ್ನು ಪ್ರತಿಭಟಿಸಿ ನಿಂತಿರುವ ಏಕ ರಾಷ್ಟ್ರವೆಂದರೆ ರಷ್ಯಾ ಒಂದೇ. ಬ್ರಿಟನ್ನು ಸಂಪೂರ್ಣವಾಗಿ ಮಾರಿದ್ದು ಬಿದ್ದಿದೆ, ಅದು ಅಮೆರಿಕಾ ಸಂಯುಕ್ತ ಸಂಸ್ಥಾನದ ಜಾಟಿಗೆ ನಿಲ್ಲಲಾರದೆಂದೂ ಅವರು ತಿಳಿಸಿದ್ದಾರೆ.

ನಗರ ಕಾಂಗ್ರೆಸ್ ಸಮಿತಿ

ಮೈಸೂರು, ನಗರ ಕಾಂಗ್ರೆಸ್ ಸಮಿತಿಯ ಅಧಿಕಾರಿ ವರ್ಗದವರ ಚುನಾವಣೆಯು ಇದೇ ಮಾಹೆ ೩ ನೇ ತಾ॥ ಶನಿವಾರ ಸಾಯಂಕಾಲ ಏಳೂವರೆ ಗಂಟೆಗೆ ಕಾಂಗ್ರೆಸ್ ಕಛೇರಿಯಲ್ಲಿ ಜರುಗುವುದು. ಸಮಿತಿ ಸದಸ್ಯರೆಲ್ಲಾ ತಪ್ಪದೆ ದಯಮಾಡಿಸಬೇಕೆಂದು ಚುನಾವಣಾಧಿಕಾರಿಗಳಾದ ಶ್ರೀ ನಾರಾಯಣಸ್ವಾಮಿಯವರು ಪ್ರಾರ್ಥಿಸಿದ್ದಾರೆ.

ಭೂಗೋಳ

ಸಪ್ಲಿಮೆಂಟ್

ಮಂಗಳೂರು ಹೈದರಾಬಾದಿನಲ್ಲಿದೆ. ಪಲ್ಯಾವಟಿಗಿ, ಲಾಯದ ಗಂದಿ, ಮುದಿಜಹಿತ್ಲು ಎಲ್ಲಿವೆ? ಬಹಿಷ್ಟೆ ಸಂಬಂಧದ ಹೊಟ್ಟೆನೋವಿನ ದೆಸೆಯಿಂದ ಮಕ್ಕಳಾಗದೇ ಇರತಕ್ಕವರಿಗೆ ಗ್ಯಾರಂಟೀ ಔಷಧವೆಂದು ಎಂಭತ್ತೇಳು ವರ್ಷಗಳಿಂದ ಪ್ರಖ್ಯಾತವಾದ "ಸಂತಾನ ಸಿಂಧೂರ" ಎಂಬ ಭಸ್ಮದ ವಿಚಾರವಾಗಿ ಹೊಸದಾಗಿ ಪ್ರಿಂಟಾಗಿರತಕ್ಕ ನಮ್ಮ ಕ್ಯಾಟಲಾಗ್ ಮತ್ತು "ಸಪ್ಲಿಮೆಂಟ್" ನೋಡಿರಿ. ಗೊತ್ತಾಗುತ್ತೆ. ಬರೆದರೆ ಎರಡೂ ಬಿಟ್ಟಿ ರವಾನೆ

ಎ. ರಾಮಸ್ವಾಮಿ ಅಯ್ಯರ್,
ಪ್ರೊಪ್ರೈಟರ್: "ಸಂತಾನ ಸಿಂಧೂರ" ಆಫೀಸ್, ಅಂಬಳೆ, ಯಳಂದೂರ್ ಪೋಸ್ಟ್.

ಪ್ರಭುಗಳ ವರ್ಧಂತಿ ಉತ್ಸವ

ಮೈಸೂರು:

ಚಾಮುಂಡಿ ಬೆಟ್ಟದ ಹೊಸ ಸಮಾಧ್ಯಮಿಕ ಶಾಲೆಯಲ್ಲಿ ನಿನ್ನೆ ಮಧ್ಯಾಹ್ನ ಶ್ರೀಮನ್ಮಹಾರಾಜರವರ ಇಪ್ಪತ್ತೆಂಟನೇ ವರ್ಷ ವರ್ಧಂತ್ಯುತ್ಸವವು ವಿಜೃಂಭಣೆಯಿಂದ ಜರುಗಿತು. ಮಿಸೆಸ್ ಮಿಸ್ಸಿಯವರು ಅಧ್ಯಕ್ಷತೆ ವಹಿಸಿ ಆಟಗಳಲ್ಲಿ ಜಯಶೀಲರಾದ ವಿದ್ಯಾರ್ಥಿ ವಿದ್ಯಾರ್ಥಿಯರಿಗೆ ಪಾರಿತೋಷಕಗಳನ್ನು ವಿನಿಯೋಗ ಮಾಡಿದರು. ಮುಖ್ಯೋಪಾಧ್ಯಾಯರು ಶಾಲೆಯ ವರದಿಯನ್ನೋದಿದ ನಂತರ ಉಪಾಧ್ಯಾಯರು ಶ್ರೀಮನ್ಮಹಾರಾಜರ ಗುಣಗಾನ ಮಾಡಿದರು. ಶ್ರೀ ವ್ಯವಹಾರಿಣಿಯವರು ತಮ್ಮ ಕುಮಾರರೊಡನೆ ಬಂದು ಸಭೆಯನ್ನು ಅಲಂಕರಿಸಿದ್ದರು. ಬೆಟ್ಟದ ಪ್ರಮುಖ ನಿವಾಸಿಗಳೂ, ಡಾ॥ ಆಲ್‌ಫ್ರೆಡ್‌ರವರೂ ಉತ್ಸವದಲ್ಲಿ ಭಾಗ ವಹಿಸಿದ್ದರು. ಅತಿಥಿಗಳಿಗೆ ಗಂಧಪುಷ್ಪ ತಾಂಬೂಲ ವಿನಿಯೋಗ, ಮಕ್ಕಳಿಗೆ ಮಧುರ ವಸ್ತು ಹಂಚಿದ ನಂತರ ಶ್ರೀಮನ್ಮಹಾರಾಜರ ಶ್ರೇಯಃ ಪ್ರಾರ್ಥನೆಯಿಂದ ಉತ್ಸವವು ಮುಕ್ತಾಯವಾಯಿತು.

ಅಭಿನಂದನಾ ಸಭೆಗಳು

ಶ್ರೀಮನ್ಮಹಾರಾಜರಿಂದ ಸನ್ಮಾನಿತರಾಗಿರುವ ತಿ ॥ ಧರ್ಮ ರತ್ನಾಕರ ಕೆ. ಬಸಪ್ಪನವರನ್ನು ಅಭಿನಂದಿಸುವ ಸಲುವಾಗಿ ನಿನ್ನೆ ಸಂಜೆ ಶಾರದಾವಿಲಾಸ ವಿದ್ಯಾಸಮಿತಿಯವರು ಸದರೀ ಶಾಲೆಯಲ್ಲಿ ಶ್ರೀ ಕೆ. ಸುಬ್ರಹ್ಮಣ್ಯ ಅಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಸೇರಿಸಿದ್ದರು. ಪ್ರಾರ್ಥನಾ ಸಂಗೀತಗಳಾದ ನಂತರ ಅಧ್ಯಕ್ಷರು ನಂದೀಬಸಪ್ಪನವರಿಗೆ ಮಾನಪತ್ರವನ್ನು ಸಮಿತಿಯ ಪರವಾಗಿ ಅರ್ಪಿಸಿದರು. ಆದ ರಾಮಚಂದ್ರರಾವ್ ಬೊಂಗಾಳೆ, ಎಸ್. ಸಿ. ದೇವರಾಜ ಅರಸ್, ಎಂ. ಸ್ವಾಮಿಯವರು ಭಾಷಣಗಳನ್ನು ಮಾಡಿ ಶ್ರೀ ನಂದೀಬಸಪ್ಪನವರನ್ನು ಪ್ರಶಂಸಿಸಿ ಮತ್ತಷ್ಟು ದಾನ ಧರ್ಮಗಳನ್ನು ಕೈಗೊಳ್ಳುವಂತಹರಾಗಲೆಂದು ಆಶಿಸಿದರು.

ಮೈಸೂರು ನಗರದ ಖಾಸಗೀ ಡಿಪೋ ಮಾಲೀಕರು ನಿನ್ನೆ ಶ್ರೀ ಚಂದ್ರರಾವ್ ಬೊಂಗಾಳೆಯವರ ಅಧ್ಯಕ್ಷತೆಯಲ್ಲಿ ಭಕ್ಷ್ಯ ನಂದೀಬಸಪ್ಪನವರ ಸಭೆ ನಡೆಸಿ ಶ್ರೀ ಧರ್ಮ ರತ್ನಾಕರ ಕೆ. ಬಸಪ್ಪನವರನ್ನು ಅಭಿನಂದಿಸಿದರು.

ಮಂಗಳೂರಿನಿಂದ ಮೊದಲನೇ ಬಾರಿ ಲಂಡನ್ನಿಗೆ ಪ್ರಯಾಣ ಮಾಡಿದ ೨೧ ವರ್ಷ ವಯಸ್ಸಿನ ಮಿಸ್ ಕ್ಯೂರಿಯಾ ಎಂಬ ಒಬ್ಬ ನರ್ಸ್ ಕೊಲೆ ಮಾಡಲ್ಪಟ್ಟಿರುವುದಾಗಿ ಬಂದಿದೆ.

ರಣಜಿತ್

೧—೮—೪೦ ರಿಂದ

ರತ್ನಾವಳಿ

ಪಾತ್ರ

ರತ್ನಮಾಲ — ಸುರೇಂದ್ರ

ಪ್ರತಿದಿನ ೩ ಆಟಗಳು

ರಾಜ್ ಕಮಲ್ ಟಾಕೀಸ್, ಮೈಸೂರು

31-7-46 ನೇ ಬುಧವಾರದಿಂದ

ಮಧುರ ಗಾಯನದ ಸವಿ! ಸಂತೋಷದ ಸುರಿ ಮಳೆ!!

ಕಾನನ್ ಬಾಲ ಮುಖ್ಯಪಾತ್ರವಹಿಸಿರುವ

"ಬನ್ ಪೂಲ್"

ಪ್ರತಿ ದಿನ ೩ ಆಟಗಳು

ಡಿಸ್ಟ್ರಿಬ್ಯೂಟರ್ಸ್: ... ಸ್ಟುಡಿಯೋ

ಅಪೇರಾ ಟಾಕಿ

೩—8—46 ರಿಂ

ಭಕ್ತಕಲಾ

(ತಮಿಳು)

ತಾರಾಗಣ: — ಹೊನ್ನಪ್ಪ ಭಾಗವತರ್, ಕಮಲಾ, ಕುಮುದಿನಿ

ಎಸ್. ಎಸ್. ಕೃಷ್ಣನ್, ಬಿ. ಎ.

Edited, printed and published by ... Nagaraiah at the ... D. Subbiah Road, Mysore.

ಫೋ. ನಂ 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶನಿವಾರ ೯—೮—೪೬ [ಸಂಚಿಕೆ ೧೦

— ಜೈಲುವಾಸಕ್ಕೆ — ಜಿನ್ನಾರವರ ಸಿದ್ಧತೆ

ಅಂಚೆಯವರು ಕೆಲಸಕ್ಕೆ ಹಿಂತಿರುಗಿದರು

ಮೈಸೂರು ೮. ೯

ರಾಜಧಾನಿಯಲ್ಲಿ ೧೯ ದಿನದಿಂದ ಮುಷ್ಕರ ಹೂಡಿದ್ದ ಅಂಚೆಯವರ ವಿಶೇಷ ಸಭೆಯು ಈದಿನ ಬೆಳಿಗ್ಗೆ ಸಯ್ಯಾಜಿರಾವ್ ರಸ್ತೆಯಲ್ಲಿರುವ ವಿಜಯಾ ಏಜನ್ಸೀಸ್ ಕಾರ್ಯಾಲಯದಲ್ಲಿ ಶ್ರೀ|| ಹಿರಳ್ಳಿ ದಾಸಪ್ಪನವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ಶ್ರೀಗಳಾದ ಟಿ. ಕೃಷ್ಣರಾವ್, ನಾಡಿಗ ಕೃಷ್ಣಮೂರ್ತಿ, ಎ ರಾಮಣ್ಣ, ಟಿ ಎಸ್ ಸುಬ್ಬಣ್ಣ ಮೊದಲಾದವರು ಭಾಷಣಮಾಡಿದರು. ಅಧ್ಯಕ್ಷರು ಶ್ರೀ ದಳವಾಯಿಯವರ ರೇಡಿಯೋ ಭಾಷಣವನ್ನು ವಿವರಿಸಿದರು. ಅದರಂತೆ ಮೈಸೂರು ಪಾಲೆಯ ಅಂಚೆ ನೌಕರರೆಲ್ಲರೂ ಈದಿನ ಮಧ್ಯಾಹ್ನ ಹನ್ನೆರಡು ಗಂಟೆಗೆ ಕೆಲಸಕ್ಕೆ ಹಾಜರಾಗತಕ್ಕದ್ದೆಂತಲೂ ಸಂಬಳವನ್ನು ಪೂರ್ತಿಯಾಗಿ ಕೊಡದೆ ಸ್ವಲ್ಪ ಭಾಗವನ್ನು ಕೊಟ್ಟರೆ ಉಳಿದನ್ನು ಕಡರಾಂತ ಮೇಲೆ ತೆಗೆದುಕೊಳ್ಳಬೇಕೆಂದು ನಿರ್ಣಯಗಳಾದುವು

ಕಳ್ಳತನ ಪತ್ತೆ

ಯೂನಿವರ್ಸಿಟಿ ಆಫೀಸಿನ ಜವಾನ ನಂಜಯ್ಯ ಎಂಬುವನು ಶ್ರೀ ರಂಗರಾಮಯ್ಯನವರ ಒಂದು ಕರುವನ್ನು ಇದೇ ಸೋಮವಾರದಿಂದ ಹಿಡಿದಿಟ್ಟುಕೊಂಡಿದ್ದ ವಿಚಾರ ನಿನ್ನೆ ದಿನ ಪತ್ತೆಯಾಗಿರುತ್ತೆ. ಶ್ರೀಯುತರ ಸಹೋದರರೂ ಪೌ|| ಸ|| ಉಪಾಧ್ಯಕ್ಷರೂ ಆದ ಶ್ರೀ ಕೃಷ್ಣಮೂರ್ತಿರಾಯರಿಗೆ ಸವರೇ ನಂಜಯ್ಯನು ಕರುವಿನ ಸಮೇತ ಸಿಕ್ಕಿಬಿದ್ದು ಪೋಲೀಸಿಗೆ ದೂರು ಕೊಡಲಾಗಿದೆ ಇನ್ಸ್‌ಪೆಕ್ಟರ್ ಸರ್ ತಾಸಪ್ಪನವರು ತನಿಖೆ ನಡೆಸುತ್ತಿದ್ದಾರೆ

ಪ್ರಭುಗಳ ವರ್ಧಂತಿ

ರಾಜಧಾನಿಯ ಸದ್ವಿದ್ಯಾ ಪಾಠಶಾಲೆಯಲ್ಲಿ ನೆನ್ನೆ ದಿನ ಧರ್ಮ ಪ್ರವರ್ತ ಎ ಎಸ್ ರಂಗಸ್ವಾಮಿ ಅಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಶ್ರೀಮನ್ಮಹಾರಾಜರ ವರ್ಧಂತ್ಯುತ್ಸವವು ವೈಭವದಿಂದ ಆಚರಿಸಲ್ಪಟ್ಟಿತು

ಹಿತರಕ್ಷಣಾ ಸಂಘ

ತಿರುವಣ್ಣಾಮಲೆ ದೇವೀದಾಸ ಗೋಪಾಲ ಸುಬ್ರಹ್ಮಣ್ಯಂರವರು ರಾಜಧಾನಿಗೆ ಆಗಮಿಸಿ, ಸರ್ವ ಧರ್ಮೀಯರ ಹಿತರಕ್ಷಣಾ ಸಂಘವನ್ನು ಸ್ಥಾಪಿಸಲು ಪ್ರಯತ್ನಿಸುತ್ತಿದ್ದಾರೆ. ಇವರು ದೊಡ್ಡಕೆರೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಬಿಡಾರ ಮಾಡಿದ್ದಾರೆ ಇವರಲ್ಲಿ ಆಸಕ್ತಿ ಇರುವವರೆಲ್ಲರೂ ಇವರನ್ನು ಭೇಟಿ ಮಾಡಬಹುದು.

ಹರಿಕಥೆ

ಮೈಸೂರು ಹೊಸ ಸಂತೇಪೇಟೆಯಲ್ಲಿ ಇರುವ ಶ್ರೀ|| ಡಿ. ವೆಂಕಟಯ್ಯನವರ ಮನೆಯಲ್ಲಿ ನಾಳೆ ಸಂಜೆ ೫ ಘಂಟೆಗೆ ಶ್ರೀ|| ಶೇಷಗಿರಿದಾಸರವರಿಂದ ಭಕ್ತ ಪುಂಡರೀಕ ಎಂಬ ಕಥೆ ನಡೆಯುವುದು.

ಪಡುವಾರಹಳ್ಳಿ ಹೊಸ ಬಡಾವಣೆಯಲ್ಲಿ ಇರುವ ಶ್ರೀ ಅನಂತಸ್ವಾಮಿಯವರ ಆಶ್ರಮದಲ್ಲಿ ಪ್ರತಿ ಭಾನುವಾರ ಮಧ್ಯಾಹ್ನ ೪ರಿಂದ ೬ರ ವರೆಗೆ ವೇ|| ಬ್ರ|| ಹರಿಹರಾನಂದ ಭಾರತಿ ಸ್ವಾಮಿಗಳವರಿಂದ ಹರಿಕಥೆ ನಡೆಯುತ್ತೆ. ಸರ್ವರಿಗೂ ಆಹ್ವಾನವುಂಟು

ಕೃಷ್ಣರಾಜನಗರದಲ್ಲಿ [illegible] ದೊಡ್ಡರಾಮ ದೇವಸ್ಥಾನದಲ್ಲಿ ಈದಿನ ರಾತ್ರಿ [illegible] ಶ್ರೀ ಸಿ ಎ ನರಸಿಂಹದಾಸರವರಿಂದ "[illegible]" ಎಂಬ ಹರಿಕಥೆ ನಡೆಯಲಿರುತ್ತೆ

ಶ್ರೀ ಪುಲ್ಲಾರೆಡ್ಡಿಯವರು ಮದ್ರಾಸಿಗೆ ವಾಪಸ್ಸು

ಸ್ವಂ. ವಾರ್ತೆ] ಬೆಂಗಳೂರು ೯

ಮದ್ರಾಸ್ ಪ್ರಾಂತ್ಯದಲ್ಲಿ ಪ್ರಮುಖ ಖಾತೆಗಳ ಆಡಳಿತ ಸೂತ್ರವನ್ನು ವಹಿಸಲು ಅಧಿಕಾರಿಗಳು ಸಾಲದಿರುವುದರಿಂದ ಕೆಲವು ವರ್ಷಗಳ ಹಿಂದೆ ಇಂಡಿಯಾ ಮತ್ತು ದೇಶೀಯ ಸಂಸ್ಥಾನಗಳ ಸರ್ಕಾರಗಳಿಗೆ ಎರವಲಾಗಿ ಕೊಟ್ಟಿದ್ದ ಅಧಿಕಾರಿಗಳನ್ನು ವಾಪಸು ಕರೆಸಲು ಮದ್ರಾಸ್ ಸರ್ಕಾರ ನಿರ್ಧರಿಸಿದೆಯೆಂದೂ, ಶ್ರೀ ಪುಲ್ಲಾರೆಡ್ಡಿಯವರನ್ನು ವಾಪಸು ಮದ್ರಾಸಿಗೆ ಕಳಿಸಿಕೊಡುವಂತೆ ಮೈಸೂರು ಸರ್ಕಾರಕ್ಕೆ ಪತ್ರ ಬರೆಯಲಾಗಿಯೆದೆಂದು ತಿಳಿದುಬಂದಿತ್ತು. ಅದರಂತೆ ಶ್ರೀ ಪುಲ್ಲಾರೆಡ್ಡಿಯವರನ್ನು ವಾಪಸು ಮದ್ರಾಸಿಗೆ ಕಳುಹಿಸಲು ಮೈಸೂರು ಸರ್ಕಾರದವರು ಸಮ್ಮತಿಸಿರುವುದಾಗಿ ಅಧಿಕಾರ ಪ್ರಕಟಣೆ ಹೊರಡಿದೆ. ಶ್ರೀ ಪುಲ್ಲಾರೆಡ್ಡಿಯವರ ಸೇವೆಯನ್ನು ಪ್ರಭುಗಳು ಮೆಚ್ಚಿರುವುದಾಗಿ ತಿಳಿಸಲಾಗಿದೆ.

ರಜದ ಮೇಲೆ ಇರುವ ಜಿಲ್ಲಾ ಸೆ|| ಜಡ್ಜಿರಾದ ಶ್ರೀ ಎನ್ ರಾಮಯ್ಯಂಗಾರ್ ರವರು ಆಗಸ್ಟ್ ೧೮ ರಿಂದ ಮೈಸೂರು ಜಿಲ್ಲಾ ಸೆಷನ್ಸ್ ನ್ಯಾಯಾಧೀಶರಾಗಿ ನೇಮಕ ಮಾಡಲ್ಪಟ್ಟಿದ್ದಾರೆ

● ಜನೇ ತಾ|| ನಡೆಯಬೇಕಾಗಿದ್ದ ಅರ್ಜಿಕ ಸಮ್ಮೇಳನವನ್ನು ಮುಂದುವರಿಸಲಾಗಿದೆ

೯ ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರನ್ನು ಒದಗಿಸುವ ಕಾರ್ಯಕ್ರಮವನ್ನು ಮತ್ತೆ ಮೂರು ವರ್ಷಗಳ ಕಾಲ ಜಾರಿಗೆ ತರಲಾಗಿದೆ. ಈ ಸಾಲಿನಲ್ಲಿ ೫ ಲಕ್ಷ ರೂ.ಗಳನ್ನು ಖರ್ಚಿರುವ ೨ ಸಾಲುಗಳಲ್ಲಿ ೪ ಲಕ್ಷ ರೂಗಳನ್ನು ಒದಗಿಸಲಾಗುವುದು.

ರಾಷ್ಟ್ರಸೇವಾದಳ

ಸ್ವಂ ವ] ನಂಜನಗೂಡು ೯

ಇಲ್ಲಿನ ವಿದ್ಯಾರ್ಥಿ ಕಾಂಗ್ರೆಸ್ ಆಶ್ರಯ ರಾಷ್ಟ್ರ ಸೇವಾ ದಳದ ತರಗತಿಗಳನ್ನು ತೆರೆಯಲಾಗಿದೆ. ದಳಕ್ಕೆ ಸೇರಲಿಚ್ಛಿಸುವವರು ೧೫ ನೇ ತಾ|| ನೊಳಗಾಗಿ ತಿಳಿಸಬೇಕೆಂದು ಕಾರ್ಯದರ್ಶಿಗಳು ಪ್ರಾರ್ಥಿಸಿದ್ದಾರೆ

ನದಿಯಲ್ಲಿ ಮರಣ

ಈ ದಿನ ಬೆಳಗ್ಗೆ ಕಾವೇರಿ ನದಿಯಲ್ಲಿ [illegible] ಈಜಲು ಹೋಗಿ [illegible] ಪಟ್ಟನು. ಇಕ್ಕಡೆ [illegible] ದು ಹೆಣ ಸಿಕ್ಕಿತು ಶ್ರೀ [illegible] ಗಳನ್ನು ತೆಗೆಸಿ [illegible] ವರು

ಸೆರೆಮನೆಗೆ ಹೋಗಲು ಜಿನ್ನಾರವರ ಸಿದ್ಧತೆ

ಸೆರೆಮನೆಯ ಕಠಿಣ ವಾತಾವರಣಕ್ಕೆ ಸರಿಹೊಂದಿಸಿಕೊಳ್ಳುವ ಸಲುವಾಗಿ ಮಿ|| ಜಿನ್ನಾರವರು ತಮ್ಮ ಸೌಕರ್ಯವನ್ನು ಬದಲಾಯಿಸುತ್ತಿರುವರು. ಅವರು ಈಗ ಕೆಲವು ದಿನಗಳಿಂದಲೂ ಬರೀ ನೆಲದ ಮೇಲೆ ಮಲಗುವುದನ್ನೂ ಸಹ ಅಭ್ಯಾಸ ಮಾಡುತ್ತಿರುವರು ಇದುವರೆಗೆ ಅವರು ಸೆರೆಮನೆಗೆ ಒಂದು ಸಲವೂ ಹೋಗಿಲ್ಲ. ಲೀಗಿನವರ ಕಾನೂನು ಭಂಗದ ಕಾರ್ಯಕ್ರಮವು ಜಾರಿಗೆ ಬಂದರೆ ಜೈಲಿಗೆ ಹೋಗಬೇಕಾಗುವುದರಿಂದ ಅವರು ಅದಕ್ಕಾಗಿ ಹೀಗೆ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿರುವರು

ಅಂಚೆ ಮುಷ್ಕರದ ಪರಿಸಮಾಪ್ತಿ

ಸರ್ಕಾರದವರು ಅಂಚೆ ನೌಕರರ ಬಗ್ಗೆ ಪಂಚಾಯಿತಿದಾರರು ಶಿಫಾರ್ಸುಗಳನ್ನು ಒಪ್ಪಿಕೊಂಡಿರುವುದರಿಂದಲೂ ಮತ್ತು ಕೆಳದರ್ಜೆ ನೌಕರರಿಗೆ ಇನ್ನೂ ಹೆಚ್ಚಿನ ರಿಯಾಯಿತಿಗಳನ್ನು ಕೊಡಿಸುವರೆಂದೂ ನೌಕರರ ಪರ ಮಧ್ಯಸ್ಥಿಕೆ ವಹಿಸಿದ್ದ ಜೊ ಬಾಯಿನ [illegible] ಸಭೆಯ ಅಧ್ಯಕ್ಷರಾದ ಶ್ರೀ ಎಂ. ಪಟ್ಟಣ [illegible] ಅಂಚೆ ನೌಕರರ ಸಂಘದ ಕಾರ್ಯದರ್ಶಿ ಶ್ರೀ ಎಂ ದಳವಾಯಿರವರಿಗೆ ಸೂಚಿಸಿರುವುದರಿಂದ ಶ್ರೀ ದಳವಾಯಿಯವರು ಒಂದು ಹೇಳಿಕೆ ಹೊರಡಿಸಿ ಮುಷ್ಕರ ಹೂಡಿರುವ ಎಲ್ಲ ನೌಕರರು ಕೂಡಲೇ ಕೆಲಸಕ್ಕೆ ಹಾಜರಾಗಬೇಕೆಂದು ತಿಳಿಸಿರುವರು ಅದರಂತೆಯೇ ಅನೇಕ ಕಡೆಗಳಲ್ಲಿ ನೌಕರರು ಕೆಲಸಕ್ಕೆ ಹೋಗುತ್ತಿರುವರು.

ವಿಶ್ವಕರ್ನಾಟಕಕ್ಕೆ ಇತ್ತ ನೋಟೀಸ್ ಬಗ್ಗೆ ಖಂಡನೆ

ಸಂಸ್ಥಾನದ ವೃತ್ತಪತ್ರಿಕೆಗಳ ಮಾಲೀಕರ ಮತ್ತು ಸಂಪಾದಕರುಗಳ ಸಂಘದ ಆಡಳಿತ ಮಂಡಲಿಯು ಸಭೆ ಸೇರಿದೆ. ಸರ್ಕಾರದವರು ವಿಶ್ವಕರ್ನಾಟಕ ಪತ್ರಿಕೆಗೆ ಇತ್ತಿರುವ ನೋಟೀಸಿನ ಬಗ್ಗೆ ತಮ್ಮ ತೀವ್ರ ಖಂಡನೆಯನ್ನು ವ್ಯಕ್ತಪಡಿಸಿ, ಸರ್ಕಾರದವರು ಈ [illegible] ಇದನ್ನು ಹಿಂತೆಗೆದುಕೊಳ್ಳಬೇಕೆಂದು [illegible] ಪತ್ರಿಕೆಗಳಿಗೂ [illegible] ಮಾಡಿತು

● [illegible]

ಶ್ರೀ|| ಎಸ್. ಚೆನ್ನಯ್ಯನವರ ಹೇಳಿಕೆ

[ಹಿಂದಿನ ಪುಟದಿಂದ ಮುಂದುವರಿದ ದ]

ಮೈವರಿಗೆ ತಿಳಿಸಿ ಶ್ರೀ ಸುಬ್ರಹ್ಮಣ್ಯಂರವರೂ ನಾನೂ ನಡೆದುಕೊಂಡು ಅವರ ಮನೆವರ ಮನೆಗೆ ಹೋದೆವು ನಾವು [illegible] ಮುಗಿಸಿಕೊಂಡು ಪುನಃ ಕಾಂಗ್ರೆಸ್ ಆಫೀಸಿಗೆ ಬರುವುದರಲ್ಲಿ ಎಲ್ಲರೂ ಮಲಗಿದ್ದರು. ಪುನಃ ಸಭೆ ಸೇರಲಿಲ್ಲ. ಆದದರಿಂದ ಶ್ರೀ ದಾಸಪ್ಪನವರು ಇಲ್ಲದಿದ್ದಾಗ ರಾತ್ರಿ ೧೧ ಗಂಟೆಗೆ ಸಭೆ ನಡೆದು ತೀರ್ಮಾನವಾಯಿತೆಂಬುದು ನಿಜವಲ್ಲ.

ಇದೇ ಸಂದರ್ಭದಲ್ಲಿ ಇನ್ನೆರಡು ವಿಷಯಗಳನ್ನು ಮಹಾಜನರ ಗಮನಕ್ಕೆ ತರಲು ಇಚ್ಛಿಸುತ್ತೇನೆ ಮುಖಂಡರ ಸಭೆಯ [illegible] ತೀರ್ಮಾನವನ್ನು ಪ್ರಧಾನ ಕಾರ್ಯದರ್ಶಿಯವರು ಈ ತಿಂಗಳು ೧೮ ನೇ ತಾರೀಖಿನ ದಿನವೇ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ ಅದರಲ್ಲಿ ಶ್ರೀ ಚೆಂಗಲರಾಯರೆಡ್ಡಿ ಮತ್ತು ಶ್ರೀ ಸಿದ್ದಲಿಂಗಯ್ಯ ಇವರಿಬ್ಬರ ಸ್ಥೈರ್ಯ ಒಟ್ಟಿದನ್ನು "ಅರಿಸಬೇಕೆಂದು" ಅದಕ್ಕೆ ಅಗತ್ಯ ಕಾರ್ಯಕ್ರಮ ಕಾರ್ಯಸಮಿತಿ ಕೈಗೊಂಡು ಹೊಸ ನೇತಾ ಪತ್ರಿಕೆ ಹೊರಡಿಸಬೇಕೆಂದು ತೀರ್ಮಾನವಾಯಿತೆಂದೂ ತಿಳಿಸಿದ್ದಾರೆ ಪ್ರಧಾನ ಕಾರ್ಯದರ್ಶಿ ಹೇಳಿಕೆ ಕೊಟ್ಟ ಒಂದೂವರೆ ತಿಂಗಳ ನಂತರ ಈಗ ಜೂನ್ ೧೬ ನೇ ತಾರೀಖಿನ ದಿನವೇ ತೀರ್ಮಾನವಾಯಿತೆಂದು ಹೇಳುವುದು ಆಶ್ಚರ್ಯಕರವಾಗಿದೆ

ಎರಡನೆಯ ವಿಷಯ ಜೂನ್ ತಿಂಗಳು ೨೪-೨೫ ನೇ ತಾರೀಖುಗಳಲ್ಲಿ ಕಾರ್ಯಕಾರೀ ಸಮಿತಿ ಸಭೆಯಲ್ಲಿ ಇಬ್ಬರ ಸ್ಥೈರ್ಯ ಯಾರನ್ನು ಆರಿಸಬೇಕೆಂಬುದನ್ನು ಚರ್ಚಿಸಿದಾಗ ಶ್ರೀ ಸಿದ್ದಲಿಂಗಯ್ಯನವರು ಎಂದು ದಿನವೂ ಸಭೆಯಲ್ಲಿ ಸುಮ್ಮನೆ ಕುಳಿತಿದ್ದ ೨೫ ನೇ ತಾರೀಖು ಬೆಳಗ್ಗೆ ಈ ರೀತಿ ಅರ್ಥ ಬರುವಂತೆ ಹೇಳಿದರು :-ಎರಡು ದಿನದಿಂದ ನಡೆದಿರುವ ಚರ್ಚೆ ಕೇಳಿದೆ ಯಾರನ್ನು ಆರಿಸಬೇಕೆಂಬುದನ್ನು ನಿರ್ಧರಿಸಲು. ನೀವು ಹಿಂದುಮುಂದು ನೋಡುತ್ತಿದ್ದೀರಿ ನನ್ನ ಅಭಿಪ್ರಾಯ ಇಷ್ಟೇ ಈಗಿನ ಸಂದರ್ಭದಲ್ಲಿ ಅಧ್ಯಕ್ಷರಾಗಿರಲು ನಾನೇ ಅರ್ಹ. ಶ್ರೀ ಚೆಂಗಲರಾಯರೆಡ್ಡಿಯವರು ಅರ್ಹರಲ್ಲ. ಆದರೆ ಅವರಿಗೆ ಅಧ್ಯಕ್ಷರಾಗಬೇಕೆಂಬ ಅಪೇಕ್ಷೆ ಇರುವಂತೆ ತೋರುತ್ತೆ. ಇನ್ನಿಬ್ಬರು ಆರಿಸುವ ಸ್ಥಾನದಲ್ಲಿ ನಾನಿರಲು ಬಯಸುವುದಿಲ್ಲ ಅಧ್ಯಕ್ಷತೆಗೆ ಯಾರಾದರೂ ಸ್ಪರ್ಧೆ ಇರಬಾರದು ಶಿವಪುರದ ಅಧಿವೇಶನದಲ್ಲಿ ನಾನು ನಿಲ್ಲಲಿಲ್ಲ ಹೋಗಿದ್ದುದರಿಂದ ಶ್ರೀ [illegible]ರವರು ಸ್ಪರ್ಧಿಸಿದ್ದರು ನನಗೆ ಗೊತ್ತಿಲ್ಲದೆ ಚುನಾವಣೆಗೆ ಎಡೆಯಾಯಿತು ನನ್ನದರಿಗೆ ತೀರ್ಮಾನಿಸಲು ನಿಮಗೆ ಸಂಕೋಚವಾಗಬಹುದು ನನ್ನ ಅಭಿಪ್ರಾಯ ತಿಳಿಸಿದ್ದೇನೆ ಈಗ ನಿಮ್ಮ ಇಷ್ಟಬಂದಂತೆ ತೀರ್ಮಾನಿಸಿ ಎಂದು ಹೇಳಿ ಹೊರಟು ಹೋದರು ಜೂನ್ ೧೬ನೇ ತಾರೀಖಿನ ದಿನವೇ ತೀರ್ಮಾನವಾಗಿದ್ದರೆ, ಆ ಪೇಡಿ ಒಂದು ವಾರದಲ್ಲಿ ಶ್ರೀ ಸಿದ್ದಲಿಂಗಯ್ಯನವರು ಈ ರೀತಿ ಮಾಡಬೇಕಾಗಿರಲಿಲ್ಲ ಆ ಅಂಶಗಳು ಗಮನಾರ್ಹವಾಗಿದೆ

ಎಸ ಚೆನ್ನಯ್ಯ
ಗೀತಾ ಉಪನ್ಯಾಸ

[illegible]

ಸಾಧ್ವಿ

೩-೮-೪೬ ಶನಿವಾರ

ಮುಷ್ಕರದ ಮುಕ್ತಾಯ

ಇಪ್ಪತ್ತಮೂರು ದಿನಗಳ ನಂತರ ಅಂಚೆ ನೌಕರರಿಗೂ, ಸರ್ಕಾರದವರಿಗೂ ಒಪ್ಪಂದವಾಗಿ ಮುಷ್ಕರವು ಮುಕ್ತಾಯವಾಗಿರುವುದು ಸಂತೋಷದ ಸಂಗತಿ. ಇಲಾಖೆಯ ನೌಕರರ ಬೇಡಿಕೆಗಳೆಲ್ಲಾ ಬಹುಮಟ್ಟಿಗೆ ಈಡೇರಿವೆ. ಇದಕ್ಕೆ ಅವರು ತೋರಿಸಿದ ಶಿಸ್ತು, ವ್ಯವಸ್ಥೆ, ಏಕಮತ್ಯ ಮತ್ತು ಸ್ವಾರ್ಥತ್ಯಾಗವೇ ಮುಖ್ಯ ಕಾರಣ. ಅವರು ಈ ರೀತಿ ಶಾಂತಿಯಿಂದಲೂ, ಸೌಹಾರ್ದದಿಂದಲೂ ನಡೆಸಿದ ಚಳುವಳಿಯಲ್ಲಿ ಯಶಸ್ವಿಯಾಗಿ ತಮ್ಮ ಉದ್ದೇಶವನ್ನು ನೆರವೇರಿಸಿಕೊಂಡಿರುವುದಕ್ಕಾಗಿ ಸಕಲರ ಅಭಿನಂದನೆಗೂ ಪಾತ್ರರಾಗಿದ್ದಾರೆ. ಈ ಮಧ್ಯಕಾಲದಲ್ಲಿ ಅನಿವಾರ್ಯವಾಗಿ ಮಹಾಜನರಿಗೆ ಉಂಟಾದ ಅನಾನುಕೂಲಗಳು ವಿಷಾದಕರವಾದುವು. ಆದರೆ ಬಡ ನೌಕರರಿಗೆ ದೊರೆತಿರುವ ಪರಿಹಾರದಿಂದ ಮಹಾಜನರು ಈ ತಾತ್ಕಾಲಿಕ ಅನಾನುಕೂಲವನ್ನು ಮರೆಯುವುದರಲ್ಲಿ ಸಂದೇಹವಿಲ್ಲ. ಈ ಮುಷ್ಕರದಲ್ಲಿ ಮಧ್ಯಸ್ಥಿಕೆಯನ್ನು ವಹಿಸಿ ಸಂಧಾನವನ್ನು ನಡೆಸಿದ ನಾಯಕರುಗಳೆಲ್ಲರೂ ವಂದನಾರ್ಹರು. ನ್ಯಾಯ ಮತ್ತು ನೀತಿಯ ಬಲದಿಂದ ಕ್ರಮವಾದ ಮಾರ್ಗದಲ್ಲಿ ತಮ್ಮ ಬೇಡಿಕೆಗಳನ್ನು ಮುಂದಿಸಿದರೆ ಎಲ್ಲ ಕೆಲಸಗಾರರಿಗೂ ನ್ಯಾಯವು ದೊರೆಯುವುದೆಂಬುದು ಈ ಮುಷ್ಕರದಿಂದ ವೇದ್ಯವಾಗಿದೆ. ಇದಕ್ಕೆ ಭಾಗಿಗಳಾದ ಸಕಲರನ್ನೂ ನಾವು ಮತ್ತೊಮ್ಮೆ ಅಭಿನಂದಿಸುತ್ತೇವೆ.

ವಿಶ್ವಕರ್ನಾಟಕಕ್ಕೆ ಗದಾ ಪ್ರಹಾರ

ಮೇಲಿಂದಮೇಲೆ ವಿಶ್ವಕರ್ನಾಟಕ ಪತ್ರಿಕೆಗೆ ಒದಗುತ್ತಿರುವ ಗದಾಪ್ರಹಾರಗಳು ಸಕಲರಿಗೂ ವಿಸ್ಮಯವನ್ನುಂಟುಮಾಡುವುವು. ಠೇವಣಿಯನ್ನೇಕೆ ಕೇಳಬಾರದೆಂಬುದಾಗಿ ಪತ್ರಿಕೆಯ ಸಂಪಾದಕರಿಗೆ ಕೊಟ್ಟಿರುವ ನೋಟೀಸಿನ ಇತ್ಯರ್ಥವು ಇನ್ನೂ ಆಗಿರುವುದಿಲ್ಲ. ಅಷ್ಟರಲ್ಲಿಯೇ ಎರಡು ತಿಂಗಳ ಅಜ್ಞಾತವಾಸದ ಶಿಕ್ಷೆಯನ್ನು ಆ ಪತ್ರಿಕೆಗೆ ವಿಧಿಸಲಾಗಿದೆ ಮತ್ತು ಎರಡು ದಿವಸದ ಸಂಚಿಕೆಗಳನ್ನು ಮುಟ್ಟುಗೋಲು ಹಾಕಲಾಗಿದೆ. ಅಜ್ಞಾತವಾಸವೂ, ಠೇವಣಿಯೂ ವಿಶ್ವಕರ್ನಾಟಕಕ್ಕೆ ಹಳೆಯ ಅನುಭವಗಳು. ಮುಟ್ಟುಗೋಲಿನ ಪ್ರಕರಣವು ಹೊಸದು. ಮೈಸೂರಿನ ಪತ್ರಿಕೆಗಳ ಇತಿಹಾಸದಲ್ಲೇ ಇದು ಹೊಸದೆಂದು ಹೇಳಬಹುದು.

ಯುದ್ಧಕಾಲದಲ್ಲಿ ಅವಸರದ ಕಾರ್ಯಕ್ರಮಗಳಿಗಾಗಿ ಜಾರಿಗೆ ಬಂದು ಈಗ ಅಂತ್ಯಕಾಲವನ್ನು ನಿರೀಕ್ಷಿಸುತ್ತಿರುವ ರಕ್ಷಣಾ ಶಾಸನದ ಬಾಣಗಳನ್ನು ಈ ಪತ್ರಿಕೆಯ ಮೇಲೆ ಪ್ರಯೋಗಿಸಿರುವುದಕ್ಕಾಗಿ ಎಲ್ಲರೂ ಪ್ರತಿಭಟಿಸಲೇ ಬೇಕು. ವಿಶ್ವಕರ್ನಾಟಕವು ಇಂತಹ ಅನೇಕ ಆಘಾತಗಳನ್ನು ಎದುರಿಸಿ ನಿಂತು ಸೇವೆಮಾಡುತ್ತಿದೆ. ಇಂದು ಒದಗಿರುವ ವಿಪತ್ತುಗಳಿಂದಲೂ ಅದು ಪಾರಾಗಿ ತನ್ನ ಸೇವೆಯನ್ನು ಮುಂದುವರಿಸಲು ಅವಕಾಶವಾಗಲೆಂದು ನಾವು ಹಾರೈಸುತ್ತೇವೆ.

Edited printed and published by A. K. Nagarajan at the Sadhvi Press D. Subbiah Road Mysore

ರೆಡ್ಡಿಯವರಿಗೆ ಅಭಿನಂದನೆ

ಶ್ರೀ ಚೆಂಗಲರಾಯ ರೆಡ್ಡಿಯವರು ಮೈಸೂರು ಕಾಂಗ್ರೆಸ್ ಅಧ್ಯಕ್ಷರಾಗಿ ಬಹುಮತದಿಂದ ಆರಿಸಿ ಬಂದಿರುವರು. ಇದಕ್ಕಾಗಿ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ. ಅಧ್ಯಕ್ಷ ಸ್ಥಾನಕ್ಕೆ ಅವರೇ ಅರ್ಹರೆಂದು ನಾವು ಮೊದಲಿನಿಂದಲೂ ಹೇಳುತ್ತಿದ್ದೇವೆ. ಕಾಂಗ್ರೆಸ್ ಪ್ರತಿನಿಧಿಗಳು ಅದರಂತೆ ಅವರಿಗೇ ಬೆಂಬಲಕೊಟ್ಟು ಚುನಾಯಿಸಿರುವುದಕ್ಕಾಗಿ ನಾವು ಸಂತೋಷವನ್ನು ಸೂಚಿಸುತ್ತೇವೆ.

ಈ ಚುನಾವಣೆಯಲ್ಲಿ ಸ್ವಲ್ಪ ಮಟ್ಟಿಗೆ ವಾದ ವಿವಾದಗಳು ನಡೆದಿವೆ. ಅವುಗಳಲ್ಲಿ ಯಾವ ಸತ್ವವೂ ಅಡಗಿಲ್ಲವೆಂಬುದೇ ನಮ್ಮ ಅಭಿಪ್ರಾಯ. ಕೇವಲ ವ್ಯಕ್ತಿಗಳ ವರ್ತನೆಯ ಬಗ್ಗೆ ಉತ್ತರ ಪ್ರತ್ಯುತ್ತರಗಳು ಸಾಗಿವೆ. ಮಾಜಿ ಅಧ್ಯಕ್ಷರುಗಳೂ, ಕಾರ್ಯಕಾರೀ ಮಂಡಲಿಯ ಸದಸ್ಯರುಗಳೂ ಮತ್ತು ಇತರರೂ ಪರಸ್ಪರ ವಿರುದ್ಧವಾದ ವಿವರಗಳನ್ನು ತಿಳಿಸಿರುತ್ತಾರೆ. ಆದರೆ ಅವುಗಳ ಗೊಡವೆಯು ಪ್ರತಿನಿಧಿಗಳಿಗೆ ಸಂಬಂಧಪಡದ ಅಂಶ. ಉಮೇದುವಾರರ ಅರ್ಹತೆಯ ವಿಚಾರದಲ್ಲಿ ಸ್ವತಂತ್ರವಾದ ಅಭಿಪ್ರಾಯವನ್ನು ಇಟ್ಟುಕೊಂಡು ಪ್ರತಿನಿಧಿಗಳು ಓಟುಗಳನ್ನು ಕೊಟ್ಟಿರುತ್ತಾರೆಂದು ನಾವು ನಂಬುತ್ತೇವೆ. ಸ್ವತಂತ್ರವಾದ ಈ ಚುನಾವಣೆಯಿಂದ ಬಂದಿರುವ ಫಲಿತಾಂಶವನ್ನು ಸಕಲರೂ ನಿಸ್ಸಂಕೋಚವಾಗಿ ಸ್ವೀಕರಿಸುವರೆಂದು ನಾವು ನಂಬುತ್ತೇವೆ.

ಶ್ರೀ ರೆಡ್ಡಿಯವರು ಕಾಂಗ್ರೆಸ್ಸಿನ ಅಧ್ಯಕ್ಷಗದ್ದುಗೆಯನ್ನು ಏರಿ ಅದರ ಘನತೆ ಗೌರವಗಳನ್ನು ಹೆಚ್ಚಿಸುವುದಲ್ಲದೆ ಮೈಸೂರಿನ ಪ್ರಜೆಗಳೆಲ್ಲರ ಏಕಮಾತ್ರ ಗುರಿಯಾದ ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ಸಕಲ ಪ್ರಯತ್ನಗಳನ್ನೂ ಮಾಡಲೆಂದು ಹಾರೈಸುತ್ತೇವೆ.

ಹುಡುಗ ಪತ್ತೆ ಇಲ್ಲ

ಆರು ವರ್ಷ ವಯಸ್ಸಿನ ಶ್ರೀಕಂಠ ಎಂಬ ಹುಡುಗನು ನಂಜನಗೂಡಿನಿಂದ ಈಗ್ಗೆ ಮೂರು ದಿನಗಳ ಕೆಳಗೆ ತಪ್ಪಿಸಿಕೊಂಡು ಹೋದವನು ಇದುವರೆಗೆ ಪತ್ತೆಯಿಲ್ಲ. ಹುಡುಗನು ಸುಮಾರು ಎರಡು ಅಡಿ ಎತ್ತರವಾಗಿರುತ್ತಾನೆ. ಎಡ ಮೇಲೆ ಬಾವು ಎದ್ದು ಆಪರೇಷನ್ ಆದ ಕಲೆ ಇರುತ್ತೆ, ಬಲದ ಕಣ್ಣು ಮಾಲುಗಣ್ಣು, ತಲೆಯ ಸ್ವಲ್ಪ ಗಾಯದ ಗುರುತು ಇದೆ. ಮಹನೀಯರು ಯಾರಾದರೂ ಹುಡುಗನನ್ನು ಕಂಡಲ್ಲಿ ದಯವಿಟ್ಟು ಕೆಳಗೆ ಕಂಡ ವಿಳಾಸದಾರರ ವಶಕ್ಕೆ ತಲುಪಿಸಬೇಕಾಗಿ ಕೋರಲಾಗಿದೆ:- ಎಂ. ಸುಬ್ಬಯ್ಯ, ಅಮೀನ್, ನಂಜನಗೂಡು ಮುನ್ಸೀಫ್ ಕೋರ್ಟು

ಶ್ರೀ|| ಎಸ್. ಚನ್ನಯ್ಯನವರ ಹೇಳಿಕೆ

ಶ್ರೀ ಎಸ್. ಚನ್ನಯ್ಯನವರು ಈ ರೀತಿ ಒಂದು ಹೇಳಿಕೆ ಹೊರಡಿಸಿದ್ದಾರೆ:—

ಮೈಸೂರು ಕಾಂಗ್ರೆಸ್ ಅಧ್ಯಕ್ಷತೆ ಸಂಬಂಧ ತೀರ್ಮಾನಿಸಲು ಕಳೆದ ಜೂನ್ ೧೬ ನೇ ತಾರೀಖು ಸೇರಿದ ಮುಖಂಡರ ಸಭೆಯಲ್ಲಿ ಏನು ನಿರ್ಧಾರವಾಯಿತೆಂಬುದರ ಬಗ್ಗೆ ಶ್ರೀಗಳಾದ ಎಂ. ಎಲ್. ನಂಜರಾಜೇ ಅರಸಿನವರು ಕೆ. ಎಸ್. ಕುಮಾರನ್‌ರವರೂ ಪ್ರಕಟಿಸಿರುವ ಹೇಳಿಕೆಗಳಲ್ಲಿ ಅಂದು ರಾತ್ರಿ ೧೧ ಘಂಟೆಯಲ್ಲಿ ಶ್ರೀ ಸಿದ್ದಲಿಂಗಯ್ಯನವರನ್ನೇ ಆರಿಸುವುದಾಗಿ ತೀರ್ಮಾನವಾಯಿತೆಂದು ತಿಳಿಸಿದ್ದಾರೆ. ಇವರಿಬ್ಬರ ಹೇಳಿಕೆ ಹೊರಬೀಳುವುದರ ಮೊದಲು ಶ್ರೀ ದಾಸಪ್ಪನವರೊಂದು ಹೇಳಿಕೆಯಲ್ಲಿ ಶ್ರೀಗಳಾದ ಸಿದ್ದಲಿಂಗಯ್ಯ ಮತ್ತು ಚೆಂಗಲರಾಯ ರೆಡ್ಡಿ ಇವರಿಬ್ಬರಿಗೂ ರಚನಾತ್ಮಕ ಪ್ರಚಾರ ಆಗಬಹುದಾದ ಸೂಚನೆಗಳನ್ನು ವಿಮರ್ಶಿಸಲು ಮುಂದುವರಿಸಲಾಗಿತ್ತೆಂದು ಹೇಳಿದ್ದರು. ಪುನಃ ಮತ್ತೊಂದು ಹೇಳಿಕೆ ಹೊರಡಿಸಿ ತಾವು ಆ ದಿನ ರಾತ್ರಿ ೯ ಘಂಟೆಯವರೆಗೆ ಮಾತ್ರ ಸಭೆಯಲ್ಲಿದ್ದುದಾಗಿಯೂ ಆ ಮೇಲೆ ರಾತ್ರಿ ೧೧ ಘಂಟೆಗೆ ಆದ ತೀರ್ಮಾನ ತಮಗೆ ತಿಳಿದಿರಲಿಲ್ಲವೆಂದೂ ಆದುದರಿಂದ ಶ್ರೀಗಳಾದಂತ ನಂಜರಾಜೇಅರಸ್ ಮತ್ತು ಕುಮಾರನ್‌ರವರು ಹೇಳಿರುವುದೇ ಸರಿಯೆಂದೂ ವಾದಿಸಿದ್ದಾರೆ.

ಪತ್ರಿಕೆಗಳಿಗೆ ಹೇಳಿಕೆ ಕೊಡುವುದು ನನಗೆ ಇಷ್ಟವಿಲ್ಲ. ಈ ವಾದ ವಿವಾದದಲ್ಲಿ ಭಾಗವಹಿಸಲಂತೂ ಇನ್ನೂ ಇಷ್ಟವಿಲ್ಲ. ಆದರೆ ನಡೆದುದೇನೆಂಬುದನ್ನು ಮಹಾಜನರ ಗಮನಕ್ಕೆ ತರಬೇಕಾದುದು ನನ್ನ ಕರ್ತವ್ಯವೆಂದು ತಿಳಿದು ಈ ಹೇಳಿಕೆ ಹೊರಡಿಸಿದ್ದೇನೆ. ಕಳೆದ ಜೂನ್ ೧೬ ನೇ ತಾರೀಖು ಸೇರಿದ ಮುಖಂಡರ ಸಭೆಯಲ್ಲಿ ಶ್ರೀ ದಾಸಪ್ಪನವರು ರಾತ್ರಿ ೯ ಗಂಟೆಯವರೆವಿಗೆ ಮಾತ್ರ ತಾವಿದ್ದುದಾಗಿ ಹೇಳಿರುವುದು ಸರಿಯಲ್ಲ. ಆ ರಾತ್ರಿ ಸುಮಾರು ೧೦ ಗಂಟೆವರೆವಿಗೂ ಅವರು ಸಭೆಯಲ್ಲಿದ್ದರು. ಸಭೆ ಮುಗಿದ ಮೇಲೆಯೇ ಅವರಲ್ಲಿಂದ ಹೊರಟರು. ಶ್ರೀ ಸುಬ್ರಹ್ಮಣ್ಯಂರವರು ತಮ್ಮ ಮಾವನವರ ಮನೆಗೆ ನನ್ನನ್ನೂ ಊಟಕ್ಕೆ ಕರೆದಿದ್ದರು. ನಾವಿಬ್ಬರೂ ಊಟಕ್ಕೆ ಹೊರಡುವಾಗ ಶ್ರೀ ದಾಸಪ್ಪನವರು ತಮ್ಮನ್ನು ಚಾಮರಾಜಪೇಟೆಯಲ್ಲಿ ಬಿಡಬೇಕೆಂದೂ ಕೇಳಿದರು. ನಾವು ಮೂರು ಮಂದಿ ಚಾಮರಾಜಪೇಟೆಗೆ ಕಾರಿನಲ್ಲಿ ಹೋದೆವು. ಅಲ್ಲಿ ದಿವಂಗತ ಶ್ರೀ ಪುಟ್ಟಯ್ಯನವರ ಮನೆಗೆ ಶ್ರೀ ದಾಸಪ್ಪನವರು ಹೋಗಿ ಅಲ್ಲಿಗೆ ತಮ್ಮ ಪತ್ನಿಯವರು ಬಂದಿರಲಿಲ್ಲವೆಂಬ ವಿಷಯ ತಿಳಿದು ಕೊಂಚ ತಮ್ಮನ್ನು ವಿಶ್ವೇಶ್ವರಪುರದಲ್ಲಿ ಬಿಡಬೇಕೆಂದರು. ಸ್ವಲ್ಪ ದೂರ ನಾವು ಮೂರು ಮಂದಿ ಕಾರಿನಲ್ಲಿ ಹೋಗಿ ಶ್ರೀ ದಾಸಪ್ಪನವರನ್ನು ವಿಶ್ವೇಶ್ವರಪುರದಲ್ಲಿ ಬಿಟ್ಟು ಬರುವಂತೆ

[ಮುಂದಿನ ಪುಟ ನೋಡಿ]

ರಣಜಿತ್

2—8—46 ರಿಂದ

ರತ್ನಾವಳಿ

-: ಪಾತ್ರ :-

* ರತ್ನಮಾಲ * ಸುರೇಂದ್ರ

ಪ್ರತಿದಿನ ೩ ಆಟಗಳು

ಹೊಸ ಹೊಸ ನಮೂನೆಯ ಬಳೆಗಳು

ಈ ದಿನವೇ ನೋಡಿರಿ

ಸ್ವರ್ಗ ಸೀಮ ಬಳೆ / ಕಮಲ್ ಫ್ಲಾಲ್ ಬಳೆ } ಬಳೆಗಳು { ಸುಭಾಷ್ ಬಳೆ / ಗಾಂಧಿಜಿ ಬಳೆ

ಚಾಂದಿನಿ ಬಳೆ ಮತ್ತು ರಾಷ್ಟ್ರ ನಾಯಕರುಗಳ ಫೋಟೋ ಸಮೇತ ಒಡೆಯದ ಇದರತಕ್ಕಂತಹುದು.

ಮೈಸೂರು ಸಿಲ್ಕ್ ರಿಬ್ಬನ್‌ಗಳು, ಸ್ಟಾಂಡರ್ಡ್ ಬಳೆಗಳು

ಪ್ರಭಾತ್ ಬ್ಯಾಂಗಲ್ಸ್ ಸ್ಟೋರ್ಸ್,

ಚಾಮುಂಡೇಶ್ವರೀ ಟಾಕೀಸ್ ಬಿಲ್ಡಿಂಗ್, ಮೈಸೂರು.

ರಾಜ್ ಕಮಲ್ ಟಾಕೀಸ್, ಮೈಸೂರು

31-7-46 ನೇ ಬುಧವಾರದಿಂದ

ಮಧುರ ಗಾಯನದ ಸವಿ! ಸಂತೋಷದ ಸುರಿ ಮಳೆ!!

ಕನನ್ ಬಾಲ ಮುಖ್ಯಪಾತ್ರವಹಿಸಿರುವ

"ಬನ್‌ಫ್ಲೂಲ್"

ಪ್ರತಿ ದಿನ ೩ ಆಟಗಳು

ವೆರೈಟಿ ಸ್ಟೋರ್ಸ್

ಪೋಸ್ಟಾಫೀಸ್ ಬೀದಿ, ಶ್ರೀರಂಗಪಟ್ಟಣ

ನಮ್ಮಲ್ಲಿ ಪರಿಶುದ್ಧವಾದ ಕಾಫಿಪುಡಿ ದೊರೆಯುತ್ತದೆ. ನಿಮ್ಮ ಎದುರಿಗೆ ಪುಡಿ ಮಾಡಿಕೊಡಲಾಗುತ್ತದೆ.

ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್ ಕೊಡಲಾಗುತ್ತದೆ.

ಪಾರ್ಚ್‌ಮೆಂಟ್ ಪೌಂಡಿಗೆ		೧-೧೦-೦
ನೇಟಿವ್	,,	೧-೭-೮
ರೋಬಸ್ಟ	,,	೧-೩-೦

ಮತ್ತು ನಮ್ಮಲ್ಲಿ ಪ್ರತಿ ದಿನದ ಬಳಕೆ ಸಾಮಾನುಗಳೂ ಸ್ಟೇಷನರಿ ಸಾಮಾನುಗಳು ದೊರೆಯುತ್ತವೆ.

ಒಂದು ಸಾರಿ ಪರೀಕ್ಷಿಸಿ ನೋಡಿ.

ಪ್ರೊಪ್ರೈಟರ್,
ಸಿ. ನರಸಿಂಹ ಶಾಸ್ತ್ರಿ

ಅಪೇರಾ ಟಾಕೀಸ್

3—8—46 ರಿಂದ

ಭಕ್ತಕಲಾತಿ

(ತಮಿಳು)

ತಾರಾಗಣ :— ಹೊನ್ನಪ್ಪ ಭಾಗವತರ್, ತವಮಣಿ, ಕುಮುದಿನಿ, ಎನ್. ಎಸ್. ಕೃಷ್ಣನ್, ಟಿ. ಎ. ಮಧುರಂ

ಒಡೆಯರ್ ಪಬ್ಲಿಸಿಟೀಸ್ ಮೈಸೂರು

ಫೋನ್ ನಂ. 302 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಭಾನುವಾರ ೪—೮—೪೬ [ಸಂಚಿಕೆ ೧೧೦

ಮುಸ್ಲಿಂ ಲೀಗಿನವರಿಂದ ಕಂದಾಯದ ಸತ್ಯಾಗ್ರಹ

ಪತ್ರಿಕೋದ್ಯೋಗಿಗಳ ಪ್ರತಿಭಟನೆ

ಮೈಸೂರು ೪

ಸಾರ್ವಜನಿಕರು ವೃತ್ತಪತ್ರಿಕಾ ಶಾಸನವನ್ನು ರದ್ದುಪಡಿಸಬೇಕೆಂದು ಬಹಳ ದಿನಗಳಿಂದಲೂ ಒತ್ತಾಯಪಡಿಸುತ್ತಿದ್ದರೂ ಅದನ್ನು ಲಕ್ಷಿಸದೆ, ಸರ್ಕಾರದವರು ವಿಶ್ವಕರ್ಣಾಟಕ ಪತ್ರಿಕೆಗೆ ಠೇವಣಿ ನೋಟೀಸನ್ನು ಕೊಟ್ಟಿರುವುದಲ್ಲದೆ ಅದನ್ನು ಎರಡು ತಿಂಗಳ ಕಾಲ ನಿಲ್ಲಿಸಿ ಎರಡು ದಿನಗಳ ನಂತರ ಠೇವಣಿಯನ್ನು ಮುಟ್ಟುಗೋಲು ಹಾಕಿರುವುದನ್ನು ತೀವ್ರವಾಗಿ ಪ್ರತಿಭಟಿಸುತ್ತಾ, ಪತ್ರಿಕೆಯ ಸಂಪಾದಕರು ಮತ್ತು ಕಾರ್ಯಕರ್ತರುಗಳಿಗೆ ಸಹಾನುಭೂತಿಯನ್ನು ಸೂಚಿಸಿಯೂ ಮೈಸೂರು ನಗರದ ಪತ್ರಿಕೋದ್ಯೋಗಿಗಳು ನಿನ್ನೆ ದಿನ ನಡೆದ ತಮ್ಮ ಸಂಘದ ವಿಶೇಷ ಸಭೆಯಲ್ಲಿ ನಿರ್ಣಯವನ್ನು ಅಂಗೀಕರಿಸಿದರು. ಅಧ್ಯಕ್ಷರಾದ ಶ್ರೀ ಅಗರಂ ರಂಗಯ್ಯನವರು ವಿಶ್ವಕರ್ಣಾಟಕ ಪತ್ರಿಕೆಯ ಸೇವೆಯನ್ನು ಕೊಂಡಾಡಿ ಇದುವರೆಗೆ ಅದು ಕರಾಳ ಶಾಸನದ ಬಾಣಪ್ರಯೋಗಗಳನ್ನು ಎದುರಿಸಿ ನಿಂತು ತನ್ನ ಸೇವೆಯನ್ನು ಮುಂದುವರಿಸಿರುವಂತೆಯೇ ಈಗ ಬಂದಿರುವ ವಿಪತ್ತಿನಿಂದಲೂ ಪಾರಾಗಿ ಬಹುಕಾಲ ದೇಶಸೇವೆ ಮಾಡಲೆಂದು ಹಾರೈಸಿದರು.

ಸನ್ಮಾನ ಸಭೆ

ಮೈಸೂರು ವಿಶ್ವಕರ್ಮ ಸಮಾಜ ಮತ್ತು ವಿಶ್ವಕರ್ಮ ವಿದ್ಯಾರ್ಥಿ ನಿಲಯದವರು ಮೊನ್ನೆ ಸಂಜೆ ಸಾ|| ಶಾರದಮ್ಮನವರ ಛತ್ರದಲ್ಲಿ ಶ್ರೀಮಾನ್ ಆರ್. ರಾಮಚಂದ್ರರಾವ್ ಬೂಂಭೂರೆಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿಸಿ ಅರಮನೆ ಕಂಟ್ರಾಕ್ಟರ್ ಶ್ರೀಮಾನ್ ಟಿ. ಚಲುವಾಚಾರ್ಯರವರಿಗೆ "ವಾಸ್ತುಕಲಾ ಸೇವಾಸಕ್ತ" ಎಂಬ ಪ್ರಶಸ್ತಿಯನ್ನು ಆಳುವ ಮಹಾಪ್ರಭುಗಳವರು ಕೊಟ್ಟು ಪ್ರೋತ್ಸಾಹಿಸಿರುವುದಕ್ಕಾಗಿ ಶಿಲ್ಪಕಲಾ ಮಂಡಳಿಯವರೂ, ವಿಶ್ವಕರ್ಮ ಸಮಾಜ ಮತ್ತು ವಿದ್ಯಾರ್ಥಿ ನಿಲಯದವರೂ ಸಹ ಬಿನ್ನವತ್ತಳೆಯ ಮೂಲಕ ತಮ್ಮ ಅಭಿನಂದನೆಗಳನ್ನು ಚಲುವಾಚಾರ್ಯರಿಗೆ ಸಮರ್ಪಿಸಿದರು.

ಡಾ|| ಸಿದ್ದಪ್ಪನವರಿಗೆ ಸನ್ಮಾನ

ಶ್ರೀ ಮನ್ಮಹಾರಾಜರವರಿಂದ ಸನ್ಮಾನಿಸಲ್ಪಟ್ಟು ಧರ್ಮಪ್ರವರ್ತ ಎಂಬ ಬಿರುದನ್ನು ಪಡೆದಂಥಾ ಶ್ರೀ|| ಡಾ|| ಟಿ.ಎನ್. ಸಿದ್ದಪ್ಪನವರನ್ನು ಸತ್ಕರಿಸುವುದಕ್ಕೋಸ್ಕರ ಮೈಸೂರು ಥಿಯಸಾಫಿಕಲ್ ಲಾಡ್ಜಿನವರು ಗುರುವಾರ ಸಾಯಂಕಾಲ ಚಾಮುಂಡೀಪುರದಲ್ಲಿ ಶ್ರೀ ಗುಂಡಪ್ಪ ಎಸ್. ಕೂರ್ಗಾಡ್‌ರವರ ಮನೆಯಲ್ಲಿ ಸಂತೋಷ ಕೂಟವನ್ನು ಏರ್ಪಡಿಸಿದ್ದರು. ಉಪಹಾರಾನಂತರ ಶ್ರೀ|| ಕೂರ್ಗಾಡು ಗುಂಡಪ್ಪನವರು ಭಾಷಣ ಮಾಡುತ್ತ ಧರ್ಮಪ್ರವರ್ತ ಶ್ರೀ ಸಿದ್ದಪ್ಪನವರಿಗೆ ಭಗವಂತನು ಆಯುರಾರೋಗ್ಯ ಐಶ್ವರ್ಯಗಳನ್ನು ಅನುಗ್ರಹಿಸಬೇಕೆಂದೂ, ಶ್ರೀಮನ್ಮಹಾರಾಜರವರಿಂದ ಇನ್ನೂ ಹೆಚ್ಚಿನ ಬಹುಮಾನಗಳು ಅವರಿಗೆ ದೊರಕಬೇಕೆಂದೂ, ಧರ್ಮಕಾರ್ಯಗಳಲ್ಲೊಂದಾಗಿ ಮೈಸೂರು ಲಾಡ್ಜಿಗೆ ಸರಿಯಾದ ಕಟ್ಟಡವನ್ನು ನಿರ್ಮಿಸಿಕೊಡಬೇಕೆಂದೂ [illegible] ಕೋರಿದರು. ಶ್ರೀ [illegible] ಮೊದಲಿಯಾರ್‌ರವರು ಬೆಂಗಳೂರು ಲಾಡ್ಜಿನ ಪರವಾಗಿ ಅಭಿನಂದನೆಗಳನ್ನು ಅರ್ಪಿಸಿ, [illegible] ಮೈಸೂರು [illegible] ಸಂಜೆ [illegible]

ಇರಾಕಿಗೆ ಭಾರತದ ಸೈನ್ಯ

ಭಾರತಕ್ಕೆ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಪೆಟ್ರೋಲ್ ಒದಗಿಸುವ ದಕ್ಷಿಣ ಪರ್ಷಿಯಾದ ಎಣ್ಣೆ ಗಣಿಗಳಲ್ಲಿ ಅನೇಕ ಭಾರತೀಯರು ಕೆಲಸದಲ್ಲಿರುವರು. ಇವರಿಗೂ ಅಲ್ಲಿಯ ಅರಬ್ಬರಿಗೂ ಘರ್ಷಣೆಗಳಾಗುವ ಸಂಭವವಿರುವುದರಿಂದ ಭಾರತೀಯರ ಮತ್ತು ಬ್ರಿಟಿಷರ ಹಿತರಕ್ಷಣೆಗೆ ಭಾರತದಿಂದ ಸೈನ್ಯಗಳನ್ನು ಇರಾಕಿಗೆ ಕಳುಹಿಸಲಾಗುತ್ತಿದೆ ಎಂದು ದೆಹಲಿಯ ಒಂದು ವರದಿ ತಿಳಿಸುತ್ತದೆ.

ಬಟ್ಟೆ ಹಂಚಿಕೆ ತೊಂದರೆ

ಚನ್ನರಾಯಪಟ್ಟಣದ ಜವಳಿ ವರ್ತಕರ ಸಂಘದ ಅಧ್ಯಕ್ಷರಾದ ಶ್ರೀ ಸಿ. ಟಿ. ರಾಮಕೃಷ್ಣಶೆಟ್ಟರು ಈ ರೀತಿ ಹೇಳಿಕೆ ಕೊಟ್ಟಿರುತ್ತಾರೆ:—

ಕಳೆದ ಎರಡು ವರ್ಷಗಳಿಂದ ಈ ಊರು ವರ್ತಕರ ಸಂಘದವರು ಯಾವ ಪ್ರಕಾರವೂ ಇಲ್ಲದೆ ಬಟ್ಟೆ ಮಾರಾಟ ಮಾಡುತ್ತಿರುವರು. ಸಂಘದ ಅಧ್ಯಕ್ಷನಾಗಿ ನಾನು ಕೂಪನ್‌ಗಳನ್ನು ಕೊಡುತ್ತಿದ್ದೆ. ಈ ವಿಚಾರದಲ್ಲಿ ಜನಗಳಿಗೆ ತೊಂದರೆಯಾಗಿದೆ ಎಂಬ ದೂರು ಬಂದಿರಲಿಲ್ಲ. ಈಚೆಗೆ ಹಾಸನ ಜಿಲ್ಲೆಯ ಡೆಪ್ಯುಟಿ ಕಮೀಷನರವರು ಒಂದು ಆಜ್ಞೆ ಹೊರಡಿಸಿ, "ನೀವು ಅಮಲ್ದಾರರಿಂದ ಕೂಪನ್ ತಿರಸ್ಕಾರ ಮಾಡಿದ್ದರಿಂದ ಇನ್ನು ಮುಂದೆ ನೀವು ಯಾವ ಮಿಲ್ ಬಟ್ಟೆಗೂ ಕೂಪನ್ ಕೊಡಲಾಗದು. ಅಮಲ್ದಾರರು ಕೊಡುವ ಕೂಪನ್ ಮೇಲೆ ಬಟ್ಟೆ ಹಂಚಬೇಕು" ಎಂದು ತಿಳಿಸಿರುತ್ತಾರೆ.

ಈ ಆಜ್ಞೆಯನ್ನು ನೋಡಿ ಸಂಘದವರಿಗೆ ತುಂಬಾ ವಿಷಾದ ಉಂಟಾಗಿದೆ. ಅಮಲ್ದಾರರವರು ಕೊಟ್ಟಿರುವ ಯಾವ ಕೂಪನ್‌ಗಳನ್ನೂ ಈ ಸಂಘದವರು ತಿರಸ್ಕರಿಸಿರುವುದಿಲ್ಲ. ಸಂಘದವರು ಅಮಲ್ದಾರರವರನ್ನು ಕಂಡು ಈ ವಿಚಾರ ತಿಳಿಸಿದಾಗ ಅವರು ಯಾವ ಕೂಪನ್‌ಗಳನ್ನೂ ಕೊಟ್ಟಿರಲಿಲ್ಲವೆಂದೂ ಸಂಘದವರಾರೂ ಅವುಗಳನ್ನು ತಿರಸ್ಕರಿಸಿರುವುದಿಲ್ಲವೆಂದೂ ತಿಳಿಸಿರುತ್ತಾರೆ. ಹಾಗಾದರೆ ಈ ಹೊಸ ರೀತಿಯ ಆಜ್ಞೆಗೆ ಏನು ಕಾರಣವಿದ್ದರೂ ತಿಳಿಯುವುದು ಕಷ್ಟವಾಗಿದೆ. ಈ ಆಜ್ಞೆಗೆ [illegible] ಅನ್ಯಾಯವೂ ಆಗಿರುತ್ತದೆ. ಅಲ್ಲದೆ ಇದು ಕೇವಲ ಈ ಜಿಲ್ಲೆಗೆ [illegible] ಮಾತ್ರ ಅನ್ವಯವಾಗ [illegible] [illegible]

ದಕ್ಷಿಣ ಆಫ್ರಿಕದ ಪ್ರಶ್ನೆಯಲ್ಲಿ ರಾಜೀ ಪ್ರಯತ್ನ

ಮಿತ್ರ ಸಂಯುಕ್ತ ರಾಷ್ಟ್ರಗಳ ಸಮಿತಿಯ ಮುಂದೆ ದಕ್ಷಿಣ ಆಫ್ರಿಕದ ವರ್ಣ ವಿಭೇದದ ಶಾಸನದ ವಿರುದ್ಧವಾಗಿ ಹಿಂದೂಸ್ಥಾನವು ಪ್ರಸ್ತಾಪ ಮಾಡಿದೆಯಷ್ಟೆ. ಇದನ್ನು ಅಲ್ಲಿ ವಿಮರ್ಶೆಯಾಗಲು ಬಿಡದೆ ಹೊರಗಡೆಯೇ ರಾಜಿ ಮಾಡಿಕೊಳ್ಳಲು ಉದ್ದೇಶಿಸಿ ಆಫ್ರಿಕದ ಪ್ರಧಾನಿ ಜನರಲ್ ಸ್ಮಟ್ಸ್‌ರವರು ಡಿಹಲಿಯೊಡನೆ ಸಂಧಾನಗಳನ್ನು ಆರಂಭಿಸಬಹುದೆಂದು ವರದಿಯಾಗಿದೆ. ಇದಕ್ಕೆ ಸಮರ್ಥನೆ ದೊರೆತಿಲ್ಲ.

ಶಿವರಾಮ ದೀಕ್ಷಿತರ ನಿಧನ

ರಾಜಧಾನಿಯ ಸುಪ್ರಸಿದ್ಧ ಪುರೋಹಿತರಾದ ವೇ|| ಮೂ|| ಬ್ರಂ|| ಶ್ರೀ ವಾಧ್ಯಾರ್ ಶಿವರಾಮದೀಕ್ಷಿತರವರು ನಿನ್ನೆ ರಾತ್ರಿ ತಮ್ಮ ೮೩ನೇ ವಯಸ್ಸಿನಲ್ಲಿ [illegible] ಸ್ವರ್ಗಸ್ಥರಾದರೆಂದು ತಿಳಿಸಲು ಅತ್ಯಂತ ವಿಷಾದಿಸುತ್ತೇವೆ. ಮೃತರ ಆತ್ಮಕ್ಕೆ ಭಗವಂತನು ಶಾಂತಿ ನೀಡಲೆಂದು ಬೇಡುತ್ತೇವೆ. ಅವರ ಬಂಧುವರ್ಗದವರಿಗೆ ನಮ್ಮ ಹೃತ್ಪೂರ್ವಕವಾದ ಅನುತಾಪವನ್ನು ಸಲ್ಲಿಸುತ್ತೇವೆ.

ನಗರ ಕಾಂಗ್ರೆಸ್ ಸಮಿತಿ

ರಾಜಧಾನಿಯ ನಗರ ಕಾಂಗ್ರೆಸ್ ಸಮಿತಿಯ ಕಾರ್ಯನಿರ್ವಾಹಕ ಮಂಡಳಿಯ ಚುನಾವಣೆಯು ನಿನ್ನೆ ನಡೆಯಿತು. ಶ್ರೀ ಎಸ್. ಚನ್ನಯ್ಯನವರು ಅಧ್ಯಕ್ಷರಾಗಿಯೂ ಶ್ರೀ ಬಿ. ನಾರಾಯಣಸ್ವಾಮಿಯವರು ಉಪಾಧ್ಯಕ್ಷರಾಗಿಯೂ, ಶ್ರೀ ಟಿ. ನರಸಿಂಹಯ್ಯಂಗಾರ್‌ರವರು ಕಾರ್ಯದರ್ಶಿಯಾಗಿಯೂ, ಶ್ರೀ ಎಂ. ಆರ್. ಸಿ. ಬಸಪ್ಪನವರು ಕೋಶಾಧಿಕಾರಿಯಾಗಿಯೂ ಚುನಾಯಿಸಲ್ಪಟ್ಟರು.

ಬೈಸಿಕಲ್ ಸಿಕ್ಕಿದೆ

ದೇವರಾಜ ಪೊಲೀಸ್ ಸ್ಟೇಷನ್ನಿನಲ್ಲಿ ವಾರಸುದಾರರಿಲ್ಲದ ಕರೀ ಬಣ್ಣದ ಬೈಸಿಕಲ್ ಒಂದು ಇರುತ್ತದೆ. [illegible] ೧೦ನೇ ನಂಬರ್ ಇದೆ. [illegible] ವರ್ಷದ [illegible]

ಲೀಗಿನ ಕಂದಾಯ ನಿರಾಕರಣೆಯ ಸತ್ಯಾಗ್ರಹವೇ?

ಮುಸ್ಲಿಂ ಲೀಗಿನವರು ಪಾಕೀಸ್ಥಾನವನ್ನು ಗಳಿಸುವ ಸಲುವಾಗಿ ಹೂಡುವ ಸತ್ಯಾಗ್ರಹದಲ್ಲಿ ಕೇಂದ್ರ ಸರ್ಕಾರದ ವಿಧಿಸುವ ತೆರಿಗೆಗಳನ್ನು ಕೊಡುವುದಿಲ್ಲವೆಂದು ಮುಸ್ಲಿಂ ಲೀಗಿನ ಕೌನ್ಸಿಲ್ ಸದಸ್ಯರಾದ ಮಿ|| [illegible] ತಿಳಿಸಿರುವರು. ರಾಜ್ಯಾಂಗ ರಚನಾ ಸಭೆಗೆ ಸದಸ್ಯರ ಮುಸ್ಲಿಮರೂ ಬಾರದಿರುವಂತೆ ಮಾಡುವ ಸಲುವಾಗಿ ಲೀಗಿನ ಸದಸ್ಯರಾರೂ ಆ ಸಭೆಗೆ ರಾಜೀನಾಮೆಯನ್ನೂ ಸಹ ಕೊಡುವುದಿಲ್ಲವೆಂದು ಅವರು ತಿಳಿಸಿದರು. ಸಿಂಧ್ ಮತ್ತು ಬಂಗಾಳದ ಮಂತ್ರಿಮಂಡಲಗಳು ಸಹ ರಾಜೀನಾಮೆಯನ್ನು ಕೊಡುವುದಿಲ್ಲ.

ಸರ್ ಮೊದಲಿಯಾರರ ನಾಯಕತ್ವದಲ್ಲಿ ರಾಜ್ಯಾಂಗ ಸಭಾ ಪ್ರತಿನಿಧಿಗಳು

ಮೈಸೂರಿನಿಂದ ಭಾರತ ರಾಜ್ಯಾಂಗ ಶಾಸನ ಸಭೆಗೆ ಏಳು ಜನ ಪ್ರತಿನಿಧಿಗಳನ್ನು ಕಳಿಸಿಕೊಳ್ಳಲಾಗುವುದೆಂದು ವರದಿಯಾಗಿದೆ. ನೂತನ ದಿವಾನರಾದ ಸರ್ ಎ. ರಾಮಸ್ವಾಮಿ ಮೊದಲಿಯಾರರು ಅವರುಗಳ ನಾಯಕರಾಗುವರೆಂದು ಹೇಳಲಾಗಿದೆ. ಶಾಸನ ಸಭೆಯಿಂದ ಮೂರು ಜನರನ್ನೂ ಪ್ರಜಾಪ್ರತಿನಿಧಿ ಸಭೆಯಿಂದ ಮೂವರನ್ನೂ ಚುನಾಯಿಸಲಾಗುವುದು. ನಿವೃತ್ತ ನ್ಯಾಯಾಧೀಶರಾದ ಶ್ರೀ ಸಿ. ಸುಬ್ರಹ್ಮಣ್ಯ ಅಯ್ಯರ್ ಮತ್ತು ಸಿ. ಮಹದೇವಪ್ಪನವರು, [illegible] ಮಾಜಿ ಮಂತ್ರಿಗಳಾದ ಮಿ|| ಮಹಮದ್ ಇಮಾಮ್‌ರೂ ಶಾಸನ ಸಭೆಯಿಂದ ಆರಿಸಲ್ಪಡುವ ಸಂಭವವಿದೆ. ಹೊಸ ದಿವಾನರು ಬಂದನಂತರ ಯಾವುದೂ ನಿರ್ಧಿಷ್ಟವಾಗಿ ಗೊತ್ತಾಗುವುದು.

ಗ್ರಾಮಾಧಿಕಾರಿಗಳ ಸಮ್ಮೇಳನ

ಸಂಸ್ಥಾನದ ಗ್ರಾಮಾಧಿಕಾರಿಗಳ ಮಹಾಸಮ್ಮೇಳನವು ಮುಂದಿನ ತಿಂಗಳು ೨೦, ೨೧, ೨೨ನೇ ತಾರೀಖುಗಳಲ್ಲಿ ಶಿವನಸಮುದ್ರದಲ್ಲಿ ನಡೆಯುವುದು. ಶ್ರೀಯುತ ಸಿ. ಟೀ. ರಾಜೇ ಅರಸಿನವರು ಅಧ್ಯಕ್ಷತೆ ವಹಿಸುವರು. ಚರ್ಚೆಯಾಗಬೇಕಾದ ವಿಷಯಗಳನ್ನು ಈ ತಿಂಗಳ ಅಂತ್ಯದೊಳಗೆ ಬೆಂಗಳೂರು ಕೇಂದ್ರ ಕಾರ್ಯಾಲಯಕ್ಕೆ ಕಳುಹಿಸಿ ಕೊಡಬೇಕಾಗಿ ಕೋರಲಾಗಿದೆ. ಸಮ್ಮೇಳನದ [illegible] ಎರಡು [illegible] ಕೇಂದ್ರ ಸಂಘಕ್ಕೆ ಕಳುಹಿಸಬೇಕೆಂದು ಕೋರಲಾಗಿದೆ.

[illegible] ಮುಸ್ಲಿಮರ ನಿರ್ಣಯ

ಮುಸ್ಲಿಮರ [illegible] ಸಂಸ್ಥೆಗಳವನ್ನು [illegible] ಇಲ್ಲದೆ [illegible] ಬಿಡಲಿಲ್ಲವೆಂದೆ [illegible] ನಿರ್ಧಾರವನ್ನು [illegible] [illegible]

ಸಾಧ್ವಿ

ತಾ॥ ೪-೮-೪೬ ಭಾನುವಾರ

ಮೈಸೂರಿನಲ್ಲಿ ಹೇಗೆ?

ಭಾರತ ರಾಜ್ಯಾಂಗ ರಚನಾ ಸಭೆಗೆ ತಮ್ಮ ಸಂಸ್ಥಾನದಿಂದ ಚುನಾಯಿತ ಪ್ರತಿನಿಧಿಯನ್ನೇ ಕಳುಹಿಸಿಕೊಡುವುದಾಗಿ ಕೊಚ್ಚಿ ಸಂಸ್ಥಾನದ ಮಹಾರಾಜರು ತಿಳಿಸಿರುತ್ತಾರೆ. ಬ್ರಿಟಿಷ್ ಪ್ರಾಂತಗಳೊಡನೆ ಹೊಂದಿಕೊಂಡು ಹೋಗುವುದರಿಂದಲೇ ಸಂಸ್ಥಾನಗಳ ರಾಜರುಗಳು ಮತ್ತು ಪ್ರಜೆಗಳ ಹಿತಸಾಧನೆಯಾಗುವುದೆಂದು ಅವರು ತಿಳಿಸಿದ್ದಾರೆ. ಈ ರೀತಿ ಪ್ರಜೆಗಳಿಂದ ಚುನಾಯಿತರಾದವರನ್ನೇ ಕಳುಹಿಸುವುದಾಗಿ ಯಾವ ರಾಜರೂ ಇದುವರೆಗೆ ಘೋಷಿಸಿರುವುದಿಲ್ಲ. ಆದುದರಿಂದ ಕೊಚ್ಚಿ ರಾಜರ ಉದಾರ ಮನೋಭಾವವನ್ನು ದೇಶದ ಮುಂದಾಳುಗಳೆಲ್ಲರೂ ಮುಕ್ತಕಂಠದಿಂದ ಹೊಗಳಿದ್ದಾರೆ.

ಈಗಾಗಲೇ ಜಾರಿಯಲ್ಲಿರುವ ಉದಾರ ಧೋರಣೆಯನ್ನು ಜವಾಬ್ದಾರೀ ಸರ್ಕಾರದ ಮಾರ್ಗದಲ್ಲಿ ಇನ್ನೂ ವಿಸ್ತರಿಸಲು ಸಹ ಕೊಚ್ಚಿ ರಾಜರು ಕಾರ್ಯಕ್ರಮಗಳನ್ನು ಕೈಗೊಳ್ಳುವುದಾಗಿ ತಿಳಿಸಿದ್ದಾರೆ. ಭಾಷಾವಾರು ಪ್ರಾಂತಗಳ ರಚನೆಯ ತತ್ವವನ್ನು ಸಹ ಅವರು ಅಂಗೀಕರಿಸಿ ಇಡೀ ಕೇರಳ ದೇಶವು ಕೇಂದ್ರೀಕೃತವಾದ ಒಂದು ಆಡಳಿತಕ್ಕೆ ಒಳಪಡಬೇಕೆಂಬ ಅಭಿಪ್ರಾಯವನ್ನು ಸೂಚಿಸಿದ್ದಾರೆ. ತಿರುವಾಂಕೂರು, ಮಲಬಾರು ಮತ್ತು ಕೊಚ್ಚಿ ಪ್ರದೇಶಗಳನ್ನು ಒಂದುಗೂಡಿಸಿ ಒಂದೇ ರಾಜ್ಯವನ್ನಾಗಿ ಮಾಡಬೇಕೆಂದೂ, ಅದಕ್ಕಾಗಿ ಮಾಡಬೇಕಾದ ಸಕಲ ತ್ಯಾಗಗಳಿಗೂ ತಾವು ಸಿದ್ಧರಿರುವುದಾಗಿಯೂ ಸಹ ಅವರು ಹೇಳಿದ್ದಾರೆ. ಪ್ರಚಲಿತವಾಗಿರುವ ಅತ್ಯಂತ ಪ್ರಾಮುಖ್ಯವಾದ ಎರಡು ಪ್ರಶ್ನೆಗಳ ವಿಚಾರದಲ್ಲಿ ಕೊಚ್ಚಿನ ರಾಜರು ಸ್ಪಷ್ಟವಾದ ನೀತಿಯನ್ನು ಪ್ರತಿಪಾದಿಸಿ ಸಕಲ ಭಾರತೀಯರ ಮೆಚ್ಚಿಗೆಗೂ ಪಾತ್ರರಾಗಿದ್ದಾರೆ.

ತಿರುವಾಂಕೂರಿನಲ್ಲಿ ಅರ್ಧಭಾಗದ ಸದಸ್ಯರನ್ನು ಸರ್ಕಾರದವರು ನಾಮಕರಣ ಮಾಡಿಯೂ, ಉಳಿದ ಅರ್ಧವನ್ನು ಪ್ರಜೆಗಳಿಂದ ಚುನಾಯಿತರಾದವರ ಮೂಲಕವೂ ರಾಜ್ಯಾಂಗ ರಚನಾ ಸಭೆಗೆ ಕಳುಹಿಸಿಕೊಡುವುದಾಗಿ ಅಲ್ಲಿನ ದಿವಾನರು ಹೇಳಿರುತ್ತಾರೆ. ಇದು ಸಂಸ್ಥಾನದ ಪ್ರಜೆಗಳಿಗೆ ಸಮಾಧಾನವನ್ನುಂಟುಮಾಡಲಾರದು. ರಾಜ್ಯಾಂಗ ರಚನೆಯು ಮುಖ್ಯವಾಗಿ ಪ್ರಜೆಗಳಿಗೆ ಸಂಬಂಧಪಟ್ಟ ಅಂಶ. ಬ್ರಿಟಿಷರು ತಮ್ಮ ಸಾರ್ವಭೌಮತ್ವವನ್ನು ತ್ಯಜಿಸಿ ಪ್ರಜಾವರ್ಗದವರಿಗೆ ಅದನ್ನು ವರ್ಗಾಯಿಸುವವರಾಗಿದ್ದಾರೆ. ಹೀಗಿರುವಲ್ಲಿ ಸಂಸ್ಥಾನಗಳ ಪ್ರಜೆಗಳಿಗೂ ಅದೇ ಅಧಿಕಾರವು ಇರಬೇಕಾದುದು ಸಹಜವಾಗಿದೆ. ಬ್ರಿಟಿಷ್ ಭಾರತದ ಪ್ರಜೆಗಳಿಗೆ ಲಭಿಸುವ ಹಕ್ಕನ್ನು ಸಂಸ್ಥಾನಗಳ ಪ್ರಜೆಗಳಿಗೆ ಇಲ್ಲವೆನ್ನುವುದು ಸರಿಯಲ್ಲ.

ಇತರ ಸಂಸ್ಥಾನಗಳು ಹಲವು ಬಗೆಯಲ್ಲಿ ಪ್ರಕೃತದ ಸಮಸ್ಯೆಗಳ ವಿಷಯವಾಗಿ ತಮ್ಮ ರೀತಿನೀತಿಗಳನ್ನು ನಿರೂಪಿಸುತ್ತಿವೆ. ಆದರೆ ನಮ್ಮ ಮೈಸೂರಿನಲ್ಲಿ ಯಾವುದೊಂದು ವಿಷಯವೂ ಪ್ರಜೆಗಳಿಗೆ ತಿಳಿಯಬಂದಿಯೇ ಇಲ್ಲ. ದಿವಾನರಾಗಲಿ, ಮಂತ್ರಿಗಳಾಗಲಿ, ರಾಜ್ಯಾಂಗ ಸಮಿತಿಯ ಸದಸ್ಯತನದ ಆಧಾರ ಬೇರೆ ಯಾವ ವಿಷಯದಲ್ಲಿಯೂ ಸರ್ಕಾರದವರು ಅನುಸರಿಸುವ ನೀತಿಯು ಸಾರ್ವಜನಿಕರಿಗೆ ತಿಳಿದಿಲ್ಲ. ಶಾಸನ ಸಭೆಗಳ ಸದಸ್ಯರ ಹಲವರನ್ನು ತೆಗೆದುಕೊಳ್ಳುವುದಾಗಿ ದಿವಾನರು ಹೇಳಿದುದು ಬಿಟ್ಟರೆ ರಾಜ್ಯಾಂಗ ರಚನೆಯ ವಿಚಾರದಲ್ಲಿ ಇದುವರೆಗೆ ಯಾವುದೊಂದು ಕ್ರಮವೂ ಹೊರಬಿದ್ದಿಲ್ಲ. ಇದು ಅತ್ಯಂತ ಶೋಚನೀಯ ವಿಷಯ.

ಕಾಲವು ಮೀರುತ್ತಿದೆ. ಈಗಾಗಲೇ ಪ್ರಾಂತಗಳಿಂದ ಪ್ರತಿನಿಧಿಗಳನ್ನು ಚುನಾಯಿಸಲಾಗಿದೆ. ಸಂಸ್ಥಾನಗಳಿಂದ ಚುನಾಯಿಸುವ ಕಾಲವು ಸನ್ನಿಹಿತವಾಗಿದೆ. ನಮ್ಮ ಸರ್ಕಾರದವರು ಕೂಡಲೇ ಈ ವಿಚಾರದಲ್ಲಿ ನಿರ್ಧಾರವನ್ನು ಮಾಡಬೇಕು. ಪ್ರಜೆಗಳ ಆಶೋತ್ತರಗಳನ್ನು ಈಡೇರಿಸಬೇಕು. ಪ್ರಜೆಗಳಿಂದ ಚುನಾಯಿತರಾದ ಪ್ರತಿನಿಧಿಗಳನ್ನೇ ರಾಜ್ಯಾಂಗ ಸಮಿತಿಗೆ ಕಳುಹಿಸುವಂತೆ ಶ್ರೀಮನ್ ಮಹಾರಾಜರವರಿಗೆ ಸಲಹೆ ಮಾಡಬೇಕು. ಹಾಗೆ ಮಾಡಿದರೆ ಇಂದಿನ ವಾತಾವರಣವು ಬಹಳಮಟ್ಟಿಗೆ ತಿಳಿಯಾಗಲು ಸಹಾಯವಾಗುವುದೆಂದು ನಾವು ನಂಬುತ್ತೇವೆ.

ಪೋಲೀಸಿನವರ ಅತ್ಯಾಚಾರ

ಮೈಸೂರು ರೈಲ್ವೆಸ್ಟೇಷನ್ ಆರಸೀಕೆರೆಯ ಪ್ಲಾಟ್ ಫಾರಂನಲ್ಲಿ ೧-೮-೪೬ ನೇ ಸಾಯಂಕಾಲ ೬ ಗಂಟೆಯಲ್ಲಿ ನಾಗರಹಳ್ಳಿ, ಕೃಷ್ಣರಾಜಸಾಗರ, ಬೆಳಗೊಳ ಮೊದಲಾದ ಸ್ಥಳಗಳಿಂದ ಹೈಸ್ಕೂಲ್, ಕಾಲೇಜುಗಳಿಗೆ ವ್ಯಾಸಂಗಕ್ಕಾಗಿ ಬರುತ್ತಿರುವ ವಿದ್ಯಾರ್ಥಿಗಳು ಎಲ್ಲಿಯೂ ಸ್ಥಳವಿಲ್ಲದೆ ಇರಲು ಕೇವಲ ೫-೬ ಜನ ರಿಜರ್ವ್ ಪೋಲೀಸಿನವರು ಕುಳಿತಿದ್ದ ಒಂದು ದೊಡ್ಡ ಬೋಗಿಯಲ್ಲಿ ಕುಳಿತುಕೊಳ್ಳಲು ಹೋದಾಗ ರೈಲ್ವೇ ಇಲಾಖೆಯವರಿಗೆ ವಿರೋಧವಾಗಿ ವರ್ತಿಸುವುದಲ್ಲದೆ ವಿದ್ಯಾರ್ಥಿಗಳನ್ನು ಕತ್ತು ಹಿಡಿದು ಗಾಡಿಯಿಂದ ಹೊರಕ್ಕೆ ನೂಕಿದರು. ರೈಲ್ವೇ ಇಲಾಖೆಯವರೂ ಪೋಲೀಸಿನವರೂ ಇಂದಿನ ವಿದ್ಯಾರ್ಥಿಗಳು ಮುಂದಿನ ಪ್ರಜೆಗಳೆಂಬುದನ್ನು ಮರೆತಿರುವಂತೆ ತೋರುತ್ತದೆ. ಇನ್ನಾದರೂ ಇಲಾಖೆಯವರು ವಿದ್ಯಾರ್ಥಿಗಳಿಗಾಗಿ ಒಂದು ಬೋಗಿಯನ್ನು ರಿಜರ್ವ್ ಮಾಡಿಕೊಡಬೇಕಾಗಿ ನೊಂದ ವಿದ್ಯಾರ್ಥಿಗಳ ಪರವಾಗಿ ಪ್ರಾರ್ಥಿಸುತ್ತೇನೆ.

ಹೆಚ್. ರಾಮಚಂದ್ರ

ಬೆಂಗಳೂರಿನಲ್ಲಿ ವಿಮಾನ ಮತ್ತು ರೈಲ್ವೆ ಗಾಡಿಗಳ ತಯಾರಿ

ಬೆಂಗಳೂರಿನಲ್ಲಿರುವ ಹಿಂದೂಸ್ಥಾನ್ ವಿಮಾನ ಕಾರ್ಖಾನೆಯಲ್ಲಿ ವಿಮಾನಗಳನ್ನು ತಯಾರಿಸಬಹುದೆಂದು ಬ್ರಿಟನ್ನಿನಿಂದ ಭಾರತಕ್ಕೆ ಬಂದಿದ್ದ ವಿಮಾನ ನಿಯೋಗದವರು ಇತ್ತಿದ್ದ ಸಲಹೆಯಂತೆ ವಿಮಾನಗಳನ್ನು ತಯಾರಿಸಲಾಗುವುದು. ಇಲ್ಲಿ ೧೦೦ ರೈಲ್ವೆ ಗಾಡಿಗಳನ್ನೂ ತಯಾರಿಸಲಾಗುವುದು. ಈ ಕಾರ್ಖಾನೆಗೆ ಮೊದಲನೇ ಐದು ವರ್ಷಗಳಲ್ಲಿ ೧೩೦ ಲಕ್ಷ ರೂಗಳ ಖರ್ಚು ಆಗಲಿದೆ.

ಸತ್ಕಾರ ಸಮಾರಂಭ

ಅಡ್ವೋಕೇಟ್ ಮ॥ರಾ॥ ಶ್ರೀ ಸಿ. ನರಸಿಂಹಯ್ಯನವರಿಗೆ ರಾಜಸೇವಾಸಕ್ತ ಎಂಬ ಬಿರುದು ಬಂದಿರುವುದಕ್ಕಾಗಿ ಅವರನ್ನು ಅಭಿನಂದಿಸಲು ನಾಳೆ ಸಂಜೆ ೬॥ ಗಂಟೆಗೆ ಸಹಕಾರ ಭವನದಲ್ಲಿ ರಾಜಸೇವಾಸಕ್ತ ಎಂ. ರಾಮರಾಯರ ಅಧ್ಯಕ್ಷತೆಯಲ್ಲಿ ಸಹಕಾರ ಸಂಸ್ಥೆಯವರು ಸಭೆಯನ್ನು ಏರ್ಪಡಿಸಿರುತ್ತಾರೆ. ಸರ್ವರಿಗೂ ಸ್ವಾಗತವಿದೆ.

ಬಟ್ಟೆ ಹಂಚಿಕೆ

ಸ್ವಂ. ವ.] ಆಗರ-ಮಾಂಬಳ್ಳಿ, ೩

ಇಲ್ಲಿನ ಪ್ರಜೆಗಳಿಗೆ ಬಟ್ಟೆಯನ್ನು ಸರಿಯಾಗಿ ಹಂಚಲು ಅಮಲ್ದಾರರು ಒಂದು ಸಮಿತಿಯನ್ನು ಏರ್ಪಡಿಸಿರುವುದಾಗಿ ಗೊತ್ತಾಗಿದೆ. ಅದರಲ್ಲಿ ಶ್ರೀಗಳಾದ ಎಂ. ಕೆ. ನಾರಾಯಣ ಜ್ಯೋಯಿಸ್, ಎಂ. ಮಾದಯ್ಯ, ಬಿ. ಗೋವಿಂದಯ್ಯ, ಎಂ. ಜಿ. ಸಿದ್ದಲಿಂಗಪ್ಪ ಮತ್ತು ಎ. ಶ್ರೀನಿವಾಸ ಉಪಾಧ್ಯರು ಸದಸ್ಯರೆಂದು ತಿಳಿದುಬಂದಿದೆ. ಮುಂದೆ ಬರುವ ಬಟ್ಟೆಯನ್ನು ಇವರು ನಿಷ್ಪಕ್ಷಪಾತವಾಗಿ ಹಂಚುವರೆಂದು ನಂಬಲಾಗಿದೆ.

ಈ ತಿಂಗಳು ೫ ನೇ ತಾ॥ ನಿಂದ ಇಲ್ಲಿ ಮಿಡಲ್ ಸ್ಕೂಲು ಪ್ರಾರಂಭವಾಗುವುದಾಗಿ ತಿಳಿದು ಬಂದಿದೆ.

ಭೂಗೋಳ ಸಪ್ಲಿಮೆಂಟ್

ಮಂಗಳೂರು ಹೈದರಾಬಾದಿನಲ್ಲಿದೆ. ಬಳ್ಳವಟಿಗ, ಲಾವುದ ಗಂಧಿ, ಮರದ ಹಿತ್ತಲು ಎಲ್ಲಿವೆ? ಬಹುಸ್ತ್ರೀ ಸಂಬಂಧದ ಹೊಟ್ಟೆನೋವಿನ ರೋಗಿಯಂತ ಮಕ್ಕಳಾಗದೇ ಇರತಕ್ಕವರಿಗೆ ಗ್ಯಾರಂಟೀ ಔಷಧವೆಂದು ಎಂಭತ್ತೈದು ವರ್ಷಗಳಿಂದ ಪ್ರಖ್ಯಾತವಾದ "ಸಂತಾನ ಸಿಂಧೂರ" ಎಂಬ ಭಸ್ಮದ ವಿಚಾರವಾಗಿ ಹೊಸದಾಗಿ ಪ್ರಿಂಟಾಗಿರತಕ್ಕ ನಮ್ಮ ಕ್ಯಾಟಲಾಗ್ ಮತ್ತು "ಸಪ್ಲಿಮೆಂಟ್" ನೋಡಿರಿ. ಗೊತ್ತಾಗುತ್ತೆ. ಬರೆದರೆ ಎರಡೂ ಬಿಟ್ಟಿ ರವಾನೆ.

ಎ. ರಾಮಸ್ವಾಮಿ ಅಯ್ಯರ್,
ಪ್ರೊಪ್ರೈಟರ್: "ಸಂತಾನ ಸಿಂಧೂರ" ಆಫೀಸ್, ಅಂಚೆ, ಯಳಂದೂರ್ ಪೋಸ್ಟ್.

ರೈಲಿನ ತೊಂದರೆ

ಮೈಸೂರಿಗೆ ನಂಜನಗೂಡಿನಿಂದ ೧೦- ಘಂಟೆಗೆ ಬರಬೇಕಾದ ರೈಲು ಕೆಲವು ದಿನಗಳಿಂದ, ಪ್ರತಿದಿನವೂ ೧೦-೧೫ ನಿಮಿಷಗಳು ಹೊತ್ತಾಗಿ ಬರುತ್ತಿದೆ. ಇದರಿಂದ ೧೦-೩೦ ಘಂಟೆಗೆ ತರಗತಿಯುಳ್ಳ ಅನೇಕ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ... ರಿಗೆ ಹಾಜರಿಯೂ ಖಾರವೂ ಇಲ್ಲದಂತಾಗಿದೆ. ಇದಕ್ಕೆ ರೈಲು ನಂಜನಗೂಡಿನಿಂದ ತಡವಾಗಿ ಹೊರಡುವುದೇ ಕಾರಣ. ...ದುದರಿಂದ ರೈಲು ಸರಿಯಾದ ವೇಳೆಗೆ ಹೊರಟು, ಸರಿಯಾದ ವೇಳೆಗೆ ತಲುಪುವುದ... ಅನುಕೂಲಪಡಿಸಬೇಕಾಗಿ ವಿದ್ಯಾರ್ಥಿಗಳು ಕೋರುತ್ತಾರೆ.

ನಜರ್‌ಬಾದ್ ಕಾಂಗ್ರೆಸ್ ಸಮಿತಿ ನಿನ್ನೆ ಸಾಯಂಕಾಲ ಇಟ್ಟಿಗೆಗೂಡು ಯುವಕರ ಸಂಘದಲ್ಲಿ ಶ್ರೀ ಎಸ್. ಜಯ್ಯನವರ ಅಧ್ಯಕ್ಷತೆಯಲ್ಲಿ ಸಭೆಸೇರಿ ನಜರ್‌ಬಾದ್ ಮೊಹಲ್ಲಾ ಕಾಂಗ್ರೆಸ್ ಸಮಿತಿಯನ್ನು ರಚಿಸಿ ಶ್ರೀ ಎಂ. ಪಿ. ಸಿದ್ದಪ್ಪನವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಎಂ. ಕೃಷ್ಣಯ್ಯನವರನ್ನು ಕಾರ್ಯದರ್ಶಿಗಳನ್ನಾಗಿಯೂ, ಶ್ರೀ ಬಿ. ಪುಟ್ಟಸ್ವಾಮಯ್ಯನವರನ್ನು ಖಜಾಂಚಿಗಳನ್ನಾಗಿಯೂ ಚುನಾಯಿಸಲಾಯಿತು.

ಆಸ್ಪತ್ರೆಯಲ್ಲಿ ತಿಗಣೆಗಳು

ಕಣ್ಣಿಗೆ ಗೋಚರವಾಗದ ಅನೇಕ ಸೂಕ್ಷ್ಮ ವಿಷ ಕ್ರಿಮಿಗಳನ್ನು ನಾಶಪಡಿಸಲು ಕ್ರಿಮಿನಾಶಕಗಳನ್ನು ಕಂಡು ಹಿಡಿದು ಉಪಯೋಗಿಸುತ್ತಿರುವ ವೈದ್ಯರು ಕಣ್ಣಿಗೆ ಕಾಣುವ ತಿಗಣೆಗಳನ್ನು ನಾಶಪಡಿಸದೇ ಇರುವುದು ಶೋಚನೀಯವಾಗಿದೆ. ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಪ್ರತಿ ಮಂಚದಲ್ಲಿಯೂ ಒಂದೊಂದು ಜೊತೆ ತಿಗಣೆಗಳು, ಕೈಯಿಂದ ತಳ್ಳಿದಾಗಲೆಲ್ಲಾ ಇರುವೆಗಳು ಬಿದ್ದು ಬೀಳುತ್ತವೆ. ಅನೇಕ ರೋಗಿಗಳ ಮೈಮೇಲೆಲ್ಲಾ ಇದರ ಕಡಿತದಿಂದ ಗುಳಗಂಜೀ ಗಾತ್ರ ಬೊಕ್ಕೆಗಳು ಎದ್ದಿವೆ. ರಾತ್ರಿ ಅವರಿಗೆ ನಿದ್ದೆ ಬರುವ ಹಾಗೇ ಇಲ್ಲ. ರೋಗಿಗಳ, ಇಷ್ಟುಬದ್ದು ... ವನ್ನೆಲ್ಲಾ ಇವೇ ಹೀರುತ್ತಿವೆ.

ಆರೋಗ್ಯ ಇಲಾಖೆಯವರು ತಿಗಣೆಗಳನ್ನು ನಾಶಪಡಿಸಲು ಏರ್ಪಾಡು ಮಾಡುತ್ತಾರೆಂದು ನಂಬಿರುತ್ತೇನೆ.

ರೋಗಿಗಳ ಹಿತೈಷಿ

ವೆರೈಟಿ ಸ್ಟೋರ್ಸ್

ಪೋಸ್ಟಾಫೀಸ್ ಬೀದಿ, ಶ್ರೀರಂಗಪಟ್ಟಣ

ನಮ್ಮಲ್ಲಿ ಪರಿಶುದ್ಧವಾದ ಕಾಫಿಪುಡಿ ಸಿಗುತ್ತದೆ. ನಿಮ್ಮ ಎದುರಿಗೆ ಪುಡಿ ಮಾಡಿಕೊಡಲಾಗುತ್ತದೆ.

ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತದೆ.

ಪಾರ್ಚ್‌ಮೆಂಟ್	ಪೌಂಡಿಗೆ	೧-೧...
ನೇಟಿವ್	,,	೧-...
ರೋಬಸ್ಟ	,,	೧-...

ಮತ್ತು ನಮ್ಮಲ್ಲಿ ಪ್ರತಿ ದಿವಸ ಓ... ಸಾಮಾನುಗಳೂ ಸ್ವದೇಶೀ ಸಾಮಾನುಗಳು ದೊರೆಯುತ್ತವೆ.

ಒಂದು ಸಾರಿ ಪರೀಕ್ಷಿಸಿ ನೋಡಿ.

ಪ್ರೊಪ್ರೈಟರ್,
ಸಿ. ನರಸಿಂಹ ರಾ...

ಒಪೇರಾ ಟಾಕೀಸ್

3—8—46 ರಿಂದ

ಭಕ್ತಕಲಾತ್ರಿ

(ತೆಲುಗು)

ತಾರಾಗಣ ಹೊನ್ನಪ್ಪ ಭಾಗವತರ್,
ತನಮಣಿ, ಕುಮುದಿನಿ,
ಎಸ್ ಎಸ್ ಕೃಷ್ಣನ್ ... ಮುಂತಾದ

ರಾಜ್ ಕಮಲ್ ಟಾಕೀಸ್, ಮೈಸೂರು

31-7-46 ನೇ ಬುಧವಾರದಿಂದ

ಮನದುಂಬಿ ನಗಿಸುವ ಕಥೆ! ಸಂತೋಷದ ಸುರಿ ಮಳೆ!!

ಕೇಸನ್ ಬಾಲ ಮುಖ್ಯಪಾತ್ರವಹಿಸಿರುವ

"ಬಿಸ್‌ಪ್ರೋಲರ್"

Edited printed and published ... A ... at the Sadhvi Pr... D Subbiah Road, Mysore

ಫೋನ್ ನಂ. 392 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಂಪುಟ: ೧೧] ಸೋಮವಾರ ೫—೮—೪೭ [ಸಂಚಿಕೆ ೩

ಬಿಕನೀರ್ ಗ್ವಾಲಿಯರ್ ನಲ್ಲಿ ಖಾಸಗಿ ಮಂತ್ರಿಗಳು

ಕಾಂಗ್ರೆಸ್ ಕಾವಲುಗಾರ ಸರ್ಕಾರ

ಮುಸ್ಲಿಂ ಲೀಗಿನವರು ಕೇಂದ್ರ ಸರ್ಕಾರದಲ್ಲಿ ಭಾಗ ವಹಿಸುವುದಿಲ್ಲವೆಂದು ತಿಳಿಸಿರುವರಷ್ಟೆ. ಈ ತಿಂಗಳ ಮೂರನೇ ವಾರದಲ್ಲಿ ವೈಸರಾಯರು ಕಾಂಗ್ರೆಸ್ ನಾಯಕರುಗಳನ್ನೇ ಕರೆದು ಹಿಂದೆ ಅವರು ಸೂಚಿಸಿದ್ದ ಪ್ರಕಾರ ಕೇಂದ್ರ ಸರ್ಕಾರವನ್ನು ರಚಿಸುವಂತೆ ಕೋರಲಿರುವರೆಂದೂ, ಮುಸ್ಲಿಂ ಲೀಗಿನವರಿಗಾಗಿ ಮೀಸಲಾಗಿಟ್ಟಿದ್ದ ಐದು ಸ್ಥಾನಗಳನ್ನು ಮಿ॥ ಜಿನ್ನಾರವರು ತಮಗೆ ಬೇಕಾದಾಗ ಆಕ್ರಮಿಸಲು ಅವಕಾಶವಿರುವಂತೆ ಖಾಲೀ ಬಿಟ್ಟಿರಲಾಗುವುದೆಂದೂ ದೆಹಲಿಯ ರಾಜಕೀಯ ಆವರಣದಲ್ಲಿ ಹೇಳಲ್ಪಡುತ್ತಿದೆ — —

ಆಹಾರದ ಹಂಚಿಕೆ

ಸ್ವಂ ಸು.] ಚಾಮರಾಜನಗರ ೩

ಹಳ್ಳಿಗಳ ಕಡೆ ಆಹಾರದ ಹಂಚಿಕೆ ಸಮರ್ಪಕವಾಗಿಲ್ಲವೆಂಬ ಕೂಗು ಹೆಚ್ಚಿದೆ. ಸಂಬಂಧಪಟ್ಟವರು ಕೂಡಲೇ ಗಮನ ಕೊಡಬೇಕಾಗಿದೆ

ತುಟ್ಟಿಭತ್ಯ ಇಲ್ಲವೇ ?

ಹೈ ಸ್ಕೂಲ್ ಉಪಾಧ್ಯಾಯರುಗಳಿಗೆ ಸರ್ಕಾರದಿಂದ ಸಹಾಯ ಬರುವವರೆಗೂ ತುಟ್ಟಿಭತ್ಯ ಕೊಡಲು ಸಾಧ್ಯವಿಲ್ಲವೆಂದು ಪುರಸಭೆಯಲ್ಲಿ ನಿರ್ಣಯ ಮಾಡಿರುವರೆಂದು ತಿಳಿದುಬಂದಿದೆ. ಪೌರಸಭೆಯ ಇತರ ನೌಕರರಿಗೆ ತುಟ್ಟಿಭತ್ಯ ಕೊಡಲಾಗುತ್ತಿದೆ

ಅಮಾನಿಕೆರೆ ದುರಸ್ತಿ

ಸ್ವಂ ಸು.] ಗುಂಡ್ಲುಪೇಟೆ ೩

ವಿಜಯಪುರದ ಅಮಾನಿಕೆರೆ ಕೆಳಗಿನ ಅಚ್ಚುಕಟ್ಟಿನಲ್ಲಿ ಕೆಲವರು ನಾಟಿ ಹಾಕಿಯೂ, ಕೆಲವರು ಉದಿ ಹಾಕಿಯೂ, ಕೆಲವರು ಉದಿ ಹಾಕಬೇಕಾಗಿಯೂ ಇರುತ್ತದೆ. ಕೆರೆಯಲ್ಲಿ ನೀರು ಬತ್ತಿ ಹೋಗಿ ಜನರು ಕಂಗೆಟ್ಟಿರುತ್ತಾರೆ. ಕೆರೆ ಒಡಾವರಿಗಾಗಿ ಕಂಟ್ರಾಕ್ಟ್ ಕೊಡಲು ಒಪ್ಪಿ ಹತ್ತು ತಿಂಗಳಾಯಿತು. ಅದರೂ ಇದುವರೆಗೆ ಯಾವ ಏರ್ಪಾಡೂ ಆಗಿರುವುದಿಲ್ಲ. ಒಡನೆಯೇ ಅಧಿಕಾರಿಗಳು ಗಮನ ಕೊಟ್ಟು ಕೆಲಸವನ್ನು ಪ್ರಾರಂಭ ಮಾಡಿಸಬೇಕಾಗಿ ಕೋರಲಾಗಿದೆ

— —

ಗ್ರಾಮ ನೈರ್ಮಲ್ಯ ಕೆಟ್ಟಿದೆ

ಸ್ವಂ ಸು.] ಆಗರ-ಮಾಂಬಳ್ಳಿ ೪

ಈ ಗ್ರಾಮಗಳ ಬೀದಿಗಳಲ್ಲಿ ಕಸಕಡ್ಡಿಗಳು ಬಹಳವಾಗಿ ಬಿದ್ದುಹೋಗಿವೆ. ಮೈಲೇರಿಯಲ್ಲೂ ಮತ್ತು ಇನ್ನುಳಿದ ರಸ್ತೆಗಳಲ್ಲೂ ಗೊಬ್ಬರದ ಗುಡ್ಡೆಗಳು ಅತ್ಯಧಿಕ ಸಂಖ್ಯೆಯಲ್ಲಿ ಬಿದ್ದಿವೆ. ಚರಂಡಿಗಳ ವ್ಯವಸ್ಥೆ ಸರಿಯಿಲ್ಲದೆ ಬಚ್ಚಲು ನೀರು ರಸ್ತೆಗಳಲ್ಲೆಲ್ಲಾ ಹರಿದಾಡುತ್ತಿದೆ. ಒಳ್ಳೆಯ ವ್ಯಾಪಾರ ಸ್ಥಳವೆಂದು ಹೆಸರು ಪಡೆಯುತ್ತಿರುವ ಈ ಗ್ರಾಮದಲ್ಲಿ ಜನರ ಆರೋಗ್ಯಸ್ಥಿತಿಯ ಕಡೆಗೂ ಪುರಸಭೆಯವರು ಹೆಚ್ಚಿಗೆ ಗಮನ ಕೊಟ್ಟು ಜಾಗ್ರತೆಯಾಗಿ ವ್ಯವಸ್ಥೆ ಕ್ರಮ ಕೈಗೊಳ್ಳುವುದು ಅತ್ಯಗತ್ಯ.

ಇಲ್ಲಿನ ಎಲ್. ಎಫ್. ಇನ್ಫೆಕ್ಷನ್ [illegible] ಮಿಡ್‌ವೈಫ್ ಕಳೆದ [illegible] ಆಸ್ಪತ್ರೆಗೆ [illegible] [illegible] ಇಲ್ಲ. ಆದರಿಂದ ಅನೇಕ [illegible] [illegible] [illegible] [illegible]

ಬಿರುದಾಂಕಿತರಿಗೆ ಅಭಿನಂದನೆ

ಮೈಸೂರು ೫

ಮೈಸೂರು ನಗರದ ವೀರಶೈವ ಸಮಾಜದ ಆಶ್ರಯದಲ್ಲಿ, ನೆನ್ನೆ ಸಾಯಂಕಾಲ ಡಿ. ಬನುಮಯ್ಯನವರ ಶಾಲೆಯಲ್ಲಿ ಜಸ್ಟಿಸ್ ಜಿ. ಪರಮಶಿವಯ್ಯನವರ ಅಧ್ಯಕ್ಷತೆಯಲ್ಲಿ ಅಭಿನಂದನಾಸಭೆ ನಡೆದು, ಪ್ರಭುಗಳ ಅನುಗ್ರಹಕ್ಕೆ ಪಾತ್ರರಾಗಿ ಬಿರುದಾಂಕಿತರಾದ ಶ್ರೀಗಳಾದ ಕೆ. ನಂದೀಬಸಪ್ಪನವರು ಮತ್ತು ಡಾ॥ ಟಿ. ಎಸ್. ಸಿದ್ಧಪ್ಪನವರನ್ನು ವೀರಶೈವ ಸಮಾಜದವರು ಅಭಿನಂದಿಸಿದರು. ಪ್ರಾರ್ಥನೆಯಾದ ನಂತರ ಶ್ರೀ ಒಸವಾರಾಧ್ಯರು ಮಂಗಳಾಷ್ಟಕ ಪದ್ಯಗಳನ್ನು ಪಠಿಸಿದರು. ಸ್ವಾಗತ್ಯವಾದ ಸಂಗೀತವಾದ ನಂತರ ಶ್ರೀಗಳಾದ ಎಂ. ಎಲ್. ನಾಗಣ್ಣನವರು, ಶಿವಮೂರ್ತಿಶಾಸ್ತ್ರಿಗಳು, ಶಿವಸ್ವಾಮಿಯವರು ಧರ್ಮಕರ್ತರ ಗುಣ ಕಥನ ಮಾಡಿದರು. ಶ್ರೀಗಳಾದ ನಂದೀಬಸಪ್ಪನವರು ಮತ್ತು ಸಿದ್ಧಪ್ಪನವರು ಸಮಯೋಚಿತವಾಗಿ ಮಾತನಾಡಿ ತಾವು ಸಮಾಜಸೇವೆ, ಜನತಾಸೇವೆ ದೃಷ್ಟಿಯಿಂದ ತಮ್ಮ ಕರ್ತವ್ಯವನ್ನು ನಡೆಸಿರುವುದಾಗಿ ತಿಳಿಸಿ ತಮ್ಮ ಕೃತಜ್ಞತೆಯನ್ನು ಸೂಚಿಸಿದರು. ಆಕ್ಕನ ಬಳಗದ ಪುಕ್ಕಳಿಂದ ಚನ್ನಬಸವಣ್ಣನವರ ಜನನ ನಾಟಕ ಪ್ರದರ್ಶನವು ನಡೆಯಿತು. ವೀರಶೈವ ಸಂಗದ ಪರವಾಗಿ ಶ್ರೀಗಳಾದ ನಂದೀಬಸಪ್ಪ ಮತ್ತು ಸಿದ್ಧಪ್ಪನವರಿಗೆ ಪ್ರಭುಗಳು ಬಿರುದುಗಳನ್ನು ದಯ ಪಾಲಿಸಿರುವುದಕ್ಕಾಗಿ ಸಮಾಜದವರು ತಮ್ಮ ರಾಜಭಕ್ತಿಯುತವಾದ ಧನ್ಯವಾದಗಳನ್ನು ಅರ್ಪಿಸುವ ಠರಾವು ಸಹ ಅಂಗೀಕೃತವಾಯಿತು.

ಸಂಗೀತ ಸ್ಪರ್ಧೆ

ಅಖಿಲ ಮೈಸೂರು ಸಂಗೀತ ಉಪಾಧ್ಯಾಯರುಗಳ ಸಂಘದ ಆಶ್ರಯ ದಲ್ಲಿ ಮೈಸೂರಿನಲ್ಲಿ ತಾ॥ ೨೧-೭-೪೭ ನೇ ಖ ಭಾನುವಾರ ನಡೆದ ಸಂಗೀತ ಸ್ಪರ್ಧೆಯಲ್ಲಿ ಕೆಳಗೆ ಕಂಡವರು ಜಯಶೀಲರಾಗಿದ್ದಾರೆ. ಇವರುಗಳಿಗೆ ಬರುವ ನವರಾತ್ರಿಯಲ್ಲಿ ಬಹುಮಾನ ವಿನಿಯೋಗ ಮಾಡಲಾಗುವುದು; ಶ್ರೀಮತಿಗಳಾದ ಎಂ. ಲೀಲಾವತಿ, ಕ್ಯಾಥರೀನ್ ಗ್ರೇಸ್, ಎ. ಪಿ. [illegible] ಜೆ. ಲೋಬೋ [illegible] [illegible] [illegible] [illegible] [illegible]

೯ ನೇ ತಾ॥ ಹರತಾಳ

ಮೈಸೂರು ೫

ಕರ್ನಾಟಕ ವಿದ್ಯಾರ್ಥಿ ಕಾಂಗ್ರೆಸ್ಸಿನ ಕಾರ್ಯಕಾರೀ ಸಮಿತಿಯು ಇಂದು ಮೈಸೂರಿನಲ್ಲಿ ಸೇರಿ ಈ ರೀತಿ ನಿರ್ಣಯ ಮಾಡಿದೆ:— ಆಗಸ್ಟ್ ೯ ನೆಯ ಚರಿತ್ರಾರ್ಹ ದಿನವನ್ನು ಕರ್ನಾಟಕದ ವಿದ್ಯಾರ್ಥಿಗಳು ಯೋಗ್ಯ ರೀತಿಯಿಂದ ಆಚರಿಸಬೇಕು. ಅದಕ್ಕಾಗಿ ಅಂದು ಕಾಂಗ್ರೆಸ್ ಧ್ವಜವಂದನೆ, ಮೈಸೂರಿನ ವರೆಗೆ, ಬೆಳಗಾವಿ, ಜಮಖಂಡಿ, ಮುಂತಾದ ಮುಖ್ಯಗಳನ್ನೊಳಗೊಂಡ ಅಖಂಡ ಕರ್ನಾಟಕದಲ್ಲಿ, ವಿದ್ಯಾರ್ಥಿಗಳು ಸ್ವಯಂ ಪ್ರೇರಿತ ಹರತಾಳವನ್ನು ಆಚರಿಸಬೇಕು. ಹರತಾಳ, ಮೆರವಣಿಗೆ ಸಭೆ ನಡೆಸಿ ಅಂದು ಭವಿಷ್ಯ ಭಾರತದಲ್ಲಿ ಒದಗುವ ಕ್ರಾಂತಿಯ ಸಿದ್ಧತೆಯ ಸ್ವರೂಪವನ್ನು ಕಾಣಬೇಕು.

ಸೈಕಲ್ಲುಗಳ ಪತ್ತೆ

ಮೈಸೂರಿನಲ್ಲಿ ಅಪಹರಿಸಲಾಯಿತೆಂದು ಹೇಳಲಾದ ನಾಲ್ಕು ಸೈಕಲ್‌ಗಳನ್ನು ಕ್ರೈಂ ಬ್ರಾಂಚಿನಲ್ಲಿ ಪೋಲೀಸಿನವರು ಅಬ್ದುಲ್ ಕರೀಂ ಎಂಬವನಿಂದ ವಶಪಡಿಸಿಕೊಂಡಿರುವರು. ಸೈಕಲ್ ನಂಬರುಗಳು:- ಅಂಜನ್ ನಂ ೭೫೪೬೩, ಫಿಲಿಪ್ಸ್ ನಂ ೧೧೭೬೭೩, ಫಿಲಿಪ್ಸ್ ನಂ. ೬೩೪೮೮ A ೧೩೬೭೩ ರೇಂಗ್ಲರ್, ನಂ. ಡಿ. ೩೬೭೯೯ ಇದಕ್ಕೆ ಸಂಬಂಧಪಟ್ಟ ವಾರಸುದಾರರು ದೇವರಾಜ ಪೋಲೀಸ್ ಸ್ಟೇಷನ್ನಿನಲ್ಲಿ ವಿಚಾರಿಸಬಹುದು.

ಅಂಚೆ ಕೆಲಸಗಾರರ ಕೃತಜ್ಞತೆ

ಅಂಚೆ ನೌಕರರ ಸಭೆಯು ಮೈಸೂರ್ ಸಬ್ಆರ್ಡಿನೇಟ್ ರಸ್ತೆಯ ಎಜೆನ್ಸೀಸ್ ಕಾರ್ಯಾಲಯದಲ್ಲಿ ಶ್ರೀ॥ ಹಿರಿಯ ಮಾದಪ್ಪನವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಮುಷ್ಕರದಿಂದ ಅನಾನುಕೂಲವಾದರೂ ಸಹನೆ ಪ್ರಕಟ ತೋರಿಸಿದ ಸಾರ್ವಜನಿಕರಿಗಾಗಿಯೂ, ಮೈಸೂರಿನ ಮತ್ತು ಇತರ ಪತ್ರಿಕೆಗಳು ಸಹಕಾರ ಕೊಟ್ಟದಕ್ಕಾಗಿ ಕೃತಜ್ಞತೆಯನ್ನು ಸೂಚಿಸುವ ನಿರ್ಣಯವು ಅಂಗೀಕೃತವಾಯಿತು.

ಸಂಸ್ಕೃತದ ಸ್ಥಾನ

ಮಹಾರಾಜಾ ಕಾಲೇಜಿನ ಸಂಸ್ಕೃತ ಸಂಘದ ಆರಂಭ ಭಾಷಣವನ್ನು [illegible] [illegible] [illegible] [illegible] [illegible]

ನಗರಾಭಿವೃದ್ಧಿ ಸಭಾಧ್ಯಕ್ಷರು

ಸ್ವಂ ಸು ಫೋನ್] [ಬೆಂಗಳೂರು ೫

ಬೆಂಗಳೂರು ನಗರಾಭಿವೃದ್ಧಿ ಸಭಾಧ್ಯಕ್ಷರಾಗಿರುವ ಶ್ರೀ॥ ಕೆ. ಸುಬ್ಬರಾಯರನ್ನು ವರಮಾನ ತೆರಿಗೆ ಕಮಿಷನರನ್ನಾಗಿ ನೇಮಿಸಲಾಗಿದೆ. ಅವರ ಸ್ಥಾನದಲ್ಲಿ ಪ್ರಾ. ಸಭಾ ಸದಸ್ಯರಾದ ಶ್ರೀ॥ ಸಿ. ಎಸ್. ನರಸಿಂಗರಾಯರನ್ನು ಅಧ್ಯಕ್ಷರಾಗಿ ನೇಮಿಸಲಾಗಿದೆ.

ಶ್ರೀ॥ ಪುಲ್ಲರೆಡ್ಡಿಯವರು ೩೧ ನೇ ತಾ॥ ತಮ್ಮ ಕೆಲಸದ ಚಾರ್ಜನ್ನು ಬಿಟ್ಟುಕೊಡುವರು.

ಹೆಚ್ಚು ಆಹಾರ ಡೈರೆಕ್ಟರಾದ ಶ್ರೀ॥ ಎಂ. ಪುಟ್ಟರಂಗಸ್ವಾಮಿಯವರೊಡನೆ ಸ್ಯಾಯಾಂಗ ಮಂತ್ರಿ ಶ್ರೀ ಟಿ. ಎಸ್. ಎನ್. ನರಸಿಂಹರು ಈ ದಿನ ದೆಹಲಿಗೆ ತೆರಳಿದರು. ಅಲ್ಲಿ ನಡೆಯುವ ಆಹಾರ ಮಂತ್ರಿಗಳ ಸಭೆಯಲ್ಲಿ ಭಾಗ ವಹಿಸಿ ೧೫ ನೇ ತಾ॥ ಹಿಂತಿರುಗುವರು.

ಮೊನ್ನೆ ನಡೆದ ಪೌರ ಸಭೆಯಲ್ಲಿ ದಿವಾನ್ ಮಾಧವರಾಯರ ಸೇವೆಯನ್ನು ಕೊಂಡಾಡಿ ನಿರ್ಣಯವು ಅಂಗೀಕಾರವಾಯಿತು. ಚಿತ್ರದುರ್ಗ ಜಿಲ್ಲೆಯ ಬಡಜನರಿಗೆ ಬಟ್ಟೆಗಳನ್ನು ಒದಗಿಸಲು ೫೦೦೦ ರೂ. ಮಂಜೂರಾಯಿತು. ಸದಸ್ಯರು ೧,೦೦೦ ರೂ ಕೊಟ್ಟರು. ಗುಮಾಸ್ತರುಗಳಿಗೆ ಇನ್ನು ಮುಂದೆ ೧ ಟ್ಟಿ ಭತ್ಯ ಸೇರಿ ೫೦ ರೂ ಸಂಬಳ ಕೊಡುವಂತೆ ನಿರ್ಣಯಿಸಲಾಯಿತು

ಬಿಕನೀರ , ಗ್ವಾಲಿಯರ್ ಗಳಲ್ಲಿ ಖಾಸಗಿ ಸಚಿವರು

ಬಿಕನೀರ್ ಸಂಸ್ಥಾನದ ರಾಜರು ಇಬ್ಬರು ಖಾಸಗೀ ಮಂತ್ರಿಗಳನ್ನು ನೇಮಿಸಿದ್ದಾರೆ. ಇಬ್ಬರು ಸಿವಿಲ್ ಸರ್ವೀಸ್ ಮಂತ್ರಿಗಳು ತಮ್ಮ ಸ್ಥಾನ [illegible] ಗ್ವಾಲಿಯರ್ ಮಹಾರಾಜರೂ ಸಹ ಇಬ್ಬರು ಖಾಸಗೀ ಮಂತ್ರಿಗಳನ್ನು ತೆಗೆದುಕೊಳ್ಳುವುದಾಗಿ ನಿರ್ಧರಿಸಿದ್ದಾರೆ. ಜನರ ಹಿತ ಸಾಧನೆಗೆ ಸಂಬಂಧಪಟ್ಟ ಇಲಾಖೆಗಳನ್ನು ಅವರಿಗೆ ಕೊಡಲಾಗುವುದು

ಮುನಿಸಿಪಲ್ ಕೆಲಸಗಾರರ ಸಂಸ್ಥೆ

ನಿನ್ನೆ ಮಧ್ಯಾಹ್ನ ಮೈಸೂರು ಕಾಂತರಾಜ ಪಾರ್ಕಿನಲ್ಲಿ ಬೆಂಗಳೂರಿನ ಕೂಲಿಗಾರರ ಮುಖಂಡರಾದ ಎಂ. ಎಸ್. ರಾಮರಾಯರ ಅಧ್ಯಕ್ಷತೆಯಲ್ಲಿ ಮೈಸೂರು ಮುನಿಸಿಪಲ್ ಜಾಡಮಾಲಿಗಳ ಮತ್ತು ಗ್ಯಾಂಗಿನವರ ಸಭೆ ಸೇರಿತ್ತು. ಸಭೆಯು ಸರ್ವಾನುಮತದಿಂದ ಸಂಘವನ್ನು ಸ್ಥಾಪಿಸಿ ಅದನ್ನು ಮೈಸೂರು ಕೂಲಿಗಾರ ಕಾನೂನಿನಂತೆ ರಿಜಿಸ್ಟರ್ ಮಾಡಿಸಬೇಕೆಂದು ನಿರ್ಣಯಿಸಿತು. ಶ್ರೀ ಬಿ ಎಲ್ ಚಾಮರಾಜರವರು ಅಧ್ಯಕ್ಷರಾಗಿಯೂ, ಶ್ರೀ ಶಿವೇಗೌಡರು ಉಪಾಧ್ಯಕ್ಷರಾಗಿಯೂ, ಶ್ರೀ ಎಸ್. ಪಿ ವೆಂಕಟರಾಮ [illegible] ಕಾರ್ಯದರ್ಶಿಗಳಾಗಿಯೂ, ಶ್ರೀ ಎಂ ಎಸ್ ಮುನಿಸ್ವಾಮಿಯವರು [illegible] ಗಿಯೂ ಉಳ್ಳ ತಾತ್ಕಾಲಿಕ ಸಮಿತಿಯನ್ನು ರಚಿಸಲಾಯಿತು.

ಸಂತಾಪಸಭೆ

[illegible] [illegible]

ಸಂಪಾದಕೀಯ

ಸಂ॥ ೨೯-೭-೪೬ ಸೋಮವಾರ

ಸಂಕುಚಿತ ಮನೋಭಾವ

ಭಾಷಾವಾರು ಪ್ರಾಂತ ರಚನೆಯ ಪ್ರಯತ್ನಕ್ಕೆ ಸಂಪೂರ್ಣ ಪುರಸ್ಕಾರವನ್ನು ಸೂಚಿಸಿ ಇಡೀ ಕೇರಳ ಪ್ರಾಂತವನ್ನು ಒಂದುಗೂಡಿಸುವ ಉದ್ದೇಶವನ್ನು ಕೊಚ್ಚಿಯ ಮಹಾರಾಜರವರು ಮೊನ್ನೆ ತಾನೆ ಸೂಚಿಸಿದರಷ್ಟೆ. ತಿರುವಾಂಕೂರು, ಮಲಬಾರು ಮತ್ತು ಕೊಚ್ಚಿಗಳನ್ನು ಸೇರಿಸಿ ಒಂದು ಪ್ರತ್ಯೇಕ ಪ್ರಾಂತವನ್ನು ರಚಿಸಬೇಕೆಂಬುದೇ ಇದರ ಉದ್ದೇಶ. ಇದರಿಂದ ಉಂಟಾಗುವ ಆರ್ಥಿಕ, ಸಾಂಸ್ಕೃತಿಕ ಮತ್ತು ಇತರ ಪ್ರಯೋಜನಗಳನ್ನು ಕೊಚ್ಚಿಯ ಅರಸರು ಚೆನ್ನಾಗಿ ಅರಿತಿದ್ದಾರೆ. ಅವರ ಈ ಹೇಳಿಕೆಯನ್ನು ರಾಷ್ಟ್ರದ ನಾಯಕರುಗಳೂ ಮೆಚ್ಚಿದ್ದಾರೆ.

ಆದರೆ ತಿರುವಾಂಕೂರಿನ ದಿವಾನರಾದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್ ರವರು ಈಗಾಗಲೇ ಈ ವಿಚಾರದಲ್ಲಿ ಅಪಸ್ವರವನ್ನು ನುಡಿದಿದ್ದಾರೆ. ಈ ಏಕೀಕರಣದಿಂದ ತಿರುವಾಂಕೂರಿನ ಸಾರ್ವಭೌಮತ್ವಕ್ಕೆ ಧಕ್ಕೆ ತಗಲುವುದೆಂದೂ, ಆದುದರಿಂದ ತಿರುವಾಂಕೂರು ಇದಕ್ಕೆ ಒಪ್ಪಲು ಸಾಧ್ಯವಿಲ್ಲವೆಂದೂ ಸಹ ಅವರು ಹೇಳಿದ್ದಾರೆ. ಕೇರಳ ಪ್ರಾಂತ ರಚನೆಗೆ ಸೇರಬೇಕಾಗಿರುವ ಕೇವಲ ಮೂರು ಪ್ರದೇಶಗಳಲ್ಲಿ ಒಂದಾದ ತಿರುವಾಂಕೂರು ಈ ರೀತಿ ಪ್ರತಿಭಟಿಸಿದರೆ ಈ ಪ್ರಶ್ನೆಯು ಸಧ್ಯಕ್ಕೆ ತೊಡಕಿಗೆ ಸಿಲುಕುವುದರಲ್ಲಿ ಸಂದೇಹವಿಲ್ಲ.

ಮೂರು ಪ್ರದೇಶಗಳಿಗೂ ಸಮಾನವಾದ ಒಂದು ಧ್ಯೇಯ ಸಾಧನೆಯಲ್ಲಿ ನೆರೆಯ ಸಂಸ್ಥಾನದ ಅರಸರಿಗೆ ತೋರದಿದ್ದ ಅಡಚಣೆಯು ತಿರುವಾಂಕೂರಿನ ದಿವಾನರಿಗೆ ಹೇಗೆ ಗೋಚರಿಸಿತೋ ತಿಳಿಯದು. ಕೊಚ್ಚಿಯ ರಾಜರು ಇದಕ್ಕಾಗಿ ಅವಶ್ಯಕವಿರುವ ತ್ಯಾಗವನ್ನು ಮಾಡುವುದಕ್ಕೂ ಸಹ ಸಿದ್ಧರಿರುವುದಾಗಿ ಹೇಳುವರು. ದೇಶ, ಭಾಷೆ, ಸಂಸ್ಕೃತಿ, ಕೈಗಾರಿಕೆ ಮುಂತಾದುವುಗಳ ಅಭ್ಯುದಯಕ್ಕೆ ಸಾಧಕವಾದ ಇಂತಹ ಪ್ರಯತ್ನದಲ್ಲಿ ಕೊಚ್ಚಿಯ ರಾಜರು ತೋರಿಸಿರುವ ಉದಾರ ಭಾವನೆಯು ತಿರುವಾಂಕೂರಿನ ರಾಜರಿಗೆ ಬರುವುದಿಲ್ಲವೆಂದು ಭಾವಿಸಲು ಕಾರಣವಿಲ್ಲ. ಆದರೆ ತಿರುವಾಂಕೂರಿನಲ್ಲಿ ಸರ್ ಸಿ. ಪಿ. ರಾಮಸ್ವಾಮಿಅಯ್ಯರ್‌ರವರೇ ಸರ್ವಾಧಿಕಾರಿಗಳಂತೆ ವರ್ತಿಸುತ್ತಿರುವುದರಿಂದ ಅವರ ಅಭಿಪ್ರಾಯಗಳನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ.

ರಾಜರುಗಳ ಸಾರ್ವಭೌಮತ್ವವೆಂಬುದು ಅನೇಕ ಬಗೆಯ ಪರಿಮಿತಿಯುಳ್ಳ ವಿಚಾರವಾಗಿದೆ. ಒಂದೊಂದು ದೇಶದ ರಾಜರಿಗೆ ಒಂದೊಂದು ರೀತಿಯ ಸ್ಥಾನಮಾನಗಳಿವೆ. ಎಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಬ್ರಿಟಿಷ್ ಸರ್ಕಾರದ ಪ್ರಭಾವಕ್ಕೆ ಒಳಪಟ್ಟಿರುವರು. ಈಗಾಗಲೇ ಪರಿಮಿತಿಯುಳ್ಳಿರುವ ಸಾರ್ವಭೌಮತ್ವಕ್ಕೆ ಹೊಸದಾಗಿ ಧಕ್ಕೆ ಬರುವುದೆಂದು ಶಂಕೆ ಪಡುವುದರಲ್ಲಿ ಅರ್ಥವಿಲ್ಲ.

ಮುಂದಿನ ರಾಜ್ಯಾಂಗ ರಚನೆಯಲ್ಲಿ ಬ್ರಿಟಿಷರ ಕೈವಾಡವು ಅಳಿಸಿಹೋಗಿ ಸಂಸ್ಥಾನಗಳು ಸಂಯುಕ್ತ ಭಾರತದ ಆಡಳಿತದ ಪ್ರಭಾವಕ್ಕೆ ಒಳಪಡುವುವು. ಆದ ಪ್ರಯುಕ್ತ ಹಳೆಯ ಸಂಕುಚಿತ ಭಾವನೆಗಳನ್ನು ಇಟ್ಟುಕೊಂಡಿರುವುದು ಸ್ವಲ್ಪವೂ ಸರಿಯಲ್ಲ. ದೇಶಾಭಿಮಾನದಿಂದಲೂ, ಸಂಸ್ಕೃತಿಯ ಪುನರುಜ್ಜೀವನದ ಗುರಿಯಿಂದಲೂ ಪ್ರೇರಿತರಾಗಿ ಕೊಚ್ಚಿಯ ರಾಜರು ಸೂಚಿಸಿರುವ ಉದಾತ್ತವಾದ ಧ್ಯೇಯ ಸಾಧನೆಯು ತತ್ಕ್ಷಣ ಸಕಲ ರಾಜರುಗಳೂ ಮನ್ನಣೆಯನ್ನೀಯುವರೆಂದು ನಾವು ಹಾರೈಸುತ್ತೇವೆ.

ವಾರ ಭವಿಷ್ಯ

(ಶ್ರೀ॥ ನಿತ್ಯಾನಂದ ಸ್ವಾಮಿಗಳವರಿಂದ)

೨೯-೭-೪೬ ರಿಂದ ೧೧-೮-೪೬ ರ ವರೆಗೆ

ಮೇಷ—ಗ್ರಹಗತಿ ಅನುಕೂಲವಾಗಿದೆ. ಕೈಗೊಂಡ ಕೆಲಸಗಳು ನೆರವೇರುವುವು. ಆರೋಗ್ಯ ಉತ್ತಮವಾಗಿರುವುದು. ಆರ್ಥಿಕ ಸ್ಥಿತಿ ಸಮರ್ಪಕವಾಗಿರುವುದು. ಮನಸ್ಸಿಗೆ ಆನಂದ.

ವೃಷಭ—ನಿಮ್ಮ ಶತ್ರುಗಳಿಗೆ ಪರಾಜಯ. ಆರೋಗ್ಯ ಉತ್ತಮ. ಧನಾದಾಯ ಉಂಟು. ಆರೋಗ್ಯ ಸಮರ್ಪಕ. ಪ್ರಯಾಣದಲ್ಲಿ ತೊಂದರೆ. ವ್ಯಾಪಾರದಲ್ಲಿ ಸೌಕರ್ಯ.

ಮಿಥುನ—ಆರೋಗ್ಯ ಸಮರ್ಪಕವಿಲ್ಲ. ಆರ್ಥಿಕ ಸ್ಥಿತಿ ಅಷ್ಟು ಉತ್ತಮವಿಲ್ಲ. ವ್ಯಾಪಾರ ವ್ಯವಹಾರಗಳಲ್ಲಿ ತೊಂದರೆ. ಪ್ರಯಾಣದಲ್ಲಿ ಅಡಚಣೆ.

ಕಟಕ—ಈ ವಾರ ಮಿಶ್ರ ಫಲ. ದೇಹವು ಆರೋಗ್ಯವಾಗಿದ್ದರೂ ಮನಸ್ಸಿಗೆ ಚಿಂತೆ ಇರುವುದು. ಹೆಚ್ಚಿನ ಖರ್ಚು ವೆಚ್ಚಗಳು ಸಂಭವಿಸುವುವು. ನಷ್ಟದ ಸುದ್ದಿ ಬರುವುದು.

ಸಿಂಹ—ಗ್ರಹಗತಿಗಳು ಚೆನ್ನಾಗಿವೆ. ಆರೋಗ್ಯ ಉತ್ತಮ. ಧನಾದಾಯ ಉಂಟು. ವ್ಯಾಪಾರದಲ್ಲಿ ಯಶಸ್ಸು ಹೆಚ್ಚುವುದು.

ಕನ್ಯಾ—ಧನಲಾಭ. ಮನಸ್ಸು ನೆಮ್ಮದಿಯಿಂದಿರುವುದು. ಆರೋಗ್ಯವು ತೃಪ್ತಿಕರವಾಗಿರುವುದು. ಶತ್ರುನಾಶ. ದಾನಧರ್ಮಗಳಲ್ಲಿ ಆಸಕ್ತಿ. ವಿದ್ಯಾರ್ಥಿಗಳಿಗೆ ವಿಜಯ.

ತುಲಾ—ಈ ವಾರದಲ್ಲಿ ಸುಖವನ್ನು ಪಡೆಯಬಹುದು. ದೇಹಾರೋಗ್ಯವು ಚೆನ್ನಾಗಿರುವುದು. ಧನಾದಾಯ ಹೆಚ್ಚುವುದು. ಮನಸ್ಸು ಉಲ್ಲಾಸದಿಂದಿರುವುದು. ವ್ಯಾಪಾರದಲ್ಲಿ ಲಾಭವಿದೆ.

ವೃಶ್ಚಿಕ—ಆರೋಗ್ಯಕ್ಕೆ ಸ್ವಲ್ಪ ಕುಂದುಕ, ಮನಸ್ಸಿಗೆ ನೆಮ್ಮದಿಯಿಲ್ಲ, ಧನಾದಾಯವು ಸಮರ್ಪಕವಿರುವುದಿಲ್ಲ, ವ್ಯಾಪಾರ ಉದ್ಯೋಗಗಳಲ್ಲಿ ವ್ಯಾಜ್ಯ ಮತ್ತು ಅಡಚಣೆ.

ಧನುಸ್ಸು—ದೇಹಕ್ಕೆ ಆರೋಗ್ಯವಿದ್ದರೂ ಮನಸ್ಸಿಗೆ ನೆಮ್ಮದಿಯಿಲ್ಲ, ಧನಾದಾಯ ಕಡಿಮೆ, ಮಡದಿಯ ಆರೋಗ್ಯಕ್ಕೆ ಹಾನಿ, ಉದ್ಯೋಗದಲ್ಲಿ ತೊಂದರೆ.

ಮಕರ—ನಿಮ್ಮ ದೇಹ ಸ್ಥಿತಿ ಉತ್ತಮವಾಗಿರುವುದು, ಅಧಿಕ ಅರ್ಥ ಲಾಭ, ಮನಸ್ಸಿಗೆ ಹರ್ಷ, ಉದ್ಯೋಗ ವ್ಯಾಪಾರಗಳಲ್ಲಿ ಪ್ರಯೋಜನ ಮತ್ತು ಪ್ರಯಾಣದಲ್ಲಿ ಆಸಕ್ತಿ ಇರುವುದು.

ಕುಂಭ—ಈ ವಾರ ಧನ ಲಾಭವು ಕಡಿಮೆ, ವಿದ್ಯಾರ್ಥಿಗಳಿಗೆ ನಿರಾಶೆಯು, ವಿರೋಧಿಗಳಿಂದ ವ್ಯಾಪಾರಕ್ಕೆ ನಷ್ಟ, ಇವುಗಳಿಂದ ಮಾನಸಿಕ ಚಿಂತೆ.

ಮೀನ—ಆರೋಗ್ಯವು ಚೆನ್ನಾಗಿದ್ದರೂ ಆರ್ಥಿಕ ಸ್ಥಿತಿಯು ಸಮರ್ಪಕವಾಗಿರುವುದಿಲ್ಲ, ಮನಸ್ಸಿಗೂ ನೆಮ್ಮದಿ ಇರುವುದಿಲ್ಲ, ವ್ಯಾಪಾರದಲ್ಲಿ ಲಾಭವಿದೆ.

ಜೋಳದ ಬೆಳೆ ಕಮ್ಮಿ

ಸ್ವಂ. ಸು.] ಗುಂಡ್ಲುಪೇಟೆ ೪

ಈ ತಾಲ್ಲೂಕಿನಲ್ಲಿ ಈ ವರ್ಷ ಸಕಾಲದಲ್ಲಿ ಮಳೆ ಬಾರದೆ ಸರಿಯಾಗಿ ಪೈರು ಸಿಲ್ಲದೆ ಕೇವಲ ನಾಲ್ಕು ಆಣೆ ಅಂದಾಜಿಗೂ ಕಮ್ಮಿಯಾಗಿ ಬೆಳೆಯಾಗಿರುತ್ತೆ. ಈಗಾಗಲೇ ಪಹಣಿ ಬರೆಯುತ್ತಿರುವುದಾಗಿ ತಿಳಿಯ ಬರುತ್ತೆ. ದಾಮಾಷಾ ಹಾಕುವದರಿಂದ ಜನರಿಗೆ ತುಂಬಾ ತೊಂದರೆಯಾಗುತ್ತೆ. ಸ್ವಾನುಭೋಗರುಗಳು ದುಬಾರಿ ಕಾಣಿಸುವದರಿಂದ ಮುಂದೆ ಹೆಚ್. ಎಸ್. ಪ್ರಕಾರ ಸರ್ಕಾರಕ್ಕೆ ಸೆರೆಂಡರ್ ಮಾಡಬೇಕಾದ ಮೊತ್ತವೂ ಜಾಸ್ತಿಯಾಗಿ ಜನರು ತಿನ್ನುವುದಕ್ಕೂ ಇಲ್ಲದೆ ತುಂಬಾ ತೊಂದರೆಯಾಗುತ್ತೆ. ಹೀಗಿರುವಲ್ಲಿ ಶ್ಯಾನುಭೋಗರು ಅನ್ಯಾಯವಾಗದ ರೀತಿಯಲ್ಲಿ ನಿಜವಾದ ಅಂದಾಜನ್ನು ಹಾಕುವಂತೆ ಸಂಬಂಧ ಪಟ್ಟ ಅಧಿಕಾರಿಗಳು ತಿಳುವಳಿಕೆ ಕೊಟ್ಟು, ಮುಂದೆ ರೈತರು ತೊಂದರೆಗಳಿಗೆ ಒಳಗಾಗದಂತೆಯೂ ರೈತರು ಕಛೇರಿಗಳ ಮುಂದೆ ಗೋಳಾಡುವ ಪರಿಸ್ಥಿತಿಯು ಒದಗದಂತೆಯೂ ಏರ್ಪಡಿಸಬೇಕಾಗಿ ಕೋರಲಾಗಿದೆ.

ಬಟ್ಟೆಯ ಅಭಾವ

ಈ ಊರಿನಲ್ಲಿ ಮಿಲ್ಲು ಬಟ್ಟೆಗಳು ದೊರೆಯದೇ ತುಂಬಾ ತೊಂದರೆಯಾಗಿರುತ್ತೆ. ಅಂಗಡಿಗಳವರನ್ನು ಕೇಳಿದರೆ ನಮಗೆ ಕೋಟಾವೇ ಬಂದಿಲ್ಲವೆಂದು ಹೇಳುತ್ತಾರೆ. ನಿಜಸ್ಥಿತಿ ಗೊತ್ತಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಗಮನ ಕೊಟ್ಟು ಒಡನೆಯೇ ಅಭಾವ ತಪ್ಪಿಸುತ್ತಾರೆಂದು ನಂಬಲಾಗಿದೆ.

ಭೂಗೋಳ

ಸಪ್ಲಿಮೆಂಟ್

ಮಂಗಳೂರು ಹೈದರಾಬಾದಿನಲ್ಲಿದೆ. ಪಲ್ಯಾವಟಿಗ್, ಲಾಯಪ ಗಂಡಿ, ಮರದ ಹಿತ್ತಲು ಎಲ್ಲಿವೆ? ಬಹಿಷ್ಟೆ ಸಂಬಂಧದ ಹೊಟ್ಟೆನೋವಿನ ದೆಸೆಯಿಂದ ಮಕ್ಕಳಾಗದೇ ಇರತಕ್ಕವರಿಗೆ ಗ್ಯಾರಂಟೀ ಔಷಧವೆಂದು ಎಂಭತ್ತೇಳು ವರ್ಷಗಳಿಂದ ಪ್ರಖ್ಯಾತವಾದ "ಸಂತಾನ ಸಿಂಧೂರ" ಎಂಬ ಭಸ್ಮದ ವಿಚಾರವಾಗಿ ಹೊಸದಾಗಿ ಪ್ರಿಂಟಾಗಿರತಕ್ಕ ನಮ್ಮ ಕ್ಯಾಟಲಾಗ್ ಮತ್ತು "ಸಪ್ಲಿಮೆಂಟ್" ನೋಡಿರಿ. ಗೊತ್ತಾಗುತ್ತೆ. ಬರೆದರೆ ಎರಡೂ ಬಿಟ್ಟಿ ರವಾನೆ.

ಎ. ರಾಮಸ್ವಾಮಿಅಯ್ಯರ್,
ಪ್ರೊಪ್ರೈಟರ್: "ಸಂತಾನ ಸಿಂಧೂರ"
ಆಫೀಸ್, ಅಂಬಳೆ, ಯಳಂದೂರ್ ಪೋಸ್ಟ್.

ಉಪಾಧ್ಯಾಯರ ಅಭಾವ

ಸ್ವಂ. ಸು.] ನಂಜನಗೂಡು ೩

ಇಲ್ಲಿಯ ಮಾಧ್ಯಮಿಕ ಶಾಲೆಯಲ್ಲಿ ಸಂಸ್ಕೃತ ಪಾಠ ಓದುವ ಹುಡುಗರು ೧೦೦ ಮಂದಿ ಇದ್ದಾರೆ. ಶಾಲಾ ಬಾಗಿಲು ತೆಗೆದು ೨ ತಿಂಗಳ ಮೇಲಾಯಿತು. ಇಷ್ಟು ದೊಡ್ಡ ಶಾಲೆಗೆ ಇಷ್ಟು ಮಂದಿ ವಿದ್ಯಾರ್ಥಿಗಳಿದ್ದಾಗ್ಯೂ ಈ ಪಾಠಕ್ಕೆ ಉಪಾಧ್ಯಾಯರನ್ನು ನೇಮಿಸದೇ ಇರುವುದು ತುಂಬಾ ಶೋಚನೀಯವಾಗಿದೆ. ಹೈಸ್ಕೂಲಿನಲ್ಲಿ ವ್ಯಾಯಾಮ ಪಾಠ ಕಲಿಸಲು ಯಾರೂ ಇಲ್ಲದೆ ತುಂಬಾ ತೊಂದರೆಯಾಗಿರುತ್ತದೆ.

ವಿದ್ಯಾರ್ಥಿಗಳ ತೊಂದರೆ

ಪ್ರೌಢ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಕೂರಲು ಸ್ಥಳಾಭಾವವಾಗಿರುತ್ತದೆ. ೨ ನೇ ಸಾರಿ ಎಸ್. ಎಸ್. ಎಲ್. ಸಿ. ಗೆ ಕೂರುವ ವಿದ್ಯಾರ್ಥಿಗಳಿಗೆ ಬೆಳಗಿನ ತರಗತಿಗಳನ್ನು ನಡೆಸುತ್ತಿದ್ದಾರೆ. ಈ ಪಾಠದಿಂದ ವಿದ್ಯಾರ್ಥಿಗಳಿಗೆ ಸ್ವಲ್ಪವೂ ಅನುಕೂಲವಿಲ್ಲ. ಆದರೂ ಮಾತ್ರ ಫೀಜು ತೆಗೆದುಕೊಳ್ಳುತ್ತಿದ್ದಾರೆ. ಹೆಸರಿಗೆ ೩ ಗಂಟೆ ಕಾಲ, ಕೆಲವು ವೇಳೆ ಸರಿಯಾದ ಪಾಠ ೧ ಗಂಟೆ ಸಹ ನಡೆಯುತ್ತಿಲ್ಲ. ಕೂಡಲೇ ಇಲಾಖೆಯವರು ವಿದ್ಯಾರ್ಥಿಗಳ ಈ ತೊಂದರೆಯನ್ನು ತಪ್ಪಿಸುವುದು ಒಳ್ಳೆಯದು.

ವೆರೈಟಿ ಸ್ಟೋರ್ಸ್

ಪೋಸ್ಟಾಫೀಸ್ ಬೀದಿ, ಶ್ರೀರಂಗಪಟ್ಟಣ

ನಮ್ಮಲ್ಲಿ ಪರಿಶುದ್ಧವಾದ ಕಾಫಿಪುಡಿ ದೊರೆಯುತ್ತದೆ. ನಿಮ್ಮ ಎದುರಿಗೆ ಪುಡಿ ಮಾಡಿಕೊಡಲಾಗುತ್ತದೆ.

ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್ ಕೊಡಲಾಗುತ್ತದೆ

ಪಾರ್ಚ್‌ಮೆಂಟ್	ಪೌಂಡಿಕ್ಕೆ	೧-೧೦-೦
ನೇಟಿವ್	,,	೧-೬-೦
ರೋಬಸ್ಟ	,,	೧-೩-೦

ಮತ್ತು ನಮ್ಮಲ್ಲಿ ಪ್ರತಿ ದಿನದ ಬಳಕೆ ಸಾಮಾನುಗಳೂ ಸ್ಟೇಷನರೀ ಸಾಮಾನುಗಳು ದೊರೆಯುತ್ತವೆ.

ಒಂದು ಸಾರಿ ಪರೀಕ್ಷಿಸಿ ನೋಡಿ.

ಪ್ರೊಪ್ರೈಟರ್,
ಸಿ. ನರಸಿಂಹ ಶಾಸ್ತ್ರಿ

ಶ್ರೀರಂಗಪಟ್ಟಣದ ಶ್ರೀ ರಂಗನಾಯಕಿ ಸ್ತ್ರೀ ಸಮಾಜದ ಸಹಾಯಾರ್ಥವಾಗಿ
ಶ್ರೀಯುತ
ಆರ್. ರಾಮಚಂದ್ರರಾವ್ ಘೋರ್ಪಡೆ
ಬಿ. ಎ. ರವರ ಅಧ್ಯಕ್ಷತೆಯಲ್ಲಿ

ಅಮೋಘ ನರ್ತನ

ಉದಯ ರುದ್ರ ಮತ್ತು ಪಾರ್ಟಿಯವರಿಂದ
ಮೈಸೂರು ಟೌನ್ ಹಾಲಿನಲ್ಲಿ
೧೨-೮-೪೬ ನೇ ಸೋಮವಾರ
ಸಂಜೆ ೬-೩೦ ಕ್ಕೆ
ಪ್ರವೇಶ ಧನ
ರೂ 10, 5, 3, 2 ಮತ್ತು 1
ಮಹಾಜನರ ಉದಾರ ಸಹಾಯ ಕೋರಿದೆ.

ಎಸ್. ಪದ್ಮ, ಕಾರ್ಯದರ್ಶಿ, ಎಸ್. ಗಂಗಮ್ಮ, ಅಧ್ಯಕ್ಷಿಣಿ.

ರಾಜ್‌ಕಮಲ್ ಟಾಕೀಸ್, ಮೈಸೂರು

31-7-46 ನೇ ಬುಧವಾರದಿಂದ
ಕನನ್ ಬಾಲ ಮುಖ್ಯಪಾತ್ರವಹಿಸಿರುವ
"ಬನ್‌ಫೂಲ್"

Edited printed and published by A. R. Nagarajan at the Sadhvi Press D Subbiah Road, Mysore

ಫೋ. ನಂ. 393 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು



ಸಂಪುಟ ೫] ಮಂಗಳವಾರ ೬—೮—೪೬ [ಸಂಚಿಕೆ ೧೨

ಪಂಚಾಯುತಿ ವಿಮರ್ಶೆಗೆ ಜಿನ್ನಾರವರ ನಿರಾಕರಣೆ

ಜವಾಬ್ದಾರಿ ಸರ್ಕಾರಕ್ಕೆ ಕೂಡಲೇ ಹೋರಾಟ

ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯಕರ್ತರ ನಿರ್ಣಯ

ಸ್ವಂ.ವ.] ಬೆಂಗಳೂರು ೫

ಅಖಿಲ ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ಸಿನ ಅಂಗ ಸಂಸ್ಥೆಗಳ ಕಾರ್ಯಕರ್ತರ ಸಮಾವೇಶವು ನಿನ್ನೆಯದಿನ ಬೆಳಗ್ಗೆ ಬೆಂಗಳೂರು ನಗರದ ಕಾಂಗ್ರೆಸ್ ಭವನದಲ್ಲಿ ಸೇರಿದ್ದಿತು. ಸಂಸ್ಥಾನದ ಎಲ್ಲ ಜಿಲ್ಲೆಗಳಿಂದ ೬೦ ಜನರು ಭಾಗವಹಿಸಿದ್ದರು. ಲಕ್ನೋ ವಿದ್ಯಾರ್ಥಿ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ.ಎಲ್.ವಿ ಪಟ್ಟಯವರು ಅಧ್ಯಕ್ಷತೆ ವಹಿಸಿದ್ದರು. ಅಖಿಲ ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ಸು ಮುಂದೆ ಅನುಸರಿಸಬೇಕಾಗಿರುವ ಕಾರ್ಯಕ್ರಮದ ಬಗ್ಗೆ ೩ ಘಂಟೆಗಳ ಕಾಲ ವಿಪುಲ ಚರ್ಚೆಯಾದ ನಂತರ ಈ ಕೆಳಗೆ ಕಂಡ ನಿರ್ಣಯಗಳು ಸರ್ವಾನುಮತದಿಂದ ಅನುಮೋದಿತವಾದುವು:—

ಈಗ ಕೆಲವು ತಿಂಗಳ ಹಿಂದೆ ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷರು ಸಾರಿದಂತೆ ಮೈಸೂರು ಕಾಂಗ್ರೆಸ್ಸು ಪೂರ್ಣ ಜವಾಬ್ದಾರಿ ಸರ್ಕಾರಕ್ಕಾಗಿ ಕೂಡಲೇ ಬಲವತ್ತರವಾದ ಹೋರಾಟ ಹೂಡಬೇಕೆಂದು ಮೈಸೂರು ಕಾಂಗ್ರೆಸ್ಸನ್ನು ಈ ಸಮಾವೇಶವು ಒತ್ತಾಯ ಮಾಡುತ್ತದೆ. ಮೈಸೂರು ಕಾಂಗ್ರೆಸ್ಸಿನಲ್ಲಿ ಈಗ ಕಂಡುಬರುತ್ತಿರುವ ಜಾಡ್ಯ ಹೋಗಿ ಕೂಡಲೇ ಕ್ರಾಂತಿಪಥ ಹಿಡಿಯಬೇಕೆಂದೂ, ಇದಕ್ಕೆ ಸಂಸ್ಥಾನದ ಎಲ್ಲ ವಿದ್ಯಾರ್ಥಿಗಳ ಬೆಂಬಲವಿರುವುದೆಂದೂ ಈ ಸಮಾವೇಶವು ತೀರ್ಮಾನಿಸುತ್ತದೆ.

ಅಖಿಲ ಕರ್ನಾಟಕ ವಿದ್ಯಾರ್ಥಿ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಗಳಾದ ರಾಮಸ್ವಾಮಿಯವರು ಗೋವಾದ ಪರಿಸ್ಥಿತಿಯನ್ನು ಬಣ್ಣಿಸಿ ಸಮಯ ಬಂದರೆ ವಿದ್ಯಾರ್ಥಿಗಳು ಗೋವೆಯ ಕಡೆಗೆ ನುಗ್ಗುವಂತಹ ಸತ್ಯಾಗ್ರಹಿಗಳ ಪಡೆಯನ್ನು ತಯಾರು ಮಾಡಬೇಕೆಂದು ತಿಳಿಸಿದರು. ಕರ್ನಾಟಕದ ಏಕೀಕರಣದ ಬಗ್ಗೆಯೂ, ವಿದ್ಯಾರ್ಥಿಗಳ ಕಂದು ಕೊರತೆಗಳ ವಿಚಾರವಾಗಿಯೂ ವಿಶ್ವಕರ್ನಾಟಕದ ವಿರುದ್ಧವಾಗಿಯೂ ಸರ್ಕಾರವು ಮಾಡಿರುವ ಆಜ್ಞೆಯನ್ನು ಖಂಡಿಸುವ ನಿರ್ಣಯಗಳಾದಮೇಲೆ ರಾಷ್ಟ್ರಗೀತೆಯೊಡನೆ ಸಮಾವೇಶವು ಮುಕ್ತಾಯವಾಯಿತು.

ಶಾಂತಿ ಸಮ್ಮೇಳನ

ಶಾಂತಿ ಸಮ್ಮೇಳನದ ಎರಡನೆ ಅಧಿವೇಶನವು ೩ ನೇ ತಾ|| ನಡೆದಾಗ ಭಾರತದ ಪ್ರತಿನಿಧಿಗಳಾಗಿರುವ ಸರ್ ಸ್ಯಾಮುಯಲ್ ರಂಗನಾಥನ್‌ರವರು ಭಾಷಣ ಮಾಡಿದರು. ಭಾರತವು ಯುದ್ಧದಲ್ಲಿ ಅತ್ಯಂತ ಗಣ್ಯ ಸ್ಥಾನವನ್ನು ಪಡೆದು, ಅಂತರ ರಾಷ್ಟ್ರೀಯ ಭಾವನೆಯಿಂದ ಕೂಡಿದೆಯೆಂದೂ, ಆಯ ಕಟ್ಟಿನ ಸ್ಥಾನದಲ್ಲಿರುವುದರಿಂದ ಜಗತ್ತಿನ ಶಾಂತಿ ಪಾಲನೆಯಲ್ಲಿ ದೊಡ್ಡ ಜವಾಬ್ದಾರಿಯನ್ನು ನಿರ್ವಹಿಸುವುದೆಂದೂ, ಅವರು ಹೇಳಿದರು. ಸಮಿತಿ ಮೇಲೆ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಬೇಕೆಂದು ಸಭೆಯಲ್ಲಿ ಕೇಳಲಾಗಿ ಸಭೆಯು ಮಾನ್ಯರೇ ಎರಡು ಭಾಗದವನ್ನು ಮುಂದಿ ಒಪ್ಪಿದ ವಿಷಯಗಳನ್ನು ಸಾಮ್ಯ ಮಾಡಬೇಕೆಂದೂ, ಅವನ್ನು ಪರಿಶೀಲನೆ ಮಾಡಲಾಗುವೆಂದೂ [illegible]

ಸಿ. ನರಸಿಂಹಯ್ಯನವರಿಗೆ ಅಭಿನಂದನೆ

ಮೈಸೂರು ೬

ಪ್ರಭುಗಳ ಮೆಚ್ಚುಗೆಗೆ ಪಾತ್ರರಾಗಿ "ರಾಜಸೇವಾಸಕ್ತ" ಎಂಬ ಬಿರುದನ್ನು ಪಡೆದ ಶ್ರೀ ಸಿ. ನರಸಿಂಹಯ್ಯನವರಿಗೆ ನಿನ್ನೆ ಸಾಯಂಕಾಲ ಸಹಕಾರ ಭವನದಲ್ಲಿ ಮೈಸೂರು ಸಹಕಾರ ಸಂಯುಕ್ತ ಸಂಸ್ಥೆಯವರು ಸಭೆ ಸೇರಿಸಿ ಮಾನಪತ್ರ ಸಮರ್ಪಣೆ ಮೂಲಕ ಅಭಿನಂದನೆಯನ್ನು ಸಲ್ಲಿಸಿದರು. ರಾಜಸೇವಾಸಕ್ತ ಎಂ. ರಾಮರಾಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಟಿ ಕೃಷ್ಣಪ್ಪನವರು, ಎಸ್ ಕೃಷ್ಣಸ್ವಾಮಿಯವರು, ಶಾಮಣ್ಣನವರು, ರಾ|| ಬ|| ಎಂ. ರಾಮಸ್ವಾಮಿಯವರು ಶ್ರೀ ನರಸಿಂಹಯ್ಯನವರ ಸೇವೆಯನ್ನು ಪ್ರಶಂಸಿಸಿದರು.

ಶ್ರೀ ನರಸಿಂಹಯ್ಯನವರು ಉತ್ತರಕೊಡುತ್ತ ಪ್ರಜಾಸೇವೆ ಮತ್ತು ಸಮಾಜ ಸೇವೆಯನ್ನು ಯಶಸ್ವಿಯಾಗಿ ನಡೆಸಲು ಸಹಕಾರ ಸಂಘಗಳು ಅತ್ಯಗತ್ಯವೆಂದೂ ಈ ಸಹಕಾರ ಸಂಘಗಳ ಬಲದಿಂದಲೇ ಅನೇಕ ಯೂರೋಪ್ ದೇಶಗಳು ಅಭ್ಯುದಯ ಹೊಂದಿರಾಜಕೀಯ ಸ್ವಾತಂತ್ರ್ಯವನ್ನು ಪಡೆದಿರುತ್ತವೆಯೆಂದೂ ಹೇಳಿದರು. ಸಂಗೀತ ಮತ್ತು ಮಂಗಳಗಳೊಡನೆ ಸಮಾರಂಭವು ಮುಗಿಯಿತು.

ವಿದ್ಯಾರ್ಥಿ ಸಂಘ

ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್ ಸಂಘದ ಚುನಾವಣೆಗಳು ನಿನ್ನೆ ದಿವಸ ನಡೆದು ಶ್ರೀ ಎಚ್ ಎಸ್. ಕೃಷ್ಣಮೂರ್ತಿಯವರು ಉಪಾಧ್ಯಕ್ಷರಾಗಿಯೂ, ಎ. ಎಸ್ ಗೋಪಾಲಸ್ವಾಮಿ ಮತ್ತು ಎಚ್ ವಿ ವೇದಾಂತ ರಾವರುಗಳು ಗೌರವ ಕಾರ್ಯದರ್ಶಿಗಳಾಗಿಯೂ ಇತರ ೮ ವಿದ್ಯಾರ್ಥಿಗಳು ಸದಸ್ಯರಾಗಿಯೂ ಆರಿಸಲ್ಪಟ್ಟಿದ್ದಾರೆ.

ಮಂತ್ರಾಲಯದಲ್ಲಿಸ್ವಾಮಿಗಳ ಆರಾಧನೆ

ಮಂತ್ರಾಲಯ ೫

ಶ್ರೀ ರಾಘವೇಂದ್ರ ಸ್ವಾಮಿಗಳವರ ಆರಾಧನೆಯು ಇದೇ ೧೧ ನೇ ತಾ|| ನಿಂದ ೧೩ ನೇ ತಾ|| ನವರೆಗೆ ನಡೆಯುವುದು. ಈ ಸಮಯದಲ್ಲಿ ಶಾಲಾ ಉಪನ್ಯಾಸ ಕಾಲಕ್ಷೇಪ ಸಂತರ್ಪಣೆಗಳು ನಡೆಯುವುದರಿಂದ ಜಿಲ್ಲೆಗೆ ಬರುವ ರೈಲ್ವೆ ಕಾರ್ಡು ಇನಾಯ್ತಿಗೋಸ್ಕರ [illegible] ಕೋರಿ, ಸರ್ಟಿಫಿಕೇಟ್ ಪಡೆಯಬೇಕು [illegible]

ಉಪಾಕರ್ಮ ವಿಚಾರ

ತಾ|| ೧೨-೮-೪೬ ನೇ ಶ್ರಾವಣ ಶುದ್ಧ ಪೂರ್ಣಿಮಾ ಸೋಮವಾರ ಋಗ್ವೇದ ಮತ್ತು ಯಜುರ್ವೇದದವರಿಗೆ ಉಪಾಕರ್ಮವು ಪ್ರಥಮೋಪಾಕರ್ಮವನ್ನೂ ಈ ದಿನವೇ ಆಚರಿಸಬಹುದು.

ಕೇವಲ ಸೌರಮಾನಾನುಷ್ಠಾನದ (ಶಿವಮೊಗ್ಗ ಮತ್ತು ಕನ್ನಡ ಜಿಲ್ಲೆಯವರು ಅಧಿಕವಾಗಿ ಕೇವಲ ಸೌರಮಾನಾನುಷ್ಠಾನದ ಸ್ಮೃತಿ ಆಚಾರವುಳ್ಳವರು)ಋಗ್ವೇದದವರಿಗೆ ತಾ|| ೮-೯-೪೬ ನೆಯ ಭಾದ್ರಪದ ಶುದ್ಧ ದ್ವಾದಶೀ ಭಾನುವಾರವೂ ಮತ್ತು ಯಜುರ್ವೇದದವರಿಗೆ ತಾ|| ೧೧-೯-೪೬ ನೆಯ ಭಾದ್ರಪದ ಶುದ್ಧ ಪೂರ್ಣಿಮಾ ಬುಧವಾರವೂ ಉಪಾಕರ್ಮವು.

ಕೇವಲ ಸೌರಮಾನಾನುಷ್ಠಾನದವರಿಗಾಗಿಯೇ ತಾ|| ೮-೯-೪೬ ನೆಯ ಭಾನುವಾರ, ಸೌರ ಋಗುಪಾಕರ್ಮವೆಂದೂ, ತಾ|| ೧೧-೯-೪೬ ನೆಯ ಬುಧವಾರ ಸೌರ ಯಜುರುಪಾಕರ್ಮವೆಂದೂ ನಮ್ಮ ಈ ವರ್ಷದ ಪಂಚಾಂಗದಲ್ಲಿ ಪ್ರಕಟಿಸಿದೆ.

ಕೇವಲ ಸೌರಮಾನಾನುಷ್ಠಾನ ಇಲ್ಲದವರು (ನಮ್ಮ ದೇಶದ ಸೌರಮಾನಾಚರಣೆಯವರು) ಶ್ರಾವಣ ಶುದ್ಧ ಪೂರ್ಣಿಮಾ ದಿನವೇ ಉಪಾಕರ್ಮವನ್ನು ಆಚರಿಸಬೇಕು.

ಎಸ್. ಎ. ಕೃಷ್ಣಜೋಯಿಸ್

ಅಂಚೆ ಮುಷ್ಕರ ಮುಕ್ತಾಯಗೊಂಡಿತು

ಬೊಂಬಾಯಿಯಲ್ಲಿ ಅಂಚೆ ಮುಷ್ಕರವು ಮುಕ್ತಾಯಗೊಂಡಿತು. ನಿನ್ನೆ ಬೆಳಗ್ಗೆ ಎಲ್ಲ ಕೆಲಸಗಾರರೂ ಕೆಲಸಕ್ಕೆ ಹಾಜರಾದರು. ಕಳೆದ ತಿಂಗಳ ಸಂಬಳವನ್ನು ಪೂರ್ತಿಯಾಗಿ ಕೊಡದ ಹೊರತು ಜುಲೈ ೧ ನೇ ತಾ|| ವರೆಗಿನ ಸಂಬಳವನ್ನು ಏಗದುಕೊಳ್ಳಕೂಡದೆಂದು ಎಲ್ಲ ಕೆಲಸಗಾರರಿಗೂ ಸೂಚನೆಕೊಡಲಾಗಿದೆ. ಸಂಜಾಬು, ಗಡಿನಾಡುಗಳಲ್ಲೂ ಮುಷ್ಕರ ಹಿಂತೆದೆ. ಅಲಹಾಬಾದಿನಲ್ಲಿ ಮಾತ್ರ ನಾಗಿತ್ತಲೇ ಇದೆ. ಬೊಂಬಾಯಿನ ತಂತೀ ಇಲಾಖೆಯವರೂ ಮುಷ್ಕರವನ್ನು ಮುಂದ ವರಿಸುತ್ತಿದ್ದಾರೆ.

ಮೈಸೂರು ಮುಸಲ್ಮಾನರಿಂದ ಬಿರುದು ತಿರಸ್ಕಾರ

ಅಖಿಲ ಭಾರತ [illegible] ಕ್ರಿಯಾದ [illegible] ಅವ ಸ್ಲಿಂ [illegible] [illegible] ಬಿರುದುಗಳನ್ನು ತಿರಸ್ಕರಿಸಿದ್ದಾರೆ [illegible]

ಸೆಪ್ಟೆಂಬರ್ ಪರೀಕ್ಷೆಗಳು ಮುಂದುವರಿಯಿತು

ಮೈಸೂರು ೬

ಸೆಪ್ಟೆಂಬರ್ ೩ ನೇ ತಾ|| ನಿಂದ ನಡೆಯಬೇಕಾಗಿದ್ದ ಇಂಟರ್‌ಮೀಡಿಯೆಟ್, ಬಿ ಎ ಬಿ.ಎಸ್.ಸಿ, ಆನರ್ಸ್ ಮುಂತಾದ ಪರೀಕ್ಷೆಗಳು ಸೆಪ್ಟೆಂಬರ್ ೧೭ ನೇ ತಾ|| ನಿಂದ ಆರಂಭವಾಗಲಿವೆ.

ಭಾಷಣ

ನಾಳೆ ಸಾಯಂಕಾಲ ೬ ಗಂಟೆಗೆ ಸಂಯುಕ್ತ ಮೈಸೂರು ಸಂಸ್ಥಾನದ ನೇಡ ಪ್ರಚಾರ ಮಂಡಲದ ಸಭಾಗಾನ ಪ್ರಾರ್ಥನಾ ಕಾಲೇಜಿನ ಪ್ರೊ|| ಶ್ರೀ ಏಕನಾಥಚಾರ್ಯರು ಸಂಗೀತ ಮಂದಿರ ಸಭೆಯಲ್ಲಿ "ಮಾನವ ಜೀವನದ ಗುರಿ" ಎಂಬ ವಿಷಯವಾಗಿ ಭಾಷಣ ಮಾಡುವರು. ಶ್ರೀ ಶಂಕರಾನಂದ ಭಾರತೀಯವರು ಅಧ್ಯಕ್ಷತೆಯನ್ನು ವಹಿಸುವರು. ಸರ್ವರಿಗೂ ಸ್ವಾಗತವಿದೆ.

ಕೂಡ್ಲಿ ಮಠದ ಏಜೆಂಟರು

ಕೂಡ್ಲಿ ಶೃಂಗೇರಿ ಮಠಕ್ಕೆ ಶ್ರೀ ಹೆಚ್. ವಿ ಗುಂಡೂರಾಯರ ಸ್ಥಾನದಲ್ಲಿ ಆಗಸ್ಟ್ ೧ ರಿಂದ ಶ್ರೀಧರಪುರದ ಶ್ರೀ ಟಿ ಎಸ್. ರಾಮಸ್ವಾಮಯ್ಯನವರನ್ನು ಏಜೆಂಟರನ್ನಾಗಿ ನೇಮಿಸಲಾಗಿದೆಯೆಂದು ತಿಳಿದು ಬಂದಿದೆ.

ನಾಮಕರಣ ಸದಸ್ಯರಿಗೆ ಓಟಿನ ಹಕ್ಕಿಲ್ಲ

ಕೊಲ್ಹಾಪುರದ ೫೫ ಸನ ಸಭೆಯಿಂದ ರಾಜ್ಯಾಂಗ ರಚನಾ ಸಭೆಗೆ ನಡೆಯುವ ಚುನಾವಣೆಯಲ್ಲಿ ನಾಮಕರಣ ಮಾಡಲ್ಪಟ್ಟ ಸಾಮಾಜ ಸದಸ್ಯರು ಓಟು ಕೊಡಬಾರದು ವುದಿಲ್ಲವೆಂದು ಕಲ್ಲಿನ ದಿವಾನರು ಭರವಸೆ ಇತ್ತಿದ್ದರಿಂದ ಸಾಜನ ಸಭೆಗೆ ರಾಜೀನಾಮೆ ಇತ್ತಿದ್ದ ಕೊಲ್ಹಾಪುರದ ಪ್ರಜಾ ಮಂಡಲದ ಸದಸ್ಯರು ತಮ್ಮ ರಾಜೀನಾಮೆಯನ್ನು ವಾಪಸು ತೆಗೆದುಕೊಂಡಿದ್ದಾರೆ.

ಪಾಕೀಸ್ತಾನದ ಬಗ್ಗೆ ಪಂಚಾಯಿತಿ ಬೇಕಿಲ್ಲ

ಪಾಕೀಸ್ತಾನ ಸಮಸ್ಯೆಯನ್ನು ಪಂಚಾಯಿತರ ತೀರ್ಪಿಗೆ ಒಪ್ಪಿಸಬೇಕೆಂದು ರಾಷ್ಟ್ರನಾಯಕರು ಹೇಳುತ್ತಿರುವ ವಿಚಾರದ ಬಗ್ಗೆ ಮಿ|| ಜಿನ್ನಾರವರು ತಮ್ಮ ಅಭಿಪ್ರಾಯವನ್ನು ತಿಳಿಸಿ ತಾವು ಅದಕ್ಕೆ ಒಪ್ಪುವುದಿಲ್ಲವೆಂದೂ, ಪಾಕೀಸ್ತಾನವು ಮುಸ್ಲಿಮರ ಆತ್ಮ ನಿರ್ಧಾರದ ಹಕ್ಕಿಂದ; ಇದು ನ್ಯಾಯವಿಚಾರಣೆಗೆ ಒಳಪಡತಕ್ಕ ವಿಷಯವಲ್ಲವೆಂದೂ, ಹೇಳಿದರು.

ಮನಿ ಆರ್ಡರುಗಳು

ಮೈಸೂರು ಸಂಸ್ಥಾನದ ಎಲ್ಲಾ ಕಡೆಗಳಿಗೂ, ಕೊಡಗು ಮತ್ತು ಬಳ್ಳಾರಿಗಳಿಗೂ ಈಗ ಮನಿ ಆರ್ಡರ್ ಗಳನ್ನೂ, ರಿಜಿಸ್ಟರ್ಡ್ ಟಪಾಲುಗಳನ್ನೂ ತೆಗೆದುಕೊಳ್ಳುವುದಾಗಿ ಇಲ್ಲಿನ ಅಂಚೆ ಸೂಪರಿಂಟೆಂಡೆಂಟರು ತಿಳಿಸಿದ್ದಾರೆ. ಇತರ ಕಡೆಗಳಲ್ಲಿ ಇನ್ನು ಒಂದೆರಡು ದಿನ ಇಲ್ಲಿ ಇವುಗಳನ್ನು ತೆಗೆದುಕೊಳ್ಳಲಾಗುವುದು.

ರಾಷ್ಟ್ರೋದ್ಯೋಜನಾ ಸಮಿತಿಗೆ ಮೈಸೂರಿನ ಸಹಾಯ

ಅಖಿಲ ಭಾರತ ಕಾಂಗ್ರೆಸ್ಸಿನ ಸಮಿ [illegible]

ಸಾಧ್ವಿ

೩೧೯ ೬-೮-೪೬ ಮಂಗಳವಾರ

ಮೈಸೂರಿಗೆ ಖಾಸಗೀ ಅಧ್ಯಕ್ಷರು ಎಂದು ?

ಬೆಂಗಳೂರು ನಗರಾಭಿವೃದ್ಧಿ ಸಭೆಗೆ ಸರ್ಕಾರದವರು ಖಾಸಗೀ ಅಧ್ಯಕ್ಷರೊಬ್ಬರನ್ನು ನೇಮಿಸಿದ್ದಾರೆ. ಅಲ್ಲಿನ ಪೌರಸಭೆಗೆ ಖಾಸಗೀ ಅಧ್ಯಕ್ಷರನ್ನು ಚುನಾಯಿಸುವ ಅವಕಾಶವು ಹಲವಾರು ವರ್ಷಗಳಿಂದ ದೊರೆತಿದೆ. ನಮ್ಮ ಸಂಸ್ಥಾನದ ಶಾಸನ ಸಭೆಗೆ ಖಾಸಗೀ ಅಧ್ಯಕ್ಷರನ್ನು ಚುನಾಯಿಸುವ ಅಧಿಕಾರವು ಬಂದು ನಾಲ್ಕೈದು ವರ್ಷಗಳಾದುವು. ಪ್ರಜಾ ಪ್ರತಿನಿಧಿ ಸಭೆಗೂ ಸಹ ಖಾಸಗಿ ಅಧ್ಯಕ್ಷರನ್ನು ಆರಿಸುವ ಅವಕಾಶವನ್ನು ಶ್ರೀಮನ್ಮಹಾರಾಜರವರು ಸಧ್ಯದಲ್ಲಿಯೇ ದಯಪಾಲಿಸುವರೆಂದು ಗೊತ್ತಾಗಿದೆ. ಹೀಗಿದ್ದರೂ ಸಹ ಸಂಸ್ಥಾನದ ರಾಜಧಾನಿಯಾದ ಮೈಸೂರು ನಗರದ ಪೌರಸಭೆಯು ತನ್ನ ಸ್ವಂತ ಅಧ್ಯಕ್ಷರನ್ನು ಚುನಾಯಿಸುವ ಅವಕಾಶವು ಇದುವರೆಗೆ ದೊರೆಯದೆ ಇರುವುದು ಅತ್ಯಂತ ಶೋಚನೀಯವಾದ ವಿಚಾರವಾಗಿದೆ.

ಮೈಸೂರು ಪೌರಸಭೆಯವರು ಈ ವಿಚಾರದಲ್ಲಿ ಅನೇಕ ವರ್ಷಗಳಿಂದ ಠರಾವುಗಳನ್ನು ಮಾಡಿ ಸರ್ಕಾರದವರನ್ನು ಪ್ರಾರ್ಥಿಸುತ್ತಲೇ ಇದ್ದಾರೆ. ಇದಲ್ಲದೆ ಪ್ರಜಾ ಪ್ರತಿನಿಧಿ ಸಭೆಯಲ್ಲಿಯೂ ನ್ಯಾಯ ವಿಧಾಯಕ ಸಭೆಯಲ್ಲಿಯೂ ಈ ವಿಷಯವು ಅನೇಕ ಬಾರಿ ಒತ್ತಾಯ ಪಡಿಸಲ್ಪಟ್ಟಿದೆ. ಆದರೂ ಸಹ ಈ ಅಲ್ಪವಿಷಯವನ್ನು ಸರ್ಕಾರದವರು ಈಡೇರಿಸಿರುವುದಿಲ್ಲ. ಅದಕ್ಕೆ ಅವರು ಯಾವ ಕಾರಣವನ್ನೂ ಸಹ ಕೊಟ್ಟಿರುವುದಿಲ್ಲ.

ಸ್ಥಳೀಯ ಸಂಸ್ಥೆಗಳಲ್ಲಿ ಪ್ರಾಮುಖ್ಯವಾದ ಜಿಲ್ಲಾ ಬೋರ್ಡುಗಳಿಗೆಲ್ಲಾ ಚುನಾಯಿತ ಅಧ್ಯಕ್ಷರೇ ಇರುವರು. ಮೇಜರ್ ಮತ್ತು ಮೈನರ್ ಮ್ಯುನಿಸಿಪಾಲಿಟಿಗಳಿಗೆಲ್ಲಾ ಮತ್ತು ಮೂರು ವೀಸವಾಲು ಖಾಸಗೀ ಅಧ್ಯಕ್ಷರು ಬಂದಿರುವರು. ಗ್ರಾಮ ಪಂಚಾಯಿತಿಗಳಲ್ಲೂ ಸಹ ಅವರೇ ಇರುವರು. ಹೀಗಿರುವಲ್ಲಿ ಸಂಸ್ಥಾನದ ಪ್ರಮುಖ ನಗರವಾದ ಈ ಪಟ್ಟಣದಲ್ಲಿ ಈ ಅವಕಾಶವಿಲ್ಲದಿರುವುದು ಅತ್ಯಂತ ಲಾಂಛನಾಸ್ಪದವಾದ ವಿಷಯ.

ಸಂಸ್ಥಾನದಲ್ಲಿ ಹೊಸ ಸುಧಾರಣೆಗಳು ಬಂದಮೇಲೆ ಮಂತ್ರಿ ಪದವಿಗಳನ್ನೂ ಸಹ ಖಾಸಗೀ ಮಹನೀಯರುಗಳು ನಿರ್ವಹಿಸುತ್ತಿರುವರು. ರಾಜಧಾನಿಯ ಪೌರಸಭೆಗೆ ಉಪಾಧ್ಯಕ್ಷರಾಗಿದ್ದ ಶ್ರೀ ನ್ಯಾಪತಿಯವರು, ವಿಧಾನಸಭೆಯನ್ನೂ ನಿರ್ವಹಿಸಿರುವರು ಶ್ರೀಗಳಾದ ಎಂ. ಎ. ಶ್ರೀನಿವಾಸನ್, ಅಪ್ಪಾಜಿ ಗೌಡ ಮುಂತಾದವರು. ಇಲ್ಲಿನ ಪೌರ ಸಭಾಧ್ಯಕ್ಷರಾಗಿದ್ದು ಸಚಿವ ಸ್ಥಾನಕ್ಕೆ ಏರಿದ, ಶ್ರೀಗಳಾದ ಹೆಚ್. ಸಿ. ದಾಸಪ್ಪ ಗೌಡ, ಡಾ ॥ ರಾಯ, ನಜೀರ್ ಅಹಮದ್ ಮುಂತಾದವರು. ಸ್ಥಳೀಯ ಸಂಸ್ಥೆಗಳ ಅಧ್ಯಕ್ಷರಾಗಿದ್ದ ಮಂತ್ರಿಪದವಿಗೆ ಏರಿದ ... [illegible] ... ಸ್ಥಾನವನ್ನು ... [illegible] ... ಸರ್ಕಾರದವರ ... [illegible] ...

ನಿರ್ವಹಿಸಬಲ್ಲ ಖಾಸಗೀ ಮಹನೀಯರುಗಳು ಯಾರೂ ಇರುವುದಿಲ್ಲವೇ ? ಖಾಸಗೀ ಅಧ್ಯಕ್ಷರನ್ನು ಪೌರ ಸಭೆಯವರೇ ಚುನಾಯಿಸಿಕೊಳ್ಳಲು ಕಾನೂನಿನಲ್ಲಿ ಸಂಪೂರ್ಣ ಅವಕಾಶವಿದೆ. ಅಥವಾ ಇದೇ ನಗರದ ನಿವಾಸಿಗಳೇ ನೇರವಾಗಿ ಒಬ್ಬರನ್ನು ಚುನಾಯಿಸುವ ಅವಕಾಶವೂ ಇದೆ. ಸರ್ಕಾರದವರು ಈ ಬಗ್ಗೆ ಅನುಮತಿಯನ್ನು ಮಾತ್ರ ಕೊಡಬೇಕೆಂದು ವಿಧಾಯಕವಾಗಿದೆ. ಈ ಅನುಮತಿಯನ್ನು ಕೊಡದೆ ಸರ್ಕಾರದವರು ನಿರಾಕರಿಸುತ್ತಿದ್ದಾರೆ. ದೇವರು ವರ ಕೊಟ್ಟರೂ ಪೂಜಾರಿಯು ಕೊಡದಂತೆ ಆಗಿದೆ. ಈ ವಿಚಾರದಲ್ಲಿ ಪೌರ ಸಭೆಯವರು ಮತ್ತಾ ಜನರುಗಳೂ ಚುನಾಯಿಸುವ ಅಧಿಕಾರವನ್ನು ಕೊಡುವಂತೆ ಸರ್ಕಾರದವರನ್ನು ಪ್ರಾರ್ಥಿಸಿ ಅರು ತಿಂಗಳ ಮೇಲಾಯಿತು. ಇದುವರೆಗೆ ಅದಕ್ಕೆ ಸರ್ಕಾರದವರು ಉತ್ತರವನ್ನೇ ಕೊಟ್ಟಿರುವುದಿಲ್ಲ.

ಈ ವರ್ಷದ ಪೌರಸಭೆಗೆ ಹೊಸ ಚುನಾವಣೆಗಳು ನಡೆಯಲಿವೆ. ಈ ಸಮಯವನ್ನು ಸದುಪಯೋಗಪಡಿಸಿಕೊಂಡು ಸರ್ಕಾರದವರು ಖಾಸಗೀ ಅಧ್ಯಕ್ಷರ ಚುನಾವಣೆಗೂ ಮೇಲ್ಕಂಡ ಎರಡು ವಿಧಾನಗಳಲ್ಲಿ ಯಾವುದಾದರೂ ಒಂದರಂತೆ ಅವಕಾಶವನ್ನು ಕಲ್ಪಿಸುವುದು ಅತ್ಯಂತ ಉಚಿತವಾಗಿರುತ್ತದೆ.

ಮಧ್ಯಪ್ರಾಚ್ಯದಲ್ಲಿ ಯುದ್ಧ ಸೂಚನೆಗಳೇ ?

ಬಾಸ್ರಾದಲ್ಲಿ ಬ್ರಿಟಿಷರು ಭಾರತೀಯ ಸೇನೆಗಳನ್ನು ತಂದಿಳಿಸಿರುವುದರಿಂದ ಮಧ್ಯಪ್ರಾಚ್ಯದಲ್ಲಿ ಯುದ್ಧದ ಕಾರ್ಮುಗಿಲು ಕಾಣಿಸಿಕೊಂಡಂತಿದೆಯೆಂದು ವರದಿಯಾಗಿದೆ. ಬ್ರಿಟಿಷ್ ಇರಾಕ್ ಒಪ್ಪಂದದಲ್ಲಿ ಸೂಚಿಸಿರುವಂತೆ ಈ ಎರಡು ರಾಷ್ಟ್ರಗಳಲ್ಲಿ ಯಾವುದೊಂದಕ್ಕೆ ಯುದ್ಧ ಭೀತಿ ಪ್ರಾಪ್ತವಾದರೆ ಆಗ್ಗೆ ಬ್ರಿಟನ್ ತನ್ನ ಸೇನೆ ತಂದಿಳಿಸಬಹುದೆಂದಿದೆ. ಈಗ ಬ್ರಿಟನ್ನು ಬಾಸ್ರಾದಲ್ಲಿ ಸೇನೆ ತಂದಿಳಿಸಿರುವುದರಿಂದ ಇರಾಕ್-ಬ್ರಿಟನ್‌ಗಳಿಗೇನಾದರೂ ಯುದ್ಧ ಪರಿಸ್ಥಿತಿ ಉಂಟಾಗಿವೆಯೇ ಎಂದು ಸಂದೇಹಪಡಲಾಗಿದೆ.

ಉದಾರ ದಾನ

ರಾಜಧಾನಿಯ ಶ್ರೀ ಎಸ್. ಎನ್. ಪಂಡಿತರವರು ದಳವಾಯಿ ಶಾಲಾ ಕಟ್ಟಡಕ್ಕೆ ಒಂದುನೂರು ರೂಪಾಯಿಗಳನ್ನು ಉದಾರವಾಗಿ ದಾನವಿತ್ತಿದ್ದಾರೆ.

ಸತ್ಕಾರ ಸಮಾರಂಭ

ಸ್ವಂ ಸು] ಕೃಷ್ಣರಾಜನಗರ ೫

ನಂಜನಗೂಡಿನ ಪುರಸಭಾ ಉಪಾಧ್ಯಕ್ಷರಾದ ಶ್ರೀ ವೈ. ಕೆ. ಲಕ್ಷ್ಮಣಶೆಟ್ಟರಿಗೆ ಸಾರ್ವಜನಿಕ ಪ್ರಶಸ್ತಿ ಪದಕ ದೊರೆತಿದ್ದಕ್ಕಾಗಿ ಅಲ್ಲಿ ಅಮಲ್ದಾರ್ ಶ್ರೀ ವಿ. ಶಂಕರಪ್ಪನವರ ಅಧ್ಯಕ್ಷತೆಯಲ್ಲಿ ಅವರನ್ನು ಸತ್ಕರಿಸಲಾಯಿತು. ಶ್ರೀಗಳಾದ ತಿಪ್ಪೂರು ಸುಬ್ಬರಾವ್, ವೈ. ವಿ. ಗುಂಡೂರಾವ್, ಚಿನ್ನಸ್ವಾಮಿ ಶೆಟ್ಟಿ ಮುಂತಾದವರು ಶ್ರೀ ಲಕ್ಷ್ಮಣಶೆಟ್ಟರ ಸೇವೆಯನ್ನು ಪ್ರಶಂಸಿಸಿ ಭಾಷಣ ಮಾಡಿದರು.

ವಿಶ್ವಕರ್ಮ ವಿದ್ಯಾರ್ಥಿಗಳಿಗೆ ಸೌಲಭ್ಯ

ನಂಜನಗೂಡು ೫

ಇಲ್ಲಿನ ಹೈಸ್ಕೂಲಿನಲ್ಲಿ ಓದುತ್ತಿರುವ ವಿಶ್ವಕರ್ಮ ಜಾತಿಯ ಬಡ ವಿದ್ಯಾರ್ಥಿಗಳಿಗೆ ವೇತನ ರೂಪದಲ್ಲಿಯೂ ಸಹಾಯಮಾಡಲು ಸಮಾಜವು ನಿರ್ಧರಿಸಿರುವುದರಿಂದ ಸಹಾಯ ಅಪೇಕ್ಷಿಸುವ ವಿದ್ಯಾರ್ಥಿಗಳು ಇದೇ ೧೫ ನೇ ತಾರೀಖಿನೊಳಗೆ ಅರ್ಜಿ ಹಾಕಿಕೊಳ್ಳಬೇಕೆಂದು ಸಮಾಜದ ಅಧ್ಯಕ್ಷರಾದ ಶ್ರೀ ಎಂ. ಗೋವಿಂದಾಚಾರ್ಯರು ತಿಳಿಸಿದ್ದಾರೆ.

ಉನಬೇಕನಾ !

ಪುರುಷ ಸರಸ್ವತಿಗಳೆರಡಕ್ಕೂ ಕನ್ನಡ ಸಾಹಿತ್ಯ ಸಂಪತ್ತಿನಲ್ಲಿಯೂ ಮತ್ತು ಕರ್ನಾಟಕ ಸಂಘಗಳಲ್ಲಿಯೂ ನಡೆಸತಕ್ಕ ಪ್ರಾರ್ಥನೆ ಯಾವುದೆಂದರೆ-"ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಬಹಿಷ್ಟೆ ಸಂಬಂಧದ ತೊಟ್ಟಿನೋವಿನ ದೆಸೆಯಿಂದ ಮಕ್ಕಳಾಗದೇ ಇರತಕ್ಕವರು "ಸಂತಾನ ಸಿಂಧೂರ" ಎಂಬ ಸಿದ್ಧೌಷಧವನ್ನು ಸೇವನೆ ಮಾಡಿ ಸುಪುತ್ರ ಸಂತಾನವನ್ನು ಪಡೆಯಲಿ ಎಂಬುದೇ ನಮ್ಮ ಪ್ರಾರ್ಥನೆ. ಮುಪ್ಪತ್ತು ನಲವತ್ತು ವರ್ಷಗಳಿಂದಲೂ ಇದರಿಂದ ಸಂತಾನ ಫಲ ಪಡೆದಿರತಕ್ಕವರ ಪ್ರಶಂಸಾ ಪತ್ರಗಳನ್ನು ಕ್ಯಾಟ್ಲಾಗಿನಲ್ಲಿ ನೋಡಿರಿ. ಬರೆದರೆ ಬಿಟ್ಟಿ ರವಾನೆ.

ಎ. ರಾಮಸ್ವಾಮಿ ಅಯ್ಯರ್,
ಪ್ರೊಪ್ರೈಟರ್, "ಸಂತಾನ ಸಿಂಧೂರ"
ಆಫೀಸ್, ಅಂಬಳೆ, ಯಳಂದೂರ್
ಪೋಸ್ಟ್

ಮದ್ರಾಸ್ ಪ್ರಾಂತ್ಯದಲ್ಲಿ ರೈತರ ಚಳುವಳಿ

ಬೆಳೆಯಲ್ಲಿ ತಮಗೆ ಅರ್ಧ ಭಾಗವನ್ನು ಕೊಡಲು ಜಮೀನುದಾರರು ನಿರಾಕರಿಸಿದ್ದನ್ನು ಪ್ರತಿಭಟಿಸಲು ಕುಂಭಕೋಣದಲ್ಲಿ ರೈತರು ಮುಷ್ಕರ ಹೂಡಿದ್ದಾರೆಂದೂ, ಇದರಿಂದ ೫೦ ಸಾವಿರ ಎಕರೆ ಜಮೀನು ಪಾಳು ಬಿದ್ದಿದೆಯೆಂದೂ ತಿಳಿದು ಬಂದಿದೆ. ಜಮೀನುದಾರರು ಬೆಳೆಯ ಆರು ಭಾಗ ಕೊಡಲು ಒಪ್ಪಿದ್ದಾರೆ. ಅದಕ್ಕೂ ಅವರು ಸಮ್ಮತಿಸಿಲ್ಲ. ೧೫ ಮಂದಿ ರೈತರು ಜಮೀನ್ದಾರರ ಅಪ್ಪಣೆ ಪಡೆಯದೆ ಜಮೀನಿಗೆ ನುಗ್ಗಿ ಭೂಮಿಯನ್ನು ಉತ್ತರೆಂದು ಅವರಿಗೆ ದಸ್ತಗಿರಿ ಆಗಿದೆ.

ತುರ್ಕಿಯಲ್ಲಿ ಆಂದೋಳನ

ತುರ್ಕಿಯಲ್ಲಿ ಈಗಿರುವ ಸರಜೋಗ್ಲುರವರ ಮಂತ್ರಿ ವರ್ಗ ರಾಜೀನಾಮೆ ಇತ್ತು, ಇನೋನೂ ಇನನೋನುರವರೇ ಮತ್ತೆ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ. ಮಂತ್ರಿ ವರ್ಗದ ರಾಜೀನಾಮೆ ದೊಡ್ಡ ಆಂದೋಳನವನ್ನೆಬ್ಬಿಸಿದೆ. ವಿರೋಧ ಪಕ್ಷದವರು ಸಾರ್ವತ್ರಿಕ ಚುನಾವಣೆಯಲ್ಲಿ ಗಳಿಸಿದ ಓಟುಗಳ ಸಂಖ್ಯೆಯೇ ಈ ಪರಿಸ್ಥಿತಿಗೆ ಕಾರಣವೆಂದು ಊಹಿಸಲಾಗಿದೆ. ಸರ್ಕಾರದ ಆಡಳಿತದಿಂದ ಜನರು ರೋಸಿ ಹೋಗಿದ್ದಾರೆಂದೂ, ಧಾನ್ಯಗಳು ೧ ಕ್ಕೆ ೧೦ ರಷ್ಟು ಏರಿವೆಯೆಂದೂ ಹೇಳಲಾಗಿದೆ.

ಹಿಂದೀ ಪ್ರಚಾರಕರ ವಿದ್ಯಾಲಯ

ದೇಶದಾದ್ಯಂತವೂ ಹಿಂದೀ ಪ್ರಚಾರಕರ ಅವಶ್ಯಕತೆಯು ಹೆಚ್ಚಾಗಿರುವುದರಿಂದ ಮೈಸೂರು ರಿಯಾಸತ್ ಹಿಂದೀ ಪ್ರಚಾರ ಸಮಿತಿ ಆಶ್ರಯದಲ್ಲಿ ಹಿಂದೀ ಅಧ್ಯಾಪಕರನ್ನು ತಯಾರು ಮಾಡಲು ಒಂದು ವಿದ್ಯಾಲಯವನ್ನು ಆಕ್ಟೋಬರ್ ಮೊದಲನೆ ವಾರದಿಂದ ತೆರೆಯಲಾಗುವುದು. ಇದಕ್ಕೆ ಸೇರಲಪೇಕ್ಷಿಸುವವರು ತಮ್ಮ ಅರ್ಜಿಗಳನ್ನು ಕಾರ್ಯದರ್ಶಿ, ಮೈಸೂರು ರಿಯಾಸತ್ ಹಿಂದೀ ಪ್ರಚಾರ ಸಮಿತಿ, ಬಸವನಗುಡಿ ಪೋಸ್ಟ್ ಬೆಂಗಳೂರು ನಗರ-ಇವರಿಗೆ ಕಳುಹಿಸಬೇಕಾಗಿ ಪ್ರಕಟಿಸಲಾಗಿದೆ.

ವೆರೈಟಿ ಸ್ಟೋರ್ಸ್

ಪೋಸ್ಟಾಫೀಸ್ ಬೀದಿ, ಶ್ರೀರಂಗಪಟ್ಟಣ

ನಮ್ಮಲ್ಲಿ ಪರಿಶುದ್ಧವಾದ ಕಾಫಿಪುಡಿ ದೊರೆಯುತ್ತದೆ. ನಿಮ್ಮ ಎದುರಿಗೆ ಪುಡಿ ಮಾಡಿಕೊಡಲಾಗುತ್ತದೆ.

ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತದೆ.

ಪಾರ್ಚ್‌ಮೆಂಟ್ ಪೌಂಡಿಕ್ಕೆ		೧-೧೦-
ನೇಟಿವ್	,,	೧-೬-
ರೋಬಸ್ಟ	,,	೧-೬-

ಮತ್ತು ನಮ್ಮಲ್ಲಿ ಪ್ರತಿ ದಿನದ ಉಪಯೋಗದ ಸಾಮಾನುಗಳೂ ಸ್ಟೇಷನರಿ ಸಾಮಾನುಗಳೂ ದೊರೆಯುತ್ತವೆ.

ಒಂದು ಸಾರಿ ಪರೀಕ್ಷಿಸಿ ನೋಡಿ.

ಪ್ರೊಪ್ರೈಟರ್,
ಸಿ. ನರಸಿಂಹ ಶಾಸ್ತ್ರಿ

ಹೊಸ ಹೊಸ ನಮೂನೆಯ ಬಳೆಗಳು

ಈ ದಿನವೇ ನೋಡಿರಿ

ಸ್ವರ್ಗ ಸೀಮ ಬಳೆ
ಕಮಲ್ ಪ್ಲಾಟ್ ಬಳೆ } ಬಳೆಗಳು { ಸುಭಾಸ್ ಬಳೆ
ಗಾಂಧೀಜಿ ಬಳೆ

ಚಾಂದಿಸಿ ಬಳೆ ಮತ್ತು ರಾಷ್ಟ್ರ ನಾಯಕರುಗಳ ಫೋಟೋ ಸಮೇತ ಒಡೆಯದೆ ಇರತಕ್ಕಂತಹುದು.

ಮೈಸೂರು ಸಿಲ್ಕ್ ರಿಬ್ಬನ್‌ಗಳು, ಸ್ಟಾಂಡರ್ಡ್ ಬಳೆಗಳು

ಪ್ರಭಾತ್ ಬ್ಯಾಂಗಲ್ ಸ್ಟೋರ್ಸ್,

ಚಾಮುಂಡೇಶ್ವರಿ ಟಾಕೀಸ್ ಬಿಲ್ಡಿಂಗ್ಸ್, ಮೈಸೂರು.

ರಾಜ್ ಕಮಲ್ ಟಾಕೀಸ್, ಮೈಸೂರು

31-7-46 ನೇ ಬುಧವಾರದಿಂದ

ಕನ್ನಡ ಚಿತ್ರ ಮನ್ನಿ ಪಾತ್ರ ವಹಿಸಿರುವ

"ಬನ್ ಪ್ಲೂಲ್"

Edited printed and published by A. R. Nagarajan at the Sadhvi Press, D. Subbiah Road, Mysore.

ಫೋನ್ ನಂ 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಬುಧವಾರ ೭—೮—೪೬ [ಸಂಚಿಕೆ ೧೯

ಸರ್ ಮೊದಲಿಯಾರರು ದಿವಾನಗಿರಿ ವಹಿಸಿದರು

ಸರ್ ಮೊದಲಿಯಾರರಿಗೆ ಭಾರಿ ಸ್ವಾಗತ

ಸ್ವಂ ಸು.ಫೋ.] [ಬೆಂಗಳೂರು ೭

ಸಂಸ್ಥಾನದ ನೂತನ ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರು ಈ ದಿನ ಬೆಳಗ್ಗೆ ೮ ಗಂಟೆಗೆ ಮದ್ರಾಸಿನಿಂದ ರೈಲಿನಲ್ಲಿ ಆಗಮಿಸಿದರು. ಸಿಟಿ ರೈಲ್ವೆ ನಿಲ್ದಾಣದಲ್ಲಿ ಮಂತ್ರಿಗಳೂ, ಅಧಿಕಾರಿಗಳೂ, ಸಾರ್ವಜನಿಕ ಪ್ರಮುಖರೂ, ವಿದ್ಯಾರ್ಥಿಗಳೂ, ಸೇರಿ ೬೦೦ ಕ್ಕೆ ಮೇಲ್ಪಟ್ಟು ನೆರೆದಿದ್ದು ಅವರನ್ನು ಸ್ವಾಗತಿಸಿದರು. ಡಾ॥ ರಾಯ್, ಶ್ರೀ ಸಿದ್ದಪ್ಪ, ಮತ್ತು ಶ್ರೀ ಮೇದ ಪ್ಯಾಸಾಚಾರ್, ಎಂ ಶೇಷಾದ್ರಿ ಸರ್ ಮೊದಲಿಯಾರರಿಗೆ ಹಸ್ತಲಾಘವಿತ್ತು ಸುಸ್ವಾಗತ ನೀಡಿದರು. ಸರ್ ಮೊದಲಿಯಾರರು ಹಸನ್ಮುಖಿಗಳಾಗಿ ಎಲ್ಲರನ್ನು ವಂದಿಸಿದರು.

ಪ್ರಜಾ ಪಕ್ಷದ ಪರವಾಗಿ ಶ್ರೀ ಹೆಚ್. ಆರ್. ಗುರುವಾರೆಡ್ಡಿಯವರು ಅವರನ್ನು ಹಾರತುರಾಯಿಗಳನ್ನಿತ್ತು ಸ್ವಾಗತಿಸಿ ಅಭಿನಂದನೆಗಳನ್ನು ಸಲ್ಲಿಸಿದರು. ಸಂಸ್ಥಾನದ ಒಂದೂ ಮಹಾ ಸಭಾಧ್ಯಕ್ಷರಾದ ಶ್ರೀ ಎಂ. ಸಿ. ಮಲ್ಲಪ್ಪನವರು ಅವರಿಗೆ ಸ್ವಾಗತ ಕೋರಿದರು. ಅಲ್ಲಿ ನೆರೆದಿದ್ದ ವಿದ್ಯಾರ್ಥಿಗಳಲ್ಲಿ ಕೆಲವರು "ಸರ್ ಆರ್ಕಾಟರಿಗೆ ಸ್ವಾಗತ" ಎಂದು ತಮ್ಮ ಸಂತೋಷ ವ್ಯಕ್ತಪಡಿಸಿದರು. ಪತ್ರಿಕಾ ಪ್ರತಿನಿಧಿಗಳು ನೂತನ ದಿವಾನರನ್ನು "ಏನಾದರೂ ಸಂದೇಶ ಕೊಡುವಿರಾ"? ಎಂದು ಪ್ರಶ್ನಿಸಲಾಗಿ "ಸದ್ಯಕ್ಕೇನೂ ಇಲ್ಲ" ಎಂದು ಸರ್ ಮೊದಲಿಯಾರರು ಉತ್ತರವಿತ್ತರು. ಪ್ರೈವೇಟ್ ಸೆಕ್ರೆಟರಿಗಳಾದ ಶ್ರೀ ಸಿ. ನರಸಿಂಹಮೂರ್ತಿಯವರೊಡನೆ ಮೈಸೂರಿಗೆ ಮೋಟಾರಿನಲ್ಲಿ ಪ್ರಯಾಣ ಮಾಡಿದರು.

ಬೆಂಗಳೂರಿನಲ್ಲಿದ್ದ ಪ್ರತಿಬಂಧಕಾಜ್ಞೆ ಹೋಯಿತು

ಸಭೆ, ಮೆರವಣಿಗೆ ಇತ್ಯಾದಿಗಳನ್ನು ನಿಷೇಧಿಸಿ ಗಳೂರಿನಲ್ಲಿ ಹಾಕಲಾಗಿದ್ದ ಪ್ರತಿಬಂಧಕಾಜ್ಞೆಯನ್ನು ವಜಾ ಮಾಡಿರುವುದಾಗಿ ಜಿಲ್ಲಾ ನ್ಯಾಯಾಧೀಶರು ಒಂದು ಆಜ್ಞೆ ಹೊರಡಿಸಿದ್ದಾರೆ.

ಸರ್ ತಂಬೂಚೆಟ್ಟಿಯವರು ನಿವೃತ್ತರಾಗಲಿರುವರು

ಶ್ರೀಮನ್ಮಹಾರಾಜರವರ ಆಪ್ತ ಕಾರ್ಯದರ್ಶಿಯಾಗಿರುವ ಸರ್ ಟಿ. ತಂಬೂಚೆಟ್ಟಿಯವರು ಮುಂದಿನ ಮಾಹೆಯಿಂದ ನಿವೃತ್ತರಾಗಲು ಶ್ರೀಮನ್ಮಹಾರಾಜರ ಅಪ್ಪಣೆಯನ್ನು ಪಡೆದಿರುವರೆಂದೂ ಅವರ ಸ್ಥಾನದಲ್ಲಿ ಸರ್ ರಾಬರ್ಟ್ ಹಟನ್ಸ್‌ರವರು ನೇಮಿಸಲ್ಪಡಬಹುದೆಂದು ವರದಿಯಾಗಿದೆ.

ಬೋಸರು ಬದುಕಿದ್ದಾರೆ

"ನೇತಾಜಿ ಸುಭಾಷಚಂದ್ರ ಬೋಸರು ಜೀವಂತವಾಗಿದ್ದಾರೆ; ಆದರೆ ಈಗ ಎಲ್ಲಿದ್ದಾರೆಂಬುದನ್ನು ನಾನು ಬಹಿರಂಗ ಪಡಿಸಲಾರೆ"-ಎಂದು ಫಾರ್‌ವರ್ಡ್ ಬ್ಲಾಕಿನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಹೆಚ್. ವಿ ಕಾಮತ್‌ರವರು ತಿಳಿಸಿದ್ದಾರೆ.

ಈಸ್ಟ್ ಇಂಡೀಸಿನ ರಾಜ್ಯಾಂಗ

ಈಸ್ಟ್ ಇಂಡೀಸಿನ ಭವಿಷ್ಯ ರಾಜ್ಯಾಂಗವನ್ನು ನಿರ್ಧರಿಸುವ ಸಲುವಾಗಿ ಒಂದು ಸಮಿತಿಯನ್ನು ಡಚ್ ಸರ್ಕಾರ ನೇಮಿಸಿದೆ. ಡಚ್ ರಾಣಿಯ ಆಶ್ರಯ-ದೊಳಗೆ ಒಂದು ರಾಜ್ಯಾಂಗ ಪದ್ಧತಿಯನ್ನು ಒದಗಿಸಲು ಈ ಸಮಿತಿಗೆ ಪೂರ್ಣಾಧಿಕಾರ ಕೊಡಲಾಗಿದೆ.

ರಾಜಧಾನಿಗೆ ಸರ್ ಮೊದಲಿಯಾರರ ಆಗಮನ

ಮೈಸೂರು ೭

ದಿವಾನರಾಗಿ ನೇಮಿಸಲ್ಪಟ್ಟಿರುವ ಸರ್ ಎ ರಾಮಸ್ವಾಮಿ ಮೊದಲಿಯಾರ್‌ರವರು ಈ ದಿನ ಮಧ್ಯಾಹ್ನ ಮೋಟಾರ್ ಕಾರಿನಲ್ಲಿ ರಾಜಧಾನಿಗೆ ಆಗಮಿಸಿದರು. ಅವರ ಮಕ್ಕಳಾದ ಶ್ರೀ ಕೃಷ್ಣಮೂರ್ತಿಯವರೂ ಪ್ರೈವೇಟ್ ಸೆಕ್ರೆಟರಿಯವರಾದ ಶ್ರೀ ಸಿ ನರಸಿಂಹಮೂರ್ತಿಯವರೂ ಅವರೊಡನೆ ಬಂದರು. ರೈಲ್ವೆ ನಿಲ್ದಾಣದಲ್ಲಿ ಪೌರಸಭಾ ಅಧ್ಯಕ್ಷರೂ, ಜಿಲ್ಲಾಧಿಕಾರಿಗಳೂ ಇತರ ಅಧಿಕಾರಿಗಳೂ, ವರ್ತಕರೂ ಅವರನ್ನು ಸ್ವಾಗತಿಸಿ ಪುಷ್ಪಹಾರವನ್ನು ಅರ್ಪಿಸಿದರು. ಸರ್ ಮೊದಲಿಯಾರ್‌ರವರು ಶ್ರೀ ಎ ಡಿ ರಾಜಾರಾಂರವರ ಭವನಕ್ಕೆ ತೆರಳಿದರು.

ಈ ಮಧ್ಯಾಹ್ನ ಅವರು ಅರಮನೆಯಲ್ಲಿ ಪ್ರಭುಗಳ ಸಂದರ್ಶನವನ್ನು ಮಾಡಿ ರಾಜಭಕ್ತಿಯನ್ನು ಸಮರ್ಪಿಸಿ ತಮ್ಮ ಅಧಿಕಾರವನ್ನು ಸ್ವೀಕರಿಸಿದರು. ಅನಂತರ ದಿವಾನರ ನಿವಾಸವಾದ "ಲೇಕ್ ವ್ಯೂ" ಭವನಕ್ಕೆ ಆಗಮನಯಿಂದ ಲೇಕ್ ವ್ಯೂ ಭವನಕ್ಕೆ ೪ ಕುದುರೆಯ ಗಾಡಿಯಲ್ಲಿ ಸಕಲ ರಾಜಮರ್ಯಾದೆಯೊಡನೆ, ಆಪ್ತ ಕಾರ್ಯದರ್ಶಿಗಳಾದ ಶ್ರೀ ಸಿ. ನರಸಿಂಹಮೂರ್ತಿಯವರ ಸಂಗಡ ತೆರಳಿದರು.

ನೂತನ ದಿವಾನರು ರಾಜಧಾನಿಯಲ್ಲಿ ಈ ವಾರಾಂತ್ಯದ ವರೆವಿಗೆ ಇರುವರೆಂದು ಹೇಳಲಾಗಿದೆ.

ತಾತ್ಕಾಲಿಕ ಸರ್ಕಾರಕ್ಕೆ ವೈಸರಾಯರ ಹೊಸ ಸಲಹೆ

ಕೇಂದ್ರದಲ್ಲಿ ತಾತ್ಕಾಲಿಕವಾಗಿ ಸ್ಥಾಪಿಸಲಿರುವ ಸರ್ಕಾರದ ಹದಿನಾಲ್ಕು ಮಂತ್ರಿಗಳ ಪೈಕಿ ಆರು ಜನರನ್ನು ಕಾಂಗ್ರೆಸ್ಸಿನಿಂದಲೂ, ಐದು ಜನರನ್ನು ಮುಸ್ಲಿಂ ಲೀಗಿನಿಂದಲೂ ಆರಿಸಿ ಕಳುಹಿಸಬೇಕೆಂತ ವೈಸರಾಯರು ಸೂಚಿಸಲಿರುವರು. ಉಳಿದ ಮೂರು ಸ್ಥಾನಗಳಿಗೆ ಸದಸ್ಯರನ್ನು ತಾವೇ ನೇಮಿಸುವರು. ಹೊಸ ಮಂತ್ರಿ ಮಂಡಲದಲ್ಲಿರುವ ಸದಸ್ಯರುಗಳಲ್ಲಿ ಕಾಂಗ್ರೆಸ್ಸಿನವರು ತಮಗೆ ಇಷ್ಟ ಬಂದವರನ್ನು ಕಳುಹಿಸುವ ಹಕ್ಕನ್ನು ಸಹ ಅವರಿಗೆ ಕೊಡಲಾಗಿದೆ. ಈ ಸಲದ ಮಂತ್ರಿ ಮಂಡಲದ ಸದಸ್ಯರನ್ನು [illegible] [illegible] ಕೇಳಿದವರನ್ನು [illegible] ತಮ್ಮ [illegible] ಕೊಡಲಾಗಿದೆ.

೯ ಇಲಾಖೆಗಳಿಗೆ ಒಟ್ಟು ೩೫ ಪ್ರೊಬೇಷನರುಗಳು

ಸ್ವಂ.ಸು.ಫೋ.] ಬೆಂಗಳೂರು ೭

೯ ಇಲಾಖೆಗಳಿಗೆ ಒಟ್ಟು ೩೫ ಮಂದಿ ಪ್ರೊಬೇಷನರುಗಳನ್ನು ನೇಮಿಸಿ, ನಿನ್ನೆ ಸರ್ಕಾರದಾಜ್ಞೆಯಾಯಿತು. ಪಟ್ಟಿ ಈ ರೀತಿ ಇದೆ:—

ಅಕೌಂಟ್ಸ್ ಇಲಾಖೆ—ಶ್ರೀಗಳಾದ ಆರ್. ಚನ್ನಪ್ಪ, ಬಿ. ಆರ್ ಶ್ರೀನಿವಾಸ ಮೂರ್ತಿ, ಕೆ. ಜಾಪಪ್ಪ, ಡಿ. ಎ. ಚಂದ್ರಶೇಖರ್, ಮಿಜ ಜೆ ಅಬ್ದುಲ ಸೈ, ಎಸ್ ಸಿದ್ದಯ್ಯ.

ಪೋಲೀಸ್—ಶ್ರೀಗಳಾದ ಹೆಚ್ ವೀರಭದ್ರಯ್ಯ, ಡಿ. ವಿಜಯದೇವರಾಜ ಅರಸ್, ಸಿ. ಆರ್ ಶ್ಯಾಮಸುಂದರ್, ಎಂ ಎಲ್. ಚಂದ್ರಶೇಖರ

ವರಮಾನ ಇಲಾಖೆ—ಶ್ರೀಗಳಾದ ಜಿ. ಎಂ ಮಾದಪ್ಪ, ಕೆ ಎಸ್ ರಾಮ ಮೂರ್ತಿ, ಮೀರ್ ರ್ ಹಸನ್ ಸ್ಸೇನ್, ಎಸ್ ಶಿವರಾಮ ರೆಡ್ಡಿ.

ಅಬ್ಕಾರಿ ಇಲಾಖೆ—ಶ್ರೀಗಳಾದ ಇ. ಆರ್. ತಿಮ್ಮಯ್ಯ, ಬಿ ನಾರಾಯಣ, ಅಗ್ಗರ್ ಬೆ ಎಫ್ ಬಿಗೋಜ, ಪೈ ಯಾಕೂಬ್ ಸಾಹೇಬ್.

ರೆವಿನ್ಯೂ ಇಲಾಖೆ—ಶ್ರೀಗಳಾದ ಟಿ. ಜಿ. ರಾಮಯ್ಯ, ಎಸ್ ಎನ್ ಪಾಳೇಗಾರ್, ಜಿ. ಪದ್ಮನಾಭ, ಎಂ. ನಜೀರ್ ಮೊಹಿಯುದ್ದೀನ್, ಬಿ. ಎಸ್ ನಂಜುಂಡಪ್ಪ, ಕೆ. ಕಾಳಯ್ಯ.

ಜವಳಿ ಸಂಶೋಧನೆಗಳ ಇಲಾಖೆ—ಆರ್ ತಿಪ್ಪೇಸ್ವಾಮಿ, ಎಂ ಎಸ್. ನಾರಾಯಣಸ್ವಾಮಿ.

ಸಹಕಾರ ಇಲಾಖೆ—ಶ್ರೀಗಳಾದ ಎಂ. ಜಿ. ಪರಮಶಿವಯ್ಯ, ಟಿ. ವೈ. ಬಾಳಪ್ಪ, ಟಿ. ರಂಗದಾಸಪ್ಪ, ಎನ ಪುಟ್ಟೇಗೌಡ.

ವಾಣಿಜ್ಯ ಇಲಾಖೆ—ಶ್ರೀ ಎಂ. ವಿ ರೆಡ್ಡಿ, ಕೆ ವಿ ಕುಮಾರಸ್ವಾಮಿ.

ಲೇಬರ್ ಇಲಾಖೆ—ಶ್ರೀಗಳಾದ ಜಿ. ಹೆಚ್ ರಾಮದಾಸ್, ಸಿ ಆರ್ ಕೇಶವ ಮೂರ್ತಿ, ಹೆಚ್. ಗೋಪಾಲರಾಜ ಅರಸ್.

ಎಲ್ಲರೂ ಎರಡು ವರ್ಷ ಪ್ರೊಬೇಷನ್, ಈ ಕಾಲದಲ್ಲಿ ಪೋಲೀಸ್, ಅಕೌಂಟ್ಸ್, ವರಮಾನ ತೆರಿಗೆ ಮತ್ತು ಅಬ್ಕಾರಿ ಇಲಾಖೆಗಳ ಪ್ರೊಬೇಷನರುಗಳಿಗೆ ತಿಂಗಳಿಗೆ [illegible] ಇತರ ಇಲಾಖೆಗಳ ಪ್ರೊಬೇಷನರುಗಳಿಗೆ [illegible]

[illegible]

ಲೀಗಿನ ಸತ್ಯಾಗ್ರಹದ ಬಗ್ಗೆ ಗೊಡ್ಡು ಬೆದರಿಕೆ

ಈಗತಾನೆ ಲಂಡನ್ನಿನಿಂದ ಭಾರತಕ್ಕೆ ವಾಪಸು ಬಂದಿರುವ ಡಾ॥ ಜಯಕರ್‌ರವರು ಲೀಗಿನ ಹೋರಾಟದ ಬಗ್ಗೆ ತಮ್ಮ ಅಭಿಪ್ರಾಯ ತಿಳಿಸುತ್ತಾ, ಲೀಗಿನವರು ಹಿಡಿದಿರುವ ಹಾದಿಯು ಬ್ರಿಟಿಷರಿಗೆ ಒಪ್ಪಿಗೆಯಾಗಿಲ್ಲವೆಂದೂ, ಅವರಿಂದ ಈ ಗೊಡ್ಡು ಬೆದರಿಕೆಗೆ ಯಾವ ಸಹಾನುಭೂತಿಯೂ ದೊರೆಯುವುದಿಲ್ಲವೆಂದೂ ಹೇಳಿರುವರು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಲೀಗಿನವರು ಸೂಚಿಸಿರುವ ಅಂಶಗಳನ್ನು ಪರಿಶೀಲಿಸಿ ತಾರ್ಕಿಕ್ಕೆಡೆ ಕೊಡದಂತೆ ತಮ್ಮ ನೀತಿಯನ್ನು ಪುನಃ ಪ್ರತಿಪಾದಿಸುವುದು ಉತ್ತಮವೆಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.

ಕಾಂಗ್ರೆಸ್-ಲೀಗು ಸಂಧಾನವೇ?

ಕಾಂಗ್ರೆಸ್ಸಿಗೂ, ಲೀಗಿಗೂ ನೇರವಾದ ಸಂಧಾನವು ಶೀಘ್ರದಲ್ಲೇ ಆರಂಭವಾಗಬಹುದೆಂದು ಪೂನಾದಿಂದ ವಾರ್ತೆ ಬಂದಿದೆ. ಇದರಲ್ಲಿ ಗಾಂಧೀಜಿಯವರೇ ಪ್ರಮುಖ ಪಾತ್ರ ವಹಿಸುವರೆಂದು ಹೇಳಲಾಗಿದೆ. ವಾರ್ಧಾದಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸೇರುವ ಮುನ್ನ ಅಥವಾ ಅನಂತರ ಈ ಬಗ್ಗೆ ಕಾಂಗ್ರೆಸ್ಸಿನಿಂದ ಮಿ॥ ಜಿನ್ನಾರವರಿಗೆ ಆಹ್ವಾನ ಹೋಗಬಹುದೆಂದು ತಿಳಿದುಬಂದಿದೆ.

ಗ್ರೀಸಿನಲ್ಲಿ ಅಂತರ್ಯುದ್ಧದ ಹೆದರಿಕೆ?

ಅಥೆನ್ಸಿನಲ್ಲಿರುವ ಬ್ರಿಟಿಷ್ ಪರವಾದ ಸರ್ಕಾರವು ಭದ್ರತಾ ಕಾನೂನುಗಳನ್ನು ಜಾರಿಗೆ ತರುತ್ತಾ ಪರಿಸ್ಥಿತಿಯನ್ನು ಕಠಿಣ ಮಾಡಿದೆ, ಆದ್ದರಿಂದ ಈಗಿರುವ ಸ್ಥಿತಿಯಂತೆ ಅಂತರ್ಯುದ್ಧ ಅನಿವಾರ್ಯ,-ಎಂದು ಗ್ರೀಸಿನ ಲಿಬರಲ್ ನಾಯಕರು ಅಭಿಪ್ರಾಯ ಪಟ್ಟಿದ್ದಾರೆ. ರಿಪಬ್ಲಿಕನ್ ಪಕ್ಷದವರಿಗೆ ಉಂಟಾಗುತ್ತಿರುವ ಕಿರುಕುಳವನ್ನು ಹೆಚ್ಚು ಕಾಲ ಸಹಿಸಲಾಗುವುದಿಲ್ಲವೆಂದೂ ಅವರು ಹೇಳಿದ್ದಾರೆ.

ಲೀಗ್ ಮಂತ್ರಿಮಂಡಲವನ್ನು ವಜಾ ಮಾಡಿ

ಶಾಸನ ಭಂಗ ಮಾಡುವುದಾಗಿ ಘೋಷಿಸಿರುವ ಲೀಗ್ ಪಕ್ಷದವರ ಕೈಯ್ಯಲ್ಲಿ ನ್ಯಾಯ ಪರಿಪಾಲನೆ ಮಾಡುವ ಅಧಿಕಾರವಿರಬಾರದು; ಆದ್ದರಿಂದ ಸಿಂಧ್‌ನಲ್ಲಿರುವ ಲೀಗ್ ಮಂತ್ರಿಮಂಡಲವನ್ನು ಕೂಡಲೇ ವಜಾ ಮಾಡಬೇಕು-ಎಂದು ರಾಷ್ಟ್ರೀಯ ಮುಸ್ಲಿಂ ನಾಯಕರಾದ ಮೌಲಾನಾ ಭಾಷ್ಣಿಯವರು ಗವರ್ನರಿಗೆ ಸೂಚಿಸಿದ್ದಾರೆ.

ನ್ಯಾ॥ ಪಿ॥ ಸಭೆಗೆ ರೆಡ್ಡಿಯವರ ರಾಜೀನಾಮೆ

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವ ಶ್ರೀ ಕೆ. ಚೆಂಗಲರಾಯ ರೆಡ್ಡಿಯವರು ನ್ಯಾಯ ವಿಧಾಯಕ ಸಭೆಯ ಕಾಂಗ್ರೆಸ್ ಪಕ್ಷದ ನಾಯಕತ್ವಕ್ಕೂ, ಸದಸ್ಯತ್ವಕ್ಕೂ ರಾಜೀನಾಮೆ ಸಲ್ಲಿಸಿ ಅದನ್ನು ಪಾರ್ಲಿಮೆಂಟರಿ ಸಮಿತಿಗೆ ಕಳುಹಿಸಿಕೊಟ್ಟಿರುವರೆಂದು ತಿಳಿದು ಬಂದಿದೆ.

[illegible]

ಸಾಧ್ವಿ

ತಾ|| ೭-೮-೪೬ ಬುಧವಾರ

ಆಗಮನ-ನಿರ್ಗಮನ

ಹಳೆಯ ದಿವಾನರು ನಿವೃತ್ತರಾದರು; ಹೊಸಬರು ಇಂದಿನಿಂದ ಕೆಲಸವನ್ನು ವಹಿಸಿಕೊಂಡರು. ಈ ಪ್ರಕರಣದ ವಿಚಾರವಾಗಿ ವಿಶೇಷ ಜಿಜ್ಞಾಸೆಗಳಾಗಿವೆ. ಹೊಸ ದಿವಾನರ ನೇಮಕದ ಯುಕ್ತಾಯುಕ್ತತೆಯು ವಾದ ಭೂಮಿಯನ್ನು ಈಗ ಮೀರಿದೆ. ಅವರು ಸಂಸ್ಥಾನದ ಉನ್ನತಿಗೆ ಏನು ಮಾಡುವರೆಂಬುದು ಮಾತ್ರ ಇನ್ನು ಉಳಿದಿರುವ ಪ್ರಶ್ನೆ. ಅವರ ನೇಮಕದ ವಿಚಾರವಾಗಿ ಬಂದ ಟೀಕೆಗಳನ್ನೆಲ್ಲಾ ಅವರು ಗಮನಿಸದೆ ಇರಲಾರರು. ಮೈಸೂರಿನ ಹಿತ ಸಾಧನೆಗೆ ಅವರಿಂದ ಎಷ್ಟು ಮಟ್ಟಿನ ಸಹಾಯವಾದೀತೆಂಬ ಶಂಕೆಯನ್ನು ಸಕಲರೂ ವ್ಯಕ್ತಪಡಿಸಿದ್ದಾರೆ. ಇವುಗಳಿಗೆಲ್ಲಾ ಕಾರ್ಯರೂಪದಲ್ಲಿ ಸಮರ್ಪಕವಾದ ಉತ್ತರವನ್ನಿತ್ತು ತಾವು ನಿಜವಾಗಿಯೂ ಮೈಸೂರಿನ ಹಿತ ಸಾಧಕರೆಂಬುದನ್ನು ತೋರಿಸಿಕೊಡುವ ಹೊಣೆಯು ಸರ್ ಮೊದಲಿಯಾರರದು.

ಇದುವರೆಗೆ ದಿವಾನರಾಗಿದ್ದ ಪ್ರಧಾನ ಶಿರೋಮಣಿ ಎನ್. ಮಾಧವರಾಯರು ಸಂಸ್ಥಾನಕ್ಕೆ ಸಲ್ಲಿಸಿರುವ ಸೇವೆಯು ಪ್ರಶಂಸನೀಯವಾದುದು. ಅವರು ಸದಾ ಹಸನ್ಮುಖಿಗಳಾಗಿದ್ದು ಜನರ ಮನಸ್ಸನ್ನು ನೋಯಿಸದೆ ಸಕಲರಿಗೂ ಸಾಧ್ಯವಾದಷ್ಟು ಸೌಕರ್ಯವನ್ನು ಕಲ್ಪಿಸಿಕೊಡುವ ಮನೋವೃತ್ತಿಯಿಂದ ವರ್ತಿಸಿರುವರು. ಆಡಳಿತ ಯಂತ್ರವು ಶಿಸ್ತಿನಿಂದಲೂ, ವ್ಯವಸ್ಥೆಯಿಂದಲೂ ಚಲಿಸುವಂತೆ ಮಾಡಿರುವರು. ನೌಕರ ವರ್ಗದವರ ಹಿತಸಾಧನೆಗೆ ಬೇಕಾದ ಸೌಲಭ್ಯಗಳನ್ನು ಕಲ್ಪಿಸಿರುವರು. ಮುಖ್ಯವಾಗಿ ಸಿವಿಲ್ ಸರ್ವಿಸ್ಸಿನ ಮೊದಲನೇ ಮೆಟ್ಟಲಿನಿಂದ ಅಧಿಕಾರದ ಅತ್ಯುನ್ನತ ಸ್ಥಾನದ ವರೆಗೆ ಏರಿ ನಿಸ್ವಾರ್ಥದಿಂದಲೂ, ದೇಶ ಸೇವಾ ತತ್ಪರತೆಯಿಂದಲೂ ಕೆಲಸ ಮಾಡಿರುವರು. ಇದಕ್ಕಾಗಿ ಮೈಸೂರಿನ ಜನ ಅವರಿಗೆ ಕೃತಜ್ಞರಾಗಿರಬೇಕು.

ವ್ಯಕ್ತಿಗಳು ಹೋಗುವರು, ಬೇರೆ ವ್ಯಕ್ತಿಗಳು ಬರುವರು. ಅದು ಅಷ್ಟು ಪ್ರಾಮುಖ್ಯ ವಿಷಯವಲ್ಲ. ಆಡಳಿತ ಯಂತ್ರವು ನಡೆಯುವ ರೀತಿ ನೀತಿಗಳೇ ಪ್ರಜಾ ವಿಶ್ವಾಸದ ತಗ್ಗುಮುಟ್ಟುಗಳು. ದಿವಾನಗಿರಿಯು ಜನ ಪ್ರತಿನಿಧಿಗಳ ಅಧಿಕಾರದ ಮೇಲೆಯೇ ನಿಲ್ಲಬೇಕೆಂದು ನಾವು ಬಯಸುತ್ತೇವೆ. ಈಗಿರುವ ಆಡಳಿತ ಪದ್ಧತಿಯು ಬದಲಾಯಿಸಿ ಪ್ರಜಾಸರ್ಕಾರಕ್ಕೆ ಪಾತ್ರವಾದ ವ್ಯವಸ್ಥೆಯು ಬರಬೇಕೆಂಬುದೇ ಎಲ್ಲರ ಆಕಾಂಕ್ಷೆಯಾಗಿದೆ. ಇದನ್ನು ಎಷ್ಟು ಬೇಗ ಸರ್ ಮೊದಲಿಯಾರರು ಈಡೇರಿಸಿಕೊಡುವುದರಲ್ಲಿ ಸಹಾಯಕರಾಗುವರೆಂಬುದನ್ನೇ ಅವರ ಆಡಳಿತದ ಸಫಲತೆಯು ಅವಲಂಬಿಸಿರುತ್ತದೆಂಬುದನ್ನು ಅವರು ಮನಗಾಣಲೆಂದು ನಾವು ಹಾರೈಸುತ್ತೇವೆ.

ನಮ್ಮ ಕನ್ನಡಪದಪ್ಲ

೧೦೦ ಪತ್ರಿಕೆಗಳೂ ಎಂಟು ಪುಸ್ತಕಗಳೂ ಇವೆ. ಏನುಗೀನು ಬೇಕಾದರೂ ನನಗೆ ತಿಳಿ.

ಕೆ ಅನಂತಸುಬ್ಬರಾಯ, ಮೈಸೂರು.

ಬೆಂಗಳೂರಿಗೆ ನಾಗರಿಕ ಸ್ವಾತಂತ್ರ್ಯ

ನಾಲ್ಕು ವರ್ಷಗಳ ಹಿಂದೆ ಸಭೆ ಮೆರವಣಿಗೆಗಳನ್ನು ನಡೆಸದಂತೆ ಬೆಂಗಳೂರು ನಗರದಲ್ಲಿ ಹಾಕಲಾಗಿದ್ದ ಪ್ರತಿಬಂಧಕಾಜ್ಞೆಯನ್ನು ಈಗ ರದ್ದುಗೊಳಿಸಲಾಗಿದೆಯೆಂದು ಕೇಳುತ್ತೇವೆ. ಇದನ್ನು ತೆಗೆದುಹಾಕಲು ಇದುವರೆಗೆ ನೂರಾರು ರೀತಿಗಳಿಂದ ಸರ್ಕಾರದವರನ್ನು ಪ್ರಾರ್ಥಿಸಲಾಗಿತ್ತು. ಅವುಗಳಿಗೆ ಅವರು ಮನ್ನಣೆ ಕೊಟ್ಟಿರಲಿಲ್ಲ. ಆದರೂ ಬೆಂಗಳೂರಿನಲ್ಲಿ ಸಭೆಗಳೂ, ಮೆರವಣಿಗೆಗಳೂ ಅನಧಿಕಾರಯುತವಾಗಿ ನಡೆಯುತ್ತಲೇ ಇದ್ದವು. ಅಲ್ಲಿದ್ದ ಪ್ರತಿಬಂಧಕವು ಕೇವಲ ಪುಸ್ತಕದಲ್ಲಿ ಮಾತ್ರ ಇರುತ್ತಿತ್ತು. ಆದರೂ ಶಾಸನ ಬದ್ಧರಾಗಿ ವರ್ತಿಸುವ ಪ್ರಜೆಗಳಿಗೆ ಅದೊಂದು ಕಳಂಕವಾಗಿಯೇ ಕಾಣುತ್ತಿತ್ತು.

ಹಳೆಯ ದಿವಾನರು ಹೋಗಿ ಹೊಸ ದಿವಾನರು ಬರುವ ಈ ಸಮಯದಲ್ಲಿ ಈ ನಿರ್ಬಂಧವು ತೊಲಗಿರುವುದರಿಂದ ಸಂಸ್ಥಾನದಲ್ಲಿ ಹೊಸ ಅಧ್ಯಾಯಕ್ಕೆ ಅಂಕುರಾರ್ಪಣವಾದರೆ ಅದನ್ನು ಸಕಲ ಪ್ರಜೆಗಳೂ ಸಂತೋಷಪಡುವುದರಲ್ಲಿ ಸಂದೇಹವಿಲ್ಲ.

ಶ್ರೀ ಮಾಧವರಾಯರಿಗೆ ರಜಾ

ದಿವಾನಗಿರಿಯಿಂದ ನಿವೃತ್ತರಾದ ಶ್ರೀ|| ಎನ್ ಮಾಧವರಾಯರಿಗೆ ಇಂದಿನಿಂದ ೧೦ ತಿಂಗಳ ಕಾಲ ರಜಾ ಮಂಜೂರಾಗಿದೆ. ಅನಂತರ ಅವರಿಗೆ ೧೫೦೦ ರೂಗಳ ಪೆನ್ಷನ್ ಕೊಡಲಾಗುವುದೆಂದು ಗೊತ್ತಾಗಿದೆ. ಇವರನ್ನು ಬೀಳ್ಕೊಡಲು ನಿನ್ನೆ ಸೆಕ್ರೆಟೇರಿಯೆಟ್ಟಿನಲ್ಲಿ ಮಂತ್ರಿಗಳು, ಕಾರ್ಯದರ್ಶಿಗಳು, ಉಪಕಾರ್ಯದರ್ಶಿಗಳು ಸತ್ಕಾರ ಸಮಾರಂಭವನ್ನು ಜರುಗಿಸಿದರು.

ಉಪಚಿಕಸಾ !

ಪ್ರತಿಷ್ಠಿತ ಸಂಸ್ಥೆಗಳೆಂತಹ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿಯೂ ಮತ್ತು ಕರ್ನಾಟಕ ಸಂಘಗಳಲ್ಲಿಯೂ ನಡೆಸತಕ್ಕ ಸ್ಪರ್ಧೆಗೆ ಯಾವುದೆಂದರೆ—"ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಬಹಿಷ್ಠೆ ಸಂಬಂಧದ ಹೊಟ್ಟೆನೋವಿನ ಮೇರೆಯಾದ ಮಕ್ಕಳಿಗದೇ ಇರತಕ್ಕವರು "ಸಂತಾನ ಸಿಂಧೂರ" ಎಂಬ ಸಿದ್ಧೌಷಧವನ್ನು ಸೇವನೆ ಮಾಡಿ ಸುಪುತ್ರ ಸಂತಾನವನ್ನು ಪಡೆಯಲಿ ಎಂಬುದೇ ನನ್ನ ಪ್ರಾರ್ಥನೆ. ಮುವ್ವತ್ತು ನಲವತ್ತು ವರ್ಷಗಳಿಂದಲೂ ಇದರಿಂದ ಸಂತಾನ ಫಲ ಪಡೆದಿರತಕ್ಕವರ ಪ್ರಶಂಸಾ ಪತ್ರಗಳನ್ನು ಕ್ಯಾಟ್ಲಾಗಿನಲ್ಲಿ ನೋಡಿ. ಒರಿಜಿನಲ್ ಬೆಟ್ಟಿಗ ವಾಸಿ

ಎ. ರಾಮಸ್ವಾಮಿ ಅಯ್ಯರ್,
ಪ್ರೊಪ್ರೈಟರ್, "ಸಂತಾನ ಸಿಂಧೂರ" ಆಫೀಸ್, ಅಂಬಳೆ, ಯಳಂದೂರ್ ಪೋಸ್ಟ್

ಕಾಂಗ್ರೆಸ್ಸಿನೊಳಗೆ ಹೊಸ ಪಕ್ಷ

ಲಕ್ನೋ ನಗರದಲ್ಲಿ ಕಾಂಗ್ರೆಸ್ಸಿನೊಳಗೆ ಇನ್ನೊಂದು ಹೊಸ ಪಕ್ಷದ ಸ್ಥಾಪನೆಯಾಗಿದೆ. ಸಧ್ಯಕ್ಕೆ ಅದರ ಚಟುವಟಿಕೆಗಳು ಸಂಯುಕ್ತ ಪ್ರಾಂತಕ್ಕೆ ಮಾತ್ರ ಅನ್ವಯಿಸುವುವು. ಆ ಪಕ್ಷಕ್ಕೆ ಕಿಸಾನ್-ಮಜದೂರ್ ಪ್ರಜಾ ಪಕ್ಷವೆಂದು ಹೆಸರು

ಉದಾರ ದಾನ

ಮೈಸೂರು ನಗರದಲ್ಲಿ ಕಟ್ಟಲಾಗುತ್ತಿರುವ ಭಾವಸಾರ್ ಕ್ಷತ್ರಿಯ ಸೋಷಿಯಲ್ ಇನ್ಸ್ಟಿಟ್ಯೂಟ್ ಕಟ್ಟಡದ ನಿಧಿಗೆ ಈ ಕೆಳಗೆ ನಮೂದಿಸಿರುವ ಮಹಾ ಜನಗಳು ಧನ ಸಹಾಯ ಮಾಡಿರುತ್ತಾರೆ:— ಬೊಂಬಾಯಿನ ಫಿನಾಕಿ ಖಂಡೋಜಿರಾವ್‌ರವರು ೧೦೦೧ ರೂ. ವಾಗ್ದಾನ ಮಾಡಿ ನಗದು ೫೦೧ ರೂ ಮೈಸೂರಿನ ಪಿ.ಎಸ್ ಕೊಂಡಯ್ಯರಾವ್‌ರವರು ೧೦೦೧ ರೂ ವಾಗ್ದಾನ ಮಾಡಿ ೫೦೧ ರೂ ಧನ್ವಂತರಿ ರೋಡಿನಲ್ಲಿರುವ ಬಗರೆ ನರಸಿಂಗರಾಯರು ೧೦೦೧ ರೂ ವಾಗ್ದಾನ ಮಾಡಿ ನಗದು ೨೫೧ ರೂ ಎನ್.ಬಿ ಭಗವಂತರಾವ್ ಅಂಡ್ ಸನ್ಸ್‌ರವರು ೫೦೧ ರೂ ರಾಮಶಂಕರ್ ಶ್ಯಾಮರಾಯರು ೩೦೧ ರೂ ಬೊಂಬಾಯಿನ ಮಹದೇವರಾವ್ ಸುಬ್ಬರಾವ್ ಮೂಳೆರವರು ೨೫೧ ರೂ ಪಂಢರೀನಾಥ್ ಸುಬ್ಬರಾವ್ ಮೂಳೆರವರು ೨೫೧ ರೂ ವಾಗ್ದಾನ ಮಾಡಿ ನಗದು ೧೦೧ ರೂ. ಜಿ. ಎನ್. ರಾಮಚಂದ್ರರಾಯರು ೨೫೧ ರೂ ಮೈಸೂರಿನ ದೇವೋಜಿರಾಯರು ೨೫೧ ರೂ ಪರೋಳೆ ರಾಮರಾವ್‌ರವರು ೧೦೧ ರೂ ಜಂಗ್ ಕೆ. ಕೃಷ್ಣಾಜಿರಾಯರು ೧೦೧ ರೂ ಜಿ ಎನ್. ಬಸಪ್ಪರಾವ್‌ರವರು ೧೦೧ ರೂ ಟಾಳಗೆ ಶಂಕರರಾಯರು ೧೦೧ ರೂ ಟಾಳಗೆ ಲಕ್ಷ್ಮಣರಾಯರು ೧೦೧ ರೂ, ಜವಳಿ ಅಂಗಡಿ ಪತಂಗೆ ವೆಂಕಟರಾಯರು ೧೦೧ ರೂ ಬೋದ್ಕೆ ಮಹದೇವರಾವ್ ಅಂಡ್ ಸನ್ಸ್‌ರವರು ೧೦೧ ರೂ ಪಿ ಎಸ್. ನ್ಯಾತಾ ರಾಮರಾಯರು ೧೦೧ ರೂ.

ವೆರೈಟಿ ಸ್ಟೋರ್ಸ್

ಪೋಸ್ಟಾಫೀಸ್ ಬೀದಿ, ಶ್ರೀರಂಗಪಟ್ಟಣ

ನಮ್ಮಲ್ಲಿ ಪರಿಶುದ್ಧವಾದ ಕಾಫಿಪುಡಿ ದೊರೆಯುತ್ತದೆ. ನಮ್ಮ ಎದುರಿಗೆ ಪುಡಿ ಮಾಡಿಕೊಡಲಾಗುತ್ತದೆ.

ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್ ಕೊಡಲಾಗುತ್ತದೆ.

ಸಾರ್ಟ್‌ಮೆಂಟ್	ಪೌಂಡಿಗೆ	೧-೧೦-೦
ನೇಟಿವ್	,,	೧-೭-೦
ರೋಬಸ್ಟ್	,,	೧-೩-೦

ಮತ್ತು ನಮ್ಮಲ್ಲಿ ಪ್ರತಿ ದಿನದ ಬಳಕೆ ಸಾಮಾನುಗಳೂ ಸ್ಟೇಷನರಿ ಸಾಮಾನುಗಳು ದೊರೆಯುತ್ತವೆ.

ಒಂದು ಸಾರಿ ಪರೀಕ್ಷಿಸಿ ನೋಡಿ.

ಪ್ರೊಪ್ರೈಟರ್,
ಸಿ. ನರಸಿಂಹ ಶಾಸ್ತ್ರಿ.

ಪ್ರೊಬೇಷನರಿ ಅಸಿಸ್ಟೆಂಟ್ ಕಮೀಷನರುಗಳು

ಸ್ವಂ. ವ.] ಬೆಂಗಳೂರು ೭

ಮೈಸೂರು ಸರ್ಕಾರದವರು ಈ ಮುಂದೆ ಕಂಡವರನ್ನು ಪ್ರೊಬೇಷನರಿ ಅಸಿಸ್ಟೆಂಟ್ ಕಮೀಷನರುಗಳನ್ನಾಗಿ ನೇಮಿಸಿದ್ದಾರೆ. ಶ್ರೀಗಳಾದ ಎಂ. ಸುಬ್ರಹ್ಮಣ್ಯಂ, ಸ್ಯಾಮ್ಯುಯಲ್ ಜಪ್ಪಾಜಿ, ಎಸ್. ಮುನಿಸ್ವಾಮಿ, ಎ. ವೇಣುಗೋಪಾಲ ನಾಯ್ಡು, ಹೆಚ್ ಎಲ್. ಲಿಂಗರಾಜ ಅರಸ್, ಎನ್. ನರಸಿಂಹರಾವ್, ಜಿ ಹೆಚ್. ಆದಿರಾಜಯ್ಯ, ಎಸ್. ಲಿಂಗಯ್ಯ, ಬಿ. ಎಸ್. ಪದ್ಮನಾಭನ್, ಎಸ್ ನಂಜುಂಡಯ್ಯ, ಟಿ ಅಹಮದ್ ಅಲಿಖಾನ್ ಮತ್ತು ಆರ್. ಸಂಪತ್ಕುಮಾರನ್.

ಸಾಧ್ವಿ

ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ

ಕೂಡಲೇ ಚಂದಾದಾರರಾಗಿರಿ

(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)

ಜಾಹೀರಾತಿನ ದರಗಳಿಗೆ ವಿಚಾರಿಸಿರಿ

ಟಿ. ಸಿ. ನಟರಾಜ್

ಔಷಧಾಲಯ

ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅಗತ್ಯವಾಗಿ ಬೇಕಾದ ಎಲ್ಲಾ ಇಂಜೆಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದೀಯ ಔಷಧಗಳೆಲ್ಲವೂ ದೊರೆಯುತ್ತವೆ.

ಅಮೃತ

ನಿತ್ಯದ ಜ್ವರ, ಮಲೇರಿಯಾ ಜ್ವರ, ಜ್ವರದ ಗಡ್ಡೆ ಇವುಗಳ ಮೇಲೆ ಬಹಳ ಚೆನ್ನಾಗಿ ಕೆಲಸ ಮಾಡುತ್ತದೆ.

ಕೆ. ವಿ. ವೆಂಕಟರಾಮಯ್ಯ
ಡಿಸ್ಟ್ರಿಕ್ಟ್ ಬೋರ್ಡ್ ವೈದ್ಯಶಾಲೆ
ಅರಕಲವಾಡಿ.

ರಾಜ್ ಕಮಲ್ ಟಾಕೀಸ್, ಮೈಸೂರು

7—8—46 ರಿಂದ ಎರಡನೇ ವಾರ

ಕಣ್ಣನ್ ಬಾಲ ಮುಖ್ಯ ಪಾತ್ರ ವಹಿಸಿರುವ

"ಬನ್‌ಪ್ರಾಲಾ"

ಅಪೇರಾ ಟಾಕೀಸ್

3—8—46 ರಿಂದ

ಭಕ್ತಕಲಾತಿ

(ತಮಿಳು)

ತಾರಾಗಣ:— ಹೊನ್ನಪ್ಪ ಭಾಗವತರ್ ರಮಾಮಣಿ, ಕುಮುದಿನಿ, ಎನ್ ಎಸ್ ಕೃಷ್ಣನ್, ಟಿ. ಎ ಮಧುರಂ

Edited printed and published A. K. Nagarajan at the Sadhvi Press D Subbiah Road Mysore

೯ ನೇ ತಾ॥ ನ ದಿನಾಚರಣೆ

ಮೈಸೂರು ೭

ರಾಷ್ಟ್ರಪತಿ ಜವಹರಲಾಲ್ ನೆಹರುರವರ ಸೂಚನೆಯಂತೆ ಆಗಸ್ಟ್ ೯ ನೇ ತಾ॥ ನ ದಿನಾಚರಣೆಯನ್ನು ಮೈಸೂರು ನಗರ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಇದೇ ೯ ನೇ ತಾ॥ ಶುಕ್ರವಾರ ನಡೆಸಲೇರ್ಪಡಿಸಿರುತ್ತೆ. ಬೆಳಗ್ಗೆ ೯ ಘಂಟೆಗೆ ಸುಬ್ಬರಾಯನ ಕೆರೆಯಲ್ಲಿ ಧ್ವಜಾರೋಹಣ, ಸಂಜೆ ೭ ಗಂಟೆಗೆ ಬಹಿರಂಗ ಸಭೆ ನಡೆಯುವುವು. ಆದಿನ ಸರ್ವರೂ ಈ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದಲ್ಲದೆ ಅವರವರ ಮನೆಗಳ ಮೇಲೂ ರಾಷ್ಟ್ರಧ್ವಜವನ್ನು ಹಾರಿಸಬೇಕೆಂದು ಕಾರ್ಯದರ್ಶಿಯವರು ಕೋರಿರುತ್ತಾರೆ.

ವ್ರತಾಚರಣೆ

ಮೈಸೂರು ಚಿಲ್ಲೆ ಮೊಹಲ್ಲಾ ವೀಣೆ ಶಾಮಣ್ಣನವರ ಬೀದಿಯಲ್ಲಿರುವ ಶ್ರೀ ಶ್ರೀನಿವಾಸ ರಾಘವೇಂದ್ರ ರಾಮಮಂದಿರದಲ್ಲಿ ಶ್ರೀ ಸುಬ್ಬಾಚಾರ್ಯರು ಲೋಕ ಕಲ್ಯಾಣ, ಮತ್ತು ಶ್ರೀಮನ್ಮಹಾರಾಜರ ಶ್ರೇಯಸ್ಸಿಗಾಗಿ ಚಾತುರ್ಮಾಸ್ಯದ ಜೊತೆಗೆ ಒಂದು ವರ್ಷದಿಂದಲೂ ಕಠಿಣ ವ್ರತ ಆಚರಿಸುತ್ತಿರುವರು. ಇದೇ ೧೩, ೧೪, ೧೫ ನೇ ತಾ॥ ಗಳಲ್ಲಿ ಶ್ರೀ ರಾಘವೇಂದ್ರಸ್ವಾಮಿಗಳವರ ಪೂಜೆ ಆರಾಧನೆ ಮತ್ತು ಅನ್ನಶಾಂತಿ ನಡೆಸಿ ೧೬-೮-೪೬ ರಿಂದ ಎರಡನೇ ವರ್ಷದ ಕಠಿಣ ವ್ರತಾಚರಣೆ (ಸೋಮ, ಗುರು, ಶನಿವಾರಗಳಲ್ಲಿ ಉಪವಾಸ) ವನ್ನು ಪ್ರಾರಂಭಿಸಿರುವರು. ಮಹಾಜನರು ಇದಕ್ಕೆ ಉದಾರವಾದ ಸಹಾಯ ನೀಡಬೇಕಾಗಿ ಕೋರಿರುತ್ತಾರೆ.

ಆರಂಭ ಭಾಷಣ

ಸುತ್ತೂರು ಶ್ರೀ ಶಿವರಾತ್ರೀಶ್ವರ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿ ಸಂಘದ ಆರಂಭ ಭಾಷಣವು ಕಳೆದ ೨೮ ನೇ ತಾ॥ ಸಂಜೆ ಗವಿ ಮಠಾಧ್ಯಕ್ಷರಾದ ಶ್ರೀ ಗೌರೀಶಂಕರ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಶ್ರೀ ಸಿದ್ಧಗಂಗಾ ಮಠಾಧ್ಯಕ್ಷರಾದ ಶ್ರೀ ಶಿವಕುಮಾರಸ್ವಾಮಿಗಳವರಿಂದ ನಡೆಯಿತು. ೩-೮-೪೬ ನೇ ಶನಿವಾರ ಬಾಗಲಕೋಟೆ ಬಸವೇಶ್ವರ ಕಾಲೇಜ್ ಪ್ರಿನ್ಸಿಪಾಲರಾದ ಡಾ॥ ಎಸ್. ಸಿ. ನಂದೀಮಠರವರ ಅಧ್ಯಕ್ಷತೆಯಲ್ಲಿ, ಧಾರವಾಡದ ಕರ್ನಾಟಕ ಕಾಲೇಜಿನ ಕನ್ನಡ ಪ್ರೊ॥ ಶ್ರೀ ಎಸ್. ಎಸ್. ಮಾಲವಾಡ್‌ರವರು ವಿದ್ಯಾರ್ಥಿಗಳನ್ನು ಕುರಿತು ಉಪದೇಶ ಭಾಷಣ ಮಾಡಿದರು.

ಶ್ರೀ ಮಾಧವರಾಯರ ಸೇವೆ ಬಗ್ಗೆ ಶ್ರೀಮನ್ಮಹಾರಾಜರ ಪ್ರಶಂಸೆ

ಸ್ವಂ ಸು.] [ಬೆಂಗಳೂರು ೮

ಪ್ರಧಾನ ಶಿರೋಮಣಿ ಎನ್. ಮಾಧವರಾಯರು ನಿನ್ನೆ ಅಧಿಕಾರವನ್ನು ಬಿಟ್ಟುಕೊಟ್ಟರು. ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರು ದಿವಾನರ ಅಧಿಕಾರ ಸೂತ್ರವನ್ನು ವಹಿಸಿಕೊಂಡರು. ಶ್ರೀ ಮಾಧವರಾಯರು ಕಳೆದ [illegible] ವರ್ಷಗಳಿಂದ ಅಧಿಕಾರದಲ್ಲಿದ್ದು ಸಂಸ್ಥಾನಕ್ಕೆ ಸಲ್ಲಿಸಿರುವ ಅಮೂಲ್ಯ ಸೇವೆಯ ಬಗ್ಗೆ ಶ್ರೀಮನ್ಮಹಾರಾಜರು ತಮ್ಮ ಪ್ರಶಂಸೆಯನ್ನು ಸೂಚಿಸಿದ್ದಾರೆ. ಅಲ್ಲದೆ ರಾಯರು ತಮ್ಮ ವಿಶ್ರಾಂತಿಯನ್ನು ಸುಖಮಯವಾಗಿ ಅನುಭವಿಸಲೆಂದು ಹಾರೈಸಿದ್ದಾರೆ.

ಫೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಗುರುವಾರ ೮—೮—೪೬ [ಸಂಚಿಕೆ ೧೪

ಲೀಗಿನ ಹೋರಾಟಕ್ಕೆ ಟೋರಿಗಳ ಬೆಂಬಲವೇ?

ಸಂಯುಕ್ತ ಸಂಸ್ಥಾನದಲ್ಲಿ ವರ್ಣ ದ್ವೇಷಕ್ಕೆ ಬಹಿಷ್ಕಾರ

ಸಂಯುಕ್ತ ಸಂಸ್ಥಾನದಲ್ಲಿ ಸಾರ್ವತ್ರಿಕ ಹೋಟೆಲುಗಳು, ಸಿನಿಮಾ, ನಾಟಕ ಮಂದಿರಗಳು ಮತ್ತು ಇತರ ಸಾರ್ವಜನಿಕ ಸಂಸ್ಥೆಗಳಲ್ಲಿ ವರ್ಣ ಭೇದವನ್ನು ನಿರೋಧಿಸುವ ಮಸೂದೆಯನ್ನು ಕಾಂಗ್ರೆಸ್ ಮುಂದೆ ನಿಗ್ರೋ ಸದಸ್ಯರೊಬ್ಬರು ತಂದಿದ್ದಾರೆ. ಇದನ್ನು ವಿರೋಧಿಸುವವರು ಶಿಕ್ಷಿಸಲ್ಪಡುವರಲ್ಲದೆ ೧೦೦೦ ಡಾಲರ್ ಜುಲ್ಮಾನೆ ಮತ್ತು ಒಂದು ವರ್ಷದ ಸಜಾ ಶಿಕ್ಷೆಗೂ ಗುರಿಯಾಗತಕ್ಕದ್ದೆಂದು ಸೂಚಿಸಲಾಗಿದೆ.

ಮದ್ರಾಸಿನ ೮ ಜಿಲ್ಲೆಗಳಲ್ಲಿ ಪಾನ ನಿರೋಧ ಕಾರ್ಯಕ್ರಮ

ಮದ್ರಾಸಿನಲ್ಲಿ ಈ ಸಾರಿನಲ್ಲೇ ೮ ಜಿಲ್ಲೆಗಳಲ್ಲಿ ಪಾನ ನಿರೋಧ ಕಾರ್ಯಕ್ರಮವನ್ನು ಜಾರಿಗೆ ತರಲಾಗುವುದು. ಇದರಿಂದ ಹೋಗಬೇಕಾದ [illegible] ಲಕ್ಷ ರೂ ಗಳನ್ನು ತುಂಬಿ ತೂಗಿಸಲು ವ್ಯಾಪಾರ ತೆರಿಗೆಯನ್ನು ರೂ ಗೆ ಅರ್ಧ ಕಾಸಿನಷ್ಟು ಹೆಚ್ಚಿಸಲು ಆಲೋಚಿಸಲಾಗಿದೆ. ಅಲ್ಲದೆ ವ್ಯವಸಾಯ ತೆರಿಗೆಯನ್ನು ವಿಧಿಸುವ ಆಲೋಚನೆ ಸಹ ಮಾಡಲಾಗಿದೆ. ಆದರೆ ಇನ್ನೂ ಅಂತ್ಯ ನಿರ್ಧಾರವಾಗಿಲ್ಲ.

ಮದ್ರಾಸಿನಲ್ಲಿ ಸರ್ಕಾರಿ ನೌಕರ ಮುಷ್ಕರವೇ?

ಮದರಾಸಿನ ಕೆಳದರ್ಜೆ ಸರ್ಕಾರಿ ನೌಕರರು ಪಟ್ಟ ದಾರಿದ್ರ್ಯವನ್ನು ಸೂಚಿಸುವ 'ಬಿಲ್ಲೆ' ಗಳನ್ನು ಧರಿಸಿ ಇವತ್ತಿನ ಕೆಲಸಕ್ಕೆ ಹೋಗಲು ನಿರ್ಧರಿಸಿದ್ದಾರೆ. ತಮ್ಮ ಸಂಬಳ ಮತ್ತು ಗ್ರೇಡನ್ನು ಹೆಚ್ಚಿಸಬೇಕು. ರಜಾ ಕಾಲದಲ್ಲಿ ಗುಮಾಸ್ತರ ಕೈಲಿ ಕೆಲಸ ತೆಗೆದುಕೊಳ್ಳಕೂಡದು; ಪ್ರಾವಿಡೆಂಟ್ ಫಂಡ್ ಇತ್ಯಾದಿ ಸೌಕರ್ಯ ಕಲ್ಪಿಸಬೇಕು ಎಂಬುದಾಗಿ ತಮ್ಮ ಬೇಡಿಕೆಗಳನ್ನು ಮುಂದಿಟ್ಟಿದ್ದಾರೆ. ಇವು ಈಡೇರದಿದ್ದರೆ ಮುಷ್ಕರ ಹೂಡಬೇಕೆ ಬೇಡವೇ ಎಂಬ ಬಗ್ಗೆ ೨೫ ನೇ ತಾ॥ ಸಭೆ ಸೇರಿ ತೀರ್ಮಾನ ಮಾಡಲಿದ್ದಾರೆ.

ಭಾರತೀಯರ ವಿಜಯ

ಗ್ಲಾಮರ್ಗನ್ ಕ್ರಿಕೆಟ್ ಟೀಮಿನವರನ್ನು ಭಾರತೀಯರು ೮ ವಿಕೆಟ್ಟುಗಳಿಂದ ಸೋಲಿಸಿ ವಿಜಯ ಗಳಿಸಿದ್ದಾರೆ. ಗ್ಲಾಮರ್ಗನ್ [illegible] ಮತ್ತು [illegible], ಭಾರತೀಯರು [illegible] ಮತ್ತು [illegible] ವಿಕೆಟ್ಟುಗಳಿಗೆ [illegible]

ಅಂಚೆ ಸೌಕರ್ಯ

ಮದ್ರಾಸ್ ಮತ್ತು ಬೊಂಬಾಯಿ ಪೋಸ್ಟಲ್ ಸರ್ಕಲ್‌ಗಳಿಗೆ ಮೈಸೂರು ಡಿವಿಜನ್ನಿನಿಂದ ಎಲ್ಲಾ ವಿಧವಾದ ಅಂಚೆ ಮತ್ತು ಮನಿಆರ್ಡರುಗಳನ್ನು ತೆಗೆದುಕೊಳ್ಳಲಾಗುವುದು; ಬಂಗಾಳ ಮತ್ತು ಆಸ್ಸಾಂ ಸರ್ಕಲ್ಲುಗಳಿಗೆ ಒಂದು ತೊಲಾಕ್ಕೆ ಮೀರದ ಮೊದಲನೆ ದರ್ಜೆ ಕಾಗದಗಳನ್ನು ತೆಗೆದುಕೊಳ್ಳಲಾಗುವುದೆಂದು ಮೈಸೂರು ಡಿವಿಜನಲ್ ಅಂಚೆ ಸೂಪರಿಂಟೆಂಡೆಂಟು ಪ್ರಕಟಣೆ ಹೊರಡಿಸಿದ್ದಾರೆ.

೬೫ ವಿದ್ಯಾರ್ಥಿಗಳಿಗೆ ಊಟದ ಸೌಕರ್ಯ

ಮೈಸೂರು ನಗರದ ಪುರನಿವಾಸಿಗಳೂ, ಹೋಟೆಲುಗಳ ಮಾಲೀಕರುಗಳೂ, ವಿದ್ಯಾರ್ಥಿ ನಿಲಯಗಳ ವ್ಯವಸ್ಥಾಪಕರುಗಳೂ ಉದಾರವಾಗಿ ಸಹಾಯ ನೀಡಲು ಮುಂದೆ ಬಂದಿರುವುದರಿಂದ ಈ ಸಲ ೬೫ ವಿದ್ಯಾರ್ಥಿಗಳಿಗೆ ಊಟದ ಸೌಕರ್ಯ ಒದಗಿಸಲು ಸಾಧ್ಯವಾಯಿತು. ಈ ಸೈಕಿ [illegible] ವಿದ್ಯಾರ್ಥಿನಿಯರೂ ಇದ್ದಾರೆ. ಹಾಗೆ ಸಹಾಯ ನೀಡಿದ ಮಹನೀಯರೆಲ್ಲರಿಗೂ ವಿದ್ಯಾರ್ಥಿ ಫೂಡ್ ಫಂಡಿಂಗ್ ಸಮಿತಿ ಪರವಾಗಿ ಪ್ರಧಾನ ಕಾರ್ಯದರ್ಶಿ ಶ್ರೀ ಚೌಡಯ್ಯನವರು ವಂದನೆಗಳನ್ನು ಅರ್ಪಿಸಿದ್ದಾರೆ.

ಅಂಚೆ ಮುಷ್ಕರ ಪೂರ್ಣವಾಗಿ ನಿಂತಿತು

ಭಾರತದ ನಾನಾ ಭಾಗಗಳಿಂದ ಬರುತ್ತಿರುವ ಸುದ್ದಿಯಂತೆ ಎಲ್ಲ ಕಡೆಗಳಲ್ಲೂ ಅಂಚೆ ಮುಷ್ಕರ ನಿಂತಿರುವುದಾಗಿ ತಿಳಿದು ಬಂದಿದೆ. ಕಲ್ಕತ್ತಾ, ಬೊಂಬಾಯಿ ನಗರಗಳಲ್ಲಿ ನಡೆಯುತ್ತಿದ್ದ ತಂತಿ ಮುಷ್ಕರ ಸಹ ಮುಕ್ತಾಯಗೊಂಡಿದೆ. ಮುಷ್ಕರಗಾರರಿಗೆ ಯಾವ ವಿಧವಾದ ಶಿಕ್ಷೆಗಳನ್ನು ಕೊಡುವುದಿಲ್ಲವೆಂದೂ ಕೆಲಸಕ್ಕೆ ಬಾರದ ದಿನಗಳ ಸಂಬಳವನ್ನು ಕೊಡುವ ಬಗ್ಗೆ ಸರ್ಕಾರಕ್ಕೆ ಶಿಫಾರಸ್ ಮಾಡಲಾಗುವುದೆಂದೂ ಪೋಸ್ಟ್ ಮಾಸ್ಟರ್ ಜನರಲ್‌ರವರು ಭರವಸೆ ಇತ್ತುದರಿಂದ ಮುಷ್ಕರ ಸಮಾಪ್ತಿಯಾಯಿತೆಂದು ಗೊತ್ತಾಗಿದೆ.

ಜಿಲ್ಲಾಧಿಕಾರಿಗಳಾಗಿ ಭಡ್ತಿ

ಸ್ವಂ ಸು. ಪ್ರೋ] ಬೆಂಗಳೂರು ೮

ಸರ್ಕಾರದ ಅಂಡರ್ ಸೆಕ್ರೆಟರಿಯವರಾದ ಮಿ॥ ಮಹಮದ್ ಅಹಮದ್ ರವರನ್ನು ಜಿಲ್ಲಾಧಿಕಾರಿ ದರ್ಜೆಗೆ ಬಡ್ತಿ ಮಾಡಲಾಗಿದೆಯೆಂದು ಖಚಿತವಾಗಿ ಗೊತ್ತಾಗಿದೆ. ಅವರನ್ನು ಕೋಲಾರದ ಜಿಲ್ಲಾಧಿಕಾರಿಗಳನ್ನಾಗಿ ನೇಮಿಸಲಾಗುವುದೆಂದು ಹೇಳಲಾಗಿದೆ.

ಲೀಗಿನ ಹೋರಾಟದ ಬಗ್ಗೆ ಜಿನ್ನಾ-ಚರ್ಚಿಲ್ ಒಪ್ಪಂದ?

ಮುಸ್ಲಿಂ ಲೀಗಿನ ಹೋರಾಟದ ಬಗ್ಗೆ ಈಗಾಗಲೇ ಮಿ॥ ಜಿನ್ನಾರವರು ಮಿ॥ ಚರ್ಚಿಲ್‌ರವರೊಂದಿಗೆ ಪತ್ರವ್ಯವಹಾರ ನಡೆಸಿರುವರೆಂದು ದೆಹಲಿಯಲ್ಲಿ ವಾರ್ತೆ ಹಬ್ಬಿದೆ. ಬ್ರಿಟನ್ನಿನ ಟೋರಿ ಪಂಗಡದವರು ಲೀಗಿಗೆ ಪೂರ್ಣ ಬೆಂಬಲ ನೀಡುವುದಾಗಿ ಭರವಸೆ ಇತ್ತಿರುವುದಾಗಿ ಸಹ ತಿಳಿದುಬಂದಿದೆ.

ಗೋವಾದಲ್ಲಿ ಪೋಲೀಸ್ ತಂಡಗಳ ಜಮಾವಣೆ

ಗೋವಾದಲ್ಲಿ ಕಾಂಗ್ರೆಸ್ ಸಂಸ್ಥೆಯವರು ನಡೆಸುತ್ತಿರುವ ಚಳುವಳಿಯನ್ನು ಎದುರಿಸಲು ಸರ್ಕಾರದವರು ಪೋಲೀಸ್ ಪಡೆಗಳನ್ನು ತಂದು ಜಮಾಯಿಸುತ್ತಿದ್ದಾರೆ. ಲಿಸ್ಬನ್ ಪೋಲೀಸ್ ಉಪ ಮುಖ್ಯಾಧಿಕಾರಿಯಾದ ಕ್ಯಾ॥ ಎಂ. ಸಿಲ್ವಾರವರನ್ನು ಗೋವಾಕ್ಕೆ ವಿಮಾನದಲ್ಲಿ ಕಳುಹಿಸಲಾಗಿದೆ.

ತಿರುಚನಾಪಳ್ಳಿಯಲ್ಲಿ ಮಕ್ಕಳ ಅಪಹರಣ

ತಿರುಚನಾಪಳ್ಳಿ ಮತ್ತು ಶ್ರೀರಂಗಂ ನಗರಗಳಲ್ಲಿ ೫ ರಿಂದ ೧೨ ವರ್ಷ ವಯಸ್ಸಿನ ಅನೇಕ ಗಂಡು ಮಕ್ಕಳನ್ನು ಅಪಹರಿಸಿರುವ ಆಪಾದನೆಗಳು ವರದಿಯಾಗಿವೆ. ಇದುವರೆಗೆ ಇಂಥ ೧೫ ದೂರುಗಳು ಬಂದಿವೆ. ಪ್ರಾಥಮಿಕ ಶಾಲೆಗಳೆಲ್ಲಾ ಬಂದಾಗಿವೆ. ಈ ಸಂಬಂಧದಲ್ಲಿ ನಾಲ್ವರ ದಸ್ತಗಿರಿ ಆಗಿ ತನಿಖೆ ನಡೆಯುತ್ತಿದೆ.

ಕಾಂಗ್ರೆಸ್ಸೇ ತಾತ್ಕಾಲಿಕ ಸರ್ಕಾರ ರಚಿಸಲಿ

ಭಾರತದಲ್ಲೆಲ್ಲಾ ಬಹು ಸಂಖ್ಯಾತರ ಪ್ರತಿನಿಧಿಯಾಗಿರುವ ಕಾಂಗ್ರೆಸ್ಸು ಕೇಂದ್ರದಲ್ಲಿ ತಾತ್ಕಾಲಿಕ ಸರ್ಕಾರವನ್ನು ರಚಿಸುವಂತೆ ವೈಸರಾಯರು ಅವರನ್ನು ಸ್ವಾಗತಿಸಬೇಕೆಂದು ಪ್ರಸಿದ್ಧ ಪತ್ರಿಕೋದ್ಯೋಗಿಗಳಾದ ಮಿ॥ ಹೆಚ್. ಎನ್. ಬ್ರೇಲ್ಸ್ ಫರ್ಡ್‌ರವರು ಸೂಚಿಸಿ ಇದರಿಂದ ರಾಜ್ಯಾಂಗ ರಚನಾ ಸಭೆಯ ಕೆಲಸ ಸುಸೂತ್ರವಾಗಿ ನಡೆಯಲು ಅನುಕೂಲವಾಗುವುದೆಂದು ತಿಳಿಸಿದ್ದಾರೆ.

ಕೊಚ್ಚಿ ಮಂತ್ರಿಗಳ ಮೇಲೆ ಅವಿಶ್ವಾಸ

ಕೊಚ್ಚಿ ಸಂಸ್ಥಾನದ ಜನಪ್ರಿಯ ಮಂತ್ರಿಗಳಾದ ಶ್ರೀ ಲೋನಪ್ಪನ್ ಮತ್ತು ಶ್ರೀ ಕೆ. ಬಾಲಕೃಷ್ಣ ಮೆನನ್ ಇವರುಗಳ ಮೇಲೆ ಅವಿಶ್ವಾಸ ನಿರ್ಣಯವು ಶಾಸನ ಸಭೆಯಲ್ಲಿ [illegible] ಓಟುಗಳಿಂದ ಅಂಗೀಕಾರವಾಯಿತು. ಅಧಿಕಾರಿ ಸದಸ್ಯರು ಓಟು ಕೊಡದೆ ತಟಸ್ಥರಾಗಿದ್ದರು. ಇದರಿಂದ ಈ ಇಬ್ಬರು ಮಂತ್ರಿಗಳೂ ತಮ್ಮ ಸ್ಥಾನಗಳಿಗೆ ರಾಜೀನಾಮೆ ಸಲ್ಲಿಸಿದ್ದಾರೆ.

ರಾಜ್ಯಾಂಗ ಸಭೆಗೆ ಲೀಗಿನಿಂದ ಪಿಕೆಟಿಂಗ್

ಮುಸ್ಲಿಂ ಲೀಗಿನವರು ಹೋರಾಟ ಹೂಡಲು ನಿರ್ಧರಿಸಿರುವರಷ್ಟೆ. ಅದರ ಮೊದಲನೇ ಕಾರ್ಯಕ್ರಮವೆಂದರೆ ರಾಜ್ಯಾಂಗ ರಚನಾ ಸಭೆ ಸೇರುವ ಮುನ್ನ ಪಿಕೆಟಿಂಗ್ ನಡೆಸುವುದೇ ಆಗಿರಬಹುದೆಂದು ಊಹಿಸಲಾಗಿದೆ. ಆದರೆ ಈ ಬಗ್ಗೆ ಲೀಗ್ ಅಧಿಕಾರಿ ಪ್ರಕಟಣೆ ಹೊರಬಿದ್ದಿಲ್ಲ. [illegible] ಕಾಲದಲ್ಲಿ ಯಾವ ಕಾರ್ಯಕ್ರಮ [illegible] ಹೋರಾಟದ ಬಗ್ಗೆ ನಾನಾ ಭಾಗಗಳ ಲೀಗ್ ಅಧಿಕಾರಿ [illegible] ಸಂಪರ್ಕವಿದೆ [illegible]

ಸಾಧ್ವಿ

ತಾ॥ ೮-೮-೪೬ ಗುರುವಾರ

ಉದಾರಾದರ್ಶಿತ ನೀತಿ

ಹೊಸ ರಾಜ್ಯಾಂಗ ಶಾಸನವು ಜಾರಿಗೆ ಬಂದಾಗ ಮಾಜಿ ದಿವಾನರಾದ ಶ್ರೀ ಎನ್. ಮಾಧವರಾಯರು ಪ್ರಜಾಪ್ರತಿನಿಧಿ ಸಭೆಯಲ್ಲಿ ಭಾಷಣ ಮಾಡುತ್ತ ಈ ಸುಧಾರಣೆಗಳನ್ನು ಅತ್ಯಂತ ಉದಾರವಾದ ರೀತಿಯಲ್ಲಿ ಉಪಯೋಗಿಸಲಾಗುವುದೆಂದು ತಿಳಿಸಿದ್ದರು. ಆದರೆ ಕಳೆದ ನಾಲ್ಕೈದು ವರ್ಷದ ಇತಿಹಾಸವನ್ನು ನೋಡಿದರೆ ಸಂಸ್ಥಾನದ ರಾಜನೀತಿಯು ಸ್ವಲ್ಪವೂ ಉದಾರ ಭಾವನೆಯಿಂದ ಮುಂದುವರಿದಿಲ್ಲವೆಂದೂ ಅತ್ಯಂತ ಸಂಕುಚಿತ ರೀತಿಯಲ್ಲಿಯೇ ಸಾಗಿವೆಯೆಂದೂ ಹೇಳಬಹುದು. ಇದಕ್ಕೆ ಮಾಧವರಾಯರು ಕಾರಣರಲ್ಲ. ಸರ್ಕಾರದ ರೀತಿ ನೀತಿಗಳಿಗೆ ಯಾವ ಒಬ್ಬ ವ್ಯಕ್ತಿಯೂ ಕಾರಣರಲ್ಲ.

ಇಂದಿನ ಮೈಸೂರು ರಾಜ್ಯಾಂಗ ಶಾಸನದ ಪ್ರಕಾರ ಸಂಸ್ಥಾನವು ರಾಜನೀತಿಯ ಪಥದಲ್ಲಿ ಎಷ್ಟು ದೂರ ಹೋಗಬಹುದೆಂಬುದನ್ನು ಸರ್ ಮಿರ್ಜಾ ಇಸ್ಮೈಲರು ಬಹಳ ಹಿಂದೆಯೇ ಹೇಳಿದ್ದಾರೆ. ದಿವಾನರನ್ನೂ ಒಳಗೊಂಡ ಎಲ್ಲಾ ಮಂತ್ರಿಗಳೂ ಚುನಾಯಿತರಾದವರೇ ಆಗಿರಲು ಈಗ ಅವಕಾಶವಿಲ್ಲವೆಂದು ಅವರು ಹೇಳಿದ್ದರು. ಆದರೆ ಇಬ್ಬರು ಚುನಾಯಿತ ಮಂತ್ರಿಗಳ ಬದಲು ಮೂವರು ನೇಮಕವಾಗಿದ್ದರೆ ಅದು ಬಿಟ್ಟು ಬೇರೆ ಯಾವ ಉದಾರತೆಯೂ ತೋರಿಸಲ್ಪಟ್ಟಿಲ್ಲ. ಮಂತ್ರಿಗಳೂ ಸಹ ಯಾವ ರಾಜನೀತಿಯ ತಳಹದಿಯ ಆಧಾರದ ಮೇಲೆಯೂ ಆರಿಸಲ್ಪಟ್ಟಿಲ್ಲ. ಇನ್ನು ದಿವಾನರ ನೇಮಕದ ವಿಚಾರವನ್ನು ಹೇಳಲೇಬೇಕಾಗಿಲ್ಲ. ಈಗ ಸರ್ ನೊದಲಿಯಾರರು ಬಂದಿರುವ ರೀತಿಯು ಎಲ್ಲರಿಗೂ ಚೆನ್ನಾಗಿ ಗೊತ್ತಾಗಿದೆ.

ಶ್ರೀ ಮಾಧವರಾಯರು ಪ್ರತಿಪಾದಿಸಿದ ಸರ್ಕಾರದ ನೀತಿಯು ಮುಂದೆಯಾದರೂ ಜಾರಿಗೆ ಬರಬೇಕು. ಜಾರಿಗೆ ಬರಬೇಕಾಗಿದೆ. ಹೊಸ ದಿವಾನರ ಮುಂದೆ ಅನೇಕ ಪ್ರಶ್ನೆಗಳು ಬರುತ್ತವೆ. ಅವುಗಳಲ್ಲಿ ಗಹನವಾದ ಮತ್ತು ಜಟಿಲವಾದ ಸಮಸ್ಯೆಗಳೂ ಇರುವುವು. ಪ್ರಗತಿಯನ್ನು ವಜಾ ಮಾಡಿಸುವುದು, ದಂಡನ್ನು ಹಿಂದಕ್ಕೆ ಪಡೆಯುವುದು, ಬಂದವರನ್ನು ಹೊಂದುವುದು, ಕೈದಿಗಳನ್ನು ಬಿಡುಗಡೆ ಮಾಡುವುದೇ ಮುಂತಾದ ದೊಡ್ಡ ದೊಡ್ಡ ವಿಷಯಗಳಿವೆ. ಯುದ್ಧಾನಂತರದ ಪುನರ್ರಚನೆಗಾಗಿ ಕೋಟ್ಯಂತರ ರೂಪಾಯಿ ಖರ್ಚಿನಲ್ಲಿ ಕೈಗೊಂಡಿರುವ ಭಾರಿ ಯೋಜನೆಗಳಿವೆ. ಇವುಗಳನ್ನು ಒಂದೊಂದಾಗಿ ಬಗೆ ಹರಿಸಲು ನೂತನ ದಿವಾನರು ಪ್ರಯತ್ನಿಸಬೇಕಾಗಿದೆ.

ಆಹಾರದ ಸಮಸ್ಯೆಯು ಭೂತಾಕಾರವಾಗಿ ಎದ್ದು ಕಾಣುತ್ತಿದೆ. ಮಾಜಿ ದಿವಾನರಾದ ಶ್ರೀ ಮಾಧವರಾಯರೊಡನೆ ತಾವು ಪಾಶ್ಚಿಮಾತ್ಯ ದೇಶಗಳಿಗೆ ಆಹಾರ ಸಂಗ್ರಹಕ್ಕಾಗಿ ಹೋಗಿ ಬಂದ ಅನುಭವಗಳು ಅವರಿಗೆ ಚೆನ್ನಾಗಿವೆ. ಪ್ರಪಂಚದ ಆಹಾರ ಸ್ಥಿತಿಯು ಹದಗೆಡುವುದೆಂಬ ವಾರ್ತೆಯು ಅಧಿಕಾರ ಮೂಲಗಳಿಂದ ಬರುತ್ತಿದೆ. ಹಿಂದೂಸ್ತಾನದ ಆಹಾರಾಭಾವ ಕ್ಷೇತ್ರಗಳಲ್ಲಿ ನಮ್ಮ ಸಂಸ್ಥಾನವು ಅತ್ಯಂತ ಮುಖ್ಯವಾದುದೆಂಬ ಅಂಶವು ಸರ್ ಮೊದಲಿಯಾರರಿಗೆ ಮನವರಿಕೆಯಾಗಿದೆ. ಆದುದರಿಂದ ಈ ವಿಷಯಕ್ಕೆ ಅವರು ಸಂಪೂರ್ಣ ಗಮನ ಕೊಡುವುದು ಅವಶ್ಯಕ.

ಎಲ್ಲಕ್ಕಿಂತ ಮಿಗಿಲಾದ ಕರ್ತವ್ಯವೊಂದಿದೆ; ಸಂಸ್ಥಾನದಲ್ಲಿರುವ ಎಲ್ಲ ಜಗಳ ಅನಿವಾರ್ಯಗಳನ್ನು ನಿವಾರಿಸುವುದೇ ಅದು. ಹೊಸ ಪ್ರಕರಣವು ಆರಂಭವಾಗುವಾಗ ಹಳೆಯ ಕೊಳೆಗಳನ್ನು ತೊಡೆದು ಹಾಕುವುದು ಪದ್ಧತಿ. ಸರ್ ಮೊದಲಿಯಾರರೂ ಸಹ ಹಾಗೆಯೇ ವಿರುದ್ಧವಾದ ವಾತಾವರಣದಲ್ಲಿ ತಮ್ಮ ಕೆಲಸವನ್ನು ಆರಂಭಿಸುವುದು ಯುಕ್ತವಾಗಿದೆ. ಗಡೀಪಾರು ಆಜ್ಞೆಗಳನ್ನು ರದ್ದುಮಾಡುವುದು; ಬಂಧನದಲ್ಲಿರುವವರನ್ನು ಬಿಡಿಸುವುದು, ಪತ್ರಿಕೆಗಳ ಮೇಲಿನ ಆಜ್ಞೆಗಳನ್ನು ನಿವಾರಿಸುವುದು, (ವಿಶ್ವಕರ್ನಾಟಕ ಪತ್ರಿಕೆಯು ಪ್ರಕಟನೆಗೆ ಅವಕಾಶ ಕೊಡುವುದು) ಇವೇ ಮುಂತಾದ ಕಾರ್ಯಗಳನ್ನು ಮೊದಲು ಮಾಡಬೇಕು. ಮತ್ತು ಸಾರ್ವಜನಿಕರೊಡನೆ ನಿಕಟ ಸಂಪರ್ಕವನ್ನಿಟ್ಟುಕೊಂಡು ಪ್ರಜಾನುರಾಗಕ್ಕೆ ಪಾತ್ರವಾಗುವಂತೆ ಆಡಳಿತವನ್ನು ನಡೆಸಬೇಕೆಂದು ಸರ್ ಮೊದಲಿಯಾರರಿಗೆ ನಾವು ಸೂಚಿಸಲು ಬಯಸುತ್ತೇವೆ.

Edited printed and published by A. R. Nagaraiao at the Sadhvi Press D Subhash Road Mysore

ನೂಲುವುದರಿಂದ ಹುಚ್ಚು ಹೋಗುವುದು

ಬಂಗಾಳದ ನಿವೃತ್ತ ಸಿವಿಲ್ ಸರ್ಜನ್ನರೊಬ್ಬರು ಕೈ ರಾಟೆಯಲ್ಲಿ ನೂಲು ತೆಗೆಯುವುದರಿಂದ ಹುಚ್ಚು ಹೋಗುವುದೆಂಬುದನ್ನು ಪ್ರಾಯೋಗಿಕವಾಗಿ ಸಿದ್ಧಪಡಿಸಿದ್ದಾರೆ. ಕೊಮಿಲ ಜೈಲಿನಲ್ಲಿ ೩ ತಿಂಗಳಲ್ಲಿ ಒಬ್ಬ ಹುಚ್ಚನನ್ನು ಇದೇ ರೀತಿ ಹೋಗಲಾಡಿಸಲಾಯಿತೆಂದೂ, ಮಿಡ್ನಾಪುರದ ಜೈಲಿನಲ್ಲಿ ಹಿಂದೆ ಮುಂದಿಗೆ ಈ ಪ್ರಯೋಗದಿಂದಲೇ ಗುಣಪಡಿಸಲಾಗಿದೆಯೆಂದೂ ಅವರು ಹೇಳಿದ್ದಾರೆ.

ವೈಸರಾಯರಿಗೆ ಸರ್ವಾಧಿಕಾರ

ಭಾರತದಲ್ಲಿ ಉಂಟಾಗಿರುವ ವಿಶೇಷ ಪರಿಸ್ಥಿತಿಯಲ್ಲಿ ವೈಸರಾಯರು ತಮಗೆ ಸೂಕ್ತ ಕಂಡಂತೆ ವರ್ತಿಸಬಹುದಾಗಿ ಅವರಿಗೆ ಪೂರ್ಣಾಧಿಕಾರವನ್ನು ಕೊಡಬೇಕೆಂದು ಬ್ರಿಟಿಷ್ ಮಂತ್ರಿ ಮಂಡಲದ ಭಾರತ ಸಮಿತಿ ತೀರ್ಮಾನ ಮಾಡಿರುವುದಾಗಿ ತಿಳಿದುಬಂದಿದೆ.

ವೆರೈಟಿ ಸ್ಟೋರ್ಸ್

ಪೋಸ್ಟಾಫೀಸ್ ಬೀದಿ, ಶ್ರೀರಂಗಪಟ್ಟಣ

ನಮ್ಮಲ್ಲಿ ಪರಿಶುದ್ಧವಾದ ಕಾಫಿಪುಡಿ ದೊರೆಯುತ್ತದೆ. ನಿಮ್ಮ ಎದುರಿಗೆ ಪುಡಿ ಮಾಡಿಕೊಡಲಾಗುತ್ತದೆ.

ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್ ಕೊಡಲಾಗುತ್ತದೆ.

ಪಾರ್ಲಿಮೆಂಟ್ ಪೌಂಗಕ್ಕೆ	೧-೧೦-೦
ನೇಟಿವ್ ,,	೧-೭-೦
ಬೋಟನ್ಸ್ ,,	೧-೩-೦

ಮತ್ತು ನಮ್ಮಲ್ಲಿ ಪ್ರತಿ ದಿವಸ ಬಳಕೆ ಸಾಮಾನುಗಳೂ ಸ್ಟೇಷನರಿ ಸಾಮಾನುಗಳು ದೊರೆಯುತ್ತವೆ.

ಒಂದು ಸಾರಿ ಪರೀಕ್ಷಿಸಿ ನೋಡಿ.

ಪ್ರೊಪ್ರೈಟರ್,
ಸಿ. ನರಸಿಂಹ ಶಾಸ್ತ್ರಿ.

ನಮ್ಮ ಕನ್ನಡದಲ್ಲಿ

ರಂಗ ಪತ್ರಿಕೆಗಳೂ ಎಲ್ಲಾ ಪುಸ್ತಕಗಳೂ ಇವೆ. ನಿಮಗೆ ಬೇಕಾದರೆ ನಮಗೆ ತಿಳಿಸಿ

ಕೆ. ಅನಂತಸುಬ್ಬರಾಯ,
ವಿಶ್ವಕರ್ನಾಟಕ ಮಂದಿರ, ಮೈಸೂರು

ತಾ॥ 11—8—46 ನೇ ಭಾನುವಾರ ಸಂಜೆ 4—30 ಕ್ಕೆ.

ಅಠಾರಾ ಕಚೇರಿ ಬಳಿ ಇರುವ ಮೈದಾನದಲ್ಲಿ

ಕೇರಳ ಟೈ ನಿಂತಿರುವ ಪೈಲ್ವಾನ್

ಸಣ್ಣ ಪೋರಯ್ಯ

ಬೆಂಗಳೂರು ಮೈಸೂರಿಗೆ ಕೋರ್ಟಿನಲ್ಲಿ ನಿಂತಿರುವ

ಪೈ॥ ಶ್ರೀಕಂಠಯ್ಯ

ಪಂಜಾಬ್ ಪೈ॥ ಧರ್ಮಸಿಂಗ್ - ಕೊಲ್ಲಾಪುರ ಪೈ॥ ನಾಮುರಾವ್

ಪೈ॥ ಅಬ್ದುಲ್ ಸಾಬ — ಪೈ॥ ಸಾಬೂಲಾಲ

ಪೈ॥ ಚನ್ನಯ್ಯ - ನಂಜನಗೂಡು ಪೈ॥ ಏನಯ್ಯ

ಜಾ 11 ... 11 ನೇ ತಾ. ...

...

Rajkamal Talkies, Mysore

From Friday the 9th Aug 46

Daily Three Shows

SAMUEL GOLDWYN'S

"The Hurricane"

Featuring:—Dorothy Lamou , John Hall, Mar Astor, Aubrey Smith & a host of other

A moon-lit, fragrant South Sea Paradise for lovers in the grip of nature's greatest terror is the setting for the Story of a grim man-hunt.

ರಾಜ್ ಕಮಲ್ ಟಾಕೀಸ್, ಮೈಸೂರು

1946 ನೇ ಆಗಸ್ಟ್ 9 ನೇ ಶುಕ್ರವಾರದಿಂದ ಪ್ರತಿದಿನ ಮೂರು ಆಟಗಳು

★ ಬಿರುಗಾಳಿ ★

ಎಂಬ ಸ್ಯಾಮ್ಯುಯಲ್ ಗೋಲ್ಡ್‌ವಿನ್ ರವರ ಅತ್ಯದ್ಭುತವಾದ ಚಲನಚಿತ್ರ

ಪಾತ್ರಗಳು:—ಡೊರೋತಿ ಲಾಮರ್, ಮೇರಿ ಆಸ್ಟರ್, ಜಾನ್ ಹಾಲ್ ಮುಂತಾದವರು

ಸಂಪುಟ ೫] ಶುಕ್ರವಾರ ೯—೮—೪೬ [ಸಂಚಿಕೆ ೧೫೫

ಮೈಸೂರು ಸಂಸ್ಥಾನಕ್ಕೆ ೭,೦೦೦ ಟನ್ ಬರ್ಮಾ ಅಕ್ಕಿ

ಹೊಸ ದಿವಾನರಿಗೆ ಬಿನ್ನವತ್ತಳೆ

ಮೈಸೂರು ೯

ಈ ತಿಂಗಳು ೧೭ ನೇ ತಾ|| ಶನಿವಾರ ಸಂಜೆ ೪|| ಗಂಟೆಗೆ ಟೌನ್ ಹಾಲಿನಲ್ಲಿ ನೂತನ ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರಿಗೆ ರಾಜಧಾನಿಯ ಪುರನಿವಾಸಿಗಳ ಪರವಾಗಿ ಬಿನ್ನವತ್ತಳೆಯನ್ನು ಅರ್ಪಿಸಲು ಏರ್ಪಾಡುಗಳಾಗುತ್ತಿವೆ. ಓರಿಯಂಟಲ್ ಇಂಡಸ್ಟ್ರೀಸಿನ ಶ್ರೀ ಟಿ ಎಸ್ ಸಬ್ಬರಾವ್ ಮತ್ತು ಡಾ|| ಟಿ ಸಿ. ನಟರಾಜ್ ಮುಂತಾದವರು ಇದರ ವ್ಯವಸ್ಥೆಯನ್ನು ಕೈಗೊಂಡಿದ್ದಾರೆ

ಸಂಗೀತ

ನಾಳೆ ಸಂಜೆ ಆರೂವರೆ ಘಂಟೆಗೆ ಪ್ರದೋಷದ ಪ್ರಯುಕ್ತ ಕೃಷ್ಣರಾಜಮೊಹಲ್ಲ ದೊಡ್ಡ ರಾಮದೇವಸ್ಥಾನದಲ್ಲಿ ಕುಮಾರಿ ಶಾರದಮ್ಮನವರಿಂದ ಸಂಗೀತವು ನಡೆಯುತ್ತದೆ

ರೈಲ್ವೆ ಕೆಲಸಗಾರರ ಬೇಡಿಕೆ

ಮೊನ್ನೆ ಸಾಯಂಕಾಲ ರೈಲ್ವೆ ಕ್ಲಬ್ ಎದುರು ಮೈದಾನದಲ್ಲಿ ಮೈಸೂರು ರೈಲ್ವೆ ಕೆಲಸಗಾರರ ಸಭೆಯು ಎ. ಹೆಚ್ ಎರ್ಡೇರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಸ್ಥಾನಾದ್ಯಂತ ರೈಲ್ವೆ ಕೆಲಸಗಾರರ ಕೇಂದ್ರ ಸಂಸ್ಥೆಯನ್ನು ಏರ್ಪಡಿಸಬೇಕೆಂಬ ನಿರ್ಣಯ ಮಂಜೂರಾಯಿತು. ೨೪ ನೇ ತಾರೀಖಿನ ವರೆವಿಗೆ ಬೋನಸ್ ಮೊದಲಾದುವುಗಳನ್ನು ಕೇಳದುಕೊಳ್ಳಕೂಡದೆಂದೂ ಈ ಮಧ್ಯೆ ಸರ್ಕಾರದೊಡನೆ ವ್ಯವಹಾರಗಳನ್ನು ನಡೆಸಬೇಕೆಂದೂ ತೀರ್ಮಾನವಾಯಿತು.

ಪ್ರದೋಷ ಸಂಗೀತ

ನಾ|| ಬಿಡಾರಂ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮ ಮಂದಿರದಲ್ಲಿ ಶನಿ ಪ್ರದೋಷದ ಪ್ರಯುಕ್ತ ನಾಳೆ ಸಂಜೆ ೭ ಗಂಟೆಗೆ ಕುಮಾರಿ ಸರೋಜಮ್ಮನವರ ಗಾಯನವನ್ನು ಏರ್ಪಡಿಸಿರುತ್ತದೆ ಸಕಲರಿಗೂ ಆಹ್ವಾನವಿದೆ.

ಸರ್ಕಾರಿ ವಕೀಲರಿಗೆ ದಿನಕ್ಕೆ ೧೫೦೦ ರೂ

ಕಾಶ್ಮೀರದ ಶೇಖ್ ಅಬ್ದುಲ್ಲಾರವರ ವಿಚಾರಣೆಯಲ್ಲಿ ಸರ್ಕಾರದ ಪರ ವಕೀಲರಾಗಿರುವ ಶ್ರೀ ಜೋಗೋವಾಲಾ ಸೇಟರವರಿಗೆ ದಿನಕ್ಕೆ ೧೫೦೦ ರೂ ಫೀಜು ಕೊಡುತ್ತಿರಲಾಗಿದೆ ಆಜಾದ್ ಹಿಂದ್ ಫೌಜಿನ ಪ್ರಾಸಿಕ್ಯೂಟರ್ ಆದಂತಹ ಸರ್ ಇಂಜಿನೀಯರ್ ರಿಗೂ ಇಷ್ಟು ಹಣ ಸಲ್ಲುತ್ತಿರಲಿಲ್ಲ. ಅವರಿಗೆ ದಿನಕ್ಕೆ ೫೦೦ ರೂ. ಮಾತ್ರ ಬರುತ್ತಿತ್ತು ಶೇಖ್ ಅಬ್ದುಲ್ಲಾರವರು ಕೋರ್ಟಿನಲ್ಲಿ ಇತ್ತ ಹೇಳಿಕೆಯನ್ನು ಒಳಗೊಂಡಿದ್ದ ಪತ್ರಿಕೆಗಳಿಗೆ ಅಸಾಧ್ಯ ಗಿರಾಕಿ ಇತ್ತು. ಕೆಲವು ಪ್ರತಿಗಳು ಬ್ಲಾಕ್ ಮಾರ್ಕೆಟ್ಟಿನಲ್ಲೂ ಮಾರಾಟವಾದುವು

ಬೊಂಬಾಯಿಯಲ್ಲಿ ಉಪಾಧ್ಯಾಯರಿಗೆ ಹೆಚ್ಚು ಸಂಬಳ

ಶಿಕ್ಷಣ ಪಡೆದ ಪ್ರಾಥಮಿಕ ಉಪಾಧ್ಯಾಯರ ಕನಿಷ್ಟ ಸಂಬಳವು ೩೦ ರೂ. ಗಳಿರಬೇಕೆಂದು ಬೊಂಬಾಯಿ ಸರ್ಕಾರದವರು ಗೊತ್ತು ಮಾಡಿದ್ದಾರೆ ಅವರ ಸಂಬಳ ೭೫ ರೂ. ಗಳ ವರೆಗೂ ಹೆಚ್ಚುವುದು ಇಷ್ಟು ಸಂಬಳವು ಹಿಂದೂಸ್ಥಾನದಲ್ಲಿ ಎಲ್ಲೂ ಪ್ರಾಥಮಿಕ ಶಿಕ್ಷಕರಿಗೆ ಸಿಗುತ್ತಿಲ್ಲ ಎಂದು ಬೊಂಬಾಯಿ ಪ್ರಧಾನಿ ಶ್ರೀ ಖೇರರು ತಿಳಿಸಿದ್ದಾರೆ

ಮಹದೇವಸ್ವಾಮಿಯವರಿಗೆ ಅಭಿನಂದನೆ

ಮೈಸೂರು ೯

ಶ್ರೀಮನ್ ಮಹಾರಾಜರವರಿಂದ ಸಾರ್ವಜನಿಕಸೇವಾ ಪ್ರಶಸ್ತಿಯನ್ನು ಪಡೆದಿರುವ ಶ್ರೀ ಮಹದೇವಸ್ವಾಮಿಯವರನ್ನು ಗೌರವಿಸುವ ಸಲುವಾಗಿ ಮೈಸೂರು ಪತ್ರಿಕೋದ್ಯೋಗಿ ಸಂಘದವರು ನಿನ್ನೆ ಒಂದು ಸಂತೋಷ ಕೂಟವನ್ನು ಏರ್ಪಡಿಸಿದ್ದರು. ಶ್ರೀ ಆಗರಂ ರಂಗಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಮಹದೇವಸ್ವಾಮಿಯವರು ರಂಗಭೂಮಿಗೆ ಸೇವೆ ಸಲ್ಲಿಸುವ ಸುಯೋಗವನ್ನು ಪಡೆದು ಅನೇಕ ಸಾರ್ವ

ಜನಿಕ ಸಂಸ್ಥೆಗಳಿಗೆ ಧನ ಸಹಾಯಗಳನ್ನು ಮಾಡಿಸುತ್ತಿದ್ದರೆಂದೂ, ಇದರಿಂದ ಪ್ರಜಾಮನ್ನಣೆಗೆ ಮತ್ತು ರಾಜಮನ್ನಣೆಗೆ ಪಾತ್ರರಾಗಿರುತ್ತಾರೆಂದು ತಿಳಿಸಿ ಅಧ್ಯಕ್ಷರು ಶ್ರೀ ಮಹದೇವಸ್ವಾಮಿಯವರನ್ನು ಅಭಿನಂದಿಸಿದರು ಇವರ ಸಂಚಾಲಕತ್ವದಲ್ಲಿ ಗುಬ್ಬಿ ಕಂಪೆನಿಯು ಅಭ್ಯುದಯಕ್ಕೆ ಬಂದು; ಸರ್ವಜನಾದರಣೀಯವಾದ ಸಂಸ್ಥೆಯಾಗಿದೆ, ಎಂದು ಹೇಳಿ ಇವರು ಇನ್ನೂ ಹೆಚ್ಚು ಸೇವೆಯನ್ನು ಮಾಡಿ ಯಶೋವಂತರಾಗಿ ಬಾಳಲೆಂದು ಹಾರೈಸಿದರು. ಶ್ರೀಗಳಾದ ಟಿ ನಾರಾಯಣರಾಯರು, ಎಸ್. ನರಸಿಂಹಯ್ಯನವರು ಮತ್ತು ಎಚ್.ಎಸ್. ಶಾಸ್ತ್ರಿಗಳೂ ಸಹ ಮಾತನಾಡಿ, ಶ್ರೀ ಮಹದೇವಸ್ವಾಮಿಯವರ ಗುಣಕಥನ ಮಾಡಿದರು. ಶ್ರೀ ಸ್ವಾಮಿಯವರು ಉತ್ತರವೀಯುತ್ತ ಯಾವ ಸಂಸ್ಥೆಯೂ ಪತ್ರಿಕಾ ಪ್ರತಿನಿಧಿಗಳ ಸಹಾಯ ಸಹಕಾರಗಳಿಲ್ಲದೆ ಮೇಲೆಗೆ ಬರಲಾರದೆಂದು ಹೇಳಿ ಗುಬ್ಬಿ ಕಂಪನಿ ವಸಂತೋತ್ಸವ ಸಂದರ್ಭದಲ್ಲಿ ನಡೆಯುತ್ತಿರುವ ಕಾರ್ಯಕ್ರಮಗಳಲ್ಲಿ ವೃತ್ತ ಪತ್ರಿಕೆಗಳ ಸಹಕಾರವನ್ನು ಕೋರಿದರು ಸಂಘದ ಕಟ್ಟಡಕ್ಕಾಗಿ ಇದುವರೆವಿಗೆ ಗುಬ್ಬಿ ಕಂಪನಿಯವರು ಮಾಡಿರುವ ಧನ

ಧ್ವಜಾರೋಹಣ

ಮೈಸೂರು ೯

"ಕ್ವಿಟ್ ಇಂಡಿಯಾ" ದಿನಾಚರಣೆಯ ಅಂಗವಾಗಿ ಈ ದಿನ ಬೆಳಗ್ಗೆ ಸುಬ್ಬರಾಯನಕೆರೆ ಮೈದಾನದಲ್ಲಿ ಧ್ವಜಾರೋಹಣವು ನಡೆಯಿತು. ಅನೇಕ ಜನ ಕಾಂಗ್ರೆಸ್ ಕೆಲಸಗಾರರು ಸೇರಿದ್ದರು. ಶ್ರೀ ಎಸ್. ಚೆನ್ನಯ್ಯನವರು ರಾಷ್ಟ್ರಧ್ವಜವನ್ನೂ, ಶ್ರೀ ಎಸ್ ರಂಗರಾಮಯ್ಯನವರು ಮೈಸೂರು ಧ್ವಜವನ್ನೂ ಹಾರಿಸಿದರು. ಧ್ವಜ ವಂದನೆಯ ನಂತರ ಶ್ರೀ ಚೆನ್ನಯ್ಯನವರು ಸಣ್ಣ ಭಾಷಣವೊಂದನ್ನು ಮಾಡಿದರು. ಭಾರತಖಂಡದ ಸ್ವಾತಂತ್ರ್ಯ ಚಿಹ್ನೆಯಾದ ರಾಷ್ಟ್ರಧ್ವಜದ ಗೌರವವನ್ನು ಎತ್ತಿಹಿಡಿಯಲು ಸಹಸ್ರಾರು ಜನರು ತನುಮನ ಧನಗಳನ್ನು ಅರ್ಪಿಸಿರುತ್ತಾರೆ, ಮೈಸೂರಿನವರೂ ಅಪಾರ ತ್ಯಾಗಗಳನ್ನು ಮಾಡಿದ್ದಾರೆ, ಎಂಬುದಾಗಿ ಶ್ರೀ ಚೆನ್ನಯ್ಯನವರು ಹೇಳಿ ಮೈಸೂರು ಸಂಸ್ಥಾನದಲ್ಲಿ ಎರಡು ಬಾವುಟವನ್ನು ಹಾರಿಸುವಂತೆ ಒಪ್ಪಂದವಾಗಿರುವ ವಿಷಯವನ್ನು ವಿವರಿಸಿದರು. ಸರ್ಕಾರದವರು ಈ ಒಪ್ಪಂದದಂತೆ ನಡೆದುಕೊಳ್ಳದೆ ಕಾಂಗ್ರೆಸ್ಸಿನವರನ್ನು ಪೀಡಿಸುತ್ತ ಬಂದಿದ್ದರೂ, ಕಾಂಗ್ರೆಸ್ಸಿನವರು ಮಾತ್ರ ಒಪ್ಪಂದದ ಸರ

ಕಾರಿನ ಜೊತೆಗೆ ಇನ್ನೂ ವಿಶೇಷವಾದ ಸಹಾಯವನ್ನು ಮಾಡುವುದಾಗಿ ಅವರು ಭರವಸೆ ಇತ್ತರು ವಂದನಾರ್ಪಣೆಗಳೊಡನೆ ಸಮಾರಂಭವು ಮುಕ್ತಾಯವಾಯಿತು.

ಮೈಸೂರಿಗೆ ಬರ್ಮಾ ಅಕ್ಕಿ

ಮದರಾಸ್ ಬಂದರಿಗೆ ಏಳು ಸಾವಿರ ಟನ್ ಬರ್ಮಾ ಅಕ್ಕಿ ಬಂದಿರುತ್ತದೆ ಇದನ್ನು ಪೂರ್ತಿಯಾಗಿ ಮೈಸೂರು ಸಂಸ್ಥಾನಕ್ಕೆ ಕಳುಹಿಸಿಕೊಡಲಾಗುವುದೆಂದು ತಿಳಿದುಬಂದಿದೆ

ರೈಲಿನ ಚಕ್ರ ಕಳಚಿತು

ಮೈಸೂರು ೯

ಈ ದಿನ ಅರಸೀಕೆರೆಯಿಂದ ಮೈಸೂರಿಗೆ ಬರುವ ಮೇಲ್ ಟ್ರೈನು ಮೈಸೂರಿನ ಸಿಗ್ನಲ್ ಔಟ್‌ಪೋಸ್ಟ್ ಬಳಿ ಬರುತ್ತಿದ್ದಾಗ ಒಂದು ಭೋಗಿಯ ಚಕ್ರವು ಹಠಾತ್ತಾಗಿ ಕಳಚಿಕೊಂಡು ಗಾಡಿಯಿಂದ ಕೆಳಕ್ಕೆ ಬಿದ್ದು ಬಿಟ್ಟಿತೆಂದೂ ಈ ಅಪಘಾತದಿಂದ ಯಾರಿಗೂ ಯಾವ ನೋವೂ ಉಂಟಾಗಲಿಲ್ಲವೆಂದು ಹೇಳಲಾಗಿದೆ. ಪ್ರಯಾಣಿಕರು ಗಾಡಿಯಿಂದ ಇಳಿದು ಅಲ್ಲಿಂದ ನಡೆದುಕೊಂಡು ಬಂದರು

ಇಂಜನ್ನಿನ ತೊಂದರೆಯಿಂದ ಈ ದಿನ ಮಧ್ಯಾಹ್ನ ಬೆಂಗಳೂರಿನಿಂದ ಬಂದ ಮೇಲ್ ಟ್ರೈನು ಮದ್ದೂರಿನ ಬಳಿಯಲ್ಲಿಯೇ ನಿಂತು ಮಧ್ಯಾಹ್ನ ಮೂರುವರೆ ಘಂಟೆಗೆ ರಾಜಧಾನಿಗೆ ಬಂದು ಸೇರಿತು.

ತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿರುವರೆಂದು ತಿಳಿಸಿದರು. ಭಾರತವನ್ನು ಬಿಟ್ಟು ಹೋಗು ಎಂತ ಹೇಳಿದ ನಾಯಕರುಗಳನ್ನು ಮೊದಲು ಬಂಧನದಲ್ಲಿಟ್ಟು, ಅನಂತರ ಯಾವ ಪರತ್ತೂ ಇಲ್ಲದೆ ಬಿಡುಗಡೆ ಮಾಡಿ ಈಗ ಸಂಧಾನಕ್ಕಾಗಿ ಅವರ ನೆರವನ್ನೇ ಬ್ರಿಟಿಷ್ ಸರ್ಕಾರವು ಬೇಡುತ್ತಿದೆ, ಆದರೆ ಮೈಸೂರು ಸರ್ಕಾರವು ಅಂತಹವರನ್ನು ನಿರ್ಲಕ್ಷಿಸುತ್ತಿದೆ. ಇದು ಸರಿಯಲ್ಲ. ದಿವಾನರಿಗೆ ಯಾರೇ ಬರಲಿ, ಆದಷ್ಟು ಸೂತ್ರವು ಪ್ರಜಾ ಪ್ರಮುಖರ ಕೈಲಿ ಇರಲಿ, ಶ್ರೀಮನ್ ಮಹಾರಾಜರವರು ತಮ್ಮ ಆದರ್ಶ ಧ್ಯೇಯವಾದ ಪ್ರಜಾ ಪ್ರಭುತ್ವವನ್ನು ಜಾರಿಗೆ ತರಲು ಈಗ ಸುಸಮಯವಾಗಿದೆ-ಎಂದು ಹೇಳಿದರು ಜಯಕಾರದೊಡನೆ ಸಮಾರಂಭವು ಮುಕ್ತಾಯವಾಯಿತು

ದೇಶೀಯ ವಿದ್ಯಾಶಾಲೆಯಲ್ಲಿ

ಆಗಸ್ಟ್ ೯ ರ ಪ್ರಯುಕ್ತ ಈ ದಿನ ಬೆಳಿಗ್ಗೆ ಮೇಲ್ಕಂಡ ಶಾಲೆಯ ಆಶ್ರಯದಲ್ಲಿ ಪ್ರಭಾತ ಫೇರಿ ನಡೆಸಿ ಶ್ರೀ ಶಂಕರನಾರಾಯಣರಾವ್‌ರವರ ಅಧ್ಯಕ್ಷತೆಯಲ್ಲಿ ಧ್ವಜ ವಂದನಾ ಸಮಾರಂಭವನ್ನು ಜರುಗಿಸಲಾಯಿತು

UNIVERSITY OF MYSORE.

No. Ex 2. 1320/45-46, Office of the University of Mysore.
Mysore, Dated 3rd August 1946.

Intermediate Examination in Arts, Science and Commerce, and B.A., B.Sc., and Honours preliminary Examinations September 1946.

In modification of this office Notification No. Ex 2. 1320/45-46 dated 14th June 1946, published on page 377 in Part II of the Mysore Gazette dated 20th June 1946, regarding the date of University Examinations in September 1946, it is hereby Notified that the above examinations will commence on 12th September 1946 instead of on 2nd September 1946, as already notified.

The revised detailed time tables will be published in due course.

By Order,
D. S. Gardon
Registrar

ಸಾಧ್ವಿ

ತಾ|| ೯-೮-೪೬ ಶುಕ್ರವಾರ

ಪುಣ್ಯ ಸ್ಮರಣೆ

ಭಾರತ ಸ್ವಾತಂತ್ರ್ಯ ಸಾಧನೆಯ ಇತಿಹಾಸದಲ್ಲಿ ಇಂದು ಅತ್ಯಂತ ಪವಿತ್ರವಾದ ದಿನ; ಸ್ವರಾಜ್ಯದ ದಾರಿಯು ಖಚಿತವಾಗಿ ನಿರ್ಧರಿಸಲ್ಪಟ್ಟ ದಿನ; ಬ್ರಿಟಿಷರು ಭಾರತವನ್ನು ಬಿಟ್ಟು ಹೊರಡಬೇಕೆಂಬ ನಿರ್ಣಯವನ್ನು ಮಾಡಿದ ದಿನ. ೧೯೪೨ನೇ ಇಸವಿಯಲ್ಲಿ ಇದೇ ದಿವಸ ಭಾರತೀಯರು ಈ ದೃಢ ಸಂಕಲ್ಪವನ್ನು ಮಾಡಿದರು. ಎರಡು ಶತಮಾನಗಳ ದಾಸ್ಯದಿಂದ ಬಳಲಿ, ಬೇಸತ್ತು, ಬ್ರಿಟಿಷರನ್ನು ಬೇಡಿ, ಕಾಡಿ, ಅಸಹಕರಿಸಿ, ಕೊನೆಯ ಪಕ್ಷ ಕಡೆಗೆ ಬ್ರಿಟಿಷರು ಇಲ್ಲಿಂದ ಬಿಟ್ಟು ಹೊರಡಬೇಕೆಂಬ ಅಂತ್ಯ ನಿರ್ಧಾರವನ್ನು ಮಾಡಿದರು. ಅದನ್ನು ಕಾರ್ಯ ರೂಪಕ್ಕೆ ತರುವುದರಲ್ಲಿಯೇ ರಾಷ್ಟ್ರ ನಾಯಕರ ಬಂಧನವಾಗಿ ಅನೇಕ ಹಿಂಸಾಚಾರ ಪರ್ಯಂತರವೂ ನಡೆದು ಕಿಚ್ಚಿನಂತೆ ಆಂದೋಳನವು ಆವರಿಸಿತು. ಅನಂತರ ನಡೆದ ವಿದ್ಯಮಾನಗಳೆಲ್ಲವೂ ಮಾತೃಭೂಮಿಯ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಲು ಅರ್ಹತೆಯನ್ನು ಪಡೆದವು.

ಸ್ವಾತಂತ್ರ್ಯ ಸಮರದಲ್ಲಿ ಬಲಿ ದಾನ ಮಾಡಿದ ವೀರ ದೇಶ ಭಕ್ತರ ಪುಣ್ಯ ಸ್ಮರಣೆಗಾಗಿ ಈ ದಿನ ಭಾರತೀಯರೆಲ್ಲರೂ ಶ್ರದ್ಧಾಂಜಲಿಯನ್ನು ಅರ್ಪಿಸಬೇಕೆಂದು ರಾಷ್ಟ್ರಪತಿಗಳು ಆಜ್ಞೆ ಮಾಡಿದ್ದಾರೆ. ದೇಶದ ಕರೆಯನ್ನು ಮನ್ನಿಸಿ ಭಾರತ ಮಾತೆಯ ಪುತ್ರರೆಲ್ಲರೂ ನೇರವಾಗಿ ಸ್ವಾತಂತ್ರ್ಯದ ಸವಿಯನ್ನು ಉಣ ಭೋಗಿಸಲು ಈ ಪವಿತ್ರ ದಿವಸದಲ್ಲಿ ದೃಢ ಸಂಕಲ್ಪ ಮಾಡಬೇಕೆಂದು ನಾವು ಬೇಡುವೆವು.

ಹರಿಕಥೆ

ಇರ್ವಿನ್ ರಸ್ತೆಯಲ್ಲಿರುವ ಶಾಳಮ್ಮನ ದೇವಸ್ಥಾನದಲ್ಲಿ ನಾಳೆ ಸಂಜೆ ೬-೩೦ ಕ್ಕೆ ಶ್ರೀ ಪರಮಾನಂದಸ್ವಾಮಿಗಳಿಂದ "ರಾಜಾ ಗೋಪೀಚಂದ್" ಎಂಬ ಹರಿಕಥೆ ನಡೆಯುವುದು.

ಕುಡುಕರಿಗೆ ಒಂದು ಕಡೆ ಮೀಸೆ ಬೋಳಿಸಲಾಗುವುದು

ಅಟ್ಟಿಕನಗರದಲ್ಲಿರುವ ಸುಮಾರು ೩ ಸಾವಿರ ಜನ ನಿಮ್ನ ವರ್ಗದವರು ಜೂಜು ಮತ್ತು ಕುಡಿತಗಳನ್ನು ಸಂಪೂರ್ಣವಾಗಿ ತೊರೆಯುವುದಾಗಿ ಪ್ರತಿಜ್ಞೆಯನ್ನು ಸ್ವೀಕರಿಸಿದ್ದಾರೆ. ಇದನ್ನು ಉಲ್ಲಂಘಿಸುವವರಿಗೆ ೫೦ ರೂ ಜುಲ್ಮಾನೆ, ಮತ್ತು ವಿರೋಧವಾಗಿ ವರ್ತಿಸುವವರ ಒಂದು ಭಾಗದ ಮೀಸೆಯನ್ನು ತೆಗೆದುಹಾಕಲಾಗುವುದೆಂದು ತೀರ್ಮಾನಿಸಿದ್ದಾರೆ

ಶಾಂತಿ ಸಮ್ಮೇಳನದಲ್ಲಿ ಓಟಿಂಗ್ ಪ್ರಶ್ನೆ

ಶಾಂತಿ ಸಮ್ಮೇಳನದ ತೀರ್ಮಾನಗಳ ಸಾಮಾನ್ಯ ಬಹುಮತ, ಮೂರನೇ ಎರ... ಭಾಗದ ಬಹುಮತ ಇವೆರಡನ್ನೂ ಅನು... ಸರಬೇಕೆಂಬ ಬ್ರಿಟಿಷ್ ಸಲಹೆಯನ್ನು ಶಾ... ಸಮ್ಮೇಳನದ ಕಾರ್ಯಕಾರಿ ಸಮಿತಿಯು ಅಂಗೀಕರಿಸಲಾಯಿತು. ಸಮ್ಮೇಳನದ ...ರದಿ ಪ್ರಕಟಣೆ ಬಗ್ಗೆ ರಷ್ಯ ಮತ್ತು ಅವೆ...ರಿಕಾ ಪ್ರತಿನಿಧಿಗಳಿಗೆ ಸಭೆಯಲ್ಲಿ ಬಿಸಿ ಬ... ಚರ್ಚೆ ಸಹ ನಡೆಯಿತು.

ನಿಧನ

ಮೈಸೂರು ರೈಲ್ವೆಯಲ್ಲಿ ಛೀಫ್ ಗಾರ್ಡ್ ಆಗಿದ್ದ ಶ್ರೀ|| ಎಂ. ಸಿ. ರಾಘವೇಂದ್ರರವರು ನೆನ್ನೆ ಸಂಜೆ ನಿಧನರಾದರೆಂದು ತಿಳಿಸ... ವಿಷಾದಿಸುತ್ತೇವೆ. ಮೃತರಿಗೆ ಪತ್ನಿಯು ಐದು ಜನ ಮಕ್ಕಳೂ ಇರುವರೆಂದು ...ತ್ತಾಗಿದೆ.

ಅಪೇರಾ ಟಾಕೀಸ್
10—8—46 ರಿಂದ
ಎರಡನೇ ವಾರ!
ಭಕ್ತಕಲಾತಿ
(ತಮಿಳು)
ಎನ್ ಎಸ್. ಕೃಷ್ಣನ್, ಟಿ. ಎ ಮಧುರಂ

Edited printed and published by A. R. Nagarajan at the Sadhvi Press D Subbiah Road Mysore

ಸಂಯುಕ್ತ ಕರ್ನಾಟಕ
ಕರ್ನಾಟಕದ ಅತ್ಯಂತ ದೊಡ್ಡ ಪತ್ರಿಕೆ
ಕೂಡಲೇ ಚಂದಾದಾರರಾಗಿರಿ.
ಕೆ. ಅನಂತಸುಬ್ಬರಾಯ
ಕರ್ನಾಟಕ ಮಂದಿರ, ಮೈಸೂರು

Rajkamal Talkies, Mysore
From Friday the 9th Aug 46
Daily Three Shows
SAMUEL GOLDWYN'S
"The Hurricane"
Featuring.—Dorothy Lamour, John Hall, Mary Astor, Aubrey Smith & a host of others
A moon-lit, fragrant South Sea Paradise for lovers in the grip of nature's greatest terror is the setting for the ... Story of a grim man-hunt.



ರಾಜ್ ಕಮಲ್ ಟಾಕೀಸ್, ಮೈಸೂರು
1946 ನೇ ಆಗಸ್ಟ್ 9 ನೇ ಶುಕ್ರವಾರದಿಂದ
ಪ್ರತಿ ದಿನ ಮೂರು ಆಟಗಳು
* ಬಿರುಗಾಳಿ *
ಎಂಬ ಸ್ಯಾಮ್ಯುಯಲ್ ಗೋಲ್ಡ್ ವಿನ್ ರವರ ಅತ್ಯದ್ಭುತವಾದ
ಚಲನಚಿತ್ರ
ಭೂಮಿಕೆ—ಡೊರೊಥಿ ಲಾಮೂರ್, ಮೇರಿ ಆಸ್ಟರ್,
ಜಾನ್ ಹಾಲ್ ಮುಂತಾದವರು.

ತಾ|| 10—8—46 ರಿಂದ ಅಮೋಘ ಪ್ರಾರಂಭ
ಮೋತಿಲಾಲ್ ಟಾಕೀಸಿನಲ್ಲಿ
"ಮುಗ್ಗುರು ಮರಾಟಿಲು"
(ತೆಲುಗು ಚಿತ್ರ)
THREE MARATEES
ಪ್ರತಿ ದಿನ ಮೂರು ಆಟಗಳು
—: ಭೂಮಿಕೆ :—
ಕನ್ನಾಂಬ, ಡಾ|| ಜಿ. ಪಿ. ಸುಬ್ಬರಾವ್, ಬಿ ರಾಜರತ್ನಂ
ನಾಗೇಶರಾವ್, ನಾರಾಯಣರಾವ್, ಶಿವರಾವ್
ಮುಂತಾದವರು
೯-೮-೪೬ ರಿಂದ ಬೆಂಗಳೂರು ಮೂವಿಲ್ಯಾಂಡಿನಲ್ಲಿ
ಅಮೋಘ ಮೂರನೇ ವಾರ
—: Released Through :—
SRI MAHAVEER FILM EXCHANGE
Asoka Road, ... Mysor
ವಿಜಯಾ ಏಜನ್ಸೀಸ್, ಮೈಸೂರು

ತಾ|| 11—8—46 ನೇ ಭಾನುವಾರ ಸಂಜೆ 4—30 ಕ್ಕೆ.
ಅಠಾರಾ ಕಛೇರಿ ಬಳಿ ಇರುವ ಮೈದಾನದಲ್ಲಿ

ಬೆಂಗಳೂರು ಮೈಸೂರಿಗೆ
ಕೋರಾಟಿರ್ ನಿಂತಿರುವ
ಪೈ|| ಸಣ್ಣ ಬೋರಯ್ಯ

ಬೆಂಗಳೂರು ಮೈಸೂರಿ
ಕೋರಾಟಿರ್ ನಿಂತಿರು
ಪೈ|| ಶ್ರೀಕಂಠಯ

ಪಂಜಾಬ್ ಪೈ|| ಧರ್ಮಸಿಂಗ್-ಕೊಲ್ಲಾಪುರ ಪೈ|| ರಾಮರಾ
ಪೈ|| ಅಮಂಸಾಬ್—ಪೈ|| ಸುಬಹಾಲ್
ಪೈ|| ಜವರಯ್ಯ - ನಂಜನಗೂಡು ಪೈ|| ಶಿವಯ್ಯ
ಇನ್ನೂ 10 ಜತೆ ಅಮೋಘವಾದ ಕುಸ್ತಿಗಳು 11 ನೇ ತಾ|| ತಪ್ಪದೆ ನಡೆಯುತ್ತವೆ
ವಿಜಯಾ ಏಜನ್ಸೀಸ್, ಮೈಸೂರು.

ಫೋ. ನಂ. 302 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶನಿವಾರ, ೧೦—೮—೪೬ [ಸಂಚಿಕೆ ೧೭

ಕಾಂಗ್ರೆಸ್ ತೀರ್ಮಾನಕ್ಕೆ ಲಂಡನ್ನಿನಲ್ಲಿ ಕಾತುರ

ಗಾಂಧಿ—ವೈಸರಾಯ್

ಭೇಟಿಯೇ ?

ಸದ್ಯದಲ್ಲೇ ಗಾಂಧಿ-ವೈಸರಾಯ್ ಭೇಟಿ ನಡೆದು ತಾತ್ಕಾಲಿಕ ಸರ್ಕಾರದ ರಚನೆ ಬಗ್ಗೆ ಲಾರ್ಡ್ ವೇವಲರು ಗಾಂಧೀಜಿಯ ಸಲಹೆ ಪಡೆಯುವರೆಂದು ವರ್ಧಾದಲ್ಲಿ ಬಲವಾದ ವದಂತಿ ಹಬ್ಬಿದೆ.

ಪಂ॥ ನೆಹರೂರವರಿಗೆ ವೈಸರಾಯರ ಪತ್ರ

ವೈಸರಾಯರು ಪಂ॥ ನೆಹರೂರವರಿಗೆ ಒಂದು ಪತ್ರವನ್ನು ಬರೆದು, ಅದನ್ನು ವರ್ಧಾ ಜಿಲ್ಲಾ ಮ್ಯಾಜಿಸ್ಟ್ರೇಟರ ಕೈಲಿ ಕಳಿಸಿದ್ದಾರೆ. ಇದು ನಿನ್ನೆ ನೆಹರೂರವರಿಗೆ ತಲುಪಿತು.

ಎಲ್ಲೆಲ್ಲೂ ಪ್ರವಾಹದ ಹಾವಳಿ

ಕಾಶಿಯಲ್ಲಿ ಗಂಗಾನದಿ ಎಂದಿಗಿಂತ ೪೭ ಅಡಿ ಎತ್ತರ ಉಕ್ಕೇರಿ ಬಂದಿದೆ. ನೀರು ಚಂದ್ರಶೂರ್ ದೇವಾಲಯಕ್ಕೆ ನುಗ್ಗಿ ಊರೇ ಕೊಚ್ಚಿ ಹೋಗುವಂತಾಗಿದೆ.

ತುಂಗಾನದಿಯು ಪ್ರವಾಹ ೨೪॥ ಅಡಿ ಮಟ್ಟ ಹರಿಯುತ್ತಿದೆ. ಕುಂಬಾರಗುಂಡಿ ಮತ್ತು ಸೀಗೆಕಟ್ಟೆ ಪೂರ್ಣವಾಗಿ ನೀರಿನಲ್ಲಿ ಮುಳುಗಿ ಹೋಗಿವೆ

ಡೆ॥ ಡೈರೆಕ್ಟರುಗಳ ನೇಮಕ

ಶಿಕ್ಷಣ ಇಲಾಖೆಯಲ್ಲಿ ಖಾಲಿ ಇರುವ ಎರಡು ಡೆ॥ ಡೈರೆಕ್ಟರುಗಳ ಸ್ಥಾನಗಳಿಗೆ ಪ್ರೀತಿಯ ರಾಜೀವಲೋಚನಂ ಮತ್ತು ಎಂ. ಎಸ್. ರಾಜಗೋಪಾಲರಾವ್‌ರವರನ್ನು ನೇಮಕಮಾಡಲಾಗಿದೆಯೆಂದು ಗೊತ್ತಾಗಿದೆ

" ನೇತಾಜಿ ಸುಭಾಸ್‌ಚಂದ್ರ ಬೋಸರ ಫಾರ್ವರ್ಡ್ ಬ್ಲಾಕಿನ ಮೇಲಿದ್ದ ಪ್ರತಿಬಂಧಕಾಜ್ಞೆಯನ್ನು ಇಂಡಿಯಾ ಸರ್ಕಾರವು ತೆಗೆದಿದೆ.

ಸಂತಾಪ ಸೂಚಕ ಸಭೆ

ಶ್ರೀ ರಂಭಾಪುರೀ ಸ್ವಾಮಿಗಳು ಶಿವೈಕ್ಯರಾದುದರಿಂದ ವಾಣೀವಿಲಾಸ ರಸ್ತೆಯಲ್ಲಿರುವ ಶ್ರೀ ಸಿದ್ಧಲಿಂಗಯ್ಯನವರ ಸಂಸ್ಕೃತ ಪಾಠಶಾಲೆಯಲ್ಲಿ ಪಂಚಗವಿ ಮಠದ ಶ್ರೀ ಗೌರೀಶಂಕರ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ನಾಳೆ ಸಂಜೆ ೬ ಗಂಟೆಗೆ ಸಂತಾಪ ಪ್ರದರ್ಶಕ ಸಭೆ ನಡೆಯುವುದು. ಸರ್ವ ಸಾರ್ವಜನಿಕರಿಗೂ ಆಹ್ವಾನವಿದೆ.

ಬೆಳವಾಡಿಯ ಕಸ್ತೂರಿ ಬಾಯಿ ಶಿಬಿರ

ಮೈಸೂರು, ೧೦

ಮೈಸೂರಿಗೆ ಆರು ಮೈಲಿಯಲ್ಲಿ ಹುಣಸೂರು ರಸ್ತೆಯಲ್ಲಿ ಬೆಳವಾಡಿ ಗ್ರಾಮದಲ್ಲಿ ತೆರೆಯಲಾಗಿರುವ ಕಸ್ತೂರಿ ಬಾಯಿ ಶಿಬಿರದ ಆರಂಭೋತ್ಸವವನ್ನು ನೆರವೇರಿಸಲು ಶ್ರೀಮತಿ ಸುಚೇತಾ ಕೃಪಲಾನಿಯವರು ರಾಜಧಾನಿಗೆ ಈ ತಿಂಗಳು ೧೪ ನೇ ತಾರೀ ಬರುವರು. ಆ ದಿನ ಬೆಳಿಗ್ಗೆ ೯-೩೦ ಗಂಟೆಗೆ ಆರಂಭೋತ್ಸವವು ನಡೆಯುವುದು. ಸರ್ವರಿಗೂ ಆಹ್ವಾನವಿದೆ

ಶಿಬಿರದಲ್ಲಿ ಆಗಸ್ಟ್ ದಿನಾಚರಣೆ ಪ್ರಯುಕ್ತ ನಿನ್ನೆ ಬೆಳಿಗ್ಗೆ ಅಧ್ಯಾಪಕರಾದ ಶ್ರೀ॥ ಎಸ್. ನಂಜುಂಡಯ್ಯನವರು ಧ್ವಜಾರೋಹಣ ಮಾಡಿದರು. ಸಂಜೆ ಶ್ರೀ ಟಿ. ಸಿ. ವೆಂಕಟಪ್ಪನವರು ಇಂದಿನ ರಾಜಕೀಯ ಪರಿಸ್ಥಿತಿಯನ್ನು ಕುರಿತು ಭಾಷಣ ಮಾಡಿದರು

ಹರಿಕಥೆ

ಹೊರಸಂತೆಪೇಟೆ ಶ್ರೀ ಡಿ. ಕೃಷ್ಣಯ್ಯನವರ ಮನೆಯಲ್ಲಿ ನಾಳೆ ಸಂಜೆ ೭ ಗಂಟೆಗೆ ಶ್ರೀ ಲಕ್ಷ್ಮೀಪತಿ ಸೂರದಾಸರ "ಸುದಾಮ" ಎಂಬ ಕಥೆ ನಡೆಯುವುದು.

ವಿದ್ಯಾರ್ಥಿಗಳ ಮೇಲೆ ಗ್ಯಾಸ್ ಪ್ರಯೋಗ

ಆಗಸ್ಟ್ ೯ ರ ದಿನಾಚರಣೆ ಸಂಬಂಧದಲ್ಲಿ ದೆಹಲಿಯಲ್ಲಿ ಪೋಲೀಸರಿಗೂ ವಿದ್ಯಾರ್ಥಿಗಳಿಗೂ ಘರ್ಷಣೆ ಆಗಿ, ವಿದ್ಯಾರ್ಥಿಗಳ ಮೆರವಣಿಗೆ ಮೇಲೆ ಟಿಯರ್ ಗ್ಯಾಸ್ ಉಪಯೋಗಿಸಲಾಯಿತೆಂದು ಸುದ್ದಿಬಂದಿದೆ ೨೭ ಮಂದಿ ಯುವಕರ ದಸ್ತಗಿರಿ ಆಗಿದೆ

ಅರಬ್ಬರಿಗೆ ರಷ್ಯದ ಸಹಾಯ

ಪ್ಯಾಲಸ್ಟೈನ್ ವಿಭಜನೆಯನ್ನು ವಿರೋಧಿಸಿ ಅರಬ್ಬರು ರಷ್ಯದ ಸಹಾಯ ಪಡೆಯಲು ಮಾಸ್ಕೋವಿಗೆ ಒಂದು ನಿಯೋಗವನ್ನು ಕಳಿಸಲಿದ್ದಾರೆ.

ಕನ್ನಂಬಾಡಿ ಕಟ್ಟೆ

ಈ ಕಟ್ಟೆಯಲ್ಲಿ ಈ ದಿನ ಮಧ್ಯಾಹ್ನ ೧೨-೩೦ ಅಡಿ ನೀರು ಇತ್ತೆಂದು ವರದಿಯಾಗಿದೆ

ಸಂಯುಕ್ತ ಕರ್ನಾಟಕ

ಕರ್ನಾಟಕದ ಅತ್ಯಂತ ದೊಡ್ಡ ಪತ್ರಿಕೆ

ಕೂಡಲೇ ಚಂದಾದಾರರಾಗಿರಿ.

ಕೆ. ಅನಂತಸುಬ್ಬರಾಯ

ಕರ್ನಾಟಕ ಮಂದಿರ, ಮೈಸೂರು

ತಾ॥ 10—8—46 ರಿಂದ ಅಪೂರ್ವ ಪ್ರಾರಂಭ

ಮೋತಿಲಾಲ್ ಟಾಕೀಸಿನಲ್ಲಿ

"ಮುಗ್ಗುರು ಮರಾಟೀಲು"

(ತೆಲುಗು ಚಿತ್ರ)

THREE MARATEES

ಪ್ರತಿ ದಿನ ಮೂರು ಆಟಗಳು

—:ಭೂಮಿಕೆ:—

ಸ್ನಾಂಬ, ಡಾ॥ ಜಿ. ವಿ. ಸುಬ್ಬರಾವ್, ಬಿ. ರಾಜರತ್ನಂ, ನಾಗೇಶರಾವ್, ನಾರಾಯಣರಾವ್, ಶಿವರಾವ್ ಮುಂತಾದವರು

೯-೮-೪೬ ರಿಂದ ಬೆಂಗಳೂರು ಮೂವಿಲ್ಯಾಂಡಿನಲ್ಲಿ ಅಪೂರ್ವ ಮೂರನೇ ವಾರ

—. Released Through :—

SRI MAHAVEER FILM EXCHANGE

...ka Road, ... Mysore

ಮಾ ಏಜನ್ಸೀಸ್, ಮೈಸೂರು

ರಣಜಿತ್

11—8—46 ರಿಂದ

ಶಂಕರ ಪಾರ್ವತಿ

(ಹಿಂದಿ)

—:ಪಾತ್ರ:—

ಸಾಧನ ಬೋಸ್, ಅರುಣಾ

ಪ್ರತಿ ದಿನ ಮೂರು ಆಟಗಳು

NOTICE

Applications are invited for agencies for sale of milk & butter from The City Milk supply at fixed hours for each Mohalla in Mysore City from business houses to work on commission. Applications will be dealt with ... Proprietor ... 10th ... 1946

M. V. Krishna Swami

ಕಾಂಗ್ರೆಸ್ ನಿರ್ಧಾರದ ಬಗ್ಗೆ ಲಂಡನ್ನಿನಲ್ಲಿ ಕಾತುರ

ವರ್ಧಾದಲ್ಲಿ ಸೇರಿರುವ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ನಿರ್ಧಾರದ ಬಗ್ಗೆ ಲಂಡನ್ನಿನ ರಾಜಕೀಯ ವ್ಯಕ್ತಿಗಳಲ್ಲಿ ಕುತೂಹಲ ಹುಟ್ಟಿದೆ. ತಾತ್ಕಾಲಿಕ ಸರ್ಕಾರದ ರಚನೆ ಬಗ್ಗೆ ವೈಸರಾಯರು ನಿನ್ನೆ ಪಂ॥ ನೆಹರುರವರ ಸಂಗಡ ಟೆಲಿಫೋನಿನಲ್ಲಿ ಸಂಭಾಷಣೆ ನಡೆಸಿದರು. ಇದರ ಪರಿಣಾಮವಾಗಿ ಕಾಂಗ್ರೆಸ್ಸು ತಾತ್ಕಾಲಿಕ ಸರ್ಕಾರದ ಬಗ್ಗೆ ತನ್ನ ಬಿಟ್ಟುಕೊಟ್ಟು ರಾಷ್ಟ್ರೀಯ ಮುಸಲ್ಮಾನರನ್ನು ಹೊರ ಸರ್ಕಾರದಲ್ಲಿ ಸೇರಿಸಿಕೊಂಡು ಕೆಲಸಮಾಡಲು ತೊಡಗುವುದಾದರೆ, ವೈಸರಾಯರು ಮುಂದುವರಿದು ಸರ್ಕಾರ ಕೂಡಲೇ ಅಂತಹ ಸರ್ಕಾರವನ್ನು ರಚಿಸಲು ಬೇಕಾದ ಅಧಿಕಾರಗಳನ್ನು ಅವರಿಗೆ ಬ್ರಿಟಿಷ್ ಮಂತ್ರಿಮಂಡಲ ಕೊಡುವುದೆಂದು ಲಂಡನ್ನಿನಿಂದ ವಾರ್ತೆ ಬಂದಿದೆ.

ಜಮೀನ್ದಾರಿ ಪದ್ಧತಿ ವಜಾ

ಸಂಯುಕ್ತ ಪ್ರಾಂತ್ಯದ ಜಮೀನ್ದಾರಿ ಪದ್ಧತಿಯನ್ನು ವಜಾ ಮಾಡತಕ್ಕದ್ದೆಂದು ಅಲ್ಲಿನ ಸಭೆಯಲ್ಲಿ ತೀರ್ಮಾನಿಸಲಾಯಿತು. ಬಂಡವಾಳಗಾರಿಕೆಯನ್ನು ರಾಷ್ಟ್ರದ ಹತೋಟಿಗೆ ಒಳಪಡಿಸಿಕೊಳ್ಳುವ ಶಾಸನವು ಮುಂದಿನ ಸಭೆಯ ಮುಂದೆ ಬರುವುದು.

ಮೋಟಾರು ಢಿಕ್ಕಿ

ಗಡಿಯಾರಗೋಪುರದ ಬಳಿ ಬೈಸಿಕಲ್ ಮೇಲೆ ಬರುತ್ತಿದ್ದ ಒಬ್ಬ ಮುಸಲ್ಮಾನ ತರುಣನಿಗೆ ಅತ್ತಲಾಗಿ ಹೋಗುತ್ತಿದ್ದ ಮೋಟಾರೊಂದು ಈ ಮಧ್ಯಾಹ್ನ ಢಿಕ್ಕಿ ಹೊಡೆದು ಅತನು ಕೆಳಗೆ ಬಿದ್ದು ಗಾಯಗೊಂಡನೆಂದೂ ಅತನನ್ನು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸಾಗಿಸಲಾಯಿತೆಂದೂ ತಿಳಿದುಬಂದಿದೆ

ಮೈಸೂರು ಸಿಟಿ ರೇಷನಿಂಗ್

ನೋಟಿಫಿಕೇಷನ್ ನಂಬರ್

R 1 160 15-16

೧೧-೮-೪೬ ನೇ ಆಗಸ್ಟ್ ಮಾಹೆ ೧೫ ನೇ ತಾರೀಖು ಸೋಮವಾರ ಬೆಳಿಗ್ಗೆ "ಉಪವಾಸ ಕರ್ಮದ ಪ್ರಯುಕ್ತ" ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ, ಮೊಹಲ್ಲಾ ಸಬ್ ಗೋಡೌನ್ ಮತ್ತು ಇತರ ರೇಷನ್ ಡಿಪೋಗಳಿಗೆ ರಜಾ ಕೊಡಲ್ಪಟ್ಟಿರುತ್ತದೆ

(ಸಹಿ) ಅಬ್ದುಲ್ ರಜಾಕ್

ರೇಷನಿಂಗ್ ಆಫೀಸರ್

ಮೈಸೂರು ... ಮೈಸೂರು ಸಿಟಿ

೭-೮-೪೬

ಶ್ರೀರಂಗಪಟ್ಟಣದ ಶ್ರೀ ರಂಗನಾಯಕಿ ಸ್ತ್ರೀ ಸಮಾಜದ ಸಹಾಯಾರ್ಥವಾಗಿ

ಶ್ರೀಯುತ

ಆರ್. ರಾಮಚಂದ್ರರಾವ್ ಘಾಂಘೋರೆ ಬಿ. ಎ. ರವರ ಅಧ್ಯಕ್ಷತೆಯಲ್ಲಿ

ಅಪೂರ್ವ ನರ್ತನ.

ಉದಯ ಗುಪ್ತ ಮತ್ತು ಪಾರ್ಟಿ ಯವರಿಂದ

ಮೈಸೂರು ಟೌನ್ ಹಾಲಿನಲ್ಲಿ

೧೨-೮-೪೬ ನೇ ಸೋಮವಾರ

ಸಂಜೆ ೬-೩೦ ಕ್ಕೆ

ಪ್ರವೇಶ ದರ

ರೂ 10, 5, 3, 2 ಮತ್ತು 1

... ಕೋರಿದೆ.

... ... ಗಂಗಮ್ಮ

ಸಾಧ್ವಿ

ತಾ|| ೧೦-೮-೪೬ ಶನಿವಾರ

ಮೈಸೂರಿನಲ್ಲಿ ಸುಧಾರಣೆ

ಸಧ್ಯದಲ್ಲೇ ನಮ್ಮ ಸಂಸ್ಥಾನದಲ್ಲಿ ರಾಜಕೀಯ ಸುಧಾರಣೆಗಳು ಆಗಲಿವೆಯೆಂದು ವರದಿಯಾಗಿದೆ ಆದರೆ ಆ ಸುಧಾರಣೆಯ ಚಿತ್ರವು ಮಾತ್ರ ಅಷ್ಟು ಸಮರ್ಪಕವಾಗಿ ಕಾಣುವುದಿಲ್ಲ ಪ್ರಜಾ ಪ್ರತಿನಿಧಿ ಸಭೆಗೆ ಸಧ್ಯದಲ್ಲಿ ಖಾಸಗೀ ನಾಮಕರಣದ ಅಧ್ಯಕ್ಷರನ್ನು ಕೊಡುವುದು, ಶಾಸನ ಸಭೆಗಳಿಂದ ಚುನಾಯಿತ ಮಂತ್ರಿಗಳನ್ನು ತೆಗೆದುಕೊಳ್ಳಲು ರಾಜ್ಯಾಂಗದಲ್ಲಿ ಏರ್ಪಾಟು ಮಾಡುವುದು; ಈ ಬಗ್ಗೆ ಸಲಹೆ ಕೊಡಲು ಒಂದು ಸಮಿತಿಯನ್ನು ನೇಮಿಸುವುದು-ಇವೇ ಈ ವರದಿಯ ಸಾರಾಂಶ

ಸಣ್ಣ ಪುಟ್ಟ ಸಂಸ್ಥಾನಗಳೆಲ್ಲವೂ ಪ್ರಜೆಗಳಿಗೆ ಅಧಿಕಾರವನ್ನು ವಹಿಸುವ ಮಾರ್ಗದಲ್ಲಿ ಮುಂದಡಿ ಇಡುತ್ತಿವೆ. ಮೈಸೂರು ಇನ್ನೂ ಸಮಿತಿಗಳನ್ನು ನೇಮಿಸುತ್ತ ಕುಳಿತುಕೊಳ್ಳುವುದು ಸರಿಯಲ್ಲ. ಹಳೆಯ ರಾಜ್ಯಾಂಗದಂತೆ ಪ್ರಜೆಗಳಿಗೆ ಇರುವ ಪೂರ್ಣ ಅಧಿಕಾರವನ್ನು ಕೂಡಲೇ ಅವರಿಗೆ ವರ್ಗಾಯಿಸಬೇಕು, ಹೊಸ ವ್ಯವಸ್ಥೆಯ ಬಗ್ಗೆ ಸಮಿತಿಗಳ ನೇಮಕದ ಬದಲು ಪ್ರಭುಗಳೇ ವಿಶೇಷ ಘೋಷಣೆಯನ್ನು ಹೊರಡಿಸಿ ಪ್ರಜಾಪ್ರಭುತ್ವ ಪದ್ಧತಿಗೆ ದಾರಿ ತೋರಬೇಕು

University of Mysore

NOTIFICATION

No. G 4—1393/45-46 Dated the 16th July 1946

It is hereby notified that the Twenty-eighth Annual Convocation of the University of Mysore for conferring degrees will be held in the Jaganmohan Palace, Mysore, on Saturday the 12 th October 1946 at 9 A.M.

The following rules are published for the guidance of candidates eligible for degrees:—

1. Candidates who have been declared to be eligible for any of the degrees of the Mysore University may receive their respective degrees in Person or in Absentia at a Convocation to be held after such declaration.

2. Candidates who wish to take the degree at the Convocation to be held on 12 th October 1946 must send in their application in the form A or B appended hereto to the Registrar, University of Mysore, Mysore, so as to reach him on or before 11th September 1946. Copies of these forms may be obtained from the Head of the College in which the Candidate studied last for the degree Examination.

3. A candidate who wishes to take the degree in Absentia may apply in the prescribed form B so as to reach the Registrar, University of Mysore, Mysore, on or before 11th September 1946 on payment of a fee of Rs. 10.

4. A candidate who having applied under rule 2 above fails to appear at the Convocation, may take the degree in Person or in Absentia at a subsequent Convocation. If he wishes to take the degree in person he must pay a fee of Rs. 5. If he wishes take the degree in absentia he must not only pay Rs 5, the fee prescribed in this rule, but also Rs 10 the fee prescribed in rule 3 above.

5. The prescribed fee or fees may be remitted to the Registrar, University of Mysore, along with the application or be paid into a Mysore Government Treasury and the treasury receipt attached to the application.

6. A woman candidate for degree who is precluded by custom from appearing in public may, by order of the University Council, be permitted to the degree in absentia without payment of any fee, provided that she applies to the Registrar in the prescribed form B so as to reach him on or before 11th September 1946.

7. The application of a candidate for the B. E. degree Examination in Person or in Absentia should be accompanied by a certificate from the Principal stating that he has completed the prescribed practical training satisfactorily.

8. Specification regarding academic robes is enclosed.

By Order,
D. S. GORDON, Registrar

UNIVERSITY OF MYSORE.

No. Ex 2. 1329/45-46, Office of the University of Mysore.
Mysore, Dated 3rd August 1946.

Intermediate Examination in Arts, Science and Commerce, and B.A., B.Sc., and Honours preliminary Examinations September 1946.

In modification of this office Notification No. Ex 2 1329/45-46 dated 14th June 1946, published on page 377 in Part II of the Mysore Gazette dated 20th June 1946, regarding the date of University Examinations in September 1946, it is hereby Notified that the above examinations will commence on 12th September 1946 instead of on 2nd September 1946, as already notified.

The revised detailed time-tables will be published in due course.

By Order,
D. S. Gordon
Registrar

Rajkamal Talkies, Mysore

From Friday the 9th Aug 46

Daily Three Shows

SAMUEL GOLDWYN'S

"The Hurricane"

Featuring:—Dorothy Lamour, John Hall, Mary Astor, Aubrey Smith & a host of others

A moon-lit, fragrant South Sea Paradise for lovers in the grip of nature's greatest terror is the s ing for the Story of a grim man-hunt

ರಾಜ್ ಕಮಲ್ ಟಾಕೀಸ್, ಮೈಸೂರು

1946 ನೇ ಆಗಸ್ಟ 9 ನೇ ಶುಕ್ರವಾರದಿಂದ
ಪ್ರತಿದಿನ ಮೂರು ಆಟಗಳು

★ ಬಿರುಗಾಳಿ ★

ಎಂಬ ಸ್ಯಾಮ್ಯುಎಲ್ ಗೋಲ್ಡ್‌ವಿನ್ ರವರ ಅತ್ಯದ್ಭುತವಾದ ಚಲನಚಿತ್ರ

ಭೂಮಿಕೆ:— ಡೊರೋತಿ ಲಾಮರ್, ಮೇರಿ ಆಸ್ಟರ್, ಜಾನ್ ಹಾಲ್ ಮುಂತಾದವರು

Edited printed and published by A. P. Nagarajan at the Sadhvi Press D Subbiah Road, Mysore

ರೆ॥ ನಂ 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು



ಸಂಪುಟ ೫] ಭಾನುವಾರ ೧೧—೮—೪೬ [ಸಂಚಿಕೆ ೧೭

೧೯೯೯ ರ ಕೊನೆಯಲ್ಲಿ ಮೂರನೆ ವಿಶ್ವಸಂಗ್ರಾಮ

೧೯೯೯ ರ ಕೊನೆಯಲ್ಲಿ ತೃತೀಯ ಮಹಾ ಯುದ್ಧ ?

ತ್ರಿಕಾಲ ಜ್ಞಾನಿಗಳ ಭವಿಷ್ಯ

ಪ್ರಪಂಚದ ೩ ನೇ ಮಹಾ ಸಂಗ್ರಾಮವು ೧೯೯೯ ನೇ ವರ್ಷದ ಉತ್ತರಾರ್ಧದಲ್ಲಿ ಪ್ರಾರಂಭವಾಗಿ ೧೯೫೩ ನೇ ಮಾರ್ಚಿ ಅಥವಾ ಮೇ ತಿಂಗಳವರೆಗೆ ನಡೆಯುವುದು ; ಈ ಯುದ್ಧದ ನಂತರ ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯ ದೊರೆಯುವುದು. ಇದಾದ ನಂತರ ಅನೇಕ ವರ್ಷಗಳವರೆಗೆ ಯುದ್ಧ ಸಂಭವಿಸುವುದೇ ಇಲ್ಲ-ಎಂದು ಪೂನಾದ ಶ್ರೀ ಎಂ. ವಿ. ಮುಸ್ಕರವರು ಭವಿಷ್ಯ ನುಡಿದಿದ್ದಾರೆ. ಶ್ರೀ ಮುಸ್ಕರವರು ಒಂದು ವಿಮಾ ಕಂಪೆನಿಯಲ್ಲಿದ್ದಾರೆ. ಇವರು ತಮ್ಮ ೧೨ ನೇ ವಯಸ್ಸಿನಲ್ಲಿಯೇ ಅಂತಃ ಶಕ್ತಿಯನ್ನು ಬೆಳೆಸಿಕೊಳ್ಳಲು ಆರಂಭಿಸಿ, ಅಭ್ಯಾಸ ಬಲದಿಂದ ಈಗ ತ್ರಿಕಾಲ ಜ್ಞಾನಿಗಳಾಗಿದ್ದಾರೆ. ವಿಷಯ ವನ್ನು ಯೋಚಿಸಲು ಆರಂಭಿಸಿದರೆ ಇವರ ದೇಹಕ್ಕೆ ನಡುಕ ಹುಟ್ಟುವುದು. ಆಗ ಭವಿಷ್ಯ ನುಡಿಯುವರು. ಇದುವರೆಗಿನ ಇವರ ಸೂಚನೆಯೆಲ್ಲವೂ ನಿಜವಾಗಿದೆಯೆಂದು ಹೇಳಲಾಗಿದೆ.

ಉಪಾಕರ್ಮಗಳು

" ಸಾಧ್ವಿ " ಕಛೇರಿಯಲ್ಲಿ ನಾಳೆ ಬೆಳಗ್ಗೆ ೭ ಗಂಟೆಗೆ ಸರಿಯಾಗಿ ವೇದರತ್ನಂ ಕೆ. ವೆಂಕಟರಾಮಾವಧಾನಿಗಳಿಂದ ಯಜುರು ಪಾಕರ್ಮವು ನಡೆಸಲ್ಪಡುವುದು.

ಶ್ರೀ ಮನ್ಮಹಾರಾಜ ಸಂಸ್ಕೃತ ಪಾಠಶಾಲೆಯಲ್ಲಿ ನಾಳೆ ಬೆಳಗ್ಗೆ ೮ ಗಂಟೆಗೆ ಋಗುಪಾಕರ್ಮ ಮತ್ತು ಯಜುರುಪಾಕರ್ಮಗಳೂ, ಪದ್ಧತಿಯ ಪ್ರಕಾರ ಶುಕ್ರವಾರ ಬ್ರಾಹ್ಮಣರಿಗೆ ಪ್ರತ್ಯೇಕವಾಗಿ ನಡೆಯುವುದು. ಆಸ್ತಿಕ ಮಹಾಶಯರೆಲ್ಲರೂ ದಯಮಾಡಿಸಬೇಕಾಗಿ ಪ್ರಾರ್ಥಿಸಲಾಗಿದೆ.

ವಿದ್ಯಾರ್ಥಿ ಕಾಂಗ್ರೆಸ್

ಸನ್ನಿಧಿನ ಫಿಲೋಮಿನ ಕಾಲೇಜು ಆವರಣದಲ್ಲಿ ಸೇರಿದ್ದ ವಿದ್ಯಾರ್ಥಿಗಳ ಸಭೆಯಲ್ಲಿ ' ಸೆಂಟ್ ಫಿಲೋಮಿನಾ ಕಾಲೇಜು ವಿದ್ಯಾರ್ಥಿ ಕಾಂಗ್ರೆಸ್ " ಶಾಖೆಯನ್ನು ಸ್ಥಾಪಿಸಲಾಯಿತು. ಸಂಸ್ಥೆಯ ಕಾರ್ಯನಿರ್ವಹಣೆಗಾಗಿ ಶ್ರೀಗಳಾದ ರಾಮಚಂದ್ರನ್ ಮತ್ತು ಬುಕು ಮಾರ ಶಾಸ್ತ್ರಿಗಳವರ ಸಂಚಾಲಕತ್ವದಲ್ಲಿ ತಾತ್ಕಾಲಿಕ ಸಮಿತಿಯೊಂದನ್ನು ಏರ್ಪಡಿಸಲಾಯಿತು.

ಉಪನ್ಯಾಸ

ಇದೇ ೧೩ ನೇ ತಾರೀಕು ಮಂಗಳವಾರ ಸಂಜೆ ೭ ಗಂಟೆಗೆ ಸಂಸ್ಕೃತ ಪಾಠಶಾಲೆಯಲ್ಲಿ ಅ॥ ವಿ॥ ವೇ॥ ಎಲ್. ವಿದ್ವಾಂಸರುಗಳು " ಜೀವಿತ್ವವು ಸ್ವಾಭಾವಿಕವೋ ಆಗಂತುಕವೋ " ಎಂಬ ವಿಷಯದಲ್ಲಿ ಉಪನ್ಯಾಸ ಮಾಡುವರು.

ಭೂಮಿ ಗುಂಡಾಗಿಲ್ಲ ?

ಭೂಮಿಯು ಗುಂಡಾಗಿಲ್ಲ; ಸಮಭಾಜಕ ವೃತ್ತ ನೀಳವಾಗಿ [illegible] ಒಂದು ವೃತ್ತವಲ್ಲ ಮತ್ತು ಭೂಮಿಯು ನಾವು ಊಹಿಸಿರುವುದಕ್ಕಿಂತ ತೆಳು ಸ್ವಲ್ಪ ಮಟ್ಟ ಗಳಷ್ಟು ದೊಡ್ಡದಾಗಿದೆ-ಎಂದು ಅಮೆರಿಕಾ, ರಷ್ಯ ಮತ್ತು ಇತರ ದೇಶಗಳ ವೈಜ್ಞಾನಿಕರ ಪರಿಶೋಧನೆಗಳನ್ನು [illegible] ವಿಜ್ಞಾನಿಗಳು [illegible] ತಿಳಿಸಿದ್ದಾರೆ.

ದಿವಾನರ ಅಪ್ತ ಕಾರ್ಯದರ್ಶಿ

ಸ್ಟಾಂ ಸ್ಸ್] ಬೆಂಗಳೂರು ೧೧

ದಿವಾನರ ಆಪ್ತ ಕಾರ್ಯದರ್ಶಿಗಳಾಗಿ ಸರ್ ರಾಮಸ್ವಾಮಿ ಮೊದಲಿಯಾರ್ ರವರ ಮುಖ್ಯಸ್ಥರು ಶ್ರೀ ಕೃಷ್ಣಸ್ವಾಮಿ ಎಲ್. ಎಲ್. ಬಿ. ಇವರನ್ನು ನೇಮಿಸಲು ಉದ್ದೇಶಿಸಿರುವುದಾಗಿ ಸಂಬಂಧಪಟ್ಟ ಕಡೆಗಳಲ್ಲಿ ಹೇಳಲಾಗುತ್ತಿದೆ.

ಫೆಡರಲ್ ಚೀಫ್ ಜಸ್ಟಿಸರ ಆಗಮನ

ಭಾರತದ ಫೆಡರಲ್ ಕೋರ್ಟಿನ ಚೀಫ್ ಜಸ್ಟಿಸ್ ರಾದ ಸರ್ ಪ್ಯಾಟ್ರಿಕ್ ಸ್ಪೆನ್ಸ್ ರವರು ನಿನ್ನೆ ಬೆಳಗ್ಗೆ ಮದ್ರಾಸಿನಿಂದ ಆಗಮಿಸಿದರು. ರೈಲ್ವೆ ನಿಲ್ದಾಣದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಅವರನ್ನು ಎದುರುಗೊಂಡರು. ಇಲ್ಲಿ ಅವರು ೩ ದಿನಗಳಿದ್ದು ನಂತರ ರಾಜಧಾನಿಗೆ ಪ್ರಯಾಣ ಮಾಡುವರು.

ದಿವಾನರ ಕಛೇರಿಯ [illegible] ಟರು ಶ್ರೀ ಸುಬ್ರಹ್ಮಣ್ಯನ್ ರವರು ಸಮ್ಮದ ಲ್ಲೀ ಸರ್ವಿಸ್ಸಿನಿಂದ ನಿವೃತ್ತರಾಗುವರು.

ಚೀಫ್ ಸೆಕ್ರೆಟರಿ ಕಛೇರಿಯ ಅಸಿಸ್ಟೆಂಟಾದ ಶ್ರೀ ಕೆ. ಜಿ ರಾಮಯ್ಯನವರಿಗೆ ಇದೇ ಸೆಪ್ಟೆಂಬರ್ ೧ ನೇ ತಾ॥ ನಿಂದ ಒಂದು ವರ್ಷ ಬಡ್ತಿ ಕೊಡಲಾಗಿದೆಯೆಂದು ತಿಳಿದುಬಂದಿದೆ.

ಜಯಂತ್ಯುತ್ಸವಗಳು

ಸಂಸ್ಕೃತ ಮಹಾಪಾಠಶಾಲೆಯ ಶ್ರೀ ಹಯವದನ ಸೇವಾ ಸಂಘದಾಶ್ರಯದಲ್ಲಿ ಇದೇ ೧೩ ನೇ ತಾ॥ ಸೋಮವಾರ ಮಧ್ಯಾಹ್ನ ೪ ಘಂಟೆಗೆ ಹರಿಸೇವೆಯೊಡನೆ ಶ್ರೀ ಹಯಗ್ರೀವ ಜಯಂತಿ ಉತ್ಸವವು ಜರುಗುವುದು.

ವೈಷ್ಣವ ಆಗಮ ಸಂಘದ ಆಶ್ರಯದಲ್ಲಿ ಶ್ರೀ ವಿಖನಸಾಚಾರ್ಯರ ಜಯಂತಿ ಉತ್ಸವವು ೧೫ ನೇ ತಾ॥ ಸೋಮವಾರ ನಡೆಯುವುದು. ಈ ಸಂದರ್ಭದಲ್ಲಿ ಗಾನ ವಿಶಾರದ ಶ್ರೀ [illegible] ಅಯ್ಯಂಗಾರ್ ರವರ ಹರಿಕಥೆ ಮತ್ತು [illegible] ಮಹಾರುದ್ರ [illegible] ಸನ್ಮಾನ [illegible] ಸಂಜೆ [illegible] ರವರ [illegible] ೧೫ ನೇ [illegible] ಘಂಟೆಗೆ [illegible] ಗೋಷ್ಠಿ [illegible] ರಿಂದ ಗೋಷ್ಠಿ [illegible] ಸವು.

ಮುಖ್ಯ ಕಾರ್ಯದ ಪ್ರಯುಕ್ತ ನಾಳೆ " ಸಾಧ್ವಿ " ಪತ್ರಿಕೆಗೆ ರಜಾ ಕೊಡಲ್ಪಟ್ಟಿದೆ.

—ವ್ಯವಸ್ಥಾಪಕ

ಆಗಸ್ಟ್ ದಿನಾಚರಣೆ

ಮೈಸೂರು ೧೧

ಶ್ರೀ ಸರಸ್ವತಿ ವಿದ್ಯಾರ್ಥಿ ನಿಲಯದ ಸಂಘದವರು ನಿನ್ನೆ ಆಗಸ್ಟ್ ದಿನಾಚರಣೆಯನ್ನು ನಡೆಸಿದರು. ಬೆಳಗ್ಗೆ ೮ ಘಂಟೆಗೆ ಮೈಸೂರು ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷ ಶ್ರೀ ಟಿ ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು. ಶ್ರೀ ಡಿ ಎಂ. ಸಿದ್ದಯ್ಯನವರು ೧೯೪೨ ನೇ ಸಂಗ್ರಾಮದಲ್ಲಿ ವಿದ್ಯಾರ್ಥಿಗಳು ವಹಿಸಿದ ಮುಖ್ಯ ಪಾತ್ರವನ್ನು ವಿವರಿಸಿದರು. ಅಧ್ಯಕ್ಷರು ಆಗಸ್ಟ್ ದಿನಾಚರಣೆಯ ಔಚಿತ್ಯದ ಮೇಲೆ ಭಾಷಣ ಮಾಡಿದರು. ಸಾಯಂಕಾಲ ಶ್ರೀ ಮತಿ ಕೆ. ಗಂಗಾಬಾಯಿ ಇವರ ಅಧ್ಯಕ್ಷತೆಯಲ್ಲಿ ಶ್ರೀ ಶಾಂತಿಕುಮಾರ್ ರವರು ರಾಜಕೀಯದಲ್ಲಿ ವಿದ್ಯಾರ್ಥಿಗಳ ಪಾತ್ರ ಮತ್ತು ವಿದ್ಯಾರ್ಥಿಗಳ ಕರ್ತವ್ಯ ಎಂಬ ವಿಷಯದ ಮೇಲೆ ಭಾಷಣ ಮಾಡಿದರು. ಅನೇಕರು ಸಂವಾದದಲ್ಲಿ ಭಾಗ ವಹಿಸಿದ್ದರು.

ಸಂಸ್ಕೃತ ವಿದ್ಯಾಲಯದಲ್ಲಿ ಶ್ರೀ ಎಸ್. ನಾರಾಯಣರಾಯರ ಅಧ್ಯಕ್ಷತೆಯಲ್ಲೂ, ಬೀಗಿನಕಟ್ಟೆಯಲ್ಲಿ ಶ್ರೀ ಎಲ್. ಎಸ್. ಶಾಸ್ತ್ರಿಯವರ ಅಧ್ಯಕ್ಷತೆಯಲ್ಲೂ ಆಗಸ್ಟ್ ದಿನಾಚರಣೆ ನಡೆಯಿತು.

ಗಾಂಧಿ ಸೇವಾ ಸಂಘದಲ್ಲಿ ಶ್ರೀ ಪಿ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಧ್ವಜಾರೋಹಣ ನೆರವೇರಿತು ನೂಲುವುದು, ಮತ್ತು ನೂಲುವ ಸ್ಪರ್ಧೆ ಏರ್ಪಡಿಸಿದ್ದರು. ನಿನ್ನೆ ಶ್ರೀ ಟಿ ಸಿದ್ಧಲಿಂಗಯ್ಯನವರು ಸಂಘಕ್ಕೆ ಭೇಟಿ ಇತ್ತಿದ್ದರು.

ಹರಿಕಥೆ

ಪ್ರಾದೇಶಿಕ ವಾರ್ಷಿಕೋತ್ಸವದ ಪ್ರಯುಕ್ತ ನಾಳೆ ರಾತ್ರಿ " ಸಾಧ್ವಿ " ಕಛೇರಿಯ ಮೇಲೆ ಶ್ರೀ ಬಿ. ಎಸ್. ಕೃಷ್ಣರಾವ ರವರಿಂದ " ಚಕ್ರದಾರ [illegible] " ಎಂಬ ಹರಿಕಥೆ [illegible] ಏರ್ಪಡಿಸಲಾಗಿದೆ.

ಸ್ವಾತಂತ್ರ್ಯ ಪ್ರತಿಜ್ಞೆಯ ಪಠನ

[illegible]

ನವೆಂಬರ್ ತಿಂಗಳಲ್ಲಿ ಕಾಂಗ್ರೆಸ್ ಅಧಿವೇಶನ

ಅಖಿಲ ಭಾರತ ಕಾಂಗ್ರೆಸ್ಸಿನ ಮುಂದಿನ ಮಹಾಧಿವೇಶನವನ್ನು ನವೆಂಬರ್ ತಿಂಗಳಲ್ಲಿ ಸಂಯುಕ್ತ ಪ್ರಾಂತ್ಯದಲ್ಲಿ ನಡೆಸಬೇಕೆಂದು ವರ್ಕಿಂಗ್ ಕಮಿಟಿ ತೀರ್ಮಾನಿಸಿದೆ.

ರೇಷನ್ ಕಡಿಮೆಯಾಗುವುದಿಲ್ಲ

ಆಹಾರದ ರೇಷನಿಂಗ್ ಪ್ರಮಾಣವನ್ನು ಕಡಿಮೆ ಮಾಡಕೂಡದೆಂದು ದೆಹಲಿಯಲ್ಲಿ ಸೇರಿದ್ದ ಅಖಿಲ ಭಾರತ ಆಹಾರ ಮಂತ್ರಿಗಳ ಸಮ್ಮೇಳನದಲ್ಲಿ ತೀರ್ಮಾನಿಸಲಾಗಿದೆ.

ಮುಂದಿನ ವರ್ಷದೊಳಗೇ ಸ್ವಾತಂತ್ರ್ಯ ಲಭಿಸುವುದು

[illegible] ವರ್ಷಗಳಿಂದ ಬಯಸುತ್ತಿದ್ದ [illegible] ಸ್ವಾತಂತ್ರ್ಯವನ್ನು [illegible] ಪ್ರಯತ್ನ [illegible] ದಲ್ಲಿ ವಾರ್ಧಾದಲ್ಲಿ ತಿಳಿಸಿದರು.

ತಾತ್ಕಾಲಿಕ ಸರ್ಕಾರ ರಚಿಸಲು ನೆಹರೂರವರಿಗೆ ಆಹ್ವಾನ

[illegible] ಪ್ರಮುಖ ರಾಜಕೀಯ ಪಕ್ಷವಾದ ಕಾಂಗ್ರೆಸ್ಸೇ ಕೇಂದ್ರದಲ್ಲಿ ತಾತ್ಕಾಲಿಕ ಸರ್ಕಾರವನ್ನು ರಚಿಸಬೇಕೆಂದು ನೆಹರೂ ರವರಿಗೆ ವೈಸರಾಯರು ಪತ್ರ ಬರೆದಿದ್ದಾರೆಂದು ಗೊತ್ತಾಗಿದೆ. ಲೀಗಿನವರು ವೈಸರಾಯರ ಹೊಸ ಸಲಹೆಯನ್ನು ತಿರಸ್ಕರಿಸಿದ್ದರಿಂದಲೇ [illegible] ಕಾಂಗ್ರೆಸ್ಸಿಗೆ ಆಹ್ವಾನ ಕೊಡಲಾಗಿದೆಯೆಂದೂ ಇತರ ರಾಜಕೀಯ ಪಕ್ಷಗಳ ಜೊತೆಗೂಡಿ ಕಾಂಗ್ರೆಸ್ ಕೇಂದ್ರ ಸರ್ಕಾರವನ್ನು ರಚಿಸಬಹುದೆಂದೂ ದೆಹಲಿಯಲ್ಲಿ ಹೇಳಲಾಗುತ್ತಿದೆ.

ಕನ್ನಂಬಾಡಿ ಕಟ್ಟೆಯಲ್ಲಿ ಇದಿನ ೧೧೩ ಅಡಿ ನೀರು ಇತ್ತೆಂದು ವರದಿಯಾಗಿದೆ.

ಅತಿ ರುದ್ರ ಮಹಾಯಾಗ

ಕಳೆದ ಸೆಪ್ಟೆಂಬರ್ ತಿಂಗಳು ಬೆಂಗಳೂರಿನಲ್ಲಿ ಶ್ರೀ ಸದ್ಗುರು ಘೇಟ್ ನಾರಾಯಣ ಮಹಾರಾಜರವರು ನಡೆಸಿದ ಅತಿರುದ್ರ ಸ್ವಾಹಾಕಾರ ಕ್ರತುವಿನಲ್ಲಿ ಆಚಾರ್ಯರು, ಋತ್ವಿಜರು, ದರ್ಶನಕ್ಕೋಸ್ಕರ ಮೊದಲಾಗಿ ಆಗಮಿಸಿದ ಮಹನೀಯರು ಯಾಗದ ಜನಾರ್ದನ [illegible] ಭಕ್ತ ಸಹಸ್ರ [illegible] ಗಳನ್ನು ಸಂಸ್ಥಾನದ [illegible] ಶ್ರೀ [illegible] ಭಕ್ತ [illegible] ಈ [illegible] ವಿಶ್ವ [illegible] ಶ್ರೀ [illegible] ನಡೆಸಿದ [illegible] ಶ್ರೀ ರಾಮಚಂದ್ರರಾವ್ [illegible] ರಿ ೧) [illegible] ೧೦, ೨) ಸಹಾಯೋಪಾಧ್ಯಕ್ಷರಿಗೆ ೧೫ ೩೦, ೩) ಪ್ರಧಾನ ಆಚಾರ್ಯರಿಗೆ ೧೦ ೪೦, ೪) [illegible] ೪೦, ೫) [illegible] ೧೫, ೩೦, ೬) ೬೦ [illegible] ೭) ೬೦ [illegible] ೮) [illegible]

ಸಾಧ್ವಿ

ತಾ॥ ೧೧-೮-೪೬ ಭಾನುವಾರ

ಗ್ರಾಮ-ಪ್ರಜಾ ರಾಜ್ಯ

ಮದರಾಸ್ ಪ್ರಾಂತ್ಯದಲ್ಲಿ ಗ್ರಾಮಗಳ ಆಡಳಿತವನ್ನು ಗ್ರಾಮಸ್ಥರಿಗೇ ವಹಿಸುವ ವ್ಯವಸ್ಥೆಯನ್ನು ಅಲ್ಲಿನ ಸರ್ಕಾರದವರು ಕೈಗೊಂಡಿದ್ದಾರೆ. ಇದಕ್ಕಾಗಿ ಒಂದು ಹೊಸ ಮಸೂದೆಯನ್ನು ಶಾಸನ ಸಭೆಯಲ್ಲಿ ಮಂಡಿಸಲಿದ್ದಾರೆ ಅದಕ್ಕೆ ಗ್ರಾಮ-ಪ್ರಜಾ ರಾಜ್ಯ ಮಸೂದೆಯೆಂದು ಹೆಸರು. ಪಂಚಾಯಿತಿಗಳು ಗ್ರಾಮಸ್ಥರ ಹಿತಕ್ಕಾಗಿ ಕೆಲಸ ಮಾಡುವ ಸಾರ್ವಜನಿಕ ಸಂಸ್ಥೆಗಳಾಗಬೇಕೆಂಬುದೇ ಇದರ ಉದ್ದೇಶ.

ಕಾಂಗ್ರೆಸ್ ಮಂತ್ರಿ ಮಂಡಲಗಳು ಅನೇಕ ಬಗೆಯ ಸುಧಾರಣೆಗಳನ್ನು ಕೈಗೊಂಡಿವೆ. ಕೆಲವುಗಳ ಕ್ರಾಂತಿಕಾರವಾದ ಬದಲಾವಣೆಗಳನ್ನೇ ಮಾಡಿವೆ. ರಾಷ್ಟ್ರದ ಬೆನ್ನು ಮೂಳೆಯಂತಿರುವ ಬಡ ಬೋರೇಗೌಡನಿಗೆ ಆಡಳಿತದಲ್ಲಿ ಮುಖ್ಯ ಪಾತ್ರವಿರಬೇಕೆಂಬುದೇ ಇವುಗಳ ಗುರಿ. ಹಳ್ಳಿಗಳ ದೇಶವಾದ ಭರತ ಖಂಡದಲ್ಲಿ ಗ್ರಾಮ ಸಂಘಟನೆಯೇ ರಾಷ್ಟ್ರೋದ್ಧಾರದ ಹಾದಿಗಲ್ಲೆಂದು ಸಕಲರೂ ಸಾರುತ್ತಿರುವರು. ಆದುದರಿಂದ ಎಲ್ಲ ಬಗೆಯ ಸುಧಾರಣೆಗಳೂ ಗ್ರಾಮದಿಂದಲೇ ಆರಂಭವಾಗುತ್ತಿವೆ

ಆಡಳಿತ ಯಂತ್ರದಲ್ಲಿ ಗ್ರಾಮ ಪಂಚಾಯಿತಿಗಳೇ ಮೊದಲನೆಯ ಮೆಟ್ಟಿಲು ಅವುಗಳನ್ನು ಸರಿಯಾದ ರೀತಿಯಲ್ಲಿ ರಚಿಸಿ ಅಲ್ಲಿ ಪ್ರಜಾ ಸ್ವಾತಂತ್ರ್ಯಕ್ಕೆ ಅಸ್ತಿಭಾರ ಹಾಕಿದರೆ ಇಡೀ ರಾಜ್ಯಭಾರದಲ್ಲಿ ಪ್ರಜೆಗಳಿಗೆ ಅಧಿಕಾರವನ್ನು ದೊರಕಿಸಿಕೊಟ್ಟಂತಾಗುವುದು ಇದೇ ಧ್ಯೇಯದಿಂದಲೇ ಕಾಂಗ್ರೆಸ್ ಸಂಸ್ಥೆಯಲ್ಲಿ ಮುಂದುವರಿದ ಪಂಗಡಗಳವರು ದೇಶದಲ್ಲಿ ಇಂದು ಸ್ಥಾಪಿತವಾಗಬೇಕಾಗಿರುವುದು "ಕಿಸಾನ್-ಮಜದೂರ್-ಪ್ರಜಾ ರಾಜ್ಯ" ವೆಂದು ಸಾರುತ್ತಿರುವರು ಕಾರ್ಮಿಕರಿಗೂ, ರೈತರಿಗೂ, ಪ್ರಜಾವರ್ಗದವರಿಗೂ ಪ್ರಭುತ್ವದಲ್ಲಿ ಸಂಪೂರ್ಣ ಪಾತ್ರವನ್ನು ದೊರಕಿಸಿಕೊಡುವುದೇ ನಿಜವಾದ ಪ್ರಜಾ ಸ್ವಾತಂತ್ರ್ಯದ ಲಕ್ಷಣ. ಇದಕ್ಕೆ ಮದರಾಸ್ **ಸರ್ಕಾರದವರು ಈಗ ಹೀಠಿಕೆಯನ್ನು ಹಾಕಿರುವರೆಂದು ನಾವು ಭಾವಿಸುತ್ತೇವೆ. ಅವರ ಈ ಪ್ರಯತ್ನವು ಯಶಸ್ವಿಯಾಗಿ ಇತರ ಕಡೆಗಳಿಗೂ ಆದರ್ಶವಾಗಿ ಪರಿಣಮಿಸಲೆಂದು ಹಾರೈಸುತ್ತೇವೆ.**

ಶ್ರೀರಂಗಪಟ್ಟಣದ ಶ್ರೀ ರಂಗನಾಯಕಿ ಸ್ತ್ರೀ ಸಮಾಜದ ಸಹಾಯಾರ್ಥವಾಗಿ ಶ್ರೀಯುತ

ಆರ್. ರಾಮಚಂದ್ರರಾವ್ ಧಾಂಭೋರೆ ಬಿ. ಎ. ರವರ ಅಧ್ಯಕ್ಷತೆಯಲ್ಲಿ.

ಅಮೋಘ ನರ್ತನ

ಉದಯ ರುದ್ರ ಮತ್ತು ಪಾರ್ಟಿಯವರಿಂದ

ಮೈಸೂರು ಟೌನ್ ಹಾಲಿನಲ್ಲಿ

೧೨-೮-೪೬ ನೇ ಸೋಮವಾರ

ಸಂಜೆ ೬-೩೦ ಕ್ಕೆ

ಪ್ರವೇಶ ದರ

ರೂ 10, ೨, ೫, ೩ ಮತ್ತು 1

ಮಹಾಜನರ ಉದಾರ ಸಹಾಯ ಕೋರಿದೆ.

ಎಸ್. ಪದ್ಮ, ಕಾರ್ಯದರ್ಶಿ. ಎಸ್. ಗಂಗಮ್ಮ, ಅಧ್ಯಕ್ಷಿಣಿ.

ಆಗಸ್ಟ್ ದಿನಾಚರಣೆ

ಮೈಸೂರು ೧೦

ಮೈಸೂರು ನಗರ ವಿದ್ಯಾರ್ಥಿ ಕಾಂಗ್ರೆಸ್ ಆಶ್ರಯದಲ್ಲಿ ಆಗಸ್ಟ್ ದಿನಾಚರಣೆ ಫಿಲೋಮಿನ ಕಾಲೇಜು ಆವರಣದಲ್ಲಿ ನಡೆಯಿತು. ವಿದ್ಯಾರ್ಥಿ ಕಾಂಗ್ರೆಸ್ ಅಧ್ಯಕ್ಷರಾದ ಹೆಚ್. ಕೆ. ಕುಮಾರಸ್ವಾಮಿಯವರು ಅಗ್ರಾಸನವನ್ನು ವಹಿಸಿದ್ದರು. ಕಾರ್ಯದರ್ಶಿ ಜೆ. ರಂ. ವ್ಯಾಣೇಶರಾಯರು ಈ ದಿನಾಚರಣೆಯ ಮಹತ್ವವನ್ನು ತಿಳಿಸಿದರು. ಶ್ರೀ ಹೆಚ್. ವೈ. ಶಾರದಾ ಪ್ರಸಾದ್‌ರವರು ಆಗಸ್ಟ್ ೯ ರ ನಿರ್ಣಯ ಮತ್ತು ವಿದ್ಯಾರ್ಥಿಗಳ ಚಳುವಳಿಯ ಬಗ್ಗೆ ಅಮೋಘ ಭಾಷಣ ಮಾಡಿದರು ಅಧ್ಯಕ್ಷರ ಭಾಷಣವಾದ ಮೇಲೆ, ದೇಶಕ್ಕಾಗಿ ಜೀವ ದಾನ ಮಾಡಿದ ಹುತಾತ್ಮರ ಸ್ಮರಣೆಗಾಗಿ ಸಭೆ ಎರಡು ನಿಮಿಷಗಳ ಕಾಲ ಮೌನವನ್ನು ಆಚರಿಸಿತು ಸಂಜೆ ವಿದ್ಯಾರ್ಥಿ ಕಾಂಗ್ರೆಸ್ ಆಶ್ರಯದಲ್ಲಿ ಸ್ವಯಂ ದಳವೊಂದು ಹೊರಟು ನಗರದ ವಿವಿಧ ಭಾಗಗಳಲ್ಲಿ ಮೆರವಣಿಗೆ ನಡೆಸಿತು.

ವಾಣೀವಿಲಾಸ ಮೊಹಲ್ಲಾದಲ್ಲಿರುವ ತಿಲಕಸಂಘದಲ್ಲಿ ಆಗಸ್ಟ್ ೯ ರ ದಿನಾಚರಣೆ ಪ್ರಯುಕ್ತ ನಿನ್ನೆ ಸಂಜೆ ಶ್ರೀ ಪಾರ್ಥಸಾರಥಿಯವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯಿತು ಶ್ರೀಗಳಾದ ಭೂಪಾಲ್, ಸುಬ್ರಹ್ಮಣ್ಯಂ ರಾಮಚಂದ್ರರಾವ್ ಮುಂತಾದವರು ಭಾಷಣಮಾಡಿದರು

ಶ್ರೀರಂಗಪಟ್ಟಣದ ತಾ॥ ಕಾಂಗ್ರೆಸ್ ಆಶ್ರಯದಲ್ಲಿ ಶ್ರೀ ಸಿ. ಬಂದೀಗೌಡರ ಅಧ್ಯಕ್ಷತೆಯಲ್ಲಿ ಆಗಸ್ಟ್ ೯ ರ ದಿನಾಚರಣೆ ಜರುಗಿತು ಶ್ರೀಗಳಾದ ಡಾ॥ ಸಿ. ಬಂದೀಗೌಡ, ಎ. ಜಿ ಬಂದೀಗೌಡ, ಬಿ. ಕೆಂಪೇಗೌಡ ಮತ್ತು ತಮ್ಮಯ್ಯನವರು ಭಾಷಣ ಮಾಡಿದರು.

ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಟಿ ನರಸೀಪುರದಲ್ಲಿ ಶ್ರೀ ಆಗರಂ ಸೂರ್ಯನಾರಾಯಣ ಪಂಡಿತರ ಅಧ್ಯಕ್ಷತೆಯಲ್ಲಿ ಆಗಸ್ಟ್ ದಿನಾಚರಣೆ ಜರುಗಿತು

ಜವಾಬ್ದಾರಿ ಸರ್ಕಾರಕ್ಕೆ ಸಾರ್ವತ್ರಿಕ ಒತ್ತಾಯ

ಮೈಸೂರು ೧೧

ರಾಜಧಾನಿಯಲ್ಲಿ ಮೊನ್ನೆ ದಿನ ವೈಭವದಿಂದ ಆಗಸ್ಟ್ ದಿನಾಚರಣೆಯನ್ನು ನಡೆಸಲಾಯಿತು. ಬೊಂಬಾಯಿಯಲ್ಲಿ ೧೯೪೨ ನೇ ಆಗಸ್ಟ್ ೯ ನೇ ತಾ॥ ಅಖಿಲ ಭಾರತ ಕಾಂಗ್ರೆಸ್ ನಿರ್ಣಯಿಸಿದ "ಕ್ವಿಟ್ ಇಂಡಿಯಾ" ನಿರ್ಣಯವು ನಗರದ ನಾನಾ ಭಾಗಗಳಲ್ಲಿ ಪ್ರತಿಧ್ವನಿತವಾಗುತ್ತಿದ್ದಿತು ಅದೇ ಸಂಜೆ ಸುಬ್ಬರಾಯನ ಕೆರೆಯಲ್ಲಿ ಮೈಸೂರು ನಗರ ಕಾಂಗ್ರೆಸ್ ಸಮಿತಿ ಆಶ್ರಯದಲ್ಲಿ ಭಾರಿ ಬಹಿರಂಗ ಸಭೆಯು ಶ್ರೀ ಎಸ್. ಚೆನ್ನಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತು. ಅಧ್ಯಕ್ಷರೂ, ಶ್ರೀಗಳಾದ ಹೆಚ್. ಕೆ ಕುಮಾರಸ್ವಾಮಿ, ರಾಜಂಶೆಟ್ಟಿ, ಟಿ. ಮರಿಯಪ್ಪ, ಓ. ಸೀತಾರಾಮಯ್ಯ ಮತ್ತು ಆಗರಂ ರಂಗಯ್ಯನವರು ಮಾತನಾಡಿ, ಕ್ವಿಟ್ ಇಂಡಿಯಾ ನಿರ್ಣಯದ ಮಹತ್ವವನ್ನು ವಿವರಿಸಿದರು: ದೇಶದಲ್ಲಿ ಜನ ಸಾಮಾನ್ಯರ ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ಒತ್ತಾಯ ಪಡಿಸುತ್ತಿರುವ ಅಂಶವನ್ನು ವಿಶದಪಡಿಸಿ, ಸರ್ಕಾರದವರು ಕೂಡಲೇ ಇತ್ತ ಗಮನಕೊಟ್ಟು ಮಹಾಜನರ ಆಕಾಂಕ್ಷೆಯನ್ನು ಈಡೇರಿಸದಿದ್ದರೆ ಮುಂದೆ ಸಂಭವಿಸಬಹುದಾದ ಅನರ್ಥಗಳಿಗೆಲ್ಲಾ ಸರ್ಕಾರದವರೇ ಹೊಣೆಗಾರರಾಗಬೇಕಾಗುತ್ತೆಂದು ಎಚ್ಚರಿಸಿದರು.

'ಕ್ವಿಟ್ ಇಂಡಿಯಾ' ನಿರ್ಣಯ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಆತ್ಮಾರ್ಪಣೆ ಮಾಡಿದ ವೀರರ ಆತ್ಮಕ್ಕೆ ಶಾಂತಿ ಕೋರುವ ನಿರ್ಣಯ ಮತ್ತು ಜವಾಬ್ದಾರಿ ಸರ್ಕಾರವನ್ನು ಕೂಡಲೇ ಸಂಸ್ಥಾನದಲ್ಲಿ ಜಾರಿಗೆ ತರಬೇಕೆಂದು ಒತ್ತಾಯಪಡಿಸುವ ನಿರ್ಣಯಗಳನ್ನು ಸಭೆಯಲ್ಲಿ ಅಂಗೀಕರಿಸಿದ ತರುವಾಯ ಕಾರ್ಯದರ್ಶಿ ಶ್ರೀ ನರಸಿಂಹಯ್ಯಂಗಾರ್ಯರ ವಂದನಾರ್ಪಣೆಯೊಡನೆ ಸಭೆ ಜಯಕಾರಗಳೊಡನೆ ಮುಕ್ತಾಯವಾಯಿತು.

ಅಪೇರಾ ಟಾಕೀಸ

10—8—46 ರಿಂದ

ಎರಡನೇ ವಾರ!

ಭಕ್ತ ಕೈಲಾಸ

(ತಮಿಳು)

Next Change:-

'King Of The Texas Rangers

(Full Serial)

ಹೊಸ ಹೊಸ ನಮೂನೆಯ ಬಳೆಗಳು

ಈ ದಿನವೇ ನೋಡಿರಿ

ಸ್ವರ್ಗ ಸೀಮ ಬಳೆ, ಕಮಲ್ ಫ್ಲೂರ್ ಬಳೆ { ಬಳೆಗಳು } ಸುಭಾಸ್ ಬಳೆ, ಗಾಂಧಿಜಿ ಬಳೆ

ಚಾಂದಿನಿ ಬಳೆ ಮತ್ತು ರಾಷ್ಟ್ರ ನಾಯಕರುಗಳ ಫೋಟೋ ಸಮೇತ ಒಡೆಯದ ಇರತಕ್ಕಂತಹುದು.

ಮೈಸೂರು ಸಿಲ್ಕ್ ರಿಬ್ಬನ್‌ಗಳು, ಸ್ಟಾಂಡರ್ಡ್ ಬಳೆಗಳು

ಪ್ರಭಾತ್ ಬ್ಯಾಂಗಲ್ಸ್ ಸ್ಟೋರ್ಸ್,

ಚಾಮುಂಡೇಶ್ವರೀ ಟಾಕೀಸ್ ಬಿಲ್ಡಿಂಗ್ಸ್, ಮೈಸೂರು.

Edited printed and published by A. H. Nagarajan at the Sadhvi Pr[ess] D Subbiah Road, Mysore

ತಾ॥ 10—8—46 ರಿಂದ ಅಮೋಘ ಪ್ರಾರಂಭ

ಮೋತಿಲಾಲ್ ಟಾಕೀಸಿನಲ್ಲಿ

"ಮುಗ್ಗುರು ಮರಾಟಿಲು"

(ತೆಲುಗು ಚಿತ್ರ)

THREE MARATEES

ಪ್ರತಿ ದಿನ ಮೂರು ಆಟಗಳು

—:ಭೂಮಿಕೆ:—

ಕಣ್ಣಾಂಬ, ಡಾ॥ ಜಿ. ವಿ ಸುಬ್ಬರಾವ್, ಬಿ ರಾಜರತ್ನಂ, ನಾಗೇಶರಾವ್, ನಾರಾಯಣರಾವ್, ಶಿವರಾವ್ ಮುಂತಾದವರು

೯-೮-೪೬ ರಿಂದ ಬೆಂಗಳೂರು ಮೂವಿಲ್ಯಾಂಡಿನಲ್ಲಿ ಅಮೋಘ ಮೂರನೇ ವಾರ

—: Released Through :—

SRI MAHAVEER FILM EXCHANGE

Asoka Road, ... Mysore.

ವಿಜಯಾ ಪಬ್ಲಿಸಿಟಿ, ಮೈಸೂರು

ರಣಜಿತ್

11—8—46 ರಿಂದ

ಶಂಕರ ಪಾರ್ವತಿ

(ಹಿಂದಿ)

-:ಪಾತ್ರ:-

ಸಾಧನ ಬೋಸ್, ಅರುಣ...

ಪ್ರತಿ ದಿನ ಮೂರು ಆಟಗ[ಳು]

NOTICE

Applications are invit[ed] for agencies for sale [of] milk & butter from T[he] City Milk supply at fix[ed] hours for each Mohalla [of] Mysore City from busine[ss] houses to work on comm[i]ssion. Applicatins will [be] dealt with in person by [the] Proprietor, between 10 & 15th Aug 1946.

M. V. Krishna Swa[my]
Proprietor

ಫೋನ್ ನಂ 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಮಂಗಳವಾರ ೧೩—೮—೪೭ [ಸಂಚಿಕೆ ೧೮

ಹಂಗಾಮಿ ಸರ್ಕಾರವನ್ನು ನೆಹರು ರಚಿಸುವರು

ಕೊಚ್ಚಿ ಮಹಾರಾಜರಿಗೆ ಬ್ರಿ॥ ಅಧಿಕಾರಿಗಳ ಸೂಚನೆ

ಕೇರಳ ಪ್ರಾಂತ್ಯದ ರಚನೆಯ ಬಗ್ಗೆ ಕೊಚ್ಚಿಯ ರಾಜರು ಕೆಲವು ದಿನಗಳ ಹಿಂದೆ ಇತ್ತ ಹೇಳಿಕೆಯು ಭಾರತ ಸರ್ಕಾರದ ಪೊಲಿಟಿಕಲ್ ಶಾಖೆಯನ್ನು ಕೆರಳಿಸಿರುವಂತೆ ಕಂಡುಬಂದಿದೆ. ಕೊಚ್ಚಿ ರಾಜರು ತಮ್ಮ ಹದ್ದನ್ನು ಮೀರಿ ಹೋಗುತ್ತಿರುವರೆಂದೂ, ಆ ರೀತಿ "ಬೇಜವಾಬ್ದಾರಿ" ಹೇಳಿಕೆ ಹೊರಡಿಸಕೂಡದೆಂದು ಅವರಿಗೆ ಸೂಚನೆಯನ್ನು ಪೊಲಿಟಿಕಲ್ ಇಲಾಖೆ ಕಳಿಸಿದುದ್ದಾಗಿಯೂ ವರದಿಯಾಗಿದೆ

೯ ರೂಗೆ ಮಗಳನ್ನು ಮಾರಿದ

ನೇತ್ರಕೋಣ ಎಂಬಲ್ಲಿ ಒಬ್ಬ ಬಡವಾಯಿ ಹೊಟ್ಟೆಗಿಲ್ಲದೆ ತನ್ನ ಮಗಳನ್ನು ೯ ರೂಗಳಿಗೆ ಮಾರಿದನೆಂದು ವರದಿಯಾಗಿದೆ. ಕಳೆದ ಕ್ಷಾಮದಲ್ಲಿ ಈತ ತನ್ನ ಮನೆ, ಪಾತ್ರೆಗಳನ್ನು ಮಾರಿದ್ದನೆಂಬೂ, ಇವನ ಹೆಂಡತಿ ಇವನನ್ನು ತೊರೆದು ಹಿಂದೆಯೇ ಪರಾರಿಯಾಗಿದ್ದಾಳೆಂದೂ ಹೇಳಲಾಗಿದೆ

ಬ್ರಿಟಿಷ್ ಸಲಹೆಗೆ ಕಾಂಗ್ರೆಸ್ಸಿನ ಒಪ್ಪಿಗೆ

ಬ್ರಿಟಿಷ್ ನಿಯೋಗದವರು ಮೇ ೧೬ನೇ ತಾ॥ ಹೊರಡಿಸಿದ ಸಲಹೆಗಳನ್ನು ಅಖಿಲ ಭಾರತ ಕಾಂಗ್ರೆಸ್ಸಿನ ಕಾರ್ಯಕಾರೀ ಸಮಿತಿ ಪೂರ್ಣವಾಗಿ ಅಂಗೀಕರಿಸಿದೆ ಭಾರತ ರಾಜ್ಯಾಂಗ ಸಭೆಯನ್ನು ಮುಸ್ಲಿಂ ಲೀಗು ತಿರಸ್ಕರಿಸಿರುವುದಕ್ಕಾಗಿ ಕಾಂಗ್ರೆಸ್ಸು ವಿಷಾದಿಸಿದೆ ಲೀಗಿನವರ ಸಹಕಾರವನ್ನು ಕೋರಿದೆ

ಸ್ವಾತಂತ್ರ್ಯ ಪ್ರತಿಜ್ಞೆ

ಸ್ವಂ.ಸು] ನಂಜನಗೂಡು ೧೧

ಆಗಸ್ಟ್ ದಿನಾಚರಣೆ ಪ್ರಯುಕ್ತ ಮೊನ್ನೆ ಬೆಳಿಗ್ಗೆ ಧ್ವಜ ವಂದನೆ, ಸಂಜೆ ಶ್ರೀ ಎಸ್ ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆದವು ಶ್ರೀಗಳಾದ ಡಿ ಎ. ಸಿದ್ದಯ್ಯ, ರಾಮಯ್ಯಂಗಾರ್, ಟಿ ಎಸ್ ಸುಬ್ಬಣ್ಣ, ಪಿ. ಮಹದೇವಯ್ಯ ಮತ್ತು ಟಿ. ಸಿದ್ದಲಿಂಗಯ್ಯನವರು ಭಾಷಣ ಮಾಡಿ ಆಗಸ್ಟ್ ೯ ರ 'ಕ್ವಿಟ್ ಇಂಡಿಯಾ' ನಿರ್ಣಯವನ್ನು ವಿವರಿಸಿದರು. ನಂತರ ಸಭೆಯಲ್ಲಿದ್ದವರೆಲ್ಲಾ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಸ್ವೀಕರಿಸಿದ ನಂತರ ಜಯಕಾರಗಳೊಡನೆ ಸಭೆ ಮುಕ್ತಾಯವಾಯಿತು.

ಬಟ್ಟೆ ಅಭಾವ

ಸ್ವಂ ಸು] ಚಿಕ್ಕಮಗಳೂರು ೧೦

ಬಿನ್ನಿಮಿಲ್ ಒಟ್ಟೆ ಸರಿಯಾಗಿ ದೊರೆಯುತ್ತಿಲ್ಲ. ಇಲ್ಲೂ ಒಟ್ಟೆ ರೂಪ್ ವ್ಯವಸ್ಥೆ ಜಾರಿಗೆ ತರಬೇಕೆಂದು ಮಹಾಜನರು ಪ್ರಾರ್ಥಿಸುತ್ತಿದ್ದಾರೆ

ಪ್ಲೇಗ್ ಉಪದ್ರವವು ಇನ್ನೂ ಕಡಿಮೆಯಾಗಿಲ್ಲ ಸಿನಿಮಾ ನಿಂತಿದೆ ಸಂತೆ ವಜಾ ಮಾಡಲಾಗಿದೆ. ಇನಾಕ್ಯುಲೇಷನ್ ಸಾಗುತ್ತಿದೆ

ಹರಿಕಥೆ

ಮೈಸೂರು ಶಿವರಾಂಪೇಟೆ ವಿಠಲರಾಯರ ಶ್ರೀರಾಮ ಮಂದಿರದ ಹಿಂಭಾಗದಲ್ಲಿರುವ ಶ್ರೀ ಎನ್ ಎಸ್. ಕೃಷ್ಣರಾಯರ ಶ್ರೀ ರಾಘವೇಂದ್ರ ಸ್ವಾಮಿ ಮಂದಿರದಲ್ಲಿ ನಾಳೆ ಶ್ರೀ ರಾಘವೇಂದ್ರಸ್ವಾಮಿಗಳ ಪುಣ್ಯ ದಿನದ ಪ್ರಯುಕ್ತ ಶ್ರೀ ಡಿ ಅಣ್ಣಾಜಿರಾಯರಿಂದ ಸ್ವಾಮಿಗಳ ಜೀವನ ಚರಿತ್ರೆಯು ಹರಿಕಥಾ ರೂಪದಲ್ಲಿ ನಡೆಸಲ್ಪಡುತ್ತದೆ ಸರ್ವರಿಗೂ ಆಹ್ವಾನವುಂಟು

ಲೀಗನ್ನು ಉಪೇಕ್ಷಿಸಿದರೆ ಬಂಗಾಳ ಸ್ವತಂತ್ರವಾಗುವುದು

ಬ್ರಿಟಿಷರಾಗಲೀ, ಇತರರಾಗಲೀ ಮುಸ್ಲಿಂ ಲೀಗನ್ನು ಉಪೇಕ್ಷಿಸಿ ಕೇಂದ್ರ ಸರ್ಕಾರದ ರಚನೆಗೆ ತೊಡಗಿದರೆ ಆಗ್ಗೆ ಬಂಗಾಳಾ ಪ್ರಾಂತ್ಯವು ಕೇಂದ್ರದೊಡನೆ ಇರುವ ಎಲ್ಲ ವ್ಯವಹಾರಗಳನ್ನೂ ತೊರೆದು, ಸ್ವತಂತ್ರವಾಗುವುದು-ಎಂದು ಬಂಗಾಳದ ಪ್ರಧಾನಿ ಮಿ॥ ಸುಹ್ರವರ್ದಿಯವರು ತಿಳಿಸಿದ್ದಾರೆ ರಾಷ್ಟ್ರೀಯ ಮುಸಲ್ಮಾನರೆಂದು ಕರೆದುಕೊಳ್ಳುವವರನ್ನು ಸೇರಿಸಿಕೊಂಡು ಕೇಂದ್ರ ಸರ್ಕಾರ ರಚಿಸಲು ಪ್ರಯತ್ನಿಸಿದರೆ ಇಡೀ ಭಾರತದಲ್ಲಿ ಅಂತಃಯುದ್ಧವಾಗುವುದು ಖಂಡಿತವೆಂದು ಅವರು ಎಚ್ಚರಿಸಿದ್ದಾರೆ

ಮಧುರೆಯಲ್ಲಿ ೧೫೭ ಮಂದಿಯ ಬಂಧನ

ಮಧುರೆಯಲ್ಲಿ ಜಾರಿಯಲ್ಲಿರುವ ಪ್ರತಿಬಂಧಕಾಜ್ಞೆಯನ್ನು ವಿರೋಧಿಸಿ ತಿರುಪ್ಪರಕುಂದ್ರಮ್ ಬೆಟ್ಟದ ಮೇಲೆ ರಾಷ್ಟ್ರಧ್ವಜವನ್ನು ಹಾರಿಸಲು ಪ್ರಯತ್ನಿಸಿದ ೧೫೭ ಮಂದಿ ಕಾಂಗ್ರೆಸ್ಸಿನವರ ಬಂಧನವಾಗಿದೆ

ಗೋವಾ ಭಾರತದ ಅಂಗ

ಗೋವಾ ಹಿಂದೆಯೂ ಭಾರತದ ಅಂಗವಾಗಿತ್ತು, ಮುಂದೆಯೂ ಹಾಗೆ ಉಳಿಯಬೇಕು ಎಂದು ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ನಿರ್ಣಯಿಸಿದೆ ಪೋರ್ಚುಗಲ್ ಸರ್ಕಾರವು ಗೋವಾದಲ್ಲಿ ನಡೆಸುತ್ತಿರುವ ದಬ್ಬಾಳಿಕೆಯನ್ನೂ ಖಂಡಿಸಿದೆ

• ಲಂಡನ್ನಿನಲ್ಲಿ ಸೇರುವ ಪ್ಯಾಲಸ್ಟೈನ್ ಚರ್ಚೆಗೋಷ್ಠಿಗೆ ನಿಯೋಗವನ್ನು ಕಳಿಸಲು ಅರಬ್ ಹೈಯರ್ ಕಮಿಟಿ ತಿರಸ್ಕರಿಸಿದೆ

ಅಪ್ಪಾಜಿಗೌಡರು ಪುನಃ ಮಂತ್ರಿಗಳಾದರು

ಸ್ವಂ.ಸು.ಫೋ] ಬೆಂಗಳೂರು ೧೨

ಶ್ರೀ ಪುಲ್ಲರೆಡ್ಡಿಯವರು ಅಧಿಕಾರ ಬಿಡುವ ದಿನದಿಂದ. ಅವರ ಸ್ಥಾನದಲ್ಲಿ ಶ್ರೀ ಜಿ. ಅಪ್ಪಾಜಿಗೌಡರನ್ನು ಮಂತ್ರಿಗಳನ್ನಾಗಿ ಶ್ರೀಮನ್ಮಹಾರಾಜರವರು ನೇಮಿಸಿದ್ದಾರೆ

ಹೊಸ ರೆಸಿಡೆಂಟರು

ಮೈಸೂರು ಸಂಸ್ಥಾನದ ರೆಸಿಡೆಂಟರಾದ ಸರ್ ಫಿಲಿಫ್ ಗೇ ಸ್ ಫೋರ್ಡ್‌ರವರು ನಿವೃತ್ತರಾಗುವ ಮುನ್ನ ರಜ ಪಡೆಯುವುದರಿಂದ ಅವರ ಸ್ಥಾನದಲ್ಲಿ ಮಧ್ಯ ಇಂಡಿಯಾ ರೆಸಿಡೆಂಟರಾಗಿದ್ದ ಲೆ॥ ಕ॥ ಸರ್ ವಾಲ್ಟರ್ ಕಾಂಪ್‌ಬೆಲ್‌ರವರನ್ನು ನೈಸರ್ಗಿಕರು ನೇಮಿಸಿದ್ದಾರೆ

ಸುಚೇತಾ ಕೃಪಲಾನಿಯವರ ಭಾಷಣ

ಮೈಸೂರು ೧೨

ಶ್ರೀಮತಿ ಸುಚೇತಾ ಕೃಪಲಾನಿಯವರು ನಾಳೆ ಸಂಜೆ ಆರೂವರೆ ಗಂಟೆಗೆ ಟೌನ್‌ಹಾಲಿನಲ್ಲಿ ಕಸ್ತೂರಿ ಬಾಯಿ ಸ್ಮಾರಕ ಮತ್ತು ರಚನಾತ್ಮಕ ಕಾರ್ಯದ ವಿಚಾರವಾಗಿ ಭಾಷಣ ಮಾಡುವರು ಸರ್ವರಿಗೂ ಸ್ವಾಗತವಿದೆ.

ಹಿಂದೀ ಪರೀಕ್ಷೆಗಳು ಮುಂದು ವರಿದುವು

ಇದೇ ೧೭ ಮತ್ತು ೧೮ ನೇ ತಾ॥ ಗಳಲ್ಲಿ ನಡೆಯಬೇಕಾಗಿದ್ದ ಹಿಂದೀ ಪರೀಕ್ಷೆಗಳು ೩೧ ೮ ೪೭ ಮತ್ತು ೧-೯-೪೭ ನೇ ತಾ॥ ಗಳಲ್ಲಿ ನಡೆಯುವುವು

ವಿಷ ಸರ್ಪಕ್ಕೆ ಚಿಕಿತ್ಸೆ

ಅರಮನೆ ಪಲ್ಲಕ್ಕಿ ಕೆಲಸದಲ್ಲಿರುವ ತಿಮ್ಮದಾಸಪ್ಪನೆಂಬ ೩೦ ವರ್ಷ ವಯಸ್ಸಿನವನು ತಾ ೮-೮-೪೭ ನೇ ದಿನ ಕಾಸ್ಮಾಪಾಲಿಟನ್ ಕ್ಲಬ್ ಹತ್ತಿರ ಹಾವು ಹಿಡಿಯುವಾಗ್ಗೆ ಆ ಘಟಸರ್ಪವು ಕಾಲಿಗೆ ಸುತ್ತಿಕೊಂಡು ನುಣುಚಿಕೊಂಡು ಕಚ್ಚಲು, ಮಂಕಾಗಿ, ರಾಜವೈದ್ಯ ಪಂಡಿತ ಓ. ಹೆಚ್. ಚಂದ್ರಶೇಖರ್‌ಸಿಂಗ್‌ರವರ ಶ್ರೀ ಸತ್ಯನಾರಾಯಣ ವೈದ್ಯಶಾಲೆಗೆ ಬಂದು ಇಲಾಜು ಪಡೆದನು ಈಗ ಆತ ಆರೋಗ್ಯವಾಗಿದ್ದಾನೆ

ವಿದ್ಯುಚ್ಛಕ್ತಿ ಬಡಿದು ಮರಣ

ಕೆಂಪನಂಜಾಂಬಾ ಅಗ್ರಹಾರದ ಬಳಿ ಇರುವ ಮನೆಯೊಂದರಲ್ಲಿನ ಮಹಡಿಯ ಮೇಲೆ ಒಣಗಿ ಹಾಕಿದ್ದ ಸೀರೆಯನ್ನು ಎಳೆಯುತ್ತಿದ್ದಾಗ ಅದು ಪಕ್ಕದಲ್ಲೇ ಇದ್ದ ವಿದ್ಯುಚ್ಛಕ್ತಿಯ ತಂತಿಗೆ ತಗುಲಿ ಆಕೆಗೆ 'ಷಾಕ್' ಹೊಡೆದು ನಿನ್ನೆ ಆಕೆಯನ್ನು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸಾಗಿಸಲಾಗಿತ್ತು. ಈ ದಿನ ಆವರು ಆಸ್ಪತ್ರೆಯಲ್ಲಿ ನಿಧನರಾದರೆಂದು ತಿಳಿದುಬಂದಿದೆ

ಕಸ್ತೂರಿ ಬಾ ಚಿತ್ರ ಅನಾವರಣ

ನಾಳೆ ಸಾಯಂಕಾಲ ೫ ಗಂಟೆಗೆ ಮಹಾರಾಣಿ ಶಿವಲಾಕ್ಷೇತ್ರದ ವಿದ್ಯಾರ್ಥಿನಿಲಯದಲ್ಲಿ ಶ್ರೀ ಕಸ್ತೂರಿ ಬಾ ಛಾಯಚಿತ್ರವನ್ನು ಅನಾವರಣ ಮಹೋತ್ಸವವನ್ನು ಶ್ರೀ ಮತಿ ಸುಚೇತ ಕೃಪಾಲಿನಿಯವರು ನೆರವೇರಿಸುತ್ತಾರೆ ಸರ್ವರಿಗೂ ಆಹ್ವಾನವುಂಟು.

● ರಾಜಕೀಯ ಸಲಹೆಗಾರರಾಗಿದ್ದ ಶ್ರೀ ರಕ್ಷಸ್ವಾಮಿ ಮುದಲಿಯಾರ್ ಅಧಿಕಾರವು ನವೆಂಬರ್ ೧ರಿಂದ ಮುಕ್ತಾಯವಾಗುವುದು

"ನವರಾತ್ರಿ ಬೆಂಬಲ ಬಂದಿನ ಪರೀಕ್ಷೆಯು ಏಪ್ರಿಲ್ ತಿಂಗಳಿನಲ್ಲಿ ನಡೆಯುವುದು"

ಸುಚೇತ ಕೃಪಲಾನಿಯವರ ಆಗಮನ

ಸ್ವಂ.ಸು.ಫೋ] ಬೆಂಗಳೂರು ೧೨

ಶ್ರೀಮತಿ ಸುಚೇತ ಕೃಪಾಲಿನಿಯವರು ಈ ದಿನ ಬೆಳಿಗ್ಗೆ ಮದ್ರಾಸಿನಿಂದ ಇಲ್ಲಿಗೆ ಆಗಮಿಸಿದರು ಇಲ್ಲಿ ಧರ್ಮ ಪ್ರಕಾಶ ಎಲ್. ಎಸ್. ವೆಂಕೋಜಿರಾಯರ ಅತಿಥಿಗಳಾಗಿ ಬಿಡಾರ ಮಾಡಿದ್ದಾರೆ. ಇಂದು ಸಂಜೆ ಶ್ರೀಮತಿ ಯಶೋಧರಾದಾಸಪ್ಪನವರೊಡನೆ ಮೈಸೂರಿಗೆ ತೆರಳಲಿದ್ದಾರೆ.

ಚೆಂಗಲರಾಯರೆಡ್ಡಿಯವರು ಅಧ್ಯಕ್ಷರಾದರು

ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆ ನೆನ್ನೆ ಸೇರಿ ಶ್ರೀ ಕೆ. ಚೆಂಗಲರಾಯರೆಡ್ಡಿಯವರು ಮುಂದಿನ ಸಾಲಿನ ಅಧ್ಯಕ್ಷರಾಗಿ ಬಹುಮತದಿಂದ ಚುನಾಯಿತರಾದರೆಂದು ಘೋಷಿಸಿದೆ

ಮುಂದಿನ ಕಾಂಗ್ರೆಸ್ ಅಧಿವೇಶನವನ್ನು ಬೆಂಗಳೂರಿನಲ್ಲಿ ನಡೆಸುವ ಬಗ್ಗೆ ನಗರ ಕಾಂಗ್ರೆಸ್ ಸಮಿತಿ ಅಭಿಪ್ರಾಯ ಕೇಳಬೇಕೆಂದು ತೀರ್ಮಾನಿಸಲಾಗಿದೆ

ನಾಡಿದ್ದು ಬೆಳಿಗ್ಗೆ ೧೦॥ ಗಂಟೆಗೆ ಮಂತ್ರಿಮಂಡಲದ ಸಭೆಯು ನಡೆಯುವುದು.

ಫೆಡರಲ್ ಕೋರ್ಟಿನ ಪ್ರಧಾನ ನ್ಯಾಯಾಧೀಶರು ಈ ದಿನ ಮು ಖ್ಯ ನ್ಯಾಯಾಸ್ಥಾನಕ್ಕೆ ರೆಸಿಡೆಂಟರ ಸಂಗಡ ಭೇಟಿ ಇತ್ತಿದ್ದರು

ಮೌಲಾನಾ ಆಜಾದರು ಮತ್ತೆ ಕಾಂ॥ ಅಧ್ಯಕ್ಷರಾಗುವರೇ ?

ಈ ತಿಂಗಳ ಒಳಗೇ ಕೇಂದ್ರದಲ್ಲಿ ತಾತ್ಕಾಲಿಕ ಸರ್ಕಾರ ರಚನೆ ಆಗುವುದು ಖಂಡಿತವೆಂದು ಹೇಳಲಾಗಿದೆ ಪಂ॥ ನೆಹರು, ಸ॥ ಪಟೇಲ್, ರಾಜೇಂದ್ರಬಾಬು ಇವರುಗಳು ಕೇಂದ್ರ ಸರ್ಕಾರದ ಮಂತ್ರಿಗಳಾಗುವರು. ಆದ್ದರಿಂದ ಮೌಲಾನ ಆಜಾದರೇ ಮತ್ತೆ ಅಧ್ಯಕ್ಷತೆಯನ್ನು ವಹಿಸಿಕೊಳ್ಳುವಂತೆ ಪ್ರಾರ್ಥಿಸಿಕೊಳ್ಳಲ್ಪಡಬಹುದೆಂದು ವಾರ್ಧಾದಲ್ಲಿ ಹೇಳಲಾಗುತ್ತಿದೆ

ನೆಹರುರವರು ಹಂಗಾಮಿ ಸರ್ಕಾರ ರಚಿಸುವರು

ಕೇಂದ್ರ ಹಂಗಾಮಿ ಸರ್ಕಾರವನ್ನು ರಚಿಸಲು ಸಲಹೆಗಳನ್ನು ಕೊಡುವಂತೆ ಕಾಂಗ್ರೆಸ್ ಅಧ್ಯಕ್ಷರಿಗೆ ವೈಸರಾಯರು ಬ್ರಿಟಿಷ್ ಸಾರ್ವಭೌಮ ಸರ್ಕಾರದವರ ಸಮ್ಮತಿಯ ಮೇರೆ ಆಹ್ವಾನವನ್ನು ಕಳುಹಿಸಿದ್ದಾರೆಂದೂ, ಅಧ್ಯಕ್ಷರು ಅದನ್ನು ಅಂಗೀಕರಿಸಿದರೆಂದೂ ವೈಸರಾಯರ ಭವನದಿಂದ ನಿನ್ನೆ ಪ್ರಕಟಣೆ ಹೊರಟಿದೆ ಪಂ॥ ನೆಹರುರವರು ವೈಸರಾಯರೊಡನೆ ಈ ವಿಷ್ಯ ಸಮಾಲೋಚನೆ ನಡೆಸಲು ಸಧ್ಯದಲ್ಲಿಯೇ ದೆಹಲಿಗೆ ತೆರಳುವರು

ಮತ್ತೆ ಅರಾಜಕತೆ ಪ್ರಾರಂಭವೇ ?

ಕೆಲವು ದಿನಗಳ [illegible] ದರ ಸಂಘಗಳ [illegible] [illegible] [illegible] [illegible] [illegible]

ಸಾಧ್ವಿ

ತಾ|| ೧೩-೮-೪೬ ಮಂಗಳವಾರ

ಪತ್ರಿಕಾ ಸಲಹಾ ಸಮಿತಿ

ಸಂಸ್ಥಾನದ ಪತ್ರಿಕಾ ಸಲಹಾ ಸಮಿತಿಯ ಪುನರ್ರಚನೆಯ ವಿಚಾರವಾಗಿ ನ್ಯಾಯಾಂಗ ಕಾರ್ಯದರ್ಶಿಗಳೊಡನೆ ಹಲವು ಸಂಪಾದಕರುಗಳು ನಡೆಸಿದ ಮಾತುಕತೆಗಳಿಗೆ ಅನುಸಾರವಾಗಿ ಮೊನ್ನೆ ಬೆಂಗಳೂರಿನಲ್ಲಿ ಪತ್ರಿಕೋದ್ಯೋಗಿಗಳ ಪ್ರತಿನಿಧಿ ವರ್ಗದವರ ಸಭೆಯೊಂದು ನಡೆಯಿತು. ಪತ್ರಿಕಾ ಸಲಹಾ ಸಮಿತಿಗೆ ಸೂಚಿಸಬೇಕಾದ ಹೆಸರುಗಳೂ ನಿರ್ಧಾರವಾದುವು. ಪತ್ರಿಕೋದ್ಯೋಗಿಗಳಿಗೆ ಅಂಗೀಕಾರಾರ್ಹವಾಗುವ ರೀತಿಯಲ್ಲಿ ಈ ನಿರ್ಣಯವು ಮಾಡಲ್ಪಟ್ಟಿದೆ ಎಂದೂ, ಹಾಸನದಲ್ಲಿ ನಡೆದ ಪತ್ರಿಕೋದ್ಯೋಗಿ ಸಮ್ಮೇಳನದ ನಿರ್ಣಯಕ್ಕೆ ಅನುಗುಣವಾಗಿದೆ ಎಂದೂ ಧಾರಾಳವಾಗಿ ಹೇಳಬಹುದು.

ಸಲಹಾ ಸಮಿತಿಯಿಂದ ಪತ್ರಿಕೆಗಳಿಗಾಗಲೀ, ಸರ್ಕಾರದವರಿಗಾಗಲೀ ಆಗುವ ಪ್ರಯೋಜನದ ಬಗ್ಗೆ ಅನೇಕರಿಗೆ ಸಂಶಯವಿರುವುದು. ಆದರೆ ನೆರೆಯ ಪ್ರಾಂತಗಳಲ್ಲಿರುವಂತೆ ಪತ್ರಿಕಾ ಕರ್ತರ ವಿಶ್ವಾಸಕ್ಕೆ ಪಾತ್ರರಾಗಿ ಸರ್ಕಾರದ ಮೇಲೆಯೂ, ಪತ್ರಿಕೋದ್ಯೋಗಿಗಳ ಮೇಲೆಯೂ ಉತ್ತಮವಾದ ಪ್ರಭಾವವನ್ನು ಬೀರುವ ಮಹನೀಯರುಗಳಿಂದ ಕೂಡಿದ ಸಮಿತಿಯು ಉಭಯತಾಪಿ ಸ್ನೇಹ, ಸೌಹಾರ್ದ ಭಾವವನ್ನು ಹೆಚ್ಚಿಸಲು ವಿಶೇಷ ಸಹಕಾರಿಯಾಗಬಲ್ಲುದೆಂಬುದನ್ನು ಎಲ್ಲರೂ ಅಂಗೀಕರಿಸಿರುವರು. ಆದ್ದರಿಂದಲೇ ಸರ್ಕಾರದವರೂ ಸಹ ಸಮಿತಿಯನ್ನು ಮುಂದುವರಿಸುವ ಆಲೋಚನೆಯನ್ನು ಹೊಂದಿರುವರೆಂದು ನಾವು ನಂಬುತ್ತೇವೆ

ಸಮಿತಿಯಲ್ಲಿ ಸರ್ಕಾರದಿಂದ ನಾಮಕರಣ ಹೊಂದಿದ ಸದಸ್ಯರಾರೂ ಇರಕೂಡದೆಂಬುದು ಸಕಲ ಪತ್ರಿಕೋದ್ಯೋಗಿಗಳ ಅಭಿಪ್ರಾಯವಾಗಿರುತ್ತದೆ ಈ ಬಗ್ಗೆ ಇದುವರೆಗೆ ವಿಶೇಷ ಟೀಕೆಗಳೂ ಆಗಿವೆ. ತಮ್ಮ ವಿಶ್ವಾಸವನ್ನು ಗಳಿಸದೆ ಇರುವವರು ತಮ್ಮ ಲೇಖನಗಳ ವಿಮರ್ಶೆಗೆ ಕೂರಬಹುದೆಂಬುದನ್ನು ಯಾವ ಪತ್ರಿಕೋದ್ಯೋಗಿಗಳೂ ಅಂಗೀಕರಿಸಲಾರರು. ಬ್ರಿಟಿಷ್ ಇಂಡಿಯದಲ್ಲಿ ರಚಿತವಾಗಿರುವ ಸಮಿತಿಗಳಲ್ಲಿಯೂ ಸಹಾ ಪತ್ರಿಕಾ ಕರ್ತರುಗಳಿಂದ ಆರಿಸಲ್ಪಟ್ಟವರೇ ಸಮಿತಿಯ ಸದಸ್ಯರುಗಳಾಗಿರುತ್ತಾರೆ. ಇಲ್ಲಿ ಅದಕ್ಕೆ ವ್ಯತಿರೇಕವಾಗಿದ್ದುದರಿಂದಲೇ ಇಷ್ಟೊಂದು ಅಸಮಾಧಾನಕ್ಕೆ ಕಾರಣವಾಗಿದೆ.

ಸಲಹಾ ಸಮಿತಿಯನ್ನು ರಚಿಸಲು ನಾಲ್ಕು ವರ್ಷಗಳ ಹಿಂದೆ ಸರ್ಕಾರದವರು ಆಜ್ಞೆ ಮಾಡಿದಾಗ ಪತ್ರಿಕೋದ್ಯೋಗಿಗಳಿಂದ ಚುನಾಯಿತರಾದವರೇ ಸಮಿತಿಯ ಸದಸ್ಯರಾಗಿರತಕ್ಕದ್ದೆಂದು ಸ್ಪಷ್ಟವಾಗಿ ಸೂಚಿಸಿದ್ದಾರೆ ನಾಮಕರಣದವರಿಗೆ ಸ್ಥಾನವೇ ಇರುತ್ತಿರಲಿಲ್ಲ. ನಾಮಕರಣ ಹೊಂದಿದವರು ಸಮಿತಿಗೆ ಬರುವುದನ್ನು, ಅದನ್ನು ಇತರರು ಅಂಗೀಕರಿಸುವುದೂ ಎರಡೂ ಸರಿಯಲ್ಲ. ಈ ಆಜ್ಞೆಗೆ ವಿರುದ್ಧವಾಗಿ ಸರ್ಕಾರದವರು ಇದುವರೆಗೆ ಈ ಸಮಿತಿಯನ್ನು ರಚಿಸಿ ಕೆಲಸ ನಡೆಸುತ್ತಿದ್ದ [illegible] ತಪ್ಪು [illegible] ದರೂ ಈ ಲೋಪವನ್ನು [illegible] ಸರಿಪಡಿಸಿ ಇನ್ನು ಮುಂದಾದರೂ ಸರಿಯಾದ ರೀತಿಯಲ್ಲಿ ಸಮಿತಿಯನ್ನು ರಚಿಸುವುದು ಯುಕ್ತವಾಗಿದೆ.

ಪತ್ರಿಕೋದ್ಯೋಗಿಗಳು ಸಂಸ್ಥೆಯೊಂದನ್ನು ಮಾಡಿಕೊಂಡ ಮೇಲೆ ಅವರು ಕಳುಹಿಸತಕ್ಕ ಸದಸ್ಯರ ಪಟ್ಟಿಯಿಂದಲೇ ಸಲಹಾ ಸಮಿತಿಯನ್ನು ರಚಿಸಬೇಕೆಂದು ಸರ್ಕಾರದ ಆಜ್ಞೆಯು ತಿಳಿಸುತ್ತದೆ ಅದರಂತೆ ಈಗ ಪತ್ರಿಕೋದ್ಯೋಗಿಗಳು ಸೇರಿ ಸಮಾಲೋಚನೆ ನಡೆಸಿ ತೀರ್ಮಾನಕ್ಕೆ ಬಂದಿದ್ದಾರೆ. ಸಂಸ್ಥಾನದಲ್ಲಿ ಪತ್ರಿಕೋದ್ಯೋಗಿಗಳ ಹಿತ ಸಾಧನೆಗಾಗಿ ಹಲವು ಸಂಸ್ಥೆಗಳಿರುವುದೇನೋ ನಿಜ. ಆದರೆ ಪತ್ರಿಕೋದ್ಯೋಗಿಗಳ ಸಮ್ಮೇಳನವು ಇವೆಲ್ಲಕ್ಕಿಂತಲೂ ಮೇಲ್ಪಟ್ಟಿರುತ್ತದೆ ಅದರಲ್ಲಿ ಎಲ್ಲ ಪತ್ರಿಕೋದ್ಯೋಗಿಗಳೂ ಸೇರಿರುತ್ತಾರೆ ಸಮ್ಮೇಳನದ ಸ್ಥಾಯೀ ಸಮಿತಿಯು ಸಕಲ ಪತ್ರಿಕೋದ್ಯೋಗಿಗಳ ಹಿತವನ್ನು ಸಾಧಿಸುವುದಾಗಿದೆ. ಆದ್ದರಿಂದ ಆ ಸಮಿತಿಯವರು ಈಗ ಕೊಟ್ಟಿರುವ ಸಲಹೆಯಂತೆ ಪತ್ರಿಕಾ ಸಲಹಾ ಸಮಿತಿಯನ್ನು ಸರ್ಕಾರದವರು ಪುನರ್ರಚನೆ ಮಾಡಿ ಪತ್ರಿಕೋದ್ಯೋಗಿಗಳಿಗೂ, ಆಡಳಿತ ವರ್ಗದವರಿಗೂ ಮಧುರ ಬಾಂಧವ್ಯವನ್ನು ಕಲ್ಪಿಸಿ ಉಭಯತ್ರರಿಂದಲೂ ದೇಶದ ಕಲ್ಯಾಣವು ಸಾಧಿಸಲ್ಪಡುವಂತೆ ಏರ್ಪಡಿಸಬೇಕೆಂದು ನಾವು ಕೋರುತ್ತೇವೆ

ಬೆಳವಾಡಿಯಲ್ಲಿ ಕಸ್ತೂರಿ ಬಾ ಶಿಬಿರದ ಆರಂಭ

ಮೈಸೂರು ೧೩

ಮೈಸೂರು-ಹುಣಸೂರು ರಸ್ತೆಯಲ್ಲಿ ಬೆಳವಾಡಿಯಲ್ಲಿರುವ ಕಸ್ತೂರಿ ಬಾ ಶಿಬಿರದ ಆರಂಭೋತ್ಸವವು ನಾಳೆ ಬೆಳಗ್ಗೆ ೯-೩೦ಕ್ಕೆ ಶ್ರೀಮತಿ ಸುಚೇತ ಕೃಪಾಲಿನಿಯವರಿಂದ ನೆರವೇರಿಸಲ್ಪಡುವುದು ಎಲ್ಲರಿಗೂ ಪ್ರತ್ಯೇಕ ಆಹ್ವಾನ ಪತ್ರವನ್ನು ಕಳಿಸಲು ಸಾಧ್ಯವಾಗಲಿಲ್ಲವಾಗಿ ಇದನ್ನೇ ಆಹ್ವಾನವೆಂದು ಸ್ವೀಕರಿಸಿ ಎಲ್ಲರೂ ದಯಮಾಡಿಸಬೇಕೆಂದು ವ್ಯವಸ್ಥಾಪಕರು ಪ್ರಾರ್ಥಿಸಿದ್ದಾರೆ

ಗೋಪಾಲರಾಯರ ರಾಜೀನಾಮೆ

ಸ್ವಂ ಸು] ಚಾಮರಾಜನಗರ ೧೧

ಇಲ್ಲಿನ ಪುರಸಭೆಯ ಕಾಂಗ್ರೆಸ್ ಸದಸ್ಯರಾದ ಶ್ರೀ ಸಿ. ಗೋಪಾಲರಾಯರು ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಇತ್ತಿರುವರು ಈ ಸಂದರ್ಭದಲ್ಲಿ ಇವರು ಒಂದು ಹೇಳಿಕೆ ಇತ್ತು ಮೈಸೂರು ಕಾಂಗ್ರೆಸ್ ಪ್ರಗತಿ ಪಕ್ಷದ ಪ್ರಣಾಳಿಕೆಯನ್ನು ಒಪ್ಪಿ ಈ ರೀತಿ ಮಾಡಿರುವುದಾಗಿ ಅವರು ತಿಳಿಸಿದ್ದಾರೆ.

ಆಗಸ್ಟ್ ೯

ಶ್ರೀ ಕೆ.ವಿ ಕೃಷ್ಣಮೂರ್ತಿಯವರ ಅಧ್ಯಕ್ಷತೆಯಲ್ಲಿ ವಿದ್ಯಾರ್ಥಿಗಳೂ, ಕಾಂಗ್ರೆಸ್ಸಿನವರೂ ಆಗಸ್ಟ್ ೯ ರ ದಿನಾಚರಣೆಯನ್ನು ಮೊನ್ನೆ ದಿನ ಆಚರಿಸಿದರು.

ತುಟ್ಟಿಭತ್ಯದ ವಿಚಾರ

ಹೈಸ್ಕೂಲ್ ಉಪಾಧ್ಯಾಯರುಗಳ ತುಟ್ಟಿಭತ್ಯದ ವಿಚಾರದಲ್ಲಿ ಪುರಸಭೆಯಲ್ಲಿ ಆದ ನಿರ್ಣಯವು ಈ ರೀತಿ ಇರುವುದಾಗಿ ಅಧ್ಯಕ್ಷರಾದ ಶ್ರೀ ಸಿ. ಟಿ ನಾರಾಯಣರಾಯರು ತಿಳಿಸಿದ್ದಾರೆ. "ಹೈಸ್ಕೂಲ್ ಉಪಾಧ್ಯಾಯರುಗಳಿಗೆ ಈಗಿರುವಂತೆಯೇ ತುಟ್ಟಿಭತ್ಯವು ಮುಂದುವರಿಸಲ್ಪಡಬಹುದು. ಶೇಕಡ ೫೦ರಷ್ಟು ಹೆಚ್ಚಿಸಿರುವ ತುಟ್ಟಿಭತ್ಯದ ಮೊಬಲಗಿನಲ್ಲಿ ಸರ್ಕಾರದವರು ಅರ್ಧ ಭಾಗ ವಹಿಸಿಕೊಂಡರೆ ಆಗ್ಗೆ ಹೆಚ್ಚಾದ ಭತ್ಯದ ಬಗ್ಗೆ ಪರಿಶೀಲನೆ ನಡೆಸಬಹುದು"

೧೪ ನೇ ತಾ|| ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನೆ ನಡೆಸಲು ವಿದ್ಯುಚ್ಛಕ್ತಿ ಇಲಾಖೆಯಲ್ಲಿರುವ ಶ್ರೀ ಮೂರ್ತಿರಾಯರು ಏರ್ಪಾಡು ಮಾಡಿದ್ದಾರೆ.

ವರೈಟಿ ಸ್ಟೋರ್ಸ್

ಪೋಸ್ಟಾಫೀಸ್ ಬೀದಿ, ಶ್ರೀರಂಗಪಟ್ಟಣ

ನಮ್ಮಲ್ಲಿ ಪರಿಶುದ್ಧವಾದ ಕಾಫಿಪುಡಿ ದೊರೆಯುತ್ತದೆ. ನಿಮ್ಮ ಎದುರಿಗೆ ಪುಡಿ ಮಾಡಿಕೊಡಲಾಗುತ್ತದೆ.

ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತದೆ.

ಪಾರ್ಚ್‌ಮೆಂಟ್ ಪೌಂ.ಗಳಿಗೆ ೧-೧೦-೦
ನೇಟಿವ್ ,, ೧-೭-೦
ರೋಬಸ್ಟ್ ,, ೧-೩-೦

ಮತ್ತು ನಮ್ಮಲ್ಲಿ ಪ್ರತಿ ದಿನದ ಬಳಕೆ ಸಾಮಾನುಗಳೂ ಸ್ಟೇಷನರಿ ಸಾಮಾನುಗಳು ದೊರೆಯುತ್ತವೆ.

ಒಂದು ಸಾರಿ ಪರೀಕ್ಷಿಸಿ ನೋಡಿ.

ಪ್ರೊಪ್ರೈಟರ್,
ಸಿ. ನರಸಿಂಹ ಶಾಸ್ತ್ರಿ

ರಾಜ್ ಕಮಲ್ ಟಾಕೀಸ್, ಮೈಸೂರು

1946 ನೇ ಆಗಸ್ಟ್ 9 ನೇ ಶುಕ್ರವಾರದಿಂದ
ಪ್ರತಿ ದಿನ ಮೂರು ಆಟಗಳು

* ಬಿರುಗಾಳಿ *

"The Hurricane"

ಎಂಬ ಸ್ಯಾಮ್ಯುಯೆಲ್ ಗೋಲ್ಡ್‌ವಿನ್ ರವರ ಅತ್ಯದ್ಭುತವಾದ ಚಲನಚಿತ್ರ

ಭೂಮಿಕೆ:— ಡೊರೋತಿ ಲಾಮರ್, ಮೇರಿ ಆಸ್ಟರ್, ಜಾರ್ಜ್ ಹ್ಯಾಲ್ ಮುಂತಾದವರು

ತಾ|| 10—8—46 ರಿಂದ ಅಮೋಘ ಪ್ರಾರಂಭ.

ಮೋತಿಲಾಲ್ ಟಾಕೀಸಿನಲ್ಲಿ

"ಮುಗ್ಗುರು ಮರಾಟೀಲು" (ತೆಲುಗು ಚಿತ್ರ)

THREE MARATEES

ಪ್ರತಿ ದಿನ ಮೂರು ಆಟಗಳು

—:ಭೂಮಿಕೆ:—

ಕನ್ನಾಂಬ, ಡಾ|| ಜಿ. ಪಿ ಸುಬ್ಬರಾವ್, ಜಿ ರಾಜರತ್ನಂ, ನಾಗೇಶರಾವ್, ನಾರಾಯಣರಾವ್, ಶಿವರಾವ್ ಮುಂತಾದವರು

೯-೮-೪೬ ರಿಂದ ಬೆಂಗಳೂರು ಮೂವಿಲ್ಯಾಂಡಿನಲ್ಲಿ ಅಮೋಘ ಮೂರನೇ ವಾರ

—: Released Through :—

SRI MAHAVEER FILM EXCHANGE

Asoka Road, ... Mysore.

ವಿಜಯಾ ಪಿಕ್ಚರ್ಸ್, ಮೈಸೂರು.

NOTICE

Applications are invited for agencies for sale of milk & butter from The City Milk supply at fixed hours for each Mohalla in Mysore City from business houses to work on commission. Applications will be dealt with in person by the Proprietor, between 10,1[illegible] & 15th Aug 1946.

M. V. Krishna Swam[illegible]
Proprietor

OPERA TALKIES

From 13—8—46
Daily 3 Show[illegible]

'King Of The Texas Rangers'
(Full Serial)

FEATURING:-
NEAL HAMILTON and
PANLINE MOORE

Edited printed and published by A. P. Narayan at the Sadhvi Press D Subbiah Road, Mysore

ಗ್ರಾಮೋದ್ಧಾರದಿಂದಲೇ ಸ್ವಾತಂತ್ರ್ಯ

ಸುಚೇತಾರವರ ಭಾಷಣ

ಮೈಸೂರು ೧೪

"ಭಾರತವು ಹಳ್ಳಿಗಳ ದೇಶ ; ಭಾರತವು ಸ್ವತಂತ್ರ್ಯವೆಂದು ಖ್ಯಾತಿಪಡೆದು ಮೆರೆಯಬೇಕಾದರೆ ಪ್ರತಿಯೊಂದು ಗ್ರಾಮವೂ ಸ್ವತಂತ್ರವಾಗಬೇಕು ; ಈ ಶಿಬಿರದಲ್ಲಿ ಶಿಕ್ಷಣ ಪಡೆದ ಪ್ರತಿ ಗ್ರಾಮ ಸೇವಕಿಯೂ ಸ್ವಾತಂತ್ರ್ಯ ದೀಪಿಗೆಯನ್ನು ಭಾರತದ ಪ್ರತಿಮೂಲೆಯಲ್ಲೂ ಬೆಳಗಲಿ" ಎಂಬ ಭಾವನೆಯಿಂದ ಕೂಡಿದ ಸ್ಫೂರ್ತಿದಾಯಕವಾದ ಮಾತುಗಳನ್ನು ಅಖಿಲ ಭಾರತ ಕಸ್ತೂರಿ ಬಾ ನಿಧಿ ವ್ಯವಸ್ಥಾಪಕರಾದ ಶ್ರೀಮತಿ ಸುಚೇತಕೃಪಲಾನಿಯವರು ಬೆಳವಾಡಿಗ್ರಾಮದಲ್ಲಿ 'ಬಾ' ನಿಧಿ ಆಶ್ರಯದಲ್ಲಿ ನಡೆಯುತ್ತಲಿರುವ ಶಿಕ್ಷಣ ಶಿಬಿರವನ್ನು ಆರಂಭಮಾಡುತ್ತಾ ಈ ದಿನ ತಿಳಿಸಿದರು. ಈ ಉತ್ಸವಕ್ಕೆ ಶ್ರೀ ಜಿ. ರಾಮಚಂದ್ರ್ರರವರು ಅಧ್ಯಕ್ಷರಾಗಿದ್ದರು.

ಆರಂಭದಲ್ಲಿ ಧ್ವಜಾರೋಹಣ ನಡೆಯಿತು ಪ್ರಾರ್ಥನೆಯ ನಂತರ ಮೂಲಶಿಕ್ಷಣ ಪ್ರಚಾರಕರಾದ ಶ್ರೀ ರಾಮಚಂದ್ರ್ರರವರು ಕಸ್ತೂರಿಬಾಯಿಯವರ ವಿಚಾರವಾಗಿ ಮಾತನಾಡುತ್ತಾ 'ಬಾ'ರವರು ಮಹಾತ್ಮರಿಯೊಂದೂ ಮಹಾತ್ಮರಿಗೆ ಅನೇಕ ವೇಳೆ ಅಮೂಲ್ಯ ಸಲಹೆಗಳನ್ನು ಕೊಟ್ಟು ಸಹಾಯ ಮಾಡುತ್ತಿದ್ದರೆಂದೂ ಹೇಳಿದರು. ಅವರು ಪಾಕಶಾಸ್ತ್ರ ನಿಪುಣರಾಗಿದ್ದರು, ಎಲ್ಲವನ್ನೂ ಶುದ್ಧವಾಗಿಡುತ್ತಿದ್ದರು, ಮತ್ತು ಕಾಲಕ್ಕೆ ಸರಿಯಾಗಿ ಕೆಲಸ ಮಾಡುತ್ತಿದ್ದರು. ಕಾರ್ಯತತ್ಪರತೆ, ದೇಶಭಕ್ತಿಗಳು ಮಹಾತ್ಮರಿಗೆ ಅನುಗುಣವಾಗಿಯೇ ಅವರಲ್ಲಿ ನೆಲಸಿದ್ದುವು. ನವೀನ ವಿದ್ಯಾಭ್ಯಾಸವು ಪ್ರಚಾರಕ್ಕೆ ಬಂದು ಓದುಗರನ್ನು ಹಳ್ಳಿಗಳಿಂದ ದೂರ ಮಾಡಿದೆ. ಹೆಚ್ಚು ಓದಿದಂತೆಲ್ಲಾ ಹಳ್ಳಿಗಳಿಗೂ ಜನರಿಗೂ ಇರುವ ಅಂತರವು ಹೆಚ್ಚುತ್ತಿದೆ ಇದು ದೇಶದ ಹಿತದೃಷ್ಟಿಯಿಂದ ಸರಿಯಲ್ಲ. ವಿದ್ಯಾರ್ಥಿಗಳಿಗೂ ಹಳ್ಳಿಗಳಿಗೂ ನಿಕಟ ಸಂಬಂಧ ಬೆಳೆಯಬೇಕು. ಗ್ರಾಮಗಳ ಸುಧಾರಣೆಯಾಗಿ ಭಾರತವು ಸ್ವಾತಂತ್ರ್ಯ ಪಡೆಯಬೇಕು ಇದನ್ನು ಗಮನದಲ್ಲಿಟ್ಟು ಎರಡು ಕಾರ್ಯಕ್ರಮಗಳನ್ನೂ ಆರಂಭಿಸಲಾಗಿದೆ ಒಂದು ಗ್ರಾಮ ಶಿಕ್ಷಣ ಶಿಬಿರಗಳು ಎರಡನೆಯದು ಮೂಲ ಶಿಕ್ಷಣ ಪದ್ಧತಿ. ಸೇವಾಗ್ರಾಮದಲ್ಲಿ ನಡೆಯುತ್ತಿರುವ ಈ ಪದ್ಧತಿಯು ಯಶಸ್ವಿಯಾಗಿ ನಡೆದಲ್ಲಿ ದೇಶದ ವಿದ್ಯಾ ಪದ್ಧತಿಯನ್ನೇ ಪರಿವರ್ತಿಸುವುದರಲ್ಲಿ ಸಂದೇಹವಿಲ್ಲವೆಂದು ಹೇಳಿದರು. ಶಿಕ್ಷಣ ಪಡೆದವರು ಪುನಃ ಪಟ್ಟಣಕ್ಕೆ ಹೋಗದೆ ಹಳ್ಳಿಗಳಲ್ಲೇ ನಿಂತು ಗ್ರಾಮೋದ್ಧಾರ ಕಾರ್ಯಗಳಲ್ಲಿ ತುರುಕಾಗಿ ಶ್ರದ್ಧಾ ಭಕ್ತಿಗಳಿಂದ ಕೆಲಸ ಮಾಡಬೇಕೆಂದು ಆಶಿಸಿದರು.

ಶ್ರೀಮತಿ ಕೃಪಾಲಿನಿಯವರು ಮಾತನಾಡುತ್ತಾ ಶಿಕ್ಷಣ ಶಿಬಿರಗಳ ಕಾರ್ಯಕ್ರಮವನ್ನು ವಿವರಿಸಿದರು. ದೇಶದಲ್ಲಿ ಆಂದೋಲನಗಳು ಆಗಿಂದಾಗ್ಗೆ ನಡೆಯುತ್ತಿವೆ ... ಳಗಳಲ್ಲಿ ಸ್ತ್ರೀ ... [illegible] ... ವೆಂದು ತಿಳಿಸಿದರು ಆಂದೋಲನದಲ್ಲಿ ... ವರಿಗೆ ... ಮಾಡಬೇಕೆಂದೂ, ... ಮೂಲ ... ಅಭಾವವೇ ಕಾರಣವೆಂದೂ ತಿಳಿಸಿದರು. ... ಗ್ರಾಮ ಸುಧಾರಣೆ, ಗ್ರಾಮ ... ಇವೇ ಮುಖ್ಯವೆಂದು ...

ಫೋನ್ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಬುಧವಾರ ೧೪—೮—೪೬ [ಸಂಚಿಕೆ ೧೯

ಸೆಪ್ಟೆಂಬರ್ ಒಳಗೇ ನೆಹರೂರವರ ಸರ್ಕಾರ

ಸಂಸ್ಥಾನಗಳಲ್ಲಿ ಬ್ರಿಟಿಷರ ಕೈವಾಡ

ಸ್ವಂ.ಸು.ಪ್ರೋ] ಬೆಂಗಳೂರು ೧೪

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಸಿದ್ದವನಹಳ್ಳಿ ನಿಜಲಿಂಗಪ್ಪನವರು ಈ ದಿನ ಬೆಳಗ್ಗೆ ಪತ್ರಿಕಾಸಮ್ಮೇಳನವೊಂದನ್ನು ನಡೆಸಿದರು. ಅಧ್ಯಕ್ಷರು ಭಾರತ ರಾಜ್ಯಾಂಗ ರಚನಾ ಸಭೆಯ ವಿಚಾರವನ್ನು ಪ್ರಸ್ತಾಪಿಸಿ ಸಂಸ್ಥಾನಗಳಿಂದಲೂ ಪ್ರಜಾಪ್ರತಿನಿಧಿಗಳನ್ನೇ ಕಳುಹಿಸಬೇಕೆಂದರು. ದಿವಾನರ ನೇಮಕವನ್ನು ಕುರಿತು "ಮೈಸೂರು ಮತ್ತು ಹೈದರಾಬಾದ್ ನೇಮಕಗಳನ್ನು ನೋಡಿದರೆ ಬ್ರಿಟಿಷರು ತಮ್ಮ ಅಧಿಕಾರವನ್ನು ಸಂಸ್ಥಾನಗಳ ಮೂಲಕ ಭದ್ರಪಡಿಸಿಕೊಳ್ಳುತ್ತಿರುವರೆಂಬ ಸಂಶಯ ಹುಟ್ಟಿದೆ ಎಂದರು. ನಮ್ಮ ಸಂಸ್ಥಾನದಲ್ಲಿ ಸ್ವಲ್ಪ ಮಳೆ ಆಗಿದ್ದರೂ ಆಹಾರ ಪರಿಸ್ಥಿತಿ ಸ್ವಲ್ಪವೂ ಸುಧಾರಿಸಿಲ್ಲವೆಂದು ಹೇಳಿ ಸರ್ಕಾರದ ಆಹಾರ ನೀತಿ ಇನ್ನೂ ಉತ್ತಮಗೊಂಡಿಲ್ಲವೆಂದರು. ಮಂತ್ರಿಗಳ ಬದಲಾವಣೆಯ ಬಗ್ಗೆ ತಮ್ಮ ಅಭಿಪ್ರಾಯ ತಿಳಿಸುತ್ತಾ "ಇದನ್ನೆಲ್ಲಾ ನೋಡಿದರೆ ಅಧಿಕಾರದ ಬಿಗಿ ತಪ್ಪಿಹೋಗಿದೆಯೆಂದು ತೋರಿಬರುವುದು" ಎಂದರು. ಕೊಚ್ಚಿ ಮಹಾರಾಜರು ರಾಜ್ಯಾಂಗ ಸಮಿತಿ ಮತ್ತು ಇತರ ಸುಧಾರಣೆಗಳ ಬಗ್ಗೆ ಘೋಷಿಸಿರುವ ಘೋಷಣೆಯನ್ನು ಸ್ವಾಗತಿಸಿ ಅವರನ್ನು ಅಭಿನಂದಿಸಿದರು. ತಮ್ಮ ಅಧಿಕಾರಾವಧಿಯಲ್ಲಿ ಸಹಕಾರವಿತ್ತ ಸಹೋದ್ಯೋಗಿ ಕಾರ್ಯಕಾರಿ ಸಮಿತಿ ಸದಸ್ಯರಿಗೂ, ಕೆಲಸಗಾರರಿಗೂ ಪತ್ರಿಕೋದ್ಯೋಗಿಗಳಿಗೂ ತಮ್ಮ ವಂದನೆಗಳನ್ನರ್ಪಿಸಿ ಹೊಸ ಅಧ್ಯಕ್ಷರಾದ ಶ್ರೀ ಕೆ. ಚೆಂಗಲರಾಯರೆಡ್ಡಿಯವರನ್ನು ಪ್ರಶಂಸಿಸಿ ಅವರನ್ನು ಅಭಿನಂದಿಸಿದರು.

ರು. ಪ್ರತಿ ಗ್ರಾಮವೂ ಸ್ವರಾಜ್ಯವಾಗಬೇಕು : ಗ್ರಾಮ ಸ್ವರಾಜ್ಯಗಳ ಶಕ್ತಿಯಿಂದ ಭಾರತದ ಸಂಕೋಲೆ ಬಿಡುಗಡೆಯಾಗುವುದೆಂದು ಹೇಳಿದರು

ಶಿಬಿರದ ಶಿಕ್ಷಣ ಕ್ರಮವನ್ನು ವಿವರಿಸುತ್ತಾ, ಅದರಲ್ಲಿ ಗ್ರಾಮ ಸುಧಾರಣೆಗೆ ಅಗತ್ಯವಾದ ಚರಕ, ಹಾರೋಗ್ಯ ಆರೋಗ್ಯ ಪರಿಪಾಲನೆ, ಸಾಮಾಜಿಕ ಮತ್ತು ಆರ್ಥಿಕ ಮೇಲ್ಮೆಗೆ ಬೇಕಾದ ಅಂಶಗಳ ವಿಚಾರವಾಗಿ ಶಿಕ್ಷಣವನ್ನು ಕೊಡುವಂತೆ ಏರ್ಪಾಡಾಗಿದೆ ಎಂದರು. ಶಿಬಿರದಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಯರು ... ಗ್ರಾಮಗಳಲ್ಲಿ ಕೆಲಸಮಾಡಿ ಗ್ರಾಮೋದ್ಧಾರ ಮಾಡಬೇಕೆಂದು ಆಶಿಸಿದರು.

ವಂದನಾರ್ಪಣೆ ... ನಂತರ ಸಭೆಯು ಮುಕ್ತಾಯವಾಯಿತು.

ಚಿನ್ನದ ಮಾರಾಟದ ತೆರಿಗೆ ಕಡಿಮೆಯಾಯಿತು

ಹೊರ ದೇಶಗಳಿಂದ ಬರುತ್ತಿದ್ದ ಚಿನ್ನ ಮತ್ತು ಬೆಳ್ಳಿಯ ಮೇಲೆ ವಿಧಿಸಿದ್ದ ತೆರಿಗೆಯನ್ನು ಈಗ ಶೇಕಡ ೫೦ ರಷ್ಟು ಇಳಿಸಲಾಗಿದೆ. ಚಿನ್ನಕ್ಕೆ ಒಂದು ತೊಲಾವಿಗೆ ೨೫ ರೂ. ನಿಂದ ಹನ್ನೆರಡೂವರೆ ರೂಪಾಯಿಗೂ, ಬೆಳ್ಳಿಗೆ ಒಂದು ಔನ್ಸಿಗೆ ೪ ಆಣೆಯಿಂದ ೪ ಆಣೆಗಳಿಗೂ ಇಳಿಸಲಾಗಿದೆ. ಇದರಿಂದ ಹೊರ ದೇಶಗಳಿಂದ ಹೆಚ್ಚಾಗಿ ಚಿನ್ನ ಮತ್ತು ಬೆಳ್ಳಿಯು ಬರಬಹುದೆಂದು ಸಂಭವನೀಯವಾಗಿದೆ.

ನನಗೇನೂ ತಿಳಿಯದು

ಮೊನ್ನೆ ದಿನ ರಾತ್ರಿ ದೆಹಲಿಯಿಂದ ಹೊರಟ ಪ್ರಕಟನೆಯ ವಿಷಯವಾಗಿ ಮಿ॥ ಜಿನ್ನಾರವರನ್ನು ಪ್ರಶ್ನಿಸಲು ಅವರು ಕಾಂಗ್ರೆಸ್ ಅಧ್ಯಕ್ಷರಿಗೂ ಮತ್ತು ವೈಸರಾಯರವರಿಗೂ ನಡೆಯುತ್ತಿರುವ ಕಾಗದಪತ್ರ ವ್ಯವಹಾರಗಳಾಗಲೀ ಮತ್ತು ಕಾಂಗ್ರೆಸ್ಸಿನವರು ತಾತ್ಕಾಲಿಕ ಸರ್ಕಾರವನ್ನು ರಚಿಸುವುದಾಗಲೀ ತನಗೆ ಗೊತ್ತಿಲ್ಲವೆಂದು ಅವರು ತಿಳಿಸಿದರು

ರೈಲ್ವೆ ಮುಷ್ಕರ ಮುಂದು ವರಿಯಿತು

ನಾಳೆ ಮಧ್ಯ ರಾತ್ರಿಯಿಂದ ಮುಷ್ಕರ ಹೂಡುವುದಾಗಿ ಸೌತ್ ಇಂಡಿಯನ್ ರೈಲ್ವೆ ಕೆಲಸಗಾರರು ಕೊಟ್ಟಿದ್ದ ನೋಟೀಸನ್ನು ೨೪ ನೇ ತಾ॥ ವರೆವಿಗೆ ಮುಂದುವರಿಸಿರುವುದಾಗಿ ಪ್ರಕಟಿಸಲಾಗಿದೆ. ಮದ್ರಾಸಿನ ಪ್ರಧಾನಿಗಳೇ ಮಧ್ಯಸ್ಥಿಕೆ ವಹಿಸಲು ಬಂದಿರುವುದರಿಂದ ಈ ಮುಷ್ಕರವನ್ನು ಮುಂದಕ್ಕೆ ಹಾಕಲಾಗಿದೆ

ವರ್ಧಂತ್ಯುತ್ಸವ

ರಾಜಧಾನಿಯ ನಾರಾಯಣರಾವ್ ರೋಡಿನಲ್ಲಿರುವ ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನದಲ್ಲಿ ಶ್ರೀ ರಾಜಪರಿವಾರ ಯುವಜನ ಸೋಷಿಯಲಿಸ್ಟ್ ಸಂಘದವರು ತಾರೀಖು ೧೧-೮-೪೬ ನೇ ಭಾನುವಾರ ಸಾಯಂಕಾಲ ಸಭೆ ಸೇರಿ ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ರವರ ೨೮ ನೇ ವರ್ಧಂತ್ಯುತ್ಸವವನ್ನು ಶ್ರೀ ... [illegible] ... ಮಾಡಲಾಯಿತು.

ಸೆಪ್ಟೆಂಬರ್ ಒಳಗೇ ಕೇಂದ್ರ ಸರ್ಕಾರ

ಪಂ॥ ನೆಹರೂರವರು ವೈಸರಾಯರ ಆಹ್ವಾನದಂತೆ ಸದ್ಯದಲ್ಲೇ ದೆಹಲಿಗೆ ತೆರಳಲಿದ್ದಾರೆ. ಈ ಮಧ್ಯೆ ಅವರು ಮಿ॥ ಜಿನ್ನಾರವರನ್ನು ಭೇಟಿ ಮಾಡುವ ಸಂಭವವಿದೆ. ಪಂ॥ ನೆಹರೂರವರು ದೆಹಲಿಗೆ ತೆರಳಿದ ನಂತರ ಕೇಂದ್ರ ತಾತ್ಕಾಲಿಕ ಸರ್ಕಾರದ ಸದಸ್ಯರ ಪಟ್ಟಿಯನ್ನು ವೈಸರಾಯರಿಗೆ ಕೊಡುವರು. ತಾತ್ಕಾಲಿಕ ಸರ್ಕಾರ ಮತ್ತು ರಾಜ್ಯಾಂಗ ರಚನಾ ಸಭೆಗಳೆರಡೂ ಸೆಪ್ಟೆಂಬರ್ ಮಧ್ಯಭಾಗದೊಳಗೇ ಕೆಲಸಮಾಡಲು ಆರಂಭಿಸುವುವೆಂದು ದೆಹಲಿಯ ವರದಿ ತಿಳಿಸುತ್ತದೆ.

ಜಮಖಂಡಿಯಲ್ಲಿ ರಾಜಬಂದಿಗಳ ಬಿಡುಗಡೆ

ಕಳೆದ ೪೨ ನೇ ಆಗಸ್ಟ್ ಚಳುವಳಿಯಲ್ಲಿ ಹಲವಾರು ವರ್ಷ ಶಿಕ್ಷೆಗೆ ಗುರಿಯಾಗಿದ್ದ ೧೭ ಮಂದಿ ರಾಜಕೀಯ ಬಂದಿಗಳನ್ನು ಜಮಖಂಡಿ ರಾಜಾ ಸಾಹೇಬರು ತಮ್ಮ ಸಿಂಹಾಸನಾರೋಹಣದ ೨೦ ನೇ ವಾರ್ಷಿಕೋತ್ಸವದ ಸಂಬಂಧದಲ್ಲಿ ಬಿಡುಗಡೆ ಮಾಡಿದ್ದಾರೆ

ಗಾಂಧೀ ಸೇವಾ ಸಂಘ

ನಾಳೆ ಸಂಜೆ ನಾಲ್ಕು ಘಂಟೆಗೆ ಶ್ರೀಮತಿ ಸುಚೇತಾ ಕೃಪಲಾನಿಯವರು ಚಾಮುಂಡಿ ಎಕ್ಸ್‌ಟೆನ್‌ಷನ್ ದೀವಟಿಗೆ ಬೀದಿ ಕೊನೆಯಲ್ಲಿರುವ ಮೇಲ್ಕಂಡ ಸಂಘಕ್ಕೆ ಭೇಟಿ ಕೊಡುವರು. ಸರ್ವರಿಗೂ ಆಹ್ವಾನವುಂಟು.

ಫೆಡರಲ್ ಜಡ್ಜರು ರಾಜಧಾನಿಗೆ

ಸ್ವಂ.ಸು.ಪ್ರೋ] ಬೆಂಗಳೂರು ೧೪

ಫೆಡರಲ್ ಕೋರ್ಟಿನ ಚೀಫ್ ಜಸ್ಟಿಸ್ ರಾದ ಸರ್ ಪ್ಯಾಟ್ರಿಕ್ ಸ್ಪೆನ್ಸರವರು ಅವರ ಪತ್ನೀ ಸಮೇತ ರಾಜಧಾನಿಗೆ ಪ್ರಯಾಣ ಮಾಡಿದರು. ೧೭ ನೇ ತಾ॥ ನಾವರು ಬಂದು, ಅದೇ ರಾತ್ರಿ ಸ್ವಸ್ಥಾನಕ್ಕೆ ಹಿಂತಿರುಗುವರು.

ಅಠಾರಾ ಕಛೇರಿಗೆ ದಿವಾನರ ಪ್ರಥಮ ಭೇಟಿ

ಈ ದಿನ ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರು ಇದೇ ಮೊದಲಾಗಿ ಅಠಾರಾ ಕಛೇರಿಗೆ ಭೇಟಿಕೊಟ್ಟು ದಿವಾನಗಿರಿಯ ಮಾಮೂಲು ಕೆಲಸ ಕಾರ್ಯಗಳಿಗೆ ಪ್ರಾರಂಭಮಾಡಿದರು

ಹೊಸಕೋಟೆಗೆ ಹೈಸ್ಕೂಲು

ಬೆಂಗಳೂರು ಜಿಲ್ಲೆಯ ಹೊಸಕೋಟೆಗೆ ಸರ್ಕಾರದವರು ಒಂದು ಮುನಿಸಿಪಲ್ ಹೈಸ್ಕೂಲನ್ನು ಮಂಜೂರ್ಮಾಡಿದ್ದಾರೆ ಈ ವರ್ಷವೇ ಮೊದಲನೇ ತರಗತಿ ನಡೆಯುವುದು

ಸರ್ಕಾರೀ ಸುದ್ದಿ

ಪ್ಲೇಗು ತಲುಪಿದುದರಿಂದ ತಿಪಟೂರಿನಲ್ಲಿ ಕೊಬ್ಬರಿ ... ೧೭ ನೇ ತಾ॥ ನ ವರೆಗೆ ಮುಚ್ಚಲು ಸರ್ಕಾರದ ಅಪ್ಪಣೆಯಾಗಿದೆ. ಆನರರಿ ... ಶ್ರೀ ಪಿ. ರಾಜಗೋಪಾಲಯ್ಯಂಗಾರ್ಯರನ್ನು ... ಮೈಸೂರು ಸರ್ಕಾರಕ್ಕೆ ... ನೇಮಿಸಲಾಗಿದೆ

OPERA TALKIES

From 13—8 46

Daily 3 Shows

'King Of The Texas Rangers'

(Full Story)

FEATURING

[illegible]

ಸಾಧ್ವಿ

ತಾ॥ ೧೪-೮-೪೬ ಬುಧವಾರ

ಕೇಂದ್ರ ಸರ್ಕಾರದ ರಚನೆ

ಕಡೆಗೂ ಭಾರತ ಕೇಂದ್ರ ಸರ್ಕಾರದ ರಚನೆಗೆ ಏರ್ಪಾಡಾಗಿರುತ್ತದೆ. ಬ್ರಿಟಿಷ್ ಸಾರ್ವಭೌಮ ಸರ್ಕಾರದ ಸಮ್ಮತಿಯಿಂದ ವೈಸರಾಯರು ಈ ಬಗ್ಗೆ ಸಲಹೆ ನೀಡಲು ಕಾಂಗ್ರೆಸ್ಸಿಗೆ ಆಹ್ವಾನವಿತ್ತಿದ್ದಾರೆ. ಕಾಂಗ್ರೆಸ್ ಅಧ್ಯಕ್ಷರಾದ ಪಂಡಿತ ನೆಹರೂರವರು ಇದನ್ನು ಅಂಗೀಕರಿಸಿದ್ದಾರೆ. ಇದಕ್ಕಾಗಿ ಕಾಂಗ್ರೆಸ್ಸಿನವರನ್ನೂ, ಸರ್ಕಾರದವರನ್ನೂ ಅಭಿನಂದಿಸಬೇಕು.

ಕೇವಲ ಕೋಮು ವಾರು ತತ್ವದ ಮೇಲೆ ಸಂಪುಟವನ್ನು ರಚಿಸುವ ಪ್ರಯತ್ನಕ್ಕೆ ಇದುವರೆಗೆ ಕಾಂಗ್ರೆಸ್ಸು ಒಪ್ಪದಿದ್ದುದರಿಂದ ಇದಕ್ಕೆ ಇದುವರೆಗೆ ಸಾವಕಾಶವಾಯಿತು. ಪ್ರಧಾನ ರಾಜಕೀಯ ಪಕ್ಷವೇ ಯಾವಾಗಲೂ ಮಂತ್ರಿ ಮಂಡಲವನ್ನು ರಚಿಸಬೇಕಾದ ಒಳ್ಳೆಯ ಸಂಪ್ರದಾಯವನ್ನು ಮನ್ನಿಸಿ ಸರ್ಕಾರದವರು ಕಾಂಗ್ರೆಸ್ಸಿಗೆ ಆಹ್ವಾನವನ್ನಿತ್ತಿರುವರು. ಅದನ್ನು ಕಾಂಗ್ರೆಸ್ಸಿನವರು ಅಂಗೀಕರಿಸಿರುವುದು ಸಹಜವಾಗಿಯೇ ಇದೆ. ಬ್ರಿಟಿಷ್ ಸರ್ಕಾರದವರು ಈಗಲಾದರೂ ಕೋಮುವಾರು ಪ್ರಾಧಾನ್ಯತೆಯನ್ನು ಬದಿಗೊತ್ತಿ ರಾಜಕೀಯ ತತ್ವಗಳಿಗೆ ಪ್ರತಿಷ್ಠೆಯನ್ನಿತ್ತಿರುವುದು ಉಚಿತವಾಗಿಯೇ ಇದೆ. ಭಾರತ ಸಮಸ್ಯೆಯ ತೀರ್ಮಾನದ ಬಗ್ಗೆ ಅವರ ಪ್ರಾಮಾಣಿಕತೆಯನ್ನು ಇದು ಬಹುಮಟ್ಟಿಗೆ ವ್ಯಕ್ತೀಕರಿಸುವುದರಲ್ಲಿ ಸಂಶಯವಿಲ್ಲ.

ಕಾಂಗ್ರೆಸ್ಸಿನ ಔದಾರ್ಯವೂ ಸಹ ಅನೇಕ ಮುಖವಾಗಿ ಈಗ ವೇದ್ಯವಾಗುತ್ತಿದೆ. ರಾಜ್ಯಾಂಗ ಸಮಿತಿಗೆ ಕಾಂಗ್ರೆಸ್ಸಿನವರಲ್ಲದವರನ್ನು ಅದು ತೆಗೆದುಕೊಂಡಿದೆ. ಕೇಂದ್ರ ಸರ್ಕಾರದಲ್ಲಿ ರಾಷ್ಟ್ರೀಯ ಮುಸಲ್ಮಾನರಿಗೂ ಸ್ಥಾನವನ್ನು ಕಲ್ಪಿಸಿಕೊಡಲು ಒತ್ತಾಯ ಪಡಿಸುತ್ತಿದೆ. ಎಲ್ಲಕ್ಕಿಂತಲೂ ಮಿಗಿಲಾಗಿ ಈಗ ಕೇಂದ್ರ ಸರ್ಕಾರದ ರಚನೆಯಲ್ಲಿ ಮುಸ್ಲಿಂ ಲೀಗಿನ ಸಹಕಾರವನ್ನು ಬಹಿರಂಗವಾಗಿ ಬೇಡಿದ ಕಾಂಗ್ರೆಸ್ಸು ಯಾವ ಪ್ರತಿಷ್ಠೆಯ ಮೇಲೂ ಕುಳಿತಿಲ್ಲವೆಂದೂ, ದೇಶದ ಹಿತಕ್ಕೆ ಬೇಕಾದ ಸಕಲ ಏರ್ಪಾಟುಗಳಿಗೂ ಅದು ಸಿದ್ಧವಾಗಿದೆಯೆಂಬುದೂ ಇದರಿಂದ ವೇದ್ಯವಾಗುತ್ತದೆ.

ಲೀಗಿನ ಅಡಚಣೆಯ ನೀತಿಯನ್ನೇ ಕಂಡು ಅದರೊಡನೆ ಮತ್ತೊಮ್ಮೆ ಸಂಧಾನವನ್ನೇ ಎತ್ತುವುದಿಲ್ಲವೆಂದು ಹಲವು ಕಾಂಗ್ರೆಸ್ ನಾಯಕರು ಹೇಳುತ್ತಿದ್ದರು. ಆದರೂ ಈ ಸಮಯದಲ್ಲಿ ಉದಾರ ಭಾವನೆಯನ್ನು ತೋರಿ ಲೀಗಿಗೆ ಆಹ್ವಾನವನ್ನು ಕಳುಹಿಸಿ ಅದರ ಸಹಕಾರವನ್ನು ಕೋರಿದ್ದಾರೆ. ಈಗಲೂ ಸಮಯವು ಮಿಂಚಿ ಹೋಗಿಲ್ಲ. ಇಂದಿನ ವಿದ್ಯಮಾನಗಳನ್ನೂ, ದೇಶದ ಜಾಗೃತಿಯನ್ನೂ ಮನಗಂಡು ಲೀಗಿನವರು ಕೇಂದ್ರ ಸರ್ಕಾರ ರಚನೆಯಲ್ಲಿ ಸಹಕರಿಸಿ ಇಡೀ ದೇಶದ ಪ್ರಜಾಕೋಟಿಯ ಅಭ್ಯುದಯವನ್ನು ಸಾಧಿಸುವುದು ಉಚಿತವಾಗಿದೆ. ಅದು ಹಾಗೆ ಮಾಡದಿದ್ದರೆ ದೇಶದ ಇತರ ಪಂಗಡಗಳೆಲ್ಲವೂ ಒಂದುಗೂಡಿ ಲೀಗನ್ನು ಬದಿಗೊತ್ತಿ ತಮ್ಮ ಧ್ಯೇಯವನ್ನು ಸಾಧಿಸುವುದು ಖಂಡಿತ.

ಹೈದರಾಬಾದಿನಲ್ಲಿ ಕಾಂಗ್ರೆಸ್ ಪ್ರಬಲವಾಗುತ್ತಿದೆ

ಹೈದರಾಬಾದ್ ಕರ್ನಾಟಕ ಪರಿಷತ್ತಿನ ಸ್ಥಾಯೀ ಸಮಿತಿ ಸಭೆಸೇರಿ ಸಂಸ್ಥಾನದ ಕಾಂಗ್ರೆಸ್ಸಿನಲ್ಲಿ ಪರಿಷತ್ತನ್ನು ವಿಲೀನ ಮಾಡಬೇಕೆಂದು ತೀರ್ಮಾನಿಸಿ ಸಂಸ್ಥಾನದ ಕಾಂಗ್ರೆಸ್ಸಿನ ಕೌನ್ಸಿಲಿಗೆ ಹೈದರಾಬಾದ್ ಕರ್ನಾಟಕದಿಂದ ೩೨ ಪ್ರತಿನಿಧಿಗಳನ್ನು ಆರಿಸಲಾಯಿತು.

ನಿಮ್ಮ ಮೈ ಮೋಹಕವಲ್ಲದಂತೆ
ಹೋಗಬೇಕೆ? ನೀವು
ಲಾವಣ್ಯ ಮೂರ್ತಿಗಳಾಗಬೇಕೆ?
ಹಾಗಾದರೆ
ನಮ್ಮ ಮೈಸೂರು ಸ್ಯಾಂಡಲ್
ಸೋಪನ್ನೇ ಉಪಯೋಗಿಸಿ!

ಮೈಸೂರು
ಸ್ಯಾಂಡಲ್
ಸೋಪ್

ಅನೇಕರಿಗೆ ಸೌಂದರ್ಯವನ್ನು
ಸಂಪಾದಿಸಿ ಕೊಟ್ಟಿದೆ. ನಿಮಗೂ
ಸಂಪಾದಿಸಿ ಕೊಡುತ್ತದೆ.
ಪರೀಕ್ಷಿಸಿ ನೋಡಿರಿ
ಎಲ್ಲೆಲ್ಲೂ ದೊರೆಯುತ್ತವೆ.
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.

ಬಸ್ ವ್ಯವಸ್ಥೆ

ಸ್ವಂ.ವ.] ಚಾಮರಾಜನಗರ ೧೨ ನಿನ್ನೆ ದಿನದಿಂದ ಅಗರ-ಮಾಂಬಳ್ಳಿಗೆ ಹೊಸ ಬಸ್ಸು ಹೊರಡುತ್ತಿದೆ. ಇದರಿಂದ ಬಹಳ ಅನುಕೂಲವಾಗಿದೆ. ಇದೇ ಬಸ್ಸು ಪ್ರತಿದಿನ ಎರಡು ವೇಳೆ ಹೋಗಿ ಬಂದು ಮಾಡಿದರೆ ಉತ್ತಮ.

ಕಳೆದೆರಡು ದಿನಗಳಿಂದ ತೃಪ್ತಿಕರವಾಗಿ ಮಳೆಯಾಗಿದೆ — —

ಆರಾಧನೆ

ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನೆ ಪ್ರಯುಕ್ತ ಮೈಸೂರು ರಾಮಾನುಜ ರಸ್ತೆ ವೀಣೆ ಸುಬ್ಬಯ್ಯನವರ ತೊಟ್ಟಿಯಲ್ಲಿರುವ ಶ್ರೀ ಶ್ಯಾಮದಾಸರ ಮನೆಯಲ್ಲಿ ಈ ದಿನ ಸಂಜೆ ೭ ಗಂಟೆಗೆ ದಾಸರಿಂದ ಶ್ರೀ ಸ್ವಾಮಿಗಳ ವಿಚಾರವಾಗಿ ಹರಿಕಥೆ ನಡೆಯುತ್ತದೆ.

NOTICE

Applications are invite
for agencies for sale o
milk & butter from Th
City Milk supply at fixe
hours for each Mohalla i
Mysore City from busines
houses to work on commi
ssion. Applications will b
dealt with in person by th
Proprietor, between 10t
& 15th Aug 1946.

M. V. Krishna Swa
Proprietor

ಶ್ರೀಕೃಷ್ಣರಾಜೇಂದ್ರ ಮಿಲ್ಸ್-ಲಿಮಿಟೆಡ್.,

ಮೈಸೂರು

ಅಬ್‌ಸ್ಟ್ರಾಕ್ಟ್ ನೋಟೀಸು

ಈ ನೋಟೀಸು ಮೂಲಕ ತಿಳಿಯಪಡಿಸುವದೇನೆಂದರೆ :—

ಶ್ರೀ ಕೃಷ್ಣರಾಜೇಂದ್ರ ಮಿಲ್ಸ್, ಲಿಮಿಟೆಡ್ಡಿನ ಶೇರುದಾರರ ಇಪ್ಪತ್ತಾರನೆ
ಸಾಮಾನ್ಯ ಮಹಾಸಭೆಯು ಮೈಸೂರು ಸಿಟಿ ಚಾಮರಾಜ ರಸ್ತೆಯಲ್ಲಿರುವ ಕೋ
ರೇಟಿವ್ಸ್ ಹೌಸ್‌ನ ಕಟ್ಟಡದಲ್ಲಿ ಈ ಕೆಳಗೆ ಕಾಣಿಸಿರುವ ಕಾರ್ಯಕ್ರಮಗಳನ್ನು ವ
ಹರಿಸಲು, ೧೯೪೬ ನೇ ಸೆಪ್ಟೆಂಬರ್ ಮಾಹೆ ೨೧ ನೇ ತಾರೀಖು ಶನಿವಾರ ಸಂಜೆ ೫
ಟೆಗೆ ನಡೆಯುತ್ತದೆ:—

೧) ೧೯೪೬ ನೇ ಜೂನ್ ೩೦ ನೇ ತಾರೀಖಿಗೆ ಅಂತ್ಯವಾಗುವ ವರ್ಷದ
ಕ್ಟರುಗಳ ವರದಿ ಮತ್ತು ಪರಿಷ್ಕೃತವಾದ ಲೆಖ್ಖ ಪತ್ರಗಳ ವಿವರವ
ಸ್ವೀಕರಿಸುವುದು.

೨) ಡಿವಿಡೆಂಡ್ ಮತ್ತು ಬೋನಸ್ಸನ್ನು ನಿರ್ಧರಿಸುವುದು.

೩) ಎಲ್ಲಾ ಶೇರುದಾರರಿಗೂ ಪ್ರತ್ಯೇಕವಾಗಿ ತಿಳಿಯಪಡಿಸಿರುವ ರಿಸಲ್ಯೂ
ಗಳನ್ನು (ತಿದ್ದುಪಡಿಯಿಂದಾಗಲೀ ಅಥವಾ ತಿದ್ದುಪಡಿಯಿಲ್ಲದೆಯಾಗ
ಸ್ಪೆಷಲ್ ರಿಸಲ್ಯೂಷನ್‌ಗಳಾಗಿ ಪರಿಶೀಲಿಸಿ ಸ್ವೀಕರಿಸುವುದು

೪) ಕ್ರಮವಾಗಿ ನಿವೃತ್ತರಾಗುವ ಇಬ್ಬರು ಡೈರೆಕ್ಟರುಗಳ ಸ್ಥಾನಗಳಿಗೆ ಇ
ಡೈರೆಕ್ಟರುಗಳನ್ನು ಚುನಾಯಿಸುವುದು

೫) ಮೇಲ್ಕಂಡಂತೆ ಸೂಚಿಸಿರುವ ಸ್ಪೆಷಲ್ ರಿಸಲ್ಯೂಷನ್‌ಗಳಿಗೆ ಅನು
ವಾಗಿ ಮೂರು ಗೌರ್ನಮೆಂಟು ಡೈರೆಕ್ಟರುಗಳ ಸ್ಥಾನಗಳಿಗೆ
ಮೂರು ಡೈರೆಕ್ಟರುಗಳನ್ನು ಚುನಾಯಿಸುವುದು.

೬) ಪ್ರಸ್ತುತ ವರ್ಷಕ್ಕೆ (೧೯೪೬ ನೇ ಜುಲೈ ೧ ರಿಂದ, ೧೯೪೭ ನೇ ಜ
೩೦ ನೇ ತಾರೀಖಿನ ವರೆಗೆ) ಆಡಿಟರುಗಳನ್ನು ನೇಮಿಸಿ ಅವರ
ವನೆಯನ್ನು ನಿರ್ಧರಿಸುವುದು.

ಕಂಪೆನಿಯ ಶೇರ್ ಟ್ರಾನ್ಸ್‌ಫರ್ ಪುಸ್ತಕಗಳು, ೧೯೪೬ ನೇ ಸೆಪ್ಟೆಂಬರ್ ೧
ಸೆಪ್ಟೆಂಬರ್ ೨೨ ನೇ ತಾರೀಖಿನ ವರೆಗೆ ಈ ಎರಡು ದಿನಗಳೂ ಸಹಾ ಸೇರಿ ಮು
ಟ್ಟಿರುತ್ತವೆ.

ಮೈಸೂರು — ಬೋರ್ಡಿನ ಅಪ್ಪಣೆ ಪ್ರಕಾರ
೪ ನೇ ಆಗಸ್ಟ್ ೧೯೪೬. — ಬಿ. ಎಸ್. ವಿಶ್ವೇಶ್ವರಯ
ಸೆಕ್ರಟರಿ

ಸೂಚನೆ:—೧) ಡಿವಿಡೆಂಡ್ ಮತ್ತು ಬೋನಸ್ ನಿರ್ಧರಿಸಿದ ನಂತರ ಅವು
ಮೈಸೂರು ಸಿಟಿಯಲ್ಲಿರುವ "ದಿ ಬ್ಯಾಂಕ್ ಆಫ್ ಮೈಸೂರು, ಲಿಮಿಟೆ
ಮುಖಾಂತರ ೧೯೪೬ ನೇ ಸೆಪ್ಟೆಂಬರ್ ೨೮ ನೇ ತಾರೀಖಿನ ಲಾಗಾಯ್ತು
ಮಾಡಲಾಗುವದು. ೧೯೪೬ ನೇ ಸೆಪ್ಟೆಂಬರ್ ೧ ನೇ ತಾರೀಖಿನ ದಿನ
ನಿಯ ಮೆಂಬರುಗಳ ಪಟ್ಟಿಯಲ್ಲಿ ಹೆಸರಿರುವ ಶೇರುದಾರರಿಗೆಲ್ಲಾ ಡಿವಿ
ಮತ್ತು ಬೋನಸ್ ವಾರಂಟುಗಳನ್ನು ಕಳುಹಿಸಲಾಗುವದು.

೨) ಕಂಪೆನಿಯ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ನಿನ ೧೨೨ ನೇ
ಕಲ್ ಪ್ರಕಾರ ಡೈರೆಕ್ಟರ್ ಸ್ಥಾನಕ್ಕೆ ಉಮೇದುವಾರಿಕೆ ನೋಟೀಸನ್ನು
ಸಭೆ ಮೀಟಿಂಗಿಗೆ ಏಳು ದಿನಗಳಾದರೂ ಮುಂಚೆ ಅಂದರೆ ೧೯೪೬ ನೇ ಸೆ
೧೪ ನೇ ತಾರೀಖು ಸಂಜೆ, ೫ ಗಂಟೆಯ ಒಳಗಾಗಿ ಕಂಪೆನಿಯ ರಿ
ಆಫೀಸಿನಲ್ಲಿ ಲಿಖಿತ ಮೂಲಕ ಕೊಡತಕ್ಕದ್ದು.

೩) ಶೇರುದಾರರು ತಮ್ಮ ವಿಳಾಸದಲ್ಲಿ ಬದಲಾವಣೆ ಏನಾದರೂ
ಅದನ್ನು ಈಗಲೇ ಕಂಪೆನಿಗೆ ತಿಳಿಸಬೇಕಾಗಿ ಕೋರಿದೆ.

ಮಳೆ ದೆಸೆಯಿಂದ ಕಳೆದ ಭಾನುವಾರ ಕುಸ್ತಿಯು ನಡೆಯಲಿಲ್ಲ

ತಾ॥ 18—8—46 ನೇ ಭಾನುವಾರ ಸಂಜೆ

೪-೩೦ ಕ್ಕೆ ತಪ್ಪದೆ ನಡೆಯುತ್ತದೆ.

ಮೈಸೂರು ಅಠಾರಾ ಕಛೇರಿ ಬಳಿ ಇರುವ ಮೈದಾನದಲ್ಲಿ

ಬೆಂಗಳೂರು ಮೈಸೂರಿಗೆ
ಕೋರಾಪಿಟ್ ನಿಂತಿರುವ
ಪೈ॥ ಸಣ್ಣ ಬೋರಯ್ಯ



ಬೆಂಗಳೂರು ಮೈಸೂರಿಗೆ
ಕೋರಾಪಿಟ್ ನಿಂತಿರುವ
ಪೈ॥ ಶ್ರೀಕಂಠಯ್ಯ

ಪಂಜಾಬ್ ಪೈ॥ ಧರ್ಮಸಿಂಗ್-ಕೊಲ್ಲಾಪುರ ಪೈ॥ ರಾಮರಾವ್

ಪೈ॥ ಆದಂಸಾಬ್—ಪೈ॥ ಸಾಬೂಲಾಲ್

ಪೈ॥ ಜವರಯ್ಯ—ನಂಜನಗೂಡು ಪೈ॥ ಎನಂಪು.

ಇನ್ನೂ ೧೦ ಜೊತೆ ಅಮೋಘವಾದ ಕುಸ್ತಿಗಳು 18 ನೇ ತಾ॥ ತಪ್ಪದೆ ನಡೆಯುತ್ತವೆ

Edited printed and published by A. K. Nagarajan at the Sadhv
D Subbiah Road, Mysore

ಫೋನ್ ನಂ 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸ

ಸಂಪುಟ ೫] ಗುರುವಾರ ೧೪—೧೧—೪೬ [ಸಂಚಿಕೆ ೨೦

ಕಾಂಗ್ರೆಸ್ ಅಧ್ಯಕ್ಷತೆಗೆ ಆಚಾರ್ಯ ಕೃಪಲಾನಿ

ದಿವಾನರು ರಾಜಧಾನಿಗೆ

ಸ್ವಂ. ಸು ಫೋ] ಬೆಂಗಳೂರು ೧೫

ದಿವಾನರು ಈ ದಿನ ಮಧ್ಯಾಹ್ನ ಮೋಟಾರಿನಲ್ಲಿ ರಾಜಧಾನಿಗೆ ಪ್ರಯಾಣ ಮಾಡಿದರು. ಅಲ್ಲಿ ೩ ದಿನಗಳು ಇರುವ ನಿರೀಕ್ಷಣೆ ಇದೆ.

ಮಂತ್ರಿ ಮಂಡಲದ ಸಭೆ

ಈ ದಿನ ಬೆಳಗ್ಗೆ ೧೧-೩೦ಕ್ಕೆ ದಿವಾನರ ಅಧ್ಯಕ್ಷತೆಯಲ್ಲಿ ಮಂತ್ರಿ ಮಂಡಲದ ಸಭೆ ನಡೆಯಿತು. ಸರ್ ಮೊದಲಿಯಾರರು ದಿವಾನರಾದ ನಂತರ ಮಂತ್ರಾಲೋಚನಾ ಸಭೆ ನಡೆದದ್ದು ಇದೇ ಮೊದಲು.

ದಿವಾನರೊಡನೆ ಭೇಟಿ

ಕಳೆದ ೨-೩ ದಿನಗಳಿಂದ ಮದ್ರಾಸಿನ ಕೈಗಾರಿಕಾ ಮಂತ್ರಿಗಳಾದ ಶ್ರೀ ವಿ ವಿ ಗಿರಿ, ಕೇಂದ್ರ ಶಾಸನ ಸಭಾ ಸದಸ್ಯರಾದ ಶ್ರೀ ಕೆ. ಸಿ ನಿಯೋಗಿ ಮತ್ತು ಮದ್ರಾಸ್ ಮೇಯರ್ ಶ್ರೀ ಎಸ್ ಶಿವರಾಜ್ ಮುಂತಾದ ಪ್ರಮುಖರು ದಿವಾನರನ್ನು ಭೇಟಿ ಮಾಡಿದರು.

ಪುರಸಭೆಯ ಪ್ರತಿಭಟನೆ

ಪುರಸಭೆಯ ಕಮೀಷನರ ಪರ್ಸನಲ್ ಅಸಿಸ್ಟೆಂಟರ ನೇಮಕದ ಬಗ್ಗೆ ಪುರಸಭೆಗೆ ಅಧಿಕಾರವಿದ್ದರೂ ತಾವೇ ನೇಮಕವನ್ನು ಮಾಡಿರುವ ಸರ್ಕಾರದ ವರ್ತನೆಯನ್ನು ಖಂಡಿಸಿ ನಿನ್ನೆ ಪುರಸಭೆಯ ಅಧಿವೇಶನದಲ್ಲಿ ನಿರ್ಣಯಿಸಲಾಯಿತು.

ಕಾಂಗ್ರೆಸ್ ಅಧ್ಯಕ್ಷತೆಗೆ ಕೃಪಲಾನಿಯವರು

ಪಂ॥ ನೆಹರೂ, ಆಜಾದ್, ಪಟೇಲ್, ರಾಜೇಂದ್ರಬಾಬು ಇವರುಗಳೆಲ್ಲರೂ ಕೇಂದ್ರ ಸರ್ಕಾರದ ಮಂತ್ರಿಗಳಾಗುವುದರಿಂದ ಪಂ॥ ನೆಹರೂರವರು ಅಧ್ಯಕ್ಷತೆ ಬಿಟ್ಟುಕೊಟ್ಟರೆ ಆಗ್ಗೆ ಆಚಾರ್ಯ ಕೃಪಲಾನಿಯವರನ್ನು ಆ ಸ್ಥಾನಕ್ಕೆ ಚುನಾಯಿಸಲಾಗುವುದೆಂದು ಖಚಿತವಾದ ವರದಿಯೊಂದು ತಿಳಿಸುತ್ತದೆ.

"ಬಾ" ರವರ ಭಾವಚಿತ್ರ ಅನಾವರಣ

ಮೈಸೂರು ೧೫

ಸುತ್ತೂರು ಶಿವರಾತ್ರಿ ವಿದ್ಯಾರ್ಥಿ ನಿಲಯದ ಸಂಘದಲ್ಲಿ, ನೆನ್ನೆ ಸಂಜೆ, ಶ್ರೀಮತಿ ಸುಚೇತಾ ಕೃಪಲಾನಿಯವರು, ಕಸ್ತೂರಿ ಬಾ' ರವರ ಚಿತ್ರವನ್ನು ಅನಾವರಣ ಮಾಡಿದರು. ಶ್ರೀಮತಿ ಯಶೋಧರಾ ದಾಸಪ್ಪನವರು ಅಗ್ರಪೀಠದಲ್ಲಿದ್ದರು.

ಭಾರತದ ರಾಜಕೀಯ ಪರಿಸ್ಥಿತಿಯನ್ನು ಸೊಕ್ಷ್ಮವಾಗಿ ವಿವರಿಸಿ, ಭಾರತದ ಜ್ಯೋತಿಯನ್ನು ಬೆಳಗುವಂತೆ ಮಾಡತಕ್ಕ ಕರ್ತವ್ಯವು ವಿದ್ಯಾರ್ಥಿಗಳ ಪಾಲಿಗೆ ಬಂದಿದ್ದಾಗಿದೆ ಎಂದು ಶ್ರೀಮತಿ ಸುಚೇತಾರವರ ಹೇಳಿದರು. ವಿದ್ಯಾರ್ಥಿಗಳು ಸುಸಂಘಟಿತರಾಗಿ ಸ್ಥಿರವಾದ ಶಾಂತಿ ಪ್ರಚಾರ ವಿಶ್ವಾಸವನ್ನು ಪಡೆಯಬೇಕು ಎಂದರು. ೧೯೪೨ ನೇ ಕ್ರಾಂತಿಯಲ್ಲಿ ವಿದ್ಯಾರ್ಥಿಗಳು ಮಹತ್ವದ ಕೆಲಸ [illegible] ಕೊಡುಗೆ ಕೊಟ್ಟು ಮುಂದೆ ಸಾಗಿ ಯಶಸ್ಸುಗಳಿಸಿದ ಸಂದರ್ಭದಲ್ಲಿ ವಿದ್ಯಾರ್ಥಿಗಳನ್ನು ಪ್ರಶಂಸೆ ಮಾಡುವರು. ರಚನಾತ್ಮಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ದೇಶಸೇವೆ ಮಾಡಬೇಕೆಂಬುದನ್ನು ವಿದ್ಯಾರ್ಥಿಗಳು ಮರೆಯಬಾರದು ಎಂದು ಹೇಳಿ ಕಸ್ತೂರಿ ಬಾ ರವರ ಸ್ಮಾರಕ ನಿಧಿಯನ್ನು ವಿವರಿಸಿ ಅವರ ಸೇವೆಯನ್ನು ಪ್ರಶಂಸಿಸಿದರು.

ನೆಹರೂರವರ ಪತ್ರಕ್ಕೆ ಜಿನ್ನಾರವರ ಉತ್ತರ

ಕೇಂದ್ರ ಸರ್ಕಾರದ ರಚನೆಯಲ್ಲಿ ಮಿ॥ ಜಿನ್ನಾ ಮತ್ತು ಲೀಗಿನವರ ಸಹಕಾರವನ್ನು ಕೋರಿ ಪಂ॥ ನೆಹರೂರವರು ಬರೆದಿದ್ದ ಪತ್ರವನ್ನು ಮಿ॥ ಜಿನ್ನಾರವರು ಪರಿಶೀಲಿಸುತ್ತಿದ್ದಾರೆ. ಈ ವೇಳೆಗಾಗಲೇ ಅವರು ತಮ್ಮ ಉತ್ತರವನ್ನು ನೆಹರೂರವರಿಗೆ ಕಳುಹಿಸಿರಬಹುದೆಂದೂ ಊಹೆ ಎದ್ದಿದೆ.

ಶ್ರೀ ಕೃಷ್ಣರಾಜೇಂದ್ರ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್, ಮೈಸೂರು

ವಾರ್ಷಿಕ ಮಹಾಸಭೆ

ತಾರೀಖು ೮-೧೨-೪೬ ನೆಯ ಭಾನುವಾರ ಸಾಯಂಕಾಲ ೪ ಘಂಟೆಗೆ ರಾವ್ ಬಹದ್ದೂರ್ ಧರ್ಮಪ್ರಕಾಶ ಲೇಟ್ ಡಿ ಬನುಮಯ್ಯನವರ ಹೈಸ್ಕೂಲಿನಲ್ಲಿ ಸೊಸೈಟಿಯ ಸಂಘದ ೧೯೪೫-೪೬ ನೇ ಸಾಲಿನ ವಾರ್ಷಿಕ ಮಹಾಸಭೆಯು ನಡೆಯಲು ಏರ್ಪಡಿಸಿರುತ್ತೆ.

ರಿಪೋರ್ಟಿನ ಕಾಪಿಗಳನ್ನು ಆಗಸ್ಟ್ ೧೪ ನೆಯ ತಾರೀಖಿನಿಂದ ಆಗಸ್ಟ್ ೨೩ ನೆಯ ತಾರೀಖಿನ ವರೆಗೆ ಸೊಸೈಟಿಯ ಆಫೀಸಿನಲ್ಲಿ ಆಫೀಸು ಕಾಲದಲ್ಲಿ ಖುದ್ದು ಬಂದು ಪಡೆಯಬಹುದು. ಜಾರಿಯಾಗದೆ ಇರತಕ್ಕವುಗಳನ್ನು ೨೩ ನೆಯ ತಾರೀಖಿನ ದಿವಸ ಟಿಕೆಟ್ಟು ಪೋಸ್ಟ್ ಆಫೀಸಿಗೆ ರವಾನಿಸಲಾಗುತ್ತದೆ.

ಮೆಂಬರುಗಳಿಂದ ಸೂಚಿತವಾದ ಉಮೇದುವಾರರುಗಳ ಪಟ್ಟಿಯನ್ನು ತಾರೀಖು ೨೯-೧೧-೪೬ ನೆಯ ಸೋಮವಾರ ಸಾಯಂಕಾಲ ೮ ಘಂಟೆಯೊಳಗೆ ಲಿಖಿತ ಮೂಲಕ ಸಂಘದ ಕಛೇರಿಗೆ ತಲುಪುವಂತೆ ಕಳುಹಿಸಬೇಕಾಗುತ್ತೆ. ರಿಪೋರ್ಟಿನಲ್ಲಿ ಚರ್ಚಿಸಬೇಕಾದ ಇತರ ವಿಷಯಗಳ ಪಟ್ಟಿಗಳನ್ನು ಲಿಖಿತ ಮೂಲಕ ೨೯-೧೧-೪೬ ರ ಸಾಯಂಕಾಲ ೮ ಘಂಟೆಯೊಳಗೆ ಸಂಘದ ಕಛೇರಿಗೆ ತಲುಪುವಂತೆ ಕಳುಹಿಸಬೇಕಾಗಿರುತ್ತೆ.

ಷೇರುದಾರರುಗಳ ರಿಪೋರ್ಟುಗಳು ಕಾರಣಾಂತರದಿಂದ ಮೆಂಬರು ಮಹಾಶಯರಿಗೆ ತಲುಪದೆ ಇದ್ದಲ್ಲಿ ಇದನ್ನೇ ಆಹ್ವಾನ ಪತ್ರಿಕೆಯೆಂದು ಭಾವಿಸಿಕೊಂಡು ಜನರಲ್ ಮೀಟಿಂಗಿಗೆ ದಯಮಾಡಿಸಬೇಕಾಗಿ ಪ್ರಾರ್ಥನೆ.

ಎಂ. ಎಸ್ ಕೃಷ್ಣರಾವ್,

ಬಿ ಎಸ್ ಕಪನೀಪತಯ್ಯ, ಬಿ ಎ,

೧೫-೧೧-೪೬ ಗೌರವ ಕಾರ್ಯದರ್ಶಿಗಳ

ಹಳ್ಳಿಗಳ ಏಳಿಗೆಯೇ ಸ್ವರಾಜ್ಯದ ಅಡಿಗಲ್ಲು

ಸುಚೇತಾರವರ ಭಾಷಣ

ಮೈಸೂರು, ೧೫

ಕಸ್ತೂರಿ ಬಾ ನಿಧಿ ಸಮಿತಿಯ ಆಶ್ರಯದಲ್ಲಿ, ನೆನ್ನೆ ಸಾಯಂಕಾಲ ಪುರಭವನದಲ್ಲಿ, ಶ್ರೀ ಜಿ ರಾಮಚಂದ್ರರವರ ಅಧ್ಯಕ್ಷತೆಯಲ್ಲಿ, ಬಹಿರಂಗ ಸಭೆ ನಡೆಯಿತು. ಶ್ರೀಮತಿ ಸುಚೇತಾ ಕೃಪಲಾನಿ ಯವರು ಪ್ರಧಾನ ಭಾಷಣಕಾರರಾಗಿ ಕಸ್ತೂರಿ ಬಾಯಿಯವರ ಸ್ಮಾರಕವಾಗಿ ಇಡೀ ಭಾರತದಲ್ಲಿ ನಡೆಯುತ್ತಿರುವ ಗ್ರಾಮ ಸುಧಾರಣಾ ಕಾರ್ಯಕ್ರಮದ ವಿವರಗಳನ್ನು ತಿಳಿಸಿದರು. ಬಾ ರವರು ಸ್ತ್ರೀ ಮಹಿಳೆಯೆಂದೂ, ಓದು ಬರಹಗಳನ್ನು ಕಲಿಯದಿದ್ದರೂ, ವಿವೇಚನ ಶಕ್ತಿಯಿಂದ ಭಾರತೀಯ ಜನಾಂಗದವರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದರು. ಅವರ ಹೆಸರಿನಲ್ಲಿ ೭೫ ನಿಧಿಯು ಶೇಖರವಾಯಿತು. ಹಣವನ್ನು ಗ್ರಾಮೋದ್ಧಾರ ಕಾರ್ಯಗಳಿಗಾಗಿ ಮೀಸಲು ಮಾಡಿ, ಮಹಾತ್ಮರ ನೇತೃತ್ವದಲ್ಲಿ ಒಂದು ಯೋಜನೆ ತಯಾರಾಗಿದೆ. ಹರಿಜನೋದ್ಧಾರ, ಖಾದಿ ಪ್ರಚಾರ, ಹಿಂದೂ ಮುಸ್ಲಿಂ ರ ಐಕ್ಯತೆ ಮೊದಲಾದ ಕಾರ್ಯಗಳ್ ಕಾಂಗ್ರೆಸ್ ಆಶ್ರಯದಲ್ಲಿ ಮುಂದೆ ಸಾಗುತ್ತಿವೆಯೆಂದೂ, ಗ್ರಾಮೋದ್ಧಾರ ಕಾರ್ಯಕ್ರಮವು ಪಟ್ಟಿಯ ಕೊನೆಯ ಹಂತವೆಂದೂ ಹೇಳಿದರು. ಈ ಕಾರ್ಯಕ್ರಮವು ಸಫಲವಾಯಿತೆಂದರೆ ಮಹಾತ್ಮರ ಯೋಜನೆಯು ಪೂರ್ಣ ಫಲ ಹೊಂದಿ ಭಾರತವು ಸ್ವತಂತ್ರ ರಾಜ್ಯವಾದಂತೆಯೇ ಎಂದು ಹೇಳಿದರು.

ಶ್ರೀ ರಾಮಚಂದ್ರರವರು ಮಾತನಾಡುತ್ತಾ ದೇಶದಲ್ಲಿ ಕ್ರಾಂತಿಗಳು ಆಗಿಂದಾಗ್ಗೆ ನಡೆಯುತ್ತಿವೆಯೆಂದೂ ದುರ್ಭಿಕ್ಷ, ಚಳುವಳಿ, ಅಸ್ಪೃಶ್ಯರು ಕ್ರಾಂತಿಗೆ ಕಾರಣಗಳೆಂದೂ ಹೇಳಿದರು. ಭಾರತದ ಕ್ರಾಂತಿಗಳಿಗೂ ಇತರ ಪಾಶ್ಚಾತ್ಯ ದೇಶಗಳಲ್ಲಿನ ಕ್ರಾಂತಿಗಳಿಗೂ ಹೆಚ್ಚು ವ್ಯತ್ಯಾಸವಿದೆ. ಪಾಶ್ಚಾತ್ಯ ದೇಶದ ಕ್ರಾಂತಿಗಳು ಸರ್ವವನ್ನು ನಾಶ ಪಡಿಸುವವು. ಅನಂತರ ರಚನಾತ್ಮಕ ಕಾರ್ಯಗಳನ್ನು ಕೈಗೊಳ್ಳುವವು. ಭಾರತದಲ್ಲಿ ನಡೆಯುತ್ತಿರುವ ಕ್ರಾಂತಿಗಳು ಶಾಂತಿ ಕ್ರಾಂತಿಗಳು, ಅಹಿಂಸಾಯುತವಾದವು; ರಚನಾತ್ಮಕ ಕಾರ್ಯಗಳೊಡನೆ ಕೂಡಿದ ಕ್ರಾಂತಿಗಳು. [illegible] ಕ್ರಾಂತಿಯ ಸಮಾಪ್ತಿಯಾದ ಕೂಡಲೆ [illegible] ರಚನಾತ್ಮಕ ಕಾರ್ಯಗಳು [illegible]

ಅರುಣಾರವರ ದಕ್ಷಿಣ ಭಾರತ ಪ್ರವಾಸ

ಶ್ರೀಮತಿ ಅರುಣಾ ಅಸಫ್ ಅಲಿಯವರು ೨೦ ನೇ ತಾ॥ ಮದ್ರಾಸಿಗೆ ಬಂದು ಅಲ್ಲಿಂದ ದಕ್ಷಿಣ ಭಾರತದ ಪ್ರವಾಸವನ್ನು ಆರಂಭಿಸುವರೆಂದು ಗೊತ್ತಾಗಿದೆ.

ಕೇಂದ್ರ ಸರ್ಕಾರದಲ್ಲಿ ಪಕ್ಷಗಳ ಬಲಾಬಲ

ಒಂದೆ ವೈಸರಾಯರು ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗಿನೊಡನೆ ಸಂಧಾನ ನಡೆಸಿದಾಗ ಸೂಚಿಸಿದ್ದಂತೆ ಕಾಂಗ್ರೆಸ್, ೬, ಲೀಗು, ೫ ಅಲ್ಪಸಂಖ್ಯಾತರ ಪ್ರತಿನಿಧಿಗಳು ೩ ಈ ರೀತಿ ಸ್ಥಾನಗಳು ಈಗಲೂ ಕೊಡಲ್ಪಡುವುದೆಂದೂ, ಒಂದು ವೇಳೆ ಲೀಗಿನವರು ಸಹಕರಿಸದಿದ್ದರೆ ಆ ಸ್ಥಾನಗಳಿಗೆ ಬೇರೆಯ ಮುಸಲ್ಮಾನರನ್ನು ನೇಮಿಸಿಕೊಳ್ಳಲಾಗುವುದೆಂದೂ ಖಚಿತವಾಗಿ ಗೊತ್ತಾಗಿದೆ.

ನಾಳೆದಿವ್ಸ ನೆಹರೂ-ವೈಸರಾಯ್ ಭೇಟಿ

ಪಂ॥ ನೆಹರೂರವರು ದಿವಸಗಳ ೧೬ ನೇ ತಾ॥ ವರಳ ವೈಸರಾಯರನ್ನು ಭೇಟಿ ಮಾಡಿ ಕೇಂದ್ರ ಸರ್ಕಾರದ ಮಂತ್ರಿಗಳ ಪಟ್ಟಿಯನ್ನು ಒಪ್ಪಿಸುವರೆಂದು ಗೊತ್ತಾಗಿದೆ.

ದುಬಾರಿ ಭತ್ಯ ವಜಾ ಆಗಲಿ

ಸ್ವಂ ಸು] ಶ್ರೀರಂಗಪಟ್ಟಣ ೧೫

ಇಲ್ಲಿಯ ಶ್ರೀ ಚಾ ಮು ರಾ ಜೇಂದ್ರ ಮೆಮೋರಿಯಲ್ ಛತ್ರದಲ್ಲಿ ಮದುವೆ ಮಗ್ಗಿರೆಗೆ ದಿನ ಒಂದಕ್ಕೆ ೫ ರೂಗಳಂತೆ ಪಡೆದು ಕೊಳ್ಳುತ್ತಿದ್ದು, ಅದರ ಈಗ ರಿಜರ್ವ್ ಫೀಸ ರೂಗಳನ್ನು ನಿಗದಿಗೊಳಿಸಿದ್ದಲ್ಲಿ ಮಾತ್ರ ಛತ್ರವನ್ನು ಉಪಯೋಗಿಸಬಹುದು. ಇದರಿಂದ ಮಧ್ಯಮ ವರ್ಗದವರಿಗೂ, ಬಡವರಿಗೂ ಬಹಳ ತೊಂದರೆಯಾಗಿದೆ. ಈ ದುಬಾರಿ ದರವನ್ನು ವಜಾ ಮಾಡಬೇಕೆಂದು ಮಹಾಜನರು ಪ್ರಾರ್ಥಿಸುತ್ತಿದ್ದಾರೆ.

ಲಾರಿ ಅಪಘಾತ

ಮೈಸೂರು ೧೫

ಚಟ್ಟನಹಳ್ಳಿಗೆ ಹೋಗಿ ತೆಗೆದ ಕೊಂಡು ಹೋಗುತ್ತಿದ್ದ ಆಹಾರದ ಇಲಾಖೆ ಲಾರಿಯೊಂದು ಸಿದ್ಧಲಿಂಗೇಶ್ವರ [illegible] ಮುಂಭಾಗದಲ್ಲಿ ನಿನ್ನೆ ಮಧ್ಯಾಹ್ನ ಎರಡು ೧೦ ವರ್ಷದ ಬಾಲಕನ ಮೇಲೆ ಹರಿಯಿತು. ಬಾಲಕನು ಆಸ್ಪತ್ರೆಯಲ್ಲಿ ಮೃತನಾದನು.

ರೇಷ್ಮೆ ಹವಣ ರೈತರಿಗೆ ತೊಂದರೆ?

ನಂಜನಗೂಡು ೧೫

ಇಲ್ಲಿಯ ಸಿಲ್ಕ್ ಫಿಲೇಚರ್ ಮಾರ್ಕೆಟ್ಟಿನಲ್ಲಿ ಗೂಡನ್ನು [illegible] ರೈತರಿಗೆ ತೊಂದರೆ ಕೊಡಲಾಗುತ್ತಿದೆಯೆಂದು ಶ್ರೀ [illegible] ರವರು ಮನವಿ [illegible] ಶ್ರೀ ಜಿ ಕೃಷ್ಣಸ್ವಾಮಿ [illegible] ಭೇಟಿ [illegible] ಗೊತ್ತಾಗಿದೆ

[illegible] ಎಂದು ಹೇಳಿದರು.

ಈ [illegible] ಶ್ರೀಮತಿ ಸುಚೇತಾರವರು, [illegible]

ಸಾಧ್ವಿ
ಶ್ರಾವಣ ೧೫ ೮-೮-೪೬ ಗುರುವಾರ

ಕಸ್ತೂರಿಬಾಯಿ ಶಿಬಿರ

ಮೈಸೂರಿಗೆ ಆರು ಮೈಲಿ ದೂರದಲ್ಲಿರುವ ಬೆಳವಾಡಿ ಗ್ರಾಮದಲ್ಲಿ ಕಸ್ತೂರಿಬಾಯಿ ನಿಧಿಯ ಆಶ್ರಯದಲ್ಲಿ ಎರಡನೆಯ ಶಿಕ್ಷಣ ಶಿಬಿರವು ಈಗ ನಡೆಯುತ್ತಿದೆ. ಹಿಂದೆ ರಾಜಧಾನಿಗೆ ಸಮೀಪದಲ್ಲಿರುವ ಪಡುವಾರಹಳ್ಳಿಯ ಬಳಿ ಮೊದಲನೆಯ ಶಿಬಿರವು ನಡೆಯಿತು. ಮೈಸೂರು ಸಂಸ್ಥಾನದಿಂದಲೂ ಬ್ರಿಟಿಷ್ ಕರ್ನಾಟಕದಿಂದಲೂ ಅನೇಕ ಮಹಿಳೆಯರು ಬಂದು ಶಿಕ್ಷಣವನ್ನು ಪಡೆದಿದ್ದರು. ಅವರುಗಳು ದೇಶದ ಬೇರೆ ಬೇರೆ ಭಾಗಗಳಲ್ಲಿ ನೆಲೆಸಿ ಹಳ್ಳಿಗರ ಸೇವೆಯನ್ನು ಕೈಗೊಳ್ಳುವರೆಂದು ಆಶಿಸಲಾಗಿದೆ.

ಮೊದಲನೆಯ ಶಿಬಿರವು ನಗರದ ಸಮೀಪದಲ್ಲಿದ್ದು ಆಧುನಿಕ ಸೌಲಭ್ಯಗಳುಳ್ಳ ಪರಿಪೂರ್ಣವಾಗಿ ಗ್ರಾಮಗಳ ಸ್ಥಿತಿಗತಿಗಳು ಮತ್ತು ಅವಶ್ಯಕತೆಗಳ ಬಗ್ಗೆ ಹೆಚ್ಚಿನ ಪರಿಚಯವು ದೊರೆಯಲು ಅನುಕೂಲವಾಗದ್ದರಿಂದ ಮುಂದೆ ನಡೆಯುವ ಶಿಬಿರಗಳು ಹಳ್ಳಿಗಳಲ್ಲಿಯೇ ನಡೆಯಬೇಕೆಂಬ ಅಭಿಪ್ರಾಯವು ಬಂದು ಅನಂತರ ಬೆಳವಾಡಿಯ ಶಿಬಿರವು ಆರಂಭವಾಗಿದೆ. ಇದು ಒಂದು ವರ್ಷ ಕಾಲ ನಡೆಯುವುದು. ಈಗಾಗಲೇ ಇಪ್ಪತ್ತೈದು ಜನ ಗ್ರಾಮ ಸೇವಿಕೆಯರು ಬಂದು ಸೇರಿದ್ದಾರೆ. ಇನ್ನೂ ಐದಾರು ಜನ ಬರಲಿದ್ದಾರೆ. ಈ ಶಿಬಿರದ ವ್ಯವಸ್ಥೆಗೆ ಆ ಗ್ರಾಮದ ಜನರು ಸಕಲ ಸಹಾಯಗಳನ್ನೂ ನೀಡಿರುವರು. ಶಿಬಿರಕ್ಕೆ ಬೇಕಾದ ಸೌಲಭ್ಯಗಳೆಲ್ಲವೂ ದೊರೆಯಲಿವೆ. ರಚನಾತ್ಮಕ ಕಾರ್ಯದಲ್ಲಿಯೂ, ಮಹಿಳೆಯರ ಹಿತ ಸಾಧನೆಯಲ್ಲಿಯೂ ತಮ್ಮ ಜೀವಮಾನವನ್ನೇ ವಿನಿಯೋಗಿಸಿರುವ ಹುಬ್ಬಳ್ಳಿಯ ಶ್ರೀಮತಿ ಉಮಾಬಾಯಿ ಕುಂದಾಪುರ ಮತ್ತು ಮೈಸೂರಿನ ಶ್ರೀಮತಿ ಯಶೋಧರಾ ದಾಸಪ್ಪನವರ ಪರಿಪೂರ್ಣ ಸಹಕಾರವು ಇದಕ್ಕೆ ದೊರೆತಿದೆ. ಇಲ್ಲಿಗೆ ಮೈಸೂರು, ಬೆಂಗಳೂರು ಮತ್ತು ಇತರ ಕಡೆಗಳಿಂದಲೂ ಆಗಿಂದಾಗ್ಗೆ ಅನುಭವಸ್ಥರಾದ ಮಹನೀಯರುಗಳು ಬೇಟಿಗೆ ಹೋಗಿ ವಿವಿಧ ವಿಚಾರಗಳಲ್ಲಿ ಶಿಕ್ಷಣವನ್ನು ಕೊಡುವವರಾಗಿದ್ದಾರೆ.

ಗ್ರಾಮದಲ್ಲಿಯೇ ನೆಲಸಿ, ಗ್ರಾಮಸ್ಥರೊಡನೆ ಬೆರೆತು, ಗ್ರಾಮದವರ ಕಷ್ಟ ಸುಖಗಳನ್ನು ಅರಿತು, ತನ್ಮೂಲಕ ಇಡೀ ದೇಶದ ಗ್ರಾಮಸ್ಥರ ಅಭ್ಯುದಯಕ್ಕೆ ಸಾಧಕವಾದ ಕಾರ್ಯಕ್ರಮದ ಪ್ರಯೋಗವನ್ನು ಬೆಳವಾಡಿಯಲ್ಲಿ ಕೈಗೊಳ್ಳಲಾಗಿದೆ. ರಾಷ್ಟ್ರ ರಚನೆಗೆ ಆಧಾರ ಭೂತವಾದ ಗ್ರಾಮೋದ್ಧಾರ ಕಾರ್ಯವು ಈ ಶಿಬಿರದ ಮೂಲಕ ಯಶಸ್ವಿಯಾಗಿ ಜರುಗಿ ಪೂಜ್ಯಮಾತೆ ಕಸ್ತೂರಿಬಾಯಿಯವರ ದಿವ್ಯ ಸ್ಮಾರಕವಾಗಿ ಅದು ಪರಿಣಮಿಸಿ ದೇಶದ ಸ್ವಾತಂತ್ರ್ಯ ಸಾಧನೆಗೆ ಅಸ್ತಿಭಾರವನ್ನು ಹಾಕಲೆಂದು ನಾವು ಹಾರೈಸುತ್ತೇವೆ.

೨೫ ನೇ ತಾ|| ದಿಂದ ಸ್ಟೇಷನ್ ಮಾಸ್ತರುಗಳ ಮುಷ್ಕರ ?

ಸೌತ್ ಇಂಡಿಯನ್ ರೈಲ್ವೆ ಸ್ಟೇಷನ್ ಮಾಸ್ತರುಗಳು ಇದೇ ೨೫ ನೇ ತಾರೀಖಿನೊಳಗೆ ತಮ್ಮ ೨೯ ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ಅಂದಿನಿಂದ ಮುಷ್ಕರ ಹೂಡುವುದಾಗಿ ಕಳೆದ ೧೧ ನೇ ತಾ|| ನೋಟೀಸನ್ನು ಕೊಟ್ಟಿದ್ದಾರೆ.

ರಜತ ಕವಚ ಧಾರಣೋತ್ಸವ

ಶ್ರೀಮನ್ಮಹಾರಾಜ ಸಂಸ್ಕೃತ ಮಹಾಪಾಠಶಾಲೆಯಲ್ಲಿ ವಿದ್ಯಾಗಣಪತಿ ಸ್ವಾಮಿಯವರ ರಜತ ಕವಚ ಧಾರಣ ಮಹೋತ್ಸವವು ನಾಳೆ ಸಂಜೆ ನಾಲ್ಕೂವರೆ ಗಂಟೆಗೆ ಮೈಸೂರು ಸಿಲ್ಕ್ ಫಿಲೇಚರ್ಸ್ ಮ್ಯಾನೇಜಿಂಗ್ ಏಜೆಂಟರಾದ ಶ್ರೀ ಜಿ ಕೃಷ್ಣಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರುಗುವುದು. ಮಹಾ ವಿದ್ವಾನ್ ಬ್ರ|| ಪಾಲಘಾಟ್ ನಾರಾಯಣ ಶಾಸ್ತ್ರಿಗಳು 'ಗಣೇಶ ಮಹಿಮಾ' ಎಂಬ ವಿಷಯವಾಗಿ ಉಪನ್ಯಾಸ ಮಾಡುವರು. ವೈಣಿಕ ವಿದ್ವಾನ್ ಎಂ ಜೆ ಶ್ರೀನಿವಾಸ ಅಯ್ಯಂಗಾರ್‌ರವರ ವೀಣಾ ವಾದನ, ಮಿ|| ಹೆಚ್. ಟಿ ನಾಗಣ್ಣನವರ ಮೃದಂಗ ಸಹ ಏರ್ಪಾಡಾಗಿವೆ.

ಹೆಚ್. ಜಿ. ವೆಲ್ಸರ ನಿಧನ

ಸುಪ್ರಸಿದ್ಧ ಬ್ರಿಟಿಷ್ ಸಾಹಿತಿಯಾದ ಶ್ರೀ ಹೆಚ್. ಜಿ ವೆಲ್ಸರು ಮೊನ್ನೆ ಮಧ್ಯಾಹ್ನ ಲಂಡನ್ನಿನ ತಮ್ಮ ನಿವಾಸದಲ್ಲಿ ನಿಧನರಾದರು. ಇವರಿಗೆ ೭೯ ವರ್ಷ ವಯಸ್ಸಾಗಿದ್ದಿತು. ಆಧುನಿಕ ಆಂಗ್ಲ ಸಾಹಿತ್ಯದ ತ್ರಿಮೂರ್ತಿಗಳ ಪೈಕಿ ಇವರೂ ಒಬ್ಬರೆಂದು ಕೀರ್ತಿ ಗಳಿಸಿದ್ದರು. ಷಾ ಮತ್ತು ಕಿಪ್ಲಿಂಗ್ ರವರೇ ಉಳಿದಿಬ್ಬರು.

ಸಿವಿಲ್ ಇಲಾಖೆ ನೌಕರರಿಗೆ ೩|| ಕೋಟಿ ರೂ. ಪರಿಹಾರ

ರೈಲ್ವೆ, ಅಂಚೆ ಮತ್ತು ತಂತಿ ಇಲಾಖೆಗಳನ್ನು ಹೊರತಾಗಿ ಇತರ ಸಿವಿಲ್ ಖಾತೆಗಳ ಕೆಳದರ್ಜೆ ನೌಕರರುಗಳಿಗೆ ೩|| ಕೋಟಿ ರೂ. ಗಳ ಜರೂರು ತಾತ್ಕಾಲಿಕ ಪರಿಹಾರವನ್ನು ಕೇಂದ್ರ ಸರ್ಕಾರದವರು ಒದಗಿಸಿದ್ದಾರೆ.

WANTED

A duly qualified Compounder to the Mills' Dispensary on a monthly salary of Rs. 25 plus Rs 14 dearness allowance as per Company's rules. Apply to,—The General Manager, Sri Krishnarajendra Mills, Ltd Mysore, not later than 25th August 1946."

ಜಮೀನ್ದಾರಿ ಪದ್ಧತಿ ವಜಾ ?

ಮದ್ರಾಸ್ ಪ್ರಾಂತ್ಯದಲ್ಲಿ ಜಮೀನ್ದಾರಿ ಪದ್ಧತಿಯನ್ನು ಇನ್ನು ಒಂದೆರಡು ತಿಂಗಳುಗಳಲ್ಲಿ ವಜಾ ಮಾಡುವುದಾಗಿ ಪ್ರಧಾನಿಗಳು ಹೇಳಿಕೆ ಇತ್ತಿದ್ದಾರೆ. ಸದ್ಯಕ್ಕೆ ರೈತರಿಗೆ ಉದಾರವಾದ ಪ್ರತಿಫಲ ಕೊಡುವಂತೆ ಜಮೀನ್ದಾರರಿಗೆ ಸೂಚಿಸಲಾಗಿದೆ.

ರಾಜಕಮಲ್ ಟಾಕೀಸ್
ಮೈಸೂರು
16-8-46 ರಿಂದ
ತದ್‌ಬೀರ್
ಭೂಮಿಕೆ :— ಸೈಗಾಲ್, ಸೂರ್ಯ
ಮುಂತಾದವರು
ಪ್ರತಿದಿನ ಮೂರು ಆಟಗಳು

NOTICE

Applications are invited for agencies for sale of milk & butter from The City Milk supply at fixed hours for each Mohalla in Mysore City from business houses to work on commission. Applications will be dealt with in person by the Proprietor, between 10th & 15th Aug 1946.

M. V. Krishna Swamy
Proprietor

ತಾ|| 10—8—46 ರಿಂದ ಅಮೋಘ ಪ್ರಾರಂಭ
ಮೋತಿಲಾಲ್ ಟಾಕೀಸಿನಲ್ಲಿ
"ಮುಗ್ಗುರು ಮರಾಟಿಲು"
(ತೆಲುಗು ಚಿತ್ರ)
THREE MARATEES
ಪ್ರತಿ ದಿನ ಮೂರು ಆಟಗಳು
—:ಭೂಮಿಕೆ:—
ಕನ್ನಾಂಬ, ಡಾ|| ಜಿ. ವಿ ಸುಬ್ಬರಾವ್, ಬಿ ರಾಜರತ್ನಂ, ನಾಗೇಶ್ವರರಾವ್, ಸಾರಾ ಸುಬ್ಬರಾವ್, ಶಿವರಾವ್
ಮುಂತಾದವರು
೯-೮-೪೬ ರಿಂದ ಬೆಂಗಳೂರು ಸೂಪರ್‌ಲ್ಯಾಂಡಿನಲ್ಲಿ
ಅಮೋಘ ಮೂರನೇ ವಾರ
—: Released Through :—
SRI MAHAVEER FILM EXCHANGE
Asoka Road, ... Mysore.
ವಿಜಯಾ ಪಿಕ್ಚರ್ಸ್, ಮೈಸೂರು.

ಹೊಸ ಹೊಸ ನಮೂನೆಯ ಬಳೆಗಳು
ಈ ದಿನವೇ ನೋಡಿರಿ
ಸ್ವಗತ ಸೀಮ ಬಳೆ / ಕಮಲ್ ಫ್ಲವರ್ ಬಳೆ { ಬಳೆಗಳು } ಸುಭಾಷ್ ಬಳೆ / ಗಾಂಧಿಜಿ ಬಳೆ
ಗಾಂಧಿಜಿ ಬಳೆ ಮತ್ತು ರಾಷ್ಟ್ರ ನಾಯಕರುಗಳ ಫೋಟೋ ಸಮೇತ ಒಡೆಯದೆ ಇರತಕ್ಕಂತಹದು.
ಮೈಸೂರು ಸಿಲ್ಕ್ ರಿಬ್ಬನ್‌ಗಳು, ಸ್ಟ್ಯಾಂಡರ್ಡ್ ಬಳೆಗಳು
ಪ್ರಭಾತ್ ಬ್ಯಾಂಗಲ್ಸ್ ಸ್ಟೋರ್ಸ್,
ಚಾಮುಂಡೇಶ್ವರೀ ಟಾಕೀಸ್ ಬಿಲ್ಡಿಂಗ್ಸ್, ಮೈಸೂರು.

ಮಳೆ ಬಂದಿದ್ದರಿಂದ ಕಳೆದ ಭಾನುವಾರ ಕುಸ್ತಿಯು ನಡೆಯಲಿಲ್ಲ
ತಾ|| 18—8—46 ನೇ ಭಾನುವಾರ ಸಂಜೆ
೪-೩೦ಕ್ಕೆ ತಪ್ಪದೆ ನಡೆಯುತ್ತದೆ.
ಮೈಸೂರು ಅಠಾರಾ ಕಚೇರಿ ಬಳಿ ಇರುವ ಮೈದಾನದಲ್ಲಿ

ಬೆಂಗಳೂರು ಮೈಸೂರಿಗೆ
ಕೋಲಾಟಿ ನಿಂತಿರುವ
ಪೈ|| ಸಣ್ಣ ಬೋರಯ್ಯ



ಬೆಂಗಳೂರು ಮೈಸೂರಿಗೆ
ಕೋಲಾಟಿ ನಿಂತಿರುವ
ಪೈ|| ಶ್ರೀಕಂಠಯ್ಯ

ಪಂಜಾಬ್ ಪೈ|| ಧರ್ಮಸಿಂಗ್ - ಕೊಲ್ಹಾಪುರ ಪೈ|| ರಾಮರಾವ್
ಪೈ|| ಅಮ್ಮಾಸಾಹೇಬ್ — ಪೈ|| ಸಾಹುಬಲಾಲ್
ಪೈ|| ಬಸವಯ್ಯ — ನಂಜನಗೂಡು ಪೈ|| ತಿಮ್ಮಯ್ಯ
ಒಟ್ಟು ೧೦ ಜೊತೆ ಅಮೋಘವಾದ ಕುಸ್ತಿಗಳು 18 ನೇ ತಾ|| ತಪ್ಪದೆ ನಡೆಯುತ್ತವೆ

Edited printed and published by A. ... Nagaraj... at the Sadhvi Press, D Subbiah Road, Mysore

ರೋಜಿ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶನಿವಾರ ೧೭—೮—೪೬ [ಸಂಚಿಕೆ ೨೨

ಕಲ್ಕತ್ತೆಯಲ್ಲಿ ದೊಂಬಿ, ಲೂಟಿ, ಸಾವು, ನೋವು

ರಾಜ್ಯಾಂಗ ಸಭೆ ವಿಫಲವಾದಲ್ಲಿ ಮತ್ತೊಂದು ಹೋರಾಟ

ವಿದ್ಯಾರ್ಥಿಗಳ ಸಭೆಯಲ್ಲಿ ಸುಚೇತಾರವರ ಭಾಷಣ

ಮೈಸೂರು ೧೬

ಮೊನ್ನೆ ಸಂಜೆ ಮೈಸೂರು ನಗರ ವಿದ್ಯಾರ್ಥಿ ಕಾಂಗ್ರೆಸ್ ಆಶ್ರಯದಲ್ಲಿ ದೇಶೀಯ ವಿದ್ಯಾಶಾಲೆಯ ಆವರಣದಲ್ಲಿ ಸೇರಿದ್ದ ಪ್ರಚಂಡ ಸಭೆಯನ್ನುದ್ದೇಶಿಸಿ ಶ್ರೀಮತಿ ಸುಚೇತಾ ಕೃಪಲಾನಿಯವರು ಈ ರೀತಿ ಹೇಳಿದರು. "ಕಾನ್ಸ್ಟಿಟ್ಯೂಎಂಟ್ ಅಸೆಂಬ್ಲಿ ವಿಫಲವಾದಲ್ಲಿ ಹಿಂದೆಂದೂ ನಡೆಯದಿರುವ ಮಹಾ ಹೋರಾಟವು ಆಗಬೇಕಾಗುತ್ತದೆ. ಆ ಮಹಾಹೋರಾಟದಲ್ಲಿ ವಿದ್ಯಾರ್ಥಿಗಳು, ಕಾರ್ಮಿಕರು, ರೈತರು ಎಲ್ಲರೂ ಬಲವಾಗಿ ನಿಂತು ತಮ್ಮ ತ್ಯಾಗ ಬಲದಿಂದ ಸ್ವಾತಂತ್ರ್ಯ ಪಡೆಯಬೇಕಾಗುತ್ತದೆ. ನಲವತ್ತೆರಡರಲ್ಲಿ ಅಂಚೆ ನೌಕರರು, ರೈಲ್ವೆ ಕೆಲಸಗಾರರು ನಮ್ಮ ಜೊತೆಗೆ ಬರಲಿಲ್ಲ. ಆದ್ದರಿಂದಲೇ ನಮ್ಮ ಹೋರಾಟ ಯಶಸ್ವಿಯಾಗಲಿಲ್ಲ" ಎಂದರು. ಶ್ರೀಮತಿ ಯಶೋಧರಮ್ಮ ದಾಸಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಮೈಸೂರು ವಿದ್ಯಾರ್ಥಿ ಕಾಂಗ್ರೆಸ್‌ನ ಕಾರ್ಯಕ್ರಮದ ಬಗ್ಗೆ ಸಂಕ್ಷಿಪ್ತ ವರದಿಯನ್ನು ಶ್ರೀ ಅಂಬಳೆ ಶ್ರೀನಿವಾಸಮೂರ್ತಿಯವರು ವಿವರಿಸಿದರು.

ಈಚೆಗೆ ವಿಶ್ವವಿದ್ಯಾನಿಲಯದಲ್ಲಿ ಅಧಿಕಾರಿಗಳು "ವಂದೇಮಾತರಂ" ಮೇಲೆ ಹಾಕಿರುವ ಪ್ರತಿಬಂಧಕಾಜ್ಞೆಯ ಬಗ್ಗೆ ಈ "ಚೈತನ್ಯವಿದ್ದರೆ ಪ್ರತಿಬಂಧಕ ಮುರಿಯಿರಿ" ಎಂದು ಹೇಳಿದರು.

ಜಿಲ್ಲಾ ಕಾಂಗ್ರೆಸ್ ಸಮಿತಿ

ಮೈಸೂರು ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯು ಇದೇ ೨೫ ನೇ ತಾ॥ ಭಾನುವಾರ ಬೆಳಗ್ಗೆ ಹತ್ತೂವರೆ ಗಂಟೆಗೆ ಕೃಷ್ಣರಾಜನಗರದ ಖಾದಿ ವಸ್ತ್ರಾಲಯದಲ್ಲಿ ನಡೆಯಲು ಏರ್ಪಾಟಾಗಿದೆ. ಅಂದು ಸದಸ್ಯರೆಲ್ಲಾ ತಪ್ಪದೆ ದಯಮಾಡಿಸಬೇಕೆಂದೂ, ಊಟ ವಸತಿಗಳ ಏರ್ಪಾಟು ನಡೆದಿದೆಯೆಂದೂ ಕಾರ್ಯದರ್ಶಿಗಳಾದ ಶ್ರೀ ಹೆಚ್. ಕೆ. ಕುಮಾರಸ್ವಾಮಿಯವರು ತಿಳಿಸಿದ್ದಾರೆ.

ಹರಿಕಥೆ

ಹೊಸ ಸಂತೇಪೇಟೆ ಶ್ರೀ ಡಿ. ಪುಟ್ಟಯ್ಯನವರ ಮನೆಯಲ್ಲಿ ನಾಳೆ ಸಂಜೆ ೬ ಘಂಟೆಗೆ ಶ್ರೀ ಎಲ್. ಲಕ್ಷ್ಮೀಪತಿ ಸಹೋದರರಿಂದ "ನಳ-ದಮಯಂತಿ" ಎಂಬ ಕಥೆಯು ನಡೆಯುವುದು ——

ಸಿಂಧ್‌ನಲ್ಲಿ ಲೀಗಿನವರ ಹೊಸ ಆಟ

ಸಿಂಧ್ ಶಾಸನ ಸಭೆಯ ವಿರೋಧ ಪಕ್ಷದ ನಾಯಕರಾದ ಮಿ॥ ಸೈಯದ್‌ರವರನ್ನು ಲೀಗಿಗೆ ಸೇರಿ ಹೋರಾಟದ ನಾಯಕತ್ವ ವಹಿಸಿಕೊಳ್ಳಿ, ಎಂದು ಪ್ರಾಂತ್ಯ ಲೀಗಿನ ಅಧ್ಯಕ್ಷ ಮಿ॥ ಗಜದಾರರೂ, ಖುಹ್ರೋರವರೂ ಮೊರೆ ಹೊಕ್ಕಿದ್ದಾರೆ. ಆದರೆ ಮಿ॥ ಸೈಯದ್ದರ ಸ್ಥಾನ ಭದ್ರವಾಗಿರುವುದರಿಂದ ಈ ಸಲ ಲೀಗಿನ ಬಲೆಗೆ ಅವರು ಬೀಳಲಾರರೆಂದು ಹೇಳಲಾಗಿದೆ.

ಇಂಡೋಚೀನಾ-ಸಂಗ್ರಾಮ ಗಡಿ ಬಂದಾಗಿದೆ

ಸಯ್ಯಾಮಿಗೂ ಇಂಡೋಚೀನಾಕ್ಕೂ ಮಧ್ಯೆ ಗಡಿಯಲ್ಲಿ ಹೋರಾಟವನ್ನು ಒಸಿರಿ[illegible] ಸ್ವ ಕಾಲದ ವರೆಗೆ ನಿಲ್ಲಿಸಿರುವುದಾಗಿ ತಿಳಿದು ಬಂದಿದೆ.

ನೆಹರೂರವರ ನೀತಿಯಿಂದ ಬ್ರಿಟನ್ನಿನಲ್ಲಿ ಸಮಾಧಾನ

ಪಂ॥ ನೆಹರುರವರು ಕೇಂದ್ರ ಸರ್ಕಾರದ ರಚನೆಗೆ ಒಪ್ಪಿರುವುದೂ, ಲೀಗಿನ ಸಹಕಾರವನ್ನು ಕೇಳಿರುವುದೂ ಬ್ರಿಟನ್ನಿನ ಎಲ್ಲಾ ರಾಜಕೀಯ ಪಕ್ಷಗಳಿಗೂ ಸಮಾಧಾನವನ್ನುಂಟುಮಾಡಿದೆ. ಒಂದು ವೇಳೆ ಲೀಗು ಸಹಕರಿಸಲು ನಿರಾಕರಿಸಿದರೆ ಆಗ್ಯೆ ಪಂ॥ ನೆಹರೂರವರು ಲೀಗೇತರ ಮುಸ್ಲಿಮರ ಬೆಂಬಲದಿಂದ ತಡಮಾಡದೆ ಕೇಂದ್ರ ಸರ್ಕಾರವನ್ನು ರಚಿಸಬೇಕೆಂದು ಲೇಬರ್ ಪಕ್ಷದ ಖಚಿತವಾದ ಅಭಿಪ್ರಾಯವೆಂದು ತಿಳಿದು ಬಂದಿದೆ. ಗಾಂಧೀಜಿಯವರ ಖಾಸಗೀ ಪ್ರತಿನಿಧಿಗಳಾದ ಶ್ರೀ ಸುಧೀರ ಘೋಷರು ಮೊನ್ನೆ ಪ್ರಧಾನಿ ಅಟ್ಲೀಯವರನ್ನು ಭೇಟಿ ಮಾಡಿದ್ದರು. ಲೇಬರ್ ಸರ್ಕಾರವು ಭಾರತದ ಬಗ್ಗೆ ಬಹಳ ಆಸಕ್ತಿ ವಹಿಸಿದೆಯೆಂದು ಅವರು ಹೇಳಿಕೆ ಇತ್ತಿದ್ದಾರೆ.

ಅಶಾಂತಿ ಪರಿಹಾರಕ್ಕಾಗಿ ಸತ್ಯಾಗ್ರಹ

ತಿರುವಣ್ಣಾಮಲೆಯಿಂದ ಬಂದಿರುವ "ದೇವೀದಾಸ" ಗೋಪಾಲ ಸುಬ್ರಹ್ಮಣ್ಯಂರವರು ಸರ್ವರ ಕಷ್ಟ ಪರಿಹಾರ ಮತ್ತು ಧರ್ಮ ಜೀವನದ ರಕ್ಷಣಾರ್ಥವಾಗಿ ಎಲ್ಲಾ ಮುಖಂಡರೂ ಕೋರುವ ರಚನಾತ್ಮಕ ಕಾರ್ಯಕ್ರಮಗಳನ್ನು ಸುಗಮವಾಗಿ ನಡೆಸಲ್ಪಡಲು ಶ್ರೀ ಚಾಮುಂಡಾಂಬೆಯ ಕೃಪೆಯಿಂದ ದೊರೆತ ಮಾರ್ಗದರ್ಶನಗಳನ್ನು ಸರ್ಕಾರಗಳ ಮತ್ತು ಪ್ರಜೆಗಳ ಮುಖಂಡರೂ ಮತ್ತು ಪ್ರತಿನಿಧಿಗಳಿಗೆ ಸಮರ್ಪಿಸಿಯೂ ಸಧ್ರಿಯರೆಲ್ಲರೂ ಸಹಕಾರ ಪ್ರತ್ಯುತ್ತರಗಳನ್ನು ಕೊಡಲು ತಿರಸ್ಕರಿಸಿದ್ದರಿಂದ ಮೈಸೂರು ದೊಡ್ಡಕೆರೆ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಸತ್ಯಾಗ್ರಹವನ್ನು ಹೂಡುತ್ತಾರೆ. ಆತ್ಮಭಿಕ್ಷೆ ನೀಡಲು ಲೋಕಶಾಂತಿ ಕೋರುವವರು ತಕ್ಕ ಸಹಕಾರವನ್ನು ಇತ್ತು ಧರ್ಮೋದ್ಧಾರ ಪೂರ್ವಕ ಶಾಂತಿ ಸ್ಥಾಪನೆಗಾಗಿ "ಸರ್ವ ಧರ್ಮೀಯರ ಹಿತರಕ್ಷಣಾ ಸಂಘ" ಏರ್ಪಡಿಸಲು ಸಹಾಯ ಕೋರಿರುತ್ತಾರೆ.

ಅಖಿಲ ವಿಶ್ವಾ ಸಮ್ಮೇಳನ

ಮುಂದಿನ ವರ್ಷ ಜನವರಿ ಅಥವಾ ಫೆಬ್ರವರಿಯಲ್ಲಿ ಅಖಿಲ ವಿಶ್ವ ಸಮ್ಮೇಳನ ನಡೆಯುವುದೆಂದೂ, ಏಷ್ಯಾದ ರಾಷ್ಟ್ರಗಳೆಲ್ಲಾ ಸೇರಿ ವಿಚಾರಿಸಬೇಕಾಗುವ ಒಂದು ಮಹಾ ಘಟನೆಯನ್ನಾಗಿ ಭಾರತವು ಒಂದು ಮುಖ್ಯ ಕೇಂದ್ರವಾಗುವುದೆಂದೂ ಪಂ॥ ನೆಹರೂರವರು ತಿಳಿಸಿದ್ದಾರೆ.

ನ್ಯಾಯನಿರ್ವಹಣೆಯ ಮಹತ್ವ

ಪೆಟ್ರಿಕ್ ಸ್ಪೆನ್ಸ್‌ರವರ ಭಾಷಣ

ಮೈಸೂರು ೧೬

ಫೆಡರಲ್ ಕೋರ್ಟ್ ನ್ಯಾಯಾಧೀಶರಾದ ಸರ್ ಪೆಟ್ರಿಕ್ ಸ್ಪೆನ್ಸರವರು ನಿನ್ನೆ ವಕೀಲರ ಸಂಘಕ್ಕೆ ಭೇಟಿ ಇತ್ತರು. ಅಧ್ಯಕ್ಷರಾದ ಶ್ರೀ ಲಕ್ಷ್ಮೀನಾರಾಯಣರಾಯರು ಅವರನ್ನು ಸ್ವಾಗತಿಸಿದರು. ಸರ್ ಸ್ಪೆನ್ಸರವರು ಭಾಷಣಮಾಡಿ ಮೈಸೂರಿನ ಸೌಂದರ್ಯ, ಸದ್ಗುಣ ಮುಂತಾದುವುಗಳನ್ನು ಪ್ರಶಂಸಿಸಿದರು. ಭವಿಷ್ಯ ಭಾರತ ರಚನೆಯಲ್ಲಿ ವಕೀಲರ ಪಾತ್ರವು ಪ್ರಾಮುಖ್ಯವಾದುದು. ನ್ಯಾಯಾಂಗವು ಕೇಂದ್ರಸರ್ಕಾರಕ್ಕೆ ಮೀಸಲಾದ ವಿಷಯವಾಗಲಾರದು. ಪ್ರಾಂತಪ್ರಾಂತಗಳಿಗೆ ಕಾನೂನಿನ ಚಲಾವಣೆಯಲ್ಲಿ ಬದಲಾವಣೆಯೂ ಉಂಟಾಗಬಹುದು. ಆದರೂ ಸಮಾನತೆಯನ್ನು ಸಾಧಿಸುವುದರಲ್ಲಿ ವಕೀಲರು ನಿರತರಾಗಬೇಕು. ಸುಲಭ ವೆಚ್ಚದಿಂದಲೂ, ದಕ್ಷತೆಯಿಂದಲೂ ನ್ಯಾಯನಿರ್ವಹಣೆಯನ್ನು ಮಾಡುವುದರಲ್ಲಿಯೇ ಒಂದು ದೇಶದ ಅಭ್ಯುದಯವು ಸೇರಿರುತ್ತದೆ. ವಿಚಕ್ಷಣೆಯಿಂದ ನ್ಯಾಯವನ್ನು ದೊರಕಿಸಿಕೊಡುವುದರಿಂದ ಅಸಂತೃಪ್ತಿಯು ಅದೃಶ್ಯವಾಗುವುದೆಂಬುದನ್ನು ಸರ್ಕಾರದ ಅಧಿಕಾರಿಗಳು ಅರಿಯದಿರುವುದು ಶೋಚನೀಯ ಎಂದು ಅವರು ಹೇಳಿದರು.

ಉಪನ್ಯಾಸ

ವಾಣಿವಿಲಾಸ ಮೊಹಲ್ಲಾದ ಶ್ರೀ ರಾಮಕೃಷ್ಣಾಶ್ರಮದಲ್ಲಿ ನಾಳೆ ಸಂಜೆ ೬ ಘಂಟೆಗೆ ಸ್ವಾಮಿ ಸೋಮನಾಥಾನಂದರು ಭಗವದ್ಗೀತೆಯ ಮೇಲೆ ಭಾಷಣಮಾಡುವರು.

ಜಿಲ್ಲಾ ಜಡ್ಜರ ನಿವೃತ್ತಿ

ಜಿಲ್ಲಾ ಸೆಷನ್ಸ್ ಜಡ್ಜರಾದ ಶ್ರೀ ಎಲ್. ವೆಂಕಟರಮಣಯ್ಯನವರು ನಾಳೆಯಿಂದ ನಿವೃತ್ತರಾಗಲಿರುವುದರಿಂದ ಅವರನ್ನು ಮೈಸೂರು ಲಾಯರುಗಳು ಈ ಮಧ್ಯಾಹ್ನ ಸನ್ಮಾನಿಸಿ ಬೀಳ್ಕೊಟ್ಟರು.

ನೀರಿನ ರೇಷನ್

ಉತ್ತರ ಸಿಲೋನಿನ ಕ್ಯಾಂಡಿ ಮತ್ತು ಜಪನ್ನಾನ್ ದಿಕ್ಕುಗಳಲ್ಲಿ ನೀರೇ ಇಲ್ಲದಿರುವುದರಿಂದ ಸುಮಾರು ೩ ಸಾವಿರ ನಿವಾಸಿಗಳಿಗೆ ೩ ಮೈಲಿ ದೂರದ [illegible] ನೀರನ್ನು ಲಾರಿಗಳಲ್ಲಿ ತಂದು ಪ್ರತಿದಿನವೂ ಒಂದು ಗ್ಯಾಲನ್ ನೀರನ್ನು ಕೊಡಲಾಗುತ್ತಿದೆ. ಇದಕ್ಕಾಗಿ ನೀರಿನ ರೇಷನ್ ಕಾರ್ಡುಗಳನ್ನು ಹಂಚಲಾಗುತ್ತಿದೆ.

ಕಲ್ಕತ್ತೆಯಲ್ಲಿ ದೊಂಬಿ

ಮುಸ್ಲಿಂ ಲೀಗಿನ ವಿರೋಧ ದಿನಾಚರಣೆಯಲ್ಲಿ ನಿನ್ನೆ ಕಲ್ಕತ್ತೆಯ ಅನೇಕ ಕಡೆಗಳಲ್ಲಿ ಲೂಟಿ, ದೊಂಬಿ ಮತ್ತು ಇರಿತಗಳು ನಡೆದು ೧೫೫ ಜನರು ಮೃತಪಟ್ಟರೆಂದೂ ಸುಮಾರು ೭೫೦ ಮಂದಿಗೆ ಗಾಯಗಳಾಗಿ ಅವರನ್ನು ಆಸ್ಪತ್ರೆಗೆ ಸಾಗಿಸಲಾಗಿದೆಯೆಂದೂ ವರದಿಯಾಗಿದೆ. ಇದರ ಪರಿಣಾಮವಾಗಿ ಬಂಗಾಳಾ ಅಸ್ಸಾಂ ರೈಲುಗಳನ್ನು ನಿಲ್ಲಿಸಲಾಗಿದೆ. ಧರ್ಮತಲಾ ರಸ್ತೆಯಲ್ಲಿರುವ ಕಾ ಗ್ರೀನ್ ಕಛೇರಿಗೆ ಮುಸ್ಕರಗಾರರು ಕಲ್ಲುಗಳ ಮಳೆಯನ್ನು ಸುರಿಸಿದುವರು ಮತ್ತು ಅದರ ಬಳಿ ಇರುವ ಅಂಗಡಿಗಳನ್ನು ಲೂಟಿ ಮಾಡಿರುವರು. ಕೆಲವು ಮುಖ್ಯ ರಸ್ತೆಗಳ ಚೌಕಗಳ ಬಳಿ ಲೀಗಿನ ಸ್ವಯಂ ಸೇವಕರುಗಳು ಕೈಯಲ್ಲಿ ಲಾಠಿಯನ್ನು ಹಿಡಿದು ವಾಹನಗಳ ಸಂಚಾರವನ್ನು ಕ್ರಮವಾಗಿ ಹೋಗುವಂತೆ ಮಾಡುತ್ತಿದ್ದರು. ಬಂಗಾಳಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾದ ಶ್ರೀ ಕಾಳಿಪದ ಗುಪ್ತರವರು ಮುಷ್ಕರಕಾರರ ಧಾಳಿಯನ್ನು ತಡೆಗಟ್ಟುವ ಸಲುವಾಗಿ ಲೀಗಿನ ನಾಯಕರುಗಳೊಡನೆ ಸಮಾಲೋಚನೆ ಮಾಡುತ್ತಿರುವರು. ಕೆಲವು ಕಡೆಗಳಲ್ಲಿ ಶಾಂತಿ ದಳಗಳು ಏರ್ಪಟ್ಟಿವೆ. ಅವರೆಲ್ಲರೂ ಲೂಟಿ ನಡೆಯುವ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿರುವರೆಂದು ಹೇಳಲಾಗಿದೆ.

ಬೆಳ್ಳಿ ಕುರ್ಚಿಗಿಂತ ಮಣ್ಣಿನ ಗುಡಿಸಲೇ ಶ್ರೇಷ್ಠ

ಪಂ॥ ನೆಹರೂರವರು ಬೊಂಬಾಯಿಗೆ ರೈಲಿನಲ್ಲಿ ತೆರಳುತ್ತಿದ್ದಾಗ, ಥಾಮಾಂಗ ರೈಲ್ವೆ ಸ್ಟೇಷನ್ನಿನಲ್ಲಿ ಸ್ವಾಗತ ಏರ್ಪಡಿಸಿ ಅವರು ಕೂರಲು ಬೆಳ್ಳಿ ಕುರ್ಚಿಯನ್ನು ಹಾಕಿದ್ದನ್ನು ನೋಡಿ "ಬೆಳ್ಳಿ ಕುರ್ಚಿಗಿಂತ ಹಳ್ಳಿಯ ಮಣ್ಣಿನ ಗುಡಿಸಲನ್ನು ನಾನು ಆಶಿಸುತ್ತೇನೆ. ಎಷ್ಟು ಮಂದಿ ನನ್ನ ಗೆಳೆಯರು ಈ ಸೌಖ್ಯ ಅನುಭವಿಸುತ್ತಿದ್ದಾರೆ? ನನ್ನ ಜಾಗ ಹಳ್ಳಿಗಳಲ್ಲಿ. ಹಳ್ಳಿಗರ ಉದ್ಧಾರದಿಂದಲೇ ನಮಗೆ ಮೋಕ್ಷ" ಎಂದು ಅವರು ತಿಳಿಸಿದರು.

ರಾಜ್ಯಾಂಗ ಸಭೆಗೆ ಪ್ರಕಾಶಂ ಅಧ್ಯಕ್ಷರೇ ?

ಭಾರತ ರಾಜ್ಯಾಂಗ ರಚನಾ ಸಭೆಯ ಅಧ್ಯಕ್ಷ ಸ್ಥಾನಕ್ಕೆ ಸಭೆಯ ಹಿರಿಯ ಸದಸ್ಯರೊಬ್ಬರನ್ನು ಆರಿಸಬೇಕೆಂದು ಕಾಂಗ್ರೆಸ್ ನಿಪುಣರ ಸಮಿತಿ ಅಭಿಪ್ರಾಯಪಟ್ಟಿರುವುದಾಗಿ ತಿಳಿದುಬಂದಿದೆ. ಈ ಸಂದರ್ಭದಲ್ಲಿ ಶ್ರೀ ಟಿ. ಪ್ರಕಾಶಂ, ಸರ್ ಹರಿಸಿಂಗ್ ಗೌರ್ ಮತ್ತು ಫಜಲುಲ್ ಹಕ್‌ರವರ ಹೆಸರುಗಳನ್ನು ಹೇಳಲಾಗುತ್ತಿದೆ.

ಹೊಸ ಮಂತ್ರಿ ಮಂಡಲಕ್ಕೆ ಸ್ವತಂತ್ರಾಧಿಕಾರ

ಲೀಗಿನ ಸಹಕಾರವಿಲ್ಲದಿದ್ದರೂ ಕಾಂಗ್ರೆಸ್ ಕೇಂದ್ರ ಸರ್ಕಾರ ರಚಿಸುವುದು; ವೈಸ್‌ರಾಯರು ಶಾಸನಬದ್ಧ ಮುಖ್ಯಾಧಿಕಾರಿಗಳಾಗಿ ಮಾತ್ರ ಇರುವರು; ಹೊಸ ಮಂತ್ರಿಮಂಡಲವು ಕಾರ್ಯಕಾರೀ ಸಮಿತಿಯಾಗಿದ್ದು ಅದಕ್ಕೆ ಸ್ವತಂತ್ರವಾಗಿದೆ. ವರ್ಕಿಂಗ್ ಕಮಿಟಿ ಯಾವಾಗಲೂ ಸ್ವಾಗತ ಹಿಸ್ಸೆ ಇದೆ. ಲೀಗಿನವರು ಹೋರಾಟದ ಸ್ಥಾನಗಳನ್ನು [illegible] ಸರ್ಕಾರದವರು ಅವರನ್ನು [illegible] ಎಂದು [illegible] [illegible]

ಸಾಧ್ವಿ

ತಾ॥ ೧೭-೮-೪೬ ಶನಿವಾರ

ಲೀಗಿನ ನಿರಾಕರಣೆ

ಕೇಂದ್ರ ಸರ್ಕಾರ ರಚನೆಯಲ್ಲಿ ಸಹಕರಿಸಬೇಕೆಂದು ಕಾಂಗ್ರೆಸ್ ಅಧ್ಯಕ್ಷರಾದ ಪಂ॥ ಜವಹರಲಾಲರು ಮಾಡಿದ ಮನವಿಗೆ ಮಿ॥ ಜಿನ್ನಾರವರು ಒಪ್ಪಲಿಲ್ಲವೆಂದು ಗೊತ್ತಾಗಿದೆ. ಉಳಿದ ಎಲ್ಲ ಸಂಗಡಿಗಳೂ ಸಮ್ಮತಿಸಿರುವುದಾಗಿಯೂ ತಿಳಿದುಬಂದಿದೆ. ತಮ್ಮ ಪ್ರಯತ್ನವು ವಿಫಲವಾದುದಕ್ಕಾಗಿ ನೆಹರುರವರು ವಿಷಾದವನ್ನು ಸೂಚಿಸಿರುತ್ತಾರೆ. ಆದರೂ ಸಹ ಈಗ ಕೈಗೊಂಡಿರುವ ಕೇಂದ್ರ ಸರ್ಕಾರ ರಚನೆಯ ಕೆಲಸವನ್ನು ಮಾತ್ರ ಬಿಟ್ಟು ಬಿಡಲು ಸಾಧ್ಯವಿಲ್ಲವೆಂದು ತಿಳಿಸಿದ್ದಾರೆ.

ದೇಶದಲ್ಲಿರುವ ಎಲ್ಲ ಪಕ್ಷಗಳವರೂ ಸಹಕರಿಸಲು ಒಪ್ಪಿರುವಾಗ ಮುಸ್ಲಿಂ ಲೀಗಿನವರು ಅದಕ್ಕೆ ವಿರೋಧವಾಗಿರುವುದು ವಿಷಾದಕರವಾದ ಸಂಗತಿಯೇ ಸರಿ. ಆದರೆ ಅವರ ಇದುವರೆಗಿನ ನೀತಿಯನ್ನು ಪರಿಶೀಲಿಸಿದರೆ ಈಗಲೂ ಅವರು ಅಸಹಕಾರ ಮನೋಭಾವವನ್ನು ಸೂಚಿಸಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ಹಿಂದೂಸ್ಥಾನದ ಭವಿಷ್ಯ ರಾಜ್ಯಾಂಗವನ್ನು ಗೊತ್ತು ಮಾಡಲು ಪ್ರತ್ಯೇಕವಾದ ಸಮಿತಿಯು ರಚಿಸಲ್ಪಟ್ಟಿದೆ. ಅದರಲ್ಲಿ ಭಾಗವಹಿಸಲು ಕಾಂಗ್ರೆಸ್ಸಿನವರೂ, ಇತರ ಎಲ್ಲಾ ಸಂಗಡಿಗಳವರೂ ಒಪ್ಪಿದ್ದಾರೆ. ಮುಸ್ಲಿಂ ಲೀಗಿನವರು ಮೊದಲು ಒಪ್ಪಿದ್ದರೂ ಸಹ ಕಾರಣಾಂತರದಿಂದ ಈಗ ಅದನ್ನು ನಿರಾಕರಿಸಿರುತ್ತಾರೆ. ಅಲ್ಪ ನಿರ್ಣಯದ ಆಧಾರದ ಮೇಲೆ ಇತ್ಯರ್ಥವಾಗುವ ರಾಜ್ಯಾಂಗ ಪರಿಶೀಲನೆಯ ಪ್ರಯತ್ನದಲ್ಲಿ ದೇಶದ ಯಾವ ಒಂದು ಸಂಗಡದವರು ಭಾಗವಹಿಸದಿದ್ದರೂ ಅವರಿಗೇ ಹಾನಿಯಲ್ಲದೆ ಬೇರೆಯವರಿಗಲ್ಲ. ಇದನ್ನು ಅರಿಯದ ಲೀಗಿನವರು ತಮ್ಮ ತೀರ್ಮಾನವನ್ನೇ ಬದಲಾಯಿಸಿ ಈಗ ವಿರೋಧ ವರ್ತನೆಯಲ್ಲಿ ತೊಡಗಿರುವುದು ಅತ್ಯ ಘಾತಕವಾದ ಅಂಶವೆಂದು ಬೇರೆ ಹೇಳಬೇಕಾಗಿಲ್ಲ.

ಲೀಗಿನೊಡನೆ ಸಂಧಾನಕ್ಕೆ ಸದಾ ಬಾಗಿಲನ್ನು ತೆರೆದಿಟ್ಟಿರುವುದಾಗಿ ನೆಹರುರವರು ಹೇಳಿರುತ್ತಾರೆ. ಇದು ಕಾಂಗ್ರೆಸ್ಸಿನ ಅನೂಚಾನ ಪದ್ಧತಿಯಾಗಿದೆ. ದಾರಿ ತಪ್ಪಿ, ಭಿನ್ನ ಭಾವಗಳಿಗೆ ಒಳಗಾಗಿ, ತತ್ಕಾಲದಲ್ಲಿ ವಿರುದ್ಧರೀತಿಯಲ್ಲಿ ವರ್ತಿಸುವ ಸಂಗಡಗಳನ್ನು ತನ್ನ ನೈತಿಕ ಪ್ರಭಾವದಿಂದ ಒಲಿಸಿಕೊಂಡು ಕ್ರಮೇಣ ತನ್ನ ದಾರಿಗೆ ಎಳೆಯುವ ನೀತಿಯನ್ನು ಕಾಂಗ್ರೆಸ್ಸು ಸದಾ ಕಾಲದಲ್ಲಿಯೂ ಅನುಸರಿಸುತ್ತಿದೆ. ಈಗಲೂ ಹಾಗೆ ಮಾಡಿರುವುದು ಸಹಜವಾಗಿಯೇ ಇದೆ. ಆದರೆ ಲೀಗಿನವರ ಮನಸ್ಸು ಎಂದಿಗೆ ಕರಗುವುದೋ ಹೇಳಲು ಸಾಧ್ಯವಿಲ್ಲ.

ಸಧ್ಯದಲ್ಲಿ ನಡೆದಿರುವ ವಿದ್ಯಮಾನಗಳು ಸಮಾಧಾನಕರವಾಗಿಲ್ಲ. ಸಿಕ್ಷೆ ಮುಸಲ್ಮಾನರು ಹೋರಾಟದ ದಿನಾಚರಣೆಯನ್ನು ನಡೆಸಿದರೆ, ಶಾಂತಿಯಿಂದಲೂ ಶಿಸ್ತಿನಿಂದಲೂ ಇದನ್ನು ಆಚರಿಸಬೇಕೆಂದು ಮಿ॥ಜಿನ್ನಾರವರು ಹೇಳಿದರೂ ಸಹ ಅಲ್ಲಲ್ಲಿ ನಡೆದ ದುರ್ಘಟನೆಗಳು ಅತ್ಯಂತ ಶೋಚನೀಯವಾಗಿವೆ. ಕಲ್ಕತ್ತೆಯ ಪ್ರಸಂಗವು ಒಹಳ ಘೋರವಾಗಿದೆ. ಸಂಘರ್ಷಣವಾದ ಪರಿಣಾಮವನ್ನು ಆಚರಿಸಲು ಹೋರಾಟು ದೊಂಬಿ, ಲೂಟಿ, ಚೂರಿಯ ಇರಿತಗಳೇ ಮುಂತಾದ ದುಷ್ಕೃತ್ಯಗಳು ಅಲ್ಲಿ ನಡೆದು ನೂರಾರು ಜನರು ಸತ್ತು ಸಾವಿರಾರು ಜನರಿಗೆ ಗಾಯಗಳಾಗಿವೆಯೆಂದ ಮೇಲೆ ಇಂತಹ ಪ್ರದರ್ಶನಗಳಿಂದ ನಡೆಯುವ ಅನರ್ಥವು ವೇದ್ಯವಾದೀತು. ರಚನಾತ್ಮಕವಾದ ಯಾವ ಉದಾತ್ತ ಧ್ಯೇಯ ಸಾಧನೆಯೂ ಇಲ್ಲದೆ ಕೇವಲ ವಿರೋಧಕ್ಕಾಗಿ ನಡೆಯುವ ಇಂತಹ ಪ್ರಸಂಗಗಳ ಪರಿಣಾಮವೇ ಇದು. ಲೀಗಿನವರು ತಮ್ಮ ವರ್ತನೆಯನ್ನು ಇದೇ ರೀತಿ ಮುಂದುವರಿಸಿದರೆ ದೇಶದ ಶಾಂತಿಗೆ ಬಹಳಮಟ್ಟಿನ ಭಂಗ ಉಂಟಾದೀತು.

ಮುಸ್ಲಿಮರು ವಿರೋಧವನ್ನು ಪ್ರದರ್ಶಿಸಿದರೆ ಅದನ್ನು ಎದುರಿಸಲೇಬೇಕಾಗುವುದೆಂದು ನೆಹರೂರವರು ಹೇಳಿದ್ದಾರೆ. ಶಾಂತಿಯನ್ನು, ಶಿಸ್ತನ್ನೂ ಕಾಪಾಡುವುದು ಪ್ರತಿಯೊಂದು ಸರ್ಕಾರದ ಆದ್ಯ ಕರ್ತವ್ಯ. ಗಲಭೆಕೋರರ ಕೈ ಮೇಲಾದರೆ ಸರ್ಕಾರವು ಸತ್ವಹೀನವಾಗುವುದು; ಸರ್ಕಾರವು ದರ್ಪದಿಂದ ವರ್ತಿಸಿದರೆ ಪುಂಡು ಪೋಕರಿಗಳು ಹತರಾಗುವರು. ಹೊಸದಾಗಿ ರಚನೆಯಾಗಲಿರುವ ಕೇಂದ್ರ ಸರ್ಕಾರಕ್ಕೆ ಸೇರದ ಒಂದು ಗುಂಪಿನವರ ಪಿರುಕುಳವನ್ನು ಅಡಗಿಸುವ ಕರ್ತವ್ಯವೇ ಮೊದಲು ಸಂಪ್ರಾಪ್ತವಾಗುವುದು ಅಷ್ಟೇನೂ ಹಿತಕರವಲ್ಲ. ಆದರೆ ಮಿ॥ಜಿನ್ನಾರವರು ಹೇಳಿರುವಂತೆ ನಿಜವಾಗಿಯೂ ಅವರ ಅನುಯಾಯಿಗಳು ಶಾಂತಿಯಿಂದಲೂ, ಶಿಸ್ತಿನಿಂದಲೂ ವರ್ತಿಸಿದರೆ ಯಾರಿಗೂ ಯಾವ ತೊಂದರೆಯೂ ಬರುವುದಿಲ್ಲ.

ಹೊಸ ಸರ್ಕಾರವು ವೈಸರಾಯರ ಸೂತ್ರಗೊಂಬೆಯಾಗಿರುವುದಿಲ್ಲವೆಂಬುದನ್ನು ನೆಹರೂರವರು ಸ್ಪಷ್ಟಪಡಿಸಿದ್ದಾರೆ. ಮಂತ್ರಿಮಂಡಲದವರ ವ್ಯವಹಾರದಲ್ಲಿ ವೈಸರಾಯರು ಕೈ ಹಾಕುವುದಾದರೆ ಬಿಕ್ಕಟ್ಟು ಉಂಟಾಗುವುದೆಂದು ಅವರು ತಿಳಿಸಿದ್ದಾರೆ. ಹಿಂದೆ ಕಾಂಗ್ರೆಸ್ ಮಂತ್ರಿ ಮಂಡಲಗಳ ರಚನೆಯ ಕಾಲದಲ್ಲಿ ಗವರ್ನರುಗಳು ಪ್ರಾಂತ್ಯ ಸರ್ಕಾರಗಳಿಗೆ ಭರವಸೆ ಇತ್ತು ಯಾವ ರೀತಿ ದಿನಚರಿ ವ್ಯವಹಾರಗಳಲ್ಲಿ ಪ್ರವೇಶಿಸದೆ ತಟಸ್ಥರಾಗಿದ್ದರೋ ಈಗ ವೈಸರಾಯರೂ ಹಾಗೆಯೇ ಇರುವರೆಂದು ನಂಬಲಾಗಿದೆ.

ಲೀಗಿನವರು ಸಹಕಾರ ನೀಡದಿದ್ದರೂ ಲೀಗಿನಿಂದ ಹೊರಗಿರುವ ಅಸಂಖ್ಯಾತ ಮುಸಲ್ಮಾನರ ಪೈಕಿ ಅನೇಕ ದೇಶ ಭಕ್ತರು ಸಹಕರಿಸಲು ಸಿದ್ಧರಾಗಿರುತ್ತಾರೆ. ಈ ದಿನ ವೈಸರಾಯರಿಗೂ ನೆಹರೂರವರಿಗೂ ನಡೆಯುವ ಭೇಟಿಯಲ್ಲಿ ಕೇಂದ್ರ ಸರ್ಕಾರ ರಚನೆಯ ಕಡೆಯ ಘಟ್ಟವು ಮುಟ್ಟಲ್ಪಡುವುದು. ಅನಂತರ ಕ್ಷಿಪ್ರದಲ್ಲಿಯೇ ಹೊಸ ಸರ್ಕಾರವು ಆಡಳಿತ ನಡೆಸಲು ಆರಂಭವಾಗುವುದು. ಹತ್ತಾರು ವರ್ಷಗಳ ರಾಜಕೀಯ ಸಮಾಲೋಚನೆಯ ಫಲವಾಗಿ ರಚನೆಯಾಗಲಿರುವ ಈ ನೂತನ ರಾಜಕೀಯ ಪ್ರಯೋಗವು ಯಶಸ್ವಿಯಾಗಿ ನಡೆದು ಭಾರತ ಸ್ವಾತಂತ್ರ್ಯ ಸೋಪಾನಕ್ಕೆ ಅಸ್ತಿಭಾರ ಹಾಕಲೆಂದು ಹಾರೈಸೋಣ.

ಬಂಗಾಳಾದಲ್ಲಿ ಕ್ರಾಂತಿಕಾರರ ಬಿಡುಗಡೆ

೧೯೩೭ ಕ್ಕೆ ಮುಂಚಿನಿಂದಲೂ ಶಿಕ್ಷೆ ಅನುಭವಿಸುತ್ತಿರುವ ಭಯೋತ್ಪಾದಕ ರಾಜಕೀಯ ಬಂದಿಗಳನ್ನು ಬಿಡುಗಡೆ ಮಾಡಬೇಕೆಂದು ಬಂಗಾಳಾ ಸರ್ಕಾರ ಆಜ್ಞೆ ಮಾಡಿದೆ. ಈ ಆಜ್ಞೆಯ ಪ್ರಕಾರ ೪೦ ಮಂದಿ ಕ್ರಾಂತಿಕಾರರು ಬಿಡುಗಡೆಯಾಗುವರು.

ಸಿಡಿಲಿನಿಂದ ಮರಣ

ಪಾಟ್ನಾದ ಬಳಿ ಇರುವ ಲೆಹಾರಿ ಧನಪುರ ಘಾಟಿನಲ್ಲಿ ೩೩ ಜನರಿಗೆ ಸಿಡಿಲು ಬಡಿದು, ಅವರಲ್ಲಿ ೩ ಜನ ಸ್ಥಳದಲ್ಲೇ ಸತ್ತರೆಂದೂ ಉಳಿದವರಿಗೆ ತೀವ್ರ ಗಾಯವಾಗಿದೆಯೆಂದೂ ವರದಿಯಾಗಿದೆ.

NOTICE

Applications are invited for agencies for sale of milk & butter from The City Milk supply at fixed hours for each Mohalla in Mysore City from business houses to work on commission. Applications will be dealt with in person by the Proprietor, between 10th & 15th Aug 1946.

M. V. Krishna Swami
Proprietor

ಸಂತಾಪ ಸೂಚನೆ

ಸ್ವಂ.ವ.] ನಂಜನಗೂಡು

ಶ್ರೀ ರಂಭಾಪುರಿ ಜಗದ್ಗುರು ಶ್ರೀ ಶಿ. ನಂದ ರಾಜೇಂದ್ರ ಶಿವಾಚಾರ್ಯ ಸ್ವಾಮಿಗಳವರ ೧ ನೇ ತಾ॥ ಶಿವೈಕ್ಯರಾದ್ದರಿಂದ ವೀರಶೈವ ಸಮಾಜಕ್ಕೆ ಉಂಟಾಗಿರುವ ಅಪಾರ ನಷ್ಟವನ್ನೂ, ಸಂತಾಪವನ್ನೂ ವ್ಯಕ್ತಪಡಿಸಲು ನಿನ್ನೆ ದಿನ ಶ್ರೀ ಹೊಂದಗೆರೆ ಮಠದ ಶ್ರೀ ಶಿವರುದ್ರ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸಭೆ ಜರುಗಿತು. ಶ್ರೀಗಳು ಮುನಸೀಫ್ ಟಿ ಗುರುನಂಜಯ್ಯ, ಮ್ಯಾಜಿಸ್ಟ್ರೇಟ್ ಬಿ.ಎಸ್.ರುದ್ರಪ್ಪ, ಅಡ್ವೋಕೇಟ್ ಎಂ.ಎಲ್. ಲಿಂಗಪ್ಪ ಮತ್ತು ಬಿ ಎಸ್ ಎ... ಆರಾಧ್ಯರು ಸ್ವಾಮಿಗಳ ಸೇವೆಯನ್ನು ಪ್ರಶಂಸಿಸಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿದರು.

ಭಾರತವನ್ನು ತ್ಯಜಿಸಿದರ ಬ್ರಿಟನ್ನಿಗೆ ಕ್ಷೇಮ

ವೈಸರಾಯರು ಪಂ॥ ನೆಹರೂರವರನ್ನು ಕೇಂದ್ರ ಸರ್ಕಾರ ರಚಿಸಲು ಆಹ್ವಾನಿಸಿದ ಸುದ್ದಿಯನ್ನು ಜಾರ್ಜ್ ಬರ್ನಾರ್ಡ್ ಷಾರವರಿಗೆ ತಿಳಿಸಿದಾಗ "೪೦ ಕೋಟಿ ಭಾರತೀಯನ್ನು ಆಳುವ ಜವಾಬ್ದಾರಿಯಿಂದ ನಿವೃತ್ತಿಯಾದಾಗಲೇ ಬ್ರಿಟನ್ನಿಗೆ ಕ್ಷೇಮ" ಎಂದು ಹೇಳಿದ್ದಾರೆ.

ಅ॥ ಕರ್ನಾಟಕ ಏಕೀಕರಣ ಸಮ್ಮೇಳನ

ಆಗಸ್ಟ್ ೩೧ ನೇ ತಾ॥ ದಾವಣಗೆರೆಯಲ್ಲಿ ಜರುಗುವ ಅಖಿಲ ಕರ್ನಾಟಕ ಏಕೀಕರಣ ಸಮ್ಮೇಳನದ ಅಧ್ಯಕ್ಷತೆಯನ್ನು ಬೊಂಬಾಯಿನ ವ್ಯವಸಾಯ ಮಂತ್ರಿ ಶ್ರೀ ಎಂ. ಪಿ. ಪಾಟೀಲರು ವಹಿಸುವರು. ಮದ್ರಾಸಿನ ರೆವಿನ್ಯೂ ಮಂತ್ರಿಗಳಾದ ಶ್ರೀ ಕೆ. ಅಲ್ಲಾಡಿ ಕಾಸಂತರು ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸುವರು.

ಸಂತಾನ ಸಿಂಧೂರ

ಬಹಿಷ್ಟೆ ಸಂಬಂಧದ ಹೊಟ್ಟೆನೋವು ಬೇನೆಯಿಂದ ಮಕ್ಕಳಾಗದೇ ಇರತಕ್ಕವರಿಗೆ ಗ್ಯಾರಂಟೀ ಔಷಧ.

ಕ್ರಯ:—ಎಂಟು ಪೊಟ್ಟಣ "ಸಂತಾನ ಸಿಂಧೂರ", ನಾಲ್ಕು ಗುಳಿಗೆ "ಮದನ ವಿಲಾಸ" ಇರತಕ್ಕ ಒಂದು ಸೆಟ್ ಮೂರು ರೂಪಾಯಿ ಪ್ಯಾಕಿಂಗ್ ಮತ್ತು ಟಪಾಲ್ ಖರ್ಚು ಹನ್ನೆರಡಾಣೆ. ರೂ. ೩-೧೨-೦ ಮನಿಯಾರ್ಡರ್ ಮಾಡಿ ರಿ. ಕೂಡಲೆ ರಿಜಿಷ್ಟರ್ ಪಾರ್ಸೆಲ್ ರವಾನೆ. ವಿ.ಪಿ. ಇಲ್ಲ. ಕಮೀಷನ್ ಏಜೆಂಟರು ಬೇಕಿಲ್ಲ. ಪತ್ರ ವ್ಯವಹಾರ ಗುಪ್ತ. ಅನುಪಾನ ಮತ್ತು ಉಪಚಾರ ಪತ್ರಿಕೆ ಔಷಧಿ ಸಂಗಡ. ಹನ್ನೆರಡು ಪುಟಗಳ ಕ್ಯಾಟಲಾಗ್ ಉಚಿತ.

ವಿ. ರಾಮಸ್ವಾಮಿ ಅಯ್ಯಂಗಾರ್,
ಪ್ರೊಪ್ರೈಟರ್, "ಸಂತಾನ ಸಿಂಧೂರ" ಆಫೀಸ್, ಅಂಚೆ, ಮುಳಬಾಗಿಲ್ ಪೋಸ್ಟ್

ರಾಜಕಮಲ್ ಟಾಕೀಸ್
ಮೈಸೂರು

16-8-46 ರಿಂದ

ತದ್‌ಬೀರ್

ಭೂಮಿಕೆ'—ಸೈಗಾಲ್, ಸುರಯ್ಯ ಮುಂತಾದವರು

ಪ್ರತಿದಿನ ಮೂರು ಆಟಗಳು

ಕನ್ನಾಂಬ, ಡಾ॥ ಜಿ. ವಿ ಸುಬ್ಬರಾವ್ ನಟಿಸಿರುವ

"ಮುಗ್ಗುರು ಮರಾಟೀಲು"

(ತೆಲುಗು ಚಿತ್ರ)

THREE MARATEES

ವೀರ ಮಾತೆ

17—8—46 ರಿಂದ ಅಮೋಘ ಎರಡನೇ ವಾರ

ಮೋತೀಲಾಲ್ ಟಾಕೀಸಿನಲ್ಲಿ

೧೪-೮-೪೬ ರಿಂದ ಬೆಂಗಳೂರು ಸೂಪಿರಿಯರ್ ಟಾಕೀಸಿನಲ್ಲಿ ಅಮೋಘ ನಾಲ್ಕನೇ ವಾರ

- Released Through : -

SRI MAHAVEER FILM EXCHANGE
Asoka Road, Mysore.

ವಿಜಯಾ ಏಜನ್ಸೀಸ್, ಮೈಸೂರು.

Edited printed and published by A. N. Nagarajan at the Sadhvi Press D Subbiah Road, Mysore

[ಬಿ]ರುದು ಪ್ರಶಸ್ತಿ ಪಡೆದವರಿಗೆ ಸಾರ್ವಜನಿಕ ಸನ್ಮಾನ

ಮೈಸೂರು ೧೮

[ಶ್ರೀ]ಮಹಾ ಪ್ರಭುಗಳಿಂದ ಸನ್ಮಾನಿತರಾಗಿ [ಬಿ]ರುದುಗಳನ್ನೂ ಮತ್ತು ಪ್ರಶಸ್ತಿಗಳನ್ನೂ [ಪ]ಡೆದ ಮಹನೀಯರನ್ನು ಗೌರವಿಸಿ, ಅಭಿ[ನ]ಂದಿಸುವುದಕ್ಕಾಗಿ ನಿನ್ನೆ ಸಾಯಂಕಾಲ [ಪುರಭ]ವನ ಹಾಲಿನಲ್ಲಿ ಸಾರ್ವಜನಿಕ ಸಭೆಯನ್ನು [ಡಾ]॥ ಸರ್ ಎ ರಾಮಸ್ವಾಮಿ ಮೊದಲಿ[ಯಾ]ರ್‌ರವರ ಅಧ್ಯಕ್ಷತೆಯಲ್ಲಿ ಸೇರಿತ್ತು. [ಇ]ಲ್ಯ ಫಿಲೇಚರ್‍ಸ್ ಮ್ಯಾ॥ ಏಜೆಂಟರಾದ [ಶ್ರೀ] ಜಿ ಕೃಷ್ಣಸ್ವಾಮಿರಾಯರು ಆಧ್ಯಕ್ಷರ[ನ್ನು] ಸ್ವಾಗತಿಸಿ ಭಾಷಣ ಮಾಡಿದರು. ಶ್ರೀ . ನಾರಾಯಣರಾಯರು ಮಂಗಳಾಷ್ಟಕ [ಶ್ಲೋ]ಕಗಳನ್ನು ಪಠಿಸಿದ ನಂತರ ಸೋದರಿ [ಕ]ಮಲ ಮತ್ತು ಲಲಿತರವರ ಘನವಾದ [ಸ]ಂಗೀತ ನಡೆಯಿತು. ಸಮಿತಿ ಕಾರ್ಯದರ್ಶಿ[ಗಳಾ]ದ ಶ್ರೀ ಜಿ ಆರ್ ರಾಮಯ್ಯನವರು [ಪ್ರ]ಶಸ್ತಿ ಪಡೆದವರನ್ನು ಸ್ವಾಗತಿಸಿದರು. ಶ್ರೀ [ಸ]ರ್ ಎಂ. ರುದ್ರಪ್ಪನವರೂ ಅಭಿನಂದಿಸಿ [ಭಾ]ಷಣ ಮಾಡಿದರು. ಪ್ರಶಸ್ತಿಗಳನ್ನು [ಪ]ಡೆದ ದೈಶೋಪಕಾರಿಣಿ ಸರ್ ತಂಬೂಚೆ[ಟ್ಟಿ]ಯವರೂ, ರಾಜ ಸೇವಾಸಕ್ತ ಶ್ರೀ ಸಿ. [ನ]ರಸಿಂಹಯ್ಯನವರೂ ಮಾ ತ ನಾ ಡಿ [ಶ್ರೀ]ಮನ್ಮ ಮಹಾರಾಜರು ಪ್ರಜಾ ಸೇವಕರ [ಅ]ವರವರ ಸೇವೆಗೆ ಅನುಗುಣವಾಗಿ ಪ್ರಶ[ಸ್ತಿ]ಗಳನ್ನೂ ಬಿರುದುಗಳನ್ನೂ ದಯಪಾಲಿ[ಸಿ]ದುದಕ್ಕೆ ಪ್ರಭುಗಳನ್ನು ವಂದಿಸಿದರು.

ಡಿ॥ ಬಿ॥ ಮೊದಲಿಯಾರ್‌ರವರು ಮಾತ[ನಾ]ಡುತ್ತಾ ಮಹಾ ಪ್ರಭುಗಳು ಅಧಿಕಾರ ವರ್ಗದಲ್ಲಿರುವವರ ಸೇವೆಯನ್ನು ಗಣಿಸು ವುದರ ಜೊತೆಗೆ ಸಾರ್ವಜನಿಕರು ಸಲ್ಲಿಸುತ್ತಿರುವ ಸೇವೆಗಳನ್ನೂ ಪರಿಗಣಿಸಿರುವುದರಿಂದ ಅವರ ಧ್ಯೇಯ ಮತ್ತು ಪ್ರಜಾ ವಾತ್ಸಲ್ಯಗಳು ಎಷ್ಟು ಮಟ್ಟಿಗೆ ಇವೆ ಎಂದು ಹೇಳಿ ಪ್ರಭುಗಳನ್ನು ಪ್ರಶಂಸಿಸಿದರು. ಮೈಸೂರು ಸಂಸ್ಥಾನವು ಕಲಾ ವಾಸಸ್ಥಾನವೆಂದೂ, ಕಲಾಭಿವೃದ್ಧಿಗೆ ಉತ್ತೇಜನ ಕೊಟ್ಟು ಕಲೆಯು ಅತಿಶಯವಾಗಿ ಬೆಳಗುವಂತೆ ಆಗಿಂದಾಗ್ಗೆ ಕಲಾವಂತರಿಗೆ ಬಿರುದು ಬಾವಲಿಗಳನ್ನು ಪ್ರಭುಗಳು ದಯಪಾಲಿಸುತ್ತಿರುವುದು ಎಲ್ಲರ ಸುಯೋಗ ಎಂದು ಹೇಳಿ, ಪ್ರಶಸ್ತಿ ಪಡೆದವರನ್ನು ಕೊನೆಯಲ್ಲಿ ಅಭಿನಂದಿಸಿದರು ರಾಷ್ಟ್ರಗೀತೆ ಮತ್ತು ಜಯಕಾರದೊಡನೆ ಸಭೆಯು ಮುಕ್ತಾಯವಾಯಿತು.

ಪ್ರದೋಷ ಸಂಘ

ಸಂಸ್ಕೃತ ಪಾಠಶಾಲೆಯ ಪ್ರದೋಷ ಸಂಘಕ್ಕೆ ಟಿ ನರಸೀಪುರದ ಸಿಲ್ಕ್‌ಫಿಲೇಚರಿನ ಶ್ರೀಮಾನ್ ಜಿ ಕೃಷ್ಣಸ್ವಾಮಿಯವರು ಒಂದುನೂರು ರೂಪಾಯಿಯನ್ನೂ, ವಿದ್ಯಾ ಗಣಪತಿಯವರಿಗೆ ರೇಷ್ಮೆ ಸೊಗುಟವನ್ನೂ ಕೊಟ್ಟಿರುತ್ತಾರೆ. ಸದ್ಗುರುಸೇವಾ ಮಂಡಳಿಯವರೂ ಸಹ ಸಂಘದ ಸಮಾರಂಭಕ್ಕೆ ೫ ರೂ ಕೊಟ್ಟಿರುತ್ತಾರೆ.

ಸವರ್ಣ ಕಳವು ಪತ್ತೆ

ಪಶ್ಚಿಮಂಗಲದ ಕುರುಪಯ್ಯ ಗೌಡ ಎಂಬುವರ ಮಗ ರಾಮಸ್ವಾಮಿ ಗೌಡ ಎಂಬುವನು ಅನುಮಾನದ ಮೇಲೆ ಕೊಯಮತ್ತೂರಿನಲ್ಲಿ ಕಳೆದ ೩ನೇ ತಾ॥ ದಸ್ತಗಿರಿಯಾದನು. ಇವನಲ್ಲಿ ೬೬ ಪವನುಗಳಿದ್ದುವೆಂದು ಗೊತ್ತಾಗಿದೆ ವಿಚಾರಿಸಿದ್ದರಲ್ಲಿ ಅವನು ಆ ಸವನನ್ನುಗಳನ್ನು ಮೈಸೂರಿನಲ್ಲಿ ಒಬ್ಬಾತನ ಸೊಂಟದಲ್ಲಿದ್ದುದನ್ನು ಕದ್ದನೆಂದು ತಿಳಿಸಿದುದಾಗಿ ವರದಿಯಾಗಿದೆ

ಫೋನ್ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಭಾನುವಾರ ೧೮—೮—೪೬ [ಸಂಚಿಕೆ ೨೬

ಕಲ್ಕತ್ತದಲ್ಲಿ ೨೦೦ ಸಾವು ೧೬೦೦ ಮಂದಿಗೆ ಗಾಯ

ಪಂಜಾಬಿನಲ್ಲಿ ಲೀಗಿಗೆ ಸೋಲು

ಪಂಜಾಬಿನ ಪ್ರಧಾನಿಗಳಾದ ಮಲ್ಲಿಕ್ ಖಿಜರ್ ಹಯಾತ್‌ಖಾನರು ಶಾಸನ ಸಭೆಗೆ ೩ ಕಡೆಯಿಂದ ಚುನಾಯಿತರಾಗಿದ್ದರು ಅವರು ರಾಜೀನಾಮೆ ಕೊಟ್ಟ ೨ ಸ್ಥಾನಗಳಿಗೆ ಉಪಚುನಾವಣೆ ನಡೆದು ಎರಡು ಕಡೆಗಳಲ್ಲೂ ಲೀಗಿಗೆ ಸೋಲಾಗಿ ಯೂನಿಯನಿಸ್ಟ್ ಪಕ್ಷದವರೇ ಜಯಗಳಿಸಿದ್ದಾರೆ. ಈಗ ಮಂತ್ರಿಮಂಡಲದ ಪಕ್ಷದಲ್ಲಿ ೯೪ ಮಂದಿಯೂ, ಲೀಗ್ ಪಕ್ಷದಲ್ಲಿ ೮೦ ಮಂದಿಯೂ ಇದ್ದಾರೆ

ಹರಿಜನರೆಲ್ಲಾ ಮುಸ್ಲಿಮರಾಗಲು ಆಹ್ವಾನ

ಡಾಕ್ಟರ್ ಅಂಬೇಡ್ಕರರೂ, ಅವರ ಅನುಯಾಯಿಗಳಾದ ನಿಮ್ನ ವರ್ಗದವರೂ ಮುಸ್ಲಿಂ ಮತವನ್ನು ಅವಲಂಬಿಸಿ ಲೀಗಿಗೆ ಸೇರಬೇಕೆಂದೂ ಫಿರೋಜ್‌ಖಾನ್ ನೂನರು ಬಹಿರಂಗ ಆಹ್ವಾನವಿತ್ತಿದ್ದಾರೆ. ಕಾಂಗ್ರೆಸ್ಸು ಶ್ರೀಮಂತರ ಕೂಟವೆಂದು ಹೇಳಿ ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರ ವಹಿಸಿಕೊಂಡರೆ ಅದು ತನ್ನ ಸಾವಿಗೆ ತಾನೇ ಹೊಣೆಯಾಗಬೇಕಾಗುತ್ತದೆಂದು ನೂನರು ಬೆದರಿಸಿದ್ದಾರೆ.

ವಿದ್ಯಾರ್ಥಿಗಳ ಮುಷ್ಕರವೇ ?

ಹೈಸ್ಕೂಲು ಸ್ಥಾಪನೆಯಾಗಿ ೩ ವರ್ಷಗಳು ಕಳೆದರೂ ತಮಗೆ ಆಟಕ್ಕೆ ಮೈದಾನವನ್ನೂ, ಸೌಕರ್ಯವನ್ನೂ ಏರ್ಪಾಡು ಮಾಡಿಲ್ಲವೆಂದೂ, ಆದಕಾರಣ ತಾವು ಕೊಡುತ್ತಿರುವ 'ಸ್ಪೋರ್ಟ್ಸ್' ಫೀಜನ್ನು ನಿಲ್ಲಿಸುವುದಾಗಿಯೂ, ನೋಟೀಸ್ ಕೊಟ್ಟಿರುವುದಾಗಿ ತಿಳಿದುಬಂದಿದೆ

ರೇಷ್ಮೆ ಹತೋಟಿ ರದ್ದು

ರೇಷ್ಮೆ ಮತ್ತು ಫಿಲೇಚರ್‍ಸ್‌ಗಳ ದರ ಮತ್ತು ಹಂಚಿಕೆಯ ಮೇಲಿನ ಹತೋಟಿಗಳನ್ನೆಲ್ಲಾ ಭಾರತ ಸರ್ಕಾರವು ವಜಾಮಾಡಿದೆ ಈ ಕ್ರಮದಿಂದ ಭಾರತಕ್ಕೆ ಸಾಕಷ್ಟು ರೇಷ್ಮೆ ಬೇಗನೆ ಪರದೇಶಗಳಿಂದ ಬರುವುದು ಎಂದು ತಿಳಿಸಲಾಗಿದೆ

ಉಪಾಧ್ಯಾಯರುಗಳ ಮುಷ್ಕರ

ಸ್ವಂ ಸ್ವ ... ಚಾಮರಾಜನಗರ ೧೬

ಈ ದಿನ ಮಧ್ಯಾಹ್ನ ೨ ಘಂಟೆಗೆ ಸರಿಯಾಗಿ ಮುಂಚೆಯೇ ನಿರ್ಧರಿಸಿದ್ದಂತೆ ಹೈಸ್ಕೂಲು ಉಪಾಧ್ಯಾಯರುಗಳು ಮುಷ್ಕರ ಪ್ರಾರಂಭಿಸಿದರು ವಿದ್ಯಾರ್ಥಿಗಳೆಲ್ಲರೂ ತರಗತಿಯಿಂದ ಹೊರಗೆ ಬಂದರು. ಮುಷ್ಕರ ಮುಂದುವರಿಯುತ್ತಿದೆ.

ದುಂಡಾವರ್ತಿಯನ್ನು ಕಾಂಗ್ರೆಸ್ಸು ಲಕ್ಷಿಸುವುದಿಲ್ಲ

ಕಲ್ಕತ್ತ ನಗರದಲ್ಲಾದಂತೆ ಹಲವು ಗೂಂಡಾಗಳ ಆಟ, ಅತ್ಯಾಚಾರ ವರ್ತನೆಗಳಿಂದ ನಮ್ಮ ಯೋಜನೆಗಳು ವ್ಯತ್ಯಾಸವಾಗುವುದಿಲ್ಲ ಎಂದು ಪಂ॥ ನೆಹರೂರವರು ದೆಹಲಿಗೆ ಹೊರಡುವಾಗ ಮುನ್ನ ತಿಳಿಸಿದರು. " ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ರಚಿಸಿದಾಗ ಬಂಗಾಳ ಮತ್ತು ಸಿಂಧ್ ಪ್ರಾಂತ್ಯಗಳು ಸ್ವತಂತ್ರವಾದರೆ ಏನು ಮಾಡಬೇಕೆಂಬುದನ್ನು ನಾವು ಕುಳಿತು ಆಲೋಚಿಸುತ್ತೇವೆ " ಎಂದು ಹೇಳಿದರು

ಕಾರುಗಳ ಮಾರಾಟದ ಹತೋಟಿ ರದ್ದು

ಅಕ್ಟೋಬರ್ ೧ ನೇ ತಾ॥ ನಿಂದ ಕಾರುಗಳ ಮಾರಾಟದ ಬಗ್ಗೆ ಇದ್ದ ಹತೋಟಿಯು ರದ್ದು ಮಾಡುವುದಾಗಿ ತಿಳಿದುಬಂದಿದೆ. ಆದರೆ ದರದ ಹತೋಟಿ ಮಾತ್ರ ಸ್ವಲ್ಪಕಾಲ ಹಾಗೆಯೇ ಇರುವುದಾಗಿ ಹೇಳಲಾಗಿದೆ.

ಮದ್ರಾಸಿನಲ್ಲಿ ಬಾಡಿಗೆ ಹತೋಟಿ ಆಜ್ಞೆ

೧೯೪೧ ರಲ್ಲಿದ್ದ ಬಾಡಿಗೆ ದರದಲ್ಲಿ ಶೇಕಡ ೧೫ ಕ್ಕಿಂತ ಹೆಚ್ಚು ಬಾಡಿಗೆಯನ್ನು ವಿಧಿಸಕೂಡದೆಂದು ಮದ್ರಾಸ್ ಸರ್ಕಾರದ ಆಜ್ಞೆಯಾಗಿದೆ

ಸಿಂಧ್‌ನಲ್ಲಿ ಪ್ರತಿಯೊಬ್ಬ ಲೀಗಿನವರ ರಾಜೀನಾಮೆ

ಸಿಂಧ್ ಮುಸಲ್ಮಾನ್ ಶಾಸನ ಸಭೆಯ ಸದಸ್ಯರುಗಳಲ್ಲೊಬ್ಬರಾದ ಪಿ॥ ಮಹಮದ್ ಯೂಸಫ್ ಚಾಂಡಿಯವರು ಮುಸ್ಲಿಂ ಲೀಗ್ ಪಕ್ಷಕ್ಕೆ ರಾಜೀನಾಮೆ ಇತ್ತು ವಿರೋಧ ಪಕ್ಷವನ್ನು ಸೇರಿದ್ದಾರೆ

ರೇಷ್ಮೆ ಹತೋಟಿ ವಜಾ

ಕೃತಕ ಮತ್ತು ನಾಚು ರೇಷ್ಮೆ ಮೇಲಿನ ದರ ಮತ್ತು ಹಂಚಿಕೆ ಬಗ್ಗೆ ಇದ್ದ ಎಲ್ಲಾ ಹತೋಟಿಯನ್ನು ಭಾರತ ಸರ್ಕಾರದವರು ರದ್ದುಗೊಳಿಸಿರುವರು ಭಾರತಕ್ಕೆ ಪರದೇಶಗಳಿಂದ ಸಾಕಷ್ಟು ರೇಷ್ಮೆ ಬರಲಿರುವುದಾಗಿ ಗೊತ್ತಾಗಿದೆ

ಮೋಟಾರಿಗೆ ಸಿಕ್ಕಿ ಮರಣ

ರಾಜಧಾನಿಯಲ್ಲಿ ಕಳೆದ ೧೩ ನೇ ತಾ॥ ಸಯ್ಯಾಜಿರಾವ್ ರಸ್ತೆಯಲ್ಲಿ ಮೋಟಾರು ಅಪಘಾತಕ್ಕೆ ತುತ್ತಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಬಾಲಕನೊಬ್ಬನು ನಿನ್ನೆ ಮೃತಪಟ್ಟನು

ಕಲ್ಕತ್ತೆಯಲ್ಲಿ ೨೦೦ ಸಾವು ೧೬೦೦ ಮಂದಿಗೆ ಗಾಯ

ಕರ್ಫ್ಯೂ ಆಜ್ಞೆ ಜಾರಿಗೆ ಬಂದಿದೆ

ಕಲ್ಕತ್ತ ನಗರದಲ್ಲಿ ಪರಿಸ್ಥಿತಿ ಒಂದೇ ಸಮನಾಗಿ ಬಿಗಡಾಯಿಸುತ್ತಿದೆ ಇದುವರೆವಿಗೆ ಇನ್ನೂರಕ್ಕೆ ಮೇಲ್ಪಟ್ಟು ಸಾವುಗಳೂ ೧೬೦೦ ಕ್ಕೆ ಮೇಲ್ಪಟ್ಟು ಗಾಯಗಳೂ ಆಗಿರುವುದಾಗಿ ವರದಿಯಾಗಿದೆ ಇವೆಲ್ಲಾ ಲೀಗಿನವರ 'ಹೋರಾಟದ ದಿನಾಚರಣೆ'ಯ ಫಲ ಸಿವಿಲ್ ಅಧಿಕಾರಿಗಳ ಸಹಾಯಕ್ಕಾಗಿ ಮಿಲಿಟರಿಯವರನ್ನು ಕರೆಸಲಾಗಿದೆ ನಿನ್ನೆ ಬೆಳಗಿನಿಂದ ಕರ್ಫ್ಯೂ ಆಜ್ಞೆ ಜಾರಿಗೆ ಬಂದಿದೆ. ನಿನ್ನೆ ದಿನವೂ ಅನೇಕ ಅಂಗಡಿಗಳ ಲೂಟಿ ನಡೆದು ಬೆಂಕಿ ಹಚ್ಚಲಾಗಿದೆ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಪ್ರಧಾನ ವ್ಹಿಪ್ ಆದ ಶ್ರೀ ಮುಖರ್ಜಿಯವರ ಮೇಲೆ ಗೂಂಡಾಗಳು ಮುತ್ತಿಗೆ ಹಾಕಿ ಅವರಿಗೆ ನೋವನ್ನುಂಟು ಮಾಡಿದ್ದಾರೆ. ಬಂಗಾಳಾ ಪ್ರಾಂತೀಯ ಕಾಂಗ್ರೆಸ್ ಕಛೇರಿಯ ಸ್ವಲ್ಪ ಭಾಗವನ್ನು ನಾಶ ಮಾಡಿದ್ದಾರೆ. ಗುಂಪುಗಳನ್ನು ಚದುರಿಸಲು ಪೋಲೀಸರು ಹಲವು ಕಡೆ ಗುಂಡು ಹಾರಿಸಿದ ಪ್ರಸಂಗಗಳು ವರದಿಯಾಗಿವೆ ಹಿಂದೂ ದೇವಾಲಯವಾದ ಓಲಿಚಂದಿ ಮಂದಿರವನ್ನು ಧಾಳಿಕಾರರು ಮುತ್ತಿ ನಷ್ಟಪಡಿಸಿದ್ದಾರೆ. ಆನಂದ ಬಜಾರ್ ಮತ್ತು ಹಿಂದೂಸ್ಥಾನ್ ಸ್ಟ್ಯಾಂಡರ್ಡ್ ಪತ್ರಿಕಾ ಕಛೇರಿಗಳಿಗೂ ಸ್ವಲ್ಪ ನಷ್ಟ ಸಂಭವಿಸಿರುವುದಾಗಿ ವರದಿಯಾಗಿದೆ. ಶ್ರೀ ಕಿರಣ ಶಂಕರರಾಯರ ಅಳಿಯನನ್ನು ಚೂರಿಯಿಂದ ಇರಿಯಲಾಗಿದೆ ಶ್ರೀ ಶರತ್ ಚಂದ್ರಬೋಸರು ನಿನ್ನೆ ಬೆಳಗ್ಗೆ ಗವರ್ನರನ್ನು ಭೇಟಿ ಮಾಡಿ ಪರಿಸ್ಥಿತಿಯ ಘೋರತೆಯನ್ನು ವಿವರಿಸಿದ್ದಾರೆ.

ಸಂಸ್ಥಾನಾಧೀಶರುಗಳಿಗೆ ನೆಹರುರವರ ಸೂಚನೆ

ಕಾಲಕ್ಕನುಗುಣವಾಗಿ ಮುನ್ನಡೆಯುವಂತೆ ಸಂಸ್ಥಾನಾಧೀಶರುಗಳಿಗೆ ಪಂ॥ ನೆಹರೂರವರು ಸೂಚನೆ ಇತ್ತಿದ್ದಾರೆ ಸಂಸ್ಥಾನಗಳೂ ಸೇರಿ ಭಾರತಕ್ಕೆಲ್ಲಾ ಒಂದೇ ರಾಜ್ಯಾಂಗ ಕ್ರಮ ಇರಬೇಕು, ಅಧಿಕಾರ ಮತ್ತು ಜವಾಬ್ದಾರಿಗಳೆಲ್ಲಾ ಪ್ರಜೆಗಳಲ್ಲೇ ಇರಬೇಕು ಎಂದು ಹೇಳಿ ಜವಾಬ್ದಾರಿ ಸರ್ಕಾರವನ್ನು ಘೋಷಿಸಿರುವ ಕೊಚ್ಚಿಯ. ಮಹಾರಾಜರನ್ನು ಅವರು ಅಭಿನಂದಿಸಿದ್ದಾರೆ

ನೆಹರು-ವೈಸರಾಯರ ಭೇಟಿ

ಕಾಂಗ್ರೆಸ್ ಅಧ್ಯಕ್ಷರಾದ ಪಂ॥ ನೆಹರುರವರು ನಿನ್ನೆ ಮಧ್ಯಾಹ್ನ ೩ ಘಂಟೆಗೆ ವೈಸರಾಯರನ್ನು ದೆಹಲಿಯಲ್ಲಿ ಭೇಟಿಮಾಡಿ ಒಂದೂವರೆ ಗಂಟೆಗಳ ಕಾಲ ಮಾತುಕತೆ ನಡೆಸಿದರು ಪಂ॥ ನೆಹರುರವರು ವೈಸರಾಯರ ಏಟೋ ಅಧಿಕಾರ, ಬ್ರಿಟಿಷ್ ಸೈನ್ಯಗಳನ್ನು ಕೂಡಲೇ ವಾಪಸು ಕರೆಸಿಕೊಳ್ಳುವ ಮತ್ತು ವಾಣಿಜ್ಯ ರಕ್ಷಣೆಗಳ ಬಗ್ಗೆ ವೈಸರಾಯರಿಂದ ಭರವಸೆ ಕೇಳಿದ್ದಾರೆಂದು ವರದಿಯಾಗಿದೆ ಹೊಸ ಸರ್ಕಾರವು ಮುಂದಿನ ವಾರದಲ್ಲಿ ಅಧಿಕಾರ ವಹಿಸಿಕೊಳ್ಳುವುದು.

ಆರಂಭ ಭಾಷಣ

ವಿಶ್ವವಿದ್ಯಾನಿಲಯದ ತತ್ವ ಶಾಸ್ತ್ರ ಸಂಘದ ಆರಂಭ ಭಾಷಣವನ್ನು ಪ್ರೊ॥ ಟಿ ಎ. ಪುರುಷೋತ್ತಮರವರು ನಾಳೆಯ ದಿನ ಸಂಜೆ ಆರೂವರೆ ಘಂಟೆಗೆ ಮಹಾರಾಜ ಕಾಲೇಜಿನ ಲೂಸಿಯನ್ ಬಿ. ಎ ಹಾಲಿನಲ್ಲಿ ಮಾಡುವರು. ಶ್ರೀ ಬಿ. ನೇದೇಂಪ್ರಪ್ಪನವರು ಸಂಗೀತವೂ ಸಹ ಏರ್ಪಡಿಸಿದೆ ಸರ್ವರಿಗೂ ಸ್ವಾಗತವುಂಟು .

ಸಾಧ್ವಿ

ತಾ॥ ೧೮-೮-೪೬ ಭಾನುವಾರ

ಕಲ್ಕತ್ತೆಯ ದುರಂತ

ಮುಸ್ಲಿಂ ಲೀಗಿನವರ ಡೈರೆಕ್ಟ್ ಆಕ್ಷನ್ ದಿನಾಚರಣೆಯ ಸಲುವಾಗಿ ಇದುವರೆಗೆ ಕಲ್ಕತ್ತ ನಗರದಲ್ಲಿ ಇನ್ನೂರಕ್ಕೆ ಮೇಲ್ಪಟ್ಟು ನಿರಪರಾಧಿಗಳಾದ ಜನರು ಮೃತ್ಯುವಿಗೆ ತುತ್ತಾಗಿದ್ದಾರೆ. ಒಂದೂವರೆ ಸಾವಿರಕ್ಕೆ ಮೀರಿದ ಜನರು ಗಾಯಗೊಂಡಿದ್ದಾರೆ. ಇದು ಅಧಿಕಾರ ವೃತ್ತಗಳಿಂದ ಬಂದಿರುವ ವರದಿ. ಅನಧಿಕಾರಯುತವಾಗಿ ಇನ್ನೂ ಹೆಚ್ಚಿನ ಅನರ್ಥಗಳು ವರದಿಯಾಗುತ್ತಿವೆ. ಇನ್ನೂ ಅಲ್ಲಿನ ಪರಿಸ್ಥಿತಿ ಬಿಕ್ಕಟ್ಟಿನಿಂದಲೇ ಕೂಡಿದೆಯೆಂದು ಗೊತ್ತಾಗಿದೆ.

ಬ್ರಿಟಿಷ್ ಸಾಮ್ರಾಜ್ಯದಲ್ಲಿ ಲಂಡನ್ನನ್ನು ಬಿಟ್ಟರೆ ಎರಡನೇ ಮಹಾನಗರವೆಂದು ಹೆಸರುಗೊಂಡ ಕಲಕತ್ತೆಯು ಇಂದು ಇ ತಹ ಘೋರ ನರಹತ್ಯೆಯ ರಣರಂಗವಾಗಿ ಪರಿಣಮಿಸಿರುವುದಕ್ಕಾಗಿ ಸಕಲರೂ ಅತ್ಯಂತ ವ್ಯಾಕುಲಪೂರ್ಣರಾಗಿರುವರು. ಲೀಗಿನವರ ಕಾರ್ಯಾಚರಣೆಯು ಯಾವ ದುರಂತದಲ್ಲಿ ಪರ್ಯವಸಾನಗೊಳ್ಳುತ್ತದೆಯೆಂಬುದನ್ನು ಇದು ಸೂಚಿಸುತ್ತದೆ. ಇದು ಪಾಕೀಸ್ಥಾನದ ಪೂರ್ವಪೀಠಿಕೆಯಾದರೆ, ಗೌರವಾನ್ವಿತರಾದ ಮುಸಲ್ಮಾನರೇ ಇಂತಹ ಸ್ಥಾನವು ತಮಗೆ ಬೇಕಿಲ್ಲವೆಂದು ಹೇಳುವಂತಿದೆ. ಈಗ ನಡೆದಿರುವ ಪುಂಡಾಟಗಳನ್ನು ಮಿ॥ ಜಿನ್ನಾರವರೂ ಸಹ ನಿರ್ದಾಕ್ಷಿಣ್ಯವಾಗಿ ಖಂಡಿಸಿರುವುದು ಸಮಾಧಾನಕರವಾದ ವಿಷಯ.

ಬಂಗಾಳದಲ್ಲಿ ಈಗ ಇರುವುದು ಲೀಗ್ ಮಂತ್ರಿಮಂಡಲ. ಅದು ಮುಸ್ಲಿಂ ಲೀಗಿನ ಕಾರ್ಯಕ್ರಮಗಳನ್ನು ಜಾರಿಗೆ ತರಲು ಇಷ್ಟ ದಾರಿಗಳನ್ನು ಹಿಡಿದಿರುವಂತಿದೆ. ತಮ್ಮ ಕೋಮಿನವರಿಗೆ ಉತ್ತೇಜನ ಕೊಡುವುದರಲ್ಲಿ ಇತರರ ಅಭಿಪ್ರಾಯಗಳಿಗೆ ಲಕ್ಷ್ಯವನ್ನೇ ಕೊಡುತ್ತಿಲ್ಲ. ಪ್ರತಿಯೊಂದು ಕಾರ್ಯದಲ್ಲಿಯೂ ಮುಸ್ಲಿಂ ಲೀಗಿನ ಆಜ್ಞೆಗೆ ಅನುಗುಣವಾಗಿ ಕುಣಿಯುತ್ತಿದೆ. ಮೊನ್ನೆ ನಡೆದ ದಿನಾಚರಣೆಗಾಗಿ ಇಡೀ ಪ್ರಾಂತ್ಯದಲ್ಲಿ ಸಾರ್ವಜನಿಕ ರಜವನ್ನು ಕೊಟ್ಟದ್ದು ಅಲ್ಲಿನ ಲೀಗ್ ಮಂತ್ರಿಮಂಡಲದ ಅನುಚಿತ ವರ್ತನೆಯ ಪರಮಾವಧಿ. ಇಂತಹ ಸನ್ನಿವೇಶಗಳಲ್ಲಿ ರಜಾ ಕೊಟ್ಟರೆ ಪುಂಡುಪೋಕರಿಗಳಿಗೆ ಸರ್ವಾಧಿಕಾರವನ್ನು ಒಪ್ಪಿಸಿದಂತೆಯೇ ಸರಿ. ಕಲ್ಕತ್ತೆಯ ದೌರ್ಜನ್ಯಕಾರರು ಈ ಸಂದರ್ಭದ ಸಂಪೂರ್ಣ ಉಪಯೋಗವನ್ನು ಮಾಡಿಕೊಂಡು ಲೂಟಿ, ಬೆಂಕಿ, ದಂಗೆ, ಖೂನಿ ಮುಂತಾದುವುಗಳಲ್ಲಿ ತೊಡಗಿದ್ದಾರೆ. ಕಾಂಗ್ರೆಸ್ ಭವನಗಳ ಮೇಲೂ ಧಾಳಿಗಳು ನಡೆದು ಅವು ಅಗ್ನಿ ಜ್ವಾಲೆಗೆ ಆಹುತಿಯಾಗಿವೆ. ಕಲ್ಕತ್ತೆಯಲ್ಲಿ ಇಂದು ಪುಂಡರ ರಾಜ್ಯವು ತಾಂಡವವಾಡುತ್ತಿದೆ. ಇದನ್ನು ಅಡಗಿಸಲು ಗೌರ್ನರವರು ಸರ್ವ ರಕ್ಷಣೆಯನ್ನೂ ವಿನಿಯೋಗಿಸುವುದಾಗಿ ಹೇಳಿದ್ದಾರೆ.

ಶಾಂತಿ ಶಿಸ್ತುಗಳಿಂದ ತಮ್ಮ ದಿನಾಚರಣೆಯನ್ನು ನಡೆಸಬೇಕೆಂದು ಹೇಳಿದ್ದ ಮಿ॥ ಜಿನ್ನಾರವರಿಗೆ ಎಷ್ಟು ಮಟ್ಟಿಗೆ ಸಮಾಧಾನವಾಗಿರಬಹುದೆಂಬುದನ್ನು ವಾಚಕರೇ ಊಹಿಸಬಹುದು. ಲೀಗಿನ ಕೆಲವು ನಾಯಕರುಗಳು ಅಹಿಂಸೆಯನ್ನು ತ್ಯಜಿಸಿ, ಅಗತ್ಯವಾದರೆ ಹಿಂಸಾ ಮಾರ್ಗ ಹಿಡಿಯಲಾದರೂ ಸ

ಹಿಂದೂ ಐ. ಸಿ. ಎಸ್. ಅಧಿಕಾರಿಗಳ ರಾಜೀನಾಮೆ

ನಿಷ್ಕಾರಣವಾಗಿ ಜವಾಬ್ದಾರಿ ಸ್ಥಾನಗಳಿಂದ ತಮ್ಮನ್ನು ವರ್ಗಾಯಿಸಿರುವುದರಿಂದ ತಾವೆಲ್ಲರೂ ಒಟ್ಟಿಗೆ ರಾಜೀನಾಮೆ ಕೊಡಲು ಬಯಸುವುದಾಗಿ ಬಂಗಾಳದ ಎಲ್ಲಾ ಹಿಂದೂ ಐ. ಸಿ. ಎಸ್. ಅಧಿಕಾರಿಗಳೂ ಅಲ್ಲಿನ ಗವರ್ನರಿಗೆ ಬರೆದುಕೊಂಡಿರುವರೆಂದೂ, ಆದರೆ ಮಂತ್ರಿ ಮಂಡಲದ ಕಾರ್ಯಕ್ರಮದಲ್ಲಿ ತಾವು ಪ್ರವೇಶಿಸುವುದಿಲ್ಲನೆಂದು ಗವರ್ನರರು ಹೇಳಿರುವುದರಿಂದ ಅವರೆಲ್ಲರೂ ರಾಜೀನಾಮೆ ಕೊಡುವುದೇ ತಮಗೆ ಉಳಿದಿರುವ ಗೌರವದ ಕರ್ತವ್ಯವೆಂದು ನಿರ್ಧರಿಸಿರುವುದಾಗಿಯೂ ವರದಿಯಾಗಿದೆ.

ಮ್ಮ ಕಾರ್ಯ ಸಾಧನೆಯನ್ನು ಮಾಡಿಕೊಳ್ಳುವುದಾಗಿ ಹೇಳುತ್ತಿರುವುದರಿಂದಲೇ ಇಂತಹ ವರ್ತನೆಗಳಿಗೆ ಉತ್ತೇಜನವುಂಟಾಗಿದೆ. ಆದರೆ ಇಂದಿನ ಅಣು ಶಕ್ತಿಯ ಯುಗದಲ್ಲಿ ಹಿಂಸೆಯ ಪ್ರದರ್ಶನವು ಪ್ರಯೋಜನಕಾರಿಯಲ್ಲವೆಂಬುದನ್ನು ಎಲ್ಲರೂ ಅರಿತಿರುವರು. ಇಂತಹ ಕೃತ್ಯಗಳನ್ನು ಯಾವ ಸರ್ಕಾರವೇ ಆಗಲಿ ನಿಮಿಷ ಮಾತ್ರದಲ್ಲಿ ಅಡಗಿಸಿ ಬಿಡುವುದು. ಈ ವರ್ತನೆಯಿಂದ ಪಾಕಿಸ್ಥಾನಕ್ಕೆ ಕುಠಾರ ಪ್ರಹಾರವಾದಂತೆಯೇ ಸರಿ. ಮಿ॥ ಜಿನ್ನಾರವರು ತಮ್ಮ ಅನುಯಾಯಿಗಳಿಗೆ ನ್ಯಾಯಬದ್ಧವಾದ ರೀತಿಯಲ್ಲಿ ಚಳುವಳಿ ಮಾಡುವುದನ್ನು ಕಲಿಸಿದರೆ ಅದಕ್ಕೆ ಸಕಲರ ಸ್ವಾಗತವೂ ದೊರೆತೀತು.

ಸದ್ಯದಲ್ಲೇ ದಂಡು ಮೈಸೂರಿಗೆ ದೊರೆಯುವುದು

ದಿವಾನರ ಭಾಷಣ

ಮೈಸೂರು ೧೮

ನಿನ್ನೆ ಸಂಜೆ ಟೌನ್‌ಹಾಲಿನಲ್ಲಿ ಮೈಸೂರು ಪುರಜನರು ದಿವಾನ್ ಬಹದ್ದೂರ್ ಸರ್ ಎ. ರಾಮಸ್ವಾಮಿ ಮೊದಲಿಯಾರ್‌ರವರಿಗೆ ಬಿನ್ನವತ್ತಳೆಯನ್ನು ಅರ್ಪಿಸಿದರು. ಪ್ರಾರ್ಥನೆ ಮತ್ತು ಮಂಗಳ ಪದ್ಯಗಳ ಪಠನವಾದ ನಂತರ ಶ್ರೀ ಎಫ್. ಸಿ. ದೇವರಾಜ ಅರಸರವರು ಸ್ವಾಗತ ಭಾಷಣ ಮಾಡಿದರು. ಆ॥ ವಿ॥ ಗಾನ ವಿಶಾರದ ಚಿಟ್ಟಿ ಕೃಷ್ಣಯ್ಯಂಗಾರ್ಯರು ಮತ್ತು ಪಾರ್ಟಿಯವರ ಸುಶ್ರಾವ್ಯವಾದ ಸಂಗೀತವಾಯಿತು. ಶ್ರೀ ಪಿ. ಎಸ್. ಸಂಗಪ್ಪನವರು ಬಿನ್ನವತ್ತಳೆಯನ್ನು ಓದಿ ರಜತ ಕರಂಡದಲ್ಲಿ ಅದನ್ನು ಶ್ರೀ ಮೊದಲಿಯಾರ್‌ರವರಿಗೆ ಅರ್ಪಿಸಿದರು.

ದಿವಾನರು ಮಾತನಾಡುತ್ತಾ, ತಮಗೂ ಮೈಸೂರಿಗೂ ಅನೇಕ ವಿಧಗಳಲ್ಲಿ ಬಹುಕಾಲದಿಂದಲೂ ಒಂದಲ್ಲ ಒಂದು ರೀತಿಯಲ್ಲಿ ಸಂಪರ್ಕವಿದ್ದೇ ಇತ್ತು. ಭಾರತದ ನಾನಾ ಭಾಗಗಳಲ್ಲಿ ಮತ್ತು ಕೇಂದ್ರ ಸರ್ಕಾರದ ಸಚಿವ ಮಂಡಲದಲ್ಲಿ ದೇಶದ ಸೇವೆಯನ್ನು ಮಾಡಿರುವುದನ್ನೂ ಮತ್ತು ಅಂತರರಾಷ್ಟ್ರೀಯ ಸಂಬಂಧದಲ್ಲಿ ನಡೆಸಿರುವ ಸೇವೆಯನ್ನೂ ಮನಗಂಡು ಮಹಾಪ್ರಭುಗಳು ತಮ್ಮನ್ನು ಜವಾಬ್ದಾರಿಯುತವಾದ ದಿವಾನಗಿರಿಗೆ ನೇಮಿಸಿರುವರೆಂದು ಹೇಳಿದರು. ಆ ನಂಬಿಕೆ ಮತ್ತು ವಿಶ್ವಾಸಗಳನ್ನು ಆದಷ್ಟು ಮಟ್ಟಿಗೆ ಪಾಲಿಸಿಕೊಂಡು ಬರಲು ಸರ್ವಪ್ರಯತ್ನ ಮಾಡುವುದಾಗಿ ಭರವಸೆ ಇತ್ತರು. ತಮ್ಮ ಕಾರ್ಯ ಕಲಾಪಗಳ ವಿಚಾರದಲ್ಲಿ ಮಾತನಾಡುತ್ತಾ, ಮೈಸೂರು ಬೆಂಗಳೂರು ಎರಡು [illegible]ಲ್ಲಿಯೂ ತಮ್ಮ ಕಛೇರಿಯ ಕೆಲಸ [illegible]ವುದಾಗಿ ನಿರ್ಧರಿಸಿರುವರೆಂದು ಹೇ[illegible]

ಮುಂದುವರಿಯುತ್ತಾ, ದೇಶದ[illegible]ಯ ಹಳ್ಳಿಗಳ ಏಳಿಗೆಯನ್ನು ಹೆಚ್ಚು [illegible]ಲಂಬಿಸಿರುವ ಕಾರಣ ಆ ಗ್ರಾಮಗಳ[illegible] ಜನರ ಮೇಲ್ಮೆಗೆ ಅಗತ್ಯ ಕಾರ್ಯ[illegible]ಕೈಗೊಂಡು ಅವರನ್ನು ಉತ್ತಮ ದ[illegible] ತರಲು ಸಕಲ ಪ್ರಯತ್ನಗಳನ್ನು ಮಾ[illegible]ದೂ ಸಹ ಅವರ ಉದ್ದೇಶವೆಂದು ಹೇ[illegible]ರು. ಕೇಂದ್ರ ಸರ್ಕಾರದ ವ್ಯವಹಾ[illegible] ಬಹುಮಟ್ಟಿಗೆ ಪರಿಚಯವಿರುವು[illegible] ಬೆಂಗಳೂರು ದಂಡನ್ನು ಹಿಂದಕ್ಕೆ ಕೊ[illegible] ವಿಚಾರ ಪೂರ್ಣ ಫಲಕಾರಿಯಾಗುವ [illegible] ವೇಶಗಳು ಕಾಣಬರುತ್ತಿದೆಯೆಂದು ಹ[illegible]ರು. ಮೈಸೂರು ಪ್ರಗತಿ ಮಾರ್ಗದ [illegible]ವಾಗಿ ಮಾತನಾಡುತ್ತಾ, ಹಿಂದಿನ ದಿ[illegible]ರುಗಳು ಹಾಕಿಕೊಟ್ಟಿರುವ ಮೇಲ್ಪಂ[illegible]ನ್ನು ಅನುಸರಿಸಿ ಕಾರ್ಯಕ್ರಮಗ[illegible] ನಡೆಸುವುದೂ ಸಹ ಉಚಿತವಾಗಿದೆ[illegible]ರು. ಮೈಸೂರು ಮತ್ತಷ್ಟು ಪ್ರಗತಿಪ[illegible] ಮಾದರಿಯಾಗಲು ಜನರ ಸಹಕಾರ ಸ[illegible]ರ್ದಗಳು ಅಗತ್ಯವೆಂದೂ ತಿಳಿಸಿದರು.

ತಮ್ಮನ್ನು ಯಾರು ಬೇಕಾದ [illegible] ನೋಡಬೇಕಾದಲ್ಲಿ ಅಂತಹವರನ್ನು [illegible] ಕಾಲದಲ್ಲೂ ನೋಡಲು ಅವಕಾಶವು[illegible]ದೂ, ಈ ಅವಕಾಶವನ್ನು ಪ್ರಜೆಗಳು [illegible] ಪಯೋಗಪಡಿಸಿಕೊಳ್ಳಬಹುದೆಂದು [illegible]ಯಲ್ಲಿ ಹೇಳಿದರು. ಶ್ರೀ ಬಿ. ಎಸ್. [illegible] ರಾಯರವರ ವಂದನೆಯಾದ ನಂತರ [illegible]ವವು ಮುಗಿಯಿತು.

ಹೊಸ ಹೊಸ ನಮೂನೆಯ ಬಳೆಗಳು

ಈ ದಿನವೇ ನೋಡಿರಿ

ಸ್ವರ್ಗ ಸೀಮೆ ಬಳೆ
ಕಮಲ್ ಫ್ಲಾಲ್ ಬಳೆ } ಬಳೆಗಳು { ಸುಭಾಷ್ ಬಳೆ
ಗಾಂಧೀಜಿ ಬಳೆ

ಚಾಂದಿನಿ ಬಳೆ ಮತ್ತು ರಾಷ್ಟ್ರ ನಾಯಕರುಗಳ ಫೋಟೋ ಸಮೇತ ಒಡವೆ ದೊರೆಯುವುದು.

ಮೈಸೂರು ಸಿಲ್ಕ್ ರಿಬ್ಬನ್‌ಗಳು, ಸ್ಟಾಂಡರ್ಡ್ ಬಳೆಗಳು

ಪ್ರಭಾತ್ ಬ್ಯಾಂಗಲ್ ಸ್ಟೋರ್ಸ್,

ಚಾಮುಂಡೇಶ್ವರೀ ಟಾಕೀಸ್ ಬಿಲ್ಡಿಂಗ್ಸ್, ಮೈಸೂರು.

ಕನ್ನಾಂಬ, ಡಾ॥ ಜಿ. ವಿ. ಸುಬ್ಬರಾವ್ ನಟಿಸಿರುವ

"ಮುಗ್ಗುರು ಮರಾಟಿಲು"

(ತೆಲುಗು ಚಿತ್ರ)

THREE MARATEES

ವೀರಮಾತೆ

17—8—46 ರಿಂದ ಅಮೋಘ ಎರಡನೇ ವಾರ

ಮೋತಿಲಾಲ್ ಟಾಕೀಸಿನಲ್ಲಿ

೧೬-೮-೪೬ ರಿಂದ ಬೆಂಗಳೂರು ಸೂಪರ್ ಲ್ಯಾಂಡಿನಲ್ಲಿ ಅಮೋಘ ನಾಲ್ಕನೇ ವಾರ

—. Released Through —

SRI MAHAVEER FILM EXCHANGE

Asoka Road, Mysore.

ವಿಜಯಾ ಏಜನ್ಸೀಸ್, ಮೈಸೂರು

ರಾಜಕಮಲ್ ಟಾಕೀಸ್

ಮೈಸೂರು

16-8-46 ರಿಂದ

ತದ್‌ಬೀರ

ಭೂಮಿಕೆ:—ಸೈಗಾಲ್, ಸೂರಯ್ಯ ಮುಂತಾದವರು

ಪ್ರತಿದಿನ ಮೂರು ಆಟಗಳು

ಸಂತಾನ ಸಿಂಧೂರ

ಬಹಿಷ್ಟೆ ಸಂಬಂಧದ ಹೊಟ್ಟೆನೋ[illegible] ದೆಸೆಯಿಂದ ಮಕ್ಕಳಾಗದೇ ಇರತಕ್ಕವ[illegible] ಗ್ಯಾರಂಟೀ ಔಷಧ

ಕ್ರಯ —ಎಂಟು ಪೊಟ್ಟಣ "ಸಂತಾನ ಸಿಂಧೂರ", ನಾಲ್ಕು ಗುಳಿಗೆ "ವ[illegible] ವಿಲಾಸ" ಇರತಕ್ಕ ಒಂದು ಸೆಟ್ ವ[illegible] ರೂಪಾಯಿ. ಪ್ಯಾಕಿಂಗ್ ಮತ್ತು ಟಪಾ[illegible] ಖರ್ಚು ಹನ್ನೆರಡಾಣೆ. ರೂ [illegible] ಮನಿಯಾರ್ಡರ್ ಮಾಡಿ [illegible] ರಿಜಿಸ್ಟರ್ ಪಾರ್ಸಲ್ ರವಾನ[illegible] ಇಲ್ಲ. ಕಮೀಷನ್ ಏಜೆಂಟರು ಬೇ[illegible] ಪತ್ರ ವ್ಯವಹಾರ ಗುಪ್ತ. ಅನುಪಾನ ವ[illegible] ಉಪಚಾರ ಪತ್ರಿಕೆ ಔಷಧಿ ಸಂಗಡ [illegible] ರಡು ಪ್ರತಿಗಳ ಸ್ಯಾಂಪಲ್ ಉಚಿತ.

ವಿ. ರಾಮಸ್ವಾಮಿ ಅಯ್ಯರ್, ಪ್ರೊಪ್ರೈಟರ್, "ಸಂತಾನ ಸಿಂಧೂರ" ಆಫೀಸ್ [illegible]

Edited printed and published by A. N. Nagaraja at the Sadhvi Press D Subbiah Road, Mysore

ಫೋನ್ ನಂ. 392 **WEEKLY EDITION** ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೧] ಸೋಮವಾರ ೧೯—೮—೪೬ [ಸಂಚಿಕೆ ೪

ಕಲ್ಕತ್ತದಲ್ಲಿ ೬೦೦ ಸಾವು ೨೫೦೦ ಮಂದಿಗೆ ಗಾಯ

ಆಯುರ್ವೇದ ಮತ್ತು ಯುನಾನಿ ಪದವೀಧರರ ಸಮ್ಮೇಳನ

ಮೈಸೂರು ೧೮

ಇದೇ ೨೦-೨೧ ನೇ ತಾ॥ ಗಳಲ್ಲಿ ಚನ್ನ[ಪಟ್ಟ]ಣದಲ್ಲಿ ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಕಾಲೇಜು ಪದವೀಧರರ [..]ನೇ ಸಮ್ಮೇಳನದ ಅಂಗವಾಗಿ ಜಿಲ್ಲಾ ಬೋರ್ಡುಗಳ ಆಶ್ರಯದಲ್ಲಿರುವ ವೈದ್ಯ[ರು] ಮತ್ತು ಹಕೀಮ ಪದವೀಧರರ ಸಭೆಯೊಂದು ಏರ್ಪಟ್ಟಿದೆ. ಎಲ್ಲಾ ಜಿಲ್ಲಾಬೋರ್ಡುಗಳ ಆಶ್ರಯದಲ್ಲಿರುವ ಮೇಲ್ಕಂಡ ಪದವೀಧರರೂ ಈ ಸಭೆಗೆ ತಪ್ಪದೆ ದಯಮಾಡಿಸಬೇಕೆಂದು ಡಾ॥ ಟಿ. ವಿ. ಕಸ್ತೂ[ರಿ] ರಂಗಾಚಾರ್ಯರವರು ಪ್ರಾರ್ಥಿಸಿದ್ದಾರೆ.

ನಜರಬಾದಿನ ಹೀನಸ್ಥಿತಿ

ರಾಜಧಾನಿಯ ಪುರಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರು ನಿನ್ನೆ ಬೆಳಿಗ್ಗೆ ನಜರಬಾದ್ ಮೊಹಲ್ಲಾ ಪರಿಶೀಲನೆಯನ್ನು ನಡೆಸಿದರು. ಇಟ್ಟಿಗೆಗೂಡು ಯುವಕ ಸಂಘದವರೂ, ಮೊಹಲ್ಲಾ ಕಾಂಗ್ರೆಸ್ ಸಮಿತಿಯವರೂ, ಪುರಸಭಾ ಸದಸ್ಯರಿಗೆ ತಮ್ಮ ಮೊಹಲ್ಲಾದಲ್ಲಿ ಸಾರ್ವಜನಿಕ ಕಕ್ಕಸು ಇಲ್ಲದಿರುವುದನ್ನೂ, ನಲ್ಲಿಗಳ ಕೊರತೆಯನ್ನೂ, ರಸ್ತೆಗಳ ಕೊರಕಲು, ಚರಂಡಿಗಳ ದುರವಸ್ಥೆ, ಮತ್ತು ಗಲ್ಲಿಗಳಲ್ಲಿರುವ ಅಡಚಣೆಗಳನ್ನು ವಿವರಿಸಿದರು. ಸದಸ್ಯರು ಎಲ್ಲವನ್ನು ಕೂಲಂಕುಷವಾಗಿ ಪರಿಶೀಲಿಸಿ ಅನುಕೂಲಗಳನ್ನು ಕಲ್ಪಿಸಿ ಕೊಡುವುದಾಗಿ ಭರವಸೆ ಇತ್ತರು. ಶಿಥಿಲವಾಗಿರುವ ಮನೆಗಳನ್ನು ದುರಸ್ತು ಮಾಡಿಸಿಕೊಳ್ಳುವ ಬಗ್ಗೆ ಲೈಸೆನ್ಸ್ ಸರಿಯಾಗಿ ಕೊಡಲ್ಪಡುತ್ತಿಲ್ಲವೆಂಬ ಅಂಶವನ್ನೂ, ಪುರಸಭಾಧಿಕಾರಿಗಳು ಈ ಮೊಹಲ್ಲದ ಕಡೆ ಗಮನ ಕೊಡುತ್ತಿಲ್ಲವೆಂಬ ಅಂಶವನ್ನೂ ಕೇಳಿ ವಿಷಾದಿಸಿದರು.

ಮುಸ್ಲಿಮರ ಸಭೆ

ಮೊನ್ನೆ ಸಂಜೆ ರಾಜಧಾನಿಯ ಮುಸ್ಲಿಮರ ಭಾರಿ ಸಭೆಯೊಂದು ಜಿ॥ ಮಹಮದ ಸೇಟರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡಿತ್ತು. ಸಭೆಯಲ್ಲಿ, ರಂಜಾನ್ ಹಬ್ಬದ ಮುಸ್ಲಿಮರಿಗೆ ಬಟ್ಟೆ ಮತ್ತು ಆಹಾರ ಪದಾರ್ಥಗಳ ಸರಬರಾಜು ಬಗ್ಗೆ ಸರಿಯಾದ ವ್ಯವಸ್ಥೆ ಮಾಡಿಲ್ಲವೆಂದೂ, ಈ ಒಗ್ಗೆ ಇನ್ನು ಮೂರು ದಿವಸಗಳಲ್ಲಿ ತಕ್ಕ ವ್ಯವಸ್ಥೆ ಮಾಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸುವ ನಿರ್ಣಯವನ್ನೂ ಮತ್ತು ಇತರ ೧೨ ನಿರ್ಣಯಗಳನ್ನೂ ಮಾಡಲಾಯಿತು.

ಓಟರುಗಳ ಪಟ್ಟಿ ಪ್ರಕಟಣೆ

ಇದೇ ೧೪-೧೧-೪೬ರಲ್ಲಿ ನಡೆಯಲಿರುವ ರಾಜಧಾನಿಯ ಪುರಸಭಾ ಚುನಾವಣೆಯ ಓಟುದಾರರ ಪಟ್ಟಿಯನ್ನು ಪ್ರಕಟಿಸಲಾಗಿದೆ. ಇದನ್ನು ನಾನಾ ಮೊಹಲ್ಲಾಗಳ ೨೫ ಪ್ರದೇಶಗಳಲ್ಲಿಡಲಾಗಿದೆ. ಅರ್ಹತೆಯನ್ನು ಪಡೆದು ಹೆಸರು ಬಿಟ್ಟುಹೋಗಿರುವವರೂ, ತಪ್ಪಿ ಹೆಸರು ಬಿದ್ದಿರುವವರೂ, ರಿಟರ್ನಿಂಗ್ ಆಫೀಸರಾದ ಪೌರಸಭಾಧ್ಯಕ್ಷರಿಗೆ ಸೆಪ್ಟೆಂಬರ್ ೨ನೇ ತಾ॥ ಯೊಳಗಾಗಿ ಲಿಖಿತವಾಗಿ ಅರ್ಜಿ ಹಾಕಿಕೊಳ್ಳಬೇಕಾಗಿ ಸೂಚಿಸಲಾಗಿದೆ.

ನಗರ ಕಾಂಗ್ರೆಸ್ ಸಮಿತಿ

ಮೈಸೂರು ಕಾಂಗ್ರೆಸ್ ನಗರ ಸಮಿತಿಯ ಸಭೆಯು ನಾಳೆ ಸಂಜೆ ೬-೩೦ ಘಂಟೆಗೆ ಸಯ್ಯಾಜಿರಾವ್ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ನಡೆಯುವುದು. ಸದಸ್ಯರೆಲ್ಲರೂ ಬರಬೇಕಾಗಿ ಕೋರಿದೆ.

ರಾಜ್ಯಾಂಗ ಸಮಿತಿಗೆ ಖಾಸಗಿ ಮತ್ತು ಅಧಿಕಾರಿ ಪ್ರತಿನಿಧಿಗಳು

ವರ್ತಕರ ಸತ್ಕಾರ ಕೂಟದಲ್ಲಿ ಭಾಷಣ

ಮೈಸೂರು ೧೯

ರಾಜಧಾನಿಯ ವರ್ತಕ ಸಂಘದವರು ನಿನ್ನೆ ಸಾಯಂಕಾಲ ಟವನ್‌ಹಾಲಿನಲ್ಲಿ ದಿವಾನರಾದ ಸರ್ ಎ. ರಾಮಸ್ವಾಮಿ ಮೊದಲಿಯಾರರನ್ನು ಸನ್ಮಾನಿಸಿ ಬಿನ್ನವತ್ತಳೆಯನ್ನು ಒಪ್ಪಿಸಿದರು. ಪ್ರಾರ್ಥನೆ, ನೃತ್ಯ ಪ್ರದರ್ಶನ, ಸಂಗೀತ, ನಾಟಕಗಳು ನಡೆದುವು, ಶ್ರೀಮತಿ ನೀಲಮ್ಮ ಕಡಾಂಬಿಯವರ ವೀಣಾ ವಾದ ನಂತರ ವರ್ತಕ ಸಂಘದ ಪರವಾಗಿ ಶ್ರೀ ಶಾಂತಪ್ಪನವರು ದಿವಾನರಿಗೆ ಮಾನಪತ್ರವನ್ನು ಒಪ್ಪಿಸಿದರು.

ದಿವಾನರು ಉತ್ತರವೀಯುತ್ತಾ ಜನಸಾಮಾನ್ಯರ ಹಿತದೃಷ್ಟಿಯಿಂದ ಕೈಗಾರಿಕೆಗಳ ಅಭಿವೃದ್ಧಿಯ ಕಡೆ ಸರ್ಕಾರದ ಪೂರ್ಣ ಲಕ್ಷ್ಯ ಕೊಡಲಾಗುವುದೆಂದು ಹೇಳಿ ಸಂಸ್ಥಾನದ ಮಟ್ಟಿಗಾದರೂ ಸ್ವಯಂ ಪರಿಪೂರ್ಣತೆಯನ್ನು ಪಡೆಯುವ ಸಲುವಾಗಿ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ತಕ್ಕ ಏರ್ಪಾಡು ಮಾಡುವುದಾಗಿ ಭರವಸೆ ಇತ್ತರು.

ಭಾರತ ರಾಜ್ಯಾಂಗ ಸಭೆಯ ವಿಚಾರವನ್ನು ಪ್ರಸ್ತಾಪಮಾಡಿ, ಬರಲಿರುವ ಆರು ತಿಂಗಳುಗಳು ಬಹು ಕಟುತರವಾದ ಕಾಲವೆಂದೂ, ಆಗ್ಗೆ ಯಾರೂ ಊಹಿಸಲಾರದಷ್ಟು ಬದಲಾವಣೆಗಳು ನಡೆಯುವುವೆಂದೂ ಹೇಳಿದರು. “ಕೇಂದ್ರದಲ್ಲಿ ರಾಜ್ಯಾಂಗ ರಚನಾ ಸಭೆಯು ಸಧ್ಯದಲ್ಲೇ ಕಾರ್ಯೋನ್ಮುಖವಾಗುವುದು. ಆ ಸಭೆಯಲ್ಲಿ ದೇಶೀಯ ಸಂಸ್ಥಾನಗಳೂ ತಮ್ಮ ಪ್ರಧಾನಪಾತ್ರವನ್ನು ನಿರ್ವಹಿಸಬೇಕಾಗಿದೆ. ನಮ್ಮ ಸಂಸ್ಥಾನದಿಂದ ಆ ಸಭೆಗೆ ಪ್ರತಿನಿಧಿಗಳನ್ನು ಕಳಿಸಲಾಗುವುದು. ಅದರೆ ಯಾವರೀತಿ ಆಯ್ಕೆ ನಡೆಯಬೇಕೆಂಬ ವಿಚಾರ ತೀವ್ರ ಪರ್ಯಾಲೋಚನೆಯಲ್ಲಿದೆ. ಸಂಸ್ಥಾನದ ಹಿತವನ್ನು ನಿಷ್ಪಕ್ಷಪಾತವಾಗಿ ಕಾಪಾಡಲು ದಕ್ಷರಾಗಿರುವ ಖಾಸಗೀ ಮತ್ತು ಅಧಿಕಾರಿ ವರ್ಗದಿಂದ ಪ್ರತಿನಿಧಿಗಳನ್ನು ಆರಿಸಿ ಕಳುಹಿಸಿಕೊಡಲಾಗುವುದೆಂದು ಮಾತ್ರ ಹೇಳಬಹುದು” ಎಂದು ತಿಳಿಸಿದರು.

● ಸಂಯುಕ್ತ ಸಂಸ್ಥಾನದ ವ್ಯವಸಾಯ ಶಾಖಾ ಪ್ರಕಟಣೆಯಂತೆ ಭಾರತಕ್ಕೆ ಸೆಪ್ಟೆಂಬರ್ ತಿಂಗಳಿನ ಅಲ್ಲಿಂದ ೨,೨೪,೦೦೦ ಟನ್ ಆಹಾರ ಕೊಡಲಾಗುವುದು.

ಕಲ್ಕತ್ತದ ದಂಗೆ ನಿಂತಿಲ್ಲ

೬೦೦ ಜನರ ಸಾವು ೨೫೦೦ ಮಂದಿಗೆ ನೋವು

ಕಲ್ಕತ್ತ ನಗರದಲ್ಲಿ ಕಳೆದ ೩ ದಿನಗಳಿಂದ ನಡೆಯುತ್ತಿರುವ ದೊಂಬಿ ನಿಂತಿಲ್ಲವೆಂದು ವರದಿಯಾಗಿದೆ. ಸಾವು ನೋವುಗಳ ಬಗ್ಗೆ ಅಧಿಕಾರಯುತವಾದ ವರದಿ ಯಾವುದೂ ಬಂದಿಲ್ಲವಾದರೂ, ಇದುವರೆವಿಗೆ ೬೦೦ ಕ್ಕೆ ಮೇಲ್ಪಟ್ಟು ಸಾವೂ, ೨೫೦೦ ಮಂದಿಗೆ ನೋವೂ ಆಗಿರುವುದಾಗಿ ವರದಿಯಾಗಿದೆ. ಗಲಭೆಯು ಇನ್ನೂ ಹತೋಟಿಗೆ ಬಂದಿಲ್ಲವೆಂದು ಮಾತ್ರ ಸರ್ಕಾರದ ಪ್ರಕಟಣೆ ಹೊರಟಿದೆ. ನಗರದ ಬಡಾವಣೆ ಪ್ರದೇಶಗಳಿಗೂ ದಂಗೆಕಾರರ ಧಾಳಿ ಹರಡಿರುವುದಾಗಿ ಹೇಳಲಾಗಿದೆ. ನಿನ್ನೆ ಶ್ರೀ ಬೋಸ್ ಮತ್ತು ಪ್ರಧಾನಿ ಸುಹ್ರವರ್ದಿ ಮುಂತಾದ ೧೪ ಮಂದಿ ಪ್ರಮುಖರು ಗಲಭೆಕಾರರಲ್ಲಿ ಈ “ಯುದ್ಧ” ವನ್ನು ನಿಲ್ಲಿಸುವಂತೆ ಪ್ರಾರ್ಥಿಸಿದ್ದಾರೆ. ಬ್ರಿಟಿಷ್ ಸೈನ್ಯಗಳ ವಿಮಾನಗಳು ನಿನ್ನೆಯೆಲ್ಲಾ ನಗರದ ಮೇಲೆ ಹಾರಾಡುತ್ತಿದ್ದುವು. ಅನೇಕ ಕಡೆ ಗುಂಪುಗಳ ಮೇಲೆ ಪೋಲೀಸರು ಗುಂಡು ಹಾರಿಸಿದ್ದಾರೆ. ಸಿಖ್ಖರು ಕತ್ತಿಗಳನ್ನೂ ಶಂಖಗಳನ್ನೂ ಹಿಡಿದು ಬಲ್ಲಿಗಂಜ್ ಬಡಾವಣೆಯಲ್ಲಿ ಭಾರಿ ಮೆರವಣಿಗೆ ನಡೆಸಿದರು. ಇವರಿಗೂ ಆ ಪ್ರದೇಶದ ಮುಸ್ಲಿಮರಿಗೂ ಘರ್ಷಣೆಯಾಯಿತೆಂದು ವರದಿಯಾಗಿದೆ.

ಜಿನ್ನಾರವರ ಅಧ್ಯಕ್ಷತೆಯಲ್ಲಿ ‘ಪಾಕಿಸ್ಥಾನ’ ಪ್ರತಿಸರ್ಕಾರ

ಲೀಗನ್ನು ಕಳ್ಳಿಹಾಕಿ ಕಾಂಗ್ರೆಸ್ಸೇನಾದರೂ ಕೇಂದ್ರಸರ್ಕಾರವನ್ನು ರಚಿಸಿದರೆ ಆಗ್ಗೆ ನಾವು ಧೈರ್ಯದಿಂದ ಪಾಕಿಸ್ಥಾನ್ ರಿಪಬ್ಲಿಕ್ಕನ್ನು ಸ್ಥಾಪಿಸಿ ಮಿ॥ ಜಿನ್ನಾರವರನ್ನು ಪ್ರಥಮಾಧ್ಯಕ್ಷರನ್ನಾಗಿ ಆರಿಸಬೇಕು. ನಾವು ದಂಗೆ ಎದ್ದು ನಮ್ಮ ಪ್ರತಿಸರ್ಕಾರವನ್ನು ರಚಿಸಬೇಕು” ಎಂದು ಮುಸ್ಲಿಂ ಲೀಗಿನ ವರ್ಕಿಂಗ್ ಕಮಿಟಿ ಸದಸ್ಯರಾದ ಮಿ॥ ಕ್ವಾಜಿ ಇಸ್ಮಾಯಿಲ್‌ರವರು ದೆಹಲಿಯಲ್ಲಿ ಭಾಷಣಮಾಡುತ್ತಾ ತಿಳಿಸಿದ್ದಾರೆ.

ಬಟ್ಟೆ ಅಭಾವ

ಸ್ವಂ ವ] ತಿಗರ-ಮಾಗಡಿ, ೧೭

ಇಲ್ಲಿ ಬಟ್ಟೆ ಹಂಚಿಕೆ ವ್ಯವಸ್ಥೆ ಬಗ್ಗೆ ಒಂದು ಸಮಿತಿಯನ್ನು ನೇಮಿಸಲಾಗಿದೆ. ಆದರೆ ಜನರಿಗೆ ಬಟ್ಟೆ ಸರಬರಾಜು ಮಾತ್ರ ಇನ್ನು ಏರ್ಪಾಡಾಗಿಲ್ಲ. ಗೌರಿ ಹಬ್ಬ ಹತ್ತಿರ ಬಂತು. ಜಾಗ್ರತೆ ವ್ಯವಸ್ಥೆ ಯಾಗುವುದು ಅಗತ್ಯವಾಗಿದೆ.

ಮುಂದಿನ ವಾರದಲ್ಲಿ ಹೊಸ ಕೇಂದ್ರ ಸರ್ಕಾರ

ಮೊನ್ನೆ ಮಧ್ಯಾಹ್ನ ಪಂ॥ ನೆಹರೂರವರು ವೈಸರಾಯರನ್ನು ಭೇಟಿ ಮಾಡಿ ಕೇಂದ್ರ ಸರ್ಕಾರದ ರಚನೆಯ ಬಗ್ಗೆ ಪೂರ್ವಭಾವಿ ಮಾತುಕತೆ ನಡೆಸಿದರು. ಸಧ್ಯದಲ್ಲೇ ಇನ್ನೊಮ್ಮೆ ಭೇಟಿಮಾಡಲಿದ್ದಾರೆ. ಪಂ॥ ನೆಹರೂರವರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಬೊಂಬಾಯಿಯಲ್ಲಿ ಮಾಡಿದ ನಿರ್ಣಯವನ್ನು, ಮಿ॥ ಜಿನ್ನಾರವರೊಡನೆ ನಡೆಸಿದ ಸಂಭಾಷಣೆಯನ್ನು ವೈಸರಾಯರಿಗೆ ತಿಳಿಸಿದರೆಂದು ವರದಿಯಾಗಿದೆ. ಕಲ್ಕತ್ತ ದುರಂತ ಪ್ರಕರಣವು ಕೂಡಲೇ ಕೇಂದ್ರ ಸರ್ಕಾರದ ರಚನೆ ಮಾಡಬೇಕೆಂಬ ಹರಕ್ಕೆ ಎಡೆಗೊಟ್ಟಿದೆ. ಮುಂದಿನ ಭೇಟಿಯ ಕಾಲದಲ್ಲಿ ಪಂ॥ ನೆಹರೂರವರು ತಮ್ಮ ಸರ್ಕಾರದ ಮಂತ್ರಿಗಳ ಹೆಸರನ್ನು ವೈಸರಾಯರಿಗೆ ಕೊಡುವರೆಂದು ಗೊತ್ತಾಗಿದೆ. ಇತ್ತೀಚಿನ ವರದಿಯಂತೆ ಹೊಸ ಸರ್ಕಾರವು ಮುಂದಿನ ವಾರದೊಳಗೇ ರಚನೆಯಾಗುವುದೆಂದು ನಂಬಲಾಗಿದೆ.

ಹೊಸ ಜಿಲ್ಲಾ ನ್ಯಾಯಾಧೀಶರು

ಮೈಸೂರು ೧೯

ಮೈಸೂರು ಜಿಲ್ಲಾ ಸೆಷನ್ಸ್ ನ್ಯಾಯಾಧೀಶರು ವರ್ಗವಾಗಿ ಬಂದಿರುವ ಶ್ರೀ ಎಸ್. ರಾಮಯ್ಯಂಗಾರ್ಯರು ಈ ದಿನ ನ್ಯಾಯಸ್ಥಾನದ ಸಿರಸ್ತೇದಾರರಿಂದ ಅಧಿಕಾರವನ್ನು ವಹಿಸಿಕೊಂಡರು. ಲಾಯರು ಸಂಘದ ಪರವಾಗಿ ಶ್ರೀ ಹೆಚ್. ಸುಬ್ಬರಾಯರು ಅವರಿಗೆ ಸ್ವಾಗತ ಕೋರಿದರು.

ಭಾಷಣ

ನಾಳೆ ಸಂಜೆ ೬॥ ಘಂಟೆಗೆ ಒಂಟಿಕೊಪ್ಪಲು ರಾಮಕೃಷ್ಣಾಶ್ರಮದಲ್ಲಿ ಸ್ವಾಮಿ ಸೋಮನಾಥಾನಂದರ ಶ್ರೀ ಕೃಷ್ಣನ ವಿಚಾರವಾಗಿ ಭಾಷಣ ಮಾಡುವರು.

ವೇದಪ್ರಚಾರ ಸಮಿತಿ

ಸಂಸ್ಥಾನದ ವೇದಪ್ರಚಾರ ಸಮಿತಿಯವರು ನಗರದ ಪ್ರಮುಖರನ್ನು ಆಹ್ವಾನಿಸಿ ನಿನ್ನೆ ಚಾಮುಂಡೇಶ್ವರೀ ಭವನದಲ್ಲಿ ಸಭೆಯೊಂದನ್ನು ನಡೆಸಿದರು. ಬೆಂಗಳೂರಿನಿಂದ ಬಂದಿದ್ದ ಶ್ರೀಗಳಾದ ಚತ್ರಲಾಲ್, ಕಾಪೂರ್, ಸುಬ್ಬನರಸಿಂಹಶಾಸ್ತ್ರೀ ಮುಂತಾದವರು ಭಾಷಣಮಾಡಿ ಹಿಂದೂ ಜನಾಂಗದವರೆಲ್ಲರಿಗೂ ಮಾನ್ಯವಾದ ವೇದಗಳ ವಿಷಯವನ್ನು ಪ್ರಚಾರಮಾಡಲು ಎಲ್ಲರ ಸಹಕಾರಗಳನ್ನು ಕೋರಿದರು. ಶ್ರೀಗಳಾದ ಸಿ. ನರಸಿಂಹಯ್ಯ, ಎಂ. ಎ. ದೊರೆಸ್ವಾಮಯ್ಯಂಗಾರ್, ಸಿ. ಆರ್. ನರಸಿಂಹಶಾಸ್ತ್ರಿ ಮುಂತಾದವರು ಮಹಾಜನಪಾಡಿ ಸಭೆಯ ಉದ್ದೇಶಕ್ಕೆ ತಮ್ಮ ಬೆಂಬಲವನ್ನು ನೀಡಿದರು. ಸಧ್ಯದಲ್ಲಿ ಇದಕ್ಕಾಗಿ, ಆರ್ಯಸಮಾಜದವರು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳುವರು.

ರಾಜಕಮಲ್ ಟಾಕೀಸು

ಮೈಸೂರು

16-8-46 ರಿಂದ

ತದ್‌ಬೀರ್

ಬಾಮಿಕೆ,—ಸೈಗಲ್, ಸೂರಯ್ಯ ಮುಂತಾದವರು

ಪ್ರತಿದಿನ ಮೂರು ಆಟಗಳು.

ಸಾಧ್ವಿ

ತಾ|| ೧೯-೮-೪೬ ಸೋಮವಾರ

ದಿವಾನರ ಭಾಷಣ

ನೂತನ ದಿವಾನರಾದ ಸರ್ ರಾಮಸ್ವಾಮಿ ಮೊದಲಿಯಾರರು ಮೊಟ್ಟಮೊದಲನೆಯದಾಗಿ ಸಿನೆಟ್ ಮತ್ತು ಮೊನ್ನೆ ಬಹಿರಂಗ ಭಾಷಣಗಳನ್ನು ಮಾಡಿ ಹಲವು ಅಭಿಪ್ರಾಯಗಳನ್ನು ಸೂಚಿಸಿರುವರು ಅವುಗಳಲ್ಲಿ ತಮ್ಮ ಕಾರ್ಯಕ್ರಮ ವಿಧಾನಗಳಿಂದ ಹಿಡಿದು ಭವಿಷ್ಯ ಭಾರತದ ರಾಜ್ಯಾಂಗ ರಚನಾ ಸಮಿತಿಯ ವರೆಗೆ ಅನೇಕ ವಿಷಯಗಳನ್ನು ಪ್ರಸ್ತಾಪಿಸಿರುವರು ಸಂಸ್ಥಾನದ ಮಹಾಜನರು ಈ ಭಾಷಣಗಳನ್ನು ವಿಮರ್ಶ ದೃಷ್ಟಿಯಿಂದ ಪರಿಶೀಲಿಸುತ್ತಿರುವರು

ಮೈಸೂರಿನೊಡನೆ ತಮಗೆ ಬಹುಕಾಲದಿಂದ ಇದ್ದ ಸಂಪರ್ಕ, ಅಭಿಮಾನ ಮತ್ತು ವ್ಯವಹಾರ ವಿಚಾರವನ್ನು ಅವರು ತಿಳಿಸಿ ಸಂಸ್ಥಾನದ ಏಳಿಗೆಗೆ ತಾವು ದುಡಿಯುವುದಾಗಿ ಹೇಳಿರುವರು. ಇದು ಎಲ್ಲ ಅಧಿಕಾರಿಗಳೂ ಪದ್ಧತಿ ಪ್ರಕಾರ ಹೇಳತಕ್ಕ ಒಂದು ಉಪಚಾರೋಕ್ತಿ. ಈ ಉದ್ದೇಶವನ್ನು ಅವರು ಯಾವರೀತಿ ನಿರ್ವಹಿಸುವರೆಂಬುದೇ ಈ ಉದ್ಗಾರದ ಒರೆಗಲ್ಲು. ಗ್ರಾಮಗಳ ಉದ್ಧಾರವೇ ದೇಶಾಭ್ಯುದಯದ ಅಸ್ತಿಭಾರವೆಂದೂ, ಅದರ ಸಾಧನೆಗೆ ತಾವು ವಿಶೇಷ ಗಮನ ಕೊಡುವುದಾಗಿಯೂ ಅವರು ಹೇಳಿರುವರು ಗ್ರಾಮೋದ್ಧಾರವೆಂಬುದು ಹಲವು ದಿನಗಳಿಂದ ಒಂದು ದೊಡ್ಡ ಪಲ್ಲವಿಯಾಗಿ ಪರಿಣಮಿಸಿದೆ ಇಪ್ಪತ್ತು ವರ್ಷಗಳ ಹಿಂದೆ ಮಹಾತ್ಮ ಗಾಂಧಿಯವರು ರಚನಾತ್ಮಕ ಕಾರ್ಯಕ್ರಮವನ್ನು ಸೂಚಿಸಿದಂದಿನಿಂದಲೂ ಹಳ್ಳಿಗಳ ಉದ್ಧಾರದ ಮಾತು ಎಲ್ಲರ ಬಾಯಿಯಿಂದಲೂ ಕೇಳಿ ಬರುತ್ತಿದೆ ಅಧಿಕಾರಿಗಳು, ಖಾಸಗಿ ಜನರು, ಸಾರ್ವಜನಿಕ ಸಂಸ್ಥೆಗಳೇ ಮುಂತಾದ ಎಲ್ಲ ಭಾಗಗಳಿಂದಲೂ ಗ್ರಾಮೋದ್ಧಾರದ ಧ್ವನಿಯೇ ಕೇಳಗುತ್ತಿದೆ ಆದರೆ ನಮ್ಮ ದೇಶದ ಬಡ ಜೋಳಿಗೌಡನ ಪರಿಸ್ಥಿತಿಯು ಎಂದಿನಂತೆಯೇ ಇರುತ್ತದೆ ಅವನ ಬೆನ್ನು ಮೂಳೆಯನ್ನು ಮುರಿಯುತ್ತಿರುವ ಹೊರೆಯು ಮಾತ್ರ ಇಳಿದಿಲ್ಲ ಬಡತನ, ಅಜ್ಞಾನ, ಅಭಾವಗಳು ತಾಂಡವವಾಡುತ್ತಿವೆ. ನಿಜವಾದ ಗ್ರಾಮಾಭಿವೃದ್ಧಿಯ ಕೆಲಸವು ಇನ್ನೂ ಆಗಬೇಕಾಗಿದೆ ಇದಕ್ಕೆ ಪ್ರತಿಯೊಂದು ಗ್ರಾಮವೂ ಒಂದೊಂದು ರಿಪಬ್ಲಿಕ್ಕಿನಂತೆ ಆಗಿ ಸ್ವಯಂ ಪರಿಪೂರ್ಣವಾದ ಕೇಂದ್ರವಾಗಿ ಪರಿಣಮಿಸಬೇಕೆಂದು ಗಾಂಧೀಜಿಯವರು ಹೇಳಿದ್ದಾರೆ ಮದರಾಸ್ ಪ್ರಾಂತದಲ್ಲಿ ಈ ಬಗ್ಗೆ ಶಾಸನಬದ್ಧವಾದ ಯೋಜನೆಯು ನಡೆಯುತ್ತಿದೆ. ಸರ್ ಆರ್ಕಾಟ್‌ರವರ ನೇತೃತ್ವದಲ್ಲಿ ಮೈಸೂರಿನ ಹಳ್ಳಿಗಳು ಸ್ವಯಂ ಪೂರ್ಣ ಪ್ರದೇಶಗಳಾಗಿ ಮೆರೆಯುವ ಸುಯೋಗವು ಲಭಿಸುವುದನ್ನು ಮಹಾಜನರು ಇದಿರು ನೋಡುತ್ತಿದ್ದಾರೆ.

ಬೆಂಗಳೂರು ದಂಡು ಮೈಸೂರಿಗೆ ಸೇರುವ ಪ್ರಯತ್ನವು ಕಡೆಯ ಮೆಟ್ಟಿಲನ್ನು ಮುಟ್ಟಿದೆ ಎಂದು ಸರ್ ಆರ್ಕಾಟರು ತಿಳಿಸಿರುವರು ಅರ್ಧ ಶತಮಾನ ಕಾಲದಿಂದ ಮುಂದುವರಿಯುತ್ತಿರುವ ಈ ಸಮಸ್ಯೆಯು ಈಗಲಾದರೂ ಬಗೆಹರಿದರೆ ಸಂತೋಷವೇ ಸರಿ ಈ ಪ್ರಕರಣದ ಕೊನೆಯ ಅಧ್ಯಾಯವು ವಿಶೇಷ ದೀರ್ಘವಾಗಿ ಎಳೆದಾಡದಿರಲೆಂದು ಹಾರೈಸಬೇಕಾಗಿದೆ

ರಾಜ್ಯಾಂಗ ರಚನಾ ಸಮಿತಿಗೆ ಮೈಸೂರಿನ ಪ್ರತಿನಿಧಿಗಳನ್ನು ಕಳುಹಿಸುವ ವಿಚಾರದಲ್ಲಿ ದಿವಾನರು ಸೂಚಿಸಿರುವ ಕ್ರಮವು ಯಾರಿಗೂ ಸಮಾಧಾನವನ್ನುಂಟುಮಾಡುವಂತಿರುವುದಿಲ್ಲ. ಅಧಿಕಾರಿಗಳನ್ನೋ, ಖಾಸಗಿಯವರನ್ನೊ ಕಳುಹಿಸುವುದಾಗಿ ಅವರು ತಿಳಿಸಿದ್ದಾರೆ ಈ ಸಲಹೆಯು ಪ್ರಜೆಗಳ ಕೋರಿಕೆಗೂ, ಇಂದಿನ ವಿದ್ಯಮಾನಗಳ ಆವಶ್ಯಕತೆಗೂ ಅತ್ಯಂತ ವ್ಯತಿರೇಕವಾಗಿದೆ ಎಂಬುದನ್ನು ಒತ್ತಿ ಹೇಳಬೇಕಾಗಿಲ್ಲ. ಪ್ರಜೆಗಳಿಂದ ಚುನಾಯಿತರಾದ ಪ್ರತಿನಿಧಿಗಳೇ ರಾಜ್ಯಾಂಗ ಶಾಸನವನ್ನು ರಚಿಸಲು ಅರ್ಹರೆಂಬುದನ್ನು ಅಂತರ ರಾಷ್ಟ್ರೀಯ ವ್ಯವಹಾರಗಳೆಲ್ಲವೂ ಅಂಗೀಕರಿಸಿವೆ ಇದಕ್ಕಾಗಿ ಇಡೀ ದೇಶದ ಜನರೆಲ್ಲರೂ ಒತ್ತಾಯಪಡಿಸಿದ್ದಾರೆ. ಬ್ರಿಟಿಷ್ ಇಂಡಿಯಾದಲ್ಲಿ ಎಲ್ಲ ಕಡೆಯೂ ಪ್ರಜೆಗಳಿಂದ ಚುನಾಯಿತರಾದವರೇ ರಾಜ್ಯಾಂಗ ಸಮಿತಿಯ ಸದಸ್ಯರಾಗಿದ್ದಾರೆ. ಕೊಚ್ಚಿ, ಜಯಪುರ ಮುಂತಾದ ಸಂಸ್ಥಾನಗಳಿಂದಲೂ ಚುನಾಯಿತ ಪ್ರತಿನಿಧಿಗಳನ್ನೇ ಕಳುಹಿಸುವುದಾಗಿ ಘೋಷಣೆಗಳು ಹೊರಟಿವೆ. ಹೀಗಿರುವಲ್ಲಿ ನೆರೆಯ ಪ್ರಾಂತದವರಿಗೆ ದೊರೆತ ಅವಕಾಶವು ಮೈಸೂರಿನವರಿಗೆ ನಿರಾಕರಿಸಲ್ಪಡಲೇಕೆ? ಈ ಬಗ್ಗೆ ಈಗಾಗಲೇ ವಿಶೇಷ ಜಿಜ್ಞಾಸೆಗಳು ನಡೆದಿರುವುದರಿಂದ ಹೆಚ್ಚಿನ ಟೀಕೆಯು ಅಗತ್ಯವಿಲ್ಲ. ಈಗ ದಿವಾನರು ಸೂಚಿಸಿರುವ ನೀತಿಯೇ ಅವರು ನಿರ್ಧಾರವಾಗಿರುವುದಾದರೆ ಇದು ಮೈಸೂರಿನ ಪ್ರಜೆಗಳಿಗೆ ಲಭಿಸಿದ ಮೊದಲನೆಯ ಆಶಾಭಂಗವೆಂದೇ ಹೇಳಬೇಕು.

ಟಿ. ಸಿ. ನಟರಾಜ್
ಔಷಧಾಲಯ

ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ

ಅಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದೀಯ ಔಷಧಗಳೆಲ್ಲವೂ ದೊರೆಯುತ್ತವೆ.

ವಾರ ಭವಿಷ್ಯ

(ಶ್ರೀ|| ಸಿತ್ಯಾನಂದ ಸ್ವಾಮಿಗಳವರಿಂದ)

೧೯-೮-೪೬ ರಿಂದ ೨೫-೮-೪೬ ರ ವರೆಗೆ

ಮೇಷ—ನಿಮ್ಮ ಆರೋಗ್ಯ ಚೆನ್ನಾಗಿರುವುದು. ಆದಾಯ ಉತ್ತಮವಾಗಿರುವುದು ನಿಮ್ಮ ಸಹೃದಯ ವರ್ತನೆಯಿಂದ ಕೆಲಸ ಕಾರ್ಯಗಳಲ್ಲಿ ಯಶ ಮೇಲಧಿಕಾರಿಗಳಿಂದ ಮಾನ್ಯತೆ. ಪ್ರವಾಸದಲ್ಲಿ ಉತ್ತಮ ಫಲ.

ವೃಷಭ—ಈ ವಾರವೂ ನಿಮ್ಮ ಗ್ರಹಗತಿ ಒಡಲಾಯಿಸಿಲ್ಲ ಆದ್ದರಿಂದ ಯಾರ ಕೂಡಲೂ ನಿಸ್ಠೂರ ಕಟ್ಟಿಕೊಳ್ಳಬೇಡಿ ಕೆಲಸ ಕಾರ್ಯಗಳಲ್ಲಿ ಅನಾವಶ್ಯಕ ವಿಘ್ನಗಳು ಪ್ರಾಪ್ತವಾಗುವುವು ಆರೋಗ್ಯವು ಸಹ ಚೆನ್ನಾಗಿರಲಾರದು ಆರ್ಥಿಕ ಸ್ಥಿತಿ ಉತ್ತಮವಿಲ್ಲ

ಮಿಥುನ—ಪರಮಾತ್ಮನ ದಯೆ ಒಂದಿದ್ದರೆ ಯಾವ ಅಡ್ಡಿ ಆತಂಕಗಳೂ ಸಿದ್ಧಿಸಲಾರವು ದೇವರ ಮೇಲೆ ಭಾರ ಹಾಕಿ ಕೆಲಸ ಕಾರ್ಯಗಳಲ್ಲಿ ನಿರತರಾಗಿ ಆರೋಗ್ಯ ಮತ್ತು ಸಾಂಸಾರಿಕ ಸ್ಥಿತಿಗಳು ಚೆನ್ನಾಗಿರಲಾರವು ಪ್ರವಾಸ ನಿಲ್ಲಿಸಿ.

ಕಟಕ—ಆರೋಗ್ಯ ಚೆನ್ನಾಗಿರುವುದು. ಹೆಚ್ಚುಬಳಕೆ ಅನಾವಶ್ಯಕವಾದ ಅನಾದರಣೆಗೆ ಗುರಿಯಾಗಬಹುದು. ಆರ್ಥಿಕ ಸ್ಥಿತಿ ಉತ್ತಮಗೊಳ್ಳುವುದು. ಆಪ್ತ ಮಿತ್ರರ ಆಗಮನದಿಂದ ಮನಸ್ಸಿನಲ್ಲಿ ಆನಂದ.

ಸಿಂಹ—ಎಲ್ಲ ಕೆಲಸದಲ್ಲೂ ಕೈಹಾಕಿ ಜವಾಬ್ದಾರಿ ಹೊತ್ತುಕೊಳ್ಳಬೇಡಿ. ಆರೋಗ್ಯವೇನೋ ಚೆನ್ನಾಗಿರುವುದು ಆರ್ಥಿಕ ಸ್ಥಿತಿ ಮಾತ್ರ ಚೆನ್ನಾಗಿಲ್ಲ ವಾರಾಂತ್ಯದಲ್ಲಿ ಧನ ಪ್ರಾಪ್ತಿ, ಮಿತ್ರರ ಭೇಟಿ ಹೊಸ ವ್ಯವಹಾರದಲ್ಲಿ ಕೈ ಹಾಕಬೇಡಿ.

ಕನ್ಯಾ—ನಿಮ್ಮ ಕರ್ತವ್ಯದಲ್ಲಿ ಶ್ರದ್ಧೆಯಿಂದ ವರ್ತಿಸಿ. ಫಲಾ ಫಲಗಳ ಕಡೆ ಮನ ಕೊಡದೆ ಕಾರ್ಯೋನ್ಮುಖರಾ[illegible] ಆರೋಗ್ಯ ಚೆನ್ನಾಗಿರುವುದಿಲ್ಲ ವ್ಯಾಪಾ[illegible] ಉದ್ಯೋಗಗಳಲ್ಲಿ ಮೇಲಧಿಕಾರಿಗಳಿಂದ ರುಕಾಳ ಕಲಹದಿಂದ ಸಂಕಟ.

ತುಲಾ—ನಿಮ್ಮ ಸ್ವಂತ ಶಕ್ತಿಯಿಂ[illegible] ನೀವು ಕೆಲಸ ಮಾಡಬೇಕಾಗಿದೆ ಧೈರ್ಯದಿಂದ ಮುನ್ನುಗ್ಗಿ, ವಿಘ್ನಗಳನ್ನು ಎದುರಿ[illegible] ಮಾನಸಿಕ ಚಿಂತೆ ಹುಟ್ಟುವುದು ವ್ಯಾಪಾ[illegible]ರ ವ್ಯವಹಾರಗಳಲ್ಲಿ ತೊಂದರೆ. ಮನೆಯಲ್ಲಿ ಕಿರುಕುಳ ಆರೋಗ್ಯ ಉತ್ತಮವಿ[illegible]

ವೃಶ್ಚಿಕ—ಕೊನೆಗೂ ನಿಮ್ಮ ಪರಿ[illegible] ಧನೆಯಾಗುವ ಕಾಲ ಬಂದಿತು. ಅತಿ[illegible] ಸುಖ ಅನುಭವಿಸುವಿರಿ ಆರೋಗ್ಯ ಉ[illegible]ಮ ಆರ್ಥಿಕ ಸ್ಥಿತಿ ಬಲಗೊಳ್ಳುವುದ[illegible] ವ್ಯಾಪಾರ, ನೌಕರಿಗಳಲ್ಲಿ ಯಶಸ್ಸು. ಪ್ರವಾಸದಲ್ಲಿ ಬಹಳ ಅನುಕೂಲ.

ಧನುಸ್ಸು—ಆರೋಗ್ಯವು ಸುಧಾ[illegible]ವುದು. ಆರ್ಥಿಕ ಸ್ಥಿತಿ ತಹಬಂದಿಗೆ ಬಂ[illegible] ಲಾಭ ಕೈ ಹತ್ತುವುದು. ವ್ಯವಹಾ[illegible]ಳಲ್ಲಿ ಹೊಸ ಹಾದಿ ಹಿಡಿದು ಲಾಭ ಗಳಿ[illegible]ವಿರಿ. ಬಂಧು ಮಿತ್ರರಿಂದ ಸಹಾಯ[illegible] ಸ್ತ್ರೀಯರಿಂದ ಲಾಭ ಮಿತ್ರರ ಭೇಟಿ.

ಮಕರ—ಯಾವ ಕೆಲಸ ಸಿದ್ಧಿಸ[illegible]ವಾದರೂ ನಂಬಿಕೆಯಿಂದಲೇ ಆದ್ದರಿಂದ [illegible]ಲ್ಲರಲ್ಲೂ ನಂಬಿಕೆಯಿಂದ ವರ್ತಿಸಿ. ಆರೋಗ್ಯ ಚೆನ್ನಾಗಿರುವುದು. ವ್ಯವಹಾರಗ[illegible] ಸಂಶಯದಿಂದ ನಷ್ಟ ಸಂಭವಿಸಬಹುದು

ಕುಂಭ—ಆರೋಗ್ಯ ಕೆಡಬಹುದು ಕೈ ಕೆಳಗಿನವರು ಅವಿಧೇಯರಾಗಿ ನಿಮ್ಮನ್ನು ಅಸಂತುಷ್ಟಗೊಳಿಸುವರು ವಿದ್ಯಾಭ್ಯಾಸಗಳಿಗೆ ಉದಾಸೀನತೆ ಅನ್ಯ ಚಿಂತೆ ಖರ್ಚು ಮಿತಿಮೀರುವುದು.

ಮೀನ—ಬೆಟ್ಟದಷ್ಟು ಆಶೆಗಳ ಹೊಂದಿದ್ದೀರಿ ಆದರೆ ವಿಘ್ನಗಳು ಬಾ[illegible] ಸಂಸಾರ ಸುಖ ಕಡಮೆ ಆರೋಗ್ಯ ಧಾರಣ ವ್ಯಾಪಾರ ವ್ಯವಹಾರಗಳಲ್ಲಿ [illegible] ಹೀಡೆ. ಆರ್ಥಿಕ ಸ್ಥಿತಿ ತರಕೆಳಗಾಗುವ[illegible]

For Immediate Sale

Austin Ten-Four Sedan Excellent running condition. New tyres and New Battery Price above Rs. 6000/- will be considered. Offer holds good till 26th instant. Apply to X, C/o Sadhvi Patrika, Mysore.

ಕನ್ನಾಂಬ, ಡಾ|| ಜಿ. ಪಿ ಸುಬ್ಬರಾವ್ ನಟಿಸಿರುವ

"ಮುಗ್ಗುರು ಮರಾಟಿಲು"

(ತೆಲುಗು ಚಿತ್ರ)

THREE MARATEES

ವೀರಮಾತೆ

17—8—46 ರಿಂದ ಅಮೋಘ ಎರಡನೇ ವಾರ

ಮೋತಿಲಾಲ್ ಟಾಕೀಸಿನಲ್ಲಿ

೧೬-೮-೪೬ ರಿಂದ ಬೆಂಗಳೂರು ಮೂವಿಲ್ಯಾಂಡಿನಲ್ಲಿ

ಅಮೋಘ ನಾಲ್ಕನೇ ವಾರ

—: Released Through :—

SRI MAHAVEER FILM EXCHANGE

Asoka Road, Mysore.

ವಿಜಯಾ ಪಿಕ್ಚರ್ಸ್, ಮೈಸೂರು

OPERA TALKIES

2nd WEEK!

From 20—8—

'King Of The Texas Ranger

(Full Serial)

FEATURING:-

NEIL HAMILTON and

'Commonsense Special Chart

With Ten Bankers

For Four, Eight & Sixteen Entries

For Commonsense Crosswo[illegible] can be had from the [fo]llowing on pre-payment m. o.

M. T Sampathkumaran
[illegible], Vanivilasa Mohalla, My[sore]

Prices of Charts.-For [illegible] Competitions Rs. 3-8-0, [illegible] Twelve Competitions [illegible] 6-8-0 & for Twenty-f[our] Competitions Rs. 12-0-0

Edited, printed and published by A. .. Nagaraian at the Sadhvi Press D Subbiah Road, Mysore

ಫೋನ್ ನಂ 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೫] ಮಂಗಳವಾರ ೨೦—೮—೪೬ [ಸಂಚಿಕೆ ೨೪

ಸಚಿವರ ಪಟ್ಟಿಯನ್ನು ನೆಹರೂ ಒಪ್ಪಿಸಿದರು

ಸಂತೇಪೇಟೆಯಲ್ಲಿ ಭಾರಿ ಬೆಂಕಿ ಅನಾಹುತ

ಮೈಸೂರು ೨೦

ನಿನ್ನೆ ರಾತ್ರಿ ೧೨॥ ಘಂಟೆ ಸಮಯದಲ್ಲಿ ಸಂತೇಪೇಟೆಯ ಜೆ॥ ಅಬ್ದುಲ್ ಮುಕರಿ ಮಹಮದ್ ಸಿದ್ದಿಕ್ ಸೇಟ್‌ರವರ ಮಳಿಗೆ ಬೆಂಕಿ ತಗಲಿ ಅಪಾರ ನಷ್ಟ ಸಂಭವಿಸಿತು. ಕೂಡಲೇ ಫೈರ್ ಬ್ರಿಗೇಡಿನವರು ಶ್ರೀ ಪಿ. ಕೆ. ಶಾಮಣ್ಣನವರ ನಾಯಕತ್ವದಲ್ಲಿ ಎರಡು ತುಕ್ಕಡಿಗಳಲ್ಲಿ ಸ್ಥಳಕ್ಕೆ ಬಂದು ಸುಮಾರು ಎರಡೂವರೆ ಗಂಟೆಗಳ ಕಾಲ ಶ್ರಮಪಟ್ಟು ಬೆಂಕಿ ಆರಿಸಿದರು. ಮಳಿಗೆಯಲ್ಲಿ ಒಂದು ಕೊಠಡಿಯು ತುಂಬ ಬೆಂಕಿಪೊಟ್ಟಣ ಗಳ ದೊಡ್ಡ ಪೆಟ್ಟಿಗೆಗಳು ಇದ್ದು ಇಲಿಗಳ ಸಂಚಾರದಿಂದ ಅಲ್ಲಿ ಬೆಂಕಿ ಹುಟ್ಟಿ ಕೊಂಡಿತೆಂದು ಹೇಳಲಾಗಿದೆ. ಸಕಾಲದಲ್ಲಿ ಬೆಂಕಿಯನ್ನು ಆರಿಸದಿದ್ದಲ್ಲಿ ಸಂತೇಪೇಟೆಯ ಇಡೀ ಸಾಲೇ ಅಗ್ನಿ ದೇವನಿಗೆ ಆಹುತಿಯಾಗುತ್ತಿತ್ತೆಂಬುದರಲ್ಲಿ ಸಂದೇಹವಿಲ್ಲ. ಇದುವರೆಗಿನ ಅಂದಾಜಿನಲ್ಲಿ ನಿನ್ನೆ ಅನಾಹುತದಿಂದ ಸುಮಾರು ೧೮ ಸಾವಿರ ರೂಗಳ ಬೆಲೆಗೆ ನಷ್ಟ ಸಂಭವಿಸಿರಬಹುದೆಂದು ಹೇಳಲಾಗಿದೆ.

ಟಾಂಗಾ ಮತ್ತು ಜಟಕಾ ಲೈಸೆನ್ಸ್

ಮೈಸೂರು ನಗರದಲ್ಲಿರುವ ಟಾಂಗಾ ಮತ್ತು ಜಟಕಾ ಮಾಲೀಕರುಗಳ ಅಹವಾಲಿನಂತೆ ಲೈಸೆನ್ಸ್ ಕಾಲಾವಧಿಯನ್ನು ಈ ತಿಂಗಳಿನ ಕಡೆಯವರೆಗೂ ಹೆಚ್ಚಿಸಿರುತ್ತೆ. ಈ ಅವಧಿಯೊಳಗೆ ಅವರು ವಾಹನಗಳನ್ನು ಸುಸ್ಥಿತಿಗೆ ತಂದು ಲೈಸೆನ್ಸ್ ಪಡೆಯಬೇಕಾಗಿ ತಿಳಿಸಲಾಗಿದೆ

ಶ್ರೀ ಕೃಷ್ಣ ಜಯಂತೀ

ಮೈಸೂರು ಚಲುವಾಂಬಾ ಅಗ್ರಹಾರದ ಉತ್ತರಭಾಗದಲ್ಲಿರುವ ಶ್ರೀ ಪ್ರಸನ್ನ ವೆಂಕಟರಮಣ ಸ್ವಾಮಿಯವರ ದೇವಸ್ಥಾನದಲ್ಲಿ ವಾಡಿಕೆಯಂತೆ ಶ್ರೀ ಕೃಷ್ಣ ಜಯಂತಿ ಪ್ರಯುಕ್ತ ತಾ॥ ೨೨-೮-೪೬ರಿಂದ ೩೦-೮-೪೬ರ ವರೆಗೆ ಪ್ರತಿನಿತ್ಯವೂ ಸಾಯಂಕಾಲ ೭ ಘಂಟೆಯಿಂದ ಸಂಗೀತ ಮತ್ತು ಹರಿಕಥೆಗಳು ನಡೆಯುವುವು

ವ್ಯಾಖ್ಯಾನ-ವ್ಯಾಯಾಮ ಪ್ರದರ್ಶನ

ನಾಳಿದ್ದು ಸಂಜೆ ೫॥ ಗಂಟೆಗೆ ಮಹಾರಾಜಾ ಕಾಲೇಜ್ ತತ್ವಶಾಸ್ತ್ರ ಸಂಘದಾಶ್ರಯದಲ್ಲಿ ಡಾ॥ ಟಿ ಎ. ಪುರುಷೋತ್ತಮರವರ ಅಧ್ಯಕ್ಷತೆಯಲ್ಲಿ ದಾವಣಗೆರೆಯ ಶ್ರೀ ಕೆ. ವೀರಭದ್ರಪ್ಪನವರು ಆಧುನಿಕ ವಿಜ್ಞಾನದ ಬೆಳವಣಿಗೆಯು ತಾತ್ವಿಕ ರಹಸ್ಯಗಳು ಎಂಬ ವಿಷಯದ ಮೇಲೆ ಉಪನ್ಯಾಸ ಮಾಡುವರು. ಶುಕ್ರವಾರ ಸಂಜೆ ಕುಸ್ತಿ ಪ್ರದರ್ಶನವನ್ನು ಮಾಡುವರು ಸರ್ವರಿಗೂ ಆಹ್ವಾನವುಂಟು

ಮುಂದಿನ ಯುದ್ಧಕ್ಕೆ ಬಾಸ್ರಾ ಕುರುಕ್ಷೇತ್ರವೇ ?

ರಷ್ಯಾ-ಇರಾನ್ ಗಡಿ ಬಳಿ ಇರುವ ಅಟ್ರೆಕ್ ನದೀ ಪ್ರದೇಶದಲ್ಲಿ ರಷ್ಯದ ಸುಮಾರು ೨೦ ಡಿವಿಜನ್ ಸೈನ್ಯಗಳು ಠೀಕಾಣಿ ಹೂಡಿರುವುದಾಗಿ ತಿಳಿದುಬಂದಿದೆ ಈ ಸುದ್ದಿಯನ್ನು ರಷ್ಯದ ಪ್ರತಿನಿಧಿ ನಿರಾಕರಿಸಿದ್ದಾರೆ. ಬಾಸ್ರಾಕ್ಕೆ ಭಾರತೀಯ ಸೈನ್ಯ ಬಂದಿಳಿದಿರುವುದೂ, ಇರಾನಿ ತೈಲ ಕ್ಷೇತ್ರದ ಮುಷ್ಕರದ ಪರಿಣಾಮವೂ, ಅಜರ್ ಬೈಜಾನಿನ ಬಿಕ್ಕಟ್ಟಿನ ಪ್ರಸಂಗವೂ, ಮುಂದಿನ ಯುದ್ಧಕ್ಕೆ ಬಾಸ್ರಾವೇ ಕುರುಕ್ಷೇತ್ರವಾಗಿ ಪರಿಣಮಿಸಬಹುದೆಂಬ ಊಹೆಗೆ ಎಡೆ ಕೊಟ್ಟಿದೆ.

ಕಲ್ಕತ್ತದ ದೌರ್ಜನ್ಯ

ಸಾವಿನ ಸಂಖ್ಯೆ ೩ ಸಾವಿರಕ್ಕೆ ಏರಿದೆ

ಕಲ್ಕತ್ತ ನಗರದ ರುದ್ರನಾಟಕ ಇನ್ನೂ ಪರಿಸಮಾಪ್ತಿಗೊಂಡಿಲ್ಲ. ಸಾವಿನ ಸಂಖ್ಯೆ ೩ ಸಾವಿರವನ್ನು ಏರುವುದಾಗಿ ವರದಿಯಾಗಿದೆ ನಗರದ ರಸ್ತೆಗಳೆಲ್ಲಾ ಸ್ಮಶಾನದೋಪಾದಿಯಲ್ಲಿದೆ ಹೆಣಗಳ ರಾಶಿ ಅಲ್ಲಲ್ಲೇ ಬಿದ್ದಿವೆ. ಆಸ್ಪತ್ರೆಗಳಲ್ಲೆಲ್ಲಾ ಗಾಯಗೊಂಡವರು ತುಂಬಿದ್ದಾರೆ. ಎಲ್ಲೆಲ್ಲೂ ಆರ್ತನಾದ ಕೇಳಿ ಬರುತ್ತಿದೆ. ಗುಂಪುಗಳ ಮೇಲೆ ಪೋಲೀಸರೂ, ಮಿಲಿಟರಿಯವರೂ ಅನೇಕ ಬಾರಿ ಗುಂಡು ಹಾರಿಸಿದರು. ಹೆಚ್ಚು ಖಂಡಿತಗಳು ವರದಿಯಾಗಿವೆ ಕಲ್ಕತ್ತ ನಗರದ ಕಾಳಿಕಾಂಬೆಯ ಮಂದಿರವನ್ನು ಲೂಟಿ ಮಾಡಿ ಸಹಸ್ರಾರು ರೂ ಗಳ ಒಡವೆಗಳನ್ನು ಧಾಳಿಕಾರರು ಅಪಹರಿಸಿದ್ದಾರೆ ಗಾಯಗೊಂಡವರ ಸಂಖ್ಯೆ ಅನೇಕ ಸಾವಿರಗಳಾಗಿವೆಯೆಂದು ತಿಳಿದುಬಂದಿದೆ.

ಕಾಂಗ್ರೆಸ್ಸಿಗೆ ವಿರುದ್ಧವಾಗಿ ರಾಜರುಗಳು ನಿಲ್ಲುವರೇ ?

ದೇಶೀಯ ಸಂಸ್ಥಾನಗಳ ರಾಜರುಗಳು ತಮ್ಮ ಸ್ವಂತ ವೆಚ್ಚಕ್ಕೆ ರಾಜ್ಯದ ಆದಾಯದಿಂದ ಹೆಚ್ಚು ಹಣವನ್ನು ತೆಗೆದುಕೊಳ್ಳುವಂತೆಯೂ, ಇದನ್ನು ಕೇಂದ್ರ ಸರ್ಕಾರ ರಚನೆಯಾಗುವುದರೊಳಗೇ ಜಾರಿಗೆ ತರಬೇಕೆಂದೂ, ಭಾರತ ರಾಜ್ಯಾಂಗ ರಚನಾ ಸಭೆಗೆ ಶೇಕಡ ೫೦ ಸ್ಥಾನಗಳನ್ನು ಪ್ರಜಾಪ್ರತಿನಿಧಿಗಳಿಗೆ ಕೊಡಬೇಕೆಂದೂ ; ಸಾಧ್ಯವಾದರೆ ತಾವೇ ಸಭೆಗೆ ಹೋಗಬೇಕೆಂದೂ, ಸುಲಭ ಮಾರ್ಗದಲ್ಲಿ ಪ್ರಜೆಗಳ ಸಂಪರ್ಕ ಪಡೆಯಲು ಯತ್ನಿಸಬೇಕೆಂದೂ, ಭೂಪಾಲಿನ ನವಾಬರು ರಾಜರುಗಳಿಗೆಲ್ಲಾ ಒಂದು ಗುಪ್ತ ಸೂಚನೆ ಕಳಿಸಿರುವುದಾಗಿ ವರದಿಯಾಗಿದೆ

ನೆಹರುರವರು ಸಚಿವರ ಪಟ್ಟಿ ಒಪ್ಪಿಸಿದರು

ಪಂ॥ ನೆಹರೂರವರು ಮೊನ್ನೆ ಸಂಜೆ ವೈಸರಾಯರನ್ನು ಭೇಟಿಮಾಡಿ ತಮ್ಮ ಸರ್ಕಾರದ ಮಂತ್ರಿಗಳ ಪಟ್ಟಿಯೊಂದನ್ನು ಅವರಿಗೆ ಒಪ್ಪಿಸಿದರೆಂದು ಗೊತ್ತಾಗಿದೆ. ಆ ಸದಸ್ಯರ ಅಭಿಮತ ತಿಳಿದ ನಂತರ ಅಧಿಕಾರಿ ಪ್ರಕಟಣೆ ಹೊರಬೀಳುವುದೆಂದು ಹೇಳಲಾಗಿದೆ ಪಂ॥ ಆದಾದರ. ನಿನ್ನೆ ವೈಸರಾಯರನ್ನು ಭೇಟಿ ಮಾಡಿದ್ದರು. ಮೌ॥ ಆಜಾದ, ಅಸಫ್ ಅಲಿ, ಮಿ॥ ಫಜಲುಲ್ ಹಕ್ ಮಿ॥ ಸೈಯದ್‌ರವರುಗಳನ್ನು ಸಂಸ್ಥೆ ರಕ್ಷೆ ತೆಗೆದುಕೊಳ್ಳಬಹುದೆಂದು ಹೇಳಲಾಗಿದೆ

ಸೂಚನೆ

ಪತ್ರಿಕಾ ಪರಿಷತ್ತಿನ ಪ್ರಯುಕ್ತ ನಾಳೆ " ಸಾಧ್ವಿ " ಪತ್ರಿಕೆ ಹೊರಡುವುದಿಲ್ಲ.

—ವ್ಯವಸ್ಥಾಪಕ.

ಜಿನ್ನಾರವರನ್ನು ದಸ್ತಗಿರಿ ಮಾಡಿ

ಮುಸ್ಲಿಂ ಲೀಗನ್ನು ನ್ಯಾಯ ಬಾಹಿರ ಸಂಸ್ಥೆಯೆಂದು ಘೋಷಿಸಿ ಮಿ॥ ಜಿನ್ನಾರವರನ್ನೂ ಅವರ ಅನುಯಾಯಿ ಮುಖಂಡರುಗಳನ್ನು ಕೂಡಲೇ ದಸ್ತಗಿರಿ ಮಾಡಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಪಡಿಸುವ ನಿರ್ಣಯವನ್ನು ಬೊಂಬಾಯಿನ ಪಾಕಿಸ್ತಾನ ವಿರೋಧಿಗಳ ಮತ್ತು ಗಿರಿಗಾಂ ಜಿಲ್ಲಾ ಹಿಂದೂ ಮಹಾಸಭೆಯ ಜಂಟಿ ಸಭೆಯಲ್ಲಿ ಅಂಗೀಕರಿಸಲಾಗಿದೆ.

೫೦೦ ಕ್ಕೆ ೭ ಮಂದಿಯಿಂದ ಮಾತ್ರ ಬಿರುದು ತ್ಯಾಗ

ಸಿಂಧೂ ದೇಶದ ಮುಸ್ಲಿಂ ಲೀಗಿನವರ ಪೈಕಿ ಬಿರುದು ಬಾವಲಿಗಳನ್ನು ಪಡೆದಿದ್ದ ಸುಮಾರು ೫೦೦ ಜನರಲ್ಲಿ ಏಳು ಮಂದಿ ಮಾತ್ರ ಇದುವರೆವಿಗೆ ಬಿರುದುಗಳನ್ನು ವಾಪಸು ಕೊಟ್ಟಿರುವುದಾಗಿ ತಿಳಿದುಬಂದಿದೆ

ಪಡಿತರದ ಕಾರ್ಡಿಗೆ ಲಂಚವೇ

ಸ್ವಂ ಸು] ಚಾಮರಾಜನಗರ ೧೮

ಈ ತಾಲ್ಲೂಕಿನ ಹಳ್ಳಿಗಳಲ್ಲಿ ಆಹಾರದ ಹಂಚಿಕೆಗಾಗಿ " ಐಡೆಂಟಿಫಿಕೇಷನ್ " ಕಾರ್ಡುಗಳನ್ನು ಕೊಡುವ ಬಗ್ಗೆ ಹಲವು ಪಟೇಲ್ ಶಾನುಭೋಗರುಗಳು ಕಾರ್ಡು ಒಂದಕ್ಕೆ ಇಷ್ಟೆಂದು ಜನಗಳಿಂದ ಸುಲ್ಕ ತೆಗೆದುಕೊಳ್ಳುತ್ತಿರುವರೆಂದು ಪುಕಾರು ಬಂದಿದೆ.

ಮೈಸೂರು ಸಿಟಿ ರೇಷನಿಂಗ್

ಆಫೀಸಿನಿಂದ:—

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ,—

ನೋಟಿಫಿಕೇಷನ್ ನಂ R 1-141 16-17 ತಾ॥ 19-8-1946.

ಮುಸುಕಿನ ಜೋಳವನ್ನು 1 ರೂಪಾಯಿಗೆ 5 ಸೇರಿನ-ತೆ ಮಿಲಿಟ್ಸ್‌ಗೆ ಬದಲಾಗಿ, 7 2 ಔನ್ಸು ತೂಕಕ್ಕೆ 1 ಪಾವು ಅಳತೆಯ ರೂಪದಲ್ಲಿ 20-8-46 ರ ಆಗಾಯ್ತು ರೇಷನ್ ಅಂಗಡಿಗಳಲ್ಲಿ ಕೊಡಲ್ಪಡುತ್ತೆ

(ಸಹಿ) ಅಬ್ದುಲ್ ರಜಾಕ್,
ರೇಷನಿಂಗ್ ಆಫೀಸರ್
ಮೈಸೂರು ಸಿಟಿ

ರಾ॥ ಸಮಿತಿ ನಿಯೋಗಕ್ಕೆ ದಿವಾನರೇ ನಾಯಕರು

ಸ್ವಂ.ಸು.ಪ್ರೋ] ಬೆಂಗಳೂರು ೨೦

ದಿವಾನರಾದ ಸರ್ ರಾಮಸ್ವಾಮಿ ಮೊದಲಿಯಾರರು ಈ ದಿನ ಬೆಳಗ್ಗೆ ನ್ಯಾಯ ವಿಧಾಯಕ ಸಭಾಂಗಣದಲ್ಲಿ ಪತ್ರಿಕಾ ಸಮ್ಮೇಳನವನ್ನು ನಡೆಸಿದರು. ದಿವಾನರು ದೇಶದ ಆಡಳಿತಾಧಿಕಾರವು ಜನೋಪಕಾರಿಯಾಗಿ ಸಾಗಬೇಕಾದರೆ ಪತ್ರಿಕೆಗಳ ಬೆಂಬಲ ಅತ್ಯಾವಶ್ಯಕ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವ ಒಂದು ಮಹತ್ತರವಾದ ಕಾರ್ಯವನ್ನು ಪತ್ರಿಕೆಗಳು ಸಾಗಿಸುತ್ತಿವೆ. ಎಂದು ಹೇಳಿ ತಾವು ಅನೇಕ ವರ್ಷಗಳ ಕಾಲ ಪತ್ರಿಕೋದ್ಯೋಗಿಯಾಗಿದ್ದುದನ್ನು ತಿಳಿಸಿ ಪತ್ರಿಕಾ ಸ್ವಾತಂತ್ರ್ಯವನ್ನು ತಾವು ಬಯಸುವುದಾಗಿ ಹೇಳಿದರು. ಪತ್ರಿಕೋದ್ಯೋಗಿಗಳ ಸ್ಥಿತಿಗತಿಗಳು ಉತ್ತಮಗೊಳ್ಳಬೇಕೆಂದು ಅವರು ಆಶಿಸಿದರು.

ಪತ್ರಿಕಾ ಪ್ರತಿನಿಧಿಗಳು ಸಂಸ್ಥಾನದಲ್ಲಿರುವ ಪತ್ರಿಕಾ ಶಾಸನ, ಪತ್ರಿಕಾ ಸಲಹಾ ಸಮಿತಿ, ಪ್ರಕಟಣೆ ಶಾಖೆ, ವಿಶ್ವಕರ್ನಾಟಕವನ್ನು ನಿಲ್ಲಿಸಿರುವುದು ಮುಂತಾದ ವಿಷಯಗಳ ಬಗ್ಗೆ ಅನೇಕ ಪ್ರಶ್ನೆಗಳನ್ನು ಕೇಳಿದರು. ದಿವಾನರು ಈ ವಿಷಯಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸುವುದಾಗಿ ಭರವಸೆ ಇತ್ತರು.

ಭಾರತ ರಾಜ್ಯಾಂಗ ರಚನಾ ಸಭೆಯ ವಿಚಾರದಲ್ಲಿ ಬಂದ ಪ್ರಶ್ನೆಗೆ ದಿವಾನರು ಉತ್ತರ ಹೇಳಿ ಸಂಸ್ಥಾನದ ನಿಯೋಗಕ್ಕೆ ದಿವಾನರೇ ನಾಯಕರಾಗಿ ಹೋಗಬೇಕೆಂದು ಪ್ರಭುಗಳು ಅಭಿಪ್ರಾಯ ಪಟ್ಟಿದ್ದಾರೆಂದೂ, ನಿಯೋಗದಲ್ಲಿ ದಿವಾನರೂ ಮತ್ತು ಅಧಿಕಾರಿ ಸದಸ್ಯರುಗಳು ಇರುವರು. ರಾಜಕೀಯ ಪಕ್ಷಗಳ ಪ್ರತಿನಿಧಿಗಳೂ ನಿಯೋಗದಲ್ಲಿರಲೆಂಬುದೇ ತಮ್ಮ ಆಶಯವೆಂದೂ, ತಿಳಿಸಿದರು

ಪಾಶ್ಚಾತ್ಯ ದೇಶಗಳಲ್ಲಿರುವಂತೆ ಪತ್ರಿಕಾ ವೃತ್ತಿಯಲ್ಲಿ ತಪ್ಪು ನಡೆಯುವವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಂಡು ವೃತ್ತಿ ಗೌರವವನ್ನು ಕಾಪಾಡುವ ವ್ಯವಸ್ಥೆಯನ್ನು ಮೈಸೂರಿನಲ್ಲಿ ಪತ್ರಿಕಾ ಕರ್ತರೇ ಜಾರಿಗೆ ತಂದು ದೇಶಕ್ಕೆಲ್ಲಾ ಮಾರ್ಗ ತೋರಿಸಬೇಕೆಂದು ದಿವಾನರು ಸೂಚಿಸಿದರು.

ಪ್ರತಿಭಟನಾ ದಿನಾಚರಣೆ

ಮೈಸೂರು ೨೦

ವಿಶ್ವಕರ್ನಾಟಕ ದಿನ ಪತ್ರಿಕೆಯನ್ನು ಸರ್ಕಾರದವರು ನಿಲ್ಲಿಸಿರುವುದನ್ನು ಪ್ರತಿಭಟಿಸುವ ಸಲುವಾಗಿ ನಾಳೆ ಬೆಳಗ್ಗೆ ೧೦ ೩೦ಕ್ಕೆ ಪತ್ರಿಕೋದ್ಯೋಗಿಗಳ ಸಂಘದ ಕಛೇರಿಯಲ್ಲಿ ವಿಶೇಷ ಸಭೆಯೊಂದು ಜರುಗುವುದು. ಸದಸ್ಯರೆಲ್ಲಾ ತಪ್ಪದೆ ದಯಮಾಡಿಸಬೇಕೆಂದು ಕಾರ್ಯದರ್ಶಿಗಳು ಪ್ರಾರ್ಥಿಸಿದ್ದಾರೆ

ವಿಶ್ವಕರ್ನಾಟಕ ದಿನಾಚರಣೆ

ಮೇಲ್ಕಂಡ ದಿನಾಚರಣೆಯ ಸಂಬಂಧವಾಗಿ ವಿದ್ಯಾರ್ಥಿ ಕಾಂಗ್ರೆಸ್ ಆಶ್ರಯದಲ್ಲಿ ನಾಳೆ ದಿನ ಮಧ್ಯಾಹ್ನ ೧-೩೦ ಘಂಟೆಗೆ ಸರಿಯಾಗಿ ಮಹಾರಾಜಾ ಕಾಲೇಜು ಮುಂಭಾಗದಲ್ಲಿ ಶ್ರೀ ಆಗರಂ ರಂಗಯ್ಯನವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ಏರ್ಪಡಿಸಿದೆ ಶ್ರೀಗಳಾದ ಆರ್. ಗೋಪಾಲಸ್ವಾಮಿ ಮತ್ತು ನಾಡಿಗ ಕೃಷ್ಣಮೂರ್ತಿಯವರು ಭಾಷಣ ಮಾಡುವರು

ಸಾಧ್ವಿ

ತಾ|| ೨೦-೮-೪೬ ಮಂಗಳವಾರ

ನಾಳೆ ಪತ್ರಿಕಾ ಹರತಾಳ

ವಿಶ್ವಕರ್ನಾಟಕ ಪತ್ರಿಕೆಯ ಮೇಲೆ ಸರ್ಕಾರದವರು ಹೂಡಿರುವ ಗದಾ ಪ್ರಹಾರವನ್ನು ಪ್ರತಿಭಟಿಸಲು ನಾಳೆಯ ದಿನ ಸಂಸ್ಥಾನದ ಎಲ್ಲಾ ಪತ್ರಿಕೆಗಳನ್ನೂ ನಿಲ್ಲಿಸಿ ಹರತಾಳವನ್ನಾಚರಿಸಬೇಕೆಂದು ಅಖಿಲ ಮೈಸೂರು ಪತ್ರಿಕೋದ್ಯೋಗಿಗಳ ಸಮ್ಮೇಳನದ ಅಧ್ಯಕ್ಷರಾದ ಜನಾಬ್ ಸಯ್ಯದ್ ಗೌಸ್ ಮೋಹಿಯುದ್ದೀನರವರು ಅಪ್ಪಣೆ ಮಾಡಿರುತ್ತಾರೆ. ಅದಕ್ಕೆ ಅನುಗುಣವಾಗಿ ನಾಳೆ ದಿನ ನಾವೂ ಸಹ ನಮ್ಮ ಪತ್ರಿಕೆಯನ್ನು ಪ್ರಕಟಿಸುವುದಿಲ್ಲ. ವ್ಯಕ್ತಿಯ ಹಿತಕ್ಕೆ ಧಕ್ಕೆಯು ಬರುವ ಪ್ರತಿಯೊಂದು ಪ್ರಸಂಗವನ್ನೂ ಅತ್ಯ ಗೌರವವುಳ್ಳ ಸಹೋದ್ಯೋಗಿಗಳೆಲ್ಲರೂ ಸಂಪೂರ್ಣವಾಗಿ ಪ್ರತಿಭಟಿಸಬೇಕೆಂಬ ಧ್ಯೇಯದಿಂದ ನಾವು ಅಧ್ಯಕ್ಷರ ಸೂಚನೆಗೆ ಹೃತ್ಪೂರ್ವಕವಾದ ಸಹಕಾರವನ್ನು ನೀಡುವೆವು

ವಿಶ್ವಕರ್ನಾಟಕದ ಮೇಲೆ ಕರಾಳ ಶಾಸನದ ಪ್ರಕಾರ ನಡೆದಿರುವ ಧಾಳಿಗಳು ಇತಿಹಾಸ ಪ್ರಸಿದ್ಧವಾದುವು. ಈಗ ಅದರ ಮೇಲೆ ಆಗಿರುವ ಆಘಾತವು ಹಿಂದಿನದೆಲ್ಲವನ್ನೂ ಮೀರಿಸುತ್ತದೆ. ಏಕ ಕಾಲದಲ್ಲಿ ಎರಡು ಬಾಣಗಳು ಅದರ ಮೇಲೆ ಪ್ರಯೋಗವಾಗಿವೆ. ಹಲವು ಲೇಖನಗಳನ್ನು ಪ್ರಕಟಿಸಿದುದಕ್ಕಾಗಿ ಠೇವಣಿಯನ್ನೇಕೆ ಕೇಳಬಾರದೆಂಬ ಪತ್ರವು ಅದಕ್ಕೆ ಬಂದಿರುತ್ತದೆ. ಅದರ ವಿಚಾರವು ಇನ್ನೂ ಇತ್ಯರ್ಥವಾಗಿರುವುದಿಲ್ಲ. ಅಷ್ಟರಲ್ಲಿಯೇ ಇನ್ನು ಕೆಲವು ಲೇಖನಗಳಿಗಾಗಿ ಆ ಪತ್ರಿಕೆಯನ್ನು ಎರಡು ತಿಂಗಳುಗಳ ಕಾಲ ನಿಲ್ಲಿಸಿರುವುದಾಗಿ ಮತ್ತೊಂದು ಆಜ್ಞೆಯು ಹೊರಟಿದೆ. ಏಕ ಕಾಲದಲ್ಲಿ ಹೀಗೆ ಎರಡು ಅಸ್ತ್ರಗಳ ಪ್ರಯೋಗವು ಆಗಿರುವುದು ಇದೇ ಮೊದಲು.

ಹಿಂದೆ ಅನೇಕ ಬಾರಿ ವಿಶ್ವಕರ್ನಾಟಕವು ಪ್ರಭುತ್ವದ ಕ್ರೂರ ದೃಷ್ಟಿಗೆ ತುತ್ತಾಗಿದೆ. ಅಜ್ಞಾತವಾಸ, ಠೇವಣಿ ಪಾವತಿ ಮತ್ತು ಇತರ ವಿಧವಾದ ಚಿತ್ರಹಿಂಸೆಗಳಿಗೆ ಗುರಿಯಾಗಿರುತ್ತದೆ. ಪತ್ರಿಕಾ ಶಾಸನದ ಕ್ರೂರ ಬಾಣಗಳು ವಿಶ್ವಕರ್ನಾಟಕದ ಮೇಲೆ ಬಿದ್ದಿರುವಷ್ಟು ಬೇರೆ ಯಾವ ಪತ್ರಿಕೆಯ ಮೇಲೆಯೂ ಬಿದ್ದಿಲ್ಲವೆಂದು ಹೇಳಬಹುದು. ಆದರೆ ಪ್ರತಿಯೊಂದು ಸಂದರ್ಭದಲ್ಲಿಯೂ ಅದು ಬಂದ ಕಷ್ಟಗಳನ್ನೆಲ್ಲಾ ದಿಟ್ಟತನದಿಂದ ಎದುರಿಸಿ ಮುನ್ನುಗ್ಗುತ್ತಿದೆ. ಕರಾಳ ಶಾಸನವನ್ನು ಪ್ರತಿಭಟಿಸಿ, ಪ್ರಜಾಸ್ವಾತಂತ್ರ್ಯವನ್ನು ಎತ್ತಿ ಹಿಡಿದು ಸತ್ಯ ಮತ್ತು ಧರ್ಮಗಳ ಸ್ಥಾಪನೆಗಾಗಿ ವಿಶ್ವಕರ್ನಾಟಕವು ಕಾಲು ಶತಮಾನಕ್ಕೆ ಮೀರಿ ಹೂಡಿರುವ ಹೋರಾಟವು ಪ್ರಶಂಸನೀಯವಾದುದು.

ಹಲವಾರು ವರ್ಷಗಳಿಂದ ಪ್ರಜೆ, ಪ್ರಭು ನಾಡು ಮತ್ತು ನುಡಿಯ ಸೇವೆಯನ್ನು ನಿರ್ವಂಚನೆಯಿಂದ ಮಾಡುತ್ತಿರುವ ಪತ್ರಿಕೆಯು ತತ್ಕಾಲದಲ್ಲಿ ಅಧಿಕಾರ ಸ್ಥಾನದಲ್ಲಿರುವವರಿಗೆ ಅಪ್ರಿಯವಾದ ಪ್ರಕಟಣೆಗಳನ್ನು ಮಾಡಿತೆಂಬ ನೆಪದ ಮೇಲೆ ಪತ್ರಿಕಾ ಜೀವನಕ್ಕೆ ಕುಠಾರವನ್ನು ಪ್ರಯೋಗಿಸಲು ಅವಕಾಶವಿರುವವರೆಗೆ ಸಾರ್ವಜನಿಕ ಜೀವನವು ಅತ್ಯಂತ ಅಸಹನೀಯವಾದೀತು. ಇಂತಹ ಪರಿಸ್ಥಿತಿಯನ್ನು ಎದುರಿಸುವುದಕ್ಕಾಗಿಯೇ ನಾಳೆ ಸಹೋದ್ಯೋಗಿಗಳೆಲ್ಲರೂ ಹರತಾಳವನ್ನಾಚರಿಸುವರು. ಇದಕ್ಕೆ ರಾಜಕೀಯ ಪಕ್ಷಗಳ ನಾಯಕರೂ, ಕಾರ್ಮಿಕರೂ, ವಿದ್ಯಾರ್ಥಿಗಳೂ ಬೆಂಬಲವನ್ನು ನೀಡಿರುವುದು ಅಭಿನಂದನೀಯವಾಗಿದೆ. ಸಾರ್ವಜನಿಕ ಜೀವನದ ಪ್ರತಿಬಿಂಬದಂತಿರುವ ಪತ್ರಿಕೆಗಳ ಹಕ್ಕು ಬಾಧ್ಯತೆಗಳನ್ನು ಸಂರಕ್ಷಿಸುವುದರಲ್ಲಿ ಮಹಾಜನರು ಎಷ್ಟು ಬದ್ಧಾದರರಾಗಿರುವರೆಂಬುದನ್ನು ಇದು ಸೂಚಿಸುತ್ತದೆ

ಪ್ರಜಾಭಿಪ್ರಾಯಕ್ಕೆ ಪೂರ್ಣ ಪುರಸ್ಕಾರವು ದೊರೆಯಬೇಕಾದ ಈ ಕಾಲದಲ್ಲಿ ಪತ್ರಿಕೆಗಳ ಮೇಲೆ ನಡೆಯುವ ದಬ್ಬಾಳಿಕೆಗಳು ಸಕಲರಿಂದಲೂ ಖಂಡನೀಯವಾದುವು. ಮಹಾಜನರ ಅಭಿಪ್ರಾಯವನ್ನು ಸದಾ ಕಾಲದಲ್ಲಿಯೂ ಮನ್ನಿಸುವುದಾಗಿ ಮೊನ್ನೆ ತಾನೆ ಭರವಸೆ ಇತ್ತ ನೂತನ ದಿವಾನರಿಂದ ಪರಿಹರಿಸಲ್ಪಡಲು ಅರ್ಹವಾದ ಪ್ರಶ್ನೆಗಳಲ್ಲಿ ಇದು ಅತ್ಯಂತ ಪ್ರಾಮುಖ್ಯವಾದುದು. ಜನಾಂಗದ ಸಕಲ ವರ್ಗಗಳಿಗೂ ಅತ್ಯಗತ್ಯವಾದ ಪತ್ರಿಕಾ ಪ್ರಪಂಚಕ್ಕೆ ಉಂಟಾಗಿರುವ ಅಸಮಾಧಾನವನ್ನು ಅವರು ಕೂಡಲೇ ನಿವಾರಿಸಿ ವಿಶ್ವಕರ್ನಾಟಕದ ನಿರಾತಂಕವಾದ ಸೇವೆಗೆ ಅವಕಾಶ ಉಂಟುಮಾಡಿ ಪ್ರಭುತ್ವಕ್ಕೂ, ಪತ್ರಿಕಾ ಸಮೂಹಕ್ಕೂ ಮಧುರ ಬಾಂಧವ್ಯವನ್ನು ಕಲ್ಪಿಸಲಾರರೆ ?

ಸಕ್ಕರೆ ಸರಬರಾಜು

ಆಗರ-ಮಾಂಬಳ್ಳಿ ೧೮

ರೇಷನ್ ಹಂಚಿಕೆ ಬಗ್ಗೆ 'ಎ' ಮತ್ತು 'ಬಿ' ತರಗತಿಯೆಂದು ವಿಂಗಡಿಸಿರುವುದು ಸರಿಯಷ್ಟೆ. ಇಲ್ಲಿನ ಮುಸಲ್ಮಾನರಿಗೆ ಸಕ್ಕರೆಯನ್ನು ಕೊಡಲಾಗುತ್ತಿದೆ; ಆದರೆ ದೇವಾಂಗದವರಿಗೆ ಕೊಡುತ್ತಿಲ್ಲ. ಸಾಧಾರಣವಾಗಿ, ರೇಷನ್ ಜಾರಿಯಲ್ಲಿರುವ ಪ್ರದೇಶಗಳಲ್ಲಿ 'ಎ' ತರಗತಿಯವರಿಗೆ ಮಾತ್ರ ಸಕ್ಕರೆ ಕೊಡಲಾಗುತ್ತಿದೆ. 'ಬಿ' ತರಗತಿಗೆ ಸೇರಿದ ಮುಸಲ್ಮಾನರಿಗೆ ಕೊಡುತ್ತಿರುವುದರಿಂದ ಅದೇ ತರಗತಿಗೆ ಸೇರಿದ ದೇವಾಂಗದವರಿಗೂ ಮತ್ತು ಇತರ ಕೋಮಿನವರಿಗೂ ಅದನ್ನು ಕೊಡಲು ವ್ಯವಸ್ಥೆ ಮಾಡಬೇಕಾಗಿದೆ

ವಿವಾಹ

ಅಡ್ವೋಕೇಟ್ ಶ್ರೀ ಎಂ. ಎನ್. ನಂಜುಂಡಯ್ಯನವರ ಸೋದರಳಿಯ ಮೈಸೂರು ಇರ್ಫೇಟಿಂ ಇನ್ಸ್ಪೆಕ್ಟರಾದ ಚಿ|| ಎಂ. ಎಸ್. ಶ್ರೀಕಂಠಯ್ಯನವರ ವಿವಾಹವು ಕೃಷ್ಣರಾಜೇಂದ್ರ ಆಸ್ಪತ್ರೆಯ ಸ|| ಅ|| ಸರ್ಜನರಾಗಿರುವ ಡಾ|| ಕೆ. ರಾಮಶಾಸ್ತ್ರಿಯವರ ಕುಮಾರಿ ಸೌ|| ಶಾಂತಾರವರೊಡನೆ ಇದೇ ೨೧ ನೇ ತಾ|| ಬೆಳಗೊಳದಲ್ಲಿ ನಡೆಯುವುದು.

ಜಮೀನಿನ ಹಂಚಿಕೆ

ಸ್ವಂ ಸು.] ಚಾಮರಾಜನಗರ ೧೯

ಸ್ವಂತ ವ್ಯವಸಾಯ ಮಾಡಬಲ್ಲ ಅನೇಕ ರೈತರು ಜಮೀನಿಗಾಗಿ ಅರ್ಜಿಗಳನ್ನು ಹಾಕಿದ್ದರೂ, ಜಮೀನಿನ ಬೆಲೆ ಗಮನಾರ್ಹವಾಗಿದ್ದರೂ, ಅಧಿಕಾರಿಗಳು ದಾಕ್ಷಿಣ್ಯಕ್ಕಾಗಿ ಬೇರೆ ಯಾರ್ಯಾರಿಗೋ ಜಮೀನು ಕೊಡಬೇಕೆಂದು ಸರ್ಕಾರಕ್ಕೆ ಶಿಫಾರಸ್ ಮಾಡಿದ್ದಾರೆಂದು ತಿಳಿದುಬಂದಿದೆ.

ಭಾಷಣ

ವಿಠ್ಠಲರಾವ್ ಶೇಷಣ್ಣನವರ ವಿದ್ಯಾರ್ಥಿ ನಿಲಯ ಸಂಘದ ಆರಂಭ ಭಾಷಣವನ್ನು ಶ್ರೀ ಎಂ. ಯಾಮುನಾಚಾರ್ಯರು ಮೊನ್ನೆ ಸಂಜೆ ಮಾಡಿದರು. ಸಭಾ ಭವನವು ವಿದ್ಯಾರ್ಥಿಗಳಿಂದಲೂ ಹಿರಿಯರಿಂದಲೂ ತುಂಬಿತ್ತು. ಭಾಷಣಕಾರರು "ವಿದ್ಯಾರ್ಥಿಗಳು ಮತ್ತು ಅವರ ಕರ್ತವ್ಯ" ಎಂಬ ವಿಷಯದ ಮೇಲೆ ಹೃದಯಂಗಮ ಭಾಷಣವಿತ್ತರು.

§ ಆಸ್ಟ್ರೇಲಿಯಾದ ಪಾರ್ಲಿಮೆಂಟ್ ವಿಸರ್ಜಿಸಲ್ಪಟ್ಟಿದೆ. ಸೆಪ್ಟೆಂಬರ್‌ನಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಲಿದೆ

§ ಹೈಫಾದಲ್ಲಿ ಬ್ರಿಟಿಷ್ ಮಿಲಿಟರಿ ನ್ಯಾಯಾಸ್ಥಾನವು ೧೮ ಮಂದಿ ಯೆಹೂದ್ಯ ಯುವಕರಿಗೆ ಮರಣ ದಂಡನೆ ವಿಧಿಸಿದೆ.

ಗೃಹಕೃತ್ಯದ ನೋಟೀಸು

ಮೈಸೂರು ಸಿಟಿ ಚಾಮುಂಡಿ ಬಡಾವಣೆ ೧೨೩೫ ನೇ ನಂಬರು ಮನೆಯಲ್ಲಿರುವ ಮರಿಗೌಡರ ಮಗ ಮಲ್ಲಯ್ಯನು ಈ ಮೂಲಕ ಸರ್ವರಿಗೂ ತಿಳಿಯಪಡಿಸುವುದೇನೆಂದರೆ:—

ಟಿ. ನರಸೀಪುರದ ತಾಲ್ಲೂಕು ಬೋಳೇಗೌಡನ ಹುಂಡಿ ಚಿನ್ನೇಗೌಡನ ಮಗಳು ಗೌರಮ್ಮನೆಂಬುವಳು ಮದುವೆಯಾದ ಬೋಳಮಲ್ಲನೆಂಬುವನನ್ನು ಬಿಟ್ಟು ನನ್ನನ್ನು ಕೂಡಾವಳಿ ಮಾಡಿಕೊಂಡಳು. ಸದರಿಯವಳು ಬಹಳ ನಂಬಿಕೆ ತೋರಿಸಿದ್ದರಿಂದ ಬಿನಾಮಿಯಾಗಿ ಸ್ಥಿರ ಆಸ್ತಿಯನ್ನು ಸದರಿಯವಳ ಹೆಸರಿನಲ್ಲಿ ಖರೀದಿಗೆ ತೆಗೆದುಕೊಂಡಿರುತ್ತೇನೆ. ಸದರಿ ಆಸ್ತಿಯ ಮೇಲೆ ಇಟ್ಟರಿಂದಲೂ ಪರಭಾರೆ ಪತ್ರಗಳಿರುತ್ತೆ. ಕೂಡಾವಳಿಯಾದ ಲಾಗಾಯಿತು ಹಸುಗಳು ಐದು, ಎತ್ತು ಗಾಡಿ ಸಹ ಒಂದು, ಎಮ್ಮೆಗಳು ಐದು ಮತ್ತು ಒಂದು ಕರು ಸಹ ಇರುತ್ತೆ. ಸದರಿಯವಳ ಮೈಮೇಲೆ ಕೆಲವು ಒಡವೆಗಳು ಇರುತ್ತೆ. ಆದರೆ ಸದರಿ ಗೌರಮ್ಮನು ನನ್ನನ್ನು ಬಿಟ್ಟು ಎರಡು ವರ್ಷಗಳಿಂದ ಬೇರೆ ಜಾತಿಯವರ ಮನೇಲಿ ವಾಸ ಮಾಡಿಕೊಂಡಿರುತ್ತಾಳೆ. ಮೇಲ್ಕಂಡ ಷೆಡ್ಯೂಲ್ ಸ್ವತ್ತಿಗಾಗಲೀ ಚರ ಸ್ವತ್ತುಗಳಿಗಾಗಲಿ ಅವಳಿಗೆ ಯಾವ ಹಕ್ಕು ಬಾಧ್ಯತೆಯೂ ಇರುವುದಿಲ್ಲ. ಯಾರೇ ಆಗಲಿ ಸ್ಥಿರ ಸ್ವತ್ತನ್ನಾಗಲೀ ಚರ ಮಾಲುಗಳನ್ನಾಗಲೀ ಸದರಿಯವಳಿಂದ ಪರಭಾರೆ ಮಾಡಿಕೊಂಡಲ್ಲಿ ಊರ್ಜಿತವಾಗತಕ್ಕದ್ದಲ್ಲ. ಮತ್ತು ಅಂಥವರು ಈ ನೋಟೀಸು ಹಾಕಿರುವ ಮತ್ತು ಆಸ್ತಿಗಳ ಮಾಲೀಕನ ನಷ್ಟಗಳಿಗೆ ಗುರಿಯಾಗಬೇಕಾಗುತ್ತೆ. ತಿಳಿಯುವುದು.

ಷೆಡ್ಯೂಲ್.- ಮೈಸೂರು ಸಿಟಿ ಚಾಮುಂಡಿ ಬಡಾವಣೆಯಲ್ಲಿರುವ ಡೋರ್ ನಂಬರು ೧೨೩೫ ನೇ ನಂಬರು ಮನೆ

○ ಮಲ್ಲಯ್ಯನ ಎಡಗೈ
ಹೆಬ್ಬೆಟ್ಟಿನ ಗುರ್ತಿನ ರುಜು.

ದಿವಾನರ ಭಾಷಣದ ಬ[ಗ್ಗೆ] ಕಾಂಗ್ರೆಸ್ ಅಧ್ಯಕ್ಷರ ಅಭಿಪ್ರಾಯ

ಬೆಂಗಳೂರು

ಭಾರತ ರಾಜ್ಯಾಂಗ ರಚನಾ ಸಭೆ[...]
ಸಂಸ್ಥಾನದಿಂದ ಅಧಿಕಾರಿಗಳನ್ನೂ, [...]
ಗೀ ಸದಸ್ಯರನ್ನೂ ಕಳುಹಿಸುವುದಾಗಿ ದಿ[...]
ರು ಮೊನ್ನೆ ದಿನದ ಭಾಷಣದಲ್ಲಿ ಹೇ[...]
ನ್ನು ಮೈಸೂರು ಕಾಂಗ್ರೆಸ್ಸಿನ ನೂತನ [...]
ಕ್ಷರಾದ ಶ್ರೀ ಕೆ. ಚಂಗಲರಾಯರೆಡ್ಡಿ[...]
ರು ಟೀಕಿಸಿ, "ಮೈಸೂರಿನ ಪ್ರತಿನಿಧಿ[...]
ಲ್ಲರೂ ಶಾಸನ ಸಭೆಗಳ ಮುಖಾಂತರ
ನಾಯಕರಾಗಬೇಕೆಂಬುದೇ ಕಾಂಗ್ರೆಸ್ಸಿ[...]
ಉದ್ದಿಷ್ಟ. ಆ ರೀತಿ ಚುನಾವಣೆ [...]
ಹೊರತು ಕಾಂಗ್ರೆಸ್ಸಿಗೆ ತೃಪ್ತಿ ಇರುವು[...]
ಮತ್ತು ಆ ಪರಿಸ್ಥಿತಿಯನ್ನು ಕಾಂಗ್ರೆಸ್
ಪ್ಪಿಕೊಳ್ಳುವುದೂ ಇಲ್ಲ" ಎಂದು ಹೇ[...]
ದ್ದಾರೆ

ಸಂಸ್ಕೃತ ವಿಶ್ವ ವಿದ್ಯಾಲಯ[...] ಆಳ್ವಾರ್ ಅರಸರ ದಾನ

ಸಂಸ್ಕೃತ ವಿಶ್ವ ವಿದ್ಯಾಲಯವನ್ನು ಸ್ಥಾ[...]
ಸುವ ಸಲುವಾಗಿ ಆಳ್ವಾರ್ ಸಂಸ್ಥಾನಾ[...]
ಶರು ಒಂದು ಕೋಟಿ ರೂ.ಗಳನ್ನು ಕೊ[...]
ರುವರು

ಮೈಸೂರು ಸಿಟಿ ರೇಷನಿಂಗ್ ಆಫೀಸಿನಿಂ[...]

ಇದರಿಂದ ಸಮಸ್ತ ಜನಗಳಿಗೂ ತಿಳಿ[...]
ಪಡಿಸುವುದೇನೆಂದರೆ:—

ನೋಟಿಫಿಕೇಷನ್

ನಂ. R1—122-46-[...]
ತಾ|| 19—8—4[6]

ಘನ ಸರ್ಕಾರದ 14—8—1946 [...]
ಮರ್‍ಸಂ S D 1664-73—R-5[...]
46-3 ನೇ ನಂ ಆರ್ಡರಿನಂತೆ 20-8-4[6]
ನೇ ತಾರೀಖು ಲಾಗಾಯ್ತು ಈ ಕೆಳಗೆ [...]
ದಂತೆ ರೇಷನ್ ಪರಿಮಾಣದ ಧಾನ್ಯಗಳನ[...]
A ಮತ್ತು B ತರಗತಿಯ ಕಾರ್ಡನವ[...]
ಕೊಡಲಾಗುತ್ತೆ.

A ತರಗತಿಯವರಿಗೆ 7-2 ಔನ್ಸ್ ಅಕ್[...]
4-8 ಔನ್ಸ್ ಗೋಧಿ, ರಾಗಿ, ಜೋಳ, ವ[...]
ಸಕಿನ ಜೋಳ ಇಲ್ಲ ಜುಮ್ಲಾ 12 ಔನ್ಸ್[...]

B ತರಗತಿಯವರಿಗೆ 2-4 ಔನ್ಸ್ ಅಕ್[...]
2-4 ಔನ್ಸ್ ಗೋಧಿ, 7-2 ಔನ್ಸ್ ರಾ[...]
ಜೋಳ, ಮುಸಕಿನ ಜೋಳ. ಜುಮ್ಲಾ
12 ಔನ್ಸ್.

ಎಂಟು ವರ್ಷಕ್ಕೆ ಕೆಳಪಟ್ಟ ಮಕ್ಕಳಿ[...]
ಮೇಲ್ಕಂಡ ದರದ ಅರ್ಧಭಾಗ ರೇಷನ[...]
ಕೊಡಲಾಗುತ್ತೆ.

(ಸಹಿ) ಅಬ್ದುಲ್ ರಜಾಕ್,
ರೇಷನಿಂಗ್ ಆಫೀಸರ್,
ಮೈಸೂರು ಸಿ[ಟಿ]

OPERA TALKIES
2nd WEEK !
From 20—8—46
'King Of The - Texas Rangers'
(Full Serial)
Next Change
Crash Drive
(Technicolor)
with TYRONE POWER and ANNE BAXTER

ರಾಜಕಮಲ್ ಟಾಕೀಸ್
ಮೈಸೂರು
16-8-46 ರಿಂದ
ತದ್‌ಬೀರ್
ಭೂಮಿಕೆ:—ಸೈಗಾಲ್, ಸೂರಿಯಾ
ಮುಂತಾದವರು
ಪ್ರತಿದಿನ ಮೂರು ಆಟಗಳು

Edited, printed and published b[y] A. R. Nagarajan at the Sadhvi Pres[s], D Subbiah Road, Mysore

ರಿ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಗುರುವಾರ ೨೩—೮—೪೬ [ಸಂಚಿಕೆ ೨೫

ಅಕ್ಟೋಬರ್ ೨೧ಕ್ಕೆ ಸುಭಾಷರ ಆಗಮನ?

ಪ್ರತಿಭಟನಾ ದಿನಾಚರಣೆ

ಮೈಸೂರು ೨೨

ರಾಜಧಾನಿಯ ಪತ್ರಿಕೋದ್ಯೋಗಿಗಳ ಸಂಘದ ವಿಶೇಷ ಸಭೆಯು ನಿನ್ನೆ ದಿನ ಶ್ರೀ ಆಗರಂ ರಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆದು "ವಿಶ್ವಕರ್ನಾಟಕ ಪತ್ರಿಕೆಯು ಎರಡು ತಿಂಗಳ ಕಾಲ ಪ್ರಕಟವಾಗದಂತೆ ಸರ್ಕಾರದವರು ಹೊರಡಿಸಿರುವ ಆಜ್ಞೆಯು ಪತ್ರಿಕಾ ಸ್ವಾತಂತ್ರ್ಯಕ್ಕೆ ಧಕ್ಕೆ ತರುವುದರಿಂದ ಸದರಿ ಆಜ್ಞೆಯನ್ನು ಈ ಸಭೆಯು ತೀವ್ರವಾಗಿ ಪ್ರತಿಭಟಿಸುತ್ತದೆ. ಮತ್ತು ಸರ್ಕಾರದವರು ಆದಷ್ಟು ಕೂಡಲೇ ವಾಪಸು ತೆಗೆದುಕೊಂಡು ವಿಶ್ವಕರ್ನಾಟಕವು ನಿರಾತಂಕವಾಗಿ ತನ್ನ ಸೇವೆಯನ್ನು ಮುಂದುವರಿಸಲು ಅವಕಾಶ ಮಾಡಿಕೊಡಬೇಕೆಂದು ಒತ್ತಾಯ ಪಡಿಸುತ್ತದೆ. ಈ ಸಂದರ್ಭದಲ್ಲಿ ಈ ದಿನ ನಡೆಯುವ ಪತ್ರಿಕಾ ಹರತಾಳಕ್ಕೆ ಈ ಸಭೆಯು ಸಂಪೂರ್ಣ ಬೆಂಬಲವನ್ನು ನೀಡುತ್ತದೆ" ಎಂಬ ನಿರ್ಣಯವನ್ನು ಅಂಗೀಕರಿಸಿತು.

ಮಾನನಷ್ಟ ಮೊಕದ್ದಮೆ

ಹುಣಸೂರಿನ ಪೋಟೆ ಮಠದ ಮಲ್ಲಯ್ಯನವ ಗ ಕರಿಸಯ್ಯ, ಎಂಬುವನು, ಮೈಸೂರಿನ ಶ್ರೀಗಳಾದ ಎಂ. ಎ ಗೌರಯ್ಯ, ಆರ್. ಆರ್. ನಂಜುಂಡಯ್ಯ, ಎ. ಗೋವಿಂದರ್, ಎಂ. ನಂಜಯ್ಯ ಮತ್ತು ನಂಜುಂಡ ಮುಂತಾದವರು ತನ್ನನ್ನು ಜಾತಿಯಿಂದ ತೆಗೆದು ಹಾಕಿ ಅವಮಾನ ಪಡಿಸಿದ್ದಾರೆಂದು ನಗರ ನ್ಯಾಯಾಧೀಶರ ಮುಂದೆ ಹೂಡಿದ್ದ ಮೊಕದ್ದಮೆಯಲ್ಲಿ ವಿಚಾರಣೆ ಸ್ವೀಕರಿಸಿ, ಮೇಲ್ಕಂಡ ೫ ಮಂದಿಗೆ ತಲಾ ೫೦ ರೂ. ಜುಲ್ಮಾನೆ ತಪ್ಪಿದಲ್ಲಿ ತಲಾ ಒಂದು ತಿಂಗಳ ಸಾದಾ ಸಜ ವಿಧಿಸಲ್ಪಟ್ಟಿತು. ಆಪಾದಿತರೆಲ್ಲಾ ಜುಲ್ಮಾನೆ ಕೊಟ್ಟು ಬಿಡುಗಡೆಯಾದರು.

ಟಾಗೂರ್ ದಿನಾಚರಣೆ

ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನದಲ್ಲಿ ಶ್ರೀ ಚಾಮರಾಜಪುರ ಯುವಜನ ಸೋಷಲಿಸ್ಟ್ ಸಂಘದವರು ಶ್ರೀ ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ನಿನ್ನೆಯ ದಿನ ವಿಶ್ವಕವಿ ಟಾಗೂರ್‌ರವರ ದಿನಾಚರಣೆಯನ್ನು ಆಚರಿಸಿದರು

ಹರಿಕಥೆ

ಶ್ರೀ ರಾಘವೇಂದ್ರಸ್ವಾಮಿಗಳ ಆರಾಧನೆ ಪ್ರಯುಕ್ತ ಈ ಸಂಜೆ ಶಿವರಾಂಪೇಟೆ ಸೀಬಣ್ಣನ ಬೀದಿಯಲ್ಲಿ ೨೩೩ ನೇ ನಂ. ಮನೆಯಲ್ಲಿ ವೇ॥ ಕೀರ್ತನ ಕೇಸರಿ ವೆಂಕಟಸುಬ್ಬದಾಸರಿಂದ "ಭಕ್ತ ಪ್ರಹ್ಲಾದ" ಎಂಬ ಹರಿಕಥೆ ನಡೆಯುವುದು.

ಕೇಂದ್ರ ಸರ್ಕಾರ ರಚನೆ

ಪಂ॥ ನೆಹರೂರವರು ವೈಸರಾಯರಿಗೆ ಕೇಂದ್ರ ಸರ್ಕಾರದ ಸದಸ್ಯರ ಹೆಸರುಗಳ ಪಟ್ಟಿಯೊಂದನ್ನು ಈಗಾಗಲೇ ಕೊಟ್ಟಿರುವರೆಂದೂ ಆದರೆ ಅದು ಇನ್ನೂ ಅಪೂರ್ಣವಾಗಿಯೇ ಇರುವುದೆಂದೂ ಹೇಳಲಾಗಿದೆ. ಸಿಂಧಿನ ಮೌಲಾ ಬಕ್ಷರವರೂ, ಸಿಯಾಸ ಸಮ್ಮೇಳನದ ಜಮೀರ್‌ರವರೂ ಮೋಮಿನ್ ನಾಯಕರಾದ ಜಾಹಿರುದ್ದೀನ್‌ರವರೂ ನಿನ್ನೆ ಪಂಡಿತಜೀಯವರನ್ನು ಭೇಟಿಮಾಡಿ ಮಾತುಕತೆ ನಡೆಸಿದರು. ಸರ್ಕಾರದ ರಚನೆಯು ಅಶ್ವಯ ಘಟ್ಟ ಇಂದೋ ನಾಳೆಯೋ ಪೂರ್ಣವಾಗಲಿದೆ

* ಗಯಾದಲ್ಲಿ ಗಲಭೆಯಾಗಿ ೩ ಜನರು ಬಹಳ ಏಟಿನಿಂದ ಗಾಯಗೊಂಡಿದ್ದಾರೆ. ಒಬ್ಬ ಪತ್ತೆ ಕಾಣದವನು.

ಕಲ್ಕತ್ತಾ ಗಲಭೆಯಲ್ಲಿ ೫೦೦೦ ಜನರ ಕೊಲೆ

ಕಲ್ಕತ್ತ ನಗರದ ಗಲಭೆಯಲ್ಲಿ ೫೦೦೦ ಮಂದಿ ಮಡಿದಿರುವರೆಂದು ಹಿಂದೂ ಮಹಾಸಭೆಯವರು ವೈಸರಾಯರಿಗೆ ತಂತಿ ಕಳಿಸಿದ್ದಾರೆ. ಸರ್ಕಾರ ಅಸಮರ್ಥವಾಗಿದೆ, ಈ ದುರಂತಕ್ಕೆಲ್ಲಾ ಪ್ರಧಾನಿ ಸುಹ್ರವರ್ದಿಯವರೇ ಹೊಣೆಗಾರರೆಂದು ಅವರು ತಿಳಿಸಿದ್ದಾರೆ. ಜನರು ಗಾಬರಿಗೊಂಡು ಊರು ಬಿಡುತ್ತಿದ್ದಾರೆ. ರೈಲ್ವೆ ನಿಲ್ದಾಣದಲ್ಲಿ ೩೦ ಸಹಸ್ರ ಮಂದಿ ಹೊರಹೋಗಲು ನಿಂತಿರುವರು. ಆಸ್ಪತ್ರೆಯೆಲ್ಲಾ ಗಾಯಗೊಂಡ ಸಹಸ್ರಾರು ಮಂದಿಯಿಂದ ತುಂಬಿ ಹೋಗಿವೆ. ನಿನ್ನೆಯಿಂದ ನಗರದಲ್ಲಿ ಸ್ವಲ್ಪ ಶಾಂತ ಪರಿಸ್ಥಿತಿ ಉಂಟಾಗುತ್ತಿದೆ. ಕೆಲವು ಭಾಗಗಳ ಅಂಗಡಿಗಳು ತೆರೆದಿವೆ.

ಕಲ್ಕತ್ತಾಕ್ಕೆ ಬರಬೇಕೆಂದು ವೈಸರಾಯರಿಗೆ ಒತ್ತಾಯ

ಶ್ರೀ ಶರತ್ ಚಂದ್ರಬೋಸರು ಮೊನ್ನೆ ದಿನ ವೈಸರಾಯರ ಕಾರ್ಯದರ್ಶಿಗಳೊಡನೆಯೂ, ಮೌ॥ ಅಜಾದರೊಡನೆಯೂ, ಟ್ರಂಕ್ ಟೆಲಿಫೋನಿನಲ್ಲಿ ಮಾತನಾಡಿ ಕಲ್ಕತ್ತಾದ ಘೋರ ಸ್ಥಿತಿಯನ್ನು ವಿವರಿಸಿ, ಕೂಡಲೇ ವೈಸರಾಯರು ಅಲ್ಲಿಗೆ ಬರಬೇಕೆಂದು ಒತ್ತಾಯಪಡಿಸಿದರೆಂದು ವರದಿಯಾಗಿದೆ. ಶ್ರೀ ಬೋಸರು ಪತ್ರಿಕೆಗಳಿಗೆ ಹೇಳಿಕೆ ಇತ್ತು ಕಲ್ಕತ್ತದ ಅಶಾಂತತೆಯೆಲ್ಲಾ ಕುಸಿದಿದೆಯೆಂದೂ, ಅಲ್ಲಿನ ಗವರ್ನರೂ ಮತ್ತು ಮಂತ್ರಿಮಂಡಲವೂ ಜನರ ವಿಶ್ವಾಸವನ್ನು ಸಂಪೂರ್ಣವಾಗಿ ಕಳೆದುಕೊಂಡಿರೆಯೆಂದೂ, ವೈಸರಾಯರು ಶಾಂತಿ ಪರಿಸ್ಥಿತಿಯನ್ನು ಸುಧಾರಿಸಬೇಕೆಂದೂ ತಿಳಿಸಿದ್ದಾರೆ

ಹೈದರಾಬಾದಿನಲ್ಲಿ ಹೋರಾಟಕ್ಕೆ ಸಿದ್ಧತೆ

ಹೈದರಾಬಾದ ಸಂಸ್ಥಾನದ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿ ಸಭೆಸೇರಿ ಹೊಸದಾಗಿ ಸಂಸ್ಥಾನದಲ್ಲಿ ಜಾರಿಗೆ ಬರುವ ಸುಧಾರಣೆಗಳನ್ನು ನಿರಾಕರಿಸಿ ಅವುಗಳನ್ನು ವಾಪಸು ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಪಡಿಸುವ ನಿರ್ಣಯವನ್ನು ಅಂಗೀಕರಿಸಿ ಜವಾಬ್ದಾರಿ ಸರ್ಕಾರವೇ ಪ್ರಜೆಗಳ ಆಕಾಂಕ್ಷೆಯೆಂದೂ, ಅದನ್ನು ಹೋರಾಟದಿಂದ ಸ್ಥಾಪಿಸಿಕೊಳ್ಳಬೇಕೆಂದೂ ತೀರ್ಮಾನಿಸಿ ಈ ಬಗ್ಗೆ ಯೋಜನೆ ತಯಾರಿಸಬೇಕೆಂದೂ ನಿರ್ಧರಿಸಲಾಗಿದೆ.

ಮೈಸೂರು ಕಾಂಗ್ರೆಸ್ ನಗರ ಸಮಿತಿ ಸಭೆ

ಮೈಸೂರು ೨೨

ಮೊನ್ನೆ ದಿನ ನಗರ ಕಾಂಗ್ರೆಸ್ ಸಮಿತಿ ಸಭೆಯು ಶ್ರೀ ಎಸ್. ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ಮೈಸೂರು ಕಾಂಗ್ರೆಸ್ಸಿಗೆ ಅಧ್ಯಕ್ಷರಾಗಿ ಚುನಾಯಿತರಾದ ಶ್ರೀ ಕೆ. ಚೆಂಗಲರಾಯ ರೆಡ್ಡಿಯವರನ್ನು ಅಭಿನಂದಿಸುವ, ವಿಶ್ವಕರ್ನಾಟಕ ಪತ್ರಿಕೆಯನ್ನು ಸರ್ಕಾರದವರು ನಿಲ್ಲಿಸಿರುವುದನ್ನು ಖಂಡಿಸುವ, ಕಲ್ಕತ್ತಾದಲ್ಲಿ ನಡೆದ ಗಲಭೆಯಲ್ಲಿ ಗಾಯಗೊಂಡವರಿಗೆ ಮತ್ತು ಮೃತಿ ಹೊಂದಿದವರಿಗೆ ಸಹಾನುಭೂತಿ ತೋರುವ, ರಾಜ್ಯಾಂಗ ರಚನಾ ಸಭೆಗೆ ಮೈಸೂರಿನಿಂದ ಹೋಗುವ ಪ್ರತಿನಿಧಿಗಳು ಶಾಸನ ಸಭೆಗಳಿಂದಲೇ ಚುನಾಯಿಸಲ್ಪಡಬೇಕೆಂದು ಒತ್ತಾಯ ಪಡಿಸುವ ನಿರ್ಣಯಗಳು ಶ್ರೀ ಎಂ. ಆರ್. ಸಿ. ಬಸಪ್ಪನವರು ಖಜಾಂಚಿಯಾಗಿ ಚುನಾಯಿತರಾಗಿರುವ ಬಗ್ಗೆ ಕಾಂಗ್ರೆಸ್ಸಿನ ಕಾರ್ಯದರ್ಶಿಗಳು ವಿವರಣೆ ಕೇಳಿ ಬರೆದಿದ್ದ ಕಾಗದಕ್ಕೆ ೧೯-೮-೪೬ ರಲ್ಲಿ ನಡೆದ ಸಭೆಯ ವರದಿಯನ್ನು ಕಳುಹಿಸಬೇಕೆಂಬ ರಿಂದಾವೂ ಸಭೆ ಮಂಜೂರಾಯಿತು.

ವಿದ್ಯಾರ್ಥಿಗಳ ಸಹಾನುಭೂತಿ

ನಿನ್ನೆ ಮಧ್ಯಾಹ್ನ ಕಾಲೇಜು ಮುಂಭಾಗದಲ್ಲಿ ವಿದ್ಯಾರ್ಥಿ ಕಾಂಗ್ರೆಸ್ ಆಶ್ರಯದಲ್ಲಿ ಶ್ರೀ ಆಗರಂ ರಂಗಯ್ಯನವರ ಅಧ್ಯಕ್ಷತೆಯಲ್ಲಿ ವಿದ್ಯಾರ್ಥಿಗಳ ಸಭೆ ನಡೆದು, ವಿಶ್ವಕರ್ನಾಟಕದ ಮೇಲೆ ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮವನ್ನು ಖಂಡಿಸಿ ಸದರಿ ಪತ್ರಿಕೆಗೆ ವಿದ್ಯಾರ್ಥಿಗಳ ಸಹಾನುಭೂತಿಯನ್ನು ವ್ಯಕ್ತಪಡಿಸಲಾಯಿತು. ಶ್ರೀಗಳಾದ ಅಧ್ಯಕ್ಷರು, ಗೋಪಾಲ ಕೃಷ್ಣರಾವ್, ನಾಡಿಗ ಕೃಷ್ಣಮೂರ್ತಿ ಮತ್ತು ಶ್ರೀಕಂಠಪ್ಪನವರು ಭಾಷಣ ಮಾಡಿದರು.

ಆ ಮೈ ವಿ. ಕಾಂ ನ ಕಾರ್ಯದರ್ಶಿಗಳ ಹೇಳಿಕೆಯಂತೆ ಈಗ ಜಾರಿಗೆ ತಂದಿರುವ ನಿಷೇಧದ ಆಜ್ಞೆಯನ್ನು ಕೂಡಲೇ ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಮೈಸೂರು ವಿಶ್ವವಿದ್ಯಾನಿಲಯದ ಅಧಿಕಾರಿಗಳನ್ನು ಒತ್ತಾಯ ಪಡಿಸುವ ನಿರ್ಣಯವೂ ಸಹ ಸರ್ವಾನುಮತದಿಂದ ಅಂಗೀಕಾರವಾಯಿತು.

ಭಾಷಣ

ಶ್ರೀ ಸಿದ್ಧಯ್ಯನವರು ವಿದ್ಯಾರ್ಥಿ ನಿಲಯದ ವಸ್ತಿಶಾಲೆ ಸಂಜೆ ೬ ಘಂಟೆಗೆ ಶ್ರೀ ಕೆ. ವೀರಭದ್ರಪ್ಪನವರು "... ವನಕ್ಕೆ ತತ್ವಶಾಸ್ತ್ರದ ಅವಶ್ಯಕತೆ" ಎಂಬ ವಿಷಯದ ಮೇಲೆ ಭಾಷಣ ಮಾಡುವರು.

ಅಕ್ಟೋಬರ್ ೨೧ ಕ್ಕೆ ಸುಭಾಸ್ ಚಂದ್ರಬೋಸರ ಹಾಜರಿ

ಆಜಾದ್ ಹಿಂದ್ ಸರ್ಕಾರದ ಸ್ಥಾಪನಾರ್ಥವಾಗಿ ಅಕ್ಟೋಬರ್ ೨೧ ನೇ ತಾರೀಖು ಭಾರತದಲ್ಲಿ ನಡೆಯುವ ಸಮಾರಂಭದ ದಿನಕ್ಕೆ ಶ್ರೀ ಸುಭಾಸ್ ಚಂದ್ರಬೋಸರು ಭಾರತದಲ್ಲಿ ಬಹಿರಂಗವಾಗಿ ಕಾಣಿಸಿಕೊಳ್ಳುವರೆಂದು ಅಲಹಾಬಾದಿನ ಫಾರ್ವರ್ಡ್ ಬ್ಲಾಕಿನ ಆವರಣದಲ್ಲಿ ಹೇಳಲಾಗುತ್ತಿದೆ. ಅಂದಿನ ಸಮಾರಂಭವನ್ನು ವೈಭವದಿಂದ ಆಚರಿಸಬೇಕೆಂದು ಫಾರ್ವರ್ಡ್ ಬ್ಲಾಕಿನ ಅಂಗ ಸಂಸ್ಥೆಗಳಿಗೆಲ್ಲಾ ಸೂಚನೆ ಕೊಟ್ಟಿರುವುದಾಗಿ ವರದಿಯಾಗಿದೆ

ರೈಲ್ವೆ ದರಗಳು ಹೆಚ್ಚುವ ಸಂಭವ

ರೈಲ್ವೆ ದರಗಳು ಏರುವ ಸಂಭವವಿರುವುದೆಂದು ಕೇಂದ್ರ ಸರ್ಕಾರದ ರೈಲ್ವೆ ಇಲಾಖಾ ಮುಖ್ಯಾಧಿಕಾರಿಗಳು ನಾಗಪುರದಲ್ಲಿ ತಿಳಿಸಿದ್ದಾರೆ. ದರಗಳನ್ನು ಏರಿಸ ಬೇಕಾದುದಿಲ್ಲವೆಂದು ಹೇಳಿ, ರೈಲ್ವೆ ಒಪ್ಪಂದ ಯುದ್ಧಾನಂತರದ ಏರ್ಪಾಡಾಗಬೇಕಾದರೆ ಇನ್ನೂ ೮ ತಿಂಗಳ ಕಾಲ ಬೇಕಾಗುವುದೆಂದು, ಅವರು ತಿಳಿಸಿದ್ದಾರೆ.

ಬೋಸರ ಚಲನಚಿತ್ರ

ಅಕ್ಟೋಬರ್ ತಿಂಗಳಲ್ಲಿ "ನೇತಾಜಿ ಬೋಸ್" ಎಂಬ ಚಲನಚಿತ್ರದ ಪ್ರದರ್ಶನವು ೨೧ ನೇ ತಾರೀಖಿನಿಂದ ನೆರವೇರಿಸಲ್ಪಡುವುದು. ಈ ಚಿತ್ರವು ಮೊದಲು ಆಜಾದ್ ಹಿಂದ್ ಸರ್ಕಾರದಿಂದ ತೆಗೆಯಲ್ಪಟ್ಟಿತು

ಕೊಚ್ಚಿಯಲ್ಲಿ ಜನಾದರಣೆಯ ಸರ್ಕಾರ

ಕೊಚ್ಚಿಯ ಕ್ಲಿ ಸೋಷಿಯಲಿಸ್ಟ್ ಮತ್ತು ಪ್ರೋಗ್ರೆಸಿವ್ ಪಕ್ಷಗಳ ಸಮ್ಮಿಶ್ರ ಮಂತ್ರಿ ಮಂಡಲ ರಚನೆಯಾಗಲಿದೆ. ಪ್ರಜಾಮಂಡಲ ಮಂತ್ರಿಮಂಡಲದಲ್ಲಿ ಸೇರುವುದಿಲ್ಲವೆಂದೂ ಸಂಪೂರ್ಣ ಸಹಕಾರವನ್ನು ಕೊಡುವುದಾಗಿ ಭರವಸೆ ಇತ್ತಿರುವುದಾಗಿಯೂ ಗೊತ್ತಾಗಿದೆ

ಪತ್ರಿಕಾ ಹರತಾಳ

ಸ್ವಂ ಸು.] ಬೆಂಗಳೂರು ೨೨

ಅ॥ ಮೈ॥ ಪತ್ರಿಕೋದ್ಯೋಗಿಗಳ ಸಂಘದ ಅಧ್ಯಕ್ಷರ ಸಲಹೆಯಂತೆ ನಿನ್ನೆ ದಿನ ಇಲ್ಲಿಯ ಯಾವ ದಿನ ಪತ್ರಿಕೆಗಳೂ ಪ್ರಕಟವಾಗದೆ ಹರತಾಳವಾಚರಿಸಿ 'ವಿಶ್ವಕರ್ನಾಟಕ' ದಿನ ಪತ್ರಿಕೆಗೆ ಸಹಾನುಭೂತಿ ತೋರಿಸಲಾಯಿತು. ಪತ್ರಿಕೋದ್ಯೋಗಿಗಳು ಭಾರಿ ಮೆರವಣಿಗೆ ನಡೆಸಿದರು. ನಂತರ ಸಭೆ ನಡೆದು ಸರ್ಕಾರದ ವರ್ತನೆಯನ್ನು ಖಂಡಿಸಿ ಕೂಡಲೇ ಸರ್ಕಾರದವರು ತಮ್ಮ ಆಜ್ಞೆಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಸೂಚಿಸಲಾಯಿತು.

---

* ಸರ್ಕಾರದಿಂದ ನೀಡುವ ... ಉತ್ಸವ ... ಮುಂಬಯಿ ನಗರದ ... ಸಾರ್ವಜನಿಕರಿಗೆ ಹೆಚ್ಚು ... ಕೊಡಲಾಗುವುದೆಂದು ಗೊತ್ತಾಗಿದೆ.

* ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ... ಕಾರ್ಯದರ್ಶಿಗಳಾಗಿ ಶ್ರೀ ... ನೇಮಕ ಮಾಡಲ್ಪಟ್ಟಿದ್ದಾರೆ

* ಕೇಂದ್ರ ಸರ್ಕಾರದ ... [illegible]

ಸಾಧ್ವಿ

ತಾ॥ ೨೨-೮-೪೬ ಗುರುವಾರ

ಪತ್ರಿಕೆಗಳ ನೀತಿ ನಿಯಮಗಳು

ದಿವಾನರು ಮೊನ್ನೆ ನಡೆಸಿದ ಪತ್ರಿಕಾ ಸಮ್ಮೇಳನದಲ್ಲಿ ಪತ್ರಿಕೆಗಳ ನೀತಿ ನಿಯಮಗಳ ವಿಚಾರವನ್ನು ಪ್ರಸ್ತಾಪಿಸಿದರು. ವೈದ್ಯ ಮತ್ತು ವಕೀಲ ವೃತ್ತಿಯಲ್ಲಿರುವವರು ತಮ್ಮ ಉದ್ಯೋಗಕ್ಕೆ ಸಂಬಂಧಪಟ್ಟ ಹಲವು ನೀತಿ ಸೂತ್ರಗಳನ್ನು ಮಾಡಿಕೊಂಡಿರುವರೆಂದೂ, ಪತ್ರಿಕೋದ್ಯಮದಲ್ಲಿಯೂ ಅಂತಹ ಏರ್ಪಾಡು ಆಗುವುದು ಆಗತ್ಯವೆಂದೂ ಸೂಚಿಸಿದರು.

ದಿವಾನರು ಕೊಟ್ಟಿರುವ ಸಲಹೆಯು ಸಾಧುವಾಗಿಯೇ ಇದೆ. ಪ್ರತಿಯೊಂದು ವೃತ್ತಿಯಲ್ಲಿಯೂ ಅದರ ಘನತೆ ಮತ್ತು ಗೌರವಗಳನ್ನು ರಕ್ಷಿಸಲು ಅವಶ್ಯಕವಾದ ನಿಯಮಾವಳಿಯನ್ನು ರಚಿಸಿ ಸದರಿ ಉದ್ಯಮದಲ್ಲಿರುವವರೆಲ್ಲರೂ ಅವುಗಳನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬರುವಂತೆ ಮಾಡುವುದು ಆಗತ್ಯ. ಇದರಿಂದ ಆ ಕೆಲಸದಲ್ಲಿ ತೊಡಗಿರುವವರ ಮೇಲೆ ಪ್ರಭಾವಶಾಲಿಯಾದ ನೈತಿಕ ಪರಿಣಾಮವುಂಟಾಗಿ ಅವರು ಉನ್ನತ ಮಟ್ಟದಲ್ಲಿ ತಮ್ಮ ವೃತ್ತಿಯನ್ನು ನಡೆಸಲು ಸಹಾಯವಾಗುವುದು. ತಪ್ಪು ದಾರಿಯಲ್ಲಿ ನಡೆಯುವವರ ಮೇಲೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುವ ಅವಕಾಶವುಂಟಾದರೆ ಹೀನಮಾರ್ಗಗಳಿಗೆ ಹೋಗುವ ಪ್ರಸಂಗಗಳು ಬಹಳಮಟ್ಟಿಗೆ ತಪ್ಪುವುವು.

ನಿಯಮಾವಳಿಗಳನ್ನೂ, ಸಂಸ್ಥೆಗಳನ್ನೂ ಮಾಡಿಬಿಟ್ಟರೆ ಈ ದೋಷಗಳು ನಿವಾರಣೆಯಾಗುವುವೆಂದು ದಿವಾನರು ಭಾವಿಸಿಲ್ಲವೆಂದು ನಾವು ನಂಬುತ್ತೇವೆ. ಏಕೆಂದರೆ ಉದಾತ್ತವಾದ ಧ್ಯೇಯಗಳನ್ನೂ, ತತ್ವಗಳನ್ನೂ ಎಷ್ಟರಮಟ್ಟಿಗೆ ಬಾಯಿಯಲ್ಲಿ ಹೇಳಬಹುದು ಆಚರಣೆಗೆ ತರುವಾಗ ತೊಡಕುಗಳು ಬರುವುವು. ಹೇಳುವವರೇ ಅವಕ್ಕೆ ವಿರುದ್ಧವಾಗಿ ವರ್ತಿಸಬಹುದು. ಪರಸ್ಪರ ಭಿನ್ನಾಭಿಪ್ರಾಯ ಮತ್ತು ವ್ಯಾಪಾರ ಸಂಬಂಧದ ಸ್ಪರ್ಧೆಗಳೇರ್ಪಡಬಹುದಾದ ಸಂದರ್ಭಗಳಲ್ಲಿ ಈ ಭಿನ್ನಭಾವಗಳು ಹೆಚ್ಚಾಗಿ ಎದ್ದು ಕಾಣಬಹುದು. ಆದರೂ ಎಲ್ಲರಿಗೂ ಮಾನ್ಯವಾದ ಮುಖ್ಯ ಸೂತ್ರಗಳನ್ನು ರಚಿಸಿ ಅವುಗಳಂತೆ ವರ್ತಿಸುವ ಹಾಗೆ ಮಾಡುವುದು ಕಷ್ಟವಲ್ಲ.

ಇದಕ್ಕೆ ಮುಖ್ಯವಾಗಿ ಶಾಸನಬದ್ಧವಾದ ಅಧಿಕಾರ ಬೇಕು. ಬ್ರಿಟಿಷ್ ಇಂಡಿಯಾದಲ್ಲಿ ಬಾರ್ ಕೌನ್ಸಿಲ್ಲುಗಳೆಂಬ ಸಂಸ್ಥೆಗಳಿವೆ. ವಕೀಲ ವೃತ್ತಿಯಲ್ಲಿರುವವರ ದೋಷಗಳನ್ನು ಇವು ಪರಿಶೀಲಿಸುತ್ತವೆ. ಅವರ ನಡತೆಗೆ ಸಂಬಂಧಪಟ್ಟ ಶಾಸನದ ಪ್ರಕಾರ ಈ ಸಂಘಗಳೇ ವಿಚಾರಣೆ ನಡೆಸುತ್ತವೆ. ಅವುಗಳು ಯಾವ ರೀತಿಯಲ್ಲಿ ಶಿಫಾರಸು ಮಾಡುತ್ತವೆಯೋ ಅದರಂತೆಯೇ ಸರ್ಕಾರದವರು ಕಾರ್ಯಕ್ರಮವನ್ನು ಕೈಗೊಳ್ಳುವರು. ಅದರ ಅಭಿಪ್ರಾಯವನ್ನು ಕೇಳದೆ, ಅಥವಾ ಅದನ್ನು ಕೇಳಿಯೂ ನಿರ್ಲಕ್ಷಿಸಿ, ಸರ್ಕಾರದವರು ಯಾವ ಕಾರ್ಯಭಾಗವನ್ನೂ ನಡೆಸುವುದಿಲ್ಲ. ಹೀಗಿರುವುದರಿಂದ ತಾವು ಕೈಗೊಳ್ಳುವ ಕ್ರಮದ ಬಗ್ಗೆ ಸಂಘದವರು ಅತ್ಯಂತ ಜವಾಬ್ದಾರಿಯಿಂದ ವರ್ತಿಸುವರು. ಶಿಸ್ತಿನ ಕ್ರಮಕ್ಕೆ ಗುರಿಯಾದವರೂ ತಕ್ಕ ಬಂದೋಬಸ್ತಿನಿಂದ ನಡೆದುಕೊಳ್ಳುವರು. ಇಡೀ ವೃತ್ತಿಯ ಮೇಲೆಯೇ ಇದರಿಂದ ಒಳ್ಳೆಯ ಪರಿಣಾಮವುಂಟಾಗುವುದು.

ಪತ್ರಿಕೆಗಳ ಮೇಲೆ ಒಳ್ಳೆಯ ಪ್ರಭಾವವನ್ನು ಬೀರುವ ಸಂಸ್ಥೆಗಳೇನೋ ಈಗ ಇರುವುದಿಲ್ಲ. ಪತ್ರಿಕೋದ್ಯೋಗಿಗಳ ನೀತಿ ನಿಯಮಾವಳಿಯೊಂದನ್ನು ಸಿದ್ಧಪಡಿಸಬೇಕೆಂಬ ಒಂದು ನಿರ್ಣಯವು ಮಾತ್ರ ಹಾಸನದ ಪತ್ರಿಕೋದ್ಯೋಗಿಗಳ ಸಮ್ಮೇಳನದಲ್ಲಿ ಮಂಜೂರಾಗಿದೆ. ಇದು ಆದಷ್ಟು ಬೇಗ ಕಾರ್ಯಗತವಾಗಬೇಕು. ಆದ್ದರಿಂದ ಸರ್ಕಾರದವರು ಹೊಸದಾಗಿ ಒಂದು ಪತ್ರಿಕಾ ಸಲಹಾ ಸಮಿತಿಯನ್ನು ರಚಿಸಿದ್ದರೂ ಅದನ್ನು ಕೇಳದೆಯೇ, ಅಥವಾ ಕೇಳಿದರೂ ಅದಕ್ಕೆ ಪುರಸ್ಕಾರವೀಯದೆ ಪತ್ರಿಕೆಗಳ ಮೇಲೆ ಕಾರ್ಯಭಾಗವನ್ನು ಕೈಗೊಳ್ಳುತ್ತಿರುವರು. ವಿಶ್ವಕರ್ನಾಟಕವೇ ಇದಕ್ಕೆ ಉಚಿತ ಸಾಕ್ಷಿ. ಹೀಗೆ ಮಾಡುವುದರಿಂದ ಸಮಿತಿಗಳಿಗೆ ಬೆಲೆಯೇ ಇಲ್ಲದಂತಾಗುವುದು.

ತಮ್ಮ ಸಲಹೆಯು ಕಾರ್ಯಗತವಾಗಬೇಕಾದರೆ ದಿವಾನರು ಪತ್ರಿಕಾ ಸಲಹಾ ಸಮಿತಿಯನ್ನು ಬಾರ್ ಕೌನ್ಸಿಲ್ಲುಗಳ ರೀತಿಯಲ್ಲಿ ಪುನರ್ರಚಿಸಬೇಕು. ಅವುಗಳಿಗೆ ಶಾಸನಬದ್ಧವಾದ ಅಧಿಕಾರಗಳನ್ನು ಕೊಡಬೇಕು; ಪತ್ರಿಕಾ ವರ್ಗದವರ ವಿಶ್ವಾಸಕ್ಕೆ ಪಾತ್ರರಾದವರೇ ಅದರ ಸದಸ್ಯರಾಗಿರಬೇಕು; ಅದರ ಅಭಿಪ್ರಾಯಗಳಿಗೆ ಸರ್ಕಾರದವರೂ, ಪತ್ರಿಕೋದ್ಯೋಗಿಗಳೂ ಬದ್ಧರಾಗಿರಬೇಕು. ಹಾಗೆ ಮಾಡಿದರೆ ದಿವಾನರ ಸಲಹೆಯು ಕಾರ್ಯಗತವಾಗುವುದು.

ಪತ್ರಿಕೋದ್ಯೋಗಿ ಸಮ್ಮೇಳನದವರು ಸಲಹಾ ಸಮಿತಿಯ ರಚನೆಗೆ ಈಗಾಗಲೇ ಸಲಹೆಯನ್ನು ಕೊಟ್ಟಿರುವರು. ಅದಕ್ಕೆ ಅನುಗುಣವಾಗಿ ದಿವಾನರು ಸಮಿತಿಯನ್ನು ರಚಿಸಿ ಅದಕ್ಕೆ ತಕ್ಕ ಅಧಿಕಾರವನ್ನೂ ಕಲ್ಪಿಸಿ, ಅದರ ಸಲಹೆಯಂತೆ ಉಭಯತ್ರರೂ ನಡೆದರೆ ವಿಶೇಷ ಪರಿಣಾಮಕಾರಿಯಾದ ಪ್ರಯೋಜನವುಂಟಾಗುವುದರಲ್ಲಿ ಸಂದೇಹವಿಲ್ಲ.

'Commonsense Special Charts'
With Ten Bankers
For Four, Eight & Sixteen Entries
For Commonsense Crosswords
can be had from the following on pre-payment by m. o.
M. T. Sampathkumaran,
2839, Vanivilasa Mohalla, Mysore.
Prices of Charts:-For Six Competitions Rs. 3-8-0, for Twelve Competitions Rs. 6-8-0 & for Twenty-four Competitions Rs. 12-0-0.

ಪೋ॥ ಇನ್ಸ್‌ಪೆಕ್ಟರಿಗೆ ಶಿಕ್ಷೆ

ಬಾಗಲಕೋಟೆಯ ಪೋಲೀಸ್ ಇನ್ಸ್‌ಪೆಕ್ಟರಿಗೆ ಲಂಚ ತೆಗೆದುಕೊಂಡ ಅಪಾದನೆಯಲ್ಲಿ ಜಿಲ್ಲೆಯ ಮ್ಯಾಜಿಸ್ಟ್ರೇಟರು ಒಂದು ದಿನದ ಶಿಕ್ಷೆ ವಿಧಿಸಿದ್ದರು. ಇದರ ವಿರುದ್ಧ ಅವರು ಅಪೀಲು ಮಾಡಿಕೊಂಡಾಗ ಸೆಷನ್ಸ್ ಜಡ್ಜರು ವಿಚಾರಣೆ ನಡೆಸಿ ಅವರಿಗೆ ೧ ವರ್ಷ ಕಠಿಣ ಸಜ ಮತ್ತು ೮೦೦ ರೂ. ಜುಲ್ಮಾನೆಯನ್ನು ವಿಧಿಸಿದ್ದಾರೆ.

ಆಂಗ್ಲೋ-ಈಜಿಪ್ಟ್ ಒಪ್ಪಂದ ವಿಫಲವಾಯಿತೇ ?

ಆಂಗ್ಲೋ-ಈಜಿಪ್ಟ್ ಒಪ್ಪಂದದ ಪುನರ್ವಿಮರ್ಶೆ ಬಗ್ಗೆ ನಡೆದ ಮಾತುಕತೆಗಳು ವಿಫಲವಾಗಿರುವುವೆಂದೂ ಈಜಿಪ್ಟ್ ಪ್ರತಿನಿಧಿಗಳು ಬ್ರಿಟಿಷ್ ಸೂಚನೆಗಳನ್ನು ಅಂಗೀಕರಿಸಲು ನಿರಾಕರಿಸಿದರೆಂದೂ ಗೊತ್ತಾಗಿದೆ.

ಸೀಮೆ ಎಣ್ಣೆ ಹಂಚಿಕೆ

ರಾಜಧಾನಿಯಲ್ಲಿ ಮುಸುಕಿನ ಜೋಳವನ್ನು ವಿಲೆಗೆ ಬದಲಾಗಿ ೭೬ ಟಿನ್ಸ್ ಕೂಲಿಕ್ಕೆ ೧ ಪಾವು ಅಳತೆ ರೂಪದಲ್ಲಿ ನಿನ್ನೆಯಿಂದ ಕೊಡಲಾಗುತ್ತಿದೆ.

ನಿಮ್ಮ ಮೈ ಮೋಹಮಲ್ಲಿನಂತೆ ಹೊಳೆಯಬೇಕೆ? ನೀವು ಲಾವಣ್ಯ ಮೂರ್ತಿಗಳಾಗಬೇಕೆ?
ಹಾಗಾದರೆ
ನಿಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!
ಮೈಸೂರು ಸ್ಯಾಂಡಲ್ ಸೋಪ್
ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ.
ಪರೀಕ್ಷಿಸಿ ನೋಡಿರಿ.
ಎಲ್ಲೆಲ್ಲೂ ದೊರೆಯುತ್ತವೆ,
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.

ಪರೀಕ್ಷಾ ಫಲಿತಾಂಶ

ಮೈಸೂರು ...

ಮೈಸೂರು ವಿಶ್ವವಿದ್ಯಾನಿಲಯ... ನಾಮಿಕ್ಸ್ ಎಂ. ಎ. ಪರೀಕ್ಷೆಯಲ್ಲಿ ... ಗೆ ಕಂಡವರು ಉತ್ತೀರ್ಣರಾಗಿದ್ದಾ... ಪ್ರಕಟಿಸಲಾಗಿದೆ:—ಮೊದಲ ನೇ... ಯಾರೂ ಇಲ್ಲ ಎರಡನೇ ದರ್ಜೆ... ೨೦ ಮತ್ತು ೨೧.

ಮುಸಲ್ಮಾನರಿಗೆ ಹೆಚ್ಚು ಸೌಕ...

ಕಳೆದ ಶನಿವಾರ ರಾಜಧಾನಿಯಲ್ಲಿ ... ಸಲ್ಮಾನರ ಸಭೆಯೊಂದು ನಡೆದು, ... ಮತ್ತು ಆಹಾರ ವಿಚಾರದಲ್ಲಿ ನಿರ್ಣ... ನ್ನು ಮಾಡಿ ರಂಜಾನ್ ಹಬ್ಬದ ಕಾ... ಅವರಿಗೆ ಒಳ್ಳೆ ಬಟ್ಟೆ ಮತ್ತು ಆಹಾರ... ವಂತೆ ಏರ್ಪಾಡು ಮಾಡಿಸಬೇಕೆಂದು ... ರದಲ್ಲಿ ಮೊರೆಯಿಟ್ಟಿದ್ದರು. ಮಾರು... ಗಳೊಳಗೆ ತಮ್ಮ ಇಷ್ಟ ಸಫಲವಾಗ... ಶಾಂತಿ ಸಂಪು ನಡೆಸುವುದಾಗಿಯೂ ... ದ್ದರು. ಈ ಸಂಬಂಧದಲ್ಲಿ ಮೊನ್ನೆ ಸ... ರದವರ ಸಲಹೆಯಂತೆ ಮೈಸೂರು ... ಧ್ಯಕ್ಷ ಶ್ರೀ ಬೊಂಥೋರಿಯವರ ಅ... ತೆಯಲ್ಲಿ ಒಂದು ವಿಶೇಷ ಸಮಿತಿಯ... ಟ್ಟು ಮುಸಲ್ಮಾನರಿಗೆ ಇರುವ ಬಟ್ಟೆ ... ಕಾರದ ವಿಚಾರವನ್ನು ಆಲೋಚಿ... ಲಾಯಿತು. ಹಾ॥ ಮಹಮದ್ ಸೇಟ್, ... ನೂರ್ ಹುಸೇನ್, ಖಲೀಲುಲ್ಲ, ಬಿ. ಎ... ಅಲಿಖಾನರವರೂ ಭಾಗವಹಿಸಿದ್ದರು. ಸಮಿತಿಯ ಸಲಹೆಯಂತೆ ನಿನ್ನೆ ದಿನ ... ರಾಜು ಸಚಿವರು ರಂಜಾನ್ ಕಾಲದಲ್ಲಿ ... ಗ್ಗದ ಬಟ್ಟೆಗಳನ್ನು ಕೊಳ್ಳಬೇಕೆಂಬ ... ಯಕವಿರಕೂಡದೆಂದೂ, ಸಕಾತ್ ... (ಬಡವರಿಗೆ ದಾನ ಕೊಡಲು ಉಪಯೋ... ಸುವ ಬಟ್ಟೆ) ಯನ್ನು ಮುಸಲ್ಮಾನ... ಕೇಳಿದಷ್ಟು ಪ್ರಮಾಣದಲ್ಲಿ ಮಾರಬೇ... ದೂ ಫ್ಲೋರ್ ಮೂಲಕ ಆಜ್ಞೆ ಮಾ... ರುತ್ತಾರೆ. ಸ್ತ್ರೀಯರಿಗಾಗಿ ಬಟ್ಟೆಗಳ... ಹೆಚ್ಚು ಪ್ರಮಾಣದಲ್ಲಿ ಮಾರಾಟ... ಸರಬರಾಜು ಮಾಡಲಾಗಿದೆಯೆಂದೂ ಆಜ್ಞೆಯಲ್ಲಿ ಹೇಳಿರುತ್ತಾರೆ.

For Immediate Sale

Austin Ten-Four Seda... Excellent running cond... tion. New tyres and Ne... Battery. Price above R... 6000/- will be con idere... Offer holds good till 26... instant. Apply to- X, C, Sadhvi Patrika, Mysore.

ರಾಜಕಮಲ್ ಟಾಕೀಸ್
ಮೈಸೂರು
16-8-46 ರಿಂದ
ತದ್‌ಬೀರ್
ಭೂಮಿಕೆ:—ಸೈಗಾಲ್, ಸೂರಯ್ಯಾ ... ಮುಂತಾದವರು
ಪ್ರತಿದಿನ ಮೂರು ಆಟಗಳು

ಹೊಸ ಹೊಸ ನಮೂನೆಯ ಬಳೆಗಳು
ಈ ದಿನವೇ ನೋಡಿರಿ
ಸ್ವರ್ಗ ಸೀಮ ಬಳೆ / ಕಮಲ್ ಸ್ಟಾರ್ ಬಳೆ { ಬಳೆಗಳು } ಸುಭಾಸ್ ಬಳೆ / ಗಾಂಧಿಜಿ ಬಳೆ
ಚಾಂದಿಸಿ ಬಳೆ ಮತ್ತು ರಾಷ್ಟ್ರ ನಾಯಕರುಗಳ ಫೋಟೋ ಸಮೇತ ಒಡೆಯದ ಅರಕ್ಕಂತಮುದು.
ಮೈಸೂರು ಸಿಲ್ಕ್ ರಿಬ್ಬನ್‌ಗಳು, ಸ್ಟಾಂಡರ್ಡ್ ಬಳೆಗಳು
ಪ್ರಭಾತ್ ಬ್ಯಾಂಗಲ್ಸ್ ಸ್ಟೋರ್ಸ್,
ಚಾಮುಂಡೇಶ್ವರೀ ಟಾಕೀಸ್ ಬಿಲ್ಡಿಂಗ್ಸ್, ಮೈಸೂರು.

Edited, printed and published by A. S. Nagaraja... at the Sadhvi Pr... D. Subbaiah Road, Mysore.

ಫೋ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶುಕ್ರವಾರ ೨೩—೮—೪೬ [ಸಂಚಿಕೆ ೨೬

ಸೆಪ್ಟೆಂಬರ್ ೧ ರಿಂದ ಹೊಸ ಕೇಂದ್ರ ಸರ್ಕಾರ

ಟಾಂಗಾದವರ ಕುಂದು ಕೊರತೆಗಳು

ಮೈಸೂರು ೨೨

ರಾಜಧಾನಿಯ ಟಾಂಗಾ ಗಾಡಿಯವ ನೊಬ್ಬನನ್ನು ಪೋಲೀಸಿನವರು ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಹಿಂಸೆ ಪಡಿಸಿದರೆಂಬ ಕಾರಣದ ಮೇಲೆ ನಿನ್ನೆ ಟೌನ್‌ಹಾಲ್ ಮೈದಾನದಲ್ಲಿ ಸುಮಾರು ೬೦ ಜನ ಟಾಂಗಾ ಗಾಡಿಯವರು ಡಾ|| ಮೀರ್ ನೂರ್ ಹುಸೇನ ರ ಅಧ್ಯಕ್ಷತೆಯಲ್ಲಿ ತಮ್ಮ ಗಾಡಿಗಳ ಸಮೇತ ಬಹಿರಂಗ ಸಭೆ ನಡೆಸಿ ತಮ್ಮ ಕುಂದು ಕೊರತೆಗಳನ್ನು ಹೇಳಿಕೊಂಡರು. ಸುಸಂಘಟಿತರಾಗಿ ಸಂಘದ ಮೂಲಕ ಅಧಿಕಾರಿಗಳಿಗೆ ತಮ್ಮ ಕುಂದು ಕೊರತೆಗಳನ್ನು ಅರಿಕೆ ಮಾಡುವಂತೆ ಅಧ್ಯಕ್ಷರು ಅವರಿಗೆ ಹೇಳಿದರು. ಡಾ|| ನೂರ್ ಹುಸೇನರು ನೇತೃತ್ವದಲ್ಲಿ ಟಾಂಗಾ ನಿಯೋಗದವರು ಜಿಲ್ಲಾಧಿಕಾರಿಗಳನ್ನು ಕಂಡು ತಮ್ಮ ಅಹವಾಲುಗಳನ್ನು ಹೇಳಿಕೊಂಡರೆಂದು ತಿಳಿದು ಬಂದಿದೆ.

ಓಟರುಗಳ ಪಟ್ಟಿ ವಿಮರ್ಶೆ

ಬರುವ ನವಂಬರ್ ೧೪ ನೇ ತಾ|| ನಡೆಯುವ ಮೈಸೂರು ನಗರದ ಪೌರಸಭಾ ಚುನಾವಣೆಯ ಮತದಾರರ ಪಟ್ಟಿ ಪ್ರಕಟವಾಗಿದೆ. ಅದರಲ್ಲಿ ಹೆಸರುಗಳನ್ನು ಬಿಟ್ಟಿರುವುದು, ಅಥವಾ ತಪ್ಪು ಬಿದ್ದಿರುವುದು ಇವುಗಳ ತಿದ್ದುಪಡಿ ಬಗ್ಗೆ ಅರ್ಜಿ ಹಾಕಿಕೊಳ್ಳಲು ನಗರ ಕಾಂಗ್ರೆಸ್ ಸಮಿತಿ ಸಹಾಯವನ್ನು ಏರ್ಪಡಿಸಿದೆ. ಅರ್ಜಿ ನಕಲುಗಳು ಸಮಿತಿ ಕಛೇರಿಯಲ್ಲಿ ದೊರೆಯುತ್ತವೆ.

ವಿವಾಹ ಮಹೋತ್ಸವಗಳು

ರಾಜಧಾನಿಯ ವಕೀಲರಾದ ಶ್ರೀ ಎ. ಸೀತಾರಾಮಯ್ಯನವರು ತಮ್ಮ ಮಗ ಚಿ|| ಎ. ಕೃಷ್ಣರಾವ್‌ರವರ ವಿವಾಹವನ್ನು ಹಳೆ ಮೈಸೂರು ಶ್ಯಾನುಭೋಗ್ ಶ್ರೀ ಸುಬ್ಬರಾಯರ ಕುಮಾರಿ ಸೌ|| ಪಾರ್ವತಮ್ಮನೊಂದಿಗೆ ನಿನ್ನೆ ದಿನ ಕೃಷ್ಣಮೂರ್ತಿಪುರದಲ್ಲಿರುವ ತಮ್ಮ ನಿವಾಸದಲ್ಲಿ ವಿಜೃಂಭಣೆಯಿಂದ ನಡೆಸಿದರು.

ನಂಜನಗೂಡಿನಲ್ಲಿ ಸಾಧ್ವಿ ಪತ್ರಿಕೆ ಏಜೆಂಟರಾಗಿರುವ ಶ್ರೀ ಕೆ. ಎಸ್. ರಾಮಯ್ಯನವರು ತಮ್ಮ ಕುಮಾರ್ತಿ ಚಿ|| ಸೌ|| ಜಯಲಕ್ಷ್ಮಮ್ಮನನ್ನು ಯಳಂದೂರು ತಾಲ್ಲೂಕು ಅಗರದಲ್ಲಿರುವ ಶ್ಯಾನುಭೋಗ್ ಮ|| ಎ. ಆರ್. ನಾರಾಯಣಯ್ಯರ್‌ರವರ ತಮ್ಮ ಚಿ|| ಸುಬ್ಬಯ್ಯನವರಿಗೆ ಕೊಟ್ಟು ವಿವಾಹ ಮಹೋತ್ಸವವನ್ನು ನೆರವೇರಿಸಿದರು.

ಸೋಲೋ ಕಛೇರಿ

ಕೃಷ್ಣರಾಜ ಮೊಹಲ್ಲಾ ನಾಲಾ ಬೀದಿ ಮೊತ್ತ ರಾಮದೇವಸ್ಥಾನದಲ್ಲಿ ನಾಳೆ ಸಂಜೆ ೬|| ಗಂಟೆಗೆ ವಿ|| ಟಿ ಗುರುರಾಜಪ್ಪ ಮತ್ತು ವಿ|| ತಾತಾಚಾರ್‌ರವರ ಪಿಟೀಲು, ಆ|| ವಿ|| ಟಿ. ಎಸ್. ಪುಟ್ಟಸ್ವಾಮಯ್ಯನವರ ಮೃದಂಗ ನಡೆಯುತ್ತದೆ. ಎಲ್ಲರಿಗೂ ಸ್ವಾಗತವುಂಟು.

LATEST NEWS

ಸ್ವಂತ ಫೋನ್] ಬೆಂಗಳೂರು ೨೩

ಅಕ್ಟೋಬರ್ ೧ ನೇ ತಾ|| ರಾಜಧಾನಿಯ ಒಗನ್ಯೂ... ಬಂಗಲೆಯಲ್ಲಿ ನಡೆಯುವ ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ಉಪದೇಶ ಭಾಷಣ ಮಾಡಲು ಮದ್ರಾಸ್ ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರೂ, ನಮ್ಮ ... ಸಮೀಪದವರೂ ಆದ ಡಾ|| ಎ. ಲಕ್ಷ್ಮಣಸ್ವಾಮಿ ಮೊದಲಿಯಾರ್ ... ಯ್ಯರವರು.

ಬಟ್ಟೆ ಅಭಾವದ ಬಗ್ಗೆ ಬಹಿರಂಗ ಸಭೆ

ಮೈಸೂರು ೨೩

ರಾಜಧಾನಿಯಲ್ಲಿ ಉಂಟಾಗಿರುವ ಬಟ್ಟೆ ಅಭಾವವನ್ನು ಕುರಿತು ಚರ್ಚಿಸುವುದಕ್ಕಾಗಿ ಈ ದಿನ ಸಂಜೆ ೬|| ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಿದೆ. ಬಟ್ಟೆ ಅಭಾವದ ಬಗ್ಗೆ ೫೦೦ ಜನಕ್ಕೆ ಮೇಲ್ಪಟ್ಟು ಸಹಿ ಹಾಕಿರುವ ಮನವಿಯೊಂದನ್ನು ದಿವಾನರಿಗೂ, ಸಂಬಂಧಪಟ್ಟ ಮಂತ್ರಿಗಳಿಗೂ ಮತ್ತು ಸಿವಿಲ್ ಸಪ್ಲೈ ಕಂಟ್ರೋಲರಿಗೂ ಕಳುಹಿಸಲಾಗಿದೆ.

ಆರನೇ ಜನ್ಮೋತ್ಸವ

ರಾಜಧಾನಿಯ ಮೈತ್ರಿ ಪತ್ರಿಕೆಯ ಆರನೇ ಜನ್ಮ ದಿನೋತ್ಸವವು ಇದೇ ೨೫ ನೇ ತಾ|| ಮಧ್ಯಾಹ್ನ ೪ ಗಂಟೆಗೆ ಅಶೋಕಾ ರಸ್ತೆಯಲ್ಲಿರುವ ಶ್ರೀ ಕನ್ನಿಕಾ ಪರಮೇಶ್ವರೀ ದೇವಾಲಯದಲ್ಲಿ ಜರುಗುವುದು. ಸಭಾಧ್ಯಕ್ಷತೆಯನ್ನು ಡಾ|| ಶ್ರೀ ಮೊಂತಿ ಸಿದ್ದಪ್ಪ ಶ್ರೇಷ್ಠಿಯವರು ವಹಿಸುವರು. ಇದೇ ಸಂಬಂಧದಲ್ಲಿ ನಾಳೆ ಮಧ್ಯಾಹ್ನ ಅದೇ ಸ್ಥಳದಲ್ಲಿ ಲೇಡೀಸ್ ಸಮ್ಮೇಳನವು ಬಾಪಟ್ಲ ನಗರದ ಶ್ರೀಮತಿ ಊಟಕೂರಿ ಲಕ್ಷ್ಮೀಕಾಂತಮ್ಮನವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಜಿಲ್ಲಾ ಮೋಟಾರು ಕೆಲಸಗಾರರ ಸಂಘ

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಭೆ ನಿನ್ನೆ ಶ್ರೀ ಎಂ. ಕೆ. ರಂಗಸ್ವಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ಸಂಘದ ಅಧಿಕಾರಿ ವರ್ಗದವರ ಚುನಾವಣೆ ನಡೆಯಿತು. ಶ್ರೀಗಳಾದ ಬಾಲಕ್‌ರಾವ್ ರವರು ಅಧ್ಯಕ್ಷರಾಗಿಯೂ, ಸೈಯದ್ ಪೀರ್‌ರವರು ಉಪಾಧ್ಯಕ್ಷರಾಗಿಯೂ ಟಿ. ಎಸ್. ಸುಬ್ಬಣ್ಣನವರು ಕಾರ್ಯದರ್ಶಿಗಳಾಗಿಯೂ, ರಂಗಸ್ವಾಮಯ್ಯನವರು ಖಜಾಂಚಿಗಳಾಗಿಯೂ ಆರಿಸಲ್ಪಟ್ಟರು.

ಯುಗೋಸ್ಲೋವಿಯಾಕ್ಕೆ ಅಮೆರಿಕಾದ ಎಚ್ಚರಿಕೆ

ಯುಗೋಸ್ಲೋವಿಯಾ ಸರ್ಕಾರಕ್ಕೆ ಅಮೆರಿಕಾದ ವಿಮಾನ ಒಂದನ್ನು ಹೊಡೆದು ಹಾಕಿದ ಬಗ್ಗೆ ೪೮ ಗಂಟೆಗಳೊಳಗೆ ಸಮಾಧಾನ ಕೊಡಬೇಕೆಂದು ಅಮೆರಿಕಾ ಸಂಯುಕ್ತ ಸಂಸ್ಥಾನ ಅಲ್ಟಿಮೇಟಂ ಕೊಟ್ಟಿರುವುದಾಗಿಯೂ, ತಪ್ಪಿದಲ್ಲಿ ವಿಶ್ವ ಭದ್ರತಾ ಸಮಿತಿ ... ಕಾರ್ಯಕ್ರಮವನ್ನು ನಿರ್ಧರಿಸುವುದಾಗಿ ತಿಳಿಸಲಾಗಿದೆಯೆಂದೂ ವರದಿಯಾಗಿದೆ.

ಸೆಪ್ಟೆಂಬರ್ ೧ಕ್ಕೆ ಹೊಸ ಕೇಂದ್ರ ಸರ್ಕಾರ

ಹೊಸ ಸರ್ಕಾರದ ಬಗ್ಗೆ ಅಧಿಕಾರಿ ಪ್ರಕಟನೆ ನಾಳೆ ಹೊರಬೀಳುವುದು. ಹೊಸ ಮಂತ್ರಿಗಳು ಸೆಪ್ಟೆಂಬರ್ ೧ನೇ ತಾ|| ಅಧಿಕಾರ ವಹಿಸಿಕೊಳ್ಳುವರು. ರಾಜ್ಯಾಂಗ ಸಮಿತಿ ಸೆ|| ೧೫ ರಿಂದ ಆರಂಭವಾಗುವುದು.

ನೆಹರು-ವೈಸರಾಯ್ ಭೇಟಿ

೧೪ ಮಂದಿಯ ಪಟ್ಟಿ ಒಪ್ಪಿಸಲಾಗಿದೆ

ಪಂ|| ಜವಹರಲಾಲ್ ನೆಹರೂರವರು ನಿನ್ನೆ ಬೆಳಿಗ್ಗೆ ವೈಸರಾಯರನ್ನು ಮತ್ತೆ ಭೇಟಿ ಮಾಡಿದ್ದರು. ಕೇಂದ್ರ ಸರ್ಕಾರದ ಸಚಿವರ ಪಟ್ಟಿಯನ್ನು ಅಂತ್ಯವಾಗಿ ವೈಸರಾಯರಿಗೆ ಕೊಡಲಾಗಿದೆಯೆಂದೂ ವರದಿಯಾಗಿದೆ. ಹೊಸ ಮಂತ್ರಿ ಮಂಡಲದಲ್ಲಿ ಪಂ|| ನೆಹರು, ಸ|| ಪಟೇಲ್, ರಾಜೇಂದ್ರ ಪ್ರಸಾದ್, ಶರತ್ ಚಂದ್ರಬೋಸ್, ರಾಜಗೋಪಾಲಚಾರಿ, ಜಗಜೀವನರಾಂ, ಅಸಫ್ ಅಲಿ, ಫಜಲುಲ್ ಹಕ್, ಸರ್ ಶಫಾತ್ ಅಹಮದ್‌ಖಾನ್, ಅಲಿ ಜಹೀರ್, ಜಾನ್ ಮಥಾಯಿ, ಜಮ್ ಸೇಠ್‌ಮೆಹ್ತ, ಸರ್ದಾರ್ ಬಲದೇವಸಿಂಗ್ ಮತ್ತು ಮ್ರಿಂಗ್ ಆಂಥೋನಿ ಇರುತ್ತಾರೆ. ಉಳಿದ ಸದಸ್ಯರ ಹೆಸರನ್ನು ಸಧ್ಯದಲ್ಲೇ ಪ್ರಕಟಿಸಲಾಗುವುದೆಂದು ಹೇಳಲಾಗಿದೆ.

ಕೃಷ್ಣರಾಜೇಂದ್ರ ಗಿರಣಿ ವಾದ ವಿವಾದ ಮುಕ್ತಾಯ

ಮೈಸೂರು ೨೩

ಕೃಷ್ಣರಾಜೇಂದ್ರ ಮಿಲ್ಸ್ ಆಡಳಿತ ವರ್ಗದವರಿಗೂ ಮತ್ತು ಅಲ್ಲಿನ ಕೆಲಸಗಾರರಿಗೂ ನಡೆಯುತ್ತಿದ್ದ ವಾದ ವಿವಾದಗಳು ಮುಕ್ತಾಯವಾಗಿ ಈ ಕೆಳಗೆ ಕಂಡ ಸೌಲಭ್ಯಗಳನ್ನು ಕೆಲಸಗಾರರಿಗೆ ಕೊಡಲಾಗಿದೆ:- ರೇಷನ್ ಡಿಪೋಗಳಲ್ಲಿ ರಾಗಿ ಸಿಕ್ಕದೇ ಇರುವ ಪ್ರಯುಕ್ತ ೧-೫-೦ ರೂ ಗಳನ್ನು ರಾಗಿ ಅಲೋಯನ್ಸಾಗಿಯೂ, ಕೆಲಸಗಾರರ ಒಂದು ತಿಂಗಳಲ್ಲಿ ೩ ದಿವಸ ಗೈರು ಹಾಜರಾದರೂ ಪೂರ್ತಿ ತುಟ್ಟಿಭತ್ಯವನ್ನು ಕೊಡಬೇಕು, ಎರಡು ದಿವಸ ಗೈರುಹಾಜರಾದವರಿಗೆ ತುಟ್ಟಿಭತ್ಯದ ಜೊತೆಗೆ ೦-೯-೦ ಬೋನಸ್ಸು ಮತ್ತು ಒಂದು ದಿನ ಗೈರುಹಾಜರಾದವರಿಗೆ ೧-೨-೦ ... ಜರು ಬೋನಸ್ಸಾಗಿ ಕೊಡಬೇಕು. ಪ್ರತಿದಿನವೂ ಬರುವವರಿಗೆ ... ಬೋನಸ್ಸನ್ನು ಕೊಡಬೇಕು ... ಒಪ್ಪಂದವಾಗಿದೆ.

ಕಲ್ಕತ್ತಾದಲ್ಲಿ ಆಹಾರದ ಅಭಾವ

ಕಲ್ಕತ್ತಾ ನಗರದ ಸ್ಥಿತಿ ಉತ್ತಮಗೊಂಡು ಶಾಂತಿ ಸ್ಥಾಪನೆಯಾಗುತ್ತಿದೆ. ಅನೇಕ ಅಂಗಡಿಗಳು ತೆರೆದಿವೆ. ಆಹಾರದ ಅಭಾವ ವಿಶೇಷವಾಗಿದೆ. ಸರಕಾರಗಳ ಮೇರೆ ಇಲ್ಲದಂತಾಗಿದೆ. ಈಗಿರುವ ಆಹಾರ ಇನ್ನು ಒಂದು ವಾರದ ವರೆಗೂ ಸಾಲುವುದಿಲ್ಲವೆಂದು ಗೊತ್ತಾಗಿದೆ. ಆಹಾರದ ಸರಬರಾಜು ಕೂಡಲೇ ಆಗದಿದ್ದಲ್ಲಿ ಮತ್ತೊಂದು ಘೋರ ಕ್ಷಾಮ ತಪ್ಪಿದ್ದು ಮತ್ತು ೩೨೦೦ ಸಾವುಗಳಾಗಿವೆಯೆಂದು ಅಧಿಕಾರಿ ವರ್ಗದ ಹೇಳಿಕೆ ... ಸಾವಿರದ ವರೆಗೂ ಸಾವು ಏರಿರುವುದಾಗಿ ಖಾಸಗೀ ಪ್ರಕಟಣೆ. ೨೦ ಸಹಸ್ರ ಮಂದಿಗಿಂತಲೂ ಹೆಚ್ಚಾಗಿ ನೋವಿಗೆ ಗುರಿಯಾಗಿದ್ದಾರೆ. ಕರ್ಫ್ಯೂ ಮುಕ್ತಗಳಲ್ಲೇ ನೆಲೆಗಳನ್ನು ಪೂರ್ಣ ಶಾಂತಿ ನೆಲಸುವ ತನಕ ವಾಪಸು ತೆಗೆದುಕೊಳ್ಳುವುದಿಲ್ಲವೆಂದು ಪ್ರಧಾನಿಗಳು ತಿಳಿಸಿದ್ದಾರೆ.

ಕ್ಷಾಮ ಪೀಡಿತರಿಗೆ ಸಹಾಯ

ಚಿತ್ರದುರ್ಗ ಜಿಲ್ಲೆಯ ಕ್ಷಾಮ ಪೀಡಿತ ಪ್ರದೇಶದ ಜನಗಳಿಗೆ ಬಟ್ಟೆ ಸಹಾಯ ಮಾಡಲು ವಸ್ತ್ರದಾನ ಮಾಡುವ ಮಹನೀಯರು ಕೂಡಲೇ ಬಟ್ಟೆಗಳನ್ನು ಅಥವಾ ಧನ ಸಹಾಯವನ್ನು ನಗರ ಕಾಂಗ್ರೆಸ್ ಸಮಿತಿ ಕಛೇರಿಗೆ ಕಳುಹಿಸಿಕೊಡಬೇಕೆಂದು ಅಧ್ಯಕ್ಷರಾದ ಶ್ರೀ ಎಸ್. ಚನ್ನಯ್ಯನವರು ಕೋರಿರುತ್ತಾರೆ.

ಡಾ|| ರಾಘವೇಂದ್ರರಾಯರು ಮೊದಲನೇ ಮಂತ್ರಿಗಳು

ಸ್ವಂತ ಫೋನ್] ಬೆಂಗಳೂರು ೨೩

ಶ್ರೀ ಸುಬ್ಬರಾಯರವರು ನಿವೃತ್ತರಾದ್ದರಿಂದ ಡಾ|| ರಾಘವೇಂದ್ರರಾಯರವರು ಮೊದಲನೇ ಮಂತ್ರಿಗಳ ಸ್ಥಾನವನ್ನೂ ಶ್ರೀಗಳಾದ ಷರೀಫ್, ಸಿದ್ದಪ್ಪ, ಶೇಷಾದ್ರಿ ಮತ್ತು ಅಪ್ಪಾಜಿಗೌಡರು ಕ್ರಮವಾಗಿ ಮುಂದಿನ ಸ್ಥಾನಗಳನ್ನೂ ಪಡೆದಿರುತ್ತಾರೆ.

ಬಟ್ಟೆ ಹಂಚಿಕೆ ವ್ಯವಸ್ಥೆ

ಅ|| ಕಂಟ್ರೋಲರಾದ ಜ|| ಎ. ಜಿ. ಖಲೀಲ್‌ರವರು ನಿನ್ನೆ ಪತ್ರಿಕಾ ಸಮ್ಮೇಳನದಲ್ಲಿ ಗೌರಿ, ಗಣೇಶ ಮತ್ತು ರಂಜಾನ್ ಹಬ್ಬಗಳಿಗಾಗಿ ಬಟ್ಟೆ ಹಂಚಿಕೆ ಬಗ್ಗೆ ಮಾಡಿರುವ ವ್ಯವಸ್ಥೆಯನ್ನು ವಿವರಿಸಿದರು. ಪ್ರತಿ ತಾಲ್ಲೂಕಿನಲ್ಲೂ ೩೦ ವ್ಯಾಪಾರಗಾರರಿಗೆ ೮೦೦ ಬೇಲ್ ಮಿಲ್ ಮತ್ತು ೪೦೦ ಬೇಲ್ ಕೈಮಗ್ಗದ ಬಟ್ಟೆಗಳನ್ನು ಕೊಡಲಾಗಿದೆಯೆಂದೂ, ಬೆಂಗಳೂರು ನಗರಕ್ಕೆ ೧೮೦ ಬೇಲ್ ಮತ್ತು ಮೈಸೂರು ನಗರಕ್ಕೆ ೩೦ ಬೇಲ್ ಹೀಗೆ ಎರಡು ತರಹ ಬಟ್ಟೆಗಳನ್ನು ಹಂಚಲಾಗಿದೆಯೆಂದೂ ಅವರು ಹೇಳಿದರು. ಅಲ್ಲದೆ ದಾನ ಧರ್ಮಗಳಿಗಾಗಿ ಬೇರೆ ತರಹ ಬಟ್ಟೆಯನ್ನು ಕೊಟ್ಟಿರುವುದಾಗಿ ತಿಳಿಸಿದರು.

ದಿವಾನರ ಕಾರ್ಯದರ್ಶಿಗಳು

ದಿವಾನರ ಆಪ್ತ ಕಾರ್ಯದರ್ಶಿ ಸ್ಥಾನವನ್ನು ಇನ್ನು ಮುಂದೆ ದಿವಾನರ ಕಾರ್ಯದರ್ಶಿ ... ಉಪಯೋಗಿಸಿ ಆ ಸ್ಥಾನಕ್ಕೆ ... ಅವರನ್ನು ನೇಮಿಸಿ ... ತಿಳಿದು ಬಂದಿದೆ.

ಸಾಧ್ವಿ

೨೩-೮-೪೬ ಶುಕ್ರವಾರ

ಸರ್ಕಾರದ ಪ್ರತಿಕ್ರಿಯೆ ಏನು?

ವಿಶ್ವಕರ್ನಾಟಕದ ವಿಷಯದಲ್ಲಿ ಸಹಾನುಭೂತಿಯನ್ನು ತೋರಿ ಸರ್ಕಾರದ ನೀತಿಯನ್ನು ಖಂಡಿಸಲು ಮೊನ್ನೆ ಪತ್ರಿಕೆಗಳ ಹರತಾಳವು ನಡೆಯಿತಷ್ಟೆ. ಪತ್ರಿಕಾ ಪ್ರಪಂಚಕ್ಕೆ ಸೇರಿದವರು ಮಾತ್ರವೇ ಅಲ್ಲದೆ ಇತರ ಎಲ್ಲ ವರ್ಗಗಳವರೂ ಇದರಲ್ಲಿ ಸಹಕರಿಸಿದುದು ಅತ್ಯಂತ ಅಭಿನಂದನೀಯವಾದ ಸಂಗತಿ. ಪತ್ರಿಕಾ ಸ್ವಾತಂತ್ರ್ಯದ ಸಾಧನೆಗಾಗಿ ಹೀಗೆ ರಾಜಕೀಯ ಪಂಗಡಗಳವರೂ, ವಿದ್ಯಾರ್ಥಿ ವೃಂದದವರೂ, ಕಾರ್ಮಿಕರೂ ಮತ್ತು ಇತರ ಸಾರ್ವಜನಿಕ ಮುಖಂಡರೂ ಏಕೀಭವಿಸಿ ತಮ್ಮ ಪ್ರತಿಭಟನೆಯನ್ನು ಸೂಚಿಸಿದುದು ಮೈಸೂರಿನ ಇತಿಹಾಸದಲ್ಲೇ ಹೊಸದು.

ಹರತಾಳ, ಸಭೆ, ಮೆರವಣಿಗೆ ಮತ್ತು ಭಾಷಣಗಳಾದ ಮೇಲೆ ಹಲವು ಮುಖ್ಯ ನಿರ್ಧಾರಗಳನ್ನು ಬೆಂಗಳೂರಿನ ಸಭೆಯಲ್ಲಿ ಮಾಡಲಾಯಿತು. ಪತ್ರಿಕಾ ಶಾಸನವನ್ನು ರದ್ದುಮಾಡುವುದು, ಅದರ ಪ್ರಕಾರ ಹೂಡಿರುವ ಪ್ರತಿಬಂಧಕಗಳನ್ನು ಹಿಂದಕ್ಕೆ ತೆಗೆದುಕೊಳ್ಳುವುದು ಮತ್ತು ವಿಶ್ವಕರ್ನಾಟಕ, ಜನವಾಣಿ ಮುಂತಾದ ಪತ್ರಿಕೆಗಳಿಂದ ತೆಗೆದುಕೊಂಡಿರುವ ಠೇವಣಿಗಳನ್ನು ಹಿಂದಕ್ಕೆ ಕೊಡುವುದು-ಇವು ಸಭೆಯಲ್ಲಿ ಮಂಜೂರಾದ ಮುಖ್ಯ ಠರಾವುಗಳು. ಸಾರ್ವಜನಿಕ ಜೀವನಕ್ಕೆ ಅತ್ಯಂತ ಪ್ರಾಮುಖ್ಯ ಸಾಧನವಾದ ಪತ್ರಿಕೆಗಳ ವಿಷಯದಲ್ಲಿ ಮಹಾಜನರು ಮಂಡಿಸಿರುವ ಈ ಕೋರಿಕೆಗಳಿಗೆ ಸರ್ಕಾರದವರ ಪ್ರತಿಕ್ರಿಯೆ ಏನೆಂಬುದು ಈಗ ಎಲ್ಲರ ಮುಂದೆ ಇರುವ ಪ್ರಶ್ನೆ.

ದಿನಗಳು ಕಳೆದಂತೆಲ್ಲಾ ಔದಾರ್ಯದ ಬೆಲೆಯು ಕಡಿಮೆಯಾಗುತ್ತದೆ. ಎರಡು ತಿಂಗಳ ಸ್ಥಿತಿ ಈಗಾಗಲೇ ಒಂದು ತಿಂಗಳು ಕಳೆಯುತ್ತಾ ಬಂತು. ಇನ್ನೂ ಒಂದು ತಿಂಗಳು ಹೀಗೆಯೇ ತಳ್ಳುವುದು ಸರಿಯಲ್ಲ. ಆದುದರಿಂದ ಕೂಡಲೇ ಕಾರ್ಯಕ್ರಮವನ್ನು ಕೈಗೊಳ್ಳಬೇಕು. ಈ ಆಜ್ಞೆಯನ್ನು ಹಿಂದಕ್ಕೆ ತೆಗೆದುಕೊಂಡು ಪತ್ರಿಕೆಯು ಪ್ರಕಟವಾಗಲು ಅವಕಾಶ ಕೊಡಬೇಕು. ಅಲ್ಲದೆ ವಿಶ್ವಕರ್ನಾಟಕದ ಮೇಲೆ ಇನ್ನೊಂದು ನೋಟೀಸು ಸಹಾ ಇರುತ್ತದೆ. ಠೇವಣಿಯನ್ನೇಕೆ ಕೇಳಬಾರದೆಂದು ಅದರಲ್ಲಿ ಸೂಚಿಸಲಾಗಿದೆ. ಈ ನೋಟೀಸನ್ನೂ ಸಹ ಇದೇ ಸಮಯದಲ್ಲಿ ರದ್ದುಮಾಡುವುದೂ ಅವಶ್ಯಕವಾಗಿದೆ.

ವಿಶ್ವಕರ್ನಾಟಕ, ಜನವಾಣಿ, ಪ್ರಜಾಮತ, ಮೈಸೂರು ಪತ್ರಿಕೆ ಮುಂತಾದುವುಗಳಿಂದ ಸರ್ಕಾರದವರು ನೂರಾರು ರೂಪಾಯಿ ಠೇವಣಿಗಳನ್ನು ತೆಗೆದುಕೊಂಡಿರುತ್ತಾರೆ. ಈ ಬಗ್ಗೆ ಪತ್ರಿಕೋದ್ಯೋಗಿಗಳ ಸಮ್ಮೇಳನಗಳಲ್ಲಿ ಪ್ರತಿಭಟನೆಯನ್ನು ಸೂಚಿಸಲಾಗಿದೆ. ಬ್ರಿಟಿಷ್ ಪ್ರಾಂತಗಳಲ್ಲಿ ಅನೇಕ ಪತ್ರಿಕೆಗಳ ಠೇವಣಿಗಳನ್ನು ವಾಪಸು ಕೊಡಲಾಗಿದೆ. ಇತ್ತೀಚೆಗೆ ಹಾಗೆ ಮಾಡಲು ಇದು ಸಕಾಲವಾಗಿದೆ. ಪತ್ರಿಕಾ ಶಾಸನವನ್ನು ಕಾನೂನಿನ ಕಡತದಿಂದ ತೊಡೆದು ಹಾಕಬೇಕೆಂದು ಹಲವು ವರ್ಷಗಳಿಂದ ಪತ್ರಿಕೋದ್ಯೋಗಿಗಳು, ಪ್ರಜಾಪ್ರತಿನಿಧಿಗಳು ಒತ್ತಾಯ ಪಡಿಸುತ್ತಿದ್ದಾರೆ. ಈ ಶಾಸನದಿಂದ ಪತ್ರಿಕೆಗಳ ಸ್ವಾತಂತ್ರ್ಯಕ್ಕೆ ಎಷ್ಟೊ—

—ಟ್ಟಿಗೆ ಧಕ್ಕೆಯುಂಟಾಗುತ್ತಿದೆ ಎಂಬುದು ಈಗ ಸಕಲರಿಗೂ ವೇದ್ಯವಾಗಿಯೇ ಇರುತ್ತದೆ. ಇತರ ರಾಷ್ಟ್ರಗಳಲ್ಲಿರುವಂತೆ ಸಾಮಾನ್ಯ ಶಾಸನಗಳ ಮೂಲಕವೇ ಪತ್ರಿಕೋದ್ಯೋಗಿಗಳನ್ನೂ ವಿಚಾರಣೆಗೆ ಗುರಿಪಡಿಸಬೇಕೇ ವಿನಾ ವಿಶೇಷ ಶಾಸನಗಳನ್ನು ಜಾರಿ ಮಾಡಲಾಗದೆಂದು ಜನರು ಕೇಳುತ್ತಿದ್ದಾರೆ. ವಿಶ್ವಕರ್ನಾಟಕವು ಈ ಕಾನೂನಿನ ಮೇಲೆ ನಿರಂತರವಾದ ಹೋರಾಟವನ್ನೇ ನಡೆಸುತ್ತಿದೆ.

ಮಹಾಜನರು ಈ ಸಮಯದಲ್ಲಿ ತೋರಿರುವ ಅಸಮಾಧಾನವನ್ನು ಮನಗಂಡು ಸರ್ಕಾರದವರು ಈ ಶಾಸನವನ್ನು ಕೂಡಲೇ ರದ್ದುಮಾಡುವುದು ಉಚಿತವಾಗಿದೆ. ತಾವೇ ಸ್ವತಃ ಪತ್ರಿಕೋದ್ಯೋಗಿಗಳಾಗಿದ್ದು ಅದರ ಕಷ್ಟನಿಷ್ಠುರಗಳನ್ನು ಅರಿತು ಪತ್ರಿಕಾ ಸ್ವಾತಂತ್ರ್ಯದ ಧ್ವಜವನ್ನು ಎತ್ತಿ ಹಿಡಿಯುವುದಾಗಿ ಹೇಳಿರುವ ನೂತನ ದಿವಾನರು ಮೇಲ್ಕಂಡ ಕೋರಿಕೆಗಳನ್ನು ಈಡೇರಿಸುವರೇ?

ರಾಜ್ಯಾಂಗ ಸಮಿತಿಯಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ

ಮೈಸೂರು ನ್ಯಾಯವಿಧಾಯಕ ಸಭಾ ಸದಸ್ಯರೂ, 'ಬೆಳಕು' ವಾರ ಪತ್ರಿಕೆಯ ಸಂಪಾದಕರೂ ಆದ ಶ್ರೀಮತಿ ಎಂ. ಆರ್. ಲಕ್ಷ್ಮಮ್ಮನವರು ಈ ರೀತಿ ಹೇಳಿಕೆಯೊಂದನ್ನಿತ್ತಿದ್ದಾರೆ.

"ಆರ್ಥಿಕ ಮರುಭೂಮಿಗಳು ಯಾವ ದೇಶಕ್ಕೇ ಆಗಲಿ, ಕಾರ್ಯಕ್ಕೇ ಆಗಲಿ ಪ್ರಗತಿ ಸಾಧಕವಲ್ಲ" ಎಂದು ಪ್ರಸಿದ್ಧ ಪತ್ರಿಕೋದ್ಯಮಿ ಲೂಯಿ ಫಿಷರ್ ನುಡಿದಿದ್ದಾರೆ. ಇದು ನಿಜ. ತಮ್ಮ ಸಂಪತ್ತನ್ನು ಅಭಿವೃದ್ಧಿಗೊಳಿಸಲು ಅವಕಾಶವಿಲ್ಲದೆ ಪರ ವಾಣಿಜ್ಯಕ್ಕೆ ತುತ್ತಾದ ದಾಸ್ಯ ದೇಶಗಳು ಅಥವಾ ವಸಾಹತುಗಳು ಇರುವ ತನಕ ಪ್ರಪಂಚದ ಮುನ್ನಡೆ ಸುಸೂತ್ರವಲ್ಲ.

ಇದೇ ರೀತಿ ಮಾನವ ಕುಲವನ್ನು ಮುನ್ನಡೆಯಗೊಳಿಸಬೇಕಾಗುವ ಸಾಮಾಜಿಕ ಮರುಭೂಮಿಗಳೂ ಇವೆ. ಅವುಗಳ ವ್ಯಾಪ್ತಿಯೂ ಅಗಾಧವಾಗಿದೆ. ಮುಂದೆ ಈ ಮರುಭೂಮಿಗಳು ಫಲವತ್ತಾಗದಿದ್ದರೆ ಮಾನವ ಕುಲಕ್ಕೇ ವಿನಾಶಕಾರಿಯಾಗುವ ಸಂಭವವೂ ಇದೆ. ಒಡೆದು ಹೇಳುವುದಾದರೆ, ಸ್ತ್ರೀ ಸಮಾಜಗಳೇ ಈ ಮರುಭೂಮಿಗಳು. ಹೆಂಗಸರಿಗೆ ಸರಿಯಾದ ಪಾಲನೆ, ಪೋಷಣೆ, ವಿದ್ಯಾಭ್ಯಾಸ, ಹಕ್ಕುಬಾಧ್ಯತೆಗಳು ದೊರೆತಿದ್ದರೆ ಈ ದಿನ ಪ್ರಪಂಚವು ಅಟಂ ಬಾಂಬಿನ ಹೊಡೆತಕ್ಕೆ ಸಿಲುಕಬೇಕಾಗಿರಲಿಲ್ಲ. ಈ ಮರುಭೂಮಿಗಳು ಮಾಯವಾಗಬೇಕಾದ ಕಾಲವಿದು. ಹೆಂಗಸಿಗೆ ತನ್ನ ದೇಶಹಿತ ಸಾಧನೆಯ ಪ್ರತಿಯೊಂದು ಕ್ಷೇತ್ರದಲ್ಲಿಯೂ ಸ್ಥಾನ ಅಗತ್ಯವಾಗಿರುವ ಕಾಲವಿದು.

ಅವಳಿಗೆ ಒಳಿತು, ಬರಹ ಎಂಬ ಮಾನವ ಪರಿವರ್ತಕ ಸ್ವಾತಂತ್ರ್ಯವನ್ನು ಅವಳು ಸಾರ್ಥಕಗೊಳಿಸಿಕೊಳ್ಳಬೇಕಾದಲ್ಲಿ ಅವಳಿಗೆ ದನ್ನು ಕೊಡಬೇಕು, ಕೊಟ್ಟು ಕಲಿಸಬೇಕು.

ಆದುದರಿಂದ ಮೈಸೂರು ಸಂಸ್ಥಾನದ ಪರವಾಗಿ ರಾಜ್ಯಾಂಗ ಸಭೆಯ ಚುನಾವಣೆಗಳನ್ನು ನಿರ್ಧರಿಸುವ ಈ ಸಮಯದಲ್ಲಿ ಅವಳ ಸ್ಥಾನ ಮರೆಯಲಾಗದು. ಅವಳಿಗೆ ಪ್ರಾತಿನಿಧ್ಯ ದೊರಕಿಸಿಯೇ ಕೊಡಬೇಕು- ಎಂಬುದು ಪ್ರತಿಯೊಬ್ಬ ಸ್ತ್ರೀಯ ಅಭಿಪ್ರಾಯವಾಗಿದೆ. ನಮ್ಮಗಳ ಭರವಸೆ ಗಾಳಿಪಾಲಾಗದಿರಲಿ.

ದಿವಾನರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಸಭೆ

ಸ್ವಂ ಸು] ಬೆಂಗಳೂರು ೨೨

ಸಂಸ್ಥಾನದ ಗ್ರಾಮಾಂತರಗಳಲ್ಲಿರುವ ಪಡಿತರ ವ್ಯವಸ್ಥೆ ಮತ್ತು ಆಹಾರ ಪರಿಸ್ಥಿತಿಗಳನ್ನು ವಿಮರ್ಶಿಸಿ, ಮುಂದಿನ ಕಾರ್ಯಕ್ರಮವನ್ನು ನಿರ್ಧರಿಸುವ ಸಲುವಾಗಿ ಇದೇ ೨೭ ನೇ ತಾ|| ೧೧ ಗಂಟೆಗೆ ಹಳೇ ಅಠಾರಾ ಕಛೇರಿಯಲ್ಲಿ ದಿವಾನರ ಅಧ್ಯಕ್ಷತೆಯಲ್ಲಿ ಸಂಸ್ಥಾನದ ೯ ಜಿಲ್ಲಾಧಿಕಾರಿಗಳ ಸಭೆ ನಡೆಯುವುದು.

ಪುಲ್ಲರೆಡ್ಡಿಯವರ ನಿವೃತ್ತಿ

ಶ್ರೀ ಪುಲ್ಲಾರೆಡ್ಡಿಯವರು ನಿನ್ನೆ ಮಂತ್ರಿ ಪದವಿಯನ್ನು ವಹಿಸಿಕೊಟ್ಟು ಅಧಿಕಾರದಿಂದ ಬಿಡುಗಡೆಯಾದರು. ಶ್ರೀ ಅಪ್ಪಾಜಿಗೌಡರು ಮಂತ್ರಿ ಪದವಿಯ ಅಧಿಕಾರ ವಹಿಸಿಕೊಂಡರು.

ದಿವಾನರ ಪ್ರವಾಸ

ದಿವಾನರು ೨೩ ನೇ ತಾ|| ಮಧ್ಯಾಹ್ನ ತುಮಕೂರಿನಿಂದ ಮೈಸೂರಿಗೆ ತೆರಳಿ ೨೪ ಮತ್ತು ೨೫ ನೇ ತಾ|| ಗಳಲ್ಲಿ ಅಲ್ಲೇ ಇದ್ದು ೨೬ ನೇ ತಾ|| ಬೆಂಗಳೂರಿಗೆ ವಾಪಸು ಬರುವರು.

ಕಾಂಗ್ರೆಸ್ ಮಹಾಧಿವೇಶನ

ಅಖಿಲ ಭಾರತ ಕಾಂಗ್ರೆಸ್ಸಿನ ಮಹಾಧಿವೇಶನವು ಮೀರತ್ತಿನಲ್ಲಿ ನಡೆಯುವುದೆಂದು ತಿಳಿದುಬಂದಿದೆ.

ಮೈಸೂರು ಕಾಂಗ್ರೆಸ್ ಅಧಿವೇಶನ, ಸೆಪ್ಟೆಂಬರ್ ಕೊನೆಯಲ್ಲಿ ಬೆಂಗಳೂರಿನಲ್ಲಿ ನಡೆಯಬೇಕೆಂದು ತೀರ್ಮಾನಿಸಲಾಗಿದೆ.

ಅಭಿನಂದನೆಗಳು

ಶ್ರೀಮನ್ಮಹಾರಾಜರಿಂದ ಸನ್ಮಾನಿತರಾದ ಶ್ರೀ ಧರ್ಮರತ್ನಾಕರ ಕೆ. ನಂದೀಶಪ್ಪನವರನ್ನು ಮೊನ್ನೆ ದಿನ ಪಿರಿಯಾಪಟ್ಟಣದ ವೀರಶೈವ ಸಜ್ಜನ ಸಂಘದವರು ಅಭಿನಂದಿಸಿ ಒಂದು ಮಾನ ಪತ್ರವನ್ನು ಪಿರಿಯಾಪಟ್ಟಣದಲ್ಲಿ ಅರ್ಪಿಸಿದರು.

ಉಪನ್ಯಾಸ

ಶ್ರೀ ಮಧ್ವ ಸಂಘದಾಶ್ರಯದಲ್ಲಿ ಕೃಷ್ಣಮೂರ್ತಿಪುರಂ ಶ್ರೀ ರಾಮದೇವರ ದೇವಸ್ಥಾನದಲ್ಲಿ ಇದೇ ೨೪ ನೇ ತಾ|| ಶನಿವಾರ ಸಂಜೆ ೬ ಘಂಟೆಗೆ ವೇ|| ಬ್ರ|| ಶ್ರೀ ವಿದ್ಯಾ[illegible] ಮಧುರೆ ಮಧ್ವಾಚಾರ್ಯರಿಂದ ಉಪನ್ಯಾಸ ಜರುಗುವುದು. ಸರ್ವರಿಗೂ ಆಹ್ವಾನವುಂಟು.

‡ ಅರಮನೆ ಮೋತೀಖಾನೆ ಕಂ|| ಶ್ರೀ ಪಿ. ಪಾಂಡುರಂಗಪ್ಪನವರು ೫ ರೂ. ಗ[illegible]ನ್ನು, ಶ್ರೀ ಮೇಲಗಿರಿಯಪ್ಪನವರು [illegible] ರೂ ಗಳನ್ನೂ, ತಮ್ಮ ಮನೆಯಲ್ಲಿ ನಡೆದ ವಿವಾಹದ ಸಮಯದಲ್ಲಿ ಕುಂಚಟಿಗರ ಸಂಘಕ್ಕೆ ಸಹಾಯ ಮಾಡಿರುತ್ತಾರೆ.

† ಮದ್ರಾಸ್ ಸರ್ಕಾರಕ್ಕೆ ಬೇಕಾ[illegible] ಎಲ್ಲಾ ಬಟ್ಟೆಗಳಿಗೂ ಖಾದಿಯನ್ನೇ ಕೊಳ್ಳಲು ಮದ್ರಾಸ್ ಕಾಂ|| ಸರ್ಕಾರ ತೀರ್ಮಾನಿಸಿದೆ.

§ ಆಂಗ್ಲೋ-ಈಜಿಪ್ಟ್ ಸಂಧಾನ ಸಂಬಂಧದಲ್ಲಿ ಈಜಿಪ್ಟಿನ ಪ್ರಧಾನಿಗಳು ರಾಜೀನಾಮೆ ಕೊಡಬಹುದೆಂದು ವದಂತಿ ಹರಡಿದೆ.

† ಮದ್ರಾಸ್ ಪುರಸಭಾ ಭವನದ ಮೇಲೆ ಪುನಃ ರಾಷ್ಟ್ರಧ್ವಜವನ್ನು ಎಂದಿನಂತೆ ಹಾರಿಸಲಾಗುವುದು.

ಶ್ರೀರಂಗಪಟ್ಟಣದಲ್ಲಿ ಹೊಸ ಚಿಕಿತ್ಸಾಲಯ

ಮೈಸೂರು ಚಾಮುಂಡಿಪುರಂ, ೨೮[illegible] ಚಾಮುಂಡೇಶ್ವರಿ ರೋಡ್, ಎಸ್. [illegible] ಆರ್. ಲಿವರ್ ಅಂಡ್ ಸ್ಪ್ಲೀನ್ ವೈದ್ಯಶಾಲೆಯಲ್ಲಿ – ಹಳೇ ಬಿಳುಪುರೋಗ, ಮಲೇರಿಯಾ ಜ್ವರ, ಲಿವರ್ ಅಂಡ್ ಸ್ಪ್ಲೀನ್ (ಮಲೇರಿಯ ಗೆಡ್ಡೆ) ಪರಿಣಾಮಕಾರಿ, ನಾಯಿ ಮತ್ತು, ಸಂದು (ಊತವು) ಪಕ್ಕೆಶೂಲೆ, ಹೊ[illegible] ಬಾಧೆ, ವಿಷಬು ವ್ಯಾಧಿಗಳಿಗೆ ಶ್ರೇಷ್ಠ ಚಿಕಿತ್ಸೆ ನಡೆಯುತ್ತದೆ.

ಶ್ರೀರಂಗಪಟ್ಟಣದಲ್ಲಿ ಮ|| ಎಂ. [illegible] ಶೆಟ್ಟರು ಸದರಿ ಚಿಕಿತ್ಸೆಗಳನ್ನು ಗರೀಬ[illegible] ಉಚಿತವಾಗಿ ನಡೆಸಲು ಏರ್ಪಡಿಸಿರುತ್ತಾರೆ.

ಎಸ್. ನಾಗರಾಜನ್

ರಾಜಕಮಲ್ ಟಾಕೀಸ್

ಮೈಸೂರು

ತದ್‌ಬೀರ್

ಭೂಮಿಕೆ:—ಸೈಗಾಲ್, ಸುರಯ್ಯಾ ಮುಂತಾದವರು

೨೩-೮-೪೬ [illegible]

ಎರಡನೇ ವಾರ

ಹಂಸಾ ಫುಡ್ ಪ್ರಾಡಕ್ಟ್ಸ್

ಮೈಸೂರು

(ಹಂಸಾ ಮಾರ್ಕಿನ ತಿಂಡಿ ಪದಾರ್ಥಗಳು)

ಮಹನೀಯರೆ, ಬ್ರಾಹ್ಮಣರಿಂದ ಶುದ್ಧವಾಗಿ ಎಲ್ಲರ ಮೆಚ್ಚಿಗೆಗೂ ಸರಿಯೊಂದುವಂತೆ ಈ "ಹಂಸಾ ಫುಡ್ ಪ್ರಾಡಕ್ಟ್ಸ್"ನ ತಯಾರಿಸಲ್ಪಡುತ್ತಲಿವೆ. ಇವು ನಿತ್ಯೋಪಯೋಗಕ್ಕೂ ಮತ್ತು ಎಲ್ಲಾ ಶುಭಕಾರ್ಯಗಳಲ್ಲಿಯೂ ಸರ್ವದಾ ಉಪಯೋಗಿಸಲು ಯೋಗ್ಯವಾದುವು. ಶುಚಿ ರುಚಿಗಳಲ್ಲಿ ಶ್ರೇಷ್ಠವಾದುವು. ಒಂದು ಸಲ ಪರೀಕ್ಷಿಸಿದಲ್ಲಿ ಇವುಗಳ ಶ್ರೇಷ್ಠತೆಯು ವ್ಯಕ್ತವಾಗುವುದು. ಸರ್ವರೂ ಉಪಯೋಗಿಸಿ ಪ್ರೋತ್ಸಾಹಿಸಬೇಕೆಂದು ಕೋರುತ್ತೇನೆ.

ಉದ್ದು, ಅಕ್ಕಿ, ಅವಲಕ್ಕಿ ಮತ್ತು ಹುರಳಿ ಹಪ್ಪಳಗಳು, ತರಳದ ಮತ್ತು ಅಕ್ಕಿ ಸಂಡಿಗೆ, ಮೆಣಸಿನ ಮತ್ತು ಚಟ್ನಿ ಪುಡಿ, ರವೆ, ಶ್ಯಾವಿಗೆ, ಗಸಗಸೆ ಇತ್ಯಾದಿ-ಒಟ್ಟಾಗಿಯೂ, ಸದಾಕಾಲದಲ್ಲಿಯೂ ದೊರೆಯುತ್ತವೆ. ಇವರಲ್ಲಿ ವಿಚಾರಿಸಿ.

ಪ್ರೊಪ್ರೈಟರ್,

ಎ. ಎಸ್. ರಾಮಕೃಷ್ಣ ಶಾಸ್ತ್ರಿ,

[illegible] ಅಗ್ರಹಾರ

ಮೈಸೂರು.

Edited, printed and published by A. S. Nagaraju at the Sadhvi Press, D. S[illegible] Road, Mysore.

OPERA TALKIES

From 24-8-46

Daily 3 Shows

CRASH DIVE

(Technicolor)

with TYRONE POWER and ANNE BAXTER

ರೋ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶನಿವಾರ ೨೪—೮—೪೬ [ಸಂಚಿಕೆ ೨೭

ಈರಾತ್ರಿ ೧೨ಗಂಟೆ ಇಂದ ಎಸ್. ಐ. ರೈಲ್ವೆ ಮುಷ್ಕರ

ತಿಲಕರ ದಿನಾಚರಣೆ

ಮೈಸೂರು ೨೪

ನಾಳೆ ಬನಪ್ಪ ಒಂಟಿಕೊಪ್ಪಲು ತಿಲಕ್ ಸಂಘದವರು ಲೋಕಮಾನ್ಯ ಬಾಲಗಂಗಾಧರ ತಿಲಕರ ದಿನಾಚರಣೆ ನಡೆಸುವರು. ಬೆಳಗ್ಗೆ ೯ ಘಂಟೆಗೆ ಧ್ವಜಾರೋಹಣ, ೧೦ ಘಂಟೆಗೆ ತಿಲಕರ ಭಾವಚಿತ್ರದ ಮೆರವಣಿಗೆ, ಸಾಯಂಕಾಲ ೬ ಕ್ಕೆ ಶ್ರೀ ಆಗರಂ ರಂಗಯ್ಯನವರ ಅಧ್ಯಕ್ಷತೆಯಲ್ಲಿ ಸಂಘದ ಆವರಣದಲ್ಲಿ ಬಹಿರಂಗ ಸಭೆ. ಶ್ರೀಯುತ ಎಂ. ಎ. ದೊರೆಸ್ವಾಮಯ್ಯಂಗಾರ್ಯರು ತಿಲಕರ ಜೀವನ ಚರಿತ್ರೆ ವಿಷಯವಾಗಿ ಭಾಷಣಮಾಡುವರು. ಸರ್ವರಿಗೂ ಆದರದ ಸ್ವಾಗತ ಉಂಟು.

ಶಾಲಾ ಕಟ್ಟಡಕ್ಕೆ ಸಹಾಯ

ಚಾಮರಾಜ ಮೊಹಲ್ಲಾ ಸೋನಾರ್ ಬೀದಿಯಲ್ಲಿರುವ ತಿಮ್ಮಣ್ಣನವರ ಮಗ ಜಮೀನ್‌ದಾರ್ ಶ್ರೀ ಟಿ. ತಮ್ಮಯ್ಯನವರು ಮೈಸೂರು ತಾ|| ಕಸಬ ಹೋಬಳಿ ಹಿನಕಲ್ ಗ್ರಾಮದಲ್ಲಿ ತಮಗೆ ಸೇರಿರುವ ಭಾರಿ ಬೆಲೆ ಬಾಳುವ ಜಾಗಿ ನಿವೇಶನವನ್ನು ಆ ಗ್ರಾಮದ ಸ್ಕೂಲ್ ಕಟ್ಟಡಕ್ಕೆ ಉಚಿತಾರ್ಥವಾಗಿ ಕೊಟ್ಟಿರುತ್ತಾರೆ.

ವಿವಾಹ ಮಹೋತ್ಸವ

ಮೊನ್ನೆ ಸಂಜೆ ಮೈಸೂರು ಬೀಡಿ ಕೆಲಸಗಾರರ ಸಂಘದ ಕಛೇರಿಯಲ್ಲಿ ಕಾಮ್ರೇಡ್ ಪಿ. ಪಿ. ಕಣ್ಣಾರವರಿಗೆ ಮಹದೇವಪುರದ ನಾ|| ಅಪ್ಪಾರವರ ಮಗಳು ಸೌ|| ಚೆಲ್ಲಮ್ಮನನ್ನು ಕೊಟ್ಟು ವಿವಾಹ ಮಹೋತ್ಸವವು ನಡೆಯಿತು. ಈ ಸಮಾರಂಭಕ್ಕೆ ಎಲ್ಲ ಬೀಡಿ ಕೆಲಸಗಾರರೂ ನೆರೆದಿದ್ದರು. ಶ್ರೀ ಕಣ್ಣಾರವರು ಈ ಸಂದರ್ಭದಲ್ಲಿ ಕಮ್ಯೂನಿಸ್ಟ್ ಪಾರ್ಟಿಗೆ ತಮ್ಮ ಬೆಂಬಲವನ್ನು ತೋರಿಸಿ ಐದು ರೂಪಾಯಿಗಳನ್ನು ಕೊಟ್ಟಿರುತ್ತಾರೆ.

ಜರ್ಮನಿಯಲ್ಲಿ ರಷ್ಯನರಿಂದ "ವಿ" ಅಸ್ತ್ರಗಳ ತಯಾರಿಕೆ

ರಷ್ಯನರು ಆಕ್ರಮಿಸಿರುವ ಜರ್ಮನ್ ಪ್ರದೇಶದಲ್ಲಿ, ಜರ್ಮನ್ ವೈಜ್ಞಾನಿಕರ ಸಹಾಯದೊಡನೆ ರಷ್ಯ ಹೊಸ "ವಿ" ಅಸ್ತ್ರಗಳನ್ನು ತಯಾರಿಸುತ್ತಿರುವುದೆಂದು ಗೊತ್ತಾಗಿದೆ. ಈ ಕೈಗಾರಿಕಾ ಕ್ಷೇತ್ರಗಳಿಗೆ ಮಿತ್ರರಾಷ್ಟ್ರೀಯರನ್ನು ಹೋಗಿಸಲಾಗುತ್ತಿಲ್ಲ. ಬರ್ಲಿನ್ ನಗರದಲ್ಲಿ ಹೆಚ್ಚಾಗಿ ಈ ಅಸ್ತ್ರಗಳು ತಯಾರಾಗುತ್ತಿವೆ. ಜೆಟ್ ವಿಮಾನಗಳಿಗೆ ದೇಶಾಂಗದ ಎಷ್ಟೋ ಹೊಸ ಮೆಸರ್‌ಬರ್ಗ್ ಕಾರ್ಖಾನೆಯಲ್ಲಿ ತಯಾರಾಗುತ್ತಿದೆಯೆಂದೂ ಕ್ರುಪ್ಸ್ ಕಂಪೆನಿಯಲ್ಲಿ ಭಾರಿ ಯುದ್ಧೋಪಕರಣಗಳನ್ನು ತಯಾರಿಸಿ ರಷ್ಯಕ್ಕೆ ಹಡಗುಗಳ ಮೂಲಕ ಸಾಗಿಸಲಾಗುತ್ತಿದೆಯೆಂದೂ ತಿಳಿದು ಬಂದಿದೆ.

ಮೆಡಿಟರೇನಿಯನ್ನಿನಲ್ಲಿ ಯುದ್ಧ ಸೂಚನೆಗಳು

ಯುಗೋಸ್ಲಾವಿಯಾಕ್ಕೆ ರಷ್ಯ ಕೊಟ್ಟಿರುವ ಎಚ್ಚರಿಕೆ ಬಗ್ಗೆ ಅನೇಕ ಊಹಾಪೋಹಗಳಿವೆ. ಅಮೆರಿಕನ್ ಯುದ್ಧನೌಕಾಪಡೆ ಮೆಡಿಟರೇನಿಯನ್ ಕ್ಷೇತ್ರದಲ್ಲಿ ಅಮೆರಿಕನ್ ಸೈನ್ಯಬಲವನ್ನು ಹೆಚ್ಚಿಸಬೇಕೆಂದು ಸೂಚಿಸಿದ್ದಾರೆ. ಇದೇ ಸಮಯದಲ್ಲಿ ಟರ್ಕಿಯು ಡಾರ್ಡನೆಲ್ಸ್ ಸಂಬಂಧದಲ್ಲಿ ರಷ್ಯಕ್ಕೆ ಇತ್ತಿರುವ ಉತ್ತರವು ಅಮೆರಿಕದ ಮೇಲಿನ ಸಿದ್ಧಾಂತಕ್ಕೆ ಬೆಂಬಲವಿತ್ತಿದೆ. 'ರಂಗ್ ವೆಲ್ಟ್' ಎಂಬ ಸಮರನೌಕೆಯನ್ನು ಮೆಡಿಟರೇನಿಯನ್ ಸಮುದ್ರಕ್ಕೆ ಕಳುಹಿಸಿದೆ. ಅಮೆರಿಕಾ ಯುಗೋಸ್ಲಾವಿಯಾ ಪ್ರಶ್ನೆಯು ಇತ್ಯರ್ಥವಾಗಿ ಸೋವಿಯೆಟ್ ಬಟ್ಟಲ ನೀತಿ ನಿಲ್ಲುವವರೆಗೆ ಕಳಿಸಿದೆ.

ಹೊಣೆಗಾರಿಕೆ ಸರ್ಕಾರದ ರಾಜೀನಾಮೆ

ಕೇರ್ ಟೇಕರ್ ಸರ್ಕಾರದ ಸದಸ್ಯರು ನಿನ್ನೆ ವೈಸರಾಯರಿಗೆ ತಮ್ಮ ರಾಜೀನಾಮೆಯನ್ನು ಸಲ್ಲಿಸಿದರೆಂದು ಗೊತ್ತಾಗಿದೆ. ಈ ಸಂಬಂಧದಲ್ಲಿ ಅಧಿಕೃತ ಪ್ರಕಟಣೆ ಇಂದು ಹೊರಬೀಳಲಿದೆ.

ಸ್ತ್ರೀಯರೂ ವೇದಾಧ್ಯಯನ ಮಾಡಬಹುದು

ಸ್ತ್ರೀಯರು ಪೌರೋಹಿತ್ಯ ಮತ್ತು ಕರ್ಮಕಾಂಡಗಳನ್ನು ಕಲಿಯಬಹುದೇ ಎಂಬ ವಿಚಾರದಲ್ಲಿ ತೀರ್ಮಾನ ಕೊಡಲು ಪಂ|| ಮದನಮೋಹನ ಮಾಳವೀಯರ ಅಧ್ಯಕ್ಷತೆಯಲ್ಲಿ ನೇಮಕವಾಗಿದ್ದ ಸಮಿತಿಯು ಕಾಶೀ ಹಿಂದೂ ವಿಶ್ವವಿದ್ಯಾನಿಲಯಕ್ಕೆ ತನ್ನ ವರದಿ ಒಪ್ಪಿಸಿ ಸ್ತ್ರೀಯರೂ ವೇದಾಧ್ಯಯನ ಮಾಡಬಹುದೆಂದು ತಿಳಿಸಿದೆ.

ರಷ್ಯಕ್ಕೆ ತುರ್ಕಿ ಉತ್ತರ

ಡಾರ್ಡನೆಲ್ಸ್ ಸಂಧಿ ಬಗ್ಗೆ ಕಪ್ಪುಸಮುದ್ರದ ರಾಷ್ಟ್ರಗಳು ಮಾತ್ರ ಭಾಗವಹಿಸಬೇಕೆಂದು ರಷ್ಯ ಸೂಚಿಸಿದ್ದನ್ನು ನಿರಾಕರಿಸಿ ತುರ್ಕಿ ಉತ್ತರವಿತ್ತಿದೆ. ಬ್ರಿಟನ್ ಮತ್ತು ಅಮೆರಿಕಾ ರಾಯಭಾರಿಗಳ ಸಲಹೆ ಪಡೆದು ಈ ಉತ್ತರ ಕೊಡಲಾಗಿದೆಯೆಂದು ಹೇಳಲಾಗಿದೆ.

ಬ್ರಿಟಿಷ್ ಹಡಗಿಗೆ ಮೈನ್ ಹೊಡೆತ

ಕಾನೂನಿಗೆ ವಿರುದ್ಧವಾಗಿ ಯಹೂದಿ ವಲಸೆಗಾರರನ್ನು ಪ್ಯಾಲಸ್ಟೈನಿಗೆ ಕೊಂಡೊಯ್ದ 'ಎಂಪೈರ್ ರೈವಲ್' ಎಂಬ ಬ್ರಿಟಿಷ್ ಹಡಗಿಗೆ ಲಿಂಪೆಟ್ ಮೈನುಗಳು ಬಡಿದು ಅದರ ಮುಕ್ಕಳಿಯು ಭಾರಿ ರಂಧ್ರವಾಗಿ ಹಡಗಿಗೆ ಜಖಂ ಆಗಿರುವುದಾಗಿ ವರದಿಯಾಗಿದೆ.

ದಿವಾನರ ಆಗಮನ

ಸ್ವಂ ಸು] ಶ್ರೀರಂಗಪಟ್ಟಣ ೨೪

ದಿವಾನರಾದ ಸರ್ ರಾಮಸ್ವಾಮಿ ಮೊದಲಿಯಾರರು ನಿನ್ನೆ ರಾತ್ರಿ ತುಮಕೂರು ಪ್ರವಾಸವನ್ನು ಮುಗಿಸಿಕೊಂಡು ಇಲ್ಲಿಗೆ ಆಗಮಿಸಿದರು. ಅವರನ್ನು ಶ್ರೀಗಳಾದ ಕೆ. ಎಚ್. ಸಿಂಹ, ಎಂ. ಸುಬ್ಬಯ್ಯ, ಎಸ್. ವಿ. ಚಂದ್ರಶೇಖರಯ್ಯ ಮತ್ತು ಆರ್ ರಂಗಯ್ಯನವರು ಊರ ಬಾಗಿಲಲ್ಲಿ ಹಾಕಿದ್ದ ಹಸಿರುವಾಣಿ ಚಪ್ಪರದಲ್ಲಿ ಸ್ವಾಗತಿಸಿ ಹಾರಾರ್ಪಣೆ ಮಾಡಿ ಆರ್ಶೀಸಿದರು. ದಿವಾನರು ಕೆಲವು ಸಂಭಾಷಣೆಯಾದ ನಂತರ ನೇರವಾಗಿ ಮೈಸೂರಿಗೆ ತೆರಳಿದರು.

ಇಂದಿನಿಂದ ಎಸ್. ಐ. ಆರ್. ರೈಲ್ವೆ ಮುಷ್ಕರ

ಸೌತ್ ಇಂಡಿಯನ್ ರೈಲ್ವೆ ಕೆಲಸಗಾರರ ಮುಷ್ಕರವು ಈದಿನ ರಾತ್ರಿ ೧೨ ಘಂಟೆಯಿಂದ ಆರಂಭವಾಗುವುದೆಂದು ಗೊತ್ತಾಗಿದೆ. ಆದರೆ ಮುಷ್ಕರಕ್ಕೆ ಬಹುಮಂದಿ ಕೆಲಸಗಾರರ ವಿರೋಧವಿದೆಯೆಂದೂ, ಕೇವಲ ಶೇಕಡ ೩೦ ರಷ್ಟು ಮಂದಿ ಮಾತ್ರ ಮುಷ್ಕರದ ಬಗ್ಗೆ ದೃಢ ನಿರ್ಧಾರಮಾಡಿರುವುದಾಗಿ ಹೇಳಲಾಗಿದೆ. ರೈಲ್ವೆ ಅಧಿಕಾರಿಗಳು ಬೇಗನೆ ಮೆ.* ಸಾಮಾನ್ಯ ಸಿಬ್ಬಂದಿಗಳೊಡನೆ ರೈಲು ಓಡಿಸುವರೆಂದೂ ರಾತ್ರಿ ಪ್ರಯಾಣಗಳನ್ನು ಸದ್ಯಕ್ಕೆ ನಿಲ್ಲಿಸುವುದಾಗಿಯೂ ಗೊತ್ತಾಗಿದೆ. ರೈಲ್ವೆ ಲೈನಿಗೆ ಯಾವ ವಿಧವಾದ ಅಪಾಯವೂ ಸಂಭವಿಸದಂತೆ ಮುನ್ನೆಚ್ಚರಿಕೆ ತೆಗೆದುಕೊಳ್ಳಲು ವಿಶೇಷ ಪೋಲೀಸ್ ಸಿಬ್ಬಂದಿಯನ್ನು ನೇಮಿಸಲಾಗಿದೆ. ಸಾಗಿಸಬೇಕಾದ ಪಾರ್ಸಲ್ ಮತ್ತು ಇನ್ಸೂರೆನ್ಸ್ ಸಾಮಾನುಗಳನ್ನು ತೆಗೆದುಕೊಳ್ಳುವುದಿಲ್ಲವೆಂದು ಅಂಚೆ ಇಲಾಖೆಯು ಪ್ರಕಟಣೆ ಸಹ ಹೊರಬಿದ್ದಿದೆ.

ಈರಾತ್ರಿ ವೈಸರಾಯರ ರೇಡಿಯೋ ಭಾಷಣ

ಹೊಸ ಕೇಂದ್ರ ಸರ್ಕಾರದ ರಚನೆ ಬಗ್ಗೆ ವೈಸರಾಯರು ಈದಿನ ರಾತ್ರಿ ೮-೩೦ ಕ್ಕೆ ದೆಹಲಿಯಿಂದ ರೇಡಿಯೋ ಮೂಲಕ ಭಾಷಣಮಾಡುವರು. ಈ ಭಾಷಣವನ್ನು ಮೈಸೂರು ಆಕಾಶವಾಣಿಯಲ್ಲಿ ಅದೇ ಸಮಯದಲ್ಲಿ ಪುನಃ ಪ್ರಸಾರಮಾಡಲಾಗುವುದು.

ಕೇಂದ್ರ ಸರ್ಕಾರ ಬಲವಾಗಿರಬೇಕೆಂದು ಸರ್ ಸಿ. ಪಿ.

"ಈಗ ದೇಶಕ್ಕೆ ಬೇಕಾಗಿರುವುದು ಬಲವಾದ ಕೇಂದ್ರಸರ್ಕಾರ. ಕಾಂಗ್ರೆಸ್ಸು ಮಿತಾಧಿಕಾರ ಉಳ್ಳ ಕೇಂದ್ರಸರ್ಕಾರವನ್ನು ರಚಿಸಲು ಒಪ್ಪಿರುವುದು ಬುದ್ಧಿವಂತಿಕೆಯಿಂದ ಕೂಡಿಲ್ಲ. ಭಾವೀ ಭಾರತದಲ್ಲಿ ದೇಶೀಯ ಸಂಸ್ಥಾನಗಳಿಗೂ ಭಾರತದ ಇತರ ಭಾಗಗಳಿಗೂ ನಿಕಟವಾದ ಸಂಬಂಧವಿರಬೇಕಾದುದರಿಂದ ಕೇಂದ್ರ ಸರ್ಕಾರದಲ್ಲಿ ಸಂಸ್ಥಾನಗಳ ಪ್ರತಿನಿಧಿಗಳೊಬ್ಬರು ಇರುವುದು ಅತ್ಯವಶ್ಯಕ" - ಎಂದು ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರು ಮೊನ್ನೆ ಬೊಂಬಾಯಿನಲ್ಲಿ ಭಾಷಣಮಾಡುತ್ತಾ ತಿಳಿಸಿದ್ದಾರೆ.

ಶ್ರೀ ಪಿ.|| ಜಿನ್ನಾರವರು, ಮಾ|| ಶಾಂತಿ ಸಿ ಗಳಿಗೆ ಸಮಸ್ಯಾ ನಿಷ್ಪತ್ತಿ ಮಾತುಕತೆ ನಡೆಸಲು ಬರುವಂತೆ ಆಹ್ವಾನ ಕಳಿಸಿದ್ದಾರೆ.

ಹೊಸ ಸರ್ಕಾರದ ಬಗ್ಗೆ ಇಂದು ಪ್ರಕಟಣೆ

ನಿನ್ನೆ ವೈಸರಾಯರಿಗೂ ಪಂ|| ನೆಹರೂರವರಿಗೂ ನಡೆದ ಸಂಭಾಷಣೆ ಮುಗಿಯಿತೆಂದು ವರದಿಯಾಗಿದೆ. ಹೊಸ ಸರ್ಕಾರದ ಬಗ್ಗೆ ಪಂ|| ನೆಹರೂರವರು ಇತ್ತಿರುವ ಮಂತ್ರಿಗಳ ಪಟ್ಟಿಯನ್ನು ವೈಸರಾಯರು ಪರಿಶೀಲಿಸಿ ಇಂದು ಒಂದು ಅಧಿಕೃತ ಪ್ರಕಟಣೆ ಹೊರಡಿಸಲಿದ್ದಾರೆ. ನಿನ್ನೆ ಸಂಜೆ ನಡೆದ ಮತ್ತೊಂದು ಭೇಟಿಯಲ್ಲಿ ಮಂತ್ರಿಮಂಡಲದ ಸದಸ್ಯರ ಮತ್ತು ಖಾತೆಗಳ ಹಂಚಿಕೆ ಬಗ್ಗೆ ಅವರು ತೀರ್ಮಾನಕ್ಕೆ ವೈಸರಾಯರೂ, ಪಂ|| ನೆಹರೂರವರೂ ಬಂದಿರುವುದಾಗಿ ತಿಳಿದುಬಂದಿದೆ. ಹೊಸ ಸರ್ಕಾರಕ್ಕೆ ಮೊದಲು ಅಧಿಕಾರ ಸ್ಥಾನ ಮಾನ ಕೊಡುವುದಾಗಿ ವೈಸರಾಯರು ಮಿ|| ಆಜಾದರಿಗೆ ಬರೆದಿರುವ ಪತ್ರದಲ್ಲಿ ನಮೂದುಮಾಡಿರುವರೆಂದು ತಿಳಿದುಬಂದಿದೆ.

ಹೊಸ ಮಂತ್ರಿಗಳ ಪೋರ್ಟ್ ಫೋಲಿಯೋಗಳು

ಪಂ|| ನೆಹರು-ಹೊರದೇಶದ ವ್ಯವಹಾರ, ಸ|| ಪಟೇಲ್-ಒಳಾಡಳಿತ, ರಾಜಗೋಪಾಲಾಚಾರಿ-ಹಣಕಾಸು, ರಾಜೇಂದ್ರ ಪ್ರಸಾದ್-ಆಹಾರ ಮತ್ತು ವ್ಯವಸಾಯ, ಫಜಲುಲ್ ಹಕ್-ವಿದ್ಯಾಭ್ಯಾಸ, ಬಲದೇವ್‌ಸಿಂಗ್-ರಕ್ಷಣೆ, ಡಾ|| ಜಾನ್ ಮತ್ತಾಯಿ-ಕೈಗಾರಿಕೆ ಮತ್ತು ಸರಬರಾಜು, ಶರತ್‌ಬೋಸ್ ಅಥವಾ ಆಲಿ ಜಹೀರ್‌ರವರಿಗೆ ನ್ಯಾಯಾಂಗ ಖಾತೆಗಳು ಹೊಸ ಕೇಂದ್ರ ಸರ್ಕಾರದಲ್ಲಿ ಕೊಡಲ್ಪಡುವುವೆಂದು ತಿಳಿದುಬಂದಿದೆ.

೨ನೇ ತಾ|| ಹೊಸ ಸರ್ಕಾರ

ಹೊಸ ಕೇಂದ್ರ ಸರ್ಕಾರವು ೨ನೇ ತಾ|| ಸೋಮವಾರ ಅಧಿಕಾರ ಸ್ವೀಕರಿಸುವುದೆಂದು ಕಾಂಗ್ರೆಸ್ ಆವರಣದಲ್ಲಿ ಹೇಳಲಾಗುತ್ತಿದೆ. ಮಿ|| ಆಸಫ್ ಆಲಿಯವರು ಕೂಡಲೇ ದೆಹಲಿಗೆ ಹಿಂತಿರುಗಬೇಕೆಂದು ಕಾಂಗ್ರೆಸ್ಸಿನಿಂದ ಆಜ್ಞಪ್ತರಾಗಿದ್ದಾರೆ.

ರಂಜಾನಿಗೆ ಹೆಚ್ಚು ರೇಷನ್

ರೇಷನ್‌ಕಾರ್ಡ್ ಪಡೆಯುವ ಮುಸ್ಲಿಮರಿಗೆಲ್ಲಾ ರಂಜಾನ್ ಹಬ್ಬಕ್ಕಾಗಿ ಒಂದು ದಿನದ ರೇಷನನ್ನು ಹೆಚ್ಚಾಗಿ ಕೊಡತಕ್ಕದ್ದೆಂತ ಮದ್ರಾಸ್ ಸರ್ಕಾರ ಆಜ್ಞೆ ಇತ್ತಿದೆ. ರಂಜಾನ್, ಬಕ್ರೀದ್, ದೀಪಾವಳಿ, ಪೊಂಗಲ್, ಕ್ರಿಸ್‌ಮಸ್, ಈಸ್ಟರ್ ಹಬ್ಬ ಮತ್ತು ಮದುವೆ ಮುಂತಾದುವುಗಳಿಗೂ ಹೆಚ್ಚು ಸಕ್ಕರೆ ಕೊಡಲು ಸರ್ಕಾರದ ಆಜ್ಞೆಯಾಗಿದೆ.

ಪುಸ್ತಕ ದಾನ

ಮೈಸೂರಿನ ಸುಪ್ರಸಿದ್ಧ ಉಪಾಧ್ಯಾಯರಾದ ಶ್ರೀ ಡಿ. ಪಿ. ರಂಗಸ್ವಾಮಿ ಅಯ್ಯಂಗಾರ್ಯರು ಶಾರದಾವಿಲಾಸ ಇಂಟರ್ ಕಾಲೇಜಿನ ಲೈಬ್ರರಿಯ ಉಪಯೋಗಕ್ಕಾಗಿ ಬಹಳ ಬೆಲೆಬಾಳುವ ಎನ್‌ಸೈಕ್ಲೋಪೀಡಿಯ ಬ್ರಿಟಾನಿಕದ ಮತ್ತು ಇತರ ಪುಸ್ತಕಗಳನ್ನು, ದಿವಂಗತರಾದ ರಾಜಕಾರ್ಯ ಪ್ರಸಕ್ತ ಎಂ. ವೆಂಕಟಕೃಷ್ಣಯ್ಯನವರ ಹಿಸ್ಟರಿ ಆಫ್ ದಿ ವರ್ಲ್ಡ್ ಎಂಬ ಪುಸ್ತಕದ ಹಸ್ತಪ್ರತಿ ಮೂರು ಭಾಗಗಳೊಡನೆ ಸೇರಿಸಿ ಪುಸ್ತಕಗಳನ್ನು ದಾನ ಮಾಡಿರುತ್ತಾರೆ. ವಿದ್ಯಾರ್ಥಿಗಳಿಗೆ ಉಪಯೋಗವಾಗುವ ಈ ಪುಸ್ತಕಗಳನ್ನು ಕೊಟ್ಟ ವಿದ್ಯಾದಾನವನ್ನು ಕಾಲೇಜಿನವರು ಕೃತಜ್ಞತೆಯಿಂದ ಸ್ವೀಕರಿಸಲಾಗಿದೆ.

ಸಾಧ್ವಿ
ತಾ॥ ೨೪-೮-೪೬ ಶನಿವಾರ

ಬಟ್ಟೆ ಅಭಾವ

ಎಲ್ಲಾ ಕಡೆಗಳಲ್ಲಿಯೂ ಬಟ್ಟೆಯ ಅಭಾವವು ಕಂಡುಬರುತ್ತಿದೆ. ಇರುವ ಬಟ್ಟೆಯೂ ಸಹ ಸರಿಯಾಗಿ ಹಂಚಲ್ಪಡುತ್ತಿಲ್ಲವೆಂಬ ಪುಕಾರುಗಳು ಬರುತ್ತಿವೆ. ಕಾಳಸಂತೆಯಲ್ಲಿ ಒಂದಕ್ಕೆ ನಾಲ್ಕರಂತೆ ಬೆಲೆಗೆ ಬಟ್ಟೆಯು ಮಾರಾಟವಾಗುತ್ತಿರುವುದಾಗಿ ವರದಿಗಳು ಬರುತ್ತಿವೆ. ಬಟ್ಟೆನಲ್ಲಿ ಮಹಾಜನರಿಗೆ ಸಾಕಾದಷ್ಟು ಬಟ್ಟೆಯು ದೊರೆಯದೆ ತುಂಬಾ ತೊಂದರೆಯಾಗಿದೆ.

ಮುಸಲ್ಮಾನ ಸಹೋದರರು ರಂಜಾನ್ ಹಬ್ಬಕ್ಕಾಗಿ ತಮಗೆ ಸಾಕಾದಷ್ಟು ಬಟ್ಟೆ ಬರೆಗಳು ದೊರೆಯುತ್ತಿಲ್ಲವೆಂದು ಪುಕಾರು ಮಾಡಿದರು. ಅದರ ಮೇಲೆ ಸರ್ಕಾರದವರು ಅವರಿಗೆ ಅವಶ್ಯಕವಾದ ಪರಿಮಾಣವನ್ನು ದೊರಕಿಸಲು ಏರ್ಪಾಡು ಮಾಡಿರುವರು. ಆದರೂ ಸಹ ಅವರಲ್ಲಿಯೂ ಎಲ್ಲರಿಗೂ ಬೇಕಾದಷ್ಟು ಬಟ್ಟೆಯು ದೊರೆಯುತ್ತಿಲ್ಲವೆಂಬ ಕೂಗು ಕೇಳಿಬರುತ್ತಿದೆ. ಆಹಾರದಂತೆ ಬಟ್ಟೆಗೂ ಕ್ಷಾಮವು ಬಂದಿರುವ ಈ ಕಾಲದಲ್ಲಿ ಎಷ್ಟು ದಾಸ್ತಾನು ಇದ್ದರೂ ಸಾಲದಾಗಿದೆ.

ಹಿಂದೂ ಜನರಿಗೆ ಅತ್ಯಂತ ಪ್ರಾಮುಖ್ಯವಾದ ಗೌರಿ ಮತ್ತು ಗಣೇಶನ ಹಬ್ಬಗಳೂ ಸಹ ಸಧ್ಯದಲ್ಲೇ ಬರುತ್ತಿವೆ. ಇದಕ್ಕಾಗಿಯೂ ಹೇರಳವಾದ ಬಟ್ಟೆಯು ಬೇಕಾಗುತ್ತದೆ. ಈ ಸಂಬಂಧವಾಗಿ ಬೆಂಗಳೂರು ಮೈಸೂರು ನಗರಗಳಲ್ಲಿಯೂ ಮತ್ತು ತಾಲ್ಲೂಕುಗಳಲ್ಲಿಯೂ ಸಾರ್ವಜನಿಕರಿಗೆ ಬಟ್ಟೆಯನ್ನೊದಗಿಸಲು ಮಾಡಿರುವ ಏರ್ಪಾಡುಗಳನ್ನು ಅಧಿಕಾರಿಗಳು ಪ್ರಕಟಿಸಿದ್ದಾರೆ. ಆದರೆ ಇದರಿಂದ ಮಹಾಜನರಿಗೆ ಲಭಿಸುವ ಪ್ರಯೋಜನವು ಅತ್ಯಲ್ಪವಾಗಿ ಕಾಣುತ್ತದೆ. ರಾವಣನ ಹೊಟ್ಟೆಗೆ ಅರೆ ಕಾಸಿನ ಮಜ್ಜಿಗೆಯಂತಿರುತ್ತದೆ. ಈಗ ಒದಗಿಸಿರುವ ಬಟ್ಟೆಯು ಶೇಕಡ ೫ ಭಾಗದ ಜನರಿಗೂ ಸಾಲುವಂತಿಲ್ಲ. ಇದನ್ನು ಸಾಧ್ಯವಾದಷ್ಟು ಮಟ್ಟಿಗೆ ಹೆಚ್ಚಿಸಿ ಹೊರಗಿನಿಂದ ಬಟ್ಟೆಯನ್ನು ತರಿಸಿಕೊಂಡು ಜನರಿಗೆ ಹೆಚ್ಚು ಬಟ್ಟೆ ದೊರೆಯುವಂತೆ ಮಾಡುವುದು ಅವಶ್ಯಕ. ನಿನ್ನೆ ನಡೆದ ಬಹಿರಂಗ ಸಭೆಯಲ್ಲಿ ಪುರ ನಿವಾಸಿಗಳು ಈ ಬಗ್ಗೆ ಸರ್ಕಾರದವರಲ್ಲಿ ಹಲವು ಮನವಿಗಳನ್ನು ಮಾಡಿಕೊಂಡಿರುತ್ತಾರೆ. ಅವುಗಳನ್ನು ಈಡೇರಿಸಲು ಅಧಿಕಾರಿಗಳು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಮುಖ್ಯವಾಗಿ ಈಗ ಒದಗಿರತಕ್ಕ ಬಟ್ಟೆಯನ್ನು ಕಾಳಸಂತೆಗೆ ಬಿಡದೆ ಅರ್ಹರಾದ ಬಡಜನರಿಗೆ ವಿತರಣೆಯಿಂದ ವಿನಿಯೋಗಿಸುವಂತೆ ಸರಿಯಾದ ಏರ್ಪಾಡು ಮಾಡಬೇಕು. ಈ ವಿಷಯದಲ್ಲಿ ಅವರು ಕೂಡಲೇ ಗಮನ ಕೊಡುವರೆಂದು ನಂಬಿದ್ದೇವೆ.

ಡಾರ್ಡನೆಲ್ಸ್ ಹತೋಟಿ

ಡಾರ್ಡನೆಲ್ಸ್ ಜಲಸಂಧಿ ಹತೋಟಿಯಲ್ಲಿ ತನಗೂ ಪಾಲು ಬೇಕೆಂದು ರಷ್ಯಾ ಸರ್ಕಾರ [illegible] ಬೇಡಿಕೆಯನ್ನು [illegible] ಟರ್ಕಿ ಸರ್ಕಾರ ತಿರಸ್ಕರಿಸಿದೆ. ಆ ಜಲಸಂಧಿಯ ಹತೋಟಿ ಪೂರ್ಣ ಜವಾಬ್ದಾರಿ ಟರ್ಕಿ ಸರ್ಕಾರಕ್ಕೇ ಸೇರಿದ್ದೆಂದು [illegible] ತಿಳಿಸಿದೆ.

ಬಟ್ಟೆ ಸರಬರಾಜು ವ್ಯವಸ್ಥೆ

ಮೈಸೂರು ೨೪

ನಿನ್ನೆ ಸಾಯಂಕಾಲ ಮೈಸೂರು ಟವರ್ ಹಾಲ್ ಮೈದಾನದಲ್ಲಿ ಶ್ರೀ ಎಸ್. ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆದು ರಾಜಧಾನಿಯಲ್ಲಿ ಉಂಟಾಗಿರುವ ಬಟ್ಟೆ ಅಭಾವವನ್ನು ಕುರಿತು ಭಾಷಣಗಳಾದುವು. ಶ್ರೀಗಳಾದ ಜಿ ವಿ ಸೂರ್ಯನಾರಾಯಣಶೆಟ್ಟಿ, ಯು. ಎಲ್ ರಾಮಚಂದ್ರರಾವ್, ಇ. ಪಿ. ನಂಜಪ್ಪ, ಜನಾರ್ದನ ನಾಯ್ಡು, ರಾಜಂ ಶೆಟ್ಟರವರು ಭಾಷಣ ಮಾಡಿ, ಬಟ್ಟೆ ಹಂಚಿಕೆ ವಿಷಯದಲ್ಲಿ ಸರ್ಕಾರದವರು ಅನುಸರಿಸುತ್ತಿರುವ ನೀತಿಗಳನ್ನು ಟೀಕಿಸಿದರು. ಎಲ್ಲಾ ಕೋಮಿನವರೂ ಮೈಸೂರು ಪ್ರಜೆಗಳೆಂದು ಗಣಿಸಿ, ಅವರ ಕಷ್ಟ ನಿಷ್ಠುರಗಳನ್ನು ಏಕ ರೀತಿಯಲ್ಲಿ ಪರಿಹರಿಸಲು ಕಾರ್ಯಕ್ರಮ ಕೈಗೊಳ್ಳುವುದು ಸರ್ಕಾರದವರ ಕರ್ತವ್ಯವೆಂದು ತಿಳಿಸಿದರು.

ಬಟ್ಟೆ ಹಂಚಿಕೆ ಕ್ರಮದಲ್ಲಿ ಸರ್ಕಾರದವರು ಮತ್ತು ಸಂಬಂಧಪಟ್ಟ ಅಧಿಕಾರ ವರ್ಗದವರು ಅನುಸರಿಸುತ್ತಿರುವ ರೀತಿ ನೀತಿಗಳನ್ನು ಖಂಡಿಸುವ ಮತ್ತು ವರ್ತಕ ಮಹಾಶಯರಲ್ಲಿ ಒಬ್ಬರಿಗೆ ಪಾಲು ಬಂದಿರುವ ೬೧ ಬೇಲ್ ಬಟ್ಟೆಯನ್ನು ರಾಜಧಾನಿಯ ಜನರಿಗೆ ಗೌರಿ, ಗಣೇಶ ಹಬ್ಬಗಳ ಪ್ರಯುಕ್ತ ಸಾಕಷ್ಟು ಹಂಚಲು ಕೂಡಲೇ ಏರ್ಪಾಡು ಮಾಡಿಸಿಕೊಡಬೇಕೆಂಬ ನಿರ್ಣಯಗಳು ಅಂಗೀಕೃತವಾದುವು.

ಇದೇ ಸಂದರ್ಭದಲ್ಲಿ ಗೌರಿ, ಗಣೇಶ ಹಬ್ಬದ ದಿನಗಳಾದರೂ ಮೊದಲಿನಂತೆ ೧ ಪಾವಿನಂತೆ ಅಕ್ಕಿಯನ್ನು ಪ್ರಜೆಗಳಿಗೆ ಕೊಡಬೇಕೆಂದು ಅಧಿಕಾರಿಗಳನ್ನು ಪ್ರಾರ್ಥಿಸಿಕೊಳ್ಳುವ ನಿರ್ಣಯವೂ ಸಹ ಮಂಜೂರಾಯಿತು. ಈ ವಿಚಾರಗಳಲ್ಲಿ ಇತರೆ ಕಾರ್ಯಕ್ರಮಗಳನ್ನು ನಡೆಸುವುದಕ್ಕಾಗಿ ಒಂದು ಸಮಿತಿಯೂ ರಚಿತವಾಯಿತು. ಶ್ರೀಗಳಾದ ಇ. ಪಿ. ನಂಜಪ್ಪ, ಯು. ಎಲ್ ರಾಮಚಂದ್ರರಾವ್, ಜಿ ವಿ ಸೂರ್ಯನಾರಾಯಣಶೆಟ್ಟಿ, ಜನಾರ್ದನ ನಾಯ್ಡು, ಟಿ. ಡಯ್ಯ, ಬಿ. ನಾರಾಯಣಸ್ವಾಮಿ ಮತ್ತು ಎಸ್ ಚನ್ನಯ್ಯ ಇವರುಗಳು ಈ ಸಮಿತಿಯಲ್ಲಿರುವವರು.

ಭೇಟಿ ಮಹಾರಾಜರ ಆರಾಧನೋತ್ಸವ

ಸಂಸ್ಕೃತ ಪಾಠಶಾಲೆಯಲ್ಲಿರುವ ಸದ್ಗುರು ಸೇವಾ ಮಂಡಲಿಯವರು ಶ್ರೀ ಭೇಟಿ ನಾರಾಯಣ ಮಹಾರಾಜರವರ ಸ್ಮಾರಕೋತ್ಸವವನ್ನು ನಾಳೆ ಆಚರಿಸುವರು. ಬೆಳಗ್ಗೆ ಅಭಿಷೇಕ ಪೂಜೆ ಮುಂತಾದವುಗಳೂ, ಸಂಜೆ ಗಂಟೆಗೆ ಮಂಗಳಾರತಿಯೂ ನಡೆದು ಅತಿರುದ್ರ ಮಹಾಯಾಗದ [illegible] ಬಟ್ಟೆಯನ್ನು ಒಪ್ಪಿಸಲಾಗುವುದು.

ಶ್ರೀ ಸದ್ಗುರು ಭೇಟಿ ನಾರಾಯಣ ಮಹಾರಾಜರ ಪ್ರಥಮ ವಾರ್ಷಿಕ ಆರಾಧನಾ ಮಹೋತ್ಸವವು ಬೆಂಗಳೂರಿನ ಗವಿಪುರದ ಛತ್ರದ ಬಳಿ ಇರುವ ಶ್ರೀ ಸದ್ಗುರು ಸ್ಮಾರಕ ಸ್ಥಳದಲ್ಲಿ ಇಂದು ಬೆಳಗ್ಗೆ ವೈಭವದಿಂದ ಜರುಗಿತು.

ರೇಷನ್ ತಿದ್ದುಪಡಿ

೨೨-೮-೪೬ ರಲ್ಲಿ ಪ್ರಕಟವಾಗಿದ್ದ ರೇಷನ್ ಆಫೀಸ್ ನೋಟೀಫಿಕೇಷನ್ನಿನಲ್ಲಿ ೨-೩ ಔನ್ಸಿಗೆ ೧ ಪಾವು ಮುಸುಕಿನಜೋಳ ಕೊಡಲಾಗುವುದೆಂದು ತಪ್ಪಾಗಿದ್ದಿದೆ. ಅದನ್ನು "[illegible] ಔನ್ಸಿಗೆ ೧ ಪಾವು" ಎಂದು ತಿದ್ದಿಕೊಳ್ಳಬೇಕಾಗಿ ಕೋರಲಾಗಿದೆ.

ಕಲ್ಕತ್ತ ನಗರದಲ್ಲಿ ಹೆಂಗಸರು ಮಕ್ಕಳ ಯಜ್ಞ

ಕಲ್ಕತ್ತ ನಗರದಲ್ಲಿ ನಡೆದ ಕ್ರೂರ ಕೃತ್ಯಗಳ ವಿವರ ಒಂದೊಂದಾಗಿ ಹೊರಬೀಳುತ್ತಿದೆ. ಧಾಳಿಕಾರರು ಕುದಿಯುವ ನೀರನ್ನೂ, ಕಾಯುವ ಎಣ್ಣೆಯನ್ನೂ ಅಬಲೆಯರ ಮೇಲೂ ಮಕ್ಕಳ ಮೇಲೂ ಸುರಿದು, ಕೊಲ್ಲುತ್ತಿದ್ದರೆಂದು ವರದಿಯಾಗಿದೆ. ಬಾಲಕಿಯರ ವಿದ್ಯಾಲಯವೊಂದಕ್ಕೆ ಬೆಂಕಿ ಹಚ್ಚಿ ಒಳಗಿದ್ದವರಲ್ಲೊಬ್ಬರೂ ಉಳಿದು ಬರದಂತೆ ಮಾಡಿ ಅನೇಕ ವಿದ್ಯಾರ್ಥಿನಿಯರು ಜೀವಸಹಿತ ಭಸ್ಮ ಮಾಡಲ್ಪಟ್ಟರು. ನಗರದ ಸಮೀಪದಲ್ಲೇ ಇರುವ ಭವಾನಿಪುರವೆಂಬ ಹಳ್ಳಿಗೆ ಬೆಂಕಿಹಾಕಿ ಗ್ರಾಮದ ೧೫೦ ಮಂದಿ ಹೆಂಗಸರು ಮಕ್ಕಳನ್ನು ಸುಟ್ಟು ಹಾಕಿದರೆಂದು ಗೊತ್ತಾಗಿದೆ. ತಪ್ಪಿಸಿಕೊಂಡು ಹೋಗಲು ಯತ್ನಿಸಿದವರನ್ನು ಚೆಂಡಾಡುವಂತೆ ತಿರುಗಿಸಿ ಅಗ್ನಿಕುಂಡಕ್ಕೆ ಎಸೆದು ಕೊಂದ ಹೃದಯ ವಿದ್ರಾವಕ ಸುದ್ದಿ ಪ್ರಕಟವಾಗಿದೆ. ಒಂದು ಹಾಸ್ಟಲಿನಲ್ಲಿ ಜನರನ್ನು ಬಾಣಲೆಯಲ್ಲಿ ಹಾಕಿ ಹುರಿದರೆಂದೂ ಹೇಳಲಾಗಿದೆ.

ಕೊಲ್ಲಾಪುರದಲ್ಲಿ ಜವಾಬ್ದಾರಿ ಸರ್ಕಾರ ?

ಕೊಲ್ಲಾಪುರದಲ್ಲಿ ರಾಜಕೀಯ ಸುಧಾರಣೆಗಳನ್ನು ಜಾರಿಗೆ ತರಲು ಸೂಕ್ತ ಸಲಹೆ ಕೊಡಲು ನೇಮಕವಾಗಿದ್ದ ಸುಧಾರಣಾ ಸಮಿತಿಯು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವಂತೆ ಸೂಚಿಸಿದೆಯೆಂದು ಗೊತ್ತಾಗಿದೆ.

ಉಪನ್ಯಾಸ

ಮೈಸೂರು ೨೪

ನಾಳೆ ಸಾಯಂಕಾಲ ೬ ಗಂಟೆಗೆ ಶ್ರೀ ರಾಮಕೃಷ್ಣಾಶ್ರಮದಲ್ಲಿ ಸ್ವಾಮಿ ಸೋಮನಾಥಾನಂದರು "ಭಗವದ್ಗೀತೆ" ಯ ಮೇಲೆ ಉಪನ್ಯಾಸ ಮಾಡುವರು

ಹಂಸಾ ಫುಡ್ ಪ್ರಾಡಕ್ಟ್ಸ್

ಮೈಸೂರು

(ಹಂಸಾ ಮಾರ್ಕಿನ ತಿಂಡಿ ಪದಾರ್ಥಗಳು)

ಮಡಿಯಿಂದ, ಬ್ರಾಹ್ಮಣರಿಂದ ಶುದ್ಧವಾಗಿ ಎಲ್ಲರ ಮೆಚ್ಚಿಗೆಗೂ ಸರಿಹೊಂದುವಂತೆ ಈ "ಹಂಸಾ ಫುಡ್ ಪ್ರಾಡಕ್ಟ್ಸ್" ತಯಾರಿಸಲ್ಪಡುತ್ತಲಿವೆ. ಇವು ನಿತ್ಯೋಪಯೋಗಕ್ಕೂ ಮತ್ತು ಎಲ್ಲಾ ಶುಭಕಾರ್ಯಗಳಲ್ಲಿಯೂ ಸಹ ಉಪಯೋಗಿಸಲು ಯೋಗ್ಯವಾದುವು. ರುಚಿಗಳಲ್ಲಿ ಶ್ರೇಷ್ಠವಾದುವು. ಒಂದು ಸಲ ಪರೀಕ್ಷಿಸಿದಲ್ಲಿ ಇವುಗಳ ಶ್ರೇಷ್ಠತೆಯು ವ್ಯಕ್ತವಾಗುವುದು. ಸರ್ವರೂ ಉಪಯೋಗಿಸಿ ಪ್ರೋತ್ಸಾಹಿಸಬೇಕೆಂದು ಕೋರುತ್ತೇನೆ.

ಹಪ್ಪಳ, ಅಕ್ಕಿ, ಅವಲಕ್ಕಿ ಮತ್ತು [illegible] ಸಂಡಿಗೆಗಳು, ಖಾರದ ಪುಡಿ, ಅಕ್ಕಿ ಸಂಡಿಗೆ, ಮಸಾಲೆ ಮತ್ತು ಚಟ್ನಿಪುಡಿ, ರವೆ, ಶ್ಯಾವಿಗೆ, ಮಸಾಲ ಇತ್ಯಾದಿ-ಒಟ್ಟಾಗಿಯೂ, ಚಿಲ್ಲರೆಯಾಗಿಯೂ ದೊರೆಯುತ್ತವೆ. ಇವುಗಳಲ್ಲಿ ಪರೀಕ್ಷಿಸಿ.—
ಪ್ರೊಪ್ರೈಟರ್,
ಎ. ಎನ್. ರಾಮಕೃಷ್ಣ ಶಾಸ್ತ್ರಿ,
[illegible] ರಾಮಾನುಜ ಅಗ್ರಹಾರ
ಮೈಸೂರು.

Edited, printed and published by [illegible] D. Subbaiah Road, Mysore

ಜೋಳಿಗೆ ದಾರದ ಅಭಾವ

ನಂಜನಗೂಡಿನಲ್ಲಿ ಜೋಳಿಗೆ ದಾರ ಸರಿಯಾಗಿ ಸಿಗುತ್ತಿಲ್ಲವೆಂದು ಮುಂಚಿತವಾಗಿ ವಿ[illegible]ಕವಾಗಿ ಪುಕಾರು ಮಾಡಿ ೨೦ ಮಂದಿ ಜೋಳಿಗೆಯವರು ನಮಗೆ ಒಂದು ಪತ್ರವನ್ನು ಬರೆದಿದ್ದಾರೆ. ಆವರುಗಳಿಗೆ ಜೋಳಿಗೆ ದಾರ ಸರಿಯಾಗಿ ದೊರೆಯುತ್ತಿಲ್ಲವೆಂದೂ ಅಧಿಕಾರಿಗಳು ಹಂಚಿಕೆ ಬಗ್ಗೆ ತನಿಖೆ ನಡೆಸಿದರೆ ತಾವು ಅಗತ್ಯವಾದ ಸಾಕ್ಷ್ಯಗಳನ್ನು ಕೊಡಲು ತಯಾರಿರುವುದಾಗಿಯೂ ಅಧಿಕಾರಿಗಳು ಈ ಕಡೆ ಕೂಡಲೇ ಗಮನ ಕೊಡಬೇಕೆಂಬುದಾಗಿಯೂ ಅವರು ಪ್ರಾರ್ಥಿಸಿದ್ದಾರೆ.

ಧರ್ಮ ಸಹಾಯ

ಚನ್ನರಾಯಪಟ್ಟಣ ೨[illegible]

ಈ ಊರಿನ ಶ್ರೀ ಸಾ ಧು ಜಿ ಗುರು[illegible] ಪಂಡಿತರು ಒಕ್ಕಲಿಗರ ವಿದ್ಯಾರ್ಥಿ ನಿಲಯದ ಬಾಲಕರಿಗೆ ಪ್ರತಿ ತಿಂಗಳಲ್ಲಿಯೂ ಎರಡು ಊಟಗಳನ್ನು ಕೊಡಿಸಲೂ, ನಿಲಯಕ್ಕೆ ಇನ್ನೂ ಅನೇಕ ರೀತಿಯಲ್ಲಿ ಸಹಾಯ ಮಾಡಲೂ ಒಪ್ಪಿದ್ದಾರೆ. ಬಹುಕಾಲದಿಂದ ಶಿಥಿಲವಾಗಿದ್ದ ಶ್ರೀ ಗಣೇಶ, ಬಸವೇಶ್ವರ ಮತ್ತು ನವಗ್ರಹ ದೇವಸ್ಥಾನಗಳನ್ನು [illegible] ಸಹಸ್ರ ರೂ. ಖರ್ಚಿನಲ್ಲಿ ಕಟ್ಟಿಸಿ ಮ[illegible] ಜನರ ಅಭಿನಂದನೆಗೆ ಪಾತ್ರರಾಗಿದ್ದಾರೆ.

* ರಸ್ತದಲ್ಲಿ ನಿರೀಕ್ಷಿಸಿದ್ದಕ್ಕಿಂತ ಮು[illegible]ಸವಾಗಿಯೇ ಸಮೃದ್ಧಿಯಾದ ಬೆಳೆ ಕೈಸೇರುವುದಾಗಿ ವರದಿಯಾಗಿದೆ

ರಾಜಕಮಲ್ ಟಾಕೀಸ್

ಮೈಸೂರು

ತದ್‌ಬೀರ್

ಭೂಮಿಕೆ:—ಸೈಗಲ್, ಸುರಯ್ಯಾ ಮುಂತಾದವರು

23-8-46 ರಿಂದ

ಎರಡನೇ ವಾರ

ಶ್ರೀರಂಗಪಟ್ಟಣದಲ್ಲಿ ರೋಗ ಚಿಕಿತ್ಸಾಲಯ

ಮೈಸೂರು ಚಾಮುಂಡಿಪುರಂ, ೨೫೩ ಚಾಮುಂಡೇಶ್ವರೀ ರೋಡ್, ಎಸ್. ಪಿ. ಆರ್. ಲಿವರ್ ಅಂಡ್ ಸ್ಪ್ಲೀನ್ ವೈದ್ಯಶಾಲೆಯಲ್ಲಿ - ಹಳೇ ಜ್ವರ, ಮಲೇರಿಯಾ ಜ್ವರ, ಲಿವರ್ ಅಂಡ್ ಸ್ಪ್ಲೀನ್ (ಮಲೇರಿಯ ಗಡ್ಡೆ) ಪರಿಣಾಮಶೂಲೆ, ನಾಡಿ [illegible] (ಉಳಪ್ಪು) ಪಕ್ಕೆಶೂಲೆ, ಪಕ್ಕಬಾಧೆ, [illegible] ವ್ಯಾಧಿಗಳಿಗೆ ಶ್ರೇಷ್ಠ ಚಿಕಿತ್ಸೆ ನಡೆಯುತ್ತದೆ

ಶ್ರೀರಂಗಪಟ್ಟಣದಲ್ಲಿ ಮಿ॥ ಎಂ. [illegible] ಶೆಟ್ಟರು ಸದರಿ ಚಿಕಿತ್ಸೆಗಳನ್ನು ಉಚಿತವಾಗಿ ನಡೆಸಲು ಏರ್ಪಡಿಸಿರುತ್ತಾರೆ.

ಎಸ್. ನಾಗರಾಜ್

OPERA TALKIES

From 24- 8 - 46

Daily 3 Shows

CRASH DIVE

(Technicolor)

with TYRONE POWER and ANNE BAXTER

ಫೋ. ನಂ. 392 || ನೆಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫ | ಭಾನುವಾರ ೨೫—೬—೪೭ | ಸಂಚಿಕೆ ೬೮

ಸಿಂಧೂ ದೇಶದ ಸ್ವಾತಂತ್ರ್ಯ ಘೋಷಣೆ ?

ದಿವಾನರ ಭೇಟಿ

ಚಾಮರಾಜನಗರದ ಪೌರಸಭಾಧ್ಯಕ್ಷ ರಾದ ಶ್ರೀ ಸಿ. ಬಿ. ನಂಜುಂಡಾಚಾರ್ಯರು ಈ ದಿನ ದಿವಾನ್‌ರನ್ನು ಭೇಟಿ ಮಾಡಿದ್ದರು. [illegible] ಮುಕ್ತ ರಂಜಾನ್ ಹಬ್ಬಗಳ [illegible] ಎರಡು ದಿವಸದ [illegible] ಕೊಡಬೇಕೆಂದು ಕೇಳಿ [illegible] ಚಾಮರಾಜನಗರದ ತಾಲ್ಲೂ [illegible] ಜನ ಸಂಖ್ಯೆಗೆ ಅನುಸಾರವಾಗಿ ಪಟ್ಟಗ [illegible] ಸುಡ [illegible] ಕಾಲದಿರುವುದರಿಂದ ಏಳು ಬೇಲು [illegible] ಗಳನ್ನು ಕಳುಹಿಸಿ ಕೊಡಬೇಕೆಂದೂ [illegible] ಮಾಡಿದರು. 'ಪೈಸ್ಕೂಲ್ ಸಕ್ರಿ [illegible] ದರ್ಪದಿಂದ ಸ್ಕೂಲ್ [illegible] ಮೇಲೆ ಜರಿದ [illegible] ವಿಷಯವನ್ನೂ [illegible] ನೌಕರರು ಎಸಗಿದ ಮುಷ್ಕರದ [illegible] ತಿಳಿಸಿದರು. ದಿವಾನರು [illegible] ಕಾರ್ಯಕ್ರಮ ಕೈಗೊಳ್ಳುವುದಾಗಿ [illegible]

[illegible] ಸಂಘದ ನೌಕರರ ಮುಷ್ಕರ

[illegible] ಸಂಘಗಳ ನೌಕರರು ತಮಗೆ [illegible] ಬೇಕೆಂಬ ಕೋರಿಕೆಗಳ [illegible] ಸಂಘಗಳಿಗೆ ಒಪ್ಪಿಸಿದ್ದಾರೆ. [illegible] ನ್ಯಾಯದಂತೆ [illegible]

[illegible]

ಭಾಗವತ್ಸ ಅನುವಾದ

[illegible]

ಕೇಂದ್ರ ಸರ್ಕಾರದ ಮಂತ್ರಿಗಳು

ಭಾರತ ಕೇಂದ್ರ ಸರ್ಕಾರದಲ್ಲಿ ಈ ಕೆಳಗೆ ಕಂಡವರು ಮಂತ್ರಿಗಳಾಗಿರುವರೆಂದು ಅಧಿ ಕಾರಯುತ ಪ್ರಕಟಣೆ ಹೊರಟಿದೆ:—

ಪಂಡಿತ ಜವಾಹರ್ ನೆಹರೂ, ಸರ್ದಾರ್ ವಲ್ಲಭಾಯಿ ಪಟೇಲ್, ಡಾ|| ರಾಜೇಂದ್ರ ಪ್ರಸಾದ್, ಮಿ|| ಅಸಾಫ್ ಅಲಿ, ಶ್ರೀ ಸಿ. ರಾಜಗೋಪಾಲಾಚಾರಿ, ಶ್ರೀ ಶರತ್ ಚಂದ್ರ ಬೋಸ್, ಡಾ|| ಜಾನ್ ಮತ್ತಾಯ್, ಸರ್ದಾರ್ ಬಲದೇವಸಿಂಗ್, ಸರ್ ಷಾಫತ್ ಅಹಮದ್ ಖಾನ್, ಶ್ರೀ ಜಗಜ್ಜೀವನರಾಂ, ಮಿ|| ಸೈಯದ್ ಅಲಿ ಜಹೀರ್, ಶ್ರೀ ಸಿ. ಎಚ್. ಭಾಭಾ-ಇವರುಗಳನ್ನು ಪ್ರಿ|| ಚಕ್ರವರ್ತಿಗಳು ಮಂತ್ರಿಗಳಾಗಿ ನೇಮಿಸಿರುವರು.

ಉಳಿದಿರುವ ಎರಡು ಮುಸ್ಲಿಂ ಸ್ಥಾನಗಳನ್ನು ಮುಂದೆ ಭರ್ತಿಮಾಡಲಾಗುವುದು. ಸೆಪ್ಟೆಂಬರ್ ಎರಡನೇ ತಾ|| ಇವರು ಅಧಿಕಾರವನ್ನು ವಹಿಸುವರು.

ಅಧ್ಯಾತ್ಮಿಕ ಸಭಾ

ನಂಜನಗೂಡು ೨೪

[illegible] ನಾ|| ಸೇ ಮಾರನೇ ತಾ|| [illegible] ಗಳು [illegible] ಸಂಸ್ಕೃತ [illegible] ಭಗವದ್ಗೀತಾ ಜ್ಞಾನಯೋಗ" ಎಂಬ ವಿಷಯವಾಗಿಯೂ, ೨೬ ನೇ ಸೋಮ ಗಳವಾರ 'ಸಾಯಂಕಾಲ ೫ ಗಂಟೆಗೆ ನಂಜ ನಗೂಡಿನ [illegible] ಎಸ್. ಕೆ. [illegible] ನವರು "ಭಗವದ್ಗೀತಾ-ಕರ್ಮಯೋಗ" ಎಂಬ ವಿಷಯವಾಗಿಯೂ ಶ್ರೀಕಂಠೇಶ್ವರ ದೇವಾ ಲಯದಲ್ಲಿ ಉಪನ್ಯಾಸ ಮಾಡುತ್ತಾರೆ.

೭ ಸರ್ಪದ ಮಗುವನ್ನು ನೋಡಿ ಹೊಡೆದು ಕೊಂದರು

[illegible] ಕೆಲ್ಲತ್ತೂರು [illegible] ಸರ್ಪದ ಮಗು [illegible] ಕೊಂದ [illegible] ಮನೆಯ ಬಾಗಿಲಿಗೆ [illegible] ಮನೆಯ [illegible] ಮಕ್ಕಳನ್ನು [illegible] ಜನರನ್ನು [illegible] ಇದನ್ನು ಕೇಳಿದ [illegible] ಇಷ್ಟು ಜನರಿಗೆ [illegible] ಆಗಿದೆ.

ಸಿಂಧ್ ಪ್ರಾಂತದ ಸ್ವಾತಂತ್ರ್ಯ ಘೋಷಣೆಯೇ ?

ಪಶ್ಚಿಂ-ಲೀಗಿನವರನ್ನು ಬಿಟ್ಟು ಕೇಂದ್ರ ಸರ್ಕಾರವನ್ನು ರಚಿಸುವುದಾದರೆ ಸಿಂಧು ಪ್ರಾಂತವು ಹೊಸ ಸರ್ಕಾರದ [illegible] ಯಾದ ದಿನದಿಂದ ಸ್ವತಂತ್ರ ದೇಶವೆಂದು ಘೋಷಿಸುವುದಾಗಿ ಅಲ್ಲಿನ ಲೀಗ್ ಅಧ್ಯಕ್ಷ ಮಿ|| ಗಜ್ದಾರರು [illegible] ಕಾಂಗ್ರೆಸ್ಸು ನಡೆಸಿದಂತೆಯೇ ಲೀಗು [illegible] ನಡೆಸುವುದು, ಈ ದಿನ [illegible] ಕಾಂಗ್ರೆಸ್ಸು [illegible] ಲೀಗಿನವರನ್ನು ಪ್ರಶಂಸಿಸಲು [illegible] ಲೀಗು ಅಧಿಕಾರಕ್ಕೆ ಬಂದಾಗ [illegible] ಹಿಂದುಗಳು [illegible] ಮುಸ್ಲಿಮರು [illegible] ಹಿಂದುಗಳಿಗೆ [illegible] ಪ್ರತೀಕಾರ [illegible] ಹಿಂದುಗಳ [illegible] ; [illegible]

ಹಿಂದೂ ಮುಸ್ಲಿಂ ವಿದ್ಯಾರ್ಥಿಗಳ ಗಲಭೆ

[illegible] ಹೈಸ್ಕೂಲ್ ಹಿಂದೂ ಮುಸ್ಲಿಂ ವಿದ್ಯಾರ್ಥಿಗಳಲ್ಲಿ [illegible] ಕೆಲವು [illegible] ಪೋಲೀಸರು ಬಂದು [illegible] ವರದಿ ಯಾಗಿದೆ. ಒಬ್ಬ ವಿದ್ಯಾರ್ಥಿಗೆ ಜ್ಞಾನ ತಪ್ಪಿ ಆಸ್ಪತ್ರೆಗೆ ಸೇರಿಸಲ್ಪಟ್ಟಿದ್ದಾನೆ.

ಅಮೇರಿಕಕ್ಕೆ

ಯುಗೋಸ್ಲಾವಿಯ ತಿರಸ್ಕಾರ

[illegible]

ವೃತ್ತಿ ಮುಷ್ಕರ

[illegible]

ಮುಸಲ್ಮಾನರಲ್ಲಿ [illegible] ಅಸಹಾಯದ ಭೀತಿ

[illegible]

[illegible] ಪ್ರತಿಭಟನಾ ಮಂತ್ರಿ [illegible]

[illegible]

ಉದ್ಯೋಗ ತಪ್ಪಿಸಿಕೊಂಡಿದ್ದಾನೆ

[illegible]

ಅಮೆರಿಕಾ [illegible] ಘೋಷಣೆ

[illegible]

[illegible]

[illegible]

ಸಾಧ್ವಿ

ತಾ॥ ೨೫-೮-೪೬ ಭಾನುವಾರ

ತಾತ್ಕಾಲಿಕ ಸರ್ಕಾರ

ಕಡೆಗೂ ಕೇಂದ್ರ ಸರ್ಕಾರದ ರಚನೆಯು ಆಯಿತು. ಸಚಿವರ ಪಟ್ಟಿಯೂ ನಿನ್ನೆ ಹೊರಬಿತ್ತು. ಕಾವಲುಗಾರ ಸರ್ಕಾರವು ರಾಜೀನಾಮೆ ಇತ್ತಿತು. ಸಧ್ಯದಲ್ಲಿಯೇ ಹೊಸ ಸರ್ಕಾರವು ಆಡಳಿತ ನಡೆಸಲು ಆರಂಭಿಸುವುದು. ಭಾರತದ ರಾಜಕೀಯ ಇತಿಹಾಸದಲ್ಲಿ ಇದೊಂದು ಪರ್ವ ಕಾಲವೆಂದು ಧಾರಾಳವಾಗಿ ಹೇಳಬಹುದು. ಸ್ವಾತಂತ್ರ್ಯ ಸಾಧನೆಯ ಪ್ರಯತ್ನವು ಒಂದು ನಿರ್ದಿಷ್ಟವಾದ ಘಟ್ಟವನ್ನು ಇಂದು ಮುಟ್ಟಿದೆ. ಬ್ರಿಟಿಷ್ ಸರ್ಕಾರದವರು ಮಾಡಿದ ಘೋಷಣೆಯನ್ನು ಕಾರ್ಯರೂಪಕ್ಕೆ ತರುವ ಉದ್ದೇಶಕ್ಕೆ ಅನುಗುಣವಾಗಿ ಹೊಸ ಸರ್ಕಾರವನ್ನು ರಚಿಸಲು ವ್ಯವಸ್ಥೆ ಮಾಡಿರುವರು. ಇದರಿಂದ ರಾಜಕೀಯ ಸಂಧಾನಗಳು ಸಮರಸದಿಂದ ಸಾಗಲು ವಿಶೇಷ ಸಹಾಯವಾಗುವುದರಲ್ಲಿ ಸಂದೇಹವಿಲ್ಲ.

ಸಚಿವರಾಗಿ ನೇಮಿಸಲ್ಪಟ್ಟಿರುವವರಲ್ಲಿ ಮುಸ್ಲಿಂ ಲೀಗಿನ ಅಧಿಕೃತ ಪ್ರತಿನಿಧಿಗಳು ಇಲ್ಲದಿರುವುದೇನೋ ನಿಜ. ಆದರೆ ಇದಕ್ಕೆ ಲೀಗಿನವರಲ್ಲದೆ ಬೇರೆ ಯಾರೂ ಉತ್ತರವಾದಿಗಳಲ್ಲ. ಕಾಂಗ್ರೆಸ್ಸಿನವರೂ, ಸರಕಾರದವರೂ ಲೀಗಿನವರ ಸಹಕಾರವನ್ನು ಬೇಡಿ ಅದನ್ನು ಗಳಿಸಲು ಬಹಳ ಔದಾರ್ಯದಿಂದ ಕೈ ನೀಡಿದ್ದಾರೆ. ಆದರೂ ಸಹ ಮಿ॥ ಜಿನ್ನಾರವರು ವಜ್ರಮುಷ್ಟಿಯನ್ನೇ ಹಿಡಿದು ಸಹಕಾರವನ್ನು ನಿರಾಕರಿಸುತ್ತ ಬಂದಿದ್ದಾರೆ.

ಬ್ರಿಟಿಷ್ ನಿಯೋಗದವರ ಘೋಷಣೆಯು ಹೊರಟ ಅತ್ಯಲ್ಪ ಕಾಲದಲ್ಲಿಯೇ ಕೇಂದ್ರ ಸರ್ಕಾರವನ್ನು ಪುನರ್ರಚಿಸುವುದಾಗಿಯೂ ಸಹ ಅವರು ಭರವಸೆ ಇತ್ತಿದ್ದರು. ಆದರೆ ಮುಸ್ಲಿಂ ಲೀಗಿನವರ ವಿರೋಧ ಮನೋವೃತ್ತಿಯಿಂದ ರಾಷ್ಟ್ರೀಯ ಸರ್ಕಾರವನ್ನು ರಚಿಸಲು ಅಡಚಣೆಯುಂಟಾಯಿತು. ಆದುದರಿಂದ ಸರ್ಕಾರದವರೇ ಕಾವಲುಗಾರ ಆಡಳಿತವನ್ನು ಏರ್ಪಡಿಸಿದರು. ಇದಾದ ಮೇಲೆ ಲೀಗಿನವರು ತಮ್ಮ ಮೊದಲನೆಯ ನಿರ್ಣಯವನ್ನು ರದ್ದುಮಾಡಿ ರಾಜ್ಯಾಂಗ ರಚನೆ ಮತ್ತು ಹಂಗಾಮಿ ಸರ್ಕಾರ ಸ್ಥಾಪನೆ ಇವೆರಡಕ್ಕೂ ಬಹಿಷ್ಕಾರ ಹಾಕುವುದಾಗಿ ನಿರ್ಧರಿಸಿದರು. ಅನಂತರ ಬಿರುದುಗಳನ್ನು ತ್ಯಾಗಮಾಡಿದುದಲ್ಲದೆ ಪ್ರತಿಭಟನಾ ದಿನಾಚರಣೆಯನ್ನು ಕೈಗೊಂಡರು. ಇದರಿಂದ ಉಂಟಾದ ದುಷ್ಪರಿಣಾಮವು ಸಕಲರನ್ನೂ ಇನ್ನೂ ಬಾಧಿಸುತ್ತಲೇ ಇದೆ.

ಲೀಗಿನವರು ಸಧ್ಯಕ್ಕೆ ಹೊಸ ಸರ್ಕಾರದಲ್ಲಿ ಭಾಗಿಗಳಾಗಲು ನಿರಾಕರಿಸಿದ್ದಾರೆ. ಆದರೂ ಅವರ ಪ್ರವೇಶಕ್ಕಾಗಿ ಬಾಗಿಲನ್ನು ಸದಾ ತೆರೆದಿಡಲಾಗಿದೆ. ನಾಳೆ ಅವರು ತಮ್ಮ ನೀತಿಯನ್ನು ಬದಲಾಯಿಸಿ ಮಂತ್ರಿ ಮಂಡಲದಲ್ಲಿ ಪ್ರವೇಶಿಸಲು ನಿರ್ಧರಿಸಿದರೆ ಅವರಿಗೆ ಸ್ಥಾನಗಳು ಮೀಸಲಾಗಿ ಇಡಲ್ಪಟ್ಟಿವೆ. ಇದು ಕಾಂಗ್ರೆಸ್ಸಿನ ಔದಾರ್ಯವನ್ನೂ, ವಿಶಾಲ ಹೃದಯವನ್ನೂ ಸೂಚಿಸುತ್ತದೆ.

ವೈಸರಾಯರು ನಿನ್ನೆ ರಾತ್ರಿ ಭಾರತದ ಸಕಲ ಸಂಘಗಳವರನ್ನೂ ಕುರಿತು ಮನವಿಯನ್ನು ಮಾಡಿದ್ದಾರೆ. ದೇಶದ ಎಲ್ಲ ಸಂಘಗಳವರೂ ಕಲೆತು ಸ್ವಾತಂತ್ರ್ಯದ ಸಾಧನೆಯನ್ನು ಪೂರೈಸಬೇಕಾದ ಕಾಲವು ಸನ್ನಿಹಿತವಾಗಿದೆ. ಎಲ್ಲ ಸಂಘದವರೂ ಇದರಲ್ಲಿ ಸಹಕರಿಸುತ್ತಿರುವಾಗ ಮುಸ್ಲಿಂ ಲೀಗಿನವರು ಮಾತ್ರ ದೂರವಾಗಿರುವುದು ಸರಿಯಲ್ಲ. ದೇಶನಾಯಕರ ಕರೆಗೆ ಕಿವಿಗೊಟ್ಟು ಲೀಗಿನವರು ತಮ್ಮ ಅಸಹಕಾರ ನೀತಿಯನ್ನು ತೊರೆದು ಹೊಸ ಅಧ್ಯಾಯವನ್ನು ಆರಂಭಿಸಿ ದೇಶದ ಅಭ್ಯುದಯ ಸಾಧನೆಯಲ್ಲಿ ಭಾಗಿಗಳಾಗುವುದು ವಿಹಿತವಾಗಿದೆ.

ಕ್ಷಾಮ ಪೀಡಿತರಿಗೆ ಬಟ್ಟೆ

ಸ್ವಂ.ಸು.] ಬೆಂಗಳೂರು ೨೪

ಚಿತ್ರದುರ್ಗ, ತುಮಕೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಬಡಜನರಿಗೆ ಬಟ್ಟೆಯನ್ನು ಕೊಂಡು ಪುಕ್ಕಟೆಯಾಗಿ ಹಂಚಿಸುವುದಕ್ಕಾಗಿ ಸಂಸ್ಥಾನದ ರೆಡ್‌ಕ್ರಾಸಿನವರು ೧೦೦೦೦ ರೂ ಗಳನ್ನು ಕೊಟ್ಟಿರುತ್ತಾರೆ.

ಸ್ವತ್ತು ವರ್ಗಕ್ಕೆ ತೆರಿಗೆ

ನಿನ್ನೆ ಸಂಜೆ ಶ್ರೀ ಶಿವಶಂಕರರ ಅಧ್ಯಕ್ಷತೆಯಲ್ಲಿ ನಡೆದ ಪುರಸಭೆಯ ಮೀಟಿಂಗಿನಲ್ಲಿ ನಗರದಲ್ಲಿ ಚರಸ್ವತ್ತುಗಳನ್ನು ಒಬ್ಬರಿಂದ ಇನ್ನೊಬ್ಬರಿಗೆ ವರ್ಗ ಮಾಡುವಾಗ ಶೇಕಡ ೧ ರೂಪಾಯಿನಂತೆ ತೆರಿಗೆ ವಿಧಿಸುವಂತೆ ತೀರ್ಮಾನವಾಯಿತು. ಪುರಸಭೆಯ ಉಪಯೋಗಕ್ಕಾಗಿ ತಲಾ ಒಂದಕ್ಕೆ ೧೦೦ ರೂ. ಗಳಂತೆ ೧೩ ಬೆಂಕಿ ಆರಿಸುವ ಯಂತ್ರಗಳನ್ನು ಕೊಳ್ಳಲು ನಿರ್ಧಾರವಾಯಿತು.

ಮಾತು ನಿಂತುಹೋಗುವ ಖಾಯಿಲೆ

ಚೀಣದ ಫೈಫಿಂಗ್ ಎಂಬಲ್ಲಿ ಮಾತು ನಿಂತುಹೋಗುವ ಖಾಯಿಲೆಯೊಂದು ತಲೆದೋರಿ ೨೦ ಮಂದಿ ಮೃತರಾದರೆಂದು ಸುದ್ದಿ ಬಂದಿದೆ. ಈ ಖಾಯಿಲೆ ಬಂದ ಕೂಡಲೇ ಮಾತನಾಡುವ ಶಕ್ತಿ ಅಡಗಿಹೋಗುವುದೆಂದೂ ಈ ಖಾಯಿಲೆ ಮಕ್ಕಳಿಗೆ ಹೆಚ್ಚಾಗಿ ತಗಲುವುದೆಂದೂ ಹೇಳಲಾಗಿದೆ.

ಬಟ್ಟೆ ಹಂಚಿಕೆ

ಸ್ವಂ.ಸು.] ಚಾಮರಾಜನಗರ ೨೩

ಇಲ್ಲಿ ರಂಜಾನ್ ಮತ್ತು ಗೌರಿ ಹಬ್ಬದ ಪ್ರಯುಕ್ತ ಬಟ್ಟೆಗಾಗಿ ಬಹಳ ಜನಗಳು ಸಂತೆಯಂತೆ ಸೇರಿದ್ದರು. ಅಮಲ್ದಾರರೂ, ಪೊ॥ ಇನ್ಸ್‌ಪೆಕ್ಟರರೂ ಊರಿನ ಮುಖಂಡರಾದ ಸುಲ್ತಾನ್ ಷರೀಫ್ ಸಾಹೇಬರೂ ಎಲ್ಲರಿಗೂ ಸ್ವಲ್ಪ ಬಟ್ಟೆ ಸಿಗುವಂತೆ ಮುತುವರ್ಜಿಯಿಂದ ಹಂಚಿಸಿದರು. ಇದರಿಂದ ಕಳ್ಳಸಂತೆಗೆ ಸ್ವಲ್ಪ ಪೆಟ್ಟು ಬಿದ್ದುದಲ್ಲದೆ ಜನಗಳಿಗೆ ಸ್ವಲ್ಪ ಅನುಕೂಲವಾಯಿತು.

ತಮ್ಮ ರೇಷನ್‌ಕಾರ್ಡು ಕಿತ್ತುಕೊಂಡರೆಂಬ ಆಪಾದನೆಯ ಮೇಲೆ ಇಲ್ಲಿನ ನಿವಾಸಿಗಳೊಬ್ಬರು ಆಹಾರದ ನೌಕರರನ್ನು ನಡುರಸ್ತೆಯಲ್ಲಿ ಹೊಡೆದರೆಂದು ತಿಳಿದುಬಂದಿದೆ.

OPERA TALKIES
From 24—8—46
Daily 3 Shows

CRASH DIVE
(Technicolor)

ತಾ॥ 28—8—46 ರಿಂದ

ಬಿಸಿ ಶಾದಿ

(20 ನೇ ಸೆಂಚುರಿ)
* ಮೋತಿಲಾಲ್, * ನರ್ಗಿಸ್
* ಮುಬಾರಕ್ ಖಾನ್

ನೋಟೀಸು

ಮೈಸೂರು ಸಿಟಿ ಲಷ್ಕರ್ ಮೊಹಲ್ಲಾ ಈರನಗೆರೆಯಲ್ಲಿರುವ ವೀರಶೈವ ಮತದ ಲೇಟ್ ಚಾಮಣ್ಣನವರ ಕುಟುಂಬ ಕೆಂಪಮ್ಮನು ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:—

ನನ್ನ ಯಜಮಾನರು ಅವರ ಅಣ್ಣ ತಮ್ಮಂದಿರುಗಳಿಂದ ವಿಭಕ್ತರಾಗಿದ್ದು ಈಗ್ಗೆ ಸುಮಾರು ೪೦ ವರ್ಷಗಳಲ್ಲಿ ನನ್ನನ್ನೂ ಮತ್ತು ನನ್ನ ಮೂರು ಗಂಡು ಮಕ್ಕಳನ್ನೂ ಬಿಟ್ಟು ಕಾಲವಾದರು. ನನ್ನ ಮೂರು ಮಕ್ಕಳುಗಳಲ್ಲಿ ದೈವಗತಿಯಿಂದ ಮೊದಲನೇ ಮಗ ಚಿಕ್ಕಯ್ಯ ಎಂಬುವನು ಸಂತಾನವಿಲ್ಲದೆ ಅಕಾಲ ಮೃತ್ಯುವಿಗೆ ತುತ್ತಾದನು. ಈಚೆಗೆ ಸುಮಾರು ಮೂರು ವರ್ಷಗಳಲ್ಲಿ ಈತನ ಹೆಂಡತಿಯೂ ಸಹ ಕಾಲವಾಗಿ ಹೋದಳು. ನನ್ನ ಎರಡನೇ ಮಗ ದೇವರಸಯ್ಯ ಎಂಬುವನು ಈಗ್ಗೆ ಸುಮಾರು ೨೫ ವರ್ಷಗಳಲ್ಲಿ ಬುದ್ಧಿಪೂರ್ವಕವಾಗಿ (Unsound man) ಹುಚ್ಚನಾಗಿ ಹೋಗಿ ಆಗಿನಿಂದಲೂ ಇದುವರೆವಿಗೂ ಹುಚ್ಚನಾಗಿರುತ್ತಾನೆ. ಈತನ ಹೆಂಡತಿಯು ಗಂಡನ ಮನೆಗೇ ಬರದೇ ಗಂಡನನ್ನು ತ್ಯಜಿಸಿ ದುರಾಚಾರಿಯಾಗಿದ್ದುಕೊಂಡು ಹಾಗೆ ಮೃತಳಾಗಿರುತ್ತಾಳೆ. ನನ್ನ ಮೂರನೇ ಮಗ ಪುಟ್ಟಮಾದಯ್ಯ ಎಂಬುವನು ಅವಿವಾಹಿತನಾಗಿ ಈಗ್ಗೆ ಸುಮಾರು ೨೦ ವರ್ಷಗಳಲ್ಲೇ ಕಾಲವಾದನು. ನಾನೇ ಕುಟುಂಬದ ವಿಶಿಷ್ಟ ಆಸ್ತಿಗೂ ಹಕ್ಕುದಾರಳಾಗಿರುತ್ತೇನೆ. ಹಾಲಿ ನನ್ನ ವೃದ್ಧಾಪ್ಯ ಕಾಲದಲ್ಲಿ ನನ್ನನ್ನೂ ಮತ್ತು ನನ್ನ ಹುಚ್ಚು ಮಗನನ್ನೂ ಸರಿಯಾಗಿ ಕಾಪಾಡಿಕೊಂಡು ಬಂದು ನಮ್ಮಗಳಿಗೆ ಉತ್ತರ ಕ್ರಿಯಾದಿಗಳನ್ನು ಮಾಡುವವರು ಮತ್ತು ಹಿರೀಕರಿಗೆ ಶಿಲ ತರ್ಪಣಗಳನ್ನು ಕೊಡತಕ್ಕವರೂ ಸಹ ಯಾರೂ ಇರುವುದಿಲ್ಲವೆಂಬುದನ್ನು ನಾನು ಯೋಚಿಸಿ, ನನ್ನ ಗಂಡನ ವಿಭಕ್ತ ತಮ್ಮ ಪೌತಿ ಕಾಳಯ್ಯ ಎಂಬುವನ ೪ ನೇ ಮಗ ಪುಟ್ಟಸ್ವಾಮಯ್ಯ ಎಂಬ ಹುಡುಗನನ್ನು ಅವನ ತಾಯಿ ಮತ್ತು ಅಣ್ಣಂದಿರ ಒಪ್ಪಿಗೆಯಿಂದ ನನ್ನ ಮನೆಗೆ ಕರೆದುಕೊಂಡು ಬಂದು ನಾನೇ ಪೋಷಣೆ ಮಾಡುತ್ತಾ ಪುಟ್ಟಗೌರಮ್ಮ ಎಂಬ ಹುಡುಗಿಯನ್ನೂ ತಂದು ಅವನಿಗೆ ಲಗ್ನ ಮಾಡಿ ನನ್ನ ಇಷ್ಟಾನುಸಾರ ಸದರಿ ಪುಟ್ಟಸ್ವಾಮಿಯು ನಡೆಯುತ್ತಾ ಇರುವುದರಿಂದ ನಾನು ಈಶ್ವರ ಪ್ರೀತಿಯಾಗಿ ದಾನವಾಗಿ ಈರನಗೆರೆ ಬಸವೇಶ್ವರ ಸ್ವಾಮಿಗೆ ಚಿಲ್ಕುಂದ ಗ್ರಾಮದ ಸರ್ವೆ ೧೮೫-೨ ನೇ ನಂಬರಿನಲ್ಲಿ ಕೊಟ್ಟಿರುವುದು ಒಂದು ಎಕರೆ ತರೀ ಜಮೀನು ಮತ್ತು ನಾಜಮಂಗಲದ ಚಿಕ್ಕಚನ್ನಪ್ಪನ ಮಗ ಶಿವರುದ್ರಯ್ಯನಿಗೆ ಸದರಿ ಜಮೀನಿನಲ್ಲಿ ಕೊಟ್ಟಿರುವುದು ಒಂದು ಎಕರೆ ತರೀ ಜಮೀನು ಬಿಟ್ಟು ನನ್ನ ವಿಶಿಷ್ಟ ಚರ ಮತ್ತು ಸ್ಥಿರ ಸ್ವತ್ತುಗಳು ಅಂದರೆ ಈರನಗೆರೆಯಲ್ಲಿರುವುದು ಮೂರು ಮನೆಗಳು, ಒಂದು ಖಾಲಿ ಜಾಗ, ಚಿಲ್ಕುಂದ ಗ್ರಾಮದಲ್ಲಿ ೩ ಎಕರೆ ೨೫ ಗುಂಟೆ ತರೀ ಜಮೀನು ೨ ಎಕರೆ ೩ ಗುಂಟೆ ಖುಷ್ಕಿ ಜಮೀನು ಕೆಸರೆ ಗ್ರಾಮದಲ್ಲಿ ೧೮ ಗುಂಟೆ ತೋಟ ಎಲ್ಲವನ್ನೂ ಮೇಲ್ಕಂಡ ನನ್ನ ಸಾಕುಮಗ ಪುಟ್ಟಸ್ವಾಮಯ್ಯನಿಗೂ ಮತ್ತು ನನ್ನ ಸೊಸೆ ಸದರಿ ಪುಟ್ಟಸ್ವಾಮಯ್ಯನ ಹೆಂಡತಿ ಪುಟ್ಟಗೌರಮ್ಮನಿಗೂ ನನ್ನ ಮತ್ತು ನನ್ನ ಹುಚ್ಚು ಮಗನ ಕಾಲಾ ನಂತರ ಸೇರತಕ್ಕದ್ದು ಅವರುಗಳೇ 'ಸಂಪೂರ್ಣ' ಮಾಲೀಕರು ಅವರ ವಂಶ ಪಾರಂಪರ್ಯವಾಗಿ ಅನುಭವಿಸಿಕೊಂಡು ಬರತಕ್ಕದ್ದೆಂದೂ, ನನಗೆ ಚೆನ್ನಾಗಿರುವಾಗಲೇ ನಾನು ನಿಸ್ವಾರ್ಥವಾಗಿ ನನ್ನ ದಾಯಾದಿಗಳ ಮತ್ತು ಹಿತೈಷಿಗಳ ಸಮಕ್ಷಮ ಒಂದು ವಿಲ್ಲನ್ನು (೧೦-೬-... ನೇ ಮುದ್ರಾಂ ವಿಲ್ಲನ್ನು) ಬರೆಸಿ ರಿಜಿಸ್ಟರ್ ಮಾಡಿಸಿ ಸದರಿ ಆಸ್ತಿಗಳ ಸಂಪೂರ್ಣ ವಹಿವಾಟನ್ನು ಹಾಲಿ ನನ್ನ ಸಾಕುಮಗ ಪುಟ್ಟಸ್ವಾಮಯ್ಯನಿಗೇ ವಹಿಸಿರುತ್ತೇನೆ.

ನಾನು ಈ ರೀತಿಯಾಗಿ ಮಾಡಿದ ವ್ಯವಸ್ಥೆಯನ್ನು ನನ್ನ ದೂರದ ಬಂಧುಗಳು ತಮಗೆ ನನ್ನ ಆಸ್ತಿಯಲ್ಲಿ ಏನೂ ಸಿಗಲಿಲ್ಲವೆಂಬ ಸಂಕುಚಿತ ಬುದ್ಧಿಯಿಂದ ಇತರರ ದುರ್ಬೋಧನೆಗಳಿಂದಲೂ ... ಬಾಹಿರವಾಗಿ ನನ್ನ ಹುಚ್ಚು ಮಗನ ... ಮೋಸದಿಂದ ಕೆಲವು ಕಾಗದ ಪತ್ರಗಳನ್ನು ಮಾಡಿಸಿಕೊಳ್ಳಬೇಕೆಂದು ಸಂಚು ಹೂಡುತ್ತಾ ಇರುವುದಾಗಿ ತಿಳಿದುಬಂದಿದೆ. ಹಾಗೆ ಯಾರಾದರೂ ಮೋಸದಿಂದ ತಿಳಿಯದಂತೆ ನನ್ನ ಹುಚ್ಚು ಮಗನಿಂದ ಯಾವುದಾದರೂ ಕಾಗದ ಪತ್ರಗಳನ್ನು ಮಾಡಿಸಿಕೊಂಡಲ್ಲಿ ಸದರಿ ಕಾಗದ ಪತ್ರಗಳು ಊರ್ಜಿತವಾಗುವುದಿಲ್ಲವೆಂದೂ, ಸದರಿ ... ಗಳನ್ನು ಎಷ್ಟು ಮಾತ್ರವೂ ಬದ್ಧಪಡಿಸಲು ಇಲ್ಲವೆಂದೂ ಈ ಮೂಲಕ ಸಮಸ್ತ ಜನಗಳಿಗೂ ವಿಶದಪಡಿಸಿರುತ್ತೇನೆ.

ಎಡಗೈ ಹೆಬ್ಬೆಟ್ಟಿನ ಗುರ್ತಿನ ...
ಕೆಂಪಮ್ಮ ...

ವಿದ್ಯಾರ್ಥಿ ಕಾಂಗ್ರೆಸ್

ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ಸಿನ ನೂತನ ವರ್ಷದ ಸಾಮಾನ್ಯ ಸದಸ್ಯರ ಸಭೆ ೬-೯-೪೬ ನೇ ಶುಕ್ರವಾರ ಸಂಜೆ ೬ ... ನಡೆಯಲಿದೆ. ಹೊಸ ಸಾಲಿನ ... ಸ್ಥಾನಗಳಿಗೆ ಸ್ಪರ್ಧಿಸುವವರು ... ೨-೯-೪೬ರ ಸಂಜೆ ೬ ಗಂಟೆಯೊಳಗೆ ಉಮೇದುವಾರಿಕೆ ಅರ್ಜಿ ಸಲ್ಲಿಸಬೇಕು. ಉಮೇದುವಾರಿಕೆ ವಾಪಸು ತೆಗೆದುಕೊಳ್ಳಲು ಅವಧಿ ೪-೯-೪೬; ಚುನಾವಣೆ ೬ ನೇ ಶುಕ್ರವಾರ ಸಂಜೆ ೬ ಗಂಟೆಗೆ; ಉಪಸಭಾಪತಿ ಅಧ್ಯಕ್ಷರು ೧, ... ಗಳು ೨ ಮಂದಿ, ಕಾರ್ಯಕಾರಿ ಸಮಿತಿ ಸದಸ್ಯರು ೧೩ ಮಂದಿ. ಎಲ್ಲ ವಿವರಗಳಿಗೂ ... ನೂರಡಿ ರಸ್ತೆಯಲ್ಲಿರುವ ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯಾಲಯದಲ್ಲಿ ವಿಚಾರಿಸಬೇಕೆಂದು ಕಾರ್ಯದರ್ಶಿಗಳು ಕೋರಿದ್ದಾರೆ.

ಟಿ. ಸಿ. ನಟರಾಜ
ಔಷಧಾಲಯ

ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅಗತ್ಯವಾಗಿ ಬೇಕಾದ ಎಲ್ಲಾ ... ಔಷಧಿಗಳೂ ಸದಾ ಕಾಲದಲ್ಲಿ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳ ಚಿಕಿತ್ಸೆಯು ಬಹು ಸುಲಭ ಭಾಗ... ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದೀಯ ... ದಿವ್ಯೌಷಧಗಳೆಲ್ಲವೂ ದೊರೆಯುತ್ತವೆ.

Edited, printed and publish... A. R. Nagarajan at the Sadhvi ... D Subbiah Road, Mysore

ರೋ. ನಂ. 392 WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಂಪುಟ ೧೧] ಸೋಮವಾರ ೨೮—೮—೪೭ [ಸಂಚಿಕೆ ೫

ಹೊಸ ಸರ್ಕಾರದ ಮಂತ್ರಿಗೆ ಚೂರಿ ತಿವಿತ

ತಿಲಕ್ ದಿನಾಚರಣೆ

ಮೈಸೂರು ೨೭

ರಾಜಧಾನಿಯ ವಾಣಿವಿಲಾಸ ಮೊಹಲ್ಲಾದಲ್ಲಿರುವ ತಿಲಕ್ ಸಂಘದವರು ನಿನ್ನೆ ಲೋಕಮಾನ್ಯ ಬಾಲ ಗಂಗಾಧರ ತಿಲಕರ ಸ್ಮಾರಕೋತ್ಸವವನ್ನು ಅತ್ಯಂತ ವೈಭವದಿಂದ ಆಚರಿಸಿದರು ಬೆಳಿಗ್ಗೆ ಜಯಪ್ರಕಾಶ ಮಂದಿರದಲ್ಲಿ ಧ್ವಜಾರೋಹಣ ನಡೆಯಿತು. ಅನಂತರ ದಿವ್ಯವಾಗಿ ಅಲಂಕರಿಸಲ್ಪಟ್ಟಿದ್ದ ಎತ್ತಿನ ಬಂಡಿಯಲ್ಲಿ ತಿಲಕರ ಭಾವಚಿತ್ರವನ್ನಿಟ್ಟು ಮಂಗಳ ವಾದ್ಯಗಳೊಡನೆ ಮೊಹಲ್ಲೆಯ ಬೀದಿಗಳಲ್ಲೆಲ್ಲಾ ವೈಭವಯುತವಾದ ಮೆರವಣಿಗೆಯನ್ನು ನಡೆಸಿದರು

ಸಂಜೆ ಶ್ರೀ ಅಗರಂ ರಂಗಯ್ಯನವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯಿತು. ಪ್ರಾರ್ಥನೆ ಮತ್ತು ಸ್ವಾಗತಗಳಾದ ಮೇಲೆ ರಾಷ್ಟ್ರ ನಾಯಕರುಗಳಿಂದ ಬಂದಿದ್ದ ಸಂದೇಶಗಳನ್ನು ಓದಲಾಯಿತು ಸುಪ್ರಸಿದ್ಧ ವಕೀಲರಾದ ಶ್ರೀ ಎಂ ಎ ದೊರಸ್ವಾಮಿ ಅಯ್ಯಂಗಾರ್ಯರವರೂ ಮೈ|| ಕಾಂ|| ಕಾರ್ಯದರ್ಶಿಗಳಾದ ಶ್ರೀ ಟೀ ರಂ. ಪ್ರಾಣೇಶರಾಯರೂ ಲೋಕಮಾನ್ಯರ ಜೀವನ ಚರಿತ್ರೆ ಮತ್ತು ಅದರಿಂದ ತರುಣರು ಕಲಿಯಬೇಕಾದ ಅಂಶಗಳ ವಿಚಾರವಾಗಿ ಹೃದಯಂಗಮವಾದ ಭಾಷಣಗಳನ್ನು ಮಾಡಿದರು ಸಂಘವು ನಡೆಸುತ್ತಿರುವ ಕಾರ್ಯಕಲಾಪಗಳ ವಿವರಗಳನ್ನು ಶ್ರೀ ಜಿ. ಎಸ್ ಸುಬ್ರಹ್ಮಣ್ಯಂರವರು ತಿಳಿಸಿ ಮಹಾಜನರು ಹೆಚ್ಚು ಹೆಚ್ಚಾಗಿ ಪ್ರೋತ್ಸಾಹಿಸಬೇಕೆಂದು ಪ್ರಾರ್ಥಿಸಿದರು.

ತಿಲಕರು ಮಾಡಿರುವ ಅಪಾರ ಸೇವೆ ಮತ್ತು ಸಾರಿ ಕೊಟ್ಟಿರುವ ಮೇಲ್ಪಂಕ್ತಿಯನ್ನು ತರುಣ ತಲೆಮಾರು ಅನುಕರಿಸಿ ಸ್ವಾತಂತ್ರ್ಯ ಸಾಧನೆಗೆ ನೆರವಾಗಬೇಕೆಂದು ಅಧ್ಯಕ್ಷರು ಹೇಳಿದರು ಮನೋಹರವಾದ ಕಾನ್ಸರ್ಟ್ ಸಂಗೀತವು ನಡೆದು ಧನ್ಯವಾದಗಳಾದ ಮೇಲೆ ವಂದೇಮಾತರಂ ಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

"ಟಾಂಗಾವಾಲಾ"ಗಳಿಗೆ ಬುದ್ಧಿವಾದ

ನೆನ್ನೆ ಸಂಜೆಯೂ ಸಹ ಮೈಸೂರು ನಗರದ ಟಾಂಗಾವಾಲಗಳ ಸಭೆಯನ್ನು ಟೌನ್ ಹಾಲ್ ಮೈದಾನದಲ್ಲಿ ಸೇರಿಸಿ ಹಾಗಳಾದ ಮಹಮದ್‌ಸೇಟ್ ಮತ್ತು ಮೀರ್‌ನೂರ್ ಸಾಹೇಬರವರು ಬುದ್ಧಿವಾದಗಳನ್ನು ಹೇಳಿ, ಸಂಘವನ್ನು ಸ್ಥಾಪಿಸಿ ಅದರ ಮೂಲಕ ತಕ್ಕ ಪರಿಹಾರ ಪಡೆಯಬೇಕೆಂದು ತಿಳಿಸಿದರು.

ಕೈ ಮಗ್ಗದ ಬಟ್ಟೆಗೆ ಒತ್ತಾಯವೇ ?

ಬಟ್ಟೆಯನ್ನು ಕೊಳ್ಳುವಾಗ ಸ್ವಲ್ಪ ಭಾಗ ಕೈ ಮಗ್ಗದ ಬಟ್ಟೆಯನ್ನು ಕೊಳ್ಳಲೇ ಬೇಕೆಂಬ ಕಟ್ಟಾಜ್ಞೆ ಯವಿದ್ದುದು ಸರಿಯಲ್ಲ ಕೈ ಮಗ್ಗದ ಬಟ್ಟೆ ಬೆಲೆ ಬಹಳ ದುಬಾರಿಯಾಗಿದೆ ಇದರಿಂದ ಬಡವರಿಗೆ ಬಹಳ ತೊಂದರೆಯಾಗಿದೆ ಮುಸ್ಲಿಮರು ರಂಜಾನ್ ಕೋಟಾಗಳಲ್ಲಿ ಕೈ ಮಗ್ಗದ ಬಟ್ಟೆ ತೆಗೆದುಕೊಳ್ಳಬೇಕಾಗಿಲ್ಲವೆಂದು ಸರ್ಕಾರದವರೇ ಹೇಳಿರುವಂತೆ ಗೌರಿ, ಗಣೇಶ ಕೋಟಾಗಳಿಗೂ ಅದೇ ರೀತಿ ಉದಾರತೆ ತೋರಿಸಿ ಬಡ ಸಂಸಾರಿಗಳಿಗೆ ಉಪಕಾರ ಮಾಡಬೇಕಾಗಿದೆ.

—ಒಬ್ಬ ಬಡ ಸಂಸಾರಿ

ಕೇಂದ್ರ ಸರ್ಕಾರದ ಮಂತ್ರಿಗಳಿಗೆ ಚೂರಿ ಇರಿತ

ಕೇಂದ್ರ ಹೊಸ ಸರ್ಕಾರದ ಸದಸ್ಯರಾದ ಸರ್ ಷಫತ್ ಅಹಮದ್ ಖಾನರನ್ನು ಸಿಮ್ಲಾದಲ್ಲಿ ಮೊನ್ನೆ ರಾತ್ರಿ ಚೂರಿಯಿಂದ ಇರಿದರೆಂದು ವರದಿಯಾಗಿದೆ ಅವರು ಮೊನ್ನೆ ರಾತ್ರಿ ೮-೩೦ ರಲ್ಲಿ ಗಾಳಿ ಸಂಚಾರ ಮುಗಿಸಿಕೊಂಡು ಬಿಡಾರಕ್ಕೆ ಹಿಂತಿರುಗುತ್ತಿದ್ದಾಗ ಇಬ್ಬರು ಯುವಕರು ಖಾನರು ಮೇಲೆ ಬಿದ್ದು ತಲೆ, ಎದೆ ಮತ್ತು ಕತ್ತು ಮುಂತಾದ ೭ ಜಾಗಗಳಲ್ಲಿ ಹರಿತವಾದ ಚೂರಿಯಿಂದ ಇರಿದು ಪರಾರಿಯಾದರೆಂದು ಗೊತ್ತಾಗಿದೆ ಪಕ್ಕದಲ್ಲೇ ಹಾದು ಹೋದ ರಿಕ್ಷಾದವರು ಖಾನರನ್ನು ಅವರ ಬಿಡಾರಕ್ಕೆ ಒಯ್ದರು ಈಗ ಖಾನರು ಆಸ್ಪತ್ರೆಯಲ್ಲಿ ಗುಣ ಹೊಂದುತ್ತಿದ್ದಾರೆಂದು ತಿಳಿದು ಬಂದಿದೆ ಸರ್ ಅಹಮದ್‌ರವರು ಕಳೆದ ತಿಂಗಳಲ್ಲಿ ಲೀಗಿಗೆ ರಾಜೀನಾಮೆ ಇತ್ತಿದ್ದರು.

ವೈಶ್ಯಪತ್ರಿಕೆ ವಾರ್ಷಿಕೋತ್ಸವ

ಮೈಸೂರು ೨೭

ರಾಜಧಾನಿಯಲ್ಲಿ ಹೊರಡುತ್ತಿರುವ ವೈಶ್ಯಪತ್ರಿಕೆಯ ಆರನೆ ವಾರ್ಷಿಕೋತ್ಸವ ಸಮಾರಂಭವು ಮೊನ್ನೆ ಮತ್ತು ನೆನ್ನೆ ದಿನ ಶ್ರೀ ಕನ್ನಿಕಾ ಪರಮೇಶ್ವರಿ ದೇವಸ್ಥಾನದಲ್ಲಿ ನಡೆಯಿತು ಪ್ರಭಾತ ಫೇರಿ ಧ್ವಜಾರೋಹಣ ಕಾರ್ಯಕ್ರಮಗಳು ನಡೆದವು ಕ್ರೀಡಾಸ್ಪರ್ಧೆಗಳೂ, ಚರ್ಚಾಗೋಷ್ಠಿಗಳೂ, ಏರ್ಪಟ್ಟು ಸ್ಪರ್ಧೆಗಳಲ್ಲಿ ವಿಜಯಗಳಿಗೆ ಬಹುಮಾನಗಳನ್ನು ಕೊಡಲಾಯಿತು. ಮೊದಲನೇ ದಿವಸದ ಸಮಾರಂಭಕ್ಕೆ ಶ್ರೀ ಬಿ ಎಲ್. ಈಶ್ವರಗುಪ್ತರೂ, ಎರಡನೆಯ ಸಮಾರಂಭಕ್ಕೆ ಡಾ|| ನೊಂತಿಸಿದ್ದಪ್ಪ ಶ್ರೇಷ್ಠಿಯವರೂ ಅಧ್ಯಕ್ಷರಾಗಿದ್ದರು

ಹಬ್ಬಕ್ಕೆ ಬಟ್ಟೆ ಸರಬರಾಜು

ಗೌರಿ, ಗಣೇಶ ಹಬ್ಬಗಳಿಗಾಗಿ ಮಹಾಜನರಿಗೆ ಬಟ್ಟೆ ಒದಗಿಸಲು ರಾಜಧಾನಿಯ ಬೇರೆ ಬೇರೆ ಮೊಹಲ್ಲಾಗಳಲ್ಲಿ ೧೩ ಕಡೆ ಏರ್ಪಾಡು ಮಾಡಲಾಗಿದ ಪಂಚೆ, ಸೀರೆ, ವಾಯಿಲ್ ಮತ್ತು ಚೀಂಟ್ಸ್‌ಗಳನ್ನು ಕೊಡಲಾಗುವುದು. ಕೈ ಮಗ್ಗದ ಬಟ್ಟೆಗಳನ್ನು ತೆಗೆದು ಕೊಳ್ಳಬೇಕೆಂಬ ನಿರ್ಬಂಧವೇನೂ ಇಲ್ಲ. ಈ ವಿಚಾರವಾಗಿ ಹಲವು ಜನರ ಪತ್ರಗಳೂ, ಈ ದಿನ ಸಮಾಲೋಚನೆ ನಡೆಸಿ ಮೇಲ್ಕಂಡ ನಿರ್ಧಾರಕ್ಕೆ ಬಂದಿರುವರು

ಹೊಸ ಸರ್ಕಾರಕ್ಕೆ ಒಳಾಡಳಿತ ಸ್ವಾತಂತ್ರ್ಯ

ಮೈಸೂರಿಯರು ಮೊನ್ನೆ ರಾತ್ರಿ ಆಕಾಶವಾಣಿಯಲ್ಲಿ ಭಾಷಣ ಮಾಡುತ್ತಾ ಭಾರತದ ದಿನಚರಿ ಆಡಳಿತದಲ್ಲಿ ಹೊಸ ಸರ್ಕಾರಕ್ಕೆ ಪೂರ್ಣ ಸ್ವಾತಂತ್ರ್ಯ ದಯಪಾಲಿಸುವಂತೆ ಚಕ್ರವರ್ತಿ ಸರ್ಕಾರದ ಘೋಷಣೆಯನ್ನು ತಾವು ಸಂಪೂರ್ಣವಾಗಿ ಜಾರಿಗೆ ತರುವುದಾಗಿ ಭರವಸೆ ಇತ್ತರು ಲೀಗು ಯಾವಾಗಬೇಕಾದರೂ ತನ್ನ ೫ ಸದಸ್ಯರನ್ನು ಮಂತ್ರಿಮಂಡಲಕ್ಕೆ ಕಳುಹಿಸಬಹುದೆಂದೂ, ೫ ಹೆಸರುಗಳು ಕಮಗೂ, ಚಕ್ರವರ್ತಿಗಳಿಗೂ ಸಮಾಧಾನಕರವಾಗಿದ್ದರೆ ಮಂತ್ರಿಮಂಡಲಕ್ಕೆ ಯಾವಾಗಲಾದರೂ ಅವರನ್ನು ತೆಗೆದುಕೊಳ್ಳಲಾಗುವುದೆಂದೂ ಬಹುಮತದ ಆಧಿಕಾರಬಲದಿಂದ ಲೀಗನ್ನು ತುಳಿದುಬಿಡಲಾಗುವುದೆಂಬ ಶಂಕೆಯು ನಿರಾಧಾರವಾದದ್ದೆಂದೂ, ಉಭಯ ಪಕ್ಷಗಳ ಸಹಕಾರದಿಂದ ರಾಷ್ಟ್ರನಿರ್ಮಾಪಣೆಯಾಗಬೇಕಾಗಿದೆಯೆಂದೂ ಅವರು ಹೇಳಿ, ಲೀಗು ತನ್ನ ಧೋರಣೆಯನ್ನು ಬದಲಾಯಿಸಿ ಹೊಸ ಸರಕಾರದಲ್ಲಿ ಸೇರಬೇಕೆಂದು ಅವರು ಪ್ರಾರ್ಥಿಸಿದರು. ಕಲ್ಕತ್ತ ದುರಂತದ ಬಗ್ಗೆ ತಮ್ಮ ವಿಷಾದವನ್ನು ಸೂಚಿಸಿ ಭಾರತ ಸ್ವಾತಂತ್ರ್ಯದ ಗುರಿಯನ್ನು ಮುಟ್ಟುತ್ತಿರುವಾಗ ಲವಲೇಶವೂ ಹೆಚ್ಚಿನ ಹಾಳ್ಕೆಯನ್ನು ಜನರು ಅನುಸರಿಸಬೇಕೆಂದು ಹೇಳಿದರು. ಹೊಸ ಸರ್ಕಾರವು ಯಾವ ಪಕ್ಷಕ್ಕೂ ಸೇರಿದ್ದಲ್ಲವೆಂದೂ, ಯುದ್ಧಪೂರ್ವಕಾಲದ ಶಾಂತಿಯನ್ನು ಸ್ಥಾಪಿಸುವುದೆಂದು ಅವರು ತಿಳಿಸಿದರು ರಾಜ್ಯಾಂಗ ರಚನಾ ಸಭೆಯ ಕಾರ್ಯಕಲಾಪಗಳು ಆರಂಭವಾಗುವುದೆಂದೂ ಜಾತಿಯ ವಿಷಯಗಳಲ್ಲಿ ಅಭಿಪ್ರಾಯವ್ಯತ್ಯಾಸವಾದರೆ ಅಗ್ಗಿ ಅದನ್ನು ಫೆಡರಲ್‌ಕೋರ್ಟಿನ ನಿರ್ಧಾರಕ್ಕೆ ಬಿಡಲು ಕಾಂಗ್ರೆಸ್ಸು ಒಪ್ಪಿರುವುದೆಂದೂ ಅದ್ದರಿಂದ ಲೀಗು ತನ್ನ ಸಹಕಾರ ನೀಡುವುದು ಅಗತ್ಯವೆಂದೂ ಅವರು ಹೇಳಿ ಭಾರತೀಯರೆಲ್ಲ ತಮ್ಮ ಜವಾಬ್ದಾರಿಯನ್ನರಿತು ತಮ್ಮ ದೇಶವು ಬಲಿಷ್ಠವೂ ಸ್ವತಂತ್ರವೂ ಆಗುವಂತೆ ಮಾಡಬೇಕೆಂದೂ ಅಪೇಕ್ಷಿಸಿದರು.

ಅಹಮದಾಬಾದಿನಲ್ಲಿ ಗಲಭೆ

ಕಳೆದ ಸೋಮವಾರದಿಂದ ಗಲಭೆಯು ಅಲ್ಲಲ್ಲಿ ನಡೆಯುತ್ತಲೇ ಇದೆ. ಕರ್ಫ್ಯೂ ಆಜ್ಞೆಯನ್ನು ಜಾರಿ ಮಾಡಲಾಗಿದೆ. ನಿನ್ನೆ ಮತ್ತೆ ಗಲಭೆ ನಡೆದು ಪೊಲೀಸರ ಗುಂಡಿನೇಟಿನಿಂದ ಹಲವು ಜನರು ಸತ್ತು ಅನೇಕ ಜನರಿಗೆ ಗಾಯ

ಎಸ್. ಐ. ರೈಲ್ವೆ ಮುಷ್ಕರ

ಮೊನ್ನೆ ಮಧ್ಯ ರಾತ್ರಿಯಿಂದ ಸೌತ್ ಇಂಡಿಯನ್ ರೈಲ್ವೆ ಮುಷ್ಕರ ಆರಂಭವಾಯಿತು ಪ್ರಯಾಣಿಕರು ಸಂಚರಿಸುವ ರೈಲುಗಳನ್ನೆಲ್ಲ ವಜಾ ಮಾಡಲಾಗಿದೆ ಆಹಾರವನ್ನು ಸಾಗಿಸಲು ಪ್ರತ್ಯೇಕ ವ್ಯವಸ್ಥೆ ಮಾಡಲು ಪ್ರಯತ್ನ ಸಾಗುತ್ತಿದೆ. ಪತ್ರಿಕೆಗಳ ಪಾರ್ಸಲುಗಳನ್ನು ಸಾಗಿಸಲು ಅನುಕೂಲ ಕಲ್ಪಿಸಲಾಗುವುದೆಂದು ಪ್ರಧಾನಿ ಶ್ರೀ ಪ್ರಕಾಶಂರವರು ತಿಳಿಸಿದ್ದಾರೆ

ಅಂಬಾ ಪೂಜೆ

ಸ್ವಂ ವ] ನಂಜನಗೂಡು ೨೫

ಕಳೆದ ಗುರುವಾರ ಕುರುಬಗೇರಿ ಗರಡಿಯಲ್ಲಿ ಅಂಬಾ ಪೂಜೆಯು ಮ್ಯಾಜಿಸ್ಟ್ರೇಟ್ ಶ್ರೀ ರುದ್ರಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು ವಿದ್ವಾನ್ ಶ್ರೀ ಪುಟ್ಟಸ್ವಾಮಯ್ಯನವರು ತಮ್ಮ ಅಪೋಘ ಸಂಗೀತದಿಂದ ಸಭಿಕರನ್ನು ಆನಂದಗೊಳಿಸಿದರು.

ಈ ಊರಿನ ಉಪಾಧ್ಯಕ್ಷ ಶ್ರೀ ವೈ ಕೆ ಎಸ್ ಲಕ್ಷ್ಮಣಶೆಟ್ಟರು ಆದಿಜಾಂಬವರಿಗೆ ಮುಕುವರ್ಜಿ ವಹಿಸಿ ಕೂಲಿಗಳ ಮೂಲಕ ಬಟ್ಟೆ ಕೊಡಿಸುತ್ತಿರುವರು,

ಕ್ರಿಕೆಟ್

ಈ ದಿನ ನಂಜನಗೂಡು ಸ್ಟೂಡೆಂಟ್ಸ್ ಕ್ರಿಕೆಟ್ ಕ್ಲಬ್ಬಿನವರಿಗೂ ಶ್ರೀರಂಗಪಟ್ಟಣದ ಸ್ಟೂಡೆಂಟ್ಸ್ ಲೀಗ್ ಕ್ರಿಕೆಟ್ ಕ್ಲಬ್ಬಿನವರಿಗೂ ನಂಜನಗೂಡ, ಹೈಸ್ಕೂಲು ಮೈದಾನದಲ್ಲಿ ಪಂದ್ಯ ನಡೆದು ನಂಜನಗೂಡು ಕ್ಲಬ್ಬಿನವರು ೬ ವಿಕೆಟ್ಟುಗಳು ಮತ್ತು ೧೧ ರನ್ನುಗಳಿಂದ ಜಯ ಶೀಲರಾದರು,

ಕಲ್ಕತ್ತಾವಿಗೆ ವೈಸರಾಯರ ಭೇಟಿ

ವೈಸರಾಯರು ನಿನ್ನೆ ಮಧ್ಯಾಹ್ನ ಕಲ್ಕತ್ತಾ ನಗರಕ್ಕೆ ವಿಮಾನದಲ್ಲಿ ತೆರಳಿ ಗಲಭೆ ಪ್ರದೇಶಗಳನ್ನು ಪರಿಶೀಲಿಸಿದರು ನಗರದಲ್ಲಿ ಈಗ ಪೂರ್ಣ ಶಾಂತಿ ಸ್ಥಾಪನೆಯಾಗಿರುವುದೆಂದು ಹೇಳಲಾಗಿದೆ. ಸಭೆ, ಮೆರವಣಿಗೆ ಮತ್ತು ಆಯುಧಗಳನ್ನು ಹಿಡಿದು ತಿರುಗಾಡುವುದನ್ನು ಪ್ರತಿಬಂಧಿಸಲಾಗಿದೆ ಅಧಿಕಾರಿ ಪ್ರಕಟಣೆಯಂತೆ ೩೦೩೦ ಹೆಣಗಳ ಲೆಕ್ಕ ಸಿಕ್ಕಿದೆ ೧೧೦೭೪ ಮಂದಿಯ ದಸ್ತಗಿರಿ ಆಗಿದೆ ೫೦ ಸಹಸ್ರ ಮಂದಿ ಕಲ್ಕತ್ತ ನಗರ ಬಿಟ್ಟು ಹೊರಗೆ ಹೊರಟು ಹೋಗಿದ್ದಾರೆ.

ಬಹಿರಂಗ ಸಭೆ

ಭಾರತ ರಾಜ್ಯಾಂಗ ಸಮಿತಿಗೆ ಮೈಸೂರಿನ ಪ್ರತಿನಿಧಿಗಳನ್ನು ಕಳುಹಿಸುವ ವಿಚಾರದಲ್ಲಿ ದಿವಾನರು ಹೇಳಿರುವ ಅಭಿಪ್ರಾಯವನ್ನು ಖಂಡಿಸಿ ಜವಾಬ್ದಾರಿ ಸರ್ಕಾರವನ್ನೇ ಕಲ್ಪಿಸಬೇಕೆಂದು ಒತ್ತಾಯ ಪಡಿಸಲು ಇದೇ ಭಾನುವಾರ ಸಂಜೆ ೩. ೬.೦೦ ಟೌನ್‌ಹಾಲ್ ಉತ್ತರದ ಮೈದಾನದಲ್ಲಿ ಬಹಿರಂಗ ಸಭೆ ನಡೆಯುವುದೆಂದು ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ಚನ್ನಯ್ಯನವರು ತಿಳಿಸಿರುತ್ತಾರೆ.

ಯುಗೋಸ್ಲಾವಿಯಾ ಸರ್ಕಾರಕ್ಕೆ ಅಮೆರಿಕಾ ಕಳುಹಿದ್ದ ಎಚ್ಚರಿಕೆ ಒಬ್ಬರ ಸರ್ಕಾರ ತನ್ನ ಒತ್ತೆಯನ್ನಿತ್ತು ಅಮೆರಿಕದ ವಿಮಾನವನ್ನು ಹೊಡೆದುರುಳಿಸಿದ ಸಂದರ್ಭದಲ್ಲಿ ಯುಗೋಸ್ಲಾವಿಯಾ ಪ್ರಧಾನಿ ಟೀಟೋರವರ ತಮ್ಮ ವಿಷಾದವನ್ನು ಸೂಚಿಸಿದ್ದಾರೆ

ವಾಗಿದೆ ರಾತ್ರಿ ಮನೆ ಬಿಟ್ಟು ಹೊರಗೆ ಬರಬಾರದೆಂದು ನಿಷೇಧಾಜ್ಞೆ ಜಾರಿಯಲ್ಲಿದೆ.

ಸಾಧ್ವಿ

ತಾ|| ೨೬-೮-೪೬ ಸೋಮವಾರ

ವೈಸರಾಯರ ಮನವಿ

ಹೊಸ ಕೇಂದ್ರ ಸರ್ಕಾರವನ್ನು ರಚಿಸಿದ ಮೇಲೆ ಮೊನ್ನೆ ರಾತ್ರಿ ವೈಸರಾಯರು ದೇಶದ ಎಲ್ಲ ಪಂಗಡದವರನ್ನೂ ಕುರಿತು ಒಂದು ಮನವಿಯನ್ನು ಮಾಡಿಕೊಂಡರಷ್ಟೆ. ಅದರಲ್ಲಿ ರಾಷ್ಟ್ರ ನಾಯಕರು ಪರಿಶೀಲಿಸಿ ಪುರಸ್ಕರಿಸಬೇಕಾದ ಅನೇಕ ಅಂಶಗಳಿವೆ

ಹೊಸ ಸರ್ಕಾರವು ಒಳ ಆಡಳಿತ ವಿಚಾರಗಳಲ್ಲಿ ಸಂಪೂರ್ಣ ಸ್ವಾತಂತ್ರ್ಯದಿಂದ ವರ್ತಿಸಬಹುದೆಂದು ವೈಸರಾಯರು ಹೇಳಿರುವುದು ಬಹಳ ಪ್ರಾಮುಖ್ಯವಾದ ವಿಚಾರ. ತಾತ್ಕಾಲಿಕ ಸರ್ಕಾರಕ್ಕೆ ಇದಕ್ಕಿಂತಲೂ ಹೆಚ್ಚಿನ ಅಧಿಕಾರವು ದೊರೆಯುವುದು ಸಾಧ್ಯವಲ್ಲ ವೈಸರಾಯರು ತಮ್ಮ ವಿಶೇಷಾಧಿಕಾರವನ್ನು ಚಲಾಯಿಸುವ ಪ್ರಸಂಗವು ಒದಗುವುದಿಲ್ಲವೆಂದು ನೆಹರೂರವರು ಸೂಚಿಸಿದ್ದಾರೆ ಹಾಗೆ ಅವರು ಚಲಾಯಿಸಿದರೆ ಬಿಕ್ಕಟ್ಟು ಪ್ರಾಪ್ತವಾಗಬಹುದೆಂದೂ ತಿಳಿಸಿದ್ದಾರೆ ಹೊಸ ಸರ್ಕಾರವನ್ನು ವಸ್ತುತಃ ಡೊಮಿನಿಯನ್ ಸರ್ಕಾರದ ರೀತಿಯಲ್ಲಿಯೇ ಕಾಣಲಾಗುವುದೆಂದು ಬ್ರಿಟಿಷ್ ಸರ್ಕಾರದವರು ಭರವಸೆ ಇತ್ತಿರುವುದರಿಂದ ಈ ವಿಧವಾದ ಬಿಕ್ಕಟ್ಟಿಗೆ ಅವಕಾಶವಾಗಲಾರದೆಂದು ನಂಬಲಾಗಿದೆ.

ಮುಖ್ಯವಾಗಿ ಮುಸ್ಲಿಂ ಲೀಗಿನವರನ್ನು ಕುರಿತು ವೈಸರಾಯರು ವಿಶೇಷವಾದ ಒತ್ತಾಯವನ್ನು ಮಾಡಿರುತ್ತಾರೆ ಈಗಲೂ ಲೀಗಿನವರು ತಮ್ಮ ನಿರ್ಧಾರವನ್ನು ಪುನಃ ಪರಿಶೀಲಿಸಿ ಹೊಸ ಸರ್ಕಾರಕ್ಕೆ ಸಹಕಾರ ನೀಡಬೇಕೆಂದು ಕೋರಿದ್ದಾರೆ ಲೀಗಿನವರಿಗಾಗಿ ಸದಾ ಬಾಗಿಲನ್ನು ತೆಗೆದಿಟ್ಟಿರುವುದಾಗಿಯೂ ಹೇಳಿದ್ದಾರೆ. ಕಾಂಗ್ರೆಸ್ಸಿನವರೂ ಸಹ ಇದಕ್ಕೆ ಒಪ್ಪಿದ್ದಾರೆ. ಇದು ವಿಶಾಲ ನೀತಿಯನ್ನು ಪ್ರಕಟಗೊಳಿಸುತ್ತದೆ. ಲೀಗಿನವರು ಈ ಸದವಕಾಶವನ್ನು ಉಪಯೋಗಿಸಿಕೊಳ್ಳುವುದು ಯುಕ್ತವಾಗಿದೆ.

ರಾಜ್ಯಾಂಗ ವಿಚಾರಗಳಲ್ಲಿ ಬ್ರಿಟಿಷ್ ನಿಯೋಗದವರು ಮಾಡಿದ ಘೋಷಣೆಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದು ಸಹ ವೈಸರಾಯರು ತಿಳಿಸಿದ್ದಾರೆ. ರಾಜ್ಯಾಂಗ ಸಮಿತಿಯಲ್ಲಿ ಭಿನ್ನಾಭಿಪ್ರಾಯಗಳುಂಟಾದರೆ ಅವುಗಳನ್ನು ತೀರ್ಮಾನಿಸಲು ಫೆಡರಲ್ ಕೋರ್ಟಿನ ವಿಮರ್ಶೆಗೆ ಒಪ್ಪಿಸಲು ಕಾಂಗ್ರೆಸ್ಸು ಸಮ್ಮತಿಸಿದೆಯೆಂದೂ ತಿಳಿಸಲಾಗಿದೆ ಆದುದರಿಂದ ಲೀಗಿನವರು ಯಾವ ಸಂಶಯಕ್ಕೂ ಎಡೆಗೊಡದೆ ಹೊಸ ಸರ್ಕಾರದಲ್ಲಿ ಸೇರಲು ಅವಕಾಶ ಕಲ್ಪಿಸಲಾಗಿದೆ.

ವೈಸರಾಯರ ಹೇಳಿಕೆಯನ್ನು ಸಾವಧಾನವಾಗಿ ಪರಿಶೀಲಿಸುತ್ತಿರುವುದಾಗಿ ಮಿ|| ಜಿನ್ನಾರವರು ಹೇಳಿದ್ದಾರೆ. ಕಾಂಗ್ರೆಸ್ಸಿನವರೂ, ಸರ್ಕಾರದವರೂ ಉದಾರ ನೀತಿಯುಳ್ಳ ಎಷ್ಟು ದೂರ ಹೋಗಬಹುದೋ ಅಷ್ಟು ಹೋಗಿದ್ದಾರೆ. ದೇಶದ ಎಲ್ಲ ಪಂಗಡಗಳವರ ಸಹಕಾರವು ಈಗ ಅತ್ಯಗತ್ಯವಾಗಿದೆ ಮುಂದೆ ರಚನೆಯಾಗಲಿರುವ ರಾಜ್ಯಾಂಗ ಶಾಸನದ ಅನುಸರಣಕ್ಕೆ ಪೀಠಿಕೆಯಾಗಿ ತಾತ್ಕಾಲಿಕ ಸರ್ಕಾರವನ್ನು ರಚಿಸಲಾಗಿದೆ. ಆದುದರಿಂದ ಮುಸ್ಲಿಂ ಲೀಗಿನವರು ಇಂದಿನ ಸ್ಥಿತಿಗತಿಗಳಿಗನುಗುಣವಾಗಿ ತಮ್ಮ ವರ್ತನೆಯನ್ನು ಬದಲಾಯಿಸಿಕೊಂಡು ಹೊಸ ಆಡಳಿತದಲ್ಲಿ ಭಾಗಿಗಳಾಗಲೆಂದು ಸಕಲ ಹಿತೈಷಿಗಳೂ ಆಶಿಸುತ್ತಿದ್ದಾರೆ.

ವಾರ ಭವಿಷ್ಯ

(ಶ್ರೀ ನಿತ್ಯಾನಂದ ಸ್ವಾಮಿಗಳವರಿಂದ)

೨೬-೮-೪೬ ರಿಂದ ೧-೯-೪೬ ರ ವರೆಗೆ

ಮೇಷ—ಶರೀರ ಸ್ಥಿತಿಯು ಚೆನ್ನಾಗಿರುವುದು. ಆರ್ಥಿಕ ಸ್ಥಿತಿ ಉತ್ತಮಗೊಳ್ಳುವುದು. ನಿಷ್ಕಾರಣವಾಗಿ ಹೊರಿಸಲ್ಪಡುವ ತೊಂದರೆಗಳನ್ನು ಧೈರ್ಯದಿಂದ ಎದುರಿಸಿ. ವ್ಯಾಪಾರ, ಉದ್ಯೋಗಗಳಲ್ಲಿ ಲಾಭ ಆಪ್ತರ ಭೇಟಿಯಿಂದ ಆನಂದ

ವೃಷಭ—ನಾನಾ ಯೋಜನಾ ತರಂಗಗಳ ಮಧ್ಯೆ ಸಿಲುಕಿ ತಾಪತ್ರಯ ಪಡುವಿರಿ. ಇದರಿಂದ ಕೆಲಸಗಳೊಂದೂ ಪೂರ್ತಿಯಾಗುವುದಿಲ್ಲ ಆರೋಗ್ಯವೇನೋ ಚೆನ್ನಾಗಿರುವುದು ಆದರೆ ಮನಸ್ಸಿಗೆ ನೆಮ್ಮದಿ ಮಾತ್ರ ಇಲ್ಲ ಅನಿರೀಕ್ಷಿತ ಧನ ಲಭಿಸುವುದು.

ಮಿಥುನ—ಆರ್ಥಿಕ ಯೋಜನೆಗಳು ತಲೆ ಕೆಳಗಾಗಿ, ನಿಮ್ಮ ಮನಸ್ಸೇ ಸ್ಥಿಮಿತದಲ್ಲಿರದೆ ಅಲ್ಲೋಲ ಕಲ್ಲೋಲವಾಗುವುದು ಆರೋಗ್ಯ ಸಹ ಉತ್ತಮವಿಲ್ಲ. ವ್ಯಾಪಾರ, ವ್ಯವಹಾರಗಳಲ್ಲಿ ಹಾನಿ ವಾರಾಂತ್ಯದಲ್ಲಿ ಗಡಿಬಿಡಿ, ಕಲಹ ಶಾಂತ ಚಿತ್ತರಾಗಿ ವಾರವನ್ನು ಕಳೆಯಿರಿ.

ಕಟಕ—ಕೊನೆಗೂ ಜಯ ನಿಮಗೇ ಲಭಿಸಿ ನಿಮ್ಮ ಶತ್ರುಗಳೆಲ್ಲಾ ನಿರಾಶರಾಗುವರು. ಆರೋಗ್ಯ ಚೆನ್ನಾಗಿರುವುದು. ಆರ್ಥಿಕ ಸ್ಥಿತಿ ಉತ್ತಮಗೊಂಡು, ಹೊಸ ಕೆಲಸಗಳಲ್ಲಿ ಕೈ ಹಾಕಿ ಲಾಭ ಗಳಿಸುವಿರಿ. ಮೇಲಧಿಕಾರಿಗಳಿಂದಲೂ, ಹಿತ ಮಿತ್ರರಿಂದಲೂ ಸನ್ಮಾನಿತರಾಗುವಿರಿ

ಸಿಂಹ ಒಂದೇ ಸಮನಾಗಿ ಬಂದೊದಗುವ ತೊಂದರೆಗಳಿಂದ ಮನಸ್ಸಿಗೆ ವ್ಯಾಕುಲವಾಗುವುದು. ಆರೋಗ್ಯ ಚೆನ್ನಾಗಿಲ್ಲದೆ ನಿದ್ರಾನಾಶ, ಅಧಾಮುಕ್ತಾಂತ ಮರ್ನದ ಬಾಧೆ ಹೆಚ್ಚುವುದು ವ್ಯಾಪಾರಾದಿ ಉದ್ಯೋಗಗಳಲ್ಲಿ ಕೈ ಕೆಳಗಿನವರ ಅಸಹಕಾರದಿಂದ ನಷ್ಟ.

ಕನ್ಯಾ—ಗೃಹ ಕಲಹದಿಂದ ನಿಮ್ಮ ಯೋಜನೆಗಳೆಲ್ಲಾ ಕುಸಿದು ಬೀಳುವುವು ಹಣಕಾಸಿನ ಮುಗ್ಗಟ್ಟು ಬಾಧಿಸತೊಡಗುವುದು ನಿಮ್ಮ ಮನೆಯವರೇ ನಿಮ್ಮ ವಿರುದ್ಧ ವರ್ತಿಸುವರು ಆರೋಗ್ಯವೂ ಉತ್ತಮವಾಗಿರದೆ ಮನಸ್ಸಿನಲ್ಲಿ ಚಿಂತೆ ಹುಟ್ಟುವುದು ವೃಥಾ ಕಲಹಕ್ಕೆ ಸಿಕ್ಕಿ ಬೀಳುವಿರಿ

ತುಲಾ—ನಿಮ್ಮ ಶತ್ರುಗಳು ಚೇತರಿಸಿಕೊಂಡು ಪುನಃ ನಿಮಗೆ ತೊಂದರೆ ಕೊಡಲು ಆರಂಭಿಸುವರು ಆರೋಗ್ಯ ಸಾಧಾರಣವಾಗಿರುವುದು. ಆರ್ಥಿಕ ಸ್ಥಿತಿ ಈ ವಾರವೂ ಸರಿ ಹೋಗುವುದಿಲ್ಲ. ನೌಕರಿ, ವ್ಯವಹಾರಗಳಲ್ಲಿ ಬಿಕ್ಕಟ್ಟಿನ ಪರಿಸ್ಥಿತಿ ಉಂಟಾಗುವುದು.

ವೃಶ್ಚಿಕ—ನಿಮ್ಮನ್ನು ಮೋಸ ಪಡಿಸುವ ಉದ್ದೇಶದಿಂದ ಹಲವರು ಪ್ರಯತ್ನಿಸುವರು. ಎಚ್ಚರಿಕೆಯಿಂದ ಅವನ್ನೆಲ್ಲಾ ಎದುರಿಸಿ ಹಣಕಾಸಿನ ಬೆಂಬಲ ದೊರೆಯುವುದು. ಆರೋಗ್ಯ ಸ್ಥಿತಿ ಚೆನ್ನಾಗಿರುವುದು. ವ್ಯಾಪಾರದಲ್ಲಿ ಲಾಭ ಪ್ರವಾಸದಲ್ಲಿ ಶ್ರೇಯಸ್ಸು.

ಧನುಸ್ಸು—ನಿಮ್ಮ ಭವಿಷ್ಯ ರೂಪುಗೊಳ್ಳುವ ಕಾಲ ಬಂದೇ ಬಂದಿತು. ನಿಮ್ಮ ಇಷ್ಟದಂತೆ ಅಭಿವೃದ್ಧಿಯಾಗಿ ಹಣ ದೊರೆಯುವುದು. ನೀವು ಯೋಚಿಸಿರುವ ವ್ಯಾ ಕ್ಕೆ ಮೊದಲು ಮಾಡಲು ಇದೇ ಸುಸ ಯ ಆರೋಗ್ಯ ಉತ್ತಮ; ಮಹ ಶತ್ರು ಬರಲಿದೆ ಪ್ರವಾಸದಲ್ಲಿ ನಷ್ಟವಿ

ಮಕರ—ನಿಮ್ಮ ಬುದ್ಧಿವಂತಿಕೆಯ ಎದುರಾಳಿಗಳು ಬೆರಗಾಗಿ ಮುಗ್ಗರಿ ರು. ವ್ಯಾಪಾರ, ಉದ್ಯೋಗಗಳಲ್ಲಿ ಚೆ ಗಿ ಲಾಭ ದೊರೆಯುವುದು ಆರೋಗ್ಯ ತ್ತಮವಾಗಿರುವುದು. ಆಪ್ತರ ಭೇಟಿ ಸ ವಿಸುವುದು. ಆರ್ಥಿಕ ಸ್ಥಿತಿ ಸುಧಾ ವುದು

ಕುಂಭ—ಕೋಪ, ಜಂಭ, ಇವೇ ನವನ ಪ್ರಗತಿಗೆ ಕುಠಾರಗಳು ನೀವು ವುಗಳನ್ನು ತೊರೆದ ಹೊರತು ನಿಮಗೆ ವಿಲ್ಲ ಈ ವಾರ ಆರೋಗ್ಯ ಕೆಡುವು ಹಣಕಾಸಿನ ಮುಗ್ಗಟ್ಟು ಉಂಟಾಗುವು ಪ್ರತಿಸ್ಪರ್ಧಿಗಳ ಕಾಟ ಹೆಚ್ಚಾಗುವುದು.

ಮೀನ—ನಿಮ್ಮ ಉತ್ಸಾಹವೆಲ್ಲಾ ಕ್ಷಣದಂತೆಯೇ ಕುಗ್ಗಿ ಹೋಗಿ ಮನಸ್ಸಿ ಚಿಂತೆ ಹುಟ್ಟುವುದು. ಆರೋಗ್ಯ ಸಾ ಣವಾಗಿರುವುದು. ಕೆಲಸಕಾರ್ಯಗಳ ರೋಧಿಗಳು ತೊಂದರೆ ಕೊಡುವರು

ಅಕ್ಷರಶಃ ವರದಿ

ಕನ್ನಡದಲ್ಲಿ ನಡೆಯುವ ಭಾಷಣಾದಿ ವರದಿಗಳನ್ನು ಶೀಘ್ರಲಿಪಿಯ ಸಹಾಯದಿಂದ ಅಕ್ಷರಶಃ ಬರೆದುಕೊಡುತ್ತೇವೆ

ಕೆ. ಅನಂತಸುಬ್ಬರಾಯ,
ವಿಶ್ವಕರ್ನಾಟಕ ಪ್ರತಿನಿಧಿ, ಮೈಸೂರು.

ಟಿ. ಸಿ. ನಟರಾಜ್
ಔಷಧಾಲಯ

ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದೀಯ ಸಿದ್ಧೌಷಧಗಳೆಲ್ಲವೂ ದೊರೆಯುತ್ತವೆ.

Edited, printed and published by A. R. Nagarajan at the Sadhvi Press D Subbiah Road, Mysore

ಪುನಃ ಬಂದಿವೆ

ಹೊಸ ನಮೂನೆಗಳಲ್ಲಿ

ಪ್ಯೂರ್ ಉಲ್ಲನ್ ಸ್ವೆಟ್ಟರುಗಳು!

ಬನ್ನಿರಿ ಕೊಳ್ಳಿರಿ!! ಸಂತೋಷ ಹೊಂದಿರಿ!!!

ಜಿ. ವಿ. ಸೂರ್ಯನಾರಾಯಣ ಶೆಟ್ಟಿ ಅಂಡ್ ಸನ್ಸ್,

ರೆಡಿಮೇಡ್ ಡ್ರೆಸ್ ಎಂಪೋರಿಯಂ

ಸಯ್ಯಾಜಿರಾವ್ ರಸ್ತೆ ... .. ಮೈಸೂರು.

UNIVERSITY OF MYSORE

Notification No· G· 2-74/46-47

Office of the Universi of Mysore,
Mysore, Dated 20th August 1946

Applications are invited from duly qualified ca didates for the award of four Fellowships to select Arts and Science Graduates of the University for t purpose of pursuing original investigation or Resear in their special subjects.

Applications in triplicate, in the following for should reach the Registrar, University of Myso Mysore on or before the 15th September 1946.

1. Name.
2. Age.
3. Caste or Community.
4. Qualifications (including examinatio passed, name of University, date of pass and class)
5. Present Position.
6. Salary.
7. Previous Service if any.
8. Works published & other particulars if a
9. Special subject in which applicant wishes pursue original investigation or researc

For terms and conditions of award applica may refer to pages 206 & 207 of the Mysore Univ sity Calendar Vol. II for 1939-40.

D S Gordo
Registrar

ಫೋ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಮಂಗಳವಾರ ೨೭—೮—೪೬ [ಸಂಚಿಕೆ ೯೨

ಡಾರ್ಡೆನಲ್ಸ್ ದ್ವೀಪದಲ್ಲಿ ಬ್ರಿಟಿಷ್ ಮಿಲಿಟರಿ ಠಾಣ್ಯ

ಕಳುವು ಪತ್ತೆ

ಮೈಸೂರು ೨೭

ಸಯ್ಯಾಜಿರಾವ್ ರಸ್ತೆಯಲ್ಲಿರುವ ಶ್ರೀ [illegible]ರ್ ರಾಮಾಂಜನೇಯುಲು ಶೆಟ್ಟರ ಮನೆ[illegible]ಲ್ಲಿ ಕೆಲಸ ಮಾಡುತ್ತಿದ್ದ ಸೇಲಮ್ಮನ [illegible]ಯ್ಯಾಮಶೆಟ್ಟಿ ಎಂಬಾತನು ನೊನ್ನೆ [illegible]ತ್ರಿ ಅವರ ಮನೆಯಿಂದ ಒಂದು ಚಿನ್ನದ [illegible]ಟು, ಕೈ ಗಡಿಯಾರ ಮತ್ತು ಬೆಳ್ಳಿ [illegible]ಟ್ಟಿಯನ್ನು (ಒಟ್ಟು ಬೆಲೆ ಸುಮಾರು [illegible]೦೦ ರೂ) ಕದ್ದುಕೊಂಡು ಬೆಂಗಳೂರಿಗೆ [illegible]ಗಿ ಸೇಲಮ್ಮನ ಬಸ್ಸಿನಲ್ಲಿ ಕುಳಿತು [illegible]ಯಾಣ ಮಾಡಲು ಪ್ರಯತ್ನಿಸುತ್ತಿದ್ದಾಗ [illegible]ಮರಾಜ ಪೋಲೀಸಿನವರು ಅತನನ್ನು [illegible]ಡಿಪಟ್ಟಿ ಬಂಧಿಸಿ ನಗರ ನ್ಯಾಯಾಧೀಶರ [illegible]ಂದೆ ಮೊಕದ್ದಮೆ ಹೂಡಿದರು. ಇಂ[illegible] ವಿಚಾರಣೆ ನಡೆದು ಅತನಿಗೆ ೩ ತಿಂಗಳ [illegible] ಶಿಕ್ಷೆ ವಿಧಿಸಲ್ಪಟ್ಟಿತು.

ಟಾಂಗಾ ಸಂಘ

ರಾಜಧಾನಿಯ ಟಾಂಗಾ ಗಾಡಿಯವ[illegible] ಒಂದು ಸಂಘವನ್ನು ಸ್ಥಾಪಿಸಿಕೊಂಡಿ[illegible]ವುದಾಗಿ ತಿಳಿದುಬಂದಿದೆ. ಅವರ ಪೈಕಿ [illegible]ನಿಗೆ ಹಿಂಸೆ ಕೊಟ್ಟರೆಂಬ ಕಾರಣದ [illegible]ಲೆ ಸಂಬಂಧಪಟ್ಟ ಪೋಲೀಸ್ ಅಧಿಕಾ[illegible]ಮೇಲೆ ಕಾರ್ಯಕ್ರಮ ಕೈಗೊಳ್ಳಲಾ[illegible] ಎಂದು ತಿಳಿದುಬಂದಿದೆ.

ಸತ್ಕಾರ ಕೂಟ

ಅಸ್ಥಾನ ವಿದ್ವಾನ್ ಬಿ. ದೇವೇಂದ್ರಪ್ಪನ[illegible]ಗೆ ಶ್ರೀಮನ್ ಮಹಾರಾಜರು "ಗಾನ [illegible]ರದ" ಎಂಬ ಬಿರುದನ್ನು ಅನುಗ್ರಹಿ[illegible]ನ ಸಂತೋಷಾರ್ಥವಾಗಿ ಮೈಸೂರು [illegible]ದ ನಾಯಕ ಜನಾಂಗದವರೂ ಮತ್ತು [illegible]ಂಗದ ವಿದ್ಯಾರ್ಥಿಗಳೂ ಮೈಸೂರಿನಲ್ಲಿ [illegible] ನಜರ್‌ಬಾದ್ ಶ್ರೀ ದುರ್ಗಾದೇವಿ [illegible]ಸ್ಥಾನದಲ್ಲಿ ಸತ್ಕಾರ ಕೂಟವನ್ನು [illegible] ಬೆಳಗ್ಗೆ ಏರ್ಪಡಿಸಿದ್ದರು. ವಿದ್ಯಾರ್ಥಿ [illegible]ನರಸಿಂಹನ್‌ರವರು ಶ್ರೀ ದೇವೇಂದ್ರ[illegible]ವರ ಗುಣಗಾನ ಮಾಡಿದರು. ದೇವಂ[illegible]ರ್ಥನೆಯಿಂದ ಪ್ರಾರಂಭವಾಗಿ ದುರ್ಗಾ[illegible]ಯ ಪೂಜೆ ಅನಂತರ ಸತ್ಕಾರವು [illegible]ಗಿತು.

[illegible] ದೇವೇಂದ್ರಪ್ಪನವರು ತಮ್ಮ ಜನಾಂ[illegible]ಗಳಿಗೆ ವಿಚಾರದಲ್ಲಿ ಸ್ಫೂರ್ತಿದಾಯಕ [illegible]ಣ ಮಾಡಿದರು.

ನಿಮ್ನ ವರ್ಗದವರಿಂದ ಧಿರುಮು ತ್ಯಾಗ

[illegible]ಮ್ನ ವರ್ಗದ ಫೆಡರೇಷನ್ನಿನ ಕಾರ್ಯ [illegible]ಸಮಿತಿಯು ನಿನ್ನೆ ಪೂನಾದಲ್ಲಿ ಸೇರಿ, [illegible] ವರ್ಗದವರು ತಮ್ಮ ಪಕ್ಕ ಬಾಧ್ಯ[illegible] ಸ್ಥಾಪನೆಗಾಗಿ ಶಾಂತಿ ರೀತಿಯ ಚ[illegible] ಹೂಡಬೇಕೆಂದೂ, ಬ್ರಿ॥ ಸರ್ಕಾರ [illegible] ಕೊಡಲ್ಪಟ್ಟ ಬಿರುದು ಬಾವಲಿಗಳನ್ನು [illegible]ಬೇಕೆಂದೂ, ತೀರ್ಮಾನಿಸಿದೆ. [illegible] ಮದ್ರಾಸ್ ಮೇಯರಾದ ದಿವಾನ್ [illegible]ದ್ದೂರ್ ಎನ್. ಶಿವರಾಜ್‌ರವರು ತಮ್ಮ [illegible]ನ್ನು ನಿನ್ನೆ ತ್ಯಜಿಸಿದರು.

ಕ್ರಿಮಿನಲ್‌ಗಳಿಗೆ ಭಾರತೀಯರ ಬಹಿಷ್ಕಾರವೇ?

[illegible]೭ನೇ ಇಸವಿ ಮಾರ್ಚಿ ತಿಂಗಳಲ್ಲಿ [illegible] ಚಕ್ರವರ್ತಿ ದಂಪತಿಗಳು ದಕ್ಷಿಣ [illegible]ಕ್ಕೆ ಭೇಟಿ ಕೊಡುವರೆಂದೂ ಅಲ್ಲಿ [illegible]ವಾಸಿಸುವ ಭಾರತೀಯರು ಶಾಂತ [illegible]ನ್ನುವ ನ ಗುತ್ತಿರುವ ಅನ್ಯಾಯ [illegible]ಪ್ರತಿಭಟಿಸಲು ಅವರ ಆಗಮನವ [illegible]ಬಹಿಷ್ಕರಿಸಬಹುದೆಂದು ಭಾವಿಸಲ್ಪಾ[illegible]

ಪ್ರತಿ ತಾಲ್ಲೂಕಿನಲ್ಲೂ ಕಾಂಗ್ರೆಸ್ ಭವನ

ಕೃಷ್ಣರಾಜನಗರ ೨೫

ಮೈಸೂರು ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯು ಇದಿನ ಬೆಳಗ್ಗೆ ೧೦-೩೦ಕ್ಕೆ ಶ್ರೀ ಎಂ. ಎಲ್. ನಂಜರಾಜೇ ಅರಸಿನವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡಿತ್ತು. ಮೈಸೂರು ಕಾಂಗ್ರೆಸ್ ಅಧ್ಯಕ್ಷರಾಗಿ ಚುನಾಯಿತರಾದ ಶ್ರೀ ಕೆ. ಚೆಂಗಲರಾಯರೆಡ್ಡಿಯವರನ್ನೂ, ಕಳೆದ ಸಾಲಿನ ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯನ್ನೂ ಅಭಿನಂದಿಸುವ ನಿರ್ಣಯವು ಅಂಗೀಕಾರವಾಯಿತು. ಕಲ್ಕತ್ತಾ ದುರಂತದ ಬಗ್ಗೆ ಸಭೆ ತನ್ನ ಅನುತಾಪವನ್ನು ವ್ಯಕ್ತಪಡಿಸಿತು. ಭಾರತ ರಾಜ್ಯಾಂಗ ರಚನಾ ಸಭೆಗೆ ಮೈಸೂರಿಂದ ಎಲ್ಲ ಸ್ಥಾನಗಳಿಗೂ ಚುನಾಯಿತ ಪ್ರಜಾಪ್ರತಿನಿಧಿಗಳೇ ಹೋಗಬೇಕೆಂದು ತೀರ್ಮಾನಿಸಲಾಯಿತು. ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲೂ ಕೂಡಲೇ ಕಾಂಗ್ರೆಸ್ ಸಮಿತಿಗಳನ್ನು ರಚಿಸಿ, ಪ್ರತಿ ತಾಲ್ಲೂಕು ಕೇಂದ್ರಗಳಲ್ಲೂ ಸ್ವಂತ ಕಾಂಗ್ರೆಸ್ ಭವನಗಳನ್ನು ಸ್ಥಾಪಿಸಲು ಕಾರ್ಯಕ್ರಮ ಕೈಗೊಳ್ಳಬೇಕೆಂದು ನಿರ್ಧರಿಸಲಾಯಿತು. ಕಾರ್ಯದರ್ಶಿ, ಶ್ರೀ ಹೆಚ್. ಕೆ. ಕುಮಾರಸ್ವಾಮಿಯವರು ಒಪ್ಪಿಸಿದ ವರದಿಯನ್ನು ಅಂಗೀಕರಿಸಿದ ನಂತರ ಮುಂದಿನ ತಿಂಗಳ ಸಭೆಯನ್ನು ೨೨-೯-೪೬ ನೇ ಭಾನುವಾರ ಮಧ್ಯಾಹ್ನ ೧೨ ಗಂಟೆಗೆ ಚಾಮರಾಜನಗರದಲ್ಲಿ ಸೇರಿಸಬೇಕೆಂದು ತೀರ್ಮಾನವಾಯಿತು.

ಹೊಸ ಸರ್ಕಾರಕ್ಕೆ ಎಲ್ಲೆಲ್ಲೂ ಸುಸ್ವಾಗತ

ಹೊಸ ಕೇಂದ್ರ ಸರ್ಕಾರಕ್ಕೆ ವಿಶ್ವದಲ್ಲೆಲ್ಲಾ ಸ್ವಾಗತ ದೊರೆತಿದೆ. ಸೊರೆನ್ಸೆನ್, ಕ್ರೋನ್ವ್, ಬ್ರಾಕ್ವೆ, ಡಾ॥ ಭಂಡಾರಿ, ಪಿ.ಟಿ. ಸೀಲ್, ಬ್ರೋರಿ ಸಂಗದವ ಬಟ್ಲರ್, ಆಸ್ಟ್ರೇಲಿಯಾದ ಪ್ರತಿನಿಧಿ ಸರ್ ಪರ್ಸಿ ಸ್ಪೆಂಡರ್, ಚೆಕೋಸ್ಲೋವಾಕದ ಜಾನ್ ಮೆಸಾರಿಕ್, ಅಮೆರಿಕಾ ಪ್ರತಿನಿಧಿ ಸಭೆಯ ಸದಸ್ಯರಾದ ವ್ಯಕ್ತಿ ಸೋಲೋಬ್ಲೂಮ್, ಮುಂತಾದವರೂ, ಭಾರತ ಮುಖಂಡರಾದ, ಡಾ॥ ಖರೆ, ಎಂ.ಎಸ್. ಅಣೆ, ಪ್ರೊ॥ ರಂಗಾ, ಡಾ॥ ಜಯಕರ್, ಜಮನಲಾಲ್ ಪಟೇಲ್, ಬಿ.ಜಿ. ಖೇರ್ ತೇಜ ಬಹದ್ದೂರ್ ಸಪ್ರು, ಟಿ. ಪ್ರಕಾಶಂರವರೂ ಹೊಸ ಸರ್ಕಾರವನ್ನು ಸ್ವಾಗತಿಸಿದ್ದಾರೆ.

ಪ್ರತಿಬಂಧಕಾಜ್ಞೆ

ಸ್ವಂ ಸು ಪ್ರೋ] ಬೆಂಗಳೂರು ೨೭

ರಂಜಾನ್, ಗೌರಿ ಮತ್ತು ಗಣೇಶನ ಹಬ್ಬಗಳ ಕಾಲದಲ್ಲಿ ಯಾವ ಗಲಭೆಗಳೂ ನಡೆಯದಂತೆ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಲು ಬೆಂಗಳೂರು ನಗರ ಮತ್ತು ದಂಡಿನ ಪ್ರಮುಖರು ವಿಶೇಷ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ನಿನ್ನೆ ಒಂದು ಸಭೆಯನ್ನು ನಡೆಸಿ ಪ್ರಮುಖ ಅಧಿಕಾರಿಗಳಿಗೆ ಈ ಬಗ್ಗೆ ಸೂಕ್ತ ಸಲಹೆಗಳನ್ನು ಕೊಡಲಾಯಿತು.

ದಂಡಿನಲ್ಲಿ ನಾಳೆಯಿಂದ ಒಂದು ವಾರ ಕಾಲ ರಹದಾರಿ ಇಲ್ಲದೆ ಸಭೆ ಮೆರವಣಿಗೆಗಳನ್ನು ನಡೆಸದಂತೆ ಅಲ್ಲಿನ ಕಲೆಕ್ಟರು ಆಜ್ಞೆ ಮಾಡಿದ್ದಾರೆ. ನಗರದಲ್ಲಿಯೂ ಇದೇ ರೀತಿಯ ಆಜ್ಞೆಯನ್ನು ಜಿಲ್ಲಾಧಿಕಾರಿಗಳು ಹೊರಡಿಸಿದ್ದಾರೆ. ಮಂತ್ರಿಗಳಾದ ಶ್ರೀ ಎಂ. ಶೇಷಾದ್ರಿಯವರು ಈ ಬಗ್ಗೆ ಕೈಗೊಳ್ಳಲಾಗಿರುವ ಬಂದೋಬಸ್ತುಗಳನ್ನು ಎಲ್ಲಾ ಪೋಲೀಸ್ ಠಾಣೆಗಳಲ್ಲಿಯೂ ಈ ದಿನ ಪರಿಶೀಲಿಸಿದರು.

ಸುಳ್ಳು ವದಂತಿಗಳನ್ನು ಹರಡದಂತೆಯೂ, ಶಾಂತಿಯಿಂದಿರಬೇಕೆಂಬುದಾಗಿಯೂ ಮಹಾಜನರನ್ನು ಪ್ರಾರ್ಥಿಸಿ ಹಿಂದೂ, ಮುಸ್ಲಿಂ ಮುಖಂಡರು ಮನವಿಯನ್ನು ಮಾಡಿಕೊಂಡಿದ್ದಾರೆ. ಪುಂಡರನ್ನು ಉಗ್ರವಾಗಿ ದಂಡಿಸುವುದಾಗಿ ಅಧಿಕಾರಿಗಳು ಎಚ್ಚರಿಕೆ ಇತ್ತಿದ್ದಾರೆ.

ದಿವಾನರ ಆಪ್ತ ಕಾರ್ಯದರ್ಶಿ

ಮದರಾಸಿನ ಶ್ರೀ ಷಣ್ಮುಗಂ ಎಂಬುವರನ್ನು ದಿವಾನರ ಆಪ್ತ ಕಾರ್ಯದರ್ಶಿಗಳನ್ನಾಗಿ ನೇಮಿಸಲಾಗುವುದೆಂದು ತಿಳಿದುಬಂದಿದೆ.

೦ ೦ ೦ ೦

ದಿವಾನರ ಅಧ್ಯಕ್ಷತೆಯಲ್ಲಿ ಇಂದು ಎಲ್ಲಾ ಜಿಲ್ಲಾಧಿಕಾರಿಗಳೂ, ಆಹಾರದ ಅಧಿಕಾರಿಗಳೂ ಸಭೆಸೇರಿ ಗ್ರಾಮಾಂತರದ ಪಡಿತರ ವ್ಯವಸ್ಥೆಯನ್ನು ಪರಿಶೀಲಿಸಿದರು.

೦ ೦ ೦ ೦

ದಕ್ಷಿಣ ಆಫ್ರಿಕಾದ ರಾಯಭಾರಿಯಾಗಿದ್ದ ಶ್ರೀ ಅಪ್ಪಾಜಿ ಗೌಡರ ಸ್ಥಾನದಲ್ಲಿ ಹೈಕೋರ್ಟ್ ನ್ಯಾಯಾಧೀಶರಾದ ಶ್ರೀ ಪಿ. ಮೇದಪ್ಪನವರನ್ನು ನೇಮಿಸಲಾಗುವುದೆಂದು ತಿಳಿದುಬಂದಿದೆ.

೦ ೦ ೦ ೦

ಅವರೇ ಮೈಸೂರು ಕಾಂಗ್ರೆಸ್ ಅಧಿವೇಶನವನ್ನು ಬೆಂಗಳೂರಿನಲ್ಲಿ ವಿಜೃಂಭಣೆಯಿಂದ ನಡೆಸುವ ಸಲುವಾಗಿ ಶ್ರೀ ಕೆ. ಟಿ. ಭಾಷ್ಯಂರವರ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿ ರಚಿಸಲಾಗಿದೆ.

ಡಾರ್ಡೆನಲ್ಸಿನಲ್ಲಿ ಬ್ರಿಟಿಷ್ ಠಾಣ್ಯಗಳು

ಡಾರ್ಡೆನಲ್ಸ್ ದ್ವೀಪಗಳಲ್ಲಿ ಬ್ರಿಟಿಷ್ ಠಾಣ್ಯಗಳನ್ನು ಸ್ಥಾಪಿಸಿ ಅದರಲ್ಲಿ ಅಗಾಧವಾದ ಮಿಲಿಟರಿ ಸಾಮಗ್ರಿಗಳ ಸಂಗ್ರಹ ಮಾಡಿಕೊಳ್ಳುತ್ತಿರುವುದಾಗಿ ಸೋವಿಯಟ್ ಪ್ರಕಟಣೆ ತಿಳಿಸುತ್ತದೆ. ಇಸ್ತಾಂಬುಲ್ ಬಳಿ ಇರುವ ತುರ್ಕಿಯ ವಿಮಾನ ನಿಲ್ದಾಣವೊಂದನ್ನು ಬ್ರಿಟಿಷ್ ಅಧೀನಕ್ಕೆ ತೆಗೆದುಕೊಳ್ಳಲಾಗಿದೆಯೆಂದು ಹೇಳಲಾಗಿದೆ. ತುರ್ಕಿಯ ಕಪ್ಪುಸಮುದ್ರದ ತೀರದಲ್ಲಿ ಬ್ರಿಟಿಷ್ ಮಿಲಿಟರಿ ಪ್ರವೀಣರು ರಾಡಾರ್ ನಿಲ್ದಾಣಗಳನ್ನು ಸ್ಥಾಪಿಸಿ ಸೋವಿಯಟ್ ಚಲನವಲನಗಳನ್ನು ಗಮನಿಸುತ್ತಿದ್ದಾರೆಂದು ವರದಿಯಾಗಿದೆ.

ಶಿಕ್ಷೆ ಖಾಯಂ

ಮೈಸೂರು ೨೭

ಚಾಮುಂಡಿ ಬೆಟ್ಟದ ಶ್ರೀಮತಿ ಗೌರಮ್ಮ ಎಂಬಾಕೆಯನ್ನು ಅಪಹರಿಸಲು ಪ್ರಯತ್ನಪಟ್ಟ ತಿಮ್ಮಯ್ಯನಿಗೆ ನಗರ ನ್ಯಾಯಾಧೀಶರು ೬ ತಿಂಗಳ ಶಿಕ್ಷೆ ವಿಧಿಸಿದ್ದರು. ಅತನು ಅಪೀಲು ಮಾಡಿಕೊಂಡದ್ದರಿಂದ ಸೆಷನ್ಸ್ ಜಡ್ಜರು ವಿಚಾರಣೆ ನಡೆಸಿ ಕೆಳಕೋರ್ಟಿನ ಶಿಕ್ಷೆಯನ್ನು ಖಾಯಂ ಮಾಡಿರುತ್ತಾರೆ.

ಲಲಿತ ಕಲಾ ಸಂಘ

ಮಹಾರಾಜಾ ಕಾಲೇಜ್ ಒಳಾಂಗಣದಲ್ಲಿ ನಾಳೆ ಸಂಜೆ ೬ ಘಂಟೆಗೆ ಮೇಲ್ಕಂಡ ಸಂಘದ ಆರಂಭ ಭಾಷಣವನ್ನು ಡಾ॥ ಪುರುಷೋತ್ತಮರವರು ಮಾಡುವರು. ಡಾ॥ ಕೃಷ್ಣಸ್ವಾಮಿಯವರು ಅಧ್ಯಕ್ಷತೆ ವಹಿಸುವರು. ಶ್ರೀಮತಿ ಸೇಲಮ್ಮ ಕದಾಂಬಿಯವರ ಸಂಗೀತ ಕಛೇರಿ ನಡೆಯುವುದು.

ಮೈಸೂರು ಮುನಿಸಿಪಲ್ ಅಧ್ಯಕ್ಷರು ಮತ್ತು ರಿಟರ್ನಿಂಗ್ ಆಫೀಸರವರ ಕಛೇರಿಯಿಂದ.

ತಾ॥ ೨೬-೮-೪೬

ನಂ R. I. C 845—46-16

ನೋಟೀಸು

ಸಿಟಿ ಮುನಿಸಿಪಲ್ ಚುನಾವಣಾ ನಿಯಮಾವಳಿಯ ೬(b) ಯಂತೆ ೧೯೪೬ ನೇ ನವಂಬರ್‌ನಲ್ಲಿ ನಡೆಯುವ ಪುರಸಭಾ ಸಾರ್ವತ್ರಿಕ ಚುನಾವಣೆಗೆ ಸಂಬಂಧಪಟ್ಟಿದ್ದು [illegible]

ಮುಂಚೆಯೇ ತಿಳಿಯಪಡಿಸಲಾಗಿದ್ದಂತೆ ೧೯-೮-೪೬ ರಲ್ಲೂ ಪ್ರಕಟಿಸಲಾಗಿರುವ ಮೈಸೂರು ನಗರದ ನಾನಾ ಮೊಹಲ್ಲಾಗಳ ವೋಟರುಗಳ ಪಟ್ಟಿಯ ಕಡೆಗೆ ಸಾರ್ವಜನಿಕರ ಗಮನವನ್ನು ಸೆಳೆಯಲಾಗಿದೆ.

ಯಾರೊಬ್ಬರೂ ಒಂದಕ್ಕಿಂತ ಹೆಚ್ಚಾದ ಮೊಹಲ್ಲಾಗಳಲ್ಲಿ ವೋಟನ್ನು ಚಲಾಯಿಸಲು ಅಧಿಕಾರವಿರುವುದಿಲ್ಲವಾದ್ದರಿಂದ ಯಾರಾದರೂ ಒಂದಕ್ಕಿಂತ ಹೆಚ್ಚಾದ ಮೊಹಲ್ಲಾಗಳಲ್ಲಿ ವೋಟಿನ ಹಕ್ಕುಗಳನ್ನು ಪಡೆದಿದ್ದರೆ (ಪ್ರಕಟವಾಗಿರುವ ವೋಟರುಗಳ ಪಟ್ಟಿಯಂತೆ) ಮೇಲಿನ ನಿಯಮಾವಳಿಗನುಸಾರವಾಗಿ ತಮಗೆ ಬೇಕಾದ ಒಂದು ಮೊಹಲ್ಲಾದಲ್ಲಿ ಮಾತ್ರ ವೋಟಿನ ಹಕ್ಕನ್ನು ಆರಿಸಿಕೊಂಡು ಅದನ್ನು ಈ ದಿನದಿಂದ ಒಂದು ವಾರದೊಳಗೆ ಕೆಳಗೆ ರುಜು ಮಾಡಿರುವವರಿಗೆ ಲಿಖಿತ ಮೂಲಕ ತಿಳಿಸತಕ್ಕದ್ದು. ತಪ್ಪಿದಲ್ಲಿ ಮುನಿಸಿಪಲ್ ಕೌನ್ಸಿಲಿನವರು ನಿರ್ಧರಿಸುವಂತಹ ಮೊಹಲ್ಲಾದಲ್ಲಿ ಮಾತ್ರ ವೋಟು ಕೊಡಬಹುದಾಗಿರುತ್ತೆ.

ಎಸ್. ಮುರುಗೇಂದ್ರಸ್ವಾಮಿ,
ಅಧ್ಯಕ್ಷರು ಮತ್ತು ರಿಟರ್ನಿಂಗ್
ಆಫೀಸರು.

ಸಾಧ್ವಿ

ತಾ|| ೨೭-೮-೪೬ ಮಂಗಳವಾರ

ಗಜದಾರರ ಘರ್ಜನೆ

ಮುಸ್ಲಿಂ ಲೀಗನ್ನು ಬಿಟ್ಟು ಕೇಂದ್ರ ಸರ್ಕಾರವನ್ನು ರಚಿಸಿದರೆ ಸಿಂಧೂ ಪ್ರಾಂತವು ಸ್ವಾತಂತ್ರ್ಯವನ್ನು ಘೋಷಿಸುವುದಾಗಿ ಅಲ್ಲಿನ ಮುಸ್ಲಿಂ ಲೀಗ್ ಅಧ್ಯಕ್ಷರಾದ ಮಿ|| ಗಜದಾರರು ಹೇಳಿರುವರು. ಈ ವಿಷಯದಲ್ಲಿ ಅಲ್ಲಿನ ಪ್ರಧಾನ ಮಂತ್ರಿ ಮಿ|| ಹಿದಾಯತುಲ್ಲಾರವರು ಒಂದು ಪ್ರಕಟಣೆ ಹೊರಡಿಸುವರೆಂದೂ ಕೂಡ ಅವರು ತಿಳಿಸಿರುವರು. ಇಷ್ಟು ಮಾತ್ರವೇ ಅಲ್ಲ ತಮ್ಮ ಪ್ರಾಂತದ ಸ್ವಾತಂತ್ರ್ಯ ಸಾಧನೆಯ ಸ್ವರೂಪವು ಹೇಗಿರುವುದೆಂಬುದನ್ನು ಅವರು ಸೂಚಿಸಿರುವರು. ನಾಲ್ಕು ವರ್ಷದ ಹಿಂದೆ ಕಾಂಗ್ರೆಸ್ಸು ನಡೆಸಿದ ಚಳುವಳಿಗಿಂತಲೂ ಇದು ಹೆಚ್ಚು ಭಯಂಕರವಾಗಿರುವುದೆಂದೂ, ಈ ಆಂದೋಲನದಲ್ಲಿ ಸೇರಿದವರನ್ನು ವೀರ ಪುರುಷರೆಂದೆಣಿಸಿ ಅವರುಗಳಿಗೆ ವಿಶೇಷ ಪುರಸ್ಕಾರ ಕೊಡುವುದಾಗಿಯೂ ಹೇಳಿದ್ದಾರೆ. ಹಿಂದುಗಳು ಬಹು ಸಂಖ್ಯೆಯಿರುವ ಕಡೆ ಮುಸ್ಲಿಮರಿಗೆ ತೊಂದರೆ ಕೊಟ್ಟರೆ ಮುಸ್ಲಿಮರು ಹೆಚ್ಚು ಸಂಖ್ಯೆಯಿರುವ ಕಡೆ ಚಕ್ರ ಬಡ್ಡಿ ಸಮೇತ ಹಿಂದುಗಳಿಗೆ ಪ್ರತೀಕಾರ ಮಾಡಲಾಗುವುದೆಂದು ಬೆದರಿಸಿದ್ದಾರೆ. ಕಲ್ಕತ್ತೆಯ ಹಿಂದುಗಳು ಅಲ್ಲಿ ನಡೆದ ಅನಾಹುತಗಳನ್ನು ಅಭ್ಯಾಸಿಸಿದರೆಂದೂ ಅದರಂತೆಯೇ ಅವನ್ನು ಪಡೆದರೆಂದೂ ಸಹ ಸೂಚಿಸಿದ್ದಾರೆ.

ಇತಿಹಾಸದಲ್ಲೇ ಕಂಡು ಕೇಳದ ಘೋರ ದುರಂತದಿಂದ ಕಲ್ಕತ್ತಾ ನಗರ ಮಾತ್ರವೇ ಅಲ್ಲದೆ ಇಡೀ ಪ್ರಪಂಚವೇ ಸಂತಪ್ತವಾಗಿರುವಾಗ ಒಂದು ಪ್ರಮುಖ ಪ್ರಾಂತದ ಲೀಗಿನ ನಾಯಕರು ಇಂತಹ ಹೇಳಿಕೆಗಳನ್ನು ಕೊಡುವುದು ಅತ್ಯಂತ ವಿಷಾದಕರವಾದುದು. ಇದರಿಂದ ಉರಿಯುವ ಬೆಂಕಿಗೆ ತುಪ್ಪವನ್ನು ಹುಯ್ದಂತೆ ಆಗುತ್ತದೆ. ಈಗ ಆಗಿರುವ ನೋವನ್ನು ಶಮನಿಸಲು ಸಕಲರೂ ಭಿನ್ನಭಾವಗಳನ್ನು ತೊರೆದು ಸರ್ವ ಪ್ರಯತ್ನಗಳನ್ನೂ ಮಾಡಬೇಕಾಗಿದೆ. ಕಲ್ಕತ್ತೆಯ ದೌರ್ಜನ್ಯವನ್ನು ಮಿ|| ಜಿನ್ನಾರವರು ಮೊದಲುಗೊಂಡು ಅನೇಕ ಮುಸ್ಲಿಂ ನಾಯಕರು ಖಂಡಿಸಿದ್ದಾರೆ. ಹೀಗಿರುವಲ್ಲಿ ಇಂತಹ ಅಕ್ಷಮ್ಯದ ವಿಚಾರವಾಗಿ ಪರಿಹಾಸ್ಯಕರವಾದ ಅಭಿಪ್ರಾಯಗಳನ್ನು ಮಿ|| ಗಜದಾರರಂತಹವರು ಹೇಳುವುದು ಕೇವಲ ಅನುಚಿತವಾಗಿದೆ.

ಹಿಂದೆ ನಡೆದಿದ್ದು ಆಗಿ ಹೋಯಿತು. ಮುಂದೆ ಸಕಲ ಕೋಮುಗಳಿಗೂ ಸೌಹಾರ್ದವನ್ನುಂಟುಮಾಡಲು ಎಲ್ಲರೂ ಕಾತುರರಾಗಿದ್ದಾರೆ. ಅದಕ್ಕಾಗಿಯೇ ಕೇಂದ್ರ ಸರ್ಕಾರದಲ್ಲಿ ಲೀಗಿನವರಿಗೆ ಸ್ಥಾನವನ್ನು ಮೀಸಲಾಗಿಟ್ಟು ಅವರ ಸಹಕಾರಕ್ಕಾಗಿ ಬಾಗಿಲನ್ನು ತೆಗೆದಿಟ್ಟಿರುವುದಾಗಿ ವೈಸರಾಯರೂ ಕಾಂಗ್ರೆಸ್ ನಾಯಕರೂ ತಿಳಿಸಿದ್ದಾರೆ. ಲೀಗಿನವರು ತಮ್ಮ ನೀತಿಯನ್ನು ಬದಲಾಯಿಸಿಕೊಂಡು ಸದ್ಯದಲ್ಲಿಯೇ ತಾತ್ಕಾಲಿಕ ಸರ್ಕಾರದಲ್ಲಿ ಸೇರುವರೆಂಬ ನಿರೀಕ್ಷಣೆಯೂ ಇದೆ. ಹೀಗಿರುವಲ್ಲಿ ಮೇಲ್ಕಂಡ ರೀತಿಯ ಹೇಳಿಕೆಗಳು ನಡೆಯುವ ಕೆಲಸಕ್ಕೆ ಪೆಟ್ಟನ್ನು ತಂದೊಡ್ಡುವಂತಿವೆ. ಇಂತಹ ಉದ್ರೇಕಕರವಾದ ಮಾತುಗಳಿಂದಲೇ ಇದುವರೆಗೆ ದೇಶದಲ್ಲಿ ಅಸಂಖ್ಯಾತವಾದ ಪ್ರಾಣನಷ್ಟವೂ, ಇತರ ಕಷ್ಟ ಪರಂಪರೆಗಳೂ ಸಂಪ್ರಾಪ್ತವಾಗಿವೆ. ಅವುಗಳನ್ನು ತಡೆಗಟ್ಟುವುದು ಉಭಯ ಪಂಗಡಗಳ ನಾಯಕರ ಪ್ರಥಮ ಕರ್ತವ್ಯ.

ಸಿಂಧೂ ಪ್ರಾಂತವು ಸ್ವಾತಂತ್ರ್ಯವನ್ನು ಘೋಷಿಸಲು ಈಗಿನ ಶಾಸನದಂತೆ ಅವಕಾಶವೇ ಇಲ್ಲವೆಂಬುದಾಗಿ ಅಲ್ಲಿನ ಸರ್ಕಾರದ ಚೀಫ್ ಸೆಕ್ರೆಟರಿಯವರು ಸಕಾಲದಲ್ಲಿ ಹೇಳಿಕೆಯನ್ನಿತ್ತಿದ್ದಾರೆ. ಈಗ ಜಾರಿಯಲ್ಲಿರುವ ಭಾರತ ರಾಜ್ಯಾಂಗ ಶಾಸನಕ್ಕೆ ಸಿಂಧೂ ಪ್ರಾಂತವೂ ಒಳಪಟ್ಟಿದೆ. ಅಲ್ಲಿರುವ ಶಾಸನ ಸಭೆಯೂ, ಮಂತ್ರಿಮಂಡಲವೂ ಇದೇ ಕಾನೂನಿನಂತೆಯೇ ರಚಿತವಾಗಿವೆ. ಅವುಗಳನ್ನು ಅತಿಕ್ರಮಿಸಿ ನಡೆಯಲು ಯಾರಿಗೂ ಅಧಿಕಾರವಿಲ್ಲ. ಬಂಗಾಳದಲ್ಲಿ ಲೀಗ್ ಮಂತ್ರಿಮಂಡಲವು ಇದುವರೆಗೆ ಕೈಗೊಂಡ ಕಾರ್ಯಕ್ರಮದಿಂದ ಉಂಟಾದ ಅನರ್ಥವೇ ಸಾಕು. ಬೇರೆ ಎಲ್ಲಿಯೂ ಅವು ಪುನರಾವರ್ತಿಯಾಗದಿರಲೆಂಬುದೇ ಎಲ್ಲ ದೇಶಾಭಿಮಾನಿಗಳ ಹಾರೈಕೆಯಾಗಿದೆ. ಇದಕ್ಕಾಗಿ ಮೇಲ್ಕಂಡ ರೀತಿಯ ಬೇಜವಾಬ್ದಾರಿಯ ಮಾತುಗಳನ್ನು ತಡೆಗಟ್ಟುವುದು ಸಕಲರ ಕರ್ತವ್ಯ.

ಉತ್ಸಾಹ ಹೆಚ್ಚಿತೆಂದು ಸರ್ ಷಾಫತ್

ಸಿಮ್ಲಾದಲ್ಲಿ ಚೂರಿ ಇರಿತಕ್ಕೆ ಗುರಿಯಾದ ಕೇಂದ್ರ ಸರ್ಕಾರದ ಮಂತ್ರಿಗಳಾಗಿ ನೇಮಕವಾಗಿರುವ ಸರ್ ಷಾಫತ್‌ರವರು ಗುಣಮುಖ ಹೊಂದುತ್ತಿದ್ದಾರೆ. ಈ ಹೇಯವಾದ ಕೃತ್ಯದಿಂದ ತಾವು ಧೈರ್ಯಗುಂದಿಲ್ಲವೆಂದೂ, ತಮ್ಮ ಉತ್ಸಾಹ ಮತ್ತಷ್ಟು ಹೆಚ್ಚಿತೆಂದೂ ಅವರು ಡಾ|| ಭರ್ಗವಾರವರಿಗೆ ತಿಳಿಸಿದರು.

ರಾಜಕಮಲ್ ಟಾಕೀಸ್

ಮೈಸೂರು

23-8-46 ರಿಂದ

ಎರಡನೇ ವಾರ

ತದ್‌ಬೀರ್

ಭೂಮಿಕೆ:—ಸೈಗಾಲ್, ಸೂರಯಾ ಮುಂತಾದವರು

Edited, printed and published by A. R. Nagarajan at the Sadhvi Press D Subbiah Road, Mysore.

OPERA TALKIES

ತಾ|| 28—8—46 ರಿಂದ

ಬಿಸಿ ಶಾದಿ

ವ

(20 ನೇ ಸೆಂಚುರಿ)

* ಮೋತಿಲಾಲ್, * ನರ್ಗಿಸ್

* ಮುಜಾರ್ ಖಾನ್

ಜಾಹಿರಾತು

ನಾಯಿ ಕೆಮ್ಮು

ಒಂದೇ ದಿನದಲ್ಲಿ ಎರಡೇ ಆಣೆ ...ನಲ್ಲಿ ಆಶ್ಚರ್ಯಕರವಾದ ಗುಣವ ಹೊಂದಬಹುದು. ಶ್ರೀರಂಗಪಟ್ಟಣ ಮೆ|| ಎಂ. ವಿ. ಶೆಟ್ಟರಲ್ಲಿಯೂ, ... ಯಪಟ್ಟಣದಲ್ಲಿ ಮಿ|| ಸಿ. ಆರ್. ...ಯ್ಯನವರಲ್ಲಿಯೂ ದೊರೆಯುತ್ತದೆ. ಟಪ್ಪಾಲ್ ದ್ವಾರ ಕೊಂಡಲಪೇಕ್ಷಿಸುವರು ಅಂಚೇ ಚಾರ್ಜನ್ನು ಮುಂಗಡ ಕಳಿಸಬೇಕಾಗಿದೆ.

ಎಸ್. ಎಸ್. ವೈದ್ಯ

ಎಸ್. ವಿ. ಆರ್. ಲಿವರ್ ... ಸ್ಪ್ಲೀನ್, ಔಷಧಾಲಯ, ೨೮೩೦: ಚಾಮುಂಡೇಶ್ವರೀ ರೋಡ್, ಚಾಮುಂಡಿಪುರಂ, ಮೈಸೂರು

ವಿ ಸೂ:—ಎಂಥಾ ಕಠಿಣ ವಿಷಮವೇ ಬಿಳುಪು ರೋಗಕ್ಕೂ ಶೀಘ್ರ ಶಾಶ್ವತವಾದ ಉತ್ತಮ ಚಿಕಿತ್ಸೆ ಮಾಡಲಾಗುತ್ತದೆ.

No R I-187 1946-47

ಮೈಸೂರು ಸಿಟಿ ರೇಷನಿಂಗ್ ಆಫೀಸಿನಿಂದಾ:—

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:—

ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ, ಮೊದಲ್ಗೊಂಡು ಸಬ್ ಗ... ಲೈಸೆನ್ಸ್ ಪಡೆದ ವರ್ತಕರ ಡಿಪೋ, ಮತ್ತು ಸಹಕಾರ ಸಂಘಗಳಿಗೆ ಸಹ ಇದೇ 29, 30, 31 ನೇ ತಾರೀಖುಗಳಲ್ಲಿ ಈ ಕೆಳಗೆ ಕಂಡಂತೆ ರಜಾ ಕೊಡಲ್ಪಟ್ಟಿರುತ್ತ...

29-8-46 (ಗುರುವಾರ) ಗೌರಿ ಮತ್ತು ರಂಜಾನ್ ಹಬ್ಬದ ಪ್ರಯುಕ್ತ ರಜಾ ಕೊಡಲ್ಪಟ್ಟು ಮಧ್ಯಾಹ್ನ ಡಿಪೋಗಳು ತೆಗೆಯಲ್ಪ...

30-8-46 (ಶುಕ್ರವಾರ) ಗಣೇಶ ಹಬ್ಬದ ಪ್ರಯುಕ್ತ ಬೆಳಿಗ್ಗೆ ರಜಾ ಕೊಡ... ಮಧ್ಯಾಹ್ನ ಡಿಪೋಗಳು ತೆಗೆಯಲ್ಪಡುತ್ತೆ.

31-8-46 (ಶನಿವಾರ) ದಾಸ್ತಾನು ಎಣಿಕೆ ಬಗ್ಗೆ ಪೂರ್ಣ ರಜಾ.

(ರುಜು) ಅಬ್ದುಲ್ ರಜಾಕ್

14-8-46 ರೇಷನಿಂಗ್ ಆಫೀ...

ಮೈಸೂರು

ಹರಾಜು

ಮೈಸೂರು ಮಂಡಿ ಮೊಹಲ್ಲಾ ಈದಿಗ ಎಕ್ಸ್‌ಟೆನ್‌ಷನ್‌ನಲ್ಲಿರುವ ಶ್ರೀ|| ... ಕೆಂಟ್‌ರವರ ಬಂಗಲೆ, ಕಾಟೇಜ್ ಮತ್ತು ಸೈಟುಗಳು ಸಹ 1-9-46 ನೇ ಭಾ... ಪ್ರಾತಃಕಾಲ ೧೦ ಗಂಟೆಗೆ ಸ್ವತ್ತಿನ ಬಳಿ ಹರಾಜು ಮಾಡಲ್ಪಡುತ್ತೆ. ಸದರಿ ಸ್ವತ... ವರ್ಕ್‌ಷಾಪ್‌ಗಳಿಗೂ, ಮಿಲ್‌ಗಳಿಗೂ, ಸಿನಿಮಾ ಮಂದಿರಗಳು ಕಟ್ಟುವುದಕ್ಕೆ ಅತ್ಯುತ್ತಮವಾಗಿರುತ್ತೆ. ಹರಾಜಿನಲ್ಲಿ ಹಿಡಿದವರು ಹರಾಜು ಮೊಬಲಗಿನಲ್ಲಿ ... ಒಂದು ಭಾಗ ಕೂಡ್ಲೆ ಪಾವತಿ ಮಾಡತಕ್ಕದ್ದು. ಬಾಕಿ ಮೊಬಲಗನ್ನು ರಿಜಿಸ್ಟ್ರಿಯಲ್ಲಿ ಪಾವತಿಮಾಡಿ ರಿಜಿಸ್ಟರ್ ವಗೈರೆಗಳನ್ನು ಅವರ ಸ್ವಂತ ಖರ್ಚಿನಿಂದ ನ... ತಕ್ಕದ್ದು. ಬಾಕಿ ವಿಷಯಗಳಿಗೆ ಕೆಳಗೆ ಕಂಡ ವಿಳಾಸದಲ್ಲಿ ಮೊಬ್ರಾ ವಿಚಾರಿಸಬಹುದು

Neo Furniture Compan...

Cabinet Makers, Auctioneers and Commission...

Irwin Road, ...

ವಿಜಯಾ ಏಜನ್ಸೀಸ್, ಮೈಸೂರು.

ಹೊಸ ಹೊಸ ನಮೂನೆಯ ಬಳೆಗಳು

ಈ ದಿನವೇ ನೋಡಿರಿ

ಸ್ವರ್ಗ ಸೀಮ ಬಳೆ, ಕಮಲ್ ಫ್ಲಾಫ್ ಬಳೆ { ಬಳೆಗಳು } ಸುಭಾಸ್ ಬಳೆ, ಗಾಂಧಿಜಿ ಬಳೆ

ಚಾಂದಿನಿ ಬಳೆ ಮತ್ತು ರಾಷ್ಟ್ರ ನಾಯಕರುಗಳ ಫೋಟೋ ಸಮೇತ ಒಡೆಯದ ತರತರ್ಹಂತಮುದು.

ಮೈಸೂರು ಸಿಲ್ಕ್ ರಿಬ್ಬನ್‌ಗಳು, ಸ್ಟ್ಯಾಂಡರ್ಡ್ ಬಳೆಗಳು

ಪ್ರಭಾತ್ ಬ್ಯಾಂಗಲ್ಸ್ ಸ್ಟೋರ್ಸ್,

ಚಾಮುಂಡೇಶ್ವರೀ ಟಾಕೀಸ್ ಬಿಲ್ಡಿಂಗ್ಸ್, ಮೈಸೂರು.

ಪ್ರವಹ ಬಂದಿವೆ

ಹೊಸ ನಮೂನೆಗಳಲ್ಲಿ

ಫ್ಯಾನ್ಸಿ ಉಲ್ಲನ್ ಸ್ವೆಟ್ಟರುಗಳು!

ಬನ್ನಿರಿ! ನೋಡಿರಿ!! ಸಂತೋಷ ಹೊಂದಿರಿ!!!

ಪಿ. ವಿ. ಸೂರ್ಯನಾರಾಯಣ ಶೆಟ್ಟಿ ಅಂಡ್ ಸನ್ಸ್,

ರೆಡಿಮೇಡ್ ಡ್ರೆಸ್ ಎಂಪೋರಿಯಂ

ಶಿವರಾಮ್‌ಪೇಟ್ ರಸ್ತೆ .... ಮೈಸೂರು.

ಫೋನ್ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಬುಧವಾರ ೨೮—೮—೪೬ [ಸಂಚಿಕೆ ೩೦

ನೂತನ ಮಂತ್ರಿಗಳಿಗೆ ವಿಶೇಷ ರಕ್ಷಣಾ ವ್ಯವಸ್ಥೆ

ಆತ್ಮ ರಕ್ಷಣಾ ವ್ಯವಸ್ಥೆ ಮಾಡಿಕೊಳ್ಳಬೇಕು

ಕಲ್ಕತ್ತ ದುರಂತವನ್ನು ತೀವ್ರವಾಗಿ ಖಂಡಿಸಿ ಪಂ॥ ನೆಹರೂರವರು ಹೇಳಿಕೆಯೊಂದನ್ನಿತ್ತು ಇಂತಹ ದುಷ್ಕೃತ್ಯಗಳನ್ನು ತಡೆಯುವ ಪ್ರತಿಯೊಂದು ಮೊಹಲ್ಲಾದ ಜನರೂ ಆತ್ಮ ರಕ್ಷಣೆಯ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕೆಂದು ಸಲಹೆ ಇತ್ತಿದ್ದಾರೆ. ಇದೇ ರೀತಿ ಗ್ರಾಮಗಳಲ್ಲಿಯೂ ಕ್ರಮ ಕೈಗೊಳ್ಳಬೇಕೆಂದು ಹೇಳಿದ್ದಾರೆ.

ಕಲ್ಕತ್ತ ಅಪಾಯಕರ ಪ್ರದೇಶ

ಕಲ್ಕತ್ತ ನಗರ ಮತ್ತು ಬಡಾವಣೆಗಳು ಮತ್ತು ಹೌರಾ ಪೌರಸಭೆಯ ಪ್ರದೇಶಗಳು ಅಪಾಯಕರ ಕ್ಷೇತ್ರಗಳೆಂದು ಗವರ್ನರು ಘೋಷಿಸಿದ್ದಾರೆ. ಈ ಪ್ರದೇಶಗಳಲ್ಲಿ ಇನ್ನೆರಡು ತಿಂಗಳುಗಳ ಕಾಲದೊಳಗೆ ಯಾರಾದರೂ ಇತರರಿಂದ ಗಾಯಗೊಂಡರೆ ಅಂತಹವರು ಪರಿಹಾರ ಕೇಳಬಹುದು.

ಮಂಚೂರಿಯಾದಲ್ಲಿ ಭಾರಿ ಸಂಗ್ರಾಮವೇ?

ಮಂಚೂರಿಯಾದ ಬಹು ಭಾಗ ಚೀಣೀ ಕಮ್ಯೂನಿಸ್ಟರ ವಶವಾಗಿದೆ. ಚೀಣೀ [illegible] ಈ ಪ್ರದೇಶವನ್ನು ಮತ್ತೆ ಸ್ವತಂತ್ರಗೊಳಿಸಲು ಯುದ್ಧ ಸನ್ನಾಹ ಮಾಡಿಕೊಳ್ಳುತ್ತಿದ್ದಾರೆ. ಸಂಗ್ರಾಮ [illegible] ಘಳಿಗೆಯಲ್ಲಾದರೂ ಸಿಡಿಯುವುದು, ಈ ಪ್ರದೇಶವು ಭಾರಿ ಯುದ್ಧ ಕ್ಷೇತ್ರವಾಗುವ ಸಂಭವವಿದೆ ಎಂದು ಅಧಿಕಾರಿಗಳೇ ಹೇಳುತ್ತಿದ್ದಾರೆ.

ಉಪ್ಪಿನ ಸುಂಕ ರದ್ದೇ?

ಕೇಂದ್ರದಲ್ಲಿ ಹೊಸ ಸರ್ಕಾರ ಸ್ಥಾಪನೆಯಾದ ಕೂಡಲೇ ಉಪ್ಪಿನ ಸುಂಕವನ್ನು ರದ್ದು ಮಾಡಲಾಗುವುದೆಂದು ತಿಳಿದುಬಂದಿದೆ.

ರೈಲ್ವೆ ಮುಷ್ಕರ

೨೫ ನೇ ತಾ॥ ರಾತ್ರಿಯಿಂದ ದ॥ ಭಾ॥ ರೈಲ್ವೆ ಕೆಲಸಗಾರರು ಮುಷ್ಕರ ಆರಂಭಿಸಿರುವರು. ಸ್ಟೇಷನ್ ಮಾಸ್ಟರ್ ಸಂಘದವರೂ ಇದರಲ್ಲಿ ಸೇರಿದ್ದಾರೆ. ಈ ಮುಷ್ಕರದಲ್ಲಿ ೧೨ ಸಹಸ್ರ ಕೆಲಸಗಾರರು ಭಾಗವಹಿಸಿದ್ದಾರೆಂದೂ ಇದು ಒಟ್ಟು ಸಂಖ್ಯೆಯಲ್ಲಿ ಶೇಕಡ ೫೦ ರಷ್ಟಾಗಿದೆಯೆಂದೂ ವರದಿಯಾಗಿದೆ. ಎಲ್ಲಾ ಪ್ರಯಾಣಿಕರ ರೈಲುಗಳೂ ನಿಲ್ಲಿಸಲ್ಪಟ್ಟಿವೆ. ಪೋಲೀಸ್ ಬಂದೋಬಸ್ತಿನಲ್ಲಿ ಆ [illegible] ಮತ್ತು ವೃತ್ತ ಪತ್ರಿಕೆಗಳನ್ನು ಗೂಡ್ಸ್ ಗಾಡಿಯಲ್ಲಿ ರವಾನಿಸಲಾಗುತ್ತಿದೆ. ಮಧುರೆಯಲ್ಲಿ ನಡೆದ ಸಹಾನುಭೂತಿ ಮೆರವಣಿಗೆ ಮೇಲೆ ಟಿಯರ್ ಗ್ಯಾಸ್ ಪ್ರಯೋಗವಾಯಿತು.

"ಮಹಾತ್ಮ ಗಾಂಧಿಯವರ ದಕ್ಷಿಣ ಮಗನಾದ ಶ್ರೀ ಟಿ. ಎ. ನಿಡೋ ಮತ್ತು ಇತರರು ಮುಂದಿ ದಕ್ಷಿಣ ಆಫ್ರಿಕಾದ ಸತ್ಯಾಗ್ರಹದಲ್ಲಿ ಮೊನ್ನೆ ದಸ್ತಗಿರಿಯಾದರು.

ಕೇಂದ್ರ ಸರ್ಕಾರದ ಸಚಿವರಿಗೆ ರಕ್ಷಣೆ

ಕೇಂದ್ರ ಸರ್ಕಾರದ ಹೊಸ ಸಚಿವರಿಗೆ ರಕ್ಷಣೆ ಒಗ್ಗೆ ಕೂಡಲೇ ತಕ್ಕ ವ್ಯವಸ್ಥೆ ಮಾಡಬೇಕೆಂದು ಇಂಡಿಯಾ ಸರ್ಕಾರದವರು ಪ್ರಾಂತೀಯ ಸರ್ಕಾರಗಳಿಗೆ ಟೆಲಿಗ್ರಾಂ ಮೂಲಕ ಆಜ್ಞೆ ಇತ್ತಿರುವುದಾಗಿ ಗೊತ್ತಾಗಿದೆ. ಕೇಂದ್ರ ಸರ್ಕಾರದ ಸಚಿವರಾಗಲಿರುವ ಹಿಯಾ ಸಂಗಡದ ನಾಯಕರಾದ ಶ್ರೀ ಆಫ್‌ಜಲ್‌ರವರಿಗೆ ಘಂಟಾಗಳು ಆ ನಾವ ಧೇಯ ಪತ್ರ ಬರೆದು ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಡದಿದ್ದಲ್ಲಿ ಅಪಾಯ ಸಂಭವಿಸುವುದೆಂದು ಎಚ್ಚರಿಕೆ ಇತ್ತಿದ್ದಾರೆಂದು ತಿಳಿದುಬಂದಿದೆ. ದೆಹಲಿಯಲ್ಲಿ ಅವರ ಮನೆಗೆ ಮಿಲಿಟರಿ ಕಾವಲು ಹಾಕಿ, ಪಾಸುಗಳ ಮೂಲಕ ಮಾತ್ರ ಒಳಕ್ಕೆ ಪ್ರವೇಶಿಸಲು ಅವಕಾಶ ಕೊಡಲಾಗುತ್ತಿದೆ.

ಕಾಂಗ್ರೆಸ್ ಅಧಿವೇಶನ

ಅಖಿಲ ಭಾರತ ಕಾಂಗ್ರೆಸ್ಸಿನ ವಾರ್ಷಿಕ ಅಧಿವೇಶನವು ಸಂಯುಕ್ತ ಪ್ರಾಂತ್ಯದ ಕಾಂಗ್ರೆಸ್ ಸಮಿತಿಯು ಗೊತ್ತು ಮಾಡುವ ಪ್ರದೇಶದಲ್ಲಿ ನವಂಬರ್ ೨೩, ೨೪ ಮತ್ತು ೨೫ ನೇ ತಾ॥ ಗಳಲ್ಲಿ ನಡೆಯುವುದು.

ಆಜಾದರೇ ಪುನಃ ಅಧ್ಯಕ್ಷರು

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನಿನ್ನೆ ದೆಹಲಿಯ ಭಂಗಿ ಕಾಲೋನಿಯಲ್ಲಿ ಆರಂಭವಾಯಿತು. ನೆಹರೂರವರ ಜಾಗದಲ್ಲಿ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಪುನಃ ಮೌಲಾನಾ ಆಜಾದರನ್ನೇ ಆರಿಸಬೇಕೆಂದು ಬಹು ಮಂದಿ ನಾಯಕರು ಅಭಿಪ್ರಾಯಪಟ್ಟಿರುವರೆಂದೂ ಈ ಬಗ್ಗೆ ಇಂದು ಆಜಾದರು ಒಪ್ಪಿಗೆಯ ಮಾಡಲ್ಪಡುವರೆಂದೂ ಹೇಳಲಾಗಿದೆ.

ವೈಸರಾಯರೊಡನೆ ಗಾಂಧಿ-ನೆಹರು ಭೇಟಿ

ಮಹಾತ್ಮ ಗಾಂಧಿ ಮತ್ತು ಪಂ॥ ಜವಹರಲಾಲ ನೆಹರೂರವರು ನಿನ್ನೆ ಸಂಜೆ ೬ ಗಂಟೆಗೆ ವೈಸರಾಯರನ್ನು ದೆಹಲಿಯಲ್ಲಿ ಭೇಟಿ ಮಾಡಿದರು.

ಆತ್ಮಹತ್ಯೆ ಪ್ರಯತ್ನ ಸ್ಥಿರಪಡಲಿಲ್ಲ

ಕೃಷ್ಣರಾಜನಗರದ [illegible] ಹೊಸ ಅಗ್ರಹಾರದ ಹರಿಬಳ್ಳಿಕೊಪ್ಪಲು [illegible] ಮನೆ [illegible] ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದನು. [illegible]

ಕಲ್ಕತ್ತದ ರಕ್ಷಣೆ
ಗವರ್ನರೇ ವಹಿಸುವರು

ಈದು ದಿನಾಚರಣೆ ಸಂಬಂಧವಾದ್ದ [illegible] ಘೆಗಳಾಗಬಹುದೆಂದು ಬಂಗಾಳದ ಗವರ್ನರೇ ಪ್ರಧಾನಿ ಸುಹ್ರವರ್ದಿಯವರ [illegible] ನ್ಯಾಯ ಮತ್ತು ಶಾಂತಿ ರಕ್ಷಣಾ [illegible] ಗಳನ್ನು ವಹಿಸಿಕೊಳ್ಳುವರೆಂದು ಹೇಳಲಾಗಿದೆ. ಅವರು ಕಲ್ಕತ್ತ ನಗರದ [illegible] ಗಳಲ್ಲಿ ಮಿಲಿಟರಿಗಳನ್ನು ತಮ್ಮ [illegible] ಆಜ್ಞೆ ಇತ್ತಿದ್ದಾರೆಂದೂ ಗೊತ್ತಾಗಿದೆ.

ಭಾರತಕ್ಕೆ ಬ್ರಿಟಿಷ್ ಹೈ ಕಮಿಷನರ್

ಭಾರತದಲ್ಲಿ ಬ್ರಿಟಿಷ್ ಹೈ ಕಮಿಷನರ ಕಛೇರಿಯನ್ನು ಸ್ಥಾಪಿಸಲು ಪ್ರಯತ್ನಗಳು ನಡೆಯುತ್ತಿವೆ. ಹೈ ಕಮಿಷನರು ನವೆಂಬರ್‌ನಲ್ಲಿ ಅಧಿಕಾರ ವಹಿಸಿಕೊಳ್ಳುವರೆಂದು ಬ್ರಿಟಿಷ್ ಸರ್ಕಾರದ ಪ್ರಕಟಣೆ ಹೊರಟಿದೆ. ಡೆಪ್ಯುಟಿ ಹೈ ಕಮಿಷನರಾಗಿ ನೇಮಕವಾಗಿರುವ ಮಿ॥ ಸ್ಯಾಮುಯೆಲ್‌ರವರು ಸೆಪ್ಟೆಂಬರ್‌ನಲ್ಲಿ ತಮ್ಮ ಅಧಿಕಾರವನ್ನು ವಹಿಸಿಕೊಳ್ಳುವರು.

ಹಿಂದೀ ತರಗತಿ ಆರಂಭ

ಮೈಸೂರು ೨೮

ಮೈಸೂರು ಸರ್ಕಾರಿ ಟ್ರೈನಿಂಗ್ ಕಾಲೇಜ್ ಸಂಘದ ಆಶ್ರಯದಲ್ಲಿ ಹಿಂದೀ ತರಗತಿಯನ್ನು ಶ್ರೀ ಚಿಕ್ಕ ನರಸಿಂಹಯ್ಯನವರು ನಡೆಸುವರು. ಇದರ ಆರಂಭೋತ್ಸವವು ಮೊನ್ನೆ ಶ್ರೀ ಕೆ. ಎಸ್. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಮಹಾರಾಜಾ ಕಾಲೇಜಿನ ಶ್ರೀ ನಾಗಪ್ಪನವರಿಂದ ನೆರವೇರಿಸಲ್ಪಟ್ಟಿತು.

ಸಮಿತಿಗಳನ್ನು ಬಹಿಷ್ಕರಿಸಲು ಲೀಗ್ ಸದಸ್ಯರಿಗೆ ಸೂಚನೆ

ಕೇಂದ್ರ ಸರ್ಕಾರದ ರಚನೆ ಬಗ್ಗೆ ವಿರೋಧ ಸೂಚಿಸಲು ಕೇಂದ್ರ ಶಾಸನ ಸಭೆಯ ಮುಸ್ಲಿಂ ಲೀಗಿನ ಸದಸ್ಯರು ಸರ್ಕಾರದಿಂದ ರಚಿತವಾಗಿರುವ ಯಾವ ಸಮಿತಿ ಸಭೆಗಳಿಗೂ ಹೋಗಕೂಡದೆಂದು ಸಭೆಯ ಲೀಗ್ ಪಕ್ಷದ ಉಪನಾಯಕರಾದ ಮಿ॥ [illegible] ಸೂಚನೆ ಕೊಟ್ಟಿದ್ದಾರೆ.

ದಕ್ಷಿಣ ಭಾರತ ರೈಲ್ವೆ ಕೆಲಸಗಾರರು ಮುಷ್ಕರ ಹೂಡಿರುವುದರಿಂದ ಆಟ್ಲಿಸ್ಟ್ ಓಡಾಡುತ್ತಿರುವ ರೈಲುಗಳಲ್ಲಿ ಅನೇಕ ಜನರು ಟಿಕೇಟಿಲ್ಲದೆ ಪ್ರಯಾಣ ಮಾಡುತ್ತಿರುವರೆಂದು ವರದಿಯಾಗಿದೆ. ಟಿಕೇಟು ಕೊಡುವವರೂ, ಅವನ್ನು ತನಿಖೆ ಮಾಡುವವರೂ ಇಲ್ಲದಿರುವುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ.

೬ ಜೊತೆ ಬಿಜಲಿ ಕುಸ್ತಿಗಳು

ನಂಜನಗೂಡಿನಲ್ಲಿ ೧—೯—೪೬ನೇ ಭಾನುವಾರ ಸಂಜೆ ೪ ಗಂಟೆಗೆ [illegible] ಅವರ [illegible] ಮಂಡಿಯಪ್ಪನವರ ಮನೆ [illegible] ನಗರ [illegible] ಮೈಸೂರು [illegible]

[illegible]

UNIVERSITY OF MYSORE

Notification No·
G 2-71/46-47

Office of the University
of Mysore,
Mysore, Dated 20th August 1946.

Applications are invited from duly qualified candidates for the award of four Fellowships to selected Arts and Science Graduates of the University for the purpose of pursuing original investigation or Research in their special subjects.

Applications in triplicate, in the following form should reach the Registrar, University of Mysore, Mysore on or before the 15th September 1946.

1. Name.
2. Age.
3. Caste or Community.
4. Qualifications (including examinations passed, name of University, date of passing and class)
5. Present Position.
6. Salary.
7. Previous Service if any.
8. Works published & other particulars if any.
9. Special subject in which applicant wishes to pursue original investigation or research

For terms and conditions of award applicants may refer to pages 206 & 207 of the Mysore University Calendar Vol. II for 1939-40.

D. S. Gordon,
Registrar.

ಸಾಧ್ವಿ

ತಾ|| ೨೮-೮-೪೬ ಬುಧವಾರ

ದಾವಣಗೆರೆಯ ಸಮಾರಂಭ

ಬರುವ ಶನಿವಾರ ದಾವಣಗೆರೆಯಲ್ಲಿ ಅಖಿಲ ಕರ್ನಾಟಕ ಏಕೀಕರಣದ ಮಹಾಧಿವೇಶನವು ಜರುಗುವುದು. ಮದರಾಸ್ ಮತ್ತು ಬೊಂಬಾಯಿನ ಕನ್ನಡಿಗರಾದ ಮಂತ್ರಿಗಳು ಅದರಲ್ಲಿ ಭಾಗವಹಿಸುವರು ಈ ಸಂಬಂಧವಾಗಿ ಉತ್ಸಾಹಪೂರಿತವಾದ ಕಾರ್ಯಕ್ರಮವನ್ನೇರ್ಪಡಿಸಲಾಗಿದೆ

ಕನ್ನಡ ನಾಡಿನ ಏಕೀಕರಣಕ್ಕಾಗಿ ಇದುವರೆಗೆ ಅನೇಕ ಸಮಾರಂಭಗಳು ಜರುಗಿವೆ. ಈಗ ದಾವಣಗೆರೆಯಲ್ಲಿ ನಡೆಯಲಿರುವ ಸಮ್ಮೇಳನವು ಅವೆಲ್ಲಕ್ಕಿಂತಲೂ ಮಿಗಿಲಾದುದಾಗಿದೆ ಭಾಷೆಗಳಿಗೆ ಅನುಗುಣವಾಗಿ ಪ್ರಾಂತಗಳನ್ನು ರಚಿಸುವ ಯೋಜನೆಯು ಈಗ ಒಂದು ವಾಸ್ತವ ಸ್ವರೂಪವನ್ನು ಹೊಂದಿರುತ್ತದೆ ಈ ತತ್ವವನ್ನು ಸರ್ಕಾರದೂ ಅಂಗೀಕರಿಸಿರುತ್ತಾರೆ ಕೊಟ್ಟ ಮಹಾರಾಜರು ಇದರ ಬಗ್ಗೆ ತಮ್ಮ ಸ್ಪಷ್ಟವಾದ ನೀತಿಯನ್ನು ಪ್ರತಿಪಾದಿಸಿ ಸಕಲರಿಗೂ ಮೇಲ್ಪಂಕ್ತಿಯನ್ನು ಹಾಕಿದ್ದಾರೆ.

ಹಿಂದೂಸ್ಥಾನದಲ್ಲಿ ಹೊಸ ಸರ್ಕಾರವು ಸ್ಥಾಪನೆಯಾಗಲಿರುವ ಈ ಸಮಯದಲ್ಲಿ ಮೇಲ್ಕಂಡ ಗುರಿಯನ್ನು ಸಾಧಿಸಲು ಈಗ ಸದವಕಾಶವು ದೊರೆತಿರುತ್ತದೆ ಕನ್ನಡ ನಾಡನ್ನು ಬೇರೆ ಬೇರೆ ವಿಭಾಗಗಳಿಗೆ ಹಂಚಿ ಹೋಗಿರುವ ಪ್ರಾಂತವು ಇನ್ನೊಂದಿರುವುದಿಲ್ಲ ಆದುದರಿಂದ ಕನ್ನಡಿಗರು ಈ ಸಮಸ್ಯೆಯನ್ನು ಯಶಸ್ವಿಯಾಗಿ ಬಗೆಹರಿಸಿ ತಮ್ಮ ನಾಡನ್ನು ಒಂದುಗೂಡಿಸಿದರೆ ಇತರರಿಗೆ ಮಾದರಿಯನ್ನು ಹಾಕಿಕೊಟ್ಟಂತಾಗುವುದು

ಮೈಸೂರು, ಹೈದರಾಬಾದು, ಮದರಾಸು, ಬೊಂಬಾಯಿ ಮತ್ತು ಇತರ ಸಣ್ಣ ಪುಟ್ಟ ಸಂಸ್ಥಾನಗಳಿಗೆ ಸೇರಿರುವ ಕನ್ನಡ ನಾಡಿನ ಭಾಗಗಳನ್ನು ಒಂದುಗೂಡಿಸಲು ಹಲವು ರಾಜಕೀಯ ತೊಡಕುಗಳು ಉದ್ಭವಿಸುವುದು ಸಹಜವೇ ಆಗಿದೆ ಆದರೆ ಇಡೀ ರಾಷ್ಟ್ರದ ಸಕಲ ಸಮಸ್ಯೆಗಳನ್ನೂ ಸಂಧಾನ ಮತ್ತು ಸಮಾಲೋಚನೆಗಳಿಂದ ಬಗೆಹರಿಸಲು ರಾಷ್ಟ್ರ ನಾಯಕರು ತೊಡಗಿರುವ ಈ ಸಮಯದಲ್ಲಿ ಇಂತಹ ಸಣ್ಣ ಪ್ರಶ್ನೆಗಳನ್ನು ಬಿಡಿಸುವುದೇನೂ ಅಸಾಧ್ಯವಾಗಲಾರದು ದಾವಣಗೆರೆಯ ಅಧಿವೇಶನವು ಕೈಗೊಂಡಿರುವ ಕಾರ್ಯವು ಯಶಸ್ವಿಯಾಗಿ

ರಷ್ಯ-ಅಮೆರಿಕ ಯುದ್ಧ ಸಂಭವವೇ ?

ಡಾರ್ಡನೆಲ್ಸ್ ಜಲಸಂಧಿ ವಿಚಾರದಲ್ಲಿ ರಷ್ಯದ ಕೋರಿಕೆಯನ್ನು ಅಮೆರಿಕಾ ತಿರಸ್ಕರಿಸಿರುವುದೂ, ಪೋಲೆಂಡ್, ಯುಗೋಸ್ಲಾವಿಯಾಗಳಲ್ಲಿ ಈ ರಾಷ್ಟ್ರಗಳ ಪ್ರಭಾವ ಹೆಚ್ಚುತ್ತಿರುವುದೂ, ವಿಶ್ವಶಾಂತಿ ಸಮ್ಮೇಳನ ಮತ್ತು ಭದ್ರತಾ ಸಮಿತಿಯಲ್ಲಿ ಈ ಎರಡು ರಾಷ್ಟ್ರಗಳಿಗೆ ಬಹಿರಂಗವಾಗಿ ನಡೆದ ವಾಗ್ಯುದ್ಧಗಳೂ ಮುಂದೆ ನಡೆಯಬಹುದಾದ ಯುದ್ಧಕ್ಕೆ ಸೂಚನೆಗಳಂತಿವೆಯೆಂದು ಹೇಳಲಾಗಿದೆ

ಬೇಗನೆ ಕನ್ನಡ ನಾಡು ಒಂದೇ ಪ್ರಾಂತವಾಗುವ ಸುಯೋಗವು ಸಂಪ್ರಾಪ್ತವಾಗಲೆಂದು ಹಾರೈಸೋಣ

Edited, printed and published by A. R. Nagarajan at the Sadhvi Press D Subbiah Road Mysore

ರಣಜಿತ್

29-8-46 ರಿಂದ

ರಂಜಾನ್ ಹಬ್ಬದ ಪ್ರಯುಕ್ತ

ಅನ್‌ಮೋಲ್-ಘಡಿ

ಅಥವಾ

ಅಮೂಲ್ಯ ಗಡಿಯಾರ

ಪಾತ್ರ—ಸುರೇಂದ್ರ, ನೂರ್‌ಜಹಾನ್, ಸುರಯ್ಯ, ಮೆಹಬೂಬ್, ತಯಾರಿಕೆ,

ಬೆಳಗಿನ ಪ್ರದರ್ಶನ :—ಸೂರದಾಸ್

OPERA TALKIES

ತಾ|| 28—8—46 ರಿಂದ

ಬಿಸಿ ಶಾದಿ

(20 ನೇ ಸಂಚುರಿ)

ಪ್ರತಿ ದಿನ ಮೂರು ಆಟಗಳು

* ಮೋತಿಲಾಲ್, * ನರ್ಗಿಸ್ * ಮಜಾರ್ ಖಾನ್

ನಿಮ್ಮ ಮೈ ಮೊಗವಲ್ಲಿನಂತೆ ಹೊಳೆಯಬೇಕೆ ? ನೀವು ಲಾವಣ್ಯ ಮೂರ್ತಿಗಳಾಗಬೇಕೆ ? ಹಾಗಾದರೆ ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ. ಪರೀಕ್ಷಿಸಿ ನೋಡಿರಿ ಎಲ್ಲೆಲ್ಲೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

ಗೌರೀ ಹಬ್ಬದ ಪ್ರಯುಕ್ತ

ಹೊಸ ಹೊಸ ನಮೂನೆಯ

(ಬಳೆಗಳು)

● ಗಾಜಿನ ○ ರಬ್ಬರ್ ಸೆಟ್ ○ ಕೆಮಿಕಲ್ ದಂತದ ○ ಸಿಲ್ಕ್ ಬಳೆಗಳು ○ ಮನೋರಮ ಸೆಟ್ ಬಳೆ

ತರಹವಾರಿ ಮೈಸೂರು ಸಿಲ್ಕ್ ರಿಬ್ಬನ್ ಬ್ರೋಚುಗಳು

ಬೆಳ್ಳಿಯ ಎನಾಮಲ್ ಲೋಲಕುಗಳು ✱ ಸಿಲಿಗ್ರಿ ಸಾಮಾನುಗಳು

ದೊರೆಯುತ್ತವೆ.

ಪ್ರಭಾತ್ ಬ್ಯಾಂಗಲ್ ಸ್ಟೋರ್ಸ್,

ಚಾಮುಂಡೇಶ್ವರಿ ಟಾಕೀಸ್ ಬಿಲ್ಡಿಂಗ್, ಸಯ್ಯಾಜಿರಾವ್ ರೋಡ್, ಮೈಸೂರು.

ಹರಾಜು

ಮೈಸೂರು ಮಂಡಿ ಮೊಹಲ್ಲಾ ಈದ್‌ಗಾ ಎಕ್ಸ್‌ಟೆನ್‌ಷನ್‌ನಲ್ಲಿರುವ ಶ್ರೀ ಎಂ ಸಿ ಕೆಂಪೇಗೌಡರ ಬಂಗಲೆ, ಕಾಟೇಜ್ ಮತ್ತು ಸೈಟುಗಳು ಸಹ 1-9-46 ನೇ ಭಾನುವಾರ ಪ್ರಾತಃಕಾಲ ೧೦ ಗಂಟೆಗೆ ಸ್ಥಳದಲ್ಲಿ ಬಹಿರಂಗ ಹರಾಜು ಮಾಡಲ್ಪಡುತ್ತದೆ ಸದರಿ ಸ್ವತ್ತುಗಳು, ವರ್ಕ್‌ಷಾಪ್‌ಗಳಿಗೂ, ಮಿಲ್‌ಗಳಿಗೂ, ಸಿನಿಮಾ ಮಂದಿರಗಳು ಕಟ್ಟುವುದಕ್ಕೂ ಸಹ ಅನುಕೂಲವಾಗಿರುತ್ತೆ ಹರಾಜಿನಲ್ಲಿ ಪಡೆದವರು ಹರಾಜು ಮೊಬಲಗಿನಲ್ಲಿ ನಾಲ್ಕನೇ ಒಂದು ಭಾಗ ಕೂಡಲೆ ಪಾವತಿ ಮಾಡತಕ್ಕದ್ದು ಬಾಕಿ ಮೊಬಲಗನ್ನು ರಿಜಿಸ್ಟರು ಕಾಲದಲ್ಲಿ ಪಾವತಿ ಮಾಡಿ ರಿಜಿಸ್ಟರ್ ವಗೈರೆಗಳನ್ನು ಅವರ ಸ್ವಂತ ಖರ್ಚಿನಿಂದ ನಡೆಸಿಕೊಳ್ಳತಕ್ಕದ್ದು ಬಾಕಿ ವಿಷಯಗಳಿಗೆ ಕೆಳಗೆ ಕಂಡ ವಿಳಾಸದಲ್ಲಿ ಮೊಖ್ತಾ ವಿಚಾರಿಸಿಕೊಳ್ಳಬಹುದು.

Neo Furniture Company,
Cabinet Makers, Auctioneers and Commission Agents,
Irwin Road, ... Mysore.

ವಿಜಯಾ ಪ್ರೆಸ್ಸ್, ಮೈಸೂರು.

ಪುನಹ ಉಲ್ಲನ್ ಸ್ವೆಟ್ಟರುಗಳು ಬಂದಿವೆ

ಆದರೆ. ಈ ಬಾರಿ ಹೆಂಗಸರಿಗೂ, ಗಂಡಸರಿಗೂ, ಮಕ್ಕಳಿಗೂ ಆಗುವಂತೆ, ತರಹವಾರಿ ನಮೂನೆಗಳಲ್ಲಿ ಬಂದಿವೆ ಸ್ವಲ್ಪವೇ ಇರುವುದರಿಂದ, ನಿಧಾನಮಾಡದೆ, ಬಂದು ಆರಿಸಿ, ತೆಗೆದುಕೊಳ್ಳಿರಿ

ಜಿ. ವಿ ಸೂರ್ಯನಾರಾಯಣ ಶೆಟ್ಟಿ ಅಂಡ್ ಸನ್ಸ್,

ಜವಳಿ ಮತ್ತು ಸಂಪಾಫ್ ಅಂಗಡಿ, ಸಯ್ಯಾಜಿರಾವ್ ರೋಡ್, ಮೈಸೂರು

No R I.18/ 1946-47

ಮೈಸೂರು ಸಿಟಿ ರೇಷನಿಂಗ್ ಆಫೀಸಿನಿಂದ:—

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ —

ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ, ಮೊಹಲ್ಲಾ ಸಬ್ ಗಾಡ್ ಲೈಸೆನ್ಸ್ ಪಡೆದ ವರ್ತಕರ ಡಿಪೋ, ಮತ್ತು ಸಹಕಾರ ಸಂಘಗಳಿಗೆ ಸಹ ಇದೇ ಮಾ 29, 30, 31 ನೇ ತಾರೀಖುಗಳಲ್ಲಿ ಈ ಕೆಳಗೆ ಕಂಡಂತೆ ರಜಾ ಕೊಡಲ್ಪಟ್ಟಿರುತ್ತೆ

29-8-46 (ಗುರುವಾರ) ಗೌರಿ ಮತ್ತು ರಂಜಾನ್ ಹಬ್ಬದ ಪ್ರಯುಕ್ತ ಬೆ... ರಜಾ ಕೊಡಲ್ಪಟ್ಟು ಮಧ್ಯಾಹ್ನ ಡಿಪೋಗಳು ತೆಗೆಯಲ್ಪಡ...

30-8-46 (ಶುಕ್ರವಾರ) ಗಣೇಶ ಹಬ್ಬದ ಪ್ರಯುಕ್ತ ಬೆಳಗ್ಗೆ ರಜಾ ಕೊಡಲ್ಪ... ಮಧ್ಯಾಹ್ನ ಡಿಪೋಗಳು ತೆಗೆಯಲ್ಪಡುತ್ತೆ.

31-8-46 (ಶನಿವಾರ) ದಾಸ್ತಾನು ಎಣಿಕೆ ಬಗ್ಗೆ ಪೂರ್ತಿ ರಜಾ

(ರುಜು) ಅಬ್ದುಲ್ ರಜಾಕ್,

14-8-46

ರೇಷನಿಂಗ್ ಆಫೀಸ...

ಮೈಸೂರು ...



ರಾಜಕಮಲ್ ಟಾಕೀಸ್

ಮೈಸೂರು

30—8—46 ರಿಂದ

ಪ್ರತಿ ದಿನ ಮೂರು ಆಟಗಳು

“ದ್ರೌಪದಿ”

ಭೂಮಿ ಕೆ.- ಸುಶೀಲಾ ರಾಣಿ, * ಚಂದ್ರಮೋಹನ್, * ಮಜಹರ್ ...

29-8-46 ರಿಂದ

ಪ್ರತಿ ದಿನ ಪ್ರಾತಃಕಾಲ 10-30 ...

“ಲಾಲ್ ಹವೇಲಿ”

ಪಾತ್ರ— ನೂರ್‌ಜಹಾನ್, ಸುರೇಂದ್ರ, ಯಾಕೂಬ್

ಕಡೆಯ ತರಗತಿಯ ವಿನಹ ಇತರ ಎಲ್ಲಾ ತರಗತಿಗಳಲ್ಲಿಯೂ ರಿಯಾಯಿತಿಯು...

ಫೋನ್ ನಂ. 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು



ಸಂಪುಟ ೫] ಗುರುವಾರ ೨೯—೪—೪೬ [ಸಂಚಿಕೆ ೩೧

ಮಂತ್ರಿಮಂಡಲಕ್ಕೆ ಪಟೇಲರು ಉಪಾಧ್ಯಕ್ಷರ

ರೈಲ್ವೆ ನೌಕರರ ಬೇಡಿಕೆ

ಸ್ವಂ.ಸು.ಫೋನ್] [ಬೆಂಗಳೂರು ೨೮

ಮೈಸೂರು ರೈಲ್ವೆಯ ವರ್ಕ್ ಷಾಪ್ ಮತ್ತು ಇತರ ಶಾಖೆಗಳ ಕೆಲಸಗಾರರು ೨೪ ಮತ್ತು ೨೫ ನೇ ತಾರೀಕುಗಳಲ್ಲಿ ಬೆಂಗಳೂರಿನಲ್ಲಿ ಸಭೆ ಸೇರಿ ಅನೇಕ ನಿರ್ಣಯಗಳನ್ನು ಮಾಡಿದರು. ಯಾವ ಪರತ್ತೂ ಇಲ್ಲದೆ ಎಲ್ಲಾ ಕೆಲಸಗಾರರಿಗೂ ಎರಡು ತಿಂಗಳ ಸಂಬಳ ಮತ್ತು ಬೋನಸ್ಸುಗಳನ್ನು ಕೊಡಬೇಕು, ಈಗ ಕೊಟ್ಟಿರುವ ಒಂದು ತಿಂಗಳ ಬೋನಸ್ ಮತ್ತು ಸಂಬಳವನ್ನು [illegible] ಪಟೇಲರು ಎಸ್. ಐ. ರೈಲ್ವೆಯವರಿಗೆ [illegible] ಅನುಭೂತಿ, ಆಹಾರದ ರೇಷನ್ನಿನಲ್ಲಿ [illegible] ಆಗಿರುವುದನ್ನು ಭರ್ತಿ ಮಾಡುವುದು, ಇನ್ನೇ ಮುಂತಾದವುಗಳ ಬಗ್ಗೆ ನಿರ್ಣಯಗಳಾದುವು. ೩೧ ನೇ ತಾರೀಕಿನೊಳಗೆ [illegible] ದೊರೆಯದಿದ್ದರೆ ದಿವಾನರಲ್ಲಿ ನಿಯೋಗ ಹೋಗುವಂತೆಯೂ ತೀರ್ಮಾನಿಸಿದರು.

* ನಗರಾಭಿವೃದ್ಧಿ ಸಭೆಗೆ ೪೬ ಲಕ್ಷ ರೂ[illegible] ವರಮಾನದ ಬಜೆಟ್ಟು ತಯಾರಾಗಿದೆ. ೩೦ ಲಕ್ಷ ರೂಪಾಯಿನ ಯೋಜನೆಯನ್ನು ಗೊತ್ತುಮಾಡಲಾಗಿದೆ. ಕೈಗಾರಿಕೆ [illegible]ಗಳು ಮತ್ತು ಐದು ಬಡಾವಣೆಗಳ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗಿದೆ.

* ಮೆಸರು ಘಟ್ಟದಲ್ಲಿ ನೂರು ಸಿಂಧೀ ಹಸುಗಳನ್ನು ಇಟ್ಟು ೪೯,೩೦೦ ರೂ. ಅಂದಾಜಿನಲ್ಲಿ ಒಂದು ಡೈರಿ ಫಾರಮ್ಮನ್ನು ತೆರೆಯಲು ಏರ್ಪಾಡಾಗಿದೆ.

[illegible] ಮಹಾರಾಣಿ ಕಾಲೇಜು ಲೆಕ್ಚರರಾದ [illegible] ಎಂ. ಜಯಲಕ್ಷ್ಮಮ್ಮಣ್ಣಿಯವರು ಅಸಿಸ್ಟೆಂಟ್ ಪ್ರೊಫೆಸರನ್ನಾಗಿ ಮಾಡಲಾಗಿದೆ.

ಖಾಸಗೀ ವಿದ್ಯಾಶಾಲೆಗಳ ಕಟ್ಟಡದ [illegible] ಕೊಡುವ ಸಹಾಯ ದ್ರವ್ಯವನ್ನು [illegible] ಒಂದು ಭಾಗದಿಂದ ಅರ್ಧ ಭಾಗಕ್ಕೆ [illegible]

ಕಳೆದುಹೋಗಿದೆ

[illegible] ಮೊನ್ನೆ ಬೆಳಗಿನ [illegible] ಮೈಸೂರಿಗೆ ಬಂದಾಗ ಒಂದು [illegible] ಗಂಟು ಕಳೆದುಹೋಗಿದೆ. ಅದರಲ್ಲಿ [illegible] ಚೀಲ, ಮೊಗುಟ, [illegible] ನೋಟು, ಕನ್ನಡಕದ ಮನೆ [illegible] ಇವೆಲ್ಲಾ ಇದ್ದುವು. ಯಾರಿಗಾದರೂ [illegible] ಚಾಮರಾಜನಗರದ [illegible] ವಿಳಾಸಕ್ಕೆ [illegible] ಕೋರಲಾಗಿದೆ.

ಕೊತೆ ಬಿಜಲಿ ಕುಸ್ತಿಗಳು

[illegible]ನಗೂಡಿನಲ್ಲಿ ೧೯-೪-೪೬ ನೇ [illegible] ಸಂಜೆ ೪ ಗಂಟೆಗೆ ಮೈಸೂರು [illegible] ನವರ ಮಗ ಕೋರಾಸಿಟ್ [illegible] ದೇವರಸನ ಹಳ್ಳಿ ಸಿಂಗ್ರೆ [illegible] ಮಗ ಕೋರಾಸಿಟ್ ಸ್ವಾ॥ [illegible], ಮೈಸೂರು ಸುಬ್ಬಣ್ಣನವರ ಗ[illegible] ಕೃಷ್ಣಪ್ಪನಿಗೂ ಇಲ್ಲಿನ ಕುರುಬ[illegible] ಮಾದಯ್ಯನವರ [illegible] ರಾಮಯ್ಯನಿಗೂ, ಶ್ರೀರಂಗಪ[illegible] ಗರಡಿ ಮರಿಯಪ್ಪನವರ [illegible] ಶ್ರೀನಿವಾಸುವಿಗೂ ಚಿಕ್ಕಯ್ಯನ [illegible] ಮೈಲಾರಯ್ಯನವರ ಮಗ ಸ್ವಾ॥ [illegible] ಯೂ [illegible] ನಡೆಯುತ್ತದೆ.

[illegible] ಕೆ ಪುಟ್ಟೇಗೌಡ,
ನಂಜನಗೂಡು.

ಮೈಸೂರಿನಲ್ಲಿ ರಾಜಕೀಯ ಪ್ರಗತಿಯಾಗಬೇಕು

ಮದರಾಸ್ ಮಂತ್ರಿಗಳೊಡನೆ ಭೇಟಿ

ಮೈಸೂರು ೨೮

ಮದರಾಸಿನ ಅರ್ಥಿಕ ಮಂತ್ರಿಗಳಾದ ಶ್ರೀ ಕೆ. ಆರ್. ಕಾರಂತರವರು ನಿನ್ನೆ ರಾಜಧಾನಿಗೆ ಆಗಮಿಸಿದರು. ದಾವಣಗೆರೆಯಲ್ಲಿ ನಡೆಯುವ ಏಕೀಕರಣ ಪರಿಷತ್ತಿನ ಆರಂಭೋತ್ಸವಕ್ಕಾಗಿ ಈ ದಿನ ತೆರಳುವರು. ನಮ್ಮ ಪ್ರತಿನಿಧಿಗಳು ಅವರನ್ನು ಭೇಟಿ ಮಾಡಲಾಗಿ ಅವರು ಈ ಕೆಳಗೆ ಕಂಡ ಅಂಶಗಳನ್ನು ತಿಳಿಸಿದರು:—

ಕರ್ನಾಟಕ ಏಕೀಕರಣಕ್ಕೆ ಬರೀ ಬ್ರಿಟಿಷ್ ಕರ್ನಾಟಕವು ಸೇರಿದರೆ ಸಾಲದು. ಪ್ರಮುಖ ಭಾಗವಾದ ಮೈಸೂರೂ ಸೇರಬೇಕು. ಆದರೆ ಮೈಸೂರು ನೆರೆಯ ಪ್ರಾಂತಗಳಷ್ಟು ಪ್ರಜಾ ಸ್ವಾತಂತ್ರ್ಯದಲ್ಲಿ ಮುಂದುವರಿದಿಲ್ಲ. ನಾವುಗಳು ಮೈಸೂರಿನೊಡನೆ ಸೇರಿ ನಮಗೆ ಈಗ ದೊರೆತಿರುವ ಅಲ್ಪಸ್ವಲ್ಪ ಸ್ವಾತಂತ್ರ್ಯವನ್ನು ಕಳೆದುಕೊಳ್ಳಲು ಸಿದ್ಧರಾಗಿಲ್ಲ. ಮೈಸೂರೇ ನಮ್ಮೊಡನೆ ಸೇರಿ ಪ್ರಜಾ ಸ್ವಾತಂತ್ರ್ಯವನ್ನು ಹೆಚ್ಚು ಹೆಚ್ಚಾಗಿ ಬೆಳಸಬೇಕು.

ಮದರಾಸ್ ಪ್ರಾಂತದ ೮ ಜಿಲ್ಲೆಗಳಲ್ಲಿ ಪಾನ ನಿರೋಧವನ್ನು ಜಾರಿಗೆ ತರಲು ಸಾಧ್ಯವೇ? ಎಂದು ಕೇಳಲು, ಅದು ಅಸಾಧ್ಯವೇನೂ ಅಲ್ಲವೆಂದು ಹೇಳಿದರು. ಭೋಗ್ಯದ ವೃಕ್ಷಗಳ ಮೇಲೆ ತೆರಿಗೆಯನ್ನು ಹಾಕಿ ಇದರಿಂದಾಗುವ ನಷ್ಟವನ್ನು ಭರ್ತಿ ಮಾಡಲಾಗುವುದೆಂದು ಸೂಚಿಸಿದರು.

ಈಗಾಗಲೇ ಅನೇಕ ಬ್ರಿಟಿಷ್ ಅಧಿಕಾರಿಗಳು ಭಾರತವನ್ನು ಬಿಟ್ಟು ಹೊರಡುತ್ತಿರುವರು. ಅವರು ಹೋದ ಮಾತ್ರಕ್ಕೆ ಸ್ವಾತಂತ್ರ್ಯವು ಬರುವುದಿಲ್ಲ. ಬ್ರಿಟಿಷ್ ಸೈನ್ಯವು ಹೋಗಬೇಕು. ನೇತಾಜಿ ಬೋಸರು ಅಲ್ಪ ಕಾಲದಲ್ಲಿ ರಾಷ್ಟ್ರೀಯ ಸೈನ್ಯವನ್ನು ಕೂಡಿಸಿದಂತೆ ನಾವೂ ಸಹ ಬ್ರಿಟಿಷ್ ಸೈನ್ಯಗಳು ಹೋದ ಮೇಲೆ ರಾಷ್ಟ್ರೀಯ ಸೈನ್ಯವನ್ನು ಅತ್ಯಂತ ಸುಲಭವಾಗಿ ರಚಿಸಬಹುದು.

ಕೋಮುವಾರು ಗಲಭೆಗಳು ನಡೆದರೆ ಅವುಗಳನ್ನು ನಿವಾರಿಸಲು ನಮ್ಮ ಸರ್ಕಾರವು ಸಂಪೂರ್ಣ ಸಿದ್ಧತೆಯನ್ನು ಮಾಡಿರುವುದಾಗಿ ಹೇಳಿದರು. ತಮ್ಮ ಪ್ರಾಂತದ ಎಲ್ಲಾ ಐ. ಸಿ. ಎಸ್. ಅಧಿಕಾರಿಗಳನ್ನೂ [illegible] ಕಡೆಗಳಿಂದ [illegible] ಕರೆಸಿಕೊಳ್ಳುತ್ತಿ[illegible] [illegible]

(ಹಿಂದಿನ ಪುಟದಿಂದ ಮುಂದುವರಿದುದು)

ನಿಧಿ ಸಭೆಯ ಸಂದರ್ಭದಲ್ಲಿ ಶಾಸನ ಸಭೆಗಳ ನಾಯಕರ ಸಲಹೆಗಳನ್ನು ಕೇಳಲಾಗುವುದೆಂದು ದಿವಾನರು ಭರವಸ ಇತ್ತಿದ್ದರೆಂದೂ ಈಗಿನ ಪರಿಸ್ಥಿತಿ ಬದಲಾಗಿದೆಯೆಂದೂ ಹೇಳಿದರು.

ಶ್ರೀ॥ ಹೆ. ಮರಿಯಪ್ಪನವರು ಮಾತನಾಡಿ, ಸರ್ ರಾಮಸ್ವಾಮಿ ಮೊದಲಿಯಾರ್‌ರವರ ಹೇಳಿಕೆಯು ಆಶ್ಚರ್ಯವನ್ನುಂಟು ಮಾಡಿದೆ ಎಂದು ತಿಳಿಸಿದರು. ದೇಶದ [illegible] ಆದರ [illegible] ಗಳು ಅವರಿಗೇನೂ ತಿಳಿದಿರುವುದಿಲ್ಲ. ಭಾರತದಲ್ಲಿ ರಾಜಕೀಯ ಬದಲಾವಣೆ ತೋರಿಬಂದಂತೆಲ್ಲಾ ಇಲ್ಲೂ ಬದಲಾವಣೆಯಾಗಿದೆ. ದೇಶೀಯ ರಾಜರಿಗೂ ಸ್ವಾತಂತ್ರ್ಯವು ಪ್ರಾಪ್ತವಾಗುವ [illegible] ಸನ್ನಿವೇಶಗಳು [illegible] ರುತ್ತಿವೆಯೆಂಬುದನ್ನು ಮರೆಯಬಾರದು. ದೇಶೀಯ ರಾಜರು ಇಷ್ಟರಲ್ಲೇ ಶತಮಾನದ ದಕ್ಷದೃಷ್ಟಿಯೇ ಇಲ್ಲ [illegible] ಶತಮಾನದಲ್ಲಿಲ್ಲ. ಮೈಸೂರು [illegible] ವಿಚಾರದಲ್ಲಿ [illegible] ಮುಂದುವರಿದಿದೆ. ಅವರ ಅಭ್ಯುದಯಕ್ಕೆ [illegible] ಸಂವಿಧಾನ ರಚನಾ ಸಭೆಯಲ್ಲಿ ಭಾರತ ಕೇಂದ್ರ ಸರ್ಕಾರವನ್ನು ಅನೇಕ ವಿಷಯದಲ್ಲಿ [illegible] ನಡೆಯಬೇಕಾಗಿದೆ ಎಂದು ಹೇಳಿದರು.

ಶ್ರೀ॥ ಬಂದೀಗೌಡರೂ ಮತ್ತು ಶ್ರೀ॥ ರಾಜಂ ಶೆಟ್ಟಿಯವರೂ ಸಹ ಭಾಷಣ ಮಾಡಿದರು.

ಭಾರತ ರಾಜ್ಯಾಂಗ ಸಮಿತಿಗೆ ಮೈಸೂರಿನ ಪರವಾಗಿ ಅಧಿಕಾರೀ ಮತ್ತು ಖಾಸಗೀ ಪ್ರತಿನಿಧಿಗಳನ್ನು ಕಳುಹಿಸಲಾಗುವುದೆಂದೂ ತಾವೇ ಅವರ ನಾಯಕರಾಗಿ ಹೋಗುವುದಾಗಿಯೂ, ದಿವಾನರು ಹೇಳಿರುವುದನ್ನು ಖಂಡಿಸಿ, ಆ ಸಮಿತಿಗೆ ಮೈಸೂರಿನ ಪರವಾಗಿ ಚುನಾಯಿತ ಪ್ರಜಾಪ್ರತಿನಿಧಿಗಳೇ ಹೋಗುವಂತೆ ಏರ್ಪಾಡು ಮಾಡಬೇಕೆಂದು ಶ್ರೀ ಮನ್ಮಹಾರಾಜರನ್ನು ಪ್ರಾರ್ಥಿಸುವ ನಿರ್ಣಯವು ಅಂಗೀಕಾರವಾಯಿತು.

ಸಹ ಕರೆಸಿಕೊಳ್ಳಲಾಗಿದೆ ಎಂದು ತಿಳಿಸಿದರು.

ಏಕೀಕರಣ ಪರಿಷತ್ತಿನ ಅಂಗವಾಗಿ ಪ್ರತಿನಿಧಿ [illegible] ಶ್ರೀ ಕಾರಂತರ [illegible] ಅಧ್ಯಕ್ಷತೆಯಲ್ಲಿ [illegible] ಅವರನ್ನು [illegible] ಇನ ಮೆರವಣಿಗೆಯಲ್ಲಿ [illegible] ಈ ಕೆಲಸ [illegible] ಕನ್ನಡ [illegible] "[illegible]" ಎಂದು [illegible]

ಸಿನಿಮಾ, ನಾಟಕಗಳಿಗೆ ಪ್ರತಿಬಂಧಕ

ರಾಜಧಾನಿಯಲ್ಲಿ ಮುಂಜಾಗ್ರತೆ ಕ್ರಮ

ಮೈಸೂರು ೨೮

ಕೋಮುವಾರು ಗಲಭೆಗಳಿಗೆ ಅವಕಾಶವಾಗದಂತೆ ರಾಜಧಾನಿಯಲ್ಲಿ ಅಧಿಕಾರಿಗಳು ಅವಶ್ಯಕವಾದ ಎಲ್ಲಾ ಮುಂಜಾಗ್ರತೆ ಕ್ರಮಗಳನ್ನು ಕೈಗೊಂಡಿರುವರು. ಈ ದಿನ ಮತ್ತು ೩೦ ಮತ್ತು ೩ ನೇ ತಾ॥ ಸೋಮವಾರ, ಮಂಗಳವಾರದ ಸಂಜೆ ೬ ಘಂಟೆ ಮೇಲೆ ಯಾವ ಸಿನಿಮಾ ಅಥವಾ ನಾಟಕಗಳು ನಡೆಯದಂತೆ ಪೋಲೀಸ್ ಶಾಸನದ ೪೨ ನೇ ವಿಧಿ ಪ್ರಕಾರ ಜಿಲ್ಲಾಧಿಕಾರಿಗಳು ಪ್ರತಿಬಂಧಕಾಜ್ಞೆ ಹೊರಡಿಸಿದ್ದಾರೆ. ಮೇಲ್ಕಂಡ ದಿನಗಳಲ್ಲಿ ಸಂಜೆ ೬ ಘಂಟೆಯ ನಂತರ ಎಲ್ಲಾ ಹೋಟೆಲು ಮತ್ತು ಕಾಫಿ ಅಂಗಡಿಗಳನ್ನು ಮುಚ್ಚತಕ್ಕದೆಂದೂ ಸಹ ಅವರು ಮತ್ತೊಂದು ಆಜ್ಞೆಯನ್ನು ಹೊರಡಿಸಿದ್ದಾರೆ.

ಕಲ್ಯಕ್ರೆಯ ದುರಂತದ ಬಗ್ಗೆ ಅನೇಕ ನಿರಾಧಾರವಾದ ವದಂತಿಗಳು ಹಬ್ಬಿ [illegible], ಗಣೇಶ ಮತ್ತು ರಂಜಾನ್ ಹಬ್ಬಗಳ ಸಂದರ್ಭದಲ್ಲಿ ಸಂದಿಗ್ಧವಾಗಿರುವ ಈ ಸಮಯದಲ್ಲಿ ಹಿಂದೂ ಮುಸಲ್ಮಾನರುಗಳಿಗೆ ಘರ್ಷಣೆ ಉಂಟಾಗಬಹುದಾದುದನ್ನು ತಪ್ಪಿಸಿ ಶಾಂತಿ ಮತ್ತು ಶಿಸ್ತನ್ನು ರಕ್ಷಿಸಲು ಈ ಆಜ್ಞೆಯನ್ನು ಹೊರಡಿಸುವುದಾಗಿ ಸಮರ್ಥನೆ ಮಾಡಲಾಗಿದೆ.

[illegible] ಮುಖ್ಯ ಸ್ಥಳಗಳಲ್ಲಿ ರಕ್ಷಣೆ ಸಜ್ಜುಗೊಳಿಸಿದ ಪೋಲೀಸರು ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ. [illegible] ಬಿಗಿಯನ್ನು [illegible] ಡುತ್ತಿದ್ದಾರೆ.

ಈ ಬೆಳಿಗ್ಗೆ ೧೧ ಗಂಟೆ ಸಮಯದಲ್ಲಿ [illegible] ಜನ ಮುಸ್ಲಿಮರು ಸಭೆಸೇರಿ [illegible] ಯೀ ಪ್ರಾರ್ಥನೆ ಸಲ್ಲಿಸಿದರು.

ಕೋಟೆ ವಿಶ್ವೇಶ್ವರಸ್ವಾಮಿಗೆ ಬೆಣ್ಣೆ ಅಲಂಕಾರ

ಈ ದಿನ ಉತ್ಸವದ ಕೋಟೆ ಬಾಗಿಲಿನ ವಿಶ್ವೇಶ್ವರ ಸ್ವಾಮಿಗೆ ಸಾರಿ ಬೆಣ್ಣೆ ಅಲಂಕಾರ ಮಾಡಲಾಗುವುದು. ಭಕ್ತಾದಿಗಳಿಂದ ವಿಶೇಷ ಪೂಜೆ ಸಹ ನಡೆಯುವುದು.

ಪಟೇಲರು ಕೇಂದ್ರ ಸರ್ಕಾರದ ಉಪಾಧ್ಯಕ್ಷರೇ?

ಪಂ॥ ನೆಹರೂರವರು ವಿಶ್ವಸಮ್ಮೇಳನದಲ್ಲಿ ಭಾಗ ವಹಿಸಬೇಕಾಗಬಹುದಾದ್ದರಿಂದ ಸ॥ ಪಟೇಲರು ವೈಸರಾಯರ ಕಾರ್ಯಕಾರಿ ಸಮಿತಿಯ ಉಪಾಧ್ಯಕ್ಷರಾಗಬಹುದೆಂದು ದೆಹಲಿಯಲ್ಲಿ ಹೇಳಲಾಗುತ್ತಿದೆ. ಈ ಬಗ್ಗೆ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಅಂತಿಮ ನಿರ್ಧಾರಕ್ಕೆ ಬರಲಿದೆ.

ಉಪ ಚುನಾವಣೆ

[illegible] [illegible] ೨೮

ಇಲ್ಲಿಯ ಪುರಸಭೆಯ ಎರಡು ಸ್ಥಾನಗಳಿಗೆ ನಿನ್ನೆ ದಿನ ಉಪ ಚುನಾವಣೆ ನಡೆಯಿತು. ಶ್ರೀ [illegible] ಅನಂತ ನಾರಾಯಣ [illegible] [illegible] ಮತ್ತು [illegible] ಗಳು [illegible]

[illegible] [illegible]

[illegible]

[illegible]

ಸಾಧ್ವಿ

ಕೊಚ್ಚಿ ರಾಜ್ಯದ ಆದರ್ಶ

[illegible] ನ್ನು ಅವರು [illegible] ರೂಪದಲ್ಲಿ ಅಂಗೀಕ ರಿಸಿದ್ದಾರೆ. ಮತ್ತು [illegible] ಪ್ರಾಂತಗಳು ಪ್ರಜಾಪ್ರಭುತ್ವದ ಅಭಿಪ್ರಾಯಕ್ಕೂ ಮನ್ನಣೆಯಿತ್ತಿದ್ದಾರೆ. ಇ ದಕ್ಕಾಗಿ ಸಕಲ ದೇಶಾಭಿಮಾನಿಗಳ ಮೆಚ್ಚಿ ಗೆಗೂ ಪಾತ್ರರಾಗಿದ್ದಾರೆ. ರಾಷ್ಟ್ರಪತಿ ಜವ ಹರಲಾಲರು ಅವರಿಗೆ ಒಂದು ವಿಶೇಷ ಸಂ ದೇಶವನ್ನು ಕಳುಹಿಸಿ ತಮ್ಮ ಅಭಿನಂದನೆ ಯನ್ನು ಸಲ್ಲಿಸಿದ್ದಾರೆ. ಕೊಚ್ಚಿ ರಾಜರ ಉದ್ಯಮದಲ್ಲಿ ಅಲ್ಲಿನ ಪ್ರಜಾವರ್ಗದವ ರು ಸಂಪೂರ್ಣವಾಗಿ ಸಹಕರಿಸಬೇಕೆಂದು ನೆಹರೂರವರು ಸೂಚಿಸಿದ್ದಾರೆ.

ಸರ್ ಷಣ್ಮುಗಂ ಶೆಟ್ಟಿಯಾರರು ಕೆಲವು ವರ್ಷಗಳ ಹಿಂದೆ ಕೊಚ್ಚಿಯ ದಿವಾನರಾಗಿ ದ್ದಾಗ ಅಲ್ಲಿ ಒಂದು ಬಗೆಯ ಸುಧಾರಣೆ ಯನ್ನು ಜಾರಿಗೆ ತಂದರು. ಚುನಾಯಿತ ರಾದ ಮಂತ್ರಿಗಳನ್ನು ನೇಮಿಸಲು ಅವ ಕಾಶ ಕಲ್ಪಿಸಿದರು. ಆ ಮಂತ್ರಿಗಳು ಪ್ರಜಾ ಪ್ರತಿನಿಧಿಗಳ ವಿಶ್ವಾಸಕ್ಕೆ ಬದ್ಧರಾಗುವಂತೆ ಮಾಡಿದರು. ಜವಾಬ್ದಾರಿ ಸರ್ಕಾರದ ಬೇ ಡಿಕೆಯನ್ನು ಆಗಲೇ ಅಲ್ಲಿ ಮಾಡಿದು ದಾಗಿಯೂ ಕೇಳಲಾಗುತ್ತಿತ್ತು.

ಕೆಲವು ದಿನಗಳ ಹಿಂದೆ [illegible] ಅಲ್ಲಿನ [illegible] ನಂತರ [illegible] ಪಕ್ಷಗಳವರಿಂ ದಲೇ [illegible] ಮಂತ್ರಿಗಳನ್ನು [illegible] ದಿವಾನರು ಮಾತ್ರ [illegible] ಆದರೆ ಈ ಹೊಸ ವ್ಯವಸ್ಥೆಯು ಜವಾಬ್ದಾರಿ ಸರ್ಕಾರ ಸಾಧನೆಗೆ ಮತ್ತೊಂದು ಮೆಟ್ಟಿಲೆಂದು ಅಲ್ಲಿ ನ ಸರ್ಕಾರದವರು ಹೇಳಿರುವರು.

ಜವಾಬ್ದಾರಿ ಸರ್ಕಾರದ ಮಾತನ್ನೇ ಎ ತ್ತದಿರುವ ಸಂಸ್ಥಾನಗಳು ಅನೇಕವಿವೆ. ನ ಮ್ಮ ಸಂಸ್ಥಾನದಲ್ಲಿ ಪ್ರಜೆಗಳು ಇದಕ್ಕಾಗಿ ಹಲವಾರು ವರ್ಷಗಳಿಂದ ಒತ್ತಾಯಪಡಿ ಸುತ್ತಿದ್ದರೂ ಇನ್ನೂ ಪ್ರಭುತ್ವದ ಅಂಗೀಕಾ ರವು ಸಹ ಇದಕ್ಕೆ ದೊರೆತಿರುವುದಿಲ್ಲ. ಪ್ರ ಜಾಪ್ರಭುತ್ವವೆಂಬುದು ಇನ್ನೂ ನಗನ [illegible] ಸುಮವಾಗಿಯೇ ಇರುತ್ತದೆ. ನಿಜವು ಪ್ರಾಂ ತವಾದ ಕೊಚ್ಚಿ ಸಂಸ್ಥಾನವು ಈ ವಿಚಾರದ ಲ್ಲಿ ಮುಂದುವರಿಯುತ್ತಿರುವುದಕ್ಕಾಗಿ ನ ಸ್ಸಿನಿಂದ ಪ್ರಶಂಸೆ [illegible] ಪಡಬೇಕೇಕೆ. ರಾಜ್ಯಾಂಗ ರಚನಾ ಸಭೆ ಗೂ ಸಹ ಚುನಾಯಿತ ಪ್ರತಿನಿಧಿಯನ್ನೇ ಕಳುಹಿಸಿಕೊಡುವುದಾಗಿ ಕೊಚ್ಚಿ [illegible] [illegible] ಸಂಸ್ಥಾನದ [illegible]

ಮೊಕದ್ದಮೆ ವಾಪಸು

ಮು ನಿಸಿಪಲ್ ಲಾರಿಗಳು ಸೌದೆಯನ್ನು ತುಂಬಿಕೊಂಡು ಬೋಲುಗೇಟಿನಿಂದ ನೇರ ವಾಗಿ ಇಂದ್ರಭವನಕ್ಕೆ ಹೋಗುತ್ತವೆ ಎಂ ದು ನಾನು ಜಿಲ್ಲಾಧಿಕಾರಿಗಳು ನಡೆಸಿದ ಪ ತ್ರಿಕಾ ಸಮ್ಮೇಳನದಲ್ಲಿ ಹೇಳಿದೆನೆಂದು ಮುಂಚಾಗಿ ಹಲವು ಪತ್ರಿಕೆಗಳಲ್ಲಿ ವರದಿ ಯಾದುದರ ಪರಿಣಾಮವಾಗಿ ಇಂದ್ರಭವನ ದ ಮಾಲೀಕರಾದ ಶ್ರೀ ಬದರೀ ಪ್ರಸಾದರು ತಮಗೆ ಅಪಮಾನವೂ, ನಷ್ಟವೂ ಉಂ ಟಾದುದಕ್ಕಾಗಿ ನನ್ನ ಮೇಲೆ ಮೈಸೂರು ಒಂದನೇ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮಾನನಷ್ಟದ ಮೊಕದ್ದಮೆಯನ್ನು ಹೂಡಿ ದ್ದರು. ಮೇಲ್ಕಂಡ ವರದಿಗಳ ವಿಚಾರ ವಾಗಿ ನನಗೂ ಅವರಿಗೂ ಪತ್ರವ್ಯವಹಾರ ನಡೆದು ವರದಿಗಳು ಅಪಕೃತವಾದ ಪ್ರಸಂಗ ವೆಂದೂ, ಇಂದ್ರಭವನದ ವಿಷಯದಲ್ಲಾಗ ಲೀ, ಶ್ರೀ ಬದರೀ ಪ್ರಸಾದರ ವಿಷಯದ ಲ್ಲಾಗಲೀ, ಬೇರೆ ಯಾವ ಭವನದ ವಿಷ ಯದಲ್ಲಾಗಲೀ, ನನಗೆ ಯಾವ ದುರಭಿ ಪ್ರಾಯವೂ ಇಲ್ಲವೆಂದೂ ಸೂಚಿಸಿದ್ದೆನು.

ಈಚೆಗೆ ನನಗೂ ಶ್ರೀ ಬದರೀ ಪ್ರಸಾದ ರಿಗೂ ಸಂಭಾಷಣೆ ನಡೆಯಿತು. ಇಂದ್ರ ಭವನದ ಮೇಲೆ ನಾನು ಯಾವ ಆರೋಪ ಣೆಯನ್ನೂ ಮಾಡಲಿಲ್ಲವೆಂದೂ "ಇಂದ್ರ ಭವನವೇ ಮುಂತಾದ ಹೋಟೆಲುಗಳಿಗೆ ಮುನಿಸಿಪಲ್ ಲಾರಿಗಳಲ್ಲಿ ಸೌದೆಯು ಹೋಗುತ್ತದೆಂಬ ಕಾರಣದಿಂದ ಸಾರ್ವಜ ನಿಕರಿಗೆ ಸೌದೆಯ ಅಭಾವವು ಸಂಭವಿಸ್ತ ವಾಗಿದೆ ಎಂದು ಮಹಾಜನರಲ್ಲಿ ವಿಶೇಷ ಪ್ರಚಾರ ಇರುವುದೆಂಬ" ಮಾತನ್ನು ಅಧಿ ಕಾರಿಗಳಿಗೆ ತಿಳಿಸಿದನೆಂಬುದನ್ನೂ, ಈ ಪ್ರ ಕಾರದ ನಿರೂಪಣೆಯ ನನಗೆ ತಿಳಿಯದೆಂಬು ದನ್ನು, ಮೇಲ್ಕಂಡ ವರದಿಯ ದೆಸೆಯಿಂದ ನನಗೆ ಉಂಟಾಗಿರುವ ವಿಷಾದವನ್ನೂ ನಾ ನು ಶ್ರೀ ಬದರೀ ಪ್ರಸಾದರಿಗೆ ವಿವರಿಸಿದೆ ನು. ಇದರಿಂದ ಅವರು ಸಂತೃಪ್ತರಾಗಿ

ಟಿ. ಸಿ. ನಟರಾಜ್

ಔಷಧಾಲಯ

ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅಗತ್ಯವಾಗಿ ಬೇಕಾದ ಎಲ್ಲಾ ಇಂಜ ಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದೀಯ ಔ ಷಧಗಳೆಲ್ಲವೂ ದೊರೆಯುತ್ತವೆ.

ರಣಜಿತ್

೨೯-8-46 ರಿಂದ

ರಂಜಿತ್ ಪಿಕ್ಚರ್ಸ್ ಪ್ರಯುಕ್ತ

ಅನ್‌ಮೋಲ್‌-ಘಡಿ

ಅಥವಾ

ಅಮೂಲ್ಯ ಗಡಿಯಾರ

ಪಾತ್ರ - ಸುರೇಂದ್ರ, ನೂರ್‌ಜಹಾನ್, ಸುರಯ್ಯಾ, ಮೊಹಬೂಬ್, ತಯಾರಿಕೆ,

ಟೀನಿನ ಪ್ರದರ್ಶನ — ಸೂರದಾಸ್

Edited, printed and published by A. R. Nagaraja at the [illegible] Press [illegible] Mysore.

ರಾಜ್ಯಾಂಗ ಸಮಿತಿಯಲ್ಲಿ ಮೈಸೂರಿನ ಪ್ರಾತಿನಿಧ್ಯ

ದಿವಾನರ ಹೇಳಿಕೆಯ ಖಂಡನೆ

ಮೈಸೂರು ೨೮

ಟೌನ್ ಹಾಲ್ ಮೈದಾನದಲ್ಲಿ ನಿನ್ನೆ ಸಂ ಜೆ ಶ್ರೀ॥ ಎಸ್. ಚೆನ್ನಯ್ಯನವರ ಅಧ್ಯಕ್ಷತೆ ಯಲ್ಲಿ ಬಹಿರಂಗ ಸಭೆ ನಡೆದು, ರಾಜ್ಯಾಂಗ ರಚನಾ ಸಮಿತಿಗೆ ಮೈಸೂರು ಪ್ರತಿನಿಧಿಗಳ ನ್ನು ಕಳುಹಿಸುವ ಬಗ್ಗೆ ದಿವಾನರು ತಿಳಿಸಿ ರುವ ಮತ್ತು ಅನುಸರಿಸಬಹುದಾದ ಕಾರ್ಯ ಕ್ರಮಗಳನ್ನು ಕುರಿತು ತೀವ್ರವಾಗಿ ಖಂಡಿ ಸಲಾಯಿತು. ರಾಜ್ಯಾಂಗ ರಚನಾ ಸಮಿತಿ ಯ ವಿಚಾರಗಳನ್ನು ಸೂಕ್ಷ್ಮವಾಗಿ ಶ್ರೀ॥ ಟಿ. ನಾರಾಯಣಸ್ವಾಮಿಯವರು ತಿಳಿಸಿದರು.

ಶ್ರೀ॥ ಚೆನ್ನಯ್ಯನವರು ಮಾತನಾಡು ತ್ತಾ, ಸರ್ ರಾಮಸ್ವಾಮಿ ಮೊದಲಿಯಾರ್ ರವರು ರಚನಾ ಸಮಿತಿಗೆ ಅಧಿಕಾರೀ ಮತ್ತು ಬಾಹಿರೀ ಪ್ರತಿನಿಧಿಗಳನ್ನು ತಮ್ಮ ನಾಡು ಕತ್ವದಲ್ಲಿ ಕರೆದೊಯ್ಯುವೆನೆಂದು ಹೇಳುವು ದು ಸೋಜಿಗವಾಗಿದೆ ಎಂದು ಹೇಳಿದರು. ಮಹಾಪ್ರಭುಗಳು ಮೈಸೂರು ಪ್ರತಿನಿಧಿಗ ಳನ್ನು ತಮ್ಮ ನಾಯಕತ್ವದಲ್ಲಿ ಕರೆದೊ ಯ್ಯಬೇಕೆಂದು ತಿಳಿಸಿದಾಗ, ದಿವಾನರು ಬ

ಮೊಕದ್ದಮೆಯನ್ನು ವಾಪಸು ತೆಗೆದುಕೊಂ ಡುದನ್ನು ದೀರ್ಘಕಾಲದಸ್ನೇಹವು ಶಾಶ್ವತ ವಾಗಿರಲು ಅವಕಾಶ ಕಲ್ಪಿಸಿದ್ದಕ್ಕಾಗಿ ನಾನು ಶ್ರೀ ಬದರೀ ಪ್ರಸಾದರಿಗೆ ಸಂತೋಷವನ್ನು ಸೂಚಿಸುತ್ತೇನೆ.

ಆಗರಂ ರಂಗಯ್ಯ

ವರಿಗೆ ಸೂಕ್ತ ಹಿತವಾದಗಳನ್ನು [illegible] ಹುದಾಗಿತ್ತು. ಕಾಂಗ್ರೆಸ್ ಪಕ್ಷದವ ರು ನಿರ್ಧಾರಕ್ಕೆ ಬಂದು ಸತ್ಯಾಗ್ರಹ ಹೂಡಬೇಕೆಂದು ತೀರ್ಮಾನಿಸಿದಲ್ಲಿ, ರಿಂದ ಉಂಟಾಗಬಹುದಾದ ಕಷ್ಟ ನ ಗೆಲ್ಲಾ ದಿವಾನರೇ ಕಾರಣರೆಂದು [illegible] ವಾಗಿ ಹೇಳಬಹುದು. ಕಾಲವು [illegible] ಹೋಗುವ ಮೊದಲು ದಿವಾನರು ಪ್ರ ಳಿಗೆ ಅರಿಕೆ ಮಾಡಿ, ಈಗಿನ ಕಾರ್ಯ ವು ಬದಲಾಗುವಂತೆ ಏರ್ಪಾಡು ಮಾ ದು ಮೇಲು, ಎಂದು ಶ್ರೀ॥ ಚನ್ನಯ ರು ಹೇಳಿದರು.

ಕಳೆದ ಎರಡು ಶತಮಾನಗಳಿಂದ ತವನ್ನು ಆಳಿದ ಬ್ರಿಟಿಷರು ತಮ್ಮ ತವನ್ನು ಭಾರತೀಯರಿಗೇ ವಹಿಸಿ ತೆರಳುವ ಕಾಲ ಬಂದಿದೆ; ಅದರ ಪರಿ ವೇ ಈ ರಾಜ್ಯಾಂಗ ರಚನಾ ಸಮಿತಿ; ದುವರೆಗೆ ಸಂಸ್ಥಾನಗಳ ಸರ್ಕಾರಗಳು, ಪ್ರಭಾವ ಪ್ರತಿಭೆಗಳು ಎಷ್ಟೇ ಇರಲಿ, ಜಾ ಬೆಂಬಲ ಪಡೆದ ಪ್ರತಿನಿಧಿಗಳು ರ ಸಮಿತಿಯಲ್ಲಿ ಭಾಗವಹಿಸುವುದಕ್ಕೆ ಅ ರವನ್ನು ಮಾಡಿಕೊಡುವುದು ಒಳ್ಳೆಯ ಸಮಿತಿಯು ಬಹು ಮಂದಿ ಸದಸ್ಯರ ನಾಯಕರೇ ಆಗಿರುವಲ್ಲಿ, ಮೈಸೂರು ನಿಧಿಗಳ ನಾಯಕರಾದ ಶ್ರೀ॥ ಮೊದಲಿ ರ್ ರವರು ಏಕಾಂಗಿಯಾಗಿ ಏನು ಮಾಡಲು ಸಾಧ್ಯವಾದೀತು? ಎಂದು ಶ್ರೀ॥ ಸಿ. ಸೀತಾರಾಮಯ್ಯನವರು ಣ ಮಾಡುತ್ತಾ ತಿಳಿಸಿದರು. ಕಳೆದ

(ಹಿಂದಿನ ಪುಟದಲ್ಲಿ ಮುಂದುವರಿ

ಹರಾಜು

ಮೈಸೂರು ಮಂಡಿ ಮೊಹಲ್ಲಾ ಈದ್ಗಾ ಎಕ್ಸ್‌ಟೆನ್‌ಷನ್‌ನಲ್ಲಿರುವ ಶ್ರೀ॥ ಇ ಕೆಂಪಿರವರ ಬಂಗಲೆ, ಕಾಟೇಜ್ ಮತ್ತು ಸೈಟುಗಳು ಸಹ 1-9-46 ನೇ ದಿನ ಪ್ರಾತಃಕಾಲ ೧೧ ಗಂಟೆಗೆ ಸ್ಥಳದ ಬಳಿ ಹರಾಜು ಮಾಡಲ್ಪಡುತ್ತೆ. ಸದರಿ ಸ್ವತ್ತು ವರ್ಕ್‌ಷಾಪ್‌ಗಳಿಗೂ, ಮಿಲ್‌ಗಳಿಗೂ, ಸಿನಿಮಾ ಮುಂತಾದುಗಳು ಕಟ್ಟುವುದಕ್ಕೂ ಅತ್ಯುತ್ತಮವಾಗಿರುತ್ತೆ. ಹರಾಜಿನಲ್ಲಿ ಪಡೆದವರು ಹರಾಜು ಮೊಬಲಗಿನಲ್ಲಿ ನಾ ಒಂದು ಭಾಗ ಕೂಡ್ಲೆ ಪಾವತಿ ಮಾಡತಕ್ಕದ್ದು. ಬಾಕಿ ಮೊಬಲಗನ್ನು ರಿಜಿಸ್ಟರು ದಲ್ಲಿ ಪಾವತಿಮಾಡಿ ರಿಜಿಸ್ಟರ್ ವಗೈರೆಗಳನ್ನು ಅವರ ಸ್ವಂತ ಖರ್ಚಿನಿಂದ ನಡೆಸ ತಕ್ಕದ್ದು. ಬಾಕಿ ವಿಷಯಗಳಿಗೆ ಕೆಳಗೆ ಕಂಡ ವಿಳಾಸದಲ್ಲಿ ಮೊದ್ದಾ ವಿಚಾರಿಸ ಬಹುದು.

Neo Furniture Company,
Cabinet Makers, Auctioneers and Commission Agents
Irwin Road, ... Mysore

ವಿಜಯಾ ಏಜನ್ಸೀಸ್, ಮೈಸೂರು.

ರಾಜಕಮಲ್ ಟಾಕೀಸ್

ಮೈಸೂರು

30—8—46 ರಿಂದ

ಪ್ರತಿ ದಿನ ಮೂರು ಆಟಗಳು

"ದ್ರೌಪದಿ"

ಭೂಮಿಕೆ:— ಸುಶೀಲಾ ರಾಣಿ, "ಚಂದ್ರಮೋಹನ್," ಮುಜಹರ್,

29—8—46 ರಿಂದ

ಪ್ರತಿ ದಿನ ಪ್ರಾತಃಕಾಲ 10-30

"ಲಾಲ್ ಹವೇಲಿ"

ಪಾತ್ರ ನೂರ್ಜಹಾನ್, ಸುರೇಂದ್ರ, ಯಾಕೂಬ್

ಕಡೆಯ ವರಗತಿಯ ವಿನಹ ಇತರವೆಲ್ಲಾ ತರಗತಿಗಳಲ್ಲಿಯೂ ರಿಯಾಯಿತಿಯು

ಇಂಟರ್ ಕಾಲೇಜ್ ಸಂಘ

ಮೈಸೂರು ೩೦

ರಾಜಧಾನಿಯ ಇಂಟರ್‌ಮಿಡಿಯೆಟ್ ಕಾಲೇಜ್ ಸಂಘದ ಚುನಾವಣೆ ಫಲಿತಾಂಶ ಈ ರೀತಿ ಹೊರ ಬಿದ್ದಿದೆ:—ಶ್ರೀಗಳು ಜಿ ದೊಡ್ಡ ತಮ್ಮಪ್ಪ ಉಪಾಧ್ಯಕ್ಷರು, ವಿ ನಾರಾಯಣರಾವ್ ಕಾರ್ಯದರ್ಶಿ ಪಿ. ಎಸ್ ದೊರೆಸ್ವಾಮಿ ಇಂಡೋರ್ ಗೇಮ್ ಕ್ಯಾಪ್ಟನ್, ಆರ್. ಸತ್ಯನಾರಾಯಣ, ಲೂಯಿ ಲಜಾರಸ್, ಎ. ಜಿ. ರಾಮಕೃಷ್ಣ ಪರ್ವತಯ್ಯ, ಸುಂದರದಾಸ್ ಮತ್ತು ಜಕ್ಕಿ ಅಡಳಿತ ಮಂಡಲಿ ಸದಸ್ಯರು.

ಲಲಿತ ಕಲಾ ಸಂಘ

ಮೇಲ್ಕಂಡ ಸಂಘದ ಆರಂಭ ಭಾಷಣವನ್ನು ಡಾ॥ ಟಿ ಎ ಪುರುಷೋತ್ತಂರವರು ಕಳೆದ ಬುಧವಾರ ಕಾಲೇಜು ಅಂಗಳದಲ್ಲಿ ಮಾಡಿದರು. ಡಾ॥ ಬಿ. ಕುಪ್ಪಸ್ವಾಮಿಯವರು ಅಗ್ರಾಸನವನ್ನು ವಹಿಸಿದ್ದರು. ಲಲಿತ ಕಲೆಗಳನ್ನು ಪ್ರತಿಯೊಬ್ಬರೂ ಪ್ರೋತ್ಸಾಹಿಸಬೇಕೆಂದು ಡಾ॥ ಪುರುಷೋತ್ತಂರವರು ತಮ್ಮ ಭಾಷಣದಲ್ಲಿ ಹೇಳಿದರು. ಶ್ರೀಮತಿ ಲಕ್ಷ್ಮಮ್ಮ ಕಡಾಂಬಿಯವರಿಂದ ಸುಶ್ರಾವ್ಯವಾದ ವೀಣಾ ಗಾನವು ನಡೆಯಿತು.

ಹಿಂದೂ ಮುಸಲ್ಮಾನ ಸಹೋದರರುಗಳಿಗೆ ಅಭಿನಂದನೆಗಳು

ಮೈಸೂರು ನ್ಯಾಯವಿಧಾಯಕ ಸಭಾ ಸದಸ್ಯರು ಶ್ರೀ॥ ಎಸ್. ಕೃಷ್ಣಸ್ವಾಮಿ ರಾಯರು ಈ ರೀತಿ ತಿಳಿಸುತ್ತಾರೆ—

ಮೊನ್ನೆ ದಿವಸ ಹಿಂದೂಗಳಿಗೂ ಮುಸಲ್ಮಾನರಿಗೂ ದೊಡ್ಡ ಹಬ್ಬಗಳಿದ್ದುವು. ಈ ಸನ್ನಿವೇಶವು ಸಮಸ್ತ ಜನಗಳಿಗೂ ಸಂತೋಷಗಳನ್ನು ಉಂಟು ಮಾಡುವ ಕಾಲವಾಗಿದ್ದಾಗ್ಯೂ ಕೆಲವರಲ್ಲಿ ಒಂದು ವಿಧವಾದ ಕಳವಳವು ಇದ್ದು ಈ ಸುಖಸಂತೋಷಗಳಿಗೆ ಸ್ವಲ್ಪ ಧಕ್ಕೆಯನ್ನು ತಂದಿದ್ದಿತು. ಆದರೆ ಜಗದೀಶ್ವರನ ಕೃಪೆಯಿಂದ ಮೈಸೂರು ದೇಶದಲ್ಲಿವೆ ಇಡೀ ಇಂಡಿಯಾ ದೇಶದಲ್ಲೇ ಯಾವ ವಿಧವಾದ ಅಹಿತಕರ ಘಟನೆ ಆಕಸ್ಮಿಕ ಇಲ್ಲದೆ ಹಬ್ಬಗಳು ಸಾಂಗವಾಗಿ ನೆರವೇರಿ ಎಲ್ಲರಿಗೂ ಒಂದು ವಿಧವಾದ ಆನಂದವು ಉಂಟಾಗಿದೆ. ಇದಕ್ಕಾಗಿ ಉಭಯ ಪಕ್ಷಗಳವರು ಸೌಹಾರ್ದಭಾವದಿಂದ ವರ್ತಿಸಿದ ಅಖಿಲ ಹಿಂದೂ ಮುಸಲ್ಮಾನ ಸಹೋದರರಿಗೆ ನನ್ನ ಅಭಿನಂದನೆಯನ್ನು ಅರ್ಪಿಸುತ್ತೇನೆ. ಇದೇ ವಿಧವಾದ ಸುಹೃದ್ಭಾವವು ಮುಂದೆಯೂ ದೇಶದಲ್ಲೆಲ್ಲಾ ಶಾಶ್ವತವಾಗಿ ನೆಲಸಲೆಂದು ಪ್ರಾರ್ಥಿಸುತ್ತೇನೆ.

ಎಲ್ಲಾ ಕಡೆಯಲ್ಲೂ ಸರಿಯಾದ ಕ್ರಮಗಳನ್ನು ಕೈಗೊಂಡು ಯಾವ ಮನಃ ಕಷ್ಟಗಳಿಗೂ ಅಸ್ಪದ ಉಂಟಾಗದಂತೆ ಜಾಗರೂಕರಾಗಿದ್ದ ಸರ್ಕಾರಿ ಅಧಿಕಾರಿಗಳಿಗೂ ನನ್ನ ಕೃತಜ್ಞತಾಪೂರ್ವಕವಾದ ಅಭಿನಂದನೆಯನ್ನು ಅರ್ಪಿಸುತ್ತೇನೆ.

ಕಳ್ಳರಿಗೆ ಶಿಕ್ಷೆ

(ಪ್ರಂ.ಸು.) ಶ್ರೀರಂಗಪಟ್ಟಣ ೩೦

ಪಾಲಹಳ್ಳಿ ಗ್ರಾಮದಲ್ಲಿ ಕನ್ನ ಕೊರೆದು ಕಳವು ಮಾಡಲು ಪ್ರಯತ್ನಿಸುತ್ತಿದ್ದಾಗ ಮೂವರು ಕಳ್ಳರು ಸಿಕ್ಕಿ ಬಿದ್ದು ಅವರ ಮೇಲೆ ಮೊಕದ್ದಮೆ ಹೂಡಲಾಗಿ ಫ್ರಿಂಜ್ ಕ್ಲಾಸ್ ಮ್ಯಾಜಿಸ್ಟ್ರೇಟರು ಅವರಿಗೆಲ್ಲಾ ತಲಾ ಒಂದು ವರ್ಷಗಳ ಸಜಾ ವಿಧಿಸಿದ್ದಾರೆ. ಇವರಿಂದಾಗಿ ಈ ಪರಿಸ್ಥಿತಿಯಲ್ಲಿ ಕಳವು ಕಡಿಮೆಯಾಗಿದೆ...

ಪೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶನಿವಾರ ೩೧—೮—೪೬ [ಸಂಚಿಕೆ ೩೨

ಕಲ್ಕತ್ತಾ ದೊಂಬಿ ಬಗ್ಗೆ ವಿಚಾರಣಾ ಸಮಿತಿ

ಕಸ್ತೂರಿ ಬಾಯಿ ಶಿಬಿರಕ್ಕೆ ಭೇಟಿ

ಮದರಾಸಿನ ಆರ್ಥಿಕ ಮಂತ್ರಿ ಶ್ರೀ ಕೆ. ಆರ್ ಕಾರಂತರವರೂ ಬೊಂಬಾಯಿನ ಮಾಜಿ ಮಂತ್ರಿ ಶ್ರೀ ಎ.ಬಿ ಲಟ್ಠೆಯವರೂ ನಿನ್ನೆ ಬೆಳವಾಡಿಯ ಕಸ್ತೂರಿ ಬಾಯಿ ಶಿಬಿರಕ್ಕೆ ಭೇಟಿ ಇತ್ತು ಅಲ್ಲಿ ನಡೆಯುತ್ತಿರುವ ಕೆಲಸ ಕಾರ್ಯಗಳನ್ನು ಪರಿಶೀಲಿಸಿದರು. ಶ್ರೀ ಲಟ್ಠೆಯವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಇಂತಹ ಶಿಬಿರಗಳಲ್ಲಿ ನಡೆಯುವ ನಿಸ್ವಾರ್ಥ ಸೇವೆಯೇ ದೇಶವನ್ನು ಉನ್ನತಿಗೆ ತರಬಲ್ಲುದೆಂದು ಶ್ರೀ ಕಾರಂತರವರು ತಮ್ಮ ಭಾಷಣದಲ್ಲಿ ತಿಳಿಸಿದರು.

LATEST NEWS

ಅಖಿಲ ಕರ್ನಾಟಕ ಏಕೀಕರಣ ಪರಿಷತ್ತು

(ನಮ್ಮ ವಿಶೇಷ ಪ್ರತಿನಿಧಿಯಿಂದ ತಂತಿ)

ದಾವಣಗೆರೆ ೩೧

ಅಖಿಲ ಕರ್ನಾಟಕ ಏಕೀಕರಣ ಸಮ್ಮೇಳನದ ಉದ್ಘಾಟನವನ್ನು ಇಂದು ಬೆಳಗ್ಗೆ ದಾವಣಗೆರೆಯ "ಏಕೀಕರಣ ನಗರ" ದಲ್ಲಿ ಶ್ರೀ ಕಾರಂತರವರು ನೆರವೇರಿಸಿದರು. ಕರ್ನಾಟಕದ ನಾನಾ ಭಾಗಗಳಿಂದ ೫೦೦೦ ಜನ ಪ್ರತಿನಿಧಿಗಳು ಬಂದಿದ್ದರು.

ಮುಂಬೈ ಸರ್ಕಾರದ ಒಕ್ಕಲು ತನ್ನ ವಿಭಾಗದ ಮಂತ್ರಿಗಳಾದ ಶ್ರೀ॥ ಪಾಟೀಲರು ಮಲ್ಲನಗೌಡರು ರಾಷ್ಟ್ರಧ್ವಜವನ್ನೂ ಮತ್ತು ಶ್ರೀ ಎಸ್. ಸಿದ್ದಲಿಂಗಪ್ಪನವರು ಮೈಸೂರು ಧ್ವಜವನ್ನೂ ಶ್ರೀ ಜಿನರಾಜು ಹೆಗ್ಗಡೆಯವರು ಕರ್ನಾಟಕದ ಧ್ವಜವನ್ನೂ ಹಾರಿಸಿದರು.

ಸಮ್ಮೇಳನಾಧ್ಯಕ್ಷರಾದ ಶ್ರೀ ಪಾಟೀಲ್ ರವರ ಮೆರವಣಿಗೆಯು ನಿನ್ನೆ ವೈಭವದಿಂದ ನೆರವೇರಿತು. ೨೦ ಸಾವಿರದ ವರೆಗೆ ಜನ ಸಂದಣಿ ಸೇರಿತ್ತು.

ಸ್ವಾಗತ ಸಮಿತಿ ಅಧ್ಯಕ್ಷರಾದ ಶ್ರೀ॥ ಚನ್ನಬಸಪ್ಪನವರು ಸ್ವಾಗತ ಭಾಷಣಮಾಡಿದನಂತರ ಶ್ರೀ॥ ರಾಮಕೃಷ್ಣ ಕಾರಂತರವರು ಆರಂಭ ಭಾಷಣ ಮಾಡುತ್ತಾ ಕರ್ನಾಟಕ ಏಕೀಕರಣದ ಅವಶ್ಯಕತೆಯನ್ನು ವಿವರಿಸಿ ಹೇಳಿದರು.

ಕಡೆಯಲ್ಲಿ ಶ್ರೀ ಪಾಟೀಲರು ರಾಜ್ಯಾಂಗ ರಚನಾ ಸಭೆಯಲ್ಲಿ ಕರ್ನಾಟಕ ಏಕೀಕರಣದ ಬಗ್ಗೆ ಒತ್ತಾಯಪಡಿಸಬೇಕೆಂದು ತಿಳಿಸಿ ಈ ಬಗ್ಗೆ ಸಂಸ್ಥಾನಗಳ ಸಹಾನುಭೂತಿಯನ್ನು ಕೋರಿದರು.

ಇಬ್ನಸೌದ್ ರ ಕೊಲೆ ಯತ್ನಕ್ಕೆ ಅರಬ್ ಲೀಗಿನವರ ಖಂಡನೆ

ಸರ್ ಮಹಮದ್ ಅಹಮದ್ ರವರ ಕೊಲೆ ಪ್ರಯತ್ನವನ್ನು ಲಂಡನ್ನಿನ ಎಲ್ಲಾ ಪತ್ರಿಕೆಗಳಲ್ಲೂ ಖಂಡಿಸಲಾಗುತ್ತಿದೆ. ಅರಬ್ ಲೀಗಿನ ಪ್ರಕಟಣಾ ಇಲಾಖಾ ಅಧಿಕಾರಿಗಳೊಬ್ಬರು ಈ ಬಗ್ಗೆ ಅಭಿಪ್ರಾಯ ಸೂಚಿಸುತ್ತಾ "ಇಂಥಾ ಹೇಯ ಕೃತ್ಯಗಳಿಗೆ ನಮ್ಮ ಸಮಾಜದಲ್ಲಿ ಸ್ವಲ್ಪವೂ ಇಲ್ಲ. ಪಂ॥ ನೆಹರೂರವರ ಕಾಂಗ್ರೆಸ್ ಪಕ್ಷದ ಆಶ್ರಯದಲ್ಲಿ ಎಲ್ಲರೂ ಸಂಘಟಿತರಾಗಿ ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ಈಗ ಬಡಿದೋಡಿಸಬೇಕಾಗಿದೆ. ಸರ್ ಶಫತ್ ರ ಕೊಲೆ ಪ್ರಯತ್ನವನ್ನು ನಾವೆಲ್ಲಾ ಖಂಡಿಸಿ ಅಪಾಯದಿಂದ ಪಾರಾದ ಅವರನ್ನು ಅಭಿನಂದಿಸುತ್ತೇವೆ. ಮತ್ತು ಪಂ॥ ನೆಹರೂರವರ ಮಂತ್ರಿಮಂಡಲಕ್ಕೆ ಶುಭ ಕೋರುತ್ತೇವೆ" ಎಂದಿದ್ದಾರೆ.

ಹೊಸ ಸಚಿವರಿಂದ ಅಧಿಕಾರ ಸ್ವೀಕಾರ

ಹೊಸ ಕೇಂದ್ರ ಸರ್ಕಾರದ ಸಚಿವರುಗಳಲ್ಲಿ ಡಾ॥ ಜಾನ್ ಮತ್ತು ರಾಜಗೋಪಾಲಾಚಾರಿಯವರು ಸೆಪ್ಟೆಂಬರ್ ತಾ॥ ಅಧಿಕಾರ ಸ್ವೀಕರಿಸುವುದಿಲ್ಲವೆಂದೂ ಅವರ ಬದಲು ಪೂರ್ಣವಾಗಿ ಗುಣಹೊಂದಿದ ನಂತರವೇ ಅವರು ದೆಹಲಿಗೆ ತೆರಳುವರೆಂದು ಗೊತ್ತಾಗಿದೆ. ಪ॥ ಬಲದೇವ ಸಿಂಗರ ಸ್ಥಾನದಲ್ಲಿ ಪಂಜಾಬ್ ಮಂತ್ರಿಗಳಾಗುವವರ ಬಗ್ಗೆ ಇನ್ನೂ ನಿರ್ಧಾರವಾಗದಿರುವುದರಿಂದ ಅವರೂ ಅಂದು ಅಧಿಕಾರ ಸ್ವೀಕರಿಸಲಾರರೆಂದು ಹೇಳಲಾಗಿದೆ. ಉಳಿದ ಸದಸ್ಯರೆಲ್ಲಾ ಅಂದು ಮಂತ್ರಿಪದವಿ ವಹಿಸಿಕೊಳ್ಳುವರು.

ಮಹಿಳಾ ನಿರಾಶ್ರಿತರಿಗೆ ಚೀನಾದ ಸಹಾಯ

ಮೇಡಂ ಚಿಯಾಂಗ್ ಕೈಷೇಕ್ ರವರ ನಾಮಾಂಕಿತದಲ್ಲಿ ಚೀನಾ ಸರ್ಕಾರವಿಲ್ಲಿ ಮಹಿಳಾ ನಿರಾಶ್ರಿತರಿಗೆ ಪರಿಹಾರ ಕೇಂದ್ರವನ್ನು ಸ್ಥಾಪಿಸಲಾಗುವುದು. ಭಾರತೀಯರ ಪರವಾಗಿ ಚೀನೀಯರಿಗೆ ಸಹಾಯ ಮಾಡಿದ ಡಾ॥ ಕೋಟ್ನೀಸ್ ಸ್ಮಾರಕ ಸಂಘದವರು ೩ ಲಕ್ಷ ರೂ ಗಳ ಸಹಾಯವಿತ್ತಿದ್ದಾರೆ.

ಸಿಮ್ಲಾದಲ್ಲಿ ದಸ್ತಗಿರಿ

ಡಾ॥ ... ವರ ಇಂತಹ ... ದಲ್ಲಿ ಸರ್ಕಾರಿ ಕಚೇರಿಯ... ... ಸೇರಿ ... ದಸ್ತಗಿರಿ ...

ದೈಷ್ಟಿ ಮುಷ್ಕರ ದುರ್ಬಲವಾಗುತ್ತಿದೆ

ದಕ್ಷಿಣ ಭಾರತ ರೈಲ್ವೆ ಕೆಲಸಗಾರರ ಮುಷ್ಕರವು ದುರ್ಬಲವಾಗುತ್ತಿರುವುದಾಗಿ ವರದಿಯಾಗಿದೆ. ಹೆಚ್ಚು ಮಂದಿ ಕೆಲಸಗಾರರು ಹಿಂತಿರುಗುತ್ತಿರುವರೆಂದು ತಿಳಿದುಬಂದಿದೆ. ಟುಟಿ ಕೋರಿನ್, ಜಲಾರ್ ಪೇಟ್ ಮತ್ತು ಮದ್ರಾಸ್ ಎಗ್ಮೋರ್ ನಿಂದ ನೇರವಾಗಿ ಹೋಗುವ ೩ ರೈಲುಗಳು ಇಂದು ಹೊರಟವು. ನಾಳೆಯಿಂದ ಅನೇಕ ಕಡೆಗಳ ಮೂಲಕ ರೈಲು ಹೊರಡಲು ಏರ್ಪಾಡಾಗಿರುವುದಾಗಿದೆ.

ಕಲ್ಕತ್ತಾ ದೊಂಬಿ ಬಗ್ಗೆ ವಿಚಾರಣಾ ಸಮಿತಿ

ಆಗಸ್ಟ್ ೧೬ನೇ ತಾ॥ ಕಲ್ಕತ್ತಾ ನಗರದಲ್ಲಿ ನಡೆದ ಘೋರ ಕೃತ್ಯಗಳ ಬಗ್ಗೆ ತನಿಖೆ ನಡೆಸಲು ಬಂಗಾಳ ಸರ್ಕಾರವು ಒಂದು ವಿಚಾರಣಾ ಸಮಿತಿಯೊಂದನ್ನು ನೇಮಿಸಬೇಕೆಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಒತ್ತಾಯಪಡಿಸುವುದಾಗಿ ತಿಳಿದುಬಂದಿದೆ.

ಹರಿಕಥಾ ಕಾಲಕ್ಷೇಪ

ಮೈಸೂರು ೩೧

ಮೈಸೂರು ಹೊಸ ಸಂತೇಪೇಟೆ ಶ್ರೀ॥ ದಿ ಪುಟ್ಟಯ್ಯನವರ ಮನೆಯಲ್ಲಿ ನಾಳೆ ಸಾಯಂಕಾಲ ೬ ಗಂಟೆಗೆ ಶ್ರೀ ಎಲ್. ಲಕ್ಷ್ಮೀಪತಿ ಸಹೋದರರಿಂದ ಧ್ರುವ ಚರಿತ್ರೆ ಹರಿಕಥಾ ಕಾಲಕ್ಷೇಪವು ನಡೆಯುವುದು.

ರಾಮಕೃಷ್ಣರ ದಿನಾಚರಣೆ

ತಿಲಕ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬ ಘಂಟೆಗೆ ಶ್ರೀ ಎ. ಹರಿದಾಸಾಚಾರ್ಯರವರ ಅಧ್ಯಕ್ಷತೆಯಲ್ಲಿ ಸ್ವಾಮಿ ರವೀಂದ್ರನಾಥ ಠಾಕೂರರ ದಿನಾಚರಣೆ ನಡೆಯುವುದು. ಸರ್ವರಿಗೂ ಆದರದ ಸ್ವಾಗತವಿದೆ.

ಕೊರತೆ

(ಪ್ರಂ.ಸು.) ನಂಜನಗೂಡು ೩೦

ಇಲ್ಲಿ ಬಟ್ಟೆ ಕೊರತೆಯುಂಟಾಗಿದೆ. ಜನರಿಗೆ ಅವಶ್ಯವಾಗಿದ್ದ ಕೈ ಮಗ್ಗದ ಬಟ್ಟೆ ಕೊಳ್ಳಬೇಕೆಂದು ಒತ್ತಾಯ ಹೋಗಿದ್ದರೆ, ಬಡವರ ಕಷ್ಟ ಹೇಳತೀರದು.

ಅಂಗಡಿ ಬೀದಿಯಿಂದ ಹಾದು ಶ್ರೀಕಂಠೇಶ್ವರ ದೇವಸ್ಥಾನಕ್ಕೆ ಹೋಗುವ ರಸ್ತೆಯಲ್ಲಿ ಹಳ್ಳ ತೆಗೆದು ಮಣ್ಣು, ಕಲ್ಲು ರಾಶಿ ಅನೇಕ ದಿನಗಳಿಂದ ಬಿದ್ದಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿದೆ.

೪ ಜೊತೆ ಬೆಳ್ಳಿ ಕುಸ್ತಿಗಳು

ನಂಜನಗೂಡಿನಲ್ಲಿ ೧ನೇ ತಾ॥ ಭಾನುವಾರ ಸಂಜೆ ೪ ಗಂಟೆಗೆ ಮೈಸೂರು ... ರವರ ಮಗ ... ಮತ್ತು ... ರವರ ಮಗ ... ನಾಗರತ್ನ, ಮೈಸೂರು ... ರವರ ... ಅವರ ... ಇವರ ... ನಡೆಯುವುದು ...

...

ಸಾಧ್ವಿ

ತಾ|| ೩೧-೮-೪೬ ಶನಿವಾರ

ಕೋಮುವಾರು ಶಾಂತಿ

ಭಾರತದ ರಾಜಕೀಯ ಪ್ರಶ್ನೆಯು ಒಂದು ಘಟ್ಟವನ್ನು ಮುಟ್ಟಿದೆ ಆದರೆ ಕೋಮುವಾರು ಸಮಸ್ಯೆಯು ಮಾತ್ರ ಇನ್ನೂ ಬಗೆಹರಿದಿರುವಂತೆ ಕಾಣುವುದಿಲ್ಲ. ಮೊನ್ನೆ ಕಲ್ಕತ್ತೆಯಲ್ಲಿ ನಡೆದ ಘೋರ ಕೃತ್ಯಗಳು ಎಲ್ಲರ ಕಣ್ಣನ್ನೂ ತೆರೆದಿವೆ. ಈ ದುರಂತಕ್ಕೆ ತುತ್ತಾದ ಅಲ್ಲಿನ ನ್ಯಾಯಮೂರ್ತಿಗಳೊಬ್ಬರು ತಮ್ಮ ಕಡೆಯ ಉಸಿರನ್ನು ಬಿಡುವಾಗ "ಇದೇ ಕಟ್ಟ ಕಡೆಯ ಪ್ರಕರಣವಾಗಲಿ!" ಎಂದು ಹೇಳಿದ ಪ್ರಾರ್ಥನೆಯನ್ನೇ ಸಕಲರೂ ಪ್ರತಿಧ್ವನಿ ಮಾಡಬೇಕಾಗಿದೆ.

ಹೊಸ ಸರ್ಕಾರದ ರಚನೆಯಾದೊಡನೆ ಎಲ್ಲ ಪ್ರಶ್ನೆಗಳಿಗಿಂತಲೂ ಕೋಮುವಾರು ಶಾಂತಿಯ ವಿಷಯಕ್ಕೆ ಹೆಚ್ಚು ಗಮನವನ್ನು ಕೊಡಬೇಕಾಗಬಹುದು. ಗಲಭೆಗಳನ್ನು ತಡೆಗಟ್ಟಲು ಒಬ್ಬೊಬ್ಬರು ಒಂದೊಂದು ಮಾರ್ಗವನ್ನು ಸೂಚಿಸುತ್ತಿರುವರು. ಸಂಪೂರ್ಣ ಅಹಿಂಸಾ ಕ್ರಮದಿಂದ ವರ್ತಿಸಿ ವಿರೋಧಿಗಳ ಹೃದಯವು ಕರಗುವಂತೆ ಮಾಡಬೇಕೆಂದು ಮಹಾತ್ಮ ಗಾಂಧಿಯವರು ಮೊದಲಿನಿಂದಲೂ ಸಾರುತ್ತಿರುವರು. ಪ್ರತಿಯೊಂದು ಮೊಹಲ್ಲೆಯಲ್ಲಿಯೂ ರಕ್ಷಣಾ ವ್ಯವಸ್ಥೆಯನ್ನು ಏರ್ಪಡಿಸಿ ಗಲಭೆಗಳನ್ನು ತಡೆಗಟ್ಟಬೇಕೆಂದು ಪಂಡಿತ ನೆಹರೂರವರು ಹೇಳುತ್ತಿರುವರು. ಒಂದು ಗುಂಪಿನವರಿಗೆ ತೊಂದರೆಯಾದರೆ ಇನ್ನೊಂದು ಗುಂಪಿನವರು ರಕ್ಷಣೆ ಕೊಡಬೇಕೆಂದೂ ಪರಿಹಾರವನ್ನೂ ಸಹ ಕೊಡಬೇಕೆಂದೂ ಗೊತ್ತುಮಾಡುವ ಶಾಸನವನ್ನು ಬೊಂಬಾಯಿ ಸರ್ಕಾರದವರು ಜಾರಿಗೆ ತರಲಿರುವರು. ಗಲಭೆಗಳಾದರೆ ನಿರ್ದಾಕ್ಷಿಣ್ಯವಾಗಿ ಅವುಗಳನ್ನು ಅಡಗಿಸುವುದಾಗಿ ಎಲ್ಲಾ ಸರ್ಕಾರಗಳವರೂ ಭರವಸೆ ಕೊಡುತ್ತಿರುವರು.

ಇವೆಲ್ಲವೂ ಗಲಭೆಗಳ ಪರಿಹಾರ ಕ್ರಮಗಳು. ಗಲಭೆಗಳೇ ನಡೆಯದಂತೆ ಕಾರ್ಯಕ್ರಮವನ್ನು ಕೈಗೊಳ್ಳುವುದು ಹೆಚ್ಚು ಅವಶ್ಯಕ. ಪೋಲೀಸಿನವರ ಅಸ್ತ್ರ ಶಸ್ತ್ರ ಬಲದಿಂದ ಏರ್ಪಡುವ ಶಾಂತಿಯು ನಿಜವಾದ ಶಾಂತಿಯಲ್ಲ. ಅದು ಕೇವಲ ತಾತ್ಕಾಲಿಕವಾದುದು. ವಿವಿಧ ಕೋಮುಗಳಲ್ಲಿ ಪರಸ್ಪರ ಸ್ನೇಹ, ಸೌಹಾರ್ದ, ಪ್ರೀತಿ ವಿಶ್ವಾಸಗಳನ್ನು ಬೆಳಸಬೇಕು. ಇದಕ್ಕೆ ಉಭಯತ್ರರ ಆಚಾರ, ವ್ಯವಹಾರ ಮುಂತಾದುವುಗಳ ಬಗ್ಗೆ ತಿಳುವಳಿಕೆಯನ್ನುಂಟುಮಾಡಬೇಕು.

ಅಕಸ್ಮಾತ್ ಗಲಭೆಗಳಾದರೆ ಅದಕ್ಕೆ ಕಾರಣರಾದವರನ್ನು ನಿರ್ದಾಕ್ಷಿಣ್ಯವಾಗಿ ದಂಡಿಸಬೇಕು. ಪುಂಡರು ಶಿಕ್ಷೆಯಿಲ್ಲದೆ ಸ್ವಚ್ಛಂದವಾಗಿ ವರ್ತಿಸಲು ಅವಕಾಶವಿರುವುದಾದರೆ ಗಲಭೆಗಳಿಗೆ ಗಾರಿ ಮಾಡಿಕೊಟ್ಟಂತೆಯೇ ಸರಿ. ವಿದ್ಯಾರ್ಥಿಗಳಲ್ಲಿ ಕೋಮುವಾರು ಭೇದವು ಬೆಳೆಯುವುದು ಅತ್ಯಂತ ವಿಷಾದಕರ. ಪರಸ್ಪರ ಸೌಹಾರ್ದವೂ ತಿಳುವಳಿಕೆಯೂ ಬೆಳೆಯಬೇಕಾದುದು ವಿದ್ಯಾಲಯಗಳಲ್ಲಿಯೇ. ಆದುದರಿಂದ ಶಾಲಾ ಕಾಲೇಜುಗಳಲ್ಲಿಯೂ ಸಾರ್ವಜನಿಕ ಕ್ಷೇತ್ರಗಳಲ್ಲಿಯೂ ಮೊದಲು ಕೋಮುವಾರು ಐಕಮತ್ಯವನ್ನು ಸಾಧಿಸಿ ಅನಂತರ ಸಮಾಜದಲ್ಲಿಯೂ ಬೆಳಸಬೇಕು.

○ ತಾ|| ೧-೯-೪೬ ನೇ ಭಾನುವಾರ ಸಾಯಂಕಾಲ ೫ ಗಂಟೆಗೆ ನಂಜನಗೂಡು ವಿದ್ಯಾರ್ಥಿ ಕಾಂಗ್ರೆಸ್‌ನ ಸಾಮಾನ್ಯ ಸದಸ್ಯರ ಸಭೆಯು ಶ್ರೀ|| ಲಿಂಗಣ್ಣನವರ ಛತ್ರದಲ್ಲಿ ನಡೆಯಲಿದೆ. ಅದೇ ಸಭೆಯಲ್ಲಿ ಕಾರ್ಯಕಾರೀ ಸಮಿತಿಯ ಸದಸ್ಯರ ಚುನಾವಣೆ ನಡೆಯಲಿದೆ.

UNIVERSITY OF MYSORE

Notification No. G. 2-74/46-47

Office of the University of Mysore,
Mysore, Dated 29th August 1946.

Applications are invited from duly qualified candidates for the award of four Fellowships to selected Arts and Science Graduates of the University for the purpose of pursuing original investigation or Research in their special subjects.

Applications in triplicate, in the following form should reach the Registrar, University of Mysore, Mysore on or before the 15th September 1946.

1. Name.
2. Age.
3. Caste or Community.
4. Qualifications (including examinations passed, name of University, date of passing and class)
5. Present Position.
6. Salary.
7. Previous Service if any.
8. Works published & other particulars if any.
9. Special subject in which applicant wishes to pursue original investigation or research.

For terms and conditions of award applicants may refer to pages 206 & 207 of the Mysore University Calendar Vol. II for 1939-40.

D. S. Gordon,
Registrar.

OPERA TALKIES

ತಾ|| 28—8—46 ರಿಂದ

ಬಿಸಿ ಶಾದಿ

(20 ನೇ ಸಂಚಿಕೆ)

ಪ್ರತಿ ದಿನ ಮೂರು ಆಟಗಳು

* ಮೋತಿಲಾಲ್, * ನರ್ಗಿಸ್

* ಮುಜಾರ್ ಖಾನ್

Edited, printed and published by A. R. Nagarajan at the Sadhvi Press Dhanbbiah Road, Mysore

ರಣಜಿತ್

29-8-46 ರಿಂದ

ರಂಜಿತ್ ಚಿತ್ರದ ಪ್ರಯುಕ್ತ

ಅನ್‌ಮೋಲ್-ಘ[ಡಿ]

ಅಥವಾ

ಅಮೂಲ್ಯ ಗಡಿಯ[ಾರ]

ಪಾತ್ರ:—ಸುರೇಂದ್ರ, ನೂರ್‌ಜ[ಹಾನ್] ಸುರಯ್ಯ, ಮಹಬೂಬ್, ತಂ[...]

ಬೆಳಗಿನ ಪ್ರದರ್ಶನ:—ಸೂರ[...]

ಈದಿಗಾ ಬಡಾವಣೆಯಲ್ಲಿ

ಭಾರಿ ಬಂಗಲಾ ಮತ್ತು ಸೈಟುಗಳ ಹರಾ[ಜು]

1—9—46 ನೇ ಭಾನುವಾರ ಬೆಳಿಗ್ಗೆ ೧೦ ಗಂಟೆ[ಗೆ]

ಮೈಸೂರು ಮಂಡಿ ಮೊಹಲ್ಲಾ ಈದಿಗ ಎಕ್ಸ್‌ಟೆನ್‌ಷನ್‌ನಲ್ಲಿರುವ ಶ್ರೀ|| [...] ಕೆಂಟ್‌ರವರ ಬಂಗಲಾ, ಔಟ್‌ಹೌಸ್ ಮತ್ತು ಸೈಟುಗಳು ಸಹ 1-9-46 ನೇ ಭಾ[ನುವಾರ] ಪ್ರಾತಃಕಾಲ ೧೦ ಗಂಟೆಗೆ ಸ್ವಸ್ಥಳದ ಬಳಿ ಹರಾಜು ಮಾಡಲ್ಪಡುತ್ತೆ. ಸದರಿ ಸ್ಥ[ಳ] ವರ್ಕ್‌ಷಾಪ್‌ಗಳಿಗೂ, ಮಿಲ್‌ಗಳಿಗೂ, ಸಿನಿಮಾ ಮಂದಿರಗಳು ಕಟ್ಟುವುದಕ[್ಕೂ] ಅತ್ಯುತ್ತಮವಾಗಿರುತ್ತೆ. ಹರಾಜಿನಲ್ಲಿ ಪಡೆದವರು ಹರಾಜು ಮೊಬಲಗಿನಲ್ಲಿ [...] ಒಂದು ಭಾಗ ಕೂಡಲೆ ಪಾವತಿ ಮಾಡತಕ್ಕದ್ದು. ಬಾಕಿ ಮೊಬಲಗನ್ನು ರಿಜಿಸ್ಟ[ರಿ]ನಲ್ಲಿ ಪಾವತಿಮಾಡಿ ರಿಜಿಸ್ಟರ್ ವಗೈರೆಗಳನ್ನು ಅವರ ಸ್ವಂತ ಖರ್ಚಿನಿಂದ ನಡೆ[ಸ]ತಕ್ಕದ್ದು. ಬಾಕಿ ವಿಷಯಗಳಿಗೆ ಕೆಳಗೆ ಕಂಡ ವಿಳಾಸದಲ್ಲಿ ನೋಡಿ ವಿಚಾರಿ[ಸ]ಬಹುದು.

Neo Furniture Company,

Cabinet Makers, Auctioneers and Commission Agen[ts]

Irwin Road, ... Myso[re]

ವಿಜಯಾ ಏಜನ್ಸೀಸ್, ಮೈಸೂರು.

ಶ್ರೀ ರಾಜರಾಜೇಶ್ವರಿ

ಮಾಡರ್ನ್ ಹಿಂದು ಮಿಲಿಟರಿ ಹೋಟೇ[ಲು]

(ಟ್ಯಾಕ್ಸಿ ಸ್ಟ್ಯಾಂಡ್ ಎದುರು)

ಗಾಂಧಿ ಚೌಕ, ಮೈಸೂರು.

30—8—46 ನೇ ಶುಕ್ರವಾರದಿಂದ ಪ್ರಾರಂಭ

ಅತ್ಯುತ್ತಮವಾದ ನಾನ್ ವೆಜಿಟೇರಿಯನ್ ಫಲಹಾರ ಮ[ತ್ತು] ಊಟದ ಹೋಟೇಲು.

ಎಲ್ಲಾ ಸಕಲರಣೆಗಳಿಂದ ಕೂಡಿದ ರೂಂಗಳು ಬಾಡಿಗೆಗೆ ದೊರೆಯುತ್ತವೆ.

ಒಂದಾವರ್ತಿ ಪರೀಕ್ಷಿಸಿರಿ !

ಪ್ರೊಪ್ರೈಟರ್:— ಚೆನ್ನೇ[...]

ವಿಜಯಾ ಏಜನ್ಸೀಸ್, ಮೈಸೂರು



ರಾಜಕಮಲ್ ಟಾಕೀ[ಸ್]

ಮೈಸೂರು

30—8—46 ರಿಂ[ದ]

ಪ್ರತಿ ದಿನ ಮೂರು ಆಟಗಳು

"ದ್ರೌಪದಿ[...]

ಭೂಮಿಕೆ:— ಸುಶೀಲಾ ರಾ[ಣಿ] * ಚಂದ್ರಮೋಹನ್, * ಮುಬಾರ[ಕ್]

29—8—46 ರಿಂದ

ಪ್ರತಿ ದಿನ ಪ್ರಾತಃಕಾಲ 10-3[0]

"ಲಾಲ್ ಹವೇಲಿ"

ಪಾತ್ರ:—ನೂರ್ಜಹಾನ್, ಸುರೇಂದ್ರ, ಯಾಕೂಬ್

ಕಡಿಯ ದರಗಳ ವಿನಹ ಇತರವೆಲ್ಲಾ ದರಗಳಲ್ಲಿಯೂ ರಿಯಾಯಿತಿಯು

ಪೋ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಭಾನುವಾರ ೧—೯—೪೬ [ಸಂಚಿಕೆ ೩೩

ರಾಜೇಂದ್ರ ಪ್ರಸಾದರು ರಾಜ್ಯಾಂಗಸಭಾಧ್ಯಕ್ಷರೇ

ಇನ್ನು ೧೦ ವರ್ಷಗಳಲ್ಲಿ ಭಾರತದಲ್ಲಿ ಸ್ವಪರಿಪೂರ್ಣತೆ

ಭಾರತಕ್ಕೆ ಬೇಕಾದ ಕೈಗಾರಿಕಾ ಅವಶ್ಯಕತೆಗಳಲ್ಲಿ ಸಾಧ್ಯವಾದಷ್ಟನ್ನು ಇನ್ನು ೧೦ ವರ್ಷಗಳೊಳಗಾಗಿ ಹೊಸ ಸರ್ಕಾರದ ಆಳ್ವಿಕೆಯಲ್ಲಿ ಪಡೆಯಲಾಗುವುದೆಂದು ಸರ್ ಎಂ. ವಿಶ್ವೇಶ್ವರಯ್ಯನವರು ಮೊನ್ನೆ ವಾಷಿಂಗ್ಟನ್ನಿನಲ್ಲಿ ತಿಳಿಸಿದ್ದಾರೆ. ಹೊಸ ಸರ್ಕಾರವು ಭಾರತದ ಪ್ರಕೃತಿ ಸೌಕರ್ಯಗಳನ್ನು ಚೆನ್ನಾಗಿ ಉಪಯೋಗಿಸಿಕೊಂಡು ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವುದೆಂದು ತಿಳಿಸಿದ್ದಾರೆ.

ಆಫ್ರಿಕಾ-ಸಿಲೋನುಗಳಿಂದ ನೆಹರೂರವರಿಗೆ ಸಂದೇಶ

ಕೇಂದ್ರ ತಾತ್ಕಾಲಿಕ ಸರ್ಕಾರವನ್ನು ಪಂ॥ ನೆಹರೂರವರು ಸ್ಥಾಪಿಸುವ ಬಗ್ಗೆ ದಕ್ಷಿಣ ಆಫ್ರಿಕಾದ ಹಂಗಾಮಿ ಪ್ರಧಾನಿ ಮಿ॥ ಹಾಫ್, ಮೇಯರ್‌ರವರೂ, ಸಿಲೋನಿನ ಪ್ರಧಾನ ಶ್ರೀ ಡಿ. ಎಸ್. ಸೇನಾ ನಾಯಕೆಯವರೂ ಶುಭಾಶಯಗಳನ್ನು ಕಳಿಸಿದ್ದಾರೆ.

ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ಶ್ರೀ ಜೈ ಪ್ರಕಾಶರು

ಶ್ರೀ॥ ಪಟ್ಟವರ್ಧನ್‌ರವರ ಸ್ಥಾನದಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ಶ್ರೀ ಜೈಪ್ರಕಾಶ ನಾರಾಯಣ್‌ರವರನ್ನು ಪಂ॥ ನೆಹರೂರವರು ನೇಮಿಸಿದ್ದಾರೆ. ಶ್ರೀ ಪಟ್ಟವರ್ಧನ್‌ರವರು ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ ಸಂಸ್ಥೆಯ ಮೇಲ್ವಿಚಾರಣೆ ನೋಡಿಕೊಳ್ಳುವರು.

ನಾಳೆ ಮುಸ್ಲಿಮರಿಂದ ಕಪ್ಪು ಬಾವುಟ ಪ್ರದರ್ಶನ

ನಾಳೆ ಇಡೀ ಭಾರತದ ಬಹು ಸಂಸ್ಥಾನಗಳಲ್ಲಿ ಆನಂದದ ದಿನ. ರಾಷ್ಟ್ರ ನಾಯಕರುಗಳು ಸೇವೆಯಲ್ಲಿ ಅಧಿಕಾರ ಸ್ವೀಕರಿಸುವರು. ಮಾಮೂಲಿನಂತೆ ಇದಕ್ಕೆ ಲೀಗಿನ ವಿರೋಧ ಇದ್ದೇ ಇದೆ. ಮುಸ್ಲಿಂರೆಲ್ಲರು ನಾಳೆ ಕಪ್ಪು ಧ್ವಜ ಹಾರಿಸಿ ಮೌನವಾದ ಶಿರಸ್ಕಾರವನ್ನು ತೋರಬೇಕೆಂದು ಲೀಗ್ ಕಾರ್ಯದರ್ಶಿಗಳು ಕರೆ ಕೊಟ್ಟಿದ್ದಾರೆ. ಭಾರತದ ಸ್ವಾತಂತ್ರ್ಯ ಪಥದಲ್ಲಿ ಹೆಜ್ಜೆ ಮುಂದಿಡುವ ಬದಲು ಮುಸ್ಲಿಮರ ಮೇಲೆ ದಬ್ಬಾಳಿಕೆ ಆರಂಭವೆಯೆಂದು ಅವರು ತಿಳಿಸಿದ್ದಾರೆ.

ಕರಾಚಿಯಲ್ಲಿ ನಿಷೇದಾಜ್ಞೆ

ಇನ್ನೊಂದು ತಿಂಗಳ ಕಾಲ ಯಾರೂ ಸಹ ಕರಾಚಿಯಲ್ಲಿ ಓಡಿಯಾಡಕೂಡದೆಂದು ಜಿಲ್ಲಾ ಮ್ಯಾಜಿಸ್ಟ್ರೇಟರು ನಿಷೇದಾಜ್ಞೆ ಮಾಡಿದ್ದಾರೆ.

ಢಾಕಾದಲ್ಲಿ ಗಲಭೆ

ಢಾಕಾ ನಗರದಲ್ಲಿ ಮತ್ತೆ ಗಲಭೆ ನಡೆಯಿತು. ಸುಮಾರು ೨೫ ಮಂದಿ ಗಾಯಗೊಂಡರೆಂದು ವರದಿಯಾಗಿದೆ. ಕರ್ಫ್ಯೂ ಜಾರಿಯಲ್ಲಿದೆ. ಮಿಲಿಟರಿ ಸಹಾಯ ಪಡೆಯಲಾಗಿದೆ.

ದೆಹಲಿಯಲ್ಲಿ ನೆಹರೂರವರ ಬ್ರಾಡ್‌ಕ್ಯಾಸ್ಟು ಭಾಷಣ

ಪಂಡಿತ್ ಜವಹರಲಾಲರು ಮಂಗಳವಾರ ... ನೆಹರೂರವರು ರೇಡಿಯೋ ಮೂಲಕ ಭಾಷಣ ಮಾಡಿ ಮುಸ್ಲಿಂ ಲೀಗಿನ ಅನುಮಾನವನ್ನು ನಿವಾರಿಸಲು ಪ್ರಯತ್ನಿಸಿದ್ದಾರೆ.

ಕರ್ನಾಟಕವು ಒಂದೇ ಪ್ರಾಂತವಾಗಬೇಕು

ಏಕೀಕರಣ ಪರಿಷತ್ತಿನ ನಿರ್ಣಯ

(ನಮ್ಮ ವಿಶೇಷ ಪ್ರತಿನಿಧಿಗಳಿಂದ)

ದಾವಣಗೆರೆ ೩೧

ಅಖಿಲ ಕರ್ನಾಟಕ ಏಕೀಕರಣ ಪರಿಷತ್ತಿನ ಸಮಾರಂಭವು ಈ ದಿನ ಇಲ್ಲಿ ಕರ್ನಾಟಕ ಏಕೀಕರಣ ನಗರದಲ್ಲಿ ಅತ್ಯಂತ ವೈಭವದಿಂದ ಜರುಗಿತು. ಬೊಂಬಾಯಿನ ಮಂತ್ರಿಗಳಾದ ಶ್ರೀ ಎಂ. ಪಿ. ಪಾಟೀಲರು ಅಗ್ರಾಸನವನ್ನು ವಹಿಸಿದ್ದರು. ಮದರಾಸ್ ಅರ್ಥಿಕ ಮಂತ್ರಿ ಶ್ರೀ ಕೆ. ಆರ್. ಕಾರಂತರು ಆರಂಭೋತ್ಸವವನ್ನು ನೆರವೇರಿಸಿದರು. ಕರ್ನಾಟಕದ ವಿವಿಧ ಭಾಗಗಳಿಂದ ಸುಮಾರು ಐನೂರು ಮಂದಿ ಪ್ರತಿನಿಧಿಗಳು ಬಂದಿದ್ದರು.

ಶ್ರೀ ಗುರೇಕೊಂಡೆ ಚನ್ನಬಸಪ್ಪನವರು ಎಲ್ಲರನ್ನೂ ಸ್ವಾಗತಿಸಿ ಭಾಷಣ ಮಾಡಿದರು. ಶ್ರೀ ಕಾರಂತರವರು ಸಮ್ಮೇಳನದ ಆರಂಭೋತ್ಸವವನ್ನು ಮಾಡುತ್ತ ಈ ರೀತಿ ಹೇಳಿದರು:—

ಆರಂಭ ಭಾಷಣ

ಬ್ರಿಟಿಷ್ ಭಾರತವೆಂಬ ಹೆಸರನ್ನು ತೊಡೆದು ಹಾಕಿ ಮಹಾಜನರ ಭಾರತವನ್ನು ನಿರ್ಮಿಸುವ ಕಾಲ ಈಗ ಬಂದಿದೆ. ಪರರು ತಮ್ಮ ಮೇಲೆ ಆಡಳಿತವನ್ನು ನಡೆಸುವರೆಂಬ ಭಾವನೆ ಹೋಗಿ ತಮ್ಮನ್ನು ತಾವೇ ಆಳಿಕೊಳ್ಳುವೆವೆಂಬ ಭಾವನೆಯು ಜನರಿಗೆ ಬರುತ್ತಿದೆ. ಜನರ ಪ್ರತಿನಿಧಿಗಳು ಆಡಳಿತ ನಡೆಸಲು ಉಪಕ್ರಮಿಸುತ್ತಿದ್ದಾರೆ. ಇದೇ ಸಂಪೂರ್ಣ ಸರ್ಕಾರವಾಗುವುದು. ಮೈಸೂರು ಸಂಸ್ಥಾನವು ಆ ಮಟ್ಟಕ್ಕೆ ಇನ್ನೂ ಬಂದಿಲ್ಲದಿರುವುದು ವಿಷಾದಕರ. ಅಲ್ಲಿನ ಮಂತ್ರಿಗಳು ಪ್ರಜೆಗಳಿಂದ ಚುನಾಯಿತರಾದವರಲ್ಲ. ಇಂತಹ ಆತಳಿತದಲ್ಲಿ ನಾವು ಹೇಗೆ ಸೇರುವುದು?

ಶಾಸನಬದ್ಧವಾದ ಆಡಳಿತವನ್ನು ಮೈಸೂರಿನಲ್ಲಿ ಸ್ಥಾಪಿಸುವುದು ಯುಕ್ತ. ಸರ್ ಸಿ. ಪಿ. ರಾಮಸ್ವಾಮಿ ಮೊದಲಿಯಾರರು ಪ್ರಭುಗಳಿಗೆ ಈ ಬಗ್ಗೆ ಸೂಕ್ತ ಸಲಹೆಗಳನ್ನು ಕೊಡಬೇಕು. ಬ್ರಿಟಿಷರು ಭಾರತವನ್ನು ಬಿಟ್ಟು ಹೋಗಲಿರುವರು. ಈಗಲೇ ಸಂಸ್ಥಾನದಲ್ಲಿ ಶಾಸನಬದ್ಧ ಆಡಳಿತವನ್ನು ಸ್ಥಾಪಿಸುವುದು ಒಳ್ಳೆಯದು. ಇನ್ನು ಕೆಲವು ದಿನಗಳು ಕಳೆದರೆ ಇವರ ಪ್ರಾಮುಖ್ಯತೆಯು ಕಡಿಮೆ ಯಾಗುವುದು.

ಬ್ರಿಟಿಷರು ಮತ್ತೊಬ್ಬರನ್ನು ಆಳುತ್ತಿರುವರೆಂಬ ಭಾವನೆಯು ಹೋಗುತ್ತಿದೆ. ವರ್ಷಕ್ಕೆ ೪೦-೫೦ ಲಕ್ಷ ರೂ. ವರಮಾನವಿರುವ ಭಾರಿ ಜಮೀನ್ದಾರರು ಮುಂದೆ ಬಂದು ತಮ್ಮ ಅಧಿಕಾರವನ್ನು ಬಿಟ್ಟುಕೊಟ್ಟು ತಮಗೆ ಏನಾದರೂ ವೇತನ ಕೊಟ್ಟುಬಿಡುವಂತೆ ಕೇಳುತ್ತಿದ್ದಾರೆ. ಅವರು ತಮ್ಮಿಂದಲೇ ಕಲ್ಪಿತವಾದ ಒಂದು ಕಾರಾಗೃಹದಲ್ಲಿರುವಂತೆ ಭಾವಿಸಿ ಹೀಗೆ ಕೇಳುತ್ತಿದ್ದಾರೆ. ಈಗಲೇ ಜನರೊಡನೆ ಸೇರಿದರೆ ಕ್ಷೇಮವೆಂದರಿತು ಅವರು ಹೀಗೆ ಹೇಳುತ್ತಿದ್ದಾರೆ.

ಸಂಸ್ಥಾನಗಳೂ ಸೇರಿ ಕರ್ನಾಟಕದ ಎಲ್ಲ ಭಾಗಗಳೂ ಒಂದೇ ಆಡಳಿತಕ್ಕೆ ಒಳಪಡಬೇಕೆಂಬುದು ನಮ್ಮೆಲ್ಲರ ಅಪೇಕ್ಷೆ. ಇದು ಸಾಧ್ಯವಾಗದಿದ್ದರೆ ಬ್ರಿಟಿಷ್ ಕರ್ನಾಟಕವಾದರೂ ಒಡನೆ ಒಂದು ಪ್ರಾಂತವಾಗಬೇಕು. ಇದರಲ್ಲಿ ಯಾವ ಪ್ರದೇಶದವರಿಗೂ ಒತ್ತಾಯವಿಲ್ಲ. ಪರಸ್ಪರ ಸಮ್ಮತಿಯಿಂದ ಇದರಲ್ಲಿ ಸೇರುವವರನ್ನು ಮಾತ್ರ ಒಂದುಗೂಡಿಸಲಾಗುವುದು. ಇದಕ್ಕಾಗಿ ಕನ್ನಡಿಗರೆಲ್ಲರೂ ಸಮುದಾಯದಿಂದ ಪ್ರಯತ್ನ ಪಡಬೇಕು ಎಂದು ಶ್ರೀ॥ ಕಾರಂತರು ಹೇಳಿದರು.

ಸಂದೇಶಗಳು

ಪರಿಷತ್ತಿಗೆ ಯಶಸ್ಸು ಕೋರಿ ಬಂದಿದ್ದ ಸಂದೇಶಗಳನ್ನು ಓದಲಾಯಿತು. ಶ್ರೀಗಳವರಾದ ಮುರುಘ ರಾಜೇಂದ್ರಸ್ವಾಮಿಗಳು, ಗವಿಪುರದ ಸ್ವಾಮಿಗಳು, ಬೊಂಬಾಯಿ ಮುಖ್ಯ ಮಂತ್ರಿ ಬಿ. ಜಿ. ಖೇರ್, ಮಂಜಪ್ಪ, ಹರ್ಡೇಕರ್, ಕೊಲ್ಹಾಪುರದ ಮಂತ್ರಿ ಬಾಗ್ವೆ, ಸಂಡೂರ್ ಪ್ರಜಾ ಮಂಡಲದ ಅಧ್ಯಕ್ಷರು, ಆರ್. ಎ. ಜಹಗೀರ್‌ದಾರ್ ಕೂಡಗಿನ ಬೆಳ್ಳಿಯಪ್ಪ ... ಮುಂತಾದವರಿಂದ ಸಂದೇಶಗಳು ಬಂದಿದ್ದವು.

ಮುಖ್ಯಾಕ್ಷದ ಮೇಲೆ ಏಕೀಕರಣ ವಿಚಾರವಾಗಿ ಶ್ರೀ ಜನಾರ್ದನ ಹೆಗ್ಗಡೆಯವರು ನಿರ್ಣಯವನ್ನು ಮಂಡಿಸಿದರು. ಶ್ರೀ ನಿಜಲಿಂಗಪ್ಪನವರು ಅನುಮೋದಿಸಿದರು. ಚರ್ಚೆ ನಡೆಯುತ್ತಿದೆ. ಈ ರಾತ್ರಿ ಸಮಾರಂಭವು ಮುಕ್ತಾಯವಾಗುವುದು.

ಶ್ರೀ ಕಾರಂತರವರು ನಾಳೆ ಹತ್ತುವರೆಗಿನ ಶಾಸನ ಸಭೆಯಲ್ಲಿ ಭಾಗಿಗಳಾಗಲು ಹೊರಟು ತೆರಳಿದರು. ನಮಗೆ ಸ್ವರಾಜ್ಯ ಸಿಗಬೇಕು; ನಮ್ಮನ್ನು ಯಾರೂ ಆಳಬಾರದು; ನಮಗೆ ನಾವೇ ರಾಜರು, ಎಂಬ ಭಾವನೆ ಬೆಳೆಯಬೇಕು ಎಂದು ಅವರು ತಮ್ಮ ಕಡೆಯ ಭಾಷಣದಲ್ಲಿ ಹೇಳಿದರು.

§ ತಾತ್ಕಾಲಿಕ ಸರ್ಕಾರಕ್ಕೆ ಮುಸ್ಲಿಂ ಲೀಗು ಒಂದು ನೇರವು ಬಂದು ಗೊತ್ತಾದ ಆನಂತರವನ್ನು ಕೊಡುವುದಕ್ಕೆ ಕಾಂಗ್ರೆಸ್ ಯೋಚಿಸುತ್ತಿದೆ.

ರಾಜ್ಯಾಂಗ ರಚನಾ ಸಭೆಗೆ ಶ್ರೀ ಪ್ರಸಾದರು ಅಧ್ಯಕ್ಷರೇ?

ರಾಜ್ಯಾಂಗ ರಚನಾ ಸಭೆಗೆ ಜ್ಞಾನವೃದ್ಧರಾದವರೊಬ್ಬರು ಮೊದಲನೇ ದಿನ ಅಧ್ಯಕ್ಷತೆ ವಹಿಸುವರೆಂದೂ ಆದರ ಪ್ರಕಾರ ಸಭೆಯ ಸದಸ್ಯರ ವಯಸ್ಸನ್ನು ಕೇಳಲಾಗಿರುವುದೂ ಸಹ ಗೊತ್ತಾಗಿದೆ. ಇದರಂತೆ ಶ್ರೀ ಸಚ್ಚಿದಾನಂದಸಿನ್ಹರು ಮೊದಲನೇ ದಿನ ಅಧ್ಯಕ್ಷರಾಗುವರು. ಬಹುಶಃ ಶ್ರೀ ಬಾಬೂ ರಾಜೇಂದ್ರ ಪ್ರಸಾದರು ರಚನಾ ಸಮಿತಿಯ ಸಭೆಗೆ ಅಧ್ಯಕ್ಷರಾಗಿ ಚುನಾಯಿಸಲ್ಪಡುವರೆಂದೂ ಹೇಳಲಾಗಿದೆ.

ಮೈಸೂರಿಗೆ ಅಕ್ಕಿ ಬದಲು ಗೋಧಿ

ಮೈಸೂರಿಗೆಂದು ಬರ್ಮಾದಿಂದ ಬಂದಿದ್ದ ೩,೦೦೦ ಟನ್ ಅಕ್ಕಿಯನ್ನು ಮದರಾಸ್ ಸರ್ಕಾರದವರೇ ತೆಗೆದುಕೊಂಡು ಅದಕ್ಕೆ ಬದಲು ೩,೦೦೦ ಟನ್ ಗೋಧಿಯನ್ನು ಕೊಡುವರೆಂದು ಮದರಾಸಿನ ಒಂದು ಪತ್ರಿಕೆಯು ವರದಿಮಾಡಿದೆ.

ಕಾವಲುಗಾರ ಸರ್ಕಾರದ ಸದಸ್ಯರ ಭವಿಷ್ಯ

ಕಾವಲುಗಾರ ಸರ್ಕಾರದ ಸದಸ್ಯರಾದ ಶ್ರೀ ಗುರುನಾಥ ಬೇವೂರರು ತಾತಾ ಕಂಪೆನಿಗೂ, ಸರ್ ಅಕ್ಬರ್ ಹೈದರಿಯವರು ಕಾಶ್ಮೀರದ ದಿವಾನರಾಗಿಯೂ, ಮಿ॥ ಠಾಕೂರ್ ದಾಸ್ ... ಹಚ್ಚಿನ್ಸ್ ಮತ್ತು ... ಅವರ ಮೇಲೆ ಕೂಡಲೆ ಹೊರಡುವರು. ಇದಲ್ಲದೆ ತಾತ್ಕಾಲಿಕ ಸರ್ಕಾರದ ಸದಸ್ಯರು ಬಂದೊಡನೆ ಸರ್ವರೂ ಜಾಗ ಬಿಡಬೇಕೆಂದು ಗೊತ್ತಾಗಿದೆ.

ಸಂಯುಕ್ತ ರಾಷ್ಟ್ರಗಳ ಸಭೆಗೆ ಭಾರತದ ಪ್ರತಿನಿಧಿಗಳು

ತಾತ್ಕಾಲಿಕ ಸರ್ಕಾರವು ಸ್ಥಾಪಿತವಾದೊಡನೆಯೇ ಸಂಯುಕ್ತ ರಾಷ್ಟ್ರಗಳ ಮಹಾಸಭೆಗೆ ಭಾರತದ ಪ್ರತಿನಿಧಿಗಳನ್ನು ಕಳುಹಿಸುವುದು ಈ ಸರ್ಕಾರದ ಪ್ರಥಮ ಕರ್ತವ್ಯವಾಗಿದೆ. ಇದರಂತೆ ಬಹುಶಃ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್, ಜಯಕರ್, ಪಂಡಿತ ಕುಂಜ್ರು ಮತ್ತು ಶ್ರೀಮತಿ ವಿಜಯಲಕ್ಷ್ಮಿ ಪಂಡಿತರವರುಗಳನ್ನು ಚುನಾಯಿಸುವರೆಂದೂ ಮುಸ್ಲಿಂ ಲೀಗಿನವರು ಸಹಕರಿಸಿದ್ದರೆ ಮಿ॥ ರಾಜಾ ಅಲಿ ... ರವರನ್ನು ಆರಿಸುವರೆಂದೂ ಹೇಳಲಾಗಿದೆ.

ಭಾರತದ ಪ್ರತಿನಿಧಿಗಳು ಮಿ॥ ಸ್ಮಟ್ಸ್ ರವರ ನಾಯಕತ್ವದಲ್ಲಿ ಒಳಗಿರುವ ದಕ್ಷಿಣ ಆಫ್ರಿಕದ ಭಾರತೀಯರ ಸಮಸ್ಯೆಯನ್ನು ಪರಿಶೀಲಿಸಬೇಕಾಗಿರುವುದರಿಂದ ಒಳ್ಳೆಯ ವಾಗ್ಮಿಗಳನ್ನು ಕಳಿಸಲು ಸರ್ಕಾರವು ಯೋಚಿಸುತ್ತಿದೆಯೆಂದೂ ಸಹ ಹೇಳಲಾಗಿದೆ.

ದಿವಾನರೊಡನೆ ಮಿಲ್ಲಿ ಕೆಲಸಗಾರರ ಭೇಟಿ

ಮೈಸೂರು ೧

ಈ ದಿನ ಮೈಸೂರ ಮಿಲ್ಲಿ ಕೆಲಸಗಾರರು ತಮ್ಮ ಕುಂದು ಕೊರತೆಗಳನ್ನು ನಿವೇದಿಸುವ ಸಲುವಾಗಿ ದಿವಾನರನ್ನು ಭೇಟಿ ಮಾಡಿದರು. ... ಮಾತುಕತೆಗಳು ನಡೆದುವು. ದಿವಾನರು ... ಯನ್ನು ... ಭರವಸೆ ಕೊಟ್ಟಿರುವರು ತಿಳಿಸಿದರು.

ಸಾಧ್ವಿ
ತಾ॥ ೧-೯-೪೬ ಭಾನುವಾರ

ನಾಮಕರಣ ಪದ್ಧತಿ ವಜಾ

ಪೌರಸಭೆ ಮತ್ತು ಜಿಲ್ಲಾ ಬೋರ್ಡುಗಳಿಗೆ ಸದಸ್ಯರನ್ನು ನಾಮಕರಣ ಮಾಡುವ ಪದ್ಧತಿಯು ಇನ್ನು ಮುಂದೆ ಅವಶ್ಯಕವಿಲ್ಲವೆಂದು ಹೇಳಿ ಮಹಾರಾಜರ ಸರ್ಕಾರದವರು ಆಜ್ಞೆ ಮಾಡಿದ್ದಾರೆ. ಇದನ್ನು ಎಲ್ಲರೂ ಸ್ವಾಗತಿಸುವುದರಲ್ಲಿ ಸಂದೇಹವಿಲ್ಲ. ಮುನಿಸಿಪಾಲಿಟಿ, ಹೀಗೆ ನಾಲು ಚುನಾಯಿತ ಸದಸ್ಯರೇ ಇರುವ ಸಂಸ್ಥೆಗಳಲ್ಲಿ ನಾಲ್ಕಾರು ಜನ ನಾಮಕರಣದವರು ಇದ್ದು ಮಾಡಬೇಕಾದ ಕೆಲಸವೇನೂ ಇರುವುದಿಲ್ಲ. ಸಾರ್ವಜನಿಕ ಹಿತದೃಷ್ಟಿಯಿಂದ, ಉಚಿತವಾದ ನೀತಿಯ ಆಧಾರದ ಮೇಲೆ ಉಮೇದುವಾರರನ್ನು ಚುನಾಯಿಸುವ ಕಾಲವಿದು. ಇದರಲ್ಲಿ ಜಾತಿ ಮತ ಮತ್ತು ಕೋಮುಗಳ ಪ್ರತ್ಯೇಕ ಹಿತಸಾಧನೆಯು ಆಗತ್ಯವೇ ಇಲ್ಲ.

ನೈರ್ಮಲ್ಯ, ನೀರು ಸರಬರಾಜು, ರಸ್ತೆಗಳ ದುರಸ್ತು, ಆರೋಗ್ಯ ಸಹಾಯ ಮುಂತಾದ ಕೆಲಸಗಳು ಯಾವ ಕೋಮುವಾರು ಪಕ್ಷಪಾತದಿಂದಲೂ ಆಗುವ ಕೆಲಸಗಳಲ್ಲ. ಅಥವಾ ಒಬ್ಬರು ನಾಮಕರಣದ ಸದಸ್ಯರಿದ್ದ ಮಾತ್ರಕ್ಕೆ ಅವರ ಅಪೇಕ್ಷೆಯಂತೆ ಕೆಲಸ ನಡೆಯುವುದೆಂಬ ಭರವಸೆ ಇಲ್ಲ. ಯಾರಿಂದಲೂ ಚುನಾಯಿಸಲ್ಪಡದೆ, ಯಾರ ಪ್ರತಿನಿಧಿಯೂ ಅಲ್ಲದೆ ಹಿಂದಿನ ಬಾಗಿಲಿನಿಂದ ಪ್ರವೇಶಿಸುವ ಸದಸ್ಯರುಗಳಿಗೆ ಸಾಮಾನ್ಯವಾಗಿ ಪುರಸ್ಕಾರವು ದೊರೆಯುವುದೂ ಇಲ್ಲ. ಅವರು ಮಹಾಜನರಿಗೆ ಉತ್ತರವಾದಿಗಳಲ್ಲ. ತಮ್ಮನ್ನು ನೇಮಿಸಿದ ಸರ್ಕಾರದವರಿಗೇ ಋಣಿಗಳು.

ನಾಮಕರಣದ ಸದಸ್ಯರಿಂದ ಉಪಕಾರಕ್ಕಿಂತಲೂ ಅಪಕಾರವೇ ಹೆಚ್ಚು. ತಮ್ಮ ಇಷ್ಟದಂತೆ ಕೂಡ ನಡೆಸುವ ಸ್ವಾತಂತ್ರ್ಯವು ಅವರಿಗಿರುವುದಿಲ್ಲ. ಪ್ರಜೆಗಳ ಅಭಿಪ್ರಾಯವನ್ನು ಪ್ರತಿಬಿಂಬಿಸುವುದಂತೂ ಇಲ್ಲವೇ ಇಲ್ಲ. ಆದುದರಿಂದಲೇ ಎಲ್ಲಾ ಪ್ರಜಾ ಸ್ವಾತಂತ್ರ್ಯ ರಾಜ್ಯಗಳಲ್ಲಿಯೂ ನಾಮಕರಣದ ಜನರಿಗೆ ಸ್ಥಾನವೇ ಇರುವುದಿಲ್ಲ. ಮದರಾಸಿನಲ್ಲಿ ಈ ಪದ್ಧತಿಯನ್ನು ವಜಾ ಮಾಡಿರುವುದು ಯುಕ್ತವಾಗಿಯೇ ಇದೆ.

ನಮ್ಮ ಸಂಸ್ಥಾನದಲ್ಲಿಯೂ ನಾಮಕರಣ ಪದ್ಧತಿಯನ್ನು ರದ್ದು ಮಾಡುವಂತೆ ಶಾಸನ ಸಭೆಗಳಲ್ಲಿಯೂ ಸ್ಥಳೀಯ ಸಂಸ್ಥೆಗಳಲ್ಲಿಯೂ ಅನೇಕಾವರ್ತಿ ಸರ್ಕಾರದವರನ್ನು ಪ್ರಾರ್ಥಿಸಲಾಗಿದೆ. ಇನ್ನೂ ಇದನ್ನು ರದ್ದು ಮಾಡಿಲ್ಲ. ಸದ್ಯದಲ್ಲಿಯೇ ಪೌರಸಭೆಗಳ ಚುನಾವಣೆಗಳು ನಡೆಯಲಿವೆ. ಹೊಸ ಸಭೆಗಳ ರಚನೆಯಾಗುವಾಗ ಅವುಗಳಲ್ಲಿ ನಾಮಕರಣದ ಜನರು ಇರದಂತೆ ಈಗಲಾದರೂ ನಮ್ಮ ಸರ್ಕಾರದವರು ಏರ್ಪಡಿಸಬೇಕೆಂದು ನಾವು ಕೋರುತ್ತೇವೆ.

ಚರ್ಚಾಕೂಟ

ಶ್ರೀ ಎಸ್. ಪಟೇಲರಾವ್ ಶೇಷಣ್ಣನವರ ವಿದ್ಯಾರ್ಥಿ ನಿಲಯದ ಆಶ್ರಯದಲ್ಲಿ ಎಂದಿನಂತೆ ಈ ವರ್ಷವೂ ಅಂತರ ವಿದ್ಯಾರ್ಥಿನಿಲಯದ ಚರ್ಚಾಕೂಟವು ನಡೆಯುವುದು. ಇದರಲ್ಲಿ ಭಾಗ ವಹಿಸುವ ಮೈಸೂರು ನಗರದ ವಿದ್ಯಾರ್ಥಿ ನಿಲಯಗಳವರು ೩೦ ನೇ ತಾ॥ ಹೊಳಗಾಗಿ ೨ ರೂ. ಗಳ ಪ್ರವೇಶ ಧನದೊಂದಿಗೆ ಎರಡು ಹೆಸರುಗಳನ್ನು ಕಳುಹಬೇಕಾಗಿದೆ.

ಕಲ್ಕತ್ತಾ ದೌರ್ಜನ್ಯದ ಬಗ್ಗೆ ಪುರಸಭೆಯ ಖಂಡನೆ

ಮೈಸೂರು ೧

ನೆನ್ನೆ ಸಾಯಂಕಾಲ, ಪುರಸಭೆಯ ತಿಂಗಳ ಕಟ್ಟಳೆ ಅಧಿವೇಶನವು ಶ್ರೀ ರಾಮಚಂದ್ರರಾವ್ ಬೊಂಬೋರೆಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾರ್ಯಕ್ರಮವು ಆರಂಭವಾಗುವ ಮುನ್ನ, ಶ್ರೀ ಬಿ. ನಾರಾಯಣಸ್ವಾಮಿಯವರು ಮಾತನಾಡಿ, ಕಲ್ಕತ್ತಾ ದುರಂತ ಕೃತ್ಯಗಳನ್ನು ವಿವರಿಸಿ ಸಾವು ನೋವುಗಳನ್ನು ಅನುಭವಿಸಿರುವವರಿಗೆ ಅನುತಾಪವನ್ನು ಸೂಚಿಸಿ ಈ ಕೃತ್ಯಗಳನ್ನು ಖಂಡಿಸಿ ಅಪಘಾತಕ್ಕೆ ಒಳಗಾಗಿ ಆಸ್ಪತ್ರೆಯಲ್ಲಿ ಉಪಚಾರ ಪಡೆಯುತ್ತಿರುವ ನೂತನ ಮಂತ್ರಿಮಂಡಲದ ಸದಸ್ಯರಾದ ಡಾ॥ ಷಫತ್ ಅಹಮದ್ ಖಾನರವರು ಶೀಘ್ರವಾಗಿ ಗುಣ ಹೊಂದಲೆಂದು ಹಾರೈಸಿಯೂ ನಿರ್ಣಯಗಳನ್ನು ಮಂಡಿಸಿದರು. ಶ್ರೀಗಳಾದ ಟಿ ವೆಂಕಟರಮಣಯ್ಯ, ಪಿ ಸೀತಾರಾಮಯ್ಯ; ಮು॥ ಅಹಮದ್ ಖಾನರು ನಿರ್ಣಯಕ್ಕೆ ಬೆಂಬಲವಿತ್ತು ಮಾತನಾಡಿದರು. ನಿರ್ಣಯವು ಸರ್ವಾನುಮತದಿಂದ ಅಂಗೀಕಾರವಾಯಿತು.

ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಚಾಮುಂಡೇಶ್ವರಿ ಗುಡಿ ಎದುರು ಕಸಾಯಿಖಾನೆ ದಾರಿಯ ಸಂಬಂಧದಲ್ಲಿ ಬಂದಿದ್ದ ಶ್ರೀ ಎಂ ಎಸ್. ನಂಜಪ್ಪನವರ ಪ್ರಶ್ನೆಗಳಿಗೆ ಉತ್ತರವಾಗಿ, ಆ ಗಲ್ಲಿಯ ಸ್ವಲ್ಪಭಾಗವನ್ನು ಮಾಲೀಕರಿಗೆ ಕೊಟ್ಟ ವಿಚಾರದಲ್ಲಿ ಯಾವ ದಾಖಲಾತಿಗಳೂ ಕಛೇರಿಯಲ್ಲಿಲ್ಲವೆಂದೂ, ಮನೆ ಕಟ್ಟಲು ಲೈಸೆನ್ಸ್ ಮಾತ್ರ ಕೊಡಲಾಗಿದೆ ಎಂದು ತಿಳಿಸಲಾಯಿತು.

ಲಷ್ಕರ್ ಮೊಹಲ್ಲಾದಲ್ಲಿ ಸಾಂಕ್ರಾಮಿಕ ರೋಗಗಳು ಹರಡದಂತೆ ಮಾಡುವ ಸಂಬಂಧದಲ್ಲಿ ಶ್ರೀ ಪಿ.ಎಸ್. ರಾಜಪ್ಪನವರು ಪ್ರಶ್ನೆಗಳನ್ನು ಕೇಳಿದರು. ಆ ವಿಚಾರದಲ್ಲಿ ಯುಕ್ತ ಮತ್ತು ಅವಶ್ಯಕ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಅಧ್ಯಕ್ಷರು ತಿಳಿಸಿದರು.

ಮಾಂಸದ ಅಂಗಡಿಗಳಿಗೆ ಲಗತ್ತಾದ ಶ್ರೀ ಕೆ. ಸಿದ್ದಯ್ಯನವರ ಪ್ರಶ್ನೆಗಳಿಗೆ ಅಧ್ಯಕ್ಷರು ಉತ್ತರ ಕೊಡುತ್ತಾ, ಮೈಸೂರು ಪಟ್ಟಣದಲ್ಲಿ ೭೦ ಅಂಗಡಿಗಳಿವೆ ಎಂದೂ ಅವುಗಳಿಗೆ ಪುರಸಭೆ ಲೈಸೆನ್ಸ್ ಕೊಡಲಾಗಿದೆ ಎಂದೂ, ಲೈಸೆನ್ಸ್ ಇಲ್ಲದೆ ಮಾಂಸ ಮಾರಾಟ ಮಾಡುವವರ ಮೇಲೆ ಕಾರ್ಯಕ್ರಮ ಕೈಗೊಂಡದ್ದಾಗಿದೆ ಎಂದೂ ತಿಳಿಸಿದರು.

ಸಂತೇಪೇಟೆಯಲ್ಲಿ ಕೆಲವು ದಿನಗಳ ಹಿಂದೆ ನಡೆದ ಬೆಂಕಿ ಅನಾಹುತದ ವಿಚಾರದಲ್ಲಿ ಬಂದಿದ್ದ ಶ್ರೀ ವೆಂಕಟರಮಣಯ್ಯನವರ ಪ್ರಶ್ನೆಗಳಿಗೆ ಅಧ್ಯಕ್ಷರು ಬೆಂಕಿ ಅನಾಹುತ ನಡೆದುದು ಸತ್ಯವೆಂದೂ, ಪೋಲೀಸರ ತನಿಖೆಕ್ರಮ ನಡೆಯುತ್ತಿದೆಯೆಂದೂ, ಆ ಬಗ್ಗೆ ವರದಿ ಕಳಿಸುವಂತೆ ಕೋರಲಾಗಿದೆಯೆಂದೂ ಹೇಳಿದರು.

ವರ್ಷಕ್ಕೆ ೨ ಸಾರಿ ಕಾಮರ್ಸ್ ಇಂಟರ್ ಪರೀಕ್ಷೆಗಳು

ಮೈಸೂರು ೧

ಸ್ಥಾನಪತಿಗಳಾದ ಶ್ರೀ ಸುಲ್ತಾನ್ ಮೊಹಿಯುದ್ದೀನ್‌ರ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾನಿಲಯದ ಅಕ್ಯಾಡೆಮಿಕ್ ಕೌನ್ಸಿಲ್ ಅಧಿವೇಶನವು ನಡೆಯಿತು. ಫಿಲೋಮಿನಾ ಕಾಲೇಜ್, ಕೃಷ್ಣರಾಜೇಂದ್ರ ಸಿಲ್ವರ್ ಜ್ಯುಬಿಲಿ ಟೆಕ್ನಾಲಾಜಿಕಲ್ ಇನ್‌ಸ್ಟಿಟ್ಯೂಟ್ ಮತ್ತು ಅಗ್ರಿಕಲ್ಚರ್ ಕಾಲೇಜ್ ಇವುಗಳನ್ನೂ ಸಹ ವಿಶ್ವವಿದ್ಯಾನಿಲಯದ ಅಧಿಕಾರ ವ್ಯಾಪ್ತಿಗೆ ಸೇರಿಸಿಕೊಳ್ಳಬಹುದೆಂದು ಬಂದಿದ್ದ ಅಂಶಗಳನ್ನು ಅಂಗೀಕಾರ ಮಾಡಲಾಯಿತು.

ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಸಿ ಮತ್ತು ಡಿ ಶಾಖೆಗಳನ್ನು ತೆಗೆದುಕೊಂಡು ಉತ್ತೀರ್ಣರಾಗಿರುವ ವಿದ್ಯಾರ್ಥಿಗಳನ್ನು ಆರ್ಟ್ಸ್ ಶಾಖೆಯ ಇಂಟರ್‌ಮೀಡಿಯಟ್ ತರಗತಿಗಳಿಗೆ ಸೇರಿಸಬಹುದೆಂಬ ನಿರ್ಣಯಕ್ಕೆ ಸಭೆ ಒಪ್ಪಿಗೆ ದೊರೆಯಿತು.

ಇಂಟರ್‌ಮೀಡಿಯಟ್ ಕಾಮರ್ಸ್ ಪರೀಕ್ಷೆಯನ್ನು ವರ್ಷಕ್ಕೆರಡಾವರ್ತಿ ನಡೆಸಬೇಕೆಂಬ ನಿರ್ಣಯವೂ ಅಂಗೀಕೃತವಾಯಿತು.

ವಿದ್ಯಾರ್ಥಿಗಳು ಕಾಲೇಜಿಗೆ ಹಾಜರಿ ಹಾಕಿ, ಕಾರಣಾಂತರಗಳಿಂದ ಪರೀಕ್ಷೆಗೆ ಕೂಡಲು ಆಗದೆ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳು ಹಾಜರಾತಿ ಇಲ್ಲದೆ ಮೂರು ವರ್ಷಗಳ ನಂತರ ಪರೀಕ್ಷೆಗೆ ಕೂಡಲು ಅವಕಾಶ ಕೊಡಬೇಕೆಂದು ಬಂದಿದ್ದ ಶ್ರೀ ಡಿ ಸುಮಿತ್ರರವರ ನಿರ್ಣಯಕ್ಕೆ ಸಭೆಯ ಅಂಗೀಕಾರ ಸಿಗಲಿಲ್ಲ.

ವಿಶ್ವವಿದ್ಯಾನಿಲಯದಲ್ಲಿ ಪದವೀಧರರಾದವರಿಗೆ ಮಾತ್ರ ಪ್ರವೇಶವಿರಬೇಕೆಂದು ಶ್ರೀ ಎಸ್ ಶ್ರೀನಿವಾಸಮೂರ್ತಿಯವರ ನಿರ್ಣಯವು ಅನುಮೋದನೆ ಇಲ್ಲದೆ ಬಿದ್ದು ಹೋಯಿತು.

Edited, printed and published by A. R. Nagarajan at the Sadhvi Press Dubbiah Road Mysore

ವಿಶ್ವವಿದ್ಯಾನಿಲಯಕ್ಕೆ ೧ ಲಕ್ಷ ರೂ. ಗಳ ದಾನ

ಮೈಸೂರು

ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣ ಪಡೆವ ವೀರಶೈವ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸೌಕರ್ಯಕ್ಕಾಗಿ ಕೊಯಮತ್ತೂರು ಜಿಲ್ಲಾ ಕೊಳ್ಳೇಗಾಲದ ರೇಷ್ಮೆ ವ್ಯಾಪಾರಿಗಳಾದ ರಾ॥ ಗುರುಕಾರ್ ಎಂ. ಮಾದಪ್ಪನವರು ಒಂದು ಲಕ್ಷ ರೂ. ಗಳ ದಾನ ಮಾಡಿರುವರು.

ಮುಂಜಾಗ್ರತೆ ಕ್ರಮ

ಅಖಂಡ ಹಿಂದೂಸ್ಥಾನದಲ್ಲಿ ಕೋಮುವಾರು ಗಲಭೆಗೆ ಅನೇಕಾವಕಾಶವಿದ್ದು ಮೈಸೂರು ಸಂಸ್ಥಾನದಲ್ಲಿ ಮಾತ್ರ ಇಂಥ ಘೋರ ಪರಿಸ್ಥಿತಿಗೆ ಅವಕಾಶವಿಲ್ಲದಿರುವುದು ಸಂಸ್ಥಾನದ ಹಿಂದೂ ಮುಸಲ್ಮಾನರ ಸದ್ಭಾವನೆಯನ್ನು ವ್ಯಕ್ತಪಡಿಸುತ್ತದೆ. ಆದಾಗ್ಯೂ ತಾ॥ ೧೬-೮-೪೬ ನೇ ಶುಕ್ರವಾರವು ಅಂಗಡಿಯೊಂದರಲ್ಲಿ ಸ್ವಲ್ಪ ಗಲಭೆಗೆ ಅವಕಾಶವಾಗಿರುವುದು ಕೆಲವರ ಕ್ರೋಧವನ್ನುಂಟುಮಾಡಿರುವಂತೆ ಬರುತ್ತದೆ. ಬೆಂಗಳೂರು ನಗರದಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ೨೯, ೩೦, ೩೧ ನೇ ತಾ॥ ಗಳಲ್ಲಿ ೧೪೪ ನೇ ಸೆಕ್ಷನ್ ಜಾರಿಯಲ್ಲಿರುವುದೆಂದೂ, ಸಿನಿಮಾ, ನಾಟಕ ಶಾಲೆ ಮತ್ತು ಪಬ್ಲಿಕ್ ಅಂಗಡಿಗಳು ಪೂರಾ ದಿನಸ ಮುಚ್ಚಿರಬೇಕೆಂದು ಆಜ್ಞೆ ಮಾಡಿರುವರು. ಬೆಂಗಳೂರಿನಂತೆಯೂ ಆ ದಿವಸಗಳಲ್ಲಿ ಗಲಾಟೆಗೆ ಕಾರಣವಾಗುವ ಎಲ್ಲ ಲಿಕ್ಕರ್ ಷಾಪು, ಸಿನಿಮಾ ಮಂದಿರಗಳನ್ನು ಮುಚ್ಚುವಂತೆ ಆಜ್ಞೆ ಮಾಡುವರೆಂದು ಕೋರಲಾಗಿದೆ.

ಪ್ರಜಾ ಹಿ

ರಾಜ್ ಕಮಲ್
ಮೈಸೂರು
೨-9-49 ನೇ ಸೋಮವಾರ
ಎರಡು ಪ್ರದರ್ಶನಗಳು ಮಾ
1) ಬೆಳಗ್ಗೆ 10-30 ಕ್ಕೆ.
"ಲಾಲ್ ಹವೇಲಿ
2) ಮಧ್ಯಾಹ್ನ 3-30 ಕ್ಕೆ
"ದ್ರೌಪದಿ"
3—9—46 ಮಂಗಳವಾರ
ಒಂದು ಪ್ರದರ್ಶನ ಮಾತ್ರ
ಮ್ಯಾಟನಿ 3-30 ಕ್ಕೆ:- "ದ್ರೌಪ

ಇಂಗ್ಲೀಷ್ ಪತ್ರಿಕೆಗೆ ಸಮಾನವಾ
ಕನ್ನಡದ ಅತ್ಯಂತ ದೊಡ್ಡ ಪತ್ರಿ
"ಸಂಯುಕ್ತ ಕರ್ನಾಟಕ
ವನ್ನು ಓದಿ ಕ್ಷಸಿಗೊಳ್ಳಿರಿ
ಕೆ. ಅನಂತ ಸುಬ್ಬರಾಯ, ಗ

OPERA TALKIES
ತಾ॥ 28—8—46 ರಿಂದ
ಬಿಸಿ ಶಾದಿ
ಅವ
(20 ನೇ ವಾರ)
ಪ್ರತಿ ದಿನ ಮೂರು ಆಟಗಳು
* ಮೋತಿಲಾಲ್, * ನರ್ಗಿಸ್
* ಮುಜಾರ್ ಖಾನ್

ಶ್ರೀ ರಾಜ ರಾಜೇಶ್ವರಿ
ಮಾಡರ್ನ್ ಹಿಂದು ಮಿಲಿಟರಿ ಹೋಟೇಲ್
(ಟ್ಯಾಕ್ಸಿ ಸ್ಟ್ಯಾಂಡ್ ಎದುರು)
ಗಾಂಧಿ ಚೌಕ, ಮೈಸೂರು.
30—8—46 ನೇ ಶುಕ್ರವಾರದಿಂದ ಪ್ರಾರಂಭ
ಅತ್ಯುತ್ತಮವಾದ ನಾನ್ ವೆಜಿಟೇರಿಯನ್ ಫಲಹಾರ ಮತ್ತು
ಊಟದ ಹೋಟೇಲು.
ಎಲ್ಲಾ ಸಕಲರಣೆಗಳಿಂದ ಕೂಡಿದ ರೂಂಗಳು
ಬಾಡಿಗೆಗೆ ದೊರೆಯುತ್ತವೆ.
ಒಂದಾವರ್ತಿ ಪರೀಕ್ಷಿಸಿರಿ !
ಪ್ರೊಪ್ರೈಟರ್:—ಚನ್ನೇಗೌಡ.

ವಿಜಯಾ ಬಿಜನ್ಸ್ ಸ್, ಮೈಸೂರು

ಪೋ. ನಂ. 392 WEEKLY EDITION ಇಂದಿನ ಪತ್ರಿಕೆ 6 ಪುಟ

ಸಂಪುಟ ೧೧] ಸೋಮವಾರ ೨—೯—೪೬ [ಸಂಚಿಕೆ ೬

ಈ ದಿನ ಕೇಂದ್ರ — ಸರ್ಕಾರದ ಸ್ಥಾಪನೆ

ನೆಹರೂರವರಿಗೆ ಅಭಿನಂದನೆ

ಮೈಸೂರು ೨

ಈ ದಿನ ಕೇಂದ್ರ ಸರ್ಕಾರದ ಅಧಿಕಾರ ಸೂತ್ರಗಳನ್ನು ವಹಿಸಿಕೊಂಡ ಪ್ರಧಾನ ಮಂತ್ರಿ ಪಂಡಿತ ಜವಹರಲಾಲ ನೆಹರೂರವರಿಗೆ ನ ಜಿಲ್ಲಾ ಮತ್ತು ನಗರ ಕಾಂಗ್ರೆಸ್ ಸಮಿತಿಯವರು, ವಕೀಲರ ಸಂಘದವರು ಮತ್ತು ಪತ್ರಿಕೋದ್ಯೋಗಿ ಸಂಘದವರು ಶುಭಾಶಯವನ್ನು ಕೋರಿ ತಂತೀ ಕಳುಹಿಸಿದರು

ಬೊಂಬಾಯಿಯಲ್ಲಿ ಕೋಮುವಾರು ಗಲಭೆ

ನೆನ್ನೆ ಸಂಜೆ ೫ ಘಂಟೆಯಲ್ಲಿ ಬೊಂಬಾಯಿನ ಬಂಡೀ ಬಜಾರಿನಲ್ಲಿ ಕೆಲವು ಮುಸಲ್ಮಾನರು ಕಪ್ಪು ಬಾವುಟಗಳನ್ನು ಹಿಡಿದು ಕೇಂದ್ರ ಸರ್ಕಾರದ ಬಗ್ಗೆ ಅಸಮಾಧಾನವನ್ನು ಸೂಚಿಸಲು ಪ್ರಯತ್ನಿಸಿದಾಗ ಗಲಭೆಯಾಗಿ ಅನೇಕರಿಗೆ ಚೂರಿಯಿಂದ ಘಾಯ, ಮತ್ತು ಏಟುಗಳು ಬಿದ್ದುವೆಂದು ವರದಿಯಾಗಿದೆ

ಸರ್ ಸಿ. ವಿ. ರಾಮನ್ನರು

ಕೊಲಂಬೋವಿನಲ್ಲಿ ಈ ಮಾಹೆ ೧೯ ಮತ್ತು ೨೦ ನೇ ತಾ॥ ಗಳಲ್ಲಿ ನಡೆಯುವ ಸಿಲೋನಿನ ವೈಜ್ಞಾನಿಕರ ಸಮ್ಮೇಳನದಲ್ಲಿ ಸರ್ ಸಿ. ವಿ. ರಾಮನ್‌ರವರು ಭಾಷಣ ಮಾಡುವರು

ಎಲ್ಲೆಲ್ಲೂ ಧ್ವಜ ಪ್ರದರ್ಶನ

ಸ್ವಂ. ಸು. ಪ್ರೋ] ಬೆಂಗಳೂರು ೨

ಭಾರತ ಕೇಂದ್ರ ಸರ್ಕಾರದ ಸೂತ್ರಗಳನ್ನು ರಾಷ್ಟ್ರ ನಾಯಕರು ವಹಿಸಿಕೊಂಡ ಆನಂದವನ್ನು ಸೂಚಿಸಲು ಇಲ್ಲಿನ ಅಂಗಡಿ ಬೀದಿಗಳಲ್ಲಿಯೂ ಮುಖ್ಯ ಭವನಗಳ ಮೇಲೂ ರಾಷ್ಟ್ರ ಧ್ವಜವು ಈ ದಿನ ಹಾರುತ್ತಿರುವ ದೃಶ್ಯವು ನಯನಮನೋಹರವಾಗಿದೆ. ಮುಸ್ಲಿಮರಿಗೆ ಉಂಟಾಗಿರುವ ಅಸಮಾಧಾನವನ್ನು ಸೂಚಿಸಲು ಅಲ್ಲಲ್ಲಿ ಕಪ್ಪು ಬಾವುಟಗಳೂ ಸಹ ಕಂಡು ಬರುತ್ತವೆ.

(ಹಿಂದಿನ ಪುಟದಿಂದ ಮುಂದುವರಿದುದು)

ಧನುಸ್ಸು—ನಿಮಗೆ ಬೇಕಾದ ಸಹಾಯಕರು ದೊರಕಿ ನಿಮ್ಮ ಉದ್ಯಮವು ಕೈಗೂಡುವುದು. ಆರೋಗ್ಯ ಚೆನ್ನಾಗಿರುವುದು. ಆರ್ಥಿಕ ಸ್ಥಿತಿ ತೃಪ್ತಿದಾಯಕವಾಗಿರುವುದು. ಪ್ರವಾಸದಲ್ಲಿ ಯಶಸ್ಸು. ವ್ಯವಹಾರ ಉದ್ಯೋಗಗಳಲ್ಲಿ ಹೆಚ್ಚು ಜವಾಬ್ದಾರಿ ಬರುವುದು.

ಮಕರ—ಆರೋಗ್ಯ ಚೆನ್ನಾಗಿರುವುದು ಹೊಸ ಯೋಜನೆಗಳು ನಿಮ್ಮಲ್ಲಿ ಮೂಡಿ ಕಾರ್ಯ ರೂಪಕ್ಕೆ ಬರುವುವು. ನೌಕರರಿಗೆ ಯಶ. ಪ್ರವಾಸದಲ್ಲಿ ಕಾರ್ಯ ಸಾಧನೆ. ಖರ್ಚು ಹಿಡಿತಕ್ಕೆ ಬಂದು ಆರ್ಥಿಕ ಸ್ಥಿತಿ ಸುಧಾರಿಸಲ್ಪಡುವುದು

ಕುಂಭ—ಈ ವಾರವೂ ಸಹ ನಿಮ್ಮ ಕಷ್ಟಗಳು ಪರಿಹಾರವಾಗುವುದಿಲ್ಲ. ಚಿಂತೆ ಮಗ್ನರಾಗುವಿರಿ. ಆರೋಗ್ಯ ಚೆನ್ನಾಗಿರುವುದಿಲ್ಲ. ಕೆಲಸ ಕಾರ್ಯಗಳಲ್ಲಿ ವಿಘ್ನಗಳು ದ ಕಿರುಕುಳ. ವಾರಾಂತ್ಯದಲ್ಲಿ ಉತ್ತಮ ಫಲ. ಆರ್ಥಿಕ ಸ್ಥಿತಿ ಚೆನ್ನಾಗಿರುವುದು

ಮೀನ—ಈ ವಾರ ಸ್ವಲ್ಪ ಶಾಂತಿಯಿಂದ ವರ್ತಿಸಿ. ಆರೋಗ್ಯ ಸಾಧಾರಣ. ಆರ್ಥಿಕ ಸ್ಥಿತಿ ಕೆಡುವುದು. ವ್ಯಾಪಾರ ಉದ್ಯೋಗಗಳಲ್ಲಿ ನಿಮಗೆ ವಿರುದ್ಧವಾಗಿ ಕೆಲಸಗಾರರು ಜರುಗುವರು. ಮಿತ್ರರ ನೆರವಿನಿಂದ ಮುಂದೆ ಅನುಕೂಲವಾಗುವುದು.

ಕರ್ನಾಟಕ ಏಕೀಕರಣ

ಪರಿಷತ್ತಿನ ನಿರ್ಣಯಗಳು

ದಾವಣಗೆರೆ ೧

ಅಖಿಲ ಕರ್ನಾಟಕ ಏಕೀಕರಣ ಮಹಾ ಸಂಪತ್ತಿನಲ್ಲಿ ಈ ಕೆಳಗೆ ಕಂಡ ನಿರ್ಣಯಗಳು ಮಂಜೂರಾದುವು:—

೧) ಬ್ರಿಟಿಷ್ ಕರ್ನಾಟಕ ವಿಭಾಗಗಳನ್ನು ಒಂದೆಡೆ ಸೇರಿಸಿ ಕರ್ನಾಟಕ ಪ್ರಾಂತವನ್ನು ನಿರ್ಮಿಸುವುದಕ್ಕೆ ಆತಂಕವುಂಟಾಗದಂತೆ ಬ್ರಿಟಿಷ್ ಕರ್ನಾಟಕ ಮತ್ತು ಸಂಸ್ಥಾನ ಕರ್ನಾಟಕ ಎಂಬ ಭೇದವನ್ನೆಣಿಸದೆ, ಎಲ್ಲ ಕರ್ನಾಟಕ ಸ್ಥರ ಬೆಳವಣಿಗೆಗಾಗಿ ಒಂದೇ ಆಡಳಿತವುಳ್ಳ ಸರ್ಕಾರ ಸಂಯುಕ್ತ ಒಗ್ಗಟ್ಟಿನೊಳಗೇ ಬೇರೆ ಬಗೆಯ ದಾಗಲೀ ಸ್ಥಾಪಿತವಾಗುವುದರಿಂದಲೇ ಅಖಂಡ ಕರ್ನಾಟಕದ ಹಿತ ಸಾಧಿತವಾಗುವುದೆಂದು ಸಂಸ್ಥಾನ ಕರ್ನಾಟಕವನ್ನೊಳಗೊಂಡ ಅಖಿಲ ಕರ್ನಾಟಕದ ಪ್ರತಿನಿಧಿಗಳ ಈ ಏಕೀಕರಣ ಮಹಾ ಪರಿಷತ್ತು ಸಾರುತ್ತದೆ. ಅಖಂಡ ಕರ್ನಾಟಕಕ್ಕೆ ಈ ಬಗೆಯ ಒಂದೇ ಸರ್ಕಾರ ಸ್ಥಾಪನೆ ಸುಲಭ ಸಾಧ್ಯವೆಂದೂ, ಎಲ್ಲ ಸಂಸ್ಥಾನಗಳಲ್ಲಿ ಪೂರ್ಣ ಪ್ರಜಾಸತ್ತಾತ್ಮಕ ಹೊಣೆಗಾರಿಕೆ ಸರ್ಕಾರ ಸ್ಥಾಪಿಸುವುದು ಅವಶ್ಯಕವೆಂದೂ ಅಭಿಪ್ರಾಯಪಡುತ್ತದೆ. ಹಾಗೂ ಸಂಸ್ಥಾನಾಧಿಪತಿಗಳು ಈ ಮಹಾ ಕಾರ್ಯದಲ್ಲಿ ಸಹಕರಿಸಬೇಕೆಂದು ವಿನಂತಿಸುತ್ತದೆ.

೨) ಭಾಷಾನುಗುಣ ಪ್ರಾಂತ ರಚನೆಯ ವಿಷಯವನ್ನು ಮಹತ್ವದ ಮಾತೆಂದೂ, ಘಟನಾ ಸಮಿತಿಯವರು ಈ ಪ್ರಶ್ನೆಯನ್ನು ತೆಗೆದುಕೊಳ್ಳಬೇಕೆಂದೂ, ಕರ್ನಾಟಕ ಪ್ರಾಂತ ರಚನೆಗಾಗಿ ಶೀಘ್ರವಾಗಿಯೇ ಕಾರ್ಯ ಪ್ರವೃತ್ತರಾಗಬೇಕೆಂದೂ ಈ ಮಹಾ ಪರಿಷತ್ತು ಆಗ್ರಹಪೂರ್ವಕವಾಗಿ ಸೂಚಿಸುತ್ತದೆ

೩) ಮೇಲಿನ ಗೊತ್ತುವಳಿಗಳ ಉದ್ದೇಶ ಸಾಧನೆಗಾಗಿ ಅವಶ್ಯ ಕಂಡ ಎಲ್ಲ ಒಗೆಯ ಕಾರ್ಯ ಕೈಗೊಳ್ಳಲು ಈ ಪರಿಷತ್ತಿನ ಅಧ್ಯಕ್ಷರಾದ ಶ್ರೀ॥ ಎಂ. ಪಿ. ಪಾಟೀಲರು, ಕರ್ನಾಟಕ ಪ್ರಾಂತ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾದ ಶ್ರೀ॥ ಎಸ್. ನಿಜಲಿಂಗಪ್ಪನವರು ಮತ್ತು ಕರ್ನಾಟಕ ಏಕೀಕರಣ ಸಂಘದ ಅಧ್ಯಕ್ಷರಾದ ಶ್ರೀ॥ ಜನಾರ್ದನ ದೇಶಪಾಂಡೆಯವರು ಇವರುಗಳನ್ನೊಳಗೊಂಡ ಒಂದು ಉಪ ಸಮಿತಿಯನ್ನು ಸ್ಥಾಪಿಸಲಾಗಿದೆ. ಈ ಸಮಿತಿಯವರು ಕರ್ನಾಟಕ ಪ್ರಾಂತ ಕಾಂಗ್ರೆಸ್ ಕಮಿಟಿ ಮತ್ತು ಏಕೀಕರಣ ಸಂಘದ ಸೂಚನೆಯಂತೆ ಕೆಲಸ ಮಾಡತಕ್ಕದ್ದು.

೪) ಭಾರತ ರಾಜ್ಯಾಂಗ ರಚನಾ ಸಮಿತಿ

ಪಟ್ಟಾಭಿಷೇಕ ದಿನಾಚರಣೆ

ಮೈಸೂರು ೨

ಶ್ರೀಮನ್ ಮಹಾರಾಜರವರ ಪಟ್ಟಾಭಿಷೇಕದ ದಿನಾಚರಣೆಯನ್ನು ಈ ದಿನ ಬೆಳಿಗ್ಗೆ ಅರಮನೆ ನೌಕರರೆಲ್ಲರೂ ರಾಜಭಕ್ತಿಯಿಂದ ನೆರವೇರಿಸಿದರು. ಬೆಳಿಗ್ಗೆ ೨೧ ಕುಶಾಲ ತೋಪುಗಳು ಹಾರಿಸಲ್ಪಟ್ಟವು. ಜಗನ್ಮೋಹನ ಬಂಗಲೆಯಲ್ಲಿ ಹುಜೂರ್ ಸೆಕ್ರೆಟರಿ ಶ್ರೀ ಟಿ ರಾಮಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆದು ಪ್ರಭುಗಳಿಗೆ ದೀರ್ಘಾಯುರಾರೋಗ್ಯವನ್ನು ಕೋರಲಾಯಿತು. ಈ ದಿನ ಅರಮನೆ ಇಲಾಖೆಗಳೆಲ್ಲಕ್ಕೂ ರಜಾ ಕೊಡಲಾಗಿತ್ತು

ಕಪ್ಪು ಬಾವುಟದ ಪ್ರದರ್ಶನ

ಈ ದಿನವೂ ನಗರದಲ್ಲಿ ಶಾಂತಿ ಪಾಲನೆಗಾಗಿ ಪೊಲೀಸಿನವರು ಎಚ್ಚರಿಕೆ ಕ್ರಮಗಳನ್ನು ಕೈಗೊಂಡಿರುವರು. ರಿಜರ್ವ್ ಪೊಲೀಸಿನವರು ಊರಿನಲ್ಲೆಲ್ಲಾ ಗಸ್ತು ತಿರುಗುತ್ತಿರುವರು. ಮಿ॥ ಜಿನ್ನಾರವರ ಸೂಚನೆಯಂತೆ ಕೇಂದ್ರ ಸರ್ಕಾರದ ರಚನೆಗೆ ಅಸಮ್ಮತಿಯನ್ನು ಸೂಚಿಸಲು ಮುಸ್ಲಿಂ ಮೊಹಲ್ಲೆಯ ಎರಡು ಮನೆಗಳ ಮೇಲೆ ಕಪ್ಪು ಬಾವುಟಗಳು ಕಾಣಬರುತ್ತಿದ್ದುವೆಂದು ವರದಿಯಾಗಿದೆ

ಕೇಂದ್ರ ಸರ್ಕಾರದ ರಚನೆ

ಭಾರತ ಕೇಂದ್ರ ಸರ್ಕಾರದ ಅಧಿಕಾರವನ್ನು ಈ ದಿನ ರಾಷ್ಟ್ರ ನಾಯಕರು ವಹಿಸಿಕೊಳ್ಳುವರು. ರಾಜ ಭಕ್ತಿ, ಅಧಿಕಾರದ ಮತ್ತು ಆಡಳಿತದ ಗೋಪ್ಯತೆಯ ಬಗ್ಗೆ ವಹಿಸುವ ಪ್ರಮಾಣ ವಚನಗಳನ್ನು ಅವರು ಸ್ವೀಕರಿಸುವರು. ವೈಸರಾಯರ ಮಂತ್ರಿ ಮಂಡಲದ ಭವನದಲ್ಲಿ ಇದು ನಡೆಯುವುದು. ಅನಂತರ ಮಂತ್ರಿ ಮಂಡಲದ ಸಾಮಾನ್ಯ ಸಭೆಯು ಜರುಗುವುದು.

ಇಲ್ಲಿ ಸಂಸ್ಥಾನಗಳ ಪರವಾಗಿ, ರಾಜರುಗಳಿಂದ ನಾಮಕರಣ ಹೊಂದಿದ ಸದಸ್ಯರಿಂದ ಪ್ರಜೆಗಳಿಂದ ಚುನಾಯಿತರಾದ ಪ್ರತಿನಿಧಿಗಳೇ ಇರತಕ್ಕದ್ದು.

ರಾಜ್ ಕಮಲ್

ಮೈಸೂರು

೩೦—೮—೪೬ ರಿಂದ

ಪ್ರತಿ ದಿನ ಮೂರು ಆಟಗಳು

"ದ್ರೌಪದಿ"

ಭೂಮಿಕೆ:— ಸುಶೀಲಾ ರಾಣಿ,

ಚಂದ್ರ ಮೋಹನ್, ಮುಜಫರ್ ಖಾನ್

ಮಂತ್ರಿಗಳ ಪೋರ್ಟ್‌ಫೋಲಿಯೋಗಳು

ಸ್ವಂ ಸು. ಪ್ರೋ] [ಬೆಂಗಳೂರು ೨

ದಿವಾನರಿಗೆ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಗಳು, ಆರ್ಥಿಕ ಸಚಿವರಾದ ಶ್ರೀ॥ ತಮ್ಮಣ್ಣಗೌಡರಿಗೆ ಟ್ರಾಂಸ್‌ಪೋರ್ಟ್, ಶ್ರೀ॥ ಶೇಷಾದ್ರಿಯವರಿಗೆ ಪೋಲೀಸ್ ಮತ್ತು ಸೈನ್ಯ, ಶ್ರೀ॥ ಎಲ್ ಸಿದ್ದಪ್ಪನವರಿಗೆ ವ್ಯವಸಾಯ, ಹೆಚ್॥ ಬಿ. ಎಸ್. ಎ ಪಟೇಲರಿಗೆ ಆಹಾರ ಮತ್ತು ನ್ಯಾಯಾಂಗ, ಡಾ॥ ರಾಯರವರಿಗೆ ವಿದ್ಯೆ ಮತ್ತು ಆರೋಗ್ಯ— ಈ ರೀತಿ ಇಲಾಖೆಗಳನ್ನು ಹಂಚಲಾಗುವುದೆಂದು ತಿಳಿದುಬಂದಿದೆ.

ಇಂಜನಿಯರುಗಳಾದ ಶ್ರೀಗಳು ಟಿ. ಎಲ್ ಮಾಣಿಕ್ಯಂ ಮತ್ತು ಗಂಗಾಧರಯ್ಯನವರುಗಳನ್ನು ಯುದ್ಧಾನಂತರದ ವ್ಯವಸಾಯ ಯೋಜನೆಗಳನ್ನು ಪರಿಶೀಲಿಸಲು ಅಮೇರಿಕಕ್ಕೆ ಕಳುಹಿಸುವಂತೆ ಆಜ್ಞೆಯಾಗಿದೆ

ಭಾರತ ಮಂತ್ರಿಗಳ ಇಲಾಖೆಗಳು

ಈ ದಿನ ಭಾರತ ಸರ್ಕಾರದ ಸೂತ್ರವನ್ನು ವಹಿಸಿಕೊಳ್ಳುವ ಮಂತ್ರಿಗಳಿಗೆ ಈ ಕೆಳಗೆ ಕಂಡಂತೆ ಇಲಾಖೆಗಳನ್ನು ವೈಸರಾಯರು ವಹಿಸಿರುವರು:—

ಪಂಡಿತ ನೆಹರೂ:-ವಿದೇಶಾಂಗ ಮತ್ತು ಕಾಮನ್‌ವೆಲ್ತ್ ಸಂಬಂಧ, ಸರ್ದಾರ್ ಬಲದೇವಸಿಂಗ್:-ರಕ್ಷಣೆ, ಸರ್ದಾರ್ ಪಟೇಲ್:- ಗೃಹ ಶಾಖೆ ಮತ್ತು ಪ್ರಚಾರ, ಡಾ॥ ಜಾನ್ ಮತ್ತಾಯಿ:-ಹಣಕಾಸು, ಮಿ॥ ಅಸಫ್ ಅಲಿ:-ಸಾರಿಗೆ ಮತ್ತು ರೈಲು, ಡಾ॥ ರಾಜೇಂದ್ರ ಪ್ರಸಾದ್:-ಆಹಾರ ಮತ್ತು ವ್ಯವಸಾಯ, ಜಗಜೀವನರಾಮ್:-ಕಾರ್ಮಿಕ ಶಾಖೆ, ಸರ್ ಶಾಫತ್ ಅಹಮದ್ ಖಾನ್:-ಆರೋಗ್ಯ, ವಿದ್ಯೆ ಮತ್ತು ಕಲೆ, ಅಲಿ ಜಹೀರ್:- ರಸ್ತೆ, ಅಂಚೆ ಮತ್ತು ವಿಮಾನ, ಸಿ. ರಾಜಗೋಪಾಲಾಚಾರಿ:-ಕೈಗಾರಿಕೆ ಮತ್ತು ಸರಬರಾಜು, ಶರತ್ ಚಂದ್ರಬೋಸ್:-ಮರಾಮತ್ತು, ಗಣಿ ಮತ್ತು ವಿದ್ಯುಚ್ಛಕ್ತಿ, ಸಿ. ಎಚ್. ಬಾಬಾ:-ವಾಣಿಜ್ಯ

ಕಳ ದರ್ಜೆ ನೌಕರರ ಸಂಬಳ ಹೆಚ್ಚುವುದು

ಸ್ವಂ ಸು ಪ್ರೋ] ಬೆಂಗಳೂರು ೨

ನ್ಯಾಯವಿಧಾಯಕ ಸಭೆಯಲ್ಲಿ ಸರ್ಕಾರದವರು ಭರವಸ ಇತ್ತಿದ್ದ ಪ್ರಕಾರ ಸರ್ಕಾರದ ಕೆಳ ದರ್ಜೆ ನೌಕರರ ಸಂಬಳವನ್ನು ಶೇ ಕಡ ೨೫ ರಷ್ಟು ಹೆಚ್ಚು ಮಾಡಲಾಗುವುದೆಂದು ತಿಳಿದುಬಂದಿದೆ. ಈ ಬಗ್ಗೆ ಒಟ್ಟು ವೆಚ್ಚವು ಎಷ್ಟು ಆಗಬಹುದೆಂಬ ಅಂದಾಜನ್ನು ತಯಾರು ಮಾಡಲಾಗುತ್ತಿದೆ

ಮುನಿಸಿಪಲ್ ಕೆಲಸಗಾರರ ಪ್ರದರ್ಶನ

ಮೈಸೂರು ೨

ನೆನ್ನೆ ಸುಮಾರು ೪೦೦ ಜನ ಮುನಿಸಿಪಲ್ ಕೆಲಸಗಾರರು "ಸಮಗೆ ೧೦ ರೂ. ತುಟ್ಟಿಭತ್ಯ ಕೊಡಿ ಮತ್ತು ಅಕ್ಕಿ, ರಾಗಿಯನ್ನು ಕೊಡಿ" ಎಂಬ ಉದ್ಘೋಷಗಳೊಡನೆ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಹೋಗಿದ್ದರು. ಅನಂತರ ಟೌನ್ ಹಾಲ್ ಮೈದಾನದಲ್ಲಿ ಶ್ರೀ ರಾಮಾನುಜಾಚಾರ್ಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಸರ್ಕಾರ ... ಕೊಡಬೇಕೆಂದೂ ... ಕೆಲಸಗಾರರಿಗೆ ... ಮ ... ಪ್ರ

ಸಾಧ್ವಿ

೨-೯-೪೬ ಸೋಮವಾರ

ಕರ್ನಾಟಕ ಏಕೀಕರಣ

ದಾವಣಗೆರೆಯಲ್ಲಿ ಕನ್ನಡ ನಾಡಿನ ಏಕೀಕರಣಕ್ಕಾಗಿ ಮೊನ್ನೆ ನಡೆದ ಸಮಾರಂಭವು ಅತ್ಯಂತ ಯಶಸ್ವಿಯಾಗಿ ಜರುಗಿತು. ಮದರಾಸ್ ಮತ್ತು ಬೊಂಬಾಯಿನ ಮಂತ್ರಿಗಳ ಆಗಮನ ಮತ್ತು ಕನ್ನಡ ನಾಡಿನ ಸಕಲ ಭಾಗಗಳ ಪ್ರತಿನಿಧಿಗಳ ಸಮ್ಮೇಳನವು ಮುಂದಿನ ಅಖಂಡ ಕರ್ನಾಟಕದ ಪೂರ್ವ ಸೂಚನೆಯನ್ನು ಉಂಟುಮಾಡಿ ಕೊಡುತ್ತಿದ್ದಿತು. ಭಾಷೆ ಮತ್ತು ಸಂಸ್ಕೃತಿಗಳ ದೃಷ್ಟಿಯಿಂದ ಮಾತ್ರವಲ್ಲದೆ ರಾಜಕೀಯವಾಗಿಯೂ ಕನ್ನಡಿಗರು ಒಂದೇ ಆಡಳಿತಕ್ಕೆ ಒಳಪಡಬೇಕೆಂಬ ಆಕಾಂಕ್ಷೆಯನ್ನು ಹೊರಸೂಸುತ್ತಿತ್ತು.

ಮೇಲ್ಕಂಡ ಧ್ಯೇಯ ಸಾಧನೆಗಾಗಿ ಪರಸ್ಪರ ಹೊಂದಿಕೊಂಡು ಕನ್ನಡಿಗರೆಲ್ಲರೂ ಒಮ್ಮತದಿಂದ ಕೆಲಸ ಮಾಡಬಲ್ಲರೆಂಬುದನ್ನು ದಾವಣಗೆರೆಯ ಮಹಾ ಪರಿಷತ್ತು ತೋರಿಸಿಕೊಟ್ಟಿರುತ್ತದೆ. ಈಗ ಬ್ರಿಟಿಷರಿಂದ ರಚಿತವಾಗಿರುವ ಪ್ರಾಂತಗಳ ಕೃತಕ ರೂಪವನ್ನು ಮಾರ್ಪಡಿಸಿ ಭಾಷೆಗಳಿಗೆ ಅನುಗುಣವಾಗಿ ಸಹಜವಾದ ರೀತಿಯಲ್ಲಿ ಅವುಗಳನ್ನು ಪುನರ್ರಚಿಸಬೇಕೆಂಬ ತತ್ವವನ್ನು ಸಕಲ ದೇಶಭಕ್ತರೂ ಸಂಘ ಸಂಸ್ಥೆಗಳೂ ಅಂಗೀಕರಿಸಿರುವವು. ಇದಕ್ಕೆ ಕಾಂಗ್ರೆಸ್ಸು ದೇಶದ ಮಹಾ ಜನರೂ ಇದಕ್ಕೆ ಬೆಂಬಲ ಕೊಟ್ಟಿರುವರು. ಅದಕ್ಕಾಗಿ ಬೇಕಾದ ತ್ಯಾಗಗಳನ್ನು ಮಾಡುವುದಾಗಿಯೂ ಅವರು ತಿಳಿಸಿರುವರು.

ಏಕೀಕರಣದ ಪ್ರಶ್ನೆಯಲ್ಲಿ ರಾಜರುಗಳ ಪಾತ್ರವು ಪ್ರಧಾನವಾದುದು. ಬ್ರಿಟಿಷ್ ಹಿಂದೂಸ್ಥಾನವೆಲ್ಲವೂ ಈಗ ಒಂದೇ ಆಡಳಿತದಲ್ಲಿರುವುದರಿಂದ ಅಲ್ಲಿರುವ ಪ್ರದೇಶಗಳನ್ನು ಒಂದುಗೂಡಿಸುವುದು ಅತ್ಯಂತ ಸುಲಭ ಸಾಧ್ಯವಾದ ವಿಚಾರ. ದೇಶೀಯ ರಾಜರುಗಳ ಸಂಸ್ಥಾನಗಳಲ್ಲಿ ಒಂದೊಂದು ಸಂಸ್ಥಾನವೂ ಬೇರೆ ಬೇರೆ ರಾಜಕೀಯ ಮಟ್ಟದಲ್ಲಿರುವುದರಿಂದ ಅವುಗಳು ನೆರೆಯ ಪ್ರಾಂತಗಳ ಮಟ್ಟಕ್ಕೆ ಬರಬೇಕಾಗುವುದು. ಈಗ ಅಲ್ಲಿನ ಜನರಿಗೆ ಇರುವ ರಾಜಕೀಯ ಅಧಿಕಾರಕ್ಕಿಂತಲೂ ಹೆಚ್ಚಿನ ಸುಧಾರಣೆಗಳನ್ನು ಕೊಡಬೇಕಾಗುವುದು. ಕೊಟ್ಟಿಯ ರಾಜರು ಹೇಳುವಂತೆ ದೇಶ, ಭಾಷೆ ಮತ್ತು ಸಂಸ್ಕೃತಿಗಳ ಅಭ್ಯುದಯದ ದೃಷ್ಟಿಯಿಂದ ರಾಜರುಗಳು ಇನ್ನು ಮುಂದೆ ಮುಂದುವರಿಯಬೇಕು.

ಕಾವಲೇ ಬ್ರಿಟಿಷ್ ಪ್ರಾಂತಗಳು ಒಂದುಗೂಡಲು ಅಡ್ಡಿಯಿಲ್ಲದಂತೆ, ಅವಿಲ ಕರ್ನಾಟಕದ ರಾಜ್ಯ ರಚನೆಗಾಗಿ ಕನ್ನಡಿಗರೆಲ್ಲರೂ ಪ್ರಯತ್ನಿಸಬೇಕೆಂದು ಸಮ್ಮೇಳನದಲ್ಲಿ ನಿರ್ಣಯವಾಗಿರುವುದು ಸೂಕ್ತವಾಗಿಯೇ ಇದೆ. ಸಂಸ್ಥಾನಗಳಲ್ಲಿ ಸಾಂಕುರ ಆಡಳಿತವು ಸ್ಥಾಪಿತವಾಗಬೇಕೆಂದೂ, ಪ್ರಜೆಗಳಿಂದ ಚುನಾಯಿತರಾದ ಪ್ರತಿನಿಧಿಗಳೇ ರಾಜ್ಯಾಂಗ ಶಾಸನ ಸಭೆಗೆ ಹೋಗಬೇಕೆಂದೂ ಮಾಡಿರುವ ನಿರ್ಣಯಗಳನ್ನು ನಾವು ಸ್ವಾಗತಿಸುತ್ತೇವೆ. ಕನ್ನಡ ನಾಡಿನ ಸಕಲ ಪ್ರಜೆಗಳೂ, ಪ್ರಭುಗಳೂ ತಮ್ಮ ಅಭ್ಯುದಯಕ್ಕಾಗಿ ತಮ್ಮ ಪ್ರಾಂತದ ಏಕೀಕರಣಕ್ಕೆ ನೆರವು ನೀಡಬೇಕೆಂದು ನಾವು ಬೇಡುತ್ತೇವೆ.

ವಾರ ಭವಿಷ್ಯ

(ಶ್ರೀ ನಿತ್ಯಾನಂದ ಸ್ವಾಮಿಗಳವರಿಂದ)

೨-೯-೪೬ ರಿಂದ ೮-೯-೪೬ ರ ವರೆಗೆ

ಮೇಷ—ದೈವಾನುಗ್ರಹಕ್ಕೆ ಪಾತ್ರರಾಗಿದ್ದೀರಿ ನಿಮ್ಮ ಆರೋಗ್ಯ ಚೆನ್ನಾಗಿರುವುದು. ಹಣಕಾಸಿನ ಸ್ಥಿತಿ ಉತ್ತಮಗೊಳ್ಳುವುದು. ವ್ಯಾಪಾರಾದಿ ವ್ಯವಹಾರಗಳಲ್ಲಿ ಯಶಸ್ಸು ಉದ್ಯೋಗದಲ್ಲಿ ಮೇಲಿನ ಸ್ಥಾನ ದೊರೆಯುವ ಯೋಗವಿದೆ. ಪ್ರವಾಸದಲ್ಲಿ ಲಾಭವಿದೆ.

ವೃಷಭ—ತೊಂದರೆಗಳು ಅಧಿಕಗೊಂಡು ವಿರಾಮ ದೊರೆಯುವುದು ಕಷ್ಟವಾಗುವುದು ಆರೋಗ್ಯ ಸಹ ಚೆನ್ನಾಗಿರುವುದಿಲ್ಲ. ಮಾನಸಿಕ ವ್ಯಥೆಗೆ ಸಿಲುಕುವಿರಿ. ವ್ಯಾಪಾರ ವ್ಯವಹಾರಗಳಲ್ಲಿ ನಷ್ಟ ಉಂಟಾಗುವ ಸೂಚನೆಗಳಿವೆ ಪ್ರವಾಸ ಕೈಗೊಳ್ಳಬೇಕಾಗಿ ಆದಾಯಕ್ಕಿಂತ ಖರ್ಚು ಹೆಚ್ಚು.

ಮಿಥುನ—ಆರೋಗ್ಯ ಚೆನ್ನಾಗಿದ್ದರೂ, ಮಾನಸಿಕ ಚಿಂತೆ ಮಾತ್ರ ಬಗೆ ಹರಿಯಲಾರದು ವ್ಯಾಪಾರ, ಉದ್ಯೋಗಗಳಲ್ಲಿ ಅನಾವಶ್ಯಕ ತೊಂದರೆಗಳು ಪ್ರವಾಸದಲ್ಲಿ ಅಪಯಶಸ್ಸು. ಹಿತ ಮಿತ್ರರ ಬಗ್ಗೆ ಅನಿಷ್ಟ ಸುದ್ದಿ ಕೇಳುವಿರಿ. ಆರ್ಥಿಕ ನಷ್ಟವಾಗುವುದು

ಕಟಕ—ನೀವು ಯೋಚಿಸಿದ್ದಂತೆ ಕೆಲಸ ಕಾರ್ಯಗಳಲ್ಲಿ ಜಯ ಉಂಟಾಗುವುದು. ಆರೋಗ್ಯ ಚೆನ್ನಾಗಿರುವುದು. ಆರ್ಥಿಕ ಪ್ರಗತಿ ಉಂಟಾಗುವುದು ವ್ಯವಹಾರಗಳಲ್ಲಿ ಮಿತ್ರರಿಂದಲೂ, ಮೇಲಧಿಕಾರಿಗಳಿಂದಲೂ ಪ್ರಶಂಸೆ, ದಾನಧರ್ಮಗಳಿಗಾಗಿ ಖರ್ಚು

ಸಿಂಹ – ನಿಮ್ಮ ಶತ್ರುಗಳ ಕೈವಾಡ ಅಧಿಕಗೊಳ್ಳುವುದು. ಸಂಸಾರ ತಾಪತ್ರಯದಿಂದ ಬೇಸರಗೊಳ್ಳುವಿರಿ. ಆರೋಗ್ಯ ಸಾಧಾರಣ. ಹಣಕಾಸಿನ ಮುಗ್ಗಟ್ಟು ಉಂಟಾಗುವುದು ಬೆಲೆ ಬಾಳುವ ವಸ್ತುಗಳ ಅಪಹಾರವಾಗುವುದು ಪ್ರವಾಸದಲ್ಲಿ ಉತ್ತಮ ಫಲವಿಲ್ಲ.

ಕನ್ಯಾ—ಆರೋಗ್ಯ ಉತ್ತಮವಿಲ್ಲದಿರುವುದರಿಂದ ಕೆಲಸಕಾರ್ಯಗಳಲ್ಲೆಲ್ಲಾ ಜಾಗು ಷ್ಟೆ ಉಂಟಾಗಿ ಬರಲಿರುವ ಆದಾಯಗಳಲ್ಲೆಲ್ಲಾ ಹೋತಾ ಉಂಟಾಗುವುದು. ಪ್ರವಾಸದಲ್ಲಿ ಕೆಡಕು ಬಂಧುಗಳೊಬ್ಬರ ವಿಯೋಗದಿಂದ ಸಂತಾಪ ಪ್ರಾಪ್ತಿ.

ತುಲಾ—"ಈಸಬೇಕು-ಇದ್ದು ಜೈಸಬೇಕು" ಎಂಬ ಛಲದಿಂದ ಕೊನೆಗೂ ದುಃಕಾಲಗಳಾದಿರಿ ನಿಮ್ಮ ದಿಗ್ವಿಜಯವ ನಿಮ್ಮ ಭವಿಷ್ಯ ಫಲಪ್ರದವಾಯಿತು ಆರೋಗ್ಯ ಸಾಧಾರಣ. ಪ್ರತಿಸ್ಪರ್ಧಿಗಳು ಸ್ವಲ್ಪ ಹೊಂಚು ಹಾಯುತ್ತಿರುವರು ಎಚ್ಚರಿಕೆಯಿಂದಿರಿ

ವೃಶ್ಚಿಕ—ಈ ವಾರ ಮನೆಯಲ್ಲಿ ಕೋಪದ ವಾತಾವರಣ ಹುಟ್ಟಿ ನಿಮ್ಮ ಕಾರ್ಯಗಳೆಲ್ಲಾ ಯಶಸ್ವಿಯಾಗಿ ನಡೆಯುವುವು. ಆರೋಗ್ಯ ಚೆನ್ನಾಗಿರುವುದು ಸಾಂಪತ್ತಿಕ ಸ್ಥಿತಿ ಉತ್ತಮಗೊಳ್ಳುವುದು ಅತಿಥಿಗಳಿಗಾಗಿ ಖರ್ಚು ಹೆಚ್ಚುವುದು ಖರ್ಚು ಕೀರ್ತಿ ಹರಡುವುದು

(ಹಿಂದಿನ ಪುಟ ನೋಡಿ)

ಮೈಸೂರು ಸಿಟಿ ಮುನಿಸಿಪಲ್ ಆಫೀಸಿನಿಂದಾ

ಪ್ರಸಿದ್ಧ ಪತ್ರಿಕೆ

ಮೈಸೂರು ಸಿಟಿ ಸಮಸ್ತ ಪುರಜನಗಳಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಸಾರ್ವಜನಿಕರ ಸಂಚಾರಕ್ಕೂ ವಾಹನಗಳ ಓಡಾಟಕ್ಕೂ ಬೀದಿಗಳಲ್ಲಿ ಪೋಲಿ ದನಗಳಿಂದಾಗುವ ತೊಂದರೆಗಳನ್ನು ತಪ್ಪಿಸಲು ಅಂಥಾ ದನಗಳನ್ನು ಹಿಡಿದು ದೊಡ್ಡಿಗೆ ಹಾಕುವುದಕ್ಕಾಗಿ ಗೌರ್ನಮೆಂಟಿನವರು ೧-೭-೪೬ ರ ಲಾಗಾಯಿತು ಒಂದು ಕ್ಯಾಟಲ್ ಕ್ಯಾಚಿಂಗ್ ಗ್ಯಾಂಗನ್ನು ಮಂಜೂರು ಮಾಡಿರುತ್ತಾರೆ. ಈ ಗ್ಯಾಂಗಿನವರು ಹಿಡಿದ ದನಗಳಿಗೆ ಅಡ್ಡಿ ಬರುವ ಮತ್ತು ಗ್ಯಾಂಗಿನವರನ್ನು ಅವಮಾನ ಪಡಿಸುವ ಜನಗಳ ಮೇಲೆ ಕ್ಯಾಟಲ್ ಟ್ರೆಸ್‌ಪಾಸ್ ಆಕ್ಟು ಪ್ರಕಾರ ಕ್ರಮ ಜರುಗಿಸಬೇಕಾಗುವ ಸಂದರ್ಭ ಒದಗುವುದರಿಂದ ಸರ್ವರೂ ತಮ್ಮ ತಮ್ಮ ದನಗಳನ್ನು ತಮ್ಮ ಹಟ್ಟಿಯಲ್ಲಿ ಇಟ್ಟುಕೊಂಡು ಮನಸ್ಸಿಗೆ ಬಿಡದ ಹಾಗೆ ನೋಡಿಕೊಳ್ಳಲು ಕೋರಿದೆ. ವಾರಸುದಾರರ ಸ್ವಾಧೀನದಲ್ಲಿರುವ ದನಗಳನ್ನು ಗ್ಯಾಂಗಿನವರು ಅಕಸ್ಮಾತ್ ಹಿಡಿದಲ್ಲಿ ಅಂಥ ಅಕ್ರಮ ಸಂದರ್ಭಗಳನ್ನು ನಮ್ಮ ಗಮನಕ್ಕೆ ತಂದಲ್ಲಿ ತಕ್ಕ ಬಂದೋಬಸ್ತನ್ನು ಮಾಡಲಾಗುತ್ತೆ.

(ಸಹಿ) ಆರ್. ರಾಮಚಂದ್ರಯ್ಯರ್,
ಚೇರ್‌ಮನ್ ಪ್ರೆಸಿಡೆಂಟ್, ಸಿಟಿ ಮುನಿಸಿಪಲ್ ಕೌನ್ಸಿಲ್, ಮೈಸೂರು

Edited, printed and published by A. R. Nagarajan at the Sadhvi Press D5 Lli' Bire Mys e

University of Mysore

NOTIFICATION

No. G 4—1593/45-46 Dated the 16th July 19

It is hereby notified that the Twenty-eighth Annu Convocation of the University of Mysore for conferri degrees will be held in the Jaganmohan Palace, Myso on Saturday the 12 th October 1946 at 9 A.M.

The following rules are published for the guidan of candidates eligible for degrees:—

1. Candidates who have been declared to be eli ble for any of the degrees of the Mysore University m receive their respective degrees in Person or in Absent at a Convocation to be held after such declaration.

2. Candidates who wish to take the degree at t Convocation to be held on 12 th October 1946 must se in their application in the form A or B appended here to the Registrar, University of Mysore, Mysore, so as reach him on or before 11th September 1946. Copies these forms may be obtained from the Head of the C lege in which the Candidate studied last for the deg Examination

3. A candidate who wishes to take the degree Absentia may apply in the prescribed form B so as reach the Registrar, University of Mysore, Mysore, on before 11th September 1946 on payment of a fee of Rs. 1

4. A candidate who having applied under rule above fails to appear at the Convocation, may take t degree in Person or in Absentia at a subsequent Convoc tion. If he wishes to take the degree in person he m pay a fee of Rs. 5. If he wishes to take the degree in abse tia he must not only pay Rs. 5, the fee prescribed in t rule, but also Rs 10 the fee prescribed in rule 3 above.

5. The prescribed fee or fees may be remited to t Registrar, University of Mysore, along with the applic tion or be paid into a ysore Government Treasury a the treasury receipt attached to the application.

6. A woman candidate for degree who is preclud by custom from appearing in public may, by order of t University Council, be permitted to the degree in absen without payment of any fee, provided that she applies the Registrar in the prescribed form B so as to reach h on or before 11th September 1946.

7 The application of a candidate for the B. degree Examination in Person or in Absentia should accompanied by a certificate from the Principal stat that he has completed the prescribed practical train satisfactorily.

8 Specification regarding academic robes enclosed.

By Order,
D. S. GODON, Registrar

ಫೋ|. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು



ಸಂಪುಟ ೫] ಮಂಗಳವಾರ ೩—೯—೪೬ [ಸಂಚಿಕೆ ೩೪

ಬಿಕನೀರ್ ಸಂಸ್ಥಾನದಲ್ಲಿ ಜವಾಬ್ದಾರೀ ಸರ್ಕಾರ

★ ರಾಷ್ಟ್ರಪತಿ ನೆಹರೂ ಭಾರತ ರಾಷ್ಟ್ರೀಯ ಸರ್ಕಾರದ ಪ್ರಥಮ ಪ್ರಧಾನಿ (ಪತಿಮಾಚ್ಚು ಸ್ವತ್ವ ಪತ್ರಿಕೆಯ ಕೃಪೆಯಿಂದ) ★

ಬಿಕನೀರ್‌ನಲ್ಲಿ ಜವಾಬ್ದಾರೀ ಸರ್ಕಾರ

ನಮ್ಮ ಮಾತೃಭೂಮಿಯು ಸ್ವಾತಂತ್ರ್ಯ ಹೆಬ್ಬಾಗಿಲಿನಲ್ಲಿರುವ ಈ ಸಮಯದಲ್ಲಿ ಶೀಘ್ರವಾದ ಬದಲಾವಣೆಗಳಾಗುತ್ತಿವೆ; ಧರಿಂದ ಕಾಲಕ್ಕೆ ತಕ್ಕಂತೆ ನಮ್ಮ ಸಂಸ್ಥಾನವು ಮುಂದುವರಿಯಬೇಕು ಎಂದು ಹೇಳಿದ ಶನಿವಾರ ಬಿಕನೀರ್ ಸಂಸ್ಥಾನದ ಮಹಾರಾಜರು ತಮ್ಮ ಪ್ರಜೆಗಳಿಗೆ ಜವಾಬ್ದಾರೀ ಸರ್ಕಾರವನ್ನು ಕೊಡಲು ಒಂದು ಘೋಷಣೆಯನ್ನು ಹೊರಡಿಸಿದರು. ತಾತ್ಕಾಲಿಕವಾಗಿ ಒಂದು ಹೊಸ ಮಂತ್ರಿಮಂಡಲವನ್ನು ಅವರು ಸ್ಥಾಪಿಸ ಲಿರುವರು. ಇದರಲ್ಲಿ ಜನಾನುರಾಗವನ್ನು ಪಡೆದ ಮಂತ್ರಿಗಳೇ ಸ್ವಲ್ಪ ಅರ್ಧ ಭಾಗದಷ್ಟು ಇರುವರು. ಮೂರು ವರ್ಷಕಾಲ, ಅಥವ ಭಾರತ ಯೂನಿಯನ್ ಸ್ಥಾಪನೆಯಾಗುವ ವರೆವಿಗೆ ಇದು ಆಡಳಿತ ನಡೆಸುವುದು. ಅನಂತರ ಪ್ರಜೆಗಳ ಪ್ರತಿನಿಧಿಗಳ ವಿಶ್ವಾಸಕ್ಕೆ ಪಾತ್ರರಾದವರನ್ನೇ ಪೂರ್ತಿಯಾಗಿ ಮಂತ್ರಿಮಂಡಲಕ್ಕೆ ನೇಮಿಸಲಾಗುವುದು. ವಿಶಾಲವಾದ ಚುನಾವಣಾ ಕ್ಷೇತ್ರಗಳಿಂದ ಪ್ರತಿನಿಧಿಗಳನ್ನು ಆರಿಸಲಾಗುವುದು. ಈ ಯೋಜನೆಯ ಪ್ರಕಾರ ಮೂರು ವರ್ಷದಲ್ಲಿ ಪ್ರಜೆಗಳಿಗೆ ಜವಾಬ್ದಾರೀ ಸರ್ಕಾರವು ದೊರೆಯುವುದು.

ರಾಷ್ಟ್ರೀಯ ಸರ್ಕಾರ ದಿನಾಚರಣೆ

ನಿನ್ನೆಯ ದಿನ ಶ್ರೀರಂಗಪಟ್ಟಣದ ಕಾಂಗ್ರೆಸ್ ಕಛೇರಿಯಲ್ಲಿ ಲಾಯರ್ ಶ್ರೀ ಕೆಂಪೇಗೌಡರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಸರ್ಕಾರ ದಿನ ಆಚರಣೆಯನ್ನು ನೆರವೇರಿಸಲಾಯಿತು. ಶ್ರೀ ಹನುಮಂತಯ್ಯನವರು ಭಾಷಣ ಮಾಡಿದ ನಂತರ ವಂದೇ ಮಾತರಂ ಗೀತೆಯೊಡನೆ ಸಭೆ ಮುಕ್ತಾಯವಾಯಿತು. ಬಂದಿದ್ದವರೆಗೆಲ್ಲಾ ಸಿಹಿ ತಿಂಡಿಯನ್ನು ಹಂಚಲಾಯಿತು.

ರೇಡಿಯೋವಿನಲ್ಲಿ "ಮಹಾತ್ಮ" ಎಂಬ ಪದ

ಇದುವರೆವಿಗೆ ಅಖಿಲ ಭಾರತ ರೇಡಿಯೋವಿನಲ್ಲಿ ಮಿಸ್ಟರ್ ಗಾಂಧಿ ಎಂಬುದಾಗಿ ಹೇಳಲ್ಪಡುತ್ತಿತ್ತು. ನಿನ್ನೆ ಬೆಳಿಗ್ಗೆ ಸಹ ಹಾಗೆಯೇ ಹೇಳಲಾಯಿತು. ರಾಷ್ಟ್ರೀಯ ಸರ್ಕಾರದ ಸ್ಥಾಪನೆಯಾದ ಮೇಲೆ ನಿನ್ನೆ ಮಧ್ಯಾಹ್ನದಿಂದಲೇ ಮಹಾತ್ಮ ಗಾಂಧೀ ಎಂಬುದಾಗಿ ಹೇಳಲಾಗುತ್ತಿದೆ.

ನೆಹರೂರವರು ಮಂತ್ರಿ ಮಂಡಲದ ಉಪಾಧ್ಯಕ್ಷರು

ವೈಸರಾಯರ ಮಂತ್ರಿಮಂಡಲಕ್ಕೆ ಪಂ|| ನೆಹರೂರವರು ಉಪಾಧ್ಯಕ್ಷರಾಗಿ ನೇಮಿಸಲ್ಪಟ್ಟಿದ್ದಾರೆ. ಪ್ರಜೆಗಳಿಗಾಗಿ, ಪ್ರಜೆಗಳಿಂದ ನಡೆಯುವ ಸರ್ಕಾರಕ್ಕೆ ಪ್ರಜೆಗಳೆಲ್ಲರೂ ಬೆಂಬಲ ಕೊಡಬೇಕೆಂದು ನೆಹರೂರವರು ಹೇಳಿದ್ದಾರೆ.

ಚರ್ಚಾ ಸ್ಪರ್ಧೆ

ಬೆಂಗಳೂರಿನಲ್ಲಿರುವ ಎಲ್ಲಾ ಹಾಸ್ಟಲ್ಲುಗಳ ವಿದ್ಯಾರ್ಥಿಗಳಲ್ಲಿ ಮೈತ್ರೀಭಾವನೆಯನ್ನು ಬೆಳೆಸುವ ಸಲುವಾಗಿ ಶ್ರೀ ವಿಠ್ಠಲರಾವ್ (ಪ್ಪಣ್ಣ ಹಾಸ್ಟಲಿನ ವಿದ್ಯಾರ್ಥಿಗಳು ಒಂದು ಚರ್ಚಾಸ್ಪರ್ಧೆಯನ್ನು ಕನ್ನಡದಲ್ಲಿ ಏರ್ಪಡಿಸಿರುವರು. ಎಲ್ಲಾ ಹಾಸ್ಟಲಿನ ವಿದ್ಯಾರ್ಥಿಗಳೂ ೨ ರೂ. ಪ್ರವೇಶ ಧನವನ್ನು ಕೊಟ್ಟು ಸಹಕರಿಸಬೇಕೆಂದು ಪೋರ್ಟ್ ಹಾಸ್ಟಲಿನ ಕಾರ್ಯದರ್ಶಿಯವರು ತಿಳಿಸುತ್ತಾರೆ.

ಪಬ್ಲಿಕ್ ಲೈಬ್ರರಿ ಸಮಿತಿ

ಮೈಸೂರು ೩

ಪಬ್ಲಿಕ್ ಲೈಬ್ರರಿ ಸಮಿತಿಗೆ ೪೬-೪೭ನೇ ಸಾಲಿಗೆ ಈ ಕೆಳಗೆ ಕಂಡ ಮಹನೀಯರು ಚುನಾಯಿತರಾಗಿರುವರು:-ಶ್ರೀಗಳಾದ ಎನ್ ನರಸಿಂಹಮೂರ್ತಿ, ಜೆ. ಆರ್. ಮೋಸ್ಸರ್, ಜೆ. ಎಸ್. ಕೃಷ್ಣಯ್ಯಂಗಾರ್, ಎಂ. ವೆಂಕಟೇಶ್, ಎಚ್. ಸಿ. ದೇವರಾಜೇ ಅರಸ್, ಡಿ. ವಿ. ನರಸಿಂಹರಾವ್, ಕೆ. ಎಸ್. ವೆಂಕಟಸುಬ್ಬಶಾಸ್ತ್ರಿ, ಟಿ ರಾಮರಾವ್, ಎಸ್. ರಾಮಸ್ವಾಮಿ ಮತ್ತು ಎಸ್. ಕೃಷ್ಣಯ್ಯಂಗಾರ್.

ಗಾಂಧಿ ಸೇವಾ ಸಂಘ

ನಿನ್ನೆ ಗಾಂಧೀ ಸೇವಾ ಸಂಘದ ಸದಸ್ಯರು ಸಭೆಸೇರಿ ಪಂಡಿತ ಜವಹರಲಾಲ್ ನೆಹರೂರವರು ಕೇಂದ್ರದಲ್ಲಿ ತಾತ್ಕಾಲಿಕ ಸರ್ಕಾರವನ್ನು ಸ್ಥಾಪಿಸಿರುವುದಕ್ಕಾಗಿ ಅಭಿನಂದಿಸುವ ನಿರ್ಣಯವನ್ನು ಮಾಡಿದರು. ಯೂನಿವರ್ಸಿಟಿ ರಂಗಯ್ಯನವರ ಹಾಸ್ಟಲಿನ ವಿದ್ಯಾರ್ಥಿಗಳೂ ಪಂಡಿತ ಜವಹರಲಾಲ್ ನೆಹರೂರವರಿಗೆ ಅಭಿನಂದಿಸುವ ರೀತಿಯನ್ನು ಮಾಡಿ ಎಲ್ಲರಿಗೂ ಸಕ್ಕರೆಯನ್ನು ಹಂಚಿದರು.

ಪಂ|| ನೆಹರೂರವರಿಗೆ ಅವರು ಕೈಕೊಂಡಿರುವ ಉದ್ಯಮದಲ್ಲಿ ಜಯಶಕ್ತಿ[illegible] ನಿರ್ಣಯವನ್ನು ಮಾಡಿ [illegible] ಮಿಡಿಲ್ ಕಾಲೇಜಿನ ವಿದ್ಯಾರ್ಥಿ [illegible] ನಂತರ ಸಾರ್ವಜನಿಕ [illegible]

ಬೊಂಬಾಯಿಯಲ್ಲಿ ಅರವತ್ತು ಮರಣ

ಮೊನ್ನೆ ಬಾಪ್ಪಟವನ್ನು ಸಾರಿದ ಸಂದರ್ಭದಲ್ಲಾಗಿ ಆರಂಭವಾದ ಕೋಮುವಾರು ಗಲಭೆಯಲ್ಲಿ ಇದುವರೆವಿಗೆ ಅರವತ್ತು ಜನರು ಮಡಿದು ೨೮೦ ಜನರಿಗೆ ಗಾಯವಾಗಿದೆ. ಚೂರಿ, ಚಾಕು, ಸೋಡಾ ಸೀಸೆ, ಲಾಠಿ, ಕಲ್ಲು ಮುಂತಾದುವು ಧಾರಾಳವಾಗಿ ಉಪಯೋಗಿಸಲ್ಪಟ್ಟಿವೆ. ಸೈನಿಕರನ್ನು ಕರೆಸಿ ಪರಿಸ್ಥಿತಿಯನ್ನು ಹತೋಟಿಗೆ ತರಲಾಗಿದೆ. ಸರ್ಕಾರದವರು ವಿಶೇಷ ಪರಿಸ್ಥಿತಿಯ ಕಾನೂನನ್ನು ಜಾರಿ ಮಾಡಿ ತುಂಟರನ್ನು ಗಡೀಪಾರು ಮಾಡಲು ಪೋಲೀಸ್ ಅಧಿಕಾರಿಗಳಿಗೆ ಅಧಿಕಾರ ಕೊಟ್ಟಿದ್ದಾರೆ. ನೂರಾರು ಜನ ಬಂಧಿತರಾಗಿದ್ದಾರೆ.

ಧ್ವಜ ಪ್ರದರ್ಶನ

ಸ್ವಂ. ವ.] ಪ ನಂಜನಗೂಡು ೩

ಕಳೆದ ನಾಲ್ಕಾರು ದಿನಗಳಿಂದ ಪೋಲೀಸಿನವರ ಬಂದೋಬಸ್ತಿನಿಂದ ಜೋಡಿಗಿಟ್ಟಿ ಬೀದಿಯಲ್ಲಿದ್ದ ತ್ರಿವರ್ಣ ಧ್ವಜದ ಕಂಬದ ಸುತ್ತಲೂ ಅಲ್ಲಲ್ಲಿ ಒಂದೊಂದು ಕಪ್ಪು ಬಾವುಟ ಇವೆ. ಯಾವ ಘರ್ಷಣೆ ಅದ ಕಾಂಗ್ರೆಸ್ಸಿಗರು ಪೋಲೀಸಿನವರ ಉಪಯೋಗಿಸಿದ್ದಾರೆ. ಈ ವಿಷಯ [illegible] ಸರ್ಕಾರದ [illegible]

ಹೊಸ ಸರ್ಕಾರದ ಅಧಿಕಾರ ಸ್ವೀಕಾರ

ನಿನ್ನೆ ಬೆಳಿಗ್ಗೆ ಹನ್ನೊಂದು ಘಂಟೆಯಲ್ಲಿ ಪಂಡಿತ ನೆಹರೂ, ಸರ್ದಾರ್ ಪಟೇಲ್, ಡಾ|| ರಾಜೇಂದ್ರಪ್ರಸಾದ್, ಮಿ|| ಆಸಫ್ ಅಲಿ, ಮಿ|| ಅಲಿಜಾಹೀರ್, ಶರತ್ ಚಂದ್ರಬೋಸ್ ಮತ್ತು ಜಗಜೀವನರಾಂರವರುಗಳು ಪ್ರಮಾಣ ವಚನವನ್ನು ಸ್ವೀಕರಿಸಿ ಮಂತ್ರಿಪದವಿಯನ್ನು ವಹಿಸಿಕೊಂಡರು. ಹತ್ತು ಘಂಟೆಯಲ್ಲಿ ಈ ಕಾರ್ಯಕ್ರಮ ಮುಗಿಯಿತು. ಉಳಿದ ಮಂತ್ರಿಗಳು ಬಂದಿರಲಿಲ್ಲ. ಅವರುಗಳ ಇಲಾಖೆಗಳನ್ನೂ ನೆಹರೂರವರೇ ವಹಿಸಿಕೊಂಡರು. ಅಧಿಕಾರವನ್ನು ವಹಿಸುವ ಮೊದಲು ನೂತನ ಮಂತ್ರಿಗಳು ಮಹಾತ್ಮರ ಬಳಿ ಹೋಗಿ ಅವರ ಆಶೀರ್ವಾದವನ್ನು ಪಡೆದು ಬಂದರು. ನಿನ್ನೆ ಮೌನವನ್ನು ಆಚರಿಸುತ್ತಿದ್ದುದರಿಂದ ಅವರು ಒಪ್ಪಿಗೆಯನ್ನಾಗಿ ಮೌನದಿಂದಲೇ ಹರಸಿದರು. ಎಲ್ಲರೂ ಸೇರಿ ಭಜನೆಯನ್ನು ನಡೆಸಿದರು. ಹಿಂದೂಸ್ತಾನ್ ಸ್ಕೌಟ್ ದಳದವರು ಪಂಡಿತ ನೆಹರೂರವರಿಗೆ ಗಾರ್ಡ್ ಆಫ್ ಆನರ್ ಮರ್ಯಾದೆ ಸಲ್ಲಿಸಿದರು. ಮುಸ್ಲಿಂ ಲೀಗಿನ ಸಾಲವರು ಕಪ್ಪು ಧ್ವಜವನ್ನೂ ಇತರರು ರಾಷ್ಟ್ರಧ್ವಜವನ್ನೂ ಎತ್ತಿ ಹಿಡಿದಿದ್ದರು.

ಸುಳ್ಳು ವದಂತಿಗಳು

ಸ್ವಂ. ವ. ಪೋ|] ಬೆಂಗಳೂರು ೩

ವಿಜ್ಞಾನ ಮಂದಿರದ ನವಾಬ ಮತ್ತು ಜೋಸಫ್ ಎಂಬುವರಿಗೂ ಖೂನಿಯಾಯಿತು ಎಂಬ ನಿಜವಲ್ಲದ ಸುದ್ದಿ ಹಬ್ಬಿದೆ. ಆದರೆ ಅದು ಸುಳ್ಳು. ಕೇವಲ ಹಬ್ಬಿಸಲ್ಪಟ್ಟಿದೆ. ನವಾಬ್ ಸೇಟ್ ಸಿನಿಮಾ ಬಳಿ ಜನರು ಗುಂಪು ಸೇರಿದ್ದರಿಂದ ಜನರು ಹೆದರಿ ಓಡಿಹೋದರು. ಅಂಗಡಿಗಳು ಮುಚ್ಚಲ್ಪಟ್ಟವು. ಪೋಲೀಸಿನವರು ಈ ಬಗ್ಗೆ ಒಂದು ಪ್ರಕಟಣೆ ಹೊರಡಿಸಿ ಶಾಂತಿ ಪಾಲನೆಗಾಗಿ ಸಮಸ್ತ ಏರ್ಪಾಡುಗಳನ್ನೂ ಮಾಡುವುದಾಗಿ ತಿಳಿಸಿದ್ದಾರೆ. ಮತ್ತು ಮೇಲೆ ಹೇಳಿದ ಇರಿತದ ಪ್ರಸಂಗಗಳು ಬಾಹಿರ ಕಲಹಗಳಿಂದ ಉದ್ಭವಿಸಿದುವೆಂದೂ ಕೋಮುವಾರು ಕಾರಣದಿಂದ ಅಲ್ಲವೆಂದೂ ತಿಳಿಸಿರುತ್ತಾರೆ. ಜನರು ವೃಥಾ ಗಾಬರಿಗೊಳ್ಳಬಾರದೆಂದೂ ಸಹ ಕೋರಿರುತ್ತಾರೆ.

§ ಶ್ರೀ ಕೆ ಮ್ಯಾಥ್ಯೂರವರ ಸ್ಥಾನದಲ್ಲಿ ಶ್ರೀ ಟಿ ಸಿಂಗಾರವೇಲು ಮೊದಲಿಯಾರವರನ್ನು ಅಧಿಕ ಸಮ್ಮೇಳನದ ವಿದ್ಯಾ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ಮುಷ್ಕರ ಮುಕ್ತಾಯ

ಪಂಡಿತ ನೆಹರೂರವರ ಸಲಹೆಯ ಮೇರೆಗೆ ಪೋಸ್ಟ್ ಮತ್ತು ಟೆಲಿಗ್ರಾಫ್ ಇಲಾಖೆಯ ನೌಕರರುಗಳು ಹೂಡಬೇಕೆಂದಿದ್ದ ಮುಷ್ಕರವನ್ನು ರದ್ದು ಮಾಡಿರುತ್ತಾರೆ.

ಸೌತ್ ಇಂಡಿಯನ್ ರೈಲ್ವೆ ಮುಷ್ಕರವು ೨ನೇ ದಿನಕ್ಕೆ ಕಾಲಿಟ್ಟಿದೆ. ಒಳಪ್ರದೇಶದಲ್ಲಿ ಅನೇಕರು ಕೆಲಸಕ್ಕೆ ಹಿಂತಿರುಗುತ್ತಿದ್ದಾರೆ. ಪ್ರಯಾಣಿಕರ ರೈಲುಗಳನ್ನು ಹೆಚ್ಚು ಹೆಚ್ಚಾಗಿ ಬಿಡಲಾಗುತ್ತಿದೆ. ಮುಷ್ಕರದವರಿಗೆ [illegible] ಕೊಡಲಾಗ [illegible] ಇದರಲ್ಲಿ ಪ್ರವೇಶಿಸಿ [illegible]

ಸಾಧ್ವಿ

ತಾ|| ೩-೯-೪೬ ಮಂಗಳವಾರ

ನೆಹರೂ ಸರ್ಕಾರ

ಭಾರತದ ರಾಜಕೀಯ ಜೀವನದಲ್ಲಿ ಹೊಸ ಅಧ್ಯಾಯವು ಆರಂಭವಾಗಿದೆ. ಪ್ರಜಾ ವಿಶ್ವಾಸಕ್ಕೆ ಪಾತ್ರರಾದವರೇ ಮಂತ್ರಿಮಂಡಲವನ್ನು ರಚಿಸಿದ್ದಾರೆ. ಈ ಮಂತ್ರಿಮಂಡಲದ ರಚನೆಯ ಕಾರ್ಯವನ್ನು ಪ್ರಮುಖ ರಾಜಕೀಯ ಪಕ್ಷವಾದ ಕಾಂಗ್ರೆಸ್ ಸಂಸ್ಥೆಗೆ ಒಪ್ಪಿಸಲಾಗಿದೆ. ಈ ಕ್ರಮವು ಪ್ರಜಾ ಪ್ರಭುತ್ವ ತತ್ವಗಳಿಗೆ ಅನುಗುಣವಾಗಿಯೇ ಇದೆ. ಬ್ರಿಟಿಷ್ ಸರ್ಕಾರದವರು ತಮ್ಮ ವಾಗ್ದಾನದಂತೆ ಕೇಂದ್ರ ಸರ್ಕಾರ ರಚನೆಗೆ ಈ ರೀತಿ ಏರ್ಪಾಟು ಮಾಡಿರುವುದು ಸಂತೋಷದ ಸಂಗತಿ. ಭಾರತ ಸ್ವಾತಂತ್ರ್ಯ ಸಾಧನೆಯ ಪ್ರಯತ್ನದಲ್ಲಿ ಇದು ಒಂದು ಸ್ಪಷ್ಟವಾದ ಹಂತ. ಸ್ವಾತಂತ್ರ್ಯದ ಅರುಣೋದಯವು ಈಗ ಆಗಿದೆಯೆಂದು ಧಾರಾಳವಾಗಿ ಹೇಳಬಹುದು. ಸಂಪೂರ್ಣ ಸ್ವರಾಜ್ಯದ ಜ್ಯೋತಿಯ ಪ್ರಕಾಶಕ್ಕೆ ಇದು ತಳಹದಿಯಾಗುವುದೆಂದು ಸಕಲರೂ ನಿರೀಕ್ಷಿಸಿದ್ದಾರೆ.

ರಾಜಕೀಯ ಪದ್ಧತಿಗೆ ಅನುಗುಣವಾಗಿ ಕಾಂಗ್ರೆಸ್ ಪಕ್ಷದ ನಾಯಕರಾದ ಪಂಡಿತ ನೆಹರೂರವರನ್ನೇ ವೈಸರಾಯರು ಭಾರತದ ಪ್ರಧಾನ ಮಂತ್ರಿಯನ್ನಾಗಿಯೂ ಚುನಾಯಿಸಿರುವುದು ಉಚಿತವಾಗಿಯೇ ಇದೆ. ಇನ್ನು ಮೇಲೆ ಹಿಂದೂಸ್ಥಾನದಲ್ಲಿ ಪರಕೀಯರ ಪ್ರಭುತ್ವವು ಆಡಳಿತ ನಡೆಸುವುದಿಲ್ಲ. ಭಾರತೀಯರೇ, ಭಾರತೀಯರ ಹಿತಕ್ಕಾಗಿ ಆಡಳಿತ ನಡೆಸುವರು. ಭಾರತ ಮಕುಟಮಣಿ ಜವಾಹರರ ನೇತೃತ್ವದಲ್ಲಿ ನಿಸ್ಸೀಮ ದೇಶಭಕ್ತರು ರಾಜ್ಯ ಸೂತ್ರಗಳನ್ನು ನಿರ್ವಹಿಸುವರು. ಪರಕೀಯ ಸರ್ಕಾರವು ಹೋಗಿ ನೆಹರೂ ಸರ್ಕಾರವು ಬಂದಿರುವುದು.

ಪ್ರಪಂಚದ ಸಕಲ ರಾಷ್ಟ್ರಗಳಿಂದಲೂ ನೆಹರೂರವರಿಗೆ ಅಭಿನಂದನೆಯ ಸಂದೇಶಗಳು ಸುರಿಮಳೆಗರೆಯುತ್ತಿವೆ. ಅವರ ಪ್ರಯತ್ನವು ದಿಗ್ವಿಜಯ ಹೊಂದಲೆಂದು ಸಕಲರೂ ಹಾರೈಸುತ್ತಿದ್ದಾರೆ. ಅತ್ಯಲ್ಪ ಕಾಲದಲ್ಲಿಯೇ ತಾತ್ಕಾಲಿಕ ಸರ್ಕಾರದ ಕೆಲಸ ಕಾರ್ಯಗಳು ಸಾಂಗವಾಗಿ ನಡೆದು ಶಾಶ್ವತವಾದ ಭಾರತ ಸ್ವತಂತ್ರ ಸರ್ಕಾರವು ಅಧಿಕಾರ ನಡೆಸುವ ಕಾಲವು ಬೇಗನೆ ಬರಲೆಂದು ಪ್ರಾರ್ಥಿಸುತ್ತಿದ್ದಾರೆ. ಜನಪ್ರಿಯರಾದ ಜವಾಹರರು ಭಾರತದ ಪ್ರಥಮ ಪ್ರಜಾ ಪ್ರಭುತ್ವ ಸರ್ಕಾರದ ಮೊದಲನೇ ಜನಾಧಿಪತಿಯಾಗಿ ವಿರಾಜಿಸುವ ಸುದಿನವನ್ನು ಬೇಗನೆ ಕಾಣಬೇಕೆಂಬುದೇ ಭಾರತೀಯರೆಲ್ಲರ ಆಕಾಂಕ್ಷೆ.

ತಾತ್ಕಾಲಿಕ ಸರ್ಕಾರದ ರಚನೆಯು ಇನ್ನೊಂದು ವೈಭವದಿಂದ ನಡೆದಿರುವುದೇನೋ ಸರಿ. ಆದರೆ ಇದೇ ಸ್ವರಾಜ್ಯದ ಸ್ಥಾಪನೆಯಲ್ಲ. ಪೂರ್ಣ ಸ್ವಾತಂತ್ರ್ಯವನ್ನು ಗಳಿಸಲು ಇನ್ನೂ ಸ್ವಲ್ಪ ಹಂತಗಳನ್ನು ಹತ್ತಬೇಕಾಗಿದೆ. ವೈಸರಾಯರ ಪರಮಾಧಿಕಾರವು ಸುಷುಪ್ತಾವಸ್ಥೆಯಲ್ಲಿದ್ದಾಗಲೂ ಇನ್ನೂ ಇದ್ದೇ ಇರುತ್ತವೆ. ಬ್ರಿಟಿಷ್ ಸೈನ್ಯಗಳು ಇನ್ನೂ ಈ ದೇಶದಲ್ಲಿಯೇ ಇರುತ್ತವೆ. ಬ್ರಿಟಿಷರಿಗೂ ಹಿಂದೂಸ್ಥಾನಕ್ಕೂ ರಾಜಿ ಕರಾರುಗಳು ಇನ್ನೂ ಆಗಿರುವುದಿಲ್ಲ. ಇವನ್ನು ನಿಷ್ಕರ್ಷೆಪಡಿಸುವ ಸಲುವಾಗಿಯೇ ರಾಜ್ಯಾಂಗ ಸಭೆಯು ಏರ್ಪಾಡಾಗಿದೆ. ಇದರ ಪ್ರಯತ್ನದಿಂದ ಸಧ್ಯದಲ್ಲಿಯೇ ಉಭಯ ರಾಷ್ಟ್ರಗಳಿಗೂ ಸ್ನೇಹ ಪೂರಿತವಾದ ಒಪ್ಪಂದವು ಆಗಿ ಭಾರತವು ಸಂಪೂರ್ಣ ಸ್ವಾತಂತ್ರ್ಯವನ್ನು ಹೊಂದುವುದೆಂದು ಆಶಿಸಲಾಗಿದೆ.

ಈಗ ರಚನೆಯಾಗಿರುವ ಸರ್ಕಾರವು ರಾಷ್ಟ್ರೀಯ ಸರ್ಕಾರವೆಂದು ಧಾರಾಳವಾಗಿ ಹೇಳಬಹುದು. ಎಲ್ಲ ಪಂಗಡಗಳ ಪ್ರತಿನಿಧಿಗಳೂ ಅದರಲ್ಲಿರುವರು. ಮುಸ್ಲಿಂ ಲೀಗಿನವರು ಮಾತ್ರ ಇಲ್ಲ. ಇದೊಂದು ಕೊರತೆಯೇ ಸರಿ. ಆದರೆ ಲೀಗಿನವರ ಹಟ ಮಾತ್ರವೇ ಇದಕ್ಕೆ ಕಾರಣ. ಇಷ್ಟೇ ಅಲ್ಲದೆ ಅವರು ಹೊಸ ಸರ್ಕಾರದ ಬಗ್ಗೆ ವಿರೋಧ ನೀತಿಯನ್ನೇ ಅನುಸರಿಸಿರುವರು. ಇದರ ಅನರ್ಥಗಳು ಈಗಾಗಲೇ ಎಲ್ಲರಿಗೂ ಸಂತಾಪವನ್ನುಂಟುಮಾಡಿವೆ. ಇದರ ಜ್ವಾಲೆಯು ಈಗ ಬೊಂಬಾಯಿಯಲ್ಲಿ ಆಡುತ್ತಿದೆ. ಮುಂದೆ ಇದು ಹೇಗೆ ಪರಿಣಮಿಸುವುದೋ ತಿಳಿಯದು. ಲೀಗಿನ ಕಾರ್ಯಕ್ರಮಗಳು ಬಲವತ್ತರವಾಗಿದ್ದರೆ ಸರ್ಕಾರವು ಕೆಳಕ್ಕೆ ಬೀಳುವುದು, ಸರ್ಕಾರವು ಬಲಿಷ್ಟವಾಗಿದ್ದರೆ ಲೀಗು ಪತನವಾಗುವುದು-ಎಂದು ಜವಾಹರರು ಹಿಂದೆಯೇ ಹೇಳಿರುವರು. ಆದುದರಿಂದ ಘರ್ಷಣೆಯುಂಟಾದರೆ ಇನ್ನೂ ಹೆಚ್ಚಿನ ಅನರ್ಥಗಳು ಸಂಭವಿಸಬಹುದು. ಇದಕ್ಕೆ ಆಸ್ಪದವಿಲ್ಲದಂತೆ ಮಾಡುವುದು ಲೀಗಿನವರ ಕೈಯಲ್ಲಿದೆ. ಇತರ ಪಂಗಡಗಳವರಂತೆ ತಾತ್ಕಾಲಿಕ ಸರ್ಕಾರದಲ್ಲಿ ಅವರೂ ಭಾಗಿಗಳಾಗುವುದೇ ಇದಕ್ಕೆ ಪರಿಹಾರ ಮಾರ್ಗ. ಅವರು ತಾಟಸ್ಥ್ಯವನ್ನಾದರೂ ವಹಿಸುವುದು ಮೇಲು. ಒಟ್ಟಿನಲ್ಲಿ ಇಂದಿನ ರಾಷ್ಟ್ರೀಯ ಸರ್ಕಾರದ ಸ್ಥಾಪನೆಯು ಬೇಗನೆ ಸಂಪೂರ್ಣ ಸ್ವರಾಜ್ಯ ಸಾಧನೆಯಲ್ಲಿ ಪರಿಣಮಿಸುವುದೆಂದು ಧಾರಾಳವಾಗಿ ನಂಬಬಹುದು.

ಕ್ರಿಪ್ಸರು ಭಾರತದ ಮುಂದಿನ ಮಂತ್ರಿಗಳು

ಈಗ ಭಾರತದ ಕಾರ್ಯದರ್ಶಿಯಾಗಿರುವ ಸರ್ ಪೆಥಿಕ್ ಲಾರೆನ್ಸರು ನಿವೃತ್ತರಾಗಲು ಬಯಸಿರುವುದರಿಂದ ಈ ತಿಂಗಳಲ್ಲಿ ಬ್ರಿಟಿಷ್ ಮಂತ್ರಿಮಂಡಲದ ಪುನರ್ರಚನೆಯಾಗುವಾಗ ಸರ್ ಸ್ಟಾಫರ್ಡ್ ಕ್ರಿಪ್ಸರವರು ಭಾರತದ ಕಾರ್ಯದರ್ಶಿಯಾಗುವರೆಂದು ವರದಿಯಾಗಿದೆ.

ನೂತನ ಮಂತ್ರಿಗಳಿಗೆ ಮುಳ್ಳಿನ ಕಿರೀಟ

ನೆಹರೂ, ಪಟೇಲ್, ರಾಜೇಂದ್ರ ಪ್ರಸಾದ್ ಮುಂತಾದವರು ಈ ದಿನ ಕಿರೀಟಗಳನ್ನು ಧರಿಸಿರುವರು. ಆದರೆ ಅವು ಚಿನ್ನದ ಕಿರೀಟಗಳಲ್ಲ; ಮುಳ್ಳಿನ ಕಿರೀಟಗಳು. ತಮ್ಮ ಸುಖಲೋಲುಪ್ತಿಗಾಗಿ ಅವರು ಮಂತ್ರಿಗಳಾಗುವುದಿಲ್ಲ; ಬಡವರ ಸೇವೆಗಾಗಿ ಹೊರಟಿರುವರು- ಎಂಬುದಾಗಿ ಮಹಾತ್ಮ ಗಾಂಧಿಯವರು ಹೇಳಿರುವರು.

ಕೊಲೆ ಮೊಕದ್ದಮೆಯಲ್ಲಿ ಖುಲಾಸೆ

ಯಳಂದೂರು ತಾಲ್ಲೋಕು ಹೊನ್ನೂರಿನ ಮುತ್ತಯ್ಯ ಎಂಬಾತನು ೨-೪-೪೬ ರಲ್ಲಿ ತನ್ನ ತಾಯಿಯನ್ನು ಮಚ್ಚಿನಿಂದ ಹೊಡೆದು ಕೊಂದನೆಂದು ಅಲ್ಲಿನ ಪೋಲೀಸರು ನಂಜನಗೂಡು ಸ್ಪೆಷಲ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮೊಕದ್ದಮೆಯನ್ನು ಹೂಡಿದ್ದರು. ಸೆಷನ್ಸ್ ನ್ಯಾಯಾಧೀಶರು ಮೊಕದ್ದಮೆಯನ್ನು ವಿಚಾರಿಸಿ ಅಪರಾಧಿಗೆ ಬುದ್ಧಿಭ್ರಮಣೆಯಿಂದ ಈ ಕೃತ್ಯವು ನಡೆಯಿತೆಂದು ಅವನನ್ನು ಖುಲಾಸೆ ಮಾಡಿರುವರು. ಅವನಿಗೆ ಗುಣವಾಗುವ ವರೆಗೆ ಅವನನ್ನು ಆಸ್ಪತ್ರೆಯಲ್ಲಿಟ್ಟಿರಬೇಕೆಂದು ಸೂಚಿಸಿರುವರು.

Edited, printed and published by A. R. Nagarajan at the Sadhvi Press Ukkadhiah Road, Mysore

ಭಾವಚಿತ್ರ ಅನಾವರಣ

ಮೈಸೂ

ಮೊನ್ನೆ ಸಾಯಂಕಾಲ ಒಂಟಿಕೊ ತಿಲಕ ಸಂಘದವರು ರವೀಂದ್ರ ನಾಥ ಗೂರರ ಭಾವಚಿತ್ರದ ಅನಾವರಣ ಮ ತ್ಸವವನ್ನು ನೆರವೇರಿಸಿದರು. ಶ್ರೀ|| ಯಾಮುನಾಚಾರ್ಯರು ಅಧ್ಯಕ್ಷತೆ ವ ದ್ದರು ಶ್ರೀ|| ಕೆ ರಾಮಸ್ವಾಮಿಯವ ಸಂಘದ ಬಾಲಕ ಪ್ರೇಮ್ ಎಂಬುವ ಅಧ್ಯಕ್ಷರೂ ಕವಿ ವರ್ಯರ ಜೀವನ ಚ ಯ ವಿಷಯವಾಗಿ ಮಾತನಾಡಿದರು.

ಸಂಗೀತ ಭೂಷಣ ಎಂ. ಎ. ನರಸಿ ಚಾರ್ಯರ ಸಂಗೀತವಾಯಿತು. ಕೇ ಲ್ಲಿ ಪಂಡಿತ ನೆಹ್ರೂರವರು ರಚಿಸಿರು ರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸು ರಾವನ್ನು ಅನುಮೋದಿಸಲಾಯಿತು.

ಠಾಕೂರರ ದಿನಾಚರಣೆ

"ಇಟ್ಟಿಗೆಗೂಡು ಯುವಕ ಸಂಘ ಶ್ರಯದಲ್ಲಿ ಮೊನ್ನೆ ಸಾಯಂಕಾಲ ಗೋವಿಂದರಾಯರ ಅಧ್ಯಕ್ಷತೆಯಲ್ಲಿ ಕವಿ ಠಾಕೂರರವರ ದಿನಾಚರಣೆಯು ಸಲ್ಲಿಸಿತು. ಮಹಾರಾಜಾ ಕಾಲೇ ಅಧ್ಯಾಪಕರಾದ ಎಂ. ಅನಂತರಂಗಾ ವರು ಭಾಷಣ ಮಾಡಿದರು."

ರಾಜ್ ಕಮಲ್
ಮೈಸೂರು.
೩೦-8-46 ರಿಂದ
ಪ್ರತಿ ದಿನ ಮೂರು ಆಟಗಳು
"ದ್ರೌಪದಿ"
ಭೂಮಿಕೆ:— ಸುಶೀಲಾ ರಾಣಿ, ಚಂದ್ರ ಮೋಹನ್, ಮಜಹರ್

ಇಂಟರ್ ವಿದ್ಯಾರ್ಥಿಗಳಿಗ
ಸೀತಾ ಪರಿತ್ಯಾಗ
ಸಮಸ್ಯೆಗಳು
ಬೆಲೆ 0-8-0
ಪ್ರತಿಗಳಿಗೆ
ಸಾಹಿತ್ಯ ಮಂದಿರ
ಪದಕೀಸ್ ಜಯಾ ಸ್ಟೋ
ಇವುಗಳಲ್ಲಿ ವಿಚಾರಿಸಿ

R. S. PANDIT'S.
Whooping Cough em
ಆರ್. ಎಸ್. ಪಂಡಿತರ
ನಾಯಿಕೆಮ್ಮಿನ ಔಷಧಿ.
7-8 ದಿವಸಗಳಲ್ಲೇ ಖಾತರಿಯಾ ಯಾಗುತ್ತ
ಕ್ರಯ ಬಾಟ್ಲಿಗೆ 1-
ಗೂರಲು ಉಬ್ಬಸಕ್ಕೆ
(Asthma)
ಖಾತರಿಯಾದ ಔಷಧಿ ದೊರೆ ಅನೇಕ ದೊಡ್ಡ ಮನುಷ್ಯರು ಬಂ ಪದಕ ಮತ್ತು ಸರ್ಟಿಫಿಕೇಟುಗಳನ್ನು ಕೊ ದ್ದಾರೆ.
(Appendecitis) ಗುಲ್ಮ ಮತ್ತು (Tonsils) ಗಳಾದ ನ್ನು ಆಪರೇಷನ್ ಇಲ್ಲದೆ ಗುಣಪಡಿ ಬಹುದು. ನೋಡಿ.
ಗುಂಡ್ಲುಪೇಟೆ ಆರ್. ಎಸ್. ಪಂಡಿ ದಿವಾನ್ಸ್ ರೋಡ್, ಗೊಲ್ಲಗೇರಿ, ಮೈಸೂ

Sri Krishnarajendra Mills Ltd.

MYSORE.

WANTED

Applications are invited from graduates (1) in Chemistry and (2) in Mechanical Engineering, for training as Officer Apprentices in the Mills. Graduates in Chemistry should have obtained an Honours degree of the Mysore University or Industrial Chemistry of Benares University.

The applicants should not be more than 27 years of age and should possess the requisite physical fitness.

The apprenticeship will cover a period of two years. A stipend of Rs. 80/- per mensem plus dearness allowance as per Company's Rules will be paid during the period of appreticeship.

The selected candidate should execute a written agreement that he will serve the Company for a period of at least five years after training.

Applications should be addressed to the General Manager, Sri Krishnarajandra Mills, Ltd., Sri Krishnarajandra Mills P. O, Mysore and should reach him not later than the 15th September 1946.

N. B:—Canvassing in any form will be a serious disqualification.

M. R. Srinivasa Iyengar,
GENERAL MANAGER.

ಸಿಟಿ ಸ್ಕೌಟ್ ಕೌನ್ಸಿಲ್

ಮೈಸೂರು ೪

...ನ್ನೆ ಸಾಯಂಕಾಲ ಪುರ ಸಭಾಂಗಣದ ...ರೀ ರಾವ್.ಚಂದ್ರರಾವ್ ಬೊಂಥೋರೆ ...ರ ಅಧ್ಯಕ್ಷತೆಯಲ್ಲಿ ಮೈಸೂರು ನಗರ ...ಸ್ಕೌಟ್ ಕೌನ್ಸಿಲ್ ವಾರ್ಷಿಕಾಧಿವೇಶನ ...ಡೆಯಿತು. ವಾರ್ಷಿಕ ವರದಿಯನ್ನು ...ಕರಿಸಿದ ನಂತರ ೧೯೪೬-೪೭ ನೇ ...ಗೆ ಕಾರ್ಯನಿರ್ವಾಹಕ ಮಂಡಲಿಯನ್ನು ...ನ್ನು ಆರಿಸಲಾಯಿತು. ಶ್ರೀ ರಾವು ...ದ್ರರಾವ್ ಬೊಂಥೋರೆಯವರು ಅಧ್ಯ..., ರಾ|| ಸಾ|| ಶ|| ಎಸ್. ಗೋಪಾಲ..., ಧ|ಕೆ. ನಂದಿಬಸಪ್ಪ ಮೇಜರ್ ಸಿ. ...ರಾಜ ಅರಸ್ ಮತ್ತು ಡಾ|| ಸಿದ್ದಪ್ಪ ...ವುಗಳು ಉಪಾಧ್ಯಕ್ಷರು, ರಾ|ಬ|ಎಂ. ...ಸ್ವಾಮಿಯವರು ಕಾರ್ಯದರ್ಶಿಗಳು, ಬಿ. ವಿ ನಂಜುಂಡಯ್ಯನವರು ಕ್ವಾರ್ಟರ್ ಮಾಸ್ಟರ್. ಮೈಸೂರು ನಗರದಲ್ಲಿ ...ದಳದವರು ಒಂದು ಲಕ್ಷ ರೂ. ...ವೆಂಚ ಒಂದು ಕಟ್ಟಡವನ್ನು ಕಟ್ಟಿಸ ಏರ್ಪಾಡು ಮಾಡುತ್ತಾರೆ. ಈ ಕಟ್ಟ...ನ್ನು ಅ ರಾ ರಾ ಕಛೇರಿ ಹಿಂಭಾಗದ ...ನದಲ್ಲಿ ಕಟ್ಟಿಸಲು ಏರ್ಪಾಡಾಗಿದೆ.

...|| ನೆಹರೂರವರಿಗೆ ಜಿಲ್ಲಾ ಸಭೆಯ ಶುಭಾಶಯ

ಮೈಸೂರು ೪

ಮೈಸೂರು ಜಿಲ್ಲಾ ಬೋರ್ಡ್ ಅಧಿವೇ... ಈ ದಿನ ಮಧ್ಯಾಹ್ನ ೧೧ ಗಂಟೆಗೆ ...ಧ್ಯಕ್ಷರಾದ ಶ್ರೀ ಟಿ. ಸಿ. ಹೊನ್ನಪ್ಪ ...ರ ಅಧ್ಯಕ್ಷತೆಯಲ್ಲಿ ನಡೆಯಿತು. ಕೇಂದ್ರ ...ಸರ್ಕಾರವನ್ನು ರಚಿಸಿದ ಪಂ||ನೆಹರೂ ...ನ್ನೂ ಅವರ ಸಹೋದ್ಯೋಗಿಗಳನ್ನೂ ...ಂದಿಸುವ ನಿರ್ಣಯವನ್ನು ಕಾಂಗ್ರೆಸ್ ...ದವರು ಮಂಡಿಸಿದರು. ಸರ್ವಾನು...ದಿಂದ ಈ ನಿರ್ಣಯವು ಅಂಗೀಕಾರ...ಯಿತು.

...ಸ್ಥಾನದ ದಿವಾನರಾಗಿ ನಿವೃತ್ತರಾದ ...ಎ, ಮಾಧವರಾಯರ ಸೇವೆಯನ್ನು ...ಂಸಿಸಿಯೂ, ಹೊಸ ದಿವಾನರಾದ ...ಮೊದಲಿಯಾರರನ್ನು ಸ್ವಾಗತಿಸಿಯೂ ...ಯಗಳಾದುವು.

ಪ್ರಭುಗಳಿಗೆ ಕೃತಜ್ಞತೆ

ಮೈಸೂರು ಎಂ. ಎಲ್. ವರ್ಧಮಾನ ...ನವರ ದೇವಾಲಯದ ಅರ್ಚಕರಾದ ...ಬ್ರ|| ಎಸ್. ವಿ. ಪಾರ್ಶ್ವನಾಥ ಶಾಸ್ತ್ರಿ...ರಿಗೆ ಶ್ರೀಮನ್ಮಹಾರಾಜರು ಆಸ್ಥಾನ ...ಸ್ತ್ರಿ ಎಂಬ ಬಿರುದನ್ನು ದಯಪಾಲಿಸಿ...ದ್ದಾಗಿ ಕಳೆದ ರವಿವಾರ ಶ್ರೀ ಶಾಸ್ತ್ರಿಗಳ ... ಪ್ರಭುಗಳ ಸಂದರ್ಶನವನ್ನು ಮಾಡಿ ... ಸಮಾಜದವರ ಕೃತಜ್ಞತೆಯನ್ನು ... ಮಾಡಿದರು. ಪ್ರಭುಗಳು ತಮ್ಮ ...ತೋಷವನ್ನು ತಿಳಿಯಪಡಿಸಿದರು.

...ಂ|| ನಾಯಕರ ಚಿತ್ರ ಕಳುವು

...ಜನಗೂಡು ಕಾ||ಕಾಂಗ್ರೆಸ್ ಸಮಿತಿ...ರಿಗೆ ಮೊನ್ನೆ ಸಂಜೆ ಯಾರೋ ಮಂ...ನುಗ್ಗಿ ಪಂ||ನೆಹರು, ಶ್ರೀಮತಿ ಕಮ...ದೇವಿ, ಸರೋಜಿನಿ ನಾಯುಡು, ಚಿತ್ತ...ನ ಬೋಸ್ ಮುಂತಾದವರ ಪಟಗಳ ...ಕಳ್ಳತನ ಮಾಡಿರುವುದಾಗಿ ತಿಳಿದುಬಂ...

—

...ಗ್ರಾಮಾಂತರಗಳಲ್ಲಿ ಕುಡಿಯುವ ನೀರ...ಬಾವಿಗಳಿಗಾಗಿ ಸರ್ಕಾರದವರು ಬಜೆ...ಲ್ಲಿ ಐದು ಲಕ್ಷ ರೂ ಮಂಜೂರು ಮಾ...ದೆ.

ಫೋ|. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಬುಧವಾರ ೪—೯—೪೬ [ಸಂಚಿಕೆ ೩೫

ಬೊಂಬಾಯಿನ ಪರಿಸ್ಥಿತಿ ಉಗ್ರವಾಗಿಯೇ ಇದೆ

ಮಂತ್ರಿ ಮಂಡಲದ ಸಭಾಧ್ಯಕ್ಷತೆಗೆ ಪಂ|| ನೆಹರೂ

ಕೇಂದ್ರ ತಾತ್ಕಾಲಿಕ ಸರ್ಕಾರದ ಮಂತ್ರಿ ಮಂಡಲದ ಸಭೆಗಳ ಅಧ್ಯಕ್ಷತೆಯನ್ನು ಪಂ|| ನೆಹರೂರವರೇ ವಹಿಸುವರೆಂದು ಗೊತ್ತಾಗಿದೆ. ಸಂಸ್ಥಾನಗಳಿಗೆ ಸಂಬಂಧಪಟ್ಟ "ರಾಜಕೀಯ" ಶಾಖೆ, ಪ್ರಾಂತಗಳ ಗವರ್ನರು ಮತ್ತು ವೈಸರಾಯರ ವ್ಯವಹಾರಕ್ಕೆ ಸಂಬಂಧಪಟ್ಟ 'ಸುಧಾರಣಾ' ಶಾಖೆ ಮತ್ತು ಐ ಸಿ ಎಸ್. ಅಧಿಕಾರಿಗಳಿಗೆ ಸಂಬಂಧಪಟ್ಟ ವೈಸರಾಯರ ಕಛೇರಿ ಶಾಖೆಗಳ ಮೇಲ್ವಿಚಾರಣಾ ಪಕ್ಷ ಹೊಸ ಸರ್ಕಾರಕ್ಕೆ ದೊರಕಿಲ್ಲ. ಇಲಾಖಾ ಕಾರ್ಯದರ್ಶಿಗಳು ಇದುವರೆವಿಗೆ ನೇರವಾಗಿ ವೈಸರಾಯರನ್ನು ನೋಡಬಹುದಾಗಿದ್ದಿತು. ಇನ್ನು ಮುಂದೆ ಆ ಪದ್ಧತಿಯನ್ನು ರದ್ದುಮಾಡಿ ಕಾರ್ಯದರ್ಶಿಗಳು ಸಂಬಂಧಪಟ್ಟ ಮಂತ್ರಿಗಳ ಮೂಲಕವೇ ವ್ಯವಹರಿಸಬೇಕಾಗಿದೆ. ಕೇಂದ್ರ ಸರ್ಕಾರದಲ್ಲಿದ್ದ ಸಾಮ್ರಾಜ್ಯಶಾಹಿ ಸಚಿವಾಲಯಗಳನ್ನೆಲ್ಲಾ ದೃಢ ಮೂಲವಾಗಿ ಚಿಕಿತ್ಸೆಗೆಯ್ಯಲು ಪಂ|| ನೆಹರೂರವರು ಸಂಕಲ್ಪಿಸಿರುವುದಾಗಿ ವರದಿಯಾಗಿದೆ.

ವಿದ್ಯಾರ್ಥಿಗಳಿಗೆ ಕಿರುಕುಳವೆ?

ಕೃಷ್ಣರಾಜಸಾಗರದಿಂದ ಮೈಸೂರಿನ ಶಾಲಾ, ಕಾಲೇಜುಗಳಿಗೆ ವ್ಯಾಸಂಗಕ್ಕಾಗಿ ಬರುವ ಬಾಲಕ, ಬಾಲಕಿಯರುಗಳಿಗೆ ರೈಲ್ವೆ ಪೋಲೀಸ್ ದಫೇದಾರರೊಬ್ಬರೂ, ಮತ್ತೊಬ್ಬ ಪೋಲೀಸ್ ಕಾನ್ಸ್ಟೇಬಲ್ಲನೂ, ಅನಾವಶ್ಯಕವಾದ ಕಿರುಕುಳಗಳನ್ನು ಕೊಡುತ್ತಿರುವರೆಂದೂ, ಇದರಿಂದ ತಮ್ಮ ಮಕ್ಕಳಿಗೆ ಗಾಬರಿ ಉಂಟಾಗಿ ವಿದ್ಯಾಭ್ಯಾಸಕ್ಕೆ ಅಡಚಣೆಯಾಗಿದೆಯೆಂದೂ, ಕೂಡಲೇ ತನಿಖೆ ನಡೆಸಿ ತಕ್ಕ ವ್ಯವಸ್ಥೆ ಮಾಡುವಂತೆಯೂ ಜಿಲ್ಲಾ ಪೋಲೀಸ್ ಮತ್ತು ಟ್ರಾಫಿಕ್ ಸೂಪರಿಂಟೆಂಡೆಂಟರು; ಜಿಲ್ಲಾ ವಿದ್ಯಾಧಿಕಾರಿಗಳು, ಇವರುಗಳನ್ನು ಕೃಷ್ಣರಾಜಸಾಗರದ ನಿವಾಸಿಗಳನೇಕರು ಅರ್ಜಿ ಮೂಲಕ ಪ್ರಾರ್ಥಿಸಿಕೊಂಡಿದ್ದಾರೆಂದು ಗೊತ್ತಾಗಿದೆ

ಅಲಹಾಬಾದಿನಲ್ಲಿ ಪುಂಡು ತೆರಿಗೆ

ಅಲಹಾಬಾದಿನಲ್ಲಿ ಎರಡು ಕೋಮುಗಳ ... ದಂಗೆಯು ವರದಿಯಾಗಿವೆ. ಈ ಪ್ರದೇಶಗಳ ಜನರ ಮೇಲೆ ಜಿಲ್ಲಾ ಮ್ಯಾಜಿಸ್ಟ್ರೇಟರು ೧೦ ಸಾವಿರ ರೂ ಪುಂಡುಗಂದಾಯ ವಿಧಿಸಿದ್ದಾರೆ.

ದಿವಾನರಿಗೆ ೬ ಸಾವಿರ ರೂ.

ಸ್ವಂ.ಸು.ಪ್ರೋ|] ಬೆಂಗಳೂರು ೪

ಶ್ರೀಮನ್ಮಹಾರಾಜರವರು ದಿವಾನ್ ಬಹದ್ದೂರ್ ಸರ್ ಎ. ರಾಮಸ್ವಾಮಿ ಮೊದಲಿಯಾರ್‌ರವರಿಗೆ ಆರು ಸಾವಿರ ರೂ ಸಂಬಳ ಕೊಡತಕ್ಕದ್ದೆಂದು ಆಜ್ಞೆ ಮಾಡಿದ್ದಾರೆ.

° ° ° °

ಬೆಂಗಳೂರು ಪೌರಸಭೆಯ ವಿಶೇಷ ಅಧಿವೇಶನವು ನಿನ್ನೆ ನಡೆದು ಕೇಂದ್ರ ರಾಷ್ಟ್ರೀಯ ಸರ್ಕಾರದ ರಚನೆಯ ಬಗ್ಗೆ ಪಂಡಿತ ನೆಹರೂರವರನ್ನು ಅಭಿನಂದಿಸುವ ನಿರ್ಣಯವನ್ನು ಮಾಡಲಾಯಿತು. ಸರ್ ಷಾಫತ ಅಹಮದ್‌ಖಾನ್‌ರವರ ಮೇಲೆ ನಡೆದ ಆಘಾತವನ್ನು ಖಂಡಿಸಿ ಬೇಗನೆ ಅವರು ಗುಣ ಹೊಂದಲೆಂದು ಹಾರೈಸಲಾಯಿತು. ಭಾರತ ರಾಜ್ಯಾಂಗ ಸಮಿತಿಗೆ ಚುನಾಯಿತ ಪ್ರತಿನಿಧಿಗಳನ್ನೇ ಕಳುಹಿಸಬೇಕೆಂದೂ ಸಹ ನಿರ್ಣಯವಾಯಿತು

° ° ° °

ಸಹಕಾರ ಸಂಘಗಳ ಅಸಿಸ್ಟೆಂಟ್ ರಿಜಿಸ್ಟ್ರಾರ್ ಶ್ರೀ ಬಿ. ಸೂರ್ಯನಾರಾಯಣರಾಯರನ್ನು ಡೆಪ್ಯುಟಿ ರಿಜಿಸ್ಟ್ರಾರನ್ನಾಗಿ ಬಡ್ತಿ ಮಾಡಲಾಗಿದೆ.

ಭಾಷಣ

ಮೈಸೂರು ೪

ನಾಳೆ ಸಾಯಂಕಾಲ ಆರು ಗಂಟೆಗೆ ಮಹಾರಾಜಾ ಕಾಲೇಜು ಆರ್ಥಿಕ ಸಂಘದ ಆಶ್ರಯದಲ್ಲಿ ಸರ್ವೆಂಟ್ಸ್ ಆಫ್ ಇಂಡಿಯಾ ಸಂಘದ ಸದಸ್ಯರಾದ ಶ್ರೀ ಕೆ.ಜಿ ಶಿವಸ್ವಾಮಿಯವರು "ಆಹಾರ ಮತ್ತು ಹಿಡುವಳಿ ನೀತಿ" ಎಂಬ ವಿಷಯವಾಗಿ ಭಾಷಣ ಮಾಡುತ್ತಾರೆ. ಎಲ್ಲರಿಗೂ ಆಹ್ವಾನವುಂಟು. ನಾಳೆ ರಾತ್ರಿ ಎಂಟು ಗಂಟೆಗೆ ಅವರು ಅದೇ ವಿಷಯದ ಮೇಲೆ ಆಕಾಶವಾಣಿ ಮೂಲಕವೂ ಭಾಷಣ ಮಾಡುವರು.

ದಿವಾನರೊಡನೆ ಭೇಟಿ

ರಾಜಧಾನಿಯ ಸೂರಿಡಿ ರಸ್ತೆಯಲ್ಲಿರುವ ತುಳಸಿತೋಟದ ಶ್ರೀ ತಿಮ್ಮರಾಯಪ್ಪನವರು ತಮ್ಮ ಮನೆಯನ್ನು ಸರ್ಕಾರವು ಸ್ವಾಧೀನಪಡಿಸಿಕೊಂಡ ಸಂದರ್ಭದಲ್ಲಿ, ಮೈಸೂರು ಬ್ರ|| ಸಿಟಿಜನ್ಸ್ ಗ... ವರು, ... ಕಾರವರೊಡನೆ ತಾವು ನಡೆಸಿದ ಪತ್ರ ವ್ಯವಹಾರಗಳನ್ನೂ, ತಮಗಾಗಿರುವ ಅನ್ಯಾಯವನ್ನೂ, ೨೯-೮-೪೬ ರಲ್ಲಿ ದಿವಾನರಿಗೆ ಅರಿಕೆ ಮಾಡಿಕೊಂಡರು. ದಿವಾನರು ಸಾವಧಾನದಿಂದ ವಿಷಯವನ್ನು ಆಲಿಸಿ ಸೂಕ್ತವಾದ ತೀರ್ಮಾನ ಮಾಡುವುದಾಗಿ ಭರವಸೆ ಇತ್ತರೆಂದು ಗೊತ್ತಾಗಿದೆ

೧೨ ನೇ ತಾ|| ಖಂಡನಾ ದಿನಾಚರಣೆ

ಸ್ವಂ.ಸು.ಪ್ರೋ|] ಬೆಂಗಳೂರು ೪

ಭಾರತ ರಾಜ್ಯಾಂಗ ಸಮಿತಿಗೆ ಮೈಸೂರಿನ ಪರವಾಗಿ ಅಧಿಕಾರೀ ಮತ್ತು ಜನಸಾಮಾನ್ಯರ ನಿಯೋಗವನ್ನು ಕಳುಹಿಸಲಾಗುವುದೆಂದೂ, ತಾವೇ ಅದರ ನಾಯಕರಾಗುವುದಾಗಿಯೂ ದಿವಾನರು ತಿಳಿಸಿರುವುದನ್ನು ಖಂಡಿಸಲು ಈ ತಿಂಗಳ ೧೨ ನೇ ತಾ|| ಗುರುವಾರ ಸಂಸ್ಥಾನದಲ್ಲೆಲ್ಲಾ ಸಭೆಗಳನ್ನು ನಡೆಸಬೇಕೆಂದು ಮೈಸೂರು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯವರು ನಿರ್ಧರಿಸಿದ್ದಾರೆ. ಮತ್ತು ಇದೇ ವಿಷಯವಾಗಿ ದೀರ್ಘವಾದ ಹೇಳಿಕೆಯನ್ನಿತ್ತು ದಿವಾನರ ಸೂಚನೆಯನ್ನು ಖಂಡಿಸಿದ್ದಾರೆ. ಪಂಡಿತ ನೆಹರೂ ಮತ್ತು ಇತರ ರಾಷ್ಟ್ರನಾಯಕರಿಗೆ ಅಭಿನಂದನೆಯನ್ನು ಸಲ್ಲಿಸಿ ಶುಭಾಶಯವನ್ನು ಕೋರಿದ್ದಾರೆ. ಅವರ ಪ್ರಯತ್ನದಿಂದ ಪೂರ್ಣ ಸ್ವಾತಂತ್ರ್ಯವು ದೊರೆತು ಬ್ರಿಟಿಷ್ ಸಾಮ್ರಾಜ್ಯಶಾಹಿಯು ನಿರ್ಮೂಲವಾಗಲೆಂದು ಹಾರೈಸಿದ್ದಾರೆ. ಮಹಾಜನರು ದುಷ್ಟ ಶಕ್ತಿಗಳಿಗೆ ಗಮನ ಕೊಡದೆ ಶಾಂತಿ ಪಾಲನೆಯಲ್ಲಿ ಸಹಕರಿಸಬೇಕೆಂದು ಕೋರಿದ್ದಾರೆ

ಬೊಂಬಾಯಿಯಲ್ಲಿ ಗಲಭೆ

ಸಾವಿನ ಸಂಖ್ಯೆ ೮೫ ಕ್ಕೆ ಏರಿದೆ

ಬೊಂಬಾಯಿ ನಗರದ ಹಲವು ಭಾಗಗಳಲ್ಲಿ ನಡೆದ ಗಲಭೆಯು ಇನ್ನೂ ಹತೋಟಿಗೆ ಬಂದಿಲ್ಲ. ಗಲಭೆ ಪ್ರದೇಶಗಳಲ್ಲಿ ಬಲವಾದ ಶಸ್ತ್ರಸಜ್ಜಿತ ಸೈನ್ಯಗಳನ್ನು ಕಳುಹಿಸಲಾಗಿದೆ. ಗಲಭೆ ಇತರ ಕಡೆಗಳಿಗೆ ಹರಡದಂತೆ ಗಲಭೆ ನಡೆದ ಪ್ರದೇಶಗಳಲ್ಲಿ ೩ ದಿನಗಳವರೆಗೆ ಪೂರ್ಣವಾಗಿ ಕರ್ಫ್ಯೂ ಆಜ್ಞೆಯನ್ನು ಜಾರಿಗೆ ತರಲಾಗಿದೆ. ಇದುವರೆವಿಗೆ ೮೫ ಜನರು ಸತ್ತಿರುವರೆಂದೂ, ೩೦೦ ಮಂದಿಗೆ ಗಾಯಗಳಾಗಿವೆಯೆಂದೂ ವರದಿಯಾಗಿದೆ. ಗಲಭೆ ಪ್ರದೇಶಗಳನ್ನು ಪ್ರತ್ಯೇಕಿಸಿ ಅವನ್ನು ಅಪಾಯಕರ ಪ್ರದೇಶವೆಂದು ಸಾರಲಾಗಿದೆ. ಗೂಂಡಾಗಳೆಂದು ಸಂಶಯ ಬಂದವರನ್ನು ಗಡೀಪಾರು ಮಾಡಲು ಪೋಲೀಸ್ ಕಮೀಷನರಿಗೆ ಅಧಿಕಾರ ಕೊಡಲಾಗಿದೆ. ಇದುವರೆವಿಗೆ ಒಂದು ಸಹಸ್ರ ಮಂದಿಯನ್ನು ದಸ್ತಗಿರಿ ಮಾಡಲಾಗಿದೆ

ಅಕ್ಕಿ ಹತ್ತಿ

ಮೈಸೂರು ೪

ಟಿ. ನರಸೀಪುರದ ತಾಲ್ಲೂಕು ಕೆಂಪೇಗೌಡನಹುಂಡಿಯ ಕಣ್ಣಯ್ಯ ಎಂಬುವನು ೧೫ ಮೂಟೆ ಅಕ್ಕಿಯನ್ನು ಮೈಸೂರಿಗೆ ಸಾಗಿಸುತ್ತಿದ್ದಾಗ ಹಲವರು ಅವನನ್ನು ಪೋಲೀಸರಿಗೆ ಹಿಡಿದು ಕೊಟ್ಟರೆಂದೂ, ಪೋಲೀಸಿನವರು ಮುಂದಿನ ಕ್ರಮ ಜರುಗಿಸುತ್ತಿರುವರೆಂದೂ ತಿಳಿದು ಬಂದಿದೆ.

ಸಿಲ್ಕ್ ವೀವಿಂಗ್ ಫ್ಯಾಕ್ಟರಿ ಲೇಬರ್ ಸಂಘ

ಕಳೆದ ಶುಕ್ರವಾರ ಮೇಲ್ಕಂಡ ಸಂಘದವರು ವೈಭವದಿಂದ ವಿನಾಯಕ ವ್ರತವನ್ನು ಆಚರಿಸಿದರು. ಇದೇ ಸಂದರ್ಭದಲ್ಲಿ ರಾಜಕೀಯ ಜನರಲ್ ಮ್ಯಾನೇಜರ್‌ರವರನ್ನು ಸತ್ಕರಿಸಿದರು.

ಶ್ರೀಮಂತರ ... ಮೊಕದ್ದಮೆಯಲ್ಲಿ ... ಆಗಿರುವ ಈ ... ಗೆ ... "... ಕರ್ತವ್ಯ" ಎಂದು ... ನಿ... ... ವರ ... ಪ್ರಕಟಿಸಿದ್ದಾರೆ

ಸಾಧ್ವಿ
ತಾ|| ೪-೯-೪೬ ಬುಧವಾರ

ಸ್ವರಾಜ್ಯದ ಬಾಗಿಲು ತೆರೆಯಿತು

ಹೊಸ ಕೇಂದ್ರ ಸರ್ಕಾರದ ಸ್ಥಾಪನೆಯ ವಿಷಯವಾಗಿ ಮಾತನಾಡುತ್ತಾ ಮಹಾತ್ಮ ಗಾಂಧಿಯವರು ಈಗ ಸ್ವರಾಜ್ಯದ ಮಹಾದ್ವಾರವು ತೆರೆದಂತಾಯಿತೆಂದು ಹೇಳಿರುವರು. ಇಂತಹ ಸುದಿನವನ್ನು ಕಾಣಲು ಭಾರತವು ಬಹಳ ದಿನಗಳಿಂದ ಕಾದಿತ್ತು. ಅದಕ್ಕಾಗಿ ಅನೇಕ ವರ್ಷಗಳಿಂದ ಕಷ್ಟನಷ್ಟಗಳನ್ನು ಅನುಭವಿಸಿತು. ಬ್ರಿಟಿಷ್ ಸರ್ಕಾರದೊಡನೆ ನಮ್ಮ ಹಿಂದಿನ ವ್ಯಾಜ್ಯಗಳು ಏನೇ ಇರಲಿ; ಈಗ ಅವರು ಭಾರತದ ನಾಯಕರೊಡನೆ ಒಂದು ಒಪ್ಪಂದಕ್ಕೆ ಬರಲು ಒಪ್ಪಿರುವುದಕ್ಕಾಗಿ ಅವರನ್ನು ವಂದಿಸಬೇಕಾಗಿದೆ ಎಂಬುದಾಗಿಯೂ ಮಹಾತ್ಮರು ಹೇಳಿರುವರು. ದೇಶದ ಸಕಲ ಪ್ರಜೆಗಳೂ ಈ ಸರ್ಕಾರಕ್ಕೆ ಬೆಂಬಲವೀಯಬೇಕೆಂದು ಕೋರಿರುವರು. ಇದಕ್ಕೆ ನಿಜವಾದ ಭಾರತ ಪುತ್ರರೆಲ್ಲರೂ ಮನ್ನಣೆಯೀಯುವುದರಲ್ಲಿ ಸಂದೇಹವಿಲ್ಲ.

ಈಗ ಸ್ವಾತಂತ್ರ್ಯದ ಅರುಣೋದಯವು ಮಾತ್ರ ಆಗಿದೆ. ಇನ್ನು ಸೂರ್ಯೋದಯವು ಆಗುವುದು ಖಂಡಿತ. ಎರಡು ಶತಮಾನಗಳ ದಾಸ್ಯದ ಪೊಟ್ಟು ಹರಿದು ಸ್ವಾತಂತ್ರ್ಯ ಭಾಸ್ಕರನ ದಿವ್ಯ ಜ್ಯೋತಿಯು ಸಕಾಲದಲ್ಲಿ ಭಾರತ ದಿಗಂತವನ್ನು ದೇದೀಪ್ಯಮಾನವಾಗಿ ಪ್ರಜ್ವಲಿಸುವುದು. ಸ್ವಾತಂತ್ರ್ಯದ ಹೆಬ್ಬಾಗಿಲು ತೆರೆದಿದೆ. ಇನ್ನು ಭವನದ ಪ್ರವೇಶವು ಮಾತ್ರ ಉಳಿದಿದೆ. ಪರಕೀಯರ ಆಕ್ರಮಣಕ್ಕೆ ತುತ್ತಾಗಿ ಸಕಲ ವಿಧವಾದ ಸೂರೆ ಮತ್ತು ಶೋಷಣೆಗಳಿಂದ ಬಳಲಿ ಬೆಂಡಾಗಿದ್ದ ಭಾರತ ಮಾತೆಯ ಭವ್ಯ ಭವನವು ಆತ್ಮಾವಲಂಬನದ ನವಚೈತನ್ಯದಿಂದ ಕೂಡಿ ಮತ್ತೆ ಪೂರ್ಣ ಕಳೆಯಿಂದ ಪರಿಶೋಭಿಸುವುದಾಗಿದೆ.

ತಾತ್ಕಾಲಿಕ ಸರ್ಕಾರವು ಶಾಶ್ವತ ಸರ್ಕಾರಕ್ಕೆ ಪೂರ್ವ ಪೀಠಿಕೆಯೆಂದು ಬೇರೆ ಹೇಳಬೇಕಾಗಿಲ್ಲ. ಅದುದರಿಂದಲೇ ಅಪೂರ್ಣ ಸ್ವಾತಂತ್ರ್ಯ ಸರ್ಕಾರದ ಮಿತಿ ಮೇರೆಗಳಿಗೆ ಇದು ಒಳಪಟ್ಟಿದೆ. ಆದರೂ ಬ್ರಿಟಿಷ್ ಅಧಿಕಾರದ ಪ್ರತಿನಿಧಿಗಳ ಸೌಹಾರ್ದಪೂರಿತ ವರ್ತನೆಯ ಮೇಲೆ ರಾಷ್ಟ್ರ ನಾಯಕರು ಮುನ್ನಡೆ ಇಡಲು ಹೊರಟಿದ್ದಾರೆ. ಈ ಸರ್ಕಾರಕ್ಕೆ ಇರುವ ಪರಿಮಿತಿಗಳನ್ನು ಅವರು ಚೆನ್ನಾಗಿ ಅರಿತಿದ್ದಾರೆ. ದೇಶದಲ್ಲಿ ಒಂದು ಪ್ರಮುಖ ಪಂಗಡವಾದ ಮುಸ್ಲಿಂ ಲೀಗು ಸಹಕರಿಸದೆ ದೂರವಾಗಿರುವ ಅಂಶವನ್ನೂ ಮನಗಂಡಿದ್ದಾರೆ. ವಿವಿಧ ಪಂಗಡಗಳ ಪ್ರತಿನಿಧಿಗಳಿಂದ ಸಮ್ಮಿಶ್ರಿತವಾದ ಮಂತ್ರಿ ಮಂಡಲಗಳಲ್ಲಿ ಈ ಬಗೆಯ ರಿಯಾಯಿತಿಗಳೂ, ಹೊಂದಾಣಿಕೆಯೂ ಇರಬೇಕಾದುದು ಸಹಜವಾಗಿಯೇ ಇದೆ. ಮುಸ್ಲಿಂ ಲೀಗಿನವರನ್ನು ಬಿಟ್ಟು ದೇಶದ ಸಕಲ ಪಂಗಡಗಳವರ ವಿಶ್ವಾಸವನ್ನೂ ಗಳಿಸಿರುವುದು ರಾಷ್ಟ್ರೀಯ ಸರ್ಕಾರದ ಒಂದು ಮಹಾ ಸಾಧನೆಯೆಂದೇ ಹೇಳಬೇಕು.

ಮಹಾತ್ಮರ ಆಶೀರ್ವಾದ ಬಲದಿಂದಲೂ ದೇಶಮಾತೆಯ ದಿವ್ಯಾನುಗ್ರಹದಿಂದಲೂ ರಾಷ್ಟ್ರ ನಾಯಕರು ಸ್ವಾತಂತ್ರ್ಯ ಸಾಧನೆಯ ಪ್ರಥಮ ಸೋಪಾನದಲ್ಲಿ ಅಡಿಯಿಟ್ಟಿರುವರು. ರಾಜ್ಯಾಂಗ ರಚನಾ ಸಮಿತಿಯ ಕಾರ್ಯವು ಪೂರೈಸಿದೊಡನೆ ನಲವತ್ತು ಕೋಟಿ ಭಾರತ ಪುತ್ರರೂ ಈ ಮಹಾ ನಾಯಕರುಗಳ ಹಿಂಬದಿಯಲ್ಲಿ ಭಾರತ ಸ್ವರಾಜ್ಯ ಭವನವನ್ನು ಪ್ರವೇಶಿಸಿ ಅಲ್ಲಿ ಚಿರ ಕಾಲ ನಿರಾತಂಕವಾದ ಸ್ವತಂತ್ರ ಜೀವನವನ್ನು ಅನುಭವಿಸುವಂತೆ ಪರಮಾತ್ಮನು ಅನುಗ್ರಹಿಸಲೆಂದು ಪ್ರಾರ್ಥಿಸೋಣ.

ವೈದ್ಯ ಪತ್ರಿಕೆ

ರಾಜಧಾನಿಯಲ್ಲಿ ಶ್ರೀ ಪಿ ಗೋಪಾಲಕೃಷ್ಣ ಶೆಟ್ಟರು ನಡೆಸುತ್ತಿರುವ ಮೈಸೂರು ವೈದ್ಯ ಪತ್ರಿಕೆಯ ಆರನೇ ಜನ್ಮೋತ್ಸವ ಸಂಚಿಕೆಯು ನಮ್ಮ ಹಸ್ತಗತವಾಗಿದೆ. ಇದರಲ್ಲಿ ಪದ್ಧತಿ ಮೇರೆ ಅನೇಕ ಉಪಯುಕ್ತವಾದ ಲೇಖನಗಳು ಇವೆ. ಮುಂಭಾಗದಲ್ಲಿ ರಾಷ್ಟ್ರಪತಿ ಜವಹರಲಾಲರ ವರ್ಣ ಚಿತ್ರವು ಮನೋಹರವಾಗಿ ಮೆರೆಯುತ್ತಿದೆ. ಪ್ರಖ್ಯಾತ ವಿದ್ವಾಂಸರಿಂದ ಬರೆಯಲ್ಪಟ್ಟ ಕಥೆ, ಕವಿತೆ, ವರ್ಷ ಭವಿಷ್ಯ ಮುಂತಾದ ವಿಷಯಗಳು ವಾಚಕರಿಗೆ ಉಪಯುಕ್ತವಾಗಿವೆ. ಎಂದಿನಂತೆ ಹಲವಾರು ಆಂಧ್ರ ಭಾಷೆಯ ಲೇಖನಗಳೂ ಆಂಗ್ಲ ಭಾಷಾ ಬರವಣಿಗೆಗಳೂ ಇವೆ. ಬೆಲೆ ಎಂಟಾಣೆ ಮಾತ್ರ. ಸರ್ವರಿಗೂ ಗ್ರಾಹ್ಯವಾಗಿದೆ.

ಬ್ರಾಹ್ಮಣ ವಿದ್ಯಾರ್ಥಿ ನಿಲಯದ ಆರಂಭೋತ್ಸವ

ಸ್ವಂ.ಸು.] ಚಾಮರಾಜನಗರ ೩

ಅಖಿಲ ಬ್ರಾಹ್ಮಣ ವಿದ್ಯಾರ್ಥಿ ನಿಲಯದ ಈ ಊರಿನ ಶಾಖೆಯ ಆರಂಭೋತ್ಸವವು ಡಾ|| ಪಾರ್ಥಸಾರಥಿಯವರಿಂದ ಇಂದು ನೆರವೇರಿತು. ಶ್ರೀ ಜಗನ್ನಾಥರಾಯರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ತಗಡೂರು ರಾಮಚಂದ್ರರಾಯರು ವಿದ್ಯಾರ್ಥಿ ನಿಲಯಗಳ ಅಗತ್ಯ ಮುಂತಾದ ವಿಷಯಗಳನ್ನು ಕುರಿತು ಭಾಷಣ ಮಾಡಿದರು.

ಚರಖಾ ಸಂಘ

ಇಲ್ಲಿನ ಹೈಸ್ಕೂಲಿನ ಸಂಘದವರು ಚರಖಾ ಶಾಖೆಯನ್ನು ಈ ದಿನದಿಂದ ಆರಂಭಿಸಿರುತ್ತಾರೆ.

ಹೊಸ ಮಂತ್ರಿಗಳ ಸಂಬಳ

ಕೇಂದ್ರ ಸರ್ಕಾರದ ಮಂತ್ರಿಗಳ ಸಂಬಳವು ೫೫೦೦ ರೂ. ಗಳಿದ್ದರೂ, ಪಂಡಿತ ನೆಹರೂ ಸರ್ಕಾರದ ಮಂತ್ರಿಗಳು ಮಾತ್ರ ೧೫೦೦ ರೂ ಗಳನ್ನು ತೆಗೆದುಕೊಳ್ಳಬಹುದೆಂದು ಹೇಳಲಾಗುತ್ತಿದೆ.

ಭಾರತೀಯರ ವಿಜಯ

ಭಾರತೀಯ ಕ್ರಿಕೆಟ್ಟಿನವರು ಲಾರ್ಡ್ಸ್ ಮೇಲಿನ ಕಡೇ ಪಂದ್ಯದಲ್ಲಿ ಮಿಡಲ್ ಸೆಕ್ಸ್‌ನವರನ್ನು ಒಂದು ಇನ್ನಿಂಗ್ಸ್ ಮತ್ತು ೩೩ ರನ್ನುಗಳಿಂದ ಸೋಲಿಸಿದರು.

ಇಂಟರ್ ವಿದ್ಯಾರ್ಥಿಗಳಿಗಾಗಿ
ಸೀತಾ ಪರಿತ್ಯಾಗದ ಸಮಸ್ಯೆಗಳು
ಬೆಲೆ 0-8-0
ಪ್ರತಿಗಳಿಗೆ
ಸಾಹಿತ್ಯ ಮಂದಿರ
ಪದಕೀಸ್ ಬಯಾ ಸ್ಟೋರ್ಸ್
ಇವುಗಳಲ್ಲಿ ವಿಚಾರಿಸಿ

ಕೋಲಾರದಲ್ಲಿ ಕರ್ಫ್ಯೂ ಆಜ್ಞೆ

ಸ್ವಂ.ಸು.] ಕೋಲಾರ ೩

ಈ ನಗರದಲ್ಲಿ ನಿನ್ನೆಯಿಂದ ಕರ್ಫ್ಯೂ ಆಜ್ಞೆಯನ್ನು ಜಾರಿಗೆ ತರಲಾಗಿದೆ. ಸಭೆ ಮೆರವಣಿಗೆಗಳು ನಡೆಯುವಂತಿಲ್ಲ. ಸಿನಿಮಾ, ಹೆಂಡ ಮತ್ತು ಸಾರಾಯಿ ಅಂಗಡಿಗಳನ್ನು ಮುಚ್ಚಲಾಗಿದೆ. ೫ ಜನಕ್ಕಿಂತ ಹೆಚ್ಚಾಗಿ ಒಂದೆಕಡೆ ಸೇರಕೂಡದಾಗಿದೆ. ಈ ಆಜ್ಞೆ ಸಂಜೆ ೬ ರಿಂದ ೭ ಗಂಟೆವರೆಗೆ ಜಾರಿಯಲ್ಲಿರುತ್ತದೆ. ಪೋಲೀಸರ ಗಸ್ತು ಬಹಳವಾಗಿದೆ.

ಗಣಪತಿ ಮಂಗಳಾರತಿ

ಸ್ವಂ ಸು.] ಶ್ರೀರಂಗಪಟ್ಟಣ ೩

ಇಲ್ಲಿಯ ಸ್ಟುಡೆಂಟ್ಸ್ ಯೂನಿಯನ್ನಿನವರು ಮೊನ್ನೆ ಸಂಜೆ ವಿದ್ಯಾಗಣಪತಿ ಮಹಾ ಮಂಗಳಾರತಿಯನ್ನು ನಡೆಸಿದರು. ಈ ಸಂಬಂಧದಲ್ಲಿ ಶ್ರೀ ರಾಮಸ್ವಾಮಿಯವರಿಂದ ವೀಣಾ ವಾದನವೂ ಶ್ರೀ ಎಸ್ ನಂಜುಂಡಸ್ವಾಮಿಯವರಿಂದ ಪಿಟೀಲು ವಾದನವೂ ಜರುಗಿದವು.

ಪೋಲೀಸರ ಉಸ್ತುವಾರಿ

ಸ್ವಂ ಸು.] ಚಿಕ್ಕಮಗಳೂರು ೧

ಮುಂಜಾಗ್ರತೆಯಿಂದ ಪೋಲೀಸರು ಆಜ್ಞೆಗಳನ್ನು ಜಾರಿಮಾಡಿ ಉಸ್ತುವಾರಿ ಏರ್ಪಡಿಸಿದ್ದುದರಿಂದ ಹಬ್ಬಗಳಲ್ಲಿ ಯಾವ ವಿಧವಾದ ಗಲಭೆಯೂ ಆಗಲಿಲ್ಲ. ಮಾಮೂಲಿನಂತೆ ವಿಶ್ವ ವಿದ್ಯಾನಿಲಯದ ಶ್ರೀ ವಿದ್ಯಾ ಗಣಪತಿಯ ಉತ್ಸವವು ಜರುಗುತ್ತಿದೆ.

ವಿಜಯಲಕ್ಷ್ಮಿಯವರಿಗೆ ರಾಯಭಾ-

ಮಿತ್ರರಾಷ್ಟ್ರ ಸಂಸ್ಥೆಯಲ್ಲಿ ದಕ್ಷಿಣ ಆಫ್ರಿಕದ ಭಾರತೀಯರ ಪರವಾಗಿ ವಾದಿಸುವ ನಿಯೋಗದವರಿಗೆ ಪಂಡಿತ ನೆಹರೂರವರ ಸೋದರಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ನಾಯಕರಾಗಿ ತೆರಳುವರೆಂದು ತಿಳಿದು ಬಂದಿದೆ.

† ಸಿಂಧ್ ಲೀಗ್ ಮಂತ್ರಿ ಮಂಡಲದ ಮೇಲಿನ ಅವಿಶ್ವಾಸ ನಿರ್ಣಯವು ೯ ನೇ ತಾ|| ಚರ್ಚೆಗೆ ಬರುವುದು.

† ಪಂ|| ನೆಹರೂರವರು ಪ್ರಪ್ರಥಮವಾಗಿ ಅಧಿಕಾರಯುತವಾಗಿ ನಿನ್ನೆ ಪ್ರಧಾನ ಸೇನಾ ಕಛೇರಿಗೆ ಭೇಟಿ ಕೊಟ್ಟರು.

R. S. PANDIT'S
Whooping Cough Remedy
ಆರ್. ಎಸ್. ಪಂಡಿತರ
ನಾಯಿಕೆಮ್ಮಿನ ಔಷಧಿ.
7-8 ದಿವಸಗಳಲ್ಲೇ ಖಾತರಿಯಾಗಿ ವಾಸಿಯಾಗುತ್ತೆ
ಕ್ರಯ ಬಾಟ್ಲಿಗೆ 1-8-0
ಗೂರ್ಲು ಉಬ್ಬಸಕ್ಕೆ
(Asthma)
ಖಾತರಿಯಾದ ಔಷಧಿ ದೊರೆಯುತ್ತೆ
ಅನೇಕ ದೊಡ್ಡ ಮನುಷ್ಯರು ಬಂಗಾರದ ಪದಕ ಮತ್ತು ಸರ್ಟಿಫಿಕೇಟ್‌ಗಳನ್ನು ಕೊಟ್ಟಿದ್ದಾರೆ.
(Appendecitis) ಗುಲ್ಮ ಬೂಟಿ ಮತ್ತು (Tonsils) ಗಲಾಯ್ಲು ಇವುಗಳನ್ನು ಆಪರೇಷನ್ ಇಲ್ಲದೆ ಗುಣಪಡಿಸುತ್ತೆ. ಖುದ್ದು ಬಂದು ನೋಡಿ.
ಗುಂಡ್ಲುಪೇಟೆ ಆರ್. ಎಸ್. ಪಂಡಿತರು ದಿವಾನ್ಸ್ ರೋಡ್, ಗೊಲ್ಲಗೇರಿ, ಮೈಸೂರು.

ಬಟ್ಟೆ ಹಂಚಿಕೆ

ಸ್ವಂ ಸು] ಅಗರ-ಮಾಂಬಳ್ಳಿ

ಹಬ್ಬಗಳಿಗಾಗಿ ಬಟ್ಟೆ ಹಂಚಿಕೆ ವ್ಯವಸ್ಥೆಯನ್ನು ಸರಿಯಾಗಿ ಏರ್ಪಡಿಸಿರಲಿಲ್ಲವೆಂದು ದೂರುಗಳು ಬಹಳವಾಗಿವೆ. ಕೂಡಲೇ ವರ್ತಕರ ಬಟ್ಟೆ ಹಂಚಿಕೆ ನಡೆದರೆ ಸಾರ್ವಜನಿಕರಿಗೆ ಅನುಕೂಲವಾಗಬಹುದಾಗಿದೆ.

ಕೆಲವು ದಿನಗಳಿಂದ ಉಂಟಾಗಿದ್ದ ಸೀಮೆಎಣ್ಣೆ ಅಭಾವವು ಅನುಭವಸ್ಥರ ಮನವಿಯಿಂದ ಸ್ವಲ್ಪ ನೀಗಿರುವಂತಾಗಿ ಗ್ರಾಮದ ಬೀದಿಗಳಲ್ಲಿ ದೀಪ ಇಲ್ಲ.

ಯಳಂದೂರು ರಸ್ತೆ ಬಹಳ ಕೆಟ್ಟುಹೋಗಿದೆ. ಕೂಡಲೇ ಇದರ ರಿಪೇರಿ ಆವಶ್ಯಕ.

ಪಂಜಾಬ್ ಮಂತ್ರಿಮಂಡಲಕ್ಕೆ ಶರಣಸಿಂಗರು

ಸ|| ಬಲದೇವಸಿಂಗರು ತಾತ್ಕಾಲಿಕ ಸರ್ಕಾರಕ್ಕೆ ತೆರಳಿದ್ದರಿಂದ ಅವರ ಸ್ಥಾನಕ್ಕೆ ಸ|| ಶರಣಸಿಂಗರು ಅಕಾಲಿ ಪಕ್ಷದ ನಾಯಕರಾಗಿಯೂ ಪಂಜಾಬಿನ ಮಂತ್ರಿಗಳಾಗಿಯೂ ಆರಿಸಲ್ಪಟ್ಟಿದ್ದಾರೆ.

ದ|| ಆಫ್ರಿಕದಲ್ಲಿ ಮಹಿಳೆಯ ದಸ್ತಗಿರಿ

ಹನ್ನೆರಡು ಜನ ಭಾರತೀಯ ಮಹಿಳೆಯರೊಡನೆ ಮಿಸ್ ಮೇರಿ ಬಾರ್ ಎಂಬ ಐರೋಪ್ಯ ಮಹಿಳೆಯೂ ದಕ್ಷಿಣ ಆಫ್ರಿಕದಲ್ಲಿ ಸತ್ಯಾಗ್ರಹವನ್ನಾಚರಿಸಿ ದಸ್ತಗಿರಿಯಾಗಿದ್ದಾಳೆ. ಬಿಳಿಯ ಮಹಿಳೆಯರಲ್ಲಿ ಬಂಧಿತರಾಗಲು ಈಕೆಯೇ ಮೊದಲನೆಯವಳು.

OPERA TALKIES
ತಾ|| 4-9-46ರಿಂದ
ಎರಡನೆಯ ವಾರ
ಬಿಸಿ ಶಾದಿ
(20 ನೇ ಸೆಂಚುರಿ)
ಮುಂದಿನ ವಿನೋದ
ನನ್ನ ಮಗ (ತಮಿ

ಟಿ. ಸಿ. ನಟರಾಜ್
ಔಷಧಾಲಯ
ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.
ಅಗತ್ಯವಾಗಿ ದೇಶದ ಎಲ್ಲಾ ಇಂಗ್ಲಿಷ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳ ಚಿಕಿತ್ಸೆಯು ಬಹು ಸುಲಭ ಛಾರ್ಜಿ ಮಾಡಲ್ಪಡುತ್ತದೆ.
ಝಂಡೂರವರ ಆಯುರ್ವೇದೀಯ ಪ್ರಾಡಕ್ಟ್‌ಗಳೆಲ್ಲವೂ ದೊರೆಯುತ್ತವೆ.

ರಾಜ್ ಕಮಲ್
ಮೈಸೂರು.
30-8-46 ರಿಂದ
ಪ್ರತಿದಿನ ಮೂರು ಆಟಗಳು
"ದ್ರೌಪದಿ"
ಭೂಮಿಕೆ:— ಸುಶೀಲಾ ರಾಣಿ, ಚಂದ್ರಶೇಖರ್, ಮಜಹರ್ ಖಾ

Edited, printed and published by A. K. Nagaraja at the Sadhvi P[ress] D...bhiah Road, Mysore

ಫೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಗುರುವಾರ ೫—೯—೪೬ [ಸಂಚಿಕೆ ೪೬

ಆಳ್ವಾರ್ ಸಂಸ್ಥಾನದಲ್ಲಿ ಬಂದಿಗಳ ಬಿಡುಗಡೆ

ಬೊಂಬಾಯಿಯಲ್ಲಿ ೧೩೫ ಮರಣ

ವಸನ್ನ ಗಲಭೆಕಾರರು ಬೊಂಬಾಯಿಯ ಪೋಲೀಸರ ಮೇಲೆ ಬೇಗ ಮುತ್ತಿಗೆ ಕಲು ಪ್ರಯತ್ನಿಸಿದರು. ಮತ್ತು ಬೆಂಕಿ ಲೂಟಿ ಮಾಡಲೂ ತೊಡಗಿದ್ದರು. ಪೋಲೀಸ್ ಕಮೀಷನರ ಮೇಲೂ ಜನರು ಲ್ಲು ಹೊಡೆದು ಗಾಯಗೊಳಿಸಿದರು. ೧೫೦ ೦ ಗುಂಡು ಹೊಡೆಯಲಾಯಿತು ೧೧೦೩ ತ್ತ ಗುಂಡನ್ನು ಹಾರಿಸಲಾಯಿತು. ಇದು ಗೆ ೧೩೫ ಜನರು ಸತ್ತು ೪೦೮ ಜನರಿಗೆ ಯವಾಗಿದೆ. ಸಾವಿರಕ್ಕೆ ಮೇಲ್ಪಟ್ಟ ರ ದಸ್ತಗಿರಿಯಾಗಿದೆ. ಕಪ್ಪು ಬಾವುಟ , ಹಳೆಯ ತೋಪುಗಳು, ಪರಕೆಗಳು, ಡಿಗಳು ಇನ್ನೂ ನೇತಾಡುತ್ತಲೇ ಇವೆ. ಮತ್ತು ಕಡ್ಡಿಗಳು ನಾರುತ್ತಿವೆ. ಕಲ್ಲು, ಣ್ಣೆ, ಸೋಡಾ ಸೀಸೆಗಳನ್ನು ಹಿಡಿದ ರ ಗುಂಪುಗಳು ಪರಸ್ಪರ ಕಾಳಗವನ್ನು ಸುತ್ತಿದ್ದವು. ಗಲಭೆ ಪ್ರದೇಶಗಳಲ್ಲಿ ಲೀಸರು ಕರ್ಫ್ಯೂ ಆಜ್ಞೆ ಜಾರಿ ಮಾಡಿ ದೆ.

ಹೊಸ ಸರ್ಕಾರಕ್ಕೆ ಒಳಪಡದ ಬಾಬುಗಳು

ಭಾರತ ಕೇಂದ್ರ ಸರ್ಕಾರದ ಅಧೀನ ಈ ಕೆಳಗೆ ಕಂಡ ಇಲಾಖೆಗಳು ಇನ್ನೂ ಪಟ್ಟಿಲ್ಲ. ಆದರೆ ಅವುಗಳ ಕಾರ್ಯದರ್ಶಿ ನೇರವಾಗಿ ವೈಸರಾಯರೊಡನೆ ವ್ಯವ ಸಲು ಅವಕಾಶವಿಲ್ಲ; ನೆಹರೂರವರ ಮೂಲಕವೇ ವರ್ತಿಸಬೇಕು. ಇಲಾಖೆಗ ಸಂಸ್ಥಾನಗಳೊಡನೆ ವ್ಯವಹರಿಸುವ ಇಲಾಖೆ, ವೈಸರಾಯ್ ಮತ್ತು ನರುಗಳೊಡನೆ ವ್ಯವಹರಿಸುವ ಸುಧಾ ಶಾಖೆ, ಐ.ಸಿ.ಎಸ್. ಇಲಾಖೆಯನ್ನು ನೋಡಿಕೊಳ್ಳುವ ವೈಸರಾಯರ ಕಾರ್ಯದರ್ಶಿ ಖೆ.

ರೈಲ್ವೆ ಮುಷ್ಕರ ಇಳಿಮುಖ

ದಕ್ಷಿಣ ಭಾರತ ರೈಲ್ವೆ ಕೆಲಸಗಾರರ ಮು ರವು ದಿನ ದಿನಕ್ಕೆ ಸಡಿಲವಾಗಿ ಹೆಚ್ಚು ನ್ಟು ಕೆಲಸಗಾರರು ವಾಪಸು ಕೆಲಸಕ್ಕೆ ಹೋಗುತ್ತಿರುವುದಾಗಿ ವರದಿಯಾಗಿದೆ. ಗಳೂರು ಗೂಡ್ಸ್ ಮತ್ತು ಕಂಪ್ರಯಾಣಿಕ ರೈಲುಗಳು ಓಡಾಡುತ್ತಿವೆ. 'ಬ್ಲೂ ಮೌಂಟನ್ ಎಕ್ಸ್‌ಪ್ರೆಸ್' ಸಹ ಮೊನ್ನೆಯಿಂ ಹೊರಡುತ್ತಿದೆ. ತಿರುನೆಲ್ವೇಲಿ ಎಂ ರೈಲ್ವೆ ಕೆಲಸಗಾರರ ಸಂಘದ ಅಧ್ಯಕ್ಷ ತ್ತು ಕಾರ್ಯದರ್ಶಿಗಳನ್ನೂ, ಶ್ರೀರಂಗ ಭಾಷಣ ಮಾಡುತ್ತಿದ್ದ ಓ ನಂದಿ ಮು ಮುರನ್ನೂ ದಸ್ತಗಿರಿ ಮಾಡಿರುವುದಾಗಿ ದುಬಂದಿದೆ.

ನಾಸಿಕದಲ್ಲಿ ಗಲಭೆ

ಕೋಮುವಾರು ಗಲಭೆಯಿಂದ ಮೊನ್ನೆ ಈ ಕ್ಷೇತ್ರದಲ್ಲಿ ಪೋಲೀಸರು ಗುಂಡು ರಿಸಬೇಕಾಯಿತು. ಮೂರು ಜನರು ಸತ್ತರು, ಮೂವತ್ತು ಜನರಿಗೆ ಗಾಯ ಯಿತು. ದೊಂಬಿಯಿಂದ ಮಿಲಿಟರಿಯ ಕರೆಸಲಾಗಿದೆ. ರಾತ್ರಿ ಕಾಲದ ಕ ರ್ಫ್ಯೂ ಆಜ್ಞೆ ಜಾರಿ ಮಾಡಲಾಗಿದೆ.

ಮೈ॥ ಕಾಂಗ್ರೆಸ್ ಅಧಿವೇಶನ

ಮೈಸೂರು ಕಾಂಗ್ರೆಸ್ಸಿನ ಆರನೇ ಅಧಿ ವೇಶನವು ಅಕ್ಟೋಬರ್ ಎರಡನೇ ವಾರದ ನಡೆಯುವುದಾಗಿ ತೀರ್ಮಾನವಾಗಿದೆ. ಬೆಂಗ ಳೂರು ನ್ಯಾಷನಲ್ ಹೈಸ್ಕೂಲು ಮೈದಾನದಲ್ಲಿ ಸೇರುವ ಮೈದಾನದಲ್ಲಿ ಇದನ್ನಾಗಿ ನಡೆಸಲಾಗುತ್ತಿವೆ. ಶ್ರೀ ಚಾಮಯ್ಯಂಗಾರರು ಗತ ಸಮಿತಿಯ ಅಧ್ಯಕ್ಷರಾಗಿರುವರು.

ಗ್ರಾಮಾಧಿಕಾರಿಗಳ ಸಮ್ಮೇಳನ

ಇದೇ ಸೆಪ್ಟೆಂಬರ್ ೨೦, ೨೧, ಮತ್ತು ೨೨ ನೇ ತಾ॥ ಗಳಲ್ಲಿ ಶಿವಮೊಗ್ಗದಲ್ಲಿ ನಡೆ ಯಲಿರುವ ಮೈಸೂರು ಸೀಮೆಯ ಗ್ರಾಮಾ ಧಿಕಾರಿಗಳ ೧೫ ನೇ ಸಮ್ಮೇಳನದ ಪ್ರಾರಂ ಭೋತ್ಸವವನ್ನು ಸರ್ ಆರ್ಕಾಟ್ ರಾಮ ಸ್ವಾಮಿ ಮೊದಲಿಯಾರ್‌ರವರು ನೆರವೇರಿ ಸಲು ಒಪ್ಪಿರುತ್ತಾರೆ. ಸಮ್ಮೇಳನಕ್ಕೆ ಎಲ್ಲಾ ಗ್ರಾಮಾಧಿಕಾರಿಗಳೂ ದಯಮಾಡಿ ಕಾರ್ಯ ಕಲಾಪಗಳಲ್ಲಿ ಭಾಗವಹಿಸಬೇಕಾಗಿ ಕಾರ್ಯ ದರ್ಶಿಗಳು ಕೋರಿರುತ್ತಾರೆ.

ಬಿರುದು ಬಾವಲಿಗಳಿಗೆ ತಿಲಾಂಜಲಿ

ಬಿರುದು ಬಾವಲಿಗಳನ್ನು ಕೊಡುವ ಸಂಪ್ರದಾಯ ತೊಲಗಬೇಕು ಎಂಬ ಹೆಸ ರುಗಳ ಮುಂದೆ, ಮತ್ತು ಹಿಂದೆ ಹಾಕಿಕೊ ಳ್ಳುವ ಬಿರುದು ಬಾವಲಿಗಳು ಭಾರತದ ಗೌರವ ಪ್ರತಿಷ್ಠೆಗಳಿಗೆ ಮಸಿ ಬಳಿದಿವೆ. ಬಿರುದುಗಳು ಸಾಹಿತ್ಯ ಮತ್ತಿತರ ವ್ಯಕ್ತಿಗಳಿ ಗೆ ಸಂಬಂಧಿಸಿದ್ದಾದರೆ ಬಾಧಕವಿಲ್ಲ ಎಂದು ಭಾರತದ ಪ್ರಧಾನಿ ಪಂ॥ ನೆಹರೂರವರು ತಿಳಿಸಿದ್ದಾರೆ.

ಮದ್ರಾಸಿನಲ್ಲಿ ದೇವದಾಸಿ ಪದ್ಧತಿ ವಜಾ

ದೇವರ ಹೆಸರಿನಲ್ಲಿ ಹೆಣ್ಣು ಮಕ್ಕಳನ್ನು ಬಸವಿ ಬಿಡುವ ದೇವದಾಸಿ ಪದ್ಧತಿಯನ್ನು ವಜಾ ಮಾಡುವ ಬಗ್ಗೆ ಶಾಸನ ಮಂಡಿಸಲು ಮದ್ರಾಸ್ ಶಾಸನ ಸಭೆಯ ಕಾಂಗ್ರೆಸ್ ಪಕ್ಷದವರು ಸಿದ್ಧತೆಗಳನ್ನು ಮಾಡುತ್ತಿರು ವುದಾಗಿ ವರದಿಯಾಗಿದೆ.

ಐ.ಎನ್.ಎ. ಯವರು ಪೋಲೀಸು ಹುದ್ದೆಗೆ

ಸಂಯುಕ್ತ ಪ್ರಾಂತದ ಪೋಲೀಸ್ ದಳ ಕ್ಕೆ ಐ ಎನ್ ಎ ಸೈನಿಕರನ್ನು ಕರೆದುಕೊಳ್ಳ ಲು ಏರ್ಪಾಡಾಗಿದೆ. ಐವತ್ತು ಜನರನ್ನು ಸಬ್ ಇನ್ಸ್‌ಪೆಕ್ಟರ್ ಸ್ಥಾನಕ್ಕೆ ನೇಮಿಸಲಾ ಗುವುದು. ಸಿವಿಲ್ ರಕ್ಷಣಾ ದಳಗಳಿಗೂ ಸಹ ಅವರನ್ನು ನೇಮಿಸುವಂತೆ ಏರ್ಪಾಡಾ ಗಿದೆ. ತುಂಗಭದ್ರಾ ಜಲಾಶಯದ ಕೆಲಸ ಕ್ಕೂ ಸಹ ೧೫೦೦ ಜನ ಐ ಎನ್ ಎ ಯವರ ನ್ನು ತೆಗೆದುಕೊಳ್ಳಲಾಗಿದೆ.

ಶ್ರೀ ಶಿನ್ನೆಯ ನಮ್ಮ ಪತ್ರಿಕೆಯಲ್ಲಿ ಪ್ರಕಟ ಗವಟ್ಟದ ಸ್ಟೂಡೆಂಟ್ಸ್ ಫೆಡರೇಷನ್ನಿನ ವರು ಗಲಾಟೆ ಮಂಗಳೂರಿನ ನಡೆಸಿದರು ಎಂದಿರುವುದನ್ನು ಸ್ಟೂಡೆಂಟ್ಸ್ ಲೀಗಿನವರು ಎಂದು ತಿದ್ದಿಕೊಳ್ಳಬೇಕಾಗಿ ಕೋರುತ್ತೇವೆ.

ಪೌರಸಭೆಯ ವಿಶೇಷ ಅಧಿವೇಶನ

ಮೈಸೂರು ೫

ರಾಷ್ಟ್ರೀಯ ಸರ್ಕಾರವನ್ನು ರಚಿಸಿರುವ ಪಂಡಿತ ಜವಹರಲಾಲ್ ನೆಹರೂ ಮತ್ತು ನಾಯಕರನ್ನು ಅಭಿನಂದಿಸಿ ಶುಭಾಶಯವ ನ್ನು ಕೋರುವುದು; ಕೋಮುವಾರು ಶಾಂ ತಿ ಪಾಲನೆಗಾಗಿ ಶಾಂತಿ ಸಮಿತಿಗಳನ್ನು ಸ್ಥಾಪಿಸುವುದು; ರಾಜ್ಯಾಂಗ ಸಮಿತಿಗೆ ಚುನಾಯಿತ ಪ್ರತಿನಿಧಿಗಳನ್ನೇ ಕಳುಹಿಸು ವಂತೆ ಒತ್ತಾಯ ಪಡಿಸುವುದು ಮತ್ತು ನಗ ರಕ್ಕೆ ನೀರಿನ ಸರಬರಾಜು ಮಾಡಲು ಕಾವೇ ರಿಯಲ್ಲಿ ಕೆಲವು ಭಾಗಗಳನ್ನು ವಿಂಗಡಿಸಲಾಗಿ ರುವಂತೆ ಸರ್ಕಾರವನ್ನು ಪ್ರಾರ್ಥಿಸುವುದು ಮುಂತಾದ ಮುಖ್ಯವಾದ ವಿಷಯಗಳನ್ನು ಪರಿ ಶೀಲಿಸಲು ಪೌರಸಭೆಯ ವಿಶೇಷ ಅಧಿವೇಶನವನ್ನು ಕರೆಯಬೇಕೆಂದು ಕಾಂಗ್ರೆಸ್ ಪಂಗಡದ ಸದಸ್ಯರು ಅಧ್ಯ ಕ್ಷರನ್ನು ಕೋರಿರುತ್ತಾರೆ.

ವಿದ್ಯಾರ್ಥಿ ಕಾಂಗ್ರೆಸ್

ನಾಳೆ ಸಂಜೆ ೫ ಗಂಟೆಗೆ ಕಾಂಗ್ರೆಸ್ ಕಛೇರಿಯಲ್ಲಿ ವಿದ್ಯಾರ್ಥಿ ಕಾಂಗ್ರೆಸ್ಸಿನ ಸಂಸ್ಥಾಪಕ ಸದಸ್ಯರ ಸಭೆಯನ್ನು ಏರ್ಪಡಿ ಸಿದೆ. ಕಾರ್ಯಕಾರಿ ಮಂಡಲಿಯ ಚುನಾ ವಣೆಯನ್ನು ಸಹ ಇಡಲಾಗಿದೆ.

ವಿದ್ಯಾರ್ಥಿಗಳ ಕೋರಿಕೆ

ಮಹಾರಾಜಾ ಕಾಲೇಜಿನಲ್ಲಿ ಸೀನಿಯರ್ ಬಿ. ಎ. ವಿದ್ಯಾರ್ಥಿಗಳಿಗೆ ಪಾಠ ಬಾಗಿಲು ತೆರೆದಾಗಿನಿಂದಲೂ ಹಿಂದಿನ ಚರಿತ್ರೆ ಕರಗ ತಿಯು ನಡೆಯುತ್ತಿಲ್ಲವಾದ್ದರಿಂದ ವಿದ್ಯಾ ರ್ಥಿಗಳು ನಿರುತ್ಸಾಹರನ್ನು ಕಂಡಿದ್ದರು. ಅವರು ಈ ವಿಷಯವನ್ನು ಪರಿಶೀಲಿಸಿ ತ ಕ್ಕ ಏರ್ಪಾಡುಗಳನ್ನು ಕೂಡಲೇ ಮಾಡಬ ಬೇಕೆಂದು ಕೋರುತ್ತಿದ್ದಾರೆ.

ಯಕ್ಷಗಾನ

ಶ್ರೀ ಹನುಮಪ್ಪನವರ ಚಾಮುಂಡೇಶ್ವರಿ ಯಕ್ಷಗಾನ ಸಂಘದವರಿಂದ ಪ್ರೊಫೆಸ ರ್ ಲಕ್ಷ್ಮೀ ವಿಲಾಸ್ ಹೋಟೆಲಿನಲ್ಲಿ ಈ ದಿನ ರಾತ್ರಿ 'ಸತ್ಯಭಾಮಾ ಕಲ್ಯಾಣ' ಎಂಬ ಕಥೆ ನಡೆಯುತ್ತದೆ.

ಸಂಯುಕ್ತ ಪ್ರಾಂತದಲ್ಲಿ ರಾಷ್ಟ್ರೀಯ ರಕ್ಷಣಾ ದಳ

ಕೋಮು ಗಲಭೆಗಳನ್ನು ಅದಿ [illegible]

ದಂಡ ವಾಪಸು ಬರುವುದು

ಸ್ವಂ ವರ್ತಮಾನ] ಬೆಂಗಳೂರು ೫

ಬೆಂಗಳೂರು ದಂಡನ್ನು ಮೈಸೂರು ಸಂ ಸ್ಥಾನಕ್ಕೆ ವಾಪಸು ಕೊಡಲು ಏರ್ಪಾಡಾಗ ಲಾಗಿದೆಯೆಂದು ವರದಿಯಾಗಿದೆ. ಬರುವ ನವರಾತ್ರಿಯಲ್ಲಿ ಈ ಬಗ್ಗೆ ಪ್ರಕಟಣೆ ಹೊರ ಬೀಳುವುದೆಂದು ಹೇಳಲಾಗಿದೆ.

ಆಳ್ವಾರಿನಲ್ಲಿ ಒಪ್ಪಂದ

ಆಳ್ವಾರ್ ಸಂಸ್ಥಾನದ ಸರ್ಕಾರದವರಿ ಗೂ ಪ್ರಜಾ ಮಂಡಲದವರಿಗೂ ಒಪ್ಪಂದವು ಏರ್ಪಟ್ಟು ಎಲ್ಲಾ ರಾಜಕೀಯ ಖೈದಿಗಳ ನ್ನೂ ಬಿಡುಗಡೆ ಮಾಡಲಾಗಿದೆ. ಪ್ರಜೆ ಗಳು ಆಳುವಿಕೆಯನ್ನು ಸ್ಥಾಪಿಸಿದ್ದಾರೆ. ಸಂ ಸ್ಥಾನದ ಧ್ವಜಕ್ಕೆ ಅದ ಅವಮಾನವನ್ನು ಅಕ್ರ ಮವಾದುದೆಂದು ಪ್ರಜಾ ಮಂಡಲದವರಿಂ ದ ಅರ್ಜಿನ ಮಹಾರಾಜರಿಗೆ ಭರವಸೆ ಬಂದ ನಂತರ ಒಪ್ಪಂದಕ್ಕೆ ಬರಲಾಯಿತೆಂದು ತಿಳಿ ದುಬಂದಿದೆ.

ಫಾರ್‌ವರ್ಡ್ ಬ್ಲಾಕಿನವರ ಅಸಮಾಧಾನ

ಪಂಡಿತ ಗೋವಿಂದವಲ್ಲಭ ಪಂತರವರ ಸಹಿತ ಸ್ವಾತಂತ್ರ್ಯ ಮ ತ್ತು ಕ್ರಿಪ್ಸ್ ಕಮಿಷನ ನಿರ್ಣಯಗಳ ಜ ನ್ಮದಾತರೂ ಆದ ಪಂಡಿತ ಜವಹರಲಾಲ ನೆಹರೂರವರು ಇಂಗ್ಲೆಂಡಿನ ದೊರೆಗಳ ಸೇ ವೆಯನ್ನು ರಾಜಭಕ್ತಿ ಪೂರ್ವಕವಾಗಿ ಮಾ ಡೆ ಪ್ರಮಾಣ ವಚನವನ್ನು ಸ್ವೀಕರಿ ಸಿರುವುದನ್ನು ನೋಡಿ ಸಿಟ್ಟು ಬರಲಿಲ್ಲವೆಂದು ಗಿದೆಯೆಂದು ಫಾರ್‌ವರ್ಡ್ ಬ್ಲಾಕಿನ ಅ ಧ್ಯಕ್ಷರಾದ ಸರ್ದಾರ್ ಶಾರ್ದೂಲಸಿಂಗ್ ಕ ವೀಶ್ವರ್ ಹೇಳಿಕೆ ನೀಡಿದ್ದಾರೆ.

ಐ. ಎನ್. ಎ. ಯವರ ಬಿಡುಗಡೆ

ಸುಭಾಷ್‌ಚಂದ್ರ ಬೋಸರ ಐ.ಎನ್.ಎ ವೀರರನ್ನು ಬಿಡುಗಡೆ ಮಾಡುವುದೇ ನಮ್ಮ ರ್ ನಲ್ಲಿ ಮೊದಲನೇದಾಗಿ ಹೊರಡಿಸುವ ಆಜ್ಞೆಯೆಂದು ವರದಿಯಾಗಿದೆ. ಆಮೇರಿಕದಲ್ಲಿರುವ ಭಾರತ ಸರ್ಕಾರದ ಪ್ರತಿನಿಧಿ ಸರ್ ಜಿ. ಎಸ್. ಬಾಜ್‌ಪೈರವರ ಕಛೇರಿಯನ್ನು ಮುಚ್ಚಲೂ ಸಹ ಮತ್ತೊಂ ದು ಆಜ್ಞೆಯನ್ನು ಹೊರಡಿಸುವರೆಂದು ಹೇಳ ಲಾಗಿದೆ.

ಹನ್ನೆರಡಾಣೆಗೊಂದು ರಾಟೆ

ಸಂಯುಕ್ತ ಪ್ರಾಂತದ ಕಾಂಗ್ರೆಸ್ ಸರ್ಕಾ ರದವರು ಬೇಗ ಬಿನಲ್ಲಿ ತಯಾರಾದ ಪೈಂ ಟೆಗಳನ್ನು ಹನ್ನೆರಡಾಣೆಗೊಂದರಂತೆ ಮಾರ ಲು ಏರ್ಪಾಟು ಮಾಡಿದ್ದಾರೆ.

ಆಧುನಿಕ ಶಸ್ತ್ರಾಸ್ತ್ರಗಳನ್ನು ಉಪಯೋಗಿ ಸಲಾಗುವುದು. ಈ ಸೈನ್ಯದ ಮುಖ್ಯಾಧಿ ಕಾರಿಗೆ ವಿಶೇಷ ಅಧಿಕಾರವನ್ನು ಕೊಡಲಾ ಗುವುದು. ಸುಮಾರು ಐದು ಸಾವಿರ ಜನ ರನ್ನು ಮೊದಲು ಸೇರಿಸಲಾಗುವುದು.

OPERA TALKIES
ತಾ॥ 4—9—46ರಿಂದ
ಪ್ರದರ್ಶಿಸುವ ಚಿತ್ರ
ಬಿಸ್ಸಿ ಶಾದಿ
(ಹಿಂದಿ ಸಂಭಾಷಣೆ)
ಇದರ ನಂತರ
ಕೃಷ್ಣ ಲೀಲಾ
(ತಮಿಳು)

ಸಾಧ್ವಿ

ತಾ॥ ೫-೯-೪೬ ಗುರುವಾರ

ಬಿಕನೀರಿನ ಮುನ್ನಡೆ

ದೇಶೀಯ ಸಂಸ್ಥಾನಗಳು ಒಂದೊಂದಾಗಿ ಕಾಲಕ್ಕೆ ತಕ್ಕಂತೆ ಮುನ್ನಡೆ ಇಡುತ್ತಿರುವುದು ಸಂತೋಷದ ಸಂಗತಿ. ಈ ತಿಂಗಳಲ್ಲಿ ತಮ್ಮ ಪ್ರಜೆಗಳಿಗೆ ಹೊಸ ಸುಧಾರಣೆಗಳನ್ನು ಕೊಡುವ ಒಗ್ಗೆ ಘೋಷಣೆಯೊಂದನ್ನು ಹೊರಡಿಸುವುದಾಗಿ ಬಿಕನೀರ್ ಸಂಸ್ಥಾನದ ರಾಜರು ಹಿಂದೆ ತಿಳಿಸಿದ್ದರು. ಅದಕ್ಕೆ ಅನುಸಾರವಾಗಿ ಈಗ ಅವರು ತಮ್ಮ ಮುಂದಿನ ಕಾರ್ಯ ವಿಧಾನವನ್ನು ಸೂಚಿಸಿರುವರು. ಅದು ಕಾಲಾನುಗುಣವೂ, ಅತ್ಯಂತ ತೃಪ್ತಿಕರವೂ ಆಗಿದೆಯೆಂದು ಹೇಳುವುದರಲ್ಲಿ ಸಂದೇಹವಿಲ್ಲ. ಈಚೆಗೆ ಸುಧಾರಣೆಗಳನ್ನು ಘೋಷಿಸಿರುವ ಎಲ್ಲ ಸಂಸ್ಥಾನಗಳನ್ನೂ ಬಿಕನೀರು ಮೀರಿಸಿರುತ್ತದೆ.

ಕೆಲವು ಸಂಸ್ಥಾನಗಳಲ್ಲಿ ಜವಾಬ್ದಾರಿ ಸರ್ಕಾರದ ಹೆಸರನ್ನೇ ಎತ್ತುವಂತಿಲ್ಲ. ಇನ್ನು ಕೆಲವು ಕಡೆ ಅದು ದೂರದ ಒಂದು ಗುರಿಯಾಗಿ ಉಳಿದಿರುತ್ತದೆ. ಮತ್ತೆ ಕೆಲವೆಡೆ ಅದಕ್ಕೆ ಬಾಯಿಮಾತಿನ ಪುರಸ್ಕಾರವು ಮಾತ್ರ ದೊರೆತಿರುತ್ತದೆ. ಕಾರ್ಯರೂಪದಲ್ಲಿ ಏನೂ ಆಗಿರುವುದಿಲ್ಲ. ಪ್ರಜಾ ಪ್ರಭುತ್ವ ತತ್ವವು ಎಲ್ಲ ರಾಜರುಗಳ ಬಾಯಿಯಲ್ಲೂ ಖಂಡವಾಡುತ್ತಿದೆ. ಆದರೆ ಪ್ರಜೆಗಳಿಗೆ ಅಧಿಕಾರವನ್ನು ವರ್ಗಾಯಿಸಲು ಮಾತ್ರ ಅವರು ಹಿಂಜರಿಯುತ್ತಿರುವರು. ಹೀಗಿರುವಲ್ಲಿ ಮುಂದುವರಿದು ಪ್ರಜೆಗಳಿಗೆ ಸ್ವಾತಂತ್ರ್ಯವನ್ನು ನೀಡುತ್ತಿರುವ ರಾಜ್ಯಗಳನ್ನು ನೋಡಿದರೆ ಸಕಲ ಭಾರತೀಯರೂ ಹೆಮ್ಮೆ ಪಡುವುದರಲ್ಲಿ ಸಂಶಯವಿಲ್ಲ.

ಕೊಚ್ಚಿ ಸಂಸ್ಥಾನವು ಜವಾಬ್ದಾರಿ ಸರ್ಕಾರದ ಮಾರ್ಗದಲ್ಲಿ ಇನ್ನೊಂದು ಹೆಜ್ಜೆ ಮುಂದೆ ಹೋಗಿರುವುದಾಗಿ ಮಾತ್ರ ಹೇಳಿದೆ. ಆದರೆ ಬಿಕನೀರಿನಲ್ಲಿ ಮೂರು ವರ್ಷದೊಳಗೆ ಪ್ರಜಾ ಪ್ರಭುತ್ವವು ಬರಲು ನಿರ್ದಿಷ್ಟವಾದ ಏರ್ಪಾಡನ್ನು ಮಾಡಲಾಗಿದೆ. ಭಾರತದ ಯೂನಿಯನ್ ಸ್ಥಾಪನೆಯಾಗುವುದರೊಳಗೆ, ಅಥವಾ ಇನ್ನು ಮೂರು ವರ್ಷದೊಳಗೆ ಇವುಗಳ ಪೈಕಿ ಯಾವುದು ಮುಂಚೆ ಆದರೆ ಆಗ ಆ ಸಂಸ್ಥಾನದಲ್ಲಿ ಪೂರ್ಣ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವುದಾಗಿ ಹೇಳಲಾಗಿದೆ. ಸದ್ಯಕ್ಕೆ ಪ್ರಜಾ ವಿಶ್ವಾಸಕ್ಕೆ ಪಾತ್ರರಾದವರಿಂದ ಅರ್ಧ ಭಾಗದ ಮಂತ್ರಿಗಳನ್ನು ತೆಗೆದುಕೊಂಡು ಹಂಗಾಮಿ ಸರ್ಕಾರವನ್ನು ರಚಿಸಲಾಗುವುದು. ಅನಂತರ ಎಲ್ಲ ಮಂತ್ರಿಗಳನ್ನೂ ಪ್ರಜಾಪ್ರತಿನಿಧಿಗಳ ವಿಶ್ವಾಸಕ್ಕೆ ಬದ್ಧರನ್ನಾಗಿ ಮಾಡಲಾಗುವುದು. ಹೀಗೆ ನಿರ್ದಿಷ್ಟಕಾಲದಲ್ಲಿ ಪೂರ್ಣ ಪ್ರಜಾ ಪ್ರಭುತ್ವವನ್ನು ಸಾರಿರುವ ಕೀರ್ತಿಯು ಬಿಕನೀರಿಗೆ ಸಂದಿರುವುದು. ಇದಕ್ಕಾಗಿ ಅಲ್ಲಿನ ಅರಸರು ಸಕಲ ಭಾರತೀಯರ ಮನ್ನಣೆಗೂ ಪಾತ್ರರು. ಇತರ ರಾಜರುಗಳೂ ಇವರ ಮೇಲ್ಪಂಕ್ತಿಯನ್ನೇ ಅನುಸರಿಸಿ ಪ್ರಜೆಗಳ ವಿಶ್ವಾಸಕ್ಕೆ ಪಾತ್ರರಾಗಬಾರದೇ?

Edited, printed and published by A. R. Nagarajan at the Sadhvi Press Dhanvantri Road, Mysore

ನೆಹರೂರವರು ಅಮೇರಿಕಾಕ್ಕೆ

ದಕ್ಷಿಣ ಆಫ್ರಿಕದ ಭಾರತೀಯರ ಪ್ರಶ್ನೆಯು ವಿಶ್ವಸಂಸ್ಥೆಯಲ್ಲಿ ಚರ್ಚಿಸಲ್ಪಡುವಾಗ ಭಾರತೀಯರ ಪರವಾಗಿ ವಾದಿಸಲು ಪ್ರಧಾನಮಂತ್ರಿ ನೆಹರೂರವರು ನ್ಯೂಯಾರ್ಕಿಗೆ ತೆರಳುವರೆಂದು ವಾರ್ತೆ ಬಂದಿದೆ. ಶ್ರೀಮತಿ ವಿಜಯಲಕ್ಷ್ಮಿ ಪಂಡಿತರೂ ಡಾ॥ ಕುಂಜ್ರುರವರೂ ಅವರ ಸಹಾಯಕ್ಕೆ ಹೋಗುವರೆಂದು ಗೊತ್ತಾಗಿದೆ.

ಸಂಸ್ಥಾನಗಳಲ್ಲಿ ಕಾಂಗ್ರೆಸ್

ಪ್ರಜಾಮಂಡಲಿ ಮತ್ತು ಕಾಂಗ್ರೆಸ್ ಎಂದು ಎರಡು ಸಂಸ್ಥೆಗಳು ಸಂಸ್ಥಾನಗಳಲ್ಲಿ ಇರುವುದು ಅನವಶ್ಯಕವೆಂದೂ, ಇವುಗಳ ಪೈಕಿ ಒಂದನ್ನು ಮಾತ್ರ ಇಟ್ಟುಕೊಳ್ಳಬೇಕೆಂದೂ ಅಖಿಲಭಾರತ ಕಾಂ॥ ಕಾರ್ಯಕಾರಿ ಸಮಿತಿಯು ನಿರ್ಧರಿಸಿರುತ್ತದೆ.

ರಾಜ್ ಕಮಲ್
ಮೈಸೂರು.
30-8-46 ರಿಂದ
ಪ್ರತಿ ದಿನ ಮೂರು ಆಟಗಳು
"ದ್ರೌಪದಿ"
ಭೂಮಿಕೆ,— ಸುಶೀಲಾ ರಾಣಿ, ಚಂದ್ರ ಮೋಹನ್, ಮಜಹರ್ ಖಾನ್

ಇಂಟರ್ ವಿದ್ಯಾರ್ಥಿಗಳಿಗಾಗಿ
ಸೀತಾ ಪರಿತ್ಯಾಗದ ಸಮಸ್ಯೆಗಳು
ಬೆಲೆ 0—8—0
ಪ್ರತಿಗಳಿಗೆ
ಸಾಹಿತ್ಯ ಮಂದಿರ
ಪದಕೀಸ್ ಜಯಾ ಸ್ಟೋರ್ಸ್
ಇವುಗಳಲ್ಲಿ ವಿಚಾರಿಸಿ

ಮೈಸೂರು ಸ್ಟೇಟ್ ರೈಲ್ವೆ

ಲೋಕೋ ಮತ್ತು ಕಾರ್ ಸೂಪರಿಂಟೆಂಡೆಂಟ್ ಆಫೀಸು, ಮೈಸೂರು.

ತಾ॥ 31 8-

ನೋಟಿಫಿಕೇಷನ್

1. ಮೈಸೂರು ಟೌನ್‌ನಲ್ಲಿರುವ ರೈಲ್ವೆ ಸೆಂಟ್ರಲ್ ವರ್ಕ್‌ಷಾಪಿಗೆ 1946- ನೇ ವರ್ಷದ ಅಥವ ಟೆಂಡರ್ ಸ್ವೀಕರಿಸಿದ ತಾರೀಖಿನಿಂದ 1947 ನೇ ಜೂನ್ 30 ತಾ॥ ವರೆಗೆ ಉಪಯೋಗಿಸಲ್ಪಡುವ ಕಟ್ಟಡದ ಸಾಮಾನುಗಳ ಒಗ್ಗೆ ಸೀಲ್ಡ್ ಟೆಂಡರುಗಳನ್ನು ಕೆಳಗೆ ತಿಳಿಸಿದ ಆಫೀಸಿನಲ್ಲಿ 1946 ನೇ ಸೆಪ್ಟೆಂಬರ್ 18 ನೇ ತಾ॥ ಮಧ್ಯಾಹ್ನ 4 ಗಂಟೆಯ ವರೆಗೆ ಸ್ವೀಕರಿಸಲಾಗುವುದು.

ಸೀರಿಯಲ್ ನಂ	ಸಾಮಾನುಗಳ ವಿವರಣೆ	1 ವರ್ಷಕ್ಕೆ ಬೇಕಾದ ಸರಾಸರಿ ಮೊತ್ತ	ಯೂನಿಟ್
1)	ಸ್ಯಾಂಡ್ (ಲೋಕಲ್)	100 ಭರ್ತಿ ಗಾಡಿಗಳು	ಭರ್ತಿ ಗಾಡಿ 1
2)	ನದಿಯ ಮರಳು ಆರ್ ಎಂ ಸಿ. ಸಮೇತ	2 ಬಿ. ಎಂ ಲೋಡುಗಳು ಅಥವಾ 1200 ಘನ ಅಡಿ	100 ಘನ ಅ ಒಂದಕ್ಕೆ
3)	ಒಳ್ಳೆಯ ಕೆಂಪು ಮಣ್ಣು	141 ಭರ್ತಿ ಗಾಡಿಗಳು	ಭರ್ತಿ ಗಾಡಿ 1
4)	ಒಡೆದ ಕ್ವಾರ್ಟ್ಸ್ ಜಲ್ಲಿ	10 ಚದರ ಅಥವಾ 100 ಘನ ಗಜ	ಘನ ಗಜ 1ಕ್ಕೆ
5)	ಜೇಡಿ ಮಣ್ಣು	21 ಭರ್ತಿ ಗಾಡಿಗಳು	ಭರ್ತಿ ಗಾಡಿ 1
6)	ಬಟಾಣಿ ಜಲ್ಲಿಗಳು (ಕಾಂಕ್ರೀಟ್ ಕೆಲಸಕ್ಕೆ)	6 ಭರ್ತಿ ಗಾಡಿಗಳು	ಭರ್ತಿ ಗಾಡಿ 1

2. ಸರಬರಾಯಿ ಮಾಡುವ ಸಾಮಾನುಗಳು ಮಾರೆಯಟ್ಸ್ ಬೊಂಬಾಯಿ ಡಬ್ಲ್ಯೂ. ಡಿ. ಸ್ಪೆಸಿಫಿಕೇಷನ್‌ಗೆ ಸರಿಬೀಳಬೇಕು

3. ಮೇಲೆ ಹೇಳಿದ ಸಾಮಾನುಗಳಿಗೆ ಪ್ರತಿಯೊಂದಕ್ಕೂ ಯೂನಿಟ್ ಪ್ರ ದರಗಳನ್ನು ನಮೂದಿಸಬೇಕು.

4. ಪ್ರತಿಯೊಂದು ಟೆಂಡರು 200 ರೂ ಗಳ ಠೇವಣಿ ಹಣದೊಡನೆ ಆ ನಲ್ಲಿ ಡಿಪಾಜಿಟ್ ಮಾಡಬೇಕು. ಸ್ವೀಕರಿಸದ ಟೆಂಡರುದಾರರಿಗೆ ಅದನ್ನು ವಾಪಸು ಮಾಡಲಾಗುವುದು.

5. ಅಡಳಿತದವರು ಕಮ್ಮಿ ಟೆಂಡರುಗಳನ್ನು ಅಥವ ಇನ್ನಾವ ಟೆಂಡರುಗ ಸ್ವೀಕರಿಸಬೇಕೆಂದು ಕಡ್ಡಾಯ ಇರುವುದಿಲ್ಲ. ಅಥವ ಸ್ವೀಕರಿಸದಿದ್ದಕ್ಕೆ ಕಾರಣಗ ಕೊಡಬೇಕಾದ್ದಿಲ್ಲ

6. ಕೆಲಸದ ವಿವರಣೆ ಮತ್ತು ಕರಾರು ವಿವರಣೆವುಳ್ಳ ಫಾರಂಗಳನ್ನು ಆ ನಲ್ಲಿ ಒಂದು ರೂ. ಕೊಟ್ಟು ಪಡೆಯಬಹುದು

ಎಂ. ಚೆಲುವೇ ಅರಸ್,
ಆಕ್ಟಿಂಗ್ ಲೋಕೋ ಮತ್ತು ಕಾರ್ ಸೂಪರಿಂಟೆಂಡೆಂಟ್

ರಾಜಕಮಲ್, ಮೈಸೂರು
ಬಹಳ ದಿನಗಳಿಂದಲೂ ನೀವು ಕಾತುರದಿಂದ ನೋಡ ಬಯಸುತ್ತಿರುವ
"ಸ್ವರ್ಗಸೀಮ"
ಎಂಬ ಶ್ರೀ ವಾಹಿನಿಯವರ ಮಹೋನ್ನತ ತೆಲುಗು ಚಿತ್ರವನ್ನು
ಶೀಘ್ರದಲ್ಲಿಯೇ ನೋಡುವಿರಿ! ಬರುವ ದಿನವನ್ನು ಎದುರು ನೋಡಿರಿ!
* ನಾಗಯ್ಯ, * ಜಯಮ್ಮ, * ಭಾನುಮತಿ.
ಮುಂತಾದ ಪ್ರಖ್ಯಾತ ನಟ ನಟಿಯರುಗಳಿಂದಲೂ ವೈಭವ ಪೂರ್ಣ ದೃಶ್ಯಗಳಿಂದಲೂ, ಮನೋಹರ ಸಂಗೀತದಿಂದಲೂ ವಿರಾಜಮಾನವಾಗಿರುವ ದಿವ್ಯ ಕಲಾಕೃತಿ.
[ವಿಜಯಾ ಏಜನ್ಸೀಸ್, ಮೈಸೂರು]

ಸುಸಮಯ! : : ಕಳೆದುಕೊಳ್ಳಬೇಡಿ!!
ನಿಯೋರವರ
ಬಹಿರಂಗ ಹರಾಜು
ತಾ॥ 8—9—46 ನೇ ಭಾನುವಾರ ೧೦-೩೦ ಗಂಟೆಗೆ
ಇರ್ವಿನ್ ರೋಡಿನಲ್ಲಿರುವ ಸ್ವಂತ ಅಂಗಡಿಯ ಸಮೀಪದಲ್ಲಿ
ತಾ॥ ೭-೯-೪೬ ನೇ ಶನಿವಾರ ಸಾಮಾನುಗಳನ್ನು ನೋಡಬಹುದು
—: ಸಾಮಾನುಗಳ ವಿವರ :—
ಎಲ್ಲಾ ವಿಧವಾದ ಸಾಗುವಾನಿ ಮತ್ತು ಕರೀ ಮರದ ಮನೆ ಸೌಕರ್ಯಗಳಿಗೆ ಬೇಕಾದ ಫರ್ನಿಚರ್ ಸಾಮಾನುಗಳು, ಬೀರುಗಳು, ತರಹೇವಾರಿ ಕುರ್ಚಿಗಳು, ಸೊಗಸಾದ ಮೆತ್ತೆ ಕುರ್ಚಿಗಳು, ಒಂಟಿ ಮತ್ತು ಜೋಡಿ ಮಂಚಗಳು, ಮೇಜುಗಳು, ಡ್ರೆಸ್ಸಿಂಗ್ ಟೇಬಲ್, ಇನ್ನೂ ಅನೇಕ ವಿಧವಾದ ಸಾಮಾನುಗಳು
ಸೊಗಸಾದ ವಿಕ್ಟೋರಿಯಾ ಗಾಡಿ ಕುದುರೆ ಸಹಿತ, ಜೀಪ್ ವಿಲ್ಸ್ ಮೋಟಾರು ಕಾರು, ಗುಡ್ ಚಾರ್ಟರ್- ಇನ್ನೂ ಇತರ ವಿಧವಾದ ಸಾಮಾನುಗಳು.
ಸ್ಥಳದಲ್ಲಿ ಹಣ ತಕ್ಷಣ ಡೆಲಿವರಿ
— ಹರಾಜು ಮಾಡುವವರು —
ನಿಯೋ ಫರ್ನಿಚರ್ ಕಂಪೆನಿ
ಇರ್ವಿನ್ ರೋಡ್ ಮೈಸೂರು.
[ವಿಜಯಾ ಏಜನ್ಸೀಸ್, ಮೈಸೂರು]

ರೇಜಿ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶುಕ್ರವಾರ ೬—೯—೪೬ [ಸಂಚಿಕೆ ೩೭

ನಾಳೆ ರಾತ್ರಿ ನೆಹರೂ – – ರೇಡಿಯೋ ಭಾಷಣ

ಎಂ. ಸಿ. ಸಿ. ಚುನಾವಣೆ

ಮೈಸೂರು ೬

[illegible] ನಡೆಯಲಿರುವ ಚುನಾವಣಾ [illegible] ಪಟ್ಟಿಯು ಈ ರೀತಿ ಇದೆ:— [illegible] ನೇ ಸಂಜೆ ೬ ಗಂಟೆ ಒಳಗೆ [illegible] ಪತ್ರಗಳನ್ನು ಕೊಡುವುದು. ಅದೇ ದಿನ ಸಂಜೆ ಏಳು ಘಂಟೆಗೆ [illegible] ಪಟ್ಟಿ ಪ್ರಕಟನೆ [illegible] ನೇ ಸಂಜೆ ವರೆಗೆ [illegible] ಅದೇ ದಿನ ಎಂಟು ಗಂಟೆಗೆ [illegible] ಪಟ್ಟಿ ಪ್ರಕಟನೆ. ಚುನಾವಣೆಯು [illegible] ನೇ ಶನಿವಾರ ಬೆಳಿಗ್ಗೆ ೧೦ ರಿಂದ [illegible] ರ ವರೆವಿಗೂ ಮತ್ತು ಮಧ್ಯಾಹ್ನ [illegible] ೬ ಗಂಟೆಯ ವರೆವಿಗೂ ನಡೆಯು[illegible]. ಫಲಿತಾಂಶವನ್ನು ಅ ದಿನವೇ [illegible] ಗಂಟೆಗೆ ಪ್ರಕಟಿಸಲಾಗು[illegible] ಎಂದು ಚುನಾವಣಾಧಿಕಾರಿಗಳಾದ [illegible] ನರಸಿಂಹಯ್ಯಂಗಾರ್ಯರು ತಿಳಿಸಿದ್ದಾರೆ.

[illegible]ಗೌಡರ ಯುವಕರ ಸಂಘ

[illegible] ಸಂಘದ ಆಶ್ರಯದಲ್ಲಿ [illegible] ಅಧ್ಯಕ್ಷತೆಯಲ್ಲಿ ಸಭೆ [illegible] ಸಮ್ಮಿಳಿತ ಸರ್ಕಾರದ [illegible] ಪಂಡಿತ ನೆಹರೂರವರನ್ನು ಅಭಿನಂದಿ[illegible] ನಿರ್ಣಯವನ್ನು ಮಾಡಲಾಯಿತು. [illegible] ಸಂದರ್ಭದಲ್ಲಿ ಸರ್ವರಿಗೂ ಸಕ್ಕರೆಯನ್ನು [illegible] ಹಂಚಲಾಯಿತು.

[illegible] ಕಾಂಗ್ರೆಸ್ ಸಮಿತಿ ಸಭೆ

[illegible] ನೆ ಮೊದಲ್ನೆಯ ವಾರ್ಡ್ ಕಾಂಗ್ರೆಸ್ [illegible] ಸಭೆಯು ನಾಳೆ ಸಂಜೆ [illegible] ಗಂಟೆಗೆ [illegible] ಅಗ್ರಹಾರದಲ್ಲಿರುವ [illegible] ಸೇರುವುದು. [illegible] ವಿಷಯ ಪರ್ಯಾಲೋಚಿಸಬೇಕಾದ್ದರಿಂದ [illegible] ಸಭೆಗೆ ಬರಬೇಕೆಂದು ಕಾರ್ಯದರ್ಶಿಗಳು ಕೋರಿದ್ದಾರೆ.

ಸೈಕಲ್ ಸಿಕ್ಕಿದೆ

[illegible] ಮಾಡಲು ಬೈಸಿಕಲ್ [illegible] ಮಾಲೀಕರು [illegible] ಕೊಟ್ಟು ಯೂನಿವರ್ಸಿಟಿ [illegible] ಸಬ್‌ಇನ್ಸ್‌ಪೆಕ್ಟರವರಿಂದ ಪಡೆ[illegible] ತಿಳಿಸಲಾಗಿದೆ.

ಸೂರು ಲೇಬರ್ ಫೆಡರೇಷನ್

[illegible]ಸೂರು ಮತ್ತು [illegible] ಜಿಲ್ಲೆಯ ಕೆಲಸಗಾರರ ಸಂಘಗಳ ಪ್ರತಿನಿಧಿಗ[illegible] ನಗರ ಕಾಂಗ್ರೆಸ್ ಆಫೀಸಿನಲ್ಲಿ [illegible] ಅಧ್ಯಕ್ಷತೆಯಲ್ಲಿ [illegible] ಮೈಸೂರು ಲೇಬರ್ ಫೆಡ[illegible] ಸ್ಥಾಪಿಸಲಾಯಿತು [illegible] ಸಕ್ಕರೆ ಕಾರ್ಖಾನೆ ಮತ್ತು [illegible] ಕಾರ್ಖಾನೆ ಮತ್ತು [illegible] ಎಲ್ಲಾ ಕೆಲಸಗಾರರ ಸಂಘ[illegible] ಸಭೆಗೆ [illegible] ಜಿಲ್ಲೆಗಳ ಎಲ್ಲಾ ಕೆಲಸಗಾರರ [illegible] ಕರೆಸಿ [illegible] ಶ್ರೀ ಟಿ [illegible] ಶ್ರೀರಂಗಪ[illegible] [illegible]

ಹೊಯ್ಸಳ ಕರ್ಣಾಟಕ ಸಂಘ

ಮೈಸೂರು ೬

ನೆನ್ನೆ ಸಾಯಂಕಾಲ ಮೈಸೂರು ಮಹಾರಾಣಿ ರಸ್ತೆ [illegible] ಕೃಷ್ಣ ಸದನದಲ್ಲಿ ಹೊಯ್ಸಳ ಕರ್ಣಾಟಕ ಸಂಘದ ವಿದ್ಯಾರ್ಥಿ ನಿಲಯದ ಕಟ್ಟಡಕ್ಕಾಗಿ ಕೊಟ್ಟಿರುವ ನಿವೇಶನದಲ್ಲಿ ಶ್ರೀ ರಾಮಚಂದ್ರರಾವ್ [illegible] ಯವರು [illegible] ಶಂಕುಸ್ಥಾಪನಾ ಸಮಾರಂಭವನ್ನು ನೆರವೇರಿಸಿದರು. ದೇವತಾ ಪ್ರಾರ್ಥನೆ, ಸ್ವಾಗತ ಭಾಷಣ, ಬಿನ್ನವತ್ತಳೆ ಆದ ನಂತರ ಅಧ್ಯಕ್ಷರು ಶಂಕು ಸ್ಥಾಪನೆ ಕಾರ್ಯವನ್ನು ನಡೆಸಿ ಶಾಲಾ ಕಾಲೇಜುಗಳಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ [illegible] ಮಾಡಿ ಕೊಡುವುದೂ ಮತ್ತು [illegible] ನಿಲಯದ ಆಶ್ರಯದಲ್ಲಿ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳು ದೇಶ ಸೇವೆಗೆ ಅರ್ಹತೆ ಪೊಂದ [illegible] ಹಾರೈಸಿದರು.

ಡೆ|| ಕಮೀಷನರ ವರ್ಗ

ಡೆ|| ಕಮೀಷನರ್ [illegible] ಅವರನ್ನು ಶಿವಮೊಗ್ಗದಿಂದ ಕೋಲಾರ ಜಿಲ್ಲೆಗೂ, ಶ್ರೀ ಎಸ್. ಎಸ್. [illegible] ರವರನ್ನು ಶಿಕ್ಷಣ [illegible] ಶಿವಮೊಗ್ಗ ಜಿಲ್ಲಾಧಿಕಾರಿಗಳನ್ನಾಗಿಯೂ, ಶ್ರೀ ಕೆ [illegible] ರವರನ್ನು ಮಂಡ್ಯ ಜಿಲ್ಲೆಯ [illegible] ಡೆ|| ಕಮೀಷನರ್ [illegible] ಶ್ರೀ ಕೆ. ಮಹಮದ್ [illegible] ಡೆ|| ಕಮೀಷನರನ್ನಾಗಿ ನೇಮಿಸಿ, ಮಂಡ್ಯ ಜಿಲ್ಲೆಗೂ ವರ್ಗ ಮಾಡಲಾಗಿದೆ.

ಗ್ರಾಮಾಭಿವೃದ್ಧಿ ಸಮಿತಿಯ ಸಭೆ

ಚಾಮರಾಜನಗರ [illegible]

[illegible] ಸಮಿತಿ ಸಭೆಯು ಚಾಮರಾಜನಗರದ [illegible] ಪುರ ಗ್ರಾಮದಲ್ಲಿ [illegible] ನೇ ದಿನ [illegible] ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ನಡೆಯಿತು. [illegible] ಆಫೀಸರವರು "ಗ್ರಾಮಾಭಿವೃದ್ಧಿ" ವಿಷಯವಾಗಿ ಉಪನ್ಯಾಸ ಮಾಡಿದರು. [illegible] ಗ್ರಾಮದ [illegible] ಪ್ರಯೋಜನ [illegible] ವಿದ್ಯಾಭ್ಯಾಸ [illegible] ಸ್ವಾರಸ್ಯವಾಗಿ ಉಪನ್ಯಾಸ ಮಾಡಿದರು.

ನಾಳೆ ನೆಹರೂರವರ ರೇಡಿಯೋ ಭಾಷಣ

ಭಾರತ ಸರ್ಕಾರದ ಪ್ರಧಾನ ಮಂತ್ರಿಗಳಾದ ಪಂಡಿತ ಜವಹರಲಾಲ್ ನೆಹರೂರವರು ಅಖಿಲ ಭಾರತ ರೇಡಿಯೋ ಮೂಲಕ ನಾಳೆ ರಾತ್ರಿ [illegible] ಗಂಟೆಗೆ ಹಿಂದಿಯಲ್ಲಿಯೂ [illegible] ಗಂಟೆಗೆ ಇಂಗ್ಲೀಷಿನಲ್ಲಿಯೂ ಭಾಷಣ ಮಾಡುವರು. ಇದನ್ನು ಎಲ್ಲಾ ರೇಡಿಯೋ ಕೇಂದ್ರದಿಂದಲೂ ಪ್ರಸಾರ ಮಾಡಲಾಗುವುದು. [illegible] ಪುನಃ ಪ್ರಸಾರ ಮಾಡಲಾಗುವುದು.

ಗಾಂಧೀಜಿಯವರ ಪ್ರಾರ್ಥನೆ ರೇಡಿಯೋ ಮೂಲಕ ಪ್ರಸಾರ

ಮಹಾತ್ಮ ಗಾಂಧಿಯವರು ಪ್ರತಿದಿನವೂ ನಡೆಸುವ ಸಾಯಂಕಾಲದ ಪ್ರಾರ್ಥನೆಯನ್ನು ಇನ್ನು ಮೇಲೆ ಅಖಿಲ ಭಾರತ ರೇಡಿಯೋ [illegible] ಮೂಲಕ ಪ್ರಸಾರ ಮಾಡುವ [illegible] ನವ [illegible]

ಸರ್ಕಾರೀ [illegible]ದಲ್ಲಿ ಹೊಸ ಶಿಸ್ತು

[illegible] ಸರ್ಕಾರದ [illegible] ಕಾರ್ಯಾಲಯದ ಕೆಲಸದ [illegible] ವೇಳೆ [illegible] ಅಧಿಕಾರಿಗಳು [illegible] ಪ್ರತಿದಿನವೂ ಬೆಳಿಗ್ಗೆ [illegible] ನೆಹರೂರವರಲ್ಲಿ [illegible] ಕೇಳುತ್ತಿದ್ದಾರೆ.

ವೈದ್ಯಶಾಲೆಯ ಪ್ರಾರಂಭ

ಹೊಸಕೋಟೆ [illegible]

[illegible] ಹೊಸಕೋಟೆಗೆ ಮೈಸೂರು ಡಿಸ್ಟ್ರಿಕ್ಟ್ [illegible] ವೈದ್ಯ ಶಾಲೆಯನ್ನು [illegible] ಈ ದಿವಸ [illegible] ಕಾರ್ಯಭೋಕ್ತರನ್ನು [illegible] ಫಂಡ್ [illegible] ಗ್ರಾಮ [illegible] ವೈದ್ಯಶಾಲೆಯ [illegible] ಕೇಂದ್ರ [illegible]

ನೆಹರೂರವರ ನೂತನ ಬಿಡಾರ

ಪಂಡಿತ ಜವಹರಲಾಲ್ ನೆಹರೂರವರು ನವದೆಹಲಿಯ ಯಾರ್ಕ್ ರಸ್ತೆಯಲ್ಲಿರುವ ೧೭ ನೇ ನಂಬರ್ ಭವನವನ್ನು ತಮ್ಮ ವಾಸಕ್ಕಾಗಿ ತೆಗೆದುಕೊಂಡಿರುತ್ತಾರೆ. ಆ ಭವನದ ಆವರಣದಲ್ಲಿ ರಾಷ್ಟ್ರ ಧ್ವಜವನ್ನು ಏರಿಸಲಾಗಿದೆ. ಕಾಶೀ ವಿಶ್ವವಿದ್ಯಾನಿಲಯದಲ್ಲಿ ಡಿಸೆಂಬರ್ ೧೫ಕ್ಕೆ ನಡೆಯುವ ಘಟಿಕೋತ್ಸವ ಸಮಾರಂಭದಲ್ಲಿ ಪಂಡಿತ ನೆಹರೂರವರಿಗೆ ಗೌರವದ ಡಾಕ್ಟರೇಟ್ ಡಿಗ್ರಿಯನ್ನು ಕೊಡುವುದಾಗಿ ನಿರ್ಧರಿಸಿದ್ದಾರೆ.

ಮಿ|| [illegible] ದ್ಯರವರಿಗೆ ಆಹ್ವಾನವೇ

ತಾತ್ಕಾಲಿಕ ಸರ್ಕಾರದ ಮಂತ್ರಿಮಂಡಲದಲ್ಲಿ [illegible] ಮಂತ್ರಿ ಸ್ಥಾನಕ್ಕೆ [illegible] ಪಂಡಿತ ಜವಹರಲಾಲ್ ನೆಹರೂರವರು ಆಹ್ವಾನಿಸಿರುವರೆಂದು ವರದಿಯಾಗಿದೆ. ಇವರು ಪಂಜಾಬಿನಲ್ಲಿ ವಿದ್ಯಾ ಮಂತ್ರಿಗಳಾಗಿದ್ದರು.

ಸಿಂಧ್ ಅಧ್ಯಕ್ಷರ ರಾಜೀನಾಮೆ

ಸಿಂಧೂ ದೇಶದ ಶಾಸನ ಸಭೆಯ ಅಧ್ಯಕ್ಷರಾದ [illegible] ರವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಇತ್ತಿದ್ದಾರೆ. [illegible] ಸರ್ಕಾರದ ಮೇಲೆ [illegible] ಮಾಡಬೇಕೆಂಬ ಉದ್ದೇಶದಿಂದ ಹೀಗೆ ಮಾಡಿರುವರು.

ಸಂಯುಕ್ತ ಜನಾಂಗ ಸಂಘವನ್ನು ರಷ್ಯಾ ತ್ಯಜಿಸುವುದೇ ?

[illegible] ಸಂಯುಕ್ತ ರಾಷ್ಟ್ರ ಸಂಘವನ್ನು ತ್ಯಜಿಸ [illegible] ಡೈಲಿ ಮೇಲ್ ಪತ್ರಿಕೆಯು ಪ್ರಕಟಿಸಿದೆ.

ಗ್ರಾ. ಅಧಿಕಾರಿಗಳ ಸಂಘ

[illegible]

[illegible] ಗ್ರಾಮಾಧಿಕಾರಿಗಳ ಸಂಘದ ಸಾಮಾನ್ಯ ಸಭೆಯು [illegible] ಭಾನುವಾರ ಮಧ್ಯಾಹ್ನ [illegible] ಗಂಟೆಗೆ [illegible] ನಡೆಯುತ್ತದೆ. ಎಲ್ಲಾ ಗ್ರಾಮಾಧಿಕಾರಿಗಳೂ ಬರಬೇಕೆಂದು ಕೋರಲಾಗಿದೆ.

ಚುನಾವಣಾ ಫಲಿತಾಂಶ

ಮೈಸೂರು [illegible] ಕಾಲೇಜಿನಲ್ಲಿ ಈ ವರ್ಷ ಹೊಸದಾಗಿ ಸ್ಥಾಪಿತವಾಗಿರುವ ಕರ್ಣಾಟಕ ಸಂಘದ ಕಾರ್ಯ [illegible] ಸಮಿತಿಗೆ [illegible] ರವರು ಚುನಾಯಿತರಾಗಿದ್ದಾರೆ.

[illegible]
[illegible]
"[illegible]"
[illegible]

ಸಾಧ್ವಿ

ತಾ|| ೬-೯-೪೬ ಶುಕ್ರವಾರ

ಆಹಾರದಿಂದ ಅನಾರೋಗ್ಯ ?

ಈಗ ಉಂಟಾಗಿರುವ ಆಹಾರಾಭಾವದಿಂದ ಅನೇಕ ಬಗೆಯ ಕಷ್ಟ ಪರಂಪರೆಗಳು ಪ್ರಾಪ್ತವಾಗುತ್ತಿವೆಯಷ್ಟೆ. ಇವುಗಳಲ್ಲಿ ಅನಾರೋಗ್ಯವೂ ಒಂದು ಅಂಶವಾಗಿ ಪರಿಣಮಿಸಿರುವಂತಿದೆ. ರಾಗಿ, ಜೋಳಗಳ ಅಭಾವದಿಂದ ಈಗ ಜನರಿಗೆ ಮುಸುಕಿನ ಜೋಳವನ್ನು ಕೊಡಲಾಗುತ್ತಿದೆಯಷ್ಟೆ. ಇದನ್ನು ಸೇವಿಸುತ್ತಿರುವವರ ಪೈಕಿ ನೂರಕ್ಕೆ ತೊಂಬತ್ತು ಜನರಿಗೆ ಬಗೆ ಬಗೆಯ ವ್ಯಾಧಿಗಳು ಪೀಡಿಸುತ್ತಿರುವುದಾಗಿ ವರದಿಯಾಗಿದೆ. ಯಾವ ಆಸ್ಪತ್ರೆಯಲ್ಲಿ ನೋಡಿದರೂ ಹೊಟ್ಟೆನೋವು, ಆಮಶಂಕೆ ಭೇಧಿ ಮುಂತಾದ ಉದರ ವ್ಯಾಧಿಗಳಿಂದ ಪೀಡಿತರಾದ ರೋಗಿಗಳ ಸಂಖ್ಯೆಯು ವಿಪರೀತವಾಗಿ ಕಂಡು ಬರುತ್ತಿದೆ. ಇವರ ಪೈಕಿ ಬಹು ಜನರು ಮುಸುಕಿನ ಜೋಳವನ್ನು ತಿನ್ನುತ್ತಿರುವರೆಂದೂ ಹೇಳಲಾಗಿದೆ.

ಪಾಶ್ಚಿಮಾತ್ಯ ದೇಶಗಳಲ್ಲಿ ಈ ಜೋಳವು ರೂಢಿಯಲ್ಲಿದೆ. ಆದರೆ ನಮ್ಮ ದೇಶಕ್ಕೆ ಹೊಸದು. ಅದು ಬೇಗನೆ ಜೀರ್ಣವಾಗುವುದಿಲ್ಲ. ಅದನ್ನು ಯಂತ್ರದಲ್ಲಿ ಬೀಸಬೇಕಾದರೂ ಸಹ ಇತರ ಧಾನ್ಯಗಳಂತಲ್ಲದೆ, ಇನ್ನೂ ಹೆಚ್ಚು ಬಾರಿ ಪುನಃ ಪುನಃ ಹಾಕಿ ಬೀಸಬೇಕಾಗುವುದು. ಇದಕ್ಕೆ ಬೀಸುವುದಕ್ಕೆ ಮಿಲ್ಲಿನವರು ಹೆಚ್ಚು ಮಜೂರಿಯನ್ನು ಸಹ ತೆಗೆದುಕೊಳ್ಳುತ್ತಿದ್ದಾರೆ. ಹೀಗೆ ಇದನ್ನು ಪುಡಿ ಮಾಡಲು ಯಂತ್ರಕ್ಕೇ ಇಷ್ಟು ಕಠಿಣವಾಗಿರುವಲ್ಲಿ ಮಾನವ ಶರೀರಗಳಿಗೆ ವತ್ತೆಷ್ಟು ಕಷ್ಟವೆಂಬುದನ್ನು ಹೇಳಬೇಕಾಗಿಲ್ಲ. ಅದರಲ್ಲಿಯೂ ರೋಗಿಗಳಿಗೂ ಬಸಿರಿ, ಬಾಣಂತಿಯರಿಗೂ, ಎಳೆಯ ಮಕ್ಕಳಿಗೂ, ಹಲ್ಲಿಲ್ಲದ ಮುದುಕರಿಗೂ ಇದರಿಂದ ಆಗುವ ತೊಂದರೆಯು ಅಷ್ಟಿಷ್ಟಲ್ಲ. ಆಹಾರದ ಹೆಸರಿನಲ್ಲಿ ಅನಾರೋಗ್ಯವನ್ನು ಕೊಂಡುಕೊಂಡಂತಾಗಿದೆ.

ಈ ಧಾನ್ಯವು ಅಭ್ಯಾಸವಾಗಿರುವ ಪಾಶ್ಚಾತ್ಯರಿಗೆ ಇದೇ ಬಹಳ ಅನುಕೂಲವಾಗಿರಬಹುದು. ಆದರೆ ನಮ್ಮ ದೇಶಕ್ಕೆ ಇದು ಹೊಂದುವುದು ಕಷ್ಟ. ಮುಸುಕಿನ ಜೋಳವು ಬಹಳ ಪುಷ್ಟಿಕರವಾದ ಧಾನ್ಯವೆಂದು ಮುಂತಾಗಿ ಪತ್ರಿಕೆಗಳಲ್ಲಿ ಪ್ರಕಟಣೆಗಳು ಬರುತ್ತಿವೆ. ಇದು ಹೇಗೇ ಇರಲಿ, ಪ್ರಾಯಶಃ ಇದು ವ್ಯಾಧಿಗಳನ್ನು ತರಲು ಕಾರಣಭೂತವಾಗಿದೆ. ಆರೋಗ್ಯಾಧಿಕಾರಿಗಳೂ, ಸರ್ಕಾರ ಅಧಿಕಾರಿಗಳೂ ಇದಕ್ಕೆ ಕೂಡಲೇ ಗಮನ ಕೊಡಬೇಕು. ಆಹಾರಾಭಾವವನ್ನು ತಪ್ಪಿಸಲು ಹೋಗಿ ಆರೋಗ್ಯಾಭಾವವನ್ನು ತಂದುಕೊಳ್ಳುವುದು ಸರಿಯೆ ?

ನಮ್ಮ ಕನ್ನಡದಲ್ಲಿ ೧೦೦ ಪತ್ರಿಕೆಗಳಿವೆ ನಮಗೆ ಯಾವ ಕನ್ನಡ ಪತ್ರಿಕೆ ಬೇಕಾದರೂ ನಮಗೆ ತಿಳಿಸಿ. ತರಿಸಿಕೊಡುತ್ತೇವೆ.

ಪೂರ್ವ ಕರ್ಣಾಟಕ

ಕೆ. ಅನಂತಸುಬ್ಬರಾಯ,

ಪ್ರತಿನಿಧಿ, ಸೈಲಾಕ ವಿಭಾಗ, ವಾಣಿವಿಲಾಸ ಮಾರ್ಕೆಟ್, ಮೈಸೂರು

Edited, printed and published by A. R. Nagaraian at the Sadhvi Press and at Road, Mysore

ಪೆನ್ಷನ್ನಿನವರಿಗೂ ಹೆಚ್ಚು ಭತ್ಯ

ಸ್ವಂ ಸು] ಬೆಂಗಳೂರು ೫

ಸರ್ಕಾರದಿಂದ ಪೆನ್ಷನ್ ಪಡೆಯುತ್ತಿರುವವರ ಪೈಕಿ ಒಂದು ಮಟ್ಟದ ವರೆಗೆ ಇರುವವರಿಗೆಲ್ಲಾ ಒಂದು ಗೊತ್ತಾದ ದರದಲ್ಲಿ ತುಟ್ಟಿಭತ್ಯವನ್ನು ಕೊಡಲಾಗುತ್ತಿದೆಯಷ್ಟೆ. ಈಗ ಕೆಲಸದಲ್ಲಿರುವವರಿಗೆ ಕೊಡುತ್ತಿರುವಂತೆಯೇ ಅವರಿಗೂ ಶೇ|| ೫೦ ರಂತೆ ಹೆಚ್ಚಿನ ಭತ್ಯವನ್ನು ಕೊಡುವಂತೆ ಸರ್ಕಾರದವರು ಆಜ್ಞೆ ಮಾಡಿದ್ದಾರೆ.

ಬಟ್ಟೆ ಹಂಚಿಕೆ

ಸಂಸ್ಥಾನದ ಎಲ್ಲಾ ಕಡೆಗಳಲ್ಲಿಯೂ ಬಟ್ಟೆಯನ್ನು ಹಂಚುವ ಜವಾಬ್ದಾರಿಯು ಇದುವರೆಗೆ ಸಿವಿಲ್ ಸಪ್ಲೈಸ್ ಕಂಟ್ರೋಲರಿಗೇ ಸೇರಿತ್ತು. ಇನ್ನು ಮುಂದೆ ತಮ್ಮ ತಮ್ಮ ಜಿಲ್ಲೆಗೆ ಬರುವ ಬಟ್ಟೆಯನ್ನು ತಾವೇ ಸರಿಯಾಗಿ ಹಂಚುವ ಜವಾಬ್ದಾರಿಯನ್ನು ಜಿಲ್ಲಾಧಿಕಾರಿಗಳಿಗೆ ವಹಿಸಲಾಗುವುದೆಂದು ತಿಳಿದುಬಂದಿದೆ.

ಬಲಾತ್ಕಾರ ವಿದ್ಯಾಭ್ಯಾಸ

ಕೃಷ್ಣರಾಜಪೇಟೆ, ಮದ್ದೂರು, ಚಾಮರಾಜನಗರ, ಬೇಲೂರು, ಸಾಗರ, ತರೀಕೆರೆ, ದಾವಣಗೆರೆ, ಕೊರಟಗೆರೆ, ಬೌರಿಂಗ್ ಪೇಟೆ ತಾ|| ಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ನಿರ್ಬಂಧ ಶಾಸನವನ್ನು ಜಾರಿಗೆ ತರುವಂತೆ ಸರ್ಕಾರದವರು ಆಜ್ಞೆ ಮಾಡಿದ್ದಾರೆ.

ಸುಭಾಷ್ ಯೂನಿಯನ್

ಮೈಸೂರು ೬

ರಾಷ್ಟ್ರೀಯ ಸರ್ಕಾರವನ್ನು ರಚಿಸಿದ್ದಕ್ಕಾಗಿ ಪಂಡಿತ ನೆಹರೂರವರನ್ನು ಅಭಿನಂದಿಸಿ ರಾಜ್ಯಾಂಗ ರಚನಾ ಸಭೆಗೆ ಚುನಾಯಿತ ಪ್ರತಿನಿಧಿಗಳನ್ನು ಮೈಸೂರಿನಿಂದ ಕಳುಹಿಸಬೇಕು, ಮತ್ತು ಕೋಮುವಾರು ಘರ್ಷಣೆಯಲ್ಲಿ ಮೃತಿ ಹೊಂದಿದವರಿಗೆ ಸಹಾನುಭೂತಿ ತೋರುವ ನಿರ್ಣಯಗಳನ್ನೂ ಮೇಲ್ಕಂಡ ಸಂಘದವರು ಮಾಡಿರುವರು.

ಶ್ರೀನಿವಾಸ

ಮೋಟಾರ್ ಸರ್ವಿಸ್

ಮೈಸೂರು—ಬೆಂಗಳೂರು

ಮೈಸೂರಿನಿಂದ ಬನ್ನೂರು, ಮಳವಳ್ಳಿ, ಸಾತನೂರು, ಕಗ್ಗಲೀಪುರ, ಹಾರೋಹಳ್ಳಿ ಮಾರ್ಗವಾಗಿ ಬೆಂಗಳೂರಿಗೆ ತಲುಪುವುದು.

ಮೈಸೂರಿನಿಂದ ಬೆಳಿಗ್ಗೆ 9-15 ಗಂಟೆಗೆ ಹೊರಟು ಬೆಂಗಳೂರಿಗೆ ಮಧ್ಯಾಹ್ನ 3 ಗಂಟೆಗೆ ತಲುಪುತ್ತೆ. ಮತ್ತು ಬೆಂಗಳೂರಿನಿಂದ ಬೆಳಿಗ್ಗೆ 7-30 ಕ್ಕೆ ಹೊರಟು ಮೈಸೂರನ್ನು ಮಧ್ಯಾಹ್ನ 4-30 ಕ್ಕೆ ತಲುಪುತ್ತೆ.

ಪ್ರೊಪ್ರೈಟರ್, ಶ್ರೀನಿವಾಸ ಮೋಟಾರ್ ಸರ್ವಿಸ್, ಮೈಸೂರು

ಪುನಹ ಬಂದಿವೆ !

ಆದರೆ ಈ ಬಾರಿ ಸಣ್ಣ ಮಕ್ಕಳಿಗೂ, ದೊಡ್ಡವರಿಗೂ ಆಗುವಂತೆ ನವೀನ ಮಾದರಿ

ಬಿಳೀ

ಪುಲ್ಓವರ್ ಸ್ವೆಟರುಗಳು

ಬಂದಿವೆ

ಜಿ. ವಿ. ಸೂರ್ಯನಾರಾಯಣ ಶೆಟ್ಟಿ ಅಂಡ್ ಸನ್ಸ್,

ಸಯ್ಯಾಜಿರಾವ್ ರೋಡ್, ಮೈಸೂರು

OPERA TALKIES

ತಾ|| 7—9—46 ರಿಂದ

ನನ್ನ ಮಗ

(ತಮಿಳು)

* ಯು ಆರ್ ಜೀವರತ್ನಂ,

* ಎಸ್ ಕೃಷ್ಣಮೂರ್ತಿ,

* ಬಾಲಸುಬ್ರಹ್ಮಣ್ಯಂ * ಬೇಬಿ ಕಮಲ

ಪ್ರತಿ ದಿನ ಮೂರು ಆಟಗಳು

ಮನೆಗಳ ಮಾರಾಟ

ಮೈಸೂರು ಇರ್ವಿನ್ ರಸ್ತೆಯಲ್ಲಿ

ಎರಡು ದೊಡ್ಡ ಮನೆಗಳು

ಮಾರಾಟಕ್ಕಿವೆ.

—: ವಿವರಗಳಿಗೆ ವಿಚಾರಿಸಿ :—

ನಿಯೋ ಫರ್ನಿಚರ್ ಕಂಪೆನಿ

ಇರ್ವಿನ್ ರಸ್ತೆ .... ಮೈಸೂರು.

ಸುಸಮಯ ! : : ಕಳೆದುಕೊಳ್ಳಬೇಡಿ !!

ನಿಯೋ ರವರ

ಬಹಿರಂಗ ಹರಾಜು

ತಾ|| 8—9—46 ನೇ ಭಾನುವಾರ ೧೦-೩೦ ಗಂಟೆಗೆ

ಇರ್ವಿನ್ ರೋಡಿನಲ್ಲಿರುವ ಸ್ವಂತ ಅಂಗಡಿಯ ಆವರಣದಲ್ಲಿ

ತಾ|| ೭-೯-೪೬ ನೇ ಶನಿವಾರ ಸಾಮಾನುಗಳನ್ನು ನೋಡಬಹುದು

—: ಸಾಮಾನುಗಳ ವಿವರ :—

ಎಲ್ಲಾ ವಿಧವಾದ ಸಾಗುವಾನಿ ಮತ್ತು ಕರೀ ಮರದ ಮನೆ ಸೌಕರ್ಯಗಳಿಗೆ ಬೇಕಾದ ಫರ್ನಿಚರ್ ಸಾಮಾನುಗಳು, ಬೀರುಗಳು, ತರತರವಾದ ಕುರ್ಚಿಗಳು, ಹೊಸದಾದ ಮಿತ್ರ ಕುರ್ಚಿಗಳು, ಒಂಟಿ ಮತ್ತು ಜೋಡಿ ಮಂಚಗಳು, ಮೇಜುಗಳು, ಡ್ರೆಸ್ಸಿಂಗ್ ಟೇಬಲ್, ಇನ್ನೂ ಅನೇಕ ವಿಧವಾದ ಸಾಮಾನುಗಳು

ಹೊಸದಾದ ವಿಕ್ಟೋರಿಯಾ ಗಾಡಿ ಕುದುರೆ ಸಹಿತ. ಜೀಪ್ ವಿಲ್ಸ್ ಮೋಟಾರು ಕಾರು, ಗುಡ್ ಆರ್ಡರ್ - ಇನ್ನೂ ಇತರ ವಿಧವಾದ ಸಾಮಾನುಗಳು

ಸ್ಥಳದಲ್ಲೇ ಹಣ ತಕ್ಷಣ ಡೆಲಿವರಿ

— . ಹರಾಜು ಮಾಡುವವರು . —

ನಿಯೋ ಫರ್ನಿಚರ್ ಕಂಪೆನಿ

ಇರ್ವಿನ್ ರೋಡ್ ಮೈಸೂರು.

ಈಗ ಹೊಸದಾಗಿ ಸಪ್ಲೈ ಆಗಿ

ಬಿಕರಿಗೆ ಸಿದ್ಧವಾಗಿವೆ

೧ ಟೆಲಿಗ್ರಾಫ್ ಕಲಿಯುವ ಇನ್‌ಸ್ಟ್ರುಮೆಂಟ್, (ಡೆಸ್ಕ್

೨. ಫಿಟೀಲಿನ ತಂತಿಗಳು,

೩. ಫಿಟೀಲ್ ಚಾರ್ಟ್ (ಕವ...

೪. ರೋಜಿನ್, ಕೀ, ಬ್ರಿಡ್ಜ್ ವಗೈರೆ

೫. ವೀಣೆ ಮತ್ತು ತಂಬೂರಿ ತಂತಿ

ಎಂ. ಎಸ್. ಸಿದ್ದಪ್ಪ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ವಾಣಿವಿಲಾಸ ಮಾರ್ಕೆಟ್ ಚೌಕ, ಮೈಸೂರು

ಬೆನಿಫಿಟ್ ! ಬೆನಿಫಿಟ್

ಜನತಾ ಪುಸ್ತಕ ಭಂಡಾರದ

ಸಹಾಯಾರ್ಥವಾಗಿ

ಕಲಾ ಮಂಡಲಿಯವರು

ತಾ|| ೭—೯—೪೬ ಸಂಜೆ

೬—೩೦ ಗಂಟೆಗೆ

ಟೌನ್ ಹಾಲಿನಲ್ಲಿ

ನಾಟಕ ಮತ್ತು ನೃತ್ಯಗಳನ್ನು ಪ್ರದರ್ಶಿಸುವರು. ಸಂಜೆ ೪-೩೦ ರಿಂದ ಟಿಕೇಟುಗಳು ಟೌನ್ ಹಾಲಿನಲ್ಲಿ ಮಾರಲ್ಪಡುತ್ತವೆ.

EASTERNS STD.

[ನಿಜಯಂ ಏಜನ್ಸೀಸ್, ಮೈಸೂರು]

ವಿದ್ಯಾರ್ಥಿ ಕಾಂಗ್ರೆಸ್

ಮೈಸೂರು ೬

ನಗರದ ವಿದ್ಯಾರ್ಥಿ ಕಾಂಗ್ರೆಸ್ಸಿನ ಸಾಮಾನ್ಯ ಸಭೆ ನಿನ್ನೆ ನಡೆದು ಮುಂದಿನ ಸಾಲಿಗೆ ಟೀ.ರಂ. ಪ್ರಾಣೇಶಾಚಾರ್ಯರು ಅಧ್ಯಕ್ಷರಾಗಿಯೂ, ಶ್ರೀಗಳಾದ ಶಾಂತರಾಜು ಮತ್ತು ...ಪ್ಪ ಭೂಪಾಲ್‌ರವರು ಕಾರ್ಯದರ್ಶಿಗಳಾಗಿಯೂ ಚುನಾಯಿಸಲ್ಪಟ್ಟರು. ನೆಹರೂರವರ ನಾಯಕತ್ವದಲ್ಲಿ ರಚಿತವಾಗಿರುವ ... ಸರ್ಕಾರಕ್ಕೆ ಸ್ವಾಗತ ಮತ್ತು ಶುಭ ... ಕೋರುವುದು ಏಕಮತ್ಯದ ಅವಶ್ಯ ಮತ್ತು ಚುನಾಯಿತ ಪ್ರತಿನಿಧಿಗಳನ್ನೇ ... ಸಮಿತಿಗೆ ಕಳುಹಿಸಲು ಒತ್ತಾ... ಈ ಬಗ್ಗೆ ನಿರ್ಣಯಗಳು ಮಂಜೂರಾ...

ಪ್ರಗತಿ ಪಕ್ಷ

ಮೈಸೂರು ಕಾಂಗ್ರೆಸ್ ಪ್ರಗತಿ ಪಕ್ಷದ ...ರಾದ ಶ್ರೀಗಳು ಆರ್. ವಿ. ಭದ್ರಣ್ಣ, ..., ಹೆಚ್. ಎಸ್. ದೊರೆಸ್ವಾಮಿ, ಟಿ. ... ಸುಬ್ಬಣ್ಣ ಇವರುಗಳು ನಂಜನಗೂಡು, ಕೃಷ್ಣರಾಜನಗರ, ಶ್ರೀರಂಗಪಟ್ಟಣ ...ರವೇ ಕಡೆಗಳಿಗೆ ಹೋಗಿ ಪಕ್ಷದ ..., ಧೋರಣೆಗಳನ್ನು ಕೆಲಸಗಾರರಿಗೆ ...ಸಿದರು.

ಸಂಗೀತ ಕಛೇರಿ

ಪ್ರದೋಷ ಮತ್ತು ಗಣಪತಿ ಮಂಗಳ ... ಪ್ರಯುಕ್ತ ನಾಳೆ ಸಂಜೆ ಆರೂವರೆ ...ಗೆ ಕೃಷ್ಣರಾಜ ಮೊಹಲ್ಲಾ ದೊಡ್ಡ ... ದೇವಸ್ಥಾನದಲ್ಲಿ ವಿದ್ವಾನ್ ಟಿ. ಪುಟ್ಟಸ್ವಾಮಯ್ಯನವರಿಂದ ಸಂಗೀತ, ವಿದ್ವಾನ್ ಟಿ. ...ರಾಜಪ್ಪನವರ ಪಿಟೀಲು ಮತ್ತು ವಿ|| ಎಂ. ಪುಟ್ಟಸ್ವಾಮಯ್ಯನವರ ಮೃದಂಗ ನಡೆಯುತ್ತದೆ.

ಗುರು ಮಲ್ಲೇಶ್ವರ ಆಶ್ರಮ

...ರಾಜಾ ಕಾಲೇಜು ಅಧ್ಯಾಪಕರಾದ ಶ್ರೀ ಎಂ. ಯಾಮುನಾಚಾರ್ಯರವರು ನಿನ್ನೆ ದಿನ ಮೇಲ್ಕಂಡ ಆಶ್ರಮದ ವಿದ್ಯಾರ್ಥಿ ಸಂಘದ ಆರಂಭ ಭಾಷಣವನ್ನು ...ಡಿ ವಿದ್ಯಾರ್ಥಿಗಳು ಪತ್ರ್ಯಜೇನಗಾಗಲು ...ಸರಿಸಬೇಕಾದ ಕ್ರಮಗಳನ್ನು ವಿವರಿಸಿ...

ಸಂಗೀತ

...ನ ವಿಶಾರದ ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ ನಾಳೆ ಸಂಜೆ ಆರೂವರೆಗಂಟೆಗೆ ಪ್ರದೋಷ ಪ್ರಯುಕ್ತ ಸಂಗೀತ ಭೂಷಣ ವಿದ್ವಾನ್ ಎ. ನರಸಿಂಹಾಚಾರ್ಯರ ಸಂಗೀತವು ...ರಾಸ್ ವಿದ್ವಾನ್ ವಿ. ಕೆ. ವೆಂಕಟರಾಮಾಚಾರವರ ಪಿಟೀಲು ಮತ್ತು ವಿದ್ವಾನ್ ...ಯ್ಯಂಗಾರ್ಯರವರ ಮೃದಂಗದೊಡನೆ ...ಯುವುದು. ಸರ್ವರಿಗೂ ಸ್ವಾಗತವಿದೆ.

...ರೀ ಬಾವುಟ ಪ್ರದರ್ಶನ

...ಸು.] ನಂಜನಗೂಡು ೬

...ಊರಿನಲ್ಲೂ ಎಂಟು ರಸ್ತೆ ಅಂಗಡಿ ಮಾಲೀಕರೂ ಜಟಕಾ ಗಾಡಿಯವರೂ ... ಬಾವುಟ ಹಾಕಿಕೊಂಡು ಪ್ರತಿಭಟನಾ ...ವಣೆ ನಡೆಸಿದರು.

ಕರಾರಿ ಬಟ್ಟೆ ತಿಂಗಳ ಡಿ ಯು ಸದಾ ...ಸ್ಥಿರುವುದರಿಂದ ವಿಶೇಷ ತೊಂದರೆ ...ಗಿದೆ. ಸಕ್ಕರೆ, ಕಡಲೆ ಬೇಳೆ ಮತ್ತು ...ತಿ ಸ್ವಾಮಗ್ರಿಗಳು ಜನರಿಗೆ ಸಿಗುತ್ತಿಲ್ಲ ...ಡಿ ದುರಸ್ತಿ ಮಾಡುವಾಗ ಮನೆಗಳ ...ಡಿಗಳೇ ಕುಸಿದು ಬೀಳುತ್ತಿವೆ ಮುನ್ಸಿ...ಕೆ ಅವರ್ಕ ಬಸ್ ನಿಲ್ದಾಣದ ಬಳಿ ...ಹೋಟೆಲಿನ ಕೊಳಕ ನೀರಿನ ಗುಂಡಿ...ನ್ನು ತಪ್ಪಿಸುವುದು ಮುಖ್ಯವಾಗಿದೆ

ಫೋ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು



ಸಂಪುಟ ೫] ಶನಿವಾರ ೭—೯—೪೬ [ಸಂಚಿಕೆ ೩೮

ನವರಾತ್ರಿಯಲ್ಲಿ ಜಂಟೀ ಅಧಿವೇಶನಗಳೇ ?

ಐ. ಎನ್. ಎ. ಯವರು ಸೈನ್ಯಕ್ಕೆ

ಬೋಸರು ಸ್ಥಾಪಿಸಿದ ರಾಷ್ಟ್ರೀಯ ಸೈನ್ಯದವರನ್ನು ಭಾರತ ಸೇನಾದಳಕ್ಕೆ ಸೇರಿಕೊಳ್ಳಲು ಏರ್ಪಾಡುಗಳಾಗುತ್ತಿವೆ. ಹಿಂದೆ ಅವರು ಭಾರತ ಸೈನ್ಯದಲ್ಲಿ ಹೊಂದಿದ್ದ ಸ್ಥಾನಗಳನ್ನೇ ಅವರಿಗೆ ಕೊಡಲಾಗುವುದು. ಬಂಧನದಲ್ಲಿರುವ ಐ. ಎನ್. ಎ. ಯವರೆಲ್ಲರನ್ನೂ ಮತ್ತು ಇತರ ರಾಜಕೀಯ ಖೈದಿಗಳನ್ನೂ ಬಿಡುಗಡೆಮಾಡಲು ಸಹ ಏರ್ಪಾಡಾಗುತ್ತಿದೆ

ಬೋಸರ ಬಗ್ಗೆ ೨೦ ನೇ ತಾ|| ಪ್ರಕಟಣೆ

ಬೋಸರು ಬದುಕಿದ್ದಾರೆ; ಆರೋಗ್ಯವಾಗಿಯೂ ಆನಂದದಿಂದಲೂ ಇದ್ದಾರೆ— ಎಂಬುದಾಗಿ ಅಖಿಲ ಭಾರತ ಫಾರ್ವರ್ಡ್ ಬ್ಲಾಕ್ ಜ|| ಸಕ್ರೆಟರಿ ವಿಶ್ವಂಭರದಯಾಳ್ ತ್ರಿಪಾಠಿಯವರು ಹೇಳಿರುವರು. ಬಹು ಬೇಗ ನೇತಾಜಿಯವರು ನಮ್ಮೊಡನೆ ಬಂದು ಸೇರುವರು; ಈ ತಿಂಗಳು ೨೦ ಅಥವಾ ಮುಂದಿನ ತಿಂಗಳ ಆರಂಭದೊಳಗೆ ಬೋಸರ ವಿಷಯವಾಗಿ ಆಶ್ಚರ್ಯಕರವಾದ ಪ್ರಕಟಣೆ ಹೊರಬೀಳುವುದು-ಎಂಬುದಾಗಿ ಅವರು ಹೇಳಿರುವರು.

ಬೋಸರು ನಮ್ಮ ದೇಶದಲ್ಲೇ ಇದ್ದಾರೆ. ತಾವು ಯಾವಾಗ ಕಾಣಿಸಿಕೊಳ್ಳುವರೆಂಬುದನ್ನು ನೆಹರೂರವರಿಗೆ ತಿಳಿಸುತ್ತಾರೆ. ಈ ತಿಂಗಳು ೧೪ ನೇ ತಾ|| ನಡೆಯುವ ಫಾರ್ವರ್ಡ್ ಬ್ಲಾಕ್ ಸಮ್ಮೇಳನದಲ್ಲಿ ಅವರು ಕಾಣಿಸಿಕೊಳ್ಳಬಹುದು-ಎಂಬುದಾಗಿ ಲಾಹೋರಿನ ಪ್ರಭಾತ್ ಪತ್ರಿಕೆಯ ವರದಿ ತಿಳಿಸುತ್ತದೆ.

ಫಿರೋಜಪುರದಲ್ಲಿ ಧೆವ್ವದ ಭೀತಿ

ಮಧ್ಯರಾತ್ರಿವೇಳೆಯಲ್ಲಿ ಒಂದು ದೆವ್ವವು ಆಗಾಗ ಫಿರೋಜ್‌ಪುರದ ದಂಡಿನಲ್ಲಿ ಮನೆಗಳಿಗೆ ನುಗ್ಗಿ ಅಲ್ಲಿನ ಹೆಂಗಸರು ಮಕ್ಕಳಿಗೆ ಭೀತಿಯನ್ನುಂಟುಮಾಡುತ್ತಿದೆ ಯೆಂದು ವದಂತಿಯಾಗಿದೆ. ಈ ದೆವ್ವವು ಅಲ್ಲಿನ ಗವಾಲ್‌ಮಂಡಿ ಪ್ರದೇಶದಲ್ಲಿ ಕಾಣಿಸಿಕೊಳ್ಳುವುದೆಂದೂ ಸ್ವಲ್ಪ ಗಲಾಟೆಯಾದಕೂಡಲೇ ಅದೃಶ್ಯವಾಗುವುದೆಂದೂ ಹೇಳಲಾಗಿದೆ.

○ ಮೈಸೂರು ಟೆಕ್ನಿಕಲ್ ಇನ್ಸ್ಟಿಟ್ಯೂಟ್ ಸೂಪರಿಂಟೆಂಡೆಂಟ್ ಶ್ರೀ ಎಸ್. ವೆಂಕಟರಾಯರಿಗೆ ನಿವೃತ್ತರಾಗುವುದಕ್ಕೆ ಮುಂಚೆ ಈ ತಿಂಗಳು ಎರಡನೇ ತಾ|| ನಿಂದ ನಾಲ್ಕು ತಿಂಗಳು ರಜಾ ಮಂಜೂರಾಗಿದೆ.

ಶಾಸನ ಸಭೆಗಳ ಜಂಟೀ ಅಧಿವೇಶನ

ಸ್ವಂ ಸು ಪ್ರೋ|] ಬೆಂಗಳೂರು ೬

ನವರಾತ್ರಿಯಲ್ಲಿ ಉಭಯ ಶಾಸನ ಸಭೆಗಳ ಜಂಟೀ ಅಧಿವೇಶನವನ್ನು ಕರೆದು ದಿವಾನರು ಸದಸ್ಯರುಗಳನ್ನು ಕುರಿತು ಭಾಷಣ ಮಾಡುವರೆಂದು ತಿಳಿದುಬಂದಿದೆ. ಮತ್ತು ಭಾರತ ರಾಜ್ಯಾಂಗ ಸಮಿತಿಗೆ ಪ್ರತಿನಿಧಿಗಳನ್ನು ಕಳುಹಿಸುವ ಏರ್ಪಾಡನ್ನು ಮಾಡಲಾಗುವುದೆಂದೂ ಸಹ ಹೇಳಲಾಗಿದೆ. ದಿವಾನರು ಈ ತಿಂಗಳು ಕಡೇ ವಾರದಲ್ಲಿ ದೆಹಲಿಗೆ ಹೋಗಬಹುದೆಂದು ತಿಳಿದುಬಂದಿದೆ

ವಿಶ್ವಕರ್ನಾಟಕದ ಪ್ರತಿಬಂಧಕ ರದ್ದಾಗುವುದೇ ?

ಎರಡು ತಿಂಗಳ ಕಾಲ ಪ್ರತಿಬಂಧಕ ಮತ್ತು ಠೇವಣಿ ನೋಟೀಸುಗಳು ವಿಶ್ವಕರ್ನಾಟಕ ಪತ್ರಿಕೆಯ ಮೇಲೆ ಜಾರಿಯಾಗಿರುವುದಷ್ಟೆ ಅವುಗಳನ್ನು ಸಧ್ಯದಲ್ಲಿಯೇ ವಾಪಸು ತೆಗೆದುಕೊಳ್ಳಲಾಗುವುದೆಂದು ತಿಳಿದುಬಂದಿದೆ

○ ○ ○ ○

ಸಾರ್ವಜನಿಕರಿಗೆ ರಾಗಿ ಮತ್ತು ಜೋಳದ ಬದಲು ಕೊಡುತ್ತಿರುವ ಗೋಧಿಹಿಟ್ಟನ್ನು ರೂಗೆ ಏಳು ಪೌಂಡಿನಿಂದ ಒಂಭತ್ತು ಪೌಂಡಿಗೆ ಹಚ್ಚಿಸಿದೆ. ಹೋಟೆಲುಗಳಿಗೆ ಮಾತ್ರ ಆರು ಪೌಂಡ್ ಕೊಡಲಾಗುವುದು

○ ○ ○ ○

ಮುರಾಮತ್ತು ಮತ್ತು ಆಡಿಟ್ ಇಲಾಖೆಗಳಿಗೆ ಹೆಚ್ಚು ನಿಕಟ ಸಂಪರ್ಕವನ್ನುಂಟು ಮಾಡಲು ಸರ್ಕಾರದವರು ಒಂದು ಸ್ವತಂತ್ರ ಶಾಖೆಯನ್ನು ರಚಿಸುವವರಾಗಿದ್ದಾರೆ.

○ ○ ○ ○

ಮದರಾಸು ಪೌರಸಭೆಯ ಕಮೀಷನರ ಖಾಸಗೀ ಗುಮಾಸ್ತರಾದ ಶ್ರೀ ವಿ. ಬಿ. ವಿಶ್ವನಾಥ ಮೊದಲಿಯಾರ್‌ರವರನ್ನು ಇನ್ನೂ ಮೂರು ತಿಂಗಳಿನ ಮೇಲೆ ದಿವಾನರ ಪರ್ಸನಲ್ ಅಸಿಸ್ಟೆಂಟರನ್ನಾಗಿ ನೇಮಿಸಲಾಗಿದೆ.

ರಾಜ್ ಕಮಲ್
ಮೈಸೂರು.
೨೦-೮-೪೬ ರಿಂದ
ಪ್ರತಿ ದಿನ ಮೂರು ಆಟಗಳು
"ದ್ರೌಪದಿ"
ಭೂಮಿಕೆ:— ಸುಶೀಲಾ ರಾಣಿ, ಚಂದ್ರಮೋಹನ್, ಮುಜಮಿಲ್ ಖಾನ್

ಭಾರತೀಯರೆಲ್ಲರೂ ಕಾಂಗ್ರೆಸ್ ಸದಸ್ಯರು

ಇನ್ನು ಮುಂದೆ ಕಾಂಗ್ರೆಸ್ಸಿಗೆ ನಾಲ್ಕಾಣೆಯ ಸದಸ್ಯರನ್ನು ಸೇರಿಸಬೇಕಾಗಿಲ್ಲ. ನಲವತ್ತು ಕೋಟಿ ಭಾರತೀಯರೂ ಅದರ ಸದಸ್ಯರೆಂದು ಭಾವಿಸಲಾಗುವುದು. ರಚನಾತ್ಮಕ ಅಥವಾ ಪಾರ್ಲಿಮೆಂಟರೀ ಕ್ಷೇತ್ರಗಳಲ್ಲಿ ಕೆಲಸ ಮಾಡುವವರು, ಪ್ರಜಾಪ್ರತಿನಿಧಿ, ಶಾಸನ ಸಭೆ ಮತ್ತು ಸ್ಥಳೀಯ ಸಂಸ್ಥೆಗಳ ಸದಸ್ಯರುಗಳು ಇವರುಗಳ ಹೆಸರುಗಳು ಮಾತ್ರ ಕಾಂಗ್ರೆಸ್ಸಿನ ರಿಜಿಸ್ಟರಿನಲ್ಲಿ ಇರುವುವು. ಹೀಗೆಂಬುದಾಗಿ ಕಾಂಗ್ರೆಸ್ಸಿನ ಅಂಗ ರಚನಾ ಸಮಿತಿಯವರು ಶಿಫಾರಸ್ ಮಾಡಿರುತ್ತಾರೆ.

ಕಲ್ಕತ್ತಾ ದುರಂತದ ವಿಚಾರಣೆ

ಕಲ್ಕತ್ತಾ ನಗರದಲ್ಲಿ ಕಳೆದ ತಿಂಗಳು ೧೬ ದಿನಾಂಕದಲ್ಲಿ ನಡೆದ ಮತ ಕಲಹ ಬಗ್ಗೆ ವಿಚಾರಣೆ ನಡೆಸಲು ಫೆಡರಲ್ ಕೋರ್ಟಿನ ಜಡ್ಜಾದ ಮಿ|| ಪ್ಯಾಟ್ರಿಕ್ ಸ್ಪೆನ್ಸರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಏರ್ಪಡಿಸಲಾಗುವುದು. ಇವರಿಗೆ ಸಹಾಯಕರಾಗಿ ಒಬ್ಬ ಹಿಂದೂ ಮತ್ತು ಒಬ್ಬ ಮುಸ್ಲಿಂ ಹೈಕೋರ್ಟ್ ಜಡ್ಜರನ್ನೂ ಸಹ ನೇಮಿಸಲಾಗುವುದು

ಕುರಂದವಾಡ್ ಸಂಸ್ಥಾನದಲ್ಲಿ ಪ್ರಜಾ ಪ್ರಭುತ್ವ

ಕರ್ನಾಟಕ ಪ್ರಾಂತ್ಯಕ್ಕೆ ಸೇರಿರುವ ಕುರಂದವಾಡ ಸಂಸ್ಥಾನದ ರಾಜರು ಪ್ರಜೆಗಳಿಗೆ ಎಲ್ಲಾ ಅಧಿಕಾರವನ್ನು ವಹಿಸುವುದಾಗಿ ತಿಳಿಸಿದ್ದಾರೆ. ಸಾರ್ವಭೌಮತ್ವವು ಪ್ರಜೆಗಳಿಗೆ ಸೇರಿರುವುದ; ತಮ್ಮ ಭವಿಷ್ಯವನ್ನು ಪ್ರಜೆಗಳೇ ನಿರ್ಧರಿಸಿಕೊಳ್ಳುವುದು ಯುಕ್ತವಾಗಿದೆ ಎಂದು ಅವರು ಹೇಳಿರುವರು. ಶಾಸನಾನುಗುಣವಾಗಿ ಪ್ರಾಂತ ರಚನೆಯನ್ನು ಮಾಡುವುದಕ್ಕೂ ಸಹ ಅವರು ಬೆಂಬಲವಿತ್ತಿದ್ದಾರೆ. ರಾಜರುಗಳು ಅತ್ಯಗತ್ಯವಾದ ಖರ್ಚುಗಳಿಗೆ ಮಾತ್ರ ಹಣವನ್ನು ತೆಗೆದುಕೊಳ್ಳಬೇಕೆಂದೂ, ಹೆಚ್ಚು ಹಣದ ಆಸೆಯನ್ನಿಟ್ಟುಕೊಳ್ಳಬಾರದೆಂದೂ ಸಹ ಅವರು ಹೇಳಿರುವರು.

ಹೊಸ ಸರ್ಕಾರಕ್ಕೆ ಸೇನಾಪತಿಗಳ ವಿಧೇಯತೆ

ಭಾರತ ಪ್ರಧಾನ ಸೇನಾಪತಿ ಫೀ|| ಮಾ|| ಸರ್ ಆಚಿನ್ ಲೆಕ್‌ರವರು ಮೊನ್ನೆ ಅನುರಿಂದ ದಿಂದ ಹಿಂದಿರುಗಿದರು. ಯುದ್ಧ ಖಾತೆಯ ಮಂತ್ರಿಯಾದ ಸರ್ದಾರ್ ಬಲದೇವಸಿಂಗರವರಿಗೆ ಅವರು ಅಭಿನಂದನಾ ತಂತಿಯನ್ನು ಕಳುಹಿಸಿ ಅವರ ಕೈಕೆಳಗೆ ಕೆಲಸಮಾಡಲು ಕಾತುರರಾಗಿರುವುದಾಗಿ ತಿಳಿಸಿರುವರು.

ಮೈಸೂರು ಸಂಸ್ಥಾನದ ಟೇಬಲ್ ಟೆನ್ನಿಸ್ ಸಂಘ

ಮೈಸೂರು ಸಂಸ್ಥಾನದ ಟೇಬಲ್ ಟೆನ್ನಿಸ್ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಶ್ರೀಗಳಾದ ವಿ. ಕೆ. ಶ್ರೀನಿವಾಸನ್‌ರವರು ಅಧ್ಯಕ್ಷರಾಗಿಯೂ, ಎ. ಸಿ. ದೇವರಾಜ್, ಪ್ರೊ|| ಬಿ. ಎಸ್. ... ನಸ್ತ್ರು ಬಿ. ಎ. ಎಸ್. ... ಉಪಾಧ್ಯಕ್ಷರಾಗಿಯೂ, ಎಂ. ಎಸ್. ... ಮತ್ತು ಕೆ. ವಿ. ... ಕಾರ್ಯದರ್ಶಿಗಳಾಗಿಯೂ, ಶ್ರೀ ಸಿ. ಎಸ್. ... ಕೋಶಾಧ್ಯಕ್ಷರಾಗಿಯೂ ಆರಿಸಲ್ಪಟ್ಟಿದ್ದಾರೆ.

ಸಾಧ್ವಿ

ತಾ|| ೭-೯-೪೬ ಶನಿವಾರ

ಕೇಂದ್ರ ಸರಕಾರದ ಸಚಿವರಿಗೆ ೧೫೦೦ ರೂ. ಸಂಬಳ

ನೂತನ ಭಾರತ ಸರಕಾರದವರು ಬಂದ ಮೇಲೆ ಅನೇಕ ಕ್ರಾಂತಿಕಾರಕ ಮಾರ್ಪಾಡುಗಳನ್ನು ಮಾಡುತ್ತಿರುವರು ಹಳೇ ಸಂಪ್ರದಾಯದ ಮಾಮೂಲುಗಳೆಲ್ಲಾ ಮಾಯವಾಗುತ್ತಿರುವುವು ಶಿಸ್ತು, ನ್ಯವಸ್ಥೆ, ಕಾರ್ಯದಕ್ಷತೆಗಳು ತಲೆದೋರುತ್ತಿರುವುವು ಸೋಮಾರಿತನವು ನಿರ್ನಾಮವಾಗುತ್ತಿರುವುದು ಪಂಡಿತ ನೆಹರೂ ಮತ್ತು ಇತರ ರಾಷ್ಟ್ರ ನಾಯಕರು ಆಡಳಿತ ಯಂತ್ರದಲ್ಲಿ ನವಚೈತನ್ಯವನ್ನೇ ಉಂಟುಮಾಡಿರುವರು ಪರಕೀಯರು ತಮ್ಮ ರಾಷ್ಟ್ರದ ಅಭ್ಯುದಯಕ್ಕಾಗಿ ಮಾಡಿಕೊಳ್ಳುತ್ತಿದ್ದ ಕಾರ್ಯಸಾಧನೆಯಲ್ಲಿ ಆಡಳಿತ ವರ್ಗದವರಿಗಿದ್ದ ಅನಾಸಕ್ತಿಯು ತೊಲಗಿ ದೇಶಭಕ್ತರು ಮಾತೃಭೂಮಿಗಾಗಿ ಸಲ್ಲಿಸುತ್ತಿರುವ ನಿಸ್ವಾರ್ಥಸೇವೆಯಲ್ಲಿ ತಾವೂ ಭಾಗಿಗಳೆಂಬ ಭಾವನೆ ಮೂಡುತ್ತಿರುವುದು.

ಆಡಳಿತದ ಸೂತ್ರಧಾರಿಗಳಾದವರು ಸ್ವಾರ್ಥ ಸಾಧನೆಯಿಲ್ಲದ ದೀನ ಜನರ ಸೇವೆಯೇ ತಮ್ಮ ಸಂಕಲ್ಪವೆಂದು ಹೇಳಿ ಹೊರಟ ಮಾಗ ಅವರ ಅನುಯಾಯಿಗಳ ಮೇಲೂ ಅದರ ಪ್ರಭಾವವು ಬೀರಲ್ಪಡುವುದು ಸಹಜವೇ ಆಗಿದೆ. ಪ್ರಾಂತಗಳಲ್ಲಿ ಮೊದಲು ಕಾಂಗ್ರೆಸ್ ಮಂತ್ರಿ ಮಂಡಲಗಳು ಬಂದಾಗ ಮಂತ್ರಿಗಳ ಸಂಬಳಗಳು ಐನೂರಕ್ಕೆ ಮೀರಕೂಡದೆಂದು ವಿಧಾಯಕವಾಗಿತ್ತು ಈಗ ಹುಟ್ಟಿ ಬೆಲೆಸ ನಿಮಿತ್ತದಿಂದ ಅದನ್ನು ಸ್ವಲ್ಪಮಟ್ಟಿಗೆ ಹೆಚ್ಚಿಸಿದ್ದಾರೆ. ಕೇಂದ್ರ ಸರ್ಕಾರದ ಮಂತ್ರಿಗಳೂ ತಿಂಗಳಿಗೆ ೧೫೦೦ ರೂಪಾಯಿ ಸಂಬಳವನ್ನು ತೆಗೆದುಕೊಳ್ಳುವುದಾಗಿ ವರದಿಯಾಗಿದೆ ಬಡ ಭಾರತ ದೇಶದಲ್ಲಿ ಜಾರಿಯಲ್ಲಿರುವ ಸಂಬಳಗಳ ಪ್ರಮಾಣವು ಪ್ರಪಂಚದ ಇತರ ಎಲ್ಲ ರಾಷ್ಟ್ರಗಳಿಗಿಂತಲೂ ಹೆಚ್ಚೆಂದೂ ಇದನ್ನು ಬಹಳವಾಗಿ ಕಡಿಮೆ ಮಾಡಬೇಕೆಂದೂ ಕಾಂಗ್ರೆಸ್ಸಿನವರು ಹೇಳುತ್ತಿದ್ದುದಕ್ಕೆ ಅನುಗುಣವಾಗಿ ಹೀಗೆ ಮಾಡಿರುವರು

ವಸ್ತುತಃ ಈಗ ಮಂತ್ರಿಗಳಾಗಿರುವವರಾರೂ ತಮ್ಮ ಜೀವನಕ್ಕೆ ಸಂಬಳವನ್ನೇ ನೆಚ್ಚಿಕೊಂಡಿರುವವರಲ್ಲ ಒಬ್ಬೊಬ್ಬರೂ ಸಾವಿರಾರು ರೂಪಾಯಿನ ನೌಕರರನ್ನು ತಮ್ಮ ಕೈಕೆಳಗೆ ಇಟ್ಟುಕೊಳ್ಳಲು ಸಮರ್ಥರಾದವರೇ ನೆಹರೂ ಮನೆತನದವರು ಒಂದು ಸಮಯದಲ್ಲಿ ತಿಂಗಳಿಗೆ ಐವತ್ತು ಸಾವಿರ ರೂಪಾಯಿ ವರಮಾನ ಹೊಂದುತ್ತಿದ್ದರೆಂದೂ ಅದಕ್ಕೆ ತಕ್ಕ ವರಮಾನದ ತೆರಿಗೆಯನ್ನು ಕೊಡುತ್ತಿದ್ದರೆಂದೂ ತಿಳಿದುಬಂದಿದೆ ಆದುದರಿಂದ ಸರ್ಕಾರದ ಸಂಬಳವು ಅವರಿಗೆ ಜೀವನಾಧಾರವಲ್ಲ, ಗೌರವದ ಕಾಣಿಕೆ ಮಾತ್ರ.

ಕೇವಲ ಸಣ್ಣ ಪುಟ್ಟ ರಾಜ್ಯಗಳ ದಿವಾನರುಗಳಿಗೆ ಐದಾರು ಸಾವಿರ ರೂ ಸಂಬಳವಿದೆ; ಗೌರ್ನರುಗಳಿಗೆ ಹತ್ತು ಸಾವಿರ, ವೈಸರಾಯರಿಗೆ ಇಪ್ಪತ್ತೈದು ಸಾವಿರ-ಹೀಗೆ ಬೋರೇಗೌಡನ ಕಷ್ಟಾರ್ಜಿತವು ಸೂರೆಯಾಗುತ್ತಿದೆ. ಇದನ್ನು ನೋಡಿದವರಿಗೆ ಕೇಂದ್ರ ಸರ್ಕಾರದ ಸಚಿವರ ವೇತನವು ಅಸಹ್ಯಕರವಾಗಿ ಕಾಣಬಹುದು ಆದರೆ ಸಂಬಳಕ್ಕಾಗಿ ನೌಕರಿಯಲ್ಲವೆಂದೂ ಸೇವೆಗಾಗಿ ಅಧಿಕಾರವೆಂದೂ ಅರಿತವರಿಗೆ ಇದೇನೂ ಆಶ್ಚರ್ಯ

ವನ್ನುಂಟುಮಾಡಲಾರದು. ಹೊಸ ಮಂತ್ರಿಗಳು ಸಂಬಳಗಳ ಬಗ್ಗೆ ಹಾಕಿರುವ ನೇಲ್ಪಂಕ್ತಿಯು ಎಲ್ಲ ನೌಕರರನ್ನೂ ತಮ್ಮ ಕರ್ತವ್ಯ ಪಥದಲ್ಲಿ ಸ್ಫೂರ್ತಿಗೊಳಿಸಲೆಂದು ಹಾರೈಸೋಣ

ಬೆನಿಫಿಟ್! ಬೆನಿಫಿಟ್!

ಜನತಾ ಪುಸ್ತಕ ಭಂಡಾರದ ಸಹಾಯಾರ್ಥವಾಗಿ

ಕಲಾ ಮಂಡಲಿಯವರು

ತಾ|| ೭—೯—೪೬ ಸಂಜೆ

೬—೩೦ ಗಂಟೆಗೆ

ಟೌನ್ ಹಾಲಿನಲ್ಲಿ

ನಾಟಕ ಮತ್ತು ನೃತ್ಯಗಳನ್ನು ಪ್ರದರ್ಶಿಸುವರು. ಸಂಜೆ ೪-೩೦ ರಿಂದ ಟಿಕೆಟ್ಟುಗಳು ಟೌನ್ ಹಾಲಿನಲ್ಲಿ ಮಾರಲ್ಪಡುತ್ತವೆ

ಹರಿಕಥೆ

ಹೊಸ ಸಂತೇಪೇಟೆ ಶ್ರೀ ಡಿ.ಪುಟ್ಟಯ್ಯನವರ ಮನೆಯಲ್ಲಿ ನಾಳೆ ಸಂಜೆ ೫ ಗಂಟೆ ಶ್ರೀ ಎಚ್. ಎಸ್. ಶಿವಲಿಂಗಸ್ವಾಮಿಗಳು ರಾಜಾ ಶಿರಿಯಾಳ ಎಂಬ ಹರಿಕಥೆ ನಡೆಯುತ್ತದೆ ಸರ್ವರಿಗೂ ಸ್ವಾಗತವಿದೆ.

OPERA TALKIES

ತಾ|| 7—9—46ರಿಂದ

ನನ್ನ ಮಗ

(ತಮಿಳು)

* ಯು ಆರ್ ಜೀವರತ್ನಂ, * ಎಸ್. ಕೃಷ್ಣಮೂರ್ತಿ, * ಬಾಲಸುಬ್ರಹ್ಮಣ್ಯಂ * ಬೇಬಿಕಲ

ಪ್ರತಿ ದಿನ ಮೂರು ಆಟಗಳು

Edited, printed and published A. R. Nagarajan at the Sadhvi P., D S bhlak Road Mysore

ಮೈಸೂರು ಸ್ಟೇಟ್ ರೈಲ್ವೆ

ಲೋಕೋ ಮತ್ತು ಕಾರ್ ಸೂಪರಿಂಟೆಂಡೆಂಟ್ ಆಫೀಸು, ಮೈಸೂರು.

ತಾ|| 31-8

ನೋಟಿಫಿಕೇಷನ್

1. ಮೈಸೂರು ಸೌತ್‌ನಲ್ಲಿರುವ ರೈಲ್ವೆ ಸೆಂಟ್ರಲ್ ವರ್ಕ್‌ಷಾಪಿಗೆ 1946 ನೇ ವರ್ಷದ ಅಥವ ಟೆಂಡರ್ ಸ್ವೀಕರಿಸಿದ ತಾರೀಖಿನಿಂದ 1947 ನೇ ಜೂನ್ 30 ತಾ|| ವರೆಗೆ ಉಪಯೋಗಿಸಲ್ಪಡುವ ಕಟ್ಟಡದ ಸಾಮಾನುಗಳ ಬಗ್ಗೆ ಸೀಲ್ಡ್ ಟೆಂಡರುಗಳನ್ನು ಕೆಳಗೆ ತಿಳಿಸಿದ ಆಫೀಸಿನಲ್ಲಿ 1946 ನೇ ಸೆಪ್ಟೆಂಬರ್ 18 ನೇ ತಾ|| ಮಧ್ಯಾಹ್ನ 4 ಗಂಟೆಯ ವರೆಗೆ ಸ್ವೀಕರಿಸಲಾಗುವುದು.

ಸೀರಿಯಲ್ ನಂ.	ಸಾಮಾನುಗಳ ವಿವರಣೆ	1 ವರ್ಷಕ್ಕೆ ಬೇಕಾದ ಸುಮಾರು ಮೊತ್ತ	ಯೂನಿಟ್
1)	ಸ್ಯಾಂಡ್ (ಲೋಕಲ್)	100 ಭರ್ತಿ ಗಾಡಿಗಳು	ಭರ್ತಿ ಗಾಡಿ
2)	ನದಿಯ ಮರಳು ಆರ್ ಎಂ.ಸಿ. ಸಮೇತ	2 ಬಿ. ಎಂ ಲೋಡುಗಳು ಅಥವಾ 1200 ಘನ ಅಡಿ	100 ಘನ ಅಡಿಗೆ
3)	ಒಳ್ಳೆಯ ಕೆಂಪು ಮಣ್ಣು	141 ಭರ್ತಿ ಗಾಡಿಗಳು	ಭರ್ತಿ ಗಾಡಿ
4)	ಒಡೆದ ಕ್ವಾರ್ಟ್ಸ್ ಜಲ್ಲಿ	10 ಚದರ ಅಥವಾ 100 ಘನ ಗಜ	ಘನ ಗಜ 1
5)	ಜೇಡಿ ಮಣ್ಣು	24 ಭರ್ತಿ ಗಾಡಿಗಳು	ಭರ್ತಿ ಗಾಡಿ
6)	ಬಟಾಣಿ ಜಲ್ಲಿಗಳು (ಕಾಂಕ್ರೀಟ್ ಕೆಲಸಕ್ಕೆ)	6 ಭರ್ತಿ ಗಾಡಿಗಳು	ಭರ್ತಿ ಗಾಡಿ

2. ಸರಬರಾಯಿ ಮಾಡುವ ಸಾಮಾನುಗಳು ಮಾರಿಯಟ್ಸ್ ಬೊಂಬಾಯಿ ಡಬ್ಲ್ಯು. ಡಿ. ಸ್ಪೆಸಿಫಿಕೇಷನ್‌ಗೆ ಸರಿಬೀಳಬೇಕು.

3. ಮೇಲೆ ಹೇಳಿದ ಸಾಮಾನುಗಳಿಗೆ ಪ್ರತಿಯೊಂದಕ್ಕೂ ಯೂನಿಟ್ ದರಗಳನ್ನು ನಮೂದಿಸಬೇಕು.

4. ಪ್ರತಿಯೊಂದು ಟೆಂಡರು 200 ರೂ ಗಳ ಠೇವಣಿ ಹಣದೊಡನೆ ಇರಬೇಕು ಇಲ್ಲದಿದ್ದಲ್ಲಿ ಡಿಪಾಜಿಟ್ ಮಾಡಬೇಕು. ಸ್ವೀಕರಿಸದ ಟೆಂಡರುದಾರರಿಗೆ ಅದನ್ನು ವಾಪಸು ಮಾಡಲಾಗುವುದು.

5. ಆಡಳಿತದವರು ಕಮ್ಮಿ ಟೆಂಡರುಗಳನ್ನು ಅಥವ ಇನ್ನಾವ ಟೆಂಡರನ್ನು ಸ್ವೀಕರಿಸಬೇಕೆಂದು ಕಡ್ಡಾಯ ಇರುವುದಿಲ್ಲ ಅಥವ ಸ್ವೀಕರಿಸದಿದ್ದಕ್ಕೆ ಕಾರಣ ಕೊಡಬೇಕಾದ್ದಿಲ್ಲ

6. ಕೆಲಸದ ವಿವರಣೆ ಮತ್ತು ಕರಾರು ವಿವರಗಳುಳ್ಳ ಫಾರಂಗಳನ್ನು ನಲ್ಲಿ ಒಂದು ರೂ. ಕೊಟ್ಟು ಪಡೆಯಬಹುದು

ಎಂ. ಚೆಲುವೇ ಅರಸ್,

ಆಕ್ಟಿಂಗ್ ಲೋಕೋ ಮತ್ತು ಕಾರ್ ಸೂಪರಿಂಟೆಂ

ರಾಜಕಮಲ್, ಮೈಸೂರು

ಬಹಳ ದಿನಗಳಿಂದಲೂ ನೀವು ಕಾತುರದಿಂದ ನೋಡ ಬಯಸುತ್ತಿರುವ

"ಸ್ವರ್ಗಸೀಮ"

ಎಂಬ ಶ್ರೀ ವಾಹಿನಿಯವರ ಮಹೋನ್ನತ ತೆಲುಗು ಚಿತ್ರವನ್ನು

ಶೀಘ್ರದಲ್ಲಿಯೇ ನೋಡುವಿರಿ! ಬರುವ ದಿನವನ್ನು ಎದುರು ನೋಡಿರಿ!

* ನಾಗಯ್ಯ, * ಜಯಮ್ಮ, * ಭಾನುಮತಿ.

ಮಾಂತ್ರಿಕ ಸುರಿತ ನಟ ನಟಿಯರುಗಳಿಂದಲೂ ವೈಭವ ಪೂರ್ಣ ದೃಶ್ಯಗಳಿಂದಲೂ, ಮನೋಹರ ಸಂಗೀತದಿಂದಲೂ ವಿರಾಜಮಾನವಾಗಿರುವ ದಿವ್ಯ ಕಲಾಕೃತಿ.

[ವಿಜಯಾ ಏಜನ್ಸೀಸ್, ಮೈಸೂರು]

NEO'S

GRAND AUCTION SALE

On Sunday the 8th Sept 46 at the Showrooms

From 10 30 a. m.

Catalogue

Sofa suits, Tables, gramaphones. records, R. D. single & double Cots glass almirahs, easy chairs, Carved side boards and trays, fountain pens, wrist watchs, Iron Cot, Victoria Cart one tonga without wheels, one Cart with rubber tyres made out of motor parts and many other office and house hold requisites

Inspection on 7-9-46 between 3 and 7 P. M.

NEO FURNITURE CO.,

Reliable Auctioneers and Commission Agents

Irwin Road Mysore

[Vijay Agencies, Mysore]

ಫೋ. ನಂ. 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಂಪುಟ [illegible] ಭಾನುವಾರ [illegible] [ಸಂಚಿಕೆ [illegible]

ಬೆಂಗಳೂರು ನಗರಕ್ಕೆ ಕಾವೇರಿ ನದಿಯ ನೀರು

...ಯರು ಶಾಸನ ಬದ್ಧ ಅಧಿಕಾರಿಗಳು

...ವೈಸರಾಯರಿಗೆ ಎಲ್ಲ ಅಧಿಕಾರಗ...ವು ಅವರು ಈಗ ಅದನ್ನು ...ಗೆ ವಹಿಸಿದ್ದಾಗಿ ಅವರನ್ನು ಈಗ ...ಮೊರೆಗಳಿಗೆ ಹೋಲಿಸಬಹುದು ... ಸಲಹೆ ಕೇಳದೆ ಅವರು ಯಾವ ...ನ್ನು ಮಾಡಲು ಸಾಧ್ಯವಿಲ್ಲ. ಪ್ರಜೆ ...ಬದ್ಧವಾಗಿದ್ದ ರಾಜನ ಶಿರಚ್ಛೇದ ...ಬ್ರಿಟಿಷ್ ಜನರು ಮಾಡಿರುವರು. ...ರತೀಯ ಮಂತ್ರಿಗಳು ಅಂತಹುಕೆ ...ಮಾಡುವುದಿಲ್ಲವೆಂದು ಆಶಿಸೋ ...ರತೀಯರು ಅಹಿಂಸಾ ಮಾರ್ಗ ...ರು ಅವರು ಸತ್ಯ ಮತ್ತು ...ಂದಲೇ ತಮ್ಮ ಗುರಿಯನ್ನು ...ರು-ಎಂ ಬು ದಾ ಗಿ ಮಹಾತ್ಮ ...ವರು ಪ್ರಾರ್ಥನಾ ಸಭೆಯಲ್ಲಿ ...ನರು

...ರ ನೋಟಿಸ್ ಆಜ್ಞೆಗಳ ರದ್ದು

...ಜನಿಕರ ಕೋರಿಕೆಯಂತೆ ಬಾಬೂ ...ಚಂದ್ರ ಬೋಸರ ಮೇಲಿದ್ದ ಪ್ರತಿ...ಜ್ಞೆಗಳೆಲ್ಲವನ್ನೂ ಕೇಂದ್ರ ಸರ್ಕಾ...ರದ್ದು ಮಾಡಿದ್ದರೆ ಈ ಆಜ್ಞೆಗಳನ್ನು ...ಮಾಡಿರುವುದಕ್ಕೆ ಹೆಚ್ಚಿನ ಮಹತ್ವ ...ಇಲ್ಲವೆಂದು ಹೇಳಲಾಗಿದೆ

...ನರು ಬದುಕಿದ್ದಾರೆಂಬುದಕ್ಕೆ ...ವು ದೊರೆತಿಲ್ಲ ಆದರೆ ಯಾವ ...ರ್ಭದಲ್ಲಿಯೂ ಅವರನ್ನು ಏನೂ ...ಮಾಡಿಲ್ಲ. ಅವರಿಗೆ ತೋರಿದ ಕಾರ್ಯ ...ನ್ನು ಕೈಗೊಳ್ಳಲು ಯಾವ ಆಜ್ಞೆ ...ಅಡ್ಡಿ ಪಡಿಸಲಾಗದು

...ನ ತೆರಿಗೆ ರದ್ದಾಗುವುದೇ ?

...ದ್ರ ಸರ್ಕಾರವು ಉಪ್ಪಿನ ತೆರಿಗೆಯ ...ರದ್ದು ಪಡಿಸುವುದರಿಂದ ಆಗುವ ನಷ್ಟ ...ಪರಿಶೀಲಿಸುತ್ತಿದೆ. ಇ ದ ಕ್ಕಾ...ಗೆ ಒಂದು ಸಣ್ಣ ಕಛೇರಿಯನ್ನು ...ದೆಹಲಿಯಲ್ಲಿ ತೆರೆಯಲಾಗಿದೆ ಹಣ ...ಸಚಿವರಾದ ಡಾ॥ ಜಾನ್ ಮಥಾಯಿ ...ದಲ್ಲಿಗೆ ಬಂದನಂತರ ಈ ಬಗ್ಗೆ ಅಧಿ... ಪ್ರಕಟಣೆ ಹೊರ ಬೀಳಲಿರುವುದು.

...ರವರ ದಸ್ತಗಿರಿಯೇ ?

...ರತದಲ್ಲಿ ಶಾಂತಿ ಮತ್ತು ಶಿಸ್ತನ್ನು ...ಡುವ ಸಲುವಾಗಿ ಕೇಂದ್ರ ಸರ್ಕಾರದ ...ಮಂತ್ರಿ ನೆಹರೂರವರು ಜಿನ್ನಾರನ್ನು ...ನ್ನು ಬಂಧಿಸುವರೆಂದು ಲಂಡನ್ನಿನ ...ಮೇಲ್ ಪತ್ರಿಕೆ ಪ್ರಕಟಿಸಿದೆ.

...ಮೊಹಲ್ಲಾ ಕಾಂಗ್ರೆಸ್ ಸಮಿತಿ

... ಮೈಸೂರು ೮

...ನ್ನೆ ದಿನ ಕಿಲ್ಲೇ ಮೊಹಲ್ಲಾ ಕಾಂಗ್ರೆಸ್ ...ಸಭೆಯು ಶ್ರೀ ಎ ಕೃಷ್ಣಮೂರ್ತಿ...ರ ಅಧ್ಯಕ್ಷತೆಯಲ್ಲಿ ನಡೆಯಿತು. ಎಲ್ಲಾ ...ಸ್ಥರ ಓಟುಗಳಿಂದ ಚುನಾಯಿತರಾದ ...ರಾಜ್ಯಾಂಗ ರಚನಾ ಸಮಿತಿಗೆ ...ಪಡಬೇಕೆಂದು ಒತ್ತಾಯ ಪಡಿಸುವ ...ತಾತ್ಕಾಲಿಕ ಸರ್ಕಾರವನ್ನು ರಚಿಸಿ ...ಪಂಡಿತ ನೆಹರೂರವರನ್ನು ಅಭಿನಂದಿ...ಸು ಮತ್ತು ಕಲ್ಕತ್ತಾ ಮತ್ತು ...ಎ.ಗಳಲ್ಲಿ ಮೃತರಾದವರಿಗೆ ಶಾಂತಿ ...ಕೋರಿ ಅಲ್ಲಿನ ಜನರಿಗೆ ಸಹಾನು...ತಿಯನ್ನು ... ರು ವ ದು-ಇವೇ ...ಬಾದ ನಿರ್ಣಯಗಳು ಮಾಡಲ್ಪ...

ಬೆಂಗಳೂರಿಗೆ ಕಾವೇರಿ ನೀರು

ಶಿವನಸಮುದ್ರ ಮತ್ತು ಶಿಂಷಾಗಳಿಂದ

ಸ್ವಂ ಸು] ಬೆಂಗಳೂರು ೮

ದಿನ ದಿನವೂ ಬೆಳೆಯುತ್ತಿರುವ ಬೆಂಗಳೂರು ನಗರಕ್ಕೆ ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಈಗ ಒದಗುತ್ತಿರುವ ನೀರು ಸ್ವಲ್ಪವೂ ಸಾಲದೆ ನಗರ ಮತ್ತು ದಂಡಿನ ನಿವಾಸಿಗಳಿಗೆ ವಿಶೇಷ ತೊಂದರೆಯಾಗುತ್ತಿದೆ. ಇದನ್ನು ತಪ್ಪಿಸಿ ಜನರಿಗೆ ಸದಾ ಕಾಲದಲ್ಲಿಯೂ, ಯಥೇಚ್ಛವಾಗಿ ನೀರು ದೊರೆಯುವಂತೆ ಮಾಡಲು ಕಾವೇರಿಯ ನೀರನ್ನು ಬೆಂಗಳೂರಿಗೆ ಸಾಗಿಸುವ ಭಾರಿ ಯೋಜನೆಯೊಂದು ಸಿದ್ಧವಾಗಿದೆ. ಆರ್ಥಿಕ ಸನ್ನಿವೇಶದ ಯೋಜನಾ ಸಮಿತಿಯವರು ಇದನ್ನು ಅನುಮೋದಿಸಿದ್ದಾರೆ ಆದರೆ ಇದು ಸಧ್ಯಕ್ಕೆ ಸಾಧ್ಯವಲ್ಲವೆಂದು ಆರ್ಥಿಕ ಉಪಸಮಿತಿಯವರು ಭಾವಿಸಿದ್ದಾರೆ.

ಈ ವಿಷಯವನ್ನು ಪರಿಶೀಲಿಸಲು ದಿವಾನರು ಸಂಬಂಧಪಟ್ಟ ಅಧಿಕಾರಿಗಳೊಡನೆ ಸಮಾಲೋಚನಾ ಸಭೆಯನ್ನು ಗುರುವಾರ ನಡೆಸಿದರು. ಈ ಉದ್ಯಮವನ್ನು ಕಾರ್ಯಗತ ಮಾಡುವ ಬಗ್ಗೆ ಸಾಮಾನ್ಯ ಒಪ್ಪಂದಕ್ಕೆ ಬರಲಾಯಿತೆಂದು ತಿಳಿದುಬಂದಿದೆ

ಶಿವಸಮುದ್ರ ಮತ್ತು ಶಿಂಷಾ ಜಲಪಾತಗಳಿಂದ ಬೆಂಗಳೂರಿಗೆ ಕಾವೇರಿಯ ನೀರನ್ನು ಸಾಗಿಸುವ ಪ್ರಯತ್ನವು ಈ ಉದ್ಯಮದ ಉದ್ದೇಶವಾಗಿದೆ. ತಿಪ್ಪಗೊಂಡನಹಳ್ಳಿಯಿಂದ ಹದಿನಾರು ಮೈಲಿ ದೂರದವರೆಗೆ ಈಗ ನೀರನ್ನು ಸಾಗಿಸಲಾಗುತ್ತಿದೆ. ಮುಂದೆ ಶಿವಸಮುದ್ರದಿಂದ ಅರವತ್ತು ಮೈಲಿಯೂ, ಶಿಂಷಾದಿಂದ ಸಲವತ್ತೆಂಟು ಮೈಲಿಯೂ ಆಗುವಷ್ಟು ದೂರದಿಂದ ನೀರನ್ನು ಪಂಪು ಮಾಡಲಾಗುವುದು. ಈ ಯೋಜನೆಯು ಕಾರ್ಯಗತವಾದರೆ ಬೆಂಗಳೂರು ನಗರ ಮತ್ತು ದಂಡುಗಳಿಗೆ ಸದಾ ಕಾಲವೂ ಸಮೃದ್ಧಿಯಾದ ಜಲ ಸೌಕರ್ಯವು ಒದಗುವುದೆಂದು ನಂಬಲಾಗಿದೆ.

ಕರ್ನಾಟಕ ಸಂಘ

ಮೈಸೂರು ೮ ಇಂಟರ್ ಮೀಡಿಯಟ್ ಕಾಲೇಜಿನ ಕರ್ನಾಟಕ ಸಂಘದ ಆರಂಭ ಭಾಷಣವನ್ನು ಶ್ರೀ ಎ ಆರ್ ಕೃಷ್ಣಶಾಸ್ತ್ರಿ ಯವರು ನಾಳೆ ಸಾಯಂಕಾಲ ೫ ಗಂಟೆಗೆ ಇಂಟರ್ ಕಾಲೇಜಿನ ಒಳ ಅಂಗಳದಲ್ಲಿ ಮಾಡುತ್ತಾರೆ. ಸರ್ವರಿಗೂ ಆಹ್ವಾನ ವುಂಟು

ಎ.ಐ.ಸಿ.ಸಿ. ಗೆ ಬೋಸರು ಬರುತ್ತಾರೆ

ದೆಹಲಿಯಲ್ಲಿ ನಡೆಯಲಿರುವ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಭೆಯ ಹೊತ್ತಿಗೆ ಬಾಬು ಸ.ಭಾಷ್‌ಚಂದ್ರ ಬೋಸರು ಬರುಬಹುದೆಂದು ನಂಬಲಾಗಿದೆ. ಅವರು ಭಾರತದಲ್ಲೇ ಇದ್ದಾರೆ. ಅವರು ಹಿಂದಿರುಗಲು ಇರುವ ಕಾನೂನಿನ ಅಡಚಣೆಗಳನ್ನು ರದ್ದು ಮಾಡಿದರೆ ಸ್ವತಂತ್ರ ಪ್ರಜೆಯಾಗಿ ವಾಪಸು ಬರಲು ಅಪೇಕ್ಷಿಸಿರುತ್ತಾರೆ ಎಂಬುದಾಗಿ ಫಾರ್ವರ್ಡ್ ಬ್ಲಾಕ್‌ನ ಸಕ್ರೆಟರಿ ವಿಶ್ವಂಭರ ದಯಾಳ್ ತ್ರಿಪಾಠಿಯವರು ಇತ್ತೀಚೆಗೆ ಕೊಟ್ಟ ಹೇಳಿಕೆಯಲ್ಲಿ ತಿಳಿಸಿರುತ್ತಾರೆ

ಸರ್ಕಾರೀ ನೌಕರರಿಗೆ ರಾಷ್ಟ್ರೀಯ ಉಡುಪು

ರಾಷ್ಟ್ರೀಯ ಸರ್ಕಾರವು ಬಂದುದರಿಂದ ಇಂಡಿಯಾ ಸರ್ಕಾರದ ನೌಕರರು ರಾಷ್ಟ್ರೀಯ ಉಡುಪನ್ನೇ ಧರಿಸಲು ಹವಣಿಸುತ್ತಿದ್ದಾರೆ. ತನಗೆ ಬೇಕಾದ ಟೋಪಿಗಳನ್ನು ಹಾಕಿಕೊಂಡು ಬರಲು ಅವರಿಗೆ ಅನುಮತಿ ಕೊಡಲಾಗುವುದೆಂದು ತಿಳಿದುಬಂದಿದೆ. ಹಿಂದಿನ ದಿನ ಟೋಪಿಯನ್ನು ಹಾಕಿದ್ದವರನ್ನು ಈಗ ಹಾಕುತ್ತಿದ್ದಾರೆ ಇದರ ... ಅವರನ್ನು ಹಿಂಗಿಸುತ್ತಲೇ ಇದ್ದಾರೆ. ನೆಹರೂರವರ ... ಉಡುಪು ಹೆಚ್ಚು ಜಾರಿಗೆ ಬರುತ್ತಿದೆ

ವಜೀರಿಸ್ಥಾನದ ಮೇಲೆ ಬಾಂಬು

ವಿಮಾನದಿಂದ ವಜೀರಿಸ್ಥಾನದ ಮೇಲೆ ಸಾಮೂಹಿಕವಾಗಿ ಬಾಂಬುಗಳನ್ನು ಹಾಕಲಾಗುತ್ತಿದೆ. ಈ ವಿಷಯವನ್ನು ಗೋಪ್ಯವಾಗಿ ಇಡಲಾಗಿದೆ-ಎಂ.ಬಿ. ಖಾನ್ ಅಬ್ದುಲ್ ಗಫಾರ್ ಖಾನರು ತಿಳಿಸಿರುತ್ತಾರೆ

ಆಸ್ಟ್ರೇಲಿಯಾದಲ್ಲಿ ಭಾರತೀಯ ಸಿಪಾಯಿಗಳಿಗೆ ಸ್ಥಾನವಿಲ್ಲ

ಭಾರತೀಯ ಸಿ ಪಾ ಯಿ ಗ ಳ ವಸತಿ ಬಂದು ನೆಲೆಸಲು ಅನುಮತಿ ಕೊಡಬೇಕೆಂದು ಆಸ್ಟ್ರೇಲಿಯಾ ಸರ್ಕಾರಕ್ಕೆ ವೈಸರಾಯರಾದ ಲಾರ್ಡ್ ವೇವಲ್ಲರ ಮೂಲಕ ಮಾಡಿಕೊಂಡಿರುವ ಅಹವಾಲನ್ನು ತಿರಸ್ಕರಿಸಲಾಗುವುದೆಂದು ವರದಿಯಾಗಿದೆ. ಈ ಅಹವಾಲಿಗೆ ಬ್ರಿಟಿಷ್ ಸರ್ಕಾರದ ಬೆಂಬಲವಿದೆ ಆದರೆ ಆಸ್ಟ್ರೇಲಿಯಾದ ಬಿಳಿಯ ನೀತಿಗೆ ಇದು ಸವಾಲು ಹಾಕಿದಂತೆ ಇದೆಯೆಂದು ಭಾವಿಸಲಾಗಿದೆ ಅವರೂ ಅಲ್ಲಿನ ಸರ್ಕಾರದವರು ಭಾರತೀಯ ಸಿಪಾಯಿಗಳ ಪ್ರವೇಶಕ್ಕೆ ಅವಕಾಶ ಕೊಡುವುದಿಲ್ಲವೆಂದು ತಿಳಿದುಬಂದಿದೆ

ಬಿಲ್ಲುಗಳ ಶೋಧನೆಗೆ ಅಧಿಕಾರ

ತಮ್ಮ ತಮ್ಮ ಪ್ರಾಂತಗಳಲ್ಲಿ ಇರುವ ಅಕ್ಕಿ ಗಿರಣಿಗಳನ್ನು ಭೇಟಿಮಾಡಿ ಪರೀಕ್ಷೆ ಮಾಡುವ ಅಧಿಕಾರವನ್ನು ಮದರಾಸ್ ಸರ್ಕಾರವು ಅಲ್ಲಿನ ಶಾಸನಸಭಾ ಸದಸ್ಯರುಗಳಿಗೆ ಕೊಟ್ಟಿರುವುದಾಗಿ ತಿಳಿದುಬಂದಿದೆ

ಅಮೆರಿಕದಿಂದ ಅಕ್ಕಿ ಲವಾಜಮೆ ಪೊಟ್ಟಣಗಳು

ಮದರಾಸಿನಲ್ಲಿರುವ ಆಹಾರದ ಅಭಾವವನ್ನು ಅದನ್ನು ಕಡಿಮೆ ಮಾಡಲು ಅಲ್ಲಿನ ಸರ್ಕಾರದವರು ಅಮೆರಿಕದಿಂದ ಎಪ್ಪತ್ತೈದು ಲಕ್ಷ ಟನ್ ಅಕ್ಕಿ ಲವಾಜಮೆ ಪೊಟ್ಟಣಗಳನ್ನು ತರಿಸಲು ಏರ್ಪಾಡು ಮಾಡಿರುತ್ತಾರೆ ಒಂದೊಂದು ಪೊಟ್ಟಣದಲ್ಲಿ ನಾಲ್ಕು ಔನ್ಸು ಅಕ್ಕಿ ಒಣಗಿಸಿದ ತರಕಾರಿ ಮತ್ತು ಸಂಬಾರದ ಸಾಮಾನುಗಳು ಇರುತ್ತವೆ ಬೇಯಿಸಿದ ಮೇಲೆ ಅವು ಹದಿನಾರು ಔನ್ಸು ತೂಗುತ್ತವೆ. ಎರಡು ಊಟಕ್ಕೆ ಇದು ಸಾಕಾಗುವುದೆಂದು ಹೇಳಲಾಗಿದೆ ಒಂದೊಂದು ಪೊಟ್ಟಣಕ್ಕೆ ಐದಾಣೆ ಬೆಲೆಯಾಗಬಹುದೆಂದು ಅಂದಾಜಾಗಿದೆ

ಕಾಂಗ್ರೆಸ್ ಅಧ್ಯಕ್ಷತೆಗೆ ಶ್ರೀ ಕೃಪಲಾನಿ

ಪಂಡಿತ ನೆಹರೂರವರ ಬದಲು ಆಚಾರ್ಯ ಕೃಪಲಾನಿಯವರನ್ನೇ ಕಾಂಗ್ರೆಸ್ ಮಹಾಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸಲಾಗುವುದೆಂದು ಖಚಿತವಾಗಿ ಗೊತ್ತಾಗಿದೆ ಈ ಬಗ್ಗೆ ಕೃಪಲಾನಿಯವರಿಗೆ ಮಹಾತ್ಮಾ ಆಶೀರ್ವಾದವು ದೊರೆತಿದೆ ಎಂದು ಹೇಳಲಾಗಿದೆ

ಬೆಂಗಳೂರಿಗೆ ವಿದ್ಯುಚ್ಛಕ್ತಿ ಟ್ರಾಲಿಗಳು

ಸ್ವಂ. ವ. ಫೋ] ಬೆಂಗಳೂರು ೮

ನಲವತ್ತೆಂಟು ಲಕ್ಷ ರೂ ಪಾ ಯಿ ನ ಯೋಜನೆಯಲ್ಲಿ ಬೆಂಗಳೂರು ಮತ್ತು ದಂಡಿನಲ್ಲಿ ವಿದ್ಯುಚ್ಛಕ್ತಿಯ ಟ್ರಾಲಿಗಳನ್ನು ಹಾಕಲು ಆರ್ಥಿಕ ಸನ್ನಿವೇಶದ ಹಣ ಕಾಸಿನ ಸಮಿತಿಯು ನಿರ್ಧರಿಸಿರುತ್ತದೆ ಮತ್ತು ಐವತ್ತು ಲಕ್ಷ ರೂಪಾಯಿನಲ್ಲಿ ಬೆಂಗಳೂರಿನ ಸಮೀಪದ ಪ್ರದೇಶಗಳಿಗೆ ವಿದ್ಯುಚ್ಛಕ್ತಿ ರೈಲುಗಳನ್ನು ಬಿಡುವುದಕ್ಕೂ ಶಿಫಾರಸು ಮಾಡಲಾಗಿದೆ ತುಮಕೂರು ಮತ್ತು ದೊಡ್ಡಬಳ್ಳಾಪುರಗಳಿಗೆ ಮೊದಲು ಈ ರೈಲನ್ನು ಹಾಕಿ ಆನಂತರ ಬೌರಿಂಗ್ ಪೇಟೆವರೆಗೆ ಬಿಡಲಾಗುವುದು. ಟ್ರಾಲಿ ಬಸ್ಸುಗಳನ್ನು ಪೌರಸಭೆಯು ಮೇಲ್ವಿಚಾರಣೆಯಲ್ಲಿಯೇ ನಡೆಸಬೇಕೆಂದೂ ಸಹ ಸೂಚಿಸಲಾಗಿದೆ

ಅರುಣ ಆಸಫ್ ಅಲಿಯವರ ಆಗಮನ

ದಕ್ಷಿಣ ಭಾರತದ ಪ್ರವಾಸವನ್ನು ಮುಗಿಸಿಕೊಂಡು ನಿನ್ನೆ ದಿನ ಶ್ರೀಮತಿ ಅರುಣ ಆಸಫ್ ಅಲಿಯವರು ಬೆಂಗಳೂರಿಗೆ ಬಂದಿದ್ದರು. ದಂಡಿನಲ್ಲಿ ಕಾಂಗ್ರೆಸ್ ಕೆಲಸಗಾರರನ್ನು ಕುರಿತು ಭಾಷಣವನ್ನು ಮಾಡಿದರು. ... ಅಜ್ಞಾತವಾಸದಲ್ಲಿದ್ದಾಗ ಬೆಂಗಳೂರಿಗೆ ಬಂದಿದ್ದಾಗಿ ಯೂ ... ಒದಗುವುದಾಗಿಯೂ ಹೇಳಿದರು. ಆನಂತರ ಮದರಾಸಿಗೆ ತೆರಳಿದರು.

ಬ್ರಿಟಿಷ್ ಸೈನ್ಯದ ... ಫೌಜಿನ ... ಮೈಲಿ ... ವಿಮಾನವನ್ನು ... ವಿಚಾರಿಸುವವ...

ಸಾಧ್ವಿ
ತಾ॥ ೮-೯-೪೬ ಭಾನುವಾರ

ನೌಕರರ ಉಡುಪಿನ ನಿರ್ಬಂಧದ ನಾಶ

ಸರ್ಕಾರಿ ನೌಕರರು ತಮ್ಮ ಕೆಲಸದ ಮೇಲೆ ಹಾಜರಾಗುವಾಗ ಯಾವುದೇ ಬಗೆಯ ನಿರ್ದಿಷ್ಟವಾದ ಉಡುಪನ್ನು ಧರಿಸಿಕೊಂಡು ಬರಬೇಕೆಂಬ ನಿರ್ಬಂಧವನ್ನು ಹೊಸ ಭಾರತ ಸರ್ಕಾರದವರು ತೆಗೆದು ಹಾಕುವರೆಂದೂ, ತಮ್ಮ ರಾಷ್ಟ್ರೀಯ ಉಡುಪಿನಲ್ಲಿಯೇ ನೌಕರರು ಬರಲು ಅವಕಾಶ ಕೊಡುವರೆಂದೂ ವರದಿಯಾಗಿದೆ. ಹೊಸ ಸರ್ಕಾರದವರು ಜಾರಿಗೆ ತರಲಿರುವ ಮುಖ್ಯವಾದ ಸುಧಾರಣೆಗಳಲ್ಲಿ ಇದೂ ಒಂದು. ಇದನ್ನು ನೌಕರರೆಲ್ಲರೂ ಅತ್ಯಂತ ಆನಂದದಿಂದ ಸ್ವಾಗತಿಸುವುದರಲ್ಲಿ ಸಂದೇಹವಿಲ್ಲ.

ಉಡುಪಿನ ನಿರ್ಬಂಧವು ಇದುವರೆಗೆ ಮಾಡಿರುವ ಹಾವಳಿಯು ಅಷ್ಟಿಷ್ಟಲ್ಲ. ಅದಕ್ಕಾಗಿ ನೌಕರರು ತಮ್ಮ ಶಕ್ತಿ ಮೀರಿ ಹಣವನ್ನು ವ್ಯಯ ಮಾಡಿರುತ್ತಾರೆ. ಅದರಲ್ಲೂ ಪಾಶ್ಚಾತ್ಯ ರೀತಿಯ ಉಡುಪನ್ನು ಧರಿಸುವ ವ್ಯಾಮೋಹಕ್ಕೆ ಒಳಗಾಗಿ ಮತ್ತೂ ಹೆಚ್ಚಿನ ಕಷ್ಟಗಳಿಗೆ ಗುರಿಯಾಗಿದ್ದಾರೆ. ಈ ಬಗೆಯ ಉಡುಪು ಅವರ ಕೆಲಸಕಾರ್ಯಗಳಿಗೆ ಅಡಚಣೆಯನ್ನುಂಟು ಮಾಡುವುದೆಂಬ ಅರಿವನ್ನೂ ಸಹ ಹೊಂದದೆ ಇದ್ದಾರೆ. ಪರಕೀಯರಾದ ಅಧಿಕಾರಿಗಳ ಪ್ರಸನ್ನತೆಗೆ ಪಾತ್ರರಾಗುವರೆಂಬ ನಂಬಿಕೆಯಿಂದಲೂ ಹೀಗೆ ಮಾಡುತ್ತ ಬಂದಿದ್ದಾರೆ.

ತಮ್ಮ ಕೈ ಕೆಳಗಿನ ನೌಕರರು ವೇಷಭೂಷಣಗಳಲ್ಲಿ ಆಧುನಿಕ ರೀತಿಗೆ ತಕ್ಕಂತೆ ಅಚ್ಚುಕಟ್ಟಾಗಿ ಇರಬೇಕೆಂದು ಬಯಸುವ ಅಧಿಕಾರಿಗಳೂ ಇದ್ದಾರೆ. ಸಾಹೇಬರನ್ನು ಮೀರಿಸುವಂತೆ ಇವರು ವರ್ತಿಸುವರು. ಸರ್ಕಾರದ ಕಾರ್ಯ ದಕ್ಷತೆಯು ಬಟ್ಟೆಬರೆಯ ಬೆಡಗಿನಲ್ಲಿಯೇ ಅಡಗಿದೆಯೆಂಬುದು ಇಂತಹವರ ಮನೋಭಾವ.

ಸಾರ್ವಜನಿಕರ ಮೇಲೆಯೂ ಈ ದುಷ್ಟ ಪದ್ಧತಿಯ ಪ್ರಭಾವವು ಆಗದೇ ಇಲ್ಲ. ಉನ್ನತಾಧಿಕಾರಿಗಳಿಗೂ ಸರ್ಕಾರಿ ಕಛೇರಿಗಳಿಗೂ, ಭೇಟಿ ಕೊಡುವಾಗ ಅಂದಚಂದದ ಬಟ್ಟೆಬರೆಗಳಿಂದಲೇ ಹೋಗಬೇಕೆಂಬ ಭಾವನೆಯು ಜನರಲ್ಲಿಯೂ ಬೆಳೆದು ಬಂದಿದೆ. ಹೀಗೆ ಅಧಿಕಾರಿ ಆವರಣದಲ್ಲಿಯೂ, ಸಾರ್ವಜನಿಕ ಜೀವನದಲ್ಲಿಯೂ ಬಟ್ಟೆಗೆ ಬೆಲೆಯು ದೊರೆಯುತ್ತಿದೆಯೇ ವಿನಾ ಯೋಗ್ಯತೆಗೆ ಅಲ್ಲ. ಜರೀ ರುಮಾಲು, ನೀಳವಾದ ಅಂಗಿ, ಜರತಾರಿ ಅಂಗ ವಸ್ತ್ರಗಳನ್ನು ಧರಿಸಿದವರಿಗೆ ದೊರೆಯುವ ಪುರಸ್ಕಾರವು ಕಂಬಳಿ ಅಥವಾ ದುಪಟಿಯನ್ನು ಹೊದೆಯುವ ನಾಡಿನ ಬೆನ್ನೆಲುಬೆಂತಿರುವ ಬಡ ಜೋಗೇಗೌಡನಿಗೆ ದೊರೆಯುವುದಿಲ್ಲ.

ವಿದ್ಯಾರ್ಥಿ ವೃಂದದಲ್ಲಿಯೂ ಈ ಬಗೆಯ ವಸ್ತ್ರ ವ್ಯಾಮೋಹವು ವಿಪರೀತವಾಗಿ ತಾಂಡವವಾಡುತ್ತಿದೆ. ನೆಕ್ ಟೈ, ಕಾಲರ್, ಬೂಟು, ಓಪನ್ ಕಾಲರ್ ಕೋಟು ಮುಂತಾದುವುಗಳನ್ನೇ ವಿದ್ಯಾರ್ಥಿಗಳು ಹಾಕಬೇಕೆಂದ ವಿದ್ಯಾ ಇಲಾಖೆಯ ಮುಖ್ಯಾಧಿಕಾರಿಗಳು ಇಷ್ಟು ದಿನ ಹೊರಡಿಸುತ್ತಿದ್ದ ಕಾಲವೂ ಒಂದಿತ್ತು. ಈಗ ಅದೆಲ್ಲಾ ಮಾಯವಾಗಿದೆ. ವಿದ್ಯಾರ್ಜನೆಗೆ ವೇಷಭೂಷಣ

ವಿದ್ಯಾಲಯದ ಪ್ರಶಸ್ತಿ ವಾಪಸು ತೆಗೆದುಕೊಳ್ಳಬೇಕು

ಆಗಸ್ಟ್ ಗಲಭೆಗಳ ಕಾಲದಲ್ಲಿ ಪ್ರಜೆಗಳಿಗೆ ವಿಶೇಷ ತೊಂದರೆಗಳನ್ನುಂಟುಮಾಡಿದುದಕ್ಕಾಗಿ ಸಂಯುಕ್ತ ಪ್ರಾಂತದ ಗೌರ್ನರಾಗಿದ್ದ ಸರ್ ಹ್ಯಾಲೆಟ್‌ರವರಿಗೆ ಆಗ್ರಾ ವಿಶ್ವವಿದ್ಯಾಲಯದವರು ಕೊಟ್ಟಿದ್ದ ಡಿ. ಲಿಟ್. ಎಂಬ ಗೌರವದ ಪ್ರಶಸ್ತಿಯನ್ನು ಅವರ ವರ್ತನೆಯ ಕಾರಣದಿಂದ ಕಾನೂನು ಪ್ರಕಾರ ವಾಪಸು ತೆಗೆದುಕೊಳ್ಳಬೇಕೆಂದು ಅಲ್ಲಿನ ಸೆನೆಟ್ ಸದಸ್ಯರೊಬ್ಬರು ನಿರ್ಣಯವನ್ನು ಕಳುಹಿಸಿದ್ದಾರೆ.

ಭಾರತದ ರಾಯಭಾರಿಗಳು

ಅಂತರ ರಾಷ್ಟ್ರೀಯ ವ್ಯವಹಾರಗಳಲ್ಲಿ ಭಾಗವಹಿಸಲು ಕೇಂದ್ರ ಸರಕಾರದವರು ರಾಜನೀತಿ ನಿಪುಣರಾದ ರಾಯಭಾರಿಗಳ ದಳವೊಂದನ್ನು ನೇಮಿಸಲಿರುವರೆಂದು ತಿಳಿದುಬಂದಿದೆ. ದೇಶವಿದೇಶಗಳಲ್ಲಿ ಅವರಿಗೆ ಈಗಿರುವುದಕ್ಕಿಂತಲೂ ಹೆಚ್ಚಿನ ಸ್ಥಾನಮಾನವು ದೊರೆಯುವುದೆಂದು ಹೇಳಲಾಗಿದೆ.

ಗಳು ಉಪಕರಣವಲ್ಲವೆಂಬ ಅಭಿಪ್ರಾಯವು ಬೇರೂರಿದೆ.

ಇಂದು ಕೇಂದ್ರ ಸರ್ಕಾರವನ್ನು ನಡೆಸುತ್ತಿರುವವರೆಲ್ಲರೂ ಸರಳ ಜೀವನದ ಆದರ್ಶ ಮೂರ್ತಿಗಳು. ಒಬ್ಬರೂ ರುಮಾಲನ್ನು ಸಹ ಹಾಕುವುದಿಲ್ಲ. ಗಾಂಧೀ ಟೋಪಿಯನ್ನೇ ಧರಿಸುವರು. ಶ್ರೀ ಸಿ. ರಾಜಗೋಪಾಲಾಚಾರಿಯವರಂತಹವರು ಬರೀ ತಲೆಯಲ್ಲಿಯೇ ಇರುವರು. ಆದರೂ ಅವರ ಮೇಧಾ ಶಕ್ತಿ ಮತ್ತು ಕಾರ್ಯ ದಕ್ಷತೆಗಳು ಯಾವ ದೇಶದ ಪ್ರಧಾನ ಮಂತ್ರಿಗಳಿಗೂ ಎರಡನೆಯದಾಗಿರುವುದಿಲ್ಲ.

ಮಹಾತ್ಮರು ನಾಯಕತ್ವವನ್ನು ವಹಿಸಿದಂದಿನಿಂದ ಉಡುಪಿನ ಪ್ರಾಬಲ್ಯವು ಕ್ಷೀಣಿಸುತ್ತಿದೆ. ಎಷ್ಟು ಕಡಿಮೆ ಬಟ್ಟೆ ಧರಿಸಿದರೆ ಅಷ್ಟು ಮಾನ್ಯತೆಯೂ ಹೆಚ್ಚುತ್ತಿದೆ. ಅಲ್ಲದೆ, ಬಟ್ಟೆಗಳ ಅಭಾವದಿಂದ ಬಡಜನರು ಪರಿತಪಿಸುತ್ತಿರುವಲ್ಲಿ ಸರ್ಕಾರಿ ನೌಕರರಿಗೆ ಯಾವುದೇ ಬಗೆಯ ಉಡುಪಿನ ನಿರ್ಬಂಧವನ್ನು ಹಾಕುವುದೂ ಒಂದು ಹಿಂಸೆಯೇ ಸರಿ. ಭಾರತ ಸರ್ಕಾರದವರ ಮಾದರಿಯನ್ನು ಎಲ್ಲಾ ಪ್ರಾಂತಗಳೂ ಅನುಸರಿಸಿ ಬಟ್ಟೆಯ ಬಿನ್ನಾಣವನ್ನು ತಗ್ಗಿಸಲೆಂದು ಆಶಿಸೋಣ.

ಶ್ರೀ ಪಂಡಿತ

ಜವಹರಲಾಲ್ ನೆಹರೂ

ಶುಭಾ ಶಂಸನ ಪಂಚ ರತ್ನ ಮಾಲಾ.

(ಭಾಮಿನೀ ಷಟ್ಪದಿ)

ಮೆರೆಯುವೀ ವ್ಯಯ ಭಾದ್ರಪದ ಸಿತ
ಪರಮ ಸಪ್ತಮಿ ಚಂದ್ರವಾರದಿ
ಧರಣಿ ಮಂಡನ ವಾಗೆ ಜವಹಿರಲಾಲ ನೆಹರುಗಳು ॥
ಭರತಖಂಡಕೆ ರಾಷ್ಟ್ರಪತಿಯೆನೆ
ಭರತ ಸಂತಸ ವಾಗೆ ಪಟ್ಟವ
ಧರಿಸಿದರು ಕಾವೆನಲು ನಾವೆ ಭಾಗ್ಯಶಾಲಿಗಳು ॥೧॥
ಹಿಂದೆ ವಿಕ್ರಮ ಶಾಲಿವಾಹನ
ರಂದವೆನೆ ಭಾರತವನಾಳುತ
ಬಂಧುರದ ತರ ಪುರುಷರಾದರು ಭರತ ಖಂಡಕ್ಕೆ ॥
ಇಂದು ಪಂಡಿತ ನೆಹರುವಿಂ ಪರಿ
ಚಂದವಾಯಿತು ಪೂರ್ಣ ಭಾರತ
ಪೊಂದಿದುದು ನಾಯಕನನೊಬ್ಬನನರರೆ ಚಿತ್ರವಲ ॥೨॥
ಬಂದ ಬಹು ಕಷ್ಟಗಳ ಸಹಿಸುತ
ನಿಂದು ಧೈರ್ಯದೆ ಮುಂದುವರಿಯುತ
ಲೊಂದೆ ಮನದೊಳು ಭಾರತದ ಮಂಗಳಕೆ ದುಡಿಯುತ್ತ ॥
ಸಂದಿರಲು ಬಹು ವರ್ಷಗಳು ಮನ
ಗುಂದದಲೆ ಮುಂಬರಿದು ಸಿಂಹವ
ನಂದ ಗೆಡಿಬೇ ನೆಹರುವಿಗೆ ಸಮರಾರು ಜಗದೊಳಗೆ ॥೩॥
ಜಗದಿ ಮಾನ್ಯರು ಗಾಂಧಿನಾಮರು
ಬಗೆಯಲವರ ಭವ್ಯ ವಚನದಿ
ಸೊಗವ ಸಾಧಿಸಿ ವಿಶ್ವ ವಂದಿತರೀ ಮೆರೆದಿರುವ ॥
ನಗೆಮೊಗದ ಜವಹಿರರು ಬಾಳಲಿ
ಯುಗ ಯುಗದಿ ಸತ್ಕೀರ್ತಿ ಹರಡಲಿ
ನಗಧರನು ಕಾಪಿಡಲಿ ಸಂತತ ಪಂಡಿತಾಗ್ರಣಿಯನು ॥೪॥
ಇಂತು ಜವಹಿರಲಾಲರಿಗೆ ನೆರೆ
ಸಂತಸದೆ ಕವಿ ಕಾಣಿಕೆಯನ
ತ್ಯಂತ ಭಕ್ತಿಯೊಳೊಪ್ಪಿಸಿತೆ ಜನಗಣವು ನಲಿದೋವಿ ॥
ಸಂತೆ ಪಡೆದಾ ಭಾರತಾಂಬೆಯ
ಸಂತ ಪುತ್ರರ ಮನಕೆ ಶಾಂತಿಯು
ನಂತವಾಗಲಿಯೆಂದು ಬೇಡಿಂ ಪರಮ ಸಂತಸದೆ ॥೫॥

ಆಶು ಕವಿರತ್ನಂ ವಿದ್ವಾನ್
ಜಿ ಆರ್. ವೆಂಕಟಸುಬ್ಬಶಾಸ್ತ್ರಿ ಭಾರತೀ
ಮೈಸೂರು

ನೆಹರೂರವರಿಗೆ ಅ...

ಗುಂ...

ಕೇಂದ್ರ ಸರ್ಕಾರವನ್ನು ರಚಿ... ನೆಹರು ಮತ್ತು ಇತರ ನಾಯ... ಶುಭಾಶಯವನ್ನು ಕೋರಲು ... ರ ಶ್ರೀ ವೈ ಜಿ ಎಸ್. ಆಚಾರ್ಯರ... ಮಹಾ ಮಂಗಳಾರತಿ ನಡೆಯಿ... ಬಾವುಟದ ಪ್ರದರ್ಶನವೇನೂ ... ನೆಹರೂರವರಿಗೆ ತಂತೀ ಮೂಲ... ದನೆಯನ್ನು ಕಳುಹಿಸಲಾಯಿತು...

ಎರಡು ತಲೆ ಮ...

ಕೊಯಮುತ್ತೂರು ಜಿಲ್ಲಾ ಘ... ಪಲ್ಲಂ ಪಾಳ್ಯಂ ಎಂಬಲ್ಲಿ ಆಗಸ... ಒಬ್ಬ ಹೆಂಗಸು ಹೆತ್ತಿರುವ ಒಂದ... ವಿಗೆ ಎರಡು ತಲೆ, ನಾಲ್ಕು ಕೈ... ಮೂರು ಕಾಲುಗಳು ಇದ್ದವು... ಹೆಣ್ಣೋ ಗಂಡೋ ಗೊತ್ತಾಗುವ... ಎರಡು ಗಂಟೆ ಕಾಲ ಮಾತ್ರ ಇದ... ಹೋಯಿತು. ಸಾವಿರಾರು ಜನರು... ಕೊಂಡು ಹೋದರು.

ವೈಸೂರಿಗೆ ಬಂದಾಗ ಊಟಕ್ಕಾಗಿ ಪೇಚಾಡಬೇಡಿ !
ರೈಲಿನಿಂದಿಳಿದು ನೇರವಾಗಿ ಗಾಂಧಿ ಚೌಕಕ್ಕೆ ಬಂದರೆ ಅಲ್ಲೇ ಇದೆ.
ರಾ ಜ ರಾ ಜೇ ಶ್ವ ರಿ
ಮಾಡರ್ನ್ ಹಿಂದೂ ಮಿಲಿಟರಿ ಹೋಟೇಲ್
(ಬ್ರಾಂಚ್)
(ಟ್ಯಾಕ್ಸಿ ಸ್ಟ್ಯಾಂಡ್ ಎದುರು)
ಅಡಿಗೆಯಲ್ಲಿ ಹೆಸರಾದಂಥ ಆಂಧ್ರದ ಗೌಡರ ರುಚಿಯಾದ ನಾನ್ ವೆಜಿಟೇರಿಯನ್ ಊಟ ಮತ್ತು ತಿಂಡಿ
ಎಲ್ಲಾ ಸಲಕರಣೆಗಳಿಂದ ಕೂಡಿದ ರೂಂಗಳು ಸಿಗುತ್ತವೆ.
ಒಂದಾವರ್ತಿ ಪರೀಕ್ಷಿಸಿರಿ !
ಪ್ರೊ:— ಚನ್ನೇಗೌಡ,
[ವಿಜಯಾ ಪ್ರೆಸ್, ಮೈಸೂರು]

Raj Kamal
Mysore
From 8–9–46 Daily 3...
Alexandar Korda's
FOUR FEATHER...
in full length technico...
ಫೋರ್ ಫೆದರ್ಸ್
ನಾನಾ ವರ್ಣ ರಂಜಿತವಾದ ಅತ್ಯು...
ಇಂಗ್ಲಿಷ್ ನಾಟಕ.

ಮನೆಗಳು ಮಾರಾಟಕ್ಕಿ...
ಇರ್ವಿನ್ ರಸ್ತೆಯಲ್ಲಿ ಎ... ದೊಡ್ಡ ಮನೆಗಳು ಮಾ... ಕ್ಕಿವೆ.
—ವಿವರಗಳಿಗೆ:—
ನಿಯೋ ಫರ್ನಿಚರ್ ಕಂಪ...
ಇರ್ವಿನ್ ರಸ್ತೆ .... ಮೈಸ...

ಶ್ರೀನಿವಾಸ
ಮೋಟಾರ್ ಸರ್ವೀ...
ಮೈಸೂರು—ಬೆಂಗಳೂ...
ಮೈಸೂರಿನಿಂದ ಚನ್ನಪಟ್ಟಣ, ಮ... ಸಾತನೂರು, ಕನಕಪುರ, ಹಾರೋ... ಮಾರ್ಗವಾಗಿ ಬೆಂಗಳೂರಿಗೆ ತಲುಪುವ...
ಮೈಸೂರಿನಿಂದ ಬೆಳಗ್ಗೆ 9-15 ಗಂ... ಹೊರಟು ಬೆಂಗಳೂರಿಗೆ ಮಧ್ಯಾಹ್ನ... ಗಂಟೆಗೆ ತಲುಪುತ್ತೆ. ಮತ್ತು ಬೆಂಗ... ನಿಂದ ಬೆಳಗ್ಗೆ 7-30 ಕ್ಕೆ ಹೊ... ಮೈಸೂರನ್ನು ಮಧ್ಯಾಹ್ನ 1 30 ಕ್ಕೆ ... ಪುತ್ತೆ.
ಪ್ರೊಪ್ರೈಟರ್, ಶ್ರೀನಿವಾಸ ಮೋಟಾ... ಸರ್ವಿಸ್, ಮೈಸೂ...

Edited, printed and published ... A. S. Nagarajan at the Sadhvi Pr... D. Subbiah Road, Mysore.

ಫೋ. ನಂ. 392 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೧] ಸೋಮವಾರ ೯—೯—೪೭ [ಸಂಚಿಕೆ ೭

ನವರಾತ್ರಿಯಲ್ಲಿ ಮೆರವಣಿಗೆ ಉಂಟು

...ಿನ ಸಮಿತಿಗೆ ದಿವಾನರು ಸದಸ್ಯರು

ಮೈಸೂರು ೮

...ಸ್ಥಾನಗಳಿಗೂ ಭಾರತ ಯೂನಿಯ ...ವರಬೇಕಾದ ಸಂಬಂಧದ ಬಗ್ಗೆ ಸಂ...ನ್ನು ನಡೆಸಲು ನರೇಂದ್ರ ಮಂಡಲ ಒಂದು ಸಂಧಾನ ಸಮಿತಿಯನ್ನು ...ರಸ್ಪೆ. ಇದರಲ್ಲಿ ಮೈಸೂರಿನ ದಿವಾ...ಸರ್ ರಾಮಸ್ವಾಮಿ ಮೊದಲಿಯಾ...ರು ಇರಬೇಕೆಂದು ನರೇಂದ್ರ ಮಂ... ಅಧ್ಯಕ್ಷರಾದ ಭೋಪಾಲ್ ನವಾಬರು ...ತ್ತರು. ಶ್ರೀಮನ್ಮಹಾರಾಜರ ಅನು...ಂದ ದಿವಾನರು ಇದಕ್ಕೆ ಒಪ್ಪಿರುವ ...ಹಾರಾನಿಯ ಸುತ್ತೂರು ಶಿವರಾತ್ರೀ...ಶ್ವರ ನಿಲಯದಲ್ಲಿ ನಿನ್ನೆ ಗಣಪ...ಗಳಾರತಿ ನಡೆದಾಗ ಶ್ರೀಮನ್ಮಹಾ...ರ ಛಾಯಾಚಿತ್ರವನ್ನು ಅನಾವರಣ ...ತ್ತು ದಿವಾನರು ಈ ಅಂಶವನ್ನು ...ಪಡಿಸಿದರು.

...ಕೆ ಘೋಷ, ಪ್ರಾರ್ಥನೆ, ಸಂಗೀತಗ...ಂತರ ಡಾ|| ಟಿ ಎಸ್ ಸಿದ್ಧಪ್ಪನವ...ಗತ ಭಾಷಣ ಮಾಡಿದರು. ಶ್ರೀ...ರು ಮಠದ ಪರವಾಗಿ ಒಂದು ವತ್ತಳೆ...ನ್ನು ದಿವಾನರಿಗೆ ಅರ್ಪಿಸಲಾಯಿತು ...ನರು ಅದಕ್ಕೆ ಉತ್ತರಿಸುತ್ತಾ ಮ...ಭಾಗಗಳ ಗ ಜಾತಿಪಯಣಗಳನ್ನು ಕೊಂ...ಮ ರಾಜ್ಯಾಂಗ ಸಮಿತಿಗೆ ಮೈಸೂ...ಪ್ರತಿನಿಧಿಗಳಾಗಿ ಹಾಕು ತೆರಳಿರುವ ...ಧದಲ್ಲಿ ತಮ್ಮ ಗುರುತರವಾದ ...ಯನ್ನು ನಿರ್ವಹಿಸಲು ಮೈಸೂರಿ...ಗಳು ತಮಗೆ ಪೂರ್ಣವಾದ ವಿಶ್ವಾ...ಸ ಸಹಕಾರವನ್ನು ನೀಡಬೇಕೆ...ದಿದರು.

...ಚೇರಿ ಬದಲಾವಣೆ

...ಿ ಮೊಹಲ್ಲಾದಲ್ಲಿರುವ ಎಂಡನೇ ...ಪ್ಪೆಕ್ಟರ್ ಇನ್ಸ್ಪೆಕ್ಟರ ಕಚೇರಿಯನ್ನು ...ಬೀದಿಯಲ್ಲಿರುವ ಟೀಚರ್ಸ್ ಅಸೋಸಿಯೇಷನ್ ...ಕ್ಕೆ ವರ್ಗಾಯಿಸಲಾಗಿದೆ

ಚರ್ಚಾ ಸ್ಪರ್ಧೆ

ವಿದ್ಯಾರ್ಥಿ ...-ಕೇಸನ್ನಾ ವಿದ್ಯಾರ್ಥಿ...ದ ಆಶ್ರಯದಲ್ಲಿ ೭ ನೇ ತಾ|| ನಡೆ...ದ ವಿದ್ಯಾರ್ಥಿನಿಲಯದ ಚರ್ಚಾ ...ಲ್ಲಿ ಈ ಕೆಳಗೆ ಕಂಡವರು ಕ್ರಮ...ವು ಮತಗಳನ್ನು ಹೊಂದಿರುವರು.

ಬಹುಮಾನ ಎಲ್ ವಿ ಎಸ್ ...ಗೆ: ಇತರ ಬಹುಮಾನಗಳು ಶ್ರೀ ...ಮಹಾರಾಜಾ ಕಾಲೇಜು ಹೆಚ್ ...ನಾರಾಯಣರಾಯರು ಕೆ. ...ಹಾಸ್ಟೆಲಿನ ಟಿ. ಎಲ್. ಬೆಂಗಳೂ...ರ ಎ ಎಲ್. ಹಾಸ್ಟೆಲಿನ ಟಿ ಎಸ್. ...ಶ್ರೀನಿವಾಸ, ಕೆ. ಎಸ್ ಎಸ್ ವಾರ ...ಶ್ರೀ ಪೆಚ್. ಗಂಗಾಧರಪ್ಪ, ವಿ ...ದ ಸಿ ಜಿ ಪುರುಷೋತ್ತಮ ...ದಿರೆ

...ರು ರಷ್ಯದಲ್ಲಿರುವರೇ?

...ಂಡಿನಲ್ಲಿರುವ ಭಾರತ ಕಾಂಗ್ರೆಸ್ ...ದ ಶ್ರೀ|| ಸಿ. ಬಿ ಸೀಲರು, ಒಂ... ...ತಿಯನ್ನಿತ್ತು ನೇತಾಜಿ ಸುಭಾಷ ...ಂದ್ರರು ಭಾರತೀಯರು ನಂ...ಬಿದ್ದೂ, ಬೆಲಪು ಇನ ಐ ಎ.ಎ ...ಸ ಸೇನಾ ಕಛೇರಿಗಳಿಂದ ಬೋಧಿಸು...ರುವಂತೆ ಕಾಣುವುದಿಲ್ಲವಾಗಿ ...ರು.

ಭಾರತೀಯರ ಅಂತಸ್ತನ್ನು ಹೆಚ್ಚಿಸುವುದೇ ನಮ್ಮ ಕರ್ತವ್ಯ

ನೆಹರೂರವರ ರೇಡಿಯೋ ಭಾಷಣ

ಕೇಂದ್ರ ಸರ್ಕಾರದ ಉಪಾಧ್ಯಕ್ಷರಾದ ಶ್ರೀ|| ಪಂಡಿತ ಜವಹರಲಾಲರು ನೆನ್ನೆ ರಾತ್ರಿ ರೇಡಿಯೋದಲ್ಲಿ ಭಾಷಣ ಮಾಡುತ್ತಾ, ಭಾರತೀಯರ ಜೀವನದ ಮಟ್ಟದ ಅಂತಸ್ತನ್ನು ಹೆಚ್ಚಿಸುವುದೇ ತಮ್ಮ ಗುರಿಯೆಂದೂ ಭಾರತದ ಸಂಪೂರ್ಣ ಸ್ವಾತಂತ್ರ್ಯ ಮತ್ತು ಶಾಂತಿ ವ್ಯವಸ್ಥೆಯನ್ನು ಪಡೆಯುವ ಸಲುವಾಗಿ ಪ್ರಪಂಚದ ಎಲ್ಲಾ ರಾಷ್ಟ್ರಗಳೊಂದಿಗೂ ಸಂಧಾನ ನಡೆಸುವುದಾಗಿ ಅವರು ತಿಳಿಸಿದರು. ಭಾರತ ರಾಜ್ಯಾಂಗ ಸಭೆಯ ವಿಷಯವಾಗಿ ಅವರು ಮಾತಾಡುತ್ತಾ ಕೇಂದ್ರದಲ್ಲಿ ತಾತ್ಕಾಲಿಕವಾಗಿ ಏರ್ಪಟ್ಟಿರುವ ಸರ್ಕಾರವು ಸಹ ಮುಖ್ಯ ಕಾರ್ಯ ಕ್ರಮವಲ್ಲಿ ಒಂದಾದ, ಈ ಸರ್ಕಾರವನ್ನು ಹಾಗು ಅಧಿಕಾರವುಳ್ಳದರಿಂದ ಪೂರ್ಣ ಸ್ವಾತಂತ್ರ್ಯವನ್ನು ಆದಷ್ಟು ಬೇಗ ಹೊಂದಬಹುದೆಂಬ ... ಸರ್ಕಾರದ ... ಅವರಲ್ಲಿ ಕೆಲಸ ಮಾಡುತ್ತಿರುವುದಾಗಿ ತಿಳಿಸಿದರು. ... ಸ್ವ... ... ಮು ಸ್ಲಿಂ ಲೀಗ್ ... ಬಗ್ಗೆ ಅವರು ಮಾತನಾಡಿ ಎಲ್ಲರೂ ಒಟ್ಟಿಗೆ ... ಲೀಗಿನವರು ಒಟ್ಟಿಗೆ ಕೂತು ಚರ್ಚಿಸಿದರೆ ಭೇದಗಳೆಲ್ಲವೂ ಮಾಯವಾಗುವುವೆಂದು ಅಭಿಪ್ರಾಯ. ಪಟ್ಟರು ಮತ್ತು ಅಸ್ಪೃಶ್ಯತಾ ನಿವಾರಣೆ ಮಾಡಲು ಸರ್ವ ಪ್ರಯತ್ನವನ್ನು ಮಾಡುವುದಾಗಿ ಅವರು ತಿಳಿಸಿದರು. ಘಟನಾ ಸಮಿತಿಯ ನಿರ್ಣಯಗಳನ್ನು ಅವರು ಮುಸ್ಲಿಂ ಲೀಗು ಒಪ್ಪಿರುವುದರಿಂದ ಹೊರಗಿನ ಉದ್ದೇಶವಿಲ್ಲವೆಂದು ... ಲೀಗಿನವರು ಎಲ್ಲರಿಗೂ ಸಮ್ಮತವಾದ ಒಪ್ಪಂದವನ್ನೇ ಕಾಂಗ್ರೆಸ್ಸು ಬಯಸುವುದು. ಪ್ರಾಂತಗಳ ವರ್ಗೀಕರಣ ವಿಷಯದಲ್ಲಿ ನಿಷ್ಪಕ್ಷಪಾತ ತೀರ್ಮಾನಕ್ಕೆ ಒಪ್ಪುವುದು ಕಾಂಗ್ರೆಸ್ಸಿಗೆ ಅಭಿಮತ ... ಇಲ್ಲ ಸ್ವಾತಂತ್ರ್ಯ ಸಾಧನೆಯಿಂದ ೪೦ ಕೋಟಿ ಭಾರತೀಯರ ಹಿತ ಸಾಧನೆ ಮಾಡುವುದೇ ನಮ್ಮ ಉದ್ದೇಶ, ಎಂದು ಹೇಳಿದರು.

ಕ್ರಿಕೆಟ್ ಪಂದ್ಯ

ನಿನ್ನೆ ಸ್ಟೂಡೆಂಟ್ಸ್ ಯೂನಿಯನ್ನಿಗೂ ಮಲ್ಲೇಶ್ವರಂ ಯೂನಿಯನ್ನಿಗೂ ನಡೆದ ಕ್ರಿಕೆಟ್ ಪಂದ್ಯದಲ್ಲಿ ಮಲ್ಲೇಶ್ವರದವರು ... ಸ್ಟೂಡೆಂಟ್ಸ್ ಯೂನಿಯನ್ನು ರವರು ೧೦೭ ರನ್ನುಗಳನ್ನು ಒಟ್ಟಿಗೆ ಮಾಡಿ ಗೆದ್ದರು.

ವೃತ್ತಿ ಮುಷ್ಕರ ನಿಲ್ಲಿಸಿ

ಭಾರತ ಸರ್ಕಾರದ ರೈಲ್ವೆ ಮೆಂಬರಾದ ಮಿ|| ಅಸಫ್ ಅಲಿಯವರು ದಕ್ಷಿಣ ಭಾರತ ರೈಲ್ವೆಯ ನೌಕರರು ನಡೆಸುತ್ತಿರುವ ಮುಷ್ಕರವನ್ನು ಕೂಡಲೆ ನಿಲ್ಲಿಸಿ ಅಲ್ಲಿನ ಜನರ ಲ ... ದವರೊಡನೆ ಮಾತುಕತೆ ನಡೆಸಿ ಉಭಯಯುಕ್ತವಾದ ಸಲಹೆಯನ್ನು ಕೊಟ್ಟು ತಮ್ಮ ಕುಂದು ಕೊರತೆಗಳನ್ನು ಆದಷ್ಟು ಬೇಗ ಪರಿಹರಿಸಿಕೊಳ್ಳಬೇಕೆಂದು ಶ್ರೀ ಗಿರಿ ಸ್ವಾಮಿ ಯವರಿಗೆ ಅವರು ಕಳುಹಿ... ತಂತಿಗೆ ಜವಾಬನ್ನು ಕೊಟ್ಟಿರುವರು.

ಪೋಲೀಸ್ ವಿಚಾರಣೆ

ಕೃಷ್ಣರಾಜ ನಗರದ ಕೆಲವು ವಿದ್ಯಾರ್ಥಿಗಳಿಗೆ ಪೋಲೀಸ್ ನೌಕರರಿಂದ ತೊಂದರೆ ಕೊಡಲ್ಪಡುತ್ತಿದೆಯೆಂಬ ವಿಚಾರವಾಗಿ ಮೈಸೂರು ಜಿಲ್ಲಾ ಪೋಲೀಸ್ ಇನ್ಸ್ಪೆಕ್ಟ...ರು ನಿನ್ನೆ ಕೃಷ್ಣರಾಜ ನಗರಕ್ಕೆ ಬಂದು ಆ ... ವಿದ್ಯಾರ್ಥಿಗಳ ಹೇಳಿಕೆಯನ್ನು ತೆಗೆದುಕೊಂಡರು. ಮುಂದಿನ ಈ ವಿಷಯದಲ್ಲಿ ಸರಿಯಾದ ತನಿಖೆ ನಡೆದು ತಕ್ಕ ಬಂದೋಬಸ್ತು ಏರ್ಪಡಬಹುದೆಂದು ವಿದ್ಯಾರ್ಥಿಗಳು ನಿರೀಕ್ಷಿಸುತ್ತಾರೆ.

ಸತ್ಕಾರ

ಸ್ವಂ ...] ... ೮

ಶ್ರೀ ಪುಟ್ಟಸ್ವಾಮಿ ಕರಾಕುಸ್... ಸಂಘದವರು ಗಾನ ವಿಶಾರದ ಬಿ. ದೇವೇಂದ್ರಪ್ಪನವರನ್ನು ಆಹ್ವಾನಿಸಿಕೊಂಡು ಸತ್ಕಾರ ನಡೆಸಿದರು. ಶ್ರೀಯುತ ತಿಮ್ಮಯ್ಯನವರ ಶ್ರೀ ... ರವರಿಂದ ಸಂಗೀತವಾಯಿತು. ಶ್ರೀ ಎಂ. ವಿ ನರಸಿಂಹಯ್ಯಂಗಾರ್ಯರವರು ಕವನವನ್ನು ರಚಿಸಿ ... ಓದಿದರು. ಶ್ರೀ ದೇವೇಂದ್ರಪ್ಪನವರು ಸ್ವಾರಸ್ಯವಾದ ಭಾಷಣ ಮಾಡಿ ಗುರುಗಳಿಗೆ ಸತ್ಕಾರವನ್ನು ... ದರು ... ವಾದ ... ವಾದನವನ್ನೂ ಸಹ ಮಾಡಿದರು.

ಲೀಗಿನವರಲ್ಲಿ ಸುಧಾರಣೆ

... ಲೀಗಿನ ಸದಸ್ಯರಿಗೆ ಪೂರ್ಣ ... ವಾಗಿ ... ಎಲ್ಲಾ ... ನೌಕರರಲ್ಲಿರುವ ... ಗಳನ್ನು ... ದ್ವಾರೆ ... ಎಲ್ಲಾ ... ... ಪ್ರಕಟವಾಗಿದೆ.

ದಸರಾ ದರ್ಬಾರ್ ಮತ್ತು ಮೆರವಣಿಗೆ ಉಂಟು

[ಸ್ವಂ ಸು. ಫೋ] ಬೆಂಗಳೂರು ೮

ಈ ಸಾರಿ ನವರಾತ್ರಿಯಲ್ಲಿ ... ನೆಯ ದಿನ ಜಂಬೂ ಸವಾರಿ ನಡೆಯುವುದಿಲ್ಲವೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿತ್ತಷ್ಟೆ. ಈ ಬಗ್ಗೆ ಸರ್ಕಾರದವರು ಈ ದಿನ ಒಂದು ಪ್ರಕಟಣೆ ಹೊರಡಿಸಿ ದರ್ಬಾರು ಮತ್ತು ಜಂಬೂಸವಾರಿಗಳು ವಾಡಿಕೆಯಂತೆ ನಡೆಯುವುವೆಂದೂ ವಸ್ತು ಪ್ರದರ್ಶನ ಮಾತ್ರ ನಡೆಯುವುದಿಲ್ಲವೆಂದೂ ತಿಳಿಸಿದ್ದಾರೆ

ಗಂಥದೆಲ್ಲೆ ಡೈರೆಕ್ಟರ್ ಶ್ರೀ ಎಂ ... ಸಿಂಗಯ್ಯಂಗಾರ್ರವರು ಒರಿಸ್ಸಾ ಸರ್ಕಾರದಲ್ಲಿ ತಿಂಗಳಿಗೆ ೧೬೦೦ ರೂ ಸಂಬಳದ ... ಅಲ್ಲಿನ ಕೈಗಾರಿಕೆ ಡೈರೆಕ್ಟರ ಕೆಲಸವನ್ನು ಅಂಗೀಕರಿಸಲು ರಜ ಮಾಡಿಕೊಟ್ಟು ಇವರಿಗೆ ಆರು ತಿಂಗಳ ರಜಾ ಮಂಜೂರಾಗಿದೆ

ಈ ವರ್ಷ ಹೊಸದಾಗಿ ... ಪ್ರೈಮರಿ ಶಾಲೆಗಳನ್ನು ತೆರೆಯಲು ಸರ್ಕಾರದವರು ೧,೬೭,೪೦೦ ರೂ ಮಂಜೂರು ಮಾಡಿದ್ದಾರೆ

ನೆನ್ನೆ ಬೆಂಗಳೂರು-ಅರಸೀಕೆರೆ ಮಾರ್ಗ... ಮಧ್ಯೆ ... ರೈಲು ಕಂಬಿ ತಪ್ಪಿ ಒಂದು ... ಹೊರ... ಪ್ರಾಣಾಪಾಯವಿಲ್ಲ. ಪ್ಯಾಸೆಂಜರ್ ಗಾಡಿಗಳು ... ಒಂದವು.

ನಂಜಾಪುರದಲ್ಲಿ ಖುಲಾಸೆ

ಈ ವರ್ಷ ... ತಿಂಗಳು ... ತಾ|| ... ಕಾರಣವಿದ್ದು ... ... ಮಂತ್ರಿಗಳ ... ಸಿಕ್ಕಿದೆ.

ಮೈಸೂರಿನಲ್ಲಿ ಜಿನ್ನಾ ಭೇಟಿ

... ಜಿನ್ನಾರವರಿಗೂ ... ಭೇಟಿ ... ... ಬಯಲಾದಂದೂ ... ವಿಷಯ ... ...

ದಿವಾನರ ಭೇಟಿ

... ಮೈಸೂರು ಸರ್ಕಾರದ ... ...

... ಜನ

... ...

ದಿನಪತ್ರಿಕೆ
ಸಾಧ್ವಿ
೯-೯-೪೬ ಸೋಮವಾರ

ಭಾರತದ ವೀರ ವಾಣಿ

ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಪಂ॥ ನೆಹರೂರವರು, ಮೊನ್ನೆ ಆಕಾಶವಾಣಿಯಲ್ಲಿ ಮಾಡಿದ ಭಾಷಣದಲ್ಲಿ ಭಾರತ ಮಾತೆಯ ವೀರ ವಾಣಿಯಂತಿರುವುದ . ಅಧಿಕಾರವನ್ನು ಸ್ವೀಕರಿಸಿದ ಮೇಲೆ ನೆಹರೂರವರು ತಮ್ಮ ದೇಶ ಬಾಂಧವರಿಗೆ ಸಾರಿದ ಪ್ರಥಮ ಸಂದೇಶವೇ ಇದು . ನಮ್ಮ ಅನೇಕ ಜನಾಬಲ ಸಮುದಾಯವೂ ಕೋಟ್ಯಂತರ ಭಾರತೀಯರು ಕೇಳಿ ನವ ಚೈತನ್ಯವನ್ನು ಹೊಂದಿರುವರು.

ಸರ್ಕಾರದ ಸೂತ್ರಗಳನ್ನು ದೇಶದ ನಾಯಕರುಗಳೇ ಇಂದು ನಿರ್ವಹಿಸುತ್ತಿರುವರು. ವೈಸರಾಯರು ನಮ್ಮ ಸರ್ವಾಧಿಕಾರವನ್ನು ಒಪಿಗೊತ್ತಿ ತಮ್ಮ ಬದ್ಧ ಅಧಿಕಾರಿಯಾಗಿ ವರ್ತಿಸಲು ಒಪ್ಪಿರುವರು. ದಿನ ತರಿಯ ಕೆಲಸಕಾರ್ಯಗಳಲ್ಲಿ ಕೇಂದ್ರ ಸರ್ಕಾರವು ಏರ್ಪಡಿಸಿದಂತೆ ಕೆಲಸ ಮಾಡಲು ಅವಕಾಶವು ಕಲ್ಪಿಸಲ್ಪಟ್ಟಿರುವುದು. ಆದರೂ ಸಹ ಇನ್ನೇ ಸ್ವಾತಂತ್ರ್ಯವಿಲ್ಲ; ಸಂಪೂರ್ಣ ಸ್ವಾತಂತ್ರ್ಯವು ಇನ್ನೂ ದೊರೆತಿದೆ. ಸ್ವಾತಂತ್ರ್ಯದ ಹೆಬ್ಬಾಗಿಲು ಮಾತ್ರ ಈಗ ತೆರೆದಿದೆ; ಕೇಂದ್ರ ಸರ್ಕಾರದ ಮೂಲಕ ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯುವ ಭರವಸೆಯಿಂದಲೇ ರಾಷ್ಟ್ರ ನಾಯಕರು ಅದರಲ್ಲಿ ಪ್ರವೇಶ ಮಾಡಿದ್ದಾರೆ ಈ ಅಂಶವ ನ್ನು ನೆಹರೂರವರು ತಮ್ಮ ಸಂದೇಶದಲ್ಲಿ ಸ್ಪಷ್ಟಪಡಿಸಿದ್ದಾರೆ.

ಹೊಸದಾಗಿ ಉನ್ನತ ಪದವಿಗೆ ಬಂದ ಹೆಮ್ಮೆಯು ನೆಹರೂರವರ ಸಂದೇಶದಲ್ಲಿ ಕಾಣಬರುತ್ತಿಲ್ಲ. ಮುಂದೆ ಸಾಧಿಸಬೇಕಾದ ಗುರಿಯ, ಜವಾಬ್ದಾರಿಯು ಗುರುತರವಾಗಿ ಎದ್ದು ಕಾಣುತ್ತಿದೆ. ದೇಶದ ಏಳಿಗೆ ಮತ್ತು ದೀನ ಜನರ ಉದ್ಧಾರಕ್ಕಾಗಿ ರಾಷ್ಟ್ರ ಭಕ್ತರು ಕೈಗೊಳ್ಳಲಿರುವ ಕ್ರಮಗಳನ್ನು ಸೂಚಿಸುತ್ತಿದೆ.

ಕಲ್ಕತ್ತಾ, ಬೊಂಬಾಯಿ ಮುಂತಾದ ಕಡೆಗಳ ಮಾರಣಹೋಮದ ಯಾತನೆಗಳು ಇನ್ನೂ ನಿವಾರಣೆಯಾಗಿಲ್ಲ. ಆದರೂ ಅವುಗಳಲ್ಲಿನ ವನ್ನು ನಮ್ಮ ಮುಸ್ಲಿಂ ಲೀಗಿನವರೆಂಬುವ ರ್ವ ಸಮಾನತೆಯಿಂದ ವರ್ತಿಸುವುದಾಗಿ ನೆಹರೂರವರು ಹೇಳಿದ್ದಾರೆ. ರಾಷ್ಟ್ರಾಂಗ ರಚನಾ ಸಭೆಯು ಮುಸ್ಲಿಂ ಯುದ್ಧದ ರಂಗ ಸ್ಥಳವಾಗುವುದು. ತಮ್ಮ ಉದ್ದೇಶವಲ್ಲವೆಂದು ತಿಳಿಸಿದ್ದಾರೆ. ತೆರೆದ ಮನಸ್ಸಿನಿಂದ ಸಕಲ ಸಮಸ್ಯೆಗಳನ್ನೂ ನಿಷ್ಪಕ್ಷಪಾತವಾದ ಪರಿಹಾರಕ್ಕೆ ಒಪ್ಪಿಸಲು ಸಿದ್ಧರಿದ್ದಾರೆ. ಇದರಿಂದ ಅವರ ಹೃದಯ ವೈಶಾಲ್ಯವೂ, ಉದಾರ ಮನೋಭಾವವೂ ವೇದ್ಯವಾಗುವುದು. ಈಗಲಾದರೂ ಮುಸ್ಲಿಂ ಲೀಗಿನವರ ಕಣ್ಣು ತೆರೆದು ಅವರು ಮುಂದೆ ಇಡೀ ದೇಶದ ಅಭ್ಯುದಯಕ್ಕಾಗಿ ಸಹಕರಿಸುವರೆಂದು ನಂಬಲಾಗಿದೆ.

ಜಗತ್ ಶಾಂತಿಗಾಗಿ ಸಂಪೂರ್ಣ ಸ್ವಾತಂತ್ರ್ಯದಿಂದ ವರ್ತಿಸಿ ಸಕಲ ರಾಷ್ಟ್ರಗಳೊಡನೆ ಯೂ ಸಮಾನತೆಯಿಂದ ವ್ಯವಹರಿಸುವುದಾಗಿ ನೆಹರೂರವರು ಹೇಳಿದ್ದಾರೆ. ಆದಿವಾಸಿಗಳಿಗೆ ಕ್ಷೇಮಕಾರ್ಯಗಳನ್ನು ಸಲ್ಲಿಸಿರುವರು. ... ರಾಷ್ಟ್ರಗಳಲ್ಲಿ ಆತ್ಮೀಯತೆಯನ್ನು ಪ್ರದರ್ಶಿಸಿರುವರು.

ನೌಕರರ ತುಟ್ಟಿ ಭತ್ಯ

ಮೈಸೂರು ೯

ಮೊನ್ನೆ ಸಾಯಂಕಾಲ ಮೈಸೂರು ಪುರಸಭೆಯ ವಿಶೇಷ ಅಧಿವೇಶನವು ನಡೆದು ಗೆಜೆಟೆಡ್ ನೌಕರರಲ್ಲದವರಿಗೆ, ಅಂದರೆ ಗುಮಾಸ್ತರು ಮೊದಲಾದವರಿಗೆ ಈಗ ಕೊಡುತ್ತಿರುವ ತುಟ್ಟಿ ಭತ್ಯದ ಜೊತೆಗೆ ರೂ॥ ೫೦ ರಷ್ಟು ಹೆಚ್ಚು ಭತ್ಯವನ್ನು ಕೊಡಬಹುದೆಂದು ಒಂದಿದ್ದ ಮ್ಯಾನೇಜಿಂಗ್ ಕಮಿಟಿ ಶಿಫಾರಸನ್ನು ಸಭೆಯವರು ಅಂಗೀಕರಿಸಿದರು ಹಾಲಿ ಪುರಸಭೆಯ ಹಣಕಾಸಿನ ಸ್ಥಿತಿ ಚೆನ್ನಾಗಿಲ್ಲದಿರುವುದರಿಂದ ಈ ತುಟ್ಟಿ ಭತ್ಯವನ್ನು, ಅಂದರೆ ೩,೮೦,೦೦೦ ರೂ ಗಳನ್ನು ಸರ್ಕಾರದವರೇ ಕೊಡಬೇಕೆಂದು ಪ್ರಾರ್ಥಿಸಿ ನಿರ್ಣಯ ಮಾಡಲಾಯಿತು

ಹೊರಗಿನವರಿಗೆ ಪ್ರೋತ್ಸಾಹ?

ಕರ್ನೂಲ್ ಜಿಲ್ಲೆಯಲ್ಲಿ ವನಸ್ಪತಿ ಕಾರ್ಖಾನೆಯನ್ನು ಸ್ಥಾಪಿಸಲು ಹೊರಗಿನವರಾದ ಶ್ರೀ ಬಿರ್ಲಾರವರಿಗೆ ಅನುಮತಿ ಇತ್ತಿರುವುದನ್ನು ಖಂಡಿಸಲು ೨೫ ಜನ ಶಾಸನ ಸಭಾ ಸದಸ್ಯರು ಮದರಾಸ್ ಮುಖ್ಯ ಮಂತ್ರಿ ಮತ್ತು ಕೈಗಾರಿಕೆ ಮಂತ್ರಿ ಶ್ರೀ ವಿ ವಿ ಗಿರಿಯವರಿಗೆ ಮನವಿಯೊಂದನ್ನು ಸಲ್ಲಿಸಿದ್ದಾರೆ.

ಬ್ರಿಟಿಷ್ ಸಾಮ್ರಾಜ್ಯದೊಳಗೆ ಇರುವ ವರ್ಣ ವಿಭೇದದ ಪಕ್ಷಪಾತವನ್ನು ಟೀಕಿಸುತ್ತ ಇದುವರೆಗೆ ನಡೆದುಬಂದ ರಾಜ್ಯಾಂಗವು ಇಂದಿನ ಕಾಲಕ್ಕೆ ಅನುಗುಣವಾಗಿಲ್ಲದಿರುವುದರಿಂದ ಅದನ್ನು ಸಂಪೂರ್ಣವಾಗಿ ಬದಲಾಯಿಸುವುದಾಗಿಯೂ ಸೂಚಿಸಿರುವರು.

ಮುಂದಿನ ಕಾರ್ಯ ಬಗ್ಗೆ ನೆಹರೂರವರು ಹೇಳಿರುವ ಮಾತುಗಳು ಸಮಸ್ತರಿಗೂ ಆದರ್ಶಪ್ರಾಯವಾಗಿವೆ ವೈಷಮ್ಯ, ಮನೋರೋಗಗಳಿಂದ ನಮ್ಮ ಕನಸಿನ ಸ್ವಾತಂತ್ರ್ಯವನ್ನು ಗಳಿಸಲು ಸಾಧ್ಯವಿಲ್ಲ; ಪ್ರೀತಿ, ವಿಶ್ವಾಸ, ಐಕಮತ್ಯಗಳಿಂದಲೇ ಗಳಿಸಬೇಕು ನಮಗೆ ಸೋಲು ಎಂಬುದೇ ಇಲ್ಲ; ಯಾವುದೇ ಅಡಚಣೆಗಳು ಬಂದರೂ ಅವುಗಳನ್ನು ಎದುರಿಸಿ ನಮ್ಮ ಕಾರ್ಯ ಸಾಧನೆಯಲ್ಲಿ ಮುಂದುವರಿಯುತ್ತೇವೆ, ಜಯವನ್ನು ಗಳಿಸುತ್ತೇವೆ ಎಂದು ನೆಹರೂರವರು ತಮ್ಮ ಸಂದೇಶದ ಅಂತ್ಯದಲ್ಲಿ ಸಾರಿರುವರು. ಭಾರತ ಮಾತೆಯ ನಲವತ್ತು ಕೋಟಿ ಪುತ್ರ ಪುತ್ರಿಯರಲ್ಲಿಯೂ ಈ ಸಂದೇಶವು ಪ್ರತಿಧ್ವನಿ ಮಾಡಬೇಕೆಂಬುದೇ ನಮ್ಮ ಹಾರೈಕೆ.

Edited, printed and published by A. R. Nagaraj at the Sadhvi Press D. S. Ikbah Road Mysore

ವಾರ ಭವಿಷ್ಯ

(ಶ್ರೀ ಸಚ್ಚಿದಾನಂದ ಸ್ವಾಮಿಗಳವರಿಂದ)

೯-೯-೪೬ ರಿಂದ ೧೫-೯-೪೬ ರ ವರೆಗೆ

ಮೇಷ—ನಿಮ್ಮ ಗುರುಯು ಈ ವಾರ ಸರಿಯಾಗಿರುವುದು. ಸ್ನೇಹಿತರಿಂದ ಮನ್ನಣೆ ದೊರೆಯುವುದು ಧನಾದಾಯ ಹೆಚ್ಚುವುದು ನಿಮ್ಮ ಹೆಸರು ಎಲ್ಲೆಲ್ಲೂ ಹರಡುವುದು, ಕಷ್ಟಕ್ಕೆ ತಕ್ಕ ಫಲವುಂಟು

ವೃಷಭ—ಬಂಧುಗಳ ಬಗ್ಗೆ ಚಿಂತೆ. ಮನಸ್ಸಿಗೆ ನೆಮ್ಮದಿಯಿಲ್ಲ. ಆದರೆ ವ್ಯಾಪಾರ, ಉದ್ಯೋಗಗಳಲ್ಲಿ ನಷ್ಟವಾಗುವುದಿಲ್ಲ. ಮಿತವಾಗಿ ವೆಚ್ಚ ಮಾಡುವುದು ಒಳ್ಳೆಯದು ಸ್ನೇಹಿತರ ಭೇಟಿ, ಶುಭವಾರ್ತೆ.

ಮಿಥುನ—ಬಂಧು ಜನರ ಅವಿವೇಕ ವರ್ತನೆಯಿಂದ ಮಾನಹಾನಿ ವ್ಯಾಪಾರ ವ್ಯವಹಾರಗಳಲ್ಲಿ ಜಾಗರೂಕರಾಗಿರಬೇಕು. ಆಶ್ರಿತ ಜನರು ಮೋಸ ಮಾಡುವ ಸಂಭವ ಧೈರ್ಯದಿಂದ ಎಲ್ಲ ಆತಂಕಗಳನ್ನೂ ಎದುರಿಸಿರಿ. ಆರೋಗ್ಯವು ಉತ್ತಮಗೊಳ್ಳುವುದು ಮನಸ್ಸಿಗೆ ನೆಮ್ಮದಿಯು ಕಡಮೆ

ಕಟಕ—ಬಂಧು ಜನರಿಂದ ಸೌಖ್ಯ. ಧರ್ಮ ಕೆಲಸಗಳಲ್ಲಿ ಆಸಕ್ತಿ, ಪ್ರಯಾಣ ಸುಗಮ, ಸ್ನೇಹಿತರ ಸಂದರ್ಶನ. ಆರೋಗ್ಯ ಉತ್ತಮ, ಆದರೆ ಮನಸ್ಸಿಗೆ ಚಿಂತೆ, ಕುಟುಂಬ ಸುಖ ಸಮರ್ಪಕ, ವ್ಯಾಪಾರಾದಿಗಳಲ್ಲಿ ಲಾಭವಿದೆ, ಅತಿಥಿ ಸತ್ಕಾರ ಮತ್ತು ಒಳ್ಳೇ ಭೋಜನಗಳು ದೊರೆಯುವುವು.

ಸಿಂಹ—ವ್ಯಾಪಾರಾದಿಗಳಲ್ಲಿ ಅನುಕೂಲವಿಲ್ಲ ವಿರೋಧಿಗಳಿಂದ ಅಡಚಣೆ,ಆರೋಗ್ಯ ಉತ್ತಮ ಆದರೆ ಮನಸ್ಸಿಗೆ ಚಿಂತೆ. ಕುಟುಂಬದ ವೆಚ್ಚವು ವಿಶೇಷವಾಗಿರುವುದು. ಕೆಟ್ಟ ಪರಿಣಾಮದ ಭೀತಿಯಿಂದ, ಮಾಡುವ ಕೆಲಸವನ್ನು ನಿಲ್ಲಿಸದೆ ಧೈರ್ಯದಿಂದ ಮುಂದುವರಿಯಿರಿ

ಕನ್ಯಾ—ಆರೋಗ್ಯವು ಉತ್ತಮವಾಗುವುದು. ಕುಟುಂಬದ ಜೀವಸ್ಥಿತಿ ಸಮರ್ಪಕವಿರುವುದಿಲ್ಲ ಮೇಲಿನ ಅಧಿಕಾರಿಗಳ ಕೋಪಕ್ಕೆ ಗುರಿಯಾಗುವ ಪ್ರಸಂಗ ಬರುವುವು. ಕೇವಲ ಸ್ವಂತ ಸೌಖ್ಯವೂ ಇತರರ ಸೌಖ್ಯವೇ ಮುಖ್ಯವೆಂದು ನೀವು ನಡೆಯುವುದು ಒಳ್ಳೆಯದು

ತುಲಾ—ಕಳ್ಳರು, ಶತ್ರು, ಪುಂಡ ಪೋಕರಿಗಳಿಂದ ತೊಂದರೆಯುಂಟು. ಅಜಾಗರೂಕತೆಯಿಂದ ಆರೋಗ್ಯವು ಕೆಡುವುದು. ವ್ಯಾಪಾರಾದಿಗಳಲ್ಲಿ ಅನೇಕ ಅಡಚಣೆಗಳು ಧನಹಾನಿ ಮತ್ತು ವಿರೋಧ ಉಂಟಾಗುವುವು

ವೃಶ್ಚಿಕ—ಹಣಕಾಸಿನ ಸ್ಥಿತಿ ಉತ್ತಮವಾಗಿರುತ್ತದೆ. ಆರೋಗ್ಯವು ಚೆನ್ನಾಗಿರುವುದು. ಮುಂದೆ ಹೆಚ್ಚಿನ ವೆಚ್ಚವು ಬರುವುದಕ್ಕಾಗಿ ಈಗಿನಿಂದಲೇ ಸಿದ್ಧರಾಗಿರಬೇಕು. ಧರ್ಮದಿಂದ ನಡೆದರೆ ಫಲವು ಹಿತವಾಗುವುದು, ವೆಚ್ಚ.

ಧನುಸ್ಸು—ಜಯ ಮುಖ್ಯವಾದ ಯಾವಲ್ಲಿ ಈ ವಾರ ತೀವ್ರವಾಗಿ ಬರುವುದು ಹಣಕಾಸಿನ ಸ್ಥಿತಿ ಅನುಕೂಲವಾಗುವುದು. ದೇಹಾಲಸ್ಯವು ನಿವಾರಣೆಯಾಗುತ್ತದೆ. ಅನೇಕ ಸಾಹಸ ಕಾರ್ಯಗಳ ಸಾಧನೆ ಪ್ರಯಾಣ ಮತ್ತು ಧರ್ಮ ಕಾರ್ಯಗಳು ಜರುಗುವುವು.

ಮಕರ—ಮಹಿಳೆಯರ ಕಡೆಯಿಂದ ಧನಲಾಭ, ಸ್ನೇಹಿತರ ಭೇಟಿ, ಆರೋಗ್ಯ ತೃಪ್ತಿಕರ, ಮನಸ್ಸಿಗೆ ಉಲ್ಲಾಸ, ಪ್ರಯಾಣದಲ್ಲಿ ಅಡಚಣೆ. ವಾದದಲ್ಲಿ ಜಯ ದೊರಕುವುವು.

ಕುಂಭ—ಅಜೀರ್ಣ ವ್ಯಾಧಿಯ ತೊಂದರೆ, ಪ್ರಯಾಣದಲ್ಲಿ ಅಡಚಣೆ ವ್ಯಾಪಾರೋದ್ಯಮಗಳಲ್ಲಿ ಸಂದಿಗ್ಧ ಪರಿಸ್ಥಿತಿ ಅಪವಾದಗಳೂ, ಬಂಧುಗಳ ಭಯವೂ ಹೆಚ್ಚಿನ ವೆಚ್ಚವೂ, ನಿಷ್ಠುರವೂ ಸಂಭವಿಸುವುವು.

ಮೀನ—ಅಧಿಕಾರಿಗಳವರ ರಿಯಲ್ಲಿ ಸ್ಪರ್ಧೆ ಸಾಧನೆ ಮಾಡಿಕೊಳ್ಳುವರು. ಆರೋಗ್ಯ ಉತ್ತಮ, ಆದರೆ ಮನಸ್ಸಿಗೆ ಚಿಂತೆ, ಹೆಚ್ಚು ಖರ್ಚಿನ ಪ್ರಸಂಗಗಳು ಮತ್ತು ಆಗಲಿಕೆಗಳು ಪ್ರಾಪ್ತವಾಗುವುವು

ಶ್ರೀ ನಿವಾಸ
ಮೋಟಾರ್ ಸರ್ವೀಸ್
ಮೈಸೂರು—ಬೆಂಗಳೂರು

ಮೈಸೂರಿನಿಂದ ಚನ್ನಪಟ್ಟಣ, ಮಳವಳ್ಳಿ, ಸಾತನೂರು, ಕಾಗ್ಗಲೀಪುರ, ಹಾರೋಹಳ್ಳಿ ಮಾರ್ಗವಾಗಿ ಬೆಂಗಳೂರಿಗೆ ತಲುಪುವುದು.

ಮೈಸೂರಿನಿಂದ ಬೆಳಗ್ಗೆ 9-15 ಗಂಟೆಗೆ ಹೊರಟು ಬೆಂಗಳೂರಿಗೆ ಮಧ್ಯಾಹ್ನ 3 ಗಂಟೆಗೆ ತಲುಪುತ್ತ ಮತ್ತು ಬೆಂಗಳೂರಿನಿಂದ ಬೆಳಗ್ಗೆ 7-30 ಕ್ಕೆ ಹೊರಟು ಮೈಸೂರನ್ನು ಮಧ್ಯಾಹ್ನ 4-30 ಕ್ಕೆ ತಲುಪುತ್ತೆ

ಪ್ರೊಪ್ರೈಟರ್, ಶ್ರೀನಿವಾಸ ಮೋಟಾರ್ ಸರ್ವೀಸ್, ಮೈಸೂರು.

ರಾಜಕಮಲ್, ಮೈಸೂರು

ಜನಗಳ ದಿನಗಳಿಂದಲೂ ನೀವು ಕಾತುರದಿಂದ ನೋಡ ಬಯಸುತ್ತಿರುವ

" ಸ್ವರ್ಗಸೀಮ "

ಎಂಬ ಶ್ರೀ ವಾಹಿನಿಯವರ ಮಹೋನ್ನತ ತೆಲುಗು ಚಿತ್ರವನ್ನು ಕ್ಷಿಪ್ರದಲ್ಲಿಯೇ ನೋಡುವಿರಿ ! ಬರುವ ದಿನವನ್ನು ಎದುರು ನೋಡಿರಿ !

' ನಾಗಯ್ಯ, ' ಜಯಮ್ಮ, ' ಭಾನುಮತಿ

ಮುಂತಾದ ಖ್ಯಾತ ನಟ ನಟಿಯರುಗಳ ಅಭಿನಯ ವೈಭವ ಪೂರ್ಣ ದೃಶ್ಯಗಳಿಂದಲೂ, ಮನೋಹರ ಸಂಗೀತದಿಂದಲೂ ವಿರಾಜಿಸುವ ದಿವ್ಯ ಚಿತ್ರ.

[ವಿಜಯಾ ಪಿಕ್ಚರ್ಸ್, ಮೈಸೂರು]

Raj Kamal
Mysore

From 8-9-46 Daily 3 Sh...
Alexander Korda's

FOUR FEATHERS
in full length technicol...

ಫೋರ್ ಫೆದರ್ಸ್
ನಾನಾ ವರ್ಣ ರಂಜಿತವಾದ ಅಸ್ಸಲ್ ಇಂಗ್ಲಿಷ್ ನಾಟಕ.

OPERA TALKIES
ತಾ॥ 7—9—46ರಿಂದ
ನನ್ನ ಮಗ
(ತಮಿಳು)
* ಯು ಆರ್. ಜೀವರತ್ನಂ
* ಎನ್. ಕೃಷ್ಣಮೂರ್ತಿ,
* ಬಾಲಸುಬ್ರಹ್ಮಣ್ಯಂ * ಬೇಬಿ
ಪ್ರತಿ ದಿನ ಮೂರು ಆಟಗಳು.

ಫೋ. ನಂ. 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಬುಧವಾರ ೧೧—೯—೪೬ [ಸಂಚಿಕೆ ೪೦

ರಾಜೇಂದ್ರ ಪ್ರಸಾದರು ಬೆಂಗಳೂರಿಗೆ ಬರುವರು

ಗ್ರಾಮಾಧಿಕಾರಿಗಳ ಸಮ್ಮೇಳನ

ಮೈಸೂರು ೧೧
ಸಂಸ್ಥಾನದ ಗ್ರಾಮಾಧಿಕಾರಿಗಳ ೧೫ನೇ ಸಮ್ಮೇಳನವು ಈ ತಿಂಗಳು ೨೦, ೨೧ ಮತ್ತು ೨೨ನೇ ತಾರೀಖುಗಳಲ್ಲಿ ಶಿವಮೊಗ್ಗೆಯ ... ಟಾಕೀಸ್ ಮಂದಿರದಲ್ಲಿ ನಡೆಯುತ್ತದೆ ಶ್ರೀ ಎಫ್. ಸಿ. ದೇವರಾಜೇ ಅರಸರವರು ಅಧ್ಯಕ್ಷತೆ ವಹಿಸುವರು. ಸಂಸ್ಥಾನದ ಸಂ. ಎ. ರಾಮಸ್ವಾಮಿ ಮೊದಲಿಯಾರರವರು ಪ್ರಾರಂಭೋತ್ಸವವ ನೆರವೇರಿಸುವರು. ಮೈಸೂರು ... ದಿಂದ ಸಮ್ಮೇಳನಕ್ಕೆ ಹೋಗಬೇಕಾದ ಪ್ರತಿನಿಧಿಗಳನ್ನು ಚುನಾಯಿಸಲು ... ರಾಮಯ್ಯನವರ ಬೀದಿ ೧೯ನೇ ... ಮನೆಯಲ್ಲಿರುವ ಸಂಘದ ಕಛೇರಿಯಲ್ಲಿ ಈ ತಿಂಗಳು ೧೪ನೇ ತಾ॥ ೩ ಗಂಟೆಗೆ ವಿಶೇಷ ಸಭೆಯನ್ನು ಏರ್ಪಡಿಸಲಾಗಿದೆ.

ಸಿವಿಕ್ ಗಾರ್ಡ್ಸ್ ಸಂಘ

... ನಗರದ ಸಿವಿಕ್ ಗಾರ್ಡ್ಸ್ ಸಂಸ್ಥೆಯುವ ... ದ ಸೋಮವಾರ ಸದ್ವಿದ್ಯಾ ಪಾಠಶಾಲೆಯಲ್ಲಿ ಗಣಪತಿ ಮಂಗಳಾರತಿಯನ್ನು ... ಸಿದರು. ಜಿಲ್ಲಾಧಿಕಾರಿಗಳಾದ ಶ್ರೀ ... ನೆಟ್ ರಣಜೋಧ್ ಸಿಂಗರವರು ... ವಹಿಸಿದ್ದರು. ಪ್ರಾರ್ಥನೆಯಾದ ... ಕಾರ್ಯದರ್ಶಿಗಳಾದ ಶ್ರೀ ಎಂ. ದೀಪ ... ರವರು ಸ್ವಾಗತ ಭಾಷಣ ಮಾಡಿ ... ಸಂಸ್ಥೆಯವರು ಸಮಾಕಾಲದಲ್ಲಿಯೂ ... ಜನಿಕ ಸೇವೆ ಮಾಡಲು ಸಿದ್ಧರಾಗಿ ... ರಾಗಿ ತಿಳಿಸಿದರು. ವಿದ್ವಾನ್ ಟಿ. ಎಸ್. ... ಸ್ವಾಮಿಯ್ಯಂಗಾರ್ಯರವರಿಂದ ಸುಶ್ರಾವ್ಯವಾದ ಸಂಗೀತವಾಯಿತು. ಅಧ್ಯಕ್ಷರ ... ನಂತರ ಮಂಗಳಾರತಿ, ಪ್ರಸಾದ ವಿನಿಯೋಗ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಗಿಯಿತು.

ಸತ್ಕಾರ

... ಮನ್ನ ಮಹಾರಾಜರವರಿಂದ ಸಾರ್ವಜನಿಕ ... ಪ್ರಶಸ್ತಿ ಪದಕವನ್ನು ಪಡೆದಿರುವ ... ನಾಟಕ ಮಂಡಲಿಯ ವ್ಯವಸ್ಥಾಪಕ ಶ್ರೀ ಎಂ. ಸಿ. ಮಹದೇವ ಸ್ವಾಮಿಯ ... ಗೌರವಾರ್ಥವಾಗಿ ಮಿತ್ರಮಂಡಲಿಯು ಮೊನ್ನೆ ಎಗ್ಸಿಬಿಷನ್ ಕಛೇರಿಯಲ್ಲಿ ಒಂದು ... ರ ಕೂಟವನ್ನೇರ್ಪಡಿಸಿದ್ದರು. ಶ್ರೀಗಳು ... ಎ. ಕೃಷ್ಣಮೂರ್ತಿರಾವ್ ಮತ್ತು ... ರಾಜುರವರು ಭಾಷಣ ಮಾಡಿ ಶ್ರೀ ಮಹದೇವ ಸ್ವಾಮಿಯವರ ಗುಣಾತಿಶಯ... ಕೊಂಡಾಡಿದರು. ಶ್ರೀ ಮಹದೇವ ... ಯವರು ಕೃತಜ್ಞತೆಯನ್ನು ಸಲ್ಲಿಸಿ ... ಹೆಚ್ಚು ಪ್ರಭು ಮತ್ತು ಪ್ರಜಾವಾತ್ಸಲ್ಯಕ್ಕೆ ತಾವು ಪಾತ್ರರಾಗಲು ಮಹಾಜನ ... ನೀಡಬೇಕೆಂದು ಬೇಡಿದರು. ... ಆರ್. ರಾಮಯ್ಯನವರ ಭಾಷಣದ ಮೇಲೆ ಸಮಾರಂಭವು ಮುಕ್ತಾಯವಾಯಿತು.

... ಬೇಳೆ ಮತ್ತು ಕಡಲೇ ಹಿಟ್ಟು ಸರಬರಾಜು

... ಸರ್ಕಾರದವರು ತರಿಸಿರುವ ... ಬೇಳೆ ಮತ್ತು ಕಡಲೆಹಿಟ್ಟನ್ನು ... ಡಿಪೋಗಳ ಮೂಲ್ಯ ಮಾರ ... ಸರ್ಕಾರದವರು ಏರ್ಪಡಿಸಿದ್ದಾರೆಂದು ... ಡಿಪೋ ವರ್ತಕರ ಸಂಘದ ಕಾರ್ಯದರ್ಶಿ ತಿಳಿಸಿದ್ದಾರೆ.

ಖಂಡನಾ ಸಭೆ

... ತಿಂಗಳು ೧೨ ನೇ ತಾ॥ ಗುರುವಾರ ... ಗಂಟೆಗೆ ಟೌನ್‌ಹಾಲ್ ಮೈದಾನ...

ಷೇಕ್ ಅಬ್ದುಲ್ಲಾರವರಿಗೆ ಮೂರು ವರ್ಷ ಸಜಾ

ಕಾಶ್ಮೀರ ಸಂಸ್ಥಾನದಲ್ಲಿ ರಾಜದ್ರೋಹದ ಆಪಾದನೆಗೆ ಗುರಿಯಾಗಿದ್ದ ಷೇಕ್ ಅಬ್ದುಲ್ಲಾರವರಿಗೆ ಅಲ್ಲಿನ ನ್ಯಾಯಾಸ್ಥಾನದವರು ಮೂರು ಆಪಾದನೆಗಳ ಮೇಲೂ ತಲಾ ಮೂರು ವರ್ಷ ಸಜಾ ಮತ್ತು ೧೫೦೦ ರೂ. ದಂಡವನ್ನು ವಿಧಿಸಿದ್ದಾರೆ. ಶಿಕ್ಷೆಗಳು ಏಕ ಕಾಲದಲ್ಲಿ ಅನುಭವಿಸಲ್ಪಡಬೇಕು.

ಸಂಗೀತ

ಹುಣ್ಣಿಮೆ ಪ್ರಯುಕ್ತ ಈ ದಿನ ರಾತ್ರಿ ೯ ಗಂಟೆ ಮೇಲೆ ಡಿ. ಸುಬ್ಬಯ್ಯನ ರಸ್ತೆಯ ಲ್ಲಿರುವ ಸಾಧ್ವಿ ಕಛೇರಿಯ ಮಹಡಿಯ ಮೇಲೆ ವಿದ್ವಾನ್ ಎ. ಎಲ್. ಕೃಷ್ಣಯ್ಯರ ಸಂಗೀತವು ನಡೆಯುವುದು. ಸರ್ವರಿಗೂ ಸ್ವಾಗತವಿದೆ.

ವಿದ್ಯಾರ್ಥಿಗಳ ಪ್ರತಿಭಟನೆ

ರಾಜ್ಯಾಂಗ ರಚನಾ ಸಮಿತಿಗೆ ಚುನಾಯಿತ ಪ್ರತಿನಿಧಿಗಳನ್ನು ಕಳುಹಿಸುವ ವಿಚಾರದಲ್ಲಿ ಮೈಸೂರು ಕಾಂಗ್ರೆಸ್ ಪ್ರಕಟಣೆಗೆ ಅನುಸಾರವಾಗಿ ನಾಳೆ ಬೆಳಗ್ಗೆ ೯ ಗಂಟೆಗೆ ದೇಶೀಯ ವಿದ್ಯಾಶಾಲೆ, ತಿಲಕ ಸಂಘ, ಯುವಕರ ಸಂಘಗಳಲ್ಲಿ ಧ್ವಜಾರೋಹಣವೂ ಮಧ್ಯಾಹ್ನ ೧-೩೦ಕ್ಕೆ ಸೆಂಟ್ ಫಿಲೋಮಿನಾ ಕಾಲೇಜಿನ ಮುಂಭಾಗದಲ್ಲಿ ಬಹಿರಂಗ ಸಭೆಯೂ ವಿದ್ಯಾರ್ಥಿ ಕಾಂಗ್ರೆಸ್ ಆಶ್ರಯದಲ್ಲಿ ನಡೆಯುವುವು. ಮೈಸೂರು ನಗರ ಕಾಂಗ್ರೆಸ್ ಆಶ್ರಯದಲ್ಲಿ ಸಂಜೆ ನಡೆಯುವ ಮೆರವಣಿಗೆ, ಮತ್ತು ಸಭೆಯಲ್ಲಿಯೂ ವಿದ್ಯಾರ್ಥಿಗಳೆಲ್ಲರೂ ಭಾಗವಹಿಸಬೇಕಾಗಿ ಕಾರ್ಯದರ್ಶಿಗಳು ಕೋರಿರುತ್ತಾರೆ.

... ನದಲ್ಲಿ ಬಹಿರಂಗ ಸಭೆಯು ನಡೆದು ರಾಜ್ಯಾಂಗ ರಚನಾ ಸಭೆಗೆ ಮೈಸೂರು ಪ್ರತಿನಿಧಿಗಳ ಆಯ್ಕೆಯ ವಿಷಯದಲ್ಲಿ ಭಾಷಣಗಳು ಜರುಗುವುವು. ಅದೇ ದಿನ ಬೆಳಗ್ಗೆ ಒಂಭತ್ತು ಗಂಟೆಗೆ ಸುಬ್ಬರಾಯನ ಕೆರೆಯಲ್ಲಿ ಧ್ವಜಾರೋಹಣವು ನಡೆಯುವುದು.

ಪ್ರತಿಭಟನಾ ಸಭೆ

ನಂಜನಗೂಡು ತಾ॥ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ನಾಳೆ ಸಂಜೆ ೫॥ ಗಂಟೆಗೆ ಪ್ರತಿಭಟನಾ ಸಭೆಯನ್ನು ಏರ್ಪಡಿಸಿದೆ. ಶ್ರೀ ಮಳವಳ್ಳಿ ವೀರಪ್ಪನವರು ಭಾಷಣ ಮಾಡುತ್ತಾರೆ. ಪುರಜನರೆಲ್ಲರೂ ದಯಮಾಡಿಸಬೇಕಾಗಿ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳು ಕೋರುತ್ತಾರೆ.

ಉಪ್ಪಿನ ತೆರಿಗೆ ವಜಾ

ಮಹಾತ್ಮ ಗಾಂಧಿಯವರು ಪ್ರಾರ್ಥನಾ ಸಭೆಯಲ್ಲಿ ಭಾಷಣ ಮಾಡುತ್ತಾ ನೂತನ ಸರ್ಕಾರದವರು ಶೀಘ್ರವಾಗಿಯೂ ಉಪ್ಪಿನ ತೆರಿಗೆಯನ್ನು ವಜಾ ಮಾಡುವರೆಂದೂ ಅವರಿಗೆ ಸಕಲರೂ ಬೆಂಬಲವೀಯಬೇಕೆಂದೂ ಸೂಚಿಸಿದ್ದಾರೆ.

ಮೌಲಾನಾ ಅಜಾದರಿಗೆ ಆಹ್ವಾನ

ಮೈಸೂರು ಕಾಂಗ್ರೆಸ್ಸಿನ ೮ನೇ ಅಧಿವೇಶನವು ಅಕ್ಟೋಬರ್ ೧೯ ಮತ್ತು ೨೦ ರಲ್ಲಿ ಬೆಂಗಳೂರಿನಲ್ಲಿ ನಡೆಯುವಂತೆ ಗೊತ್ತಾಗಿದೆ. ಆ ಸಮಯದಲ್ಲಿ ನಡೆಯುವ ವಸ್ತು ಪ್ರದರ್ಶನದ ಆರಂಭೋತ್ಸವವನ್ನು ನೆರವೇರಿಸಲು ಕಾಂ॥ ಮಹಾ ಅಧ್ಯಕ್ಷ ಮೌ॥ ಅಜಾದರನ್ನು ಆಹ್ವಾನಿಸುವಂತೆ ನಿರ್ಧಾರವಾಗಿದೆ.

ಬೊಂಬಾಯಿಯಲ್ಲಿ ಅತಿವೃಷ್ಟಿ

ಭಾನುವಾರ ಬೊಂಬಾಯಿ ನಗರದಲ್ಲಿ ಎಂಟು ಅಂಗುಲ ಮಳೆಯಾಗಿ ಅನೇಕ ಪ್ರದೇಶಗಳು ನೀರಿನಲ್ಲಿ ಮುಳುಗಿವೆ. ರಸ್ತೆಗಳಲ್ಲಿ ನಾಲ್ಕು ಅಡಿ ನೀರು ನಿಂತಿದೆ. ರೈಲು, ಬಸ್ಸು, ಟ್ರಾಮ್‌ಗಳ ಸಂಚಾರಗಳು ನಿಂತಿವೆ. ಅಲ್ಲಲ್ಲೇ ಸಣ್ಣ ಸಣ್ಣ ದ್ವೀಪಗಳು ಏರ್ಪಟ್ಟು ಹೊರಗಿನ ಸಂಬಂಧವೇ ತಪ್ಪಿದೆ.

ಸಿಂಧ ಮುಸ್ಲಿಂ ಡಿಕ್ಟೇಟರ್

ಮುಸ್ಲಿಂ ಲೀಗಿನವರ ಪ್ರತೀಕಾರದ ಕಾರ್ಯಕ್ರಮವನ್ನು ಜಾರಿಮಾಡಲು ಹಾ॥ ಯೂಸಫ್ ಅಬ್ದುಲ್ಲಾ ಹರೂನ್ ರವರನ್ನು ಮೊದಲನೇ ಸರ್ವಾಧಿಕಾರಿಯಾಗಿ ಅಲ್ಲಿನ ಲೀಗ್ ಕೌನ್ಸಿಲ್ಲಿನವರು ನೇಮಿಸಿದ್ದಾರೆ. ಅವರಿಗೆ ಸಂಪೂರ್ಣ ಅಧಿಕಾರವನ್ನು ಕೊಡಲಾಗಿದೆ.

ಬಂಗಾಳಾ ರೈಲ್ವೆ ಅಪಾಯ

ಕಳೆದ ಭಾನುವಾರ ಪಂಜಾಬ್ ಮೇಲ್ ರೈಲು ಬಂಡಿಯು ಅಪಘಾತಕ್ಕೆ ಒಳಗಾಗಿ ಏಳು ಜನ ಪ್ರಯಾಣಿಕರು ಮಡಿದರು. ೩೦ ಜನರಿಗೆ ಗಾಯವಾಯಿತು. ಇಂಜನ್ ಮತ್ತು ಮೂರು ಗಾಡಿಗಳು ಉರುಳಿದವು. ಇನ್ನು ಮೂರು ಗಾಡಿಗಳು ಜಖಂಗೊಂಡವು.

ರಾಜೇಂದ್ರ ಪ್ರಸಾದರು ಕೊಚ್ಚಿಗೆ

ಕೊಚ್ಚಿ ಸಂಸ್ಥಾನದ ಆಹಾರ ಪರಿಸ್ಥಿತಿಯನ್ನು ಸ್ವತಃ ನೋಡಿ ಸಾಧ್ಯವಾದಷ್ಟು ಪರಿಹಾರವನ್ನು ನೀಡಲು ಕೇಂದ್ರ ಸರ್ಕಾರದ ವ್ಯವಸಾಯ ಮಂತ್ರಿ ಡಾ॥ ರಾಜೇಂದ್ರ ಪ್ರಸಾದರು ಅಲ್ಲಿಗೆ ಅಕ್ಟೋಬರ್ ೧೫ನೇ ... ವಿಮಾನದಲ್ಲಿ ತೆರಳುವರು.

ಬೆಂಗಳೂರಿಗೆ ರಾಜೇಂದ್ರ ಪ್ರಸಾದರು

ಸ್ವಂ. ಸು. ಪ್ರೋ.] ಬೆಂಗಳೂರು ೧೧
ಕೇಂದ್ರ ಸರ್ಕಾರದ ವ್ಯವಸಾಯ ಮಂತ್ರಿ ಡಾ॥ ರಾಜೇಂದ್ರ ಪ್ರಸಾದರು ಈ ತಿಂಗಳು ೧೫ ನೇ ತಾ॥ ಬೆಂಗಳೂರಿಗೆ ಬಂದು, ದಿವಾನರೊಡನೆ ಇಲ್ಲಿನ ಆಹಾರ ಪರಿಸ್ಥಿತಿಯ ವಿಚಾರವಾಗಿ ಮಾತುಕತೆ ನಡೆಸುವರು.

‡ ಭಾರತ ಸರ್ಕಾರದ ವಾಣಿಜ್ಯ ಸಚಿವರ ಆಹ್ವಾನದ ಮೇಲೆ ಸರ್. ರಾಮಸ್ವಾಮಿ ಮೊದಲಿಯಾರರು ಈ ತಿಂಗಳು ೧೯ ಮತ್ತು ೨೦ ನೇ ತಾ॥ ನವ ದೆಹಲಿಯಲ್ಲಿ ನಡೆಯುವ ವ್ಯಾಪಾರ ನೀತಿ ನಿರ್ಣಯದ ಸಮಿತಿಯಲ್ಲಿ ಭಾಗವಹಿಸುವರು.

§ ಶ್ರೀ ಓ. ಪುಲ್ಲರೆಡ್ಡಿಯವರ ಸ್ಥಾನದಲ್ಲಿ ಹಾ॥ ಓ. ಎಸ್. ಎಂ. ಷರೀಫ್‌ರವರನ್ನು ಪ್ರ॥ಪ್ರ॥ ಸಭೆಯ ಉಪಾಧ್ಯಕ್ಷ ಸಮಿತಿಯ ಅಧ್ಯಕ್ಷರನ್ನಾಗಿ ದಿವಾನರು ನೇಮಿಸಿರುವರು.

§ ಶ್ರೀ ಟಿ. ವೆಂಕಟರಂಗರವರು ನಿವೃತ್ತರಾಗುವುದಕ್ಕೆ ಮುಂಚೆ ಒಂದು ತಿಂಗಳು ೫ ದಿನ ರಜ ಪಡೆದಿದ್ದಾರೆ.

† ಶ್ರೀ ಪಿ. ರಾಜಪ್ಪ ನಾಯುಡುರವರನ್ನು ವಿದ್ಯುಚ್ಛಕ್ತಿ ಇಲಾಖೆಗೆ ಸ್ವತಂತ್ರ ಆಡಿಟರ್ ಆಗಿ ನೇಮಿಸಲಾಗಿದೆ.

* ಈ ದಿನ ದಿವಾನರ ಅಧ್ಯಕ್ಷತೆಯಲ್ಲಿ ಮಂತ್ರಿ ಮಂಡಲದ ಸಭೆ ನಡೆಯಿತು.

* ರಾಷ್ಟ್ರೀಯ ಸೈನಿಕ ಶಿಕ್ಷಣ ಸಮಿತಿಯ ಉಪಾಧ್ಯಕ್ಷರಾದ ಡಾ॥ ಅಮರನಾಥ ಝಾ‌ರವರು ಈ ದಿನ ಬೆಂಗಳೂರಿಗೆ ಆಗಮಿಸಿದರು.

ಜಿನ್ನಾರವರ ಹೊಸ ಸಲಹೆ

ಸಂಧಾನಕ್ಕೆ ಸಂಬಂಧಪಟ್ಟ ಇತರರೆಲ್ಲರೊಡನೆ ಸಮಾನಸ್ಕಂದ ಸ್ಥಾನವನ್ನು ತಮಗೆ ಕೊಟ್ಟು ಹೊಸ ಸಂಧಾನದ ಸಮ್ಮೇಳನಗಳನ್ನು ನಡೆಸಲು ಬ್ರಿಟಿಷ್ ಸರ್ಕಾರದವರು ತಮ್ಮನ್ನು ಲಂಡನ್ನಿಗೆ ಆಹ್ವಾನಿಸುವುದಾದರೆ ತಾವು ಅದನ್ನು ಅಂಗೀಕರಿಸುವುದಾಗಿ ಮಿ॥ ಜಿನ್ನಾರವರು ಲಂಡನ್ನಿನ ಡೇಲಿ ಮೇಲ್ ಪತ್ರಿಕೆಯ ಬಾತ್ಮೀದಾರರಿಗೆ ಕೊಟ್ಟ ಭೇಟಿಯಲ್ಲಿ ಹೇಳಿರುವುದಾಗಿ ವರದಿಯಾಗಿದೆ. ಹಾಗಾದರೆ ಈಗಿರುವ ಹಂಗಾಮಿ ಸರ್ಕಾರವೇ ಅಧಿಕಾರದಲ್ಲಿರಲೂ ತಾವು ಒಪ್ಪುವುದಾಗಿ ಹೇಳಿರುವರು. ತಮ್ಮ ಅಸ್ತಿತ್ವದಿಂದ ಈಗಿನ ಸರ್ಕಾರಕ್ಕೆ ಬೆಂಬಲ ಕೊಡುವುದು ಬಿಟ್ಟು ಬೇರೇನನ್ನೂ ಬ್ರಿಟಿಷರು ಮಾಡಲು ಒಪ್ಪದಿದ್ದಾಗ, ಮುಸಲ್ಮಾನರು ಅವನ್ನು ಸಹಿಸಿಕೊಳ್ಳುವುದಿಲ್ಲ. ನನ್ನನ್ನು ಅವರು ದಸ್ತಗಿರಿ ಮಾಡಲು ಬಯಸುವುದಾದರೆ ನಾನು ಜೈಲಿಗೆ ಹೋಗಲು ಈಗಲೇ ಸಿದ್ಧನಾಗಿದ್ದೇನೆ-ಎಂದು ಅವರು ಹೇಳುವರು.

ನೆಹರೂರವರ ರೇಡಿಯೋ ಭಾಷಣದ ವಿಚಾರದಲ್ಲಿ ... ನನ್ನನ್ನು ದೂರದಿಂದ ... ಗಾಯ ... ಕಾಂಗ್ರೆಸ್ಸು ... ದವರು ... ಇನ್ನೂ ... ಸರ್ಕಾರ ... ... ಭವಿಷ್ಯವು ... ಬ್ರಿಟಿಷ್ ... ಸಂಬಂಧದಲ್ಲಿ ... ... ಕೇಳಲು ... ಅವರ ...

ಸಾಧ್ವಿ

ಸೌ॥ ೧೧-೯-೪೬ ಬುಧವಾರ

ಕೊಚ್ಚಿಯಲ್ಲಿ ಮಿಶ್ರಮಂತ್ರಿ ಮಂಡಲ

ಪ್ರಜಾವರ್ಗದವರಿಗೆ ಅಧಿಕಾರವನ್ನು ವಹಿಸುವ ಕಾರ್ಯಕ್ರಮದಲ್ಲಿ ಕೊಚ್ಚಿ ಸಂಸ್ಥಾನವು ಕ್ರಮಕ್ರಮವಾಗಿ ಮುನ್ನಡಿಯಿಡುತ್ತಿದೆ. ಜವಾಬ್ದಾರಿ ಸರ್ಕಾರದ ಸ್ಥಾಪನೆಗಾಗಿ ಇನ್ನೊಂದು ಹೆಜ್ಜೆ ಮುಂದೆ ಹೋಗುವುದಾಗಿ ಅಲ್ಲಿನ ಪ್ರಭುತ್ವದವರು ತಿಳಿಸಿದ್ದರು. ಅದಕ್ಕೆ ಅನುಗುಣವಾಗಿ ಈಗ ಅಲ್ಲಿ ಮಿಶ್ರ ಮಂತ್ರಿ ಮಂಡಲವನ್ನು ಸ್ಥಾಪಿಸಲಾಗಿದೆ. ಅಲ್ಲಿರುವ ಪ್ರಧಾನ ರಾಜಕೀಯ ಪಕ್ಷಗಳಾದ ಪ್ರಗತಿ, ಸಮತಾವಾದಿ, ಮತ್ತು ಪ್ರಜಾ ಮಂಡಲಗಳ ನಾಯಕರುಗಳನ್ನು ಮಂತ್ರಿ ಮಂಡಲದ ರಚನೆಗಾಗಿ ಆಹ್ವಾನಿಸಲಾಯಿತು. ಅವರುಗಳು ಏಕೀಭವಿಸಿ ಮಿಶ್ರ ಮಂತ್ರಿ ಮಂಡಲವನ್ನು ಅಲ್ಲಿ ಸ್ಥಾಪಿಸಿರುವರು. ಸಂಸ್ಥಾನಗಳಲ್ಲಿ ಹೀಗೆ ಪ್ರಮುಖ ರಾಜಕೀಯ ಪಂಗಡಗಳಿಂದ ಮಿಶ್ರ ಮಂತ್ರಿ ಮಂಡಲವು ರಚನೆಯಾಗಿರುವುದು ಇದೇ ಮೊದಲು. ಇದಕ್ಕಾಗಿ ಕೊಚ್ಚಿ ಸಂಸ್ಥಾನವು ಸಕಲರ ಅಭಿನಂದನೆಗೂ ಪಾತ್ರವಾಗಿದೆ.

ಸಂಸ್ಥಾನಗಳ ಪ್ರಜಾ ಸಮ್ಮೇಳನದ ಅಧ್ಯಕ್ಷರಾದ ಪಂಡಿತ ಜವಾಹಿರಲಾಲ್ ನೆಹರೂರವರ ಸೂಚನೆಯಂತೆಯೇ ಕೊಚ್ಚಿಯ ಪ್ರಜಾನಾಯಕರು ನೂತನ ಸರ್ಕಾರದಲ್ಲಿ ಪ್ರವೇಶಿಸಲು ಒಪ್ಪಿದರು. ಹಿಂದೂಸ್ಥಾನದಲ್ಲಿ ಸ್ವಾತಂತ್ರ್ಯವು ಸ್ಥಾಪಿಸಲ್ಪಡುವುದಕ್ಕೆ ಪೂರ್ವಭಾವಿಯಾಗಿ ಹಂಗಾಮಿ ಕೇಂದ್ರ ಸರ್ಕಾರದಲ್ಲಿ ರಾಷ್ಟ್ರದ ವಿವಿಧ ಪಂಗಡಗಳ ಪ್ರತಿನಿಧಿಗಳು ಸೇರಿರುವವಷ್ಟೆ. ಅದೇ ಮಾದರಿಯಲ್ಲಿ ಸಂಸ್ಥಾನಗಳಲ್ಲಿಯೂ ಪ್ರಜಾನುರಾಗಕ್ಕೆ ಪಾತ್ರರಾದವರಿಂದ ಮಂತ್ರಿ ಮಂಡಲಗಳನ್ನು ಪುನರ್ರಚನೆ ಮಾಡುವುದು ಅತ್ಯಂತ ಹಿತವಾಗಿದೆ. ಹಾಗೆ ಮಾಡಲು ಸಂಸ್ಥಾನಗಳ ನಾಯಕರುಗಳೆಲ್ಲರೂ ತಮ್ಮ ತಮ್ಮ ಪ್ರಭುತ್ವದವರನ್ನು ಒತ್ತಾಯಪಡಿಸುತ್ತಿರುವರು. ಆದರೂ ಅನೇಕ ಕಡೆಗಳಲ್ಲಿ ಇದಕ್ಕೆ ಸ್ವಾಗತವಾಗಲಿ ಪುರಸ್ಕಾರವು ದೊರೆತಿರುವುದಿಲ್ಲ. ರಾಜಕೀಯ ಪಥದಲ್ಲಿ ಪ್ರಗತಿ ಮಾರ್ಗವನ್ನು ಅವಲಂಬಿಸಿರುವ ಕೊಚ್ಚಿ ಸಂಸ್ಥಾನವು ಹಾಕಿಕೊಟ್ಟಿರುವ ಮೇಲ್ಪಂಕ್ತಿಯು ಸಂಸ್ಥಾನಗಳ ಪ್ರಜೆಗಳೆಲ್ಲರಿಗೂ ಹೆಮ್ಮೆಯನ್ನುಂಟುಮಾಡುವುದಾಗಿದೆ.

ರಾಜಕೀಯ ಪಕ್ಷಗಳು ತಮ್ಮ ತಮ್ಮಲ್ಲಿರಬಹುದಾದ ಭಿನ್ನಭಾವಗಳನ್ನು ಒದಗಿಟ್ಟು ಇಡೀ ದೇಶದ ಸರ್ವತೋಮುಖವಾದ ಅಭ್ಯುದಯವನ್ನು ಸಾಧಿಸಲು ತಾತ್ಕಾಲಿಕವಾಗಿಯಾದರೂ ಮುಂದೆ ಬಂದು ಜವಾಬ್ದಾರಿಯನ್ನು ಹೊತ್ತು ದೇಶದ ಆಡಳಿತವನ್ನು ನಿರ್ವಹಿಸಬೇಕೆಂಬುದೇ ಮಿಶ್ರ ಮಂತ್ರಿ ಮಂಡಲಗಳ ಮೂಲ ಉದ್ದೇಶ.

ಈ ಕಾರ್ಯದಲ್ಲಿ ಕೊಚ್ಚಿಯ ರಾಜಕೀಯ ಪಂಗಡಗಳು ಪರಸ್ಪರ ಸಹಕರಿಸಲು ಮುಂದೆ ಬಂದಿರುವುದು ಅಭಿನಂದನೀಯವಾಗಿಯೇ ಇದೆ. ಕೊಚ್ಚಿಯಲ್ಲಿ ನಡೆದಿರುವ ನೂತನ ಪ್ರಯೋಗವು ಸಂಪೂರ್ಣವಾಗಿ ಯಶಸ್ಸನ್ನು ಪಡೆದು ಪೂರ್ಣ ಜವಾಬ್ದಾರಿ ಸರ್ಕಾರಕ್ಕೆ ದಾರಿಯನ್ನು ಮಾಡಿ ಇತರ ಎಲ್ಲಾ ಸಂಸ್ಥಾನಗಳಿಗೂ ಮಾದರಿಯಾಗಲೆಂದು ಹಾರೈಸೋಣ.

ಏಷ್ಯಾಖಂಡದವರ ಸಮ್ಮೇಳನ

ಬರುವ ಜನವರಿ ಅಂತ್ಯಕ್ಕೆ ದೆಹಲಿಯಲ್ಲಿ ಅಖಿಲ ಏಷ್ಯಾಖಂಡದ ದೇಶಗಳ ಸಮ್ಮೇಳನವೊಂದನ್ನು ನಡೆಸಲು ಏರ್ಪಾಡುಗಳಾಗುತ್ತಿವೆ. ಭಾರತದ ವಿಶ್ವವಿಚಾರ ಸಂಸ್ಥೆಯು ಇದರ ವ್ಯವಸ್ಥೆಗಳನ್ನು ಮಾಡುತ್ತಿದೆ. ಭಾರತ ತಾತ್ಕಾಲಿಕ ಸರ್ಕಾರದ ಉಪಾಧ್ಯಕ್ಷರಾದ ಪಂ॥ ಜವಹರಲಾಲ್ ನೆಹರೂರವರು ಏಷ್ಯಾಖಂಡದ ಎಲ್ಲಾ ಸ್ವತಂತ್ರ ರಾಜ್ಯಗಳ ನಾಯಕರುಗಳಿಗೂ ಆಹ್ವಾನವನ್ನು ಕಳುಹಿಸುವರು. ರಷ್ಯಾಕ್ಕೂ ಸಹ ಆಹ್ವಾನವು ಹೋಗುವುದು. ಪರಕೀಯ ಆಕ್ರಮಣಕ್ಕೆ ತುತ್ತಾಗಿರುವ ದೇಶಗಳನ್ನೂ ಕರೆಯಲಾಗುವುದು. ಆದರೆ ಅಲ್ಲಿನ ರಾಷ್ಟ್ರನಾಯಕರುಗಳಿಗೆ ಆಹ್ವಾನವು ಹೋಗುವುದು.

ಮಯೂರ

ಶ್ರೀ ಮಾಸ್ತಿ ಕೃಷ್ಣಮೂರ್ತಿಯವರು ಬೆಂಗಳೂರಿನಲ್ಲಿ ನಡೆಸುತ್ತಿರುವ ಮಯೂರ ಮಾಸ ಪತ್ರಿಕೆಯು ಈ ತಿಂಗಳ ಸಂಚಿಕೆಯು ನಮ್ಮ ಹಸ್ತಗತವಾಗಿದೆ. ಇದರಲ್ಲಿ ಅನೇಕ ಉಪಯುಕ್ತವಾದ ಲೇಖನಗಳೂ, ಕಥೆ ಮತ್ತು ಕವಿತೆಗಳೂ ಸುಂದರವಾದ ಚಿತ್ರಗಳೂ ಇವೆ. ಮಾಸ ಭವಿಷ್ಯವೂ ಸಹ ಇರುತ್ತದೆ. ವಾರ್ಷಿಕ ಚಂದಾ ೩ ರೂ ೮ ಆಣೆ. ಸರ್ವರಿಗೂ ಗ್ರಾಹ್ಯವಾಗಿದೆ.

ರೇಷನ್ ತೊಂದರೆ

ಅಗರ-ಮಾಂಬಳ್ಳಿ ೧೦

ನಮ್ಮೂರಿನ ರೇಷನ್ ಡಿಪೋವಿನಲ್ಲಿ ಡಿಸೆಂಬರಿನಿಂದ ಜುಲೈ ತಿಂಗಳವರಿಗೂ ಕೊಡುತ್ತಿದ್ದ ದಿನಸಿ ರೂಲ್ಸನ್ನು ಬದಲಾಯಿಸಿ ಒಂದು ಸಂಸಾರಕ್ಕೆ ಒಂದು ವಾರಕ್ಕೆ ತಲಾ ನಾಲ್ಕಾಣೆ ಅಕ್ಕಿ, ಮುಸುಕಿನಜೋಳ ಗೋಧಿ ಜುಮ್ಲಾ ೧೨ ಆಣೆಗೆ ಸರಬರಾಜು ಮಾಡುತ್ತಿರುವರು. ಇದರಿಂದ ಇಲ್ಲಿನ ಜನರಿಗೆ ಆಹಾರದಲ್ಲಿ ತುಂಬಾ ತೊಂದರೆಯಾಗಿದೆ. ಬಡವರು ಅನುಭವಿಸುತ್ತಿರುವ ಕಷ್ಟ ಹೇಳತೀರದು. ಈ ತೆರನಾದ ಅಹವಾಲುಗಳನ್ನು ಸಂಬಂಧಪಟ್ಟ ಅಧಿಕಾರಿಗಳಲ್ಲಿ ತಿಳಿಸಿಕೊಂಡರೂ ಗಮನಕೊಟ್ಟಿಲ್ಲ. ಮೇಲ್ಪಟ್ಟ ಅಧಿಕಾರಿಗಳಾದರೂ ಗಮನಕೊಟ್ಟು ಈ ತೊಂದರೆ ತಪ್ಪಿಸಿಕೊಡುವರೆಂದು ನಂಬಿದ್ದೇವೆ ಎಂಬುದಾಗಿ ಒಬ್ಬ ವಾಚಕರು ಬರೆದಿರುತ್ತಾರೆ.

ಹೆಚ್ಚು ಧಾನ್ಯ ಬೇಕು

ಸ್ವಂ.ಸು] ಶ್ರೀರಂಗಪಟ್ಟಣ ೯

ಈ ತಾಲ್ಲೂಕು ಆಹಾರ ಸಮಿತಿ ಸಭೆಯು ಅಮಲ್ದಾರರ ಅಧ್ಯಕ್ಷತೆಯಲ್ಲಿ ಸೇರಿ ಈಗ ಕೊಡುತ್ತಿರುವ ೪೦೦ ಪಲ್ಲ ಅಕ್ಕಿ ಸಾಲದೆಂದೂ ಇನ್ನೂ ೨೦೦ ಪಲ್ಲ ಹೆಚ್ಚು ಸಬೇಕೆಂದೂ ಸರ್ಕಾರವನ್ನು ಪ್ರಾರ್ಥಿಸುವ ನಿರ್ಣಯ ಮಾಡಲಾಯಿತು. ಮಲೇರಿಯಾ ವ್ಯಾಧಿಯಿರುವ ಈ ಸ್ಥಳದಲ್ಲಿ ಅಭ್ಯಾಸವಿಲ್ಲದಿರುವ ಮುಸಿಕಿನ ಜೋಳವನ್ನು ತಪ್ಪಿಸಿ ಅದಕ್ಕೆ ಬದಲು ರಾಗಿ ಅಥವಾ ಗೋಧಿಹಿಟ್ಟು ಕೊಡಬೇಕು; ಸಕ್ಕರೆ ಸರಬರಾಜನ್ನು ಹಿಂದಿನ ಮಟ್ಟಕ್ಕೇ ಹೆಚ್ಚಿಸಬೇಕು; ಸ್ಟಾಂಡರ್ಡ್ ಬಟ್ಟೆಯನ್ನು ಹೆಚ್ಚಿಸುವುದಲ್ಲದೆ ಮಹಾಲಯ ಪಕ್ಷಕ್ಕೆ ಮಿಲ್ ಬಟ್ಟೆಯ ಸ್ಪೆಷಲ್ ಕೋಟಾವನ್ನು ಕೊಡಬೇಕು ಎಂದು ಮುಂತಾಗಿ ನಿರ್ಣಯಗಳನ್ನು ಮಾಡಲಾಯಿತು.

ಲಂಡನ್ನಿನ ನಿರಾಶ್ರಿತರಿಂದ ಮನೆಗಳ ಆಕ್ರಮಣ

ವಾಸಿಸಲು ಮನೆಯಿಲ್ಲದ ಸುಮಾರು ೫೦೦ ಸಂಸಾರಗಳಿಗೆ ಸೇರಿದ ೧೫೦೦ ಜನ ಲಂಡನ್ ನಿವಾಸಿಗಳು ಖಾಲಿಯಿದ್ದ ಒಂದು ದೊಡ್ಡ ಭವನವನ್ನು ಆಕ್ರಮಿಸಿದ ಅಂಶವು ವರದಿಯಾಗಿದೆ. ಅವರುಗಳು ವಾಸಿಸಲು ಆಶ್ರಯವಿಲ್ಲದೆ ಬೀದಿ ಬೀದಿಗಳಲ್ಲಿ ಅಲೆಯುತ್ತಿದ್ದರು. ವಿವಾಹಿತರಾದ ದಂಪತಿಗಳೇ ಅವರಲ್ಲಿ ಬಹುಮಂದಿ ಇದ್ದರು. ಕೇಳದ ಭಾನುವಾರ ಅವರುಗಳು ಹಠಾತ್ತಾಗಿ ತಮ್ಮ ಗಂಟು ಮೂಟೆಗಳೊಡನೆ ಮೇಲ್ಕಂಡ ಭವನದ ಬಳಿ ಬಂದು ಸೇರಿ ಅದರ ಕೊಠಡಿಗಳನ್ನು ಆಕ್ರಮಿಸಿದರು. ಈ ಮುತ್ತಿಗೆಯು ಆರಂಭವಾದೊಡನೆಯೇ ಭವನದ ರಕ್ಷಕರು ಪೋಲೀಸರಿಗೆ ಫಿರ್ಯಾದು ಮಾಡಿದರು. ಆದರೆ ಪೋಲೀಸರು ಮುತ್ತಿಗೆ ಹಾಕಿದವರಿಗೆ ನೆರವು ನೀಡಿ ಅವರಿಗೆ ಬಿಸಿ ಬಿಸಿ ಪಾನೀಯಗಳನ್ನು ಒದಗಿಸಿದರು. ಮನೆಗಳಿಲ್ಲದೆ ಕಷ್ಟಪಡುವ ಸಂಸಾರಗಳಿಗೆ ವಸತಿಯನ್ನೊದಗಿಸಲು ಇದೇ ರೀತಿ ಖಾಲಿಯಿರುವ ಮನೆಗಳನ್ನೆಲ್ಲಾ ಆಕ್ರಮಿಸಿಕೊಳ್ಳುವುದಾಗಿಯೂ ಈಗ ನಡೆದಿರುವ ಪ್ರಕರಣವು ಎಲ್ಲರ ಕಣ್ಣನ್ನು ತೆರೆಯಲೆಂಬುದಾಗಿಯೂ ಕಮ್ಯೂನಿಸ್ಟ್ ಪಕ್ಷದ ಡೆನ್ನಿಸ್ ಗುಡ್ವಿನ್ ಎಂಬುವರು ಹೇಳಿದರು.

ಮೊಹಲ್ಲಾ ಸಮಿತಿ ಸಭೆ

ಮೈಸೂರು ೯

ಚಾಮರಾಜ ಮೊಹಲ್ಲಾ ಪ್ರಾಂ[illegible] ಕಾಂಗ್ರೆಸ್ ಸಮಿತಿ ಸಭೆಯು ನಿನ್ನೆ [illegible] ಅಗರಂ ರಂಗಯ್ಯನವರ ಅಧ್ಯಕ್ಷತೆಯ[illegible] ನಡೆಯಿತು. ಭಾರತ ಕೇಂದ್ರ ಸರ್ಕಾ[illegible]ನ್ನು ರಚಿಸಿರುವ ಪಂ॥ ನೆಹರೂ ಮ[illegible] ಇತರ ನಾಯಕರುಗಳಿಗೆ ಶುಭಾಶಯ[illegible]ನ್ನು ಕೋರಿದುದಲ್ಲದೆ ಅವರ ಪ್ರಯ[illegible] ಯಶಸ್ವಿಯಾಗಿ ಜರುಗಿ ಬೇಗನೆ ಸಂಪೂ[illegible] ಸ್ವಾತಂತ್ರ್ಯ ಸ್ಥಾಪನೆಯಾಗಲೆಂದು ಹಾ[illegible]ಲಾಯಿತು.

ರಾಜ್ಯಾಂಗ ರಚನಾ ಸಮಿತಿಗೆ ಸಂಸ್ಥಾ[illegible]ಗಳ ಪರವಾಗಿ ಚುನಾಯಿತ ಪ್ರತಿನಿಧಿ[illegible] ಹೋಗಬೇಕೆಂದು ಸಮಿತಿಯು ಅಭಿ[illegible]ಯ ಸೂಚಿಸಿದುದಲ್ಲದೆ ದಿವಾನರು [illegible] ನಾಯಕತ್ವದಲ್ಲಿ ಅಧಿಕಾರಿ ಮತ್ತು [illegible] ಸದಸ್ಯರುಗಳನ್ನು ಸದರಿ ಸಭೆಗೆ [illegible] ಕೊಂಡು ಹೋಗುವುದಾಗಿ ಹೇಳಿದ[illegible]ನ್ನು ಖಂಡಿಸಲಾಯಿತು. ರಾಜ್ಯಾಂಗ [illegible]ತಿಯೊಡನೆ ಸಂಸ್ಥಾನಗಳ ಪರವಾಗಿ [illegible]ನ ನಡೆಸಲು ಪ್ರಜೆಗಳ ವಿಶ್ವಾಸಕ್ಕೆ [illegible]ರಾದ ಸಂಸ್ಥಾನದ ಪ್ರತಿನಿಧಿಗಳೇ [illegible] ಕೆಂದೂ ಹೊರಗಿನವರು ಇರಬಾರದೆ[illegible] ಸಹ ಸೂಚಿಸುವ ನಿರ್ಣಯಗಳಾದುವು.

ವಾರ್ತಾವಳಿ

ಬೋಸರು

ಸುಭಾಷ್ ಬೋಸರು ಮಾಜಿ [illegible] ದರ್ಶಿ ಜೆ. ಎ. ರಾವ [illegible]ರವರು [illegible] ಹೇಳಿಕೆಯಲ್ಲಿ ನೇತಾಜಿಯವ[illegible] ಗಾಗಲೇ ಭಾರತಕ್ಕೆ ಬಂದಿದ್ದರೆ, [illegible] ಬಳಿ ಒಂದು ಕಡೆ ಇದ್ದಾರೆ ಎಂದು [illegible] ರುವುದಾಗಿ ವರದಿಯಾಗಿದೆ. ಬೋ[illegible] ಭಾರತದಲ್ಲೇ ಇರುವರೆಂದೂ ಪ್ರ[illegible] ಕಾಂ॥ ನಾಯಕರೊಬ್ಬರನ್ನು ಭೇಟಿ [illegible] ರುವರೆಂದೂ ಶ್ರೀ ವಿಶ್ವಂಭರನಾಥ [illegible] ಯವರು ಹೇಳಿದ್ದಾರೆ. ಬಹು[illegible] ಒಂದು ಸೂಕ್ತವಾದ ದಿವಸ ಗೊ[illegible] ಸ್ಥಳದಲ್ಲಿ ನೇತಾಜಿ ಬೋಸರು [illegible] ಕೊಳ್ಳುವರೆಂದು ಫಂಡಾಬ್ ಫಾ[illegible] ಬ್ಲಾಕ್ ಅಧ್ಯಕ್ಷ ಪ್ರೊ॥ ಮೋಟಾಸಿಂ[illegible] ತಿಳಿಸಿದ್ದಾರೆ.

ಶ್ರೀನಿವಾಸ

ಮೋಟಾರ್ ಸರ್ವಿ[illegible]

ಮೈಸೂರು—ಬೆಂಗಳೂ[illegible]

ಮೈಸೂರಿನಿಂದ ಬನ್ನೂರು, [illegible] ಹಲಗೂರು, ಸಾತನೂರು, [illegible] ಹಾರೋಹಳ್ಳಿ, ಮಾರ್ಗವಾಗಿ ಬೆಂಗ[illegible] ತಲುಪುವುದು.

ಮೈಸೂರಿನಿಂದ ಬೆಳಿಗ್ಗೆ 9-15 [illegible] ಹೊರಟು ಬೆಂಗಳೂರಿಗೆ ಮಧ್ಯಾಹ್ನ [illegible] ಗಂಟೆಗೆ ತಲುಪುತ್ತೆ. ಮತ್ತು ಬೆಂಗ[illegible]ನಿಂದ ಬೆಳಿಗ್ಗೆ 7-30 ಕ್ಕೆ ಹೊ[illegible] ಮೈಸೂರನ್ನು ಮಧ್ಯಾಹ್ನ 3 10 ಕ್ಕೆ [illegible]ಪುತ್ತೆ.

ಪ್ರೊಪ್ರೈಟರ್, ಶ್ರೀನಿವಾಸ ಮೋಟ[illegible] ಸರ್ವಿಸ್,

ಆಫೀಸ್:- "ಪದ್ಮಾಲಯ", ಸ[illegible] ರಾವ್ ರೋಡ್, ಮೈಸೂ[illegible]

ಮಹಾ ಜನಗಳ ಅಡಿದಾವರೆಗಳಲ್ಲಿ ಅರ್ಪಣೆ

ಶ್ರೇಷ್ಠವೆನಿಸಿದ ಮತ್ತು ತೆಲುಗು ಚಿತ್ರ ಪಟಗಳಲ್ಲಿ ಹಿರಿಯ ಸ್ಥಾನವನ್ನು ಪಡೆದಿರುವ

"ಸ್ವರ್ಗಸೀಮ"

ಎಂಬ ಶ್ರೀ ವಾಹಿನಿಯವರು ಕಲಾಮಂಟಪಕ್ಕೆ ಧಾರೆಯೆರೆದಿರುವ ಘನತರವಾದ ತಯಾರಿಕೆಗಳಲ್ಲಿ ಪ್ರಥಮ ಸ್ಥಾನವನ್ನು ಅಲಂಕರಿಸಿರುವ ಈ ಮಹೋನ್ನತ ಚಿತ್ರವು ಮೈಸೂರಿನ

ರಾಜಕಮಲ್ ಟಾಕೀಸಿನಲ್ಲಿ

ಅತಿ ಶೀಘ್ರದಲ್ಲಿಯೇ ಪ್ರದರ್ಶಿಸಲ್ಪಡುವುದು

ನೇತ್ರದಲ್ಲಿ ನೇತ್ರವನ್ನಿಟ್ಟು, ಹೃದಯಕ್ಕೆ ಹೃದಯವನ್ನಿಟ್ಟು ಹಿಂದಾದ ಮನಸ್ಸಿನ ನಾಡಿಯ ಉದ್ವೇಗದಿಂದವಲೋಕಿಸಬೇಕಾದ ಈ ಸೊಬಗಿನ ಸಂಪತ್ತನ್ನು ಬಣ್ಣಿಸಲಸದಳವು.

ಈ ಕಲಾಕೃತಿಯನ್ನು ನೀವು ತಪ್ಪದೆ ನೋಡಲೇಬೇಕು !

ನೋಡಿ ಬಾಳಿನ ಸತ್ವವನ್ನು ಅರಿಯಬೇಕು !!

ಅರಿತು ಇದರ ಹಿರಿಮೆಯನ್ನರಿಯಬೇಕು !!!

ಅರಿತು ಆನಂದ ಸಾಗರದಲ್ಲಿ ಓಲಾಡಬೇಕು !!!!

ಆನಂದಿಸಿ ನಿಮ್ಮ ಮಿತ್ರರಿಗೂ ಆಮಂತ್ರಣವನ್ನೀಯಬೇಕು !!!!!

Edited, printed and published by A. R. Nagarajan at the Sadhvi [illegible] D. Subbiah Road, Mysore.

SADHVI, MYSORE
Regd. No. M. 4313
ರೀ. ನಂ. 302 | ವಾರ್ಷಿಕ ಚಂದಾ | ಬಿಡಿ ಪ್ರತಿ 3 ಕಾಸು

ಸಾಧ್ವಿ

ಸಂಪುಟ ೫] ಗುರುವಾರ ೧೨—೯—೪೬ [ಸಂಚಿಕೆ ೪೧

ಸೋವಿಯಟ್ ರಷ್ಯದ-ಮೇಲೆಯುದ್ಧದಬೆದರಿಕೆ

...ಸ್ತಾರರವರ ಅತ್ಯಾಚಾ...ರಿಯ ಬಂಧನ

...ಯ ಸರ್ಕಾರದ ಮಂತ್ರಿ ಸರ್ ಅಹಮದ್ ಖಾನರನ್ನು ಕೊಲೆ ...ಯಲು ಪ್ರಯತ್ನಿಸಿದ್ದವರೆಂದು ...ದ ಕೆಲವರನ್ನು ಸಿಮ್ಲಾ ನಗರ ...ದ್ದಾಗ ಅವರು ಒಬ್ಬಾತನನ್ನು ...ದರು. ಅಲ್ಲಿ ಹಾಜರಿದ್ದ ಅವನ ... ಕೂಡಲೇ ಪ್ರಶ್ನೆ ತಪ್ಪಿ ಬಿದ್ದ...

...ಬರ್ ೨೧ನೇ ತಾ|| ...ಜಾ ಕೊಡಬೇಕು

...ಬರ್ ೨೧ನೇ ತಾ|| ಸುಭಾಷರ ...ಹಿಂದ್ ಸರ್ಕಾರದ ಸ್ಥಾಪನಾ ದಿ...ದಿಂದ ಅಂದು ಸಾರ್ವಜನಿಕ ರ...ನವನ್ನಾಗಿ ಪರಿಗಣಿಸಬೇಕೆಂದು ...ಪಂ|| ಜವಹರರಿಗೆ ಫಾರ್ವರ್ಡ್ ...ಕಾರ್ಯ ಸಮಿತಿಯವರು ಪತ್ರ...ರೆ

...ರ್ಮನ್ ಸೈನ್ಯಕ್ಕೆ ರಷ್ಯದ ಶಿಕ್ಷಣ

...ನಿಯಲ್ಲಿ ತನಗೆ ಸೇರಿರುವ ಪ್ರದೇ...ಶ್ಯವು ಒಂದು ಜರ್ಮನ್ ಸೇನೆ ...ತಯಾರು ಮಾಡುತ್ತಿದೆಯೆಂದು ...ಲೇಬರರಾದ ಡ್ರ್ಯಾ ಪಿಯರ್ಸ್ ...ಸ ಹೇಳಿದ್ದಾರೆ. ಬ್ರಿಟಿಷರೂ ಸಹ ಪ್ರದೇಶಗಳಲ್ಲಿ ನೂರು ಲಕ್ಷ ಸೈನಿಕರನ್ನು ಶಸ್ತ್ರಸಹಿತವಾಗಿ ...ಸಿದ್ದಾರೆ. ಆದರೆ ಈ ಸೈನ್ಯವು ...ರ ಆಜ್ಞೆಯಂತೆ ವರ್ತಿಸುವುದಿಲ್ಲ ...ಳಲಾಗಿದೆ. ಆದ್ದರಿಂದ ಜರ್ಮ...ಸ್ವಂತ ಸರ್ಕಾರವನ್ನು ಕೊಡು...ವೆಂಬ ಸಿದ್ಧರಿಸಿರುವು...ವರದಿಯಾಗಿದೆ.

...ರ್ಡ್ ಮನೆಗಳ ಆಕ್ರ...ಮಣದ ಪ್ರತಿಧ್ವನಿ

...ರಗಳಲ್ಲಿದ್ದ ೧,೫೦೦ ಜನರು ...ಒಂದು ಭವನವನ್ನು ಬಲಾತ್ಕಾ...ಆಕ್ರಮಿಸಿದ್ದರಷ್ಟೆ. ಇಂತಹ ...ನ್ನು ಮುಂದೆ ತಡೆಗಟ್ಟಲು ಅಲ್ಲಿನ ...ವರು ಸೂಕ್ತವಾದ ಏರ್ಪಾಡು ...ಗೊಳ್ಳುವುದಾಗಿ ತಿಳಿಸಿರುವರು. ...ಗೆ ಕಾರಣ ಭೂಕರಾದ ಕಮ್ಯೂ...ಕ್ಕೆ ಪ್ರತೀಕಾರ ಮಾಡುವುದಾಗಿ ...ರುವರು

...ಂದ್ರ ಮಂಡಲಕ್ಕೆ ಪ್ರಯಾಣ

...ಹತ್ತು ವರ್ಷಗಳಲ್ಲಿ ಭೂಮಿಯಿಂ...ಪ್ರಹಕ್ಕೆ ಹೋಗುವ ರಾಕೆಟ್ ...ಗಳು ಸಿದ್ಧವಾಗುವುವು-ಎಂಬುದಾ...ನ ವಿಜ್ಞಾನ ಶೋಧನಾಧಿಕಾರಿ ...ಸುವರು. ಒಂದು ಸಣ್ಣ ಕಬ್ಬಿ...ನನ್ನು ಭೂಮಿಯಿಂದ ಚಂದ್ರ...ಕ್ಕೆ ಕಳುಹಿಸಲು ಹತ್ತು ವರ್ಷವಾ...ಇನ್ನು ಒಂದೂವರೆ ವರ್ಷದಲ್ಲಿ ...ವಿಮಾನಗಳು ಸಿದ್ಧವಾಗುವು...ಳಲಾಗಿದೆ. ಅವುಗಳಲ್ಲಿ ರೇಡಿ...ಯಂತ್ರಗಳನ್ನೂ ರವಾನಿಸಲಾಗುವು...ಚಂದ್ರ ಮಂಡಲದಿಂದ ಅವು ಕೆಲಸ ...ವು. ಅವುಗಳ ವೇಗವು ಗಂಟೆಗೆ ...ಮೈಲಿ ಇರುವುದು. ಆದವತ್ತು ...ಅವು ಚಂದ್ರನನ್ನು ತಲಪುವು...ಳಲಾಗಿದೆ.

ಚೆತ್ವಾರಿ ನವಾಬರ ಸಂಧಾನ

ಕೋಮುವಾರು ಸಮಸ್ಯೆಯನ್ನು ಪರಿಹರಿಸಲು ಬೇಗನೇ ಮಾರ್ಗವನ್ನು ಕಂಡು ಹಿಡಿಯಲಾಗುವುದೆಂದು ಚತ್ತಾರಿ ನವಾಬರು ಹೇಳಿರುವರು. ಈಗತಾನೆ ಅವರು ವೈಸರಾಯರನ್ನು ಭೇಟಿ ಮಾಡಿರುವರು. ಜಿನ್ನಾರವರನ್ನೂ ಸಧ್ಯದಲ್ಲಿಯೇ ಕಾಣಲಿರುವರು.

ಸಿಂಧು ದೇಶದ ಗೊಂದಲ

ಸಿಂಧು ದೇಶದಲ್ಲಿರುವ ಲೀಗ್ ಮಂತ್ರಿ ಮಂಡಲದ ಮೇಲೆ ಅವಿಶ್ವಾಸ ನಿರ್ಣಯವು ನಿನ್ನೆ ಚರ್ಚೆಗೆ ಬರಬೇಕಾಗಿತ್ತು. ಆದರೆ ಶಾಸನ ಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರು ರಾಜೀನಾಮೆ ಇತ್ತ ಪ್ರಯುಕ್ತ ಗವರ್ನರರು ಸಭೆಯನ್ನೇ ಮುಂದೆ ಹಾಕಿರುವರು. ಅಧ್ಯಕ್ಷರಿಲ್ಲವಿದ್ದರೆ ಬೇರೆಯವರನ್ನು ಆರಿಸುವುದು ಸರ್ಕಾರದವರ ಕರ್ತವ್ಯವೆಂದೂ ಸಭೆಯನ್ನೇ ಮುಂದೆ ತಳ್ಳುವುದು ಸರಿಯಲ್ಲವೆಂದೂ ವಿರೋಧ ಪಕ್ಷದವರು ಪ್ರತಿಭಟಿಸಿ ತಮಗೆ ಮಂತ್ರಿ ಮಂಡಲವನ್ನು ರಚಿಸಲು ಅವಕಾಶ ಕೊಡಬೇಕೆಂದು ವೈಸರಾಯರನ್ನು ಕೋರಿದ್ದಾರೆ

ಮಿತ್ರ ಸಂಸ್ಥೆಗೆ ಭಾರತೀಯ ನಿಯೋಗ

ದಕ್ಷಿಣ ಆಫ್ರಿಕದ ಪ್ರಶ್ನೆಯ ಬಗ್ಗೆ ಮಿತ್ರ ಸಂಯುಕ್ತ ಸಂಘದಲ್ಲಿ ವಾದಿಸಲು ಹೊರಡುವ ನಿಯೋಗದಲ್ಲಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್ ಮಿ|| ಫ್ರಾಂಕ್ ಆಂತೋನಿ ಮತ್ತು ಕೆ ಸಿ ನಿಯೋಗಿಯವರು ಇರುವರು. ದಕ್ಷಿಣ ಆಫ್ರಿಕದಲ್ಲಿ ಭಾರತ ಹೈ ಕಮೀಷನರಾಗಿದ್ದ ಶ್ರೀ ಆರ್ ಎಂ ದೇಶಮುಖ್‌ರವರು ಸಲಹೆಗಾರರಾಗಿರುವರು. ಚೀಣಾದಲ್ಲಿ ಭಾರತೀಯ ಏಜೆಂಟರಾಗಿದ್ದ ಶ್ರೀ ಕೆ ಪಿ ಎಸ್. ಮೆನನ್‌ರವರು ಕಾರ್ಯದರ್ಶಿಗಳಾಗಿರುವರು

ರಷ್ಯಕ್ಕೆ ರಾಜ್ಯ ದಾಹ

ಭಾರತದ ವಿಚಾರ ಸಂಸ್ಥೆಯ ಅಧ್ಯಕ್ಷರಾದ ಸರ್ ಹೋಮಿ ಮೋದಿಯವರು ಬೊಂಬಾಯಿಯಲ್ಲಿ ಭಾಷಣ ಮಾಡುತ್ತಾ ರಷ್ಯಾ ನಡೆಸುತ್ತಿರುವ ರಾಜ್ಯ ವಿಸ್ತರಣಾ ಕಾರ್ಯವನ್ನು ತಡೆಗಟ್ಟಲು ಪಾಶ್ಚಾತ್ಯ ಪ್ರಜಾಪ್ರಭುತ್ವ ರಾಷ್ಟ್ರಗಳು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ತಿಳಿಸಿದರು. ಗಲಭೆಯೆಬ್ಬಿಸುವ ರಾಷ್ಟ್ರಗಳಿಗೆ ಪೆಟ್ಟು ...ಯಾಮಿತಿಗಳನ್ನು ತೋರಿಸುವ ಉಪಶಮನದ ನೀತಿಯನ್ನು ನಿಲ್ಲಿಸಬೇಕೆಂದೂ ಸಹ ಅವರು ಅಭಿಪ್ರಾಯಪಟ್ಟರು

ಮತದಾರರ ಪಟ್ಟಿಯ ವಿಮರ್ಶೆ

ಮೈಸೂರು ೧೨

ಪೌರಸಭೆಯ ವಿಶೇಷ ಅಧಿವೇಶನವು ನಿನ್ನೆ ನಡೆದು ಚುನಾವಣೆಯ ಮತದಾರರ ಪಟ್ಟಿಯಲ್ಲಿ ಮಾಡಬೇಕಾದ ಬದಲಾವಣೆಗಳ ಬಗ್ಗೆ ಬಂದಿದ್ದ ಅರ್ಜಿಗಳನ್ನು ಇತ್ಯರ್ಥ ಮಾಡಲಾಯಿತು. ಮುನಿಸಿಪಲ್ ಸಮಿತಿಯವರು ಶಿಫಾರ್ಸು ಮಾಡಿದ್ದ ೧೬,೩೦೦ ರೂ. ಗಳ ಕಾಮಗಾರಿಗಳ ಅಂದಾಜನ್ನು ಮಂಜೂರ್ ಮಾಡಲಾಯಿತು. ಮುಂದಿನ ತಿಂಗಳ ಆರಂಭದಲ್ಲಿ ಮಾರ್ಕೆಟ್ ಪ್ರದರ್ಶನವನ್ನು ನಡೆಸಲು ೯ ಜನಗಳಿಂದ ಕೂಡಿದ ಉಪಸಮಿತಿಯನ್ನು ರಚಿಸಲಾಯಿತು. ಅದರ ವೆಚ್ಚಕ್ಕಾಗಿ ೧೦೦೦ ರೂಪಾಯಿಗಳನ್ನು ಸಹ ಮಂಜೂರ್ ಮಾಡಲಾಯಿತು.

ಕರ್ನಾಟಕ ಸಂಘ

ಮಹಾರಾಜಾ ಕಾಲೇಜು ಕರ್ನಾಟಕ ಸಂಘದ ಚುನಾವಣೆಯು ಕಳೆದ ಸೋಮವಾರ ನಡೆದು ಸೀನಿಯರ್ ಬಿ ಎ ವಿದ್ಯಾರ್ಥಿ ಹ ಲ. ನಾರಾಯಣಗೌಡರು ಕಾರ್ಯದರ್ಶಿಯಾಗಿ ಚುನಾಯಿತರಾದರು

ಪ್ರೈಮರಿ ಶಾಲೆ

ಗೋಕುಲ ಮತ್ತು ಅದರ ಸಮೀಪದಲ್ಲಿ ರತಕ್ಕ ಚಿಕ್ಕ ಮಕ್ಕಳ ಸೌಕರ್ಯಕ್ಕಾಗಿ ಸರ್ಕಾರದವರು ಒಂದು ಬಾಲಕ ಬಾಲಕಿಯರ ಪ್ರಾಥಮಿಕ ಶಾಲೆಯನ್ನು ಮಂಜೂರ್ ಮಾಡಿರುವರು. ಇದರ ಆರಂಭೋತ್ಸವವು ಕಳೆದ ಶುಕ್ರವಾರ ಶ್ರೀ ಸಿ ಆರ್ ನರಸಿಂಹ ಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಶಾಲೆಯ ಸುತ್ತಮುತ್ತಲೂ ಇರುವ ನಿವಾಸಿಗಳು ತಮ್ಮ ಮಕ್ಕಳನ್ನು ಕಳುಹಿಸಿಕೊಡಬೇಕೆಂದು ಕೋರಲಾಗಿದೆ.

ಮಂತ್ರಿಗಳಿಗೆ ಬಿರುದು ಬೇಕಿಲ್ಲ.

ಕೇಂದ್ರ ಸರ್ಕಾರದ ಆರ್ಥಿಕ ಮಂತ್ರಿ ಡಾ|| ಜಾನ್ ಮಥಾಯ್‌ರವರು ಮಾಡಿದ ಮೊದಲನೆಯ ಆಜ್ಞೆಯೇನೆಂದರೆ, ತಮ್ಮ ಹೆಸರಿನ ಹಿಂದೆ ಇದ್ದ ಆನರಬಲ್ ಎಂಬ ವಿಶೇಷಣವನ್ನೂ, ಹೆಸರಿನ ನಂತರ ಇದ್ದ "ಓ. ಬಿ ಇ. ಸಿ ಐ ಇ" ಎಂಬ ಅಕ್ಷರಗಳನ್ನೂ ಬರೆಯ ಕೂಡದೇ ಆಗಿದೆ. ಅವರ ಕೊಠಡಿಯ ಮುಂದೆ ಇರುವ ಬೋರ್ಡಿನಲ್ಲಿ ಕೇವಲ ಡಾ|| ಜಾನ್ ಮಥಾಯ್ ಎಂಬುದಾಗಿ ಮಾತ್ರ ಇರತಕ್ಕದ್ದೆಂದು ಆಜ್ಞೆ ಮಾಡಿರುವರು

ರಷ್ಯದ ಮೇಲೆ ಯುದ್ಧವೇ ?

ಮಿತ್ರ ಸಂಯುಕ್ತ ಸಭೆಯಲ್ಲಿ ರಷ್ಯದ ವಿಚಾರವಾಗಿ ಅನೇಕ ಆಪಾದನೆಗಳಿಗೆ ಉತ್ತರ ...ಲಾಗಿ ರಷ್ಯಾ ನಿಯೋಗದ ಪ್ರತಿನಿಧಿ ... ಸ್ಕಿಯವರು ಮಾತನಾಡಿ ಈ ಬೆದರಿಕೆಗಳ ಹಿಂದೆ ರಷ್ಯದ ಮೇಲೆ ಯುದ್ಧವನ್ನು ಹೂಡುವ ಬೆದರಿಕೆ ಇದೆಯೆಂದೂ ಅದನ್ನು ತಾವು ತೀವ್ರವಾಗಿ ಪ್ರತಿಭಟಿಸುವುದಾಗಿಯೂ ಹೇಳಿದರು

ದಿವಾಳಿಯಾದ ಸಂಸ್ಕಾರಗಳೆಲ್ಲವೂ ತಮ್ಮ ದೌರ್ಬಲ್ಯವನ್ನು ಸೋವಿಯಟ್ ವಿರೋಧದ ಮೂಲಕ ಹೊರಗೆಡಹುತ್ತಿವೆ. ಮ್ಯೂನಿಚ್ ಒಪ್ಪಂದದ ಪ್ರತಿಧ್ವನಿಯೇ ಇಂದು ಮತ್ತೆ ಕೇಳಿಬರುತ್ತಿದೆ, ಆದರೆ ರಷ್ಯಕ್ಕೆ ಎಲ್ಲಾ ರಾಜ್ಯಗಳೊಡನೆಯೂ ಸ್ನೇಹ ಬೇಕು-ಎಂಬುದಾಗಿಯೂ ಅವರು ಹೇಳಿದರು.

ರಷ್ಯದೊಡನೆ ಲೀಗಿನ ಸಂಧಾನವಿಲ್ಲ

ಮುಸ್ಲಿಂ ಲೀಗಿನವರು ತಮ್ಮ ಕಾರ್ಯ ಸಾಧನೆಗಾಗಿ ರಷ್ಯದೊಡನೆ ಸಂಧಾನ ನಡೆಸುತ್ತಿರುವರೆಂದು ವರದಿಯಾಗಿದೆಯಷ್ಟೆ, ಇದು ನಿಜವಲ್ಲವೆಂದು ಮಿ|| ಜಿನ್ನಾರವರು ಹೇಳಿದ್ದಾರೆ. ಅಂತಹ ಉದ್ದೇಶವೇ ತಮಗೆ ಇಲ್ಲವೆಂದೂ, ವಿದೇಶಗಳ ಸಹಾಯವನ್ನು ಇಂತಹ ವಿಚಾರಗಳಲ್ಲಿ ಬಯಸುವುದು ನಿರರ್ಥಕವೆಂದೂ ಅವರು ಹೇಳಿರುವರು.

ಜಿನ್ನಾರವರಿಂದ ಅಂತರ್ಯುದ್ಧದ ಬೆದರಿಕೆ

ಈಗಲೇ ಪ್ರಾಮಾಣಿಕತೆಯಿಂದಲೂ ಚತುರತೆಯಿಂದಲೂ ಸಂಧಾನವನ್ನು ನಡೆಸದಿದ್ದರೆ ೪೦ ಕೋಟಿ ಹಿಂದೂ, ಮುಸ್ಲಿಂ ಮತ್ತು ಅಲ್ಪ ಸಂಖ್ಯಾತರಿಂದ ಕೂಡಿದ ಹಿಂದೂಸ್ಥಾನದಲ್ಲಿ ಭಾರಿ ಅಂತರ್ಯುದ್ಧವು ಆರಂಭವಾಗುವ ಸಂಭವವಿದೆ ಎಂದು ಮಿ|| ಜಿನ್ನಾರವರು ತಿಳಿಸಿದ್ದಾರೆ. ಕಲ್ಕತ್ತಾ, ಬೊಂಬಾಯಿಗಳೇ ಈ ಅಂತರ್ಯುದ್ಧದ ಬೀಜಗಳು. ಅಂತರ್ಯುದ್ಧದಿಂದ ಹಿಂದೂ ಮತ್ತು ಮುಸ್ಲಿಂ ರಾಷ್ಟ್ರಗಳು ನಿರ್ನಾಮವಾಗುತ್ತವೆ. ಇದನ್ನು ಪರಿಹರಿಸಲು ಲಂಡನ್ನಿನಲ್ಲಿ ಬ್ರಿಟಿಷ್ ಉನ್ನತಾಧಿಕಾರಿಗಳೂ ಭಾರತೀಯ ಮುಖಂಡರೂ ಸಂಧಾನ ಸಮ್ಮೇಳನವನ್ನು ನಡೆಸಬೇಕು, ಎಂಬುದಾಗಿ ಮಿ|| ಜಿನ್ನಾರವರು ಸೂಚಿಸಿರುವರು

ರಕ್ತಪಾತ ತಪ್ಪಿಸಲು ಜಿನ್ನಾರವರ ಸಲಹೆ

ರಕ್ತಪಾತವೆಂಬುದೇ ನನಗೆ ಆಗುವುದಿಲ್ಲ; ಅದನ್ನು ತಪ್ಪಿಸಿ ಭಾರತದ ಎರಡು ರಾಷ್ಟ್ರಗಳೂ ವೈರಿಗಳಾಗಿರಲು ಬೇಕಾದ ಸನ್ನಿವೇಶವನ್ನು ಒದಗಿಸುವುದಕ್ಕಾಗಿಯೇ ನಾನು ರಚನಾತ್ಮಕ ಸಲಹೆಯನ್ನು ಕೊಡುತ್ತಿದ್ದೇನೆ; ಮಧ್ಯಂತರ ಸರ್ಕಾರದಲ್ಲಿ ಸೇರಿಕೆ ಇರುವುದಿಲ್ಲವೆಂದು ನಾನು ಹೇಳಲ್ಲ; ಮ್ಯಾಕ್ ಡೊನಾಲ್ಡರ ಅಂಶಗಳ ಬಗ್ಗೆ ಬ್ರಿ|| ಸರ್ಕಾರದವರು ಸ್ಪಷ್ಟವಾದ ನೀತಿಯನ್ನು ಪ್ರಕಟಿಸಬೇಕು; ಪಾಕಿಸ್ಥಾನವನ್ನು ಅಂಗೀಕರಿಸಿ ಅದನ್ನು ಜಾರಿಗೆ ತರಲು ಭರವಸೆ ಕೊಡುವುದೇ ಇದು-ಎಂಬುದಾಗಿ ಮಿ|| ಜಿನ್ನಾರವರು ಒಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ. ...ನ್ನಿವಾಸ ದ್ವೀಪದ ಸುಪ್ರಸಿದ್ಧ ಜೇನೇ ಮನೆತನಕ್ಕೆ ಸೇರಿದ ಮಿಲ್ ಕಿಲ್ಲಿ ಓರ್ ಎ ಬರೆಯು ತಿಲೋತ್ತಮ ... ನಾದ ಫೋಟೋವನ್ನು ಶೋಭಿ ಬೆಂಗಳೂರಿನ ಪ್ರಸನ್ನಾನಂದಭವನದಲ್ಲಿ ಅಲ್ಪ ಸಮಾರಂಭ ... ಸಂಸ್ಥೆಯ ಮೂಲಕ ಹಿಂದೂ ಮಹಿಳೆ ... ಸೇರಿಸಲ್ಪಟ್ಟಳು.

ಸಾಧ್ವಿ

೧೨-೯-೪೬ ಗುರುವಾರ

ಸೌದೆ ಮತ್ತು ಇದ್ದಲು ತೊಂದರೆ

ರಾಜಧಾನಿಯಲ್ಲಿ ಮತ್ತೆ ಸೌದೆ ಮತ್ತು ಇದ್ದಲಿನ ತೊಂದರೆಯು ಉಲ್ಬಣ ಸ್ಥಿತಿಗೆ ಬಂದಿದೆ. ಆಹಾರದ ಅಭಾವವನ್ನೂ ಇದು ಮೀರಿಸುತ್ತಿರುವಂತೆ ಕಾಣುತ್ತದೆ. ಮಣ ಒಂದಕ್ಕೆ ಹನ್ನೆರಡಾಣೆ ಮತ್ತು ಹದಿನಾಲ್ಕಾಣೆಯಂತೆ ಸೌದೆಯು ಮಾರಾಟವಾಗುತ್ತಿದೆ. ಅದು ಮನೆಗೆ ಬಂದು ಸೇರುವ ಹೊತ್ತಿಗೆ ಮಣ ಒಂದಕ್ಕೆ ಒಂದು ರೂಪಾಯಿಯಾದರೂ ಆದೀತು. ಇದ್ದಿಲು ಮೂಟೆಯು ಮೂರೂ ಮುಕ್ಕಾಲು ರೂಪಾಯಿಯಿಂದ ನಾಲ್ಕೂವರೆ ರೂಪಾಯಿಯಂತೆ ಮಾರಾಟವಾಗುತ್ತಿದೆ. ಅದರಲ್ಲಿ ಅರ್ಧಕ್ಕೆ ಮೇಲ್ಪಟ್ಟು ಪುಡಿಯೇ ಬೆರೆಸಿರುತ್ತದೆ. ಉಳಿದ ಇದ್ದಿಲೂ ಸಹ ಅರ್ಧ ಬೆಂದು ಅರ್ಧ ಬೇಯುವ ಮರದ ತುಂಡುಗಳ ಚೂರುಗಳಾಗಿರುತ್ತದೆ. ಮೂಟೆಯ ಪ್ರಮಾಣವು ಗೊತ್ತು ಗುರಿಯಿಲ್ಲದಂತಿದೆ. ಒಂದೊಂದು ಕಡೆ ಒಂದೊಂದು ಅಳತೆಯಲ್ಲಿರುತ್ತದೆ. ತೂಕವನ್ನಂತೂ ನೋಡುವಂತೆಯೇ ಇಲ್ಲ. ಸೌದೆ ಮತ್ತು ಇದ್ದಲಿಗಾಗಿ ಜನರ ಹಾ ಹಾ ಕಾರವನ್ನು ಹೇಳತೀರದಾಗಿದೆ.

ಸರ್ಕಾರದವರು ಸೌದೆ ಸರಬರಾಜಿಗಾಗಿ ಲಾರಿಗಳನ್ನೂ ಇತರ ಸೌಲಭ್ಯಗಳನ್ನೂ ಒದಗಿಸಿಕೊಟ್ಟಿದ್ದಾರೆ. ಪೌರ ಸಭೆಯ ಮೇಲ್ವಿಚಾರಣೆಯಲ್ಲಿ ಫೇರ್ ಪ್ರೈಜ್ ಡಿಪೋಗಳೂ ಏರ್ಪಾಡಾಗಿ ಕೆಲವು ದಿನಗಳು ಮಾತ್ರ ರೂಪಾಯಿಗೆ ನಾಲ್ಕು ಮಣದಂತೆ ಸೌದೆ ಸರಬರಾಜಾಗುತ್ತಿತ್ತು. ಈಚೆಗೆ ಆ ಡಿಪೋಗಳ ಮೇಲಿನ ಹತೋಟಿಯು ಸಮರ್ಪಕವಾಗಿಲ್ಲವೆಂದು ಕಂಡುಬರುತ್ತಿದೆ. ಎಲ್ಲಿಯೂ ನಾಲ್ಕು ಮಣ ಸೌದೆ ದೊರೆಯುತ್ತಿಲ್ಲ. ಸರ್ಕಾರಿ ಲಾರಿಗಳಲ್ಲಿ ಬಂದಷ್ಟು ಸೌದೆಯೆಲ್ಲವೂ ಯಾವ ರೀತಿ ವಿಲೆಯಾಗುವುದೆಂಬುದನ್ನು ಅಧಿಕಾರಿಗಳು ಗಮನಿಸುತ್ತಿರುವಂತೆ ಕಾಣಿಸುವುದಿಲ್ಲ. ಹೀಗಿದ್ದ ಪಕ್ಷದಲ್ಲಿ ಇದಕ್ಕಾಗಿ ಒದಗಿಸಿರುವ ಸೌಲಭ್ಯಗಳೆಲ್ಲವೂ ನಿರರ್ಥಕವಾದಂತೆಯೇ ಸರಿ.

ಹೊಸ ವ್ಯವಸ್ಥೆಯು ಆದಂದಿನಿಂದಲೂ ಇದ್ದಲು ಸರಬರಾಜಿನ ಬಗ್ಗೆ ಅಧಿಕಾರಿಗಳು ಸ್ವಲ್ಪವೂ ಗಮನ ಕೊಟ್ಟಿರುವುದಿಲ್ಲ. ಕ್ಲುಪ್ತವಾದ ದರದಲ್ಲಿ ಇದುವರೆಗೆ ಪುರನಿವಾಸಿಗಳಿಗೆ ಇದ್ದಿಲು ದೊರಕಿರುವುದಿಲ್ಲ. ಈಗ ಅಂತೂ ಪುರನಿವಾಸಿಗಳ ಕಷ್ಟವನ್ನು ಹೇಳುವಂತೆಯೇ ಇಲ್ಲ. ಆಹಾರದ ಅಭಾವ, ಬಟ್ಟೆಯ ಕ್ಷಾಮ, ಸೌದೆಯ ಮಿತಿಮೀರಿದ ಬೆಲೆ, ಮತ್ತು ಇತರ ಅಗತ್ಯವಾದ ವಸ್ತುಗಳ ಮುಗ್ಗಟ್ಟಿನಿಂದ ಪ್ರಜೆಗಳು ಬಹಳವಾಗಿ ಸಂತಪ್ತರಾಗಿರುವರು.

ಬೆಂಗಳೂರು ನಗರದಲ್ಲಿ ಸರ್ಕಾರದವರು ಸೌದೆ ಸರಬರಾಜಿಗೆ ವಿಶೇಷವಾದ ವ್ಯವಸ್ಥೆಯನ್ನು ಮಾಡಿರುವರು. ಇದರಿಂದ ಅಲ್ಲಿ ತಕ್ಕಮಟ್ಟಿನ ಪರಿಹಾರವಾದರೂ ದೊರಕಿದೆ. ಸಂಸ್ಥಾನದ ರಾಜಧಾನಿಯೂ, ಪುರಾತನ ನಗರವೂ ಆದ ಈ ಪಟ್ಟಣದಲ್ಲಿ ಈ ಬಗ್ಗೆ ಸರಿಯಾದ ವ್ಯವಸ್ಥೆಯನ್ನು ಪ್ರಭುತ್ವದವರು ಮಾಡದಿರುವುದು ಒಂದು ಕೊರತೆಯೇ ಸರಿ. ಇನ್ನಾದರೂ ಇದಕ್ಕೆ ಅವರು ಕೂಡಲೇ ಗಮನ ಕೊಡುವರೆಂದು ನಂಬಿದ್ದೇವೆ.

ಅಹಮ್ಮದ್ ಖಾನರಿಗೆ ಸತ್ಕಾರ

ಮೈಸೂರು ೧೧

ಹಾಜ್ ಯಾತ್ರೆಗೆ ಹೊರಟಲಿರುವ ರಾಜಧಾನಿಯ ಪೌರಸಭಾ ಸದಸ್ಯರಾದ ಹಾ|| ಅಹಮ್ಮದ್ ಖಾನರವರನ್ನು ಸತ್ಕರಿಸಿ ಬೀಳ್ಕೊಡಲು ಪೌರ ಸಭಾ ಸದಸ್ಯರಾದ ಶ್ರೀ|| ಇ. ಪಿ. ನಂಜಪ್ಪನವರು ನಿನ್ನೆ ಒಂದು ಭಾರಿ ಸಂತೋಷ ಕೂಟವನ್ನೇರ್ಪಡಿಸಿದ್ದರು. ಅನೇಕ ಜನ ಪುರ ಪ್ರಮುಖರೂ, ಜವಳಿವರ್ತಕರೂ ಅಧಿಕಾರಿವರ್ಗದವರೂ ಬಂದಿದ್ದರು. ಉಪಾಹಾರಾ ನಂತರ ಶ್ರೀ|| ಇ. ಪಿ. ನಂಜಪ್ಪನವರು ಭಾಷಣಮಾಡಿ ಹಿಂದೂ ಮುಸ್ಲಿಂ ಮತ್ತು ಎಲ್ಲಾ ಕೋಮುಗಳ ಐಕಮತ್ಯವು ಅತ್ಯಂತ ವಿಶೇಷವಾಗಿ ಅಗತ್ಯವಿರುವ ಈ ಕಾಲದಲ್ಲಿ ಹಾ|| ಖಾನರವರ ಯಾತ್ರೆಯು ಅವರ ಆತ್ಮೋನ್ನತಿಗೆ ಮಾತ್ರವೇ ಅಲ್ಲದೆ ದೇಶದ ಶಾಂತಿ ಸಾಮರಸ್ಯಗಳಿಗೂ ಸಹಾಯಕವಾಗಲೆಂದು ಹಾರೈಸಿ ಅವರಿಗೆ ಸುಖ ಪ್ರಯಾಣವನ್ನು ಕೋರಿದರು. ಶ್ರೀಗಳಾದ ಬಿ. ನಾರಾಯಣಸ್ವಾಮಿ, ಅಬ್ದುಲ್ ಕರೀಂ, ಅಗರ್ವಾಲಾ, ಟಿ. ಮರಿಯಪ್ಪ, ಎಸ್. ಚೆನ್ನಯ್ಯ, ಫಾದರ್ ಕ್ವೈಗನಿಯುಲ್, ಸಿ. ಎಂ. ಎಚ್. ರಣಚೋಡ್ ಸಿಂಗ್ ಮತ್ತು ರಾಮಚಂದ್ರ ರಾವ್ ಬೊಂಬೋರೆ ಮುಂತಾದವರು ಭಾಷಣ ಮಾಡಿ ಹಾ|| ಖಾನರವರ ಗುಣಕಥನ ಮಾಡಿದರು. ಹಾ|| ಖಾನರವರು ಉತ್ತರವಿತ್ತು ಸತ್ಕಾರಕ್ಕಾಗಿ ತಮ್ಮ ಕೃತಜ್ಞತೆಯನ್ನು ಸಲ್ಲಿಸಿದರು ಮತ್ತು ಮೈಸೂರು ದೇಶದಲ್ಲಿರುವಂತೆಯೇ, ಇಡೀ ಹಿಂದೂಸ್ಥಾನದಲ್ಲಿ ಹಿಂದೂ-ಮುಸ್ಲಿಮರು ಅಣ್ಣ ತಮ್ಮಂದಿರಂತೆ ಸಕಲರ ಹಿತಸಾಧನೆಗೂ ಕೆಲಸಮಾಡಲೆಂದು ಹಾರೈಸಿದರು. ಧನ್ಯವಾದಗಳೊಡನೆ ಸಭೆ ಮುಗಿಯಿತು.

ರಾಜೇಂದ್ರ ಪ್ರಸಾದರ ಭೇಟಿ

ಡಾ|| ರಾಜೇಂದ್ರ ಪ್ರಸಾದರು ಅಕ್ಟೋಬರ್ ೧೫ನೇ ತಾರೀಖು ಬೆಂಗಳೂರಿಗೆ ಬರುವರು, ಸೆಪ್ಟೆಂಬರ್ ೧೫ ಎಂಬುದಾಗಿ ನಿನ್ನೆ ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿರುವುದು ಸರಿಯಲ್ಲ.

ರಾಜಧಾನಿಯಲ್ಲಿ ಇದ್ದಲಿಗೂ ಅನ್ಯಾಯವೆ?

ರಾಜಧಾನಿಯಲ್ಲಿ ಇದ್ದಲು ವ್ಯಾಪಾರಗಾರರು ಮಾಡುತ್ತಿರುವ ಅನ್ಯಾಯವು ಹೇಳತೀರದು. ಮನಸ್ಸು ಬಂದಂತೆ ಬೆಲೆಯೇ. ತೂಕ ನಿಖರವಾದ ಬೆಲೆ ಇಲ್ಲವೇ ಇಲ್ಲ. ಕೆಲವರು ನಾಲ್ಕು ರೂಪಾಯಿಗಳ ಬೆಲೆಯಲ್ಲಿ ಮಾರುತ್ತಾರೆ. ಮತ್ತೆ ಕೆಲವರು ೩|೦ ಪ್ರಕಾರ ಮಾರುತ್ತಾರೆ. ಇನ್ನು ಕೆಲವರು ಇನ್ನೂ ಕಮ್ಮಿ ಬೆಲೆಗೆ ಮಾರುತ್ತಾರೆ. ಅಂತೂ ಮೂಟೆಯಲ್ಲಿ ಹೆಚ್ಚು ಭಾಗ ಪುಡಿ ಬೆರಕೆ ಇರುತ್ತೆ. ಅಕ್ಕಿ, ರಾಗಿ, ಮುಂತಾದ ಧಾನ್ಯಗಳಿಗೆ ಇರುವಂತೆ ಇದಕ್ಕೂ ಇದೇ ನಿಖರವಾದ ಬೆಲೆಗೆ ನಿಖರವಾದ ತೂಕ ಸಿಕ್ಕುವಂತೆ ಮುನಿಸಿಪಾಲಿಟಿಯವರು ಜಾಗರೂಕತೆ ಕಲ್ಪಿಸಲಾರರೇ ?

ನೊಂದ ನಿವಾಸಿ

೦ ಸಮ್ಮಿಶ್ರ ಮಂತ್ರಿ ಮಂಡಲದ ಸ್ಥಾಪನೆಯ ಗೌರವಾರ್ಥವಾಗಿ ಬೊಬ್ಬಿಲಿ ಸಂಸ್ಥಾನದ ರಾಜರು ತಮ್ಮ ದೇಶದಲ್ಲಿರುವ ಎಲ್ಲಾ ರಾಜಕೀಯ ಖೈದಿಗಳನ್ನೂ ಬಿಡುಗಡೆ ಮಾಡುವಂತೆ ಆಜ್ಞೆ ಮಾಡಿದ್ದಾರೆ.

ಭಾರತ ತಾತ್ಕಾಲಿಕ ಸರ್ಕಾರಕ್ಕೆ ಹಾರೈಕೆ

ಸಹನ ಶಕ್ತಿಯು ಮಹಿಮ ಮಾನ್ಯರು
ವಿಹಿತ ಕಾರ್ಯಕೆ ಮೂಲಮೂರ್ತಿಯು
ಮಹಿಮ ಗಾಂಧಿಯು ಪ್ರೇಮ ಪಾತ್ರರು
ನೆಹರು ಎಂಬುವರು ||
ಬಹಳ ಕಷ್ಟದೆ ಹಿಡಿದ ಕಾರ್ಯವ
ಮಹಿತರೊಂದಿಗೆ ಕೂಡಿಯಾಡುತ
ಬಹಳ ಕಾಲಕೆ ಒಲಿಸಿಕೊಂಡರು
ಭಾರತಾಂಬೆಯನು ||೧||
ಥೈಲಿ ಹಣಗಳ ರಾಶಿಯಿದ್ದರು
ಕೈಲಿ ಆಗುವ ಕಾರ್ಯವೆಲ್ಲವ
ಕಾಲ ಕಾಲಕೆ ತಾನೆ ಮಾಡುತ
ಮಾದ್ರಿಯಾಗಿರುತ ||
ಜೈಲು ವಾಸದಿ ಬಹಳ ನೊಂದಿಹ
ಶೀಲವಂತರ ನೆಹರು ಮಾನ್ಯರ
ಒಲಿಸಿಕೊಂಡಿಹ ಭಾರತಾಂಬೆಯು
ಸಲಹಲನವರತ ||೨||
ಸಹನೆ ತತ್ವವ ಸತತವಾಗಿಯು
ಮಹಿಮರಾಗಿಹ ಪೂಜ್ಯ ಗಾಂಧಿಯು
ವಿಹಿತದಿಂದಲೆ ತೋರಿ ಕೊಡುತಲೆ
ಹಿಡಿದ ಹಟದಲ್ಲಿ ||
ವಹಿಸಿಕೊಟ್ಟರು ಮಹಿಮ ಪದವಿಯ
ಸಹನೆ ಮಂತ್ರವ ಒಲಿಸಿಕೊಂಡಿಹ
ಮಹಿಮವಂತರು ನೆಹರು ಮೂರ್ತಿಗೆ
ಶಂಕೆಯೊಡಗೂಡಿ ||೩||
ಮಂತ್ರಿ ಪದವಿಗ ಕೂಡಿಕೊಂಡಿಹ
ಯಾಂತ್ರದಂಪದ ಮಹಿಮರೆಲ್ಲರು
ತಂತ್ರವಾದಿಗೆ ದಾರಿಕೊಡದೆಯೆ ಒಂದೆ
ಮನದಲ್ಲಿ ||
ಸೂತ್ರಧಾರರ ಗಾಂಧಿ ಮಹಿಮರ
ಮಂತ್ರವಾದ್ಯದೊಂದೆ ಎಂಬಾ ಸ್ವ
ತಂತ್ರ ಸೂತ್ರವ ಸತತ ನೆನೆಯುತ
ಕಾರ್ಯ ಸಾಧಿಸಿರಿ ||೪||
ಗತಿಯ ತೋರಲು ಜನುಮವೆತ್ತಿದ
ಗೀತೆ ನಾಯಕ ಕೃಷ್ಣ ದೇವನು
ಸತತ ಕಾಯುತ ಮಹಿಮ ಗಾಂಧಿಯ
ಚರಿತ ಸ್ಪಂದನವನು ||
ಹಿತದ ಕೆಲಸವ ಸತತ ನಡೆಸುವ
ಜತವ ಕೂಡಿದ ಮನವನೆಲ್ಲರು
ಅತಿಶಯದಲ್ಲಿ ನೀಡಲೆನ್ನುತ
ಮುಗಿವೆ ಕೈಯ್ಯನ್ನು ||೫||

ಎಂ. ವಿ. ಎಲ್.

ಜಿಲ್ಲಾ ಮೋಟಾರು ಕೆಲಸಗಾರರ ಸಂಘ

ನಾಳೆ ಸಾಯಂಕಾಲ ೬ ಗಂಟೆಗೆ ಸಯ್ಯಾಜಿರಾವ್ ರಸ್ತೆಯಲ್ಲಿರುವ ಕಾಂಗ್ರೆಸ್ ಕಛೇರಿಯಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ದೌಲತ್‌ರಾವ್‌ರವರ ಅಧ್ಯಕ್ಷತೆಯಲ್ಲಿ ಸಭೆ ನಡೆಯುತ್ತದೆ. ಶ್ರೀ ಮಳವಳ್ಳಿ ವೀರಪ್ಪನವರು ಭಾಷಣ ಮಾಡುತ್ತಾರೆ. ಕೆಲಸಗಾರರೆಲ್ಲರೂ ದಯಮಾಡಿಸಬೇಕಾಗಿ ವಿನಂತಿ.

ಸಿಟಿ ಕೋ-ಆಪರೇಟಿವ್
ಬ್ಯಾಂಕ್ ಲಿಮಿಟೆಡ್, ಮೈಸೂರು
ಡೈರೆಕ್ಟರುಗಳ ಚುನಾವಣೆ
15—9—46
—ಸ್ಥಳ—
ಮರಿಮಲ್ಲಪ್ಪನವರ ಹೈಸ್ಕೂಲ್
ನಂ. ೩೩
ಜಿ. ಆರ್. ಶಾಮರಾವ್
ಇವರಿಗೆ ನಿಮ್ಮ ಘನವಾದ ಒಂದು ಓಟನ್ನು
ಕೊಡಬೇಕಾಗಿ ಪ್ರಾರ್ಥನೆ

ಧ್ವಜಾರೋಹಣ

ಮೈಸೂರು ೧೧

ಖಂಡನಾ ದಿನಾಚರಣೆ ಪ್ರಯುಕ್ತ ... ದಿನ ಬೆಳಗ್ಗೆ ಸುಬ್ಬರಾಯನಕೆರೆ ಮೈದಾನದಲ್ಲಿ ಧ್ವಜ ವಂದನೆ ನಡೆಯಿತು. ಶ್ರೀ ಟಿ. ಮರಿಯಪ್ಪನವರು ರಾಷ್ಟ್ರ ಧ್ವಜವನ್ನೂ ಶ್ರೀ ಪಿ. ಸೀತಾರಾಮಯ್ಯನವರು ಮೈಸೂರು ಧ್ವಜವನ್ನೂ ಹಾರಿಸಿದರು. ಕೆಲವು ದಿನಗಳ ಹಿಂದೆ ಮೈಸೂರಿನ ರಾಜಕೀಯ ಆಶಾ ಭಾವನೆಯಿಂದ ಕೂಡಿ ಸರ್ಕಾರಕ್ಕೂ ಪ್ರಜೆಗಳಿಗೂ ಅನ್ಯೋನ್ಯತೆಯು ಬೆಳೆಯಬಹುದೆಂಬ ನಿರೀಕ್ಷಣೆಯಿತ್ತು, ಆದರೆ ... ಬರುತ್ತಾ ಪರಿಸ್ಥಿತಿಯು ಬಿಗಡಾಯಿಸಿ ಘರ್ಷಣೆಯ ಪ್ರಸಂಗಗಳೇ ಪ್ರಾಪ್ತವಾಗುತ್ತಿವೆ. ಇದು ತಪ್ಪು. ಪ್ರಭುತ್ವದವರು ದೂರಾಲೋಚನೆಯಿಂದ ಪ್ರಜೆಗಳ ಇಚ್ಛೆಯಂತೆ ಇನ್ನುಮೇಲಾದರೂ ವರ್ತಿಸುವುದು ಯುಕ್ತವೆಂದೂ ರಾಜ್ಯಾಂಗ ಸಮಿತಿಗೆ ಪ್ರಜೆಗಳ ಪ್ರತಿನಿಧಿಗಳನ್ನೇ ಕಳುಹಿಸುವುದು ಎ... ವೆಂದೂ ಶ್ರೀ ಟಿ. ಮರಿಯಪ್ಪನವರು ತಮ್ಮ ಭಾಷಣದಲ್ಲಿ ಹೇಳಿದರು. ದೇಶದ ಆಹಾರ ಪರಿಸ್ಥಿತಿಯು ಅತ್ಯಂತ ಭೀಕರವಾ... ಇನ್ನು ಕೆಲವು ವಾರಗಳಿಗೂ ಸಹ ಸಾಕಾಗುವಷ್ಟು ಧಾನ್ಯವಿಲ್ಲದಿರುವಾಗ ಸರ್ಕಾರದವರು ಪ್ರಜೆಗಳ ಅಭಿಪ್ರಾಯವನ್ನು ... ಸುವುದು ಸರಿಯಲ್ಲವೆಂದೂ ಇನ್ನು ಮುಂದಾದರೂ ಪ್ರಜಾ ನಾಯಕರ ಸಲಹೆಯಂತೆ ನಡೆಯಬೇಕೆಂದೂ ಶ್ರೀ ಪಿ. ಸೀತಾರಾಮಯ್ಯನವರು ಹೇಳಿದರು. ಜಯಕಾರದೊಡನೆ ಸಮಾರಂಭವು ಮುಗಿಯಿತು. ಸಂಜೆ ಕಾಂಗ್ರೆಸ್ ಕಛೇರಿಯಿಂದ ಮೆರವಣಿಗೆ ಮತ್ತು ಟೌನ್‌ಹಾಲ್ ಮೈದಾನದ ಬಹಿರಂಗ ಸಭೆ ನಡೆಯುವುವು.

ಟಿ. ಸಿ. ನಟರಾಜ್
ಔಷಧಾಲಯ

ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅಗತ್ಯವಾಗಿ ಬೇಕಾದ ಎಲ್ಲಾ ಇಂಗ್ಲೀಷ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಧಾರಣೆಯಿಂದ ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದೀಯ ಔಷಧಗಳೆಲ್ಲವೂ ದೊರೆಯುತ್ತವೆ.

Raj Kamal
Mysore

From 8-9-46 Daily 3 Show
Alexandar Korda's
FOUR
FEATHERS
in full length technicolor
ಫೋರ್ ಫೆದರ್ಸ್
ನಾನಾ ವರ್ಣ ರಂಜಿತವಾದ ಅತ್ಯದ್ಭುತ
ಇಂಗ್ಲಿಷ್ ನಾಟಕ.

Edited, printed and published by A. R. Nagarajan at the Sadhvi Press D. Subbiah Road, Mysore

ಫೋ. ನಂ 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶುಕ್ರವಾರ ೧೭—೯—೪೩ [ಸಂಚಿಕೆ ೪೨

ಕೇಂದ್ರ ಸರ್ಕಾರದಲ್ಲಿ ಜಿನ್ನಾರವರ ಪ್ರವೇಶವೇ?

ಸಂಬಳ ಮತ್ತು ತುಟ್ಟಿಭತ್ಯ ಹೆಚ್ಚಿಸಬೇಕು

ಮಂಡ್ಯ ೧೧

ಮಂಡ್ಯ ಡಿಸ್ಟ್ರಿಕ್ಟಿನ ರೆವಿನ್ಯೂ ಶಾಖೆಯ ಕೆಲಸ ಮಾಡುತ್ತಿರುವ ನೂರಾರು ಜನ ಉದ್ಯೋಗಿಗಳೂ ಮತ್ತು ಪದವೀಧರರಲ್ಲದ ನೌಕರರುಗಳೂ ಮಂಡ್ಯ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರ ಮೂಲಕ ಸರ್ಕಾರದ ಚೀಫ್ ಸೆಕ್ರೆಟರಿಯವರಿಗೆ, ತಮ್ಮಗಳ ಸಂಬಳ ಮತ್ತು ತುಟ್ಟಿಭತ್ಯಗಳನ್ನು ಹೆಚ್ಚಿಸಬೇಕೆಂದು ಅರ್ಜಿಗಳನ್ನು ಹಾಕಿಕೊಂಡಿರುತ್ತಾರೆಂದು ತಿಳಿದುಬಂದಿದೆ.

ಮೈಸೂರು-ನಂಜನಗೂಡು ರೈಲ್ವೆ ವ್ಯವಸ್ಥೆ

ಇತ್ತೀಚೆಗೆ ರೈಲ್ವೆ ಇಲಾಖೆಯವರು ಮೈಸೂರಿನಿಂದ ಚಾಮರಾಜನಗರಕ್ಕೆ ಮತ್ತೊಂದು ರೈಲನ್ನು ಹೆಚ್ಚಿಸಿರುವರು. ಈ ವ್ಯವಸ್ಥೆಯಿಂದ ಚಾಮರಾಜನಗರ, ನಂಜನಗೂಡು ಮತ್ತು ಸುತ್ತಮುತ್ತಲ ನಿವಾಸಿಗಳಿಗೆ ಹೆಚ್ಚು ಮಟ್ಟಿನ ಸೌಕರ್ಯವುಂಟಾಗಿದೆ. ಇದಕ್ಕಾಗಿ ಇಲಾಖೆಯವರು ಅಭಿನಂದನಾರ್ಹರು.

ಆದರೆ ಚಾಮರಾಜನಗರದಿಂದ ಮೈಸೂರಿಗೆ ಬೆಳಗಿನ ಹೊತ್ತು ಬರುವ ರೈಲು ಮೈಸೂರನ್ನು ೧೦-೧೫ ಗಂಟೆಗೆ ತಲುಪಬೇಕಾಗಿದೆ. ಈಗ ಬಹಳ ದಿವಸಗಳಿಂದಲೂ ತಡವಾಗಿ ಬರುತ್ತಿದೆ. ಇದರಿಂದಾಗಿ ವಿದ್ಯಾರ್ಥಿಗಳಿಗೆ ಪಾಠ ಪ್ರವಚನಗಳು ಹೋಗುವುದಲ್ಲದೆ ಗೈರು ಹಾಜರಿಯೂ ಬೀಳುವುದು. ವಿದ್ಯಾರ್ಥಿಗಳ ಹಿತ ದೃಷ್ಟಿಯಿಂದ ರೈಲ್ವೆ ಇಲಾಖೆಯವರು ಈ ಬಗ್ಗೆ ಕೂಡಲೇ ವ್ಯವಸ್ಥೆಗೊಳಿಸುವರೆಂದು ನಂಬಲಾಗಿದೆ. ಮತ್ತು ಮೈಸೂರು ನಂಜನಗೂಡು ಮಾರ್ಗದಲ್ಲಿ ಓಡಿಯಾಡುತ್ತಿದ್ದ ರಾತ್ರಿಯ ರೈಲನ್ನು ಮತ್ತೆ ಬಿಡಲು ಏರ್ಪಾಡು ಮಾಡಿದಲ್ಲಿ ಪ್ರಯಾಣಿಕರಿಗೆ ಹೆಚ್ಚಿನ ಸೌಕರ್ಯವಾಗುವುದು. ಹಿತೈಷಿ.

ದಿವಾನರಿಗೆ ರೈಲ್ವೆ ನೌಕರರ ತಂತಿ

ಮೈಸೂರು ೧೩

ಕಳೆದ ೯ ನೇ ತಾ॥ ನ ದಿನ ಮೈಸೂರು ರೈಲ್ವೆ ನೌಕರರುಗಳು ದಿವಾನರವರಿಗೆ ಒಂದು ತಂತಿಯನ್ನು ಕಳುಹಿಸಿ ತಮ್ಮ ಕಷ್ಟ ನಷ್ಟಗಳನ್ನು ಅರಿಕೆ ಮಾಡಿಕೊಳ್ಳಲು ಅವಕಾಶವನ್ನು ಕೊಡಬೇಕೆಂದು ಪ್ರಾರ್ಥಿಸಿಕೊಂಡಿರುವರೆಂದು ಗೊತ್ತಾಗಿದೆ. ಆವ ಪ್ರಾರ್ಥನೆಗೆ ಯುಕ್ತ ಪರಿಹಾರ ದೊರಕದೇ ಇದ್ದಲ್ಲಿ ೧೫ ನೇ ತಾ॥ ನ ನಂತರ ಮುಂದಿನ ಕಾರ್ಯಕ್ರಮವನ್ನು ನಿರ್ಧರಿಸುವರೆಂದು ಗೊತ್ತಾಗಿದೆ.

ಪ್ರತಿಭಟನಾ ಸಭೆ

ವಿದ್ಯಾರ್ಥಿ ಕಾಂಗ್ರೆಸ್ ಆಶ್ರಯದಲ್ಲಿ ನೆನ್ನೆ ಮಧ್ಯಾಹ್ನ ಸೆಂಟ್ ಫಿಲೋಮಿನಾ ಕಾಲೇಜಿನ ಮುಂಭಾಗದಲ್ಲಿ ಪ್ರತಿಭಟನಾ ಸಭೆಯು ಶ್ರೀಮಾನ್ ದೊರೆಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಮಾನ್ ನಟರಾಜ್, ಬಿ ರಂ ವ್ಯಾಕ್ರೇದರಾಯರು ಮತ್ತು ಭೂಪಾಲ್‌ರವರು ಭಾಷಣ ಮಾಡಿದರು. ಅಧ್ಯಕ್ಷರಿಂದ ಶ್ರೀಮಾನ್ ದೊರೆಸ್ವಾಮಿಯವರು ಸರ್ಕಾರದ ನಡವಳಿಕೆಗಳನ್ನು ಖಂಡಿಸಿ ಚುನಾಯಿತ ಪ್ರತಿನಿಧಿಗಳ ಸರ್ಕಾರ ಸ್ಥಾಪಿಸಬೇಕೆಂದು ಒತ್ತಾಯ ಪಡಿಸಿದರು. ಈ ಬಗ್ಗೆ ಒಂದು ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ಇಂಗ್ಲೆಂಡಿನಲ್ಲಿ ಪಾಕಿಸ್ಥಾನ ಪ್ರಚಾರ

ಮುಸ್ಲಿಂ ಲೀಗಿನ ಕಾರ್ಯದರ್ಶಿಗಳಾದ ಮಿ॥ ಲಿಯಾಖತ್ ಅಲೀಖಾನರು ಲಂಡನ್ನಿಗೆ ಹೋಗಿ ಪಾಕೀಸ್ಥಾನ ವಿಚಾರವಾಗಿ ಪ್ರಚಾರ ನಡೆಸುವರೆಂದು ತಿಳಿದುಬಂದಿದೆ. ಬ್ರಿಟಿಷ್ ಜನದಲ್ಲಿಯೂ ಮುಖ್ಯವಾಗಿ ಚರ್ಚಿಲ್ ಮತ್ತು ಅವರ ಅನುಯಾಯಿಗಳಲ್ಲಿಯೂ ಅವರು ಪ್ರಚಾರ ನಡೆಸುವರೆಂದು ಹೇಳಲಾಗಿದೆ.

ಮುಸ್ಲಿಮರಿಗೆ ಶೇ॥ ೨೫ ರಷ್ಟು ಹುದ್ದೆ

ಭಾರತ ಸರ್ಕಾರದ ಸುಪಾರ್ಶ್ವ ಕೆಲಸಗಳಲ್ಲಿ ಮುಸಲ್ಮಾನರಿಗೆ ಶೇಕಡ ೨೫ ಭಾಗವನ್ನು ಮೀಸಲಾಗಿಡಲಾಗಿದೆ. ಅಂತೆ ಒಳಾಡಳಿತ ಮಂತ್ರಿಗಳಾದ ಸರ್ದಾರ್ ಪಟೇಲರು ಆಜ್ಞೆ ಮಾಡಿರುವುದಾಗಿ ತಿಳಿದುಬಂದಿದೆ.

ತಾ॥ ಕಾಂಗ್ರೆಸ್ ಸಮಿತಿ

ಹೆಗ್ಗಡದೇವನಕೋಟೆ ೧೩

ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಎಂ ಎಲ್ ನಂಜೆರಾಜೇ ಅರಸಿನವರ ಅಧ್ಯಕ್ಷತೆಯಲ್ಲಿ ನೆನ್ನೆ ಇಲ್ಲಿನ ಕಾಂಗ್ರೆಸ್ ಕೆಲಸಗಾರರ ಸಭೆ ನಡೆಯಿತು. ರಾಜ್ಯಾಂಗ ಶಾಸನ ಸಭೆಗೆ ಚುನಾಯಿತ ಪ್ರತಿನಿಧಿಗಳನ್ನೇ ಕಳುಹಿಸಬೇಕೆಂದೂ ದಿವಾನರ ಹೇಳಿಕೆಯನ್ನು ಖಂಡಿಸುವ ಬಗ್ಗೆ ಭಾಷಣಗಳೂ ನಿರ್ಣಯಗಳೂ ಆದುವು. ತಾಲ್ಲೂಕು ಕಾಂಗ್ರೆಸ್ ಸಮಿತಿಯನ್ನೂ ಹೊಸ ರಚಿಸಲಾಯಿತು. ಶ್ರೀ ಸಿ ಎಂ. ಸುಬ್ಬಣ್ಣನವರು ಅದರ ಅಧ್ಯಕ್ಷರಾಗಿಯೂ, ಶ್ರೀ ಸಿ ಪಿ.ಅಪ್ಪರವರು ಉಪಾಧ್ಯಕ್ಷರಾಗಿಯೂ, ಶ್ರೀ ಲಿಂಗಣ್ಣನವರು ಕಾರ್ಯದರ್ಶಿಯಾಗಿಯೂ ಶ್ರೀ ಎಂ ಡಿ ಶಿವಪ್ಪನವರು ಕೋಶಾಧ್ಯಕ್ಷರಾಗಿಯೂ ಚುನಾಯಿಸಲ್ಪಟ್ಟರು.

ಹೊಸ ಸರ್ಕಾರದ ಪ್ರಥಮ ಕರ್ತವ್ಯ

ಸ್ವತಂತ್ರವಾದ ಪ್ರಜಾಪ್ರಭುತ್ವವುಳ್ಳ ಭಾರತ ಖಂಡವನ್ನು ಸ್ಥಾಪಿಸುವುದು, ಬಡಜನರ ಜೀವನದ ಮಟ್ಟವನ್ನು ಹೆಚ್ಚಿಸುವುದು ಮತ್ತು ಎಲ್ಲ ಕಡೆಯಲ್ಲಿಯೂ ಶಾಂತಿ, ಸ್ವಾತಂತ್ರ್ಯಗಳಿಗಾಗಿ ನಡೆಯುವ ಪ್ರಯತ್ನಗಳಲ್ಲಿ ಸಹಕರಿಸುವುದು—ಇವೇ ನೂತನ ಭಾರತ ಸರ್ಕಾರದ ಪ್ರಥಮ ಕರ್ತವ್ಯವೆಂದು ಪಂಡಿತ ನೆಹರೂರವರು ಅಮೇರಿಕದ ಇಂಡಿಯಾ ಲೀಗ್ ಸಂಸ್ಥೆಗೆ ಸಂತಾಪ(?) ವನ್ನು ಕಳುಹಿಸಿದ್ದಾರೆ.

ಖಂಡನಾ ದಿನಾಚರಣೆ

ಮೈಸೂರು ೧೩

ನೆನ್ನೆ ಸಂಜೆ ಮೈಸೂರು ನಗರ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಭಾರಿ ಮೆರವಣಿಗೆಯೂ, ಟೌನ್‌ಹಾಲ್ ಮೈದಾನದಲ್ಲಿ ಶ್ರೀ ಎಸ್ ಚೆನ್ನಯ್ಯನವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯೂ ನಡೆದುವು. ಶ್ರೀಗಳಾದ ಟಿ ಮರಿಯಪ್ಪ, ಬಿ. ನಾರಾಯಣಸ್ವಾಮಿ, ಎಂ ಎನ್ ಜೋಯಿಸ್, ಪಿ ಸೀತಾರಾಮಯ್ಯ, ಹಗರಂ ರಂಗಯ್ಯ, ಕೆ ಚಾಮುಂಡಯ್ಯ, ಶೇಖ್ ಎಸ್. ದೊರೆಸ್ವಾಮಿ, ಶೇಖ್ ಕೆ. ಕುಮಾರಸ್ವಾಮಿ, ಮತ್ತು ಎ ಶಿವಣ್ಣನವರುಗಳು ಭಾಷಣ ಮಾಡಿದರು. ಮೈಸೂರಿನ ಸರವಾಗಿ ದಿವಾನರು ಪ್ರಜೆಗಳ ಮತ್ತು ಅಧಿಕಾರಿ ಸದಸ್ಯರಿಂದ ಕೂಡಿದ ನಿಯೋಗವನ್ನು ತಮ್ಮ ನಾಯಕತ್ವದಲ್ಲಿಯೇ ತೆಗೆದುಕೊಂಡು ಹೋಗುವುದಾಗಿ ಹೇಳಿರುವುದನ್ನು ಖಂಡಿಸಿದರು. ಪ್ರಜೆಗಳಿಂದ ಚುನಾಯಿತರಾಗಿ ಪ್ರಜಾ ಪ್ರತಿನಿಧಿಗಳನ್ನೇ ಪಾತ್ರರಾದವರೇ ರಾಜ್ಯಾಂಗ ಸಭೆಗೆ ಹೋಗಬೇಕೆಂದೂ ಒತ್ತಾಯಪಡಿಸಿದರು. ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಇದರ ಬಗ್ಗೆ ಮೇಲ್ಕಂಡ ಅಭಿಪ್ರಾಯದ ನಿರ್ಣಯಗಳ ಮಂಡನಾದುವು. ಅಧ್ಯಕ್ಷರ ವಂದನಾರ್ಪಣೆಯೊಡನೆ ಸಭೆ ಮುಕ್ತಾಯವಾಯಿತು.

ಹೊಯ್ಸಳ ಕರ್ನಾಟಕ ವಿದ್ಯಾರ್ಥಿ ನಿಲಯ

ಮೇಲ್ಕಂಡ ನಿಲಯದಲ್ಲಿ ಮೊನ್ನೆ ಸಾಯಂಕಾಲ ಶ್ರೀ ಟಿ ನಾರಾಯಣರವರ ಅಧ್ಯಕ್ಷತೆಯಲ್ಲಿ ಶ್ರೀ ಗಣಪತಿ ಸೀರಾಜನೋತ್ಸವವು ನಡೆಯಿತು. ಆಗಮಿಸಿದ್ದ ಹಿರಿಯರುಗಳು ವಿದ್ಯಾರ್ಥಿಗಳಿಗೆ ಹಿತೋಪದೇಶ ಮಾಡಿದ ನಂತರ ವಂದನಾರ್ಪಣೆ, ಮಂಗಳಾರತಿ ಮತ್ತು ಪ್ರಸಾದ ವಿನಿಯೋಗದೊಡನೆ ಉತ್ಸವವು ಕೊನೆಗಂಡಿತು.

ಬಾಬು ರಹಿಮಾನನು ಪತ್ತೆಯಿಲ್ಲ

ಸಾಧು ಫಕೀರನೆಂದು ಹೇಳಿಕೊಂಡಿದ್ದು ಓರ್ವ ಮಹಿಳೆಯನ್ನು ಮತ್ತು ಆಕೆಯ ಮಗಳನ್ನೂ ಅಪಹರಿಸಿ ಕೊಂಡು ಹೋಗಲು ಯತ್ನಿಸಿದ ಆಪಾದನೆಯ ಮೇಲೆ ವಿಚಾರಣೆಗೆ ಗುರಿಯಾಗಿರುವ ಬಾಬು ರಹಿಮಾನ್ ಎಂಬುವವನು ಸ್ವಂತ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದನಷ್ಟೆ. ಈಗ ಆ ಫಕೀರನೂ ಮತ್ತು ಇತರ ಗುಂಪಿನವರು ಎಲ್ಲಿ ತಲೆ ತಪ್ಪಿಸಿಕೊಂಡಿರುವರೆಂದು ಗೊತ್ತಾಗಿದೆ. ಸೆಷನ್ಸ್ ನಮೂನೆ ಮಾಡಿಗೆ ಖಟ್ಲೆ ...

ಮುಷ್ಕರ ನಿಲ್ಲಿಸಿದರೆ ಪರಿಹಾರ

ದಕ್ಷಿಣ ಭಾರತ ರೈಲ್ವೆ ಕೆಲಸಗಾರರು ತಮ್ಮ ಮುಷ್ಕರವನ್ನು ನಿಲ್ಲಿಸಿದರೆ ನ್ಯಾಯವಾದ ಅವರ ಕುಂದು ಕೊರತೆಗಳಿಗೆಲ್ಲಾ ಸಹಾನುಭೂತಿಯುತವಾದ ಪರಿಹಾರವನ್ನು ಒದಗಿಸಲಾಗುವುದೆಂದು ರೈಲ್ವೆ ಮಂತ್ರಿಗಳಾದ ಮಿ॥ ಅಸಫ್ ಅಲಿಯವರು ತಿಳಿಸಿದ್ದಾರೆ. ಅನೇಕ ಕಡೆಗಳಲ್ಲಿ ಕೆಲಸಗಾರರು ಈಗಾಗಲೇ ಮುಷ್ಕರವನ್ನು ತ್ಯಜಿಸಿ ಕೆಲಸಕ್ಕೆ ಬರುತ್ತಿದ್ದಾರೆ. ರೈಲುಗಳನ್ನೂ ಸಹ ಹೆಚ್ಚು ಹೆಚ್ಚಾಗಿ ಬಿಡಲಾಗುತ್ತಿದೆ. ಸಧ್ಯದಲ್ಲಿಯೇ ಮುಷ್ಕರವು ಸಂಪೂರ್ಣವಾಗಿ ಮುಕ್ತಾಯವಾಗುವುದೆಂದು ಹೇಳಲಾಗಿದೆ.

ಆಕಾಶವಾಣಿಯ ಲ್ಲಿ ಭಾಷಣ

ಅಲಹಾಬಾದ್ ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರೂ, ರಾಷ್ಟ್ರೀಯ ಯುದ್ಧ ವಿದ್ಯಾಲಯದ ಅಧ್ಯಕ್ಷರೂ ಆದ ಡಾ॥ ಅಮರನಾಥ ಝಾರವರು ಈ ದಿನ ರಾತ್ರಿ ೯ ೪೫ ರಿಂದ ೧೦ ಘಂಟೆ ವರೆಗೆ ಆಕಾಶವಾಣಿಯ ಮೂಲಕ ರಾಷ್ಟ್ರೀಯ ಯುದ್ಧ ವಿದ್ಯಾನಿಲಯದ ವಿಷಯವಾಗಿ ಭಾಷಣ ಮಾಡುವರು.

ನಾಯಕರ ಮೇಲಿನ ಗೂಢ ಚಾರರ ವರದಿ ನಾಶ

ಹಳೇ ಸರ್ಕಾರದ ಗುಪ್ತ ವರದಿಗಾರರು ತಮ್ಮಗಳ ಮೇಲೆ ಕಳುಹಿಸಿದ್ದ ವರದಿಯನ್ನು ನೋಡಲು ಕೇಂದ್ರ ಭಾರತ ಸರ್ಕಾರದ ಮಂತ್ರಿಗಳು ಕಾತುರರಾಗಿದ್ದರು. ಆದರೆ ಹೊಸ ಸರ್ಕಾರವು ಬರುವುದಕ್ಕೆ ಮುಂಚೆಯೇ ಅವುಗಳನ್ನು ನಾಶ ಮಾಡಲಾಗಿದ್ದುದರಿಂದ ಅವುಗಳ ಯಾವೇ ಇವರಿಗೆ ಸಿಗದೆ ನಿರಾಶರಾಗಬೇಕಾಯಿತೆಂದು ಹೇಳಲಾಗಿದೆ.

ಕೇಂದ್ರ ಸರ್ಕಾರಕ್ಕೆ ಜಿನ್ನಾ ಪ್ರವೇಶವೇ?

ಮುಸ್ಲಿಂ ಲೀಗಿನ ಅಧ್ಯಕ್ಷರಾದ ಮಿ॥ ಜಿನ್ನಾರವರೊಡನೆ ಮಾತುಕತೆ ನಡೆಸಲು ವೈಸ್‌ರಾಯರು ಅವರಿಗೆ ಆಹ್ವಾನವಿತ್ತಿದ್ದಾರೆಂದೂ ಅವರು ಅದನ್ನು ಅಂಗೀಕರಿಸಿರುವರೆಂದೂ ತಿಳಿದುಬಂದಿದೆ. ಮುಸ್ಲಿಂ ಲೀಗಿನವರು ಕೇಂದ್ರ ಸರ್ಕಾರದಲ್ಲಿ ಪ್ರವೇಶಿಸುವರೆಂಬ ನಿರೀಕ್ಷಣೆಯು ಬಲವಾಗುತ್ತಿದೆ. ಬಂಗಾಳ ಮುಖ್ಯ ಮಂತ್ರಿ ಮಿ॥ ಸುಹ್ರಾವರ್ದಿಯವರು ಇದಕ್ಕಾಗಿ ಸಂಧಾನ ನಡೆಸುತ್ತಿರುವರೆಂದೂ ಹೇಳಲಾಗಿದೆ. ಕಾಂಗ್ರೆಸ್ಸಿನೊಡನೆ ಲೀಗು ಬೇಗ ಸಹಕರಿಸಲು ಮುಂದೆ ಬರುವುದಾಗಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಆಶಿಸಿದ್ದಾರೆ. ಜಿನ್ನಾ ವೈಸ್‌ರಾಯ್ ಭೇಟಿಯ ಪರಿಣಾಮವಾಗಿ ಕೇಂದ್ರ ಸರ್ಕಾರದಲ್ಲಿ ಮುಸ್ಲಿಂ ಲೀಗಿನವರು ಸೇರಬಹುದೆಂದು ಭಾವಿಸಲಾಗಿದೆ.

ಲಂಡನ್ನಿಗೆ ಪ್ರಯಾಣ

ನಂಜನಗೂಡು ೧೩

ಈ ಊರಿನ ಯುವಕ ಮುಖಂಡರೂ, ಕಾಂಗ್ರೆಸ ವಕ್ತಾರರೂ ಆದ ಶ್ರೀಮಾನ್ ಎಲ್ ಶ್ರೀಕಂಠಯ್ಯನವರು ಲಂಡನ್ನಿಗೆ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಲು ಹೊರಟಿರುವರು. ಅನೇಕ ಮಿತ್ರರು ಅವರಿಗೆ ಸುಖ ಪ್ರಯಾಣ ಬಯಸಿ ಬೀಳ್ಕೊಟ್ಟರು.

ಮುಸ್ಲಿಂ ಲೀಗಿನ ಜೋರಿ ... ಆಕ್ಷೇಪಿಸುವ ಸಮಿತಿಯ ಸಭೆ ... [illegible] ... ಭೋಜನ ನಡೆಸಲಾಯಿತು.

ಸಾಧ್ವಿ

ತಾ॥ ೧೩-೯-೪೬ ಶುಕ್ರವಾರ

ದಸರಾ ಕಾಲಕ್ಕೆ ಆಹಾರದ ವ್ಯವಸ್ಥೆ

ಈ ಸಾರಿ ನವರಾತ್ರಿ ಕಾಲದಲ್ಲಿ ಮಾಮೂಲಿನಂತೆ ವಸ್ತುಪ್ರದರ್ಶನವು ನಡೆಯುವುದಿಲ್ಲವೆಂದು ನಿರ್ಧಾರವಾಗಿದ್ದರೂ, ಪದ್ಧತಿ ಪ್ರಕಾರ ದರ್ಬಾರು ಗಳೂ ಜಂಬೂ ಸವಾರಿಯೂ ಜರುಗುವುವೆಂದು ಪ್ರಕಟವಾಗಿದೆ. ಎಂದಮೇಲೆ ರಾಜಧಾನಿಗೆ ಬರುವ ಜನಸಂದಣಿಯು ಸ್ವಲ್ಪ ಹೆಚ್ಚು ಕಡಿಮೆ ಹಿಂದಿನಂತೆಯೇ ಇರುತ್ತದೆಯೆಂದು ಹೇಳಬಹುದು. ಹೊರಗಿನಿಂದ ಬರತಕ್ಕ ಜನರು ವಿಶೇಷವಾಗಿ ಅರಮನೆಯ ದರ್ಬಾರನ್ನೂ ಜಂಬೂ ಸವಾರಿಯನ್ನೂ ನೋಡುವುದಕ್ಕಾಗಿಯೇ ಬರುವರು. ಇದೇ ಮೈಸೂರಿನಲ್ಲಿರುವ ವೈಶಿಷ್ಟ್ಯ.

ವಸ್ತುಪ್ರದರ್ಶನಗಳು ಅನೇಕ ಕಡೆ ಹೇರಳವಾಗಿ ನಡೆಯುತ್ತವೆ. ಮೈಸೂರಿನ ಪ್ರದರ್ಶನಕ್ಕಿಂತಲೂ ಹೆಚ್ಚು ಪ್ರಮಾಣದಲ್ಲಿಯೂ ಜರಗುತ್ತವೆ. ಆದ್ದರಿಂದ ಕೇವಲ ಪ್ರದರ್ಶನವನ್ನು ನೋಡುವುದಕ್ಕಾಗಿಯೇ ಹೊರಗಿನಿಂದ ಬರುವವರು ವಿರಳ. ಆದೂ ಅಲ್ಲದೆ ಈ ಪ್ರದರ್ಶನವು ಬರಬರುತ್ತಾ ತನ್ನ ನೈಜವಾದ ಆಕರ್ಷಣೆಯನ್ನು ಕಳೆದು ಕೊಂಡು ಕೇವಲ ಪೇಟೆಯ ಅಂಗಡಿಗಳೇ ಅಲ್ಲಿ ತುಂಬಿರುತ್ತವೆ. ಮಾಂಟೆಸ್ಸಾಗಿ ಮಾಲುಗಳನ್ನು ಕೊಳ್ಳತಕ್ಕವರು ವಿನಾ ಪ್ರದರ್ಶನವನ್ನು ನೋಡುವುದಕ್ಕಾಗಿ ಹೊರಗಿನಿಂದ ಬರುವವರು ಬಹಳ ಕಡಿಮೆ. ಆದುದರಿಂದ ರಾಜಧಾನಿಗೆ ಬರತಕ್ಕವರ ಸಂಖ್ಯೆಯಲ್ಲಿ ವಿಶೇಷವಾಗಿ ಕಡಿಮೆಯೇನೂ ಆಗುವುದಿಲ್ಲ ವೆಂದು ಧಾರಾಳವಾಗಿ ಭಾವಿಸಬಹುದು.

ಈಗಾಗಲೇ ನಗರದ ನಿವಾಸಿಗಳಿಗೆ ಸಾಕಾದಷ್ಟು ಆಹಾರ ಧಾನ್ಯಗಳು ಸರಿಯಾಗಿ ದೊರಕದೆ ಬಹಳ ತೊಂದರೆಯಾಗಿದೆ. ಅನೇಕರು ಮುಕ್ತಕಂಠದಿಂದ ಬೋಳಪನ್ನು ತಿನ್ನಲು ಬಂದ ಹಿಂದು ಸಾನಾ ಬಗೆಯಾಗಿ ತೊಂದರೆಗೀಡಾಗಿದ್ದಾರೆ. ಹೀಗಿರುವಲ್ಲಿ ಹೊರಗಿನಿಂದ ಬರುವ ಅತಿಥಿ ಅಭ್ಯಾಗತರನ್ನು ಅವರು ಸತ್ಕರಿಸುವುದಾದರೂ ಎಂತು? ನೆಂಟರಿಷ್ಟ ರಿಲ್ಲದೆ ಹಾಗಾಗಿಯೋ ಬರತಕ್ಕವರ ಗತಿ ಏನು? ಮತ್ತು ಆ ಕಾಲದಲ್ಲಿ ಸಹಜವಾಗಿ ಯೂ ಹೋಟೆಲುಗಳಿಗೆ ಅವಲಂಬಿಸಬೇಕಾಗಿ ಬರುವ ಗಿರಾಕಿಗಳ ವಿಚಾರವೇನು? ಈ ಅಂಶಗಳನ್ನು ಸಹ ಅಧಿಕಾರಿಗಳು ದಯ್ಯ ಯೋಚಿಸುವರೆಂದು ನಾವು ನಂಬುತ್ತೇವೆ. ನವರಾತ್ರಿ ಉತ್ಸವವನ್ನೂ ಶ್ರೀಮನ್ಮಹಾರಾಜರವರ ಮೆರವಣಿಗೆಯನ್ನೂ ನೋಡಿ ಆನಂದ ಪಡಲು ಬರುವ ಪ್ರಜೆಗಳು ಹೊಟ್ಟೆಗಿಲ್ಲದೆ ಉಪವಾಸವಿರಲು ಅವಕಾಶ ಕೊಡುವುದು ಸರ್ವಥಾ ಸರಿಯಲ್ಲ.

ಹಿಂದೆ ನವರಾತ್ರಿ ಸಂದರ್ಭದಲ್ಲಿ ರೇಷನ್ ಇಲಾಖೆಯವರು ಅನೇಕ ಕಡೆ ವಿಶೇಷ ವ್ಯವಸ್ಥೆಗಳನ್ನು ಏರ್ಪಡಿಸಿ ಹೊರಗಿನಿಂದ ಬರತಕ್ಕವರಿಗಾಗಿ ಹಂಗಾಮಿ ಕಾರ್ಡುಗಳನ್ನು ವಿತರಣೆ ಮಾಡಿ ಧಾನ್ಯವನ್ನು ಒದಗಿಸಿದ್ದರು. ಈ ಸಾರಿಯೂ ಸಹ ಅದೇ ರೀತಿ ಸೌಕರ್ಯವನ್ನು ದೊರಕಿಸುವುದು ಅಗತ್ಯವಾಗಿದೆ. ಇಲ್ಲವಾದರೆ ನಗರದ ನಿವಾಸಿಗಳಿಗೂ ಹೊರಗಿನಿಂದ ಬರುವವರಿಗೂ ಅಪಾರವಾದ ಕಷ್ಟವು ಸಂಭವಿಸುತ್ತದೆ. ನವರಾತ್ರಿ ಉತ್ಸವವು ಎಂದಿನಂತೆ ವೈಭವದಿಂದ ನಡೆಯುವುದೇನೋ ಸಂತೋಷದ ಸಂಗತಿ. ಅದಕ್ಕೆ ತಕ್ಕಂತೆ ಸೌಕರ್ಯಗಳನ್ನು ಕಲ್ಪಿಸುವುದರಲ್ಲಿಯೂ ನಮ್ಮ ಸರ್ಕಾರದವರು ಒಟ್ಟಾದರಾಗುವುದು ಅತ್ಯವಶ್ಯಕ.

ಶ್ರೀನಿವಾಸ

ಮೋಟಾರ್ ಸರ್ವೀಸ್

ಮೈಸೂರು—ಬೆಂಗಳೂರು

ಮೈಸೂರಿನಿಂದ ಬನ್ನೂರು, ಮಳವಳ್ಳಿ, ಹಲಗೂರು, ಸಾತನೂರು, ಕನಕಪುರ, ಹಾರೋಹಳ್ಳಿ ಮಾರ್ಗವಾಗಿ ಬೆಂಗಳೂರಿಗೆ ತಲುಪುವುದು.

ಮೈಸೂರಿನಿಂದ ಬೆಳಗ್ಗೆ 9-15 ಗಂಟೆಗೆ ಹೊರಟು ಬೆಂಗಳೂರಿಗೆ ಮಧ್ಯಾಹ್ನ 4-30 ಗಂಟೆಗೆ ತಲುಪುತ್ತೆ. ಮತ್ತು ಬೆಂಗಳೂರಿನಿಂದ ಬೆಳಗ್ಗೆ 7-30 ಕ್ಕೆ ಹೊರಟು ಮೈಸೂರನ್ನು ಮಧ್ಯಾಹ್ನ 3-10 ಕ್ಕೆ ತಲುಪುತ್ತೆ.

ಪ್ರಾಪ್ರೈಟರ್, ಶ್ರೀನಿವಾಸ ಮೋಟಾರ್ ಸರ್ವಿಸ್,

ಆಫೀಸ್:- "ಪದ್ಮಾಲಯ", ಸಯ್ಯಾಜಿ ರಾವ್ ರೋಡ್, ಮೈಸೂರು.

Edited, printed and published by A. R. Nagaraiao at the Sadhvi Press D Subbiah Road, Mysore

ಇದ್ದಿಲು ಮತ್ತು ಸೌದೆ ಸರಬರಾಜು

ಶ್ರೀಮ ಸೌದೆ, ಇದ್ದಿಲು ವಿಚಾರದಲ್ಲಿ ನಿನ್ನೆ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿರುವ ಲೇಖನವನ್ನು ಆಸಕ್ತಿಯಿಂದ ಓದಿದೆ.

ಮೈಸೂರು ನಗರದಲ್ಲಿ ದಿನದಿನಕ್ಕೂ ಸೌದೆ ಮತ್ತು ಇದ್ದಲಿಗಾಗಿ ಪಡುತ್ತಿರುವ ತೊಂದರೆಯನ್ನು ವರ್ಣಿಸಲು ಸಾಧ್ಯವಿಲ್ಲ. ಇದ್ದಲಿಗಂತೂ ಈಗ ೪ ರೂಪಾಯಿಗೆ ಒಂದು ಮೂಟೆಯಂತೆ ಮಾರುತ್ತಿದ್ದಾರೆ. ಅಷ್ಟನ್ನು ಕೊಟ್ಟು ಮನೆಗೆ ತಂದು ನೋಡಿದರೆ ಅದರಲ್ಲಿ ಉರಿಯಲು ಸಾಧ್ಯವಿಲ್ಲದಂತಹ ಇಟ್ಟಿಗೆ ಚೂರು, ಸೌದೆ ತುಂಡುಗಳಿರುತ್ತವೆ. ಇವುಗಳನ್ನು ಬೇರೆಸದಂತೆ ಸರಿಯಾಗಿ ಸರಬರಾಜನ್ನು ನೋಡಿಕೊಳ್ಳಲು ತಕ್ಕ ಅಧಿಕಾರಿಗಳನ್ನು ಟಿಂಬರ್ ಡಿಪೋನಲ್ಲಿ ನೇಮಿಸಿ ರಚಿಸಿದ್ದ ಯಂತ್ರವು ಈಗ ಕೆಲಸ ಮಾಡುತ್ತಿದೆಯೋ ಇಲ್ಲವೋ ಅನುಮಾನವಾಗಿದೆ. ಜನರ ಸೌಕರ್ಯಕ್ಕೆ ಆ ಯಂತ್ರವನ್ನು ಗುರುತಿನಿಂದ ಕೆಲಸ ಮಾಡಿಸಬೇಕು. ಅಲ್ಲದೆ ದರವನ್ನು ಗೊತ್ತು ಮಾಡಿ ಪಟ್ಟಿಯನ್ನು ಕಡ್ಡಾಯವಾಗಿ ಜಾರಿಗೆ ತರಲೇಬೇಕಾಗಿದೆ.

ಎಸ್. ಶ್ರೀನಿವಾಸಮೂರ್ತಿ

ಪತ್ರಿಕೋದ್ಯೋಗಿ ಮತ್ತು ಪ್ರಜಾಪ್ರತಿನಿಧಿ ಸಭಾ ಸದಸ್ಯ

"NATIONAL INSTITUTE"

Mysore.

This Institute will open shortly in Mysore to provide systematic and thorough instruction in essential subjects such as English, Mathematics, Physics, Chemistry and Music up to the Intermediate standard. Able and experienced teachers and scholars will serve on the staff and give individual attention to students. The fees charged are moderate.

Three sessions of courses for 3, 6 and 9 months will run concurrently to coach students for the Middle school, S.S.L.C and Intermediate Examinations. The number of seats is limited in the first instance to **fifteen** in each subject

For further particulars, apply to:-

The Secretary,
NATIONAL INSTITUTE,
321, D. Subbiah Road,
Mysore.

ನಿಮ್ಮ ಮೈ ಮೊಗವು ಹೊಳೆಯಬೇಕೆ? ನೀವು ಲಾವಣ್ಯ ಮೂರ್ತಿಗಳಾಗಬೇಕೆ? ಹಾಗಾದರೆ ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ. ಪರೀಕ್ಷಿಸಿ ನೋಡಿರಿ

ಎಲ್ಲೆಲ್ಲೂ ದೊರೆಯುತ್ತವೆ,
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.

ಈ ವನ್ನು ಪರ್ಸಾಂಗಿಕ ಮಾನವ ಲೋಕಕ್ಕೆ ಅರ್ಪಿಸುತ್ತಿದ್ದಾರೆ.

FOR SALE

One Victoria cart with a pony

One Dog-cart with an English-breed horse.

For particulars:

NEO FURNITURE CO,
Irwin Road Mysore

V. A. M

OPERA TALKIES

ತಾ॥ 14 -9—46ರಿಂದ ಎರಡನೆಯ ವಾರ

ನನ್ನ ಮಗ

(ತಮಿಳು)

* ಯು. ಆರ್. ಜೀವರತ್ನಂ, * ಎಸ್. ಕೃಷ್ಣಮೂರ್ತಿ, * ಬಾಲಸುಬ್ರಹ್ಮಣ್ಯಂ * ಜೇಬುನ್ನಿಸಾ

RAJKAMAL, MYSORE.

FOUR FEATHERS in Technicolor

from 8—9- 46 for 6 days

'BURN'EM UP BARNES'

A thrilling Serial from 14 -9- 46 for 5 days

"ಫೋರ್ ಫೆದರ್ಸ್" 8-9—46 ರಿಂದ 6 ದಿನಗಳು

'ಬರ್ನ್ ದೆಂ ಅಪ್ ಬಾರ್ನ್ಸ್'

ರೋಮಾಂಚಕಾರಿ ಸೀರಿಯಲ್ ಚಿತ್ರ

14—9—46 ರಿಂದ 5 ದಿನಗಳು.

15-9-46 ರಿಂದ ದಿನಗಳು ... ಪ್ರತಿ ...

'ಮಗ' ... ದೇವಿಕಾರಾಣಿ, * ... ಅವರು

ರೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶನಿವಾರ ೧೪—೯—೪೬ [ಸಂಚಿಕೆ ೪೩

ಕೇಂದ್ರದಲ್ಲಿ ಮಿಶ್ರಸರ್ಕಾರ ಸ್ಥಾಪನೆಯ ಪ್ರಯತ್ನ

ಖೂನಿ ಮೊಕದ್ದಮೆಯಲ್ಲಿ ಶಿಕ್ಷೆ

ಮೈಸೂರು ೧೪

ಚಾಮರಾಜನಗರದ ಕರಿಸಾರದ ಜಾತಿ ಚಿಕ್ಕಮಾದ ಎಂಬುವನು ೨೧-೪-೪೬ ರಲ್ಲಿ ಚಿಕ್ಕ ಎಂಬುವನೊಡನೆ ಜಗಳವಾಡಿ ಅವನ ಹೊಟ್ಟೆಯ ಮೇಲೆ ಶಸ್ತ್ರದಿಯಿಂದ ತಿವಿದು ಖೂನಿ ಮಾಡಿದನೆಂದು ನಂಜನಗೂಡು ಮೊದಲನೇ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ವಿಚಾರಣೆ ನಡೆದು ಮೊಕದ್ದಮೆಯನ್ನು ಸೆಷನ್ಸ್‌ಗೆ ಗುರಿಪಡಿಸಲಾಗಿತ್ತು. ಸೆಷನ್ಸ್ ವಿಚಾರಣೆಯಲ್ಲಿ ಆಪಾದಿತನು ತಪ್ಪಿತಸ್ಥನೆಂದು ತೀರ್ಪಿತ್ತು ಒಂದು ವರ್ಷ ಕಠಿಣ ಸಜಾ ವಿಧಿಸಲಾಗಿದೆ

ಸೊಸೈಟಿ ಡೈರೆಕ್ಟರುಗಳು

ಶ್ರೀಕೃಷ್ಣ ರಾಜೇಂದ್ರ ಕೋಆಪರೇಟಿವ್ ಸೊಸೈಟಿಗೆ ಈ ಕೆಳಗೆ ಕಂಡವರು ಹೊಸ ವರ್ಷದ ಡೈರೆಕ್ಟರುಗಳಾಗಿ ಚುನಾಯಿತರಾಗಿದ್ದಾರೆ:—ಅಧ್ಯಕ್ಷರು ಶ್ರೀ ಎಸ್. ಕೃಷ್ಣಸ್ವಾಮಿರಾವ್, ಉಪಾಧ್ಯಕ್ಷರು ಶ್ರೀ ಟಿ ಎನ್. ಸುಬ್ಬರಾವ್, ಕಾರ್ಯದರ್ಶಿಗಳು ಶ್ರೀ ಎಸ್ ಪದ್ಮರಾಜಯ್ಯ, ಸದಸ್ಯರುಗಳು ಶ್ರೀಗಳಾದ ಬಿ ಆರ್. ನಾಯ್ಡು, ಸುಂದರೇಶ್ವರ, ಬಕ್ಷಿ ಚಂದ್ರಶೇಖರಯ್ಯ. ಬಿ. ಎಸ್. ಶಿವನೀಲಕಂಠಯ್ಯ, ಕೆ ಕೃಷ್ಣರಾಜು, ಎಂ ಎ. ರಾಮಸ್ವಾಮಿ, ವೀರಭದ್ರಪ್ಪ, ಕಂಠಿಪುಟ್ಟಣ್ಣ, ನಿಜಗಣ, ಎಸ್. ಆರ್. ಕೃಷ್ಣಮೂರ್ತಿ; ಎಂ ಮಾದರಾಜೇ ಅರಸ್.

ಗಣಪತಿ ಉತ್ಸವ

ಛಾವಣಾರ ಕ್ಷತ್ರಿಯ ಸೋಷಿಯಲ್ ಇನ್‌ಸ್ಟಿಟ್ಯೂಟಿನ ಸದಸ್ಯರು ಕಳೆದ ಶನಿವಾರ ಹುಜೂರ್ ಸೆಕ್ರೆಟರಿ, ಶ್ರೀ ಟಿ. ರಾಮಯ್ಯನವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಶ್ರೀ ಗಣಪತಿ ಉತ್ಸವವನ್ನು ನಡೆಸಿದರು ಪೌರ ಸಭಾಧ್ಯಕ್ಷರಾದ ಶ್ರೀ ಆರ್. ರಾಮಚಂದ್ರ ರಾವ್ ಬೊಂಬೋರೆಯವರು ಮನೋರಂಜಕವಾದ ಭಾಷಣವನ್ನು ಮಾಡಿದರು ಉತ್ತರ್‌ಕರ್ ಸಹೋದರಿಯರಿಂದ ಸಂಗೀತ ನಡೆದು ಮಂಗಳಾರತಿಯೊಡನೆ ಪೂಜೆ ಮುಗಿಯಿತು.

ಏಷ್ಯಾ ಸಮ್ಮೇಳನಕ್ಕಾಗಿ ೩೨ ರಾಷ್ಟ್ರಗಳಿಗೆ ಆಹ್ವಾನ

ಬರುವ ಫೆಬ್ರವರಿ ೧೫ ರಿಂದ ಮಾರ್ಚಿ ೩೧ರ ವರೆವಿಗೆ ದೆಹಲಿಯಲ್ಲಿ ಏಷ್ಯಾ ಜನಾಂಗಗಳ ಸಮ್ಮೇಳನಕ್ಕಾಗಿ ಪಂಡಿತ ನೆಹರೂರವರು ೩೨ ರಾಷ್ಟ್ರಗಳಿಗೆ ಆಹ್ವಾನವನ್ನು ಕಳುಹಿಸಿದ್ದಾರೆ ಜಪಾನ್ ಮತ್ತು ರಷ್ಯದ ರಿಪಬ್ಲಿಕ್ಕುಗಳೂ ಅವುಗಳಲ್ಲಿ ಸೇರಿವೆ

ಬೋಸರು ೨೭ ನೇ ತಾ॥ ಬರುವರು

ಜ್ಯೋತಿಷ್ಯರ ಭವಿಷ್ಯ ಫಲ

ಬಾಬು ಸುಭಾಸ್‌ಚಂದ್ರ ಬೋಸರು ಸಿಂಧೂ ಪ್ರಾಂತದಲ್ಲಿರುವರೆಂದೂ, ಈ ತಿಂಗಳು ೨೭ ನೇ ತಾರೀಖು ಕಾಣಿಸಿಕೊಳ್ಳುವರೆಂದೂ ಕೊಡಲಗಿಯ ಜ್ಯೋತಿಷ್ಯರಾದ ಶ್ರೀ ಹನುಮಂತಾಚಾರ್ಯರು ಬರೆದಿರುತ್ತಾರೆ ರವಿ ಮತ್ತು ಲಗ್ನಾಧಿಪತಿ ಕುಜ ಇಬ್ಬರೂ ಮಿತ್ರತ್ವದಿಂದಲೂ, ಆಯುಷ್ಕಾರಕ ಶನಿ ಎಂಟನೆಯ ಆಯು ಸ್ಥಾನದಲ್ಲಿ ಇರುವುದರಿಂದಲೂ, ಬುಧ, ಗುರುಗಳು ಕೇಂದ್ರ ತ್ರಿಕೋಣದಲ್ಲಿರುವುದರಿಂದಲೂ ಬಾಬು ಬೋಸರು ಪೂರ್ಣಾಯುಗಳಾಗಿರುತ್ತಾರೆ. ೬೪ನೇ ವಯಸ್ಸಿನವರೆವಿಗೆ ಅವರ ವ್ಯಕ್ತಿತ್ವದ ಭೀತಿ ಇಲ್ಲ. ಗೋಚಾರ ರೀತ್ಯಾ ಗುರು ಏಳನೇ ಮತ್ತು ಶನಿ ಹನ್ನೊಂದನೇ ಕಡೆ ಇರುವುದರಿಂದ ಜಾತಕನು ೨೭-೯-೪೬ ನೇ ದಿನ ಕಾಣಿಸಿಕೊಳ್ಳುವನು ಸ್ತ್ರೀ ವ್ಯಕ್ತಿಯನ್ನು ಮುಂದೆ ಮಾಡಿಕೊಂಡು ಪ್ರಕಟವಾಗುವನು ಪ್ರಶ್ನ ಕಾಲದಲ್ಲಿ ಲಗ್ನಾಧಿಪತಿ ಮತ್ತು ದಶಾಧಿಪತಿ ಗುರು ಇರುವುದರಿಂದ ಗುರುವಿನ ದೇಶವಾದ ಸಿಂಧ್ ಪ್ರಾಂತದಲ್ಲಿ ಜಾತಕನು ಇರುತ್ತಾನೆ

ಸಿಂಧ್ ಶಾಸನ ಸಭೆಯ ರದ್ದು

ಸಿಂಧೂ ಪ್ರಾಂತದ ಶಾಸನ ಸಭೆಯನ್ನು ಅಲ್ಲಿನ ಗೌರ್ನರು ರದ್ದು ಮಾಡಿದ್ದಾರೆ. ಅಧ್ಯಕ್ಷರೂ ಉಪಾಧ್ಯಕ್ಷರೂ ತಮ್ಮ ಸ್ಥಾನಗಳಿಗೆ ರಾಜೀನಾಮೆ ಇತ್ತುದರಿಂದಲೂ ಬೇರೆಯಾರೊಬ್ಬರೂ ಅಧ್ಯಕ್ಷರ ಕಾರ್ಯವನ್ನು ನಿರ್ವಹಿಸಲು ಮುಂದೆ ಬಾರದಿರುವುದರಿಂದಲೂ ಈ ರೀತಿ ಮಾಡಲಾಯಿತೆಂದು ಅವರು ಹೇಳಿದ್ದಾರೆ ಮತ್ತು ಇಂದಿನ ಪರಿಸ್ಥಿತಿಯಲ್ಲಿ ಭದ್ರವಾದ ಮಂತ್ರಿ ಮಂಡಲವನ್ನು ರಚಿಸುವುದು ಶಕ್ಯವಲ್ಲವೆಂದೂ ಸೂಚಿಸಲಾಗಿದೆ. ಸಧ್ಯದಲ್ಲಿಯೇ ಶಾಸನ ಸಭೆಗೆ ಹೊಸ ಚುನಾವಣೆ ನಡೆಯುವುದು

ಬಾಂಬು ಹಾಕುವುದನ್ನು ನಿಲ್ಲಿಸಲು ಜವಹರರ ಆಜ್ಞೆ

ದಕ್ಷಿಣ ವಜೀರಿಸ್ಥಾನದ ಕಾಡುಜನರ ಮೇಲೆ ವಿಮಾನದಿಂದ ಬಾಂಬು ಹಾಕುತ್ತಿರುವುದನ್ನು ಫಿರಂಗಿಗಳಿಂದ ಹೊಡೆಯುತ್ತಿರುವುದನ್ನೂ ನಿಲ್ಲಿಸಲು ವಿದೇಶಾಂಗ ಮಂತ್ರಿ ನೆಹರೂರವರು ಆಜ್ಞೆ ಮಾಡಿರುವುದಾಗಿ ಗೊತ್ತಾಗಿದೆ

ಕೇಂದ್ರದಲ್ಲಿ ಮಿಶ್ರ ಮಂತ್ರಿ ಮಂಡಲ

ಹಿಂದೂಸ್ಥಾನದಲ್ಲಿ ಈಗಿರುವ ಮಧ್ಯಂತರ ಸರ್ಕಾರದ ಸ್ಥಾನದಲ್ಲಿ ಕಾಂಗ್ರೆಸ್ ಮತ್ತು ಲೀಗ್ ಮಿಶ್ರ ಮಂತ್ರಿಮಂಡಲವನ್ನು ಸ್ಥಾಪಿಸಲು ಪ್ರಯತ್ನಗಳಾಗುತ್ತಿವೆಯೆಂದು ಲಂಡನ್ನಿನ ಅಧಿಕಾರೀ ಆವರಣಗಳಲ್ಲಿ ನಂಬಲಾಗಿದೆ. ಹೊಸ ಸಂಧಾನಗಳಿಗೆ ನೆಹರೂರವರು ಬಾಗಿಲನ್ನು ತೆರೆದಿಟ್ಟಿರುವುದರಿಂದ ಕಾಂಗ್ರೆಸ್ಸಿಗೂ ಲೀಗಿಗೂ ಒಪ್ಪಂದವೇರ್ಪಡಬಹುದೆಂದು ದೆಹಲಿಯ ವರದಿಗಳು ಸೂಚಿಸುತ್ತಿವೆ. ನೆಹರೂರವರ ಸರ್ಕಾರದಲ್ಲಿ ಬ್ರಿಟಿಷ್ ಲೇಬರ್ ಪಂಗಡದ ಅಧಿಕಾರಿಗಳು ವಿಶ್ವಾಸವನ್ನು ವ್ಯಕ್ತಪಡಿಸುತ್ತಿದ್ದಾರೆ ಜಿನ್ನಾರವರಿಗೆ ವೈಸ್ರಾಯರು ಕೊಟ್ಟಿರುವ ಆಹ್ವಾನವನ್ನು ಲೇಬರ್ ಮತ್ತು ಕನ್ಸರ್‌ವೆಟಿವ್ ಪಂಗಡದವರು ಸ್ವಾಗತಿಸಿದ್ದಾರೆ

ರಷ್ಯದೊಡನೆ ಯುದ್ಧದ ಸಂಭವ

ಅಮೇರಿಕದ ವಿದೇಶಾಂಗ ನೀತಿಗೆ ಬ್ರಿಟನ್ನನ್ನು ಆಧಾರವಾಗಿ ಇಟ್ಟುಕೊಳ್ಳುವುದು ಮೂರ್ಖತನದ ಪರಮಾವಧಿಯೆಂದು ಅಮೇರಿಕದ ಸೆಕ್ರೆಟರಿ ಮಿ॥ ಹೆನ್ರಿ ವ್ಯಾಲೇಸರು ತಿಳಿಸಿರುವರು ಸ್ಪಷ್ಟವಾದ ಮತ್ತು ನಮಗೆ ಬೇಕಾದ ನೀತಿಯನ್ನು ಅನುಸರಿಸದೇ ಇದ್ದರೆ ಸಮೀಪ ಪ್ರಾಚ್ಯದಲ್ಲಿ ಬ್ರಿಟನ್ನಿನ ಸಾಮ್ರಾಜ್ಯ ನೀತಿಯೂ ರಷ್ಯದ ಪ್ರತಿಭಟನಾ ಕ್ರಮವೂ ಸಮ್ಮಿಳಿತವಾಗಿ ಅಮೇರಿಕವನ್ನು ನೇರವಾಗಿ ಸಂಗ್ರಾಮದ ಅಗ್ನಿ ಜ್ವಾಲೆಗೆ ಸಿಲುಕಿಸುವುದು ಖಂಡಿತ ಎಂಬುದಾಗಿಯೂ ಅವರು ಸೂಚಿಸಿರುವರು. ಮೇಲ್ಕಂಡ ಎರಡು ರಾಷ್ಟ್ರಗಳಿಗೂ ಸಧ್ಯದಲ್ಲಿ ಯುದ್ಧವು ಬೇಕಿಲ್ಲ ಆದರೂ ಅವುಗಳ ವರ್ತನೆಯು ಯುದ್ಧದ ಕಡೆಗೇ ಸೆಳೆಯುತ್ತಿದೆ ಎಂಬುದಾಗಿಯೂ ಅವರು ಹೇಳಿರುವರು

ರಾಜ್ಯಾಂಗ ರಚನಾ ಸಮಿತಿ

ಭಾರತ ರಾಜ್ಯಾಂಗ ರಚನಾ ಸಮಿತಿಯು ಅಕ್ಟೋಬರ್ ೨೩ ನೇ ತಾರೀಖಿನಿಂದ ಕೆಲಸ ಮಾಡಲು ಆರಂಭಿಸುವುದೆಂದು ವರದಿಯಾಗಿದೆ ಅದೇ ದಿನ ಸಂಯುಕ್ತ ರಾಷ್ಟ್ರಗಳ ಸಂಘದಲ್ಲಿ ದಕ್ಷಿಣ ಆಫ್ರಿಕದ ಭಾರತೀಯರ ಪ್ರಶ್ನೆಯೂ ಸಹ ಚರ್ಚೆಗೆ ಬರಲಿದೆ.

ರಷ್ಯವು ಯುದ್ಧಕ್ಕೆ ಸಿದ್ಧವಾಗುತ್ತಿದೆಯೇ

ಜರ್ಮನಿಯಲ್ಲಿ ರಷ್ಯನರು ಆಕ್ರಮಿಸಿಕೊಂಡಿರುವ ಪ್ರದೇಶಗಳಲ್ಲಿ ಕೆಂಪು ಸೈನ್ಯದವರು ಕಳೆದ ಎರಡು ತಿಂಗಳಿಂದಲೂ ಯುದ್ಧ ಸಾಮಗ್ರಿಗಳನ್ನು ಸಿದ್ಧಗೊಳಿಸುತ್ತಿರುವರೆಂಬ ಬಗ್ಗೆ ಲಿಖಿತ ಮೂಲಕವಾದ ರಾಜವಾರ್ತೆ ದೊರೆತಿರುವುದಾಗಿ ವರದಿಯಾಗಿದೆ.

ಮಹಿಳೆಯರಿಗೆ ಸೈನ್ಯ ಶಿಕ್ಷಣ

ಝಾನ್ಸಿ ರಾಣಿ ಸೇನೆಯ ಸ್ಮಾರಕಾರ್ಥವಾಗಿ ಒರಿಯೇಂಟಲ್ ಆರ್ಯ ಕನ್ಯಾ ಮಹಾವಿದ್ಯಾಲಯದವರು ಮಹಿಳೆಯರಿಗೆ ಸೈನಿಕ ಮತ್ತು ಶಾರೀರಿಕ ಶಿಕ್ಷಣವನ್ನು ಕೊಡಲು ಒಂದು ಸೈನಿಕ ವಿದ್ಯಾಲಯವನ್ನು ತೆರೆಯಲಿರುವರು ಇದಕ್ಕೆ ಐದು ಲಕ್ಷ ರೂ ಅಂದಾಜಾಗಿದೆ ನಾರಾಯಣಲಾಲ್ ಬನ್ಸಿಲಾಲ್ ಮತ್ತು ನಾನ್ಜಿಭಾಯ್ ಮೆಹತಾರವರು ಇದಕ್ಕೆ ಈಗಾಗಲೇ ಒಂದು ಲಕ್ಷ ರೂ ಕೊಟ್ಟಿರುವರು

...ಷ್ಟ್ರೀಯ ಯುದ್ಧ ಶಿಕ್ಷಣ

...ರನಾಥ ಝಾರವರ ಭಾಷಣ

ಮೈಸೂರು ೧೪

... ಸಾಯಂಕಾಲ ಮಹಾರಾಜಾ ಕಾ...ಲ್ಲಿ ಅಲಹಾಬಾದ್ ವಿಶ್ವವಿದ್ಯಾನಿಲ...ಸ್ಥಾನಪತಿಗಳಾದ ಡಾ॥ ಅಮರನಾಥ...ವರು " ರಾಷ್ಟ್ರೀಯ ಯುದ್ಧ ವಿದ್ಯಾ..." ದ ವಿಚಾರವಾಗಿ ಭಾಷಣ ಮಾಡಿ... ಸಂಯುಕ್ತ ರಾಷ್ಟ್ರಗಳ ಮತ್ತು ಕೆ...ಲ್ಲಿನ ಯುದ್ಧ ಶಿಕ್ಷಣ ಕ್ರಮವನ್ನು...ದರು. ಅಮೇರಿಕಾ ಮತ್ತು ಬ್ರಿಟಿ...ಲಿಟರಿ ಶಿಕ್ಷಣ ಕ್ರಮಗಳಿಗೆ ಬಹು...ವುಂಟು. ಅಮೇರಿಕದಲ್ಲಿ ವಿದ್ಯಾರ್ಥಿ...ಭೂ, ಜಲ, ಮತ್ತು ವಿಮಾನ ಶಿಕ್ಷ...ಕಡ್ಡಾಯವಾಗಿ ಕೊಡಲಾಗುತ್ತಿ...ದರಿಂದ ಯುದ್ಧ ಕಾಲದಲ್ಲಿ ಈ...ಸೇವೆಗಳಿಗೂ ನಿಕಟವಾದ ಸಂಪ...ತ್ತು ಶತ್ರುಗಳ ಮೇಲೆ ವಿಜಯವನ್ನು...ಗಳಿಸಿರುವುದೇ ಮುಖ್ಯ ದೃಷ್ಟಾಂತವಾ...ಈ ಶಿಕ್ಷಣ ಕ್ರಮವು ಬ್ರಿಟಿಷರಲ್ಲಿರದೆ...ರಣ ಭೂ, ಜಲ, ವಿಮಾನ ಪಡೆಗ...ಸಂಪರ್ಕಗಳಿಲ್ಲದೆ ಪೌರ್ವಾತ್ಯ ಪ್ರದೇ...ಬ್ರಿಟಿಷರಿಗೆ ಪರಾಜಯವುಂಟಾ...

...ತದಲ್ಲಿ ಯುದ್ಧ ವಿದ್ಯಾಲಯವನ್ನು...ವುದು ಯುದ್ಧಾನಂತರದ ಕಾರ್ಯ...ಗಳಲ್ಲಿ ಮೊದಲನೆಯದು. ಭಾರತ...ಸ್ಥಾಪನೆಯಾಗಲಿರುವ ವಿದ್ಯಾಲಯದ...ಹೂತರವಾಗಿ ಅಮೇರಿಕಾ ಕೆನಡಾ ಶಿಕ್ಷ...ಮವನ್ನು ಅನುಸರಿಸಿ, ಭೂ, ಜಲ,...ನ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ...ನಂತೆ ಏರ್ಪಾಡಾಗಿದೆ

...ನಗರದಲ್ಲಿ ಈ ವಿದ್ಯಾಲಯವು...ಪನಾಗುವುದು. ಮೊದಲು ೬೬೦...ರ್ಥಿಗಳನ್ನು ಸೇರಿಸಲಾಗುವುದು...ಮವಾರು ಭಾವನೆಗಳನ್ನು ದೂರ...ಅರ್ಹತೆಯ ದೃಷ್ಟಿಯನ್ನೇ ಗಮ...ವಿದ್ಯಾರ್ಥಿಗಳನ್ನು ಸೇರಿಸಲಾಗುವುದು....ದ ಹಿರಿಮೆಯು ಆದರ ಭೂ, ಜಲ,...ನ ಸೈನ್ಯ ಬಲದ ಮೇಲೆ ಇರಬೇಕಾ...ರಿಂದ ವಿದ್ಯಾರ್ಥಿಗಳಿಗೆ ತಕ್ಕ ಶಿಕ್ಷಣವನ್ನು ಕೊಡಲು ಸಕಲ ಏರ್ಪಾಡುಗ...ತ್ತಿವೆ ಭಾರತದ ಸೇವೆಯನ್ನು ಮಾ...ಡಪೇಕ್ಷೆಯುಳ್ಳ ಯುವಕರು ಈ ಅವ...ನ್ನು ಸದುಪಯೋಗಿಸಿಕೊಂಡು, ...ದೇಶದ ಅಭ್ಯುದಯಕ್ಕೆ ನೆರವಾಗುವ...ಭಾಷಣಕಾರರು ಆಶಿಸಿದರು.

...ೀ ಯಜ್ಞ ಮಹಾ ಸ್ವಾಹಾಕಾರ

...ಬೇರಿ ೨೬-೯-೨೨ ನೇ...ರುವ ಶ್ರೀ ರಾಜರಾಜೇಶ್ವರೀ ಸ...ದಲ್ಲಿ ಮಾಮೂಲಿನಂತೆ ಶರನ್ನವ...ಪ್ರಯುಕ್ತ ಅಶ್ವಯುಜ ಶುದ್ಧ ...ಮಹಾ ಪುನಶ್ಚರಣೆಗಳೂ,...ಗಳೂ ದಶಮಿಯ ವರೆಗೆ ನಡೆದು,...ದಿನ ಶ್ರೀ ದೇವೀ ಯಜ್ಞವೂ,...ದಿನ ಪೂರ್ಣಾಹುತಿಯೂ ನ...ವೆ. ಭಕ್ತಾದಿಗಳು ಯಥಾ ಶಕ್ತಿ...ಶ್ರೀ ದೇವೀ ಸೇವೆಗೆ ಪಾತ್ರರಾ...ಕೋರಲಾಗಿದೆ

...ಯ ಬೆಳೆಯ ಭರವಸೆ

...ರ್ ತಿಂಗಳಿನ ಎರಡನೇ ಭಾಗ...ಕಪ್ಪಿದ್ದರೆ ಮುಂದಿನ ಬೆಳೆಗಳು...ವಾಗಿ ಆಗಬಹುದೆಂದು ಹಿಂದೂ...ಸ್ಥಾನ್ ಸಿರೀಸ್ಸನೆಯ ವರದಿಯು...ವೆ ಬಂಗಾಳದಲ್ಲಿ ಮಾಮೂಲಿನಂ...ಬರುವುದೆಂದು ಅಂದಾಜಾಗಿದೆ

ಸಾಧ್ವಿ

ತಾ॥ ೧೪-೯-೪೬ ಶನಿವಾರ

ಪ್ರಜಾಭಿಪ್ರಾಯಕ್ಕೆ ಮನ್ನಣೆ ಕೊಡಬೇಕು

ರಾಜ್ಯಾಂಗ ಸಮಿತಿಗೆ ಮೈಸೂರಿನ ಪ್ರತಿನಿಧಿಗಳನ್ನು ಕಳುಹಿಸುವ ವಿಚಾರದಲ್ಲಿ ಈಗಾಗಲೇ ಸಾರ್ವಜನಿಕಾಭಿಪ್ರಾಯವು ಅನೇಕ ಬಗೆಯಲ್ಲಿ ವ್ಯಕ್ತವಾಗಿದೆ. ನಿನ್ನೆ ಸಂಸ್ಥಾನದಲ್ಲೆಲ್ಲಾ ನಡೆದ ಬಹಿರಂಗ ಸಭೆಗಳೂ ಮೆರವಣಿಗೆಗಳೂ ಜನಾಭಿಪ್ರಾಯದ ಪರಮಾವಧಿಯನ್ನು ಪ್ರತಿಬಿಂಬಿಸುತ್ತವೆ. ಮೈಸೂರು ಕಾಂಗ್ರೆಸ್ಸಿನ ಕೋರಿಕೆಯಂತೆ ದೊಡ್ಡದಾಗಿ ಇಡೀ ದಿನವೆಲ್ಲಾ ಕಾರ್ಯಕ್ರಮಗಳು ಜರುಗಿವೆ. ಬೆಂಗಳೂರು, ಮೈಸೂರುಗಳಲ್ಲಿ ವಿಶೇಷ ರೀತಿಯ ಪ್ರದರ್ಶನಗಳು ನಡೆದಿವೆ. ಇವುಗಳಲ್ಲಿ ಕಾಂಗ್ರೆಸ್ಸಿನವರು ಮಾತ್ರವೇ ಅಲ್ಲದೆ ಇತರ ಪ್ರಜೆಗಳೂ ಭಾಗವಹಿಸಿರುವರು. ಪ್ರಚಲಿತವಾದ ಈ ಪ್ರಮುಖ್ಯ ವಿಷಯದಲ್ಲಿ ಮೈಸೂರಿನ ಪ್ರಜೆಗಳ ಆಕಾಂಕ್ಷೆಯೇನೆಂಬುದನ್ನು ದಿಗಂತ ವಿಶ್ರಾಂತವಾಗುವಂತೆ ತೋರ್ಪಡಿಸಿರುವರು.

ಸಂಸ್ಥಾನದ ಶಾಶ್ವತ ಹಿತಸಾಧನೆಗೆ ಸಂಬಂಧಪಟ್ಟ ಈ ವಿಷಯದಲ್ಲಿ ಪ್ರಜೆಗಳ ಇಂಗಿತಕ್ಕೆ ಪರಿಪೂರ್ಣವಾದ ಮನ್ನಣೆಯು ದೊರೆಯುವುದು ಅತ್ಯಾವಶ್ಯಕ. ಆಡಳಿತದ ದಿನಚರಿಯ ವ್ಯವಹಾರಗಳಲ್ಲಿ ಪ್ರಜೆಗಳಿಗೂ ಪ್ರಭುತ್ವದವರಿಗೂ ಸಣ್ಣ ಪುಟ್ಟ ಭಿನ್ನಾಭಿಪ್ರಾಯಗಳಿದ್ದರೆ ಅದರಿಂದ ವಿಶೇಷ ಬಾಧಕವಿಲ್ಲ. ಆದರೆ ಮೂಲಭೂತ ವಿಚಾರಗಳಲ್ಲಿ ಈ ಬಗೆಯ ಭಿನ್ನತೆಯು ಕಾಣಬರುವುದು ಹಿತಕರವಲ್ಲ. ಅದರಲ್ಲೂ ಹೊಸದೊಂದು ರಾಷ್ಟ್ರ ಸಂಘಟನೆಯಲ್ಲಿ ಸನ್ನಿಹಿತವಾಗಬೇಕಾದ ಸಂದರ್ಭದಲ್ಲಿ ಪ್ರಜೆಗಳಿಗೂ ಪ್ರಭುತ್ವದವರಿಗೂ ಐಕಮತ್ಯವು ಇರಬೇಕಾದುದು ಬಹಳ ಅವಶ್ಯಕ. ಮುಂದೆ ಮೈಸೂರಿಗೂ ಭರತಖಂಡಕ್ಕೂ ಶಾಶ್ವತವಾಗಿ ಇರಬೇಕಾದ ಸಂಬಂಧದ ವಿಚಾರಗಳು ಇತ್ಯರ್ಥವಾಗಲಿವೆ.

ಈ ಸಮಯದಲ್ಲಿ ಮೈಸೂರಿನವರು ಅತ್ಯಂತ ದೂರ ದರ್ಶಿತ್ವದಿಂದಲೂ, ರಾಜನೀತಿ ನೈಪುಣ್ಯದಿಂದಲೂ ವರ್ತಿಸಬೇಕಾಗಿದೆ. ಇಡೀ ಭರತಖಂಡದ ಸಾರ್ವಭೌಮತ್ವಕ್ಕೆ ಧಕ್ಕೆ ತರದಂತೆಯೂ ಮೈಸೂರು ಸಂಸ್ಥಾನದ ಹಿತಸಾಧನೆಗೆ ವಿರೋಧವಿಲ್ಲದಂತೆಯೂ ವರ್ತಿಸಬೇಕಾಗಿದೆ. ದೇಶ ಪ್ರೇಮಿಗಳೂ ರಾಜಕಾರಣ ಪಟುಗಳೂ ಆದ ಮೈಸೂರಿನವರೇ ಈ ಕಾರ್ಯದಲ್ಲಿ ಕೊಡಗುವುದು ಉಚಿತವಾಗಿದೆ. ಇತರರಿಂದ ಇದು ಸಾಧ್ಯವಿಲ್ಲ ಮತ್ತು ಪ್ರಜೆಗಳಿಂದ ಚುನಾಯಿತರಾದ ಪ್ರತಿನಿಧಿಗಳೇ ಈ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಬಲ್ಲರು.

ನೆರೆಯಲ್ಲಿರುವ ಬ್ರಿಟಿಷ್ ಪ್ರಾಂತದ ಪ್ರಜೆಗಳಿಗೆ ಇರುವ ಅವಕಾಶವನ್ನು ಸಂಸ್ಥಾನದವರಿಗೆ ಅಲ್ಲಗಳೆಯುವುದೇಕೆ? ಸಂಸ್ಥಾನಗಳ ಪ್ರಜೆಗಳಾಗಿರುವುದೇ ಅವರ ಅಪರಾಧವೇ? ಬ್ರಿಟಿಷರು ಹಿಂದೂ ಸ್ಥಾನವನ್ನು ಬಿಟ್ಟುಹೋಗುವಾಗ ಅಧಿಕಾರವನ್ನು ಪ್ರಜೆಗಳಿಗೆ ವರ್ಗಾಯಿಸಿ ಹೋಗುವರೇ ವಿನಾ ಯಾವುದೊಂದು ಸಂಕುಚಿತ ಪಕ್ಷ ಅಥವಾ ಅಧಿಕಾರ ವರ್ಗದವರಿಗೆ ಅದನ್ನು ವಹಿಸಿ ಕೊಡುವುದಿಲ್ಲ. ಹಾಗೆಯೇ ಸಂಸ್ಥಾನಗಳಲ್ಲಿರುವ ಪ್ರಜೆಗಳಿಗೂ ತಮ್ಮ ದೇಶದ ಆಡಳಿತದ ಮೇಲಿನ ಹಕ್ಕೋಟಿಯು ವರ್ಗಾಯಿಸಲ್ಪಡಬೇಕು. ಭರತ ಖಂಡದ ನಲವತ್ತು ಕೋಟಿ ಪ್ರಜೆಗಳಲ್ಲಿ ಇವರೂ ಸೇರಿರುವರು. ಅವರಿಗೆ ದೊರೆತ ರಾಜಕೀಯ ಸೌಲಭ್ಯಗಳು ಇವರಿಗೂ ದೊರೆಯಬೇಕು.

ಇಡೀ ಭರತ ಖಂಡಕ್ಕೆಲ್ಲಾ ರಚನೆಯಾಗಲಿರುವ ರಾಜ್ಯಾಂಗ ವ್ಯವಸ್ಥೆಯಲ್ಲಿ ದೇಶದ ಒಂದೊಂದು ಭಾಗಕ್ಕೆ ಒಂದೊಂದು ರೀತಿಯ ಏರ್ಪಾಡು ಆಗುವುದು ಸಾಧ್ಯವಿಲ್ಲ. ಆದುದರಿಂದ ಬ್ರಿಟಿಷ್ ಇಂಡಿಯದಲ್ಲಿ ಅನುಸರಿಸುವ ಮಾರ್ಗಗಳನ್ನೇ ಸಂಸ್ಥಾನಗಳಲ್ಲಿಯೂ ಅನುಸರಿಸಬೇಕು. ನಿನ್ನೆ ಸಂಸ್ಥಾನದ ಪ್ರಜೆಗಳು ನಡೆಸಿದ ಪ್ರದರ್ಶನದ ಉದ್ದೇಶವೇ ಇದು. ಇದಕ್ಕೆ ಪ್ರಭುತ್ವದವರು ಪೂರ್ಣವಾದ ಪುರಸ್ಕಾರವನ್ನೀಯಲೆಂದು ಹಾರೈಸುತ್ತೇವೆ.

ಸಹಕಾರ ಸಮಾಚಾರ

ರಾಜಧಾನಿಯ ಪ್ರಸಿದ್ಧ ವಕೀಲರೂ ಮತ್ತು ಸಹಕಾರ ಸಂಸ್ಥೆಗಳ ಪುರೋಭಿವೃದ್ಧಿಯಲ್ಲಿ ಆಸಕ್ತರೂ ಆದ ಶ್ರೀ ವೈ. ಶ್ರೀನಿವಾಸಯ್ಯನವರ ಸಂಪಾದಕತ್ವದಲ್ಲಿ ಹೊರಟಿರುವ "ಸಹಕಾರ ಸಮಾಚಾರ" ಎಂಬ ಪಕ್ಷ ಪತ್ರಿಕೆಯನ್ನು ನಾವು ಆದರದಿಂದ ಸ್ವೀಕರಿಸಿದ್ದೇವೆ. ಇದರಲ್ಲಿ ಸಹಕಾರ ತತ್ವದ ಮೇಲೆ ಬಹಳ ಉಪಯುಕ್ತವಾದ ಲೇಖನಗಳಿವೆ. ಈ ಪತ್ರಿಕೆಯು ಸಹಕಾರಾಭಿವೃದ್ಧಿಗೆ ಸಹಾಯಕವಾಗಲೆಂದು ಹಾರೈಸುತ್ತೇವೆ.

ಕೃಷ್ಣರಾಜೇಂದ್ರ ಕೋ-ಆಪರೇಟಿವ್ ಸೊಸೈಟಿ

ರಾಜಧಾನಿಯ ಕಲ್ಲೆ ಮೊಹಲ್ಲಾದಲ್ಲಿರುವ ಮೇಲ್ಕಂಡ ಸಂಸ್ಥೆಯು ಅನೇಕ ವರ್ಷಗಳಿಂದ ಬಡ ನಿವಾಸಿಗಳಿಗೆ ಸಲ್ಲಿಸುತ್ತಿರುವ ಸೇವೆಯು ಪ್ರಶಂಸನೀಯವಾಗಿದೆ. ಪ್ರತಿ ವರ್ಷವೂ ೩ ಲಕ್ಷಕ್ಕೆ ಮೇಲ್ಪಟ್ಟು ಲೇವಾದೇವಿ ನಡೆಯುತ್ತಿದೆ. ಬಡಜನರಿಗೆ ಇದರಿಂದ ವಿಶೇಷ ಪ್ರಯೋಜನವಾಗುತ್ತಿದೆ. ಸದಸ್ಯರು ಸಕಾಲದಲ್ಲಿ ತಮ್ಮ ಲೇವಾದೇವಿಗಳನ್ನು ಫೈಸಲ್ ಮಾಡುತ್ತಿರುವುದರಿಂದ ಸುಸ್ತಿಬಾಕಿಯು ಅತ್ಯಂತ ಕಡಿಮೆ ಪ್ರಮಾಣದಲ್ಲಿರುತ್ತದೆ. ಸಂಘದ ನೌಕರರಿಗೂ ಮತ್ತು ಸದಸ್ಯರಿಗೂ ಸುಲಭ ದರದಲ್ಲಿ ಬಾಡಿಗೆಗೆ ಮನೆಗಳನ್ನು ಕಟ್ಟಿಸಿಕೊಡಲು ೫೦೦೦೦ರೂ ಮಂಜೂರಾಗಿರುತ್ತದೆ. ನೌಕರರಿಗೆಲ್ಲಾ ಒಂದು ತಿಂಗಳ ಸಂಬಳವನ್ನು ವಿಶೇಷ ಬೋನಸ್ಸಾಗಿ ಮಂಜೂರು ಮಾಡಲಾಗಿದೆ. ಬಟ್ಟೆ ಅಭಾವವನ್ನು ಪರಿಹರಿಸಲು ಸಂಘದಲ್ಲಿ ಬಟ್ಟೆಗಳನ್ನು ಕೊಂಡು ಮಾರುವಂತೆ ತೀರ್ಮಾನವಾಗಿರುತ್ತದೆ. ಸಂಘದ ಏಳಿಗೆಗಾಗಿ ವಿಶೇಷ ಶ್ರಮ ವಹಿಸಿರುವ ಅಧ್ಯಕ್ಷರಾದ ಶ್ರೀ ಎಸ್. ಕೃಷ್ಣಸ್ವಾಮಿರಾವ್, ಉಪಾಧ್ಯಕ್ಷರಾದ ಶ್ರೀ ಎಂ. ಎಸ್. ರಾಮಸ್ವಾಮಿ, ಕಾರ್ಯದರ್ಶಿಯಾಗಿದ್ದ ಶ್ರೀ ಎಸ್. ಸಿ. ನಂಜರಾಜೇ ಅರಸಿನವರ ಛಾಯಾಚಿತ್ರಗಳನ್ನು ಅನಾವರಣ ಮಾಡಲು ಏರ್ಪಾಡುಗಳಾಗುತ್ತಿವೆ.

ಖಂಡನಾ ಸಭೆ

ಸ್ವಂ.ಸು.] ಶ್ರೀರಂಗಪಟ್ಟಣ

ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸೂಚನೆಯಂತೆ ನಿನ್ನೆ ಇಲ್ಲಿನ ತಾಲ್ಲೂಕು ಕಾಂಗ್ರೆಸ್ ಸಮಿತಿಯವರು ಡಾ॥ ಸಿ. ಬಂಟೀಗೌಡರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಭಾರತ ರಾಜ್ಯಾಂಗ ಸಮಿತಿಗೆ ಮೈಸೂರಿನ ಸರಕಾರಿ ಚುನಾಯಿತ ಪ್ರತಿನಿಧಿಗಳನ್ನೇ ಕಳುಹಿಸಬೇಕೆಂದೂ ಈ ವಿಷಯದಲ್ಲಿ ಈಗಿನ ದಿವಾನರ ಹೇಳಿಕೆಗಳನ್ನು ಖಂಡಿಸುವುದಾಗಿಯೂ ನಿರ್ಣಯಗಳನ್ನು ಮಾಡಿದರು. ಕಾಶ್ಮೀರ ಸಂಸ್ಥಾನದ ನಾಯಕರಾದ ಷೇಕ್ ಅಬ್ದುಲ್ಲರವರಿಗೆ ವಿಧಿಸಲಾಗಿರುವ ಶಿಕ್ಷೆಯನ್ನೂ ಸಹ ಖಂಡಿಸಿದುದಲ್ಲದೆ ಕೂಡಲೇ ಅವರ ಬಿಡುಗಡೆಯಾಗಿ ಅವರ ಇಷ್ಟಾರ್ಥವು ಕೈಗೂಡಲೆಂದೂ ಸಹ ಹಾರೈಸುವ ನಿರ್ಣಯವಾಯಿತು. ಡಾ॥ ಮತ್ತು ಶ್ರೀ ಎ. ಪಿ. ಬಂದಿಗೌಡರುಗಳು ಭಾಷಣ ಮಾಡಿದರು.

Edited, printed and published by A. R. Nagarajan at the Sadhvi Press D Subbiah Road, Mysore.

ಖಂಡನಾ ಸಭೆ

ಸ್ವಂ.ಸು.] ಚಾಮರಾಜನಗರ

ಇಲ್ಲಿನ ಕಾಂಗ್ರೆಸ್ ಕೆಲಸಗಾರರು ಶ್ರೀ ಎಸ್. ಪುಟ್ಟನಂಜಪ್ಪನವರ ಅಧ್ಯಕ್ಷತೆಯಲ್ಲಿ ಬೆಳಿಗ್ಗೆ ಧ್ವಜಾರೋಹಣವನ್ನೂ, ಸಾಯಂಕಾಲ ಬಹಿರಂಗ ಸಭೆಯನ್ನೂ ನಡೆಸಿದರು. ಮೈಸೂರಿನಿಂದ ರಾಜ್ಯಾಂಗ ರಚನಾ ಸಭೆಗೆ ಪ್ರತಿನಿಧಿಗಳನ್ನು ಕಳುಹಿಸುವ ವಿಚಾರದಲ್ಲಿ ಮೈಸೂರಿನ ದಿವಾನರು ಅನುಸರಿಸುತ್ತಿರುವ ರೀತಿ ನೀತಿಗಳನ್ನು ಖಂಡಿಸಲಾಯಿತು. ಪ್ರಜೆಗಳಿಂದ ಚುನಾಯಿತರಾದ ಪ್ರತಿನಿಧಿಗಳನ್ನೇ ಕಳುಹಿಸಬೇಕೆಂಬ ನಿರ್ಣಯವನ್ನು ಅಂಗೀಕರಿಸಲ್ಪಟ್ಟಿತು. ಕಾಶ್ಮೀರದ ಷೇಕ್ ಅಬ್ದುಲ್ಲರವರಿಗೆ ವಿಧಿಸಿರುವ ಶಿಕ್ಷೆಯನ್ನು ಖಂಡಿಸಿ ಅವರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಒತ್ತಾಯಪಡಿಸುವ ನಿರ್ಣಯವನ್ನೂ ಅಂಗೀಕರಿಸಲಾಯಿತು.

ರೇಡಿಯೋ ಆರಂಭ

ಮೈಸೂರು ೧೧ ವಾಣಿವಿಲಾಸ ಪುರದಲ್ಲಿರುವ ಚೆಲುವಾಂಬಾ ಪಾರ್ಕಿನಲ್ಲಿ ಇಂದಿನಿಂದ ಹೊಸದಾಗಿ ರೇಡಿಯೋ ಯಂತ್ರವನ್ನು ಇಡಲಾಗುವುದು. ಈ ಸಂಜೆ ೫-೩೦ ಘಂಟೆಗೆ ಪೌರ ಸಭಾಧ್ಯಕ್ಷರಾದ ಶ್ರೀ ರಾಮಚಂದ್ರರಾವ್ ಬಾಂಭೋರೆಯವರು ಇದರ ಆರಂಭೋತ್ಸವವನ್ನು ನೆರವೇರಿಸುವರು.

ಹರಿಕಥೆ

ಹೊಸ ಸಂತೇಪೇಟೆಯಲ್ಲಿರುವ ಶ್ರೀ॥ ಡಿ. ಪುಟ್ಟಯ್ಯನವರ ಮನೆಯಲ್ಲಿ ನಾಳೆ ಸಂಜೆ ಶ್ರೀ॥ ಎಚ್. ಎನ್. ಶಿವಲಿಂಗಸ್ವಾಮಿ ಯವರಿಂದ ಹೇಮರೆಡ್ಡಿ ಮಲ್ಲಮ್ಮ ಎಂಬ ಕಥೆಯು ನಡೆಸಲ್ಪಡುತ್ತದೆ. ಸರ್ವರಿಗೂ ಸ್ವಾಗತವಿದೆ.

ವಿದ್ಯಾ ಗಣಪತಿ ಮಂಗಳಾರತಿ

ಕುಂಬಾರಕೊಪ್ಪಲು ವಿದ್ಯಾರ್ಥಿ ನಿಲಯದಲ್ಲಿ ತಾ॥ ೧೬-೯-೪೬ ರ ಸಾಯಂಕಾಲ ೬ ಗಂಟೆಗೆ ಹುಜೂರ್ ಸೆಕ್ರೆಟರಿ ಶ್ರೀ ಟಿ ರಾಮಯ್ಯನವರ ಅಧ್ಯಕ್ಷತೆಯಲ್ಲಿ ಶ್ರೀ ವಿದ್ಯಾ ಗಣಪತಿ ಮಹಾಮಂಗಳಾರತಿಯು ಆಸ್ಥಾನ ವಿದ್ವಾನ್ ಸಂಗೀತರತ್ನ ಶ್ರೀ ಟಿ. ಚೌಡಯ್ಯನವರ ಪಿಟೀಲು, ವಿದ್ವಾನ್ ಶ್ರೀ ರಂಗನಾಥರವರ ಮೃದಂಗದೊಡನೆ ಜರುಗುತ್ತದೆ.

FOR SALE

One Victoria cart with a pony.

One Dog-cart with an English-breed horse.

For particulars:-

NEO FURNITURE CO.,

Irwin Road ... Mysore.

V. A. M.

OPERA TALKIES

ತಾ॥ 14-9-46ರಿಂದ

ಎರಡನೆಯ ವಾರ

ನನ್ನ ಮಗ

(ತಮಿಳು)

* ಯು. ಆರ್. ಜೀವರತ್ನಂ,

* ಎಸ್. ಕೃಷ್ಣಮೂರ್ತಿ,

* ಬಾಲಸುಬ್ರಹ್ಮಣ್ಯಂ * ಬೇಬಿಕಮಲ

ನಂಜನಗೂಡು ಟವುನ್ ಮುನಿಸಿಪಲ್ ಪ್ರೆಸಿಡೆಂಟರವರ ಆಫೀಸಿನಿಂದಾ

ತಾ॥ 8-9-46

ನೋಟಿಫಿಕೇಷನ್

ನಂಜನಗೂಡು ಟವುನಲ್ಲಿ ಕೋತಿಗಳ ಹಾವಳಿಯು ವಿಪರೀತವಾಗಿ ಉಂಟಾಗಿರುವುದರಿಂದ ಸದರಿ ಕೋತಿಗಳನ್ನು ಹಿಡಿದು ದೂರ ಪ್ರದೇಶಕ್ಕೆ ಸಾಗಿಸತಕ್ಕವರು ಪ್ರೆಸಿಡೆಂಟರವರ ಬಳಿ ಬಂದು ಹಾಜರಾಗುವುದು

ಎ. ಪಿ. ಕೃಷ್ಣಯ್ಯ,
ಪ್ರೆಸಿಡೆಂಟ್.

ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಮೈಸೂರು.

ಡೈರೆಕ್ಟರುಗಳ ಚುನಾವಣೆ

15-9-46

-: ಸ್ಥಳ :-

ಮರಿಮಲ್ಲಪ್ಪನವರ ಹೈಸ್ಕೂಲ್

ನಂ. 33

ಜಿ. ಆರ್. ಶಾಮರಾವ್

ಇವರಿಗೆ ನಿಮ್ಮ ಅಮೂಲ್ಯವಾದ ಒಂದು ಓಟನ್ನು ಕೊಡಬೇಕಾಗಿ ಪ್ರಾರ್ಥನೆ

RAJKAMAL, MYSORE.

'BURN'EM UP BARNES'

A thrilling Serial from 14-9-46 for 5 days.

'ಬರ್ನ್ ದೆಂ ಅಪ್ ಬಾರ್ನ್ಸ್'

ರೋಮಾಂಚಕಾರಿ ಪೂರ್ತಿ ಸೀರಿಯಲ್.

14-9-46 ರಿಂದ ೫ ದಿನಗಳು.

13-9-46ರಿಂದ 4 ದಿನಗಳು ಪ್ರಾತಃಕಾಲ 10-30 ಕ್ಕೆ

'ಮಗ' ಭೂಮಿಕೆ:- * ದೇವಿಕಾರಾಣಿ, * ಮಮ್ತಾಜ್ ಅಲಿ

ಫೋ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಭಾನುವಾರ ೧೫—೯—೪೭ [ಸಂಚಿಕೆ ೪೪

ಕಾಶ್ಮೀರದ ಗಡಿಯಲ್ಲಿ ರಷ್ಯದ ಸೇನೆಯೋ?

ರಾಗಿಗಾಗಿ ಕಾರ್ಮಿಕರ ಮೆರವಣಿಗೆ

[illegible] ಬೆಂಗಳೂರು ೧೪ ಮುಸುಕಿನ ಜೋಳವನ್ನು ಕೊಡುತ್ತಿರು [illegible]ಕ್ಕಾಗಿ ವಿರೋಧವನ್ನು ಸೂಚಿಸಲು [illegible] ಸಂಜೆ ಇಲ್ಲಿನ ಕಾರ್ಮಿಕರೇ ಮೊದ[illegible] ಜನಗಳ ಮೆರವಣಿಗೆಯೊಂದು ನಡೆ[illegible] "ಅಕ್ಕಿ, ರಾಗಿ ಕೊಡಿ;" "ಈ [illegible] ಸರ್ಕಾರ ಬಲಿ [illegible] ಮುಸುಕಿನ [illegible]ವನ್ನು ತಿನ್ನಲು ನಾವು ಅವೇಂದ[illegible] ದನಗಳಲ್ಲ" ಎಂಬುದಾಗಿ ಬರೆದಿದ್ದ [illegible]ರ್ಡುಗಳ ಸಹಿತ ಘೋಷಣೆಗಳನ್ನು [illegible]ತ್ತಾ ಮುಖ್ಯ ಬೀದಿಗಳಲ್ಲಿ ಹೊರಟ [illegible] ಯಾವ ಅಡ್ಡಿಯೂ ಇರಲಿಲ್ಲ.

ಪಶುವೈದ್ಯ ಶಿಕ್ಷಣ

ತುಮಕೂರು, ಮಂಡ್ಯ, ಶಿವಮೊಗ್ಗ [illegible]ಗಳಲ್ಲಿ ಪಶುವೈದ್ಯದ ಕಾಂಪೌಂಡ[illegible]ಗಳ ಶಿಕ್ಷಣಕ್ಕಾಗಿ ಕೇಂದ್ರಗಳನ್ನು ತೆರೆ[illegible]ಲು ಸರ್ಕಾರದವರು ಆಜ್ಞೆ ಮಾಡಿ [illegible] ರೂ.ಗಳನ್ನು ಮಂಜೂರ್ ಮಾಡಿರು[illegible]

ಕೇಂದ್ರಾಧಿಕಾರಿಗಳ ಆಗಮನ

ಭಾರತ ಸರ್ಕಾರದ ರೆವಿನ್ಯೂ ಬೋರ್ಡ [illegible] ಸಂಬಂಧದ ಸಲಹೆ[illegible] ಮಿ|| [illegible]ರವರು ನಾಳಿದ್ದು [illegible]ಗಳೂರಿಗೆ ಬಂದು ಇಲ್ಲಿನ ಅಧಿಕಾರಿಗ[illegible]ಡನೆ ಸಮಾಲೋಚನೆ ನಡೆಸಲಿದ್ದಾರೆ.

ನಿವೃತ್ತ ಛೀ ಸೆಕ್ರೆಟರಿ ಶ್ರೀ [illegible] ನಾ[illegible]ಸ್ವಾಮಿ ನಾಯ್ಡು ರವರ ಪತ್ನಿ ಶ್ರೀ [illegible] ಸಿ. ಅಂಡಾಳಮ್ಮನವರನ್ನು ಸರ್ಕಾರ[illegible] ಜೀವ ವಿಮಾ ಸಮಿತಿಗೆ ನಾಮಕರಣ [illegible]ಡಲಾಗಿದೆ.

ಶ್ರೀ ಅಪ್ಪಾಜಿ ಗೌಡರು ಮಂತ್ರಿಗಳಾ[illegible] ಮೇಲೆ ದಕ್ಷತೆಯ ಇಲಾಖೆಗೆ [illegible] ಅಧಿಕಾರಿಗಳನ್ನು ಸರ್ಕಾರದವರು ನೇ[illegible]ಮಿಸುವುದಿಲ್ಲ. ಆ ಇಲಾಖೆಯು ಶ್ರೀ [illegible]ರ ಅಧೀನದಲ್ಲಿಯೇ ಇರತಕ್ಕದ್ದೆಂದು [illegible]ಯಾಗಿದೆ.

ರೆವಿನ್ಯೂ ಕಮೀಷನರ ಅಸಿಸ್ಟೆಂಟರಾ[illegible]ವ ಶ್ರೀ ಬಿ ಎಸ್ ನಂಜುಂಡೇಗೌಡ[illegible] ಮೈಸೂರಿನ ನವರಾತ್ರಿ ಉತ್ಸವಕ್ಕೆ [illegible] ಡ್ಯೂಟಿ ಅಧಿಕಾರಿಗಳನ್ನಾಗಿ ನೇ[illegible]ಲಾಗಿದೆ.

ದಿವಾನರು ವಿಶೇಷ ಕಾರ್ಯಗೌರವ[illegible] ಮೇಲೆ ದೆಹಲಿಗೆ ತೆರಳಲಿರುವುದರಿಂದ, [illegible]ಮೊಗ್ಗದಲ್ಲಿ ನಡೆಯುವ ಪ್ರಾಮಾಧಿಕಾ[illegible] ಸಮ್ಮೇಳನದ ಆರಂಭೋತ್ಸವವನ್ನು [illegible] ಕಮೀಷನರಾದ ಶ್ರೀ ಎಸ್. ನಾ[illegible]ರಾಯರು ನೆರವೇರಿಸುವರು.

ಉದಾರ ದಾನ

ರಾಜಧಾನಿಯ ಭಾವಸಾರ ಕ್ಷತ್ರಿಯ [illegible] ಇನ್ಸ್ಟಿಟ್ಯೂಟಿನ ಕಟ್ಟಡದ [illegible] ಈ ಕೆಳಗೆ ಕಂಡ ಮಹನೀಯರು ಇತ್ತೀ[illegible] ಧನಸಹಾಯ ಮಾಡಿರುತ್ತಾರೆ.—

ಮೈಸೂರಿನ ಶ್ರೀ|| ಬಿ. ಕಾಳೋಜೀ ರಾ[illegible] ರೂ, ವಾಗ್ದಾನ, [illegible] ರಾಯರು [illegible] ರೂ. ವಾಗ್ದಾನ, [illegible] ರಾಯರು ೬೦೦ ರೂ. ವಾಗ್ದಾನ, [illegible]ನ ಸಿ. ಸದಾಶಿವ ರಾಯರು, [illegible] ರೂ. ಪಾವತಿ, ಬ[illegible]ನ ಬಿ. ಲಿಂಗೋಜಿ ರಾಯರು [illegible] ಮೈಸೂರಿನ ಜೆ. ದೋಂಡೋಜಿ [illegible] ಮತ್ತು ಆರ್. ಸಿ. ರಾಜಗೋಪಾಲ [illegible] ರೂ. ಹುಬ್ಬಳ್ಳಿ, ಸಿ. [illegible] ರಾಯರು [illegible] ರೂ. ವಾಗ್ದಾ[illegible] ರೂ. ಪಾವತಿ.

ಕಾಂಗ್ರೆಸ್ ಸಮಿತಿ

[illegible] ನರಸೀಪುರ ೧೪

ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಂ ಎಲ್ ನಂಜರಾಜೇ ಅರಸಿನವರೂ, ಉಪಾಧ್ಯಕ್ಷರಾದ ಶ್ರೀ [illegible] ನಾರಾಯಣ ಪಂಡಿತರೂ; ಇತ್ತೀಚೆಗೆ [illegible] ಭೇಟಿಯಿತ್ತು ಕಾಂಗ್ರೆಸ್ ಕೆಲಸಗಾರರ ಸಭೆ ನಡೆಸಿ ತಾಲ್ಲೂಕು ಕಾಂಗ್ರೆಸ್ ಸಮಿತಿಯನ್ನು ರಚಿಸಿದರು. ಶ್ರೀ ಜಿ. [illegible]ಯ್ಯನವರು ಅಧ್ಯಕ್ಷರಾಗಿಯೂ, ಶ್ರೀ [illegible]ಗೂರು ನಂಜುಂಡಯ್ಯನವರು ಉಪಾಧ್ಯಕ್ಷರಾಗಿಯೂ, ಶ್ರೀ ಪಿ. ಶ್ರೀಕಂಠಸ್ವಾಮಿಯವರು ಕೋಶಾಧ್ಯಕ್ಷರಾಗಿಯೂ, ಶ್ರೀ ಸಿ. ಸಿದ್ದೋಜಿರಾಯರು ಕಾರ್ಯದರ್ಶಿಯಾಗಿಯೂ, ಶ್ರೀ ಕೆ ಕಂಚೀಗೌಡರು ಸಹಾಯಕ ಕಾರ್ಯದರ್ಶಿಯಾಗಿಯೂ, ಶ್ರೀ ಬಿ. ಎಲ್. ಕೃಷ್ಣೋಜಿರಾವ್ ರು ಜಂಟೀ ಕಾರ್ಯದರ್ಶಿಯಾಗಿಯೂ ಚುನಾಯಿಸಲ್ಪಟ್ಟರು. ಮಹಾತ್ಮಾಗಾಂಧಿಯವರಿಗೆ ದೀರ್ಘಾಯುಸ್ಸನ್ನು ಕೋರುವುದು; [illegible] ಸರ್ಕಾರಕ್ಕೆ ಅಭಿನಂದನೆ; [illegible] ಸಮಿತಿಗೆ ಚುನಾಯಿತ ಪ್ರತಿನಿಧಿಗಳನ್ನು ಕಳುಹಿಸಲು ಒತ್ತಾಯ ಮತ್ತು ಬೊಂಬಾಯಿ, ಕಲ್ಕತ್ತ ಮರಂತಗಳಿಗೆ ವಿಷಾದ, ಇವುಗಳನ್ನು ಸೂಚಿಸುವ ನಿರ್ಣಯಗಳಾದುವು.

ಹಿಂದೂ ಮಹಾಸಭೆ

[illegible] ಚಾಮರಾಜನಗರ ೧೩

ಬರುವ ವರ್ಷಕ್ಕೆ ಮೇಲ್ಕಂಡ ಸಭೆಯ ಕಾರ್ಯನಿರ್ವಾಹಕ ಮಂಡಲಿಗೆ ಶ್ರೀಗಳಾದ ಮೂರಿಮುತ್ತ ಶೆಟ್ಟರು ಅಧ್ಯಕ್ಷರಾಗಿಯೂ, ಎನ್. ಶಾಮಣ್ಣನವರು ಪ್ರಧಾನ ಕಾರ್ಯದರ್ಶಿಯಾಗಿಯೂ, ಡಿ. ವಿ. ರಾಜಶೆಟ್ಟರು ಸಹಾಯಕ ಕಾರ್ಯದರ್ಶಿಯಾಗಿಯೂ ಬಿ. ವಿ. ಕೇಶವಶೆಟ್ಟರು ಕೋಶಾಧಿಕಾರಿಗಳಾಗಿಯೂ ಆರಿಸಲ್ಪಟ್ಟಿರುವರು. ಶ್ರೀಗಳಾದ ಭಾಷ್ಯಂಆಚಾರ್ಯ, ಸಿ. ವಿ. ಚಿನ್ನಸ್ವಾಮಿ ರಯ್ಯ, ಟೋಯಿಸ್ ಸುಬ್ಬರಾಮಯ್ಯ ಎಸ್ ಪಿ. ರಾಜಣ್ಣ, ಅಪ್ಪಾಜಿ ಚೆಟ್ಟಿಪ್ಪ ಕೆ. ಮಾಧವರಾಯರು ಮೊದಲಾದವರುಗಳು ಸದಸ್ಯರುಗಳಾಗಿಯೂ ಚುನಾಯಿತರಾಗಿರುವರು.

ಪ್ರೌಢಶಾಲಾ ಸಂಘ

ಕಳೆದ ಶನಿವಾರ ಸಾಯಂಕಾಲ ಅಮ[illegible] ಶ್ರೀ ಪಾಲಪ್ಪನವರ ಅಧ್ಯಕ್ಷತೆಯಲ್ಲಿ ಮಹಾರಾಜಾ ಕಾಲೇಜಿನ ಮನಃಶಾಸ್ತ್ರ ಪ್ರಾಧ್ಯಾಪಕರಾದ ಡಾ|| ಎನ್ ಎಸ್. ನಾರಾಯಣ ಶಾಸ್ತ್ರಿಯವರು ಆರಂಭ ಭಾಷಣ ಮಾಡಿ ವಿದ್ಯಾರ್ಥಿಗಳು ಅರ್ಥವ ಜೀವನದ [illegible]

ಕಾಶ್ಮೀರದ ಬಳಿ ರಷ್ಯನ್ ಸೈನ್ಯ

ರಷ್ಯದ ಸೇನೆಗಳು ಕಾಶ್ಮೀರದ ಸರಹದ್ದಿನಲ್ಲಿ ಸಂಗ್ರಹವಾಗುತ್ತಿವೆಯೆಂಬ ಕೋಲಾಹಲಕರ ಸುದ್ದಿಯು ಲಾಹೋರಿನ ಪ್ರತಾಪ್ ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಶ್ರೀನಗರದಲ್ಲಿರುವ ಮಧ್ಯ ವಿಷಯದ ಜನರ ಮೇಲೆ ಕಾಶ್ಮೀರ ಸರ್ಕಾರವು ಬಲವಾದ ಕಾವಲನ್ನು ಇಟ್ಟಿರುವುದಾಗಿಯೂ ಸಹ ಆ ವರದಿಯು ತಿಳಿಸುತ್ತದೆ. ಕಾಶ್ಮೀರದಲ್ಲಿ ರಷ್ಯನರು ವಿಮಾನ ಟ್ರೂಪುಗಳನ್ನು ತಂದಿಳಿಸಲು ಸಾಧ್ಯವೇ ಎಂಬುದನ್ನು ಬ್ರಿಟಿಷ್ ವಿಮಾನದಳದವರು ಪರಿಶೀಲಿಸುತ್ತಿದ್ದಾರೆ ಕಾಶ್ಮೀರ ಸರಹದ್ದಿನಲ್ಲಿ ಸೈನ್ಯ ಸುದ್ದಿ ಖಾತೆಯವರು ತಮ್ಮ ಕಛೇರಿಯನ್ನು ತೆರೆದಿದ್ದಾರೆ ಎಂದೂ ಸಹ ವರದಿಯಾಗಿದೆ

ಜಿನ್ನಾರವರಿಗೆ ಬ್ರಿಟಿಷ್ ಸರ್ಕಾರದ ತಿರಸ್ಕಾರ

ಹಿಂದೂಸ್ಥಾನದ ಪ್ರಶ್ನೆಯನ್ನು ಇತ್ಯರ್ಥ ಮಾಡಲು ಬ್ರಿಟಿಷ್ ಪ್ರಧಾನ ಮಂತ್ರಿಗಳು ಸ್ಥಳೀಯ ಸಮ್ಮೇಳನಗಳಿಗೆ ಏರ್ಪಾಡು ಮಾಡಬೇಕೆಂದು ಮಿ|| ಜಿನ್ನಾರವರು ಮಾಡಿದ್ದ ಸಲಹೆಯನ್ನು ಬ್ರಿಟಿಷ್ ಸರ್ಕಾರದವರು ತಿರಸ್ಕರಿಸಿರುವುದಾಗಿ [illegible]

ಸಹಕಾರ ಸಂಘಗಳ ನೌಕರರ ಸಂಘ

ಮೇಲ್ಕಂಡ ಸಂಘದ ಆಶ್ರಯದಲ್ಲಿ ಇದೇ ತಿಂಗಳು ತಾ|| ೨೨ ನೆ ಸೋಮವಾರ ಸಂಜೆ ೬ ಘಂಟೆಗೆ ಮೈಸೂರು ಸಹಕಾರ ಭವನದಲ್ಲಿ "ಪೇಷನ್ ಸ್ಕೀಂ" ವಿಚಾರ ವಿಮರ್ಶೆ ಮಾಡಲು ಎಲ್ಲಾ ಸಹಕಾರ ಸಂಘಗಳ ನೌಕರರ ಸಭೆಯನ್ನು ಏರ್ಪಡಿಸಲಾಗಿದೆ ದಯವಿಟ್ಟು ಎಲ್ಲಾ ಸಂಘಗಳ ನೌಕರು ಮಾನ್ಯರುಗಳೂ ತಪ್ಪದೆ ದಯಮಾಡಿಸಬೇಕಾಗಿ ಕೋರಲಾಗಿದೆ

ಓಡುತ್ತಿರುವ ನೋಟು ರಿನಿಂದ ಗುಂಡಿ ನೇಟು

ನಿನ್ನೆ ಬೆಳಿಗ್ಗೆ ಹತ್ತು ಘಂಟೆಯಲ್ಲಿ ಬೊಂಬಾಯಿನ ಕಾಲ್ಬಾದೇವಿ ಪ್ರದೇಶದಲ್ಲಿ ಓಡುತ್ತಿದ್ದ ಒಂದು ಮೋಟಾರು ವ್ಯಕ್ತಿ ಯೊಂದಿಂದ ಮೇಲೆ ಹೊಡೆಯಲ್ಪಟ್ಟ ಬಹಳ ಕೋಲಾಹಲವನ್ನುಂಟು ಮಾಡಿದವು. ನಾಲ್ಕು ಜನರು ಮಡಿದು ಹತ್ತೊಂಬತ್ತು ಜನರಿಗೆ ಗಾಯವಾಗಿದೆ ನಗರದಲ್ಲಿ ಇನ್ನೂ ಪರಿಸ್ಥಿತಿ ಶಾಂತವಾಗಿಲ್ಲ.

[illegible] ನಡೆಸಬೇಕೆಂದೂ ಮತ್ತೆ ತಮ್ಮ ಶೀಘ್ರ [illegible] ಕೆಚ್ಚು ಗಮನ ಕೊಡ ಬೇಕೆಂದೂ ಹೇಳಿದರು.

ವಿಷ್ಣ್ವಾ ಸಮ್ಮೇಳನ ಮಹಾತ್ಮರಿಂದ ಆರಂಭ

ಬರುವ ಫೆಬ್ರವರಿ ೧೫ ರಿಂದ ಮಾರ್ಚಿ ೬ರ ವರೆವಿಗೆ ನವ ದೆಹಲಿಯಲ್ಲಿ ನಡೆಯುವ ಅಖಿಲ ಏಷ್ಯಾ ರಾಷ್ಟ್ರಗಳ ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸ್ಬೇಕೆಂದು ಅಂತರ ಏಷ್ಯಾ ಸಂಬಂಧ ಸಮ್ಮೇಳನದ ವ್ಯವಸ್ಥಾಪಕ ಸಮಿತಿಯ ಅಧ್ಯಕ್ಷರಾದ ಪಂಡಿತ ಜವಹರಲಾಲ ನೆಹರೂರವರು ಮಹಾತ್ಮ ಗಾಂಧಿಯವರನ್ನು ಪ್ರಾರ್ಥಿಸಿದರೆಂದು ತಿಳಿದುಬಂದಿದೆ. ಭರತಖಂಡಕ್ಕೂ ಏಷ್ಯಾ ಖಂಡದ ಇತರ ಭಾಗಗಳಿಗೂ ಇರುವ ಧಾರ್ಮಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಬಾಂಧವ್ಯವನ್ನು ವ್ಯಕ್ತಪಡಿಸಲು ಇದೇ ಸಂದರ್ಭದಲ್ಲಿ [illegible] ಪ್ರದರ್ಶನವನ್ನೂ ನಡೆಸಲು [illegible]ದು ಗೊತ್ತಾಗಿದೆ.

ರೈಲ್ವೆ ಮುಷ್ಕರದ ಮುಕ್ತಾಯ ಸಂಭವ

ಮೂರು ವಾರದಿಂದ ದಕ್ಷಿಣ ಭಾರತ ರೈಲ್ವೆ ಕೆಲಸಗಾರರು ನಡೆಸುತ್ತಿರುವ ಮುಷ್ಕರ ಉಭಯ ಪಕ್ಷಗಳವರು ಸಧ್ಯದಲ್ಲಿಯೇ ಸೇರಿ ಮುಷ್ಕರವನ್ನು ಮುಕ್ತಾಯಗೊಳಿಸುವ ನಿರ್ಧಾರಕ್ಕೆ ಬರುವರೆಂದು ವರದಿಯಾಗಿದೆ. ಈಗ ಬ್ರಾಂಚಿನಲ್ಲಿರುವ ಮುಷ್ಕರದ ನಾಯಕರು ಈ ಸಭೆಯಲ್ಲಿ ಭಾಗವಹಿಸಲು ಮದ್ರಾಸ್ ಸರ್ಕಾರದವರು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ನಾಳೆ ಅಥವಾ ಬುಧವಾರದೊಳಗೆ ಮುಷ್ಕರ ಮುಕ್ತಾಯದ ತೀರ್ಮಾನವು ಆಗಲಿದೆ.

ಸಂಧಾನ ಸಮಿತಿ ಸದಸ್ಯರು

ಸಂಸ್ಥಾನಗಳ ಪರವಾಗಿ ರಾಜ್ಯಾಂಗ ರಚನಾ ಸಮಿತಿಯೊಡನೆ ಸಂಧಾನ ನಡೆಸುವ ಸಮಿತಿಯಲ್ಲಿ ಈ ಕೆಳಗೆ ಕಂಡ ಸದಸ್ಯರಿರುವರು.— ಭೋಪಾಲ್ ನವಾಬರು, ಪಾಟಿಯಾಲ ಮಹಾರಾಜರು, ನವಾ ನಗರದ ಜಾಂ ಸಾಹೇಬರು, ಗ್ವಾಲಿಯರಿನ ಮಹಾರಾಜರು, ಸರ್ ವಿ. ಟಿ. ಕೃಷ್ಣಮಾಚಾರಿ, ಸರ್ ಎ. ರಾಮಸ್ವಾಮಿ ಮೊದಲಿಯಾರರು, ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್ ರವರು ಸರ್ ಸುಲ್ತಾನ್ ಅಹಮದ್ ರವರು, ಮತ್ತು ಸರ್ ಮಿರ್ಜಾ ಇಸ್ಮಾಯಿಲ್ [illegible]

ಮೇರಿ ರಾಣಿಯವರ ಮನೆಗೂ ಮುತ್ತಿಗೆಯೋ?

ವಾಸಿಸಲು ಮನೆಯಿಲ್ಲದೆ ಲಂಡನ್ನಿನ ನೂತನ ಸಂಪತ್ತಿನ ಖಾಲಿ ಇರುವ ಭವನಗಳನ್ನು ಆಕ್ರಮಿಸುತ್ತಿರುವುದು ಒಂದು ಸೋಂಕ, ಜಾಡ್ಯವಾಗಿ ಪರಿಣಮಿಸುತ್ತಿದೆ ಖಾಸಗೀ ವಸತಿಗಳಿಂದ ಅವರು ಮಂತ್ರಿಗಳ ನಿವಾಸಗಳ ಕಡೆಗೂ ತಿರುಗಿದ್ದಾರೆ. ಬ್ರಿಟಿಷ್ ಚಕ್ರವರ್ತಿಯ ಮಾತೆ ಮೇರಿ ರಾಣಿಯವರ ಮಾರಲ್ ಬರೋ ಭವನದ ಮೇಲೆಯೂ ಅವರ ದೃಷ್ಟಿಯು ಬಿದ್ದಿರುವುದಾಗಿ ಪೊಲೀಸಿನವರ ವರದಿಯಿಂದ ತಿಳಿದು ಬಂದಿದೆ. ಈ ಪ್ರಕರಣವು ಲಂಡನ್ನಿನಲ್ಲಿ ವಿಶೇಷ ಕೋಲಾಹಲವನ್ನು ಎಬ್ಬಿಸಿರುವುದಲ್ಲದೆ ಬ್ರಿಟಿಷ್ ಸರ್ಕಾರಕ್ಕೂ ಕಳವಳವನ್ನುಂಟುಮಾಡುತ್ತಿದೆ.

ಕೀಮ ಎಣ್ಣೆ ರೇಷನ್ ಹೆಚ್ಚುವುದು

ಮಿಲ್ಲಿನಲ್ಲಿ ನೀರಸವಿಲ್ಲದಿರುವ ಮನೆಗಳಿಗೆ ಬೆಂಗಳೂರಿನ ತಯ [illegible] ಈ ಆರಿನಲ್ಲಿ ಒಂದು ತಿಂಗಳಿಗೆ ನಾಲ್ಕು ಸೀಸೆ ಸೀಮೆ [illegible] ಕೊಡಲಾಗುವುದು [illegible] ಬರುವೆ.

ಸಾಧ್ವಿ

ತಾ॥ ೧೫-೯-೪೬ ಭಾನುವಾರ

ಮಿಶ್ರ ಸರ್ಕಾರ ಸ್ಥಾಪನೆಯ ಪ್ರಯತ್ನ

ಹಿಂದೂಸ್ಥಾನದಲ್ಲಿ ಈಗಿರುವ ಸರ್ಕಾರದ ಸ್ಥಾನದಲ್ಲಿ ಮಿಶ್ರ ಮಂತ್ರಿ ಮಂಡಲವನ್ನು ಸ್ಥಾಪಿಸುವ ಪ್ರಯತ್ನಗಳು ನಡೆಯುತ್ತಿವೆ. ಇದಕ್ಕಾಗಿ ಮಿ॥ ಜಿನ್ನಾರವರು ವೈಸರಾಯರನ್ನು ಭೇಟಿ ಮಾಡಲು ದೆಹಲಿಗೆ ತೆರಳಿದ್ದಾರೆ. ಲೀಗಿನ ಪ್ರತಿನಿಧಿಗಳು ಇಂದಿನ ಸರ್ಕಾರದಲ್ಲಿ ಬಂದು ಸೇರಲು ಅವಕಾಶವನ್ನು ಕಲ್ಪಿಸುವ ಪ್ರಯತ್ನಗಳು ಜರುಗುತ್ತಿವೆ. ಆದರೆ, ಇವುಗಳ ಫಲಿತಾಂಶವನ್ನು ಈಗಲೇ ಹೇಳಲು ಸಾಧ್ಯವಿಲ್ಲ.

ಮುಸ್ಲಿಂ ಲೀಗಿನವರ ಸಹಕಾರಕ್ಕಾಗಿ ಸದಾ ಕಾಲದಲ್ಲಿಯೂ ಬಾಗಿಲನ್ನು ತೆರೆದಿಟ್ಟಿರುವುದಾಗಿ ಪಂ॥ ನೆಹರೂರವರು ಹೇಳಿರುವರು. ವೈಸರಾಯರು ಮೊನ್ನೆ ಮಾಡಿದ ಘೋಷಣೆಯಲ್ಲಿಯೂ ಸಹ, ಜಿನ್ನಾರವರ ಸಹಕಾರವನ್ನು ಕೋರಿರುವರು. ಭಿನ್ನಾಭಿಪ್ರಾಯಗಳುಂಟಾಗುವ ಸಂದರ್ಭಗಳಲ್ಲಿ ಫೆಡರಲ್ ನ್ಯಾಯಸ್ಥಾನದ ಅಭಿಪ್ರಾಯವನ್ನು ಅಂಗೀಕರಿಸುವುದಾಗಿ ನೆಹರೂರವರು ಹೇಳಿರುವರು. ಬ್ರಿಟಿಷ್ ನಿಯೋಗದವರ ರಾಜ್ಯಾಂಗ ಪ್ರಣಾಳಿಕೆಯಲ್ಲಿ ಯಾವ ಬದಲಾವಣೆಯನ್ನೂ ಮಾಡುವುದಿಲ್ಲವೆಂದು ವೈಸರಾಯರು ಭರವಸೆಯಿತ್ತಿರುವರು. ಹಲವು ಮುಸಲ್ಮಾನ್ ಪ್ರಮುಖರು ಈ ಘೋಷಣೆಗಳಿಂದ ಉತ್ತೇಜನಗೊಂಡು ಮತ್ತೆ ಸಂಧಾನಕ್ಕೆ ಆರಂಭಿಸಿದ್ದಾರೆ. ಬಂಗಾಳದ ಮುಖ್ಯ ಮಂತ್ರಿ, ಮಿ॥ ಸುಹ್ರವರ್ದಿಯವರೂ, ಹೈದರಾಬಾದಿನ ಮಾಜಿ ಮುಖ್ಯ ಮಂತ್ರಿ ಛತ್ತಾರಿ ನವಾಬರೂ ಇದರಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದಾರೆ. ಇದರ ಪರಿಣಾಮವಾಗಿಯೇ ವೈಸರಾಯರು ಜಿನ್ನಾರವರನ್ನು ಆಹ್ವಾನಿಸಿದ್ದಾರೆ.

ವೈಸರಾಯರು ಜಿನ್ನಾರವರನ್ನು ತಾವಾಗಿಯೇ ಈ ಸಾರಿ ಕರೆದಿಲ್ಲವೆಂದೂ, ಜಿನ್ನಾರವರ ಕೋರಿಕೆಯಂತೆಯೇ ಅವರಿಗೆ ಆಹ್ವಾನವಿತ್ತಿರುವರೆಂದೂ ಸಹ ವರದಿಯಾಗಿದೆ. ಎರಡನೇ ಲೀಗಿನ ದೇಶದ ದುರ್ಘಟನೆಗಳನ್ನು ಕಂಡು ಜಿನ್ನಾರವರು ತಮ್ಮ ನೀತಿಯನ್ನು ಬದಲಾಯಿಸಿಕೊಂಡಿರಬಹುದೆಂದು ಊಹಿಸಲು ಅವಕಾಶವಿದೆ. ಅತ್ತಲಾಗಿ ಈಗಿನ ಮಾತು ಕತೆಗಳಲ್ಲಿ ವೈಸರಾಯರು ಪಾಕೀಸ್ಥಾನ ವಿಚಾರವನ್ನು ಎತ್ತಲು ಅವಕಾಶವೀಯುವುದಿಲ್ಲವೆಂದೂ, ಹೊಸ ಸರ್ಕಾರದ ಸ್ಥಾನ ಮಾನಗಳು ಮತ್ತು ಜಾರಿಗೆ ತಂದಿರುವ ಹೊಸ ಪದ್ಧತಿಗಳಲ್ಲಿ ಬದಲಾವಣೆ ಮಾಡಲು ಪಂ॥ ನೆಹರೂರವರು ಸಿದ್ಧವಾಗಿಲ್ಲವೆಂದೂ ಸಹ ಇನ್ನೊಂದು ವರದಿಯು ತಿಳಿಸುತ್ತದೆ.

ಬ್ರಿಟಿಷ್ ನಿಯೋಗದವರ ಘೋಷಣೆಯಲ್ಲಿಯೇ ಪಾಕೀಸ್ಥಾನಕ್ಕೆ ಸ್ಥಾನವಿಲ್ಲದಿರುವಾಗ ಅದರ ವಿಚಾರವಾಗಿ ಈಗ ಪ್ರಸ್ತಾಪ ಮಾಡಲು ಅವಕಾಶವೆಲ್ಲಿದೆ? ಮತ್ತು ನೂತನ ಸರ್ಕಾರದವರು ವಿಶೇಷ ಉತ್ಸಾಹದಿಂದ ಜಾರಿಗೆ ತಂದಿರುವ ಜನಪ್ರಿಯವಾದ ಏರ್ಪಾಡುಗಳನ್ನು ತ್ಯಜಿಸುತ್ತಾರಾದರೂ ಏತಕ್ಕೆ? ಇವೆರಡೂ ಸಾಧ್ಯವಿಲ್ಲದ ಮಾತು. ಹೀಗಿದ್ದರೂ ಮಿ॥ ಜಿನ್ನಾರವರು ಮಾತುಕತೆಗಾಗಿ ಹೊರಟಿರುವುದನ್ನು ನೋಡಿದರೆ ಕೇಂದ್ರ ಸರ್ಕಾರದಲ್ಲಿ ಅವರು ಸೇರಬಹುದೆಂಬ ಊಹೆಗೆ ಅವಕಾಶವಿರುತ್ತದೆ. ಹಾಗೆ ಅವರು ನಿಜವಾಗಿಯೂ ಮನಸ್ಸು ಮಾಡಿ ಮುಂದೆ ಬಂದರೆ ಮಹಾತ್ಮ ಗಾಂಧಿಯವರೂ, ಪಂ॥ ನೆಹರೂ ಮುಂತಾದ ಕಾಂಗ್ರೆಸ್ ನಾಯಕರೂ ಅವರನ್ನು ಆನಂದದಿಂದ ಸ್ವಾಗತಿಸುವರು. ನೂತನ ಮಿಶ್ರ ಮಂತ್ರಿ ಮಂಡಲವು ಸಂಪೂರ್ಣವಾದ ರಾಷ್ಟ್ರೀಯ ಸರ್ಕಾರವಾಗಿ ಪರಿಣಮಿಸುವುದು. ಹಾಗೆ ಮಾಡಲು ಅವರನ್ನು ಭಗವಂತನು ಪ್ರೇರೇಪಿಸಲಿ!

ಜಿಲ್ಲಾ ಮೋಟಾರು ಕೆಲಸಗಾರರ ಸಂಘ

ಮೊನ್ನೆ ರಾತ್ರಿ ಕಾಂಗ್ರೆಸ್ ಕಛೇರಿಯಲ್ಲಿ ಮೋಟಾರು ಸಂಘದ ಕೆಲಸಗಾರರು ಶ್ರೀ॥ ಕೆ. ದೌಲತ್‌ರಾವ್‌ರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದರು. ಶ್ರೀಗಳಾದ ಮಳವಳ್ಳಿ ವೀರಪ್ಪ, ಟಿ. ಮರಿಯಪ್ಪ ಮತ್ತು ಅಖಿಲ ಮೈಸೂರು ರೇಷ್ಮೆ ಕೆಲಸಗಾರರ ಸಂಘದ ಅಧ್ಯಕ್ಷರಾದ ಶ್ರೀ ರಜಾಬ್ ಅಲಿಯವರು ಕೆಲಸಗಾರರನ್ನುದ್ದೇಶಿಸಿ ಭಾಷಣ ಮಾಡಿದರು.

ಹಾಲಿನ ತೊಂದರೆ

ಸ್ವಂ. ವ.] ಶ್ರೀರಂಗಪಟ್ಟಣ ೧೪

ಹಾಲು ಮೊಸರುಗಳಿಗೆ ಸುಪ್ರಸಿದ್ಧವಾದ ಈ ಪ್ರಾಂತದಲ್ಲಿ ಈಗ ಅವುಗಳಿಗೆ ತುಂಬಾ ಅಭಾವವುಂಟಾಗಿದೆ. ರೂಪಾಯಿಗೆ ೨-೩ ಸೇರಿನಂತೆ ಮಾರಾಟವಾಗುತ್ತಿದೆ. ಅದಕ್ಕೆ ವಿಶೇಷವಾಗಿ ನೀರನ್ನು ಬೆರೆಸಿರುತ್ತಾರೆ. ಪುರಸಭೆಯವರು ಇದಕ್ಕೆ ಗಮನ ಕೊಟ್ಟು ಉತ್ತಮವಾದ ಹಾಲು, ಮೊಸರು ದೊರೆಯುವಂತೆ ಮಾಡುವುದು ಅವಶ್ಯಕ.

ಊರಿನ ರಸ್ತೆಗಳಲ್ಲಿ ತಿಪ್ಪೆ ಗುಂಡಿಗಳೂ ಚರಂಡಿಗಳೂ ದುರ್ವಾಸನೆಯಿಂದ ನಾರುತ್ತಿವೆ. ಸೊಳ್ಳೆ ಕಾಟವು ವಿಪರೀತವಾಗಿದೆ. ಇದಕ್ಕೂ ಸಹ ಪೌರಸಭೆಯವರು ಕೂಡಲೇ ಗಮನ ಕೊಡಬೇಕಾಗಿದೆ.

ಆಫೀಸು ಕೆಲಸಕ್ಕೆ. ಹುಡುಗರು ಬೇಕು.

ನಮ್ಮ ಆಫೀಸಿನಲ್ಲಿ ಕೆಲಸ ಮಾಡಲು ಓದು ಬರಹ ಬಲ್ಲ ಮತ್ತು ಬೈಸಿಕಲ್ ಬಿಡಲು ಬರುವ ಹುಡುಗರು ಬೇಕು. ಕೂಡಲೇ ಬಂದು ನೋಡಿರಿ.

—ವ್ಯವಸ್ಥಾಪಕ, ಸಾಧ್ವಿ

Edited, printed and published by A. R. Nagarajao at the Sadhvi Press D. Subbiah Road, Mysore

ಖಂಡನಾ ಸಭೆ.

ಚನ್ನರಾಯಪಟ್ಟಣ

ರಾಜ್ಯಾಂಗ ಸಮಿತಿಗೆ ಪ್ರತಿನಿಧಿಗಳ ಕಳುಹಿಸುವ ವಿಚಾರವಾಗಿ ದಿವಾನರು ಪ್ಪಿರುವ ಅಭಿಪ್ರಾಯಗಳನ್ನು ಪ್ರತಿಭಲು ಇಲ್ಲಿನ ನಿವಾಸಿಗಳು ಸಭೆ ನಡೆಸಿ ನಿಯಗಳನ್ನು ಮಾಡಿದರು. ಪ್ರಜೆಗಳಿಂದ ನಾಯಕರಾದ ಪ್ರತಿನಿಧಿಗಳನ್ನೇ ಕಳುಕೊಡಬೇಕೆಂಬ ನಿರ್ಣಯವನ್ನು ಮಶ್ರೀಮನ್ಮಹಾರಾಜರವರಿಗೆ ಕಳುಹಿಸಲಾಯಿತು

ಶ್ರೀನಿವಾಸ
ಮೋಟಾರ್ ಸರ್ವೀಸ್
ಮೈಸೂರು—ಬೆಂಗಳೂರು

ಮೈಸೂರಿನಿಂದ ಚನ್ನಪಟ್ಟಣ, ಮಳವಳ್ಳಿ, ಹಲಗೂರು, ಸಾತನೂರು, ಕನಕಪುರ, ಹಾರೋಹಳ್ಳಿ, ಮಾರ್ಗವಾಗಿ ಬೆಂಗಳೂರು ತಲುಪುವುದು

ಮೈಸೂರಿನಿಂದ ಬೆಳಗ್ಗೆ 9-15 ಗಂಟೆಗೆ ಹೊರಟು ಬೆಂಗಳೂರಿಗೆ ಮಧ್ಯಾಹ್ನ 4 ಗಂಟೆಗೆ ತಲುಪುತ್ತೆ. ಮತ್ತು ಬೆಂಗಳೂರಿನಿಂದ ಬೆಳಗ್ಗೆ 7-30 ಕ್ಕೆ ಹೊರಟು ಮೈಸೂರನ್ನು ಮಧ್ಯಾಹ್ನ 3-10 ಕ್ಕೆ ತಲುಪುತ್ತೆ.

ಪ್ರೊಪ್ರೈಟರ್, ಶ್ರೀನಿವಾಸ ಮೋಟಾರ್ ಸರ್ವಿಸ್,
ಆಫೀಸ್:- "ಪದ್ಮಾಲಯ", ಸಯ್ಯಾಜಿರಾವ್ ರೋಡ್, ಮೈಸೂರು.

ಮಹಾ ಜನಗಳ ಅಭಿಲಾಷೆಗಳಲ್ಲಿ ಅರ್ಪಣೆ

ಶ್ರೇಷ್ಠತರವೆನಿಸಿದ ಮತ್ತು ತೆಲುಗು ಚಿತ್ರ ಪಟಗಳಲ್ಲಿ ಹಿರಿಯ ಸ್ಥಾನವನ್ನು ಪಡೆದಿರ

"ಸ್ವರ್ಗ ಸೀಮ"

ಎಂ. ಬಿ. ಶ್ರೀ ವಾಹಿನಿಯವರು ಕಲಾ ಮುಕುಟಕ್ಕೆ ಧಾರೆಯೆರೆದಿರುವ ಘನತರವಾದ ತಯಾರಿಕೆಗಳಲ್ಲಿ ಪ್ರಥಮ ಸ್ಥಾನವನ್ನಲಂಕರಿಸಿರುವ ಈ ಮಹೋನ್ನತ ವಾಕ್ಚಿತ್ರವ

ಮೈಸೂರಿನ

ರಾಜಕಮಲ್ ಟಾಕೀಸಿನಲ್ಲಿ

19—9—46 ರಿಂದ : : ಪ್ರತಿ ದಿನ ಮೂರು ಆಟಗಳು

ನೇತ್ರದಲ್ಲಿ ನೇತ್ರವನ್ನಿಟ್ಟು, ಹೃದಯಕ್ಕೆ ಹೃದಯವನ್ನಿಟ್ಟು ಹಿಂದಾದ ಮನಸ್ಸಿನ ನಾ
ಉದ್ವೇಗದಿಂದವಲೋಕಿಸಬೇಕಾದ ಈ ಸೊಬಗಿನ ಸಂಪತ್ತನ್ನು ಬಣ್ಣಿಸಲಸದಳವು
ಈ ಕಲಾಕೃತಿಯನ್ನು ನೀವು ತಪ್ಪದೆ ನೋಡಲೇಬೇಕು!
ನೋಡಿ ಬಾಳಿನ ಸತ್ವವನ್ನು ಅರಿಯಬೇಕು!!
ಅರಿತು ಇದರ ಹಿರಿಮೆಯನ್ನರುಹಬೇಕು!!!
ಅರುಹಿ ಆನಂದ ತುಂದಿಲರಾಗಬೇಕು!!!!
ಆನಂದಿಸಿ ನಿಮ್ಮ ಮಿತ್ರರಿಗ್ಗರಲ್ಲಿ ಆ ಮಂತ್ರವನ್ನೀಯಬೇಕು!!!!!

ರುಚಿ! ಶು

ಆರೋಗ್ಯವೇ ಭಾಗ್ಯ!

ನೀವು ಸದಾ ಆರೋಗ್ಯದಿಂದಿರಬೇಕಾದರೆ ಶುಚಿ ರುಚಿಯಾದ ತಿಂಡಿಯನ್ನೆ
ಉಪಯೋಗಿಸಿ ಶುಚಿ ರುಚಿಗೆ ತವರು ಮನೆಯಾದ

ರಾಜರಾಜೇಶ್ವರೀ

ಮಾಡರ್ನ್ ಹಿಂದೂ ಮಿಲಿಟರಿ ಹೋಟೇ

(ಬ್ರಾಂಚ್

(ಗಾಂಧಿ ಚೌಕ, ಮೈಸೂರು)

ಇಲ್ಲಿಗೆ ಭೇಟಿ ಕೊಡಲು ಮರೆಯಬೇಡಿ!

ಅಂದಾನಿ ಗೌಡರ ರುಚಿಯಾದ ನಾನ್—ವೆಜಿಟೇರಿಯನ್

ಊಟ ಮತ್ತು ತಿಂಡಿ ಸಿಗುತ್ತೆ.

ಪ್ರೊ:—ಚನ್ನೇಗ

[ವಿಜಯಾ ಏಜನ್ಸೀಸ್, ಮೈಸೂರು]

Neo Furniture Co.,

AUCTIONEERS, CABINET MAKERS & COMMISSION AGENTS.

Irwin Road .... Mysore.

THE FIRM OF REPUTE

Consult them before you

BUY or SELL

Furniture, Houses, Cars Etc

[Vijaya Agencies, Mysore]

RAJKAMAL, MYSORE.

'BURN'EM UP BARNES'

A thrilling Serial from 14—9—46 for 5 days.

'ಬರ್ನ್ ದೆಂ ಅಪ್ ಬಾರ್ನ್ಸ್'

ರೋಮಾಂಚಕವಾದ ಪೂರ್ತಿ ಸೀರಿಯಲ್.

14—9—46 ರಿಂದ ೫ ದಿನಗಳು.

1 9-46ರಿಂದ 4 ದಿನಗಳು ಪ್ರಾತಃಕಾಲ 10-30 ಕ್ಕೆ

ದುರ್ಗಾ' ಭಾ.ಪಿ.ಕೆ. 'ದೇವಿಕಾರಾಣಿ, 'ಮುಮ್ತಾಜ್' ಅಲಿ

ಫೋ. ನಂ 392 **WEEKLY EDITION** ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೧] ಸೋಮವಾರ ೧೬—೯—೪೬ [ಸಂಚಿಕೆ ೮

— ಈ ದಿನ ಸಂಜೆ —

ಜಿನ್ನಾ-ವೈಸ್ರಾಯ್ ಭೇಟಿ

ನ್ನಾ-ವೈಸರಾಯ್ ಭೇಟಿ

ಮಹಮ್ಮದಾಲಿ ಜಿನ್ನಾರವರು ತ ನುಗಳೊಡನೆ ನಿನ್ನೆ ದೆಹಲಿಗೆ ಬಂದಿ . ಈ ದಿನ ಸಂಜೆ ಐದೂವರೆ ಘಂಟೆ ರಿಂಗೂ ವೈಸರಾಯರಿಗೂ ಭೇಟಿ ನ ಯುವುದು. ಈ ಸಮಯದಲ್ಲಿ ಪಂಡಿತ ರಲಾಲ್ ನೆಹರೂ ರವರೂ ಸಹ ಹಾ ರೆಂದು ತಿಳಿದುಬಂದಿದೆ ಹಂಗಾ ರ್ಕಾರದಲ್ಲಿಯೂ ರಾಜ್ಯಾಂಗ ರಚನಾ ಯಲ್ಲಿಯೂ ಭಾಗಿಗಳಾಗುವಂತೆ ವೈ ಯವರು ಜಿನ್ನಾರವರಿಗೆ ಸೂಚಿಸುವರೆಂ ಹೇಳಲಾಗಿದೆ. ಈಗಿನ ಸರ್ಕಾರದವರ ಯಿಂದಲೇ ಅವರು ಈ ಸಲಹೆಯ ಕೊಡುವರೆಂದೂ ಸಹ ವರದಿಯಾ

ಹಸಿವಿನಿಂದ ಹೆಂಡತಿಯ ಕೊಲೆ

ಬಾದ್ ಜಿಲ್ಲೆಯ ಧೂಮಾಲ್ ದಲ್ಲಿ ಒಬ್ಬಾತನು ಹಸಿವಿನಿಂದ ಬ ಮಾಣ ಹೊಂದಿ ತನ್ನ ಹೆಂಡತಿಯ ಕೊಲೆ ಮಾಡಿದ ಅಂಶವು ವರದಿಯಾ ಆತನೂ ಅವನ ಹೆಂಡತಿಯೂ, ಇ ಮಕ್ಕಳೂ ಅನೇಕ ದಿನಗಳಿಂದ ಅ ವಿಲ್ಲದೆ ಉಪವಾಸವಿದ್ದರು ಕಡೆಗೆ ಹಿಟ್ಟನ್ನು ಆತನು ತಂದನು ಹೆಂ ನು ಮೂರು ಚಪಾತಿಗಳನ್ನು ಮಾಡಿ ನ್ನು ಮಕ್ಕಳಿಗೆ ಕೊಟ್ಟಳು ಹಸಿವ ತಾಳಲಾರದೆ ಮತ್ತೊಂದನ್ನು ತಾನೇ ಳು ಮನೆಗೆ ಹಿಂದಿರುಗಿದ ಗಂಡನು ಏನೂ ಉಳಿಯದಿದ್ದುದನ್ನು ಕಂಡು ತನಾಗಿ ಹೆಂಡತಿಯನ್ನು ಒದೆಯಲು ಡನೇ ಮೃತಿ ಹೊಂದಿದಳು

ನೇತಾಜಿಯವರು ವಿಜಯ ದಶಮಿಯ ದಿನ ಬರುವರು

ಕ್ಟೋಬರ್ ೫ ನೇ ತಾ|| ವಿಜಯದಶ ಯ ದಿನ ಸುಭಾಷ್ ಚಂದ್ರಬೋಸರು ತ್ತರ ಭಾರತದ ಒಂದು ಗ್ರಾಮದಲ್ಲಿ ಕಾ ಕೊಳ್ಳುವರೆಂದು ಒಬ್ಬ ಜ್ಯೋತಿಷ್ಯರ ನುಡಿದಿದ್ದಾರೆ. ವಿಜಯದಶಮಿಯ ಮಹೋತ್ಸವವನ್ನು ಸೂಚಿಸುವುದರಿಂದ ಪುನರಾಗಮನಕ್ಕೆ ಬೋಸರು ಆ ದಿ ನ್ನ ಗೊತ್ತುಮಾಡಿಕೊಂಡಿರುವುದಾಗಿ ಲಾಗಿದೆ

ಸಕ್ಕರೆ ತೊಂದರೆ

ನು] ನಂಜನಗೂಡು ೧೫

ಸಕ್ಕರೆಯನ್ನು ಇಷ್ಟ ಬಂದ ದಿನ ಹಂ ಪ್ಪರೆ ತಿಳಿದುಕೊಂಡು ಹೋದವರಿಗೆ ಭಾಗ ಮಾತ್ರ ದೊರೆಯುತ್ತದೆ ಈ ಲ್ಲಿ ಅನೇಕ ಜನರಿಗೆ ಅದೂ ಸಿಕ್ಕಿರು ಇಷ್ಟು ತೊಂದರೆ ಇದ್ದಾಗ್ಯೂ ಮಿ ವಿ. ಅಂಗಡಿಯವರಿಗೂ, ಕೆಲವು ಜನ ಟೆಲ್ ಮಾಲೀಕರಿಗೂ ಸಾಕಾಗುವ ಷ್ಟು ತಿಂಡಿ ಮಾಡಿ ಮಾರಾಟ ಮಾ ಸಕ್ಕರೆ ಎಲ್ಲಿಂದ ಬಂತು ? ಜನಗಳಿಗೆ ಡಿಯಾಗಿರುವಷ್ಟು ಸಕ್ಕರೆ ಸಿಗುವಂತೆ ಅ ರಿಗಳ ನಿಗಾ ಬೇಕಾಗಿರುತ್ತದೆ.

ಮಳೆ ಅವಾಂತರ

ವ ಭಾನುವಾರ ಹುಲ್ಲಹಳ್ಳಿ ಪ್ರಾಂತ್ಯ ಅವಾಂತರದಿಂದ ಜಮೀನಿನಲ್ಲಿ ರೇಷ್ಮೆ ನೂರಾರು ಹಲ್ಲ ಕಡಲೆಕಾಯಿ ಕೊ ಹೋಯಿತೆಂದು ತಿಳಿದುಬಂದಿದೆ

ಪೌರಾಧ್ಯಕ್ಷರಲ್ಲಿ ಅವಿಶ್ವಾಸ

ಸ್ವಂ ಹು] ಚಾಮರಾಜನಗರ ೧೬

ಇಲ್ಲಿನ ಪೌರ ಸಭಾಧ್ಯಕ್ಷರಲ್ಲಿ ಅವಿಶ್ವಾಸವನ್ನು ಒಂಭತ್ತು ಜನ ಸದಸ್ಯರುಗಳು ಸೂಚಿಸಿ ತಾ|| ೧೪ ರಲ್ಲು ಠರಾವೊಂದನ್ನು ಕಳುಹಿಸಿರುವರೆಂದು ತಿಳಿದುಬಂದಿದೆ

ಕಾಶ್ಮೀರ ಸರಹದ್ದಿನಲ್ಲಿ ಪುಂಡರು

ಕಾಶ್ಮೀರದ ಉತ್ತರ ಗಡಿಯಲ್ಲಿ ಸೈನಿಕ ಕಾರ್ಯಕ್ರಮಗಳು ನಡೆಯುತ್ತಿವೆ- ಎಂಬ ವಿಷಯದಲ್ಲಿ ಇಂಡಿಯಾ ಸರ್ಕಾರದವರು ಒಂದು ಹೇಳಿಕೆಯನ್ನಿತ್ತು ಆ ಪ್ರದೇಶದಲ್ಲಿ ಪುಂಡರ ಗುಂಪಿನವರು ಹಾವಳಿ ಮಾಡು ತ್ತಿರುವರೆಂದೂ ಅವರನ್ನು ಅಡಗಿಸಲು ಸೈನ್ಯಗಳನ್ನು ಉಪಯೋಗಿಸಲಾಗುತ್ತಿದೆಯೆಂದೂ ತಿಳಿಸಿರುವರು

ಮಹಾತ್ಮರ ಕಂಚಿನ ಪ್ರತಿಮೆ

ಕರಾಚಿಯ ವರ್ತಕರ ಸಂಘದವರು ಕಂಚಿನಲ್ಲಿ ಮಾಡಿಸಿರುವ ಮಹಾತ್ಮ ಗಾಂಧಿಜಿಯವರ ಪೂರ್ಣಾಕಾರದ ಪ್ರತಿಮೆಯ ಅನಾವರಣ ಮಹೋತ್ಸವವನ್ನು ಸರ್ ಎಸ್. ರಾಧಾ ಕೃಷ್ಣನ್ ರವರು ಮೊನ್ನೆ ನೆರವೇರಿಸಿದರು ಕರಾಚಿಯ ಚೀಫ್ ಕೋರ್ಟ್ ಮತ್ತು ಸೆಕ್ರೆಟೇರಿಯಟ್‌ಗಳ ಎದುರಿನಲ್ಲಿ ಈ ಪ್ರತಿಮೆಯನ್ನು ಸ್ಥಾಪಿಸಲಾಗಿದೆ ಪರಾವಲಂಬನೆಯಿಂದ ಆತ್ಮಾವಲಂಬನೆಗೆ ಹಿಂದೂಸ್ಥಾನವು ಪ್ರಗತಿಹೊಂದಲು ಮಹಾತ್ಮರು ವಹಿಸಿರುವ ಪಾತ್ರವನ್ನು ಹೆಮ್ಮೆಯಿಂದಲೂ ಭಕ್ತಿಯಿಂದಲೂ ಭಾರತೀಯರು ಸ್ಮರಿಸುವರು- ಎಂಬುದಾಗಿ ಡಾ|| ರಾಧಾಕೃಷ್ಣನ್‌ರವರು ಆ ಸಮಯದಲ್ಲಿ ಹೇಳಿದರು.

ವೀಣಾ ವಾದನ

ಮೈಸೂರು ೧೬

ನಾಳೆ ಸಂಜೆ ಆರು ಘಂಟೆಗೆ ಕುಂಚಿಟಿಗರ ಶ್ರೀರಾಮ ಮಂದಿರದಲ್ಲಿ ಶ್ರೀ ಆರ್ ರಾಮಚಂದ್ರರಾವ್ ಬಾಂಭೋರೆಯ ವರ ಅಧ್ಯಕ್ಷತೆಯಲ್ಲಿ ಮಹಾಗಣಪತಿ ಮಂಗಳಾರತಿ ನಡೆಯುವುದು ವೈಣಿಕ ಪ್ರವೀಣ ಶ್ರೀ ವಿ ವೆಂಕಟಗಿರಿಯಪ್ಪನವರಿಂದ ವೀಣಾವಾದನವನ್ನೂ ಸಹ ಏರ್ಪಡಿಸಲಾಗಿದೆ ಸರ್ವರಿಗೂ ಸ್ವಾಗತವುಂಟು

ಆಕಾಶವಾಣಿ ಸಂಭಾಷಣೆ

ಪೌರಸಭೆಯ ಉಪಾಧ್ಯಕ್ಷರಾದ ಶ್ರೀ ಎ ಕೃಷ್ಣನ ಅರ್ಸರಾಯರು ನಾಳೆ ರಾತ್ರಿ ೯-೪೫ ಘಂಟೆಗೆ ಆಕಾಶವಾಣಿಯ ಮೂಲಕ ಪೌರಸಭೆಯ ಚುನಾವಣೆ ವಿಷಯವಾಗಿ ಸಂಭಾಷಣೆ ನಡೆಸುವರು.

ನೆಹರೂರವರು ವಾಷಿಂಗ್‌ಟನ್ನಿಗೆ

ಮಿತ್ರ ಸಂಯುಕ್ತ ರಾಷ್ಟ್ರಗಳ ಸಭೆಯನ್ನು ಒಂದು ತಿಂಗಳ ಕಾಲ ಮುಂದೆ ಹಾಕಿರುವುದರಿಂದ ಆ ಸಮಯಕ್ಕೆ ಪಂಡಿತ ನೆಹರೂರವರೇ ಭಾರತ ನಿಯೋಗದವರ ನಾಯಕರಾಗಿ ಹೋಗಬೇಕೆಂದೂ ದಕ್ಷಿಣ ಆಫ್ರಿಕದ ಭಾರತೀಯರ ವಿಷಯದಲ್ಲಿ ಅಲ್ಲಿ ವಾದಿಸಬೇಕೆಂದೂ ಅನೇಕರು ಒತ್ತಾಯಪಡಿಸುತ್ತಿರುವರು ನೆಹರೂರವರು ಅಲ್ಲಿಗೆ ಹೋದರೆ ಒಂದು ವಾರದೊಳಗೇ ಹಿಂದಿರುಗ ವರೆಂದು ಸಹ ಹೇಳಲಾಗಿದೆ

ಮುಷ್ಕರಕಾರರಿಗೆ ಪ್ರತೀಕಾರವಿಲ್ಲ

ದಕ್ಷಿಣ ಭಾರತ ರೈಲ್ವೆ ಮುಷ್ಕರವು ಮುಕ್ತಾಯವಾಗುವ ಸಂಭವವಿರುವುದರಿಂದ ಸದರಿ ಮುಷ್ಕರದಲ್ಲಿ ಭಾಗಿಗಳಾಗಿದ್ದ ಯಾವ ಕೆಲಸಗಾರರ ಮೇಲೆಯೂ ಪ್ರತೀಕಾರ ಕ್ರಮವನ್ನು ಕೈಗೊಳ್ಳುವುದಿಲ್ಲವೆಂದು ರೈಲ್ವೆ ಬೋರ್ಡಿನವರು ಭರವಸೆ ಇತ್ತು ಪ್ರಕಟಣೆ ಹೊರಡಿಸಿದ್ದಾರೆ ಕೆಲಸಗಾರರು ಹಿಂದಿರುಗಿದ ಮೇಲೆ ಅವರ ನ್ಯಾಯವಾದ ಕುಂದುಕೊರತೆಗಳನ್ನು ಯುಕ್ತವಾದ ರೀತಿಯಲ್ಲಿ ಪರಿಹರಿಸಲಾಗುವುದೆಂದೂ ಸಹ ತಿಳಿಸಿದ್ದಾರೆ

ಬೊಂಬಾಯಿಯಲ್ಲಿ ಧಾಳಿಕಾರರ ದಸ್ತಗಿರಿ

ಮೊನ್ನೆ ಬೊಂಬಾಯಿನ ಕಾಲ್ಬಾದೇವಿ ಪ್ರದೇಶದಲ್ಲಿ ಮೋಟಾರು ಟ್ಯಾಕ್ಸಿಯಿಂದ ಗುಂಡು ಹಾರಿಸಿದ ಸಂಬಂಧವಾಗಿ ನಾಲ್ಕು ಜನ ಪಠಾಣರನ್ನು ಪೋಲೀಸರು ದಸ್ತಗಿರಿ ಮಾಡಿರುವರು ಅವರ ಬಳಿ ಇದ್ದ ಪೆಟ್ಟಿಗೆಯೊಂದರಲ್ಲಿ ಮದ್ದು ಗುಂಡುಗಳು ಇದ್ದುವೆಂದು ತಿಳಿದುಬಂದಿದೆ ಗುಂಡನ್ನು ಹಾರಿಸಿದ ಮೇಲೆ ಟ್ಯಾಕ್ಸಿ ನಡೆಸುವವನನ್ನು ಹೊರಗೆ ಎತ್ತಿಹಾಕಿ ಅವರು ಪರಾರಿಯಾದರೆಂದು ವರದಿಯಾಗಿದೆ

ಗಣಪತಿ ಮಂಗಳಾರತಿ

ನಾಳೆ ಸಂಜೆ ೭ ಘಂಟೆಗೆ ವಾಣೀವಿಲಾಸ ರಸ್ತೆಯಲ್ಲಿರುವ ವೀರಶೈವ ಸಂಸ್ಕೃತ ಪಾಠಶಾಲಾ ವಿದ್ಯಾರ್ಥಿ ಸಂಘದವರು ಮ್ಯಾಜಿಸ್ಟ್ರೇಟ್ ರವರಾದ ಶ್ರೀ ಎಚ್ ಎಲ್ ದೇವರಾಜ ಅರಸಿನವರ ಅಧ್ಯಕ್ಷತೆಯಲ್ಲಿ ವಿದ್ಯಾ ಗಣಪತಿ ಮಹಾಮಂಗಳಾರತಿ ಮಹೋತ್ಸವವನ್ನು ನೆರವೇರಿಸುವರು ಗಾನವಿಶಾರದ ಆಸ್ಥಾನ ವಿದ್ವಾನ್ ಬಿ ದೇವೇಂದ್ರಪ್ಪನವರ ವೀಣೆ ಮತ್ತು ಆಸ್ಥಾನ ವಿದ್ವಾನ್ ಚಂದ್ರಶೇ

ಬ್ರಿಟಿಷ್ ಪ್ರಧಾನಿಗಳ ಮನೆಯಲ್ಲಿ ಕಳುವು

ಲಂಡನ್ನಿನ ಡೌನಿಂಗ್ ರಸ್ತೆಯಲ್ಲಿರುವ ಬ್ರಿಟಿಷ್ ಪ್ರಧಾನಿಗಳ ಸುಪ್ರಸಿದ್ಧಭವನವಾದ ಹತ್ತನೇ ನಂಬರಿನ ನಿವಾಸಕ್ಕೆ ಸೇರಿರುವ ಹನ್ನೊಂದನೇ ನಂಬರಿನ ಮನೆಗೆ ಆಗಸ್ಟ್ ಎಂಟನೆತಾರೀಖು ಕಳ್ಳರು ನುಗ್ಗಿದ್ದ ಕಥೆಯು ಈಗತಾನೆ ವರದಿಯಾಗಿದೆ ಆಗ ಅಲ್ಲಿ ಬಿಡಾರಮಾಡಿದ್ದ ಬ್ರಿಟಿಷ್ ಹಣಕಾಸಿನ ಪ್ರಧಾನಿ ಡಾ|| ಹ್ಯೂ ಡಾಲ್ಟನ್‌ರವರ ಸಿಗರೆಟ್ ಪೆಟ್ಟಿಗೆಯೂ ಕೆಲವು ಕಾಗದ ಪತ್ರಗಳೂ ಅಪಹರಿಸಲ್ಪಟ್ಟುವು ಜೇಡೊಂದು ಆಪಾದನೆಯಮೇಲೆ ವಿಚಾರಣೆಗೆ ಗುರಿಯಾಗಿದ್ದ ಅಪರಾಧಿಯು ತಾನೇ ಈ ಕೃತ್ಯವನ್ನು ಮಾಡಿದುದಾಗಿ ಒಪ್ಪಿಕೊಂಡಾಗ ಈ ಅಂಶವು ಹೊರಬಿತ್ತು

ಚಕ್ರವರ್ತಿಗಳ ಭೇಟಿ ಮುಂದೆ ಹಾಕಬೇಕು

ಬರುವ ವರ್ಷ ಮಾರ್ಚಿ ತಿಂಗಳಲ್ಲಿ ಬ್ರಿಟಿಷ್ ಚಕ್ರವರ್ತಿ ದಂಪತಿಗಳು ದಕ್ಷಿಣ ಆಫ್ರಿಕಕ್ಕೆ ಭೇಟಿ ಕೊಡಲಿರುವರೆಂಬ ಇದಕ್ಕಾಗಿ ಸಿದ್ಧತೆಗಳೂ ಆಗುತ್ತಿವೆ ಚಕ್ರವರ್ತಿಗಳ ಪ್ರಜೆಗಳ ಪೈಕಿ ಒಂದು ಪಂಗಡದರಿಗೆ ಮತ್ತೊಂದು ಪಂಗಡದವರಿಂದ ಆಗುತ್ತಿರುವ ಅಪಚಾರವು ತಪ್ಪಿ ಶಾಂತಿ ಸೌಹಾರ್ದಗಳು ನೆಲೆಸುವ ವರೆಗೂ ಈ ಭೇಟಿಯನ್ನು ಮುಂದಕ್ಕೆ ಹಾಕಬೇಕೆಂದೂ, ಇಂತಹ ಸಮಾರಂಭಗಳಲ್ಲಿ ಭಾರತೀಯರು ಸಂತೋಷದಿಂದ ಭಾಗಿಗಳಾಗುವರೆಂದು ಭಾವಿಸುವುದು ಸರಿಯಲ್ಲವೆಂದು ಸೂಚಿಸಿ ಅಲ್ಲಿನ ಭಾರತೀಯ ಕಾಂಗ್ರೆಸ್ ಕಾರ್ಯದರ್ಶಿ ಮೀರ್‌ರವರು ಸ್ವಾಗತ ಸಮಿತಿಯವರಿಗೆ ತಿಳಿಸಿರುತ್ತಾರೆ

ಕಮ್ಯೂನಿಸ್ಟ್ ಸಂಗಡದ ಮೇಲೆ ಪ್ರತಿಬಂಧಕವೇ ?

ಕೆಲಸಗಾರರನ್ನು ಮುಷ್ಕರಕ್ಕೆ ಪ್ರೇರೇಪಿಸುವುದಲ್ಲದೆ, ಕೋಮು ಗಲಭೆಗಳಿಗೂ ಸಿದ್ಧತೆ ಮಾಡುತ್ತಿರುವರೆಂಬ ಆಪಾದನೆ ಮೇಲೆ ಕಮ್ಯೂನಿಸ್ಟ್ ಸಂಗಡದವರನ್ನು ಕ್ರಮ ಸಂಸ್ಥೆಯವರೆಂದು ಸಾರಲು ಸಂಯುಕ್ತ ಪ್ರಾಂತದವರು ಆಲೋಚಿಸುತ್ತಿರುವರೆಂದು ವರದಿಯಾಗಿದೆ.

ಬೋಸ್ ಸರ್ಕಾರದ ಮಂತ್ರಿಗಳ ಖುಲಾಸೆ

ಸುಭಾಷ್ ಬೋಸರು ಸ್ಥಾಪಿಸಿದ ಆಜಾದ್ ಹಿಂದ್ ಸರ್ಕಾರದ ಅಧಿಕಾರಿಗಳಾಗಿದ್ದ ಮಣಿಲಾಲ್ ದೇಸಾಯಿ ಮತ್ತು ನೇತಾಜಿಸಿಥ ಸಮಿತಿಯ ಐದು ಜನ ಸದಸ್ಯರು ಹಾಂಗ್ ಕಾಂಗ್ ಮತ್ತು ಒಸಾತ್ಯದ ಮಹಿಳೆಯ ಆಪಾದನೆಯಮೇಲೆ ಬ್ರಿಟಿಷ್ ಸರ್ಕಾರದವರಿಂದ ವಿಚಾರಣೆಗೆ ಗುರಿಪಡಿಸಲ್ಪಟ್ಟಿದ್ದವು ಬಾಬು ಶರತ್ ಚಂದ್ರಬೋಸರ ಮೂಲಕ ಪಂಡಿತ ನೆಹರೂರವರು ಮಾಡಿದ್ದ ಕೋರಿಕೆಯನ್ನು ಮನ್ನಿಸಿ ಬರ್ಮಾಸರ್ಕಾರದವರು ಸರ್ವರ ಮೊಕದ್ದಮೆಯನ್ನು ವಾಪಸ್ಸು ತೆಗೆದುಕೊಂಡರೆಂದು ತಿಳಿದುಬಂದಿದೆ

ಮಿರವಣಿಗೆಯ ಮೃದಂಗ ಸಹ ಏರ್ಪಡಿಸಿರುತ್ತೆ. ಸರ್ವರೂ ದಯಮಾಡಿಸಬೇಕಾಗಿ ಸಂಘದ ಕಾರ್ಯದರ್ಶಿಯವರು ಪ್ರಾರ್ಥಿಸಿರುತ್ತಾರೆ

ಸಾಧ್ವಿ

ತಾ|| ೧೬-೯-೪೬ ಸೋಮವಾರ

ಒತ್ತಾಯದ ಸಮಾಜ ಸೇವೆ

ಸಂಯುಕ್ತ ಪ್ರಾಂತದ ಸರ್ಕಾರದವರು ವಿದ್ಯಾಭ್ಯಾಸ ಕ್ರಮದಲ್ಲಿ ಕ್ರಾಂತಿಕಾರಕವಾದ ಸುಧಾರಣೆಯನ್ನು ಕೈಗೊಳ್ಳಲಿದ್ದಾರೆ ಹೈಸ್ಕೂಲು ವಿದ್ಯಾಭ್ಯಾಸವನ್ನು ಮುಗಿಸಿದ ನಂತರ ಪ್ರತಿಯೊಬ್ಬ ವಿದ್ಯಾರ್ಥಿಯೂ ಕಡೆಯ ಪಕ್ಷ ಒಂದು ವರ್ಷವಾದರೂ ಸಮಾಜ ಸೇವೆಯನ್ನು ಮಾಡಬೇಕೆಂದು ಒತ್ತಾಯಪಡಿಸಲಾಗುವುದು ಹಾಗೆ ಮಾಡಿದಲ್ಲದೆ ಅವರು ಸರ್ಕಾರಿ ನೌಕರಿಗಳಿಗಾಗಲೀ ಅಥವಾ ಸಾರ್ವಜನಿಕ ಸಂಸ್ಥೆಗಳ ಸ್ಥಾನಮಾನಗಳಿಗಾಗಲೀ ಅರ್ಹತೆಯನ್ನು ಹೊಂದುವುದಿಲ್ಲ. ಮುಖ್ಯವಾಗಿ ವಿದ್ಯಾರ್ಥಿಗಳು ಗ್ರಾಮಾಂತರ ಪ್ರದೇಶಗಳಲ್ಲಿ ನೆಲಸಿ ರೈತರ ಏಳಿಗೆಗಾಗಿ ಕೆಲಸ ಮಾಡಬೇಕು

ಪಟ್ಟಣಗಳಲ್ಲಿ ಗಳಿಸಿದ ವಿದ್ಯೆಯೂ ಜೀವನದ ಸೌಲಭ್ಯಗಳೂ ಹಳ್ಳಿಗಳಲ್ಲಿ ದೊರೆಯುವುದಿಲ್ಲ ಗ್ರಾಮಗಳಲ್ಲಿಯೇ ನೆಲಸುವುದರಿಂದ ವಿದ್ಯಾರ್ಥಿಗಳಿಗೆ ಗ್ರಾಮಗಳ ವಿದ್ಯಮಾನಗಳ ಅರಿವು ಚೆನ್ನಾಗಿ ಗೊತ್ತಾಗುವುದು. ಮತ್ತು ಹಳ್ಳಿಯ ಪರಿಸರ ತಮ್ಮ ಕಷ್ಟನಿಷ್ಠುರಗಳನ್ನು ಅವರಿಗೆ ತಿಳಿಸಲು ಅವಕಾಶವಾಗುವುದು 'ಹಳ್ಳಿಗಳ ದೇಶವಾದ ಭರತಖಂಡದಲ್ಲಿ ನಾಡಿನ ತರುಣ ತರುಣಿಯರ ಸೇವೆಯು ವಿಶೇಷವಾಗಿ ಹಳ್ಳಿಗಳಲ್ಲಿಯೇ ಬೇಕಾಗಿದೆ. ವಿದ್ಯಾರ್ಜನೆಯನ್ನು ಮಾಡಿದನಂತರ ನಮ್ಮ ಯುವಕರು ಹಳ್ಳಿಗಳ ಏಳಿಗಾಗಿಯೇ ದುಡಿಯಬೇಕಾಗಿದೆ.

ನಿರಕ್ಷರತೆಯ ನಿರ್ಮೂಲ, ಗ್ರಾಮ ಕೈಗಾರಿಕೆಯ ಪುನರುದ್ಧಾರ, ಮದ್ಯಪಾನ ನಿರೋಧ, ಕೋಮುವಾರು ಐಕಮತ್ಯ- ಇವೇ ಮುಂತಾದುವುಗಳಿಗಾಗಿ ವಿದ್ಯಾರ್ಥಿಗಳು ಶ್ರಮಿಸಬೇಕೆಂದು ಈ ಯೋಜನೆಯ ಪ್ರಕಾರ ಗೊತ್ತುಮಾಡಲಾಗಿದೆ ಹೀಗೆ ವಿದ್ಯಾರ್ಥಿಗಳು ಸಹಸ್ರಾರು ಸಂಖ್ಯೆಯಲ್ಲಿ ಸಮಾಜ ಸೇವೆಯಲ್ಲಿ ಮುಂದೆ ಬರುವುದರಿಂದ ಅವರಿಗೆ ಉತ್ತಮ ಪಾಠ ಶಿಕ್ಷಣವು ದೊರೆಯುವುದಲ್ಲದೆ ಬಡ ಜನರಿಗೂ ಬಹಳ ಉಪಕಾರವಾಗುವುದು. ಮುಂದೆ ಅವರು ಕೈಗೊಳ್ಳುವ ಕೆಲಸವನ್ನು ಯಶಸ್ವಿಯಾಗಿ ನಡೆಸಲೂ ಸಹಾಯವಾಗುವುದು. ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೆ ಈ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ದೊರೆಯುವ ಶಿಕ್ಷಣವು ಒಂದು ರಾಷ್ಟ್ರೀಯ ಸಂಪತ್ತಾಗಿಯೇ ಪರಿಣಮಿಸುವುದು

ಆಧುನಿಕ ವಿದ್ಯೆಯು ಹೆಚ್ಚಿದಂತೆಲ್ಲಾ ಹಳ್ಳಿಯ ಜನರೊಡನೆ ಸಂಸರ್ಗವು ಕಡಿಮೆಯಾಗುವುದೆಂಬ ಅಪಪ್ರಥೆಯು ಬಂದಿರುತ್ತದೆ ಇದನ್ನು ತಪ್ಪಿಸಲು ಮೇಲ್ಕಂಡ ಯೋಜನೆಯು ಅತ್ಯಂತ ಉಪಯುಕ್ತವಾಗಿರುವುದು ನಮ್ಮ ಮೈಸೂರು ವಿಶ್ವವಿದ್ಯಾಲಯದಲ್ಲಿಯೂ ಇದೇ ಬಗೆಯ ಒಂದು ಸೂಚನೆಯು ಹಲವು ದಿನಗಳ ಹಿಂದೆ ಬಂದು ಅದು ಕೇವಲ ಸರಸ್ವತೀ ಪ್ರಸನ್ನದಲ್ಲಿ ಇರುವುದಾಗಿ ತಿಳಿಯಬಂದಿದೆ. ವಿದ್ಯಾಲಯದವರು ಈ ಬಗ್ಗೆ ನಿರ್ದಿಷ್ಟವಾದ ಯಾವ ಕಾರ್ಯಕ್ರಮವನ್ನೂ ಕೈಗೊಂಡಂತೆ ಕಾಣುವುದಿಲ್ಲ ಸಂಯುಕ್ತ ಪ್ರಾಂತದವರ ನಡೆಸುವ ಪ್ರಯೋಗವನ್ನು ನೋಡಿದಮೇಲೆ ಯಾದರೂ ಅದನ್ನು ಇಲ್ಲಿ ಅನುಸರಿಸಲೆಂದು ಹಾರೈಸೋಣ

ವಾರ ಭವಿಷ್ಯ

೧೬-೯-೪೬ ರಿಂದ ೨೨-೯-೪೬ ರ ವರೆಗೆ

(ಶ್ರೀ ನಿತ್ಯಾನಂದ ಸ್ವಾಮಿಗಳವರಿಂದ)

ಮೇಷ—ವ್ಯಾಪಾರಾದಿ "ಉದ್ಯೋಗಗಳಲ್ಲಿ ತೊಂದರೆ, ಮಿತ್ರರೊಡನೆ ವಿರೋಧ, ಆಪ್ತರಿಗೆ ಖಾಯಿಲೆ, ಕೋರ್ಟು ವ್ಯವಹಾರಗಳಲ್ಲಿ ವಿಪರೀತ ವೈಷಮ್ಯ ವಿಶೇಷ ಖರ್ಚು. ಪತ್ನಿಯ ಆರೋಗ್ಯಕ್ಕೆ ಧಕ್ಕೆ ತಗಲುತ್ತದೆ.

ವೃಷಭ—ಆರೋಗ್ಯ ಉತ್ತಮವಾಗಿರುತ್ತದೆ. ಧನಾದಾಯ ಚೆನ್ನಾಗಿರುತ್ತದೆ ವ್ಯಾಪಾರ, ಉದ್ಯೋಗಗಳಲ್ಲಿ ಮುನ್ನಡೆ, ತಾ|| ೧೯-೨೦ ರಲ್ಲಿ ಮಹತ್ವದ ಪತ್ರಗಳು ಬರುವುವು ಆಪ್ತ ಜನರ ಭೇಟಿ.

ಮಿಥುನ—ವಿದ್ಯಾಭ್ಯಾಸಕ್ಕೆ ಅಡಚಣೆ. ಉದ್ಯೋಗಗಳಲ್ಲಿ ಸೋಲು, ಖರ್ಚು ಜಾಸ್ತಿ. ಮಾನಸಿಕ ಜಡತ್ವ. ತಾ|| ೧೬-೧೭ ವೆಚ್ಚ ಜಾಸ್ತಿ.

ಕಟಕ—ಆರೋಗ್ಯ ಸಾಧಾರಣ ಹಣದ ತೊಂದರೆ ವಿಪರೀತ. ವಾಹನಾದಿಗಳಿಂದ ಅಪಘಾತ ಶತ್ರು ಬಲ ಜಾಸ್ತಿ. ನೆರೆಯವರೊಡನೆ ಕಲಹ. ತಾ|| ೧೯-೨೦ ದುಷ್ಟ ವಾರ್ತೆ.

ಸಿಂಹ—ಕೋರ್ಟು ವ್ಯವಹಾರಗಳಲ್ಲಿ ಜಯ, ವ್ಯಾಪಾರ ಉದ್ಯೋಗಗಳಲ್ಲಿ ಗೆಲುವು. ಆರೋಗ್ಯ ಉತ್ತಮ. ತಾ|| ೧೯ ರಲ್ಲಿ ಅನಿರೀಕ್ಷಿತ ಧನಲಾಭ. ಆಪ್ತರ ಭೇಟಿ.

ಕನ್ಯಾ—ಮಿತ್ರರೊಡನೆ ಮನಸ್ತಾಪ ವಿಪರೀತವಾದ ಖರ್ಚು. ತಾ|| ೧೬-೧೭ ರಲ್ಲಿ ಧನಲಾಭ. ಪತ್ನಿಗೆ ಖಾಯಿಲೆಯಾಗಬಹುದು. ವ್ಯಾಪಾರ ಉದ್ಯೋಗಗಳಲ್ಲಿ ಬೇಸರಿಕೆ.

ತುಲಾ—ಆರೋಗ್ಯ ಚೆನ್ನಾಗಿರಲಾರದು ಕುಟುಂಬದ ಆರೋಗ್ಯವೂ ಸಾಧಾರಣ. ವ್ಯಾಪಾರ ಉದ್ಯೋಗಗಳಲ್ಲಿ ತೊಂದರೆ. ವಿಪರೀತವಾದ ಖರ್ಚು. ತಾ|| ೧೬-೧೭ ಶತ್ರು ಪೀಡೆ, ತಲೆಗೆ ಏಟು ಬೀಳಬಹುದು. ಜಗಳ.

ವೃಶ್ಚಿಕ—ವ್ಯಾಪಾರ, ನೌಕರಿಗಳಲ್ಲಿ ಮೇಲ್ಪಟ್ಟವರೊಡನೆ ಜಗಳ, ಪ್ರವಾಸವನ್ನು ನಿಲ್ಲಿಸುವುದು ಉತ್ತಮ. ತಾ|| ೧೮-೧೯ ಧನ ನಾಶ. ಶತ್ರು ಪೀಡೆ.

ಧನುಸ್ಸು—ಆರೋಗ್ಯ ಉತ್ತಮ ವ್ಯಾಪಾರ ಉದ್ಯೋಗಗಳಲ್ಲಿ ಶತ್ರುಗಳ ಕಾಟ ತಪ್ಪುವುದು. ದಾನಧರ್ಮಗಳಲ್ಲಿ ಜಯ. ತಾ|| ೨೦-೨೧ ಖರ್ಚು ಜಾಸ್ತಿ, ಕೊಂಚ ಬೇಜಾರು.

ಮಕರ—ಧಾರ್ಮಿಕ ತೊಂದರೆ ಬಹಳ. ಮನೆಯವರಿಂದಲೇ ಅಸ್ವಾಸ್ಥ್ಯ ವ್ಯಾಪಾರ ಉದ್ಯೋಗಗಳಲ್ಲಿ ಬಹಳ ದೇಹಶ್ರಮವಾಗುವುದು. ತಾ|| ೧೮-೧೯ ತಪ್ಪು ಕಾರಣಗಳಿಂದ ಖರ್ಚು. ಮನೋ ವೇದನೆ ಜಾಸ್ತಿ.

ಕುಂಭ—ಸಾಂಪತ್ತಿಕ ಸ್ಥಿತಿ ಸುಧಾರಿಸುವುದು ಆರೋಗ್ಯ ಉತ್ತಮ ಮೇಲ್ಪಟ್ಟವರಿಂದ ಗೌರವ 'ಮಹತ್ವ ಪತ್ರಾಗಮನ ತಾ|| ೧೬-೧೭ ಮನರಂಜನೆಗಾಗಿ ವಿಶೇಷವಾದ ವೆಚ್ಚ.

ಮೀನ—ಆರೋಗ್ಯ ಸಾಧಾರಣ. ವ್ಯಾಪಾರ ಉದ್ಯೋಗಗಳಲ್ಲಿ ಸೋಲು. ಸಾಂಪತ್ತಿಕ ಸ್ಥಿತಿ ಅಷ್ಟೇನೂ ಹಿತಕರವಾಗಿರಲಾರದು. ತಾ|| ೧೮-೧೯ ಧನ ಚಿಂತೆ: ಪ್ರಾಣಿಗಳಿಂದ ಹಾನಿ, ಅಸಂತೋಷ ಸಮಾಚಾರ.

ಡೈರೆಕ್ಟರುಗಳ ಚುನಾವಣೆ

ಮೈಸೂರು ೧೬

ನೆನ್ನೆ ಸಿಟಿ ಕೋ-ಆಪರೇಟೀವ್ ಬ್ಯಾಂಕಿನ ಚುನಾವಣೆ ನಡೆದು ಈ ಕೆಳಗೆ ಕಂಡವರು ಹೊಸ ಸಾಲಿನ ಡೈರೆಕ್ಟರುಗಳಾಗಿ ಆರಿಸಲ್ಪಟ್ಟಿದ್ದಾರೆ:—

ಶ್ರೀಗಳಾದ, ಸಿ. ನರಸಿಂಹಯ್ಯ, ಬಿ ಎ. ನಂಜುಂಡಯ್ಯ, ಕೆ. ನಂದಿಬಸಪ್ಪ, ಟಿ ಗುಂಡಪ್ಪ, ಎ. ವಿ ರಂಗರಾವ್, ಡಿ ಬಿ. ಕೃಷ್ಣಪ್ಪ, ಡಿ. ಜನಾರ್ಧನನಾಯ್ಡು, ಡಬ್ಲ್ಯು. ಎಚ್. ಥಿಯೋಬಾಲ್ಡ್, ಚೌಡಯ್ಯ, ಎಚ್ ಅಬ್ದುಲ್ ಗಫ್ಫಾರ್, ಟಿ. ಚಂದ್ರಶೇಖರಗೌಡ, ಎಚ್. ಕೃಷ್ಣಮೂರ್ತಿರಾವ್, ಎಚ್. ರಾಮಣ್ಣ, ನಂಜನಗೂಡು ಶ್ರೀಕಂಠಶಾಸ್ತ್ರಿ, ಶ್ರೀಮತಿ ಪಿ ಎಸ್. ವೆಂಕಮ್ಮ.

ವಿದ್ಯಾರ್ಥಿನಿಯರ ಸಂಘ

ಮೊನ್ನೆ ಮಹಾರಾಣಿ ನೇಟಿವ್ ಗರ್ಲ್ಸ್ ಸ್ಕೂಲಿನ ಮೇಲ್ಕಂಡ ಸಂಘದ ಈ ಸಾಲಿನ ಆರಂಭ ಭಾಷಣವನ್ನು ಮಾಡುತ್ತಾ ನಗರದ ಪ್ರಾಥಮಿಕ ಶಾಲಾಧಿಕಾರಿಗಳಾದ ಶ್ರೀ|| ಬಿ. ಕೆ ಸತ್ಯಬೋಧಾಚಾರ್ಯರು ಬೋಧಕರನ್ನೂ ವಿದ್ಯಾರ್ಥಿನಿಯರನ್ನೂ ಕುರಿತು ಸ್ಫೂರ್ತಿದಾಯಕ ವಾಗಿ ಮಾತನಾಡಿದರು. ವಂದನಾರ್ಪಣೆ ಮತ್ತು ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯೊಡನೆ ಕಾರ್ಯಕ್ರಮವು ಮುಗಿಯಿತು.

ಗಣಪತಿ ಉತ್ಸವ

ಶ್ರೀಮನ್ಮಹಾರಾಜರವರ ಛತ್ರದಲ್ಲಿ ಮೊನ್ನೆ ಗಣಪತಿ ಉತ್ಸವಸನೋತ್ಸವವು ಛತ್ರದ ವ್ಯವಸ್ಥಾಪಕರಾದ ಶ್ರೀ ರಾಮರಾಯರ ನೇತೃತ್ವದಲ್ಲಿ ನಡೆದು ಸಂಸ್ಕೃತ ಪಾಠಶಾಲಾ ವಿದ್ಯಾರ್ಥಿಗಳಿಂದ ಮುಖ್ಯ ಬೀದಿಗಳಲ್ಲಿ ಮೆರವಣಿಗೆಯು ವೈಭವದಿಂದ ಜರುಗಿತು.

Edited, printed and published by A. R. Nagarajan at the Sadhvi Press D. Subbiah Road, Mysore.

ಪುಸ್ತಕಗಳ ತೊಂದರೆ

ಹೈಸ್ಕೂಲುಗಳು ತೆರೆದು ನಾಲ್ಕು ತಿಂಗಳಾದುವು. ಪಾಠಗಳೆಲ್ಲವೂ ಪ್ರಾರಂಭವಾಗಿರುವುದಲ್ಲದೆ ಮೊದಲನೆ ಟರ್ಮ್ ಪರೀಕ್ಷೆಗಳು ಕೂಡ ನಡೆಯುತ್ತಿವೆ. ಹೀಗಿರುವಾಗ ಇನ್ನೂ ಕನ್ನಡ ಪದ್ಯಪದ್ಯ ಪುಸ್ತಕವು ಪ್ರಕಟನ ಶಾಖೆಯಿಂದ ಹೊರಬೀಳದಿರುವುದು, ಶೋಚನೀಯವಾದ ವಿಷಯವಾಗಿದೆ. ಎಜುಕೇಷನ್ ಆಫೀಸಿನ ಗುಮಾಸ್ತರು ನಾಳೆ ನಾಳೆ ಎಂದು ಕಾಲ ತಳ್ಳುತ್ತಿದ್ದಾರೆ. ಇದರಿಂದ ವಿದ್ಯಾರ್ಥಿಗಳಾದ ನಾವು ಮುಂದೆ ಬಹಳ ತೊಂದರೆಗೆ ಈಡಾಗಬೇಕಾಗುವುದು. ಪುಸ್ತಕಗಳು ಮೈಸೂರಿಗೆ ಬಂದಿಲ್ಲವೋ ಅಥವಾ ಬೇರಾವ ಅಕ್ರಮವೋ ತಿಳಿಯಲಸಾಧ್ಯವಾಗಿದೆ. ಎಜುಕೇಷನ್ ಆಫೀಸಿನವರು ಇದನ್ನು ಏತಕ್ಕೆ ಗಮನಕ್ಕೆ ತೆಗೆದುಕೊಂಡು ಪರಿಶೀಲಿಸಿಲ್ಲವೋ ತಿಳಿಯದು. ದಯವಿಟ್ಟು ಇನ್ನಾದರೂ ಗಮನಕ್ಕೆ ತೆಗೆದುಕೊಂಡು ಆದಷ್ಟು ಬೇಗ ಪದ್ಯ ಪುಸ್ತಕವನ್ನು ದೊರಕಿಸಿಕೊಡಬೇಕೆಂದು, ವಿದ್ಯಾರ್ಥಿಗಳಾದ ನಾವು ವಿದ್ಯಾ ಇಲಾಖೆಯ ಪ್ರಮುಖಾಧಿಕಾರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇವೆ. ನೊಂದ ವಿದ್ಯಾರ್ಥಿಗಳು

ಯಕ್ಷ ಗಾನ

ಶ್ರೀ ಹನುಮತ್ಸಂಕಲ್ಪ ಚಾಮುಂಡೇಶ್ವರಿ ಯಕ್ಷ ಗಾನ ಪುನರುಜ್ಜೀವಿನೀ ಸಂಘದವರಿಂದ ಮೈಸೂರು ಹಳೇ ಸಂತೇಪೇಟೆ ಪ್ರಸನ್ನ ನಂಜುಂಡೇಶ್ವರ ಸ್ವಾಮಿ ದೇವಾಲಯದಲ್ಲಿ ಈ ದಿನ ರಾತ್ರಿ ೯ ಘಂಟೆಗೆ ಲಕ್ಷ್ಮಣ ಸಂಜೀವಿನಿ ಎಂಬ ಕಥೆಯು ಮುನಿಸಿಪಲ್ ಕೌನ್ಸಿಲರ್ ಶ್ರೀ|| ಚೌಡಯ್ಯನವರ ನೇತೃತ್ವದಲ್ಲಿ ನಡೆಸಲ್ಪಡುತ್ತದೆ ಸರ್ವರಿಗೂ ಆಹ್ವಾನವಿದೆ

ಮಹಾತ್ಮರಿಗೆ ಡಾಕ್ಟರ್ ಪ್ರಶಸ್ತಿ

ನಾಗಪುರ ವಿಶ್ವವಿದ್ಯಾಲಯದ ಕಾರ್ಯಮಂಡಲಿಯಲ್ಲಿ ಮಹಾತ್ಮ ಗಾಂಧಿಯವರಿಗೆ 'ಡಾಕ್ಟರ್ ಆಫ್ ಲೆಟರ್ಸ್' ಪ್ರಶಸ್ತಿ ಕೊಡಲು ನಿರ್ಧರಿಸಿದ್ದಾರೆ.

ಸಾಧ್ವಿ

ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ

ಕೂಡಲೇ ಚಂದಾದಾರರಾಗಿರಿ

(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)

ಜಾಹಿರಾತಿನ ದರಗಳಿಗೆ ವಿಚಾರಿಸಿರಿ

ಟಿ. ಸಿ. ನಟರಾಜ್ ಔಷಧಾಲಯ

ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಆಗತ್ಯವಾಗಿ ಬೇಕಾದ ಎಲ್ಲಾ ಇಂಗ್ಲೀಷ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತವ್ಯಾಧಿಗಳಿಗೆ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದೀಯ ಔಷಧಗಳೆಲ್ಲವೂ ದೊರೆಯುತ್ತವೆ.

RAJKAMAL, MYSORE

'BURN'EM UP BARNES'

A thrilling Serial from 14—9—46 for 5 days.

'ಬರ್ನ್ ದೆಂ ಅಪ್ ಬಾರ್ನ್ಸ್'

ರೋಮಾಂಚಕವಾದ ಫೂರ್ತಿ ಸೀರಿಯಲ್

14—9—46 ರಿಂದ ೫ ದಿನಗಳು.

19-9-46 ರಿಂದ 1 ದಿನಗಳು, ಪ್ರತಿದಿನ 10-40 ಕ್ಕೆ

'ದುರ್ಗ' ಭೂಮಿಕೆ. ದೇವಿಕಾರಾಣಿ, ಮನ್ಮಥ ಅಲಿ

ಫೋ. ನಂ. 302 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾ

ಸಂಪುಟ ೫] ಮಂಗಳವಾರ ೧೬—೯—೪೭ [ಸಂಚಿಕೆ ೪೫

ಮಧ್ಯ ಪ್ರಾಚ್ಯಕ್ಕೆ — ಅಜಾದರ ರಾಯಭಾರ

ನವರಾತ್ರಿ ದರ್ಬಾರುಗಳು

ಮೈಸೂರು ೧೬

ಈ ತಿಂಗಳು ೨೫ ನೇ ತಾರೀಖಿನಿಂದ ... ೩ ನೇ ತಾರೀಖಿನವರೆವಿಗೆ ಅರಮನೆಯಲ್ಲಿ ನಡೆಯುವ ನವರಾತ್ರಿ ಮಹೋತ್ಸವದ ಕಾರ್ಯಕ್ರಮಗಳು ಈ ರೀತಿ ಇವೆ:— ... ನೇ ತಾ॥ ಗುರುವಾರ ಬೆಳಿಗ್ಗೆ ೧೦ ೩೦ ಗೆ ಶ್ರೀಮನ್ಮಹಾರಾಜರು ದರ್ಬಾರು ... ದಯಮಾಡಿಸಿ ಸನ್ನೊಂದು ... ಸಿಂಹಾಸನಾರೋಹಣವನ್ನು ... ದಿವಾನರು, ಅಸ್ಸಿ ಕಾರ್ಯದರ್ಶಿ, ... ನ್ಯಾಯಾಧೀಶರು, ಮಂತ್ರಿಗಳು, ... ಸಭಾಧ್ಯಕ್ಷರು, ಪ್ರೈಸ್ ಛಾನ್ಸಲರು, ... ಸೆಕ್ರೆಟರಿಯವರು ಮತ್ತು ಇತರ ... ಅರಸರುಗಳಿಂದ ನಜರು ... ವುದು. ಸಂಜೆ ಆರು ಗಂಟೆಗೆ ಪಟ್ಟದ ... ಮತ್ತು ಪಟ್ಟದ ಕುದುರೆ ಸೋಮೇಶ್ವರ ದೇವಸ್ಥಾನಕ್ಕೆ ಬಿಜ ಮಾಡುವುದು. ... ದಿನವೂ ಸಂಜೆ ೭ ಗಂಟೆಗೆ ದರ್ಬಾರು, ... ಪ್ರತಿ ಪ್ರಾತಃಕಾಲ ೮ ಗಂಟೆಗೆ ... ಆನೆ ಮತ್ತು ಕುದುರೆ ಸೋಮೇಶ್ವರ ದೇವಸ್ಥಾನಕ್ಕೆ ಬಿಜ ಮಾಡುವುದು. ... ಬರ್ ನಾಲ್ಕನೇ ಶುಕ್ರವಾರ ಬೆಳಿಗ್ಗೆ ... ಗಂಟೆಗೆ ಪಟ್ಟದಾನೆ, ಕುದುರೆ ಮತ್ತು ... ಸೋಮೇಶ್ವರ ದೇವಸ್ಥಾನಕ್ಕೆ ... ೮-೩೦ ಗಂಟೆಗೆ ಅರಮನೆಗೆ ಬಿಜ ... ವುದು ಅನಂತರ ಆಯುಧ, ಗಜಾ ... ಗಳ ಪೂಜೆ ಸಂಜೆ ೭ ಗಂಟೆಗೆ ... ದರ್ಬಾರು. ಅಕ್ಟೋಬರ್ ೫ ತಾ॥ ಶುಕ್ರವಾರ ಬೆಳಿಗ್ಗೆ ಪೂಜೆ ಅನಂ ... ೭ ಗಂಟೆಗೆ ಆಯುಧ, ಗಜಾಶ್ವಗ ... ಬನ್ನೀಮಂಟಪಕ್ಕೆ ಬಿಜ ಮಾಡುವುವು. ... ಬಳ್ಳೀ ಕಾಳಗ. ಸಂಜೆ ೪-೩೦ ... ಗೆ ಜಂಬೂ ಸವಾರಿ ... ಪಂಜಿನ ... ಮೂಲಕ ಹೊಸ ಬನ್ನೀಮಂ ... ದ ರಸ್ತೆಯ ಮಾರ್ಗವಾಗಿ ತೆರಳಿ ಅದೇ ... ಮಾರ್ಗವಾಗಿ ಹಿಂದಿರುಗುವುದು.

ಮಾರ್ಕೆಟ್ ಪ್ರದರ್ಶನ

ಮೈಸೂರು ಪೌರಸಭೆಯ ಆಶ್ರಯದಲ್ಲಿ ... ಟೋಬರ್ ೨ ಮತ್ತು ೩ ನೇ ತಾ॥ ದೇವ ... ಮಾರ್ಕೆಟ್ಟಿನಲ್ಲಿ ಮಾರ್ಕೆಟ್ ಪ್ರದರ್ಶ ... ಫಲ ಪುಷ್ಪಗಳ ಪ್ರದರ್ಶನವನ್ನೂ ... ವಂತೆ ತೀರ್ಮಾನವಾಗಿದೆ. ಮೈಸೂ ... ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್. ನಿಜ ... ಪ್ಪನವರು ಇದರ ಆರಂಭೋತ್ಸವವ ... ನಡೆಸುವಂತೆಯೂ ಮುಂದಿನ ಅಧ್ಯಕ್ಷ ... ಶ್ರೀ ಚೆಂಗಲ್ರಾಯ ರೆಡ್ಡಿಯವರು ... ಬಹುಮಾನ ವಿನಿಯೋಗ ಮಾಡುವಂತೆ ... ಪ್ರಾರ್ಥಿಸಲ್ಪಟ್ಟಿರುವರು.

ವಿದ್ಯಾ ಗಣಪತಿ ಮಂಗಳಾರತಿ

... ಸಾಯಂಕಾಲ ೭ ಗಂಟೆಗೆ ... ತಾ॥ ಸಿದ್ಧಲಿಂಗಯ್ಯನವರ ಸಂಸ್ಕೃತ ಪಾಠಶಾಲೆಯ ವಿದ್ಯಾರ್ಥಿ ಸಂಘದವರು ... ಸಭಾಧ್ಯಕ್ಷರಾದ ಶ್ರೀ ಆರ್. ರಾಮ ... ಬಾಂಬೋರೆಯವರ ಅಧ್ಯಕ್ಷ ... ಗಣಪತಿ ಮಹಾಮಂಗಳಾರತಿಯ ... ನಡೆಸುವರು. ಆಸ್ಥಾನ ವಿದ್ವಾನ್ ಶ್ರೀ ... ನವರ ಸಂಗೀತವು ಜರುಗುವುದು. ... ನೇ ತಾ॥ ಗುರುವಾರ ಸಾಯಂಕಾ ... ಎಂ. ಸಿದ್ದಲಿಂಗಯ್ಯನವರ ಅಧ್ಯ ... ಶ್ರೀ ಹೆಚ್. ಆರ್. ಮಹಾಂತ ... ನವರ ಭಾಷಣವೂ ... ಜಲತರಂಗ ವಾದನವೂ ನಡೆ ... ಸರ್ವರಿಗೂ ಆಹ್ವಾನವಿದೆ.

ಗಿರಣಿ ಕೆಲಸಗಾರರ ಸಂಘ

ಮೈಸೂರು ೧೬

ಶ್ರೀ ಕೃಷ್ಣರಾಜೇಂದ್ರ ಗಿರಣಿ ಕೆಲಸಗಾರರ ಸಂಘದ ಆಶ್ರಯದಲ್ಲಿ ಮೊನ್ನೆ ಸಾಯಂಕಾಲ ಕೈಲಾಸ ಎದುರು ಭಾಗದ ಮೈದಾನದಲ್ಲಿ ಒಂದು ಸಭೆ ಶ್ರೀ ಟಿ. ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಇತ್ತೀಚೆಗೆ ಗಿರಣಿ ಆಡಳಿತ ವರ್ಗದವರಿಗೂ ಮತ್ತು ಕೂಲಿಗಾರರಿಗೂ ನಡೆದ ಒಪ್ಪಂದದಂತೆ ತುಟ್ಟಿ ಭತ್ಯ ೧೯-೬-೦, ರಾಗಿ ಅಲೋಯೆನ್ಸ್ ೧-೪-೦, ಹಾಜರಾತಿ ಬೋನಸ್ ೧-೧೧-೦ ಇವುಗಳನ್ನು ಆಡಳಿತ ವರ್ಗದವರು ಕೂಲಿಕಾರರಿಗೆ ಕೊಡಬೇಕಾಗಿತ್ತು; ಇವೆಲ್ಲವೂ ಬಹಳ ದುಬಾರಿಯಾದ ಕಾರಣ ಮತ್ತು ಇನ್ನಾವ ಕಡೆಯಲ್ಲಿಯೂ ಈ ರೀತಿ ಪರಿಹಾರಗಳನ್ನು ಕೂಲಿಕಾರರಿಗೆ ಕೊಡುತ್ತಿಲ್ಲವೆಂದು ತಿಳಿಸಿ, ಸ್ವಲ್ಪ ಕಡಿಮೆ ರಿಯಾಯಿತಿ ಕೇಳುವುದು ಗಿರಣಿ ಹಿತದೃಷ್ಟಿಯಿಂದ ಉತ್ತಮವೆಂದು ಆಡಳಿತ ವರ್ಗದವರು ಸೂಚನೆ ಕೊಟ್ಟಿದ್ದರು. ಇದರ ವಿಚಾರವಾಗಿ ಶ್ರೀಗಳಾದ ಬಿ. ನಾರಾಯಣಸ್ವಾಮಿ, ಸತ್ಯನಾರಾಯಣ, ಶ್ರೀಕಂಠಪ್ಪನವರು ಮಾತನಾಡಿ, ಕೂಲಿಗಾರರ ಶ್ರಮದಿಂದ ಕಾರ್ಖಾನೆಗೆ ಆದಾಯ ಅಭಿವೃದ್ಧಿ ಸಂಪಾದನೆ ಆಗಿರುವುದನ್ನು ಗಮನದಲ್ಲಿಟ್ಟು, ಕೂಲಿಗಾರರ ಹಿತವನ್ನು ಕಾಲಿಸುವುದಕ್ಕಾಗಿ ಇವರಿಗೂ ಮಿಲ್ ಅಧಿಕಾರ ವರ್ಗದವರಿಗೂ ಆಗಿರುವ ಒಪ್ಪಂದದ ಪ್ರಕಾರ ರಿಯಾಯಿತಿಗಳನ್ನು ಕೊಡುವುದು ಯುಕ್ತವೆಂದು ಹೇಳಿದರು. ಅದರಂತೆ ಒಂದು ನಿರ್ಣಯವೂ ಸಹ ಅಂಗೀಕೃತವಾಯಿತು.

ಪವರ್‌ಲೂಂ ಕೆಲಸಗಾರರ ಸಂಘ

ನಿನ್ನೆ ಸಂಜೆ ಕಾಂಗ್ರೆಸ್ ಭವನದಲ್ಲಿ ಶ್ರೀ ಟಿ. ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ನಗರದ ಪವರ್‌ಲೂಂ ಕೆಲಸಗಾರರ ಸಭೆ ಸೇರಿದ್ದರು. ಕೆಲಸಗಾರರಿಗೆ ಕೆಲಸದ ಕಾಲದ ಪರಿಮಿತಿ ಇಲ್ಲದಿರುವುದು, ತುಟ್ಟಿಭತ್ಯ ವಗೈರೆ ದೊರಕದೆ ಇರುವುದು, ಆಹಾರ ವಸ್ತುಗಳ ಬೆಲೆ ಮಿತಿಮೀರಿರುವುದು ಇವುಗಳ ಕಾರಣದಿಂದ ತಕ್ಕ ಪರಿಹಾರಗಳನ್ನು ಹೊಂದಲು ಸಂಘ ಶಕ್ತಿ ಅಗತ್ಯವಾಗಿರುವ ಪ್ರಯುಕ್ತ ಸಂಘವು ಏರ್ಪಾಡಾಯಿತು. ಶ್ರೀ ಬಿ. ನಾರಾಯಣಸ್ವಾಮಿಯವರು ಅಧ್ಯಕ್ಷರಾಗಿಯೂ ಶ್ರೀ ರಾಮಯ್ಯನವರು ಉಪಾಧ್ಯಕ್ಷರಾಗಿಯೂ ಶ್ರೀ ರಾಜು ಮತ್ತು ಗೋಪಾಲಸ್ವಾಮಿ ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

ದಾರಿದ್ರ್ಯದಿಂದ ಹೆಂಡತಿ ಮಾರಲು ಪ್ರಯತ್ನ

ಅಹಮದಾಬಾದಿನ ಬಳಿ ಖೇಡಾ ... ಬಸ್ತಿ ದಾರಿದ್ರ್ಯ ದೋಷದಿಂದ ಒಬ್ಬಾತನು ತನ್ನ ಹೆಂಡತಿಯನ್ನು ಮಾರಲು ಪ್ರಯತ್ನಿಸುವುದನ್ನು ಕಂಡ ಅವನ ಸೋದರಮಾವನಾದ ಒಬ್ಬ ಮುದುಕನು ಅಳಿಯನನ್ನೂ ಅವನ ಹೆಂಡತಿಯನ್ನೂ ಕತ್ತಿಯಿಂದ ತಿವಿದು ಕೊಂದು ಹಾಕಿ ರಕ್ತಮಯವಾದ ಕತ್ತಿಯೊಡನೆ ಪೋಲೀಸರ ವಶವಾದನೆಂದು ವರದಿಯಾಗಿದೆ.

ಪ್ರತಿಭಟನಾ ದಿನಾಚರಣೆ

ನಂಜನಗೂಡು ೧೬

ನಿನ್ನೆ ಇಲ್ಲಿನ ಕಾಂಗ್ರೆಸ್ ಸಮಿತಿಯವರು ಪ್ರತಿಭಟನಾ ದಿನಾಚರಣೆ ನಡೆಸಿದರು. ಬೆಳಿಗ್ಗೆ ರಾಷ್ಟ್ರ ಸೇವಾದಳದವರೊಡಗೂಡಿ ಪ್ರಭಾತ ಫೇರಿ ಆಯಿತು. ಅನಂತರ ಸಮಿತಿಯ ಕಾರ್ಯದರ್ಶಿ ಶ್ರೀ ಹೆಜ್ಜಿಗೆ ಲಿಂಗಣ್ಣನವರಿಂದ ರಾಷ್ಟ್ರ ಧ್ವಜ ರೋಹಣವಾಯಿತು. ಸಂಜೆ ಶ್ರೀ ಹೆಜ್ಜಿಗೆ ಮಾದಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನಡೆದು ಶ್ರೀಗಳಾದ ಮಳವಳ್ಳಿ ವೀರಪ್ಪ, ಟಿ. ಎಸ್. ಸುಬ್ಬಣ್ಣ ಮತ್ತು ಡಿ. ಎಂ. ಸಿದ್ಧಯ್ಯನವರು ಭಾಷಣ ಮಾಡಿ ರಾಜ್ಯಾಂಗ ರಚನಾ ಸಮಿತಿಗೆ ಪ್ರಜೆಗಳ ಪ್ರತಿನಿಧಿಗಳೇ ಹೋಗಬೇಕೆಂಬ ಅಂಶವನ್ನು ಒತ್ತಿ ಹೇಳಿದರು. ಇದೇ ಅಭಿಪ್ರಾಯದ ನಿರ್ಣಯವನ್ನೂ ಸಹ ಮಾಡಲಾಯಿತು.

ಪ್ರಭುಗಳ ಭೇಟಿ

ನಿವೃತ್ತ ಚೀಫ್ ಸೆಕ್ರೆಟರಿ ರಾಜ ಸೇವಾಸಕ್ತ ಎಂ. ರಾಮರಾಯರು, ಚಿತ್ರದುರ್ಗ ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀ ಕೆ. ಬಸಪ್ಪನವರು, ಕೀರ್ತನ ಕೇಸರಿ ಬಿ. ಶಿವಮೂರ್ತಿ ಶಾಸ್ತ್ರಿಗಳವರು, ನಿವೃತ್ತ ಅಮಲ್ದಾರ್ ಎ. ಮಲ್ಲರಾಜೇ ಅರಸಿನವರಿಗೆ ಈ ದಿನ ಶ್ರೀಮನ್ಮಹಾರಾಜರು ಭೇಟಿಯನ್ನು ದಯಪಾಲಿಸಿದರು.

ಕಾಂಗ್ರೆಸ್ ಚುನಾವಣೆ

ಚಾಮರಾಜನಗರ ತಾಲ್ಲೂಕಿನಿಂದ ಆ॥ ಮೈ॥ ಕಾಂಗ್ರೆಸ್ ಸಮಿತಿಗೆ ಇರುವ ಎರಡು ಸ್ಥಾನಗಳಿಗೆ ಶ್ರೀಗಳಾದ ಹೆಚ್. ಎಸ್. ದೊರೆಸ್ವಾಮಿ, ಟಿ. ಎಸ್. ಸುಬ್ಬಣ್ಣ, ಎ. ರಾಮಣ್ಣ, ಯು. ಎಲ್. ರಾಮಚಂದ್ರರಾವ್, ಎ. ಶಿವಣ್ಣ ಮತ್ತು ಬಿ. ನಾರಾಯಣಸ್ವಾಮಿಯವರು ಉಮೇದುವಾರರಾಗಿದ್ದಾರೆ. ಚುನಾವಣೆಯು ಈ ತಿಂಗಳು ೨೧ ನೇ ತಾ॥ ಭಾನುವಾರ ಬೆಳಿಗ್ಗೆ ೯ ರಿಂದ ೧೧ ರ ವರೆವಿಗೂ ಮಧ್ಯಾಹ್ನ ೪ ರಿಂದ ೬ ರ ವರೆವಿಗೂ ನಡೆಯುವುದು.

ಡಾ॥ ರಾಯನ್‌ರವರು ಇನ್‌ಛಾರ್ಜ್ ದಿವಾನರು

ಸ್ವಂ. ದು ಫೋ.] ಬೆಂಗಳೂರು ೧೬

ದಿವಾನರು ದೆಹಲಿಯಿಂದ ಹಿಂದಿರುಗುವವರೆವಿಗೆ ಮೊದಲನೇ ಮಂತ್ರಿ ಡಾ॥ ರಾಯನ್‌ರವರು ಇನ್‌ಛಾರ್ಜ್ ದಿವಾನರಾಗಿರುವರು.

ಪಟಾಕಿಗಳಿಗೆ ವಿನಾಯಿತಿ

ಮದ್ದು ಗುಂಡುಗಳ ಪ್ರಯೋಗವನ್ನು ಪ್ರತಿಬಂಧಿಸಿ ೧೯೪೬ ನೇ ನವಂಬರಿನಲ್ಲಿ ಹೊರಟಿದ್ದ ಆಜ್ಞೆಯನ್ನು ಬದಲಾಯಿಸಿ ಈ ತಿಂಗಳು ೨೦ ರಿಂದ ಅಕ್ಟೋಬರ್ ೨೭ ರ ವರೆವಿಗೆ ಪಟಾಕಿ ಮತಾಪುಗಳನ್ನು ಮಾರಲು ಸರ್ಕಾರದವರು ವಿನಾಯಿತಿ ಕೊಟ್ಟಿದ್ದಾರೆ.

• ಕೃಷ್ಣರಾಜೇಂದ್ರ ಆಸ್ಪತ್ರೆಯ ಡಾ॥ ಎ. ಸಿ. ದೇವರಾಜರವರು ತಮ್ಮ ಕೆಲಸದ ಜೊತೆಗೆ ದಿವಾನರ ಭವನವಾದ ಬೇರ್‌ಫ್ರ್ಯಾಂಗೂ ವೈದ್ಯರಾಗಿ ನೇಮಿಸಲ್ಪಟ್ಟಿದ್ದಾರೆ.

• ಶ್ರೀಗಳಾದ ಟಿ. ರಂಗಸ್ವಾಮಿ ಮತ್ತು ಬಿ. ಟಿ. ಕೆಂಪಣ್ಣನವರುಗಳನ್ನು ಡೆಪ್ಯುಟೀ ಕಮೀಷನರ ದರ್ಜೆಗೆ ಬಡ್ತಿ ಮಾಡಿ ಶ್ರೀ ರಂಗಸ್ವಾಮಿಯವರನ್ನು ಗ್ರಾಮಾಭಿವೃದ್ಧಿ ಅಧಿಕಾರಿಯನ್ನಾಗಿ ನೇಮಿಸಲಾಗಿದೆ.

• ರಜದ ಮೇಲಿರುವ ಶ್ರೀ ಜೆ. ರುದ್ರಪ್ಪನವರನ್ನು ಬೆಂಗಳೂರು ಸ್ಟಾಫ್ ಕಾಲೇಜಿಗೆ ವರ್ಗಾಯಿಸಲಾಗಿದೆ.

ಮಧ್ಯ ಪ್ರಾಚ್ಯಕ್ಕೆ ಮೌ॥ ಅಜಾದರ ರಾಯಭಾರ

ಹಿಂದೂಸ್ಥಾನದ ಪರವಾಗಿ ಮಧ್ಯ ಪ್ರಾಚ್ಯದ ಮುಸ್ಲಿಂ ರಾಷ್ಟ್ರಗಳಿಗೆ ಮೌಲಾನಾ ಅಜಾದರನ್ನು ಸ್ನೇಹ ಸೌಹಾರ್ದದ ರಾಯಭಾರಿಯನ್ನಾಗಿ ಕಳುಹಿಸಿಕೊಡಲು ಭಾರತ ಸರ್ಕಾರದ ವಿದೇಶಾಂಗ ಶಾಖೆಯವರು ನಿರ್ಧರಿಸಿರುವುದಾಗಿ ತಿಳಿದುಬಂದಿದೆ.

ಗೂಡ್ಸ್ ಟ್ರೈನ್ ಲೂಟಿ

ಲಂಗಾರ್‌ಪೈನ್ ಸಿಂಗ್‌ಬರ್ ಬಳಿಯ ಪ್ರಸ್ತೂರದಲ್ಲೇ ಶನಿವಾರ ರಾತ್ರಿ ಭಯಂಕರ ಶಸ್ತ್ರ ಸಜ್ಜಿತರಾದ ೨೦೦ ಜನ ದರೋಡೆಕೋರರು ಗೂಡ್ಸ್ ಟ್ರೈನನ್ನು ನಿಲ್ಲಿಸಿ ಅನೇಕ ಅಕ್ಕಿ ಮೂಟೆಗಳನ್ನೂ ಎಣ್ಣೆ ಡಬ್ಬಗಳನ್ನೂ ಲೂಟಿಮಾಡಿ ಹೊತ್ತುಕೊಂಡು ಹೋದರೆಂದು ವರದಿಯಾಗಿದೆ.

ಮೈಸೂರು ಅಕ್ಕಿ ಮದ್ರಾಸ್ ಮತ್ತು ತಿರುವಾಂಕೂರಿಗೆ

ಮೈಸೂರು ಸಂಸ್ಥಾನದಲ್ಲಿ ಅಕ್ಕಿ ದಾಸ್ತಾನಿನ ಪರಿಸ್ಥಿತಿಯು ಸಮರ್ಪಕವಾಗಿದೆಯೆಂದು ನಂಬಲಾಗಿರುವುದರಿಂದ ಮೊದಲು ಮೈಸೂರಿಗಾಗಿ ಮಂಜೂರು ಮಾಡಿದ್ದ ಏಳು ಸಾವಿರ ಟನ್ ಅಕ್ಕಿಯ ಸರಬರಾಜನ್ನು ಮದ್ರಾಸ್ ಮತ್ತು ತಿರುವಾಂಕೂರುಗಳಿಗೆ ವರ್ಗಾಯಿಸುವುದಾಗಿ ಮುಂಬಯಿನ ವರದಿಯೊಂದು ತಿಳಿಸುತ್ತದೆ. ಇದ್ದರಿಂದ ಮದ್ರಾಸು ಏಳು ಸಾವಿರ ಟನ್ ಅಕ್ಕಿಯನ್ನು ಈಸ್ಟ್‌ನಿಂದ ಆಮದು ಮಾಡಿಕೊಂಡು ಅದರಲ್ಲಿ ಒಂದು ಭಾಗವನ್ನು ತಿರುವಾಂಕೂರಿಗೆ ಕೊಡುವಂತೆ ತಿಳಿಸಲಾಗಿದೆ.

○ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರ ನಾಯಕತ್ವದಲ್ಲಿ ಡಾ॥ ಎಂ. ಆರ್. ಜಯಕರ್, ಸರ್. ಮಹಮ್ಮದ್ ಜಫರುಲ್ಲಾ ಜಸ್ಟಿಸ್ ಎಂ. ಸಿ. ಚಾಗ್ಲಾ ಮತ್ತು ನವಾಬ್ ಅಲಿಯಾರ್ ಜಂಗ್ ಇವರುಗಳು ಶಾಸಂಗ್ಟನ್ನಿನಲ್ಲಿ ಇರುವ ... ನೇ ತಾ॥ ನಡೆಯುವ ... ರಾಷ್ಟ್ರಗಳ ... ಭಾರತದ ಪ್ರತಿನಿಧಿಗಳಾಗಿ ... ವಾಗಿ ... ವಾಗಿ ಪ್ರಯಾಣಮಾಡುವರು.

ಸಾಧ್ವಿ

ತಾ|| ೧೭-೯-೪೬ ಮಂಗಳವಾರ

ಕಾಲೇಜುಗಳಿಂದ ವಿದ್ಯಾರ್ಥಿಗಳ ವರ್ಗೀಕರಣ

ವಿಶ್ವವಿದ್ಯಾಲಯದ ಒಂದು ಕಾಲೇಜಿನಿಂದ ಮತ್ತೊಂದು ಕಾಲೇಜಿಗೆ ವಿದ್ಯಾರ್ಥಿಗಳು ವರ್ಗವನ್ನು ಹೊಂದಲು ವಿಶೇಷವಾದ ತೊಂದರೆಯಾಗುತ್ತಿರುವುದಾಗಿ ಬಹಳ ಪ್ರಕಾರಗಳು ಬರುತ್ತಿವೆ. ಮತ್ತು ಒಂದು ಊರಿನ ವಿದ್ಯಾರ್ಥಿಯು ವಿಶ್ವವಿದ್ಯಾಲಯದವರು ಹೇಳುವ ಕಾಲೇಜಿಗೇ ಸೇರಬೇಕೆಂದು ಒತ್ತಾಯಪಡಿಸಲಾಗುತ್ತಿದೆಯೆಂದೂ ಸಹ ಆಕ್ಷೇಪಣೆಗಳು ಕೇಳಿಬರುತ್ತಿವೆ. ಅಲ್ಲದೆ ಕಾಲೇಜಿನಿಂದ ಕಾಲೇಜಿಗೆ ವರ್ಗಾಯಿಸುವ ಅಧಿಕಾರವನ್ನು ವಿಶ್ವವಿದ್ಯಾಲಯದವರು ರಿಜಿಸ್ಟ್ರಾರವರಿಗೆ ವಹಿಸಿರುವ ಸಂಬಂಧದಲ್ಲಿಯೂ ಸಹ ಅಸಮಾಧಾನದ ಪತ್ರಗಳು ಬರುತ್ತಿವೆ.

ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಜನೆ ಮಾಡುವುದು ಇಂದಿನ ಕಾಲದಲ್ಲಿ ಎಷ್ಟು ಕಷ್ಟಸಾಧ್ಯವಾದ ವಿಚಾರವೆಂಬುದನ್ನು ಹೇಳಬೇಕಾಗಿಯೇ ಇಲ್ಲ. ಅದರಲ್ಲಿಯೂ ವಿದ್ಯಾರ್ಥಿಗಳು ಓದಬೇಕಾದ ಊರು ಮತ್ತು ಕಾಲೇಜುಗಳನ್ನು ವಿಶ್ವವಿದ್ಯಾಲಯದವರೇ ನಿರ್ಧರಿಸಿದರೆ ಇನ್ನೂ ಹೆಚ್ಚು ಅಡಚಣೆಯುಂಟುಮಾಡುವುದರಲ್ಲಿ ಸಂದೇಹವಿಲ್ಲ. ತಮಗೆ ಅನುಕೂಲವಾದ ಸ್ಥಳಗಳಲ್ಲಿ ಇದ್ದುಕೊಂಡು ಫೀಜು, ಪುಸ್ತಕ, ಊಟ ವಸತಿ ಮುಂತಾದವುಗಳ ವೆಚ್ಚವನ್ನು ನೋಡಿಕೊಳ್ಳುವುದೇ ಅನೇಕರಿಗೆ ಅಸಾಧ್ಯವಾಗಿರುತ್ತದೆ. ಇವುಗಳನ್ನು ನಿರ್ವಹಿಸಲಾರದೆ ಹಲವರು ಓದುವುದನ್ನೇ ಬಿಟ್ಟುಬಿಟ್ಟಿರುವುದೂ ಉಂಟು. ಇನ್ನು ಕೆಲವರು ಕಾಲೇಜುಗಳಿರುವ ಊರುಗಳಲ್ಲಿ ನೆಂಟರಿಷ್ಟರನ್ನು ಆಶ್ರಯಿಸಿ ವಿದ್ಯಾರ್ಜನೆ ಮಾಡುತ್ತಿರುವುದೂ ಉಂಟು. ಅಲ್ಲದೆ ತಂದೆತಾಯಿಗಳಿಗೋ ಅಥವಾ ನೆಂಟರಿಷ್ಟರಿಗೋ ನೌಕರಿಗಳಲ್ಲಿ ವರ್ಗವರ್ಗಿಯಾಗಿ ತಾವೂ ಸಹ ಅವರುಗಳೊಡನೆ ಹೋಗಬೇಕಾದ ವಿದ್ಯಾರ್ಥಿಗಳೂ ಅನೇಕರಿರುವರು. ಇವರುಗಳನ್ನು ಯಾವುದೋ ಒಂದು ಕಡೆ ವ್ಯಾಸಂಗ ಮಾಡುವಂತೆ ಹೇಳುವುದು ಅವರ ಓದುವಿಕೆಗೆ ಕಲ್ಲು ಹಾಕಿದಂತೆಯೇ ಸರಿ.

ಶಾಲಾ ಕಾಲೇಜುಗಳು ದಿನದಿನವೂ ಬೆಳೆಯುತ್ತಿರುವ ಈ ಕಾಲದಲ್ಲಂತೂ ಈ ಬಗೆಯ ಒತ್ತಾಯಗಳು ಅತ್ಯಂತ ಅನುಚಿತ. ಮೇಲೆ ಹೇಳಿದ ಸಂದರ್ಭಗಳಲ್ಲಿ ವಿದ್ಯಾರ್ಥಿಗಳು ಒಂದು ಕಾಲೇಜಿನಿಂದ ಮತ್ತೊಂದು ಕಾಲೇಜಿಗೆ ವರ್ಗವನ್ನು ಹೊಂದಲು ವಿಶ್ವವಿದ್ಯಾಲಯದವರು ಧಾರಾಳವಾದ ಸೌಕರ್ಯವನ್ನು ಕಲ್ಪಿಸಿಕೊಡುವುದು ಯುಕ್ತವಾಗಿದೆ. [illegible] ಯಾರೂ ಹೀಗೆ ವರ್ಗವನ್ನು ಬಯಸುವುದಿಲ್ಲ. ಅತ್ಯಂತ ಅಗತ್ಯವಿದ್ದಲ್ಲಿ ಮಾತ್ರ ಅಪೇಕ್ಷಿಸುವರು. ವಿಶ್ವವಿದ್ಯಾಲಯದ ರಿಜಿಸ್ಟ್ರಾರವರು ತಮ್ಮಲ್ಲಿ ಬರತಕ್ಕ ಜನರನ್ನು ವಿಶ್ವಾಸದಿಂದಲೂ ಆದರದಿಂದಲೂ ಸಂಬೋಧಿಸಿ ಅವರಿಗೆ ಸೂಕ್ತವಾದ ಸಹಾಯವನ್ನು ನೀಡುವುದು ಯುಕ್ತವಾಗಿದೆ. ಈ ವಿಷಯದಲ್ಲಿ [illegible] ಇದಕ್ಕೆ [illegible] ಅಧಿಕಾರಿಗಳೂ ತಕ್ಕ ವ್ಯವಸ್ಥೆಯನ್ನು [illegible]

ವಿದ್ಯಾರ್ಥಿಗಳಿಗೆ ವಸತಿಯಿಲ್ಲ

ರಾಜಧಾನಿಯ ಕಾಲೇಜುಗಳಲ್ಲಿ ಓದುವ ಆದಿಕರ್ನಾಟಕ ವಿದ್ಯಾರ್ಥಿಗಳಿಗೆ ಇರಲು ವಸತಿಗಳಿಲ್ಲದೆ ಬಹಳ ತೊಂದರೆಪಡುತ್ತಿರುವುದಾಗಿ ಅಡ್ವೋಕೇಟ್ ಎಸ್. ಎಂ. ಸಿದ್ಧಯ್ಯನವರು ಬರೆದಿರುತ್ತಾರೆ. ಅವರಿಗಾಗಿ ನಿರ್ಮಾಣವಾಗಿದ್ದ ಕಾಲೇಜು ಹಾಸ್ಟಲನ್ನು ವಿಶ್ವ ವಿದ್ಯಾಲಯದವರೇ ತಮ್ಮ ವಶಕ್ಕೆ ತೆಗೆದುಕೊಂಡರೆಂದೂ ಆದರೂ ಕಾಲೇಜುಗಳು ತೆರೆದು ನಾಲ್ಕು ತಿಂಗಳಾದರೂ ಇನ್ನೂ ಹಾಸ್ಟಲನ್ನು ತೆರೆಯದಿರುವುದು ಬಹಳ ಶೋಚನೀಯವಾಗಿದೆಯೆಂದೂ ಅವರು ತಿಳಿಸಿರುತ್ತಾರೆ. ಈ ರೀತಿಯಲ್ಲಿ ೬೫ ಜನ ವಿದ್ಯಾರ್ಥಿಗಳು ತೊಂದರೆಗೆ ಗುರಿಯಾಗಿದ್ದಾರೆ. ಈ ಅಂಶವನ್ನು ವಿಶ್ವ ವಿದ್ಯಾಲಯದ ಅಧಿಕಾರಿಗಳ ಮತ್ತು ವಿದ್ಯಾ ಮಂತ್ರಿಗಳ ಗಮನಕ್ಕೆ ತಂದರೂ ಯಾವ ಪರಿಹಾರವೂ ದೊರೆತಿರುವುದಿಲ್ಲ. ಹಲವು ವಿದ್ಯಾರ್ಥಿಗಳು ಓದುವುದನ್ನೇ ಬಿಡುವವರಾಗಿದ್ದಾರೆ. ಈಗಲಾದರೂ ಅಧಿಕಾರಿಗಳು ಕೂಡಲೇ ಸೂಕ್ತವಾದ ವ್ಯವಸ್ಥೆ ಮಾಡಬೇಕು—ಎಂಬುದಾಗಿ ಅವರು ಹೇಳುತ್ತಾರೆ.

ಲಂಡನ್ನಿನಲ್ಲಿ ಮನೆ ನುಗ್ಗಿದವರ ದಸ್ತಗಿರಿ

ಮನೆಮಠಗಳಿಲ್ಲದ ಜನರು ಖಾಲಿ ಇರುವ ಲಂಡನ್ನಿನ ಭವನಗಳನ್ನು ಆಕ್ರಮಿಸಲು ಪ್ರೇರೇಪಿಸುತ್ತಿರುವರೆಂಬ ಆಪಾದನೆ ಮೇಲೆ ಐದು ಜನ ಪ್ರಮುಖ ಕಮ್ಯೂನಿಸ್ಟರನ್ನು ದಸ್ತಗಿರಿ ಮಾಡಲಾಗಿದೆ. ಅವರ ಪೈಕಿ ಒಬ್ಬ ಮಹಿಳೆಯೂ ಇರುವಳು. ಮುಂದಿನ ವಿಚಾರಣೆಗೆ ಪೂರ್ವಭಾವಿಯಾಗಿ ಅವರನ್ನು ಜಾಮೀನಿನ ಮೇಲೆ ಬಿಡಲಾಗಿದೆ. ಸ್ಥಳೀಯ ಸಂಸ್ಥೆಗಳಿಗೆ ಸೇರಿದ ನಿವಾಸಗಳನ್ನು ಆಕ್ರಮಿಸಿದವರಿಗೆ ವಿದ್ಯುಚ್ಛಕ್ತಿಯೇ ಮುಂತಾದ ಸೌಲಭ್ಯಗಳನ್ನು ತಪ್ಪಿಸುವಂತೆ ಆರೋಗ್ಯ ಮಂತ್ರಿ ಮಿ|| ಬೆವಿನ್ ರವರು ಸಲಹೆ ಇತ್ತಿದ್ದಾರೆ. ಆಕ್ರಮಣಕಾರರನ್ನು ಓಡಿಸಲು ಕಾನೂನಿನಲ್ಲಿ ಸಾಕಾದಷ್ಟು ಅವಕಾಶವಿಲ್ಲದೆ ತೊಂದರೆಯಾಗಿರುವುದಾಗಿಯೂ ಹೇಳಲಾಗಿದೆ.

ನಗರದ ನೀರು ಸರಬರಾಜಿನಲ್ಲಿ ಅಡಚಣೆ

ಮೈಸೂರು ವಾಣಿವಿಲಾಸ ನೀರು ಸರಬರಾಜಿನ ಇಲಾಖೆಯ ಯಂತ್ರೋಪಕರಣಗಳಲ್ಲಿ ಅಕಸ್ಮಾತ್ ಒದಗಿರುವ ಅನಿರೀಕ್ಷಿತ ತೊಂದರೆಗಳಿಂದ ಮೈಸೂರು ಪಟ್ಟಣದ ಎಲ್ಲಾ ಭಾಗಗಳಲ್ಲಿಯೂ ನೀರಿನ ಸರಬರಾಜಿಗೆ ಅಡಚಣೆಯುಂಟಾಗಿರುತ್ತದೆ. ನೀರು ಬರುವ ಮತ್ತು ನಿಲ್ಲುವ ಕಾಲವನ್ನು ಖಚಿತವಾಗಿ ತಿಳಿಸುವುದು ಸಾಧ್ಯವಿಲ್ಲದಿರುತ್ತದೆ. ಈ ಕಾರಣದಿಂದ ಮಹಾಜನಗಳು ಈ ಬಾಗಾಯತ್ತು ಒಂದು ವಾರದವರೆವಿಗೆ ನೀರು ಬಂದಾಗ [illegible] ಮಾಡಿಕೊಳ್ಳಬೇಕಾಗಿ ವಿನಂತಿ.

ಸಾಧ್ಯವಾದಷ್ಟು ಬೇಗನೆ ನೀರನ್ನು ಸ್ವಲ್ಪ ಕಾಲವಾದರೂ ನಗರದ ಎಲ್ಲಾ ಭಾಗಗಳಿಗೂ ಒದಗಿಸಲು ಪ್ರಯತ್ನಿಸಲಾಗುವುದು.

ಎ. ಕೃಷ್ಣಮೂರ್ತಿರಾವ್,
ಉಪಾಧ್ಯಕ್ಷ,
ಮೈಸೂರು ಪುರಸಭೆ.

ಹೈಸ್ಕೂಲ್ ನೌಕರರ ಮುಷ್ಕರದ ವಿಚಾರ

ಚಾಮರಾಜನಗರದ ಮುನಿಸಿಪಲ್ ಪ್ರೆಸಿಡೆಂಟ್ ಶ್ರೀ ಸಿ. ಡಿ. ನಾರಾಯಣರಾಯರು ದಿವಾನರಲ್ಲಿ ಅರಿಕೆಮಾಡಿದ ವಿಷಯ ಪ್ರಕಟವಾಗಿರುವುದು ಸರಿಯಷ್ಟೆ. ಹೈಸ್ಕೂಲ್ ನೌಕರರುಗಳಿಗೆ ನ್ಯಾಯವಾಗಿ ಪಾವತಿಯಾಗಬೇಕಾಗಿದ್ದ ಸಂಬಳ ಮತ್ತು ಅಲೋಯನ್ಸುಗಳನ್ನು ಸಕಾಲಕ್ಕೆ ಪಾವತಿ ಮಾಡದೆ ಇದ್ದುದನ್ನು ಅವರು ಶಾಲೆಯ ಪ್ರೆಸಿಡೆಂಟರಾದ ಡೆಪ್ಯುಟಿ ಕಮೀಷನರಲ್ಲಿ ಮನವಿ ಮಾಡಿಕೊಂಡರು. ಅದರ ಮೇಲೆ ಅವರು ಹೈಸ್ಕೂಲು ನೌಕರರುಗಳಿಗೆ ಸಲ್ಲಬೇಕಾಗಿದ್ದ ಮೊಬಲಗನ್ನು ಶೀಘ್ರ ಪಾವತಿ ಮಾಡುವಂತೆ ಮುನಿಸಿಪಲ್ ಪ್ರೆಸಿಡೆಂಟರಿಗೆ ಎರಡು ಹುಕುಂ ಮಾಡಿದರೂ ಕೂಡ ೧೭ ತಾ|| ಆದರೂ ಪಾವತಿ ಮಾಡದೆ ಹೋದುದರಿಂದ ನೌಕರರು ೧೭ ನೇ ತಾರೀಖು ಮಧ್ಯಾಹ್ನ ಕೆಲಸಮಾಡದೆ ಹಟಸ್ಥರಾದರು. ಈ ವಿಚಾರದಲ್ಲಿ ಹೈಸ್ಕೂಲಿನ ಸೆಕ್ರೆಟರಿಯವರು ಮುನಿಸಿಪಲ್ ಪ್ರೆಸಿಡೆಂಟರು ಎತ್ತಿದ್ದ ಕೆಲವು ಆಕ್ಷೇಪಣೆಗಳಿಗೆ ಸಮಂಜಸವಾದ ಉತ್ತರಗಳನ್ನು ಕೊಟ್ಟಿರುವುದೇ ಅವರ ದೊಡ್ಡ ತಪ್ಪೆಂದು ಆರೋಪಣೆ ಮಾಡಿರುವುದು ತುಂಬಾ ಶೋಚನೀಯ.

ಈ ದುರ್ಭಿಕ್ಷ ಕಾಲದಲ್ಲಿ ಸಂಬಳ, ೧೭ ತಾ|| ಆದರೂ ಬಾರದೆ ಇದ್ದುದರಿಂದ ನೌಕರರು ಪೂರ್ವಭಾವಿಯಾಗಿಯೇ ತಿಳಿಸಿ ಹಟಸ್ಥರಾದುದಕ್ಕೆ ಮುನಿಸಿಪಲ್ ಪ್ರೆಸಿಡೆಂಟರ ಕರ್ತವ್ಯ ಲೋಪವೇ ಕಾರಣ. ಸಂಬಳ ಕೂಡಲೇ ಪಾವತಿಯಾಗದಿದ್ದಲ್ಲಿ ಉಂಟಾಗುವ ಪರಿಣಾಮವನ್ನು ಶ್ರೀ ಸಿ. ಡಿ. ನಾರಾಯಣರಾಯರು ತಿಳಿದಿದ್ದಾಗ್ಯೂ ಮತ್ತು ೧೫ ನೇ ತಾರೀಖು ಅವರಿಗೆ ಡಿ. ಸಿ. ಯವರಿಂದ ಮತ್ತೊಂದು ಖಚಿತವಾದ ಆರ್ಡರ್ ಬಂದಿದ್ದಾಗ್ಯೂ ಅವರು ಅದನ್ನು ಉಲ್ಲಂಘಿಸಿ, ೧೭ ನೇ ತಾ|| ಕೂಡ ಸಂಬಳ ಪಾವತಿ ಮಾಡದೇ ಹೋದುದರ ಪರಿಣಾಮವೇ ಮುಷ್ಕರ. ಇದಕ್ಕೆ ಶ್ರೀ ಸಿ. ಡಿ. ನಾರಾಯಣರಾಯರು ಪೂರ್ಣ ಜವಾಬ್ದಾರರೇ ಹೊರತು ಇತರ ಮುನಿಸಿಪಲ್ ಮೆಂಬರುಗಳಾಗಲೀ, ಹೈಸ್ಕೂಲು ಸೆಕ್ರೆಟರಿ ಅಥವಾ ನೌಕರರುಗಳಾಗಲೀ ಕಾರಣರೂ ಅಲ್ಲ, ಜವಾಬ್ದಾರರೂ ಅಲ್ಲ.

ಹೈಸ್ಕೂಲು ನೌಕರರು ಸಾಧ್ಯವಾದಷ್ಟು ಶಾಂತಿಯಿಂದ ವರ್ತಿಸಿರುವರು. ಮುಷ್ಕರದ ಕಾಲದಲ್ಲಿಯೂ ಕೂಡ ಸಂಬಳ ಕೊಟ್ಟ ಕೂಡಲೇ ಕೆಲಸಕ್ಕೆ ಹಿಂತಿರುಗಲು ಹೈಸ್ಕೂಲಿನಲ್ಲಿಯೇ ಕುಳಿತಿದ್ದರು. ೧೭ರ ಬೆಳಿಗ್ಗೆ ಸಂಬಳ ಸಿಗುತ್ತದೆಯೆಂಬ ಭರವಸೆಯನ್ನು ಮುಖ್ಯೋಪಾಧ್ಯಾಯರು ಕೊಟ್ಟ ಕೂಡಲೇ ಕೆಲಸಕ್ಕೆ ಹಿಂದಿರುಗಿದರು. ವಿಷಾದಕರ ಪ್ರಸಂಗ ಉಂಟಾಗಲು ಮುನಿಸಿಪಲ್ ಪ್ರೆಸಿಡೆಂಟರ ಆತುರತೆಯೇ ಕಾರಣ.

ಜಿ. ವೆಂಕಟಶೆಟ್ಟಿ,
ಚಾಮರಾಜನಗರ.

ಶ್ರೀನಿವಾಸ
ಮೋಟಾರ್ ಸರ್ವೀಸ್
ಮೈಸೂರು—ಬೆಂಗಳೂರು

ಮೈಸೂರಿನಿಂದ ಬನ್ನೂರು, ಮಳವಳ್ಳಿ, ಹಲಗೂರು, ಸಾತನೂರು, ಕಗ್ಗಲಹಳ್ಳಿ, ಹಾರೋಹಳ್ಳಿ, ಮಾರ್ಗವಾಗಿ ಬೆಂಗಳೂರಿಗೆ ತಲುಪುವುದು.

ಮೈಸೂರಿನಿಂದ ಬೆಳಿಗ್ಗೆ 9-15 ಗಂಟೆಗೆ ಹೊರಟು ಬೆಂಗಳೂರಿಗೆ ಮಧ್ಯಾಹ್ನ 4-30 ಗಂಟೆಗೆ ತಲುಪುತ್ತೆ. ಮತ್ತು ಬೆಂಗಳೂರಿನಿಂದ ಬೆಳಿಗ್ಗೆ 7-30 ಕ್ಕೆ ಹೊರಟು ಮೈಸೂರನ್ನು ಮಧ್ಯಾಹ್ನ 3 10 ಕ್ಕೆ ತಲುಪುತ್ತೆ.

ಪ್ರೊಪ್ರೈಟರ್, ಶ್ರೀನಿವಾಸ ಮೋಟಾರ್ ಸರ್ವಿಸ್,
ಆಫೀಸ್:- "ಸದ್ವಿದ್ಯಾಲಯ", ಸಯ್ಯಾಜಿರಾವ್ ರೋಡ್, ಮೈಸೂರು.

ಆರ್ಯ ಸಮಾಜ

ತಾ|| ೮-೯-೪೬ ರಿಂದ ಪ್ರತಿದಿನ ಮೈಸೂರು ಆರ್ಯ ಸಮಾಜದಲ್ಲಿ ರಾತ್ರಿ ೬-೧೫ ಗಂಟೆಗೆ ಪಂ|| ಮಂಜುನಾಥಜೀಯವರು ಮಹರ್ಷಿ ದಯಾನಂದ ಸರಸ್ವತಿಯವರಿಂದ ರಚಿತವಾದ ಸತ್ಯಾರ್ಥ ಪ್ರಕಾಶ ವಿಷಯದಲ್ಲಿ ಉಪನ್ಯಾಸ ಮಾಡುವರು. ಸರ್ವರೂ ದಯಮಾಡಿಸಬೇಕಾಗಿ ಪ್ರಾರ್ಥಿಸಲಾಗಿದೆ.

Edited, printed and published by A. R. Nagarajan at the Sadhvi Press, D. Subbiah Road, Mysore.

RAJKAMAL, MYSORE.
'BURN'EM UP BARNES'
A thrilling Serial from 14—9—46 for 5 days.
'ಬರ್ನ್ ದೆಂ ಅಪ್ ಬಾರ್ನ್ಸ್'
ರೋಮಾಂಚಕವಾದ ಪೂರ್ತಿ ಸೀರಿಯಲ್
14—9—46 ರಿಂದ ೫ ದಿನಗಳು.

13-9-46ರಿಂದ 4 ದಿನಗಳು ಪ್ರಾತಃಕಾಲ 10-30 ಕ್ಕೆ
'ದುರ್ಗಾ' ಭೂಮಿಕೆ:— 'ದೇವಿಕಾರಾಣಿ, 'ಮಮ್ತಾಜ್' ಅಲಿ

ಮನೆ, ಗದ್ದೆ, ಕಾರು, ಫರ್ನಿಚರ್
ಮಾರುವಾಗ ಕೊಳ್ಳುವಾಗ
ನಮ್ಮಲ್ಲಿ ಬನ್ನಿ ... ಲಾಭ ಕ[illegible]
ಸಿಯೋ? ಫರ್ನಿಚರ್ ಕಂಪೆನಿ
ಇರ್ವಿನ್ ರಸ್ತೆ ... . ಮೈಸೂರು
[ವಿಜಯಾ ಏಜನ್ಸೀಸ್, ಮೈಸೂರು.]

ಪೋ. ನಂ. 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಬುಧವಾರ ೧೮—೯—೪೬ [ಸಂಚಿಕೆ ೪೬

ಭಾರತ ಸರ್ಕಾರಕ್ಕೆ ಮೈಸೂರಿನ ಪ್ರತಿಭಟನೆ

ಪುಳೆಯಿಂದ ಬಾಲಕಿಯ ಮರಣ

ಮೈಸೂರು ೧೮

ನಿನ್ನೆ ದಿನ ರಾಜಧಾನಿಯಲ್ಲಿ ಬಂದ ಭಾರಿ ಮಳೆಯಿಂದ ನಗರದ ಮೋರಿಗಳಲ್ಲಿ ನೀರು ತುಂಬಿ ಬಂದು ರಾಮಾನುಜ ಅಗ್ರಹಾರದ ಇರುವ ಒಂದು ಚಿಕ್ಕ ಚಚ್ಚಲಿನಲ್ಲಿ ನಯ್ಯನ ಮಗಳು ಮಹದೇವಮ್ಮ ೬ ವರ್ಷದ ಬಾಲಕಿಯು ಶಾಲೆಯಿಂದ ಹಿಂದಿರುಗುವಾಗ ಕಾಲು ಜಾರಿ ಬಿದ್ದು ಅದರಲ್ಲಿ ಮುಳುಗಿ ಸತ್ತು ಹೋದಳೆಂದು ಗೊತ್ತಾಗಿದೆ. ಈ ದಿನ ಮಹಜರ್ ನ್ನು ಜರುಗಿಸಲಾಯಿತು. ಆಕೆಯ ಜೊತೆಯಲ್ಲಿಯೇ ಕಾಲುಜಾರಿ ಬಿದ್ದ ಇನ್ನಿತರ ಮಕ್ಕಳನ್ನು ಗಣಪತಿ ಆಚಾರಿಯೆಂಬ ಹೋಟೆಲ್ ಮಾಲೀಕರು ಬದುಕಿಸಿದರೆಂದು ಗೊತ್ತಾಗಿದೆ.

ಗಣಪತಿ ಮಂಗಳಾರತಿ

ಸಾಮ ರಾಜ ರಸ್ತೆಯಲ್ಲಿರುವ ಶ್ರೀ ಚೌಟಾಳ ರಂಗಯ್ಯನವರ ಕುಂಚಿಟಿಗರ ವಿದ್ಯಾರ್ಥಿ ನಿಲಯದಲ್ಲಿ ೨೧ ನೇ ತಾ॥ ಶನಿವಾರ ಸಂಜೆ ೬ ಗಂಟೆಗೆ ಜಿಲ್ಲಾಧಿಕಾರಿಗಳಾದ ಶ್ರೀ ಎಂ ಹೆಚ್. ರಣಜೋದ್ ಸಿಂಗರ ಅಧ್ಯಕ್ಷತೆಯಲ್ಲಿ ಗಣಪತಿ ಮಂಗಳಾರತಿ ನಡೆಯುವುದು. ಆ॥ ವಿ॥ ಸ್ವಾಮಿಮೂರ್ತಿಯವರ ಮಧುರ ಗೀತವು ಜರುಗುವುದು.

ನಗರ ಕಾಂಗ್ರೆಸ್ ಸಮಿತಿ

ಈ ತಿಂಗಳು ೨೦ ನೇ ತಾ॥ ಶುಕ್ರವಾರ ಸಂಜೆ ೬॥ ಗಂಟೆಗೆ ನಗರ ಕಾಂಗ್ರೆಸ್ ಸಮಿತಿಯ ಸಭೆಯು ಸಯ್ಯಾಜಿರಾವ್ ರಸ್ತೆಯ ನಗರ ಕಾಂಗ್ರೆಸ್ ಕಛೇರಿಯಲ್ಲಿ ನಡೆಯುವುದು.

ಡಿಸೆಂಬರ್ ೯ಕ್ಕೆ ರಾಜ್ಯಾಂಗ ರಚನಾ ಸಭೆ

ಕೇಂದ್ರ ಶಾಸನ ಸಭೆಯು ಅಕ್ಟೋಬರ್ ೮ ರಿಂದ ಆರಂಭವಾಗುವುದರಿಂದಲೂ ಮೈಸೂರು ದಸರಾ ರಜವು ಬರುವುದರಿಂದಲೂ ಅಕ್ಟೋಬರ್ ಮಧ್ಯ ಭಾಗದಲ್ಲಿ ಆರಂಭವಾಗಬೇಕಾಗಿದ್ದ ರಾಜ್ಯಾಂಗ ರಚನಾ ಸಭೆಯು ಡಿಸೆಂಬರ್ ಒಂಬತ್ತನೇ ತಾ॥ ಸೋಮವಾರದಿಂದ ಪ್ರಾರಂಭವಾಗುವುದು.

ರಾಜಾಜೀ ಕಾರಿಗೆ ಗುಂಡಿನ ಏಟು

ಕೇಂದ್ರ ಸರ್ಕಾರದ ಮಂತ್ರಿಗಳಾದ ಸಿ. ರಾಜಗೋಪಾಲಾಚಾರಿಯವರನ್ನು ದೆಹಲಿಯಲ್ಲಿ ಅವರ ಮನೆಗೆ ಬಿಟ್ಟು ಅವರ ಕಾರು ಹಿಂದಿರುಗಿ ಕರ್ಜನ್ ರೋಡ್ ಕಡೆ ಬರುತ್ತಿದ್ದಾಗ ಯಾರೋ ಗುಂಡು ಹಾರಿಸಿದರೆಂದೂ ಅದರ ಫಲವಾಗಿ ಗುಂಡು ಹಿಂಭಾಗದ ಗಾಜಿನೊಳಕ್ಕೆ ರಂಧ್ರ ಮಾಡಿಕೊಂಡು ಬಂದಿತೆಂದೂ ವರದಿಯಾಗಿದೆ. ಪೋಲೀಸರು ತನಿಖೆ ನಡೆಸುತ್ತಿರುವರು.

ಜಿನ್ನಾ-ವೈಸರಾಯ್ ಭೇಟಿ

ನಿನ್ನೆ ಸಂಜೆ ಮಿ॥ ಮಹಮದಾಲಿ ಜಿನ್ನಾರವರು ವೈಸರಾಯರಾದ ಲಾರ್ಡ್ ವೇವೆಲ್‌ರವರೊಡನೆ ಸುಮಾರು ೭೫ ನಿಮಿಷಗಳ ಕಾಲ ಮಾತುಕತೆ ನಡೆಸಿದರು. ಯಾವ ವಿಷಯಗಳನ್ನು ಕುರಿತು ಚರ್ಚಿಸಿದರೆಂಬುದು ಗೊತ್ತಾಗಿಲ್ಲ. ಮತ್ತು ಪುನಃ ಅವರು ವೈಸರಾಯರೊಡನೆ ಮಾತುಕತೆ ನಡೆಸುವರೆಂದೂ ಆದರೆ ಯಾವಾಗ ಭೇಟಿ ಮಾಡುವರೆಂಬುದು ಗೊತ್ತಿಲ್ಲವೆಂದು ಹೇಳಲಾಗಿದೆ.

ಬೋಸರು ಸರಿಯಾದ ಸಮಯಕ್ಕೆ ಬರುವರು

ಭಾರತಮಾತೆಯನ್ನು ಪರ ದಾಸ್ಯದಿಂದ ವಿಮೋಚನೆ ಮಾಡಲು ಅಂತಿಮ ಕ್ರಾಂತಿಗಾಗಿ ಬಾಬು ಸುಭಾಷ್‌ಚಂದ್ರ ಬೋಸರು ಸರಿಯಾದ ಕಾಲಕ್ಕೆ ಬರುವರು ಅವರು ಹಿಂದೂಸ್ಥಾನದಲ್ಲಿಯೇ ಇರುವರೆಂಬುದಕ್ಕೆ ಆಧಾರವಿಲ್ಲ ಆದರೆ ಅವರು ಇನ್ನೂ ಜೀವಂತರಾಗಿರುವರೆಂದು ಘೋಷಿಸಲು ಆಧಾರಗಳಿವೆ-ಎಂಬುದಾಗಿ ಫಾರ್ವರ್ಡ್ ಬ್ಲಾಕಿನ ಕಾರ್ಯಕಾರೀ ಸಮಿತಿಯವರು ಮೊನ್ನೆ ದೆಹಲಿಯಲ್ಲಿ ಅಂಗೀಕರಿಸಿದ ನಿರ್ಣಯವೊಂದು ತಿಳಿಸುತ್ತದೆ. ನೇತಾಜಿ ಬೋಸರ ನಾಯಕತ್ವದಲ್ಲಿ ಹೂಡಲಾಗುವ ಅಂತಿಮ ಕ್ರಾಂತಿಗಾಗಿ ದೇಶವನ್ನು ಸಿದ್ಧಪಡಿಸುವಂತೆ ಫಾರ್ವರ್ಡ್ ಬ್ಲಾಕ್ ಸಮಿತಿಗಳನ್ನು ಪ್ರಾರ್ಥಿಸಲಾಗಿದೆ. ಬ್ರಿಟಿಷ್ ಚಕ್ರವರ್ತಿ ಮತ್ತು ಅವರ ಉತ್ತರಾಧಿಕಾರಿಗಳಿಗೆ ರಾಜಭಕ್ತಿಯನ್ನು ಸೂಚಿಸಿ ಹಂಗಾಮೀ ಸರ್ಕಾರದ ಕಾಂಗ್ರೆಸ್ ಮಂತ್ರಿಗಳು ಪ್ರಮಾಣ ವಚನ ಸ್ವೀಕಾರ ಮಾಡಿರುವುದನ್ನು ಖಂಡಿಸಲಾಗಿದೆ. ಅಕ್ಟೋಬರ್ ೨೧ ನೇ ತಾ॥ ಆಜಾದ್ ಹಿಂದ್ ದಿನಾಚರಣೆಯನ್ನು ನಡೆಸುವಂತೆಯೂ ನಿರ್ಧರಿಸಲಾಯಿತು.

ಆಯುರ್ವೇದ ಕಾಲೇಜಿನ ವಿದ್ಯಾರ್ಥಿಗಳ ಮುಷ್ಕರವೇ ?

ಮೈಸೂರು ೧೮

ರಾಜಧಾನಿಯ ಆಯುರ್ವೇದ ಕಾಲೇಜಿನಲ್ಲಿ ಪಾಠ ಪ್ರವಚನಗಳನ್ನು ಹೇಳಲು ಸಾಕಾದಷ್ಟು ಜನ ಉಪಾಧ್ಯಾಯರುಗಳು ಇಲ್ಲವೆಂದೂ, ಪ್ರಯೋಗಿಕ ತರಗತಿಗಳು ಸರಿಯಾಗಿ ನಡೆಯುತ್ತಿಲ್ಲವಾದ ದರಿಂದಲೂ ಅಲ್ಲಿನ ವಿದ್ಯಾರ್ಥಿಗಳು ಮುಷ್ಕರ ಹೂಡಲಿರುವರೆಂದು ತಿಳಿದುಬಂದಿದೆ. ಈ ಸಂಬಂಧವಾಗಿ ಈ ದಿನ ಸಂಜೆ ಕಾಂಗ್ರೆಸ್ ಕಛೇರಿಯಲ್ಲಿ ಸಭೆಯೊಂದು ನಡೆಯುವುದು.

ಮೈಸೂರು ಬ್ಲೂಸ್ ಫುಟ್ ಬಾಲ್ ಕ್ಲಬ್ಬಿನವರು ನಿನ್ನೆಯ ದಿನ ಶಾರದಾ ವಿಲಾಸ ಪ್ರೈಮರಿ ಸ್ಕೂಲಿನಲ್ಲಿ ಗಣಪತಿ ಮಂಗಳಾರತಿ ಪ್ರಯುಕ್ತ ವಿದ್ವಾಂಸರುಗಳಿಂದ ಸಂಗೀತ ಕಛೇರಿಗಳನ್ನು ನಡೆಸುತ್ತಿರುವರು. ಈ ದಿನ ರಾತ್ರಿ ೮ ಗಂಟೆಗೆ ವಿ। ಸಂಪಂಗಾಚಾರ್ಯರ ಗಾಯನವೂ ಉತ್ಸವವೂ ಜರುಗುವುವು.

ಭಾರತ ಸರ್ಕಾರಕ್ಕೆ ಮೈಸೂರು ಸರ್ಕಾರದ ಪ್ರತಿಭಟನೆ

ಸ್ವಂ. ಬು. ಪೋ॥] ಬೆಂಗಳೂರು ೧೮

ಮೈಸೂರು ಸಂಸ್ಥಾನಕ್ಕೆ ಮಂಜೂರಾಗಿದ್ದ ೭೦೦೦ ಟನ್ ಅಕ್ಕಿಯನ್ನು ಮದರಾಸ್ ಮತ್ತು ತಿರುವಾಂಕೂರುಗಳಿಗೆ ಹಂಚಿ ಕೊಟ್ಟಿರುವುದಕ್ಕಾಗಿ ಭಾರತ ಸರ್ಕಾರದವರಿಗೆ ಮೈಸೂರು ಸರ್ಕಾರದವರು ತಮ್ಮ ಪ್ರತಿಭಟನೆಯನ್ನು ಸೂಚಿಸಿರುವರೆಂದು ತಿಳಿದುಬಂದಿದೆ. ದೆಹಲಿಗೆ ತೆರಳಿರುವ ದಿವಾನರಾದ ಸರ್ ಎ. ರಾಮಸ್ವಾಮಿಮೊದಲಿಯಾರರು ಭಾರತ ಆಹಾರ ಶಾಖೆಯವರೊಡನೆ ಈ ವಿಷಯದಲ್ಲಿ ಮಾತುಕತೆ ನಡೆಸಬೇಕೆಂದು ತಂತೀ ಮೂಲಕ ಅವರನ್ನು ಪ್ರಾರ್ಥಿಸಲಾಗಿದೆ. ನೆರೆಯ ಪ್ರಾಂತಗಳ ನೆರವಿಗೆ ಬರಲು ಮೈಸೂರು ಸದಾ ಸಿದ್ಧವಿರುವುದೆಂದೂ ಆದರೆ ಈಗ ಮೈಸೂರಿನಲ್ಲಿ ಅಕ್ಕಿಯ ದಾಸ್ತಾನು ಪರಿಸ್ಥಿತಿಯು ವರದಿಯಾಗಿರುವಷ್ಟು ಸಮರ್ಪಕವಾಗಿಲ್ಲವೆಂದೂ ಆಹಾರ ಮಂತ್ರಿಗಳಾದ ದಾ॥ ಒ. ಎಸ್. ಎನ್. ಶೆಟ್ಟಿಯವರು ಹೇಳಿರುತ್ತಾರೆ. ಮುಂದಿನ ಬೆಳೆಯು ಬರುವ ವರೆವಿಗೆ ಸಾಕಾದಷ್ಟು ದಾಸ್ತಾನು ಇಲ್ಲವೆಂದು ಅವರು ಸೂಚಿಸಿರುವರು. ಮದರಾಸಿನಲ್ಲಿ ೮ ಔನ್ಸ್ ಅಕ್ಕಿಯ ಪಡಿತರವನ್ನು ಕೊಡುತ್ತಿರುವಂತವರಾ ಮೈಸೂರಿನಲ್ಲಿ ಕೇವಲ ೬.೨ ಔನ್ಸನ್ನು ಮಾತ್ರ ಕೊಡಲಾಗುತ್ತಿದೆಯೆಂದು ಅವರು ತಿಳಿಸಿರುವರು.

ರಾಗಿ ಬೆಳೆಗೆ ಬಹುಮಾನ

ಇತ್ತೀಚಿನ ಕೆಳಗೆ ಹೆಚ್ಚು ಬೆಳೆಯನ್ನು ತೆಗೆಯುವ ಪ್ರಯತ್ನದ ಫಲವಾಗಿ ಬೇಸಿಗೆಯಲ್ಲಿ ರಾಗಿಯನ್ನು ಬೆಳೆಯಲು ಎಂಟು ಸಾವಿರ ಎಕರೆ ಜಮೀನಿನಲ್ಲಿ ೧೬೦೦೦ಸಾವಿರ ಪಲ್ಲ ರಾಗಿಯು ಬೆಳೆದಿರುವುದಾಗಿ ತಿಳಿದುಬಂದಿದೆ. ಉತ್ತಮ ಬೆಳೆ ತೆಗೆದವರಿಗಾಗಿ ಸರ್ಕಾರದವರು ೪೦೦೦ ರೂ ಬಹುಮಾನ ಕೊಡಲು ಮಂಜೂರ್ಮಾಡಿರುತ್ತಾರೆ.

ಹೆಚ್ಚು ಪೋಲೀಸ್ ಸಿಬ್ಬಂದಿ

ಬೆಂಗಳೂರು ನಗರದ ಜನಸಂಖ್ಯೆಯು ಬಹಳವಾಗಿ ಹೆಚ್ಚಿರುವುದರಿಂದ ಎಲ್ಲಾ ಪರಿಸ್ಥಿತಿಯನ್ನೂ ಪರಿಶೋಧಿಸಿಯೂ ಈಗಿರುವ ನಗರದ ಪೋಲೀಸ್ ಸಿಬ್ಬಂದಿಯನ್ನು ದ್ವಿಗುಣಮಾಡಲು ಸರ್ಕಾರದವರು ಪರ್ಯಾಲೋಚಿಸುತ್ತಿರುವರೆಂದು ತಿಳಿದುಬಂದಿದೆ. ಪೋಲೀಸ್ ಕಮಿಷನರ್ ಒಬ್ಬರನ್ನು ನೇಮಿಸುವರೆಂದೂ ಸಹ ಹೇಳಲಾಗಿದೆ.

ಪ್ರಕಾಶಂರವರು ದೆಹಲಿಗೆ

ಮದರಾಸಿನ ಆಹಾರದ ಪರಿಸ್ಥಿತಿಯನ್ನು ಡಾ॥ ರಾಜೇಂದ್ರಪ್ರಸಾದರಿಗೆ ತಿಳಿಸಿ ಅದಷ್ಟು ಹೆಚ್ಚು ಧಾನ್ಯವನ್ನು ತಮ್ಮ ಪ್ರಾಂತ್ಯಕ್ಕೆ ಪಡೆಯಲು ಮದ್ರಾಸಿನ ಪ್ರಧಾನಿ ಶ್ರೀ ಟಿ. ಪ್ರಕಾಶಂರವರು ಸಧ್ಯದಲ್ಲಿಯೇ ದೆಹಲಿಗೆ ತೆರಳುವರೆಂದು ವರದಿಯಾಗಿದೆ.

ರೈಲ್ವೆ ಮುಷ್ಕರಗಾರರಿಗೆ ಎಚ್ಚರಿಕೆ

ಈ ತಿಂಗಳು ೨೪ ನೇ ತಾ॥ ನೊಳಗೆ ದಕ್ಷಿಣ ಭಾರತ ರೈಲ್ವೆಯ ಕೆಲಸಗಾರರು ತಮ್ಮ ಮುಷ್ಕರವನ್ನು ತ್ಯಜಿಸಿ ಕೆಲಸಕ್ಕೆ ಹಿಂದಿರುಗದಿದ್ದರೆ ಇನ್ನೂ ಮುಷ್ಕರ ಮಾಡುತ್ತಿರುವವರನ್ನು ವಜಾ ಮಾಡಿ ಅವರ ಸ್ಥಾನದಲ್ಲಿ, ಯುದ್ಧ ಸೇವೆಯಿಂದ ಹಿಂದಿರುಗಿ ಬಂದಿರುವವರನ್ನು ತೆಗೆದುಕೊಳ್ಳಲಾಗುವುದೆಂದು ಪ್ರಕಟಿಸಲಾಗಿದೆ.

ಸೈನ್ಯ ಕೇಂದ್ರ ಪೂನಾಕ್ಕೆ

ದಕ್ಷಿಣ ಭಾರತ ಸೇನೆಯ ಕೇಂದ್ರ ಕಛೇರಿಯನ್ನು ಬೆಂಗಳೂರಿನಿಂದ ಪೂನಾ ನಗರಕ್ಕೆ ನವೆಂಬರ್ ತಿಂಗಳಲ್ಲಿ ವರ್ಗಾಯಿಸುವರೆಂದು ತಿಳಿದುಬಂದಿದೆ.

ಇಲಿಗಳನ್ನು ಸಾಕುತ್ತಿರುವ ಬೆಕ್ಕು

ಲಂಡನ್ನಿನ ಒಂದು ಸಂಸಾರದಲ್ಲಿರುವ ಸಯಾಂ ದೇಶದ ಬೆಕ್ಕು ಒಂದು ಇಲಿ ಮರಿಯನ್ನು ತನ್ನ ಮರಿಗಳ ಜೊತೆಯಲ್ಲಿಯೇ ಸಾಕಿ ಸಲಹುತ್ತಿದೆಯೆಂದು ವಾರ್ತೆ ಬಂದಿದೆ. ಮೂರು ವಾರಗಳ ಕೆಳಗೆ ಒಂದು ಪೆಟ್ಟಿಗೆಯಲ್ಲಿ ಬೆಕ್ಕು ಮತ್ತು ಅದರ ಮರಿಗಳು ಇಲಿ ಮರಿಯೊಡನೆ ಇದ್ದುದು ಕಂಡುಬಂದಿತು. ಇಲಿ ಮರಿಯನ್ನು ಬೆಕ್ಕು ತನ್ನ ಮರಿಯಂತೆಯೇ ಪ್ರೀತಿ ವಿಶ್ವಾಸಗಳಿಂದ ಪೋಷಿಸುತ್ತಿದೆ. ಯಾರಾದರೂ ಇಲಿಯನ್ನು ದೂರ ತೆಗೆದುಕೊಂಡು ಹೋದರೆ ಪ್ರತಿಭಟಿಸುತ್ತದೆ. ಪ್ರೇಕ್ಷಕರು ನೋಡಲು ಬಂದಾಗ ಇಲಿಗೆ ರಕ್ಷಣೆ ಕೊಡುತ್ತದೆ.

ಕಲ್ಕತ್ತಾ ರಸ್ತೆಗಳಲ್ಲಿ ಮೀನುಗಳು

ಮೊನ್ನೆ ಕಲ್ಕತ್ತೆಯಲ್ಲಿ ವಿಪರೀತ ಮಳೆ ಬಿದ್ದು ರಸ್ತೆಗಳೆಲ್ಲಾ ಭಾರಿ ಕಾಲುವೆಗಳಂತೆ ಮಳೆಯ ನೀರು ಹರಿಯಿತು. ಟ್ರಾಮು ಗಾಡಿ ಮೋಟಾರ್ ಮುಂತಾದ ಎಲ್ಲಾ ವಾಹನಗಳ ಸಂಚಾರವೂ ನಿಂತುಹೋಗಿದ್ದವು. ಕೊಳಗಳೆಲ್ಲವೂ ಕೋಡಿಗೆ ಬಿದ್ದುದರಿಂದ ಅವುಗಳಲ್ಲಿದ್ದ ಮೀನುಗಳು ರಸ್ತೆಯ ಕಾಲುವೆಗಳಲ್ಲಿ ಸಂಚರಿಸುತ್ತಿದ್ದವು. ಜನರು ಯಥೇಚ್ಛವಾಗಿ ಮೀನುಗಳನ್ನು ಬೇಟೆಯಾಡಿ ತೆಗೆದುಕೊಂಡು ಹೋದರು.

ಉಪ್ಪಿನ ತೆರಿಗೆ ವಜಾ

ಉಪ್ಪಿನ ತೆರಿಗೆಯನ್ನು ವಜಾ ಮಾಡಲು ಇನ್ನು ಒಂದು ತಿಂಗಳೊಳಗಾಗಿ ಅವಶ್ಯಕವಾದ ಕಾರ್ಯಕ್ರಮವನ್ನು ಕೈಗೊಳ್ಳುವುದಾಗಿ ಕೇಂದ್ರ ಸರ್ಕಾರದ ಹಣಕಾಸಿನ ಸಚಿವರಾದ ಡಾ॥ ಜಾನ್‌ಮತ್ತಾಯ್‌ರವರು ಮಹಾತ್ಮ ಗಾಂಧಿಯವರಿಗೆ ತಿಳಿಸಿರುತ್ತಾರೆ.

ಅಮೆರಿಕಕ್ಕೆ ರಷ್ಯದ ಪ್ರತಿಭಟನೆ

ಪೋಲೆಂಡಿನ ಪಶ್ಚಿಮ ಸರಹದ್ದುಗಳನ್ನು ಬದಲಾಯಿಸಲು ಅವಕಾಶ ವಿರುವುದೆಂಬ ಅಭಿಪ್ರಾಯವನ್ನು ಅಮೆರಿಕದ ಸ್ಟೇಟ್ಸ್ ಸಕ್ರೆಟರಿ ಮಿ॥ ಬರ್ನ್‌ಸ್‌ರವರು ಹೇಳಿರುವುದಕ್ಕೆ ರಷ್ಯದ ವಿದೇಶಾಂಗ ಮಂತ್ರಿ ಎಂ. ಮಾಲೊಟೋವ್‌ರವರು ಪ್ರತಿಭಟಿಸಿ ಹಾಗೆ ಬದಲಾಯಿಸಲು ಅವಕಾಶ ಇಲ್ಲವೆಂದು ತಿಳಿಸಿದ್ದಾರೆ.

ಸಾಧ್ವಿ

ತಾ॥ ೧೮-೯-೪೬ ಬುಧವಾರ

ಕೈಗೆ ಬಂದುದು ಬಾಯಿಗೆ ಇಲ್ಲವೇ ?

ಮೈಸೂರಿಗಾಗಿ ಅಸ್ಸಾಮಿನಿಂದ ಬರಲಿಷ್ಟ ಏಳು ಸಾವಿರ ಟನ್ ಅಕ್ಕಿಯು ಮದರಾಸ್ ಮತ್ತು ತಿರುವಾಂಕೂರುಗಳಿಗೆ ಹಂಚಲ್ಪಟ್ಟಿರುವುದಾಗಿ ವರದಿಯಾಗಿದೆ. ಮೈಸೂರಿನಲ್ಲಿ ಅಕ್ಕಿಯ ಪರಿಸ್ಥಿತಿಯು ಸಮರ್ಪಕವಾಗಿರುವುದೆಂದು ನಂಬಲಾಗಿರುವುದರಿಂದ ಈ ರೀತಿ ಮಾಡಲಾಗಿದೆಯೆಂದು ಸದರಿ ವರದಿಯು ತಿಳಿಸುತ್ತದೆ. ಯಾರಿಗೆ ತೃಪ್ತಿಕರವಾಗಿದೆಯೆಂಬುದೂ ಮತ್ತು ಅದು ಎಷ್ಟರ ಮಟ್ಟಿನ ತೃಪ್ತಿಯೆಂಬುದೂ ಗೋಚರವಾಗಿರುವುದಿಲ್ಲ. ಮೈಸೂರಿನ ಪ್ರಜೆಗಳ ತೃಪ್ತಿ ಸಮಾಧಾನಗಳನ್ನಂತೂ ಇದರಲ್ಲಿ ಗಣನೆಗೆ ತೆಗೆದುಕೊಂಡಿರುವಂತೆ ಕಾಣುವುದಿಲ್ಲ.

ಈಗ ಮೈಸೂರು ಸಂಸ್ಥಾನದ ಪ್ರಜೆಗಳಿಗೆ ಕೊಡಲಾಗುತ್ತಿರುವ ಅಕ್ಕಿಯ ಪ್ರಮಾಣವು ಇಲ್ಲಿನ ಜನರಿಗೆ ಸ್ವಲ್ಪವೂ ಸಾಲದೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಮದರಾಸಿನವರು ಆದಿಯಿಂದಲೂ ಒಂದೂವರೆ ಪಾವು ಪಡಿತರವನ್ನು ಪಡೆಯುತ್ತಿದ್ದಾಗಲೂ ಮೈಸೂರಿನವರು ಒಂದು ಅಥವಾ ಒಂದೂಕಾಲು ಪಾವನ್ನು ಹೊಂದುತ್ತಿದ್ದರು. ಈಗ ಮದರಾಸಿನಲ್ಲೂ ಅಭಾವವುಂಟಾಗಿ ಅಲ್ಲಿ ಎಂಟು ಔನ್ಸು ಅಕ್ಕಿಯನ್ನು ಕೊಡಲಾಗುತ್ತಿದೆ. ಆದರೆ ಮೈಸೂರಿನಲ್ಲಿ ಈಗ ಕೊಡುತ್ತಿರುವುದು ಏಳೂಕಾಲು ಔನ್ಸು ಅಕ್ಕಿ ಮಾತ್ರ. ಮದರಾಸಿಗಿಂತಲೂ ಇದು ಕಡಿಮೆಯೆಂಬುದನ್ನು ವಿವರಿಸಿ ಹೇಳಬೇಕಾಗಿಲ್ಲ. ಹೀಗಿದ್ದರೂ ಮೈಸೂರಿನ ಅಕ್ಕಿ ದಾಸ್ತಾನಿನ ಸ್ಥಿತಿಯು ಸಮರ್ಪಕವಾಗಿರುವುದೆಂದು ಹೊರಗಿನವರು ಹೇಳುವುದು ಆಶ್ಚರ್ಯಕರವಾಗಿದೆ.

ಮದರಾಸಿಗಿಂತಲೂ ಮೈಸೂರಿನಲ್ಲಿ ಕೊಡುತ್ತಿರುವ ಪಡಿತರವು ಕಡಿಮೆಯಾಗಿರುವುದೇನೋ ಸರ್ವರಿಗೂ ವೇದ್ಯವಾಗಿರುವ ಅಂಶ. ಅಕ್ಕಿಯ ದಾಸ್ತಾನು ಸಮರ್ಪಕವಾಗಿದೆಯೆಂದು ಹೇಳಿರುವುದು ನಮಗೆ ತಿಳಿಯದ ಅಂಶ. ದಾಸ್ತಾನು ಸಮರ್ಪಕವಾಗಿದ್ದು ಸರಬರಾಜಿನಲ್ಲಿ ಕಡಿಮೆಯಾಗಿದ್ದರೆ ಅದಕ್ಕೆ ನಮ್ಮ ಅಧಿಕಾರಿ ವರ್ಗದವರೇ ಉತ್ತರ ಹೇಳಬೇಕು.

ಅಂತೂ ಮೈಸೂರಿನ ಕೈಗೆ ಬಂದಿದ್ದ ತುತ್ತು ಬಾಯಿಗೆ ಇಲ್ಲವಾಗಿದೆ. ನಮ್ಮ ಸಂಸ್ಥಾನಕ್ಕೆ ಒದಗಿರುವ ಅಭಾವವನ್ನು ನೀಗಿಸಲು ಹೊರಗಿನಿಂದ ಬರಲಿರುವ ಸಹಾಯವನ್ನು ದೊರಕಿಸಿಕೊಳ್ಳಲು ಪ್ರಾಪ್ತಿಯಿಲ್ಲದಂತೆ ಕಾಣುತ್ತದೆ. ಈ ವಿಷಯವು ಪ್ರಜೆಗಳ ನಿತ್ಯ ಜೀವನದ ಅವಶ್ಯಕತೆಗೆ ಸಂಬಂಧಿಸಿರುವುದರಿಂದ ನಮ್ಮ ಸರ್ಕಾರದವರು ಇದನ್ನು ಕೂಲಂಕಷವಾಗಿ ಪರಿಶೀಲಿಸಬೇಕು. ಸಂಸ್ಥಾನದ ಅಕ್ಕಿ ದಾಸ್ತಾನು ಅಥವಾ ಸರಬರಾಜಿನ ವ್ಯವಸ್ಥೆಯು ಪ್ರಜೆಗಳಿಗಾಗಲೀ ಸರ್ಕಾರದವರಿಗಾಗಲೀ ಸಮಾಧಾನ ನೀಡುವಂತಿದೆಯೇ ಎಂಬುದನ್ನು ವಿಮರ್ಶಿಸಬೇಕು. ನಮಗಾಗಿ ಬಂದ ಆಹಾರ ಧಾನ್ಯವನ್ನು ಇತರರಿಗೆ ಬಿಟ್ಟು ಕೊಡುವಷ್ಟು ತೃಪ್ತಿಕರವಾದ ಸ್ಥಿತಿಯಲ್ಲಿ ನಾವು ಇರುವೆವೇ ಎಂಬುದನ್ನು ತಿಳಿಸಬೇಕು.

ಹೊಸ ಸರ್ಕಾರದ ರಚನೆಯಾದೊಡನೆಯೇ ತಿರುವಾಂಕೂರು ದಿವಾನರಾದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರು ಎಲ್ಲರಿಗಿಂತಲೂ ಮುಂಚೆ ನೂತನ ಸಚಿವರುಗಳಿಗೆ ಅಭಿನಂದನೆಗಳನ್ನು ಸೂಚಿಸಿದರು; ಒಡನೆಯೇ ವಿಮಾನದಲ್ಲಿ ದೆಹಲಿಗೆ ತೆರಳಿದರು; ಹಿಂದೆ ರಾಜಕೀಯದಲ್ಲಿ ತಾವು ವಿರೋಧಿಸುತ್ತಿದ್ದವರೆಲ್ಲರನ್ನೂ ಭೇಟಿ ಮಾಡಿದರು; ಅವರೊಡನೆ ಭೋಜನವನ್ನೂ ಮಾಡಿದರು; ಅತ್ತ ವೈಸರಾಯರೊಡನೆಯೂ ಉಪಾಹಾರವನ್ನು ಸ್ವೀಕರಿಸಿದರು. ತಿರುವಾಂಕೂರಿನ ದುಃಸ್ಥಿತಿಯನ್ನು ವರ್ಣಿಸಿ ಅವರ ಮನಸ್ಸನ್ನು ಕರಗಿಸಿ ಒಂಭತ್ತು ಸಾವಿರ ಟನ್ ಅಕ್ಕಿಯು ದೊರಕುವಂತೆ ಮಾಡಿಕೊಂಡರು. ಇದರಲ್ಲಿ ಮೈಸೂರಿಗೆ ಬರಬೇಕಾಗಿದ್ದುದೂ ಸೇರಿರುತ್ತದೆ. ಅಲ್ಲದೆ ಮದರಾಸು ಬೊಂಬಾಯಿಗಳಿಂದಲೂ ಸ್ವಲ್ಪ ಭಾಗವು ಬಂದು ಸೇರಿರುತ್ತದೆ. ಕಾರ್ಯವಾಸಿಗಳಾದ ಸರ್ ಸಿ. ಪಿ. ಯವರು ತಮ್ಮ ಸಂಸ್ಥಾನದ ಅಭಾವವನ್ನು ನೀಗಿಸಲು ಈ ರೀತಿ ಸಾಹಸವನ್ನು ಮಾಡಿರುತ್ತಾರೆ. ಆದರೆ ನಮ್ಮ ಸಂಸ್ಥಾನದ ಸರಬರಾಜನ್ನು ಉತ್ತಮಪಡಿಸಲು ಯಾವ ಏರ್ಪಾಡನ್ನು ಕೈಗೊಳ್ಳಲಾಗಿದೆಯೆಂಬುದು ವೇದ್ಯವಾಗಿಲ್ಲ. ಕೈಗೆ ಬಂದುದೂ ಸಹ ತಪ್ಪಿಹೋಗುತ್ತಿದೆ. ನಮ್ಮ ದಿವಾನರೂ ಈಗ ದೆಹಲಿಗೆ ತೆರಳಿದ್ದಾರೆ. ಆಹಾರ ಮಂತ್ರಿಗಳಾದ ಡಾ॥ ರಾಜೇಂದ್ರ ಪ್ರಸಾದರು ಇಲ್ಲಿಗೆ ಬರಲಿದ್ದಾರೆ. ಅವರು ಬಂದು ಇಲ್ಲಿನ ಸ್ಥಿತಿಗತಿಗಳನ್ನು ನೋಡಿದ ಮೇಲೆಯಾದರೂ ನೆರೆಯ ಪ್ರಾಂತಗಳ ಮಟ್ಟದಲ್ಲಿ ಇಲ್ಲಿನ ಪ್ರಜೆಗಳಿಗೂ ಪಡಿತರವು ದೊರೆಯಲೆಂದು ಆಶಿಸೋಣವೇ ?

ರೈಲಿನ ತೊಂದರೆ

ಸ್ವಂ ಸು.] ಶ್ರೀರಂಗಪಟ್ಟಣ ೧೭

ಈ ಊರಿನಿಂದಲೂ, ಸುತ್ತಮುತ್ತಿನ ಹಳ್ಳಿಗಳಿಂದಲೂ ನೂರಾರು ಜನ ವಿದ್ಯಾರ್ಥಿಗಳು ಮೈಸೂರಿನ ಶಾಲಾ ಕಾಲೇಜುಗಳಿಗೆ ಹೋಗುತ್ತಿದ್ದಾರೆ. ಆದರೆ ರೈಲು ಪ್ರತಿದಿನವೂ ತಡವಾಗಿ ಸೇರುತ್ತಿರುವುದರಿಂದ ಒಂದು ಗಂಟೆ ಪಾಠವು ಹೋಗುತ್ತಿದೆ. ಅಧಿಕಾರಿಗಳು ಇದಕ್ಕೆ ಗಮನ ಕೊಟ್ಟು ಕೂಡಲೇ ಕ್ರಮವಹಿಸಬೇಕಾಗಿದೆ.

ವಿದ್ಯುಚ್ಛಕ್ತಿ ದೀಪದ ಬಾಡಿಗೆಯನ್ನು ಕೊಡದವರಿಗೆ ೧೬ನೇ ತಾ॥ದೀಪವನ್ನು ನಿಲ್ಲಿಸದೇ ಇದ್ದರೂ ಸಹ ಮುಂದಿನ ತಿಂಗಳಲ್ಲಿ ಒಂದು ರೂ.ಯನ್ನು ಹೆಚ್ಚಾಗಿ ರೀ-ಕನೆಕ್ಷನ್ ಫೀ ಎಂದು ವಸೂಲ್ಮಾಡುತ್ತಿದ್ದಾರೆ. ಈ ಅಕ್ರಮವು ತಪ್ಪಬೇಕು. ಈ ಊರಿನಲ್ಲಿ ಸೌದೆ ಅಭಾವವು ಮಿತಿಮೀರುತ್ತಿದೆ. ಡಿಪೋಗಳಲ್ಲಿ ರೂ ೧ ಕ್ಕೆ ೩॥ ಮಣದಂತೆ ಹಸಿ ಸೌದೆ ಕೊಡುತ್ತಿದ್ದಾರೆ. ಸರ್ಕಾರಿ ಡಿಪೋ ಒಂದನ್ನು ತೆರೆದು ಜನರಿಗೆ ಅನುಕೂಲ ಮಾಡಬೇಕಾಗಿದೆ.

ನೂಲುವ ತರಗತಿ

ಸ್ವಂ ಸು.] ಚಾಮರಾಜನಗರ ೧೬

ಈ ಊರಿನಲ್ಲಿ ನಡೆಯುತ್ತಿರುವ ಬಾಲ ಸೇವಾ ಸಮಾಜದಲ್ಲಿ ನಿನ್ನೆ ಚರಕಾ ತರಗತಿಯು ಶುರುವಾಯಿತು. ಶ್ರೀಗಳಾದ ಎಸ್. ಪ್ರಭಾಕರರಾವ್, ಎಚ್. ಎಸ್. ಸೀತಾರಾಂ, ಮತ್ತು ವ್ಯವಸ್ಥಾಪಕರಾದ ಎ. ಎಸ್. ನಾಗಪ್ಪನವರು ಭಾಷಣ ಮಾಡಿದರು. ವಂದೇಮಾತರಂ ಗೀತೆಯೊಡನೆ ಸಭೆ ಮುಗಿಯಿತು.

Edited, printed and published by A. T. Nagarajan at the Sadhvi Press D Subbiah Road, Mysore

ವೈದ್ಯರ ಅಭಾವ

ಸ್ವಂ. ಸು.] ನಂಜನಗೂಡು

ಹದಿಮೂರು ಸಾವಿರಕ್ಕೆ ಮೇಲ್ಪಟ್ಟ ಜನಸಂಖ್ಯೆಯಿರುವ ಈ ಊರಿನ ಆಸ್ಪತ್ರೆಯಲ್ಲಿ ಇರುವ ವೈದ್ಯರ ಸಂಖ್ಯೆ ಸಾಲದು. ಮತ್ತೊಬ್ಬ ವೈದ್ಯರನ್ನು ಒದಗಿಸುವುದು ...

ತೂಕ ಮತ್ತು ಅಳತೆ ಇನ್ಸ್‌ಪೆಕ್ಟರ್ ... ದ್ದಾಗ್ಯೂ ಅನೇಕ ಅಂಗಡಿಯವರೂ, ... ಲು, ಮೊಸರು, ಬೆಣ್ಣೆ ವ್ಯಾಪಾರದವರು ತುಂಬಾ ಹಳೆಯದಾದ ಮತ್ತು ಕಡಿಮೆ ಸೇರು ಪಾವು ಮತ್ತು ಬಟ್ಟುಗಳನ್ನು ... ಸುತ್ತಿದ್ದಾರೆ. ಇದನ್ನು ತಪ್ಪಿಸ ಬೇಕು. ಯಾತ್ರಾಸ್ಥಳವಾದ ಇಲ್ಲಿಗೆ ಪರಸ್ಥಳಗಳಿಂದ ಸಾವಿರಾರು ಜನರು ಬರುತ್ತಿರುವುದರಿಂದ ಆರೋಗ್ಯ ನಿಯಮಗಳಿಗನುಗುಣವಾಗಿ ಹೋಟೆಲುಗಳು ನಡೆಯುವ ಏರ್ಪಾಡಾಗಬೇಕು.

WANTED

One graduate with Physics, Chemistry and Mathematics as optionals and One graduate with History as one of the optionals. Persons selected will be started in grade Rs. 40-4-60 with Dearness Allowance at Government rates. It is likely that the advance increments will be given. Apply on or before 30-9-1946 to—

H. Halappa,
Secretary,
Municipal High School,
Chamarajanagar.

19-9-46ರಿಂದ ಪ್ರದರ್ಶಿಸಲಾಗುವ

ಸ್ವರ್ಗಸೀಮ

ವು ಹೆಸರಿನ ಆಸೆಯಿಂದ ಕಲ್ಪಿತವಾಗಿಲ್ಲ. ಹಣದ ಲೋಭದಿಂದ ತಯಾರಿಸಲಿಲ್ಲ. ಆತ್ಮನಿವೇದನೆಗಾಗಿ, ಜನ ಮನವನ್ನು ತಣಿಗೊಳಿಸಿ, ಆನಂದವನ್ನು ಉಕ್ಕಿಸುವ ಸಲುವಾಗಿ

ರಾಜಕಮಲ

...ನ ಭವ್ಯ ರಂಜಿತ ಪರದೆ ಮೇಲೆ ಅರಳಿ, ಹೊ... ಪ್ರಕೃತಿ ನಿಯಮ ... ವಿವೇಚನಾ ದೃಷ್ಟಿಯಿಂದ ನಿರ್ಮಿತವಾಗಿ, ಮೆರೆ... ಮಾನವ ಸೃಷ್ಟಿಯ ಶಿಖರ

ಎಂತೆಂತಹ ಪ್ರಾಜ್ಞರೂ ಕೂಡ ಅತಿ ಆಸೆಗೆ ಅಡಿಯಾಳಾಗಿ, ಹೆಣ್ಣಿಗಾಗಿ ಎದೆ ಕೊಟ್ಟಿದ್ದಾರೆ, ಹೊ... ಹೊಂಚು ಹಾಕಿದ್ದಾರೆ, ಮಣ್ಣಿಗೆ ಮುತ್ತಿಕ್ಕಿದ್ದಾರೆ. ಈ ವೈಪರೀತ್ಯವು ಮೋಹದ ಭಕ್ತಿಯ ಲಾಂಛನವೋ ಅಥವಾ ಗಾಢ ಶಕ್ತಿಯ ಪರಿಣಾಮವೋ ಎಂಬ ಜಟಿಲ ಸಮಸ್ಯೆಯನ್ನು ಪರಿಹರಿಸಬೇಕಾದರೆ

‘ಸ್ವರ್ಗಸೀಮ’ : ‘Swargaseema’

ವನ್ನು ನೋಡಿದ ಮೇಲೆ ವಿಶ್ವದ ಅಂತರಾಳವನ್ನು ಅರಿಯುವಿರಿ.

ಪ್ರತಿ ದಿನ ಮೂರು ಆಟಗಳು :: ೩-೩೦ಕ್ಕೆ, ೬-೩೦ಕ್ಕೆ, ೯-೩೦ಕ್ಕೆ.

ರೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಗುರುವಾರ ೧೯—೯—೪೬ [ಸಂಚಿಕೆ ೪೭

ಜಂಬೂ ಸವಾರಿಯನ್ನು ರದ್ದು ಮಾಡಲಾಗಿದೆ

ಪ್ರಜಾ ಸಮ್ಮೇಳನ

ನೆಹರೂರವರು - ತಾತ್ಕಾಲಿಕ ಸೇರಿದ್ದರೂ ಕೂಡ ಅಖಿಲ ಜಾ ಪರಿಷತ್ತಿನ ಅಧ್ಯಕ್ಷರಾಗಿ ಡುವರೆಂದೂ ಪ್ರತಿದಿನದ ಕಾರ್ಯ ನ್ನು ನಡೆಸಲು ಡಾ॥ ಪಟ್ಟಾಭಿ ರಾಮಯ್ಯನವರನ್ನು ಕಾರ್ಯಕಾರೀ ಗೆ ನೇಮಿಸಲಾಗಿದೆಯೆಂದೂ ದೆ.

ೇಂದ್ರ ಪ್ರಸಾದರ ಆಗಮನ

ರು ಸಂಸ್ಥಾನದ ಆಹಾರಾಭಾವ ದ ತುಮಕೂರು, - ಚಿತ್ರದುರ್ಗ ೋಲಾರ ಜಿಲ್ಲೆ - ಪ್ರದೇಶಗಳಲ್ಲಿ ರ್ಕಾರದ ಮಂತ್ರಿಗಳಾದ ' ಬಾಬು ಪ್ರಸಾದರು ಅಕ್ಟೋಬರ್ ೧೫, ೧೭ ನೇ ತಾ॥ ಗಳಲ್ಲಿ ಪ್ರವಾಸ ಂದು ಗೊತ್ತಾಗಿದೆ.

ರಿಕಕ್ಕೆ ನಿಯೋಗ

ರ್ಕಾರ್ನಲ್ಲಿ ಮುಂದಿನ ತಿಂಗಳು ನಿವ್ ಸಂಯುಕ್ತ ರಾಷ್ಟ್ರಗಳ ವಾಮಾಜಿಕ ಮತ್ತು ಸಾಂಸ್ಕೃತಿಕ ನ್ನೆ ಸರ್ ರಾಧಾಕೃಷ್ಣರವರು ಯೋಗದವರ ನಾಯಕರಾಗಿ ಅರಿ ರೆಂದು ವರದಿಯಾಗಿದೆ

ರವರಿಗೆ ಚಿನ್ನದ ತಟ್ಟೆ

ರ್ ೨ ನೇ ತಾ॥ ಪಂ॥ ಜವಹರ ರೂರವರಿಗೆ ೫೮ ವರ್ಷ ತುಂಬು ಲಿಂದು ಅವರಿಗೆ ಅಖಿಲ ಭಾರತ ಕಾಂಗ್ರೆಸ್ಸಿನವರು ತಮ್ಮ ಗೌರವ ೫೮ ತೊಲ ಭಂಗಾರದ ತಟ್ಟೆ ಅರ್ಪಿಸಲು ತೀರ್ಮಾನಿಸಿದ್ದಾರೆ

ನ್ನಿಗೆ ವಿರುದ್ಧವಾಗಿ ಭಾರತದ ಓಟು

ರಿಯಾ ಆರ್ಥಿಕ ಸಮಿತಿಯಲ್ಲಿ ಯಾ ಒಪ್ಪಂದದ ಬಗ್ಗೆ ಬ್ರಿಟನ್ ಗಳಿಂದ ಸೋತುಹೋಯಿತು ಲನೆಯ ದಾಗಿ ಭಾರತದ ಪ್ರತಿ ಬ್ರಿಟನ್ನಿಗೆ ವಿರೋಧವಾಗಿ ಓಟು ದ್ದು

ರ ಹಾರಿಹೋಯಿತು

ಸ ಮೀ ಪ ದ ದ್ವೀಪವೊಂದರಲ್ಲಿ ಕಾಗಿ ಆ ದ್ವೀಪದ ಒಂದು ಭಾಗ ವೈಲಿಗಳ ದೂರಕ್ಕೆ ಹಾರಿಹೋ ವರದಿಯಾಗಿದೆ

ಂದ್ರರ ದಿನಾಚರಣೆ

ಶ್ರೀರಂಗಪಟ್ಟಣ ೧೮

ಪ ವಿದ್ಯಾರ್ಥಿ ಸಂಘದ ಆಶ್ರಯದ ೨೧ ನೇ ತಾ॥ ಶನಿವಾರ ಸಂಜೆ ಶ್ರೀ ಚಾಮರಾಜೇಂದ್ರ ಸ್ಮಾರಕ ನಲ್ಲಿ ವಿಶ್ವಕವಿ ರವೀಂದ್ರರ ದಿನಾ ಸಲಾಗುತ್ತದೆ ಶ್ರೀ ಎ ಸೀತಾರಾ ರವರು ಸಭಾಧ್ಯಕ್ಷತೆ ವಹಿಸುವರು. ಯಾಮುನಾಚಾರ್ಯರು ರವೀಂದ್ರ ಷಯವಾಗಿ ಭಾಷಣ ಮಾಡುವರು ಸ್ವಾಗತವಂಟು..

ಉಪನ್ಯಾಸ

ಮೈಸೂರು ೧೮

ಗೋಪಿಪುರದ ಶ್ರೀರಾಮ ದೇವ ಶ್ರೀ ಮಧ್ವಸಂಘದಾಶ್ರಯದಲ್ಲಿ ೬॥ ಘಂಟೆಗೆ ವಿ॥ ವೇ॥ ಚತು. ಶ್ರೀ ರಾಮಚಂದ್ರಾಚಾರ್ಯರು ಪ ಪ ಯ ವಾ ಗಿ ಉಪನ್ಯಾಸ ರು

ಪುರಸಭೆಯಲ್ಲಿ ಸಭಾ ಪರಿತ್ಯಾಗ

ಮೈಸೂರು ೧೮

ಭಾರತ ರಾಜ್ಯಾಂಗ ರಚನಾ ಸಭೆಗೆ ಸ್ವಸಂಸ್ಥಾನದಿಂದ ಜ ನಾಯಿತ ಪ್ರತಿನಿಧಿಗಳನ್ನು ಕಳಿಸುವಂತೆ ಸರ್ಕಾರವನ್ನು ಒತ್ತಾಯಿಸು ಡಿಸುವ ಕಾಂಗ್ರೆಸ್ ಪಕ್ಷದ ನಿರ್ಣಯವನ್ನು ಪುರ ಸಭಾಧ್ಯಕ್ಷರು ತಳ್ಳಿಹಾಕಿದ್ದರಿಂದ ಅದನ್ನು ಪ್ರತಿಭಟಿಸಲು ನಿನ್ನೆ ಸಂಜೆ ನಡೆದ ಪುರಸಭಾ ವಿಶೇಷ ಅಧಿವೇಶನದಲ್ಲಿ ಸದಸ್ಯರುಗಳು ಸಭಾ ಪರಿತ್ಯಾಗ ಮಾಡಿದರು.

ಅದಕ್ಕಿಂತ ಮುಂಚಿತವಾಗಿ ಕೇಂದ್ರದಲ್ಲಿ ರಾಷ್ಟ್ರೀಯ ಸರ್ಕಾರವನ್ನು ರಚಿಸಿದ ಪಂ॥ ನೆಹರು ಮತ್ತು ಅವರ ಸಹೋದ್ಯೋಗಿಗಳನ್ನು ಅಭಿನಂದಿಸಿ, ಭಾರತದಲ್ಲಿ ಸ್ವತಂತ್ರ ಸರ್ಕಾರವನ್ನು ಸ್ಥಾಪಿಸಲು ಅವರ ಉದ್ಯಮದಲ್ಲಿ ಬರಲಿರುವ ಎಲ್ಲಾ ಅಡ್ಡ ಆತಂಕಗಳನ್ನು ಎದುರಿಸಲು ಅವರುಗಳಿಗೆ ಶಕ್ತಿಯನ್ನೂ, ಧೈರ್ಯವನ್ನೂ ಕರುಣಿಸುವಂತೆ ಪರಮಾತ್ಮನನ್ನು ಪ್ರಾರ್ಥಿಸುವ ನಿರ್ಣಯವು ಸರ್ವಾನು ಮತದಿಂದ ಅಂಗೀಕಾರವಾಯಿತು.

ಭಾರತದ ಹಲವೆಡೆಗಳಲ್ಲಿ ಕಾಣಬರುತ್ತಿರುವ ಕೋಮುವಾರು ಗಲಭೆಗಳ ಬಗ್ಗೆ ತೀವ್ರ ವಿಷಾದಿಸಿ, ಈ ನಗರದಲ್ಲಿ ಕೋಮುವಾರು ಸೌಹಾರ್ದ ಸ್ಥಾಪನೆಗಾಗಿ ಶಾಂತಿ ಸಮಿತಿಯೊಂದನ್ನು ರಚಿಸಿ, ನಗರದ ನಾನಾ ಭಾಗಗಳಲ್ಲಿ ಶಾಂತಿ ಸಮ್ಮೇಳನಗಳನ್ನು ನಡೆಸಬೇಕೆಂಬ ನಿರ್ಣಯವು ಸಭೆಯಲ್ಲಿ ಬಹುವಾಗಿ ಚರ್ಚಿಸಲ್ಪಟ್ಟಿತು. ಶ್ರೀ ಗ ಊ ದ ಎಂ.ಪಿ ಜೋಯ್ಸ್ ಇ ಸಿ ನಂಜಪ್ಪ, ಟಿ ಮರಿಯಪ್ಪ, ಬಿ. ನಾರಾಯಣಸ್ವಾಮಿ ಮತ್ತು ಪಿ. ಸೀತಾರಾಮಯ್ಯನವರು ನಿರ್ಣಯದ ಪರವಾಗಿಯೂ, ಶ್ರೀ ಎಫ್. ಸಿ ದೇವರಾಜೇ ಅರಸ್ ಮತ್ತು ಶ್ರೀಮತಿ ಫಿಯೋ ಬಾಲ್ಡ್ ರವರು ವಿರೋಧವಾಗಿಯೂ ಮಾತನಾಡಿದರು. ಅಧ್ಯಕ್ಷರು ತಮ್ಮ ಅಭಿಪ್ರಾಯ ಸೂಚಿಸಿ ಇಂತಹ ಸಮಿತಿಗಳ ಅವಶ್ಯಕತೆ ಇಲ್ಲವೆಂದೂ, ಪುರಸಭೆ ಈ ಬಗೆಯ ಸಮಿತಿ ರಚಿಸಿದರೆ ಇತರರೂ ರಚಿಸಿ ತನ್ಮೂಲಕ ತಿಕ್ಕಾಟವಾಗಬಹುದೆಂದೂ ತಿಳಿಸಿದರು.

ನಂತರ ನಿರ್ಣಯವು ೧೧-೨ ಓಟುಗಳಿಂದ ಅಂಗೀಕಾರವಾಯಿತು. ಈ ಸಭೆಗೆ ಮುಸ್ಲಿಂ ಸದಸ್ಯರಾರೂ ಬಂದಿರಲಿಲ್ಲ

೧೭ ನೇ ತಾ॥ ಸಂಜೆ ನಗರದಲ್ಲಿ ಮಳೆ ಒಂದು ಅರೆಂದಿಯಲ್ಲಿ ಪ್ರವಾಹ ಪಟ್ಟೆ ಮಗುವೊಂದು ಮೃತಪಟ್ಟ ಬಗ್ಗೆ ಪುರಸಭೆಯಲ್ಲಿ ಸಂತಾಪ ಸೂಚಿಸುವ ನಿರ್ಣಯವು ಅಂಗೀಕಾರವಾಯಿತು.

ನಗರದ ಚರಂಡಿಗಳ ಪುನರ್ವ್ಯವಸ್ಥೆ ಬಗ್ಗೆ ಪಟ್ಟದಲ್ಲೇ ಒಂದು ಸರ್ವೆ ನಡೆಸಲಾಗುವುದೆಂದು ಅಧ್ಯಕ್ಷರು ತಿಳಿಸಿದರು.

ನಗರದ ಫೇರ್ ಪ್ರೈಸ್ ಡಿಪೋಗಳಿಗೆ ಸಾಕಷ್ಟು ಸರಬರಾಜುಮಾಡಿ ಸಾರ್ವಜನಿಕರುಗಳು ಸೈಸೂರು ಡಿಪೋಗಳಲ್ಲಿ ಹಲವು ತೊಂದರೆಗಳನ್ನು ತಪ್ಪಿಸಬೇಕೆಂದೂ, ಹಂಚುವ ನಿಯಮಗಳು ಪ್ರಕಟಿಸಬೇಕೆಂದೂ ಸರ್ಕಾರವನ್ನು ಪ್ರಾರ್ಥಿಸುವ ನಿರ್ಣಯವು ಸರ್ವಾನುಮತದಿಂದ ಅಂಗೀಕಾರವಾಯಿತು

ಮಹಾರಾಜ ಕಾಲೇಜು ವಿದ್ಯಾರ್ಥಿಗಳ ಸಂಘ

ಮಹಾರಾಜ ಕಾಲೇಜಿನ ಹಳೇ ವಿದ್ಯಾರ್ಥಿಗಳ ಸಂಘದವರು ಮುಂದಿನ ತಿಂಗಳು ೧೩ ನೇ ತಾ॥ "ಕಾಲೇಜು ದಿನಾಚರಣೆ" ನಡೆಸಬೇಕೆಂದು ನಿಶ್ಚಯಿಸಿರುವರು. ಕಾಲೇಜಿನ ಹಳೇ ವಿದ್ಯಾರ್ಥಿಗಳೆಲ್ಲರೂ ಚಂದಾ ಬಾಬ್ತು ಒಂದು ರೂ ವನ್ನು ಕೊಟ್ಟು ಮೇಲ್ಕಂಡ ಉತ್ಸವದಲ್ಲಿ ಭಾಗ ವಹಿಸಬೇಕೆಂದು ಕಾರ್ಯದರ್ಶಿಗಳು ಕೋರಿದ್ದಾರೆ.

ಹೋಟೇಲ್ ಮಾಲೀಕರ ತೊಂದರೆಗಳು

ಶ್ರೀರಂಗಪಟ್ಟಣ ೧೮

ಇಲ್ಲಿನ ಹೋಟೇಲು ಮಾಲೀಕರು ೩ ನೇ ತಾ॥ ಜಿಲ್ಲಾಧಿಕಾರಿಗಳನ್ನು ಕಂಡು ತಮಗೆ ಕೊಡುತ್ತಿರುವ ಆಹಾರದ ಪದಾರ್ಥಗಳು ಸಾಲದೆಂದು ತಿಳಿಸಿದರು. ಜಿಲ್ಲಾಧಿಕಾರಿಗಳು ಎಲ್ಲವನ್ನೂ ಸಾವಧಾನದಿಂದ ಕೇಳಿ ರೇಷನಿಂಗ್ ಅಧಿಕಾರಿಗಳಿಗೆ ಆಹಾರ ಪದಾರ್ಥವನ್ನು ಹೆಚ್ಚಿಗೆ ಕೊಡುವಂತೆ ತಿಳಿಸಿದರೆಂದು ಗೊತ್ತಾಗಿದೆ. ಆದರೆ ನದೀ ಮಾಲೀಕರುಗಳಿಗೆ ಅಧಿಕಾರಿಗಳು ಇನ್ನೂ ಆಹಾರ ಪದಾರ್ಥಗಳನ್ನು ಕೊಡದೇ ಇರುವುದರಿಂದ ಹೋಟೆಲವರಿಗೆ ತೊಂದರೆಯಾಗಿದೆ ಎಂದು ತಿಳಿದುಬಂದಿದೆ

ಗಣಪತಿ ಮಂಗಳಾರತಿ

ಶಿದ್ಲಘಟ್ಟ ೧೮

ಮೈಸೂರು ಸಿಲ್ಕ್ ಫಿಲೇಚರಿನ ಕಾರ್ಖಾನೆಯಲ್ಲಿ ಶ್ರೀ ಗಣಪತಿ ಮಂಗಳಾರತಿಯನ್ನು ೮ ನೇ ತಾ॥ ಭಾನುವಾರ ವೈಭವದಿಂದ ಜರುಗಿಸಲಾಯಿತು ಇದರ ಅಂಗವಾಗಿ ವಿದ್ವಾಂಸರಿಂದ ಸಂಗೀತವೂ, ಶ್ರೀ ನಾ ಕ ಸ್ವಾಮಿಯವರಿಂದ "ಕಲಿಯುಗ ಮಹಾತ್ಮೆ" ಎಂಬ ವಿಷಯವಾಗಿ ಭಾಷಣವೂ ಏರ್ಪಡಿಸಲ್ಪಟ್ಟಿದ್ದವು.

ಜಂಬೂಸವಾರಿ ರದ್ದು

ಸ್ವಂ ಸು ಫೋ॥] ಬೆಂಗಳೂರು ೧೦

ಹಿಂದೆ ಸರ್ಕಾರದವರು ಹೊರಡಿಸಿದ್ದ ಪ್ರಕಟಣೆಯನ್ನು ಮಾರ್ಪಡಿಸಿ, ಆಹಾರ ಪರಿಸ್ಥಿತಿ ಸಮರ್ಪಕವಾಗಿಲ್ಲದಿರುವ ಪ್ರಯುಕ್ತ ನವರಾತ್ರಿಯಲ್ಲಿ ವಿಜಯದಶಮೀ ದಿನ ಜಂಬೂಸವಾರಿ ಉತ್ಸವವನ್ನು ರದ್ದು ಮಾಡುವುದಾಗಿ ಈಚೆಗೆ ಮತ್ತೊಂದು ಪ್ರಕಟಣೆ ಹೊರಡಿಸಿರುತ್ತಾರೆ ದರ್ಬಾರುಗಳು ಇತರ ಶಾಸ್ತ್ರೋಕ್ತ ಕಾರ್ಯಕ್ರಮಗಳು ಎಂದಿನಂತೆ ನಡೆಯುವುವು.

ಬೆಂಗಳೂರು ಜಯಚಾಮರಾಜೇಂದ್ರ ಉದ್ಯೋಗ ಶಾಲೆಯಲ್ಲಿ ಆರು ಜನ ವಿದ್ಯಾರ್ಥಿಯರಿಗೆ ಹೊಲಿಗೆ ಶಿಕ್ಷಣ ಕೊಡಲು ಮಾಸೆಯಾನ ೨೫ ರೂ ವೇತನ ಮಂಜೂರಾಗಿದೆ.

ಮುನಸಿಪಲ್ ಜೋಳವನ್ನು ಯಂತ್ರಗಳಲ್ಲಿ ಬೀಸಿಸಲು ಇರುವ ತೊಂದರೆಯ ಬಗ್ಗೆ ಬಹಳ ಪುಕಾರು ಬಂದಿರುವುದರಿಂದ ಇನ್ನು ಮೇಲೆ ಜೋಳದ ಹಿಟ್ಟನ್ನು ರಾಗಿ ಹಿಟ್ಟಿನಂತೆ ಹೆಚ್ಚುಮಾಡಿ ಮಾರತಕ್ಕದ್ದೆಂದು ಆಜ್ಞೆಯಾಗಿದೆ.

ಭದ್ರಾವತಿಯಲ್ಲಿ ಟೆಲಿಫೋನ್ ಕೇಂದ್ರವನ್ನು ಇಡಲು ಸರ್ಕಾರದವರು ೫೫,೦೦೦ ರೂ. ನ ಹಿಂದಾಜನ್ನು ಮಂಜೂರ್ ಮಾಡಿರುವರು

ಗ್ರಾಮಗಳಿಗೆ ಸಂಬಂಧಪಟ್ಟ ಒಳ ಪ್ರದೇಶಗಳ ರಸ್ತೆಗಳಿಗಾಗಿ ಬೇರೆ ಬೇರೆ ಜಿಲ್ಲೆಗಳಿಗೆ ಒಟ್ಟು ಆರು ಲಕ್ಷ ರೂ ಮಂಜೂರಾಗಿದೆ

ಜಿನ್ನಾ ಬಳಿಗೆ ವೈಸರಾಯರ ರಾಯಭಾರಿ

ವೈಸರಾಯರಿಗೆ ರಾಜಕೀಯ ಸಲಹೆಗಾರರಾಗಿರುವ ಸರ್ ಬಿ ಎನ್ ರಾವ್‌ರವರು ನಿನ್ನೆ ಮಿ॥ ಜಿನ್ನಾರವರನ್ನು ಭೇಟಿಮಾಡಿದ್ದರು. ವೈಸರಾಯ್-ಜಿನ್ನಾ ಭೇಟಿ ವ ತ್ವರಿತ ನಡೆಯಲಿದೆಯೆಂದು ಪಾತ್ರ ಸುದ್ದಿ ಹೇಳುತ್ತಿದೆ ಆದರೆ ಎಂದು ನಡೆಯುತ್ತದೆಂಬುದು ಇನ್ನೂ ನಿಶ್ಚಿತವಾಗಿ ತಿಳಿದುಬಂದಿಲ್ಲ

ಸಂಸ್ಥಾನದ ಆಹಾರ ಪರಿಸ್ಥಿತಿ

ಪತ್ರಿಕಾ ಸಮ್ಮೇಳನ

ಸ್ವಂ.ಸು ಫೋ॥] ಬೆಂಗಳೂರು ೧೮

ಆಹಾರ ಇಲಾಖಾಧಿಕಾರಿಗಳಾದ ಶ್ರೀ ಕೆ ಗುರುದತ್‌ರವರು ನಿನ್ನೆ ಪತ್ರಿಕಾ ಸಮ್ಮೇಳನವನ್ನು ನಡೆಸಿ ಈ ಕೆಳಗಿನ ಸಂಗತಿಗಳನ್ನು ತಿಳಿಸಿದರು :—

ಈಗಿರುವ ದಾಸ್ತಾನಿನ ಜೊತೆಗೆ ಹೊರಗಿನಿಂದ ಬರುವ ಸರಬರಾಜೂ ಸೇರಿದರೆ ಮುಂದಿನ ಸುಗ್ಗಿಯ ವರೆವಿಗೆ ತಲ್ಲಲು ಸಾಕಾಗುವಷ್ಟು ಇದೆ. ಈ ತಿಂಗಳು ಹೆಚ್ಚಾಗಿ ಸುತ್ತಾಗಿ ಸುಮಾರು ... ಇನ್ನೂ ಹೆಚ್ಚಿಗೆ ಕೇಳುತ್ತಿದ್ದಾರೆ. ಕಡಲೆ, ಜೋಳ ಮೊದಲಾದ ಧಾನ್ಯಗಳನ್ನು ಜನರಿಗೆ ಒದಗಿಸಲು ಸರ್ಕಾರದವರು ಏಳು ಲಕ್ಷ ರೂ ವನ್ನು ಒದಗಿಸಿರುತ್ತಾರೆ.

ಕಳೆದ ವರ್ಷಕ್ಕಿಂತ ಈ ಸಾರಿ ೫೦,೦೦೦ ಟನ್ ಸಕ್ಕರೆ ಕಡಿಮೆ ಬಂದಿದೆ ... ನ್ನು ಪ್ರಸ್ತುತ ... ನ ಕಡ ... ಪಡೆಯಲು ಪ್ರಯತ್ನಿಸುತ್ತಿದ್ದಾರೆ.

ಸಾಧ್ವಿ

ತಾ|| ೧೯-೯-೪೬ ಗುರುವಾರ

ಹಿಂದೂ ಮುಸ್ಲಿಂ ಸೌಹಾರ್ದ

ನಗರದಲ್ಲಿ ಕೋಮುವಾರು ಸೌಹಾರ್ದವನ್ನು ಬೆಳೆಸಲು ಶಾಂತಿ ಸಮಿತಿಗಳನ್ನು ಸ್ಥಾಪಿಸುವ ವಿಚಾರದಲ್ಲಿ ನಗರ ಸಭೆಯ ಕಾಂಗ್ರೆಸ್ ಪಕ್ಷದವರು ಮಂಡಿಸಿದ್ದ ನಿರ್ಣಯವು ನಿನ್ನೆ ನಡೆದ ವಿಶೇಷ ಸಭೆಯಲ್ಲಿ ಮಂಜೂರಾಯಿತು. ಈ ಪ್ರಯತ್ನಕ್ಕಾಗಿ ನಾವು ಪೌರಸಭೆಯವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ. ಎಂದಿಗಿಂತಲೂ ಇಂದು ವಿವಿಧ ಪಂಗಡಗಳ ಸೌಹಾರ್ದವು ವಿಶೇಷವಾಗಿ ಅವಶ್ಯಕವಾಗಿದೆ.

ಕಳೆದ ಕಾಲು ಶತಮಾನದಿಂದಲೂ ರಾಷ್ಟ್ರ ನಾಯಕರು ಮಹಾತ್ಮ ಗಾಂಧಿಯವರ ನೇತೃತ್ವದಲ್ಲಿ ಸಕಲ ಕೋಮುಗಳ ಏಕಮತ್ಯಕ್ಕಾಗಿ ಹೆಣಗುತ್ತಿರುವರು. ಹಿಂದೂ-ಮುಸ್ಲಿಂ ಏಕಮತ್ಯವು ಸ್ವರಾಜ್ಯದ ಅಡಿಗಲ್ಲೆಂದು ಸಾರುತ್ತಿರುವರು. ಅಸ್ಪೃಶ್ಯತಾ ನಿವಾರಣೆಯನ್ನು ತಮ್ಮ ಕಾರ್ಯಕ್ರಮದ ಪ್ರಥಮ ಹಂತವನ್ನಾಗಿ ಇಟ್ಟುಕೊಂಡಿರುವರು. ಹೀಗೆ ಎಲ್ಲಾ ಪಂಗಡಗಳ ಸ್ನೇಹ ಸೌಹಾರ್ದಗಳು ದಿನೇ ದಿನೇ ಪ್ರವರ್ಧಮಾನವಾಗುತ್ತಾ ಬರುತ್ತಿವೆ. ಆದರೆ ರಾಜಕೀಯ ನೆಪದಿಂದ ಈ ಸಮಸ್ಯೆಯಲ್ಲಿ ಹಲವು ತೊಡಕುಗಳು ಉದ್ಭವಿಸಿರುವುದು ವಿಷಾದಕರ. ಮುಸ್ಲಿಂ ಲೀಗಿನವರ ಪಾಕಿಸ್ತಾನ ಬೇಡಿಕೆಯು ಬೆಳೆದಂದಿನಿಂದ ಈ ಸಮಸ್ಯೆಯು ಬಹಳ ತೊಡಕಿಗೆ ಕಾರಣವಾಗಿದೆ. ಲೀಗಿನವರ "ಡೈರೆಕ್ಟ್ ಆಕ್ಷನ್" ಕಾರ್ಯಕ್ರಮದ ನಂತರ ಅತ್ಯಂತ ವಿಷಾದಕರ ಘಟನೆಗಳು ಸಂಭವಿಸಿವೆ. ಕಲ್ಕತ್ತ, ಬೊಂಬಾಯಿಗಳ ದುರಂತವು ಇನ್ನೂ ಎಲ್ಲರನ್ನೂ ಬಾಧಿಸುತ್ತಿವೆ.

ಮೊನ್ನೆ ರಂಜಾನ್ ಮತ್ತು ಗಣಪತಿ ಹಬ್ಬಗಳ ಕಾಲದಲ್ಲಿ ಬೆಂಗಳೂರಿನಲ್ಲಿ ಜನರು ಸುಳ್ಳು ವದಂತಿಗಳಿಂದ ಗಾಬರಿಗೊಂಡಿದ್ದಾಗ ನಗರ ಮತ್ತು ದಂಡಿನ ಅಧಿಕಾರಿಗಳೂ ಖಾಸಗೀ ದೊಡ್ಡ ಮನುಷ್ಯರೂ, ಪೌರಸಭಾ ಸದಸ್ಯರೂ ಮುಂಜಾಗ್ರತೆ ಕ್ರಮಗಳನ್ನು ಕೈಗೊಂಡಿದ್ದರು. ಎಲ್ಲರೂ ಜಂಟಿಯಾಗಿ ಹೇಳಿಕೆಗಳನ್ನು ಹೊರಡಿಸಿ ಸಾರ್ವಜನಿಕ ಶಾಂತಿಯನ್ನು ರಕ್ಷಿಸಲು ಮಹಾಜನರಲ್ಲಿ ಮನವಿ ಮಾಡಿದ್ದರು. ಮೈಸೂರು ನಗರದಲ್ಲಿಯೂ ಸಹ ಅಧಿಕಾರಿಗಳು ಎಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡಿದ್ದರು. ಇದರಿಂದ ಯಾವ ಗಲಭೆಗಳಿಗೂ ಅವಕಾಶವಿಲ್ಲದೆ ಪರಿಸ್ಥಿತಿಯು ಪ್ರಶಾಂತವಾಗಿ ಕಳೆಯಿತು. ವಸ್ತುತಃ ನಮ್ಮ ಸಂಸ್ಥಾನದಲ್ಲಿ ಕೋಮುವಾರು ಅನ್ಯೋನ್ಯತೆಯು ಸಹಜವಾಗಿ ಅನಾದಿ ಕಾಲದಿಂದಲೂ ನೆಲೆಸಿರುತ್ತದೆ. ಆದರೂ ಸಹ ವಿಷಮ ಸಮಯಗಳಲ್ಲಿ ಜಾಗರೂಕತೆಯಿಂದ ಇರುವುದು ಮುಂದಾಳುಗಳ ಕರ್ತವ್ಯ. ರೋಗವು ಬಂದ ಮೇಲೆ ಚಿಕಿತ್ಸೆ ಮಾಡುವುದಕ್ಕಿಂತಲೂ ಬಾರದಂತೆ ತಡೆಗಟ್ಟುವುದೇ ಉತ್ತಮ ಪುರುಷರ ಲಕ್ಷಣ. ಈ ದೃಷ್ಟಿಯಿಂದಲೇ ಪೌರಸಭೆಯವರು ಮೇಲ್ಕಂಡ ನಿರ್ಣಯವನ್ನು ಮಾಡಿರುವರೆಂದು ನಾವು ನಂಬುತ್ತೇವೆ

ಇಂತಹ ಆಗತ್ಯವೂ ಅನಪಾಯಕರವೂ ಆದ ವಿಷಯದಲ್ಲಿಯೂ ಒಬ್ಬಿಬ್ಬರು ಭಿನ್ನಾಭಿಪ್ರಾಯವನ್ನು ಸೂಚಿಸಿರುವುದು ವಿಷಾದಕರ. ಶಾಂತಿ ಸಮಿತಿಗಳನ್ನು ಸ್ಥಾಪಿಸಿದರೆ ಅವುಗಳಿಗೆ ವ್ಯತಿರೇಕವಾದ ಪ್ರತಿ ಸಮಿತಿಗಳು ಸ್ಥಾಪನೆಯಾಗಬಹುದೆಂದು ಜವಾಬ್ದಾರಿಯುತರಾದ ಅಧ್ಯಕ್ಷರು ಸೂಚಿಸಿರುವುದು ಆಶ್ಚರ್ಯಕರವಾಗಿದೆ. ಕೋಮುವಾರು ಗಲಭೆಗಳು ಹತೋಟಿ ತಪ್ಪಿ ಪರಿಸ್ಥಿತಿಯು ಉತ್ಕಟವಾದಾಗ ಅಧಿಕಾರಿಗಳು ಸಾರ್ವಜನಿಕ ಮುಖಂಡರಿಂದ ಕೂಡಿದ ಶಾಂತಿ ಸಮಿತಿಗಳನ್ನು ಸ್ಥಾಪಿಸಿ ಪರಿಸ್ಥಿತಿಯನ್ನು ಹತೋಟಿಗೆ ತಂದಿರುವ ನಿದರ್ಶನಗಳು ಅನೇಕವಾಗಿವೆ. ಹೀಗಿರುವಲ್ಲಿ ಈ ಉದ್ದೇಶವನ್ನು ವಿರೋಧಿಸಿ ಅಧ್ಯಕ್ಷರು ಒಂದು ದೊಡ್ಡ ಹೇಳಿಕೆಯನ್ನೇ ಕೊಟ್ಟಿರುವುದು ಒಳ್ಳೆಯ ಆದರ್ಶವಲ್ಲ. ಈಗಲೂ ಅವರು ಸಭೆಯ ನಿರ್ಣಯದಂತೆ ನಗರದ ಶಾಂತಿ ಪಾಲನೆಗೆ ಮುಂಜಾಗ್ರತೆಯ ಕ್ರಮಗಳನ್ನು ಕೈಗೊಳ್ಳಲು ಸೂಕ್ತ ಮಾರ್ಗಗಳನ್ನು ಅವಲಂಬಿಸುವರೆಂದು ನಂಬುತ್ತೇವೆ

ಅಬ್ದುಲ್ಲಾರವರ ಉಪವಾಸ

ಈಗ ಕೊಡುತ್ತಿರುವ ಆಹಾರದ ಪ್ರಮಾಣವು ಸಾಲದೆಂಬ ಕಾರಣದಿಂದ ಕಾರಾಗೃಹದಲ್ಲಿರುವ ಕಾಶ್ಮೀರದ ಷೇಕ್ ಅಬ್ದುಲ್ಲಾರವರು ಕಳೆದ ಬುಧವಾರದಿಂದ ಉಪವಾಸ ವ್ರತವನ್ನಾಚರಿಸುತ್ತಿದ್ದಾರೆ.

OPERA TALKIES

ತಾ|| 20—9—46ರಿಂದ

ಪ್ರತಿ ದಿನ ಮೂರು ಆಟಗಳು

ಚೌ—ಚೌ

(ತಮಿಳು)

ಪಾತ್ರ:-* ಎನ್. ಎಸ್. ಕೃಷ್ಣನ್,
* ಟಿ ಎ. ಮಧುರಂ,* ಕಾಳಿ ಎನ್ ರತ್ನಂ
ಮುಂತಾದವರು

ಮಾರ್ಕೆಟ್ ಪ್ರದರ್ಶನ

ರಾಜಧಾನಿಯ ದೇವರಾಜ ಮಾರ್ಕೆಟ್ಟಿನಲ್ಲಿ ಬರುವ ನವರಾತ್ರಿ ಉತ್ಸವದ ಸಂದರ್ಭದಲ್ಲಿ ೧೯೪೬ನೇ ಅಕ್ಟೋಬರ್ ಮಾ[ಹೆ] 2 ಮತ್ತು 3 ನೇ ಬುಧವಾರ ಮತ್ತು ಗುರುವಾರ ಮಾರ್ಕೆಟ್ ಪ್ರದರ್ಶನ ಮತ್ತು ಫಲ ಪುಷ್ಪಗಳ ಪ್ರದರ್ಶನವನ್ನು ನಡೆಸಲು ಏರ್ಪಾಡಾಗಿದೆ.

ಮಾರ್ಕೆಟ್ ಸ್ಟಾಲು ಹೋಲ್ಡರುಗಳಲ್ಲದೆ ಇತರ ವ್ಯಾಪಾರಸ್ಥರುಗಳೂ ಮತ್ತು ಖಾಸಗಿ ಮಹನೀಯರುಗಳೂ ಸ್ಪರ್ಧಿಸಲು ಅವಕಾಶವಿರುತ್ತದೆ. ಉತ್ತಮ ಪ್ರದರ್ಶಕರಿಗೆ ಬೆಳ್ಳಿ ಬಟ್ಟಲು ಮತ್ತು ಮೆಡಲ್‌ಗಳನ್ನು ಬಹುಮಾನವಾಗಿ ಕೊಡಲಾಗುವುದು

ಪ್ರದರ್ಶನ: - 2 ನೇ ತಾ|| ಬೆಳಗ್ಗೆ 10 ರಿಂದ 3 ನೇ ತಾ|| ಬೆಳಗ್ಗೆ 8-3[0]

ಪ್ರವೇಶ ಧನ :—2 ನೇ ತಾ|| 0-2
3 ನೇ ತಾ|| 0-1.

ಎ. ಕೃಷ್ಣಮೂರ್ತಿರಾವ್
ಕಾರ್ಯದರ್ಶಿ,
ಮಾರ್ಕೆಟ್ ಪ್ರದರ್ಶನದ ಸಮಿತಿ

Edited printed and published A. R. Nagarajan at the Sadhvi Press, D Subbiah Road, Mysore

ಸಿನಿಮಾ ಪ್ರೇಮಿಗಳಿಗೆ ಇದೊಂದು ಸುದಿನ !

ಎಲ್ಲೆಲ್ಲಿಯೂ, ಯಾರ ಬಾಯಲ್ಲಿಯೂ

'ಸ್ವರ್ಗ ಸೀಮಾ'

ದ ಮಾತೇ ಮಾತಾಗಿದೆ! ಜನ ಸಂದಣಿಯೆಲ್ಲವನ್ನೂ ನೀವು ಇಂದು

ರಾಜ್ ಕಮಲ್

ನ ಬಳಿ ವೀಕ್ಷಿಸಬಹುದು. ಹೀಗಿರಲು ಕಾರಣವೇನೆಂಬುದನ್ನು ನೀವು ಬಲ್ಲಿರಾ?

ಇದು ವರೆವಿಗೂ ನೀವು

ಸ್ವರ್ಗ ಸೀಮವನ್ನು

ನೋಡಲು ಕಾತುರರಾಗಿದ್ದಿರಿ, ಇಂದು ನೀವು ಈ ಚಿತ್ರವನ್ನು ನೋಡಿ ಅದರ ಆನಂದವನ್ನು ಆಸ್ವಾದಿಸುತ್ತೀರಿ, ಇಂತಹ ಸೊಬಗಿನ ಚಿತ್ರವನ್ನು ನೀವು ಹಿಂದೆಂದೂ ನೋಡಿಲ್ಲವೆಂದು ಮನಗಂಡು ಮತ್ತೊಮ್ಮೆ ಈ ಚಿತ್ರವನ್ನು ನೋಡಲು ಬಯಸುವಿರಿ ಇದೆಲ್ಲವೂ 'ಸ್ವರ್ಗ ಸೀಮ' ದ ಹಿರಿಮೆಯ ಕುರುಹು. ನಿರಂತರಾಗಿ ಸ್ಥಳ ದೊರಕದೆ ಹಿಂದಿರುಗಿದ ಮಹನೀಯರಿಗೆ ನಮ್ಮ ಕೃತಜ್ಞತೆಗಳು. ಅದನ್ನು ನಿವಾರಿಸಲು ಮೊದಲೇ ಬನ್ನಿ! ಬನ್ನಿ! ಆನಂದಿಸಿ.

FREE LIST ENTIRELY SUSPENDED.

Morning Shows From 20-9 46 for four days
At 10-30 A M

KID FROM ARIZONA

UNIVERSITY OF MYSORE.

Office of the University of Mysore.

No. G. 4-1393/45-46. Mysore,

Dated 13th September 1946.

NOTIFICATION

Convocation—Saturday The 12th October 1946 at 9 A.M.

Candidates for Degrees are requested to call at the University Office, Mysore, on any of the following dates and sign the required declaration in the Register kept for the purpose. They will not be admitted to the Degrees for which they are candidates unless they have signed the declaration.

1 WEDNESDAY-9th OCTOBER 1946 11-30 A.M. to 5 30 P.M.

2. THURSDAY-10th OCTOBER 1946 11-30 A.M. to 6 P.M.

Candidates must come with their academic gown and hood to the Convocation Pavilion on 12th October 1946 before 8-15 A.M. Men candidates should wear, in addition, the prescribed dress *

A copy of the detailed directions to candidates is enclosed. D. S. GORDON, REGISTRAR.

To

The Candidates for degrees.

* DRESS—Either white or black long coat, white trousers, turban with or without lace and Uttariyam, boots or shoes (optional) For Europeans, morning dress and academic cap

ಫೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶುಕ್ರವಾರ ೨೦—೯—೪೭ [ಸಂಚಿಕೆ ೪೮

ದೆಹಲಿ ಸಂಧಾನದಲ್ಲಿ ಸ್ತಬ್ಧತೆ ಉಂಟಾಗಿದೆ

ಗ್ರಾಮಾಧಿಕಾರಿಗಳೇ ಸರ್ಕಾರದ ಬೆನ್ನು ಮೂಳೆ

ಪಟೇಲ್, ಶ್ಯಾನುಭೋಗರ ಸಮ್ಮೇಳನದಲ್ಲಿ ಅಧ್ಯಕ್ಷರ ಭಾಷಣ

(ನಮ್ಮ ವಿಶೇಷ ಪ್ರತಿನಿಧಿಯಿಂದ)

ಶಿವಮೊಗ್ಗ ೨೦

"ರೈತನು ದೇಶದ ಬೆನ್ನು ಮೂಳೆಯಂತಿರುವನೋ ಹಾಗೆ ನೀವುಗಳು ಸರ್ಕಾರದ ಬೆನ್ನು ಮೂಳೆಯಂತೆ ಇರುವಿರಿ. ಹಲವು ಸಹಸ್ರಾರು ವರ್ಷಗಳಿಂದ ವಂಶಪಾರಂಪರ್ಯವಾಗಿ ಬಂದಿರುವ ನಿಮ್ಮ ಜವಾಬ್ದಾರಿಯು ಸಂಸ್ಥಾನದಲ್ಲಿ ಅತಿ ಮುಖ್ಯವಾದುದು ಮತ್ತು ದೊಡ್ಡದು. ಕದಂಬರು, ಗಂಗರು, ಚೋಳರು, ಮುಸಲ್ಮಾನರು, ಇಂಗ್ಲೀಷರು, ಫ್ರೆಂಚರು ಮತ್ತು ಪೋರ್ಚುಗೀಸರು ಮುಂತಾದ ಅನೇಕರು ರಾಜ್ಯವನ್ನು ಕಟ್ಟಿ, ಆಳಿ, ಬಾಳಿ ಹೋದರು. ಯಾರೇ ಬರಲಿ, ಯಾರೇ ಹೋಗಲಿ, ನಿಮ್ಮ ಸ್ಥಾನವು ಉಳಿದು, ಗ್ರಾಮಗಳ, ಗ್ರಾಮಸ್ಥರ ಏಳಿಗೆಗಾಗಿ ನೀವುಗಳು ಹಗಲಿರುಳೂ ಶ್ರಮಿಸಿ ಸೇವೆಯನ್ನು ಸಲ್ಲಿಸುತ್ತಿರುವುದು ಅತಿ ಶ್ಲಾಘನೀಯವಾಗಿದೆ" ಎಂದು ಈ ದಿನ ಇಲ್ಲಿ ಸಮಾವೇಶಗೊಂಡ ಮೈಸೂರು ಸಂಸ್ಥಾನದ ಗ್ರಾಮಾಧಿಕಾರಿಗಳ ಮಹಾ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಶ್ರೀ ಎಫ್. ಸಿ. ದೇವರಾಜೇ ಅರಸಿನವರು ಭಾಷಣ ಮಾಡಿದರು.

ಸಮ್ಮೇಳನವು ಈ ದಿನ ಮಧ್ಯಾಹ್ನ ೩ ಗಂಟೆಗೆ ಶ್ರೀ ಕೃಷ್ಣಾ ಟಾಕೀಸ್ ಮಂದಿರದಲ್ಲಿ ಪ್ರಾರಂಭವಾಯಿತು. ಪ್ರಾರ್ಥನೆಯಾದ ನಂತರ ಸಂಸ್ಥಾನದ ರೆವಿನ್ಯೂ ಕಮೀಷನರ್ ಶ್ರೀ ಎಚ್. ನಾರಾಯಣರಾಯರು ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸಿ ಗ್ರಾಮಾಧಿಕಾರಿಗಳ ಗುರುತರ ಜವಾಬ್ದಾರಿಯನ್ನು ವಿವರಿಸಿ, ರಾಷ್ಟ್ರದ ಉನ್ನತಿಯು ಬಹುಭಾಗದ ಹೊರೆಯು ಗ್ರಾಮಾಧಿಕಾರಿಗಳ ಮೇಲೆ ಬಿದ್ದಿದೆಯೆಂದು ಹೇಳಿದರು. ಸಮ್ಮೇಳನಕ್ಕೆ ಸಂಸ್ಥಾನದ ನಾನಾ ಭಾಗಗಳಿಂದ ಸಹಸ್ರಾರು ಜನ ಪಟೇಲ್, ಶ್ಯಾನುಭೋಗರುಗಳು ಆಗಮಿಸಿರುವರು.

ಆರಂಭೋತ್ಸವವು ನೆರವೇರಿದ ನಂತರ ಅಧ್ಯಕ್ಷರು ಈ ರೀತಿ ಭಾಷಣಮಾಡಿದರು:-

"ಯುದ್ಧ ಮತ್ತು ಆಹಾರ ಪರಿಸ್ಥಿತಿಯಿಂದ ನಿಮ್ಮ ಕೆಲಸ ಹೆಚ್ಚಿದೆ. ಆದರೆ ನಿಮ್ಮ ಸಂಬಳ ಮತ್ತು ಪ್ರೋಟಿಗೆ ಹಿಂದೆ ಇದ್ದಷ್ಟೇ ಇವೆ. ನಿಮ್ಮ ಕುಂದುಕೊರತೆಗಳಿಗೆ ಪರಿಹಾರ ದೊರೆಯದಿದ್ದ ಕಾರಣದಿಂದ ನಿಮಗೆ ಅಸಹನೆ, ಅಸಂತೋಷ, ಅತೃಪ್ತಿ ಉಂಟಾಗಿ ಕೆಲಸಕಾರ್ಯಗಳ ಮೇಲೆ ಲಕ್ಷ್ಯವಿಲ್ಲದೆ ತಾತ್ಸಾರ ಭಾವವೇ ಜಾಸ್ತಿಯಾಗಿದೆ. ಇದರಿಂದ ಸರ್ಕಾರಕ್ಕೆ ತುಂಬಾ ನಷ್ಟವಾಗಿದೆ. ಸರ್ಕಾರದವರೇ ಆಗಲಿ ಪರಿಸ್ಥಿತಿಯನ್ನರಿಯಲಿಲ್ಲ ಎಂದು ತಿಳಿದು ನಿಮ್ಮಗಳ ಸಂಬಳವನ್ನು ಹೆಚ್ಚಿಸಲು ಪ್ರಯತ್ನಪಡಲಿಲ್ಲ. ನೀವುಗಳೇ ಆಗಲಿ ವೇತನಗಳಿಗೆ ಇರಲಿ, ಸತ್ಯದಿಂದ ಧರ್ಮದ ಮೇಲೆ ನಿಷ್ಠೆಯಿಟ್ಟು ನಮ್ಮ ಕರ್ತವ್ಯವನ್ನು ನಾವು ಪೂರ್ಣವಾಗಿ ನೆರವೇರಿಸಿ ಸಾರ್ಥಕಗೊಳಿಸಿ, ಎಂಬ ಉದಾರ ಬುದ್ಧಿಯನ್ನು ತೋರಿಸಿರಿ. ಉಭಯ ಪಾಪಿ ಹೀಗಾಗಿದೆ. ತುಂಬಾ ಶೋಚನೀಯವಾದ ವಿಷಯ.

"ಗ್ರಾಮಗಳಲ್ಲಿ ಮುಖ್ಯಸ್ಥರಾದ ನೀವು ... ಗ್ರಾಮಸ್ಥರ ಕಷ್ಟಸುಖಗಳನ್ನು ಸರ್ಕಾರಕ್ಕೆ ... ಶಾಸನ ಸಭೆಗಳಲ್ಲಿ, ರಾ...

ತಿರುವಾಂಕೂರಿಗೆ ಸ್ಪೆಷಲ್ ರೈಲಿನಲ್ಲಿ ಅಕ್ಕಿ

ಕೇಂದ್ರ ಸರ್ಕಾರದ ವಿಶೇಷ ಕೋರಿಕೆಯ ಮೇರೆಗೆ ಪಂಜಾಬ್ ಸರ್ಕಾರವು ತಿರುವಾಂಕೂರಿಗೆ ಕಳೆದ ನಾಲ್ಕು ದಿನಗಳಲ್ಲಿ ೩೫೦೦ ಟನ್ನು ಅಕ್ಕಿಯನ್ನು ಕಳಿಸಿರುವುದಾಗಿ ಗೊತ್ತಾಗಿದೆ. ಈ ಅಕ್ಕಿಯನ್ನು ವಿಶೇಷ ರೈಲುಗಳಲ್ಲಿ ಅತ್ಯಂತ ತ್ವರಿತವಾಗಿ ತುಂಬಿ ರವಾನಿಸಲಾಯಿತೆಂದೂ, ಇದೇ ರೀತಿ ದಕ್ಷಿಣ ಭಾರತದ ಅಭಾವ ಪ್ರದೇಶಗಳಿಗೆ ಸರಬರಾಜು ವ್ಯವಸ್ಥೆಯು ಮುಂದುವರಿಯುವುದಾಗಿಯೂ ತಿಳಿದು ಬಂದಿದೆ.

ವಿಕಾಸ ಸಂಘ, ಪ್ಲಾಂಟರ್ಸ್ ಸಂಘ, ಇತ್ಯಾದಿ ಸಂಸ್ಥೆಗಳಿಗೆ ಪ್ರಾತಿನಿಧ್ಯ ದೊರಕಿದಂತೆ ನಿಮ್ಮ ಸಂಘಕ್ಕೂ ಪ್ರಾತಿನಿಧ್ಯ ದೊರೆಕಿಸಿಕೊಂಡು ನೀವುಗಳೇ ಹೆಚ್ಚು ನೇರವಾಗಿ ಚುನಾವಣೆಗೆ ನಿಂತು ಅದರಲ್ಲಿ ಗೆದ್ದು, ಸೇವೆ ಸಲ್ಲಿಸಬೇಕು. ಹೀಗಾದಲ್ಲಿ ಇನ್ಯಾವ ಪಕ್ಷದವರಿಗೂ ಅವಕಾಶ ದೊರೆಯದೆ ದೇಶದಲ್ಲಿ ನಿಮ್ಮ ದ ಹೆಚ್ಚಾಗಿ ರೈತನ ಪಕ್ಷಪಾತಿಯಾಗಿ, ಅವನ ಉನ್ನತಿಗೆ ಕಾರಣವಾಗುತ್ತದೆ-ಎಂದು ತಿಳಿಸಿದರು.

ಯುದ್ಧಾನಂತರ ಪುನರ್ರಚನೆ ಆಗಲಿರುವ ಈಗ ನಿಮ್ಮ ಪಾತ್ರ ಅತಿ ಮುಖ್ಯವಾಗಿದೆ. ಅಲ್ಲದೆ ಜವಾಬ್ದಾರಿಯೂ ಹೆಚ್ಚಿದೆ. ನೀವುಗಳು ಗ್ರಾಮ ನೈರ್ಮಲ್ಯ, ಅಕ್ಷರ ಪ್ರಚಾರ, ಸ್ತ್ರೀ ವಿದ್ಯಾಭ್ಯಾಸ, ಪಶ್ಚಾತ್ತೈಗಾರಿಕೆಗಳ ಪ್ರಚಾರ ಮತ್ತು ಸಮಯೋಚಿತವಾಗಿ ಲಾಭದಾಯಕವಾದ ಬೆಳೆಗಳ ವಿಚಾರದಲ್ಲಿ ರೈತರಿಗೆ ತಕ್ಕ ತಿಳುವಳಿಕೆ ಕೊಡಬೇಕಾಗಿದೆ. ಈ ಘನವಾದ ಕಾರ್ಯಗಳ ಸಾಧನೆಗೆ ನೀವುಗಳು ನಿಮ್ಮದೇ ಆದ ಮುದ್ರಣಾಲಯ ಪ್ರೊಂದನ್ನಿಟ್ಟುಕೊಂಡು ನಿಮ್ಮದೇ ಆದ ಒಂದು ಪ್ರತ್ಯೇಕ ಪತ್ರಿಕೆಯನ್ನು ನಡೆಸಬೇಕಾಗುತ್ತದೆ- ಎಂದು "ಸರ್ಕಾರದ ರಥಕ್ಕೆ ಚಕ್ರಗಳೋಪಾದಿಯಲ್ಲಿ ನೀವುಗಳು ದೇಶ ಸೇವೆಯೇ ಈಶ ಸೇವೆ, ಜನ ಸೇವೆಯೇ ಜನಾರ್ದನ ಸೇವೆ ಎಂಬ ಅಂಶಗಳನ್ನು ನೆನಪಿನಲ್ಲಿಟ್ಟುಕೊಂಡು ವಿಶೇಷ ಕಷ್ಟಗಳಿರಲಿ ರೈತನ ಏಳಿಗೆಗಾಗಿ ಸಾಧ್ಯ ದುಡಿದು ಕೀರ್ತಿ ಗಳಿಸುತ್ತೀರೆ ಎಂದು ಸೇವೆ ಸಲ್ಲಿಸಿದ ಪಕ್ಷದಲ್ಲಿ ನಿಮ್ಮ ಜನ್ಮವು ಸಾರ್ಥಕವಾಗಿ ದೇಶಕ್ಕೂ ಯಶಸ್ಸು ಬಂದು ರೈತನು ಸುಖವಾಗಿ ಬಾಳಿ ನಿಮ್ಮಗಳಿಗೆ ಸರ್ಕಾರದವರಿಂದ ಮನ್ನಣೆಯೂ, ರೈತರುಗಳಿಂದ ಗೌರವವೂ ದೊರಕುವುದರಲ್ಲಿ ಸಂದೇಹವಿಲ್ಲ" ಎಂದು ತಮ್ಮ ಭಾಷಣವನ್ನು ಮುಕ್ತಾಯ ಮಾಡುತ್ತಾ ತಿಳಿಸಿದರು.

ಡೈರೆಕ್ಟ್ ಆಕ್ಷನ್ನಿಗೆ ಸಿದ್ಧತೆ

ಮುಸ್ಲಿಂ ಲೀಗಿನ ಡೈರೆಕ್ಟ್ ಆಕ್ಷನ್ ಕಾರ್ಯಕ್ರಮದ ಪ್ರಕಾರ ಮುಂದೆ ಕೈಗೊಳ್ಳುವ ನಿರಾಕರಣೆ ಮುಂತಾದುವುಗಳನ್ನು ಕೈಗೊಳ್ಳಬೇಕಾಗಿ ಬಂದರೆ ಅದರ ಪರಿಣಾಮಕ್ಕೆ ಸಿದ್ಧರಾಗಿರಲು ಪಂಜಾಬಿನ ಮುಸ್ಲಿಂ ಲೀಗ್ ನಾಯಕರು ತಮಗಿರುವ ಚರ ಸ್ಥಿರ ಆಸ್ತಿಗಳನ್ನು ತಮ್ಮ ಮಡದಿಯರು ಅಥವಾ ಬೇರೆ ಬಂಧುಗಳ ಹೆಸರಿಗೆ ವರ್ಗಾಯಿಸುತ್ತಿರುವುದಾಗಿ ವರದಿಯಾಗಿದೆ.

ವೆನಿಜುಲಾದಲ್ಲಿ ಮಿಲಿಟರಿ ದಂಗೆ

ವೆನಿಜುಲಾದಲ್ಲಿ ಕಳೆದ ಮಂಗಳವಾರ ಮಿಲಿಟರಿಯವರು ದಂಗೆ ಎದ್ದು ಇಬ್ಬರು ಸೈನ್ಯಾಧಿಕಾರಿಗಳು ಕೊಲೆ ಮಾಡಲ್ಪಟ್ಟಿದ್ದಾರೆ ಮತ್ತು ಅನೇಕರು ಗಾಯಗೊಂಡಿದ್ದಾರೆ. ಈ ದಂಗೆಯು ನಗರದ ದಕ್ಷಿಣ ಭಾಗದಲ್ಲಿ ಕಾಲುದಳದ ಶಿಬಿರದಿಂದ ಆರಂಭವಾಯಿತೆಂದೂ, ಒಂದು ಘರ್ಷಣೆಯಾದ ನಂತರ ದಂಗೆ ಅಡಗಿಸಲ್ಪಟ್ಟಿತೆಂದೂ ವರದಿಯಾಗಿದೆ.

ಸಂಸ್ಥಾನಗಳಲ್ಲೂ ತಾತ್ಕಾಲಿಕ ಸರ್ಕಾರ ಅವಶ್ಯಕ

ಬ್ರಿಟಿಷ್ ಭಾರತದಲ್ಲಾಗುತ್ತಿರುವ ಬದಲಾವಣೆಗಳನ್ನನುಸರಿಸಿ ಸಂಸ್ಥಾನಗಳಲ್ಲೂ ಕೂಡಲೇ ತಾತ್ಕಾಲಿಕ ರಾಷ್ಟ್ರೀಯ ಸರ್ಕಾರಗಳ ರಚನೆ ಆಗಬೇಕೆಂದೂ, ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ರಾಜ್ಯಾಂಗ ಸಭೆಗಳನ್ನು ನೇಮಿಸಬೇಕೆಂದೂ, ಸಂಸ್ಥಾನಗಳ ಸಂಧಾನ ಸಮಿತಿಯಲ್ಲಿ ಪ್ರಜೆಗಳ ಪ್ರತಿನಿಧಿಗಳು ಇರಬೇಕೆಂದೂ ಸಂಸ್ಥಾನಗಳ ಪ್ರಜಾ ಸಮ್ಮೇಳನದ ಸ್ಥಾಯೀ ಸಮಿತಿಯು ಪಂ॥ ನೆಹರೂರವರ ಅಧ್ಯಕ್ಷತೆಯಲ್ಲಿ ನಿರ್ಣಯಗಳನ್ನು ಮಾಡಿರುತ್ತದೆ.

ಗಡಿನಾಡು ಮುಖಂಡರಿಗೆ ನೆಹರೂರವರ ಗುಪ್ತ ಪತ್ರ

ಪಂ॥ ಜವಹರಲಾಲ ನೆಹರೂರವರು ಎರಡು ಗುಪ್ತ ಪತ್ರಗಳನ್ನು ಒಬ್ಬ ವಿಶೇಷ ದೂತನೊಡನೆ ಗಡಿನಾಡಿನ ಖಾನ್ ಅಬ್ದುಲ್ ಗಫಾರ್ ಖಾನರಿಗೂ, ಪ್ರಧಾನಿ ಡಾ॥ ಖಾನ್ ಸಾಹೇಬರಿಗೂ ಕಳಿಸಿರುವರೆಂದು ಗೊತ್ತಾಗಿದೆ. ಪತ್ರದಲ್ಲಿ ನಮೂದಾಗಿರುವ ವಿಷಯಗಳು ಗುಪ್ತವಾಗಿಡಲ್ಪಟ್ಟಿವೆ. ಗಡಿನಾಡಿನ ಮಂತ್ರಿಗಳಲ್ಲಿಯೂ ಸರ್ದಾರ್ ಅಬ್ದುಲ್ ನಲ್ಲಿರುವ ಗಫಾರ್ ಖಾನರನ್ನು ... ಲು ತೆರಳಿದ್ದಾರೆ

ಗ್ರಾಮ ಪ್ರದೇಶಗಳಿಗೆ ಸಮನಾದ ರೇಷನ್

ಸ್ವಂ. ವ. ಫೋ.] ಬೆಂಗಳೂರು ೨೦

ಸೆಪ್ಟೆಂಬರ್ ೨೫ ರಿಂದ ನಗರಗಳಲ್ಲಿ ಕೊಡುತ್ತಿರುವಂತೆ ಗ್ರಾಮಾಂತರ ಪ್ರದೇಶಗಳಲ್ಲಿರುವ 'ಎ' ರೇಷನ್ ಕಾರ್ಡ್ ದಾರರುಗಳಿಗೂ ಒಂದೇ ಸಮನಾದ ಧಾನ್ಯ ಪರಿಮಾಣಗಳಲ್ಲಿ ರೇಷನ್ ಕೊಡಲಾಗುವುದೆಂದು ಪ್ರಕಟಿಸಲಾಗಿದೆ.

ಸಕ್ಕರೆ ಕಂಪನಿ ಅಧ್ಯಕ್ಷತೆ

ಶ್ರೀ ಟಿ. ಟಿ. ಕೆಂಪಣ್ಣನವರನ್ನು ಸಕ್ಕರೆ ಕಂಪನಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗುವುದೆಂದು ಖಚಿತವಾಗಿ ತಿಳಿದುಬಂದಿದೆ. ಈಗ ಅಧ್ಯಕ್ಷರಾಗಿರುವ ಮಿ॥ ಎ. ಎಂ. ... ರವರಿಂದ ಪದವಿ ಅಧಿಕಾರವನ್ನು ವಹಿಸಿಕೊಳ್ಳುವ ತಿಳುವಳಿಕೆ ಸೂಚನೆಯನ್ನು ಸರ್ಕಾರವು ಇತ್ತಿರುವುದಾಗಿ ಗೊತ್ತಾಗಿದೆ

ದೆಹಲಿಯ ಮಾತುಕತೆಗಳಲ್ಲಿ ತಾತ್ಕಾಲಿಕ ಸ್ಥಗಿತ

ಮೈಸೂರು ರಾಜಪ್ರತಿನಿಧಿಯು ನಿಯೋಗದ ... ಸರ್ ಬಿ. ಎನ್. ರಾಯರು ಮಿ॥ ಜಿನ್ನಾರವರೊಡನೆ ಮಾತುಕತೆ ನಡೆಸಿ ರಾಜ್ಯಾಂಗ ವಿಚಾರಗಳಲ್ಲಿ ವಿವರಣೆಗಳನ್ನು ಕೊಟ್ಟಿವೆ. ಲೀಗಿನ ಮಿ॥ ಜಿನ್ನಾರವರು ... ಸರ್ಕಾರದಲ್ಲಿ ಸೇರುವ ಬಗ್ಗೆ ಇನ್ನೂ ಯಾವ ನಿರ್ಧಾರಕ್ಕೂ ಬಂದಿರುವುದಿಲ್ಲವೆಂದು ಹೇಳಲಾಗಿದೆ. ನೆಹರೂರವರೂ ವೈಸರಾಯರೂ ಹಿಂದೆಯೇ ಎಲ್ಲ ಅಂಶಗಳನ್ನೂ ಪರಿಶೀಲಿಸಿದ್ದರಿಂದ ಹೊಸ ಭರವಸೆಗಳನ್ನು ಕೊಡುವ ಅವಶ್ಯಕತೆಯಿಲ್ಲವೆಂದು ವೈಸರಾಯರು ಸೂಚಿಸಿದರೆಂದು ಹೇಳಲಾಗಿದೆ. ಆದುದರಿಂದ ಮಾತುಕತೆಗಳಲ್ಲಿ ತಾತ್ಕಾಲಿಕ ಸ್ಥಗಿತ ಉಂಟಾಗಿ ಪುನಃ ಜಿನ್ನಾರವರು ವೈಸರಾಯರನ್ನು ಕಾಣುವ ದಿನವು ಅನಿರ್ದಿಷ್ಟವಾಗಿ ಉಳಿದಿದೆ.

ಗಣಪತಿ ಮಂಗಳಾರತಿ

ಮೈಸೂರು ೨೮

ಜಗನ್ಮೋಹನ ಬಂಗಲೆ ಬಳಿಯಲ್ಲಿರುವ ಶ್ರೀನಿವಾಸ ಟೈಲರಿಂಗ್ ಹಾಲ್‌ನವರು ನಿನ್ನೆ ದಿನ ಗಣಪತಿ ಮಂಗಳಾರತಿಯನ್ನು ವೈಭವದಿಂದ ನೆರವೇರಿಸಿ, ಜಯಾ ಸ್ಟೋರ್ಸ್ ಭವನದ ಬಳಿ ಪ್ರಸಾದ ವಿನಿಯೋಗವನ್ನು ಮಾಡಿದರು.

ಸತ್ಕಾರ

ಶ್ರೀಮನ್ಮಹಾರಾಜರವರು ಅಡ್ವೊಕೇಟ್ ಸಿ. ನರಸಿಂಹಯ್ಯನವರಿಗೆ ರಾಜ ಸೇವಾಸಕ್ತ ಎಂಬ ಬಿರುದನ್ನು ದಯಪಾಲಿಸಿದ್ದಕ್ಕಾಗಿ ನಗರದ ವಕೀಲ ಸಂಘದವರು ಸಂತೋಷವನ್ನು ಸೂಚಿಸಲು ತಮ್ಮ ಸಂಘಕ್ಕೆ ಅವರನ್ನು ಬರಮಾಡಿಕೊಂಡಿದ್ದರು. ಸಂಘದ ಅಧ್ಯಕ್ಷರಾದ ಶ್ರೀ॥ ಲಕ್ಷ್ಮೀನಾರಾಯಣರಾವ್ ಮತ್ತು ಶ್ರೀಯುತ ... ಗುಣ ಕಥನ ಮಾಡಿ ಸಂಘದ ಪರವಾಗಿ ಅವರಿಗೆ ಒಂದು ಚಿತ್ರವನ್ನು ಅರ್ಪಿಸಿದರು. ಶ್ರೀ ನರಸಿಂಹಯ್ಯನವರು ತಮಗೆ ತೋರಿಸಿದ ಗೌರವಕ್ಕಾಗಿ ಕೃತಜ್ಞತೆಯನ್ನು ಸೂಚಿಸಿದರು. ಈ ಸಂದರ್ಭದಲ್ಲಿ ವಿದ್ವಾನ್ ಟಿ. ... ನಾರಾಯಣರಾವ್ ... ಅವರಿಂದ ಸಂಗೀತವು ನಡೆಯಿತು.

ಇಂದು ಆರಂಭ: ಲೋಕಮಾನ್ಯ ... ಪಕ್ಕದ ... ಆರಂಭೋತ್ಸವವನ್ನು ನಿನ್ನೆ ... ಶ್ರೀ ಎಂ. ಸಿ. ... ನೆರವೇರಿಸಿದರು.

ಸಾಧ್ವಿ

ತಾ|| ೨೦-೯-೪೬ ಶುಕ್ರವಾರ

ಮೈಸೂರಿನ ಪ್ರತಿಭಟನೆ

ನಮ್ಮ ಸಂಸ್ಥಾನಕ್ಕೆ ಬರಲಿದ್ದ ಏಳು ಸಾವಿರ ಟನ್ ಅಕ್ಕಿಯನ್ನು ಮದರಾಸು ಮತ್ತು ತಿರುವಾಂಕೂರುಗಳಿಗೆ ವರ್ಗಾಯಿಸಲಾಗಿದೆಯಷ್ಟೆ. ಈ ವಿಚಾರದಲ್ಲಿ ನಮ್ಮ ಸರ್ಕಾರದವರು ಇಂಡಿಯಾ ಸರ್ಕಾರಕ್ಕೆ ತಮ್ಮ ಪ್ರತಿಭಟನೆಯನ್ನು ಸೂಚಿಸಿರುವರೆಂದು ತಿಳಿದುಬಂದಿದೆ. ಈ ಪ್ರತಿಭಟನೆಗೆ ಸಂಸ್ಥಾನದ ಎಲ್ಲಾ ಪ್ರಜೆಗಳ ಬೆಂಬಲವೂ ಇರುವುದೆಂದು ನಾವು ಹೇಳಬಯಸುತ್ತೇವೆ. ಮೈಸೂರಿನ ಅಧಿಕಾರಿ ವರ್ಗದವರು ಆಸ್ಸಾಂ ಪ್ರಾಂತಕ್ಕೆ ಹೋಗಿ ಅಲ್ಲಿಂದ ಅಕ್ಕಿಯು ಬರುವಂತೆ ಏರ್ಪಾಡು ಮಾಡಿದ್ದರು. ಅದು ಇಲ್ಲಿಗೆ ಬರುವಷ್ಟರಲ್ಲಿ ಬೇರೆ ಕಡೆಗೆ ಅದನ್ನು ವರ್ಗಾಯಿಸಿರುವುದು ಆಶ್ಚರ್ಯಕರವಾಗಿದೆ. ಈ ವಿಷಯದಲ್ಲಿ ಮೈಸೂರಿನವರ ಅಭಿಪ್ರಾಯವನ್ನು ತೆಗೆದುಕೊಳ್ಳಲಿಲ್ಲವೆಂಬುದು ಸ್ಪಷ್ಟವಾಗಿಯೇ ಇದೆ.

ಆಹಾರ ಮಂತ್ರಿಗಳಾದ ಹೆ|| ಬಿ. ಎಸ್. ಎಂ. ಪಟೇಲರೊಡನೆ ನಮ್ಮ ಪ್ರತಿನಿಧಿಗಳು ಈ ಬಗ್ಗೆ ಸಂಭಾಷಣೆ ನಡೆಸಿದರು. ಮೈಸೂರಿನಲ್ಲಿ ಈಗ ಇರುವ ಆಹಾರ ಪರಿಸ್ಥಿತಿಯು ಬಹು ಮಟ್ಟಿಗೆ ಸಮರ್ಪಕವಾಗಿದೆಯೆಂದೂ ಯಾವ ಕಳವಳಕ್ಕೂ ಕಾರಣವಿಲ್ಲವೆಂದೂ ಅವರು ತಿಳಿಸಿದ್ದಾರೆ. ಅವರೇ ಎಷ್ಟು ಸಮರ್ಪಕವಾಗಿರಬೇಕೋ ಅಷ್ಟು ಇಲ್ಲವೆಂದೂ ಸಹ ಸೂಚಿಸುತ್ತಾರೆ. ಹೊರಗಿನಿಂದ ಬರಲಿರುವ ಆಹಾರ ಪದಾರ್ಥಗಳು ಯುಕ್ತ ಕಾಲದಲ್ಲಿ ಬಂದರೆ ಮುಂದಿನ ಸುಗ್ಗಿಯವರೆಗೆ ತಗಲು ಅಡ್ಡಿಯಿಲ್ಲವೆಂದೂ ತಿಳಿಸಿರುತ್ತಾರೆ. ಇದೇ ಅಭಿಪ್ರಾಯಗಳನ್ನೇ ಆಹಾರದ ಇಲಾಖಾಧಿಕಾರಿಗಳೂ ಪತ್ರಿಕಾ ನಮ್ಮೇ...

ವ್ಯಾಲೇಸರಿಗೆ ಎಚ್ಚರಿಕೆ

ಅಮೇರಿಕದ ವಿದೇಶಾಂಗ ನೀತಿಯ ಬಗ್ಗೆ ಭಾಷಣ ಮಾಡುವುದನ್ನು ಕೂಡಲೇ ನಿಲ್ಲಿಸಬೇಕು; ತಪ್ಪಿದಲ್ಲಿ ಮಂತ್ರಿಮಂಡಲವನ್ನು ಬಿಡಬೇಕು ಎಂದು ಅಧ್ಯಕ್ಷ ಟ್ರೂಮನ್ನರು ವಾಣಿಜ್ಯ ಕಾರ್ಯದರ್ಶಿ ಮಿ|| ವ್ಯಾಲೇಸರಿಗೆ ಎಚ್ಚರಿಕೆ ಇತ್ತಿದ್ದಾರೆಂದು ವರದಿಯಾಗಿದೆ. ಈ ರೀತಿ ವಾಗ್ಬಂಧನಕ್ಕೆ ಒಳಗಾಗುವುದಕ್ಕಿಂತಲೂ ಮಂತ್ರಿ ಪದವಿಗೆ ರಾಜೀನಾಮೆಯಿತ್ತು ತಮ್ಮ ಅಭಿಪ್ರಾಯ ವಿಚಾರದಲ್ಲಿ ವ್ಯಾಲೇಸರು ಪ್ರಚಾರ ನಡೆಸಬಹುದೆಂದೂ ಹೇಳಲಾಗಿದೆ.

...ಳಿನದಲ್ಲಿ ಸೂಚಿಸಿರುತ್ತಾರೆ. ಸಂಸ್ಥಾನದ ಹಲವು ಕಡೆಗಳಲ್ಲಿ ಮಳೆಯು ಸಮರ್ಪಕವಾಗಿ ಆಗಿ ಒಳ್ಳೆಯ ಬೆಳೆಯು ಬರುವ ನಿರೀಕ್ಷೆ ಇದೆ. ಆದುದರಿಂದ ಸಂಸ್ಥಾನದ ಪ್ರಜೆಗಳಿಗೆ ಈ ವರ್ಷದ ಪಡಿತರವು ಸರಿಯಾದ ರೀತಿಯಲ್ಲಿ ದೊರೆಯಬಹುದೆಂದು ನಂಬಬಹುದಾಗಿದೆ.

ಇಷ್ಟೇ ಅಲ್ಲದೆ ಇವೆಲ್ಲವೂ ಅಭಾವದ ಪರಿಸ್ಥಿತಿಗೆ ಸಿಲುಕಿರುವಾಗ ನೆರೆಯ ಪ್ರಾಂತಗಳ ನೆರವಿಗೆ ಹೋಗುವುದು ಪ್ರತಿಯೊಬ್ಬರ ಕರ್ತವ್ಯವೆಂದು ಪಟೇಲರು ಹೇಳುವುದನ್ನು ನಾವು ಒಪ್ಪುತ್ತೇವೆ. ನಮಗೆ ತೊಂದರೆ ಬಂದಾಗಲೂ ಈ ಜಗಿಯ ನೆರವಿನ ಭರವಸೆಯನ್ನು ಅವರು ಕೊಡಿಸಿದರೇ ಮಾತ್ರ ತೃಪ್ತಿಯಾಗುವುದು ಅಗತ್ಯ. ಈ ವಿಚಾರದಲ್ಲಿ ನಮ್ಮ ಸರ್ಕಾರದವರ ಕೋರಿಕೆಯಂತೆ, ದಸರೆಯಲ್ಲಿಯೂ ದಿವಾನರು ಅವಶ್ಯಕವಾದ ಪ್ರಯತ್ನಗಳನ್ನು ಮಾಡಿ ಸಂಸ್ಥಾನಕ್ಕೆ ಬರಬೇಕಾದ ಧಾನ್ಯ ಸಹಾಯವನ್ನು ಸಕಾಲದಲ್ಲಿ ಪಡೆಯುವಂತೆ ಏರ್ಪಡಿಸುವರೆಂದು ನಂಬೋಣ.

Edited printed and published by K. R. Nagaraman at the Sadhvi Press D. Subbiah Road, Mysore.

ಅಹ್ಮದಾಬಾದಿನಲ್ಲಿ ಬಾಂಬು

ಅಹ್ಮದಾಬಾದಿನಲ್ಲಿ ಮೊನ್ನೆ ಬಾಂಬೊಂದು ಹಾಕಲ್ಪಟ್ಟಿತೆಂದೂ, ಅಂಗಡಿಗಳೂ, ಕಛೇರಿಗಳೂ ತತ್ಪರಿಣಾಮವಾಗಿ ಮುಚ್ಚಲ್ಪಟ್ಟವೆಂದೂ ವರದಿಯಾಗಿದೆ. ಬಾಂಬು ತಯಾರಾಗುವ ಸ್ಥಳವನ್ನು ಪತ್ತೆಹಚ್ಚಿ ಕೊಟ್ಟವರಿಗೆ ಒಂದು ಸಹಸ್ರ ರೂ. ಬಹುಮಾನ ಕೊಡುವುದಾಗಿ ಪ್ರಕಟಿಸಲಾಗಿದೆ. ನಗರದಲ್ಲಿ ಕರ್ಫ್ಯೂ ಆಜ್ಞೆ ಜಾರಿಗೆ ಬಂದಿದೆ.

ಅಮೇರಿಕಾ ಸೈನ್ಯದ ಮೇಲೆ ರಷ್ಯದ ಧಾಳಿ

ಆಕ್ರಮಿತ ಬರ್ಲಿನ್ ಕ್ಷೇತ್ರದಲ್ಲಿದ್ದ ಅಮೇರಿಕನ್ ಸೈನ್ಯ ಶಿಬಿರವೊಂದರಲ್ಲಿದ್ದ ಪೋಲೆಂಡಿಗೆ ಸೇರಿದ ರಷ್ಯದ ದ್ರೋಹಿಗಳಿಂದ ಇಬ್ಬರನ್ನು ತಮಗೆ ಒಪ್ಪಿಸಬೇಕೆಂದು ತಿಳಿಸಿ ರಷ್ಯದ ಕೇಂದ್ರ ಸೈನ್ಯದ ಇಪ್ಪತ್ತು ಮಂದಿ ಮುತ್ತಿಗೆ ಹಾಕಿದರೆಂದೂ, ಅವರನ್ನು ಮ್ಯಾಧಿಕಾರಿಗಳ ಮಧ್ಯಸ್ಥಿಕೆಯಿಂದ ರಕ್ತಪಾತ ತಪ್ಪಿತೆಂದೂ, ರಷ್ಯದ ಅಧಿಕಾರಿಗಳು ಈ ಘಟನೆ ಬಗ್ಗೆ ತಮ್ಮ ಕ್ಷಮಾಪಣೆ ಯಾಚಿಸಿದ್ದಾರೆಂದೂ ವರದಿಯಾಗಿದೆ.

OPERA TALKIES

ತಾ|| 20—9—46ರಿಂದ ಪ್ರತಿ ದಿನ ಮೂರು ಆಟಗಳು

ಚೌ-ಚೌ

(ತಮಿಳು)

ಪಾತ್ರ:- * ಎಂ. ಎಸ್. ಕೃಷ್ಣನ್, * ಟಿ. ಎ. ಮಧುರಂ, * ಕಾಳಿ ಎನ್. ರತ್ನಂ * ಪೊಲ್ಲಿರಾಜ್, * ರಾಮಚಂದ್ರನ್ * ರಾಜಕಾಂತಂ ಮುಂತಾದವರು

ಶ್ರೀ ನಿವಾಸ

ಮೋಟಾರ್ ಸರ್ವಿಸ್

ಮೈಸೂರು—ಬೆಂಗಳೂರು

ಮೈಸೂರಿನಿಂದ ಬನ್ನೂರು, ಮಳವಳ್ಳಿ, ಹಲಗೂರು, ಸಾತನೂರು, ಕಗ್ಗಲೀಪುರ, ಹಾರೋಹಳ್ಳಿ ಮಾರ್ಗವಾಗಿ ಬೆಂಗಳೂರಿಗೆ ತಲುಪುವುದು.

ಮೈಸೂರಿನಿಂದ ಬೆಳಿಗ್ಗೆ 9-15 ಗಂಟೆಗೆ ಹೊರಟು ಬೆಂಗಳೂರಿಗೆ ಮಧ್ಯಾಹ್ನ 4-30 ಗಂಟೆಗೆ ತಲುಪುತ್ತದೆ. ಮತ್ತು ಬೆಂಗಳೂರಿನಿಂದ ಬೆಳಿಗ್ಗೆ 7-30 ಕ್ಕೆ ಹೊರಟು ಮೈಸೂರನ್ನು ಮಧ್ಯಾಹ್ನ 3-10 ಕ್ಕೆ ತಲುಪುತ್ತದೆ.

ಪ್ರೊಪ್ರೈಟರ್, ಶ್ರೀನಿವಾಸ ಮೋಟಾರ್ ಸರ್ವಿಸ್,

ಆಫೀಸ್:- "ಪದ್ಮಾಲಯ", ಸಯ್ಯಾಜಿರಾವ್ ರೋಡ್, ಮೈಸೂರು

ಶಾಲಾ ಆರಂಭ

ಮೈಸೂರು ೨೦

ಕುಕ್ಕರಹಳ್ಳಿಯಲ್ಲಿ ಸ್ಥಾಪಿತವಾಗಿರುವ ಆದಿಕರ್ನಾಟಕ ಪ್ರೈಮರಿ ಸ್ಕೂಲಿನ ಪ್ರಾರಂಭೋತ್ಸವವನ್ನು ಮೊನ್ನೆ ಶಾಲಾ ಅಸಿಸ್ಟೆಂಟ್ ವಿದ್ಯಾಧಿಕಾರಿಗಳಾದ ಶ್ರೀ ಬಿ. ಕೆ. ಸತ್ಯಬೋಧಾಚಾರ್ಯರು ನೆರವೇರಿಸಿದರು. ಚಾಮರಾಜಪುರಂ ಪ್ರೈಮರಿ ಬಾಯ್ಸ್ ಸ್ಕೂಲಿನ ಹೆ|| ಮಾಸ್ಟರಾದ ಶ್ರೀ ಎಲ್. ರಾಚಯ್ಯನವರು ವಿದ್ಯಾಭ್ಯಾಸದ ಅವಶ್ಯಕತೆ, ಒಗ್ಗಟ್ಟು ಸ್ವೈರ್ಯಗಳ ವಿಚಾರವಾಗಿ ಭಾಷಣ ಮಾಡಿದರು. ಅಧ್ಯಕ್ಷರು ಈ ಶಾಲೆಯು ಮಾದರಿ ಶಾಲೆಯಾಗಿ ಅಭಿವೃದ್ಧಿ ಹೊಂದಲೆಂದು ಹಾರೈಸಿದರು.

ಈ ಐವತ್ತು ವರ್ಷಗಳಿಂದ ಮಾನವ ಲೋಕಕ್ಕೆ ಆರೋಗ್ಯ ಸಂಪದಗಳನ್ನು ನೀಡುತ್ತಾ ಅನರ್ಘ್ಯವಾಗಿ, ಅವಿಚ್ಛಿನ್ನವಾಗಿ ಸೇವೆ ಮಾಡಿ, ದಿನದಿನಾಭಿವೃದ್ಧಿ ಹೊಂದುತ್ತಿರುವುದಕ್ಕಾಗಿ ಎಷ್ಟೋ ಗರ್ವಿಸುತ್ತದೆ.

ಅಮೃತಾಂಜನ ಲಿಮಿಟೆಡ್

EASTERNS 374

ರಾಜ್‌ಕಮಲ್, ಮೈಸೂರು

ಸಿನಿಮಾ ಪ್ರೇಮಿಗಳಿಗೆ ಇದೊಂದು ಸುದಿನ! ಎಲ್ಲಿಯೂ ಯಾರ್‍ಯಾರಲ್ಲಿಯೂ ಸ್ವರ್ಗಸೀಮದ ವಾರ್ತೆ ಕೇಳಿಬರುತ್ತಿದೆ. ಜನಸಂದಣಿಯಿಲ್ಲವನ್ನೂ ನೀವು ಇಂದು "ರಾಜ್‌ಕಮಲ್" ನ ಬಳಿ ವೀಕ್ಷಿಸಬಹುದು, ಹೀಗಿರಲು ಕಾರಣವೇನೆಂಬುದನ್ನು ನೀವು ಬಲ್ಲಿರಾ! ಇದುವರೆವಿಗೂ ನೀವು ಸ್ವರ್ಗಸೀಮವನ್ನು ನೋಡಲು ಕಾತುರರಾಗಿದ್ದೀರಿ! ಈಗ ನೀವು ಈ ಚಿತ್ರವನ್ನು ನೋಡಿ ಅದರ ಆನಂದವನ್ನು ಅಸ್ವಾದಿಸಿದ್ದೀರಿ! ಇಂತಹ ಸೊಬಗಿನ ಚಿತ್ರವನ್ನು ನೀವು ಹಿಂದೆಂದೂ ನೋಡಿಲ್ಲವೆಂದು ಮನಗೊಂಡು ಮತ್ತೊಮ್ಮೆ ಈ ಚಿತ್ರವನ್ನು ನೋಡಲು ಬಯಸುವಿರಿ! ಇದೆಲ್ಲವೂ ಸ್ವರ್ಗಸೀಮದ ಹಿರಿಮೆಯ ಕುರುಹು. ನಿರಾತರವಾಗಿ ಸ್ಥಳ ದೊರಕದೆ ಹಿಂದಿರುಗಿದ ಮಹಾಶಯರಿಗೆ ನಮ್ಮ ಕೃತಜ್ಞತೆಗಳು. ಅದನ್ನು ಸಿನಿಮಾಸಲು ಮೊದಲೇ ಬನ್ನಿ! ಬನ್ನಿ! ಅನ್ನೆಂದಿಸಿ.

19-9-46 ರಿಂದ

ಪ್ರತಿ ದಿನ ಮೂರು ಆಟಗಳು

3-30 ಕ್ಕೆ, 6-30 ಕ್ಕೆ, 9-30 ಕ್ಕೆ

ಟಿಕ್ಕೆಟ್ಟಿನ ಖರೀದಿಗೆ ಮುಂಚಿತವಾಗಿ ಪ್ರದರ್ಶಿಸಲಾಗುವುದು

ಸ್ವರ್ಗಸೀಮ

ವನ್ನು ನೀವು ಇಂದೇ ರಾಜ್‌ಕಮಲ್‌ನಲ್ಲಿ ತಪ್ಪದೇ ನೋಡಿರಿ!

FREE LIST ENTIRELY SUSPENDED.

Morning Shows From 20-9-46 for four days

AT 10-30 A. M.

KID FROM ARIZONA

ಸುಲಭ ಬೆಲೆ! ತ್ವರಿತ ಸಾರ್ವಿಸ್!

Sri Rama Electric Stores,

Govt. Licenced Electrical Contractors & Engineers.

ಎಲ್ಲಾ ವಿಧವಾದ ಎಲೆಕ್ಟ್ರಿಕ್ ಪವರ್ ಮತ್ತು ಲೈಟಿಂಗ್ ಇನ್ಸ್ಟಲೇಷನ್ ಕೆಲಸಗಳನ್ನು ಸುಲಭ ದರದಲ್ಲಿಯೂ, ಸಕಾಲದಲ್ಲಿಯೂ ಮಾಡಿಕೊಡುತ್ತೇವೆ. ನಮ್ಮಲ್ಲಿ ಮೋಟಾರ್ ಪಂಪುಗಳಿಗೆ ಸಂಬಂಧಪಟ್ಟ ಎಲ್ಲಾ ಸಾಮಾನುಗಳೂ ಕಂಟ್ರೋಲ್ ದರದಲ್ಲಿ ಸಿಗುತ್ತವೆ.

ಮಹಾಜನರ ಪ್ರೋತ್ಸಾಹವನ್ನು ಕೋರುತ್ತೇವೆ

ಶ್ರೀ ರಾಮಾ ಎಲೆಕ್ಟ್ರಿಕ್ ಸ್ಟೋರ್ಸ್,

(ಜಿಮಖಾನ ಕೃಷ್ಣಪ್ಪನವರ ರಾಮಮಂದಿರದ ಎದುರು)

ನಾರಾಯಣಶಾಸ್ತ್ರಿ ರಸ್ತೆ, ಮೈಸೂರು.

ಫೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶನಿವಾರ ೨೧—೯—೪೬ [ಸಂಚಿಕೆ ೪೯

ಮದ್ರಾಸ್ ಸರ್ಕಾರವನ್ನು ಉರುಳಿಸುವ ಪ್ರಯತ್ನ

..ಾರ್ಕೆಟ್ ಪ್ರದರ್ಶನದಲ್ಲಿ ಬಹುಮಾನಗಳು

ಮೈಸೂರು ೨೧

..ಕ್ಟೋಬರ್ ೨ ಮತ್ತು ೩ ನೇ ತಾ॥ಗ ..ರಾಜಧಾನಿಯ ದೇವರಾಜ ಮಾರ್ಕೆ..ಲ್ಲಿ ಪ್ರದರ್ಶಿಸುವ ವಸ್ತುಗಳಲ್ಲಿ ಉತ್ತ..ದ ಸ್ಟಾಲನ್ನು ಪ್ರದರ್ಶಿಸುವವರಿಗಾಗಿ .. ಭಂಗಾರದ ಪದಕವನ್ನು ಶ್ರೀ ಎಂ. .. ಬಸಪ್ಪನವರು ಬಹುಮಾನವಾಗಿ ..ದ್ದಾರೆ. ನಗರದ ಬಡವರಿಂದಲೇ ಸ್ವಂ.. ಬೆಳೆದ ಉತ್ತಮವಾದ ತರಕಾರಿ, .. ಮತ್ತು ಸಾಕಿದ ಕೋಳಿಗಳಿಗೆ ಬಹು.. ಕೊಡಲು, ಶ್ರೀಗಳಾದ ರಾಮಚಂ..ನ್ ಬೊಂಭೋರೆ, ಯು ಎಲ್ ರಾಮ..ರಾವ್, ಕೆ ಎಸ್. ಸತ್ಯನಾರಾಯಣ .., ಕಂ॥ ಗವಿಯಣ್ಣ ಮತ್ತು ಕಾಫೊ.. ಜ್ಯೂಯಲರಿ ಹಾಲಿನವರು ಉಟ.. ಕೊಟ್ಟಿರುವ ಬೆಳ್ಳಿ ಬಟ್ಟಲುಗಳ ಮತ್ತು ಉತ್ತಮ ತರಗತಿಯ ಪೀಠೋ..., ಫೂ, ಸ್ಥಳದ ತರಕಾರಿ, ಸ್ಥಳದ ..ಿಂದಲೇ ತಯಾರಾದ ಕುಕ್ಕೆ, ಬುಟ್ಟಿ ..ಂಬಾರರಿಂದ ತಯಾರಾದ ಕಡಿಕೆಗಳ ಸಂಗ್ರಹಕ್ಕಾಗಿ ಬಹುಮಾನವಾಗಿ .. ಮೈಸೂರು ಪತ್ರಿಕೆ ಆಫೀಸಿನವ..ಟ್ಟಿರುವ ತಲಾ ೧೦ ರೂ ಗಳ ೫೦ ..ವನ್ನೂ ಪ್ರದರ್ಶನದ ಸಮಿತಿ ಬಹಳ ..ನಾಪೂರ್ವಕವಾಗಿ ಸ್ವೀಕರಿಸಿ, ಇದೇ ..ನ ಜನರು ಪ್ರೋತ್ಸಾಹಿಸಬೇಕೆಂ.. ಪ್ರದರ್ಶಿ ಶ್ರೀ ಎ. ಕೃಷ್ಣಮೂರ್ತಿರಾ.. ಪ್ರಾರ್ಥಿಸಿದ್ದಾರೆ.

ವೀಣಾ ವಾದನ

..ದೋಷದ ಪ್ರಯುಕ್ತ ೨೨ ನೇ ಸಾ.. ..ಲ ೭ ಗಂಟೆಗೆ ಬಡಾರದ ಕೃಷ್ಣಪ್ಪ ..ರಾಮ ಮಂದಿರದಲ್ಲಿ ವಿದ್ವಾನ್ ಎಂ. ..ನಿವಾಸಯ್ಯಂಗಾರ್ಯರ ವೀಣಾ ವಾ..ರ್ಪಡಿಸಿದೆ. ಎಲ್ಲರಿಗೂ ಪ್ರವೇ..

..ಲ್ವೆ ಮುಷ್ಕರ ನಿಲ್ಲುವ ಸೂಚನೆ

..ಾ ಭಾರತ ರೈಲ್ವೆ ಮುಷ್ಕರವನ್ನು ..ಪ ಬಗ್ಗೆ ಅವರು ತೀರ್ಮಾನಕ್ಕೆ ಬ..ಮುಷ್ಕರ ಸಮಿತಿಯವರು ಕಂಡಾವೂ ..೨ ನೇ ತಾ॥ ಸಭೆ ಸೇರಲಿದ್ದಾರೆ ..ೆ ಕಾರ್ಮಿಕ ಮಂತ್ರಿ ಮಿ॥ ಅಸಫ..ವರು ಮುಷ್ಕರ ನಿಂತ ನಂತರ ಅವ..ಡಿಕೆಗಳನ್ನು ಪರಿಶೀಲಿಸುವುದಾಗಿ ..ದ್ದರಿಂದಲೇ ಈ ಸಭೆ ಸೇರಲಿದೆ ..ನಿಲ್ಲಿಸಲ್ಪಡುವುದೆಂದು ಕಾರ್ಮಿಕ..ಲ್ಲಿ ಹೇಳಲಾಗಿದೆ

..ಿಯು ಭವನದ ಮೇಲೆ ರಾಷ್ಟ್ರಧ್ವಜ

..ನ ತಾಲ್ಲೂಕು ಸಮಿತಿಯವರು .. ರಾಷ್ಟ್ರೀಯ ಧ್ವಜವೊಂದನ್ನು ..ರವಣಿಗೆ ಕಳುಹಿಸಿ, ಅದನ್ನು ..ರಿ ಭವನದ ಮೇಲೆ ಹಾರಿಸಲು ಮಾಡಿಕೊಂಡಿದ್ದರು. ಮೈಸೂರು ..ನಿಸರ ಮೇಲೆ ಧ್ವಜವನ್ನು ಹಾರಿ.. ಇನ್ನೂ ಬಂದಿಲ್ಲವೆಂದೂ ಆದ..ೀಯ ಧ್ವಜವು ಸ್ವತಂತ್ರ ಭಾರತ..ವಾಗಿ ಇನ್ನು ಸ್ವಲ್ಪ ದಿನಗಳಲ್ಲಿ ..ರಾಡುವುದೆಂದೂ ತಿಳಿಸಿ ಸಂಜೀವ.. ಉತ್ತರವಿತ್ತಾರೆ.

ಎಂ. ಆರ್. ಸಿ. ಬಸಪ್ಪನವರ ಮೇಲೆ ಅವಿಶ್ವಾಸ

ಮೈಸೂರು ೨೧

ಮೈಸೂರು ನಗರ ಕಾಂಗ್ರೆಸ್ ಸಮಿತಿ ಸಭೆಯು ನಿನ್ನೆ ಸಂಜೆ ಶ್ರೀ ಎಸ್. ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಖಜಾಂಚಿಗಳಾದ ಶ್ರೀ ಎಂ. ಆರ್. ಸಿ ಬಸಪ್ಪನವರು ಕಾಂಗ್ರೆಸ್ಸಿನ ಶಿಸ್ತಿಗೆ ವಿರುದ್ಧವಾಗಿ ನಡೆಯುತ್ತಿರುವರೆಂದು ಹಲವು ಸದಸ್ಯರು ಬರೆದಿದ್ದ ಪತ್ರವನ್ನು ದೀರ್ಘವಾಗಿ ಪರಿಶೀಲಿಸಿ ಅವರ ಮೇಲೆ ಅವಿಶ್ವಾಸ ಸೂಚಿಸುವ ನಿರ್ಣಯವು ಅವಿರೋಧವಾಗಿ ಅಂಗೀಕರಿಸಲ್ಪಟ್ಟಿತು. ಹೊಸ ಖಜಾಂಚಿಗಳು ಆಯ್ಕೆ ಆಗುವವರೆಗೆ ಕಾರ್ಯದರ್ಶಿಗಳೇ ಆ ಸ್ಥಾನವನ್ನು ನೋಡಿಕೊಳ್ಳಬೇಕೆಂದು ತೀರ್ಮಾನಿಸಲಾಯಿತು ಗಾಂಧಿ ಜಯಂತಿ ಆಚರಣೆ ಬಗ್ಗೆ ತಕ್ಕ ಏರ್ಪಾಡುಗಳನ್ನು ಮಾಡಲು ಒಂದು ಉಪ ಸಮಿತಿಯನ್ನು ರಚಿಸಲಾಯಿತು.

ಪ್ರದೋಷ ಸಂಗೀತ

ಕೃಷ್ಣರಾಜ ಮೊಹಲ್ಲಾ ನಾಲಾ ಬೀದಿ ರಾಮ ಮಂದಿರದಲ್ಲಿ ನಾಳೆ ಪ್ರದೋಷ ಪ್ರಯುಕ್ತ ಸಂಜೆ ೭ ಗಂಟೆಗೆ ಸಂ॥ವಿ॥ ಶ್ರೀಕಂಠ ಪಾರ್ಟಿಯವರಿಂದ ಸಂಗೀತ ಕಛೇರಿ ನಡೆಯುವುದು.

ಭಾಷಣ

ವಾಣೀವಿಲಾಸ ಮೊಹಲ್ಲಾ ಶ್ರೀ ರಾಮಕೃಷ್ಣಾಶ್ರಮದಲ್ಲಿ ಶ್ರೀ ಸೋಮನಾಥಾನಂದರು ಭಗವದ್ಗೀತೆಯ ಮೇಲೆ ನಾಳೆ ಸಂಜೆ ೬ ಗಂಟೆಗೆ ಭಾಷಣ ಮಾಡುವರು.

ಅಕ್ಕಿ ಮೂಟೆ ಕಳವು

ದೇವರಾಜ ೬ ನೇ ನಂ ಡಿಪೋವಿನಲ್ಲಿ ನಿನ್ನೆ ರಾತ್ರಿ ಯಾರೋ ಬೀಗ ಒಡೆದು ಸುಮಾರು ಏಳೆಂಟು ಮೂಟೆ ಸಣ್ಣಕ್ಕಿಯನ್ನು ಕಳವು ಮಾಡಿರುವರೆಂದು ವರ್ತಮಾನ ಬಂದಿದೆ ಈ ಬಗ್ಗೆ ಡಿಪೋ ಮಾಲೀಕರಾದ ಸಾ॥ ದೊಡ್ಡ ಜವರಪ್ಪನವರು ಪೋಲೀಸರಿಗೆ ದೂರು ಕೊಟ್ಟಿರುವರೆಂದು ಗೊತ್ತಾಗಿದೆ

ಅವಿಶ್ವಾಸ ಸೂಚನೆ ಬಿದ್ದು ಹೋಯಿತು

ಬಂಗಾಳಾ ಮಂತ್ರಿಮಂಡಲ ಮತ್ತು ಮುಖ್ಯ ಮಂತ್ರಿಯ ಮೇಲೆ ಅವಿಶ್ವಾಸ ಸೂಚನಾ ನಿರ್ಣಯಗಳು ನಿನ್ನೆ ದಿನ ಶಾಸನ ಸಭೆಯಲ್ಲಿ ಬಹುಮತದಿಂದ ಬಿದ್ದುಹೋದುವು.

ಪ್ರಕಾಶಂ ಮಂತ್ರಿ ಮಂಡಲಿ ಉರುಳಿಸಲು ಪ್ರಯತ್ನ

ಮದ್ರಾಸಿನಲ್ಲಿರುವ ಶ್ರೀ ಟಿ ಪ್ರಕಾಶಂರವರ ಮಂತ್ರಿ ಮಂಡಲವನ್ನು ಉರುಳಿಸಲು ಹಲವು ಶಾಸನ ಸಭಾಸದಸ್ಯರುಗಳು ಪ್ರಯತ್ನ ಪಡುತ್ತಿರುವುದಾಗಿ ವರದಿಯಾಗಿದೆ. ನೂರು ಮಂದಿ ಶಾಸನ ಸಭಾಸದಸ್ಯರು ಈ ಮಂತ್ರಿ ಮಂಡಲವನ್ನು ಉರುಳಿಸಿ ಬೇರೊಂದು ಸಮಾಧಾನಕರವಾದ ಮಂತ್ರಿ ಮಂಡಲವನ್ನು ಸ್ಥಾಪಿಸಬೇಕೆಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಮಯದಲ್ಲಿ ಕಾಂಗ್ರೆಸ್ ಅಧ್ಯಕ್ಷರಿಗೆ ಮನವಿ ಸಲ್ಲಿಸುವರೆಂದು ಗೊತ್ತಾಗಿದೆ,

ಆಜಾದ ದಳದವರ ಖುಲಾಸೆ

ಮೊದಲು ಫಾಸಿ ಶಿಕ್ಷೆಗೆ ಗುರಿಯಾಗಿ ಜೀವಾವಧಿ ಶಿಕ್ಷೆಗೆ ಇಳಿಸಲ್ಪಟ್ಟು ಕಾರಾಗೃಹದಲ್ಲಿದ್ದ ನಾಲ್ಕು ಮಂದಿ ಆಜಾದ್ ಹಿಂದ್ ದಳದ ಅಧಿಕಾರಿಗಳು ಭಾರತ ಸರ್ಕಾರದ ಆಜ್ಞೆಯಂತೆ ಖುಲಾಸೆಯಾಗಿರುವರು

ಯೂರೋಪಿನಲ್ಲಿ ಸಂಯುಕ್ತ ರಾಷ್ಟ್ರ ರಚನೆ

ಯೂರೋಪಿನಲ್ಲಿ ಸಂಯುಕ್ತ ಸಂಸ್ಥಾನವೊಂದನ್ನು ಸ್ಥಾಪಿಸಬೇಕೆಂದು ಮಿ॥ ಚರ್ಚಿಲರು ಸೂಚಿಸಿದ್ದಾರೆ. ಈ ಕಾರ್ಯದಲ್ಲಿ ಫ್ರಾನ್ಸ್ ಮತ್ತು ಜರ್ಮನಿಗಳು ಗ್ರೇಟ್ ಬ್ರಿಟನ್ನಿನ ಸಹಕಾರದೊಡನೆ ಮುಂಗಾಮಿಯಾಗಬೇಕೆಂದು ಸಲಹೆ ಇತ್ತಿದ್ದಾರೆ ಜರ್ಮನಿಯಲ್ಲಿ ಸಂಪೂರ್ಣ ಶಸ್ತ್ರ ಸನ್ಯಾಸವನ್ನು ಜಾರಿಗೆ ತರಬೇಕು, ಯೂರೋಪಿನ ಈಗಿನ ದುಸ್ಥಿತಿಗೆ ಇದೇ ಪರಿಹಾರೋಪಾಯವೆಂದೂ ಸಹ ಅವರು ತಿಳಿಸಿದ್ದಾರೆ.

ಬರ್ಮಾದಲ್ಲಿ ದಂಗೆ

ಬರ್ಮಾದಲ್ಲಿ ದಂಗೆಯ ಸೂಚನೆಗಳು ಕಂಡುಬರುತ್ತಿವೆ ರಂಗೂನಿನಲ್ಲಿ ಮುಷ್ಕರ ಹಿಡಿದಿರುವ ಭಾರತೀಯ ಪೋಲೀಸರು ದೆಹಲಿ ಕಡೆಗೆ 'ಕವಾತು' ಮಾಡಿಕೊಂಡು ಹೊರಡಲು ನಿರ್ಧರಿಸಿದ್ದಾರೆ. ಬರ್ಮಾ ಪೋಲೀಸರು ಸರ್ಕಾರದಿಂದ ಪ್ರತ್ಯೇಕವಾಗಿ ರಾಷ್ಟ್ರೀಯ ಪಡೆಯೊಂದನ್ನು ಸ್ಥಾಪಿಸಿ ಬ್ರಿಟಿಷ್ ಸಾಮ್ರಾಜ್ಯ ಶಾಹಿಯೊಡನೆ ಹೋರಾಟ ಹೂಡಲು ತೀರ್ಮಾನಿಸಿದ್ದಾರೆ ಪ್ಯಾಪನ್ ನಗರದಲ್ಲಿ ಪಠಾಯಿತ ಹಾವಳಿ ಆರಂಭವಾಗಿ ಕರ್ಫ್ಯೂ ಆಜ್ಞೆ ಜಾರಿಗೆ ಬಂದಿದೆ ಅಂಚೆ ಮುಷ್ಕರ ಆರಂಭವಾಗಿ ಪ್ರಬಲವಾಗುತ್ತಿದೆ ಪರಿಸ್ಥಿತಿ ತೀವ್ರ ಹದಗೆಟ್ಟಿರುವುದರಿಂದ ಅಲ್ಲಿಗೆ ಮಿತ್ರ ಸೇನಾನಿ ಲಾರ್ಡ್ ಮೌಂಟಬೆನ್ ಸ್ವಾಫರ್‌ರವರು ವಿಮಾನದಲ್ಲಿ ಸಿಂಗಪುರದಿಂದ ತೆರಳಿದ್ದಾರೆ.

ಜುಲೈನಲ್ಲಿ ದಂಡು ವಾಪಸಾಗುವುದು

ಸ್ವಂ. ಸು ಫೋ.] ಬೆಂಗಳೂರು ೨೧

ದಂಡನ್ನು ಮೈಸೂರು ಸಂಸ್ಥಾನಕ್ಕೆ ವಾಪಸು ಕೊಡಲು ಯುದ್ಧಕ್ಕೆ ಪೂರ್ವಭಾವಿಯಾಗಿಯೇ ಇಂಡಿಯಾ ಸರ್ಕಾರವು ಒಪ್ಪಿತ್ತು. ಈಗ ಯುದ್ಧ ಮುಗಿದಿರುವುದರಿಂದ ಉಭಯ ಸರ್ಕಾರಗಳ ಅಧಿಕಾರಿಗಳು ವರ್ಗಾಯಿಸಲು ಅಗತ್ಯವಾದ ಕ್ರಮಗಳನ್ನು ಪರಿಶೀಲಿಸುತ್ತಿದ್ದಾರೆ. ದಂಡನ್ನು ಜುಲೈ ತಿಂಗಳಲ್ಲಿ ಮೈಸೂರು ಸರ್ಕಾರಕ್ಕೆ ವಹಿಸಿಕೊಡಲಾಗುವುದೆಂದು ಅಧಿಕಾರಿ ಆವರಣಗಳಿಂದ ತಿಳಿದುಬಂದಿದೆ

ಸೆನೆಟ್ಟಿಗೆ ನಾಮಕರಣ

ವಿಶ್ವ ವಿದ್ಯಾಲಯ ಸೆನೆಟ್ಟಿಗೆ ಕೆಳಗೆ ಕಂಡ ಮಹನೀಯರನ್ನು ಚಾನ್ಸಲರು ನಾಮಕರಣ ಮಾಡಿದ್ದಾರೆ ಶ್ರೀಗಳಾದ ಕೆ ಹೆಚ್ ಶ್ರೀನಿವಾಸ್, ಎಸ್ ಆರ್ ಮಾಂಡ್ರೆ, ಎಸ್ ಡಿ. ಗಣೇಶರಾವ್. ಮಿರ್ಜ ಅಜೀಜುಲ್ಲಾ ಬೇಗ್, ಎ ಅಬ್ದುಲ್ ಹಾದಿ, ಸರ್ದಾರ್, ಬಿ ಬಿ ಅಪ್ಪಾದೊರೆ ಮೊದಲಿಯಾರ್, ಎಸ್ ಮುನಿವೆಂಕಟಪ್ಪ ಮತ್ತು ಬಿ ಎಸ್. ವಿಜಯಾದೇವಿ.

ಬಲವಂತ ವಿದ್ಯಾಭ್ಯಾಸ ಯೋಜನೆ

ಪ್ರಾಥಮಿಕ ವಿದ್ಯಾಭ್ಯಾಸ ನಿರ್ಬಂಧ ಶಿಕ್ಷಣಾಧಿಕಾರವನ್ನು ಚಾಮರಾಜನಗರ, ಕ್ಲೋಸ್‌ಪೇಟೆ, ಮಧುಗಿರಿ, ಬೇಲೂರು, ಸಾಗರ, ಕಡೂರು, ದಾವಣಗೆರೆ, ಕೋಲಾರ ಮತ್ತು ಬೌರಿಂಗಪೇಟೆ ಈ ತಾಲ್ಲೂಕುಗಳಿಗೆ ಬದಲಾಯಿಸಲಾಗಿದೆ.

ಮದ್ರಾಸ್ ಎಕ್ಸ್‌ಪ್ರೆಸ್

ಈಗ್ಗೆ ೨ ವರ್ಷಗಳ ಹಿಂದೆ ನಿಲ್ಲಿಸಲ್ಪಟ್ಟಿದ್ದ ಮದ್ರಾಸ್ ಬೆಂಗಳೂರು ಎಕ್ಸ್‌ಪ್ರೆಸ್ ರೈಲನ್ನು ಅಕ್ಟೋಬರ್ ೧ ನೇ ತಾ॥ನಿಂದ ಬಿಡಲಾಗುವುದೆಂದು ಗೊತ್ತಾಗಿದೆ.

ಪ್ರತಿನಿಧಿ ಸಭೆಯು ಕಾಂಗ್ರೆಸ್ ಪಕ್ಷದ ಸದಸ್ಯರುಗಳು ೧ ನೇ ಜೂನ್‌ನಲ್ಲಿ ಸಭಾತ್ಯಾಗ ಮಾಡಿದ್ದ ದಿನದ ಭತ್ಯವನ್ನು ಕೊಡಬೇಕೆಂದು ಪಕ್ಷಬಾಹ್ಯರು ಸಮಿತಿ ಸರ್ವಾನುಮತದಿಂದ ತೀರ್ಮಾನಿಸಿದೆ.

ರಾಜ್ಯಾಂಗ ಸಭೆಗೆ ಲೀಗಿನ ಸಹಕಾರವೇ ?

ಕೇಂದ್ರ ತಾತ್ಕಾಲಿಕ ಸರ್ಕಾರಕ್ಕೆ ಸೇರಲು ಮಿ॥ ಜಿನ್ನಾರವರು ನಿರಾಕರಿಸಬಹುದೆಂದು ದೆಹಲಿಯಿಂದ ಸುದ್ದಿ ಬಂದಿದೆ. ರಾಜ್ಯಾಂಗ ಸಲಹೆಗಾರರಾದ ಸರ್. ಬಿ ಎನ್. ರಾಯರು ಮಿ॥ ಜಿನ್ನಾರವರನ್ನು ಭೇಟಿಮಾಡಿದ ನಂತರ ಲೀಗ್. ರಾಜ್ಯಾಂಗ ರಚನಾ ಸಭೆಯಲ್ಲಿ ಭಾಗವಹಿಸಬಹುದೆಂದು ಹೇಳಲಾಗಿದೆ ಈ ವರ್ಷ ಡಿಸೆಂಬರ್ ಆಖೈರ್ ಕಾರ್ಯಕ್ರಮಗಳು ಸಾಂಗವಾಗಿ ನಡೆಯುವುದೆಂದು ತಿಳಿಸಲಾಗಿದೆ

ಕಾಂಗ್ರೆಸ್ ಕೆಲಸಗಾರರ ಸಭೆ

ಮೈಸೂರು ೨೧

ಮಹಾತ್ಮ ಗಾಂಧೀಜಿಯವರ ವರ್ಧಂತ್ಯುತ್ಸವವನ್ನು ವೈಭವದಿಂದ ಆಚರಿಸುವ ಬಗ್ಗೆ ಅವಶ್ಯವಾದ ಕಾರ್ಯಕ್ರಮ ಕೈಗೊಳ್ಳಲು ಕಾಂಗ್ರೆಸ್ ಕೆಲಸಗಾರರ ಸಭೆಯೊಂದನ್ನು ನಾಳೆ ... ಗಂಟೆಗೆ ಕಾಂಗ್ರೆಸ್ ಕಛೇರಿಯಲ್ಲಿ ಏರ್ಪಡಿಸಿದೆ ಎಲ್ಲಾ ... ಗಳ ಸದಸ್ಯರೂ ಮತ್ತು ಕೆಲಸಗಾರರು ತಪ್ಪದೆ ಬರಬೇಕೆಂದು ... ಕೋರಲಾಗಿದೆ

ಸಾಧ್ವಿ

ತಾ|| ೨೧-೯-೪೬ ಶನಿವಾರ

ಗ್ರಾಮಾಧಿಕಾರಿಗಳ ಹಿತ ಸಾಧನೆ

ಸಂಸ್ಥಾನದ ಗ್ರಾಮ ನೌಕರರುಗಳ ಸಮ್ಮೇಳನವು ಈಗ ಶಿವಮೊಗ್ಗದಲ್ಲಿ ನಡೆಯುತ್ತಿದೆಯಷ್ಟೆ ಅದರಲ್ಲಿ ಅವರುಗಳ ಪರಿಸ್ಥಿತಿಯನ್ನೂ, ಕುಂದು ಕೊರತೆಗಳನ್ನೂ, ಆಕ್ಷೇಪಣೆಗಳನ್ನೂ ಪರಿಶೀಲಿಸಲಾಗುತ್ತಿದೆ ಇದುವರೆಗೆ ಗ್ರಾಮಾಧಿಕಾರಿಗಳು ಹಿಂದೆ ಮೂರು ಸಮ್ಮೇಳನಗಳನ್ನು ನಡೆಸಿ ತಮ್ಮ ಕಷ್ಟ ಸುಖಗಳನ್ನು ಸರ್ಕಾರದ ಮುಂದೆ ಮಂಡಿಸಿದ್ದಾರೆ ಈಚೆಗೆ ಸಮ್ಮೇಳನವು ಸುಸಂಘಟಿತವಾದ ರೂಪವನ್ನು ತಾಳಿ ಪ್ರಜಾಪ್ರಭುತ್ವದ ಕಾರ್ಯಕ್ರಮವನ್ನು ಕೈಗೊಳ್ಳಲು ಅರ್ಹತೆಯನ್ನು ಪಡೆದಿರುತ್ತದೆ ಗ್ರಾಮಾಧಿಕಾರಿಗಳ ಪೈಕಿ ಇಪ್ಪತ್ತು ಮೂರು ಸಾವಿರ ಜನರು ಸಮ್ಮೇಳನದ ಸದಸ್ಯರಾಗಿದ್ದಾರೆ ಎಲ್ಲಾ ತಾಲ್ಲೂಕುಗಳಲ್ಲಿಯೂ ಸಂಘಗಳನ್ನು ಸ್ಥಾಪಿಸಿಕೊಂಡಿರುತ್ತಾರೆ ದಿನೇ ದಿನೇ ಸಮ್ಮೇಳನವು ಬಲವನ್ನೂ ಪ್ರಭಾವವನ್ನೂ ಹೊಂದುತ್ತಿದೆ

ಗ್ರಾಮಾಧಿಕಾರಿಗಳ ಹೀನ ಸ್ಥಿತಿಯು ಇತಿಹಾಸ ಪ್ರಸಿದ್ಧವಾದುದು ಅವರ ಸ್ಥಾನವು ಒಂದು ತ್ರಿಶಂಕು ಸ್ವರ್ಗದಂತೆ ಇರುತ್ತದೆ ಸರ್ಕಾರದ ನೌಕರರೆಂದು ಕರೆಯೋಣವೆಂದರೆ ಅವರಿಗೆ ಸರ್ಕಾರದ ನೌಕರರ ಸ್ಥಾನ ಮಾನಗಳಾಗಲೀ, ಸೌಲಭ್ಯಗಳಾಗಲೀ, ಯಾವುದೂ ಇರುವುದಿಲ್ಲ ಕೆಲಸ ಮಾಡಬೇಕಾದ ಕಾಲದ ಪರಿಮಿತಿಯೇ ಇಲ್ಲ ಇಪ್ಪತ್ತನಾಲ್ಕು ಘಂಟೆಗಳಲ್ಲಿ ಯಾವಾಗ ಕೆಲಸ ಬಿದ್ದರೂ ಅವರು ಹಾಜರಿರಬೇಕು ರೆವಿನ್ಯೂ, ಮುಜರಾಯಿ, ಜುಡಿಷಿಯಲ್, ಪೋಲೀಸ್, ಮತ್ತು ಇತರ ಸಮಸ್ತ ಅಧಿಕಾರಿಗಳಿಗೂ ಅವರು ಅಧೀನರಾಗಿರಬೇಕು ಅವರಿಗೆ "ರಜಾ" ಎಂಬುದೇ ನಿರ್ದಿಷ್ಟವಾಗಿಲ್ಲ ಇಂತಹುದೇ ಕೆಲಸವೆಂಬ ನಿಷ್ಕರ್ಷೆಯೂ ಇಲ್ಲ. ಸರ್ಕಾರದ ಪರವಾಗಿ ಗ್ರಾಮಕ್ಕೆ ಬರುವ ಸಕಲ ಇಲಾಖೆಗಳ ಸಣ್ಣ ಪುಟ್ಟ ಮತ್ತು ದೊಡ್ಡ ದೊಡ್ಡ ನೌಕರರುಗಳಿಗೂ ಆಜಾಬುವಾರಿಯನ್ನು ಮಾಡಬೇಕು. ಗ್ರಾಮದಲ್ಲಿ ಯಾವುದೊಂದು ಹೆಚ್ಚು ಕಡಿಮೆ ಯಾದರೂ ಪಟೇಲ, ಶ್ಯಾನುಭೋಗರುಗಳಿಗೆ ಅದರ ಜವಾಬ್ದಾರಿಯು ಬೀಳುತ್ತದೆ

ಸರ್ಕಾರದ ಕಂದಾಯವನ್ನು ವಸೂಲು ಮಾಡಿ ಖಜಾನೆಗೆ ಕಟ್ಟುವುದು ಮತ್ತು ಲೆಖ್ಖಗಳನ್ನು ಇಡುವುದು ಗ್ರಾಮ ನೌಕರರ ಮುಖ್ಯ ಕೆಲಸ ಆದರೆ ಇತರ ಕೆಲಸಗಳಿಗೆ ಮಿತಿ ಮೇರೆಯೇ ಇಲ್ಲ ಇವುಗಳಿಗಾಗಿ ಅವರುಗಳಿಗೆ ಕೊಡುತ್ತಿರುವ ವೇತನವು ಲಜ್ಜಾಸ್ಪದವಾಗುವಷ್ಟು ಅಲ್ಪ ಪ್ರಮಾಣದಲ್ಲಿರುತ್ತದೆ ವರ್ಷಕ್ಕೆ ಹದಿನೈದು ಇಪ್ಪತ್ತು ರೂಪಾಯಿ ಪೋಟಿಗೆ ಪಡೆವ ಕೆಲವರೂ ಇದ್ದಾರೆ ಇದರಿಂದ ಅವರು ಸಂಸಾರ ಭರಣ ಮಾಡಿ ಸಂತೃಪ್ತಿಯಿಂದ ಎಷ್ಟರವರೆಗೆ ಕೆಲಸ ಮಾಡಬಹುದೆಂಬುದನ್ನು ಮಹಾಜನರೇ ಊಹಿಸಬೇಕು

ವಂಶ ಪಾರಂಪರ್ಯವಾಗಿ ಬಂದಿರುವ ಬರಾವರ್ದಿನ ಈ ನೌಕರಿಯಲ್ಲಿ ಒಂದು ವ್ಯಾಮೋಹವನ್ನಿಟ್ಟು ಅವರುಗಳು ಕೆಲಸ ಮಾಡುತ್ತಾ ಬಂದಿದ್ದಾರೆ ಬ್ರಿಟಿಷ್ ಹಿಂದೂಸ್ಥಾನದ ಪ್ರಾಂತಗಳಲ್ಲಿ ಅವರುಗಳನ್ನು ಪೂರ್ಣವಾಗಿ ಸರ್ಕಾರಿ ನೌಕರರಂತೆಯೇ ಪರಿಗಣಿಸಿ ಕ್ಲಪ್ತವಾದ ಸಂಬಳಗಳ ಪ್ರಮಾಣವನ್ನು ಗೊತ್ತುಮಾಡಿರುತ್ತಾರೆ ನಮ್ಮಲ್ಲಿ ಹಾಗೆ ಇರುವುದಿಲ್ಲ. ಆದರೂ ಇವರುಗಳಿಗೆ ಅಧಿಕಾರಿಗಳೆಂಬ ದೊಡ್ಡ ಹೆಸರು ಮಾತ್ರ ಇರುತ್ತದೆ. ತಮ್ಮ ಕೆಲಸಕ್ಕೆ ತಕ್ಕ ಪ್ರತಿಫಲವಿಲ್ಲದಿರುವುದು ಅವರ ಪ್ರಮುಖ ಕೊರತೆ ಇದನ್ನು ನಿವಾರಿಸುವುದಕ್ಕಾಗಿಯೇ ಅವರು ಪ್ರತಿ ವರ್ಷವೂ ಸರ್ಕಾರದಲ್ಲಿ ಮೊರೆಯಿಡುತ್ತಿದ್ದಾರೆ. ಆದರೂ ಯಾವ ಪರಿಹಾರವೂ ದೊರೆತಿರುವುದಿಲ್ಲ ಬಾಯಿಮಾತಿನಲ್ಲಿ ಮಾತ್ರ ಸಹಾನುಭೂತಿಯನ್ನು ತೋರಿಸಲಾಗುತ್ತಿದೆ ಈ ಬಗ್ಗೆ ವ್ಯವಸ್ಥಿತವಾದ ರೀತಿಯಿಂದ ಗ್ರಾಮ ನೌಕರರು ತಮ್ಮ ಆಕ್ಷೇಪಣೆಗಳನ್ನು ಮುಂದಿಟ್ಟು ಸೂಕ್ತವಾದ ಪರಿಹಾರವನ್ನು ಪಡೆಯುವರೆಂದು ನಾವು ನಂಬುತ್ತೇವೆ

ಗ್ರಾಮಾಧಿಕಾರಿಗಳಿಗೆ ಶಾಸನ ಸಭೆಗಳ ಚುನಾವಣೆಗಳಲ್ಲಿ ಸ್ಪರ್ಧಿಸುವ ಅವಕಾಶವನ್ನು ಕೊಡಲಾಗಿದೆ ಆದರೆ ಅವರು ಯಾವ ರಾಜಕೀಯ ಪಕ್ಷಗಳನ್ನೂ ಸೇರಕೂಡದೆಂಬ ನಿರ್ಬಂಧವು ಇರುತ್ತದೆ ಇದು ಎಲ್ಲಾ ರಾಜನೀತಿ ತತ್ವಗಳಿಗೂ ವಿರುದ್ಧವಾದುದು. ಬಹಿರಂಗ ಚುನಾವಣೆಗಳಿಂದ ಆರಿಸಿ ಬಂದವರು ನಿಯಮಿತವಾದ ರೀತಿಯಲ್ಲಿ ವರ್ತಿಸಬೇಕೆಂದು ಹೇಳುವುದು ಪ್ರಜಾ ಸ್ವಾತಂತ್ರ್ಯದ ವಿರೋಧ ವರ್ತನೆಯಾಗುವುದು ಅವರು ಪ್ರಜೆಗಳ ಇಷ್ಟಬಂತಿ ಸಭೆಗಳಲ್ಲಿ ಸ್ವತಂತ್ರವಾಗಿ ವರ್ತಿಸುವ ಅವಕಾಶವನ್ನು ಕಲ್ಪಿಸಬೇಕು. ಒಟ್ಟಿನಲ್ಲಿ ಗ್ರಾಮ ನೌಕರರ ಸ್ಥಾನ ಮಾನಗಳನ್ನು ಹೆಚ್ಚಿಸಿ ತನ್ಮೂಲಕ ದೇಶ...

ಕಾನ್ಪುರದಲ್ಲಿ ದಸ್ತಗಿರಿ

ನಿಯಮ ವಿರುದ್ಧವಾಗಿ ಮುಷ್ಕರಗಳನ್ನು ನಡೆಸಲು ಮತ್ತು ಸಾಮೂಹಿಕ ಹಿಂಸಾ ವೃತ್ತಿಯನ್ನು ಅನುಸರಿಸುವಂತೆ ಗಿರಣಿ ಕೆಲಸಗಾರರುಗಳಿಗೆ ಬೋಧನೆ ಮಾಡುತ್ತಿದ್ದರೆಂಬ ಆಪಾದನೆ ಮೇಲೆ ೯೪ ಮಂದಿಯನ್ನು ಕಾನ್ಪುರದಲ್ಲಿ ದಸ್ತಗಿರಿ ಮಾಡಲಾಗಿದೆ ಇವರಲ್ಲಿ ಬಹುಮಂದಿ ಕಮ್ಯೂನಿಸ್ಟ್ ಪಕ್ಷಕ್ಕೆ ಸೇರಿದವರಾಗಿದ್ದಾರೆ.

...ದ ಏಳಿಗೆಯು ತೃಪ್ತಿಕರವಾಗಿ ನಡೆಯಲು ಸರ್ಕಾರದವರು ಏರ್ಪಡಿಸುವುದು ಅಗತ್ಯವಾಗಿದೆ.

ಕಾಲವನ್ನು ಕಳೆಯಲು ತೋಚದಿರುವ ವಯೋವೃದ್ಧರೂ, ರೋಗ ರುಜಿನಗಳ ಬೇಗೆಯನ್ನು ಸಹಿಸಲಾರದಿರುವವರೂ

ಸ್ವರ್ಗಸೀಮ

ದ ಹಿರಿಮೆಯನ್ನು ಕೇಳಿ, ಬಂದು ನೋಡಿ, ಸಂತೋಷ ಪಡುವಾಗ, ನೀವು ಯಾಕೆ ನೋಡಬಾರದು ?

ಬನ್ನಿ, ಇಂದೇ ರಾಜ್ ಕಮಲ್‌ನಲ್ಲಿ ನೋಡಿ ಆನಂದಿಸಿ!

FREE LIST ENTIRELY SUSPENDED

Morning Shows From 20 9 46 for four days

AT 10 30 A M

KID FROM ARIZONA

ಸುಲಭ ಬೆಲೆ ! ತ್ವರೆ ಮಾಡಿರಿ !!

Sri Rama Electric Stores,

Govt Licenced Electrical Contractors & Engineers

ಎಲ್ಲಾ ವಿಧವಾದ ಎಲೆಕ್ಟ್ರಿಕ್ ಪವರ್ ಮತ್ತು ಲೈಟಿಂಗ್ ಇನ್ಸ್ಟಲೇಷನ್ ಕೆಲಸಗಳನ್ನೂ ಸುಲಭ ದರದಲ್ಲಿಯೂ, ಸಕಾಲದಲ್ಲಿಯೂ ಮಾಡಿಕೊಡುತ್ತೇವೆ ನಮ್ಮಲ್ಲಿ ಮೇಲ್ಕಂಡ ಕೆಲಸಗಳಿಗೆ ಸಂಬಂಧಪಟ್ಟ ಎಲ್ಲಾ ಸಾಮಾನುಗಳೂ ಕಂಟ್ರೋಲ್ ದರದಲ್ಲಿ ಸಿಗುತ್ತವೆ

ಮಹಾಜನರು ಪ್ರೋತ್ಸಾಹಿಸಬೇಕಾಗಿ ಕೋರುತ್ತೇವೆ

ಶ್ರೀ ರಾಮಾ ಎಲೆಕ್ಟ್ರಿಕ್ ಸ್ಟೋರ್ಸ್,

(ಬಿಡಾರದ ಕೃಷ್ಣಪ್ಪನವರ ರಾಮ ಮಂದಿರದ ಎದುರು)

ನಾರಾಯಣಶಾಸ್ತ್ರಿ ರಸ್ತೆ, ಮೈಸೂರು.

ನಿಮ್ಮ ಮೈ ಕೋಮಲವಾಗಿರಬೇಕೆ? ನಿಮ್ಮ ಮೈ ನೋಟವುಳ್ಳದ್ದಂತೆ ಹೊಳೆಯಬೇಕೆ ? ನೀವು ಲಾವಣ್ಯ ಮೂರ್ತಿಗಳಾಗಬೇಕೆ ? ಹಾಗಾದರೆ ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ !

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ. ಪರೀಕ್ಷಿಸಿ ನೋಡಿರಿ ಎಲ್ಲೆಲ್ಲೂ ದೊರೆಯುತ್ತವೆ. ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

OPERA TALKIES

ತಾ|| 20-9-46ರಿಂದ

ಪ್ರತಿ ದಿನ ಮೂರು ಆಟಗಳು

ಚೌ-ಚೌ

(ತಮಿಳು)

ಪಾತ್ರ:- * ಎನ್ ಎಸ್. ಕೃಷ್ಣನ್, * ಟಿ ಎ ಮಧುರಂ, * ಕಾಳಿ ಎನ್ ರತ್ನಂ * ದೊರೈರಾಜ್, * ರಾಮಚಂದ್ರನ್ * ರಾಜಕಾಂತಂ ಮುಂತಾದವರು

Edited printed and published by A. R. Nagarajan at the Sadhvi Press D Subbiah Road Mysore

Office of the President,
City Municipal Council, Mysore.
Dated 13th September 1946.

NOTIFICATION

No M5. C. 117-56 / 46-7

It is hereby notified for the information of the inhabitants of the Mysore City Municipality that the Municipal Council have resolved to amend the existing octroi bye laws framed under Section 51 (1) K and 64 Proviso (a) (II) of the Mysore City Municipalities Act, as noted below

Any person having any objection in respect of the proposed amendment may prefer the same in writing to the undersigned within a month from this date after which no objection will be received

Chapter XI.

Octroi Byelaws approved in G.O No L 10361-2/M I 106-45-16 dated 5-4-16.

Amendment proposed: Add under exemptions as serial No. 31, the following

" The consignment of sugar imported by Government for transport to outside places "

(Sd) R Ramachandra Rao Bhombore
President.

ಪೋ. ನಂ 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಭಾನುವಾರ ೨೭—೧—೪೬ [ಸಂಚಿಕೆ ೫೦

ಆಹಾರಕ್ಕಾಗಿ ಅಮೆರಿಕಕ್ಕೆ ನೆಹರೂರವರ ಮನವಿ

ನಯಗ್ಗಾರ ಜಲಪಾತ ಕುಸಿಯಿತು

ಅಮೆರಿಕದ ಸುಪ್ರಸಿದ್ಧ ಜಲಪಾತವಾದ ನಯಾಗರದ ಮೇಲ್ಭಾಗದಲ್ಲಿ ೧೨೦ ಅಡಿ ಅಗಲ ಮತ್ತು ಕೆಳಭಾಗದಲ್ಲಿ ೬೦ ಅಡಿ ಅಗಲವಿರುವ ಒಂದು ಬಂಡೆಯು ಮೊನ್ನೆ ಕುಸಿದು ಬಿದ್ದು ಆ ನಗರವೆಲ್ಲಾ ನೀರಿನಲ್ಲಿ ಮುಳುಗಿ ಹೋಗಿದೆ. ಅದು ಬಿದ್ದಾಗ ದೊಡ್ಡ ಭೂಕಂಪವಾದಂತೆ ಶಬ್ದವು ಕೇಳಿ ಬಂದಿತು.

ರಷ್ಯಕ್ಕೆ ಆಹಾರ ನಿಯೋಗ

ಭಾರತಕ್ಕೆ ಬೇಕಾಗಿರುವ ಧಾನ್ಯಗಳಲ್ಲಿ ಸ್ವಲ್ಪವಾದಷ್ಟನ್ನು ರಷ್ಯದಿಂದ ಒದಗಿಸಿಕೊಳ್ಳುವ ಅಂಶವನ್ನು ಪರಿಶೀಲಿಸಲು ಮಾಸ್ಕೋಗೆ ಆಹಾರ ನಿಯೋಗವೊಂದನ್ನು ಕಳುಹಿಸುವ ವಿಚಾರವನ್ನು ಇಂಡಿಯಾ ಸರ್ಕಾರ ಆಲೋಚಿಸುತ್ತಿದೆಯೆಂದು ಗೊತ್ತಾಗಿದೆ.

ಮಹಾತ್ಮರ ಬೋಧನೆಗೆ ಬ್ರಿ॥ ತರುಣರ ಶರಣು

ಲಂಡನ್ ಬಳಿ ಇರುವ ಸಫೋಕ್ ಜಿಲ್ಲೆಯ ೩೦ ಹಳ್ಳಿಯ ಯುವಕರುಗಳು ಮಹಾತ್ಮ ಗಾಂಧಿಯವರ ಪುಸ್ತಕಗಳನ್ನು ಓದಿ ಯಾಂತ್ರಿಕ ಜೀವನವನ್ನು ತ್ಯಜಿಸಿ, ಸಾತ್ವಿಕ ಜೀವನವನ್ನು ನಡೆಸಲು ನಿರ್ಧರಿಸಿರುವರೆಂದು ತಿಳಿದುಬಂದಿದೆ. ಈ ಹಳ್ಳಿಗಳಲ್ಲಿ ಸಿನಿಮಾಗಳನ್ನು ನೋಡುವುದನ್ನು ತ್ಯಜಿಸಿದ್ದಾರೆ. ಹುಡುಗಿಯರು ತುಟಿಗೆ ಬಣ್ಣ ಬಳಿಯುವುದನ್ನು ರದ್ದು ಮಾಡಿರುತ್ತಾರೆ. ಗಾಂಧಿಜಿಯವರ ಶಾಂತಿ ತತ್ವವನ್ನು ಎಲ್ಲ ಕಡೆಗೂ ಸಾರಲು ಅವರು ಪ್ರಚಾರಕರನ್ನು ಕಳಿಸಿದ್ದಾರೆ.

"ಬ್ರಿಟಿಷ್ ಸಾಮ್ರಾಜ್ಯ ಶಾಹಿಯು ಸತ್ತಿದೆ"

ದಕ್ಷಿಣ ಆಫ್ರಿಕದ ಪ್ರಧಾನ ಮಂತ್ರಿ "ಸ್ಮಟ್ಸರವರು ಮಾಡಿದ ಒಂದು ಭಾಷಣದಲ್ಲಿ ತಮ್ಮ ದೇಶವು ಬ್ರಿಟನ್ನಿನ ಬಾಲವನ್ನು ಹಿಡಿದು ನಡೆಯುತ್ತಿಲ್ಲವೆಂದು ಹೇಳಿದರು. ಬ್ರಿಟಿಷ್ ಸಾಮ್ರಾಜ್ಯ ಶಾಹಿಯು ಸತ್ತುಹೋಗಿದೆ; ಯುದ್ಧದ ಹಿಂಸೆಯಿಂದ ಜಗತ್ತನ್ನು ಪಾರು ಮಾಡಲು ಅದು ಸತ್ತಿತು; ಅಂದಿನಿಂದ ಈವರೆಗೆ ಅದು ನಾಮಾವಶೇಷವಾಗಿದೆ-ಎಂದು ಸಹ ಅವರು ಹೇಳಿರುವರು.

ಎ ಎಂ ಸಿ ಸಿ ಗೆ ಚುನಾವಣೆ

ಮೈಸೂರು ೨೨

ಚಾಮರಾಜ ಮೊಹಲ್ಲಾದಿಂದ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಗೆ ನಿನ್ನೆ ನಡೆದ ಚುನಾವಣೆಯಲ್ಲಿ ಶ್ರೀಗಳಾದ ಹೆಚ್. ಎಸ್. ದೊರೆಸ್ವಾಮಿ, ಮತ್ತು ಟಿ. ಎಸ್. ಸುಬ್ಬಣ್ಣನವರು ಬಹುಮತದಿಂದ ಚುನಾಯಿಸಿ ಬಂದಿರುವರು.

ಭಾಷಣ

ವ್ಯಾಳಿಕಾವಲ್ಲಿ ಸ್ವಾ॥ ಶಿವಲಿಂಗಯ್ಯನವರ ಸ್ಮೃತಿ ಪಾಠಶಾಲಾ ವಿದ್ಯಾರ್ಥಿ ಸಂಘದಾಶ್ರಯದಲ್ಲಿ ಬನುಮಯ್ಯನವರ ಶಾಲಾ ಭವನದಲ್ಲಿ ೨೩ ನೇ ತಾ॥ ಸಂಜೆ ೬॥ ಗಂಟೆಗೆ ಶ್ರೀ॥ ಗೌರೀಶಂಕರ ಸ್ವಾಮಿಯವರು 'ಜೀವನದ ರಹಸ್ಯ' ಎಂಬ ವಿಷಯವಾಗಿ ಭಾಷಣ ಮಾಡುವರು.

...ನಿನ್ನು ವರ್ಗದ ವಿದ್ಯಾರ್ಥಿ ನಿಲಯಗಳಿಗೆ ಕೊಡುತ್ತಿದ್ದ ಗ್ರಾಂಟನ್ನು ತಿಂಗಳಿಗೆ ರೂ ೪ ರೂಗಳಿಂದ ೬ ರೂಗಳಿಗೆ ಈ ... ನಲ್ಲಿ ಸರ್ಕಾರದವರು ಹೆಚ್ಚಿಸಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷತೆಗೆ ಸುಭಾಷ್ ಚಂದ್ರ ಬೋಸರು

ಕಾಂಗ್ರೆಸ್ ಅಧ್ಯಕ್ಷತೆಯನ್ನು ವಹಿಸಲು ಬಾಬು ಸುಭಾಷ್ ಚಂದ್ರ ಬೋಸರನ್ನು ಆಹ್ವಾನಿಸಿ ಅವರನ್ನು ಆ ಸ್ಥಾನಕ್ಕೆ ಚುನಾಯಿಸುವುದಲ್ಲದೆ ಬೋಸರು ಹಿಂದೂಸ್ಥಾನಕ್ಕೆ ಹಿಂದಿರುಗಿ ಮೀರತ್ತಿನಲ್ಲಿ ನಡೆಯುವ ಕಾಂಗ್ರೆಸ್ ಮಹಾಧಿವೇಶನದ ಅಧ್ಯಕ್ಷಸ್ಥಾನವನ್ನು ವಹಿಸುವಂತೆ ಭಾರತ ಸರ್ಕಾರದವರು ರೇಡಿಯೋ ಮೂಲಕ ಪ್ರಾರ್ಥಿಸಬೇಕೆಂದು ಕೋರುವ ನಿರ್ಣಯವೊಂದನ್ನು ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಭೆಗೆ ಒಬ್ಬ ಸದಸ್ಯರು ಕಳುಹಿಸಿಕೊಟ್ಟಿದ್ದಾರೆ.

ಪೆಷಾವರಿನಲ್ಲಿ ಬೋಸರು

ಸುಭಾಷ್ ಚಂದ್ರ ಬೋಸರು ಪೆಷಾವರಿಗೆ ಬಂದಿರುವುದಾಗಿ ಫಾರ್ವರ್ಡ್ ಬ್ಲಾಕಿನ ಅಧ್ಯಕ್ಷರಾದ ಸರ್ದಾರ್ ಶಾರ್ದೂಲಸಿಂಗ್ ಕವೀಶ್ವರರಿಗೆ ಆತ್ಮಬೋಧ ಎಂಬ ಪವರಿಂದ ತಂತಿಯೊಂದು ಬಂದು ಲಾಹೋರಿನಲ್ಲಿ ವಿಶೇಷವಾದ ಆನಂದೋತ್ಸಾಹಗಳು ನಿನ್ನೆ ಕಂಡುಬಂದುವು. ಅಲ್ಲಿನ ಆಜಾದ್ ಫೌಜಿನ ಕಛೇರಿಗೂ ಇದೇ ರೀತಿಯ ತಂತಿಯೊಂದು ಬಂದಿತು. ಆದರೆ ಗಡಿನಾಡಿನ ಮುಖ್ಯ ಮಂತ್ರಿ ಡಾ॥ ಖಾನ್ ಸಾಹೇಬರನ್ನು ಫೋನ್ ಮೂಲಕ ಕೇಳಲು ಈ ಸುದ್ದಿಯನ್ನು ಅವರು ದೃಢಪಡಿಸಲಿಲ್ಲ.

ಆದಿಕರ್ನಾಟಕ ಸಮ್ಮೇಳನ

ನಿನ್ನೆ ಮಧ್ಯಾಹ್ನ ಮೈಸೂರು ತಾಲ್ಲೂಕು ಹಿನ್ಕಲ್ ಗ್ರಾಮದಲ್ಲಿ ಆದಿಕರ್ನಾಟಕರ ಸಮ್ಮೇಳನವು ಜರುಗಿತು. ಬೆಳವಾಡಿ, ಊಟಗಳ್ಳಿ ಮತ್ತು ಹಳ್ಳಹಳ್ಳಿ ಗ್ರಾಮಗಳಿಂದ ಅನೇಕ ಜನರು ಸಭೆಗೆ ಬಂದಿದ್ದರು. ಕಾಂಗ್ರೆಸ್ ಮುಖಂಡರಾದ ಶ್ರೀಗಳಾದ ಹೆಚ್ ಸಿ ದಾಸಪ್ಪ, ಕೆ. ಶೇಷಾದ್ರಿ, ಎಸ್. ಎಂ ಸಿದ್ದಯ್ಯ ಮತ್ತು ಇತರರು ಮಾತನಾಡಿ ಆದಿಕರ್ನಾಟಕರು ವಿದ್ಯಾವಂತರಾಗಬೇಕೆಂದೂ ಪ್ರತಿಯೊಂದು ಹಳ್ಳಿಯಲ್ಲಿಯೂ ಸಂಘಗಳನ್ನು ಏರ್ಪಡಿಸಿಕೊಂಡು ಅವರ ಸ್ವಶಕ್ತಿಯಿಂದಲೇ ಮುಂದುವರಿಯಬೇಕೆಂದೂ ತಿಳಿಸಿದರು.

ಉಪನ್ಯಾಸ

ಈ ತಿಂಗಳು ೨೭ ನೇ ತಾ॥ ಗುರುವಾರ ಸಂಜೆ ೫॥ ಗಂಟೆಗೆ ಸಾಲಿಗ್ರಾಮದ ಕರ್ನಾಟಕ ಸಂಘದ ಆಶ್ರಯದಲ್ಲಿ ಮೈಸೂರು ಮಹಾರಾಜಾ ಕಾಲೇಜು ಕನ್ನಡ ಅಧ್ಯಾಪಕರಾಗಿರುವ ಶ್ರೀ ಎಂ. ಅನಂತರಂಗಾಚಾರ್ಯರು 'ಕನ್ನಡ ಸಾಹಿತ್ಯದ ಸವಿ' ಎಂಬ ವಿಷಯವಾಗಿ ಭಾಷಣ ಮಾಡುತ್ತಾರೆ.

ಸಾರ್ವಜನಿಕ ಜೀವನದಲ್ಲಿ ಮರಣದ ಸಂಪರ್ಕ ಆಗತ್ಯ

ಕೇಂದ್ರ ಸರ್ಕಾರದ ಮಂತ್ರಿಗಳಾದ ಶ್ರೀ ಸಿ ರಾಜಗೋಪಾಲಾಚಾರಿಯವರು ತಮ್ಮ ಮೋಟಾರಿನ ಮೇಲೆ ಗುಂಡು ಹಾರಿಸಿದ ಸಂಬಂಧದಲ್ಲಿ ಈ ರೀತಿ ಹೇಳಿಕೆ ಇತ್ತಿದ್ದಾರೆ:-ನಾವು ಪ್ರತಿಯೊಬ್ಬರೂ ಪ್ರತಿಕ್ಷಣದಲ್ಲಿಯೂ ಮರಣದ ಹಿಡಿತದಿಂದ ಪಾರಾಗುತ್ತಿದ್ದೇವೆ. ಸಾರ್ವಜನಿಕ ಸೇವೆಯು ಸಕಲ ಕ್ಷೇತ್ರಗಳಲ್ಲಿಯೂ ಅಪಾಯದೊಡನೆ ಸರಿಗೆಯೂ, ಮರಣದೊಡನೆ ಸಂಪರ್ಕವೂ ಅತ್ಯಗತ್ಯವಾಗಿರಬೇಕಾದ ಶಿಕ್ಷಣವೆಂಬುದನ್ನು ಸಕಲರೂ ಮನಗಾಣಬೇಕು. ಜನರಲ್ಲಿ ಭೀತಿ ಮತ್ತು ಗಲಿಬಿಲಿಯನ್ನುಂಟುಮಾಡುವವರಿಗೆ ವಿಫಲವಾಗುವಂತೆ ನಾವು ನಡೆಯಬೇಕು. ನಮ್ಮ ಪವಿತ್ರ ಗ್ರಂಥಗಳಲ್ಲಿ ಹೇಳಿರುವ ನಿಷ್ಕಾಮ ಕರ್ಮೋಪದೇಶವಕ್ಕೆ ಸಾಧನ ಅದನ್ನು ಸ್ವಲ್ಪಮಟ್ಟಿಗೆ ಅಭ್ಯಾಸ ಮಾಡಿದರೂ ಮಹತ್ತರವಾದ ಫಲವುಂಟಾಗುವುದು.

ಡಿಪೋಗಳ ಪರಿಶೀಲನೆ

ಸ್ವಂ ಸು] ನಂಜನಗೂಡು ೨೧

ಈ ಊರಿಗೆ ಹೊಸದಾಗಿ ಬಂದಿರುವ ಅಮಲ್ದಾರ್ ಶ್ರೀ ಬಿ. ಮಲ್ಲರಾಜೇ ಅರಸಿನವರು ಇಲ್ಲಿನ ಡಿಪೋಗಳನ್ನು ಪರಿಶೀಲಿಸಿ ಆಹಾರದ ಅಭಾವವನ್ನು ತಪ್ಪಿಸಲು ಬಹಳ ಮುತುವರ್ಜಿ ವಹಿಸುತ್ತಿದ್ದಾರೆ.

ಸನ್ಮಾನ ಸಮಾರಂಭ

೨೦ನೇ ತಾ॥ ಶನಿವಾರ ಬೆಳಗ್ಗೆ ೮ ಗಂಟೆಗೆ ಇದಿ ಜಾ-ಬವರ ಪುರದಲ್ಲಿ ವೈಸ್ ಪ್ರೆಸಿಡೆಂಟ್ ಶ್ರೀ ವೈ. ಕೆ ಎಸ್. ಲಕ್ಷ್ಮಣಶೆಟ್ಟರಿಗೆ ಸಬ್ ಡಿವಿಜನ್ ಆಫೀಸರ ಅಧ್ಯಕ್ಷತೆಯಲ್ಲಿ ಒಂದು ಸತ್ಕಾರಕೂಟವನ್ನು ಏರ್ಪಡಿಸಿದೆ.

ಕಾಶ್ಮೀರದಿಂದ ಗಡೀಪಾರು

ಪಂಡಿತ ನೆಹರೂರವರು ಕಾಶ್ಮೀರಕ್ಕೆ ಹೋಗುವ ಮುಂಚೆ ಅಲ್ಲಿ ದಸ್ತಗಿರಿಯಾಗಿದ್ದ ಸಂಸ್ಥಾನ ಪ್ರಜಾ ಸಮ್ಮೇಳನದ ಕಾರ್ಯದರ್ಶಿ ಶ್ರೀ ದ್ವಾರಕಾನಾಥ್ ಕಚ್ರೂರವರ ಮೇಲೆ ಅಲ್ಲಿನ ಸರ್ಕಾರದವರು ಹೂಡಿದ್ದ ಮೊಕದ್ದಮೆಯನ್ನು ವಾಪಸು ತೆಗೆದುಕೊಂಡು ಅವರನ್ನು ಸಂಸ್ಥಾನದಿಂದ ಗಡೀಪಾರು ಮಾಡಲು ಆಜ್ಞೆ ಇತ್ತಿರುವರೆಂದು ಗೊತ್ತಾಗಿದೆ.

ಜಿನ್ನಾ-ವೈಸರಾಯ್ ಭೇಟಿ

ನಾಳೆ ದಿನ ಮಿ. ಜಿನ್ನಾರವರನ್ನು ವೈಸರಾಯರು ಭೇಟಿ ಮಾಡುವರೆಂದು ವರದಿಯಾಗಿದೆ.

ಅಮೆರಿಕಕ್ಕೆ ನೆಹರೂರವರ ಮನವಿ

ಹಿಂದೂಸ್ಥಾನದಲ್ಲಿರುವ ಅತ್ಯಂತ ಭೀಕರ ಆಹಾರ ಪರಿಸ್ಥಿತಿಯನ್ನು ನಿವಾರಿಸುವುದಕ್ಕಾಗಿ ಈಗ ವಾಗ್ದಾನ ಮಾಡಿರುವ ಧಾನ್ಯವನ್ನು ಕಳುಹಿಸಲು ಅಮೆರಿಕದಲ್ಲಿ ನಡೆಯುತ್ತಿರುವ ಹಡಗಿನ ಕೆಲಸಗಾರರ ಮುಷ್ಕರದಲ್ಲಿ ವಿನಾಯಿತಿಯನ್ನು ಕಲ್ಪಿಸಿ ಲಕ್ಷಾಂತರ ಜನರ ಜೀವನಾಧಾರಕ್ಕೆ ಆಗತ್ಯವಾಗಿರುವ ಈ ವಿಚಾರದಲ್ಲಿ ಅಮೆರಿಕದ ಕಾರ್ಮಿಕ ನಾಯಕರೂ ಸರ್ಕಾರದವರೂ ಪೂರ್ಣವಾಗಿ ಸಹಕರಿಸಬೇಕೆಂದು ಪ್ರಾರ್ಥಿಸಿ ಅಮೆರಿಕದ ಹಂಗಾಮಿ ಸ್ಟೇಟ್ ಸೆಕ್ರೆಟರಿ ಮಿ॥ ಕ್ಲೇಟೋರವರಿಗೆ ಪಂಡಿತ ಜವಹರಲಾಲ್ ನೆಹರೂರವರು ಒಂದು ವಿಶೇಷ ಮನವಿಯನ್ನು ಕಳುಹಿಸಿದ್ದಾರೆ.

ಲಂಡನ್ನಿನ ನಿರಾಶ್ರಿತರಿಗೆ ಬಿಡಾರಗಳು

ಲಂಡನ್ ನಗರದ ಮನೆ ಮಠಗಳಿಲ್ಲದ ಬಡ ಸಂಸಾರಿಗಳು ಖಾಲಿ ಇರುವ ವಸತಿಗಳನ್ನು ಆಕ್ರಮಿಸುತ್ತಿರುವುದರ ಪರಿಣಾಮವಾಗಿ ಅವರುಗಳಿಗೆ ಬಿಡಾರಗಳನ್ನು ಒದಗಿಸುವ ಕಾರ್ಯವನ್ನು ಸರ್ಕಾರದವರೇ ಕೈಗೊಂಡಿರುತ್ತಾರೆ. ಸರ್ಕಾರದ ಕೆಲಸಗಳಿಗಾಗಿ ಮೀಸಲಾಗಿದ್ದ ಮುಕ್ಕಾಲು ಭಾಗದ ಬಿಡಾರಗಳನ್ನು ಅವರ ಗಳಿಗೆ ಬಿಟ್ಟುಕೊಡುವಂತೆ ಆಜ್ಞೆ ಮಾಡಿದ್ದಾರೆ.

ನೂರು ವರ್ಷದವನಿಗೆ ಸಂತಾನ

ಆಸ್ಟ್ರೇಲಿಯಾದ ಬೆಂಡಿಗೋ ಎಂಬಲ್ಲಿ ಗಾಗಾಸಿಂಗ್ ಎಂಬ ನೇಪಾಳದ ಘೂರ್ಕನೊಬ್ಬನಿದ್ದಾನೆ. ತನಗೆ ೧೧೨ ವರ್ಷ ವಯಸ್ಸೆಂದೂ ತನ್ನ ತಂದೆಗೆ ೧೪೦ ವರ್ಷವೆಂದೂ ಹೇಳುತ್ತಾನೆ. ಅವನ ಹಿರಿಯರೆಲ್ಲರೂ ಶತಾಯುಷ್ಯವಂತರೆಂದೂ ಸಹ ಹೇಳಲಾಗಿದೆ. ಆತನ ತಾತನು ೧೫೧ ವರ್ಷ ವಯಸ್ಸಿನ ವರೆಗೂ ಅಜ್ಜಿಯು ೧೨೭ ರ ವರೆಗೂ ಬದುಕಿದ್ದರೆಂದೂ ಹೇಳುತ್ತಾನೆ. ಇವನು ಸಿಪಾಯಿ ದಂಗೆಯ ಕಾಲದವನೆಂದು ಹೇಳಲಾಗಿದೆ. ಎಂಬತ್ತು ವರ್ಷ ಮುದುಕನಾದ ಬಳಿಕ ತನ್ನ ಸಂತತಿಯ ಸಂಖ್ಯೆಯನ್ನೇ ಮರೆತುಬಿಟ್ಟಿದ್ದಾನೆ. ಆತನ ಹಿರಿಯ ಮಗನಿಗೆ ೭೭ ವಯಸ್ಸು. ಕಿರಿಯ ಮಗುವಿಗೆ ೨ ವರ್ಷ-ಎಂದೂ ವರದಿಯಾಗಿದೆ.

ಹೆನ್ರಿ ವ್ಯಾಲೇಸರ ರಾಜೀನಾಮೆ

ಅಮೆರಿಕದ ಅಧ್ಯಕ್ಷರಾದ ಮಿ॥ ಟ್ರೂಮನ್ನರ ಸೂಚನೆಯಂತೆ ಅಲ್ಲಿನ ಕಾಮರ್ಸ್ ಶಾಖೆಯ ಮಂತ್ರಿ ಮಿ॥ ಹೆನ್ರಿ ವ್ಯಾಲೇಸರು ತಮ್ಮ ಸ್ಥಾನಕ್ಕೆ ರಾಜೀನಾಮೆ ಇತ್ತಿದ್ದಾರೆ. ಅಮೆರಿಕ ಸ್ಟೇಟ್ ಸೆಕ್ರೆಟರಿಯವರಾದ ಮಿ॥ ಜೇಮ್ಸ್ ಬೈರನ್ಸ್ ರವರಲ್ಲಿಯೂ ಮತ್ತು ಅವರ ನೇತೃತ್ವದಲ್ಲಿ ಶಾಂತಿ ಸಮ್ಮೇಳನಕ್ಕೆ ಹೋಗಿರುವ ನಿಯೋಗದವರಲ್ಲಿಯೂ ಸಂಪೂರ್ಣ ವಿಶ್ವಾಸವನ್ನು ಟ್ರೂಮನ್ನರು ತೋರಿಸಿದ್ದಾರೆ. ಇಡೀ ಪ್ರಪಂಚದ ಸಂಘಟನೆಗೆ ಶ್ರಮಿಸಿ ವಿಶ್ವಶಾಂತಿ ಸ್ಥಾಪಿಸುವುದಕ್ಕೆ ಪ್ರಯತ್ನಿಸುವುದಾಗಿ ಮಿ॥ ಹೆನ್ರಿ ವ್ಯಾಲೇಸರು ತಿಳಿಸಿದ್ದಾರೆ.

● ಬಂಗಾಳ-ಅಸ್ಸಾಂ ರೈಲ್ವೆಯಲ್ಲಿ ಹನ್ನೆರಡು ದಿನಗಳ ಅವಧಿಯೊಳಗೆ ಹೊನ್ನೆ ... ಕ್ರಿಮಿನಲ್ ... ತಪ್ಪು ಸಂಭವಿಸಿ ... ಜನ ... ಅವರಲ್ಲಿ ... ಜನಗಳಿಗೆ ಗಾಯಗಳಾದುವು

ಸಾಧ್ವಿ
ತಾ|| ೨೨-೯-೪೬ ಭಾನುವಾರ

ಪ್ರಕಟಣ ಶಾಖಾಧಿಕಾರಿಗಳ ನೇಮಕ

ಸಂಸ್ಥಾನದ ಪ್ರಕಟಣ ಶಾಖಾಧಿಕಾರಿಗಳ ಸ್ಥಾನವು ಈಗ ಖಾಲಿ ಬಿದ್ದಿರುವುದಷ್ಟೆ. ಅದನ್ನು ಭರ್ತಿಮಾಡಲು ಸರ್ಕಾರದವರು ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಈ ಸ್ಥಾನಕ್ಕೆ ಎಂತಹವರು ಇರಬೇಕೆಂಬ ಬಗ್ಗೆ ಈಗಾಗಲೇ ಪತ್ರಿಕೆಗಳಲ್ಲಿ ಸಲಹೆಗಳು ಬರುತ್ತಿವೆ.

ಹಲವು ಅಂಶಗಳಲ್ಲಿ ಎಲ್ಲರ ಅಭಿಪ್ರಾಯವೂ ಏಕಮುಖವಾಗಿ ಕಂಡುಬರುತ್ತಿದೆ. ಈ ಹುದ್ದೆಗೆ ಮೈಸೂರಿನವರೇ ಬರಬೇಕು; ಅವರಿಗೆ ಕನ್ನಡ ಚೆನ್ನಾಗಿ ತಿಳಿದಿರಬೇಕು, ಪತ್ರಿಕೋದ್ಯಮದಲ್ಲಿ ಸಾಕಷ್ಟು ಪರಿಶ್ರಮವಿರಬೇಕು; ಬರವಣಿಗೆಯ ಶಕ್ತಿಯು ಚೆನ್ನಾಗಿರಬೇಕು-ಎಂಬಿವೇ ಮುಂತಾದ ಅಭಿಪ್ರಾಯಗಳು ಮಂಡಿಸಲ್ಪಡುತ್ತಿವೆ. ಇವುಗಳ ಬಗ್ಗೆ ಯಾವ ಭಿನ್ನಾಭಿಪ್ರಾಯವೂ ಇರುವುದಿಲ್ಲ.

ಮೈಸೂರಿನ ಪ್ರಜೆಗಳು ನಮ್ಮ ಸಂಸ್ಥಾನದಲ್ಲಿಯೂ ಹೊರಗಡೆಯಲ್ಲಿಯೂ ಪ್ರಭಾವಶಾಲಿಗಳಾಗಿ ಕೆಲಸಮಾಡಿ, ತಮಗೂ ತಮ್ಮ ನಾಡಿಗೂ ಕೀರ್ತಿಯನ್ನು ತಂದಿದ್ದಾರೆ. ಕೇಂದ್ರ ಸರ್ಕಾರ ಮತ್ತು ಬೊಂಬಾಯಿ ಸರ್ಕಾರಗಳ ಪ್ರಕಟಣ ಇಲಾಖೆಗಳಲ್ಲಿ ಮೈಸೂರಿನವರು ಜವಾಬ್ದಾರಿ ಸ್ಥಾನಗಳಲ್ಲಿರುತ್ತಾರೆ. ಮೈಸೂರಿನವರೊಬ್ಬರು ನಾಗಪುರದ 'ಹಿತವಾದ' ಎಂಬ ದಿನ ಪತ್ರಿಕೆಯ ಸಂಪಾದಕರಾಗಿಯೂ ಇದ್ದರೆ. ಮೈಸೂರಿನ ತರುಣರೊಬ್ಬರು ಮದರಾಸಿನ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯ ಉಪಸಂಪಾದಕರಾಗಿದ್ದಾರೆ. ಅಲ್ಲದೆ ಅನೇಕ ತರುಣರು ಭರತಖಂಡದ ಇತರ ಭಾಗಗಳಲ್ಲಿ ಪತ್ರಿಕೋದ್ಯಮದ ವೃತ್ತಿಯನ್ನು ಯಶಸ್ವಿಯಾಗಿ ನಡೆಸುತ್ತಿರುವರು. ಹೀಗಿರುವಲ್ಲಿ ಸಂಸ್ಥಾನದ ಪ್ರಕಟಣ ಶಾಖೆಯ ಕಾರ್ಯವನ್ನು ನಿರ್ವಹಿಸಬಲ್ಲವರು ನಮ್ಮಲ್ಲಿ ಇಲ್ಲದೇ ಇಲ್ಲ. ಮೈಸೂರಿನವರನ್ನೇ ಈ ಸ್ಥಾನಕ್ಕೆ ನೇಮಿಸಬೇಕೆಂದು ಹೇಳುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ಈಚೆಗೆ ಖಾಲಿ ಬೀಳುತ್ತಿರುವ ಸ್ಥಳಗಳಿಗೆ ಹೊರಗಿನವರನ್ನು ಆಮದು ಮಾಡುತ್ತಿರುವ ಪದ್ಧತಿಯು ಹೆಚ್ಚುತ್ತಿರುವುದರಿಂದ ಮೇಲ್ಕಂಡ ರೀತಿಯಲ್ಲಿ ಒತ್ತಾಯ ಪಡಿಸುವುದು ಅಗತ್ಯವಾಗಿದೆ. ಪ್ರಕಟಣ ಶಾಖೆಯ ಅಧಿಕಾರಿಗಳಿಗೆ ಸಂಸ್ಥಾನದ ಎಲ್ಲಾ ವಿದ್ಯಮಾನಗಳ ವಿವರಗಳೂ ಚೆನ್ನಾಗಿ ತಿಳಿದಿರಬೇಕು. ಸ್ಥಳದ ಪತ್ರಿಕೆಗಳೊಡನೆ ಅವರು ನಿಕಟ ಸಂಪರ್ಕವನ್ನಿಟ್ಟುಕೊಂಡಿರಬೇಕು. ಕನ್ನಡವನ್ನೇ ಅರಿಯದ ಹೊರಗಿನವರಾದ ಒಬ್ಬ ಮಹನೀಯರು ಹಿಂದೆ ನೇಮಿಸಲ್ಪಟ್ಟಿದ್ದಾಗ ನಡೆದ ಹಲವು ಅನುಚಿತ ಪ್ರಸಂಗಗಳು ನೆನಪಿಗೆ ಬರುತ್ತವೆ. ಮೈಸೂರಿನ ಪತ್ರಿಕೆಗಳೊಡನೆ ಅವರಿಗೆ ಯಾವಾಗಲೂ ಘರ್ಷಣೆಯು ನಡೆಯುತ್ತಲೇ ಇತ್ತು. ಇಲ್ಲಿನ ನಾಯಕರುಗಳ ವಿರುದ್ಧವಾಗಿ ಲೇಖನಗಳನ್ನು ಹೊರಡಿಸುವುದೇ ಅವರ ದಿನಚರಿಯ ಕೆಲಸವಾಗಿತ್ತು. ಅಲ್ಲದೆ ಮೈಸೂರನ್ನು ಹೊಗಳುವ ಹೊರಗಿನ ಪತ್ರಿಕೆಗಳಿಗೆ ಪ್ರೋತ್ಸಾಹವೀಯುವುದೂ ಅವರ ನೀತಿಯಾಗಿತ್ತು. ಈ ಬಗೆಯ ಹೊಣೆ

ಪ್ರಚಾರದ ನಿರರ್ಥಕತೆಯು ಬೇಗನೆ ಮನವರಿಕೆಯಾಗಿ ಅಂತಹ ಪ್ರಚಾರವು ಕ್ರಮೇಣ ತಡೆಗಟ್ಟಲ್ಪಟ್ಟಿತು.

ಪ್ರಕಟಣ ಶಾಖೆಯ ಕರ್ತವ್ಯವು ಈಗ ಹೊಸ ರೂಪವನ್ನು ತಾಳಿದೆ. ಸರ್ಕಾರದ ಕೆಲಸ ಕಾರ್ಯಗಳ ಪ್ರಶಂಸೆಯನ್ನು ಮಾಡಿಕೊಳ್ಳುವ ಅಗತ್ಯವು ಈಗ ಇರುವುದಿಲ್ಲ. ನಾಡಿನ ಜನರ ನಿಜವಾದ ಹಿತ ಸಾಧನೆಗೆ ಬೇಕಾದ ತಿಳುವಳಿಕೆಯನ್ನು ಕೊಡುವುದು ಅಗತ್ಯವಾಗಿದೆ. ಇದನ್ನು ದೇಶಾಭಿಮಾನಿಗಳೂ, ಅನುಭವಶಾಲಿಗಳೂ, ಅರಿತು ನುರಿತವರೂ ಆದ ಮೈಸೂರಿನವರೇ ಯಶಸ್ವಿಯಾಗಿ ನಿರ್ವಹಿಸಬಲ್ಲರು. ಅಂತಹವರನ್ನೇ ಸರ್ಕಾರದವರು ನೇಮಿಸಿ ಪ್ರಜೆಗಳಿಗೆ ನಿಜವಾಗಿಯೂ ಉಪಕಾರವಾಗುವಂತೆ ಮಾಡಬೇಕೆಂದು ಹಾರೈಸುತ್ತೇವೆ.

ಆಯುರ್ವೇದಿಕ್ ಕಾಲೇಜ್ ವಿದ್ಯಾರ್ಥಿಗಳ ಕುಂದು ಕೊರತೆಗಳು

ಆಯುರ್ವೇದವನ್ನು ಅಭಿವೃದ್ಧಿ ಪಡಿಸಲು ಎ. ಸುಬ್ರಹ್ಮಣ್ಯ ಅಯ್ಯರ್ ಸಮಿತಿಯು ಮಾಡಿದ ಶಿಫಾರಸುಗಳನ್ನು ಇದುವರೆವಿಗೂ ಜಾರಿಗೆ ತಂದಿಲ್ಲ; ಇತ್ತೀಚೆಗೆ ಆಯುರ್ವೇದಿಕ್ ಕಾಲೇಜು ಬಹಳ ಕ್ಷೀಣ ದೆಸೆಗೆ ಬರುತ್ತಿದೆ. ೧೯೪೦ ನೇ ಇಸವಿಗೆ ಮುಂಚೆ ಉಪಾಧ್ಯಾಯರುಗಳು ಹೆಚ್ಚು ಸಂಖ್ಯೆಯಲ್ಲಿರುತ್ತಿದ್ದರು. ಆಗ್ಗೆ ವಿದ್ಯಾರ್ಥಿಗಳೂ ಹೆಚ್ಚು ಹೆಚ್ಚಾಗಿ ಬಂದು ಸೇರುತ್ತಿದ್ದರು. ಈಗ ಇಬ್ಬರು ಆಯುರ್ವೇದ ಪಂಡಿತರೂ ಮತ್ತು ಇಬ್ಬರು ಪಾಶ್ಚಾತ್ಯ ವೈದ್ಯದ ಉಪಾಧ್ಯಾಯರೂ ಇದ್ದಾರೆ. ಇವರುಗಳು ಪಾಠ ಪ್ರವಚನಗಳನ್ನು ತೆಗೆದುಕೊಳ್ಳುವುದೇ ಅಲ್ಲದೆ ಆಸ್ಪತ್ರೆಯ ಕೆಲಸಗಳನ್ನೂ ನೋಡಿಕೊಳ್ಳಬೇಕಾಗಿದೆ. ಇದರಿಂದ, ಅವರುಗಳು ತಮ್ಮ ಕೆಲಸವನ್ನು ದಕ್ಷತೆಯಿಂದ ಮಾಡಲಾಗುವುದಿಲ್ಲವಾದುದರಿಂದ ವಿದ್ಯಾರ್ಥಿಗಳಿಗೆ ಸರಿಯಾದ ಶಿಕ್ಷಣವು ದೊರೆಯುತ್ತಿಲ್ಲ.

ಪ್ರಯೋಗ ಶಾಲೆಯಲ್ಲಿ ಕಲಿಯಬೇಕಾದ ವಿಚಾರಗಳು ಬಹಳವಿವೆ. ಆದರೆ ಅಲ್ಲಿರುವುದು ಕೇವಲ ಒಂದೇ ಒಂದು ಸೂಕ್ಷ್ಮದರ್ಶಕ ಯಂತ್ರ. ಅದನ್ನು ಉಪಯೋಗಿಸುವುದಕ್ಕೆ ಬೇಕಾದ ರಸಾಯನಿಕ ವಸ್ತುಗಳು ಇಲ್ಲದೆ ಅದೂ ಸಹ ಉಪಯೋಗಿಸಲ್ಪಡುತ್ತಿಲ್ಲ. ಇಷ್ಟೇ ಅಲ್ಲದೆ ಮಲ, ಮೂತ್ರ ಮುಂತಾದುವುಗಳನ್ನು ಪರೀಕ್ಷಿಸಲು ಬೇಕಾಗುವ ಕಾರಕಗಳು ಸರಿಯಾಗಿ ಒದಗಿಸಲ್ಪಡುತ್ತಿಲ್ಲ.

ವೈದ್ಯ ವಿದ್ಯೆಯನ್ನು ಸರಿಯಾಗಿ ಅಭ್ಯಸಿಸಲು ಮಾನವ ಶರೀರದ ಅಂಗರಚನೆಯನ್ನು ತಿಳಿಯುವುದು ಅತ್ಯವಶ್ಯಕ. ಇಪ್ಪತ್ತೈದಕ್ಕೂ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಕೇವಲ ಒಂದು ಶವವನ್ನು ಒದಗಿಸಿ ಅವರು ಆ ಶಾಸ್ತ್ರದಲ್ಲಿ ಪಾರಂಗತರಾಗಬೇಕೆಂದರೆ ಎಷ್ಟು ಅಸಾಧ್ಯವಾದುದು? ಶವವನ್ನು ಕೆಡದಂತೆ ಇಡಲು ತಕ್ಕ ಸಲಕರಣೆಗಳಿಲ್ಲ.

ಈ ಆಸ್ಪತ್ರೆಯಲ್ಲಿ ಹನ್ನೆರಡು ಜನರನ್ನು ಮಾತ್ರ ಇಟ್ಟುಕೊಂಡು ಚಿಕಿತ್ಸೆ ನಡೆಸುವಷ್ಟು ಸ್ಥಳವಿದೆ. ಇದು ಬಹಳ ಕಡಿಮೆ. ಶಸ್ತ್ರ ಚಿಕಿತ್ಸೆಯೂ ಸಹ ವೈದ್ಯ ವಿದ್ಯೆಯಲ್ಲಿ ಬಹು ಮುಖ್ಯವಾದ ಭಾಗ. ಇದಕ್ಕಾಗಿ ಬೇರೆ ಒಂದು ಸಲಕರಣೆಗಳಿಂದ ಕೂಡಿದ ಭಾಗವು ಇಲ್ಲವಾದುದರಿಂದ ವಿದ್ಯಾರ್ಥಿಗಳು ಈ ವಿಚಾರದಲ್ಲಿ ಸಾಕಷ್ಟು ತಿಳುವಳಿಕೆ ಹೊಂದದೆ ಇದ್ದಾರೆ. ವಿದ್ಯಾರ್ಥಿಗಳೇ ಸ್ವಂತವಾಗಿ ರಸ, ಭಸ್ಮ ಮುಂತಾದ ಔಷಧಗಳನ್ನು ತಯಾರಿಸುವಂತೆ ಅವರುಗಳಿಗೆ ಸೌಕರ್ಯವು ಕೊಡಲ್ಪಡಬೇಕು. ಈಗ ಇರುವ ಕಾಂಪೌಂಡಿಂಗ್ ತರಗತಿಯನ್ನು ಕಡಿಮೆ ಮಾಡಿ ಔಷಧ ತಯಾರಿಕೆಗೆ ಹೆಚ್ಚು ಗಮನ ಕೊಡಬೇಕು.

ಆಯುರ್ವೇದದಲ್ಲಿ ಬಹು ಮುಖ್ಯ ಚಿಕಿತ್ಸೆಗಳಾದ ಪಂಚಕರ್ಮ, ಕ್ಷಾರ, ಶಸ್ತ್ರ ಮುಂತಾದುವುಗಳನ್ನು ಆಚರಣೆಗೆ ತರಬೇಕು.

ಕೃಷ್ಣರಾಜೇಂದ್ರ ಆಸ್ಪತ್ರೆ, ಕ್ಷಯರೋಗಿಗಳ ಆಸ್ಪತ್ರೆ ಮುಂತಾದ ಕಡೆಗಳಿಗೆ ಇಲ್ಲಿಯ ವಿದ್ಯಾರ್ಥಿಗಳು ಹೋಗಲು ಅವಕಾಶ ಕೊಟ್ಟು ಅಲ್ಲಿ ನಡೆಯುವ ಕಣ್ಣಿನ ಚಿಕಿತ್ಸೆ, ಶಸ್ತ್ರ ಚಿಕಿತ್ಸೆ ಮುಂತಾದುವುಗಳನ್ನು ಅಭ್ಯಸಿಸಲು ಅನುಕೂಲ ಮಾಡಿ ಕೊಡಬೇಕು. ಪ್ರೌಢ ಶಿಕ್ಷಣಕ್ಕೂ ಮತ್ತು ಸಂಶೋಧನಾ ಕೆಲಸಕ್ಕೂ ಸಾಕಷ್ಟು ಪ್ರೋತ್ಸಾಹವನ್ನುಂ

ಟು ಮಾಡಬೇಕು.

ಮೂಲಿಕೆಗಳಿರುವ ತೋಟವು ಈಗ ಬಹಳ ಹೀನಸ್ಥಿತಿಯಲ್ಲಿದೆ. ಅಲ್ಲಿ ಸಾಕಷ್ಟು ಗಿಡಮೂಲಿಕೆಗಳಿಲ್ಲ. ಇದನ್ನೇ ಸರಿಪಡಿಸಬೇಕಾಗಿದೆ.

—ವಿದ್ಯಾರ್ಥಿಗಳ ಹಿತೈ

ಗ್ರಾಮ ನೈರ್ಮಲ್ಯ

ಸ್ವಂ ಸು] ಅಗರ ಮಾಂಬಳ್ಳಿ

ಈ ಗ್ರಾಮದಲ್ಲಿ ಚರಂಡಿಗಳ ವ್ಯ ಚೆನ್ನಾಗಿಲ್ಲ. ಇದ್ದ ಚರಂಡಿಗಳನ್ನೂ ಪುರಸಭೆಯವರು ಮುಚ್ಚಿಸುತ್ತಲಿರುವ ಮತ್ತು ರಸ್ತೆಗಳ ಅಕ್ಕಪಕ್ಕಗಳಲ್ಲಿ ಗುಂ ಳನ್ನು ತೋಡಿಸಿ ಸಂಚಾರಕ್ಕೆ ತೊಂದರೆ ನ್ನುಂಟುಮಾಡಿರುವರು. ಇಲ್ಲಿ ಪ್ಯಾ ಗಳಿಲ್ಲದಿರುವುದರಿಂದ ಪುರಸಭೆಯವರು ರ್ವಜನಿಕ ಕಕ್ಕಸುಗಳನ್ನು ಕಟ್ಟಿಸಿ ಜನ ಗೆ ಸಹಾಯ ಮಾಡಬೇಕಾಗಿದೆ.

ಪ್ರಕಟಣೆ

ಮೈಸೂರು ಪುರ ನಿವಾಸಿಗಳಿಗೆ ತಿಳಿ ಪಡಿಸುವುದೇನೆಂದರೆ:—

ಮೈಸೂರು ಪಟ್ಟಣದಲ್ಲಿ ಆಗುವ ಜನ ಮರಣಗಳ ವಿವರಗಳು ಸಕಾಲಕ್ಕೆ ಮುನಿ ಪಲ್ ಹೆಲ್ತ್ ಆಫೀಸರವರ ಆಫೀಸಿಗೆ ಬರುತ್ತಿರುವುದಿಲ್ಲ. ಮುನಿಸಿಪಲ್ ರೆಗ್ಯುಲೇಷ ಮೇರೆಗೆ ಜನನ ಮರಣಗಳ ವಿವರವನ್ನು ಏಳು ದಿನಗಳ ಒಳಗಾಗಿ ತಂದೆ ತಾಯಿಗ ಗಲೀ, ಮನೆಯ ಮಾಲೀಕರಾಗಲೀ, ಹ ರದ ಸಂಬಂಧಿಗಳಾಗಲೀ, ವೈದ್ಯರಾಗಲೀ, ಸೂಲಗಿತ್ತಿಯರಾಗಲೀ, ಹೆಲ್ತ್ ಆಫೀಸರಿಗೆ ತಿಳಿಯಪಡಿಸಬೇಕಾಗಿ ಕೋರಿದೆ.

ತಪ್ಪಿದಲ್ಲಿ ಮುನಿಸಿಪಲ್ ಬೈಲಾ ನೇ ಪ್ರಕಾರ ಕಾರ್ಯಕ್ರಮವನ್ನು ತೆಗೆ ಕೊಳ್ಳಲಾಗುತ್ತದೆ. ಈ ವಿಚಾರದಲ್ಲಿ ಪ್ರ ಜನರ ಸಹಕಾರವನ್ನು ಕೋರಲಾಗಿದೆ.

ಆರ್. ರಾಮಚಂದ್ರರಾವ್
ಧಾಂಬೋರೆ, ಅಧ್ಯಕ್ಷ

OPERA TALKIES
ತಾ|| 20—9—46ರಿಂದ
ಪ್ರತಿದಿನ ಮೂರು ಆಟಗಳು

ಚೌ-ಚೌ
(ತಮಿಳು)
ಪಾತ್ರ:-* ಎನ್. ಎಸ್. ಕೃಷ್ಣನ್,
* ಟಿ. ಎ. ಮಧುರಂ, * ಕಾಳಿ ಯನ್ ರತ್ನಂ
* ಡೋರೈರಾಜ್, * ರಾಮಚಂದ್ರನ್
* ರಾಜಕಾಂತಂ ಮುಂತಾದವರು

ಮುಂದಿನ ವಿನೋದ
ಮಾಯಾ ಮಚ್ಛೀಂದ್ರ
ಕನ್ನಾಂಬ, ಮಾಲತಿ, ಮಂಗಳಂ,
ಗೌರೀನಾಥ ಶಾಸ್ತ್ರಿ, ಅದ್ದಂಕಿ
ಮುಂತಾದವರು

ಕಾಲವನ್ನು ಕಳೆಯಲು ತೋಚದಿರುವ ವಯೋವೃದ್ಧರೂ, ರೋಗ ರುಜಿನಗಳ ಬೇಗೆಯನ್ನು ಸಹಿಸಲಾರದಿರುವವರೂ
ಸ್ವರ್ಗಸೀಮ
ದ ಸೊಬಗನ್ನು ಕೇಳಿ, ಬಂದು ನೋಡಿ, ಸಂತೋಷ ಪಡುವಾಗ, ನೀವು ಯಾಕೆ ನೋಡಬಾರದು?
ಬನ್ನಿ, ಇಂದೇ ರಾಜ್ ಕಮಲ್‌ನಲ್ಲಿ ನೋಡಿ ಆನಂದಿಸಿ!
FREE LIST ENTIRELY SUSPENDED

Morning Shows From 20 9 46 for four days
AT 10-30 A M
KID FROM ARIZONA

ಸುಸಮಯ
ಚಲನ ಚಿತ್ರಗಳಲ್ಲಿ ಅಭಿನಯಿಸಲು
ಇಚ್ಛೆಯುಳ್ಳ ತರುಣಿಯರನ್ನು
ತರಪೇತು ಮಾಡಿ
ಉತ್ತಮ ನಟಿಯರಾಗಿ
ತಮಿಳು ಚಿತ್ರರಂಗದಲ್ಲಿ ಖ್ಯಾತಿವಂತ ಗಲು ಅನುವಾಗುವಂತೆ ರಾಜಧಾನಿಯ ಕೆಳಗೆಕಂಡ ಸ್ಥಳದಲ್ಲಿ ನಟಿಯರ ಶಿಕ್ಷಣ ಶಾ ಯೊಂದನ್ನು ಮೈಸೂರು ಸಂಸ್ಥಾನದ ಚಲ ಚಿತ್ರ ಪ್ರೇಮಿಕರ ಬೆಳವಣಿಗೆಯ ಸ ಕಾರ ನೀಡಲು ತೆರೆದಿರುತ್ತದೆ
ವಿದ್ಯಾರ್ಥಿ ವೇತನವನ್ನೂ
ಸಹ ಕೊಡಲಾಗುವುದು.
ವಿವರಗಳಿಗೆ ಕೂಡಲೇ ಬರೆಯಿರಿ
ಅಥವಾ ನೇರವಾಗಿ ಬಂದು ನೋಡಿ
ಪತ್ರ ವ್ಯವಹಾರದೊಡನೆ
ಫೋಟೋ ಕಳುಹಿಸಿ
ವಿ. ಟಿ. ಎನ್. ಮೊದಲಿಯಾರ್,
ಪ್ರಿನ್ಸಿಪಾಲ್,
೧೭೫, ಕೃಷ್ಣಮೂರ್ತಿಪುರಂ, ಮೈಸೂರು.

Edited, printed and published by A. N. Nagarajan at the Sadhvi Press

ಪೋ|. ನಂ. 392 WEEKLY EDITON ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೧] ಸೋಮವಾರ ೩೦—೯—೪೬ [ಸಂಚಿಕೆ ೯

ದಕ್ಷಿಣ ಭಾರತ ರೈಲ್ವೆ ಮುಷ್ಕರದ ಮುಕ್ತಾಯ

ಈ ರಾತ್ರಿ ಡಾ|| ರಾಜೇಂದ್ರ ಪ್ರಸಾದರ ರೇಡಿಯೊ ಭಾಷಣ

ಭಾರತಖಂಡದ ಆಹಾರ ಪರಿಸ್ಥಿತಿಯ ವಿಚಾರವಾಗಿ ಕೇಂದ್ರ ಸರ್ಕಾರದ ಆಹಾರ ಮಂತ್ರಿಗಳಾದ ಡಾ|| ರಾಜೇಂದ್ರ ಪ್ರಸಾದರು ಈ ರಾತ್ರಿ ೮-೩೦ ಗಂಟೆಗೆ ಅಖಿಲ ಭಾರತ ರೇಡಿಯೋ ಮೂಲಕ ಭಾಷಣ ಮಾಡುವರು. ಅದನ್ನು ಮೈಸೂರು ಆಕಾಶವಾಣಿಯಲ್ಲಿಯೂ ಅದೇ ಸಮಯಕ್ಕೆ ಪುನಃ ಪ್ರಸಾರ ಮಾಡಲಾಗುವುದು.

ಬೆಂಕಿ ಅನಾಹುತ

ಮೈಸೂರು ೨೯

ಕೊಪ್ಪಿನಕೊಳದ ಬಳಿ ತ್ಯಾಗರಾಜ ರಸ್ತೆಯ ಪ್ರಾಸಿಕ್ಕಿರುವ ೧೪೧೨ ರಿಂದ ೧೪೯ ನಂಬರಿನ ಶ್ರೀ ಎಂ. ಎಸ್ ರಾಮಸ್ವಾಮಿಯವರ ಮನೆಗೆ ನಿನ್ನೆ ಬೆಳಗ್ಗೆ ೧೦ ಘಂಟೆಯಲ್ಲಿ ಆಕಸ್ಮಾತ್ ಬೆಂಕಿಯು ಹತ್ತಿ ಬಹಳ ನಷ್ಟವುಂಟಾಗುವುದರಲ್ಲಿತ್ತು. ಹೋಟೆಲ್ ಮಾಲೀಕರಾದ ಶ್ರೀ|| ಗಣಪತಿ ಆಚಾರ್ಯರು ಮುತುವರ್ಜಿಮಾಡಿ ಸಹಾಯಮಾಡಲು ಕೂಡಲೇ ಫೈರ್ ಬ್ರಿಗೇಡಿನವರು ಬಂದು ಬೆಂಕಿಯನ್ನು ಪೂರ್ತಿಯಾಗಿ ಆರಿಸಿ ಹೆಚ್ಚು ಅನರ್ಥವಾಗುವುದನ್ನು ತಪ್ಪಿಸಿದರು.

ವಿದ್ಯಾರ್ಥಿಗಳಿಗೆ ಹಿತೋಪದೇಶ

ನಿನ್ನೆ ನಗರದ ನಜರ್‌ಬಾದ್ ವಿದ್ಯಾಸಂಘದ ವಿದ್ಯಾರ್ಥಿಗಳ ಹಾಸ್ಟೆಲಿನಲ್ಲಿ ಸೇರಿದ್ದ ವಿದ್ಯಾರ್ಥಿಗಳಿಗೆ ಶ್ರೀಗಳಾದ ಎಸ್.ಎಂ. ಪುಟ್ಟಯ್ಯ, ಹೊಂಬಯ್ಯ, ದೊಡ್ಡ ವೀರಯ್ಯ, ಸಾಹಯ್ಯ, ಪುಟ್ಟಮಾದಯ್ಯ, ಕಂಬಯ್ಯ, ಶ್ರೀನಿವಾಸಯ್ಯ ಮುಂತಾದವರು ಹಿತೋಪದೇಶ ಮಾಡುತ್ತಾ, ರಜಾ ಕಾಲದಲ್ಲಿ ವಿದ್ಯಾರ್ಥಿಗಳು ಗ್ರಾಮಾಂತರ ಪ್ರದೇಶಗಳಲ್ಲಿರುವ ಜನಗಳಿಗೆ ನೈರ್ಮಲ್ಯ, ವಿದ್ಯಾಭ್ಯಾಸ, ಆರೋಗ್ಯ ವಿಚಾರಗಳಲ್ಲಿ ತಿಳುವಳಿಕೆ ಕೊಡಬೇಕೆಂದು ಹೇಳಿದರು.

ಪದವೀಧರರಿಗೆ ಸತ್ಕಾರ

ಶ್ರೀ ಸುತ್ತೂರು ಶಿವರಾತ್ರೀಶ್ವರ ವೀರಶೈವ ವಿದ್ಯಾರ್ಥಿ ನಿಲಯದ ಸಂಘದ ಆಶ್ರಯದಲ್ಲಿ ಅಕ್ಟೋಬರ್ ೧೩ ನೇ ತಾ|| ಬೆಳಗ್ಗೆ ೯ ಗಂಟೆಗೆ ವೀರಶೈವ ನೂತನ ಪದವೀಧರರಿಗೆ ಸತ್ಕಾರ-ಕೂಟವನ್ನೇರ್ಪಡಿಸಿದೆ. ಸರ್ಕಾರದ ರೆವೆನ್ಯೂ ಸೆಕ್ರೆಟರಿಯವರಾದ ಶ್ರೀ ಟಿ. ಬಿ ಮಲ್ಲಾರಾಧ್ಯರ ಅಧ್ಯಕ್ಷತೆಯಲ್ಲಿ ಕರ್ನಾಟಕ ಕಾಲೇಜ್ ಕನ್ನಡ ಪ್ರಾಧ್ಯಾಪಕರಾದ ಶ್ರೀ ಮೂಳವಾಡ್ ಅವರು ಭಾಷಣ ಮಾಡಲು ಒಪ್ಪಿರುತ್ತಾರೆ. ವೀರಶೈವ ನೂತನ ಪದವೀಧರರೆಲ್ಲರೂ ಆ ಸಮಾರಂಭದಲ್ಲಿ ಭಾಗವಹಿಸಬೇಕೆಂದು ಕೋರಲಾಗಿದೆ.

ಆಕಾಶವಾಣಿ ಭಾಷಣ

ತಾಯಿನಾಡು ಪತ್ರಿಕಾ ಪ್ರತಿನಿಧಿಗಳೂ, ಪ್ರಜಾಪ್ರತಿನಿಧಿಸಭಾ ಸದಸ್ಯರೂ ಆದ ಶ್ರೀ|| ಶ್ರೀನಿವಾಸಮೂರ್ತಿಯವರು ೨೫ ನೇ ಬುಧವಾರ ರಾತ್ರಿ ೮ ರಿಂದ ೮-೧೫ ರ ವರೆಗೆ ಸ್ವಾತಂತ್ರ್ಯದ ವಿಷಯವಾಗಿ ಆಕಾಶವಾಣಿಯಲ್ಲಿ ಭಾಷಣಮಾಡುವರು.

ರವೀಂದ್ರರ ದಿನಾಚರಣೆ

(ಸ್ವಂ. ಸು.] ಶ್ರೀರಂಗಪಟ್ಟಣ ೨೯

ಮಹಾರಾಜಾ ಕಾಲೇಜಿನ ಅಸಿಸ್ಟೆಂಟ್ ಪ್ರೊಫೆಸರ್ ಶ್ರೀ ವಿ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಈ ದಿನ ಸ್ಟೂಡೆಂಟ್ಸ್ ಯೂನಿಯನ್ನಿನವರು ಕವಿ ರವೀಂದ್ರರ ದಿನಾಚರಣೆಯನ್ನು ನಡೆಸಿದರು. ಅಧ್ಯಕ್ಷರೂ ಮತ್ತು ಎಂ. ಯಾಮುನಾಚಾರ್ಯರೂ ಕವಿವರರ ಜೀವನದ ವಿಚಾರವಾಗಿ ಅಮೋಘ ಭಾಷಣ ಮಾಡಿದರು.

ಪೌರಸಭಾಧ್ಯಕ್ಷರ ವರ್ತನೆಯ ಖಂಡನೆ

ಸಭೆಯನ್ನು ಮುಂದೆಹಾಕಲಾಯಿತು

ಮೈಸೂರು ೨೯

ಪಂಡಿತ ಜವಹರಲಾಲ ನೆಹರೂರವರ ರೇಡಿಯೋ ಭಾಷಣದ ಸಮಯದಲ್ಲಿ ಟೌನ್ ಹಾಲ್ ಮತ್ತು ಸುಬ್ಬರಾಯನ ಕೆರೆಯ ರೇಡಿಯೋಗಳಿಂದ ಸದರೀ ಭಾಷಣವನ್ನು ಪ್ರಸಾರಮಾಡಲು ಸರಿಯಾದ ವ್ಯವಸ್ಥೆ ಮಾಡದೆ ಇದ್ದುದಕ್ಕಾಗಿ ಪೌರಸಭಾಧಿಕಾರಿಗಳ ವರ್ತನೆಯನ್ನು ಟೀಕಿಸಲು ಶ್ರೀ ಕೆ. ಎಸ್. ಸತ್ಯನಾರಾಯಣರಾಯರು ಕಳುಹಿಸಿದ್ದ ನಿರ್ಣಯವನ್ನು ಕಾರ್ಯಕ್ರಮದ ಪಟ್ಟಿಗೆ ಅಧ್ಯಕ್ಷರು ಸೇರಿಸದೆ ಇದ್ದುದನ್ನು ಪ್ರತಿಭಟಿಸಲು ಈದಿನ ನಡೆಯಬೇಕಾಗಿದ್ದ ಪೌರಸಭಾಧಿವೇಶನದಲ್ಲಿ ಯಾವ ಕಾರ್ಯಕ್ರಮವನ್ನೂ ನಡೆಸದೆ ಅದನ್ನು ಮುಂದಕ್ಕೆ ಹಾಕಲಾಯಿತು. ಅಧ್ಯಕ್ಷರ ವರ್ತನೆಯು ಕೇವಲ ನಿರಂಕುಶವಾದುದೆಂದೂ ಅವರು ಪದೇ ಪದೇ ಈರೀತಿ ಮಾಡುವುದು ಸರಿಯಲ್ಲವೆಂದೂ ಮತ್ತು ಪಂಡಿತ ನೆಹರೂರವರ ಭಾಷಣವನ್ನು ಕೇಳಲು ಮೇಲ್ಕಂಡ ಸ್ಥಳಗಳಿಗೆ ಹೋಗಿದ್ದ ನೂರಾರು ಜನ ಪುರನಿವಾಸಿಗಳಿಗೆ ಉಂಟಾದ ಆಶಾಭಂಗಕ್ಕೆ ಪೌರಸಭಾಧಿಕಾರಿಗಳ ಕರ್ತವ್ಯಲೋಪವೇ ಕಾರಣವೆಂದೂ ಸೂಚಿಸಿ ಶ್ರೀ ಅಗರಂ ರಂಗಯ್ಯನವರು ಸಭೆಯನ್ನು ಮುಂದೆಹಾಕುವ ನಿರ್ಣಯವನ್ನು ಮಂಡಿಸಿದರು. ಅನಂತರ ಸಭೆಯನ್ನು ಮುಂದಕ್ಕೆ ಹಾಕಲಾಯಿತು

ಸತ್ಕಾರ

ಹಾಜ್ ಯಾತ್ರೆಗೆ ಹೋದಲಿರುವ ಶ್ರೀ ಗುಲಾಂ ಅಹಮದ್ ಖಾನರವರನ್ನು ಸತ್ಕರಿಸಿ ಬೀಳ್ಕೊಡಲು ನಗರದ ಪ್ರಮುಖ ವರ್ತಕರೂ ಪೀಸ್ ಗುಡ್ಸ್ ಅಸೋಸಿಯೇಷನ್ನಿನ ಪ್ರೆಸಿಡೆಂಟರೂ ಆದ ಶ್ರೀ ಮಾಣಿಕಚಂದ್ ಪೃಥ್ವಿರಾಜ್‌ರವರು ಜಾಯಿಂಟ್ ಸೆಕ್ರೆಟರಿ ಶ್ರೀ ಟಿ ರಾಮಯ್ಯನವರ ಅಧ್ಯಕ್ಷತೆಯಲ್ಲಿ ನೆನ್ನೆ ಸಂಜೆ ಟೌನ್‌ಹಾಲಿನಲ್ಲಿ ಒಂದು ಸತ್ಕಾರ ಕೂಟವನ್ನೇರ್ಪಡಿಸಿದ್ದರು. ಸಮಾರಂಭಕ್ಕೆ ಅನೇಕ ಗಣ್ಯ ಹಿಂದೂ-ಮುಸ್ಲಿಂ ಪ್ರಮುಖರು ಬಂದಿದ್ದರು. ಶ್ರೀಗಳಾದ ಮಾಣಿಕ ಚಂದ್ ಪೃಥ್ವಿರಾಜ್, ಎಸ್. ನಂಜಪ್ಪಶೆಟ್ಟರು, ಬಿ ಎಸ್. ರುದ್ರಪ್ಪ, ಜಿ ವಿ. ಸೂರ್ಯನಾರಾಯಣಶೆಟ್ಟರು, ಅಬ್ದುಲ್ ರಹಮಾನ್ ಅತ್ತಾರ್ ಸಾಹೇಬ್ ಮುಂತಾದವರುಗಳು ಹಿಂದೂ-ಮುಸ್ಲಿಂ ಒಗ್ಗಟ್ಟಿನ ವಿಚಾರ ಮಾತನಾಡಿ ಶ್ರೀಯುತರಿಗೆ ಸುಖ ಪ್ರಯಾಣವನ್ನು ಕೋರಿದರು. ಹಾ|| ಅಹಮದ್ ಖಾನರು ತಮ್ಮನ್ನು ಸತ್ಕರಿಸಿದ್ದಕ್ಕಾಗಿ ಎಲ್ಲರಿಗೂ ತಮ್ಮ ಕೃತಜ್ಞತೆಯನ್ನು ಸಲ್ಲಿಸಿದರು

ಸೂಚನೆ

ಮಹಾಲಯ ಅಮಾವಾಸ್ಯೆ ಪ್ರಯುಕ್ತ ನಾಳೆಯ ದಿನ ಕಾರ್ಖಾನೆ ಪತ್ರಿಕೆಗೆ ರಜಾ ಕೊಡಲಾಗಿದೆ — ವ್ಯವಸ್ಥಾಪಕ

ಕೃಷ್ಣರಾಜೇಂದ್ರ ಮಿಲ್

ಮೈಸೂರು ೨೯

ದಿವಾನ್ ಬಹದ್ದೂರ್ ಕೆ ರಾಮಸ್ವಾಮಿ, ರಾಜಸೇವಾಸಕ್ತ ಸಿ ನರಸಿಂಹಯ್ಯ, ಧರ್ಮಪ್ರಕಾಶ್ ಎಲ್. ಎಸ್ ವೆಂಕಾಜಿರಾವ್, ಶ್ರೀಗಳಾದ ಎಂ ಎಸ್ ರಾಮಚಂದ್ರರಾವ್, ಡಾ|| ಸಿದ್ದಪ್ಪ, ಜಿ. ಕೃಷ್ಣಸ್ವಾಮಿ, ವಿ. ಹನುಮಂತಪ್ಪ, ಡಿ. ಬಿ. ವಿಶ್ವಂಭರಯ್ಯ, ಹೆಚ್. ನಂಜುಂಡಯ್ಯ, ಎ. ಕೆ. ರಂಗರಾವ್ ಮತ್ತು ಟಿ ರಾಮಯ್ಯ—ಇವರುಗಳು ಶ್ರೀ ಕೃಷ್ಣರಾಜೇಂದ್ರ ಮಿಲ್ಲಿನ ಡೈರೆಕ್ಟರುಗಳಾಗಿ ಚುನಾಯಿತರಾಗಿದ್ದಾರೆ

ಸಿಟಿ ಕೋ-ಆಪರೇಟಿವ್ ಬ್ಯಾಂಕ್

ಬರುವ ವರ್ಷಕ್ಕೆ ರಾಜಸೇವಾಸಕ್ತ ಸಿ ನರಸಿಂಹಯ್ಯನವರು ಮೇಲ್ಕಂಡ ಬ್ಯಾಂಕಿನ ಅಧ್ಯಕ್ಷರಾಗಿಯೂ, ಶ್ರೀ ಟಿ ಗುಂಡಪ್ಪನವರು ಉಪಾಧ್ಯಕ್ಷರಾಗಿಯೂ ಮತ್ತು ಶ್ರೀ ಬಿ ವಿ. ನಂಜುಂಡಯ್ಯನವರು ಕಾರ್ಯದರ್ಶಿಯಾಗಿಯೂ ಚುನಾಯಿತರಾಗಿದ್ದಾರೆ

ಜಿಲ್ಲಾ ಕಾಂಗ್ರೆಸ್ ಸಮಿತಿ

ಚಾಮರಾಜನಗರ ೨೯

ನಿನ್ನೆ ಶ್ರೀ ಎಂ ಎಲ್. ನಂಜರಾಜೇ ಅರಸಿನವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯು ಸೇರಿದ್ದಿತು. ೨ನೇ|| ತಾರೀಖಿನಿಂದ ಅಕ್ಟೋಬರ್ ೨ರವರೆಗೆ ಎಲ್ಲಾ ಕಡೆಯೂ ಗಾಂಧಿ ಜಯಂತಿ ಉತ್ಸವಗಳನ್ನು ಆಚರಿಸಬೇಕೆಂಬ ನಿರ್ಣಯವಾಯಿತು. ರಚನಾತ್ಮಕ ಕಾರ್ಯಕ್ರಮದ ಯೋಜನೆಯನ್ನು ತಯಾರಿಸಲು ಶ್ರೀಗಳಾದ ಎಂ ಎ ಶ್ರೀನಿವಾಸಯ್ಯಂಗಾರ್, ಅಗರಂ ಸೂರ್ಯನಾರಾಯಣ ಪಂಡಿತರು ಮತ್ತು ಹೆಚ್ ಕೆ ಕುಮಾರಸ್ವಾಮಿಯವರನ್ನೊಳಗೊಂಡ ಒಂದು ಉಪಸಮಿತಿಯನ್ನು ರಚಿಸಲಾಯಿತು. ಮುಂದಿನ ತಿಂಗಳ ಸಭೆಯು ಅಕ್ಟೋಬರ್ ೨೭ ರಲ್ಲಿ ಹುಣಸೂರಿನಲ್ಲಿ ಸೇರಬೇಕೆಂದು ತೀರ್ಮಾನವಾಯಿತು.

ತಾಲ್ಲೂಕು ಕಾಂಗ್ರೆಸ್ ಸಮಿತಿಯು ನಿನ್ನೆ ರಚಿತವಾಗಿ ಶ್ರೀಗಳಾದ ಎಸ್. ಪುಟ್ಟನಂಜಪ್ಪನವರು ಅಧ್ಯಕ್ಷರಾಗಿಯೂ ಕೆ ವಿ. ಕೃಷ್ಣರವರು ಉಪಾಧ್ಯಕ್ಷರಾಗಿಯೂ ಎಸ್ ನಾಗರಾಜ್ ಕಾರ್ಯದರ್ಶಿ ಮತ್ತು ಶ್ರೀ ಸಿ ಎಸ್ ಲಕ್ಷ್ಮೀನಾರಾಯಣರವರು ಖಜಾಂಚಿಗಳಾಗಿಯೂ ಆರಿಸಲ್ಪಟ್ಟರು.

ರೈಲ್ವೆ ಮುಷ್ಕರದ ಮುಕ್ತಾಯ

ದಕ್ಷಿಣಭಾರತ ರೈಲ್ವೆ ಮುಷ್ಕರವು ಮುಕ್ತಾಯಗೊಂಡಿರುವುದಾಗಿ ತಿಳಿದುಬಂದಿದೆ. ಮುಷ್ಕರ ಸಮಿತಿಯವರೂ, ಕೆಲಸಗಾರ ಮುಖಂಡರೂ ಕಲೆತು ಈ ವಿಚಾರವನ್ನು ಕೂಲಂಕಷವಾಗಿ ಪರಿಶೀಲಿಸಿ ಮೇಲ್ಕಂಡ ನಿರ್ಧಾರಕ್ಕೆ ಬಂದಿರುವರು. ಇದಕ್ಕಾಗಿ ಮದ್ರಾಸ್ ಸರ್ಕಾರದವರು ಬಂಧನದಲ್ಲಿದ್ದ ಕಾರ್ಮಿಕ ನಾಯಕರುಗಳಿಗೆ ವಿಶೇಷ ಸೌಲಭ್ಯಗಳನ್ನು ಕಲ್ಪಿಸಿ ಈ ಸಭೆಗಳಲ್ಲಿ ಭಾಗವಹಿಸಲು ಅವಕಾಶ ಕೊಟ್ಟಿದ್ದರು

ಗಾಂಧೀಜೀಯವರಿಗೆ ಕೈ ನೂಲು

ಜಯಂತಿ ಸಮಯದಲ್ಲಿ ಕಾಣಿಕೆ

ಮಹಾತ್ಮರಿಗೆ ಬರುವ ಅಕ್ಟೋಬರ್ ೨ ನೇ ತಾರೀಖಿಗೆ ೭೭ ವರ್ಷ ತುಂಬುತ್ತದೆ. ಮಹಾತ್ಮರ ಅಖಿಲ ಜಯಂತಿ ಈ ಜನ್ಮೋತ್ಸವದ ವೇಳೆಗೆ ಅ. ಭಾ. ಚ ಸಂಘದವರು ೭೭,೦೦೦ ಸಹಯೋಗಿ ಮತ್ತು ೩೯,೦೦೦ ಸ್ವಾವಲಂಬಿ ಸದಸ್ಯರನ್ನು ಕೂಡಿಸಲು ನಿರ್ಧರಿಸಿದ್ದಾರೆ ೬ ಲಡಿ ಸ್ವಂತ ನೂಲನ್ನು ವಾರ್ಷಿಕ ಚಂದಾ ಕೊಡುವವರು ಸಹಯೋಗಿ ಸದಸ್ಯರಾಗಿಯೂ, ಸಂಪೂರ್ಣ ಖಾದಿಧಾರಿಗಳಾಗಿ ತಿಂಗಳಿಗೆ ೭|| ಲಡಿ ನೂಲನ್ನು ನೂಲುವವರು ಸ್ವಾವಲಂಬಿ ಸದಸ್ಯರುಗಳಾಗಿಯೂ ಇರುವಂತೆ ತೀರ್ಮಾನಿಸಿದ್ದಾರೆ. ಜಯಂತಿ ವೇಳೆಗೆ ನಮ್ಮ ಸಂಸ್ಥಾನದಿಂದಲೂ ೧೩೦ ಸದಸ್ಯರನ್ನು ದಯವಿಟ್ಟು ೭೮೦ ಲಡಿ ನೂಲನ್ನು ಕಳಿಸಬೇಕೆಂದು ನಿರ್ಧರಿಸಿದೆ. ಆದ್ದರಿಂದ ಎಲ್ಲರೂ ಈ ಕಾರ್ಯದಲ್ಲಿ ಸಹಕರಿಸಿ ಮೇಲ್ಕಂಡ ಸಂಘದ ಸದಸ್ಯರಾಗಿ ಜನ್ಮೋತ್ಸವ ಕಾರ್ಯಕ್ರಮದಲ್ಲಿ ಭಾಗಿಗಳಾಗಬೇಕೆಂದು ಚಿಕ್ಕಮಗಳೂರಿನ ಅ. ಭಾ. ಚ ಸಂಘದ ವ್ಯವಸ್ಥಾಪಕರು ಪ್ರಾರ್ಥಿಸುತ್ತಾರೆ.

ದಿವಾನರು

(ಸ್ವಂ. ವ. ಪ್ರ.] ಬೆಂಗಳೂರು ೨೯

ಡೆಲ್ಲಿಯಿಂದ ನಾಳೆ ದಿವಾನರು ಹಿಂದಿರುಗುವರು. ನಾಡಿದ್ದು ಅವರಿಗೆ ಒಂದು ಸಾರ್ವಜನಿಕ ಬಿನ್ನವತ್ತಳೆಯನ್ನು ಅರ್ಪಿಸುವ ಏರ್ಪಾಡಾಗಿದೆ. ನಾಡಿದ್ದು ರಾತ್ರಿ ಅವರು ಮೈಸೂರಿಗೆ ತೆರಳುವರು. ಮಂತ್ರಿಗಳೂ ಸಹ ನಾಳಿದ್ದು ತೆರಳುವರು.

* ಜಿಲ್ಲಾಬೋರ್ಡ್ ಅಧಿವೇಶನವು ಈ ದಿನ ಶ್ರೀ ಗುರುವಾರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆದು ರಾಷ್ಟ್ರೀಯ ಸರ್ಕಾರವನ್ನು ರಚಿಸಿರುವ ಪಂ|| ನೆಹರೂ, ಇನ್ನಿತರರಿಗೆ ಅಭಿನಂದನೆಗಳನ್ನು ಸಲ್ಲಿಸಲಾಯಿತು

* ಈಗ ಮುಕ್ತಾಯವಾಗಲಿದ್ದ ವಾರ್ ಎಮರ್ಜೆನ್ಸಿ ಮುಂದುವರೆದ ಶಾಸನವನ್ನು ಇನ್ನೂ ೬ ತಿಂಗಳಕಾಲ ಹೆಚ್ಚಿಸಲಾಗಿದೆ

ಅರಮನೆ ಸುದ್ದಿ

ಮೈಸೂರು ೨೯

ಚಿತ್ರದುರ್ಗದ ಅಡ್ವೋಕೇಟ್ ಮತ್ತು ಶಾಸನ ಸಭಾ ಸದಸ್ಯರಾದ ಶ್ರೀ ಪಿ. ವೀರಬಸಪ್ಪನವರಿಗೆ ಈ ದಿನ ಶ್ರೀಮನ್ಮಹಾರಾಜರವರು ಭೇಟಿ ದಯಪಾಲಿಸಿದರು.

● ರಾಜಧಾನಿಯ ಸ್ಕೂಲುಗಳು, ಆಸ್ಪತ್ರೆಗಳು ಮತ್ತು ಮನೆಗಳಿಂದ ಫರ್ನಿಚರ್, ಮಾರ್ಫಿಯಾ ಮತ್ತು ಇತರ ಸಾಮಾನುಗಳನ್ನು ಕಳುವುಮಾಡಿದ್ದ ಹಳೇ ಕೈದಿ ರಾಮಸ್ವಾಮಿನಾಯ್ಡು ಎಂಬವನನ್ನು ಕ್ರೈಂ ಬ್ರಾಂಚ್ ಪೋಲೀಸಿನವರು ದಸ್ತಗಿರಿಮಾಡಿ ಮುಂದಿನ ಪತ್ತೆ ಕಾರ್ಯ ನಡೆಸುತ್ತಿರುವರು

ಸಾಧ್ವಿ

ತಾ|| ೨೩-೯-೪೬ ಸೋಮವಾರ

ಗಾಂಧಿ ಜಯಂತಿ ಕಾರ್ಯಕ್ರಮ

ಮಹಾತ್ಮ ಗಾಂಧಿಯವರ ಎಪ್ಪತ್ತೆಂಟನೇ ವರ್ಷ ವರ್ಧಂತಿಯ ಸಂಬಂಧವಾಗಿ ಸಮಾರಂಭಗಳು ಈಗಾಗಲೇ ಉಪಕ್ರಮವಾಗಿವೆ. ಹಿಂದೂ ಪಂಚಾಂಗದ ಪ್ರಕಾರ ನಿನ್ನೆಯೇ ಅವರ ಹುಟ್ಟಿದ ಹಬ್ಬ. ಅದನ್ನು ಕಾಂಗ್ರೆಸ್ ನಾಯಕರೆಲ್ಲರೂ ದೆಹಲಿಯ ಭಂಗೀ ವಸತಿಯಲ್ಲಿ ಆಚರಿಸಿದರು. ದೇಶದ ಅನೇಕ ಕಡೆಗಳಲ್ಲಿ ಈ ಮಹೋತ್ಸವದ ಅಂಗವಾಗಿ ಕಾರ್ಯಕ್ರಮಗಳನ್ನು ಆರಂಭಿಸಲಾಯಿತು. ಮಹಾತ್ಮರಿಗೆ ಪರಮ ಪ್ರಿಯವಾದ ರಚನಾತ್ಮಕ ಕಾರ್ಯದಲ್ಲಿ ಸಕಲರೂ ಈ ಸಂದರ್ಭದಲ್ಲಿ ತೊಡಗಬೇಕೆಂದು ಕಾಂಗ್ರೆಸ್ ಅಧ್ಯಕ್ಷರಾದ ಪಂಡಿತ ನೆಹರೂರವರು ಸಲಹೆಯಿತ್ತಿದ್ದಾರೆ.

ನಿನ್ನೆಯಿಂದ ಬರುವ ಎರಡನೇ ತಾ||ನ ವರೆಗೆ ಈ ಸಂಬಂಧವಾಗಿ ಅನೇಕ ಕಾರ್ಯಕ್ರಮಗಳು ಜರುಗುವುವು. ಮಹಾತ್ಮರ ಮುಖ್ಯ ವ್ರತವಾದ ನೂಲುವುದನ್ನು ಅನೇಕರು ಕೈಗೊಳ್ಳುವರು. ಕೈ ರಾಟೆಯಲ್ಲಿ ನೂಲನ್ನು ತೆಗೆದು ಮಹಾತ್ಮರಿಗೆ ಕಾಣಿಕೆಯಾಗಿ ಅರ್ಪಿಸುವರು. ಇದು ಈ ಕಾರ್ಯಕ್ರಮದ ಮುಖ್ಯವಾದ ಅಂಗ. ಸಭೆಗಳೂ, ಮೆರವಣಿಗೆಗಳೂ, ಪ್ರದರ್ಶನಗಳೂ ಸಾಮಾನ್ಯವಾಗಿ ನಡೆದೇ ನಡೆಯುತ್ತವೆ.

ಕೋಮುವಾರು ಐಕಮತ್ಯ, ಅಸ್ಪೃಶ್ಯತಾ ನಿವಾರಣೆ, ಮದ್ಯ ಪಾನ ನಿರೋಧ, ಹಿಂದೀ ಭಾಷಾ ಪ್ರಚಾರ, ಗ್ರಾಮ ಕೈಗಾರಿಕೆಗಳ ಪುನರುದ್ಧಾರ ಇವೇ ಮುಂತಾದುವು ರಚನಾತ್ಮಕ ಕಾರ್ಯಕ್ರಮದ ಮುಖ್ಯ ಅಂಗಗಳು. ಇವುಗಳ ಸಾಧನೆಯಿಂದಲೇ ದೇಶದ ಸ್ವಾತಂತ್ರ್ಯವು ಲಭಿಸುವುದೆಂದು ಮಹಾತ್ಮರು ನಂಬಿರುವರು. ಆದುದರಿಂದ ಈ ಸಾರಿ ಮಹಾತ್ಮರ ಜಯಂತಿಯನ್ನು ಆಚರಿಸುವಾಗ ಈ ಕಾರ್ಯಕ್ರಮಗಳಿಗೆ ಸಕಲರೂ ಮುಖ್ಯ ಗಮನ ಕೊಡುವುದು ಆಗತ್ಯವಾಗಿದೆ.

ಕೋಮುವಾರು ಐಕಮತ್ಯವು ಎಲ್ಲಕ್ಕಿಂತಲೂ ಈಗ ಅತಿ ಮುಖ್ಯವಾದ ಅಂಶವಾಗಿದೆ. ಯಾವ ಜಾತಿ ಮತಗಳ ಭೇದವೂ ಇಲ್ಲದೆ ಮಾನವರೆಲ್ಲರನ್ನೂ ಸಮಾನತೆಯಿಂದ ಕಾಣಬೇಕೆಂಬುದೇ ಮಹಾತ್ಮರ ಜೀವನದ ಮುಖ್ಯ ಸಂದೇಶ. ಇದನ್ನು ಆಚರಣೆಗೆ ತಂದರೆ ಇಂದು ಕಲ್ಕತ್ತ, ಬೊಂಬಾಯಿಗಳಲ್ಲಿ ನಡೆದಂತಹ ದುರಂತಗಳನ್ನು ನಿವಾರಿಸಬಹುದು. ದೇಶದ ಸಕಲ ಕೋಮುಗಳ ಜನರೂ ಈ ಸಾರಿ ಜಯಂತಿಯ ಆಚರಣೆಯಲ್ಲಿ ಈ ವಿಷಯಕ್ಕೆ ಮುಖ್ಯವಾದ ಗಮನವನ್ನು ಕೊಡಬೇಕೆಂದು ನಾವು ಕೋರುತ್ತೇವೆ.

ಸರ್ಕಾರಿ ಜವಾನರಿಗೆ ಕೈರಾಟೆ ಶಿಕ್ಷಣ

ಖಾದೀ ಬಟ್ಟೆಯನ್ನು ಧರಿಸುವವರು ತಮ್ಮ ಕೈಯಿಂದಲೇ ತೆಗೆದ ನೂಲನ್ನು ಕೊಡಬೇಕೆಂಬ ನಿಯಮವಿರುವುದರಿಂದ ಸರ್ಕಾರೀ ಕಛೇರಿಗಳಲ್ಲಿರುವ ನೌಕರರು ಕೈರಾಟೆಯಲ್ಲಿ ನೂಲು ತೆಗೆಯುವುದಾದರೆ ಅವರಿಗೆ ಉತ್ತೇಜನ ಕೊಡಬೇಕೆಂದು ಮಹಾತ್ಮ ಗಾಂಧಿಯವರು ಸೂಚಿಸಿದ್ದ ಪ್ರಕಾರ ಮದ್ರಾಸ್ ಸರ್ಕಾರದ ಸೆಕ್ರೆಟೇರಿಯಟ್ ಕಛೇರಿಯ ಜವಾನರುಗಳಿಗೆ ಕೈರಾಟೆಯಲ್ಲಿ ನೂಲು ತೆಗೆಯುವುದನ್ನು ಕಲಿಸಲಾಗುತ್ತಿದೆ. ತಮ್ಮ ಬಟ್ಟೆಯನ್ನು ತಾವೇ ಮಾಡಿಕೊಳ್ಳಲು ಅವರಿಗೆ ಈ ರೀತಿಯಲ್ಲಿ ಪ್ರೋತ್ಸಾಹ ನೀಡಲಾಗುತ್ತಿದೆ.

Edited printed and published by A. R. Nagesetao at the Sadhvi Press D Subbiah Road, Mysore

ವಾರ ಭವಿಷ್ಯ

೨೩-೯-೪೬ ರಿಂದ ೩೦-೯-೪೬ ರ ವರೆಗೆ

(ಶ್ರೀ ನಿತ್ಯಾನಂದ ಸ್ವಾಮಿಗಳವರಿಂದ)

ಮೇಷ—ಆರೋಗ್ಯ ಸಾಧಾರಣ. ಧನ ಚಿಂತೆ ಹೆಚ್ಚು. ನೌಕರಿ ಉದ್ಯೋಗಗಳಲ್ಲಿ ಬೇಸರಿಕೆ. ಮಾನಸಿಕ ಚಿಂತೆ ಅಧಿಕ. ತಾ|| ೨೬-೨೮ ಸಾಧಾರಣ ಶಾಂತಿ

ವೃಷಭ—ಆರೋಗ್ಯ ಉತ್ತಮ. ಅಧಿಕಾರಿಗಳಿಂದ ಉತ್ತೇಜನ. ಧನಾದಾಯ ಸಾಧಾರಣ, ಖರ್ಚು ಹೆಚ್ಚು. ತಾ|| ೨೯-೩೦ ಹೆಚ್ಚು ಖರ್ಚು. ಸಂತೋಷ ವಾರ್ತೆ

ಮಿಥುನ—ಆರೋಗ್ಯ ಉತ್ತಮ. ವ್ಯಾಪಾರ ಉದ್ಯೋಗಗಳಲ್ಲಿ ಆಸಕ್ತಿ ಹೆಚ್ಚು. ಮಿತ್ರರಿಂದ ಸಹಾಯ. ಪ್ರಯಾಣ. ತಾ|| ೨೪-೨೭ ಸಂತೋಷವಾರ್ತೆ. ಬಂಧು ದರ್ಶನ

ಕಟಕ—ಆರೋಗ್ಯ ಚೆನ್ನಾಗಿರಲಾರದು. ಅನಿರೀಕ್ಷಿತ ಚಿಂತೆ, ಖರ್ಚು ಹೆಚ್ಚು. ಪತ್ನಿ ಪೀಡೆ ಜಾಸ್ತಿ. ತಾ|| ೨೪-೨೬ ಸಾಧಾರಣ ಶಾಂತಿ.

ಸಿಂಹ—ಆರೋಗ್ಯ ಸಾಧಾರಣ. ಅನಿರೀಕ್ಷಿತ ಧನಲಾಭ. ವ್ಯಾಪಾರ ಉದ್ಯೋಗಗಳಲ್ಲಿ ಏಳಿಗೆ. ತಾ|| ೨೬ ಸಂತೋಷ ವಾರ್ತೆ.

ಕನ್ಯಾ—ಆರೋಗ್ಯ ಚೆನ್ನಾಗಿರಲಾರದು. ಖರ್ಚು ಜಾಸ್ತಿ. ಪರಸ್ಥಳ ಪ್ರವಾಸ. ಮಾನಸಿಕ ಚಿಂತೆ ಹೆಚ್ಚು. ತಾ|| ೨೭-೨೮ ಸಾಧಾರಣ ಸಮಾಧಾನ. ಸಂತೋಷ ಜನಕ ವಾರ್ತೆ.

ತುಲಾ—ಪತ್ನಿಗೆ ಆಕಸ್ಮಿಕ ಬೇನೆ ತಲೆದೋರುವುದು. ಆದಾಯ ಚೆನ್ನಾಗಿರುತ್ತದೆ. ಖರ್ಚು ಅಧಿಕ. ಮಾನಸಿಕ ಚಿಂತೆ ವಾರಾದ್ಯಂತವೂ ಇರುತ್ತದೆ.

ವೃಶ್ಚಿಕ—ಹಿಡಿದ ಕಾರ್ಯಗಳಲ್ಲಿ ಜಯ. ಉತ್ತಮವಾದ ಆರೋಗ್ಯ. ಸುಗ್ರಾಸ ಭೋಜನ. ಮಿತ್ರ ಭೇಟಿ. ತಾ|| ೨೮ ಸ್ವಲ್ಪ ಚಿಂತೆ, ಖರ್ಚು

ಧನುಸ್ಸು—ಆರೋಗ್ಯ ಚೆನ್ನಾಗಿರುತ್ತದೆ. ವ್ಯವಹಾರಗಳಲ್ಲಿ ತ್ರಾಸ. ಅಧಿಕಾರಿಗಳಿಂದ ತಿರಸ್ಕಾರ. ಮಿತ್ರರಿಂದ ಸಹಾಯ. ತಾ|| ೨೬-೨೮ ಉತ್ತಮ

ಮಕರ—ಆರ್ಥಿಕ ಸ್ಥಿತಿ ಉತ್ತಮ. ಆರೋಗ್ಯ ಸಾಧಾರಣ. ವ್ಯವಹಾರ[illegible] ನಿಧಾನ. ಬಂಧು ಮಿತ್ರರಿಂದ ತ್ರಾಸ[illegible] ೨೭ ಶುಭವಾರ್ತೆ. ಅಕ್ಕ ಭೇಟಿ

ಕುಂಭ—ಆರೋಗ್ಯ ಕೆಡುವ ಸಂಭವ ಜಾಸ್ತಿ. ಕುಟುಂಬದ ಆರೋಗ್ಯ ಸಾಧಾರಣ. ಅನಿರೀಕ್ಷಿತ ಚಿಂತೆ [illegible]ಯ ಹೆಚ್ಚು. ತಾ|| ೨೫ ಸಾಧಾರಣ [illegible]

ಮೀನ—ಆರೋಗ್ಯ ಉತ್ತಮ. [illegible] ಬೇಕುತ್ತದೆ. ವ್ಯವಹಾರಗಳು ಮುಂದು[illegible] ಯುತ್ತವೆ. ಸ್ವೇಚ್ಛಾ ಖರ್ಚು. ತಾ|| ೨೯ [illegible] ಸಮಾಚಾರ. ಅಧಿಕಾರಿಗಳಿಂದ ಗೌ[illegible]

ಪ್ಲೇಗಿನ ಸೋಂಕು

ರಾಜಧಾನಿಯ ಹಲವು ಕಡೆಗಳಲ್ಲಿ [illegible]ಗಿನ ಸೋಂಕು ಕಾಣಿಸಿಕೊಳ್ಳುತ್ತಿದೆ[illegible] ದೂ ಇಲಿಗಳು ಸತ್ತ ಕೂಡಲೇ ಪೌರ[illegible] ಯ ಆರೋಗ್ಯ ಶಾಖೆಗೆ ತಿಳಿಸುವುದಲ್ಲದೆ ನಾಕ್ಯುಲೇಷನ್, ಡಿಸಿಂಫೆಕ್ಷನ್ ಮತ್ತು ನೋಗ್ಯಾಸಿಂಗ್ ಕಾರ್ಯಕ್ರಮಗಳಲ್ಲಿ [illegible] ಜನರು ಸಹಕರಿಸಬೇಕೆಂದೂ ಆರೋಗ್ಯಾಧಿಕಾರಿಗಳು ಕೋರಿರುತ್ತಾರೆ

ಪ್ರಕಟಣೆ

ಮೈಸೂರು ಪುರ ನಿವಾಸಿಗಳಿಗೆ ತಿ[illegible] ಪಡಿಸುವುದೇನೆಂದರೆ.—

ಮೈಸೂರು ಪಟ್ಟಣದಲ್ಲಿ ಆಗುವ ಜ[illegible] ಮರಣಗಳ ವಿವರಗಳು ಸಕಾಲಕ್ಕೆ ಮು[illegible] ಪಲ್ ಹೆಲ್ತ್ ಆಫೀಸರವರ ಆಫೀಸಿಗೆ ಬರು[illegible] ರುವುದಿಲ್ಲ. ಮುನಿಸಿಪಲ್ ರೆಗ್ಯುಲೇ[illegible] ಮೇರೆಗೆ ಜನನ ಮರಣಗಳ ವಿವರ[illegible] ಏಳು ದಿನಗಳ ಒಳಗಾಗಿ ತಂದೆ ತಾಯಿಗ[illegible] ಗಲೀ, ಮನೆಯ ಮಾಲೀಕರಾಗಲೀ, ಪ[illegible] ರದ ಸಂಬಂಧಿಗಳಾಗಲೀ, ವೈದ್ಯರಾಗಲೀ, ಸೂಲಗಿತ್ತಿಯರಾಗಲೀ, ಹೆಲ್ತ್ ಆಫೀಸ[illegible] ರಿಗೆ ತಿಳಿಯಪಡಿಸಬೇಕಾಗಿ ಕೋರಿದೆ.

ತಪ್ಪಿದಲ್ಲಿ ಮುನಿಸಿಪಲ್ ಬೈಲಾ [illegible]ನೇ ಪ್ರಕಾರ ಕಾರ್ಯಕ್ರಮವನ್ನು ತೆಗೆ[illegible] ಕೊಳ್ಳಲಾಗುತ್ತದೆ. ಈ ವಿಚಾರದಲ್ಲಿ ಪ[illegible] ಜನರ ಸಹಕಾರವನ್ನು ಕೋರಲಾಗಿದೆ

ಆರ್. ರಾಮಚಂದ್ರರಾ[illegible]

ಛೇರ್‌ಮನ್, ಅಧ್ಯಕ್ಷ

UNIVERSITY OF MYSORE.

Office of the University of Mysore,

No. G. 4-1394/15-46. Mysore,

Dated 13th September 1946.

NOTIFICATION

Convocation—Saturday The 12th October 1946 at 9 A.M.

Candidates for Degrees are requested to call at the University Office, Mysore, on any of the following dates and sign the required declaration in the Register kept for the purpose. They will not be admitted to the Degrees for which they are candidates unless they have signed the declaration.

1. WEDNESDAY 9th OCTOBER 1946 11-30 A. M. to 5-30 P.M.
2. THURSDAY 10th OCTOBER 1946 11-30 A.M. to 6 P.M.

Candidates must come with their academic gown and hood to the Convocation Pavilion on 12th October 1946 before 8-15 A.M. Men candidates should wear, in addition, the prescribed dress.*

A copy of the detailed directions to candidates is enclosed.

D. S. GORDON, REGISTRAR

To

The Candidates for degrees.

* DRESS: Either white or black long coat, white trousers, turban with or without lace and Uttariyam, boots or shoes (optional). For Europeans, morning dress and academic cap.

24-9-46 ಒಂದು ಮಹಾ ವಿಶೇಷದ ದಿನ

ನಮ್ಮನ್ನು ಸಲಹಿ, ಕಷ್ಟಗಳ ಸುಳಿಗಳಿಂದ ಸಂರಕ್ಷಿಸಿ, ತಮ್ಮ ಜೀವವನ್ನೇ ತ್ಯಾ[illegible] ಮಾಡಿ ಧಾರೆಯೆರೆದು ನಭೋಮಂಡಲದಲ್ಲಿ ಕಿರು ನಕ್ಷತ್ರಗಳಾಗಿ ರಾಜಿಸುವವರ ಸ[illegible] ನೆನಪುಗಳನ್ನು ಮರಳಿ ಜ್ಞಾಪಕಕ್ಕೆ ತರುವ ವಿಶೇಷ ದಿನವೆಂದರೆ ವರುಷಕ್ಕೆ ಒಮ್[illegible] ಬರುವ "ಮಹಾಲಯಾ ಅಮಾವಾಸ್ಯೆ" ಅಂತೆಯೇ, ನೀವು ಅನೇಕ ಚಿತ್ರಗಳನ್ನು ನೋಡಿರುವಿರಿ, ಆದರೆ,

"ಸ್ವರ್ಗಸೀಮ"

ದಂಥ ಕಲಾಚಿತ್ರದ ವೈಖರಿಯನ್ನು ವರ್ಣಿಸ್ಯನ್ನೆ, ಮಾತ್ರ ನೋಡುವಿರಿ. ನೀವು ಬಂದು ನೋಡಿದಾಗ ಅದರ ಮಹತ್ವವನ್ನು ಅರಿಯುವಿರಿ

ರಾಜ್‌ಕಮಲ್

ನಿಮಗೆ ಸಾದರ ಆಮಂತ್ರಣವನ್ನೀಯುತ್ತಿರುವುದು

ಸುಲಭ ಬೆಲೆ!

ತ್ವರೆ ಮಾಡಿರಿ!

Sri Rama Electric Stores.

Govt. Licenced Electrical Contractors & Engineers.

ಎಲ್ಲಾ ವಿಧವಾದ ಎಲೆಕ್ಟ್ರಿಕ್ ಪವರ್ ಮತ್ತು ಲೈಟಿಂಗ್ ಇನ್‌ಸ್ಟಲೇಷನ್ ಕೆಲಸಗಳನ್ನು ಸುಲಭ ದರದಲ್ಲಿಯೂ, ಸಕಾಲದಲ್ಲಿಯೂ ಮಾಡಿಕೊಡುತ್ತೇವೆ. ನಮ್ಮಲ್ಲಿ ಮೇಲ್ಕಂಡ ಕೆಲಸಗಳಿಗೆ ಸಂಬಂಧಪಟ್ಟ ಎಲ್ಲಾ ಸಾಮಾನುಗಳೂ ಕಂಟ್ರೋಲ್ ದರದಲ್ಲಿ ಸಿಗುತ್ತವೆ

ಮಹಾಜನರು ಪ್ರೋತ್ಸಾಹಿಸಬೇಕಾಗಿ ಕೋರುತ್ತೇವೆ

ಶ್ರೀ ರಾಮಾ ಎಲೆಕ್ಟ್ರಿಕ್ ಸ್ಟೋರ್ಸ್,

(ಬಿಡಾರದ ಕೃಷ್ಣಪ್ಪನವರ ರಾಮ ಮಂದಿರದ ಎದುರು)

ನಾರಾಯಣಶಾಸ್ತ್ರಿ ರಸ್ತೆ, ಮೈಸೂರು.

ಫೋ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫]. ಬುಧವಾರ ೨೫—೬—೪೭ [ಸಂಚಿಕೆ ೫೧

ತಿಮ್ಮಾರೆಡ್ಡಿಯವರು — — ಬಿಡುಗಡೆಯಾದರು

ಭಾರತದಲ್ಲಿ ಆಹಾರ ಪರಿಸ್ಥಿತಿ

ಕ್ಕಿ ಪಡಿತರ ಕಡಿಮೆಯಾಗಬಹುದು

ಕೇಂದ್ರ ಸರ್ಕಾರದ ಆಹಾರ ಸಚಿವರಾದ ಬಾಬು ರಾಜೇಂದ್ರ ಪ್ರಸಾದರು ಮೊನ್ನೆ ಸಂಜೆ ರೇಡಿಯೋ ಮೂಲಕ ಭಾಷಣ ಮಾಡುತ್ತಾ ಭಾರತದಲ್ಲಿ ಆಹಾರ ಪರಿಸ್ಥಿತಿ ಸ್ಥಿತಿ ಉತ್ಕಟಾವಸ್ಥೆಗೆ ಬಂದಿರುವುದಕ್ಕೆ ಸ್ವದೇಶದಲ್ಲಿ ಬೆಳಸು ಸರಿಯಾಗಿ ಫಲಿಸದ್ದುದೂ, ಹೊರದೇಶದಿಂದ ಆಹಾರ ಪದಾರ್ಥಗಳು ಬಾರದಿದ್ದುದೂ, ಸೈಯಾಂ, ಬ್ರಹ್ಮ, ಮತ್ತು ಅರ್ಜೆಂಟೈನಾದಿಂದ ಧಾನ್ಯ ಸಾಗಿಸಲು ಸರಿಯಾದ ಸೌಕರ್ಯವಿಲ್ಲದ್ದುದೂ, ಕಾರಣಗಳೆಂದು ತಿಳಿಸಿದ ಮುಂದಿನ ಎರಡು ತಿಂಗಳುಗಳು ಆಶಾದಾಯಕವಾಗಿಲ್ಲದಿದ್ದರೂ, ಸಂಪೂರ್ಣ ಕರವಾಗಿಲ್ಲವೆಂದು ಅವರು ಹೇಳಿದರು. ಪರಿಸ್ಥಿತಿಯನ್ನು ಎದುರಿಸಲು ಕಾರು ಹೆಚ್ಚು ಬೆಳೆಸುವುದು, ಹೊರದೇಶದಿಂದ ಹೆಚ್ಚು ಸಹಾಯ ಪಡೆಯುವುದು ಮತ್ತು ಇರುವ ಧಾನ್ಯವನ್ನು ಸಮನಾಗಿ ಹಂಚುವುದು, ಈ ಮೂರು ಮಾರ್ಗಗಳನ್ನು ಅನುಸರಿಸಬೇಕಾಗಿದೆಯೆಂದೂ ಸಾರ್ವಜನಿಕರು ಇನ್ನೂ ಕಡಿಮೆ ಪ್ರಮಾಣದಲ್ಲಿ ಅಕ್ಕಿ ಪಡಿತರವನ್ನು ಪಡೆಯಲು ಸಿದ್ಧರಿರಬೇಕೆಂದೂ ಸಹ ತಿಳಿಸಿದರು.

ಬರ್ಮಾದಲ್ಲಿ ಮುಷ್ಕರಗಳು

ಸರ್ಕಾರದ ಅಧೀನದಲ್ಲಿ, ಬಂದರುಗಳು, ಅಂಚೆ ಮತ್ತು ತಂತಿ ಇಲಾಖೆಗಳು, ೭೦ ಕಛೇರಿಗಳು ಮುಂತಾದೆಡೆ ಕೆಲಸ ಮಾಡುತ್ತಿರುವ ೬೦ ಸಹಸ್ರ ಮಂದಿ ಮುಷ್ಕರ ಹೂಡಿದ್ದಾರೆ. ಇಡೀ ಬರ್ಮಾದ ರಾಜ್ಯಭಾರ ಕಲುಸಿಹೋಗಿದೆ. ೧೬ ಜಿಲ್ಲೆಗಳ ಪೋಲೀಸರ ಮುಷ್ಕರ ಸಹ ಆರಂಭವಾಗಿದೆ. ಬರ್ಮಾದ ಹೊರ ವ್ಯಾಪಾರಗಳೆಲ್ಲಾ ನಿಂತಿದೆ.

ವಕೀಲರಿಗೆ ರಾಷ್ಟ್ರೀಯ ಉಡುಪು

ರಾಷ್ಟ್ರೀಯ ಉಡುಪನ್ನು, ಎಂದರೆ ಖಾದಿ ಪಂಚೆ, ಜುಬ್ಬ, ಅಂಗವಸ್ತ್ರ ಮತ್ತು ಶಿರೋಭೂಷಣವನ್ನು ಧರಿಸಿದ ವಕೀಲರು ಕೋರ್ಟಿಗೆ ಬರಲು ಅನುಮತಿ ಕೊಡಬೇಕೆಂದು ಕುಂಭಕೋಣದ ವಕೀಲರ ಸಂಘದವರು ಮದರಾಸ್ ಸರ್ಕಾರದವರ ಪ್ರಾರ್ಥಿಸಿದ್ದಾರೆ.

ಸಂಯುಕ್ತ ಭಾರತಕ್ಕೆ ಕಮ್ಯೂ ಪ್ರಧಾನಿ ಬೆಂಬಲ

ಪಂ|| ನೆಹರೂರವರನ್ನು ಉಚಿಪ್ಪಿನ ಪ್ರಧಾನ ವಿ || ಸಿದ್ದಿಕಿ ಪಾಷಾರವರು ಭೇಟಿಸಿದ್ದಾರೆ. ಭಾರತದ ಸಮಸ್ಯೆಗೆ ಸಂಯುಕ್ತ ವ್ಯವಸ್ಥೆಯೇ ಸರಿಯಾದ ಮಾರ್ಗ. ಈಜಿಪ್ಟು ನೋದರ ಸ್ವಾತಂತ್ರ್ಯಕ್ಕೆ ಯಾವಾಗಲೂ ಬೆಂಬಲ ಕೊಡುವುದಾಗಿ ಅವರು ತಿಳಿಸಿ ಏಷ್ಯಾ ರಾಷ್ಟ್ರಗಳ ಸಮ್ಮೇಳನದ ವ್ಯವಸ್ಥೆ ಅವರು ಸ್ವಾಗತಿಸಿದ್ದಾರೆ.

ಲೀಗಿಗೆ ಸಿಖ್ಖರ ಸಹಕಾರವಿಲ್ಲ

ಲೀಗಿನವರು ಕೈಗೊಳ್ಳುವ ಶಾಸನ ಭಂಗದ ಕಾರ್ಯಾಚರಣೆಯಲ್ಲಿ ಸಿಖ್ಖರು ಭಾಗವಹಿಸದಂತೆ ಭಾರತ ಸಿಖ್ ಲೀಗ್ ನ ಸಮಿತಿಯು ನಿರ್ಣಯ ಮಾಡಿದೆ.

ಯುದ್ಧದ ಭಯವಿಲ್ಲವೆಂದು ಸ್ಟಾಲಿನ್ನರ ಭರವಸೆ

ಯುದ್ಧಕಾಲದ ಬಡ್ಜೆಟ್ಟನ್ನು ಮುಂದುವರಿಸಿಕೊಂಡು ಹೋಗುವುದು ಮತ್ತು ಸೈನಿಕರನ್ನು ವಿಸರ್ಜನೆ ಮಾಡುವುದನ್ನು ಮುಂದುವರಿಸುವುದು, ಇವುಗಳಿಗಾಗಿ ಯುದ್ಧ ಸೂಚನೆಯ ಸೋಗು ಕಾಣಬರುತ್ತಿದೆಯೇ ಹೊರತು ನಿಜವಾಗಿಯೂ ಯುದ್ಧವು ನಡೆಯುವ ಸಂಭವವಿಲ್ಲವೆಂದು ರಷ್ಯದ ನಾಯಕ ಜ|| ಸ್ಟಾಲಿನ್‌ರವರು ತಮ್ಮ ವಿದೇಶಾಂಗ ನೀತಿಯನ್ನು ಹೊರಗೆಡಹುತ್ತಾ ತಿಳಿಸಿದ್ದಾರೆ. ಅಣು ಬಾಂಬಿನ ಪ್ರಯೋಗದಿಂದಲೇ ಯುದ್ಧದಲ್ಲಿ ಗೆಲ್ಲಲು ಸಾಧ್ಯವಿಲ್ಲವೆಂದೂ ಅದರ ಪ್ರಯೋಗವನ್ನು ನಿಷೇಧಿಸಬೇಕೆಂದು ಅವರು ಹೇಳಿದ್ದಾರೆ.

ಕಾಂ|| ಅಧ್ಯಕ್ಷತೆಗೆ ನೆಹರೂರವರ ರಾಜೀನಾಮೆ

ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿಗಳಾದ ಪಂ|| ನೆಹರೂರವರು ತಮ್ಮ ಕೆಲಸದ ಜೊತೆಗೆ ಕಾಂಗ್ರೆಸ್ ಅಧ್ಯಕ್ಷರಾಗಿಯೂ ಕೆಲಸ ಮಾಡುವುದು ಸಾಧ್ಯವಲ್ಲವೆಂದೂ ಆದ್ದರಿಂದ ತಾವು ಕಾಂಗ್ರೆಸ್ ಅಧ್ಯಕ್ಷತೆಗೆ ರಾಜೀನಾಮೆ ಸಲ್ಲಿಸುವುದಾಗಿಯೂ ತಿಳಿಸಿದ್ದಾರೆ. ಆ ಸ್ಥಾನಕ್ಕೆ ಬೇರೊಬ್ಬರನ್ನು ಚುನಾಯಿಸಲು ಕಾರ್ಯಕ್ರಮವನ್ನು ಕೈಕೊಳ್ಳಲಾಗಿದೆ.

ಕಾಂ|| ಕಾರ್ಯಕಾರಿಸಮಿತಿಯಲ್ಲಿ ಮಂತ್ರಿಗಳಿರಬಹುದು

ಕೇಂದ್ರ ಸರ್ಕಾರದ ಮಂತ್ರಿಗಳು ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿರಬಹುದೆಂಬ ನಿರ್ಣಯವು ಮೊನ್ನೆ ಅಖಿಲ ಭಾರತ ಕಾಂಗ್ರೆಸ್ ಸಮಿತಿಯಲ್ಲಿ ೧೩೩ ೮೦ ಓಟುಗಳಿಂದ ಅಂಗೀಕಾರವಾಯಿತು.

ಗೋವಾ ಚಳುವಳಿಗಾಗಿ ಡಾ|| ಲೋಹಿಯಾರವರು

ನಾಗರಿಕ ಹಕ್ಕುಗಳನ್ನು ಸ್ಥಾಪಿಸುವುದಕ್ಕಾಗಿ ಗೋವಾದ ಪ್ರಜೆಗಳು ಕೈಗೊಂಡಿರುವ ಚಳುವಳಿಯ ನಾಯಕತ್ವವನ್ನು ವಹಿಸಿಕೊಳ್ಳಲು ಡಾ|| ರಾಮಮನೋಹರ ಲೋಹಿಯಾರವರು ಈ ವಾರ ಅಲ್ಲಿಗೆ ತೆರಳುವರು. ಈ ಸಾರಿ ತಾವು ತಮ್ಮ ಪ್ರಯತ್ನದಲ್ಲಿ ಜಯಶಾಲಿಗಳಾಗಬೇಕೆಂದೂ, ಇಲ್ಲವಾದರೆ ಗೋವಾದಿಂದ ತಾವು ಜೀವಸಹಿತ ಹಿಂದಿರುಗುವುದಿಲ್ಲವೆಂದೂ ಡಾ|| ಲೋಹಿಯಾರವರು

ತಿಮ್ಮಾರೆಡ್ಡಿಯವರ ಬಿಡುಗಡೆ

ಸ್ವಂ ಸು ಫೋ] ಬೆಂಗಳೂರು ೨೫

ಆಜ್ಞೋಲ್ಲಂಘನೆಗಾಗಿ ದಸ್ತಗಿರಿಯಾಗಿ ಚಿಕ್ಕಬಳ್ಳಾಪುರದ ಮ್ಯಾಜಿಸ್ಟ್ರೇಟರಿಂದ ಒಂದು ವರ್ಷದ ಕಠಿಣ ಶಿಕ್ಷೆಗೆ ಗುರಿಯಾಗಿದ್ದ ಶ್ರೀ ಎನ್. ಸಿ. ತಿಮ್ಮಾರೆಡ್ಡಿಯವರು ಮಾಡಿಕೊಂಡಿದ್ದ ಅಪ್ಪೀಲಿನ ಮೇಲೆ ಅಡಿಷನಲ್ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಟಿ. ಎಂ. ಮಲ್ಲಪ್ಪನವರು ತೀರ್ಪು ಕೊಟ್ಟು ಅವರು ನಿರಪರಾಧಿಯೆಂದು ಹೇಳಿ ಇದುವರೆವಿಗೆ ಅನುಭವಿಸುವ ಶಿಕ್ಷೆಗೆ ಅವರ ಸಜಾವನ್ನು ಇಳಿಸಿದರು. ಅದರಂತೆ ಅವರು ನಿನ್ನೆ ಸಂಜೆ ಸೆಂಟ್ರಲ್ ಜೈಲಿನಿಂದ ಬಿಡುಗಡೆಯಾದರು. ಶ್ರೀ ಕೆ. ಟಿ. ಭಾಷ್ಯಂ ಮತ್ತು ಇತರರು ಅವರನ್ನು ಜೈಲಿನ ಬಳಿ ಸ್ವಾಗತಿಸಿದರು.

ಪೌರಸಭೆಯ ನೌಕರರಿಗೆ ಖಾದಿ

ಪೌರಸಭೆಯು, ಸ್ಯಾನಿಟರಿ ಇನ್ಸ್‌ಪೆಕ್ಟರುಗಳು, ಆರೋಗ್ಯ ನೌಕರರುಗಳು ಮತ್ತು ಜವಾನರುಗಳಿಗೆ ಖಾದಿ ಉಡುಪನ್ನೇ ಕೊಡಬೇಕೆಂದು ಪೌರಸಭೆಯು ಸರ್ವಾನುಮತದಿಂದ ತೀರ್ಮಾನಿಸಿರುತ್ತದೆ.

ವರ್ಗಾವರ್ಗಿ

ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಸೂಪರಿಂಟೆಂಡೆಂಟ್ರುಗಳಾದ ಶ್ರೀ ಟಿ. ಹೆಚ್. ಕೃಷ್ಣರಾವ್‌ರವರನ್ನು ಗಣಿಯಿಂದ ಶಿವಸಮುದ್ರಕ್ಕೂ, ಶಿವಸಮುದ್ರದಲ್ಲಿದ್ದ ಶ್ರೀ ಎಂ. ವಿ. ಶ್ರೀನಿವಾಸಮೂರ್ತಿಯವರನ್ನು ಶಿಂಷಾಪುರದಿಂದ ಶಿವಸಮುದ್ರಕ್ಕೂ ವರ್ಗ ಮಾಡಲಾಗಿದೆ.

ರಾಜೇಂದ್ರ ಪ್ರಸಾದರಿಗೆ ತಂತಿ

ಮೈಸೂರಿಗೆ ಬರಬೇಕಾಗಿದ್ದ ಅಕ್ಕಿಯನ್ನು ಬೇರೆ ಕಡೆಗೆ ರವಾನಿಸಿರುವುದು ಬಹಳ ನಿರ್ಧಯದ ವರ್ತನೆಯೆಂದೂ ಇಲ್ಲಿನ ಪರಿಸ್ಥಿತಿಯು ಬಹಳ ಭೀಕರವಾಗಿರುವುದರಿಂದ ಹಸಿವು ಮತ್ತು ಮರಣಗಳನ್ನು ತಪ್ಪಿಸಲು ಕೂಡಲೇ ಇಲ್ಲಿಗೆ ಅಕ್ಕಿಯನ್ನು ರವಾನಿಸಬೇಕೆಂದೂ ಪ್ರಾರ್ಥಿಸಿ ಶ್ರೀ ಕೆ. ಟಿ. ಭಾಷ್ಯಂರವರು ಡಾ|| ರಾಜೇಂದ್ರ ಪ್ರಸಾದರಿಗೆ ತಂತಿ ಕಳುಹಿಸಿದ್ದಾರೆ.

ಬೊಂಬಾಯಿ ನಲ್ಲಿ ವಯಸ್ಕರಿಗೆಲ್ಲಾ ಓಟು

ಮುಂದೆ ಬರಲಿರುವ ಬೊಂಬಾಯಿ ನಗರದ ಪೌರಸಭೆಯ ಚುನಾವಣೆಯಲ್ಲಿ ವಯಸ್ಕರಿಗೆಲ್ಲಾ ಓಟು ಕೊಡುವ ಪದ್ಧತಿಯನ್ನು ಜಾರಿಗೆ ತರಲಾಗುತ್ತದೆ. ನಗರದ ಎಲ್ಲಾ ಜನರಿಗೂ ಓಟು ಕೊಡುವ ಅವಕಾಶವಾಗು

ಪಾಕೀಸ್ಥಾನಕ್ಕಾಗಿ ರಷ್ಯದ ನೆರವು

ಸಿಂಧ್ ಪ್ರಾಂತ್ಯದ ಮುಸ್ಲಿಂಲೀಗಿನ ಅಧ್ಯಕ್ಷರಾದ ಮಿ|| ಯೂಸಫ್ ಅಬ್ದುಲ್ಲ ಹರೂನ್‌ರವರು ಭಾರತದಿಂದ ಲಂಡನ್ನಿಗೆ ತೆರಳುವರು. ಅವರು ನಾಳೆ ಅಲ್ಲಿಂದ ಮಾಸ್ಕೋಗೆ ಹೋಗಿ ಅಲ್ಲಿ ರಷ್ಯದ ವಿದೇಶಾಂಗ ಸಚಿವ ಮಿ|| ಮೊಲೊಟೋವ್‌ರವರನ್ನು ಭೇಟಿ ಮಾಡಿ ಪಾಕೀಸ್ಥಾನದ ಪಕ್ಷವನ್ನು ವಿಶ್ವಸಂಸ್ಥೆಯಲ್ಲೂ, ಶಾಂತಿಸಮ್ಮೇಳನದಲ್ಲೂ ವಹಿಸುವಂತೆ ಪ್ರಾರ್ಥಿಸುವರೆಂದು ಗೊತ್ತಾಗಿದೆ. ಇದಲ್ಲದೆ ಮಿ|| ಹರೂನ್‌ರವರು ಬ್ರಿಟನ್ನಿನ ಕಮ್ಯೂನಿಸ್ಟ್ ನಾಯಕರ ಬೆಂಬಲ ಗಳಿಸಲು ಪ್ರಯತ್ನಿಸುವರೆಂದು ತಿಳಿದುಬಂದಿದೆ.

ಬೋಸರಿಗೆ ಜರ್ಮನಿಯ ಬೆಂಬಲವಿತ್ತು

ಸುಭಾಷ್ ಚಂದ್ರಬೋಸರು ಟೋಕಿಯೋವಿಗೆ ಹೋಗಲು ಜರ್ಮನಿಯ ವಿದೇಶಾಂಗ ಮಂತ್ರಿ ರಿಬ್ಬನ್‌ಟ್ರಾಪರು ಸಹಾಯಕರಾಗಿದ್ದರೆಂದು ವಾಷಿಂಗ್‌ಟನ್ನಿನಲ್ಲಿ ಪ್ರಕಟವಾಗಿರುವ ಜರ್ಮನ್ ಕಾಗದ ಪತ್ರಗಳಿಂದ ಗೊತ್ತಾಗಿದೆ. ಜಪಾನಿನ ಆಕಾಂಕ್ಷೆಗಳನ್ನು ನೆರವೇರಿಸಿಕೊಳ್ಳಲು ಬೋಸರೇ ಸರಿಯಾದ ಭಾರತೀಯರೆಂದು ರಿಬ್ಬನ್‌ಟ್ರಾಪರು ಜಪಾನೀ ಪ್ರತಿನಿಧಿಗೆ ತಿಳಿಸಿದರೆಂದು ಅದರಲ್ಲಿ ನಮೂದಾಗಿದೆ.

ಕಾಶ್ಮೀರಕ್ಕೆ ಕಚ್ರೂರವರ ಪುನಃ ಪ್ರವೇಶ

ಸಂಸ್ಥಾನದೊಳಕ್ಕೆ ಪ್ರವೇಶಿಸಕೂಡದೆಂಬ ನಿರ್ಬಂಧದ ಮೇಲೆ ಅಖಿಲ ಭಾರತ ಸಂಸ್ಥಾನ ಪ್ರಜಾ ಸಮ್ಮೇಳನದ ಸ್ಥಾಯೀ ಸಮಿತಿ ಕಾರ್ಯದರ್ಶಿಗಳಾದ ಶ್ರೀ ದ್ವಾರಕಾನಾಥ ಕಚ್ರೂರವರ ಮೊನ್ನೆ ಜಾನೆ ಕಾಶ್ಮೀರದ ಶ್ರೀನಗರದಿಂದ ಸಂಸ್ಥಾನದ ಗಡಿ ಹೊರಗಡೆ ಬಿಡುಗಡೆಯಾಗಿದ್ದರು. ಆದರೆ ಅವರು ತಮ್ಮ ಮೇಲಿರುವ ಪ್ರತಿಬಂಧಕವನ್ನು ವಿರೋಧಿಸಿ ನಿನ್ನೆ ಕಾಶ್ಮೀರದ ಗಡಿ ಪ್ರವೇಶಿಸಿದರು. ಇನ್ನೂ ಅವರ ದಸ್ತಗಿರಿಯಾಗಿಲ್ಲ. ಅವರು ಮುಂದುವರಿಯಲೂ ಸಹ ಅವಕಾಶಕೊಟ್ಟಿಲ್ಲ. ಆದ್ದರಿಂದ ಕಾಶ್ಮೀರ ಮತ್ತು ಪ್ರೀಇಂಡಿಯಾ ಎಲ್ಲೆಯಲ್ಲಿ ಇರುವ ಕೋಹಲ ಸೇತುವೆಯ ಬಳಿ ಕುಳಿತುಬಿಟ್ಟಿದ್ದಾರೆ.

ಹಂಗೇರಿ-ಯುಗೊಸ್ಲಾವಿಯಾ ಒಪ್ಪಂದ

ಉಭಯ ರಾಷ್ಟ್ರಗಳ ಮೈತ್ರಿಯನ್ನು ಹೆಚ್ಚಿಸಲು ಯುಗೊಸ್ಲಾವಿಯಾ ಮತ್ತು ಹಂಗೇರಿಗಳು ಒಪ್ಪಂದ ಮಾಡಿಕೊಂಡು ತಮ್ಮ ತಮ್ಮ ಅಲ್ಪಸಂಖ್ಯಾತರಿಗೆ ಅನುಕೂಲವಾಗುವಂತೆ ಜನವಿನಿಮಯ ಮಾಡಲು ಸಮ್ಮತಿಸಿದ್ದಾರೆ.

ಕಲ್ಕತ್ತೆಯಲ್ಲಿಯೂ ಮನೆಗಳ ಆಕ್ರಮಣ

ಲಂಡನ್ನಿನ ರೀತಿಯೇ ಕಲ್ಕತ್ತೆಯಲ್ಲಿಯೂ ವಸತಿ ಮನೆಗಳಿಲ್ಲದವರು ಖಾಲಿ ಇರುವ ಮನೆಗಳನ್ನು ಆಕ್ರಮಿಸುತ್ತಿದ್ದಾರೆ. ಅಲ್ಲಿನ ಟ್ರಾಮ್ ಕಂಪೆನಿಯ ಆಫೀಸಿನ ಬಳಿಯಿರುವ ಮನೆಯಿಂದ ಸದರಿ ಕಂಪೆನಿಯ ನೌಕರರು ಕೆಲವರು ಆ ಮನೆಯ ಕೊಠಡಿಗಳನ್ನು ಆಕ್ರಮಿಸಿಕೊಂಡು ನೆಲಸಿದ್ದಾರೆ. ತಮ್ಮ ವಸತಿಗೆ ಸ್ಥಳ ಒದಗಿಸುವವರೆಗೆ ಬೇರೆ ಕಡೆ ಹೋಗುವುದಿಲ್ಲವೆಂದು ಅವರು ಹೇಳುತ್ತಾರೆ.

ಸಾಧ್ವಿ

ತಾ|| ೨೫-೯-೪೬ ಬುಧವಾರ

ರೈಲ್ವೆ ಮುಷ್ಕರದ ಮುಕ್ತಾಯ

೮೯ ದಿನಗಳ ನಂತರ ದಕ್ಷಿಣ ಭಾರತ ರೈಲ್ವೆ ಕೆಲಸಗಾರರು ತಮ್ಮ ಮುಷ್ಕರವನ್ನು ಮುಕ್ತಾಯ ಮಾಡಿರುತ್ತಾರೆ. ನಾಳೆಯಿಂದ ಅವರುಗಳೆಲ್ಲರೂ ತಮ್ಮ ಕೆಲಸದ ಮೇಲೆ ಹಿಂದಿರುಗುವ ನಿರೀಕ್ಷಣೆಯಿದೆ. ಕೇಂದ್ರ ಸರ್ಕಾರದ ರೈಲ್ವೆ ಮಂತ್ರಿಗಳಾದ ಡಾ|| ಅಸಾಫ್ ಅಲಿಯವರ ಸಲಹೆ ಮತ್ತು ಭರವಸೆಗಳ ಪ್ರಕಾರ ಅವರು ಮುಷ್ಕರವನ್ನು ಮುಕ್ತಾಯ ಮಾಡಿರುವುದು ಅಭಿನಂದನೀಯವಾದ ಸಂಗತಿ. ಜನಾನುರಾಗಿಗಳಾದ ಆಡಳಿತ ವರ್ಗದವರ ಸಲಹೆಗಳಿಗೆ ದೇಶದ ಪ್ರಜೆಗಳು ಯಾವ ರೀತಿ ಪುರಸ್ಕಾರವೀಯುವರೆಂಬುದು ಇದರಿಂದ ವೇದ್ಯವಾಗುತ್ತದೆ.

ಮುಷ್ಕರದಲ್ಲಿ ಭಾಗಿಗಳಾಗಿದ್ದವರ ಮೇಲೆ ಯಾವ ಕ್ರಮವನ್ನೂ ಜರುಗಿಸಲಾಗುವುದಿಲ್ಲವೆಂದು ಡಾ|| ಅಸಾಫ್ ಅಲಿಯವರು ಭರವಸೆಯಿತ್ತಿದ್ದಾರೆ. ಮತ್ತು ಅವರುಗಳ ನ್ಯಾಯವಾದ ಬೇಡಿಕೆಗಳನ್ನು ಸೂಕ್ತವಾದ ರೀತಿಯಲ್ಲಿ ಬಗೆ ಹರಿಸಲಾಗುವುದೆಂದೂ ತಿಳಿಸಿದ್ದಾರೆ. ದೇಶದ ಸಕಲ ಪ್ರಜೆಗಳ ಹಿತಕ್ಕಾಗಿಯೇ ಅಧಿಕಾರ ಸೂತ್ರಗಳನ್ನು ವಹಿಸಿರುವ ದೇಶಭಕ್ತರುಗಳು ಬಡ ಜನರ ಹಿತಕ್ಕೆ ಎಂದಿಗೂ ಧಕ್ಕೆಯುಂಟುಮಾಡುವುದಿಲ್ಲವೆಂದು ಎಲ್ಲರೂ ಧಾರಾಳವಾಗಿ ನಂಬಬಹುದು.

ಪ್ರಕೃತದ ಮುಷ್ಕರವು ಅಷ್ಟು ಸಮಯೋಚಿತವಾಗಿರಲಿಲ್ಲವೆಂದು ಎಲ್ಲರೂ ಹೇಳಿರುವರು. ಮೊನ್ನೆ ತಾನೆ ಅಖಿಲ ಭಾರತ ರೈಲ್ವೆ ಮುಷ್ಕರದ ಪ್ರಸಂಗವು ಒಂದು ಒಪ್ಪಂದದ ಮೇಲೆ ಪರ್ಯವಸಾನಗೊಂಡ ಮೇಲಂತೂ ಇದು ಶುದ್ಧ ಅನುಚಿತವೆಂದೂ ಸಹ ಅನೇಕರು ಹೇಳಿದ್ದರು. ಅವರೂ ಚಳುವಳಿಯ ಚಾಪಲ್ಯದ ಹಲವು ಜನರ ಪ್ರೇರೇಪಣೆಯಿಂದ ಈ ಮುಷ್ಕರವು ಮುಂದುವರಿಯಿತೆಂದು ತಿಳಿದುಬಂದಿದೆ. ಆರಂಭವಾದ ಮೂರನೇ ದಿನದಿಂದಲೇ ಇದು ಸಡಿಲವಾಗಿ ಕೆಲಸಗಾರರು ದಿನ ದಿನವೂ ಕೆಲಸಕ್ಕೆ ಹಿಂದಿರುಗಿ ಬರುತ್ತಿದ್ದುದೇ ಇದಕ್ಕೆ ಸಾಕ್ಷಿ.

ಈಗ ಮುಷ್ಕರವು ಮುಕ್ತಾಯವಾಗಿರುವುದು ಸಂತೋಷದ ಸಂಗತಿ. ರಾಷ್ಟ್ರೀಯ ಸರ್ಕಾರವು ಇರುವಾಗ ಇಂತಹ ಮುಷ್ಕರಗಳನ್ನು ತಡೆಗಟ್ಟುವುದು ಅತ್ಯವಶ್ಯಕವೆಂಬ ವಿಚಾರವನ್ನು ಸಕಲರೂ ಇದರಿಂದ ಕಲಿತರೆ ಸಾರ್ಥಕವಾದೀತು.

ಹೈಸ್ಕೂಲ್ ಉಪಾಧ್ಯಾಯರ ಮುಷ್ಕರ

ಚಾಮರಾಜನಗರ ೨೫

ಚಾಮರಾಜನಗರದ ಪುರಸಭಾ ಹೈಸ್ಕೂಲಿನಲ್ಲಿ ಆಗಸ್ಟ್ ೧೬ ನೇ ತಾ|| ನಡೆದ ಉಪಾಧ್ಯಾಯರ ಮುಷ್ಕರಕ್ಕೆ ತಾವು ಕಾರಣವೆಂದು ನಮೂದಿಸಿರುವುದು ಸರಿಯಲ್ಲವೆಂದೂ ಆ ಪ್ರಕರಣಕ್ಕೆ ತಾವು ಜವಾಬ್ದಾರರಲ್ಲವೆಂದೂ ತಿಳಿಸಿ ಇಲ್ಲಿಯ ಪುರಸಭಾಧ್ಯಕ್ಷರಾದ ಶ್ರೀ ಸಿ. ಡಿ. ನಾರಾಯಣರಾಯರು ಒಂದು ದೀರ್ಘವಾದ ಹೇಳಿಕೆಯನ್ನು ಕಳಿಸಿದ್ದಾರೆ. ಇದಲ್ಲದೆ ಇನ್ನು ಕೆಲವರು ಈ ಬಗ್ಗೆ ಪತ್ರಗಳನ್ನು ಕಳಿಸಿದ್ದಾರೆ. ಸ್ಥಳ ಸಂಕೋಚದಿಂದ ಅವುಗಳನ್ನು ಪ್ರಕಟಿಸಲು ಸಾಧ್ಯವಿಲ್ಲದ್ದಕ್ಕಾಗಿ ವಿಷಾದಿಸುತ್ತೇವೆ.

ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಭೆ

ದೆಹಲಿಯಲ್ಲಿ ಸಮಾವೇಶಗೊಂಡಿರುವ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಅಧಿವೇಶನಕ್ಕೆ ೩೦೦ ಪ್ರತಿನಿಧಿಗಳು ಆಗಮಿಸಿದ್ದಾರೆ. ತಾತ್ಕಾಲಿಕ ಸರ್ಕಾರ ರಚಿಸಲು ವೈಸರಾಯರಿಂದ ಬಂದ ಆಹ್ವಾನವನ್ನು ಕಾಂಗ್ರೆಸ್ ಅಧ್ಯಕ್ಷರು ಅಂಗೀಕರಿಸಿದ ಬಗ್ಗೆ ವರ್ಕಿಂಗ್ ಕಮಿಟಿ ಮಾಡಿದ್ದ ನಿರ್ಣಯವನ್ನು ಮೌ|| ಆಜಾದರು ಸಭೆಯಲ್ಲಿ ಮಂಡಿಸಿದರು. ೨೦೧-೧೫ ಓಟುಗಳಿಂದ ಅದು ಅಂಗೀಕಾರವಾಯಿತು.

ರೇಷ್ಮೆ ಕೆಲಸಗಾರರ ಸಭೆ

ಮೈಸೂರು ೨೩

ಮೈಸೂರು ಸರ್ಕಾರದ ರೇಷ್ಮೆ ನೆಯ್ಗೆ ಕಾರ್ಖಾನೆ ಕೆಲಸಗಾರರ ಸಂಘದ ಸರ್ವ ಸದಸ್ಯರ ಸಭೆಯು ಕಳೆದ ಭಾನುವಾರ ಬೆಳಗ್ಗೆ ಶ್ರೀ ಕೆ.ಆರ್.ರಾಜಾರಾಂ ಪ್ರಸಾದ್‌ರವರ ಅಧ್ಯಕ್ಷತೆಯಲ್ಲಿ ಜರುಗಿ ೧೯೪೬ ನೇ ಸಾಲಿನ ಬೋನಸ್ಸು ಮತ್ತು ಕನಿಷ್ಠ ಕೂಲಿ ದರಗಳು ಹೆಚ್ಚಿದ ಬಗ್ಗೆ ದಿವಾನರಿಗೂ, ಜ|| ಮ್ಯಾನೇಜರಿಗೂ, ಇದಕ್ಕೆ ಸಹಾಯ ಮಾಡಿದ ಶ್ರೀಮತಿ ಎಂ. ಆರ್. ಲಕ್ಷ್ಮಮ್ಮನವರೇ ಮುಂತಾದ ಇತರರಿಗೂ ವಂದನೆಗಳನ್ನರ್ಪಿಸಲಾಯಿತು.

ತೆಂಗಿನ ಮರಕ್ಕೆ ಸಿಡಿಲು

ನೆನ್ನೆ ರಾತ್ರಿ ೯-೩೦ ಗಂಟೆಯಲ್ಲಿ ಉತ್ತರಾದಿ ಮಠದ ಬೀದಿ ೨೩೩ ನೇ ನಂಬರಿನ ಶ್ರೀ ಕೆ. ಪಿ. ಕೃಷ್ಣಮೂರ್ತಿಯವರ ಮನೆಯ ತೆಂಗಿನ ಮರಕ್ಕೆ ಸಿಡಿಲು ಹೊಡೆದು ವಿದ್ಯುಚ್ಛಕ್ತಿ ತಂತಿಗಳಿಗೆ ತಗಲಿ ಮರವೂ ತಂತಿಗಳೂ ಉರಿಯಲು ಆರಂಭವಾದುವು. ಒಡನೆಯೇ ವಿದ್ಯುಚ್ಛಕ್ತಿಯನ್ನು ನಿಲ್ಲಿಸಿ ಫೈರ್ ಬ್ರಿಗೇಡಿನವರು ಬಂದು ಬೆಂಕಿಯನ್ನು ಆರಿಸಿದರು. ಯಾವ ಬಗೆಯ ಅಪಾಯಗಳೂ ಜರುಗಲಿಲ್ಲ.

ಪುರಸಭಾಧಿವೇಶನ ಮುಂದುವರಿಸಿತು

ಸ್ವಂ ಸು.] ಚಾಮರಾಜನಗರ ೨೩

ಪುರಸಭೆಯ ಸಾಧಾರಣ ಅಧಿವೇಶನವು ಇಂದು ಸೇರಿದಾಗ ಅಧ್ಯಕ್ಷ ಶ್ರೀ ಸಿ. ಡಿ. ನಾರಾಯಣರಾಯರ ಮೇಲೆ ಅವಿಶ್ವಾಸ ನಿರ್ಣಯವು ಬಂದಿರುವುದರಿಂದ ಇಂದಿನ ಸಭೆಯನ್ನು ಮುಂದುವರಿಸಬೇಕೆಂಬ ಸೂಚನೆಯು ೮-೭ ಓಟುಗಳಿಂದ ಅಂಗೀಕಾರವಾಗಿ ಸಭೆ ಯಾವ ಕಾರ್ಯವನ್ನೂ ನಡೆಸದೆ ಮುಂದಕ್ಕೆ ಹಾಕಲ್ಪಟ್ಟಿತು. ಇದೇ ೨೮ ನೇ ತಾ|| ವಿಶೇಷ ಸಭೆಯಲ್ಲಿ ಅವಿಶ್ವಾಸ ನಿರ್ಣಯವು ಚರ್ಚೆಗೆ ಬರುವುದು.

ಟಿ. ಸಿ. ನಟರಾಜ್
ಔಷಧಾಲಯ

ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.

ಮುಂಡೂರವರ ಆಯುರ್ವೇದೀಯ ಸಿದ್ಧೌಷಧಗಳೆಲ್ಲವೂ ದೊರೆಯುತ್ತವೆ.

ಭಾರತದ ದಂಡನಾಯಕರಿಗೆ ಮೈಸೂರು ಪ್ರಭುಗಳ ಪತ್ರ

"ಭಾರತದ ವಿಮಾನ, ಭೂ ಮತ್ತು ನೌಕಾ ಸೈನ್ಯ ದಳಗಳ ಅಧಿಕಾರಿ ಸ್ಥಾನಗಳಿಗೆ ಶಿಕ್ಷಣ ಕೊಡಲು ರಾಷ್ಟ್ರೀಯ ಯುದ್ಧ ಶಿಕ್ಷಣಾಲಯದಂತಹ ಸಂಸ್ಥೆ ಅತ್ಯವಶ್ಯಕ. ನೀವು ಇದರಲ್ಲಿ ಮುತುವರ್ಜಿ ವಹಿಸುತ್ತಿರುವುದು ಸಂತೋಷದ ಸಂಗತಿ" ಎಂದು ಮೈಸೂರಿನ ಮಹಾರಾಜರು ಭಾರತದ ದಂಡನಾಯಕರಾದ ಸರ್ ಆಚಿನ್ ಲೆಕ್‌ರವರಿಗೆ ಪತ್ರ ಬರೆದಿದ್ದಾರೆಂದು ಗೊತ್ತಾಗಿದೆ. ಅವಶ್ಯಕವಾದ ಎಲ್ಲಾ ಸಹಾಯವನ್ನೂ ನೀಡುವುದಾಗಿ ಮಹಾರಾಜರು ತಿಳಿಸಿದ್ದಾರೆಂದೂ ಹೇಳಲಾಗಿದೆ.

ಸಕ್ಕರೆ ಕಾರ್ಖಾನೆ ಕೆಲಸಗಾರರ ಸಂಘ

ಮಂಡ್ಯ ೨೩

ಮೇಲ್ಕಂಡ ಸಂಘದ ಆಡಳಿತ ಮಂಡಲಿ ಸಭೆಯು ಕಳೆದ ಶುಕ್ರವಾರ ಶ್ರೀ ಎಂ. ಮಹಾಬಲರಾಯರ ಅಧ್ಯಕ್ಷತೆಯಲ್ಲಿ ಜರುಗಿತು. ಲೇಬರ್ ಫೆಡರೇಷನ್ ಕಾರ್ಯದರ್ಶಿಗಳಾದ ಶ್ರೀ ಕೆ. ಎಸ್. ಕುಮಾರನ್‌ರವರು ಕೆಲಸಗಾರರ ಸಂಘಟನೆ ಬಗ್ಗೆ ಭಾಷಣ ಮಾಡಿದರು. ಮೇಲ್ಕಂಡ ಸಂಘವನ್ನು ಸಂಸ್ಥಾನದ ಲೇಬರ್ ಫೆಡರೇಷನ್ನಿಗೆ ಸೇರಿಸಬೇಕೆಂದೂ, ಬೋನಸ್ ಮತ್ತು ಕೂಲಿ ದರಗಳ ಪುನರ್ವ್ಯವಸ್ಥೆಯಾಗಬೇಕೆಂದೂ, ನಿರ್ಣಯಗಳನ್ನು ಮಾಡಲಾಯಿತು.

ರೇಡಿಯೋ ಪತ್ತೆ ಇಲ್ಲ

ಸ್ವಂ ಸು.] ಶ್ರೀರಂಗಪಟ್ಟಣ ೨೩

ಇಲ್ಲಿಯ ಪುರಸಭೆಯವರು ಸುಮಾರು ೫-೬ ವರ್ಷಗಳ ಹಿಂದೆ ಸಾರ್ವಜನಿಕರ ಉಪಯೋಗಕ್ಕಾಗಿ ಒಂದು ರೇಡಿಯೋ ಇಟ್ಟಿದ್ದರು. ಈಗ ಅದನ್ನು ನಿಲ್ಲಿಸಲಾಗಿದೆ. ಅಲ್ಲದೆ ಆ ರೇಡಿಯೋ ಕೂಡ ಈಗ ಪತ್ತೆ ಇಲ್ಲದಂತಾಗಿದೆ. ಕೂಡಲೇ ಅಧಿಕಾರಿಗಳು ಮುತುವರ್ಜಿ ವಹಿಸಿ ಎಂದಿನಂತೆ ರೇಡಿಯೋ ಪ್ರಸಾರವನ್ನು ಆರಂಭಿಸಿ ಸಾರ್ವಜನಿಕರಿಗೆ ನೆರವಾಗಬೇಕಾಗಿದೆ.

ಪ್ರಕಟಣೆ

ಮೈಸೂರು ಪುರ ನಿವಾಸಿಗಳಿಗೆ ತಿಳಿಯಪಡಿಸುವುದೇನೆಂದರೆ:—

ಮೈಸೂರು ಪಟ್ಟಣದಲ್ಲಿ ಆಗುವ ಜನನ ಮರಣಗಳ ವಿವರಗಳು ಸಕಾಲಕ್ಕೆ ಮುನಿಸಿಪಲ್ ಹೆಲ್ತ್ ಆಫೀಸರವರ ಆಫೀಸಿಗೆ ಬರುತ್ತಿರುವುದಿಲ್ಲ. ಮುನಿಸಿಪಲ್ ರಿಜಿಸ್ಟ್ರೇಷನ್ ಮೇರೆಗೆ ಜನನ ಮರಣಗಳ ವಿವರವನ್ನು ಏಳು ದಿನಗಳ ಒಳಗಾಗಿ ತಂದೆ ತಾಯಿಗಳಾಗಲೀ, ಮನೆಯ ಮಾಲೀಕರುಗಳಾಗಲೀ, ಹತ್ತಿರದ ಸಂಬಂಧಿಗಳಾಗಲೀ, ವೈದ್ಯರುಗಳಾಗಲೀ, ಸೂಲಗಿತ್ತಿಯರುಗಳಾಗಲೀ, ಹೆಲ್ತ್ ಆಫೀಸರವರಿಗೆ ತಿಳಿಯಪಡಿಸಬೇಕಾಗಿ ಕೋರಿದೆ.

ತಪ್ಪಿದಲ್ಲಿ ಮುನಿಸಿಪಲ್ ಬೈಲಾ ೩೦ ನೇ ಪ್ರಕಾರ ಕಾರ್ಯಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ. ಈ ವಿಚಾರದಲ್ಲಿ ಪುರಜನರ ಸಹಕಾರವನ್ನು ಕೋರಲಾಗಿದೆ.

ಆರ್. ರಾಮಚಂದ್ರರಾವ್
ಛಾಂಬೋರೆ, ಅಧ್ಯಕ್ಷ

Edited printed and published by A. [illegible] Nagara at the Sadhvi Press D Subbiah Road, Mysore

ಜಿನ್ನಾ-ವೈಸರಾಯ್ ಭೇಟಿ

ಮಿ|| ಜಿನ್ನಾರವರು ಈ ದಿನ ಸಂ
೫-೩೦ ಕ್ಕೆ ದೆಹಲಿಯಲ್ಲಿ ವೈಸರಾಯರನ್ನು
ಭೇಟಿ ಮಾಡುವರು. ತಾತ್ಕಾಲಿಕ ಸ
ರಕ್ಕೆ ಲೀಗು ಸೇರುವ ಬಗ್ಗೆ ಈ ಭೇಟಿಯ
ಲ್ಲಿ ಅಖೈರು ನಿರ್ಧಾರವಾಗಬಹುದೆಂ
ಹೇಳಲಾಗಿದೆ. ರಾಜ್ಯಾಂಗ ರಚನಾ ಸ
ಯಲ್ಲಿ ಲೀಗು ಭಾಗವಹಿಸುವ ವಿಚಾರವ
ಈ ತೀರ್ಮಾನವನ್ನು ಅವಲಂಬಿಸುವುದಾಗಿ

ರಾಜೇಂದ್ರ ಪ್ರಸಾದರು ಸ್ಟೇಟ್ ಕೌನ್ಸಿಲ್ ನಾಯಕರು

ಬರುವ ಕೌನ್ಸಿಲ್ ಆಫ್ ಸ್ಟೇಟ್ ಸ
ಯ ಅಧಿವೇಶನದಲ್ಲಿ ಆಹಾರ ಮಂತ್ರಿಗ
ದ ಡಾ|| ರಾಜೇಂದ್ರ ಪ್ರಸಾದರು ಸಭಾ ನ
ಯಕರಾಗಿರುವರೆಂದು ತಿಳಿದುಬಂದಿ
ರಕ್ಷಣಾಮಂತ್ರಿ ಸರ್ದಾರ್ ಬಲದೇವ ಸಿಂ
ಗೂ, ವಾಣಿಜ್ಯ ಮಂತ್ರಿ ಸಿ ಹೆಚ್. ಬಾ
ರವರೂ ಸಹ ಅದರಲ್ಲಿ ಭಾಗವಹಿಸುವ

ಭಾರತದ ಗಡಿಯಲ್ಲಿ ನೇತಾ

ಸುಭಾಷ್ ಚಂದ್ರಬೋಸರು ಆಗ್ನೇ
ಏಷ್ಯದಲ್ಲಿ ಈ ಏಪ್ರಿಲ್ ತಿಂಗಳ ವರೆ
ಇದ್ದರು. ಅಲ್ಲಿ ಸೈನ್ಯದ ಗುಪ್ತ ಶಾಖೆ
ವರಿಂದ ಎರಡಾವರ್ತಿ ಗುರುತು ಹಿಡಿ
ಲ್ಪಟ್ಟರು, ಆದರೆ ದೈವವಶಾತ್ ಅವರು
ಲ್ಲಿಂದ ಈಗ ಭಾರತದ ಗಡಿಗೆ ಆಗಮಿಸಿ
ಫ ಫಕೀರರ ಅತಿಥಿಗಳಾಗಿ ಬಿಡಾರ ಮಾ
ದ್ದಾರೆ. ಈ ಫಕೀರರು ತಮ್ಮ ಸ
ನ್ಯವನ್ನೂ, ಅನುಯಾಯಿಗಳೊಂದಿಗೆ ಬೋ
ಸರ ಆಜ್ಞೆಗೆ ಅಧೀನಪಡಿಸಿದ್ದಾರೆಂದು ಗ
ತ್ತಾಗಿದೆ

ಅಧ್ಯಕ್ಷರ ಸಮ್ಮತಿ

ಮೈಸೂರು ಕಾಂಗ್ರೆಸ್ ಅಧ್ಯಕ್ಷರೂ, ಭಾ
ರತ ರಾಜ್ಯಾಂಗ ರಚನಾ ಸಮಿತಿ ಸದ
ರೂ, ಆದ ಶ್ರೀ ಎಸ್. ನಿಜಲಿಂಗಪ್ಪನವ
ಅಕ್ಟೋಬರ್ ೨ ನೇ ತಾ|| ನಡೆಯು
ಮಾರ್ಕೆಟ್ ಪ್ರದರ್ಶನದ ಆರಂಭೋತ್ಸ
ವನ್ನು ನಡೆಸಲು ಸಮ್ಮತಿಸಿರುತ್ತಾರೆಂ
ಗೊತ್ತಾಗಿದೆ

ಪಿಳ್ಳೆಮೊಹಲ್ಲಾ ಕಾಂಗ್ರೆಸ್ ಸಮಿ

ಮೇಲ್ಕಂಡ ಸಮಿತಿ ಸಭೆಯು ನಾ
ಸಂಜೆ ೭ ಘಂಟೆಗೆ ಹಳೇ ಅಗ್ರಹಾರದಲ್ಲಿ
ವ ಮಹಾತ್ಮ ಶಾಪ್ಸ್ ಮತ್ತು ಬಿಸ್ಕತ್ ಫ
ಕ್ಟರಿಯಲ್ಲಿ ಸೇರುತ್ತದೆ. ಸಮಿತಿ ಸದ
ರೆಲ್ಲಾ ತಪ್ಪದೆ ದಯ ಮಾಡಿಸಬೇಕೆಂ
ಕಾರ್ಯದರ್ಶಿಗಳು ಕೋರಿದ್ದಾರೆ.

ಅದೃಷ್ಟ! ಲಾಟರಿ

ಪ್ರತಿ ತಿಂಗಳೂ ಸಾವಿರಾರು ರೂಪಾಯಿಗಳ ಬಹುಮಾನ ಹಂಚಿಕೆಯಾಗುತ್ತಿವೆ.

೧ ನ್ಯಾಷನಲ್ ಡರ್ಬಿ,
೨ ಗೋಲ್ಡ್ ಫ್ಲಾಗ್ ನೋಬ
ಡಿಗೋನ
೩ ರಾಂತರೀತಾ ನ್ಯಾಷನಲ್
ಡಿಗೋನ

ಟಿಕೆಟ್ ೧ ಕ್ಕೆ ಒಂದೇ ರೂಪಾಯಿ
ಬಂಪರ್, 50, 100, 1000
ಅವರವರ ಅದೃಷ್ಟವಿದ್ದಂತೆ
ಒಂದು ಬಾರಿ ಪ್ರಯತ್ನಿಸಿ

ಏಜೆಂಟ್, ಹೆಚ್. ಪಿ. ರಂಗಸ್ವಾಮಿ
ರಂಗನಾಥ ಟ್ರೇಡಿಂಗ್ ಹೌಸ್,
ಚಾಮರಾಜನಗರ.

ಪೋ. ನಂ. 302 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಗುರುವಾರ ೩೭—೯—೪೭ [ಸಂಚಿಕೆ ೫೨

ವೈಸರಾಯರೊಡನೆ ಪ್ರಕಾಶಂರವರ ಭೇಟಿ

ಹೊಸ ಸರ್ದಾರರುಗಳು

ಮೈಸೂರು ೨೬ ಶ್ರೀಗಳವರ ಹೆಚ್. ಮುದ್ದರಾಜೇ ಅರಸ್, ನಾರಾಯಣಸಿಂಗ್, ಬಿ. ಎಸ್. ನಂಜರಾಜೇ ಅರಸ್, ಹೆಚ್. ಎಲ್. ದೇವರಾಜೇ ಅರಸ್, ಕೆ. ಬಸವರಾಜೇ ಅರಸ್, ಎಂ. ಪಿ. ಸುಬ್ರಹ್ಮಣ್ಯರಾಜೇ ಅರಸ್ ಇವರುಗಳನ್ನು ಶ್ರೀಮನ್ಮಹಾರಾಜರು ಸರ್ದಾರರುಗಳನ್ನಾಗಿ ನೇಮಿಸಿದ್ದಾರೆ.

ಭಾವಸಾರ ಕ್ಷತ್ರಿಯ ಸಭೆ

ಅಖಿಲ ಭಾರತ ಭಾವಸಾರ ಕ್ಷತ್ರಿಯ ಮಹಾಸಭೆಯ ಕಾರ್ಯಕಾರಿ ಸಮಿತಿ ಸಭೆಯು ವಾಣೀವಿಲಾಸ ಮೊಹಲ್ಲಾದ " ವಿಠೋಬ ದೇವಸ್ಥಾನ"ದಲ್ಲಿ ಅಕ್ಟೋಬರ್ ೮ ನೇ ತಾ ನಡೆಯುವುದೆಂದು ಅಧ್ಯಕ್ಷರಾದ ಶ್ರೀ ಎಲ್. ರಾಮಚಂದ್ರರಾಯರು ತಿಳಿಸಿದ್ದಾರೆ.

ಈಸೂರು ದಿನಾಚರಣೆ

ಮೈಸೂರು ಕಾಂಗ್ರೆಸ್ ಪ್ರಗತಿ ಪಕ್ಷ ಮತ್ತು ವಿದ್ಯಾರ್ಥಿ ಕಾಂಗ್ರೆಸ್ ಆಶ್ರಯದಲ್ಲಿ ಇಂದಿನ ಈಸೂರು ದಿನಾಚರಣೆ ಬಗ್ಗೆ ೫೬ ಸಂಜೆ ಟೌನ್ ಹಾಲ್ ಮೈದಾನ ಸಾರ್ವಜನಿಕ ಸಭೆ ನಡೆಯುವುದು. ಪ್ರೊ॥ ಸಿ ಬಾಸಪ್ಪನವರು ಅಧ್ಯಕ್ಷತೆ ವಹಿಸುತ್ತಾರೆ. ಎಲ್ಲರೂ ಸಕಾಲಕ್ಕೆ ಸಭೆ ಬರಬೇಕಾಗಿ ಪ್ರಾರ್ಥನೆ ಮತ್ತು ಅದೇ ಬೆಳಿಗ್ಗೆ ೮ ಗಂಟೆಗೆ ದೇಶೀಯ ವಿದ್ಯಾಶಾಲೆಯಲ್ಲಿ ಧ್ವಜ ವಂದನೆಯೂ, ೯ ಗಂಟೆಗೆ ಪ್ರಭಾತಫೇರಿಯೂ ನಡೆಯುವುದು.

ಗಾಂಧಿಜಿಯವರೊಡನೆ ಮೈಸೂರು ಮುಖಂಡರು

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಹೊನ್ನನಹಳ್ಳಿ ಸಿದ್ದಲಿಂಗಪ್ಪನವರೂ, ಭಾವಿ ಕ್ಷರಾದ ಶ್ರೀ ಕೆ. ಚೆಂಗಲರಾಯರೆಡ್ಡಿ ಯವರೂ ಮೊನ್ನೆ ದಿನ ದೆಹಲಿಯಲ್ಲಿ ಮಹಾತ್ಮ ಗಾಂಧಿಯವರನ್ನು ಭೇಟಿಮಾಡಿ ಮೈಸೂರು ಸಂಸ್ಥಾನದ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿ ಕೂಡಲೇ ಸಂಸ್ಥಾನದ ರಾಜಕೀಯ ಸುಧಾರಣೆಗಳ ಅಗತ್ಯವಿದೆ, ಬೆಂಗಳೂರಿನ ಸಮಿತಿಗೆ ಪ್ರಜಾಪ್ರತಿನಿಧಿಗಳು ಸೇರಿದರೆ ಮಾತ್ರ ಜನರಿಗೆ ಹಿತ ಮಾಡಲು ಸಾಧ್ಯವೆಂದೂ ಅವರು ಗಾಂಧಿಜಿಯವರಿಗೆ ತಿಳಿಸಿದರೆಂದು ತಿಳಿದಿದೆ. ನಿನ್ನೆ ದಿನ ಅವರು ಪಂ॥ ನೆಹರೂ ಅವರನ್ನೂ ಭೇಟಿಮಾಡುವರು. ಸರ್ದಾರ್ ಪಟೇಲರನ್ನೂ, ಬಾಬು ರಾಜೇಂದ್ರ ಪ್ರಸಾದರನ್ನೂ ಅವರು ಭೇಟಿಮಾಡಿ ಸಂಸ್ಥಾನದ ಅಭಿಪ್ರಾಯವನ್ನು ವಿವರಿಸಿದರೆಂದೂ ಬಂದಿದೆ.

ಜಮೀನ್ದಾರಿ ಪದ್ಧತಿ ವಜಾ

ದೇಶದಲ್ಲೆಲ್ಲ ಜಮೀನ್ದಾರಿ ಪದ್ಧತಿಯನ್ನು ವಜಾ ಮಾಡಿ ಭೂಮಿ ಕಾಣಿಗಳ ಹಂಚಿಕೆ, ಸುಧಾರಣೆಗಳನ್ನು ಜಾರಿಗೆ ತರುವ ಯೋಜನೆಗಳನ್ನು ಕಳುಹಬೇಕೆಂದು ಅಖಿಲ ಭಾರತ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಎಲ್ಲಾ ಪ್ರಾಂತೀಯ ಮಂತ್ರಿ ಮಂಡಲಗಳನ್ನು ಕೇಳಿದೆ.

ಪಂಜಾಬ ಗಲಭೆ

ಪಂಜಾಬಿನಲ್ಲಿ ಕ್ರಮೇಣ ಶಾಂತಿ ನೆಲಸುತ್ತಿದೆ. ನಿನ್ನೆ ದಿನ ಹತ್ತಿರದ ೬೧ ಮರಣಗಳು ವರದಿಯಾಗಿವೆ. ನಿರಾಶ್ರಿತರ ಎಂಟು ಸಮೀಪದ ರೈಲುಗಳ ಮೇಲೆ ದಂಗೆ ಕೋರರು ಧಾಳಿ ಮಾಡಿದರು.

ವೈಸರಾಯರೊಡನೆ ಪ್ರಕಾಶಂ ಭೇಟಿ

ಮದ್ರಾಸ್ ಪ್ರಧಾನಿಗಳಾದ ಶ್ರೀ ಟಿ. ಪ್ರಕಾಶಂರವರು ನಿನ್ನೆ ದಿನ ವೈಸರಾಯರನ್ನು ಭೇಟಿ ಮಾಡಿದ್ದರು. ಅವರು ಇಂದು ನಾಗಪುರಕ್ಕೆ ವಿಮಾನದಲ್ಲಿ ತೆರಳಿ ಮಧ್ಯಪ್ರಾಂತ್ಯದ ಪ್ರಧಾನಿಗಳನ್ನು ಭೇಟಿಮಾಡಿ ಅಲ್ಲಿಂದ ಮದ್ರಾಸಿಗೆ ಆಹಾರವನ್ನು ಒದಗಿಸುವ ಬಗ್ಗೆ ಚರ್ಚೆ ನಡೆಸುವರು. ನಂತರ ಸೇವಾಗ್ರಾಮಕ್ಕೆ ಹೋಗಿ ಮದ್ರಾಸ್ ಸರ್ಕಾರದ ಖಾದಿ ಯೋಜನೆ ಬಗ್ಗೆ ಚರಕಾ ಸಂಘದವರೊಡನೆ ಮಾತುಕತೆ ನಡೆಸಿ ಮದ್ರಾಸಿಗೆ ಹಿಂತಿರುಗುವರು.

ಮೈಸೂರಿನಲ್ಲಿ ಹೋರಾಟ ಅನಿವಾರ್ಯ

ಕಳೆದ ಒಂದು ವರ್ಷದಿಂದ ತುರಂಗದಲ್ಲಿದ್ದು ಮೊನ್ನೆ ಬಿಡುಗಡೆಯಾದ ಮೈಸೂರು ಕಾಂಗ್ರೆಸ್ ಪ್ರಕಟಣಾ ಕಾರ್ಯದರ್ಶಿಗಳಾದ ಶ್ರೀ ಎ. ಜಿ. ತಿಮ್ಮಾರೆಡ್ಡಿ ಇವರು ಒಂದು ಹೇಳಿಕೆಯನ್ನು ಹೊರಡಿಸಿ, ಇಡೀ ಭಾರತದಲ್ಲಿ ರಾಜಕೀಯ ಬದಲಾವಣೆಗಳಾಗಿ ಪ್ರಜಾ ಪ್ರಭುತ್ವಗಳು ಆಡಳಿತ ನಡೆಸುತ್ತಿರುವ ಈ ಸಮಯದಲ್ಲಿ ಮೈಸೂರಿನಲ್ಲಿ ಯಾವ ಬಗೆಯ ಸುಧಾರಣೆಗಳೂ ಆಗದಿದ್ದುದಕ್ಕಾಗಿ ವಿಷಾದವನ್ನು ಸೂಚಿಸಿದ್ದಾರೆ. ಪ್ರಜೆಗಳ ಅಕೋಶದ ನಿವಾರಣೆ ಜವಾಬ್ದಾರಿ ಸರ್ಕಾರವು ಅತ್ಯಗತ್ಯವೆಂದು ಅವರು ಹೇಳಿ, ಅದರ ಸ್ಥಾಪನೆಗಾಗಿ ಶ್ರೀಮನ್ಮಹಾರಾಜರ ಸಲಹೆಗಾರರೂ ಕೂಡಲೇ ಪ್ರಭುಗಳಿಗೆ ಆ ಬಗ್ಗೆ ಸಲಹೆ ಕೊಟ್ಟು ಪ್ರಭು-ಪ್ರಜಾ ಪ್ರೇಮ ಬಾಂಧವ್ಯವನ್ನು ಶಾಶ್ವತಗೊಳಿಸಲು ಪ್ರಯತ್ನಿಸಬೇಕು. ತಪ್ಪಿದಲ್ಲಿ ಅದಕ್ಕಾಗಿ ಘೋರ ಹೋರಾಟ ಅನಿವಾರ್ಯವೆಂದು ಅವರು ತಿಳಿಸಿದ್ದಾರೆ.

ಲೀಗು ನ್ಯಾಯಬಾಹಿರ ಸಂಸ್ಥೆ ಎಂದು ಘೋಷಿಸಿ

ಮುಸ್ಲಿಂ ಲೀಗು ನ್ಯಾಯ ಬಾಹಿರ ಮತ್ತು ಶಾಸನ ವಿರುದ್ಧ ಕಾರ್ಯಕ್ರಮಗಳನ್ನು ಅನುಸರಿಸುವುದನ್ನು ಬಿಡದಿದ್ದಲ್ಲಿ, ದೇಶದಲ್ಲಿ ಶಾಂತಿ ಮತ್ತು ನೆಮ್ಮದಿಯನ್ನು ಸ್ಥಾಪಿಸಲು ವೈಸರಾಯರು ಲೀಗನ್ನು ನ್ಯಾಯಬಾಹಿರ ಸಂಸ್ಥೆ ಎಂದು ಘೋಷಿಸಿ ಅದರ ಮೇಲೆ ಕ್ರಮ ಜರುಗಿಸಬೇಕೆಂದು ಅಖಿಲ ಭಾರತ ಹಿಂದೂ ಮಹಾಸಭೆಯ ಕಾರ್ಯಕಾರಿ ಸಮಿತಿ ನಿರ್ಧರಿಸಿದೆ.

ಆಂಸ್ಟರ್‌ಡ್ಯಾಂನಲ್ಲಿ ಗುಂಡು

ಇಂಡೋನೇಷಿಯಾಕ್ಕೆ ಡಚ್ ಪಡೆಗಳನ್ನು ಕಳುಹಿಸಿದ್ದಕ್ಕಾಗಿ ಪ್ರತಿಭಟಿಸಲು ಆಂಸ್ಟರ್‌ಡ್ಯಾಂನಲ್ಲಿ ಕೆಲಸಗಾರರು ಮುಷ್ಕರ ಹೂಡಿದ್ದಾರೆ. ಅವರು ನಡೆಸಿದ ಪ್ರದರ್ಶನದ ಮೇಲೆ ಪೋಲೀಸರು ಗುಂಡು ಹಾರಿಸಿದರು. ಸಾವು ನೋವುಗಳ ವರದಿ ಬಂದಿಲ್ಲ.

ಅಣು ಶಕ್ತಿಗಿಂತ ೧೧೦ ಲಕ್ಷ ದಷ್ಟು ಶಕ್ತಿ

ಅಣುಶಕ್ತಿಗಿಂತ ೧೧೦ ಲಕ್ಷದಷ್ಟು ಬಲಯುತವಾದ, ಅತ್ಯಂತ ಅಪಾಯಕಾರಿಯಾದ ಕಾಸ್ಮಿಕ್ ಕಿರಣವನ್ನು ಬ್ರಿಟಿಷ್ ವೈಜ್ಞಾನಿಕ ಪ್ರವೀಣರು ಜರ್ಮನ್ "ವಿ ೨" ರಾಕೆಟ್ಟುಗಳ ಪ್ರಯೋಗದಿಂದ ಕಂಡು ಹಿಡಿದಿದ್ದಾರೆ.

ಚಂದ್ರ ಮಂಡಲಕ್ಕೆ ಪ್ರಯಾಣ

ವಿಮಾನದಲ್ಲಿ ಚಂದ್ರ ಮಂಡಲಕ್ಕೆ ಹೋಗಿ ಬರಲು ಏರ್ಪಾಡುಗಳು ಸಾಗುತ್ತಿವೆ. ಮೊದಲನೇ ವಿಮಾನದಲ್ಲಿ ನಾಲ್ಕು ಮಂದಿಯನ್ನು ಮಾತ್ರ ಕಳುಹಿಸಲಾಗುವುದು. ಈ ಬಗ್ಗೆ ಅಗಲೇ ಜನರನ್ನು ಸೇರಿಸಿಕೊಳ್ಳಲಾಗುತ್ತಿದೆ. ಈ ವಿಮಾನವು ಇದುವರೆಗೆ ಕಂಡು ಕೇಳದಂತಹ ವೇಗದಲ್ಲಿ ತೆರಳುವುದೆಂದೂ, ರಾಕೆಟ್ ಮೂಲಕ ಚಂದ್ರ ಮಂಡಲದ ವಿವರವನ್ನು ಸೋತ್ತು ಮಾಡಲಾಗುವುದೆಂದೂ ಹೇಳಲಾಗಿದೆ.

ಸಾಮ್ರಾಜ್ಯಗಳೆಲ್ಲಾ ರದ್ದಾಗಬೇಕು

"ವಿಶ್ವಶಾಂತಿ ಸಮ್ಮೇಳನದಲ್ಲಿ ಸೇರಿರುವ ರಾಷ್ಟ್ರಗಳೆಲ್ಲಾ ಸ್ವಾತಂತ್ರ್ಯದ ವಿಚಾರದಲ್ಲಿ ವಿಶಾಲವಾದ ನೀತಿಯನ್ನು ಅನುಸರಿಸಬೇಕಾಗಿದೆ. ಗತಕಾಲದ ಕಾಲದೋಷಗಳ ಸಾಮ್ರಾಜ್ಯಗಳ ಪದ್ಧತಿಯನ್ನು ನಿರ್ಮೂಲ ಮಾಡಬೇಕಾಗಿದೆ" ಎಂದು ವಿಶ್ವಶಾಂತಿ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಗಳಾದ ಸರ್ ಸಾಮ್ಯುಯಲ್ ರಂಗನಾಥನವರು ತಿಳಿಸಿದ್ದಾರೆ. "ದಲಿತರುಗಳ ಆಶೋತ್ತರಗಳ ಗಾಗಿರುವ ದೇಶಗಳ ಸ್ವಾತಂತ್ರ್ಯ ಸಾಧನೆಯೇ ಭಾರತದ ಮುಖ್ಯ ಗುರಿ" ಎಂದು ಅವರು ಘೋಷಿಸಿದರು.

ಶಾಂತಿ ಸಮ್ಮೇಳನ

ವಿಶ್ವ ಶಾಂತಿ ಸಮ್ಮೇಳನದ ಸಭೆಗಳನ್ನು ಆಕ್ರಮಿಸುವ ರಾಷ್ಟ್ರಗಳ ಮತ್ತು ಸೋತ ರಾಷ್ಟ್ರಗಳ ನಡುವೆ ಜನರು ರಾಷ್ಟ್ರಗಳ ವಿರೋಧಗಳ ಪರಿಣಾಮಗಳು ಒಂದು ವೇಳೆ ಸಭೆಯ ಸ್ಥಿತಿ ಗೊಳಿಸಿದ್ದಾರೆ.

ಚೀಣಕ್ಕೆ ರಾಯಭಾರಿ

ಚೀಣಾದಲ್ಲಿರುವ ಭಾರತದ ಏಜೆಂಟ್ ಜನರಲ್ ಮತ್ತು ದೆಹಲಿಯಲ್ಲಿರುವ ಚೀನಾ ಕಮೀಷನರುಗಳನ್ನು ರಾಯಭಾರಿಗಳನ್ನಾಗಿ ಅಂಗೀಕರಿಸುವ ಬಗ್ಗೆ ಚೀನಾ ಮತ್ತು ಭಾರತ ಸರ್ಕಾರಗಳು ಪರ್ಯಾಲೋಚನೆ ನಡೆಸುತ್ತಿರುವುದಾಗಿ ವರದಿಯಾಗಿದೆ.

ಗ್ರೀಕ್ ಎಡ ಪಕ್ಷದವರಿಗೆ ಹೊರ ರಾಷ್ಟ್ರಗಳ ಸಹಾಯ

ಉತ್ತರ ಗ್ರೀಸಿನಲ್ಲಿರುವ ಎಡ ಪಕ್ಷದ ಸೈನಿಕರಿಗೆ ಯುದ್ಧೋಪಕರಣಗಳನ್ನು ಯುಗೋಸ್ಲಾವಿಯಾ ಮತ್ತು ಅಲ್ಬೇನಿಯಾ ಸರ್ಕಾರಗಳು ಒದಗಿಸುತ್ತಿರುವುದಾಗಿ ಬ್ರಿಟಿಷ್ ಸರ್ಕಾರಕ್ಕೆ ಗ್ರೀಕ್ ಪ್ರತಿನಿಧಿಗಳು ವರದಿ ಮಾಡಿದ್ದಾರೆ. ಗ್ರೀಸಿನಲ್ಲಿ ಈಗ ನಡೆಯುತ್ತಿರುವ ಕದನ ಪ್ರಬಲವಾಗುತ್ತಿರುವುದಾಗಿ ಸುದ್ದಿ ಬಂದಿದೆ.

ಪಶ್ಚಿಮ ಯೆರೂಸಲೆಂನಲ್ಲಿ ಕಾಳಗ

ಪಶ್ಚಿಮ ಕೊಲ್ಲಿಯ ಅಂಚಿನಲ್ಲಿರುವ ಬಾಸ್ಫರ್ ಎಂಬಲ್ಲಿ ಅರಬ್ ಟ್ರೈಬ್ ಜನರಿಗೂ ಸರ್ಕಾರಿ ಸೈನ್ಯಗಳಿಗೂ ಕದನವಾಗುತ್ತಿರುವುದಾಗಿ ಸುದ್ದಿ ಬಂದಿದೆ. ಸಿಂಧ್ ಎಂಬಲ್ಲಿ ಟೆಂಟ್ ಪಕ್ಷದವರನ್ನು ೧೦ ಸಹಸ್ರ ಕ್ಯಾಸಿಕ್ ಮತ್ತು ಇತರ ಅರಬ್ ಟ್ರೈಬ್ ಜನರು ಮುತ್ತಿಗೆ ಹಾಕಿದ್ದಾರೆ. ಪೆಶಾವರನಲ್ಲಿ ಯಾವ ಪ್ರತಿಕ್ರಿಯೆಯೂ ನಡೆದಿಲ್ಲ. ಸರ್ಕಾರಿ ಪಕ್ಷದ ಸೈನ್ಯಗಳು ದಂಗೆಕಾರರನ್ನು ಎದುರಿಸುತ್ತಿವೆ.

ನೌಕಾ ಚರಿತ್ರೆಯಲ್ಲಿ ಹೊಸ ಅಧ್ಯಾಯ

ವಿಶಾಖಪಟ್ಟಣದಲ್ಲಿರುವ ಸಿಂಧ್ಯ ಸ್ಟೀಂ ನ್ಯಾವಿಗೇಷನ್ ಕಂಪನಿಯ "ಎಸ್. ಎಸ್. ಜಲಉಷಾ" ಎಂಬ ಹಡಗು ಲಂಡನ್ನಿಗೆ ಕಳೆದ ಗುರುವಾರ ಪ್ರಯಾಣ ಮಾಡಿತು. ಸ್ವತಂತ್ರ ಭಾರತದ ಇತಿಹಾಸದಲ್ಲಿ ಭಾರತೀಯ ನೌಕೆಯೊಂದರಲ್ಲೇ ನಿರ್ಮಿಸಲ್ಪಟ್ಟು ವಿದೇಶಕ್ಕೆ ಪ್ರಯಾಣ ಮಾಡುತ್ತಿರುವ ಹಡಗುಗಳಲ್ಲಿ ಇದೇ ಮೊದಲನೆಯದು. ಇದನ್ನು ಭಾರತೀಯ ನೌಕಾ ಚರಿತ್ರೆಯಲ್ಲಿ ಹೊಸ ಅಧ್ಯಾಯವೆಂದು ಹೇಳಲಾಗಿದೆ.

ಜ್ವಾಲಾಮುಖಿ ಕೆಲಸ ಆರಂಭಿಸಿತು

ಇಟಲಿಯ ಸ್ಟ್ರೋಂಬೋಲಿ ದ್ವೀಪದಲ್ಲಿರುವ ಜ್ವಾಲಾಮುಖಿ ಕಳೆದ ಎರಡು ವರ್ಷಗಳಿಂದ ಶಾಂತವಾಗಿದ್ದುದು ಮೊನ್ನೆಯ ಒದಿನ ಕನ್ನ ಕೆಲಸ ಆರಂಭಿಸಿ ಕೆಂಡ ಕಾರುತ್ತಿದೆ. ಆ ಭಾಗದ ಜನರೆಲ್ಲಾ ಗಾಬರಿಗೊಂಡು ಓಡಿ ಹೋಗಿದ್ದಾರೆ. ಅಪಾಯವೇನೂ ಸಂಭವಿಸಿಲ್ಲ ಎಂದು ವರದಿಯಾಗಿದೆ.

ಭದ್ರತಾ ಸಮಿತಿಯಲ್ಲಿ ರಷ್ಯಾಕ್ಕೆ ಸೋಲು

ಬಾಲ್ಕನ್ ಪ್ರದೇಶಕ್ಕೆ ಸೇರಿದ ಪ್ರದೇಶಗಳಲ್ಲಿ ರಷ್ಯಾ ಸಂಯುಕ್ತ ರಾಷ್ಟ್ರಗಳ ಮಿಲಿಟರಿ ಸ್ಥಿತಿ ಮತ್ತು ಸೈನಿಕ ವಿಷಯಗಳನ್ನು ಕೇಳಿದ್ದನ್ನು ಭದ್ರತಾ ಸಮಿತಿಯ ಮುಂದೆ ಮಂಡಿಸಿದ್ದ ನಿರ್ಣಯವು ೧೧-೨ ಓಟುಗಳಿಂದ ಬಿದ್ದು ಹೋಯಿತು.

ಡಾ॥ ಸದಾಶಿವರಾವ್ ಇ. ಡಿ. ಎಂ... ಯಾರ ರೋಗ ನಾಶ ಮಾಡಲು ಇವರು ಹಲವನ್ನು ದಿವಸ ... ಡಾ॥ ... ಸಂದರ್ಶನ ... ಸ್ಥಳ ...

ಸಾಧ್ವಿ

ತಾ|| ೨೬-೯-೪೬ ಗುರುವಾರ

ಮೈಸೂರಿನ ರಾಜಕೀಯ

ನಮ್ಮ ಸಂಸ್ಥಾನದಲ್ಲಿ ಕೂಡಲೇ ರಾಜಕೀಯ ಸುಧಾರಣೆಯನ್ನು ಜಾರಿಗೆ ತರುವ ಅವಶ್ಯಕತೆಯು ಎಂದಿಗಿಂತಲೂ ಹೆಚ್ಚಾಗಿ ಇಂದು ಕಂಡು ಬರುತ್ತಿದೆ. ಇದಕ್ಕಾಗಿ ಎಲ್ಲಾ ಕಡೆಗಳಿಂದಲೂ ಒತ್ತಾಯ ಮಾಡಲ್ಪಡುತ್ತಿದೆ. ಕಳೆದ ಪ್ರಜಾಪ್ರತಿನಿಧಿ ಸಭೆಯ ಅಧಿವೇಶನದಲ್ಲಿ ಅನೇಕ ಪಂಗಡಗಳ ಸದಸ್ಯರು ಈ ಬಗ್ಗೆ ಪ್ರಭುಗಳಿಗೆ ಮನವಿಯನ್ನು ಮಾಡಿಕೊಂಡಿದ್ದರು. ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವ ಕಾಲವು ಸಂಪ್ರಾಪ್ತವಾಗಿದೆಯೆಂದು ಅದರಲ್ಲಿ ಖಂಡಿತ ಮಾಡಿದ್ದರು. ಶಾಸನ ಬದ್ಧವಾದ ಸಂಸ್ಥೆಯ ಪ್ರಮುಖ ಪಕ್ಷಗಳ ಸದಸ್ಯರುಗಳು ಒಟ್ಟಾಗಿ ಸೇರಿ ಈ ರೀತಿ ಪ್ರಭುಗಳಿಗೆ ಮನವಿಯನ್ನು ಮಾಡಿದುದು ಇದೇ ಮೊದಲು.

ಪ್ರಜಾಪ್ರತಿನಿಧಿ ಸಭೆಗೆ ಚುನಾಯಿತ ಅಧ್ಯಕ್ಷರನ್ನು ಕೊಡಬೇಕೆಂದೂ ಸಹ ಸದರಿ ಮನವಿಯಲ್ಲಿ ಬೇಡಲಾಗಿತ್ತು. ಇದನ್ನು ಈ ಸಾರಿ ನವರಾತ್ರಿ ಅಧಿವೇಶನದ ಹೊತ್ತಿಗೆ ಈಡೇರಿಸಲಾಗುವುದೆಂಬ ವದಂತಿಯೂ ಹಬ್ಬಿತ್ತು. ಆದರೆ ಇದುವರೆಗೆ ಅದು ಕಾರ್ಯಗತವಾಗುವ ಸೂಚನೆಗಳೇ ಕಂಡುಬಂದಿಲ್ಲ. ಎಂದಿನಂತೆಯೇ ಸಭೆಯು ಹಳೇ ಸಂಪ್ರದಾಯದ ಪ್ರಕಾರ ನಡೆಯುವಂತೆ ತಿಳಿದು ಬಂದಿರುತ್ತದೆ. ರಾಜ್ಯಾಂಗ ರಚನಾ ಸಭೆಗೆ ಮೈಸೂರಿನ ಪ್ರತಿನಿಧಿಗಳನ್ನು ಆರಿಸಲು ಶಾಸನ ಸಭೆಗಳ ಜಂಟಿ ಅಧಿವೇಶನವೊಂದು ನಡೆಯುವುದಾಗಿಯೂ ಹೇಳಲಾಗುತ್ತಿತ್ತು. ಅದೂ ಸಹ ತಣ್ಣಗಾಗಿರುವಂತಿದೆ. ಕಳೆದ ಬಜೆಟ್ ಅಧಿವೇಶನದಿಂದ ಇಂದಿನ ನವರಾತ್ರಿ ಅಧಿವೇಶನದ ವರೆಗೆ ಯಾವ ಪ್ರಗತಿಯೂ ಆಗಿರುವಂತೆ ಕಾಣುವುದಿಲ್ಲ.

ಮೇಲ್ಕಂಡ ವಿದ್ಯಮಾನಗಳನ್ನು ಕಾಂಗ್ರೆಸ್ ಪಕ್ಷದವರೂ ಮತ್ತು ಇತರ ನಾಯಕರುಗಳೂ ತೀವ್ರವಾಗಿ ಪರಿಶೀಲಿಸುತ್ತಿದ್ದಾರೆ. ಮೈಸೂರು ಕಾಂಗ್ರೆಸ್ಸಿನ ಇಂದಿನ ಮತ್ತು ಮುಂದಿನ ಅಧ್ಯಕ್ಷರುಗಳು ಮಹಾತ್ಮರ ಬಳಿಗೆ ಹೋಗಿ ಈ ವಿಷಯದಲ್ಲಿ ಸಮಾಲೋಚನೆಗಳನ್ನು ನಡೆಸಿದರು. ಇತ್ತಲಾಗಿ ಬೆಂಗಳೂರು ಕಾಂಗ್ರೆಸ್ ಸಮಿತಿಯೇ ಮುಂತಾದ ಕೆಲವು ಕ್ಷೇತ್ರಗಳಲ್ಲಿ ಸತ್ಯಾಗ್ರಹದ ಸೂಚನೆಗಳೂ ಮುಂದಿಡಲ್ಪಡುತ್ತಿವೆ. ಇಡೀ ಭರತ ಖಂಡವು ಪ್ರಗತಿ ಮಾರ್ಗದಲ್ಲಿ ಮುನ್ನಡಿಯಿಡುತ್ತಿರುವುದರಿಂದ ಮೈಸೂರು ಸಂಸ್ಥಾನವು ಅಜಗರಾವಸ್ಥೆಯಲ್ಲಿಯೇ ಇರುವುದಕ್ಕೆ ಅತೃಪ್ತಿಯನ್ನು ಸೂಚಿಸುವುದೇ ಈ ಪ್ರಯತ್ನಗಳ ಮುಖ್ಯ ಗುರಿ.

ಸಂಸ್ಥಾನದಲ್ಲಿ ರಾಜಕೀಯ ಸುಧಾರಣೆಯನ್ನು ಪಡೆಯಲು ಹೋರಾಟವನ್ನು ನಡೆಸುವುದು ಅನವಶ್ಯಕವೆಂದು ಹೇಳುವವರು ಇದ್ದಾರೆ. ಆದರೆ ಹೋರಾಟವು ಅನಿವಾರ್ಯವೆಂದು ಶ್ರೀ|| ತಿಮ್ಮಾರೆಡ್ಡಿಯವರಂತಹ ಪ್ರಮುಖ ನಾಯಕರುಗಳು ತಿಳಿಸುತ್ತಿದ್ದಾರೆ. ಆದರೆ ಇದನ್ನು ನಿರ್ಧರಿಸುವುದು ಪ್ರಭುತ್ವದವರ ಕೈಯಲ್ಲಿದೆ. ಹೊಸ ರಾಜ್ಯಾಂಗವನ್ನು ರೂಪಿಸದಿದ್ದರೂ ಈಗಿರುವ ಶಾಸನದ ಪ್ರಕಾರವೇ ಪ್ರಜಾಪಿತ್ಯಕ್ಕೆ ವಾ

ನವರಾತ್ರಿ ದರ್ಬಾರು

ಮೈಸೂರು ೨೬

ಈ ದಿನ ನವರಾತ್ರಿ ಮಹೋತ್ಸವದ ಅಂಗವಾಗಿ ಶ್ರೀಮನ್ಮಹಾರಾಜರು ಪ್ರಾತಃಕಾಲ ಮಂಗಳ ಸ್ನಾನವನ್ನು ಮಾಡಿ ಪರಮೇಶ್ವರನ ದರ್ಶನ ಪಡೆದು ೧೦-೩೦ ಕ್ಕೆ ದರ್ಬಾರ್ ಭವನಕ್ಕೆ ದಯಮಾಡಿಸಿ, ನವಗ್ರಹಾದಿ ಪೂಜೆಗಳನ್ನು ಮಾಡಿ ೧೧ ಘಂಟೆಗೆ ಸರಿಯಾಗಿ ಸಿಂಹಾಸನದಲ್ಲಿ ಮಂಡಿಸಿದರು. ಅರಮನೆ ಚಕೇರಿಯಿಂದ ೨೧ ಕುಶಾಲು ತೋಪುಗಳು ಹಾರಿಸಲ್ಪಟ್ಟವು. ಸ|| ಡಿ ದೇವರಾಜ ಅರಸಿನವರು ಮಹಾಸ್ವಾಮಿಯವರಿಗೆ ಪುಷ್ಪ ಸಮರ್ಪಣೆ ಮಾಡಿದರು. ಮಠಗಳ ಮಲ್ಲತ್ತುಗಳೂ, ದೇವಸ್ಥಾನಗಳ ಪ್ರಸಾದಗಳೂ, ಪ್ರಭುಗಳಿಗೆ ಒಪ್ಪಿಸಲ್ಪಟ್ಟವು. ದಿವಾನರು, ಆಪ್ತ ಕಾರ್ಯದರ್ಶಿಗಳು, ಶ್ರೇಷ್ಠ ನ್ಯಾಯಾಧೀಶರು, ನ್ಯಾಯವಿಧಾಯಕ ಸಭಾಧ್ಯಕ್ಷರು, ಸ್ಥಾನಪತಿಗಳು, ಹುಜೂರ್ ಸೆಕ್ರೆಟರಿಗಳು, ಸರ್ದಾರರುಗಳು ಮತ್ತು ವಿಶೇಷ ದರ್ಜೆಯ ಅರಸುಗಳು ಪ್ರಭುಗಳಿಗೆ ನಜರನ್ನೂ, ಧರ್ಮಾಧಿಕಾರಿಗಳೂ, ವಿದ್ವಾಂಸರುಗಳೂ ಫಲ ಮಂತ್ರಾಕ್ಷತೆಯನ್ನೂ ಒಪ್ಪಿಸಿದರು. ಅರಮನೆ ಮುಂಭಾಗದಲ್ಲಿ ಮಿಲಿಟರಿ ಕವಾತು ನಡೆಯಿತು. ೧೨-೩೦ ಕ್ಕೆ ದರ್ಬಾರು ಮುಕ್ತಾಯಗೊಂಡಿತು.

ಬರ್ಮದಲ್ಲಿ ಹೊಸ ಸರ್ಕಾರ

ಬರ್ಮದಲ್ಲಿ ಈಗ ಉಂಟಾಗಿರುವ ಬಿಕ್ಕಟ್ಟನ್ನು ನಿವಾರಿಸಲು ಸಮ್ಮಿಶ್ರ ಮಂತ್ರಿಮಂಡಲವನ್ನು ಸ್ಥಾಪಿಸುವುದಕ್ಕೆ ಅಲ್ಲಿನ ಗವರ್ನರು ಒಪ್ಪಿದ್ದಾರೆ. ಮಂತ್ರಿ ಮಂಡಲದಲ್ಲಿ ತಮ್ಮ ಪಕ್ಷಕ್ಕೆ ಬಹುಮತ ಲಭಿಸುವುದಾದರೆ ತಾವು ಹೊಸ ಸರ್ಕಾರದಲ್ಲಿ ಸೇರುವುದಾಗಿ ಫ್ಯಾಸಿಸ್ಟ್ ವಿರೋಧಿ ಪಕ್ಷದವರು ನಿರ್ಧರಿಸಿದ್ದಾರೆ. ಈ ಸಂಜೆಯೊಳಗೇ ಹೊಸ ಸರ್ಕಾರದ ಸದಸ್ಯರ ಪಟ್ಟಿ ಹೊರಬೀಳಬಹುದೆಂದು ಹೇಳಲಾಗಿದೆ.

ಅಧ್ಯಕ್ಷ ಚುನಾವಣೆ

ಪಂ|| ನೆಹರೂರವರು ಕಾಂಗ್ರೆಸ್ ಅಧ್ಯಕ್ಷತೆಗೆ ರಾಜೀನಾಮೆ ಇತ್ತಿರುವರು. ಅವರ ಸ್ಥಾನಕ್ಕೆ ಚುನಾವಣೆ ನಡೆಯುವ ವರೆಗೆ ಅವರೇ ಅಧ್ಯಕ್ಷರಾಗಿರುವರು.

ಪ್ರಧಾನ ಮಂತ್ರಿ ಮಂಡಲವನ್ನು ರಚಿಸಬೇಕೆಂದು ನಾಯಕರು ಕೇಳುತ್ತಿದ್ದಾರೆ. ಇದಕ್ಕೆ ಅವಕಾಶವಿದೆಯೆಂದು ಮಾಜಿ ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲರು ಹೇಳಿ ಅನೇಕ ಮರ್ಮಗಳಾದುವು.

ಹಿಂದೂಸ್ಥಾನದಲ್ಲಿ ಸ್ಥಾಪಿತವಾಗಿರುವಂತೆ ಇಲ್ಲಿಯೂ ಒಂದು ಮಿಶ್ರ ಮಂತ್ರಿ ಮಂಡಲವನ್ನು ರಚಿಸಿ ತನ್ಮೂಲಕ ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ಮಾರ್ಗವನ್ನು ಕಲ್ಪಿಸಿ ಇಂದಿನ ಬಿಕ್ಕಟ್ಟನ್ನು ಪರಿಹರಿಸಬಾರದೆ?

ಜವಾಬ್ದಾರಿ ಸರ್ಕಾರಕ್ಕಾಗಿ ಸತ್ಯಾಗ್ರಹ

ಸ್ವಂ. ವ] ಬೆಂಗಳೂರು ೨೫

ಬೆಂಗಳೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಸಭೆಯು ಶ್ರೀ ಕೆ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಮೊನ್ನೆ ದಿನ ಜರುಗಿತು. "ಮೈಸೂರು ಸಂಸ್ಥಾನದ ಆಡಳಿತ ವರ್ಗವು ಪ್ರಜೆಗಳ ನ್ಯಾಯಬದ್ಧವಾದ ಬೇಡಿಕೆಗಳನ್ನು ತಿರಸ್ಕರಿಸುತ್ತಿದೆ. ಜವಾಬ್ದಾರಿ ಸರ್ಕಾರಕ್ಕಾಗಿ ಸತ್ಯಾಗ್ರಹ ಹೂಡಬೇಕಾದದ್ದು ಅನಿವಾರ್ಯವಾಗಿದೆ. ಆದ್ದರಿಂದ ಶ್ರೀಮನ್ಮಹಾರಾಜರ ಅರಮನೆ ಮುಂದೆ ಸತ್ಯಾಗ್ರಹ ಹೂಡುವುದು ಸೂಕ್ತವಾಗಿದೆ" ಎಂಬ ನಿರ್ಣಯವನ್ನು ಒಮ್ಮತದಿಂದ ಅಂಗೀಕರಿಸಿ ಬೆಂಗಳೂರಿನಲ್ಲಿ ನಡೆಯಲಿರುವ ಮೈಸೂರು ಕಾಂಗ್ರೆಸ್ ಆರನೇ ಮಹಾಧಿವೇಶನಕ್ಕೆ ಶಿಫಾರ್ಸು ಮಾಡಲಾಗಿದೆ.

ಕಾಶ್ಮೀರದಲ್ಲಿ ಕರ್ಫ್ಯೂ

ಜಮ್ಮು ನಗರದಲ್ಲಿ ಮೊನ್ನೆ ಇದ್ದಕ್ಕಿದ್ದಂತೆಯೇ ಕೋಮುವಾರು ಕಲಹ ಆರಂಭವಾಗಿ ನಾಲ್ವರು ಸತ್ತರೆಂದೂ ೧೨ ಮಂದಿಗೆ ಮೇಲ್ಪಟ್ಟು ಗಾಯಗಳಾಗಿವೆಯೆಂದೂ ವರದಿಯಾಗಿದೆ. ಇಡೀ ನಗರದಲ್ಲಿ ಕರ್ಫ್ಯೂ ಆಜ್ಞೆ ಜಾರಿಗೆ ತರಲ್ಪಟ್ಟಿದೆ.

ಭಾರತೀಯ ಅಂಧ ವಕೀಲರು

ಒಬ್ಬ ಭಾರತೀಯ ಕೂಲಿಯವನ 'ಹೇಬಿಯಸ್ ಕಾರ್ಪಸ್' ಅರ್ಜಿ ಬಗ್ಗೆ ಫೆಡರಲ್ ಕೋರ್ಟಿನಲ್ಲಿ ಈಗ್ಗೆ ಕೆಲವು ದಿನಗಳ ಹಿಂದೆ ವಾದ ನಡೆಸಿದ ಅಂಧ ವಕೀಲರಾದ ಶ್ರೀ ಎಸ್. ಗುಪ್ತರವರು ಬಾರ್-ಅಟ್-ಲಾ ಪ್ರಶಸ್ತಿಯನ್ನು ಪಡೆದು ಬರಲು ಲಂಡನ್ನಿಗೆ ತೆರಳಲಿದ್ದಾರೆ.

ಪ್ರಾಥಮಿಕ ಶಾಲೆಗಳ ಅಭಾವ

ಸ್ವಂ.ವ] ಶ್ರೀರಂಗಪಟ್ಟಣ ೨೫

ಈ ಊರು ದಿನೇ ದಿನೇ ಅಭಿವೃದ್ಧಿಯಾಗುತ್ತಿದ್ದರೂ ಪ್ರೈಮರಿ ಶಾಲೆಗಳನ್ನು ಹೆಚ್ಚಿಸದಿರುವುದು ಶೋಚನೀಯ. ಕೆಲವು ದಿನಗಳಿಂದ ಊರಿನ ಉತ್ತರ ಭಾಗಕ್ಕೆ ಒಂದು ಶಾಲೆಯನ್ನು ಕೊಟ್ಟಿರುವುದು ಸಂತೋಷವಾದರೂ ಒಂದೇ ತರಗತಿ, ಒಬ್ಬರೇ ಉಪಾಧ್ಯಾಯರಿರುವುದು ಉಪಕಾರಿಯಾಗಿಲ್ಲ. ಕೂಡಲೇ ಇಲ್ಲಿಗೆ ಎಲ್ಲಾ ತರಗತಿಗಳನ್ನೂ ಕೊಟ್ಟು, ಸಾಧ್ಯವಾದಷ್ಟು ಶಾಲೆಗಳನ್ನು ಹೊಸದಾಗಿ ತೆರೆಯುವಂತೆ ಅಧಿಕಾರಿಗಳು ಪ್ರಯತ್ನಿಸಬೇಕಾಗಿದೆ.

ರೀವಾದಲ್ಲಿ ಸುಧಾರಣೆ

ಜನಾನುರಾಗಿ ಸರ್ಕಾರವನ್ನು ಸ್ಥಾಪಿಸುವುದಕ್ಕಾಗಿ ಎಲ್ಲಾ ತರಹ ಜನರ ಪ್ರತಿನಿಧಿಗಳನ್ನೊಳಗೊಂಡ ಒಂದು ರಾಜ್ಯಾಂಗ ಸುಧಾರಣಾ ಸಮಿತಿಯನ್ನು ರೀವಾ ಮಹಾರಾಜರು ನೇಮಿಸಿದ್ದಾರೆ.

ಜಿನ್ನಾರವರಿಗೆ ಲಾಯರ್ ನೋಟೀಸು

ಸ್ವಾತಂತ್ರ್ಯದ ಅಂಗವಾಗಿ ಪಾಕಿಸ್ತಾನದ ಬೇಡಿಕೆಯನ್ನಿಟ್ಟು, ಕಾಂಗ್ರೆಸ್ಸಿನ ಸಹಕಾರವಿಲ್ಲದ ಭಾರತದ ಸ್ವಾತಂತ್ರ್ಯ ಹೋರಾಡುವುದಾದರೆ, ತಾವುಗಳು ... ಬೆಂಬಲ ನೀಡುವುದಾಗಿ ಜಿನ್ನಾರವರಿಗೆ ಶ್ರೀ ಬರೆದ ಗಡಿನಾಡಿನ ಖಾಕ್ಸಾರರ ... ಕ ಅಲ್ಲಾಮಷರಿಕ್ರೂ ತಾವು ಬರೆದ ... ಕ್ಕೆ ಬರುವ ೧೦ ನೇ ತಾರೀಖಿನೊಳಗೆ ... ತ್ಯುತ್ತರ ಬರೆದಿದ್ದಲ್ಲಿ ಜಿನ್ನಾರವರ ... ಮಾನನಷ್ಟ ಮೊಕದ್ದಮೆ ಹೂಡುವು... ಲಾಯರ್ ನೋಟೀಸನ್ನು ಕೊಟ್ಟಿದ್ದಾ...

ಸತ್ಯಾಗ್ರಹ ನಿಲ್ಲಿಸಿದರು

ಕಾಶ್ಮೀರ ಸರ್ಕಾರವು ತಮ್ಮನ್ನು ... ದೊಳಕ್ಕೆ ಪ್ರವೇಶಿಸಕೂಡದೆಂದು ಮಾ... ಪ್ರತಿಬಂಧಕಾಜ್ಞೆಯನ್ನು ಖಂಡಿಸಿ ... ಲ್ಲಾದಲ್ಲಿ ಸತ್ಯಾಗ್ರಹ ನಡೆಸುತ್ತಿದ್ದ ಶ್ರೀ ... ಚಾರ್ಯರವರು ನೆಹರೂರವರಿಂದ ತಂತಿ ... ದ್ದರಿಂದ ತಮ್ಮ ಸತ್ಯಾಗ್ರಹವನ್ನು ... ದೆಹಲಿಗೆ ಪ್ರಯಾಣ ಮಾಡಿದ್ದಾರೆ.

ಅದೃಷ್ಟ ! ಲಾಟರಿ

ಪ್ರತಿ ತಿಂಗಳೂ ಸಾವಿರಾರು ರೂಪಾಯಿಗಳ ಬಹುಮಾನ ಹಂಚಿಕೆಯಾಗುತ್ತಿವೆ.

೧ ನ್ಯಾಷನಲ್ ಡರ್ಬಿ,

೨ ಗೋಲ್ಡನ್ ಫ್ಲ್ಯಾಗ್ ನೋಬ... ಡಿಗೋವಾ

೩ ಶಾಂತರೀತ ನ್ಯಾಷನಲ್ ಡಿಗೋವ

ಟಿಕೆಟ್ ೧ ಕ್ಕೆ ಒಂದೇ ರೂಪಾಯಿ ಬಂಡಲ್, 50, 100, 1000 ... ಅದೃಷ್ಟವಿದ್ದಂತೆ

ಒಂದು ಬಾರಿ ಪ್ರಯತ್ನಿಸಿ

ಏಜೆಂಟ್, ಹೆಚ್. ಓ ರಂಗಸ್ವಾಮಿ

ರಂಗನಾಥ ಟೈಲರಿಂಗ್ ಹಾಲ್,

ಚಾಮರಾಜನಗರ.

ಸುಸಮಯ

ಚಲನ ಚಿತ್ರಗಳಲ್ಲಿ, ಅಭಿನಯಿಸಲು ಇಚ್ಛೆಯುಳ್ಳ ತರುಣಿಯರನ್ನು ತರಪೇತು ಮಾಡಿ

ಉತ್ತಮ ನಟಿಯರಾಗಿ

ತಮಿಳು ಚಿತ್ರರಂಗದಲ್ಲಿ ಖ್ಯಾತಿವಂತರಾಗಲು ಅನುವಾಗುವಂತೆ ರಾಜಧಾನಿಯ ... ಳಗಳಿಂದ ಸ್ಥಳದಲ್ಲಿ ನಟಿಯರ ಶಿಕ್ಷಣ ಶಾಲೆಯೊಂದನ್ನು ಮೈಸೂರು ಸಂಸ್ಥಾನದ ಚಲನ ಚಿತ್ರ ಕೈಗಾರಿಕೆಯ ಬೆಳವಣಿಗೆಯ ಸಹಕಾರ ನೀಡಲು ತೆರೆಯುತ್ತದೆ

ವಿದ್ಯಾರ್ಥಿ ವೇತನವನ್ನೂ ಸಹ ಕೊಡಲಾಗುವುದು.

ವಿವರಗಳಿಗೆ ಕೂಡಲೇ ಬರೆಯಿರಿ ಅಥವಾ ನೇರವಾಗಿ ಬಂದು ನೋಡಿ

ಪತ್ರ ವ್ಯವಹಾರದೊಡನೆ ಫೋಟೋ ಕಳುಹಿಸಿ

ವಿ. ಟಿ. ಎಸ್. ಮೊದಲಿಯಾರ್,

ಪ್ರಿನ್ಸಿಪಾಲ್,

೧೭೫೬ ಕೃಷ್ಣಮೂರ್ತಿಪುರಂ, ಮೈಸೂರು

ನಿಯೋಗರವರ

ಹರಾಜು ತಾರೀಖಿನ್ನು ಗಮನಿಸಿ !

ಒಳ್ಳೆಯ ಸಾಮಾನುಗಳು ಹರಾಜು ಮಾಡಲ್ಪಡುವವು. ನಿಮ್ಮಲ್ಲಿ ಹರಾಜು ಮಾಡುವ ಸಾಮಾನುಗಳಿದ್ದರೆ ನಮ್ಮಲ್ಲಿಗೆ ಕಳುಹಿಸಿ. ನಮ್ಮ ಹರಾಜಿನಲ್ಲಿ ತಮಗೆ ಹೆಚ್ಚಿನ ಲಾಭವಿದೆ

ವಿವರಗಳಿಗೆ –

ನಿಯೋಗ ಫರ್ನಿಚರ್ ಕಂಪೆನಿ

ಇರ್ವಿನ್ ರಸ್ತೆ ಮೈಸೂರು

Edited, printed and published by A. R. Nagarajan at the Sadhvi Press D. Subbiah Road, Mysore

ಬಹಿರಂಗ ಸಭೆ

ಮೈಸೂರು ೨೮

ನಾಳೆ ಸಂಜೆ ೬ ಗಂಟೆಗೆ ಟೌನ್‌ಹಾಲ್ ಸ್ತ್ರದ ಮೈದಾನದಲ್ಲಿ ಮೈಸೂರು ಕಾಂಗ್ರೆಸ್ ಮಾಜಿ ಅಧ್ಯಕ್ಷರಾದ ಶ್ರೀ ಟಿ ಸುಬ್ರಹ್ಮಣ್ಯಂರವರು ಇಂದಿನ ರಾಜಕೀಯ ಪರಿಸ್ಥಿತಿ ವಿಚಾರವಾಗಿ ಭಾಷಣ ಮಾಡುವರು. ಎಲ್ಲರಿಗೂ ಸ್ವಾಗತವಿದೆ.

ಆಕಾಶವಾಣಿಯಲ್ಲಿ ಗಾನ

ದಸರಾ ಮಹೋತ್ಸವದ ವಿಶೇಷ ಕಾರ್ಯಕ್ರಮದ ಅಂಗವಾಗಿ ಈ ದಿನ ರಾತ್ರಿ ೮ ಗಂಟೆಯಿಂದ ೧೦ ರ ವರೆಗೆ ಆಕಾಶವಾಣಿಯಲ್ಲಿ ಆ॥ ವಿ॥ ಶೆಟ್ಟಿ ಕೃಷ್ಣಯ್ಯಂಗಾರರ ಗಾಯನವು ನಡೆಯುವುದು

ನಾಟಕ ಪ್ರದರ್ಶನ

ಶ್ರೀ ಪ್ರಕಾಶ ನಾಟಕ ಮಂಡಳಿಯವರು ನಿನ್ನೆ ರಾತ್ರಿ ಟೌನ್‌ಹಾಲಿನಲ್ಲಿ ನರೇಂದ್ರರವರಿಂದ ರಚಿತವಾದ ಶ್ರೀ ಮೇವಾಡ ನಾಟಕವನ್ನು ಅಭಿನಯಿಸಿದರು. ನಾಟಕವನ್ನು ಇನ್ನೂ ಹಲವು ಬಾರಿ ನಡೆಸುವರೆಂದು ತಿಳಿದು ಬಂದಿದೆ.

ತಿಲಕ್ ಸಂಘ

ಈಸೂರು ದಿನಾಚರಣೆಯ ಪ್ರಯುಕ್ತ ಚಿಕ್ಕಪೇಟೆಯ ತಿಲಕ್ ಸಂಘದವರು ದಿನ ಬೆಳಗ್ಗೆ ಪ್ರಭಾತಭೇರಿ ಮತ್ತು ಧ್ವಜಾರೋಹಣವನ್ನು ನಡೆಸಿದರು. ಶ್ರೀ ಜಿ. ದೇವನಾಥ್‌ರವರು ರಾಷ್ಟ್ರಧ್ವಜವ ಹಾರಿಸಿದರು.

ದಿವಾನರ ಭೇಟಿ

ಶ್ರೀಗಳಾದ ಕೆ ಟಿ. ಭಾಷ್ಯಂ ಮತ್ತು ಶ್ರೀ ಎಚ್. ಹನುಮಂತಪ್ಪನವರು ನಿನ್ನೆ ದಿವಾನರನ್ನು ಕಂಡು ಬೆಂಗಳೂರಿನಲ್ಲಿ ನಡೆಯುವ ಆರನೇ ಕಾಂಗ್ರೆಸ್ ಅಧಿವೇಶನಕ್ಕೆ ಸರಿಯಾದ ಸ್ಥಳ ಮತ್ತು ಇತರ ಸೌಕರ್ಯಗಳನ್ನು ಒದಗಿಸಿಕೊಡುವಂತೆ ಕೇಳಿಕೊಂಡರೆಂದೂ ದಿವಾನರು ಸೂಕ್ತವಾದ ರೀತಿಯಲ್ಲಿ ಏರ್ಪಾಡುಮಾಡಲಾಗುವುದೆಂದು ತಿಳಿಸಿದರೆಂದೂ ಗೊತ್ತಾಗಿದೆ.

ಬೆಂಗಳೂರು-ಮೈಸೂರು ವಿದ್ಯುಚ್ಛಕ್ತಿ ರೈಲು

ಮೈಸೂರು-ಬೆಂಗಳೂರು ರೈಲ್ವೆಯು ವಿದ್ಯುಚ್ಛಕ್ತಿ ಸಹಾಯದಿಂದ ಓಡಿಸುವುದಕ್ಕೆ ತಯಾರಾಗಿದ್ದ ಯೋಜನೆಯನ್ನು ಸಂಸ್ಥಾನದ ಆರ್ಥಿಕ ಸಮ್ಮೇಳನದಿಂದ ನೇಮಕವಾಗಿದ್ದ ಉಪಸಮಿತಿಯು ಅಂಗೀಕರಿಸಿದೆ. ಈ ಯೋಜನೆಗೆ ೧೫೫ ಲಕ್ಷ ರೂ.ಗಳ ವೆಚ್ಚವಾಗಬಹುದೆಂದು ಅಂದಾಜು ಮಾಡಲಾಗಿದೆ

ವಿಶ್ವನಾಥ್‌ರವರ ನಿಧನ

[ಸು ಪ್ರೆ॥] ಬೆಂಗಳೂರು ೨೭

ಮೆಕ್ಯಾನಿಕಲ್ ಮತ್ತು ಇಂಜಿನಿಯರಿಂಗ್ ಸರ್ವೀಸ್ ಡೈರೆಕ್ಟರಾಗಿದ್ದ ಶ್ರೀ ಬಿ ವಿಶ್ವನಾಥರವರು ನಿನ್ನೆ ಸಾಯಂಕಾಲ ೬ ಘಂಟೆಗೆ ತಮ್ಮ ೪೬ ನೇ ವಯಸ್ಸಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಎರಡು ತಿಂಗಳಿಂದ ಟೈಫಾಯಿಡ್ ಜ್ವರದಿಂದ ನರಳುತ್ತಿದ್ದು ಈಚೆಗೆ ಗುಣಮುಖರಾಗಿದ್ದರು

ಮೃತರಿಗೆ ವೃದ್ಧ ಮಾತೆಯೂ, ಪತ್ನಿಯೂ, ನಾಲ್ವರು ಹೆಣ್ಣು ಮಕ್ಕಳೂ, ಏಕ ಪುತ್ರನೂ ಇರುವರು

ಚೀಫ್ ಇಂಜಿನಿಯರ್ ಅಧಿಕಾರಿಗಳಾದ ಶ್ರೀ ವೆಂಕಟ ರಂಗಾಚಾರ್‌ರವರನ್ನು ಭದ್ರಾ ವತಿಗೆ ಶ್ರೀ ರಾಮಕೃಷ್ಣಯ್ಯನವರನ್ನು ಬೆಂಗಳೂರಿಗೂ ವರ್ಗಾಯಿಸಲಾಗಿದೆ.

ರೋ॥. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶುಕ್ರವಾರ ೨೭—೯—೪೬ [ಸಂಚಿಕೆ ೫೪

ವಿಲಾಸ ಪುರದಲ್ಲಿ — — ಲಾಠೀ ಪ್ರಯೋಗ

ಜಿನ್ನಾ-ವೈಸರಾಯ್ ಭೇಟಿ

ಮೊನ್ನೆ ಸಂಜೆ ದೆಹಲಿಯಲ್ಲಿ ವೈಸರಾಯರಿಗೂ, ಮಿ॥ ಜಿನ್ನಾರವರಿಗೂ ಭೇಟಿ ನಡೆಯಿತು. ಒಂದೂವರೆ ತಾಸು ಘಂಟೆ ಹೊತ್ತು ಮಾತುಕತೆಗಳಾದವು. ಮತ್ತೆ ಅವರ ಭೇಟಿ ಜರುಗಬಹುದೆಂದು ಹೇಳಲಾಗಿದೆ ಅಖಿಲಭಾರತ ಮುಸ್ಲಿಂ ಲೀಗ್ ಕಾರ್ಯಸಮಿತಿಯು ನಿಯೋಗವೊಂದು ನೆನ್ನೆ ಬೆಳಗ್ಗೆ ಜಿನ್ನಾರವರನ್ನು ಕಂಡು ತಮ್ಮ ಬಂಗಾಳದ ಪರಿಸ್ಥಿತಿಯನ್ನು ವೈಸರಾಯರ ಮುಂದೆ ಇಡುವಂತೆ ಕೇಳಿಕೊಂಡಿತೆಂದು ವರದಿಯಾಗಿದೆ

ಮಿರ್ಜಾರವರಿಗೆ ಗಾಂಧೀಜಿಯವರ ಪತ್ರ

ಹೈದರಾಬಾದಿನ ವಾರಂಗಲ್ಲಿನಲ್ಲಿ ನಡೆದ ಪೋಲೀಸಿನವರ ಅತ್ಯಾಚಾರದ ಬಗ್ಗೆ ಗಾಂಧೀಜಿಯವರು ಸರ್ ಮಿರ್ಜಾರವರಿಗೆ ಪತ್ರ ಬರೆದಿರುವರೆಂದೂ, ಸರ್ ಮಿರ್ಜಾರವರು ಅಕ್ಟೋಬರ್ ೯ ನೇ ತಾ॥ ತಾವೇ ಆ ಸ್ಥಳಕ್ಕೆ ಭೇಟಿಕೊಟ್ಟು ಪರಿಸ್ಥಿತಿಯನ್ನು ಖುದ್ದಾಗಿ ಅರಿಯುವರೆಂದೂ ತಿಳಿದುಬಂದಿದೆ

ಗಡಿ ಪ್ರದೇಶಗಳಿಗೆ ನೆಹರೂರವರ ಭೇಟಿ

ಗಡಿನಾಡಿನ ಬಳಿ ಇರುವ ವಜೀರಿಸ್ಥಾನ ಮುಂತಾದ ಪ್ರದೇಶಗಳಿಗೆ ಪಂ॥ ನೆಹರೂರವರು ಖಾನ್ ಅಬ್ದುಲ್‌ಗಫಾರ್‌ಖಾನರೊಡನೆ ಸಧ್ಯದಲ್ಲೇ ಭೇಟಿ ಇತ್ತು ಅಲ್ಲಿನ ಪರಿಸ್ಥಿತಿಯನ್ನು ಖುದ್ದಾಗಿ ಅರಿಯುವರೆಂದು ಹೇಳಲಾಗಿದೆ

ಭಾರತಕ್ಕೆ ಆಸ್ಟ್ರೇಲಿಯಾ ಸಹಾನುಭೂತಿ

ಭಾರತದ ಆಹಾರ ಪರಿಸ್ಥಿತಿಯ ಬಗ್ಗೆ ಸಹಾನುಭೂತಿಯನ್ನು ತೋರಿಸಲು ಮೊನ್ನೆ ಒಂದು ಪ್ರಚಂಡ ಸಾರ್ವಜನಿಕ ಪ್ರದರ್ಶನವು ಮೆಲ್ಬೋರ್ನ್ ನಗರದಲ್ಲಿ ನಡೆಯಿತು ಸಾರ್ವಜನಿಕ ಸಭೆಯಲ್ಲಿ ಭಾರತದ ಹೈ ಕಮೀಷನರವರ ಪತ್ನಿ ಶ್ರೀಮತಿ ಶಕುಂತಳ ಪರಾಂಜಪೆಯವರು ಭಾಷಣಮಾಡಿದರು.

ಬರ್ಮಾ ಹೊಸ ಸರ್ಕಾರ ನಾಳೆ ಅಧಿಕಾರಕ್ಕೆ ಬರಲಿದೆ

ಬರ್ಮಾದಲ್ಲಿ ಸರ್ವ ಪಕ್ಷಗಳ ಸರ್ಕಾರವೊಂದನ್ನು ಅಲ್ಲಿನ ಗವರ್ನರು ರಚಿಸಿದ್ದಾರೆ ಈ ಹೊಸ ಸರ್ಕಾರಕ್ಕೆ ಫ್ಯಾಸಿಸ್ಟ್ ವಿರೋಧಿ ಪಕ್ಷದ ನಾಯಕರಾದ ಅಂಗ್‌ಸಾನರೇ ಉಪಾಧ್ಯಕ್ಷರು. ಈ ಹೊಸ ಮಂತ್ರಿಮಂಡಲವು ನಾಳೆ ಅಧಿಕಾರ ಸ್ವೀಕರಿಸುವುದೆಂದು ಹೇಳಲಾಗಿದೆ

ಪುರಸಭಾ ಚುನಾವಣೆ

[ಸ್ವ. ಸು.] ಬೆಂಗಳೂರು ೨೭

ಇಲ್ಲಿಯ ಪುರಸಭೆಯ ಸಾರ್ವತ್ರಿಕ ಚುನಾವಣೆಯು ಡಿಸೆಂಬರ್ ೧೫ ನೇ ತಾ॥ ನಡೆಯುವಂತೆ ಸರ್ಕಾರದ ಆಜ್ಞೆಯಾಗಿದೆ. ಉಮೇದುವಾರಿಕೆ ಅರ್ಜಿ ಸಲ್ಲಿಸಲು ನವಂಬರ್ ೨೭ ನೇ ತಾ॥ ಕಡೆಯ ದಿನ.

ಪ್ರಜಾ ಸಂಖ್ಯೆ ಇಳಿಯಿತು

ಇತ್ತೀಚಿನ ಜನಗಣತಿ ಪ್ರಕಾರ, ಹಿಂದಿನ ಗಣತಿಗಿಂತ ೫೫ ಸಹಸ್ರ ಜನಸಂಖ್ಯೆ ಕಡಮೆಯಾಗಿರುವುದಾಗಿ ವರದಿಯಾಗಿದೆ

ಕಾಶ್ಮೀರಕ್ಕೆ ಕಾಂಗ್ರೆಸ್ ನಿಯೋಗ

ಕಾಶ್ಮೀರ ಸರ್ಕಾರದ ದಬ್ಬಾಳಿಕೆ, ಅಲ್ಲಿನ ಓಟರುಗಳ ಪಟ್ಟಿಯನ್ನು ತಿದ್ದಿರುವುದು ಪೌರರ ಸ್ವಾತಂತ್ರ್ಯಕ್ಕೆ ಬಂದಿರುವ ಧಕ್ಕೆ ಮುಂತಾದುವನ್ನು ಪರಿಶೀಲಿಸಲು ಸಮರ್ಥರಿಂದ ಕೂಡಿದ ಒಂದು ನಿಯೋಗವನ್ನು ಕಳುಹಿಸಲು ಅ॥ ಭಾ॥ ಕಾಂಗ್ರೆಸ್ ಕಾರ್ಯಸಮಿತಿಯು ನಿರ್ಣಯವನ್ನು ಮಾಡಿದೆ ನಿಯೋಗದವರನ್ನು ಸ್ವಾಗತಿಸಬೇಕೆಂದು ಕಾಶ್ಮೀರ ಸರ್ಕಾರಕ್ಕೆ ಸಲಹೆಯನ್ನು ಸಹ ಅದು ಕೊಟ್ಟಿದೆ

ಸ್ವತಂತ್ರವಾದ ವಿದೇಶಾಂಗ ನೀತಿ

ವಿದೇಶಾಂಗ ವಿಷಯಗಳಲ್ಲಿ ಭಾರತವು ಸ್ವತಂತ್ರವಾದ ನೀತಿಯನ್ನು ಅನುಸರಿಸುವುದು-ಎಂದು ಪಂ॥ ನೆಹರೂರವರು ತಿಳಿಸಿದ್ದಾರೆ. ಹೊರ ದೇಶಗಳಲ್ಲಿ ಭಾರತದ ವಿದೇಶಾಂಗ ವ್ಯವಹಾರ ರಾಜತಾಂತ್ರಿಕ ಶಾಖೆಗಳನ್ನು ವಿಸ್ತರಿಸಲು ಯೋಜನೆ ತಯಾರಾಗಿದೆ ಅವುಗಳಿಗಾಗಿ ೩೦೦ ಜನರು ಬೇಕಾಗುವರು ಅವರಿಗೆಲ್ಲಾ ತರಪೇತಿ ಕೊಡಲಾಗುವುದು ಎಂದು ಅವರು ಹೇಳಿದ್ದಾರೆ.

ಉಪ್ಪಿನ ತೆರಿಗೆ ವಜಾ

ಪೂರ್ವ ನಿ ಹದ್ದಿನಲ್ಲಿರುವ ಸರಗೂಜಾ ಸಂಸ್ಥಾನಕ್ಕೆ ಹೊರಗಿನಿಂದ ಬರುವ ಉಪ್ಪಿನ ಮೇಲೆ ಮಣ ಒಂದಕ್ಕೆ ಎರಡು ಆಣೆಯಂತೆ ವಿಧಿಸುತ್ತಿದ್ದ ತೆರಿಗೆಯನ್ನು ವಜಾ ಮಾಡುವಂತೆ ಅಲ್ಲಿನ ಮಹಾರಾಜರು ಆಜ್ಞೆ ಮಾಡಿರುತ್ತಾರೆ.

ರೀವಾ ಸುಧಾರಣಾ ಸಮಿತಿ

ರೀವಾ ಸಂಸ್ಥಾನದಲ್ಲಿ ಜನಪ್ರಿಯ ಸರ್ಕಾರವನ್ನು ಸ್ಥಾಪಿಸುವ ಬಗ್ಗೆ ಶಿಫಾರಸ್ಸು ಮಾಡಲು ನೇಮಕವಾಗಿರುವ ರಾಜಕೀಯ ಸುಧಾರಣಾ ಸಮಿತಿಗೆ ಅಲ್ಲಿನ ಮಹಾರಾಜರು ಸರ್ ಸಿ ಪಿ ರಾಮಸ್ವಾಮಿ ಅಯ್ಯರವರನ್ನು ಅಧ್ಯಕ್ಷರನ್ನಾಗಿ ನೇಮಿಸಿದ್ದಾರೆ

ವಿಲಾಸಪುರದಲ್ಲಿ ಲಾಠೀ ಪ್ರಯೋಗ

ಸೆಪ್ಟೆಂಬರ್ ೨೩ ನೇ ತಾ॥ ವಿಲಾಸಪುರ ಸಂಸ್ಥಾನದಲ್ಲಿ ಪ್ರಜಾಮಂಡಲ ಮತ್ತು ಆಜಾದ್ ಹಿಂದ್ ದಳದವರು ನಡೆಸಿದ ಸಭೆಯ ಜನರ ಮೇಲೆ ಪೋಲೀಸರು ಲಾಠೀ ಪ್ರಯೋಗ ಮಾಡಿದ್ದರಿಂದ ೨೦ ಮಂದಿಗೆ ತೀವ್ರ ಗಾಯಗಳಾಗಿವೆಯೆಂದೂ, ಅಲ್ಲಿನ ಪ್ರಜಾಮಂಡಲದ ಕಾರ್ಯದರ್ಶಿಗಳು ಪಂ॥ ನೆಹರೂರವರಿಗೆ ತಂತಿ ಕಳುಹಿಸಿದ್ದಾರೆ.

ಈಸೂರು ದಿನಾಚರಣೆ

ಈ ದಿನ ಬೆಳಗ್ಗೆ ೮ ಗಂಟೆಗೆ ದೇಶೀಯ ವಿದ್ಯಾಶಾಲೆಯ ಹಿಂಭಾಗದ ಮೈದಾನದಲ್ಲಿ ಈಸೂರು ದಿನಾಚರಣೆ ಸಂಬಂಧವಾಗಿ ಧ್ವಜವಂದನೆ ನಡೆಯಿತು. ಅನಂತರ ವಿದ್ಯಾರ್ಥಿಗಳು ಸೈಕಲ್ಲಿನ ಮೇಲೆ ನಗರದ ನಾನಾ ಭಾಗಗಳಲ್ಲಿ ಮೆರವಣಿಗೆಯಲ್ಲಿ ಈಸೂರು ಬಂದಿಗಳನ್ನು ಬಿಡುಗಡೆ ಮಾಡಿ ಎಂದು ಘೋಷಿಸಿದರು.

ಅರಮನೆ ಸುದ್ದಿ

ಮೈಸೂರು ೨೬

ಶ್ರೀಮನ್ಮಹಾರಾಜರವರು ಸಂಸ್ಥಾನದ ದಿವಾನರಾದ ಸರ್. ಆರ್ಕಾಟ್ ರಾಮಸ್ವಾಮಿ ಮೊದಲಿಯಾರರಿಗೆ ನಿನ್ನೆ ದಿನ ಭೇಟಿಯನ್ನು ದಯಪಾಲಿಸಿದ್ದಾರೆ.

ಮೈಸೂರು ಮುನಿಸಿಪಾಲಿಟಿ ಮಾರ್ಕೆಟ್ ಪ್ರದರ್ಶನ

(ದೇವರಾಜ ಮಾರ್ಕೆಟ್ಟಿನಲ್ಲಿ)

೧೯೪೬ ನೇ ಅಕ್ಟೋಬರ್ ೩ ಮತ್ತು ೪ ನೇ ಬುಧವಾರ ಮತ್ತು ಗುರುವಾರ ನಡೆಸಲ್ಪಡುವದಾಗಿದೆ. ವ್ಯಾಪಾರಸ್ಥರು ಮತ್ತು ಇತರರು ಪ್ರದರ್ಶನದಲ್ಲಿ ಸ್ಪರ್ಧಿಸಲು ಅವಕಾಶವುಂಟು.

ಉತ್ತಮ ಸ್ಪರ್ಧೆಗೆ ೫೦೦. ರೂ. ಗಳ ಬೆಳ್ಳಿ ಕಪ್ಪು ಮತ್ತು ಪದಕಗಳನ್ನು ಬಹುಮಾನವಾಗಿ ಇಟ್ಟಿರುತ್ತೆ ಹೆಚ್ಚಿನ ವಿವರಗಳನ್ನು ಮಾರ್ಕೆಟ್ ಆಫೀಸಿನಲ್ಲಿ ತಿಳಿಯಬಹುದು.

ಉಚಿತ ಬಹುಮಾನಗಳನ್ನು ಈ ಕೆಳಗೆ ಕಂಡ ಮಹನೀಯರು ಕೊಟ್ಟಿರುತ್ತಾರೆ:—

ಉತ್ತಮ ದರ್ಜೆಯ ಹಣ್ಣು ಅಥವಾ ತರಕಾರಿ ಸ್ಟಾಲಿಗೆ ಶ್ರೀಯುತ ಎಂ. ಆರ್. ಓ ಬಸಪ್ಪನವರ ಒಂದು "ಚಿನ್ನದ ಪದಕ" ಮತ್ತು ವಿವಿಧ ಪ್ರದರ್ಶನಗಳಿಗಾಗಿ ಶ್ರೀಗಳಾದ ಆರ್ ರಾಮಚಂದ್ರರಾವ್, ಬಾಂಬೆಟೋಪಿ, ಯು. ಎಲ್ ರಾಮಚಂದ್ರರಾವ್, ಕೆ. ಎಸ್ ಸತ್ಯನಾರಾಯಣರಾವ್, ಕಂ॥ ಗವಿಯಣ್ಣ, ಕಾರ್ಪೊರೇಷನ್ ಜ್ಯುಬಿಲಿ ಹಾಲ್ ಮಾಲೀಕರೂ, ಒಂದೊಂದು ಬೆಳ್ಳಿಯ ಕಪ್ಪುಗಳನ್ನೂ ಮತ್ತು ಮೈಸೂರು ಪತ್ರಿಕೆಯ ಮಾಲೀಕರಾದ ಶ್ರೀ ನಾರಾಯಣರವರು ಹತ್ತು ರೂ. ಗಳ ನಗದು ಬಹುಮಾನಗಳನ್ನೂ (ಒಟ್ಟು ೫೦ ರೂ) ಕೊಟ್ಟಿರುತ್ತಾರೆ

ಪುರಜನರು ಇದೇ ರೀತಿ ಪ್ರೋತ್ಸಾಹಿಸಲು ಪ್ರಾರ್ಥನೆ.

ಎ ಕೃಷ್ಣಮೂರ್ತಿರಾವ್,
ವೈಸ್ ಪ್ರೆಸಿಡೆಂಟ್

ಮೈಸೂರು, ಮತ್ತು ಮಾನ್ಯ ಸೆಕ್ರೆಟರಿ
೨೬-೯-೪೬ ಪ್ರದರ್ಶನ ಸಮಿತಿ

ಸಾಧ್ವಿ

ತಾ|| ೨೭-೯-೪೬ ಶುಕ್ರವಾರ

ಇನ್ನಾದರೂ ಬಿಡುಗಡೆಯಾಗಲಿ !

ನಾಲ್ಕು ವರ್ಷದ ಹಿಂದೆ ನಡೆದ ಚಳುವಳಿಯ ಸಮಯದಲ್ಲಿ ಕಾರಾಗೃಹ ವಾಸಕ್ಕೆ ಗುರಿಯಾಗಿದ್ದ ಹಲವು ಖೈದಿಗಳನ್ನು ಬಿಡುಗಡೆ ಮಾಡಲು ಸರ್ಕಾರದವರನ್ನು ಒತ್ತಾಯ ಪಡಿಸುವುದಕ್ಕಾಗಿ ಈ ದಿನ ಸಂಸ್ಥಾನದ ಅನೇಕ ಕಡೆಗಳಲ್ಲಿ ಒಂದು ದೊಡ್ಡ ಚಳುವಳಿಯು ನಡೆಯುತ್ತಿದೆ. ಇದಕ್ಕಾಗಿ ಇನ್ನೂ ಇನ್ನೊಂದು ಪ್ರಯತ್ನವು ಆಗ ಬೇಕಾಗಿರುವುದು ಅತ್ಯಂತ ವಿಷಾದಕರ ಸಂಗತಿ. ಕಳೆದ ಪ್ರಜಾ ಪ್ರತಿನಿಧಿ ಸಭೆಯ ಅಧಿವೇಶನದಲ್ಲಿ ಸಕಲ ಪಂಗಡಗಳ ಸದಸ್ಯರೂ ಈ ಒಗ್ಗಿ ಮನವಿ ಮಾಡಿಕೊಂಡಿದ್ದರು. ಸರ್ಕಾರದವರೂ ಸಹ ಅದನ್ನು ಬೇಗನೆ ಬಗೆಹರಿಸುವುದಾಗಿ ಭರವಸೆಯನ್ನು ಇತ್ತಿದ್ದರು.

ಒಂದು ಅಧಿವೇಶನವು ಹೋಗಿದ್ದು ಮತ್ತೊಂದು ಬಂದಿತು. ಆದರೂ ಭರವಸೆಯು ಸರಸ್ವತೀ ಪ್ರಸನ್ನವಾಗಿಯೇ ಉಳಿದಿರುತ್ತದೆ. ಇದಕ್ಕಾಗಿ ಒಂದು ಚಳುವಳಿಯು ನಡೆಯುವಷ್ಟು ದೂರ ಅವಕಾಶವಾಗಿರುವುದು ಶೋಚನೀಯ. ಯಾವ ಪಕ್ಷ ಪಂಗಡಗಳ ಭೇದವೂ ಇಲ್ಲದೆ ಸಂಸ್ಥಾನದ ಪ್ರಜೆಗಳೆಲ್ಲರೂ ಮಾಡಿಕೊಂಡಿರುವ ವಿನಂತಿಯನ್ನು ಈಡೇರಿಸಲು ಇಷ್ಟು ತಾತ್ಸಾರವೇಕೆ ?

ಇಲ್ಲಿಗಿಂತಲೂ ಹೆಚ್ಚಿನ ಘೋರವಾದ ಕೃತ್ಯಗಳನ್ನು ಎಸಗಿದವರೆಲ್ಲರೂ ನೆರೆಯ ಪ್ರಾಂತದಲ್ಲಿ ಬಿಡುಗಡೆ ಹೊಂದಿದ್ದಾರೆ. ಮರಣ ದಂಡನೆಗೆ ಗುರಿಯಾಗಿ ಜೀವಾವಧಿ ಶಿಕ್ಷೆ ಹೊಂದಿದ್ದವರೂ ಹೊರಗೆ ಬಂದಿದ್ದಾರೆ. ಶತ್ರುಗಳೊಡನೆ ಸ್ನೇಹ ಬೆಳೆಸಿ ಸಮರಿಗೆ ನೆರವು ನೀಡಿದ್ದವರೂ ಬಂಧನದಿಂದ ಪಾರಾಗಿದ್ದಾರೆ. ರಾಜಕೀಯ ಖೈದಿಗಳಂತೂ ಎಲ್ಲಿಯೂ ಇಲ್ಲವೇ ಇಲ್ಲವೆನ್ನಬಹುದು. ಹೀಗಿರುವಲ್ಲಿ ಮಾದರಿ ಸಂಸ್ಥಾನದ ಹಲವು ದುರದೃಷ್ಟವಂತರು ಮಾತ್ರ ಇನ್ನೂ ಕಾರಾಗೃಹದಲ್ಲಿ ಕೊಳೆಯಬೇಕೆ? ಅಲ್ಲಿನವರು ಮಾಡದಂತಹ ಮಹಾಪರಾಧಗಳನ್ನು ಇವರು ಮಾಡಿರುವರೆ ?

ಇವರುಗಳ ವಿಚಾರಣೆ ಮತ್ತು ಶಿಕ್ಷೆಯ ಹಿನ್ನೆಲೆಯು ಅತ್ಯಂತ ಘೋರವಾದುದು. ನಡೆದ ವಿದ್ಯಮಾನಗಳು ಹೇಗೇ ಇರಲಿ, ಆ ಪ್ರಸಂಗದಲ್ಲಿ ಹಲವಾರು ಪ್ರಾಣಗಳು ಪರಲೋಕವನ್ನು ಸೇರಿದುವು. ಅದಕ್ಕೆ ಪರಿಹಾರವನ್ನು ಮಾಡಲು ಈಗ ಸಾಧ್ಯವಿಲ್ಲ. ಆದರೆ ಇನ್ನೂ ಯಾತನೆಯನ್ನು ಅನುಭವಿಸುತ್ತಿರುವವರಿಗೆ ಪರಿಹಾರ ಕೊಡುವುದು ಸಾಧ್ಯ. ಅವರುಗಳನ್ನು ಈ ಕೂಡಲೇ ಬಿಟ್ಟು ಬಿಡುವುದೇ ಆ ಪರಿಹಾರ.

೧ ನಿಮಿಷಕ್ಕೆ ೪|| ಲಕ್ಷ ರೂಗಳ ಸಂಪಾದನೆ

ವಿಶ್ವದಲ್ಲೆಲ್ಲಾ ಬಾಕ್ಸಿಂಗ್‌ನಲ್ಲಿ ಪ್ರಖ್ಯಾತಗೊಂಡಿರುವ ಜೋಲೂಯಿ ಟಾಮಿ ಮಾರಿಯೆಲ್ಲೊ ಎಂಬುವನನ್ನು ೨ ನಿಮಿಷ ೯ ಸೆಕೆಂಡುಗಳಲ್ಲಿ ಸೋಲಿಸಿದನು. ಇದಕ್ಕಾಗಿ ಆತನಿಗೆ ... ಪೌಂಡು ಸಂಭಾವನೆ ಕೊಡಲ್ಪಟ್ಟಿತು. ಅಂದರೆ ಒಂದು ನಿಮಿಷಕ್ಕೆ ೪೦,೨೦ ಲಕ್ಷ ರೂಗಳಾಯಿತು.

ಜೀವಾವಧಿ ಶಿಕ್ಷೆಗೆ ಮಹಿಳೆಯರು ಗುರಿಯಾಗಿರುವುದು ಮೈಸೂರಿನ ಇತಿಹಾಸದಲ್ಲೇ ಹೊಸದು. ಅಂತಹವರನ್ನು ಇನ್ನು ಮುಂದೆಯೂ ಬಂಧಿಸಿಟ್ಟಿರುವುದು ತೀರ ಅನುಚಿತ. ಈಸೂರು, ಶ್ರವಣಬೆಳಗೊಳ, ದಾವಣಗೆರೆಗಳಿಗೆ ಸಂಬಂಧಪಟ್ಟ ಸುಮಾರು ಎಂಟು ಜನರು ಇನ್ನೂ ಬಂಧನದಲ್ಲಿರುವರೆಂದು ತಿಳಿದು ಬಂದಿದೆ. ಇದು ನವರಾತ್ರಿಯ ಶುಭ ಸನ್ನಿವೇಶ. ಅನೇಕ ಮಂಗಳ ಕಾರ್ಯಗಳು ಜರುಗುವ ಪ್ರಸಂಗ. ಇಂತಹ ಸನ್ನಿವೇಶದಲ್ಲಿ ಪ್ರಭುತ್ವದವರು ಈ ಕೂಡಲೇ ಮೇಲ್ಕಂಡ ಖೈದಿಗಳನ್ನು ಬಿಟ್ಟುಬಿಡುವಂತೆ ಆಜ್ಞೆ ಮಾಡಿ ತಮ್ಮ ಭರವಸೆಯನ್ನು ಈಡೇರಿಸುವುದು ಅತ್ಯಂತ ಸಾಧುವಾಗಿದೆ.

ಅಧ್ಯಕ್ಷ ಚುನಾವಣಾ ವೇ[ಳಾ] ಪಟ್ಟಿ.

ಪಂ|| ನೆಹರೂರವರ ಸ್ಥಾನಕ್ಕೆ ನಡೆ[ಯುವ] ಚುನಾವಣೆಯ ವೇಳಾ ಪಟ್ಟಿ ಪ್ರ[ಕಟ]ವಾಗಿದೆ. ಅಕ್ಟೋಬರ್ ೫ ನೇ ತಾ|| [ಒ]ಳಗಾಗಿ ಉಮೇದುವಾರರನ್ನು ಸೂ[ಚಿಸ]ಬೇಕಾಗಿದೆ. ೨೨ ನೇ ತಾ|| ಅಧಿಕಾರಿ[...]ಕವಾಗಿ ಫಲಿತಾಂಶವನ್ನು ಪ್ರಕಟಿಸ[ಲಾಗು]ವುದು.

● ವೈಸರಾಯರು ಮಿ|| ಜಿನ್ನಾರವ[ರನ್ನು] ಭೇಟಿ ಮಾಡಿದ ನಂತರ ಗಾಂಧಿಜಿಯ[ವರ]ನ್ನೂ, ಪಂ|| ನೆಹರೂರವರನ್ನೂ ಪ್ರ[ತ್ಯೇಕ]ವಾಗಿ ನಿನ್ನೆ ದಿನ ಭೇಟಿ ಮಾಡಿದರು.

ನಿಯೋರವರ

ಹರಾಜು ತಾರೀಖನ್ನು ಗಮನಿಸಿ !

ಒಳ್ಳೊಳ್ಳೆ ಸಾಮಾನುಗಳು ಹರಾಜು ಮಾಡಲ್ಪಡುವವು. ನಿಮ್ಮಲ್ಲಿ ಹರಾಜು ಮಾಡುವ ಸಾಮಾನುಗಳಿದ್ದರೆ ನಮ್ಮಲ್ಲಿಗೆ ಕಳುಹಿಸಿ. ನಮ್ಮ ಹರಾಜಿನಲ್ಲಿ ಕಮಾಗಿ ಹೆಚ್ಚಿನ ಲಾಭವಿದೆ

ವಿವರಗಳಿಗೆ:—

ನಿಯೋ ಫರ್ನಿಚರ್ ಕಂಪೆನಿ

ಇರ್ವಿನ್ ರಸ್ತೆ : : ಮೈಸೂರು

OPERA TALKIES

ತಾ|| 28—9—46ರಿಂದ

ಪ್ರತಿ ದಿನ ಮೂರು ಆಟಗಳು

ಮಾಯಾ ಮಚ್ಛೀಂದ್ರ

(ತೆಲುಗು)

ಕೆನ್ನಾಂಬ, ಮಾಲತಿ,

ಗೌರೀನಾಥ ಶಾಸ್ತ್ರಿ, ಅದ್ದಂಕಿ

ಶ್ರೀಕೃಷ್ಣಮೂರ್ತಿ ಮುಂತಾದವರು

ರಾಜ್ ಕಮಲ್, ಮೈಸೂರು.

26-9-46 ರಿಂದ 2 ನೇ ವಾರ

ಪ್ರತಿ ದಿನ ಮೂರು ಆಟಗಳು

ಸ್ವರ್ಗಸೀಮ

ಭೂಮಿಕೆ:—ಜಯಮ್ಮ, ಭಾನುಮತಿ,

ನಾಗಯ್ಯ, ನಾರಾಯಣರಾವ್

Morning Shows

at 10-30 A. M.

From 27-9-46 for 4 days

Pirates of the Skies

Edited, printed and published by A. R. Nagarajan at the Sadhvi Press D Subbiah Road, Mysore

UNIVERSITY OF MYSORE.

Office of the University of Mysore.

No. G. 4-1393/15-46. Mysore,

Dated 13th September 1946.

NOTIFICATION

Convocation—Saturday The 12th October 1946 at 9 A.M.

Candidates for Degrees are requested to call at the University Office, Mysore, on any of the following dates and sign the required declaration in the Register kept for the purpose. They will not be admitted to the Degrees for which they are candidates unless they have signed the declaration.

1. WEDNESDAY-9th OCTOBER 1946 11-30 A. M. to 5-30 P.M.
2. THURSDAY-10th OCTOBER 1946 11-30 A.M. to 6 P. M.

Candidates must come with their academic gown and hood to the Convocation Pavilion on 12th October 1946 before 8-15 A.M. Men candidates should wear, in addition, the prescribed dress.*

A copy of the detailed directions to candidates is enclosed.

D. S. GORDON, REGISTRAR

To

The Candidates for degrees.

*DRESS. Either white or black long coat, white trousers, turban with or without lace and Uttariyam, boots or shoes (optional). For Europeans, morning dress and academic cap.

For Sale .. .. For Sa[le]

The following properties are for sale in Mysore:—

1. One Storied House, big and decent, in main ro[ad] on Irwin Road.
2. One Bungalow with Compound in Narasimhara[ja] Mohalla
3. Decent Bangalow Sites (Eight) situated in t[he] heart of the City

For Particulars Enquire between 6 and 8 P. M. at

NEO FURNITURE CO,

Irwin Road ... Myso[re]

ರೋ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು



ಸಂಪುಟ ೫] ಶನಿವಾರ ೨೮—೯—೪೭ [ಸಂಚಿಕೆ ೫೪

ದೇವಾಸ್ ಸಂಸ್ಥಾನದಲ್ಲಿ ರಾಜಕೀಯ ಸುಧಾರಣೆ

ವಿಶೇಷ ಸಂಗೀತ

ಮೈಸೂರು ೨೭

ಆಕಾಶವಾಣಿಯಲ್ಲಿ ನವರಾತ್ರಿ ಮಹೋತ್ಸವದ ಪ್ರಯುಕ್ತ ಈ ದಿನ, ನಾಳೆ ಮತ್ತು ನಾಳಿದ್ದು ರಾತ್ರಿ ೮-೧೫ ರಿಂದ ೧೦ ಗಂಟೆಯವರೆಗೆ ಕ್ರಮವಾಗಿ ವಿದ್ವಾನ್ ದಿಲೀಪ ಚಂದ್ರ ...ಯವರ ಹಿಂದೂಸ್ತಾನಿ ಗಾನ, ವೈಣಿಕ ಪ್ರವೀಣ ಆರ್. ಎನ್. ವೆಂಕಟಗಿರಿಯಪ್ಪನವರ ವೀಣಾ ಮತ್ತು ಸಂಗೀತ ವಿಶಾರದ ಆ... ರಾಮಾನುಜಯ್ಯಂಗಾರ್ರವರ ...ವು ನಡೆಯುವುವು.

...ಯಜ್ಞ ರುದ್ರ ಸ್ವಾಹಾಕಾರ

ರಾಜಧಾನಿ ಸೀನೀರ್ ಶೆಟ್ಟಿ ಬೀದಿ ನಂ ...—೨೨ ನೇ ಗೃಹದಲ್ಲಿ ಶ್ರೀ ರಾಜರಾಜೇಶ್ವರಿ ಸನ್ನಿಧಿಯಲ್ಲಿ ತಾ|| ೨೬-೯-೪೭ರ ...ಯಿತು ಶರನ್ನವರಾತ್ರಿ ಪ್ರಯುಕ್ತ ಮ... ಮಹಾ ಪೂಜಾದಿ ಪುನಶ್ಚರಣೆಗಳು ದ...ವರೆಗೆ ನಡೆದು ಪೌರ್ಣಿಮಾ ದಿನ ...ಯಜ್ಞ ಪ್ರತಿಪತ್ತು ರುದ್ರಸ್ವಾಹಾಕಾರ ...ಂಡನೆ ಪೂರ್ಣಾಹುತಿ ನಡೆಯುತ್ತದೆ.

ಬಂದೀಖಾನೆಗೆ ರೈತರ ಮುತ್ತಿಗೆ

...ನಮ್ಮ ಗೋಧಿ ಫಸಲನ್ನು ಸರ್ಕಾರ ...ತಂದೊಪ್ಪಿಸಬೇಕೆಂಬ ಅಧಿಕಾರಿಗಳ ಆ...ವನ್ನು ವಿರೋಧಿಸಿ ಪ ರಂಗವನ್ನು ಸೇ... ಕೆಲವು ರೈತರುಗಳನ್ನು ಬಿಡಿಸಲು ಅ...ಬಟಲ್ಲಿ ೩ ಸಹಸ್ರ ಮಂದಿ ಬೇಸಾಯ...ರು ಜೈಲುಖಾನೆಯನ್ನು ಮುತ್ತಿದರೆಂ... ಪೋಲೀಸರು ಟ್ಯಾಂಕ್ ಮತ್ತು ಮಿಷ...ಗನ್ನುಗಳ ಸಹಾಯದಿಂದ ಶಾಂತಿ ಸ್ಥಾಪಿ...ದೂ ವರದಿಯಾಗಿದೆ.

...ಭಾಷೆಯಲ್ಲೇ ಘಟಿಕೋತ್ಸವದ ಭಾಷಣ

ಅಣ್ಣಾಮಲೆ ವಿಶ್ವವಿದ್ಯಾ ನಿಲಯದ ಘಟಿಕೋತ್ಸವದಲ್ಲಿ ವಿದ್ಯಾಮಂತ್ರಿಗಳಾದ ಶ್ರೀ ...ನಾಕಲಿಂಗಂರವರು ತಮಿಳಿನಲ್ಲಿ ಉಪ...ದ ಭಾಷಣ ಮಾಡುವರು. ಮದ್ರಾಸು ...ಸ್ಥದ ವಿಶ್ವವಿದ್ಯಾ ನಿಲಯಗಳ ಚರಿತ್ರೆ...ಲ್ಲಿ ಮಾತೃಭಾಷೆಯಲ್ಲಿ ಭಾಷಣಮಾಡು...ದು ಇದೇ ಮೊದಲನೆಯ ಸಲವಾಗಿದೆ.

...ಡಿಯೋ ಭದ್ರವಾಗಿದೆ

...ನೆ ತಾ|| ನ ಪತ್ರಿಕೆಯಲ್ಲಿ ಶ್ರೀ...ಟ್ಟಣದ ಪೌರ ಸಭೆಯ ರೇಡಿಯೋ ...ಲ್ಲವೆಂದು ಪ್ರಕಟವಾಗಿರುವ ಅಂಶ ...ಯಲ್ಲವೆಂದೂ ಅದು ಭದ್ರವಾಗಿದೆ ...ಅಲ್ಲಿನ ಪೌರ ಸಭೆಯ ಉಪಾಧ್ಯ... ತಾ|| ಪಿ ಅಬ್ದುಲ್ ರಜಾಕ್ರವರು ...ತ್ತಾರೆ

...ಲ್ ಮಗಳ ಮದುವೆ

...ನ್ನಿನ ಮಾಜಿ ಪ್ರಧಾನಿ ಮಿ|| ಚರ್ಚಿ...ಗಳಾದ ಮೇರಿಯರವು ಬೆಲ್ಲಿಯಂ ... ಮಾರ ಅರ್ಲರವರನ್ನು ಮದುವೆ ...ವರೆಂದು ಗೊತ್ತಾಗಿದೆ. ಚರ್ಚಿ... ಬಗ್ಗೆ ಬೆಲ್ಲಿಯಂಗೆ ತೆರಳಿ ೩ ದಿನಗ...ಮನೆಯಲ್ಲಿ ವಿಹಾರ ಮಾಡಲಿದ್ದಾರೆ.

...ಜೀರಿ ಸ್ಥಾನದ ಪೊಲಿಟಿ...ಲ್ ಏಜೆಂಟರ ಕೊಲೆ

...ನ ಬೆಕ್ಕಿಲ್ ಖಾನ್ ಟಿಲ ವಜೀರಿ...ದ ಪೊಲಿಟಿಕಲ್ ಏಜೆಂಟರಾದ ಮಿ|| ...ಲ್ಡ್ರವರು ಗುಂಡಿನೇಟಿನಿಂದ ಸ...ದ್ದಾರೆಂದು ತಿಳಿದು ಬಂದಿದೆ. ಈ ...ವು ದಿನಗಳ ಹಿಂದೆ ಇವರನ್ನು ಗು...ನ ಜನರು ಅಪಹರಿಸಿದ್ದು ಕೆಲಕಾ...ದ ಬಿಡುಗಡೆ ಮಾಡಿದ್ದರು.

ಈಸೂರು ದಿನಾಚರಣೆ

ಮೈಸೂರು ೨೮

ನಿನ್ನೆ ಸಂಜೆ ಟೌನ್ಹಾಲ್ ಮೈದಾನದಲ್ಲಿ ಡಾ|| ಪ್ರಗತಿ ಪಕ್ಷ ಮತ್ತು ವಿದ್ಯಾರ್ಥಿ ಕಾಂಗ್ರೆಸ್ಸಿನವರು ಬಹಿರಂಗ ಸಭೆಯನ್ನು ಏರ್ಪಡಿಸಿದ್ದರು. ಶ್ರೀ ಹೆಚ್.ಸಿ ದಾಸಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಪಿ ಸೀತಾರಾಮಯ್ಯ, ಟಿ ಎಸ್. ಸುಬ್ಬಣ್ಣ ಮತ್ತು ಹೆಚ್ ಕೆ ಕುಮಾರಸ್ವಾಮಿಯವರು ಭಾಷಣ ಮಾಡಿ ಈಸೂರು ಮತ್ತು ಶ್ರವಣಬೆಳಗೊಳಗಳ ರಾಜಕೀಯ ಖೈದಿಗಳನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಟೀಕಿಸಿದರು. ಈ ಬಗ್ಗೆ ಒಂದು ನಿರ್ಣಯವೂ ಅಂಗೀಕಾರವಾಯಿತು. ಅಧ್ಯಕ್ಷರ ಭಾಷಣಾನಂತರ ಜಯಕಾರದೊಡನೆ ಸಭೆ ಮುಗಿಯಿತು

ಪ್ರದರ್ಶನಕ್ಕೆ ಬಹುಮಾನ

ಮೈಸೂರು ಮಾರ್ಕೆಟ್ ಪ್ರದರ್ಶನದಲ್ಲಿ ಬಹುಮಾನ ಕೊಡಲು ಶ್ರೀಗಳಾದ ಜಿ. ಆರ್ ರಾಮಯ್ಯ, ಎಸ್.ಮಹಮದ್ ಇಬ್ರಾಹಿಂ ಅಂಡ್ ಬ್ರದರ್ಸ್, ಮದರಿ ಕೃಷ್ಣಮೂರ್ತಿ, ಪತ್ರಿಕಾ ಬಸ್ಸಿನ ಶ್ರೀ ಎ ಎಸ್ ಕೃಷ್ಣಮೂರ್ತಿ ಇವರು ತಲಾ ಒಂದೊಂದು ಬೆಳ್ಳಿ ಬಟ್ಟಲನ್ನು ಕೊಟ್ಟಿರುತ್ತಾರೆ. ಪ್ರದರ್ಶನದ ಕಾರ್ಯದರ್ಶಿಗಳು ಇವನ್ನು ಕೃತಜ್ಞತೆಯಿಂದ ಸ್ವೀಕರಿಸಿರುತ್ತಾರೆ

ಕಾಂಗ್ರೆಸ್ ಸ್ವಯಂ ಸೇವಕ ದಳದ ಸ್ಥಾಪನೆ

ಹಿಂದೂಸ್ತಾನಿ ಸೇವಾದಳದ ಸ್ಥಾಪಕರಾದ ಡಾ|| ಎನ್. ಎಸ್. ಹರ್ಡೀಕರ್ರು ದೆಹಲಿಗೆ ತೆರಳಿ ಅಲ್ಲಿ ಮೌ|| ಜನರಲ್ ಷಾ ನವಾಜರ ಸಹಕಾರದೊಡನೆ ಕಾಂಗ್ರೆಸ್ ಸ್ವಯಂ ಸೇವಕ ದಳದ ಬಗ್ಗೆ ಯೋಜನೆಯನ್ನು ಸಿದ್ಧ ಪಡಿಸುತ್ತಿದ್ದಾರೆ. ಇವರು ನೆನ್ನೆ ಮಿ|| ಆಸಫ್ ಅಲಿಯವರ ಮನೆಯಲ್ಲಿ ಪಂ|| ನೆಹರೂರವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು.

ಗ್ರೀಸಿನಿಂದ ತುರ್ಕಿಗೆ ಜನರ ಓಟ

ಯುಗೋಸ್ಲಾವಿಯಾ ಮತ್ತು ಅಲ್ಬೇನಿಯಾಗಳಿಗೆ ದಕ್ಷಿಣದಲ್ಲಿ ಗ್ರೀಸ್ ಗಡಿ ಪ್ರದೇಶದೊಳಗೆ ಕಮ್ಯೂನಿಸ್ಟ್ ಪಕ್ಷದವರು ನಡೆಸುತ್ತಿರುವ ಕೊಲೆ ದರೋಡೆಗಳನ್ನು ತಪ್ಪಿಸಿಕೊಳ್ಳಲು ಥ್ರೇಸಿನಲ್ಲಿ ನೆಲೆಸಿದ್ದ ಅನೇಕ ಜನರು ಮನೆ, ಮಠಗಳನ್ನು, ಆಸ್ತಿಪಾಸ್ತಿಗಳನ್ನೂ ತೊರೆದು ತುರ್ಕಿಗೆ ಓಡಿಹೋಗುತ್ತಿದ್ದಾರೆಂದು ವರದಿಯಾಗಿದೆ

ಸರ್ಕಾರದ ಹೊಸ ವ್ಹಿಪ್

ಕೇಂದ್ರ ಶಾಸನ ಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಚೀಫ್ ವ್ಹಿಪ್ ಆಗಿರುವ ಶ್ರೀ ಸತ್ಯನಾರಾಯಣ ಸಿನ್ಹರವರನ್ನು ಕೇಂದ್ರ ತಾತ್ಕಾಲಿಕ ಸರ್ಕಾರದ ವ್ಹಿಪ್ ಆಗಿ ನೇಮಿಸಲಾಗಿದೆ. ೧೯೪೦ ರಿಂದ ಸರ್ಕಾರಕ್ಕೆ ಇದುವರೆವಿಗೆ ೪೭ ಬಾರಿ ಸೋಲು ಉಂಟಾಗಿದ್ದಾಗ, ಅಲ್ಲದೆ ಆಸೆಂಬ್ಲಿ ಅಧ್ಯಕ್ಷ ಸ್ಥಾನಕ್ಕೆ ಸರ್ಕಾರದ ವಿರುದ್ಧವಾಗಿ ನಿಂತು ಶ್ರೀ ಮಾವಲಂಕರರು ಜಯಶೀಲರಾಗಿರುವರು.

ಭಾರತೀಯ ಭಾಷೆಗಳಲ್ಲಿ ಟೆಲಿಪ್ರಿಂಟರ್ ಯಂತ್ರಗಳು

ಪಾಟ್ನಾದ ಸರ್ಕಾರಿ ಕಾಲೇಜಿನ ಪ್ರೊ|| ಶ್ರೀ ಕೆ ಎಸ್. ಮಿತ್ರರವರ ಸಂಶೋಧನೆಯಿಂದ ಸದ್ಯದಲ್ಲೇ ಸಂಸ್ಕೃತ, ಬಂಗಾಳಿ, ಗುಜರಾತಿ, ಮರಾಠಿ ಮತ್ತು ಗುರುಮುಖಿ ಭಾಷೆಗಳಲ್ಲಿ ಟೆಲಿ ಪ್ರಿಂಟರ್ ಯಂತ್ರಗಳನ್ನು ತಯಾರಿಸಲಾಗುವುದು.

ಗ್ರೀಕ್ ದೊರೆಯ ಪುನರಾಗಮನ

ಗ್ರೀಕ್ ದೊರೆಯಾದ ಜಾರ್ಜ್ರವರು ಈ ದಿನ ರಾಜಧಾನಿಯಾದ ಅಥೆನ್ಸ್ಗೆ ವಾಪಸು ಆಗಮಿಸಿದರು. ಗ್ರೀಸಿನಲ್ಲಿ ರಾಜಪ್ರಭುತ್ವವೇ ಇರಬೇಕೆಂದು ಬಹುಮತದಿಂದ ಪ್ರಜೆಗಳು ನಿರ್ಧರಿಸಿದ ಸಲುವಾಗಿ ಇವರು ಹಿಂತಿರುಗಿರುವರು. ಇವರ ಆಗಮನದ ಸಂಬಂಧದಲ್ಲಿ ಯಾವ ಗಲಭೆಗಳೂ ಆಗದಂತೆ ಬಂದೋಬಸ್ತಿನ ಏರ್ಪಾಡುಗಳನ್ನೆಲ್ಲಾ ಮಾಡಲಾಗಿದೆ

ಬರ್ಮದಲ್ಲಿ ಸಮ್ಮಿಶ್ರ ಸರ್ಕಾರ

ಬರ್ಮದಲ್ಲಿ ಫ್ಯಾಸಿಸ್ಟ್ ವಿರೋಧ ಪಕ್ಷದ ನಾಯಕರಾದ ಯು ಆಂಗ್ ಸಾನರವರ ನಾಯಕತ್ವದಲ್ಲಿ ಸರ್ವ ಪಕ್ಷಗಳ ಮಂತ್ರಿ ಮಂಡಲವನ್ನು ಗವರ್ನರ್ ನೇಮಿಸಿದ್ದಾರೆ. ಹೊಸ ಮಂತ್ರಿ ಮಂಡಲದಲ್ಲಿ ಆಂಗ್ ಸಾನರವರ ಪಕ್ಷಕ್ಕೆ ಸೇರಿದ ಐವರೂ, ಕಮ್ಯೂನಿಸ್ಟ್ ಪಕ್ಷದ ಒಬ್ಬರೂ, ರೆಡ್ ಫ್ಲ್ಯಾಗ್ ... ಪಕ್ಷದ ನಾಯಕರಾದ ಟಾನ್ ... ಸ್ವತಂತ್ರ ... ನೇರಿ ಒಟ್ಟು ... ಮಂದಿ ಇರುವರು ... ಇವನ್ನು ... ಹಿಂದೂಸ್ತಾನದ ... ನವರ ಹೆಸರಿಗೆ ... ಇರುವ ... ಇಗಳನ್ನೆಲ್ಲಾ ಇವರಿಗೆ ಕೊಡಲಾಗಿದೆ

ದೇವಾಸ್ ಸಂಸ್ಥಾನದಲ್ಲಿ ಸುಧಾರಣೆ

ಬಹು ಸಂಖ್ಯಾತ ಚುನಾಯಿತ ಪ್ರತಿನಿಧಿಗಳನ್ನೊಳಗೊಂಡ ಶಾಸನ ಸಭೆಯೊಂದನ್ನು ನೇಮಿಸುವುದಾಗಿ ದೇವಾಸ್ ಸಂಸ್ಥಾನದ ರಾಜರು ದಸರ ಹಬ್ಬದ ಪ್ರಾರಂಭದ ದಿನ ... ರಂಭಿಸುತ್ತಾ ಘೋಷಿಸಿದ್ದಾರೆ. ಶಾಸನ ಸಭೆಯು ಒಪ್ಪಿಸುವ ಪಟ್ಟಿಯ ... ಮಂತ್ರಿಗಳನ್ನು ನೇಮಿಸಿಕೊಳ್ಳುವುದಾಗಿಯೂ ಅವರು ತಿಳಿಸಿದ್ದಾರೆ. ಇದಲ್ಲದೆ ಈವೇ ದಿವಾನರೂ ಸೇರಿ ಇಬ್ಬರು ಮಂತ್ರಿಗಳನ್ನು ನೇಮಿಸುವುದಾಗಿಯೂ ಹೇಳಿದ್ದಾರೆ.

ನಾಗಾರಾಣಿಯ ಬಿಡುಗಡೆಗಾಗಿ ಒತ್ತಾಯ

ಅಸ್ಸಾಂ ಬಳಿ ಇರುವ ನಾಗಾ ಪರ್ವತಗಳ ರಾಣಿ ಗೈಡಲೋ ಎಂಬುವಳನ್ನು ಬಿಡುಗಡೆ ಮಾಡ ಬೇಕೆಂದು ಕೇಂದ್ರ ಸರ್ಕಾರದವರನ್ನು ಅಸ್ಸಾಂ ಕಾಂಗ್ರೆಸ್ಸಿನವರು ಒತ್ತಾಯ ಪಡಿಸುತ್ತಿದ್ದಾರೆ. ಈಕೆಗೆ ೧೯೩೨ ರ ಕರ ನಿರಾಕರಣ ಚಳುವಳಿ ಸಂದರ್ಭದಲ್ಲಿ ಜೀವಾವಧಿ ಶಿಕ್ಷೆಯಾಗಿತ್ತು. ಕಳೆದ ಫೆಬ್ರವರಿಯಲ್ಲಿ ಕಾಂಗ್ರೆಸ್ ಸರ್ಕಾರವು ಈ ವರನ್ನು ಬಿಡುಗಡೆ ಮಾಡಿದ್ದಿತು. ಕೇಂದ್ರ ಸರ್ಕಾರದ ಆಡಳಿತಕ್ಕೆ ಒಳಪಡದೇ ಇರುವ ಪ್ರದೇಶಕ್ಕೆ ಈಕೆ ಸಂಬಂಧಪಟ್ಟಿದ್ದರಿಂದ ಕೈಸರಾಯರ ಆಜ್ಞೆ ಪ್ರಕಾರ ಇವರನ್ನು ಮತ್ತೆ ಬಂಧಿಸಿ ಸೆರೆಮನೆಯಲ್ಲಿಡಲಾಗಿದೆ.

ಅಮೇರಿಕಾಕ್ಕೆ ನಿಯೋಗ

ಸ್ವಂತ ವರ್ತಮಾನ] ಬೆಂಗಳೂರು ೨೮

ಈ ನಗರದ ಆರೋಗ್ಯಾಧಿಕಾರಿಗಳಾದ ಶ್ರೀ ಶೇಷಗಿರಿಯವರನ್ನು ಆರೋಗ್ಯ ವಿಚಾರಗಳಲ್ಲಿ ... ವರ್ಷಗಳ ಕಾಲ ಶಿಕ್ಷಣ ಪಡೆಯುವುದಕ್ಕಾಗಿ ಅಮೇರಿಕಕ್ಕೆ ನಿಯೋಗ ಕಳುಹಿಸಲಾಗುವುದೆಂದು ಗೊತ್ತಾಗಿದೆ.

* ಪ್ರಸಕ್ತ ಎಂಜಿನಿಯರಾದ ಶ್ರೀ|| ... ಎಕ್ಸಿಕ್ಯೂಟಿವ್ ಎಂಜಿನಿಯರನ್ನಾಗಿ ... ಗ್ರೇಡಿನಲ್ಲಿ ಬಡ್ತಿ ಕೊಡಲಾಗಿದೆ.

ಶ್ರೀ ವೈ. ಎಂ. ಸಿ. ಎ. ಸಭಾಂಗಣದಲ್ಲಿ ನಿನ್ನೆ ರಾಜಾರಾಂ ಮೋಹನರಾಯರ ೧೧೪ನೇ ವಾರ್ಷಿಕ ದಿನಾಚರಣೆಯು ಮಾಜಿ ದಿವಾನರಾದ ಸರ್ ಬ್ಯಾನರ್ಜಿರವರ ಅಧ್ಯಕ್ಷತೆಯಲ್ಲಿ ಜರುಗಿತು.

ವಿದ್ಯಾರ್ಥಿಗಳಿಗೆ ಸಹಾಯ

ನಂಜನಗೂಡು ೨೭

ಇಲ್ಲಿನ ಶಂಕರಮಠದ ವಿದ್ಯಾರ್ಥಿ ಭೋಜನ ವ್ಯವಸ್ಥಾ ಸಭೆಯ ಆಶ್ರಯದಲ್ಲಿ ಕಳೆದ ವರ್ಷ ೧೬ ವಿದ್ಯಾರ್ಥಿಗಳಿಗೆ ವ್ಯಾಸಂಗ ಮತ್ತು ಭೋಜನದ ಸೌಕರ್ಯವನ್ನು ಒದಗಿಸಲಾಗಿತ್ತು. ಕಳೆದ ವರ್ಷ ಒಟ್ಟು ... ವಸೂಲಾಗಿ ... ವೆಚ್ಚವಾಗಿದೆ. ಸ್ಥಳ ಪರಸ್ಥಳಗಳ ಅನೇಕ ಮಹನೀಯರು ಉದಾರವಾಗಿ ಸಹಾಯ ಮಾಡಿರುತ್ತಾರೆ. ಈಗಿನ ದಿನಸಿ ಧಾರಣೆಯಲ್ಲಿ ಇನ್ನೂ ಹೆಚ್ಚಿನ ಸಹಾಯವು ಬೇಕಾಗಿರುವುದರಿಂದ ಆಸ್ತಿಕ ಮಹನೀಯರು ... ನೆರವು ನೀಡಬೇಕೆಂದು ಕೋರಲಾಗಿದೆ.

...ಜನ್ನಾರವರು ಅವಶ್ಯ ಬಿದ್ದಲ್ಲಿ ... ಹುದಾಗಿಯೂ ... ವಿವನ್ನು ... ಬೇಕು. ... ಪಾಕಿಸ್ತಾನಿ ... ಗೆ ... ದ ... ಭಾ...

ಸಾಧ್ವಿ

ತಾ|| ೨೮-೯-೪೬ ಶನಿವಾರ

ಬರ್ಮಾದಲ್ಲಿ ರಾಷ್ಟ್ರೀಯ ಸರ್ಕಾರ

ನಮ್ಮ ದೇಶದಲ್ಲಿರುವಂತೆಯೇ ಬರ್ಮಾದಲ್ಲಿಯೂ ರಾಷ್ಟ್ರೀಯ ಸರ್ಕಾರವನ್ನು ಸ್ಥಾಪಿಸಲಾಗಿದೆ. ಅಲ್ಲಿನ ಪ್ರಮುಖ ರಾಜಕೀಯ ಪಂಗಡಗಳ ಪ್ರತಿನಿಧಿಗಳು ಅದರಲ್ಲಿರುವರು. ಈ ಬಗ್ಗೆ ಕೆಲವು ದಿನಗಳಿಂದ ಸಂಧಾನವು ನಡೆದು ಮೇಲ್ಕಂಡಂತೆ ವ್ಯವಸ್ಥೆ ಮಾಡಲಾಗಿದೆ. ಇದೊಂದು ಸಂತೋಷದ ವಾರ್ತೆ. ಗಾಳಿಯು ಎತ್ತ ಬೀಸುತ್ತಿದೆಯೆಂಬುದನ್ನು ಇದು ಸೂಚಿಸುತ್ತದೆ.

ಹಿಂದೂಸ್ಥಾನದಂತೆಯೇ ಬರ್ಮಾದಲ್ಲಿಯೂ ಕೆಲವು ದಿನಗಳಿಂದ ಅಶಾಂತಿ ಮತ್ತು ಅಸಮಾಧಾನಗಳು ತಾಂಡವವಾಡುತ್ತಿದ್ದವು. ಇದರಿಂದ ಅಲ್ಲಿನ ಎಲ್ಲಾ ಪಕ್ಷಗಳ ಜನರೂ ಆಂದೋಳನಗಳನ್ನು ನಡೆಸುತ್ತಿದ್ದರು. ಮುಷ್ಕರಗಳು ಸಾರ್ವತ್ರಿಕವಾಗಿದ್ದವು. ಪೋಲೀಸಿನವರೂ, ಸರ್ಕಾರಿ ನೌಕರರೂ ಸಹ ಪ್ರಚಂಡ ಮುಷ್ಕರವನ್ನು ಆರಂಭಿಸಿದ್ದರು. ಆಡಳಿತದ ಯಾವ ವರ್ಗವೂ ಹತೋಟಿಯಲ್ಲಿರಲಿಲ್ಲ. ಮಿಲಿಟರಿಯವರ ಸಹಾಯದಿಂದ ದಿನಚರಿ ಕೆಲಸಗಳನ್ನು ಸಾಗಿಸಬೇಕಾಗಿತ್ತು. ಇದೂ ಸಹ ಅಸಾಧ್ಯವಾಗಿ ಪರಿಣಮಿಸಿತು. ಕಡೆಗೆ ರಾಷ್ಟ್ರೀಯ ಸರ್ಕಾರವನ್ನು ಸ್ಥಾಪಿಸುವಂತೆ ಆಳರಸರು ಒಪ್ಪಿದರು.

ನೆರೆಯಲ್ಲಿರುವ ಹಿಂದೂಸ್ಥಾನದಲ್ಲಿ ಪ್ರಜೆಗಳ ಪ್ರಮುಖರಿಂದಲೇ ಆಡಳಿತವು ನಡೆಯುತ್ತಿರುವಾಗ ಬರ್ಮಾದ ಜನರು ಹಳೆಯ ಸರ್ಕಾರಕ್ಕೇ ಶರಣು ಹೊಡೆಯುವರೇ? ಎಂದಿಗೂ ಇಲ್ಲ. ಯುದ್ಧದ ಪ್ರಮುಖ ರಂಗಸ್ಥಳಗಳಲ್ಲಿ ಒಂದಾಗಿ, ಜಪಾನೀಯರ ಆಕ್ರಮಣಕ್ಕೆ ತುತ್ತಾಗಿ, ಅವರನ್ನು ಓಡಿಸಲು ಸರ್ವಸ್ವವನ್ನೂ ತ್ಯಾಗಮಾಡಿದ ವೀರರು ಈಗ ಸುಮ್ಮನೆ ಕೈಕಟ್ಟಿ ಕುಳಿತುಕೊಳ್ಳುವರೆ? ಹಿಂದೂಸ್ಥಾನದಂತೆಯೇ ತಮಗೂ ರಾಷ್ಟ್ರೀಯ ಸರ್ಕಾರ ಬೇಕೆಂದು ಚಳುವಳಿ ಹೂಡಿದರು. ತಮ್ಮ ನ್ಯಾಯವಾದ ಕೋರಿಕೆಯನ್ನು ಈಡೇರಿಸಿಕೊಂಡರು. ಇದಕ್ಕಾಗಿ ಅವರು ಅಭಿನಂದನಾರ್ಹರು.

ನಮ್ಮ ದೇಶಕ್ಕಿಂತಲೂ ಬರ್ಮವು ಒಂದು ಹೆಜ್ಜೆ ಮುಂದೆ ಹೋಗಿದೆಯೆನ್ನಬಹುದು. ಇಲ್ಲಿ ಇನ್ನೂ ಮುಸ್ಲಿಂ ಲೀಗಿನವರು ಸರಕಾರದಲ್ಲಿ ಭಾಗ ವಹಿಸಿಲ್ಲ. ಅಲ್ಲಿ ಎಲ್ಲ ಪಂಗಡದವರೂ ಸೇರಿದ್ದಾರೆ. ರಾಜಕೀಯ ಧ್ಯೇಯಗಳಲ್ಲಿ ಪರಸ್ಪರ ಭಿನ್ನಾಭಿಪ್ರಾಯಗಳನ್ನು ಹೊಂದಿದ್ದ ಪಕ್ಷಗಳೆಲ್ಲವೂ ಈಗ ಅವುಗಳನ್ನು ಬದಿಗೊತ್ತಿ ಒಂದುಗೂಡಿವೆ. ಈ ಭಾಗದಲ್ಲಿ ಬರ್ಮವು ಭರತಖಂಡಕ್ಕೆ ಪಾಠವನ್ನು ಕಲಿಸಿದೆ. ಇದರ ಪರಿಣಾಮವು ಮಿ|| ಜಿನ್ನಾ ಮತ್ತು ಅವರ ಅನುಯಾಯಿಗಳ ಮೇಲೆ ಆಗಬಾರದೇ?

ಭಾರತ ಸರ್ಕಾರದ ನೀತಿ

ಹೊರ ದೇಶಗಳಲ್ಲಿ ರಾಯಭಾರಿಗಳ ಸಂಖ್ಯೆ, ಸ್ಥಾನ ಮಾನಗಳನ್ನು ಹೆಚ್ಚಿಸಲಾಗುವುದು. ಮತ್ತು ಅವರಿಗೆ ಕಾರ್ಯಸೂಚನೆಯನ್ನು ನೇರವಾಗಿ ಹಿಂದೂಸ್ಥಾನದಿಂದಲೇ ಕೊಡಲಾಗುವುದು. ಎಂದು ಪಂಡಿತ ನೆಹರೂರವರು ತಿಳಿಸಿದ್ದಾರೆ.

ಪಾಕೀಸ್ಥಾನಕ್ಕೆ ಪ್ಯಾಲಸ್ಟೈನ್ ಅರಬ್ಬರ ಬೆಂಬಲ

ಭಾರತದಲ್ಲಿ ಲೀಗಿನವರು ಕೋರುತ್ತಿರುವ ಪಾಕೀಸ್ಥಾನಕ್ಕೂ ಪ್ಯಾಲಸ್ಟೈನ್ ಬಗ್ಗೆ ಆಲೋಚಿಸುತ್ತಿರುವ ವಿಭಜನೆಗೂ ಬಹಳ ವ್ಯತ್ಯಾಸವಿದೆ. ಭಾರತದ ಮುಸಲ್ಮಾನರು ಅಲ್ಪ ಸಂಖ್ಯಾಂತರಲ್ಲ. ಅವರು ಭಾರತವನ್ನು ಗೆದ್ದು ಹೆಮ್ಮೆಪಟ್ಟುಕೊಂಡ ಜನಾಂಗದ ವಂಶೀಯರು; ಅನೇಕ ಶತಮಾನಗಳ ಕಾಲ ಭಾರತವನ್ನು ಆಳಿದ ಧೀರರವರು. ಆದ್ದರಿಂದ ಭಾರತದ ಮುಸಲ್ಮಾನರ ಆಶೋತ್ತರವಾದ ಪಾಕೀಸ್ಥಾನಕ್ಕೆ ಎಲ್ಲ ಅರಬ್ಬರ ಸಹಾನುಭೂತಿ ಮತ್ತು ಬೆಂಬಲ ದೊರೆಯುವುದು ಎಂದು ಪ್ಯಾಲಸ್ಟೈನ್ ಅರಬ್ಬ ಹೈಯರ್ ಕಮಿಟಿ ಕಾರ್ಯದರ್ಶಿ ಡಾ|| ಖಲೀದಿಯವರು ಹೇಳಿಕೆ ಇತ್ತಿದ್ದಾರೆ.

ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯ

ಬ್ರಿಟಿಷ್ ಪ್ರಧಾನಿ ಮಿ|| ಅಟ್ಲಿಯವರು ಸಧ್ಯದಲ್ಲೇ ಮಾಡಲಿರುವ ಬದಲಾವಣೆಗಳಲ್ಲಿ ಇಂಡಿಯಾ ಕಛೇರಿಗೆ ಸಂಬಂಧಿಸಿದ ಹುದ್ದೆಗಳನ್ನೆಲ್ಲಾ ಕೈಬಿಡುವ ಸೂಚನೆಯಿದೆ. ವೈಟ್ ಹೌಸಿನಲ್ಲಂತೂ ಇಂಡಿಯಾ ಕಛೇರಿ ಸತ್ತಂತೆಯೇ ಆಗಿದೆ. ಭಾರತದ ಸ್ವಾತಂತ್ರ್ಯದ ಮುಸೂದೆಯನ್ನು ಲಾರ್ಡ್ ಪೆಥಿಕ್ ಲಾರೆನ್ಸ್‌ರೇ ಮಾಡುವ ನಿರೀಕ್ಷಣೆಯಿದೆ.

ಮಾಲಟೋವ್ ಭೇಟಿಗೆ ಭಾರತದ ಪ್ರತಿನಿಧಿಗಳು

ಬ್ರಿಟನ್ನಿನ ಇಂಡಿಯಾ ಲೀಗ್ ಕಾರ್ಯದರ್ಶಿ ಶ್ರೀ ವಿ. ಕೆ. ಕೃಷ್ಣ ಮೆನನ್‌ರವರು ಲಂಡನ್ನಿನಲ್ಲಿ ಭಾರತದ ಡೆಪ್ಯುಟೀ ಹೈ ಕಮೀಷನರಾದ ಶ್ರೀ ವೆಲ್ಲೋಡಿಯವರೊಡಗೆ ರಷ್ಯದ ವಿದೇಶಾಂಗ ಮಂತ್ರಿ ಮಾಲಟೋವ್‌ರವರನ್ನು ಭೇಟಿ ಮಾಡಲು ನಿನ್ನೆ ಪ್ಯಾರಿಸ್ಸಿಗೆ ಆಗಮಿಸಿದ್ದಾರೆ.

† ನಾಳೆ ಸಾಯಂಕಾಲ ೬ ಘಂಟೆಗೆ ಸ್ವಾಮಿ ಸೋಮನಾಥಾನಂದರು ವಾಣಿವಿಲಾಸ ಮೊಹಲ್ಲ, ಶ್ರೀ ರಾಮಕೃಷ್ಣಾಶ್ರಮದಲ್ಲಿ ಬಗವದ್ಗೀತೆಯ ವಿಷಯವಾಗಿ ಭಾಷಣ ಮಾಡುತ್ತಾರೆ.

ಗಾಂಧಿ ಜಯಂತಿ

ದೇವರಾಜ ಮೊಹಲ್ಲಾ ಕಾಂಗ್ರೆಸ್ ಸಮಿತಿ ಆಶ್ರಯದಲ್ಲಿ ಇದೇ ೩೦ ನೇ ತಾ|| ಪಡುವಾರಹಳ್ಳಿಯಲ್ಲಿ ಗಾಂಧಿ ಜಯಂತಿ ಉತ್ಸವವು ಜರುಗುವುದು. ಅಂದು ಸಂಜೆ ೪-೩೦ಕ್ಕೆ ಮೆರವಣಿಗೆ ಮತ್ತು ೬ ಗಂಟೆಗೆ ಬಹಿರಂಗ ಸಭೆ ನಡೆಯುವುದು.

Edited, printed and published by A. R. Nagarajan at the Sadhvi Press D. Subbiah Road, Mysore

ಗಾಂಧಿ-ನೆಹರೂರೊಡನೆ ವೈಸರಾಯರ ಭೇಟಿ

ವೈಸರಾಯ್ ವೇವಲ್ಲರು ಮೊನ್ನೆ ಗಾಂಧಿಜಯವರನ್ನೂ, ಪಂ|| ನೆಹರೂರವರನ್ನೂ ಪ್ರತ್ಯೇಕವಾಗಿ ಭೇಟಿ ಮಾಡಿದರು. ಗಾಂಧೀಜಿಯವರೊಡನೆ ೭೫ ನಿಮಿಷಗಳ ಕಾಲವೂ, ನೆಹರೂರವರೊಡನೆ ೬೦ ನಿಮಿಷಗಳ ಕಾಲವೂ ಚರ್ಚೆ ನಡೆಸಿ ಮಿ|| ಜಿನ್ನಾರೊಡನೆ ತಾವು ನಡೆಸಿದ ಮಾತು ಕತೆಗಳ ಸಾರವನ್ನು ವೈಸರಾಯರು ವಿವರಿಸಿದರೆಂದು ಗೊತ್ತಾಗಿದೆ. ಭೇಟಿ ಮುಗಿದನಂತರ ಗಾಂಧಿಜಯವರು ಪತ್ರಿಕಾ ಪ್ರತಿನಿಧಿಗಳು ಕೇಳಿದ ಪ್ರಶ್ನೆಗೆ ಉತ್ತರವೀಯುತ್ತ "ನಾನು ಯಾವಾಗಲೂ ಆಶಾವಾದಿ" ಎಂದು ತಿಳಿಸಿದರು. ಇತ್ತೀಚಿನ ಈ ಭೇಟಿಗಳಿಂದ ಮಿ|| ಜಿನ್ನಾರವರ ಮನಸ್ಸು ಪರಿವರ್ತನೆಯಾಗಿಲ್ಲವೆಂದು ಸುದ್ದಿ ಹೊರಬಿದ್ದಿದೆ.

ಕಚ್ರೂರವರ ದಸ್ತಗಿರಿ ಆಜ್ಞೆ

ಕಾಶ್ಮೀರ ಸಂಸ್ಥಾನದವರು ಹಾಕಿದ್ದ ನಿಷೇಧಾಜ್ಞೆಯನ್ನು ಉಲ್ಲಂಘಿಸಿದ್ದಕ್ಕಾಗಿ ಸಂಸ್ಥಾನದ ಪ್ರಜಾ ಸಮ್ಮೇಳನದ ಕಾರ್ಯದರ್ಶಿ ಶ್ರೀ ದ್ವಾರಕಾನಾಥ ಕಚ್ರೂರವರನ್ನು ದಸ್ತಗಿರಿ ಮಾಡುವಂತೆ ಕಾಶ್ಮೀರ ಸರ್ಕಾರದವರು ಆಜ್ಞೆ ಮಾಡಿದ್ದಾರೆ. ಈ ಮಧ್ಯೆ ಕಚ್ರೂರವರು ದೆಹಲಿಗೆ ತೆರಳಿದ್ದಾರೆ.

ಬಸ್ ಅನಾಹುತ

ಶಿವಮೊಗ್ಗ ೨೭

ಭದ್ರಾವತಿಗೂ-ಶಿವಮೊಗ್ಗಾಕ್ಕೂ ಓಡಾಡುತ್ತಿದ್ದ ರಾ ... ಮೋಟಾರ್ ಸರ್ವಿಸ್ ಬಸ್ಸು ನಿನ್ನೆ ಮೊಗಚಿಕೊಂಡು ಭದ್ರಾವತಿಯ ವರ್ತಕರಾದ ಶ್ರೀ ಬಾಲಕೃಷ್ಣರಾವ್ ಎಂಬುವರು ಸ್ಥಳದಲ್ಲೇ ಮೃತರಾದರೆಂದೂ, ಮೂರು ನಾಲ್ಕು ಮಂದಿಗೆ ಗಾಯಗಳಾಗಿವೆಯೆಂದೂ ಗೊತ್ತಾಗಿದೆ. ಬಸ್ಸಿನ ಡ್ರೈವರನ್ನು ಪೋಲೀಸರು ದಸ್ತಗಿರಿ ಮಾಡಿ ಮುಂದಿನ ಕ್ರಮ ಜರುಗಿಸುತ್ತಿದ್ದಾರೆ.

ಮೈಸೂರು ಸಿಟಿ ರೇಷನಿಂಗ್

No. R 6-81-46-47

೧೯೪೬ ನೇ ಇಸವಿ ಸೆಪ್ಟೆಂಬರ್ ಮಾಹೆ ೩೦ ನೇ ತಾ|| ಸೋಮವಾರ ದಿವಸ ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ, ಮೊಹಲ್ಲಾ ಸಬ್ ಗೋಡೌ, ವರ್ತಕರು ಡಿಪೋ ಮತ್ತು ಸಹಕಾರ ಸಂಘಗಳಲ್ಲಿರುವ, ದಿನಸಿಗಳ ಎಣಿಕೆ ಮಾಡಬೇಕಾಗಿರುವುದರಿಂದ, ಆ ದಿವಸ ಡಿಪೋಗಳು ಮುಚ್ಚಲ್ಪಡುತ್ತವೆ.

(ಸಹಿ) ಅಬ್ದುಲ್ ರಜಾಕ್,
ರೇಷನಿಂಗ್ ಆಫೀಸರ್,
ಮೈಸೂರು ಸಿಟಿ

೨೮-೯-೪೬,
ಮೈಸೂರು

ಭಾರಿ ವರ್ತಕರುಗಳ ... ಮೊಕದ್ದಮೆ

ಸಾರದ ಹತೋಟಿ ಆಜ್ಞೆಯ ... ಗಳನ್ನು ಉಲ್ಲಂಘಿಸಿ ಮಾರಾಟ ನಡೆಸಿದ ಆಪಾದನೆ ಮೇಲೆ ತಮಿಳುನಾಡಿನ ಪ್ರಸಿದ್ಧ ವ್ಯಾಪಾರಿಗಳಾದ ರಾಜಾ ... ಣ್ಣಾ ಮಲೈ ಚೆಟ್ಟಿಯಾರ್, ಕುಮಾರ ರಾಜಾ ಸರ್ ಎಂ. ಎ. ಮುತ್ತಯ್ಯ ಚೆಟ್ಟಿಯಾರ್ ಮುಂತಾದ ೯ ಮಂದಿಯ ... ಮೊಕದ್ದಮೆ ಹೂಡಲು ಮದ್ರಾಸ್ ... ರ ಅನುಮತಿ ಕೊಟ್ಟಿದೆ.

ಮಹಾತ್ಮರ ಚರಕಾ ...

ಸತ್ಯಜೀವನಕ್ಕೆ ಚರಕಾ ಸಹ ... ಕಾನುಯಾಯಿಗಳು ಭಾರತದ ... ಭಾರತೀಯರ ನಿಜವಾದ ಸೇವಕರು, ಭಾರತದ ಕೀರ್ತಿ, ಗೌರವ, ಪ್ರ... ಳು ಪ್ರಪಂಚದಲ್ಲಿ ಹೆಚ್ಚಾಗುವುವು ... ಮಹಾತ್ಮ ಗಾಂಧಿಯವರು ಮೊನ್ನೆ ... ಪ್ರಾರ್ಥನಾ ಸಭೆಯಲ್ಲಿ ಭಾಷಣ ಮ... ದರು.

ವಿಹಾರ ಕೂಟ

ಮೈಸೂರು ತಾಲ್ಲೋಕು ಉಪಾಧ್ಯಾ... ರ ಸಂಘದವರು ರಾಯನಕೆರೆಯಲ್ಲಿ ... ಡಿಸಿದ್ದ ವಿಹಾರ ಕೂಟವು ೨೬-೯-೪೬ ... ಮೈಸೂರು ತಾಲ್ಲೋಕು ರೇಂಜ್ ಅ... ಟ್ ಇನ್ಸ್‌ಪೆಕ್ಟರ್ ಶ್ರೀ ಎಸ್. ಆರ್. ಕೃ... ನಾಚಾರಾಯರ ನೇತೃತ್ವದಲ್ಲಿ ನೆರವೇ... ಸಂಘದ ಸದಸ್ಯರುಗಳನೇಕರು ಬಂದಿದ್ದ ... ಅಲ್ಲಿ ದನಗಳನ್ನು ಸಾಕುವುದು, ಹಾ... ರೆಯುವ ಮತ್ತು ಕೀಳುವ ಕ್ರಮ... ತ್ಯಾದಿಗಳನ್ನು ಅಲ್ಲಿನ ಅಧಿಕಾರಿಗಳ ... ಯದಿಂದ ಪರಿಶೀಲಿಸಲಾಯಿತು.

ನೋಟೀಸು

ಮೈಸೂರು ಸಿಟಿ ವಾಣೀವಿಲಾಸ ... ಕೇಟ್ಟಿನಲ್ಲಿ ಹೊಸದಾಗಿ ಕಟ್ಟಿರುವ ... ಗೆಗಳ ಪೈಕಿ ೬ ಮಳಿಗೆಗಳನ್ನು ಮೂ... ನ ಬಾಡಿಗೆಗೆ ಪಡೆಯುವ ಹಕ್ಕನ್ನು ತಾ ... ತಾ ೨೨-೧೦-೪೬ ನೇ ದಿವಸ ದಿವ... ಗಂಟೆಗೆ ದೇವರಾಜ ಮಾರ್ಕೆಟ್ ಬಳಿ ... ರಂಗವಾಗಿ ಹರಾಜು ಮೂಲಕ ವಿಲೇ... ಮಾಡಿಸಲಾಗುತ್ತೆ. ಮಳಿಗೆಗಳನ್ನು ... ಡಿಗೆಗೆ ಪಡೆಯಲು ಇಷ್ಟವುಳ್ಳವರು ... ಜು ಕಾಲಕ್ಕೆ ಹಾಜರಾಗಿ ಭಿಡ್ ಮಾ... ದ ಮಳಿಗೆಗಳನ್ನು ಪಡೆಯಬಹುದು ... ಟ್ಟಿಗೆ ಸಂಗತಿಗಳನ್ನು ಮುನಿಸಿಪಲ್ ಆ... ಸಿನಲ್ಲಿ ಆಫೀಸು ನಡೆಯುವ ಕಾಲದ... ತಿಳಿಯಬಹುದು.

(ಸಹಿ) ಆರ್. ರಾಮಚಂದ್ರರಾವ್,
ಚಾಂಭೋರೆ, ಪ್ರೆಸಿಡೆಂಟ್,
ಸಿಟಿ ಮುನಿಸಿಪಲ್ ಕೌನ್ಸಿಲ್,
ಮೈಸೂರು.

ನಿಯೋರವರ

ಹರಾಜು ತಾರೀಖನ್ನು ಗಮನಿಸಿ!

ಎಲ್ಲೊ ಕ್ಕೆ ಸಾಮಾನುಗಳು ಹರಾಜು ಮಾಡಲ್ಪಡುವವು. ನಿಮ್ಮಲ್ಲಿ ಹರಾಜು ಮಾಡುವ ಸಾಮಾನುಗಳಿದ್ದರೆ ನಮ್ಮಲ್ಲಿಗೆ ಕಳುಹಿಸಿ. ನಮ್ಮ ಹರಾಜಿನಲ್ಲಿ ತಮಗೆ ಹೆಚ್ಚಿನ ಲಾಭವಿದೆ

ವಿವರಗಳಿಗೆ —

ನಿಯೋ ಫರ್ನಿಚರ್ ಕಂಪೆನಿ

ಇರ್ವಿನ್ ರಸ್ತೆ : ಮೈಸೂರು

OPERA TALKIES

ತಾ|| 28—9—46ರಿಂದ
ಪ್ರತಿ ದಿನ ಮೂರು ಆಟಗಳು

ಮಾಯಾ ಮಚ್ಛೀಂದ್ರ
(ತೆಲುಗು)

ಕನ್ನಾಂಬ, ಮಾಲತಿ,
ಗೌರೀನಾಥ ಶಾಸ್ತ್ರಿ, ಅದ್ದಂಕಿ
ಕೃಷ್ಣಮೂರ್ತಿ ಮುಂತಾದವರು

ಫೋ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಭಾನುವಾರ ೨೯—೯—೪೬ [ಸಂಚಿಕೆ ೫೫

೩೪೦ ಕೋಟಿ ರೂ.ನ ಭಾರತ ರೈಲ್ವೆ ಯೋಜನೆ

...ರ್ಮಾ ಸರ್ಕಾರದ ಗುರಿ

...ಖಂಡದ ಐಕ್ಯತೆಯನ್ನು ಸ್ಥಾಪಿ... ಎಷ್ಟು ರಾಜ್ಯಗಳ ಸಂಯುಕ್ತ... ನ್ನು ರಚಿಸುವುದೇ ತಮ್ಮ ಸರ್ಕಾರ... ಯೆಂದು ಹೊಸ ಬರ್ಮಾ ಸರ್ಕಾರ... ನ ಆಂಗ್‌ಸಾನರು ಹೇಳಿರುತ್ತಾರೆ... ನಗಳನ್ನು ಮುಕ್ತಾಯಗೊಳಿಸಿ ನಾಗ... ಸ್ವತಂತ್ರ್ಯದ ಅಡ್ಡಿಗಳನ್ನು ನಿವಾರಿ... ತಮ್ಮ ಪ್ರಥಮ ಕರ್ತವ್ಯವೆಂದು ...ಳಿಸುತ್ತಾರೆ.

...ಜಾಬಿನಲ್ಲಿ ಸರ್ಕಾರಿ ನೌಕರರ ಮುಷ್ಕರ ?

...ಗೆ ಕೊಡುತ್ತಿರುವ ವೇತನವನ್ನು ...ಬೇಕೆಂಬ ತಮ್ಮ ಬೇಡಿಕೆಗೆ ಪ್ರಾಂ... ಸರ್ಕಾರ ಗಮನ ಕೊಟ್ಟಿಲ್ಲವೆಂದೂ, ಬೇಡಿಕೆಗಳು ಈಡೇರದಿದ್ದರೆ ಅ... ೮ ನೇ ತಾ|| ಅರ್ಧ ಗಂಟೆ ಕಾ... ಷ್ಕರ ನಡೆಸಬೇಕೆಂದೂ ಸರ್ಕಾರಿ ...ಫೆಡರೇಷನ್ನಿನಲ್ಲಿ ಶ್ರೀ ಮಾರ್ಗನ ...ಾಗಿ ಈ ಫೆಡರೇಷನ್ನಿನಲ್ಲಿ ೪೩... ಸಾಂದಿ ಸದಸ್ಯರಿದ್ದಾರೆ. "ಸರ್ವೀ... ಚರ್ಸ್" ನಿಯಮಗಳನ್ನು ರದ್ದು... ವಂತೆ ಅವರು ಪಂ|| ನೆಹರೂರವರ... ...ರಿಸಿದ್ದಾರೆ

...ಂಚಾಯಿಯಲ್ಲಿ ಮತ್ತೆ ಗಲಭೆ

...ನ್ನೆ ಸಂಜೆ ಇದ್ದಕ್ಕಿದ್ದಂತೆ ಬೋ... ...ಯಿಯಲ್ಲಿ ಪರಿಸ್ಥಿತಿ ಮತ್ತೆ ಹದಗೆ... ವರದಿಯಾಗಿದೆ. ಕಾರ್ಪೊರ್ನೆ... ...ಗಳಲ್ಲಿ ಇಂತಹ ಪ್ರಸಂಗಗಳು ಹೆಚ್ಚಿ... ...ಇಲ್ ಪೀರ್ ಪ್ರದೇಶದಲ್ಲಿ ದ್ರಾವ... ...ದ ಸೀಸೆಗಳನ್ನು ಎಸೆಯಲಾಗಿದೆ. ಘಟನೆ ನಡೆದುದು ಇದೇ ಮೊದಲು.

...ಕ್ ದೊರೆಯ ಸಿಂಹಾಸನಾರೋಹಣ

...ರಲ್ಲಿ ನಾಜಿಗಳ ಗಂಡಾಂತರದಿಂ... ...ಗ್ರೀಸನ್ನು ತ್ಯಜಿಸಿ ಲಂಡನ್ನಿನ... ನೋಡುತ್ತಿದ್ದ ಗ್ರೀಕ್ ದೊರೆಯು ...ತನ್ನ ರಾಜಧಾನಿಯಾದ ಅಥೆನ್ಸಿ... ಸಿಂಹಾಸನಾರೋಹಣ ಮಾಡಿದ... ದೊರೆಯು ಲಂಡನ್ನಿನಿಂದ ಸಿಲ್ವಲಂ... ವಿಮಾನ ನಿಲ್ದಾಣದಲ್ಲಿ ಬಂದಿಳಿ... ...ನ್ನು ಸುದ್ದಿ ಸಂಗ್ರಹಕ್ಕಾಗಿ ಬಂ... ...ರು ಅಮೆರಿಕನ್ ಪತ್ರಿಕಾ ಪ್ರತಿನಿ... ದನ್ನಗರಿ ಮಾಡಿ ಒಂದೂಕಾಲು ...ಧನದಲ್ಲಿಡಲಾಗಿತ್ತು.

...ೀಯ ಸಂಸ್ಥೆಗಳಿಗೆ ...ಸ್ ಸ್ಪರ್ಧಿಸಕೂಡದು

...ಬೋರ್ಡು, ಪೌರಸಭೆ ಮುಂ... ...ೀಯ ಸಂಸ್ಥೆಗಳ ಚುನಾವಣೆಯ ...ರು ಕಾಂಗ್ರೆಸ್ ಭಾಗವಹಿಸ ಬಾ... ...ರ್ಣಯವನ್ನು ವೈ|| ಕಾಂ|| ಪ್ರ... ...ಕಾರ್ಯಕಾರಿ ಸಮಿತಿಯಲ್ಲಿ ಅಂ... ...ಬರಂಗ ಅಧಿವೇಶನಕ್ಕೆ ಶಿಫಾ... ...ಡಲಾಗಿದೆ

...ರು ಜಿಲ್ಲಾ ಮೋಟಾರು ...ಲಸಗಾರರ ಸಂಘ

...೧೦-೪೬ ನೇ ಮಂಗಳವಾರ ...ಲ ೮ ಘಂಟೆಗೆ ಪಡ್ಯಾಹೆರಿಂಗ್... ...ರುವ ಕಾಂಗ್ರೆಸ್ ಆಫೀಸಿನಲ್ಲಿ ...ಸಂಘದ ಸಭೆಯು ನಡೆಯು...

ಪೌರ ಸಭೆಯಲ್ಲಿ ಸಭಾ ಪರಿತ್ಯಾಗ

ಹಣದ ದುರುಪಯೋಗದ ಆಪಾದನೆ ಪ್ರಸಂಗ

ಮೈಸೂರು ೨೯

ರಾಜಧಾನಿಯ ಪೌರಸಭೆಯ ಕಮಿಷ್ನರಾದ ಶ್ರೀ|| ಆನಂದ ರಾಮಯ್ಯರನ್ನು ಅಧ್ಯಕ್ಷರು ಕೆಲಸದಿಂದ ಸಸ್ಪೆಂಡ್ ಮಾಡಿರುವ ವಿಚಾರದಲ್ಲಿ ಬಂದ ಉಪಪ್ರಶ್ನೆಗಳಿಗೆ ಅಧ್ಯಕ್ಷರು ಉತ್ತರ ಕೊಡಲು ನಿರಾಕರಿಸಿದುದರಿಂದ ಈ ದಿನ ನಡೆದ ಪೌರಸಭೆಯ ಅಧಿವೇಶನದಲ್ಲಿ ಕಾಂಗ್ರೆಸ್ ಪಕ್ಷದವರು ಸಭಾ ಪರಿತ್ಯಾಗ ಮಾಡಿದರು. ಸರ್ಕಾರದ ಹಣವನ್ನು ದುರುಪಯೋಗಪಡಿಸಿದ ಆಪಾದನೆ ಮೇಲೆ ಶ್ರೀ ಆನಂದ ರಾಮಯ್ಯರನ್ನು ೧-೮-೪೬ ರಿಂದ ಅಧ್ಯಕ್ಷರು ಸಸ್ಪೆಂಡ್ ಮಾಡಿರುವರೆಂದೂ, ಶ್ರೀ ಆನಂದ ರಾಮಯ್ಯರು ಈ ವಿಚಾರದಲ್ಲಿ ಅಪೀಲು ಹಾಕಿಕೊಂಡಿರುವರೆಂದೂ, ಆದರೆ ಆ ವಿಚಾರಕ್ಕೆ ಸಂಬಂಧಪಟ್ಟ ಕಾಗದಗಳಿಂದ ಅಪೀಲನ್ನು ಸಭೆಯ ಮುಂದೆ ಇಡುವ ಅಗತ್ಯವಿಲ್ಲವೆಂದೂ ಸಹ ತಿಳಿಸಲಾಯಿತು.

ಹಲವು ಉಪಪ್ರಶ್ನೆಗಳಿಗೆ ಉತ್ತರ ಕೊಡುವಾಗ ಅಧ್ಯಕ್ಷರು ಈ ರೀತಿ ತಿಳಿಸಿದರು:- ದುರುಪಯೋಗವಾಗಿರುವುದೆಂದು ಹೇಳಲಾಗಿರುವುದು ಸಹಕಾರ ಸಂಘದ ಸಾಮಾನುಗಳು, ಸಂಘಗಳ ರಿಜಿಸ್ಟ್ರಾರವರು ಸಂಘದ ಸರಕುಗಳಲ್ಲಿ ಖೋತಾ ಆಗಿರುವುದಾಗಿ ಸೂಚಿಸಿರುವರು. ಅದರ ಮೇಲೆ ಮೊದಲಿನಂತೆ ಸಸ್ಪೆಂಡ್ ಮಾಡಲಾಗಿದೆ. ಆಪಾದನೆ ವಿಚಾರದಲ್ಲಿ ರಿಜಿಸ್ಟ್ರಾರರು ಯಾವ ತೀರ್ಪನ್ನೂ ಕೊಟ್ಟಿರುವುದಿಲ್ಲ. ಈ ವಿಷಯದಲ್ಲಿ ಅವರೇ ಒಂದು ಅವಾರ್ಡ್ ಕೊಡುವಂತೆ ನಾನು ಕೋರಿದ್ದೇನೆ, ಎಂದು ಅಧ್ಯಕ್ಷರು ತಿಳಿಸಿದರು. ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ಉಪಪ್ರಶ್ನೆಗಳನ್ನು ಹಾಕಿದಾಗ ಅಧ್ಯಕ್ಷರು ಹಲವನ್ನು ನೋಟೀಸ್, ನೋಟೀಸ್ ಎಂದು ಹೇಳಿ ಅನಂತರ ಯಾವ ಪ್ರಶ್ನೆಗೂ ಅವಕಾಶವೀಯುವುದಿಲ್ಲವೆಂದು ಹೇಳಿದರು. ಅದನ್ನು ಪ್ರತಿಭಟಿಸಲು ಶ್ರೀ ಸೀತಾರಾಮಯ್ಯನವರು ಸಭಾ ಪರಿತ್ಯಾಗ ಮಾಡಿದರು. ಅವರೊಡನೆ ಕಾಂಗ್ರೆಸ್ ಪಕ್ಷದ ಇತರರೂ ಸಹ ಹಾಗೆಯೇ ಮಾಡಿದರು.

ಸಭೆಯಲ್ಲಿ ನಾಲ್ಕು ಜನರು ಮಾತ್ರ ಉಳಿದಿದ್ದರು. ಇದು ನಂತರವರೆಗೆ ಸಭೆ...

ಮದ್ರಾಸ್ ನೌಕರರ ಮುಷ್ಕರ

ತಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ಅಕ್ಟೋಬರ್ ಎರಡನೇ ತಾ|| ನಿಂದ ಮುಷ್ಕರ ಹೂಡುವಂತೆ ಮದ್ರಾಸಿನ ನಾನ್ ಗೆಜೆಟೆಡ್ ನೌಕರರು ನಿರ್ಧರಿಸಿದ್ದಾರೆ.

ದೀಪಾವಳಿ ನಿಧಿ

ರಾಜಧಾನಿಯ ಮಹಾಜನ ಹೈಸ್ಕೂಲಿನ ಸಹಾಯಾರ್ಥವಾಗಿ ನಿಧಿಯನ್ನು ಕೂಡಿಸಲು ಶಾಲೆಯ ಮಕ್ಕಳು ಮತ್ತು ಉಪಾಧ್ಯಾಯರು ಕಳೆದ ವರ್ಷದ ಹಾಗೆ ಈ ಸಲವೂ ಮನೆಮನೆಗೆ ಬರುವರು. ಮಹಾಜನರು ಉದಾರವಾಗಿ ಸಹಾಯ ಮಾಡಬೇಕೆಂದು ಪ್ರಾರ್ಥಿಸಲಾಗಿದೆ.

...ತ್ತು ಕಾಂಗ್ರೆಸ್ ಪಕ್ಷದವರು ಸ್ವಲ್ಪ ಹೊತ್ತಿನನಂತರ ಸಭೆಗೆ ಬಂದರು. ಅಧ್ಯಕ್ಷರ ನೀತಿಯನ್ನು ಖಂಡಿಸಲು ಸಭೆಯನ್ನು ಮುಂದಕ್ಕೆ ಹಾಕಬೇಕೆಂದು ಶ್ರೀ ಬಿ. ಸುಬ್ಬರಾಮಸ್ವಾಮಿಯವರು ನಿರ್ಣಯವನ್ನು ಮಂಡಿಸಿದರು. ಇದರ ಮೇಲೆ ವಿಶೇಷ ಕೋಲಾಹಲವಾಯಿತು. ಅನಂತರ ಅಧ್ಯಕ್ಷರು ಮೊಲ್ಕಂಡ ಪ್ರಸಂಗವನ್ನು ಮರೆತು ಬಿಡುವಂತೆ ಕೋರಿದುದಲ್ಲದೆ ಶ್ರೀ ಆನಂದ ರಾಮಯ್ಯರ ಅಪೀಲನ್ನು ಸಭೆಯ ಮುಂದೆ ಇಡುವುದಾಗಿಯೂ ಒಪ್ಪಿಕೊಂಡರು. ಅನಂತರ ಸಭೆಯು ಮುಂದಿನ ಕಾರ್ಯಕ್ರಮಗಳನ್ನು ಶಾಂತವಾಗಿ ಮುಕ್ತಾಯಗೊಳಿಸಿತು.

ನೂತನ ದಿವಾನರಿಗೆ ಬಿನ್ನವತ್ತಳೆ ಕೊಡಲು ಟೌನ್‌ಹಾಲನ್ನು ಕಳೆದ ತಿಂಗಳು ೧೭, ೧೮ ನೇ ತಾ|| ಗಳಲ್ಲಿ ಕೊಟ್ಟದ್ದು ವಿಚಾರದಲ್ಲಿಯೂ, ಕನ್ನೇಗೌಡನ ಕೊಪ್ಪಲಿನ ಬಂಡಿಕಟ್ಟೇ ಕಾರ್ಪೊರ್ನೆ ಮುಂತಾದ ವಿಷಯಗಳಲ್ಲಿಯೂ ಪ್ರಶ್ನೋತ್ತರಗಳಾದುವು. ಒಲಿಂಪಿಯಾ ಟಾಕೀಸ್ ಹಿಂದೆ ಇರುವ ಕಕ್ಕಸನ್ನು ಬದಲಾಯಿಸುವುದಲ್ಲದೆ ಶ್ರೀ ಟಿ. ವಿ. ಕೃಷ್ಣರಾಯರ ಮನೆ ಬಳಿ ಇರುವ ಕಕ್ಕಸನ್ನು ತೆಗೆದುಹಾಕತಕ್ಕದ್ದು; ಚಾಮುಂಡಿಪುರದಲ್ಲಿ ಹಾಲು ಮೈಸೂರು ರೋಡು ಒಂದನ್ನು ತೆರೆಯುವಂತೆ ಸರ್ಕಾರವನ್ನು ಪ್ರಾರ್ಥಿಸುವುದು, "ಬಿ" ವರ್ಗಕ್ಕೆ ಸೇರಿದ ಮುನಿಸಿಪಲ್ ನೌಕರರಿಗೂ ... ... ಕೊಡುವಂತೆ ಸರ್ಕಾರವನ್ನು ಒತ್ತಾಯಪಡಿಸುವ ... ... ಅವರ ಪಿಟ್ಟು, ತೆಂಗಿನಬೀಳು, ... ಮಾಡುವಂತೆ ... ... ಮುಂತಾದ ...

ಭಾರತದ ರೈಲ್ವೆ ಬಡಾವಣೆ

೩೪೦ ಕೋಟಿ ರೂ.ನ ವೆಚ್ಚದಲ್ಲಿ ಹಿಂದೂಸ್ಥಾನದ ರೈಲ್ವೆಯನ್ನು ಬಡಾಯಿಸುವ ಹತ್ತು ವರ್ಷದ ಯೋಜನೆಯು ಮಧ್ಯಂತರ ಸರ್ಕಾರದ ಪರಿಶೀಲನೆಯಲ್ಲಿದೆಯೆಂದು ತಿಳಿದು ಬಂದಿದೆ. ಇದರ ಪ್ರಕಾರ ಪ್ರತಿ ವರ್ಷವೂ ೫೦೦ ಮೈಲಿ ದೂರ ಹೊಸ ರೈಲು ರಸ್ತೆಯನ್ನು ಹಾಕಲಾಗುವುದು. ಸರ್ಕಾರದ ಆದಾಯವ್ಯಯದ ಮೇಲೆ ಹೆಚ್ಚಿನ ಹೊರೆಯನ್ನು ಹಾಕದೆಯೇ ಈ ಯೋಜನೆಯನ್ನು ಕಾರ್ಯಗತ ಮಾಡಲಾಗುವುದು. ಬಾಯಿಲರುಗಳನ್ನು ಸಹ ತಯಾರಿಸಲಾಗುವುದು. ರೈಲ್ವೆ ಪ್ರಯಾಣವನ್ನು ಇನ್ನೂ ಹೆಚ್ಚು ಸುಖಕರವಾಗಿ ಮಾಡಲಾಗುವುದು.

ಹೊಸ ಬರ್ಮಾ ಸರ್ಕಾರದಿಂದ ಒಂದು ಲಕ್ಷ ಟನ್ ಅಕ್ಕಿ

ಮೊನ್ನೆ ತಾನೆ ಬರ್ಮಾದಲ್ಲಿ ಸ್ಥಾಪಿತವಾಗಿರುವ ರಾಷ್ಟ್ರೀಯ ಸರ್ಕಾರದ ಪ್ರಧಾನಿ ಆಂಗ್ ಸಾನ್‌ರವರು ನೆಹರೂ ಸರ್ಕಾರಕ್ಕೆ ಒಂದು ಲಕ್ಷ ಟನ್ ಅಕ್ಕಿಯನ್ನು ಕೊಡುವುದಾಗಿ ತಿಳಿಸಿರುತ್ತಾರೆ. ಅದಕ್ಕೆ ಪ್ರತಿಯಾಗಿ ಸಾಧ್ಯವಾದ ಸಾಮಗ್ರಿಗಳನ್ನು ತಮಗೆ ಕಳುಹಿಸ ಬಹುದೆಂದು ಕೋರಿದ್ದಾರೆ.

೫೦೦ ವಜ್ರಗಳ ಬಹುಮಾನ

ಸಿಂಹಳದ್ವೀಪದಲ್ಲಿ ನಡೆದ ವಿಜ್ಞಾನ ಸಂಶೋಧಕರ ವಾರ್ಷಿಕ ಕೂಟಕ್ಕೆ ಹೋಗಿದ್ದ ಸಂದರ್ಭದಲ್ಲಿ ಅಲ್ಲಿನ ರತ್ನಪುರಿ ಎಂಬಲ್ಲಿಯ ವಜ್ರದ ಗಣಿಗಳ ಮಾಲೀಕರು ಸುಪ್ರಸಿದ್ಧ ವೈಜ್ಞಾನಿಕರಾದ ಸರ್ ಸಿ. ವಿ. ರಾಮನ್ನರಿಗೆ ತಮ್ಮ ದೇಶದ ಒಗೆ ಬಗೆಯ ೫೦೦ ವಜ್ರಗಳನ್ನು ಸಮರ್ಪಿಸಿದರೆಂದು ತಿಳಿದುಬಂದಿದೆ.

ಕೃತಕ ಐಕ್ಯತೆಗಾಗಿ ತತ್ವದ ಪರಿತ್ಯಾಗವಿಲ್ಲ

ಹಿಂದೂಸ್ಥಾನವು ಸ್ವಾತಂತ್ರ್ಯ ಪಥದಲ್ಲಿ ಮುನ್ನಡೆ ಇಡುತ್ತಿದೆ. ಲೀಗಿಗೂ, ಕಾಂಗ್ರೆಸ್ಸಿಗೂ ಒಪ್ಪಂದವಾಗಲಿ, ಆಗದಿರಲಿ, ಸ್ವಾತಂತ್ರ್ಯವು ಒಂದೇ ಬರುತ್ತದೆ. ಯಾರೂ ಅದನ್ನು ತಡೆಯಲಾರರು. ಆದು ವಿಧಿಯ ಬರಹ. ಆದಕ್ಕಾಗಿ ಹಿಂದೂಸ್ಥಾನವು ಸಾಕಷ್ಟು ರಕ್ತವನ್ನು ಚೆಲ್ಲಿಯಾಗಿದೆ. ಕೃತಕ ಐಕ್ಯಮತ್ಯಕ್ಕಾಗಿ ಶಾಶ್ವತವಾದ ತತ್ವಗಳನ್ನು ಬಲಿ ಕೊಡಲಾಗುವುದಿಲ್ಲ—ಎಂಬುದಾಗಿ ಮಹಾತ್ಮ ಗಾಂಧಿಯವರು ಒಂದು ಹೇಳಿಕೆಯಲ್ಲಿ ತಿಳಿಸಿರುತ್ತಾರೆ.

ಅಣು ಶಕ್ತಿ ಹತೋಟಿ

ವಿಶ್ವ ಸಂಸ್ಥೆಗಳ ವಿಜ್ಞಾನ ಮತ್ತು ತಾಂತ್ರಿಕ ಸಮಿತಿಯು ಅಣು ಶಕ್ತಿಯನ್ನು ವಿಶ್ವಸಂಸ್ಥೆಯೊಂದರ ಹತೋಟಿಗೆ ಒಪ್ಪಿಸಬೇಕೆಂದು ಸಲಹೆ ಇತ್ತಿರುವುದನ್ನು ಲಕ್ಷ್ಯವಿಟ್ಟು ... ಬೆಂಬಲಿಸಿತ್ತವೆ.

ಈಸೂರು ದಿನಾಚರಣೆ

ಶ್ರೀ ...] ... ಚಾಮರಾಜನಗರ ೨೮

... ಕಾಂಗ್ರೆಸ್ ಸಮಿತಿ ಮತ್ತು ಪ್ರಗತಿ ಪಕ್ಷದವರ ನೇತೃತ್ವದಲ್ಲಿ ಈಸೂರು ದಿನಾಚರಣೆಯು ಈ ದಿನ ನಡೆಯಿತು. ... ... ನಡೆದು ... ...

ಸಾಧ್ವಿ

ತಾ॥ ೨೯-೯-೪೬ ಭಾನುವಾರ

ಸೌಜನ್ಯವು ಬೇಕು

ನಮ್ಮ ಸಾರ್ವಜನಿಕ ಜೀವನದಲ್ಲಿ ಎಂದಿಗಿಂತಲೂ ಹೆಚ್ಚಾಗಿ ಇಂದು ಸೌಜನ್ಯವೂ ಸೌಹಾರ್ದವೂ ಅಗತ್ಯವಾಗಿವೆ. ಸಂಸ್ಥಾನದ ರಾಜಕೀಯ ಜೀವನವು ಬಿಕ್ಕಟ್ಟಿನ ಪರಿಸ್ಥಿತಿಗೆ ಬರುತ್ತಿರುವಂತಿದೆ. ಪ್ರಜೆಗಳ ಪ್ರಮುಖರ ಅಸಮಾಧಾನಗಳೂ, ಬೇಡಿಕೆಗಳೂ ಈಡೇರದೆ ಈಗಾಗಲೇ ಅಸಮಾಧಾನದ ಸೂಚನೆಗಳು ಎದ್ದು ಕಾಣುತ್ತಿವೆ. ಮೇಲಾಗಿ ಪ್ರಜೆಗಳ ಅಭಿಪ್ರಾಯಕ್ಕೆ ವಿರುದ್ಧವಾದ ಪ್ರಸಂಗಗಳೂ ಮೇಲಿಂದ ಮೇಲೆ ಬರುತ್ತಿವೆ. ಇವುಗಳಿಂದ ಅಸಂತುಷ್ಟಿ ಹೊಂದಿದ ಪ್ರಜಾ ನಾಯಕರು ಹೋರಾಟದ ಪ್ರಸ್ತಾವವನ್ನೂ ಸಹ ಮಾಡುತ್ತಿದ್ದಾರೆ.

ಇತ್ತ ಹಿಂದೂಸ್ತಾನದಲ್ಲೆಲ್ಲವೂ ಜನಪ್ರಿಯ ನಾಯಕರ ನೇತೃತ್ವದಲ್ಲಿ ರಾಷ್ಟ್ರೀಯ ಸರ್ಕಾರದ ಸ್ಥಾಪನೆಗಾಗಿ ಆನಂದವನ್ನು ವ್ಯಕ್ತಪಡಿಸುತ್ತಿರುವಾಗ ಮೈಸೂರಿನಲ್ಲಿ ಹೋರಾಟದ ಮಾತುಗಳು ಕೇಳಿ ಬರಲು ಆಸ್ಪದವಾಗಿರುವುದಕ್ಕಾಗಿ ಎಲ್ಲರೂ ವಿಷಾದಿಸಬೇಕಾಗಿದೆ. ಇದಕ್ಕಾಗಿ ಸರ್ಕಾರದವರೂ ಸಾರ್ವಜನಿಕರೂ ತಮ್ಮ ಕುತೂಹಲವನ್ನು ವ್ಯಕ್ತಪಡಿಸುವುದು ಮಾತ್ರವಲ್ಲದೆ ಇಂತಹ ವಿಷಮ ಪರಿಸ್ಥಿತಿಯನ್ನು ಸಮರ್ಪಕವಾದ ರೀತಿಯಲ್ಲಿ ಬಗೆ ಹರಿಸಲು ಸಕಲರೂ ಪ್ರಯತ್ನಿಸಬೇಕು.

ನಾಳೆಯಿಂದ ಈ ನಗರದಲ್ಲಿ ಪ್ರಜಾ ಪ್ರತಿನಿಧಿ ಸಭೆಯ ಅಧಿವೇಶನವು ಜರುಗುತ್ತದೆ. ಅದರಲ್ಲಿ ಸದಸ್ಯರುಗಳು ತಮ್ಮ ತಮ್ಮ ವಾದಗಳನ್ನು ಮಂಡಿಸುವರು. ದೇಶದ ಹಿತಸಾಧನೆಗೆ ಸರ್ವೋತ್ತಮವೆಂದು ತಮಗೆ ತೋರುವ ವಿಚಾರಗಳನ್ನು ಒತ್ತಾಯಪಡಿಸುವರು. ಇವುಗಳಲ್ಲಿ ಪರಸ್ಪರ ಭಿನ್ನಾಭಿಪ್ರಾಯಗಳು ಇರುವುದೂ ಸಹಜ. ಆದರೂ ಪ್ರಭುತ್ವದವರೂ ಸಭೆಯ ಎಲ್ಲಾ ಪಕ್ಷಗಳೂ ಸೌಜನ್ಯದಿಂದಲೂ ಗಾಂಭೀರ್ಯದಿಂದಲೂ ವರ್ತಿಸಬೇಕು. ಎಲ್ಲರೂ ದೇಶದ ಅಭ್ಯುದಯಕ್ಕಾಗಿಯೇ ದುಡಿಯುವರು. ಆದುದರಿಂದ ಭಿನ್ನಾಭಿಪ್ರಾಯಕ್ಕೆ ಸಕಲರೂ ಮನ್ನಣೆಯನ್ನು ಕೊಡಲೇಬೇಕು.

ಸಕಲರಿಗೂ ಸಮಾನವಾದ ವಿಚಾರಗಳು ಹೇರಳವಾಗಿವೆ. ಆಹಾರದ ಅಭಾವ, ಬಟ್ಟೆಗಳ ಸರಬರಾಜು, ಜವಾಬ್ದಾರಿ ಸರ್ಕಾರ ಸ್ಥಾಪನೆ, ಪ್ರಜಾ ಪ್ರತಿನಿಧಿ ಸಭೆಗೆ ಖಾಸಗಿ ಅಧ್ಯಕ್ಷರ ನೇಮಕ, ಈಸೂರು ಬಂದಿಗಳ ಬಿಡುಗಡೆ, ರಾಜ್ಯಾಂಗ ಸಭೆಗೆ ಚುನಾಯಿತ ಸದಸ್ಯರನ್ನೇ ಕಳುಹಿಸುವುದು—ಇವೇ ಮುಂತಾದ ವಿಚಾರಗಳಲ್ಲಿ ಎಲ್ಲ ಪಕ್ಷದವರ ಅಭಿಪ್ರಾಯವೂ ಒಂದೇ ರೀತಿ ಇರುವುದು. ಆದುದರಿಂದ ಸರ್ಕಾರದವರು ಇವುಗಳನ್ನು ಉಚಿತವಾದ ರೀತಿಯಲ್ಲಿ ಪುರಸ್ಕರಿಸುವುದು ಯುಕ್ತವಾಗಿದೆ.

ಪ್ರಪಂಚದ ಶಾಸನ ಸಭೆಗಳಲ್ಲೆಲ್ಲಾ ಅನೇಕ ಬಗೆಯ ಕ್ರಾಂತಿಕಾರಕ ಪ್ರಕರಣಗಳು ಕಂಡುಬರುತ್ತಿವೆ. ಅವಿಶ್ವಾಸ ನಿರ್ಣಯಗಳು, ಅಸಮಾಧಾನ ಪ್ರದರ್ಶನಗಳು ದಿನಬಳಕೆಯ ವ್ಯವಹಾರಗಳಾಗಿವೆ. ಅವುಗಳು ಶಾಸನ ಸಭೆಗಳ ಕಾರ್ಯಕ್ರಮಗಳೆಂದು ಅಂಗೀಕೃತವಾಗಿವೆ. ಆದುದರಿಂದ ಅಂತಹವುಗಳ ಬಗ್ಗೆ ಯಾರೂ ಉಪೇಕ್ಷೆಗೊಳ್ಳಬಾ

ಹೋರಾಟ ಅನಿವಾರ್ಯ

ಬಹಿರಂಗ ಸಭೆಯಲ್ಲಿ ಭಾಷಣ

ಮೈಸೂರು ೨೮

ಮೈಸೂರು ಕಾಂಗ್ರೆಸ್ ಮಾಜಿ ಅಧ್ಯಕ್ಷರಾದ ಶ್ರೀ ಟಿ. ಸುಬ್ರಹ್ಮಣ್ಯಂರವರು ನಿನ್ನೆ ಟೌನ್‌ಹಾಲ್ ಮೈದಾನದಲ್ಲಿ ಇಂದಿನ ರಾಜಕೀಯ ಪರಿಸ್ಥಿತಿಯ ವಿಷಯವಾಗಿ ಭಾಷಣ ಮಾಡಿದರು. ಶ್ರೀ ಎಸ್. ಚೆನ್ನಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಅನೇಕ ವರ್ಷಗಳಿಂದ ಸಂಸ್ಥಾನದಲ್ಲಿ ಯಾವ ರೀತಿ ಪ್ರಜೆಗಳ ಆಶೋತ್ತರಗಳನ್ನು ನಿರಾಕರಿಸಲಾಗುತ್ತಿದೆಯೆಂಬುದನ್ನು ಶ್ರೀ ಸುಬ್ರಹ್ಮಣ್ಯರವರು ವಿವರಿಸಿ ಇನ್ನು ಮುಂದೆಯೂ ಹೀಗೆ ಇರಲು ಅವಕಾಶ ಕೊಡಲು ಸಾಧ್ಯವಿಲ್ಲವೆಂದೂ, ಅಗತ್ಯವಿದ್ದರೆ ಅದಕ್ಕಾಗಿ ಒಂದು ದೊಡ್ಡ ಹೋರಾಟವನ್ನು ಹೂಡಲಾಗುವುದೆಂದೂ ತಿಳಿಸಿದರು. ಹೋರಾಟ ಮಾಡುವುದೇ ಕಾಂಗ್ರೆಸ್ಸಿನ ಉದ್ದೇಶವಲ್ಲ. ವಿಧಿಯಿಲ್ಲದಿದ್ದರೆ ಹಾಗೆ ಮಾಡಲಾಗುವುದು. ಪ್ರಭುತ್ವದವರು ಈಗಲಾದರೂ ಜನರ ಅಭೀಷ್ಟವನ್ನು ಈಡೇರಿಸಬೇಕು. ಶ್ರೀಮನ್ಮಹಾರಾಜರವರು ಕಾಂಗ್ರೆಸ್ಸಿನ ಅಧ್ಯಕ್ಷರುಗಳನ್ನು ಕರೆಸಿಕೊಂಡು ಅವರ ಸಲಹೆಯನ್ನು ತೆಗೆದುಕೊಳ್ಳಬೇಕು. ಪ್ರಜೆಗಳ ಪ್ರತಿನಿಧಿಗಳ ಅಭಿಪ್ರಾಯದಂತೆ ಆಡಳಿತವು ನಡೆಯುವ ಹಾಗೆ ಏರ್ಪಡಿಸಬೇಕು ಎಂದು ಅವರು ತಿಳಿಸಿದರು.

ಶ್ರೀಗಳಾದ ಪಿ. ಸೀತಾರಾಮಯ್ಯ ಮತ್ತು ಮಳವಳ್ಳಿ ವೀರಪ್ಪನವರು ಮಾತನಾಡಿ ಪ್ರಜೆಗಳಿಗೆ ಈಗ ಇರುವ ಕಷ್ಟಗಳನ್ನು ವಿವರಿಸಿದರು. ವಂದೇ ಮಾತರಂ ಗೀತೆಯೊಡನೆ ಸಭೆ ಮುಗಿಯಿತು.

ಪಂಜಾಬಿನಲ್ಲಿ ಒತ್ತಾಯದ ಧಾನ್ಯ ಶೇಖರಣೆ

ಧಾನ್ಯವನ್ನು ಬೆಳೆಯುವವರಿಂದ ಬಲಾತ್ಕಾರವಾಗಿ ಅದನ್ನು ಅಕ್ಟೋಬರ್ ನಿಂದ ವಸೂಲ್ಮಾಡಲಾಗುವುದೆಂದು ಪಂಜಾಬ್ ಸರ್ಕಾರದ ಪ್ರಕಟಣೆ ಹೊರಟಿದೆ. ಅ॥ ೧೫ ನೇ ತಾ॥ ನಿಂದ ಗೋಧಿಯನ್ನೂ ಸಹ ವಸೂಲ್ಮಾಡಲಾಗುವುದೆಂದು ಆ ಆಜ್ಞೆಯಲ್ಲಿ ತಿಳಿಸಲಾಗಿದೆ.

ಜಿನ್ನಾ-ವೈಸರಾಯ್ ಭೇಟಿ

ಮಿ॥ ಜಿನ್ನಾರವರು ನಿನ್ನೆ ಸಂಜೆ ವೈಸರಾಯರನ್ನು ಭೇಟಿ ಮಾಡಿದ್ದರು. ಇತ್ತೀಚಿನ ಮಾತುಕತೆಗಳಲ್ಲಿ ಇದು ೩ನೆಯ ಭೇಟಿಯಾಗಿದೆ.

ಸಂಯುಕ್ತ ಪ್ರಾಂತ್ಯದಲ್ಲಿ ಸಾಮೂಹಿಕ ವ್ಯವಸಾಯ

ಜಮೀನ್‌ದಾರಿ ಪದ್ಧತಿಯನ್ನು ನಿರ್ನಾಮ ಮಾಡಿ ಸಂಯುಕ್ತ ಪ್ರಾಂತ್ಯದ ಭೂಸಂಪತ್ತನ್ನು ರಾಷ್ಟ್ರೀಕರಿಸುವ ಯೋಜನೆ ಪ್ರಕಾರ ಹಲವು ಜಿಲ್ಲೆಗಳಲ್ಲಿ ರಷ್ಯದಲ್ಲಿ ಆಚರಣೆಯಲ್ಲಿರುವ ಸಾಮೂಹಿಕ ವ್ಯವಸಾಯ ಪದ್ಧತಿಯನ್ನು ಆಚರಣೆಗೆ ತರಲಾಗುವುದೆಂದು ಗೊತ್ತಾಗಿದೆ.

ರದು. ಒಟ್ಟಿನಲ್ಲಿ ಪ್ರಜೆಗಳ ಪ್ರತಿನಿಧಿಗಳೂ ಸರ್ಕಾರದ ಸೂತ್ರಧಾರಿಗಳೂ ಸೌಜನ್ಯದಿಂದಲೂ ವಿಶ್ವಾಸದಿಂದಲೂ ವರ್ತಿಸಿ ಸಂಸ್ಥಾನದ ಹಿತ ಸಾಧನೆಗೆ ಸಹಾಯಕವಾಗುವಂತೆ ನಡೆದುಕೊಂಡು ಹೋರಾಟ ಮತ್ತು ಘರ್ಷಣೆಗಳ ಪ್ರಸಂಗವನ್ನು ತಪ್ಪಿಸುವುದು ಅತ್ಯಂತ ಶ್ರೇಯಸ್ಕರವಾಗಿದೆ.

ಬರ್ಮಾ ಹೊಸ ಸರ್ಕಾರದ ಧೋರಣೆ

ದೇಶದಾದ್ಯಂತವು ನಡೆಯುತ್ತಿರುವ ಮುಷ್ಕರಗಳನ್ನು ಇತ್ಯರ್ಥಪಡಿಸುವುದು; ಪ್ರಜಾ ಹಕ್ಕು ಬಾಧ್ಯತೆಗಳ ಮೇಲಿರುವ ಅಡ್ಡಿ ಆತಂಕಗಳನ್ನು ತೊಡೆದು ಹಾಕುವುದು, ಏಷ್ಯಾಖಂಡದ ಜನಾಂಗಗಳ ಒಗ್ಗಟ್ಟನ್ನು ಸಾಧಿಸಿ, ತನ್ಮೂಲಕ ಏಷ್ಯಾ ರಾಷ್ಟ್ರಗಳ ಫೆಡರೇಷನ್ ಏರ್ಪಡಿಸಲು ಸಾಧ್ಯವಾಗುವಂತೆ ಮಾಡುವುದು-ಇವೇ ಬರ್ಮಾ ರಾಷ್ಟ್ರೀಯ ಸರ್ಕಾರದ ಧ್ಯೇಯಗಳೆಂದು ಉಪಾಧ್ಯಕ್ಷರಾದ ಆಂಗ್ ಸಾನ್‌ರವರು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದ್ದಾರೆ.

ಭಾರತ-ಅರ್ಜೆಂಟೈನ ಒಪ್ಪಂದ

ಅರ್ಜೆಂಟೈನಾಕ್ಕೂ ಭಾರತಕ್ಕೂ ವ್ಯಾಪಾರ ಒಪ್ಪಂದವು ಯಶಸ್ವಿಯಾಗಿ ಮುಕ್ತಾಯಗೊಂಡಿತು. ಅರ್ಜೆಂಟೈನಾದಿಂದ ಭಾರತಕ್ಕೆ ೧,೩೦,೦೦೦ ಟನ್ ಮುಸುಕಿನ ಜೋಳ ಮತ್ತು ೨೫ ಸಾವಿರ ಟನ್ ಗೋಧಿ ಪದಾರ್ಥಗಳು ಈ ಕೂಡಲೇ ೩ ಹಡಗುಗಳಲ್ಲಿ ಬರುವುವು. ಅದೇ ಹಡಗುಗಳಲ್ಲಿ ಸೆಣಬನ್ನು ರವಾನಿಸಲಾಗುವುದು.

ಸತ್ಕಾರ ಕೂಟ

ಸ್ವಂ. ವ.] ನಂಜನಗೂಡು ೨೮

ಈ ಊರಿನ ಮುನಿಸಿಪಲ್ ಕೌನ್ಸಿಲರುಗಳು ಈ ಸಂಜೆ ಉಪಾಧ್ಯಕ್ಷರಿಗೆ, ಸೇವಾಪದಕ ದೊರೆತದ್ದಕ್ಕಾಗಿ ಒಂದು ಸತ್ಕಾರ ಕೂಟವನ್ನೇರ್ಪಡಿಸಿದ್ದರು. ನಿನ್ನೆ ದಿನ ಅವಿರೋಧವಾಗಿ ಉಪಾಧ್ಯಕ್ಷರಿಗೆ ಏರ್ಪಡಿಸಿದ್ದ ಸತ್ಕಾರ ಕೂಟದಲ್ಲಿ ಅಧ್ಯಕ್ಷರಾದ ಶ್ರೀ ಜಿ. ನರಸಿಂಹಯ್ಯನವರು ಅವಿರೋಧವಾಗಿ ಸಂಘಕ್ಕೆ ತಮ್ಮ ಕೈಲಾದ ಸಹಾಯವನ್ನು ನೀಡಲು ತಾವು ಸಿದ್ಧರಿದ್ದಾರೆಂದು ತಿಳಿಸಿದರು. ಉಪಾಧ್ಯಕ್ಷರು ತಮಗೆ ದೊರೆತಿರುವ ಗೌರವಕ್ಕೆ ಜನಗಳ ಅಭಿಮಾನವೇ ಕಾರಣವೆಂದು ಹೇಳಿ ತಮ್ಮ ಕೃತಜ್ಞತೆಯನ್ನು ಸೂಚಿಸಿದರು.

OPERA TALKIES

ತಾ॥ 28—9—46 ರಿಂದ

ಪ್ರತಿದಿನ ಮೂರು ಆಟಗಳು

ಮಾಯಾ ಮಚ್ಛೀಂದ್ರ

(ತೆಲುಗು)

ಕನ್ನಾಂಬ, ಮಾಲತಿ, ಗೌರೀನಾಥ ಶಾಸ್ತ್ರಿ, ಅದ್ದಂಕಿ ಶ್ರೀರಾಮಮೂರ್ತಿ ಮುಂತಾದವರು

Edited printed and published by A. R. Nagarajan at the Sadhvi Press D Subbiah Road, Mysore

ಕಾಶ್ಮೀರದ ಮುಸ್ಲಿಂ ಸಂಸ್ಥೆಯ ವಿರೋಧ

ಕಾಂಗ್ರೆಸ್ಸು ಪೂರ್ಣ ಸಮರ್ಥನೆ ಹಿಂದುಗಳ ಸಂಸ್ಥೆ. ಕಾಶ್ಮೀರ ಸಂಸ್ಥಾನದ ವ್ಯವಹಾರದಲ್ಲಿ ಕಾಂಗ್ರೆಸ್ಸು ಪ್ರವೇಶಿಸಿ ಈ ಸಂಸ್ಥಾನದ ಮುಸ್ಲಿಮರು ಅದನ್ನು ಎದುರಿಸುತ್ತಾರೆ. ಮುಸ್ಲಿಂ ಪ್ರಜಾ ಪರಿಷತ್ತು ಸಂಸ್ಥಾನದ ಮುಸಲ್ಮಾನರ ಅಧಿಕೃತ ಪ್ರತಿನಿಧಿ ಸಂಸ್ಥೆ ಎಂದು ಕಾಶ್ಮೀರದ ಮುಸ್ಲಿಂ ಪ್ರಜಾ ಪರಿಷತ್ತಿನ ಕಾರ್ಯದರ್ಶಿಗಳು ಪ್ರಕಟಿಸಿದ್ದಾರೆ.

+ ಹೈದರಾಬಾದಿನ ರೆಸಿಡೆಂಟರಾದ ಲೋಥಿಯನ್‌ರವರು ಅ॥ ೩ ನೇ ತಾರೀಖು ಬೆಂಗಳೂರಿಗೆ ಆಗಮಿಸಿ ರಾಧಾಕೃಷ್ಣನ್ ... ಳುವರು

ಮೈಸೂರು ಸಿಟಿ ಮುನಿಸಿಪಾಲಿಟಿ ಮಾರ್ಕೆಟ್ ಮತ್ತು ಫಲ ಪುಷ್ಪಗಳ ಪ್ರದರ್ಶನ

(ದೇವರಾಜ ಮಾರ್ಕೆಟ್ಟಿನಲ್ಲಿ)

1946 ನೇ ಅಕ್ಟೋಬರ್ ಮಾಹೆ ... ಮತ್ತು 3 ನೇ ಬುಧವಾರ ಮತ್ತು ಗು... ವಾರ ನಡೆಸಲು ಏರ್ಪಾಡಾಗಿದೆ.

ವ್ಯಾಪಾರಸ್ಥರು ಮತ್ತು ಇತರರು ಪ್ರದರ್ಶನದಲ್ಲಿ ಸ್ಪರ್ಧಿಸಲು ಅವಕಾಶವುಂಟು. ಹೆಚ್ಚಿಗೆ ವಿವರಗಳನ್ನು ಮಾರ್ಕೆಟ್ ಆಫೀಸಿನಲ್ಲಿ ತಿಳಿಯಬಹುದು.

ಪ್ರದರ್ಶನ:—

2 ನೇ ತಾ॥ ಬೆಳಿಗ್ಗೆ 10 ರಿಂದ

3 ನೇ ತಾ॥ ,, 8-30 ರಿಂದ

ಪ್ರವೇಶ ಟಿಕೇಟು ಮೂಲಕ:—

2 ನೇ ತಾ॥ 0-2-0

3 ನೇ ತಾ॥ 0-1-0

(ಸಹಿ) ಎ. ಕೃಷ್ಣಮೂರ್ತಿರಾವ್ ವೈಸ್ ಪ್ರೆಸಿಡೆಂಟ್ ಮತ್ತು ಮಾ॥ ಶ್ರೀ ಸಮಿತಿ ಕಾರ್ಯದರ್ಶಿ ಮೈಸೂರು.

ರಾಜ್ ಕಮಲ್, ಮೈಸೂರು

26-9-46 ರಿಂದ 2 ನೇ ವಾರ

ಪ್ರತಿದಿನ ಮೂರು ಆಟಗಳು

ಸ್ವರ್ಗಸೀಮ

ಭೂಮಿಕೆ:—ಜಯಮ್ಮ, ಭಾನುಮತಿ, ನಾಗಯ್ಯ, ನಾರಾಯಣರಾವ್

Morning Shows at 10-30 A. M.

From 27-9-46 for 4 days

Pirates of the Skies

For Sale For Sale

The following properties are for sale in Mysore:—

1 One Storied House, big and decent, in main ... on Irwin Road.

2. One Bungalow with Compound in Narasimhara... Mohalla

3. Decent Bangalow Sites (Eight) situated in the heart of the City.

For Particulars Enquire between 6 and 8 P. M. at

NEO FURNITURE CO,

Irwin Road ... ... Mys...

...ಕನ ಪಟಿತರದ ಮೇಲೆ ಟೀಕೆ

...ರದ ನಿರ್ಣಯ ಮಾತಿನಲ್ಲೇ ಮುಕ್ತಾಯ

ಮೈಸೂರು ೧

...ಪ್ಟ ೧೪ ನೇ ತಾರೀಖಿನಲ್ಲಿ ಸರ್ಕಾರ ...ಒಂದು ಆಜ್ಞೆಯನ್ನು ಹೊರಡಿಸಿ, ...ಗೆ ಕೊಡುತ್ತಿದ್ದ ...ಪಡಿತರವನ್ನು ... ಮಾಡುವುದನ್ನು ವಿರೋಧಿಸಿ ...ಪಕ್ಷದ ಶ್ರೀ ಪಿ. ಸೀತಾರಾಮು... ಅವರು ...ರೂಪವನ್ನು ... ಪ್ರತಿನಿಧಿ ಸಭೆಯಲ್ಲಿ ಮಂಡಿಸಿದರು. ...ದ ಈ ಆಜ್ಞೆಯಿಂದ ಪ್ರಜೆಗಳಿಗೆ ...ಪ್ತಿಯಾದ ಆಹಾರ ಸಾಮ... ಸರ್ಕಾರದವರು ಒದಗಿಸುತ್ತಿಲ್ಲ ...ಸರಿಯಾದ ದಾಸ್ತಾನು ಮಾ...ತ್ತಿದನ್ನೂ, ದಾಸ್ತಾನು ಮಾಡಿರ...ದ ಸಾಮಗ್ರಿಗಳನ್ನು ... ವಿತಕ್ಷಣೆ ...ಸುತ್ತಿರುವುದನ್ನೂ, ಶ್ರೀ ...ಸು ಟೀಕಿಸಿದರು.

ಹಲವಾರು ಡಿಪೋಗಳಿಗೆ ಭೇಟಿ ...ಲ್ಲಿ ಮಾಂಸಾಟ ಮಾತುತ್ತಿರುವ ...ಮಗ್ರಿಗಳು ಮನುಷ್ಯರು ತಿನ್ನಲು ...ಲ್ಲವೆಂದೂ, ಕೈತರಿಂದ ಅವ... ಆಹಾರ ವಸ್ತುಗಳನ್ನು ಸಂಪಾ...ಕೊಂಡು ಅವರಿಗೆ ಈ ಬಗ್ಗೆ ...ಕೊಡುತ್ತಿರುವುದು ಉತ್ತಮ ಕ...ನ ರೀತಿಯಲ್ಲವೆಂದು ಹಮೀದ್... ...ರವರು ವಾದಿಸಿದರು.

...ಟಿ ಗಳಿಂತ ತರಗತಿಗಳನ್ನು ...ಒಂದೇ ರೀತಿಯಾದ ಹಂಚಿ... ಪಾಲಿಗೆ ತರುವುದು ...ಲ... ಕಾರ್ಯಕ್ರಮಗಳು ತೃಪ್ತಿ... ಇರುವುದು ಸರ್ಕಾರದ ...ನ್ನು ವ್ಯಕ್ತಪಡಿಸುತ್ತದೆ... ...ಜೋಯಿಸರು ಹೇಳಿ...

...ಗಯ್ಯ ಮತ್ತು ಮರುಳಪ್ಪ ...ಪಟ್ಟಣಗಳಂತೆಯೇ ...ಪಡಿತರ ಸಿ... ...ಸರ್ಕಾರದವರನ್ನು ಅಭಿನಂ...

ಅಧಿಕಾರಿಗಳಾದ ಶ್ರೀ ಗುರು... ...ಗಳ ಮೂಲಕ ಸಂಸ್ಥಾ... ...ಸ್ಥಿತಿಯನ್ನು ವಿವರಿಸಿದ ...ಮಾಡಲು ಸಾಕಷ್ಟು ...ದೂ, ಆಹಾರ ಸಿಂಗ್ರಸಿದ್ದ ವಸ್ತುಗಳು ಹೊರಗಿನಿಂದ ... ಇದಕ್ಕೆ ಮುಖ್ಯ ಕಾರಣ ... ಇರುವ ವಸ್ತು ...ವರಿಗೆ ಪರಿತೂಗಿಸಲು ...ನ್ನು ಹೊರಡಿಸಬೇಕಾ...ದರು.

...ರವರು ಮಾತನಾಡಿ, ...ನು ತೆಗೆದುಕೊಳ್ಳ... ...ಸಲಹೆ ಇತ್ತರು. ...ಮಗ್ರಿಗಳು ಹೊರಗಿನಿಂದ ...ವಿಚಾರದಲ್ಲಿ ತಾವು ...ಆಹಾರ ಮಂತ್ರಿಗಳೊ... ...ಮಾಡಿಕೊಂಡಿರುವು... ...ತಿಳಿಸಿದರು.

...ಗೌಡರು ಮಾತನಾ... ...ಅಧಿಕಾರಿಗಳಲ್ಲಿ ... ಆಕ್ಷೇಪಣೆಯಿಲ್ಲವಾದ ... ತೃಪ್ತಿ ಅಧಿಕಾ... ...ವಸ್ತುಗಳ ಬೆಲೆ...

ಪೋ॥ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಮಂಗಳವಾರ ೧—೧೦—೪೬ [ಸಂಚಿಕೆ ೫೬

ರಾಮ ಮನೋಹರ ಲೋಹಿಯಾ ದಸ್ತಗಿರಿ

ಸರ್ಕಾರದ ಮಸೂದೆಗಳಿಗೆ, ಕಾಂಗ್ರೆಸ್ಸಿನ ವಿರೋಧ,

ಮೈಸೂರು ೧

ನಿನ್ನೆ ಮಸೂದೆಗಳನ್ನು ಉಪಾಹಾರಾನಂತರ ತೆಗೆದುಕೊಳ್ಳಲಾಯಿತು ಮಿಶ್ರಣವಿಲ್ಲದ ಪೆಟ್ರೋಲನ್ನು ಮಾರಲು ಅವಕಾಶವಿರುವಂತೆ ಅಧಿಕಾರ ಕೊಡುವ ಮಸೂದಾ ಕಾನೂನನ್ನು ಲಾ ಸೆಕ್ರೆಟರಿಗಳಾದ ಶ್ರೀ ಕನಕರತ್ನರಾಜರವರು ಮಂಡಿಸಿದರು ಶ್ರೀ ವೇಮಾರೆಡ್ಡಿಯವರು ಬೆಂಬಲವಿತ್ತು ಮಾತನಾಡಿದರು

ಕಳೆದ ಎರಡು ವರ್ಷಗಳಿಂದಲೂ ಒಂದು ಪದ್ಧತಿಯನ್ನು ಅನುಸರಿಸಿ, ಕಾಂಗ್ರೆಸ್ ಪಕ್ಷದವರು ಸರ್ಕಾರದವರು ತಂದ ಮಸೂದಾ ಕಾನೂನುಗಳನ್ನೆಲ್ಲಾ ವಿರೋಧಿಸುತ್ತಾ ಬಂದು ಸರ್ಕಾರದ ನಿರ್ವಹಣ ಶಕ್ತಿಗೆ ಕುಂದು ತಂದಿರುವುದು ಸರ್ವ ವಿದಿತವಾಗಿದೆ. ರಾಜಕೀಯ ದೃಷ್ಟಿಯಿಂದ ಸರ್ಕಾರಕ್ಕೆ ಸಹಕಾರ ಕೊಡಬಾರದೆಂಬುವೇ ನಮ್ಮ ಪಕ್ಷದ ಅಭಿಮತ ಅವರೂ ಸರ್ಕಾರದವರಲ್ಲಿ ಬದಲಾವಣೆಗಳೇನೂ ಕಂಡು ಬಂದಿಲ್ಲ ಪ್ರಜೆಗಳಿಗೆ ಸರ್ಕಾರದ ವಿಚಾರದಲ್ಲಿ ಸಂಶಯ ಭಾವನೆಗಳು ಮೂಡಿವೆ. ಕಾಲಗತಿಯನ್ನು ವಿರೋಧಿಸಿ ಯಾರೂ ನಿಲ್ಲಲು ಸಾಧ್ಯವಿಲ್ಲ ಪ್ರಜೆಗಳ ಮತ್ತು ಸರ್ಕಾರದ ಅಂತರವು ಒದಗುತ್ತಾ ಹೆಚ್ಚುತ್ತಾ ಹೋಗುತ್ತಿದೆ ... ಸರ್ಕಾರ ಒಂದು ಹೆಜ್ಜೆ ... ಹೋಗುವುದಿಲ್ಲವೆಂದು ತಿಳಿಸಿ ಶ್ರೀ ಬಿ. ಎನ್. ಗುಪ್ತರು ಮಸೂದೆಯನ್ನು ವಿರೋಧಿಸಿದರು ಶ್ರೀಗಳಾದ ಗಪ್ಪೂರ್, ಶಂಕರಲಿಂಗೇಗೌಡ, ಶಿವಲಿಂಗಯ್ಯ ಮಸೂದೆಗೆ ಬೆಂಬಲವಿತ್ತು ವಾದಿಸಿದರು ಅಷ್ಟು ಹೊತ್ತಿಗೆ ೪ ಗಂಟೆಯಾದ ಕಾರಣ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಲಾಯಿತು

ಇಂದು ಪ್ರಜೆಗಳಿಗೆ ಬೇಕಾಗುವಷ್ಟು ವಾದ ಹೊಂದರಿಗಳನ್ನು ಕೊಡುತ್ತಿರುವರೆಂದೂ ತಿಳಿಸಿದರು.

ಕಾಲಾವಧಿಯಾದ ಪ್ರಯುಕ್ತ ನಿನ್ನೆಯ ಒಂದು ವಾದದಲ್ಲೇ ಮುಕ್ತಾಯಗೊಂಡಿತು. ಅಧ್ಯಕ್ಷರು ಕೊನೆಯಲ್ಲಿ ಮಾತನಾಡಿ, ಸದಸ್ಯರು ಹೇಳಿರುವ ಅಂಶಗಳನ್ನು ಗಮನಿಸಲಿಟ್ಟು, ಒಟ್ಟಿಗೆ ... ಯಲ್ಲಿ ... ಜನರ ಸಹಕಾರವನ್ನು ಪಡೆದಿರುವಂತೆಯೇ ಆಹಾರ ಹಂಚಿಕೆ ... ಅವರ ಸಹಕಾರಗಳನ್ನು ಪಡೆಯಲಾಗುವುದು, ಎಂದು ತಿಳಿಸಿದರು.

ನಿಲುವಳಿ ನಿರ್ಣಯಗಳು

ಮೈಸೂರು ೧

ಈ ದಿನ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಪ್ರಶ್ನೋತ್ತರವಾದ ಮೇಲೆ ಕಳೆದ ಅಧಿವೇಶನದ ವರದಿಯಲ್ಲಿರುವ ಕೆಲವು ಅಂಶಗಳನ್ನು ತೆಗೆದುಹಾಕಬೇಕೆಂದು ಶ್ರೀ ಬಿ ಎನ್ ಗುಪ್ತರು ಸೂಚಿಸಿದರು. ಅದರ ಪರಿಶೀಲನೆಗೆ ಕಾಲಾವಕಾಶಬೇಕೆಂದು ದಿವಾನರು ಹೇಳಿದರು

ಬೆಂಗಳೂರಿನಿಂದ ಚಿತ್ರದುರ್ಗಕ್ಕೆ ಹೋಗುವ ರೈಲಿನಲ್ಲಿ ಸೀದಾ ಹೋಗುವ ಗಾಡಿಯನ್ನು ತೆಗೆದು ಹಾಕಿರುವ ವಿಚಾರವಾಗಿ ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು ನಿಲುವಳಿ ನಿರ್ಣಯವನ್ನು ತಂದಿದ್ದರು. ಇದು ಸ್ಥಳೀಯ ವಿಷಯವೆಂದೂ ತುರ್ತಾದ ಸಾರ್ವಜನಿಕ ವಿಷಯವಲ್ಲವೆಂದೂ ಉಪಾಧ್ಯಕ್ಷರು ಅದನ್ನು ತಳ್ಳಿಹಾಕಿದರು.

ಲಂಚ ನಿರೋಧ ಸಮಿತಿಯು ಸಲಹೆಗಳ ... ಕ್ರಮ ತೆಗೆದುಕೊಳ್ಳದಿರುವುದಕ್ಕಾಗಿ ಸರ್ಕಾರದವರನ್ನು ಖಂಡಿಸಲು ಶ್ರೀ ಪಿ ಸೀತಾರಾಮಯ್ಯನವರು ತಂದಿದ್ದ ... ನಿರ್ಣಯವು ಸ್ಪಷ್ಟವಾಗಿರಲಿಲ್ಲವೆಂದು ಹೇಳಿ ಅದನ್ನು ... ಯಿತು. ಗ್ರಾಮಾಂತರಗಳ ವರ್ತಕರು ... ವ ಪಾಸುಗಳನ್ನು ಪಡೆದಂತೆಯೂ ಬೆಂಗಳೂರಿನ ಮಂಡಿ ವರ್ತಕರುಗಳಿಗೆ ಇವನ್ನು ವಿಶೇಷ ಲಾಭಗಳನುವಂತೆಯೂ, ಸಿವಿಲ್ ಸಪ್ಲೈ ಕಂಟ್ರೋಲರು ಹೊರಡಿಸಿರುವ ಆಜ್ಞೆಯನ್ನು ಖಂಡಿಸಲು ಶ್ರೀ ದೇವರ ಕೊಂಡಪ್ಪನವರು ತಂದಿರುವ ನಿಲುವಳಿ ನಿರ್ಣಯವನ್ನು ಈ ಸಂಜೆ ಚರ್ಚಿಸಲು ದಿವಾನರು ಅವಕಾಶವಿತ್ತಿರುವರು

ದಿವಾನರ ಭಾಷಣದ ಬಗ್ಗೆ ಕಾಂಗ್ರೆಸ್ಸಿನ ಖಂಡನೆ

ಹೋರಾಟವು ಅನಿವಾರ್ಯವೆಂಬ ನಿರ್ಧಾರ

ಮೈಸೂರು ೧

ಮೈಸೂರು ಕಾಂ॥ ಕಾರ್ಯಕಾರಿ ಸಮಿತಿಯು ರಾಜಕೀಯ ಪರಿಸ್ಥಿತಿಯನ್ನು ಪರಿಶೀಲಿಸಿ ಈ ಕೆಳಗೆ ಕಂಡಂತೆ ನಿರ್ಣಯಗಳನ್ನು ಮಾಡಿರುವುದು,

೧ ದಿವಾನರ ಭಾಷಣವು ಪ್ರಗತಿ ವಿರೋಧಕವೂ, ಕೃತ್ರಿಮಯುತವೂ ಆಗಿರುತ್ತದೆ ... ಹೋರಾಟವನ್ನು ಅನಿವಾರ್ಯವ... ವೆಂದು ... ಭಾವಿಸುತ್ತದೆ. ಹೋರಾಟವನ್ನು ನಡೆಸಲು ... ...

ಗಾಂಧಿ ಜಯಂತಿ

ಮೈಸೂರು ೧

ಮಹಾತ್ಮರ ೭೮ ನೇ ಜಯಂತಿ ಸಂಬಂಧದಲ್ಲಿ ನಾಳೆ ಬೆಳಗ್ಗೆ ೮ ಘಂಟೆಗೆ ಬ್ಯಾಂ... ಯ ಕೆರೆಯಲ್ಲಿ ಧ್ವಜ ವಂದನೆಯನ್ನೂ, ಸಂಜೆ ೬ ಘಂಟೆಗೆ ಕಾಂಗ್ರೆಸ್ ಕಛೇರಿಯಿಂದ ಮೆರವಣಿಗೆಯನ್ನೂ; ೭ ಗಂಟೆಗೆ ಟೌನ್ ಹಾಲ್ ಮೈದಾನದಲ್ಲಿ ಬಹಿರಂಗ ಸಭೆಯನ್ನೂ ಏರ್ಪಡಿಸಲಾಗಿದೆ. ಕಾಂ॥ ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರು ಅಗ್ರಾಸನ ವಹಿಸುವರು ... ಡಾ॥ ಲೋಕನಾಥನ್ ಮತ್ತು ಶ್ರೀ ಕೆ. ಚಂಗಲರಾಯ ರೆಡ್ಡಿಯವರು ಮಾತನಾಡುವರು.

ದೇವಾಂಗ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೭ ಗಂಟೆಗೆ ಮಂಡಿ ಶ್ರೀ ರಾಮೇಶ್ವರ... ಗೇಶ್ವರ ಚೌಡೇಶ್ವರೀ ದೇವಸ್ಥಾನದಲ್ಲಿ ಶ್ರೀ ಶಾರದಾ ಮತ್ತು ಗಾಂಧಿ ಜಯಂತಿ ಉತ್ಸವವನ್ನು ಶ್ರೀ ಟಿ. ನಾರಾಯಣ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಸಲಾಗುವುದು.

ನಂಜನಗೂಡಿನಲ್ಲಿ.

ನಾಳೆಯ ದಿನ ತಾಲ್ಲೂಕು ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ... ಮಹಾತ್ಮ ಗಾಂಧೀಜಿ ಜಯಂತಿಯನ್ನು ಸಂಜೆ ಐದು ಗಂಟೆಗೆ ವೈಭವದಿಂದ ನಡೆಸಲು ಏರ್ಪಡಿಸಿದೆ. ಈ ಸಂಬಂಧದಲ್ಲಿ ಧ್ವಜ ರೋಹಣ, ವಸ್ತು ಪ್ರದರ್ಶನ, ನಾಲುವ ಸ್ಪರ್ಧೆಯೂ ಮತ್ತು ಮೆರವಣಿಗೆ ನಡೆಯಲಿದೆ.

ಬಂಗಾರದ ಪದಕ

ನಾಳೆ ದಿನ ನಡೆಯುವ ಮಾರ್ಕೆಟ್ ಪ್ರದರ್ಶನದಲ್ಲಿ ... ಅಲಂಕಾರ ಮಾಡಿರುವ ಅಂಗಡಿಗೆ ಬಹುಮಾನ ಕೊಡಲು ಉಪಾಧ್ಯಕ್ಷರಾದ ಶ್ರೀ ಎ. ಕೃಷ್ಣಮೂರ್ತಿಯವರು ಒಂದು ಬಂಗಾರದ ಪದಕವನ್ನು ಕೊಟ್ಟಿರುತ್ತಾರೆ.

ಸರ್ಕಾರಕ್ಕೆ ಎರಡು ಸೋಲು

ಮೈಸೂರು ೧

ಈ ದಿನ ಪ್ರ॥ ಪ್ರ॥ ಸಭೆಯಲ್ಲಿ ಸರ್ಕಾರದವರು ಮಂಡಿಸಿದ್ದ ಪವರ್ ಆಲ್ಕೋಹಾಲ್ ತಿದ್ದುಪಡಿ ಮತ್ತು ಯುದ್ಧ ಸಂಸ್ಥಿತಿ ... ಮಸೂದೆಗಳು ... ಓಟಿಗಳಿಂದ ಬಿದ್ದುಹೋಗಿ ಸರ್ಕಾರಕ್ಕೆ ಎರಡು ಸೋಲುಗಳು ಸಂಭವಿಸಿದುವು.

ಡಾ॥ ಲೋಹಿಯಾ ದಸ್ತಗಿರಿ

ಗೋವಾದಲ್ಲಿ ನಾಗರಿಕ ಹಕ್ಕುಗಳ ಸ್ಥಾಪನೆಗಾಗಿ ಕಾನೂನು ಭಂಗವನ್ನು ನಡೆಸಲು ಅಲ್ಲಿಗೆ ಹೋಗುತ್ತಿದ್ದ ಡಾ॥ ರಾಮ ಮನೋಹರ ಲೋಹಿಯಾರವರನ್ನು ಕೋಲ್ಹಾಪುರದಲ್ಲಿ ದಸ್ತಗಿರಿ ಮಾಡಲಾಗಿದೆಯೆಂದು ತಿಳಿದು ಬಂದಿದೆ.

ಮುಂದಿನ ಅಧಿವೇಶನದಲ್ಲಿ ... ವನ್ನು ಮಂಡಿಸಲಾಗುವುದು ... ಸ್ಥಾನದಲ್ಲಿ ... ಕೇಂದ್ರ ಸರ್ಕಾರವನ್ನು ಪ್ರಾರ್ಥಿಸುವುದು ... ...

ಸಾಧ್ವಿ

ತಾ|| ೧-೧೦-೪೬ ಮಂಗಳವಾರ

ಸಮಾಧಾನಕರ ವಿಷಯ

ಕಾಂಗ್ರೆಸ್ ಅಧಿವೇಶನಕ್ಕಾಗಿ ಸ್ಥಳ ವಸತಿ, ನೀರು, ವಿದ್ಯುಚ್ಛಕ್ತಿ ಮತ್ತು ಆಹಾರ ಸಾಮಗ್ರಿಗಳನ್ನು ಒದಗಿಸಲು ಸರ್ಕಾರದವರು ಭರವಸೆ ನೀಡಿರುವರು. ಕಾಂಗ್ರೆಸ್ಸಿಗೂ, ಸರ್ಕಾರದವರಿಗೂ, ಅನೇಕ ವಿಚಾರಗಳಲ್ಲಿ ಭಿನ್ನಾಭಿಪ್ರಾಯಗಳಿರುವುದು ಸ್ಪಷ್ಟವಾದ ಅಂಶ. ಆದರೂ ಕಾಂಗ್ರೆಸ್ಸು ದೇಶದ ಪ್ರಜೆಗಳ ಹಿತಸಾಧನೆಗಾಗಿ ತ್ಯಾಗ ಮತ್ತು ಧೈರ್ಯದಿಂದ ಹೋರಾಡುವ ಸಂಸ್ಥೆ ಎಂಬುದನ್ನು ಸರ್ಕಾರದವರು ಮನಗಂಡಿರುವರು. ಆದುದರಿಂದಲೇ ಅದಕ್ಕೆ ಅಂಗೀಕಾರವನ್ನೂ ಸಹ ಕೊಟ್ಟಿರುವರು. ಈಗ ನಡೆಯಲಿರುವ ಅಧಿವೇಶನಕ್ಕೆ ಬೇಕಾದ ಸೌಲಭ್ಯಗಳನ್ನು ಅವರು ಒದಗಿಸಲಿರುವುದು ಸಹಜವಾಗಿಯೇ ಇದೆ.

ಹಿಂದೆ ವಿದುರಾಶ್ವತ್ಥದಲ್ಲಿ ಕಾಂಗ್ರೆಸ್ ಅಧಿವೇಶನವು ನಡೆದಾಗ ಸರ್ಕಾರದ ಇಲಾಖೆಯವರು ವಿದ್ಯುಚ್ಛಕ್ತಿಯನ್ನು ಒದಗಿಸಲು ನಿರಾಕರಿಸಿದ್ದರು. ಈಗ ಅಂತಹ ಮನೋಭಾವನೆಯು ಮಾಯವಾಗಿರುವಂತಿದೆ. ತತ್ವದ ದೃಷ್ಟಿಯಿಂದ ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ, ದೇಶದ ಹಿತಕ್ಕಾಗಿ ಸರ್ಕಾರದವರೂ, ಸಾರ್ವಜನಿಕರೂ, ಪರಸ್ಪರ ಸೌಹಾರ್ದದಿಂದ ಸಹಕರಿಸಲು ಅನೇಕ ಅವಕಾಶಗಳಿವೆ ಎಂಬುದು ವೇದ್ಯವಾಗುತ್ತಿದೆ. ಈ ಬಗೆಯ ಭಾವನೆಗಳು ಬೆಳೆಯಲೆಂಬುದೇ ಎಲ್ಲರ ಹಾರೈಕೆ.

ಚುನಾವಣಾ ಸಮಿತಿ

ಮೈಸೂರು ೧

ರಾಜಧಾನಿಯಲ್ಲಿ ನಡೆಯಲಿರುವ ಪೌರಸಭಾ ಚುನಾವಣೆಗೆ ಕಾಂಗ್ರೆಸ್ ಉಮೇದುವಾರರನ್ನು ನಿಲ್ಲಿಸುವುದಕ್ಕೂ ಇತರ ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕೂ ಶ್ರೀಗಳಾದ ಎಸ್. ಚನ್ನಯ್ಯ, ಎಸ್. ರಂಗರಾಮಯ್ಯ ಮತ್ತು ಎಂ. ಶಂಕರಯ್ಯ (ಕನ್ವೀನರ್) ಇವರನ್ನೊಳಗೊಂಡ ಉಪಸಮಿತಿಯನ್ನು ಮೈ|| ಕಾಂ|| ಕಾರ್ಯಕಾರಿ ಸಮಿತಿಯವರು ನೇಮಿಸಿದ್ದಾರೆ.

ಗ್ರಾಮ ಕೈಗಾರಿಕೆ ಮತ್ತು ಸ್ವದೇಶೀ ವಸ್ತು ಪ್ರದರ್ಶನ

ಬೆಂಗಳೂರು, ೧

ಮೈಸೂರು ಕಾಂಗ್ರೆಸ್ ಅರನೇ ಅಧಿವೇಶನದ ಅಂಗವಾಗಿ ಗ್ರಾಮ ಕೈಗಾರಿಕೆ ಮತ್ತು ಸ್ವದೇಶೀ ವಸ್ತು ಪ್ರದರ್ಶನವನ್ನು ಕೆಂಪಾಂಬುಧಿ ಕೆರೆ ಅಂಗಳದಲ್ಲಿ ಇದೇ ೧೬ ನೇ ತಾರೀಖಿನಿಂದ ೨೪ ನೇ ತಾ|| ನ ವರೆಗೆ ನಡೆಸಲಾಗುವುದು.

ಕೇಂದ್ರ ಸರ್ಕಾರಕ್ಕೆ ಅಭಿನಂದನೆ

ಪ್ರತಿನಿಧಿ ಸಭೆಯಲ್ಲಿ ನಿರ್ಣಯ

ಮೈಸೂರು ೧

ಪ್ರಜಾಪ್ರತಿನಿಧಿ ಸಭೆಯಲ್ಲಿ ನಿನ್ನೆ ದಿನ ದಿವಾನರ ಭಾಷಣವಾದ ಮೇಲೆ ಕಾಂಗ್ರೆಸ್ ಪಕ್ಷದ ಸದಸ್ಯರು ಸಭೆಗೆ ಹಿಂತಿರುಗಿದರು. ಚುನಾಯಿತ ಸದಸ್ಯರನ್ನೇ ರಾಜ್ಯಾಂಗ ಸಭೆಗೆ ಕಳುಹಿಸಬೇಕೆಂಬ ಅವಸರದ ನಿರ್ಣಯವನ್ನು ಕಾಂಗ್ರೆಸ್ ಪಕ್ಷದವರು ತಂದಿದ್ದರು. ಈ ಸಂಬಂಧವಾಗಿ ಒಂದು ನಿರ್ಣಯವೂ, ಒಂದು ಅರ್ಜಿಯೂ ಬಂದಿರುವುದರಿಂದ ಅವುಗಳ ಮೇಲೆ ಹೆಚ್ಚು ಚರ್ಚೆಗೆ ಅವಕಾಶ ಕೊಡುವ ಉದ್ದೇಶದಿಂದ ಅದನ್ನು ಅಧ್ಯಕ್ಷರು ತಳ್ಳಿ ಹಾಕಿದರು.

ಹರಿಹರದಲ್ಲಿ ಪೋಲೀಸ್ ಮಾಡಿರುವ ಅತ್ಯಾಚಾರದ ಬಗ್ಗೆ ವಿಚಾರಣೆಯನ್ನು ಪರಿಶೀಲಿಸಲು ಕಾಂಗ್ರೆಸ್ ಪಕ್ಷದವರು ತಂದ ಮತ್ತೊಂದು ಅವಸರದ ನಿರ್ಣಯವು ಮುಖ್ಯವಿಚಾರವಾದುದರಿಂದ ಅದರ ಚರ್ಚೆಗೆ ಅವಕಾಶವೀಯಲಾಯಿತು.

ಈ ಸಭೆಯಲ್ಲಿ ಕೊಟ್ಟ ಹೇಳಿಕೆಯೊಂದರ ಸಂಬಂಧದಲ್ಲಿ ಸಭೆಯ ಸದಸ್ಯರಾದ ಶ್ರೀ ಮಹದೇವಪ್ಪನವರ ಮೇಲೆ ಪೋಲೀಸ್ ಅಧಿಕಾರಿಗಳೊಬ್ಬರು ಫಿರ್ಯಾದು ಹೂಡಲು ಅನುಮತಿಯನ್ನು ಸರ್ಕಾರದವರು ಕೊಟ್ಟಿರುವುದು ಸಭೆಯ ಹಕ್ಕುಬಾಧ್ಯತೆಯ ಪ್ರಶ್ನೆಯಾಗಿದೆಯೆಂದು ಬಂದ ವಿಚಾರದಲ್ಲಿ ಸರಿ, ಅಂಶವು ನ್ಯಾಯಸ್ಥಾನದ ಪರಿಶೀಲನೆಯಲ್ಲಿರುವುದರಿಂದ ದಿವಾನರು ಅದನ್ನು ತಳ್ಳಿ ಹಾಕಿದರು.

ಭಾರತ ಕೇಂದ್ರ ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುವ ನಿರ್ಣಯವನ್ನು ಶ್ರೀ ಕೆ. ಹನುಮಂತಯ್ಯನವರು ಸೂಚಿಸಿದರು. ಶ್ರೀ ಭೂಪಾಳಂ ಅವರು ಅನುಮೋದಿಸಿದರು. ಮುಸ್ಲಿಂ ಲೀಗ್ ಪಕ್ಷದ ನಾಯಕರಾದ ಹಾ|| ಎ ಜೆ ಖಲೀಲ್‌ರವರು ನಿರ್ಣಯವನ್ನು ವಿರೋಧಿಸಿ, ಕೇಂದ್ರ ಸರ್ಕಾರವು ಸ್ವತಂತ್ರವೂ ಅಲ್ಲ, ರಾಷ್ಟ್ರೀಯವೂ ಅಲ್ಲ, ಇದು ವಿವಾದಾಸ್ಪದವಾದ ವಿಷಯ, ಇದಕ್ಕೆ ಮುಸ್ಲಿಮರ ಬೆಂಬಲವಿಲ್ಲ, ಎಂದರು. ಶ್ರೀಗಳಾದ ಮೂಲ್ಯ ಗೋವಿಂದರೆಡ್ಡಿ ಮತ್ತು ಶಂಕರಲಿಂಗೇಗೌಡರವರು ನಿರ್ಣಯಕ್ಕೆ ಬೆಂಬಲವಿತ್ತರು. ಮುಸ್ಲಿಂ ಲೀಗಿನವರ ವಿನಹ ಮಿಕ್ಕೆಲ್ಲ ಸದಸ್ಯರ ಬೆಂಬಲದಿಂದ ನಿರ್ಣಯವು ಅಂಗೀಕಾರವಾಯಿತು

OPERA TALKIES

ತಾ|| 28—9—46ರಿಂದ

ಪ್ರತಿ ದಿನ ಮೂರು ಆಟಗಳು

ಮಾಯಾ ಮಚ್ಛೀಂದ್ರ

(ತೆಲುಗು)

ಕಣ್ಣಾಂಬ, ಮಾಲತಿ,

ಗೌರೀನಾಥ ಶಾಸ್ತ್ರಿ, ಅದ್ದಂಕಿ

ಕೃಷ್ಣಮೂರ್ತಿ ಮುಂತಾದವರು

೫೦೦ ರೂ. ಬೆಲೆಯ ಟಗರು

ಮಾರ್ಕೆಟ್ ಪ್ರದರ್ಶನದಲ್ಲಿ

ನಾಳೆ ದಿನ ದೇವರಾಜ ಮಾರ್ಕೆಟ್‌ನಲ್ಲಿ ನಡೆಯಲಿರುವ ಮಾರ್ಕೆಟ್ ಪ್ರದರ್ಶನದಲ್ಲಿ ೫೦೦ ರೂ ಬೆಲೆ ಬಾಳುವ ಭಾರಿ ಟಗರೊಂದನ್ನು ಇಡಲಾಗುವುದು

ಬೆಳಗ್ಗೆ ೭ ಘಂಟೆಯಿಂದ ೧೨ ಘಂಟೆ ವರೆಗೆ ಮಹಾಜನರು ಬಂದು ನೋಡಬಹುದು

ಎಂ. ಕೆ ವೆಂಕಟರಮಣಯ್ಯ,

೪೪೯ ದೇವರಾಜ ಮಾರ್ಕೆಟ್, ಮೈಸೂರು.

Edited, printed and published by A. K. Nagarajan at the Sadhvi Press D. Subbiah Road, Mysore.

ಮೈಸೂರು ಸಿಟಿ ಮುನಿಸಿಪಾಲಿಟಿ

ಮಾರ್ಕೆಟ್ ಮತ್ತು ಫಲ ಪುಷ್ಪಗಳ ಪ್ರದರ್ಶನ

(ದೇವರಾಜ ಮಾರ್ಕೆಟ್‌ನಲ್ಲಿ)

1946 ನೇ ಅಕ್ಟೋಬರ್ ಮಾಹೆ 2 ಮತ್ತು 3 ನೇ ಬುಧವಾರ ಮತ್ತು ಗುರುವಾರ ನಡೆಸಲು ಏರ್ಪಾಡಾಗಿದೆ

ಪ್ರದರ್ಶನದ ಆರಂಭೋತ್ಸವ

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ

ಶ್ರೀ ಎಸ್. ನಿಜಲಿಂಗಪ್ಪನವರಿಂದ

ಬಹುಮಾನ ವಿನಿಯೋಗ

ಶಾಸನ ಸಭಾ ಕಾಂಗ್ರೆಸ್ ಪಕ್ಷದ

ನಾಯಕರಾದ

ಶ್ರೀ ಕೆ. ಚೆಂಗಲರಾಯರೆಡ್ಡಿಯವರಿಂದ

ಸಾರ್ವಜನಿಕರಿಗೆ ಟಿಕೇಟು ಮೂಲಕ ಪ್ರವೇಶ:—

2 ನೇ ತಾ|| ... 0-2-0

3 ನೇ ತಾ|| .. 0-1-0

2 ನೇ ತಾ|| ಬೆಳಗ್ಗೆ 10 ರಿಂದ

3 ನೇ ತಾ|| ,, 8-30 ರಿಂದ

(ಸಹಿ) ಎ ಕೃಷ್ಣಮೂರ್ತಿರಾವ್

ವೈಸ್ ಪ್ರೆಸಿಡೆಂಟ್ ಮತ್ತು

ಮಾ|| ಪ್ರ|| ಸಮಿತಿ ಕಾರ್ಯದರ್ಶಿ

ಮೈಸೂರು

ನ್ಯೂ ಕೃಷ್ಣಾ ಟಾಕೀಸ್

ಮೈಸೂರು

ಇದೇ 28-9-46 ರಿಂದ

ದಿನವಹಿ ಮೂರು ಆಟಗಳು

ಸಿರ್ಕೋರವರ

ಜಂಗಲ್ ಗರ್ಲ್

ಅಥವಾ

ಹೂರ್-ಎ-ಜಂಗಲ್

(ಹಿಂದಿ)

ಪಟ್ಟಾಂ, ಅಮೀರ್ ಬಾನೋ,

ಶ್ಯಾಮ ಸುಂದರ್

ಮೊದಲಾದವರ ಅಭಿನಯ

ಅರಣ್ಯದ ಭೀಕರತೆ ಮತ್ತು ಕಾಡು ಮೃಗಗಳ ಕೂಡಿಗೆ ಹೊಡೆದಾಟವನ್ನು

ಪ್ರದರ್ಶಿಸಲಾಗುತ್ತದೆ

For Bookings Please Contact for Mysore State Coorg & S. K

Basvant Pictures,

Cottonpet, Bangalore City.

ಡಾ|| ಜಿ|| ಲೋಗನಾಥರ ಆಗಮನ

ಮೈಸೂರು

ನೇತಾಜಿ ಬೋಸರು ಸ್ಥಾಪಿಸಿದ ರಾಷ್ಟ್ರೀಯ ಸೈನ್ಯದ ಮೇಜರ್ ಜನರಲ್ ಲೋಗನಾಥನ್‌ರವರು ನಾಳೆ ಮದ್ರಾಸ್ ಬೆಂಗಳೂರು ಮೇಲಿನಲ್ಲಿ ರಾಜಧಾನಿಗೆ ಬರುವರು. ನಾಳೆ ನಡೆಯಲಿರುವ ಗಾಂಧಿ ಜಯಂತಿ ಸಭೆಯಲ್ಲಿ ಭಾಗವಹಿಸುವರು. ರೈಲ್ವೆ ಸ್ಟೇಷನ್ನಿಗೆ ಎಲ್ಲರೂ ಆಗಮಿಸಿ ಅವರಿಗೆ ಸ್ವಾಗತ ನೀಡಬೇಕೆಂದು ನಗರ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿಗಳು ಪ್ರಾರ್ಥಿಸಿದ್ದಾರೆ.

ವಿಶೇಷ ಸಂಗೀತಗಳು

ಆಕಾಶವಾಣಿಯಲ್ಲಿ ನವರಾತ್ರಿ ಪ್ರಯುಕ್ತ ಪ್ರತಿ ದಿನ ರಾತ್ರಿ ೮-೧೫ ಗಂಟೆಯಿಂದ ೧೦ ಗಂಟೆ ವರೆಗೆ ಈ ಕೆಳಗೆ ಕಂಡಂತೆ ಕಾರ್ಯಕ್ರಮಗಳು ಏರ್ಪಾಡಾಗಿವೆ— ವಿದ್ವಾನ್ ದೇವೇಂದ್ರಪ್ಪನವರ ಗಾಯನ, ವಿದ್ವಾನ್ ಎಸ್. ನಾರಾಯಣಯ್ಯಂಗಾರ್ರ ಗೋಟುವಾದ್ಯ, ೩ ನೇ ತಾ|| ವಿದ್ವಾನ್ ಚೌಡಯ್ಯನವರ ಪಿಟೀಲು, ಶುಕ್ರವಾರ ಕಾರ್ಯಕ್ರಮ ಇನ್ನೂ ಏರ್ಪಾಡಾಗಿಲ್ಲ ೫ ನೇ ತಾ|| ಶನಿವಾರ ಶ್ರೀಮತಿ ಡಿ. ಕೆ. ಪಟ್ಟಮ್ಮಾಳ್‌ರವರ ಸಂಗೀತ

ರಾಜ್ ಕಮಲ್, ಮೈಸೂರು

26-9-46 ರಿಂದ 2 ನೇ ವಾರ

ಪ್ರತಿ ದಿನ ಮೂರು ಆಟಗಳು

ಸ್ವರ್ಗ ಸೀಮ

ಭೂಮಿಕೆ:—ಜಯಮ್ಮ, ಭಾನುಮತಿ, ನಾಗಯ್ಯ, ಲಿಂಗಮೂರ್ತಿ

3-10-46 ರಿಂದ ಪ್ರತಿದಿನ ಪ್ರಾತಃಕಾಲ 10-30 ಕ್ಕೆ

ಫುಸ್ಸ್ ಬಲ್

ಕಿಶೋರ್ ಸಾಹು ಮತ್ತು ಸ್ನೇಹ ಪ್ರಭಾ

ಸುಸಮಯ

ಚಲನ ಚಿತ್ರಗಳಲ್ಲಿ ಅಭಿನಯಿಸಲು ಇಚ್ಛೆಯುಳ್ಳ ತರುಣಿಯರನ್ನು ತರಪೇತು ಮಾಡಿ

ಉತ್ತಮ ನಟಿಯರಾಗಿ

ತಮಿಳು ಚಿತ್ರರಂಗದಲ್ಲಿ ಖ್ಯಾತಿವಂತರಾಗಲು ಅನುವಾಗುವಂತೆ ರಾಜಧಾನಿಯ ಕೆಳಗೆ ಕಂಡ ಸ್ಥಳದಲ್ಲಿ ನಟಿಯರ ಶಿಕ್ಷಣ ಶಾಲೆಯೊಂದನ್ನು ಮೈಸೂರು ಸಂಸ್ಥಾನದ ಚಲನಚಿತ್ರ ಕೈಗಾರಿಕೆಯ ಬೆಳವಣಿಗೆಯ ಸಹಕಾರ ನೀಡಲು ತೆರೆದಿರುತ್ತೇವೆ.

ವಿದ್ಯಾರ್ಥಿ ವೇತನವನ್ನೂ ಸಹ ಕೊಡಲಾಗುವುದು.

ವಿವರಗಳಿಗೆ ಕೂಡಲೇ ಬರೆಯಿರಿ ಅಥವಾ ನೇರವಾಗಿ ಬಂದು ನೋಡಿ

ಪತ್ರ ವ್ಯವಹಾರದೊಡನೆ ಫೋಟೋ ಕಳುಹಿಸಿ

ವಿ. ಟಿ. ಎಸ್. ಮೊದಲಿಯಾರ್

ಪ್ರಿನ್ಸಿಪಾಲ್,

೧೫೫೩ ಕೃಷ್ಣಮೂರ್ತಿಪುರಂ, ಮೈಸೂರು

ಸುಲಭ ಬೆಲೆ! :: ತ್ವರೆ ಮಾಡಿರಿ!

Sri Rama Electric Stores

Govt. Licensed Electrical Contractors & Engineers.

ಎಲ್ಲಾ ವಿಧವಾದ ಎಲೆಕ್ಟ್ರಿಕ್ ಪವರ್ ಮತ್ತು ಲೈಟಿಂಗ್ ಇನ್‌ಸ್ಟಲೇಷನ್ ಕೆಲಸಗಳನ್ನೂ ಕಂಟ್ರಾಕ್ಟ್ ದರದಲ್ಲಿಯೂ, ಸಕಾಲದಲ್ಲಿಯೂ ಮಾಡಿಕೊಡುತ್ತೇವೆ

ಮಹಾಜನರ ಪ್ರೋತ್ಸಾಹವನ್ನು ಬೇಡುತ್ತೇವೆ.

ಶ್ರೀ ರಾಮಾ ಎಲೆಕ್ಟ್ರಿಕ್ ಸ್ಟೋರ್ಸ್,

(ಬಸವನ ಕೃಷ್ಣಪ್ಪನವರ ರಾಮ ಮಂದಿರದ ಎದುರು)

ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು.

ರೀ. ನಂ. 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫ ಬುಧವಾರ ೨—೧೦—೪೬ ಸಂಚಿಕೆ ೫೭

ನಾಜೀ ನಾಯಕರಿಗೆ ಮರಣ ದಂಡನೆ

ಸರ್ಕಾರಕ್ಕೆ ಇನ್ನೊಂದು ಸೋಲು

ಮೈಸೂರು ೨

…ಯುದ್ಧ ಪರಿಸ್ಥಿತಿಗಳಿಗನುಗುಣವಾಗಿ …ಯಲ್ಲಿ ತಂದಿದ್ದ ಮೂರು ಕಾನೂನುಗ… ಅಂದರೆ ವಿಮಾನ ದಾಳಿಯ ಎಚ್ಚರಿಕೆ …ಕ್ರಮದ ಕಾನೂನು, ಡ್ರೈವರುಗಳಿಗೆ …ಬಂಧ ಪಟ್ಟ ಕಾನೂನು, ವಿದೇಶೀಯ …ಪ್ರಯಾಣಿಕರಿಗೆ ಸಂಬಂಧ ಪಟ್ಟ ಕಾನೂನು …ರದ್ದು ಪಡಿಸಲು ಅಧಿಕಾರ ಕೊಡು…ವ ಮಸೂದಾ ಕಾನೂನನ್ನು ಶ್ರೀ ಕನಕರತ್ನ…ನವರು ನಿನ್ನೆ ದಿನ ಸಭೆಯ ಮುಂದೆ …ಇಟ್ಟು ಮಸೂದೆಯ ತತ್ವವನ್ನೂ ಉ…ದ್ದೇಶವನ್ನೂ ವಿವರಿಸಿದರು.

…ಗ್ರೆಸ್ ಪರವಾಗಿ ಶ್ರೀ ಪಾಲಹಳ್ಳಿ …ರಾಮಯ್ಯನವರು ಮಾತನಾಡುತ್ತ …ಯ ಕಾನೂನೇ ಪೂರ್ತಿಯಾಗಿ ರದ್ದಾ…ಗಬೇಕಾಗಿರುವ ಸಮಯದಲ್ಲಿ ಸರ್ಕಾರದ ಕೇವಲ ಮೂರು ಕಾನೂನುಗಳನ್ನು ಪಡಿಸಲು ಅಧಿಕಾರ ಕೇಳುವುದು ತ…ಪ್ಪು. ಯುದ್ಧ ಮುಗಿದು ಶಾಂ…ತ ವಾತಾವರಣ ನೆಲೆಸಿದೆ. ಆದರೂ ಸಂ…ದರ್ಭಗಳಲ್ಲಿ ಪರಿಸ್ಥಿತಿ ಬದಲಾಯಿಸಿಲ್ಲವೆಂ…ದು ಶೋಚನೀಯ ಎಂದು ಹೇಳಿ ಮ…ಸೂದೆಯನ್ನು ವಿರೋಧಿಸಿದರು.

…ದ್ಧ ಕಾಲದಲ್ಲಿ ಜಾರಿಗೆ ತಂದಿರತಕ್ಕ …ಕಾನೂನುಗಳನ್ನೂ ರದ್ದು ಮಾಡಿ… ಶ್ರೀ ನೂರ್ ಹುಸೇನರು ಹೇಳಿ… …ಗಳಾದ ಅಬ್ದುಲ್ ಕರೀಂ, ಎಫ್. …ರಾಜ್ ಅರಸು, ಗೋಪಾಲಯ್ಯನ…ವರು ಕೂಡಿಗೆ ಬೆಂಬಲವಿತ್ತು ಮಾತನಾ…ಡಿ ಶಂಕರಲಿಂಗೇಗೌಡರು ವಿರೋ…ಧಿಸಿ ಮಸೂದೆಯು ೧೨೩-೧೦೮ ಓ…ಟುಗಳಿಂದ ತಿರಸ್ಕರಿಸಲ್ಪಟ್ಟು ಸರ್ಕಾರಕ್ಕೆ ಈ …ನೂತನ ಸೋಲು ಸಂಪ್ರಾಪ್ತವಾ…ಯಿತು.

…ಸಿ ಯವರು ಮಾತನ್ನು …ವಕ್ಕೆ ತೆಗೆದುಕೊಂಡರು

…ಸಂಸ್ಥೆಗಳಿಗೆ ಬೆಂಬಲ ಪಡೆಯಲು …ಕ್ಯಾನ್‌ವಾಸ್ ಮಾಡುತ್ತಿರು… …ಅವರೂ ಅದಕ್ಕೆ ಗಮನ ಕೊಡದೆ …ಕಾರವನ್ನು ಪ್ರತಿಭಟಿಸುವುದಾಗಿ …ಎಂ. ಎನ್. ಜೋಯಿಸರು ಹೇ… …ಮಂತ್ರಿಗಳು ಹಾಗೆ ಮಾಡುವು…ದು ಶುಭ ಸೂಚನೆಯೆಂದೂ ಪ್ರ…ಜಾಪ್ರಭುತ್ವವನ್ನು ಗಳಿಸುವ ಅವಶ್ಯಕತೆ …ಯಿಂದ ಅವರಿಗೆ ಮನದಟ್ಟಾಗುವು…ದು. ಶ್ರೀ ಬಿ.ಎನ್. ಗುಪ್ತರು ತಿಳಿಸಿದ …ರಿಂದ ಆಡಳಿತ ನಡೆಸುವ ಅಧಿ…ಕಾರಿಗಳ ಸಂದರ್ಭದಲ್ಲಿ ಹೀಗೆ ಮಾತನಾಡು…ವುದು ಸರಿಯಲ್ಲ ಖಂಡನೀಯವೆಂದು ಶ್ರೀ ಎಫ್. …ಜಿ. ಅರಸಿನವರು ಹೇಳಿ ಈ …ಮಂತ್ರಿಗಳು" ಎನ್ನುವ ಪದವನ್ನು …ತೆಗೆಯಬೇಕು ಬಹುವಾಯಿತು ಎಂದು …ಕಾಂಗ್ರೆಸ್ ಪಕ್ಷದವರು ಅ…ಧ್ಯಕ್ಷರಿಂದ ಶ್ರೀ ಎಫ್. ಜಿ. …ತಮ್ಮ ಮಾತನ್ನು ಹಿಂದಕ್ಕೆ ತೆಗೆದು…ಕೊಂಡರು.

…ಪತ್ರಿಕೆಗೆ ೫೦೦೦ ರೂ

…ಶಿರೋಮಣಿ ಶ್ರೀ ಟಿ. ಸುಬ್ಬ… …ಮಾಹೆಯಾನ ೫೦೦೦ ರೂ …ಮಂತಿ ಪ್ರಭುಗಳು ಅಟ್ಟ… …ತಿಳಿದುಬಂದಿದೆ. ಈ …ಎಂ. ಜೋಯಿಸರು ಒಂದು …ಯನ್ನು ಪ್ರಾ॥ ಪ್ರಾ॥ ಸಭೆಗೆ …ದ್ದರು.

ನಿಲುವಳಿ ಸೂಚನೆ

ಬಣ್ಣದ ಆಜ್ಞೆ ವಾಪಸಾಗುವುದು

ಮೈಸೂರು ೨

ಗ್ರಾಮಾಂತರ ಪ್ರದೇಶಗಳಲ್ಲಿ ನೂಲಿಗೆ ಬಣ್ಣ ಹಾಕುವುದನ್ನು ಪ್ರತಿಬಂಧಿಸಿ ಬೆಂಗಳೂರು ನಗರದಲ್ಲಿ ಆ ಕೈಗಾರಿಕೆ ನಡೆಸಲು ಅವಕಾಶ ಕೊಟ್ಟಿರುವುದನ್ನು ಕೂಡಲೇ ನಿಲ್ಲಿಸಬೇಕೆಂದು ಕಾಂಗ್ರೆಸ್ ಪಕ್ಷದ ಶ್ರೀ ದೇವರಕೊಂಡಪ್ಪನವರು ನಿನ್ನೆ ನಿಲುವಳಿ ಸೂಚನೆ ತಂದು, ಸಣ್ಣ ಪುಟ್ಟ ಕೈಗಾರಿಕೆಗಳವರಿಗೆ ಈ ಆಜ್ಞೆಯಿಂದ ತೊಂದರೆಯಾಗಿದೆಯೆಂದರು. ಲೀಗಿನ ಹಾ॥ ಹುಸೇನ್ ಬೇಗ್, ಮತ್ತು ಪಾಲ್ ಚೆನ್ನಪ್ಪನವರು ಸೂಚನೆಯನ್ನು ವಿರೋಧಿಸಿದರು.

ಶ್ರೀಗಳಾದ ಶಿವಲಿಂಗಯ್ಯ, ಡಿ ಸೌ ಜ ಜನಾರ್ಧನ ನಾಯ್ಡು, ಮೀರ್ ನೂರ್ ಹುಸೇನ್ ಮತ್ತು ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣನವರು ಸೂಚನೆಗೆ ಬೆಂಬಲವಿತ್ತರು.

ಸರಬರಾಜು ಸಚಿವರಾದ ಮಿ॥ ಷರೀಫರು ಚರ್ಚೆಗೆ ಉತ್ತರವಿತ್ತು ಆ ಬಗ್ಗೆ ಕಂಟ್ರೋಲರು ಹೊರಡಿಸಿರುವ ಆಜ್ಞೆಯನ್ನು ವಾಪಸು ತೆಗೆದುಕೊಳ್ಳಲಾಗುವುದೆಂದರು. ಬಟ್ಟೆ ಹಂಚಿಕೆಗಾಗಿ ಪ್ರತಿ ತಾಲ್ಲೂಕಿನಲ್ಲೂ, ಪ್ರತಿನಿಧಿ ಸಭೆ ಶಾಸನ ಸಭೆ ಮತ್ತು ಸ್ಥಳೀಯ ಸಮಿತಿ ಸದಸ್ಯರಿಂದ ಕೂಡಿದ ಸಮಿತಿ ರಚಿಸಲಾಗುವುದೆಂದರು. ಆದ್ದರಿಂದ ಓಟಿಗೆ ಹಾಕಲು ಒತ್ತಾಯ ಪಡಿಸಲಿಲ್ಲ.

ಹೋಟೆಲುಗಳ ಕಾಲವನ್ನು ಹೆಚ್ಚಿಸಿದೆ

ಮೈಸೂರು ೨

ನಾಡ ಹಬ್ಬವಾದ ನವರಾತ್ರಿಯಲ್ಲಿ ಮೈಸೂರಿಗೆ ಬರುವ ಪ್ರಜೆಗಳ ಊಟದ ಸೌಕರ್ಯಕ್ಕಾಗಿ ಯಾವ ಏರ್ಪಾಡು ಮಾಡಲಾಗಿದೆಯೆಂದು ಶ್ರೀ ಬಿ. ಸಿ. ಚಿಕ್ಕಶೆಟ್ಟಿಯವರಿಂದ ಬಂದ ಪ್ರಶ್ನೆಗೆ ಉತ್ತರ ಕೊಡುತ್ತಾ ದಿವಾನರು ಈ ಬಗ್ಗೆ ಏನನ್ನೂ ಮಾಡಲು ಸಾಧ್ಯವಿಲ್ಲವೆಂದು ಹೇಳಿ ಹೋಟೆಲುಗಳಲ್ಲಿ ಫಲಾಹಾರ ಒದಗಿಸುವ ಕಾಲವನ್ನು ಬೆಳಗ್ಗೆ ೬ ಗಂಟೆಯಿಂದ ರಾತ್ರಿ ೯ ಗಂಟೆವರೆವಿಗೆ ತೆರುವಂತೆ ಆಜ್ಞೆ ಮಾಡಿದೆ ಎಂದು ಈ ದಿನ ಪ್ರಾ॥ ಪ್ರಾ॥ ಸಭೆಯಲ್ಲಿ ತಿಳಿಸಿದರು.

ಮಹಾಲಯ ಮತ್ತು ನವರಾತ್ರಿಗಳಿಗಾಗಿ ಬಟ್ಟೆ ಕೊಡದೆ ಇರುವ ವಿಷಯದಲ್ಲಿ ಶ್ರೀ ನಾಗಭೂಷಣ ಭಟ್ಟರು ತಂದಿರುವ ನಿಲುವಳಿ ನಿರ್ಣಯವನ್ನು ಚರ್ಚಿಸಲು ದಿವಾನರು ಅವಕಾಶವಿತ್ತಿದ್ದಾರೆ.

ಗಾಂಧಿ ಜಯಂತಿ

ಮೈಸೂರು ೨

ಮಹಾತ್ಮ ಗಾಂಧಿಯವರ ಜಯಂತಿ ಉತ್ಸವದ ಸಂಬಂಧದಲ್ಲಿ ಈ ದಿನ ಸುಬ್ಬರಾಯನ ಕೆರೆ ಅಂಗಳದಲ್ಲಿ ಧ್ವಜಾರೋಹಣ ಸಮಾರಂಭ ಜರುಗಿತು. ರಾಷ್ಟ್ರ ಧ್ವಜವನ್ನು ಆರೋಹಿಸುತ್ತಾ ಮೈ॥ ಕಾಂ॥ ಅಧ್ಯಕ್ಷರಾದ ಶ್ರೀ ಸಿದ್ದವ್ವನಹಳ್ಳಿ ನಿಜಲಿಂಗಪ್ಪನವರು, ದೇಶೀಯ ಸಂಸ್ಥಾನಗಳಲ್ಲಿ ಜವಾಬ್ದಾರಿ ಸರ್ಕಾರ ಬಂದ ಹೊರತು ಭಾರತದ ಸ್ವಾತಂತ್ರ್ಯವೆ ಮೊಟಕಾಗಿರುವುದು, ಆದ್ದರಿಂದ ಕೂಡಲೇ ದೇಶೀಯ ಸಂಸ್ಥಾನಗಳಲ್ಲಿ ಕಾಲಕ್ಕನುಗುಣವಾಗಿ ಪ್ರಜಾ ಸರ್ಕಾರಗಳೇರ್ಪಡ ಬೇಕೆಂದು ತಿಳಿಸಿ ಮಹಾತ್ಮರು ತಮ್ಮ ಜೀವಿತದಲ್ಲಿ ತಮ್ಮ ಆಟ್ಟ ಮೆಟ್ಟಿನ ಭಾರತದ ಪೂರ್ಣ ಸ್ವಾತಂತ್ರ್ಯವನ್ನು ನೋಡಿ ಸಂತೋಷ ಪಡಲೆಂದು ಹಾರೈಸಿದರು.

ಶ್ರೀ ಕೆ ಚೆಂಗಲರಾಯ ರೆಡ್ಡಿಯವರು ಮೈಸೂರು ಧ್ವಜವನ್ನು ಹಾರಿಸಿ ಇತ್ತೀಚೆಗೆ ದಿವಾನರು ಪ್ರತಿನಿಧಿ ಸಭೆಯಲ್ಲಿ ಮಾಡಿರುವ ಭಾಷಣವು ಪ್ರತಿಗಾಮಿಯಾಗಿದೆಯೆಂದೂ, ದೇಶದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ಹೋರಾಟ ಅನಿವಾರ್ಯವೆಂದೂ ತಿಳಿಸಿದರು.

ದೇಶೀಯ ವಿದ್ಯಾಶಾಲೆಯಲ್ಲಿ ಈ ದಿನ ಧ್ವಜ ವಂದನೆಯು ಶ್ರೀಗಳಾದ ಎಂ. ವಿ. ಕೃಷ್ಣಪ್ಪ ಮತ್ತು ಹೆಚ್. ಕೆ. ಕುಮಾರಸ್ವಾಮಿಯವರುಗಳಿಂದ ನೆರವೇರಿಸಲ್ಪಟ್ಟಿತು.

ಸಹಕಾರ ಸಮ್ಮೇಳನ

ಸಂಸ್ಥಾನದ ೩ನೇ ಸಹಕಾರ ಸಮ್ಮೇಳನವು ಈ ದಿನ ಬೆಳಗ್ಗೆ ಬೆಂಗಳೂರಿನ ಸುಪ್ರಸಿದ್ಧ ವಕೀಲರಾದ ಶ್ರೀ ಎಂ. ಪಿ. ಸೋಮಶೇಖರ ರಾಯರ ಅಧ್ಯಕ್ಷತೆಯಲ್ಲಿ ಆರಂಭವಾಯಿತು.

ನಾಜೀ ನಾಯಕರುಗಳಿಗೆ ಮರಣ ದಂಡನೆ

ಲಕ್ಷ್ಮೆಂಬರ್ಗಿನಲ್ಲಿ ನಡೆಯುತ್ತಿದ್ದ ಯುದ್ಧಪಾತಕಿಗಳ ಅಂತರ ರಾಷ್ಟ್ರೀಯ ವಿಚಾರಣೆಯಲ್ಲಿ ನಾಜೀ ನಾಯಕರುಗಳಾದ ಗೋಯರಿಂಗ್ ಮುಂತಾದ ೧೨ ಜನರಿಗೆ ಮರಣ ದಂಡನೆಯನ್ನೂ ಹೆಸ್ ಮುಂತಾದ ೭ ಜನರಿಗೆ ಶಿಕ್ಷೆ, ವಧಿ ಕಾರಾಗೃಹವಾಸವನ್ನೂ, ಪ. ಪೇಪೆನ್ ಮುಂತಾದ ಮೂವರಿಗೆ ಬಿಡುಗಡೆಯನ್ನೂ ನ್ಯಾಯ ನಿರ್ಣಯ ಕೊಡಲಾಗಿದೆ.

ಮಾರ್ಕೆಟ್ ಪ್ರದರ್ಶನ

ಮೈಸೂರು

ಪೌರಸಭೆಯವರು ಏರ್ಪಡಿಸಿ… ಮಾರ್ಕೆಟ್ ಮತ್ತು ಫಲಪುಷ್ಪ ಪ್ರದರ್ಶನದ ಆರಂಭೋತ್ಸವವನ್ನು ಈ ದಿನ ಮೈ॥ ಕಾಂ॥ ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪನವರು ನೆರವೇರಿಸಿದರು. ಸಾವಿರಾರು ಜನ ಪ್ರೇಕ್ಷಕರು ಬಂದು ನೋಡಿ ಸಂತೋಷಪಟ್ಟರು. ಪೌರ ಸಭಾಧ್ಯಕ್ಷರಾದ ಶ್ರೀ ಟಿ. ಬೋರೇಗೌಡರವರು ಶ್ರೀ ನಿಜಲಿಂಗಪ್ಪನವರನ್ನು ಸ್ವಾಗತಿಸಿ ಪ್ರದರ್ಶನವನ್ನು ಆರಂಭಿಸುವಂತೆ ಪ್ರಾರ್ಥಿಸಿದರು. ಮನುಷ್ಯ ದೇಹ ಪುಷ್ಟಿಗೆ ಆರೋಗ್ಯಕರವಾದ ತರಕಾರಿಗಳ ಅವಶ್ಯಕತೆಯನ್ನು ಶ್ರೀ ನಿಜಲಿಂಗಪ್ಪನವರು ಒತ್ತಿ ಹೇಳಿದರು. ವರ್ತಕರು ಲಾಭಾರ್ಜನೆಯನ್ನೇ ಮುಖ್ಯ ಗುರಿಯಾಗಿಟ್ಟುಕೊಳ್ಳದೇ ಪ್ರಜಾ ಸೇವಾ ದೃಷ್ಟಿಯಿಂದ ವ್ಯಾಪಾರ ನಡೆಸಬೇಕೆಂದು ಕೋರಿದರು.

ಪ್ರದರ್ಶನಕ್ಕಾಗಿ ಮಾರ್ಕೆಟ್ಟಿನ ಎಲ್ಲಾ ಅಂಗಡಿಗಳೂ ನಯನ ಮನೋಹರವಾಗಿ ಅಲಂಕರಿಸಲ್ಪಟ್ಟಿದ್ದುವು.

ಜಯಂತಿ ಸ್ಪರ್ಧೆ

ಮಹಾತ್ಮ ಗಾಂಧಿಯವರ ೭೮ ನೇ ಜಯಂತಿ ಇಂದಿನಿಂದ ಆರಂಭವಾಗಿ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ ಕನ್ನಡ ಅಥವಾ ಹಿಂದೀ ಭಾಷೆಯಲ್ಲಿ ೫ ಪುಟಗಳಿಗೆ ಮೀರದೆ ಗಾಂಧೀಜಿಯವರ ವಿಚಾರವಾಗಿ ಬರೆಯತಕ್ಕ ಉತ್ತಮ ಪ್ರಬಂಧಗಳಿಗೂ, ನೂಲುವ ಸ್ಪರ್ಧೆಯಲ್ಲಿ ಉತ್ತೀರ್ಣರಾದವರಿಗೂ ಬಹುಮಾನವನ್ನು ಕೊಡಲಾಗುವುದು. ಪ್ರಬಂಧವನ್ನು ೫ ನೇ ತಾ॥ ಸಂಜೆ ೮ ಘಂಟೆ ಒಳಗೆ ಕಾಂಗ್ರೆಸ್ ಕಛೇರಿಗೆ ತಲುಪಿಸ ಬೇಕಾಗಿದೆ. ನೂಲುವ ಸ್ಪರ್ಧೆಯು ೮ ನೇ ತಾ॥ ಮಧ್ಯಾಹ್ನ ೪ ಘಂಟೆಗೆ ಕಾಂಗ್ರೆಸ್ ಕಛೇರಿಯಲ್ಲಿ ಜರುಗುವುದು.

ಪ್ರಭುಗಳಿಂದ ಗುಬ್ಬಿ ಕಂಪೆನಿ ವಜ್ರೋತ್ಸವಾರಂಭ

ಶ್ರೀಮನ್ಮಹಾರಾಜರು ಬರುವ ಏಪ್ರಿಲ್ ತಿಂಗಳಲ್ಲಿ ಗುಬ್ಬಿ ನಾಟಕ ಮಂಡಳಿಯ ವಜ್ರೋತ್ಸವದ ಆರಂಭವನ್ನು ಮಾಡಲು ಸಮ್ಮತಿಸಿದ್ದಾರೆ.

ಭೋಪಾಲ್ ನವಾಬರ ಸಂಧಾನ

ಕಾಂಗ್ರೆಸ್ಸಿಗೂ ಮುಸ್ಲಿಂ ಲೀಗಿಗೂ ಒಪ್ಪಂದವನ್ನುಂಟುಮಾಡಲು ನರೇಂದ್ರ ಮಂಡಲದ ಅಧ್ಯಕ್ಷರಾದ ಭೋಪಾಲ್ ಸಂಸ್ಥಾನದ ನವಾಬರು ಸಂಧಾನ ನಡೆಸುತ್ತಿದ್ದಾರೆ. ಅವರು ಮ. ಗಾಂಧಿಯವರನ್ನು, ನೆಹರೂರವರನ್ನೂ ಮತ್ತು ಜಿನ್ನಾರವರನ್ನೂ ಭೇಟಿಮಾಡಿ ಮಾತುಕತೆ ನಡೆಸುತ್ತಿದ್ದಾರೆ. ರಾಜ್ಯಾಂಗ ಸಭೆಗೆ ಲೀಗಿನವರು ಹಾಕಿರುವ ಬಹಿಷ್ಕಾರವನ್ನು ತೆಗೆದು ಕೇಂದ್ರ ಸರ್ಕಾರದಲ್ಲಿ ಅವರು ಭಾಗವಹಿಸುವ ಸೂಚನೆಗಳು ಕಂಡು ಬರುತ್ತಿರುವುದಾಗಿ ಹೇಳಲಾಗಿದೆ.

ಬಟ್ಟೆ ಹಂಚಿಕೆ ಸರಿಯಿಲ್ಲ

ಶ್ರೀರಂಗಪಟ್ಟಣದ ಜನತಾ ಅಂಗಡಿಗಳಿಗೆ ಗಿರಾಕಿಗಳು ಬಟ್ಟೆಗಾಗಿ ಕೇಳುವುದಕ್ಕೆ ಹೋದಾಗ ದೊಡ್ಡವರಿಗೆ ಆರ್ಥ ಗಜವೆಂದೂ, ಚಿಕ್ಕವರಿಗೆ ಕಾಲು ಗಜವೆಂದೂ ಈ … ಹೇಳುವರು … … … ವಿಚಾರಕ್ಕೆ … … …

ಸಾಧ್ವಿ

ತಾ॥ ೧-೧೦-೪೬ ಮಂಗಳವಾರ

ಸಮಾಧಾನಕರ ವಿಷಯ

ಕಾಂಗ್ರೆಸ್ ಅಧಿವೇಶನಕ್ಕಾಗಿ ಸ್ಥಳ ವಸತಿ, ನೀರು, ವಿದ್ಯುಚ್ಛಕ್ತಿ ಮತ್ತು ಆಹಾರ ಸಾಮಗ್ರಿಗಳನ್ನು ಒದಗಿಸಲು ಸರ್ಕಾರದವರು ಏರ್ಪಾಡು ನೀಡಿರುವರು. ಕಾಂಗ್ರೆಸ್ಸಿಗೂ, ಸರ್ಕಾರದವರಿಗೂ, ಅನೇಕ ವಿಚಾರಗಳಲ್ಲಿ ಭಿನ್ನಾಭಿಪ್ರಾಯಗಳಿರುವುದು ಸ್ಪಷ್ಟವಾದ ಅಂಶ. ಆದರೂ ಕಾಂಗ್ರೆಸ್ಸು ದೇಶದ ಪ್ರಜೆಗಳ ಹಿತಸಾಧನೆಗಾಗಿ ತ್ಯಾಗ ಮತ್ತು ಧೈರ್ಯದಿಂದ ಹೋರಾಡುವ ಸಂಸ್ಥೆ ಎಂಬುದನ್ನು ಸರ್ಕಾರದವರು ಮನಗಂಡಿರುವರು. ಆದುದರಿಂದಲೇ ಅದಕ್ಕೆ ಅಂಗೀಕಾರವನ್ನೂ ಸಹ ಕೊಟ್ಟಿರುವರು. ಈಗ ನಡೆಯಲಿರುವ ಅಧಿವೇಶನಕ್ಕೆ ಬೇಕಾದ ಸೌಲಭ್ಯಗಳನ್ನು ಅವರು ಒದಗಿಸಲಿರುವುದು ಸಹಜವಾಗಿಯೇ ಇದೆ.

ಹಿಂದೆ ವಿದುರಾಶ್ವತ್ಥದಲ್ಲಿ ಕಾಂಗ್ರೆಸ್ ಅಧಿವೇಶನವು ನಡೆದಾಗ ಸರ್ಕಾರದ ಇಲಾಖೆಯವರು ವಿದ್ಯುಚ್ಛಕ್ತಿಯನ್ನು ಒದಗಿಸಲು ನಿರಾಕರಿಸಿದ್ದರು. ಈಗ ಅಂತಹ ಮನೋಭಾವನೆಯು ಮಾಯವಾಗಿರುವಂತಿದೆ. ತತ್ವದ ದೃಷ್ಟಿಯಿಂದ ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ, ದೇಶದ ಹಿತಕ್ಕಾಗಿ ಸರ್ಕಾರದವರೂ, ಮುಖಂಡರುಗಳೂ, ಪರಸ್ಪರ ಸೌಹಾರ್ದದಿಂದ ಸಹಕರಿಸಲು ಅನೇಕ ಅವಕಾಶಗಳಿವೆ ಎಂಬುದು ವೇದ್ಯವಾಗುತ್ತಿದೆ. ಈ ಬಗೆಯ ಭಾವನೆಗಳು ಬೆಳೆಯಲೆಂಬುದೇ ಎಲ್ಲರ ಹಾರೈಕೆ.

ಚುನಾವಣಾ ಸಮಿತಿ

ಮೈಸೂರು ೩೦

ರಾಜಧಾನಿಯಲ್ಲಿ ನಡೆಯಲಿರುವ ಪೌರಸಭಾ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಗಳನ್ನು ಆರಿಸುವುದಕ್ಕೂ ಇತರ ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕೂ ಶ್ರೀಗಳಾದ ಎಸ್. ಚನ್ನಯ್ಯ, ಎಸ್. ರಂಗರಾಮಯ್ಯ ಮತ್ತು ಎಂ. ಶಂಕರಯ್ಯ (ಕನ್ವೀನರ್) ರವರನ್ನೊಳಗೊಂಡ ಉಪಸಮಿತಿಯನ್ನು ಮೈ॥ ಕಾಂ॥ ಕಾರ್ಯಕಾರಿ ಸಮಿತಿಯವರು ನೇಮಿಸಿದ್ದಾರೆ.

ಗ್ರಾಮ ಕೈಗಾರಿಕೆ ಮತ್ತು ಸ್ವದೇಶೀ ವಸ್ತು ಪ್ರದರ್ಶನ

ಬೆಂಗಳೂರು ೩೦

ಮೈಸೂರು ಕಾಂಗ್ರೆಸ್ ಆರನೇ ಅಧಿವೇಶನದ ಅಂಗವಾಗಿ ಗ್ರಾಮ ಕೈಗಾರಿಕೆ ಮತ್ತು ಸ್ವದೇಶೀ ವಸ್ತು ಪ್ರದರ್ಶನವನ್ನು ಕೆಂಪಾಂಬುಧಿ ಕೆರೆ ಅಂಗಳದಲ್ಲಿ ಇದೇ ೧೬ ನೇ ತಾರೀಖಿನಿಂದ ೨೪ ನೇ ತಾ॥ ನ ವರೆಗೆ ನಡೆಸಲಾಗುವುದು.

ಕೇಂದ್ರ ಸರ್ಕಾರಕ್ಕೆ ಅಭಿನಂದನೆ

ಪ್ರತಿನಿಧಿ ಸಭೆಯಲ್ಲಿ ನಿರ್ಣಯ

ಮೈಸೂರು ೩೦

ಪ್ರಜಾಪ್ರತಿನಿಧಿ ಸಭೆಯಲ್ಲಿ ನಿನ್ನೆ ದಿನ ದಿವಾನರ ಭಾಷಣವಾದ ಮೇಲೆ ಕಾಂಗ್ರೆಸ್ ಪಕ್ಷದ ಸದಸ್ಯರು ಸಭೆಗೆ ಹಿಂತಿರುಗಿದರು. ಚುನಾಯಿತ ಸದಸ್ಯರನ್ನೇ ರಾಜ್ಯಾಂಗ ಸಭೆಗೆ ಕಳುಹಿಸಬೇಕೆಂಬ ಅವಸರದ ನಿರ್ಣಯವನ್ನು ಕಾಂಗ್ರೆಸ್ ಪಕ್ಷದವರು ತಂದಿದ್ದರು. ಈ ಸಂಬಂಧವಾಗಿ ಒಂದು ನಿರ್ಣಯವೂ, ಒಂದು ಅರಿಕೆಯೂ ಬಂದಿರುವುದರಿಂದ ಅವುಗಳ ಮೇಲೆ ಹೆಚ್ಚು ಚರ್ಚೆಗೆ ಅವಕಾಶ ಕೊಡುವ ಉದ್ದೇಶದಿಂದ ಅದನ್ನು ಅಧ್ಯಕ್ಷರು ತಳ್ಳಿ ಹಾಕಿದರು.

ಪಡಿತರದಲ್ಲಿ ಮೋಸ ಮಾಡಿರುವ ಇತ್ತೀಚಿನ ಸರ್ಕಾರೀ ಆಜ್ಞೆಯನ್ನು ಖಂಡಿಸಲು ಕಾಂಗ್ರೆಸ್ ಪಕ್ಷದವರು ತಂದ ಮತ್ತೊಂದು ಅವಸರದ ನಿರ್ಣಯವು ಮುಖ್ಯ ವಿಚಾರವಾದುದರಿಂದ ಅದರ ಚರ್ಚೆಗೆ ಅವಕಾಶವೀಯಲಾಯಿತು.

ಈ ಸಭೆಯಲ್ಲಿ ಕೊಟ್ಟ ಹೇಳಿಕೆಯೊಂದರ ಸಂಬಂಧದಲ್ಲಿ ಸಭೆಯ ಸದಸ್ಯರಾದ ಶ್ರೀ ಮರುಳಪ್ಪನವರ ಮೇಲೆ ಪೋಲೀಸ್ ಅಧಿಕಾರಿಗಳೊಬ್ಬರು ಫಿರ್ಯಾದು ಹೂಡಲು ಅನುಮತಿಯನ್ನು ಸರ್ಕಾರದವರು ಕೊಟ್ಟಿರುವುದು ಸಭೆಯ ಹಕ್ಕುಬಾಧ್ಯತೆಯ ಪ್ರಶ್ನೆಯಾಗಿದೆಯೆಂದು ಬಂದ ವಿಚಾರದಲ್ಲಿ ಸದರೀ ಅಂಶವು ನ್ಯಾಯಸ್ಥಾನದ ಪರಿಶೀಲನೆ

OPERA TALKIES

ತಾ॥ 28—9—46ರಿಂದ

ಪ್ರತಿ ದಿನ ಮೂರು ಆಟಗಳು

ಮಾಯಾ ಮಚ್ಛೀಂದ್ರ

(ತೆಲುಗು)

ಕನ್ನಾಂಬ, ಮಾಲತಿ, ಗೌರಿನಾಥ ಶಾಸ್ತ್ರಿ, ಅದ್ದಂಕಿ ಕೃಷ್ಣಮೂರ್ತಿ ಮುಂತಾದವರು

೫೦೦ ರೂ. ಬೆಲೆಯ ಟಗರು

ಮಾರ್ಕೆಟ್ ಪ್ರದರ್ಶನದಲ್ಲಿ

ನಾಳೆ ದಿನ ದೇವರಾಜ ಮಾರ್ಕೆಟ್‌ನಲ್ಲಿ ನಡೆಯಲಿರುವ ಮಾರ್ಕೆಟ್ ಪ್ರದರ್ಶನದಲ್ಲಿ ೫೦೦ ರೂ ಬೆಲೆ ಬಾಳುವ ಭಾರಿ ಟಗರೊಂದನ್ನು ಇಡಲಾಗುವುದು.

ಬೆಳಗ್ಗೆ ೭ ಘಂಟೆಯಿಂದ ೧೨ ಘಂಟೆ ವರೆಗೆ ಮಹಾಜನರು ಬಂದು ನೋಡಬಹುದು

ಎಂ. ಕೆ. ವೆಂಕಟರಮಣಯ್ಯ, ಲಾರ್ಡ್ ದೇವರಾಜ ಮಾರ್ಕೆಟ್, ಮೈಸೂರು.

Edited, printed and published by A. K. Nagaraian at the Sadhvi Press D. Subbiah Road, Mysore.

ಯಲ್ಲಿರುವುದರಿಂದ ದಿವಾನರು ಅದನ್ನು ತಳ್ಳಿ ಹಾಕಿದರು.

ಭಾರತ ಕೇಂದ್ರ ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುವ ನಿರ್ಣಯವನ್ನು ಶ್ರೀ ಕೆ. ಹನುಮಂತಯ್ಯನವರು ಸೂಚಿಸಿದರು. ಶ್ರೀ ಭೂಪಾಳಂರವರು ಅನುಮೋದಿಸಿದರು. ಮುಸ್ಲಿಂ ಲೀಗ್ ಪಕ್ಷದ ನಾಯಕರಾದ ಹಾ॥ ಎ. ಜೆ. ಖಲೀಲ್‌ರವರು ನಿರ್ಣಯವನ್ನು ವಿರೋಧಿಸಿ, ಕೇಂದ್ರ ಸರ್ಕಾರವು ಸ್ವತಂತ್ರವೂ ಅಲ್ಲ, ರಾಷ್ಟ್ರೀಯವೂ ಅಲ್ಲ, ಇದು ವಿವಾದಾಸ್ಪದವಾದ ವಿಷಯ, ಇದಕ್ಕೆ ಮುಸ್ಲಿಮರ ಬೆಂಬಲವಿಲ್ಲ, ಎಂದರು. ಶ್ರೀಗಳಾದ ಮೂಲ್ಕ ಗೋವಿಂದರೆಡ್ಡಿ ಮತ್ತು ಶಂಕರಲಿಂಗೇಗೌಡರವರು ನಿರ್ಣಯಕ್ಕೆ ಬೆಂಬಲವಿತ್ತರು. ಮುಸ್ಲಿಂ ಲೀಗಿನವರ ವಿನಹ ಮಿಕ್ಕೆಲ್ಲ ಸದಸ್ಯರ ಬೆಂಬಲದಿಂದ ನಿರ್ಣಯವು ಅಂಗೀಕಾರವಾಯಿತು.

ಮೈಸೂರು ಸಿಟಿ ಮುನಿಸಿಪಾಲಿಟಿ

ಮಾರ್ಕೆಟ್ ಮತ್ತು ಫಲ ಪುಷ್ಪಗಳ ಪ್ರದರ್ಶನ

(ದೇವರಾಜ ಮಾರ್ಕೆಟ್‌ನಲ್ಲಿ)

1946 ನೇ ಅಕ್ಟೋಬರ್ ಮಾಹೆ 2 ಮತ್ತು 3 ನೇ ಬುಧವಾರ ಮತ್ತು ಗುರುವಾರ ನಡೆಸಲು ಏರ್ಪಾಡಾಗಿದೆ

ಪ್ರದರ್ಶನದ ಆರಂಭೋತ್ಸವ

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪನವರಿಂದ

ಬಹುಮಾನ ವಿನಿಯೋಗ

ಶಾಸನ ಸಭಾ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಚಂಗಲರಾಯರೆಡ್ಡಿಯವರಿಂದ

ಸಾರ್ವಜನಿಕರಿಗೆ ಟಿಕೆಟು ಮೂಲಕ ಪ್ರವೇಶ:—

2 ನೇ	ತಾ॥	... 0-2-0
3 ನೇ	ತಾ॥	 0-1-0

2 ನೇ ತಾ॥ ಬೆಳಗ್ಗೆ 10 ರಿಂದ

3 ನೇ ತಾ॥ ,, 8-30 ರಿಂದ

(ಸಹಿ) ಎ. ಕೃಷ್ಣಮೂರ್ತಿರಾವ್ ವೈಸ್ ಪ್ರೆಸಿಡೆಂಟ್ ಮತ್ತು ವಗ॥ ಪ್ರ॥ ಸಮಿತಿ ಕಾರ್ಯದರ್ಶಿ ಮೈಸೂರು

ನ್ಯೂ ಕೃಷ್ಣಾ ಟಾಕೀಸ್

ಮೈಸೂರು

ಇದೇ 28-9-46 ರಿಂದ

ದಿನವಹಿ ಮೂರು ಆಟಗಳು

ಸಿಡ್ರ್ಯೂರವರ

ಜಂಗಲ್ ಗರ್ಲ್

ಅಥವಾ

ಹೂರ್-ಎ-ಜಂಗಲ್

(ಹಿಂದಿ)

ನಟ್ಟಾಂ, ಅಜೀಜ್ ಹುಸೇನ್, ಶ್ಯಾಮ ಸುಂದರ್ ಮೊದಲಾದವರ ಅಭಿನಯ

ಅರಣ್ಯದ ಭೀಕರತೆ ಮತ್ತು ಕಾಡುಮೃಗಗಳೊಂದಿಗೆ ಹೋರಾಟವನ್ನು ಪ್ರದರ್ಶಿಸಲಾಗುತ್ತದೆ

For Bookings Please Contact for Mysore State Coorg & S. K.
Basvant Pictures,
Cottonpet, Bangalore City.

ಡಾ॥ ಜಿ॥ ಲೋಗನಾಥನ್ ಆಗಮನ

ಮೈಸೂ॥

ನೇತಾಜಿ ಬೋಸರು ಸ್ಥಾಪಿಸಿದ ರಾಷ್ಟ್ರೀಯ ಸೈನ್ಯದ ಮೇಜರ್ ಜ॥ ಲೋಗನಾಥನ್‌ರವರು ನಾಳೆ ಬೆಂಗಳೂರು ಮೇಲಿನಲ್ಲಿ ರಾಜಧಾನಿ ತಲುಪುವರು. ನಾಳೆ ನಡೆಯಲಿರುವ ಗಾಂಧಿ ಜಯಂತಿ ಸಭೆಯಲ್ಲಿ ಭಾಗವಹಿಸುವರು. ರೈಲ್ವೆ ನಿಲ್ದಾಣಕ್ಕೆ ಎಲ್ಲರೂ ಬಂದು ಅವರಿಗೆ ಸ್ವಾಗತ ನೀಡಬೇಕೆಂದು ನಗರ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿಗಳು ಪ್ರಾರ್ಥಿಸಿದ್ದಾರೆ.

ವಿಶೇಷ ಸಂಗೀತಗಳು

ಆಕಾಶವಾಣಿಯಲ್ಲಿ ನವರಾತ್ರಿ ಪ್ರಯುಕ್ತ ಪ್ರತಿ ದಿನ ರಾತ್ರಿ ೮-೧೫ ಗಂಟೆಯಿಂದ ೧೦ ಗಂಟೆ ವರೆಗೆ ಈ ಕೆಳಗೆ ಕಂಡ ಕಾರ್ಯಕ್ರಮಗಳ ಏರ್ಪಾಡಾಗಿದೆ—ವಿದ್ವಾಂಸ ದೇವೇಂದ್ರಪ್ಪನವರ ಗಾನ, ವಿದ್ವಾನ್ ಎಸ್. ನಾರಾಯಣಯ್ಯಂಗಾರ್ ಗೋಟುವಾದ್ಯ, ೩ ನೇ ತಾ॥ ವಿದ್ವಾನ್ ಚೌಡಯ್ಯನವರ ಪಿಟೀಲು, ಮುಕ್ತಾಯ ಕಾರ್ಯಕ್ರಮ ಇನ್ನೂ ಏರ್ಪಾಡಾಗಿಲ್ಲ. ೫ನೇ ತಾ॥ ಶನಿವಾರ ಶ್ರೀಮತಿ ಡಿ. ಕೆ. ಪಟ್ಟಮ್ಮಾಳ್‌ರವರ ಸಂಗೀತ

ರಾಜ್ ಕಮಲ್, ಮೈಸೂರು

26-9-46 ರಿಂದ 2 ನೇ ವಾರ

ಪ್ರತಿ ದಿನ ಮೂರು ಆಟಗಳು

ಸ್ವರ್ಗ ಸೀಮ

ಭೂಮಿಕೆ:—ಜಯಮ್ಮ, ಭಾನು ನಾಗಯ್ಯ, ಲಿಂಗಮೂರ್ತಿ

3-10-46 ರಿಂದ ಪ್ರತಿದಿನ ಪ್ರಾತಃ 10-30 ಕ್ಕೆ

ಪುನರ್ಮಿಲನ

ಕಿಶೋರ್ ಸಾಹು ಮತ್ತು ಸ್ನೇಹ

ಸುಸಮಯ

ಚಲನ ಚಿತ್ರಗಳಲ್ಲಿ ಅಭಿನಯಿಸ ಇಚ್ಛೆಯುಳ್ಳ ತರುಣಿಯರನ್ನು ತರಬೇತು ಮಾಡಿ

ಉತ್ತಮ ನಟಿಯರಾ

ಗಿಸಲು ಚಿತ್ರರಂಗದಲ್ಲಿ ಪ್ರಾಶಸ್ತ್ಯಗಳು ಅನುವಾಗುವಂತೆ ರಾಜಧಾನಿ ಕೇಂದ್ರಸ್ಥಳದಲ್ಲಿ ನಟಿಯರ ಶಿಕ್ಷಣಯೊಂದನ್ನು ಮೈಸೂರು ಸಂಸ್ಥಾನದ ಚಿತ್ರ ಕೈಗಾರಿಕೆಯ ಬೆಳವಣಿಗೆಯ ಕಾರ ನೀಡಲು ತೆರೆದಿರುತ್ತದೆ.

ವಿದ್ಯಾರ್ಥಿ ವೇತನವನ್ನು ಸಹ ಕೊಡಲಾಗುವುದು.

ವಿವರಗಳಿಗೆ ಕೂಡಲೇ ಖುದ್ದಾಗಿ ಅಥವಾ ನೇರವಾಗಿ ಬಂದು ನೋಡಿ

ಪತ್ರ ವ್ಯವಹಾರದೊಡನೆ ಫೋಟೋ ಕಳುಹಿಸಿ

ವಿ. ಟಿ. ಎಸ್. ಮೊದಲಿಯಾರ್

ಪ್ರಿನ್ಸಿಪಾಲ್,

೧೭೫೩ ಕೃಷ್ಣಮೂರ್ತಿಪುರಂ, ಮೈಸೂರು.

ಸುಲಭ ಬೆಲೆ! :: ತ್ವರೆ ಮಾಡಿರಿ!

Sri Rama Electric Stores

Govt. Licensed Electrical Contractors & Engineers

ಎಲ್ಲಾ ವಿಧವಾದ ಎಲೆಕ್ಟ್ರಿಕ್ ಪವರ್ ಮತ್ತು ಲೈಟಿಂಗ್ ಇನ್‌ಸ್ಟಲೇಷನ್ ಕೆಲಸಗಳನ್ನು ಕಂಟ್ರ್ಯಾಕ್ಟ್ ರೀತಿಯಲ್ಲಿಯೂ, ಸಕಾಲದಲ್ಲಿಯೂ ಮಾಡಿಕೊಡುತ್ತೇವೆ. ಮಹಾಜನರು ಪ್ರೋತ್ಸಾಹಿಸಬೇಕಾಗಿ ಕೋರುತ್ತೇವೆ.

ಶ್ರೀ ರಾಮಾ ಎಲೆಕ್ಟ್ರಿಕ್ ಸ್ಟೋರ್ಸ್,

(ಬಜಾರದ ಕೃಷ್ಣಪ್ಪನವರ ರಾಮ ಮಂದಿರದ ಎದುರು.)

ಸಾರ್ವಜನಿಕ ಶಾಸ್ತ್ರಿ ರಸ್ತೆ, ಮೈಸೂರು.

ರೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಬುಧವಾರ ೨—೧೦—೪೬ [ಸಂಚಿಕೆ ೫೨

ನಾಜೀ ನಾಯಕರಿಗೆ ಮರಣ ದಂಡನೆ

ಸರ್ಕಾರಕ್ಕೆ ಇನ್ನೊಂದು ಸೋಲು

ಮೈಸೂರು ೨

...ದ್ಧ ಪರಿಸ್ಥಿತಿಗಳಿಗನುಗುಣವಾಗಿ ...ಲ್ಲಿ ತಂದಿದ್ದ ಮೂರು ಕಾನೂನುಗ... ಅಂದರೆ ವಿಮಾನ ದಾಳಿಯ ಎಚ್ಚರಿಕೆ ...ಮದ ಕಾನೂನು, ಡ್ರೈವರುಗಳಿಗೆ ...ದ ಪಟ್ಟಿ ಕಾನೂನು, ವಿದೇಶೀಯ ...ರಿಗೆ ಸಂಬಂಧ ಪಟ್ಟ ಕಾನೂನು ... ರದ್ದು ಪಡಿಸಲು ಅಧಿಕಾರ ಕೊಡು... ಮಸೂದಾ ಕಾನೂನನ್ನು ಶ್ರೀ ಶನಕರನ್ನ... ...ವರು ನಿನ್ನೆ ದಿನ ಸಭೆಯ ಮುಂದೆ ... ಮಸೂದೆಯ ತತ್ವವನ್ನೂ ಉ... ...ನ್ನು ವಿವರಿಸಿದರು.

...ಗ್ರೆಸ್ ಪರವಾಗಿ ಶ್ರೀ ಪಾಲಹಳ್ಳಿ ...ಮಯ್ಯನವರು ಮಾತನಾಡುತ್ತ ... ಕಾನೂನೇ ಪೂರ್ತಿಯಾಗಿ ರದ್ದಾ... ...ಗಿರುವ ಸಮಯದಲ್ಲಿ ಸರ್ಕಾರದ ...ವಲ ಮೂರು ಕಾನೂನುಗಳನ್ನು ...ಡಿಸಲು ಅಧಿಕಾರ ಕೇಳುವುದು ತ... ...ಪ್ಪು. ಯುದ್ಧ ಮುಗಿದು ಶಾಂ... ...ವರಣ ನೆಲೆಸಿದೆ. ಆದರೂ ಸಂ... ...ಲ್ಲಿ ಪರಿಸ್ಥಿತಿ ಬದಲಾಯಿಸಿಲ್ಲವೆಂ... ...ಅವಶ್ಯಕತೆಯಿದೆ ಎಂದು ಹೇಳಿ ಮ... ...ನ್ನು ವಿರೋಧಿಸಿದರು.

...ದ್ಧ ಕಾಲದಲ್ಲಿ ಜಾರಿಗೆ ತಂದಿರತಕ್ಕ ...ಕಾನೂನುಗಳನ್ನೂ ರದ್ದು ಮಾಡಿ, ಶ್ರೀ ನೂರ್ ಹುಸೇನರು ಹೇಳಿ... ...ಣದ ಅಬ್ದುಲ್ ಕರೀಂ, ಎಫ್. ...ರಾಜ್ ಅರಸು, ಗೋಪಾಲಯ್ಯನ ...ರಿಗೆ ಬೆಂಬಲವಿತ್ತು ಮಾತನಾ... ...ಶಂಕರಲಿಂಗೇಗೌಡರು ವಿರೋ... ...ಮಸೂದೆಯು ೧೩-೧೫ ಓ... ...ತಿರಸ್ಕರಿಸಲ್ಪಟ್ಟು ಸರ್ಕಾರಕ್ಕೆ ಈ ...ನೆ ಸೋಲು ಸಂಪ್ರಾಪ್ತವಾ...

...ರಿ ಯವರು ಮಾತನ್ನು ...ಪಕ್ಕೆ ತೆಗೆದುಕೊಂಡರು

...ರಗಳಿಗೆ ಬೆಂಬಲ ಪಡೆಯಲು ... ಕ್ಯಾನ್‌ವಾಸ್ ಮಾಡುತ್ತಿರು... ...ಅದರೂ ಅದಕ್ಕೆ ಗಮನ ಕೊಡದೆ ...ನವನ್ನು ಪ್ರತಿಭಟಿಸುವುದಾಗಿ ...ಎಂ. ಎಸ್. ಜೋಯಿಸರು ಹೇ... ...ಮಂತ್ರಿಗಳು ಹಾಗೆ ಮಾಡುವು... ...ತಪ್ಪು ಸೂಚನೆಯೆಂದೂ ಪ್ರ... ...ವನ್ನು ಗಳಿಸುವ ಅವಶ್ಯಕತೆ ...ದೆ ಅವರಿಗೆ ಮನದಟ್ಟಾಗುವು... ...ಬಿ ಎಸ್. ಗುಪ್ತರು ತಿಳಿಸಿದ ...ನಿಂದ ಆಡಳಿತ ನಡೆಸುವ ಅಧಿ... ...ವದಲ್ಲಿ ಹೀಗೆ ಮಾತನಾಡು... ...ಸಹಜೇಯವೆಂದು ಶ್ರೀ ಎಫ್. ... ಅರಸಿನವರು ಹೇಳಿ ಈ ...ಗಳು" ಏನು ಮಾಡಲಿಲ್ಲ ... ಬಹಿಷ್ಕಾರ ಎಂದು ... ಕಾಂಗ್ರೆಸ್ ಪಕ್ಷದವರು ಅ... ...ದ ಪರಿಂದ ಶ್ರೀ ಎಫ್. ಸಿ. ...ಮಾತನ್ನು ಹಿಂದಕ್ಕೆ ತೆಗೆದು...

...ಟ್ಟೈರಿಗೆ ೫೦೦೦ ರೂ ...ಶಿರೋಮಣಿ ಶ್ರೀ ಟಿ. ತುಟಾ... ...ಮಾಡುಯಾನ ೫೦೦೦ ರೂ ...ವಂತೆ ಪ್ರಭುಗಳು ಆಜ್ಞೆ ... ತಿಳಿದುಬಂದಿದೆ ಈ ... ಜೋಯಿಸರು ಒಂದು ...ನ್ನು ಪ್ರ॥ ಪ್ರ॥ ಸಭೆಗೆ

ನಿಲುವಳಿ ಸೂಚನೆ
ಬಣ್ಣದ ಆಜ್ಞೆ ವಾಪಸಾಗುವುದು

ಮೈಸೂರು ೨

ಗ್ರಾಮಾಂತರ ಪ್ರದೇಶಗಳಲ್ಲಿ ನೂಲಿಗೆ ಬಣ್ಣ ಹಾಕುವುದನ್ನು ಪ್ರತಿಬಂಧಿಸಿ ಬೆಂಗಳೂರು ನಗರದಲ್ಲಿ ಆ ಕೈಗಾರಿಕೆ ಸಾಗಲು ಅವಕಾಶ ಕೊಟ್ಟಿರುವುದನ್ನು ಕೂಡಲೇ ನಿಲ್ಲಿಸಬೇಕೆಂದು ಕಾಂಗ್ರೆಸ್ ಪಕ್ಷದ ಶ್ರೀ ದೇವರಕೊಂಡಪ್ಪನವರು ನಿನ್ನೆ ನಿಲುವಳಿ ಸೂಚನೆ ತಂದು, ಸಣ್ಣ ಪುಟ್ಟ ಕೈಗಾರಿಕೆಗಳವರಿಗೆ ಈ ಆಜ್ಞೆಯಿಂದ ತೊಂದರೆಯಾಗಿದೆಯೆಂದರು. ಲೀಗಿನ ಹಮೀದ್ ಹುಸೇನ್ ಬೇಗ್ ಮತ್ತು ಪಾಲ್ ಚನ್ನಪ್ಪನವರು ಸೂಚನೆಯನ್ನು ವಿರೋಧಿಸಿದರು.

ಶ್ರೀಗಳಾದ ಶಿವಲಿಂಗಯ್ಯ, ಬಿ ಸಾ ಜ ಜನಾರ್ಧನ ನಾಯ್ಡು, ಮೀರ್ ನೂರ್ ಹುಸೇನ್ ಮತ್ತು ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣನವರು ಸೂಚನೆಗೆ ಬೆಂಬಲವಿತ್ತರು.

ಸರಬರಾಜು ಸಚಿವರಾದ ಮಿ॥ ಪರೀಕ್ಷಾಯ ಚರ್ಚೆಗೆ ಉತ್ತರವಿತ್ತು, ಆ ಬಗ್ಗೆ ಕಂಟ್ರೋಲರು ಹೊರಡಿಸಿರುವ ಆಜ್ಞೆಯನ್ನು ವಾಪಸು ತೆಗೆದುಕೊಳ್ಳಲಾಗುವುದೆಂದರು. ಬಟ್ಟೆ ಹಂಚಿಕೆಗಾಗಿ ಪ್ರತಿ ತಾಲ್ಲೂಕಿನಲ್ಲೂ, ಪ್ರತಿನಿಧಿ ಸಭಾ ಶಾಸನ ಸಭೆ ಮತ್ತು ಸ್ಥಳೀಯ ಸಮಿತಿ ಸದಸ್ಯರಿಂದ ಕೂಡಿದ ಸಮಿತಿ ರಚಿಸಲಾಗುವುದೆಂದರು. ಆದ್ದರಿಂದ ಸೂಚನೆಗೆ ಹಾಕಲು ಒತ್ತಾಯ ಪಡಿಸಲಿಲ್ಲ.

ಹೋಟೆಲುಗಳ ಕಾಲವನ್ನು ಹೆಚ್ಚಿಸಿದೆ

ಮೈಸೂರು ೨

ನಾಡ ಹಬ್ಬವಾದ ನವರಾತ್ರಿಯಲ್ಲಿ ಮೈಸೂರಿಗೆ ಬರುವ ಪ್ರಜೆಗಳ ಊಟದ ಸೌಕರ್ಯಕ್ಕಾಗಿ ಯಾವ ಏರ್ಪಾಡು ಮಾಡಲಾಗಿದೆಯೆಂದು ಶ್ರೀ ಬಿ. ಸಿ. ಬಸಪ್ಪ ಶೆಟ್ಟಿಯವರಿಂದ ಬಂದ ಪ್ರಶ್ನೆಗೆ ಉತ್ತರ ಕೊಡುತ್ತ ದಿವಾನರು ಈ ಬಗ್ಗೆ ಏನನ್ನೂ ಮಾಡಲು ಸಾಧ್ಯವಿಲ್ಲವೆಂದು ಹೇಳಿ ಹೋಟೆಲುಗಳಲ್ಲಿ ಫಲಾಹಾರ ಒದಗಿಸುವ ಕಾಲವನ್ನು ಬೆಳಗ್ಗೆ ೬ ಗಂಟೆಯಿಂದ ರಾತ್ರಿ ೯ ಗಂಟೆ ವರೆಗಿಗೆ ಇರುವಂತೆ ಆಜ್ಞೆ ಮಾಡಿದೆ ಎಂದು ಈ ದಿನ ಪ್ರ॥ ಪ್ರ॥ ಸಭೆಯಲ್ಲಿ ತಿಳಿಸಿದರು.

ದಸರಾ ಮತ್ತು ನವರಾತ್ರಿಗಳಿಗಾಗಿ ಬಟ್ಟೆ ಕೊಡದೆ ಇರುವ ವಿಷಯದಲ್ಲಿ ಶ್ರೀ ನಾಗಭೂಷಣ ಶೆಟ್ಟರು ತಂದಿರುವ ನಿಲುವಳಿ ನಿರ್ಣಯವನ್ನು ಚರ್ಚಿಸಲು ದಿವಾನರು ಅವಕಾಶವಿತ್ತಿಲ್ಲ.

ಗಾಂಧಿ ಜಯಂತಿ

ಮೈಸೂರು ೨

ಮಹಾತ್ಮ ಗಾಂಧಿಯವರ ಜಯಂತಿ ಉತ್ಸವದ ಸಂಬಂಧದಲ್ಲಿ ಈ ದಿನ ಸುಬ್ಬರಾಯನ ಕೆರೆ ಅಂಗಳದಲ್ಲಿ ಧ್ವಜಾರೋಹಣ ಸಮಾರಂಭ ಜರುಗಿತು. ರಾಷ್ಟ್ರ ಧ್ವಜವನ್ನು ಆರೋಹಿಸುತ್ತಾ ಮೈ॥ ಕಾಂ॥ ಅಧ್ಯಕ್ಷರಾದ ಶ್ರೀ ಸಿದ್ದವ್ವನಹಳ್ಳಿ ನಿಜಲಿಂಗಪ್ಪನವರು, ದೇಶೀಯ ಸಂಸ್ಥಾನಗಳಲ್ಲಿ ಜವಾಬ್ದಾರಿ ಸರ್ಕಾರ ಬಂದ ಹೊರತು ಭಾರತದ ಸ್ವಾತಂತ್ರ್ಯದ ಮಾತು ನನಸು ಮಾತ್ರವಾಗುವುದು, ಆದ್ದರಿಂದ ಕೂಡಲೇ ದೇಶೀಯ ಸಂಸ್ಥಾನಗಳಲ್ಲಿ ಲಕ್ಷಣಾನುಗುಣವಾಗಿ ಪ್ರಜಾ ಸರ್ಕಾರಗಳೇರ್ಪಡ ಬೇಕೆಂದು ತಿಳಿಸಿ ಮಹಾತ್ಮರು ತಮ್ಮ ಜೀವಿತದಲ್ಲಿ ತಮ್ಮ ಅಚ್ಚು ಮೆಚ್ಚಿನ ಭಾರತದ ಪೂರ್ಣ ಸ್ವಾತಂತ್ರವನ್ನು ನೋಡಿ ಸಂತೋಷ ಪಡಲೆಂದು ಹಾರೈಸಿದರು.

ಶ್ರೀ ಕೆ. ಚಂಗಲರಾಯ ರೆಡ್ಡಿಯವರು ಮೈಸೂರು ಧ್ವಜವನ್ನು ಹಾರಿಸಿ ಇತ್ತೀಚೆಗೆ ದಿವಾನರು ಪ್ರತಿನಿಧಿ ಸಭೆಯಲ್ಲಿ ಮಾಡಿರುವ ಭಾಷಣವು ತೃಪ್ತಿಕರವಾಗಿದೆಯೆಂದೂ, ದೇಶದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ಹೋರಾಟ ಅನಿವಾರ್ಯವೆಂದೂ ತಿಳಿಸಿದರು.

ದೇಶೀಯ ವಿದ್ಯಾಶಾಲೆಯಲ್ಲಿ ಈ ದಿನ ಧ್ವಜ ವಂದನೆಯು ಶ್ರೀಗಳಾದ ಎಂ. ವಿ. ಕೃಷ್ಣಪ್ಪ ಮತ್ತು ಹೆಚ್. ಕೆ. ಕುಮಾರಸ್ವಾಮಿಯವರುಗಳಿಂದ ನೆರವೇರಿಸಲ್ಪಟ್ಟಿತು.

ಸಹಕಾರ ಸಮ್ಮೇಳನ

ಸಂಸ್ಥಾನದ ೩೩ ನೇ ಸಹಕಾರ ಸಮ್ಮೇಳನವು ಈ ದಿನ ಬೆಳಗ್ಗೆ ಬೆಂಗಳೂರಿನ ಸುಪ್ರಸಿದ್ಧ ವಕೀಲರಾದ ಶ್ರೀ ಎಂ. ಸಿ. ಸೋಮಶೇಖರ ರಾಯರ ಅಧ್ಯಕ್ಷತೆಯಲ್ಲಿ ಆರಂಭವಾಯಿತು.

ನಾಜೀ ನಾಯಕರುಗಳಿಗೆ ಮರಣ ದಂಡನೆ

ನ್ಯೂರೆಂಬರ್ಗಿನಲ್ಲಿ ನಡೆಯುತ್ತಿದ್ದ ಯುದ್ಧ ಪಾತಕಿಗಳ ಅಂತರ ರಾಷ್ಟ್ರೀಯ ವಿಚಾರಣೆಯಲ್ಲಿ ನಾಜೀ ನಾಯಕರುಗಳಾದ ಗೋಯರಿಂಗ್ ಮೊದಲಾದ ೧೨ ಜನರಿಗೆ ಮರಣ ದಂಡನೆಯನ್ನೂ ಹೆಸ್ ಮೊದಲಾದ ೩ ಜನರಿಗೆ ... ಶಿಕ್ಷೆಯನ್ನೂ ... ...ದೆ

ಮಾರ್ಕೆಟ್ ಪ್ರದರ್ಶನ

ಮೈಸೂರು ೨

ಪೌರಸಭೆಯವರು ಏರ್ಪಡಿಸಿರುವ ಮಾರ್ಕೆಟ್ ಮತ್ತು ಫಲಪುಷ್ಪ ಪ್ರದರ್ಶನದ ಆರಂಭೋತ್ಸವವನ್ನು ಈ ದಿನ ಮೈ॥ ಕಾಂ॥ ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪನವರು ನೆರವೇರಿಸಿದರು. ಸಾವಿರಾರು ಜನ ಪ್ರೇಕ್ಷಕರು ಬಂದು ನೋಡಿ ಸಂತೋಷಪಟ್ಟರು. ಪೌರ ಸಭಾಧ್ಯಕ್ಷರಾದ ಶ್ರೀ ಬೊಂಬೋರೆಯವರು ಶ್ರೀ ನಿಜಲಿಂಗಪ್ಪನವರನ್ನು ಸ್ವಾಗತಿಸಿ ಪ್ರದರ್ಶನವನ್ನು ಆರಂಭಿಸುವಂತೆ ಪ್ರಾರ್ಥಿಸಿದರು. ಮನುಷ್ಯನ ದೇಹ ಪುಷ್ಟಿಗೆ ಆರೋಗ್ಯಕರವಾದ ತರಕಾರಿಗಳ ಅವಶ್ಯಕತೆಯನ್ನು ಶ್ರೀ ನಿಜಲಿಂಗಪ್ಪನವರು ಒತ್ತಿ ಹೇಳಿದರು. ವರ್ತಕರು ದ್ರವ್ಯಾರ್ಜನೆಯನ್ನೇ ಮುಖ್ಯ ಗುರಿಯಾಗಿ ಇಟ್ಟುಕೊಳ್ಳದೇ ಪ್ರಜಾ ಸೇವೆಯ ದೃಷ್ಟಿಯಿಂದ ವ್ಯಾಪಾರ ನಡೆಸ ಬೇಕೆಂದು ಕೋರಿದರು.

ಪ್ರದರ್ಶನಕ್ಕಾಗಿ ಮಾರ್ಕೆಟ್ಟಿನ ಎಲ್ಲಾ ಅಂಗಡಿಗಳೂ ನಯನ ಮನೋಹರವಾಗಿ ಅಲಂಕರಿಸಲ್ಪಟ್ಟಿದ್ದುವು.

ಜಯಂತಿ ಸ್ಪರ್ಧೆ

ಮಹಾತ್ಮ ಗಾಂಧಿಯವರ ೭೮ ನೇ ಜಯಂತಿ ಇಂದಿನಿಂದ ಅಂಗವಾಗಿ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ ಕನ್ನಡ ಅಥವಾ ಹಿಂದೀ ಭಾಷೆಯಲ್ಲಿ ೫ ಪುಟಗಳಿಗೆ ಮೀರದೆ ಗಾಂಧಿಜಿಯವರ ವಿಚಾರವಾಗಿ ಬರೆಯುತಕ್ಕ ಉತ್ತಮ ಪ್ರಬಂಧಗಳಿಗೂ, ನೂಲುವ ಸ್ಪರ್ಧೆಯಲ್ಲಿ ಉತ್ತೀರ್ಣರಾದವರಿಗೂ ಬಹುಮಾನವನ್ನು ಕೊಡಲಾಗುವುದು, ಪ್ರಬಂಧವನ್ನು ೫ ನೇ ತಾ॥ ಸಂಜೆ ೮ ಘಂಟೆ ಒಳಗೆ ಕಾಂಗ್ರೆಸ್ ಕಛೇರಿಗೆ ತಲುಪಿಸ ಬೇಕಾಗಿದೆ. ನೂಲುವ ಸ್ಪರ್ಧೆಯು ೮ ನೇ ತಾ॥ ಮಧ್ಯಾಹ್ನ ೪ ಘಂಟೆಗೆ ಕಾಂಗ್ರೆಸ್ ಕಛೇರಿಯಲ್ಲಿ ಜರುಗುವುದು.

ಪ್ರಭುಗಳಿಂದ ಗುಬ್ಬಿ ಕಂಪೆನಿ ವಜ್ರೋತ್ಸವಾರಂಭ

ಶ್ರೀಮನ್ಮಹಾರಾಜರು ಬರುವ ಏಪ್ರಿಲ್ ತಿಂಗಳಲ್ಲಿ ಗುಬ್ಬಿ ನಾಟಕ ಮಂಡಲಿಯ ವಜ್ರೋತ್ಸವದ ಆರಂಭವನ್ನು ಮಾಡಲು ಸಮ್ಮತಿಸಿದ್ದಾರೆ.

ಭೂಪಾಲ್ ನವಾಬರ ಸಂಧಾನ

ಕಾಂಗ್ರೆಸ್ಸಿಗೂ ಮುಸ್ಲಿಂ ಲೀಗಿಗೂ ಒಪ್ಪಂದವನ್ನುಂಟುಮಾಡಲು ನರೇಂದ್ರ ಮಂಡಲದ ಅಧ್ಯಕ್ಷರಾದ ಭೂಪಾಲ್ ಸಂಸ್ಥಾನದ ನವಾಬರು ಸಂಧಾನ ನಡೆಸ... ...ದ್ದರೆ ... ಮಹಾತ್ಮರನ್ನೂ, ನೆಹರೂರವರನ್ನೂ ಮತ್ತು ಜಿನ್ನಾರವರನ್ನೂ ಭೇಟಿಮಾಡಿ ಮಾತು ಕಥೆ ನಡೆಸುತ್ತಿದ್ದಾರೆ. ... ರಾಜ್ಯಾಂಗ ಸಭೆಗೆ ಲೀಗಿನವರು ... ತಿರುವ ಬಹಿಷ್ಕಾರವನ್ನು ತೆಗೆದು ಕೇಂದ್ರ ಸರ್ಕಾರದಲ್ಲಿ ಅವರು ಭಾಗವಹಿಸುವ ಸೂಚನೆಗಳು ಕಂಡುಬರುತ್ತಿವೆ ಎಂದು ಹೇಳಲಾಗಿದೆ.

ಬಟ್ಟೆ ಹಂಚಿಕೆ ಸರಿಯಿಲ್ಲ

ಶ್ರೀರಂಗಪಟ್ಟಣದ ಜನರು ... ...

ಸಾಧ್ವಿ
ತಾ॥ ೨-೧೦-೪೬ ಬುಧವಾರ

ಗಾಂಧೀಜಿ ಚಿರಾಯುವಾಗಲಿ!

ಭರತಖಂಡದ ಇಂದಿನ ಭಾಗ್ಯ ವಿಧಾತರಾದ ಮಹಾತ್ಮ ಗಾಂಧಿಯವರ ೭೮ ನೇ ವರ್ಷ ವರ್ಧಂತಿಯು ಇಂದು ವೈಭವದಿಂದ ಆಚರಿಸಲ್ಪಡುತ್ತಿದೆ. ಭಾರತೀಯರು ಮಾತ್ರವೇ ಅಲ್ಲದೆ ವಿಶ್ವದ ಜನಾಂಗದವರೆಲ್ಲರೂ ಇದನ್ನು ಒಂದು ದೊಡ್ಡ ಹಬ್ಬದಂತೆ ಆಚರಿಸುವರು. ನಿಶ್ಶಸ್ತ್ರರೂ, ನಿರಾಯುಧಪಾಣಿಗಳೂ ಆದ ಜನರು ತಮ್ಮ ಹಕ್ಕು ಬಾಧ್ಯತೆಗಳಿಗಾಗಿ ಎಂತಹ ಪ್ರಬಲ ಶಕ್ತಿಯನ್ನಾದರೂ ತಮ್ಮ ಆತ್ಮ ಶಕ್ತಿಯಿಂದ ಪ್ರತಿಭಟಿಸಬಲ್ಲರೆಂಬುದನ್ನು ಮಹಾತ್ಮರು ತಮ್ಮ ಜೀವನದಲ್ಲಿ ತೋರಿಸಿಕೊಟ್ಟಿರುತ್ತಾರೆ. ಅದರ ಫಲವನ್ನು ಈಗಾಗಲೇ ಭಾರತೀಯರು ಉಪಭೋಗಿಸಲೂ ಆರಂಭಿಸಿದ್ದಾರೆ. ಸ್ವಾತಂತ್ರ್ಯದ ಹೆಬ್ಬಾಗಿಲು ತೆರೆದಿದೆ ಎಂದು ಮಹಾತ್ಮರು ಸಾರಿದ್ದಾರೆ. ಪೂರ್ಣ ಸ್ವರಾಜ್ಯ ಭವನದ ಪ್ರವೇಶವು ಆಗುವುದು ಮಾತ್ರ ಉಳಿದಿದೆ. ತಮ್ಮ ಕಣ್ಣ ಮುಂದಿನಲ್ಲಿಯೇ ಇದು ಆಗುವುದೆಂದು ಮಹಾತ್ಮರು ಪೂರ್ಣ ಭರವಸೆಯುಳ್ಳವರಾಗಿದ್ದಾರೆ.

ನೂರು ವರ್ಷ ಬದುಕುವಂತೆ ಮಾನ್ಯ ಪಂಡಿತ ಮದನಮೋಹನ ಮಾಳವೀಯರು ಮಹಾತ್ಮರಿಗೆ ಹಿಂದೆ ವರ್ಧಂತಿಯ ಶುಭಾಶಯವನ್ನು ಕಳುಹಿಸಿದ್ದರು. ಅದಕ್ಕೆ ಗಾಂಧೀಜಿಯವರು ಕೊಟ್ಟಿರುವ ಉತ್ತರವನ್ನು ಸ್ಮರಿಸಿ ಅದರಂತೆ ಭಗವಂತನು ಅನುಗ್ರಹಿಸಲೆಂದು ಪ್ರಾರ್ಥಿಸುವುದೇ ನಮ್ಮೆಲ್ಲರ ಇಂದಿನ ಕರ್ತವ್ಯ.

ನೂರಿಪ್ಪತ್ತೈದು ವರ್ಷ ತಾವು ಬದುಕಬೇಕೆಂದು ವ್ರತಸಂಕಲ್ಪ ಮಾಡಿರುವಾಗ ನೂರು ವರ್ಷಕ್ಕೆ ತಮ್ಮ ಆಯುಷ್ಯದ ಪರಿಮಿತಿಯನ್ನು ನಿರ್ದೇಶಗೊಳಿಸಿದುದಕ್ಕಾಗಿ ಅವರು ಮಾಳವೀಯರ ಮೇಲೆ ವಿನೋದರೂಪದ ಆಕ್ಷೇಪಣೆಯನ್ನು ಎತ್ತಿದರು. ಆದರೆ ಮಹಾತ್ಮರು ನೂರಿಪ್ಪತ್ತೈದು ವರ್ಷ ಬದುಕುವುದು ಹೇಗೆಂಬ ಬಗ್ಗೆ ಈಚೆಗೆ ಅವರೇ ಅನೇಕ ಮಾರ್ಗಗಳನ್ನು ನಿರೂಪಿಸಿರುವರು. ಭಗವದ್ಭಕ್ತಿ, ತ್ರಿಕರಣ ಶುದ್ಧಿ, ಬ್ರಹ್ಮಚರ್ಯಾಭ್ಯಾಸ, ಪರೋಪಕಾರ ಪ್ರವರ್ತನೆ ಮತ್ತು ನಿಷ್ಕಾಮ ಕರ್ಮಗಳಿಂದ ಮಾನವನು ತನ್ನ ಆಯುಷ್ಯವನ್ನು ತಾನೇ ನಿರ್ಧರಿಸಿ ಇಚ್ಛಾ ಮರಣಿಯಾಗಬಹುದೆಂದು ಅವರು ಹೇಳುತ್ತಿರುವರು.

ಗಾಂಧೀಜಿಯವರ ಇತ್ತೀಚಿನ ಜೀವನಕ್ರಮವು ಅವರನ್ನು ಅತ್ಯುನ್ನತವಾದ ಯೋಗಿಗಳ ಶ್ರೇಣಿಗೆ ಏರಿಸಿದೆ. ಮೊದಲಿಂದ ಪದ್ಧತಿಗಳೆಲ್ಲಕ್ಕೂ ಅವರು ಸಂಪೂರ್ಣ ಪಾತ್ರರಾಗುವಂತೆ ಮಾಡಿದೆ. ಕೈರಾಟೆಯ ನೂಲಿನಲ್ಲಿ ತಮ್ಮ ಆರಾಧ್ಯ ದೇವತೆಯಾದ ಶ್ರೀ ರಾಮನನ್ನೇ ತಾವು ಕಾಣುತ್ತಿರುವುದಾಗಿ ಇತ್ತೀಚಿನ ಅವರ ಸಂದೇಶದಲ್ಲಿ ತಿಳಿಸಿದುದು ಅವರ ಅತ್ಯುನ್ನತ ಆಧ್ಯಾತ್ಮ ಜೀವನದ ತಲ್ಲೀನತೆಯನ್ನು ವ್ಯಕ್ತಪಡಿಸುತ್ತದೆ.

ಇಂತಹ ಮಾನವ ಶ್ರೇಷ್ಠರು ನೂರಿಪ್ಪತ್ತೈದು ವರುಷವೇ ಅಲ್ಲದೆ ಇನ್ನೂ ದೀರ್ಘಕಾಲ ಬಾಳುವುದರಲ್ಲಿ ಆಶ್ಚರ್ಯವೇನಿದೆ? ಭಾರತೀಯರೆಲ್ಲರ ಆಕಾಂಕ್ಷೆಯಾಗಿರುವ

ಕರುಣಾಳು ಗಾಂಧೀ

(ಭಾಮಿನಿ ಷಟ್ಪದಿ)

ಜಗದ ಪರಮಣಿ ಭಾರತಾಂಬೆಯ।
ಸೊಗದ ಪ್ರಕೃತಿಯ ನಾಡ ದೇವಿಯ।
ಗಗನ ಚುಂಬಿತ ಮೇರು ಗಿರಿಯೂವಾಸಿ
ವರ ಜನನಿ॥

ಯುಗ ಯುಗಾಂತರದಿಂದ ರಂಜಿಸಿ।
ಒಗೆದು ಬಂದಿಹ ದೇವನುಲಿಯನು।
ಆಗರದಿ ತಿರೆಗೊರೆದ ಮಾತೆಯೆ ನಮೋ
ನಮೋ ನಿನಗೆ॥

ಇಂದು ನಿನ್ನಯ ಪ್ರೇಮ ಕುವರನ।
ಸಂದ ಸುದಿನದ ಜನ್ಮ ದಿನವಿದು।
ಕಂದ ಬಾಪೂಜಿ ಲೋಕ ಪೂಜ್ಯನ
ಹಿರಿಯ ಜೀವನವು॥

ಬೆಂದು ಬಾಡಿದ ಭುವನ ನಿಕರಕೆ।
ನಿಂದು ಅಭಯವನಿತ್ತು ಸಲಹಿದ।
ವಂದ್ಯ ನಾಯಕತಿಲಕ ಭಾರತ ಭೂಷ
ಗಾಂಧಿಯಲಾ॥

ವರುಷವೆಪ್ಪತ್ತೇಳು ತುಂಬಿತು।
ಭರದಿ ಎಮ್ಮಯ ಸತ್ಯ ರೂಪಗೆ।
ವರದ ನಾಡಿನ ಸೇವೆಯೊಂದರ ಗಣ್ಯ
ಕಾರ್ಯವಲೆ॥

ನರರ ಗೋಳಿನ ಕರೆಯ ಕೇಳುತ।
ಚಿರವು ನೆನೆಯುತ ಮನದಿ ಮಿಡುಕುತ।
ಕರೆದು ಕುವರರ ಕಟ್ಟಿ ಕಂಕಣ ನಿಂದ
ನನುವಾಗಿ॥

ಸತ್ಯ ಧರ್ಮದ ವ್ರತದಹಿಂಸೆಯ।
ನಿತ್ಯ ಜೀವನ ಜಪದ ತಾರಕ।
ಸ್ತುತ್ಯ ಮಂತ್ರವ ಜಗದ ಜನತೆಗೆ ನಿರತ
ಬೋಧಿಸುತ॥

ಅತ್ಮ ಜ್ಯೋತಿಯ ಬೆಳಗಿ ತೋರಿಸಿ।
ಸತ್ಯ ನಿತ್ಯನ ಸ್ಮರಣೆ ಗೆಯ್ಯುತ।
ನಿತ್ಯ ರೂಪನು ಸತ್ಯ ಸತ್ಸಂಗದಲ್ಲಿ
ಕಾಣ್ಬೆಡು॥

ಭವ್ಯ ಮೂರುತಿ ಸಕಲ ಲೋಕಕೆ।
ದಿವ್ಯ ಸಂಪದ ಶಾಂತಿ ಸಮತೆಯ।
ರವ್ಯ ರಾಟೆಯ ನೂಲ ನೇಯುವ ಮಾರ್ಗ
ವೊಂದರಲೆ॥

ಸಾಮ್ಯ ಸುಖವದು ಸಂದು ಬರುವುದು।
ಗಮ್ಯ ಕೃತಿಯಲಿ ದೀನ ಸೇವೆಯು।
ಸೌಮ್ಯ ನಾರಾಯಣನ ಭಜಿಸುವ ಶಾಂತಿ
ಪಥವೆಂದು॥

ನಿರತ ನಿಷ್ಠೆಯ ನಿರುತದಿಂದಲೆ।
ಪರಮ ಸಾಹಸ ಕೀರ್ತಿ ಸಮತೆಯ।
ಪರಮವೆಂದನು ಸರ್ವ ಧರ್ಮ ಸಮನ್ವ
ಯಾಚಾರ್ಯ॥

ಕರದ ಪಲ್ಲವದಿಂದ ಹಿಡಿದನು।
ಧರೆಯ ಭಾರತ ಗರುವ ಗುಡಿಯನು।
ಭಾರತಾಂಬೆಯ ಭಜಿಸಿ ವಂದಿಸಿ ನಭಕೆ
ಏರಿಸುತ॥

ಇಂತು ನಡೆಯುತ ಸತ್ಯ ಮಾರ್ಗದಿ।
ಕಂತು ಪಿತ ಕಮಲಾಕ್ಷ ಸೋರ್ವನ।
ಸಂತ ಸೇವೆಯ ಸಮರ ರಭಸಕೆ ತನ್ನ
ಜೀವನವು॥

ಸತತ ಮುಡಿಪೆಂದರಿತ ಮೋಹನ।
ನಿಂತು ಪರಿಜನ ಬಿಡಿಗೆ ಮರುಗುತ।
ಅತುಕೊಡಿಸಿದ ಸರ್ವ ಸ್ವಾತಂತ್ರ್ಯವನು
ನಿಕರಕ್ಕೆ॥

ನಾಡ ನಾಯಕ ಯುಗದ ಪುರುಷನೆ।
ನಾಡ ಸೇವೆಯ ಸಮರ ಯೋಧನೆ।
ನಡೆದ ವರುಷಗಳೆಲ್ಲ ಯೆಮ್ಮಯ ನಾಡ
ಚರಿತೆಯಲಿ॥

ಪಡೆದು ಬಂದಿಹೆ ವಿವಿಧ ಹಿತವ।
ಹಡೆದ ಜನನಿಯ ಖ್ಯಾತಿ ಪಸರಿಸಿ।
ಬಿಡದೆ ಬೆಳಗುವ ರನ್ನ ದಕ್ಕರ ತಾರೆಯಂದ
ದಲಿ॥

ಬಾಪು ನಿನ್ನಯ ಪ್ರತತಿ ಮೆಚ್ಚುತ।
ಆ ಪರಮ ಸಗ್ಗದ ದಿವಿಜರುಂ।
ಈ ಪರಿ ವಿಧದ ಹಿಂಸೆಯುಸ್ತ್ರವ ಕಂಡು
ಬೆರಗಾಗಿ॥

“ಬಾಪು, ಭಾಪೆಲೆ ಶಾಂತಿ ಮೂರುತಿ।
ಸ್ವೈಪು ಸ್ವೈಪಲೆ ನಿನ್ನ ಜೀವನ।
ಪುಷ್ಪ ವೃಷ್ಟಿಯ ಕರೆವ” ವೆನುತಿದೆ ನಿಖಿಲ
ಸುರನಿಕರ॥

ಹರಿಯ ಕೃಪೆಯಲಿ ಸಮರ ರಂಗದಿ।
ಅರಿಯ ಸೋಲಿಸಿ ವಿಜಯ ವನಿತೆಯ।
ಕರೆಯನಾಗರದಿಂದ ಮನ್ನಿಸಿ ತಾಯ
ಸಂತೈಸಿ।

ಕರೆದು ನೊಂದಿಹ ಅನುಜ ವೃಂದವ।
ಸರಸ ಸಲ್ಲಾಪದ ಸುಮುಹೂರ್ತದ।
ನೆರವಿನಾಶ್ರಯ ಪಡೆದು ಬಾಳುವ ತಾಯ
ನೊಡಗೂಡಿ॥

ಚಿರವು ಬಾಳಲಿ ಎಮ್ಮ ಬಾಪೂಜಿ।
ಶರದ ಕಾಲದ ಇಂದು ಕಳೆಯಲಿ।
ಹರಿಯ ಕರುಣದಿ ತಿರೆಗೆ ಬಂದಾ ‘ಬುದ್ಧ’
ನಂದದಲಿ॥

ನಿರತ ಭುವನಕೆ ದಾರಿ ತೋರುತ।
‘ನರರ’ ಮಂಗಳ ರಕ್ಷೆ ಪಡೆಯುತ।
ಭಾರತಾಂಬೆಯ ಪುತ್ರ ನೆಮ್ಮೀ ಭರತ
ಸಮ್ರಾಟ॥

‘ನೂತನಾಬ್ದಯ’ ಲಿಂದು ಜಗವದು।
ಚೂತ ಚೈತ್ರದ ಚೆಲುವ ಮೀರಿಸಿ।
‘ಖಾತ’ ನೋರ್ವನ ಕರುಣೆಯಿಂದಲಿ
ಶಾಂತಿ ಪಡೆವಿರಲಿ॥

ನೂತನಾಬ್ದಯ ‘ಬಾಪು’ ನಾಮದಿ।
ಸೋತ ಜನತೆಗೆ ಪರಮ ಸಾಹಸ।
ಕೀರ್ತಿ ಸಮತೆಯನಿತ್ತು ಸಲಹಲಿ ಜೀವ
ರಾಶಿಗಳ॥

ವೈ. ಎಸ್. ವಿಶ್ವೇಶ್ವರ ಅಯ್ಯರ್,
ಮಹಾರಾಜಾ ಕಾಲೇಜ್,
ಮೈಸೂರು

ಸಂಪೂರ್ಣ ಸ್ವಾತಂತ್ರ್ಯದ ಸ್ಥಾಪನೆಯನ್ನು ಕಣ್ಣಾರೆ ಕಂಡು ನಲವತ್ತು ಕೋಟಿ ಭಾರತ ಪುಟಾಣಿ ಸ್ವತಂತ್ರರು ಸಂಗಿ ಮೆರೆಯುವಂತೆ ಪರಮಾತ್ಮನು ಅನುಗ್ರಹಿಸಿ ವಿಶ್ವದ ಕಲ್ಯಾಣಕ್ಕೆ ಮಹಾತ್ಮರಂತಹ ದಿವ್ಯಮೂರ್ತಿಯ ನೇತೃತ್ವದಲ್ಲಿ ಅನಂತಕಾಲ ಸೇವೆ ಸಲ್ಲಿಸುವ ಸದವಕಾಶವನ್ನು ಕರುಣಿಸಲೆಂದು ಅನನ್ಯ ಭಕ್ತಿಯಿಂದ ಭಗವಂತನನ್ನು ಪ್ರಾರ್ಥಿಸೋಣ!

Edited, printed and published by A. R. Nagarajan at the Sadhvi Press D. Subbiah Road Mysore.

ಸನ್ಮಾನ

ಗುಂಡ್ಲುಪೇಟೆ

ಗುಂಡ್ಲುಪೇಟೆಯಲ್ಲಿ ಹೈಸ್ಕೂಲ್ ಸಲು ಉದಾರ ದಾನ ಮಾಡಿ ಪ್ರಭುಗೆ ಪಾತ್ರರಾಗಿ, ಪ್ರಥಮ ದರ್ಜೆಯ ವ್ಯಜನಿಕ ಸೇವಾ ಪದಕ ಪಡೆದಿರುವ ದೊಡ್ಡಕುಂಡಿ ಭೋಗಪ್ಪನವರನ್ನು ಸಿಸಿ ಗುಂಡ್ಲುಪೇಟೆ ಪೌರರು ೨೭ ನೇ ರೀಖು ಶುಕ್ರವಾರ ಪುರ ಭವನದಲ್ಲಿ ಪತ್ರವನ್ನ ರ್ಪಿಸಿದರು

ನ್ಯೂ ಕೃಷ್ಣಾ ಟಾಕೀಸ್
ಮೈಸೂರು
ಇದೇ 28-9-46 ರಿಂದ
ದಿನವಹಿ ಮೂರು ಆಟಗಳು
ಸಿಲ್ವೋರವರ
ಜಂಗಲ್ ಗರ್ಲ್
ಅಥವಾ
ಹೂರ್-ಎ-ಜಂಗಲ್
(ಹಿಂದಿ)
ಸಬಿಸ್ತಾಂ, ಅಶೀರ್ ಹುಸೇನ್,
ಶ್ಯಾಮ ಸುಂದರ್
ಮೊದಲಾದವರ ಅಭಿನಯ
ಅರಣ್ಯದ ಭೀಕರತೆ ಮತ್ತು ಕಾಡು ಮೃಗಗಳೊಂದಿಗೆ ಹೊಡೆದಾಟವನ್ನು
ಪ್ರದರ್ಶಿಸಲಾಗುತ್ತದೆ
For Bookings Please Contact (for
Mysore State Coorg & S. K
Basvant Pictures,
Cottonpet, Bangalore City

ಚಾಮರಾಜನಗರ ಟೌನ್
ರೇಷನಿಂಗ್ ಆಫೀಸ್
R o 46-46-47

1946 ನೇ ಅಕ್ಟೋಬರ್ ಮಾಹೆ ಗಾಯಿತ್ತು ಚಾಮರಾಜನಗರ ಟವನ್ ಯಲಕ್ಟ್ರಿಕ್ ಲೈಟು ಇಲ್ಲದ ಎಲ್ಲಾ ದಿನ್ ಕಾರ್ಡು ಹೋಲ್ಡರುಗಳಿಗೂ ಸೀಮೆಎಣ್ಣೆಯನ್ನು ನಾಲ್ಕು ಬಾಟ್ಲುಗಳಂತೆ ಆಯಾ ಕಾರ್ಡುಗಳು ಅಲಾಟಾಗಿರುವ ಸ್ಟೋರುಗಳಲ್ಲಿ ಕೊಡಲಾಗುತ್ತೆ. ಈ ವಿಷಯದಲ್ಲಿ ಮೈಸೂರು ಸೀಮೆಯ ಆಹಾರ ಕೃರವರಿಂದ 4. 9 46 ನೇ ಮೆಮ್ಸೊ R 6843-46 ನೇ ನಂಬರು ಆರ್ಡರು ಸಾರಾಗಿರುತ್ತೆಂದು ತಿಳಿಯುವುದು.

(ಸಹಿ) ಹೆಚ್. ಹಾಲಪ್ಪ,
ರೇಷನಿಂಗ್ ಆಫೀಸರ್,
ಚಾಮರಾಜನಗರ.

ಶುಭ ಬೆಲೆ! Estd 1945 ತ್ವರೆ ಮಾಡಿರಿ!
SRI RAMA ELECTRIC STORES
Govt. Licenced Electrical Contractors & Engineers.
ಎಲ್ಲಾ ವಿಧವಾದ ಎಲೆಕ್ಟ್ರಿಕ್ ಪವರ್ ಮತ್ತು ಲೈಟಿಂಗ್ ಇನ್ಸ್ಟಲೇಷನ್ ಕೆಲಸಗಳನ್ನು ಕಂಟ್ರೋಲ್ ದರದಲ್ಲಿಯೂ, ಸಕಾಲದಲ್ಲಿಯೂ ಮಾಡಿಕೊಡುತ್ತೇವೆ
ನಮ್ಮಲ್ಲಿ ಎಲ್ಲಾ ವಿಧವಾದ ಎಲೆಕ್ಟ್ರಿಕ್ ಸಾಮಾನುಗಳೂ ಸುಲಭ ದರದಲ್ಲಿ ದೊರೆಯುತ್ತವೆ
ಮಹಾಜನರು ಪ್ರೋತ್ಸಾಹಿಸಬೇಕಾಗಿ ಕೋರುತ್ತೇವೆ.
ಶ್ರೀ ರಾಮಾ ಎಲೆಕ್ಟ್ರಿಕ್ ಸ್ಟೋರ್ಸ್,
(ಬಿಡಾರದ ಕೃಷ್ಣಪ್ಪನವರ ರಾಮ ಮಂದಿರದ ಎದುರು)
ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು.

ರಿಜಿ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಗುರುವಾರ ೩—೧೦—೪೭ [ಸಂಚಿಕೆ ೨೭೮

ತುರ್ಕೀ ಗಡಿಯಲ್ಲಿ ರಷ್ಯದ ಚಟುವಟಿಕೆ

ಜಯಂತಿ ಉತ್ಸವ

ಹೊರಂಗ ಸಭೆಯಲ್ಲಿ ಭಾಷಣ

ಮೈಸೂರು ೩

...ತ್ಮ ಗಾಂಧಿಯವರ ಜಯಂತಿ ...ತ್ಸವದ ಪ್ರಯುಕ್ತ ನಿನ್ನೆ ಸಂಜೆ ನ ...ಗ್ರೆಸ್ ಕಛೇರಿಯಿಂದ ದಿವ್ಯವಾದ ...ಲಂಕರಿಸಲ್ಪಟ್ಟಿದ್ದ ಮಹಾತ್ಮ ...ರ ಭಾವ ಚಿತ್ರವು ಮೆರವಣಿಗೆ ...ರ್ವ ಹಾಲ್ ಮೈದಾನವನ್ನು ...ಲ್ಲಿ ಶ್ರೀ ಎಸ್. ನಿಜಲಿಂಗಪ್ಪ ...ಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನ... ಶ್ರೀ ಚಂಗಲರಾಯ ರೆಡ್ಡಿ ...ಭಾಷಣ ಮಾಡಿ ರಾಜರುಗಳ ... ಜವಾಬ್ದಾರಿ ಸರ್ಕಾರವನ್ನು ಸ್ಥಾ... ಪ್ರಜೆಗಳ ಉದ್ದೇಶವಾಗಿರುವು... ...ದರೂ ಹಲವು ಸಂ...ನಗಳು ಪ್ರಜೆಗಳ ಕೋರಿ... ...ರುವುದರಿಂದ ... ...ನಕ್ಕೆ ಅವಕಾಶವೀಯುತ್ತಿರುವ ...ವರು ಮೈಸೂರಿನಲ್ಲಿಯೂ ...ಯುಕ್ತ ಪುರಸ್ಕಾರವು ದೊರೆಯ ...ತಿನಿಧಿಗಳ ಕೋರಿಕೆಯು ಕ್ಷ...ತ್ತಿರುವುದರಿಂದ ಅದನ್ನು ...ಳ್ಳಲು ಒಂದು ಚಳುವಳಿಯು ...ದು ಅನಿವಾರ್ಯವಾದೀತೆಂ...

...ಬೋಸರು ಸ್ಥಾಪಿಸಿದ ಐ. ...ದ ನಾಯಕರಾಗಿದ್ದ ಅಂದ ...ನರ್ನರಾಗಿ ನೇಮಿಸಲ್ಪಟ್ಟಿದ್ದ ...ಲೋಕನಾಥರವ... ನಾಡಿ ಐ. ಎನ್. ಎ. ...ನ ಬಂಧನ ವಿಮೋಚನೆ... ಪ್ರಾಣಗಳನ್ನು ಅರ್ಪಿಸಲು ...ರುವ ವಾಗ್ದಾನವನ್ನು ...ಹಿಂಸೆಯಿಂದ ಸ್ವಾತಂತ್ರ್ಯ ...ಕಾಂಗ್ರೆಸ್ಸಿನವರಿಗೆ ಕರ್ತೃ... ಕೊಟ್ಟು ಅವರಲ್ಲಿ ಅವರು ...ಹಿಂಸೆ ಅಥವಾ ಅಹಿಂಸೆ, ...ಮಾರ್ಗದಿಂದ ತಾವು ...ನ್ನು ಸಾಧಿಸಲು ಬದ್ಧ ಕಂಕ... ಹೇಳಿದರು. ಅಹಿಂಸೆ ...ಶ್ಯವಾಗಿರಬಾರದೆಂದೂ, ...ವವರಿಗೆ ಅಂಜಿ ಓ... ...ದಿಟ್ಟತನದಿಂ... ...ಗಿ ಎದುರಿಸುವು... ...ಸೂಚಿಸಿದರು. ... ಐ. ಎನ್. ಎ. ಯವ... ಪೋಷಣೆಗಾಗಿ ಉದಾರ... ...ಬೇಡಿದರು. ...ರು ಧನ ಸಹಾಯ...

...ಕಾರ್ಯಗಳನ್ನು ಸ್ಥಾ... ...ನಲ್ಲಿ ಹೋರಾಟವು ಅತ್ಯ... ...ದನ್ನು ಖಂಡಿತವಾ... ...ಅಧ್ಯಕ್ಷರು ...ದೇ ಮಾತರಂ ಗೀತೆಯಾ... ...ಗೊಡನೆ ಸಭೆ ಮು...

...ದ ಮುಖರ್ಜಿಯವರ ಭಾಷಣ

...ದ್ರ ಸಿಲ್ವರ್ ಜ್ಯೂಬಿ... ...ದ ಭಾಷಣವನ್ನು ಲಕ್ನೊ... ...ಪ್ರೊ|| ಡಾ. ರಾಧಾ... ...ರು ಇದೇ ೧೦... ...ಮಹಾರಾಜ ಕಾಲೇ... ...ವಿಷಯ—ಭಾರತ... ...ಸ್ಥಿತಿ ಸಮಸ್ಯೆಗಳು.

ಗಾಂಧಿ ಜಯಂತಿ

ಮಹಿಳೆಯರಿಂದ ಆಚರಣೆ

ಮೈಸೂರು ೩

ನಗರ ಕಾಂಗ್ರೆಸ್ ಸಮಿತಿ ಆಶ್ರಯದಲ್ಲಿ ನಾಳೆ ಮಹಿಳೆಯರಿಂದಲೇ ಗಾಂಧಿ ಜಯಂತಿಯು ಆಚರಿಸಲ್ಪಡುವುದು. ಸುಬ್ಬರಾಯನ ಕೆರೆಯಲ್ಲಿ ಬೆಳಿಗ್ಗೆ ೮|| ಗಂಟೆಗೆ ಧ್ವಜಾರೋಹಣ, ಸಂಜೆ ಶ್ರೀಮತಿ ೬|| ಗಂಟೆಗೆ ಸುನಂದಾದೇವಿಯವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ. ಶ್ರೀಮತಿಗಳಾದ ಎಂ. ಆರ್ ಲಕ್ಷ್ಮಮ್ಮ, ಕಡೂರು ಸುಬ್ಬಮ್ಮ, ಎಂ ಎಸ್ ಸೀತಮ್ಮ ಮತ್ತು ರತ್ನಮ್ಮ ಮಾಧವರಾವ್ ಇವರು ಭಾಷಣ ಮಾಡುವರು ಸರ್ವರಿಗೂ ಸ್ವಾಗತವಿದೆ.

ಬೋಸರು ಬದುಕಿಲ್ಲ

ಲೋಕನಾಥರವರ ಹೇಳಿಕೆ

ಬಾಬು ಸುಭಾಸ್‌ಚಂದ್ರ ಬೋಸರು ಬದುಕಿರುವುದಾಗಿ ಹಲವು ಪತ್ರಿಕೆಗಳಲ್ಲಿ ವರದಿಗಳು ಬರುತ್ತಿವೆಯಷ್ಟೆ. ಇವುಗಳು ನಿರಾಧಾರವಾದುವುಗಳೆಂದೂ, ಅವುಗಳನ್ನು ನಂಬಬಾರದೆಂದೂ, ಲೆ|| ಜ|| ಲೋಕನಾಥರವರು ನಿನ್ನೆ ದಿನ ಬಹಿರಂಗ ಸಭೆಯಲ್ಲಿ ಹೇಳಿದರು. ಬೋಸರೊಡನೆ ವಿಮಾನದಲ್ಲಿ ಹೋದ ಕ||ಹಬಿಬುರ್ ರಹಮಾನರವರೇ ಬೋಸರ ಮರಣದ ವಿಷಯವನ್ನು ತಮಗೆ ಖಚಿತವಾಗಿ ತಿಳಿಸಿದರೆಂದು ಸೂಚಿಸಿದರು. ಇದನ್ನು ಹೇಳುವಾಗ ಅವರ ಕಣ್ಣಲ್ಲಿ ನೀರು ಧಾರಾಕಾರವಾಗಿ ಬರುತ್ತಿದ್ದಿತು.

ಅವಿಶ್ವಾಸದ ಠರಾವು ತಳ್ಳಿ ಹಾಕಲ್ಪಟ್ಟಿತು

ಕ್ಯಾಂಪು] ಚಾಮರಾಜನಗರ ೩

ಪೌರಸಭಾಧ್ಯಕ್ಷರ ಮೇಲೆ ತಂದಿದ್ದ ಅವಿಶ್ವಾಸದ ಠರಾವು ನಿನ್ನೆ ಚರ್ಚೆಗೆ ಬಂದಿತು. ಪೌರಸಭಾ ಕಛೇರಿಯಲ್ಲಿ ಜನ ಕಿಕ್ಕಿರಿದಿದ್ದರು. ಡಿಸ್ಟ್ರಿಕ್ಟ್ ಮುನಿಸಿಪಲ್ ಆಫೀಸರ್(ನಿಗ...)ರಂತೆ ಅಧ್ಯಕ್ಷರು ಅಧ್ಯಕ್ಷಸ್ಥಾನ ಖಾಲಿ ಮಾಡಬೇಕೆಂದು ಸದಸ್ಯರು ಸೂಚಿಸಿದರು. ... ವಾದ ವಿವಾದಗಳಾದವು ... ಅಧ್ಯಕ್ಷರು ಸ್ಥಾನ ಬಿಡಲಿಲ್ಲ. ಆಕ್ಷೇಪಣೆಯನ್ನು ತಳ್ಳಿ ಹಾಕಿದರು.

ಅವಿಶ್ವಾಸ ನಿರ್ಣಯವನ್ನು ಅಧ್ಯಕ್ಷರು ತಳ್ಳಿ ಹಾಕಿದರು. ... ಸಾಗಿ ನಡೆದ ... ಜನರು ಸಭಾತ್ಯಾಗ ಮಾಡಿದರು.

Edited, printed and published by A. R. Nagaraj... at the Sadhvi Press ...

ಜೋಗ್ ವಿದ್ಯುಚ್ಛಕ್ತಿ

ಪ್ರ|| ಪ್ರ|| ಸಭೆಯಲ್ಲಿ ಪ್ರಶ್ನೆ

ಮೈಸೂರು ೩

ಮುಂದಿನ ಮಾರ್ಚಿ ತಿಂಗಳ ಕೊನೆಯ ಸುಮಾರಿನಲ್ಲಿ ಜೋಗಿನ ವಿದ್ಯುಚ್ಛಕ್ತಿಯು ಜನಗಳಿಗೆ ದೊರೆಯುವುದೆಂದು ಇದಿನ ಪ್ರ|| ಪ್ರ|| ಸಭೆಯಲ್ಲಿ ಬಂದ ಪ್ರಶ್ನೆಗೆ ಉತ್ತರವಾಗಿ ತಿಳಿಸಲಾಯಿತು. ಕೋಮು ವಾರು ದಾಮಾಷಾ ಪ್ರಕಾರ ಅಸಿಸ್ಟೆಂಟ್ ಕಮೀಷನರುಗಳನ್ನು ತೆಗೆದುಕೊಂಡಿಲ್ಲವೆಂಬ ಬಗ್ಗೆ ಬಂದಿದ್ದ ಮತ್ತೊಂದು ಪ್ರಶ್ನೆಗೂ ಸರ್ಕಾರದವರು ಮೋಘಮ ಉತ್ತರವಿತ್ತರು.

ನಿಲುವಳಿ ನಿರ್ಣಯ

ಶ್ರೀ ಜಿ ಅಪ್ಪಾಜಿ ಗೌಡರು ಮಂತ್ರಿಗಳ ... ಮೋಟಾರ್ ಬಸ್ಸುಗಳ ... ಅಧಿಕಾರಿಗಳನ್ನು ನೇಮಿಸದೆ ಲಂಚ ... ಸುಗಳು ಹೆಚ್ಚಲು ಸರ್ಕಾರದವರು ಅವಕಾಶ ಕೊಟ್ಟಿರುವ ವಿಷಯದಲ್ಲಿ ಶ್ರೀಗಳಾದ ನಾಗಭೂಷಣ ಭಟ್ಟ ಮತ್ತಿತರರು ತಂದಿರುತ ನಿಲುವಳಿ ನಿರ್ಣಯಕ್ಕೆ ಅಧ್ಯಕ್ಷರು ಅವಕಾಶವಿತ್ತಿಲ್ಲವರು.

ಜಯಂತಿ ಸ್ಪರ್ಧೆಗಳು

ಇದೇ ೬ ನೇ ತಾ|| ... ಮೈಸೂರಿನ ... ಶಾಲೆಯಲ್ಲಿ (ಮಹಾರಾಣಿ ... ಮತ್ತು ... ಹೈಸ್ಕೂಲಿನಲ್ಲಿ) ಗಾಂಧಿ ಜಯಂತಿ ಪ್ರಯುಕ್ತ ನೂಲುವ ಸ್ಪರ್ಧೆ, ಮತ್ತು ... ಗೀತೆಗಳನ್ನು ಹಾಡುವ ಸ್ಪರ್ಧೆ, ಗಾಂಧೀಜಿಯವರ ಮೇಲೆ ಪ್ರಬಂಧಗಳನ್ನು ಬರೆಯುವ ಸ್ಪರ್ಧೆ, ಇವುಗಳನ್ನು ಏರ್ಪಡಿಸಲಾಗಿದೆ. ಇದಕ್ಕೆ ... ಗೂ, ಮಹಿಳೆಯರಿಗೂ ... ಪ್ರತಿಯೊಂದು ಸ್ಪರ್ಧೆಗೂ, ಬೆಳ್ಳಿ ಬಟ್ಟಲು ಮತ್ತು ಪದಕಗಳನ್ನು ... ಕೊಡಲಾಗುವುದು ... ಭಾಗವಹಿಸ ಇಚ್ಛಿಸುವವರು ... ನೇ ತಾ|| ಸಾಯಂಕಾಲದೊಳಗೆ ... ಕೋರಿದೆ.

ದೇವಾಂಗ ಸಂಘದಲ್ಲಿ

ಶ್ರೀ ರಾಮ ... ದೇವಸ್ಥಾನದಲ್ಲಿ ... ಶ್ರೀ ಎ ... ಅಧ್ಯಕ್ಷತೆಯಲ್ಲಿ ... ಮತ್ತು ಗಾಂಧಿ ಜಯಂತಿ ... ಆಚರಿಸಲ್ಪಟ್ಟಿತು ...

ತುರ್ಕಿ ಗಡಿಯಲ್ಲಿ ರಷ್ಯದ ಸೈನ್ಯ

ಡಾರ್ಡನೆಲ್ಸ್‌ನ ಹತೋಟಿ ವಿಷಯದಲ್ಲಿ ರಷ್ಯದ ಸಲಹೆಗಳನ್ನು ಮತ್ತೆ ತುರ್ಕಿಯು ನಿರಾಕರಿಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಂತೆಯೇ ಅತ್ತಲಾಗಿ ರಷ್ಯ ಮತ್ತು ತುರ್ಕಿಯ ಪೂರ್ವಗಡೀ ಪ್ರದೇಶದಲ್ಲಿ ರಷ್ಯದ ಚಟುವಟಿಕೆ ಕಾರ್ಯಾಚರಣೆಯು ವಿಶೇಷವಾಗಿ ವರದಿಯಾಗುತ್ತಿದೆ. ಅರವತ್ತು ವರ್ಷಕ್ಕೆ ಮೀರಿದವರನ್ನೆಲ್ಲಾ ಒಳನಾಡಿಗೆ ಕಳುಹಿಸಲಾಗುತ್ತಿದೆ. ಗಡೀ ಪ್ರದೇಶದಲ್ಲಿ ದೊಡ್ಡ ದೊಡ್ಡ ಕೋಟೆಗಳನ್ನು ಕಟ್ಟಲಾಗುತ್ತಿದೆ. ಭಾರೀ ವಿಮಾನ ವಿರೋಧಕ ಯಂತ್ರಗಳನ್ನು ಸಜ್ಜುಗೊಳಿಸಿ ರಷ್ಯದ ವಿಮಾನಗಳು ಎಚ್ಚರಿಕೆ ಕ್ರಮಗಳನ್ನು ಕೈಗೊಳ್ಳುತ್ತಿರುವುದಾಗಿಯೂ ವರದಿಯಾಗಿದೆ.

ಸರ್ಕಾರಕ್ಕೆ ನಾಲ್ಕನೇ ಸೋಲು

ಮೈಸೂರು ೩

ಈ ದಿನ ಪ್ರ|| ಪ್ರ|| ಸಭೆಯಲ್ಲಿ ಮೋಟಾರ್ ವಾಹನಗಳು ಮತ್ತು ರಸ್ತೆ ಸಂಚಾರದ ಮಸೂದೆಯನ್ನು ಸದಸ್ಯರು ಬಹುಮತದಿಂದ ನಿರಾಕರಿಸಿ ಸರ್ಕಾರಕ್ಕೆ ನಾಲ್ಕನೇ ಸೋಲನ್ನುಂಟು ಮಾಡಿದರು. ಆದರೆ ಸರ್ಕಾರದ ವಿರೋಧದ ಓಟುಗಳ ಸಂಖ್ಯೆಯು ಬರುಬರುತ್ತಾ ಕಡಮೆಯಾಗುತ್ತಿರುವಂತಿದೆ. ಕೇವಲ ಎರಡು ಓಟುಗಳಿಂದ ಈ ಮಸೂದೆಯು ಬಿದ್ದು ಹೋಯಿತು. ಸರ್ಕಾರದ ಪರವಾಗಿ ... ಓಟುಗಳು ಬಂದುವು.

ಡಿ. ಡಿ. ಸಿ. ಐ.

ಬೆಂಗಳೂರು ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಎಂ. ಎಸ್. ರಾಜಗೋಪಾಲರಾಯರನ್ನು ಡಿ. ಡಿ. ಸಿ. ಐ. ಆಗಿ ಕೆಲಸ ಮಾಡುವಂತೆ ನೇಮಿಸಲಾಗಿದೆ.

ಮಾಜಿ ... ಗೌರ್ನರ್ ಆಗಮನ

ಈ ದಿನ ಮಧ್ಯಾಹ್ನ ರಾಜಧಾನಿಗೆ ... ಸರ್ ಆರ್ಚಿಬಾಲ್ಡ್ ... ಬಂದಿದ್ದಾರೆ. ಅವರೇ ... ವರೆಗೆ ರಾಜ ಅತಿಥಿಗಳಾಗಿ ಇರುವರು. ... ಗೌರ್ನರ್ ... ಲಿತು.

ಕಾರ್ಮಿಕರ ಸಮ್ಮೇಳನ

ನಾಳೆ ... ಮಧ್ಯಾಹ್ನ ... ಗಂಟೆಗೆ ಸುಬ್ಬರಾಯನಕೆರೆ ಮೈದಾನದಲ್ಲಿ ಮೈಸೂರು ಮತ್ತು ಮಂಡ್ಯ ಜಿಲ್ಲೆಯ ಕಾರ್ಮಿಕರ ಸಮ್ಮೇಳನವನ್ನು ಶ್ರೀ ಟಿ ... ಅಧ್ಯಕ್ಷತೆಯಲ್ಲಿ ಏರ್ಪಡಿಸಿದೆ. ಶ್ರೀಗಳಾದ ಕೆ. ಟಿ ಭಾಷ್ಯಂ, ಕೆ. ಚೆಂಗಲರಾಯ ರೆಡ್ಡಿ, ಕೆ. ಎಸ್. ... ಮತ್ತಿತರರು ಭಾಷಣ ಮಾಡುವರು. ಈ ಸಂದರ್ಭದಲ್ಲಿ ... ಗಂಟೆಗೆ ... ಟೌನ್‌ಹಾಲ್ ಮೈದಾನ ... ಹೊರಡುವುದು.

ರೆಸಿಡೆಂಟರ ಆಗಮನ

ನವರಾತ್ರಿ ಮಹೋತ್ಸವದ ಪ್ರಯುಕ್ತ ... ದಿನ ಮಧ್ಯಾಹ್ನ ಬ್ರಿ|| ರೆಸಿಡೆಂಟರು ... ಆಗಮಿಸಿದರು ... ಅರಮನೆ ... ಬರಮಾಡಿಕೊಂಡರು.

ಸೂಚನೆ

... ಕಾರ್ಯಾಲಯ ... ಹಾಕಲಾಗಿದೆ ...

ಸಾಧ್ವಿ

ತಾ|| ೩-೧೦-೪೬ ರ ಬುಧವಾರ

ಸಹಕಾರದ ಪ್ರಗತಿ

ಸಂಸ್ಥಾನದ ಮುವ್ವತ್ತ ಮೂರನೆಯ ಸಹಕಾರ ಸಮ್ಮೇಳನವು ಈಗ ರಾಜಧಾನಿಯಲ್ಲಿ ನಡೆಯುತ್ತಿದೆ ಅನೇಕ ಜಿಲ್ಲೆಗಳಿಂದ ಪ್ರತಿನಿಧಿಗಳು ಬಂದಿದ್ದಾರೆ ಸಹಕಾರ ಪದ್ಧತಿಯ ಪರಿಷ್ಕರಣಕ್ಕೆ ಸಾಧಕವಾದ ವಿಚಾರಗಳನ್ನು ಪರಿಶೀಲಿಸುತ್ತಿದ್ದಾರೆ ಸರ್ಕಾರದವರ ಮತ್ತು ಸಾರ್ವಜನಿಕರ ಸತತ ಪ್ರಯತ್ನಗಳಿಂದ ಸಹಕಾರೋದ್ಯಮವು ದಿನೇ ದಿನೇ ಯಶಸ್ವಿಯಾಗಿ ಮುಂದುವರಿಯುತ್ತಿರುವುದು ಸಂತೋಷದ ಸಂಗತಿ.

ಮೊದಲು ಈ ಪದ್ಧತಿಯು ಪಾಶ್ಚಿಮಾತ್ಯ ದೇಶಗಳಲ್ಲಿ ಆರಂಭವಾಯಿತು. ಕಳೆದ ನಲವತ್ತು ವರ್ಷಗಳಿಂದ ಭರತ ಖಂಡದಲ್ಲಿಯೂ ಇದು ಬೆಳೆಯುತ್ತ ಬಂದಿದೆ ಕೋಟ್ಯಂತರ ಜನರು ಸಹಕಾರ ಸಂಘಗಳ ಸದಸ್ಯರಾಗಿ ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಬೆಳೆಯುವವರಿಗೂ, ಕೊಳ್ಳುವವರಿಗೂ ಮಧ್ಯೆ ಕೊಳ್ಳೆ ಹೊಡೆಯುವ ದಲ್ಲಾಳಿಗಳನ್ನು ಆದಷ್ಟು ಮಟ್ಟಿಗೆ ತಪ್ಪಿಸಿ ಮೇಲ್ಕಂಡ ಇಬ್ಬರಿಗೂ ಪ್ರಯೋಜನ ಉಂಟು ಮಾಡಬೇಕೆಂಬುದೇ ಸಹಕಾರದ ಮೂಲ ಉದ್ದೇಶ. ವರ್ತಕ ವರ್ಗದವರನ್ನು ನಿರ್ಮೂಲ ಮಾಡುವುದು ಇದರ ಅಭಿಪ್ರಾಯವಲ್ಲ. ಆದರೆ ಬೆಳೆಯುವವರಿಗೆ ಆದಷ್ಟು ಹೆಚ್ಚು ಪ್ರಯೋಜನವನ್ನೂ, ಕೊಳ್ಳುವವರಿಗೆ ಆದಷ್ಟು ಅಗ್ಗವಾಗಿ ಪದಾರ್ಥಗಳನ್ನೂ ದೊರಕಿಸಿ ಕೊಡುವ ಮಾರಾಟ ಸಂಸ್ಥೆಗಳನ್ನು ಸ್ಥಾಪಿಸುವುದೇ ಇದರ ಉದ್ದೇಶ.

ಮೊದಲು ಕೇವಲ ಹಣದ ಲೇವಾದೇವಿಯನ್ನು ಮಾಡುವುದೇ ಸಹಕಾರ ಸಂಘಗಳ ಗುರಿಯಾಗಿದ್ದಿತು ಈಚೆಗೆ ಜನ ಜೀವನದ ದಿನಚರಿಯ ಅವಶ್ಯಕತೆಯ ಸಾಮಗ್ರಿಗಳನ್ನು ಕೊಂಡು ಮಾರುವುದು ಹೆಚ್ಚುತ್ತಿದೆ. ಇದು ಇನ್ನೂ ವಿಸ್ತರಿಸಿ ಸಾರ್ವಜನಿಕರಿಗೆ ಬೇಕಾದ ಸಮಸ್ತ ಸಾಮಗ್ರಿಗಳೂ ಸಹಕಾರ ಸಂಘಗಳ ಮೂಲಕ ದೊರೆಯುವಂತೆ ಮಾಡುವುದು ಮುಖ್ಯ ಧ್ಯೇಯವಾಗಬೇಕು ಈಗ ವ್ಯಾಪಾರ ಪ್ರಪಂಚದ ಪೈಪೋಟಿ ಸತ್ಪರಿಣಾಮವುಂಟಾಗುವುದು ಈ ಅಂಶವನ್ನು ಸಮ್ಮೇಳನದ ಅಧ್ಯಕ್ಷರು ಒತ್ತಿ ಹೇಳಿರುವರು.

ಸಂಸ್ಥಾನದಲ್ಲಿ ಸಹಕಾರ ಚಳುವಳಿಯು ಇನ್ನೂ ಅತಿಶಯವಾಗಿ ಬೆಳೆದು ಪ್ರಜೆಗಳಿಗೆ ಸಕಲ ರೀತಿಗಳಲ್ಲಿಯೂ ನೆರವಾಗಲೆಂದು ನಾವು ಪ್ರಾರ್ಥಿಸುತ್ತೇವೆ

ಎಲ್ಲರಿಗೂ ಉದ್ಯೋಗ

ದೇಶದಲ್ಲಿರುವ ಸಮಸ್ತ ಕೆಲಸಗಾರರಿಗೂ ಉದ್ಯೋಗವನ್ನು ದೊರಕಿಸುವ ಭಾರೀ ರಾಷ್ಟ್ರ ರಚನಾ ಯೋಜನೆಯನ್ನು ಇನ್ನು ಒಂದೂವರೆ ವರ್ಷದಲ್ಲಿ ಸರ್ಕಾರದವರು ಕೈಗೊಳ್ಳಲಿರುವರೆಂದು ಪಂ|| ಜವಹರಲಾಲ್ ನೆಹರೂರವರು ಹೇಳಿರುವರು.

ಪ್ರಭುಗಳಿಂದ ಕಾಲೇಜು ಆರಂಭೋತ್ಸವ

ರಾಜಧಾನಿಯ ಸೆಂಟ್ ಫಿಲೋಮಿನಾ ಕಾಲೇಜಿನ ಆರಂಭೋತ್ಸವವು ಶ್ರೀ ಮನ್ಮಹಾರಾಜರವರಿಂದ ಇದೇ ೯ ನೇ ತಾ|| ಬುಧವಾರ ಬೆಳಿಗ್ಗೆ ೯-೩೦ ಕ್ಕೆ ನೆರವೇರುವುದು.

ನಿಲುವಳಿ ಸೂಚನೆ ಮಾತಿನಲ್ಲೇ ಮುಕ್ತಾಯ

ನವರಾತ್ರಿಗೆ ಬಟ್ಟೆ ಸರಬರಾಜಾಗದ ಬಗ್ಗೆ ಆಕ್ಷೇಪಣೆ

ಮೈಸೂರು ೩

ದಸರಾ ಮತ್ತು ಮಹಾಲಯ ಪಕ್ಷದ ದಿನಗಳಲ್ಲಿ ವಿಶೇಷ ಕೋಟಾಗಳ ಮೂಲಕ ಸಾರ್ವಜನಿಕರ ಉಪಯೋಗಕ್ಕಾಗಿ ಬಟ್ಟೆ ಹಂಚಿಕೆ ಆಗಲಿಲ್ಲ ಎಂಬ ವಿಚಾರವನ್ನು ಚರ್ಚಿಸುವುದಕ್ಕಾಗಿ ನಿನ್ನೆ ದಿನ ಪ್ರತಿನಿಧಿ ಸಭೆಯಲ್ಲಿ ಶ್ರೀ ಲಿಂಗೇಗೌಡರು ನಿಲುವಳಿ ಸೂಚನೆಯನ್ನು ಮಂಡಿಸುತ್ತಾ ಮುಸ್ಲಿಂ ಸೋದರರಿಗೆ ರಂಜಾನ್ ಕಾಲದಲ್ಲಿ ಸಾಕಷ್ಟು ಬಟ್ಟೆ ಹಂಚಿಕೆಯಾದ ಅಂಶವನ್ನು ತಿಳಿಸಿ ಅದೇ ರೀತಿಯ ಏರ್ಪಾಡನ್ನು ಮಹಾಲಯ ಪಕ್ಷದಲ್ಲೂ ಮಾಡಿದ್ದಲ್ಲಿ ಹಿಂದೂಗಳಿಗೆ ಅನುಕೂಲವಾಗುತ್ತಿತ್ತು, ಎಂದು ಹೇಳಿದರು

ಮುಸ್ಲಿಮರು, ಹಿಂದುಗಳು ಎಂಬ ಭೇದ ಭಾವನೆಯಿಂದ ಬಟ್ಟೆ ಹಂಚಿಕೆ ಕ್ರಮ ನಡೆದಿರುತ್ತೆ. ಸ್ಟ್ಯಾಂಡರ್ಡ್ ಬಟ್ಟೆ ಹಂಚಿಕೆಯಾಗುತ್ತಿದ್ದಾಗ ಈ ಬಗೆಯ ತಾರತಮ್ಯ ಜನರಲ್ಲಿರಲಿಲ್ಲ, ಎಂದು ತುಮಕೂರು ಶ್ರೀ ಸಿ. ರಾಮಣ್ಣನವರು ಹೇಳಿದರು. ಹಳ್ಳಿಗರು ಬಟ್ಟೆ ಇಲ್ಲದೆ ತೊಂದರೆ ಪಡುತ್ತಿರುವ ಅಂಶವನ್ನು ವಿವರಿಸಿ ಮಾನ ಕಾಪಾಡಿಕೊಳ್ಳಲು ಸಾಕಷ್ಟಾದರೂ ಬಟ್ಟೆಯನ್ನು ಕೊಡುವುದು ಉತ್ತಮವೆಂದು ಶ್ರೀ ಚೌಡೇಗೌಡರು ವಾದಿಸಿದರು. ಕೋಲಾರದ ಶ್ರೀ ಗೋಪಾಲಕೃಷ್ಣರವರು ಮಾತನಾಡುತ್ತಾ ಅಧಿಕಾರಿಗಳು ಕೋಮುವಾರು ಭಾವನೆಗಳಿಂದ ತಮ್ಮ ಕಾರ್ಯಗಳನ್ನು ನಡೆಸುತ್ತಿರುತ್ತಾರೆ ಕಳ್ಳ ಸಂತೆ ತಾಂಡವವಾಡುತ್ತಿದೆ ವ್ಯಾಪಾರಸ್ಥರು ಕಳ್ಳರಾಗುತ್ತಿದ್ದಾರೆ ಹಂಚಿಕೆ ಕ್ರಮ ಸರಿಯಾಗಿಲ್ಲ ಎಂದು ತಿಳಿಸಿದರು ರಂಜಾನ್ ಕಾಲದಲ್ಲಿ ಬಟ್ಟೆ ಹೆಚ್ಚಾಗಿ ಮುಸ್ಲಿಮರಿಗೆ ದೊರೆಕಿತೆಂದು ವಾದಿಸುವುದು ಸುಳ್ಳು. ಮುಸ್ಲಿಮರಿಗೂ ಸಹ ಸಾಕಷ್ಟು ಬಟ್ಟೆ ಸಿಗಲಿಲ್ಲ ಹಿಂದೂ ಅಧಿಕಾರಿಗಳ ಕಾಲದಲ್ಲಿ ನಮಗೆ ಅನುಕೂಲವಿದ್ದು ದಸರಾ ಬಟ್ಟೆ ಈ ವರ್ಷಕ್ಕಿಂತಲೂ ಹೆಚ್ಚಾಗಿ ಸಿಕ್ಕಿತ್ತು, ಎಂದು ಮಿ|| ಬಾಸೀರ್ ಅಹ್ಮದ್‌ರವರು ಹೇಳಿದರು

ಶ್ರೀ ಹೆಚ್. ಕೆ. ಮಾದಯ್ಯನವರು ಮಾತನಾಡಿ, ತಾವು ಈ ವಿಚಾರದಲ್ಲಿ ಸರಬರಾಜು ಮಂತ್ರಿಗಳನ್ನು ಭೇಟಿ ಕೊಡಲು ಅನೇಕಾವರ್ತಿ ಬೇಡಿದರೂ ಭೇಟಿ ಸಿಗದಿರುವುದು ತೀರ ಶೋಚನೀಯವೆಂದು ತಿಳಿಸಿ, ಅಧಿಕಾರಿಗಳ ಮನೋಭಾವನೆ ಮಾರ್ಪಾಡಾಗಬೇಕು ಎಂದು ಹೇಳಿದರು

ಸರಬರಾಜು ಅಧಿಕಾರಿಗಳು ಮುಸಲ್ಮಾನರೆಂಬ ಭಾವನೆಯಿಂದ ಸದಸ್ಯರು ವಾದಿಸುತ್ತಿರುವಂತೆ ಕಾಣುತ್ತದೆ. ಮುಸಲ್ಮಾನರಿಗೂ ಸಹ ಬಟ್ಟೆ ಸರಬರಾಜು ಸಮರ್ಪಕವಾಗಿ ನಡೆದಿದೆ ಎಂಬುದು ಒಬ್ಬೊಬ್ಬ ಸದಸ್ಯರ ಮಾತಿನಿಂದಲೇ ಗೊತ್ತಾಗುತ್ತದೆ ಎಂದು ಮಿ|| ಎ. ಜೆ. ಖಲೀಲ್‌ರವರು ತಿಳಿಸಿದರು.

ಶ್ರೀ ಶಂಕರಲಿಂಗೇಗೌಡ, ನಂಜಪ್ಪನಾಡಿಗರೂ ಶ್ರೀಮತಿ ಗಂಗಮ್ಮನವರೂ ನಿರ್ಣಯಕ್ಕೆ ಬೆಂಬಲವಿತ್ತು ಮಾತನಾಡಿದರು

ಬಟ್ಟೆ ಹಂಚಿಕೆಯನ್ನು ಸರಿಪಡಿಸಲು ಪ್ರತಿನಿಧಿ ಸಭೆ ಮತ್ತು ಶಾಸನ ಸಭೆಗಳ ಸದಸ್ಯರ ಸಹಕಾರ ಪಡೆದು ಕಾರ್ಯಕ್ರಮ ಕೈಗೊಂಡಲ್ಲಿ ಈ ಬಗೆಯ ನಿರ್ಣಯಗಳಿಗೆ ಅವಕಾಶವೇ ಇರುವುದಿಲ್ಲವೆಂದು ಶ್ರೀ ಎಫ್. ಸಿ. ದೇವರಾಜ ಅರಸಿನವರು ತಿಳಿಸಿದರು.

ಸರ್ಕಾರದ ಪರವಾಗಿ ಸರಬರಾಜು ಕಂಟ್ರೋಲರಾದ ಶ್ರೀ ಎ. ಎಸ್. ಖಲೀಲರು ಸೆಪ್ಟೆಂಬರ್ ತಿಂಗಳಲ್ಲಿ ೮೦೦ ಬೇಲುಗಳನ್ನು ಹೆಚ್ಚಾಗಿ ಸರಬರಾಜು ಮಾಡಿದೆ ಎಂದು ತಿಳಿಸಿದರು ಶ್ರೀ ಆರ್ಕಾಟರು ಬಂದ ನಂತರ ಬಟ್ಟೆ ಹಂಚಿಕೆ ಕಾರ್ಯಕ್ರಮ ಬದಲಾವಣೆಯಾಗಿದೆ. ಹಬ್ಬಗಳ ದಿನಗಳಿಗಾಗಿ ಸಂಸ್ಥಾನಕ್ಕೆ ಬರುವ ಹತ್ತನೇ ಒಂದು ಭಾಗವನ್ನು ಮೀಸಲು ದೂಡವ ವಾಡಿಕೆ ಇತ್ತು, ಹಂಚುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ವಹಿಸಿಕೊಡಬೇಕೆಂದಿದ್ದರಿಂದ ಅವರು ಈ ಹಬ್ಬದ ದಿನಗಳಿಗಾಗಿ ಹತ್ತನೇ ಒಂದು ಭಾಗವನ್ನು ಮೀಸಲಾಗಿಟ್ಟುಕೊಂಡು ಉಳಿಕೆ ಬಟ್ಟೆಯನ್ನು ಆಯಾ ಜಿಲ್ಲೆಯಲ್ಲಿ ಯುಕ್ತವಾದಷ್ಟು ಹಂಚಲು ಏರ್ಪಾಡಾಗಿದೆ ಎಂದು ಹೇಳಿದರು.

ಕಾಲಾವಧಿಯಾದ ಪ್ರಯುಕ್ತ ನಿಲುವಳಿಯು ಕೇವಲ ವಾದದಲ್ಲಿಯೇ ಮುಕ್ತಾಯವಾಯಿತು

ಗೃಹಕೃತ್ಯದ ನೋಟೀಸ್

ಮೈಸೂರು ಸಿಟಿ ಚಾಮರಾಜ ಮೊಹಲ್ಲಾ ಕುಕ್ಕರಹಳ್ಳಿಯಲ್ಲಿರುವ ಆದಿ ಕರ್ನಾಟಕ ಜಾತಿ ಶೌತಿ ಮರಿಲಿಂಗಯ್ಯನ ಹೆಂಡತಿ ಪುಟ್ಟದೇವಮ್ಮನು ಸಮಸ್ತ ಜನರಿಗೆ ತಿಳಿಸುವುದೇನೆಂದರೆ:- ನನಗೆ ಒಂದು ಹೆಣ್ಣುಮಗಳೂ, ಒಂದು ಗಂಡು ಹುಡುಗನೂ ಇರುತ್ತಾರೆ ನನ್ನ ಅತ್ತೆಯೊಡನೆ ದೊಡ್ಡ ಮಾಂಚಮ್ಮ, ಈಕೆಯ ತಮ್ಮ ... ವನ ಹೆಂಡತಿ ಮುಳ್ಳೂರು ಸಿದ್ದಿ, ಇವರುಗಳು ಸೇರಿ ನನಗೆ ಹೊಡೆದು ಜಗಳವಾಡಿ ಓಡಿಸಿ ಬಿಟ್ಟರು ಈಗ ನಾನು ಆದಿಕರ್ನಾಟಕ ಪುರದಲ್ಲಿ ಮಕ್ಕಳನ್ನು ಇಟ್ಟುಕೊಂಡು ನನ್ನ ಅಣ್ಣನ ಮನೆಯಲ್ಲಿರುತ್ತೇನೆ ... ಕುಕ್ಕರಹಳ್ಳಿಯಲ್ಲಿ ನನ್ನ ಗಂಡನ ಸ್ವತ್ತು ೨೯೭ ನೇ ನಂಬರು ... ಅಂಕಣದ ಒಂದು ಹೆಂಚಿನ ಮನೆ ಇರುತ್ತೆ ಸದರಿಯವರುಗಳು ಈ ಮನೆಯನ್ನು ಬೇರೆಯವರಿಗೆ ಕ್ರಯಕ್ಕೆ ಮಾರಬೇಕೆಂದು ಪ್ರಯತ್ನ ಮಾಡುತ್ತಿರುತ್ತಾರೆ ಆದ್ದರಿಂದ ಯಾರಾದರೂ ದೊಡ್ಡ ಮಾಂಚಮ್ಮನಿಂದಾಗಲಿ, ಮುಳ್ಳೂರು ಸಿದ್ದಿಯಿಂದಾಗಲಿ ಕ್ರಯ ಭೋಗ್ಯ ಆಧಾರ ಏನಾದರೂ ಮಾಡಿಸಿಕೊಂಡರೆ ಅದು ಊರ್ಜಿತವಾಗತಕ್ಕದ್ದಲ್ಲ ಈ ಸ್ವತ್ತು ನನ್ನ ಮೈನರ್ ಮಕ್ಕಳಾದ ನಿಂಗಮ್ಮ ... ಶಿವಲಿಂಗಯ್ಯ ಇವರುಗಳಿಗೆ ಸೇರತಕ್ಕದ್ದು. ಯಾರಾದರೂ ಹಾಗೆ ಮಾಡಿಸಿಕೊಂಡರೆ ಇದರಿಂದ ಉಂಟಾಗತಕ್ಕ ನಷ್ಟ ವಗೈರೆಗೆ ತಾವೇ ಬಾಧ್ಯರಾಗಬೇಕಾಗುತ್ತೆ.

● ಈ ಎಡಗೈ ಹೆಬ್ಬೆಟ್ಟಿನ ಗುರ್ತಿನ ರುಜು ಪುಟ್ಟದೇವಮ್ಮ ಹಾಕಿದ್ದು.

ಸುಲಭ ಬೆಲೆ! Estd 1915 ತ್ವರೆ ಮಾಡಿರಿ!

SRI RAMA ELECTRIC STORES

Govt. Licenced Electrical Contractors & Engineers

ಎಲ್ಲಾ ವಿಧವಾದ ಎಲೆಕ್ಟ್ರಿಕ್ ಪವರ್ ಮತ್ತು ಲೈಟಿಂಗ್ ಇನ್ಸ್ಟಲೇಷನ್ ಕೆಲಸಗಳನ್ನೂ ಕಂಟ್ರೋಲ್ ದರದಲ್ಲಿಯೂ, ಸಕಾಲದಲ್ಲಿಯೂ ಮಾಡಿಕೊಡುತ್ತೇವೆ ನಮ್ಮಲ್ಲಿ ಎಲ್ಲಾ ವಿಧವಾದ ಎಲೆಕ್ಟ್ರಿಕ್ ಸಾಮಾನುಗಳೂ ಸುಲಭ ದರದಲ್ಲಿ ದೊರೆಯುತ್ತವೆ ಮಹಾಜನರು ಪ್ರೋತ್ಸಾಹಿಸಬೇಕಾಗಿ ಕೋರುತ್ತೇವೆ

ಶ್ರೀ ರಾಮಾ ಎಲೆಕ್ಟ್ರಿಕ್ ಸ್ಟೋರ್ಸ್,

(ಬಿಡಾರದ ಕೃಷ್ಣಪ್ಪನವರ ರಾಮ ಮಂದಿರದ ಎದುರು)

ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು

ನೆಹರೂ ಲಂಚ್ ಹೋಂ

ಆಧುನಿಕ ಉಪಾಹಾರ ಮಂದಿರ

ರಾಜಧಾನಿಯ ವಾಣೀವಿಲಾಸ ಮಾರ್ಕೆಟ್ ಸರ್ಕಲ್ಲಿನ ಜಯಭಾರತ ಕಟ್ಟಡದಲ್ಲಿ

For Health & Taste Visit

NEHRU LUNCH HOME

Vanivilas Market Square, Mysore

ಹೆಚ್. ಮುನ್ನಿಲಾಲ್.

ಸುಸಮಯ

ಚಲನ ಚಿತ್ರಗಳಲ್ಲಿ ಅಭಿನಯಿಸಲು ಇಚ್ಛೆಯುಳ್ಳ ತರುಣಿಯರನ್ನು ತರಪೇತು ಮಾಡಿ

ಉತ್ತಮ ನಟಿಯರಾಗಿ

ತಮಿಳು ಚಿತ್ರರಂಗದಲ್ಲಿ ಖ್ಯಾತಿವಂತರಾಗಲು ಅನುವಾಗುವಂತೆ ರಾಜಧಾನಿಯಲ್ಲಿ ಕೆಳಗೆ ಕಂಡ ಸ್ಥಳದಲ್ಲಿ ನಟಿಯರ ಶಿಕ್ಷಣ ಶಾಲೆಯೊಂದನ್ನು ಮೈಸೂರು ಸಂಸ್ಥಾನದ ಚಲನ ಚಿತ್ರ ಕೈಗಾರಿಕೆಯ ಬೆಳವಣಿಗೆಯ ಸಹಕಾರ ನೀಡಲು ತೆರೆದಿರುತ್ತದೆ.

ವಿದ್ಯಾರ್ಥಿ ವೇತನವನ್ನೂ ಸಹ ಕೊಡಲಾಗುವುದು.

ವಿವರಗಳಿಗೆ ಕೂಡಲೇ ಬರೆಯಿರಿ ಅಥವಾ ನೇರವಾಗಿ ಬಂದು ನೋಡಿ

ಪತ್ರ ವ್ಯವಹಾರದೊಡನೆ ಫೋಟೋ ಕಳುಹಿಸಿ

ಪಿ. ಜಿ. ಎನ್. ಮೊದಲಿಯಾರ್,

ಪ್ರಿನ್ಸಿಪಾಲ್,

೧೨೨೫ ಕೃಷ್ಣಮೂರ್ತಿಪುರಂ, ಮೈಸೂರು

ರೋ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶನಿವಾರ ೫—೧೦—೪೬ [ಸಂಚಿಕೆ ೫೪

ಸಾಂಗ್ಲೀ ಸಂಸ್ಥಾನದಲ್ಲಿ ಜವಾಬ್ದಾರೀ ಸರ್ಕಾರ

ಪ್ರೊ॥ ಅಸಿಸ್ಟೆಂಟ್ ಕಮೀಷನರುಗಳ ನೇಮಕ

ಪ್ರಾ॥ ಪ॥ ಸಭೆಯಲ್ಲಿ ಪ್ರಶ್ನೋತ್ತರ

ಮೈಸೂರು ೩

ವಿವಿಧ ಇಲಾಖೆಗಳಿಗೆ ನೇಮಿಸಿಕೊಂಡ ಪ್ರೊಬೇಷನರುಗಳ ಸಂಖ್ಯೆ ೪೭, ಅದರಲ್ಲಿ ೪೧ ಜನ ಬ್ರಾಹ್ಮಣೇತರರು; ನಾನಾ ಕೋಮುಗಳವರ ಹಕ್ಕು ಬಾಧ್ಯತೆಗಳಿಗೂ, ಮತ್ತು ಉಮೇದುವಾರರುಗಳ ಯೋಗ್ಯತಾ ...ಗಳಿಗೂ ಗಮನಕೊಟ್ಟು ಪ್ರೊಬೇಷನರುಗಳನ್ನು ಆರಿಸಿಕೊಳ್ಳಲಾಯಿತೆಂದೂ, ಹಿಂದುಳಿದವರ ಪೈಕಿ ಮೂವರನ್ನು ತೆಗೆದುಕೊಳ್ಳಲಾಗಿದೆಯೆಂದೂ ನಿನ್ನೆ ಪ್ರತಿನಿಧಿ ಸಭೆಯಲ್ಲಿ ಶ್ರೀ ವೇದವ್ಯಾಸಾಚಾರ್ಯರು ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿದರು.

ಪ್ರೊಬೇಷನರ್ ಹುದ್ದೆಯಲ್ಲಿ ಆಗಸರಲ್ಲಿ ಯಾರನ್ನಾದರೂ ಆರಿಸಿದ್ದೀರಾ ಎಂಬ ಶ್ರೀ ...ಕರ ಲಿಂಗೇಗೌಡರ ಪ್ರಶ್ನೆಗೆ ಇಲ್ಲವೆಂಬ ಉತ್ತರ ಬಂತು. ದೊಡ್ಡ ಅಧಿಕಾರಿಗಳ ಬಿಟ್ಟೆಗಳನ್ನು ಇನ್ನು ಮುಂದೆ ಅವರು ಒಗೆಯುವುದಿಲ್ಲವೆಂಬ ನಿರ್ಧಾರಕ್ಕೆ ಬಂದಿರುವ ಅಂಶವು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಗೆ ಮಾನ್ಯ ಸದಸ್ಯರ ಮೂಲಕ ಈ ಅಂಶ ಸರ್ಕಾರದವರ ಗಮನಕ್ಕೆ ಈಗ ತಾನೆ ಬಂದಿದೆ ಎಂದು ಅಧ್ಯಕ್ಷರು ತಿಳಿಸಿದರು.

ಮೈಸೂರು ನಗರಾಭಿವೃದ್ಧಿ ಸಭೆಯವರು ಮಾರಾಟ ಮಾಡುತ್ತಿರುವ ನಿವೇಶನಗಳಿಗೆ ಸಂಬಂಧಪಟ್ಟ ಪ್ರಶ್ನೆಗಳಿಗೆ ಶ್ರೀ ಜಿ ಬಿ ಮಲ್ಲಾರಾಧ್ಯರು ಉತ್ತರವಿತ್ತರು. ೧೯೪೬ ನೇ ಜನವರಿಯಿಂದ ಈಗಿನವರೆವಿಗೆ ೭೫೭ ನಿವೇಶನಗಳನ್ನು ಸಾರ್ವಜನಿಕರಿಗೆ ವಿವಿಧ ದರದಲ್ಲಿ ೨-೮-೦ ಯಿಂದ ೧-೪-೦ ರ ವರೆವಿಗೆ ಕೊಡಲಾಗಿದೆ ೫೭ ನಿವೇಶನಗಳನ್ನು ಸಂಸ್ಥೆಗಳಿಗೆ ಮುಫತ್ತಾಗಿ ಕೊಡಲಾಗಿದೆ ಎಂದೂ ತಿಳಿಸಲಾಯಿತು.

ಇನ್ನೊಂದು ಸಂಸ್ಥಾನದಲ್ಲಿ ಜವಾಬ್ದಾರೀ ಸರ್ಕಾರ

ಈ ದಿನ ನಡೆಯುವ ದಸರಾ ವಿಜಯದಶಮಿಯ ವಿಶೇಷ ದರ್ಬಾರಿನಲ್ಲಿ ಸಾಂಗ್ಲಿ ಸಂಸ್ಥಾನದ ರಾಜಾ ಸಾಹೇಬರವರು ತಮ್ಮ ಪ್ರಜೆಗಳಿಗೆ ಹೆಚ್ಚಿನ ರಾಜಕೀಯ ಸುಧಾರಣೆಗಳನ್ನು ಕೊಡುವುದಾಗಿ ಘೋಷಿಸುವರು. ಈ ಸುಧಾರಣೆಯಲ್ಲಿ ಸಂಪೂರ್ಣ ಜವಾಬ್ದಾರೀ ಸರ್ಕಾರವನ್ನು ಕೊಡುವಂತೆ ಆಜ್ಞೆ ಮಾಡುವರೆಂದು ವರದಿಯಾ...

ಜಟಿಕಾದವನ ದಸ್ತಗಿರಿ

ಚಾಮರಾಜನಗರ ೩

ಇಲ್ಲಿನ ರೈಲ್ವೆ ಸ್ಟೇಷನ್ ಸಿಲ್ದಾಣಕ್ಕೆ ಜಟಕಾ ಗಾಡಿಯವರನ್ನು ಸೇರಿಸದಿದ್ದುದಕ್ಕಾಗಿ ಸ್ಟೇಷನವರಿಗೂ, ಗಾಡಿಯವರಿಗೂ ಜಟಾಪಟಿಯಾಗಿ ಒಬ್ಬ ಜಟಕಾದವನನ್ನು ...ಮಾಡಿರುವುದಾಗಿ ತಿಳಿದುಬಂದಿದೆ.

ಅವಿಶ್ವಾಸದ ಪ್ರತಿಧ್ವನಿ

'ಅಧ್ಯಕ್ಷರೇ, ನಿಮ್ಮಲ್ಲಿ ಅವಿಶ್ವಾಸ, 'ಜಾಗ ಕೊಡಿ" ಎಂಬ ಪ್ರಕಟಣೆಗಳು ನಿನ್ನೆ ಊರಿನಲ್ಲೆಲ್ಲಾ ಕಂಡುಬರುತ್ತಿದ್ದವು. ಪುರಸಭಾ ಕಛೇರಿ ಮೇಲೆ ವರ್ತಕರ ಬ್ಯಾಂಕ್ ಮತ್ತು ಬ್ಯಾಂಕಿನ ...ಮನೆ ಮೇಲೆ ಮುಸಿಸಿ ...ಆಫೀಸ್ ಎಂದು ಬರೆದಿದ್ದ ದೊಡ್ಡ

ಮಹಿಳೆಯರಿಂದ ಗಾಂಧೀ ಜಯಂತಿ ಆಚರಣೆ

ಮೈಸೂರು ೩

ನಿನ್ನೆ ದಿನ ರಾಜಧಾನಿಯ ಮಹಿಳೆಯರಿಂದ ಗಾಂಧೀ ಜಯಂತಿಯು ಆಚರಿಸಲ್ಪಟ್ಟಿತು. ಬೆಳಗ್ಗೆ ಸುಬ್ಬರಾಯನ ಕೆರೆಯಲ್ಲಿ ಧ್ವಜ ವಂದನೆ ನಡೆಯಿತು. ಶ್ರೀಮತಿ ಸುನಂದಾ ದೇವಿಯವರು ರಾಷ್ಟ್ರ ಧ್ವಜವನ್ನೂ, ಶ್ರೀಮತಿ ರತ್ನಮ್ಮ ಮಾಧವ ರಾಯರು ಮೈಸೂರು ಧ್ವಜವನ್ನೂ ಹಾರಿಸಿದರು ಅನೇಕ ಜನ ಮಹಿಳೆಯರೂ, ಕಾಂಗ್ರೆಸ್ ಕೆಲಸಗಾರರೂ ಸೇರಿದ್ದರು. ಶ್ರೀಮತಿ ಸುನಂದಾ ದೇವಿಯವರು ಭಾಷಣ ಮಾಡಿ ದೇಶದ ಸ್ವಾತಂತ್ರ್ಯ ಸಾಧನೆಯಲ್ಲಿ ಮಹಿಳೆಯರು ಪುರುಷರಂತೆಯೇ ಸಕಲ ತ್ಯಾಗವನ್ನೂ ಮಾಡಲು ಸಿದ್ಧರಿರುವರೆಂದು ಹೇಳಿದರು. ಶ್ರೀಮತಿ ರತ್ನಮ್ಮನವರು ತಮ್ಮ ಭಾಷಣದಲ್ಲಿ ಮಹಾತ್ಮ ಗಾಂಧಿಯವರಿಗೆ ದೀರ್ಘಾಯುರಾರೋಗ್ಯಗಳನ್ನು ಕೋರಿದುದಲ್ಲದೆ ಅವರ ನಾಯಕತ್ವದಲ್ಲಿ ಬೇಗನೆ ದೇಶದ ಸಂಪೂರ್ಣ ಸ್ವಾತಂತ್ರ್ಯವು ಸ್ಥಾಪಿಸಲ್ಪಡಲೆಂದು ಹಾರೈಸಿದರು.

ನಿನ್ನೆ ಸಂಜೆ ಸಾಧ್ವಿ ಕಛೇರಿಯಲ್ಲಿ ಮಹಿಳೆಯರ ಸಭೆಯು ಶ್ರೀಮತಿ ಸುವರ್ಣಾದೇವಿಯವರ ಅಧ್ಯಕ್ಷತೆಯಲ್ಲಿ ನಡೆದು ಪ್ರಾರ್ಥನೆ ಮತ್ತು ರಾಷ್ಟ್ರ ಗೀತೆಗಳು ಜರುಗಿದವು. ವಂದೇ ಮಾತರಂ ಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ತಿಲಕ್ ಸಂಘದಲ್ಲಿ ಗಾಂಧಿ ಜಯಂತಿ

ನಾಳೆ ದಿನ ಬಂಟಿಕೊಪ್ಪಲು ತಿಲಕ್ ಸಂಘದ ಆಶ್ರಯದಲ್ಲಿ ಬೆಳಗ್ಗೆ ಧ್ವಜಾರೋಹಣ ಮತ್ತು ಮೆರವಣಿಗೆಯೂ ಸಂಜೆ ಶ್ರೀಗಳಾದ ಕೆ. ಚೆಂಗಲ್‌ರಾಯ ರೆಡ್ಡಿ, ಕೆ. ಹನುಮಂತಯ್ಯ, ಕೆ ಶಾಮರಾಜಯ್ಯಂಗಾರ್ ಮತ್ತು ಶ್ರೀ ಹೆಚ್. ಸಿ ದಾಸಪ್ಪನವರ ಭಾಷಣವನ್ನೂ ಸಹ ಏರ್ಪಡಿಸಲಾಗಿದೆ.

ಆಕಾಶವಾಣಿ ವಿಶೇಷ ಕಾರ್ಯಕ್ರಮ

ನಾಳೆ ರಾತ್ರಿ ೮-೩೦ ಘಂಟೆಯಿಂದ ೯-೧೫ ಘಂಟೆ ವರೆಗೆ ಆಕಾಶ ವಾಣಿಯಲ್ಲಿ "ಸಂಪ" ದವರಿಂದ ಬರೆಯಲ್ಪಟ್ಟ ವಿಗಡ ವಿಕ್ರಮರಾಯ ಎಂಬ ನಾಟಕವು ನಡೆಯುವುದು. ಶ್ರೀ ವಿ ಕೆ ಶ್ರೀನಿವಾಸನ್ ರವರು ಮುಖ್ಯ ಭೂಮಿಕೆಯನ್ನು ವಹಿಸುವರು. ಈ ದಿನ ರಾತ್ರಿ ೮-೩೦ ರಿಂದ ೯ ಘಂಟೆ ವರೆಗೆ ಶ್ರೀಮತಿ ಡಿ ಕೆ ಪಟ್ಟ...

ಲಂಚ ನಿರೋಧದ ಬಗ್ಗೆ ನಿಲುವಳಿ ಸೂಚನೆ

ಚರ್ಚೆ ಮಾತಿನಲ್ಲೇ ಮುಕ್ತಾಯ

ಮೈಸೂರು ೪

ಲಂಚ ನಿರೋಧದ ವಿಶೇಷಾಧಿಕಾರಿಗಳನ್ನು ಬೇರೆ ಕಡೆಗೆ ವರ್ಗಾಯಿಸಿದ್ದರೂ ಆ ಸ್ಥಾನಕ್ಕೆ ಬೇರೊಬ್ಬರನ್ನು ನೇಮಿಸದೆ ಇರುವುದರಿಂದ ಲಂಚ ರುಸುವತ್ತುಗಳು ಹೆಚ್ಚಲು ಅವಕಾಶವಾಗಿರುವುದರಿಂದ ಈ ಅಂಶದಲ್ಲಿ ಸರ್ಕಾರದ ಕ್ರಿಯಾ ಯೋಜನೆಯನ್ನು ಚರ್ಚಿಸುವ ಸಲುವಾಗಿ ಶ್ರೀ ನಾಗಭೂಷಣ ಭಟ್ಟರು ನಿನ್ನೆ ಪ್ರತಿನಿಧಿ ಸಭೆಯಲ್ಲಿ ಒಂದು ನಿಲುವಳಿ ನಿರ್ಣಯವನ್ನು ಮಂಡಿಸಿದ್ದರು. ಲಂಚ ನಿರೋಧದ ಅಧಿಕಾರಿಗಳನ್ನು ಬೇರೆ ಹುದ್ದೆಗೆ ವರ್ಗಾಯಿಸುವುದರಿಂದ ಸಂಸ್ಥಾನದ ಪ್ರಜೆಗಳಲ್ಲಿ ಶಂಕೆಗಳು ಉತ್ಪನ್ನವಾಗಿರುವುದಲ್ಲದೆ ಲಂಚ ರುಸುವತ್ತುಗಳು ಪುನಃ ತಲೆದೋರಿ ತುಂಬಾ ತೊಂದರೆಯಾಗಿರುತ್ತದೆ ಎಂದು ಅವರು ತಿಳಿಸಿದರು. ಅಧಿಕಾರಿಗಳೇ ವಿಚಾರಣೆ ನಡೆಸುವುದರಿಂದ ಏನೂ ಪ್ರಯೋಜನವಾಗಲಾರದು. ಖಾಸಗಿ ಮನುಷ್ಯರು ಆ ಹುದ್ದೆಯಲ್ಲಿದ್ದರೆ ಹೆಚ್ಚು ಉಪಯೋಗವಾಗುತ್ತದೆ ಎಂದು ನಿಮ್ಮ ಮಗ... ಶ್ರೀ ಚನ್ನಯ್ಯನವರ ಹೇಳಿದರು. ... ಬಾರಿಗಾ ಕಾಲದಲ್ಲಿ ಏಕಪಕ್ಷದ ಹೇಳಿ... ಯನ್ನು ನಂಬಿ ಇನ್ನೇನೂ ಮಾಡುವುದು ಸರಿಯಲ್ಲವೆಂದು ಶ್ರೀ ಜಾಕೀರ್ ಸಾಹೇಬರು ಸೂಚಿಸಿದರು. ನೌಕರರ ಅಲ್ಪ ಸಂಬಳ, ಈಗಿನ ದುಬಾರಿ ಬೆಲೆಗಳು, ಇವು ಸ್ವಾತಂತ್ರ್ಯದ ... ಕರಗಳಲ್ಲಿ ದುರಾಸೆಯನ್ನು ಹುಟ್ಟಿಸಿ ಅಧರ್ಮ ಮಾರ್ಗಕ್ಕೆ ಅವರನ್ನು ಎಳೆಯುತ್ತದೆ ಇದು ತಪ್ಪಬೇಕು ಎಂದು ಶ್ರೀ ... ಪ್ಪ ಶೆಟ್ಟರು ವಾದಿಸಿದರು. ಶ್ರೀ ಪುಟ್ಟಪ್ಪನವರು ಮಾತನಾಡಿ, ಲಂಚ ರುಸುವತ್ತುಗಳನ್ನು ನಿರ್ಮೂಲ ಮಾಡಲು ಪ್ರಜೆಗಳು ಅಧಿಕಾರಿಗಳು ಮತ್ತು ಸಭಾ ಸದಸ್ಯರನ್ನು ಒಳಗೊಂಡ ಸಮಿತಿಯನ್ನು ನೇಮಿಸಿ ವಿಚಾರಣಾ ಕಾರ್ಯಕ್ರಮ ನಡೆಸುವುದು ಉತ್ತಮವೆಂದೂ ತಪ್ಪಿತಸ್ಥರಿಗೆ ಉಗ್ರ ಶಿಕ್ಷೆ ವಿಧಿಸುವುದಕ್ಕೆ ಶಾಸನ ಕಾನೂನುಗಳಿರಬೇಕೆಂದೂ, ತಿಳಿಸಿದರು.

ಶ್ರೀಗಳಾದ ಭೂಪಾಲರವರ, ಎಸ್. ಕೆ. ಮಲ್ಲಿಕಾರ್ಜುನ, ದರಸಿಂಹೇಗೌಡ, ಹಿರಿಯ ಗೌಡರು ನಿರ್ಣಯವನ್ನು ... ಬೆಂಬಲಿಸಿದರು.

ಶ್ರೀ ಎಂ ಪಿ ರಾಮಲಿಂಗಯ್ಯನವರು ಮಾತನಾಡಿ ಲಂಚ ... ಸಾವಕ ...

ರಾಜೇಂದ್ರ ಪ್ರಸಾದರಿಂದ ಪ್ರದರ್ಶನದ ಪ್ರಾರಂಭ

ಸ್ವಂ. ಸು. ಪ್ರೆ॥] ಬೆಂಗಳೂರು,

ಕೇಂದ್ರ ಸರ್ಕಾರದ ಆಹಾರ ಸಚಿವರಾದ ಬಾಬು ರಾಜೇಂದ್ರ ಪ್ರಸಾದರು ೧೮ ನೇ ತಾ॥ ಮಧ್ಯಾಹ್ನ ೧ ಘಂಟೆಗೆ ತಿರುವಾಂಕೂರಿನಿಂದ ವಿಮಾನದಲ್ಲಿ ಇಲ್ಲಿಗೆ ಆಗಮಿಸುವರು. ಅದೇ ದಿನ ಮಧ್ಯಾಹ್ನ ೩-೩೦ ಕ್ಕೆ ಕಾಫಿ ವಿಜ್ಞಾನ ಮಂದಿರಕ್ಕೆ ಭೇಟಿ ಕೊಡುವರು. ೧೯ ನೇ ತಾ॥ ಅವರು ದಿವಾನರು ಮತ್ತು ಸಂಸ್ಥಾನದ ಆಹಾರ ಸಚಿವರುಗಳೊಡನೆ, ಕೋಲಾರ ಮತ್ತು ತುಮಕೂರಿನ ಅಭಾವ ಪ್ರದೇಶಗಳಿಗೆ ಭೇಟಿ ಕೊಡುವರು. ೧೬ ನೇ ತಾ॥ ಬೆಳಗ್ಗೆ ಮೈಸೂರು ಕಾಂಗ್ರೆಸ್ ಖಾದಿ ಮತ್ತು ಗ್ರಾಮ ಕೈಗಾರಿಕಾ ವಸ್ತು ಪ್ರದರ್ಶನದ ಆರಂಭೋತ್ಸವವನ್ನು ನೆರವೇರಿಸುವರು. ಅದೇ ಸಂಜೆ ಪುರಸಭೆಯು ಬಿನ್ನವತ್ತಳೆಯ ಕಾರ್ಯಕ್ರಮವೂ ಸಹ ಇದೆ. ೧೭ ನೇ ತಾ॥ ಬೆಳಗ್ಗೆ ವಿಮಾನದಲ್ಲಿ ದೆಹಲಿಗೆ ಹಿಂತಿರುಗುವರು.

§ ಮೈಸೂರು ಸಂಸ್ಥಾನದ ಸೈನ್ಯಗಳ ಕಮ್ಯಾಂಡರ್ ಆದ ಬ್ರಿ॥ ಫ್ರೆಸ್ಟರವರಿಗೆ ಅಕ್ಟೋಬರ್ ೭ ರಿಂದ ೧ ತಿಂಗಳು ರಜಾ ಕೊಡಲಾಗಿದೆ. ಲೆ॥ ಕ॥ ಪಿ ಬಿ ಚೆಂಗಪ್ಪನವರು ಆ ಕೆಲಸವನ್ನು ತಮ್ಮ ಕೆಲಸದೊಂದಿಗೆ ನೋಡಿಕೊಳ್ಳುವರು.

ಮಹಾ ಯಾಗ ಸಂಭಾವನಾ

ಮೈಸೂರು ೩

ಕಳೆದ ವರ್ಷ ಆಗಸ್ಟ್ ತಿಂಗಳಲ್ಲಿ ಬೆಂಗಳೂರಿನಲ್ಲಿ ನಡೆದ ಅತಿರುದ್ರ ಮಹಾಯಾಗಕ್ಕೆ ಬಂದಿದ್ದ ಋತ್ವಿಕ್ಕುಗಳಲ್ಲಿ ಮೈಸೂರ ವಿದ್ವಾಂಸರುಗಳಿಗೆ ಮೈಸೂರು ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ನಾಳೆ ಸಂಭಾವನೆ ಮತ್ತು ಮಧ್ಯಾಹ್ನಸ್ಪರದ ... ವಿನಿಯೋಗಮಾಡಲಾಗುವುದು.

ವಕೀಲರ ನಿಧನ

ರಾಜಧಾನಿಯ ಪ್ರಸಿದ್ಧ ವಕೀಲರಾಗಿದ್ದ ಶ್ರೀ ಎಸ್. ಶೇಷಾಚಾರ್ಯರು ಸಲವು ದಿನಗಳಿಂದ ರಕ್ತಹೀನತೆಯ ವ್ಯಾಧಿಗ್ರಸ್ತರಾಗಿದ್ದು ನಿನ್ನೆ ಮಧ್ಯಾಹ್ನ ಸ್ವರ್ಗಸ್ಥರಾದರೆಂದು ತಿಳಿಸಲು ವ್ಯಸನಪಡುತ್ತೇವೆ.

... ಪಿ ನನ್ನ ಎಂಬಾ ಮತ್ತು ಇಲಾಖೆಗಳಲ್ಲಿ ಶಾಂತವಾಗುತ್ತಿವೆ. ಮಾಮೂಲು ಹಣ ನೌಕರರ ಕೈ ಸೇರದ ಹೊರತು ನೌಕರರು ಲೇಖನಿಯನ್ನು ಹಿಡಿಯುವುದಿಲ್ಲವೆಂದು ಹೇಳಿದರು.

ಮಂತ್ರಿಗಳಾದ ಶ್ರೀ ಅವ್ವಾಜಿ ಗೌಡರು ಉತ್ತರ ಕೊಡುತ್ತಾ ಸಮಿತಿಯವರು ಕೊಡುವ ವರದಿಯನ್ನು ಕಾಯದೆ ಲಂಚ ರುಸುವತ್ತುಗಳನ್ನು ನಿರ್ಮೂಲ ಮಾಡಲು ತಕ್ಕ ಕ್ರಮದ ಯೋಜನೆಯೊಂದನ್ನು ಸರ್ಕಾರದ ಒಪ್ಪಿಗೆಗೆ ಕಳುಹಿಸಿದ್ದಾರೆಂದು, ಶೀಘ್ರದಲ್ಲೇ ಈ ಸಂಬಂಧವಾಗಿ ಒಂದು ಆಜ್ಞೆ ಹೊರ ಬೀಳುವುದೆಂದು ಹೇಳಿದ ... ಸೂಚನೆಯ ಪ್ರಯುಕ್ತ ಚರ್ಚೆಯು ಬರೀ ಮಾತಿನಲ್ಲೇ ಮುಕ್ತಾಯವಾಯಿತು.

OPERA TALKIES

ತಾ॥ 5-10-46 ರಿಂದ

ಎರಡನೆಯ ವಾರ

ಮಾಯಾ ಮಚ್ಛೀಂದ್ರ

(ತೆಲುಗು)

ಕನ್ನಾಂಬ, ಮಾಲತಿ,

... ನಾರದ ಪಾಸಿ ...

ಸಾಧ್ವಿ
ತಾ॥ ೫-೧೦-೪೬ ಶನಿವಾರ

ಪತ್ರಿಕೆಗಳ ತೊಂದರೆ

ಬ್ರಿಟಿಷ್ ಹಿಂದೂಸ್ಥಾನದಲ್ಲಿ ಪತ್ರಿಕೆಗಳಿಗೆ ಮತ್ತೆ ಶೇಕಡ ಹನ್ನೆರಡೂವರೆಯಷ್ಟು ಮುದ್ರಣದ ಕಾಗದವನ್ನು ಕೊಡುವಂತೆ ಸರ್ಕಾರದವರು ಆಜ್ಞೆ ಮಾಡಿದ್ದಾರೆ. ಇದಕ್ಕೆ ಮೊದಲೂ ಇದೇ ಪ್ರಮಾಣದಷ್ಟು ಹೆಚ್ಚು ಮಾಡಲ್ಪಟ್ಟಿತ್ತು. ಅಂದ ಮೇಲೆ ಒಟ್ಟು ಶೇಕಡ ೨೫ ಭಾಗದಷ್ಟು ಹೆಚ್ಚಿದಂತಾಯಿತು. ಇದರಿಂದ ಮೊದಲು ಬೇಕಾಗಿದ್ದುದನ್ನು ಪೂರ್ತಿಯಾಗಿ ಭರ್ತಿ ಮಾಡಿದಂತಾಗಿದೆ.

ನಮ್ಮ ಸಂಸ್ಥಾನದಲ್ಲಿ ಈ ಬಗ್ಗೆ ಸರ್ಕಾರದವರು ಯಾವ ಗಮನವನ್ನೂ ಕೊಟ್ಟಿರುವಂತೆ ಕಾಣುವುದಿಲ್ಲ. ಪತ್ರಿಕೆಗಳಿಗೆ ಕೊಡುತ್ತಿರುವ ಕಾಗದದ ಪ್ರಮಾಣವನ್ನು ಸ್ವಲ್ಪ ಮಟ್ಟಿಗಾದರೂ ಹೆಚ್ಚಿಸಬೇಕೆಂದು ಕೇಳುತ್ತಿರುವ ಬೇಡಿಕೆಗಳಿಗೆ ಸದುತ್ತರವು ಬಂದಿರುವುದಿಲ್ಲ. ಇದರಿಂದ ಸಂಸ್ಥಾನದ ಪತ್ರಿಕೆಗಳಿಗೆ ವಿಶೇಷ ತೊಂದರೆಯುಂಟಾಗಿದೆ. ಶಾಸನ ಸಭೆಗಳ ಅಧಿವೇಶನದ ಕಾಲಗಳಲ್ಲಿ ಪತ್ರಿಕೆಗಳಿಗೆ ಹೆಚ್ಚು ಕಾಗದವನ್ನು ಕೊಡುವ ಪದ್ಧತಿಯು ಹಿಂದೆ ರೂಢಿಯಲ್ಲಿತ್ತು. ಈಗ ಅದೂ ಇರುವಂತೆ ಕಾಣುವುದಿಲ್ಲ. ಮುದ್ರಣ ಕಾಗದದ ಆಮದು ಹೆಚ್ಚಾಗಿ ಆಗುತ್ತಿರುವ ಈ ಸಮಯದಲ್ಲಿ ನೆರೆಯ ಪ್ರಾಂತದವರಿಗೆ ದೊರೆಯುವ ಸೌಲಭ್ಯಗಳು ನಮ್ಮ ಸಂಸ್ಥಾನದವರಿಗೆ ಇಲ್ಲದಿರುವುದು ಆಶ್ಚರ್ಯಕರವಾಗಿದೆ.

ನಮ್ಮಲ್ಲಿ ಕಾಗದ ತಯಾರು ಮಾಡುವ ಒಂದು ಭಾರಿ ಕಾರ್ಖಾನೆಯೇ ಇದೆ. ಅಲ್ಲಿ ಈಚೆಗೆ ಮುದ್ರಣ ಕಾಗದವನ್ನು ಹೇರಳವಾಗಿ ತಯಾರಿಸುತ್ತಿರುವರೆಂದೂ ಹೇಳಲಾಗಿದೆ. ಹೀಗಿದ್ದರೂ ನಮ್ಮ ಪತ್ರಿಕೆಗಳಿಗೆ ಉಚಿತವಾದ ಸೌಲಭ್ಯಗಳನ್ನು ಕಲ್ಪಿಸದಿರುವುದು ವಿಷಾದಕರ.

ಪ್ರಪಂಚದ ವಿದ್ಯಮಾನಗಳನ್ನೂ, ಸರ್ಕಾರದವರ ಯೋಜನೆಗಳನ್ನೂ, ಸಾರ್ವಜನಿಕರ ಚಟುವಟಿಕೆಗಳನ್ನೂ ವಿಶೇಷವಾಗಿ ಮಹಾ ಜನರಲ್ಲಿ ಪ್ರಸಾರ ಮಾಡಬೇಕಾಗಿರುವ ಈ ಕಾಲದಲ್ಲಿ ಪತ್ರಿಕೆಗಳ ಪ್ರಕಟಣೆಗೆ ಸರ್ಕಾರದವರು ಹೆಚ್ಚಿನ ಸಹಾಯಗಳನ್ನು ಒದಗಿಸಿ ಕೊಡುವುದು ಅಗತ್ಯವಾಗಿದೆ. ಈ ವಿಚಾರದಲ್ಲಿ ನೂತನ ದಿವಾನರೂ, ಸಂಬಂಧ ಪಟ್ಟ ಅಧಿಕಾರಿಗಳೂ ತಮ್ಮ ಪೂರ್ಣ ಗಮನವನ್ನು ಕೊಟ್ಟು ಸೂಕ್ತವಾದ ಪರಿಹಾರವನ್ನು ಕಲ್ಪಿಸುವುದು ಅಗತ್ಯವಾಗಿದೆ.

ಸದಸ್ಯರ ಸಮ್ಮತಿಯಿಲ್ಲದೆ ಸಭೆ ಮುಂದೆ ಹಾಕಬಹುದೇ?

ಪ್ರ॥ ಪ್ರ॥ ಸಭೆಯಲ್ಲಿ ಸಭಾ ತ್ಯಾಗ

ಮೈಸೂರು ೫

ಪ್ರತಿನಿಧಿ ಸಭೆಯಲ್ಲಿ ನಿನ್ನೆ ಪ್ರಶ್ನೋತ್ತರಗಳಾದ ನಂತರ, ಮುಸ್ಲಿಂ ಸದಸ್ಯರು ಪ್ರಾರ್ಥನೆಗೆ ತೆರಳಲು ಅನುಕೂಲವಾಗುವಂತೆ ದಿವಾನರು ಸಭೆಯನ್ನು ೧ ಘಂಟೆಯಿಂದ ೩ ಘಂಟೆಗೆ ಮುಂದುವರಿಸಿರುವುದಾಗಿ ತಿಳಿಸಿ ಸಭೆಯನ್ನು ಬರಖಾಸ್ತು ಮಾಡಿದರು.

ಪುನಃ ಸಭೆಯು ಎರಡು ಗಂಟೆಗೆ ಸೇರಿದಾಗ ಶ್ರೀ ಭೂಪಾಳಂ ಚಂದ್ರಶೇಖರಯ್ಯನವರು ಹಕ್ಕು ಬಾಧ್ಯತಾ ನಿರ್ಣಯವೊಂದನ್ನು ಮಂಡಿಸಿ ಅಧ್ಯಕ್ಷರು, ಸಭಾ ಸದಸ್ಯರ ಅಭಿಮತ ತೆಗೆದುಕೊಳ್ಳದೆ ಸಭೆಯನ್ನು ೧ ಗಂಟೆ ಕಾಲ ಮುಂದುವರಿಸಿರುವುದರಿಂದ ಸದಸ್ಯರ ಹಕ್ಕಿಗೆ ಲೋಪ ಬಂದಿದೆಯೆಂದೂ, ಈ ವಿಚಾರವನ್ನು ಹಕ್ಕು ಬಾಧ್ಯತಾ ಸಮಿತಿಯ ತೀರ್ಮಾನಕ್ಕೆ ಬಿಡಬೇಕೆಂದೂ ತಿಳಿಸಿದರು.

ಈ ಸೂಚನೆಯನ್ನು ಕಾಂಗ್ರೆಸ್ ಪಕ್ಷದ ಶ್ರೀ ಹನುಮಂತಯ್ಯನವರೂ, ನ್ಯಾಷನಲಿಸ್ಟ್ ಪಕ್ಷದ ಶ್ರೀ ಎಸ್ ಸಿ ಮಲ್ಲಯ್ಯನವರೂ, ಪ್ರಜಾ ಪಕ್ಷದ ಶ್ರೀ ಧರ್ಮಪ್ಪನವರೂ, ಸಮರ್ಥಿಸಿ, ಅದನ್ನು ಹಕ್ಕು ಬಾಧ್ಯತಾ ಸಮಿತಿಗೆ ಒಪ್ಪಿಸಬೇಕೆಂದರು. ದಿವಾನರು ಉತ್ತರವಿತ್ತು ಇತರ ಶಾಸನ ಸಭೆಗಳಲ್ಲಿ ಸಹ ಇದೇ ರೀತಿ ಶುಕ್ರವಾರದ ದಿನ ಅವಕಾಶ ಕೊಡಲಾಗುವುದೆಂದೂ, ತಾವೇ ಅವನ್ನೆಲ್ಲಾ ಪರಿಶೀಲಿಸಿ ತಮಗಿರುವ ಅಧಿಕಾರದ ಪ್ರಕಾರ ಈ ಬಗೆ ನಿರ್ಧಾರಕ್ಕೆ ಬಂದುದರಿಂದ ಈ ವಿಷಯವನ್ನು ಹಕ್ಕು ಬಾಧ್ಯತಾ ಸಮಿತಿಗೆ ಒಪ್ಪಿಸುವುದು ಅನಾವಶ್ಯಕವೆಂದೂ ಹೇಳಿದರು. ಇನ್ನು ಮುಂದೆ ಈ ವಿಚಾರದಲ್ಲಿ ಯಾವ ವ್ಯವಸ್ಥೆ ಕೈಗೊಳ್ಳಬೇಕೆಂಬ ಬಗ್ಗೆ ಪಕ್ಷದ ನಾಯಕರುಗಳೂ, ಪ್ರಮುಖ ಸದಸ್ಯರೂ ತಮಗೆ ಸಲಹೆ ಕೊಡಬೇಕೆಂದರು.

ಕಾಂಗ್ರೆಸ್ ಪಕ್ಷದ ನಾಯಕರು ಮಾತನಾಡಿ, ಮುಸ್ಲಿಮರಿಗೆ ಈ ಬಗೆಯ ಸೌಲಭ್ಯವು ಸಂಸ್ಥಾನದ ಹಿಂದೂಗಳಿಂದ ದೊರೆಯದೆ ಸರ್ ಮೊದಲಿಯಾರರಿಂದ ದೊರೆಯಿತೆಂಬ ಭಾವನೆ ಬರಲು ಅವಕಾಶವಾಗಿ ಈ ಸಂಸ್ಥಾನದಲ್ಲಿ ಹಿಂದೂ ಮುಸ್ಲಿಮರ ವ್ಯತ್ಯಾಸ ಹೆಚ್ಚಲು ಈ ತೀರ್ಮಾನದಿಂದ ಅವಕಾಶವಾಗಿದೆಯೆಂದೂ, ಆದ್ದರಿಂದ ಇದನ್ನು ಪ್ರತಿಭಟಿಸಬೇಕಾಗಿದೆಯೆಂದೂ, ತಿಳಿಸಿದರು. ಅಲ್ಲದೆ ಇಂತಹ ಸಂದರ್ಭಗಳಲ್ಲಿ ಸಭಾ ಸದಸ್ಯರ ಅಭಿಮತವನ್ನು ಇದುವರೆವಿಗೆ ತೆಗೆದುಕೊಳ್ಳಲಾಗುತ್ತಿದ್ದ ಸಂಪ್ರದಾಯ ಈಗ ತಪ್ಪಿಸಲ್ಪಟ್ಟು ಸಭಾ ಸದಸ್ಯರ ಹಕ್ಕಿಗೆ ಲೋಪ ಬಂದಿದೆಯೆಂದೂ ಆದ್ದರಿಂದ ಇವನ್ನೆಲ್ಲಾ ಪ್ರತಿಭಟಿಸಲು ತಮ್ಮ ಪಕ್ಷದವರು ಸಭಾ ಪರಿತ್ಯಾಗ ಮಾಡುವುದಾಗಿಯೂ ತಿಳಿಸಿ ಅವರೂ ಸಭೆ ಬಿಟ್ಟು ಹೋದರು.

ಹಿಂದೂ ಮಹಾಸಭೆಯ ಶ್ರೀ ಲಿಂಗೇಗೌಡರೂ ಸಹ ಇ[illegible] ಅಭಿಪ್ರಾಯವನ್ನು ಸೂಚಿಸಿ ತಮ್ಮ ಪಕ್ಷದವರೂ ಸಭಾ ಪರಿತ್ಯಾಗ ಮಾಡುವುದಾಗಿ ಹೇಳಿ ಸಭೆಯಿಂದ ಹೊರಕ್ಕೆ ಹೋದರು. ಹಲವು ಸ್ವತಂ[illegible] ಸದಸ್ಯರೂ ಈ ಸಂದರ್ಭದಲ್ಲಿ ಸಭೆ ಬಿ[illegible] ಹೋದರು.

ಮಂಡ್ಯದ ಸುತ್ತ ಮುತ್ತಲಿನ ಪ[illegible] ಪ್ರದೇಶಗಳಲ್ಲಿ ಬೆಲ್ಲದ ತಯಾರಿಕೆ[illegible] ಬಂಧಕವಿರುವ ಬಗ್ಗೆ ಬಂದಿದ್ದ ನಿಲು[illegible] ಸೂಚನೆಗೆ ಅಧ್ಯಕ್ಷರು ಅವಕಾಶ ಕೊಟ್ಟ[illegible]

ಫಲಹಾರಾನಂತರ ಸಭೆ ಸೇರಿ[illegible] ಭಾರತ ರಾಜ್ಯಾಂಗ ರಚನಾ ಸಭೆಗೆ ಮೈ[illegible]ನಿಂದ ಚುನಾಯಿತ ಪ್ರತಿನಿಧಿಗಳ[illegible] ಕಳುಹಿಸಬೇಕೆಂಬ ಶ್ರೀ ಮುಲ್ಕ ಗೋ[illegible] ರೆಡ್ಡಿಯವರ ಅರಿಕೆಯು ಚರ್ಚೆಗೆ [illegible] ತು. ನಾಲ್ಕು ಗಂಟೆ ವೇಳೆಯಲ್ಲಿ [illegible] ಸದಸ್ಯರಿದ್ದು ಅಂದು ಆಯುಧ ಪೂಜೆ[illegible]ದ್ದರಿಂದ ಸಭೆಯನ್ನು ಮುಂದುವರಿ[illegible]ಕೆಂದು ಪ್ರಾರ್ಥಿಸಿದರು. ಅದರಂತೆ ಅಧ್ಯ[illegible] ಸಭೆಯನ್ನು ಮುಂದುವರಿಸಿದರು.

ಶುಚಿ! ಶ್ರೀ ರುಚಿ!
ಶ್ರೀ ಶ್ರೀಕಂಠೇಶ್ವರ ಹಾಲಿನ ಡಿಪ್ಪೊ
ಬ್ರಾಹ್ಮಣರ ಹಾಲಿನ ಅಂಗಡಿ
ಅರಮನೆ ಬೀದಿ, ನಂಜನಗೂಡು.
ಇಲ್ಲಿ ಸದಾ ಕಾಲದಲ್ಲಿಯೂ ಹಾಲು, ಮೊಸರು, ಬೆಣ್ಣೆ ದೊರೆಯುತ್ತದೆ ಒಂದು ಸಾರಿ ಪರೀಕ್ಷಿಸಿರಿ ತಪ್ಪದೆ ಬಂದು ನೋಡಿರಿ.
ಪ್ರೊಪ್ರೈಟರ್,
ಕೆ.ಎನ್ ಎಸ್ ಮೂರ್ತಿ:

ನ್ಯೂ ಕೃಷ್ಣಾ ಟಾಕೀಸ್
ಮೈಸೂರು
ಇದೇ 28-9-46 ರಿಂದ
ದಿನವೂ ಮೂರು ಆಟಗಳು
ಸಿರ್ಕ್ಯೂಟರವರ
ಜಂಗಲ್ ಗರ್ಲ್
ಅಥವಾ
ಹೂರ್-ಎ-ಜಂಗಲ್
(ಹಿಂದಿ)
ಸಬ್ನಂ, ಆಶೀಕ್ ಹುಸೇನ್,
ಶ್ಯಾಮ ಸುಂದರ್
ಮೊದಲಾದವರ ಅಭಿನಯ
ಅದ್ಭುತ ಧೀರತೆ ಮತ್ತು ಹಾಡು ನೃತ್ಯಗಳೊಂದಿಗೆ ಹೊಡೆದಾಟವನ್ನು
ಪ್ರದರ್ಶಿಸಲಾಗುತ್ತದೆ.
For Bookings Please Contact [illegible]
Mysore State Coorg & S. K[illegible]
Basvant Pictures,
Cottonpet, Bangalore C[illegible]

Edited, printed and published [illegible]
A. R. Nagaraiao at the Sadhvi P[illegible]
D. Subbiah Road, Mysore

ನೆಹರೂ ಲಂಚ್ ಹೋಂ
ಆಧುನಿಕ ಉಪಾಹಾರ ಮಂದಿರ
ರಾಜಧಾನಿಯ ವಾಣೀವಿಲಾಸ ಮಾರ್ಕೆಟ್ ಸರ್ಕಲ್ಲಿನ
ಜಯಭಾರತ ಕಟ್ಟಡದಲ್ಲಿ
For Health & Taste Visit
NEHRU LUNCH HOME
Vanivilas Market Square, Mysore.
ಹೆಚ್. ಮುನ್ನಿಲಾಲ್.

ಸುಲಭ ಬೆಲೆ! Est' 1915 ತ್ವರೆ ಮಾಡಿರಿ!
SRI RAMA ELECTRIC STORES
Govt Licenced Electrical Contractors & Engineers.
ಎಲ್ಲಾ ವಿಧವಾದ ಎಲೆಕ್ಟ್ರಿಕ್ ಪವರ್ ಮತ್ತು ಲೈಟಿಂಗ್ ಇನ್‌ಸ್ಟಲೇಷನ್ ಕೆಲಸಗಳನ್ನೂ
ಕಂಟ್ರಾಕ್ಟ್ ದರದಲ್ಲಿಯೂ, ಸಕಾಲದಲ್ಲಿಯೂ ಮಾಡಿಕೊಡುತ್ತೇವೆ.
ನಮ್ಮಲ್ಲಿ ಎಲ್ಲಾ ವಿಧವಾದ ಎಲೆಕ್ಟ್ರಿಕ್ ಸಾಮಾನುಗಳೂ ಸುಲಭ ದರದಲ್ಲಿ ದೊರೆಯುತ್ತವೆ.
ಮಹಾಜನರು ಪ್ರೋತ್ಸಾಹಿಸಬೇಕಾಗಿ ಕೋರುತ್ತೇವೆ
ಶ್ರೀ ರಾಮಾ ಎಲೆಕ್ಟ್ರಿಕ್ ಸ್ಟೋರ್ಸ್,
(ವಿಚಾರದ [illegible])
ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು.

ತಮ್ಮ ಅವಗಾಹನೆಗಾಗಿ
ಸಂತೋಷದ ಸಮಾಚಾರ! : ನೀವು ಪಡಬೇಕಾದ ವಿಷ[illegible]
ಈ ವರ್ಷದ ಮಾರ್ಕೆಟ್ ಪ್ರದರ್ಶನದಲ್ಲಿ ನಮಗೆ ಎರಡು ಉತ್ತಮ ಬಹುಮಾನಗಳು
ಏಕೆಂದು ತಮಗೆ ತಿಳಿಯದೇ ಇಲ್ಲ
ಆದರೂ ಹೇಳಬೇಕಾದ್ದು ನಮ್ಮ ಕರ್ತವ್ಯ
ನಮ್ಮಲ್ಲಿರುವಷ್ಟು ಅತ್ಯುತ್ತಮವಾದ ಚಿತ್ರ, ವಿಚಿತ್ರ, ಬಂಟ, ಸೊಗಸುಗಳ, ಬಳೆಗಳ
ಸಂಗ್ರಹ, ಮೈಸೂರಿನಲ್ಲಿ ಮತ್ತಾರಲ್ಲಿಯೂ ಇಲ್ಲ
ಅದಕ್ಕೆ ಮೊದಲನೇ ಬಹುಮಾನ
ಆಧುನಿಕ ರೀತಿಯ ಅಲಂಕಾರದಿಂದಲೂ, ಕಣ್ಣಿಗೆ ಹಬ್ಬವನ್ನು ಉಂಟುಮಾಡುವ ವಸ್ತು ಸಂಗ್ರಹದಿಂದಲೂ, "ಜಯಲಕ್ಷ್ಮಿ" ಯ ಆ ವಾಸ ಸ್ಥಳದಂತೆ ಕಾಣಿಸುತ್ತಿದ್ದುದರಿಂದ
ಮತ್ತೊಂದು ಮೊದಲನೇ ಬಹುಮಾನ
ಒಂದೇ ವರ್ಷ ಎರಡು ಮೊದಲನೇ ಬಹುಮಾನಗಳು ಇದುವರೆವಿಗೂ ಯಾವ ಬಳೆ ಅಂಗಡಿಗೂ ಬಂದಿಲ್ಲ ನಮಗೆ ಮಾತ್ರ ಬಂದವೇಕೆ, ನಮ್ಮಲ್ಲಿರುವ ಬಳೆ ಮತ್ತು ಚಿತ್ರ, ವಿಚಿತ್ರ ವಸ್ತುಗಳ ಸಂಗ್ರಹ ಎಂಥಹುದು ಎಂಬುದನ್ನು ಯೋ[illegible] ಕಣ್ಣಿಂದ ನೋಡಿ ತಿಳಿಯಿರಿ ವ್ಯವಹಾರ ಮಾಡಿ ನಿರ್ಧರಿಸಿರಿ
ಜಯಲಕ್ಷ್ಮೀ ಬ್ಯಾಂಗಲ್ಸ್ ಸ್ಟೋರ್ಸ್
ದೇವರಾಜ ಮಾರ್ಕೆಟ್ : : ಮೈಸೂ[illegible]

ಫೋ. ನಂ: 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಆಣೆ

ಸಂಪುಟ ೫] ಭಾನುವಾರ ೬—೧೦—೪೬ [ಸಂಚಿಕೆ ೩೦

ಕನ್ನಂಬಾಡಿ ಬಳಿ ಕೃತಕ ರೇಷ್ಮೆಗಿರಣಿ

ಕಾರ್ಮಿಕ ಸಮ್ಮೇಳನ

ಮೈಸೂರು ೬

ಮೈಸೂರು ಮತ್ತು ಮಂಡ್ಯ ಜಿಲ್ಲೆಗಳ ಕೂಲಿಗಾರರ ಸಮ್ಮೇಳನವು ನಿನ್ನೆ ಮಧ್ಯಾಹ್ನ ಸುಬ್ಬರಾಯನ ಕೆರೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಸುಬ್ಬರಾಯನಕೆರೆ ಮೈದಾನವು ಅಪೂರ್ವವಾದ ಠಳಿ ಮತ್ತು ಪುಷ್ಪಗಳಿಂದ ಕಂಗೊಳಿಸುತ್ತಿತು ಸಭಾಂಗಣದಲ್ಲಿ ಬಟ್ಟೆಯ ತೋರಣಗಳೂ, ಧ್ವಜಗಳೂ ಅಂದವಾಗಿ ಅಲಂಕರಿಸಲ್ಪಟ್ಟಿದ್ದವು ಲೌಡ್ ಸ್ಪೀಕರ್ ಯಂತ್ರವನ್ನೂ ಏರ್ಪಡಿಸಲಾಗಿತ್ತು. ಸಾವಿರಾರು ಜನ ಕಾರ್ಮಿಕರೂ, ಅವರ ಹೆಣ್ಣುಮಕ್ಕಳೂ ಬಂದು ನೆರೆದಿದ್ದರು.

ಇದೇ ಸಂದರ್ಭದಲ್ಲಿ ಕೆಲಸಗಾರರು ಮಹಾತ್ಮಾ ಗಾಂಧಿಯವರ ಜಯಂತೀ ಉತ್ಸವವನ್ನೂ ಆಚರಿಸಿದರು. ಮಹಾತ್ಮರ ಚಿತ್ರವನ್ನು ಸುಂದರವಾಗಿ ಅಲಂಕರಿಸಲಾಗಿತ್ತು.

ಸಭೆಗೆ ಮುಂಚೆ ಟೌನ್ ಹಾಲ್ ಮೈದಾನದಿಂದ ಮೆರವಣಿಗೆ ಮಾಡಿಕೊಂಡು ಜಯಕಾರಗಳನ್ನೂ, ರಾಷ್ಟ್ರ ಘೋಷಣೆಗಳನ್ನು ಮಾಡುತ್ತಾ ಸುಬ್ಬರಾಯನ ಕೆರೆಗೆ ಬಂದರು. ಶ್ರೀ ಟಿ. ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ಸಮ್ಮೇಳನವು ಕೂಡಿತು. ಪ್ರಾರ್ಥನೆಯೊಡನೆ ಕಾರ್ಯಕ್ರಮವು ಆರಂಭವಾಯಿತು. ಶ್ರೀ. ಶ್ರೀಕಂಠಪ್ಪನವರು ಸ್ವಾಗತ ಭಾಷಣ ಮಾಡಿ ಸಮ್ಮೇಳನದ ಉದ್ದೇಶಗಳನ್ನು ವಿವರಿಸಿ ಎಲ್ಲರಿಗೂ ಸ್ವಾಗತವನ್ನು ಬಯಸಿದರು.

ಶ್ರೀ ಕೆ ಟಿ ಭಾಷ್ಯಂರವರು ಸಮ್ಮೇಳನದ ಆರಂಭ ಭಾಷಣವನ್ನು ನೆರವೇರಿಸಿದರು.

ಹೆಚ್ಚಿನ ಭತ್ಯ, ಕೆಲಸದ ಕಾಲದ ಅವಧಿಯನ್ನು ತಗ್ಗಿಸುವುದು, ರಜಾ ಸೌಕರ್ಯ, ವಸತಿ ವ್ಯವಸ್ಥೆ, ಪ್ರಾವಿಡೆಂಟ್ ಫಂಡ್ ಇವೇ ಮುಂತಾದ ಸೌಲಭ್ಯಗಳನ್ನು ಪಡೆಯಲು ಕಾರ್ಮಿಕರು ಹಲವಾರು ವರ್ಷದಿಂದ ಮಾಡುತ್ತಿರುವ ಪ್ರಯತ್ನಗಳು ಈ ಹೊತ್ತಿಗೆ ಸಫಲವಾಗಿ ಮುಂದೆ ರಾಜ್ಯಸೂತ್ರಗಳು ಪ್ರಜಾ ಪ್ರಮುಖರ ಕೈಗೆ ಬಂದರೆ ಅವೆಲ್ಲವೂ ಪೂರ್ಣವಾಗಿ ಈಡೇರುವ ಸಂಭವವಿರುವುದೆಂದೂ, ಅದರ ಸಾಧನೆಗಾಗಿ ಸಕಲ ಕಾರ್ಮಿಕರೂ ಯಾವ ಭಿನ್ನ ಭಾವವಿಲ್ಲದೆ ಒಂದುಗೂಡಿ ಐಕಮತ್ಯದಿಂದ ತಮ್ಮ ಬೇಡಿಕೆಗಳನ್ನು ಒತ್ತಾಯ ಪಡಿಸಬೇಕೆಂದೂ, ಶ್ರೀ ಭಾಷ್ಯಂರವರು ತಮ್ಮ ಭಾಷಣದಲ್ಲಿ ನುಡಿದರು.

ಶ್ರೀಮತಿ ರತ್ನಮ್ಮ ಮಾಧವರಾವ್ ಮುಂತಾದ ಶ್ರೀಗಳಾದ ಕೆ ಎಸ್. ತಿಮ್ಮಾರೆಡ್ಡಿ, ಕೆ. ಹನುಮಂತಯ್ಯ, ಜನಾಬ್ ರಜಾಕ್ ಅಲಿ, ಕೆ ಚೆಂಗಲರಾಯರೆಡ್ಡಿ, ಪಿ. ಆರ್ ರಾಮಯ್ಯ, ನಾಗಭೂಷಣ ಮುಂತಾದವರು ಭಾಷಣ ಮಾಡಿ, ಕಾರ್ಮಿಕರಿಗೆ ಉಪದೇಶ ಮಾಡಿದರು. ಮಹಾತ್ಮಾಜಿಯವರಿಗೆ ದೀರ್ಘಾಯುರಾರೋಗ್ಯ ಕೋರಿ ಕೇಂದ್ರ ತಾತ್ಕಾಲಿಕ ಸರ್ಕಾರಕ್ಕೆ ಅಭಿನಂದನೆಯನ್ನು ಸೂಚಿಸುವುದು, ಕಾರ್ಮಿಕರ ಪುರೋಭಿವೃದ್ಧಿಗೆ ಸಂಬಂಧಪಟ್ಟ ಅನೇಕ ನಿರ್ಣಯಗಳನ್ನು ಸ್ವೀಕರಿಸಲಾಯಿತು. ಅಧ್ಯಕ್ಷ ಭಾಷಣವಾದ ಬಳಿಕ ಜಯಕಾರದೊಡನೆ ಸಮ್ಮೇಳನವು ಮುಗಿಯಿತು.

ಮೆನನ್-ಆಟ್ಲಿ ಭೇಟಿ

ಅಟ್ಲೀಯವರನ್ನು ಭೇಟಿ ಮಾಡುವ ಸಲುವಾಗಿ ಲಂಡನ್ನಿಗೆ ಹೋಗಿರುವ ವೇಳೆ ಶ್ರೀ ಕೃಷ್ಣ ಮೆನನ್‌ರವರು ಬ್ರಿಟಿಷ್ ಪ್ರಧಾನಿ ಮಿ॥ ಅಟ್ಲೀಯವರನ್ನು ಭೇಟಿಮಾಡಿ ಭಾರತದ ರಾಜಕೀಯ ಪರಿಸ್ಥಿತಿಯ ಬಗ್ಗೆ ಚರ್ಚಿಸಿದರೆಂದು ಗೊತ್ತಾಗಿದೆ.

ರಾಜೇಂದ್ರ ಪ್ರಸಾದರ ಹೆಸರಿನಲ್ಲಿ ಮೈದಾನ

ಕೇಂದ್ರ ಸರ್ಕಾರದ ಆಹಾರ ಸಚಿವರಾದ ಡಾ॥ ರಾಜೇಂದ್ರ ಪ್ರಸಾದರು ಕೊಚ್ಚಿಗೆ ಅಕ್ಟೋಬರ್ ೧೨ ನೇ ತಾ॥ ಭೇಟಿ ಕೊಡುವ ನೆನಪಿನ ಸಲುವಾಗಿ 'ಹುಜೂರ್ ಚೆಟ್ಟಿ ಮೈದಾನವನ್ನು ಇನ್ನು ಮುಂದೆ 'ರಾಜೇಂದ್ರ ಮೈದಾನ್' ಎಂದು ಕರೆಯಬೇಕೆಂದು ಕೊಚ್ಚಿ ಮಹಾರಾಜರು ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಅದೇ ದಿನ ಎರ್ನಾಕುಲಂ ಪುರಸಭೆ ಮತ್ತು ಸಾರ್ವಜನಿಕ ಮಾನ ಪತ್ರಗಳನ್ನು ಡಾ॥ ರಾಜೇಂದ್ರ ಪ್ರಸಾದರು ಸ್ವೀಕರಿಸುವರು.

ಜಿನ್ನಾ-ನೆಹರೂ ಭೇಟಿ

ಭೂಪಾಲ್ ನವಾಬರೊಡನೆ ನಿನ್ನೆ ಮಧ್ಯಾಹ್ನ ಮಿ॥ ಜಿನ್ನಾರವರೂ, ಪಂ॥ ನೆಹರೂರವರೂ ಭೋಜನ ಮಾಡಿದರು. ಅಗ್ಗ ಮಾತುಕತೆಗಳು ನಡೆದುವು. ನಿನ್ನೆ ಬೆಳಗ್ಗೆ ಭೂಪಾಲ್ ನವಾಬರು ಮಹಾತ್ಮಾ ಗಾಂಧಿಯವರನ್ನು ಕಂಡಿದ್ದರು.

ಬರ್ಮಾದಲ್ಲಿ ಮುಷ್ಕರಗಳ ಮುಕ್ತಾಯ

ಬರ್ಮಾ ಸರ್ಕಾರದ ೩೦ ಸಹಸ್ರ ನೌಕರರೂ, ೬ ಸಾವಿರ ಪೋಲೀಸರೂ, ತಮ್ಮ ಬೇಡಿಕೆಗಳನ್ನು ಹೊಸ ರಾಷ್ಟ್ರೀಯ ಸರ್ಕಾರವು ಈಡೇರಿಸಿ ಕೊಟ್ಟಿದ್ದರಿಂದ ಮುಷ್ಕರವನ್ನು ನಿಲ್ಲಿಸಿ ನೆನ್ನೆಯಿಂದ ಕೆಲಸದ ಮೇಲೆ ಹಿಂತಿರುಗಿದ್ದಾರೆ.

೭೭ ವಯಸ್ಸಿನ ಪ್ರಣಯ

ಓಕ್ಲಹಾಮಾ ಎಂಬಲ್ಲಿ ೭೭ ವರ್ಷದ ಎಲ್ಲೀ ಡೀ ಎಂಬ ಮುದುಕಿ ಇದ್ದಾಳೆ. ಆಕೆಯು ವಿಧವೆ. ೩೯ ವಯಸ್ಸಿನ ಚಾರ್ಲಿ ಪೀಸ್ ಎಂಬ ತರುಣನೊಬ್ಬನಲ್ಲಿ ಆಕೆಯು ಅನುರಾಗ ಹೊಂದಿ ಅವನೊಡನೆ ಓಡಿ ಹೋಗಿ ಆತನನ್ನೇ ಈಗ ಮದುವೆಯಾಗಿದ್ದಾಳೆ. ತನ್ನ ನರೆ ಗೂದಲುಗಳನ್ನು ಬಣ್ಣ ಶೃಂಗಾರ ಮಾಡಿಕೊಳ್ಳುತ್ತಾಳೆ. ಒಂದಾನೊಂದು ಕಾಲದಲ್ಲಿ ತಾನು ಹೊಂದಿದ್ದ ಯೌವನವು ಈಗ ತನಗೆ ಇಲ್ಲವೆಂದೂ ಆದರೆ ಪ್ರೇಮಕ್ಕೆ ಮುಪ್ಪಿಲ್ಲವೆಂದೂ ಹೇಳುತ್ತಾಳೆ.

ಪ್ರಬಂಧ ಸ್ಪರ್ಧೆ

ಮೈಸೂರು ೬

ಕಾಂಗ್ರೆಸ್ ಸಮಿತಿಯವರು ಗಾಂಧೀ ಜಯಂತಿ ಸಂದರ್ಭದಲ್ಲಿ ಏರ್ಪಡಿಸಿದ್ದ ಪ್ರಬಂಧ ಸ್ಪರ್ಧೆಯ ಫಲಿತಾಂಶವನ್ನು ನಾಳೆ ಸಂಜೆ ಏಳು ಘಂಟೆ ಮಂದಿಗೆ ಪ್ರಕಟಿಸಿದೆಯೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಸಾಂಗ್ಲಿಯ ಸುಧಾರಣೆಗಳು

ಬ್ರಿಟಿಷ್ ಭಾರತದಲ್ಲಿರುವಂತೆಯೇ ಸಾಂಗ್ಲೀ ಸಂಸ್ಥಾನದಲ್ಲಿಯೂ ಜನಪ್ರಿಯ ಮಂತ್ರಿಗಳನ್ನು ನೇಮಿಸುವುದಾಗಿ ಅಲ್ಲಿನ ರಾಜರು ನಿನ್ನೆ ದಿನ ಘೋಷಣೆ ಹೊರಡಿಸಿದರು. ಶಾಸನ ಸಭೆಯ ಬಹುಮತದ ನಿರ್ಣಯದ ಪ್ರಕಾರ ಈ ಮಂತ್ರಿಗಳನ್ನು ತೆಗೆದು ಹಾಕಲು ಅವಕಾಶವಿರುತ್ತದೆ. ಚುನಾಯಿತರಾದ ಅಧ್ಯಕ್ಷರು ಮತ್ತು ಉಪಾಧ್ಯಕ್ಷರೇ ಶಾಸನ ಸಭೆಯಲ್ಲಿರುವರು. ಇನ್ನು ಮುಂದೆ ಯಾವ ಸದಸ್ಯರನ್ನೂ ನಾಮಕರಣ ಮಾಡುವುದಿಲ್ಲ. ರಾಜ್ಯಾಂಗವನ್ನು ವಿಮರ್ಶಿಸಿ ಅಂತ್ಯವಾಗಿ ನಿರ್ಧರಿಸಲು ಒಂದು ಸಮಿತಿಯನ್ನೂ ಸಹ ರಾಜರು ನೇಮಿಸಿರುವರು. ಈಗ ಕೊಡಲಾಗಿರುವ ಜವಾಬ್ದಾರೀ ಸರ್ಕಾರವನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಬೇಕೆಂದು ರಾಜರು ಪ್ರಜೆಗಳಲ್ಲಿ ಕೋರುತ್ತಾರೆ.

ನಾಜಿಮುದ್ದೀನರಿಗೆ ಅನಾಹುತ

ದೆಹಲಿಯಲ್ಲಿ ಮಿ॥ ಖ್ವಾಜಾ ನಾಜಿಮುದ್ದೀನರು ಮೋಟಾರು ಕಾರಿನಲ್ಲಿ ಹೋಗುತ್ತಿದ್ದಾಗ್ಗೆ ಕಾರು ಅಪಘಾತಕ್ಕೆ ಗುರಿಯಾಗಿ ಅವರಿಗೆ ಮುಖದ ಮೇಲೂ, ತೊಡೆಯಲ್ಲೂ ಗಾಯಗಳಾಗಿವೆಯೆಂದು ವರದಿಯಾಗಿದೆ.

ಟೇಬಲ್ ಟೆನಿಸ್

ಮೈಸೂರು ಸಂಸ್ಥಾನದ ಟೇಬಲ್ ಟೆನಿಸ್ ಸಂಘದವರು ಏರ್ಪಡಿಸಿದ್ದ ಓಪನ್ ಛಾಂಪಿಯನ್ ಷಿಪ್ ಸಿಂಗಲ್ಸ್‌ನ ಫೈನಲ್ಸ್ ಆಟದಲ್ಲಿ ಶ್ರೀ ಎಂ ಎಸ್ ವಿಠ್ಠಲ್‌ರವರು ಶ್ರೀ ಸಿ ರಾಮಸ್ವಾಮಿಯವರನ್ನು ಸೋಲಿಸಿದರು. ಡಬ್ಬಲ್ಸ್ ಫೈನಲ್ಸ್ ಪಂದ್ಯದಲ್ಲಿ ಶ್ರೀಗಳಾದ ಎಂ ವಿ ಎಸ್. ಎರಲ್ ಮತ್ತು ಸಿ. ರಾಮಸ್ವಾಮಿಯವರು ಕೆ ವಿ. ಪದ್ಮನಾಭನ್ ಮತ್ತು ಕೆ ಜಿ ವೆಂಕಟಕೃಷ್ಣರವರನ್ನು ಸೋಲಿಸಿದರು.

ಬಹುಮಾನ ವಿನಿಯೋಗ

ಮಾರ್ಕೆಟ್ ಪ್ರದರ್ಶನದಲ್ಲಿ ಜಯಶೀಲರಾದವರಿಗೆ ಶ್ರೀ ಕೆ ಚೆಂಗಲರಾಯ ರೆಡ್ಡಿಯವರು ನೆನ್ನೆ ಚಿನ್ನದ ಪದಕ ಪದಕ ಬೆಳ್ಳಿ ಬಟ್ಟಲು, ಪತ್ರ ಪ್ರಶಸ್ತಿ ಪತ್ರಗಳನ್ನು ವಿನಿಯೋಗ ಮಾಡಿದರು. ಪ್ರದರ್ಶನ ಸಮಿತಿಯ [illegible] ಶ್ರೀ ಎ ಕೃಷ್ಣಮೂರ್ತಿ [illegible]

ಭಾರೀ ಕೃತಕ ರೇಷ್ಮೆ ಯೋಜನೆ

೨ ಕೋಟಿ ರೂಪಾಯಿ ವೆಚ್ಚದಲ್ಲಿ ಕನ್ನಂಬಾಡಿ ಕಟ್ಟೆ ಬಳಿ ಭಾರೀ ಕೃತಕ ರೇಷ್ಮೆ ಕಾರ್ಖಾನೆಯೊಂದನ್ನು ಸ್ಥಾಪಿಸಲು ಏರ್ಪಾಡಾಗುತ್ತಿದೆ. ಹಿಂದೂ ಸ್ಥಾನದಲ್ಲಿ ಇದ ನೆಲ್ಲ ಮೊದಲನೇ ಕಾರ್ಖಾನೆಯಾಗುವುದು. ಇನ್ನು ಹತ್ತು ವರ್ಷ ಕಾಲ ತಯಾರಾಗುವ ಎಲ್ಲ ಇಂಜನಿಯರುಗಳು ಮತ್ತು ರಸಾಯನ ಶಾಸ್ತ್ರಜ್ಞರನ್ನು ಅಲ್ಲಿ ಕೆಲಸಕ್ಕೆ ಸೇರಿಸಿ ಕೊಳ್ಳಲಾಗುವುದು. ಮೈಸೂರು ಸೀಮೆಯಲ್ಲಿ ಹೇರಳವಾಗಿ ಸಿಕ್ಕುವ ಬಿದಿರಿನ ಬೊಂಬುಗಳನ್ನು ಇದಕ್ಕೆ ವಿಶೇಷವಾಗಿ ಉಪಯೋಗಿಸಲಾಗುವುದು.

ಇನ್ನು ಎರಡು ವರ್ಷದಲ್ಲಿ ಚುನಾಯಿತರಾದ ರಾಜರು

ಶ್ರೀ ರಾಮಚಂದ್ರನನ್ನು ತಮ್ಮ ದೊರೆಯಾಗಿರುವಂತೆ ಅಯೋಧ್ಯೆಯ ಪ್ರಜೆಗಳು ಹೇಗೆ ಚುನಾವಣೆ ಮಾಡಿದರೋ ಹಾಗೆಯೇ ಇನ್ನು ಎರಡು ವರ್ಷಗಳಲ್ಲಿ ತಮ್ಮ ಪಟ್ಟಕ್ಕೆ ಪಾತ್ರರಾದವರನ್ನೇ ತನ್ನ ರಾಜರನ್ನಾಗಿ ಆರಿಸಿಕೊಳ್ಳುವ ಅಧಿಕಾರವು ಪ್ರಜೆಗಳಿಗೆ ಬರುವುದೆಂಬ ಅಂಶವನ್ನು ಡಾ॥ ಪಟ್ಟಾಭಿ ಸೀತಾರಾಮಯ್ಯನವರು ಸಿದ್ಧರ್ ಸಂಸ್ಥಾನದ ರಾಜಕೀಯ ಸಮ್ಮೇಳನದ ವೇದಿಕೆಯಿಂದ ಸಾರಿದರು. ರೆಸಿಡೆಂಟರುಗಳೂ ಸಹ ಇರುವುದಿಲ್ಲವೆಂದೂ ರಾಜರುಗಳು ಪ್ರಜೆಗಳೊಡನೆ ನೇರವಾದ ಸಂಬಂಧವನ್ನು ಇಟ್ಟುಕೊಂಡಿರುವರೆಂದೂ ಸಹ ತಿಳಿಸಿರುವರು.

ಹೊಸ ಮಿಲ್ಲುಗಳಿಗೆ ಅವಕಾಶವಿಲ್ಲ

ಮದ್ರಾಸ್ ಪ್ರಾಂತದಲ್ಲಿ ಇನ್ನು ಮುಂದೆ ಹೊಸದಾಗಿ ನೂಲು ಮತ್ತು ನೇಯ್ಗೆಯ ಮಿಲ್ಲುಗಳನ್ನು ತೆರೆಯಲು ಅವಕಾಶ ಕೊಡುವದಿಲ್ಲವೆಂದು ಸರ್ಕಾರದವರು ತಿಳಿಸಿದ್ದಾರೆ.

ಟ್ರೂಮನ್ನರ ಸೂಚನೆಗೆ ಬ್ರಿಟಿಷರ ವಿರೋಧ

ಪ್ಯಾಲೆಸ್ಟೈನಿಗೆ ಕೂಡಲೇ ಯೆಹೂದ್ಯರನ್ನು ಸೇರಿಸಬೇಕೆಂದು ಅಧ್ಯಕ್ಷ ಟ್ರೂಮನ್ನರು ಹೇಳಿರುವುದು ವಿಷಾದಕರವಾದುದೆಂದು ಬ್ರಿ॥ ಪ್ರಮುಖ ಅಧಿಕಾರಿಯೊಬ್ಬರು ತಿಳಿಸಿ ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಲಂಡನ್ ಸಮ್ಮೇಳನ ಮುಗಿಯುವ ವರೆಗೂ ಪ್ಯಾಲೆಸ್ಟೈನಿಗೆ ಯೆಹೂದ್ಯರು ಪ್ರವೇಶಿಸುವ ಪ್ರಶ್ನೆ ಏಳುವುದಿಲ್ಲವೆಂದು ಬ್ರಿ॥ ಸರ್ಕಾರದ ಅಭಿಮತವಾಗಿದೆ.

ಸ್ಕೌಟ್ ಪ್ರದರ್ಶನ

ಮೈಸೂರು ೬

ಈ ದಿನ ಬೆಳಗ್ಗೆ ಟೌನ್‌ಹಾಲಿನಲ್ಲಿ ನಗರದ ಸ್ಕೌಟ್ ಪ್ರದರ್ಶನವು ದಿವಾನರಾದ ಸರ್ ಎ. ರಾಮಸ್ವಾಮಿಮೊದಲಿಯಾರರ ಅಧ್ಯಕ್ಷತೆಯಲ್ಲಿ ಜರುಗಿತು. ಮೈಸೂರು ರಾಜಮನೆತನಕ್ಕೆ ಸಾಗಲೂ ಸಂಪೂರ್ಣವಾದ ಭಕ್ತಿ ವಿಶ್ವಾಸಗಳನ್ನು ಸಲ್ಲಿಸುವ ವಿಚಾರವಾಗಿ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಒತ್ತಿ ಹೇಳಿದರು. ಒಳ್ಳೆಯ ಶೀಲವನ್ನು ಬೆಳೆಸುವುದೇ ಸ್ಕೌಟ್ ಚಳುವಳಿಯ ಮುಖ್ಯಗುರಿ ಎಂದೆ ತಿಳಿಸಿದರು. ಸ್ಕೌಟ್ ಕೆಲಸದಲ್ಲಿ ಪ್ರಶಸ್ತಿ ಪಡೆದವರಿಗೆ ಬಹುಮಾನವನ್ನು ವಿನಿಯೋಗ ಮಾಡಿದರು. ಶ್ರೀ ಮನ್ ಮಹಾರಾಜರ ಪೌತ್ರ ರಾಜಕುಮಾರಿಯ ನ್ಯಾಯಾಧೀಶ ನ [illegible]

ಸಾಧ್ವಿ

ತಾ।। ೬-೧೦-೪೬ ಭಾನುವಾರ

ಭೂಪಾಲರ ಸಂಧಾನ

ಕಾಂಗ್ರೆಸ್ಸಿಗೂ ಮುಸ್ಲಿಂ ಲೀಗಿಗೂ ಸಂಧಾನ ಉಂಟು ಮಾಡಲು ನರೇಂದ್ರ ಮಂಡಲದ ಅಧ್ಯಕ್ಷರಾದ ಭೂಪಾಲ್ ಸಂಸ್ಥಾನದ ನವಾಬರು ಬಹಳವಾಗಿ ಪ್ರಯತ್ನಗಳನ್ನು ಮಾಡುತ್ತಿದ್ದಾರೆ ಕಳೆದ ಒಂದು ವಾರದಿಂದ ಅವರು ಸತತವಾಗಿ ವೈಸರಾಯರನ್ನೂ, ಮಹಾತ್ಮರನ್ನೂ, ಮಿ।। ಜಿನ್ನಾರವರನ್ನೂ ಭೇಟಿ ಮಾಡಿ ಮಾತುಕತೆ ನಡೆಸಿದರು. ಇವರ ಪರಿಣಾಮವಾಗಿ ನಿನ್ನೆ ಭೂಪಾಲರ ಅರಮನೆಯಲ್ಲಿ ಪಂಡಿತ ಜವಹರಲಾಲ ನೆಹರೂರವರಿಗೂ, ಮಿ।। ಜಿನ್ನಾರವರಿಗೂ ಭೇಟಿಯು ಏರ್ಪಾಡಾಗಿತ್ತು ಈ ಭೇಟಿಯಲ್ಲಿ ದೀರ್ಘವಾದ ಸಮಾಲೋಚನೆಗಳು ನಡೆದುವೆಂದು ವರದಿಯಾಗಿದೆ.

ತಾತ್ಕಾಲಿಕ ಸರ್ಕಾರದಲ್ಲಿಯೂ, ರಾಜ್ಯಾಂಗ ಸಮಿತಿಯಲ್ಲಿಯೂ ಲೀಗಿನವರು ಭಾಗವಹಿಸುವಂತೆ ಮಾಡಲು ಸರ್ವ ಪ್ರಯತ್ನಗಳೂ ನಡೆಯುತ್ತಿವೆ ವೈಸರಾಯರೂ ಸಹ ಇದರಲ್ಲಿ ವಿಶೇಷವಾಗಿ ಆಸಕ್ತಿಯನ್ನು ವಹಿಸಿದ್ದಾರೆ ಈ ಪ್ರಯತ್ನಗಳು ಯಶಸ್ವಿಯಾಗಿ ಪರಿಣಮಿಸಬಹುದೆಂಬ ಭಾವನೆಯು ಮೂಡುತ್ತಿದೆ ಹೊಸ ಕೇಂದ್ರ ಸರ್ಕಾರದ ರಚನೆಯಾದ ಮೇಲೆ ಲೀಗಿನವರು ಅದರೊಡನೆ ಅಸಹಕರಿಸಿ, ವಿರೋಧ ವಿನಾಚರಣೆಯನ್ನು ನಡೆಸಿದಾಗ ಉಂಟಾದ ಘಟನೆಗಳು ಎಲ್ಲರ ಮನಸ್ಸನ್ನೂ ಕಲಕಿವೆ ಸಂಗಲಿತರಾಗಿ ಲೀಗಿನವರು ತಮ್ಮ ನೀತಿಯನ್ನು ಬದಲಾಯಿಸಿ ಇಡೀ ದೇಶದ ಹಿತಕ್ಕಾಗಿ ಸಹಕರಿಸಿದರೆ ಅವರಿಗೂ ಕ್ಷೇಮ, ಇತರರಿಗೂ ಕ್ಷೇಮ. ಇನ್ನು ಮುಂದೆ ಅವರು ಹೋರಾಟದ ಮನೋಧರ್ಮವನ್ನು ತ್ಯಜಿಸುವುದು ಲೇಸು

ಕೇಂದ್ರ ಸರ್ಕಾರದಲ್ಲಿ ಮುಸ್ಲಿಮರ ಸಂಖ್ಯೆಯ ವಿಚಾರದಲ್ಲಿಯೂ, ಪ್ರಾಂತಗಳ ವರ್ಗೀಕರಣದ ವಿಚಾರವಾಗಿಯೂ ಈಗಾಗಲೇ ಕಾಂಗ್ರೆಸ್ಸಿನವರೂ, ವೈಸರಾಯರವರೂ ಸಾಕಾದಷ್ಟು ಭರವಸೆಗಳನ್ನು ಕೊಟ್ಟಿದ್ದಾರೆ ಉಭಯ ಪಂಗಡಗಳ ದೃಷ್ಟಿಕೋಣಗಳೂ ಉಚಿತವಾದ ರೂಪವನ್ನು ತಾಳುತ್ತಿವೆ ಸ್ವತಂತ್ರವಾದ ಐಕ್ಯತೆಗಾಗಿ ತಕ್ಕ ಬೆಲೆಯನ್ನು ಒಲಿ ಕೊಡಲು ಯಾರೂ ಸಿದ್ಧರಾಗಿಲ್ಲ ಉದಾತ್ತವಾದ ರಾಜನೀತಿ ಸೂತ್ರಗಳ ಆಧಾರದ ಮೇಲೆಯೇ ಈಗ ಒಪ್ಪಂದವಾಗಬೇಕಾಗಿದೆ ಭೂಪಾಲ್ ನವಾಬರು ಮಾಡುತ್ತಿರುವ ಪ್ರಯತ್ನಗಳು ಈ ಉನ್ನತ ತತ್ವಗಳ ಆಧಾರದ ಮೇಲೆ ಮುಂದುವರೆದು ನಿಜವಾದ ಐಕ್ಯತೆಯಿಂದ ಒಡಗೂಡಿದ ವ್ಯವಸ್ಥೆಯು ಏರ್ಪಡಲು ಸಹಕಾರಿಯಾಗಲೆಂದು ಹಾರೈಸೋಣ

ವಿದೇಶ ಭಾಷೆ ಬಲ್ಲ ಭಾರತೀಯರ ಅಗತ್ಯ

ಭಾರತದ ಸಂಪೂರ್ಣ ಅಧಿಕಾರವು ಬೇಗನೆ ನಮ್ಮ ಕೈಸೇರುವುದರಿಂದ ವಿದೇಶ ಭಾಷೆಗಳನ್ನು ಚೆನ್ನಾಗಿ ಬಲ್ಲ ಭಾರತೀಯರ ಅಗತ್ಯ ಹೆಚ್ಚಿದೆ ... ಅಷ್ಟರ ಅಂತ ... ತಮ್ಮ ... ಗಳನ್ನು ... ಜೊತೆಗೆ ... ನ ... [illegible]

ಅಸ್ಪೃಶ್ಯತೆ ಹೋದರೆ ಹಿಂದು ಧರ್ಮದ ಉಳಿವು

ಹರಿಜನರ ಮೇಲಿರುವ ಸಮಾಜ ಬಹಿಷ್ಕಾರಗಳನ್ನು ನಿಷೇಧಮಾಡುವ ಮಸೂದೆಯನ್ನು ಬೊಂಬಾಯಿ ಶಾಸನ ಸಭೆಯು ೨ ನೇ ತಾ।। ಅಂಗೀಕರಿಸಿತು ಇದಕ್ಕೆ ಎಲ್ಲ ಪಕ್ಷಗಳೂ ಬೆಂಬಲವಿತ್ತವು ಪ್ರಧಾನಿ ಶ್ರೀ ಖೇರರು ಮಾತನಾಡಿ ಗಾಂಧಿ ಜಯಂತಿಯ ಈ ಶುಭ ದಿನದಲ್ಲಿ ಅವರಿಗೆ ಪ್ರಿಯವಾದ ಹರಿಜನರಿಗೆ ಸಂಬಂಧಿಸಿದ ಈ ಮಸೂದೆಯನ್ನು ಸ್ವೀಕರಿಸುವುದು ಒಂದು ಶುಭ ಸೂಚನೆ; ಮಹಾತ್ಮರು ಭಾರತದ ಮಹಾ ಪುರುಷರಾಗಿದ್ದಾರೆ, ಎಂದರು. ಯೂರೋಪಿಯನ್ ಸದಸ್ಯರಾದ ಮಿ।।ಕೊಕೇನ್‌ರವರಿದ್ದು ಗಾಂಧೀಜಿಯವರು ಜಗತ್ತಿನ ಮಹಾಪುರುಷರು, ಎಂದರು

ಮಗ್ಗದ ಬಟ್ಟೆ ಬೆಲೆ ಹತೋಟಿ

ಸಂಸ್ಥಾನದ ಕೈ ಮಗ್ಗದ ನೇಯ್ಗೆಯವರಿಗೆ ಹೆಚ್ಚು ಕೂಲಿ ಕೊಡುವುದು ಮತ್ತು ಸದರೀ ಬಟ್ಟೆಗಳನ್ನು ಆದಷ್ಟು ಮಟ್ಟಿಗೆ ಅಗ್ಗವಾಗಿ ಕೊಡುವ ಸಲುವಾಗಿ ಕೈ ಮಗ್ಗದ ಬಟ್ಟೆಯ ಮೇಲೆಯೂ ಸಹ ಹತೋಟಿಯು ಆಜ್ಞೆಯನ್ನು ವಿಧಿಸಲಾಗುವುದೆಂದು ಮಂತ್ರಿಗಳಾದ ಬಿ ಎಸ್. ಎನ್ ಸರೀಫರು ಪ್ರ।। ಪ್ರ।। ಸಭೆಯಲ್ಲಿ ತಿಳಿಸಿರುವರು.

ಅಧಿಕಾರಿಗಳಿಗೆ ಹಿಂದೀ ಶಿಕ್ಷಣ

ಕೇಂದ್ರ ಮುಂಗಾಮಿ ಸರ್ಕಾರದವರು ಪ್ರಾಂತ ಸರ್ಕಾರಗಳೊಡನೆ ಇನ್ನು ಮೇಲೆ ಇಂಗ್ಲೀಷಿನ ಬದಲು ಹಿಂದಿಯಲ್ಲಿಯೇ ಪತ್ರ ವ್ಯವಹಾರಗಳನ್ನು ಬೆಳಸುವರೆಂದು ತಿಳಿದು ಬಂದಿದೆ. ಆದುದರಿಂದ ಸರ್ಕಾರೀ ನೌಕರರುಗಳಿಗೆ ಹಿಂದಿಯನ್ನು ಕಲಿಸಲು ಬೆಂಗಳೂರಿನ ರಿಯಾಸತ್ ಸಮಿತಿಯವರು ವಿಶೇಷ ತರಗತಿಗಳನ್ನು ನಡೆಸುತ್ತಾರೆಂದು ವರದಿಯಾಗಿದೆ.

ಅನ್ನದಾನ

ಸ್ವಂ ಸು.] ಮಾಯಸಂದ್ರ

ತಾ।। ೧-೧೦ ೪೬ನೇ ದಿನ ಬೆಳಗ್ಗೆ ಮಹಾತ್ಮರ ಭಾವಚಿತ್ರದ ಮೆರವಣಿಗೆ, ಧ್ವಜವಂದನೆ, ನಾಯುಂಗಾಲ ಶ್ರೀ ಎಂ ಕೃಷ್ಣಮೂರ್ತಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆದುವು ಧಾರವಾಡ ಜಿಲ್ಲೆಯ ಸರ್ ಇಂಜಿನಿಯರಾದ ಶ್ರೀ ಎಂ ಕೆ.ನರಸಿಂಹಯ್ಯನವರು ಮಹಾತ್ಮರ ವಿಷಯವಾಗಿ ಅಮೋಘ ಭಾಷಣ ಮಾಡಿದರು ಮಾರನೇ ದಿನ ಶ್ರೀ।। ಎಂ ಎಸ್ ಶ್ರೀನಿವಾಸಯ್ಯಂಗಾರ್‌ರವರು ಮತ್ತು ಎಂ ಕೆ ನರಸಿಂಹಯ್ಯನವರು ಸುಮಾರು ೩೫೦ ಜನ ಹರಿಜನರಿಗೆ ಅನ್ನದಾನ ಮಾಡಿದರು.

ಲೋಹಿಯಾರವರ ಉಪವಾಸ ಮುಷ್ಕರ

ಡಾ।। ರಾಮ ಮನೋಹರ ಲೋಹಿಯಾರವರನ್ನು ಗೋವಾ ಸರ್ಕಾರ ದಸ್ತಗಿರಿ ಮಾಡಿ ಬಂಧನದಲ್ಲಿಟ್ಟಿದೆ ಅವರನ್ನು ಗಾಳಿ ಬೆಳಕು ಇಲ್ಲದ ಕತ್ತಲೆ ಕೋಣೆಯಲ್ಲಿ ಇಡಲಾಗಿದೆಯೆಂದೂ, ನೀಗ್ರೋ ಸೈನಿಕರಿಗೆ ಕೊಡಲಾಗುತ್ತಿರುವ ಆಹಾರವನ್ನು ಕೊಡಲಾಗಿದೆಯೆಂದೂ ತಿಳಿದು ಬಂದಿದೆ ಇದನ್ನು ಪ್ರತಿಭಟಿಸಲು ಅವರು ಕಳೆದ ೩೦ ನೇ ತಾ।। ನಿಂದ ಉಪವಾಸ ಮುಷ್ಕರ ಆರಂಭಿಸಿರುವುದಾಗಿ ತಿಳಿದು ಬಂದಿದೆ.

ರೈಲ್ವೆ ಅಪಘಾತ

ಕಲ್ಕತ್ತದಿಂದ ಗುರುವಾರ ಹೊರಟ ಮೆಯಿಲ್ ರೈಲು ಓಂಗೋಲ್ ಸ್ಟೇಷನ್ ಬಳಿ ಗುಡ್ಸ್ ಎಂಜಿನ್ನಿಗೆ ಢಿಕ್ಕಿ ಹೊಡೆದು ಅಪಘಾತಕ್ಕೆ ಈಡಾಯಿತು. ಮೊದಲನೇ ೨ ಗಾಡಿಗಳು ನುಚ್ಚು ನೂರಾದುವು. ಮೆಯಿಲ್ ರೈಲಿನ ಡ್ರೈವರೂ ಸೇರಿ ೩೩ ಮಂದಿ ಸತ್ತರೆಂದೂ ೮೧ ಮಂದಿಗೆ ಗಾಯಗಳಾಗಿವೆಯೆಂದೂ ವರದಿಯಾಗಿದೆ.

ಭಾರತದಲ್ಲಿ ವಿಶ್ವ ಕಾರ್ಮಿಕ ಸಮ್ಮೇಳನ

ಅಂತರ ರಾಷ್ಟ್ರೀಯ ಕಾರ್ಮಿಕ ಸಂಘಗಳ ವಿಶ್ವ ಸಮ್ಮೇಳನವು ಮುಂದಿನ ವರ್ಷ ದೆಹಲಿಯಲ್ಲಿ ಜರುಗುವುದು ಮತ್ತು ಏಷ್ಯಾ ರಾಷ್ಟ್ರಗಳ ಸಮ್ಮೇಳನವು ಚೈನಾ ದಲ್ಲಿ ... ಗಳಲ ರಲ್ಲಿ ನಡೆಯುವುದು, ಎಂದು ಸದರಿ ಸಂಘಗಳ ಡೈರೆಕ್ಟರ್ ಜನರಲ್‌ರವರು ತಿಳಿಸಿದ್ದಾರೆ. ಲ್ಯಾಟಿನ್ ಅಮೇರಿಕಾ ಸಂಸ್ಥೆಗಳ ಬಗ್ಗೆ ಈ ಸಂಸ್ಥೆಯು ಶ್ರದ್ಧೆಯನ್ನು ಮುಂದುವರಿಸಬೇಕಾಗಿದೆಯಲ್ಲದೆ, ಹಿಂದಿನಿಂತಲೂ ಏಷ್ಯಾ ಖಂಡದ ಸಮಸ್ಯೆಗಳ ಕಡೆ ಹೆಚ್ಚು ಗಮನ ಕೊಡಬೇಕಾಗಿದೆ ಯೆಂದು ಅವರು ಹೇಳಿಕೆ ಇತ್ತಿದ್ದಾರೆ.

ರಾಜ್ ಕಮಲ್, ಮೈಸೂರು.

3-10-46 ರಿಂದ 3 ನೇ ವಾರ

ಸ್ವರ್ಗ ಸೀಮ

ಭೂಮಿಕೆ:—ಜಯಮ್ಮ, ಭಾನುಮತಿ, ನಾಗಯ್ಯ, ಲಿಂಗಮೂರ್ತಿ

8-10-46 ರಿಂದ ಪ್ರತಿದಿನ ಪ್ರಾತಃಕಾಲ 10-30 ಕ್ಕೆ

ಪುನರ್ಮಿಲನ

ಕಿಶೋರ್ ಸಾಹು ಮತ್ತು ಸ್ನೇಹಪ್ರಭ

Edited, printed and published by A.R. Nagarajan at the Sadhvi Press D-Subbiah Road Mysore

ಗಾಂಧಿ ಜಯಂತಿ

ಸ್ವಂ. ಸು] ಶ್ರೀರಂಗಪಟ್ಟ

ಇಲ್ಲಿಯ ತಾಲ್ಲೂಕು ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಮೊನ್ನೆ ದಿನ ಬಂದೀ ಗೌಡರ ಅಧ್ಯಕ್ಷತೆಯಲ್ಲಿ ಸಭೆ ಗಾಂಧಿ ಜಯಂತಿಯನ್ನು ಆಚರಿಸಿತು. ಬಾಪೂಜಿಯವರ ಭಾವ ಚಿತ್ರ ಊರಲ್ಲೆಲ್ಲಾ ಮೆರವಣಿಗೆ ಮಾಡಲಾಯಿತು ಮಹಾತ್ಮರ ಜೀವನವನ್ನು ಕುರಿತು ... ಕಾದ ಎಂ ಎನ್. ಜೋಯಿಸ್, ಎಂ. ರಾಮರಾವ್, ಎಂ. ವಿ ಕೃಷ್ಣಪ್ಪ, ಬಂದೀ ಗೌಡರು ಮಾತನಾಡಿದರು

ಬೆಳಗೊಳದಲ್ಲೂ ಪ್ರಭಾತ ಫೇರಿ, ... ಯಜ್ಞ ಮತ್ತು ಭಾವ ಚಿತ್ರ ಮೆರವಣಿಗೆಯೂ, ಸಂಜೆ ಶ್ರೀ ನಂಜೇಗೌಡರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯೂ ನಡೆದು ಶ್ರೀಗಳಾದ ರಾಮಚಂದ್ರ ರಾವ್ ... ದಾಸೇಗೌಡರು ಭಾಷಣ ಮಾಡಿದರು

ಹೈದರಾಬಾದ್ ಹಾಸ್ಟಲ್

ಕಾಶಿಯಲ್ಲಿ ಹೈದರಾಬಾದಿನ ವಿದ್ಯಾರ್ಥಿಗಳ ವಸತಿಗಾಗಿ ಒಂದು ಹಾಸ್ಟಲನ್ನು ... ಪಿಸಲು ಕಾಶಿ ಹಿಂದೂ ವಿಶ್ವವಿದ್ಯಾನಿಲಯಕ್ಕೆ ನಿಜಾಮರು ೫ ಲಕ್ಷ ರೂ ಗಳನ್ನು ಕೊಟ್ಟಿದ್ದಾರೆ.

ಗುಂಡು ಹೊಡೆದು ಕೊಲ್ಲಬೇಕೆಂದು ಕೋರಿಕೆ

ಕಳೆದ ಯುದ್ಧದಲ್ಲಿ ಜರ್ಮನ್ ಸೈನ್ಯದ ಪ್ರಮುಖರಲ್ಲೊಬ್ಬನಾದ ಕೀಟೆಲ್ಲಿಗೆ ಅಂತರ ರಾಷ್ಟ್ರೀಯ ನ್ಯಾಯ ಮಂಡಲದವರು ... ಶಿಕ್ಷೆಯನ್ನು ವಿಧಿಸಿದ್ದಾರೆ. ಅದಕ್ಕೆ ... ಮಿಲಿಟರಿ ಅಧಿಕಾರಿಯಾಗಿದ್ದುದರಿಂದ ತನ್ನನ್ನು ಗುಂಡಿನಿಂದ ಹೊಡೆದು ಕೊಲ್ಲಬೇಕೆಂದು, ಅಪೀಲು ಮಾಡಿಕೊಂಡಿದ್ದಾನೆಂದು ಗೊತ್ತಾಗಿದೆ

R. S. PANDIT'S.

Whooping Cough Reme[dy]

ಆರ್. ಎಸ್. ಪಂಡಿತರ

ನಾಯಿಕೆಮ್ಮಿನ ಔಷಧಿ.

7-ದಿವಸಗಳಲ್ಲೇ ವಾಸಿಯಾಗುತ್ತದೆ.

ಕ್ರಯ ಬಾಟ್ಲಿಗೆ 1-

ಗೂರಲು ಉಬ್ಬಸಕ್ಕೆ

(Asthma)

ಖಾತರಿಯಾದ ಔಷಧಿ ದೊರೆಯುತ್ತದೆ. ಅನೇಕ ದೊಡ್ಡ ಮನುಷ್ಯರು ಬಂದ ಪದಕ ಮತ್ತು ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ

(Appendecitis) ಗುಲ್ಮ ಮತ್ತು (Tonsils) ಗಳಿಗೆ ಆಪರೇಷನ್ ಇಲ್ಲದೆ ಗುಣಪಡಿಸುತ್ತೇವೆ ಖುದ್ದು ಬಂದು ನೋಡಿ.

ಗುಂಡ್ಲುಪೇಟೆ ಆರ್ ಎಸ್. ಪಂಡಿತ ಡಿವಾನ್ಸ್ ರೋಡ್, ಗುಲ್ಜಾರ್, ಮೈಸೂರು

OPERA TALKIES

ತಾ।। 5—10—46ರಿಂದ

ಎರಡನೆಯ ವಾರ

ಮಾಯಾಮಚ್ಛೀಂ[ದ್ರ]

(ತೆಲುಗು)

ಕನ್ನಾಂಬ, ಮಾಲತಿ, ಗೌರೀನಾಥ ಶಾಸ್ತ್ರಿ, ಅದ್ದಂಕಿ ಕೃಷ್ಣಮೂರ್ತಿ ಮುಂತಾದವರು.

ಸುಲಭ ಬೆಲೆ! Estd 1915 ತ್ವರೆ ಮಾಡಿರಿ!

SRI RAMA ELECTRIC STORES

Govt. Licenced Electrical Contractors & Engineers.

ಎಲ್ಲಾ ವಿಧವಾದ ಎಲೆಕ್ಟ್ರಿಕ್ ಪವರ್ ಮತ್ತು ಲೈಟಿಂಗ್ ಇನ್‌ಸ್ಟಲೇಷನ್ ಕೆಲಸಗಳನ್ನೂ ಕಂಟ್ರ್ಯಾಕ್ಟ್ ದರದಲ್ಲಿಯೂ, ಸಕಾಲದಲ್ಲಿಯೂ ಮಾಡಿಕೊಡುತ್ತೇವೆ ನಮ್ಮಲ್ಲಿ ಎಲ್ಲಾ ವಿಧವಾದ ಎಲೆಕ್ಟ್ರಿಕ್ ಸಾಮಾನುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಮಹಾಜನರು ಪ್ರೋತ್ಸಾಹಿಸಬೇಕಾಗಿ ಕೋರುತ್ತೇವೆ

ಶ್ರೀ ರಾಮಾ ಎಲೆಕ್ಟ್ರಿಕ್ ಸ್ಟೋರ್ಸ್,

(ಬಿಡಾರದ ಕೃಷ್ಣಪ್ಪನವರ ಛತ್ರ ಮುಂಭಾಗದ ಎದುರು)

ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು.

ರೋ. ನಂ. 392 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೧] ಸೋಮವಾರ ೭—೧೦—೪೬ [ಸಂಚಿಕೆ ೧೧

ಭರತಪುರದಲ್ಲಿಯೂ ಚುನಾಯಿತಮಂತ್ರಿಗಳು

ಜನಾಬದ್ಧರಿ ಸರ್ಕಾರಕ್ಕಾಗಿ ಕಾರ್ಮಿಕರ ಒತ್ತಾಯ

ಮೈಸೂರು ೭

ಕಾರ್ಮಿಕರ ಉದ್ಧಾರಕ್ಕಾಗಿ ಸಂಸ್ಥಾನದಲ್ಲಿ ಕೂಡಲೇ ಜನಾಬದ್ಧರಿ ಸರ್ಕಾರವನ್ನು ಸ್ಥಾಪಿಸುವಂತೆ ಶ್ರೀಮನ್ಮಹಾರಾಜರನ್ನು ಒತ್ತಾಯ ಪೂರ್ವಕವಾಗಿ ಪ್ರಾರ್ಥಿಸಿ ಕೊಳ್ಳುವ ನಿರ್ಣಯವನ್ನು ಮೊನ್ನೆ ಮಧ್ಯಾಹ್ನ ಸುಬ್ಬರಾಯನ ಕೆರೆ ಅಂಗಳದಲ್ಲಿ ನಡೆದ ಮಂಡ್ಯ ಮತ್ತು ಮೈಸೂರು ಜಿಲ್ಲಾ ಕಾರ್ಮಿಕರ ಸಮ್ಮೇಳನದಲ್ಲಿ ಸರ್ವಾನುಮತದಿಂದ ಅಂಗೀಕರಿಸಲಾಯಿತು;

ಅಲ್ಲದೆ ಈ ಮುಂದೆ ಕಂಡ ನಿರ್ಣಯಗಳೂ ಮಂಜೂರಾದುವು: ಕೇಂದ್ರದಲ್ಲಿ ರಾಷ್ಟ್ರೀಯ ಸರ್ಕಾರವನ್ನು ರಚಿಸಿದ ಪಂ॥ ನೆಹರೂ ಮುಂತಾದ ನಾಯಕರಿಗೆ ಅಭಿನಂದನೆ, ಕಲ್ಕತ್ತ ಮುಂತಾದೆಡೆ ನಡೆದ ಕೋಮುವಾರು ಗಲಭೆಗಳ ಮತ್ತು ಪುಂಡರು ಸಾರ್ವಜನಿಕರ ಮೇಲೆ ನಡೆಸಿದ ದೌರ್ಜನ್ಯದ ಖಂಡನೆ; ಮಹಾಜನರು ಕೋಮುವಾರು ಸೌಹಾರ್ದವನ್ನು ಬೆಳೆಸಿಕೊಂಡು [illegible] ಪ್ರಾರ್ಥನೆ; [illegible] ಸಂಸ್ಥಾನದ ಕಾರ್ಖಾನೆಗಳಲ್ಲಿ ಕೆಲಸದಿಂದ ವಜಾ ಮಾಡಲ್ಪಟ್ಟಿರುವ ಕಾರ್ಮಿಕರನ್ನು ಕೂಡಲೇ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸುವುದು; ಸಂಸ್ಥಾನದ ಕಾರ್ಖಾನೆಗಳಲ್ಲೆಲ್ಲಾ ಕೂಲಿ ದರಗಳ [illegible] ವೊಂದನ್ನು ಏರ್ಪಡಿಸುವಂತೆಯೂ, [illegible] ಕೂಲಿ ದರವು ದಿನಕ್ಕೆ ೧ ರೂಪಾಯಿ ಇರುವಂತೆಯೂ, ದಕ್ಷರಾದ ಕಾರ್ಮಿಕರನ್ನು ತಯಾರು ಮಾಡಲು ಸಾಂಘಿಕ ಶಿಕ್ಷಣವನ್ನು ಕೊಡುವಂತೆಯೂ, [illegible] ರೋಗದ ಹಾವಳಿಯಲ್ಲಿ ಸಂಸ್ಥಾನದ [illegible] ಸ್ಥಿತಿಯನ್ನು ಪರಿಶೀಲಿಸಿ ಸಲಹೆಯನ್ನು ಕೊಡಲು ಒಂದು ಸಮಿತಿ ನೇಮಿಸಬೇಕೆಂದೂ ಸರ್ಕಾರವನ್ನು ಪ್ರಾರ್ಥಿಸುವುದು; [illegible] ಸಂಘಗಳಲ್ಲಿ ಖಾಸಗೀ ಸದಸ್ಯರು [illegible] ವಂತೆಯೂ, ವೈದ್ಯಕೀಯ ಸೌಕರ್ಯ [illegible] ವಂತೆಯೂ, ಪ್ರಾವಿಡೆಂಟ್ ಫಂಡ್ [illegible] ಕೊಡುವುದನ್ನು [illegible] ರಕ್ಷಣೆ, ವ್ಯಾಯಾಮ [illegible] ಸ್ಥಾನ, ಕೂಲಿ ದರ ನಿರ್ಧರಿಸುವಿಕೆ, ಸಾಮಾಜಿಕ ಭದ್ರತೆ ಮುಂತಾದ ಎಲ್ಲಾ ವಿಚಾರಗಳನ್ನೊಳಗೊಂಡ [illegible] ಶಾಸನವೊಂದನ್ನು ಸಂಸ್ಥಾನದಲ್ಲೇ ಜಾರಿಗೆ ತರಬೇಕೆಂದು ಸರ್ಕಾರವನ್ನು ಪ್ರಾರ್ಥಿಸುವುದು; [illegible] ಮತ್ತು ಡಾ॥ ಲೋಹಿಯಾರವರ [illegible] ಯನ್ನು ಖಂಡಿಸಿ, ಅವರ ಬಿಡುಗಡೆಯಾಗಬೇಕೆಂದು ಒತ್ತಾಯ ಪಡಿಸುವುದು.

[illegible] ಸಿಲ್ಕ್ ಥ್ರೋಯಿಂಗ್ ಫ್ಯಾಕ್ಟರಿ

[illegible] ಸಿದ್ದಲಿಂಗಯ್ಯನವರು ಜಗನ್ [illegible] ಅರಮನೆ ಬಳಿ ಇರುವ ಶ್ರೀ ಕೆ. [illegible] ರವರ ಶ್ರೀ ಕೃಷ್ಣ ಥ್ರೋಯಿಂಗ್ [illegible] ಆರಂಭೋತ್ಸವವನ್ನು ಮೊನ್ನೆ [illegible] ದರು.

ದುರ್ಗಾ ಪೂಜೆ

[illegible] ಬೆಳಿಗ್ಗೆ ೯-೩೦ ಗಂಟೆಗೆ ನಜರ್‌ಬಾದ್ ಶ್ರೀ ದುರ್ಗಾದೇವಿ ದೇವಸ್ಥಾನದ [illegible] ಮಂಗಳಾರತಿಯನ್ನು ದಿವಾನ [illegible] ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ [illegible] ಸಮ್ಮುಖದಲ್ಲಿ ಏರ್ಪಡಿಸಲಾ [illegible]

ಸೈಟುಗಳ ಹಂಚಿಕೆ ವಿಚಾರ

ಪ್ರ॥ ಪ॥ ಸಭೆಯಲ್ಲಿ ಪ್ರಶ್ನೆ

ಮೈಸೂರು ೭

ಮೈಸೂರು ನಗರದಲ್ಲಿ ಮನೆ ಕಟ್ಟಲು ಸೈಟುಗಳನ್ನು ಹಂಚಿ ಕೊಟ್ಟಿರುವ ವಿಚಾರವಾಗಿ ಈ ದಿನ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಡಾ॥ ಮಹಮದ್ ಖಲೀಲುಲ್ಲಾರವರು ಪ್ರಶ್ನೆಗಳನ್ನು ಹಾಕಿದಾಗ ಶ್ರೀ ಟಿ ಮರಿಯಪ್ಪನವರ ಸೈಟಿನ ವಿಚಾರವೂ ಬಂತು. ಟ್ರಸ್ಟ್ ಬೋರ್ಡು ಕಾನೂನುಬದ್ಧವಾಗಿ ರಚಿತವಾದ ಸಂಸ್ಥೆ; ಅದರಲ್ಲಿ ಅಧಿಕಾರಿಗಳೂ ಖಾಸಗಿಯವರೂ ಸದಸ್ಯರಾಗಿದ್ದಾರೆ; ಅರ್ಜಿ ದಾರರಲ್ಲಿ ನಿಜವಾದ ಅರ್ಹತೆಯನ್ನು ಪಡೆದಿರುವವರಿಗೇ ಸೈಟನ್ನು ಕೊಡಲಾಗುವುದು; ಕೋಮುವಾರು ದೃಷ್ಟಿಯಿಂದ ಕೊಡುವುದಿಲ್ಲ; ಮುಖ್ಯವಾಗಿ ಮೈಸೂರಿನವರಿಗೇ ಕೊಡಲಾಗುವುದು—ಎಂದು ಸರ್ಕಾರದವರು ತಿಳಿಸಿದರು. ಬೋರ್ಡಿನವರ ತೀರ್ಮಾನದ ಮೇಲೆ ಅಪೀಲಿಗೆ ಅವಕಾಶವಿಲ್ಲವೆಂದೂ [illegible] ಮಿಸೆಸ್ ಫಿಲೋಮಿನಾ ತಂಬೂಚೆಟ್ಟಿಯವರಿಗೆ ಒಂದರ ಪಕ್ಕದಲ್ಲೊಂದರಂತೆ ಆರು ಸೈಟನ್ನು ಕೊಡಲಾಗಿದೆಯೆಂದೂ ಹೇಳಲಾಯಿತು.

ಗಾಂಧೀ ಜಯಂತಿ

ಈ ದಿನ ಸಂಜೆ ಮಂಡಿಮೊಹಲ್ಲಾ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ, ಗಾಂಧೀ ಜಯಂತಿಯು ಶ್ರೀ ಟಿ. ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಡುವುದು. ಶ್ರೀಗಳಾದ ವಿ ವೆಂಕಟಪ್ಪ, ಎಸ್ ವಿ ಕೃಷ್ಣಮೂರ್ತಿ ಮತ್ತು ಎಚ್. ಎಸ್ ನೋರಸ್ವಾಮಿ-ಅವರುಗಳ ಭಾಷಣ ಮಾಡುವರು.

ಮಿಷನರಿ ಸಂಸ್ಥೆಗಳ ಸ್ವತ್ತುಗಳ ಮಾರಾಟವನ್ನು ಪ್ರತಿಬಂಧಿಸಬೇಕು

ಪರದೇಶಗಳಿಂದ ಸಂಸ್ಥಾನಕ್ಕೆ ಬಂದಿರುವ ಮಿಷನರಿಗಳು ಈ ದೇಶದ ಕ್ರೈಸ್ತ ಜನರ ಉದ್ಧಾರಕ್ಕೆಂದು ಸರ್ಕಾರದಿಂದಲೂ, ಸ್ಥಳೀಯ ಸಂಸ್ಥೆಗಳಿಂದಲೂ ನಿವೇಶನಗಳನ್ನು ಉಚಿತವಾಗಿ ಪಡೆದು ಕೆಲಕಾಲಾ ನಂತರ ವಿಪರೀತ ಲಾಭದ ಬೆಲೆಗೆ ಮಾರಾಟ ಮಾಡುತ್ತಿರುವುದನ್ನು ನಿರ್ಬಂಧಿಸಬೇಕೆಂದು ರಾಜಧಾನಿಯ ಶ್ರೀ ಜೆ ಸ್ವಾಮಿದಾಸರು ಸೂಚಿಸಿ, ಪ್ರತಿನಿಧಿ ಸಭೆಯಲ್ಲಿ ಶ್ರೀ ಜ ಎಚ್ ದೇವದಾಸ್‌ರವರು ಈ ಬಗ್ಗೆ ಚರ್ಚೆಗೆ ತಳಿಸಿರುವ ನಿರ್ಣಯಕ್ಕೆ ಎಲ್ಲ ಪ್ರಜಾ ಪ್ರತಿನಿಧಿಗಳೂ ಬೆಂಬಲ [illegible]

ಅರಮನೆ ಸುದ್ದಿ

ಮೈಸೂರು, ಶನಿವಾರ, ಅಕ್ಟೋಬರ್ [illegible]— ಮದರಾಸ್ ಗೌರ್ನರವರೂ ಅವರ ಪತ್ನಿ ಲೇಡಿ ನೈ ಅವರೂ, ಲೆ॥ ಜ॥ ಸರ್ ಲೋಖಾರ್ಟ್ ಮತ್ತು ಲೇಡಿ ಲೋಖಾರ್ಟರವರೂ ಮತ್ತು ಕ॥ ಮತ್ತು ಮಿಸೆಸ್ ಎಡ್ವರ್ಡ್ಸ್ ರವರೂ ಈ ದಿನ ಅರಮನೆಯಲ್ಲಿ ಶ್ರೀಮನ್ಮಹಾರಾಜರವರನ್ನು ಭೇಟಿ ಮಾಡಿದರು

ಕನ್ನಡ ಲಿಪಿ ಸುಧಾರಣೆ

ವಿಶ್ವವಿದ್ಯಾನಿಲಯದ ಮನಶ್ಶಾಸ್ತ್ರದ ಅಧ್ಯಾಪಕರಾಗಿರುವ ಡಾ॥ ಬಿ ಕುಪ್ಪುಸ್ವಾಮಿಯವರು ಕನ್ನಡ ಲಿಪಿಯಲ್ಲಿ ಮಾಡಿರುವ ಸುಧಾರಣೆಗಳನ್ನು ಪರಿಶೀಲಿಸಲು ಸಂಸ್ಥಾನದ ವಯಸ್ಕರ ವಿದ್ಯಾಭ್ಯಾಸ ಸಮಿತಿಯವರು ೮ ನೇ ತಾ॥ ಮಂಗಳವಾರ ಬೆಳಿಗ್ಗೆ ೮-೩೦ ಗಂಟೆಗೆ ಮಹಾರಾಜಾ ಕಾಲೇಜಿನಲ್ಲಿ ವಿದ್ಯಾ ಇಲಾಖೆಯ ಮುಖ್ಯಾಧಿಕಾರಿಗಳಾದ ಶ್ರೀ ಕಲ್ಯಾಣರಾಜ ಚೆಟ್ಟಿಯವರ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ಕರೆದಿರುವರು.

ಆರೋಗ್ಯ ಯುವಕ ಸಂಘ

[illegible] ಪೇಟೆಯಲ್ಲಿರುವ ಮೇಲ್ಕಂಡ ಸಂಘದಲ್ಲಿ ನಿನ್ನೆ ಸಂಜೆ ಶ್ರೀ ವಿದ್ಯಾಗಣಪತಿ ಮಂಗಳಾರತಿಯು ವೈಭವದಿಂದ ನೆರವೇರಿಸಲಾಯಿತು.

ದಿವಾನರು

ನಿನ್ನೆ ಮಧ್ಯಾಹ್ನ ದಿವಾನರು ಮಂಡ್ಯಕ್ಕೆ ಭೇಟಿ ಇತ್ತು [illegible] ಬೆಳೆಯುವವರಿಗಾಗಿ ಇಡಲಾಗಿದ್ದ [illegible] ಬಹುಮಾನವನ್ನು ವಿನಿಯೋಗ ಮಾಡಿದರು

ನ್ಯಾಷನಲ್ ಇನ್‌ಸ್ಟಿಟ್ಯೂಟ್

ಮೊನ್ನೆ ಮಧ್ಯಾಹ್ನ ಮೈಸೂರ ಡಿ ಸುಬ್ಬಯ್ಯ ರೋಡಿನಲ್ಲಿರುವ 'ಕಲ್ಯಾಣಿ ನಿವಾಸ' ದಲ್ಲಿ ಪ್ರೊಫೆಸರ್ ಎ. ಎ. ಕೃಷ್ಣಸ್ವಾಮಿ ಅಯ್ಯಂಗಾರ್ ರವರ ಅಧ್ಯಕ್ಷತೆಯಲ್ಲಿ ನ್ಯಾಷನಲ್ ಇನ್‌ಸ್ಟಿಟ್ಯೂಟಿನ ಆರಂಭೋತ್ಸವ ನಡೆಯಿತು. ಉಪಾಹಾರ, ಪ್ರಾರ್ಥನೆ [illegible] ಕಾರ್ಯದರ್ಶಿಗಳಾದ ಶ್ರೀ ಎ ಕೆ ಶ್ರೀನಿವಾಸನ್‌ರವರು ಸ್ವಾಗತ ಭಾಷಣವನ್ನು ಮಾಡಿ [illegible] ಗಳನ್ನು ಸಭೆಗೆ ತಿಳಿಸಿದರು. ಅಧ್ಯಕ್ಷರು ಸಂಸ್ಥೆಯ [illegible] ಉದ್ಘಾಟನೆ ಮಾಡಿದರು. ಶ್ರೀ [illegible], ಮ [illegible] ವಿದ್ಯಾ [illegible]

ರಕ್ಷಣಾ ಬಾಧ್ಯತೆ ಪ್ರಶ್ನೆಯ [illegible]

ಮೈಸೂರು

ಆಯುಧ ಪೂಜೆಗಾಗಿ ಪ್ರ॥ ಪ॥ ಸಭೆಯನ್ನು ಸಂಜೆ ನಾಲ್ಕು ಗಂಟೆಗೇ ದಿವಾನ ಅಧ್ಯಕ್ಷರು ಮುಕ್ತಾಯ ಮಾಡಿದಾಗ [illegible] ಯ ನಾಯಕರುಗಳ ಸಮ್ಮತಿಯನ್ನು [illegible] ದಿದ್ದುದರಿಂದ ಸಭೆಯು ಸಕ್ಕೆ [illegible] ಬಂದಿದೆಯೆಂಬ ಪ್ರಶ್ನೆಯನ್ನು ಶ್ರೀ ಎಸ್ ವಿ ಕೃಷ್ಣಮೂರ್ತಿರಾಯರು ತಂದರು. ದಸ್ಯರ ಅಭಿಪ್ರಾಯದಂತೆಯೇ [illegible] ದೆ ಹಾಕಿದುದಾಗಿ ಹೇಳಿ ಈ ಸೂಚನೆಯನ್ನು ಅಧ್ಯಕ್ಷರು ತಳ್ಳಿ ಹಾಕಿದರು.

ಶ್ರೀಮನ್ಮಹಾರಾಜರವರಿಂದ ಸ್ಕೌಟ್ ಕೇಂದ್ರದ ಶಂಕು ಸ್ಥಾಪನೆ

ಶ್ರೀಮನ್ಮಹಾರಾಜರವರು ಇದೇ ತಾ ೧೧ ನೇ ಶುಕ್ರವಾರ ಬೆಳಗ್ಗೆ ೯-೩೦ ಕ್ಕೆ ಧರ್ಮ ರಕ್ಷಕರ [illegible] ಸ್ಕೌಟ್ಸ್‌ನವರಿಂದ ಧರ್ಮಾರ್ಥವಾಗಿ ಕಟ್ಟಿಸಿ ಕೊಡಲ್ಪಡುವ ಶ್ರೀ ಜಯಚಾಮರಾಜೇಂದ್ರ ಸ್ಕೌಟ್ ಕೇಂದ್ರ ಭವನದ ಶಂಕು ಸ್ಥಾಪನೆಯನ್ನು ನೆರವೇರಿಸುವರು.

ಭರತಪುರದಲ್ಲಿ ಸುಧಾರಣೆ

ನಮ್ಮ ಮಹಾ ಸಭೆಗಳವರ ರಾಜಧಾನಿಯಾದ ಭರತ ಪುರದ ಅರಸರು ಮೊನ್ನೆ ನಡೆಸಿದ ನವರಾತ್ರಿ ದರ್ಬಾರಿನಲ್ಲಿ ಒಂದು ಘೋಷಣೆಯನ್ನು ಹೊರಡಿಸಿ ಅಲ್ಲಿನ ಶಾಸನ ಸಭೆಯು ಚುನಾಯಿತ ಸದಸ್ಯರಿಂದ ಚುನಾಯಿತರಾದ ಮಂತ್ರಿಗಳನ್ನು ನೇಮಿಸ ಬೇಕಾಗಿ ಪ್ರಕಟಿಸಿರುವರು. ಅಲ್ಲದೆ ಸಂಸ್ಥಾನದಲ್ಲಿ ರಾಜಕೀಯ ಸುಧಾರಣೆಗಳನ್ನು ಸೂಚಿಸಲು ಜನ [illegible] ಪ್ರತಿನಿಧಿಗಳಿಂದಲೂ [illegible] ಸರ್ಕಾರದಿಂದಲೂ [illegible] ರಚಿಸಿರುವರು. ಮತ್ತು [illegible] ವ್ಯವಸ್ಥೆಯು ಮೇಲೆ ಬರುವ [illegible] ಶಾಸನ ಸಭೆಗೆ [illegible]

ಗಾಂಧೀಜಿ ಮೈಸೂರಿಗೆ ಬರಲಾಗುವುದೇ ?

ಮುಂದಿನ [illegible] ಹಿಂದೂಸ್ತಾನ [illegible] ಬರುವರೇ ?— ಎಂದು ಒಬ್ಬ ವಿದೇಶೀಯ ವರದಿಗಾರರು ಕೇಳಿದಾಗ, ಮಹಾತ್ಮಾ ಗಾಂಧಿಯವರು ಹೇಳಿ, ತಾವು ಮೈಸೂರಿಗೆ ಬರಲು ಅಪೇಕ್ಷಿಸುವುದಾಗಿಯೂ, ಹಾಗಿದ್ದರೂ ಅದಕ್ಕೆ ಮೈಸೂರಿನ ಅರಸರು ಹರಿಜನರ ದೇವಾಲಯ ಪ್ರವೇಶಕ್ಕೆ ಬಿಟ್ಟು ಕೊಡುವುದೇ ತಮ್ಮ ಮೊದಲನೇ ಕೆಲಸ [illegible] ಎಂದು ನುಡಿದರು [illegible] ಮಾನ ಪ್ರತಿನಿಧಿ [illegible] ರಾಜ್ಯದ [illegible] ಸ್ಟೇಟ್ಸ್ [illegible] ದಿನ ಮೈಸೂರು [illegible] ಸುದ್ದಿ ಬಂದಿದೆ

ಅಖಿಲ ಭಾರತ ಸಂಸ್ಥಾನದಲ್ಲಿ ಜನಾನುರಾಗೀ ಸರ್ಕಾರ

ಮೊನ್ನೆ ದಿನ ನವರಾತ್ರಿ ದರ್ಬಾರಿನಲ್ಲಿ [illegible] ಸಂಸ್ಥಾನದ ದೊರೆಯು ಒಂದು ಘೋಷಣೆ ಹೊರಡಿಸಿ ತಮ್ಮ ದೇಶದಲ್ಲಿ ಜನಾನುರಾಗೀ ಸರ್ಕಾರದ ಸ್ಥಾಪನೆಗೆ [illegible] [illegible]

ಸಾಧ್ವಿ

ತಾ|| ೭-೧೦-೪೬ ಸೋಮವಾರ

ಭಟ್ಕಳಾ ವಿಚಾರವಿಲ್ಲವೇ ?

ಬೊಂಬಾಯಿ ಶಾಸನ ಸಭೆಯಲ್ಲಿ ಬಂದ ಪ್ರಶ್ನೆಯೊಂದಕ್ಕೆ ಉತ್ತರವೀಯುತ್ತಾ ಅಲ್ಲಿನ ಮಂತ್ರಿಗಳು ಮೈಸೂರು ಸರ್ಕಾರಕ್ಕೂ ತಮಗೂ ಭಟ್ಕಳ್ ಬಂದರಿನ ವಿಚಾರವಾಗಿ ಯಾವ ಪತ್ರ ವ್ಯವಹಾರವೂ ನಡೆಯುತ್ತಿಲ್ಲವೆಂದು ತಿಳಿಸಿರುವರು. ಮೈಸೂರಿನ ಪ್ರಮುಖ ಪ್ರಶ್ನೆಗಳಲ್ಲಿ ಈ ಬಂದರಿನ ಸ್ಥಾಪನೆಯೂ ಒಂದು. ನೂತನ ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರಿಗೆ ಮೈಸೂರು ನಗರದ ವರ್ತಕರು ಬಿನ್ನವತ್ತಳೆಯನ್ನರ್ಪಿಸಿದಾಗ ಈ ಅಂಶವನ್ನು ಅವರು ಒತ್ತಾಯ ಪೂರ್ವಕವಾಗಿ ಅರಿಕೆ ಮಾಡಿಕೊಂಡರು. ಈ ಪ್ರಶ್ನೆಯು ಬೇಗನೆ ಅನುಕೂಲವಾಗಿ ಬಗೆ ಹರಿಯಬಹುದೆಂಬ ಆಶ್ವಾಸನೆಯನ್ನು ದಿವಾನರು ನೀಡಿದರು. ಆದರೆ ಈ ವಿಚಾರವಾಗಿ ಯಾವ ಪ್ರಸ್ತಾಪವೂ ನಡೆಯುತ್ತಿಲ್ಲವೆಂದು ಬೊಂಬಾಯಿನ ಮಂತ್ರಿಗಳು ಹೇಳಿರುವುದು ಆಶಾ ಭಂಗವನ್ನುಂಟು ಮಾಡಿದೆ.

ಭಟ್ಕಳ್ ಬಂದರನ್ನು ಸ್ಥಾಪಿಸುವ ಯೋಜನೆಯು ಅನೇಕ ವರ್ಷಗಳಿಂದಲೂ ಜನರ ಕಣ್ಣ ಮುಂದೆ ಇರುತ್ತವೆ. ಸರ್ ಎಂ. ವಿಶ್ವೇಶ್ವರಯ್ಯನವರ ಕಾಲದಲ್ಲಿ ಇದು ಕಾರ್ಯಗತವಾದೀತೆಂಬ ಆಶೆಯೂ ಮೂಡಿತ್ತು. ಸರ್ ಮಿರ್ಜಾರವರೂ ಸಹ ಇದಕ್ಕಾಗಿ ಬಹಳ ಮಟ್ಟಿಗೆ ಹೆಣಗಾಡಿದರು. ಅಂದ ಮೇಲೆ ಇದಕ್ಕಾಗಿ ಬಹಳ ಕಾಲ ವ್ಯವಹಾರವು ನಡೆದಿದೆ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಈಗ ಹಿಂದೂಸ್ಥಾನದ ಅನೇಕ ವ್ಯವಹಾರಗಳು ಇತ್ಯರ್ಥವಾಗುವ ಕಾಲವಾಗಿದೆ. ಭಟ್ಕಳ್ ಬಂದರನ್ನು ಪರಿಷ್ಕರಿಸಿ ನಿಜವಾ ಪಕ್ಕೆ ತರುವ ನೀತಿಯನ್ನು ನೂತನ ಕೇಂದ್ರ ಸರ್ಕಾರವನ್ನೂ ಸಹ ಅಂಗೀಕರಿಸಿರುತ್ತದೆ. ಈ ಸಮಯದಲ್ಲಿ ಮೈಸೂರು ಸರ್ಕಾರವು ಬೊಂಬಾಯಿ ಮತ್ತು ಭಾರತ ಸರ್ಕಾರಗಳೊಡನೆ ವ್ಯವಹಾರವನ್ನು ಮುಂದುವರಿಸುವುದು ಉಚಿತವಾಗಿದೆ. ಹೀಗಿದ್ದರೂ ಇದರ ಪ್ರಸ್ತಾಪವೇ ಆಗಿರುವುದಿಲ್ಲವೆಂದು ಬೊಂಬಾಯಿ ಮಂತ್ರಿಗಳು ಹೇಳಿರುವುದರಿಂದ ಅತ್ಯಂತ ಆಶ್ಚರ್ಯವುಂಟಾಗಿದೆ.

ದಿವಾನರು ಪ್ರಜಾ ಪ್ರತಿನಿಧಿ ಸಭೆಯಲ್ಲಿ ಮಾಡಿದ ಭಾಷಣದಲ್ಲಿಯೂ ಇದರ ವಿಚಾರವೇ ಇರಲಿಲ್ಲ. ಆದುದರಿಂದ ಈ ಬಗ್ಗೆ ಪ್ರಜಾ ಜನರ ಕುತೂಹಲವು ಇನ್ನೂ ಹೆಚ್ಚಾಗಲು ಕಾರಣವಾಗಿದೆ. ರೈಲ್ವೆ ಪ್ರಗತಿಯನ್ನು ವಹಾ ಮಾಡುವುದು, ಹಿಂದಿನ ಪ್ರದೇಶವನ್ನು ಪಡೆಯುವುದು, ಭಟ್ಕಳ್ ಬಂದರನ್ನು ಸ್ಥಾಪಿಸುವುದು ಇವು ಮೈಸೂರಿನ ಮುಂದೆ ಅನೇಕ ವರ್ಷಗಳಿಂದ ಇರುವ ಪ್ರಶ್ನೆಗಳು. ಇವುಗಳೊಂದನ್ನೂ ದಿವಾನರು ಪ್ರಸ್ತಾಪ ಮಾಡಿರುವುದಿಲ್ಲ. ಪ್ರತ್ಯೇಕವಾಗಿ ಭಟ್ಕಳ್ ಬಂದರಿನ ಬಗ್ಗೆ ಸಂಬಂಧಿಸುವ ಪ್ರಸಂಗವು ಯಾವ ಘಟ್ಟದಲ್ಲಿ ಇರುತ್ತದೆಂಬುದನ್ನು, ಈ ವಿಚಾರದಲ್ಲಿ ನಮ್ಮ ಸರ್ಕಾರದವರು ಕೈಗೊಳ್ಳಲಿರುವ ಕಾರ್ಯಕ್ರಮವನ್ನು ಮಹಾಜನರ ತಿಳುವಳಿಕೆಗಾಗಿ ಪ್ರಕಟಪಡಿಸುವುದು ಅತ್ಯವಶ್ಯವಾಗಿದೆ.

ವಾರ ಭವಿಷ್ಯ

೭-೧೦-೪೬ ರಿಂದ ೧೩-೧೦-೪೬ ರ ವರೆಗೆ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ಮೇಷ—ಆರೋಗ್ಯ ಉತ್ತಮವಾಗಿರುವುದು. ಆದಾಯ ವೆಚ್ಚಗಳು ಸಮವಾಗುವುವು. ಪ್ರವಾಸ ನಿಲ್ಲಿಸಿ. ನಿಮ್ಮ ಆಪ್ತ ಬಂಧುಗಳೊಬ್ಬರ ವಿಯೋಗದಿಂದ ದುಃಖಿಗಳಾಗುವಿರಿ. ಮನೆಯಲ್ಲಿ ಕಳುವು ಸಂಭವಿಸಬಹುದು ಎಚ್ಚರಿಕೆಯಿಂದಿರಿ.

ವೃಷಭ—ಧನಲಾಭ ಪ್ರಾಪ್ತಿಯಾಗಿ ಸಂತೋಷದಿಂದ ಕಾಲ ಕಳೆಯುವಿರಿ. ಶರೀರ ಸ್ಥಿತಿಯು ಚೆನ್ನಾಗಿರುವುದು. ಬಂಧು ಮಿತ್ರರ ಭೇಟಿ ಒದಗುವುದು. ಆರ್ಥಿಕ ಸ್ಥಿತಿ ಉತ್ತಮಗೊಂಡು ಹೊಸ ಉದ್ಯಮದಲ್ಲಿ ಕೈ ಹಾಕುವಿರಿ.

ಮಿಥುನ—ನಿಮ್ಮ ಭವಿಷ್ಯವು ಚೆನ್ನಾಗಿ ರೂಪಗೊಳ್ಳುವ ಒಂದು ಹೊಸ ಕಾರ್ಯ ಜರುಗುವುದು. ಆರೋಗ್ಯ ಉತ್ತಮ. ಪರಿವಾರದ ಮನಸ್ತಾಪ ಸಹ ದೂರವಾಗುವುದು. ವ್ಯಾಪಾರ ಉದ್ಯೋಗದಲ್ಲಿ ಲಾಭ ಉಂಟಾಗುವುದು. ಪ್ರವಾಸದಲ್ಲಿ ಫಲಪ್ರಾಪ್ತಿ.

ಕಟಕ—ಮನೆಯವರ ಆರೋಗ್ಯ ಕೆಟ್ಟು, ಅವರ ಉಪಚಾರದ ಹೊರೆಯಿಂದ ನಿಮ್ಮ ಶರೀರ ಸ್ಥಿತಿ ಕೆಡುವ ಸಂಭವವಿದೆ. ಖರ್ಚು ಹೆಚ್ಚಿ ಬೇಸರ ಪಡುವಿರಿ. ನಿಮ್ಮ ಬಂಧುಗಳ ಕೂಡ ಕಲಹವಾಡುವ ಸನ್ನಿವೇಶಗಳು ಒದಗುವುವು. ವ್ಯಸನಕರವಾದ ವಾರ್ತೆ ಕೇಳುವಿರಿ.

ಸಿಂಹ— ನಿಮ್ಮ ಹರ ಸಿದ್ಧಿಸುವ ಕಾಲ ಬಂದಿದೆ. ಈ ವಾರ ಆರ್ಥಿಕ ಸ್ಥಿತಿ ಉತ್ತಮಗೊಂಡು ಸಂತೋಷದಿಂದ ಕಾಲ ಕಳೆಯುವಿರಿ. ಆರೋಗ್ಯ ಉತ್ತಮ. ಪ್ರವಾಸದಿಂದ ಬಹಳ ಲಾಭ. ನ್ಯಾಯಾಸ್ಥಾನದಲ್ಲಿ ನಿಮ್ಮ ಕಡೆಗೇ ಜಯ ಲಭಿಸುವುದು.

ಕನ್ಯಾ- ಕೋಪದಿಂದ ಅನರ್ಥಗಳು ಸಂಭವಿಸುವುವೆಂಬ ದನ್ನು ಜ್ಞಾಪಿಸಿಕೊಳ್ಳಿ. ಅಜಾಗರೂಕತೆಯಿಂದ ನಿಮ್ಮ ಮೇಲಿರುವ ಜವಾಬ್ದಾರಿಯನ್ನು ನಿರ್ವಹಿಸಿ. ಆರೋಗ್ಯಕ್ಕಾಗಿ ಹಣ ಬಹಳವಾಗಿ ಖರ್ಚಾಗುವುದು. ಪ್ರವಾಸ ನಿಲ್ಲಿಸಿ.

ತುಲಾ- ಆರೋಗ್ಯ ಚೆನ್ನಾಗಿಲ್ಲದೆ, ಮನಸ್ಸಿನಲ್ಲಿ ಜಿಗುಪ್ಸೆ ಹುಟ್ಟಿ ಕೆಲಸಕಾರ್ಯಗಳೆಲ್ಲಾ ಅರ್ಧರ್ಧಕ್ಕೇ ನಿಲ್ಲುವುವು. ನಿಮ್ಮ ಪ್ರತಿ ಸ್ಪರ್ಧಿಗಳು ಈ ವಾರ ತಮ್ಮ ಕಾರ್ಯ ಸಾಧನೆಗೆ ತೊಡಗುವರು. ಪ್ರವಾಸದಲ್ಲಿ ಹಾನಿ. ಅಗ್ನಿಯಿಂದ ಅಪಾಯ ದೊರಕುವ ಸಂಭವವಿದೆ.

ವೃಶ್ಚಿಕ— ಈ ವಾರ ನೀವು ಹೆಚ್ಚಿಗೆ ಯಾರ ಬಳಿಯೂ ವಾದಕ್ಕೆ ನಿಲ್ಲಬೇಡಿ. ನಿಮ್ಮ ಮೇಲೆ ದೌರ್ಜನ್ಯ ನಡೆಯುವ ಸೂಚನೆಗಳಿವೆ. ಆರೋಗ್ಯ ಸಾಧಾರಣವಿರುವುದು. ವ್ಯಾಪಾರ ವ್ಯವಹಾರಗಳಲ್ಲಿ ದುಡುಕಿ ಧನ ಹಾನಿಯಾಗಲಿದೆ.

ಧನುಸ್ಸು- ನೀವು ಧೈರ್ಯವಾಗಿ ಈ ವಾರ ಮುನ್ನುಗ್ಗಿ. ನಿಮ್ಮ ಕೆಲಸಕಾರ್ಯಗಳಲ್ಲೆಲ್ಲಾ ಜಯ ಕಟ್ಟಿಟ್ಟದ್ದು. ಆರೋಗ್ಯ ಚೆನ್ನಾಗಿರುವುದು. ವರಮಾನ ಚೆನ್ನಾಗಿರುವುದು. ನೌಕರಿ ವ್ಯವಹಾರಗಳಲ್ಲಿ ಮೇಲಧಿಕಾರಿಗಳಿಂದ ಪ್ರಶಂಸೆ. ಪ್ರವಾಸದಲ್ಲಿ ಕಾರ್ಯ ಸಾಧನೆ.

ಮಕರ- ಸಮಯಕ್ಕೆ ಸರಿಯಾಗಿ ಹೊಂದಿಕೊಂಡು ಹೋಗುವ ಸ್ವಭಾವವನ್ನು ಅರಿಯಿರಿ. ಮನಸ್ಸಿಗೆ ಸಮಾಧಾನವಿಲ್ಲದೆ ಕೆಲಸಕಾರ್ಯಗಳಲ್ಲಿ ಜಿಗುಪ್ಸೆ. ಆರೋಗ್ಯ ಕೆಡುವ ಸಂಭವಗಳಿವೆ. ದುರ್ಜನರ ಬಗಲಿಗೆ ಬಿದ್ದು ವೃಥಾ ಆಕ್ಷೇಪಣೆಗೆ ಗುರಿಯಾಗುವಿರಿ. ಆರ್ಥಿಕ ಸ್ಥಿತಿ ಕೆಡುವ ಸಂಭವವಿದೆ.

ಕುಂಭ- ಸ್ವಪ್ರತಿಭೆಯಿಂದ ಎಲ್ಲರನ್ನೂ ದಿಗ್ಭ್ರಾಂತರನ್ನಾಗಿ ಮಾಡುವಿರಿ. ಆರೋಗ್ಯ ಚೆನ್ನಾಗಿರುವುದು. ಧನಲಾಭ ಪ್ರಾಪ್ತಿಯಾಗಿ ಸಂತೋಷ ಉಂಟಾಗುವುದು. ಪ್ರವಾಸದಲ್ಲಿ ಜಯ. ಮಹತ್ವದ ಕಾರ್ಯ ಸಾಧನೆಯಲ್ಲಿ ತೊಡಗುವಿರಿ. ವಾಣಿಜ್ಯದಲ್ಲಿ ಸುವಾರ್ತೆ ಕೇಳುವಿರಿ.

ಮೀನ- ಸಂಸಾರದ ಕಷ್ಟದಲ್ಲಿ ಸಿಲುಕಿ ಸಂಕಟಪಡುವಿರಿ. ನಿರಾಶರಾಗದೆ ಧೈರ್ಯದಿಂದ ಮುಂದೆ ನುಗ್ಗಿ. ಮುಂದೆ ಸುಖ ಅನುಭವಿಸುವ ಯೋಗವಿದೆ. ಆರೋಗ್ಯ ಚೆನ್ನಾಗಿರಲಾರದು. ಆರ್ಥಿಕ ಚಿಂತೆಗೊಳಗಾಗುವಿರಿ. ವ್ಯಾಪಾರ, ವ್ಯವಹಾರಗಳಲ್ಲಿ ತೊಂದರೆ ಸಂಭವಿಸುವುದು.

ನೋಟೀಸ್

ನಮ್ಮ ಕಂಪನಿಗೆ ಪಾಲುಗಾರರಾಗಲಿ, ಯಾ ಕಮೀಷನ್ ಏಜಂಟರಾಗಲಿ, ಯಾ ಸೇಲ್ ಹೋಲ್ಡರ್ ಆಗಲಿ ಯಾರೂ ಇರುವುದಿಲ್ಲ. ಸದರಿ ಕಂಪನಿ ಹೆಸರಿನಿಂದ ಅನ್ಯರಿಂದ ಯಾರಾದರೂ ಲೇವಾದೇವಿಯನ್ನು ನಡೆಸಿದ್ದಲ್ಲಿ ಕಂಪನಿಯು ಮಾಲೀಕರು ಯಾವ ರೀತಿಯಲ್ಲೂ ಹೊಣೆಗಾರರಲ್ಲ.

(Sd) AZEEZ A SATTAR SAIT

Pro:— **Neo Furniture Co.,**

Irwin Road :: Mysore

ಸುಲಭ ಬೆಲೆ! Estd 1915 ತ್ವರ ಮಾಡಿರಿ!

SRI RAMA ELECTRIC STORES

Govt. Licenced Electrical Contractors & Engineers

ಎಲ್ಲಾ ವಿಧವಾದ ಎಲೆಕ್ಟ್ರಿಕ್ ಪವರ್ ಮತ್ತು ಲೈಟಿಂಗ್ ಇನ್ಸ್ಟಲೇಷನ್ ಕೆಲಸಗಳನ್ನೂ ಕಂಟ್ರೋಲ್ ದರದಲ್ಲಿಯೂ, ಸಕಾಲದಲ್ಲಿಯೂ ಮಾಡಿಕೊಡುತ್ತೇವೆ

ನಮ್ಮಲ್ಲಿ ಎಲ್ಲಾ ವಿಧವಾದ ಎಲೆಕ್ಟ್ರಿಕ್ ಸಾಮಾನುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಮಹಾಜನರು ಪ್ರೋತ್ಸಾಹಿಸಬೇಕಾಗಿ ಕೋರುತ್ತೇವೆ

ಶ್ರೀ ರಾಮಾ ಎಲೆಕ್ಟ್ರಿಕ್ ಸ್ಟೋರ್ಸ್,

(ಬಜಾರದ ಕೃಷ್ಣಸ್ವಾಮಿ ರಾಮ ಮಂದಿರ ಎದುರು,

ನಾರಾಯಣ ಶಾಸ್ತ್ರಿ ರೋಡ್, ಮೈಸೂರು.

ಅಮೇರಿಕಕ್ಕೆ ರಾಜಾಜೀ ರಾಯಭಾರ

ಕೇಂದ್ರ ಹಂಗಾಮಿ ಸರ್ಕಾರವು ಅಮೇರಿಕವು ರಾಯಭಾರಿಗಳ ವಿನಿಮಯವನ್ನು ಮಾಡಿಕೊಳ್ಳಲು ಸಿದ್ಧವಾಗಿದೆಯೆಂದು ಪ್ರಕಟವಾಗಿದೆ. ಶ್ರೀ ಸಿ. ರಾಜಗೋಪಾಲಾಚಾರಿಯವರು ಮೊದಲನೇ ರಾಯಭಾರಿಯಾಗಿ ತೆರಳಬಹುದೆಂದೂ ವರದಿಯಾಗಿದೆ.

ಮುಸ್ಲಿಂ ಲೀಗಿನವರೊಡನೆ ಲೀಗಿನವರ ಸಮಾಲೋಚನೆ

ಮುಸ್ಲಿಂ ಲೀಗಿನವರು ಕಾನೂನು ಭಂಗದ ಕಾರ್ಯಾಚರಣೆಯನ್ನು ಕೈಗೊಳ್ಳುವ ಬಗ್ಗೆ ಜಾರವಾಗಿ ದಹಲಿಯಲ್ಲಿ ಸೇರಲಿರುವ ನಾನಾ ಮುಖಂಡರ ಸಮ್ಮೇಳನದ ಸಲಹೆಯನ್ನು ತೆಗೆದುಕೊಳ್ಳುತ್ತಿರುವರೆಂದು ತಿಳಿದುಬಂದಿದೆ

ರಾಜ್ ಕಮಲ್, ಮೈಸೂರು

3-10-16 ರಿಂದ 3 ನೇ ವಾರ

ಸ್ವರ್ಗಸೀಮ

ಭೂಮಿಕೆ:—ಜಯಮ್ಮ, ಛಾಯಾ, ನಾಗಯ್ಯ, ಲಿಂಗಮೂರ್ತಿ

Edited, printed and published A. R. Nagarajan at the Sadhvi P. D. Subbaiah Road, Mysore.

ಈ ಏವತ್ತು ವರ್ಷಗಳಿಂದ ಮಾನವ ಲೋಕಕ್ಕೆ ಆರೋಗ್ಯಾನಂದಗಳನ್ನು ನೀಡುತ್ತಾ ಅನಿರ್ವಾಣವಾಗಿ, ಅವಿಚ್ಛಿನ್ನವಾಗಿ ಸೇವೆ ಮಾಡಿ, ಏನ ಬಿರಾಜಿತ್ವವೇ ಹೊಂದ ಶ್ರೀ ದ್ಯುದ ಶ್ಲಾಘಿ ಎಷ್ಟೋ ಗರ್ವಿಸುತ್ತದೆ.

ಪೋ. ನಂ. 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಮಂಗಳವಾರ ೧—೧೦—೪೬ [ಸಂಚಿಕೆ ೭೧

ರಾಜೇಂದ್ರರ ಪ್ರವಾಸ ಮುಂದಕ್ಕೆ ಹೋಯಿತು

...ಯನ್ನು ಮುಂದುವರಿಸಿದ ವಿಚಾರ

ಹನುಮಂತಯ್ಯನವರ ಟೀಕೆ

ಪ್ರ॥ ಪ್ರ॥ ಸಭೆಯ ಕಾಂಗ್ರೆಸ್ ಪಕ್ಷದ ಮುಖಂಡ ಶ್ರೀ. ಕೆ. ಹನುಮಂತಯ್ಯನವರು ಈ ರೀತಿ ಹೇಳಿಕೆ ಇತ್ತಿದ್ದಾರೆ:— ಪ್ರತಿ ಶುಕ್ರವಾರ ಮಧ್ಯಾಹ್ನ ೧ ಗಂಟೆಯಿಂದ ೨ ಗಂಟೆ ವರೆಗೆ ಪ್ರ॥ ಪ್ರ॥ ಸಭೆ ... ನಡೆಯುದೆ ಇರುವಂತೆ ಹೊಸ ದಿವಾನರು ... ಏರ್ಪಾಡು ಮಾಡಿದ್ದಾರೆ. ಇದು ಮುಸಲ್ಮಾನ ಸದಸ್ಯರು ಪ್ರಾರ್ಥನೆಗಾಗಿ ಹೋಗಲು ಕಲ್ಪಿಸಿದ ಹೊಸ ಸೌಲಭ್ಯ. ಪ್ರ॥ ಪ್ರ॥ ಸಭೆ ಹುಟ್ಟಿದಂದಿನಿಂದ ಈ ರೀತಿ ಇರಲಿಲ್ಲ. ಹಿಂದೆ ಈ ಪ್ರಶ್ನೆಯು ಬಂದು ಆಗಿನ ದಿವಾನರುಗಳೂ ಮತ್ತು ಸಭೆಯೂ, ... ಪದ್ಧತಿಗಳನ್ನು ರಾಜಕೀಯಕ್ಕೆ ... ಸಡದೆ ಇದಕ್ಕೆ ಅವಕಾಶವೀಯಲಿಲ್ಲ. ಈಗಿನ ದಿವಾನರು ಹಿಂದಿನ ಪದ್ಧತಿಯನ್ನು ... ಅಧ್ಯಕ್ಷರ ... ಅಲಕ್ಷಿಸಿ ಈ ಹೊಸ ದಿವಾನ ... ನ್ನು ಒಂದು ಕೋಮಿನ ಸದಸ್ಯರಿಗೆ ಇತ್ತಿದ್ದಾರೆ. ಸಭೆಯ ಅಭಿಪ್ರಾಯವ ತೆಗೆದುಕೊಂಡು ಶಾಸನಬದ್ಧವಾಗಿ ಅ ... ನಡೆಯಬೇಕಾಗಿತ್ತು. ಆದರೆ ಅವರು ... ನ್ನು ಉಪೇಕ್ಷಿಸಿದರು. ಹಿಂದಿನ ... ವನ್ನು ತ್ಯಜಿಸಿದರು.

... ಮೊದಲಿಯಾರ್‌ರವರು ಹಿಂದೂ-ಮುಸ್ಲಿಂ ಸೌಹಾರ್ದ ಬೆಳೆಸಲು ಈ ರೀತಿ ... ದೆನೆಂದು ಹೇಳಿದರು. ಅವರ ಉ... ಒಂದು ವೇಳೆ ಇದಾಗಿದ್ದರೂ ವಾಸ್ತವವಾಗಿ ಅವರು ಕೊಟ್ಟ ತೀರ್ಮಾನದ ... ಗಳು ಆ ಸೌಹಾರ್ದವನ್ನು ದೂ... ಸಂಘವುಗಳಾಗಿವೆ. ಸಭೆಯ ಹಿಂದೂ ... ಮುಸ್ಲಿಂ ಸದಸ್ಯರುಗಳು ಸಮಾಲೋ... ವಿಶ್ವಾಸ-ಸೌಹಾರ್ದ ವಿಚಾರ ಯುಕ್ತ ... ಉಭಯತ್ರರ ಮಧುರ ಬಾಂಧವ್ಯ ಬೆಳೆಯುತ್ತಿತ್ತು. ಈ ... ದಿಯನ್ನು ಕೊಟ್ಟವರು ಸರ್. ಮೊದಲಿಯಾರ್ ... ಪಡೆದವರು ಮುಸ್ಲಿಂ ಸದಸ್ಯರು. ... ದ ಇವರಿಬ್ಬರ ಸ್ನೇಹ-ಸೌಹಾರ್ದ ... ಮಾತ್ರ ಬೆಳೆಯಲವಕಾಶವಾಯಿತು ... ಹಿಂದೆ ಈ ಸಭೆಯೂ ಅದರ ದಿವಾನರು ... ಅಧ್ಯಕ್ಷರುಗಳೂ ಈ ದಿಯಾಯಿತಿಯನ್ನು ... ಕೊಡಲಿಲ್ಲವೆಂಬ ಕಹಿ ಭಾವನೆಯು ಹಿಂದೂ ಸದಸ್ಯರ ಮನಸ್ಸಿನಲ್ಲಿ ಉದ್ಭವಿಸಿ ... ದರಿಂದ ಮುಸ್ಲಿಂ ಸೌಹಾರ್ದವನ್ನು ... ದಂತಾಯಿತೇ?

... ಮೊದಲಿಯಾರ್‌ರವರು ತಮ್ಮ ಅ... ವನ್ನು ಸಭೆಗೆ ಸೂಚಿಸಿ ತಕ್ಕುದ... ದೊರೆಯಬಹುದಾಗಿದ್ದ ತೀರ್ಮಾನ... ವಾಗಿ ನಡೆಯಬೇಕಾಗಿತ್ತು. ಈ ... ಮಾಡಬೇಕಾದದ್ದು ಸಭೆಯ ಸಂಪ್ರ... ಮತ್ತು ಕೋಮುವಾರು ಸೌಹಾರ್ದ ... ಹಿತದೃಷ್ಟಿಯಿಂದ ಅತ್ಯವಶ್ಯಕವಾಗಿ ... ಸರ್. ಆರ್ಕಾಟ್‌ರವರು ಈ ಸಂದ... ಬಿತ್ತಿರುವ ವಿಷ ಬೀಜವು ಮೊಳೆ... ಯದಂತೆ ಮಾಡುವುದು ಸಾರ್ವ... ಕರ್ತವ್ಯವಾಗಿದೆ. ಹಿಂದೂಸ್ಥಾನದ ... ಪ್ರಾಂತ್ಯಗಳಲ್ಲಿ ಬೆಳೆಯ ಜನ... ಭೇದೋಪಾಯದ ನರಿನಾ... ಮೈಸೂರಿನಲ್ಲಿಯೂ ಆಗದಿರಲೆಂಬುದೇ ನನ್ನ ... ಯವಾಗಿದೆ.

ಕಾಲೇಜಿನ ಆರಂಭ

... ಕಾಲೇಜು ಇದೇ ... ನೇ ... ಭವಾಗಬೇಕಾಗಿದ್ದುದನ್ನು ೧೪ ... ಕ್ಕೆ ತೆರೆಯಲಾಗುವುದಾಗಿ ಪ್ರಕಟಿಸಿದೆ.

ಪುರಸಭಾ ಚುನಾವಣೆ

ಕಾಂಗ್ರೆಸ್ ಪ್ರಕಟಣೆ

ಮೈಸೂರು, ೮

...ರಾಜಧಾನಿಯ ಪುರಸಭಾ ಚುನಾವಣೆಯು ನವೆಂಬರ್ ೧೪ನೇ ತಾ॥ ನಡೆಯುವುದು. ಆ ಚುನಾವಣೆಯಲ್ಲಿ ಮೈಸೂರು ಕಾಂಗ್ರೆಸ್ ಪರವಾಗಿ ಉಮೇದುವಾರರಾಗಿ ನಿಲ್ಲಲು ಇಷ್ಟವುಳ್ಳ ಕಾಂಗ್ರೆಸ್ ಸದಸ್ಯರು ನಗರ ಚುನಾವಣಾ ಸಮಿತಿಗೆ, ನಿಯಮಿತ ಅರ್ಜಿಯನ್ನು ಭರ್ತಿ ಮಾಡಿ ೫೫ ರೂ.ಗಳ ಬಿಲ್ಲಿನೊಡನೆ ಇದೇ ೧೫ ನೇ ತಾ॥ ಮಂಗಳವಾರ ರಾತ್ರಿ ೮ ಗಂಟೆಯೊಳಗೆ ಸಲ್ಲಿಸಬೇಕಾಗಿ ಕೋರಲಾಗಿದೆ. ಅರ್ಜಿದಾರರುಗಳ ಹೆಸರನ್ನು ೧೬ ನೇ ತಾ॥ ಬೆಳಿಗ್ಗೆ ೯ ಗಂಟೆಗೆ ಪ್ರಕಟಿಸಲಾಗುವುದು. ಅರ್ಜಿದಾರರ ಮೇಲಿನ ತಕರಾರುಗಳನ್ನು ಕೊಡುವುದಕ್ಕೆ ಅಂದು ಸಂಜೆ ೮ ಗಂಟೆ ವರೆಗೆ ಅವಕಾಶವೀಯಲಾಗಿದೆ. ವಾರ್ಕಿಂಗ್ ಕಮಿಟಿಯವರಿಂದ ಅಂಗೀಕರಿಸಲ್ಪಟ್ಟ ಉಮೇದುವಾರರ ಹೆಸರನ್ನು ೨೧ ನೇ ತಾ॥ ಪ್ರಕಟಿಸಲಾಗುವುದು. ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಅಪೀಲು ಹೂಡಲು ೨೩ ನೇ ತಾ॥ ವರೆಗೆ ಅವಕಾಶ ಕೊಡಲಾಗಿದೆ. ಹೆಚ್ಚಿನ ವಿವರಗಳನ್ನು ನಗರ ಕಾಂಗ್ರೆಸ್ ಕಛೇರಿಯಲ್ಲಿ ಪಡೆಯಬಹುದೆಂದು ಚುನಾವಣಾ ಉಪಸಮಿತಿಯವರು ಪ್ರಕಟಿಸಿದ್ದಾರೆ.

ಮೈಸೂರು ಕಾಂಗ್ರೆಸ್ ಅಧಿವೇಶನ

ಬೆಂಗಳೂರು ೭

ಮೈಸೂರು ಕಾಂಗ್ರೆಸ್ಸಿನ ಆರನೇ ಮಹಾಧಿವೇಶನವು ಬೆಂಗಳೂರು ನಗರದಲ್ಲಿ ಇದೇ ತಿಂಗಳು ೧೯, ೨೦ ನೇ ತಾರೀಖುಗಳಲ್ಲಿ ಸೇರುತ್ತದೆ. ಅಧಿವೇಶನದಲ್ಲಿ ಚರ್ಚಿಸಲು ತರಲಿರುವ ನಿರ್ಣಯಗಳನ್ನು ಇದೇ ತಿಂಗಳು ೧೪ ನೇ ತಾ॥ ಒಳಗಾಗಿ ಕೇಂದ್ರ ಕಛೇರಿಗೆ ತಲುಪಿಸಬೇಕೆಂದು ಕೋರಲಾಗಿದೆ. ಅಧಿವೇಶನದ ಕಾರ್ಯಕ್ರಮ:— ೧೬ ನೇ ಬುಧವಾರ ಬೆಳಿಗ್ಗೆ ೯ ಘಂಟೆಗೆ ವಸ್ತು ಪ್ರದರ್ಶನದ ಪ್ರಾರಂಭೋತ್ಸವ, ೧೯ ನೇ ಶನಿವಾರ ಬೆಳಿಗ್ಗೆ ೮–೩೦ ಕ್ಕೆ ಧ್ವಜಾರೋಹಣ, ೯-೩೦ ರಿಂದ ೧೨-೩೦ ರವರೆಗೆ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಸಭೆ (ಹಿಂದಿನ ಸಾಲಿನದು) ೧೨-೩೦ ರಿಂದ ೧೨-೩೦ ರ ವರೆಗೆ ವಿಷಯ ನಿಯಾಮಕ ಸಮಿತಿ ಸಭೆ. ೨-೩೦ ರಿಂದ ೫ ಘಂಟೆ ವರೆಗೆ ವಿಷಯ ನಿಯಾಮಕ ಸಮಿತಿ ಸಭೆ. ಸಾಯಂಕಾಲ ೬-೩೦ ...

ಪಠ್ಯ ಪುಸ್ತಕಗಳ ಕೊರತೆ

ಪ್ರ॥ ಪ್ರ॥ ಸಭೆಯಲ್ಲಿ ಪ್ರಶ್ನೆ

ಮೈಸೂರು ೮

ಕೆಲವು ವರ್ಷಗಳಿಂದ ಪಠ್ಯ ಪುಸ್ತಕಗಳಿಗೆ ಉಂಟಾಗಿರುವ ಅಭಾವದ ಬಗ್ಗೆ ಈ ದಿನ ಪ್ರ॥ ಪ್ರ॥ ಸಭೆಯಲ್ಲಿ ಪ್ರಶ್ನೋತ್ತರಗಳಾದುವು. ಹೀಗೆ ತೊಂದರೆಯಾಗಿರುವುದು ನಿಜವೆಂದು ಸರ್ಕಾರದವರು ಒಪ್ಪಿಕೊಂಡರು. ಸರ್ಕಾರಿ ಮುದ್ರಣಾಲಯದಲ್ಲಿ ಪ್ರಕಟವಾಗುವ ಈ ಪುಸ್ತಕಗಳಲ್ಲಿ ವಿಪರೀತ ತಪ್ಪುಗಳಿವೆಯೆಂಬ ಆಪಾದನೆ ಬಂದಾಗ ಅದನ್ನು ಅವರು ಒಪ್ಪಲಿಲ್ಲ. ಆಗ ಪ್ರಶ್ನೆಯನ್ನು ಹಾಕಿದ್ದ ಹಾ॥ ಅಬ್ದುಲ್ ಗಫಾರ್ ಅವರು ಒಂದು ಪುಸ್ತಕವನ್ನು ಬಿಚ್ಚಿ ಅದರಲ್ಲಿರುವ ತಪ್ಪುಗಳನ್ನು ತೋರಿಸಿದರು. ಮುಂದೆ ಕ್ರಮ ವಹಿಸುವುದಾಗಿ ಸರ್ಕಾರದವರು ತಿಳಿಸಿದರು.

ಸಂಸ್ಥಾನದಲ್ಲಿ ೧೧೦ ಜನ ಪದವೀಧರರಾದ ಕ್ರೈಸ್ತ ಲೇಡಿ ಡಾಕ್ಟರುಗಳೂ, ಒಬ್ಬ ... ಜನ ಬ್ರಾಹ್ಮಣರೂ ಮತ್ತು ಇತರ ಕುಲದವರೂ ಇರುವರೆಂದು ಇನ್ನೊಂದು ಪ್ರಶ್ನೆಗೆ ಉತ್ತರವಾಗಿ ತಿಳಿಸಲಾಯಿತು.

ಪ್ರತಿನಿಧಿಗಳಿಗೆ ವಸತಿ

ಬೆಂಗಳೂರಿನಲ್ಲಿ ನಡೆಯುವ ಮೈಸೂರು ಕಾಂಗ್ರೆಸ್ ಅಧಿವೇಶನಕ್ಕೆ ಬರುವ ಪ್ರತಿನಿಧಿಗಳು ಇಳಿದುಕೊಳ್ಳಲು ಸರ್ಕಾರದವರು ಶ್ರೀ ಜಯ ಚಾಮರಾಜೇಂದ್ರ ಆಯುರ್ವೇದ ಕಾಲೇಜನ್ನು ಬಿಟ್ಟು ಕೊಟ್ಟಿದ್ದಾರೆಂದು ತಿಳಿದುಬಂದಿದೆ.

ರಾಜೇಂದ್ರಪ್ರಸಾದರ ಪ್ರವಾಸ ಮುಂದೆ ಹೋಯಿತು

ಕೇಂದ್ರ ಸರ್ಕಾರದ ಆಹಾರ ಮಂತ್ರಿ ಬಾಬು ರಾಜೇಂದ್ರ ಪ್ರಸಾದರು ಕಾರ್ಯ ಗೌರವದಿಂದ ದೆಹಲಿಯಲ್ಲಿಯೇ ಇರಬೇಕಾಗಿರುವುದರಿಂದ ತಮ್ಮ ಭಾರತದ ಪ್ರವಾಸವನ್ನು ಮುಂದಕ್ಕೆ ಹಾಕಿರುವುದಾಗಿ ತಿಳಿದು ಬಂದಿದೆ.

ವೇಶನ. ೨೦ ನೇ ಭಾನುವಾರ ಬೆಳಿಗ್ಗೆ ೮-೩೦ ಘಂಟೆಗೆ ಧ್ವಜಾರೋಹಣ. ೯-೩೦ ರಿಂದ ೧೨ ಗಂಟೆ ವರೆಗೆ ವಿಷಯ ನಿಯಾಮಕ ಸಮಿತಿ ಸಭೆ. ೨-೩೦ ರಿಂದ ೫-೩೦ ರ ವರೆಗೆ ವಿಷಯ ನಿಯಾಮಕ ಸಮಿತಿ ಸಭೆ. ಸಾಯಂಕಾಲ ೬-೩೦ ರಿಂದ ಬಹಿರಂಗ ಅಧಿವೇಶನ. ನೂತನ ಅಧ್ಯಕ್ಷರ ಚುನಾವಣೆಯನ್ನು ... ನೇ ...

ರಾಜ್ಯಾಂಗ ಸಭೆಗೆ ಮೈಸೂರಿನ ಪ್ರತಿನಿಧಿಗಳು

ಪ್ರ॥ ಪ್ರ॥ ಸಭೆಯಲ್ಲಿ ದಿವಾನರ ಹೇಳಿಕೆ

ಮೈಸೂರು ೮

ಭಾರತ ರಾಜ್ಯಾಂಗ ರಚನಾ ಸಭೆಗೆ ಮೈಸೂರಿನಿಂದ ಚುನಾಯಿತ ಪ್ರತಿನಿಧಿಗಳನ್ನೇ ಕಳುಹಿಸಬೇಕೆಂದು ಶ್ರೀ॥ ಮು ಬ್ಯಾ ಗೋವಿಂದ ರೆಡ್ಡಿಯವರು ಪ್ರತಿನಿಧಿ ಸಭೆಯಲ್ಲಿ ಮಂಡಿಸಿದ್ದ ಸೂಚನೆಯ ಮೇಲೆ ನಿನ್ನೆ ಚರ್ಚೆ ಮುಂದುವರಿಯಿತು.

ಶ್ರೀ ಭೂಪಾಳಂ ಚಂದ್ರಶೇಖರಯ್ಯನವರು ಪ್ರಜೆಗಳ ಅಭಿಮತವನ್ನು ಪ್ರತಿಬಿಂಬಿಸುವವರನ್ನು ಆ ಸಭೆಗೆ ಕಳುಹಿಸಬೇಕೆಂದು ರು. ವಿ.॥ ... ಅಲ್ಪ ಸಂಖ್ಯಾತರಿಗೆ ಕೆಲವು ಸ್ಥಾನಗಳನ್ನು ಕಾದಿಡಬೇಕೆಂದು ತಿಳಿಸಿದರು. ಶ್ರೀ ಮನ್ಮಹಾರಾಜರ ಅಭಿಪ್ರಾಯದಂತೆ ಮೈಸೂರಿನ ಪ್ರತಿನಿಧಿಗಳು ಹೋಗಬೇಕೆಂದು ಶ್ರೀ ರಂಗರ ಲಿಂಗೇಗೌಡರು ತಿಳಿಸಿದರು. ಮಹಿಳೆಯರಿಗೂ ಸ್ಥಾನ ಸಿಗಬೇಕೆಂದು, ಶ್ರೀ ಮ.ತಿ ಗಂಗಮ್ಮನವರು ಕೋರಿದರು. ಶ್ರೀ ನಾಗಭೂಷಣ ಭಟ್ಟರು, ಎಲ್ಲಾ ಸ್ಥಾನಗಳಿಗೂ ಚುನಾಯಿತ ಪ್ರತಿನಿಧಿಗಳನ್ನು ಕಳುಹಿಸಬೇಕೆಂದು ಒತ್ತಾಯಪಡಿಸಿದರು. ಚರ್ಚೆಗಳಿಗೆ ದಿವಾನರು ಉತ್ತರವಿತ್ತು ಹೀಗೆ ಹೇಳಿದರು:— ಸಂಸ್ಥಾನಗಳ ಸಂಧಾನ ಸಮಿತಿಯು ಮೊದಲು ಏರ್ಪಾಡಾದಾಗ ಮೈಸೂರಿಗೆ ಪ್ರಾತಿನಿಧ್ಯವನ್ನು ಕೊಟ್ಟಿರಲಿಲ್ಲ. ಆನಂತರ ನನಗೆ ವೈಯಕ್ತಿಕವಾಗಿ (ದಿವಾನನಾಗಿ) ಆಹ್ವಾನ ಬಂತು. ಆಗ ... ಸಭೆಯ ಅಭಿಪ್ರಾಯವನ್ನು ತೆಗೆದುಕೊಳ್ಳಲು ಅವಕಾಶವಿರಲಿಲ್ಲ. ಶ್ರೀಮನ್ಮಹಾರಾಜರವರ ಅನುಮತಿಯನ್ನು ಪಡೆದು ನಾನು ಅದಕ್ಕೆ ಒಪ್ಪಿಕೊಂಡೆನು. ರಾಜ್ಯಾಂಗ ಸಮಿತಿಯಲ್ಲಿ ನಾನೂ ಒಬ್ಬನಾಗಿದ್ದೇನೆ. ಉಳಿದವರನ್ನು ಯಾವ ರೀತಿ ಚುನಾಯಿಸಬೇಕೆಂಬ ವಿಚಾರವು ಇನ್ನೂ ತೀರ್ಮಾನವಾಗಿಲ್ಲ. ಪ್ರ॥ ಪ್ರ॥ ಸಭೆ ಮತ್ತು ಶಾಸನ ಸಭೆಗಳ ... ಇದರ ಬಗ್ಗೆ ... ನಿರ್ಧಾರಕ್ಕೆ ಬಂದರೆ ಒಳ್ಳೆಯದು. ತೀರ್ಮಾನ ಯಾರೇ ಚುನಾಯಿತರಾದರೂ ಅವರು ಮೈಸೂರಿನ ಕೀರ್ತಿ ಧ್ವಜವನ್ನು ಎತ್ತಿ ಹಿಡಿಯಬೇಕು. ಮೈಸೂರಿನ ರಾಜತ್ವದ ಸ್ಥಾನಮಾನಗಳನ್ನು ಸಂರಕ್ಷಿಸಬೇಕು. ಎಲ್ಲರೂ ಏಕ ಕಂಠದಿಂದ ಮಾತನಾಡಬೇಕು. ಇತರ ಪ್ರತಿನಿಧಿಗಳಿಗೆ ಬುದ್ಧಿಯಲ್ಲಿಯೂ ಶಕ್ತಿಯಲ್ಲಿಯೂ ಕಡಿಮೆಯಾಗಿರಬಾರದು. ನಾನು ಮೈಸೂರಿನ ಕೀರ್ತಿ ಗೌರವಗಳನ್ನು ಸದಾ ಕಾಲದಲ್ಲಿಯೂ ಎತ್ತಿ ಹಿಡಿಯುತ್ತೇನೆ.

ಗಾಂಧಿ ಜಯಂತಿ

ನಾಳೆ ಸಂಜೆ ೭ ಗಂಟೆಗೆ ಟೌನ್‌ಹಾಲಿನಲ್ಲಿ ನಗರ ಕಾಂಗ್ರೆಸ್ ಸಮಿತಿಯ ಪರವಾಗಿ ಗಾಂಧಿ ಜಯಂತಿ ಪ್ರಯುಕ್ತ ಅದೇ ದಿನದ ಕಾರ್ಯಕ್ರಮಗಳು ನಡೆಯುವುವು. ಭಾಷಣಗಳೂ ಬಹುಮಾನ ವಿನಿಯೋಗವೂ ಜರುಗುವುವು. ಸರ್ವರಿಗೂ ಸ್ವಾಗತವಿದೆ.

ಪ್ರದೋಷ ಸಂಗೀತ

... ನಾಳೆ ... ವ ಶ್ರೀ ವೆಂಕಟರಮಣಸ್ವಾಮಿ ... ಪ್ರದೋಷ ... ವಿದ್ವಾನ್ ... ಕೃಷ್ಣ ... ಸಂಗೀತ ...

ಸಾಧ್ವಿ

ಶ್ರೀ ೮-೧೦-೪೬ ಮಂಗಳವಾರ

ಮೈಸೂರಿನಲ್ಲೇನೂ ಇಲ್ಲವೇ ?

ನವರಾತ್ರಿ ಶುಭ ಸನ್ನಿವೇಶದಲ್ಲಿ ಅನೇಕ ಸಂಸ್ಥಾನಗಳು ಮುಂದೆ ಬಂದು ರಾಜಕೀಯ ಸುಧಾರಣೆಗಳನ್ನು ಘೋಷಿಸಿವೆ. ವಿಜಯದಶಮಿ ದಿನ ವಿಶೇಷ ದರ್ಬಾರುಗಳನ್ನು ನಡೆಸಿ ಅವುಗಳ ರಾಜರುಗಳು ಪ್ರಜೆಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟಿರುವರು. ಜವಾಬ್ದಾರೀ ಸರ್ಕಾರವನ್ನೇ ಕೆಲವರು ಕರುಣಿಸಿರುವರು. ಇನ್ನು ಕೆಲವರು ಅದಕ್ಕೆ ದಾರಿಯನ್ನು ಮಾಡಿರುವರು. ಮತ್ತೆ ಕೆಲವರು ರಾಜ್ಯಾಂಗ ಸುಧಾರಣಾ ಸಮಿತಿಗಳನ್ನು ರಚಿಸಿರುವರು.

ಹೀಗೆ ಘೋಷಣೆ ಹೊರಡಿಸುವುದರಲ್ಲಿ ಇತ್ತೀಚಿನವರು ನಮ್ಮ ಮಹಾ ಪ್ರಭುಗಳ ಭಾವಮೈದುನರಾದ ಭರತಪುರದ ಸಂಸ್ಥಾನಾಧೀಶರು. ಶಾಸನ ಸಭೆಯ ಚುನಾಯಿತ ಸದಸ್ಯರಿಂದಲೇ ಆರಿಸಲ್ಪಟ್ಟ ಮೂವರು ಮಂತ್ರಿಗಳನ್ನು ತೆಗೆದುಕೊಳ್ಳುವುದಾಗಿ ಅವರು ಪ್ರಕಟಿಸಿರುವರು. ಇದೇ ಸಮಯದಲ್ಲಿ ಸಾಂಗ್ಲೀ ಸಂಸ್ಥಾನದ ಅರಸರು ತನ್ನ ಪ್ರಜೆಗಳಿಗೆ ಪೂರ್ಣ ಜವಾಬ್ದಾರೀ ಸರ್ಕಾರವನ್ನು ಕೊಡುವುದಾಗಿ ಘೋಷಿಸಿರುವರು. ಅಲ್ಲದೆ ಪಂಜಾಬಿನ ಸುಕೇತ್ ಎಂಬ ಸಣ್ಣ ಸಂಸ್ಥಾನದಲ್ಲಿಯೂ, ಆಳ್ವಾರಿನಲ್ಲಿಯೂ, ಕೋಟಾ ಸಂಸ್ಥಾನದಲ್ಲಿಯೂ ಇದೇ ನವರಾತ್ರಿ ಸಮಯದಲ್ಲಿ ರಾಜಕೀಯ ಸುಧಾರಣೆಗಳಿಗಾಗಿ ಏರ್ಪಾಡುಗಳನ್ನು ಮಾಡಿ ಅಲ್ಲಿನ ರಾಜರುಗಳು ಪ್ರಕಟಣೆ ಹೊರಡಿಸಿರುವರು.

ಇದಕ್ಕೆ ಬಹಳ ಮುಂಚೆಯೇ ಬಿಕನೀರ್, ಕೊಚ್ಚಿ ಮುಂತಾದ ಕಡೆಗಳಲ್ಲಿ ಜವಾಬ್ದಾರೀ ಸರ್ಕಾರದ ಧ್ಯೇಯವು ಅಲ್ಲಿನ ಅರಸರಿಂದ ನಾರಲ್ಪಟ್ಟು ಅದರ ಸಾಧನೆಗೆ ಕಾರ್ಯಕ್ರಮಗಳು ಮುಂದುವರಿಯುತ್ತಿವೆ. ಬಹಳ ಹಿಂದೆಯೇ ಔಂಧ್ ಸಂಸ್ಥಾನವು ಪ್ರಜೆಗಳಿಗೆ ಪೂರ್ಣ ಜವಾಬ್ದಾರೀ ಸರ್ಕಾರವನ್ನು ಕೊಟ್ಟು ಮೇಲ್ಪಂಕ್ತಿಯನ್ನು ಹಾಕಿತು. ಈಚೆಗೆ ಅನೇಕ ಸಣ್ಣ ಪುಟ್ಟ ಮತ್ತು ದೊಡ್ಡ ದೊಡ್ಡ ಸಂಸ್ಥಾನಗಳೂ ಇದೇ ಮಾರ್ಗವನ್ನು ಅನುಸರಿಸುತ್ತಿವೆ. ಇವೆಲ್ಲವೂ ಈಗ ಮೈಸೂರಿನಲ್ಲಿ ಜಾರಿಯಲ್ಲಿರುವ ರಾಜ್ಯಾಂಗ ಕ್ರಮವನ್ನು ಮೀರಿಸಿ ಮುಂದೆ ಹೋಗುತ್ತಿವೆ. ಮೈಸೂರು ಹಿಂದೆ ಬೀಳುತ್ತಿದೆ. ಸಕಲ ವಯಸ್ಕರ ಓಟಿನಿಂದ ಚುನಾಯಿತರಾದ ಪ್ರಜಾಪ್ರತಿನಿಧಿಗಳ ವಿಶ್ವಾಸಕ್ಕೆ ಪಾತ್ರರಾದವರೇ ಮಂತ್ರಿಗಳಾಗಿ ಆರಿಸಲ್ಪಡುತ್ತಿದ್ದಾರೆ. ಶಾಸನ ಸಭೆಗಳಿಗೆ ಚುನಾಯಿತ ಅಧ್ಯಕ್ಷರುಗಳೇ ಬರುತ್ತಿದ್ದಾರೆ. ಸಾಮಾಜಿಕ ಪದ್ಧತಿಯು ನಾಮಮಾತ್ರವೇ ಸಮಾಗಮಿಸುತ್ತಿದೆ. ಭರತಖಂಡದ ಪ್ರಕೃತ ರಾಜಕೀಯ ಸ್ಥಿತಿಗತಿಗಳಿಗೆ ಅನುಗುಣವಾಗಿ ರಾಜರುಗಳು ಮುಂದುವರಿಯುತ್ತಿರುವುದು ಸಂತೋಷದ ಸಂಗತಿ.

ಈ ನವರಾತ್ರಿ ಸಂದರ್ಭದಲ್ಲಿ ನಮ್ಮ ಮೈಸೂರಿನಲ್ಲಿಯೂ ಪ್ರಾಮುಖ್ಯವಾದ ರಾಜಕೀಯ ಬದಲಾವಣೆಗಳಾಗುವ ನಿರೀಕ್ಷೆಯು ಬಹಳವಾಗಿತ್ತು. ಆದರೆ ನವರಾತ್ರಿಯು ಕಳೆದು ಹೋಯಿತು. ಯಾವ ಬದಲಾವಣೆಯ ಸೂಚನೆಯೂ ಕಂಡುಬಂದಿಲ್ಲ. ಅದಕ್ಕೆ ವಿರುದ್ಧವಾಗಿ ಪ್ರತಿಗಾಮಿಯಾದ ವಿದ್ಯಮಾನಗಳೇ ಕಾಣಬರುತ್ತಿವೆ. ನಿನ್ನೆ

ನಿಲುವಳಿ ನಿರ್ಣಯಗಳ ನಿರಾಕರಣೆ

ಮೈಸೂರು ೮

ಹಳ್ಳಿಗಳಲ್ಲಿ ಆಹಾರಾಭಾವ, ದೇವನಹಳ್ಳಿ ಸುತ್ತಮುತ್ತ ಎಂಬಾಕೆಯು ಆಹಾರಾಭಾವದಿಂದ ಮೃತಪಟ್ಟುದ, ತಿರುವಾಂಕೂರಿಗೆ ಮೈಸೂರಿನ ಧಾನ್ಯ ರಫ್ತು ಮಾಡಲ್ಪಟ್ಟಿರುವುದು, ಮೈಸೂರಿನ ಟೋಬೂ ಬಜಾರನ್ನು ಮತ್ತೆ ವರ್ಕ್‌ಷಾಪ್ ಟಳಗೆ ಬದಲಾಯಿಸುವುದು, ಆಯುರ್ವೇದ ಕಾಲೇಜಿನ ಕೊರತೆಗಳು ಇವೇ ಮುಂತಾದ ವಿಚಾರದಲ್ಲಿ ಬಂದ ನಿಲುವಳಿ ನಿರ್ಣಯಗಳು ಮುಖ್ಯ ವಿಚಾರಗಳಲ್ಲವೆಂದೂ ಸಾರ್ವಜನಿಕ ಹಿತಕ್ಕೆ ಸಂಬಂಧಿಸಿಲ್ಲವೆಂದೂ ಹೇಳಿ, ದಿವಾನರು ಅವುಗಳನ್ನು ಈ ದಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ತಳ್ಳಿ ಹಾಕಿದರು. ಗ್ರಾಮಾಂತರಗಳಲ್ಲಿ ಸರಿಯಾಗಿ ಬಟ್ಟೆ ಹಂಚದಿರುವ ವಿಷಯದಲ್ಲಿ ಬಂದಿರುವ ಮತ್ತೊಂದು ನಿಲುವಳಿ ನಿರ್ಣಯಕ್ಕೆ ಅವಕಾಶವಿತ್ತಿರುವರು.

ದೆಹಲಿ ಪ್ರವಾಸ

ನವೆಂಬರ್ ಮಧ್ಯ ಭಾಗದಲ್ಲಿ ದೆಹಲಿಯಲ್ಲಿ ನಡೆಯುವ ಭಾರತ ರೈಲ್ವೆ ಬೋರ್ಡಿನ ಸಮ್ಮೇಳನದಲ್ಲಿ ಭಾಗ ವಹಿಸಲು ನಮ್ಮ ರೈಲ್ವೆ ಜನರಲ್ ಮ್ಯಾನೇಜರ್ ಶ್ರೀ ಎಂ. ವೆಂಕಟೇಶ್‌ರವರನ್ನು ಸರ್ಕಾರದವರು ನೇಮಿಸಿದ್ದಾರೆ.

ಚರ್ಚಿಲ್ಲರ ಗೋಳಾಟ

ಹಿಂದೂಸ್ಥಾನದ ಬಗ್ಗೆ ಈಗಿನ ಬ್ರಿ॥ ಸರ್ಕಾರವು ಅನುಸರಿಸುತ್ತಿರುವ ನೀತಿಗಾಗಿ ಮಾಜಿ ಪ್ರಧಾನಿ ಚರ್ಚಿಲರು ವಿಪರೀತ ಆಗ್ರಹವನ್ನು ಸೂಚಿಸುತ್ತಿದ್ದಾರೆ. ದೊಡ್ಡ ಹಡಗು ಮುಳುಗಿ ಹೋಗುತ್ತಿದೆ. ಲೇಬರ್ ಸರ್ಕಾರವು ಬ್ರಿ॥ ಸಾಮ್ರಾಜ್ಯವನ್ನು ವಿನಾಶ ಮಾಡುತ್ತಿದೆ; ಭಾರತವು ಕೈ ಬಿಟ್ಟು ಹೋಗುತ್ತಿದೆ; ಬ್ರಿಟಿಷರು ಬಿಟ್ಟು ಬಂದ ಮೇಲೆ ಭಾರತದಲ್ಲಿ ಹೊಡೆದಾಟ, ಕಡಿದಾಟ, ರಕ್ತಪಾತಗಳಾಗಿ ಅನಾಹುತವಾಗುವುದು-ಎಂದು ಬೊಬ್ಬೆ ಹಾಕಿದ್ದರು.

ಸುಕೇತ್ ಸಂಸ್ಥಾನದಲ್ಲಿ ಸುಧಾರಣೆ

ಪಂಜಾಬಿನ ಕಾಂಗ್ರಾ ಕಣಿವೆಯಲ್ಲಿರುವ ಸುಕೇತ್ ಸಂಸ್ಥಾನದ ರಾಜರೂ ಸಹ ಮೊನ್ನೆ ನವರಾತ್ರಿ ದರ್ಬಾರಿನಲ್ಲಿ ಘೋಷಣೆಯನ್ನು ಹೊರಡಿಸಿ ಶಾಸನ ಸಭೆಯೊಂದನ್ನು ಸ್ಥಾಪಿಸಿದ್ದಾರೆ. ವಯಸ್ಕರೆಲ್ಲರ ಓಟಿನ ಆಧಾರದ ಮೇಲೆ ಅದಕ್ಕೆ ಚುನಾವಣೆ ನಡೆಯುವುದು. ಶಾಸಗೀ ಚುನಾಯಿತ ಸದಸ್ಯರೇ ಬಹು ಸಂಖ್ಯೆಯಲ್ಲಿರುವರು. ಈಗಾಗಲೇ ಅಲ್ಲಿ ಒಬ್ಬ ಖಾಸಗೀ ಮಂತ್ರಿಗಳಿದ್ದಾರೆ.

ನ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಮಾಡಿದ ಭಾಷಣದಿಂದ ನಿರಾಶಾ ಭಾವನೆಗೆ ಅವಕಾಶವುಂಟಾಗಿದೆ. ಈ ಪರಿಸ್ಥಿತಿಯು ಮುಂದುವರಿದ ನಮ್ಮ ಸಂಸ್ಥಾನಕ್ಕೆ ಸ್ವಲ್ಪವೂ ತಕ್ಕುದಲ್ಲ. ಆದುದರಿಂದ ಈ ವಿಷಯದಲ್ಲಿ ಶ್ರೀಮನ್ಮಹಾರಾಜರವರೇ ಸ್ವಂತವಾಗಿ ಪ್ರವೇಶಿಸಿ ಪ್ರಜೆಗಳ ಆಕಾಂಕ್ಷೆಯನ್ನು ಈಡೇರಿಸುವ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ನಾವು ಅತ್ಯಂತ ವಿನಯದಿಂದ ಬೇಡುತ್ತೇವೆ.

ಬೆಲ್ಲ ತಯಾರಿಕೆ ನಿರ್ಬಂಧ ಸರಿಯಲ್ಲ

ನಿಲುವಳಿ ಸೂಚನೆಗೆ ಸಭಾ ಪುರಸ್ಕಾರ

ಮೈಸೂರು ೮

ಮಂಡ್ಯ ಜಿಲ್ಲೆಯ ೫ ತಾಲ್ಲೂಕುಗಳಲ್ಲಿ ಕಬ್ಬಿನಿಂದ ಬೆಲ್ಲವನ್ನು ತಯಾರು ಮಾಡಲು ಇರುವ ಪ್ರತಿಬಂಧಾಜ್ಞೆಯಿಂದ ರೈತರಿಗೆ ಅನಾನುಕೂಲವೂ, ನಷ್ಟವೂ ಆಗಿರುವ ಸಂಬಂಧದಲ್ಲಿ ನಿನ್ನೆ ಸಂಜೆ ಪ್ರತಿನಿಧಿ ಸಭೆಯಲ್ಲಿ ಶ್ರೀ॥ ಎಸ್. ಸಿ. ಮಲ್ಲಯ್ಯನವರು ನಿಲುವಳಿ ಸೂಚನೆಯನ್ನು ಮಂಡಿಸಿದರು.

೧೯-೯-೪೬ರಲ್ಲಿ ಹೊರಟಿರುವ ಈ ಆಜ್ಞೆಯಿಂದ ರೈತರಿಗೆ ಈ ಕಷ್ಟಕಾಲದಲ್ಲಿ ನಾಲ್ಕು ಪುಡಿ ಕಾಸುಗಳು ಕೈಸೇರುವುದನ್ನು ಸರ್ಕಾರ ತಪ್ಪಿಸುತ್ತಿದೆಯೆಂದೂ, ಸರ್ಕಾರವು ರೈತನ ಅಭಿವೃದ್ಧಿಗೆ ಅಷ್ಟಾಗಿ ಗಮನ ಕೊಡುತ್ತಿಲ್ಲವೆಂದೂ, ಶ್ರೀ ಮಲ್ಲಯ್ಯನವರು ತಿಳಿಸಿದರು. ಸರ್ಕಾರದ ಈ ಆಜ್ಞೆಯಿಂದ ಬೆಲ್ಲದ ಧಾರಣೆ ಒಂದು ಅಚ್ಚಿಗೆ ೫ ಆಣೆಗೆ ಏರಿ ಸಾರ್ವಜನಿಕರಿಗೆ ತೊಂದರೆಯಾಗಿದೆಯೆಂದು ಶ್ರೀ ಸುಬ್ಬಯ್ಯನವರು ಸೂಚನೆಗೆ ಬೆಂಬಲವಿತ್ತರು. ಡಾ॥ ಸಿ. ಬಂದೀಗೌಡರು ಮಾತನಾಡಿ ಈ ಆಜ್ಞೆಯಿಂದ ರೈತನಿಗಾಗುತ್ತಿರುವ ಅಪಾರ ಕಷ್ಟಗಳನ್ನು ವಿವರಿಸಿ ಕೂಡಲೇ ಅದು ವಾಪಸಾಗಬೇಕೆಂದರು.

ಆಹಾರ ಸರಬರಾಜು ಡೈರೆಕ್ಟರಾದ ಶ್ರೀ ಗುರುದತ್‌ರವರು ಸರ್ಕಾರದ ಪರವಾಗಿ ವಿವರಣೆಯನ್ನೀಯುತ್ತಾ, ೧೯೪೫ ನೇ ಸಾಲಿನಲ್ಲಿ ನಮ್ಮಲ್ಲಿ ಕೇವಲ ೧೨ ಸಾವಿರ ಟನ್ ಸಕ್ಕರೆ ಮಾತ್ರ ತಯಾರಾಯಿತೆಂದೂ, ಪಡಿತರ ಪದ್ಧತಿ ಪ್ರಕಾರ ಸಂಸ್ಥಾನಕ್ಕೆ ೧೭ ಸಾವಿರ ಟನ್ ಸಕ್ಕರೆ ಬೇಕಾಗಿದೆಯೆಂದೂ ತಿಳಿಸಿ, ಆ ಕಾರಣದಿಂದ ಬೆಲ್ಲ ತಯಾರಿಕೆ ಹತೋಟಿ ಮಾಡಲಾಯಿತೆಂದು ಹೇಳಿದರು. ಈ ಹೊಸ ಆಜ್ಞೆಯಿಂದ ಕೇವಲ ತೀರದ ಸ್ವ ಮುಂದಿಗೆ ಮಾತ್ರ ತೊಂದರೆಯಾಗಿರಬಹುದೆಂದು ತಿಳಿಸಿದರು. ಕಬ್ಬಿನ ಬೆಲೆಯನ್ನು ಹೆಚ್ಚಿಸುವ ಆಲೋಚನೆಯನ್ನೂ ಸಹ ಸರ್ಕಾರದವರು ಮಾಡುತ್ತಿರುವುದಾಗಿ ಅವರು ಭರವಸೆ ಇತ್ತರು. ಮದ್ರಾಸ್ ಸರ್ಕಾರದವರು ಇದೇ ಬಗೆಯ ಆಜ್ಞೆಯನ್ನು

ಪಡಿತರಕ್ಕೆ ಅಭಾವ

ಚಾಮರಾಜಪುರಂ ಸಹಕಾರ ಸ ಚಾಮರಾಜಮೊಹಲ್ಲಾ ಶಾಖೆಯಲ್ಲಿ ದಿನಗಳಿಂದಲೂ ಕೆಲವು ರೇಷನಿಂಗ್ ಸಾಮಾನುಗಳು ಸಿಗದೆ ಬಹಳ ತೊಂದರೆಯಾಗಿದೆಯೆಂದೂ; ಕಳೆದ ೨೯ ನೇ ತಾ ಸಕ್ಕರೆಯೇ ಸಿಗುತ್ತಿಲ್ಲವೆಂದೂ, ನಗರದಲ್ಲಿ ರೇಷನಿಂಗ್ ಡಿಪೋಗಳಲ್ಲಿ ಹ ಟ್ಟುಗಳಿಂದಲೇ ತೂಕ ಮಾಡುವುದ ಸಾಮಾನು ಕಡಿಮೆ ಬರುತ್ತಿದೆಯೆಂದೂ, ಡಲೇ ಅಧಿಕಾರಿಗಳು ಈ ವಿಷಯ ಪರಿಹರಿಸಬೇಕೆಂದೂ ಪ್ರಜಾಸೇ ಬ್ಬರು ಬರೆದಿರುತ್ತಾರೆ.

ದಾರಿಗೆ ತಂದಿರುವುದರಿಂದಲೇ ತಾವ ಒಂದು ಸಮತಾ ದೃಷ್ಟಿಯಿಂದ ಮಾದರಿ ಆಜ್ಞೆಯನ್ನು ಇಲ್ಲ ತಂದಿರುವುದಾಗಿ ಸೂಚಿಸಿದರು.

ಅನಂತರ ಸಚಿವರಾದ ಮಿ॥ ಜ ಉತ್ತರವಿತ್ತು, ರೈತರ ಹಿತ ಚಿಂತ ಸರ್ಕಾರದ ಉದ್ದೇಶವೆಂದು ಹೇಳಿ, ಲ್ಲಿಯೇ ಬೆಲ್ಲದ ಬೆಲೆ ಹತೋಟಿ ಸಹ ಜಾರಿಗೆ ತರುವ ಯೋಚನೆ ಇ ದರು. ಕಬ್ಬನ್ನು ಸಕ್ಕರೆ ಕಂಪೆನಿಗೆ ಲು ಹೋದಾಗ ಅನೇಕರಿಗೆ ಆಗು ತೊಂದರೆಗಳನ್ನು ತಪ್ಪಿಸಲು ಕ ಕಾರ್ಯಕ್ರಮ ಕೈಗೊಳ್ಳಲಾಗುವುದೆಂ ವಸೆ ಇತ್ತರು. ನಿಲುವಳಿ ಸೂಚನೆ ಓಟಿಗೆ ಹಾಕಲಾಗಿ ಅದು ಅವಿರೋ ಅಂಗೀಕಾರವಾಯಿತು.

ರಾಜ್ ಕಮಲ್, ಮೈಸ.

3-10-46 ರಿಂದ ೩ ನೇ ವಾ

ಸ್ವರ್ಗ ಸೀವ

ಭೂಮಿಕೆ:—ಜಯಮ್ಮ, ಧಾನ ನಾಗಯ್ಯ, ಜಗಮೂ

Edited, printed and publ A. R. Nagaraian at the Sadav D. Subbiah Road, Mysore

ನೋಟೀಸ್

ನಮ್ಮ ಕಂಪೆನಿಗೆ ಪಾಲುಗಾರರಾಗಲಿ, ಯಾ ಕಮಿಷನ್ ದಾರರಾಗಲಿ, ಷೇರ್ ಹೋಲ್ಡರ್ ಆಗಲಿ ಯಾರೂ ಇರುವುದಿಲ್ಲ. ಸದರಿ ಕಂಪೆನಿ ಹೆಸರಿನಿಂದ ಯಾರಾದರೂ ಲೇವಾದೇವಿಯನ್ನು ನಡೆಸಿದ್ದಲ್ಲಿ ಕಂಪೆನಿಯು ಯಾವ ರೀತಿಯಲ್ಲೂ ಹೊಣೆಗಾರರಲ್ಲ.

(Sd) AZEEZ A SATTAR SAIT

Pro' — **Neo Furniture Co.,**

Irwin Road : : My

ಸುಲಭ ಬೆಲೆ ! Estd 1915 ತ್ವರಮ

SRI RAMA ELECTRIC STORES

Govt. Licenced Electrical Contractors & Engineers

ಎಲ್ಲಾ ವಿಧವಾದ ಎಲೆಕ್ಟ್ರಿಕ್ ಪವರ್ ಮತ್ತು ಲೈಟಿಂಗ್ ಇನ್‌ಸ್ಟಲೇಷನ್ ಕೆಲಸ ಕಂಟ್ರೋಲ್ ದರದಲ್ಲಿಯೂ, ಸಕಾಲದಲ್ಲಿಯೂ ಮಾಡಿಕೊಡುತ್ತೇವೆ. ನಮ್ಮಲ್ಲಿ ಎಲ್ಲಾ ವಿಧವಾದ ಎಲೆಕ್ಟ್ರಿಕ್ ಸಾಮಾನುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಮಹಾಜನರು ಪ್ರೋತ್ಸಾಹಿಸಬೇಕಾಗಿ ಕೋರುತ್ತೇವೆ.

ಶ್ರೀ ರಾಮಾ ಎಲೆಕ್ಟ್ರಿಕ್ ಸ್ಟೋರ್ಸ್,

(ಪಿಟೀಲು ವಿದ್ವಾನ್ ಕೃಷ್ಣಪ್ಪನವರ ರಾಮ ಮಂದಿರದ ಎದುರು)

ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು.

ಫೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಬುಧವಾರ ೯—೧೦—೪೭ [ಸಂಚಿಕೆ ೬೨

ದಿವಾನರ ಭಾಷಣದ ಬಗ್ಗೆ ನಿಲುವಳಿ ನಿರ್ಣಯ

ಸಕಲ ಸಂಗಡಗಳ ಅಭ್ಯುದಯವೇ ಸರ್ಕಾರದ ಗುರಿ

ಸೆ. ಫಿಲೋಮಿನಾ ಕಾಲೇಜಿನಲ್ಲಿ ಪ್ರಭುಗಳ ಭಾಷಣ

ಮೈಸೂರು ೯

ಸಂಸ್ಥಾನದ ಪ್ರಜಾ ಸಮುದಾಯದ ಎಲ್ಲ ವರ್ಗಗಳ ಶ್ರೇಯಸ್ಸಾಧನೆ ಮತ್ತು ಪ್ರಗತಿ ನಮ್ಮ ಸರ್ಕಾರದ ಪರಮೋದ್ದೇಶ. ಸಾಮಾನ್ಯರನ್ನು ಕ್ಷೇಮಾಭ್ಯುದಯ ಮತ್ತು ನಾಗರಿಕ ಮುನ್ನಡೆಯ ಮಾರ್ಗದಲ್ಲಿ ಒಯ್ಯುವ ನಾಯಕರುಗಳನ್ನು ಸಂಗಡಗಳಿಂದಲೂ ತಯಾರು ಮಾಡುವುದೇ ನಮ್ಮ ಸರ್ಕಾರದ ಗುರಿ. ಇಂಥಾ ಉದ್ದೇಶ ಕೋಮುವಾರು ಭೇದವಿಲ್ಲದೆ ಈ ಕಾಲೇಜು ತೊಡಗುತ್ತಿರುವುದು ಸ್ವಾರ್ಥವಾದುದು-ಎಂದು ರಾಜಧಾನಿಯ ಸೆ. ಫಿಲೋಮಿನಾ ಕಾಲೇಜಿನ ಆರಂಭೋತ್ಸವವನ್ನು ನೆರವೇರಿಸುತ್ತಾ ಶ್ರೀಮನ್ಮಹಾರಾಜರು ಈ ಬೆಳಿಗ್ಗೆ ಅಪ್ಪಣೆ ಕೊಡಿಸಿದರು. ಅವರು ಮುಂದುವರಿದು ಈ ರೀತಿ ಹೇಳಿದರು.

ನಮ್ಮ ಸಂಸ್ಥಾನದ ಪ್ರಜೆಗಳ ಜೀವನದಲ್ಲಿ ಪ್ರಮುಖ ಪಾತ್ರ ವಹಿಸಲಿರುವ ಈ ಕಾಲೇಜಿನ ಆರಂಭೋತ್ಸವವನ್ನು ನೆರವೇರಿಸುವುದು ನನಗೆ ಪರಮಾನಂದವನ್ನುಂಟು ಮಾಡಿದೆ. ನಿಮ್ಮ ಈ ಸೊಸೈಟಿಯು ವಿದ್ಯೆ ಮತ್ತು ಸಾಮಾಜಿಕರಂಗಗಳಲ್ಲಿ ವಿಸ್ತೃತವಾದ ಸೇವೆಯು ಪ್ರಶಂಸನೀಯವಾದುದು. ಖಾಸಗಿಯವರ ಆಶ್ರಯದಲ್ಲಿ ಒಂದನೆಯ ಉತ್ತಮ ದರ್ಜೆಯ ಕಾಲೇಜು ಆರಂಭವಾಗಿರುವುದು ಇದೇ ಮೊದಲನೆಯದು. ಈ ರೀತಿ ವಿದ್ಯಾಭ್ಯಾಸ ಅನುಕೂಲಗಳನ್ನು ಕಲ್ಪಿಸುವುದರಲ್ಲಿ ಖಾಸಗಿ ಸಂಸ್ಥೆಗಳು ವಹಿಸುತ್ತಿರುವ ಪ್ರಧಾನ ಪಾತ್ರವು ನಮ್ಮ ಸರ್ಕಾರಕ್ಕೆ ಪ್ರೋತ್ಸಾಹ ಕೊಟ್ಟಿದೆ. ಅಲ್ಲದೆ ಈ ರೀತಿ ಖಾಸಗಿಯವರ ಪ್ರಯತ್ನಕ್ಕೆ ಪೂರ್ಣ ಬೆಂಬಲವ ಸಹಾಯವನ್ನೂ ಸರ್ಕಾರವು ಕೊಡಬೇಕಾಗಿದೆ-ಎಂದು ಹೇಳಿದರು.

ನಿಮ್ಮ ಕಾಲೇಜಿನಲ್ಲಿ ಜಾತಿ, ಮತಗಳ ಭೇದವಿಲ್ಲದೆ ಎಲ್ಲ ವಿದ್ಯಾರ್ಥಿಗಳಿಗೂ ಸೇರಲವಕಾಶವಿತ್ತಿರುವ ಅಂಶವನ್ನು ಸೂಚಿಸುವುದು ಸಂತೋಷ. ನಿಮ್ಮ ನೀತಿಯು ಸ್ವಾಗತಾರ್ಹವಾಗಿದೆ. ವಿದ್ಯಾರ್ಥಿಯು ವ್ಯಾಸಂಗದ ಅವಧಿಯಲ್ಲಿ ಉಪಾಧ್ಯಾಯರೊಡನೆ ಸಮ್ಮಿಳಿತನಾಗುವಂತೆ ವ್ಯವಸ್ಥೆ ಮಾಡಿರುವುದು ಸಂತೋಷವನ್ನುಂಟುಮಾಡಿದೆ. ಯುವಕರು ನಮ್ಮ ಪ್ರಾರಂಭದ ದೆಸೆಯನ್ನು ಬಿಟ್ಟು ಮತ್ತು ಸಮ್ಮಿಳಿತವಾಗಿಯೂ ಕಳೆಯುವುದರಿಂದ ಅವರಲ್ಲಿ ವಿಶ್ವ ಸೌಹಾರ್ದ ಬೆಳೆಯಲು ಅವಕಾಶವಾಗುವುದು. ಭಾರತದ ಇಂದಿನ ಅವಶ್ಯಕತೆಯೆಂದರೆ ಎಲ್ಲ ಸಂಗಡಗಳ ಸೌಹಾರ್ದ ಮತ್ತು ಸಹಕಾರ. ವಿದ್ಯಾಲಯಗಳು ಎಲ್ಲಿ ಒಂದು ಸಂಪ್ರದಾಯದವರಿಗೆ ಮೀಸಲಾಗಿವೆಯೋ, ಎಲ್ಲಿ ಶಿಕ್ಷಕನೇ ಸಂರಕ್ಷಕನಾಗಿರುವನೋ ಅಂತಹ ರೆಸಿಡೆನ್ಷಿಯಲ್ ಕಾಲೇಜುಗಳು ಈ ಕಾರ್ಯದಲ್ಲಿ ಅತ್ಯಂತ ಸಹಕಾರಿಯಾಗಬಲ್ಲುದಾಗಿದೆ.

ನೈತಿಕ ಮತ್ತು ಭೌತಿಕ ಸಂಪೂರ್ಣತೆಗೂ ಈ ಸಂಸ್ಥೆಗೆ ವರ್ಗ ಮತ್ತು ಆಧಿಕಾರಿಗಳ ಇಲ್ಲದೆ, ವಿಲಕ್ಷಣ ಸೇವೆಯೇ ನಿಮ್ಮ ಗುರಿಯಾಗುಳ್ಳ ನಿಜವಾದ ಶಾಸ್ತ್ರೀಯ ಪ್ರತಿಬಿಂಬಿಸುವ ತಮ್ಮ ಪ್ರತಿಪಾದನೆ ಪ್ರಧಾನ ಗುರಿಯಾಗಿರಬೇಕು. ನಾನು ಪ್ರಾರ್ಥಿಸುತ್ತೇನೆ ಈ ಸಂಸ್ಥೆಯು ಯೋಗ್ಯತೆ

ಹೆಂಡದಂಗಡಿಗಳನ್ನು ಊರ ಹೊರಗೆ ಹಾಕುವುದು

ಪ್ರ॥ ಪ್ರ॥ ಸಭೆಯಲ್ಲಿ ಪ್ರಶ್ನೆ

ಮೈಸೂರು ೯

ಬೆಂಗಳೂರು ನಗರದಲ್ಲಿರುವ ಹೆಂಡದಂಗಡಿಗಳನ್ನು ಊರ ಹೊರಕ್ಕೆ ಸಾಗಿಸುವ ವಿಚಾರದಲ್ಲಿ ಬಂದಿದ್ದ ಸೂಚನೆಗಳ ಮೇಲೆ ಈ ದಿನ ಪ್ರತಿನಿಧಿ ಸಭೆಯಲ್ಲಿ ಬಹಳ ಪ್ರಶ್ನೆಗಳು ಬಂದವು. ಇವುಗಳನ್ನು ವರ್ಗಾಯಿಸುವ ವಿಚಾರದಲ್ಲಿ ಸೂಕ್ತ ಕಾರ್ಯಕ್ರಮವನ್ನು ಪರಿಶೀಲಿಸಲಾಗುವುದೆಂದು ಸರ್ಕಾರದವರು ತಿಳಿಸಿದರು. ಮಂಡ್ಯದ ಜಿಲ್ಲಾ ಆಸ್ಪತ್ರೆಯಲ್ಲಿ ರೋಗಿಗಳಿಗೆ ಸರಿಯಾಗಿ ಆಹಾರ ಮತ್ತು ಹಾಲು ಸರಬರಾಜಾಗದೆ ಇರುವ ವಿಷಯದಲ್ಲಿಯೂ ಬಹಳ ಪ್ರಶ್ನೆಗಳು ಬಂದುವು. ಹಾಲಿಗೆ ನೀರು ಬೆರೆಸುತ್ತಿರುವುದಾಗಿ ವಿಶೇಷ ಪುಕಾರುಗಳು ಬಂದುವು.

ಹಿಂದೀ ಪರೀಕ್ಷೆಗಳು

ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಆಶ್ರಯದಲ್ಲಿ ನವಂಬರ್ ತಿಂಗಳಲ್ಲಿ ನಡೆಯುವ ಪರೀಕ್ಷೆಗಳಿಗೆ ಅರ್ಜಿಯನ್ನು ಪತ್ರಗಳನ್ನು ಇದೇ ೧೦ ನೇ ತಾ॥ ಸಂಜೆ ೭ ಘಂಟೆವರೆಗೆ ಹಿಂದೀ ಪ್ರಚಾರ ಸಭೆಯಲ್ಲಿ ಸ್ವೀಕರಿಸಲಾಗುವುದು.

ಬಹಿರಂಗ ಸಭೆ

ಈ ದಿನ ಸಂಜೆ ಗಾಂಧೀ ಜಯಂತಿ ಪ್ರಯುಕ್ತ ಟೌನ್‌ಹಾಲ್ ಮೈದಾನದಲ್ಲಿ ನಡೆಯಬೇಕಾಗಿದ್ದ ಬಹಿರಂಗ ಸಭೆಯು ಕಾಂಗ್ರೆಸ್ ಕಛೇರಿಯಲ್ಲಿಯೇ ನಡೆಯುವುದೆಂದು ಕಾರ್ಯದರ್ಶಿಗಳು ತಿಳಿಸಿದ್ದಾರೆ.

ಪೂರ್ಣಾಹುತಿ

ಸೀನಿಯರ್ ಕಟ್ಟೆ ಬೀದಿ ೨ನೇ ಕ್ರಾಸ್-೨೨ ನೇ ನಂ. ಮನೆಯಲ್ಲಿರುವ ರಾಜರಾಜೇಶ್ವರಿ ಸನ್ನಿಧಿಯಲ್ಲಿ ನಾಳೆ ಶ್ರೀ ದೇವಿ ಯಜ್ಞವೂ, ನಾಳಿದ್ದು ಶುಕ್ರವಾರ ರುದ್ರ ಸ್ವಾಹಾಕಾರ ಪೂರ್ಣಾಹುತಿಯೂ ನಡೆಯುತ್ತವೆ. ಭಕ್ತಾದಿಗಳು ದೇವೀ ಕೃಪೆಗೆ ಪಾತ್ರರಾಗಬೇಕಾಗಿ ಕೋರಲಾಗಿದೆ.

ಮತ್ತು ಶರ್ಶನ್ನು ನಿರೀಕ್ಷೆಯನ್ನು ತಲಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಲೆಂದು ಆಶಿಸಿ ಈ ಸಂಸ್ಥೆಯು ಸಂಸ್ಥಾನದ ಕೀರ್ತಿಯನ್ನು ಬೇಗ, ತಮ್ಮ ನೈತಿಕತ್ವವನ್ನು ಹೆಚ್ಚಿಸಿಕೊಳ್ಳುವ ವಿಚಾರಶೀಲರಾದ ನಾಯಕರನ್ನೂ, ಭವಿಷ್ಯದಲ್ಲಿ ಕಲೆ ಮತ್ತು ಶಾಸ್ತ್ರ ಪಾರಂಗತರಾದ ಸೇವಕರನ್ನೂ ತಯಾರು ಮಾಡಲು ತೊಡಗಲಿ.

ವಿದ್ಯುಚ್ಛಕ್ತಿ ಇಲಾಖೆಯವರಿಗೆಲ್ಲಾ ಪೆನ್ಷನ್ ಪಕ್ಕಾ

ಸ್ವಂ.ವ.ಪ್ರೋ] ಬೆಂಗಳೂರು ೯

ಮೈಸೂರು ಸಂಸ್ಥಾನದ ವಿದ್ಯುಚ್ಛಕ್ತಿ ಇಲಾಖೆಯ ಎಲ್ಲ ನೌಕರರುಗಳಿಗೂ ಪೆನ್ಷನ್ ನಿಯಮವು ೧೯-೯-೪೬ ರಿಂದ ಅನ್ವಯಿಸತಕ್ಕದ್ದೆಂದು ಸರ್ಕಾರದ ಆಜ್ಞೆಯಾಗಿದೆ.

* ಅಪ್ಪೀಲಿಯದ ನ್ಯಾಯಾಲಯ ನಿಯೋಗವೊಂದು ನವೆಂಬರ್ ನ ಮಧ್ಯದಲ್ಲಿ ಮೈಸೂರಿಗೆ ಬರುವುದು.

* ೧೯೪೨-೪೪-೪೫ ನೇ ಸಾಲುಗಳಲ್ಲಿ ಎಸೆನ್ಷಿಯಲ್ ಸರ್ವೀಸ್ ಶಾಸನವನ್ನು ಹಲವು ಇಲಾಖೆಗಳಿಗೆ ಅನ್ವಯಿಸಲಾಗಿದ್ದಿತು. ಈಗ ಜೇಲುಗಳ ಸಿವಿಲ್ ಮತ್ತು ಫರ್ಟಿಲೈಸರ್ಸ್, ಸರ್ಕಾರದ ಟ್ರಾನ್ಸ್‌ಪೋರ್ಟ್ ಸರ್ವೀಸ್ ಮತ್ತು ಮೈಸೂರು ವಿದ್ಯುಚ್ಛಕ್ತಿ ಇಲಾಖೆಗೆ ಅದು ಅನ್ವಯಿಸುವುದಿಲ್ಲವೆಂದು ಸರ್ಕಾರದ ಆಜ್ಞೆಯಾಗಿದೆ.

* ಕೇಂದ್ರ ಸರ್ಕಾರದ ಆಡಿಟರ್ ಜನರಲ್ ಆದ ಶ್ರೀ ಬಿ ಆರ್ ಸೇನ್‌ರವರು ಸದ್ಯದಲ್ಲೇ ಮೈಸೂರಿಗೆ ಭೇಟಿ ಕೊಡುವರು.

ಶ್ರೇಷ್ಠ ನ್ಯಾಯಾಧೀಶರಿಗೆ ನಿಯೋಗ

ಮೈಸೂರು ೯

ಮೈಸೂರು ದಿವಿಜನ್ನಿನ ಮುನಸೀಫ್ ಕೋರ್ಟುಗಳ ಸುಮಾರು ೨೦೦ ಮಂದಿ ಅಮೀನರುಗಳೂ ಮತ್ತು ಪ್ರೋಸೆಸ್ ಸರ್ವರುಗಳೂ ಕಳೆದ ೫ ನೇ ತಾ॥ ರಾಜಧಾನಿಯಲ್ಲಿ ಶ್ರೇಷ್ಠ ನ್ಯಾಯಾಧೀಶರ ಬಳಿಗೆ ನಿಯೋಗ ಹೋಗಿ ತಮ್ಮ ಸಂಬಳವನ್ನು ಹೆಚ್ಚಿಸುವಂತೆ ಪ್ರಾರ್ಥಿಸಿದರು. ನ್ಯಾಯಾಧೀಶರು ಸಾವಧಾನದಿಂದ ಎಲ್ಲವನ್ನೂ ಆಲಿಸಿ ಸಂಬಳಗಳನ್ನು ಹೆಚ್ಚಿಸಿ ಕೊಡುವುದಾಗಿ ಭರವಸೆ ಇತ್ತರೆಂದು ಗೊತ್ತಾಗಿದೆ. ಅವರುಗಳೆಲ್ಲರೂ ಅಡ್ವೊಕೇಟರಾದ ಮೋದಪ್ಪ ಓ ಆರ್ ವೆಂಕಟರಾಮಯ್ಯ ಮತ್ತು ಮೈಸೂರು ಜಿಲ್ಲಾ ಜಡ್ಜಿಯವರುಗಳನ್ನೂ ಭೇಟಿ ಮಾಡಿ ತಮ್ಮ ಕುಂದು ಕೊರತೆಗಳನ್ನು ಅರಿಕೆ ಮಾಡಿಕೊಂಡರು.

ಸೂಚನೆ

ಶ್ರೀ ಚಾಮುಂಡೇಶ್ವರೀ ಜನ್ಮೋತ್ಸವದ ಪ್ರಯುಕ್ತ ನಾಳೆ ದಿನ "ಸಾಧ್ವಿ" ಪತ್ರಿಕೆಗೆ ರಜಾ ಕೊಡಲಾಗಿದೆ.

— ವ್ಯವಸ್ಥಾಪಕ

ದಿವಾನರ ಭಾಷಣದ ಬಗ್ಗೆ ನಿಲುವಳಿ ನಿರ್ಣಯ

ಮೈಸೂರು ೯

ಪ್ರತಿನಿಧಿ ಸಭೆಯು ಹುಟ್ಟಿದಂದಿನಿಂದ ಇದೇ ಮೊದಲನೆಯದಾಗಿ ಇಂದು ದಿವಾನರ ಭಾಷಣದ ಮೇಲೆ ನಿಲುವಳಿ ನಿರ್ಣಯವು ಬಂದಿತು. ರಾಜಭಕ್ತಿಯ ವಿಚಾರವಾಗಿ ದಿವಾನರು ಹೇಳಿರುವ ಮಾತುಗಳಿಂದ ಉಂಟಾಗಿರುವ ವಿಶೇಷ ಪರಿಸ್ಥಿತಿಯನ್ನು ಪರಿಶೀಲಿಸಲು ಕಾಂಗ್ರೆಸ್ ಪಕ್ಷದ ಶ್ರೀ ಎಂ. ಪಿ ರಾಮರಾಯರು ನಿರ್ಣಯವನ್ನು ತಂದರು. ರಾಜಭಕ್ತಿಯ ವಿಚಾರವನ್ನು ಹೊಸದಾಗಿ ಎತ್ತಿರುವುದರಿಂದ ಮೈಸೂರಿನ ಪ್ರಜೆಗಳಿಗೆ ಅವಮಾನವಾಗಿ ಬೆಳೆದು ಬಂದಿರುವ ರಾಜಭಕ್ತಿಯನ್ನು ಪುರಸ್ಕರಿಸಿದಂತಾಗಲಿಲ್ಲವೆಂದು ಅವರು ಹೇಳಿದರು. ಕಾಂಗ್ರೆಸ್ಸಿನವರು ಸಹ ಶ್ರೀಮನ್ಮಹಾರಾಜರ ಕೃಪಾಶ್ರಯದಲ್ಲಿಯೇ ಜವಾಬ್ದಾರಿ ಸರ್ಕಾರವನ್ನು ಕೇಳುತ್ತಿರುವರೆಂದೂ ಹೇಳಿದರು. ಶ್ರೀಗಳಾದ ಬಿ. ಎಸ್ ಗುಪ್ತ ಎಂ ಕೆ ಹನುಮಂತಯ್ಯನವರು ಸಮರ್ಥಿಸಿದರು. ಶ್ರೀಗಳಾದ ರಂಗಲಿಂಗೇಗೌಡ, ಎ ಎಸ್ ರಾಮರಾವ್, ಎ ಜೆ ಪಿಲೀಪ್ ಮುಂತಾದ ಮುಂತಾದವರು ವಿರೋಧಿಸಿದರು. ದಿವಾನರ ಹೇಳಿಕೆಯ ಉದ್ದೇಶವಿರುವ ಪರಿಸ್ಥಿತಿಯನ್ನು ಎತ್ತಿಸಲು ಜೊತೆ ಚಳುವಳಿಯನ್ನೇ ಹೂಡಿ ಸಾವಿರಾರು ಜನರು ಕಾಂಗ್ರೆಸ್ಸನ್ನು ಹೋಗಲಾಡಿಸಬೇಕೆಂದು ಶ್ರೀ ಹನುಮಂತಯ್ಯನವರು ಹೇಳಿದರು. ಇಂತಹ ಬೆದರಿಕೆಗಳಿಗೆ ಜಗ್ಗಬಾರದೆಂದ ಮಿ॥ ಪಿಲೀಪರು ಸೂಚಿಸಿದರು. ದಿನವೂ ದೇವರ ಪೂಜೆ ಮಾಡುವಂತೆ ದಿನವೂ ರಾಜಭಕ್ತಿಯನ್ನು ತೋರಿಸಿದರೂ ತಪ್ಪಿಲ್ಲವೆಂದು ಶ್ರೀ ಎ ಎಸ್ ರಾಮರಾಯರು ಅಭಿಪ್ರಾಯಪಟ್ಟರು.

ದಿವಾನರು ನಿಲುವಳಿ ನಿರ್ಣಯವನ್ನು ತೆಗೆದುಹಾಕುತ್ತಾ, ಈ ಸಭೆಯಲ್ಲಾಗಲೀ ಕೇಂದ್ರ ಶಾಸನ ಸಭೆಯಲ್ಲಾಗಲೀ ಈ ರೀತಿ ನಿರ್ಣಯಕ್ಕೆ ಅವಕಾಶ ದೊರೆತ ನಿದರ್ಶನವು ಇಲ್ಲವೆಂದೂ, ತಾವು ಮೈಸೂರಿನವರಿಗೆ ರಾಜಭಕ್ತಿ ಇಲ್ಲವೆಂದು ಸೂಚಿಸಿಲ್ಲವೆಂದೂ ತಮ್ಮ ಭಾಷಣದಿಂದ ಯಾವ ಅನಾಹುತವೂ ಸಂಭವಿಸಿಲ್ಲವೆಂದೂ ಹೇಳಿದರು.

ನಿಲುವಳಿಗಳ ನಿರಾಕರಣೆ

ಹೊಸ ಬಸ್ಸುಗಳಿಗೆ ಅವಕಾಶ, ಮಂಡ್ಯ ಜಿಲ್ಲೆಯಲ್ಲಿ ಬೆಲ್ಲದ ತಯಾರಿಗೆ ಅಡ್ಡಿ, ಬಟ್ಟೆ ಸರಬರಾಜಿನ ಲೋಪ, ಉರುವಲು ರಫ್ತಿಗೆ ಅಡ್ಡಿ, ಮುದ್ರಾಸಿನ ಪಾನ ನಿರೋಧದಿಂದ ಮೈಸೂರು ಗಡಿಯಲ್ಲಿ ಜಿಲ್ಲೆಯವರು ಪಾನಸ್ವಾಗಿ ಒದಗುವುದು, ಕಡಲೇ ಕಾಯಿ ಮತ್ತು ಎಣ್ಣೆ ಬೆಲೆ ಏರಿಕೆ-ಇವುಗಳ ಬಗ್ಗೆ ಬಂದ ನಿಲುವಳಿ ನಿರ್ಣಯಗಳು ಮುಖ್ಯವಲ್ಲ ಆಥವ ಬೇರೆ ರೀತಿಯಲ್ಲಿ ಚರ್ಚಿಸಬಹುದೆಂಬ ಕಾರಣದ ಮೇಲೆ ದಿವಾನರು ತಳ್ಳಿ ಹಾಕಿದರು.

ಆಲ್ಪಾವಧಿ ಪ್ರಶ್ನೆ

ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕೂಲಿಗಳು ಜನರಿಗೆ ತೊಂದರೆ ಕೊಡುತ್ತಿರುವುದೂ, ಇನ್ನೂ ಗ್ರಾಮ ಸ್ವತ್ತನ್ನು ಅವು ಕೊಂಡವೆಂಬ, ಅವುಗಳನ್ನು ಪಡೆಯಲು ತಮ್ಮ ವ್ಯವಸ್ಥೆ ಮಾಡಲಾಗಿದೆ-ಎಂದು ಸರ್ಕಾರದವರು ಅಲ್ಪಾವಧಿ ಪ್ರಶ್ನೆಯೊಂದಕ್ಕೆ ಉತ್ತರ ಕೊಟ್ಟಿರುವರು.

ಸಾಧ್ವಿ

ತಾ॥ ೯-೧೦-೪೬ ಬುಧವಾರ

ಪ್ರಭುಗಳ ಆದರ್ಶ ವಾಕ್ಯ

ಶ್ರೀಮನ್ಮಹಾರಾಜರವರು ಈ ದಿನ ಸೆಂಟ್ ಫಿಲೋಮಿನಾ ಕಾಲೇಜಿನ ಆರಂಭೋತ್ಸವದಲ್ಲಿ ಅಪ್ಪಣೆ ಕೊಡಿಸಿದ ಉದಾತ್ತ ಭಾವನೆಗಳು ಸಂಸ್ಥಾನದ ಎಲ್ಲಾ ಸೂತ್ರಧಾರಿಗಳನ್ನೂ ಪ್ರೇರೇಪಿಸಿದರೆ ನಮ್ಮ ಜನಾಂಗದಲ್ಲಿ ಪ್ರೀತಿ, ವಿಶ್ವಾಸ, ಸೌಹಾರ್ದಗಳು ಬೆಳೆಯಲು ವಿಶೇಷ ಸಹಾಯವಾಗುವುದು. ದೇಶದ ಎಲ್ಲಾ ಪಂಗಡಗಳ ಹಿತವನ್ನೂ ಸಾಧಿಸುವುದೇ ಸರ್ಕಾರದ ಗುರಿಯೆಂದು ಅವರು ನುಡಿದಿರುವರು ಎಲ್ಲಾ ಪಂಗಡಗಳಿಂದಲೂ ಸಮಾಜದ ನಿಜವಾದ ನಾಯಕರುಗಳು ಉದ್ಭವಿಸಿ ನಾಗರಿಕ ಜೀವನದಲ್ಲಿ ದಾರಿ ತೋರಲೆಂದು ಅವರು ಹಾರೈಸಿರುವರು ಮೇಲ್ಕಂಡ ಸಂಸ್ಥೆಯು ಸಂಸ್ಥಾನದ ಸಕಲ ಪಂಗಡಗಳ ಸಮಾನ ಹಿತ ಸಾಧನೆಗೂ ಉಪಯೋಗವಾಗುವುದೆಂದು ಕೇಳಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿರುವರು.

ಸರ್ಕಾರದವರಿಂದ ನಡೆಸಲ್ಪಡುತ್ತಿರುವ ವಿದ್ಯಾ ಸಂಸ್ಥೆಗಳಲ್ಲಿಯೂ ಇದೇ ಭಾವನೆಯು ಬೇರೂರಿದರೆ ಎಷ್ಟು ಚೆನ್ನಾಗಿರುವುದು! ಹೊರಗಿನಿಂದ ನಮ್ಮ ದೇಶಕ್ಕೆ ಬಂದು ಯಾವ ಜಾತಿ, ಮತ, ಕೋಮುಗಳ ಭೇದಭಾವನೆಯೂ ಇಲ್ಲದೆ ಸಕಲರಿಗೂ ವಿದ್ಯಾದಾನ ಮಾಡಲು ಹೊರಟು ಪ್ರಭುಗಳ ಮತ್ತು ಪ್ರಜೆಗಳ ಮೆಚ್ಚಿಗೆಗೆ ಪಾತ್ರರಾದವರ ಮೇಲ್ಪಂಕ್ತಿಯು ಪ್ರಭಾವವು ಸರ್ಕಾರದ ಸಂಸ್ಥೆಗಳ ಮೇಲೆಯೂ ಆಗಬಾರದೇಕೆ? ಖಾಸಗೀ ಸಂಸ್ಥೆಗಳು ಸರ್ಕಾರಿ ಸಂಸ್ಥೆಗಳೊಡನೆ ನಡೆಸುವ ಸ್ನೇಹ ಪೂರ್ವಕವಾದ ಸ್ಪರ್ಧೆಯಿಂದ ನಿಜವಾದ ವಿದ್ಯಾರ್ಜನೆಯ ಧ್ಯೇಯವನ್ನು ಸಾಧಿಸಲು ವಿಶೇಷ ಸಹಾಯವಾಗುವುದೆಂದು ಪ್ರಭುಗಳು ತಿಳಿಸಿರುತ್ತಾರೆ ಖಾಸಗೀ ಸಂಸ್ಥೆಗಳು ದಿನೇ ದಿನೇ ವೃದ್ಧಿಯಾಗುತ್ತಿರುವ ಈ ಕಾಲದಲ್ಲಿ ಮಹಾ ಸ್ವಾಮಿಯವರ ಈ ಆದರ್ಶ ವಾಕ್ಯಗಳು ನಿಜವಾಗಿಯೂ ಕಾರ್ಯ ರೂಪಕ್ಕೆ ಬರಲೆಂದು ಸಕಲರೂ ಹಾರೈಸುವರು.

ಸರ್ಕಾರದವರ ನೀತಿಯು ಏನೇ ಇರಲಿ, ಹಲ ಕೆಲವು ಖಾಸಗೀ ಮಹಾಶಯರುಗಳು ಇನ್ನೂ ಕೋಮುವಾರು ಭಾವ ಪ್ರೇರಿತರಾಗಿ ಜಾತಿ, ಮತಗಳ ಸಂಖ್ಯೆಗನುಗುಣವಾಗಿ ವಿದ್ಯಾ ದಾನ ಮಾಡಬೇಕೆಂದು ಒತ್ತಾಯ ಪಡಿಸುತ್ತಿರುವ ಟೋಳ್ಳು ಕೂಗು ಇನ್ನಾದರೂ ಕಡಿಮೆಯಾದೀತೆ? ಒಂದು ಕೋಮಿಗೆ ಪೇ॥ ನಾಲ್ಕರಂತೆ ವಿದ್ಯಾಲಯಗಳಲ್ಲಿ ಸ್ಥಾನವನ್ನು ಕೊಡಬೇಕೆಂಬ ವಾದವು ತಪ್ಪೇ?

ಸಂಕೇತಿ ಬ್ರಾಹ್ಮಣ ಸಭೆ

ಮೈಸೂರು ಸಂಸ್ಥಾನದ ಸಂಕೇತಿ ಬ್ರಾಹ್ಮಣ ಮಹಾ ಸಭೆಯು ನಿನ್ನೆ ದಿನ ಬೆಳಿಗ್ಗೆ ಶಾರದ ವಿಲಾಸ ಹೈಸ್ಕೂಲಿನಲ್ಲಿ ರಾಜಸೇವಾಸಕ್ತ ಡಾ॥ ವಿ. ಕೆ. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ನಡೆಯಿತು ಈ ಪಂಗಡದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸುವ ವಿಚಾರವೂ, ಬ್ರಾಹ್ಮಣ ಧರ್ಮ ಕರ್ಮ, ಆಚಾರ ವ್ಯವಹಾರ, ಉದ್ಯೋಗಾವಕಾಶಗಳಿಗೆ ಸಂಬಂಧಪಟ್ಟ ನಿರ್ಣಯಗಳೂ ಪರಿಶೀಲಿಸಲ್ಪಟ್ಟವು

'ಪೌರವಾಣಿ' ವಿಶೇಷ ಸಂಚಿಕೆ

ಬೆಂಗಳೂರಿನಲ್ಲಿ ಪ್ರಕಟವಾಗುತ್ತಿರುವ 'ಪೌರವಾಣಿ' ವಾರ ಪತ್ರಿಕೆಯು ಅರಸರ ಜನ್ಮೋತ್ಸವದ ವಿಶೇಷ ಸಂಚಿಕೆಯನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ. ಇದನ್ನು ಮೈಸೂರಿನಲ್ಲಿ ಬರಿ ದಾನ ಮಾಡಿದ ತ್ಯಾಗಿಗಳಿಗಾಗಿ ಅರ್ಪಣೆ ಮಾಡಲಾಗಿದೆ. ಭಾರತ ಮಾತೆಯ ಪಾದದಲ್ಲಿ ತನ್ನ ತಲೆ ಇಡುವ ಭಂಡವನ್ನು ಅರ್ಪಣೆ ಮಾಡುವ ವೀರ ದೇಶಾಭಿಮಾನಿಯ ಚಿತ್ರವು ಈ ಪ್ರಕಟಣೆಯ ಮೇಲೆ ಸಕಲರ ಹೃದಯವನ್ನೂ ಸೆರಗಿಸುವಂತಿದೆ ಪ್ರಚಲಿತವಾದ ಒಂದು ಸಾರ್ವಜನಿಕ ಪ್ರಶ್ನೆಯ ಮೇಲೆ ಸಕಲರ ಗಮನವನ್ನು ಸೆಳೆಯಲು ವಿಶೇಷ ಸಂಚಿಕೆಯನ್ನು ಹೊರಡಿಸಿ ಅದಕ್ಕಾಗಿ ಅರ್ಪಣೆ ಮಾಡುವ ಈ ಪದ್ಧತಿಯನ್ನು ನಾವು ಬಹಳವಾಗಿ ಮೆಚ್ಚುತ್ತೇವೆ. ಇದಕ್ಕಿಂತಲೂ ವಿಶ್ವವಾದ ಗುರಿಯು ಇಂತಹ ಸಂಚಿಕೆಗೆ ಈಗ ಬೇರೊಂದಿರುವುದಿಲ್ಲ. ಭರತಖಂಡದಲ್ಲೆಲ್ಲಾ ಬಿಡುಗಡೆ ಹೊಂದಿದ ಇತರರಂತೆ ವಿವೇಚನೆಯನ್ನು ಪಡೆಯದೆ ಇನ್ನೂ ಕಾರಾಕೃಹದಲ್ಲಿ ಕೊಳೆಯುತ್ತಿರುವವರ ಸಲುವಾಗಿ ದೇಶವೆಲ್ಲಾ ಮೊರೆಯಿಟ್ಟರೂ ಪ್ರಭುತ್ವದವರ ಹೃದಯದ ಪರಿವರ್ತನೆಯು ಇನ್ನು ಆಗಿರುವುದಿಲ್ಲ ಈ ಸಂಚಿಕೆಯು ಪ್ರಕಟಣೆಯಾದರೂ ಅವರ ಕಣ್ಣನ್ನು ತೆರೆಯಿಸಿದರೆ ಈ ವಿಶೇಷಾಂಕದ ಉದ್ದೇಶವು ಸಾರ್ಥಕವಾದೀತು.

ಸುಪ್ರಸಿದ್ಧ ಬರಹಗಾರರ ವಿಚಾರ ಪೂರಿತ ಲೇಖನಗಳು ಈ ಸಂಚಿಕೆಯಲ್ಲಿ ಕಂಗೊಳಿಸುತ್ತಿವೆ. ನೂರೈವತ್ತಕ್ಕೆ ಮೀರಿದ ಪುಟ ಸಂಖ್ಯೆ ಇರುವ ಈ ಸಂಚಿಕೆಗೆ ಬೆಲೆ ಎಂಟಾಣೆ ಮಾತ್ರ ಕನ್ನಡಿಗರೆಲ್ಲರೂ ಇದನ್ನು ಓದಿ ಪ್ರಯೋಜನ ಹೊಂದಲೆಂದು ಹಾರೈಸುತ್ತೇವೆ.

ಪುರಸಭಾ ಚುನಾವಣೆ

ಮೈಸೂರು ಅ

ರಾಜಧಾನಿಯ ಪುರಸಭೆಯ ಚುನಾವಣೆಯು ೧೯೪೬ ನೇ ನವೆಂಬರ್ ೧೪ ನೇ ತಾ॥ ಗುರುವಾರ ಮುಂದೆ ಕಂಡ ಸ್ಥಳಗಳಲ್ಲಿ ಜರುಗುತ್ತದೆ:- ನಜರ್‌ಬಾದ್ ಮೊಹಲ್ಲಾ ತಾಲ್ಲೂಕು ಆಫೀಸು ಕಟ್ಟಡ, ಚಿಲ್ಲೆ ಕೃಷ್ಣರಾಜ ಪ್ರೈಮರಿ ಬಾಯ್ಸ್ ಸ್ಕೂಲ್, ಕೃಷ್ಣರಾಜ ಸಿಟಿ ಮುನಿಸಿಪಲ್ ಆಫೀಸ್, ಚಾಮರಾಜ ಲಕ್ಷ್ಮೀಪುರಂ ಬಾಯ್ಸ್ ಮಿಡಲ್ ಸ್ಕೂಲ್, ದೇವರಾಜ ನಂಜರಾಜ ಬಹದ್ದೂರ್ ಛತ್ರ, ಮಂಡಿ ಮೊಹಲ್ಲಾ ಪ್ರೈಮರಿ ಬಾಯ್ಸ್ ಸ್ಕೂಲ್, ಲಷ್ಕರ್ ವೆಲ್ಲಿಂಗ್ಟನ್ ಲಾಡ್ಜ್. ಚುನಾವಣೆಯು ಬೆಳಿಗ್ಗೆ ೮ ರಿಂದ ೧೨ ಗಂಟೆ ವರೆಗೂ, ಮಧ್ಯಾಹ್ನ ೩ ರಿಂದ ೫-೩೦ ರ ವರೆಗೂ ನಡೆಯುವುದು ಈ ಚುನಾವಣೆಯಲ್ಲಿ ಉಮೇದುವಾರರಾಗಿ ನಿಲ್ಲುವವರು ೨೬-೧೦-೪೬ ನೇ ಶನಿವಾರ ಮಧ್ಯಾಹ್ನ ೪ ಗಂಟೆಯೊಳಗೆ ಅರ್ಜಿ ಹಾಕಿಕೊಳ್ಳಬೇಕು

ಬ್ರಿಗೆಡಿಯರಾಗಿ ಭಡ್ತಿ

ಮೈಸೂರು ಸಂಸ್ಥಾನದ ಸೈನ್ಯಗಳ ಛೀಫ್ ಕಮ್ಯಾಂಡೆಂಟಾಗಿ ರಜದ ಮೇಲಿರುವ ಮಿ॥ ಕೆ ಎಚ್ ಪ್ರಿನ್ಸ್‌ರವರನ್ನು ಶ್ರೀಮನ್ಮಹಾರಾಜರು ಬ್ರಿಗೆಡಿಯರ್ ಪದವಿಗೆ ಏರಿಸಿದ್ದಾರೆ

ಒತ್ತಾಯ ವ್ಯವಸಾಯದ ಶಾಸನವು

ಪ್ರಾ ಪ್ರ॥ ಸಭೆಯಲ್ಲಿ ಅರಿಕೆ

ಮೈಸೂರು ೮

ಪ್ರತಿನಿಧಿ ಸಭೆಯಲ್ಲಿ ನಿನ್ನೆ ಒತ್ತಾಯದ ವ್ಯವಸಾಯ ಶಾಸನವನ್ನು ಜಾರಿಗೆ ತರಬೇಕೆಂಬ ಬಗ್ಗೆ ಶ್ರೀ ಕೆ ಟಿ ವಜ್ರನಾಭಯ್ಯನವರು ಅರಿಕೆಯೊಂದನ್ನು ಮಂಡಿಸಿದರು. ಹಿಡುವಳಿದಾರರಿಗೆ ಹೆಚ್ಚು ಗುತ್ತಿಗೆ ಕೊಡಬೇಕೆಂಬ ಕಾರಣದಿಂದ ಅನೇಕ ಕಡೆ ಕೃಷಿಕರು ಸಾಗುವಳಿಯನ್ನೇ ಬಿಟ್ಟು ಬಿಟ್ಟಿರುವುದರಿಂದ ಈ ಶಾಸನವು ಅವಶ್ಯಕವೆಂದು ಅವರು ತಿಳಿಸಿದರು. ಸಚಿವರಾದ ಶ್ರೀ ಅಪ್ಪಾಜಿಗೌಡರು ಉತ್ತರವೀಯುತ್ತಾ ಶಾಸನವನ್ನು ಜಾರಿಗೆ ತಂದರೆ ಅದರಿಂದ ಅನೇಕರಿಗೆ ತೊಂದರೆಯಾಗುತ್ತದೆಂದೂ ಈ ಶಾಸನದಿಂದ ಈಗ ಒದಗಿರುವ ಆಹಾರಾಭಾವವು ಪರಿಹಾರವಾಗುವುದಿಲ್ಲವೆಂದೂ, ವ್ಯವಸಾಯದ ಜೊತೆಗೆ ಕೈಗಾರಿಕೆಯೂ ಹೆಚ್ಚಾಗಬೇಕಾದುದರಿಂದ ಈ ವಿಷಯವನ್ನು ಸರ್ಕಾರದವರು ಸಾವಧಾನವಾಗಿ ಪರಿಶೀಲಿಸಬೇಕಾಗಿದೆಯೆಂದೂ ತಿಳಿಸಿದರು.

ತೋಟ, ತರಿವಾರ ಮತ್ತು ನೀರಗಂಟಿ ಇವರುಗಳಿಗೆ ಸರ್ಕಾರದವರು ೧೦ ರೂ. ವೇತನವನ್ನು ಕೊಡಬೇಕೆಂದು ಮುಳವಳ್ಳಿಯ ಶ್ರೀ ದೇವಯ್ಯನವರು ಮತ್ತೊಂದು ಅರಿಕೆಯನ್ನು ಸೂಚಿಸಿದರು. ಈ ಅರಿಕೆಯ ಮೇಲೆ ಚರ್ಚೆ ಸಾಗುತ್ತಿದ್ದಾಗ ೪ ಘಂಟೆಯಾದುದರಿಂದ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಲಾಯಿತು.

ಬಟ್ಟೆ ಹಂಚಿಕೆಯಲ್ಲಿ ತೊಂದರೆ

ಸಂಸ್ಥಾನದ ಬಟ್ಟೆ ಕಂಟ್ರೋಲರ್ ಕೈರಿಟ್ಟರವರು ೯-೯-೪೬ ರಲ್ಲಿ ಹೊರಡಿಸಿರುವ ಆಜ್ಞೆಯಿಂದ ನಾನಾ ಜಿಲ್ಲೆಗಳಲ್ಲಿರುವ ಚಿಲ್ಲರೆ ವ್ಯಾಪಾರಿಗಳಿಗೆ ಉಂಟಾಗಿರುವ ತೊಂದರೆ ಬಗ್ಗೆ ಶ್ರೀ ಎಸ್. ವಿ. ಕೃಷ್ಣಮೂರ್ತಿಯವರು ನಿಲುವಳಿ ಸೂಚನೆಯನ್ನು ಮಂಡಿಸಿದರು. ಈ ಆಜ್ಞೆಯಿಂದ ಬಟ್ಟೆ ಕೊಳ್ಳುವವರಿಗೆ ಕೇವಲ ಒಂದೂಕಾಲಂಶದಷ್ಟು ನಷ್ಟ ಸಂಭವಿಸುತ್ತದೆ. ಸಂಸ್ಥಾನದ ಕೇಂದ್ರ ಸಮಿತಿಯಲ್ಲಿರುವ ೧೨ ಜನರ ಸ್ಟಾಕಿ ೯ ಮಂದಿ ಬೆಂಗಳೂರಿನವರೇ ಇದ್ದಾರೆ. ಚಿಲ್ಲರೆ ವರ್ತಕರೆಲ್ಲಾ ಬೆಂಗಳೂರಿಗೆ ಹೋಗಿ ಬಟ್ಟೆ ಕೊಂಡು ತರಬೇಕಾಗಿದೆ. ಇದರಿಂದ ಅವರಿಗೆ ತುಂಬಾ ಲುಕ್ಸಾನಾಗುತ್ತದೆ. ಆದ್ದರಿಂದ ಈ ಆಜ್ಞೆಯನ್ನು ವಾಪಸು ತೆಗೆದುಕೊಳ್ಳಬೇಕು-ಎಂದರು.

ಶ್ರೀ ಬಿ ಎ ಗುಪ್ತರು ಸೂಚನೆಯ ವಿರೋಧಿಸುವ ಸರಣಿಯಲ್ಲಿ ಮಾತ ಈ ಹೊಸ ಆಜ್ಞೆಯಿಂದ ಕೆಲವರಿಗೆ ತೊಂದರೆಯಾಗಿರಬಹುದು; ಎಂದರು. ಧಾರವಾರ್ಕರ್‌ರವರು ಈಗಿನ ಬಟ್ಟೆ ಹಂಚಿಕೆ ಸಮರ್ಪಕವಾಗಿಲ್ಲವೆಂದು ಹಂಚಿಕೆ ಮಾಡಲು ಸಹಕಾರ ಸಂಘ ಬಟ್ಟೆ ಒದಗಿಸಬೇಕೆಂದರು ಶ್ರೀ ಎಸ್ ಮಲ್ಲಯ್ಯನವರು ಆಹಾರದ ಹಂಚಿಕೆ ಯುತ್ತಿರುವಂತೆ ಸರ್ಕಾರದವರೇ ಹಂಚಿಕೆ ಮಾಡಬೇಕೆಂದರು. ಮಿ॥ ಖಲೀಲರು ನಿಲುವಳಿ ಸೂಚನೆಯ ವಿರೋಧಿಸಿದರು ಶ್ರೀ ಹೆಚ್. ಕೆ. ಯ್ಯ ಮತ್ತು ಶ್ರೀಮತಿ ಗೌಡರ ಹನುಮವರು ಹಳ್ಳಿಗಾಡಿನವರು ಬಟ್ಟೆಗಾಗಿ ಪಡುವ ಕಷ್ಟಗಳನ್ನು ವಿವರಿಸಿದರು.

ದೈರೆಕ್ಟರಾದ ಮಿ॥ ಖಲೀಲರು ಉತ್ತರವೀಯುತ್ತಾ, ಕೇಂದ್ರ ಸಮಿತಿ ವ್ಯಾಪಾರಿಗಳ ಪ್ರತಿನಿಧಿಗಳೇ ಇರು ಹೊರತು ಕೋಮುವಾರು ಆಧಾರದ ಸಮಿತಿ ರಚಿಸಲಿಲ್ಲವೆಂದರು ಈಗ ರಿ ವ್ಯಾಪಾರ ಮಾಡಲು ಅನುಮತಿ ರುವವರು, ಜಿಲ್ಲಾಧಿಕಾರಿಗಳು ಮತ್ತು ಸಮಿತಿಯು ಸಲಹೆಯಂತೆ ಬಟ್ಟೆಗ ಹಂಚುತ್ತಿದ್ದಾರೆಂದೂ ಇದರಿಂದ ಯಾರ ತೊಂದರೆಯಾಗಿಲ್ಲವೆಂದೂ, ಹಾಗೇನ ರೂ ಜನಾನುಕೂಲ ಒದಗಿದರೆ ಅದ ಪರಿಶೀಲಿಸಲು ಪ್ರಯತ್ನಿಸಲಾಗುವುದೆಂ ಹೇಳಿದರು ಸೂಚನೆಯು ಚರ್ಚೆ ಮುಕ್ತಾಯಗೊಂಡು ಸಭೆ ೬ ಘಂ ಎದ್ದಿತು

ಖಾದಿ ಗಾಂಧಿ ಸಾಮಗ್ರಿಗಳು ಹುಡುಗಳೂ

ಖರೀದಿಗೂ ಬಾಡಿಗೆಗೂ ದೊರೆಯುತ್ತವೆ.

ಖದ್ದರ್ ಪರಸ್ಪರ ಸಹಾಯ ಸಂಸ್ಥೆ

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

Edited, printed and published by K. Nagarajan at the Sadhvi Press, D. Subbiah Road, Mysore.

:: ಹರಾಜು ::

13—10—1946 ನೇ ಭಾನುವಾರ

ಮೈಸೂರು ಮಂಡಿಮೊಹಲ್ಲಾ ಈವಿನಾ ಎಕ್ಸ್‌ಟೆನ್‌ಷನ್‌ನಲ್ಲಿರುವ ಮಿ॥ ಇ. ಕೆಂಟ್‌ರವರ ಬಂಗಲೆ, ಕಾಟೇಜ್ ಮತ್ತು ಸೈಟುಗಳು

೧೩—೧೦—೪೬ ನೇ ಭಾನುವಾರ

ಪ್ರಾತಃಕಾಲ ೧೦ ಗಂಟೆಗೆ ಬಹಿರಂಗವಾಗಿ ಸ್ವತ್ತಿನ ಬಳಿ ಹರಾಜು ಮಾಡಲ್ಪಡುತ್ತವೆ.

ವರ್ಕ್ ಶಾಪುಗಳಿಗೂ, ಮಿಲ್‌ಗಳಿಗೂ ಮತ್ತು ಸಿನಿಮಾ ಮಂದಿರಗಳನ್ನು ಕಟ್ಟುವುದಕ್ಕೂ ಬಹು ಅತ್ಯುತ್ತಮವಾಗಿರುತ್ತವೆ ಹರಾಜಿನಲ್ಲಿ ಸ್ವತ್ತನ್ನು ಪಡೆದವರು ಶೇ. ಭಾಗ ಮೊಬಲಗನ್ನು ಕೂಡಲೇ ಪಾವತಿ ಮಾಡಿ ಉಳಿದ ಮೊಬಲಗನ್ನು ರಿಜಿಸ್ಟ್ರೇಷನ್ ಕಾಲದಲ್ಲಿ ಪಾವತಿ ಮಾಡತಕ್ಕದ್ದು. ರಿಜಿಸ್ಟ್ರೇಷನ್ ವಗೈರೆಗಳನ್ನೆ ಅವರ ಸ್ವಂತ ಖರ್ಚಿನಿಂದ ಮಾಡಿಕೊಳ್ಳತಕ್ಕದ್ದು ಬಾಕಿ ವಿಷಯಗಳಿಗೆ ಈ ಕೆಳಗಿನ ವಿಳಾಸದಲ್ಲಿ ಪೊಫ ವಿಚಾರಿಸಿಕೊಳ್ಳಬಹುದು

Neo Furniture Company.

Auctioneers and Commission Agents,

Irwin Road :: Mysore

[ವಿಜಯಾ ಏಜನ್ಸೀಸ್, ಮೈಸೂರು.]

ಫೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೫] ಶುಕ್ರವಾರ ೧೧—೧೦—೪೬ [ಸಂಚಿಕೆ ೬೩

ದೆಹಲಿ ಸಂಧಾನದಲ್ಲಿ ನಿರುತ್ಸಾಹ ಮೂಡಿದೆ

ರಾಜಪುತ್ರಿಯ ಜನನ

ಪ್ರತಿನಿಧಿ ಸಭೆಯಲ್ಲಿ ಸದಸ್ಯರ ಸಂತೋಷ

ಮೈಸೂರು ೧೧

ಪ್ರತಿನಿಧಿ ಸಭೆಯಲ್ಲಿ ನಿನ್ನೆ ದಿನ ಉಪಾಹಾರಾನಂತರ ದಿವಾನ್ ಅಧ್ಯಕ್ಷರು ಶ್ರೀಮನ್ಮಹಾರಾಜರಿಗೆ ಪುತ್ರೀರತ್ನ ಜನನವಾಗಿರುವ ಸಂತೋಷಕರವಾದ ಸುದ್ದಿಯನ್ನು ತಿಳಿಸಿ.

ಕಾಂಗ್ರೆಸ್ ಪಕ್ಷದ ಶ್ರೀ ಕೆ ಹನುಮಂತಯ್ಯನವರು, ಈ ಸಂತೋಷಕರವಾದ ಸುದ್ದಿ ತಮಗೆಲ್ಲಾ ಪರಮಾನಂದವಾಗಿರುವುದೂ, ಈ ಸಂದರ್ಭದಲ್ಲಿ ತಮ್ಮ ರಾಜಭಕ್ತಿಯನ್ನು ಪ್ರಭುಗಳಿಗೆ ಸಮರ್ಪಿಸಬೇಕೆಂದೂ ಪ್ರಾರ್ಥಿಸಿದರು.

ಸಭೆಯ ನಾನಾ ಪಕ್ಷಗಳಿಗೆ ಸೇರಿದ ಶ್ರೀಯುತ ಎಸ್. ಸಿ. ಮಲ್ಲಯ್ಯ, ವೈ. ಧರ್ಮಪ್ಪ, ಎ. ಜೆ. ಖಲೀಲ್, ದೇವರಾಜೇ ಅರಸ್, ಎಂ. ರಾಮಸ್ವಾಮಿ, ರಾಮಪ್ಪ, ಶ್ರೀಮತಿ ಲಕ್ಷ್ಮೀದೇವಿಯವರು ಮಾತನಾಡಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿ ರಾಜಪುತ್ರಿಯ ಕೀರ್ತಿಯು ಬೆಳೆದು ಯುವರಾಜನ ವಂಶಾಭಿವೃದ್ಧಿಯಾಗಲೆಂದು ಹಾರೈಸಿದರು. ಶ್ರೀಮತಿ ಸುನಂದಾದೇವಿಯವರು ರಾಜಪುತ್ರಿಯು, ವಿಕ್ಟೋರಿಯಾ ರಾಣಿಯಂತೆ ರಾಜ್ಯಭಾರ ಮಾಡಿ ಕೀರ್ತಿ ಪಡೆಯಲಿ ಎಂದರು.

ಸಭೆಯು ರಾಜಭಕ್ತಿ ಪುರಸ್ಸರವಾದ ಅಭಿನಂದನೆಯನ್ನು ನಿರ್ಣಯದ ಮೂಲಕ ಅಂಗೀಕರಿಸಲಾಯಿತು. ಇದನ್ನು ಪ್ರಭುಗಳಿಗೆ ಒಪ್ಪಿಸುವುದಾಗಿ ಅಧ್ಯಕ್ಷರು ತಿಳಿಸಿದರು.

ಅನಂತರ ಹಣಕಾಸಿನ ಸಮಿತಿಯು ಸೂಚಿಸಿದ ಬಜೆಟ್ ಅಧಿವೇಶನದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರ ಒಂದು ದಿನದ ಭತ್ಯ ಹಿಡಿದದ್ದು ಸರಿಯಲ್ಲವೆಂದೂ, ಅದನ್ನು ವಾಪಸು ಕೊಡಬೇಕೆಂದೂ, ಮಾಡಿದ್ದ ಸೂಚನೆಯನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

ಶುಕ್ರವಾರ ಮೈಸೂರು ನಗರಕ್ಕೆ ಸಾರ್ವಜನಿಕ ರಜಾವೆಂದು ಸರ್ಕಾರದ ಆಜ್ಞೆಯಾಗಿರುವುದರಿಂದ ಸಭೆಯನ್ನು ಭಾನುವಾರ ಬೆಳಿಗ್ಗೆ ೮-೩೦ ರಿಂದ ೧೨-೩೦ ರ ವರೆಗೆ ನಡೆಸಲಾಗುವುದೆಂದು ಅಧ್ಯಕ್ಷರು ತಿಳಿಸಿದರು.

ಲೋಹಿಯಾರವರ ಬಿಡುಗಡೆ

ಗೋವಾದಲ್ಲಿ ದಸ್ತಗಿರಿಯಾಗಿ ಸೆರೆಮನೆಗೆ ತಳ್ಳಲ್ಪಟ್ಟಿದ್ದ ಡಾ॥ ರಾಮಮನೋಹರ ಲೋಹಿಯಾರವರನ್ನು ಅಲ್ಲಿನ ಸರ್ಕಾರದವರು ಬಿಡುಗಡೆ ಮಾಡಿ ಬ್ರಿಟಿಷ್ ಸರಹದ್ದಿನ ವರೆಗೆ ತಂದು ಬಿಟ್ಟಿರುವರು. ಡಾ॥ ಲೋಹಿಯಾರವರು ಬೆಳಗಾವಿಗೆ ಈಗ ಬಂದಿದ್ದಾರೆ.

ಲಾರಿ ಅಪಘಾತ

ಒಬ್ಬನ ಮರಣ ಆರು ಮಂದಿಗೆ ಗಾಯ

ಮೈಸೂರು ೧೧

ನಿನ್ನೆ ದಿನ ಬೆಳಿಗ್ಗೆ ಚಾಮುಂಡಿ ಬೆಟ್ಟದಿಂದ ಸಾಮಾನುಗಳನ್ನು ತುಂಬಿಕೊಂಡು ಅರಮನೆ ಲಾರಿಯೊಂದು ಬರುತ್ತಿದ್ದಾಗ, ತಿರುವೊಂದರಲ್ಲಿ ಲಾರಿಯು ಪಕ್ಕದ ಕಟ್ಟೆಗೆ ಹೋಗಿ ಸಾಮಾನುಗಳ ಮೇಲೆ ಕುಳಿತಿದ್ದ ಏಳು ಜನರು ಕೆಳಕ್ಕೆ ಉರುಳಿದರೆಂದೂ, ಲಾರಿಯಲ್ಲಿದ್ದ ಸಾಮಾನುಗಳು ಅವರ ಮೇಲೆ ಬಿದ್ದುವೆಂದೂ, ಅದರಿಂದ ಬೋಗಯ್ಯನ ಮಗ ಮರಿ ಎಂಬಾತನು ಸತ್ತನೆಂದೂ, ಇತರರಿಗೆ ತೀವ್ರವಾದ ಗಾಯವಾಗಿದೆಯೆಂದೂ, ಅವರುಗಳನ್ನೆಲ್ಲಾ ಆಸ್ಪತ್ರೆಗೆ ಸಾಗಿಸಿರುವುದಾಗಿಯೂ ವರದಿಯಾಗಿದೆ.

ಸ್ಕೌಟ್ ಚಳುವಳಿಯ ಆದರ್ಶ

ಪ್ರಭುಗಳಿಂದ ನೂತನ ಭವನದ ಶಂಕು ಸ್ಥಾಪನೆ

ಮೈಸೂರು ೧೧

"ತನ್ನ ಆಸೆಗಳನ್ನು ತೃಪ್ತಿಪಡಿಸಿಕೊಳ್ಳುವುದಕ್ಕಿಂತಲೂ, ಸೋದರ ವೃಂದದ ಸೇವೆಯೇ ಪರಮೋತ್ಕೃಷ್ಟವಾದ ಕಾರ್ಯವೆಂಬುದನ್ನು ಅರಿತಿರುವುದೇ ಸ್ಕೌಟ್ ಚಳುವಳಿಯ ಆದರ್ಶ. ಸ್ಕೌಟ್ ಶಿಕ್ಷಣ ಕೊಡುವುದರ ಉದ್ದೇಶವು ಈ ತತ್ವವನ್ನು ಕಾರ್ಯರೂಪಕ್ಕೆ ಪರಿವರ್ತಿಸುವುದೇ ಆಗಿದೆ. ಇಲ್ಲಿ ನೀತಿ ಜೀವನದ ತಳಹದಿಯು ಸ್ಥಿರವಾಗಿ ಹಾಕಲ್ಪಟ್ಟಿದೆ. ಮತ್ತು ಕಷ್ಟ ಪಡುತ್ತಿರುವವರಿಗೆ ಸೇವೆಯನ್ನು ಸಲ್ಲಿಸುವುದೇ ಸಾಮಾಜಿಕ ಕಾರ್ಯಾಚರಣೆಯ ಉಚ್ಚ ನೀತಿಯಾಗಿದೆ"— ಎಂಬುದಾಗಿ ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್‌ರವರು ಈ ದಿನ ಬೆಳಿಗ್ಗೆ ಮೈಸೂರು ಜಿಲ್ಲಾ ಕಛೇರಿಯ ಬಳಿ ಸ್ಕೌಟ್ ಕೇಂದ್ರ ಭವನದ ಶಂಕು ಸ್ಥಾಪನಾ ಮಹೋತ್ಸವವನ್ನು ನೆರವೇರಿಸುತ್ತಾ ಅಪ್ಪಣೆ ಕೊಡಿಸಿದರು.

ಪ್ರಾರಂಭದಲ್ಲಿ ಮೈಸೂರು ನಗರದ ಸ್ಕೌಟ್ ಸಮಿತಿ ಅಧ್ಯಕ್ಷರಾದ ಶ್ರೀ ರಾಮಚಂದ್ರರಾವ್ ಬೊಂಬೋರೆಯವರು ಪ್ರಭುಗಳಿಗೆ ಬಿನ್ನವತ್ತಳೆಯನ್ನು ಒಪ್ಪಿಸಿದರು. ಧರ್ಮರತ್ನಾಕರ ಶ್ರೀ ಕೆ. ನಂದೀಬಸಪ್ಪನವರು ಮಹಾಸ್ವಾಮಿಯವರಿಗೆ ರಜತ ಕರಂಡವೊಂದನ್ನು ಅರ್ಪಿಸಿದರು.

ಪ್ರಭುಗಳು ತಮ್ಮ ಭಾಷಣದಲ್ಲಿ ಅವರ ತಂದೆಯವರೂ ಮತ್ತು ದೊಡ್ಡಪ್ಪಂದಿರು ಕೀರ್ತಿಶೇಷರಾದ ಮಹಾಪ್ರಭುಗಳೂ, ಸ್ಕೌಟ್ ಚಳುವಳಿಯಲ್ಲಿ ತೋರಿಸುತ್ತಿದ್ದ ಉತ್ಸಾಹ, ಆಸಕ್ತಿಗಳನ್ನು ಸೂಕ್ಷ್ಮವಾಗಿ ತಿಳಿಸಿ, ತಾವೂ ಕಳೆದ ೨೦ ವರ್ಷಗಳಿಂದ ಈ ಚಳುವಳಿಯಲ್ಲಿ ಭಾಗಿಗಳಾಗಿದ್ದುದನ್ನು ವಿವರಿಸಿದರು. ಕಳೆದ ೫ ವರ್ಷಗಳಿಂದ ಈ ಚಳುವಳಿಯು ಪ್ರವರ್ಧಮಾನಕ್ಕೆ ಬರುತ್ತಿರುವುದನ್ನು ಪ್ರಸ್ತಾಪಿಸಿ ತಮ್ಮ ಪ್ರಶಂಸೆಯನ್ನು ವ್ಯಕ್ತಪಡಿಸಿದರು. ತಮ್ಮ ದೊಡ್ಡಪ್ಪಂದಿರು ಬಯಸಿದ್ದಂತೆ ಪ್ರತಿ ಶಾಲಾ ಬಾಲಕನೂ ಸ್ಕೌಟ್ ಆಗುವಂತೆ ಮಾಡಬೇಕೆಂದೂ, ಈ ಕೇಂದ್ರ ಭವನ ನಿರ್ಮಾಣದಿಂದ ಆ ಉದ್ದೇಶವು ಯಶಸ್ವಿಯಾಗಬೇಕೆಂದೂ, ಹಾರೈಸಿದರು.

ಯುದ್ಧ ಕಾಲದಲ್ಲಿ ಎ. ಆರ್. ಪಿ ಮತ್ತು ನ್ಯಾಷನಲ್ ವಾರ್ ಫ್ರಂಟ್ ಸಂಸ್ಥೆಗಳ ವ್ಯವಹಾರಗಳಲ್ಲೂ, ಹೆಚ್ಚು ಆಹಾರ ಬೆಳೆಯುವ ಯೋಜನೆಯಲ್ಲೂ, ಸ್ಕೌಟ್ ದಳದವರು ಸಲ್ಲಿಸಿರುವ ಸೇವೆಯು ನಮ್ಮನ್ನು ಸಂತೋಷ ಗೊಳಿಸಿದೆ; ಯುದ್ಧ ಮತ್ತು ಶಾಂತಿ ಕಾಲಗಳಲ್ಲೂ, ಕಷ್ಟ ಮತ್ತು ತೊಂದರೆಗಳ ಕಾಲದಲ್ಲೂ, ಸಾರ್ವಜನಿಕರು ಎಲ್ಲಕ್ಕಿಂತಲೂ ಮಿಗಿಲಾಗಿ ತಮ್ಮ ಕಷ್ಟವನ್ನು ನೀಗುವುದಕ್ಕಾಗಿಯೂ, ತಮ್ಮಲ್ಲಿ ಉತ್ಸಾಹ ತುಂಬುವುದಕ್ಕಾಗಿಯೂ, ಸ್ಕೌಟುಗಳ ಕಡೆ ನೋಡುವುದು ಸ್ವಾಭಾವಿಕ. ನಿಃಸ್ವಾರ್ಥ ಭಾವನೆಯಿಂದ ಸಾರ್ವಜನಿಕರಿಗೆ ನೆರವು ನೀಡುವುದು ಸ್ಕೌಟುಗಳ ಪ್ರಥಮ ಕರ್ತವ್ಯವಾಗಿರಲಿ— ಎಂದು ಹಾರೈಸಿದರು. ನೂತನ ಭವನಕ್ಕಾಗಿ ಧರ್ಮರತ್ನಾಕರ ಶ್ರೀ ಕೆ ನಂದೀಬಸಪ್ಪನವರು ಇತ್ತಿರುವ ಉದಾರ ದಾನವನ್ನು ಪ್ರಶಂಸಿಸಿ ಅವರು ಶಂಕುಸ್ಥಾಪನೆಯನ್ನು ನೆರವೇರಿಸಿದರು.

ಸಾರ್ವಜನಿಕ ರಜಾ ದಿನಗಳು

ಮೈಸೂರು ೧೧

ಮೈಸೂರು ಸರ್ಕಾರದವರು ನಿನ್ನೆ ಎರಡು ವಿಶೇಷ ಪ್ರಕಟನೆಗಳನ್ನು ಹೊರಡಿಸಿ ಶ್ರೀಮನ್ಮಹಾರಾಜರವರಿಗೆ ನಿನ್ನೆ ಮಧ್ಯಾಹ್ನ ಪುತ್ರೀರತ್ನ ಜನನವಾದುದಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಿರುತ್ತಾರೆ.

ಇದಕ್ಕಾಗಿ ಈ ದಿನ ರಾಜಧಾನಿಯ ಕೋರ್ಟು ಕಛೇರಿ, ಶಾಲಾ ಮತ್ತು ಇತರ ಸಂಸ್ಥೆಗಳಿಗೂ ರಜಾ ಕೊಡಲಾಗಿದೆ.

೧೪ ನೇ ತಾ॥ ಸೋಮವಾರ ಸಂಸ್ಥಾನದಲ್ಲೆಲ್ಲಾ ಸಾರ್ವತ್ರಿಕ ರಜಾ ದಿನವೆಂದು ಪ್ರಕಟಿಸಲಾಗಿದೆ.

ನಿನ್ನೆಯಿಂದ ೧೪ ನೇ ತಾ॥ ವರೆಗೆ ಪ್ರತಿದಿನವೂ ಸರ್ಕಾರೀ ಮತ್ತು ಸಾರ್ವಜನಿಕ ಕಟ್ಟಡಗಳ ಮೇಲೆ ಮೈಸೂರು ಧ್ವಜವನ್ನು ಹಾರಿಸತಕ್ಕದ್ದೆಂದೂ ಆಜ್ಞೆಯಾಗಿದೆ.

ಪರ್ತಿ ಕೋಟೆಯ ಕೆರೆ ಒಡೆಯಿತು

ಹಿರಿಯೂರು ತಾಲ್ಲೂಕ್ ಪರ್ತಿ ಕೋಟೆಯ ಕೆರೆಯು ಅತಿ ವೃಷ್ಟಿಯಿಂದ ಕಳೆದ ೨ ನೇ ತಾರೀಖು ಒಡೆದು ಹೋಗಿ ಕೆರೆಯಲ್ಲಾ ಬರಿದಾಗಿ ರಾಗಿ ಬೆಳೆಗೆ ತುಂಬಾ ನಷ್ಟವಾಗಿದೆಯೆಂಬುದಾಗಿ ಪ್ರ॥ ಪ್ರ॥ ಸಭಾ ಸದಸ್ಯರಾದ ಶ್ರೀ॥ ಹುಲ್ಲೂರು ಶ್ರೀನಿವಾಸ ಜೋಯಿಸರು ತಿಳಿಸಿರುತ್ತಾರೆ.

ಕಾಂಗ್ರೆಸ್ ಪಕ್ಷದವರಿಂದ ಸಭಾ ತ್ಯಾಗ

ಪ್ರ॥ಪ್ರ॥ ಸಭೆಯ ಕಾರ್ಯ ಕಲಾಪ

ಮೈಸೂರು ೧೦

ಬೀಜದ ಭತ್ತವು ರೈತರಿಗೆ ದೊರೆಯದೆ ಹಾಸನ ಜಿಲ್ಲೆಯಲ್ಲಿ ಉಂಟಾಗಿರುವ ತೊಂದರೆಯನ್ನು ಚರ್ಚಿಸಲು ಶ್ರೀ ಬಸಪ್ಪ ಶೆಟ್ಟರು ನಿನ್ನೆ ಪ್ರತಿನಿಧಿ ಸಭೆಯಲ್ಲಿ ನಿಲುವಳಿ ಸೂಚನೆಯೊಂದನ್ನು ಮಂಡಿಸಿದರು. ಶ್ರೀಗಳಾದ ಎಸ್. ಸಿ. ಮಲ್ಲಯ್ಯ, ಶಿವಪ್ಪ, ಶಿವಲಿಂಗಯ್ಯ, ಕರೀಗೌಡ, ವಿ ಡಲ್ಲಾರ್ ಮುಂತಾದವರು ಸೂಚನೆಗೆ ಬೆಂಬಲವಿತ್ತು ಮಾತನಾಡಿದರು.

ಇದಾವುದನ್ನೂ ಚರ್ಚೆಯಾಗಿದೆಯೆಂದು ಶ್ರೀ ಪಿ. ಸೀತಾರಾಮಯ್ಯನವರು ಮುಕ್ತಾಯ ಸೂಚನೆ ತಂದರು. ಅಧ್ಯಕ್ಷರು ಅದಕ್ಕೆ ಮನ್ನಣೆ ಕೊಡಲಿಲ್ಲ. ಕಾಂಗ್ರೆಸ್ ಪಕ್ಷದ ನಾಯಕರು ಚರ್ಚೆ ಮುಕ್ತಾಯಗೊಳ್ಳಬೇಕೆಂದು ತಿಳಿಸಿದರು.

ಅಧ್ಯಕ್ಷರು 'ಮಧ್ಯೆ ಮಾತನಾಡಬೇಡಿ' ಎಂದು ತಿಳಿಸಿದ್ದನ್ನು ಪ್ರತಿಭಟಿಸಿ ಕಾಂಗ್ರೆಸ್ ಪಕ್ಷದವರೆಲ್ಲಾ ಸಭಾ ತ್ಯಾಗ ಮಾಡಿದರು.

ಕಾಂಗ್ರೆಸ್ ಪಕ್ಷದವರ ನೀತಿಯನ್ನು ತಾವು ಒಪ್ಪುವುದಿಲ್ಲವೆಂದೂ, ಹೆಚ್ಚು ಸದಸ್ಯರು ಈ ನಿಲುವಳಿ ಬಗ್ಗೆ ಮಾತನಾಡಲು ಕಾತುರಗೊಂಡಿದ್ದುದರಿಂದಲೇ ತಾವು ಮುಕ್ತಾಯ ಸೂಚನೆಗೆ ಅವಕಾಶ ಕೊಡಲಿಲ್ಲವೆಂದೂ ಅಧ್ಯಕ್ಷರು ತಿಳಿಸಿದರು.

ನಂತರ ನಿಲುವಳಿ ಸೂಚನೆಯನ್ನು ಓಟಿಗೆ ಹಾಕಲಾಗಿ ಅದು ಸರ್ವಾನುಮತದಿಂದ ಅಂಗೀಕಾರವಾಯಿತು.

ನಿರ್ಣಯಗಳು

ನಿಷ್ಕ್ರಮ ನಗರದವರಿಗೆ ಸಂಬಂಧಪಟ್ಟ ವಿಷಯದಲ್ಲಿ ಸರ್ಕಾರದವರಿಗೆ ಸೂಕ್ತ ಸಲಹೆ ಕೊಡಲು ಕೇಂದ್ರ ಸಮಿತಿಯೊಂದನ್ನು ರಚಿಸಬೇಕೆಂದು ಶ್ರೀ ವೆಂಕಟಯ್ಯನವರು ತಂದಿದ್ದ ನಿರ್ಣಯದ ತತ್ವವನ್ನು ಸಚಿವ ಡಾ॥ ರಾಮಯ್ಯರವರು ಒಪ್ಪಿಕೊಂಡು ತಮ್ಮ ಅಧ್ಯಕ್ಷತೆಯಲ್ಲೇ ಅಂತಹ ಒಂದು ಸಮಿತಿಯನ್ನು ರಚಿಸಲಾಗುವುದೆಂದು ಭರವಸೆ ಇತ್ತುದರಿಂದ ನಿರ್ಣಯವು ವಾಪಸು ತೆಗೆದುಕೊಳ್ಳಲ್ಪಟ್ಟಿತು.

ದೆಹಲಿ ಸಂಧಾನದಲ್ಲಿ ನಿರುತ್ಸಾಹ

ಭೂಪಾಲಿನ ನವಾಬರು ನಿನ್ನೆ ಬೆಳಿಗ್ಗೆ ಮಹಾತ್ಮ ಗಾಂಧಿಯವರನ್ನು ಮತ್ತೆ ಭೇಟಿ ಮಾಡಿದ ನಂತರ ಮಿ॥ ಜಿನ್ನಾರವರನ್ನು ಕಂಡು ಮಾತುಕತೆ ನಡೆಸಿದರು. 'ಅಸ್ಪೃಶ್ಯರ ವಿಷಯವು ಸ್ಪಷ್ಟವಾಗಬೇಕೆಂದೂ, ವಿಷಯವು ಬಹಳ ಗುರುತರವಾಗಿರುವುದೇ ಇದಕ್ಕೆ ಕಾರಣವೆಂದು ಅವರು ತಿಳಿಸಿರುವುದರಿಂದ ನಿರುತ್ಸಾಹವು ಮೂಡಿದೆ. ಸಂಧಾನವು ಈ ರೀತಿ ನಿಧಾನವಾಗಿರುವುದರಿಂದ ಈ ವಿಷಯ ಪ್ರಧಾನಿಗಳವರಲ್ಲಿ ಸಂದೇಹವೂ ಹುಟ್ಟಿದೆ. ಆದರೆ ಭೂಪಾಲ್ ನವಾಬರು ತಮ್ಮ ಪ್ರಯತ್ನವನ್ನು ಮುಂದುವರಿಸುವುದಾಗಿ ತಿಳಿಸಿದ್ದಾರೆ. ಕೇಂದ್ರ ತಾತ್ಕಾಲಿಕ ಸರ್ಕಾರದಲ್ಲಿ ಲೀಗಿನ ಮಂತ್ರಿಗಳಿಗೆ ಸ್ಥಾನ ಕೊಡುವ ವಿಚಾರದಲ್ಲೇ ಎಲ್ಲಕ್ಕೂ ಕಷ್ಟವಾಗಿದೆಯೆಂದು ಊಹಿಸಲಾಗಿದೆ.

ಸಾಧ್ವಿ

ತಾ॥ ೧೧-೧೦-೪೬ ಶುಕ್ರವಾರ

ಪ್ರಭುಗಳಿಗೆ ಅಭಿನಂದನೆ

ಶ್ರೀಮನ್ಮಹಾರಾಜರವರಾದ ಶ್ರೀಮುಮ್ಮಡಿ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರರವರಿಗೆ ನಿನ್ನೆ ದಿನ ಪುತ್ರೀ ರತ್ನವು ಜನಿಸಿದುದರಿಂದಾಗಿ ಸಂಸ್ಥಾನದ ಪ್ರಜೆಗಳೆಲ್ಲರೂ ಮಹದಾನಂದಭರಿತರಾಗಿರುವರು. ಈ ಶುಭ ಸಮಯದಲ್ಲಿ ನಾವೂ ಸಹ ಸಂಸ್ಥಾನದ ಸಕಲ ಪ್ರಜೆಗಳೊಡನೆ ನಮ್ಮ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಮಹಾಪ್ರಭುಗಳವರಿಗೆ ಸಲ್ಲಿಸುತ್ತೇವೆ. ಯದುವಂಶದ ಕೀರ್ತಿಯು ಆಚಂದ್ರಾರ್ಕವಾಗಿ ಬೆಳೆದು ಸಂಸ್ಥಾನಕ್ಕೆ ಮಾತ್ರವೇ ಅಲ್ಲದೆ ಇಡೀ ಭರತಖಂಡಕ್ಕೆಲ್ಲಾ ಆದರ್ಶಪ್ರಾಯವಾಗಿ ಶೋಭಿಸಲೆಂದು ಪ್ರಾರ್ಥಿಸುತ್ತೇವೆ.

ರಾಜ ಕುಲದ ಅಧಿದೇವತೆಯಾದ ಶ್ರೀ ಚಾಮುಂಡೇಶ್ವರಿಯ ರಥೋತ್ಸವದ ದಿವ್ಯ ಸನ್ನಿವೇಶದಲ್ಲಿ ರಾಜಕುಮಾರಿಯ ಜನನವು ಆಗಿರುವುದು ಮಹತ್ತಾದ ಅತಿಶಯವಾದ ಅಂಶವಾಗಿದೆ. ದೇವಿಯ ಕೃಪಾಕಟಾಕ್ಷದಿಂದ ದೊರೆತ ಸತ್ಫಲವಿದೆಂದು ಸಕಲರೂ ಭಾವಿಸಿದ್ದಾರೆ. ದುಷ್ಟರನ್ನು ನಿಗ್ರಹಿಸಿ, ಶಿಷ್ಟರನ್ನು ಸಂರಕ್ಷಿಸಲು ಈ ರಾಜಧಾನಿಯ ಬಳಿ ಮಹಾಬಲಾದ್ರಿಯಲ್ಲಿ ಚಾಮುಂಡೇಶ್ವರಿಯ ಅವತಾರವನ್ನು ತಾಳಿ ಮಹಿಷಾಸುರನನ್ನು ಸಂಹರಿಸಿದ ಆದಿಶಕ್ತಿ, ಮಹಾಮಾತೆಯ ಅನುಗ್ರಹವು ನಮ್ಮ ರಾಜಮನೆತನದ ಮೇಲೆ ಪರಿಪೂರ್ಣವಾಗಿರುವುದೆಂಬುದಕ್ಕೆ ಇದೇ ನಿದರ್ಶನವಾಗಿದೆ. ರಾಜಕುಮಾರಿಯ ಉದಯವು ಸಂಸ್ಥಾನದಲ್ಲಿ ಹೊಸ ಯುಗದ ಭಾಗ್ಯೋದಯಕ್ಕೆ ಅಂಕುರಾರ್ಪಣವಾಗಲೆಂದು ಸಕಲ ಪ್ರಜೆಗಳೂ ಹಾರೈಸುತ್ತಾರೆ.

ಇಂತಹ ಆನಂದದ ಸಮಯದಲ್ಲಿ ಪ್ರಭುತ್ವದವರೂ ಸಹ ಉದಾರ ನೀತಿಯನ್ನು ಅನುಸರಿಸಿ ಸಕಲ ಪ್ರಜೆಗಳೂ ಈ ಸಂತೋಷದಲ್ಲಿ ಭಾಗಿಗಳಾಗುವಂತೆ ಮಾಡುವುದು ನ್ಯಾಯ. ಸರ್ಕಾರಿ ಕಛೇರಿಗಳಲ್ಲಿಯೂ, ಶಾಲಾ ಕಾಲೇಜುಗಳಲ್ಲಿಯೂ, ಸಾರ್ವಜನಿಕ ಸಂಸ್ಥೆಗಳಲ್ಲಿಯೂ ಈ ಮಹೋತ್ಸವವು ಒಂದು ದೊಡ್ಡ ನಾಡ ಹಬ್ಬದಂತೆ ವೈಭವದಿಂದ ಆಚರಿಸಲ್ಪಡುವುದು. ದೇಶದ ಸಕಲ ಪ್ರಜೆಗಳ ಸಂತೋಷಕ್ಕೆ ಪಾತ್ರವಾದ ಈ ಸನ್ನಿವೇಶದಲ್ಲಿ ನಾವು ಇನ್ನೊಂದು ಕಡೆ ಗಮನ ಕೊಡಬೇಕಾದುದು ಅತ್ಯಗತ್ಯ.

ಸಂಸ್ಥಾನದ ಕಾರಾಗೃಹಗಳಲ್ಲಿ ಇನ್ನೂ ಹಲವು ರಾಜಕೀಯ ಬಂದಿಗಳು ಕೊಳೆಯುತ್ತಿರುವರು. ಅನೇಕ ಜನರ ಮೇಲೆ ಗಡೀಪಾರು ಆಜ್ಞೆಗಳೂ ಪ್ರತಿಬಂಧಕಗಳೂ, ಇನ್ನೂ ಜಾರಿಯಲ್ಲಿರುವುವು. ರಾಜಕುಮಾರಿಯವರ ಉದಯದ ಸಂತೋಷಾರ್ಥವಾಗಿ ಸಕಲ ರಾಜಕೀಯ ಖೈದಿಗಳನ್ನೂ ಕೂಡಲೇ ಬಿಡುಗಡೆ ಮಾಡುವುದಲ್ಲದೆ, ಎಲ್ಲಾ ಪ್ರತಿಬಂಧಕಗಳನ್ನೂ ತೆಗೆದು ಹಾಕಿ, ಸಂಸ್ಥಾನದಲ್ಲಿ ಹೊಸ ಅಧ್ಯಾಯವನ್ನು ಆರಂಭಿಸಬೇಕೆಂಬುದು ಪ್ರಭುತ್ವದವರಲ್ಲಿ ನಾವು ವಿಶ್ವಾಸಪೂರ್ವಕವಾಗಿ ವಿನಂತಿ ಮಾಡುತ್ತೇವೆ.

ಮುಖ್ಯವಾಗಿ ಸಂಸ್ಥಾನದ ಜನ ಜೀವನವೇ ಹೊಸ ರೂಪವನ್ನು ತಾಳಬೇಕಾದ ಪರಿಸ್ಥಿತಿಯು ಈಗ ಸಂಪ್ರಾಪ್ತವಾಗಿದೆ.

ಬಿಲಾಸಪುರ ಸಂಸ್ಥಾನದಲ್ಲಿ ಸುಧಾರಣೆ

ಈಸಾರಿ ದಸರಾ ಸಮಾರಂಭದಲ್ಲಿ ನಡೆದ ದರ್ಬಾರಿನಲ್ಲಿ ಬಿಲಾಸಪುರ ಸಂಸ್ಥಾನಾಧೀಶ್ವರರಾದ ರಾಜಾ ಆನಂದ ಚಂದರು ವಯಸ್ಕರ ಓಟಿನ ಹಕ್ಕುಳ್ಳ ಒಂದು ಪ್ರತಿನಿಧಿ ಶಾಸನ ಸಭೆಯನ್ನು ಬರುವ ಏಪ್ರಿಲ್‌ನೊಳಗೆ ಸ್ಥಾಪಿಸಲಾಗುವುದೆಂದೂ, ಮತ್ತು ಅದಕ್ಕಾಗಿ ಎರಡು ಮೂರು ದಿನಗಳಲ್ಲೇ ಒಂದು ಸಮಿತಿಯನ್ನು ರಚಿಸಲಾಗುವುದೆಂದೂ ಹೇಳಿರುವರು.

ಶ್ರೀ ರಾಮಕೃಷ್ಣ ಸೇವಾ ಮಂದಿರ

ಮೈಸೂರು ವಿಲ್ಲೆ ನೊಹಲ್ಲಾ ಷೀಕ್ ಶಾಮಣ್ಣನವರ ಬೀದಿಯಲ್ಲಿರುವ ಮೇಲ್ಕಂಡ ಮಂದಿರದ ಭವನಕ್ಕೆ ನಗರಾಭಿವೃದ್ಧಿ ಸಮಿತಿಯವರು ಕೊಟ್ಟಿದ್ದ ನಿವೇಶನವು ಸಾಲದೆಂದೂ, ಆದ್ದರಿಂದ ಅದೇ ಬೀದಿಯಲ್ಲಿ ಬೇರೆ ನಿವೇಶನವನ್ನು ಕೊಡುವುದಾಗಿಯೂ ಪುರಸಭಾಧ್ಯಕ್ಷರೂ ಸದಸ್ಯರೂ ವಾಗ್ದಾನ ಮಾಡಿದ್ದಾರೆಂದು ಸದರಿ ಮಂದಿರದ ಕಾರ್ಯದರ್ಶಿಗಳು ತಿಳಿಸಿರುತ್ತಾರೆ.

ಸಚಿವರಲ್ಲಿ ಭೇಟಿ

ಚಾಮರಾಜನಗರದ ಹಲವು ಪೌರ ಸಭಾ ಸದಸ್ಯರುಗಳೂ ಸ್ಥಳೀಯ ಮಹನೀಯರೂ ರೆ॥ ಮಂತ್ರಿಗಳಾದ ಶ್ರೀ ಅಪ್ಪಾಜಿ ಗೌಡರನ್ನು ತಾ॥ ೬-೧೦-೪೬ ರಲ್ಲಿ ಭೇಟಿ ಮಾಡಿ ಅಲ್ಲಿನ ಪೌರಸಭಾ ಆಡಳಿತ, ಅಧ್ಯಕ್ಷರಲ್ಲಿನ ಅವಿಶ್ವಾಸ ಪ್ರಕರಣಗಳನ್ನು ತಿಳಿಸಿದರು. ಸಚಿವರು ಎಲ್ಲವನ್ನೂ ವಿಚಾರಿಸಿ ತೀರ್ಮಾನಿಸುವುದಾಗಿ ಭರವಸೆ ಇತ್ತರು.

ಗಾಂಧಿ ಜಯಂತಿ

ಮೈಸೂರು ಕಾಂಗ್ರೆಸ್ ಮಂಡಿ ಮೊಹಲ್ಲಾ ಸಮಿತಿಯಾಶ್ರಯದಲ್ಲಿ ವೆಂಕಟರಮಣ ಸ್ವಾಮಿ ದೇವಸ್ಥಾನದಲ್ಲಿ ಮಹಾತ್ಮ ಗಾಂಧಿಜಿಯವರ ೭೮ ನೇ ಜನ್ಮದಿನೋತ್ಸವವನ್ನು ಮೊನ್ನೆ ಸಂಜೆ ೬-೩೦ ಕ್ಕೆ ಪೌರ ಸಭಾ ಸದಸ್ಯರಾದ ಶ್ರೀ ಜಿ. ಆರ್. ರಂಗಸ್ವಾಮಿಯವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಶ್ರೀಗಳಾದ ವಿ. ವೆಂಕಟಪ್ಪ, ಎಸ್. ವಿ. ಕೃಷ್ಣಮೂರ್ತಿ, ಹೆಚ್. ಎಸ್. ದೊರೆಸ್ವಾಮಿ, ಎ. ಕೃಷ್ಣಮೂರ್ತಿ, ಸಾಲಿ, ಸೀತಾರಾಮಯ್ಯ, ಬಾ. ಸು. ಕೃಷ್ಣಮೂರ್ತಿ ಇವರುಗಳಿಂದ ಅಮೋಘ ಭಾಷಣಗಳಾದುವು.

ಸಕಲ ವಿಧಗಳಲ್ಲಿಯೂ ಸಂಸ್ಥಾನಗಳಿಗೆಲ್ಲಾ ಮಾದರಿಯೆಂದು ಮೆರೆಯುತ್ತಿದ್ದ ಮೈಸೂರು ಪ್ರಜಾಪ್ರಭುತ್ವದ ಮಾರ್ಗದಲ್ಲಿಯೂ ಮುನ್ನಡೆಯಿಟ್ಟು ಆದರ್ಶಪ್ರಾಯವಾಗಬೇಕಾಗಿದೆ. ಮಹಾಪ್ರಭುಗಳು ಸಿಂಹಾಸನಾರೋಹಣ ಮಾಡಿದಾಗ ಕೊಟ್ಟ ಭರವಸೆಯನ್ನು ನೂತನ ರಾಜಕುಮಾರಿಯ ಜನನದ ಈ ಶುಭ ಸಮಯದಲ್ಲಿ ಈಡೇರಿಸುವಂತಾಗಲೆಂದು ನಾವು ಹೃತ್ಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

ತಿಲಕ್ ಸಂಘದ ಸಹಾಯಾರ್ಥವಾಗಿ

ತಾ॥ 13-10-46 ನೇ ಭಾನುವಾರ

ಸಂಜೆ 6 ಘಂಟೆಗೆ

ವಿವಿಧ ವಿನೋದಾವಳಿ

ಟೌನ್‌ಹಾಲಿನಲ್ಲಿ
ಕವನಪ್ಪ, ಭೂಪಾಲ್
ಕನ್ ಸೀನರ್.

ಗಾಂಧಿ ಜಯಂತಿ

ಸಾಲಿಗ್ರಾಮ ೫

೩-೧೦-೪೬ ನೇ ಗುರುವಾರ ಸಂಜೆ ೫ ಕಾರ್ಮಿಕರ ಸಂಘದ ಆಶ್ರಯದಲ್ಲಿ, ಗಾಂಧಿ ಜಯಂತಿಯನ್ನು ಆಚರಿಸಲಾಯಿತು. ಬಾಪೂಜಿಯವರ ಭಾವ ಚಿತ್ರವನ್ನು ಮೂರು ಜೋತಿ ಎತ್ತುಗಳನ್ನೊಳಗೊಂಡ ಗಾಡಿಯಲ್ಲಿ ಇಟ್ಟು ಊರಿನಲ್ಲೆಲ್ಲಾ ಮೆರವಣಿಗೆ ಮಾಡಲಾಯಿತು. ಸಿ. ಜಿ. ಪುರುಷೋತ್ತಮರ ಅಧ್ಯಕ್ಷತೆಯಲ್ಲಿ ಭಾಷಣಗಳಾದುವು. ಸಾಲಿಗ್ರಾಮದಲ್ಲಿ ಹಾಲಿ ಇರುವ ಚೌಕವನ್ನು ಇನ್ನು ಮುಂದೆ 'ಗಾಂಧಿ ಚೌಕ'ವೆಂದು ಕರೆಯಬೇಕೆಂಬ ಠರಾವನ್ನೂ ಸಭೆಯು ಅನುಮೋದಿಸಿತು.

ನಿಮ್ಮ ಮೈ ಮೊಗಮಲ್ಲಿನಂತೆ
ಹೊಳೆಯಬೇಕೆ ? ನೀವು
ಲಾವಣ್ಯ ಮೂರ್ತಿಗಳಾಗಬೇಕೆ ?
ಹಾಗಾದರೆ
ನಮ್ಮ ಮೈಸೂರು ಸ್ಯಾಂಡಲ್
ಸೋಪನ್ನೇ ಉಪಯೋಗಿಸಿ !

ಮೈಸೂರು
ಸ್ಯಾಂಡಲ್
ಸೋಪ್

ಅನೇಕರಿಗೆ ಸೌಂದರ್ಯವನ್ನು
ಸಂಪಾದಿಸಿ ಕೊಟ್ಟಿದೆ. ನಿಮಗೂ
ಸಂಪಾದಿಸಿ ಕೊಡುತ್ತದೆ.
ಪರೀಕ್ಷಿಸಿ ನೋಡಿರಿ
ಎಲ್ಲೆಲ್ಲೂ ದೊರೆಯುತ್ತದೆ.
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.

ರಾಜ್ ಕಮಲ್, ಮೈಸೂರು

10-10-46 ರಿಂದ ಅಮೋಘವಾದ
4 ನೇ ವಾರ
ಸ್ವರ್ಗಸೀಮ

11-10-46 ರಿಂದ 4 ದಿನಗಳು
ಪ್ರತಿ ದಿನ 10-30 ಕ್ಕೆ
'ಬಡೀ ದೀದಿ'
(ನ್ಯೂ ಥಿಯೇಟರ್ಸ್)
ಪಾತ್ರ:- "ಪಹರಿ ಸನ್ಯಾಲ್," ಮಾ

OPERA TALKIES
ತಾ॥ 12—10—46ರಿಂದ
ಮೂರನೇ ವಾರ
ಮಾಯಾ ಮಚ್ಛೀಂದ್ರ
(ತೆಲುಗು)
ಕಣ್ಣಾಂಬ, ಮಾಲತಿ,
ಗೌರೀನಾಥ ಶಾಸ್ತ್ರಿ, ಅದ್ದಂಕಿ
ಕೃಷ್ಣಮೂರ್ತಿ ಮುಂತಾದವರು

ಖಾದಿ ಗೌನುಗಳೂ
ಹುಡ್ಡುಗಳೂ
ಖರೀದಿಗೂ ಬಾಡಿಗೆಗೂ
ದೊರೆಯುತ್ತವೆ.
ಖದ್ದರ್ ಪರಸ್ಪರ ಸಹಾಯ ಸಂಘ,
ಬ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

Edited printed and published
A. R. Nagarajan at the Sadhvi Press
D Subbiah Road, Mysore

:: ಹರಾಜು ::

13—10—1946 ನೇ ಭಾನುವಾರ

ಮೈಸೂರು ಮಂಡಿಮೊಹಲ್ಲಾ ಈದಿಗಾ ಎಕ್ಸ್‌ಟೆನ್‌ಷನ್‌ನಲ್ಲಿರುವ ಮಿ॥ ಇ. ಕೆಂಟ್‌ರವರ ಬಂಗಲೆ, ಕಾಟೇಜ್ ಮತ್ತು ಸೈಟುಗಳು

೧೩—೧೦—೪೬ ನೇ ಭಾನುವಾರ

ಪ್ರಾತಃಕಾಲ ೧೦ ಘಂಟೆಗೆ ಬಹಿರಂಗವಾಗಿ ಸ್ವತ್ತಿನ ಬಳಿ ಹರಾಜು ಮಾಡಲ್ಪಡುತ್ತವೆ

ವರ್ಕ್ ಷಾಪ್ಪುಗಳಿಗೂ, ಮಿಲ್‌ಗಳಿಗೂ ಮತ್ತು ಸಿನಿಮಾ ಮಂದಿರಗಳನ್ನು ಕಟ್ಟುವುದಕ್ಕೂ ಬಹಳ ಅತ್ಯುತ್ತಮವಾಗಿರುತ್ತವೆ. ಹರಾಜಿನಲ್ಲಿ ಸ್ವತ್ತನ್ನು ಪಡೆದವರು ಭಾಗ ಮೊಬಲಗನ್ನು ಕೂಡಲೇ ಪಾವತಿ ಮಾಡಿ ಉಳಿದ ಮೊಬಲಗನ್ನು ರಿಜಿಸ್ಟ್ರೇಷನ್ ಕಾಲದಲ್ಲಿ ಪಾವತಿ ಮಾಡತಕ್ಕದ್ದು. ರಿಜಿಸ್ಟ್ರೇಷನ್ ವಗೈರೆಗಳನ್ನು ಅವರ ಸ್ವಂತ ಖರ್ಚಿನಿಂದ ಮಾಡಿಕೊಳ್ಳತಕ್ಕದ್ದು. ಬಾಕಿ ವಿಷಯಗಳಿಗೆ ಈ ಕೆಳಗಿನ ವಿಳಾಸದಲ್ಲಿ ನೋಡಿ ವಿಚಾರಿಸಿಕೊಳ್ಳಬಹುದು.

Neo Furniture Company.

Auctioneers and Commission Agents,
Irwin Road :: Mysore

[ವಿಜಯಾ ಏಜನ್ಸೀಸ್, ಮೈಸೂರು.]

ನೋಟೀಸ್

ನಮ್ಮ ಕಂಪೆನಿಗೆ ಪಾಲುಗಾರರಾಗಲಿ, ಯಾ ಕಮೀಷನ್‌ದಾರರಾಗಲಿ, ಸೇಲ್ ಸೋಲ್ಟರ್ ಆಗಲಿ ಯಾರೂ ಇರುವುದಿಲ್ಲ. ಸದರಿ ಕಂಪೆನಿ ಹೆಸರಿನಿಂದ ಯಾರಾದರೂ ಲೇವಾದೇವಿಯನ್ನು ನಡೆಸಿದ್ದಲ್ಲಿ ಕಂಪೆನಿಯು ಯಾವ ರೀತಿಯಲ್ಲೂ ಹೊಣೆಗಾರರಲ್ಲ.

(Sd) AZEEZ A SATTAR SAIT
Pro - Neo Furniture Co.,
Irwin Road :: Mysore

ಫೋ. ನಂ ೩೦೨ ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶನಿವಾರ ೧೨—೧೦—೪೬. [ಸಂಚಿಕೆ ೬೪.

ಭಟ್ಕಳ್ಳಿನಲ್ಲಿ ಹಡಗು ತಯಾರಿ ಯೋಜನೆ

ಘಟಿಕೋತ್ಸವ ಸಮಾರಂಭ

ಲಕ್ಷ್ಮಣಸ್ವಾಮಿ ಮೊದಲಿಯಾರರ ಉಪದೇಶ ಭಾಷಣ

ಮೈಸೂರು ೧೨

ನ್ನ ಯುವಕ ಮಿತ್ರರೇ, ಸಂಶಯ, ಎಕೆ, ಶಿಕ್ಷಾಟಗಳ ಪರಂಪರೆಯಲ್ಲಿ ಲುಕ್ಕಾ ಎರಡ ಮಹಾ ಯುದ್ಧಗಳ ನಂತ, ಶಾಂತಿ, ಸೌಹಾರ್ದಗಳ ಸಂ ನ್ನು ಅರಿಯಲೂ, ಪ್ರೀತಿ ವಿಶ್ವಾಸ ಮಾನ ಭೂತಿಯ ಮಾರ್ಗವನ್ನು ಸಲು ಇನ್ನೂ ಹಿಂದು ಮುಂದು ತ್ತಾ ಚೂರು ಚೂರಾಗಿರುವ ಈ ವಿ ಮುಂದೆ ನೀವು ನಿಮ್ಮ ಭವಿಷ್ಯವನ್ನು ಕೊಳ್ಳಲು ನಿಂತಿದ್ದೀರಿ. ನಿಮ್ಮ ಮದಲ್ಲಿ ಅನೇಕ ಅಡ್ಡಿಗಳೂ, ಆ ಳೂ, ಅಪಾಯಕರವಾದ ಸಲಹೆಗ ರುವುದು ಸಹಜ. ಆದರೆ ಬರಿಯ ಗುಗಳು ನಿಮ್ಮನ್ನು ಅಡ್ಡ ದಾ ಳಸುವಿರಿ. ಆತ್ಮೀಯ ತಿಳುವಳ ಕ್ಕ ಗೌರವ, ಆತ್ಮಾಭಿಮಾನ ಈ ಜೀವನವನ್ನು ಅತ್ಯುನ್ನತ ಮಟ್ಟ ಯ್ಯುವ ಸಾಧನಗಳು— ಎಂದು ನ್ ವಿಶ್ವವಿದ್ಯಾನಿಲಯದ ವೈಸ್ ಲರಾದ ಲೆ॥ ಕ॥ ದಿವಾನ್ ಬಹದ್ದೂ ಎ ಲಕ್ಷ್ಮಣಸ್ವಾಮಿ ಮೊದಲಿ ರು ಈ ದಿನ ಮೈಸೂರು ವಿಶ್ವವಿದ್ಯಾ ದ ಘಟಿಕೋತ್ಸವದಲ್ಲಿ ಉಪದೇಶ ಮಾಡುತ್ತಾ ತಿಳಿಸಿದರು.

ವು ಈಗ ಮೊದಲನೇ ಪರೀಕ್ಷೆಯಲ್ಲಿ ರ್ಣರಾಗಿದ್ದೀರಿ. ಅದು ಬರೀ ಒಂ ನೆಯ ಅಥವಾ ಒಂದು ಶಾಸ್ತ್ರದ ಶ್ರಮವಲ್ಲ. ಅದು ನಿಮ್ಮ ಸ್ಮರಣೆ, ತ್ತು ಮಾನಸಿಕ ಶಿಸ್ತಿಗನ್ನೂ ರೀಕ್ಷೆಗಾಗಿಯೇ ನಡೆದಿದೆ. ಇ ಲ್ಲಾ ನೀವು ಮುಂದುವರಿಸಿ ಕೊಂ ಜಲ್ಲೇ ಆದರೆ ಮುಂದೆ ಜೀವನದ ದಾದ ಆತಂಕಗಳನ್ನು ದಾಟು ಆದರಲ್ಲಿ ಸಂದೇಹವಿಲ್ಲ. ನಮ್ಮ ಪಕಾರವಾಗಿ ಎದ್ದು ನಿಂತಿರು ವ ಸಮಸ್ಯೆಗಳನ್ನು ನಾವು ಸ್ವತಂತ್ರ ಯಿಂದ ಬಿಡಿಸ ಬೇಕಾಗಿದೆ. ವಿಶ್ವದಲ್ಲಿ ಬದಲಾವಣೆಗಳಾಗುತ್ತಿವೆ. ಒಟ್ಟ ಪ್ರು ಬೇರೆಯಾಗಲು ಸಾಧ್ಯವಿಲ್ಲ. ಅದೇ ಕಾರಣದಿಂದ ಸಂಸ್ಕೃತಿ ಯನ್ನು ಪಡೆದಿರುವ ಜನರು ತ ತ್ರವನ್ನು ತಮ್ಮ ದೇಶದ ಮತ್ತು ಶ್ವದ ಶ್ರೇಯಸ್ಸಿಗಾಗಿ ವಹಿಸಬೇ

ವಿದ್ಯಾನಿಲಯವು ಕಾರ್ಖಾನೆಗಳ ಸಲ್ಪಟ್ಟ ವಸ್ತುಗಳ ತಯಾರಿಕಾ ಲ್ಲಿ. ಅದು ಸಮಾಜದ ಸಮ್ಮತ ತಂಪೇತು ಮಾಡುವ ಶಿಕ್ಷಣಾ ಸಾಮಾಜಿಕ ಜೀವನದ ಕಲೆಯೇ ವರ್ಷ ವಿಶ್ವ ಜೀವನಕ್ಕೆ ಅವರುಗ ಗುವಿಸುವುದೇ ಅದರ ಅಂತ್ಯ. ಗು ನಾಯಕರುಗಳ, ಕವಿ ಪುಂಗ ವಾಂತ ಶಿರೋಮಣಿಗಳ, ವಿದ್ಯಾ ರ್ಥರ, ಸಕಲ ಶಾಸ್ತ್ರ ನಿಪುಣರ, ವ್ಯಕ್ತಿಗಳಿಗಾಗಿ ವಿಶ್ವವಿದ್ಯಾ ಕಡೆ ಸಕಲರೂ ನೋಡ ಬೇಕಾದ ವಾಸ್ತವವಾದ ವಿಷಯ.

ಶಿಕ್ಷಣದ ಪ್ರಾಧಾನ್ಯತೆ ಮ ತೆಯನ್ನು ನಾನು ಒಪ್ಪಿಕೊ ಜನ ಸಾಮಾನ್ಯರಿಗೆ ಜಗತ್ತಿನ ವ್ಯಾಸಂಗಗಳನ್ನು ಬಿಡಿಸೊಡಿ ತಿ ಅಭ್ಯಾಸಿಸಬೇಕೆಂಬ ಒತ್ತಾ ಯದ ಆಸಕ್ತಿಯನ್ನು ನಾನು ಒಪ್ಪಲಾರೆ. ವಿಶ್ವವಿದ್ಯಾನಿಲಯವು ಔದ್ಯೋಗಿಕ ನಿಪು ಣರನ್ನು ಮಾತ್ರ ತಯಾರು ಮಾಡುವ ಕೇಂದ್ರವಾಗಿರತಕ್ಕದ್ದಲ್ಲ.

ವೈದ್ಯರು ತೀವ್ರವಾದ ತರ್ಕ ಅಥವಾ ರಾಜಕೀಯ ಗೊಂದಲಗಳಿಗೆ ಸಿಕ್ಕಿಕೊಳ್ಳ ಬಾರದು. ಯಾವುದಾದರೊಂದು ಕಸಬ ನ್ನು ಎಲ್ಲರೂ ಕಟ್ಟಿ ಕೊಳ್ಳಬೇಕು. ಸ್ವತಂ ತ್ರ ವಿಚಾರ ವಿಮರ್ಶೆಯನ್ನು ಬೆಳಸಬೇಕು. ವಿದ್ಯಾವಂತರೆಲ್ಲರೂ ಸಮಾಜ ಸೇವೆಯನ್ನು ನಿಸ್ವಾರ್ಥ ಭಾವನೆಯಿಂದ ಕೈಗೊಳ್ಳಬೇಕು ಎಂಬುದಾಗಿ ಹೇಳಿ ಡಾ॥ ಮೊದಲಿಯಾರ ರು ಪದವೀಧರರಿಗೆ ಶುಭಾಶಯವನ್ನು ಕೋರಿದರು.

ಘಟಿಕೋತ್ಸವವು ಜಗನ್ ಮೋಹನ ಬಂಗ್ಲೆಯಲ್ಲಿ ಶ್ರೀಮನ್ ಮಹಾರಾಜರ ಅ ಧ್ಯಕ್ಷತೆಯಲ್ಲಿ ಜರುಗಿತು. ೬೭೦ ಜನ ತ ರುಣ, ತರುಣಿಯರು ವಿವಿಧ ಶಾಖೆಗಳಲ್ಲಿ ಪದವಿಗಳನ್ನು ಸ್ವೀಕರಿಸಿದರು. ಪ್ರಶಸ್ತಿಗಳ ನ್ನು ಪಡೆದವರಿಗೆ ಪದಕಗಳನ್ನೂ, ಪ್ರಶಸ್ತಿ ಪತ್ರಗಳನ್ನೂ ಹಂಚಲಾಯಿತು.

ಗಾಂಧಿ ಜಯಂತಿಗೆ ರಾಜರ ಸಂದೇಶ.

ಪುದುಕೋಟೆ ಸಂಸ್ಥಾನಾಧೀಶ್ವರರು ತಮ್ಮ ರಾಜಧಾನಿಯಲ್ಲಿ ನಡೆದ ಗಾಂಧಿಜ ಯಂತಿ ಸಂಬಂಧದಲ್ಲಿ ಬಹಿರಂಗಸಭೆಯಲ್ಲಿ ಓದಲು ಕಾಂಗ್ರೆಸ್ ಸಮಿತಿಯವರಿಗೆ ಒಂ ದು ಸಂದೇಶವನ್ನು ಕಳುಹಿಸಿದ್ದರು. ಸರ್ವ ಶಕ್ತಿಗಿಂತಲೂ ಆತ್ಮಬಲವೇ ಹೆಚ್ಚೆಂಬುದ ನ್ನು ಉಪದೇಶಿಸಿ ಸಾಧಿಸುವುದರಲ್ಲಿ ಮಹಾ ತ್ಮರು ಪ್ರಪಂಚಕ್ಕೇ ಆದರ್ಶಪ್ರಾಯರೆಂದೂ ಈ ಕಲಿಯುಗದಲ್ಲಿಯೂ ಶಾಂತಿಸಾಧನೆಗೆ ಬುದ್ಧ ಮತ. ಹಿಂಸಾಚರಣೆಗಿಂತಲೂ ಅಹಿಂಸೆಯೇ ಶ್ರೇಷ್ಠ ಮಾರ್ಗವೆಂಬುದನ್ನು ತೋರಿಸಿ ಕೊಡುತ್ತಿರುವರೆಂದೂ ರಾಜರು ತಮ್ಮ ಸಂದೇಶದಲ್ಲಿ ಹೇಳಿರುವರು. ನಮ್ಮ ದೇಶದ ಐಕ್ಯ ಗೌರವನ್ನು ಅರಿಯುವಂತೆಯೂ ಇತರ ದೇಶದವರು ನಮ್ಮನ್ನು ಗೌರವಿಸು ವಂತೆಯೂ ಮಾಡಿರುವ ಮಹಾತ್ಮರನ್ನು ೧೭೫ ವರ್ಷ ಬಾಳಲೆಂದ ಹಾರೈಸಿರುವರು.

ಧ್ವಜಾರೋಹಣ

ನಂಜನಗೂಡು ರಾಷ್ಟ್ರೀಯ ಸೇವಾ ದಳ ದವರು ಮೊನ್ನೆ ಬೆಳಿಗ್ಗೆ ಧ್ವಜಾರೋಹಣ ಏ ರ್ಪಡಿಸಿದ್ದರು. ಶ್ರೀಮತಿ ಯಶೋಧರ ಮ್ಮ ದಾಸಪ್ಪನವರು ಧ್ವಜಾರೋಹಣ ಮಾಡಿ ಸ್ಫೂರ್ತಿದಾಯಕವಾದ ಭಾಷಣವ ನ್ನು ಮಾಡಿದರು.

ಅಭಿನಂದನಾ ಸಭೆ

ಮೈಸೂರು ೧೨.

ನಮ್ಮ ನಾಲ್ವಡಿ ಮಹಾ ಪ್ರಭುಗಳಿಗೆ ಪುತ್ರೋತ್ಸವ ಜನನವಾದ ಸಂತೋಷವನ್ನು ವ್ಯಕ್ತಪಡಿಸಲು ಶ್ರೀ ರಾಮಚಂದ್ರರಾವ್ ಬಾಂಭೋರೆಯವರ ಅಧ್ಯಕ್ಷತೆಯಲ್ಲಿ ಪುರ ಜನರ ಸಭೆಯನ್ನು ಟೌನ್‌ಹಾಲಿನಲ್ಲಿ ನಿನ್ನೆ ಏರ್ಪಡಿಸಲಾಗಿದ್ದಿತು. ವಿ॥ ಗಣಾದ ವೈ॥ ಪ್ರ॥ ಎಸ್ ವೆಂಕಟಗಿರಿಯಪ್ಪ, ಎ. ನಾ ರಾಯಣರಾವ್, ಜೆ. ಎಸ್ ವೈದ್ಯಲಿಂ ಗಂ ಇವರ ಸಂಗೀತ ಕಛೇರಿಗಳಾದ ನಂತ ರ ಶ್ರೀ॥ ಟಿ ಎಸ್. ರಾಜಗೋಪಾಲ್, ರಾ॥ ಸಾ॥ ಸಿ. ಸದಾಶಿವಯ್ಯ, ರಾ॥ ಟಿ॥ ಎಸ್ ರಾಮಸ್ವಾಮಿ, ಎಫ್ ಸಿ ದೇವ ರಾಜ ಅರಸ್, ನ್ಯಾ॥ ತೀ॥ ಶಂಕರರಾಜ ಶಾ ಸ್ತ್ರಿ ಇವರುಗಳ ಭಾಷಣಗಳಾಗಿ, ಅಧ್ಯಕ್ಷರು ರಾಜಭಕ್ತಿ ಯುತವಾದ ಠರಾವನ್ನು ಸಭೆ ಯ ಮುಂದಿಟ್ಟರು. ಸರ್ವಾನುಮತದಿಂ ದ ಅದನ್ನು ಅಂಗೀಕರಿಸಲಾಯಿತು. ಶ್ರೀ ಮನ್ಮಹಾರಾಜರಿಗೂ, ರಾಜಪುತ್ರಿಗೂ ಜ ಯಕಾರವನ್ನು ಮಾಡಿ ಸಭೆ ಮುಕ್ತಾಯವಾ ಯಿತು.

ಶ್ರೀ॥ ಬಿ ಎಸ್. ರಾಮಕೃಷ್ಣಯ್ಯನವರು

ನಗರದ ಕೋ ಆಪರೇಟಿವ್ ಬ್ಯಾಂಕಿ ನಲ್ಲಿ ಅಸಿಸ್ಟೆಂಟ್ ಸೆಕ್ರೆಟರಿಯಾಗಿದ್ದ ಶ್ರೀ॥ ಬಿ ಎಸ್ ರಾಮಕೃಷ್ಣಯ್ಯನವರು ಕೆಲಸ ದಿಂದ ನಿವೃತ್ತಿ ಹೊಂದಿರುವರು. ಇವರು ಸಂ ಸ್ಥೆಯ ಪ್ರಾರಂಭದಿಂದಲೂ ಅತ್ಯಲ್ಪ ಪ್ರತಿಫ ಲ ಹೊಂದಿ ಶ್ರದ್ಧೆಯಿಂದ ಕಾರ್ಯನಿರ್ವಾಹ ಮಾಡಿ ಸಂಸ್ಥೆಯ ಸರ್ವತ್ರ ಅಭಿವೃದ್ಧಿಗೆ ಕಾರಣಭೂತರಾಗಿರುತ್ತಾರೆ. ಕಳೆದ ತಿಂಗಳು ನಡೆದ ವಾರ್ಷಿಕ ಸಭೆ ಯಲ್ಲಿ ಇವರ ಸೇವೆಯನ್ನು ಮೆಚ್ಚಿ ೩೦೦೦ ರೂ ಬೋನಸ್ಸಾಗಿ ಕೊಡಲಾಗಿದೆ. ಅಲ್ಲದೆ ರಾಜಧಾನಿಯಲ್ಲಿ ಮೊನ್ನೆ ನಡೆದ ದಸರಾ ಸನ್ಮಾನದಲ್ಲಿಯೂ ಇವರಿಗೆ ಒಂದು ಸುವ ರ್ಣಪದಕವು ಬಹುಮಾನವಾಗಿ ದೊರೆತಿದೆ. ಇವರು ಆಯುರ್ವೇದ ವೈದ್ಯರು. ವಿಶ್ರಾಂತಿ ಕಾಲವನ್ನು ಆಯುರ್ವೇದ ಪ್ರಚಾರಕ್ಕಾಗಿ ವಿನಿಯೋಗಿಸುವರೆಂದು ತಿಳಿದು ಬಂದಿದೆ.

ಅಸ್ಪೃಶ್ಯರುಗಳ ತಿರಸ್ಕಾರ

ನಾಗಪುರ ಪತ್ರಿಕೆಗಳಲ್ಲಿ ಹಲವರು ತಮ್ಮ ಹೆಸರನ್ನು ಸಾದರಪಡಿಸಬೇಕೆಂ ದೂ, ಹಲವರು ತಮ್ಮನ್ನು ಹೀನ ಸ್ಥಿತಿ ಯಿಂದ ಕೊಲ್ಲಿಸಿ ಗೌರವಿಸಬೇಕೆಂದು ಸಾಮಾ ಜಿಕವಾಗಿ ಮಾಡಿಕೊಂಡಿದ್ದ ಅಂತ್ಯಜರು ಗಳನ್ನು ಪಿಕ್ಕನ್ನ್ಯಯಾತ್ರನ್ನೂ ನಷ್ಟತಿರಸ್ಕರಿಸಿದೆ.

ಭಟ್ಕಳ್ಳಿನಲ್ಲಿ ಹಡಗು ತಯಾರಿ ಯೋಜನೆ

ಭಟ್ಕಳ್ಳಿನಲ್ಲಿ ೫೦೦೦ ಟನ್ ತೂಕದವರೆ ಗಿನ ಹಡಗುಗಳನ್ನು ತಯಾರಿಸುವ ಯೋ ಜನೆಯನ್ನು ಬೊಂಬಾಯಿನ ಇಂಜಿನಿಯ ರಿಂಗ್ ಸಂಸ್ಥೆಯೊಂದು ವಹಿಸಿ ಕೊಂಡಿರು ವುದಾಗಿ ಗೊತ್ತಾಗಿದೆ. ಇದಕ್ಕೆ ಬೇಕಾಗು ವ ಯಂತ್ರ ಸಾಮಗ್ರಿಗಳನ್ನು ಇಂಗ್ಲೆಂಡಿ ನಿಂದ ತರಿಸಲು ಏರ್ಪಾಡಾಗಿದೆ. ಭಟ್ಕಳ್ಳಿ ನಲ್ಲಿ ಬೊಂಬಾಯಿ ಸರ್ಕಾರದವರೇ ೧೬ ಲಕ್ಷ ರೂ ವೆಚ್ಚದಿಂದ ಒಂದರನ್ನು ಕಟ್ಟ ಬೇಕೆಂದಿರುವರೆಂದು ತಿಳಿದು ಬಂದಿದೆ. ಮೈಸೂರು ಸಂಸ್ಥಾನಕ್ಕೆ ಹಲವು ವಾಣಿಜ್ಯ ದ ಅನುಕೂಲತೆಗಳನ್ನು ಕೊಡಲಿರುವುದೆಂ ದೂ ಸಹ ವರದಿಯಾಗಿದೆ.

ಕೊಚ್ಚಿಯಲ್ಲಿ ರಾಜ್ಯಾಂಗ ರಚನಾ ಸಭೆ

ಕೊಚ್ಚಿಯಲ್ಲಿ ಮಹಾರಾಜರ ಆಶ್ರಯದ ಲ್ಲಿ ಪೂರ್ಣ ಜವಾಬ್ದಾರಿ ಸರ್ಕಾರವನ್ನು ಆ ದಷ್ಟು ಜಾಗ್ರತೆಯಾಗಿ ಸ್ಥಾಪಿಸಲಾಗುವು ದೆಂದೂ ಮತ್ತು ಇದಕ್ಕಾಗಿ ಒಂದು ರಾ ಜ್ಯಾಂಗ ರಚನಾ ಸಮಿತಿಯನ್ನು ರಚಿಸಲಾ ಗುವುದೆಂದೂ ಅಲ್ಲಿನ ಆರೋಗ್ಯ ಮಂತ್ರಿಗ ಳು ತಿಳಿಸಿರುವರು. ರಚನಾ ಸಮಿತಿಗೆ ಮಂ ತ್ರಿಗಳಾದ ಶ್ರೀ ಗೋವಿಂದ ಮೆನನ್‌ರವರು ಅಧ್ಯಕ್ಷರಾಗಿರುವರೆಂದೂ ಇದಕ್ಕೆ ಶ್ರೀ ಮನ್ ಮಹಾರಾಜರ ಪೂರ್ಣ ಒಪ್ಪಿಗೆ ಇ ದೆಯೆಂದೂ ಸಹ ಅವರು ತಿಳಿಸಿರುವರು.

ಜೋಕಸರು ಬಿಡುತ್ತಿಲ್ಲ

ಬಾಬು ಸುಭಾಷ್ ಚಂದ್ರ ಬೋಸರು ಜನುಕಿಂದವರೆಂಬ ವದಂತಿಗಳು ನಿಜವಲ್ಲ ವೆಂದು ಪಂ॥ ಜವಹರಲಾಲ ನೆಹರೂರವ ರು ಒಂದು ಹೇಳಿಕೆಯನ್ನು ಹೊರಡಿಸಿರು ವರು. ವಿಶೇಷ ಅನುಯಾಯಿಗಳೊಬ್ಬ ರಾಗಿ ಇವರ ಮರಣ ಕಾಲದಲ್ಲಿ ಹಾಜರಿದ್ದ ಕ॥ ಹಬೀಬುರ್ ರಹಮಾನರು ತಿಳಿಸಿದ ಅಂಶಗಳ ಮೇಲೆಯೇ ಈ ಹೇಳಿಕೆಯನ್ನು ಕೊಡಲಾಗಿದೆಯೆಂದು ಪಂಡಿತರು ತಿಳಿಸಿರು ವರು.

ಕಾಂಗ್ರೆಸ್ ಅಧಿವೇಶನ ಮುಂದೆ ಹೋಯಿತು

ಈ ತಿಂಗಳು ೧೯ ಮತ್ತು ೨೦ ನೇ ತಾ. ರೀಕು ಬೆಂಗಳೂರಿನಲ್ಲಿ ನಡೆಯಬೇಕಾಗಿ ದ್ದ ಮೈಸೂರು ಕಾಂಗ್ರೆಸ್ಸಿನ ಆರನೇ ಅಧಿ ವೇಶನವನ್ನು ನವಂಬರ್ ೫ ಮತ್ತು ೬ ನೇ ತಾ॥ಗೆ ಮುಂದೆ ಹಾಕಲಾಗಿದೆ. ವಸ್ತು ಪ್ರದರ್ಶನವು ನವಂಬರ್ ಒಂದರಿಂದ ಎಂಟ ನೇ ತಾರೀಖಿನ ವರೆಗೆ ನಡೆಯಲಿದೆ. ಅ ಧಿವೇಶನವು ನಡೆಯುವ ಧರ್ಮಾಂಬುಧಿ ಕೆರೆ ಜಾಗಕ್ಕೆ ಸುಭಾಷ್ ನಗರವೆಂದು ಹೆ ಸರಿಡಲಾಗಿದೆ.

ವರಲಕ್ಷ್ಮೀ ಸಂಗೀತ ಮಂದಿರ

ಸಂಗೀತಕಲಾಸಿದ್ಧಿ, ಗಾಯಕಶಿಖಾಮಣಿ ಜ ಚರಿಯಾ ಕೂಡಿ ರಾಮಾನುಜಯ್ಯಂಗಾರ ರು ನಾಲ್ಕುತ್ತೆಯಲ್ಲಿರುವ ಮೈಸೂರು ಮುಖ್ಯದ ಸ್ಕೂಲಿನ ಶ್ರೀ ವರಲಕ್ಷ್ಮೀ ಸಂಗೀತವಿದ್ಯಾ ಮಂದಿರಕ್ಕೆ ತಾ॥ ೯ ನೇ ಬುಧವಾರ ಭೇಟಿ ಕೊಟ್ಟು ಅಲ್ಲಿನ ವಿದ್ಯಾರ್ಥಿಗಳ ವ್ಯಾಸಂಗ ಕ್ರಮ ಇತ್ಯಾದಿಗಳನ್ನು ಪರೀಕ್ಷಿಸಿ, ಅಲ್ಲಿನ ಸಾಂಪ್ರದಾಯಿಕ ಬೋಧನಾ ಶಿಕ್ಷಣ ಕ್ರಮಗಳ ನ್ನು ಪ್ರಶಂಸಿಸಿ ವಿದ್ಯಾರ್ಥಿಗಳ ಹಾಗೂ ಉಪಾಧ್ಯಾಯರುಗಳ ಪ್ರೋತ್ಸಾಹಕ್ಕಾಗಿ ಆಶೀರ್ವ ದಿಸಿದರು.

ಸಾಧ್ವಿ

ತಾ|| ೧೨-೧೦-೪೬ ಶನಿವಾರ

ಪದವೀಧರರ ಕರ್ತವ್ಯ

ಈದಿನ ನಡೆದ ಘಟಿಕೋತ್ಸವದಲ್ಲಿ ಪದವೀಧರರಿಗೆ ಉಪದೇಶಮಾಡುವಾಗ ಮದರಾಸಿನ ಡಾ|| ಲಕ್ಷ್ಮಣಸ್ವಾಮಿ ಮೊದಲಿಯಾರರು ಮಾಡಿದ ಭಾಷಣದಲ್ಲಿ ಹೊಸ ವಿಚಾರಗಳೇನೂ ಇರುವುದಿಲ್ಲ. ಲೋಕಾಭಿರಾಮವಾಗಿ ಯುವಕರು ಅನುಸರಿಸಬೇಕಾದ ಒಳ್ಳೆಯ ನಡತೆ ಮತ್ತು ಕಾರ್ಯಾಚರಣೆಗಳನ್ನು ಮಾತ್ರ ವಿವರಿಸಿರುತ್ತಾರೆ. ವಿಶ್ವ ಸಂಗ್ರಾಮಗಳಿಂದ ಜರ್ಜರಿತವಾಗಿರುವ ಜಗತ್ತು ಶಾಂತಿ ಸ್ಥಾಪನೆಗಾಗಿ ಕಾತುರದ ದೃಷ್ಟಿಯ ಆಗಸವನ್ನು ನೋಡುತ್ತಿದ್ದಾರೆ. ಆದರೆ ಈ ಶಾಂತಿಯನ್ನು ಸಾಧಿಸುವ ಮಾರ್ಗವು ಮಹಾರಾಷ್ಟ್ರಗಳ ಸಮಷ್ಟಿಯಾಗಿಯೇ ಇನ್ನೂ ಉಳಿದಿರುತ್ತದೆ.

ವಿಜ್ಞಾನದ ಬೆಳವಣಿಗೆಯಿಂದ ವಿಶ್ವದ ವಿವಿಧ ಭಾಗಗಳು ಹೊಂದುತ್ತಿರುವ ನಿಕಟ ಸಂಪರ್ಕವನ್ನು ಎಲ್ಲರೂ ಅರಿತಿರುವರು. ಆದುದರಿಂದ ಪ್ರತಿಯೊಂದು ಜನಾಂಗದ ಪ್ರಜೆಗಳೂ ವಿಶ್ವದ ಸುಖಶಾಂತಿಗಳಿಗಾಗಿ ಸಲ್ಲಿಸಬೇಕಾದ ಕಾಣಿಕೆಯು ಇದ್ದೇ ಇರುವುದು. ಭರತಖಂಡದ ಸುಶಿಕ್ಷಿತರಾದ ತರುಣ-ತರುಣಿಯರು ಈ ಪವಿತ್ರಕಾರ್ಯದಲ್ಲಿ ತಮ್ಮ ಸಂಸ್ಕೃತಿ ಮತ್ತು ಜ್ಞಾನಾರ್ಜನೆಗಳಿಗೆ ಅನುಗುಣವಾಗಿ ಸೇವೆಸಲ್ಲಿಸಲೆಂದು ಸಕಲ ವಿದ್ಯಾಲಯಗಳ ಸೂತ್ರಧಾರಿಗಳೂ ಬಯಸುವುದು ಸಹಜವಾಗಿದೆ. ಇದೇ ಮೈಸೂರಿನ ಪದವೀಧರರ ಪಾತ್ರವು ಈ ಉನ್ನತ ಆದರ್ಶದಿಂದ ಪ್ರೇರಿತವಾಗಿರುವುದೆಂದು ನಾವು ಹಾರೈಸುತ್ತೇವೆ.

ಸಾರ್ವಜನಿಕ ಮತ್ತು ಮಾನವೀಯ ವಿಷಯಗಳ ಬಗ್ಗೆ ಡಾ|| ಲಕ್ಷ್ಮಣಸ್ವಾಮಿ ಮೊದಲಿಯಾರರು ಮಾಡಿರುವ ಶಾರೀರಕವ್ಯಥೆ ವಿವಾದಾಸ್ಪದವಾದುದು. ಇತಿಹಾಸ, ಕಲೆ, ಮುಂತಾದ ಮಾನವೀಯ ವಿದ್ಯೆಗಳ ಪ್ರಾಶಸ್ತ್ಯವನ್ನು ಎಲ್ಲರೂ ಅಂಗೀಕರಿಸಿರುವರು. ಆದರೆ ದಿನ ಬರಿಯ ವ್ಯವಹಾರದಲ್ಲಿ ಮಾನವಜೀವನದ ಉನ್ನತಿಗೆ ಸಾರ್ವಜನಿಕ ಮತ್ತು ವಿಜ್ಞಾನ ಶಿಕ್ಷಣದ ಅಗತ್ಯವು ಹೆಚ್ಚು ಹೆಚ್ಚಾಗಿ ಕಂಡು ಬರುತ್ತಿದೆ. ಯುದ್ಧಾನಂತರದ ಪುನರ್ರಚನೆಯ ಕಾರ್ಯಕ್ರಮದಲ್ಲಿ ಇವುಗಳಿಗೇ ಹೆಚ್ಚು ಪ್ರಾಧಾನ್ಯತೆಯು ಇರುತ್ತದೆ. ಪ್ರಕೃತ ಕಾಲದಲ್ಲಂತೂ ಉದ್ಯೋಗಿಕ ಶಿಕ್ಷಣಕ್ಕೇ ಹೆಚ್ಚು ಬೆಲೆ ಇರುವುದೆಂಬುದನ್ನು ಯಾರೂ ಅಲ್ಲಗಳೆಯಲಾರರು.

ಪದವೀಧರರು ಇನ್ನು ಮುಂದೆ ಜೀವನ ಸಂಗ್ರಾಮದಲ್ಲಿ ವಹಿಸಬೇಕಾದ ಪಾತ್ರವು ಅತ್ಯಮುಖ್ಯವಾದ ವಿಷಯವಾಗಿದೆ. ಇದನ್ನು ಪ್ರತಿಯೊಬ್ಬರೂ ಅವರವರ ಶಕ್ತಿ, ಸಾಮರ್ಥ್ಯ ಮತ್ತು ಆಸಕ್ತಿಗಳಿಗೆ ಅನುಗುಣವಾಗಿ ನಿರ್ಧರಿಸಿ ಕೊಳ್ಳಬೇಕಾಗಿದೆ. ಯಾವುದೇ ಕಾರ್ಯದಲ್ಲಿ ತೊಡಗಿರಲಿ, ಪದವೀಧರರು ತಮ್ಮ ವಿದ್ಯಾಲಯದ ಮಹೋನ್ನತವಾದ ಧ್ಯೇಯಗಳನ್ನು ಸದಾ ಕಾಲದಲ್ಲಿಯೂ ಗಮನದಲ್ಲಿಟ್ಟು ತಮ್ಮ ಮತ್ತು ಸಮಾಜದ ಸೇವೆಯಲ್ಲಿ ತೊಡಗಲೆಂದು ನಾವು ಹಾರೈಸುತ್ತೇವೆ.

Edited printed and published by A. R. Nagraj ... at the Sadhvi Press D. Subbaiah Road, Mysore.

ಸಕ್ಕರೆ ವಿನಿಯೋಗ

ಮೈಸೂರು ೧೨

ಶ್ರೀಮನ್ಮಹಾರಾಜರವರಿಗೆ ಪುತ್ರೀ ಸಂತಾನವಾದ ಸಂತೋಷಾರ್ಥವಾಗಿ ನಗರದ ಎಲ್ಲಾ ಮೊಹಲ್ಲಗಳ ಬೀದಿಗಳಲ್ಲಿಯೂ ಈ ದಿನ ಮಧ್ಯಾಹ್ನ ಅರಮನೆ ಇಲಾಖೆಯವರ ಸೂಚನೆಯಂತೆ ಪೌರಸಭೆಯವರು ಮಹಾಜನರಿಗೆ ಸಕ್ಕರೆಯನ್ನು ಹಂಚಲು ಏರ್ಪಾಡು ಮಾಡಿದ್ದರು. ಈ ಕಾರ್ಯದಲ್ಲಿ ಪೌರಸಭೆಯ ಅಧಿಕಾರಿಗಳೂ, ಸದಸ್ಯರುಗಳೂ ಇತರ ಮಹನೀಯರೂ ಆಸಕ್ತಿಯಿಂದ ಸಹಕರಿಸಿದ್ದರು.

ಕಾರ್ಮಿಕ ಸಂಘಗಳು

ರಾಜಧಾನಿಯ ಗವರ್ನಮೆಂಟ್ ಬ್ರಾಂಚ್ ಪ್ರೆಸ್, ಫೆರ್ರೋ ಅಲಾಯ್ಸ್ ಮತ್ತು ಪವರ್ ಲೂಂ ಕಾರ್ಖಾನೆಗಳ ಕೆಲಸಗಾರರು ತಮ್ಮ ಪುರೋಭಿವೃದ್ಧಿಗಾಗಿ ಕಾನೂನು ಪ್ರಕಾರ ಸಂಘಗಳನ್ನು ಮಾಡಿಕೊಂಡು ಅವುಗಳನ್ನು ರಿಜಿಸ್ಟರು ಮಾಡಲು ಸರ್ಕಾರದವರಿಗೆ ಅರ್ಜಿ ಸಲ್ಲಿಸಿರುತ್ತಾರೆ. ಕೆಲಸಗಾರರ ಹಿತ ಸಾಧನೆಗೆ ಶಾಸನ ಬದ್ಧವಾಗಿ ವ್ಯವಸ್ಥಿತ ರೂಪದಲ್ಲಿ ಕೆಲಸ ಮಾಡಲು ತೊಡಗಿರುವ ಈ ಸಂಸ್ಥೆಗಳಿಗೆ ಸರ್ಕಾರದವರು ಬೇಗನೆ ಅಂಗೀಕಾರವಿತ್ತು ಪ್ರೋತ್ಸಾಹಿಸುವರೆಂದು ನಂಬಲಾಗಿದೆ.

ಉದಾರ ಸಹಾಯ

ಪಿಳ್ಳೆ ಮೊಹಲ್ಲಾ ಕಾಂಗ್ರೆಸ್ ಸಮಿತಿಯವರು ಕಳೆದ ಭಾನುವಾರ ಗಾಂಧಿ ಜಯಂತಿಯನ್ನು ವೈಭವದಿಂದ ಆಚರಿಸಿದರು. ಇದರ ಸಂಬಂಧದಲ್ಲಿ ಶ್ರೀಗಳಾದ ಸೌಭಾಗ್ಯ ಸ್ಟೋರಿನ ಎನ್. ಗೋಪಾಲರಾವ್, ಜೆ. ಪಿ. ಚೆನ್ನಬಸಪ್ಪ ಮತ್ತು ಬಿ. ಎಸ್. ಪಾಂಡವಮೂರ್ತಿ ಇವರುಗಳು ತಲಾ ಒಂದೊಂದು ಬೆಳ್ಳಿ ಬಟ್ಟಲನ್ನೂ, ಚಾಮುಂಡೇಶ್ವರೀ ಕಾಫಿ ವರ್ಕ್ಸಿನವರು ಒಂದು ಬೆಳ್ಳಿ ಪದಕವನ್ನೂ ಮತ್ತು ಶ್ರೀ|| ಎಂ. ಗೋಪಾಲರಾಯರು ೫ ರೂಗಳನ್ನೂ ಸ್ಪರ್ಧೆಗಳಲ್ಲಿ ಬಹುಮಾನ ಪಡೆದವರಿಗೆ ವಿನಿಯೋಗಿಸಲು ಉದಾರವಾಗಿ ಕೊಟ್ಟಿರುವುದಕ್ಕಾಗಿ ಸಮಿತಿಯವರು ಅವರಿಗೆ ತಮ್ಮ ಕೃತಜ್ಞತೆಯನ್ನು ಸಲ್ಲಿಸಿರುತ್ತಾರೆ.

ಜಲಪುರಿಯಲ್ಲಿ ಜಯಂತಿ

ಗಾಂಧಿ ಜಯಂತಿ ಪ್ರಯುಕ್ತ ಜಲಪುರಿಯಲ್ಲಿ ಶ್ರೀ ಬಿ ನಾಂಜುಂಡಸ್ವಾಮಿಯವರ ಅಧ್ಯಕ್ಷತೆಯಲ್ಲಿ ಒಂದು ಬಹಿರಂಗ ಸಭೆ ನಡೆಯಿತು. ಶ್ರೀಗಳಾದ ವಿ. ಎನ್. ಬಸಪ್ಪ, ಕೆ. ಎಸ್. ಸತ್ಯನಾರಾಯಣರಾವ್, ಇ. ಪಿ. ನಂಜಪ್ಪ, ಸಿ. ಟಿ. ಹನುಮಂತಯ್ಯ, ರಾಚಯ್ಯ ಮುಂತಾದವರು ಗಾಂಧೀಜಿಯವರ ಜೀವನದ ವಿಚಾರವಾಗಿ ಸ್ವಾರಸ್ಯವಾದ ಭಾಷಣಗಳನ್ನು ಮಾಡಿದರು. ಅನೇಕ ಜನ ಮಹಿಳೆಯರೂ ಬಂದಿದ್ದರು. ವಂದನಾರ್ಪಣೆಯೊಡನೆ ಸಭೆ ಮುಕ್ತಾಯಗೊಂಡಿತು.

ಉಪನ್ಯಾಸ

ಶ್ರೀ ಶಂಕರ ಜಯಂತೀ ಮಹೋತ್ಸವ ಸಭೆಯ ಆಶ್ರಯದಲ್ಲಿ ೧೩ ನೇ ತಾ|| ಭಾನುವಾರ ಸಾಯಂಕಾಲ ಆರೂವರೆ ಗಂಟೆಗೆ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಮಹಾವಿದ್ವಾನ್ ವೇ|| ನವೀನಂ ವೆಂಕಟೇಶ ಶಾಸ್ತ್ರಿಗಳು "ಗೀತೆಯ ಆರನೆಯ ಅಧ್ಯಾಯದ ರಹಸ್ಯ ಅಥವಾ ಧ್ಯಾನಯೋಗ" ಎಂಬ ವಿಷಯವನ್ನು ಕುರಿತು ಉಪನ್ಯಾಸ ಮಾಡುತ್ತಾರೆ. ಸರ್ವರಿಗೂ ಸ್ವಾಗತವಿದೆ.

ಗಾಂಧಿ ಜಯಂತಿ

ಕಳೆದ ಸೋಮವಾರದ ದಿನ ಫ್ರೆಂಚ್‌ರಾಕ್ಸ್ ತಾಲ್ಲೂಕು ಹರವು ಗ್ರಾಮದ ಪಯಸ್ವರ ವಿದ್ಯಾ ಶಾಲೆಯವರು ಗಾಂಧೀ ಜಯಂತಿಯನ್ನು ನಡೆಸಿದರು. ಊರಿನಲ್ಲೆಲ್ಲಾ ಗಾಂಧಿಜಿ, ನೆಹರು ಮತ್ತು ನೇತಾಜಿಯವರ ಭಾವಚಿತ್ರಗಳ ಮೆರವಣಿಗೆ ನಡೆಯಿತು. ರಾತ್ರಿ ಶ್ರೀ|| ಹೆಚ್. ಆರ್. ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಒಂದು ದೊಡ್ಡ ಸಭೆ ಜರುಗಿತು. ಹ. ಲ. ನಾರಾಯಣ ಗೌಡರು ಗಾಂಧೀಜಿ ಜೀವನ ಮತ್ತು ಅವರ ತತ್ವಗಳ ವಿಚಾರವಾಗಿ ಭಾಷಣ ಮಾಡಿದರು. ಅಧ್ಯಕ್ಷರು ಗಾಂಧಿ ಟೋಪಿಯನ್ನು ಕುರಿತು ಮಾತನಾಡಿ ಎಲ್ಲಾ ವಿಧದಲ್ಲಿಯೂ ಹರಿಜನರನ್ನು ಸವರ್ಣ ಹಿಂದುಗಳ ಮಟ್ಟಕ್ಕೆ ತರಬೇಕೆಂದ ರೈತರನ್ನು ಪ್ರಾರ್ಥಿಸಿಕೊಂಡರು. ವಂದೇ ಮಾತರಂ ಗೀತೆಯೊಡನೆ ಸಭೆ ಮುಕ್ತಾಯವಾಯಿತು.

OPERA TALKIES

ತಾ|| 12—10—46ರಿಂದ

ಮೂರನೇ ವಾರ

ಮಾಯಾ ಮಚ್ಛೀಂದ್ರ

(ತೆಲುಗು)

ಕನ್ನಾಂಬ, ಮಾಲತಿ, ಗೌರೀನಾಥ ಶಾಸ್ತ್ರಿ, ಅದ್ದಂಕಿ ಶ್ರೀರಾಮಮೂರ್ತಿ ಮುಂತಾದವರು

ಬಟ್ಕಳ್ ಬಂದರು ಇಲ್ಲ

ಭಟ್ಕಳ್ ಬಂದರನ್ನು ಮೈಸೂರಿಗೆ ಕೊಡುವುದಿಲ್ಲವೆಂದು ಬೊಂಬಾಯಿ ಸರ್ಕಾರ ನಿರ್ಧರಿಸುವುದಾಗಿ ಗೊತ್ತಾಗಿದೆ.

ತಿಲಕ್ ಸಂಘದ ಸಹಾಯಾರ್ಥವಾಗಿ

ತಾ|| 13-10-46 ನೇ ಭಾನು

ಸಂಜೆ 6 ಘಂಟೆಗೆ

ವಿವಿಧ ವಿನೋದಾವಳಿ

ಟೌನ್‌ಹಾಲಿನಲ್ಲಿ

ತವನಪ್ಪ ಭೂಪ

ಕನ್ ವೀನರ್

ಟಿ. ಸಿ. ನಟರಾಜ

ಔಷಧಾಲಯ

ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅಗತ್ಯವಾಗಿ ಬೇಕಾದ ಎಲ್ಲಾ ಸ್ಟ್ಯಾಂಡರ್ಡ್ ಔಷಧಿಗಳೂ ಸದಾ ಕಾಲದಲ್ಲಿ ದೊರೆಯುವುದಲ್ಲದೆ ಸಮಸ್ತವ್ಯಾಧಿಗಳ ಚಿಕಿತ್ಸೆಯು ಬಹು ಸುಲಭ ಛಾರ್ಜಿ ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದೀಯ ಔಷಧಗಳೆಲ್ಲವೂ ದೊರೆಯುತ್ತವೆ.

ಶ್ರೀ ಗಣೇಶಾ ಟಾಕೀಸ್

ಕೃಷ್ಣರಾಜವನಂ :: ಮೈಸೂರು

ರಾಜಧಾನಿಯ ರಮ್ಯ ಪ್ರದೇಶವಾದ ಕೃಷ್ಣರಾಜವನದಲ್ಲಿ ನಿರ್ಮಿತವಾಗಿರುವ ಅರಮನೆ ಕಂಟ್ರಾಕ್ಟರ್ ಟಿ. ಯಾಲಕ್ಕಾಚಾರ್ ಮೇಲ್ಕಂಡ ನೂತನ ಚಲನ ಚಿತ್ರ ಮಂದಿರದ ಪ್ರಾರಂಭೋತ್ಸವನ್ನು ಶ್ರೀಮನ್ಮಹಾರಾಜರವರ ಆಪ್ತ ಕಾರ್ಯದರ್ಶಿಗಳಾದ ಅಮಲ್ದಾರ್ ಶಿರೋಮಣಿ ಸರ್. ಟಿ. ತಂಬೂಚೆಟ್ಟಿಯವರು ಇದೇ 14-10 ನೇ ಸೋಮವಾರ ನೆರವೇರಿಸುವರು.

ಈ ಸಮಯದಲ್ಲಿ ಚಲನ ಚಿತ್ರ ತಯಾರಿಕೆಯಲ್ಲಿ ಅಗ್ರರಾದ ಎಂ. ಜಿ. ಎಂ. ಕಂಪೆನಿಯ ಟಾರ್ ಜಾನ್ಸ್ "ನ್ಯೂಯಾರ್ಕ್ ಅಡ್ವೆಂಚರ್ಸ್" ಎಂಬ ಚಿತ್ರವು ಪ್ರದರ್ಶಿಸಲ್ಪಡುವುದು.

:: ಹರಾಜು ::

13—10—1946 ನೇ ಭಾನುವಾರ

ಮೈಸೂರು ಮಂಡಿಮೊಹಲ್ಲಾ ಈದಿಗಾ ಎಕ್ಸ್‌ಟೆನ್‌ಷನ್‌ನಲ್ಲಿರುವ ಮಿ|| ಇ. ಕೆಂಟ್‌ರವರ ಬಂಗಲೆ, ಕಾಟೇಜ್ ಮತ್ತು ಸೈಟುಗಳು

೧೩—೧೦—೪೬ ನೇ ಭಾನುವಾರ

ಪ್ರಾತಃಕಾಲ ೧೦ ಘಂಟೆಗೆ ಬಹಿರಂಗವಾಗಿ ಸ್ವತ್ತಿನ ಬಳಿ ಹರಾಜು ಮಾಡಲ್ಪಡುತ್ತವೆ.

ವರ್ಕ್ ಷಾಪುಗಳಿಗೂ, ಮಿಲ್‌ಗಳಿಗೂ ಮತ್ತು ಸಿನಿಮಾ ಮಂದಿರಗಳನ್ನು ... ವುದಕ್ಕೂ ಬಹಳ ಅತ್ಯುತ್ತಮವಾಗಿರುತ್ತವೆ. ಹರಾಜಿನಲ್ಲಿ ಸ್ವತ್ತನ್ನು ಪಡೆದವರು ಭಾಗ ಮೊಬಲಗನ್ನು ಕೂಡಲೇ ಪಾವತಿ ಮಾಡಿ ಉಳಿದ ಮೊಬಲಗನ್ನು ರಿಜಿಸ್ಟ್ರೇಷನ್ ಕಾಲದಲ್ಲಿ ಪಾವತಿ ಮಾಡತಕ್ಕದ್ದು. ರಿಜಿಸ್ಟ್ರೇಷನ್ ವಗೈರೆಗಳನ್ನು ಅವರ ಸ್ವಂತ ಖರ್ಚಿನಿಂದ ಮಾಡಿಕೊಳ್ಳತಕ್ಕದ್ದು. ಬಾಕಿ ವಿಷಯಗಳಿಗೆ ಈ ಕೆಳಗಿನ ವಿಳಾಸದಲ್ಲಿ ವಿಚಾರಿಸಿಕೊಳ್ಳಬಹುದು.

Neo Furniture Company.

Auctioneers and Commission Agents,

Irwin Road :: My

[ವಿಜಯಾ ಏಜನ್ಸೀಸ್, ಮೈಸೂರು]

ಫೋ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು



ಸಂಪುಟ ೫] ಭಾನುವಾರ ೧೩—೧೦—೪೬ [ಸಂಚಿಕೆ ೬೫

ಕಾಂಗ್ರೆಸ್ ಮತ್ತು ಲೀಗ್ ಸಂಧಾನ ಮುರಿಯಿತು

ಪ್ರ|| ಪ್ರ|| ಸಭೆಯ ಮುಕ್ತಾಯ

ಖೈದಿಗಳ ಬಿಡುಗಡೆಗಾಗಿ ನಿರ್ಣಯ

ಮೈಸೂರು ೧೩

...ಊರು ಖೈದಿಗಳನ್ನು ಬಿಡುಗಡೆ ...ಬೇಕೆಂದು ಶ್ರೀ ಟಿಂಗಾರಪ್ಪನವರು ... ನಿರ್ಣಯವು ಈ ದಿನ ಪ್ರತಿನಿಧಿ ...ಲ್ಲಿ ಅಂಗೀಕರಿಸಲ್ಪಟ್ಟಿತು. ಶ್ರೀ|| ... ದೇವರಾಜೇ ಅರಸಿನವರೂ ಮಿ|| ...ಬರೀಲರೂ ಇದನ್ನು ವಿರೋಧಿಸಿದ ...ಊರಿನ ಖೈದಿಗಳ ವಿಚಾರಣೆಯು ...ಸ್ಥಾನದಲ್ಲಿ ನಡೆದು ತೀರ್ಪು ಕೊಡ... ...ವುದರಿಂದ ಇದರ ವಿಷಯವನ್ನು ...ಎತ್ತಲೇ ಕೂಡದೆಂದು ಅರಸಿನವ... ...ಳಿದರು.

...ರದ ಪರವಾಗಿ ರೆ|| ಮಂತ್ರಿ ಶ್ರೀ ...ನಾದ್ರಿಯವರು ಉತ್ತರವಿತ್ತರು ...ನ ಪ್ರಕರಣಕ್ಕೆ ಸರ್ಕಾರದವರೇ ...ವಾದಿಗಳೆಂದು ಹೇಳುವುದು ಸರಿ ...ಶಾಂತಿ ಪಾಲನೆ ಮಾಡುವುದು ...ದ ಕರ್ತವ್ಯ; ಈ ಊರಿನ ಖೈದಿಗಳ ...ವನ್ನು ವೈಯಕ್ತಿಕವಾಗಿ ಪರಿಶೀಲಿ... ...ವರುಗಳ ಬಿಡುಗಡೆ ವಿಚಾರವನ್ನು ...ಪರಿಸಲಾಗುವುದು, ಎಂದು ಅವ... ...ಳಿದರು.

ಬಿಸಿ ಬಿಸಿ ಚರ್ಚೆ

... ಸಂದರ್ಭದಲ್ಲಿ ಸ್ವಲ್ಪ ಬಿಸಿ ಬಿಸಿ ...ಗಳಾದುವು. ಒಳ್ಳೆಯ ವಿಷಯವೂ ...ದದಿಂದ ಕೆಡಿಸಲ್ಪಡುವ ನಿದರ್ಶನ ... ಮಂತ್ರಿಗಳು ಹೇಳಿದಾಗ ಶ್ರೀ|| ...ಮಂತಯ್ಯನವರು ಅದನ್ನು ಟೀಕಿಸಿ ...ಹಿತಿಗರು ಅವರ ಮಾತುಗಳು ...ಪ್ರೊಂಟರಿ ಕ್ರಮಕ್ಕೆ ವಿರುದ್ಧವಾಗಿರು... ...ಮೂ, ಅವನ್ನು ಹಿಂದಕ್ಕೆ ತೆಗೆದುಕೊ... ...ಕೆಂದೂ ದಿವಾನರು ಹೇಳಿದರು. ಆಗ ...ಳಚಿ ಬಿದ್ದರೂ ತಾವು ಅದನ್ನು ಹಿಂದ... ...ದೆ-ಕೊಳ್ಳುವುದಿಲ್ಲವೆಂದು ಶ್ರೀ ಹನು... ...ಯ್ಯನವರು ಹೇಳಿದರು. ಆದುದ... ಶ್ರೀ ಹನುಮಂತಯ್ಯನವರ ಮಾತು ... ಕಾರ್ಯಕ್ರಮದ ವರದಿಯಲ್ಲಿ ಸೇರಿ... ...ಗಲ್ಲವೆಂದು ದಿವಾನರು ಹೇಳಿದರು. ...ವಾನರು ಸಮಾರೋಪ ಭಾಷಣ ...ಬರುವ ವರ್ಷ ಅಧಿವೇಶನವು ಸೇರು... ...ಷತ್ತಿಗೆ ಸ್ವಂತ ಭವನವು ತಯಾರಾಗಿ ...ಕಾರ್ಯಗಳು ಹೆಚ್ಚು ಸಮರ್ಪಕವಾ... ...ಯಲು ಅವಕಾಶವಾಗುವುದೆಂದು ...ಸಭೆಯ ಮೂರನೇ ಅಧಿವೇ... ...ನ್ನ ಸೇರಿಸಬೇಕೆಂಬ ವಿಷಯದಲ್ಲಿ ...ಭರವಸೆಯನ್ನೂ ಕೊಡಲು ಸಾಧ್ಯ... ...ದು ಹೇಳಿದರು. ಸಭೆಯು ಆನಂ... ...ಕ್ತಾಯವಾಯಿತು.

ಜಿದ್ದರ್ ಸೊಸೈಟಿ

...ಧಾನಿಯ ಖದ್ದರ್ ಸಹಕಾರ ಸಂ... ...ಡಿಯ ಸಾಲಿಗೆ ಶ್ರೀ ಎಂ. ಲಕ್ಷ್ಮೀ... ...ನಾಚಾರ್ಯರು ಅಧ್ಯಕ್ಷರಾಗಿಯೂ, ...ಸ್. ಶ್ರೀರಂಗಾಚಾರ್ಯರು ಉಪಾ... ...ಗಿಯೂ, ಶ್ರೀ ಪಿ ಗೋಪಾಲಕೃಷ್ಣ... ... ಕಾರ್ಯದರ್ಶಿಯಾಗಿಯೂ ಚು... ...ಲ್ಪಟ್ಟಿರುವರು.

ಅರಮನೆ ಸುದ್ದಿ

...ಸೂರು, ಭಾನುವಾರ ೧೩-೧೦-೪೬ ...ಮಹಾರಾಜರವರು ಈ ದಿನ ರಾಜರ ...ಸಿಪಾ ಕರ್ನಲ್ ಡಬ್ಲ್ಯು. ಎಲ್ ...ರವರಿಗೆ ಭೇಟಿ ದಯಪಾಲಿಸಿ

ಪ್ರ|| ಪ್ರ|| ಸಭೆಯಲ್ಲಿ ಪೋಲೀಸಿನವರೇಕೆ?

ಮೈಸೂರು ೧೩

ಈ ದಿನ ಪ್ರ|| ಪ್ರ|| ಸಭೆಯಲ್ಲಿ ಶ್ರೀ|| ಕೆ. ಹನುಮಂತಯ್ಯನವರು ಒಂದು ಹಕ್ಕು ಬಾಧ್ಯತೆಯ ಸೂಚನೆಯನ್ನು ಮುಂದಿಸಿ ಸಭೆಯ ಅಂಗಳದಲ್ಲೂ ಹೊರಗಡೆಯೂ ಪೋಲೀಸಿನವರೂ ಗೂಢಚಾರರೂ ಇರುವುದರಿಂದ ಬಹಳ ಅಸಮಾಧಾನಕ್ಕೆ ಕಾರಣವಾಗಿದೆಯೆಂದು ತಿಳಿಸಿದರು. ಶ್ರೀ ಶಂಕರಲಿಂಗೇಗೌಡರೂ, ಕೃಷ್ಣಸ್ವಾಮಿ ಒಳ್ಳೆಯವರೂ, ರಾ|| ಬ|| ರಾಮಸ್ವಾಮಿಯವರೂ, ಡಿ. ಎಚ್ ಚಂದ್ರಶೇಖರಯ್ಯನವರೂ ಮಾತನಾಡಿ ಈ ಸಭೆಯಲ್ಲಿ ಗೂಢಚಾರರಿಗೆ ಸ್ಥಾನವಿಲ್ಲವೆಂದು ಹೇಳಿದರು.

ದಿವಾನರು ಉತ್ತರವಿತ್ತು ಹಲವು ಪೋಲೀಸ್ ಅಧಿಕಾರಿಗಳು ಅಲ್ಲಿ ತಮ್ಮ ಕರ್ತವ್ಯ ನಿರ್ವಹಣೆಗಾಗಿ ಬಂದಿರುವರೆಂದೂ, ಗೂಢಚಾರರನ್ನು ಯಾರೂ ಕರೆದಿಲ್ಲವೆಂದೂ ಹೇಳಿದರು. ಈ ವಿಷಯವು ಹಕ್ಕು ಬಾಧ್ಯತೆಗೆ ಸಂಬಂಧಪಟ್ಟುದಲ್ಲವೆಂದೂ, ಸಭೆಯ ಸೌಕರ್ಯಗಳಿಗೆ ಸಂಬಂಧಪಟ್ಟುದಾದುದರಿಂದ ಅದನ್ನು ಹೌಸ್ ಕಮಿಟಿಗೆ ಹಾಕುವುದಾಗಿಯೂ ಹೇಳಿದರು.

ಜಾವಾದಿಂದ ಅಕ್ಕಿ

ಜಾವಾದಿಂದ ಭಾರತಕ್ಕೆ ಇದುವರೆಗೆ ೨೪ ಸಾವಿರ ಟನ್ ಅಕ್ಕಿಯನ್ನು ಒದಗಿಸಲು ಒಪ್ಪಿಗೆಯಾಗಿದೆಯೆಂದೂ, ಮಿತ್ರ ಅಧಿಕಾರಿಗಳು ಇದನ್ನು ಒಳ ಭಾಗದಿಂದ ಬಂದರು ಪ್ರದೇಶಕ್ಕೆ ರವಾನಿಸಲು ೨೦೦ ಲಾರಿಗಳನ್ನು ಒದಗಿಸಿದ ಕೂಡಲೇ ಅಕ್ಕಿಯನ್ನು ಭಾರತಕ್ಕೆ ಕಳುಹಿಸಲಾಗುವುದೆಂದೂ ಜಾವಾಕ್ಕೆ ತೆರಳಿರುವ ಭಾರತದ ಪ್ರತಿನಿಧಿ ಶ್ರೀ ಕೆ ಎಲ್ ಪಂಜಾಬಿಯವರು ತಿಳಿಸಿದ್ದಾರೆ.

ಭಾರಿ ಜಮೀನ್ದಾರರ ಕೊಲೆ

ಸ್ವಂ.ಸು.] ಶ್ರೀರಂಗಪಟ್ಟಣ ೧೩

ಪ್ರಸಿದ್ಧ ಜಮೀನ್ದಾರರೂ, ಗಂಜಾಮಿನ ಆನಂದ ಸೈಸ್ ಮಿಲ್ ಮಾಲೀಕರೂ ಆದ ಬಲಗೇನಹಳ್ಳಿ ಶ್ರೀ ತಮ್ಮೇಗೌಡ ಉರುಫ್ ಪೈಲ್ವಾನ್ ತಮ್ಮೇಗೌಡರನ್ನು ಸದರಿ ಊರಿನ ಕುಳ್ಳೇಗೌಡರ ಮಗ ರಾಮಯ್ಯ ಎಂಬುವರು ಕಳೆದ ಮಂಗಳವಾರ ಗದ್ದೆಯ ಬಯಲಿನಲ್ಲಿ ಕಡಿದು ಹಾಕಿದನೆಂದೂ, ಆತ ಈಗ ಶ್ರೀರಂಗಪಟ್ಟಣ ಪೋಲೀಸರ ವಶದಲ್ಲಿರುವನೆಂದೂ ವರದಿಯಾಗಿದೆ.

ಕಾಂಗ್ರೆಸ್—ಲೀಗ್ ಸಂಧಾನ ಭಗ್ನ

ದೆಹಲಿಯಲ್ಲಿ ಕಾಂಗ್ರೆಸ್ಸಿಗೂ ಲೀಗಿಗೂ ಭೋಪಾಲ್ ನವಾಬರ ಮಧ್ಯಸ್ಥಿಕೆಯಲ್ಲಿ ನಡೆಯುತ್ತಿದ್ದ ಸಂಧಾನವು ವಿಫಲವಾಗಿರುವುದಾಗಿ ತಿಳಿದು ಬಂದಿದೆ. ಲೀಗು ಮುಸ್ಲಿಮರ ಏಕೈಕ ಪ್ರತಿನಿಧಿ ಸಂಸ್ಥೆಯೆಂದು ಕಾಂಗ್ರೆಸ್ ಒಪ್ಪಿಕೊಳ್ಳಲು ನಿರಾಕರಿಸಿದುದರಿಂದಲೇ ಸಂಧಾನ ಭಗ್ನವಾಗಿದೆಯೆಂದು ಹೇಳಲಾಗಿದೆ.

ಬ್ರಿಟಿಷ್ ಸಲಹೆಗೆ ಟ್ರೂಮನ್ನರ ತಿರಸ್ಕಾರ

ಪ್ಯಾಲಸ್ಟೈನಿನ ಸಮಸ್ಯೆ ಪರಿಹಾರದ ಬಗ್ಗೆ ಬ್ರಿ|| ಪ್ರಧಾನಿ ಮಿ|| ಅಟ್ಲಿಯವರು ಸೂಚಿಸಿದ್ದ ಸಲಹೆಯನ್ನು ಅದು ಪವಿತ್ರ ಭೂಮಿಯ ಬಿಕ್ಕಟ್ಟಿನ ಪರಿಹಾರಕ್ಕೆ ಉಚಿತವಾಗಿಲ್ಲವೆಂಬ ಕಾರಣದಿಂದ ನಿರಾಕರಿಸಿ ಪ್ರೆಸಿಡೆಂಟ್ ಟ್ರೂಮನ್ನರು ಉತ್ತರವಿತ್ತಿರುವುದಾಗಿ ವರದಿಯಾಗಿದೆ.

ಆಸ್ಸಾಮಿನಲ್ಲಿ ಮಳೆ ಹಾವಳಿ

ಆಸ್ಸಾಂ ಪ್ರಾಂತ್ಯದಲ್ಲಿ ವಿಪರೀತ ಮಳೆ ಬಂದು ಪ್ರವಾಹವು ಎಲ್ಲೆಲ್ಲೂ ಉಕ್ಕಿ ಬರುತ್ತಿದೆ. ಸಹಸ್ರಾರು ನಿರ್ಗತಿಕರಾಗುತ್ತಿದ್ದು ಅನೇಕ ಮಂದಿ ನಿರಾಶ್ರಿತರಾಗಿ ಬೇರೆ ಬೇರೆ ಕಡೆಗೆ ವಲಸೆ ಸಾಗುತ್ತಿದ್ದಾರೆಂದು ಗೊತ್ತಾಗಿದೆ.

ಪ್ರಧಾನಿಗಳ ಸಮ್ಮೇಳನ

ಭಾರತದ ಹನ್ನೊಂದು ಪ್ರಾಂತ್ಯಗಳ ಪ್ರಧಾನಿಗಳ ಸಮ್ಮೇಳನವೊಂದನ್ನು ಅಕ್ಟೋಬರ್ ೨೧ ನೇ ತಾ|| ಕೇಂದ್ರ ಸರ್ಕಾರದ ಆಶ್ರಯದಲ್ಲಿ ದೆಹಲಿಯಲ್ಲಿ ಜರುಗಿಸಲಾಗುತ್ತದೆಂದು ತಿಳಿದು ಬಂದಿದೆ. ಅಲ್ಲಿ ಆಹಾರಕ್ಕೆ ಸಂಬಂಧಪಟ್ಟ ಪ್ರಮುಖ ವಿಚಾರಗಳು ಚರ್ಚಿಸಲ್ಪಡುತ್ತವೆಂದು ಗೊತ್ತಾಗಿದೆ.

ಸರ್ ತಂಬೂಚೆಟ್ಟಿರ ಸಂಬಳ

ಅಲ್ಪಾವಧಿ ಪ್ರಶ್ನೆಗೆ ಅವಕಾಶವಿಲ್ಲ

ಮೈಸೂರು ೧೩

ಶ್ರೀಮನ್ಮಹಾರಾಜರವರ ಆಪ್ತ ಕಾರ್ಯದರ್ಶಿಗಳಾದ ಅಮಾತ್ಯ ಶಿರೋಮಣಿ ಸರ್ ಟಿ ತಂಬೂಚೆಟ್ಟಿಯವರಿಗೆ ೫೦೦೦ ರೂ. ಸಂಬಳವಾಗಿರುವ ವಿಚಾರದಲ್ಲಿ ಶ್ರೀ|| ಎಂ. ಎ. ಜೋಯಿಸರು ಅಲ್ಪಾವಧಿ ಪ್ರಶ್ನೆಯನ್ನು ಕಳುಹಿಸಿದ್ದರಷ್ಟೆ. ಈ ಪ್ರಶ್ನೆಯನ್ನು ತಳ್ಳಿಹಾಕಿರುವುದಾಗಿ ಈ ದಿನ ದಿವಾನ್ ಅಧ್ಯಕ್ಷರು ಪ್ರ|| ಪ್ರ|| ಸಭೆಯಲ್ಲಿ ತಿಳಿಸಿದರು.

ದಂಡಿನಲ್ಲಿ ಕರ್ಫ್ಯೂ

ಪರಿಸ್ಥಿತಿ ಶಾಂತವಾಗಿದೆ

ಸ್ವಂ ಸು. ಫೋ] ಬೆಂಗಳೂರು ೧೩

ದಂಡಿನಲ್ಲಿ ಉಂಟಾಗಿರುವ ಗಲಭೆಯ ಪರಿಸ್ಥಿತಿಯು ಹತೋಟಿಗೆ ಬರುತ್ತಿರುವುದಾಗಿ ಗೊತ್ತಾಗಿದೆ. ನೆನ್ನೆ ದಿನ ಇರಿತಕ್ಕೆ ಗುರಿಯಾದ ಇಬ್ಬರೂ ಸತ್ತು ಹೋದರು. ಇದುವರೆವಿಗೆ ಮೂರು ಮರಣಗಳು ಮಾತ್ರ ಸಂಭವಿಸಿವೆ. ಕಲೆಕ್ಟರೂ, ಕಮೀಷನರೂ ಮುದ್ದಾಗಿ ರಕ್ಷಣಾ ಏರ್ಪಾಡುಗಳನ್ನು ಮಾಡುತ್ತಿದ್ದಾರೆ. ದಂಡಿನಲ್ಲಿ ರಾತ್ರಿ ೯-೩೦ ರಿಂದ ಬೆಳಗ್ಗೆ ೫ ಘಂಟೆ ವರೆಗೆ ಕರ್ಫ್ಯೂ ಆಜ್ಞೆ ಜಾರಿಗೆ ತರಲ್ಪಟ್ಟಿದೆ. ೧೪ ನೇ ಸೆಕ್ಷನ್ ಜಾರಿಗೆ ತರಲಾಗಿದೆ. ಈ ಆಜ್ಞೆಯು ಅಕ್ಟೋಬರ್ ೧೬ ನೇ ತಾ|| ಮಧ್ಯರಾತ್ರಿಯ ವರೆಗೂ ಜಾರಿಯಲ್ಲಿರುತ್ತದೆ.

ಪತ್ರಿಕಾ ವಿವರಣೆ

ದಂಡಿನ ಕಲೆಕ್ಟರು ಈ ರೀತಿ ಒಂದು ಪತ್ರಿಕಾ ವಿವರಣೆ ಇತ್ತಿದ್ದಾರೆ:—

ಕಳೆದ ಶುಕ್ರವಾರ ಶ್ರೀ ಟಾಕೀಸಿನಲ್ಲಿ ಗೋಷಾ ಹೆಂಗಸರಿಗಾಗಿ ಏರ್ಪಡಿಸಲಾಗಿದ್ದ ಪ್ರದರ್ಶನವೊಂದನ್ನು 'ಪಿಕೆಟ್' ಮಾಡಲು ಮುಸ್ಲಿಮರ ತಂಡವೊಂದು ಹೋಗಿದ್ದು ಮಾಮೂಲು ಸ್ಪಿಂಗ್ಸ್ ರಸ್ತೆ ಬಳಿ ಹಿಂತಿರುಗುತ್ತಿದ್ದಾಗ್ಗೆ ಇದ್ದಕ್ಕಿದ್ದ ಹಾಗೆಯೇ ಗಲಭೆ ಉದ್ಭವವಾಯಿತೆಂದು ವಿವರಣೆ ಇತ್ತಿದ್ದಾರೆ.

ಬಡವರಿಗೆ ಅನ್ನ ದಾನ

ತಿರುವಾಂಕೂರಿನ ಮಹಾರಾಜರ ವರ್ಧಂತಿ ಮಹೋತ್ಸವದ ಅಂಗವಾಗಿ ೪೦ ಸಹಸ್ರ ರೂ ಗಳ ವೆಚ್ಚದಲ್ಲಿ ಬಡಬಗ್ಗರಿಗೆ ಅನ್ನ ಮತ್ತು ಗಂಜಿಯನ್ನು ಅಕ್ಟೋಬರ್ ೨೦ ನೇ ತಾ|| ನಿಂದ ಹತ್ತು ದಿನಗಳು ಹಂಚಲಾಗುವುದೆಂದು ಗೊತ್ತಾಗಿದೆ.

ಹೈದರಾಬಾದಿನಲ್ಲಿ ಸತ್ಯಾಗ್ರಹ ರದ್ದು

ಹೊಸದಾಗಿ ಹೈದರಾಬಾದಿನಲ್ಲಿ ಘೋಷಿಸಲ್ಪಟ್ಟಿರುವ ಸುಧಾರಣೆಗಳ ವಿರುದ್ಧವಾಗಿ ಅಲ್ಲಿನ ಸ್ಟೇಟ್ ಕಾಂಗ್ರೆಸ್ಸಿನವರು ಹೂಡಿರುವ ಸತ್ಯಾಗ್ರಹವನ್ನು, ಸಂಸ್ಥಾನದ ಪ್ರಧಾನಿಗಳಾದ ಸರ್ ಮಿರ್ಜಾರವರು ಎಲ್ಲ ವಿಷಯಗಳನ್ನೂ ಕೂಲಂಕಷವಾಗಿ ಪರಿಶೀಲಿಸುವುದಾಗಿ ಭರವಸೆ ಇತ್ತಿರುವುದರಿಂದ ಎರಡು ತಿಂಗಳ ಕಾಲ ರದ್ದುಮಾಡತಕ್ಕದ್ದೆಂದು ತೀರ್ಮಾನಿಸಿದ್ದಾರೆ.

ಪ್ರಧಾನಿಗೆ ಗವರ್ನರ ಕೈಲಿ ಪತ್ರ

ಗಡಿನಾಡಿನ ಪ್ರಧಾನಿಗಳಿಗೆ ಪಂ|| ನೆಹರರವರು ಒಂದು ಪತ್ರ ಬರೆದು ಅದನ್ನು ಪೆಷಾವರಿಗೆ ಆಗಮಿಸಿದ್ದ ಪ್ರಾಂತ್ಯದ ಗವರ್ನರರ ಸಂಗಡ ಕಳುಹಿಸಿದ್ದರು. ಅದನ್ನು ಅವರು ನೆನ್ನೆ ಪೆಷಾವರಿನಲ್ಲಿ ಡಾ|| ಖಾನ್ ಸಾಹೇಬರಿಗೆ ತಲುಪಿಸಿದರು. ಆ ಪತ್ರಕ್ಕೆ ಸೇರಿದ ಕೂಡಲೇ ಅವರು ಕೆಂಪು ದಳದ ಶಿಬಿರಕ್ಕೆ ತಮ್ಮ ಸೋದರರಾದ ಗಫಾರ್ ಖಾನರನ್ನು ನೋಡಲು ತೆರಳಿದರು.

ಅಲಹಾಬಾದಿನಲ್ಲಿ ಪುನಃ ಕೊಂದಾಯ

ಅಲಹಾಬಾದ್ ನಗರದ ದಕ್ಷಿಣ ಭಾಗವನ್ನೆಲ್ಲಾ 'ಗಲಭೆ ಪ್ರದೇಶ' ವೆಂದು ಘೋಷಿಸಲಾಗಿದೆ. ಆ ಪ್ರದೇಶದಲ್ಲಿ ವಾಸಿಸುವ ಹಿಂದೂ ಮತ್ತು ಮುಸ್ಲಿಂ ಜನಗಳ ಮೇಲೆ ಒಂದು ಸಾವಿರ ರೂಗಳ ಸಾಮೂಹಿಕ ದಂಡವನ್ನು ಹಾಕಲಾಗಿದೆ.

ಸಾಧ್ವಿ

ತಾ|| ೧೩-೧೦-೪೬ ಭಾನುವಾರ

ಕೋಮುವಾರು ಗಲಭೆ

ಭರತ ಖಂಡದ ಹಲವು ನಗರಗಳಲ್ಲಿ ಇದ್ದ ಕೋಮುವಾರು ವ್ಯಾಧಿಯು ಬೆಂಗಳೂರಿಗೆ ವ್ಯಾಪಿಸಿರುವಂತಿದೆ ಎರಡು ಮೂರು ದಿನಗಳಿಂದ ಅಲ್ಲಿ ಹಲವು ಪುಂಡರು ಜನರಿಗೆ ತೊಂದರೆ ಕೊಡುತ್ತಿರುವರೆಂದು ವರದಿಯಾಗಿದೆ ಇದರ ಪರಿಣಾಮವಾಗಿ ಇಬ್ಬರು ಮೂವರು ಮರಣ ಹೊಂದಿರುವರೆಂದೂ ತಿಳಿದು ಬಂದಿದೆ. ಇದು ಅತ್ಯಂತ ವಿಷಾದಕರವಾದ ವಿಚಾರ ಆದರೆ ದಂಡಿನ ಮತ್ತು ನಗರದ ಅಧಿಕಾರಿಗಳು ಬೇಗನೇ ಮುಂಜಾಗ್ರತೆಯ ಏರ್ಪಾಡುಗಳನ್ನು ಮಾಡಿರುವುದರಿಂದ ಪರಿಸ್ಥಿತಿಯು ಹತೋಟಿಗೆ ಬಂದಿರುವುದಾಗಿ ತಿಳಿದು ಬಂದಿದೆ

ಬೆಂಗಳೂರು ನಗರದಲ್ಲಿಯೂ ಸಹ ಮುಂದೆ ಗಲಭೆಗಳಾಗದಂತೆ ಅಧಿಕಾರಿಗಳು ತಕ್ಕ ವ್ಯವಸ್ಥೆ ಮಾಡಿರುವರು ದಿವಾನರೂ ಸಹ ಈ ದಿನ ರಾತ್ರಿ ಬೆಂಗಳೂರಿಗೆ ತೆರಳಿ ಸೂಕ್ತ ಕಾರ್ಯಕ್ರಮ ಕೈಗೊಳ್ಳಲಿರುವರೆಂದು ತಿಳಿದು ಬಂದಿದೆ

ಸಂಸ್ಥಾನದ ಪರಿಸ್ಥಿತಿಯು ಅನೇಕ ದಿನಗಳಿಂದ ಪ್ರಶಾಂತವಾಗಿರುತ್ತದೆ ಹಿಂದೆ ರಂಜಾನ್, ಗೌರಿ, ಮತ್ತು ಗಣೇಶನ ಹಬ್ಬಗಳ ಕಾಲದಲ್ಲಿ ಗಲಭೆಯಾಗಬಹುದೆಂಬ ಶಂಕೆ ಇದ್ದಿದ್ದಾಗ ದಂಡಿನ ಮತ್ತು ನಗರದ ಅಧಿಕಾರಿಗಳೂ ಮತ್ತು ಸಾರ್ವಜನಿಕ ಮುಖಂಡರೂ ಮುಂದೆ ಒಂದು ಮಹಾಜನರಲ್ಲಿ ಮನವಿ ಮಾಡಿ ಶಾಂತಿ ಶಿಸ್ತುಗಳನ್ನು ಸಂರಕ್ಷಿಸಿದರು. ಈಗ ದಂಡಿನಲ್ಲಿ ಗಲಭೆಯ ಸೋಂಕು ತಲೆದೋರಿರುವಂತಿದೆ ಇದನ್ನು ಮೊಳಕೆಯಲ್ಲಿಯೇ ಚಿವುಟಿ ಹಾಕುವುದು ಅಗತ್ಯವಾಗಿದೆ.

ಕೋಮುವಾರು ವ್ಯಾಧಿಯು ಸಾರ್ವಜನಿಕ ಜೀವನದಲ್ಲಿ ಎಲ್ಲ ಅನರ್ಥಗಳಿಗಿಂತಲೂ ಅತ್ಯಂತ ಮಿಗಿಲಾದುದು ಯಾವ ತತ್ವ, ಧ್ಯೇಯ ಮತ್ತು ಆದರ್ಶಗಳ ಆಧಾರವೂ ಇಲ್ಲದೆ ಕೇವಲ ಆವೇಶದಿಂದ ಇದು ನಡೆಯುವುದು ಇದನ್ನು ಸಕಾಲದಲ್ಲಿ ತಡೆಗಟ್ಟುವುದು ಮಾನವರೆಂದೆನಿಸಿದ ಸಕಲರ ಕರ್ತವ್ಯ ಈ ಬಗ್ಗೆ ಅಧಿಕಾರಿಗಳು ಕೈಗೊಳ್ಳಲಿರುವ ಎಲ್ಲ ಕಾರ್ಯಗಳಿಗೂ ಸಾರ್ವಜನಿಕರು ನೆರವು ನೀಡಿ ಶಾಂತಿ ಸ್ಥಾಪನೆ ಮಾಡಲೆಂದು ನಾವು ಹಾರೈಸುತ್ತೇವೆ.

ಕೇಂದ್ರ ಸರ್ಕಾರಕ್ಕೆ ಲೀಗು ಸೇರುವುದು

ಕೇಂದ್ರ ತಾತ್ಕಾಲಿಕ ಸರ್ಕಾರಕ್ಕೆ ಲೀಗು ಸೇರುವ ಬಗ್ಗೆ ಅಖೈರು ನಿರ್ಧಾರವು ಇಂದು ಹೊರಬೀಳಲಿದೆ ಲೀಗು ಸರ್ಕಾರಕ್ಕೆ ಸೇರಲು ವೈಸರಾಯರು ಬಹಳ ಕಾತುರರಾಗಿರುವರೆಂದೂ, ಆದ್ದರಿಂದ ಅವರ ಆಹ್ವಾನವನ್ನು ಮನ್ನಿಸಿ ಲೀಗು ಕೇಂದ್ರ ಸರ್ಕಾರಕ್ಕೆ ಸೇರುವುದೆಂದೂ ದೆಹಲಿಯಿಂದ ಸುದ್ದಿ ಬಂದಿದೆ ಪೋರ್ಟ್ ಫೋಲಿಯೋ ಹಂಚಿಕೆಗಳು ವೈಸರಾಯ್, ನೆಹರು ಮತ್ತು ಜಿನ್ನಾರವರ ಪರಸ್ಪರ ಸಮಾಲೋಚನೆ ನಂತರ ತೀರ್ಮಾನವಾಗುವುವೆಂದು ಗೊತ್ತಾಗಿದೆ. ನಿನ್ನೆ ಮಧ್ಯಾಹ್ನ ಮಿ|| ಜಿನ್ನಾರವರು ವೈಸರಾಯರನ್ನು ಕಂಡು ೯೦ ನಿಮಿಷಗಳು ಕಾಲ ಮಾತುಕತೆ ನಡೆಸಿದರು.

ದಂಡಿನಲ್ಲಿ ಗಲಭೆಗಳು

ಪ್ರ|| ಪ್ರ|| ಸಭೆಯಲ್ಲಿ ನಿಲುವಳಿ ನಿರ್ಣಯ

ಮೈಸೂರು ೧೩

ಬೆಂಗಳೂರು ದಂಡಿನಲ್ಲಿ ನಡೆದಿರುವ ಕೋಮುವಾರು ಗಲಭೆಗಳ ಪರಿಣಾಮವಾಗಿ ನಗರದಲ್ಲಿ ಬಂದೋಬಸ್ತು ಕ್ರಮಗಳನ್ನು ಕೈಗೊಳ್ಳಬೇಕಾದ ಅವಶ್ಯಕತೆಯ ಬಗ್ಗೆ ಶ್ರೀ ಬಿ ಎಸ್ ಗುಪ್ತರು ಈ ದಿನ ಪ್ರ|| ಪ್ರ|| ಸಭೆಯಲ್ಲಿ ಒಂದು ನಿಲುವಳಿ ನಿರ್ಣಯವನ್ನು ತಂದರು. ದಿವಾನರು ಇದರ ವಿಷಯದಲ್ಲಿ ಮಾತನಾಡಿ ಬೆಂಗಳೂರು ನಗರದಲ್ಲಿ ಕೈಗೊಳ್ಳಲಾಗಿರುವ ಮುಂಜಾಗ್ರತೆ ಕ್ರಮಗಳನ್ನು ವಿವರಿಸಿದರು. ಪೋಲೀಸ್ ಇ|| ಜನರಲ್‌ರವರು ಈಗಾಗಲೇ ಅಲ್ಲಿಗೆ ತೆರಳಿ ತಕ್ಕ ವ್ಯವಸ್ಥೆಗಳನ್ನು ಮಾಡುತ್ತಿರುವರು ಮತ್ತು ನಗರದಲ್ಲಿ ಜನರು ಶಸ್ತ್ರ ಸಜ್ಜಿತರಾಗಿ ಗುಂಪು ಕೂಡದಂತೆ ಪ್ರತಿಬಂಧಕಗಳನ್ನು ಹಾಕಲಾಗಿದೆ-ಎಂದು ತಿಳಿಸಿದರು. ಅಲ್ಲದೆ ತಾವೂ ಸಹ ಈ ದಿನ ರಾತ್ರಿ ಅಲ್ಲಿಗೆ ತೆರಳಿ ಎಲ್ಲಾ ಪಂಗಡಗಳ ನಾಯಕರುಗಳೊಡನೆ ಸಮಾಲೋಚನೆ ನಡೆಸಿ ಸೂಕ್ತವಾದ ಏರ್ಪಾಡುಗಳನ್ನು ಮಾಡುವುದಾಗಿಯೂ ತಿಳಿಸಿ ನಿಲುವಳಿ ನಿರ್ಣಯವನ್ನು ತಳ್ಳಿಹಾಕಿದರು

ಉದಾರ ದಾನ

ಬಂಟಿಕೊಪ್ಪಲಿನಲ್ಲಿ ೪೦ ಸಾವಿರ ರೂ. ಬೆಲೆ ಬಾಳುವ ಕನ್ಯಾ ಭವನವನ್ನು ಶ್ರೀಮತಿ ಪಂಡಿತ ಸುಂದರಮ್ಮನವರು ಮಹಿಳೆಯರ ಮತ್ತು ಮಕ್ಕಳ ಶ್ರೇಯೋಭಿವೃದ್ಧಿಗಾಗಿ ದಾನ ಮಾಡಿರುವರು

ಗಾಂಧಿ ಜಯಂತಿ

ಕಳೆದ ಭಾನುವಾರ ಖಿಲ್ಲೆ ಮೊಹಲ್ಲಾ ನಾರ್ತ್ ಸಮಿತಿಯವರು ಮಹಾತ್ಮಾ ಗಾಂಧಿ ಮತ್ತು ಬಸ್ಸೆಟ್ ಫ್ಯಾಕ್ಟರಿಯ ಶ್ರೀ ಗಾಂಧೀ ಜಯಂತ್ಯುತ್ಸವದ ಸಂಬಂಧವಾಗಿ ಧ್ವಜ ವಂದನೆ, ರಾಷ್ಟ್ರಗೀತಾ ಸ್ಪರ್ಧೆ, ಪ್ರಬಂಧ ಸ್ಪರ್ಧೆ ಮತ್ತು ೭೮ ನಿಮಿತಗಳ ಕಾಲ ನೂಲುವ ಸ್ಪರ್ಧೆಗಳನ್ನು ಏರ್ಪಡಿಸಿದ್ದರು. ಅನೇಕ ಜನ ಬಾಲಕ ಬಾಲಕಿಯರು ಭಾಗವಹಿಸಿದ್ದರು ಸಾಯಂಕಾಲ ಅಲಂಕೃತವಾದ ರಥದಲ್ಲಿ ಮಹಾತ್ಮಾಜೀಯವರ ಫೋಟೋ ಉತ್ಸವವೂ ಮತ್ತು ಬಹಿರಂಗ ಸಭೆಯೂ ನಡೆದುವು ಎಸ್ ಚೆನ್ನಯ್ಯನವರು ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ವಿನಿಯೋಗ ಮಾಡಿದರು. ಶ್ರೀಗಳಾದ ಕೆ ಚಂಗಲರಾಯರೆಡ್ಡಿ, ಮುಳವಳ್ಳಿ ವೀರಪ್ಪ, ಎಸ್ ಕೃಷ್ಣಮೂರ್ತಿ, ಉಪಾಧ್ಯಾಯ ಇವರೇ ಮೊದಲಾದವರು ಭಾಷಣ ಮಾಡಿದರು

ಪ್ರಶಸ್ತಿಗಳು

ನೆನ್ನೆ ನಡೆದ ವಿಶ್ವವಿದ್ಯಾನಿಲಯದ ಪದವೀ ದಾನ ಮಹೋತ್ಸವದಲ್ಲಿ ಶ್ರೀ ವಿಠ್ಠಲರಾವ್ ಶೇಷಣ್ಣನವರ ಹಾಸ್ಟೆಲಿನ ೬ ಜನರು ನಾನಾ ಪದವಿಗಳನ್ನು ಪಡೆದರು ಅವರಲ್ಲಿ ಶ್ರೀ ಎ ಎಸ್ ಸುಬ್ಬನರಸಿಂಹಯ್ಯನವರಿಗೆ ಚರಿತ್ರೆಗೆ ಮಹಾರಾಜರ ಸುವರ್ಣ ಪದಕವೂ ಶ್ರೀ ಎಂ. ಎಸ್. ರಾಘವೇಂದ್ರ ರಾಯರಿಗೆ ಸರ್ ಸಿ ಎಸ್ ಕೃಷ್ಣಮೂರ್ತಿ ಸಂಸ್ಕೃತ ಸುವರ್ಣ ಪದಕವೂ ಶ್ರೀ ಎ ಸತ್ಯನಾರಾಯಣರಿಗೆ ತಿರುಮಲ್ಪೂರ್ ಶ್ರೀನಿವಾಸರಾಘವಾಚಾರ್ಯರ ಕನ್ನಡ ಬಹುಮಾನವೂ ಶ್ರೀಮನ್ಮಹಾರಾಜರವರಿಂದ ಕೊಡಲ್ಪಟ್ಟವು

ಮೈಸೂರಿಗೆ ೪೦ ಸಾವಿರ ಟನ್ ಧಾನ್ಯ

ಮೈಸೂರು ಸಂಸ್ಥಾನಕ್ಕೆ ಅಕ್ಟೋಬರ್ ಮತ್ತು ನವಂಬರ್ ತಿಂಗಳುಗಳಲ್ಲಿ ಕೇಂದ್ರ ಸರ್ಕಾರದವರು ೪೦ ಸಾವಿರ ಟನ್ ಗಳಷ್ಟು ಧಾನ್ಯವನ್ನು ಒದಗಿಸಲು ನಿಗದಿ ಮಾಡಿರುವುದಾಗಿ ತಿಳಿದುಬಂದಿದೆ

ನೆಹರೂ ಅಭಿನಂದನೆ

ಕೊಚ್ಚಿಯ ನೂತನ ರಾಜ್ಯಾಂಗ ಸುಧಾರಣೆಗಳನ್ನು ತಾವು ಕುತೂಹಲ ಮತ್ತು ಸಂತೋಷದಿಂದ ನೋಡುತ್ತಿರುವುದಾಗಿ ಪಂ|| ನೆಹರೂರವರು ಕೊಚ್ಚಿ ಮಹಾರಾಜರಿಗೆ ಒಂದು ಅಭಿನಂದನಾ ಸಂದೇಶ ಕಳುಹಿಸಿದ್ದಾರೆ

ಬೆಂಗಳೂರಿನಲ್ಲಿ ಗಲಭೆ

ದಂಡಿನಲ್ಲಿ ೧೪೪ ನೇ ಸೆಕ್ಷನ್ ಜಾರಿಯಲ್ಲಿದೆ. ಆಯುಧಗಳೊಂದಿಗೆ ತಿರುಗಾಡುತ್ತಿದ್ದರೆಂಬ ಕಾರಣದಿಂದ ಅನೇಕರ ದಸ್ತಗಿರಿಯಾಗಿದೆ ಗಲಭೆಯಿಂದ ಮೂರು ಮಂದಿ ಮೃತರಾದರೆಂದೂ, ಐದು ಮಂದಿಗೆ ಗಾಯಗಳಾಗಿವೆಯೆಂದೂ ತಿಳಿದು ಬಂದಿದೆ ನಗರದಲ್ಲಿ ಲೈಸೆನ್ಸ್ ಇಲ್ಲದೆ ಅಕ್ಟೋಬರ್ ೧೮ ರ ಮಧ್ಯರಾತ್ರಿಯ ವರೆಗೂ ಯಾವ ಮೆರವಣಿಗೆಯೂ ನಡೆಯಕೂಡದೆಂದೂ, ಯಾರೂ ಆಯುಧಗಳನ್ನು ಧರಿಸಬಾರದೆಂದೂ ಜಿಲ್ಲಾ ಮ್ಯಾಜಿಸ್ಟ್ರೇಟರು ಪ್ರತಿಬಂಧಕಾಜ್ಞೆ ಇತ್ತಿದ್ದಾರೆ

ಮಹಾತ್ಮರ ಜಯಂತಿ

ಗುಂಡ್ಲುಪೇಟೆ ೧೨

ಇಲ್ಲಿ ಮಹಾತ್ಮ ಗಾಂಧಿಯವರ ಜಯಂತ್ಯುತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು ಬೆಳಿಗ್ಗೆ ಪ್ರಭಾತ ಫೇರಿ ನಡೆದು ಸಾಯಂಕಾಲ ದಿವ್ಯವಾಗಿ ಅಲಂಕರಿಸಿದ್ದ ರಥದಲ್ಲಿ ಗಾಂಧೀಜಿಯವರ ಭಾವಚಿತ್ರವನ್ನು ಮೆರವಣಿಗೆ ಮಾಡಲಾಯಿತು ಶ್ರೀ ಹೆಚ್ ಎಸ್ ರಾಮಣ್ಣನವರ ಅಧ್ಯಕ್ಷತೆಯಲ್ಲಿ ಸೇರಿದ್ದ ಭಾರಿ ಬಹಿರಂಗ ಸಭೆಯಲ್ಲಿ ಮೈಸೂರಿನ ಎಂ ಶಂಕರಯ್ಯನವರು ಗಾಂಧೀಜಿಯವರ ಜೀವನ ಚರಿತ್ರೆ, ಕೇಂದ್ರ ಸರ್ಕಾರ, ಮೈಸೂರಿನ ರಾಜಕೀಯಗಳನ್ನು ಕುರಿತು ಭಾಷಣ ಮಾಡಿದರು ಸಭಾಧ್ಯಕ್ಷರು ಗಾಂಧಿ ಜಯಂತಿಯನ್ನು ಶ್ರೀರಾಮನವಮಿಗೆ ಹೋಲಿಸಿ ಭಾಷಣ ಮಾಡಿದರು ಶ್ರೀ ವೆಂಕಟಸ್ವಾಮಿಯವರು ಸುಶ್ರಾವ್ಯವಾಗಿ ಹಿಂದೀ ಗೀತೆಗಳನ್ನು ಹಾಡಿದರು.

ಕಾಂಗ್ರೆಸ್ ಆರಂಭೋ

ಶ್ರೀ ಹೆಚ್ ಆರ್. ಗುರುವಾ ರು ಒಂದು ಹೇಳಿಕೆ ಹೊರಡಿಸಿ ನಲ್ಲಿ ನಡೆಯಲಿರುವ ಮೈಸೂರು ಅಧಿವೇಶನದ ಆರಂಭೋತ್ಸವಕ್ಕೆ ಪಟ್ಟಾಭಿಸೀತಾರಾಮಯ್ಯನವರನ್ನು ನಿಸುವ ಅಂಶವನ್ನು ಖಂಡಿಸಿದ್ದಾ ಪಟ್ಟಾಭಿಯವರು ರಾಜಕ್ಕದ ವಿ ಈಚೆಗೆ ಕೊಟ್ಟಿರುವ ಹೇಳಿಕೆಯಿಂ ನ್ನು ಕರೆಯುವುದು ಅನುಚಿ ಅಲೋಚಿತವೆಂದು ಅವರು ಹೇಳ

ಗಾಂಧಿ ಜಯಂತಿ

ಸ್ವ ಸು] ಚಾಮರಾಜನ

ಇಲ್ಲಿನ ಕಾಂಗ್ರೆಸ್ ಕೆಲಸಗಾರರು ಏಳುದಿನಗಳಿಂದ ಗಾಂಧಿ ಜಯಂತಿ ಸಪ್ತಾಹವನ್ನು ಆಚರಿಸಿ ನೆನ್ನೆ ತ್ಮಾ ಗಾಂಧೀಯವರ ಭಾವಚಿತ್ರ ವವನ್ನು ಬಹಳ ವಿಜೃಂಭಣೆಯಿಂ ನೆರವೇರಿಸಿದರು.

OPERA TALKIES
ತಾ|| 12—10—46ರಿಂದ
ಮೂರನೇ ವಾರ
ಮಾಯಾಮಚ್ಛೀ
(ತೆಲುಗು)
ಕನ್ನಾಂಬ, ಮಾಲತಿ,
ಗೌರೀನಾಥ ಶಾಸ್ತ್ರಿ, ಅದ್ದಂ
ಕೃಷ್ಣಮೂರ್ತಿ ಮುಂತಾದವ

ರಾಜ್ ಕಮಲ್, ಮೈಸೂ
10-10-46 ರಿಂದ ಅಮೋಘವಾ
4 ನೇ ವಾರ
ಸ್ವರ್ಗಸೀಮ

11-10-46 ರಿಂದ 4 ದಿನಗಳ
ಪ್ರತಿ ದಿನ 10-30 ಕ್ಕೆ
'ಬಡೀ ದೀದಿ'
(ನ್ಯೂ ಥಿಯೇಟರ್ಸ್)
ಪಾತ್ರ:- "ಸಹಗಲ್," ಮಾ

Edited printed and published A. K. Nagarajan of the Sadhvi DSehn ... Road, Mysore

ಶ್ರೀ ಗಣೇಶಾ ಟಾಕೀಸ್
ಕೃಷ್ಣರಾಜವನಂ :: ಮೈಸೂ
ರಾಜಧಾನಿಯ ರಮ್ಯ ಪ್ರದೇಶವಾದ ಕೃಷ್ಣರಾಜ ವನದಲ್ಲಿ ನಿರ್ಮಿತವಾಗಿರುವ
ಅರಮನೆ ಕಂಟ್ರಾಕ್ಟರ್ ಟಿ ಯಾಲಕ್ಕಾಚಾರ್ಯರ
ಮೇಲ್ಪಂಡ ನೂತನ ಚಲನ ಚಿತ್ರ ಮಂದಿರದ ಪ್ರಾರಂಭೋತ್ಸವವನ್ನು ಶ್ರೀಮನ್ಮ
ರಾಜರವರ ಆಪ್ತ ಕಾರ್ಯದರ್ಶಿಗಳಾದ ಅಮಾತ್ಯ ಶಿರೋಮಣಿ
ಸರ್ ಟಿ. ತಂಬೂಚೆಟ್ಟಿಯವರು
ತಾ|| 14-10-46 ನೇ ಸೋಮವಾ
ನೆರವೇರಿಸುವರು ಈ ಸಮಯದಲ್ಲಿ ಚಲನ ಚಿತ್ರ ತಯಾರಿಕೆಯಲ್ಲಿ
ಅಗ್ರಗಣ್ಯರಾದ ಎಂ ಜಿ ಎಂ ಕಂಪೆನಿಯ
ಟಾರ್ಜಾನ್ಸ್ 'ನ್ಯೂಯಾರ್ಕ್ ಅಡ್ವೆಂಚರ್'
ಎಂಬ ಚಿತ್ರವು ಪ್ರದರ್ಶಿಸಲ್ಪಡುವುದು.

ಪೋ. ನಂ. 392 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೧] ಸೋಮವಾರ ೧೫—೧೦—೪೬ [ಸಂಚಿಕೆ ೧೨

ಕೇಂದ್ರ ಸರ್ಕಾರಕ್ಕೆ ಸೇರಲು ಲೀಗ್ ನಿರ್ಧಾರ

ಪೂರ್ಣ ಪಾನನಿರೋಧ ಜಾರಿಗೆ ಬರಲಿ

ಪ್ರ॥ ಪ್ರ॥ ಸಭೆಯಲ್ಲಿ ನಿರ್ಣಯ

ಮೈಸೂರು ೧೪

ಪ್ರಜಾಪ್ರತಿನಿಧಿ ಸಭೆಯು ನಿನ್ನೆ ಬೆಳಗ್ಗೆ ೧೧ಕ್ಕೆ ಆರಂಭವಾದಾಗ ಸಂಸ್ಥಾನದ ಮದ್ಯ ಭಟ್ಟಿ ಮತ್ತು ನೂರಿನ ಕಂಟ್ರೋಲ್ ಇವುಗಳಲ್ಲಿ ಪ್ರಶ್ನೋತ್ತರಗಳಾದುವು. ಅನೇಕ ಸದಸ್ಯರು ಈ ಬಗ್ಗೆ ಪ್ರಶ್ನೆಗಳನ್ನು ಕೇಳಿ ಕಂಟ್ರೋಲ್‌ದಾರ ಎಸ್. ಖಲೀಲ್, ಉತ್ತರ ಕೊಡುತ್ತ ಸಂಸ್ಥಾನದಲ್ಲಿ ಪ್ರತಿ ತಿಂಗಳೂ ತಲಾ ೧೦ ಗಜ ಬಟ್ಟೆ ಕೊಡಲಾಗುತ್ತಿದೆಯೆಂದೂ, ಹೊಸ ಬಟ್ಟೆ ಇವುಗಳು ಮುದ್ರಣವಾಗುತ್ತಿರುವುದರಿಂದ ತಡೆಯಲ್ಲೂ ಅವನ್ನು ಹಂಚಿಸಿ ಇನ್ನು ಮುಂದೆ ಬಟ್ಟೆ ಹಂಚಿಕೆಯನ್ನು ಸುವ್ಯವಸ್ಥೆ ಮಾಡಲಾಗುತ್ತದೆಂದೂ, ತಿಳಿಸಿದರು. ಹಲವು ಸಹಸ್ರ ಬೇಲ್ ಬಟ್ಟೆಗಳು ಗೈರು ಹೋಗಿದ್ದುದು ಸರ್ಕಾರದ ಗಮನಕ್ಕೆ ಬಂದಿಯೇ ಎಂದು ಶ್ರೀ ಎಸ್ ವಿ ಕೃಷ್ಣಮೂರ್ತಿಯವರು ಕೇಳಿದ ಉಪಪ್ರಶ್ನೆಗೆ ನಿಜವಲ್ಲೆಂದು ಕಂಟ್ರೋಲರು ಹೇಳಿ

ಸಂಸ್ಥಾನದಲ್ಲೆಲ್ಲಾ ಕೂಡಲೇ ಸಂಪೂರ್ಣ ಪಾನ ನಿರೋಧವನ್ನು ಜಾರಿಗೆ ತರಬೇಕೆಂದು ಶ್ರೀ ಕೃಷ್ಣಪ್ಪ ಗೌಡ(ಕಾಂ)ಯವರು ತಂದಿದ್ದ ನಿರ್ಣಯವು ಸಭೆಯಲ್ಲಿ ನಿರಂಗೀಕಾರವಾಯಿತು ಶ್ರೀ ಎಚ್. ಸಿ. ದಾಸಪ್ಪನವರು ಅದನ್ನು ವಿರೋಧಿಸಿದವರಲ್ಲಿ ಪ್ರಮುಖರಾಗಿದ್ದರು.

ಜಟ್ಟಿಗೆಗೂಡು ಯುವಕರ ಸಂಘ

ನೆ ...ಂಡ ಸಂಘದವರು ನಿನ್ನೆ ಸಂಜೆ ಎಸ್ ಸಿದ್ದಪ್ಪನವರ ಅಧ್ಯಕ್ಷತೆಯಲ್ಲಿ ಸೇರಿ ಶ್ರೀಮನ್ಮಹಾರಾಜರವರಿಗೆ ಪೂರ್ಣ ಸ್ವಾತಂತ್ರ್ಯವಾದುದಕ್ಕೆ ಸಂತೋಷ ಸೂಚಕ ನಿರ್ಣಯವನ್ನು ಸರ್ವಾನುಮತದ ಅಂಗೀಕರಿಸಿದರು.

ಸುಭಾಷ್ ನಗರ

ಜೈ ಹಿಂದ್ ಮತ್ತು ಈಸೂರು ದ್ವಾರಗಳ ನಿರ್ಮಾಣ

ಬೆಂಗಳೂರು ೧೩

ಸುಭಾಷ್ ನಗರದ ಅಧಿವೇಶನದ ಮುಖ್ಯ ದ್ವಾರಗಳಿಗೆ ಜೈ ಹಿಂದ್ ಮತ್ತು ಈಸೂರು ದ್ವಾರಗಳೆಂದು ನಾಮಕರಣ ಮಾಡಿದೆ.

ಮೈಸೂರು ಕಾಂಗ್ರೆಸ್ ೬ನೇ ಅಧಿವೇಶನದ ಸ್ವಾಗತ ಸಮಿತಿಯು ವಿವಿಧ ಇಲಾಖೆಗಳ ಕಛೇರಿಗಳನ್ನು ಅಧಿವೇಶನದ ಸುಭಾಷ್ ನಗರಕ್ಕೆ ವರ್ಗಾಯಿಸಲಾಗಿದೆ. ಸುಭಾಷ್ ನಗರದಲ್ಲಿ ಫೋನ್ ವ್ಯವಸ್ಥೆಯನ್ನು ಏರ್ಪಡಿಸಲಾಗಿದೆ (ನಂ- ೩೧೧೧)

ಮನೆಗಳ ಅಭಾವ

ಸು] ಶ್ರೀರಂಗಪಟ್ಟಣ ೧೨

ಊರು ದಿನೇ ದಿನೇ ಅಭಿವೃದ್ಧಿಯಾಗುತ್ತಿರುವುದರಿಂದ ಮನೆಗಳ ಅಭಾವವುಂಟಾಗಿ ಕಷ್ಟವಾಗಿದೆ. ಸಾಕು ಮನೆಗಳು ಅಧಿಕ ಸಂಖ್ಯೆಯಲ್ಲಿವೆ. ಕೂಡಲೇ ಇವುಗಳ ಮಾಲೀಕರಿಗೆ ಪುರಸಭೆಯವರು ನೋಟೀಸು ಕೊಟ್ಟು ಮನೆ ಸರಿಪಡಿಸಿ ಕೊಳ್ಳದಿದ್ದರೆ ವಶಪಡಿಸಿಕೊಳ್ಳುವುದಾಗಿ ತಿಳಿಸಿ, ಮನೆಗಳ ಅಭಾವವನ್ನು ತಪ್ಪಿಸಬೇಕಾಗಿದೆ ಅಲ್ಲದೆ ಮನೆ ಕಟ್ಟಲು ಜೊತೆಗೆ ನಿವೇಶನಗಳನ್ನು ಕೊಡುವ ವಿಷಯವಾಗಿಯೂ ಪುರಸಭೆಯವರು ಪರ್ಯಾಲೋಚಿಸಬೇಕಾಗಿದೆ.

ಅಭಿನಂದನಾ ಸಭೆ

ಮೈಸೂರು ೧೪

ಶ್ರೀಮನ್ಮಹಾರಾಜರವರಿಗೆ ಪೂರ್ಣ ಸಂಸ್ಥಾನವಾದುದಕ್ಕಾಗಿ ಅಭಿನಂದನೆಯನ್ನು ಸಲ್ಲಿಸಲು ನೂರಡಿ ರಸ್ತೆಯಲ್ಲಿರುವ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾಮಂದಿರದವರು ನಿನ್ನೆ ಒಂದು ಸಭೆಯನ್ನು ಏರ್ಪಡಿಸಿದ್ದರು. ಅನೇಕ ಪ್ರಮುಖ ಮಹಿಳೆಯರೂ ಮಹನೀಯರೂ ದಯಮಾಡಿಸಿದ್ದರು ಶ್ರೀ ಆಗರಂ ರಂಗಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಮಂದಿರದ ವಿದ್ಯಾರ್ಥಿನಿಯರಿಂದ ಪ್ರಾರ್ಥನೆ ಮತ್ತು ಸುಶ್ರಾವ್ಯವಾದ ಗಾಯನವಾಯಿತು. ಶ್ರೀ ಚಾಮುಂಡೇಶ್ವರಿಯ ವರಪ್ರಸಾದದಿಂದ ರಾಜ ಕುಟುಂಬದಲ್ಲಿ ಜನ್ಮವೆತ್ತಿ ಜನಿಸಿರುವ ಈ ಶುಭ ಸಮಯವು ಸಂಸ್ಥಾನದಲ್ಲಿ ಹೊಸ ಯುಗದ ಆರಂಭಕ್ಕೆ ಕಾರಣವಾಗಿ ಮೈಸೂರಿನ ಕೀರ್ತಿಯು ಇತೋಪ್ಯತಿಶಯವಾಗಿ ಬೆಳಗಲೆಂದು ಅಧ್ಯಕ್ಷರು ತಮ್ಮ ಭಾಷಣದಲ್ಲಿ ತಿಳಿಸಿದರು ... ಪ್ರಭುಗಳಿಗೆ ರಾಜಭಕ್ತಿ ಪೂರ್ವಕವಾಗಿ ಅಭಿನಂದನೆಯನ್ನು ಸೂಚಿಸುವ ನಿರ್ಣಯವು ಅಂಗೀಕರಿಸಲ್ಪಟ್ಟಿತು ಎಲ್ಲರಿಗೂ ಸಕ್ಕರೆಯನ್ನು ಹಂಚಿದನಂತರ ಜಯಕಾರದೊಡನೆ ಸಭೆಯು ಮುಕ್ತಾಯವಾಯಿತು.

ಶ್ರೀಕಂಠೇಶ್ವರಾದ್ವೈತ ಸಭಾ ವಾರ್ಷಿಕೋತ್ಸವ

ಸ್ವಂ.ಸ] ನಂಜನಗೂಡು ೧೩

ಮೇಲ್ಕಂಡ ಸಭೆಯ ವಾರ್ಷಿಕೋತ್ಸವವು ಇದೇ ೧೧ನೇ ಶುಕ್ರವಾರ ಮಧ್ಯಾಹ್ನ ೩ ಘಂಟೆಗೆ ಶ್ರೀ ಶ್ರೀ ಕಂಠೇಶ್ವರಸ್ವಾಮಿ ದೇವಸ್ಥಾನದಲ್ಲಿ ಶ್ರೀ ಸಿ. ಕೆ. ವೆಂಕಟರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಲು ಏರ್ಪಾಡಾಗಿದೆ. ಅದರ ಅಂಗವಾಗಿ ೧೭ನೇ ತಾರೀಖಿನಿಂದ ೧೯ರ ವರೆಗೆ ೩ ದಿನಗಳ ಶ್ರೀ ಶಂಕರ ಮಠದಲ್ಲಿ ಸಾಯಂಕಾಲದಲ್ಲಿ ವಿದ್ವಾಂಸರುಗಳಿಂದ ಉಪನ್ಯಾಸಗಳು ನಡೆಯುವುವು. ಸರ್ವರೂ ಈ ಉತ್ಸವ ಕಾರ್ಯಗಳಲ್ಲಿ ಬರಬೇಕಾಗಿ ... ದರ್ಶಿಗಳು ಕೋರಿದ್ದಾರೆ

ಚಾಮುಂಡೇಶ್ವರೀ ತೆಪ್ಪೋತ್ಸವ

ಕಳೆದ ಶನಿವಾರ ಶ್ರೀ ಚಾಮುಂಡೇಶ್ವರೀ ಅಮ್ಮನವರ ತೆಪ್ಪೋತ್ಸವವು, ಊರು ಬತ್ತಿ ದೀಪಗಳ ಅಲಂಕಾರದ ಉತ್ಸವವೂ ವಿಜೃಂಭಣೆಯಿಂದ ಜರುಗಿದುವು. ಶ್ರೀ ಶ್ರೀಕಂಠೇಶ್ವರ ಸ್ವಾಮಿ ಯವರ ದೇವಸ್ಥಾನದ ಧರ್ಮದರ್ಶಿಗಳೂ, ನೌಕರ ವರ್ಗದವರೂ ಈ ಉತ್ಸವವನ್ನು ಶ್ರದ್ಧೆಯಿಂದಲೂ,

ಹರಿಕಥೆ

ಮೈಸೂರು ೧೪

ಈ ದಿನ ರಾತ್ರಿ ೭ ಘಂಟೆಗೆ ೩ ಸುಬ್ಬಯ್ಯ ರಸ್ತೆಯಲ್ಲಿರುವ ಸಾಧ್ವಿ ಆಫೀಸ್ ಮಹಡಿಯ ಮೇಲೆ ಹರಿಕಥಾ ವಿದ್ವಾನ್ ಕೇ ಶವ ಮಾಧವಾಚಾರ್ಯರವರಿಂದ 'ಗರುಡ ಗರ್ವ ಭಂಗ' ಎಂಬ ಹರಿಕಥೆಯು ನಡೆಯುವುದು. ಸರ್ವರಿಗೂ ಸ್ವಾಗತವಿದೆ.

* ಈ ರಾತ್ರಿ ೯-೩೦ ಕ್ಕೆ ಪೇಟೆ ಎನ್. ಶಿವಲಿ ಗಸ್ವಾಮಿ ಹಿರೇಮಠ ಇವರಿಂದ ಈ ಶ್ವರಾಚಾರ್ಯರವರ ಗರಡಿ ಪಕ್ಕದ ದೇವಸ್ಥಾನದಲ್ಲಿ 'ಹೇಮರೆಡ್ಡಿ ಮಲ್ಲಮ್ಮ' ಎಂಬ ಕಥೆಯು ನಡೆಯುತ್ತದೆ.

ಅಭಿನಂದನಾ ನಿರ್ಣಯ

ಜಿಲ್ಲಾ ಪರಸ್ಪರ ಸಹಾಯ ಸಂಘದ ವಾರ್ಷಿಕ ಸಭೆ ನಿನ್ನೆ ಜರಗಿ ಶ್ರೀಮನ್ಮಹಾರಾಜರಿಗೆ ಪೂರ್ಣ ಜವಾಬ್ದಾರಿ ಪ್ರಜಾ ಸರ್ಕಾರ ದೊರೆತುದಕ್ಕೆ ಸಂತೋಷ ಸೂಚಕ ರಾಜಭಕ್ತಿ ನಿರ್ಣಯವನ್ನೂ, ಕೇಂದ್ರ ಸರ್ಕಾರವನ್ನು ಅಭಿನಂದಿಸುವ ಠರಾವನ್ನೂ ಅಂಗೀಕರಿಸಲಾಯಿತು. ಅನಂತರ ಡೈರೆಕ್ಟರುಗಳ ಚುನಾವಣೆ ನಡೆದು ಶ್ರೀಗಳಾದ ಹೆಚ್ ಕೆ ಕು ಮಾರಸ್ವಾಮಿ ಹೆಚ್. ಎಸ್. ದೊರೆಸ್ವಾಮಿ, ಎಂ ಎ ದೊರೆಸ್ವಾಮಯ್ಯಂಗಾರ್, ನಾಗರಾಜಶೆಟ್ಟಿ, ಬಾಲಗಣಪತಿಭಟ್ಟ, ಎ ರಾಮಣ್ಣ, ವೆಂಕಟರಮಣಂ, ಕೆ. ವಿ ಶ್ರೀನಿವಾಸಮೂರ್ತಿ, ಕೆ ಶೇಷಾದ್ರಿ, ಸಿದ್ದರಾಮಶೆಟ್ಟಿ, ಎಸ್. ಸುಬ್ರಹ್ಮಣ್ಯ ಮತ್ತು ಸುಬ್ಬರಾವ್ ಉಪಾಧ್ಯರುಗಳು ಆರಿಸಲ್ಪಟ್ಟರು

ಗಾಂಧಿಜಯಂತಿ ಉತ್ಸವ

ಸ್ವಂ.ಸು] ನಾಗಮಂಗಲ ೧೩

ಈ ತಾಲ್ಲೂಕಿನ ನಾಗತಿಹಳ್ಳಿಯಲ್ಲಿ ವಿಜಯದಶಮಿ ದಿನ ಮಾಮೂಲಿನಂತೆ ಗ್ರಾಮದೇವತೆಯೊಡನೆ ನವರಾತ್ರಿಯ ಉತ್ಸವವು ಸಡಗರದಿಂದ ನಡೆಯಲಿಲ್ಲ. ಆಗ ಊರಿನ ಗಣ್ಯ ಮುಖಂಡರು ಮಹಾತ್ಮ ಗಾಂಧಿ, ನೆಹರು ಮತ್ತು ಬೋಸರ ಭಾವಚಿತ್ರಗಳನ್ನು ಅಲಂಕರಿಸಿ ಹಳ್ಳಿಯ ಲ್ಲೆಲ್ಲಾ ಮೆರವಣಿಗೆ ಮಾಡಿ, ಸಂಕಟನೆಗೊಂಡಿದ್ದ ಊರಿನವರನ್ನೆಲ್ಲಾ ಸಂತೋಷಗೊಳಿಸಿದರು

ಭಕ್ತಿಯಿಂದಲೂ ನೆರವೇರಿಸಿದರು. ಮಾಜೀ ಮುನಿಸಿಪಲ್ ಕೌನ್ಸಿಲರ್ ಶ್ರೀ ಆರ್. ರಾಚಪ್ಪನವರು ಉತ್ಸವವನ್ನು ಸಾಂಗವಾಗಿ ನೆರವೇರಿಸಿದರು.

ತಾತ್ಕಾಲಿಕ ಸರ್ಕಾರಕ್ಕೆ ಲೀಗು ಸೇರುವುದು

ಕೇಂದ್ರ ತಾತ್ಕಾಲಿಕ ಸರ್ಕಾರಕ್ಕೆ ಸೇರಲು ಮುಸ್ಲಿಂ ಲೀಗ್ ಕಾರ್ಯಕಾರೀ ಸಮಿತಿಯು ನಿನ್ನೆ ದಿನ ಅಪ್ಪಣೆಗಾಗಿ ನಿರ್ಧರಿಸಿ ಅದನ್ನು ವೈಸರಾಯರಿಗೆ ತಿಳಿಸಿದೆ. ವೈಸರಾಯರು ಕೇಂದ್ರ ಸರ್ಕಾರದಲ್ಲಿ ೫ ಸ್ಥಾನಗಳನ್ನು ಲೀಗಿಗೆ ಕೊಡುವುದಾಗಿ ಸೂಚಿಸಿರುವುದನ್ನು ಲೀಗು ಈಗ ಅಂಗೀಕರಿಸಿದೆಯೆಂದೂ, ಲೀಗಿನ ಸದಸ್ಯರು ಯಾರ್ಯಾರು ಹೋಗಬೇಕು ಮುಂತಾದ ವಿವರಗಳು ಪ್ರಕೃತದಲ್ಲಿಯೇ ಹೊರಬೀಳುವುವು

ಮತ್ತೊಂದು ಯುದ್ಧಕ್ಕೆ ಸ್ಟಾಲಿನ್ನರ ಹಂಚಿಕೆಯೇ

ರಷ್ಯದ ನಾಯಕ ಜೆ. ಸ್ಟಾಲಿನ್ ಮತ್ತೊಂದು ಯುದ್ಧಕ್ಕೆ ಸಿದ್ಧತೆಗಳನ್ನು ಮಾಡಿಕೊಂಡು ಹೋಗುತ್ತಾರೆಂದು ವಾಷಿಂಗ್‌ಟನ್ನಿನಲ್ಲಿದ್ದು ಈಗ್ಗೆ ಎರಡು ವರ್ಷಗಳ ಹಿಂದೆ ರಷ್ಯದಿಂದ ಓಡಿಹೋದ ವಿಕ್ಟರ್ ಕ್ರಾವ್‌ಚೆಂಕೋ ಎಂಬುವರು ಪತ್ರಿಕಾ ಸಮಾರಂಭದಲ್ಲಿ ಪ್ರಕಟಿಸಿದ್ದಾರೆ ... ಸ್ಟಾಲಿನ್ ವಿನೇ ಆಡಳಿತ ನಡೆಸುತ್ತಾನೆ ... ಹಿಟ್ಲರನ ಮಾರ್ಗವನ್ನೇ ಅನುಸರಿಸಿ ಇತರ ರಾಷ್ಟ್ರಗಳ ಮೇಲೆ ಯುದ್ಧ ಸೂಚಕವಾದ ಬೆದರಿಕೆಗಳನ್ನು ಹಾಕುತ್ತಿರುವನೆಂದೂ ವಿವರಿಸಿದ್ದಾರೆ.

ಬೋಸ್ ಬದುಕಿದ್ದಾರೆ

ಸುಭಾಷ್ ಚಂದ್ರ ಬೋಸರು ಬದುಕಿದ್ದಾರೆಂದೂ, ಆ ಬಗ್ಗೆ ತರ್ಕ ಮಾಡುವುದು ಅವಶ್ಯವಿಲ್ಲವೆಂದೂ, ಫಾರ್ವರ್ಡ್ ಬ್ಲಾಕಿನ ಉಪಾಧ್ಯಕ್ಷರಾದ ಶ್ರೀ ... ಒಂದು ಹೇಳಿಕೆಯಲ್ಲಿ 'ದಾಸ್ಯ ವಿಮೋಚಕ ನೇತಾಜಿ ಈಗಲೂ ಸಂಪೂರ್ಣವಾಗಿ ಜೀವಂತರಾಗಿದ್ದಾರೆ'' ಎಂದು ಸಾರ್ವಜನಿಕರಿಗೆ ಭರವಸೆ ಇತ್ತಿದ್ದಾರೆ

ಪೋಸ್ಟ್ ಕಾರ್ಡಿಗೂ ರೇಷನ್

ಕುಂಭಕೋಣದಲ್ಲಿ ಕೆಲವು ದಿನಗಳಿಂದ ಪೋಸ್ಟ್ ಕಾರ್ಡುಗಳ ಮೋಕದ ಬಹಳ ತೊಂದರೆಯಾಗಿದ್ದಿತು. ಈಗ ಒಬ್ಬರಿಗೆ ಒಂದೇ ಕಾರ್ಡಿನಂತೆ ಹಂಚಿಕೆ ಆರಂಭವಾಗಿ ... ಬಂದಿದೆ.

ಅವಧಿ ಹೆಚ್ಚಿಸಿದೆ

ಮೈಸೂರು ೧೪

ಕಾಂಗ್ರೆಸ್ಸಿನ ಕರಡು ವಾಗಿ ಪೌರಸಭೆಯ ಚುನಾವಣೆಗಳಲ್ಲಿ ಭಾಗವಹಿಸಲು ಕೊಡಬೇಕಾಗಿದ್ದ ಅರ್ಜಿಯ ಕಾಲಾವಕಾಶವನ್ನು ಈ ಮಾಹೆ ೧೪ ನೇ ತಾರೀಖು ೧೨ ಗಂಟೆಯ ವರೆಗೆ ಹೆಚ್ಚಿಸಲಾಗಿದೆಯೆಂದೂ ಅರ್ಜಿಗಳನ್ನು ಆ ದಿನ ರಾತ್ರಿ ೮ ಗಂಟೆಯ ಒಳಗೆ ಸಲ್ಲಿಸಬೇಕೆಂದೂ ಚುನಾವಣಾ ಸಮಿತಿ ಸಂಚಾಲಕರಾದ ಶ್ರೀ ಎಂ. ಶಂಕರಯ್ಯನವರು ತಿಳಿಸುತ್ತಾರೆ.

ನವಚೇತನ ಸ್ಟುಡಿಯೋ

ಈ ದಿನ ವಿದ್ಯಾ ಮಂತ್ರಿಗಳಾದ ಡಾ॥ ರಾಜನ್ ... ರವರು ಹಿಂದಿನ ಪೇಟೆಯಲ್ಲಿರುವ ನವಚೇತನ ಸ್ಟುಡಿಯೋವಿಗೆ ಭೇಟಿಕೊಟ್ಟು ಅಲ್ಲಿನ ಚಿತ್ರಕಲಾಕೃತಿಗಳನ್ನು ನೋಡಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು ... ವಿದ್ಯಾ ವಿಭಾಗದ ಚಿತ್ರಗಳನ್ನು ತಯಾರಿಸಲು ಈ ಸಂಸ್ಥೆಯವರು ... ಅವಕಾಶ ... ಭರವಸೆ ಇತ್ತರು.

ಸಾಧ್ವಿ

ತಾ॥ ೧೪-೧೦-೪೬ ಸೋಮವಾರ

ಪ್ರತಿನಿಧಿ ಸಭೆಯ ಕಾರ್ಯ ಕಲಾಪಗಳು

ಎರಡು ವಾರಗಳಿಂದ ನಡೆಯುತ್ತಿದ್ದ ಪ್ರಜಾಪ್ರತಿನಿಧಿ ಸಭೆಯ ಅಧಿವೇಶನವು ನಿನ್ನೆ ಮಧ್ಯಾಹ್ನ ಮುಕ್ತಾಯವಾಯಿತು. ದಿವಾನರೇ ಸೂಚಿಸಿರುವಂತೆ ಈ ಸಾರಿ ಸಭೆಯಲ್ಲಿ ನಡೆದಿರುವ ಕಾರ್ಯಕಲಾಪವು ಬಹಳ ಕಡಿಮೆ. ಅನೇಕ ವರ್ಷಗಳಿಗಿಂತಲೂ ಈ ಸಾರಿ ಅತ್ಯಲ್ಪವಾಗಿತ್ತೆಂದು ಹೇಳಬಹುದು. ಮಸೂದೆಗಳೂ, ನಿರ್ಣಯಗಳೂ, ಅರಿಕೆಗಳೂ ಬಹಳ ಸ್ವಲ್ಪ ಪ್ರಮಾಣದಲ್ಲಿ ತೀರ್ಮಾನವಾಗಿವೆ. ಸಭೆಯ ಸದಸ್ಯರ ಹಕ್ಕುಬಾಧ್ಯತೆ ಮತ್ತು ಸ್ಥಾನಮಾನಗಳಿಗೆ ಸಂಬಂಧಪಟ್ಟ ಅಂಶಗಳು ವಿಶೇಷವಾಗಿ ಚರ್ಚಿಸಲ್ಪಟ್ಟುದರಿಂದ ಈ ರೀತಿ ಆಗಿರುವುದೆಂದು ಗೊತ್ತಾಗಿದೆ. ಸಭೆಯ ಭವನವನ್ನು ಘಟಿಕೋತ್ಸವವೇ ಮುಂತಾದ ಸಮಾರಂಭಗಳಿಗಾಗಿ ಬಿಟ್ಟುಕೊಡಬೇಕಾಗಿ ಬಂದುದರಿಂದಲೂ ವಿಶೇಷ ಕಾರ್ಯಕಲಾಪಗಳನ್ನು ನಡೆಸಲು ಅವಕಾಶವಾಗಲಿಲ್ಲ.

ಬರುವ ವರ್ಷದ ಹೊತ್ತಿಗೆ ಈ ಊರಿನಲ್ಲಿ ಪ್ರತ್ಯೇಕವಾದ ಸ್ವಂತ ಭವನವು ನಿರ್ಮಾಣವಾಗಲಿದೆಯೆಂದೂ, ಅನಂತರ ಸಭೆಯ ಕಾರ್ಯಕಲಾಪಗಳು ಸಾಂಗವಾಗಿ ಜರುಗಬಹುದೆಂದೂ ದಿವಾನರು ಸೂಚಿಸಿದರು. ಮೂರನೇ ಅಧಿವೇಶನದ ವಿಷಯವಾಗಿ ಸದಸ್ಯರು ಮಾಡಿದ ಒತ್ತಾಯಕ್ಕೆ ಸರ್ಕಾರದವರಿಂದ ಯಾವ ವಿಧವಾದ ಭರವಸೆಯೂ ಬಂದಿರುವುದಿಲ್ಲ. ಕಾರ್ಯಕ್ರಮಗಳನ್ನು ಎಷ್ಟೇ ಚುರುಕಿನಿಂದ ನಡೆಸಿದರೂ ಪೂರ್ತಿಯಾಗಿ ಮುಕ್ತಾಯ ಮಾಡಲು ಆಗುವುದಿಲ್ಲ. ಆದುದರಿಂದ ಈ ಬಗ್ಗೆ ನೇಮಕವಾಗಿದ್ದ ಸಮಿತಿಯವರು ಸಲಹೆ ಮಾಡಿದ್ದಂತೆ ಮೂರನೇ ಅಧಿವೇಶನವನ್ನು ನಡೆಸುವುದೇ ಇದಕ್ಕೆ ಪರಿಹಾರೋಪಾಯ.

ಈ ಸಾರಿಯೂ ಸಭೆಯವರು ಸರ್ಕಾರಕ್ಕೆ ಅನೇಕ ಸಂಶಯಗಳನ್ನು ಉಂಟುಮಾಡಿದ್ದಾರೆ. ಮಂಡಿಸಲ್ಪಟ್ಟ ನಾಲ್ಕು ಸರ್ಕಾರೀ ಮಸೂದೆಗಳೂ ಬಿದ್ದುಹೋದುವು. ಅವಸರದ ನಿರ್ಣಯಗಳೆಲ್ಲವೂ ಬಹುಮತದಿಂದ ಮಂಜೂರಾದುವು. ನಿರ್ಣಯಗಳಲ್ಲಿ ಕೇವಲ ಮೂರು ಮಾತ್ರ ಇತ್ಯರ್ಥವಾದುವು. ಅವುಗಳಲ್ಲಿ ಪಾನ ನಿರೋಧ ಮತ್ತು ಈಸೂರು ಬಂದಿಗಳ ಬಿಡುಗಡೆಯ ನಿರ್ಣಯಗಳು ಮುಖ್ಯವಾದುವು. ಇವುಗಳ ಬಗ್ಗೆ ಸರ್ಕಾರದಿಂದ ಬಂದ ಉತ್ತರಗಳು ಸ್ವಲ್ಪವೂ ಸಮರ್ಪಕವಿಲ್ಲ. ಅರಮನೆಯಲ್ಲಿ ರಾಜಕುಮಾರಿಯ ಜನನವಾದ ಸಂದರ್ಭವನ್ನು ಉಪಯೋಗಿಸಿಕೊಂಡಾದರೂ ಖೈದಿಗಳನ್ನು ಬಿಟ್ಟುಬಿಡುವುದಾಗಿ ಸರ್ಕಾರದವರು ಹೇಳಿದ್ದರೆ ಎಷ್ಟೋ ಚೆನ್ನಾಗಿರುತ್ತಿತ್ತು. ಒಬ್ಬೊಬ್ಬರನ್ನಾಗಿ ವ್ಯಕ್ತಿಶಃ ಗುಣಾವಗುಣಗಳನ್ನು ಪರಿಶೀಲಿಸಿ ಬಿಡುಗಡೆ ಮಾಡಲು ಆಲೋಚಿಸಿರುವುದಾಗಿ ಸರ್ಕಾರದವರು ಹೇಳಿರುವುದು ಸ್ವಲ್ಪವೂ ಸಮರ್ಪಕವಿಲ್ಲ.

ನಿಲುವಳಿ ನಿರ್ಣಯಗಳನ್ನು ವಿಶೇಷವಾಗಿ ದಿವಾನರು ನಿರಾಕರಿಸಿದರೂ ಅವುಗಳ ವಿಚಾರದಲ್ಲಿ ಸ್ವಾರಸ್ಯಭಾವವಾಗಿ

ಸಾರಸನ್ ಪಳ್ಳಿಯಲ್ಲಿ ಸತ್ಯಾಗ್ರಹ

ಸರಸೋನ್ ಪುರದ ಸರಸ್ವ ವಿಮಾನ ನಿಲ್ದಾಣದ ಬಳಿ ವೈಮಾನಿಕ ಶಿಕ್ಷಣಾಲಯವೊಂದನ್ನು ಕಟ್ಟಲು ಅವಶ್ಯಕವಾದ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಸರ್ಕಾರದವರು ಜಮೀನಿನ ರೈತರಿಗೆ ನೋಟೀಸು ಕೊಟ್ಟಿದೆ. ಇದನ್ನು ವಿರೋಧಿಸಿ ಹಳ್ಳಿಯವರೆಲ್ಲಾ ಸತ್ಯಾಗ್ರಹ ಹೂಡಲು ನಿರ್ಧರಿಸಿ ಕಾರ್ಯಕ್ರಮಗಳನ್ನು ಗೊತ್ತುಮಾಡಲು ಒಂದು ಸಮಿತಿಯನ್ನೂ ಸಹ ರಚಿಸಿದ್ದಾರೆ.

ಪೆನ್‌ಷನ್‌ದಾರರ ಕುಂದು ಕೊರತೆ

ಕಳೆದ ೩೦-೯-೪೬ನೇ ತಾ॥ ದಿನ ಮಧ್ಯಾಹ್ನ ೧೧ ಘಂಟೆಯಿಂದ ೩ ಘಂಟೆ ವರೆಗೆ ಟ್ರೆಜರಿಯಲ್ಲಿ ಕಾದಿದ್ದಾಗ್ಯೂ ಅಧಿಕಾರಿಗಳ ಸಹಿ ಆಗಿ ಬರಲಿಲ್ಲವಾದ್ದರಿಂದ ಪೆನ್‌ಷನ್‌ದಾರರು ಊಟ ಮಾಡಿಕೊಂಡು ಬರಲು ಮನೆಗಳಿಗೆ ಹೋದರು. ೪-೩೦ರವರೆಗೆ ಮಳೆ ವಿಪರೀತವಾಗಿ ಬರುತ್ತಿದ್ದರೂ ಅವರು ೪-೧೦ಕ್ಕೆ ಟ್ರೆಜರಿಗೆ ಹೋಗುವ ವೇಳೆಗೆ ಅವರ ಪೆನ್‌ಷನ್ ಟಿಕೆಟ್ಟುಗಳನ್ನೆಲ್ಲಾ ವಜಾ ಮಾಡಿರುವುದಾಗಿ ತಿಳಿಸಲಾಯಿತು. ಈ ರೀತಿ ಬಡ ಪೆನ್‌ಷನ್‌ದಾರರುಗಳಿಗೆ ತೊಂದರೆ ಕೊಡುವುದು ಉಚಿತವೇ? ಇನ್ನು ಮುಂದಾದರೂ ಇಂಥ ವರ್ತನೆಯು ನಡೆಯದೆ ಈ ಬಡ ಜನರ ಉದ್ಧಾರವಾಗಬೇಕೆಂದು ಪಿಂಚಿಣಿಗಳೊಬ್ಬರು ದೀರ್ಘ ಪತ್ರವನ್ನು ಬರೆದಿದ್ದಾರೆ.

○ ಬರ್ಮಾದ ಫ್ಯಾಸಿಸ್ಟ್ ವಿರೋಧಿ ಸಂಸ್ಥೆಯಿಂದ ಕಮ್ಯೂನಿಸ್ಟರನ್ನು ಹೊರದೂಡತಕ್ಕದ್ದೆಂದು ತೀರ್ಮಾನಿಸಲಾಗಿದೆ. ಹೊಸ ಸರ್ಕಾರದಲ್ಲಿರುವ ಒಬ್ಬ ಕಮ್ಯೂನಿಸ್ಟ್ ಸದಸ್ಯರೂ ಸಹ ಸದ್ಯದಲ್ಲೇ ರಾಜೀನಾಮೆ ಕೊಡುವರೆಂದೂ ಹೇಳಲಾಗಿದೆ.

ನಡೆದ ವಾದಗಳ ಪರಿಣಾಮವು ಸರ್ಕಾರದವರ ಮೇಲೆ ಆಗಿಯೇ ಇರುತ್ತದೆ. ಅವುಗಳ ಬಗ್ಗೆ ಅವರು ಸೂಕ್ತ ಕಾರ್ಯಕ್ರಮವನ್ನು ಕೈಗೊಳ್ಳುವರೆಂದು ಆಶಿಸಬೇಕಾಗಿದೆ. ಅರಿಕೆಗಳಲ್ಲಿ ಕಾಂಗ್ರೆಸ್ಸಿನವರು ಭಾಗವಹಿಸುತ್ತಿಲ್ಲ. ಇದು ಓಟೇರಾಯನ ಕಾಲದ ಒಂದು ಪರಾವಲಂಬನೆಯ ಕುರುಹು. ಈ ಸಾರಿ ಕೇವಲ ಎರಡು ಮೂರು ಅರಿಕೆಗಳು ಮಾತ್ರ ಪರಿಶೀಲಿಸಲ್ಪಟ್ಟವು. ರಾಜ್ಯಾಂಗ ಸಮಿತಿಗೆ ಪ್ರತಿನಿಧಿಗಳನ್ನು ಕಳುಹಿಸುವ ವಿಷಯವು ಮೂರು ದಿವಸ ಚರ್ಚಿಸಲ್ಪಟ್ಟಿತು. ಆದರೂ ದಿವಾನರು ಇದಕ್ಕೆ ನಿಖರವಾದ ಉತ್ತರವನ್ನೇ ಕೊಡಲಿಲ್ಲ.

ಒಟ್ಟಿನಲ್ಲಿ ಸಭೆಯ ಕಾರ್ಯಕಲಾಪಗಳಿಂದ ಪ್ರಜಾಭಿಪ್ರಾಯವು ಸರ್ಕಾರದ ಮೇಲೆ ಯಾವ ರೀತಿ ಪ್ರಭಾವವನ್ನು ಬೀರುತ್ತಿದೆಯೆಂಬುದನ್ನು ತಿಳಿಯಲು ಅವಕಾಶ ಉಂಟಾಗಿತ್ತು. ಪ್ರಜಾ ಪ್ರಭುತ್ವ ರಾಜ್ಯಗಳಲ್ಲಿ ಸರ್ಕಾರದ ಸೋಲು ಯಾವ ಪರಿಣಾಮವನ್ನು ಉಂಟುಮಾಡುತ್ತದೋ ಅದು ಇಲ್ಲಿ ಆಗುತ್ತಿಲ್ಲ. ಪ್ರಜಾಪ್ರತಿನಿಧಿಗಳ ವಿಶ್ವಾಸಕ್ಕೆ ಪಾತ್ರರಲ್ಲದ ಮಂತ್ರಿಮಂಡಲದವರು ಅಲ್ಲಿ ಹೊಸಬರಿಗೆ ಸ್ಥಾನವನ್ನು ಬಿಟ್ಟುಕೊಡುವರು. ಅಂತಹ ಪದ್ಧತಿಯು ನಮ್ಮಲ್ಲಿಯೂ ಎಷ್ಟು ಬೇಗ ಜಾರಿಗೆ ಬಂದರೆ ಅಷ್ಟು ಬೇಗ ನಮ್ಮ ಶಾಸನ ಸಭೆಗಳ ಅಸ್ತಿತ್ವವು ಸಾರ್ಥಕ್ಯವನ್ನು ಪಡೆಯುವುದು.

ವಾರ ಭವಿಷ್ಯ

೧೪-೧೦-೪೬ ರಿಂದ ೨೧-೧೦-೪೬ ರ ವರೆಗೆ

(ಶ್ರೀ ಸತ್ಯಾನಂದ ಸ್ವಾಮಿಗಳಿಂದ)

ಮೇಷ—ಆರೋಗ್ಯ ಚೆನ್ನಾಗಿರುತ್ತದೆ. ಆರ್ಥಿಕ ಸ್ಥಿತಿ ಸಾಧಾರಣ. ನೌಕರಿ ಉದ್ಯೋಗಗಳಲ್ಲಿ ಯಶ. ತಾ॥ ೧೮-೨೦ ಧನಾದಾಯ.

ವೃಷಭ—ಆರೋಗ್ಯ ಉತ್ತಮ. ವ್ಯಾಪಾರ ವ್ಯವಹಾರಗಳಲ್ಲಿ ಜಯ. ಮಿತ್ರ ಸಹಾಯ. ಪ್ರವಾಸ. ತಾ॥ ೧೬-೨೧ ಮನೋವ್ಯಥೆ.

ಮಿಥುನ—ಆರೋಗ್ಯ ಚಿಂತಾದಾಯಕ. ಮಾನಸಿಕ ವ್ಯಥೆ ಅಧಿಕ. ಧನವ್ಯಯ. ಶತ್ರುಗಳಿಂದ ತ್ರಾಸ. ಗೃಹ ಕಲಹ. ತಾ॥ ೧೭-೧೯-೨೧ ಸಾಧಾರಣ ಶಾಂತಿ.

ಕಟಕ—ಆರೋಗ್ಯ ಸಾಮಾನ್ಯ. ಅಧಿಕಾರಿ ವರ್ಗದವರಿಂದ ಕಿರುಕುಳ. ಮಿತ್ರರಿಂದ ಸಹಾಯ. ಪ್ರವಾಸ. ನೆಂಟರಿಂದ ಖರ್ಚು ಅಧಿಕ. ತಾ॥ ೧೬-೧೭-೨೧ ಸುಗ್ರಾಸ ಭೋಜನ. ಸಂತೋಷ ಕೂಟಗಳಲ್ಲಿ ಆಸಕ್ತಿ.

ಸಿಂಹ—ಆರೋಗ್ಯ ಅತ್ಯುತ್ತಮ. ಉದ್ಯೋಗ ವ್ಯವಹಾರದಲ್ಲಿ ಉತ್ಸಾಹ, ಲಾಭ. ಧರ್ಮ ಕಾರ್ಯಾಚರಣೆ ಹೆಚ್ಚು. ತಾ॥ ೧೭ ಚಿಂತಾ ವಾರ್ತೆ.

ಕನ್ಯಾ—ಆರೋಗ್ಯ ಸಾಧಾರಣ. ಮಿತ್ರರಿಂದ ತಿರಸ್ಕಾರ, ಆರ್ಥಿಕ ಗೊಂದಲ ಹೆಚ್ಚು. ಅನಿರೀಕ್ಷಿತ ಪ್ರವಾಸ. ಜಗಳ. ಅಶಾಂತಿ. ತಾ॥ ೧೮-೨೦ ಸಾಧಾರಣ.

ತುಲಾ—ಆರೋಗ್ಯ ಚೆನ್ನಾಗಿರುತ್ತದೆ. ವಾರಾದ್ಯಂತವೂ ಮಾನಸಿಕ ಅಶಾಂತಿ ತುಂಬಿರುತ್ತದೆ. ಶತ್ರುಗಳಿಂದ ಕಿರುಕುಳ. ಧನಾದಾಯ, ವೆಚ್ಚ ಎರಡೂ ಹೆಚ್ಚು. ತಾ॥ ೧೭-೨೦-೨೧ ಸಾಧಾರಣ ಶಾಂತಿ.

ವೃಶ್ಚಿಕ—ಆರೋಗ್ಯ ಚಿಂತಾಸ್ಪದ. ಧನಾದಾಯ ಉತ್ತಮ. ಅಧಿಕಾರಿಗಳಿಂದ ಉತ್ತೇಜನ. ವ್ಯವಹಾರದಲ್ಲಿ ಜಯ. ಶತ್ರುಗಳಿಗೆ ಸೋಲು. ತಾ॥ ೧೮ ಖರ್ಚು ಜಾಸ್ತಿ.

ಧನುಸ್ಸು—ಆರೋಗ್ಯ ಸಾಧಾರಣ. ಪತ್ನೀ ಪುತ್ರರ ಆರೋಗ್ಯ ಚನ್ನಾಗಿರುವುದಿಲ್ಲ. ಉಚ್ಚ ಅಧಿಕಾರಿಗಳಿಂದ ಸಹಾಯ. ಧನಾದಾಯ ಚೆನ್ನಾಗಿರುತ್ತದೆ. ಮಾನಸಿಕ ಅಶಾಂತತೆ ಹೆಚ್ಚು.

ಮಕರ—ದೇಹ ಸ್ಥಿತಿ ಉತ್ತಮ. ಆರ್ಥಿಕ ವಾತಾವರಣ ಆಶಾದಾಯಕ. ಅನಿರೀಕ್ಷಿತ ಪ್ರಯಾಣಗಳು. ಮಾನಸಿಕ ವ್ಯಥೆ. ತಾ॥ ೧೬-೧೯ ಅತ್ಯುತ್ತಮ ಭೋಜನ. ಮಹತ್ವ ಪತ್ರಾಗಮನ.

ಕುಂಭ—ಪ್ರಕೃತಿ ಚೆನ್ನಾಗಿರು… ಮನೋವ್ಯಥೆ ಹೆಚ್ಚು. ಧನಾದಾ… ಎರಡರಷ್ಟು ಖರ್ಚು. ಕೋರ್ಟು … ಹಾರಗಳಲ್ಲಿ ಸೋಲು. ನೆಂಟರಿಂದ … ಸ್ಕಾರ. ತಾ॥ ೧೬ ಸಾಧಾರಣ.

ಮೀನ—ಶಾರೀರಕ ಸ್ಥಿತಿ ಉತ್ತ… ಗಿರುತ್ತದೆ. ಹಣದ ಚಿಂತೆ ನಾಶವಾಗು… ಮಿತ್ರರಿಂದ ಸಹಾಯ. ಅಧಿಕಾರಿಗ… ಗೌರವ. ತಾ॥ ೧೬-೧೯ ಅಧಿಕ ಸ್ವಾ…

ರೇಷ್ಮೆ ಸೀರೆಗಳು

(ಕ್ರೇಪ್ ಮತ್ತು ಸಾದಾ)

ತಯಾರಕರಿಂದಲೇ ಕೊಂಡುಕೊಳ್ಳಿ

ಶಾಂತಿ ಟೆಕ್ಸ್‌ಟೈಲ್ಸ್

(ಕಾಳಪ್ಪನವರ ಮಿಲ್ಲಿನ ಪಕ್ಕ)

ಮೈಸೂರು

Edited printed and published by A. K. Nagaraian at the Sadhvi Press D. Subbiah Road, Mysore

ಉದಾರ ದಾನ

ನೀಲಗಿರಿಯಲ್ಲಿರುವ ಜವಳಿ ವರ್ತಕರಾದ ಶ್ರೀ ಬಿ. ಭುಜಂಗರಾಯರು ಅಖಿಲ … ಸಾರ ಕ್ಷತ್ರಿಯ ವಿದ್ಯಾರ್ಥಿ ನಿಲಯವ… ಸ್ಥಾಪಿಸಲು ೨೫,೦೦೦ರೂ ಗಳನ್ನು ಕೊ… ಡುವುದಕ್ಕಾಗಿ ಅ.ಭಾ. ಭಾವಸಾರ … ಯ ಮಹಾಸಭಾಧ್ಯಕ್ಷರಾದ ಶ್ರೀ … ಎಲ್. ರಾಮಚಂದ್ರರಾಯರು ಅವ… ಕೃತಜ್ಞತೆಯನ್ನು ಸೂಚಿಸಿರುತ್ತಾ…

ಕಾಂಗ್ರೆಸ್ ಸಮಿತಿ

ಸ್ವಂ ವ] ಗುಂಡ್ಲುಪೇಟೆ

ಇಲ್ಲಿಯ ಕಾಂಗ್ರೆಸ್ ಸಮಿತಿಯನ್ನು ಪುನರ್ರಚಿಸಿ ಶ್ರೀಗಳಾದ ಜಿ. ವಿ. ಶಿವ… ಯ್ಯನವರನ್ನು ಅಧ್ಯಕ್ಷರನ್ನಾಗಿಯೂ, ದೊಡ್ಡಪ್ಪನವರನ್ನು ಉಪಾಧ್ಯಕ್ಷ… ಯೂ, ಎಚ್. ಎಸ್. ರಾಮಣ್ಣನವ… ಕಾರ್ಯದರ್ಶಿಗಳನ್ನಾಗಿಯೂ, ಜಿ. … ಷ್ಣಭಟ್ಟರನ್ನು ಖಜಾಂಚಿಗಳನ್ನಾಗಿ ಚುನಾಯಿಸಲಾಗಿದೆ.

ಉಜ್ವಲ ಸತೀತ್ವಕ್ಕೆ

ಪಂಡಿತ ಡಿ. ಗೋಪಾಲಾಚಾರ್ಲು

ಅಯೋ…

ಗರ್ಭಾಶಯರೋಗ ನಿವಾ…

ಆಯುರ್ವೇದಾಶ್ರಮಂ ಲಿಮಿಟೆಡ್

ಟಿ-ನಗರ್. . . . ಮದರಾಸ

ಫೋ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಮಂಗಳವಾರ ೧೫—೧೦—೪೭ [ಸಂಚಿಕೆ ೬೪

ಹೈದರಾಬಾದಿನಲ್ಲಿ ರಾಜಕೀಯ ಸಂಧಾನ

ಮಹಾತ್ಮರಲ್ಲಿ ಮನವಿ

ಪಾಶ್ಚಾತ್ಯ ದೇಶಗಳಿಂದ ಸೇವೆ ಮತ್ತು ಕ್ರೈಸ್ತ ಸಂದೇಶದ ಪ್ರಚಾರದ ಸಲುವಾಗಿ ಭಾರತಕ್ಕೆ ಬಂದ ಪಾದ್ರಿಗಳು ಈ ದೇಶದಲ್ಲಿ ಧಾರ್ಮಿಕವಾಗಿ ಭೂಮಿ ಕಾಣಿಗಳನ್ನು ಪಡೆದು, ಈಗ ವ್ಯಾಪಾರ ದೃಷ್ಟಿಯಿಂದ ಅದ ವಿಕ್ರಯಿಸಿ ಲಾಭ ಪಡೆಯುತ್ತಿರುವ ಕ್ರೈಸ್ತ ಪ್ರಜಾಪ್ರತಿನಿಧಿ ಸಭೆಯ ಕ್ರೈಸ್ತ ಸದಸ್ಯರಾದ ಶ್ರೀ ಜೆ. ಎಸ್. ದೇವದಾಸ್‌ರವರು ಮಹಾತ್ಮಾ ಗಾಂಧಿಯವರಿಗೆ ಪತ್ರ ಬರೆದಿರುವರೆಂದು ಗೊತ್ತಾಗಿದೆ

ಕಲ್ಕತ್ತಾ ವಿಚಾರಣೆ

ಕಲ್ಕತ್ತಾ ದೊಂಬಿ ವಿಚಾರಣೆ ಬಗ್ಗೆ ನೇಮಕವಾಗಿರುವ ಸಮಿತಿಯು ಪ್ರಥಮ ಸಭೆ ಕಾರ್ಯವನ್ನು ಆರಂಭಿಸಿತು. ಈ ಸಮಿತಿಯು ೫೭ ಸಹಸ್ರ ಮಂದಿ ಆಪಾದಿತರನ್ನು ದಸ್ತಗಿರಿಯಾಗಿರುವ ಪುಂಡರ ಗಲಭೆ ವಿಚಾರಣೆ ನಡೆಸಲಿದೆ

ನಿಯೋಗದವರ ವರದಿ

ಮೈಸೂರು ಸಂಸ್ಥಾನದ ಕ್ಷಾಮ ಪೀಡಿತ ಪ್ರದೇಶಗಳಲ್ಲಿ ಪ್ರವಾಸ ಮಾಡಿದ ಹೈದರಾಬಾದಿನ ಆಹಾರ ನಿಯೋಗದವರು ಕ್ಷಾಮ ಪೀಡಿತ ಪ್ರದೇಶಗಳಿಗೆ ಸಹಾಯ ನೀಡದಿದ್ದರೆ ೩.೩ ಲಕ್ಷ ಜನರು ತೊಂದರೆಗೊಳಗಾಗುವರೆಂದು ವರದಿ ಮಾಡಿದ್ದಾರೆ

ಪೋಲೀಸ್ ಅಧಿಕಾರಿಯ ಬಂಧನ

ಸೇಲಂನಲ್ಲಿ ನಡೆದ ಕೋಮುವಾರು ಗಲಭೆ ಸಂಬಂಧದಲ್ಲಿ ಇವರಿಗೆ ಪೋಲೀಸ್ ಇನ್‌ಸ್ಪೆಕ್ಟರ್ ಆಟ್ಕಲ್ ರಜಾಕ್ ಸ್ಕ್ವೇರ್ ಜನರನ್ನು ಬಂಧಿಸಿ ಮೊಕದ್ದಮೆ ಹೂಡಲಾಗಿದೆ.

ಬಿಳೀ ಜೋಳ

ಹೈದರಾಬಾದಿನಿಂದ ಒಂದು ಸಾವಿರ ಟನ್ ಬಿಳಿ ಜೋಳ ಬಂದಿದೆ. ಇದನ್ನು ಚಿತ್ರದುರ್ಗ, ತುಮಕೂರು ಮತ್ತು ಕಡೂರು ಜಿಲ್ಲೆಗಳಲ್ಲಿ ವ್ಯವಸಾಯ ಉಪಯೋಗಕ್ಕಾಗಿ ರೈತರಿಗೆ ಹಂಚಲಾಗುವುದು.

ಶ್ರೀ ಗಣೇಶ ಟಾಕೀಸ್

ರಾಜಧಾನಿಯ ಕೃಷ್ಣನಗರದಲ್ಲಿ ನಿರ್ಮಿತವಾಗುವ ಶ್ರೀ ಗಣೇಶ ಟಾಕೀಸಿನ ಉದ್ಘಾಟನೋತ್ಸವವು ನಿನ್ನೆ ಸಂಜೆ ಸರ್ ಟಿ. ಎಂ. ರವರಿಂದ ನೆರವೇರಿಸಲ್ಪಟ್ಟಿತು. ಥಿಯೇಟರಿನ ಮಾಲೀಕರಾದ ಶ್ರೀ ಟಿ ಯಾ ಸ್ವಾಮಿಯವರು ಎಲ್ಲರನ್ನೂ ಸ್ವಾಗತಿಸಿ ಆಹ್ವಾನಿತರೆಲ್ಲರಿಗೂ ಪುಷ್ಪ, ತಾಂಬೂಲ, ಸಿಹಿ ತಿಂಡಿಯ ವಿನಿಯೋಗ ನಡೆಯಿತು. ಬಳಿಕ ಟ್ವೆಂಟಿಯತ್ ಸೆಂಚುರಿ ಫಾಕ್ಸ್ "ನ್ಯೂಯಾರ್ಕ್ ಟೌನ್" ಎಂಬ ಚಿತ್ರದ ಪ್ರದರ್ಶನ ಜರುಗಿತು.

ಬಹು ವಿವಾಹ ಪ್ರತಿಬಂಧಕ

ಬೊಂಬಾಯಿ ಪ್ರಾಂತ್ಯ ಶಾಸನ ಸಭೆಯು ತನ್ನ ಮುಂದೆ ಬರಲಿರುವ ಬಹು ವಿವಾಹ ಪ್ರತಿಬಂಧಕ ಮಸೂದೆಯನ್ನು ಬೆಂಬಲಿಸಿತು. ಒಬ್ಬರು ಮಾತ್ರ ಮಸೂದೆಯನ್ನು ವಿರೋಧಿಸಿದರು

ತೆಪ್ಪೋತ್ಸವ

ನಡೆದ ಶನಿವಾರ ನಂಜನಗೂಡಿನಲ್ಲಿ ನಡೆದ ಶ್ರೀ ಚಾಮುಂಡೇಶ್ವರೀ ತೆಪ್ಪೋತ್ಸವದ ಏರ್ಪಾಡುಗಳನ್ನು ಪುರಸಿವಾಸಿಗಳ ಪರವಾಗಿ ಮಾಜಿ ಮುನಿಸಿಪಲ್ ಕೌನ್ಸಿಲರ್ ಶ್ರೀ ... ರಾಘವೇಂದ್ರರಾಯರು ಏರ್ಪಡಿಸಿದ್ದರೆಂದು ತಿಳಿಸಿಕೊಳ್ಳಬೇಕು

ಪ್ರಭುಗಳಿಗೆ ಪೌರಸಭೆಯ ಅಭಿನಂದನೆ

ಮೈಸೂರು ೧೪

ಶ್ರೀಮನ್ಮಹಾರಾಜರವರಿಗೆ ಪ್ರಜಾಪ್ರಭುತ್ವ ಸರಕಾರ ಘೋಷಿಸುವ ವಿಷಯದಲ್ಲಿ ರಾಜಭಕ್ತಿಯುತವಾದ ಅಭಿನಂದನೆಯನ್ನು ಸೂಚಿಸುವ ನಿರ್ಣಯವನ್ನು ನಿನ್ನೆ ನಡೆದ ಪೌರಸಭೆಯ ವಿಶೇಷ ಅಧಿವೇಶನದಲ್ಲಿ ಅಂಗೀಕರಿಸಲಾಯಿತು. ಅಧ್ಯಕ್ಷರ ದೇಹಾಲಸ್ಯದ ಪ್ರಯುಕ್ತ ಉಪಾಧ್ಯಕ್ಷರಾದ ಶ್ರೀ ಎ. ಕೃಷ್ಣಮೂರ್ತಿರಾಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಬಿ. ನಾರಾಯಣಸ್ವಾಮಿ, ಅಗರಂ ರಂಗಯ್ಯ, ಮಹಮದ್ ಸೇಟ್, ಎಫ್. ಸಿ. ದೇವರಾಜೇ ಅರಸ್ ಮತ್ತು ಜಿ. ಜನಾರ್ಧನ ನಾಯ್ಡು ಅವರು ಮಾತನಾಡಿ ರಾಜ ಮಂತ್ರಿ. ಇತೋಪ್ಯಕರವಾಗಿ ಬೆಂಗಳೂರಿಂದು ಬೆಂಬಲಿಸಿದರು ಅಧ್ಯಕ್ಷರ ಭಾಷಣಾನಂತರ ನಿರ್ಣಯವನ್ನು ಅಂಗೀಕರಿಸಿದರು.

ಕಸ್ತೂರಿ ಬಾ ಶಿಬಿರಕ್ಕೆ ಡಾ॥ ರಾಯನ್‌ರವರ ಭೇಟಿ

ಆರೋಗ್ಯ ಸಚಿವರಾದ ಡಾ॥ ರಾಯನ್‌ರವರು ೮ ದಿನ ಬೆಳಿಗ್ಗೆ ಶ್ರೀಗಳಾದ ಎಸ್. ಶ್ರೀನಿವಾಸನ್, ನೇರಳೆ ಮಾದಯ್ಯ ಮತ್ತು ಜಿಲ್ಲಾಧಿಕಾರಿಗಳೊಡನೆ ಬೇಲವಾಡಿಯಲ್ಲಿರುವ ಕಸ್ತೂರ ಬಾ ಶಿಬಿರಕ್ಕೆ ಭೇಟಿ ಇತ್ತು ಅಲ್ಲಿ ನಡೆಯುತ್ತಿರುವ ಕೆಲವು ಕಾರ್ಯಗಳನ್ನು ನೋಡಿ ತಮ್ಮ ಮೆಚ್ಚುಗೆಯನ್ನು ಸೂಚಿಸಿದರು. ಶ್ರೀಮತಿ ಯಶೋಧರಾ ದಾಸಪ್ಪನವರು ಅಲ್ಲಿನ ಕಾರ್ಯಕ್ರಮಗಳನ್ನು ವಿವರಿಸಿದರು

ಶಾಲಾ ಪ್ರಾರಂಭೋತ್ಸವ

ರಾಜಧಾನಿಯ ಚೆಲುವಾಂಬಾ ಅಗ್ರಹಾರದ ಸಮೀಪದ ಬಂಡಿಕೇರಿಯ ಶ್ರೀ ಕೊಲ್ಲಾಪುರದಮ್ಮನವರ ದೇವಾಲಯದಲ್ಲಿ ನಿನ್ನೆ ಬೆಳಿಗ್ಗೆ ಏ. ಕ್ಲೆಡ್ ಪ್ರೈಮರಿ ಶಾಲೆಯ ಪ್ರಾರಂಭೋತ್ಸವವು ಮೈಸೂರು ಸಿಟಿ ರೇಂಜ್ ಅಸಿ ಇನ್ಸ್‌ಪೆಕ್ಟರ್ ಮತ್ತು ಬಾಲಿಕ್ಯಾರ ವಿದ್ಯಾಭ್ಯಾಸದ ಅಸಿ ಇನ್ಸ್‌ಪೆಕ್ಟರವರ ನೇತೃತ್ವದಲ್ಲಿ ನಡೆಯಿತು ಈ ಪ್ರದೇಶದ ಯುವಕರು ವಿದ್ಯಾಭಿವೃದ್ಧಿಯ ಸಹಾಯವಾಗಿ ಒಕ್ಕೊರಲಿಂದ ಪ್ರೋತ್ಸಾಹಿಸಿದರು. ಮಕ್ಕಳಿಗೆ ಸಿಹಿ ತಿಂಡಿ ಹಂಚಲಾಯಿತು. ಶ್ರೀಮನ್ಮಹಾರಾಜರವರ ಶ್ರೀಯುವುದ್ಧಿಗೆ ಶೋಭನ ಯೊಡನೆ ಪ್ರಾರಂಭೋತ್ಸವವು ಮುಗಿಯಿತು.

ವಿಶೇಷ ದರ್ಬಾರು

ಮೈಸೂರು ೧೪

ಶ್ರೀಮನ್ಮಹಾರಾಜರವರಿಗೆ ಪ್ರಜಾಪ್ರಭುತ್ವ ನೀಡಿರುವ ಸಂದರ್ಭದಲ್ಲಿ ಅರಮನೆ ಅಂಬಾವಿಲಾಸದಲ್ಲಿ ನಾಳೆ ದಿನ ಬೆಳಿಗ್ಗೆ ೧೧ ಗಂಟೆಗೆ ಶ್ರೀಮಂತ ಪ್ರಸ್ತಾಪೋತ್ಸವದ ವಿಶೇಷ ದರ್ಬಾರು ನಡೆಯುವುದು.

ಶ್ರೀ ಮಾಳವಾಡರ ಭಾಷಣ

ಮಹಾರಾಜಾ ಕಾಲೇಜಿನ ಕರ್ನಾಟಕ ಸಂಘದವರ ಆಶ್ರಯದಲ್ಲಿ ನಾಳೆ ಸಂಜೆ ೫-೩೦ಕ್ಕೆ ಜೂನಿಯರ್ ಬಿ. ಎ. ಮಂದಿರದಲ್ಲಿ ಧಾರವಾಡದ ಕರ್ನಾಟಕ ಕಾಲೇಜಿನ ಪ್ರೊ॥ ಶ್ರೀ ಎಸ್. ಎಸ್. ಮಾಳವಾಡರು "ಕರ್ನಾಟಕಕ್ಕೊಂದು ವಿಶ್ವವಿದ್ಯಾನಿಲಯ" ಎಂಬ ವಿಷಯದ ಮೇಲೆ ಭಾಷಣ ಮಾಡುವರು. ಸರ್ವರೂ ದಯಮಾಡಿಸಬೇಕೆಂದು ವಿನಂತಿಯಿದೆ.

ಹೊಸ ರಾಜ್ಯಾಂಗಕ್ಕೆ ಫ್ರೆಂಚರ ಬಹುಮತ

ಹೊಸ ಫ್ರೆಂಚ್ ರಾಜ್ಯಾಂಗ ರಚನೆ ಬಗ್ಗೆ ದೇಶದ ಅಭಿಪ್ರಾಯವನ್ನು ಪಡೆಯಲು ಮೊನ್ನೆ ನಡೆಸಿದ ರೆಫರೆಂಡಮ್‌ನ ಫಲಿತಾಂಶವು ಇನ್ನೂ ಪೂರ್ತಿಯಾಗಿ ಹೊರಬಿದ್ದಿಲ್ಲ. ೬೫,೬೬,೦೦೦ ಜನರು ಹೊಸ ರಾಜ್ಯಾಂಗದ ಪರವಾಗಿಯೂ, ೬೨,೨೮,೦೦೦ ಜನರು ವಿರೋಧವಾಗಿಯೂ ಮತವಿತ್ತಿದ್ದಾರೆ. ಈ ಸಾರಿ ಒಟ್ಟು ೨೭೦ ಲಕ್ಷ ಜನರು ಓಟನ್ನು ಚಲಾಯಿಸಿದ್ದಾರೆ

ಗಾಂಧಿ ಸೇವಾ ಸಂಘ

ಮೈಸೂರು ೧೪

ತಾ॥ ೧೭-೧೦-೪೭ ರ ಬಾಗಾಯಿತು ಒಂದು ವಾರದ ಕಾಲ ಮೇಲ್ಕಂಡ ಸಂಘದ ಆಶ್ರಯದಲ್ಲಿ ಪ್ರಾತಃಕಾಲ ೮-೩೦ ರಿಂದ ೯-೩೦ ರ ವರೆವಿಗೂ, ಸಂಜೆ ೫ ರಿಂದ ೬ ರ ವರೆವಿಗೂ ಸತ್ಯಶೋಧನ ಬಿಡಿಸುವುದು, ಎಕ್ಕವುದು, ಹಾಜರಿ ಮಾಡುವುದು ಮತ್ತು ಚರಕದಲ್ಲಿ ನೂಲುವುದೇ ಸಂಬಂಧ ಶಿಕ್ಷಣವನ್ನು ಕೊಡಲಾಗುವುದು. ಶಿಕ್ಷಣ ಹೊಂದಬೇಕೆನ್ನುವವರು ತಾ॥ ೧೬-೧೦-೪೭ ನೇ ಸಂಜೆಯೊಳಗೆ ಕಾಟನ್ ಜ ಕ್ಕ ಯಲ್ಲಿರುವ ನಮಿಗೇಯ ಸ್ಟ್ರೀಟ್ ... [illegible] ... ಕಾರ್ಯದರ್ಶಿ ... ಹೆಸರುಗಳನ್ನು ಕೊಡಬೇಕೆಂದು ಕೋರಲಾಗಿದೆ

ನಾಗರಿಕ ಪ್ರಚಾರದ ಪ್ರಾರಂಭೋತ್ಸವ

ಸ್ವಂ ಸು. ಫೋ॥] ಬೆಂಗಳೂರು ೧೫

ಮದ್ರಾಸಿನ ಸ್ಥಳೀಯ ಮಂತ್ರಿಗಳಾದ ಶ್ರೀ ಡೇನಿಯಲ್ ಥಾಮಸ್‌ರವರು ಪೌರ ಸಭೆಯ ನಾಗರಿಕ ಪ್ರಚಾರ ಕಾರ್ಯಕ್ರಮದ ಆರಂಭೋತ್ಸವವನ್ನು ನಿನ್ನೆ ಸಂಜೆ ನಗರದ ಮಾರ್ಕೆಟ್ಟಿನಲ್ಲಿ ನೆರವೇರಿಸಿದರು. ಪೌರಸಭೆಯವರು ಇರುವ ಕಡೆಗಳಲ್ಲಿಯೇ ಅಲ್ಲದೆ ಬಡವರ ನಿವಾಸಗಳ ಬಳಿಯೂ ಸಕಲ ಸೌಲಭ್ಯಗಳನ್ನು ಒದಗಿಸಬೇಕೆಂದು ಅವರು ಒತ್ತಿ ಹೇಳಿದರು. ಸ್ಥಳೀಯ ಸಂಸ್ಥೆಗಳಲ್ಲಿ ಸರ್ಕಾರದವರ ಪ್ರಾಬಲ್ಯವು ಅದನ್ನು ಕಡಿಮೆಯಾಗಬೇಕೆಂದೂ, ಈ ಬಗ್ಗೆ ಮದ್ರಾಸಿನಲ್ಲಿ ಶಾಸನವನ್ನು ಜಾರಿಗೆ ತರುವುದಾಗಿಯೂ ಹೇಳಿ ಪೌರಸಭೆಯ ಕಾರ್ಯಗಳಿಗಾಗಿ ಅಭಿನಂದನೆಗಳನ್ನು ಸಲ್ಲಿಸಿದರು.

ಈ ದಿನ ನಡೆದ ಪೌರಸಭೆಯ ನಗರ ನಿರ್ಮಲೀಕರಣ ಕಾರ್ಯವನ್ನು ಅವರು ಪರಿಶೀಲಿಸಿದರು.

ಹೈದರಾಬಾದಿನಲ್ಲಿ ರಾಜಕೀಯ ಸಂಧಾನ

ಹೈದರಾಬಾದಿನ ಪ್ರಧಾನಿ ಸರ್ ಮಿರ್ಜಾ ಮತ್ತು ಸುಧಾರಣಾ ಸಚಿವ ನವಾಬ್ ಮೊಯಿನ್ ನವಾಜ್ ಜಂಗ್‌ರವರು ಸಂಸ್ಥಾನದ ಕಾಂಗ್ರೆಸ್ ನಾಯಕರಾದ ಪಂ॥ ರಾಮಾಚಾರಿ, ಶ್ರೀ॥ ರಾಹೀನ ಘವಾನ್ ವೈದ್ಯ ಮತ್ತು ಶ್ರೀ॥ ನರಸಿಂಗರಾವ್‌ರವರುಗಳನ್ನು ಭೇಟಿ ಮಾಡಿ ಸದ್ಯದಲ್ಲೇ ಜಾರಿಗೆ ಬರಲಿರುವ ಸುಧಾರಣೆಗಳ ಬಗ್ಗೆ ಚರ್ಚೆ ನಡೆಸಿದರು. ಇದರಿಂದ ಕಾಂಗ್ರೆಸ್ಸಿಗೂ ಸರ್ಕಾರಕ್ಕೂ ಇದ್ದ ಭಿನ್ನಾಭಿಪ್ರಾಯದ ಬಹಳ ಮಟ್ಟಿಗೆ ಕಡಿಮೆಯಾದಂತಿದೆ. ಕಾಂಗ್ರೆಸ್ ಮತ್ತು ಇತರ ಪಕ್ಷಗಳು ಕೇಂದ್ರ ಶಾಸನ ಸಭೆಗೆ ಹೆಚ್ಚು ಅಧಿಕಾರವನ್ನು ಕೊಡಲು ಸರ್ ಮಿರ್ಜಾರವರು ಒಪ್ಪಿಗೆ ಕೊಟ್ಟಿದ್ದಾರೆ

ಮದ್ರಾಸ್ ಮಂತ್ರಿಗಳ ಆಗಮನ

ಮೈಸೂರು ೧೪

ಮದ್ರಾಸಿನ ಸ್ಥಳೀಯ ಸಂಸ್ಥೆಗಳ ಮಂತ್ರಿಗಳಾದ ಶ್ರೀ ಡೇನಿಯಲ್ ಥಾಮಸ್‌ರವರು ಈ ಮಧ್ಯಾಹ್ನ ರಾಜಧಾನಿಗೆ ಆಗಮಿಸಿ ಸರ್ಕಾರದ ಅತಿಥಿಗಳಾಗಿ ಇರುವರು. ಇಲ್ಲಿನ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ಇತ್ತು ನಾಳೆ ಬೆಂಗಳೂರಿಗೆ ತೆರಳುವರು.

"ಶ್ರೀ ಕೃಷ್ಣರಾಜೇಂದ್ರ ಸಿಲ್ವರ್ ಜ್ಯೂಬಿಲಿ ತಾಂತ್ರಿಕ ಶಾಲೆಯಲ್ಲಿ ಬಿ. ಎಸ್. ಸಿ. ಪ್ರಶಸ್ತಿಯನ್ನು ಕೊಡಲು ವಿಶ್ವವಿದ್ಯಾನಿಲಯದವರ ಅನುಮತಿ ಕೊಟ್ಟಿದ್ದಾರೆ.

"ಮದ್ರಾಸಿನ ನ್ಯಾಯಾಂಗ ಮಂತ್ರಿ ಶ್ರೀ ಕೆ. ಮಾಧವ ಮೆನನ್‌ರವರು ಸೆಂಟ್ ಜೋಸೆಫ್ ಕಾಲೇಜಿನ ವಿದ್ಯಾರ್ಥಿಗಳನ್ನು ಸಂಬೋಧಿಸಿ ನಿನ್ನೆ ಭಾಷಣ ಮಾಡಿ ನೌಕರಿಗಾಗಿ ಅಧಿಕಾರಿಗಳ ಮನೆ ಬಾಗಿಲುಗಳಿಗೆ ಅಲೆಯದಿರುವುದರಿಂದ ಯಾವುದಾದರೂ ಒಂದು ಉದ್ಯೋಗವನ್ನು ಅವಲಂಬಿಸಬೇಕೆಂದು ಬೋಧಿಸಿದರು.

ಮದ್ರಾಸಿನಲ್ಲಿ ಅಕ್ಕಿ ದಾಸ್ತಾನು

ಮ. ದ ಅಧಿಕಾರದಲ್ಲಿರುವ ಪ್ರಾಂತ್ಯ ... [illegible] ... ಲಕ್ಷ ಟನ್ನು ಗಳಷ್ಟು ... [illegible] ... ದಾಸ್ತಾನು ... ಮದ್ರಾಸ್ ಸರ್ಕಾರದವರು ನಿರ್ಧರಿಸಿದ್ದಾರೆ

ಸಾಧ್ವಿ

ತಾ|| ೧೫-೧೦-೪೬ ಮಂಗಳವಾರ

ಮುಸ್ಲಿಂ ಲೀಗಿನ ನಿರ್ಧಾರ

ಕೇಂದ್ರ ಸರ್ಕಾರದಲ್ಲಿ ಸೇರಲು ಮುಸ್ಲಿಂ ಲೀಗು ನಿರ್ಧರಿಸಿರುವುದಕ್ಕೆ ಇದಕ್ಕೆ ಬ್ರಿಟಿಷ್ ಪತ್ರಿಕೆಗಳೂ, ಮುಂದಾಳುಗಳೂ ಸಂತೋಷವನ್ನು ವ್ಯಕ್ತಪಡಿಸಿರುವರು. ಕಾಂಗ್ರೆಸ್ಸಿನವರೂ, ಇತರ ನಾಯಕರೂ ತಮ್ಮ ಅಭಿಪ್ರಾಯವನ್ನು ಇನ್ನೂ ತಿಳಿಯಪಡಿಸಿರುವುದಿಲ್ಲ.

ಲೀಗಿನವರು ಬಂದು ಸೇರಲು ಸದಾ ಕಾಲದಲ್ಲಿಯೂ ಬಾಗಿಲನ್ನು ತೆರೆದಿಡಲಾಗಿದೆಯೆಂದು ಪಂಡಿತ ನೆಹರೂರವರೂ, ವೈಸರಾಯರೂ ಹಿಂದೆಯೇ ಸಾರಿದ್ದಾರೆ. ಆದರೆ ಈಗ ಲೀಗು ಕಾಂಗ್ರೆಸ್ಸಿನೊಡನೆ ಯಾವ ಒಪ್ಪಂದವನ್ನೂ ಮಾಡಿಕೊಂಡು ಮಂತ್ರಿಮಂಡಲದಲ್ಲಿ ಪ್ರವೇಶಿಸುತ್ತಿಲ್ಲ. ಮೊದಲಿನಿಂದಲೂ ತನಗೆ ಮೀಸಲಾಗಿದ್ದ ಐದು ಸ್ಥಾನಗಳನ್ನು ಪಡೆಯುವ ಹಕ್ಕಿನ ಆಧಾರದ ಮೇಲೆಯೇ ಪ್ರವೇಶಿಸುವುದಾಗಿ ಹೇಳುತ್ತಿದೆ. ಆದುದರಿಂದ ಲೀಗಿನ ಈ ನಿರ್ಧಾರದ ಮೇಲೆ ಭಿನ್ನವಾದ ಭಾವನೆಗಳು ಬರಲು ಅವಕಾಶವಾಗಿದೆ.

ಭೂಪಾಲ್ ನವಾಬರು ನಡೆಸಿದ ಸಂಧಾನದಿಂದ ಕಾಂಗ್ರೆಸ್ಸಿಗೂ ಲೀಗಿಗೂ ಒಡಂಬಡಿಕೆಯಾಗಿ ಲೀಗಿನವರು ಕೇಂದ್ರ ಸರ್ಕಾರದಲ್ಲಿ ಸೇರಿದ್ದರೆ ಚೆನ್ನಾಗಿರುತ್ತಿತ್ತು. ಆದರೆ ಸಂಧಾನವು ಸಫಲವಾಗಲಿಲ್ಲ. ವೈಸರಾಯರು ಸಲಹೆಯ ಮೇರೆ ತಮ್ಮ ಸ್ವಂತ ಹಕ್ಕನ್ನು ಚಲಾಯಿಸಲು ಲೀಗಿನವರು ಮುಂದೆ ಬಂದಿರುವುದಾಗಿ ತಿಳಿದುಬಂದಿದೆ. ಇದರಿಂದ ಕೇಂದ್ರ ಸರ್ಕಾರದ ಮುಂದಿನ ರೀತಿನೀತಿಗಳ ಬಗ್ಗೆ ಊಹಾಪೋಹಗಳು ಉದ್ಭವಿಸಲು ಅವಕಾಶವಾಗಿದೆ.

ಐದು ಸ್ಥಾನಗಳನ್ನು ಲೀಗಿನವರಿಗೆ ಮೀಸಲಾಗಿಟ್ಟಿರುವ ಅಂಶವನ್ನು ಕಾಂಗ್ರೆಸ್ಸಿನವರು ಇಂದಿಗೂ ಪುರಸ್ಕರಿಸುವರು. ಇಷ್ಟೇ ಅಲ್ಲದೆ ಈ ಸಂಧಿ ಕಾಲದಲ್ಲಿ ಅವರು ತಮ್ಮೊಡನೆ ಕಲೆತು ಸಮ್ಮಿಶ್ರ ಸರ್ಕಾರವನ್ನು ನಡೆಸಲು ಸಹಕರಿಸಲೆಂದೂ ಹಾರೈಸುತ್ತಿರುವರು. ಆದರೆ ಸಮ್ಮಿಶ್ರ ಮಂತ್ರಿಮಂಡಲದ ರೂಪು ರೇಖೆಗಳು ಎಷ್ಟು ಮಟ್ಟಿಗೆ ಮುಂದೆ ಸಮರ್ಥಿಸಲ್ಪಡುತ್ತವೆಯೆಂಬುದೇ ಈಗ ಉಳಿದಿರುವ ಪ್ರಶ್ನೆ.

ಮಂತ್ರಿಮಂಡಲದಲ್ಲಿ ಭಾಗ ವಹಿಸುವ ವಿವಿಧ ಸಂಗಡಿಗರ ಒಪ್ಪಂದವೇ ಸಮ್ಮಿಶ್ರ ಸರ್ಕಾರದ ಅಸ್ತಿಭಾರ. ಈಗ ಪ್ರಕೃತದಲ್ಲಿ ರಚಿತವಾಗಿರುವ ಕೇಂದ್ರ ಸರ್ಕಾರವು ಈ ಆಧಾರದ ಮೇಲೆಯೇ ಕೆಲಸ ಮಾಡುತಿದೆ. ಇದಕ್ಕೆ ಕ್ಯಾಬಿನೆಟ್ ಪದ್ಧತಿಯೆಂದೂ ಹೆಸರು. ಒಬ್ಬೊಬ್ಬ ಮಂತ್ರಿಯು ಒಂದೊಂದು ರೀತಿಯಲ್ಲಿ ವರ್ತಿಸದೆ ಇಡೀ ಮಂತ್ರಿಮಂಡಲದ ಬಹು ಮತಾಭಿಪ್ರಾಯದಂತೆ ನಡೆಯುವುದೇ ಇದರ ಮುಖ್ಯ ನೀತಿ. ಇದನ್ನು ಬಿಟ್ಟುಬಿಟ್ಟರೆ ಇದುವರೆಗೆ ಮಾಡಿರುವ ಒಳ್ಳೆಯ ಕೆಲಸವೆಲ್ಲವೂ ವ್ಯರ್ಥವಾಗುವುದು.

ಬ್ರಿಟಿಷ್ ಸರ್ಕಾರದವರು ಲೀಗಿನವರಿಗೆ ಹಲವು ಸ್ಥಾನಗಳನ್ನು ಮೀಸಲು ಮಾಡಿರುವುದೇನೋ ನಿಜ. ಆದರೆ ಒಬ್ಬೊಬ್ಬ ಸಚಿವರೂ ತಮ್ಮ ಇಷ್ಟ ಬಂದಂತೆ ನಡೆಯಲು ಅವಕಾಶ ಕಲ್ಪಿಸಿರುವುದಿಲ್ಲ. ಆದುದರಿಂದ ಕೇಂದ್ರ ಸರ್ಕಾರದಲ್ಲಿ ಲೀಗಿನವರು ಪ್ರವೇಶಿಸಿದರೂ ಅದರ ಸಾಮಾನ್ಯ ಕಾರ್ಯನೀತಿಯಲ್ಲಿ ಯಾವ ಬದಲಾವಣೆಯೂ ಆಗಲಾರದು. ಎಲ್ಲವೂ ವೈಸರಾಯರ ಮತ್ತು ಬ್ರಿಟಿಷ್ ಸರ್ಕಾರದವರ ಪ್ರವರ್ತನೆಯನ್ನೇ ಅವಲಂಬಿಸಿರುತ್ತದೆ. ಅವರು ತಮ್ಮ ಭರವಸೆಯಂತೆ ನಿತ್ಯ ವ್ಯವಹಾರಗಳಲ್ಲಿ ಪ್ರವೇಶಿಸದೆ ಕೇಂದ್ರ ಸರ್ಕಾರವು ರಾಜಕೀಯ ತತ್ವಗಳಿಗೆ ಅನುಗುಣವಾಗಿ ವರ್ತಿಸಲು ಅವಕಾಶವಿತ್ತರೆ ಲೀಗಿನವರ ಈಗಿನ ನಿರ್ಧಾರವೂ ದೇಶದ ಕಲ್ಯಾಣಕ್ಕೇ ಸಹಾಯಕವಾದೀತು.

ರೇಷ್ಮೆ ಸೀರೆಗಳು

(ಕ್ರೇಪ್ ಮತ್ತು ಸಾದಾ)

ತಯಾರಿಸುವವರಿಂದಲೇ ಕೊಂಡುಕೊಳ್ಳಿ

ಶಾಂತಿ ಟೆಕ್ಸ್‌ಟೈಲ್ಸ್,

(ಶಾಳಪ್ಪನವರ ಮಿಲ್ಲಿನ ಪಕ್ಕ)

ಮೈಸೂರು ಸೌತ್, ಮೈಸೂರು

Edited printed and published by A. R. Nagarajan at the Sadhvi Press Dasappiah Road, Mysore

ನ್ಯೂಯಾರ್ಕಿಗೆ ಭಾರತ ನಿಯೋಗದ ಪ್ರಯಾಣ

ಸಂಯುಕ್ತ ರಾಷ್ಟ್ರ ಪರಿಷತ್ತಿನ ಭಾರತ ಪ್ರತಿನಿಧಿ ನಿಯೋಗವು ನಿನ್ನೆ ನ್ಯೂಯಾರ್ಕಿಗೆ ವಿಮಾನದಲ್ಲಿ ಪ್ರಯಾಣ ಬೆಳೆಸಿತು. ನಿಯೋಗದಲ್ಲಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್, ಜ|| ಎಂ ಸಿ ಚಾಗ್ಲ, ಮಹಾರಾಜಾ ಸಿಂಗ್, ಮಿ|| ಫ್ರಾಂಕ್ ಆಂಥೋಣಿ ಮತ್ತು ನವಾಬ್ ಅಲಿ ಯಾರ್ ಜಂಗ್ ಬಹದ್ದೂರ್‌ರವರೂ ಅವರು [illegible]ರು ಸಹಾಯಕರೂ, ಆರು ಮಂದಿ ಸಲಹೆಗಾರರೂ ಇರುವರು.

ರಾಜ್ ಕಮಲ್, ಮೈಸೂರು

10-10-46 ರಿಂದ ಅಮೋಘವಾದ

4 ನೇ ವಾರ

ಸ್ವರ್ಗಸೀಮ

ಪಾತ್ರ:- ಜಯಮ್ಮ, ಭಾನುಮತಿ, ನಾಗಯ್ಯ, ನಾರಾಯಣರಾವ

ಮೈಸೂರು ಸಿಟಿ ರೇಷನಿಂಗ್ ಆಫೀಸಿನಿಂದಾ:—

ತಾರೀಖು 10–10–1946.

ನೋಟಿಫಿಕೇಷನ್.

ನಂಬರು R 1–100—46-47.

ಇದರಿಂದ ಮೈಸೂರು ನಗರದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ:

ಮೈಸೂರು ನಗರವಾಸಿಗಳು ಕೆಲವು ಈ ಕೆಳಗೆ ಕಂಡ ತರಹ ಬೋಗಸ್ ರೇಷನ್ ಕಾರ್ಡುಗಳನ್ನಿಟ್ಟುಕೊಂಡು ರೇಷನ್ ಸಾಮಾನುಗಳನ್ನು ಪಡೆಯುತ್ತಿರುವುದು ನಮ್ಮ ಗಮನಕ್ಕೆ ಬಂದಿರುತ್ತದೆ. ಅಂಥಾ ರೇಷನ್ ಕಾರ್ಡುಗಳನ್ನು ಜನರು ಸಂಬಂಧಪಟ್ಟ ಇನ್ಸ್‌ಪೆಕ್ಟರವರ ಆಫೀಸಿಗೆ ವಾಪಸ ಮಾಡಲು ತಮ್ಮ ಮೇಲೆ ಕ್ರಮ ಜರುಗಿಸಬಹುದೆಂದಾಗಿ ಹೆದರಿ ತಮ್ಮಲ್ಲೇ ಇಟ್ಟುಕೊಂಡಿರುವುದು ನಮ್ಮ ಅವಗಾಹನೆಗೆ ಬಂದಿರುತ್ತದೆ. ಅಂಥಾ ರೇಷನ್ ಕಾರ್ಡು ಉಳ್ಳವರು ಅಂಥಾ ರೇಷನ್ ಕಾರ್ಡುಗಳನ್ನು ಇದೇ ನವೆಂಬರ್ ೩೦ ನೇ ತಾರೀಖಿನೊಳಗಾಗಿ ಯಾವ ಫುಡ್ ಆಫೀಸಿಗಾಗಲಿ ಹಾಜರ್ಮಾಡಿದಲ್ಲಿ ಅಂಥವರ ಮೇಲೆ ಯಾವ ಕ್ರಮವನ್ನೂ ಜರುಗಿಸುವುದಿಲ್ಲ.

ಯಾರಲ್ಲಾದರು ಅಂಥಾ ಬೋಗಸ್ ರೇಷನ್ ಕಾರ್ಡುಗಳು ೩೦ ನೇ ತಾರೀಖಿನ ನಂತರ ಕಂಡು ಬಂದಲ್ಲಿ, ರೇಷನ್ ಕಾನೂನು ರೀತ್ಯಾ ಅಂಥವರ ಮೇಲೆ ಕ್ರಮ ಜರುಗಿಸಲಾಗುತ್ತೆ. ಅಲ್ಲದೆ ಅಂಥವರ ಮನೆಯ ಕಾರ್ಡನ್ನು ಸಹ ವಜಾ ಮಾಡಲಾಗುವುದು. ಅಂಥವರು ಈ ವಿಚಾರದಲ್ಲಿ ಮುಂದಾಗಬಹುದಾದ ತೊಂದರೆಗಳಿಗೆ ಈಡಾಗದೆ ಸಹಕಾರವನ್ನು ವ್ಯಕ್ತಪಡಿಸುವುದು ಉತ್ತಮವೆಂದು ಈ ಮೂಲಕ ತಿಳಿಯಪಡಿಸಿರುತ್ತೆ.

೧. ಮೈಸೂರು ಸಿಟಿಯಲ್ಲಿ ವಾಸವಿಲ್ಲದೆ ಇರುವ ಜನರ ಹೆಸರಿನಲ್ಲಿರುವ ರೇಷನ್ ಕಾರ್ಡುಗಳು.

೨. ಒಂದು ಸಂಸಾರದಲ್ಲಿರುವ ಜನರ ಹೆಸರನ್ನೇ ನಮೂದಿಸಿ ಬೇರೆ ಬೇರೆ ರೇಷನ್ ಕಾರ್ಡುಗಳನ್ನು ಒಂದೇ ಮನೆಯಲ್ಲಿ ಹೊಂದಿರುವುದು.

೩. ಒಂದೇ ಸಂಸಾರದವರು ಬೇರೆ ಬೇರೆ ವಿಳಾಸವನ್ನು ಕೊಟ್ಟು ಅನೇಕ ಕಾರ್ಡುಗಳನ್ನು ಹೊಂದಿರುವವರು.

೪. ಸಿಟಿಯ ವಾಸವನ್ನು ಬಿಟ್ಟು ಬೇರೆ ಸ್ಥಳದಲ್ಲಿರುವವರ ಕಾರ್ಡುಗಳನ್ನು ಇತರರು ಉಪಯೋಗಪಡಿಸುತ್ತಿರುವುದು.

೫. ಸಂಸಾರದಲ್ಲಿರುವ ಜನರಿಗಿಂತ ಹೆಚ್ಚಿನ ಜನಗಳದ್ದಾಗಿಂದು ಹೇಳಿ ಕಾರ್ಡು ಪಡೆದಿರುವವರು.

೬. ಮೈಸೂರು ಸಿಟಿಯ ಹೊರಭಾಗದಲ್ಲಿ ವಾಸವಿದ್ದು ಸಿಟಿಯಲ್ಲಿ ರೇಷನ್ ಪಡೆಯುತ್ತಿರುವವರು.

೭. ರೇಷನ್ ಕಾರ್ಡಿನಲ್ಲಿರುವ ಬರವಣಿಗೆಯನ್ನು ಅಳಿಸಿರುವ ಅಥವಾ ಬದಲಿಸಿರುವ ಥಾ ರೇಷನ್ ಕಾರ್ಡು ಉಳ್ಳವರು.

೮. ರೇಷನ್ ಕಾರ್ಡು ಡಿಪೋ ಅಸ್ಸೈನ್‌ಮೆಂಟು ರಿಜಿಸ್ಟರಿನಲ್ಲಿ ವಜಾ ಮಾಡಿದ್ದಾಗ್ಯೂ ಅಂಥಾ ಕಾರ್ಡಿನ ಮೇಲೆ ರೇಷನ್ ಪಡೆಯುತ್ತಿರುವವರು.

೯. ರೇಷನ್ ಕಾರ್ಡು ಹೊಂದಿರುವವರ ಕಾರ್ಡು ಮಾರಿದ್ದಲ್ಲಿ ಅಥವಾ ಬೇರೆ ಮಾರ್ಗದಿಂದ ಪಡೆದು ದುರುಪಯೋಗಪಡಿಸುತ್ತಿರುವುದು.

ಮೇಲೆ ಹೇಳಿದ ೫ ನೇ ನಮೂನೆ ಕಾರ್ಡು ಹೋಲ್ಡರುಗಳು ಅಂಥಾ ಕಾರ್ಡು ಬದಲಾವಣೆ ಮಾಡಿಸಬೇಕಾದಲ್ಲಿ ಸಂಬಂಧಪಟ್ಟ ಫುಡ್ ಆಫೀಸಿಗೆ ಆ ಕಾರ್ಡಿನೊಂದಿಗೆ ಒಂದು ಅರ್ಜಿಯನ್ನು ಸಲ್ಲಿಸಿದಲ್ಲಿ ಕೂಡಲೇ ಸಿನಾ ತೋರಿಸಲಾಗುವುದು.

(ಸಹಿ) ಅಬ್ದುಲ್ ರಜಾಕ್

ರೇಷನಿಂಗ್ ಆಫೀಸರ್, ಮೈಸೂರು

ಶ್ರೀ ಗಣೇಶ ಟಾಕೀಸ್, ಮೈಸೂರು

ಇದೇ ಅಕ್ಟೋಬರ್ 14 ನೇ ಸೋಮವಾರದಿಂದ

ಎಂ. ಜಿ. ಎಂ. ರವರ

ಟಾರ್‌ಜಾನ್ಸ್ ನ್ಯೂಯಾರ್ಕ್ ಅಡ್ವೆಂಚರ್

ಪಾತ್ರ:—ಜಾನಿ ವಿಸ್ಮುಲರ್, ಮೌರೀನ್ ಸಲಿವನ್

ಇವರ ಮುಖ್ಯ ಪಾತ್ರ. ಇದರೊಡನೆ ಎರಡು ಭಾಗ ಕಲರ್ ಕಾರ್ಟೂನ್ ಸಹ ಉಂಟು.

ಪ್ರತಿ ದಿನ ಮೂರು ಪ್ರದರ್ಶನ

UNIVERSITY OF MYSORE

Office of the University of Mysore,
Mysore, Dated 30th September 1946.

NOTIFICATION No. 525—46-47.

It is hereby notified that the diplomas of candidates successful at the **Final L M P. Examination held in April and October 1946** as well as the Diplomas of candidates who have been successful in the Final Examination for the Diploma in Commerce and who have completed their practical training, will be awarded at a **Special Meeting** of the Senate to be held in the Central Hall of the Mathematics Block, Central College, Bangalore, on **Saturday, the 16th November 1946 at 11-30 A. M.** Applications for the grant of Diplomas must be made in the prescribed form on or before 6th November 1946. Forms of application can be had from the Principal, Medical School, in respect of L. M. P. and from the Principal, Central College Bangalore, in respect of L. Com.

By order,
D. S. GORDON, Registrar

ಫೋ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಬುಧವಾರ ೧೬—೧೦—೪೬ [ಸಂಚಿಕೆ ೬೫

ತಿರುವಾಂಕೂರಲ್ಲಿ ರಾಜಕೀಯ ಸಂಧಾನ

ಪೂರ್ವ ಬಂಗಾಳದಲ್ಲಿ ಪುಂಡರುಗಳ ಹಾವಳಿ

ಪೂರ್ವ ಬಂಗಾಳದ ನವಾಖಲಿ ಜಿಲ್ಲೆಯು ಕೋಮುವಾರು ಗಲಭೆ ಉಗ್ರಾವಸ್ಥೆಗೆ ಏರಿದೆ. ಕಳೆದ ೧೦ನೇ ತಾರೀಖಿನಿಂದ ಪ್ರದೇಶವೆಲ್ಲಾ ಪುಂಡರುಗಳ ಅಧೀನವಾಗಿದೆ. ಇವರುಗಳ ತಂಡವು ಬಲಾತ್ಕಾರವಾಗಿ ಜನರನ್ನು ಮತಾಂತರಗೊಳಿಸುವುದು, ಸ್ವಾರ್ಥಕ್ಕಾಗಿ ಪ್ರದೇಶಗಳನ್ನು ವಶಪಡಿಸಿಕೊಳ್ಳುವುದು, ಇವೇ ಮೊದಲಾದ ಕಾರ್ಯಗಳನ್ನು ಒಂದೇ ಸಮನಾಗಿ ಎಸಗುತ್ತಿದೆ. ಆ ಪ್ರದೇಶದ ವಕೀಲರ ಸಂಘದ ಅಧ್ಯಕ್ಷರನ್ನು ಸಂಸಾರ ಸಮೇತ ಸುಟ್ಟು ಹಾಕಿದ್ದಾರೆ. ಅಲ್ಲಿನ ಪ್ರಮುಖ ಜಮೀನ್ದಾರರನ್ನು ಕೊಲೆ ಮಾಡಿದ್ದಾರೆ. ಈ ಪ್ರದೇಶವು ಲೂಟಿ, ಕೊಲೆ ಮತ್ತು ದರೋಡೆಗಳ ತವರೂರಾಗಿದೆ. ಈಗ ಅಲ್ಲಿಗೆ ಹೆಚ್ಚು ಜಿಲ್ಲಾಧಿಕಾರಿಗಳನ್ನೂ ಪೊಲೀಸರನ್ನೂ ಕಳುಹಿಸಲಾಗಿದೆಯೆಂದು ಸುದ್ದಿ ಬಂದಿದೆ.

ಸಚಿವರ ರಾಜೀನಾಮೆ

ಕೇಂದ್ರ ತಾತ್ಕಾಲಿಕ ಸರ್ಕಾರಕ್ಕೆ ಲೀಗು ಸೇರಲು ನಿರ್ಧರಿಸಿರುವುದರಿಂದ ಶ್ರೀ ಶರತ್ ಚಂದ್ರಬೋಸರು, ಡಾ|| ಜಾನ್ ಮಥಾಯ್ ಅವರು ಮತ್ತು ಅಲಿ ಜಹೀರ್‌ರವರು, ತಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಡುವರೆಂದು ದೆಹಲಿಯಿಂದ ಹೊರಬಿದ್ದಿರುವ ವಾರ್ತೆ ತಿಳಿಸುತ್ತದೆ.

ಕೇಂದ್ರ ಸರ್ಕಾರಕ್ಕೆ ನಾಲ್ವರು ಲೀಗಿನವರು?

ಕೇಂದ್ರ ಸರ್ಕಾರಕ್ಕೆ ಲೀಗಿನವರು ಹೆಸರುಗಳನ್ನು ಸೂಚಿಸಲು ವೈಸರಾಯರು ಒಪ್ಪಿಕೊಂಡಿದ್ದಾರಷ್ಟೆ. ಅದರಂತೆ ನಿನ್ನೆ ಸಮಾಲೋಚನೆಯಿಂದ ಲೀಗ್ ಕಾರ್ಯಕಾರಿ ಸಮಿತಿ ಸದಸ್ಯರು ಅಧಿಕೃತವಾಗಿ ತಮ್ಮ ಪ್ರತಿನಿಧಿಗಳನ್ನು ಸೂಚಿಸಿರುವರೆಂದು ಹೇಳಲಾಗಿದೆ. ಆ ಪ್ರಕಾರ ನಾಲ್ವರು ಮುಸ್ಲಿಮರನ್ನೂ ಕಾಂಗ್ರೆಸ್ ಮಂತ್ರಿಮಂಡಲದಲ್ಲಿರುವ ಒಬ್ಬ ಹರಿಜನ ಸದಸ್ಯರೊಬ್ಬರ ಹೆಸರನ್ನೂ ಲೀಗ್ ಸೂಚಿಸಿರುವುದಾಗಿ ತಿಳಿದು ಬಂದಿದೆ.

ಇಟಲಿಯಲ್ಲಿ ಪಾನ ನಿರೋಧ

ಇಟಲಿ ಸಂಸ್ಥಾನದಲ್ಲಿ ಪಾನ ನಿರೋಧವನ್ನು ಜಾರಿಗೆ ತರುವುದರ ಮೊದಲು ಹಳ್ಳಿ ಪ್ರದೇಶಗಳ ಪ್ರತ್ಯೇಕ ಪಟ್ಟಣಗಳಲ್ಲಿ ಸದ್ಯಕ್ಕೆ ಅದನ್ನು ಜಾರಿಗೆ ತರುವುದು. ಇದರಲ್ಲಿ ಬರುತ್ತಿದ್ದ ಆದಾಯವನ್ನು ಸರಿತೂಗಿಸಲು ವ್ಯವಸಾಯ ಹಾಗೂ ಕೈಗಾರಿಕೆಗಳ ಅಭಿವೃದ್ಧಿಗಾಗಿ ಹೊಸ ತೆರಿಗೆಯ ಯೋಜನೆ ಸಹ ಸರ್ಕಾರದ ಪರಿಶೀಲನೆಯಲ್ಲಿರುವುದಾಗಿ ಹೇಳಲಾಗಿದೆ.

ಜನ ವಿದ್ಯೋದಯ ಸಂಘ

ಟಿ. ನರಸೀಪುರ ೧೪

ಇಲ್ಲಿನ ಸಂಘದ ಸರ್ವ ಸದಸ್ಯರ ಸಭೆಯು ನಿನ್ನೆ ಧರ್ಮ ರಕ್ಷಾಕರ ಕೆ. ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿ ಸಂಘದ ಸಂಸ್ಥಾಪಕರಾದ ಶ್ರೀ ಶಿವಸ್ವಾಮಿಯವರು ವಾರ್ಷಿಕ ವರದಿಯನ್ನು ಓದಿದರು. ಮುಂದಿನ ಸಾಲಿಗೆ ಶ್ರೀಗಳಾದ ... ಸ್ವಾಮಿ (ಅಧ್ಯಕ್ಷರು) ವಿ|| ನಂಜೇಗೌಡ (ಉ. ಪಾ.) ಶಿವಾನಂದಶರ್ಮ (ಕಾರ್ಯದರ್ಶಿ) ಎಸ್. ಶ್ರೀನಿವಾಸಯ್ಯಂಗಾರ್ (ಸ. ಕಾ.) ಶ್ರೀಕಂಠಸ್ವಾಮಿ (ಖ.) ಇವರುಗಳನ್ನು ಆಯ್ಕೆ ಮಾಡಲಾಯಿತು.

ಹೊಸ ಪಕ್ಷದ ಸ್ಥಾಪನೆ

ಶ್ರೀಮನ್ಮಹಾರಾಜರ ಛತ್ರಛಾಯೆಯಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯೇ ರಾಜಕೀಯ ಸಿದ್ಧಾಂತವಾಗಿ ಉಳ್ಳ "ದಿ ಮೈಸೂರು ಪ್ರೋಗ್ರೆಸಿವ್ ಪಾರ್ಟಿ" ಯೆಂಬ ಹೊಸ ಪಕ್ಷವು ಇತ್ತೀಚೆಗೆ ಜನ್ಮ ತಾಳಿದೆ. ಹಾಲಿ ಶಾಸನ ಸಭೆಗಳ ಸದಸ್ಯರಾಗಿರುವವರು ಈ ಪಕ್ಷಕ್ಕೆ ಸೇರಲು ಅವಕಾಶವಿದೆ. ಸರ್ಕಾರದವರು ಈ ಪಕ್ಷದೊಡನೆ ಎಷ್ಟು ಗೌರವಾನ್ವಿತರಾಗಿ ನಡೆದುಕೊಳ್ಳುತ್ತಾರೋ ಅಷ್ಟೇ ಗಾಂಭೀರ್ಯದಿಂದ ಸರ್ಕಾರ ನಡೆಯಬೇಕೆಂಬುದೇ ಈ ಪಕ್ಷದ ಉದ್ದೇಶ. ಇದರ ಕಾರ್ಯಕಾರಿ ಸಮಿತಿಗೆ ಶ್ರೀ ಜಿ. ಟಿ. ಗೋಪಾಲಕೃಷ್ಣನ್‌ರವರು ಅಧ್ಯಕ್ಷರೂ ಶ್ರೀ ಜೆ. ರಾಮಕೃಷ್ಣಯ್ಯರು ಪ್ರಧಾನ ಕಾರ್ಯದರ್ಶಿಗಳೂ ಆಗಿದ್ದಾರೆ.

ಆಯುರ್ವೇದ ಮತ್ತು ಯುನಾನಿ ಪದವೀಧರರ ಸಂಘ

ಮಂಡ್ಯ ೧೩

ಮೈಸೂರು ಸಂಘದ ಸ್ಥಾಯೀ ಸಮಿತಿ ಸಭೆಯು ಡಾ|| ನಾರಾಯಣಾಚಾರ್ಯರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ದಿವಾನರಲ್ಲಿ ನಿಯೋಗ ಹೋಗಿ ತಮ್ಮ ಕುಂದುಕೊರತೆಗಳನ್ನು ನಿವಾರಿಸಿ, ಸ್ಥಾನಮಾನಗಳನ್ನು ಹೆಚ್ಚಿಸುವುದು, ಪದವೀಧರರಲ್ಲಿ ದಕ್ಷರಾದವರನ್ನೇ ಪರೀಕ್ಷಕರನ್ನಾಗಿ ನಿಯಮಿಸುವುದು ಸಂಸ್ಥಾನದ ಎಲ್ಲಾ ಜಿಲ್ಲಾ ಬೋರ್ಡ್ ಮುನಿಸಿಪಾಲಿಟಿಗಳಲ್ಲಿ ಕೆಲಸ ಮಾಡುತ್ತಿರುವ ಪದವೀಧರರಿಗೂ ಸಂಬಳ, ತುಟ್ಟಿಭತ್ಯ ಮತ್ತು ಸರ್ವಿಸ್ ರಿಯಾಯಿತಿಗಳನ್ನು ಅನ್ವಯಿಸುವಂತೆ ಮಾಡುವುದು ಮುಂತಾದ ನಿರ್ಣಯಗಳು ಅಂಗೀಕರಿಸಲ್ಪಟ್ಟವು.

ದೀಪಾವಳಿ ನಿಧಿ

ಬೆಂಗಳೂರು ನಗರದಲ್ಲಿರುವ ನ್ಯಾಷನಲ್ ಕಾಲೇಜ್ ಮತ್ತು ಹೈಸ್ಕೂಲ್ ದೀಪಾವಳಿ ನಿಧಿಯನ್ನು ಮಹಾಜನರ ಉದಾರತ್ವದಿಂದ ಸೇರಿಸಬೇಕೆಂದು ನಿರ್ಧರಿಸಿರುವುದರಿಂದ, ಹಿಂದೆ ಸಹಾಯ ಮಾಡಿದಂತೆಯೇ ಸಹಕರಿಸಬೇಕಾಗಿ ಶ್ರೀ ಕೆ. ಸಂಪದ್ಗಿರಿರಾಯರು ಕೋರಿದ್ದಾರೆ.

ದಾಸನ ಮನ ಸತ್ತೆ

[ನಮ್ಮ ವರದಿಗಾರರಿಂದ] ಶ್ರೀರಂಗಪಟ್ಟಣ ೧೪

ಇಲ್ಲಿಯ ಪುರಿ ಅಂಗಡಿ ವರ್ತಕರಾದ ಶ್ರೀ ವೆಂಕಟಯ್ಯನವರ ಹತ್ತಿರವಿದ್ದ ೮ ಪಲ್ಲ ೩ ಪಲ್ಲ ಆಳ ಸೇರು ಭತ್ತವನ್ನು ಫುಡ್ ಇನ್ಸ್‌ಪೆಕ್ಟರು ಪತ್ತೆ ಹಚ್ಚಿ ಪುರಸಭೆಯ ಉಪಾಧ್ಯಕ್ಷರ ವಶಕ್ಕೆ ವಹಿಸಿಕೊಟ್ಟಿರುತ್ತಾರೆಂದು ತಿಳಿದು ಬಂದಿದೆ.

ಪುತ್ರೀ ಉತ್ಸವ

ಮೈಸೂರು ೧೬

ಈ ದಿನ ಬೆಳಿಗ್ಗೆ ಶ್ರೀಮನ್ಮಹಾರಾಜರವರು ಅರಮನೆಯ ಅಂಬಾವಿಲಾಸದಲ್ಲಿ ಪುತ್ರೀ ಉತ್ಸವದ ಪ್ರಯುಕ್ತ ವಿಶೇಷ ದರ್ಬಾರು ನಡೆಸಿದರು. ದಿವಾನರು, ಮಂತ್ರಿಗಳು, ಶ್ರೇಷ್ಠ ನ್ಯಾಯಾಧೀಶರೂ, ಆಪ್ತ ಕಾರ್ಯದರ್ಶಿಗಳೂ, ಬಿರುದಾಂಕಿತರುಗಳೂ, ಪೌರಸಭಾ ಸದಸ್ಯರೂ, ರಾಜ ಮನೆತನದವರೂ, ಪಂಡಿತೋತ್ತಮರೂ ಮತ್ತು ಇತರ ಅಧಿಕಾರಿ ಮತ್ತು ಖಾಸಗೀ ದೊಡ್ಡಮನುಷ್ಯರೂ ಬಂದಿದ್ದರು. ಅರಮನೆ ಪುರೋಹಿತರಿಂದ ಶಾಸ್ತ್ರೋಕ್ತ ಕಾರ್ಯಕ್ರಮಗಳೆಲ್ಲವೂ ಸಾಂಗವಾಗಿ ನೆರವೇರಿದುವು.

ಮಠಗಳಿಂದಲೂ, ದೇವಸ್ಥಾನಗಳಿಂದಲೂ ಬಂದಿದ್ದ ಫಲಮಂತ್ರಾಕ್ಷತೆಯನ್ನು ಶ್ರೀಮನ್ಮಹಾರಾಜರಿಗೆ ಅರ್ಪಿಸಲಾಯಿತು. ಆಸ್ಥಾನ ವಿದ್ವಾಂಸರುಗಳ ಮನೋಹರ ಗಾನವೂ ನಡೆಯಿತು. ಅನಂತರ ಅತಿಥಿಗಳೆಲ್ಲರೂ ನೂತನ ಶಿಶುವಿನ ಸಂದರ್ಶನ ಮಾಡಿ ತೆರೆದುಕೊಂಡು ರಾಜಭಕ್ತಿಯನ್ನು ಸಲ್ಲಿಸಿದರು.

ಸಂಗೀತ ವಿದ್ವಾಂಸರ ಅಲಸ್ಯ

ಆ|| ವಿ|| ವೈಣಿಕ ಪ್ರವೀಣ ಎಸ್. ವೆಂಕಟಗಿರಿಯಪ್ಪನವರು ಅನಾರೋಗ್ಯ ನಿಮಿತ್ತವಾಗಿ ನೆನ್ನೆಯಿಂದ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು.

ತಿರುವಾಂಕೂರಿನಲ್ಲಿಯೂ ಸಂಧಾನ

ತಿರುವಾಂಕೂರು ದಿವಾನರಾದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರು ಅಲ್ಲಿನ ಕಾಂಗ್ರೆಸ್ ನಾಯಕರುಗಳಾದ ಪಟ್ಟಂ ತಾನು ಪಿಳ್ಳೆ ಮತ್ತು ಟಿ. ಎಂ. ವರ್ಗೀಸ್‌ರವರುಗಳನ್ನು ಕರೆಸಿಕೊಂಡು ರಾಜಕೀಯ ಸುಧಾರಣೆಗಳ ವಿಷಯವಾಗಿ ಮಾತುಕತೆ ನಡೆಸಿದರು. ಮಹಾರಾಜರ ಆಶ್ರಯದಲ್ಲಿ ಸಂಪೂರ್ಣ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಬೇಕೆಂದು ನಾಯಕರು ಹೇಳಿದರು. ಶಾಸನ ಸಭೆಯ ಅವಧಿಯಲ್ಲಿ ಮಂತ್ರಿಮಂಡಲವನ್ನು ತೆಗೆದು ಹಾಕಲು ಅವಕಾಶವಿರಕೂಡದೆಂದು ದಿವಾನರು ಹೇಳಿದರು. ಬಹು ಸಂಖ್ಯಾತರ ಪಕ್ಷದಿಂದಲೇ ಮಂತ್ರಿಮಂಡಲವನ್ನು ರಚಿಸಬೇಕೆಂದು ಕಾಂಗ್ರೆಸ್ಸಿನವರು ಒತ್ತಾಯ ಪಡಿಸಿದರು. ಈ ವಿಷಯದಲ್ಲಿ ಸಂಪೂರ್ಣ ಅಧಿಕಾರವು ರಾಜರಿಗೆ ಇರಬೇಕೆಂದೂ, ಶಾಸನ ಸಭೆಯಿಂದ ಆಗಲೀ ಹೊರಗಿನಿಂದಾಗಲೀ ಮಂತ್ರಿಗಳನ್ನು ನೇಮಿಸಲು ಇಂಗ್ಲೆಂಡಿನಲ್ಲಿರುವಂತೆ ಇಲ್ಲಿಯೂ ರಾಜರಿಗೆ ಅವಕಾಶವಿರಬೇಕೆಂದೂ ದಿವಾನರು ತಿಳಿಸಿದರು. ಮತ್ತು ಶಾಸನ ಸಭೆಯ ಅವಿಶ್ವಾಸ ಒಂದರಿಂದಲೇ ಮಂತ್ರಿ ಮಂಡಲವನ್ನು ತೆಗೆದುಹಾಕಲು ಅವಕಾಶವಿರಕೂಡದೆಂದೂ ಸಹ ಹೇಳಿದರು. ಕಾಂಗ್ರೆಸ್ ಮತ್ತು ಇತರ ಸಂಸ್ಥೆಗಳೊಡನೆ ಸಂಪೂರ್ಣ ಸಮಾಲೋಚನೆ ನಡೆಸಿದನಂತರವೇ ರಾಜಕೀಯ ಸುಧಾರಣೆಗಳನ್ನು ಜಾರಿಗೆ ತರುವುದಾಗಿ ದಿವಾನರು ತಿಳಿಸಿದರು.

ಮಹಾತ್ಮರು ಮೌನವನ್ನು ಆಚರಿಸುತ್ತಿರುವರು

ಗಾಂಧೀಜಿಯವರಿಗೆ ವಿಶೇಷ ಆಯಾಸವಾಗಿರುವ ಪ್ರಯುಕ್ತ, ಅನಿರ್ದಿಷ್ಟ ಕಾಲದವರೆಗೆ ಅವರು ಮೌನವನ್ನು ಆಚರಿಸಲು ನಿರ್ಧರಿಸಿದ್ದಾರೆ. ಅವರ ಸಂಧ್ಯಾಕಾಲದ ಪ್ರಾರ್ಥನೆಯ ಸಂಕೀರ್ತನೆ ಮತ್ತು ಅತ್ಯಗತ್ಯವಾದ ಸಂದರ್ಭಗಳಲ್ಲಿ ಮಾತ್ರ ಮಾತನಾಡುವುದಾಗಿ ಉದ್ದೇಶಿಸಿದ್ದಾರೆ. ಮುಸ್ಲಿಂ ಲೀಗಿನ ಪ್ರತಿನಿಧಿಗಳ ಸ್ವರೂಪದ ವಿಷಯವಾಗಿ ತಾವು ಪಟ್ಟ ಅಭಿಪ್ರಾಯವು ಆತುರದಿಂದ ಕೂಡಿದ್ದುದಕ್ಕಾಗಿಯೂ ಸಹ ಅವರು ಮೌನವನ್ನು ತಾಳಿರುವರೆಂದು ಹೇಳಲಾಗಿದೆ.

ರಣಜಿತ್ ಟಾಕೀಸ್

ಮೈಸೂರು

ತಾ|| 17-10-46 ರಿಂದ ಅಮೋಘ ಪ್ರಾರಂಭ

ರಾಜಾ ಭರ್ತೃಹರಿ

ಮುಮ್ತಾಜ್ ಶಾಂತಿ, ಸುರೇಂದ್ರ ಮತ್ತು ಅರುಣ್ ಮುಂತಾದವರು ನಟಿಸಿರುವ ಹಿಂದಿ ಚಿತ್ರ

ಪ್ರತಿ ದಿನ ಮೂರು ಆಟಗಳು

ಸಾಧ್ವಿ

ತಾ॥ ೧೬-೧೦-೪೬ ಬುಧವಾರ

ಸರ್ ಮಿರ್ಜಾರವರ ರಾಜನೀತಿ

ಹೈದರಾಬಾದ್ ಸಂಸ್ಥಾನದ ಪ್ರಧಾನಿಗಳಾಗಿರುವ ಸರ್ ಮಿರ್ಜಾ ಇಸ್ಮೈಲರು ಈಗಾಗಲೇ ರಾಜನೀತಿ ಕೌಶಲ್ಯವನ್ನು ಪ್ರದರ್ಶಿಸುತ್ತಿದ್ದಾರೆ ಅಲ್ಲಿ ಹೊಸ ಸುಧಾರಣೆಗಳನ್ನು ಪ್ರಕಟಿಸಿದ ಮೇಲೆ ಹಿಂದೂ ಮಹಾಸಭೆ, ಕಾಂಗ್ರೆಸ್ ಮತ್ತು ಇತರ ನಾಯಕರುಗಳು ಅದಕ್ಕೆ ತಮ್ಮ ಪ್ರತಿಭಟನೆಯನ್ನು ಸೂಚಿಸಲು ತೊಡಗಿದರು. ಹಿಂದೂ ಜನಾಂಗಕ್ಕೆ ಸುಧಾರಣೆಗಳಿಂದ ಉಂಟಾಗುವ ತೊಂದರೆಗಳಿಗಾಗಿ ಸತ್ಯಾಗ್ರಹವನ್ನೇ ಮಾಡುವುದಾಗಿಯೂ ಹಿಂದೂ ಮಹಾಸಭೆಯವರು ನಿರ್ಧರಿಸಿದ್ದರು. ಆದರೆ ಸರ್ ಮಿರ್ಜಾ ಇಸ್ಮೈಲರು ಅವರುಗಳನ್ನು ಕರೆಸಿಕೊಂಡು, ಸಂಧಾನ ನಡೆಸಿ, ಸೂಕ್ತ ಭರವಸೆಗಳನ್ನು ಇತ್ತುದರಿಂದ ಅವರು ಚಳುವಳಿಯನ್ನು ನಿಲ್ಲಿಸಿರುವರು

ಈಚೆಗೆ ಕಾಂಗ್ರೆಸ್ ಪ್ರಮುಖರುಗಳನ್ನೂ ಸಹ ಕರೆಸಿಕೊಂಡು, ಇದೇ ವಿಷಯವಾಗಿ ಸಮಾಲೋಚನೆ ನಡೆಸಿದರು ಇದರ ಫಲವಾಗಿ ಅಲ್ಲಿನ ಕಾಂಗ್ರೆಸ್ಸಿಗೂ, ಸರ್ಕಾರದವರಿಗೂ ಇದ್ದ ಭಿನ್ನಾಭಿಪ್ರಾಯಗಳು ಬಹಳಮಟ್ಟಿಗೆ ನಿವಾರಣೆಯಾಗಿವೆ. ಉಭಯತ್ರರಿಗೂ ಸಮಾಧಾನಕರವಾದ ಒಪ್ಪಂದವಾಗಿದೆ ಶಾಸನ ಸಭೆಗಳ ಅಧಿಕಾರ ವ್ಯಾಪ್ತಿಯನ್ನು ವಿಸ್ತರಿಸಲು ಸರ್ ಮಿರ್ಜಾರವರು ಒಪ್ಪಿರುತ್ತಾರೆ ಇನ್ನು ಮುಂದೆಯೂ ಮುಖಂಡರುಗಳೊಡನೆ ಅವರು ಪರ್ಯಾಲೋಚನೆ ನಡೆಸಿ, ಪರಸ್ಪರ ಸಮರ್ಪಕವಾದ ಏರ್ಪಾಡುಗಳನ್ನು ಮಾಡುವರೆಂದು ಹೇಳಲಾಗಿದೆ

ಸರ್ ಮಿರ್ಜಾ ಇಸ್ಮೈಲರು ಮೈಸೂರಿನ ದಿವಾನರಾಗಿದ್ದಾಗ ಕಾಂಗ್ರೆಸ್ಸಿನವರನ್ನು ಅಸ್ಪೃಶ್ಯರಂತೆ ಕಾಣುತ್ತಿದ್ದರು ಕಾಂಗ್ರೆಸ್ ಅಧ್ಯಕ್ಷರಿಗೆ ಭೇಟಿಯನ್ನೂ ಸಹ ನಿರಾಕರಿಸಿದ್ದರು ಕಾಂಗ್ರೆಸ್ಸಿನವರಿಗಿಂತಲೂ ತಾವೇ ಹೆಚ್ಚಿನ ಕಾಂಗ್ರೆಸ್ಸಿನವರೆಂದು ಹೇಳುತ್ತಿದ್ದರು. ಇದರಿಂದ ಸರ್ಕಾರಕ್ಕೂ, ಕಾಂಗ್ರೆಸ್ಸಿಗೂ, ಇಲ್ಲಿ ಅನೇಕ ಘರ್ಷಣೆಗಳಾಗಿ ವಿಶೇಷ ಅನರ್ಥ ಪರಂಪರೆಗಳು ಪ್ರಾಪ್ತವಾದುವು. ಆದರೆ ವಿಶಾಲ ಜಗತ್ತಿನ ಸಂಪರ್ಕದಿಂದಲೂ, ಹೊರಗಿನ ವಾತಾವರಣದ ಪ್ರಭಾವದಿಂದಲೂ, ಅವರ ಮನೋಭಾವವು ಈಗ ವಿಕಾಸಗೊಂಡಿರುವಂತಿದೆ ಕಾಂಗ್ರೆಸ್ಸಿನವರನ್ನು ಕರೆಸಿ ಸಂಧಾನ ನಡೆಸುವ ಪದ್ಧತಿಯನ್ನು ಅವರು ಅನುಸರಿಸಿದ್ದಾರೆ ಇದು ನಿಜವಾಗಿಯೂ ಸಂತೋಷಪ್ರದವಾದ ವಿಷಯ ಇದೇ ರೀತಿ ಅವರು ಮುಂದುವರಿದು ಆ ಸಂಸ್ಥಾನದಲ್ಲಿ ಪ್ರಜೆಗಳಿಗೆ ಸಮರ್ಪಕವಾದ ಆಡಳಿತ ಕ್ರಮವನ್ನು ಜಾರಿಗೆ ತರುವುದರಲ್ಲಿ ಯಶಸ್ವಿಯಾಗಲೆಂದು ನಾವು ಹಾರೈಸುತ್ತೇವೆ.

ನಮ್ಮ ಮೈಸೂರು ಸಂಸ್ಥಾನದಲ್ಲಿಯೂ ಇದೇ ಕ್ರಮವನ್ನು ಅನುಸರಿಸಬೇಕಾದ ಅಗತ್ಯವು ಈಗ ಎಂದಿಗಿಂತಲೂ ಹೆಚ್ಚಾಗಿ ಉದ್ಭವಿಸಿದೆ ಮೈಸೂರಿನ ಪ್ರಜೆಯಾಗಿ, ಹೊರಗಿನ ಸಂಸ್ಥಾನದ ದಿವಾನರಾಗಿ, ಸರ್ ಮಿರ್ಜಾ ಇಸ್ಮೈಲರು ಅನುಸರಿಸುತ್ತಿರುವ ಕ್ರಮವನ್ನು ಇಂದಿನ ಮೈಸೂರು ಆಡಳಿತಗಾರರೂ ಅನುಸರಿಸಬಾರದೇ ?

ಆಕಾಶವಾಣಿ ಭಾಷಣ

ಮದರಾಸ್ ಸರ್ಕಾರದ ಸ್ಥಳೀಯ ಸಂಸ್ಥೆಗಳ ಸಚಿವರಾದ ಮಿ॥ ಡೇನಿಯಲ್ ಥಾಮಸ್‌ರವರು ಈ ದಿನ ಸಂಜೆ ೮-೧೫ ಗಂಟೆಗೆ ಮೈಸೂರು ಆಕಾಶವಾಣಿಯಿಂದ ಬ್ರಾಡ್‌ಕ್ಯಾಸ್ಟ್ ಭಾಷಣ ಮಾಡುವರು.

ಆಚಾರ್ಯ ಕೃಪಲಾ[ನಿ] ಕಾಂಗ್ರೆಸ್ ಅಧ್ಯಕ್ಷರಾದ[ರು]

ಮೌಲಾನ ಆಜಾದರು ತಮ್ಮ [ಅಧ್ಯಕ್ಷ] ಹುದ್ದೆಯನ್ನು ವಾಪಸು ತೆಗೆದು[ಕೊಂಡಿ]ದ್ದರಿಂದ ಆಚಾರ್ಯ ಕೃಪಲಾನಿಯವ[ರು] ವಿರೋಧವಾಗಿ ಕಾಂಗ್ರೆಸ್ ಅಧ್ಯಕ್ಷ[ರಾಗಿ ಚು]ನ್ನು ಏರ್ಪಡಿಸಲಾಗಿದೆ

ಗೃಹಕೃತ್ಯದ ನೋಟೀ[ಸು]

ಟಿ. ನರಸೀಪುರದ ತಾಲ್ಲೂಕು ಸೋ[ಸಲೆ] ಹೋಬಳಿ ಚಿದರಳ್ಳಿ ಗ್ರಾಮದ ಅದಿ[ಕರ್ನಾ]ಟಕರ ಜಾತಿ, ರಿಸರ್ವ್ ಪೋಲೀಸ್ [ಇಲಾಖೆಯ]ಲ್ಲಿದ್ದ ಲೇಟ್ ಎಸ್ ಮಾದಯ್ಯನ[ವರ] ಸುಮಾರು ೬ ವರ್ಷದ ಮಹದೇವ[ನ] ರ್ ಸಲುವಾಗಿ, ಹಿತಚಿಂತಕರು ಮತ್ತು [ಗಾ]ರ್ಡಿಯನ್ ಸೋದರತ್ತೆಯಾದ ಮ[ಲ್ಲಮ್ಮ] ಮಗಳು ಮಲ್ಲಮ್ಮನು ಈ ಮೂಲ[ಕ ತಿಳಿ]ಯಪಡಿಸುವುದೇನೆಂದರೆ—ಮೇ[ಲ್ಕಂಡ] ಎಸ್. ಮಾದಯ್ಯನು ಈಗ್ಗೆ ಸು[ಮಾರು] ಒಂದೂವರೆ ವರ್ಷದಲ್ಲಿ ಮೃತಪ[ಟ್ಟಿದ್ದು] ಆತನಿಗೆ ಚಿದರಳ್ಳಿ ಗ್ರಾಮದಲ್ಲಿ ಪ[...] ಮರದ ಹೊಲ ಮತ್ತು ಭಂಗಿಸಾಂಗ[...]ಲ ಎಂಬ ಹೆಸರಿನ ಎರಡು ಹೊಲ[...] ಡಿಟೊ ಗ್ರಾಮದಲ್ಲಿ ೨ ಮನೆಗಳೂ [...] ಸುಮಾರು ೫೦೦ ರೂ. ಬೆಲೆ ಬಾ[...] ಕಂಚುಮುಟ್ಟು ಸಾಮಾನುಗಳೂ ಇ[...]ವೆ ಸದರಿಯವನ ಕಾಲಾನಂತರ [...] ಕುಟುಂಬದ ಸಮಸ್ತ ಆಸ್ತಿಗಳೂ [...]ನು ಪ್ರಕಾರ ಅವನ ಮಗನಾದ ಮೇ[ಲ್ಕಂಡ] ಮಹದೇವನಿಗೆ ಬಂದಿರುತ್ತೆ. ಡಿಟೊ [...]ರು ಹುಡುಗನು ಮಾದಯ್ಯನ [...] ಕಾಲದಿಂದಲೂ ನನ್ನ ಪೋಷಣೆಯ[ಲ್ಲಿ ಇ]ರುತ್ತಾನೆ ಮೈನರು ಹುಡುಗನ [...]ಯಾದ ಮಲ್ಲಯ್ಯ, ಮಗನ ಪೋಷ[ಣೆಯ]ನ್ನು ಸಹ ನೋಡದೆ ಅನ್ಯತ್ರ ವಾಸ[ಮಾಡು]ತ್ತಾನೆ ಸಂದರ್ಭಗಳು ಹೀಗಿದ್ದಾ[ಗ] ಡಿಟೋ ಮಲ್ಲಯ್ಯ ಮೈನರು ಬಾಬ್ತು [...]ಸ್ಥಿರ ಆಸ್ತಿಗಳನ್ನು, ಇತರರ ದುರ್ಬೋ[ಧನೆ]ಗೋಸ್ಕರ ಪರಭಾರೆ ಮಾಡುವ ತ[...] ನಲ್ಲಿರುತ್ತಾನೆಂತ ತಿಳಿದು ಬಂದಿರುತ್ತೆ. [...]ಗೆ ಡಿಟೊ ಸ್ವತ್ತುಗಳನ್ನು ಪರಭಾರೆ [...]ಲು ಆ ಕುಟುಂಬಕ್ಕೆ ಯಾವ ದರದಾ[ಗಲೀ ಅ]ವಶ್ಯಕತೆಯೂ ಇರುವುದಿಲ್ಲ. [...] ರೇ ಆಗಲೀ ಡಿಟೊ ಮಲ್ಲಯ್ಯಿಂದ ಮೈ[ನರು] ಬಾಬ್ತು ಸ್ವತ್ತುಗಳನ್ನು ಪರಭಾರೆ ಮ[ಾಡಿ]ಕೊಂಡಲ್ಲಿ ಡಿಟೊ ಪರಭಾರೆಯು [...] ಊರ್ಜಿತವಾಗಲಾರದು ಅಲ್ಲದೆ ಇದ[ರಿಂದ] ಮೈನರಿಗೆ ಉಂಟಾಗುವ ನಷ್ಟಕ್ಕೆಲ್ಲಾ [...]ರೇ ಜವಾಬ್ದಾರರಾಗಬೇಕಾಗುತ್ತೆ.

● ಮಲ್ಲಮ್ಮನ ಎಡಗೈ ಹೆಬ್ಬೆಟ್ಟಿನ ಗು[ರುತು]

ಮೈಸೂರು ಸಿಟಿ ರೇಷನಿಂಗ್ ಆಫೀಸಿನಿಂದಾ:—

ತಾರೀಖು 10-10-1916.

ನೋಟಿಫಿಕೇಷನ್.

ನಂಬರು R 1-100-46-47

ಇದರಿಂದ ಮೈಸೂರು ನಗರದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ:-

ಮೈಸೂರು ನಗರವಾಸಿಗಳು ಕೆಲವು ಈ ಕೆಳಗೆ ಕಂಡ ತರಹ ಬೋಗಸ್ ರೇಷನ್ ಕಾರ್ಡುಗಳನ್ನಿಟ್ಟುಕೊಂಡ ರೇಷನ್ ಸಾಮಾನುಗಳನ್ನು ಪಡೆಯುತ್ತಿರುವುದು ನಮ್ಮ ತಿಳುವಳಿಕೆಗೆ ಬಂದಿರುತ್ತದೆ ಅಂಥಾ ರೇಷನ್ ಕಾರ್ಡುಗಳನ್ನು ಜನರು ಸಂಬಂಧಪಟ್ಟ ಫುಡ್ ಇನ್ಸ್‌ಪೆಕ್ಟರವರ ಆಫೀಸಿಗೆ ವಾಪಸ ಮಾಡಲು ತಮ್ಮ ಮೇಲೆ ಕ್ರಮ ಜರುಗಿಸಬಹುದೆಂಬುದಾಗಿ ಹೆದರಿ ತಮ್ಮಲ್ಲೇ ಇಟ್ಟುಕೊಂಡಿರುವುದು ನಮ್ಮ ಅವಗಾಹನೆಗೆ ಬಂದಿರುತ್ತದೆ ಅಂಥಾ ರೇಷನ್ ಕಾರ್ಡು ಉಳ್ಳವರು ಅಂಥಾ ರೇಷನ್ ಕಾರ್ಡುಗಳನ್ನು ಇದೇ ಮಾಹೆ ೩೦ ನೇ ತಾರೀಖಿನೊಳಗಾಗಿ ಯಾವ ಫುಡ್ ಆಫೀಸಿಗಾಗಲಿ ವಾಪಸ್ಸಾಡಿದಲ್ಲಿ ಅಂಥವರ ಮೇಲೆ ಯಾವ ಕ್ರಮವನ್ನೂ ಜರುಗಿಸುವುದಿಲ್ಲ.

ಯಾರಲ್ಲಾದರು ಅಂಥಾ ಬೋಗಸ್ ರೇಷನ್ ಕಾರ್ಡುಗಳು ೩೦ ನೇ ತಾರೀಖಿನ ನಂತರ ಕಂಡು ಬಂದಲ್ಲಿ, ರೇಷನ್ ಕಾನೂನು ರೀತ್ಯಾ ಅಂಥವರ ಮೇಲೆ ಕ್ರಮ ಜರುಗಿಸಲಾಗುತ್ತೆ. ಅಲ್ಲದೆ ಅಂಥವರ ಮನೆಯ ಕಾರ್ಡನ್ನು ಸಹ ವಜಾ ಮಾಡಲಾಗುತ್ತೆ. ಅಂಥವರು ಈ ವಿಚಾರದಲ್ಲಿ ಮುಂದಾಗಬಹುದಾದ ತೊಂದರೆಗಳಿಗೆ ಈಡಾಗದೆ ನಿಜಾಂಶವನ್ನು ವ್ಯಕ್ತಪಡಿಸುವುದು ಉತ್ತಮವೆಂದು ಈ ಮೂಲಕ ತಿಳಿಯಪಡಿಸಿರುತ್ತೆ.

೧. ಮೈಸೂರು ಸಿಟಿಯಲ್ಲಿ ವಾಸವಿಲ್ಲದೆ ಇರುವ ಜನರ ಹೆಸರಿನಲ್ಲಿರುವ ರೇಷನ್ ಕಾರ್ಡುಗಳು.

೨ ಒಂದು ಸಂಸಾರದಲ್ಲಿರುವ ಜನರ ಹೆಸರನ್ನೇ ನಮೂದಿಸಿ ಬೇರೆ ಬೇರೆ ರೇಷನ್ ಕಾರ್ಡುಗಳನ್ನು ಒಂದೇ ಮನೆಯಲ್ಲಿ ಹೊಂದಿರುವುದು

೩. ಒಂದೇ ಸಂಸಾರದವರು ಬೇರೆ ಬೇರೆ ವಿಳಾಸವನ್ನು ಕೊಟ್ಟು ಅನೇಕ ಕಾರ್ಡುಗಳನ್ನು ಹೊಂದಿರುವವರು.

೪. ಸಿಟಿಯ ವಾಸವನ್ನು ಬಿಟ್ಟು ಬೇರೆ ಸ್ಥಳದಲ್ಲಿರುವವರ ಕಾರ್ಡುಗಳನ್ನು ಇತರರು ದುರುಪಯೋಗಪಡಿಸುತ್ತಿರುವುದು

೫. ಸಂಸಾರದಲ್ಲಿರುವ ಜನರಿಗಿಂತ ಹೆಚ್ಚಿನ ಜನಗಳಿದ್ದಾರೆಂದು ಹೇಳಿ ಕಾರ್ಡು ಪಡೆದಿರುವವರು.

೬ ಮೈಸೂರು ಸಿಟಿಯ ಹೊರಭಾಗದಲ್ಲಿ ವಾಸವಿದ್ದು ಸಿಟಿಯಲ್ಲಿ ರೇಷನ್ ಪಡೆಯುತ್ತಿರುವವರು

೭. ರೇಷನ್ ಕಾರ್ಡಿನಲ್ಲಿರುವ ಬರವಣಿಗೆಯನ್ನು ಅಳಸಿರುವ ಅಥವಾ ಬದಲಾಯಿಸಿರುವಂಥಾ ರೇಷನ್ ಕಾರ್ಡು ಉಳ್ಳವರು

೮ ರೇಷನ್ ಕಾರ್ಡು ಡಿಪೋ ಅಸ್ಸೈನ್‌ಮೆಂಟು ರಿಜಿಸ್ಟರಿನಲ್ಲಿ ವಜಾ ಮಾಡಿದ್ದಾಗ್ಯೂ ಅಂಥಾ ಕಾರ್ಡಿನ ಮೇಲೆ ರೇಷನ್ ಪಡೆಯುತ್ತಿರುವವರು.

೯ ರೇಷನ್ ಕಾರ್ಡು ಹೋಲ್ಡರನ ಕಾರ್ಡು ಮತ್ತೊಬ್ಬರು ಬೇರೆ ಮಾರ್ಗದಿಂದ ಪಡೆದು ದುರುಪಯೋಗಪಡಿಸುತ್ತಿರುವುದು

ಮೇಲೆ ಹೇಳಿದ ೫ ನೇ ನಮೂನೆ ಕಾರ್ಡು ಹೋಲ್ಡರುಗಳು ಅಂಥಾ ಕಾರ್ಡಿನಲ್ಲಿ ಬದಲಾವಣೆ ಮಾಡಿಸಬೇಕಾದಲ್ಲಿ ಸಂಬಂಧಪಟ್ಟ ಫುಡ್ ಆಫೀಸಿಗೆ ಆ ಕಾರ್ಡಿನೊಡನೆ ಒಂದು ಅರ್ಜಿಯನ್ನು ಸಲ್ಲಿಸಿದಲ್ಲಿ ಕೂಡಲೇ ಬದಲಾಯಿಸಿ ಕೊಡಲಾಗುವುದು.

(ಸಹಿ) ಅಬ್ದುಲ್ ರಜಾಕ್,
ರೇಷನಿಂಗ್ ಆಫೀಸರ್, ಮೈಸೂರು ಸಿಟಿ.

ನೋಟೀಸು

ನಂಜನಗೂಡು ತಾಲ್ಲೂಕು, ಬದನವಾಳು ಗ್ರಾಮದ ಮಾಜಿ ಪಟೇಲ್ ಮಾದಪ್ಪನ ಸಾಕು ಮಗ ಮಾದಪ್ಪ ಉರುಫ್ ಸಣ್ಣಪ್ಪನು ಈ ಮೂಲಕ ತಿಳಿಯಪಡಿಸುವುದೇನೆಂದರೆ :—

ನನಗೆ ಮತ್ತು ನನ್ನ ಸಾಕು ತಂದೆಗೆ ಆಗದವರು ಕೆಲವು ಸುಳ್ಳು ಪತ್ರಗಳನ್ನು ಸೃಷ್ಟಿಸಿಕೊಂಡು, ಇತರರಿಗೆ ಮೇಡೊವರ್ ಕೊಡಲು ಪ್ರಯತ್ನ ಮಾಡುತ್ತಿದ್ದಾರೆ ನಾನಾಗಲೀ ನನ್ನ ತಂದೆಯಾಗಲೀ ಸಾಲ ಮಾಡಬೇಕಾದ ಅವಶ್ಯಕವಿಲ್ಲ ನಮ್ಮ ಹೆಸರಿನಲ್ಲಿದ್ದಂತೆ ಯಾವುದಾದರೂ ಕಾಗದಗಳೆಂದು ತಂದಲ್ಲಿ ಇದನ್ನು ಮೇಡೊವರ್ ತೆಗೆದುಕೊಳ್ಳುವವರಿಗೆ ಯಾವ ಪ್ರಯೋಜನವೂ ಆಗಲಾರದೆಂದು ಈ ಮೂಲಕ ತಿಳಿಸಿದೆ

● ಮಾದಪ್ಪ ಉರುಫ್
ಸಣ್ಣಪ್ಪನ ರುಜು.

ರೇಷ್ಮೆ ಸೀರೆಗಳು

(ಕ್ರೇಪ್ ಮತ್ತು ಸಾದಾ)

ತಯಾರಿಸುವವರಿಂದಲೇ ಕೊಂಡುಕೊಳ್ಳಿ

ಶಾಂತಿ ಟೆಕ್ಸ್‌ಟೈಲ್ಸ್,
(ಕಾಳಪ್ಪನವರ ಮಿಲ್ಲಿನ ಪಕ್ಕ)
ಮೈಸೂರು ಸೌತ್, ಮೈಸೂರು.

Edited printed and publishe[d by] A. V. Nagarajan at the Sadhvi P[ress] D. Subbiah Road, Mysore.

ಶ್ರೀ ಗಣೇಶ ಟಾಕೀಸ್, ಮೈಸೂರು

ಇದೇ ಅಕ್ಟೋಬರ್ 14 ನೇ ಸೋಮವಾರದಿಂದ

ಎಂ. ಜಿ. ಯಂ. ರವರ

ಟಾರ್‌ಜಾನ್ಸ್ ನ್ಯೂಯಾರ್ಕ್ ಅಡ್ವೆಂಚರ್

ಪಾತ್ರ:—ಜಾನಿ ವಿಸ್ಮುಲರ್, ಮಾರೀನ್ ಸಲಿವನ್

ಇವರ ಮುಖ್ಯ ಪಾತ್ರ ಇದರೊಡನೆ ಎರಡು ಭಾಗ ಕಲರ್ ಕಾರ್ಟೂನ್ ಸಹ [...]

ಪ್ರತಿ ದಿನ ಮೂರು ಪ್ರದರ್ಶನ

ಮದರಾಸ್ ಸಚಿವರಿಗೆ ಸತ್ಕಾರ

ಮೈಸೂರು ೧೭
...ನ್ನೆ ಸಂಜೆ ಪೌರಸಭಾಂಗಣದಲ್ಲಿ, ಪೌರ ಮತ್ತು ನಗರಾಭಿವೃದ್ಧಿ ಸಮಿತಿಯ ...ಗಿ ಮದರಾಸಿನ ಸ್ಥಳೀಯ ಸಂಸ್ಥೆಗ ...ಚಿವರಾದ ಶ್ರೀ ಡೇನಿಯಲ್ ಥಾಮಸ್‌ಗೆ ಒಂದು ಸತ್ಕಾರವನ್ನು ನಡೆಸಲಾ... ಪಂಗಾಮಿ ಅಧ್ಯಕ್ಷರಾಗಿರುವ ಶ್ರೀ ...ಷ್ಣ ಮೂರ್ತಿರಾಯರು ಅತಿಥಿಯನ್ನು ...ಸಿ, ಮೈಸೂರು ನಗರದಲ್ಲಿ ಪುರಜನ ...ಸಾಧನೆಗಾಗಿ ಕೈಗೊಂಡಿರುವ ಕೆಲಸ ...ಗಳನ್ನು ವಿವರಿಸಿದರು. ಕಾಂಗ್ರೆಸ್ಸಿನ ಉಪನಾಯಕರಾದ ಶ್ರೀ ಅಗರಂ ...ನವರು ಮಾತನಾಡಿ ಮದರಾಸ್ ...ಮಂಡಳದವರು ಕೈಗೊಂಡಿರುವ ಜ...ಪಯುಕ್ತ ಕಾರ್ಯಗಳನ್ನು ಪ್ರಶಂಸಿಸಿ ಮೈಸೂರು ನಗರಕ್ಕೆ ಖಾಸಗಿ ಆ...ಲ್ಲದಿರುವುದು ಒಂದು ದೊಡ್ಡ ಕೊರ...ವಾ ಹೇಳಿದರು. ಶ್ರೀ ಥಾಮಸ್ ...ಉತ್ತರವಿತ್ತು ಮದರಾಸ್ ಸರ್ಕಾರ ...ದ ಪ್ರಚಾರ ಮತ್ತು ಖಾತೆ ನಿರೋ...ತಿಗಳನ್ನು ವಿವರಿಸಿದರು. ಹೊಸ ...ನ ಕಾಲದಲ್ಲಿಯಾದರೂ, ಇಲ್ಲಿನ ಪೌ...ಗೆ ಖಾಸಗಿ ಅಧ್ಯಕ್ಷರು ದೊರೆಯಲೆಂ ...ಹಾರೈಸಿದರು. ಮೈಸೂರು ನಗರದ ...ಂದ ಮತ್ತು ಆಚ್ಚುಕಟ್ಟುಗಳಿಗಾ ...ಚ್ಚಿಗೆಯನ್ನು ಸೂಚಿಸಿದರು.

...ಥಾಮಸ್‌ರವರು ಸಂಜೆ ಟೌನ್‌ಹಾ... ವಿದ್ಯಾರ್ಥಿ ಕಾಂಗ್ರೆಸ್ಸಿನ ಪರವಾಗಿ ...ಬಹಿರಂಗ ಸಭೆಯಲ್ಲಿ ಭಾಷಣ ಮಾ...ಜನರು ಆತ್ಮಾವಲಂಬಿಗಳಾಗಬೇಕೆಂ ...ಗುಲಾಮಗಿರಿಗಾಗಿ ಬಾಯಿ ಬಿಟ್ಟು ...ಬಾರದೆಂದೂ, ಗ್ರಾಮಗಳಲ್ಲಿ ನೆರೆ ...ಜನರ ಸೇವೆ ಮಾಡಬೇಕೆಂದೂ ...ರು.

ಅಭಿನಂದನೆ

...ಮನ್ನ ಹಾಜರವರಿಗೆ ಪ್ರತ್ಯೇ... ...ದನ್ನಾಗಿ ಅಭಿನಂದನೆಯನ್ನು ಸಲ್ಲಿ...ಳೆದ ಸೋಮವಾರ ನಗರದ ಬಾಲ ...ನ್ಸ್ ಪ್ರೈಮರಿ ಶಾಲೆಯ ಅಧ್ಯಾಪಕ ...ವರು ಶಾಲೆಯ ಆವರಣದಲ್ಲಿ ಶ್ರೀ ...ಸ್. ಸೂರ್ಯನಾರಾಯಣರಾಯರ ...ಯಲ್ಲಿ ಒಂದು ಸಭೆಯನ್ನು ಏರ್ಪ...ರು. ರಾಜಪ್ರತ್ರಿಯ ಜನನವು ಸಂ...ಲ್ಲಿ ಹೊಸ ಯುಗದ ಆಂಕುರಾರ್ಪ...ಣೆಂದು ಅಧ್ಯಕ್ಷರು ಹಾರೈಸಿದರು. ...ಗೆ ಕೊಬ್ಬರಿ ಸಕ್ಕರೆ ಹಂಚಲಾ...

ಪ್ರಭುಗಳಿಗೆ ವಿಮಾನ

ಮಹಾರಾಜರವರು ೨೧ ಆ...ಕೊಳ್ಳಬಹುದಾದ ಡಗ್ಲಸ್ ವಿ...ಮಾನವನ್ನು ೭೩,೦೦೦ ರೂಗಳಿಗೆ ...ಕೊಂಡಿರುವರೆಂದು ತಿಳಿದು ಬಂ...

ಕಾರ್ಡುಗಳ ಅಭಾವ

...ದಿನಗಳಿಂದ ಕಾರ್ಡುಗಳು ದೊ...ಬಹಳ ತೊಂದರೆಯಾಗಿದೆ. ಎಲ್ಲಿ ಕೇಳಿದರೂ ಸಹ ಸಿಗುವುದಿಲ್ಲ. ಇ...ಲ್ಲಿ ಬ್ಲಾಕ್ ಮಾರ್ಕೆಟ್ ಬಂದಿದೆ ...ಕಾರ್ಡುಗಳೇ ದೊರೆಯದೆ ಪತ್ರ ...ರಕ್ಕೆ ಬಹಳ ತೊಂದರೆಯಾಗಿದೆ. ...ವರು ಕೂಡಲೇ ತಕ್ಕ ಏರ್ಪಾ...ಡಬೇಕೆಂದು ಸಾರ್ವಜನಿಕರು ಬ...ಲ್ಲಿದ್ದಾರೆ.

ಫೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಗುರುವಾರ ೧೭—೧೦—೪೬ [ಸಂಚಿಕೆ ೬೬

ಬರುವ ವರ್ಷದಿಂದ ಉಪ್ಪಿನ ಸುಂಕ ವಜಾ

ಕಲಾ ಪ್ರದರ್ಶನ

ಬೆಂಗಳೂರಿನಲ್ಲಿ ನಡೆಯಲಿರುವ ಕಾಂಗ್ರೆಸ್ ಅಧಿವೇಶನದ ಅಂಗವಾಗಿ ವಸ್ತು ಪ್ರದರ್ಶನದಲ್ಲಿ ಲಲಿತ ಕಲಾ ಪ್ರದರ್ಶನವನ್ನೂ ಸಹ ಏರ್ಪಡಿಸಲಾಗಿದೆ ಅಧಿವೇಶನ ಮಂಟಪದ ಬಳಿ ಇರುವ ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆ ಕಟ್ಟಡದಲ್ಲಿ ಈ ಪ್ರದರ್ಶನವು ನಡೆಯುವುದು ಕಲಾವಿದರು ತಮ್ಮ ಉತ್ತಮ ಕೃತಿಗಳನ್ನು ಸುಭಾಷ್ ನಗರದ ವಸ್ತು ಪ್ರದರ್ಶನ ಸಮಿತಿಯವರಿಗೆ ಕಳುಹಿಸಿಕೊಡಬೇಕೆಂದು ಕೋರಲಾಗಿದೆ.

ಸುಭಾಷ್ ನ. ರದ ಮೈದಾನ ೮ ಎಕರೆಗಳಷ್ಟು ವಿಸ್ತೀರ್ಣವಿದೆ ಇದರಲ್ಲಿ ಖಾದಿನಗರಕ್ಕೇ ಸುಮಾರು ನಾಲ್ಕು ಎಕರೆಗಳಷ್ಟಿದೆ ಸ್ವಯಂಚಾಲಿ ಪ್ರದರ್ಶನದಲ್ಲಿ ಭಾಗವಹಿಸುವ ಪದಸ್ಥರವರು ತಂಗಲು ತಕ್ಕ ಏರ್ಪಾಡು ಮಾಡಲಾಗಿದೆ

ಸ್ವಯಂಸೇವಕರ ಶಾಖೆ

ಇದೇ ೨೦ ನೇ ತಾರೀಖಿನಿಂದ ಬೆಂಗಳೂರು ಧರ್ಮಾಂಬುಧಿ ಕೆರೆಯಲ್ಲಿ ನಿರ್ಮಿತವಾಗುತ್ತಿರುವ ಸುಭಾಷ್ ನಗರದಲ್ಲಿ ಸ್ವಯಂ ಸೇವಕರಿಗೆ ಕ್ರಮಬದ್ಧವಾದ ಶಿಕ್ಷಣವನ್ನು ಕೊಡಲಾಗುವುದು ಈ ವರೆಗೆ ಸ್ವಯಂ ಸೇವಕರಾಗಿ ಸೇರಿರುವರು ಮತ್ತು ಮುಂದೆ ಸೇರುವವರು ತಪ್ಪದೆ ಶಿಕ್ಷಣ ಕಾರ್ಯಕ್ರಮದಲ್ಲಿ ಭಾಗವಹಿಸತಕ್ಕದ್ದು. ಹೊರಸ್ಥಳದಿಂದ ಬರುವ ಸ್ವಯಂ ಸೇವಕರೂ ಕೂಡ ಮೇಲ್ಕಂಡ ವಿಚಾರವನ್ನು ಗಮನಿಸತಕ್ಕದ್ದು. ಹೆಚ್ಚು ತೊಂದರೆಗಳಿರುವ ಪರಸ್ಥಳದವರು ಕಡೆಯ ಪಕ್ಷ ೨೫ ನೇ ತಾರೀಖಿನ ದಿನವಾದರೂ ಶಿಬಿರದಲ್ಲಿ ಹಾಜರಾಗಬೇಕೆಂದು ಕೋರಲಾಗಿದೆ

ಕರ್ನಾಟಕಕ್ಕೊಂದು ವಿಶ್ವವಿದ್ಯಾನಿಲಯ

ನಿನ್ನೆ ದಿನ ಮಹಾರಾಜಾ ಕಾಲೇಜಿನ ಕರ್ನಾಟಕ ಸಂಘದ ಆಶ್ರಯದಲ್ಲಿ ಭಾಷಣ ಮಾಡುತ್ತಾ ಧಾರವಾಡದ ಪ್ರೊ|| ಎಸ್. ಎಸ್. ಮಾಳವಾಡರವರು ಕರ್ನಾಟಕಕ್ಕೆ ಒಂದು ವಿಶ್ವವಿದ್ಯಾನಿಲಯ ಬೇಕೆಂಬ ಅಂಶವನ್ನು ವಿವರಿಸಿದರು ಆಂಧ್ರದಂತೆ ಪ್ರಾಂತದ ಏಕೀಕರಣಕ್ಕೆ ಮುಂಚೆಯೇ, ಪ್ರತ್ಯೇಕ ವಿಶ್ವವಿದ್ಯಾನಿಲಯವನ್ನು ಪಡೆದರೆ ಅದು ಏಕೀಕರಣಕ್ಕೆ ನೆರವಾಗುವುದೆಂದೂ, ಏಕೀಕರಣಕ್ಕಾಗಿ ವಿಶ್ವವಿದ್ಯಾನಿಲಯ ಸ್ಥಾಪನೆಯನ್ನು ಮುಂದುಹಾಕಬೇಕಾಗಿಲ್ಲವೆಂದೂ ತಿಳಿಸಿದರು.

ಉಪ್ಪಿನ ತೆರಿಗೆ ಜನವರಿ ೧ ರಿಂದ ವಜಾ

ಮೊನ್ನೆ ನಡೆದ ಕೇಂದ್ರ ತಾತ್ಕಾಲಿಕ ಸರ್ಕಾರದ ಮಂತ್ರಿ ಮಂಡಲದ ಸಭೆಯಲ್ಲಿ ಉಪ್ಪಿನ ತೆರಿಗೆಯನ್ನು ಜನವರಿ ೧ ನೇ ತಾರೀಖಿನಿಂದ ವಜಾ ಮಾಡಬೇಕೆಂದು ನಿರ್ಧರಿಸಿರುವುದಾಗಿ ತಿಳಿದು ಬಂದಿದೆ. ತೀರ ಪ್ರದೇಶದಲ್ಲಿ ಉಪ್ಪನ್ನು ಸಣ್ಣ ಪ್ರಮಾಣದಲ್ಲಿ ತಯಾರಿಸುವವರಿಗೆ ಆವಶ್ಯಕವಾದ ರಕ್ಷಣೆಯನ್ನು ಕೊಟ್ಟು ಉಪ್ಪಿನ ಕೈಗಾರಿಕೆಯನ್ನು ರಾಷ್ಟ್ರೀಯವನ್ನಾಗಿ ಮಾಡಲು ತಯಾರಿಸಲಾಗಿದ್ದ ಯೋಜನೆಯನ್ನೂ ಮಂತ್ರಿಮಂಡಲವು ಅಂಗೀಕರಿಸಿದೆಯೆಂದು ಗೊತ್ತಾಗಿದೆ.

ಹೈಸ್ಕೂಲು ಯೂನಿಯನ್

ಸ್ವಂ. ವ.] ಗುಂಡ್ಲುಪೇಟೆ ೧೪

ಇಲ್ಲಿನ ಮುನಿಸಿಪಲ್ ಹೈಸ್ಕೂಲ್ ಯೂನಿಯನ್ನಿನ ಆರಂಭೋತ್ಸವವು ಅಮಲ್ದಾರರಾದ ಶ್ರೀ ಟಿ ಹೆಚ್ ಅಮೀರ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು ಮಂಡ್ಯ ಹೈಸ್ಕೂಲ್ ಹೆಡ್ಮಾಸ್ಟರಾದ ಶ್ರೀ ಎಂ.ಎಸ್. ಲಕ್ಷ್ಮೀನಾರಾಯಣರಾಯರು ಯುಗಪುರುಷರ ಉಪದೇಶ ವಾಣಿಯನ್ನು ಕುರಿತು ಎಲ್ಲರಿಗೂ ಸ್ಫೂರ್ತಿ ಬೋಧಕವಾಗುವಂತೆ ಭಾಷಣ ಮಾಡಿದರು

ಗೋರಿಂಗರ ಆತ್ಮಹತ್ಯ

ಮರಣದಂಡನೆಗೆ ಗುರಿಯಾಗಿದ್ದ ಜರ್ಮನ್ ಸೇನಾಪತಿ ಗೋರಿಂಗರು ನಿನ್ನೆ ಗಲ್ಲಿಗೇರಿಸಲ್ಪಡಬೇಕಾಗಿದ್ದ ಕಾಲಕ್ಕಿಂತ ೨ ಗಂಟೆ ಮುಂಚಿತವಾಗಿ ಪೊಟೋಸಿಯಂ ಸಯನೈಡ್ ವಿಷವನ್ನು ಸೇವಿಸಿ ಆತ್ಮಹತ್ಯೆ ಮಾಡಿಕೊಂಡರು. ಅವರಿಗೆ ವಿಷವು ಯಾವ ರೀತಿ ದೊರಕಿತೆಂಬುದು ದೊಡ್ಡ ಸಮಸ್ಯೆಯಾಗಿದೆ

ಮಂತ್ರಿಗಳ ಮೋಟಾರಿಗೆ ಬಾಂಗಾ ಗಾಡಿ ಡಿಕ್ಕಿ

ಶ್ರೀರಂಗಪಟ್ಟಣ ೧೭

ಪಬ್ಲಿಕ್ಸ್ ವರ್ಕ್ಸ್ ಸಚಿವರಾದ ಶ್ರೀ ಎಲ್. ಸಿದ್ದಪ್ಪನವರು ಮೋಟಾರಿನಲ್ಲಿ ಬರುತ್ತಿದ್ದಾಗ ಮೈಸೂರಿನ ಮಹಮದ್ ಅಮೀರ್ ಎಂಬುವರು ತಮ್ಮ ಟಾಂಗಾ ಗಾಡಿಯನ್ನು ಬೇಜವಾಬ್ದಾರಿಯಿಂದ ಮೋಟಾರಿಗೆ ಡಿಕ್ಕಿ ಹೊಡೆಸಿದ್ದ ಆಪಾದನೆಯನ್ನು ಶ್ರೀರಂಗಪಟ್ಟಣದ ಸ್ಪೆಷಲ್ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರು ಮೊನ್ನೆ ವಿಚಾರಿಸಿ ಆಪಾದಿತನಿಗೆ ೨೦ ರೂ. ಜುಲ್ಮಾನೆ ವಿಧಿಸುವರೆಂದು ಗೊತ್ತಾಗಿದೆ.

ಸಮುದ್ರದಲ್ಲಿ ಯುದ್ಧ ಪಾತಕಿಗಳ ಸಮಾಧಿ

ರಿಬ್ಬೆಂಟ್ರಾಪ್ ಮುಂತಾದ ೧೦ ಮಂದಿ ಯುದ್ಧ ಪಾತಕಿಗಳನ್ನು ಗಲ್ಲಿಗೇರಿಸಲಾಯಿತಷ್ಟೆ ಅವರ ಹೆಣಗಳನ್ನು ಗುಪ್ತವಾಗಿ ಸಮುದ್ರದೊಳಗೆ ಸಮಾಧಿ ಮಾಡಲಾಗಿರುವುದೆಂದು ತಿಳಿದುಬಂದಿದೆ

ಗಲ್ಲಿಗೇರುವ ಮುನ್ನ ರಿಬ್ಬೆನ್‌ಟ್ರಾಪರು 'ದೇವರು ಜರ್ಮನಿಯನ್ನು ಕಾಪಾಡಲಿ' ಎಂದೂ, ಜೂಲಿಯಸ್ ಸ್ಟ್ರೈಚರ್ ಹಿಟ್ಲರಿಗೆ ಜಯವಾಗಲಿ" ಎಂದೂ, ಕೀಟೆಲ್ ಮತ್ತು ಜೋಡಲ್‌ರು 'ನನ್ನ ಜರ್ಮನಿಯೇ ನಿನಗೆ ನಮಸ್ಕಾರ' ಎಂದೂ ಹೇಳಿದರೆಂದು ವರ್ತಮಾನವಾಗಿದೆ. ಇವರನ್ನೆಲ್ಲಾ ಗಲ್ಲಿಗೇರಿಸಿದವರ ಪೈಕಿ ಮಾಸ್ಟರ್ ಸಾರ್ಜೆಂಟ್ ವುಡ್ ಎಂಬುವನು ೧೫ ವರ್ಷದ ಸರ್ವೀಸಿನಿಂದ ೩೪೭ ಮಂದಿಯನ್ನು ಗಲ್ಲಿಗೆ ಹಾಕಿದ್ದಾನೆಂದು ವರದಿಯಾಗಿದೆ

ಬೀಡಿ-ಸಿಗರೆಟು ಸೇವನೆಗೆ ಬಹಿಷ್ಕಾರ

ಅನಂತಪುರ ಜಿಲ್ಲೆಯ ಕದಿರಿ ತಾಲ್ಲೂಕಿನ ಮುತ್ಯಾಲ ಚೆರುವು ಎಂಬ ಗ್ರಾಮದಲ್ಲಿ, ಬೀಡಿ, ಸಿಗರೆಟ್ ಮುಂತಾದ ಹೊಗೆ ಸೇವನೆಯನ್ನು ಬಹಿಷ್ಕರಿಸಲಾಗಿದೆ. ಅಕ್ಟೋಬರ್ ೧ ರಿಂದ ಈ ಪ್ರದೇಶದಲ್ಲಿ ಮದ್ಯಪಾನ ನಿರೋಧ ಜಾರಿಗೆ ಬಂದಿದೆ. ಅಂದಿನಿಂದಲೇ ಈ ಬಹಿಷ್ಕಾರವು ಆರಂಭವಾಯಿತು. ಹಳ್ಳಿಯ ಜನನಾಯಕರು ಮತ್ತು ಹಿಂದೂ-ಮುಸ್ಲಿಂ ಪ್ರಮುಖರುಗಳನ್ನೊಳಗೊಂಡ ಒಂದು ಸಮಿತಿಯು ರಚಿತವಾಗಿದೆ. ಈ ಬಹಿಷ್ಕಾರವು ಯಶಸ್ವಿಯಾಗುವಂತೆಯೂ ಇದನ್ನು ಉಲ್ಲಂಘಿಸುವವರಿಗೆ ಸೂಕ್ತ ಶಿಕ್ಷೆ ವಿಧಿಸಲೂ ಅಧಿಕಾರಿಗಳನ್ನು ಈ ಸಮಿತಿ ನೇಮಿಸಲಾಗಿದೆ

ಪೇಷಾವರಿಗೆ ಪಂ|| ನೆಹರು

ವಿಮಾನದಲ್ಲಿ ಪಂ|| ನೆಹರುರವರು ನಿನ್ನೆ ಪೇಷಾವರನ್ನು ತಲುಪಿದರು ನಿಲ್ದಾಣದಲ್ಲಿ ಇಳಿದ ಕೂಡಲೇ ನೆಹರುರವರು ಗಡಿ ನಾಡಿನ ಪ್ರಧಾನಿ ಡಾ|| ಖಾನ್‌ಸಾಹೇಬರನ್ನು ಆಲಿಂಗಿಸಿಕೊಂಡರು ನೆಹರುರವರ ಆಗಮನದ ಶುಭ ಸೂಚಕವೋ ಎಂಬಂತೆ ಇತ್ತೀಚೆಗೆ ಹಿಂದೆ ಬಿಡಿಸಲ್ಪಟ್ಟ ಖೈದಿಗಳು ಗುಡ್ಡಗಾಡಿನವರು ನಿನ್ನೆ ಖುಲಾಸೆ ಮಾಡಿದ್ದಾರೆ ನೆಹರುರವರು ಗಡಿ ಪ್ರದೇಶವಾದ ವಜೀರಿಸ್ಥಾನಕ್ಕೆ ಭೇಟಿ ಕೊಡಲಿದ್ದಾರೆ

೦೨,೦೦೦ ಟನ್ ವಿಷದ ಗ್ಯಾಸ್ ಅನ್ನು ಕೊಂಡಿದ್ದ ಒಬ್ಬ ವ್ಯಾಪಾರಿ ಹಡಗುಗಳನ್ನು ಬ್ರಿಟನ್ನಿಗೆ ೩೦೦ ಮೈಲಿ ದೂರದಲ್ಲಿ ಅಟ್ಲಾಂಟಿಕ್ ಸಾಗರದೊಳಗೆ ಮುಳುಗಿಸಲಾಯಿತೆಂದು ತಿಳಿದುಬಂದಿದೆ.

ರಾಜ್ ಕಮಲ್, ಮೈಸೂರು.

17-10-46 ರಿಂದ ಯಶಸ್ವಿಯಾದ 5 ನೇ ವಾರ

ನಗರ ಸೀಮ

From 18-10-46 for 4 days
Daily at 10 30. A M

In Old California

: Starring : -
John Wayne
Binnie Borns Etc.

ಸಾಧ್ವಿ

ತಾ॥ ೧೭-೧೦-೪೬ ಗುರುವಾರ

ಖಾಸಗೀ ಅಧ್ಯಕ್ಷರು ಬೇಕು

ರಾಜಧಾನಿಯ ಪೌರಸಭೆಗೆ ಖಾಸಗೀ ಅಧ್ಯಕ್ಷರು ಬೇಕೆಂಬ ಅಂಶವು ಅನೇಕ ವರ್ಷಗಳಿಂದ ಒತ್ತಾಯಪಡಿಸಲ್ಪಡುತ್ತಿದೆ. ಆದರೂ ಸರ್ಕಾರದವರು ಇದಕ್ಕೆ ಇನ್ನೂ ಸಮ್ಮತಿ ಇತ್ತಿಲ್ಲ. ನಿನ್ನೆ ಈ ಪ್ರಸ್ತಾಪವು ಮತ್ತೆ ಬಂದಿತು. ಮದ್ರಾಸಿನ ಸ್ಥಳೀಯ ಸಂಸ್ಥೆಗಳ ಮಂತ್ರಿಗಳಾದ ಶ್ರೀ ಡೇನಿಯಲ್ ಥಾಮಸ್‌ರವರಿಗೆ ಪೌರಸಭೆಯವರು ಸತ್ಕಾರ ಕೂಟವನ್ನೇರ್ಪಡಿಸಿದ್ದಾಗ ಅವರು ಈ ಸಭೆಗೆ ಬೇಗನೇ ಖಾಸಗಿ ಅಧ್ಯಕ್ಷರು ದೊರೆಯಲೆಂದು ಹಾರೈಸಿದರು.

ಹೊಸ ಚುನಾವಣೆಯು ನಡೆಯಲಿರುವ ಈ ಸಮಯದಲ್ಲಿ ಖಾಸಗಿ ಅಧ್ಯಕ್ಷರನ್ನು ಆರಿಸುವುದಕ್ಕೂ ಸಹ ಸುಸಮಯವಾಗಿದೆ. ಸರ್ಕಾರದವರು ತಾವಾಗಿಯೇ ಅಧ್ಯಕ್ಷರನ್ನು ನಾಮಕರಣ ಮಾಡುವ ಪದ್ಧತಿಯು ಹೋಗಬೇಕು. ಪೌರಸಭೆಯ ಸದಸ್ಯರುಗಳಾಗಲೀ, ಅಥವಾ ನಗರದ ಮತದಾರರಾಗಲೀ ನೇರವಾಗಿ ಅಧ್ಯಕ್ಷರನ್ನು ಚುನಾಯಿಸಲು ಕಾನೂನಿನಲ್ಲಿ ಇರುವ ಅವಕಾಶವನ್ನು ಸರ್ಕಾರದವರು ಜಾರಿಗೆ ತರಬೇಕು.

ಸಂಸ್ಥಾನದ ಮುಕ್ಕಾಲು ಮೂರು ಪಾಲು ಪೌರಸಭೆಗಳಿಗೆ ಚುನಾಯಿತ ಅಧ್ಯಕ್ಷರೇ ಇರುವರು. ಎಲ್ಲಾ ಜಿಲ್ಲಾ ಬೋರ್ಡುಗಳಿಗೂ ಇರುವರು. ಮೈಸೂರಿಗಿಂತಲೂ ಹಿರಿಯ ನಗರವಾದ ಬೆಂಗಳೂರಿನಲ್ಲಿ ಖಾಸಗಿ ಅಧ್ಯಕ್ಷರಿರುವರು. ರಾಜಧಾನಿಯಾದ ಮೈಸೂರಿನಲ್ಲಿ ಇಲ್ಲದಿರುವುದು ದೊಡ್ಡ ಕಳಂಕವೇ ಸರಿ. ಶ್ರೀ ಡೇನಿಯಲ್ ಥಾಮಸ್‌ರವರು ಸೂಚಿಸಿರುವಂತೆ ಈಗಲಾದರೂ ಇದಕ್ಕೆ ಅವಕಾಶ ಕಲ್ಪಿಸಿ ಸಂಸ್ಥಾನದವರು ಈ ನಗರದ ಪೌರಸಭೆಯ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ಆರಂಭಿಸುವರೆಂದು ಹಾರೈಸೋಣ.

ಭಾರತದ ಬಗ್ಗೆ ರಾಜ ಘೋಷಣೆ

ಬರುವ ನವಂಬರ್‌ನಲ್ಲಿ ಸೇರುವ ಪಾರ್ಲಿಮೆಂಟಿನ ಹೊಸ ಅಧಿವೇಶನದ ಆರಂಭದಲ್ಲಿ ಬ್ರಿ॥ ಸಾರ್ವಭೌಮರು ಭಾರತದ ರಾಜ್ಯಾಂಗ ಪರಿಸ್ಥಿತಿ ಬಗ್ಗೆ ಮುಖ್ಯವಾದ ಭಾಷಣ ಮಾಡುವರೆಂಬುದಾಗಿ ಗೊತ್ತಾಗಿದೆ.

ರಾಜೀನಾಮೆಯಿತ್ತ ಸಚಿವರುಗಳಿಗೆ ರಾಯಭಾರ

ಕೇಂದ್ರ ತಾತ್ಕಾಲಿಕ ಸರ್ಕಾರದ ಸಚಿವರಾಗಿದ್ದು ರಾಜೀನಾಮೆಯಿತ್ತಿರುವ ಮಿ॥ ಗಳಾದ ಸರ್ ಷಾಫತ್ ಅಹಮದ್ ಮತ್ತು ಸಯ್ಯದ್ ಅಲಿ ಜಹೀರ್ ಇವರುಗಳನ್ನು ಭಾರತ ಸರ್ಕಾರದ ರಾಯಭಾರಿಗಳಾಗಿ ಕಳುಹಿಸಲು ನಿಶ್ಚಯವಾಗಿದೆ.

ಉಪನ್ಯಾಸ

ತುಮಕೂರು ಇಂಟರ್‌ಮೀಡಿಯೆಟ್ ಕಾಲೇಜಿನ ಲೆಕ್ಚರರಾದ ಶ್ರೀ ಎಸ್. ಮಂಜುನಾಥರವರು ಬರುವ ಶನಿವಾರ ಸಂಜೆ ೬ ಗಂಟೆಗೆ ಚಾಮರಾಜನಗರದ ಜನತ ಮಂಟಪದಲ್ಲಿ ಸೇಬು ಹಣ್ಣಿನ ಗಾಡಿ (ಬರ್ನಾರ್ಡ್‌ಷಾ) ಎಂಬ ವಿಚಾರವಾಗಿ ಭಾಷಣ ಮಾಡುವರು. ಸರ್ವರಿಗೂ ಸ್ವಾಗತವಿದೆ.

ರೇಷ್ಮೆ ಸೀರೆಗಳು

(ಕ್ರೇಪ್ ಮತ್ತು ಸಾದಾ)

ತಯಾರಿಸುವವರಿಂದಲೇ ಕೊಂಡುಕೊಳ್ಳಿ

ಶಾಂತಿ ಟೆಕ್ಸ್‌ಟೈಲ್ಸ್
(ಕಾಳಪ್ಪನವರ ಮಿಲ್ಲಿನ ಪಕ್ಕ)
ಮೈಸೂರು ಸೌತ್, ಮೈಸೂರು

ಲೀಗ್ ಸಚಿವರು

ಲೀಗಿನ ಪರವಾಗಿ ಮಿ॥ಗಳಾದ ಲಿಯಾಖತ್ ಆಲಿಖಾನ್, ಐ. ಐ. ಚಂದ್ರೀಘರ್, ಅಬ್ದುಲ್ ರಬ್‌ನಿಸ್ತಾರ್, ಗಜ್ನಫರ್ ಅಲಿಖಾನ್ ಮತ್ತು ಶ್ರೀ ಜೋಗೇಂದ್ರನಾಥ ಮಂಡಲ್ ಇವರುಗಳನ್ನು ಕೇಂದ್ರ ಸರ್ಕಾರದ ಮಂತ್ರಿ ಮಂಡಳಕ್ಕೆ ತೆಗೆದುಕೊಳ್ಳಲಾಗಿದೆ. ವೈಸರಾಯರೂ ಮತ್ತು ಪಂಡಿತ ನೆಹರೂರವರೂ ತಮ್ಮ ಪ್ರವಾಸವನ್ನು ಮುಗಿಸಿಕೊಂಡು ಹಿಂತಿರುಗಿದನಂತರ, ಇವರುಗಳ ಪೋರ್ಟ್‌ಫೋಲಿಯೋ ಹಂಚಿಕೆಯು ನಡೆಯುವುದು.

ಗಲ್ಲಿಗೇರಿಸಲಾಯಿತು

ಕಳೆದ ಘೋರ ಸಂಗ್ರಾಮದಲ್ಲಿ ವಹಿಸಿ, ಅಂತರರಾಷ್ಟ್ರ ವಿಚಾರಣಾ ಯವರಿಂದ ಮರಣ ದಂಡನೆಗೆ ಗುರಿಯಾಗಿದ್ದ ೧೧ ಜನ ಜರ್ಮನ್ ನಾಯಕರನ್ನು ನಿನ್ನೆ ಗಲ್ಲಿಗೆ ಹಾಕಲಾಯಿತು. ಕಾರ್ಯಕ್ರಮವು ೧॥ ಗಂಟೆ ಕಾಲ ನಡೆಯಿತು. ಎಲ್ಲಾ ಮಿತ್ರರಾಷ್ಟ್ರಗಳ ಪ್ರತಿನಿಧಿಗಳೂ ಅಲ್ಲಿ ಹಾಜರಿದ್ದರು.

Edited, printed and published by A. R. Nagarajan at the Sadhvi Press, D. Subbiah Road, Mysore.

ಶ್ರೀ ಗಣೇಶ ಟಾಕೀಸ್, ಮೈಸೂರು

ಇದೇ ಅಕ್ಟೋಬರ್ 14 ನೇ ಸೋಮವಾರದಿಂದ

ಎಂ. ಜಿ. ಯಂ. ರವರ

ಟಾರ್‌ಜಾನ್ಸ್ ನ್ಯೂಯಾರ್ಕ್ ಅಡ್ವೆಂಚರ್

ಪಾತ್ರ—ಜಾನಿ ವಿಸ್ಮುಲರ್, ಮೌರೀನ್ ಓಸಲಿವನ್

ಇವರ ಮುಖ್ಯ ಪಾತ್ರ. ಇದರೊಡನೆ ಎರಡು ಭಾಗ ಕಲರ್ ಕಾರ್ಟೂನ್ ಸಹ.

ಪ್ರತಿ ದಿನ ಮೂರು ಪ್ರದರ್ಶನ

ಮೈಸೂರು ಸಿಟಿ ರೇಷನಿಂಗ್ ಆಫೀಸಿನಿಂದ:—

ತಾರೀಖು 10—10—1946.

ನೋಟಿಫಿಕೇಷನ್.

ನಂಬರು R 1-100—46-47.

ಇದರಿಂದ ಮೈಸೂರು ನಗರದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ:

ಮೈಸೂರು ನಗರವಾಸಿಗಳು ಕೆಲವು ಈ ಕೆಳಗೆ ಕಂಡ ತರಹ ಬೋಗಸ್ ರೇಷನ್ ಕಾರ್ಡುಗಳನ್ನಿಟ್ಟುಕೊಂಡು ರೇಷನ್ ಸಾಮಾನುಗಳನ್ನು ಪಡೆಯುತ್ತಿರುವುದು ನಮ್ಮ ತಿಳಿವಳಿಕೆಗೆ ಬಂದಿರುತ್ತದೆ. ಅಂಥಾ ರೇಷನ್ ಕಾರ್ಡುಗಳನ್ನು ಜನರು ಸಂಬಂಧಪಟ್ಟ ಇನ್ಸ್‌ಪೆಕ್ಟರವರ ಆಫೀಸಿಗೆ ವಾಪಸ್ ಮಾಡಲು ತಮ್ಮ ಮೇಲೆ ಕ್ರಮ ಜರುಗಿಸಬಹುದಾಗಿ ಹೆದರಿ ತಮ್ಮಲ್ಲೇ ಇಟ್ಟುಕೊಂಡಿರುವುದು ನಮ್ಮ ಅವಗಾಹನೆಗೆ ಬಂದಿರುತ್ತದೆ. ಅಂಥಾ ರೇಷನ್ ಕಾರ್ಡು ಉಳ್ಳವರು ಅಂಥಾ ರೇಷನ್ ಕಾರ್ಡುಗಳನ್ನು ಇದೇ ಮಾಹೆ ... ನೇ ತಾರೀಖಿನೊಳಗಾಗಿ ಯಾವ ಫುಡ್ ಆಫೀಸಿಗಾಗಲಿ ಹಾಜರ್ಪಡಿಸಿದಲ್ಲಿ ಅವರ ಮೇಲೆ ಯಾವ ಕ್ರಮವನ್ನೂ ಜರುಗಿಸುವುದಿಲ್ಲ.

ಯಾರಲ್ಲಾದರು ಅಂಥಾ ಬೋಗಸ್ ರೇಷನ್ ಕಾರ್ಡುಗಳು ೩೦ ನೇ ತಾರೀಖಿನ ನಂತರ ಕಂಡು ಬಂದಲ್ಲಿ, ರೇಷನ್ ಕಾನೂನು ರೀತ್ಯಾ ಅಂಥವರ ಮೇಲೆ ಕ್ರಮ ಜರುಗಿಸಲಾಗುತ್ತೆ. ಅಲ್ಲದೆ ಅಂಥವರ ಮನೆಯ ಕಾರ್ಡನ್ನು ಸಹ ವಜಾ ಮಾಡಲಾಗುವುದು. ಅಂಥವರು ಈ ವಿಚಾರದಲ್ಲಿ ಮುಂದಾಗಬಹುದಾದ ತೊಂದರೆಗಳಿಗೆ ಈಡಾಗದೆ ನಿಜವನ್ನು ವ್ಯಕ್ತಪಡಿಸುವುದು ಉತ್ತಮವೆಂದು ಈ ಮೂಲಕ ತಿಳಿಯಪಡಿಸಿರುತ್ತೆ.

೧. ಮೈಸೂರು ಸಿಟಿಯಲ್ಲಿ ವಾಸವಿಲ್ಲದೆ ಇರುವ ಜನರ ಹೆಸರಿನಲ್ಲಿರುವ ಕಾರ್ಡುಗಳು.

೨. ಒಂದು ಸಂಸಾರದಲ್ಲಿರುವ ಜನರ ಹೆಸರನ್ನೇ ನಮೂದಿಸಿ ಬೇರೆ ಬೇರೆ ಕಾರ್ಡುಗಳನ್ನು ಒಂದೇ ಮನೆಯಲ್ಲಿ ಹೊಂದಿರುವುದು.

೩. ಒಂದೇ ಸಂಸಾರದವರು ಬೇರೆ ಬೇರೆ ವಿಳಾಸವನ್ನು ಕೊಟ್ಟು ಅನೇಕ ಕಾರ್ಡುಗಳನ್ನು ಹೊಂದಿರುವವರು.

೪. ಸಿಟಿಯ ವಾಸವನ್ನು ಬಿಟ್ಟು ಬೇರೆ ಸ್ಥಳದಲ್ಲಿರುವವರ ಕಾರ್ಡುಗಳನ್ನು ಇತರರು ದುರುಪಯೋಗಪಡಿಸುತ್ತಿರುವುದು.

೫. ಸಂಸಾರದಲ್ಲಿರುವ ಜನರಿಗಿಂತ ಹೆಚ್ಚಿನ ಜನಗಳಿದ್ದಾರೆಂದು ಹೇಳಿ ಕಾರ್ಡು ಪಡೆದಿರುವವರು.

೬. ಮೈಸೂರು ಸಿಟಿಯ ಹೊರಭಾಗದಲ್ಲಿ ವಾಸವಿದ್ದು ಸಿಟಿಯಲ್ಲಿ ರೇಷನ್ ಪಡೆಯುತ್ತಿರುವವರು.

೭. ರೇಷನ್ ಕಾರ್ಡಿನಲ್ಲಿರುವ ಬರವಣಿಗೆಯನ್ನು ಅಳಿಸಿರುವ ಅಥವಾ ಬದಲಾಯಿಸಿರುವಂಥಾ ರೇಷನ್ ಕಾರ್ಡು ಉಳ್ಳವರು.

೮. ರೇಷನ್ ಕಾರ್ಡು ಡಿಪ್ರೋ ಅಸೈನ್‌ಮೆಂಟು ರಿಜಿಸ್ಟರಿನಲ್ಲಿ ವಜಾ ಮಾಡಿದ್ದರೂ ಅಂಥಾ ಕಾರ್ಡಿನ ಮೇಲೆ ರೇಷನ್ ಪಡೆಯುತ್ತಿರುವವರು.

೯. ರೇಷನ್ ಕಾರ್ಡು ಹೋಲ್ಡರನ ಕಾರ್ಡು ಮುಚ್ಚಿಟ್ಟಿದ್ದರು ಬೇರೆ ಮಾರ್ಗ ಪಡೆದು ದುರುಪಯೋಗಪಡಿಸುತ್ತಿರುವುದು.

ಮೇಲೆ ಹೇಳಿದ ೫ ನೇ ನಮೂನೆ ಕಾರ್ಡು ಹೋಲ್ಡರುಗಳು ಅಂಥಾ ಕಾರ್ಡು ಬದಲಾವಣೆ ಮಾಡಿಸಬೇಕಾದಲ್ಲಿ ಸಂಬಂಧಪಟ್ಟ ಫುಡ್ ಆಫೀಸಿಗೆ ಆ ಕಾರ್ಡಿನ ಒಂದು ಅರ್ಜಿಯನ್ನು ಸಲ್ಲಿಸಿದಲ್ಲಿ ಕೂಡಲೇ ಬೇರೆ ಕೊಡಲಾಗುವುದು.

(ಸಹಿ) ಅಬ್ದುಲ್ ರಜಾಕ್
ರೇಷನಿಂಗ್ ಆಫೀಸರ್, ಮೈಸೂರು.

ರಣಜಿತ್ ಟಾಕೀಸ್

ಮೈಸೂರು

ತಾ॥ 17-10-46 ರಿಂದ

ಅಮೋಘ ಪ್ರಾರಂಭ

ರಾಜಾ ಭರ್ತೃಹರಿ

ಸುಮಿತ್ರಾಜ್ ಶಾಂತಿ, ಸುರೇಂದ್ರ ಮತ್ತು ಅರುಣ್ ಮುಂತಾದವರು ನಟಿಸಿರುವ ಹಿಂದಿ ಚಿತ್ರ

ಪ್ರತಿ ದಿನ ಮೂರು ಆಟಗಳು

Just Arrived !

Fancy E. P. N. S. Cups in all sizes

Babies' Size SOCKS .. Children's CAPS

Also Available

E P N S }
Silver } PRESENTATION ARTICLES

G. V. SURYANARAYANA CHETTY & SONS,
Jewellers & Ready-made Dress Emporium,
Sayaji Rao Road, .. Mysore.

ರಿಜಿ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶುಕ್ರವಾರ ೧೮—೧೦—೪೬ [ಸಂಚಿಕೆ ೬೨

ನೆಹರು ವಿರೋಧಕ್ಕೆ ರಾಜಕೀಯ ಶಾಖೆ ಕೈವಾಡ

...ಜಕುಮಾರಿಯ ನಾಮಕರಣೋತ್ಸವ

ಮೈಸೂರು ೧೮

...ಜಕುಮಾರಿಯ ನಾಮಕರಣೋತ್ಸವ ...ಕ್ಟೋಬರ್ ೨೧ ನೇ ತಾ॥ ಜರುಗುವ ...ಸರ್ಕಾರಿ ಪ್ರಕಟಣೆ ಹೊರಬಿದ್ದಿದೆ. ...ಶಾಲಾ ಬಾಲಕ ಬಾಲಕಿಯರುಗಳ ...ಸಿಹಿ ತಿಂಡಿಯೂ, ಎಲ್ಲಾ ಜಿಲ್ಲಾ ...ಗಳಲ್ಲೂ ಬಡ ಬಗ್ಗರಿಗೆ ಅನ್ನದಾನ ...ಸಿಯುವುವು, ಎಲ್ಲಾ ಕೈಗಾರಿಕಾ ...ಗಳಲ್ಲೂ ಸಂಬಳದೊಂದಿಗೆ ಆ ದಿನ ...ಕೊಡಲಾಗುವುದು. ದೇವಸ್ಥಾನ, ...ಮತ್ತು ಚರ್ಚುಗಳಲ್ಲಿ ಆ ದಿನ ...ಪೂಜೆಗಳು ಜರುಗುವುವು. ಮೈಸೂ... ...ಬೆಂಗಳೂರು ನಗರಗಳಲ್ಲಿ ಏಕ ...೨೧ ಕುಶಾಲ ತೋಪುಗಳು ಹಾರಿ...ವುವು.

...ಾ॥ ರಂಗಣ್ಣನವರ ನಿಧನ

...ಸ್ಥಾನಿಯ ಪ್ರಸಿದ್ಧ ಡಾಕ್ಟರಾದ ಶ್ರೀ ...ರಂಗಣ್ಣನವರು ಕಳೆದ ೧೬ ನೇ ತಾ ...ಬೆಳಗಿನ ಜಾವ ೨॥ ಗಂಟೆಗೆ ತಮ್ಮ ... ವಯಸ್ಸಿನಲ್ಲಿ ನಿಧನರಾದರೆಂದು ...ವಿಷಾದಿಸುತ್ತೇವೆ. ದಿವಂಗತರ ...ಣ್ಣ ಮಕ್ಕಳೂ, ಒಟ್ಟು ಗಂಡು ಮ... ...ಮೊಮ್ಮಕ್ಕಳೂ ಇದ್ದಾರೆ.

ಅವಧಿ ಹೆಚ್ಚಿಸಿದೆ

...ಸಭೆಯ ಚುನಾವಣೆಗೆ ಕಾಂಗ್ರೆಸ್ಸಿ... ...ನಿಲ್ಲುವವರು ಅರ್ಜಿಯನ್ನು ... ನಾಳೆ ಮಧ್ಯಾಹ್ನ ಒಂದು ಗಂಟೆ ...ವಧಿಯನ್ನು ಹೆಚ್ಚಿಸಲಾಗಿದೆಯೆಂ...ೆ ರಾತ್ರಿ ೮ ಗಂಟೆವರೆಗೆ ಅಕ್ಷೇಪಣೆ ...ಸ್ವೀಕರಿಸಲಾಗುವುದೆಂದೂ ಚುನಾ...ಸಮಿತಿಯ ಕಾರ್ಯದರ್ಶಿ ಶ್ರೀ॥ ಎಂ ...ಯ್ಯನವರು ತಿಳಿಸಿದ್ದಾರೆ.

ಅರಮನೆ ಸುದ್ದಿ

...ನ್ ಮಹಾರಾಜರವರು ಮಾಜೀ ...ನ ಪ್ರಧಾನ ಶಿರೋಮಣಿ ಎನ್. ...ಯ್ಯಂಗಾರ್, ಸಹಕಾರ ಸಂಘಗಳ ...ರಿಜಿಸ್ಟ್ರಾರ್ ಶ್ರೀ ಕೆ ಸುಬ್ಬರಾಯ ...ದಿನ ಭೇಟಿ ದಯಪಾಲಿಸಿದರು.

...ಳ ಧಾನ್ಯಗಳ ಅಭಾವ

...ಪರಿಸ್ಥಿತಿ ಬಹಳ ಕಠಿಣವಾಗಿರು...ದಲ್ಲಿ ಜನರು ಮಿಶ್ರಾಹಾರ ಪ...ನ್ನಾದರೂ ಬಳಸಲು ಅವಕಾಶವಿ... ದ್ವಿದಳ ಧಾನ್ಯಗಳ ಬೆಲೆಗೆ ಪ...ೆ ಇಲ್ಲ. ಯಾವ ಧಾನ್ಯವೂ ...ಗೆ ಇಷ್ಟು ಸೇರು ಎನ್ನಿಸಿಕೊಳ್ಳು...ಕ್ಷೆ ಇಲ್ಲದೆ ಸೇರಿಗೆ ಎಷ್ಟು ರೂ. ...ಯವಾಗಿದೆ. ಸರ್ಕಾರದವ...ರೇಳೆ, ಅಲಸಂದೆ ಇವುಗಳನ್ನು ...ವಾಲಳ ಮಾರಿಸುತ್ತಿರುವುದಾ...ುದೆಯಾದರೂ ಅನೇಕ ಅಂಗಡಿಗ...ಳ ಹೆಸರೇ ಇಲ್ಲ. ಈಗಲಾದ...ದವರು ದ್ವಿದಳ ಧಾನ್ಯಗಳ ಮ...ಷ್ಟೆಯ ಬೆಲೆಯನ್ನು ನಿಗದಿ...ಿ ಕಡೆಯೂ ಸಾರ್ವಜನಿಕರ...ಿಗೆ ದೊರೆಯುವಂತೆ ಮಾಡಿ ...ವಿಂದ ವಿಶೇಷವಾಗಿ ಬಳಲು...ಸವರಿಗೆ ಸಹಾಯ ಮಾಡು...

...ಹೆಸ್ಟೆಸಿ...

...ಸು ನಾಮದೇವ ಸಮಾಜ ...೧೩ ನೇ ತಾ॥ ಸಭೆ ಸೇರಿ ಶ್ರೀ ...ಜರವರಿಗೆ ಪುತ್ರೀ ರತ್ನ ಜನ...ಬಗ್ಗೆ ತಮ್ಮ ಸಂತೋಷವನ್ನು ...ಣ್ಣ ಮಕ್ಕಳಿಗೆ ಸಿಹಿ ಹಂ...ಚಿದರು

ಅರಣ್ಯ ಇಲಾಖೆಯಲ್ಲಿ ವಿಶೇಷ ವರಮಾನ

ಸ್ವಂ.ಸು.] ಬೆಂಗಳೂರು ೧೭

೧೯೪೪-೪೫ ನೇ ಸಾಲಿನಲ್ಲಿ ಸರ್ಕಾರದ ಅರಣ್ಯ ಇಲಾಖೆಯಲ್ಲಿ ೪೩.೩೭ ಲಕ್ಷ ರೂಗಳ ವರಮಾನ ಬಂದಿದೆ. ಖರ್ಚೆಲ್ಲ ಕಳೆದು ೧೯.೪೭ ಲಕ್ಷ ರೂಗಳು ಉಳಿತಾಯವಾಗಿದೆ.

ಅ॥ ಕಮೀಷನರಾಗಿ ಭರ್ತಿ

ಅಮಲ್ದಾರರಾದ ಶ್ರೀ ಎ ಪಿ ಮಲ್ಲಪ್ಪನವರನ್ನು ಅ॥ ಕಮೀಷನರನ್ನಾಗಿ ಭರ್ತಿ ಮಾಡಿ ಮಂಡ್ಯದ ಜಿಲ್ಲಾ ಖಜಾನೆ ಅಧಿಕಾರಿಗಳನ್ನಾಗಿಯೂ, ಶ್ರೀ ಡಿ ಬಸವರಾಜ ಅರಸಿನವರನ್ನು ಅ॥ ಕ॥ ಆಗಿ ಭರ್ತಿ ಮಾಡಿ ಶಿವಮೊಗ್ಗ ಜಿಲ್ಲಾ ಖಜಾನೆ ಅಧಿಕಾರಿಗಳನ್ನಾಗಿಯೂ ನೇಮಿಸಲಾಗಿದೆ. ಅ॥ ಕ॥ ಮಿ॥ ಎಂ ಆ ಮಿ ನು ಲ್ ಮುಲ್ಯರವರನ್ನು ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಅಧಿಕಾರಿಗಳನ್ನಾಗಿ ವರ್ಗಾಯಿಸಲಾಗಿದೆ.

ನೆಹರೂರವರಿಗೆ ಲೀಗಿನ ವಿರೋಧ ಪ್ರದರ್ಶನ

ಪಂಡಿತ ನೆಹರೂರವರು ಪೆಷಾವರ್ ವಿಮಾನ ನಿಲ್ದಾಣದಲ್ಲಿಳಿದಾಗ ಸಾವಿರಾರು ಜನ ಮುಸ್ಲಿಮರು ಕಪ್ಪು ಬಾವುಟಗಳನ್ನು ಹಿಡಿದು 'ನೆಹರೂ, ಹಿಂತಿರುಗಿ;' 'ಕಾಂಗ್ರೆಸ್ ಅಳಿಯಲಿ;' ಎಂಬ ಘೋಷಣೆಗಳೊಡನೆ ವಿರೋಧ ಪ್ರದರ್ಶನ ನಡೆಸಿದರು. ಗಡಿನಾಡಿನ ಹಣಕಾಸಿನ ಸಚಿವರಾದ ಶ್ರೀ ಮೆಹರ್‌ಚಂದ್ ಖನ್ನಾರವರ ಕಾರಿಗೆ ಏಟು ತಗಲಿತು. ಪ್ರಧಾನರಾದ ಡಾ॥ ಖಾನ್ ಸಾಹೇಬರವರ ಮೇಲೆ ಏಟೆಯನ್ನೆಸೆಯಲಾಯಿತು. ಆದರೆ ಅವರಿಗೆ ಅದು ತಗಲದೆ ಸಮೀಪದಲ್ಲಿದ್ದ ಪೋಲೀಸ್ ಅಧಿಕಾರಿಗಳಿಗೆ ತಗುಲಿತು. ಆದರೂ ಅಪಾಯವೇನೂ ಒದಗಲಿಲ್ಲ. ಡಾ॥ ಖಾನ್ ಸಾಹೇಬರು ಈ ಗಲಭೆ ವಿಚಾರ ಕುರಿತು "ಈ ಪ್ರದರ್ಶನಕಾರರು ಮರೆಯಲ್ಲಿ ನಿಂತು ಆಡಿಸುವವರ ಕೈಗೊಂಬೆಗಳು, ಈ ಗಲಭೆಗಳ ಹಿಂದೆ ಲೀಗಿನವರ ಕೈವಾಡವಿದೆ" ಎಂದು ತಿಳಿಸಿದರು.

ಮೌನಾಚರಣೆ

ಕಳೆದ ಎರಡು ಮಹಾಯುದ್ಧಗಳ ಸೈನಿಕರಿಗಾಗಿ ಭಾರತದಾದ್ಯಂತವೂ ನವಂಬರ್ ೧೦ ನೇ ಭಾನುವಾರ ೧೧ ಘಂಟೆಗೆ ಎರಡು ನಿಮಿಷಗಳ ಕಾಲ ಮೌನವನ್ನಾಚರಿಸಬೇಕೆಂದು ಬ್ರಿ॥ ಸಾರ್ವಭೌಮರು ಸೂಚಿಸಿದ್ದಾರೆ

ದಂಡಿನಲ್ಲೂ ರಜಾ

ಸ್ವಂ.ಸು ವರ್ತ] ಬೆಂಗಳೂರು ೧೮

ಶ್ರೀಮನ್ಮಹಾರಾಜರವರಿಗೆ ಪುತ್ರೀ ಜನನವಾಗಿರುವ ಸಂಬಂಧದಲ್ಲಿ ಈ ತಿಂಗಳು ೨೧ ನೇ ತಾ॥ ಬೆಂಗಳೂರು ದಂಡಿನಲ್ಲಿಯೂ ರಜಾ ಕೊಡಲಾಗುವುದು.

§ ಮೈಸೂರು ಮಹಾರಾಜರ ಮೈಸೂರಿನವರು ಡಿಪಾಜಿಟ್ ಮಾಡಿರುವ ಶಾಲಾ ನಿಧಿ ೧೦೦೦ ರೂ ಅನ್ನು ಸರ್ಕಾರದವರು ಅಂಗೀಕರಿಸಿದ್ದಾರೆ.

• ಸರ್ಕಾರೀ ಜೀವವಿಮೆಗೆ ವಯಸ್ಸಿನ ದಾಖಲಾತಿಗೆ ಸಾಕ್ಷಿ ಹಾಕುವ ಅಧಿಕಾರವನ್ನು ಎಲ್ಲಾ ಗೆಜೆಟೆಡ್ ಅಧಿಕಾರಿಗಳಿಗೂ ಕೊಡಲಾಗಿದೆ.

• ಸರ್ಕಾರಕ್ಕೆ ಕೊಡಬೇಕಾದ ಸಾಲಗಳ ಬಾಬ್ತು ಸುಸ್ತೀ ಬಡ್ಡಿಯನ್ನು ಕೊಡುವ ಪದ್ಧತಿಯನ್ನು ರದ್ದು ಮಾಡಲಾಗಿದೆ.

• ವಿಶ್ವವಿದ್ಯಾನಿಲಯದ ಸ್ಥಾಪಕರುಗಳಾದ ಶ್ರೀಗಳಾದ ಗುರುವಾರೆಡ್ಡಿ, ಇ ಕೆ ರಾಮಸ್ವಾಮಿ ಅಯ್ಯರ್ ಮತ್ತು ಜಿ.ಸಿ ದಾಸ್‌ರವರೂ ಶ್ರೀ ಪಿ ಎಂ ಶ್ರೀನಿವಾಸಯ್ಯನವರ ಇಂಜನಿಯರಿಂಗ್ ಕಾಲೇಜನ್ನು ಈ ದಿನ ಸಂದರ್ಶಿಸಿ ಅದಕ್ಕೆ ಅಂಗೀಕಾರ ಕೊಡುವ ಅಂಶವನ್ನು ಪರಿಶೀಲಿಸಿದರು

ಗೋರಿಂಗನಿಗೆ ವಿಷವು ಸಿಕ್ಕಿದ ಬಗೆ

ಮರಣ ದಂಡನೆಗೆ ಗುರಿಯಾಗಿದ್ದ ನಾಜೀ ನಾಯಕನಾದ ಗೋರಿಂಗನನ್ನು ಅವನ ಹೆಂಡತಿಯು ಕಾರಾಗೃಹದಲ್ಲಿ ಭೇಟಿ ಮಾಡಿ ಅವನನ್ನು ಚುಂಬಿಸಿದಾಗ ತನ್ನ ಬಾಯಿಂದ ಅವನ ಬಾಯಿಗೆ ವಿಷವನ್ನು ಇಟ್ಟಿದ್ದ ಸಣ್ಣ ಕ್ಯಾಪ್‌ಸೋಲ್ ಎಂಬ ಕೋವೆಯನ್ನು ವರ್ಗಾಯಿಸಿದಳೆಂದು ಒಂದು ವರದಿಯು ತಿಳಿಸುತ್ತದೆ

ನೆಹರು ವಿರೋಧಕ್ಕೆ ರಾಜಕೀಯ ಶಾಖೆ ಕೈವಾಡ

ಪಂ॥ ನೆಹರೂರವರ ವಿರೋಧವಾಗಿ ಪೆಷಾವರಿನಲ್ಲಿ ಮೊನ್ನೆ ನಡೆದ ಪ್ರದರ್ಶನದಲ್ಲಿ ಭಾರತ ಸರ್ಕಾರದ ರಾಜಕೀಯ ಶಾಖೆಯ ಕೈವಾಡವಿದೆಯೆಂದು ಖಾನ್ ಅಬ್ದುಲ್ ಗಫಾರ್ ಖಾನರು ತಿಳಿಸಿದ್ದಾರೆ. ನೆಹರೂರವರು ಗಡಿ ಪ್ರದೇಶಗಳ ಪ್ರವಾಸ ಕೈಗೊಳ್ಳುವುದನ್ನು ನಾನಾ ವಿಧದಲ್ಲಿ ತಪ್ಪಿಸಲು ಪ್ರಯತ್ನಪಟ್ಟು ವಿಫಲರಾಗಿ, ಈಗ ನೆಹರೂರವರಿಗೆ ಒಂದು ವಿಧವಾದ ಪಾಠ ಕಲಿಸಲು ಹೂಡಿದ ತಂತ್ರವಿದೆಂದು ಅವರು ವಿವರಿಸಿದ್ದಾರೆ.

ಮದ್ರಾಸಿನ ಮಂತ್ರಿಗಳಿಗೆ ಸತ್ಕಾರ

ಸ್ವಂ.ಸು.ವರ್ತ] ಬೆಂಗಳೂರು ೧೮

ನಿನ್ನೆ ಸಂಜೆ ಪೌರಸಭಾಧ್ಯಕ್ಷರಾದ ಶ್ರೀ ಪಿ ಶಿವಶಂಕರ್‌ರವರು ಮದರಾಸಿನ ಸ್ಥಳೀಯ ಸಚಿವರಾದ ಶ್ರೀ ಡೇನಿಯಲ್ ಥಾಮಸ್‌ರವರಿಗೆ ಒಂದು ಭಾರಿ ಸತ್ಕಾರವನ್ನು ಏರ್ಪಡಿಸಿದ್ದರು. ಈ ಸಂದರ್ಭದಲ್ಲಿ ಶ್ರೀ ಥಾಮಸ್‌ರವರು ಮಾತನಾಡಿ ಮೈಸೂರಿಗೂ ಮದರಾಸಿಗೂ ಇರುವ ಬಾಂಧವ್ಯವು ಇನ್ನೂ ಬೆಳೆಯಲೆಂದು ಹಾರೈಸಿದರು. ಮದ್ರಾಸ್ ಸರ್ಕಾರದವರು ಕೈಗೊಂಡಿರುವ ಪಾನ ನಿರೋಧ ಕಾರ್ಯಕ್ರಮಕ್ಕೆ ಇಲ್ಲಿನ ಸರ್ಕಾರದ ಮತ್ತು ಸಾರ್ವಜನಿಕರ ಬೆಂಬಲವನ್ನು ಬೇಡಿದರು. ಮೈಸೂರಿನ ಅಂದ ಚೆಂದಗಳನ್ನು ಹೊಗಳಿದರು. ಮೈಸೂರು ನಗರದ ಅಭಿವೃದ್ಧಿ ಯೋಜನೆಯು ತಮ್ಮ ಮನಸ್ಸನ್ನು ಬಹಳ ಆಕರ್ಷಿಸಿತೆಂದು ಹೇಳಿದರು. ತಮ್ಮ ಪ್ರಾಂತ್ಯದ ಸ್ಥಳೀಯ ಸಂಸ್ಥೆಗಳಲ್ಲಿ ಪ್ರಜಾ ಸ್ವಾತಂತ್ರ್ಯವು ಬೆಳೆದಿರುವಂತೆ ಇಲ್ಲಿಯೂ ಬೆಳೆಯಲೆಂದೂ, ಇಲ್ಲಿನ ಅಂದ ಚೆಂದಗಳು ಅಲ್ಲಿಯೂ ಬರಲೆಂದು ಹಾರೈಸಿದರು.

ಸೆಂಟ್ರಲ್ ಕಾಲೇಜಿನ ವಾಣಿಜ್ಯ ಸಂಘದ ವಿದ್ಯಾರ್ಥಿಗಳಿಗೆ ಭಾಷಣ ಮಾಡುತ್ತಾ ಶ್ರೀ ಥಾಮಸ್‌ರವರು ದಿನದಿನವೂ ಬೆಳೆಯುತ್ತಿರುವ ವಾಣಿಜ್ಯ ಕ್ಷೇತ್ರದಲ್ಲಿ ತರುಣರು ಯೋಗ್ಯವಾದ ಪಾತ್ರವನ್ನು ವಹಿಸಬೇಕೆಂದೂ ಸರ್ಕಾರೀ ನೌಕರಿಗಳಿಗೂ, ಚಾಕರಿಗಳಿಗೂ ಹಂಬಲಿಸಬಾರದೆಂದು ತಿಳಿಸಿದರು.

ನವಖಾಳಿಯಲ್ಲಿ ಐದು ಸಾವಿರ ಜನರ ಕೊಲೆ

ಕಲ್ಕತ್ತ ಪ್ರಾಂತ್ಯದ ನವಖಾಳಿ ಮತ್ತು ತಿಪ್ಪೆರ ಜಿಲ್ಲೆಗಳಲ್ಲಿ ಕಳೆದ ೧೦ ನೇ ತಾ॥ ನಿಂದ ೫ ಸಹಸ್ರ ಮಂದಿಯು ಕೊಲೆಯಾಗಿದೆಯೆಂದು ಬಂಗಾಳ ಪ್ರಾಂತೀಯ ಹಿಂದೂ ಮಹಾಸಭೆಯ ಅಧ್ಯಕ್ಷರು ಪ್ರಕಟಿಸಿದ್ದಾರೆ. ದರೋಡೆ ಬಲವಂತದಿಂದ ಮತಾಂತರಗೊಳಿಸುವುದು, ಬೆಂಕಿಯಿಂದ ಸುಡುವುದು, ಇವೇ ಮೊದಲಾದ ಕೃತ್ಯಗಳ ದೆಸೆಯಿಂದ ೫೦ ಸಾವಿರ ಮಂದಿ ನರಳುತ್ತಿದ್ದಾರೆಂದು ಹೇಳಲಾಗಿದೆ. ಈ ಪ್ರದೇಶಗಳನ್ನು ಬಾಧಿತವೆಂದು ಘೋಷಿಸಬೇಕೆಂದು ಸಲಹೆ ನೀಡುವವರೂ, ಶ್ರೀ ಶರತ್‌ಚಂದ್ರ ಬೋಸರೂ ಈ ದಿನ ಭೇಟಿ ಮಾಡಿ ಪರಿಶೀಲಿಸಿದರು.

ಲೀಗಿನ ನೀತಿಯ ಬಗ್ಗೆ ಮಹಾತ್ಮರ ಸಂಶಯ

"ಹಿಂದೂಗಳೂ, ಮುಸ್ಲಿಮರೂ ಪ್ರತ್ಯೇಕವಾದ ರಾಷ್ಟ್ರಗಳಿಗೆ ಸೇರಿದವರೆಂದು ಹೇಳಿಕೊಳ್ಳುವ ಮಿ॥ ಜಿನ್ನಾರವರು ತಮ್ಮನ್ನು ಪ್ರತಿನಿಧಿಸಲು ತಮ್ಮ ಸ್ಥಾನಗಳ ಪೈಕಿ ಒಂದನ್ನು ಹರಿಜನರೊಬ್ಬರಿಗೆ ಕೊಟ್ಟಿರುವುದು ಅರ್ಥವಾಗದಂತಿದೆ" ಎಂದು ಮಹಾತ್ಮ ಗಾಂಧಿಯವರು ಕೇಂದ್ರ ಸರ್ಕಾರಕ್ಕೆ ಲೀಗು ಪ್ರವೇಶಿಸಿರುವ ನೀತಿಯ ಬಗ್ಗೆ ತಮ್ಮ ಸಂಶಯವನ್ನು ವ್ಯಕ್ತಪಡಿಸಿದ್ದಾರೆ. ಲೀಗು ಸರ್ಕಾರಕ್ಕೆ ಪ್ರವೇಶಿಸಿದ ಕೂಡಲೇ ಹೋರಾಟದ ಪ್ರವೃತ್ತಿಯನ್ನೇ ಇಟ್ಟುಕೊಂಡ ಶಂಕೆಗೆ ಅವಕಾಶವಾಗಿದೆಯೆಂದೂ ಲೀಗಿನ ಈ ನೀತಿಯು ಪ್ರಾಮಾಣಿಕತನದಿಂದ ಕೂಡಿಲ್ಲವೆಂದೂ, ಅವರು ತಿಳಿಸಿದ್ದಾರೆ.

ಸಾಧ್ವಿ

ತಾ॥ ೧೮-೧೦-೪೬ ಶುಕ್ರವಾರ

ಕರ್ನಾಟಕ ವಿಶ್ವವಿದ್ಯಾಲಯ

ಬೊಂಬಾಯಿ ಸರ್ಕಾರದ ಮುಖ್ಯ ಮಂತ್ರಿ ಶ್ರೀ ಬಿ ಜಿ ಖೇರರವರಲ್ಲಿ ಕರ್ನಾಟಕದ ಮುಂದಾಳುಗಳು ನಿಯೋಗ ಹೋಗಿ ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆಯ ವಿಷಯವನ್ನು ವಿವರಿಸಿದರು. ಮಾನ್ಯ ಮಂತ್ರಿಗಳು ನಿಯೋಗದವರ ಅಭಿಪ್ರಾಯಗಳನ್ನು ಅಂಗೀಕರಿಸಿದರು. ಬೊಂಬಾಯಿ ಸರ್ಕಾರದವರು ಒಂದು ಪ್ರಕಟನೆಯನ್ನೂ ಸಹ ಹೊರಡಿಸಿರುವರು. ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆಗೆ ಸಮ್ಮತಿಯನ್ನಿತ್ತಿರುವರು.

ಭಾಷಾವಾರು ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸುವ ಧ್ಯೇಯವನ್ನೂ ಸಹ ಬೊಂಬಾಯಿ ಸರ್ಕಾರದವರು ಅಂಗೀಕರಿಸಿರುವರು. ಅದರಂತೆ ಮಹಾರಾಷ್ಟ್ರ ಮತ್ತು ಗುಜರಾತುಗಳಲ್ಲಿಯೂ ವಿಶ್ವವಿದ್ಯಾಲಯಗಳು ಸ್ಥಾಪಿತವಾಗಲಿರುವುವು. ಇದಕ್ಕಾಗಿ ಸಲಹೆಗಳನ್ನು ಕೊಡಲು ಅವರು ನಿಪುಣರಿಂದ ಕೂಡಿದ ಸಮಿತಿಯೊಂದನ್ನೂ ರಚಿಸಿರುವರು. ಈ ಸಮಿತಿಯವರ ವರದಿಯು ಬೇಗನೆ ಹೊರಬಿದ್ದು ವಿಶ್ವವಿದ್ಯಾಲಯವು ಕಾರ್ಯರೂಪಕ್ಕೆ ಬರುವುದೆಂದು ನಿರೀಕ್ಷಿಸಲಾಗಿದೆ.

ಮೈಸೂರು ವಿಶ್ವವಿದ್ಯಾನಿಲಯವನ್ನೇ ಕರ್ನಾಟಕ ವಿಶ್ವವಿದ್ಯಾನಿಲಯವನ್ನಾಗಿ ಮಾಡಬೇಕೆಂದು ಹತ್ತಾರು ವರ್ಷಗಳ ಹಿಂದೆ ಹಲವು ಧುರೀಣರು ಹಂಬಲಿಸುತ್ತಿದ್ದರು. ಅದಕ್ಕಾಗಿ ವಿಶೇಷ ಪ್ರಯತ್ನಗಳನ್ನೂ ಮಾಡಿದರು. ನಮ್ಮ ಪ್ರಭುಗಳವರಲ್ಲಿ ನಿಯೋಗವನ್ನೂ ಸಹ ತಂದಿದ್ದರು. ಕನ್ನಡಿಗರು ಉಚ್ಚ ಶಿಕ್ಷಣಕ್ಕೆ ಬೊಂಬಾಯಿ ವಿದ್ಯಾಲಯವನ್ನು ಆಶ್ರಯಿಸುವ ಬದಲು ಮೈಸೂರಿಗೆ ಬರುವುದು ಲೇಸೆಂದು ಭಾವಿಸಿದ್ದರು. ಆದರೂ ಈ ಪ್ರಯತ್ನವು ಯಶಸ್ವಿಯಾಗಲಿಲ್ಲ. ಇಡೀ ಕರ್ನಾಟಕಕ್ಕೆ ಸಂಸ್ಕೃತಿಯ ಕೇಂದ್ರವಾಗುವ ಸುಯೋಗವು ಮೈಸೂರಿಗೆ ತಪ್ಪಿದಂತಿದೆ. ಆದರೂ ಹೊಸದಾಗಿ ಸ್ಥಾಪಿತವಾಗುವ ವಿಶ್ವ ವಿದ್ಯಾಲಯದೊಡನೆ ಮೈಸೂರು ವಿದ್ಯಾಲಯವು ಸಕಲ ವಿಧಗಳಲ್ಲಿಯೂ ಸಹಕರಿಸಿ ಕನ್ನಡನಾಡು ಮತ್ತು ನುಡಿಯ ಅಭ್ಯುದಯವನ್ನು ಸಾಧಿಸಲು ವಿಶೇಷ ಅವಕಾಶವಿರುತ್ತದೆ.

ಒಂದೇ ಭಾಷೆಯನ್ನು ಆಡುವ ಪ್ರಾಂತಗಳಲ್ಲಿ ಅನೇಕ ವಿಶ್ವ ವಿದ್ಯಾಲಯಗಳು ಇರುವ ನಿದರ್ಶನಗಳು ಹೇರಳವಾಗಿವೆ. ಆದುದರಿಂದ ಕರ್ನಾಟಕದಲ್ಲಿ ಮತ್ತೊಂದು ವಿದ್ಯಾಲಯವು ಹುಟ್ಟುವ ಈ ಸುಸಂಧಿಯನ್ನು ಸಕಲರೂ ಸ್ವಾಗತಿಸಬೇಕು. ಹತ್ತಾರು ವರ್ಷಗಳಿಂದ ಕೇವಲ ಸಮಾಲೋಚನೆಯಲ್ಲಿಯೇ ಸಮಾಪ್ತವಾಗುತ್ತಿದ್ದ ಈ ಸಮಸ್ಯೆಯು ಈಗ ಕಾರ್ಯರೂಪಕ್ಕೆ ಬರಲಿರುವುದು. ಕಾಂಗ್ರೆಸ್ ಮಂತ್ರಿ ಮಂಡಲದ ಕಾರ್ಯ ಚಟುವಟಿಕೆಯ ಸೂಚನೆಯಾಗಿರುತ್ತದೆ. ನೂತನ ವಿದ್ಯಾಲಯವು ಬೇಗನೆ ಜನಿಸಿ ಕನ್ನಡಿಗರ ಅಭ್ಯುದಯಕ್ಕೆ ಸಾಧಕವಾಗುವ ಸುದಿನವನ್ನು ನಾವು ಕಾತರದಿಂದ ಇದಿರು ನೋಡುತ್ತಿದ್ದೇವೆ.

Printed, [illegible] and published by [illegible] at the Sadhvi Press D [illegible] Road, Mysore

೧೦ ಲಕ್ಷ ಫೌಂಟನ್ ಪೆನ್ನುಗಳು

ಅಮೇರಿಕಾದಿಂದ ಕರಾಚಿಗೆ ೧೦ ಲಕ್ಷ ಫೌಂಟನ್ ಪೆನ್ನುಗಳು ವಿಮಾನದಲ್ಲಿ ಬಂದಿವೆ. ಇವುಗಳ ಒಟ್ಟು ಬೆಲೆ ೩ ಲಕ್ಷ ರೂಪಾಯಿಗಳು. ಇವುಗಳನ್ನು ಬೊಂಬಾಯಿ, ಮದ್ರಾಸ್, ಕಲ್ಕತ್ತಾಗಳಲ್ಲಿ ಹಂಚಲಾಗುವುದು.

ಸ್ಟ್ಯಾಲಿನ್ ಗಿಂತ ಹೆಚ್ಚು ಗಾಂಧೀ ಬೇಕು

ಭಾರತದ ಗ್ರಾಮ ಕೈಗಾರಿಕೆಗಳಿಗೆ ಚರಕದ ಮೂಲಕ ಉತ್ತೇಜನವಿತ್ತ ಮಹಾತ್ಮಾ ಗಾಂಧಿಯವರಂತಹ ಒಬ್ಬ ವ್ಯಕ್ತಿಯ ಆವಶ್ಯಕತೆ ಸ್ಟ್ಯಾಲಿನ್‌ಗಿಂತ ಹೆಚ್ಚಾಗಿದೆ, ಎಂದು ಪಾರ್ಲಿಮೆಂಟಿನ ಸದಸ್ಯರಾದ ಶ್ರೀ॥ ಮ್ಯಾಕ್ಲೆಡ್‌ರವರು ತಿಳಿಸಿದ್ದಾರೆ.

ಪಟ್ಟಾಭಿಷೇಕೋತ್ಸವ

ಮೈಸೂರು ಚಾಮುಂಡೇಶ್ವರಿ ರಸ್ತೆಯಲ್ಲಿರುವ ಧರ್ಮಪ್ರವರ್ತಕ ಎ. ಎಸ್ ರಂಗಸ್ವಾಮಿ ಅಯ್ಯಂಗಾರ್ಯರು ತಮ್ಮ ಮನೆಯಲ್ಲಿ ಮೊನ್ನೆ ಪದ್ಧತಿ ಮೇರೆ ಶ್ರೀಮನ್ನಹಾರಾಜರ ಪಟ್ಟಾಭಿಷೇಕೋತ್ಸವವನ್ನೂ, ಪ್ರಭುಗಳಾದ ಪುತ್ರೋತ್ಸವವನ್ನೂ ನಡೆಸಿದರು. ಹುಜೂರ್ ಸೆಕ್ರೆಟರಿಗಳಾದ ಶ್ರೀ ಟಿ ರಾಮಯ್ಯನವರೇ ಮುಂತಾದ ಅನೇಕ ಮಾನ್ಯರು ದಯಮಾಡಿಸಿ ಸತ್ಕರಿಸಲ್ಪಟ್ಟರು.

ರೇಷ್ಮೆ ಸೀರೆಗಳು

(ಕ್ರೇಪ್ ಮತ್ತು ಸಾದಾ)

ತಯಾರಿಸುವವರಿಂದಲೇ ಕೊಂಡುಕೊಳ್ಳಿ

ಶಾಂತಿ ಟೆಕ್ಸ್‌ಟೈಲ್ಸ್,

(ಕಾಳಪ್ಪನವರ ಮಿಲ್ಲಿನ ಪಕ್ಕ)

ಮೈಸೂರು ಪೋರ್ಟ್, ಮೈಸೂರು.

○ ವಿವಿಧ ಬಣ್ಣಗಳ ಸೀರೆಗಳು

○ ಬಿನ್ನಿ ಕಂಪನಿಯ ಬಟ್ಟೆಗಳು

ಬಿಕರಿಗೆ ಸಿದ್ಧವಾಗಿವೆ.

ಖಾದಿ ಉಲ್ಲನ್ ಕೋಟಿನ ಬಟ್ಟೆಗಳು

ಖಾದಿ ಉಲ್ಲನ್ ಪುಲ್ ಓವರುಗಳು ಬಂದಿವೆ

ತಾ. ೧೯-೧೦-೧೯೪೬ ಶನಿವಾರ

ಸಂಜೆ 4 ರಿಂದ 7 ಘಂಟೆ ವರೆಗೆ

ಹೆಂಗಸರಿಗೆ ಮಾತ್ರ ಮಾರಾಟ

ಶ್ರೀ ಕನ್ನಿಕಾ ಪರಮೇಶ್ವರಿ ಪರಸ್ಪರ ಸಹಾಯ ಸಂಘ ಲಿಮಿಟೆಡ್,

ಹನುಮಂತರಾವ್ ರಸ್ತೆ

(ದಾಸಪ್ರಕಾಶ-ಪ್ಯಾರಡೈಸ್ ಕಡೆ ಬಳಿ),

ಮೈಸೂರು

OPERA TALKIES

ತಾ॥ 19—10—46ರಿಂದ

ನಾಲ್ಕನೇ ವಾರ

ಮಾಯಾ ಮಚ್ಛೀಂದ್ರ

(ತೆಲುಗು)

23-10-46 ರಿಂದ

ಶ್ರೀ ಮುರುಗನ್

(ತಮಿಳು)

ಪಾತ್ರ :-ಹೊನ್ನಪ್ಪ ಭಾಗವತರ್, ಜೀವರತ್ನಂ, ಮಾಲತಿ ರಾಮಚಂದ್ರನ್, ಕಾಳಿ ಎನ್. ರತ್ನಂ ಮುಂತಾದವರು

ಬಟ್ಟೆ ಪತ್ತೆ

ಸ್ವಂ.ಸು.] ಚಾಮರಾಜನಗರ ೧೭

ಇಲ್ಲಿನ ಜವಳಿ ವರ್ತಕರೊಬ್ಬರು ಟವನ್ನಿಗೆ ಬಂದಿದ್ದ ಮೋಟಾರಲ್ಲಿ ಸುಮಾರು ೫೦೦ ಗಜ ಮಲ್ ಬಟ್ಟೆಯನ್ನು ಮೈಸೂರು ನಗರಪ್ರಾಂತದಿಂದಾಚೆಗೆ ಸಾಗಿಸುತ್ತಿದ್ದುದನ್ನು ಪೋಲೀಸಿನವರು ಪತ್ತೆ ಹಚ್ಚಿ ಮಾಲನ್ನು ವಶಪಡಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿರುವರೆಂದು ತಿಳಿದು ಬಂದಿದೆ.

ಕೀರ್ತನ ಸೇವಾ ಸಂಘ

ಮೈಸೂ[ರು]

ಇದೇ ೨೦ ನೇ ತಾ॥ ಭಾನುವಾ[ರ] ಮಧ್ಯಾಹ್ನ ೩ ಗಂಟೆಗೆ ಮೇಲ್ಕಂಡ [ಸಂಘವ]ನ್ನು ಸ್ಥಾಪಿಸಬೇಕೆಂದು ತೀರ್ಮಾ[ನಿಸಿರು]ವುದರಿಂದ ಭಾಗವತ ಸಮುದಾಯ[ವು] ಮಾರ್ಕೆಟ್ ಮರದ ಬೀದಿಯಲ್ಲಿರು[ವ] ಪಾಂಡುರಂಗಸ್ವಾಮಿ ದೇವಸ್ಥಾನ[ಕ್ಕೆ] ಬಂದು ಸಹಕರಿಸಬೇಕಾಗಿ ವ್ಯವಸ್ಥಾ[ಪಕರು] ಪ್ರಾರ್ಥಿಸಿದ್ದಾರೆ.

ರಾಜ್ ಕಮಲ್, ಮೈಸೂರು

17-10-46 ರಿಂದ

ಈ ದಿನವೇ ನೋಡಿ

ಅಮೋಘವಾ[ದ] 5 ನೇ ವಾ[ರ]

- ಪಾತ್ರ - ವಾಹಿನಿಯವರ

* ನಾಗಯ್ಯ * ಜಯಮ್ಮ * ಭಾನುಮತಿ

ಸ್ವರ್ಗಸೀಮಾ

From 18-10-46 for 4 days Daily at 10-30. A. M.

"IN OLD CALIFORNIA"

Starring :—John Wayne, Binnie Barnes Etc.

ಮೈಸೂರು ಸಿಟಿ ರೇಷನಿಂಗ್ ಆಫೀಸಿನಿಂದ:—

ತಾರೀಖು 10—10—1946.

ನೋಟಿಫಿಕೇಷನ್.

ನಂಬರು R 1-400—46-47.

ಇದರಿಂದ ಮೈಸೂರು ನಗರದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆ[ಂದರೆ] ಮೈಸೂರು ನಗರವಾಸಿಗಳು ಕೆಲವು ಈ ಕೆಳಗೆ ಕಂಡ ತರಹ ಬೋಗಸ್ ಕಾರ್ಡುಗಳನ್ನಿಟ್ಟುಕೊಂಡು ರೇಷನ್ ಸಾಮಾನುಗಳನ್ನು ಪಡೆಯುತ್ತಿರುವುದು ನಮ್ಮ ಗಮನಕ್ಕೆ ಬಂದಿರುತ್ತದೆ. ಅಂಥಾ ರೇಷನ್ ಕಾರ್ಡುಗಳನ್ನು ಜನರು ಸಂಬಂಧಪಟ್ಟ ಇನ್ಸ್‌ಪೆಕ್ಟರವರ ಆಫೀಸಿಗೆ ವಾಪಸ್ ಮಾಡಲು ತಮ್ಮ ಮೇಲೆ ಕ್ರಮ ಜರುಗಿಸಬಹುದಾಗಿ ಹೆದರಿ ತಮ್ಮಲ್ಲೇ ಇಟ್ಟುಕೊಂಡಿರುವುದು ನಮ್ಮ ಅವಗಾಹನೆಗೆ ಬಂದಿದೆ. ಅಂಥಾ ರೇಷನ್ ಕಾರ್ಡು ಉಳ್ಳವರು ಅಂಥಾ ರೇಷನ್ ಕಾರ್ಡುಗಳನ್ನು ಇದೇ ಮಾ[ಹೆ] ನೇ ತಾರೀಖಿನೊಳಗಾಗಿ ಯಾವ ಪುಡ್ ಆಫೀಸಿಗಾಗಲಿ ಹಾಜರ್ಪಡಿಸಿದಲ್ಲಿ ಅ[ವರ] ಮೇಲೆ ಯಾವ ಕ್ರಮವನ್ನೂ ಜರುಗಿಸುವುದಿಲ್ಲ.

ಯಾರಲ್ಲಾದರು ಅಂಥಾ ಬೋಗಸ್ ರೇಷನ್ ಕಾರ್ಡುಗಳು ೩೦ ನೇ ತಾ[ರೀಖಿನ] ನಂತರ ಕಂಡು ಬಂದಲ್ಲಿ, ರೇಷನ್ ಕಾನೂನು ರೀತ್ಯಾ ಅಂಥವರ ಮೇಲೆ ಕ್ರಮ ಜ[ರುಗಿಸ]ಲಾಗುತ್ತೆ. ಅಲ್ಲದೆ ಅಂಥವರ ಮನೆಯ ಕಾರ್ಡನ್ನು ಸಹ ವಜಾ ಮಾಡಲಾಗುವುದು. ಅಂಥವರು ಈ ವಿಚಾರದಲ್ಲಿ ಮುಂದಾಗಬಹುದಾದ ತೊಂದರೆಗಳಿಗೆ ಈಡಾಗದೆ [illegible] ವನ್ನು ವ್ಯಕ್ತಪಡಿಸುವುದು ಉತ್ತಮವೆಂದು ಈ ಮೂಲಕ ತಿಳಿಯಪಡಿಸಿರುತ್ತೆ.

೧. ಮೈಸೂರು ಸಿಟಿಯಲ್ಲಿ ವಾಸವಿಲ್ಲದೆ ಇರುವ ಜನರ ಹೆಸರಿನಲ್ಲಿರುವ ಕಾರ್ಡುಗಳು.

೨. ಒಂದು ಸಂಸಾರದಲ್ಲಿರುವ ಜನರ ಹೆಸರನ್ನೇ ನಮೂದಿಸಿ ಬೇರೆ ಬೇರೆ ಕಾರ್ಡುಗಳನ್ನು ಒಂದೇ ಮನೆಯಲ್ಲಿ ಹೊಂದಿರುವುದು.

೩. ಒಂದೇ ಸಂಸಾರದವರು ಬೇರೆ ಬೇರೆ ವಿಳಾಸವನ್ನು ಕೊಟ್ಟು ಅನೇಕ [ಕಾರ್ಡು]ಗಳನ್ನು ಹೊಂದಿರುವವರು.

೪. ಸಿಟಿಯ ವಾಸವನ್ನು ಬಿಟ್ಟು ಬೇರೆ ಸ್ಥಳದಲ್ಲಿರುವವರ ಕಾರ್ಡುಗಳನ್ನು [ಬೇ]ರರು ದುರುಪಯೋಗಪಡಿಸುತ್ತಿರುವುದು.

೫. ಸಂಸಾರದಲ್ಲಿರುವ ಜನರಿಗಿಂತ ಹೆಚ್ಚಿನ ಜನಗಳಿದ್ದಾರೆಂದು ಹೇಳಿ [ಕಾರ್ಡು] ಪಡೆದಿರುವವರು.

೬. ಮೈಸೂರು ಸಿಟಿಯ ಹೊರಭಾಗದಲ್ಲಿ ವಾಸವಿದ್ದು ಸಿಟಿಯಲ್ಲಿ ರೇಷ[ನ್ ಪಡೆಯು]ತ್ತಿರುವವರು.

೭. ರೇಷನ್ ಕಾರ್ಡಿನಲ್ಲಿರುವ ಬರವಣಿಗೆಯನ್ನು ಅಳಿಸಿರುವ ಅಥವಾ ಬದ[ಲಾಯಿ]ಸಿರುವಂಥಾ ರೇಷನ್ ಕಾರ್ಡು ಉಳ್ಳವರು.

೮ ರೇಷನ್ ಕಾರ್ಡು ಡಿಪೋ ಅಕ್ರಿಮೆಂಟು ರಿಜಿಸ್ಟರಿನಲ್ಲಿ ವಜಾ ಮಾಡಿದ್ದ[ರೂ] ಅಂಥಾ ಕಾರ್ಡಿನ ಮೇಲೆ ರೇಷನ್ ಪಡೆಯುತ್ತಿರುವವರು.

೯ ರೇಷನ್ ಕಾರ್ಡು ಹೋಲ್ಡರನ ಕಾರ್ಡು ಮತ್ತೊಬ್ಬರು ಬೇರೆ ಮಾರ್[ಗದಲ್ಲಿ] ಪಡೆದು ದುರುಪಯೋಗಪಡಿಸುತ್ತಿರುವುದು.

ಮೇಲೆ ಹೇಳಿದ ೫ ನೇ ನಮೂನೆ ಕಾರ್ಡು ಹೋಲ್ಡರುಗಳು ಅಂಥಾ ಕಾರ್ಡಿ[ನಲ್ಲಿ] ಬದಲಾವಣೆ ಮಾಡಿಸಬೇಕಾದಲ್ಲಿ ಸಂಬಂಧಪಟ್ಟ ಪುಡ್ ಆಫೀಸಿಗೆ ಆ ಕಾರ್ಡಿನೊ[ಡನೆ] ಒಂದು ಅರ್ಜಿಯನ್ನು ಸಲ್ಲಿಸಿದಲ್ಲಿ ಕೂಡಲೇ ಸಿಗಾ ಕೊಡಲಾಗುವುದು.

(ಸಹಿ) ಅಬ್ದುಲ್ ರಜಾಕ್

ರೇಷನಿಂಗ್ ಆಫೀಸರ್, ಮೈಸೂರು.

ಜೀ. ನಂ. ೩೯೨ ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶನಿವಾರ ೧೯—೧೦—೪೬ [ಸಂಚಿಕೆ ೬೭

ಚಾಂದಪುರ ಜಿಲ್ಲೆಯಲ್ಲಿ ದಂಗೆ, ಲೂಟಿ, ಕೊಲೆ

ಬಡ ಬಗ್ಗರಿಗೆ ಅನ್ನದಾನ

ಮೈಸೂರು ೧೯

...ವೇ ೨೦ ನೇ ತಾರೀಖು ನಡೆಯಲಿ... ರಾಜಕುಮಾರಿಯ ನಾಮಕರಣೋತ್ಸವ ಸಂಬಂಧದಲ್ಲಿ ನಗರದ ಎಲ್ಲಾ ...ಮಿನ ಬಡವರಿಗೂ ಈ ಕೆಳಗಿನ ...ಗಳಲ್ಲಿ ಮಧ್ಯಾಹ್ನ ಒಂದು ಗಂಟೆಗೆ ಅನ್ನ ...ವು ನಡೆಯುವುದು. ದೇವರಾಜ ...ಹಲ್ಲಾದ ನಂಜರಾಜ ಬಹದ್ದೂರ್ ..., ಲಕ್ಷ್ಮೀ ಮೊಹಲ್ಲಾದ ಜನಾನಾ ...ಲ್ ಸ್ಕೂಲ್, ಚಿಲ್ಲೆ ಮೊಹಲ್ಲಾದ ಕರು..., ಮಂಡಿ ಮೊಹಲ್ಲಾದ ವೆಸ್ಲಿಯನ್ ...ಸ್ಕೂಲ್. ಬ್ರಾಹ್ಮಣರಿಗಾಗಿ ಶ್ರೀ ...ಲ ಮಠದಲ್ಲಿಯೂ, ಶ್ರೀಮನ್ಮಹಾ... ...ತ್ರದಲ್ಲಿಯೂ ಪ್ರತ್ಯೇಕ ಏರ್ಪಾಡು ...ಲಾಗಿದೆ.

...ಬಾಲಕ ಬಾಲಕಿಯರಿಗೂ ಅದೇ ...ಅವರವರ ಶಾಲೆಗಳಲ್ಲಿ ಸಿಹಿ-ತಿಂಡಿ ...ಯ ಏರ್ಪಾಡು ಮಾಡಿದೆ.

ವಿದ್ಯಾರ್ಥಿ ಕಾಂಗ್ರೆಸ್

...ನವೆಂಬರ್ ೨ ಮತ್ತು ೩ ನೆಯ ...ಕು ಬೆಂಗಳೂರಿನಲ್ಲಿ ನಡೆಯಲಿರುವ ...ಯ ಕಾಂಗ್ರೆಸ್ ಅಧಿವೇಶನಕ್ಕೆ ಮೈ... ವಿದ್ಯಾರ್ಥಿ ಕಾಂಗ್ರೆಸ್ ಪರವಾಗಿ ಸ್ವ... ...ಸೇವಕರಾಗಿ ಕೆಲಸ ಮಾಡಲಿಚ್ಛಿಸುವ ...ದ್ಯಾರ್ಥಿಗಳು ತಮ್ಮ ಹೆಸರನ್ನು ಇ... ...ಂಗಳ ೨೩ ನೇ ತಾರೀಖಿನೊಳಗಾಗಿ ...ರ್ಥಿ ಕಾಂಗ್ರೆಸ್ ಆಫೀಸಿಗೆ ತಿಳಿಸಬೇ... ಕಾರ್ಯದರ್ಶಿಗಳವರು ಪ್ರಾರ್ಥಿಸು...

ಉದಾರ ದಾನ

...ಸ್ಥಾನದ ಕೃಷ್ಣರಾಜ ವನದಲ್ಲಿ ... ...ನಿರ್ಮಾಣವಾಗಿರುವ ಕುರುಬರ ಹಾಸ್ಟ... ...ಲ್ಗೆ ಡಾ|| ಚಿಕ್ಕ ವೀರಣ್ಣನವರ ಮ... ಶ್ರೀ ಕೆಂಪಯ್ಯನವರು, ಶ್ರೀ ಪುಟ್ಟ... ...ನವರು, ತಲಾ ಒಂದು ಸಾವಿರ ...ಯ್ಯ, ಶ್ರೀ ಕೆಂಪಣ್ಣ ಮತ್ತು ಶ್ರೀ ...ಸ್ವಾಮಿಯವರು ತಮ್ಮ ತಂದೆ ದಿ|| ...ನವರ ಹೆಸರಿನಲ್ಲಿ ಒಂದು ಸಹಸ್ರ ...ಯನ್ನೂ ಕೊಡಲು ವಾಗ್ದಾನ ...ದ್ದಾರೆ. ಇದೇ ರೀತಿ ಜನಾಂಗ ...ರಿಗಳು ಸಹಾಯ ಮಾಡಬೇಕೆಂ... ...ರ್ಥಿಸಲಾಗಿದೆ.

ಮಗು ಸಿಕ್ಕಿದೆ

...ಜರಾವ್ ರಸ್ತೆಯಲ್ಲಿ ಚಾಮುಂ... ...ಟಾಕೀಸ್ ಬಳಿ ನಿನ್ನೆ ಮಧ್ಯಾಹ್ನ ...ದ ಗಂಡು ಮಗುವೊಂದು ಸಿಕ್ಕಿದ... ...ಲ ಮಾಗಟ್ಟ ಚುಟ್ಟ ಕೊಂಡಿ... ...ಶಾಲಿನಲ್ಲಿ ಶಾಲಿಂದಿಗೆ ... ...ಯಿನಲ್ಲಿ ಬೆಳ್ಳಿ ಉಡದಾರ ಕಟ್ಟ... ...ಬನೀನು ಹಾಕಿದೆ ...ಸುಮಾರು ಬಿಳುಪು ಬಣ್ಣ. ಸಂ... ...ವರು ಮಂಡಿ ಪೋಲೀಸ್ ಸ್ಟೇ... ...ದು ವಿಚಾರಿಸಿ ಮಗುವನ್ನು ಪ... ...ಎಂದು ಉಪಾಧ್ಯಾಯಿನಿಯರಾ... ...ಎಸ್. ನಾಗಮ್ಮನವರು ತಿಳಿಸು...

...ಬಾಯಿಯಲ್ಲಿ ಮೈಸ ...ಯರ ಪ್ರವಾಸ

...ಷ್ ಮೇವಲ್ಲರು ಮೊನ್ನೆ ವಿ... ...ಬೊಂಬಾಯಿಗೆ ಆಗಮಿಸಿದರು. ...ರಿಗಳ ಸಂಗಡ ಗಲಭೆ ಪ್ರದೇ... ...ಭೇಟಿ ಇತ್ತರು. ಅವರ ...ಮದ್ರಾಸ್ ಗವರ್ನರೂ ಆ... ...ದ್ದಾರೆ ಈ ವಾರಾಂತ್ಯದಲ್ಲಿ ...ಮೈಸೂರಿಗೆ ವಾಪಸಾಗುವರು.

ಬಂಗಾಳಾವಿಗೆ ಗಾಂಧಿಜಿ ಭೇಟಿಯು ?

ಪೂರ್ವ ಬಂಗಾಳದಲ್ಲಿ ನಿರಾಶ್ರಿತರಾಗಿ ರುವವರಿಗೆ ಕೂಡಲೇ ಸಹಾಯ ಮಾಡಬೇಕೆಂದು ಮಹಾತ್ಮ ಗಾಂಧಿಯವರು ಡಾ|| ದಾಸಗುಪ್ತರಿಗೂ, ಶ್ರೀ ಸೇನ್‌ರವರಿಗೂ ಸೂಚನೆ ಕೊಟ್ಟಿದ್ದಾರೆ. ತಾವೂ ಸಹ ಸದ್ಯದಲ್ಲೇ ಆ ಪ್ರದೇಶಗಳಿಗೆ ಭೇಟಿ ಕೊಡಲು ಆಶಿಸಿರುವುದಾಗಿ ತಿಳಿಸಿದ್ದಾರೆ

ವಿಶ್ವವೇ ಸ್ವತಂತ್ರವಾಗಬೇಕು

ನನ್ನ ಸ್ವಂತಕ್ಕೆ ಸ್ವಾತಂತ್ರ್ಯವೇನೂ ಬೇಕಿಲ್ಲ ಇಡೀ ವಿಶ್ವವೇ ಸ್ವತಂತ್ರವಾಗಬೇಕು. ಬ್ರಿಟಿಷ್ ಸಾಮ್ರಾಜ್ಯ ಆಡಳಿತವನ್ನು ಕೊನೆಗಾಣಿಸಲು ಯಾರೇ ಆಗಲಿ ಆಶಿಸಿದರೆ ಅವರಿಗೆ ನನ್ನ ಸಂಪೂರ್ಣ ಬೆಂಬಲ ನೀಡುತ್ತೇನೆ. ಭಾರತದ ಸ್ವಾತಂತ್ರ್ಯಕ್ಕೆ ಮುಸ್ಲಿಮರು ಅಡ್ಡಿ ತರಬಾರದು – ಎಂದು ಇಫಿ ಫಕೀರರು ಗುಡ್ಡ ಪ್ರದೇಶಕ್ಕೆ ಪಂ|| ನೆಹರೂರವರು ಆಗಮಿಸಿರುವ ಸಂದರ್ಭದಲ್ಲಿ ಸಂದೇಶವನ್ನಿತ್ತು ನೆಹರೂರವರನ್ನು ಯಾವಾಗಲಾದರೂ ನೋಡಲು ಸಿದ್ಧರಿರುವುದಾಗಿ ತಿಳಿಸಿದ್ದಾರೆ

ಭಾರತದ ಭವಿಷ್ಯಕ್ಕೆ ಭಾರತೀಯರೇ ಹೊಣೆ

ಈಗ ಭಾರತೀಯರಿಗೂ ದೊರೆತಿರುವ ಹೊಸ ಸ್ವಾತಂತ್ರ್ಯವನ್ನು ಅವರು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕು, ಭಾರತವು ಸಂಸ್ಕೃತಿಯ ನೆಲೆವೀಡಾಗಬೇಕು ತನ್ನ ಹೊಸ ಸ್ವಾತಂತ್ರ್ಯದಿಂದ ಮಾನವ ಪ್ರಗತಿಗೆ ಆದರ್ಶ ಮಾರ್ಗವನ್ನು ತೋರಿಸುವ ಅಥವಾ ಅಧೋಗತಿಗಿಳಿಯುವ ಮಾರ್ಗ ಭಾರತೀಯರ ಕೈಯಲ್ಲೇ ಇದೆ, ಎಂದು ಇಂಡಿಯಾ ಸೆಕ್ರೆಟರಿ ಲಾರ್ಡ್ ಪೆಥಿಕ್ ಲಾರೆನ್ಸರೂ, ಸರ್ ಸ್ಟಾಫರ್ಡ್ ಕ್ರಿಪ್ಸರೂ ತಿಳಿಸಿದ್ದಾರೆ.

ದ|| ಆಫ್ರಿಕಾದಲ್ಲಿ ಭಾರಿ ಸತ್ಯಾಗ್ರಹ

ನ್ಯೂಯಾರ್ಕ್ ನಗರದಲ್ಲಿ ಯು.ನೋ. ವಿಶ್ವ ಸಮ್ಮೇಳನದ ಆರಂಭದ ಸಂಕೇತವಾಗಿ ದಕ್ಷಿಣ ಆಫ್ರಿಕಾದ ಭಾರತೀಯರ ಸತ್ಯಾಗ್ರಹವನ್ನು ಪ್ರಬಲಗೊಳಿಸಿ, ಅಂದು ಕಡೇಪಕ್ಷ ೩೦೦ ಮಂದಿ ಬಸ್ತಿಗೀಡಾಗಲು ವ್ಯವಸ್ಥೆ ಮಾಡುವುದಾಗಿ ಡಾ|| ದಾದೂರವರು ತಿಳಿಸಿದ್ದಾರೆ.

ಪ್ರಜಾಪ್ರತಿನಿಧಿ ಸಭಾ ಸದಸ್ಯರೊಬ್ಬರ ಕೊಲೆ

ಸ್ವಂ. ಸು ಪೋ|] ಬೆಂಗಳೂರು ೧೯

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಕಾಂಗ್ರೆಸ್ ಸದಸ್ಯರಾದ ಶ್ರೀ ರಾಮಸ್ವಾಮಿ ಎಂಬುವರು ಕಳೆದ ೧೬ ನೇ ತಾ|| ಗೋರೀಬಿದನೂರು ರೈಲ್ವೆ ಸ್ಟೇಷನ ಬಳಿ ಕೊಲೆಗೀಡಾಗಿ ಸತ್ತು ಬಿದ್ದಿದ್ದರೆಂದು ವರದಿಯಾಗಿದೆ ಶ್ರೀಯುತರು ಮೈಸೂರಿನಿಂದ ಪ್ರತಿನಿಧಿ ಸಭಾಧಿವೇಶನವನ್ನು ಮುಗಿಸಿಕೊಂಡು ಗೋರೀಬಿದನೂರಿನಿಂದ ತಮ್ಮ ಗ್ರಾಮವಾದ ಗಗ್ಗರಿಗೆ ಪ್ರಯಾಣ ಮಾಡುತ್ತಿದ್ದರೆಂದು ಹೇಳಲಾಗಿದೆ. ಪೋಲೀಸ್ ತನಿಖೆ ಸಾಗುತ್ತಿದೆ.

ಸಿಲೋನಿನಲ್ಲಿ ೧೦ ಸಹಸ್ರ ಮಂದಿ ಮುಷ್ಕರ

ಕೊಲಂಬೋವಿನಲ್ಲಿ ರೈಲ್ವೆ, ಬಂದರು ಮತ್ತು ಎಲೆಕ್ಟ್ರಿಕ್ ಇಲಾಖೆಗಳ ೧೦ ಸಹಸ್ರ ಮಂದಿ ಕೆಲಸಗಾರರು ತಮ್ಮ ಸಂಬಳಗಳ ಬಡ್ತಿ ಮುಂತಾದ ೩೦ ಬೇಡಿಕೆಗಳು ನಿರಾಕರಿಸಲ್ಪಟ್ಟಿದ್ದರಿಂದ ಮುಷ್ಕರ ಹೂಡಿದ್ದಾರೆ ಇದು ಇತರ ಇಲಾಖೆಗಳಿಗೂ ಹರಡುವ ಸ್ಥಿತಿಯಲ್ಲಿದೆ

ಮಹಿಳೆಯರು ಧೈರ್ಯದಿಂದ ಸಾವನ್ನು ಎದುರಿಸಬೇಕು

ನವಖಾಲಿ ಜಿಲ್ಲೆಯಲ್ಲಿ ನಡೆದ ಘೋರ ಹತ್ಯಾಕಾಂಡದ ಬಗ್ಗೆ ಮ. ಗಾಂಧಿಯವರು ವಿಪುಲವಾಗಿ ಪರಿತಾಪ ಗೊಂಡಿದ್ದಾರೆ ನಿನ್ನೆ ಅವರು ಪ್ರಾರ್ಥನಾ ಸಭೆಯಲ್ಲಿ ಭಾಷಣ ಮಾಡಿ, ಮಹಿಳೆಯರ ಮೇಲಿನ ಅತ್ಯಾಚಾರ, ಅಪಹಾರ ಮತ್ತು ಮುಸ್ಲಿಂ ಮತಕ್ಕೆ ಬಲಾತ್ ಕಾರಣಗೊಳಿಸಿದ ವಿಚಾರದಲ್ಲಿ ತಮ್ಮ ಮನಸ್ಸು ಬಹಳ ನೊಂದಿದೆಯೆಂದು ಹೇಳಿ, ಮಹಿಳೆಯರು ಸೀತಾ ದ್ರೌಪದಿಯರಂತೆ, ಧೈರ್ಯ ಸ್ಥೈರ್ಯಗಳನ್ನು ಕಲಿತು ಸಾವನ್ನು ಎದುರಿಸುವ ಮನೋಧರ್ಮವನ್ನು ಅರಿಯಬೇಕೆಂದು ತಿಳಿಸಿದ್ದಾರೆ

ಚಾಂದಪುರ ಜಿಲ್ಲೆಯಲ್ಲಿ ಗೂಂಡಾಗಳ ಪುಂಡಾಟಿಕೆ

ಪೂರ್ವ ಬಂಗಾಳ ಪ್ರದೇಶದಲ್ಲಿರುವ ಚಾಂದಪುರ ಜಿಲ್ಲೆಯಲ್ಲಿ ಸಾಮೂಹಿಕವಾಗಿ ದಂಗೆ, ಲೂಟಿ ಮತ್ತು ಕೊಲೆಯು ಆರಂಭವಾಗಿದೆಯೆಂದೂ, ಪರಿಸ್ಥಿತಿ ಸಹೋಚ... ...ಹೋಗಿದೆಯೆಂದೂ ಅಲ್ಲಿನ ಹಿಂದೂ ಸಮಿತಿಯ ಕಾರ್ಯದರ್ಶಿಗಳು, ತಂತಿ ಕಳುಹಿಸಿದ್ದಾರೆ.

ನಾಮಕರಣೋತ್ಸವ ಪ್ರಯುಕ್ತ ಪ್ರಭುಗಳ ದರ್ಬಾರ್

ಮೈಸೂರು ೧೯

ನಾಳಿದ್ದು ಅರಮನೆಯಲ್ಲಿ ಜರುಗುವ ರಾಜಕುಮಾರಿಯವರ ನಾಮಕರಣೋತ್ಸವದ ಪ್ರಯುಕ್ತ ಶ್ರೀಮನ್ಮಹಾರಾಜರು ಅಂದು ಬೆಳಗ್ಗೆ ೧೦|| ಘಂಟೆಗೆ ಕಲ್ಯಾಣ ಮಂಟಪದಲ್ಲಿ ದರ್ಬಾರು ನಡೆಸುವರು.

ಮೂಂಡಲೆಯಲ್ಲಿ ಬಾಂಬ್ ಸಿಡಿತ

೧೯೪೫ ರಲ್ಲಿ ಜಪಾನೀಯರು ಬರ್ಮವನ್ನು ಆಕ್ರಮಿಸಿದ್ದಾಗ ಬ್ರಿಟಿಷ್ ಆರ್. ಎ. ಎಫ್ ನವರು ಮೂಂಡಲೆ ಮೇಲೆ ಹಾಕಿದ್ದ ೨ ಟನ್ನಿನ ಬಾಂಬೊಂದು ಕಳೆದ ಶನಿವಾರ ಆಸ್ಫೋಟನಗೊಂಡು, ೬ ಜನರು ಸತ್ತರೆಂದೂ, ೧೨ ಮಂದಿಗೆ ಗಾಯಗಳಾಗಿವೆಯೆಂದೂ ವರದಿಯಾಗಿದೆ.

ವಜೀರಿ ಸ್ಥಾನದಲ್ಲಿ ಪಂ|| ನೆಹರು

ಪಂ ನೆಹರುರವರು ವಜೀರಿ ಸ್ಥಾನದಲ್ಲಿ ಪ್ರವಾಸವನ್ನು ಆರಂಭಿಸಿ ಅಲ್ಲಿನ ಮತ್ತು ರಾಜಕೀಯ ನಾಯಕರುಗಳಿಗೆ ಭೇಟಿ ಇತ್ತಿದ್ದರು. ಅವರ ಕೂಡ, ಖಾನ್ ಸಹೋದರರೂ ಹೋಗಿದ್ದಾರೆ " ನನ್ನ ನಿಯೋಗ ವಿಶ್ವಾಸದಿಂದ ಕೂಡಿದೆ ಮತ್ತು ನಾವು ನಿಮ್ಮ ಮೇಲೆ ಆಳುವ ಉದ್ದೇಶದಿಂದ ಕೂಡಿಲ್ಲ" ಎಂದು ನೆಹರೂರವರು ಗಡೀ ಪ್ರದೇಶದ ಜನಗಳಿಗೆ ಸಂದೇಶವಿತ್ತಿದ್ದಾರೆ.

ರೈಲಿನಲ್ಲಿ ಪತ್ರಿಕಾ ಸಂಪಾದಕರ ದರೋಡೆ

ಅಖಿಲ ಭಾರತ ಪತ್ರಿಕಾ ಸಂಪಾದಕರ ಸಮ್ಮೇಳನಕ್ಕೆ ಸೇರಿದ ಪ್ರಮುಖ ಕಾಗದ ಪತ್ರಗಳೂ, ಸ್ವಲ್ಪ ಹಣವೂ ಮೊನ್ನೆ ರಾತ್ರಿ ಶ್ರೀ ಟಿ. ಕೆ ಘೋಷ್‌ರವರು ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಅವರಿಂದ ಕಳವು ಮಾಡಲ್ಪಟ್ಟಿರುವುದಾಗಿ ವರದಿಯಾಗಿದೆ.

LATEST NEWS

ಈಸೂರು ಬಂದಿಗಳ ಬಿಡುಗಡೆಯೇ ?

ಸ್ವಂ ಸು ಪೋ|] ಬೆಂಗಳೂರು ೧೯

ಈಸೂರು ಮತ್ತು ಶ್ರವಣಬೆಳಗೊಳ ಬಂದಿಗಳ ಬಿಡುಗಡೆಗಾಗಿ ಪ್ರಜಾಪ್ರತಿನಿಧಿ ಸಭೆಯಲ್ಲಿ ನಿರ್ಣಯವು ಅಂಗೀಕಾರವಾಗಿದ್ದಷ್ಟೆ ಶ್ರೀಮನ್ಮಹಾರಾಜರಿಗೆ ಪುತ್ರೀರತ್ನ ಜನನವಾಗಿರುವ ಸಂತೋಷಾರ್ಥವಾಗಿ ಈಸೂರು ಮತ್ತು ಶ್ರವಣಬೆಳಗೊಳ ಬಂದಿಗಳನ್ನು ಬಿಡುಗಡೆ ಮಾಡುವ ಸೂಚನೆಗಳು ಬಲವಾಗಿ ಕಂಡುಬರುತ್ತಿವೆ ನಾಳೆ ನಾಳಿದ್ದರಲ್ಲೇ ಈ ಬಗ್ಗೆ ಪ್ರಭುತ್ವದ ಆಜ್ಞೆಯು ಹೊರಬೀಳುವ ಸಂಭವವಿದೆಯೆಂದು ಉನ್ನತ ಅಧಿಕಾರಿ ವಲಯಗಳಲ್ಲಿ ಹೇಳಲಾಗಿದೆ

ವೆದರಿಗೆ ಸ್ವಾಗತ

ಕಾಂಗ್ರೆಸ್ ಅಧಿವೇಶನದ ಅಂಗವಾಗಿ ನಡೆಯುವ ಖಾದಿ ಮತ್ತು ಸ್ವದೇಶಿ ವಸ್ತು ಪ್ರದರ್ಶನದ ಆರಂಭೋತ್ಸವವನ್ನು ನೆರವೇರಿಸಲು ಶ್ರೀ ... ... ಅಥವಾ ಪಟ್ಟಾಭಿ ಸೀತಾರಾಮಯ್ಯನವರನ್ನು ಆಹ್ವಾನಿಸುವ ಸಲುವಾಗಿ ಸ್ವಾಗತ ಸಮಿತಿ ಅಧ್ಯಕ್ಷರಾದ ಶ್ರೀ ಕೆ ಸಿ ರೆಡ್ಡಿ ... ... ಸದ್ಯದಲ್ಲೇ ... ... ತೆರಳಲಿದ್ದಾರೆ

ಸಾಧ್ವಿ

ತಾ॥ ೧೯-೧೦-೪೬ ಶನಿವಾರ

ಕಾರ್ಡುಗಳ ಅಭಾವ

ಅಂಚೆ ಕಛೇರಿಗಳಲ್ಲಿ ಕಾರ್ಡುಗಳು ದೊರೆಯುತ್ತಿಲ್ಲವೆಂಬ ದೂರು ಬಹಳವಾಗಿ ಬರುತ್ತಿದೆ. ಗ್ರಾಮಾಂತರಗಳಲ್ಲಿ ಮಾತ್ರವೇ ಅಲ್ಲದೆ ದೊಡ್ಡ ದೊಡ್ಡ ನಗರಗಳಲ್ಲಿಯೂ ಸಹ ಇದರ ಅಭಾವವು ತಲೆ ದೋರಿರುತ್ತದೆ. ಇದರಿಂದ ಕೆಲವು ಕಡೆ ಕಾರ್ಡುಗಳನ್ನು ರೇಷನ್ ಮೂಲಕ ಹಂಚುತ್ತಿರುವುದಾಗಿಯೂ ವರದಿಯಾಗಿದೆ. ರಾಜಧಾನಿಯಾದ ಈ ಊರಿನ ಅನೇಕ ಟಪಾಲ್ ಆಫೀಸುಗಳಲ್ಲಿ ಬಹಳ ದಿನಗಳಿಂದ ಸರಿಯಾಗಿ ಕಾರ್ಡುಗಳು ದೊರೆಯುತ್ತಿಲ್ಲ. ನಾಲ್ಕು ಕಾರ್ಡು ಕೇಳಿದವರಿಗೆ ಒಂದು ಕೊಡುವ ವಾಡಿಕೆಯೂ ಇದೆ.

ಹೀಗೆ ಕಾರ್ಡುಗಳ ಅಭಾವ ಉಂಟಾಗಿರುವುದರಿಂದ ಅವುಗಳ ಬೆಲೆಯನ್ನು ಇಳಿಸಿದುದರ ಉದ್ದೇಶವೇ ನೆರವೇರದಂತಾಗಿದೆ. ಒಂಭತ್ತು ಕಾಸಿನಿಂದ ಆರು ಕಾಸಿಗೆ ಅದರ ಬೆಲೆಯನ್ನು ಇಳಿಸಿದ ಮೇಲೆ ಕಾರ್ಡುಗಳ ಉಪಯೋಗವು ಹೆಚ್ಚಿರುವುದೇನೋ ನಿಜ. ಆದರೆ ಅವುಗಳ ಅವಶ್ಯಕತೆಗೆ ತಕ್ಕಂತೆ ಇಲಾಖೆಯವರು ಕಾರ್ಡುಗಳನ್ನು ತಯಾರು ಮಾಡಿಸುತ್ತಿಲ್ಲವೆಂದು ಕಂಡುಬಂದಿದೆ.

ಲಕ್ಕೋಟೆಗಳಿಗೆ ಒಂದೂವರೆ ಆಣೆಯನ್ನು ಖರ್ಚು ಮಾಡಲಾರದೆ, ಹಲವರು ಖಾಲಿ ಕಾರ್ಡುಗಳನ್ನು ಅಂಗಡಿಗಳಲ್ಲಿ ಕೊಂಡು ಅವುಗಳಿಗೆ ಅರ್ಧಾಣೆ ಸ್ಟಾಂಪನ್ನು ಹಚ್ಚುತ್ತಿದ್ದಾರೆ. ಆದರೆ ಇದರಿಂದ ಅವರಿಗೆ ಯಾವ ಪ್ರಯೋಜನವೂ ಉಂಟಾಗಿರುವುದಿಲ್ಲ. ಕಾರ್ಡಿನ ಬೆಲೆ ಕಾಲಾಣೆ ಆಗುತ್ತದೆ. ಆದುದರಿಂದ ಮೊದಲು ಕಾರ್ಡಿಗೆ ಆಗುತ್ತಿದ್ದಂತೆ ಈಗಲೂ ಒಂಭತ್ತು ಕಾಸನ್ನೇ ಕೊಟ್ಟಂತಾಗುತ್ತಿದೆ. ಹೊಸ ರಿಯಾಯಿತಿಯ ಪ್ರಯೋಜನವು ದೊರಕದಂತಾಗುವುದಿಲ್ಲ

ಜನರ ಸೌಕರ್ಯಕ್ಕಾಗಿ ಒಂದು ಪದಾರ್ಥದ ಬೆಲೆಯನ್ನು ಇಳಿಸಿ, ಅದು ದೊರೆಯದಂತೆ ಮಾಡಿ, ಮೊದಲಿನಂತೆಯೇ ಹಣವು ವ್ಯಯವಾಗುವ ಪರಿಸ್ಥಿತಿಯು ಅತ್ಯಂತ ಅಸಮರ್ಪಕವಾದುದು. ಗಿರಾಕಿಗಳಿರುವಷ್ಟು ಸರಬರಾಜು ಮಾಡಲು ಅಸಮರ್ಥವಾದ ವ್ಯವಸ್ಥೆಯು ಖಂಡನೀಯವಾದುದೇ ಸರಿ

ಆಹಾರ, ಬಟ್ಟೆ ಮುಂತಾದುವುಗಳಂತೆ ಕಾರ್ಡುಗಳಿಗೂ ಅಭಾವವುಂಟಾಗಿರುವುದು ಶೋಚನೀಯವಾಗಿದೆ. ಕೇಂದ್ರ ಶಾಸನ ಸಭೆಯ ಸದಸ್ಯರು ಬಡಜನರ ಸೌಕರ್ಯಕ್ಕಾಗಿ ಬಹಳ ಶ್ರಮಪಟ್ಟು ಕಡಿಮೆ ಮಾಡಿಸಿರುವ ರಿಯಾಯಿತಿಯು ನಿಜವಾಗಿಯೂ ಸಾರ್ಥಕವಾಗಬೇಕಾದರೆ, ಇಲಾಖೆಯವರು ಇನ್ನೂ ಹೆಚ್ಚು ಮುತುವರ್ಜಿಯಿಂದ, ಅಧಿಕ ಪ್ರಮಾಣದಲ್ಲಿ ಕಾರ್ಡುಗಳನ್ನು ತಯಾರು ಮಾಡಿಸಿ ಅವುಗಳನ್ನು ಎಚ್ಚರಣೆಯಿಂದ ವಿನಿಯೋಗಿಸುವ ವ್ಯವಸ್ಥೆ ಮಾಡುವುದು ಅತ್ಯವಶ್ಯಕವಾಗಿದೆ

ಉಪನ್ಯಾಸ

ವಾಣಿ ವಿಲಾಸ ಮೊಹಲ್ಲಾ ಶ್ರೀ ರಾಮಕೃಷ್ಣಾಶ್ರಮದಲ್ಲಿ ನಾಳೆ ಸಂಜೆ ಆರು ಘಂಟೆಗೆ ಸ್ವಾಮಿ ಸೋಮನಾಥಾನಂದರು ಭಗವದ್ಗೀತೆಯ ಮೇಲೆ ಉಪನ್ಯಾಸವೀಯುವರು.

ಕಲ್ಕತ್ತಾ ಗಲಭೆಯ ಬಹಿರಂಗ ವಿಚಾರಣೆ

ಬಂಗಾಳಾ ಸರ್ಕಾರ ಮತ್ತು ಲೀಗಿನ ವಿನಂತಿಗಳನ್ನು ತಳ್ಳಿಹಾಕಿ ಕಲ್ಕತ್ತಾ ಗಲಭೆ ವಿಚಾರಣೆಯು ಬಹಿರಂಗವಾಗಿ ನಡೆಯತಕ್ಕದ್ದೆಂದು ವಿಚಾರಣಾ ಸಮಿತಿ ಅಧ್ಯಕ್ಷರು ತಿಳಿಸಿದ್ದಾರೆ. ಇದರಿಂದ ಸಾರ್ವಜನಿಕ ಶಾಂತಿಗೆ ಭಂಗ ಬಂದರೆ ಆಗ ಮಾತ್ರ ವಿಚಾರಣೆಯನ್ನು ಗುಪ್ತವಾಗಿ ಮುಂದುವರಿಸಲಾಗುವುದೆಂದು ಅವರು ಹೇಳಿದ್ದಾರೆ.

ಘನವಾದ ಸಂಗೀತ ಕಛೇರಿ

ಬಿಡಾರಂ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮ ಮಂದಿರಂ, ಮೈಸೂರು.

20-10-46 ನೇ ಭಾನುವಾರ

ಸಾಯಂಕಾಲ 5-30 ಗಂಟೆಗೆ

ವಿದ್ವಾನ್ ಕುಂಭಕೋಣಂ ಸಹೋದರರ ಹಾಡುಗಾರಿಕೆ,
ವಿದ್ವಾನ್ ತಾ. ತಾಚಾರ್ಯರ ಪಿಟೀಲು,
ವಿದ್ವಾನ್ ರಂಗನಾಥನ್‌ರವರ ಮೃದಂಗವೂ,
ವಿದ್ವಾನ್ ಸೀತಾರಾಮ ಶಾಸ್ತ್ರಿಗಳ ಮೋರ್ಚಿಂಗ್ ಸಹಾ

ಮೆಂಬರುಗಳಲ್ಲದವರಿಗೆ ಟಿಕೆಟ್ ಮೂಲ್ಯ ಪ್ರವೇಶ
ಗಂಡಸರಿಗೆ 1-0-0; ಹೆಂಗಸರಿಗೆ 0-8-0; ಹುಡುಗರಿಗೆ 0-4-0

ನಿಮ್ಮ ಮೈ ಹೊಳಪುಳ್ಳಿನಂತೆ ಹೊಳೆಯಬೇಕೆ ? ನೀವು ಲಾವಣ್ಯ ಮೂರ್ತಿಗಳಾಗಬೇಕೆ ? ಹಾಗಾದರೆ ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ. ಪರೀಕ್ಷಿಸಿ ನೋಡಿರಿ ಎಲ್ಲೆಲ್ಲೂ ದೊರೆಯುತ್ತವೆ.
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ಮೈಸೂರು ಸಿಟಿ ರೇಷನಿಂಗ್

ನೋಟಿಫಿಕೇಷನ್ ನಂ R1-168-46-7
ತಾ॥ 18 10-1946

ಮೈಸೂರು ಸಿಟಿಯಲ್ಲಿರುವ ಎಲ್ಲಾ ರೇಷನ್ ಡಿಪೋಗಳಿಗೂ (ಸರ್ಕಾರಿ, ಲೈಸೆನ್ಸ್ ಪಡೆದಿರುವ ವರ್ತಕರ ಡಿಪೋ, ಮತ್ತು ಸೊಸೈಟಿಗಳೂ) ಮತ್ತು ಮೊಹಲ್ಲಾ ಸಬ್ ಗೋಡೌನುಗಳಿಗೂ ಸಹ ಇದೇ ಮಾಹೆ 21 ನೇ ತಾರೀಖು ಸೋಮವಾರ ಶ್ರೀಮನ್ಮಹಾರಾಜರವರ ಪುತ್ರೀರತ್ನ ಜನನದ ಸಂತೋಷ ಸಮಾರಂಭಕ್ಕಾಗಿ [illegible] ರಜಾ ಕೊಡಲಾಗಿದೆ

(ಸಹಿ) ಅಬ್ದುಲ್ ರಜಾಕ್,
ರೇಷನಿಂಗ್ ಆಫೀಸರ್, ಮೈಸೂರು ಸಿಟಿ

ಆಳ್ವಾರಿನಲ್ಲಿ ಸುಧಾರ

ತಮ್ಮ ಸಂಸ್ಥಾನದಲ್ಲಿ ಆಗಬೇ... ವ ರಾಜಕೀಯ ಸುಧಾರಣೆಗಳನ್ನು ... ವ ಸಲುವಾಗಿಯೂ ಪ್ರಜೆಗಳ ... ನ್ನು ತೆಗೆದುಕೊಳ್ಳುವ ಸಲುವಾಗಿ ಜ... ರದಿಯನ್ನೊಪ್ಪಿಸಲು ಆಳ್ವಾರ್ ಸಂ... ಧೀಶ್ವರರು ಒಂದು ಸುಧಾರಣಾ ಸ... ನ್ನು ನೇಮಕಮಾಡಿದ್ದಾರೆ.

ಪ್ಲೇಗ್

ಪ್ರಸಿದ್ಧ ಪತ್ರಿಕೆ

ಮೈಸೂರು ಪಟ್ಟಣದ ನಿವಾಸಿಗ... ದರಿಂದ ತಿಳಿಯಪಡಿಸುವುದೇನೆಂದ...

ಈಚೆಗೆ ಕೆಲವು ದಿನಗಳಿಂದ ... ಸೂರು ಪಟ್ಟಣದ ಕೆಲವು ಭಾಗಗಳ ... ಗಳು ಸಾಯುತ್ತಲೂ ಸುಮಾರು ... ಜನಗಳಿಗೆ ಪ್ಲೇಗ್ ರೋಗವು ತಗು... ತಪಟ್ಟಿರುತ್ತಾರೆ. ಜನಗಳು ಮ... ಇಲಿ ಸತ್ತರೂ ಸಹ ತಿಳಿಸದೆಯೇ ... ಸೋಂಕು ತಗುಲಿದ ಮೇಲೆ ಒಂದು ... ದ ಮತ್ತೊಂದು ಸ್ಥಳಕ್ಕೆ ಬದಲಾಯಿ... ದರಿಂದಲೂ, ಈ ಅಂಟು ವ್ಯಾಧಿಯು ... ಕಡೆಗಳಲ್ಲೂ ಹರಡಲು ಆಸ್ಪದವಾ... ದೆ. ಇದಕ್ಕೆ ಪ್ಲೇಗ್ ಇನಾಕ್ಯು... ಮಾಡಿಸಿಕೊಂಡಲ್ಲಿ ಯಾವ ಅಪಾ... ಇಲ್ಲದೆ, ಇದ್ದಲ್ಲಿಯೇ ವಾಸಮಾಡ... ಪ್ಲೇಗ್ ವ್ಯಾಧಿಯ ಸೋಂಕು ಇನ್ನೂ ... ಗಿ ಹರಡಲು ಅವಕಾಶವಾಗದಂತೆ ಜನಗಳೂ ಮುಂಚಿತವಾಗಿಯೇ ಇ... ಲೇಷನ್ ಮಾಡಿಸಿಕೊಳ್ಳಬೇಕಾಗಿ ... ಲಕ ತಿಳಿಸಿದ್ದೆ. ಇಲಿಗಳು ಸ... ದು ಮತ್ತು ಯಾರಿಗಾದರೂ ಈ ... ರೋಗದ ವಿಚಾರ ತಿಳಿದ ಕೂಡಲೇ ತಕ್ಷಣ ಹೆಲ್ತ್ ಆಫೀಸಿಗೆ ತಿಳಿಸಬೇಕಾ... ರಿದೆ. ಹೆಲ್ತ್ ಇಲಾಖೆಯವರು ... ಮತ್ತು ಸಾಯಂಕಾಲಗಳಲ್ಲಿ ಹೇ... ಲ್ಲಿಯೂ, ಮುನಿಸಿಪಲ್ ಆ... ಯೂ ಇನಾಕ್ಯುಲೇಷನ್ ಮಾಡು... ಡು ಮಾಡಿರುತ್ತಾರೆ.

(ಸಹಿ) ಪಿ. ಎ. ರಾಮ...
ಚೀಫ್ ಹೆಲ್ತ್ ಆಫೀ...

ರಾಜ್ ಕಮಲ್, ಮೈಸೂರು

17-10-46 ರಿಂದ ಅಮೋಘ 5 ನೇ ವಾರ

ಗಾನ ನೃತ್ಯಗಳಿಂದ ಶೋಭಿಸುವ

ವಾಹಿನಿಯವರ

ಸ್ವರ್ಗಸೀಮ

- ಪಾತ್ರ -
* ನಾಗಯ್ಯ, * ಜಯಮ್ಮ
* ಭಾನುಮತಿ

ನಿಮ್ಮ ಬಂಧು ಬಳಗದೊಡನೆ ಬಂದು ನೋಡಿ ಆನಂದಪಡಿ.

From 18-10-46 for 4 days Daily at 10-30. A. M

"IN OLD CALIFORNIA"

Starting .- John Wayne, Binnie Barnes Etc.

ಐಟಿಯಾಲ್

TRADE ITL MARK

ಅತ್ಯುತ್ತಮವಾದ ಕ್ರಿಮಿ ನಾಶಿನಿ

ಕಾರ್ಬಾಲಿಕ್ ದ್ರಾವಣಕ್ಕಿಂತಲೂ ಆರರಷ್ಟು ಶಕ್ತಿಯುತವಾದದ್ದು ವಿಷ ಮಿಶ್ರಿತವಲ್ಲದ್ದು, ನವೆ [illegible] ಕಲೆಯನ್ನು ಉಳಿಸದಿರುವುದು ಮತ್ತು ಆಹ್ಲಾದಕರವಾದ ವಾಸನೆಯ [illegible] ಐಟಿಯಾಲ್ [illegible] ಆದರೆ ಸೂಕ್ಷ್ಮ ಚರ್ಮಕ್ಕೆ ಯಾವ ಬಾಧೆಯನ್ನೂ ಉಂಟು ಮಾಡುವುದಿಲ್ಲ ಶಸ್ತ್ರ ಮತ್ತು ಇತರ ಚಿಕಿತ್ಸೆಗಳಲ್ಲಿ [illegible] ಉಪಯೋಗಕ್ಕೆ ಬಹಳ ಕಾಲದ ಕ್ರಿಮಿ ನಾಶಕಗಳನ್ನು ಮೀರಿಸಿದೆ

[illegible] ಸೀಸೆಗಳಲ್ಲಿ ದೊರೆಯುತ್ತವೆ

ಐ. ಟಿ. ಎಲ್. ತಯಾರಿ

ತಯಾರಿಸುವವರು :—
ಮೈಸೂರು ಇಂಡಸ್ಟ್ರಿಯಲ್ ಮತ್ತು ಟೆಸ್ಟಿಂಗ್
ಲ್ಯಾಬೊರೇಟರಿ, ಲಿಮಿಟೆಡ್

ಮಲ್ಲೇಶ್ವರಂ ಬೆಂಗಳೂರು.

OPERA TALKI

ತಾ॥ 19—10—46ರ
ನಾಲ್ಕನೇ ವಾರ

ಮಾಯಾಮಚ್ಛಿ

(ತೆಲುಗು)

23-10-46 ರಿಂದ

ಶ್ರೀ ಮುರುಗ

(ತಮಿಳು)

ಜೀವರತ್ನಂ, ಮಾಲತಿ, ರಾಮ...

ರೇಷ್ಮೆ ಸೀರೆಗ...

(ಕ್ರೇಪ್ ಮತ್ತು ಸಾ...

ತಯಾರಿಸುವವರಿಂದಲೇ ಕೊಂ...

ಶಾಂತಿ ಟೆಕ್ಸ್‌ಟೈಲ...

(ಕಾಳಪ್ಪನವರ ಮಿಲ್ಲಿನ ಪ...
ಮೈಸೂರು ಸೌತ್, ಮೈಸ...

Edited printed and pu[bl...]
A. R. Nagarajan at the Sadh[...]
D Subbiah Road, Mysore

ರಿ. ನಂ. ೨೨೭ || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೫] ಭಾನುವಾರ ೨೦—೧೦—೪೬ | [ಸಂಚಿಕೆ ೬೯

ಪಂ॥ನೆಹರೂರವರನ್ನು ಅಪಹರಿಸಲು ಪ್ರಯತ್ನ?

...ವಿದ್ಯಾನಿಲಯದ ಪರೀಕ್ಷಾ ಫಲಿತಾಂಶ

ಮೈಸೂರು ೨೦

ಮೈಸೂರು ವಿಶ್ವವಿದ್ಯಾಲಯದ ಸೆಪ್ಟೆಂ... ಪರೀಕ್ಷೆಯ ಫಲಿತಾಂಶಗಳು ಹೊರ... ದ್ದಿವೆ ನಮ್ಮ ಪತ್ರಿಕಾ ಕಛೇರಿಯಲ್ಲಿ ...ನ್ನು ಮಹಾಜನರ ಅವಗಾಹನೆಗಾಗಿ ...ಟಿಸಲಾಗಿದೆ.

ವಿದ್ಯಾರ್ಥಿ ಕಾಂಗ್ರೆಸ್

...ರಾಜಧಾನಿಯ ವಿದ್ಯಾರ್ಥಿ ಕಾಂಗ್ರೆಸ್ಸಿನ ...ಕಾರಿ ಸಮಿತಿ ಸಭೆಯು ಮೊನ್ನೆ ...ರು ...ರತದ ಹಲವು ಭಾಗಗಳಲ್ಲಿ ನಡೆಯು...ವ ಕೋಮುವಾರು ಗಲಭೆಯನ್ನು ...ಸಂಸ್ಥಾನದ ದಿವಾನರಾದ ಸರ್ ...ಮಸ್ವಾಮಿ ಮೊದಲಿಯಾರರು ...ನಲ್ಲಿ ಜವಾಬ್ದಾರಿ ಸರ್ಕಾರದ ...ಟವನ್ನು ವಿರೋಧಿಸಿ, ವ್ಯಕ್ತಪಡಿಸಿ... ಘೋಷಣೆಯನ್ನು ಖಂಡಿಸುವ ನಿರ್ಣ...ಗಳನ್ನು ಅಂಗೀಕರಿಸಲಾಯಿತು

ಪ್ರದೋಷ ಸಂಗೀತ

...ಕೃಷ್ಣರಾಜ ಮೊಹಲ್ಲಾ ನಾರಾ... ಬೀದಿ ...ಮದ್ದುರಾಮ ದೇವಸ್ಥಾನದಲ್ಲಿ ನಾಳೆ ...ಮಂಗಳವಾರ ಸಂಜೆ ೬॥ ಗಂಟೆಗೆ ಪ್ರ...ದೋಷ ಪ್ರಯುಕ್ತ ಪಾಲಘಾಟ್ ಸಂಗೀತ ...ಟಿ ಪಿ. ಸುಬ್ರಹ್ಮಣ್ಯ ಅಯ್ಯರ್‌ರವರ ...ಗಾಯನ, ವಿ॥ ರಾಜಯ್ಯಂಗಾರ್‌ರ ಪಿ... ಮತ್ತು ವಿ॥ ಗೋಪಾಲರಾಯರ ...ದಂಗ ವಾದನ ನಡೆಯುವುದು

ದೀಪಾವಳಿ ವಿಶೇಷ ಸಂಗೀತ

ಮೈಸೂರು ಶ್ರೀ ಸರಸ್ವತಿ ಸಂಗೀತ ಸ...ಭೆಯ ಆಶ್ರಯದಲ್ಲಿ ದೀಪಾವಳಿಯ ವಿ...ಶೇಷ ಕಾರ್ಯಕ್ರಮದ ಬಗ್ಗೆ ಸುಪ್ರಸಿದ್ಧ ...ಶ್ರೀಮತಿ ನೀಲಮ್ಮ ಕಡಾಂಬಿಯ ...ವೀಣಾವಾದನ ಮತ್ತು ಬಾಯಿ ಹಾ...ಡಿಕೆಯೂ ಸೂಕ್ತ ಪಕ್ಕ ವಾದ್ಯಗಳೊ... ಇದೇ ೨೭ ನೇ ತಾ॥ ಭಾನುವಾರ ಸಂ...ಜೆ ...ಕ್ಕೆ ಏರ್ಪಡಿಸಿದೆ. ಮೆಂಬರು ...ವಲ್ಲದವರಿಗೆ ಟಿಕೆಟ್ ಮೂಲಕ ಪ್ರವೇಶ... ವಿವರಗಳನ್ನು ಮುಂದೆ ಪ್ರಕಟಿಸ...ಲಾಗುವುದೆಂದೂ, ತಿಳಿಸಲಾಗಿದೆ.

...ಹುಕೂಮತ್-ಆಜಾದ್ ಹಿಂದ್ ದಿನಾಚರಣೆ

...ನಾಳೆ ದಿವಸ ತಿಲಕ್ ಸಂಘದ ಆಶ್ರಯ... ಆಜಾದ್ ಹಿಂದ್ ಸರ್ಕಾರ ದಿನಾಚರ...ಣೆ ಬಗ್ಗೆ ಬೆಳಿಗ್ಗೆ ೯ ಗಂಟೆಗೆ ಧ್ವಜಾ...ರೋಹಣವೂ, ಮಧ್ಯಾಹ್ನ ೪ ಗಂಟೆಗೆ ಮೆ...ರವಣಿಗೆಯೂ, ಸಂಜೆ ೬॥ ಗಂಟೆಗೆ ಬಹಿರಂ...ಗ ಸಭೆಯೂ ನಡೆಯುವುವು. ಶ್ರೀಗಳಾ...ದ ...ನಾರಾಯಣ ಪಂಡಿತ್, ಎಚ್. ... ದೊರೆಸ್ವಾಮಿ, ಸೆಟ್ಲೂರ್ ಮತ್ತು ... ಇವರುಗಳು ಭಾಷಣ ಮಾಡು...

...ಬಂಗಾಳಾ ದಂಗೆ ಬಗ್ಗೆ ...ಪಟೇಲರ ತನಿಖೆಯೇ ?

...ಇತ್ತೀಚೆಗೆ ಮುಂಬಾದ ಪೂರ್ವ ಬಂಗಾಳಾ...ದ ಪರಿಸ್ಥಿತಿಯ ಬಗ್ಗೆ ಸರ್ದಾರ್ ...ರು ಮಹಾತ್ಮ ಗಾಂಧಿಯವರೊಡನೆ ...ಚರ್ಚೆ ನಡೆಸುತ್ತಿದ್ದಾರೆ. ಅಲ್ಲಿನ ...ಪರಿಸ್ಥಿತಿಯನ್ನು ಕೂಲಂಕುಷವಾಗಿ ...ಲಿಸುತ್ತಿದ್ದಾರೆ. ಗಲಭೆ ಪಟ್ಟೋಟ... ...ದೇಶವು ಪ್ರವೇಶಿಸುವ ಸಂದರ್ಭ ಬಂದ... ...ಮೈಸೂರಿನವರ ಅನುಮತಿ ಪಡೆ... ...ಗ ವುದರಿಂದ ಈ ಗಿ ನಿಂ ದ ಲೇ ... ...ಗೆ ಪರಿಸ್ಥಿತಿಯನ್ನು ತಿಳಿಸಲಾ... ...ವಾಗಿ ಗೊತ್ತಾಗಿದೆ

ಮಹಾಜನ ಹೈಸ್ಕೂಲ್, ಒಂಟಿಕೊಪ್ಪಲ್

ಮೇಲ್ಕಂಡ ಶಾಲೆಯ ವಿದ್ಯಾರ್ಥಿಗಳು ಈ ವರ್ಷವೂ ದೀಪಾವಳಿ ಹಬ್ಬದ ಸಮಯದಲ್ಲಿ ಶಾಲಾ ನಿಧಿಗೆ ಹಣ ಸಂಗ್ರಹಿಸಲು ಬರುತ್ತಾರೆ ಮಹಾಜನರೆಲ್ಲರೂ ಉದಾರವಾಗಿ ಸಹಾಯ ಮಾಡಬೇಕಾಗಿ ಕೋರಿದೆ.

ಮಕ್ಕಳ ಸಂತೋಷ

ರಾಜಧಾನಿಯ ಮಕ್ಕಳ ಕೂಟದವರು ಕಳೆದ ೧೭ ನೇ ತಾ॥ ವಿಶೇಷ ಸಭೆ ಸೇರಿ ಶ್ರೀಮನ್ಮಹಾರಾಜರವರಿಗೆ ಪುತ್ರೋತ್ಸವಾದ ಬಗ್ಗೆ ತಮ್ಮ ಸಂತೋಷವನ್ನೂ ಶುಭಾಶಯಗಳನ್ನೂ ವ್ಯಕ್ತಪಡಿಸಿದರು. ಮಕ್ಕಳಿಗೆಲ್ಲಾ ಮಿಠಾಯಿ ಹಂಚಿ, ಯುವ ಸಂತಾನ ಶ್ರೇಯಸ್ಸನ್ನು ಕೋರಲಾಯಿತು.

ನೆಹರೂರವರನ್ನು ಅಪಹರಿಸಲು ಪ್ರಯತ್ನ

ಗುಡ್ಡಗಾಡು ಪ್ರದೇಶಗಳಲ್ಲಿ ಇತ್ತೀಚೆಗೆ ಬಾಂಬು ಹಾಕಲ್ಪಟ್ಟ ಜಾಗಗಳಲ್ಲಿ ಪಂ॥ನೆಹರೂರವರು ಪ್ರವಾಸ ಕೈಗೊಂಡರೆ ಅಗ್ಗ ಅವರನ್ನು ಅಪಹರಿಸಲು ಮಾಡಿದ್ದ ಗುಪ್ತ ಸಂಚಿನ ಸುಳಿವು ಪತ್ತೆಯಾಗಿರುವುದಾಗಿ ಪೇಷಾವರದಿಂದ ಬಂದ ವರದಿಯೊಂದು ತಿಳಿಸುತ್ತದೆ. ಇದರ ಸುಳಿವು ತಿಳಿದ ಕೂಡಲೇ ಆ ಯೋಜನೆಗಳನ್ನೆಲ್ಲಾ ಮಣ್ಣುಪಾಲು ಮಾಡಲು ತಕ್ಕ ಏರ್ಪಾಡು ಮಾಡಿರುವುದಾಗಿ ಆ ವರದಿಯಲ್ಲಿ ನಮೂದಿಸಲಾಗಿದೆ.

ಪೌರಸಭಾ ಪ್ರಸಂಗ

ಸ್ವಂ.ಸು] ಚಾಮರಾಜನಗರ ೧೯

ಪೌರಸಭಾ ಅಧ್ಯಕ್ಷರ ಮೇಲೆ ಬಂದಿದ್ದ ಅವಿಶ್ವಾಸ ನಿರ್ಣಯ ತಳ್ಳಿ ಹಾಕಲ್ಪಟ್ಟ "ರೂಲಿಂಗ್" ಚರ್ಚಿಸಲು ಈ ತಿಂಗಳು ೯ ನೇ ತಾ॥ ವಿಶೇಷ ಸಭೆ ಸೇರಿ ರೂಲಿಂಗ್ ಸರಿಯಲ್ಲವೆಂದು ಅವಿರೋಧವಾಗಿ ತೀರ್ಮಾನಿಸಿ ರದ್ದಾಯಿತೆಂದೂ, ಅವರೂ ಅಂದಿನ ಅಧ್ಯಕ್ಷತೆ ವಹಿಸಿದ್ದ ಉಪಾಧ್ಯಕ್ಷರು ಈ ಮೀಟಿಂಗಿನ ವಿಷಯವನ್ನೂ ತಳ್ಳಿ ಹಾಕಿದುದಾಗಿ ಹೇಳಿದರೆಂದೂ ತಿಳಿದುಬಂದಿದೆ ಅವಿಶ್ವಾಸ ನಿರ್ಣಯ ತಂದಿದ್ದ ಸದಸ್ಯರು ಜಿಲ್ಲಾಧಿಕಾರಿಗಳಿಗೆ ಅಪೀಲು ಹಾಕಿದ್ದಾರೆ.

ಮಾಧ್ವ ಸಂಘ

ಇಲ್ಲಿ ಕೆಲವು ಮಹನೀಯರು ಮಾಧ್ವ ಸಂಘ ಸ್ಥಾಪನೆ ಮಾಡಿ ಮಧ್ವ ಮತದವರ ಹಿತಕ್ಕಾಗಿ ಶ್ರಮಿಸುತ್ತಿದ್ದಾರೆ. ಈ ಸಂಘವು ಅಭಿವೃದ್ಧಿ ಹೊಂದುತ್ತಾ ಇದೆ

ಸೂಚನೆ

ನಮ್ಮ ಪ್ರಭುಗಳವರಿಗೆ ಶ್ರೀಮಂತ ಪುತ್ರ ಜನನವಾದ ಸಂತೋಷ ಸೂಚನಾರ್ಥವಾಗಿಯೂ ಮತ್ತು ನಾಮಕರಣೋತ್ಸವದ ಪ್ರಯುಕ್ತ ನಾಳೆ "ಸಾಧ್ವಿ" ಪತ್ರಿಕೆಗೆ ರಜಾ ಕೊಡಲಾಗಿದೆ.

ರಾಜಕುಮಾರರಿಗೆ ಪರಮಾತ್ಮನು ಆಯುರಾರೋಗ್ಯಾದಿಗಳನ್ನೂ, ಸಕಲ ಸಂಪತ್ತುಗಳನ್ನೂ ಕರುಣಿಸಿ, ಯದು ಸಂತಾನವು ಚಿರವಾಗಿ ಬಾಳಿ ಬದುಕುವಂತೆ ಅನುಗ್ರಹಿಸಲೆಂದು ನಾವು ಪಾರ್ಥಿಸುತ್ತೇವೆ.

—ವ್ಯವಸ್ಥಾಪಕ

ಸಮಾಜ ಸೇವೆಗೆ ಪ್ರೇರಣೆ

ಸಂಯುಕ್ತ ಪ್ರಾಂತ್ಯದಲ್ಲಿ ಯುವಕರನ್ನು ಅಗತ್ಯ ಸಮಾಜ ಸೇವೆಗೆ ಸೇರಿಸುವ ಯೋಜನೆಯನ್ನು ಜಾರಿಗೆ ತರಲಾಗುವುದೆಂದು ಅಲ್ಲಿನ ಪ್ರಧಾನಿ ಪಂತರು ಘೋಷಿಸಿದ್ದಾರೆ. ಇಂಟರ್ ಪರೀಕ್ಷೆಯಾದನಂತರ ಪ್ರತಿ ವಿದ್ಯಾರ್ಥಿಯೂ, ಸಮಾಜ ಸೇವೆಯ ಬಗ್ಗೆ ಒಂದು ವರ್ಷ ಕಾಲ ಬಲವಂತ ಶಿಕ್ಷಣ ಪಡೆಯಬೇಕೆಂದೂ, ಈ ಶಿಕ್ಷಣ ಪಡೆಯದೆ ಇರುವವರನ್ನು ವಿಶ್ವವಿದ್ಯಾನಿಲಯ ಅಥವಾ ಸರ್ಕಾರಿ ಕೆಲಸಕ್ಕೆ ಸೇರಿಸಿಕೊಳ್ಳುವುದಿಲ್ಲವೆಂದು ಅವರು ತಿಳಿಸಿದ್ದಾರೆ. ಇದರಿಂದ ಯುವಕರು ಗ್ರಾಮಾಂತರ ಪ್ರದೇಶಗಳವರ ಅಭಿವೃದ್ಧಿಗೆ ದುಡಿಯಲು ಸಹಾಯವಾಗುವುದೆಂದು ಆಶಿಸಲಾಗಿದೆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಮಿಲಿಟರಿ ಶಿಕ್ಷಣವನ್ನು ಬಲವಂತವಾಗಿ ಕೊಡಲಾಗುವುದೆಂದೂ ಸಹಕಾರಿಣಿ ಪಂತರು ಹೇಳಿದ್ದಾರೆ.

ಶರತ್ ಚಂದ್ರ ಬೋಸರಿಗೆ ಇಂಗ್ಲೆಂಡ್‌ನಲ್ಲಿ ಸ್ಥಾನ ?

ಶ್ರೀ ಶರತ್‌ಚಂದ್ರ ಬೋಸರನ್ನು ಇಂಗ್ಲೆಂಡ್ ಅಥವಾ ಅಮೆರಿಕಗಳಲ್ಲಿ ಭಾರತದ ಪ್ರತಿನಿಧಿಯನ್ನಾಗಿ ನೇಮಕ ಮಾಡಲಾಗುವುದೆಂದೆ ಲಂಡನ್ನಿನಲ್ಲಿ ಸುದ್ದಿಯಿದ್ದೆ ಶ್ರೀ ವಿ ಕೆ ಮೆನನ್‌ರವರು ಮಾಸ್ಕೋಗೆ ತೆರಳುವ ಸೂಚನೆಗಳೂ ಇವೆ.

ಶ್ರೀ ಮೈಸೂರು ವಾಣಿಜ್ಯ ಸಂಸ್ಥೆಯವರು ನಿನ್ನೆ ಸಭೆ ಸೇರಿ, ಶ್ರೀಮನ್ಮಹಾರಾಜರಿಗೆ ಪುತ್ರೋ ಜನನವಾದ ಬಗ್ಗೆ ಸಂತೋಷ ವ್ಯಕ್ತಪಡಿಸುವ ಮತ್ತು ಶ್ರೀ ಟಿ ವಿಶ್ವನಾಥ್‌ರವರ ನಿಧನದ ಬಗ್ಗೆ ಸಂತಾಪ ಸೂಚಿಸುವ ನಿರ್ಣಯಗಳನ್ನು ಅಂಗೀಕರಿಸಿದವು.

ಹಿಂದೂ-ಮುಸ್ಲಿಂ ಸೌಹಾರ್ದ ಸಮಿತಿ

ಸ್ವಂ.ಸು ವರ್ತ] ಬೆಂಗಳೂರು ೨೦

ಸಂಸ್ಥಾನದ ದಿವಾನರಾದ ಶ್ರೀ ಎಂ ಶೇಷಾದ್ರಿಯವರ ಅಧ್ಯಕ್ಷತೆಯಲ್ಲಿ ನಿನ್ನೆ ನಗರದ ಪ್ರಮುಖ ಹಿಂದೂ, ಮುಸ್ಲಿಂಮರ ಸಭೆಯೊಂದು ಜರುಗಿತು. ಸಭೆ ಸೇರಿದ್ದ ಉದ್ದೇಶವನ್ನು ಶ್ರೀ ಶೇಷಾದ್ರಿಯವರು ವಿವರಿಸಿ ನಮ್ಮ ಸಂಸ್ಥಾನದ ಧವಳ ಕೀರ್ತಿಯು ಅಚಂದ್ರಾರ್ಕವಾಗಿ ಉಳಿಯಲು ಅಗತ್ಯವಾದ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕಾದ್ದು ಅಗತ್ಯವೆಂದು ತಿಳಿಸಿದರು ಹಿಂದೂ ಮುಸ್ಲಿಂ ಸೌಹಾರ್ದ ಅಧಿಕಗೊಂಡು ಯಾವ ವಿಧವಾದ ಗಲಭೆಗೂ ಅವಕಾಶವಾಗದಂತೆಯೂ, ಪಲ ಕೆಲವರು ಸುಳ್ಳು ಸುದ್ದಿಗಳನ್ನು ಹರಡಿ ಏನೂ ತಿಳಿಯದ ಜನರಲ್ಲಿ ಉದ್ರೇಕ ಹುಟ್ಟಿಸಿ, ಸಾರ್ವಜನಿಕ ಶಾಂತಿಗೆ ಭಂಗ ತರುವುದನ್ನು ತಡೆಗಟ್ಟುವ ಸಲುವಾಗಿಯೂ, ಎಲ್ಲ ಮುಖಂಡರ ಸಹಕಾರ ಅಗತ್ಯವೆಂದರು ಸಂಸ್ಥಾನದಲ್ಲಿ ಕೋಮುವಾರು ಕಲಹ ತಲೆ ಎತ್ತದಂತೆ ಸರ್ಕಾರದವರು ಸರ್ವ ವಿಧದಲ್ಲೂ ಏರ್ಪಾಡುಗಳನ್ನು ಮಾಡುವುದಾಗಿ ಸಂಕಲ್ಪಿಸಿರುವುದಾಗಿ ಅವರು ತಿಳಿಸಿ ಮುನ್ನೆಚ್ಚರಿಕೆಯ ಸಲುವಾಗಿ ಒಂದು ಶಾಂತಿ ಸಮಿತಿ ರಚಿಸುವುದು ಅವಶ್ಯಕವೆಂದರು.

ಅನಂತರ ಬೆಂಗಳೂರಿನ ಜಿಲ್ಲಾಧಿಕಾರಿಗಳಾದ ಶ್ರೀ ನಿವಾರ್ಣೇಗೌಡರ ಅಧ್ಯಕ್ಷತೆಯಲ್ಲಿ ಶಾಂತಿ ಸಮಿತಿ ರಚಿಸಲಾಯಿತು ನಗರ ಸಭಾಧ್ಯಕ್ಷರಾದ ಶ್ರೀ ಶಿವಶಂಕರ್‌ರವರು ಉಪಾಧ್ಯಕ್ಷರು, ಶ್ರೀ ಬಾಬೂರೆಡ್ಡಿಯವರು ಅದರ ಕಾರ್ಯದರ್ಶಿಗಳು.

ಮಂಡಾಲರಿಗೆ ಸ್ಥಾನ ಸಿಕ್ಕಿದ ಬಗೆ

ಕೇಂದ್ರ ಸರ್ಕಾರಕ್ಕೆ ಲೀಗಿನ ಪರವಾಗಿ ಬಂಗಾಳದ ನಿಮ್ನ ವರ್ಗದ ಶ್ರೀ ಜೋಗೇಂದ್ರನಾಥ ಮಂಡಾಲ್‌ರವರಿಗೆ ಸ್ಥಾನ ಕೊಡಲಾಗಿದೆಯಷ್ಟೆ. ಅವರ ಮಿ॥ ನಾಜಿಮುದ್ದೀನರ ಸ್ಥಾನದಲ್ಲಿ ಅವರನ್ನು ನೇಮಿಸಿ ಬಂಗಾಳಾ ಶಾಸನ ಸಭೆಯಲ್ಲಿ ಲೀಗಿಗೆ ನಿಮ್ನ ವರ್ಗದವರ ಬೆಂಬಲ ದೊರಕಿಸಿಕೊಡುವಂತೆ ಮಿ॥ ಸುಹ್ರವರ್ದಿಯವರು ಕೊನೇ ಘಳಿಗೆಯಲ್ಲಿ ಮಿ॥ ಜಿನ್ನಾರವರಿಗೆ ವಿನಂತಿ ಮಾಡಿಕೊಂಡರೆಂದೂ, ಅದ್ದರಿಂದಲೇ ಜಿನ್ನಾರವರು, ತಮ್ಮ ಸಹೋದ್ಯೋಗಿಗಳಿಗೂ ತಿಳಿಸದೆ ಶ್ರೀ ಮಂಡಾಲ್‌ರನ್ನು ಸೂಚಿಸಿದರೆಂದು ತಿಳಿದುಬಂದಿದೆ.

ಕೇಂದ್ರ ಸರ್ಕಾರಕ್ಕೆ ಮೌಲಾನಾ ಆಜಾದರೇ ?

ಕೇಂದ್ರ ತಾತ್ಕಾಲಿಕ ಸರ್ಕಾರದಲ್ಲಿ ಮಿ॥ ಆಸಫ್ ಅಲಿಯವರ ಸ್ಥಾನದಲ್ಲಿ ಮೌಲಾನಾ ಆಜಾದರು ನೇಮಿಸಲ್ಪಡುವ ಸೂಚನೆಗಳು ಬಲವಾಗಿ ಕಂಡುಬರುತ್ತಿವೆಯೆಂದು ದೆಹಲಿಯಿಂದ ವಾರ್ತೆ ಬಂದಿದೆ

● ಬಂಗಾಳದ ನವಖಾಳಿ ಜಿಲ್ಲೆಯಲ್ಲಿ ನಡೆದ ಹತ್ಯಾಕಾಂಡವನ್ನು ಖಂಡಿಸಿ, ಅದರಲ್ಲಿ ನೊಂದವರಿಗೆ ಸಹಾನುಭೂತಿ ತೋರಿಸಲು ಬೊಂಬಾಯಿಯಲ್ಲಿ ನಿನ್ನೆ ಭಾರಿ ಹರತಾಳವು ಜರುಗಿತು. ೬೬ ಭಾರಿ ಗಿರಣಿಗಳ ಸ್ಟ್ರೈಕಿನಲ್ಲಿ ಗಿರಣಿಗಳೂ, ಎಲ್ಲಾ ಪ್ರಮುಖ ಬೈಲ್ವೆ ವರ್ಕ್‌ಷಾಪ್ಪುಗಳೂ, ಸಣ್ಣ ಸಣ್ಣ ಕಾರ್ಖಾನೆಗಳೂ, ಅನೇಕ ಅಂಗಡಿಗಳೂ ಮುಚ್ಚಲ್ಪಟ್ಟಿದ್ದುವು ಕೆಲವು ಭಾಗದ ಟ್ರಾಂಗಳ ಸಂಚಾರ ನಿಲ್ಲಿಸಲ್ಪಟ್ಟಿತು. ವರದಿಯಾಗಿದೆ

ಸಾಧ್ವಿ

ತಾ॥ ೨೦-೧೦-೪೬ ಭಾನುವಾರ

ವಿಷಾದದ ಪ್ರಕರಣ

ಪೂರ್ವ ಬಂಗಾಳ ಮತ್ತು ಗಡಿನಾಡು ಪ್ರಾಂತಗಳಲ್ಲಿ ನಡೆಯುತ್ತಿರುವ ವಿದ್ಯಮಾನಗಳು ಇಂದಿನ ಇತಿಹಾಸದಲ್ಲಿ ಅತ್ಯಂತ ಕಳಂಕ ಪ್ರಾಯವಾದ ಪ್ರಕರಣಗಳಾಗಿವೆ. ಪೂರ್ವ ಬಂಗಾಳದಲ್ಲಿ ಸರ್ಕಾರವೇ ನಿರ್ನಾಮವಾಗಿದೆ. ಬ್ರಿಟಿಷ್ ರಾಜ್ಯವೂ ಇಲ್ಲ, ದೇಶೀಯ ರಾಜ್ಯವೂ ಇಲ್ಲ; ಗೂಂಡರ ರಾಜ್ಯವಾಗಿದೆ. ಘಸ್ನಿ ಮಹಮೂದ್, ಚಂಘೇಸ್ ಖಾನರ ಕಾಲದ ಅನಾಹುತಗಳೆಲ್ಲವೂ ಪುನರಾವರ್ತಿಯಾಗುತ್ತಿವೆ.

ಪಾಕೀಸ್ತಾನದಲ್ಲಿ ಸಕಲ ಸಂಗಡಿಗರಿಗೂ ಸಂಪೂರ್ಣ ರಕ್ಷಣೆ ದೊರೆಯುವುದೆಂದೂ ಮುಖ್ಯವಾಗಿ ಅಲ್ಪ ಸಂಖ್ಯಾತರ ಹಿತವನ್ನು ಕಾಪಾಡಲಾಗುವುದೆಂದೂ ಮಿ॥ ಜಿನ್ನಾರವರು ಹೇಳುತ್ತಿರುವರಷ್ಟೆ. ಬಂಗಾಳದಲ್ಲಿ ಹಿಂದೂಗಳು ಅಲ್ಪ ಸಂಖ್ಯೆಯಲ್ಲಿರುವರು. ಪೂರ್ವ ಬಂಗಾಳದಲ್ಲಿ ಇನ್ನೂ ಕಡಿಮೆ ಸಂಖ್ಯೆಯಲ್ಲಿರುವರು. ನೌಖಾಲಿ ಜಿಲ್ಲೆಯಲ್ಲಿ ಹಿಂದುಗಳ ಸಂಖ್ಯೆ ಕೇವಲ ಶೇಕಡ ಹದಿನೈದು ಮಾತ್ರ. ಅಲ್ಲಿನ ಹಿಂದುಗಳ ಸ್ಥಿತಿಯು ಇಂದು ಅತ್ಯಂತ ಚಿಂತಾಜನಕವಾಗಿದೆ.

ಒಟ್ಟು ಐದು ಸಾವಿರ ಜನರ ಕೊಲೆಯಾಗಿದೆ. ಐವತ್ತು ಸಾವಿರಕ್ಕೆ ಮೀರಿದ ಜನರಿಗೆ ಕಷ್ಟನಷ್ಟಗಳು ಸಂಭವಿಸಿವೆ. ಮನೆ ಮಠಗಳು ಭಸ್ಮವಾಗಿವೆ; ಆಸ್ತಿ ಪಾಸ್ತಿಗಳು ಲೂಟಿಯಾಗಿವೆ, ಜನರ ಜಾತಿಯನ್ನು ಕೆಡಿಸಲಾಗಿದೆ; ಬಲಾತ್ಕಾರದಿಂದ ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಳ್ಳಲಾಗಿದೆ; ಅನೇಕ ಮಾನಭಂಗವಾಗಿದೆ, ಅವರ ಅಪಹರಣವೂ ಆಗಿದೆ. ಇತಿಹಾಸದಲ್ಲಿ ಕಂಡರಿಯದ ಎಲ್ಲಾ ಅತ್ಯಾಚಾರಗಳೂ ಜರುಗುತ್ತಿವೆ. ಸಾವಿರಾರು ಜನರು ಮನೆ ಮಠಗಳನ್ನು ತೊರೆದು ಬೇರೆಬೇರೆ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ಸರ್ಕಾರದವರು ಸಾರ್ವಜನಿಕ ರಕ್ಷಣೆಯನ್ನು ಕೊಟ್ಟಿಲ್ಲ. ಕಾಂಗ್ರೆಸ್ ಅಧ್ಯಕ್ಷರಾಗಿ ಚುನಾಯಿತರಾಗಿರುವ ಆಚಾರ್ಯ ಕೃಪಲಾನಿಯವರೂ ಶ್ರೀ ಶರತ್‌ಚಂದ್ರಬೋಸರೂ ಅಲ್ಲಿಗೆ ತೆರಳಿದ್ದಾರೆ. ಮಹಾತ್ಮ ಗಾಂಧಿಯವರೂ ಹೋಗಬೇಕೆಂದಿದ್ದಾರೆ. ಇಡೀ ದೇಶದ ಗಮನವೆಲ್ಲವೂ ಅತ್ತಕಡೆ ತಿರುಗಿದೆ.

ಪಂಡಿತ ನೆಹರೂರವರು ಗಡಿನಾಡಿಗೆ ಭೇಟಿ ಕೊಟ್ಟಿರುವ ಈ ಸಮಯದಲ್ಲಿ ಅಲ್ಲಿನ ಪಠಾಣರು ನಡೆಸಿದ ವಿರೋಧ ಪ್ರದರ್ಶನವೂ ಅತ್ಯಂತ ವಿಷಾದಕರವಾದುದು. ಪುಂಡರು ಅವರ ವಿಮಾನದ ಕಡೆ ಗುಂಡು ಹಾರಿಸಿದರೆಂದೂ ಉಟಿಭರ್ಜಿಗಳಿಂದ ಅವರನ್ನೂ ಅಲ್ಲಿನ ಮಂತ್ರಿಗಳನ್ನೂ ತಿವಿಯ ಬಿಟ್ಟ[illegible]ಸಿದರೆಂದೂ ವರದಿಯಾಗಿದೆ.

ಮುಸ್ಲಿಂ ಲೀಗಿನವರು ಕೇಂದ್ರ ಸರ್ಕಾರವನ್ನು ಪ್ರವೇಶಿಸಲು ಒಡಂಬಟ್ಟಿರುವ ಈ ಸಮಯದಲ್ಲಿಯೂ ಇಂತಹ ಪ್ರಸಂಗಗಳು ನಡೆಯುತ್ತಿರುವುದು ಹೆಚ್ಚಿನ ಆತಂಕಕ್ಕೆ ಕಾರಣವಾಗಿದೆ. ಕೂಡಲೇ ಈ ರೀತಿ ಆದರೆ ನ[illegible] ಐಕ್ಯ ಸರ್ಕಾರದ ವ್ಯವಹಾರಗಳಿಗೆ [illegible] ಕೊಡಕಿಗಳು ಒದಗ[illegible] ಕಾರಣವಾಗಿದೆ. ಇದೆ[illegible] ಹಿಡಿ[illegible]ವೇನೆಂಬುದು [illegible]

ಲೀಗ್ ಅಧಿಕಾರ ಸ್ವೀಕಾರ

ಕೇಂದ್ರ ಸರ್ಕಾರದಲ್ಲಿ ಲೀಗು ಸೇರಲು ತೀರ್ಮಾನಿಸಿದೆಯಷ್ಟೆ. ಲೀಗ್ ಪ್ರತಿನಿಧಿಗಳ ಪೋರ್ಟ್ ಫೋಲಿಯೋಗಳ ಹಂಚಿಕೆ ಆದನಂತರವೇ ಅಧಿಕಾರ ವಹಿಸಿಕೊಳ್ಳುವುದಾಗಿ ನಿಯೋಜಿತ ಸದಸ್ಯರಲ್ಲೊಬ್ಬರಾದ ಮಿ॥ ಚುಂದ್ರೀಗರ್‌ರವರು ತಿಳಿಸಿದ್ದಾರೆ.

ಗವರ್ನರರೂ ನೌಖಾಲಿ ಪರಿಸ್ಥಿತಿ ಪರಿಶೀಲಿಸುವರು

ನೌಖಾಲಿಗೆ ಸಶಸ್ತ್ರ ಪೋಲೀಸ್ ಪಡೆ ಹೋಗಿದೆ. ಗವರ್ನರರು ಅಧಿಕಾರಿಗಳೊಡನೆ ಸಂಬಂಧ ಬೆಳೆಸಿ ಪರಿಸ್ಥಿತಿಯನ್ನರಿಯುತ್ತಿದ್ದಾರೆ. ಸೈನ್ಯ ಪಡೆಗಳೂ ಹೋಗಿವೆ, ಪರಿಸ್ಥಿತಿಯನ್ನು ಹತೋಟಿಗೆ ತರಲು ಮಾಡಬೇಕಾದ ಎಲ್ಲ ಕಾರ್ಯಕ್ರಮಗಳನ್ನೂ ಕೈಗೊಳ್ಳಲಾಗುತ್ತಿದೆ -ಎಂದು ಗವರ್ನರರು ಶ್ರೀ ಎನ್. ಸಿ. ಚಟರ್ಜಿಯವರಿಗೆ ಪತ್ರ ಬರೆದಿದ್ದಾರೆ.

ಮಹಾತ್ಮರಿಗೆ ವಿಶ್ರಾಂತಿ

ಮಹಾತ್ಮರನ್ನು ಪರೀಕ್ಷಿಸಿದ ಡಾ॥ ಬಿ. ಸಿ. ರಾಯರು ಅವರು ಬಹಳ ನಿಶ್ಶಕ್ತರಾಗಿರುವರೆಂದೂ, ವಿಶ್ರಾಂತಿಗಾಗಿ ಶಾಂತವಾದ ಪ್ರದೇಶಕ್ಕೆ ಅವಷ್ಟು ಬೇಗ ಹೋಗಬೇಕೆಂದೂ ತಿಳಿಸಿದ್ದಾರೆ.

ಅಮೆರಿಕಾ-ರಷ್ಯಾ ಬಿಕ್ಕಟ್ಟು

ಸಂಯುಕ್ತ ಸಂಸ್ಥಾನಕ್ಕೂ ರಷ್ಯಾಕ್ಕೂ ಬಿಕ್ಕಟ್ಟು ದಿನೇ ದಿನೇ ಜಾಸ್ತಿಯಾಗುತ್ತಿರುವುದು ತಮಗೆ ಬಹಳ ಯೋಚನೆಯನ್ನುಂಟು ಮಾಡಿದೆಯೆಂದು ಅಮೆರಿಕಾ ಸೆಕ್ರೆಟರಿ ಆಫ್ ಸ್ಟೇಟ್ ಮಿ॥ ಬೈರನ್ಸ್‌ರವರು ಮೊನ್ನೆ ರಾತ್ರಿ ಬ್ರಾಡ್‌ಕ್ಯಾಸ್ಟ್ ಭಾಷಣದಲ್ಲಿ ತಿಳಿಸಿದ್ದಾರೆ.

ಸಿಲೋನಿನಲ್ಲಿ ಒಪ್ಪಂದ

ನೇವ್ಸ್‌ಮಿಯರ್ ಎಸ್ಟೇಟಿನ ಸಂಬಂಧದಲ್ಲಿ ಸಿಲೋನ್ ಸರ್ಕಾರಕ್ಕೂ, ಅಲ್ಲಿನ ಇಂಡಿಯನ್ ಕಾಂಗ್ರೆಸ್ಸಿಗೂ, ಶ್ರೀ ಅಣೆಯವರ ಮಧ್ಯಸ್ತಿಕೆಯಿಂದ ಒಪ್ಪಂದವಾಗಿದೆ.

ದೆಹಲಿಗೆ ಭಾರತೀಯ ಜಿಲ್ಲಾಧಿಕಾರಿಗಳು

ದೆಹಲಿ ನಗರಕ್ಕೆ ಇನ್ನು ಮೇಲೆ ಭಾರತೀಯರೊಬ್ಬರನ್ನು ಜಿಲ್ಲಾಧಿಕಾರಿಗಳನ್ನಾಗಿ ನೇಮಿಸಲಾಗುವುದೆಂದು ಗೊತ್ತಾಗಿದೆ. ಆ ಸ್ಥಾನಕ್ಕೆ ಭಾರತೀಯರು ಬರುವುದು ಇದೇ ಮೊದಲು.

ಗವರ್ನರರನ್ನು ವಜಾ ಮಾಡಲು ಮನವಿ

ಬಂಗಾಳಾ ದುರಂತದಲ್ಲಿ ಏನೂ ಅರಿಯದ ಜನರು ಕೊಲೆಗೀಡಾಗಿದ್ದಾರೆ. ಹೆಂಗಸರು ಮಕ್ಕಳ ಮಾನಹಾನಿ ಆಗಿದೆ, ಬಲಾತ್ಕಾರವಾಗಿ ಮುಸ್ಲಿಂ ಮತಕ್ಕೆ ಸೇರಿಸಿಕೊಳ್ಳಲಾಗುತ್ತಿದೆ. ಇದಕ್ಕೆಲ್ಲಾ ಅಧಿಕಾರಿಗಳ ಪರೋಕ್ಷ ಪುರಸ್ಕಾರವಿದೆಯೆಂದು ತೋರುತ್ತದೆ. ಕೂಡಲೇ ಈಗಿನ ಗವರ್ನರನ್ನು ತೆಗೆದುಹಾಕಿ, ಮಂತ್ರಿಮಂಡಲವನ್ನು ವಜಾ ಮಾಡಬೇಕಾಗಿದೆ ಎಂದು ಹಿಂದೂ ಮಹಾಸಭೆಯ ಪ್ರಧಾನ ಕಾರ್ಯದರ್ಶಿ ಶ್ರೀ [illegible] ಭಾರತದ ಕಾರ್ಯದರ್ಶಿ ಪೆಥಿಕ್ ಲಾರೆನ್ಸರಿಗೆ ಕೇಬಲ್ ಕಳಿಸಿದ್ದಾರೆ.

[illegible]ಗಿ ಗೋಚರವಾಗುವುದಿಲ್ಲ. ಮಹಾತ್ಮರೂ, ದೇಶದ ನಾಯಕರೂ [illegible] ಬೇಗನೆ [illegible] ದಾರಿ ತೋರಲಿ. ಶಾಂತಿ [illegible]

ಇಂಟರ್ ಕಾಲೇಜ್ ಸಂಘದ ಪ್ರಾರಂಭ ಭಾಷಣ

ಮೈಸೂರು ೨೦

ರಾಜಧಾನಿಯ ಇಂಟರ್ ಮೀಡಿಯೆಟ್ ಕಾಲೇಜ್ ಸಂಘದ ಪ್ರಾರಂಭ ಭಾಷಣವು ನಿನ್ನೆ ಸಂಜೆ ಸಂಸ್ಥಾನದ ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್‌ರವರಿಂದ ನೆರವೇರಿತು. ಸಭಾಧ್ಯಕ್ಷತೆಯನ್ನು ಪ್ರಿನ್ಸಿಪಾಲರಾದ ಡಾ॥ ತಿರುಮಲಾಚಾರ್‌ರವರು ವಹಿಸಿದ್ದರು. ದಿವಾನರು ಭಾಷಣ ಮಾಡುತ್ತಾ, ಭಾರತದ ಕೈಗಾರಿಕಾ ವೃತ್ತಿ, ವೃದ್ಧಿ ಹೊಂದಲು ಕಂಡುಬರುತ್ತಿರುವ ಶುಭ ಸೂಚನೆಗಳನ್ನು ಪ್ರಶಂಸಿಸಿ, ನಮ್ಮ ದೇಶವು ವ್ಯವಸಾಯ ಪ್ರದೇಶವಾದರೂ, ಕೈಗಾರಿಕೆಯ ಪ್ರವರ್ಧಮಾನ ಮುಂದೆ ಸಾಗುವುದು ಅವಶ್ಯಕವೆಂದರು. ಅವರು ಮುಂದುವರಿಯುತ್ತಾ ಮಾತೃ ಭಾಷೆಯಲ್ಲಿ ಶಿಕ್ಷಣ ಕೊಡುವ ಉದ್ದೇಶವನ್ನು ಸ್ವಾಗತಿಸಿ ಅದಕ್ಕೆ ತಮ್ಮ ಬೆಂಬಲವಿದೆಯೆಂದರು. ಅಲ್ಲದೆ ವಿಶ್ವ ಭಾಷೆಯೊಂದು ಶಿಕ್ಷಣ ಶಾಲೆಗಳಲ್ಲಿ ದ್ವಿತೀಯ ಭಾಷೆಯಾಗಿರುವುದು ಅತ್ಯವಶ್ಯಕವೆಂದು ತಿಳಿಸಿದರು. ಸಂಘದ ಕಾರ್ಯದರ್ಶಿಗಳಾದ ಶ್ರೀ ಎಂ. ವಿ. ನಾರಾಯಣರಾಯರ ವಂದನಾರ್ಪಣೆಯೊಡನೆ ಸಮಾರಂಭ ಮುಕ್ತಾಯಗೊಂಡಿತು.

OPERA TALKIES
From 70—10—46
3 days Only
Daily 3 Shows
Sidney Taler as
Charlie Chan in
'Black Magic'
with Mantan Moreland

23-10-46 ರಿಂದ
ಶ್ರೀ ಮುರುಗನ್
(ತಮಿಳು)

ನೆಹರೂರವರಿಗೆ ಆಹ್ವಾನ

ಹಾ॥ ಮಂದಿ ಮಹಮದ್ ನಾ[illegible] ನೆಹರೂರವರಿಗೆ ಆಹ್ವಾನ ಕಳುಹಿಸಿ[illegible] ಸ್ಥಳಕ್ಕೆ ಕರೆದುಕೊಂಡು ಹೋಗಿ, [illegible]ತವಾಗಿ ವಾಪಸ್ ಕಳುಹಿಸುವರೆಂದ[illegible]ರಿ ಪೊಲಿಟಿಕಲ್ ಏಜೆಂಟರನ್ನು [illegible] ಕರೆದುಕೊಂಡು ಬರಬಾರದೆಂದೂ [illegible] ಹಾಕಿದ್ದಾರೆ.

ಶ್ರೇಯಃ ಪ್ರಾರ್ಥನೆ

ಮೈಸೂರು ಪಿಲ್ಲೆ ಮೊಹಲ್ಲಾ ವಿ[illegible] ಮಣ್ಣಾದನರ ಬೀದಿಯಲ್ಲಿರುವ ಶ್ರೀ [illegible]ವೇಂದ್ರ ರಾಮಕೃಷ್ಣ ಸೇವಾ ಮಂಡ[illegible]ನಾಳೆ ಶ್ರೀ ರಾಜಕುಮಾರಿಯವರ [illegible]ರಣೋತ್ಸವದ ಸಂಬಂಧವಾಗಿ ವಿಶೇ[illegible]ಜೆಯೂ, ಶ್ರೇಯಃ ಪ್ರಾರ್ಥನೆಯೂ, [illegible]ಯುವುದು.

ಬಿಕರಿಗಿದೆ

D. D. ಫೋನಿಕ್ಸ್ ಹೊಲಿಗೆ ಮಿ[illegible]
ಬಿಕರಿಗೆ ಇದೆ ; ಬೆಲೆ 250.
ಪ್ಲಾಜಾ ಟೈಲರಿಂಗ್ ಹಾಲ್,
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂ[illegible]

ಟಿ. ಸಿ. ನಟರಾಜ
ಔಷಧಾಲಯ

ನೇತ್ರ ಪರೀಕ್ಷೆಯು ಉಚಿತವಾ[illegible]
ಮಾಡಲ್ಪಡುತ್ತದೆ.
ಅಗತ್ಯವಾಗಿ ಬೇಕಾದ ಎಲ್ಲಾ [illegible]ಕ್ಟರ್ ಔಷಧಿಗಳೂ ಸದಾ ಕಾಲದಲ್ಲಿ ದೊರೆಯುವುದಲ್ಲದೆ ನಮ್ಮಲ್ಲಿ ವ್ಯಾಧಿಗ[illegible] ಚಿಕಿತ್ಸೆಯು ಬಹು ಸುಲಭ ಭಾ[illegible] ಮಾಡಲ್ಪಡುತ್ತದೆ.
ಝಂಡೂರವರ ಆಯುರ್ವೇದೀ[illegible] ದ್ದೌಷಧಗಳೆಲ್ಲವೂ ದೊರೆಯುತ್ತವೆ.

Edited printed and publish[illegible] A. R. Nagaraian at the Sadhvi P[illegible] D. Subbiah Road, Mysore

ಈಗ ತಾನೆ ಬಂದಿವೆ

ಮಕ್ಕಳಿಗೆ { * ಶಾಲು ಚೀಲಗಳು
* ಟೋಪಿಗಳು
* ಕುಲಾವಿಗಳು ಇತ್ಯಾದಿ

ಬಹುಮಾನಕ್ಕೆ ಯೋಗ್ಯವಾದ
E. P. N. S ಕಪ್‌ಗಳು
ಹೆಂಗಸರಿಗೆ, ಹೆಣ್ಣು ಮಕ್ಕಳಿಗೆ
ಬೆಳ್ಳಿಯ ಬಳೆಗಳು
ಜಿ. ವಿ. ಸೂರ್ಯನಾರಾಯಣ ಶೆಟ್ಟಿ & ಸನ್ಸ್,
ಜ್ಯೂಯಲರ್ಸ್ ಮತ್ತು ರೆಡಿಮೇಡ್ ಡ್ರೆಸ್ ಎಂಪೋರಿಯಂ.
ಸಯ್ಯಾಜಿರಾವ್ ರಸ್ತೆ ... ... ಮೈಸೂ[illegible]

ರಾಜ್ ಕಮಲ್, ಮೈಸೂರು.
17-10-46 ರಿಂದ ಅಮೋಘ 5 ನೇ [illegible]
ಗಾನ ನೃತ್ಯಗಳಿಂದ ಶೋಭಿಸುವ
ವಾಹಿನಿಯವರ
ಸ್ವರ್ಗಸೀಮಾ
- ಪಾತ್ರ -
* ನಾಗಯ್ಯ, * ಜಯಮ[illegible]
* ಭಾನುಮತಿ
ನಿಮ್ಮ ಬಂಧು ಬಳಗದೊಡನೆ ಬಂದು ನೋಡಿ ಆನಂದಪಡಿ.

From 18-10-46 for 4 days Daily at 10 30 A. M
"IN OLD CALIFORNIA"
Starring :—John Wayne Binnie Barnes Etc.

ಫೋ॥. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೩] ಮಂಗಳವಾರ ೨೨—೧೦—೪೬ [ಸಂಚಿಕೆ ೨೦

ಗಡಿನಾಡಿನಲ್ಲಿ ನೆಹರು—ಗಫಾರ್ ಖಾನರಿಗೆ ಪೆಟ್ಟು

...ರಾಜಕುಮಾರಿಯವರ ನಾಮಕರಣೋತ್ಸವ

ಮೈಸೂರು ೨೨

...ನ್ನೆ ಬೆಳಗ್ಗೆ ಅರಮನೆಯಲ್ಲಿ ನೂತನ ...ಮಾರಿಯವರ ನಾಮಕರಣೋತ್ಸವ ...ಜೃಂಭಣೆಯಿಂದ ಸಾಗಿತು. ರಾಜ...ರಿಯವರಿಗೆ ಶ್ರೀ ಗಾಯತ್ರಿ ದೇವಿ ...ಮಕರಣ ಮಾಡಲಾಯಿತು. ಸಂತೋಷ...ವಾಗಿ ಅರಮನೆ ಬತೇರಿಯಿಂದ ೨೧ ತೋಪುಗಳು ಹಾರಿಸಲ್ಪಟ್ಟವು. ...ಅಂಗವಾಗಿ ಶ್ರೀಮನ್ಮಹಾರಾಜರು ...ರು ನಡೆಸಿದರು. ದರ್ಬಾರಿಗೆ ದಿ...ನ, ಸಚಿವರುಗಳೂ, ಪ್ರಮುಖ ಮ...ರೂ ಆಗಮಿಸಿದ್ದರು.

...ಧಾನಿಯ ನಾನಾ ಕಡೆ ಬಡಬಗ್ಗರಿ...ನವೂ ಶಾಲಾ ಬಾಲಕ ಬಾಲಕಿ...ಗೆ ಸಿಹಿ ತಿಂಡಿಯ ಹಂಚಿಕೆಯೂ ... ನಿನ್ನೆ ರಾತ್ರಿ ಅರಮನೆಯನ್ನು ...ಪಗಳಿಂದ ಅಲಂಕರಿಸಲಾಗಿದ್ದಿತು. ...ಸೆಪ್ಟ್ಸ್ ಚರ್ಚ್ ಮತ್ತು ಮಸೀದಿ ...ವಿಶೇಷ ಪ್ರಾರ್ಥನೆ ಸಹ ಜರುಗಿತು.

...ದ್ಯಾಲಯದ ಉಪನ್ಯಾಸಗಳು ...ತದ ವಿಶ್ವವಿದ್ಯಾ ನಿಲಯಗಳ, ಪ್ರೊಫೆಸರ್ ಎಂ. ಕರ್ಣಿಯವರು ...ರಾಜಧಾನಿಗೆ ಆಗಮಿಸಿ ೩ ದಿನಗಳು ... ಅವರು ಮಹಾರಾಜಾ ಕಾಲೇ... ೨೨ನೇ ತಾ॥ ಸಂಜೆ ೬ ಘಂಟೆಗೆ ...ಸಂವಿಧಾನ ರಚನೆ' ಎಂಬ ವಿಷ... ೨೩ನೇ ತಾ॥ ಸಂಜೆ ...ದೇಶೀ ಸಂಸ್ಥಾನಗಳಲ್ಲಿ ಫೆಡರಲ್ ವ್ಯವ... ವಿಷಯವಾಗಿಯೂ ಉಪನ್ಯಾಸ ...ವರು

ಭಾರತ ಪಠನ

...ಕಾರದ ಬಿಡಾರಂ ಕೃಷ್ಣಪ್ಪನವರ ...ಶಾಲಾ ಮಂದಿರದಲ್ಲಿ ಇದಿನ ...ಲ ೭ ಘಂಟೆಗೆ ಪ್ರದೋಷದ ... ರಾ॥ ರಾ॥ ಎಂ. ಎಸ್. ಶ್ರೀಕಂ... ಅಯ್ಯಂಗಾರ್‌ರವರಿಂದ ಭಾರತ ...ವಿಡಿಸುತ್ತ. ಸಕಲರಿಗೂ ಪ್ರವೇ...

ಶುಭಾಶಯಗಳು

...ಮಹಾರಾಜರವರಿಗೆ ಕನ್ಯಾರತ್ನ...ದ ಬಗ್ಗೆ ನಗರದ ಸಾಹುಕಾರ್ ... ರಂಗಯ್ಯನವರ ವಿದ್ಯಾರ್ಥಿನಿ...ಯ, ಕುಂಚಿಟಿಗರ ರಾಮಮಂ...ಯರ್ಕಾರಿ ಸಮಿತಿಯವರೂ ... ಸಂಘಗಳಲ್ಲಿ ವಿಶೇಷ ಪೂಜೆ ...ಮನ್ಮಹಾರಾಜರವರಿಗೂ ರಾಜ...ಮಾರಿಗೂ ರಾಜಕುಟುಂಬಕ್ಕೂ ...ಯಸ್ಸನ್ನು ಕೋರಿದರು. ...ಬಿಲ್ಲಿ ರಾಮಲಿಂಗ ಚೌಡೇ...ಶ್ವರಿ ಸ್ಥಾನದಲ್ಲಿ ಸರ್ ಟಿ ತಂಬೂ...ಸಮ್ಮುಖದಲ್ಲಿ ವಿದ್ವಾನ್ ರಾಮಕೃ...ರು ಸುಶ್ರಾವ್ಯವಾದ ಸಂಗೀ... ದೇವಿ ಪೂಜೆಯನ್ನು ನೆರ...

ಗಾಂಧಿ ಜಯಂತಿ

...ಯ ಕೆ ಹೆಚ್. ರಾಮಯ್ಯ ...ರವರ ಅನಾಥಾಲಯದಲ್ಲಿ ಮೊ... ಸಮಿತಿ ಯಶೋಧರಾ ದಾಸ... ಅಧ್ಯಕ್ಷತೆಯಲ್ಲಿ ಗಾಂಧಿ ಜಯಂತಿ ನಡೆಯಿತು. ಅಧ್ಯಕ್ಷರಿಂದ ಗಾಂ...ಧೀ ಭಾವಚಿತ್ರ ಅನಾವರಣೋತ್ಸ...ವಾಯಿತು

ರಾಜಧಾನಿಯಲ್ಲೂ ಖೈದಿಗಳ ಬಿಡುಗಡೆ

ಮೈಸೂರು ೨೨

ನಿನ್ನೆ ಹತ್ತೂವರೆ ಗಂಟೆ ವೇಳೆಯಲ್ಲಿ ಮೈಸೂರು ಜೈಲಿನಿಂದ ೩೦ ಜನ ಖೈದಿಗಳನ್ನು ಬಿಡುಗಡೆ ಮಾಡಲಾಯಿತು. ಇವರಲ್ಲಿ ೨೫ ಜನರು ದೀರ್ಘಕಾಲಾವಧಿ ಶಿಕ್ಷೆಗೂ ೫ ಜನರು ಜೀವಾವಧಿ ಶಿಕ್ಷೆಗೂ ಗುರಿಯಾಗಿದ್ದರು

ತಿಪಟೂರಿನ ರೈಲ್ವೆ ಸ್ಟೇಷನನ್ನು ೪೨ರ ಚಳುವಳಿಯಲ್ಲಿ ಸುಟ್ಟಿರುವ ಕಾರಣದ ಮೇಲೆ ಶಿಕ್ಷಿತರಾಗಿದ್ದ ಶ್ರೀ ಬಿ. ಸಿ. ಬಸಪ್ಪ, ಎಂಬುವರನ್ನೂ ಸಹ ನಿನ್ನೆ ಬಿಡುಗಡೆ ಮಾಡಿರುವರು.

ಆನೆಗಳ ನಿಧನ

ಅರಮನೆ ಗಜಶಾಲೆಯಲ್ಲಿದ್ದ ಶಿವರಾಜಣಿ ಎಂಬ ಆನೆಯು ನಿನ್ನೆ ಮೃತಪಟ್ಟಿತು. ಅದು ಮೂರು ದಿನಗಳ ಕೆಳಗೆ ಒಂದು ಮರಿಯನ್ನು ಹಾಕಿದ್ದಿತು. ಪಾರ್ಕ್ ಬಂಗಲೆಗೆ ಸೇರಿದ ಆಫ್ರಿಕದ ಮತ್ತೊಂದು ಆನೆಯು ೩ ದಿನಗಳ ಕೆಳಗೆ ಮೃತಿಯನ್ನು ಹೊಂದಿತೆಂದೂ ಸಹ ಗೊತ್ತಾಗಿದೆ

ಶ್ರೀ ಜಗದಂಬಾ ಶಿಶು ವಿಹಾರ

ಅಲುವ ಮಹಾಸ್ವಾಮಿಯವರಿಗೆ ಪುತ್ರೀರತ್ನವಾದ ಸಂತೋಷ ಪ್ರದರ್ಶನಕ್ಕಾಗಿ ತಾ॥ ೧೦-೧೦ ೧೯೪೬ ರಲ್ಲಿ ಮಹಾಸ್ವಾಮಿಯವರ ಸ್ವಂತ ಖರ್ಚಿನಿಂದ ಶ್ರೀ ಜಗದಂಬಾ ಶಿಶುವಿಹಾರದ ಮಕ್ಕಳಿಗೆ ಲಾಡು ಹಂಚಲಾಯಿತು. ನೆನ್ನೆ ಮಹಾಸ್ವಾಮಿಯವರ ಪುತ್ರೀರತ್ನ ನಾಮಕರಣ ಮಹೋತ್ಸವದ ಸಂತೋಷ ಪ್ರದರ್ಶನಕ್ಕಾಗಿ ಮೈಸೂರು ಪುರಸಭೆಯವರು ಮೇಲ್ಕಂಡ ಶಾಲೆಯ ಮಕ್ಕಳಿಗೆ ಲಾಡು ಮತ್ತೊಮ್ಮೆ ಹಂಚಿದರು.

ಶಾಲೆಯ ಮಕ್ಕಳು ಆನಂದ ಪರವಶರಾಗಿ ಶ್ರೀಮನ್ಮಹಾರಾಜರವರಿಗೆ ಚಿರಕಾಲದಲ್ಲಿ ಪುತ್ರ ಸಂತಾನವಾಗಲೆಂದು ಹರಸಿದರು.

ಪುರಸಭೆಯ ಕೆಲಸಗಾರರ ಬೇಡಿಕೆ

ರಾಜಧಾನಿಯ ಪುರಸಭೆಯ ಕೆಲಸಗಾರರ ಸಭೆಯೊಂದು ಮೊನ್ನೆ ಸಂಜೆ ಟೌನ್‌ಹಾಲ್ ಆವರಣದಲ್ಲಿ ಸೇರಿ ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ಕೂಡಲೇ ಚಳುವಳಿ ಹೂಡಬೇಕೆಂದೂ, ಕೆಲಸಗಾರರಿಗೆ ಕಲ್ಲಾ ೩೦ ರೂ ಸಂಬಳ, ೨೦ ರೂ ತುಟ್ಟಿ ಭತ್ಯ, ವಾಸಕ್ಕೆ ಒಳ್ಳೆಯ ಮನೆ, ಆಹಾರ, ಮಕ್ಕಳಿಗೆ ವಿದ್ಯೆ ಸೌಕರ್ಯ, ಇವುಗಳನ್ನು ಪುರಸಭೆಯವರು ಕೂಡಲೇ ಒದಗಿಸಿಕೊಡಬೇಕೆಂದೂ, ಪ್ರಾರ್ಥಿಸುವ ನಿರ್ಣಯಗಳು ಅಂಗೀಕಾರವಾದುವು.

ಈಸೂರು ಶ್ರವಣಬೆಳಗೊಳ ಖೈದಿಗಳ ಬಿಡುಗಡೆ

ಸ್ವಂ. ಸು. ಪ್ರೆ॥] ಬೆಂಗಳೂರು ೨೨

ರಾಜಕುಮಾರಿಯವರ ನಾಮಕರಣ ಪ್ರಯುಕ್ತ ನಿನ್ನೆ ದಿನ ಸೆಂಟ್ರಲ್ ಜೈಲಿನಿಂದ ೪೪ ಜನ ಖೈದಿಗಳನ್ನು ಬಿಡುಗಡೆ ಮಾಡಿದರು. ಇವರ ಪೈಕಿ ಈಸೂರು ಮೊಕದ್ದಮೆಯಲ್ಲಿ ಜೀವಾವಧಿ ಶಿಕ್ಷೆಗೊಳಗಾಗಿದ್ದ ಪಾರ್ವತಮ್ಮ, ಸಿದ್ದಮ್ಮ, ಹಾಲಮ್ಮ ಎಂಬುವರನ್ನೂ, ರಂಗಪ್ಪ, ದುಗ್ಗೋಜಿರಾವ್, ಹನುಮಂತಪ್ಪ, ವೀರಬಸಪ್ಪ, ರಾಮಣ್ಣ, ಚೆನ್ನಬಸಪ್ಪ, ಹೊಳೆಬಸಪ್ಪ, ಹುಚ್ಚರಾಯಪ್ಪ, ನಗರಂಗೌಡ ಮುಂತಾದವರನ್ನೂ ಮತ್ತು ಶ್ರವಣಬೆಳಗೊಳದ ಮೊಕದ್ದಮೆಯಲ್ಲಿ ಜೀವಾವಧಿ ಶಿಕ್ಷೆಗೊಳಗಾಗಿದ್ದ ಮಾದರಿಗೌಡ ಎಂಬುವನನ್ನೂ ಸಹ ಬಿಡುಗಡೆ ಮಾಡಲಾಯಿತು. ನಗರ ಕಾಂಗ್ರೆಸ್ ಸಮಿತಿಯವರು ಇವರನ್ನೆಲ್ಲಾ ನಿನ್ನೆ ಆತಿಥ್ಯವಿತ್ತು ಸತ್ಕರಿಸಿದರು.

ಒಂದು ತಿಂಗಳು ಮತ್ತು ಅದಕ್ಕಿಂತ ಕಡಿಮೆ ಶಿಕ್ಷೆಗೆ ಗುರಿಯಾಗಿದ್ದ ಎಲ್ಲ ಖೈದಿಗಳನ್ನು ಬಿಡಲಾಗಿದೆ. ಒಂದು ವರ್ಷಕ್ಕಿಂತ ಹೆಚ್ಚಾಗಿ ಶಿಕ್ಷೆಗೆ ಗುರಿಯಾಗಿದ್ದವರಿಗೆ ವರ್ಷಕ್ಕೆ ಒಂದು ತಿಂಗಳ ಶಿಕ್ಷೆ ಮನ್ನಾ ಮಾಡಲಾಗಿದೆ. ದಂಡ ಕೊಡಲು ತಪ್ಪಿ ಶಿಕ್ಷೆ ಅನುಭವಿಸುತ್ತಿರುವವರನ್ನು ಖುಲಾಸೆ ಮಾಡಲಾಗಿದೆ. ದಂಡ ವಸೂಲು ಮಾಡಲು ವಾರಂಟು ಇರುವುದನ್ನು ಆರು ತಿಂಗಳ ಕಾಲ ಮುಂದಕ್ಕೆ ಹಾಕಲಾಗಿದೆ. ಹುಟ್ಟು ಕಳ್ಳರನ್ನು, ಕೇಡಿಗಳನ್ನೂ ಹೊರತಾಗಿ ಮಿಕ್ಕೆಲ್ಲ ಮಹಿಳಾ ಬಂದಿಗಳ ಖುಲಾಸೆಯಾಗಿದೆ. ಒಟ್ಟು ಖುಲಾಸೆಯಾಗಿರುವವರ ಸಂಖ್ಯೆ ೩೦೦ಕ್ಕೆ ಮೀರಿದೆ.

ವಿಶ್ವವಿದ್ಯಾ ನಿಲಯದ ಅಂಗೀಕಾರ

ಬಿ ಎಂ ಶ್ರೀನಿವಾಸಯ್ಯ ಇಂಜನಿಯರಿಂಗ್ ಕಾಲೇಜನ್ನು ಮೈಸೂರು ವಿಶ್ವವಿದ್ಯಾನಿಲಯದವರು ಅಂಗೀಕರಿಸಿದ್ದಾರೆ

ಮನುಷ್ಯ ಮುಖದ ಕರು

ಮಾಸ್ತಿ ಬಳಿ ಇರುವ ಕೊಂಚ ಎಂಬ ಗ್ರಾಮದಲ್ಲಿ ಒಂದು ಹಸುವು ಒಂದು ವಿಚಿತ್ರವಾದ ಕರುವನ್ನು ಹಾಕಿರುವ ವಾರ್ತೆ ಬಂದಿದೆ. ಆ ಕರುವಿಗೆ ಬಾಲವಿಲ್ಲ. ಮುಖ ಮನುಷ್ಯನಂತಿದೆ. ಕಾಲುಗಳು ಒಂಟೆಯ ಕಾಲಿನಂತಿವೆ. ಆ ಕರುವು ಮಕ್ಕಳಂತೆ ಅಳುತ್ತದೆ. ಅಲ್ಲಿಗೆ ಜನರು ತಂಡೋಪತಂಡವಾಗಿ ಬರುತ್ತಿದ್ದಾರೆ.

ನೆಹರು ಮತ್ತು ಗಫಾರ್ ಖಾನರಿಗೆ ಗಾಯ

ಪಂ॥ ನೆಹರು ಮತ್ತು ಖಾನ್ ಅಬ್ದುಲ್ ಗಫಾರ್‌ಖಾನರು ಗುಡ್ಡಗಾಡು ಪ್ರವಾಸವನ್ನು ಮುಗಿಸಿಕೊಂಡು ಪೆಷಾವರಿಗೆ ಹಿಂತಿರುಗುತ್ತಿದ್ದಾಗ್ಯೆ ಕೆಲವರು ಅವರ ಕಾರನ್ನು ಮುತ್ತಿ ಕಲ್ಲು ಹೊಡೆದುದರ ಪರಿಣಾಮವಾಗಿ ಖಾನರ ಕೈಗೆ ತುಂಬಾ ಪೆಟ್ಟು, ನೆಹರೂರವರಿಗೆ ಸ್ವಲ್ಪ ಗಾಯವೂ ಆಗಿರುವುದಾಗಿ ವರದಿಯಾಗಿದೆ. ಗಫಾರ್ ಖಾನರನ್ನು ಈಗ ಆಸ್ಪತ್ರೆಗೆ ಸೇರಿಸಲಾಗಿದೆ. ನೆಹರೂರವರು ಈ ದಿನ ಅಲ್ಲಿಂದ ದೆಹಲಿಗೆ ಪ್ರಯಾಣ ಮಾಡಲಿದ್ದಾರೆ.

ಸಾಂಗ್ಲಿಯಲ್ಲಿ ಜವಾಬ್ದಾರಿ ಸರ್ಕಾರ

ಸಾಂಗ್ಲಿ ಸಂಸ್ಥಾನದಲ್ಲಿ ಹೊಸ ರಾಜಕೀಯ ಸುಧಾರಣೆಗಳು ನವಂಬರ್ ೧೧ ರಿಂದ ಜಾರಿಗೆ ಬರುವುವು. ಸರ್ಕಾರದ ಅಧಿಕಾರವನ್ನು ಪ್ರಜಾಪ್ರತಿನಿಧಿಗಳಿಗೆ ಬಿಟ್ಟುಕೊಡುವುದಾಗಿ ದಸರಾ ದರ್ಬಾರಿನಲ್ಲಿ ರಾಜರು ಘೋಷಿಸಿದ್ದ ಪ್ರಕಾರ ಸಂಸ್ಥಾನದ ಪ್ರಜಾಸಂಸ್ಥೆಯ ಪಾರ್ಲಿಮೆಂಟರಿ ಸಮಿತಿ ಸಲಹೆಯಂತೆ ಶ್ರೀಗಳಾದ ಬಿ. ಎನ್. ಜೋಶಿ, ಜಿ ಬಿ ಪಾಟೀಲ್, ಡಿ. ಆರ್ ದೇಶಪಾಂಡೆ ಮತ್ತು ಎಸ್. ಪಿ ಕದಮ್‌ರವರುಗಳನ್ನು ಮಂತ್ರಿಗಳನ್ನಾಗಿ ಅಲ್ಲಿನ ರಾಜರು ನೇಮಿಸಿಕೊಂಡಿದ್ದಾರೆ.

ಬೋಸರು ಬದುಕಿದ್ದಾರೆ

"ನೇತಾಜಿ ಬೋಸರು ಬದುಕಿದ್ದಾರೆ ಮತ್ತು ಸರಿಯಾದ ಕಾಲದಲ್ಲಿ ಹೊರಗೆ ಕಾಣಿಸಿಕೊಳ್ಳುತ್ತಾರೆ' ಎಂದು ಸುಭಾಷ್‌ಚಂದ್ರಬೋಸರ ಅಣ್ಣಂದಿರ ಮಕ್ಕಳಾದ ಶ್ರೀ ಅರವಿಂದಬೋಸರು ಕಲಕತ್ತೆಯಲ್ಲಿ ತಿಳಿಸಿದ್ದಾರೆ. ಅವರ ನೇತಾಜಿ ಇರುವ ಪ್ರದೇಶವನ್ನು ಬಹಿರಂಗಪಡಿಸಲು ಅವರು ನಿರಾಕರಿಸಿದ್ದಾರೆ

ಬಂಗಾಳಾ ದಂಗೆ ಬಗ್ಗೆ ಕೇಂದ್ರ ಸರ್ಕಾರದ ಪ್ರವೇಶ?

ನವದೆಹಲಿ ಮಂಗಳವಾರ: ಪೂರ್ವ ಬಂಗಾಳಾ ಪ್ರದೇಶದಲ್ಲಿ ಉಂಟಾಗಿರುವ ದಂಗೆ ಪರಿಸ್ಥಿತಿಯನ್ನು ಹತೋಟಿಗೆ ತರಲು ಬಂಗಾಳಾ ಪ್ರಾಂತ್ಯ ಸರ್ಕಾರವು ಅಸಮರ್ಥವಾಗಿದೆಯೆಂದೂ, ಆದ್ದರಿಂದ ಕೇಂದ್ರ ಸರ್ಕಾರವು ಮಧ್ಯೆ ಪ್ರವೇಶಿಸಿ, ಆ ಪ್ರದೇಶವನ್ನು 'ಅಪಾಯಕರ' ವೆಂದು ಘೋಷಿಸಬಿಟ್ಟರೆ ಸಾಧ್ಯವೇ ಇಲ್ಲವೇ ಎಂದೂ ಕೇಂದ್ರ ಸರ್ಕಾರದ ಹಲವು ಮಂತ್ರಿಗಳ ಅಭಿಮತವಾಗಿದೆ. ಅದಕ್ಕಾಗಿ ಅವರು ನೆಹರೂರವರ ಆಗಮನವನ್ನು ಎದುರು ನೋಡುತ್ತಿದ್ದಾರೆ. ಅವರು ಬಂದನಂತರ ಮಂತ್ರಿಮಂಡಲದ ಜರೂರು ಸಭೆ ನಡೆದು ನಿರ್ಣಯವನ್ನು ಕೈಕೊಂಡು ಕೂಡಲೇ ಕಾರ್ಯಕ್ರಮ ಕೈಗೊಳ್ಳಲು ಏರ್ಪಾಡು ಮಾಡಲಾಗುವುದೆಂದು ಹೇಳಲಾಗಿದೆ.

ರಷ್ಯ ಪೋಲೀಸಿನವರಿಂದ ಅಮೆರಿಕಾ ಅಧಿಕಾರಿ ಕೊಲೆ

ಬರ್ಲಿನ್ ಪುರಸಭಾ ಚುನಾವಣೆಯ ಫಲಿತಾಂಶಗಳನ್ನು ತೆಗೆದುಕೊಳ್ಳುತ್ತಿದ್ದ ಒಬ್ಬ ಸಂಯುಕ್ತ ಸಂಸ್ಥಾನದ ಅಧಿಕಾರಿಯನ್ನು ರಷ್ಯನ್ ಪೋಲೀಸಿನವರು ಗುಂಡು ಹಾರಿಸಿ ಕೊಂದರೆಂದು ವರದಿಯಾಗಿದೆ

ಮದ್ರಾಸಿನ ವಿಜಯ

ಮದ್ರಾಸ್ ಕ್ರಿಕೆಟ್ ಟೀಮಿನವರು ಮೈಸೂರನ್ನು ... ವಿಕೆಟ್ಟುಗಳಿಂದ ಸೋಲಿಸಿದರು.

ಸಾಧ್ವಿ

ತಾ॥ ೨೨-೧೦-೪೬ ಮಂಗಳವಾರ

ಬಿಡುಗಡೆ

ಅರಮನೆಯಲ್ಲಿ ರಾಜಕುಮಾರಿಯ ಜನನವು ಈ ಸೂರು, ಶ್ರವಣಬೆಳಗೊಳಗಳ ರಾಜಕೀಯ ಖೈದಿಗಳ ಬಿಡುಗಡೆಗೆ ಕಾರಣವಾಯಿತೆಂದು ಕೇಳಿ ನಾವು ಸಂತೋಷಿಸುತ್ತೇವೆ. ದೀರ್ಘ ಕಾಲದ ಶಿಕ್ಷೆಯನ್ನು ಪಡೆದಿದ್ದ ಇನ್ನೂ ಅನೇಕರಿಗೆ ಬಿಡುಗಡೆಯಾಗಿದೆ. ಸಂಸ್ಥಾನದ ಪ್ರಜೆಗಳೆಲ್ಲರೂ ಸಂತೋಷ ಸಾಗರದಲ್ಲಿ ಮಗ್ನರಾಗಿರುವಾಗ ಈ ನಿರ್ಭಾಗ್ಯರಾದ ಬಂದಿಗಳೂ ಸಹ ಆ ಸುಖ ಸಂತೋಷಗಳಲ್ಲಿ ಭಾಗಿಗಳಾಗುವುದು ಉಚಿತವಾಗಿಯೇ ಇದೆ. ಇಂತಹ ಸಮಯಗಳಲ್ಲಿ ಅವರುಗಳಿಗೆ ರಿಯಾಯಿತಿಗಳನ್ನು ತೋರುವುದು ಅನುಚಾನವಾದ ಪದ್ಧತಿಯಾಗಿದೆ. ಹಿಂದೆ ಪ್ರಭುಗಳು ಪಟ್ಟಕ್ಕೆ ಬಂದಾಗಲೂ, ಅದಕ್ಕೆ ಮುಂಚೆ ಅವರ ವಿವಾಹ ಮಹೋತ್ಸವವು ಜರುಗಿದಾಗಲೂ ಇದೇ ರೀತಿ ಖೈದಿಗಳನ್ನು ಬಿಡುಗಡೆ ಮಾಡಲಾಯಿತು. ಆಗ ಬಹು ಸಂಖ್ಯೆಯಲ್ಲಿ ರಾಜಕೀಯ ಖೈದಿಗಳು ಇದ್ದರು.

ಈಸೂರು ಮತ್ತು ಶ್ರವಣಬೆಳಗೊಳದವರ ಬಿಡುಗಡೆಗಾಗಿ ಅನೇಕ ದಿನಗಳಿಂದಲೂ ಒತ್ತಾಯವು ಮಾಡಲ್ಪಡುತ್ತಲೇ ಇದೆ. ಸಕಲ ಪಂಗಡದವರೂ ಏಕಮತ್ಯದಿಂದ ಇದಕ್ಕಾಗಿ ಪ್ರಾರ್ಥನೆಯನ್ನು ಸಲ್ಲಿಸಿದ್ದಾರೆ. ಆದರೂ ಸರ್ಕಾರದವರ ಮನಸ್ಸು ಕರಗಲಿಲ್ಲ. ಮೊನ್ನೆ ತಾನೆ ನಡೆದ ಪ್ರಜಾಪ್ರತಿನಿಧಿ ಸಭೆಯಲ್ಲಿಯೂ ಸಹ ಅವರು ಉದಾರ ಭಾವವನ್ನು ತೋರದೆ ವೈಯಕ್ತಿಕವಾಗಿ ಗುಣಾವಗುಣಗಳನ್ನು ಪರಿಶೀಲಿಸಿ, ಕ್ರಮ ಕ್ರಮವಾಗಿ, ಈ ಖೈದಿಗಳನ್ನು ಬಿಡುವುದಾಗಿ ತಿಳಿಸಿದ್ದರು.

ರಾಜಕುಮಾರಿಯ ಜನನವು ಈ ಬಡಪಾಯಿಗಳ ಬಿಡುಗಡೆಗೆ ಸಹಕಾರಿಯಾದುದಕ್ಕಾಗಿ ಎಲ್ಲರೂ ಸಂತೋಷಿಸುತ್ತಾರೆ. ರಾಜವಂಶದಲ್ಲಿ ಒದಗುವ ಇಂತಹ ಶುಭ ಸನ್ನಿವೇಶಗಳಿಂದ ಎಲ್ಲ ದೀನ ಜನರ ಬಂಧವಿಮೋಚನೆಯೂ ಆಗಲೆಂದು ಸಕಲರೂ ಹಾರೈಸುತ್ತಾರೆ. ನಾವು ಮೊದಲೇ ಸೂಚಿಸಿದ್ದಂತೆ ಬೇರೆ ವಿಧದ ನಿರ್ಬಂಧಗಳಿಗೆ ಒಳಗಾಗಿರುವ ಮೈಸೂರಿನ ಪ್ರಜೆಗಳು ಇನ್ನೂ ಹಲವರಿದ್ದಾರೆ. ಈ ಶುಭ ಸಮಯದಲ್ಲಿ ಆ ಪ್ರತಿಬಂಧಕಗಳನ್ನೂ ಸಹ ರದ್ದುಮಾಡಿ ಪ್ರಭುತ್ವದವರು ಅವರುಗಳ ಕೃತಜ್ಞತೆಗೂ ಪಾತ್ರರಾಗಲೆಂದು ನಾವು ಹಾರೈಸುತ್ತೇವೆ.

ಪಠಾಣರು ರಾಷ್ಟ್ರೀಯ ಸರ್ಕಾರದ ನೆರವನ್ನು ಪಡೆಯಬೇಕು

ಭಾರತದಲ್ಲಿ ಕಳೆದ ೬ ವರ್ಷದಿಂದ ಸ್ಥಾನಬದ್ಧರಾಗಿರುವ ನಾಲ್ಕು ಮಂದಿ ಅಫಗನ್ ಸರದಾರರು ಗುಡ್ಡಗಾಡಿನ ಜನರಿಗೆ ಒಂದು ಪತ್ರವನ್ನು ರವಾನಿಸಿ, ಪರಕೀಯರ ಹಿಡಿತದಿಂದ ಪಠಾಣರು ಮುಕ್ತರಾಗಬೇಕಾದರೆ ಈಗ ಭಾರತದಲ್ಲಿರುವ ರಾಷ್ಟ್ರೀಯ ಸರ್ಕಾರದ ನೆರವನ್ನು ಪಡೆಯಬೇಕೆಂದೂ, ಪಂಡಿತ ನೆಹರೂರವರ ಪ್ರವಾಸದ ಅವಕಾಶವನ್ನು ಉಪಯೋಗಿಸಿಕೊಂಡು, ಸಮಸ್ಯೆಗಳ ಚರ್ಚೆ ನಡೆಸಬೇಕೆಂದೂ ತಿಳಿಸಿದ್ದಾರೆ.

Edited printed and published by A. R. Nagarajan at the Sadhvi Press D Subbiah Road, Mysore

ವಿದ್ಯಾರ್ಥಿಗಳೂ ರಾಜಕೀಯವೂ

ಮೈಸೂರು ೨೨

ಎಸ್ ವಿ ಕೃಷ್ಣಮೂರ್ತಿರಾವ್ ಶೇಷಣ್ಣನವರ ವಿದ್ಯಾರ್ಥಿ ನಿಲಯದ ದಿನಾಚರಣೆ ಸಂಬಂಧದಲ್ಲಿ ನಡೆದ ಸ್ಪರ್ಧೆಯ ಬಹುಮಾನ ವಿನಿಯೋಗವು ಮೊನ್ನೆ ಶ್ರೀರಾಮಪೇಟೆಯ ರಾಮಚಂದ್ರ ದೇವಸ್ಥಾನದಲ್ಲಿ ದಿವಾನರಾದ ದಿ॥ ಬ॥ ರಾಮಸ್ವಾಮಿ ಮೊದಲಿಯಾರ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸ್ವಾಗತ ಮತ್ತು ಸುಶ್ರಾವ್ಯವಾದ ಸಂಗೀತಗಳಾದ ನಂತರ ಅಧ್ಯಕ್ಷರು ಸ್ಪರ್ಧೆಗಳಲ್ಲಿ ವಿಜಯಿಗಳಾದವರಿಗೆ ಬಹುಮಾನಗಳನ್ನು ಹಂಚಿದರು. ವಿದ್ಯಾರ್ಥಿಗಳು ರಾಜಕೀಯ ಮೊದಲಾದ ಕಟುತರವಾದ ಚಟುವಟಿಕೆಗಳಿಗೆ ಮನಗೊಡದೆ ವಿದ್ಯಾರ್ಜನೆ ಮಾಡಿ ತಮ್ಮ ಜೀವನದ ಗುರಿಯ ಸಾಧನೆಗೆ ಸಿದ್ಧತೆಮಾಡಿಕೊಳ್ಳುವುದು ಉತ್ತಮವೆಂದು ದಿವಾನರು ಹೇಳಿದರು. ನಿಲಯವು ಇನ್ನೂ ಅಭಿವೃದ್ಧಿ ಹೊಂದಿ ಹೆಚ್ಚು ಹೆಚ್ಚಾಗಿ ವಿದ್ಯಾರ್ಥಿ ವೃಂದಕ್ಕೆ ಸಹಾಯ ನೀಡಲಿ, ಎಂದು ಹಾರೈಸಿದರು. ವಂದನೆ, ಪ್ರಸಾದ ವಿನಿಯೋಗ, ರಾಷ್ಟ್ರಗೀತೆಗಳೊಡನೆ ಉತ್ಸವವು ಮುಗಿಯಿತು.

ಚಾಮರಾಜಪುರಂ ಸೊಸೈಟಿ

ಮೇಲ್ಕಂಡ ಸಂಘದ ೪೫-೪೬ ನೇ ಸಾಲಿನ ವಾರ್ಷಿಕ ಸಭೆಯು ೨೦ ನೇ ಭಾನುವಾರ ನಡೆದು ಕಾನೂನು ಪ್ರಕಾರ ೧೫ ದಿನಗಳ ಮೊದಲು ಮ್ಯಾನೇಜಿಂಗ್ ಕಮಿಟಿಯವರು ಸದಸ್ಯರುಗಳಿಗೆ ನೋಟಿಸ್ ಕೊಟ್ಟಿರಲಿಲ್ಲವೆಂಬ ಅಂಶವು ಕೆಲವರುಗಳಿಂದ ಸೂಚಿತವಾಯಿತು. ಛೇರ್‌ಮನ್ನರೂ ಸಹ ಇದಕ್ಕೆ ತಮ್ಮ ಸಮ್ಮತಿಯನ್ನಿತ್ತರು. ಕಾರ್ಯಕ್ರಮಗಳೇನೂ ನಡೆಯಲಿಲ್ಲ.

ವಿವಾಹ

ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕರಾದ ಶ್ರೀ ಎಂ ಯಾಮುನಾಚಾರ್ಯರು ತಮ್ಮ ಮಗಳು ಚಿ॥ ಸೌ॥ ಜಲಜಾದೇವಿಯನ್ನು ಶ್ರೀ ಕಾಂಡೂರು ಕೃಷ್ಣಯ್ಯಂಗಾರ್ಯರ ಮಗ ಚಿ॥ ರಮಾಕಾಂತರಿಗೆ ಕೊಟ್ಟು ಮೊನ್ನೆ ಭಾನುವಾರ ವಿವಾಹವನ್ನು ವೈಭವದಿಂದ ನೆರವೇರಿಸಿದರು.

ಬರುವ ವರ್ಷ ಬರ್ಮಾದಿಂದ ೧೫ ಲಕ್ಷ ಟನ್ ಅಕ್ಕಿ

ಬರ್ಮಾದಲ್ಲಿ ಈ ಸಲ ಭತ್ತದ ಬೆಳೆಯು ಬಹಳ ಚೆನ್ನಾಗಿದೆಯೆಂದೂ, ಕಳೆದ ಸಾಲಿಗಿಂತ ೨೦ ಲಕ್ಷ ಟನ್ನುಗಳಷ್ಟು ಫಸಲು ಹೆಚ್ಚು ಉತ್ಪತ್ತಿಯಾಗುವುದೆಂದೂ, ಮುಂದಿನ ವರ್ಷ ಭಾರತಕ್ಕೆ ೧೫ ಲಕ್ಷ ಟನ್ ಅಕ್ಕಿ ಕಳಿಸಲಾಗುವುದೆಂದೂ ಅಂದಾಜು ಮಾಡಲಾಗಿದೆ.

ಹೂವುಗಳನ್ನು ಕೊಯ್ಯಲು ಮಹಾತ್ಮರ ವಿರೋಧ

ಹೂವುಗಳನ್ನು ಗಿಡಗಳಿಂದ ಕೊಯ್ಯುವುದು ಬಹಳ ತಪ್ಪೆಂದೂ, ಸ್ವಾಭಾವಿಕವಾಗಿಯೇ ಉದುರಿ ನೆಲದಮೇಲೆ ಹಾಸಿಗೆಯಂತೆ ಹರಡಿಕೊಂಡಿದ್ದಾಗ ಹೂವುಗಳು ಪ್ರಕೃತಿಯ ನಿಜ ಸೌಂದರ್ಯವನ್ನು ತೋರಿಸುವುವೆಂದೂ ಹೇಳಿ, ಆಕಾರಣದಿಂದಲೇ ತಾವು ನೂಲಿನ ಹಾರ, ಮತ್ತು ಹಾರಗಳಿಗೆ ಪ್ರೋತ್ಸಾಹವನ್ನೀಯುತ್ತಿರುವುದಾಗಿಯೂ ಮೊನ್ನೆ ನಡೆದ ಒಂದು ಪ್ರಾರ್ಥನಾ ಸಮಯದಲ್ಲಿ ಮಹಾತ್ಮರು ತಿಳಿಸಿರುವರು.

ಮೂರನೇ ಮಹಾಯುದ್ಧ ಅನಿವಾರ್ಯ

ಇನ್ನು ಏಳೆಂಟು ವರ್ಷಗಳಲ್ಲಿ ಎಲ್ಲ ರಾಷ್ಟ್ರಗಳೂ ಆಟಂ ಬಾಂಬನ್ನು ತಯಾರಿಸುವುವು. ಯಾರೊಬ್ಬರು ಕಾಲು ಕೆರೆದರೆ ಸಾಕು, ಇಡೀ ಜಗತ್ತೇ ಯುದ್ಧ ಕುಂಡದಲ್ಲಿ ಬೀಳುವುದು. ಇದು ಅನಿವಾರ್ಯವಾದ ವಿಷಾದಕರ ಸಂಗತಿ ಎಂದು ಹೇಳಿ ಅಮೇರಿಕದ ಸರ್ ಜಾನ್ ಬಾಯ್ಡ್ ಓರರು ಪ್ಯಾರಿಸ್ ಶಾಂತಿ ಸಮ್ಮೇಳನದ ಕಾರ್ಯವಿಧಾನವನ್ನು ಟೀಕಿಸಿದ್ದಾರೆ.

OPERA TALKIES

23-10-46 ರಿಂದ

ಪ್ರತಿ ದಿನ ಮೂರು ಆಟಗಳು

ಶ್ರೀ ಮುರುಗನ್

(ತಮಿಳು)

ಪಾತ್ರ:- ಹೊನಪ್ಪ ಭಾಗವತರ್, ಜೀವರತ್ನಂ, ಮಾಲತಿ, ರಾಮಚಂದ್ರರ್, ಕಾಳಿ ಎನ್ ರತ್ನಂ ಮುಂತಾದವರು

ಹಾವುಗಳ ಸೇಡು

ಸರ್ಬಿಯಾದ ಕೊಮೆನ್ ಎಂಬಲ್ಲಿ ರೈತನೊಬ್ಬನು ಒಂದು ಕೆಂಪು ... ಕೊಂದುಹಾಕಿದನು. ನೂರಾರು ... ಊರಿನಲ್ಲೆಲ್ಲಾ ಹಾವುಗಳು ಸಮ... ವೇ ತುಂಬಿದ್ದಿತು. ಗ್ರಾಮಸ್ಥರು ೧೦೦ ರಂತೆ ಕೊಲ್ಲುತ್ತಿದ್ದರೂ ... ಹೆಚ್ಚುತ್ತಲೇ ಇರುವುವೆಂದು ... ಗಿದೆ.

ಅಮೇರಿಕಕ್ಕೆ ಸ್ಟಾಲಿನ್

ಜ॥ ಸ್ಟಾಲಿನ್ನರು ನವೆಂಬರ್ ... ಅಮೇರಿಕಾ ಸಂಯುಕ್ತ ಸಂಸ್ಥಾನ ... ಕನಡಾಗಳಿಗೆ ಭೇಟಿ ಕೊಡ... ಗೊತ್ತಾಗಿದೆ. ಆರ್ಜೆಂಟೈನಾ ಎಂ... ಗಿನಲ್ಲಿ ಸ್ಟಾಲಿನ್ನರ ಪ್ರವಾಸಕ್ಕಾಗಿ ... ಗಳೆಲ್ಲಾ ಸಾಗಿರುವುವು.

ತಿರುವಾಂಕೂರಿನಲ್ಲಿ ಕ... ನಿಸ್ಟ್ ಪಕ್ಷಕ್ಕೆ ಬಹಿಷ...

ಸಾರ್ವಜನಿಕ ಶಾಂತಿಗೆ ಭಂಗ... ರೀತಿಯಲ್ಲಿ ಕಮ್ಯೂನಿಸ್ಟ್ ಪಕ್ಷ... ವಳಿ ಹೂಡಲು ಸನ್ನಾಹ ಮಾ... ಯೆಂದು ಹೇಳಿ ಆ ಸಂಸ್ಥೆಯನ್ನು ... ಬಾಹಿರವೆಂದು ತಿರುವಾಂಕೂರು ... ವು ಘೋಷಿಸಿದೆ. ಈ ಪಕ್ಷವು ... ಯಿಂದ ಪತ್ರಗಳನ್ನೂ ಧನವನ್ನು ... ತ್ತಿದೆಯೆಂದೂ ಸರ್ಕಾರದ ಪ್ರಕಟ... ತಿಳಿಸಲಾಗಿದೆ.

ಈ ಐವತ್ತು ವರ್ಷಗಳಿಂ... ಮಾನವ ಲೋಕಕ್ಕೆ ಆರೋಗ್ಯ... ನಂದಗಳನ್ನು ನೀಡುತ್ತಾ ಜನಗ... ಳವಾಗಿ, ಅವಿಚ್ಛಿನ್ನವಾಗಿ ಸೇವೆ... ಮಾಡಿ, ದಿನ ದಿನಾಭಿವೃದ್ಧಿ... ಹೊಂದುತ್ತಿರುವುದಕ್ಕಾಗಿ... ಎಷ್ಟೋ ಗರ್ವಿಸುತ್ತಿದೆ.



EASTERN 375

ರಾಜ್‌ಕಮಲ್, ಮೈಸೂರು,

17-10-46 ರಿಂದ

ಅಮೋಘ 5 ನೇ ವಾರ

ಗಾನ ನೃತ್ಯಗಳಿಂದ ಶೋಭಿಸುವ

ವಾಹಿನಿಯವರ

ಸ್ವರ್ಗಸೀಮ

- ಪಾತ್ರ -

* ನಾಗಯ್ಯ, * ಜಯಮ್ಮ

* ಭಾನುಮತಿ

ನಿಮ್ಮ ಬಂಧು ಬಳಗದೊಡನೆ ಬಂದು ನೋಡಿ ಆನಂದಪಡಿ

LATEST

DEFINITELY BIGGER, MORE THRILLING, MORE SENSATIONAL

than any Previous TARZAN

HERMAN BRIX in

TARZAN'S ADVENTURES

EDGAR RICE BURROUGHS

Wonderful adventure thriller.

For Mysore State, South Kanara and Coorg, Contact:-

SATYANARAYANA PICTURES CIRCUIT,

Ramanuja Road Mysore.

ಫೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಬುಧವಾರ ೨೪—೧೦—೪೬ [ಸಂಚಿಕೆ ೭೧

ನೇತಾಜಿ ಸತ್ತಿರುವುದಾಗಿ ಮಲಯ ಸರ್ಕಾರದ ಸುದ್ದಿ

ಸಂಸ್ಥಾನದ ಕಾರ್ಮಿಕರ ಸಮ್ಮೇಳನ

ಸ್ವ. ಸು. ಫ್ರೋ] ಬೆಂಗಳೂರು ೨೩

ಮೈಸೂರು ಕಾಂಗ್ರೆಸ್ಸಿನ ಆಶ್ರಯದಲ್ಲಿ ಅಖಿಲ ಮೈಸೂರು ಕಾರ್ಮಿಕರ ಸಮ್ಮೇಳನವು ನವೆಂಬರ್ ೬ ನೇ ತಾ॥ ಧರ್ಮಾಂಬುಧಿ ಕೆರೆ ಅಂಗಳದಲ್ಲಿ ಜರುಗುವುದು. ಈ ಸಮಾರಂಭದ ಆರಂಭೋತ್ಸವವನ್ನು ಮದ್ರಾಸ್ ಕಾರ್ಮಿಕ ಮಂತ್ರಿಗಳಾದ ಶ್ರೀ ವಿ. ವಿ. ಗಿರಿಯವರು ನೆರವೇರಿಸುವರು.

ದಿವಾನರಿಗೆ ಸತ್ಕಾರ

ಸಂಸ್ಥಾನದ ದಿವಾನರಾದ ಸರ್ ಆರ್ಕಾಟು ರಾಮಸ್ವಾಮಿ ಮೊದಲಿಯಾರರನ್ನು ಇದೇ ೨೭ ನೇ ತಾ॥ ಲಾಲ್‌ಬಾಗಿನಲ್ಲಿ ಸತ್ಕರಿಸಲು ಸಾರ್ವಜನಿಕ ಸಮಾರಂಭವೊಂದು ಜರುಗುವುದು. ಈ ಕೂಟದ ಅಧ್ಯಕ್ಷತೆಯನ್ನು ಶ್ರೀ ದೇವರಾಜ್ ಅರಸರವರು ವಹಿಸುವರು

ಬಡಬಗ್ಗರಿಗೆ ಅನ್ನದಾನ

ಮೈಸೂರು ೨೩

ರಾಜಕುಮಾರಿ 'ಗಾಯಿತ್ರಿದೇವಿಯವರ' ನಾಮಕರಣ ಸಮಾರಂಭದಲ್ಲಿ ಹುಜೂರು ಸೆಕ್ರೆಟರಿಯವರ ಸಲಹೆಯಂತೆ ಮೈಸೂರು ನಗರದ ಪಿಳ್ಳೆ, ಮಂಡಿ, ದೇವರಾಜ್ ಮತ್ತು ಲಷ್ಕರ್ ಮೊಹಲ್ಲಾಗಳಲ್ಲಿ ಸುಮಾರು ೧೫ ಸಾವಿರ ಬಡಬಗ್ಗರಿಗೆ ಸಂತೃಪ್ತಿಯಾಗಿ ತಾ॥ ೨೧ ರಲ್ಲಿ ಭೋಜನದ ಏರ್ಪಾಡೂ, ಆ ದಿನ ಬೆಳಗ್ಗೆ ದೇವಸ್ಥಾನಗಳಲ್ಲಿ ಪೂಜೆ, ಮಸೀದಿ, ಚರ್ಚುಗಳಲ್ಲಿ ಪ್ರಾರ್ಥನೆಗಳೂ ಮತ್ತು ಶಾಲಾ ಬಾಲಕ ಬಾಲಕಿಯರಿಗೆ ಸಿಹಿ ತಿಂಡಿ ಹಂಚಿಕೆಯೂ ಸಡಗರದಿಂದ ಯಶಸ್ವಿಯಾಗಿ ನಡೆದವು.

ಪೌರಸಭೆಯ ಸದಸ್ಯರುಗಳೂ, ನಗರದ ರೇಷನಿಂಗ್ ಅಧಿಕಾರಿಗಳೂ ಮತ್ತು ಪೌರಸಭೆಯ ಅಧಿಕಾರಿಗಳೂ ಎಲ್ಲಾ ಸ್ಥಳಗಳಲ್ಲಿಯೂ ಏರ್ಪಾಡುಗಳನ್ನು ಬಹಳ ವ್ಯವಸ್ಥೆಯಿಂದ ಮಾಡಿದ್ದರು. ಪೋಲೀಸ್ ಮತ್ತು ಸ್ಕೌಟ್ ದಳದವರು ಸಂಪೂರ್ಣ ಸಹಕಾರವನ್ನು ನೀಡಿ ಈ ಕೆಲಸವು ಸಾಂಗವಾಗಿ ನಡೆಯುವಂತೆ ನಿರ್ವಹಣೆ ಮಾಡಿದರು ಈ ಕಾರ್ಯದಲ್ಲಿ ಭಾಗ ವಹಿಸಿದ್ದ ಎಲ್ಲಾ ಮಹನೀಯರುಗಳಿಗೂ ಮತ್ತು ಸಂಸ್ಥೆಗಳಿಗೂ ಹೃತ್ಪೂರ್ವಕವಾದ ವಂದನೆಗಳನ್ನು ಈ ಮೂಲಕ ಅರ್ಪಿಸುತ್ತೇನೆ ಎಂಬುದಾಗಿ ಪೌರಸಭೆಯ ಇನ್‌ಚಾರ್ಜ್ ಪ್ರೆಸಿಡೆಂಟರಾದ ಶ್ರೀ॥ ಎ. ಕೃಷ್ಣಮೂರ್ತಿರಾಯರು ತಿಳಿಸುತ್ತಾರೆ

ಪುರಸಭಾ ಚುನಾವಣೆ
ಕಾಂಗ್ರೆಸ್ ಹುರಿಯಾಳುಗಳ ಪಟ್ಟಿ

ಮೈಸೂರು ೨೩

ನವೆಂಬರ್ ೧೮ ನೇ ತಾ॥ ನಡೆಯಲಿರುವ ಪುರ ಸಭಾ ಚುನಾವಣೆಯಲ್ಲಿ ಈ ಮುಂದೆ ಕಂಡ ೨೩ ಮಂದಿಯನ್ನು ಮೈಸೂರು ಕಾಂಗ್ರೆಸ್ ಪರವಾಗಿ ಉಮೇದುವಾರರಾಗಿ ನಿಲ್ಲಿಸಲಾಗುವುದೆಂದು ನಗರ ಕಾಂಗ್ರೆಸ್ ಅಡ್‌ಹಾಕ್ ಸಮಿತಿ ಪ್ರಕಟಿಸಿದೆ ಶ್ರೀಗಳಾದ ಸಿ. ಸೀತಾರಾಮಯ್ಯ, ಟಿ. ಮರಿಯಪ್ಪ, ಪಿ. ನಾರಾಯಣಸ್ವಾಮಿ, ಅಗರಂ ರಂಗಯ್ಯ, ಪಿ. ಗೋಪಾಲಕೃಷ್ಣಶೆಟ್ಟಿ, ಟಿ. ನರಸಿಂಹಯ್ಯಂಗಾರ್, ಎಸ್ ಲಿಂಗಣ್ಣ, ರಂಗಸ್ವಾಮಯ್ಯ, ಯು. ಎಲ್. ರಾಮಚಂದ್ರರಾವ್, ಇ. ಸಿ. ನಂಜಪ್ಪ, ಎ. ಕೃಷ್ಣಮೂರ್ತಿರಾವ್, ಟಿ. ವೆಂಕಟರಮಣಯ್ಯ, ಕೆ. ಎಸ್ ಸತ್ಯನಾರಾಯಣರಾವ್, ರಾಜಶೇಖರಯ್ಯ, ಡಾ॥ ಸೂರ್ಯನಾರಾಯಣರಾವ್, ಟಿ. ಸಿ. ಗೌಡ, ಕೆ. ಪುಟ್ಟಸ್ವಾಮಿ, ಎಂ. ಎಸ್. ನಂಜಪ್ಪ, ಎ. ಎಲ್ ಸೂರ್ಯನಾರಾಯಣರಾವ್, ಹೆಚ್. ಕಮ್ಮಯ್ಯ, ಪಿ. ಎನ್ ದಾಸಪ್ಪ, ಚೌಡಯ್ಯ ಮತ್ತು ಶ್ರೀಮತಿ ಎಂ. ಆರ್. ಲಕ್ಷ್ಮಮ್ಮ ಉಳಿದಿರುವ ಮತ್ತೊಂದು ಹೆಸರನ್ನು ಸದ್ಯದಲ್ಲೇ ಪ್ರಕಟಿಸಲಾಗುವುದು.

ಧನ್ವಂತರಿ ಜಯಂತಿ

ಶ್ರೀಮನ್ಮಹಾರಾಜರವರ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಆಯುರ್ವೇದ ವೈದ್ಯ ಸಂಘದವರು ನಿನ್ನೆ ಸಂಜೆ ವೇ॥ ಕೆ. ಗೋಪಾಲಕೃಷ್ಣಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಶ್ರೀ ಧನ್ವಂತರಿ ಜಯಂತಿ ಉತ್ಸವವನ್ನು ಆಚರಿಸಿದರು.

ಕೇಂದ್ರ ಸರ್ಕಾರವನ್ನು ಕಾಂಗ್ರೆಸ್ ತ್ಯಜಿಸುವುದೇ

ಲೀಗಿನಿಂದ ಕೇಂದ್ರ ಸರ್ಕಾರಕ್ಕೆ ಮಂತ್ರಿಗಳಾಗಿ ಸೂಚಿಸಲ್ಪಟ್ಟಿರುವ ಮಿ॥ ಗಜ್‌ನಾಫರ್ ಆಲಿ ಮತ್ತು ಮಿ॥ ಲಿಯಾಖತ್ ಅಲಿಖಾನರು ಇತ್ತೀಚೆಗೆ ಕೊಟ್ಟಿರುವ ಹೇಳಿಕೆಗಳಂತೆ ಅವರು ಪ್ರತಿಜ್ಞೆಯಲ್ಲೂ ಕಾಂಗ್ರೆಸ್ಸನ್ನು ಎದುರಿಸಿ, ಪಾಕೀಸ್ಥಾನದ ಸಾಧನೆಗೆ ಪ್ರಯತ್ನಿಸುವುದೇ ಆಗಿರುವುದರಿಂದಲೂ, ವೈಸರಾಯರಾಗಲಿ, ಲೀಗಿನವರಾಗಲಿ ಮಂತ್ರಿಮಂಡಲದ ಸಂಯುಕ್ತ ಜವಾಬ್ದಾರಿಯನ್ನು ಪ್ರತಿಪಾದಿಸಿಲ್ಲದಿರುವುದರಿಂದಲೂ ಕಾಂಗ್ರೆಸ್ ಕೇಂದ್ರ ಸರ್ಕಾರದಲ್ಲಿ ಮುಂದುವರಿಯುವ ಬಗ್ಗೆ ಇಂದು ಮತ್ತು ನಾಳೆ ದಿಲ್ಲಿಯಲ್ಲಿ ನಡೆಯುವ ಕಾರ್ಯಕಾರಿ ಸಮಿತಿಯಲ್ಲಿ ತೀರ್ಮಾನ ಮಾಡಲಾಗುವುದೆಂದು ಗೊತ್ತಾಗಿದೆ.

ಬೋಸರು ಸತ್ತಿರುವರೆಂದು ಮಲಯ ಸರ್ಕಾರದ ವರದಿ

ಮಲಯ ಸರ್ಕಾರದ ಪ್ರಕಟನೆಯೊಂದರಂತೆ ಸುಭಾಷ್‌ಚಂದ್ರಬೋಸರು ಸತ್ತಿರುವುದು ನಿಜವೆಂದು ಹೇಳಲಾಗಿದೆ. ಆಗ್ನೇಯ ಏಷ್ಯಾದ ಮಿತ್ರ ಪ್ರಧಾನ ಸೇನಾನಿಗಳ ಆಜ್ಞೆಯಂತೆ ಟೋಕಿಯೋವಿನಲ್ಲಿ ಈಚೆಗೆ ಬಲವಾದ ತನಿಖೆ ನಡೆದು ಬೋಸರು ೧೯೪೫ ನೇ ಆಗಸ್ಟ್ ೧೮ ನೇ ತಾ॥ ವಿಮಾನ ಅಪಘಾತದಲ್ಲಿ ಘಾಯಗೊಂಡು ತೈಹೋಕ್ ಆಸ್ಪತ್ರೆಯಲ್ಲಿ ನಿಧನರಾದರೆಂದು ವರದಿಯಾಗಿದೆ. ವಿಮಾನವು ಅಗ್ನಿಜ್ವಾಲೆಯಿಂದ ಆವೃತವಾದಾಗ ನೇತಾಜಿ ವಿಪರೀತವಾಗಿ ಸುಟ್ಟುಹೋದರೆಂದೂ ಸ್ವಲ್ಪಕಾಲದಲ್ಲೇ ಆಸ್ಪತ್ರೆಯಲ್ಲಿ ಅದೇ ದಿನ ರಾತ್ರಿ ೮ ಘಂಟೆ ಸಮಯದಲ್ಲಿ ಹೃದಯಸ್ಪಂದನ ನಿಂತುಹೋಗಿ ನಿಧನರಾದರೆಂದು ವಿವರ ಹೊರಬಿದ್ದಿದೆ.

ಹೈದರಾಬಾದಿನಲ್ಲಿ ಸತ್ಯಾಗ್ರಹಿಗಳ ಖುಲಾಸೆ

ಹಿಂದೂ ಮಹಾಸಭೆಯ ಆಶ್ರಯದಲ್ಲಿ ಹೊಸ ಸುಧಾರಣೆಗಳನ್ನು ವಿರೋಧಿಸಿ ಹೂಡಲಾಗಿದ್ದ ಸತ್ಯಾಗ್ರಹವನ್ನು ಎರಡು ತಿಂಗಳ ಕಾಲ ಮುಂದುವರಿಸಿರುವುದರಿಂದ; ಇದುವರೆಗೆ ಬಂಧಿತರಾಗಿ ಶಿಕ್ಷೆ ಅನುಭವಿಸುತ್ತಿರುವ ಸತ್ಯಾಗ್ರಹಿಗಳನ್ನೆಲ್ಲಾ ಸರ್ಕಾರದವರು ಖುಲಾಸೆ ಮಾಡಿದ್ದಾರೆ.

ಗೋವಾದಲ್ಲಿ ದಬ್ಬಾಳಿಕೆ

ಗೋವಾ ಸರ್ಕಾರದ ದಬ್ಬಾಳಿಕೆಯು ದಿನ ದಿನಕ್ಕೆ ಅಧಿಕಗೊಳ್ಳುತ್ತಿದೆ. ಡಾ॥ ನೆಹರೂರವರು ಈ ವಿಷಯವನ್ನು ಪರಿಶೀಲಿಸುತ್ತಿರುವುದಾಗಿ ದೆಹಲಿಯಿಂದ ಸುದ್ದಿ ಬಂದಿದೆ. ಡಾ॥ ಲೋಹಿಯಾರವರು ಪುನಃ ಮೊನ್ನೆ ದಿನ ತಮ್ಮ ಮೇಲಿದ್ದ ಪ್ರತಿಬಂಧಾಜ್ಞೆಯನ್ನು ಮುರಿದು ಗೋವಾವನ್ನು ಪ್ರವೇಶಿಸಿದ್ದಾರೆ.

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ

ದೆಹಲಿಯ ಭಂಗಿ ಕಾಲೊನಿಯಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯು ಈ ದಿನ ಸೇರಿದೆ. ಸಭೆಯಲ್ಲಿ ಪೂರ್ವ ಬಂಗಾಳದ ಅರಾಜಕತೆ, ಕೇಂದ್ರ ಸರ್ಕಾರಕ್ಕೆ ಲೀಗು ಸೇರಲು ನಿರ್ಧರಿಸಿರುವ ವಿಚಾರ, ಲೀಗು ಹಿನ್ನ ವರ್ಗದವರೊಬ್ಬರಿಗೆ ಸ್ಥಾನ ಕೊಟ್ಟಿರುವುದು, ಖಾತೆಗಳ ಹಂಚಿಕೆ ಮತ್ತು ತಾತ್ಕಾಲಿಕ ಸರ್ಕಾರದ ಸಂಯುಕ್ತ ಜವಾಬ್ದಾರಿ ಇವೇ ಮುಂತಾದ ಪ್ರಮುಖ ವಿಚಾರಗಳು ಚರ್ಚೆಗೆ ಬರಲಿವೆ.

ದೀಪಾವಳಿ ಹಬ್ಬದಲ್ಲಿ ಸಂತೋಷ ಪ್ರದರ್ಶನ ಬೇಡ

"ಅಸಂಖ್ಯಾತರಾಗಿ ಜನರು ಹುಟ್ಟಿಗಿದ್ದಿತೆ ಮರಣಹೊಂದುತ್ತಿರುವಾಗ ದೀಪಾವಳಿ ಹಬ್ಬದಲ್ಲಿ ಸಂಭ್ರಮ ಸಂತೋಷ ಪ್ರದರ್ಶನಗಳು ನಡೆಸಬಾರದು. ಅನಾವಶ್ಯಕ ಖರ್ಚುಗಳನ್ನು ಹೋಲು ಮಾಡಬಾರದು" ಎಂದು ಮಹಾತ್ಮಗಾಂಧಿಯವರು ಮೊನ್ನೆ ಸಂಜೆ ಪ್ರಾರ್ಥನಾ ಸಭೆಯಲ್ಲಿ ತಿಳಿಸಿದ್ದಾರೆ.

● ಬರ್ಲಿನ್ನಿಗೆ ರಷ್ಯಾವು ಸರಬರಾಜು ಮಾಡುತ್ತಿದ್ದ ವಿದ್ಯುಚ್ಛಕ್ತಿಯನ್ನು ನಿನ್ನೆಯಿಂದ ನಿಲ್ಲಿಸಲಾಗಿದೆ. ಇತ್ತೀಚೆಗೆ ನಡೆದ ನಗರ ಸಭಾ ಚುನಾವಣೆಯಲ್ಲಿ ರಷ್ಯಾದ ಪರವಾದ ಸೋಷಿಯಲಿಸ್ಟ್ ಯೂನಿಟಿ ಪಕ್ಷಕ್ಕೆ ಅಪಜಯವಾದದ್ದೇ ಈ ಕಾರ್ಯಕ್ಕೆ ಕಾರಣವಿರಬಹುದೆಂದು ಊಹಿಸಲಾಗಿದೆ

…ಹರು-ಗಫಾರ್ ಖಾನರ ಕೊಲೆ ಪ್ರಯತ್ನ?

…ಾಲ್‌ಖಂಡ್ ಎಂಬ ಗುಡ್ಡಗಾಡಿನ …ನಲ್ಲಿ ನೆಹರು ಮತ್ತು ಗಫಾರ್ … ಕೊಲೆ ಪ್ರಯತ್ನ ನಡೆದಿತ್ತೆಂಬ …ವನ್ನು ಗಫಾರ್ ಖಾನರೇ ಹೊರಗೆಡ… ಅಲ್ಲಿನ ಪೊಲಿಟಿಕಲ್ ಏಜೆಂಟ… ನವಾಬ್ ಮಹಬೂಬ್ ಅಲಿಯವರೂ … ವರಿಗೆ ಕರೆಳ ಅಲ್ಲಿ ಈ ಬಗ್ಗೆ ಪಿತೂರಿ …ದ್ದರೆಂದೂ ಖಾನರು ತಿಳಿಸಿದ್ದಾರೆ … ಕೊಲೆಯ ಈ ಸಂಚಿಗೆ ಪ್ರತಿಯೊಬ್ಬ… ಪ್ರಜೆಯ ಜವಾಬ್ದಾರಿಯೂ ಇದೆ … ಅವರು ಎಚ್ಚರಿಸಿದ್ದಾರೆ.

ನನ್ನ ಈ ರಕ್ತದಿಂದ ಸೌಹಾರ್ದ ನೆಲಸಲಿ

…ಹಿಂತಿರುಗುತ್ತಿದ್ದಾಗ ಗಡಿ… ಖಾನ್ ಅಬ್ದುಲ್ ಗಫಾರ್‌ಖಾನರಿಗೆ …ಎರಡು ಬೆರಳುಗಳು ಜಜ್ಜ… ಮೂಗಿನಲ್ಲಿ ರಕ್ತ ಸುರಿಯಿತು. …ರೂರವರಿಗೆ ಸ್ವಲ್ಪ ಗಾಯವಾಯಿ… …ರ್ ದರ್ಯಾಖ್‌ನಲ್ಲಿ ಕೆಂಪಂಗಿ… …ನೆಹರೂರವರಿಗೆ ಇತ್ತ ಸತ್ಕಾರ… …ನವರು ಉತ್ತರವೀಯುತ್ತಾ 'ನನ್ನ… …ನೆ ಪಠಾಣರ ನಾಡಿನ ಮೇಲೆ …ಬಿದ್ದಿದೆ. ಈ ರಕ್ತ ಬೀಜದಿಂದ …ಲ್ಲಿ ಒಳ್ಳೆಯದಾಗಿ ಸೌಹಾರ್ದ ನೆಲೆ… …ದು ಆಶಿಸುತ್ತೇನೆ. ಆದರೆ ಹಲ… …ದ್ವೇಷ, ಅಸೂಯೆ ಮತ್ತು ಛಲ… …ಮಾಡಿದ್ದಾರೆ ಅವರು ಹೋರಾ… …ತರೆ ನಾವೂ ನಿಲ್ಲಲೇ ಬೇಕಾಗುತ್ತ… 'ನಾನು ಕೊಡುವ ಎಚ್ಚರಿಕೆ' ಎಂದು…

…॥ ನೆಹರೂರವರು ಸರಾಯರಾಗುವರೇ?

…ಂಗ ಸಭೆಯ ಸಂಬಂಧವಾಗಿ …ರೆಗೆಳೊಡನೆಯೂ, ಪ್ರಧಾನಿ ಅಟ್ಲೀ …ಡನೆಯೂ, ಮಾತುಕತೆ ನಡೆಸ… …ಸರಾಯ್ ವೇವೆಲ್ಲರು ಸದ್ಯದಲ್ಲೇ …ಗೆ ತೆರಳುವರೆಂದೂ, ಆ ಸಮಯ… …ಂದ್ರ ಸರ್ಕಾರದ ಉಪಾಧ್ಯಕ್ಷರಾದ …ರೂರವರು ವೈಸರಾಯರಾಗಿ ನೇ… …ಮಿಸಲ್ಪಡಬಹುದೆಂದೂ ವರದಿಯಾ…

…ಲ್ಕು ಮಕ್ಕಳ ಜನನ

…ಂಚದಲ್ಲೇ ಮೊದಲನೆಯದಾದ ಒ… …ಲ್ಕು ಮಕ್ಕಳ ಜನನವು ಪ್ಯಾರಿಸ್ಸಿನ … ಪ್ಯಾರಿಸ್ಸಿನ ಹೋಟಲೊಂ… …ಪಾಲಕಳಾದ ೩೮ ವರ್ಷ ವಯಸ್ಸಿ… …ರೀಟ್ ವಾಲ್ಟೀರ್ ಎಂಬಾಕೆಯು … ಮಕ್ಕಳನ್ನು ಹೆತ್ತಿದ್ದಾಳೆ ಅವುಗ… …ರು ಮಕ್ಕಳು ೩ ಪೌಂಡು ಮತ್ತು … ಎರಡು ಪೌಂಡು ತೂಗುತ್ತವೆ. ಆ… …ಒಂದು ಶಾಖವಾದ ಕೊಠಡಿಯ… …ಗಿವೆ ನಾಲ್ಕೂ ಬದುಕಿವೆ.

…ಪು ವೈದ್ಯಶಾಲೆ ಬೇಕು

…] ಯಳಂದೂರು ೨೩

…ತಾಲ್ಲೂಕಿಗೆ ಸಂಬಂಧಪಟ್ಟಂತೆ ಒಂ… …ವೈದ್ಯಶಾಲೆ ಇಲ್ಲದಿರುವುದು, ಅ… …ಜಾನುವಾರುಗಳಿಗೆ ತೊಂದರೆಯಾಗಿ… ವೈದ್ಯಶಾಲೆ ಅಗತ್ಯವಾಗಿರುತ್ತೆ … ಅಂಗಡಿಯ ಊರಿನ ಮುಗ್ಧ… ಜನಗಳಿಗೆ ತೊಂದರೆಯಾಗಿರು… …ಗಿಸಬೇಕಾದ ಅವಶ್ಯಕತೆ

ಸಾಧ್ವಿ

ತಾ॥ ೨೩-೧೦-೪೬ ಬುಧವಾರ

ಇನ್ನೂ ರೋಷವೇ ?

ರಾಜಕುಮಾರಿಯ ಜನನದ ಸಂಬಂಧವಾಗಿ ನೂರಾರು ಜನ ಖೈದಿಗಳಿಗೆ ಬಂಧವಿಮೋಚನೆಯಾಯಿತಷ್ಟೆ. ಆದರೆ ಈಸೂರು ಮತ್ತು ಶ್ರವಣಬೆಳಗೊಳಗಳ ಬಂದಿಗಳ ಸ್ಥಿತಿ ಇನ್ನೂ ಹಲವರಿಗೆ ಬಿಡುಗಡೆಯಾಗಿಲ್ಲವೆಂದು ತಿಳಿದುಬಂದಿದೆ. ಈ ರೀತಿ ರೋಷವನ್ನು ಉಳಿಸಿರುವುದರ ಅರ್ಥವು ಗೊತ್ತಾಗುವುದಿಲ್ಲ.

ಇಂತಹ ಅಪೂರ್ವ ಸಂತೋಷದ ಸಮಯದಲ್ಲಿ ಹೀಗೆ ಬಿಟ್ಟಿ ಉಳಿಯುವುದು ಸರ್ವಥಾ ನ್ಯಾಯವಲ್ಲ. ಒಂದೇ ಬಗೆಯ ಅಪರಾಧಕ್ಕೆ ಗುರಿಯಾಗಿ ಶಿಕ್ಷೆಯನ್ನು ಅನುಭವಿಸುತ್ತಿದ್ದವರೆಲ್ಲರೂ ಒಂದೇ ರೀತಿಯ ರಿಯಾಯಿತಿಯನ್ನು ಹೊಂದಬೇಕಾದುದು ಸಹಜವಾಗಿದೆ. ತಮ್ಮ ಜೊತೆಯಲ್ಲಿ ಬಂಧನಕ್ಕೆ ಒಳಗಾದವರು ಖುಲಾಸೆ ಹೊಂದಿರುವಾಗ ತಾವು ಇನ್ನೂ ಕಾರಾಗೃಹದಲ್ಲಿ ಕೊಳೆಯಬೇಕಾಗಿರುವುದಕ್ಕಾಗಿ ಅವರುಗಳು ಅತ್ಯಂತ ಪರಿತಾಪ ಪಡುವರು. ಈ ಬಗೆಯ ಪರಿಸ್ಥಿತಿಯು ಕೇವಲ ಅನಪೇಕ್ಷಣೀಯವಾದುದು.

ರಾಜಕೀಯ ಬಂದಿಗಳ ವಿಷಯವನ್ನು ಪ್ರತ್ಯೇಕವಾಗಿ ಪರಿಗಣಿಸುವುದು ಇಂತಹ ಸಮಯಗಳಲ್ಲಿ ನಡೆದು ಬಂದಿರುವ ಪದ್ಧತಿ. ಇಂತಹ ಬಂದಿಗಳಲ್ಲಿ ತಾರತಮ್ಯವನ್ನು ಮಾಡುವ ಕಾರಣವಿಲ್ಲ. ಈ ಖೈದಿಗಳು ಇತರರಂತೆ ಅಲ್ಲದೆ ಒಂದು ಪ್ರತ್ಯೇಕ ಗುಂಪಿಗೆ ಸೇರಿದವರು. ಸಾಮಾನ್ಯವಾಗಿ ನೀತಿ ಬಾಹಿರದ ಅಪರಾಧಕ್ಕಾಗಿ ಶಿಕ್ಷೆ ಹೊಂದಿರುವವರಂತೆ ಇವರು ಇರುವುದಿಲ್ಲ. ತಿಳಿದೋ, ತಿಳಿಯದೆಯೋ ಒಂದು ಆಂದೋಳನದ ಅಂಗವಾಗಿ ಬಂಧನಕ್ಕೆ ಒಳಗಾಗಿರುವವರು. ಅವರ ಅಪರಾಧದ ವಿಮರ್ಶೆಯನ್ನು ಈಗ ಮಾಡುತ್ತ ಹೋಗುವುದು ಸರಿಯಲ್ಲ.

ಬೇರೆ ಪ್ರಾಂತಗಳಲ್ಲಿ ಇದೇ ಬಗೆಯ ಖೈದಿಗಳೆಲ್ಲರನ್ನೂ ಖುಲಾಸೆ ಮಾಡಿ ಬಹಳ ದಿನಗಳಾದುವು. ಇಲ್ಲಿ ಈ ವಿಶೇಷ ಸಂದರ್ಭದಲ್ಲಿಯಾದರೂ ಅವರೆಲ್ಲರನ್ನೂ ಬಿಟ್ಟುಬಿಡುವುದು ಅತ್ಯಂತ ಸಾಧುವಾಗಿದೆ. ಬಿಡುಗಡೆಯ ಸುದ್ದಿಯು ನಿನ್ನೆ ಬಂದಾಗ ಇನ್ನೂ ಕೆಲವರು ಉಳಿದಿರುವರೆಂದು ನಾವು ಭಾವಿಸಿರಲಿಲ್ಲ. ಈಗ ಅದನ್ನು ಕೇಳಿ ನಮಗೆ ಅತ್ಯಂತ ವಿಷಾದವಾಗಿದೆ.

ಈಗಲಾದರೂ ಪ್ರಭುತ್ವದವರು ಈ ವಿಷಯವನ್ನು ಮತ್ತೊಮ್ಮೆ ಪರಿಶೀಲಿಸಿ ಉಳಿದಿರುವ ಮೇಲ್ಕಂಡ ನಾಲ್ಕಾರು ಖೈದಿಗಳನ್ನೂ ಬಿಟ್ಟುಬಿಡಲು ವ್ಯವಸ್ಥೆ ಮಾಡಬೇಕೆಂದು ನಾವು ಒತ್ತಾಯಪೂರ್ವಕವಾಗಿ ಬೇಡುತ್ತೇನೆ.

ಬೆಲೂಚಿಸ್ಥಾನದಲ್ಲಿ ರಾಜಕೀಯ

ಬೆಲೂಚಿಸ್ಥಾನದ ಪ್ರಮುಖ ಸರ್ದಾರರೂ [illegible] ಸರ್ದಾರ್ [illegible] ತಮ್ಮ ಅನುಯಾಯಿಗಳೊಡನೆ, ಅಖಿಲಭಾರತ ಕಾಂಗ್ರೆಸ್ಸಿನ ಅಂಗೀಕಾರ ಪಡೆದಿರುವ ಅಂಜುಮಾನ್ ಇ ವತನ್ ಎಂಬ ರಾಷ್ಟ್ರೀಯ ಸಂಸ್ಥೆಗೆ ಸೇರಿದ್ದಾರೆ

ಬರ್ಮ ರಾಷ್ಟ್ರೀಯ ಸರ್ಕಾರದ ಘೋಷಣೆ

'ಕಮ್ಯೂನಿಸ್ಟರು, ರಾಷ್ಟ್ರಸ್ವಾತಂತ್ರ್ಯದ ಚಳುವಳಿಯನ್ನು ಬುಡಮೇಲುಮಾಡಿ, ಒಪ್ಪಂದವನ್ನು ಮುರಿದು ಗುಪ್ತ ವಿಚಾರಗಳನ್ನು ಬಹಿರಂಗಪಡಿಸಿ 'ಇಡೀ ಬರ್ಮಾ ರಾಷ್ಟ್ರಕ್ಕೆ ದ್ರೋಹವೆಸಗಿದ್ದಾರೆ' ಎಂದು ಹೇಳಬಲ್ಲ ರಾಷ್ಟ್ರೀಯ ಸಂಸ್ಥೆಯ ಉಪಾಧ್ಯಕ್ಷ ಮಾಂಗ್ ಆಂಗ್ ಸಾನ್‌ರವರು ಫ್ಯಾಸಿಸ್ಟ್ ವಿರೋಧಿ ಪಕ್ಷದಿಂದ ಕಮ್ಯೂನಿಸ್ಟರನ್ನು ಹೊರದೂಡಿರುವ ಅಂಶವನ್ನು ವಿವರಿಸಿದ್ದಾರೆ. ತಮ್ಮ ಸರ್ಕಾರದ ಘೋಷಣೆಯನ್ನು ಅವರು ವಿವರಿಸುತ್ತಾ, ಯೂರೋಪಿಯನ್ನರನ್ನು ನಮ್ಮ ಸೈನ್ಯಕ್ಕೆ ಸೇರಿಸಿಕೊಳ್ಳುವುದನ್ನು ವಜಾ ಮಾಡಿರುವುದಾಗಿ ತಿಳಿಸಿದರು. ಎಲ್ಲ ರಾಜಕೀಯ ಖೈದಿಗಳನ್ನು ಖುಲಾಸೆ ಮಾಡಿ ಇನ್ನು ೧೦ ದಿನಗಳಲ್ಲಿ ಪೌರ ಹಕ್ಕುಗಳು ಪ್ರತಿಯೊಬ್ಬರಿಗೂ ದೊರಕುವಂತೆಯೂ, ನೌಕರರ ಸಂಬಳಗಳು ಹೆಚ್ಚುವಂತೆಯೂ ಮಾಡಲಾಗುವುದೆಂದು ಅವರು ಘೋಷಿಸಿದರು.

ಜಿನ್ನಾ- ವೈಸರಾಯ್ ಭೇಟಿ

ನಿನ್ನೆ ದಿನ ಮಿ॥ ಜಿನ್ನಾರವರು ವೈಸರಾಯರನ್ನು ಭೇಟಿ ಮಾಡಿ ೫೦ ನಿಮಿಷಗಳ ಕಾಲ ಸಂಭಾಷಣೆ ನಡೆಸಿದರು. ಕೇಂದ್ರ ಸರ್ಕಾರದಲ್ಲಿ ಖಾತೆಗಳ ಹಂಚಿಕೆಯ ವಿಷಯವು ಈ ಚರ್ಚೆಯ ಮುಖ್ಯ ಅಂಶವೆಂದು ಊಹಿಸಲಾಗಿದೆ.

ಚುನಾವಣೆಗಳಲ್ಲಿ ಬಣ್ಣದ ಪೆಟ್ಟಿಗೆಗಳು

ಮದ್ರಾಸ್ ಪ್ರಾಂತ್ಯದಲ್ಲಿನ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಇನ್ನು ಮುಂದೆ ಪಕ್ಷಗಳಿಗೆ ಪ್ರತ್ಯೇಕ ಬಣ್ಣದ ಪೆಟ್ಟಿಗೆಗಳನ್ನು ಗೊತ್ತುಮಾಡುವಂತೆ ಸರ್ಕಾರದ ಆಜ್ಞೆಯಾಗಿದೆ.

ಮದ್ರಾಸನ್ನು ಅನುಸರಿಸಬೇಕೆಂದು ಗಾಂಧಿಜಿ

ಮದ್ರಾಸ್ ಸರ್ಕಾರದವರು ಬಟ್ಟೆ ತಯಾರಿಕೆ ಬಗ್ಗೆ ಕೈಗೊಂಡಿರುವ ಕಾರ್ಯಕ್ರಮವನ್ನು ಇತರ ಪ್ರಾಂತಗಳೂ ಅನುಸರಿಸಬೇಕೆಂದು ದೆಹಲಿಗೆ ಬಂದಿರುವ ಪ್ರಧಾನಿಗಳನ್ನು ಮಹಾತ್ಮಾಗಾಂಧಿಯವರು ಒತ್ತಾಯಪಡಿಸುತ್ತಿದ್ದಾರೆಂದು ತಿಳಿದುಬಂದಿದೆ. ಈ ಕೂಡಲೇ ಅಸ್ಸಾಂ, ಒರಿಸ್ಸಾ ಮತ್ತು ಬಿಹಾರ್ ಪ್ರಾಂತ್ಯಗಳು ಈ ಯೋಜನೆಯನ್ನು ಅನುಸರಿಸುವುದಾಗಿ ಗೊತ್ತಾಗಿದೆ

ರೈಲುಗಾಡಿ ಅವಶ್ಯಕ

[ಸ್ವ ವ] ನಂಜನಗೂಡು ೨೧

ಹಿಂದೆ ಮೈಸೂರಿನಿಂದ, ಈ ಊರಿಗೆ ರಾತ್ರಿ ೯ ಗಂಟೆಗೆ ಒಂದು ರೈಲುಗಾಡಿ ಬಂದು ಮಾರನೆ ದಿನ ಬೆಳಗಿನ ೬ ಗಂಟೆಗೆ ಹೊರಟು ಬೆಂಗಳೂರು, ಅರಸೀಕೆರೆ ಕಡೆ ಪ್ರಯಾಣ ಮಾಡುವ ಈ ತಾಲ್ಲೂಕು ಜನಗಳಿಗೆ ತುಂಬಾ ಅನುಕೂಲವಾಗಿತ್ತು, ಇದು ತಪ್ಪಿದ್ದರಿಂದ ತುಂಬಾ ತೊಂದರೆಯಾಗಿರುತ್ತೆ, ರಾತ್ರಿ ನಂಜನಗೂಡಿಗೆ ಬರುವಗಾಡಿ, ಏರ್ಪಾಡಾದರೆ ಜನೋಪಕಾರವಾಗುತ್ತೆ

ನೀರಿನ ಕೊರತೆ

ಈ ಊರಿನ ಹೈಸ್ಕೂಲಿನಲ್ಲಿ ನಲ್ಲಿ ಇದ್ದರೂ ಒಂದು ತಿಂಗಳಿಂದಲೂ ನೀರು ಇಲ್ಲದೆ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ. ಪುರಸಭೆಯವರು ವಿದ್ಯಾರ್ಥಿಗಳ ಈ ಕಷ್ಟವನ್ನು ಲಕ್ಷಿಸುವರೆಂದು ಆಶಿಸಲಾಗಿದೆ.

ಬೋಸರು ಬದುಕಿದ್ದಾರೆ

ನೇತಾಜಿ ಬೋಸರು ಬದುಕಿದ್ದಾರೆ. ಕ॥ ಹಬೀಬುರ್ ರಹಮಾನರೊಡನೆ ವಿಮಾನ ಅಪಘಾತ ನಡೆದ ನಂತರವೂ ಅವರನ್ನು ಸಿಂಗಪುರದಲ್ಲಿ ನೋಡಿದವರಿದ್ದಾರೆಂದು ಸ॥ ಶಾರ್ದೂಲ ಸಿಂಗರು ಹೇಳಿದ್ದಾರೆ.

ಬಂಗಾಳಕ್ಕೆ ಗಾಂಧೀಜಿ

ಮಹಾತ್ಮ ಗಾಂಧಿಯವರು ಗಲಭೆಗೀಡಾಗಿರುವ ಪೂರ್ವ ಬಂಗಾಳ ಪ್ರದೇಶದಲ್ಲಿ ಸದ್ಯದಲ್ಲೇ ಪ್ರವಾಸ ಮಾಡುವರು. ಈಗ ಅವರ ಆಜ್ಞೆ ಪ್ರಕಾರ ಅವರ ಪ್ರತಿನಿಧಿಗಳಾದ ಶ್ರೀ ಸುಧೀರ್ ಘೋಷರು ಅಲ್ಲಿ ಪ್ರವಾಸವನ್ನು ಆರಂಭಿಸುವರು

ಅಭಿನಂದನೆ

ರಾಜಪುತ್ರಿಯವರ ನಾಮಕರಣೋತ್ಸವವನ್ನು ಕೊಂಡಾಡಲು, ನಗರದ ಬಾಲಬೋಧಿನೀ ಪ್ರೈಮರಿಬಾಯ್ಸ್‌ಸ್ಕೂಲ್ ಆವರಣದಲ್ಲಿ ಉಪಾಧ್ಯಾಯವರ್ಗದವರು ಶ್ರೀ ಪಿ. ಎಸ್ ಸುಬ್ಬರಾಯಪ್ಪನವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಏರ್ಪಡಿಸಿದ್ದರು.

ರಾಜಪುತ್ರಿಯವರಿಗೆ ದೀರ್ಘಾಯುರಾರೋಗ್ಯವನ್ನೂ, ಸಕಲ ಸನ್ಮಂಗಳಗಳನ್ನೂ ಚಾಮುಂಡೇಶ್ವರಿಯು ಕರುಣಿಸಲೆಂದು ಅಧ್ಯಕ್ಷರು ಹಾರೈಸಿ, ಬಾಲಕರಿಗೆ ಸಿಹಿತಿಂಡಿ ಹಂಚಿದನಂತರ ರಾಷ್ಟ್ರಗೀತೆಯೊಡನೆ ಸಭೆ ಮುಕ್ತಾಯವಾಯಿತು

ಯುವಕರು ಕೂಡಲೇ ಸಂಘಟಿತರಾಗ

" ಭಾರತದ ಮತ್ತು ಬಂಗಾಳ ಊರಿನಲ್ಲೂ ಪ್ರತಿ ಹಳ್ಳಿಯಲ್ಲೂ ಯ ರು ಸಂಘಟಿತರಾಗಿ ಅರಾಜಕತೆ ಮತ್ತು ದುರ್ಜನ್ಯಗಳನ್ನು ಹಿಮ್ಮೆಟ್ಟಿಸಬೇಕು" ಶ್ರೀ ಶರತ್ ಚಂದ್ರಬೋಸರು ತಿಳಿ

ಪ್ರಧಾನಿಗಳ ಸಮ್ಮೇಳ

ದೆಹಲಿಯಲ್ಲಿ ಭಾರತದ ನಾನಾ ಪ ಗಳ ಪ್ರಧಾನಿಗಳ ಸಮ್ಮೇಳನವು ಸ ಪಟೇಲರ ಅಧ್ಯಕ್ಷತೆಯಲ್ಲಿ ಜರುಗಿ, ಮತ್ತು ಪೋಲೀಸ್ ಸರ್ವೀಸ್ ಬಗ್ ಟರಿ ಆಫ್‌ಸ್ಟೇಟ್‌ರ ಹತೋಟಿ ಹೊ ಕೆಂದು ನಿರ್ಧಾರ ಮಾಡಲಾಗಿದೆ ದ್ದೆಗಳಿಗೆ ಇಡೀ ದೇಶದ ಆಧಾರದ ಜನರನ್ನು ನೇಮಿಸಿಕೊಳ್ಳಬೇಕೆಂಬ ರವನ್ನು ಸಭೆಯಲ್ಲಿ ಒಪ್ಪಲಾಗಿದೆ

ನೆಹರೂರವರು ದೆಹಲಿಗ ಹಿಂತಿರುಗಿದರು

ಗುಡ್ಡಗಾಡಿನ ಪ್ರವಾಸವನ್ನು ಮು ಕೊಂಡು ಪಂ॥ ನೆಹರೂರವರು ಗಡಿಪ್ರ ಪ್ರಧಾನಿ ಡಾ॥ ಖಾನ್ ಸಾಹೇಬರ ದೆಹಲಿಗೆ ವಿಮಾನದಲ್ಲಿ ನಿನ್ನೆ ಬಂದಿಳಿ

ಟಿ. ಸಿ. ನಟರಾಜ

ಔಷಧಾಲಯ

ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅಗತ್ಯವಾಗಿ ಬೇಕಾದ ಎಲ್ಲಾ ಕ್ಲಿ ಔಷಧಿಗಳೂ ಸದಾ ಕಾಲದಲ್ಲಿ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳ ಚಿಕಿತ್ಸೆಯು ಬಹು ಸುಲಭ ಛಾರ್ಜ ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದೀಯ ದ್ದೌಷಧಗಳೆಲ್ಲವೂ ದೊರೆಯುತ್ತವೆ.

Edited, printed and published A.R. Nagarajan at the Sadhvi Pr D.Subbiah Road, Mysore

OPERA TALKIES

23-10-46 ರಿಂದ

ಪ್ರತಿ ದಿನ ಮೂರು ಆಟಗಳು

ಶ್ರೀ ಮುರುಗನ್

(ತಮಿಳು)

ಪಾತ್ರ.-ಹೊನ್ನಪ್ಪ ಭಾಗವತರ್, ಜೀವರತ್ನಂ,ಮಾಲತಿ, ರಾಮಚಂದ್ರ್, ಕಾಳಿ ಎನ್ ರತ್ನಂ ಮುಂತಾದವರು

Morning Shows for 4 days

From 25-10-46

Forever & a day

LATEST ... .

DEFINITELY BIGGER, MORE THRILLING, MORE SENSATIO

than any Previous TARZAN

HERMAN BRIX in

TARZAN'S ADVENTURES

EDGAR RICE BURROUGH

Wonderful adventure thriller.

For Mysore State, South Kanara and Coorg, Contact

SATYANARAYANA PICTURES CIRCUIT,

Ramanuja Road ... ... Myso

ರಾಜ್‌ಕಮಲ್, ಮೈಸೂರು,

17-10-46 ರಿಂದ

ಅಮೋಘ 5 ನೇ ವ

ಗಾನ ನೃತ್ಯಗಳಿಂದ ಶೋಭಿಸುವ

ವಾಹಿನಿಯವರ

ಸ್ವರ್ಗಸೀಮ

- ಪಾತ್ರ -

* ನಾಗಯ್ಯ, * ಜಯಮ

* ಭಾನುಮತಿ

ನಿಮ್ಮ ಬಂಧು ಬಳಗದೊಡನೆ ಬಂದು ನೋಡಿ ಆನಂದಪಡಿ

Morning Show at 10-30 A. M. From—.5 10 to

"SONG OF NIVEDA"

ಫೋ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ ೨ ಕಾಸು

ಸಂಪುಟ ೫] ಗುರುವಾರ ೨೪—೧೦—೪೬ [ಸಂಚಿಕೆ ೭೨

ದ|| ಆಫ್ರಿಕದ ಬಗ್ಗೆ ರಷ್ಯದ ಸಹಾನುಭೂತಿ

ಜಿಲ್ಲಾ ಬೋರ್ಡ್ ಉಪಾಧ್ಯಕ್ಷರ ಚುನಾವಣೆ

ಮೈಸೂರು ೨೩

ಮೈಸೂರು ಜಿಲ್ಲಾ ಬೋರ್ಡಿನ ಉಪಾಧ್ಯಕ್ಷರು ಅಧ್ಯಕ್ಷರ ಅಧಿಕಾರವನ್ನು ವಹಿಸಿರುವುದರಿಂದ, ಖಾಲಿ ಬಿದ್ದಿರುವ ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸಲು ನವೆಂಬರ್ ೨ ನೇ ತಾ|| ಶನಿವಾರ ಮಧ್ಯಾಹ್ನ ೩ ಘಂಟೆಗೆ ಜಿಲ್ಲಾ ಬೋರ್ಡಿನ ವಿಶೇಷ ಸಭೆಯನ್ನು ಕರೆಯಲಾಗಿದೆ.

ಅರಮನೆ ಸುದ್ದಿ

ಶ್ರೀಮನ್ಮಹಾರಾಜರವರು ಈ ದಿನ ಸಕ್ರೆಟರಿಯೆಟ್ ಅಧ್ಯಕ್ಷರಿಂದ ಶ್ರೀ ಬಿ ಟಿ ಕೇಶವಯ್ಯಂಗಾರ್, ಡಾ|| ಎ ಕೆ ಸಯ್ಯದ್ ಕಾರ್ಜ್ ರವರಿಗೂ ಭೇಟಿ ದಯಪಾಲಿಸಿದರು

ಶುಭಾಶಯಗಳು

ದೇವರಾಜ ಮಾರ್ಕೆಟ್ಟಿನಲ್ಲಿರುವ ಶ್ರೀ ಲಕ್ಷ್ಮೀ ಬ್ಯಾಂಗಲ್ಸ್ ಸ್ಟೋರ್ಸ್‌ನವರು ಕಳುಹಿಸಿರುವ ದೀಪಾವಳಿ ಶುಭಾಶಯಗಳನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ

ಕೀರ್ತನಕಾರರ ಸಭೆ

ಕಳೆದ ೨೦ ನೇ ತಾ|| ಮಧ್ಯಾಹ್ನ ಕಬೇರಿ ಪೇಟೆಯಲ್ಲಿರುವ ಶ್ರೀ ಪಾಂಡುರಂಗ ದೇವಸ್ಥಾನದಲ್ಲಿ ಶ್ರೀ ಗಮಕಿ ರಾಮಕೃಷ್ಣಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಕೀರ್ತನಕಾರರ ಮಂಡಲಿಯ ಸಭೆ ಸೇರಿದ್ದಿತು. ಸಭೆಗೆ ೧೭ ಮಂದಿ ಕೀರ್ತನಕಾರರು ದಯಮಾಡಿಸಿದ್ದರು. ಸಂಘದ ಕಾರ್ಯಕಾರಿ ಸಮಿತಿಗೆ ಶ್ರೀ ಗಮಕಿ ರಾಮಕೃಷ್ಣಶಾಸ್ತ್ರಿಗಳನ್ನು ಅಧ್ಯಕ್ಷರನ್ನಾಗಿಯೂ, ಆರು ಜನರನ್ನು ಸದಸ್ಯರನ್ನಾಗಿಯೂ, ಉಪಾಧ್ಯಕ್ಷರನ್ನಾಗಿಯೂ, ಇಬ್ಬರನ್ನು ಕಾರ್ಯದರ್ಶಿಗಳನ್ನಾಗಿಯೂ ನೇಮಿಸಲಾಯಿತು

ಶ್ರೀ ಸದ್ಗುರು ಸೇವಾ ಸೇವಾ ಮಂಡಲಿ

ಸಂಸ್ಕೃತ ಮಹಾಪಾಠಶಾಲೆಯ ಶ್ರೀ ... ರವರ ದೇವಾಲಯದಲ್ಲಿ ನಾಳೆಯಿಂದ ... ಒಂದು ಅಮಾವಾಸ್ಯೆ ಪೂರ್ತಿ ... ಪ್ರತಿದಿನ ಬೆಳಗ್ಗೆ ಅಭಿಷೇಕ, ... ಗಂಟೆಗೆ ದೀಪೋತ್ಸವ, ಮಂಗಳಾರತಿ ನಡೆಯುತ್ತವೆ. ಭಕ್ತಾದಿಗಳು ... ಮಾಡಿಸಿ, ಶ್ರೀ ಶ್ರೀಗಳವರ ದರ್ಶನ ಪಡೆಯಬೇಕಾಗಿ ಕೋರಲಾಗಿದೆ

ಪ್ರಭುಗಳಿಂದ ಶಂಕುಸ್ಥಾಪನೆ

—

(ಸ್ವ ಸು) ಬೆಂಗಳೂರು ೨೪

ಮಲ್ಲೇಶ್ವರದ ಹೆರಿಗೆ ಆಸ್ಪತ್ರೆ ಕಟ್ಟಡದ ಶಂಕುಸ್ಥಾಪನೋತ್ಸವವನ್ನು ಶ್ರೀಮನ್ಮಹಾರಾಜರವರು ನವೆಂಬರ್ ೯ ನೇ ತಾ|| ನೆರವೇರಿಸಲು ಒಪ್ಪಿರುತ್ತಾರೆ

ಅಮೆರಿಕಕ್ಕೆ ಪ್ರಯಾಣ

ನಂಜನಗೂಡಿನಲ್ಲಿ ಸ್ಥಾಪಿತವಾಗಲಿರುವ ಕಪಿಲಾ ಟೆಕ್ಸ್‌ಟೈಲ್ ಮಿಲ್ಸ್ ಪರವಾಗಿ ಧರ್ಮರತ್ನಾಕರ ಸಿ ಪೆರುಮಾಳಚೆಟ್ಟಿರೂ, ಶ್ರೀ ಬಿ ಕೆ ಮೂರ್ತಿಯವರೂ, ಯಂತ್ರೋಪಕರಣಗಳನ್ನು ತರಲು ನವೆಂಬರ್ ೫ ನೇ ತಾ|| ಕರಾಚಿಯಿಂದ ವಿಮಾನದಲ್ಲಿ ಅಮೆರಿಕಕ್ಕೆ ತೆರಳುವರು. ಈ ಸಂಬಂಧದಲ್ಲಿ ನಿನ್ನೆ ಅವರುಗಳು ದಿವಾನರನ್ನು ಕಂಡು ಮಾತುಕತೆ ನಡೆಸಿದರು.

‡ ಸಂಯುಕ್ತ ರಾಷ್ಟ್ರಗಳ ಸಂಸ್ಥೆಯ ಮುಖ್ಯ ಪ್ರತಿನಿಧಿಯೊಬ್ಬರು ಸದ್ಯದಲ್ಲೇ ಮೈಸೂರಿಗೆ ಭೇಟಿ ಕೊಟ್ಟು ದಿವಾನರೊಡನೆ ಮಾತುಕತೆ ನಡೆಸುವರೆಂದು ಗೊತ್ತಾಗಿದೆ.

ಬಂಗಾಳಕ್ಕೆ ನಾಳೆ ಮಹಾತ್ಮರ ಪ್ರಯಾಣ

ಪೂರ್ವ ಬಂಗಾಳ ಪ್ರದೇಶಗಳಿಗೆ ಭೇಟಿ ಕೊಡುವುದಕ್ಕಾಗಿ ನಾಳೆ ದಿನ ಮಹಾತ್ಮಗಾಂಧಿಯವರು ನವದೆಹಲಿಯಿಂದ ಕಲ್ಕತ್ತೆಗೆ ತೆರಳುವರೆಂದು ವರದಿಯಾಗಿದೆ

ಸೂಚನೆ

ದೀಪಾವಳಿ ಪ್ರಯುಕ್ತ ನಾಳೆ 'ಸಾಧ್ವಿ' ಪತ್ರಿಕೆಗೆ ರಜಾ ಕೊಡಲಾಗಿದೆ

—ವ್ಯವಸ್ಥಾಪಕ

ಕೊಲ್ಲಾಪುರದಲ್ಲಿ ಜನಾನುರಾಗಿ ಸರ್ಕಾರ

ಕೊಲ್ಹಾಪುರ ಸಂಸ್ಥಾನದಲ್ಲಿ ಸದ್ಯದಲ್ಲೇ ರಾಜಕೀಯ ಸುಧಾರಣೆಗಳು ಜಾರಿಗೆ ಬರುವುವು. ಸಂಪೂರ್ಣ ಪ್ರಜಾಪ್ರಾತಿನಿಧ್ಯ ಪಡೆದ ಶಾಸನ ಸಭೆಯು ಸ್ಥಾಪಿಸಲ್ಪಡುವುದು. ಜವಾಬ್ದಾರಿ ಮಂತ್ರಿ ಮಂಡಲವೊಂದು ತಾತ್ಕಾಲಿಕವಾಗಿ ರಚಿತವಾಗಲಿದೆ. ಹೊಸ ಸುಧಾರಣೆಗಳು ಇನ್ನು ೩ ತಿಂಗಳುಗಳೊಳಗೇ ಜಾರಿಗೆ ಬರಬಹುದೆಂದೂ ಹೇಳಲಾಗಿದೆ

ಕಾಂಬೋಡಿಯಾದಲ್ಲಿ ಸಾಂಕುರ ಪ್ರಭುತ್ವ

ಕಾಂಬೋಡಿಯಾದ ರಾಜ್ಯಾಂಗ ರಚನಾ ಸಭೆಯ ಆರಂಭೋತ್ಸವವನ್ನು ನೆರವೇರಿಸುತ್ತ ಅಲ್ಲಿನ ದೊರೆ ತಾವು ಇನ್ನು ಮುಂದೆ ಸಾಂಕುರ ಪ್ರಭುಗಳಾಗಿ ಇರುವುದಾಗಿ ಒಯಸಿ, ರಾಜ್ಯಾಡಳಿತಗಳನ್ನೆಲ್ಲಾ ಪ್ರಜಾಪ್ರತಿನಿಧಿಗಳೇ ನಡೆಸುವವರಾಗಿ ಸಂಯುಕ್ತ ರಾಜ್ಯಗಳಲ್ಲಿ ತಮ್ಮ ದೇಶವು ಗೌರವವಾದ ಸ್ಥಾನ ಗಳಿಸುವಂತಾಗಲೆಂದು ಹಾರೈಸಿದರು

'ಉಷಾ' ವಿಶೇಷ ಸಂಚಿಕೆ

ಶ್ರೀ ಎಸ್ ನಂಜಪ್ಪನವರು ಬೆಂಗಳೂರಿನಲ್ಲಿ ಹೊರಡಿಸುತ್ತಿರುವ ಕನ್ನಡ ಪ್ರಗತಿಶೀಲ ಮಾಸಪತ್ರಿಕೆಯಾದ ಉಷಾ ಪತ್ರಿಕೆಯ ನವರಾತ್ರಿಯ ವಿಶೇಷ ಸಂಚಿಕೆಯನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ. ಸುಪ್ರಸಿದ್ಧ ಲೇಖಕರಿಂದ ಶ್ರೀಗಳಾದ ಮಾಸ್ತಿ ..., ರಂ ಶ್ರೀ ಮುಗಳಿ, ಕೋ ಶಿವರಾಮ ಕಾರಂತ, ಗೋಪಾಲಕೃಷ್ಣ ಅಡಿಗ ಮತ್ತು ಬಿ ಹೆಚ್ ಶ್ರೀಧರ ಮುಂತಾದವರುಗಳ ವಿಚಾರಪೂರಿತ ಲೇಖನಗಳೂ, ಗಾಂಧೀಜಿಯವರೂ ಮುಂತಾದವರ ಛಾಯಾಚಿತ್ರಗಳೂ ಇದರಲ್ಲಿ ಇವೆ. ಕನ್ನಡಿಗರೆಲ್ಲರೂ ಈ ಪತ್ರಿಕೆಯನ್ನು ಓದಿ ಪ್ರಯೋಜನವನ್ನು ಹೊಂದಲೆಂದು ಆಶಿಸುತ್ತೇವೆ. ಬೆಲೆ ಒಂದು ರೂಪಾಯಿ

ಸಮಾಚಾರರಿಗೆ ಸತ್ಕಾರ

ಮಂಗಳೂರು ೨೩

ಸರ್ವಜನಾನ್ನ ಮಂ ... ಮತ್ತು ಇತರೆ ... ಗ್ರಾಮಗಳ ಜನಾಂಗದವರೂ ಶ್ರೀ ಮನ್ನಾರಾಂಬವರ ಭಾವಚಿತ್ರವನ್ನೂ ...

ದ|| ಆಫ್ರಿಕದ ಬಗ್ಗೆ ರಷ್ಯದ ಸಹಾಯ

ಸಂಯುಕ್ತ ರಾಷ್ಟ್ರ ಸಭೆಯ ಮುಂದೆ ದಕ್ಷಿಣ ಆಫ್ರಿಕದ ಭಾರತೀಯರ ಪ್ರಶ್ನೆಯನ್ನು ಎತ್ತಲು ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಅಮೆರಿಕಕ್ಕೆ ನಿಯೋಗವೊಂದನ್ನು ತೆಗೆದುಕೊಂಡು ಹೋಗಿರುವದಷ್ಟೆ. ಈ ವಿಷಯದಲ್ಲಿ ಬ್ರಿಟಿಷ್ ನಿಯೋಗವವರು ತಾಟಸ್ಥ್ಯವನ್ನು ವಹಿಸುವರೆಂದು ತಿಳಿದು ಬಂದಿದೆ. ಆದರೆ ರಷ್ಯದ ಪ್ರತಿನಿಧಿಗಳು ಮಾತ್ರ ಭಾರತೀಯರಿಗೆ ಸಹಾನುಭೂತಿಯನ್ನು ನೀಡುವರೆಂದು ತಿಳಿದು ಬಂದಿದೆ

ಗೋರಿಂಗನ ದೈವ ಭಕ್ತಿ

ಜರ್ಮನ್ ಸೇನಾಪತಿ ಗೋರಿಂಗನು ಆತ್ಮಹತ್ಯ ಮಾಡಿಕೊಳ್ಳುವ ಮೊದಲು ಪಾದ್ರಿಯೊಬ್ಬರು ಅವನ ದೈವ ಭಕ್ತಿಯ ವಿಚಾರವಾಗಿ ಪ್ರಶ್ನಿಸಿದಾಗ ಅವನು ಹೀಗೆ ಹೇಳಿದನೆಂದು ವರದಿಯಾಗಿದೆ. ನನ್ನ ತಂದೆಯಾದ ಪರಮಾತ್ಮನಲ್ಲಿ ಸಂಪೂರ್ಣ ನಂಬಿಕೆ ಇದೆ. ಆದರೆ ಅವನು ಅತ್ಯಂತ ದೊಡ್ಡವನ ಮತ್ತು ಈ ಗೋರಿಂಗನ ಮರಣದಂತಹ ಅಲ್ಪ ವಿಷಯಕ್ಕೆ ಗಮನ ಕೊಡುವಂತಹ ವ್ಯವಧಾನವು ಅವನಿಗಿರುವುದಿಲ್ಲ

ಬಂಗಾಳದ ಗೌರ್ನರರ ಮೇಲೆ ಅಪಾದನೆ

ನೌಕಾಲಿ, ತಿಪ್ಪೆರಾ ಮುಂತಾದ ಕಡೆಗಳಲ್ಲಿ ನಡೆದ ಕೋಮು ಗಲಭೆಗಳ ಪ್ರಮಾಣವನ್ನು ಸರಿಯಾಗಿ ವರದಿ ಮಾಡದೆ ಬಂಗಾಳ ಗವರ್ನರು ಮರೆಮಾಚಿರುವರೆಂದೂ ಅವರು ಹೇಳಿದ ದೃಷ್ಟಾಂತಗಳೂ ಜವಾಬ್ದಾರಿ ಸರ್ಕಾರದ ಸಂಭವಿಸಿರುವುದಾಗಿಯೂ ಶ್ರೀ ಶರತ್ ಚಂದ್ರಬೋಸ ಮತ್ತು ಡಾ|| ಶ್ಯಾಮಪ್ರಸಾದ ಮುಖರ್ಜಿಯವರು ಹೇಳಿರುತ್ತಾರೆ

ಕಾಂಗ್ರೆಸ್ ಕಾರ್ಯಕಾರಿ ಸಮಿತಿ

ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಸಭೆಯು ದಹಲಿಯ ಬಿರ್ಲಾ ಭವನದಲ್ಲಿ ಮಹಾತ್ಮಗಾಂಧಿಯವರ ಸಂಜೆಯ ಪ್ರಾರ್ಥನೆಯ ಅನಂತರದಲ್ಲಿ ನಿನ್ನೆ ಸೇರಿತು. ಈ ದಿನ ಸಭೆ ಸೇರಿ ಬಂಗಾಳದ ಪರಿಸ್ಥಿತಿಯನ್ನೂ ಕೇಂದ್ರ ಸರ್ಕಾರದಲ್ಲಿ ಲೀಗಿನವರು ಸೇರಿದುದರಿಂದ ಉಂಟಾದ ಬೆಳವಣಿಗೆಗಳನ್ನೂ ಪರಿಶೀಲಿಸುವರೆಂದು ತಿಳಿದು ಬಂದಿದೆ

ಪಂಜಾಬಿನಿಂದ ಧಾನ್ಯ

ದಕ್ಷಿಣ ಭಾರತದಲ್ಲಿ ಉಂಟಾಗಿರುವ ಆಹಾರ ಅಭಾವವನ್ನು ಪರಿಹರಿಸಲು ಡಾ|| ರಾಜೇಂದ್ರ ಪ್ರಸಾದರು ಪಂಜಾಬಿಗೆ ಭೇಟಿ ಇತ್ತು ಅಲ್ಲಿರುವ ಹೆಚ್ಚಿನ ಅಕ್ಕಿಯನ್ನು ಕೊಡುವಂತೆ ಅಲ್ಲಿಯ ಅಕ್ಕಿ ವರ್ತಕರನ್ನು ಕೇಳಲು ಅವರು ೭೦ ಸಾವಿರ ಟನ್ ಅಕ್ಕಿಯನ್ನು ಕೊಡಲು ಒಪ್ಪಿರುವರೆಂದು ತಿಳಿದು ಬಂದಿದೆ. ಇದರಿಂದ ಬರುವ ೩ ತಿಂಗಳ ಅಭಾವವನ್ನು ನೀಗಿಸಲು ಸಹಾಯವಾಗುವದೆಂದು ಡಾ|| ರಾಜೇಂದ್ರ ಪ್ರಸಾದರು ಹೇಳಿದ್ದಾರೆ

ಇದೆ ಶ್ರೀ ಪಿ ಎಂ ನಂಜುಂಡಯ್ಯ ಅರಸಿನವರ ... ಸದ್ಗುರು ... ಮತ್ತು ... ಕವಿತ ದಸರಾ ... ಜನಸಮಾದ್ದಕ್ಕೊ ... ಮತ್ತು ... ಸಮಾರಂಭವನ್ನು ನಡೆಸಿದರು ... ಒಬ್ಬ ಪತ್ನಿಯನ್ನು ...

ದೀಪಾವಳಿಯ ಶುಭಾಶಯಗಳು

ಇಂದಿಗೆ ರಾಜ್ ಕಮಲವು ಅರಳಿ ಹೂವಾಗಿ ೪ ತಿಂಗಳಾ ... ಕಾಲಚಕ್ರವು ಅರಿವಿಲ್ಲದೆ ಉರುಳಿದಂತೆ ನಾವೂ ಎಡರುಗಳನ್ನೂ ಗಮನಿಸದೆ ಮುನ್ನಡಿಯಿಡುತ್ತಿದ್ದೇವೆ. ಇದು ... ನಮಗೆ ನೆರವಾಗಿ ಪ್ರೋತ್ಸಾಹವನ್ನಿತ್ತ ಮಹನೀಯರಿಗೂ ನಮಗೆ ಶುಭಾಶಯಗಳನ್ನು ಕಳುಹಿಸಿರುವವರಿಗೂ ನಮ್ಮ ಪೂರ್ವಕವಾದ ಹಾಗೂ ಕೃತಜ್ಞತಾ ಪೂರ್ಣ ವಂದನೆಗಳು. ಮುಂಬರಲಿರುವ ನೂತನ ಸಂವತ್ಸರವು ಸರ್ವರಿಗೂ ಮಂಗಳವನ್ನುಂಟುಮಾಡಲಿ!

... ಗಿ ತರಿಸಿರುವ

'ಸ್ವರ್ಗ ಸೀಮೆ'

ಯನ್ನು ಇಂದೇ ನೋಡಿ

ಮ್ಯಾನೇಜ್‌ಮೆಂಟ್, 'ರಾಜ್ ಕಮಲ್,' ಮೈಸೂರು

ಸಾಧ್ವಿ

ತಾ|| ೨೪-೧೦-೪೬ ಗುರುವಾರ

ರಾಷ್ಟ್ರನಾಯಕರಿಗೆ ಪೆಟ್ಟು

ಗುಡ್ಡಗಾಡಿನ ಪ್ರವಾಸದಲ್ಲಿ ಪಂಡಿತ ನೆಹರೂ ಮತ್ತು ಗಡಿನಾಡಿನ ಗಾಂಧಿಯವರೆನಿಸಿದ ಖಾನ್ ಅಬ್ದುಲ್‌ಗಫಾರ್‌ಖಾನರಿಗೆ ಪೆಟ್ಟುಗಳು ಬಿದ್ದವು. ಅವರ ಶರೀರದಿಂದ ರಕ್ತದ ಹನಿಗಳು ಆ ಪ್ರದೇಶದ ಮೇಲೆ ಬಿದ್ದವು. ಗಫಾರ್‌ಖಾನರು ಚಿಕಿತ್ಸೆಗಾಗಿ ಆಸ್ಪತ್ರೆಗೆ ಸೇರಿಸಲ್ಪಟ್ಟರು. ಇದು ಇಂದಿನ ನಮ್ಮ ರಾಜಕೀಯ ಜೀವನದ ಅತ್ಯಂತ ಕಳಂಕಪ್ರಾಯವಾದ ಪ್ರಕರಣ.

ಈ ಪ್ರವಾಸವನ್ನು ಕೈಗೊಳ್ಳದಂತೆ ಪಂಡಿತ ನೆಹರೂರವರಿಗೆ ಕೆಲವರು ಸೂಚಿಸಿದುದೇನೋ ನಿಜ. ಆದರೆ ಮುಂದಿಟ್ಟ ಕಾಲನ್ನು ಹಿಂದಕ್ಕೆ ಇಡುವುದಿಲ್ಲವೆಂಬುದು ನೆಹರೂರವರ ಜೀವನದ ಸಂಕಲ್ಪ. ಅದರಲ್ಲೂ ಗುಡ್ಡಗಾಡಿನ ನಾಯಕರಾದ ಅಪಿ ಫಕೀರರ ಆಹ್ವಾನದ ಮೇರೆ ಕೈಗೊಂಡ ಸೌಹಾರ್ದ ಪ್ರವಾಸವನ್ನು ಅವರು ಎಂದಿಗೂ ತ್ಯಜಿಸುವವರಲ್ಲ. ಗುಡ್ಡಗಾಡಿನವರಮೇಲೆ ಆಡಳಿತ ನಡೆಸಲು, ತಾವು ಬಂದಿಲ್ಲವೆಂದೂ, ಸ್ನೇಹವನ್ನು ಬೆಳೆಸಲು ಬಂದಿರುವುದಾಗಿಯೂ ಅವರು ಸ್ಪಷ್ಟವಾಗಿ ಸಾರಿದರು. ಆದರೆ ಹಿಂದೂ ರಾಜ್ಯವನ್ನು ತಮ್ಮ ಮೇಲೆ ಹೊರಿಸಲು ಅವರು ಒರುತ್ತಿದ್ದಾರೆಂದು ಹಲವರು ಮಾಡಿದ ಅಪಪ್ರಚಾರವೇ ಕಲ್ಲಿನ ಅನುಚಿತ ಪ್ರಸಂಗಗಳಿಗೆ ಕಾರಣ.

ಇಂಡಿಯಾ ಸರ್ಕಾರದ ರಾಜಕೀಯ ಶಾಖೆಯ ಮೇಲೆ ಬಂದಿರುವ ಆಪಾದನೆಯು ಇನ್ನೂ ಘೋರವಾಗಿದೆ. ನೆಹರೂರವರನ್ನೂ ತಮ್ಮನ್ನೂ ಕೊಲೆ ಮಾಡಲು ಒಂದು ಸಿತೂರಿಯೇ ನಡೆದಿದೆಯೆಂದು ಗಫಾರ್ ಖಾನರು ಹೇಳಿರುವರು. ಆದರೆ ಕೇವಲ ರಕ್ತಪಾತದಲ್ಲಿಯೇ ಪರ್ಯವಸಾನವಾಗಿ ಈ ನಾಯಕರುಗಳು ಪ್ರವಾಸದಿಂದ ಹಿಂದಿರುಗಿರುವುದು ದೇಶದ ಭಾಗ್ಯೋದಯ. ಅವರ ಒಂದೊಂದು ತೊಟ್ಟು ರಕ್ತವೂ ದೇಶದ ಪರಾವಲಂಬನೆಯ ನಿವಾರಣೆಗೆ ಬೀಜಾಂಕುರವಾಗುವುದೆಂದು ಧಾರಾಳವಾಗಿ ಹೇಳಬಹುದು.

ಇಡೀ ದೇಶದ ಜನರ ಕಲ್ಯಾಣಗಳಿಗಾಗಿ ಸಕಲರ ಪ್ರೀತಿ ವಿಶ್ವಾಸಗಳನ್ನೂ ಗಳಿಸಿ, ಭಾರತ ಸಾಮ್ರಾಜ್ಯ ಸಿಂಹಾಸನವನ್ನು ಅಲಂಕರಿಸಲು ಅರ್ಹತೆ ಪಡೆದಿರುವ ಈ ನಾಯಕಮಣಿಗಳಿಗೆ ಆಗಿರುವ ಅಪಚಾರವು ದೇಶದ ಪ್ರತಿಗಾಮಿ ಶಕ್ತಿಗಳಿಗೆ ಕೊಟ್ಟ ಕುಟಿಲ ಪ್ರಚಾರವೇ. ಮುಸ್ಲಿಂ ಲೀಗಿನವರು ಕೇಂದ್ರ ಸರ್ಕಾರದಲ್ಲಿ ಪ್ರವೇಶಿಸುವುದಾಗಿ ಹೇಳಿದ ಮೇಲೂ ಈ ಪ್ರಸಂಗಗಳು ನಡೆಯುತ್ತಿರುವುದು ಶೋಚನೀಯ.

ಇಂತಹ ದುಂಡಾವರ್ತಿಗಳಿಂದ ಸ್ವಾತಂತ್ರ್ಯದ ಸಾಧನೆಯು ಸಿದ್ಧಿಸುವುದಿಲ್ಲ. ನೆಹರೂರವರು ಹೇಳಿರುವಂತೆ ಸ್ನೇಹದಿಂದ ಬರುವವರಿಗೆ ಸ್ನೇಹವೂ, ಕದನವನ್ನು ಬಯಸುವವರಿಗೆ ಕದನವೂ ದೊರಕುವುವು. ಕದನದ ಮಾರ್ಗವನ್ನು ಬಿಟ್ಟು ಪ್ರೀತಿ ವಿಶ್ವಾಸಗಳಿಂದಲೇ ಭಾರತ ಸ್ವಾತಂತ್ರ್ಯ ಸಿದ್ಧಿಯು ಆಗಲೆಂಬುದು ಎಲ್ಲರ ಹಾರೈಕೆಯಾಗಿದೆ.

ನೋಟೀಸು

ಮೈಸೂರು ಒಂದನೇ ಮುನಿಸೀಫರವರ ಕೋರ್ಟಿನಲ್ಲಿ

1945-46 ನೇ ಸಾಲ್ ಅಸಲ್ ನಂಬರು 489

ವಾದಿ:—ಮೈಸೂರು ಸಿಟಿ ಮಂಡಿಮೊಹಲ್ಲ ತೊಗರಿ ಬೀದಿಯಲ್ಲಿರುವ ಗಂಗಡಿಕಾರ ಒಕ್ಕಲಿಗರ ಜಾತಿ ಲೇಟ್ ಕೆಂಪಣ್ಣನವರ ಮಗ ಸುಮಾರು ೧೯ ವರ್ಷ ವಯಸ್ಸಿನ ವಿಶ್ವೇಶ್ವರಯ್ಯ Vs

ಪ್ರತಿವಾದಿಗಳು:—೧ನೇ ಮೈಸೂರು ಸಿಟಿ ಶಿವರಾಂಪೇಟೆಯಲ್ಲಿ ಕ್ಲಾತ್ ಮರ್ಚೆಂಟ್ ಸಯ್ಯದ್ ಗಫಾರ್ ಸಾಹೇಬರ ಮನೆಯಲ್ಲಿ ವಾಸಿಸುವ ಲೇಟ್ ಸಯ್ಯದ್ ಯುಸೂಫ್ ಉರುಫ್ ಸಾಬ್ಜು ಸಾಹೇಬರವರ ಮಗಳು ಸುಮಾರು ೨೩ ವರುಷ ವಯಸ್ಸಿನ ಮಹಬೂಬುನ್ನೀಸಾ

೨ ನೇ ಮೈಸೂರು ಮಂಡಿ ಮೊಹಲ್ಲ ತೊಗರಿ ಬೀದಿಯಲ್ಲಿರುವ ಲೇಟ್ ಸಯ್ಯದ್ ಯುಸೂಫ್ ಉರುಫ್ ಸಾಬ್ಜು ಸಾಹೇಬರ ಮಗಳು ಸುಮಾರು ೨೧ ವರುಷದ ಖೈರುನ್ನೀಸಾ.

೪ ನೇ ಡಿಟೋ ಸ್ಥಳದಲ್ಲಿರುವ ೩ ನೆಯವರ ತಂಗಿ ಸುಮಾರು ೧೯ ವರುಷದ ಸೈರುನ್ನೀಸಾ.

ಮೇಲ್ಕಂಡ ಅಸಲು ಮೊಕದ್ದಮಾದಲ್ಲಿ ವಾದಿಯು ಮೇಲ್ಕಂಡ ಪ್ರತಿವಾದಿಗಳು ವಗೈರೇರ ಮೇಲೆ ಈ ದಾವಾವನ್ನು ದಾವಾ ಷೆಡ್ಯೂಲು ಸ್ವತ್ತುಗಳಲ್ಲಿ ತನಗಿರತಕ್ಕ ಮೂರನೇ ಒಂದು ಭಾಗದ ಹಕ್ಕನ್ನು ವಿಭಾಗ ಮಾಡಿ ಅವನ ಸ್ವಾಧೀನ ಕೊಡಿಸುವುದಕ್ಕೂ ಮತ್ತು ಕೋರ್ಟಿನವರು ಮೇಲ್ಕಂಡ ಪ್ರತಿವಾದಿಗಳ ತಂದೆಗೆ ವಾದಿಯು ತಂದೆ ಕೆಂಪಣ್ಣ ಮತ್ತು ವಾದಿಯು ಅಣ್ಣ ವೀರಣ್ಣನೂ ಸಹ ೧೬-೪-೩೪ ರಲ್ಲಿ ಬರೆದು ಕೊಟ್ಟಿರುವ ದಾವಾ ಷೆಡ್ಯೂಲು ಸ್ವತ್ತುಗಳ ಕ್ರಯ ಪತ್ರವು ವಾದಿಯನ್ನು ಬದ್ಧಪಡಿಸುವುದಿಲ್ಲವೆಂದು ಡಿಕ್ಲೇರ್ ಮಾಡುವುದಕ್ಕೂ ಮತ್ತು ಖರ್ಚು ನಷ್ಟ ವಗೈರೇಗೂ ಹೂಡಿ ಸದರಿ ಮೊಕದ್ದಮೆಯು ತಾರೀಖು ೧೬-೧೧-೪೬ ಕ್ಕೆ ಹಿಯರಿಂಗಿಗಿರುತ್ತೆ. ಮೇಲ್ಕಂಡ ಪ್ರತಿವಾದಿಗಳು ಮೇಲ್ಕಂಡ ಹಿಯರಿಂಗು ದಿವಸ ಬೆ. ೧೧ ಗಂಟೆಗೆ ಖುದ್ದಾಗಿಯೇ ಆಗಲಿ ಅಥವಾ ವಕೀಲರ ಮೂಲಕವೇ ಆಗಲಿ ಕೋರ್ಟಿಗೆ ಹಾಜರಾಗಿ ತಮ್ಮ ದೇನಾದರೂ ತಕರಾರು ಇದ್ದಲ್ಲಿ ಕೋರ್ಟಿಗೆ ದಾಖಲು ಮಾಡತಕ್ಕದ್ದು, ತಪ್ಪಿದಲ್ಲಿ ಮೊಕದ್ದಮೆಯು ಗೈರ್ ಹಾಜರ್ ಬಗ್ಗೆ ಏಕಪಕ್ಷನಾಗಿ ತೀರ್ಮಾನಿಸಲಾಗುತ್ತದೆಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಿರುತ್ತದೆ.

ಮೈಸೂರು, ತಾ|| ೨೪-೧೦-೪೬.

ಎಂ. ಎಸ್. ರಂಗನಾಥ
ವಾದಿಪರ ಅಡ್ವೋಕೇಟ್.

ಅಭಿನಂದನೆ

ದೊಡ್ಡಬಳ್ಳಾಪುರದ ಪುರಪ್ರಮುಖರು ಮಹಿಳೆಯರೂ, ಶ್ರೀಮನ್ಮಹಾರಾಜರ ವುತ್ರೋತ್ಸವವಾದ ಬಗ್ಗೆ ತಮ್ಮ ಸಂತೋಷವನ್ನು ಸೂಚಿಸಲು ಮುನ್ಸೀಫ್-ಮ್ಯಾಜಿಸ್ಟ್ರೇಟರಾದ ಶ್ರೀ|| ಎಂ. ಸಿ. ನಂಜರಾಜ ಅರಸಿನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಶ್ರೀಮನ್ಮಹಾರಾಜರಿಗೂ, ಯುವರಾಜರವರಿಗೂ, ರಾಜಕುಮಾರಿಯವರಿಗೂ ... ವಂತನು ಆಯುರಾರೋಗ್ಯವನ್ನು ಕರುಣಿಸಲೆಂದು ನಿರ್ಣಯಿಸಿದರು. ಮಕ್ಕಳಿಗೆ ... ತಿಂಡಿ, ಬಡಬಗ್ಗರಿಗೆ ಅನ್ನದಾನಗಳು ... ದವು.

* ಬರ್ಮಾದ ಹೊಸ ಸರ್ಕಾರದಲ್ಲಿದ್ದ ಮ್ಯೂನಿಸ್ಟ್ ಪಕ್ಷದ ಒಬ್ಬ ಮಂತ್ರಿಯು ನಿನ್ನೆ ದಿನ ರಾಜೀನಾಮೆ ಸಲ್ಲಿಸಿದರು.

ಮೈಸೂರು ಸ್ಟೇಟ್ ರೈಲ್ವೆ

ಲೋಕೋ ಮತ್ತು ಕಾರ್ ಸೂಪರಿಂಟೆಂಡೆಂಟರವರ ಆಫೀಸು

ಮೈಸೂರು ಸೌತ್

ನೋಟಿಫಿಕೇಷನ್ : ತಾ|| 12-10-46

ಮೈಸೂರು ಸೌತಿನಲ್ಲಿರುವ ಮೈಸೂರು ಸ್ಟೇಟ್ ರೈಲ್ವೆ ಸೆಂಟ್ರಲ್ ವರ್ಕ್‌ಷಾಪಿನ ಕ್ಯಾಂಟೀನ್ ಮತ್ತು ಇಂಡಿಯನ್ ರಿಫ್ರೆಷ್‌ಮೆಂಟ್ ರೂಮನ್ನು ನಡೆಸುವ ಕಾಂಟ್ರಾಕ್ಟ್ ಟೆಂಡರು ನೋಟೀಸು ;

೧ ತಾ|| 1-1-47 ರಿಂದ ತಾ|| 31-12-47 ರ ವರೆಗೆ ಅಥವಾ ಟೆಂಡರು ಒಪ್ಪಿಕೊಂಡ ತಾರೀಖಿನಿಂದ, ಒಂದು ವರ್ಷ ಕಾಲ ಕ್ಯಾಂಟೀನ್ ಮತ್ತು ಇಂಡಿಯನ್ ರಿಫ್ರೆಷ್‌ಮೆಂಟ್ ರೂಮನ್ನು ನಡೆಸುವ ಮೇಲ್ಕಂಡ ಕಾಂಟ್ರಾಕ್ಟಿಗಾಗಿ ಕಸಬುದಾರ ಕೇಟರರುಗಳಿಂದ ಸೀಲಾದ ಟೆಂಡರುಗಳು 6-11-46 ನೇ ತಾ|| ಮಧ್ಯಾಹ್ನ ೪ ಘಂಟೆಯ ವರೆಗೆ ಕೆಳಗೆ ಸಹಿ ಮಾಡಿದವರ ಆಫೀಸಿನಲ್ಲಿ ಸ್ವೀಕರಿಸಲ್ಪಡುತ್ತವೆ. ೨. "ಮೈಸೂರು ಸೌತಿನಲ್ಲಿರುವ ಮೈಸೂರು ಸ್ಟೇಟ್ ರೈಲ್ವೆ ಸೆಂಟ್ರಲ್ ವರ್ಕ್‌ಷಾಪಿನ ಕ್ಯಾಂಟೀನ್ ಮತ್ತು ಇಂಡಿಯನ್ ರಿಫ್ರೆಷ್‌ಮೆಂಟ್ ರೂಮನ್ನು ನಡೆಸುವ ಕಾಂಟ್ರಾಕ್ಟಿಗಾಗಿ ಟೆಂಡರು" ಎಂದು ಲಕ್ಕೋಟೆಯ ಮೇಲೆ ಬರೆದು ಲೋಕೋ ಮತ್ತು ಕಾರ್ ಸೂಪರಿಂಟೆಂಡೆಂಟ್, ಮೈಸೂರು ಸ್ಟೇಟ್ ರೈಲ್ವೆ, ಮೈಸೂರು ಸೌತ್‌ರವರ ವಿಳಾಸಕ್ಕೆ ಬರೆದ ಸೀಲಾದ ಕವರುಗಳಲ್ಲಿ ಟೆಂಡರುಗಳನ್ನು ಕಳುಹಿಸಬೇಕು. ೩. ಪ್ರತಿಯೊಂದು ಟೆಂಡರ್ ಜೊತೆಯಲ್ಲಿಯೂ ೨೦೦ ರೂ ಗಳನ್ನು [ಇನ್ನೂರು ರೂಪಾಯಿಗಳು ಮಾತ್ರ] ನಗದಾಗಿ ಠೇವಣಿಗಾಗಿ ಕೆಳಗೆ ಸಹಿ ಆಫೀಸಿಗೆ ಕಳುಹಿಸಬೇಕು. ಅಂಗೀಕಾರವಾಗದ ಟೆಂಡರುದಾರರುಗಳಿಗೆ ಅದನ್ನು ವಾಪಸು ಕೊಡಲಾಗುವುದು. ಅಂಗೀಕರಿಸಲ್ಪಟ್ಟ ಟೆಂಡರುದಾರರ ಹಣವನ್ನು ಸೆಕ್ಯೂರಿಟಿ ಡಿಪಾಜಿಟ್ಟಾಗಿ ಇಟ್ಟುಕೊಳ್ಳಲಾಗುವುದು. ೪ ಟೆಂಡರಿನ ಜೊತೆ ವಾಯಿದೆ ಒಂದು ವರ್ಷ ಇದನ್ನು, ಕ್ಯಾಂಟೀನ್ ಮತ್ತು ಇಂಡಿಯನ್ ರಿಫ್ರೆಷ್‌ಮೆಂಟ್ ರೂಮನ್ನು ನಡೆಸುವುದಕ್ಕಾಗಿ ಮುಂಗಡವಾಗಿ, ಈ ಆಫೀಸಿಗೆ ಪಾವತಿ ಮಾಡಬೇಕು. ಈ ನೋಟೀಸಿನಲ್ಲಿ ಖಚಿತವಾಗಿ ತಿಳಿಸಬೇಕು. ೫ ತಿಂಡಿ ಪದಾರ್ಥಗಳು, ಅವುಗಳ ಮಾರಾಟದ ದರ ಇವುಗಳ ಪಟ್ಟಿಯೊಂದನ್ನೂ ಸಹ ಕಳುಹಿಸಬೇಕು. ೬ ಷೆಡ್ಯೂಲ್ ಕರಾರಿನ ಪತ್ರಗಳನ್ನೊಳಗೊಂಡ ನಮೂದಾದ ಟೆಂಡರ್ ಫಾರಂಗಳನ್ನು, ಕೆಳಗೆ ಸಹಿ ಮಾಡಿದವರ ಆಫೀಸಿನಿಂದ, ಪ್ರತಿ ಒಂದಕ್ಕೆ ೧ ರೂ ನಂತೆ ಕೊಟ್ಟು ಪಡೆಯಬಹುದು. ೭ ಎಲ್ಲಕ್ಕಿಂತಲೂ ಹೆಚ್ಚಾದ ಟೆಂಡರನ್ನು ಅಂಗೀಕರಿಸುವುದಕ್ಕಾಗಲೀ, ಅಥವಾ ಅಂಗೀಕರಿಸದೇ ಇರುವ ಟೆಂಡರುಗಳಿಗೆ ಕಾರಣ ಕೊಡುವುದಕ್ಕಾಗಲೀ ಇಲಾಖೆಯವರು ಒಪ್ಪಿರುವುದಿಲ್ಲ. ೮ ಟೆಂಡರನ್ನು ಅಂಗೀಕರಿಸಿದಮೇಲೆ ಟೆಂಡರುದಾರರು ಕರಾರುಗಳಿಗೆ ಒಪ್ಪದಿದ್ದರೆ ಅವರ ಟೆಂಡರ್ ಡಿಪಾಜಿಟ್ಟು ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ಎಂ. ಚೆಲುವೇಅರಸ್,
ಲೋಕೋ ಮತ್ತು ಕಾರ್ ಸೂಪರಿಂಟೆಂಡೆಂಟ್,
ಮೈಸೂರು ಸ್ಟೇಟ್ ರೈಲ್ವೆ, ಮೈಸೂರು ಸೌತ್.

OPERA TALKIES

23-10-46 ರಿಂದ

ಪ್ರತಿ ದಿನ ಮೂರು ಆಟಗಳು,

ಶ್ರೀ ಮುರುಗನ್

(ತಮಿಳು)

ಪಾತ್ರ:-ಹೊನಪ್ಪ ಭಾಗವತರ್,
ಜೀವರತ್ನಂ, ಮಾಲತಿ, ರಾಮಚಂದ್ರ,
ಕಾಳಿ ಎನ್. ರತ್ನಂ ಮುಂತಾದವರು

Morning Shows for 4 days
From 25-10-46

Forever & a day

Edited, printed and published by A. R. Nagarajan at the Sadhvi Press D Subbiah Road, Mysore

ರಾಜ್ ಕಮಲ್, ಮೈಸೂರು,

24-10-46 ರಿಂದ ಅಮೋಘ 6 ನೇ ವಾರ

ವಾಹಿನಿ ಯವರ

ಸ್ವರ್ಗಸೀಮ

- ಪಾತ್ರ -
* ನಾಗಯ್ಯ, * ಜಯಮ್ಮ,
* ಭಾನುಮತಿ

Morning Show at 10-30 A. M. From:—25-10-46

"SONG OF NIVEDA"

ಸ್ನೇಹಿತರಿಗೆ, ಹಿತೈಷಿಗಳಿಗೆ ಮತ್ತು ಗಿರಾಕಿಗಳಿಗೆ

ದೀಪಾವಳಿಯ ಶುಭಾಶಯಗಳು

ಜೆ. ಸೋಮಪಾಲ್,
ಡೆಲ್ಲಿ ಮಿಠಾಯಿ ಅಂಗಡಿ
ಶಿವರಾಂಪೇಟೆ, ಮೈಸೂರು

॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶನಿವಾರ ೨೬—೧೦—೪೬ [ಸಂಚಿಕೆ ೭೩

ಮುಸ್ಲಿಂ ಲೀಗಿನವರಿಂದ ಅಧಿಕಾರ ಸ್ವೀಕಾರ

...ರಸಭಾ ಚುನಾವಣಾಗ ...ಗ್ರೆಸ್ ಉಮೇದುವಾರರು

ಮೈಸೂರು ೨೬

...ವ ನವಂಬರ್ ೧೪ ನೇ ತಾ॥ ಗು ... ನಡೆಯಲಿರುವ ರಾಜಧಾನಿಯ ...ಸಭಾ ಚುನಾವಣೆಗೆ ಕಾಂಗ್ರೆಸ್ಸಿನ ಪರ ... ಕೆಳಗೆ ಕಂಡುಬರುವ ಉಮೇದು... ಈ ದಿನ ಅರ್ಜಿಯನ್ನು ಸಲ್ಲಿಸಿರು...

...ಪೇಟೆ ಮೊಹಲ್ಲಾ (೧ ಸ್ಥಾನ) ಶ್ರೀ ಎ. ...ನರ್ಸಿಂಗರಾವ್.

...ಷ್ಣರಾಜ ಮೊಹಲ್ಲಾ (೪ ಸ್ಥಾನಗಳು) ...ದ ಪಾಲಹಳ್ಳಿ ಸೀತಾರಾಮಯ್ಯ, ... ಸೂರ್ಯನಾರಾಯಣರಾವ್, ಡಾ॥ ... ಸೂರ್ಯನಾರಾಯಣರಾವ್ ಮತ್ತು ... ಎಂ ಎಲ್ ಸೀತಮ್ಮ.

...ಮರಾಜ ಮೊಹಲ್ಲಾ (೪ ಸ್ಥಾನಗಳು) ... ಎಂ. ಆರ್. ಲಕ್ಷ್ಮಮ್ಮ, ಶ್ರೀಯುತ ... ಬೇಡಿಗನವಳೆ ನಾರಾಯಣಸ್ವಾ... ...ಗರಂ ರಂಗಯ್ಯ ಮತ್ತು ಕೆ. ಎಸ್. ...ರಾಯಣರಾವ್

...ವರಾಜ ಮೊಹಲ್ಲಾ (೪ ಸ್ಥಾನಗಳು) ...ದ ಯು ಎಲ್. ರಾಮಚಂದ್ರರಾ... ...ಗೌಡಯ್ಯ, ಟಿ ನರಸಿಂಹಯ್ಯಂಗಾರ್ ... ಎಸ್ ಲಿಂಗಣ್ಣ.

...ಬಾದ್ ಮೊಹಲ್ಲಾ (೧ ಸ್ಥಾನ) ಶ್ರೀ ...ಕಟಕದ...ಣಯ್ಯ.

...ಡಿ ಮೊಹಲ್ಲಾ (೫ ಸ್ಥಾನಗಳು) ಶ್ರೀ ... ಟಿ ಮರಿಯಪ್ಪ, ಎಂ. ಎಸ್. ನಂ... ...ಶೆಟ್ಟಿ. ತಮ್ಮಯ್ಯ, ಕೆ. ಪುಟ್ಟಸ್ವಾ... ... ಜಿ ಆರ್. ರಂಗಸ್ವಾಮಯ್ಯ.

...ರ್ ಮೊಹಲ್ಲಾ (೫ ಸ್ಥಾನಗಳು) ಶ್ರೀ ... ಎಲ್. ದಾಸಪ್ಪ, ಇ ಬಿ. ನಂಜ... ...ಜೇಶ್ವರಯ್ಯ, ಟಿ. ಚಂದ್ರಶೇಖರ ಮತ್ತು ಪುಟ್ಟಸ್ವಾ ಗೋಪಾಲ ಕೃಷ್ಣ

...ನಿರತ ಪತ್ರಿಕೋದ್ಯೋಗಿಗಳ ಸಭೆ

...ಕೋದ್ಯಮಿಗಳ ವೃತ್ತಿ ಗೌರವಕ್ಕೆ ...ಧಿಸಿದ ಕೆಲವು ಅಂಶಗಳನ್ನು ಪರಿಶೀ... ...ರಾಜಧಾನಿಯ ಕಾರ್ಯನಿರತ ಪ... ...ದ್ಯೋಗಿಗಳ ಸಭೆಯೊಂದು ನಾಳೆ ... ಘಂಟೆಗೆ ಶ್ರೀ ಚಾಮುಂಡೇಶ್ವರಿ ... ನಡೆಯುವುದು- ಕಾರ್ಯನಿರತ ...ದ್ಯೋಗಿಗಳೆಲ್ಲರಿಗೂ ಸ್ವಾಗತವಿದೆ.

ನಿಧನ

...ರೆಕ್ಟರ್ ಆಫ್ ಹೆಲ್ತ್ ರವರಾದ ... ಚಂದ್ರಶೇಖರಯ್ಯನವರ ತಂದೆ ಶ್ರೀ ...ಸುಬ್ಬಶಾಸ್ತ್ರಿಯವರು ನಿನ್ನೆ ಬೆಳಗ್ಗೆ ... ನೇ ವಯಸ್ಸಿನಲ್ಲಿ ನಿಧನರಾದ... ...ಸಲು ವಿಷಾದಿಸುತ್ತೇವೆ

...ನಾವಣೆಯಲ್ಲಿ ಕಾಟಿಷ್ಠ

...ದೆ ಬರಲಿರುವ ಪುರಸಭಾ ಚುನಾ... ...ಕಾಟಸ್ಥ್ಯ ವಹಿಸಬೇಕೆಂದು ಕ... ...ಗ್ರೆಸ್ ಕೆಲಸಗಾರರು ಮೊನ್ನೆ ದಿ... ...ಟರ್ ಎಸ್ ದೊರೆಸ್ವಾಮಿಯವ... ...ತೆಯಲ್ಲಿ ತೀರ್ಮಾನಿಸಿದ್ದಾರೆಂದು ...ದೆ

ಹರಿಕಥೆ

...ದ ರಾತ್ರಿ ೯ ಗಂಟೆಗೆ ವೇ॥ ಬ್ರ॥ ...ತಿ ರಾಮಕೃಷ್ಣ ಶಾಸ್ತ್ರಿಗಳವರಿಂದ ...ಲ್ಯಾಣ ಎಂಬ ಕಥೆಯು ಕೀರ್ತ... ...ಮಂಡಲಿಯ ಆಶ್ರಯದಲ್ಲಿ ಶ್ರೀ ...ಗ ದೇವಾಲಯದಲ್ಲಿ ನಡೆಯು...

ಕೇಂದ್ರ ಸರ್ಕಾರಕ್ಕೆ ಲೀಗಿನ ಪ್ರವೇಶ

ಕೇಂದ್ರ ತಾತ್ಕಾಲಿಕ ಸರ್ಕಾರಕ್ಕೆ ಲೀಗಿನಿಂದ ನಿಯೋಜಿತರಾಗಿದ್ದ ಐವರು ಈ ದಿನ ಅಧಿಕಾರ ಸ್ವೀಕರಿಸುವರೆಂದು ಪ್ರಕಟಿಸಲಾಗಿದೆ. ಅಲ್ಲದೆ ಈ ಮುಂದೆ ಕಂಡಂತೆ ಖಾತೆಗಳ ಪುನರ್ ಹಂಚಿಕೆಯಾಗಿದೆ. ಪಂ॥ ನೆಹರು-ವಿದೇಶಾಂಗ; ಸ॥ ಪಟೇಲ್-ಒಳಾಡಳಿತ; ಡಾ॥ ಪ್ರಸಾದ್-ಆಹಾರ ಮಿ॥ ಅಸಫ್ ಅಲಿ-ಸಂಚಾರ ಸೌಕರ್ಯ; ಜಗಜೀವನರಾಂ-ಕಾರ್ಮಿಕ; ಜಾನ್ ಮಥಾಯಿ-ಕೈಗಾರಿಕೆ ಮತ್ತು ಸರಬರಾಜು; ಸ॥ ಬಲದೇವಸಿಂಗ್-ರಕ್ಷಣೆ; ಸಿ. ರಾಜಗೋಪಾಲಾಚಾರಿ ವಿದ್ಯಾಭ್ಯಾಸ; ಭಾಭ-ಗಣಿಗಳು; ಲೀಗಿನ ಮಿ॥ ಲಿಯಾಖತ್ ಅಲಿಖಾನ-ಹಣಕಾಸು; ಚುಂದ್ರೀಘರ್-ವಾಣಿಜ್ಯ ಅಬ್ದುಲ್ ರಬ್ ನಿಸ್ತಾರ್-ವ್ಯವಹಾರ, ಅಂಚೆ; ಘಜನ್ಫರ್ ಅಲಿಖಾನ್-ಆರೋಗ್ಯ; ಜೋಗೇಂದ್ರನಾಥ ಮಂಡಲ್-ಶಾಸನಾಂಗ. ಕೇಂದ್ರ ಸರ್ಕಾರದ ವ್ಯವಹಾರಗಳಲ್ಲಿ ಸಂಪೂರ್ಣ ಸಹಕಾರವನ್ನು ನೀಡುವ ಬಗ್ಗೆ ಲೀಗು ಕಾಂಗ್ರೆಸ್ಸಿಗೆ ಭರವಸೆ ಇತ್ತಿದೆಯೆಂದು ತಿಳಿದು ಬಂದಿದೆ

ಬಂಗಾಳಾ ಮಹಿಳೆಯರ ಅಗ್ನಿ ಪ್ರವೇಶ

ನವಖಾಲಿಯಲ್ಲಿ ಅನೇಕ ಸ್ತ್ರೀಯರು ಮಾನ ರಕ್ಷಣೆಗಾಗಿ ಅಗ್ನಿಪ್ರವೇಶ ಮಾಡಿದರು,ಕೆಲವರು ನೇಣುಹಾಕಿಕೊಂಡರು ಮತ್ತೆ ಕೆಲವರು ವಿಷಪಾನ ಮಾಡಿ ಇಹಲೋಕವನ್ನು ತ್ಯಜಿಸಿದರು-ಎಂದು ತಿಳಿದುಬಂದಿದೆ ರಜಪೂತ ರಮಣಿಯರಂತೆ ಬಂಗಾಳ ಮಹಿಳೆಯರೂ, ಮಾನ ಸಂರಕ್ಷಣೆಗಾಗಿ ಜೋಹರ್ ಪದ್ಧತಿಯನ್ನು ಅನುಸರಿಸಿದರೆಂದು ವರ್ಣಿಸಲಾಗಿದೆ.

ವರದಕ್ಷಿಣೆ ನಿಷೇಧ

ಮದ್ರಾಸ್ ಪ್ರಾಂತ್ಯದಲ್ಲಿ ವರದಕ್ಷಿಣೆ ಪದ್ಧತಿಯನ್ನು ನಿಷೇಧಿಸುವ ಬಗ್ಗೆ ಒಂದು ಶಾಸನವನ್ನು ಜಾರಿಗೆ ತರಲು ಸರ್ಕಾರದ ಆಲೋಚನೆ ಸಾಗಿದೆ.

ಸಕ್ಕರೆ ಬೆಲೆ ಹೆಚ್ಚಿತು

ಕಾರ್ಖಾನೆಯಿಂದ ಪಡೆಯುವ ಸಕ್ಕರೆ ಬೆಲೆಯನ್ನು ಪಂಜಾಬ್ ಮತ್ತು ಸಿಂಧ್ ಪ್ರಾಂತ್ಯಗಳಲ್ಲಿ ಮಣ ೧ ಕ್ಕೆ ೧೫ ರೂ ೧೦ ಆಣೆಯಿಂದ ೨೪ ರೂಗಳಿಗೂ, ಇತರ ಪ್ರಾಂತ್ಯಗಳಲ್ಲಿ ೨೦ ರೂ ೧೪ ಆಣೆಗಳಿಗೂ ಹೆಚ್ಚಿಸಿರುವುದಾಗಿ ಕೇಂದ್ರ ಸರ್ಕಾರದ ಆಜ್ಞೆ ಹೊರಬಿದ್ದಿದೆ, ಅಲ್ಲದೆ ಮಣ ಒಂದಕ್ಕೆ ಆರೂ ೪ ಆಣೆ ಅಬ್ಕಾರಿ ಸುಂಕ ವಿಧಿಸಲಾಗಿದೆ

ಪುರಸಭಾಧ್ಯಕ್ಷರು

ಮೈಸೂರು ೨೬

ಪುರಸಭಾಧ್ಯಕ್ಷರಾಗಿರುವ ಶ್ರೀ ರಾಮಚಂದ್ರರಾವ್ ಬೊಂಭೋರೆಯವರು ಅನಾರೋಗ್ಯದ ಪ್ರಯುಕ್ತ ರಜ ಪಡೆದಿರುವುದರಿಂದ ಅವರ ಸ್ಥಾನಕ್ಕೆ ಆರ್ಥಿಕ ಸಮ್ಮೇಳನದ ಕಾರ್ಯದರ್ಶಿಗಳಾದ ಶ್ರೀ ಎಲ್ ಪಾದಿಥ ಪಡಿಯರನ್ನು ಪುರಸಭಾಧ್ಯಕ್ಷರನ್ನಾಗಿಯೂ, ನಗರಾಭಿವೃದ್ಧಿ ಸಮಿತಿ ಛೇರ್ಮನ್ನರಾಗಿಯೂ ಸರ್ಕಾರದವರು ನೇಮಿಸಿದ್ದಾರೆ ಈ ದಿನ ಅವರು ಛಾರ್ಜು ವಹಿಸಿಕೊಂಡರು

ಪ್ರೊ॥ ಕರ್ವೆಯವರ ಭೇಟಿ

ಬೆಳವಾಡಿಯಲ್ಲಿರುವ ಕಸ್ತೂರಿ ಬಾ ಶಿಬಿರಕ್ಕೆ ಪ್ರೊ॥ ಕರ್ವೆಯವರು ನಿನ್ನೆ ಭೇಟಿ ಇತ್ತು ಭಾರತದ ಪ್ರವಾಸದಲ್ಲಿ ತಾವು ಒಂದು ಉನ್ನತ ಸ್ಥಳದ ಅನುಭವವನ್ನು ಪಡೆದೆನೆಂದು ಅವರು ತಿಳಿಸಿದರು.

ಜಿಲ್ಲಾ ಕಾಂಗ್ರೆಸ್ ಸಮಿತಿ

ಮೈಸೂರು ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿಸಮಿತಿ ಸಭೆಯು ನಾಳೆ ಮಧ್ಯಾಹ್ನ ೧೨ ಗಂಟೆಗೆ ಪ.ಣಸೂರಿನಲ್ಲಿ ನಡೆಯುತ್ತದೆ ಸಮಿತಿ ಸದಸ್ಯರುಗಳೂ, ತಾಲ್ಲೂಕು ಕಾಂಗ್ರೆಸ್ ಸಮಿತಿ ಅಧ್ಯಕ್ಷರೂ ಮತ್ತು ಕಾರ್ಯದರ್ಶಿಗಳೂ ಈ ಸಭೆಗೆ ತಪ್ಪದೆ ಹಾಜರಾಗಬೇಕೆಂದು ಕಾರ್ಯದರ್ಶಿಗಳು ಕೋರಿದ್ದಾರೆ

ಉಪನ್ಯಾಸ

ನಾಳೆ ಸಾಯಂಕಾಲ ವಾಣಿವಿಲಾಸ ಮೊಹಲ್ಲಾ ಶ್ರೀ ರಾಮಕೃಷ್ಣಾಶ್ರಮದಲ್ಲಿ ಸ್ವಾಮಿ ಸೋಮನಾಥಾನಂದರು ಭಗವದ್ಗೀತೆಯ ಮೇಲೆ ಉಪನ್ಯಾಸ ಮಾಡುವರು.

ಹರಿಕಥೆ

ಶ್ರೀಮನ್ಮಹಾರಾಜರವರ ಸಂಸ್ಕೃತ ಪಾಠಶಾಲೆಯಲ್ಲಿ ಪಂಡಿತ ಮಂಡಲದ ಆಶ್ರಯದಲ್ಲಿ ಸೋಸಲೆ ನರಸೀಪುರದ ಅಧ್ಯಾಪಕ್ಷ ಕಾರ್ಯಾಲಯದ ಸೆಕ್ರೆಟರಿಗಳಾದ ಶ್ರೀ ನಂಜಪ್ಪ ಭಾಗವತರು, ರಾಜಸೇವಾಸಕ್ತ ಶ್ರೀ ಜಂಬಳೆ ಸುಬ್ರಹ್ಮಣ್ಯ ಐಯ್ಯರ್‌ರವರ ಅಧ್ಯಕ್ಷತೆಯಲ್ಲಿ ಬಲಿಚಕ್ರವರ್ತಿ ಎಂಬ ಹರಿಕಥೆಯನ್ನು ಮಾಡುತ್ತಾರೆ ಸರ್ವರಿಗೂ ಸ್ವಾಗತವಿದೆ

ಗಾಂಧಿಜಿ ಮಗನ ದಸ್ತಗಿರಿ

ದಕ್ಷಿಣ ಆಫ್ರಿಕಾದಲ್ಲಿ ಪತ್ರಿಕೋದ್ಯೋಗಿಗಳಾಗಿರುವ ಗಾಂಧೀಜಿಯವರ ಹಿರಿ ಮಕ್ಕಳಾದ ಶ್ರೀ ಮಣಿಲಾಲ್ ಗಾಂಧಿಯವರು ಅಲ್ಲಿನ ಸತ್ಯಾಗ್ರಹದಲ್ಲಿ ಮೊನ್ನೆ ದಸ್ತಗಿರಿ ಮಾಡಲ್ಪಟ್ಟಿದ್ದಾರೆ

ಬಂಗಾಳಾ ದುರಂತಕ್ಕೆ ಲೀಗೇ ಕಾರಣ

ಬಂಗಾಳದಲ್ಲಿ ನಡೆದಿರುವ ಅನಾಗರಿಕ ಮತ್ತು ಪಾಶವೀ ಕೃತ್ಯಗಳು ಗೌರವಸ್ಥರಾದ ಸಕಲ ಮಾನವರಿಗೂ ನಾಚಿಕೆ, ಅಸಹ್ಯ ಮತ್ತು ಉದ್ರೇಕಗಳನ್ನು ಉಂಟುಮಾಡುವುವು; ಮುಸ್ಲಿಂ ಲೀಗು ಹಲವು ವರ್ಷಗಳಿಂದ ಅನುಸರಿಸುತ್ತಿರುವ ದ್ವೇಷ, ಘರ್ಷಣೆ ಮತ್ತು ಹಿಂಸೆಯ ಬೋಧನೆಗಳ ಪರಿಣಾಮವೇ ಇದು; ಇದಕ್ಕೆ ಬಂಗಾಳಾ ಸರ್ಕಾರ, ಅಲ್ಲಿನ ಗವರ್ನರ್ ಮತ್ತು ವೈಸರಾಯರು ಉತ್ತರವಾದಿಗಳು—ಎಂಬುದಾಗಿ ದಿಹಲಿಯಲ್ಲಿ ನಡೆದಿದ್ದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನಿರ್ಣಯಿಸಿ ದುರಂತಗಳ ಬಗ್ಗೆ ತನ್ನ ಗಾಬರಿ ಮತ್ತು ವ್ಯಸನವನ್ನು ವ್ಯಕ್ತಪಡಿಸಿರುತ್ತದೆ

ಜ॥ ಸ್ಮಟ್ಸರಿಗೆ ಪ್ರಥಮ ಸೋಲು

ದಕ್ಷಿಣ ಆಫ್ರಿಕದ ಮೇಲೆ ಭಾರತದ ಪ್ರತಿನಿಧಿಗಳು ಸಂಯುಕ್ತ ರಾಷ್ಟ್ರ ಸಭೆಯ ಮುಂದೆ ಮಂಡಿಸಿರುವ ದೂರನ್ನು ಸಭೆಯ ಮುಂದೆ ಚರ್ಚಿಸಲಾಗದೆಂದು ಜ॥ ಸ್ಮಟ್ಸರು ನಿನ್ನೆ ಸಮಿತಿಯಲ್ಲಿ ವಾದಿಸಿದರು. ಅದನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂಬ ಭಾರತ ಪ್ರತಿನಿಧಿಯ ವಾದಕ್ಕೆ ರಷ್ಯ ಮತ್ತು ಚೀಣಾ ಪ್ರತಿನಿಧಿಗಳು ಬೆಂಬಲವಿತ್ತರು ೫-೨ ಓಟುಗಳಿಂದ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ತೀರ್ಮಾನಿಸಲಾಯಿತು.

ಗುಮಾಸ್ತರ ಸಂಬಳ ಹೆಚ್ಚಿತು

ಮದ್ರಾಸ್ ಪ್ರಾಂತ್ಯದ ಎಲ್ಲಾ ಜಾತಿ ಮಾಲಿಗಳಿಗೂ, ಅವರ ಸಂಬಳವನ್ನು ಶೇಕಡ ೨೫ ರಷ್ಟು ಹೆಚ್ಚಿಸಲಾಗಿದೆಯೆಂದು ಮದ್ರಾಸ್ ಸರ್ಕಾರ ಪ್ರಕಟಿಸಿದೆ.

ಪಂಜಾಬಿನಲ್ಲಿ ಬಿಡುಗಡೆ

ಪಂಜಾಬಿನಲ್ಲಿ ಇನ್ನೂ ಬಂಧಿತರಾಗಿ ಸೆರೆಮನೆಯಲ್ಲೇ ಉಳಿದಿದ್ದ ರಾಮಸ್ವರೂಪ್, ಅಜಿತ್‌ಸಿಂಗ್ ಮತ್ತು ರಾಂಜೀಲಾಲ್ ಬಂಧು ಎಂಬ ಮೂವರು ರಾಜಕೀಯ ಬಂದಿಗಳನ್ನು ಬಿಡುಗಡೆ ಮಾಡಲು ಸರ್ಕಾರದ ಆಜ್ಞೆಯಾಗಿದೆ

ವಿದ್ಯಾರ್ಥಿಗಳ ಸಭೆ

ನಂಜನಗೂಡು ೨೬

ನಾಳೆ ಸಂಜೆ ೫ ಗಂಟೆಗೆ ಹೈಸ್ಕೂಲ್ ಬಯಲಂಗಣದಲ್ಲಿ ಹಳೇ ವಿದ್ಯಾರ್ಥಿಗಳ ಸಭೆಯನ್ನು ಏರ್ಪಡಿಸಲಾಗಿದೆ ಎಲ್ಲಾ ಹಳೇ ವಿದ್ಯಾರ್ಥಿಗಳಿಗೂ ಪ್ರವೇಶವುಂಟು

ಸ್ವತಂತ್ರ ಉಮೇದುವಾರರು

ಮೈಸೂರು ೨೬

ಈ ಕೆಳಗೆ ಕಂಡವರೂ ಪೌರ ಸಭೆಯ ಚುನಾವಣೆಗೆ ಈ ದಿನ ಅರ್ಜಿ ಸಲ್ಲಿಸಿರುತ್ತಾರೆ. ಶ್ರೀಗಳಾದ ಎಂ.ಎಲ್. ರಾಮಸ್ವಾಮಿ, ಎ ಕೆ ರಂಗರಾವ್, ಡಿ. ಸುಮಿತ್ರ, ಎಸ್. ರಾಮ ರಾವ್, ಮೀರ್ ನೂರ್ ಹುಸೇನ್, ದೀನ ಪ್ರಕಾಶ್, ಟಿ ನಾರಾಯಣ, ಟಿ.ಎಸ್. ರಾಜಗೋಪಾಲಯ್ಯಂಗಾರ್, ಎ. ವೆಂಕಟೇಶಯ್ಯ, ಬಿ ಸುಬ್ಬಣ್ಣ, ಡಾ॥ ಎ ವಿ ರಂಗರಾವ್, ಬಿ.ಆರ್. ಲಕ್ಷ್ಮಣ ಶೆಟ್ಟಿ, ರಾವ್ ಬಹದ್ದೂರ್ ಎಂ. ರಾಮಸ್ವಾಮಿ, ಎಸ್. ಕೃಷ್ಣಯ್ಯಂಗಾರ್ ತಮ್ಮಯ್ಯ, ಜಿ ಶ್ರೀನಿವಾಸಯ್ಯಂಗಾರ್, ಪಿ ನಟರಾಜ, ಮಹಮದ್ ಹಿದಾಯತುಲ್ಲಾ, ಜಂಗಂ ಸೇಟ್

ಸಾಧ್ವಿ

ತಾ॥ ೨೬-೧೦-೪೬ ಶನಿವಾರ

ಕಾಂಗ್ರೆಸ್ಸಿಗೆ ಓಟು ಕೊಡಿ!

ರಾಜಧಾನಿಯಲ್ಲಿ ಬರುವ ತಿಂಗಳು ನಡೆಯಲಿರುವ ಪೌರಸಭಾ ಚುನಾವಣೆಗೆ ಕಾಂಗ್ರೆಸ್ಸಿನ ಪರವಾಗಿ ಎಲ್ಲಾ ಸ್ಥಾನಗಳಿಗೂ ಈ ದಿನ ಉಮೇದುವಾರರನ್ನು ನಿಲ್ಲಿಸಲಾಗಿದೆ. ಈ ಸಂದರ್ಭದಲ್ಲಿ ಪುರನಿವಾಸಿಗಳು ಸದರಿ ಉಮೇದುವಾರರಿಗೆ ಬೆಂಬಲವನ್ನು ನೀಡಿ ಮತ್ತೊಮ್ಮೆ ತಮ್ಮ ಅಖಂಡವಾದ ಕಾಂಗ್ರೆಸ್ಸಿನ ಪ್ರೇಮವನ್ನು ಪ್ರಕಾಶಪಡಿಸಬೇಕೆಂದು ನಾವು ಬೇಡುತ್ತೇವೆ.

ಪೌರಸಭೆಯ ಚುನಾವಣೆಗಳಲ್ಲಿ ಕಳೆದ ಆರು ವರ್ಷಗಳಿಂದಲೂ ರಾಜಧಾನಿಯ ನಿವಾಸಿಗಳು ಕಾಂಗ್ರೆಸ್ಸಿಗೆ ಅದ್ವಿತೀಯವಾದ ಯಶಸ್ಸನ್ನು ಗಳಿಸಿ ಕೊಟ್ಟಿರುತ್ತಾರೆ. ಇಲ್ಲಿ ಕಾಂಗ್ರೆಸ್ಸಿಗೆ ದೊರಕಿರುವ ಅಖಂಡ ವಿಜಯವು ಇತಿಹಾಸದಲ್ಲೇ ಪ್ರಾಮುಖ್ಯವಾದುದಾಗಿದೆ. ನಿಲ್ಲಿಸಿದ್ದ ಉಮೇದುವಾರರನ್ನೆಲ್ಲಾ ಸಂಪೂರ್ಣವಾಗಿ ವಿಜಯಗೊಳಿಸಿದ ಕೀರ್ತಿಯು ಇದುವರೆಗೆ ಎಲ್ಲಿಯೂ ಕಂಡು ಕೇಳರಲಿಲ್ಲ. ಈ ನಗರವು ಅಂತಹ ಕಾರ್ಯಸಾಧನೆಯನ್ನು ಮಾಡಿ ಮಹಾತ್ಮ ಗಾಂಧಿಯವರ ಮತ್ತು ಇಡೀ ದೇಶದ ಮನ್ನಣೆಯನ್ನು ಪಡೆಯಿತು. ಈ ಮನ್ನಣೆಗೆ ಮೈಸೂರಿನ ಪುರನಿವಾಸಿಗಳೆಲ್ಲರೂ ಪಾತ್ರರು.

ಎರಡಾವರ್ತಿ ನೂರಕ್ಕೆ ನೂರರಷ್ಟು ವಿಜಯವನ್ನು ಹೊಂದಿದ ಕಾಂಗ್ರೆಸ್ಸು ಇಂದು ಮೂರನೇ ಬಾರಿ ಅದೇ ಪ್ರಯತ್ನದಲ್ಲಿ ಮುಂದಡಿಯಿಟ್ಟಿರುತ್ತದೆ. ನಗರದ ನಿವಾಸಿಗಳು ತಮ್ಮ ಅಚಲವಾದ ಕಾಂಗ್ರೆಸ್ ಪ್ರೇಮವನ್ನು ಈ ಬಾರಿಯೂ ವ್ಯಕ್ತಗೊಳಿಸಿ ಕಾಂಗ್ರೆಸ್ಸಿಗೆ ಅಖಂಡ ದಿಗ್ವಿಜಯವನ್ನು ದೊರಕಿಸಿಕೊಡಬೇಕೆಂದು ನಾವು ಬೇಡುತ್ತೇವೆ.

ಇಡೀ ಭರತಖಂಡದಲ್ಲಿ ಕಾಂಗ್ರೆಸ್ಸು ಇತರ ಎಲ್ಲ ಸಂಸ್ಥೆಗಳಿಗಿಂತಲೂ, ಶಿಸ್ತು, ವ್ಯವಸ್ಥೆ, ತ್ಯಾಗ ಮತ್ತು ಸೇವಾಕಾಂಕ್ಷೆಯಿಂದ ಕೆಲಸ ಮಾಡುತ್ತಿದೆಯೆಂಬುದನ್ನು ಸಕಲರೂ ಅಂಗೀಕರಿಸಿರುವರು. ಅದರ ಅನುವರ್ತಿಯಾಗಿಯೇ ಮೈಸೂರು ಕಾಂಗ್ರೆಸ್ಸೂ ಸಹ, ಸಂಸ್ಥಾನದ ಪ್ರಜೆಗಳ ಸೇವೆಯನ್ನು ಮಾಡಲು ತೊಡಗಿರುತ್ತದೆ.

ಸಂಸ್ಥೆಯ ಪರವಾಗಿ ಚುನಾವಣೆಗಳಲ್ಲಿ ಉಮೇದುವಾರರನ್ನು ನಿಲ್ಲಿಸುವ ಪದ್ಧತಿಯು ಈಚೆಗೆ ನಮ್ಮ ದೇಶದಲ್ಲಿ ಹೆಚ್ಚು ಹೆಚ್ಚಾಗಿ ಜಾರಿಗೆ ಬರುತ್ತಿದೆ. ಸಂಸ್ಥೆಗಳಿಗೆ ನಿರ್ದಿಷ್ಟವಾದ ಧ್ಯೇಯ, ಹಕ್ಕೋಟ, ಶಿಸ್ತು ಮತ್ತು ಕಾರ್ಯಕ್ರಮಗಳು ಇರುತ್ತವೆ. ಅವುಗಳ ಖಂಡನೆ ಅಥವಾ ಮಂಡನೆಗಾಗಿ ಮಹಾಜನರ ಅಭಿಪ್ರಾಯವನ್ನು ತಿಳಿದುಕೊಳ್ಳುವುದು ಚುನಾವಣೆಗಳ ಒಂದು ಮುಖ್ಯ ಉದ್ದೇಶ. ವ್ಯಕ್ತಿಗಳಿಗೆ ಈ ಬಗೆಯ ಹಕ್ಕೋಟಗಳಾಗಲೀ ಶಿಸ್ತು ವ್ಯವಸ್ಥೆಗಳಾಗಲೀ ಇರುವುದಿಲ್ಲ. ಅವರು ಸ್ವತಂತ್ರರೆಂದು ಅವರೇ ಹೇಳಿಕೊಳ್ಳುವರು ಅವರು ಯಾರಿಗೂ ಉತ್ತರವಾದಿಗಳಲ್ಲ. ಆದುದರಿಂದ ವ್ಯಕ್ತಿಗಳಿಗಿಂತಲೂ, ಸಂಸ್ಥೆಗಳಿಗೇ ಚುನಾವಣೆಗಳಲ್ಲಿ ಹೆಚ್ಚಿನ ಪುರಸ್ಕಾರ ದೊರೆಯಬೇಕಾದುದು ಅಂಗೀಕೃತವಾಗಿರುವ ಪದ್ಧತಿ. ಆದ್ದರಿಂದ ಸಂಸ್ಥೆಯ ಮೂಲಕ ನಿಲ್ಲುವ ಉಮೇದುವಾರರಿಗೇ ಮಹಾಜನರು ಬೆಂಬಲ ನೀಡಬೇಕೆಂದು ನಾವು ಮತ್ತೊಮ್ಮೆ ಕೋರುತ್ತೇವೆ

ಈಗ ಭರತಖಂಡದಲ್ಲಿ ಕಾಂಗ್ರೆಸ್ ಮಹಾಸಭೆಯು ಸ್ವಾತಂತ್ರ್ಯ ಸಾಧನೆಯ ಮಹಾಪ್ರಯತ್ನದಲ್ಲಿ ಅಡಿಯಿಟ್ಟಿರುತ್ತದೆ. ಅದಕ್ಕೆ ಸರ್ವವಿಧದಲ್ಲಿಯೂ ನೆರವಾಗುವುದು ಸಕಲ ದೇಶಾಭಿಮಾನಿಗಳ ಕರ್ತವ್ಯ. ಮೈಸೂರು ಕಾಂಗ್ರೆಸ್ಸಿನವರು ಕೈಗೊಂಡಿರುವ ಕಾರ್ಯಕ್ರಮಗಳೂ ಸಹ ಅಖಿಲ ಭಾರತ ಕಾಂಗ್ರೆಸ್ ಮಹಾಸಭೆಯ ಕಾರ್ಯ ಸಾಧನೆಯ ಅಂಗಗಳಾಗಿಯೇ ಇರುತ್ತವೆ. ಆದುದರಿಂದ ನಮ್ಮ ನಗರ ಬಾಂಧವರು ಈ ಸಾರಿಯೂ ಕಾಂಗ್ರೆಸ್ ಉಮೇದುವಾರರಿಗೇ ಬೆಂಬಲ ವಿತ್ತು ತಮ್ಮ ದೇಶ ಪ್ರೇಮವನ್ನು ಪ್ರಕಾಶಪಡಿಸಲೆಂದು ನಾವು ಹಾರೈಸುತ್ತೇವೆ

ಬೂಂಡಿಯಲ್ಲಿ ಸುಧಾರಣೆ

ಚುನಾಯಿತ ಪ್ರತಿನಿಧಿಗಳ ಬಹುಮತವಿರುವ ಶಾಸನ ಸಭೆಯನ್ನು ರಚಿಸಿ, ಹಾಗೂ ಪ್ರತಿನಿಧಿಗಳೇ ಹೆಚ್ಚಾಗಿರುವಂತಹ ಸುಧಾರಣಾ ಸಮಿತಿಯನ್ನು ನೇಮಿಸುವುದಾಗಿ ಬೂಂದೀ ಸಂಸ್ಥಾನದ ಮಹಾರಾಜರು ದೀಪಾವಳಿ ದಿನ ಘೋಷಿಸಿದ್ದಾರೆ.

ಫ್ರಾನ್ಸ್ ಗಡಿಯಲ್ಲಿ ಕೋಟೆಗಳ ನಿರ್ಮಾಣ

ಫ್ರಾನ್ಸ್ ಸ್ಪೇನ್ ಗಡಿ ಪ್ರದೇಶದಲ್ಲಿ ಫ್ರಾಂಕೋ, ಜರ್ಮನಿಯ ಸೀಗ್ ... ಲೈನಿನ ಮಾದರಿಯನ್ನನುಸರಿಸಿ ... ಕೋಟೆ ಕೊತ್ತಲುಗಳನ್ನು ನಿರ್ಮಿಸು... ವುದಾಗಿ ತಿಳಿದುಬಂದಿದೆ.

ಗುಪ್ತ ವಿದ್ಯಾ ನಿಪುಣ
ಮಾಯಾಲೋಕ ನಿರ್ಮಾ...
ಪ್ರೊಫೆಸರ್
ಎಸ್. ಘೋಷ್
M.C L (Lond...
ಇವರ
ಅದ್ಭುತ, ಅತಿ ಚಮತ್ಕಾರ ದೃಶ್ಯಗಳ,
ಸಜೀವ ಸ್ತ್ರೀಯ ನಾಲಗೆಯನ್ನು
ತುಂಡರಿಸಿ ಕೂಡಿಸುವುದು!!
ಸಂಕಲೆಗಳ ಬಂಧನದಲ್ಲಿದ್ದರೂ ಬಿ...
ವಿಮುಕ್ತರಾಗಿ ಓಡಾಡುವುದು!
ಸಜೀವ ವ್ಯಕ್ತಿಯನ್ನು ಗಾಳಿಯ...
ತೂಗಿ ಬಿಡುವುದು!!
ಅಪೂರ್ವ ಸಮಾರಂಭ:—
ಮೈಸೂರು ಟೌನ್ ಹಾಲಿನ...
ಸಂಜೆ 6-30 ಕ್ಕೆ : ರಾತ್ರಿ 1...
ಪ್ರವೇಶ ದರಗಳು:— 5-0-0, 2-...
1-2-0, 0-9-0, 0-...

Edited printed and published by A. R. Nagarajan at the Sadhvi P... D. Subbiah Road, Mysore

OPERA TALKIES
23-10-46 ರಿಂದ
ಪ್ರತಿ ದಿನ ಮೂರು ಆಟಗಳು
ಶ್ರೀ ಮುರುಗನ್
(ತಮಿಳು)
ಪಾತ್ರ:-ಹೊನಪ್ಪ ಭಾಗವತರ್, ಜೀವರತ್ನಂ, ಮಾಲತಿ, ರಾಮಚಂದ್ರನ್, ಕಾಳಿ ಎನ್. ರತ್ನಂ ಮುಂತಾದವರು
Morning Shows for 4 days
From 25-10-46
Forever & a day

ಮೈಸೂರು ಸ್ಟೇಟ್ ರೈಲ್ವೆ

ಲೋಕೋ ಮತ್ತು ಕಾರ್ ಸೂಪರಿಂಟೆಂಡೆಂಟರವರ ಆಫೀಸ್
ಮೈಸೂರು ಸೌತ್

ನೋಟಿಫಿಕೇಷನ್ : ತಾ॥ 12-10-46

ಮೈಸೂರು ಸೌತಿನಲ್ಲಿರುವ ಮೈಸೂರು ಸ್ಟೇಟ್ ರೈಲ್ವೆ ಸೆಂಟ್ರಲ್ ವರ್ಕ್‌ಷಾ... ಕ್ಯಾಂಟೀನ್ ಮತ್ತು ಇಂಡಿಯನ್ ರಿಫ್ರೆಷ್‌ಮೆಂಟ್ ರೂಮನ್ನು ನಡೆಸುವ ಕಾಂಟ್ರಾ... ಟೆಂಡರು ನೋಟೀಸು ;

೧. ತಾ॥ 1-1-47 ರಿಂದ ತಾ॥ 31-12-47 ರ ವರೆಗೆ ಅಥವಾ ಟೆಂಡರು ಒ... ಕೊಂಡ ತಾರೀಖಿನಿಂದ, ಒಂದು ವರ್ಷ ಕಾಲ ಕ್ಯಾಂಟೀನ್ ಮತ್ತು ಇಂಡಿಯನ್ ರಿಫ್ರೆ... ಮೆಂಟ್ ರೂಮನ್ನು ನಡೆಸುವ ಮೇಲ್ಕಂಡ ಕಾಂಟ್ರಾಕ್ಟಿಗಾಗಿ ಕಸಬುದಾರ ಕೆಟಗ... ಳಿಂದ ಸೀಲಾದ ಟೆಂಡರುಗಳು 6-11-46 ನೇ ತಾ॥ ಮಧ್ಯಾಹ್ನ 4 ಘಂಟೆಯ ... ಕೆಳಗೆ ಸಹಿ ಮಾಡಿದವರ ಆಫೀಸಿನಲ್ಲಿ ಸ್ವೀಕರಿಸಲ್ಪಡುತ್ತವೆ. ೨. "ಮೈಸೂರು ಸೌ... ನಲ್ಲಿರುವ ಮೈಸೂರು ಸ್ಟೇಟ್ ರೈಲ್ವೆ ಸೆಂಟ್ರಲ್ ವರ್ಕ್‌ಷಾಪಿನ ಕ್ಯಾಂಟೀ... ಮತ್ತು ಇಂಡಿಯನ್ ರಿಫ್ರೆಷ್‌ಮೆಂಟ್ ರೂಮನ್ನು ನಡೆಸುವ ಕಾಂಟ್ರಾ... ಗಾಗಿ ಟೆಂಡರು" ಎಂದು ಲಕೋಟೆಯ ಮೇಲೆ ಬರೆದು ಲೋಕೋ ಮತ್ತು ... ಸೂಪರಿಂಟೆಂಡೆಂಟ್, ಮೈಸೂರು ಸ್ಟೇಟ್ ರೈಲ್ವೆ, ಮೈಸೂರು ಸೌತ್"ರವರ ವಿಳಾ... ಬರೆದ ಸೀಲಾದ ಕವರುಗಳಲ್ಲಿ ಟೆಂಡರುಗಳನ್ನು ಕಳುಹಿಸಬೇಕು. ೩. ಪ್ರತಿಯೊ... ಟೆಂಡರ್ ಜೊತೆಯಲ್ಲಿಯೂ ೨೦೦ ರೂ ಗಳನ್ನು [ಇನ್ನೂರು ರೂಪಾಯಿಗಳು ನಗ... ನಗದಾಗಿ ಠೇವಣಿಗಾಗಿ ಕೆಳಗೆ ಕಂಡ ಆಫೀಸಿಗೆ ಕಳುಹಿಸಬೇಕು. ಅಂಗೀಕಾರವಾ... ಟೆಂಡರುದಾರರುಗಳಿಗೆ ಅದನ್ನು ವಾಪಸು ಕೊಡಲಾಗುವುದು. ಅಂಗೀಕರಿಸಲ್ಪಟ್ಟ ಟೆಂ... ರುದಾರರ ಹಣವನ್ನು ಸೆಕ್ಯೂರಿಟಿ ಡಿಪಾಜಿಟ್ಟಾಗಿ ಇಟ್ಟುಕೊಳ್ಳಲಾಗುವುದು. ೪. ಟೆಂ... ರಿನ ಹಣದ ಮಾಯಿದೆ ಒಂದುವರ್ಷ ಇದನ್ನು, ಕ್ಯಾಂಟೀನ್ ಮತ್ತು ಇಂಡಿ... ರಿಫ್ರೆಷ್‌ಮೆಂಟ್ ರೂಮನ್ನು ನಡೆಸುವುದಕ್ಕಾಗಿ ಮುಂಗಡವಾಗಿ, ಈ ಇಲಾಖೆಗೆ ಜ... ಮಾಡಬೇಕು. ಈ ಮೊಬಲಗನ್ನು ಖಚಿತವಾಗಿ ತಿಳಿಸಬೇಕು ೫ ತಿಂಡಿ ಪದಾ... ಗಳು, ಅವುಗಳ ಮಾರಾಟದ ದರ ಇವುಗಳ ಪಟ್ಟಿಯೊಂದನ್ನೂ ಸಹ ಕಳುಹಿಸಬೇ... ೬. ಷೆಡ್ಯೂಲ್ ಕರಾರಿನ ಷರತ್ತುಗಳನ್ನೊಳಗೊಂಡ ನಮೂದಾದ ಟೆಂಡರ್ ಫಾರಂಗಳ... ಕೆಳಗೆ ಸಹಿ ಮಾಡಿದವರ ಆಫೀಸಿನಿಂದ, ಪ್ರತಿ ಒಂದಕ್ಕೆ ೧ ರೂ ನಂತೆ ಕೊಟ್ಟು ಪಡೆ... ಬಹುದು. ೭. ಎಲ್ಲಕ್ಕಿಂತಲೂ ಹೆಚ್ಚಾದ ಟೆಂಡರನ್ನು ಅಂಗೀಕರಿಸುವುದಕ್ಕಾಗ... ಅಥವಾ ಅಂಗೀಕರಿಸದೇ ಇರುವ ಟೆಂಡರುಗಳಿಗೆ ಕಾರಣ ಕೊಡುವುದಕ್ಕಾಗಲೀ ಇಲಾ... ಯವರು ಬದ್ಧರಾಗಿರುವುದಿಲ್ಲ. ೮ ಟೆಂಡರನ್ನು ಅಂಗೀಕರಿಸಿದಮೇಲೆ ಟೆಂಡರುದಾ... ಕರಾರಿಗೆ ಹಿಂಜರಿದರೆ ಅವರ ಟೆಂಡರ್ ಡಿಪಾಜಿಟ್ಟು ಹಣವನ್ನು ಸರ್ಕಾರಕ್ಕೆ ಮು... ಗೋಲು ಮಾಡಿಕೊಳ್ಳಲಾಗುವುದು.

ಎಂ ಚಲುವೇಅರಸ್,
ಲೋಕೋ ಮತ್ತು ಕಾರ್ ಸೂಪರಿಂಟೆಂಡೆ...
ಮೈಸೂರು ಸ್ಟೇಟ್ ರೈಲ್ವೆ, ಮೈಸೂರು ಸೌ...

ಐಟಿಯಾಲ್
TRADE ITL MARK
ಅತ್ಯುತ್ತಮವಾದ ಕ್ರಿಮಿ ನಾಶಿನಿ
ಕಾರ್ಬಾಲಿಕ್ ದ್ರಾವಕಕ್ಕಿಂತಲೂ ಆರರಷ್ಟು ಶಕ್ತಿಯುತವಾದದ್ದು ವಿಷ ಮಿಶ್ರಿತವಲ್ಲದ್ದು, ಸವೆಸದಿರುವುದು, ಕಲೆಯನ್ನು ಉಳಿಸದಿರುವುದು ಮತ್ತು ಆಹ್ಲಾದಕರವಾದ ವಾಸನೆಯುಳ್ಳದ್ದು ಕ್ರಿಮಿಗಳಿಗೆ ಐಟಿಯಾಲ್ ಮೃತ್ಯು ಪ್ರಾಯ; ಆದರೆ ಸೂಕ್ಷ್ಮ ಚರ್ಮಕ್ಕೆ ಯಾವ ಬಾಧೆಯನ್ನೂ ಉಂಟು ಮಾಡುವುದಿಲ್ಲ ಶಸ್ತ್ರಮತ್ತು ಇತರ ಚಿಕಿತ್ಸೆಗಳಲ್ಲಿಯೂ ಮನೆ ಮತ್ತು ಸ್ವಂತ ಉಪಯೋಗಕ್ಕೂ ಹಳೆ ಕಾಲದ ಕ್ರಿಮಿ ನಾಶಕಗಳನ್ನು ಮೀರಿಸುತ್ತದೆ.
೪, ೮, ಮತ್ತು ೧೬ ಔನ್ಸ್ ಸೀಸೆಗಳಲ್ಲಿ ದೊರೆಯುತ್ತದೆ.
ಐ. ಟಿ. ಎಲ್. ತಯಾರಿ
—: ತಯಾರಿಸುವವರು :—
ಮೈಸೂರು ಇಂಡಸ್ಟ್ರಿಯಲ್ ಮತ್ತು ಟೆಸ್ಟಿಂಗ್ ಲ್ಯಾಬೊರೇಟರಿ, ಲಿಮಿಟೆಡ್
ಮಲ್ಲೇಶ್ವರಂ : : ಬೆಂಗಳೂರು.

ರಾಜ್ ಕಮಲ್, ಮೈಸೂರು,
24-10-46 ರಿಂದ ಅಮೋಘ 6 ನೇ ವಾರ
ವಾಹಿನಿಯವರ
ಸ್ವರ್ಗಸೀಮಾ
- ಪಾತ್ರ -
* ನಾಗಯ್ಯ, * ಜಯಮ್ಮ
* ಭಾನುಮತಿ
Morning Show at 10-30 A M From:—25 10 46
"SONG OF NIVEDA"

ರೋಜಿ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಭಾನುವಾರ ೨೭—೧೦—೪೬ [ಸಂಚಿಕೆ ೭೪

ತಿರುವಾಂಕೂರ್‌ನಲ್ಲಿ ಮಾರ್ಷಲ್ ಲಾ ಜಾರಿ

ಶ್ರೀಮನ್ಮಹಾರಾಜರವರು

ಮೈಸೂರು ೨೭

ಶ್ರೀಮನ್ಮಹಾರಾಜರವರು ಬರುವ ೪ ನೇ ತಾರೀಖು ಬೆಂಗಳೂರಿಗೆ ಪ್ರಯಾಣ ಬೆಳೆಸಿ ಅಲ್ಲಿ ಒಂದು ವಾರ ಇರುವರೆಂದು ತಿಳಿದು ಬಂದಿದೆ

ಧನಲಕ್ಷ್ಮೀ ಪೂಜೆ

ಮೊನ್ನೆ ದಿನ ನಗರದ ರಾಜ್‌ಕಮಲ್ ಸ್ಟೋರ್ಸಿನ ಮಾಲೀಕರಾದ ಶ್ರೀ॥ ಭಗವತ್ ಪ್ರಸಾದ್ ಗುಪ್ತರೂ, ಇಂದ್ರಭವನದ ಮಾಲೀಕರಾದ ಶ್ರೀ ಬಲದೇವಪ್ರಸಾದರೂ ದೀಪಾವಳಿ ಹಬ್ಬಕ್ಕಾಗಿ ಧನಲಕ್ಷ್ಮೀ ಪೂಜೆಯನ್ನಾಚರಿಸಿ ತಮ್ಮ ನೌಕರರುಗಳಿಗೆಲ್ಲಾ ಒಂದೊಂದು ತಿಂಗಳ ಬೋನಸ್ ಹಂಚಿದರು

ಸುಪ್ರಸಿದ್ಧ ಬಳೆ ವರ್ತಕರಾದ ಶ್ರೀ॥ ಹನೀಲ್‌ಚಂದ್ ಪುಕ್ ರಾಜರೂ, ಜಯ ಲಕ್ಷ್ಮೀ ಬ್ಯಾಂಗಲ್ ಸ್ಟೋರ್ಸಿನವರೂ, ಒಲಂಪಿಯಾ ಸಿನಿಮಾದವರೂ ಸಹ ಧನಲಕ್ಷ್ಮೀ ಪೂಜೆ. ಸಮಾರಂಭದಲ್ಲಿ ಅನೇಕ ಜನ ಮಹನೀಯರುಗಳನ್ನು ಆಹ್ವಾನಿಸಿ, ಎಲ್ಲರಿಗೂ ಫಲ, ಪುಷ್ಪ, ತಾಂಬೂಲಾದಿಗಳಿಂದ ಸತ್ಕರಿಸಿದರು

ಅಶೋಕಾ ರಸ್ತೆಯಲ್ಲಿರುವ ಮಹಾವೀರ್ ಸಿಲ್ಕ್ ಎಕ್ಸ್‌ಚೇಂಜ್ನವರು ಧನಲಕ್ಷ್ಮಿ ಪೂಜೆಯನ್ನು ನೆರವೇರಿಸಿದರು ಅನೇಕ ಜನ ಆಹ್ವಾನಿತರಾಗಿದ್ದರು ಆಹ್ವಾನಿತರೆಲ್ಲಾ ಗಂಧ, ಫಲ, ಪುಷ್ಪಗಳೊಡನೆ ಸತ್ಕರಿಸಿದರು

ವಿದ್ಯಾರ್ಥಿ ಕಾಂಗ್ರೆಸ್

ನವಂಬರ್ ೩ ಮತ್ತು ೩ ರಲ್ಲಿ ನಡೆಯುವ ಮೈಸೂರು ಕಾಂಗ್ರೆಸ್ ಅಧಿವೇಶನಕ್ಕೆ ನಗರ ವಿದ್ಯಾರ್ಥಿ ಕಾಂಗ್ರೆಸ್ ಪರವಾಗಿ ಸ್ವಯಂ ಸೇವಕರನ್ನು ಕಳುಹಿಸಿಕೊಡಲಾಗುವುದು. ಈ ಬಗ್ಗೆ ಇಂದಿನಿಂದ ಪ್ರತಿದಿನ ಸಂಜೆ ೫ ಗಂಟೆಗೆ ಸರಿಯಾಗಿ ಸುಬ್ಬರಾಯನ ಕೆರೆಯಲ್ಲಿ ಸ್ವಯಂ ಸೇವಕರುಗಳಿಗೆ ಶಿಕ್ಷಣ ಕೊಡಲಾಗುವುದು ಈವರೆವಿಗೆ ಸ್ವಯಂ ಸೇವಕರಾಗಲು ಹೆಸರು ಕೊಟ್ಟಿರುವವರೂ ಮತ್ತು ಹೊಸದಾಗಿ ಸೇರುವವರೂ ಪ್ರತಿದಿನ ಸಂಜೆ ೫ ಗಂಟೆಗೆ ಸುಬ್ಬರಾಯನಕೆರೆಗೆ ಬಂದು ಸೇರಬೇಕೆಂದು ಅಧ್ಯಕ್ಷರಿಂದ ಟಿ. ಎಸ್. ಪ್ರಸನ್ನೇಶರಾಯರು ಪ್ರಾರ್ಥಿಸಿದ್ದಾರೆ.

ವಿದ್ವಾನ್ ವೆಂಕಟಗಿರಿಯಪ್ಪನವರು

ಅನಾರೋಗ್ಯದ ನಿಮಿತ್ತ ಚಿಕಿತ್ಸೆ ಪಡೆಯುತ್ತಿದ್ದ ವೈಣಿಕ ಪ್ರವೀಣ ಶ್ರೀ॥ ವಿ. ವೆಂಕಟಗಿರಿಯಪ್ಪನವರು ಈಗ ಗುಣಮುಖರಾಗಿ ಮನೆಗೆ ಹಿಂದಿರುಗಿರುವರೆಂದು ತಿಳಿಸಲು ಸಂತೋಷಿಸುತ್ತೇವೆ.

ಪೌರಸಭೆಯ ಸಹಾನುಭೂತಿ

ಸ್ವಂ. ಸು. ಫೋ॥] ಬೆಂಗಳೂರು ೨೭

ನಿನ್ನೆ ಸಂಜೆ ಬೆಂಗಳೂರು ಪೌರಸಭೆಯ ಅಧಿವೇಶನದಲ್ಲಿ ಪೂರ್ವ ಬಂಗಾಳದ ಗಲಭೆಯನ್ನು ಖಂಡಿಸಿ, ನೊಂದವರಿಗೆ ಸಹಾನುಭೂತಿಯನ್ನು ತೋರುವ ನಿರ್ಣಯವನ್ನು ಅಂಗೀಕರಿಸಲಾಯಿತು. ಮೈಸೂರು ಕಾಂಗ್ರೆಸ್ ಅಧಿವೇಶನಕ್ಕಾಗಿ ಉಚಿತ ನಿರ್ಮಲೀಕರಣ ಸೌಲಭ್ಯಗಳನ್ನು ಒದಗಿಸಿಕೊಡುವಂತೆ ನಿರ್ಧರಿಸಲಾಯಿತು. ಹಾಗೆ ಆಸ್ಪತ್ರೆಯೊಂದನ್ನು ಕಟ್ಟಲು ಶ್ರೀ ಎ. ದಾಸಪ್ಪನವರು ಕೊಟ್ಟ ೩೦೦೦೦ ಸಾವಿರ ರೂಗಳ ದಾನವನ್ನು ಅಂಗೀಕರಿಸಲಾಯಿತು ಚಿತ್ರದುರ್ಗ ಮುಂತಾದ ಕ್ಷಾಮ ಪೀಡಿತ ಪ್ರದೇಶಗಳ ಹಳ್ಳಿಗಳಲ್ಲಿ ಸುಮಾರು ೭೩ ಸಾವಿರ ಜನಗಳಿಗೆ ಪೌರಸಭೆಯ ಪರವಾಗಿ ೨೦ ಸಾವಿರ ರೂಪಾಯಿನ ಬಟ್ಟೆಗಳನ್ನು ಹಂಚುವುದನ್ನು ಅಧ್ಯಕ್ಷರು ವಿವರಿಸಿದರು

ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಕಾಂಗ್ರೆಸ್ಸು ಭಾಗವಹಿಸಬಹುದು

ಪಾರ್ಲಿಮೆಂಟರಿ ಸಮಿತಿ ಅಧ್ಯಕ್ಷರ ಹೇಳಿಕೆ

ಮೈಸೂರು ಕಾಂಗ್ರೆಸ್ಸಿನ ಪಾರ್ಲಿಮೆಂಟರಿ ಉಪಸಮಿತಿಯ ಅಧ್ಯಕ್ಷರಾದ ಟಿ. ಸುಬ್ರಹ್ಮಣ್ಯರವರು ಈ ರೀತಿ ಹೇಳಿಕೆ ಇತ್ತಿದ್ದಾರೆ:-

ಸ್ಥಳೀಯ ಸಂಸ್ಥೆಗಳ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ಮೇಲೆ ಸ್ಪರ್ಧಿಸ ಬಹುದೇ ಕೂಡದೇ ಎಂಬ ವಿಚಾರವಾಗಿ ಅನೇಕ ಕಡೆಗಳಿಂದ ಕೇಳಿಕೆಗಳು ಬಂದಿವೆ ಸಾಧ್ಯವಾದ ಕಡೆಗಳಲ್ಲೆಲ್ಲಾ ನ್ಯಾಯ ವಿಧಾಯಕ ಸಭೆಗಳಿಗೂ ಸ್ಥಳೀಯ ಸಂಸ್ಥೆಗಳಿಗೂ ಸ್ಪರ್ಧಿಸಬೇಕೆಂಬುದು ಕಾಂಗ್ರೆಸ್ಸಿನ ನೀತಿ ಈ ನೀತಿಯೇ ಈಗಲೂ ಜಾರಿಯಲ್ಲಿದೆ. ಆದುದರಿಂದ ಎಲ್ಲೆಲ್ಲಿ ಸಾಧ್ಯವೋ, ಸೂಕ್ತವೋ ಅಲ್ಲೆಲ್ಲ ಕಾಂಗ್ರೆಸ್ ಉಮೇದುವಾರರನ್ನು ನಿಲ್ಲಿಸಬೇಕು ಇದಕ್ಕಾಗಿ ಸ್ಥಳೀಯ, ಕಾಂಗ್ರೆಸ್ ಸಮಿತಿ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿನ ಕಾಂಗ್ರೆಸ್ ಪಕ್ಷ (ಇದ್ದರೆ) ಜಿಲ್ಲಾ ಕಾಂ॥ ಅಧ್ಯಕ್ಷರ, ಆ ಜಿಲ್ಲೆಯ ವರ್ಕಿಂಗ್ ಕಮಿಟಿ ಸದಸ್ಯರ ಸಲಹೆ ಸಹಕಾರಗಳನ್ನು ಪಡೆದು ಉಮೇದುವಾರರನ್ನು ನಿಲ್ಲಿಸಿ ಚುನಾವಣಾ ಕಾರ್ಯವನ್ನು ವ್ಯವಸ್ಥೆಗೊಳಿಸಲು ಅಡ್‌ಹಾಕ್ ಸಮಿತಿಗಳನ್ನು ನೇಮಿಸಿ ಪಾರ್ಲಿಮೆಂಟರಿ ಉಪಸಮಿತಿಯ ಕಾರ್ಯದರ್ಶಿಗಳಿಗೆ ತಿಳಿಸಬೇಕು.

ಬಂಗಾಳದಲ್ಲಿ ಮಹಾತ್ಮರ ಪ್ರವಾಸ

ನೌಖಾಲಿ ಮತ್ತು ತಿಪ್ಪೇರಾ ಜಿಲ್ಲೆಗಳ ಪರಿಸ್ಥಿತಿಯನ್ನರಿಯಲು ಮಹಾತ್ಮ ಗಾಂಧಿಯವರು ಇಂದಿನಿಂದ ಬಂಗಾಳ ಜಿಲ್ಲೆಯಲ್ಲಿ ಒಂದು ವಾರಗಳ ಕಾಲ ಪ್ರವಾಸ ಮಾಡುವರು ರಕ್ಷಣಾ ಮಂತ್ರಿಗಳಾದ ಶ್ರೀ ಬಲದೇವ ಸಿಂಗರೂ ಸಹ ಬಂಗಾಳದ ಅನಾಹುತ ಪ್ರದೇಶಗಳಿಗೆ ಭೇಟಿಕೊಡಲು ನಾಳಿದ್ದು ಅಲ್ಲಿಗೆ ತೆರಳುವರು

ಮೇಘ ಸಂದೇಶ

ಬೆಜವಾಡದ ಮೈಸೂರು ಪಬ್ಲಿಷಿಂಗ್ ಹೌಸಿನಿಂದ ಪ್ರಕಟವಾಗಿರುವ ಮೇಘ ಸಂದೇಶವೆಂಬ ಕನ್ನಡ ಪದ್ಯ ಪುಸ್ತಕವನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ ಕಾಳಿದಾಸ ಮಹಾಕವಿಯಿಂದ ಸಂಸ್ಕೃತದಲ್ಲಿ ರಚಿತವಾಗಿರುವ ಇದನ್ನು ಶ್ರೀ ಎ ಎ. ಪನ್ನಲಾಲ್, ಕನ್ನಡ ಷಟ್ಪದೀ ರೂಪದಲ್ಲಿ ರಚಿಸಿದ್ದಾರೆ-ಬೆಲೆ ೦-೮ ಆ ಣೆ. ಕನ್ನಡಿಗರೆಲ್ಲರೂ ಪ್ರೋತ್ಸಾಹಿಸಬೇಕು

ಗಲಭೆಕಾರರ ಮೇಲೆ ಮೊಕದ್ದಮೆ

ಸ್ವಂ.ಸು.ಫೋ॥] [ಬೆಂಗಳೂರು ೨೭

ಬೆಂಗಳೂರು ದಂಡಿನಲ್ಲಿ ಕೆಲವು ದಿನಗಳ ಹಿಂದೆ ಗಲಭೆ ನಡೆಸಿದ ೨೯ ಜನರ ಮೇಲೆ ಅಲ್ಲಿನ ಸ್ಪೆಷಲ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮೊಕದ್ದಮೆ ಹೂಡಲಾಗಿದೆ. ನವೆಂಬರ್ ೮ ನೇ ತಾ॥ ವಿಚಾರಣೆಯಿದೆ.

‡ ಶಾಂತಿರಕ್ಷಣೆಯ ವಿಶೇಷವ್ಯವಸ್ಥೆಗಾಗಿ ಸರ್ಕಾರದವರು ಪೋಲೀಸ್ ಮುಖ್ಯಾಧಿಕಾರಿಗಳಿಗೆ ಹತ್ತು ಸಾವಿರ ರೂ ಗಳನ್ನು ಹೆಚ್ಚಾಗಿ ಒದಗಿಸುತ್ತಾರೆಂದು ತಿಳಿದು ಬಂದಿದೆ.

* ಹಿಂದೂಸ್ಥಾನದ ವಿವಿಧ ಪ್ರಾಂತಗಳ ಮಂತ್ರಿಗಳು ಸಧ್ಯದಲ್ಲಿಯೇ ಬೆಂಗಳೂರಿನಲ್ಲಿ ಸಭೆ ಸೇರಲಿರುವರೆಂದು ಗೊತ್ತಾಗಿದೆ.

* ಮಲ್ಲೇಶ್ವರದಲ್ಲಿ ಶ್ರೀಮನ್ಮಹಾರಾಜರವರಿಂದ ಬರುವ ೮ ನೇ ತಾ॥ ಸ್ಥಾಪಿತವಾಗಲಿರುವ ಆಸ್ಪತ್ರೆಯಲ್ಲಿ ಒಂದು ವಾರ್ಡನ್ನು ಕಟ್ಟಲು ಶ್ರೀ ದೇವರಾವ್ ಶಿವರಾಂರವರು ಹತ್ತು ಸಾವಿರ ರೂ ಯನ್ನು ಕೊಟ್ಟಿದ್ದಾರೆ.

* ದಿವಾನರು ಈ ದಿನ ರಾಜಧಾನಿಯಿಂದ ಇಲ್ಲಿಗೆ ಆಗಮಿಸಿದರು.

‡ ಬ್ರಿಟಿಷ್ ರೆಸಿಡೆಂಟರು ಪರಿವಾರ ಸಮೇತ ಮೂರು ವಾರ ಕಾಲ ಮಲೆನಾಡಿನಲ್ಲಿ ಪ್ರವಾಸ ಮಾಡಿ ಬರಲು ನಿನ್ನೆ ದಿನ ಪ್ರಯಾಣ ಬೆಳೆಸಿದರು.

† ಆಸ್ಟ್ರೇಲಿಯದ ವ್ಯಾಪಾರ ನಿಯೋಗ ಒಂದು ನವಂಬರ್ ೨೩ ನೇ ತಾ॥ ಮೈಸೂರಿಗೆ ಬರಲಿದೆ

§ ಚಿನ್ನದ ಗಣಿಗೆ ರಿಯಾಯಿತಿ ಸಮಿತಿಯ ಅಧ್ಯಕ್ಷತೆ ವಹಿಸಲು ನ್ಯಾಯಾಂಗ ಮಂತ್ರಿ ಮಿ॥ ಓ ಎಸ್ ಎ. ಪರೀಘರು ಕೋಲಾರಕ್ಕೆ ತೆರಳಿದ್ದಾರೆ

ಲೀಗಿನವರ ಅಧಿಕಾರ ಸ್ವೀಕಾರ

೪ ಜನ ಮುಸ್ಲಿಂ ಲೀಗಿನ ಸದಸ್ಯರುಗಳು ವೈಸರಾಯರ ಅಧ್ಯಕ್ಷತೆಯಲ್ಲಿ ನಡೆದ ಮಂತ್ರಿಮಂಡಲದ ಸಭೆಯಲ್ಲಿ ನಿನ್ನೆ ಬೆಳಗ್ಗೆ ರಾಜಭಕ್ತಿ ಪ್ರಮಾಣ ವಚನ ಸ್ವೀಕರಿಸಿ ಅಧಿಕಾರವನ್ನು ವಹಿಸಿಕೊಂಡರು ಐದನೆಯವರಾದ ಜೋಗೇಂದ್ರನಾಥ ಮಂಡಲರವರು ತಂತಿ ಮೂಲಕ ಅಧಿಕಾರ ವಹಿಸಿಕೊಂಡರು ಇದಕ್ಕೆ ಮುಂಚೆ ಅವರುಗಳು ಮಿ॥ ಜಿನ್ನಾರವರನ್ನು ಭೇಟಿ ಮಾಡಿದಾಗ ಅವರು ನೂತನ ಸಚಿವರುಗಳಿಗೆ ಶುಭಾಶಯಗಳನ್ನು ಕೋರಿದರು.

ಅಧಿಕಾರಿಗಳ ವರ್ಗಾವರ್ಗಿ

ಸ್ವಂ ಸು.ಫೋ॥] ಬೆಂಗಳೂರು ೨೭

ಚೀಫ್ ಸೆಕ್ರೆಟರಿಗಳಾದ ಶ್ರೀ ವೇದವ್ಯಾಸಾಚಾರ್ಯರು ಮೂರು ತಿಂಗಳು ರಜದ ಮೇಲೆ ಹೋಗುವರೆಂದೂ, ಈ ಕೆಳಗೆ ಕಂಡಂತೆ ಅಧಿಕಾರಿಗಳ ವರ್ಗಾವರ್ಗಿ ಆಗುವುದೆಂದೂ ಅಧಿಕೃತವಾದ ಆವರಣಗಳಲ್ಲಿ ಹೇಳಲಾಗುತ್ತಿದೆ ಡೆ॥ ಸೆಕ್ರೆಟರಿಗಳಾದ ಮಿ॥ ಜಾರಲ್ಸ್‌ನೋರಾನರವರು ಚೀ॥ ಸೆಕ್ರೆಟರಿ, ಶ್ರೀ ಸಿ ಎಂ ಹಜ್. ರಣಜೋಧ್ ಸಿಂಗ್ ಡೆ॥ ಸೆಕ್ರೆಟರಿ, ಶ್ರೀ ಜೆ ಬಿ. ಮಲ್ಲಾರಾಧ್ಯರು ಆರ್ಥಿಕ ಸಮ್ಮೇಳನದ ಸೆಕ್ರೆಟರಿ, ಶ್ರೀ ರಾಮಚಂದ್ರರಾವ್ ಬೊಂಥೋರೆ ರೆ॥ ಸೆಕ್ರೆಟರಿ, ಶ್ರೀ ನಿರಂಜನರಾಜೇ ಅರಸಿನವರು ಮೈಸೂರು ಜಿಲ್ಲಾಧಿಕಾರಿಗಳು

ನೆಹರೂರವರು ಕೇಂದ್ರ ಶಾಸನ ಸಭೆಯ ನಾಯಕರು

ಶೀಘ್ರದಲ್ಲಿಯೇ ಆರಂಭವಾಗಲಿರುವ ಕೇಂದ್ರ ಶಾಸನ ಸಭೆಯಲ್ಲಿ ಕೇಂದ್ರ ಸರ್ಕಾರದ ಹದಿಮೂರು ಜನ ಮಂತ್ರಿಗಳು ಭಾಗವಹಿಸುವರು ಪಂಡಿತ ಜವಹರಲಾಲ ನೆಹರೂರವರು ಶಾಸನ ಸಭೆಯ ನಾಯಕರಾಗಿಯೂ, ಶ್ರೀ ಸಚ್ಚಿದಾನಂದ ಸಿನ್ಹರವರು ಸರ್ಕಾರದ ಪರ ಛೀಫ್ ವ್ಹಿಫ್ ಆಗಿಯೂ ಇರುವರು. ಕೌನ್ಸಿಲ್ ಆಫ್ ಸ್ಟೇಟ್ ಸಭೆಗೆ ಮಿ॥ ಅಬ್ದುರ್ ರಬ್ ನಿಷ್ಠರವರು ನಾಯಕರಾಗಿರುವರು.

ತಿರುವಾಂಕೂರಿನಲ್ಲಿ ಮಿಲಿಟರಿ ಕಾನೂನು

ಕಮ್ಯೂನಿಸ್ಟ್ ಪಂಗಡದವರು ತಿರುವಾಂಕೂರು ಸರ್ಕಾರಕ್ಕೆ ಸೇರಿದ ಅರಣ್ಯಗಳಲ್ಲಿ ಜಮೀನನ್ನು ಆಕ್ರಮವಾಗಿ ಆಕ್ರಮಿಸಿ ಸಾಗುವಳಿ ಮಾಡಲು ಅಲ್ಲಿನ ರೈತರುಗಳಿಗೆ ಬೋಧಿಸಿ ಸರ್ಕಾರದ ಕಾನೂನನ್ನು ಉಲ್ಲಂಘಿಸಿ ಅಲ್ಲಿ ಬಹಳ ಮೇಲು ಚಳುವಳಿಯನ್ನು ನಡೆಸುವುದಕ್ಕೆ ಯುಕ್ತಿ ನಡೆಸುತ್ತಿದ್ದುದನ್ನು ನಿಲ್ಲಿಸಲು ದಿವಾನರಾದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರು ತಮಗೆ ಇತ್ತೀಚೆಗೆ ವಹಿಸಿರುವ ಅಧಿಕಾರವನ್ನು ಚಲಾಯಿಸಿ ಅಂಬಲಪೂಜ ಮತ್ತು ಶೇರ್‌ತಲ್ಲೈ ತಾಲ್ಲೂಕುಗಳಲ್ಲಿ ಮಾರ್ಷಲ್ ಲಾ ಕಾನೂನನ್ನು ಜಾರಿಗೆ ತಂದಿರುವರು. ಆ ಪ್ರದೇಶಗಳಿಗೆ ಪೋಲೀಸಿನವರು ತೆರಳಿ ಪರಿಸ್ಥಿತಿಯನ್ನು ಶಾಂತಿಗೆ ತರಲು ಗುಂಡು ಹಾರಿಸಿದಾಗ ಒಬ್ಬನು ಸತ್ತನೆಂದೂ ಮತ್ತು ದಂಗೆಕೋರರು ಒಬ್ಬ ಇನ್‌ಸ್ಪೆಕ್ಟರ್ ಮತ್ತು ಇಬ್ಬರು ಪೋಲೀಸಿನವರನ್ನು ಕೊಂದರೆಂದೂ ಸಹ ವರದಿಯಾಗಿದೆ ಕಮ್ಯೂನಿಸ್ಟರು ಸರ್ಕಾರದ ಆಸ್ತಿಪಾಸ್ತಿಗಳನ್ನು ಲೂಟಿ ಮಾಡಿ ಸುಡುತ್ತಿರುವರೆಂದೂ ಸಹ ಹೇಳಲಾಗಿದೆ ಗಲಭೆಕಾರರು ತಿರುವಾಂಕೂರಿಗೂ ಮತ್ತು ಕೊಚ್ಚಿಗೂ ಇರುವ ಫೋನ ಸಂಬಂಧವನ್ನು ಕತ್ತರಿಸಿ ಹಾಕಿರುವರು. ೨೩ ನೇ ತಾ॥ ನಿಂದ ಎಲ್ಲಾ ಅಂಗಡಿ, ಮುಂಗಟ್ಟು, ಗಿರಣಿ ಮತ್ತು ದೋಣಿ ಕೆಲಸಗಾರರೂ ಶಾಂತರೀತಿಯಿಂದ ಮುಷ್ಕರವನ್ನು ಆಚರಿಸುತ್ತಿದ್ದಾರೆ

* ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ ವಾರ್ಷಿಕ ಅಧಿವೇಶನವು ಬರುವ ೪ ನೇ ತಾರೀಖು ಬೆಂಗಳೂರಿನಲ್ಲಿ ನಡೆಯುತ್ತದೆ. ಅದಕ್ಕೆ ಕ್ಯಾ॥ ಲಕ್ಷ್ಮಿಯವರನ್ನು ಅಧ್ಯಕ್ಷರನ್ನಾಗಿ ಆಹ್ವಾನಿಸಲು ಕೆಲವು ವಿದ್ಯಾರ್ಥಿ ಮುಖಂಡರು ನಿನ್ನೆ ರಾತ್ರಿ ಮದರಾಸಿಗೆ ಪ್ರಯಾಣ ಬೆಳೆಸಿದರು

ಸಾಧ್ವಿ

ತಾ|| ೨೭-೧೦-೪೬ ಭಾನುವಾರ

ಕಾಂಗ್ರೆಸ್ ವಿಜಯದ ಪೀಠಿಕೆ

ರಾಜಧಾನಿಯಲ್ಲಿ ನಡೆಯಲಿರುವ ಪೌರಸಭಾ ಚುನಾವಣೆಯ ಇಪ್ಪತ್ತನಾಲ್ಕು ಸ್ಥಾನಗಳಿಗೆ ಕಾಂಗ್ರೆಸ್ಸಿನವರು ಇಪ್ಪತ್ತನಾಲ್ಕು ಜನರನ್ನು ನಿಲ್ಲಿಸಿದ್ದಾರೆ. ಇತರರು ಪಕ್ಷೋಪಭಕ್ಷ ಮಂದಿ ಮಾತ್ರ ನಿಂತಿರುವರು. ಎಂದ ಮೇಲೆ ಐದು ಸ್ಥಾನಗಳು ಕಾಂಗ್ರೆಸ್ಸಿಗೆ ಅವಿರೋಧವಾಗಿ ಈಗಾಗಲೇ ದೊರೆತಂತಾದುವು. ಇದು ಮುಂದೆ ಬರಲಿರುವ ಕಾಂಗ್ರೆಸ್ಸಿನ ಅಖಂಡ ವಿಜಯಕ್ಕೆ ಪೂರ್ವ ಪೀಠಿಕೆಯೆಂದು ಭಾವಿಸಬಹುದು.

ಹಿಂದೆ ಚುನಾವಣೆಗಳು ನಡೆದಾಗ ಹಲವು ಮೊಹಲ್ಲೆಗಳಲ್ಲಿ ಪ್ರತಿ ಸ್ಪರ್ಧೆಯೇ ಇಲ್ಲದೆ ಅನಾಯಾಸವಾಗಿ ಕಾಂಗ್ರೆಸ್ಸಿನ ಉಮೇದುವಾರರು ಆರಿಸಲ್ಪಟ್ಟಿದ್ದರು. ಈ ಸಾರಿ ಎಂದಿಗಿಂತಲೂ ಹೆಚ್ಚು ಜನರು ಕಾಂಗ್ರೆಸ್ಸನ್ನು ಎದುರಿಸಲು ಮುಂದೆ ಬಂದಿದ್ದಾರೆ. ಚುನಾವಣೆಗಳಲ್ಲಿ ಕಾಂಗ್ರೆಸ್ಸಿನವರಲ್ಲದವರಿಗೂ ಈಚೆಗೆ ಉಂಟಾಗುತ್ತಿರುವ ಹೆಚ್ಚಿನ ಆಸಕ್ತಿ ಮತ್ತು ಉತ್ಸಾಹಗಳಿಗೆ ಇದು ಗುರುತಾಗಿದೆ. ಆದುದರಿಂದ ಈ ಸಾರಿಯ ಚುನಾವಣೆಗಳಲ್ಲಿ ವಿಶೇಷವಾದ ಚಟುವಟಿಕೆಯು ಕಂಡುಬರುವುದು ಸಹಜವಾಗಿಯೇ ಇದೆ.

ಉಮೇದುವಾರರಾಗಿ ನಿಂತಿರುವವರೆಲ್ಲರೂ ಸೇವಾ ಕಾಂಕ್ಷೆ ಮತ್ತು ಉಜ್ವಲ ದೇಶಾಭಿಮಾನಗಳಿಂದಲೇ ಪ್ರೇರೇಪಿತರಾಗಿರುವರೆಂಬುದನ್ನು ನಾವು ಒಪ್ಪುತ್ತೇವೆ. ಅವರಲ್ಲಿ ಹಲವರು ಹಿಂದೆ ಪೌರಸಭೆಯ ಸದಸ್ಯರಾಗಿದ್ದ ಹಳಬರೂ ಇರುವರು. ಇತರರು ಹೊಸಬರಾದರೂ ಉತ್ಸಾಹದಿಂದ ಮುಂದೆ ಬಂದಿರುವರು. ಇವರುಗಳ ಪೈಕಿ ಯಾರಿಗೆ ಬೆಂಬಲ ಕೊಡಬೇಕೆಂಬುದು ಮತದಾರರ ಮುಂದಿರುವ ಪ್ರಶ್ನೆ. ಇದನ್ನು ವಿವೇಚನೆಯಿಂದಲೂ ಉದಾತ್ತ ಧ್ಯೇಯಗಳ ದೃಷ್ಟಿಯಿಂದಲೂ, ನಮ್ಮ ಪುರನಿವಾಸಿಗಳು ನಿರ್ಧರಿಸಬಲ್ಲರೆಂಬ ಭರವಸೆ ನಮಗೆ ಇದೆ.

ಈಗಿನ ಚುನಾವಣೆಗಳು ತತ್ವಗಳ ಆಧಾರದ ಮೇಲೆ ನಡೆಯುತ್ತವೆ, ವ್ಯಕ್ತಿಗಳ ಗುಣಾವಗುಣಗಳ ಮೇಲೆ ನಡೆಯುವುದಿಲ್ಲ. ನಾವು ನಿನ್ನೆಯೇ ಹೇಳಿರುವಂತೆ ಸಾರ್ವಜನಿಕ ಜೀವನದ ಧ್ಯೇಯವು ಸುಸಂಘಟಿತವಾದ ಸಂಸ್ಥೆಗಳ ಮೂಲಕ ಯಶಸ್ವಿಯಾಗಿ ನಡೆಯುವಂತೆ, ವ್ಯಕ್ತಿಗಳ ಮೂಲಕ ಸಾಗುವುದು ಸಾಧ್ಯವಿಲ್ಲ. ಪೌರಸಭೆಯಂತಹ ಶಾಸನಬದ್ಧವಾದ ಸಂಸ್ಥೆಯನ್ನು ಪ್ರವೇಶಿಸುವುದರಲ್ಲಿಯೂ ಇದೇ ಉದ್ದೇಶವೇ ಅಂತರ್ಗತವಾಗಿದೆ. ಒಬ್ಬೊಬ್ಬ ವ್ಯಕ್ತಿಯೂ, ಒಂದೊಂದು ರೀತಿಯಲ್ಲಿ ಸಲ್ಲಿಸುವ ಸೇವೆಯಿಂದ ಸಾಧಿಸಲಾಗದಿರುವ ಪ್ರಜಾಹಿತವನ್ನು ಪೌರಸಭೆಯ ಮೂಲಕ ಸಾಧಿಸುವುದೇ ಈ ಚುನಾವಣೆಯ ಮುಖ್ಯ ಗುರಿ. ಇದನ್ನು ಕ್ರಮಬದ್ಧವಾದ ಮತ್ತು ಶಿಸ್ತಿನಿಂದ ಕೂಡಿದ ಸಂಘಟನೆಯವರು ಮಾತ್ರ ಯಶಸ್ವಿಯಾಗಿ ಎಸಗಬಲ್ಲರು.

ಈ ದಿಶೆಯಲ್ಲಿ ಚುನಾವಣೆಯಲ್ಲಿ ಕಾಂಗ್ರೆಸ್ ಸಂಸ್ಥೆಯ ಗುರಿಯು ಎಲ್ಲರಿಗೂ ಸ್ಪಷ್ಟವಾಗಿ ವೇದ್ಯವಾಗಿಯೇ ಇದೆ. ನಿಸ್ವಾರ್ಥಭಾವನೆಯ [illegible] ಜನ [illegible] ದೃಷ್ಟಿಯಿಂ ಬಲಾ, ನಗರದ ಸರ್ವತೋಮುಖವಾದ ಉನ್ನತಿಯನ್ನು ಬಯಸುವುದೇ ಕಾಂಗ್ರೆಸ್ ಸಂಸ್ಥೆಯ ನೀತಿಯಾಗಿದೆ. ಇದನ್ನು ಅಂಗೀಕರಿಸಿ ಪುರನಿವಾಸಿಗಳು ಕಾಂಗ್ರೆಸ್ ಉಮೇದುವಾರರಿಗೆ ಎರಡಾವರ್ತಿ ಅಭೂತಪೂರ್ವವಾದ ಬೆಂಬಲವನ್ನು ನೀಡಿದ್ದಾರೆ. ಈ ಸಾರಿಯೂ ತಮ್ಮ ಅಖಂಡ ಪ್ರೇಮವನ್ನೂ, ವಿಶ್ವಾಸವನ್ನೂ, ಕಾಂಗ್ರೆಸ್ ಉಮೇದುವಾರರಿಗೆ ಅವರು ನೀಡಿ ಎಲ್ಲ ಕಾಂಗ್ರೆಸ್ ಉಮೇದುವಾರರೂ ಜಯಶೀಲರಾಗಿ ಬರುವಂತೆ ಮಾಡಿ ಮೈಸೂರಿನ ಕೀರ್ತಿಯನ್ನು ಇತೋಧಿಕವಾಗಿ ಬೆಳಗಿಸಬೇಕೆಂದು ನಾವು ಮತ್ತೊಮ್ಮೆ ಬೇಡುತ್ತೇವೆ.

ಕಮಲಾದೇವಿಯವರಿಂದ ಆರಂಭೋತ್ಸವ

ಮೈಸೂರು ಕಾಂಗ್ರೆಸ್ ಅಧಿವೇಶನದ ವಸ್ತುಪ್ರದರ್ಶನದ ಆರಂಭೋತ್ಸವವನ್ನು ಅ|| ಭಾ|| ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀಮತಿ ಕಮಲಾದೇವಿಯವರು ನವೆಂಬರ್ ೧ ನೇ ತಾ|| ಬೆಳಗ್ಗೆ ಬೆಂಗಳೂರಿನಲ್ಲಿ ನೆರವೇರಿಸುವರು.

ನೆಹರೂರವರ ಮಧ್ಯಸ್ತಿಕೆಯಿಂದ ಬಿಡುಗಡೆ

ಜರ್ಮನಿಯಲ್ಲಿ ಬಂಧಿತರಾಗಿದ್ದ ಆಜಾದ್ ಹಿಂದ್ ದಳದ ಶ್ರೀ ಪ್ರಮೋದಸೇನ ಗುಪ್ತರವರು ಪಂ|| ನೆಹರೂರವರ ಮಧ್ಯಸ್ತಿಕೆಯಿಂದ ಬಿಡುಗಡೆಯಾಗಿ ಭಾರತಕ್ಕೆ ಪ್ರಯಾಣ ಬೆಳಸಿರುವರೆಂದು ಗೊತ್ತಾಗಿದೆ.

ರೈಲ್ವೇ ಸ್ಟೇಷನ್ನುಗಳಲ್ಲಿ ಕೋಮುವಾರು ಭೇದವೇಕೆ ?

ಉತ್ತರ ಭಾರತದ ರೈಲ್ವೆ ನಿಲ್ದಾಣದಲ್ಲಿ ಪ್ರಯಾಣಿಕರಿಗಾಗಿ "ಹಿಂದೂ ಪಾನಿ," "ಮುಸ್ಲಿಂ ಪಾನಿ" ಎಂಬುದಾಗಿ ಚಾಲ್ತಿಯಲ್ಲಿರುವ ಪದ್ಧತಿಯನ್ನು ತಪ್ಪಿಸಬೇಕೆಂದೂ, ನೀರು ಸರಬರಾಜಿನಿಂದ ಕೋಮುವಾರು ಭೇದವನ್ನು ಬೆಳೆಸಬಾರದೆಂದೂ ಮಹಾತ್ಮ ಗಾಂಧಿಯವರು ತಿಳಿಸಿರುತ್ತಾರೆ.

ವರ್ತಕರ ಸಂತೋಷ

ಸ್ವ ಸು.] ಗುಂಡ್ಲುಪೇಟೆ ೨೪

ಶ್ರೀಮನ್ಮಹಾರಾಜರವರಿಗೆ ಪುತ್ರೀರತ್ನವು ಜನಿಸಿದ್ದಕ್ಕಾಗಿ ಇಲ್ಲಿನ ಜವಳಿ ವರ್ತಕರುಗಳು ಸಭೆ ಸೇರಿ ತಮ್ಮ ಸಂತೋಷವನ್ನೂ, ರಾಜಭಕ್ತಿಯನ್ನೂ ಸಮರ್ಪಿಸುವ ನಿರ್ಣಯವನ್ನು ಅಂಗೀಕರಿಸಿದರು.

ಆರಂಭದ ಭಾಷಣ

ಸ್ವ ಸು.] ಶ್ರೀರಂಗಪಟ್ಟಣ ೨೪

ಇಲ್ಲಿಯ ಪ್ರೌಢಶಾಲೆಯ ಸಾಹಿತ್ಯಸಂಘದ ಆರಂಭ ಭಾಷಣವು ಈ ದಿನ ಬೆಳಗ್ಗೆ ಹುಣಸೂರು ಹೈಸ್ಕೂಲ್ ಮುಖ್ಯೋಪಾಧ್ಯಾಯರಾದ ಶ್ರೀ ಬಿ. ವಿ ಕೇಶವಯ್ಯಂಗಾರ್‌ರವರಿಂದ ನೆರವೇರಿತು. ಸಭಾಧ್ಯಕ್ಷತೆಯನ್ನು ಶ್ರೀ ಕೆ ಆರ್. ಕೃಷ್ಣಮೂರ್ತಿಯವರು ವಹಿಸಿದ್ದರು.

ಬಟ್ಟೆ ತೊಂದರೆ

ಇಲ್ಲಿನ ನಿವಾಸಿಗಳಿಗೆಲ್ಲರಿಗೂ ಬಟ್ಟೆ ಕಾರ್ಡ್ ಹಂಚಿದ್ದಾರೆ. ಆದರೆ ಜವಳಿ ಅಂಗಡಿಗಳಲ್ಲಿ ಸಾಕಾದಷ್ಟು ಬಟ್ಟೆಯಿದ್ದರೂ ಸಹ ಯಾರಿಗೂ ಬಟ್ಟೆ ದೊರೆಯುತ್ತಿಲ್ಲ. ಹಬ್ಬಕ್ಕಾಗಿ ಸ್ಪೆಷಲ್ ಕೋಟಾ ಕೊಟ್ಟಿರುವುದಾಗಿ ತಿಳಿದಿದೆ. ಆದರೆ ಯಾರಿಗೂ ಬಟ್ಟೆ ದೊರೆಯಲಿಲ್ಲ. ಮೇಲ್ಪಟ್ಟ ಅಧಿಕಾರಿಗಳು ಕೂಡಲೇ ಗಮನಕೊಡಬೇಕಾಗಿದೆ.

ಕಾಂಗ್ರೆಸ್ ಹಿತೈಷಿಗಳ ಸಭೆ

ಮೈಸೂರು ೨೬

ಮುಂದೆ ಬರಲಿರುವ ಪೌರಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದುವಾರರಿಗೆ ಸಂಪೂರ್ಣವಾದ ವಿಜಯವುಂಟಾಗುವಂತೆ ಕಾರ್ಯಕ್ರಮ ಕೈಗೊಳ್ಳಲು ನಾಳೆ ಸಂಜೆ ೬ ಗಂಟೆಗೆ ನಗರದ ಕಾಂಗ್ರೆಸ್ ಕಛೇರಿಯಲ್ಲಿ ಸಭೆ ನಡೆಯುತ್ತದೆ. ನಗರದ ವಾರ್ಡು ಸಮಿತಿಗಳ ಸದಸ್ಯರೂ, ನಗರ ಕಾಂಗ್ರೆಸ್ ಸಮಿತಿ ಸದಸ್ಯರೂ, ಕಾಂಗ್ರೆಸ್ ಹಿತೈಷಿಗಳೂ ದಯಮಾಡಿಸಬೇಕೆಂದು ಚುನಾವಣಾ ಉಪಸಮಿತಿಯ ಸಂಚಾಲಕರಾದ ಶ್ರೀ ಎಂ ಶಂಕರಯ್ಯನವರು ಕೋರಿರುತ್ತಾರೆ.

ಉದಾರ ದಾನ

ಪಂಡಿತ ಸುಂದರಮ್ಮನವರು ರಾಜಧಾನಿಯ ಒಂಟಿಕೊಪ್ಪಲಿನಲ್ಲಿ ೪೦,೦೦೦ ರೂಪಾಯಿ ಬೆಲೆ ಬಾಳುವ ಮನೆ ಮತ್ತು ಸೈಟುಗಳನ್ನು ಮಹಿಳೆಯರ ಸಾಂಸ್ಕೃತಿಕ ಮತ್ತು ಆರ್ಥಿಕ ಬೆಳವಣಿಗೆಗೆ ಉದಾರವಾಗಿ ದಾನ ಮಾಡಿದ್ದಾರೆ. ಆ ಪ್ರದೇಶದಲ್ಲಿ ಶ್ರೀ ಸಾಯಿಬಾಬಾ ಮಂದಿರ ಹಾಗೂ ನಿರ್ಗತಿಕ ಮಹಿಳೆಯರ ಸದನ ಇವುಗಳ ನಿರ್ಮಾಣಕ್ಕೆ ಅವರು ಒಪ್ಪಿಗೆ ಕೊಟ್ಟಿದ್ದಾರೆ. ಈ ನಿರ್ಮಾಣದ ಕಾರ್ಯಸಮಿತಿಯಲ್ಲಿ ಶ್ರೀಮತಿ ಸುನಂದಮ್ಮ, ಶ್ರೀಗಳಾದ|| ಕೆ.ಟಿ. ಭಾಷ್ಯಂ, ಎಸ್. ಆರ್. ಸಂಪತ್ಕುಮಾರಯ್ಯಂಗಾರ್, ಮತ್ತು ಪಂಡಿತ ಸುಂದರಮ್ಮನವರು ಇದ್ದಾರೆ. ಈ ಮಹತ್ಕಾರ್ಯವು ಯಶಸ್ವಿಯಾಗಿ ನಡೆಯಲು ಮಹನೀಯರ ಉದಾರ ಧನ ಸಹಾಯ ಅತ್ಯಾವಶ್ಯಕವಾಗಿದೆ. ಸಹಾಯ ಮಾಡುವವರು ಶ್ರೀಮತಿ ಸುನಂದಮ್ಮ, ಸ್ವರಾಜ್ಯಭವನ, ಒಂಟಿಕೊಪ್ಪಲ್, ಮೈಸೂರು- ಎಂಬ ವಿಳಾಸಕ್ಕೆ ಕಳುಹಿಸಿಕೊಡಬೇಕು, ಎಂದು ಶ್ರೀಮತಿ ಎಂ ಆರ್. ಲಕ್ಷ್ಮಮ್ಮನವರು ಪ್ರಾರ್ಥಿಸಿರುತ್ತಾರೆ.

ಕ್ರಿಕೆಟ್ ಪಂದ್ಯ

ಮೊನ್ನೆ ದಿನ ರಾಜಧಾನಿಯ ಓವಲ್ ಮೈದಾನದಲ್ಲಿ ಮೈಸೂರು ಕಂಟೋನ್ಮೆಂಟ್ ಕ್ರಿಕೆಟ್ ಕ್ಲಬ್ಬಿನವರಿಗೂ ಮತ್ತು ಮೈಸೂರು ಸ್ಟೇಟ್ ರೈಲ್ವೆ ಟೀಮಿನವರಿಗೂ ಪಂದ್ಯ ನಡೆದು ಮೈಸೂರು ಸ್ಟೇಟ್ ಕ್ರಿಕೆಟ್ ಟೀಮಿನವರು ಒಂದು ಇನ್ನಿಂಗ್ಸ್ ಮತ್ತು ೮೫ ರನ್ನುಗಳಿಂದ ಗೆದ್ದರು. ಮೈಸೂರು ಕಂಟೋನ್ಮೆಂಟ್ ಕ್ರಿಕೆಟ್ ಕ್ಲಬ್ಬಿನವರು ೮ ವಿಕೆಟ್ಟುಗಳಿಗೆ ೧೬೭ ರನ್ನುಗಳನ್ನು ಮಾಡಿದ್ದರು.

ದೀಪಾವಳಿ ನಿಧಿ

ವಾಣೀವಿಲಾಸಪುರದಲ್ಲಿರುವ ಮಹಾಜನ ಹೈಸ್ಕೂಲ್ ವಿದ್ಯಾರ್ಥಿಗಳೂ, ಉಪಾಧ್ಯಾಯರೂ ಶಾಲೆಯ ನಿಧಿಗಾಗಿ ದೀಪಾವಳಿಯಲ್ಲಿ ಶೇಖರಿಸಿದ ಮೊತ್ತವು ಒಂದು ಸಹಸ್ರ ರೂಪಾಯಿಗಳಾಗಿರುತ್ತವೆ. ಈ ಸಂದರ್ಭದಲ್ಲಿ ಉದಾರವಾಗಿ ಧನ ಸಹಾಯಮಾಡಿದ ಎಲ್ಲ ಮಹನೀಯರಿಗೂ ಶಾಲೆಯವರು ಕೃತಜ್ಞತೆಯನ್ನು ವ್ಯಕ್ತಗಡಿಸಿದ್ದಾರೆ.

ಪ್ಯಾರಿಸ್ಸಿನಲ್ಲಿ ವೇಶ್ಯಾ ವೃ[illegible] ವಜಾ

ಅನೇಕ ಕಲಾಂತರಗಳ ಅನಂತರ [illegible]ಟ್ಟ ಮೊದಲನೆಯದಾಗಿ ಈಗ ಪ್ಯಾರಿಸ್ ನಗರವು ವೇಶ್ಯಾ ಗೃಹರಹಿತವಾಗಿದೆ. [illegible] ಗಳನ್ನೆಲ್ಲಾ ಮುಚ್ಚಲು ಕಳೆದ [illegible] ಕಾಲಾವಧಿ ಎಂದು ಕಾನೂನಿನಿಂದ [illegible] ಯಾಗಿದ್ದಿತು. ಕ್ರಮವಾದ ವೇಶ್ಯಾ [illegible] ಯೇ ಅಲ್ಲದೆ, ಬಹಿರಂಗ ಸ್ಥಳಗಳಲ್ಲಿ [illegible] ಮಾತು ಅಥವಾ ಇನ್ನಿತರ ಮಾರ್ಗ [illegible] ಮೂಲಕವಾಗಲಿ, ಮತ್ತು ಟೆಲಿಫೋನ್ ಮೂಲಕವಾಗಲೀ ಈ ಕಾರ್ಯದಲ್ಲುದ್ಯುಕ್ತ[illegible]ಗುವುದೂ ನ್ಯಾಯಬಾಹಿರವೆಂದು ಕಾನೂನು ತಿಳಿಸುವುದು. ಹಿಂದೆ ಇಂತಹ [illegible]ತಿ ಕಾರ್ಯಗಳಿಗಾಗಿ ಉಪಯೋಗಿಸುತ್ತಿದ್ದ ಮನೆಗಳನ್ನು ಪೌರಸಭೆಯವರು ತೆಗೆದುಕೊಂಡು ಮನೆಗಳಿಲ್ಲದವರಿಗೆ ಅವುಗಳನ್ನು ಕೊಡುವರೆಂದು ಗೊತ್ತಾಗಿದೆ.

ಕಾರ್ಯನಿರತ ಪತ್ರಿಕೋದ್ಯಮಿಗಳ ಸಂಘ

ಮೈಸೂರು [illegible]

ರಾಜಧಾನಿಯ ಕಾರ್ಯನಿರತ ಪತ್ರಿಕೋದ್ಯಮಿಗಳು ಈ ದಿನ ಬೆಳಗ್ಗೆ 'ಚಾಮುಂಡೇಶ್ವರಿ ಭವನದಲ್ಲಿ' ಸಭೆ ಸೇರಿ, ತಮ್ಮ ವೃತ್ತಿಯ ಹಿತಸಾಧನೆಗಾಗಿ ಒಂದು ಪ್ರತ್ಯೇಕ ಸಂಘವನ್ನು ಸ್ಥಾಪಿಸಬೇಕೆಂದು ನಿರ್ಣಯ ಮಾಡಿದರು. ಈ ಸಭೆಗೆ ಶ್ರೀ ಎನ್. ಎಸ್. ಶಾಸ್ತ್ರಿಗಳು ಅಧ್ಯಕ್ಷತೆ ವಹಿಸಿದ್ದರು. ಈ ಸಂಘಕ್ಕೆ ಸಂಬಂಧಪಟ್ಟ ಕಾನೂನುಗಳು ಮತ್ತು ನಿರ್ವಾಹಕ ಮಂಡಲಿಯ ರಚನೆ ಮೊದಲಾದುವುಗಳನ್ನು ಯೋಚಿಸಲು ಶೀಘ್ರದಲ್ಲಿಯೇ ಪತ್ರಿಕೋದ್ಯಮಿಗಳ ಸಭೆಯನ್ನು ಸೇರಿಸಬೇಕೆಂಬ ನಿರ್ಣಯವೂ ಸಹ ಅಂಗೀಕೃತವಾಯಿತು.

WANTED

Representatives to Book orders for , Renowned Toilets in Mysore, Mandya Tumkur and Coorg either on Commission or Pay.

For further particulars please call at:—

KAMAL TRADING AGENCIES,

Asoka Road : : Mysore

Edited, printed and published by A. R. Nagarajan at the Sadhvi Press D. Subbiah Road, Mysore

ರಾಜ್ ಕಮಲ್, ಮೈಸೂರು,

24-10-46 ರಿಂದ

ಅಮೋಘ 6 ನೇ ವಾರ

ವಾಹಿನಿಯವರ

ಸ್ವರ್ಗಸೀಮಾ

- ಪಾತ್ರ -

* ನಾಗಯ್ಯ, * ಜಯಮ್ಮ

* ಭಾನುಮತಿ

Morning Show at 10-30 A. M. From—5-10-46

"SONG OF NIVEDA"

ರಿ. ನಂ. ೩೯೨ WEEKLY EDITION ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೧] ಸೋಮವಾರ ೨೨—೧೦—೪೬ [ಸಂಚಿಕೆ ೧೨

ಮಹಾತ್ಮಜೀಯವರು ಉಪವಾಸಕ್ಕೆಗೊಳ್ಳುವರೆ

ಬಂಗಾಳಕ್ಕೆ ಮಹಾತ್ಮರು

ಮಹಾತ್ಮರು ಈ ದಿನ ಬಂಗಾಳಕ್ಕೆ ಹೊರಡುವರೆಂದು ಗೊತ್ತಾಗಿದೆ. ಶ್ರೀಗಳಾದ ...ಲಾಲ್, ಕನೂಗಾಂಧಿ ಮತ್ತು ಡಾ॥ ...ನಾಯರುಗಳು ಅವರೊಡನೆ ಹೋ... ಅವರು ಗಲಭೆಗೀಡಾದ ಪ್ರದೇ... ಮತ್ತು ಚಿತ್ತಗಾಂಗಿಗೂ ಭೇಟಿ ...ವರೆಂದೂ, ಹೊರಡುವ ಮುನ್ನ ಬಂ... ಗೌರ್ನರರನ್ನು ಭೇಟಿ ಮಾಡಬ...ದೂ ಊಹಿಸಲಾಗಿದೆ.

ಐ. ಎನ್. ಎ. ಸೈನಿಕರು ಪೂರ್ವ ಬಂಗಾಳಕ್ಕೆ

...ಯ ಸಾಧನೆಗಾಗಿ ಪ್ರಾಣವನ್ನಾದರೂ ...ಡಲು ಸಿದ್ಧರಾಗಿರುವ ಸಾಧ್ಯವಾದ ...ನ ಯುವಕರನ್ನೂ ಮತ್ತು ಐ. ಎನ್ ...ನಿಕರನ್ನೂ ಕರೆದುಕೊಂಡು ಅದಷ್ಟು ಪೂರ್ವ ಬಂಗಾಳಕ್ಕೆ ಹೋಗಿ ಅಲ್ಲಿ ...ತ್ತಿರುವ ದುರಂತಗಳನ್ನು ತಡೆಗಟ್ಟ...ವು ಅತ್ಯಂತ ಆತುರರಾಗಿದ್ದೇವೆ-ಎಂ... ಆಜಾದ ಹಿಂದ್ ಸರ್ಕಾರದ ಮಾಜಿ ...ಗಳಾದ ಶ್ರೀ ಆನಂದಮೋಹನಸಹೇ, ...ರಿ ಸೆಕ್ರೆಟರಿಗಳಾದ ಡಾ॥ ವು. ಹಬೀ... ಮನ್ಸೂರ್ ಮತ್ತು ಅಖಿಲ ಭಾರತ ...ರ್ಡ್ ಬ್ಲಾಕಿನ ಉಪಾಧ್ಯಕ್ಷರಾದ ಶಂ...ಲಭದ್ರಯಾಜಿ-ಇವರುಗಳು ಒಂದು ...ಯಲ್ಲಿ ತಿಳಿಸಿದ್ದಾರೆ.

ಮಣಿಲಾಲ ಗಾಂಧಿ

ಆಫ್ರಿಕ ಸತ್ಯಾಗ್ರಹದಲ್ಲಿ ಬಂದಿತರಾ... ಶ್ರೀ ಮಣಿಲಾಲ ಗಾಂಧಿಯವರಿಗೆ ...ಪೌಂಡು ಜುಲ್ಮಾನೆ ತ... ...೦ ದಿನಗಳ ಶಿಕ್ಷೆ ವಿಧಿಸಿದರೆಂದೂ ...ದಂಡ ಕೊಡದೆ ಸೆರೆಮನೆಗ ವಾಸಕ್ಕೆ ...ರೆಂದೂ ವರದಿಯಾಗಿದೆ.

...ವಾಡ ಮೇಲೆ ಬಹಿಷ್ಕಾರ

...ವಾದ ಅಧಿಕಾರಿಗಳ ಮೇಲೆ ಸಾ... ...ಮತ್ತು ಆರ್ಥಿಕ ಬಹಿಷ್ಕಾರ ಹಾ... ..., ಅಲ್ಲಿಂದ ಮದ್ಯ-ಮುಂತಾದ ಪಾ...ಗಳನ್ನು ತರಿಸಕೂಡದು ಅಲ್ಲಿಗೆ ...ಸಿಗೆ ಮತ್ತು ಸಕ್ಕರೆಯನ್ನು ಕಳು...ಡದು; ಅಲ್ಲಿನ ಜನರು ಸರ್ಕಾರಿ ...ರೊಡನೆ ಯಾವ ಬಗೆಯ ವ್ಯವಹಾ...ರ ನಡೆಸಕೂಡದೆಂಬುದಾಗಿ ಕಾಂ...ಸ್ಸಿ ರಚಿತವಾಗಿರುವ ಸತ್ಯಾಗ್ರಹ ಸ...ಮಿತಿ ಸಲಹೆ ಮಾಡಿದ್ದಾರೆ.

ಮರಣಾಂತ ಉಪವಾಸ

ಸುಭಾಷ್‌ಚಂದ್ರ ಬೋಸರ ಸಹೋ...ಗಳಾಗಿದ್ದ ಬಂಗಾಳಿ ಬ್ರಾಹ್ಮಣರಾ... ...ಕುಮಾರ್ ಚಟರ್ಜಿಯವರು ...ಪ್ರಧಾನಿ ಮಿ॥ ಅಟ್ಲಿ ಮತ್ತು ಮಿ॥ ...ರೆನ್ಸ್‌ರವರಿಗೆ ಒಂದು ತಂತಿ ಕಳ...ಸಿ ... ವರಿಗೆ ಕಾರಣರಾದವರನ್ನು ...ಕಾಲದಿವ್ವಲ್ಲಿ ಅಕ್ಟೋಬರ್ ...ಗ ...ಮರಣಾಂತ ಉಪವಾಸ ಹೂಡು...ತಿಸಿದ್ದಾರೆ.

...ವೇಗದಲ್ಲಿ ಸಂಚರಿಸುವ ಕಾರು

...೧೦ ಮೈಲಿಗಳ ವೇಗದಲ್ಲಿ ಗಂ... ...ಪೆಟ್ರೋಲಿನಿಂದ ೩೦೦ ಮೈಲಿ ...ಕಾರೊಂದು ಪರೀಕ್ಷೆ ಪ್ರ... ...ದಿದೆ. ಇದಕ್ಕೆ ಬೆಲೆ ... ...ಇಸ್ಲೋಂದ. ವರ್ಷದಲ್ಲಿ ಹೆಚ್ಚು ...ನಲ್ಲಿ ಮಾರಾಟಕ್ಕೆ ಬರಬಹು...ತ್ತಾಗಿದೆ.

ಬಂಗಾಳದ ದುರಂತದಿಂದ ವ ನ ನೊಂದಿರುವ ಮಹಾತ್ಮರು ಸದ್ಯದಲ್ಲಿಯೇ ಆತ್ಮಶುದ್ಧಿಗಾಗಿ ಉಪವಾಸವನ್ನು ಕೈಗೊಳ್ಳಲು ತೀವ್ರವಾಗಿ ಪರ್ಯಾಲೋಚಿಸುತ್ತಿರುವರೆಂದು ವರದಿಯಾಗಿದೆ

ಜೋಗೇಂದ್ರ ಮಂಡಲರ ನೇಮಕಕ್ಕೆ ವಿರೋಧ

ಅಖಿಲ ಭಾರತ ಸಿಖ್ಖ ವರ್ಗದ ಲೀಗಿನ ಅಧ್ಯಕ್ಷರೂ, ಸಂಘದ ಉಪಾಧ್ಯಕ್ಷರೂ ಮತ್ತು ಕಾರ್ಯದರ್ಶಿಗಳೂ ಸಹ ಕೇಂದ್ರ ಸರ್ಕಾರದ ಒಳಾಡಳಿತ ಸಚಿವರಾದ ಸರ್ದಾರ್ ಪಟೇಲರಲ್ಲಿಗೆ ಹೋಗಿ ... ಮುಸ್ಲಿಂ ಲೀಗು ಸೇರುವುದು ... ಅದಕ್ಕೆ ತನ್ನ ಕೋಮಿನವರನ್ನಲ್ಲದೆ ಬೇರೆಯವರನ್ನ ... ಜೋಗೇಂದ್ರನಾಥ ಮಂಡಲರನ್ನು ಕೇಂದ್ರ ಸರ್ಕಾರದ ... ದ ತಪ್ಪು ... ಯನ್ನು ಕೋರಿದರು.

ಗಲಭೆಗಾರರಿಗೆ ...

...ಸಂಪಾದಕ...

... ... ಎಚ್ಚರಿಕೆಯಿತ್ತಿದೆ.

ಬ್ರಿಟನ್ನಿನಿಂದ ೬೭ ಲಕ್ಷ ರೂ.ಗಳ ಯಂತ್ರ ಸಾಮಗ್ರಿ

ಸ್ವಂ. ವ.] ಬೆಂಗಳೂರು ೨೮

ಮೈಸೂರು ಸರ್ಕಾರವು ೬೭ ಲಕ್ಷ ರೂ. ಬೆಲೆ ಬಾಳುವ ಯಂತ್ರ ಸಾಮಗ್ರಿಗಳನ್ನು ಬ್ರಿಟನ್ನಿನಿಂದ ತರಿಸಲು ನಿರ್ಧಾರವಾಗಿದೆ. ಕಾಂಡವಾಳವನ್ನು ತಯಾರಿಸುವ ವಿದ್ಯುಚ್ಛಕ್ತಿಯ ಕುಲುಮೆ, ಅಸಿಟಿಕ್ ದ್ರಾವಕ ಮತ್ತು ಸಿಮೆಂಟ್ ತಯಾರಿಕೆಯ ಯಂತ್ರೋಪಕರಣಗಳು ಇವುಗಳಲ್ಲಿ ಮುಖ್ಯವಾದವು. ಹಿಂದೂ ಸ್ಥಾನದಲ್ಲಿ ಅಸಿಟಿಕ್ ದ್ರಾವಕದ ಯಂತ್ರ ಸ್ಥಾಪನೆಯು ಇದೇ ಮೊದಲನೆಯದೆಂದು ಹೇಳಲಾಗಿದೆ.

ಕಛೇರಿಗಳಲ್ಲಿ ಮಂತ್ರಿಗಳು ನೂಲು ತೆಗೆಯುವರು

ನವೆಂಬರ್ ೧ ನೇ ತಾರೀಖಿನಿಂದ ಮದ್ರಾಸಿನ ಮಂತ್ರಿಗಳ ನೈಕ ಸಡೆಯು ಪಕ್ಷ ಇಟ್ಟು ... ವಿರಾಮ ... ಮತ್ತು ನಿಯೋಗದವರು ಸಕ್ರೆಟೇರಿಯಟ್ಟಿಗೆ ಭೇಟಿ ಕೊಟ್ಟಾಗ ನೂಲುತ್ತಿರುತ್ತಾರೆಂದು ಹೇಳಲಾಗಿದೆ. ಇದರಿಂದ ಅವರು ಎಷ್ಟು ಉತ್ಸಾಹದಿಂದ ಖಾದಿ ಯೋಜನೆಯನ್ನು ನಡೆಸುತ್ತಿರುವರೆಂದು ಜನರಿಗೆ ತಿಳಿಯುವುದು. ಅಹಿಂಸಾ ಸಚಿವರೆಂಬ ಭಾವನೆಯೇ ಇದರಲ್ಲಿ ಅಡಗಿದೆಯೆಂದು ತಿಳಿದು ಬಂದಿದೆ.

ಇಂಜನಿಯರಿಂಗ್ ಶಾಲೆಯ ಕಟ್ಟಡಕ್ಕೆ ಸಹಾಯ

ಮೈಸೂರು ೨೮

ರಾಜಧಾನಿಯಲ್ಲಿ ಇತ್ತೀಚೆಗೆ ಸ್ಥಾಪಿಸಲ್ಪಟ್ಟಿರುವ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜನೀಯರಿಂಗ್ ಸಂಸ್ಥೆಯವರು ಕಟ್ಟಡದ ನಿಧಿಗಾಗಿ ಹಣ ಕೇಳುತ್ತಿದ್ದು ... ... ಕಟ್ಟಡಕ್ಕೆ ೬ ಲಕ್ಷ ರೂ. ಉಪಕರಣಗಳು ಮತ್ತು ... ಎರಡು ಲಕ್ಷ ರೂ. ಹೀಗೆ ಒಟ್ಟು ಎಂಟು ಲಕ್ಷ ರೂ.ಗಳು ಬೇಕಾಗಿವೆಯೆಂದು ... ಈ ಶಾಲೆಯಲ್ಲಿ ... ತರಗತಿಯನ್ನು ಮಾತ್ರ ಆರಂಭಿಸಲಾಗಿದೆ. ಮುಂದಿನ ಸಾಲಿನಿಂದ ... ತರಗತಿಗಳನ್ನು ಆರಂಭಿಸಲು ... ನಿರ್ಧರಿಸಿರುವರು. ... ... ತಮ್ಮ ಉದಾರ ... ಅಭಿವೃದ್ಧಿಗೆ ... ಸಂಘದ ಅಧ್ಯಕ್ಷ ... ಪ್ರಸಕ್ತ ಶ್ರೀ ಮೈ. ಕೆ. ... ಪ್ರಾರ್ಥಿಸಿದ್ದಾರೆ.

ತಿರುವಾಂಕೂರಿಗೆ ಪಶ್ಚಿಮ ಆಫ್ರಿಕದ ಸೈನ್ಯ

ತಿರುವಾಂಕೂರು ಸಂಸ್ಥಾನದಲ್ಲಿ ನಡೆಯುತ್ತಿರುವ ಗಲಭೆಗಳನ್ನು ಅಡಗಿಸಲು ೨೫೦ ಸೈನಿಕರನ್ನೊಳಗೊಂಡ ಪಶ್ಚಿಮ ಆಫ್ರಿಕದ ದಳ ಒಂದನ್ನು ವಿಲ್ಲಿಂಗ್‌ಡನ್ ದ್ವೀಪದ ಶಿಬಿರದಿಂದ ರವಾನಿಸಲಾಗಿದೆಯೆಂದು ವರದಿಯಾಗಿದೆ. ಆದರೆ ಸೇತುವೆಗಳನ್ನೂ ಮಾರ್ಗಾನು ಕೂಲಗಳನ್ನೂ ನಾಶಮಾಡಿರುವುದರಿಂದ ಈ ಸೈನ್ಯಗಳು ಅಲ್ಲಿಗೆ ಹೋಗಲು ಅಡಚಣೆಯಾಗಿದೆಯೆಂದು ತಿಳಿದು ಬಂದಿದೆ.

ದಿವಾನರಿಗೆ ಭಾರಿ ಸತ್ಕಾರ

ಸ್ವಂ ಸು. ಪ್ರ.] ಬೆಂಗಳೂರು ೨೮

ನೆನ್ನೆ ಇಲ್ಲಿನ ಲಾಲ್‌ಬಾಗಿನಲ್ಲಿ ೫ ಸಾವಿರ ಜನರ ಸಮ್ಮುಖದಲ್ಲಿ ದಿವಾನರಾದ ಸರ್ ಅರ್ಕಾಟ್‌ರವರಿಗೆ ಬಿನ್ನವತ್ತಳೆಯನ್ನು ಅರ್ಪಿಸಲು ಭಾರಿ ಸಮಾರಂಭವು ಜರುಗಿತು. ಶ್ರೀ ದೇವರಾವ್ ಶಿವರಾಂರವರು ಇಂಗ್ಲೀಷಿನಲ್ಲಿಯೂ ಮಿ॥ ಅಬ್ದುಲ್ ಖಾನರು ಉರ್ದುವಿನಲ್ಲಿಯೂ, ಶ್ರೀ ಗುರುವಾರೆಡ್ಡಿಯವರು ಕನ್ನಡದಲ್ಲಿಯೂ ಬಿನ್ನವತ್ತಳೆಗಳನ್ನು ಓದಿ ಶ್ರೀ ಮೊದಲಿಯಾರರು ದೇಶ ವಿದೇಶಗಳಲ್ಲಿ ಮಾಡಿರುವ ಕಾರ್ಯವನ್ನು ಕೊಂಡಾಡಿದರು. ೩ ಸಾವಿರ ರೂ. ಬೆಲೆ ಬಾಳುವ ರಜತ ಕರಂಡವನ್ನು ದಿವಾನರಿಗೆ ಕೊಡಲಾಯಿತು. ದಿವಾನರು ತಮ್ಮ ಕೃತಜ್ಞತೆಯನ್ನು ಸೂಚಿಸಿ ಸೇವಾ ಕಾಂಕ್ಷೆಯಿಂದ ತಾವು ಮೈಸೂರಿಗೆ ಬಂದಿರುವುದಾಗಿಯೂ ಸಕಲ ಜನರ ಹಿತಸಾಧನೆಯೇ ತಮ್ಮ ಧ್ಯೇಯವೆಂದೂ ಹೇಳಿದರು. ಕೆಲವು ದಿನಗಳಲ್ಲಿಯೇ ದಂಡ. ಮೈಸೂರಿಗೆ ಸೇರುವುದು ... ಸ್ವಾತಂತ್ರ್ಯ ... ಇಂಡಿಯಾ ... ... ಭಟ್ಕಳ್ ... ಸಹ ಮೈಸೂರಿಗೆ ಲಭಿಸಲಿರುವುದ... ಸೂಚಿಸಿದರು. ರಾಜಕೀಯ ಧೋರಣೆಯಲ್ಲಿ ಇತರರನ್ನು ಅನುಸರಿಸದೆ ಮೈಸೂರು ತನ್ನದೇ ಆದ ಸ್ವಂತ ಮಾರ್ಗವನ್ನು ಅವಲಂಬಿಸಬೇಕೆಂದು ಹೇಳಿದರು. ಕೇಂದ್ರದಲ್ಲಿ ಹಿಂದೂ ಮುಸ್ಲಿಂ ಪಕ್ಷಗಳನ್ನು ಸೇರಿಸಿದುದಕ್ಕಾಗಿ ಮೈಸೂರು ಜನರನ್ನು ಅಭಿನಂದಿಸಿದರು. ... ... ಸಮಾರಂಭವು ಮುಕ್ತಾಯವಾಯಿತು.

ಉಪಮೇಯರ್ ರಾಜೀನಾಮೆ ವಾಪಸು

ಮೈಸೂರು ೨೮

ರಾಜಧಾನಿಯ ಪುರಸಭಾ ಚುನಾವಣೆಗೆ ಮುಂಚಿನಿಂದಲೂ ... ಸ್ವತಂತ್ರರಾಗಿ ಸ್ಪರ್ಧಿಸಿದ್ದ ಮಿ॥ ಮೀರ್ ನೂರ್ ಹುಸೇನ್ ಮತ್ತು ಮಿ॥ ... ತಮ್ಮ ಉಪಮೇಯರ್ ರಾಜೀನಾಮೆಯನ್ನು ಈ ದಿನ ವಾಪಸು ತೆಗೆದುಕೊಂಡಿರುವರು.

ಶಂಕರಪ್ಪ ದಿನಾಚರಣೆ

ಮೈಸೂರು ನಗರದ ವಿದ್ಯಾರ್ಥಿ ಕಾಂಗ್ರೆಸ್ಸಿನ ಆಶ್ರಯದಲ್ಲಿ ನಾಳೆ ಸಂಜೆ ೬-೩೦ಕ್ಕೆ ಟೌನ್ ಹಾಲ್ ಮೈದಾನದಲ್ಲಿ ... ಶಂಕರಪ್ಪನ ದಿನವನ್ನಾಚರಿಸಲಾಗುವುದು. ಈ ಬಗ್ಗೆ ... ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯಾಲಯದಿಂದ ... ಹೊರಡಲಿದೆ. ಸಕಲ ವಿದ್ಯಾರ್ಥಿಗಳೂ ಸಾರ್ವಜನಿಕರೂ ಭಾಗವಹಿಸಬೇಕಾಗಿ ಕೋರಲಾಗಿದೆ.

... ...

ಸಾಧ್ವಿ

ತಾ|| ೨೮-೧೦-೪೬ ಸೋಮವಾರ

ಈ ಅಪಸ್ವರವೇಕೆ ?

ರಾಜಧಾನಿಯಲ್ಲಿ ನಡೆಯಲಿರುವ ಪೌರಸಭೆಯ ಚುನಾವಣೆಗಳಲ್ಲಿ ಕಾಂಗ್ರೆಸ್ಸು ಭಾಗವಹಿಸುವ ವಿಚಾರದಲ್ಲಿ ಹಲವು ಕಾಂಗ್ರೆಸ್ ಕೆಲಸಗಾರರು ಅಪಸ್ವರವನ್ನು ಹಾಡುತ್ತಿರುವಂತೆ ಕಂಡು ಬರುತ್ತಿದೆ. ಕಾಂಗ್ರೆಸ್ಸಿನವರಲ್ಲದವರು ಅಥವಾ ಕಾಂಗ್ರೆಸ್ಸಿಗೆ ವಿರೋಧವಾಗಿ ನಿಂತಿರುವವರು ಈ ಬಗೆಯ ಅಪಪ್ರಚಾರಗಳಲ್ಲಿ ತೊಡಗುವುದು ಸಹಜವಾಗಿದೆ. ಆದರೆ ಕಾಂಗ್ರೆಸ್ಸಿನ ಕೆಲಸಗಾರರೆಂದೆನಿಸಿಕೊಳ್ಳುವವರು ಹೀಗೆ ಪ್ರವರ್ತಿಸುವುದು ಆಶ್ಚರ್ಯಕರವಾಗಿದೆ.

ಮೈಸೂರು ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಯ ಅಧ್ಯಕ್ಷರಾದ ಶ್ರೀ ಟಿ. ಸುಬ್ರಹ್ಮಣ್ಯಂರವರು ಈ ವಿಷಯದಲ್ಲಿ ಕಾಂಗ್ರೆಸ್ಸಿನ ನೀತಿಯನ್ನು ಖಚಿತವಾಗಿ ವಿವರಿಸಿದ್ದಾರೆ. ಸ್ಥಳೀಯ ಸಂಸ್ಥೆಗಳಿಗೂ, ಶಾಸನ ಸಭೆಗಳಿಗೂ ಕಾಂಗ್ರೆಸ್ಸಿನ ಪರವಾಗಿ ಪ್ರತಿನಿಧಿಗಳನ್ನು ಆರಿಸಿ ಕಳುಹಿಸುವುದು ಕಾಂಗ್ರೆಸ್ಸಿನ ಅಂಗೀಕೃತವಾದ ನೀತಿಯೆಂದು ಸ್ಪಷ್ಟವಾಗಿ ತಿಳಿಸಿದ್ದಾರೆ. ಇದರ ಮೇಲಾದರೂ ಇಂತಹ ಅಪಸ್ವರಗಳು ತಣ್ಣಗಾಗಬೇಕಾದುದು ಯುಕ್ತವಾಗಿದೆ.

ಪೌರಸಭಾ ಚುನಾವಣೆಯಲ್ಲಿ ಭಾಗವಹಿಸಬೇಕೇ, ಬೇಡವೇ ಎಂಬ ವಾದವು ಬೆಂಗಳೂರಿನಲ್ಲಿ ಕಳೆದ ಸಾರಿ ಪೌರಸಭಾಧ್ಯಕ್ಷ ಚುನಾವಣೆ ನಡೆದಾಗ ಆರಂಭವಾಯಿತು. ಅದರ ಜ್ವಾಲೆಯು ಬಹಳ ದೂರ ವಿಸ್ತರಿಸಿ ಅನೇಕ ವಾದ ವಿವಾದಗಳಿಗೂ ಕಾರಣವಾಯಿತು. ಅನಂತರ ಶಿವಮೊಗ್ಗೆಯಲ್ಲಿ ನಡೆದ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಅಧಿವೇಶನದಲ್ಲಿ ಆ ಪ್ರಕರಣವು ಮುಕ್ತಾಯ ಹೊಂದಿತು. ಆದರೂ ಅದರ ಹೊಗೆ ಮಾತ್ರ ಇನ್ನೂ ಅಲ್ಲಲ್ಲಿ ಕಂಡು ಬರುತ್ತಲೇ ಇದೆ. ರಾಜಧಾನಿಯಾದ ಮೈಸೂರಿನಲ್ಲೂ ಇದು ನಡೆದಿರುವಂತೆ ಕಂಡು ಬರುತ್ತದೆ. ನಿಜವಾದ ಕಾಂಗ್ರೆಸ್ ಭಕ್ತರೆಲ್ಲರೂ ಇದನ್ನು ಯುಕ್ತ ಕಾಲದಲ್ಲಿಯೇ ತಡೆಗಟ್ಟಿ ಹೆಚ್ಚು ಅನರ್ಥವಾಗದಂತೆ ಎಚ್ಚರಿಸಬೇಕು.

ಕಾಂಗ್ರೆಸ್ಸಿನ ಸೂತ್ರಧಾರಿಗಳೆಂದೆನಿಸಿಕೊಂಡಿರುವ, ವಿಧಾಯಕವಾದ ಒಂದು ಕಾರ್ಯಕ್ರಮದಲ್ಲಿ ತಮಗೆ ಒಮ್ಮೆ ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ, ಶಿಸ್ತಿನ ಸೇವಕರಂತೆ ಅದರಲ್ಲಿ ಸಂಪೂರ್ಣವಾಗಿ ನಿರ್ವಂಚನೆಯಿಂದ ಸೇವೆ ಸಲ್ಲಿಸುವುದು ಸಂಸ್ಥೆಗೆ ಸೇರಿದ ಪ್ರತಿಯೊಬ್ಬ ಸದಸ್ಯರ ಪ್ರಥಮ ಕರ್ತವ್ಯ. ಉದಾಹರಣೆಗಾಗಿ ಅಖಿಲ ಭಾರತ ಕಾಂಗ್ರೆಸ್ಸಿನ ಹಲವು ಪಾರ್ಲಿಮೆಂಟರಿ ಕಾರ್ಯಕ್ರಮದಲ್ಲಿ ಪೂರ್ಣ ವಿಶ್ವಾಸವಿಲ್ಲದಿರುವ ಸಮಾಜವಾದಿಗಳೇ ಮುಂತಾದ ಪ್ರಗತಿಗಾಮಿಗಳನ್ನು ತೆಗೆದುಕೊಳ್ಳಬಹುದು. ತಮ್ಮ ಸ್ವಂತ ಅಭಿಪ್ರಾಯಗಳು ಎಷ್ಟೇ ತೀವ್ರವಾಗಿದ್ದರೂ ಅವರು ಸಂಸ್ಥೆಯ ಅಂಗೀಕೃತವಾದ ನಿರ್ಧಾರಕ್ಕೆ ತಲೆ ಬಾಗಿ ಶಿಸ್ತಿನ ಸ್ವಯಂ ಸೇವಕರಂತೆ ಕಾಂಗ್ರೆಸ್ಸಿನ ಕಾರ್ಯಕ್ರಮಗಳಲ್ಲೆಲ್ಲಾ ತನು ಮನ ಧನಗಳಿಂದ ಸೇವೆ ಸಲ್ಲಿಸುತ್ತಿರುವರು. ಪ್ರತಿಯೊಂದು ಸುಸಂಘಟಿತ ಸಂಸ್ಥೆಯೂ ಅನುಸರಿಸಬೇಕಾದ ನೀತಿಯೇ ಇದು. ಪ್ರಗತಿ ಮಾರ್ಗಾವಲಂಬಿಗಳಾದ ನಮ್ಮ ಸಹೋದರರೂ ಈ ಕ್ರಮವನ್ನು ಅನುಸರಿಸಬಾರದೇ ?

ಕಾಂಗ್ರೆಸ್ ಸಂಸ್ಥೆಯ ನೀತಿಗೆ ವಿರುದ್ಧವಾಗಿ ಹೋಗುವುದು ಯಾವ ಕಾಂಗ್ರೆಸ್ ಭಕ್ತನಿಗೂ ತರವಲ್ಲ. ಅವಶ್ಯಕವಿದ್ದರೆ ಕಾಂಗ್ರೆಸ್ಸಿನ ನೀತಿಯನ್ನೇ ಬದಲಾಯಿಸಲು ಅವರು ಪ್ರಯತ್ನಿಸಬಹುದು. ಅದು ಬದಲಾಯಿಸಲ್ಪಡುವವರೆಗೆ ಇಂದಿನ ನೀತಿಗೆ ಅನುಗುಣವಾಗಿ ವರ್ತಿಸಬೇಕು. ಇಲ್ಲದಿದ್ದರೆ ಕಾಂಗ್ರೆಸ್ಸಿನ ವಿರೋಧಿಗಳಿಗೆ ಅವರು ನೆರವು ನೀಡಿದಂತಾಗುತ್ತದೆ. ಕಾಂಗ್ರೆಸ್ಸಿನಲ್ಲಿಯಾಗಲೀ ಅಥವಾ ಕಾಂಗ್ರೆಸ್ ವ್ಯಕ್ತಿಗಳಲ್ಲಿಯಾಗಲೀ ಇರಬಹುದಾದ ಲೋಪದೋಷಗಳನ್ನು ನಿವಾರಿಸಲು ಅಸಹಕಾರವು ಸರಿಯಾದ ಮಾರ್ಗವಲ್ಲ. ಸಂಸ್ಥೆಯ ನಿಯಮಗಳ ಪ್ರಕಾರ ಸರಿ ಅಂಶಗಳನ್ನು ಕ್ರಮಗೊಳಿಸಲು ಇರುವ ಅವಕಾಶವನ್ನು ಅವರು ಉಪಯೋಗಿಸಿಕೊಳ್ಳಬೇಕು.

ಕಾಂಗ್ರೆಸ್ಸಿನ ಉದಾತ್ತ ಧ್ಯೇಯ ಸಾಧನೆಗಾಗಿ ಅಸಂಖ್ಯಾತರಾದ ವೀರ ದೇಶಾಭಿಮಾನಿಗಳ ಬಲಿದಾನದಿಂದ ನಿರ್ಮಿತವಾಗಿರುವ ಪವಿತ್ರ ಸಂಸ್ಥೆ. ಶಿಸ್ತು, ಸಂಘಟನೆ, ಸೇವೆ ಮತ್ತು ತ್ಯಾಗಗಳೇ ಅದರ ಹೆಗ್ಗುರುತು. ಅಲ್ಪ ಕಾರಣಗಳಿಗಾಗಿ ಈ ಮಹಾಸಂಸ್ಥೆಯಲ್ಲಿರುವ ಘನತೆ, ಗೌರವ ಮತ್ತು ಸ್ವಾಭಿಮಾನಗಳನ್ನು ಕಾಂಗ್ರೆಸ್ಸಿನವರೇ ಆದ ಕೆಲಸಗಾರರು ಬಲಿ ಕೊಡಬಾರದೆಂಬುದೇ ನಮ್ಮ ವಿನಯ ಪ್ರಾರ್ಥನೆ.

ವಾರ ಭವಿಷ್ಯ

೨೮-೧೦-೪೬ ರಿಂದ ೪-೧೧-೪೬ ರವರೆಗೆ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ಮೇಷ—ಆರೋಗ್ಯ ಚೆನ್ನಾಗಿರುತ್ತದೆ. ಧನಾದಾಯ ಸಾಧಾರಣ. ಮಿತ್ರರಿಂದ ವಿರೋಧ. ವ್ಯಾಪಾರಾದಿಗಳಲ್ಲಿ ಸೋಲು. ತಾ|| ೨೯-೩-೩ ಸಾಧಾರಣ. ಖರ್ಚು ಹೆಚ್ಚು.

ವೃಷಭ—ಆರೋಗ್ಯ ಉತ್ತಮ. ಮಾನಸಿಕ ಅಶಾಂತಿ, ವ್ಯಾಪಾರಾದಿಗಳಲ್ಲಿ ಯಶ. ವ್ಯವಹಾರಗಳಲ್ಲಿ ಚಿಂತೆ, ಪ್ರವಾಸ, ಖರ್ಚು ಅಧಿಕ. ತಾ|| ೨೮-೩೦-೩೧ ತ್ರಾಸ, ವಿರೋಧ.

ಮಿಥುನ—ಶಾರೀರಕ ಸೌಖ್ಯ ಚೆನ್ನಾಗಿರುತ್ತದೆ. ಧನಾದಾಯ ಹೆಚ್ಚು. ಖರ್ಚು ಅಧಿಕ. ಉದ್ಯೋಗವ್ಯವಹಾರದಲ್ಲಿ ಹೆಚ್ಚಿನ ಸೋಲು, ಅಧಿಕಾರಿ ವರ್ಗದವರಿಂದ ತೊಂದರೆ. ತಾ|| ೨೮-೩೧-೩ ಸಾಧಾರಣ. ದೂರಪ್ರವಾಸ.

ಕಟಕ—ಆರೋಗ್ಯ ಚೆನ್ನಾಗಿರಲಾರದು. ಉದ್ಯೋಗವ್ಯವಹಾರಗಳಲ್ಲಿ ಏಳಿಗೆ. ಅಧಿಕಾರಿ ವರ್ಗದವರಿಂದ ಹೆಚ್ಚಿನ ಗೌರವ. ಮಿತ್ರರಿಂದ ಸಹಾಯ. ತಾ|| ೨೯-೧-೪ ಅಶಾಂತಿ, ದುಃಖವಾರ್ತೆ.

ಸಿಂಹ—ದೇಹಾರೋಗ್ಯ ಚೆನ್ನಾಗಿರುತ್ತದೆ. ಖರ್ಚು ಹೆಚ್ಚು. ಅಧಿಕಾರಿಗಳಿಂದ ಪ್ರೀತಿ. ಶತ್ರುಗಳಿಂದ ತೊಂದರೆ. ಮಿತ್ರರಿಂದ ಸಹಾಯ. ತಾ|| ೩೧-೧-೪ ಸುಖ, ಶಾಂತಿ.

ಕನ್ಯಾ—ಶಾರೀರಕ ಸ್ಥಿತಿ ಸಾಧಾರಣ. ಧನಾಭಾವ. ಕೆಲಸಕಾರ್ಯಗಳಲ್ಲಿ ಸೋಲು. ಮಾರಿಕೆ, ಬಂಧುವರ್ಗದವರಿಂದ ತಿರಸ್ಕಾರ. ತಾ|| ೨೯-೩೦ ೩-೪ ಸಾಧಾರಣ, ಶಾಂತಿ. ಪ್ರವಾಸ.

ತುಲಾ—ಕುಟುಂಬದವರ ಆರೋಗ್ಯ ಕೆಡುತ್ತದೆ. ಔಷಧೋಪಚಾರಗಳಿಗಾಗಿ ಖರ್ಚು ಹೆಚ್ಚಾಗುತ್ತದೆ. ವ್ಯವಹಾರಗಳಲ್ಲಿ ಮಿಶ್ರಫಲ. ಒಟ್ಟಿನಲ್ಲಿ ಮನಸ್ಸಿಗೆ ಚಿಂತೆ ಹೆಚ್ಚು. ತಾ|| ೨೯-೩-೪ ಸಾಧಾರಣ ಶಾಂತಿ, ಮಿತ್ರರಿಂದ ಸನ್ಮಾನ.

ವೃಶ್ಚಿಕ—ಆರೋಗ್ಯ ಚೆನ್ನಾಗಿರುತ್ತದೆ. ಧನಾದಾಯ ಉತ್ತಮ. ವ್ಯಾಪಾರಾದಿಗಳಲ್ಲಿ ಯಶ, ಮೇಲ್ಪಟ್ಟವರಿಂದ ಸನ್ಮಾನ. ಮಿತ್ರರಿಂದ ಸಹಾಯ. ತಾ|| ೩೧-೩-೩ ಸಂತೋಷ, ಪ್ರವಾಸ.

ಧನುಸ್ಸು—ಆರೋಗ್ಯ ಸಾಧಾರಣ. ಧೀರ್ಘಸ್ಥಿತಿ ಸುಧಾರಿಸುತ್ತದೆ. ವ್ಯವಹಾರ ಉದ್ಯೋಗಗಳೂ ಸಾಮಾನ್ಯವಾಗಿ ದಾಯಕವಾಗಿಯೇ ಇರುತ್ತವೆ. ಶತ್ರುಗಳ ಪದೇಪದೇ ತೊಂದರೆಗಳು ಬರುವುವು. ತಾ|| ೨೯-೧-೨ ಸಾಧಾರಣ.

ಮಕರ—ದೇಹಾರೋಗ್ಯ ಉತ್ತಮ. ಸಾರ್ವಜನಿಕ ಕಾರ್ಯಕಲಾಪಗಳಲ್ಲಿ ಹೆಚ್ಚಿನ ಆಸಕ್ತಿ ಮತ್ತು ಖರ್ಚು. ಅಧಿಕಾರಿಗಳಿಂದ ತೊಂದರೆ. ತಾ|| ೩೧-೩ ಸಾಧಾರಣ ಲಾಭ, ಸಂತೋಷ.

ಕುಂಭ—ದೈಹಿಕ ಪ್ರಕೃತಿ ಉತ್ತಮ. ಮಾನಸಿಕ ಚಿಂತೆ ಜಾಸ್ತಿ. ಆರ್ಥಿಕ ಸ್ಥಿತಿ ಬಹಳ ಚೆನ್ನಾಗಿದೆ. ಖರ್ಚು ಅಧಿಕ. ವ್ಯವಹಾರಾದಿಗಳಲ್ಲಿ ಹೆಚ್ಚಿನ ಆಸಕ್ತಿ. ತಾ|| ೪ ಯಶ, ಅನಿರೀಕ್ಷಿತ ಲಾಭ.

ಮೀನ—ಆರೋಗ್ಯ, ಸಾಂಪತ್ತಿಕ ಸ್ಥಿತಿಗಳು ಬಹಳ ಚೆನ್ನಾಗಿವೆ. ಆದರೆ ಮಿತ್ರರಿಂದಲೂ, ಬಂಧುಗಳಿಂದಲೂ ಮನಸ್ಸಿಗೆ ಅಶಾಂತಿ ಹೆಚ್ಚುವುದು. ಅಧಿಕಾರಿ ವರ್ಗದವರಿಂದ ವಿಶೇಷ ಸನ್ಮಾನ. ತಾ|| ೨೮-೩ ಉನ್ನತಾಧಿಕಾರಿಗಳೊಡನೆ ಭೇಟಿ, ಹೆಚ್ಚು ಖರ್ಚು.

● ಮಹಾತ್ಮ ಗಾಂಧಿಯವರು ಅನೇಕರಿಗೆ ಕಳುಹಿಸಿರುವ ಒಂದು ಸಂದೇಶದಲ್ಲಿ ಧನದ ಪೂಜೆಯನ್ನು ತ್ಯಜಿಸಿ, ಬಡವರೊಳಗೆ ದೇವರಿಗೆ ಒಂದು ಸ್ಥಾನವನ್ನು ಕಲ್ಪಿಸುವಂತೆ ಸೂಚಿಸಿರುತ್ತಾರೆ.

ನಿಮ್ಮ ಮೈ ಮೊಗವುಲ್ಲಿನಂತೆ ಹೊಳೆಯಬೇಕೆ ? ನೀವು ಲಾವಣ್ಯ ಮೂರ್ತಿಗಳಾಗಬೇಕೆ ? ಹಾಗಾದರೆ ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ !

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ. ಪರೀಕ್ಷಿಸಿ ನೋಡಿರಿ ಎಲ್ಲೆಲ್ಲೂ ದೊರೆಯುತ್ತದೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

Edited, printed and published by A. R. Nagarajan at the Sadhvi Press D Subbiah Road, Mysore

|| ವಂದೇಮಾತರಂ ||

ಕಾಂಗ್ರೆಸ್ ಉಮೇದುವಾರರಿಗೇ ಓಟು ಕೊಡಿ !

ರಾಜಧಾನಿಯ ಮತದಾರರಲ್ಲಿ ವಿನಂತಿ

ಬರುವ ನವೆಂಬರ್ ೧೪ ನೇ ತಾ|| ಗುರುವಾರ ನಡೆಯಲಿರುವ ಪೌರಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದುವಾರರಿಗೇ ಓಟು ಕೊಟ್ಟು ಅವರನ್ನು ಚುನಾಯಿತರನ್ನಾಗಿ ಮಾಡಬೇಕೆಂದು ವಿನಯ ಪ್ರಾರ್ಥನೆ

ನಗರ ಚುನಾವಣಾ ಉಪಸಮಿತಿ

ಉಜ್ವಲ ಸತೀತ್ವಕ್ಕೆ

ಪಂಡಿತ ಡಿ. ಗೋಪಾಲಾಚಾರ್ಲು ಅವರ

ಅಶೋಕಾರಿಷ್ಟ

ಗರ್ಭಾಶಯರೋಗ ನಿವಾರಿಣಿ

ತರುಣ ಸ್ತ್ರೀಯರು ದೇಹವನ್ನು ನಿರ್ಮೂಲಿಸಿ ಪೂರ್ಣ ಸ್ತ್ರೀತ್ವವನ್ನು ಸಾಧಿಸುವ ಸ್ವಯಂಪೂರ್ಣವಾದ ದಿವ್ಯೌಷಧವನ್ನು ಬಿಡದೆ ಸೇವಿಸಿದರೆ, ನಿಮ್ಮ ಜೀವನವು ಪರಮಾವಧಿಯಾದ ಆನಂದವನ್ನು ಒದಗಿಸಬಲ್ಲುದು.

ಆಯುರ್ವೇದಾಶ್ರಮಂ ಲಿಮಿಟೆಡ್

ಟಿ-ನಗರ್.... ಮದರಾಸ್

ರೋ||. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಮಂಗಳವಾರ ೨೯—೧೦—೪೬ [ಸಂಚಿಕೆ ೭೫

ಪಂಡಿತ ನೆಹರೂ ನಾಮಕರಣ ಸದಸ್ಯರೇ?

೩ ತಿಂಗಳ ಹಿಂದೆ ಬೋಸ ರಿಂದ ಸಂದೇಶ

ಫಾರ್ವರ್ಡ್ ಬ್ಲಾಕಿನ ಅಧ್ಯಕ್ಷರಾದ ಸರ್ದಾರ್ ಶಾರ್ದೂಲಸಿಂಗರು ಒಂದು ಹೇಳಿಕೆ ಹೊರಡಿಸಿ ಮೂರು ತಿಂಗಳ ಹಿಂದೆ ನೇತಾಜಿಯವರಿಂದ ಫಾರ್ವರ್ಡ್ ಬ್ಲಾಕಿನವರಿಗೆ ಸಂಜ್ಞಾ ಪ್ರಕರಣದ ಸಂದೇಶವೊಂದು ಬಂದಿತ್ತೆಂದು ತಿಳಿಸಿರುವರು. ನೇತಾಜಿಯವರು ಖಂಡಿತ ಬದುಕಿದ್ದಾರೆ; ಬ್ರಿಟಿಷ್ ಸರ್ಕಾರಕ್ಕೂ ಕಾಂಗ್ರೆಸ್ಸಿಗೂ ಕ್ಯಾಬಿನೆಟ್ ಮಿಷನ್ ನಿರ್ಧಾರದ ಮೇಲೆ ಒಪ್ಪಂದವಾದಾಗಲೀ ಅಥವಾ ಅಂತಿಮ ಹೋರಾಟಕ್ಕೆ ಕಾಂಗ್ರೆಸ್ ಸಿದ್ಧವಾಗಿರುವುದಾಗಿ ತಿಳಿಸಿದಾಗ ಬೋಸರು ಬರುವರು ಎಂದು ಅವರು ಹೇಳಿರುವರು.

ಪ್ರತಿಯೊಬ್ಬರ ಮೇಲೂ ಪೋಲೀಸ್ ಪಹರೆ

ಸರ್ಕಾರದವರು ಪ್ರಜೆಗಳ ಆಸ್ತಿ ಮತ್ತು ಪ್ರಾಣಗಳಿಗೆ ಹೊಣೆಯಾಗಿರುವುದರಿಂದ ಇನ್ನು ಯಾರು ಗಲಭೆಗಳೇನಾದರೂ ಹಚ್ಚಿದರೆ ಅವರಲ್ಲಿ ಪ್ರತಿಯೊಬ್ಬ ಪ್ರಜೆಯ ಮೇಲೆ ಒಬ್ಬೊಬ್ಬ ಪೋಲೀಸಿನವನನ್ನು ಕಾವಲಿಡಲಾಗುವುದು ಮತ್ತು ಅದಕ್ಕಾಗಿ ಸರ್ಕಾರಕ್ಕೆ ತಗುಲತಕ್ಕ ಹೆಚ್ಚಿನ ವೆಚ್ಚವನ್ನು ಪೌರರು ವಹಿಸಬೇಕಾಗುವುದು, ತಪ್ಪಿಗೆ ಕಠಿಣವಾದ ಶಿಕ್ಷೆ ವಿಧಿಸಲಾಗುವುದು ಎಂದು ಸಂಯುಕ್ತ ಪ್ರಾಂತ್ಯದ ಪ್ರಧಾನಿ ಪಂಡಿತ ಗೋವಿಂದ ವಲ್ಲಭಪಂತರು ಎಚ್ಚರಿಕೆ ಕೊಟ್ಟಿರುತ್ತಾರೆ.

ಕೇಂದ್ರ ಶಾಸನ ಸಭೆ

ನವೆಂಬರ್ ೫ರಿಂದ ದೆಹಲಿಯಲ್ಲಿ ಕೇಂದ್ರ ಶಾಸನ ಸಭೆಯು ಆರಂಭವಾಗಿರುವುದು. ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗಿನವರು ಸರ್ಕಾರದಲ್ಲಿ ಸೇರಿರುವುದರಿಂದ ಈ ಎರಡು ಪಕ್ಷಗಳವರೂ ಸರ್ಕಾರವನ್ನು ವಿರೋಧಿಸುವುದಿಲ್ಲ. ವಿರೋಧ ಪಕ್ಷದಲ್ಲಿ ೩೦ ಮಂದಿ ಮಾತ್ರ ವಿರೋಧ ಪಕ್ಷದವರೆಂದು ಹೇಳಲಾಗಿದೆ. ಇದೇ ಮೊದಲನೆಯದಾಗಿ ಈ ಸಭೆಯಲ್ಲಿ ಸರ್ಕಾರದ ಪರವಾಗಿ ವಿರೋಧ ಸದಸ್ಯರು ಇರುವುದಿಲ್ಲ. ಕಾಂಗ್ರೆಸ್ ಪಕ್ಷವನ್ನು ನಿಲುವಳಿ ನಿರ್ಣಯಗಳನ್ನೆಲ್ಲ ವಾಪಸು ತೆಗೆದುಕೊಂಡಿರುವರು ಕೇವಲ ಕೆಲವೇ ವಾರಗಳಲ್ಲಿ ಅಧಿವೇಶನವು ಮುಕ್ತಾಯವಾಗುವುದೆಂದು ನಿರೀಕ್ಷಿಸಲಾಗಿದೆ.

ಎನ್ಸ್ಲೆ ಕೊಳದ ಪತ್ತೆ

ನೂರಾರು ವರ್ಷಗಳ ಹಿಂದೆ ಸ್ನಾನ ಪಾನಾದಿಗಳಿಗೆ ಉಪಯೋಗಿಸುತ್ತಿದ್ದ ಒಂದು ದಮಾಸ್ಕಸ್ಸಿನ ಬಳಿ ಇರುವುದು ಪತ್ತೆಯಾಗಿದೆ. ಬಂಡಿಯ ಕೊಳದ ಮೇಲೆ ನೀರು ಈಗಲೂ ಬರುತ್ತಿದೆ. ಅದರ ಕಟ್ಟಡವು ಕಟ್ಟಲ್ಪಟ್ಟಿದೆ. ಇದರಲ್ಲಿ ಹೇರಳವಾದ ಎಣ್ಣೆ ಸಿಗಬೇಕೆಂದು ಭೂಶಂಶೋಧಕರು ಅಭಿಪ್ರಾಯಪಟ್ಟಿರುತ್ತಾರೆ.

|| ಜೈ ಹಿಂದ್ ||

ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಿದ ಪುಣ್ಯ ಸ್ಮರಣೀಯ

ಶಂಕರಪ್ಪನಿಗೆ

ಅನಂತ ಪ್ರಣಾಮಗಳು.

ವಿದ್ಯಾರ್ಥಿ ಕಾಂಗ್ರೆಸ್, ತಿಲಕ್ ಸಂಘ.

ಶಂಕರಪ್ಪಾ ಸ್ಮಾರಕ ದಿನಾಚರಣೆ

ಮೈಸೂರು ೨೮

ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ಸಿನ ಆಶ್ರಯದಲ್ಲಿ ಈ ದಿನ ಬೆಳಿಗ್ಗೆ, ಶಂಕರಪ್ಪ ಸ್ಮಾರಕ ದಿನಾಚರಣೆ ಅಂಗವಾಗಿ, ಸುಬ್ಬರಾಯನಕೆರೆಯಲ್ಲಿ ಧ್ವಜ ವಂದನೆಯು ನಡೆಯಿತು. ಅಖಿಲ ಕರ್ನಾಟಕ ವಿದ್ಯಾರ್ಥಿ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಜಾರನಹಳ್ಳಿ ರಾಮಸ್ವಾಮಿಯವರು, ಧ್ವಜಾರೋಹಣ ಮಾಡಿ, ವಿದ್ಯಾರ್ಥಿಗಳೆಲ್ಲರೂ, ಹುತಾತ್ಮ ಶಂಕರಪ್ಪನನ್ನೇ ಆದರ್ಶವನ್ನಾಗಿಟ್ಟುಕೊಂಡು ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ದುಡಿಯಬೇಕೆಂದು ಹೇಳಿದರು.

ಅಪೀಲು ವಜಾ

ಪುರಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪರವಾಗಿ ಸ್ಪರ್ಧಿಸಲು ಅರ್ಜಿ ಹಾಕಿಕೊಂಡಿದ್ದ ಶ್ರೀಗಳಾದ ಎ. ರಾಮಣ್ಣ, ಎಂ. ಆರ್. ಸಿ ಬಸಪ್ಪ ಮತ್ತು ಶ್ರೀ ಜನಾರ್ದನನಾಯ್ಡುರವರುಗಳ ಅರ್ಜಿಗಳನ್ನು ಚುನಾವಣಾ ಸಮಿತಿಯವರು ಅಂಗೀಕರಿಸಿರಲಿಲ್ಲವಷ್ಟೆ. ಇವರುಗಳು ಈ ವಿಚಾರದಲ್ಲಿ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್ ನಿಜಲಿಂಗಪ್ಪನವರಿಗೆ ಅಪೀಲು ಮಾಡಿದ್ದರು. ಅಧ್ಯಕ್ಷರು ತನಿಖೆಯ ನಂತರ ಅವರುಗಳ ಅಪೀಲನ್ನು ವಜಾ ಮಾಡಿರುತ್ತಾರೆ

ನಗರ ಪರಿಶೀಲನೆ

ಹೊಸ ಪೌರಸಭಾಧ್ಯಕ್ಷರಾದ ಶ್ರೀ ಎಂ ಮಾಧವರಾಯರು, ವೈಸ್ ಪ್ರೆಸಿಡೆಂಟ್ ಮತ್ತು ಮುನಿಸಿಪಲ್ ಇಂಜನಿಯರೊಡನೆ ಈ ದಿನ ಪ್ಲೇಗ್ ತಲೆದೋರಿರುವ ಮಂಡಿ, ಲಷ್ಕರ್ ಮತ್ತು ನಜರ್‌ಬಾದ್ ಮೊಹಲ್ಲಾಗಳಲ್ಲಿ ಸಂಚರಿಸಿ ಪ್ರೈಸೋಗ್ರ್ಯಾಸಿಂಗ್ ಮತ್ತು ಇನಾಕ್ಯುಲೇಷನ್ ಕಾರ್ಯಕ್ರಮಗಳನ್ನು ಪರಿಶೀಲಿಸಿ ಪ್ಲೇಗನ್ನು ತಡೆಗಟ್ಟಲು ಸೂಕ್ತ ಸಲಹೆಗಳನ್ನು ಕೊಟ್ಟರು ಕೆಲವು ಹೋಟೆಲುಗಳನ್ನೂ ಸಹ ಪರೀಕ್ಷಿಸಿದರು

ಸುಭಾಷ್ ನಗರ

ಈಗ ಕಾಂಗ್ರೆಸ್ ಅಧಿವೇಶನಕ್ಕಾಗಿ ಧಲ್ಯಾಂಬುಧಿಕೆರೆಯ ಮೈದಾನದಲ್ಲಿ ಸುಭಾಷ್ ಚಂದ್ರ ಬೋಸರ ಹೆಸರಿನಲ್ಲಿ ನಗರ ನಿರ್ಮಾಣವಾಗುತ್ತಿದೆಯಷ್ಟೆ. ಈಗ್ಗೆ ೧೫ ವರ್ಷಗಳ ಹಿಂದೆ ಪಂಡಿತ ನೆಹರೂರವರು ನಮ್ಮ ಪಟ್ಟಣಕ್ಕೆ ಬಂದಾಗ ಮತ್ತು ಸ್ವತಂತ್ರ ಇಂಡಿಯಾ ಪ್ರಿಯದರ್ಶಿನಿಯವರೊಡನೆ ಇದೇ ಸ್ಥಳದಲ್ಲಿ ಧ್ವಜಾರೋಹಣ ಮಾಡಿ ಆ ಸಭೆಯಲ್ಲಿ ಸ್ವಾತಂತ್ರ್ಯ ಸಂದೇಶವನ್ನು ನಾಗರೀಕರಿಗೆ ಸಾರಿದ್ದರು.

ಇಂಜನಿಯರಿಂಗ್ ಶಾಲೆ

ಮೈಸೂರು ೨೮

ಈ ದಿನ ಇಂಜನಿಯರಿಂಗ್ ಕಮಿಷನ್ ಕಮಿಟಿಯವರು ಶಾರದಾವಿಲಾಸ ಕಾಲೇಜಿನಲ್ಲಿ ನಡೆಯುತ್ತಿರುವ ನ್ಯಾಷನಲ್ ಇಂಜನಿಯರಿಂಗ್ ಶಾಲೆಗೆ ಭೇಟಿಕೊಟ್ಟು ಅಲ್ಲಿನ ಕಾರ್ಯಕ್ರಮಗಳನ್ನು ಪರಿಶೀಲಿಸಿದರು. ನವಂಬರ್ ೭ ನೇ ತಾ|| ವಿಶ್ವವಿದ್ಯಾ ನಿಲಯದ ಕಮೀಷನರವರು ಶಾರದಾವಿಲಾಸ ಕಾಲೇಜಿಗೆ ಭೇಟಿ ಕೊಡುವರು.

ಅನಾವರಣೋತ್ಸವ

ಇದೇ ೩೦ ನೇ ಬುಧವಾರ ಸಾಯಂಕಾಲ ೫-೩೦ ಗಂಟೆಗೆ ಇಂಟರ್ ಮೀಡಿಯೇಟ್ ಕಾಲೇಜಿನ ಒಳಾಂಗಣದಲ್ಲಿ ಶ್ರೀಮನ್ಮಹಾರಾಜ್ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಶ್ರೀ ಕೆ. ವಿ ಪುಟ್ಟಪ್ಪನವರು ಶ್ರೀ ಮಾಸ್ತಿ ಟಿ. ಎಸ್ ವೆಂಕಣ್ಣಯ್ಯನವರ ಭಾವ ಚಿತ್ರದ ಅನಾವರಣೋತ್ಸವವನ್ನು ನೆರವೇರಿಸುವರು. ಸಕಲರಿಗೂ ಸ್ವಾಗತವಿದೆ.

ಆಹಾರ ಸಮ್ಮೇಳನ

ಮೈಸೂರು ಜಿಲ್ಲೆಯಲ್ಲಿ ಸುಗ್ಗಿ ಆಹಾರಕ್ಕೆ ಸಂಬಂಧಪಟ್ಟ ವಿಷಯಗಳನ್ನು ಚರ್ಚಿಸಿ ಸೂಕ್ತ ಸಲಹೆಗಳನ್ನು ಕೊಡಲು ನವೆಂಬರ್ ೧೫ ನೇ ತಾ|| ನೊಳಗಾಗಿ ಒಂದು ಆಹಾರ ಸಮ್ಮೇಳನವನ್ನು ಸೇರಿಸತಕ್ಕದ್ದೆಂದು ನಿನ್ನೆ ಹುಣಸೂರಿನಲ್ಲಿ ಶ್ರೀ ಅಗರಂ ಸೂರ್ಯನಾರಾಯಣ ಪಂಡಿತರ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಕಾಂಗ್ರೆಸ್ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಯಿತು. ಸದರಿ ಸಮ್ಮೇಳನದ ಬಗ್ಗೆ ಸೂಕ್ತ ವ್ಯವಹಾರಗಳನ್ನು ಕೈಗೊಳ್ಳಲು ೯ ಜನರನ್ನೊಳಗೊಂಡ ಒಂದು ಉಪಸಮಿತಿಯನ್ನು ರಚಿಸಲಾಯಿತು. ಇದಕ್ಕೆ ಶ್ರೀಗಳಾದ ನಂಜುಂಡೇ ಅರಸಿನವರು ಅಧ್ಯಕ್ಷರು, ಪಟೇಲ್ ಕೆ. ಕುಮಾರಸ್ವಾಮಿಯವರು ಸಂಚಾಲಕರು

ಕಮ್ಯೂನಿಸ್ಟ್ ಪಕ್ಷದ ಸಭೆ

ಕಮ್ಯೂನಿಸ್ಟ್ ಪಕ್ಷದ ಮೈಸೂರು ಸಮಿತಿಯ ಆಶ್ರಯದಲ್ಲಿ ನೆನ್ನೆ ಸಂಜೆ ಟೌನ್ ಹಾಲ್ ಮೈದಾನದಲ್ಲಿ ಜನಾಬ್ ಅಹಮದ್ ಹುಸೇನರವರ ಅಧ್ಯಕ್ಷತೆಯಲ್ಲಿ ಒಂದು ಬಹಿರಂಗ ಸಭೆ ನಡೆಯಿತು. ಬೆಂಗಳೂರು ಕಮ್ಯೂನಿಸ್ಟ್ ಪಾರ್ಟಿಯ ಕಾರ್ಯದರ್ಶಿ ಶ್ರೀ ಎಂ. ಎಸ್ ಕೃಷ್ಣನ್, ಶ್ರೀ ರಾಮನಾಥನ್ ಮತ್ತು ಸೋಮ ಸುಂದರಂ ಮೊದಲಾದವರು ಭಾಷಣ ಮಾಡಿದರು ... ಬಂಧಿಗಳನ್ನು ... ಮತ್ತು ಬೆಂಗಳೂರಿನಲ್ಲಿ ನಡೆಯಲಿರುವ ಮೈಸೂರು ಕಾಂಗ್ರೆಸ್ ಅಧಿವೇಶನಕ್ಕೆ ... ದಕ್ಕೆ ...

ನೆಹರೂರವರು ನಾಮಕರಣದ ಸದಸ್ಯರು

ನಿನ್ನೆ ಕೇಂದ್ರ ಶಾಸನ ಸಭೆಯ ಆರಂಭದಲ್ಲಿ ರಾಜಭಕ್ತಿ ಪ್ರಮಾಣವನ್ನು ಸ್ವೀಕರಿಸುವಾಗ ಪಂಡಿತ ನೆಹರೂರವರ ಕೈಯಲ್ಲಿ ಕೊಟ್ಟಿದ್ದ ಕಾಗದದಲ್ಲಿ 'ಶಾಸನ ಸಭೆಗೆ ನಾಮಕರಣ ಮಾಡಲ್ಪಟ್ಟಿರುವ ಜವಹರಲಾಲ ನೆಹರೂ ಆದ ನಾನು' ಎಂಬುದಾಗಿ ಇದ್ದುದನ್ನು ನೋಡಿ ಅವರು ಪ್ರಮಾಣ ವಚನವನ್ನು ಅಲ್ಲಿಗೇ ನಿಲ್ಲಿಸಿಬಿಟ್ಟರು. ಅದಕ್ಕೆ ಅವರು ಚುನಾಯಿತ ಸದಸ್ಯರಲ್ಲವೆಂದು ನಾಮಕರಣದಿಂದ ಬಂದಿರುವರೆಂದೂ ಕಾರ್ಯದರ್ಶಿಗಳು ಜ್ಞಾಪಿಸಿದ ಮೇಲೆ ಪ್ರಮಾಣ ವಚನವನ್ನು ಮುಂದುವರಿಸಿದರು

ಮತಾಂತರದ ಬಗ್ಗೆ ಕಾಮಕೋಟಿ ಗುರುಗಳ ಅಭಿಪ್ರಾಯ

ಬಲಾತ್ಕಾರದಿಂದ ಮತಾಂತರಗೊಳಿಸಲ್ಪಟ್ಟ ಹಿಂದೂಗಳನ್ನು ಜಾತಿ ಭ್ರಷ್ಟರಾದಂತೆ ಭಾವಿಸಲಾಗದು, ಬಲವಂತದಿಂದ ಅಪಹರಿಸಲ್ಪಟ್ಟ ಅಥವ ಅವಮಾನಗೊಳಿಸಲ್ಪಟ್ಟ ಮಹಿಳೆಯರನ್ನು ಹಿಂದೂ ಸಮಾಜವು ತಿರಸ್ಕರಿಸಲಾಗದು, ಅವರೆಲ್ಲರನ್ನೂ ಹಿಂದಕ್ಕೆ ತೆಗೆದುಕೊಳ್ಳಲು ಶಾಸ್ತ್ರಗಳು ಮಾರ್ಗಗಳನ್ನು ತೋರಿಸಿವೆ. ಅವಮಾನಕ್ಕಿಂತಲೂ ಪ್ರಾಣ ತ್ಯಾಗವೇ ಲೇಸೆಂದು ತಿಳಿದು ಆತ್ಮಹತ್ಯೆ ಮಾಡಿಕೊಂಡ ಮಾನಿನಿಯರ ಹೆಸರುಗಳನ್ನು ಸಂಗ್ರಹಿಸಿ ಅವರ ಪವಿತ್ರ ಸ್ಮರಣೆಯನ್ನು ಪ್ರತಿ ಪ್ರಾತಃಕಾಲವೂ ಸಕಲರೂ ಮಾಡಬೇಕು ಗಲಭೆಗಳಲ್ಲಿ ಮತ ಭೇದವನ್ನೆಣಿಸದೆ ಕೊಂದರೆಗೀಡಾದವರ ರಕ್ಷಣೆಗೆ ನೆರವು ನೀಡಿದ ಸಕಲ ಮುಸ್ಲಿಮರಿಗೂ ಇಡೀ ರಾಷ್ಟ್ರವೇ ಋಣಿಯಾಗಿರಬೇಕು ಎಂಬುದಾಗಿ ಕಂಚಿ ಕಾಮಕೋಟಿ ಮಠದ ಜಗದ್ಗುರು ಶ್ರೀ ಶಂಕರಾಚಾರ್ಯ ಸ್ವಾಮಿಗಳವರು ಒಂದು ಪ್ರಸಿದ್ಧ ಪತ್ರಿಕೆಯ ಮೂಲಕ ತಿಳಿಸಿರುತ್ತಾರೆ.

ಉಪನ್ಯಾಸ

[ಸ್ವಂ ಸು] ಚಾಮರಾಜನಗರ ೨೮

ಮೈಸೂರು ಶಾರದಾವಿಲಾಸ ಹೈಸ್ಕೂಲಿನ ಅಧ್ಯಾಪಕರಾದ ಸೋಸಲೆ ಗೋಪಾಲ ಅಯ್ಯಂಗಾರ್ಯರು ಇಲ್ಲಿನ ಪ್ರೌಢವಿದ್ಯಾ ಶಾಲೆಯ ಸಂಘದ ಆಶ್ರಯದಲ್ಲಿ ಕಳೆದ ೨೬ ನೇ ಶನಿವಾರ ಶ್ರೀ|| ಟಿ ಪಿ. ಕೈಲಾಸಂರವರ 'ಪರ್ಪ್ಪಿನ ಮಟ್ಟ' ಮತ್ತು 'ನಮ್ಮಂಪೆಸಿ'ಯ ಭಾಗಗಳನ್ನು ಅಭಿನಯಪೂರ್ವಕವಾಗಿ ಓದಿದರು. ಅದೇ ದಿವಸ ಸಾಯಂಕಾಲ ಅಮಲ್ದಾರ್ ಶ್ರೀ ಟಿ ಹಾಲಪ್ಪನವರ ಅಧ್ಯಕ್ಷತೆಯಲ್ಲಿ ಭಾರತ ರಾಜ್ಯಾಂಗ ರಚನಾ ಸಮಿತಿಯ ವಿಷಯದಲ್ಲಿ ವಿಚಾರಪೂರಿತ ಭಾಷಣ ಮಾಡಿದರು.

...ವಳಿಯನ್ನು ಹೂಡಬೇಕು ಎಂಬ ಠರಾವುಗಳು ಮಂಜೂರಾದವು

ಜಿಲ್ಲಾ ಬೋರ್ಡ್

ನವೆಂಬರ್ ೩ ನೇ ತಾ|| ನಡೆಯಲಿರುವ ಮೈ|| ಡಿ ಬೋ. ಉಪಾಧ್ಯಕ್ಷ ಚುನಾವಣೆಯನ್ನು ಕಾಂಗ್ರೆಸ್ ಬಹಿರಂಗ ಅಧಿವೇಶನದ ಪ್ರಯುಕ್ತ, ಮುಂದೆ ಹಾಕಬೇಕೆಂದು ತಿಳಿಸಿ ಡಿ| ಬೋ|| ಕಾಂಗ್ರೆಸ್ ಪಾರ್ಟಿಯವರು ಅಧ್ಯಕ್ಷರಿಗೆ ಪತ್ರ ಬರೆದಿರುವರೆಂದು ತಿಳಿದು ಬಂದಿದೆ

... ವಿವಿಧ ... ಈ ದಿನ ... ಶಾರದಾವಿಲಾಸ ವಿದ್ಯಾ ... ಕೊಡಲಾಗಿದೆ

ಸಾಧ್ವಿ

ತಾ|| ೨೯-೧೦-೪೬ ಮಂಗಳವಾರ

ಕಾಂಗ್ರೆಸ್ಸಿಗೆ ಇನ್ನೂ ಎರಡು ಸ್ಥಾನಗಳು

ಮಂಡಿ ಮೊಹಲ್ಲೆಯಿಂದ ನಿಂತಿದ್ದ ಇಬ್ಬರು ಉಮೇದುವಾರರು ತಮ್ಮ ಅರ್ಜಿಯನ್ನು ಹಿಂದಕ್ಕೆ ತೆಗೆದುಕೊಂಡಿರುವುದರಿಂದ ಪೌರಸಭೆಯ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಇನ್ನೂ ಎರಡು ಸ್ಥಾನಗಳು ದೊರೆತಂತಾಗಿವೆ. ಇದರಿಂದ ಒಟ್ಟು ಏಳು ಮಂದಿ ಕಾಂಗ್ರೆಸ್ ಉಮೇದುವಾರರು ಪ್ರತಿಸ್ಪರ್ಧೆಯಿಲ್ಲದೆ ಜಯಶೀಲರಾಗಿ ಬರಲು ಅವಕಾಶವುಂಟಾಗಿದೆ. ಕಾಂಗ್ರೆಸ್ಸಿನ ಶಕ್ತಿ ಮತ್ತು ಪ್ರಭಾವಗಳ ಬಗ್ಗೆ ಇವು ಪ್ರತ್ಯಕ್ಷ ನಿದರ್ಶನಗಳಾಗಿವೆ. ಇನ್ನು ಮುಂದೆ ನಡೆಯುವ ಚುನಾವಣೆಗಳಲ್ಲಿ ಕಾಂಗ್ರೆಸ್ಸು ಪ್ರಜಾ ವಾತ್ಸಲ್ಯವನ್ನು ಇನ್ನೂ ಹೆಚ್ಚಾಗಿ ತೋರಿಸಿಕೊಡಲು ಅವಕಾಶವಿರುತ್ತದೆ. ಇವರಲ್ಲಿ ಪುರ ನಿವಾಸಿಗಳೆಲ್ಲರೂ ಹೃತ್ಪೂರ್ವಕವಾಗಿ ಸಹಕರಿಸುವರೆಂದು ನಾವು ನಂಬಿದ್ದೇವೆ.

ಕಾಂಗ್ರೆಸ್ಸಿನವರ ಕರ್ತವ್ಯವು ಈ ವಿಷಯದಲ್ಲಿ ನಿಶ್ಚಿತವಾಗಿದೆ. ಮೈಸೂರು ಕಾಂಗ್ರೆಸ್ಸಿನವರು ಸ್ಥಳೀಯ ಸಂಸ್ಥೆಗಳಲ್ಲಿ ಭಾಗವಹಿಸಬಹುದೆಂಬ ತೀರ್ಮಾನವು ಜಾರಿಯಲ್ಲಿರುವವರೆಗೂ ಕಾಂಗ್ರೆಸ್ಸಿನವನೆಂದು ಹೇಳಿಕೊಳ್ಳುವ ಯಾವನೇ ಸದಸ್ಯನಾಗಲೀ ಅದಕ್ಕೆ ಅನುಗುಣವಾಗಿ ಸಿಪಾಯಿಯಂತೆ ನಡೆದುಕೊಳ್ಳುವುದು ನಿಜವಾದ ಸತ್ಯಾಗ್ರಹಿಯ ಲಕ್ಷಣ. ವೈಯಕ್ತಿಕ ಭಿನ್ನಾಭಿಪ್ರಾಯಗಳು ಏನೇ ಇದ್ದಾಗ್ಯೂ ಅವನ್ನು ಒಂಬದಿಗಿಟ್ಟು ಸಹಕಾರ ಮನೋಭಾವದಿಂದ ವರ್ತಿಸುವುದು ಕಾಂಗ್ರೆಸ್ಸಿನವನ ಸಹಜವಾದ ಗುಣವಾಗಿರಬೇಕು.

ಇಂದಿನ ಸ್ಥಿತಿಯನ್ನು ಬದಲಾಯಿಸುವುದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಲು ಎಲ್ಲ ಕಾಂಗ್ರೆಸ್ಸಿನವರಿಗೂ ಸದವಕಾಶವಿರುತ್ತದೆ. ಆದರೆ ಈ ಅವಕಾಶವನ್ನು ಸೂಕ್ತ ರೀತಿಯಲ್ಲಿ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಮುಂದೆಯಾಗಲೀ, ಅಥವಾ ಮಹಾಧಿವೇಶನದಲ್ಲಾಗಲೀ ಠರಾವಿನ ರೂಪದಲ್ಲಿ ತಂದು ತೀರ್ಮಾನವನ್ನು ಪಡೆಯುವುದು ಸರಿಯಾದ ಮಾರ್ಗ. ಒಂದು ವೇಳೆ ಈ ನೀತಿಯು ಬದಲಾವಣೆಯಾದಲ್ಲಿ ಕಾಂಗ್ರೆಸ್ಸಿನವರೆಲ್ಲರೂ ಅದರಂತೆ ಶಿರಸಾವಹಿಸಿ ನಡೆದುಕೊಳ್ಳಲು ಬದ್ಧರಾಗಿರುತ್ತಾರೆ. ಇಂತಹ ಸನ್ನಿವೇಶಗಳು ಹಿಂದೆ ಬಂದು ಎಲ್ಲಾ ಸ್ಥಳೀಯ ಸಂಸ್ಥೆಗಳಿಗೂ, ಶಾಸನ ಸಭೆಗಳಿಗೂ ಕಾಂಗ್ರೆಸ್ಸಿನವರು ರಾಜೀನಾಮೆಯಿತ್ತಿದ್ದಾರೆ.

ಹೀಗಿದ್ದರೂ ಕೆಲವು ತೀವ್ರವಾದಿಗಳು ಈ ಚುನಾವಣೆಯಲ್ಲಿ ರಾಜಕೀಯವನ್ನು ನಡೆಸುವುದಾಗಿ ಹೇಳುತ್ತಿರುವುದು ಆಶ್ಚರ್ಯಕರವಾಗಿದೆ. ಚುನಾವಣೆ ಎಂಬುದು ಒಂದು ಹೋರಾಟವೆಂಬುದನ್ನು ಯಾರೂ ಅಲ್ಲಗಳೆಯಲಾರರು. ಈ ಹೋರಾಟವು ಈಗ ಒಂದು ಸಂಸ್ಥೆಯ ಪರವಾಗಿ ಕೈಗೊಳ್ಳಲ್ಪಟ್ಟಿರುತ್ತದೆ. ಹೀಗಿರುವಲ್ಲಿ ಅದೇ ಸಂಸ್ಥೆಯ [illegible] ನಡೆಸುವುದು [illegible] ಹೋರಾಟವನ್ನು [illegible] ಪಕ್ಷಕ್ಕೆ [illegible] ಪಕ್ಷದ [illegible] ಸ್ತ್ಯವೆಂಬುದು ಅಸಹಕಾರಕ್ಕೆ ತಿರುಗಿ, ವಿರೋಧದಲ್ಲಿ ಪರಿಣಮಿಸಿ, ಅಭಾಸದಲ್ಲಿ ಅಂತ್ಯವಾಗುವುದು. ಆದುದರಿಂದ ಹಟಸ್ಥಿತಿಯನ್ನು ತ್ಯಜಿಸಿ ಆಸಕ್ತಿಯಿಂದ ಸಂಸ್ಥೆಯ ಕಾರ್ಯಕ್ರಮಗಳಲ್ಲಿ ಸಹಕರಿಸುವುದೇ ಶಿಸ್ತಿನ ಸದಸ್ಯರೆಲ್ಲರ ಕರ್ತವ್ಯ. ಸ್ಥಳೀಯ ಸಂಸ್ಥೆಗಳಲ್ಲಿ ಕಾಂಗ್ರೆಸ್ಸಿನವರು ಸ್ಪರ್ಧಿಸುವುದು ಕಾಂಗ್ರೆಸ್ಸಿನ ಮುಖ್ಯ ಗುರಿಯಾದ ಜವಾಬ್ದಾರಿ ಸರ್ಕಾರದ ಹೋರಾಟದ ಒಂದು ಅಂಗವಾಗಿಯೇ ಇದೆ. ಪ್ರಜಾಕೋಟಿಯ ಹಿತಸಾಧನೆಯು ನಿಜವಾದ ಸೇವಾ ವೃತ್ತಿಯಿಂದಲೇ ಸಾಧ್ಯವೆಂಬುದನ್ನು ಕಾಂಗ್ರೆಸ್ಸಿನವರು ಅರಿತು ಪ್ರಗತಿ ವಿರೋಧಿಗಳ, ಹೊಗಳುಭಟ್ಟರ ಮತ್ತು ಸ್ವಾರ್ಥಸಾಧಕರ ಹಿಡಿಯಿಂದ ಸ್ಥಳೀಯ ಸಂಸ್ಥೆಗಳನ್ನು ಪಾರುಮಾಡುವ ಘನ ಉದ್ದೇಶದಿಂದ ಅವುಗಳಲ್ಲಿ ಪ್ರವೇಶಿಸುವುದು ಅವಶ್ಯಕವಾಗಿದೆ.

ದೇಶದ ಮೂಲೆ ಮೂಲೆಗಳಿಂದ ಜನಗಳ ಆರ್ತನಾದ ಕೇಳಿಬರುತ್ತಿದೆ. ಜನಗಳಿಗೆ ಒದಗಿರುವ ಕ್ಷೋಭೆ, ಕೋಮುವಾರು ಹಾವಳಿ ಮೊದಲಾದ ಉಪದ್ರವಗಳನ್ನು ನಿವಾರಿಸಲು ಕಾಂಗ್ರೆಸ್ ಒಂದೇ ಶಕ್ತಿಯುತವಾದ ಸಂಸ್ಥೆಯೆಂದು ಸಕಲರೂ ಮನಗಂಡಿರುವರು. ಆದುದರಿಂದ ಕಾಂಗ್ರೆಸ್ಸಿನವರೂ ಇತರ ಸಕಲ ದೇಶಾಭಿಮಾನಿಗಳೂ ಈ ಸಂಸ್ಥೆಯ ಪ್ರತಿನಿಧಿಗಳಿಗೇ ಸರ್ವ ವಿಧದಲ್ಲಿಯೂ ಬೆಂಬಲ ಕೊಡುವುದು ವಿಹಿತವಾಗಿದೆ.

ರಾಜರು ಕಾಂಗ್ರೆಸ್ಸಿಗೆ

ತಮಿಳು ನಾಡಿನ ದಕ್ಷಿಣ ಜಿಲ್ಲೆಗಳ ರಾಮನಾಡಿನ ರಾಜರು ತಮ್ಮನ್ನು ಕಾಂಗ್ರೆಸ್ಸಿನ ಪ್ರಾಥಮಿಕ ಸದಸ್ಯರನ್ನಾಗಿ ಸೇರಿಸಿಕೊಳ್ಳಬೇಕೆಂದು ಜಿಲ್ಲಾ ಕಾಂಗ್ರೆಸ್ ಸಮಿತಿಯನ್ನು ಪ್ರಾರ್ಥಿಸಿ ಅರ್ಜಿ ಹಾಕಿಕೊಂಡಿದ್ದಾರೆ.

* ಕೇಂದ್ರ ಸರ್ಕಾರದವರು ಒಂದು ಆಜ್ಞೆ ಹೊರಡಿಸಿ ನೂಲಿನ ಕನಿಷ್ಟ ಬೆಲೆಯನ್ನು ಒಂದು ಖಂಡಿಗೆ ೮೦ ರೂ. ಗಳಷ್ಟು ಏರಿಸಿದ್ದಾರೆ. ಮತ್ತೊಂದು ಕಾನೂನಿನ ಪ್ರಕಾರ ಒಂದು ಬೇಲ್ ಹತ್ತಿಯ ಮೇಲೆ ೨೦ ರೂ ಗಳ ತೆರಿಗೆಯನ್ನು ವಿಧಿಸಿದ್ದಾರೆ.

ಎಂ. ರಾಮರಾಯರ ನಿಧನ

ಮೈಸೂರು ೨೯

ಅರಮನೆಯ ನಿವೃತ್ತ ಕಂಟ್ರೋಲರಾದ ರಾಜಸೇವಾಸಕ್ತ ಶ್ರೀ ಎಂ ರಾಮರಾಯರು ಕೆಲವು ದಿನಗಳಿಂದ ವಿಷಮ ಶೀತಜ್ವರ ಪೀಡಿತರಾಗಿದ್ದು ನಿನ್ನೆ ಸಂಜೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರು ಚಿಕಿತ್ಸೆಗಾಗಿ ಆಸ್ಪತ್ರೆಗೆ ತೆರಳಿ ಹಿಂತಿರುಗುತ್ತಿದ್ದಾಗ ದಾರಿಯಲ್ಲಿಯೇ ಮೃತರಾದರು. ಇವರು ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರೂ, ಕೌನ್ಸಿಲರೂ ಆಗಿದ್ದ ಶ್ರೀ ಎಚ್. ವಿ. ನಂಜುಂಡಯ್ಯನವರ ಅಳಿಯಂದಿರು. ಆರ್ಥಿಕ ಸಮ್ಮೇಳನದ ಪ್ರಚಾರಕರಾಗಿ ವಿಶೇಷ ಕೆಲಸ ಮಾಡಿದವರು. ನಿವೃತ್ತರಾದ ಮೇಲೆ ಶಾರದಾವಿಲಾಸ ವಿದ್ಯಾ ಸಂಸ್ಥೆಯ ಕಾರ್ಯದರ್ಶಿಗಳಾಗಿ ಬಹಳ ಮುತುವರ್ಜಿಯಿಂದ ಸೇವೆ ಸಲ್ಲಿಸಿರುವರು. ಮೃತರಿಗೆ ೬೬ ವರ್ಷಗಳಾಗಿತ್ತು. ಇವರಿಗೆ ೩ ಜನ ಗಂಡು ಮಕ್ಕಳೂ ೪ ಜನ ಹೆಣ್ಣು ಮಕ್ಕಳೂ ಇದ್ದಾರೆ. ಅವರ ಆತ್ಮಕ್ಕೆ ಭಗವಂತನು ಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಕಾಂಗ್ರೆಸ್ ಪಕ್ಷದ ಸಭೆ

ನ್ಯಾಯವಿಧಾಯಕ ಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರ ಸಭೆಯು ನವಂಬರ್ ೪ ನೇ ತಾ|| ಬೆಳಗ್ಗೆ ಬೆಂಗಳೂರು ಕಾಂಗ್ರೆಸ್ ಕಛೇರಿಯಲ್ಲಿ ಸೇರುತ್ತದಾಗಿ ಸದಸ್ಯರೆಲ್ಲಾ ತಪ್ಪದೆ ದಯಮಾಡಿಸಬೇಕೆಂದು ನಾಯಕರಾದ ಶ್ರೀ ಟಿ. ಮರಿಯಪ್ಪನವರು ತಿಳಿಸಿದ್ದಾರೆ.

OPERA TALKIES
30-10-46 ರಿಂ
ಎರಡನೆಯ ವಾರ
ಶ್ರೀ ಮುರುಗನ್
(ತಮಿಳು)
ಪಾತ್ರ:- ಹೊನಪ್ಪ ಭಾಗವತರ್,
ಜೀವರತ್ನಂ, ಮಾಲತಿ, ರಾಮಚಂದ್ರನ್,

Edited, printed and published by A. R. Nagarajan at the Sadhvi Press D. Subbiah Road, Mysore.

ಅತ್ಯಾಚಾರಕ್ಕೆ ಗುರಿಯಾ[...]ರಿಗೆ ಪ್ರಾಯಶ್ಚಿತ್ತವಿಲ್ಲ

ಪೂರ್ವ ಬಂಗಾಳದಲ್ಲಿ ಈಚೆಗೆ ನಡೆ[...] ಲಭೆಗಳಲ್ಲಿ ಬಲವಂತದಿಂದ ಮತಾ[...] ಹೊಂದಿದ ಮತ್ತು ಬಲಾತ್ಕಾರ ಅತ್ಯಾ[...] ರಕ್ಕೆ ಗುರಿಯಾದ ಹಿಂದೂ ಸ್ತ್ರೀಯರಿ[...] ರಿಹುದ್ದರೆಂದೂ, ಅವರನ್ನು ಪ್ರಾಯ[...] ವಿಲ್ಲದೆ ಮತ್ತೆ ಹಿಂದೂ ಸಮಾಜಕ್ಕೆ [...] ಸಿಕೊಳ್ಳುವುದು ಶಾಸ್ತ್ರ ಸಮ್ಮತವೇ[...] ಜಾತಿ ಪದ್ಧತಿಗಳನ್ನು ನಿರ್ಮೂಲ ಮಾ[...] ವುದೇ ಇಂತಹ ಕೋಮುವಾರು ಗಲಭೆ[...] ಗೆ ಸರಿಯಾದ ಔಷಧಿ ಎಂದೂ ಅಖಿಲ[...] ಜಾತ್‌ಪತ್ ತೋಡಕ ಮಂಡಲವು [...] ರ್ಣಯಿಸಿದೆ

ಮೈಸೂರು ಸಿಟಿ
ಮುನಿಸಿಪಾಲಿಟಿ
ಪ್ರಸಿದ್ಧ ಪತ್ರಿಕೆ

ಇದರಿಂದ ಸಮಸ್ತ ಜನಗಳಿಗೂ ತಿ[...] ವುದೇನೆಂದರೆ:—

ಮೈಸೂರು ನಗರದ ಮಂಡಿ, ಲ[...] ಮತ್ತು ನಜರ್‌ಬಾದ್ ಮೊಹಲ್ಲಾಗ[...] ಪ್ಲೇಗಿನ ಸೋಂಕು ಕಲೆದೋರಿದೆ ಎ[...] ತಿಳಿಯಬಂದಿರುವುದರಿಂದ ಇದನ್ನು ತ[...] ಟ್ಟಲು ಮುಂಜಾಗ್ರತೆ ಕಾರ್ಯಕ್ರಮಗ[...] ನುಸರಿಸಿ ಈ ಕೆಳಗೆ ನಮೂದಿಸಿರುವ [...] ಗಳಲ್ಲಿ ಪ್ಲೇಗ್ ಇನಾಕ್ಯುಲೇಷನ್ ಮಾ[...] ಕೊಳ್ಳಲು ಈ ಮೂಲಕ ಕೋರಿರುತ್ತೆ[...]

ರೇಷನ್ ಕಾರ್ಡುಗಳಲ್ಲಿ ರವೆ, ಸಕ್ಕರೆ[...] ನ್ನು ಪಡೆಯಲು ಸೌಕರ್ಯವಿಲ್ಲದ[...] ಇನಾಕ್ಯುಲೇಷನ್ ಆದನಂತರ ಹೆಲ್ತ್ [...] ಸರವರಿಂದ ಚೀಟಿಗಳನ್ನು ಪಡೆದು ಸಾ[...] ನುಗಳನ್ನು ಆ ಯಾ ಡಿಪೋಗಳ[...] ಕೊಂಡಲು ಏರ್ಪಡಿಸಿರುತ್ತೆ.

ಇನಾಕ್ಯುಲೇಷನ್ ಮಾಡುವ [...] ಗಳು:—

ಮಂಡಿ:-1 ಈದಿಗಾ ಬಡಾವಣೆ ಚ[...] ತಕ್ಕ, 2 ಗಾಣಿಗರಕೇರಿ ಸರ್ಕಾರಿ, ಪ[...] ದ ಡಿಪೋ.

ಲಷ್ಕರ್:-1. ವೀರನಗೆರೆ ಆಸ್ಪತ್ರೆ[...] ಡಾ|| ಪ್ರಸಾದ್ ನರ್ಸಿಂಗ್ ಹೋಂ.

ನಜರ್‌ಬಾದ್:-1. ಲೋಕಲ್ ಫ[...] ಆಸ್ಪತ್ರೆ 2. ಇಟ್ಟಿಗೆಗೂಡು ಪೋಲಿ[...] ಸ್ಟೇಷನ್.

ಮೇಲ್ಕಂಡ ಸ್ಥಳಗಳಲ್ಲದೆ ಪ್ರೈವೇ[...] ಡಾಕ್ಟರುಗಳ ಷಾಪುಗಳಲ್ಲಿಯೂ ಸಹ [...] ಕ್ಯುಲೇಷನ್ ಮಾಡಲು ಏರ್ಪಾಡಾಗಿದೆ

ಎಂ. ಮಾಧವರಾ[...]
ಪ್ರೆಸಿಡೆಂಟ್

ಮೈಸೂರು ಸಿಟಿ ರೇಷನಿಂ[...]

No R 6-81-1946-47

1946ನೇ ಇಸವಿ ಅಕ್ಟೋಬರ್ ಮ[...] 31 ನೇ ತಾರೀಖು ಗುರುವಾರದ [...] ಮೈಸೂರು ಸಿಟಿಯಲ್ಲಿರುವ ಎಲ್ಲಾ ಸ[...] ಡಿಪೋ, ಮೊಹಲ್ಲಾ ಸಬ್ ಗೋಡ[...] ವರ್ತಕರ ಡಿಪೋ ಮತ್ತು ಸಹಕಾರ [...] ಗಳಲ್ಲಿರುವ ದಿನಸಿಗಳ ಎಣಿಕೆ ಮಾಡಬೇ[...] ಗಿರುವುದರಿಂದ ಆ ದಿವಸ ಡಿಪೋ[...] ಮುಚ್ಚಲ್ಪಡುತ್ತವೆ

(ಸಹಿ) ಅಬ್ದುಲ್ ರಜಾ[...]
ರೇಷನಿಂಗ್ ಆಫೀ[...]
22-10-46 ಮೈಸೂರು

॥ ವಂದೇಮಾತರಂ ॥

ಕಾಂಗ್ರೆಸ್ ಉಮೇದುವಾರರಿಗೇ
ಓಟು ಕೊಡಿ!

ರಾಜಧಾನಿಯ ಮತದಾರರಲ್ಲಿ ವಿನಂತಿ

ಬರುವ ನವಂಬರ್ ೧೪ ನೇ ತಾ|| ಗುರುವಾರ ನಡೆಯಲಿರುವ ಪೌರಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದುವಾರರಿಗೇ ಓಟು ಕೊಟ್ಟು ಅವರನ್ನು ಉತ್ತೀರ್ಣರನ್ನಾಗಿ ಮಾಡಬೇಕೆಂದು ಸವಿನಯ ಪ್ರಾರ್ಥನೆ

ನಗರ ಚುನಾವಣಾ ಉಪಸಮಿತಿ

ರಾಜ್ ಕಮಲ್, ಮೈಸೂರು,
21-10-46 ರಿಂದ
ಅಮೋಘ 6 ನೇ ವಾರ
ನಾಹಿನಿಯವರ
ಸ್ವರ್ಗಸೀಮಾ
- ಪಾತ್ರ -
* ನಾಗಯ್ಯ, * ಜಯಮ್ಮ,
* ಭಾನುಮತಿ

ಫೋ. ನಂ. 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು



ಸಂಪುಟ ೫] ಬುಧವಾರ ೩೦—೧೦—೪೭ [ಸಂಚಿಕೆ ೭೬

ತಿರುವಾಂಕೂರಿನಲ್ಲಿ ದಂಗೆಕಾರರ ಶರಣು

ಸೋಮವಾರದ ಕಲಹ ಕೊನೆಗಾಣಲಿ

ಕಳೆದುಹೋದದ್ದನ್ನು ನೆನೆಸಿಕೊಂಡು, ನ, ನೋವು ಮತ್ತು ಸೇಡಿನ ಪಂಸ್ಥಿತಿ ನ್ನು ನೋಡುವುದು ಬೇಡ; ನಮ್ಮ ಕೋಣವನ್ನು ಮುಂದಕ್ಕೆ ಚಾಚಿ, ತ್ರವಾದ, ಬಲಯುತವಾದ ಮತ್ತು ಶಾಲಿಯಾದ ಭಾರತವನ್ನು ಣ-ಎಂದು ಮೈಸೂರು ಮೊನ್ನೆ ರೇಡಿಯೋವಿನಲ್ಲಿ ಭಾಷಣ ಮಾಡು ತಿಳಿಸಿದರು. ಆವರು ಮಿಶ್ರ ಸರ್ಕಾರ ಸ್ಥಾಗತಿಸಿ ಬ್ರಿಟಿಷ್ ಸರ್ಕಾರದಿಂದ ಪೂರ್ಣ ಅಧಿಕಾರವನ್ನು ಪಡೆದುಕೊಳ್ಳಲು ಗುವಂತೆ ಸರ್ಕಾರದ ಎಲ್ಲಾ ಪಕ್ಷ ಸೌಹಾರ್ದದಿಂದ ಕೆಲಸ ಮಾಡಬೇ ಪ್ರಾರ್ಥಿಸಿದರು. ಭಾರತದ ಮುಖ ಬೆಳೆಯುತ್ತಿರುವ ಈ ಕೋಮು ಕಲಹ ಕೊನೆಗಾಣಬೇಕೆಂದೂ ಅವ ಸಿದರು.

ಕಾಲಿ ಸೂತ್ರಧಾರಿಯ ದಸ್ತಗಿರಿ

ಕಾಲಿ ದುರಂತದ ಆಚಾರ್ಯ ಪುರುಷ ಗಾಳದ ಶಾಸನ ಸಭೆಯ ಮಾಜೀ ಗುಲಾಂ ಸರ್ವಾರ್ ಎಂಬುವವನ್ನು ಮಾಡಲಾಗಿದೆ. ಆತನ ಜಾಮೀ ವನ್ನು ತಿರಸ್ಕರಿಸಲಾಗಿದೆ.

ಕಲ್ಕತ್ತಾದಲ್ಲಿ ಗಲಭೆ

ನ್ನೆ ರಾತ್ರಿ ಕಲ್ಕತ್ತೆಯಲ್ಲಿ ಮತ್ತೆ ಗಲ ಪರಿಣಾಮವಾಗಿ ೩೩ ಮಂದಿ ಸತ್ತು ಮಂದಿಗೆ ಗಾಯಗಳಾಗಿರುವುದಾಗಿ ಗಲಭೆಯಲ್ಲಿ ನಾಡುಬಾಂ ಸ್ಫೋಟಕಗಳನ್ನು ಉಪಯೋಗಿಸಲಾ ಲೂಟಿ, ದೊಂಬಿ, ಇರಿತಗಳು ವಾಗಿವೆ. ಟ್ರಾಂ ಮತ್ತು ಬಸ್ಸುಗಳ ನಿಂತುಹೋಗಿವೆ.

ಲೀಗ್ ಅಸಹಕಾರದ ಪ್ರಥಮ ಪಾದ

ನವಾಬರವರು ತಮ್ಮ ಮನೆಯಲ್ಲಿ ಕರೆದಿದ್ದ ಮಂತ್ರಿಮಂಡಲದ ಸಭೆಗೆ ಸದಸ್ಯರು ಬಂದಿರಲಿಲ್ಲ. ಇದು ಸಹಕಾರದ ಪ್ರಥಮ ಪಾದವೆಂದು ಗಿದೆ. ಆದರೂ ಈಗಿನಂತೆಯೇ ಬಲವು ಸ್ವತಂತ್ರ ಸರ್ಕಾರವೆಂ ನ ಮಾಡತಕ್ಕದ್ದೆಂದು ಸಭೆಯಲ್ಲಿ ನಾಯಿತು

ಪರಿಸಲ್ಪಟ್ಟ ಮುಖಿ ವಿಮಾನದಲ್ಲಿ ರವಾನೆ

ಒಂಗಾಳದಲ್ಲಿನ ಗಲಭೆಗಳಲ್ಲಿ ಪಟ್ಟ ಹುಡುಗಿಯರನ್ನು ವಿಮಾ ಲಕ ಬಂಗಾಳದಿಂದ ಮತ್ತು ಪಂಜಾ ಪ್ರದೇಶಗಳಿಗೆ ರವಾನಿಸಲಾಯಿ ಮ ಬೆಂಗಳೂರಿಗೆ ಬಂದಿರುವ ನ ವಾನೊಬ್ಬನು ತಿಳಿಸಿರುತ್ತಾನೆ. ನೆಯವರೆಲ್ಲರೂ ದುರಂತಕ್ಕೀಡಾ ನೊಬ್ಬನು ಮಾತ್ರ ಬದುಕಿದ್ದಾನೆ

ಪ್ರಾಲಿಯ ಸರ್ಕಾರಕ್ಕೆ ಸಿಗಿಸ ಘೋಷಣೆ

ಕ ಸರ್ಕಾರಕ್ಕೆ ಬೆಂಬಲ ಕೊಡ ಯನ್ನು ಕೊಡುವ; ಟೀಕಿಸ ಟೀಕಿಸುವ ನೀತಿಯನ್ನು ಸರಿಸಬೇಕೆಂದು ಮಿ॥ ಜಿನ್ನಾ ರ ಪ್ಪಾರೆ

ಉಮೇದುವಾರರ ಬಗ್ಗೆ ತಕರಾರುಗಳು

ಮೈಸೂರು, ೩೦

ರಾಜಧಾನಿಯ ಪುರಸಭೆಯ ಚುನಾವ ಣೆಯಲ್ಲಿ ಉಮೇದುವಾರರಾಗಿ ನಿಂತಿರುವ ಈ ಮುಂದೆ ಕಂಡ ಮಹನೀಯರುಗಳ ಮೇಲೆ ತಕರಾರು ಅರ್ಜಿ ಸಲ್ಲಿಸಲಾಗಿದೆಯೆಂ ದು ಗೊತ್ತಾಗಿದೆ. ಶ್ರೀಗಳಾದ ಎ ಕೆ ರಂಗ ರಾವ್, ಟಿ ಸಿ. ನಟರಾಜ್, ಡಿ. ಸುಮಿತ್ರ ಮತ್ತು ಬಿ. ಶ್ರೀನಿವಾಸಯ್ಯಂಗಾರ್

ಹರಿಕಥೆಗಳು

ಶ್ರೀ ಪಾಂಡುರಂಗ ವಿಠಲಸ್ವಾಮಿ ದೇವ ಸ್ಥಾನದಲ್ಲಿ ಕೀರ್ತನಕಾರ ಮಂಡಲಿಯ ಆ ಶ್ರಯದಲ್ಲಿ ಇಂದಿನಿಂದ ೨ ನೇ ತಾ॥ ಶನಿ ವಾರದ ವರೆವಿಗೆ ರಾತ್ರಿ ಒಂಬತ್ತು ಗಂಟೆಗೆ ಶ್ರೀಗಳಾದ ವಿಠಲಾನಂದದಾಸರು, ನಾರಾ ಯಣಶಾಸ್ತ್ರಿಗಳು, ನರಸಿಂಹಮೂರ್ತಿದಾಸ ರು ಮತ್ತು ನಾರಾಯಣದಾಸರವರುಗಳಿಂದ ಅನುಕ್ರಮವಾಗಿ ಅಕ್ಷಯ ವಸ್ತ್ರ, ಶ್ರೀ ಶಂ ಕರಾಚಾರ್ಯ, ಅನುಸೂಯೆ, ಸಾವಿತ್ರಿ ಎಂಬ ಹರಿಕಥೆಗಳೂ ೩ ನೇ ತಾ॥ ಭಾನು ವಾರ ಸಂಜೆ ೪ ಗಂಟೆಗೆ ಶ್ರೀಮತಿ ಪಂಕಜ ಮ್ಮನವರಿಂದ ಭಕ್ತನಂದನಾರ್ ಎಂಬ ಕಥೆ ಯೂ ೪ ನೇ ತಾ॥ ಸೋಮವಾರ ರಾತ್ರಿ ೯ ಗಂಟೆಗೆ ಸಮಾಪ್ತಿಯ ಶ್ರೀ ಶ್ರೀನಿವಾಸ ರಂಗಾಚಾರ್ಯರಿಂದ ಪಾಮನಚರಿತ್ರೆ ಎಂ ಬ ಕಥೆಯೂ ನಡೆಯುವವು

ಕೋಟಿ ರೆಡ್ಡಿಯವರಿಂದ ಪ್ರದರ್ಶನಾರಂಭ

ಸ್ವಂ. ಸು ಫೋನ್] ಬೆಂಗಳೂರು ೩೦

ಮದರಾಸಿನ ಕಾಂಗ್ರೆಸ್ ಮಂತ್ರಿಗಳಾದ ಶ್ರೀ ಕೋಟಿರೆಡ್ಡಿ ಯವರು ಮೈಸೂರು ಕಾಂ ಗ್ರೆಸ್ಸಿನ ವಸ್ತು ಪ್ರದರ್ಶನದ ಆರಂಭೋ ತ್ಸವವನ್ನು ಒಂದನೇ ತಾ॥ ಶುಕ್ರವಾರ ಬೆ ಳಿಗ್ಗೆ ಒಂಬತ್ತು ಘಂಟೆಗೆ ನೆರವೇರಿಸುವರು.

ಸಹಿದಾರ್ ಶಾಸನವು ಬಂದನ್ನಿನಲ್ಲಿ ಡಾ॥ ಫ್ರೀಡ್ ಕಮೀಷನರು

ಕಳೆದ ಶಾಸನ ಸಭೆಯಲ್ಲಿ ಕೊಟ್ಟ ಭರ ವಸೆಯಂತೆ ಆಂದನ್ನೇ ನಲ್ಲಿ ಮೈಸೂರು ಫ್ರೀಡ್ ಕಮೀಷನರಾಗಿರುವ ಡಾ॥ ಜೆಸ್ಸಿ ಡ್‌ರವರ ಸಹಾಯಕ್ಕಾಗಿ ಡೆಪ್ಯುಟಿ ಫ್ರೀಡ್ ಕಮೀಷನರೊಬ್ಬರನ್ನು ನೇಮಿಸುವ ವಿಷಯ ಸರ್ಕಾರದ ಆಲೋಚನೆಯಲ್ಲಿದೆಯೆಂದೂ, ಈ ಸ್ಥಾನಕ್ಕೆ ಮಿ॥ ಸಹಿದಾರ್ ಎಂಬವರ ಹೆಸರನ್ನು ಸೂಚಿಸಲಾಗಿದೆಯೆಂದೂ ಗೊತ್ತಾ ಗಿದೆ.

ಶಂಕರಪ್ಪ ಸ್ಮಾರಕ ದಿನಾಚರಣೆ

ಮೈಸೂರು ೩೦

ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ ಆಶ್ರ ಯದಲ್ಲಿ ನೆನ್ನೆ ದಿನ ಹುತಾತ್ಮ ವಿದ್ಯಾರ್ಥಿ ಶಂಕರಪ್ಪ ಸ್ಮಾರಕ ದಿನಾಚರಣೆಯನ್ನು ಅ ಖಿಲ ಕರ್ನಾಟಕ ವಿದ್ಯಾರ್ಥಿ ಕಾಂಗ್ರೆಸ್ಸಿನ ಕಾರ್ಯದರ್ಶಿಗಳಾದ ಶ್ರೀ ಹಾವನೂರು ರಾ ಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಟೌನ್ ಹಾಲ್ ಮೈದಾನದಲ್ಲಿ ನಡೆಸಲಾಯಿತು. ಅನೇಕ ವಿದ್ಯಾರ್ಥಿಗಳು ಅಮರ ಜೀವಿಯಾ ದ ಶಂಕರಪ್ಪನವರ ಪುಣ್ಯ ಜೀವನವನ್ನು ಸ್ಮರಿ ಸಿ ಭಾಷಣ ಮಾಡಿದರು. ಅಧ್ಯಕ್ಷರು ಮಾ ತನಾಡುತ್ತಾ ದೇಶದ ಸ್ವಾತಂತ್ರ್ಯಕ್ಕಾಗಿ ತ ನ್ನ ಜೀವನವನ್ನೇ ಬಲಿಯಾಗಿ ಕೊ ಟ್ಟ ಶಂಕರಪ್ಪನ ಆದರ್ಶ ಜೀವನವನ್ನು ಪ್ರ ಶಂಸಿಸಿ ಎಲ್ಲರೂ ಮುಂದಿನ ಪೂರ್ಣ ಸ್ವಾಂ ತ್ರ್ಯದ ಹೋರಾಟಕ್ಕಾಗಿ ಸರ್ವಸ್ವವನ್ನೂ ತ್ಯಾಗಮಾಡಲು ಸಿದ್ಧರಾಗಬೇಕೆಂದು ತಿಳಿ ಸಿದರು. ಸಭೆಗೆ ಮುಂಚೆ ವಿದ್ಯಾರ್ಥಿಗಳ ಮೆರವಣಿಗೆಯು ಅತ್ಯಂತ ವಿಜೃಂಭಣೆಯಿಂ ದ ನಡೆಯಿತು.

ಶಿಸ್ತಿನ ಕ್ರಮವೇ

ಕಾಂಗ್ರೆಸ್ ಪಕ್ಷದಿಂದ ಈಗ ಪೌರಸಭೆ ಚುನಾವಣೆಗೆ ಸದಸ್ಯರಾಗಿರುವ ಡಾ॥ ಎ ಪಿ ರಂಗ ರಾಯರು ಕಾಂಗ್ರೆಸ್‌ಗೆ ವಿರುದ್ಧವಾಗಿ ಪೌರ ಸಭೆಯ ಚುನಾವಣೆಗೆ ಸ್ವತಂತ್ರ ಉಮೇ ದುವಾರರಾಗಿ ಅರ್ಜಿ ಸಲ್ಲಿಸಿರುವುದರಿಂದ ಶಿ ಸ್ತಿನ ಕ್ರಮವನ್ನು ಅವರ ಮೇಲೆ ಕೈಗೊ ಳ್ಳುವಂತೆ ಪೌರಸಭೆಯ ಕಾಂಗ್ರೆಸ್ ಪಕ್ಷದ ಮುಖಂಡರು ಪಾರ್ಲಿಮೆಂಟರಿ ಸಮಿತಿಗೆ ಶಿಫಾರಸ್ಸು ಮಾಡಿರ ತ್ತಾರೆ.

ಚುನಾವಣಾ ಪ್ರಚಾರ

ಪೌರಸಭೆಯ ಚುನಾವಣೆಗಳಲ್ಲಿ ಕಾಂ ಗ್ರೆಸ್ಸಿನ ಪರವಾಗಿ ಕೆಲಸ ಮಾಡಲು ಸ್ವ ಯಂ ಸೇವಕರಾಗಲಿಚ್ಛಿಸುವವರು ಕಾಂಗ್ರೆ ಸ್ ಕಛೇರಿಯಲ್ಲಿ ತಮ್ಮ ಹೆಸರು, ವಿಳಾಸ ಗಳನ್ನು ಕೊಡಬೇಕೆಂದು ಚುನಾವಣಾ ಉ ಪಸಮಿತಿಯ ಸಂಚಾಲಕರಾದ ಶ್ರೀ ಎಂ. ಶಂಕರಪ್ಪನವರು ಕೋರುತ್ತಾರೆ

ಕಾರ್ಮಿಕ ಸಮ್ಮೇಳನ

ಮೈಸೂರು ಸಂಸ್ಥಾನದ ಕಾರ್ಮಿಕ ಸಮ್ಮೇಳನವು ನವೆಂಬರ್ ಒನ್ನೇ ತಾರೀಖು ಸುಭಾಷ್ ನಗರದಲ್ಲಿ ಶ್ರೀ ... ಅಧ್ಯಕ್ಷತೆ ... ಸಮ್ಮೇಳನವನ್ನು ... ಮಂತ್ರಿ ಶ್ರೀ ವಿ ವಿ ಗಿರಿ ... ನೆರವೇರಿಸುವರು.

ಸೇವೆ ಮತ್ತು ರಾಜಭಕ್ತಿಯೇ ಮುಖ್ಯ ಗುರಿ

ವೀರಶೈವರ ಸತ್ಕಾರಕ್ಕೆ ದಿವಾನರ ಉತ್ತರ

ಸ್ವಂ. ಸು ಫೋನ್] ಬೆಂಗಳೂರು ೩೦

ದಿವಾನರಾದ ಸರ್ ಆರ್ಕಾಟ್ ರಾಮ ಸ್ವಾಮಿ ಮೊದಲಿಯಾರರಿಗೆ ವೀರಶೈವರು ನ್ನೆ ಬಿನ್ನವತ್ತಳೆಯನ್ನೊಪ್ಪಿಸಲು ಬಸಪ್ಪ ಕಾಲೇಜಿನಲ್ಲಿ ಭಾರೀ ಸಮಾರಂಭವನ್ನು ಏರ್ಪಡಿಸಿದ್ದರು. ನಿವೃತ್ತ ಶ್ರೇಷ್ಠ ನ್ಯಾ ಯಾಧೀಶರಾದ ಶ್ರೀ ಸಿ ಮಹದೇವಯ್ಯ ನವರು ಬಿನ್ನವತ್ತಳೆಯನ್ನು ಓದಿ ರಜತ ಕರಂಡದಲ್ಲಿ ಅರ್ಪಿಸಿದರು. ಸರ್ ಮೊದ ಲಿಯಾರರು ನೀಡಿದ ಸೇವೆಗಾಗಿ ವೀರಶೈವರ ಆ ನಂದವನ್ನು ವ್ಯಕ್ತಪಡಿಸಿದರು. ಅವರ ದಿವಾನಗಿರಿಯಲ್ಲಿ ಮೈಸೂರು ಸರ್ವ ವಿಷಯದಲ್ಲಿಯೂ ಮುಂದೆ ವರಿಯಿತೆಂದು ಹಾ ರೈಸಿದರು. ಹಿಂದಿನ ಮುಂದಿನ ಕಡೆ ಕೈಗಾರಿಕೆಯ ಬೆಳವಣಿಗೆಗಳು ಇದ್ದರೂ ಸಹ ವಿಶೇಷ ಅನರ್ಥಗಳು ಸಂಭವಿಸುತ್ತಾ ಇರುವುದರಿಂದ ಆ ಬಗೆಯ ಆತಂಕವು ಮೈ ಸೂರಿಗೆ ಬೇಡವೆಂದೂ, ಮೈಸೂರಿಗೆ ಸ್ವತಂ ತ್ರ ರಾಜ್ಯ ಪದ್ಧತಿಯು ... ದಿವಾನರ ಸ್ವರೂಪವು ... ಮುಖ್ಯ ... ಸಂಸ್ಥಾನದ ಹಿತಕ್ಕಾಗಿ ... ಬಿನ್ನವತ್ತಳೆಯಲ್ಲಿ ಸೂಚಿಸಲಾಗಿತ್ತು.

ದಿವಾನರು ಉತ್ತರವಿತ್ತು ಹೀಗೆ ಹೇಳಿ ದರು. ಸೇವೆ ಮತ್ತು ರಾಜಭಕ್ತಿಗಳೇ ಮೈಸೂರಿಗೆ ನನ್ನನ್ನು ... ಮುಖ್ಯ ಕಾರಣಗಳು. ... ಕಡೆ ... ನನ್ನ ... ಇಂತಹ ಸಮಾರಂಭಗಳು ವಿಶೇಷ ... ಇಂತಹ ಸಹಕಾರದ ಭಾವನೆ ... ಬಾಳಬೇಕು ... ಮೈಸೂರಿಗೆ ... ಭಾರತ ... ಇಲ್ಲಿ ... ರಾಜ್ಯಾಂಗದ ... ಭಾರತ ರಾಜ್ಯಾಂ ಗವು ... ದೆ ಎಂದು ... ವೀರಶೈವರ ಸಂಸ್ಕೃತಿ ಮತ್ತು ಸೇವೆಗಳನ್ನು ... ಮಾಡಿದರು.

ತಿರುವಾಂಕೂರಿನಲ್ಲಿ ದಂಗೆ ಕಾರರ ಶರಣಾಗತಿ ?

ತಿರುವಾಂಕೂರಿನ ... ಮತ್ತು ... ಎಂಬ ಪ್ರದೇಶಗಳಲ್ಲಿ ... ದಂಗೆಕಾರರು ... ಪೊಲೀಸರು ... ಬಂದೂಕು, ಕತ್ತಿ, ... ಶರಣಾಗತರಾಗಿ ...

ಸಾಧ್ವಿ

ತಾ॥ ೩೦-೧೦-೪೬ ಬುಧವಾರ

ಪೌರ ಸೇವೆಯ ಮುನ್ನಡೆ

ಮೈಸೂರು ನಗರದ ಪೌರಸಭೆಯು ಸ್ಥಾಪಿತವಾಗಿ ಸುಮಾರು ಅರ್ಧ ಶತಮಾನಕ್ಕೆ ಮೇಲಾಯಿತು. ಕೇವಲ ಕೋಟೆಯೊಳಗೇ ಅಂತರ್ಗತವಾಗಿದ್ದ ಪಟ್ಟಣವು ಕ್ರಮಕ್ರಮೇಣ ವಿಶಾಲವಾಗಿ ಪ್ರಸರಿಸಿ ಈಗ ಹತ್ತಾರು ಮೈಲಿ ವಿಸ್ತೀರ್ಣವನ್ನು ಒಳಗೊಂಡಿದೆ. ಜನಸಂಖ್ಯೆಯೂ ಸಹ ದಿನೇ ದಿನೇ ಬೆಳೆದು ಸುಮಾರು ಎರಡು ಲಕ್ಷಕ್ಕೆ ಏರಿರುತ್ತದೆ. ಅನೇಕ ಹೊಸ ಹೊಸ ಬಡಾವಣೆಗಳೂ, ಅವುಗಳಿಗೆ ಸೇರಿದ ಸೌಕರ್ಯಗಳೂ ಏರ್ಪಾಡಾಗಿವೆ. ವರ್ಷಕ್ಕೆ ಹತ್ತಾರು ಲಕ್ಷ ರೂಪಾಯಿಗಳ ವೆಚ್ಚದಿಂದ ಪುರನಿವಾಸಿಗಳ ಯೋಗಕ್ಷೇಮವು ನಿರ್ವಹಿಸಲ್ಪಡುತ್ತಿದೆ. ಕ್ರಮ ಕ್ರಮವಾಗಿ ಆಧುನಿಕ ಸೌಲಭ್ಯಗಳೆಲ್ಲವೂ ದೊರೆತು ಈ ನಗರವು ಮಾದರಿ ಪಟ್ಟಣವೆಂಬ ಪ್ರಖ್ಯಾತಿಯನ್ನು ಪಡೆದಿದೆ. ಇದಕ್ಕೆ ಅನೇಕ ವರ್ಷಗಳಿಂದಲೂ ಆಳಿದ ಪ್ರಭುಗಳೂ, ಸರ್ಕಾರದ ಅಧಿಕಾರಿಗಳೂ, ಸಾರ್ವಜನಿಕ ಮುಂದಾಳುಗಳೂ ವಹಿಸಿದ ಅಪಾರ ಶ್ರದ್ಧೆಯೇ ಮುಖ್ಯ ಕಾರಣ.

ಹಲವು ವರ್ಷಗಳಿಂದಲೂ ಈ ನಗರವು ಪಡೆದಿರುವ ಅಪೂರ್ವ ಪ್ರಖ್ಯಾತಿಯನ್ನು ಇನ್ನು ಮುಂದೆಯೂ ಬೆಳೆಸಿಕೊಂಡು ಬರುವುದು ಸಕಲ ನಿವಾಸಿಗಳ ಕರ್ತವ್ಯ. ಪುರನಿವಾಸಿಗಳ ಹಿತಸಾಧನೆಯು ಪೌರಸಭೆಯಿಂದಲೇ ನಡೆಯಬೇಕಾಗಿದೆ. ಪೌರಸಭೆಯ ಆಡಳಿತವು ಪ್ರಜೆಗಳಿಂದ ಚುನಾಯಿತರಾದ ಇಪ್ಪತ್ತನಾಲ್ಕು ಜನ ಪ್ರತಿನಿಧಿಗಳ ಮೂಲಕ ನಡೆಯುತ್ತದೆ. ಆರು ಜನ ನಾಮಕರಣದ ಸದಸ್ಯರೂ ಸಹ ಸಭೆಯಲ್ಲಿರುವರು. ಆದರೂ ಒಟ್ಟಿನಲ್ಲಿ ಪೌರಾಡಳಿತದ ಅಧಿಕಾರವು ಪೌರಸಭೆಯಲ್ಲಿಯೇ ಇರುತ್ತದೆ. ಇಂತಹ ದೊಡ್ಡ ಸಂಸ್ಥೆಯ ಸಂಚಾಲಕರಾದ ಪ್ರತಿನಿಧಿಗಳನ್ನು ಆರಿಸುವಾಗ ಮತದಾರರು ತಮ್ಮ ಹಿತಸಾಧನೆಯು ಯಾರಿಂದ ಸಮರ್ಪಕವಾಗಿ ನಡೆಯುವುದೆಂಬುದನ್ನು ಮುಖ್ಯವಾಗಿ ಗಮನಿಸಬೇಕು.

ಕಳೆದ ಆರು ವರ್ಷಗಳಿಂದ ರಾಜಧಾನಿಯ ಪೌರಸಭೆಯಲ್ಲಿ ಕಾಂಗ್ರೆಸ್ ಪಕ್ಷದವರು ಬಹುಮತದಿಂದಲೂ, ಶಿಸ್ತಿನಿಂದಲೂ ಪುರನಿವಾಸಿಗಳಿಗೆ ಅನೇಕ ವಿಧವಾದ ಸೌಲಭ್ಯಗಳನ್ನು ಒದಗಿಸಿಕೊಟ್ಟಿರುವರು. ಪೌರ ಆಡಳಿತದಲ್ಲಿ ವಿಶೇಷ ಕ್ರಾಂತಿಕಾರಕವಾದ ಮಾರ್ಪಾಡುಗಳನ್ನು ಮಾಡಿರುವರು. ಪ್ರಜೆಗಳಿಗೂ, ಆಡಳಿತದವರಿಗೂ ನಿಕಟವಾದ ಸಂಪರ್ಕವನ್ನು ಕಲ್ಪಿಸಿರುವರು. ಪೌರಸಭೆಯು ತಮ್ಮದೇ ಎಂಬ ಭಾವನೆಯನ್ನು ಉಂಟುಮಾಡಿ ಕೊಟ್ಟಿರುವರು.

ಪ್ರಜೆಗಳ ಮೇಲೆ ನೇರವಾದ ತೆರಿಗೆಗಳ ಹೊರೆಯನ್ನು ಹೆಚ್ಚಿಸದೆ ಅಪ್ರತ್ಯಕ್ಷವಾದ ರೀತಿಗಳಲ್ಲಿ ವರಮಾನವನ್ನು ಹೆಚ್ಚಿಸಿ ಪ್ರಜೆಗಳಿಗೆ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಿಕೊಡುವುದೇ ಕಾಂಗ್ರೆಸ್ ಸಂಸ್ಥೆಯವರ ಮುಖ್ಯ ಗುರಿಯಾಗಿದೆ. ಇದನ್ನು ಅತ್ಯಂತ ದಕ್ಷತೆಯಾಗಿ ನಿರ್ವಹಿಸುತ್ತಿದ್ದಾರೆ. ಮುಂದೆಯೂ ಸಹ ಅವರು ಇದೇ ನೀತಿಯನ್ನೇ ಅನುಸರಿಸಿ ಪ್ರಜೆಗಳ ಮೇಲಿನ ಭಾರವನ್ನು ಕನಿಷ್ಠ ಪ್ರಮಾಣದಲ್ಲಿ ಉಳಿಸಿ ಅದರಿಂದ ಅದನ್ನು ಹೆಚ್ಚಿನ ಪ್ರಮಾಣದ ಪ್ರತಿಫಲವನ್ನು ಒದಗಿಸಿಕೊಡಲು ಬದ್ಧಕಂಕಣರಾಗಿರುತ್ತಾರೆ. ಆದುದರಿಂದ ಕಾಂಗ್ರೆಸ್ ಉಮೇದುವಾರರಿಗೇ ಮತದಾರರು ಸಂಪೂರ್ಣವಾಗಿ ಬೆಂಬಲ ನೀಡಿ ಅವರನ್ನೇ ಚುನಾಯಿಸಬೇಕೆಂದು ನಾವು ಕೋರುತ್ತೇವೆ.

ಅಟ್ಲಾಂಟಿಕ್ ಮಟ್ಟ ಹೆಚ್ಚುತ್ತಿದೆ ಪೆಸಿಫಿಕ್ ಇಳಿಯುತ್ತಿದೆ

ಅಟ್ಲಾಂಟಿಕ್ ಸಾಗರದ ಮಟ್ಟವು ಕಳೆದ ೩೦ ವರ್ಷದಿಂದೀಚೆಗೆ ಮೂರೂವರೆ ಅಂಗುಲಗಳಷ್ಟು ಹೆಚ್ಚಿದೆ. ಇದನ್ನು ಈ ಕಾಲದಲ್ಲಿ ನ್ಯೂ ಯಾರ್ಕ್, ಬಾಲ್ಟಿಮೋರ್ ಮತ್ತು ಫ್ಲಾರಿಡಾಗಳಲ್ಲಿ ರೆಕಾರ್ಡು ಮಾಡಲಾಗಿದೆ. ಇದೇ ಕಾಲದಲ್ಲಿ ಪೆಸಿಫಿಕ್ ಸಾಗರದ ಮಟ್ಟವು ಇಳಿಯುತ್ತಿದೆ. ಇದರ ಕಾರಣ ಇನ್ನೂ ತಿಳಿದಿಲ್ಲ. ಈ ಬದಲಾವಣೆಯು ಈ ಶತಮಾನದ ಪ್ರಾರಂಭದಿಂದ ಹೆಚ್ಚಾಗಿದೆ. ಎಂದು ಅಮೇರಿಕದ ಸುದ್ದಿಯೊಂದು ತಿಳಿಸುತ್ತದೆ.

ವಿದ್ಯಾರ್ಥಿಗಳನ್ನು ವಿದೇಶಕ್ಕೆ ಕಳುಹಿಸುವುದು ವ್ಯರ್ಥ

ಭಾರತದಿಂದ ವಿದ್ಯಾರ್ಥಿಗಳನ್ನು ಪ್ರೌಢ ವಿದ್ಯಾಭ್ಯಾಸಕ್ಕಾಗಿ ವಿದೇಶಗಳಿಗೆ ಕಳುಹಿಸಕೂಡದೆಂದು ಸುಪ್ರಸಿದ್ಧ ವಿಜ್ಞಾನ ಸಂಶೋಧಕರಾದ ಸರ್ ಸಿ. ವಿ. ರಾಮನ್‌ರವರು ಹೇಳಿರುವರು. ಹಾಗೆ ಮಾಡುವುದರಿಂದ ಭಾರತೀಯರು ಬೆವರು ಸುರಿಸಿ ಸಂಪಾದಿಸಿದ ಹಣವನ್ನು ವೃಥಾ ವ್ಯರ್ಥ ಮಾಡಿದಂತಾಗುವುದು. ಇಂದು ಅವರಿಗೆ ಬೇಕಾದುದು ಸಹಜವಾದ ರಾಷ್ಟ್ರೀಯತೆ ಮತ್ತು ಆತ್ಮಗೌರವ. ಅವರು ತಮ್ಮದೇ ಆದ ಪ್ರೌಢ ವಿದ್ಯಾ ಸಂಸ್ಥೆಗಳನ್ನು ಸ್ಥಾಪಿಸಿಕೊಳ್ಳಬೇಕು, ಎಂದು ಅವರು ಅಭಿಪ್ರಾಯ ಪಟ್ಟಿರುತ್ತಾರೆ.

ಕರ್ಣಾಟಕ ಆಯುರ್ವೇದ ಸಮ್ಮೇಳನ

ಬರುವ ಡಿಸೆಂಬರಿನಲ್ಲಿ ಗದುಗಿನಲ್ಲಿ ಸೇರಲಿರುವ ನಿಖಿಲ ಕರ್ಣಾಟಕ ಆಯುರ್ವೇದ ಸಮ್ಮೇಳನದ ೧೫ ನೇ ಅಧಿವೇಶನಕ್ಕೆ ಶ್ರೀಮತಿ ಸುಮತೀಬಾಯಿ ಶಾರಂಗಪಾಣಿ(?)ಯವರು ಅಧ್ಯಕ್ಷಿಣಿಯಾಗಿ ಆರಿಸಲ್ಪಟ್ಟಿರುತ್ತಾರೆ.

OPERA TALKIES

30-10-46 ರಿಂದ

ಎರಡನೆಯ ವಾರ

ಶ್ರೀ ಮುರುಗನ್

(ತಮಿಳು)

ಪಾತ್ರ:- ಹೊನ್ನಪ್ಪ ಭಾಗವತರ್, ಜೀವರತ್ನಂ, ಮಾಲತಿ, ರಾಮಚಂದ್ರನ್,

Edited, printed and published by A. R. Nagarajan at the Sadhvi Press D. Subbiah Road, Mysore

ಮೈಸೂರು ಸಿಟಿ ಮುನಿಸಿಪಾಲಿಟಿ

ಪ್ರಸಿದ್ಧ ಪತ್ರಿಕೆ

ಇದರಿಂದ ಸಮಸ್ತ ಜನಗಳಿಗೂ ತಿಳಿಸುವುದೇನೆಂದರೆ:—

ಮೈಸೂರು ನಗರದ ಮಂಡಿ, ಲಷ್ಕರ್ ಮತ್ತು ನಜರ್‌ಬಾದ್ ಮೊಹಲ್ಲಾಗಳಲ್ಲಿ ಪ್ಲೇಗಿನ ರೋಗವು ತಲೆದೋರಿದೆ ಎಂದು ತಿಳಿದುಬಂದಿರುವುದರಿಂದ ಇದನ್ನು ತಡೆಗಟ್ಟಲು ಮುಂಜಾಗ್ರತೆ ಕಾರ್ಯಕ್ರಮವನ್ನು ಅನುಸರಿಸಿ ಈ ಕೆಳಗೆ ನಮೂದಿಸಿರುವ ಸ್ಥಳಗಳಲ್ಲಿ ಪ್ಲೇಗ್ ಇನಾಕ್ಯುಲೇಷನ್ ಮಾಡಿಸಿಕೊಳ್ಳಲು ಈ ಮೂಲಕ ಕೋರುತ್ತೇವೆ.

ರೇಷನ್ ಕಾರ್ಡುಗಳಲ್ಲಿ ರವೆ, ಸಕ್ಕರೆ ಇವುಗಳನ್ನು ಪಡೆಯಲು ಸೌಕರ್ಯವಿಲ್ಲದ ಇನಾಕ್ಯುಲೇಷನ್ ಆದನಂತರ ಹೆಲ್ತ್ ಆಫೀಸರವರಿಂದ ಚೀಟಿಗಳನ್ನು ಪಡೆದು ಸಾಮಾನುಗಳನ್ನು ಆಯಾಯ ಡಿಪೋಗಳಲ್ಲಿ ಹೊಂದಲು ಏರ್ಪಡಿಸಿರುತ್ತೆ.

ಇನಾಕ್ಯುಲೇಷನ್ ಮಾಡುವ ಸ್ಥಳಗಳು:—

ಮಂಡಿ:-1 ಅದಿನಾ ಬಡಾವಣೆ ಚಿಕಿತ್ಸಾಲಯ, 2 ಗಾಣಿಗರಕೇರಿ ಸರ್ಕಾರಿ ಧಾನ್ಯದ ಡಿಪೋ

ಲಷ್ಕರ್: 1. ಮೀನಗಿರಿ(?) ಆಸ್ಪತ್ರೆ ಡಾ॥ ಪ್ರಸಾದ್ ನರ್ಸಿಂಗ್ ಹೋಂ

ನಜರ್‌ಬಾದ್:-1. ಲೋಕಲ್ ಫಂಡ್ ಆಸ್ಪತ್ರೆ 2. ಇಟ್ಟಿಗೆಗೂಡು ಪೋಲಿಸ್ ಸ್ಟೇಷನ್

ಮೇಲ್ಕಂಡ ಸ್ಥಳಗಳಲ್ಲದೆ ಪ್ರೈವೆಟ್ ಡಾಕ್ಟರುಗಳ ಆಸ್ಪತ್ರೆಗಳಲ್ಲಿಯೂ ಇನಾಕ್ಯುಲೇಷನ್ ಮಾಡಲು ಏರ್ಪಾಡಾಗಿದೆ.

ಎಂ. ಮಾಧವರಾವ್

ಪ್ರೆಸಿಡೆಂಟ್

ರಾಜ್‌ಕಮಲ್, ಮೈಸೂರು

31—10—46 ನೇ ಶುಕ್ರವಾರದಿಂದ

Village Girl—ವಿಲೇಜ್ ಗರ್ಲ್

ಪ್ರತಿ ದಿನ ಮೂರು ಆಟಗಳು

ಪಾತ್ರ:—* ನೂರ್‌ಜಹಾನ್, * ಗೀತಾನಿಜಾಮಿ, * ರಾಮತಕೂಲ್ ಮುಂತಾದ.

Morning Shows at 10-30 a. m. From 1-11-46 for 4 d

'The War of the wild Cats'

in old Oklahoma

ಚೆಲುವಾಂಬ ಆಸ್ಪತ್ರೆ,
ಮೈಸೂರು.
ತಾ॥ 12-10-1946

ಟೆಂಡರ್ ನೋಟೀಸು

ಮೈಸೂರು ಚೆಲುವಾಂಬ ಆಸ್ಪತ್ರೆಗೆ 1947 ನೇ ಜನವರಿ 1 ನೇ ತಾರೀಖು ಆರಭ್ಯ 1947 ನೇ ಡಿಸೆಂಬರ್ 31 ರ ವರೆಗೆ ಎರಡು ದಿನ್ನವೂ ಸೇರಿ ಬೇಕಾಗುವ ಆಸ್ಪತ್ರೆ ಸಾಮಾನಿನ ಸರಬರಾಜು ಬಗ್ಗೆ ಮೂರು ಪ್ರತಿಗಳುಳ್ಳ ಸೀಲಾದ ಟೆಂಡರುಗಳನ್ನು ಸೆಕ್ರೆಟರಿಯವರು ಅವರ ಆಫೀಸಿನಲ್ಲಿ ತಾ॥ 4-11-1946 ನೇ ರವಿವಾರದ ದಿನ 11 ಘಂಟೆಗೆ ತೆಗೆದುಕೊಳ್ಳುತ್ತಾರೆ.

೧೦೦ ರೂಪಾಯಿಗಳನ್ನು ಮುಂಗಡ ಡಿಪಾಜಿಟ್ಟಾಗಿ ಖಜಾನೆಗೆ ಕಟ್ಟಿ ಟೆಂಡರ್ ಕಳುಹಿಸದಿಲ್ಲದೆ ಟೆಂಡರನ್ನು ಸ್ವೀಕರಿಸಲಾಗುವುದಿಲ್ಲ. ಟೆಂಡರಿನ ಜೊತೆಯಲ್ಲಿ ತೆರಿಗೆ ರಶೀದಿಯನ್ನು ಅಧಿಕಾರಿಗಳಿಂದ ಪಡೆದ ಸಾಲ್ವೆನ್ಸಿ ಸರ್ಟಿಫಿಕೇಟುಗಳನ್ನು ಟೆಂಡರಿನೊಡನೆ ಕಳುಹಿಸಬೇಕು. ಟೆಂಡರನ್ನು ಕೊಡಬೇಕಾದ ತಾರೀಖಿಗೆ ೬ ತಿಂಗಳು ಹಿಂದೆ ಪಡೆದಿರುವ ಸಾಲ್ವೆನ್ಸಿ ಸರ್ಟಿಫಿಕೇಟುಗಳನ್ನು ಅಂಗೀಕರಿಸಲಾಗುವುದಿಲ್ಲ.

ಪಟ್ಟಿಗೆ ವಿವರಗಳನ್ನು 1946 ನೇ ಅಕ್ಟೋಬರ್ ತಾರೀಖು 17 ನೇ ಮೈಸೂರು ಗೆಜೆಟ್ಟಿನಲ್ಲಿ ಪ್ರಕಟಿಸಿರುವ ನೋಟೀಸಿನಲ್ಲಿ ನೋಡಬಹುದು. ತಪಸೀಲಾದ ಟೆಂಡರು ಫಾರಂಗಳನ್ನು ಆಫೀಸಿನಲ್ಲಿ ಪಡೆಯಬಹುದು.

(ಸಹಿ) ಎಂ. ಬಸಪ್ಪ,
ಸೆಕ್ರೆಟರಿ.

॥ ವಂದೇಮಾತರಂ ॥

ಚಾಮುಂಡಿ ಮೊಹಲ್ಲಾ ಓಟರು ಮಹಾಶಯರುಗಳಲ್ಲಿ ವಿನಂತಿ

11-11-46 ನೇ ಗುರುವಾರ ನಡೆಯಲಿರುವ ಪೌರಸಭಾ ಚುನಾವಣೆಗಳಲ್ಲಿ ಈ ಕೆಳಕಂಡ ಕಾಂಗ್ರೆಸ್ ಉಮೇದುವಾರರಿಗೇ ಓಟು ಕೊಡಬೇಕಾಗಿ ಪ್ರಾರ್ಥನೆ

ಶ್ರೀಗಳಾದ

ಬಿ. ನಾರಾಯಣಸ್ವಾಮಿ, ಬಿ. ಎ. ಬಿ. ಎಲ್,

ತಿಗರಂ ರಂಗಯ್ಯ, ಬಿ. ಎ.

ಕೆ. ಎಸ್. ಸತ್ಯನಾರಾಯಣರಾವ್,

ಶ್ರೀಮತಿ ಎಂ. ಆರ್. ಲಕ್ಷಮ್ಮ ಎಂ. ಎ.

ನಗರ ಚುನಾವಣಾ ಉಪಸಮಿತಿ

ಫೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಗುರುವಾರ ೩೧—೧೦—೪೬ [ಸಂಚಿಕೆ ೭೭

ಬಂಗಾಳ ಗವರ್ನರೊಡನೆ ಗಾಂಧಿಜಿಯವರ ಭೇಟಿ

ಬಂಗಾಳಾ ದೌರ್ಜನ್ಯದ ಖಂಡನೆ

ಉಪಸಭಾಧಿವೇಶನದಲ್ಲಿ ನಿರ್ಣಯ

ಮೈಸೂರು ೩೧

ಪೂರ್ವ ಬಂಗಾಳದಲ್ಲಿ ನಡೆದ ದೌರ್ಜನ್ಯತೆವೂ, ಅನಾಗರಿಕವೂ ಆದ ಲೂಟಿ, ಕೊಲೆ, ಸ್ತ್ರೀ ಅಪಹರಣ, ಬಲಾತ್ಕಾರದಿಂದ ಮತಾಂತರಗೊಳಿಸುವುದು ಮೊದಲಾದ ದುಷ್ಕೃತ್ಯಗಳನ್ನು ಪೂರ್ವ ಸಿದ್ಧತೆಗಳೊಡನೆ, ಸಾಮೂಹಿಕ ನಡೆಸಿದುದನ್ನು ಈ ಸಭೆಯು ತೀವ್ರವಾಗಿ ಖಂಡಿಸುತ್ತದೆ. ಅಲ್ಲದೆ ದುರಂತಕ್ಕೊಳಗಾದ ಅಲ್ಲಿನ ನಿರಪರಾಧಿ ಜನಗಳಿಗೆ ಸಭೆಯು ತನ್ನ ಸಂಪೂರ್ಣ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತದೆ. ಎಂಬ ನಿರ್ಣಯವು ನಿನ್ನೆ ರಾಜಧಾನಿಯ ಪುರಸಭಾಧಿವೇಶನದಲ್ಲಿ ಅಂಗೀಕಾರವಾಯಿತು. ಉಪಾಧ್ಯಕ್ಷರಾದ ಶ್ರೀ ಎ. ಕೃಷ್ಣಮೂರ್ತಿಯವರು ಸಭಾಧ್ಯಕ್ಷತೆಯನ್ನು ವಹಿಸಿದ್ದರು. ಮೇಲ್ಕಂಡ ನಿರ್ಣಯವನ್ನು ಶ್ರೀ ಪಿ. ನಾಮಯ್ಯನವರು ಮಂಡಿಸಿದರು. ... ಎ. ಬೋಯಸರು ಅದನ್ನು ಅನುಮೋದಿಸಿದರು. ಶ್ರೀಗಳಾದ ಬಿ. ನಾರಣಸ್ವಾಮಿ, ಸಿದ್ದಯ್ಯ, ಇ. ಪಿ. ನಂಜುಂಡಪ್ಪ, ಎ. ದಾಸಪ್ಪ, ಇವರುಗಳು ಸಮರ್ಥನೆ ಮಾಡಿದರು. ಶ್ರೀ ಮಹಮ್ಮದ್ ... ವಿರೋಧಿಸಿ ಬಂಗಾಳ ಮಾತ್ರವಲ್ಲದೆ ಇನ್ನೂ ಅನೇಕ ಕಡೆಗಳಲ್ಲಿ ಇಂತಹ ಅತ್ಯಾಚಾರಗಳು ನಡೆದಿರುವುದರಿಂದ ಅವುಗಳನ್ನೂ ಸೇರಿಸಬೇಕೆಂದರು. ಇದಕ್ಕೆ ಸಭೆಯವರು ಒಪ್ಪಲಿಲ್ಲ. ಓಟಿಗೆ ಹಾಕಿದಾಗ ನಿರ್ಣಯವು ಬಹುಮತದಿಂದ ಅಂಗೀಕರಿಸಲ್ಪಟ್ಟಿತು. ವಿರೋಧಿಸುವವರ ಹೆಸರನ್ನು ಕೇಳಿ ... ಸೇಟರು, ತಾವು ತಿದ್ದುಪಡಿಯ ಸೂಚಿಸುವುದಾಗಿ ಹೇಳಿದರು. ಓಟಿಗೆ ಹಾಕಿದ ಮೇಲೆ ತಿದ್ದುಪಡಿಗೆ ಅವಕಾಶವಿಲ್ಲ ಎಂದು ಅಧ್ಯಕ್ಷರು ಹೇಳಲು ಅಧ್ಯಕ್ಷರ ನಿರ್ಣಯ ದುಷ್ಟಾಳಿಕೆ ಎಂದು ಸೇಟರು ಹೇಳಿದರು (ವೈಹ್ಯಾಂಡಿಷ್). ಈ ಪದವನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಅಧ್ಯಕ್ಷರು ಹೇಳಿದಾಗ ಅದನ್ನು ತೆಗೆದುಕೊಳ್ಳುವುದಿಲ್ಲವೆಂದೂ, ತಾವು ಸಭೆಯನ್ನು ಬಿಟ್ಟು ಹೋಗುವುದಾಗಿಯೂ ಹೇಳಿ, ಮಿ॥ ಸೇಟರು ಹೊರಟು ಹೋದರು.

ಸ್ವಲ್ಪ ಹೊತ್ತಿನ ಮೇಲೆ ಅಧ್ಯಕ್ಷರಾದ ಶ್ರೀ ಮಾಧವರಾಯರು ಬಂದು ಆಸನವನ್ನು ವಹಿಸಿದಾಗ ಮಿ॥ ಸೇಟರೂ ಬಂದರು. ಡಿಫ್ತೀರಿಯ ಮತ್ತು ಪ್ಲೇಗ್ ಹರಡುತ್ತಿರುವ ಅಂಶವನ್ನು ಅಧ್ಯಕ್ಷರ ಗಮನಕ್ಕೆ ತಂದು, ಸೋಂಕು ರೋಗ ತಡೆಗಟ್ಟಲು ಯಶಸ್ವಿಯಾದ ಕಾರ್ಯ ಕೈಗೊಳ್ಳಬೇಕೆಂದು ಸದಸ್ಯರುಗಳು ... ನಗರದಲ್ಲಿ ಸೋಂಕು ಜಾಡ್ಯ ... ತಲೆ ಹಾಕಿ ಹಾವಳಿ ನಡೆಸ ... ಗೊತ್ತಾದ ಹಾಗೆ ವಾರ್ಷಿಕ ... ತಯಾರ್ಮಾಡಿ ಕಾರ್ಯ ... ಅನುಸರಿಸುವುದು ಯುಕ್ತವೆಂದು ... ಸಲಹೆ ಕೊಟ್ಟರು.

... ರಾಜಕುಮಾರಿಯ ನಾಮಕರಣದಲ್ಲಿ ನಡೆದ ಅನ್ನ ದಾನದ ಸಂಬಂಧ ಮೈಸೂರು ಪತ್ರಿಕೆಯವರು "ಪೌರರ ಕರ್ತವ್ಯ ಲೋಪ" ಎಂಬ ... ವರದಿಯು ವಿಚಾರವಾಗಿ ... ಓದಿತು. ಪೌರಸಭೆ

ಬಂಗಾಳಾ ಗವರ್ನರೊಡನೆ ಗಾಂಧಿಜಿಯವರ ಭೇಟಿ

ಮಹಾತ್ಮ ಗಾಂಧಿಯವರು ನಿನ್ನೆ ಮಧ್ಯಾಹ್ನ ೩ ಗಂಟೆ ಸಮಯದಲ್ಲಿ ಬಂಗಾಳದ ಗವರ್ನರನ್ನು ಕಲ್ಕತ್ತದಲ್ಲಿ ಭೇಟಿ ಮಾಡಿ ಎರಡು ಗಂಟೆಗಳ ಕಾಲ ಸಂಭಾಷಣೆ ನಡೆಸಿದರು

ಭಾರತದ ಆಶೆ ಈಡೇರಬೇಕು

ಭಾರತದ ನ್ಯಾಯವಾದ ಕೇಳಿಕೆಗಳನ್ನೆಲ್ಲಾ ಪ್ರಪಂಚ ಸಂಸ್ಥೆಯು ಅಂಗೀಕರಿಸಬೇಕು; ಈ ಸಂಸ್ಥೆಯ ಸದಸ್ಯ ರಾಷ್ಟ್ರವಾದ ಭಾರತಕ್ಕೆ ಬ್ರಿಟನ್ನಿಗಿರುವಷ್ಟೇ ಪರಮಾಧಿಕಾರವಿರಬೇಕು-ಎಂಬುದಾಗಿ ವಿಶ್ವಸಂಸ್ಥೆ ಜನರಲ್ ಅಸೆಂಬ್ಲಿಯಲ್ಲಿ ನೆನ್ನೆ ರಷ್ಯದ ಮಿ॥ ಸಟವ ಮಿ॥ಮಲಟೂಫರು ತಿಳಿಸಿದರು.

ಅನ್ನದಾನ

ಸ್ವಂ.ಸು] ಚಾಮರಾಜನಗರ ೨೯

ರಾಜಕುಮಾರಿ ಗಾಯತ್ರೀ ದೇವಿಯವರ ನಾಮಕರಣೋತ್ಸವದ ಸಮಾರಂಭದಲ್ಲಿ ಇಲ್ಲಿನ ಸಾವಿರಾರು ಬಡ ಜನರಿಗೆ ಮಸೀದಿ, ದೇವಸ್ಥಾನಗಳಲ್ಲಿ ಅನ್ನದಾನ ನಡೆಯಿತು. ಹಿಂದೂ ಮಹಾಸಭೆಯವರೂ, ಅಮಲ್ದಾರ್ ಶ್ರೀ ಬಿ ಹಾಲಪ್ಪನವರೂ ಮತ್ತು ನಗರದ ಇತರ ಜನಗಳ ಮಹನೀಯರೂ ಈ ಸಮಾರಂಭಕ್ಕಾಗಿ ವ್ಯವಸ್ಥೆ ಮಾಡಿದ್ದರು.

... ಗೆ ವಹಿಸಿದ್ದ ಅನ್ನ ದಾನದ ವಿಚಾರಗಳು ಸಮರ್ಪಕವಾಗಿ ನಡೆದುದಕ್ಕೆ ಧನ್ಯವಾದವನ್ನು ಸಲ್ಲಿಸಿ ಹುಜೂರು ಸೆಕ್ರೆಟರಿಯವರಿಂದ ಬಂದ ಪತ್ರವನ್ನು ಅಧ್ಯಕ್ಷರು ಓದಿದರು. ಪೂರ್ಣಯ್ಯನ ಛತ್ರದಲ್ಲಿ ನಡೆದ ಸಮಾರಾಧನೆಯ ವ್ಯವಸ್ಥೆಯನ್ನು ಪೌರಸಭೆಗೆ ವಹಿಸಲ್ಪಟ್ಟಿರಲಿಲ್ಲವೆಂದೂ, ಆ ವಿಷಯದಲ್ಲಿ ಮೈಸೂರು ಪತ್ರಿಕೆಯು ಪ್ರಕಟಿಸಿರುವ ತಪ್ಪು ವರದಿಯನ್ನು ತಿದ್ದುಪಡಿ ಮಾಡುವಂತೆ ಅಧ್ಯಕ್ಷರು ಕಳುಹಿಸಿದ್ದ ಪ್ರಕಟಣೆಯನ್ನು ಸದರಿ ಪತ್ರಿಕೆಯವರು ಇದುವರೆವಿಗೆ ಪ್ರಚುರಪಡಿಸಿಲ್ಲವೆಂದೂ ತಿಳಿಸಲಾಯಿತು. ಆದುದರಿಂದ ಸದರಿ ಪತ್ರಿಕೆಗೆ ಪೌರಸಭೆಯವರು ಕೊಟ್ಟಿರುವ ಸೌಲಭ್ಯಗಳನ್ನೆಲ್ಲಾ ವಿಕೆರದ್ದು ಮಾಡಬಾರದೆಂಬ ಮತ್ತೊಂದು ಪ್ರಶ್ನೆಗೆ ಸಭೆಯ ಅಭಿಪ್ರಾಯದಂತೆ ಮುಂದಿನ ಕಾರ್ಯಕ್ರಮ ಕೈಗೊಳ್ಳಲಾಗುವುದೆಂದು ಅಧ್ಯಕ್ಷರು ತಿಳಿಸಿದರು.

ಚಿತ್ರದುರ್ಗದ ಕ್ಷಾಮ ಪೀಡಿತ ಜನರಿಗೆ ವಸ್ತ್ರದಾನ ಮಾಡಲು ೫೦೦ ರೂ ಸಹಾಯವನ್ನು ಮಂಜೂರ್ ಮಾಡಲಾಯಿತು.

ಉಮೇದುವಾರಿಕೆ ಅರ್ಜಿಯ ತಿರಸ್ಕಾರ

ಮೈಸೂರು ೩೧

ಪುರಸಭಾ ಚುನಾವಣೆಗೆ ಸ್ಪರ್ಧಿಸಿದ್ದ ಉಮೇದುವಾರರ ಅರ್ಜಿ ಒಗ್ಗೆ ಅಧ್ಯಕ್ಷರು ನಿನ್ನೆ ತಕರಾರುಗಳನ್ನೆಲ್ಲಾ ಪರಿಶೀಲಿಸಿ ದೇವರಾಜ ಮೊಹಲ್ಲಾದಿಂದ ಸ್ಪರ್ಧಿಸಿದ್ದ ಶ್ರೀ ಟಿ. ಸಿ. ನಟರಾಜ್‌ರವರ ಅರ್ಜಿಯನ್ನು ಅವರ ತಂದೆ ಹೆಸರು ಸರಿಯಾಗಿರಲಿಲ್ಲವೆಂಬ ಕಾರಣದ ಮೇಲೆ ತಿರಸ್ಕರಿಸಿದರು. ಇದರಿಂದ ಕಾಂಗ್ರೆಸ್ಸಿಗೆ ಇನ್ನೂ ಒಂದು ಸ್ಥಾನವು ದೊರೆತಂತಾಯಿತು

ಆಹಾರ ಸಮ್ಮೇಳನ

ಮೈಸೂರು ಜಿಲ್ಲಾ ಆಹಾರ ಸಮ್ಮೇಳನವು ನವೆಂಬರ್ ೧೦ ನೇ ತಾ॥ ಭಾನುವಾರ ಮಧ್ಯಾಹ್ನ ೩ ಗಂಟೆಗೆ ರಾಜಧಾನಿಯ ಟೌನ್‌ಹಾಲಿನಲ್ಲಿ ಜರುಗುವುದು. ಸಮ್ಮೇಳನದಲ್ಲಿ ಚರ್ಚಿಸಲು ನಿರ್ಣಯಗಳನ್ನು ಸಾರ್ವಜನಿಕರು ನವೆಂಬರ್ ೮ ನೇ ತಾ॥ ಸಾಯಂಕಾಲದೊಳಗೆ ಕಾಂಗ್ರೆಸ್ ಕಛೇರಿಗೆ ಕಳುಹಿಸಿಕೊಡಬೇಕು. ಸಮ್ಮೇಳನಕ್ಕೆ ಜಿಲ್ಲೆಯ ಎಲ್ಲ ಜನರೂ ಆಗಮಿಸಿ ನೆರವಾಗಬೇಕೆಂದು ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಹೆಚ್. ಕೆ. ವೀರಣ್ಣಗೌಡರವರು ಪ್ರಾರ್ಥಿಸಿದ್ದಾರೆ.

ಚುನಾವಣಾ ಪ್ರಚಾರ

ಪೌರಸಭೆಯ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದುವಾರರಿಗೆ ಬೆಂಬಲ ಕೊಡಲು ಸೂಕ್ತ ಕಾರ್ಯಕ್ರಮವನ್ನು ಗೊತ್ತು ಮಾಡುವುದಕ್ಕಾಗಿ ಸೋಮವಾರ ಕಾಂಗ್ರೆಸ್ ಕಛೇರಿಯಲ್ಲಿ ಕಾಂಗ್ರೆಸ್ ಹಿತೈಷಿಗಳ ಸಭೆಯೊಂದು ಶ್ರೀ ಎಸ್. ರಂಗರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸುಮಾರು ೧೫೦ ಜನರು ಸೇರಿದ್ದರು. ಎಲ್ಲಾ ಮೊಹಲ್ಲೆಗಳಲ್ಲಿಯೂ, ಹುರುಪಿನಿಂದ ಚುನಾವಣಾ ಪ್ರಚಾರವನ್ನು ನಡೆಸಬೇಕೆಂದು ನಿರ್ಧರಿಸಲಾಯಿತು. ಕಾರ್ಯಕ್ರಮಗಳನ್ನು ಗೊತ್ತು ಮಾಡಲು ಒಂದು ಸಮಿತಿಯನ್ನು ಸಹ ರಚಿಸಲಾಯಿತು

ಮದ್ರಾಸ್ ಶಾಲೆಗಳಲ್ಲಿ ಮತ ಪ್ರಸಾರ

ಮದ್ರಾಸ್ ಪ್ರಾಂತ್ಯದ ಹಲವು ಕ್ರಿಶ್ಚಿಯನ್ ಮಿಷನ್ ಶಾಲೆಗಳು ಮತಾಂತರ ಗೊಳಿಸುವ ಕೇಂದ್ರಗಳಾಗಿ ಪರಿಣಮಿಸಿವೆಯೆಂದು ಸರ್ಕಾರಕ್ಕೆ ಬಂದಿರುವ ದೂರುಗಳನ್ನು ಪರಿಶೀಲಿಸಲಾಗುತ್ತಿದೆ ... ತಿಳಿದುಬಂದಿದೆ

ಮೈಸೂರಿಗೆ ಪಂಜಾಬ್ ಅಕ್ಕಿ

೮೦೦ ಟನ್ ಅಕ್ಕಿಯನ್ನು ತುಂಬಿಕೊಂಡು ೩ ವಿಶೇಷ ಗುಡ್ಸ್ ರೈಲು ಪಂಜಾಬಿನಿಂದ ಹೊರಟಿವೆ. ಈ ಅಕ್ಕಿಯನ್ನು ಮೈಸೂರು, ಮದ್ರಾಸ್, ತಿರುವಾಂಕೂರು ಮತ್ತು ಕೊಚ್ಚಿಗೆ ಹಂಚಲಾಗುವುದೆಂದು ಗೊತ್ತಾಗಿದೆ.

ಫರೀದ್‌ಕೋಟೆ ಜೈಲಿನಲ್ಲಿ ಉಪವಾಸ ಮುಷ್ಕರ

ಜೈಲಿನ ಅಧಿಕಾರಿಗಳು ಅನುಚಿತ ರೀತಿಯಲ್ಲಿ ವರ್ತಿಸಿದರೆಂದು ಫರೀದ್‌ಕೋಟೆ ಕಾರಾಗೃಹದಲ್ಲಿರುವ ರಾಜಕೀಯ ಬಂದಿಗಳೆಲ್ಲಾ ಉಪವಾಸ ಮುಷ್ಕರ ಹೂಡಿದ್ದಾರೆಂದು ಗೊತ್ತಾಗಿದೆ.

ಕಲ್ಕತ್ತದಲ್ಲಿ ಗಾಂಧಿಜಿ

ಮಹಾತ್ಮ ಗಾಂಧಿಯವರು ನೆನ್ನೆ ರಾತ್ರಿ ಕಲ್ಕತ್ತವಿಗೆ ರೈಲಿನಲ್ಲಿ ಬಂದಿಳಿದರು. ಅಲ್ಲಿಂದ ಅವರು ನೌಕಾಲಿ ಮತ್ತು ತಿಪ್ಪೇರಾ ಜಿಲ್ಲೆಗಳಲ್ಲಿ ಪ್ರವಾಸ ಮಾಡಲಿದ್ದಾರೆ.

ಗಾಂಧಿಜಿ ಭೇಟಿಗೆ ಲೀಗ್ ಪ್ರಧಾನಿ

ಕಲ್ಕತ್ತದ ಬಳಿ ಸೋದೇಪುರ್ ಆಶ್ರಮದಲ್ಲಿ ತಂಗಿರುವ ಗಾಂಧಿಜಿಯವರನ್ನು ಬಂಗಾಳದ ಲೀಗ್ ಪ್ರಧಾನಿ ಮಿ॥ ಸುಹ್ರವರ್ದಿಯವರು ನಿನ್ನೆ ಮಧ್ಯಾಹ್ನ ಭೇಟಿ ಮಾಡಿದ್ದರು.

ಅರಬ್ಬರ ಮೇಲೆ ಸಂಯುಕ್ತ ಸಂಸ್ಥಾನದ ನೈತಿಕ ಯುದ್ಧ

ಪ್ಯಾಲಸ್ಟೈನಿಗೆ ೧ ಲಕ್ಷ ಯೆಹೂದ್ಯರು ಪ್ರವೇಶಿಸಲು ಸಮ್ಮತಿಸಿ ಅಮೇರಿಕಾ ಸಂಯುಕ್ತ ಸಂಸ್ಥಾನದ ಅಧ್ಯಕ್ಷ ಟ್ರೂಮನ್ನರು ಸೌದಿ ಅರೇಬಿಯಾದ ರಾಜರಿಗೆ ಬರೆದಿರುವ ಪತ್ರವು ಅರಬ್ಬರಮೇಲೆ ಸಂಯುಕ್ತ ಸಂಸ್ಥಾನವು ನೈತಿಕ ಯುದ್ಧ ಹೂಡುವಂತಿದೆ. ಆದ್ದರಿಂದ ಅರಬ್ ರಾಷ್ಟ್ರಗಳು ಅಮೇರಿಕದೊಡನೆ ಇರುವ ಸಂಬಂಧಗಳನ್ನೆಲ್ಲಾ ಕಡಿದು ಹಾಕಲೇ ಬೇಕು. ಅಮೇರಿಕಾದ ವ್ಯಾಪಾರ ವ್ಯವಹಾರಗಳನ್ನು ಬಹಿಷ್ಕರಿಸಬೇಕು ಎಂದು ಅರಬ್ ಲೀಗ್ ಕಾರ್ಯದರ್ಶಿ ಘೋಷಿಸಿದ್ದಾರೆ

ಸುಭಾಷ್ ಬೋಸರಿಗೆ ಕೇಂದ್ರ ಸರ್ಕಾರದಲ್ಲಿ ಸ್ಥಾನವೇ

ಸುಭಾಷ್ ಚಂದ್ರ ಬೋಸರಿಗಾಗಿ ಕೇಂದ್ರ ತಾತ್ಕಾಲಿಕ ಸರ್ಕಾರದಲ್ಲಿ ಒಂದು ಸ್ಥಾನವನ್ನು ಖಾಲಿ ಇಟ್ಟಿರಬೇಕೆಂದು ಈಗಿನ ಮಂತ್ರಿಮಂಡಲ ನಿರ್ಧರಿಸಿರುವುದು ನಿಜವೇ? ಎಂದು ಕೇಂದ್ರ ಶಾಸನ ಸಭೆಯಲ್ಲಿ ನೆನ್ನೆ ಕೇಳಲಾದ ಪ್ರಶ್ನೆಗೆ ಸರ್ದಾರ್ ಪಟೇಲರು ಉತ್ತರವಿತ್ತು ಈ ಪ್ರಶ್ನೆಯು ಸುಭಾಷ್ ಬೋಸರು ಹಿಂತಿರುಗಿ ಬಂದಾಗ ಏಳತಕ್ಕದ್ದಾಗಿದೆ-ಎಂದಿದ್ದಾರೆ.

ಬೊಂಬಾಯಿ ಕಲೆಕ್ಟರಿಗೆ ಜುಲ್ಮಾನೆ

ಬೊಂಬಾಯಿನ ಮೆರೀನ್ ಡ್ರೈವಿನಲ್ಲಿ ಹತ್ತು ವಾಸವಾಗಿದ್ದ ಮನೆಯನ್ನು ಪ್ರಿನ್ಸಿಪಾಲ್ ನ್ಯಾಯಸ್ಥಾನದ ಹುಕುಮಿಗೆ ವಿರೋಧವಾಗಿ ಬೊಂಬಾಯಿ ಕಲೆಕ್ಟರು ಬಲವಂತದಿಂದ ಆಕ್ರಮಿಸಿಕೊಂಡರೆಂದು, ಮಿ॥ ಜಸ್ಟಿಸ್ ... ನ್ಯಾಯಸ್ಥಾನದಲ್ಲಿ ... ಕಲೆಕ್ಟರು ನ್ಯಾಯಸ್ಥಾನದ ... ವಾಗಿ ... ದಿನ ... ಜುಲ್ಮಾನೆ ವಿಧಿಸಲ್ಪಟ್ಟಿತು

ಸಾಧ್ವಿ

ತಾ|| ೩೧-೧೦-೪೬ ಗುರುವಾರ

ಸ್ಥಳೀಯ ಸಂಸ್ಥೆಗಳಲ್ಲಿ ಪ್ರಜೆಗಳ ಸಂಪರ್ಕ

ದೇಶದ ರಾಜ್ಯಭಾರವು ಸಮಾಜದ ರಕ್ಷಣೆ ಮತ್ತು ಹಿತಸಾಧನೆಗಳಿಗೆ ಮುಖ್ಯವಾಗಿ ಸಂಬಂಧ ಪಟ್ಟಿರುವುದು. ಸ್ಥಳೀಯ ಸಂಸ್ಥೆಗಳಾದರೋ ಮಾನವನ ನಿತ್ಯ ಜೀವನದ ಕಷ್ಟ ಸುಖಗಳನ್ನು ಗಮನಿಸುವುವು. ಮದರಾಸಿನ ಸ್ಥಳೀಯ ಸಂಸ್ಥೆಗಳ ಮಂತ್ರಿಗಳಾದ ಶ್ರೀ|| ಡೇನಿಯಲ್ ಥಾಮಸ್‌ರವರು ಮೊನ್ನೆ ರಾಜಧಾನಿಗೆ ಭೇಟಿಯಿತ್ತಿದ್ದಾಗ ಇದೇ ಅಂಶವನ್ನೇ ಒತ್ತಿ ಹೇಳಿದರು. ಪ್ರಜೆಗಳ ಆರೋಗ್ಯ, ನೈರ್ಮಲ್ಯ, ಮತ್ತು ನಾಗರಿಕ ಸೌಲಭ್ಯಗಳ ವಿಚಾರವನ್ನು ಪರಿಷ್ಕರಿಸಿ ಸರ್ಕಾರಕ್ಕೂ ಪುರ ನಿವಾಸಿಗಳಿಗೂ ಸಂಪರ್ಕವನ್ನು ಕಲ್ಪಿಸುವುದೇ ಸ್ಥಳೀಯ ಸಂಸ್ಥೆಗಳ ಮುಖ್ಯ ಉದ್ದೇಶವೆಂದು ಅವರು ಹೇಳಿದರು. ಇವುಗಳಿಗೆ ಸ್ಥಳೀಯ ಸ್ವರಾಜ್ಯವೆಂದೂ ಸಹ ಹೆಸರು. ಇವುಗಳ ಆಡಳಿತವು ವಿಶೇಷವಾಗಿ ಪ್ರಜೆಗಳಿಂದ ಚುನಾಯಿತರಾದ ಪ್ರತಿನಿಧಿಗಳಿಂದಲೇ ನಡೆಸಲ್ಪಡುವುದು. ಆದರೆ ಹಲವು ಅಂಶಗಳಲ್ಲಿ ಸರ್ಕಾರದವರೂ ಸಹ ಅವುಗಳ ಮೇಲೆ ತಮ್ಮ ಮೇಲ್ವಿಚಾರಣೆಯನ್ನು ಇಟ್ಟು ಕೊಂಡಿರುವರು.

ದೇಶದ ರಾಜ್ಯಭಾರದಲ್ಲಿ ಪ್ರಜೆಗಳಿಗೆ ಇರುವ ಸಂಪರ್ಕಕ್ಕಿಂತಲೂ ಪೌರ ಆಡಳಿತದಲ್ಲಿ ಪುರನಿವಾಸಿಗಳಿಗೆ ಹೆಚ್ಚಿನ ಸಂಬಂಧವು ಇರುತ್ತದೆ. ಆರೋಗ್ಯ, ನೈರ್ಮಲ್ಯ, ನೀರುಸರಬರಾಜು, ದೀಪದ ವ್ಯವಸ್ಥೆ, ರಸ್ತೆಯ ಅಚ್ಚು ಕಟ್ಟು ಇವೇ ಮುಂತಾದ ಅಂಶಗಳು ದಿನಚರಿಯ ಜೀವನಕ್ಕೆ ಸಂಬಂಧ ಪಟ್ಟವು. ಪ್ರತಿ ದಿನವೂ ಇವುಗಳನ್ನು ಸರಿಯಾದ ವ್ಯವಸ್ಥೆಯಿಂದ ಇರಿಸಿ ಜನರಿಗೆ ಸೌಲಭ್ಯವು ದೊರೆಯುವಂತೆ ಮಾಡಬೇಕಾದುದು ಪೌರ ಸಭೆಗಳ ಪ್ರಥಮ ಕರ್ತವ್ಯ. ಇವುಗಳನ್ನು ಯಶಸ್ವಿಯಾಗಿ ನಿರ್ವಹಿಸಲು ಪೌರಾಡಳಿತದವರಿಗೂ, ಮಹಾಜನರಿಗೂ ನಿಕಟವಾದ ಸಂಪರ್ಕವು ಇರಬೇಕಾದುದು ಅತ್ಯಾವಶ್ಯಕ. ನಗರದ ನಿವಾಸಿಗಳೆಲ್ಲರೂ, ಪೌರ ಸಭೆಯವರೊಡನೆ ಈ ವಿಷಯಗಳಲ್ಲಿ ವ್ಯವಹರಿಸಲು ಸಾಧ್ಯವಿರುವುದಿಲ್ಲ. ಆದುದರಿಂದಲೇ ಪ್ರಜೆಗಳ ಪ್ರತಿನಿಧಿಗಳಾದ ಸದಸ್ಯರು ಜನರ ಕುಂದು ಕೊರತೆಗಳನ್ನು, ಅಧಿಕಾರಿವರ್ಗದವರಿಗೆ ತಿಳಿಸಿ, ಸೂಕ್ತವಾದ ಪರಿಹಾರಗಳನ್ನು ಒದಗಿಸಿ ಕೊಡುವಂತೆ ಏರ್ಪಾಡಾಗಿರುತ್ತದೆ.

ಪ್ರಜೆಗಳಿಂದ ಆರಿಸಿ ಬಂದ ಪ್ರತಿನಿಧಿಗಳು ಚುನಾಯಿತರಾಗಿ ಬಂದ ಮೇಲೆ ಪುರನಿವಾಸಿಗಳೊಡನೆ ಸಂಪರ್ಕವನ್ನಿಟ್ಟುಕೊಳ್ಳುವ ಪದ್ಧತಿಯು ರಾಜಧಾನಿಯಲ್ಲಿ ಕಳೆದ ಆರುವರ್ಷಗಳಿಂದಲೂ ಜಾರಿಗೆ ಬಂದಿರುತ್ತದೆ. ಪ್ರತಿ ತಿಂಗಳಲ್ಲಿಯೂ, ಪೌರಸಭಾ ಸದಸ್ಯರು ಸಾಮೂಹಿಕವಾಗಿ ಒಂದೊಂದು ಮೊಹಲ್ಲಾಗೆ ಭೇಟಿಯಿತ್ತು ಅಲ್ಲಿನ ಕುಂದು ಕೊರತೆಗಳನ್ನೂ, ಅವಶ್ಯಕತೆಗಳನ್ನೂ, ಕೂಲಂಕಷವಾಗಿ ಪರಿಶೀಲಿಸುತ್ತಿದ್ದಾರೆ. ಇದರಿಂದ ಪುರವಾಸಿಗಳಿಗೆ, ತಮ್ಮ ಅಹವಾಲುಗಳನ್ನು ಹೇಳಿಕೊಳ್ಳಲು ಅವಕಾಶವುಂಟಾಗುವುದಲ್ಲದೆ, ಇಲಾಖೆಯ ನೌಕರರ ಮೇಲೂ ಒಳ್ಳೆಯ ಪರಿಣಾಮ ಉಂಟಾಗುತ್ತದೆ. ಕಾಂಗ್ರೆಸ್ ಪಕ್ಷದವರು ಈ ಊರಿನಲ್ಲಿ ಜಾರಿಗೆ ತಂದಿರುವ ಈ ಪದ್ಧತಿಯು ಪೌರ ಸಭೆಯ ಇತಿಹಾಸದಲ್ಲಿಯೇ ಒಂದು ಹೊಸ ಪ್ರಕರಣ. ಈ ಸತ್ಸಂಪ್ರದಾಯವು ಎಲ್ಲ ಪೌರ ಸಭೆಗಳಿಗೂ ಮಾದರಿಯಾಗಿರುತ್ತವೆಂದು ಅನೇಕ ರಾಷ್ಟ್ರ ನಾಯಕರೂ ಸಹ ಮುಕ್ತ ಕಂಠದಿಂದ ಮೆಚ್ಚುಗೆಯನ್ನು ಸೂಚಿಸಿರುವರು.

ಇಂತಹ ಒಳ್ಳೆಯ ಪದ್ಧತಿಯನ್ನು ಜಾರಿಗೆ ತಂದು ಸರ್ವ ವಿಧದಲ್ಲಿಯೂ ಪೌರ ಸಭೆಯ ಆಡಳಿತವು ಪ್ರಜಾ ಹಿತ ಸಾಧನೆಗೆ ಸಹಕಾರಿಯಾಗಲೆಂಬ ಉದಾತ್ತ ಧ್ಯೇಯದಿಂದ ಪ್ರೇರೇಪಿತರಾಗಿ ಪುರ ನಿವಾಸಿಗಳ ಸೇವೆಯನ್ನು ಮುಂದುವರಿಸಲು ಉದ್ಯುಕ್ತರಾಗಿರುವ ಸಂಸ್ಥೆಯ ಪ್ರತಿನಿಧಿಗಳಿಗೆ ಪುರ ನಿವಾಸಿಗಳೆಲ್ಲರೂ ತಮ್ಮ ಸಂಪೂರ್ಣ ಸಹಕಾರವನ್ನು ನೀಡುವರೆಂದು ನಾವು ನಂಬಿರುತ್ತೇವೆ.

ಸ್ಟಾಲಿನ್ನರ ಬಗ್ಗೆ ಚರ್ಚಿಲರ ಗೌರವ

ಪ್ರಪಂಚದ ಜನಾಂಗಗಳು ಇಟ್ಟು ಕೊಂಡಿರುವ ಸೈನ್ಯಗಳ ಅಂಕಿ ಅಂಶಗಳ ವಿವರ ವಿಶ್ವ ಸಂಸ್ಥೆಯಲ್ಲಿ ಹೊರ ಬೀಳಬೇಕು. ಪೂರ್ವ ಯೂರೋಪಿನಲ್ಲಿ ೨೦೦ ರಷ್ಯದ ಡಿವಿಜನ್ ಸೈನ್ಯಗಳಿವೆಯೆಂದು ನಾನು ಹೇಳಿದ್ದು ಪ್ರತಿಭಟಿಸಲ್ಪಟ್ಟಿಲ್ಲ. ರಷ್ಯನರೂ ಧೀರರಾಗಿ ಹೋರಾಡಿದ್ದಾರೆ. ನಿಜ ಮಾ|| ಸ್ಟಾಲಿನ್ನರ ಬಗ್ಗೆ ನನಗೆ ಗೌರವವಿದೆ. ಎಲ್ಲ ಜನಾಂಗಗಳೂ, ಸ್ನೇಹ ಸೌಹಾರ್ದದಿಂದ ಇರಬೇಕೆಂಬುದೇ ನನ್ನ ಉದ್ದೇಶ, ಎಂದು ಮಿ|| ಚರ್ಚಿಲ್ಲರು ತಿಳಿಸಿದ್ದಾರೆ.

ಚರ್ಚಿಲ್ ಯುದ್ಧ ಸನ್ನಾಹಕ

ಮಿ|| ಚರ್ಚಿಲರು ಯುದ್ಧಕ್ಕಾಗಿ ಕಾಲು ಕೆರೆಯುವ ಸ್ವಭಾವದವರೆಂದು ರಷ್ಯದ ಜನ. ಸ್ಟಾಲಿನ್‌ರವರು ತಿಳಿಸಿದ್ದಾರೆ. ಅಮೆರಿಕದ ಪತ್ರಿಕಾ ಪ್ರತಿನಿಧಿಗಳೊಬ್ಬರು ವಿಶ್ವಶಾಂತಿಗೆ ಧಕ್ಕೆ ತರುವ ಬೆದರಿಕೆ ಯಾವುದೆಂದು ಕೇಳಿದ ಪ್ರಶ್ನೆಗೆ ಸ್ಟಾಲಿನ್ನರು ಉತ್ತರವಿತ್ತು, ಮಿ|| ಚರ್ಚಿಲ್ ಮುಂತಾದ ಯುದ್ಧ ಸನ್ನಾಹಿಗಳೇ ವಿಶ್ವಶಾಂತಿಗೆ ಧಕ್ಕೆ ತರುವರೆಂದೂ, ಅವರುಗಳನ್ನು ಬಹಿರಂಗ ಸಭೆ ಹತೋಟಿಯಲ್ಲಿಡಬೇಕೆಂದೂ ತಿಳಿಸಿದ್ದಾರೆ.

ಬಂಗಾಳಕ್ಕೆ ವೈಸರಾಯರು

ಈ ವಾರದ ಕೊನೆಯಲ್ಲಿ ವೈಸರಾಯರು ಪೂರ್ವ ಬಂಗಾಳದ ಗಲಭೆ ಪ್ರದೇಶಗಳಲ್ಲಿ ಸಂಚರಿಸುವರೆಂದು ಗೊತ್ತಾಗಿದೆ.

ಬೋಸರ ಸುದ್ದಿ ಗೊತ್ತಿಲ್ಲ

ಕೇಂದ್ರ ಶಾಸನ ಸಭೆಯಲ್ಲಿ ಕೇಳ ಪ್ರಶ್ನೆಯೊಂದಕ್ಕೆ ಒಳಾಡಳಿತ ಸಚಿವ ಸ ಪಟೇಲರು ಉತ್ತರವೀಯುತ್ತಾ ಸುಭ ಚಂದ್ರ ಬೋಸರು ಬದುಕಿರುವರೋ ವಾ ಇಲ್ಲವೋ ಎಂಬ ವಿಚಾರದಲ್ಲಿ ಅಧಿಕಾರಯುತವಾಗಿ ಏನನ್ನೂ ಹೇ ಸಾಧ್ಯವಿಲ್ಲ ಎಂದು ತಿಳಿಸಿದ್ದಾರೆ.

ಕಾಂಗ್ರೆಸ್ ಅಧಿವೇಶನಕ್ಕೆ ಸ್ವಯಂ ಸೇವಕರು

ಅಖಿಲ ಮೈಸೂರು ಕಾಂಗ್ರೆಸ್ ಅಧಿವೇಶನಕ್ಕಾಗಿ ಮೈಸೂರು ವಿದ್ಯಾ ಕಾಂಗ್ರೆಸ್ ಆಶ್ರಯದಲ್ಲಿ ಶಿಕ್ಷಣ ಪಡೆದ ಮೂರು ೨೦೦ ಮಂದಿ ಸ್ವಯಂ ಸೇವಕ ಈ ಬೆಳಗ್ಗೆ ಬೆಂಗಳೂರಿಗೆ ಪ್ರಯಾ ಮಾಡಿದರು

ಮೈಸೂರು ಸಿಟಿ, ಮುನಿಸಿಪಾಲಿಟಿ

ಪ್ರಸಿದ್ಧ ಪತ್ರಿಕೆ

ಇದರಿಂದ ಸಮಸ್ತ ಜನಗಳಿಗೂ ತಿ ವುದೇನೆಂದರೆ:—

ಮೈಸೂರು ನಗರದ ಮಂಡಿ, ಲಷ್ಕ ಮತ್ತು ನಜರ್‌ಬಾದ್ ಮೊಹಲ್ಲಾಗ ಪ್ಲೇಗಿನ ಸೋಂಕು ತಲೆದೋರಿದೆ ಎಂ ತಿಳಿದುಬಂದಿರುವುದರಿಂದ ಇದನ್ನು ತ ಟ್ಟಲು ಮುಂಜಾಗ್ರತೆ ಕಾರ್ಯಕ್ರಮಗ ನುಸರಿಸಿ ಈ ಕೆಳಗೆ ನಮೂದಿಸಿರುವ ಗಳಲ್ಲಿ ಪ್ಲೇಗ್ ಇನಾಕ್ಯುಲೇಷನ್ ಮಾ ಕೊಳ್ಳಲು ಈ ಮೂಲಕ ಕೋರುತ್ತಿ

ರೇಷನ್ ಕಾರ್ಡುಗಳಲ್ಲಿ ರವೆ, ಸಕ್ಕ ನನ್ನು ಪಡೆಯಲು ಸೌಕರ್ಯವಿಲ್ಲ ಇನಾಕ್ಯುಲೇಷನ್ ಆದನಂತರ ಹೆಲ್ತ್ ಆ ಸರವರಿಂದ ಚೀಟಿಗಳನ್ನು ಪಡೆದು ಸಾ ಮುಗಳನ್ನು ಆಯಾ ಡಿಪೋಗ ಹೊಂದಲು ಏರ್ಪಡಿಸಿರುತ್ತೆ.

ಇನಾಕ್ಯುಲೇಷನ್ ಮಾಡುವ ಗಳು:—

ಮಂಡಿ:-1. ಇಂದಿರಾ ಬಜಾವಣಿ ಪತ್ಯ, 2 ಗಾಣಿಗರಕೇರಿ ಸರ್ಕಾರಿ ದ ಡಿಪೋ

ಲಷ್ಕರ್: 1. ಪೇಟನಗರಿ ಆಸ್ಪತ್ರೆ ಡಾ|| ಪ್ರಸಾದ್ ನರ್ಸಿಂಗ್ ಹೋಂ

ನಜರ್‌ಬಾದ್:-1. ಲೋಕಲ್ ಫ ಆಸ್ಪತ್ರೆ 2. ಇಟ್ಟಿಗೆಗೂಡು ಪೋಲೀ ಸ್ಟೇಷನ್

ಮೇಲ್ಕಂಡ ಸ್ಥಳಗಳಲ್ಲದೆ ಪ್ರೈ ಡಾಕ್ಟರುಗಳ ಸ್ಥಾನಗಳಲ್ಲಿಯೂ ಸಹ ಕ್ಯುಲೇಷನ್ ಮಾಡಲು ಏರ್ಪಾಡಾಗಿ

ಎಸ್. ಮಾಧವ

ಪ್ರೆಸಿಡೆಂಟ್

ರಣಜಿತ್ ಟಾಕೀಸ್

1-11-46 ರಿಂದ

ಲೋಕ ಪ್ರಸಿದ್ಧವಾದ, ಟಾಜಮಹಲ್ ಭವನದ ನಿರ್ಮಾಣಕ್ಕೆ

ಕಾರಣ ಭೂತಳಾದ ಸ್ತ್ರೀಯ ಚರಿತ್ರೆ

ರಣಜಿತ್ ಮೂವಿಟೋನ್‌ರವರ

'ಮುಮ್ತಾಜ್ ಮಹಲ್'

(ಉರ್ದು)

ಪಾತ್ರ:—ಕುರ್ಷಿದ್, ಚಂದ್ರಮೋಹನ್

ಪ್ರತಿ ದಿನ ಮೂರು ಆಟಗಳು

ಬೆಳಗಿನ ಪ್ರದರ್ಶನ.—ಜವಾಬ್

|| ವಂದೇಮಾತರಂ ||

ಕೃಷ್ಣರಾಜ ಮೊಹಲ್ಲಾ ಓಟರು ಮಹಾಶಯರುಗಳಲ್ಲಿ ವಿನಂತಿ

14-11-46 ನೇ ಗುರುವಾರ ನಡೆಯಲಿರುವ ಪೌರಸಭಾ ಚುನಾವಣೆಗಳಲ್ಲಿ ಈ ಕೆಳಗೆ ಕಂಡ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಓಟು ಕೊಡಬೇಕಾಗಿ ಪ್ರಾರ್ಥನೆ

ಶ್ರೀಗಳಾದ

ಪಿ. ಸೀತಾರಾಮಯ್ಯ, ಬಿ.ಎ.ಬಿ.ಎಲ್.,

ಎ. ಎನ್. ಸೂರ್ಯನಾರಾಯಣರಾವ್,

ಡಾ|| ಬಿ. ಎಸ್. ಸೂರ್ಯನಾರಾಯಣರಾವ್,

ಶ್ರೀಮತಿ ಎಂ. ಎನ್. ಸೀತಮ್ಮ ಎಂ.ಎ

ನಗರ ಚುನಾವಣಾ ಉಪಸಮಿತಿ

OPERA TALKIES

30-10-46 ರಿಂದ

ಎರಡನೆಯ ವಾರ

ಶ್ರೀ ಮುರುಗನ್

(ತಮಿಳು)

ಪಾತ್ರ:-ಹೊನಪ್ಪ ಭಾಗವತರ್, ಜೀವರತ್ನಂ, ಮಾಲತಿ, ರಾಮಚಂದ್ರರ್,

Edited, printed and published by A. R. Nagarajan at the Sadhvi Press D Subbiah Road, Mysore

ರಾಜ್ ಕಮಲ್, ಮೈಸೂರು

31—10—46 ನೇ ಶುಕ್ರವಾರದಿಂದ

Village Girl—ವಿಲೇಜ್ ಗರ್ಲ್

ಪ್ರತಿ ದಿನ ಮೂರು ಆಟಗಳು

ಪಾತ್ರ:—* ನೂರ್ ಜಹಾನ್, * ಗೀತಾನಿಜಾಮಿ, * ರಾಮಕಿಶೋರ್ ಮುಂತಾ

Morning Shows at 10-30 A. M. From 1-11-46 for 4

'The War of the wild Cats'

in old Oklahoma

ರೀ.ರ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶುಕ್ರವಾರ ೧—೧೧—೪೬ [ಸಂಚಿಕೆ ೭೮

ನೌಖಾಲಿ ಪ್ರದೇಶದಲ್ಲಿ — — ಗಾಂಧಿಜೀ ಪ್ರವಾಸ

ಕಾಂಗ್ರೆಸ್ಸಿಗೆ ಜಯವಾಗಲಿ

ಮೈಸೂರು ೩೧

ತ್ಯಾಗ, ನಿಸ್ವಾರ್ಥತೆ ಮತ್ತು ಜನಸೇವೆಯೇ ಪ್ರಧಾನವಾಗಿರುವ ಪ್ರಜಾಪ್ರಿಯವಾದ ಮೈಸೂರು ಕಾಂಗ್ರೆಸ್ ಉಮೇದುವಾರರಿಗೆ ರಾಜಧಾನಿಯ ಮಹಾಜನರು ಓಟುಕೊಟ್ಟು ಕಾಂಗ್ರೆಸ್ಸಿನ ಜಯಕ್ಕೆ ಸಹಾಯಕರಾಗಬೇಕೆಂದು ಇಟ್ಟಿಗೆಗೂಡು ಯುವಕ ಸಂಘದ ಮಾಜೀ ಕಾರ್ಯದರ್ಶಿ ಶ್ರೀ ... ರವರು ಒಂದು ಪ್ರಾರ್ಥನಾ ಪತ್ರಿಕೆಯನ್ನು ಹೊರಡಿಸಿದ್ದಾರೆ.

ಸಹಕಾರ ದಿನೋತ್ಸವ

... ಯುವರಾಜ ರಸ್ತೆಯಲ್ಲಿರುವ ಸಹಕಾರ ... ದಲ್ಲಿ ನಾಳೆ ಸಂಜೆ ಆರು ಗಂಟೆಗೆ ಅಖಿಲ ... ಯ ಸಹಕಾರ ದಿನೋತ್ಸವವನ್ನು ... ಶ್ರೀ|| ಎಸ್. ಕೃಷ್ಣಸ್ವಾಮಿ ... ಅಧ್ಯಕ್ಷತೆಯಲ್ಲಿ ಏರ್ಪಡಿಸಿದೆ ಸರ್ವರಿಗೂ ಸ್ವಾಗತವುಂಟು.

ಶ್ರೀಮನ್ಮಹಾರಾಜರವರ ಮೇಲೆ ದಾವೆ ನಿಲ್ಲತಕ್ಕದ್ದಲ್ಲ

ಹೈಕೋರ್ಟಿನಲ್ಲಿ ತೀರ್ಪು

ಬೆಂಗಳೂರು ೩೧-೧೦

... ೧೦೦೦೦ ರೂ. ಗಳು ಬರಬೇಕೆಂದು ಅರಮನೆಯ ಮೇಲೆ ಮೈಸೂರಿನ ... ವಾದ ಶ್ರೀ ಕೆ. ವೆಂಕಟಪ್ಪನವರು ... ಅಪೀಲು ದಾವೆಯಲ್ಲಿ ಕಳೆದ ತಿಂಗಳು ೨೨ ನೇ ತಾ|| ಅಪೈಲಾಗಿ ಪೈನಲ್ಲ ಹಿಯರಿಂಗ್ ಆಗಿ, ನಿನ್ನೆ ಚೀಫ್ ಜಸ್ಟಿಸರು ಮತ್ತು ಜಸ್ಟಿಸ್ ವೆಂಕಟರಾಮಯ್ಯನವರುಗಳು ತೀರ್ಪು ಕೊಟ್ಟು, ಶ್ರೀಮನ್ಮಹಾರಾಜರವರ ಮೇಲೆ ದಾವೆ ... ' ಎಂಬುದಾಗಿ ಅಭಿಪ್ರಾಯ ... ದಾವೆಯನ್ನು ತಿರಸ್ಕರಿಸಿದ್ದಾರೆ ... ಸರು ತಮ್ಮ ತೀರ್ಪಿನಲ್ಲಿ ದಾ... ಪ್ರತಿವಾದಿಯಾಗಿ ಹೂಡಲಾಗಿದೆಯೋ, ... ನದ ಪ್ರಕಾರ ಶ್ರೀಮನ್ಮಹಾರಾಜರ ಮೇಲೆ ದಾವೆ ಹೂಡಲು ಸಾಧ್ಯ ... ಅಂಶಗಳನ್ನು ಚರ್ಚಿಸಿರುತ್ತಾರೆ. "ಡಿಫೆಂಡೆಂಟ್" ಎಂದು ಅರಮನೆಯನ್ನು ಸೂಚಿಸಲಾಗಿದೆಯೆಂದೂ, "ಡಿಫೆಂಡೆಂಟ್" ಎಂಬುವರು ಒಬ್ಬ ವ್ಯಕ್ತಿಯಾಗಿರಬೇಕೇ ಹೊರತು ಒಂದು ... "ಕಾರ್ಪೊರೇಟ್ ಬಾಡಿ" ... ಯಾಗಿಲ್ಲವೆಂದೂ, ಎಲ್ಲಾ ಕಡೆಗಳಲ್ಲೂ ... ಗಿದೆಯೆಂದೂ, ದಾವೆಯ ... "ಅರಮನೆ" ಎಂದು ಸೂಚಿಸಿದರೆ "ಡಿಫೆಂಡೆಂಟ್" ಎಂಬ ಅರ್ಥ ... ವೆಂದೂ, ಅಲ್ಲದೆ, ಅರಮನೆಯು ... ಸಂಸ್ಥಾನದ ಯಾ... ನಿಯಮದಲ್ಲಾಗಲೀ ... ಪ್ರಕೃತ ದಾವೆಯಲ್ಲಿ "ಡಿಫೆಂಡೆಂಟ್" ... ಎಂಬುದನ್ನು ನಿರ್ದಿಷ್ಟವಾಗಿ ... ವೆಂದೂ, ವಾದಿಯೊಡನೆ ಕಾಂ... ಮಾಡಿಕೊಂಡವರೆಂದು ಹೇಳಲಾ... ಒಂದು ಕಡೆ ವಾದಿಗಳು, ಇ... ಕಡೆ ಹೇರ್ಜಿ ಕೇಸಂದ ಶ್ರೀಮ... ರವರು-ಎಂಬುದು ಅರ್ಜಿಯಲ್ಲಿ ... ಕಂಡು ಬರುವುದೆಂದೂ, ಅರ... ಒಪ್ಪಂದಕ್ಕೆ (ಕಾಂಟ್ರಾಕ್ಟ್) ... ಎಲ್ಲೂ ಸಮೂದಾಗಿಲ್ಲ ... ಕೋರ್ಟಿನಲ್ಲಿ ದಾವೆಯು ... ದು ಸಕಾರಣವಾಗಿಯೇ ... ಜಸ್ಟಿಸರು ಅಭಿಪ್ರಾಯ ...

ಜಾಮೀನಿನ ಮೇಲೆ ಬಿಡುಗಡೆ ಮತ್ತು ಪುನಃ ಬಂಧನ

ಸ್ವಂ.ಸು.ಪ್ರೋ] ಬೆಂಗಳೂರು ೧

ಬೆಂಗಳೂರು ದಂಡಿನಲ್ಲಿ ನಡೆದ ಗಲಭೆ ಸಂಬಂಧವಾಗಿ ಬಂಧಿತರಾಗಿ ವಿಚಾರಣೆಗೆ ಗುರಿಯಾಗಿದ್ದ ೨೫ ಜನರ ಪೈಕಿ ೨೩ ಜನರನ್ನು ಜಾಮೀನು ಮೇಲೆ ಬಿಡುಗಡೆ ಮಾಡಲಾಯಿತು. ಆದರೆ ಬೇರೆ ಕಲಮುಗಳ ಪ್ರಕಾರ ಅವರನ್ನು ಮತ್ತೆ ಬಂಧಿಸಲಾಯಿತು. ಅವರುಗಳ ಪರವಾಗಿ ಮಿ|| ಮಜುಮ್ದಾರ್ ಷರೀಫ್ ಮುಂತಾದವರು ಪುನಃ ಜಾಮೀನು ಅರ್ಜಿ ಸಲ್ಲಿಸಲಿರುವರು.

ಯುದ್ಧನಿಧಿ

ಯುದ್ಧ ನಿಧಿ ಸಮಿತಿಯನ್ನೂ ಸಹ ಸಮಾಪ್ತಿಗೊಳಿಸಿ ಅದರಲ್ಲಿ ಉಳಿದಿರುವ ೬೪ ಸಾವಿರ ರೂ. ಗಳ ಪೈಕಿ ಸ್ವಲ್ಪ ಮೊಬಲಗನ್ನು ಸೈನಿಕರಿಗೂ ಅವರ ಕುಟುಂಬದವರಿಗೂ ಕೊಟ್ಟು ಉಳಿದುದನ್ನು ವೈದ್ಯ ಸಹಾಯಕ್ಕಾಗಿ ವಿನಿಯೋಗಿಸುವಂತೆ ಶಿಫಾರಸು ಮಾಡಲಾಗಿದೆ.

ಪ್ರಭುಗಳಿಗೆ ಸನ್ಮಾನ

ದಕ್ಷಿಣ ಸೈನ್ಯಗಳ ನಾಯಕರಾದ ಲೆ|| ಜ|| ಲಾಕ್‌ಹಾರ್ಟರವರು ೭ ನೇ ತಾ|| ಸಂಜೆ ನಾಲ್ಕೂವರೆ ಗಂಟೆಗೆ ಬೆಂಗಳೂರು ಅರಮನೆ ಪೋಲೋ ಮೈದಾನದಿಂದ ಭಾರತ ಸೇನಾಪತಿಗಳ ಪರವಾಗಿ ಸೆಲ್ಯೂಟ್ ತೋಪಿನ ಮರ್ಯಾದೆಯನ್ನು ಶ್ರೀಮನ್ಮಹಾರಾಜರವರಿಗೆ ಸಲ್ಲಿಸುವರು.

ಅಧ್ಯಕ್ಷರನ್ನು ಸಸ್ಪೆಂಡ್ ಮಾಡಲು ಶಿಫಾರಸು

ಸ್ವಂ.ಸು.] ಚಾಮರಾಜನಗರ ೩೦

ಇಲ್ಲಿನ ಪುರ ಸಭಾಧ್ಯಕ್ಷರ ಮೇಲಿನ ಅವಿಶ್ವಾಸ ನಿರ್ಣಯದ ಸಂಬಂಧವಾಗಿ ಮೈಸೂರು ಜಿಲ್ಲಾಧಿಕಾರಿಗಳಲ್ಲಿ ಹೂಡಿದ್ದ ಅಪೀಲು ಕಳೆದ ೨೫ ನೇ ತಾ|| ವಿಚಾರಿಸಲ್ಪಟ್ಟು, ಪುರಸಭೆಯ ಚುನಾವಣೆಗಳಲ್ಲಿ ಅಕ್ರಮಗಳುಂಟಾಗಿ ಯೂ, ಆ ಕಾರಣ ಹಾಲಿ ಇರುವ ಮಾನಗೀ ಅಧ್ಯಕ್ಷರನ್ನು ಮುಂದಿನ ಚುನಾವಣೆವರೆಗೆ ಸಸ್ಪೆಂಡ್ ಮಾಡಬೇಕೆಂದೂ, ಈ ಅವಧಿಯಲ್ಲಿ ಅಧಿಕಾರಿ ಅಧ್ಯಕ್ಷರು ಇರಬೇಕೆಂದೂ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಶಿಫಾರಸು ಮಾಡಿರುವುದಾಗಿ ತಿಳಿದುಬಂದಿದೆ.

ನೆಹರೂರವರಿಗೆ ಪ್ರಶಸ್ತಿ

ಪಾಟ್ನಾ ವಿಶ್ವವಿದ್ಯಾನಿಲಯದವರು ಪಂಡಿತ ನೆಹರೂರವರಿಗೆ ಘಟಿಕೋತ್ಸವ ಸಮಾರಂಭದಲ್ಲಿ ಡಾಕ್ಟರೇಟ್ ಪ್ರಶಸ್ತಿಯನ್ನು ದಯಪಾಲಿಸಿ ಗೌರವಿಸಲು ನಿರ್ಧರಿಸಿದ್ದಾರೆ.

ಗ್ರಾಮ ಕೈಗಾರಿಕೆಗಳನ್ನು ಪ್ರೋತ್ಸಾಹಿಸಬೇಕು

ಮದ್ರಾಸ್ ಮಂತ್ರಿಗಳಿಂದ ಪ್ರದರ್ಶನದ ಆರಂಭ

ಸ್ವಂ.ಸು ಪ್ರೋ] ಬೆಂಗಳೂರು ೧

ಮದ್ರಾಸಿನ ಮಂತ್ರಿಗಳಾದ ಶ್ರೀ ಕೋಟಿರೆಡ್ಡಿಯವರು ಈ ದಿನ ಬೆಳಗ್ಗೆ ಸುಭಾಷ್ ನಗರದಲ್ಲಿ ಖಾದಿ ಮತ್ತು ಗ್ರಾಮ ಕೈಗಾರಿಕೆಗಳ ಪ್ರದರ್ಶನದ ಆರಂಭೋತ್ಸವವನ್ನು ನೆರವೇರಿಸಿದರು. ಪ್ರಾರ್ಥನೆಯ ನಂತರ ಪ್ರದರ್ಶನದ ಕಾರ್ಯದರ್ಶಿಗಳಾದ ಶ್ರೀ ಸಿ ರಾಜಗೋಪಾಲಾಚಾರಿಯವರು ವರದಿಯನ್ನು ಒಪ್ಪಿಸಿ ಗ್ರಾಮ ಕೈಗಾರಿಕೆಗಳಿಗೆ ಪ್ರೋತ್ಸಾಹವೀಯುವುದೇ ಪ್ರದರ್ಶನದ ಉದ್ದೇಶವೆಂದು ತಿಳಿಸಿದರು.

ಶ್ರೀ ಕೋಟಿರೆಡ್ಡಿಯವರು ತಮ್ಮ ಭಾಷಣದಲ್ಲಿ ಪ್ರಾಚೀನ ಭಾರತದ ಗತ ವೈಭವವನ್ನು ಸಂಪತ್ ಸಮೃದ್ಧಿಯನ್ನೂ ವರ್ಣಿಸಿ ಹಳ್ಳಿ ಕೈಗಾರಿಕೆಗಳ ಪುನರುಜ್ಜೀವನದಿಂದಲೇ ನಮ್ಮ ದೇಶವು ಉನ್ನತಿಗೆ ಬರಬೇಕೆಂದು ಹೇಳಿದರು. ದೊಡ್ಡ ದೊಡ್ಡ ನಗರಗಳಲ್ಲಿ ಯಂತ್ರದಿಂದ ತಯಾರಾಗುವ ಸಾಮಗ್ರಿಗಳಿಂದ ದೇಶದ ಬಡತನವು ನೀಗಲ್ಪಡುವುದಿಲ್ಲವೆಂದೂ, ಗ್ರಾಮೋದ್ಯಮವೇ ದೇಶಾಭ್ಯುದಯಕ್ಕೆ ಆಸ್ತಿಭಾರವೆಂದೂ ಅಭಿಪ್ರಾಯಪಟ್ಟರು. ಖಾದಿಯು ಗ್ರಾಮ ಕೈಗಾರಿಕೆಗಳ ಆಸ್ತಿಭಾರವಾಗಿರುವುದರಿಂದ ಎಲ್ಲರೂ ಅದನ್ನು ಧರಿಸಿ ಕೈರಾಟೆಯ ಬೆಳವಣಿಗೆಗೆ ನೆರವಾಗಬೇಕೆಂದು ಹಾರೈಸಿದರು. ಪ್ರದರ್ಶನಕ್ಕೆ ಕೈರಾಟೆ, ನೂಲು, ಬಣ್ಣ ಮತ್ತು ಗ್ರಾಮ ಕೈಗಾರಿಕೆಗಳಲ್ಲಿ ಅನೇಕ ವಸ್ತುಗಳು ಬಂದಿರುತ್ತವೆ.

ಈ ದಿನ ಬೆಳಗ್ಗೆ ಶ್ರೀ ಕೋಟಿರೆಡ್ಡಿಯವರು ಮದ್ರಾಸಿನಿಂದ ಆಗಮಿಸಿದರು. ಶ್ರೀ ಕೆ. ಚಂಗಲರಾಯರೆಡ್ಡಿ ಮತ್ತು ಇತರ ಕಾಂಗ್ರೆಸ್ ಪ್ರಮುಖರು ಅವರನ್ನು ಸ್ವಾಗತಿಸಿದರು.

ಸಮಿತಿ ಮುಕ್ತಾಯ

ಆರ್ಥಿಕ ಸಮ್ಮೇಳನದ ಕೋ ಆರ್ಡಿನೇಷನ್ ಸಮಿತಿಯ ಕಾರ್ಯಕಲಾಪಗಳು ಮುಗಿದು ವರದಿಯು ಸಿದ್ಧವಾಗುತ್ತಿದೆ. ಯುದ್ಧಾನಂತರದ ಪುನರ್ರಚನಾ ಕಾರ್ಯಗಳ ಪೈಕಿ ಕೆಲವು ತುರ್ತಿನ ಕ್ರಮಗಳನ್ನು ಕೂಡಲೇ ಕೈಗೊಳ್ಳುವಂತೆ ಅವರು ಶಿಫಾರಸು ಮಾಡುವರೆಂದೂ, ಇದಕ್ಕಾಗಿ ಒಬ್ಬ ಪ್ರತ್ಯೇಕ ಮಂತ್ರಿಗಳ ನೇಮಕದ ಅವಶ್ಯಕತೆಯನ್ನು ಒತ್ತಿಹೇಳುವರೆಂದೂ ಗೊತ್ತಾಗಿದೆ.

ನೌಖಾಲಿಗೆ ಗಾಂಧಿಜಿ

ಮಹಾತ್ಮ ಗಾಂಧಿಯವರು ಈ ದಿನ ಕಲ್ಕತ್ತಾದಿಂದ ನೌಖಾಲಿಗೆ ತೆರಳುವರು. ಬಂಗಾಳಾ ಪ್ರಧಾನಿಗಳು ನೆನ್ನೆ ಎರಡಾವರ್ತಿ ಗಾಂಧಿಜಿಯವರ ಭೇಟಿ ಮಾಡಿದ್ದರು. ನಿನ್ನೆ ದಿನ ಶ್ರೀ ಶರತ್ ಚಂದ್ರಬೋಸರೂ ಅಚ್ಯುತ ಪಟ್ವರ್ಧನ್‌ರವರೂ ಡಾ|| ರಾಮಮನೋಹರ ಲೋಹಿಯಾರವರೂ ಮಹಾತ್ಮರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು. ವೈಸರಾಯರು ಪರಿವಾರ ಸಮೇತರಾಗಿ ನಿನ್ನೆ ಕಲ್ಕತ್ತಕ್ಕೆ ಆಗಮಿಸಿದ್ದಾರೆ.

ಬಂಗಾಳಾದಲ್ಲಿ ಮಿಶ್ರ ಮಂತ್ರಿಮಂಡಲ

ಎಲ್ಲ ಪಕ್ಷಗಳ ಸಂಯುಕ್ತ ಸರ್ಕಾರವನ್ನು ಬಂಗಾಳಾದಲ್ಲಿ ರಚಿಸುವ ಬಗ್ಗೆ ಪರಿಶೀಲನೆ ನಡೆಯುತ್ತಿರುವುದಾಗಿ ಸುದ್ದಿ ಬಂದಿದೆ. ಈ ಸೂಚನೆಗೆ ಪ್ರಮುಖ ನಾಯಕರ ಮತ್ತು ಅಧಿಕಾರಿಗಳ ಬೆಂಬಲವಿದೆಯೆಂದೂ, ಗಾಂಧೀಜಿ ಆಗಮನಾನಂತರ ಈ ವಿಚಾರಕ್ಕೆ ಮಹತ್ವ ದೊರೆಯಬಹುದೆಂದೂ ಹೇಳಲಾಗಿದೆ.

ಬರ್ಮಾದಲ್ಲೂ ರಾಯಭಾರಿ

ಬರ್ಮಾದಲ್ಲಿ ಭಾರತದ ರಾಯಭಾರಿಯಾಗಿ ಡಾ|| ಎಂ. ಎ. ರೌಫ್‌ರವರನ್ನು ನೇಮಿಸಲಾಗಿದೆ. ಇವರು ಈಗ ಕಲಕತ್ತಾ ಹೈಕೋರ್ಟಿನಲ್ಲಿ ಆದಾಯ ತೆರಿಗೆ ವಿಚಾರಣೆ ಸಮಿತಿಯ ನ್ಯಾಯಾಂಗ ಸದಸ್ಯರಾಗಿದ್ದಾರೆ.

ಕೇಂದ್ರ ಸರಕಾರದಲ್ಲಿ ಕಾಂಗ್ರೆಸ್-ಲೀಗ್-ಬಿಕ್ಕಟ್ಟು

ಕೇಂದ್ರ ತಾತ್ಕಾಲಿಕ ಸರ್ಕಾರದಲ್ಲಿ ಕಾಂಗ್ರೆಸ್ಸಿಗೂ ಲೀಗಿನವರಿಗೂ ಸೌಹಾರ್ದ ನೀತಿ ... ಪಂ|| ನೆಹರೂರವರು ಕರೆಯುವ ಮಂತ್ರಿಮಂಡಲದ ಸಭೆಗೆ ಲೀಗಿನವರು ಬರದೆ ಅವರೇ ಪ್ರತ್ಯೇಕವಾಗಿ ಸಭೆ ಸೇರುತ್ತಿದ್ದಾರೆ. ಉಪ್ಪಿನ ತೆರಿಗೆ ರದ್ದು ಮಾಡುವ ವಿಚಾರದಲ್ಲಿ ಉಭಯ ಪಕ್ಷಗಳಿಗೂ ಬಿಕ್ಕಟ್ಟು ಪ್ರಾಪ್ತವಾಗುವುದು ಖಂಡಿತವೆಂದೂ, ಆಗ್ಗೆ ವೈಸರಾಯರ ನೀತಿಯು ಈ ತಾತ್ಕಾಲಿಕ ಸರ್ಕಾರದ ಗತಿಯನ್ನು ನಿಶ್ಚಯಿಸುವುದೆಂದೂ ಹೇಳಲಾಗಿದೆ.

ಉಪನ್ಯಾಸ

ಮೈಸೂರು ೧

ಮಹಾರಾಜಾ ಕಾಲೇಜ್ ಕರ್ನಾಟಕ ಸಂಘದ ಆಶ್ರಯದಲ್ಲಿ ನಾಳೆ ಕಾಲೇಜಿನ ಜೂನಿಯರ್ ಬಿ ಎ ಮಂದಿರದಲ್ಲಿ ಮನಶ್ಶಾಸ್ತ್ರದ ಅಸಿಸ್ಟೆಂಟ್ ಪ್ರೊಫೆಸರಾದ ಡಾ|| ಬಿ. ಕುಪ್ಪುಸ್ವಾಮಿಯವರು, 'ಲಿಪಿ ಸುಧಾರಣೆ' ಎಂಬ ವಿಷಯದ ಮೇಲೆ ಉಪನ್ಯಾಸ ಮಾಡುವರು. ಪ್ರೊ|| ಜೆ. ಸಿ ವೃಷ್ಣಪ್ಪನವರು ಅಧ್ಯಕ್ಷತೆ ವಹಿಸುವರು. ಹೊಸ ಲಿಪಿ ಪದ್ಧತಿಯ ಪ್ರತ್ಯಕ್ಷ ಪ್ರದರ್ಶನವೂ ನಡೆಯುವುದು.

ಮೈಸೂರು ಟ್ರೈನಿಂಗ್ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಟಿ ಎಗ್ ಕೃಷ್ಣರಾಯರನ್ನು ಶಾಸನಸಭಾ ಜಿಲ್ಲಾ ವಿದ್ಯಾಧಿಕಾರಿಗಳನ್ನಾಗಿ ನೇಮಿಸಲಾಗಿದೆ.

ಕೇಂದ್ರ ಆಹಾರ ಸಮಿತಿ ಸಚಿವರ ... ವಿಚಾರದ ಅಧ್ಯಕ್ಷತೆಯಲ್ಲಿ ನಡೆಯಿತು. ಬರುವ ಸುಗ್ಗಿಯ ಫಸಲು ಕೈಸೇರುವ ಕಾಲದ ಬೆಲೆಯನ್ನು ಹೆಚ್ಚಿಸುವಂತೆ ಹಲವು ಸದಸ್ಯರು ... ಭಾರತ ಸರ್ಕಾರದವರ ನಿರ್ಧಾರಗಳನ್ನು ಪರಿಶೀಲಿಸಿ ಸೂಕ್ತ ವ್ಯವಸ್ಥೆ ಮಾಡುವುದಾಗಿ ದಿವಾನರು ತಿಳಿಸಿದರು.

ಸಾಧ್ವಿ

ತಾ॥ ೧-೧೧-೪೬ ಶುಕ್ರವಾರ

ನಗರ ನಿರ್ಮಲೀಕರಣ

ಊರನ್ನು ಚೊಕ್ಕಟವಾಗಿ ಇಡುವುದು ಪೌರಸಭೆಯ ಮೊಟ್ಟಮೊದಲನೇ ಕರ್ತವ್ಯ. ಇದಕ್ಕಾಗಿ ವಿಶೇಷವಾದ ಸಿಬ್ಬಂದಿಯು ಏರ್ಪಾಡಾಗಿರುತ್ತದೆ. ನಗರ ನೈರ್ಮಲ್ಯದಿಂದ ವ್ಯಾಧಿಗಳು ಬರದಂತೆ ಆಗುತ್ತವೆ. ರೋಗಗಳು ಬಂದ ಮೇಲೆ ನಿವಾರಿಸುವುದಕ್ಕಿಂತಲೂ ಬಾರದಂತೆ ತಡೆಗಟ್ಟುವುದೇ ಉತ್ತಮವಾದ ಮಾರ್ಗ. ನಗರ ನೈರ್ಮಲ್ಯವೇ ಇದಕ್ಕೆ ಮುಖ್ಯ ಆಧಾರ.

ರಾಜಧಾನಿಯಾದ ಮೈಸೂರು ನಗರವು ಅಂದ ಚಂದಗಳಿಗೆ ಮಾತ್ರವೇ ಅಲ್ಲದೆ ನೈರ್ಮಲ್ಯ ಮತ್ತು ಅಚ್ಚುಕಟ್ಟುಗಳಿಗೂ ಹೆಸರುವಾಸಿಯಾಗಿದೆ. ಇಲ್ಲಿನ ಪೌರಸಭೆಯ ಆರೋಗ್ಯ ಶಾಖೆಯವರು ಇದಕ್ಕಾಗಿ ವಿಶೇಷವಾದ ವ್ಯವಸ್ಥೆಯನ್ನು ಕೈಗೊಂಡಿರುತ್ತಾರೆ. ಈ ಕೆಲಸದಲ್ಲಿ ಸುಮಾರು ಒಂದು ಸಾವಿರ ಜನ ದುಡಿಯುವವರೂ, ಇತರ ಮೇಲ್ವಿಚಾರಕರೂ ನಿರತರಾಗಿರುತ್ತಾರೆ. ಇವರು ಪ್ರತಿ ದಿನವೂ ಎಲ್ಲಾ ಮೊಹಲ್ಲೆಗಳಲ್ಲಿಯೂ ಬೆಳಗಿನ ಜಾವದಲ್ಲಿಯೇ ತಮ್ಮ ಕೆಲಸದಲ್ಲಿ ತೊಡಗಿ ಚರಂಡಿಗಳನ್ನೂ ಕಸ್ಮಲಗಳನ್ನೂ ಹೊರಕ್ಕೆ ಸಾಗಿಸುತ್ತಾರೆ. ಇದಲ್ಲದೆ ಮನೆಗಳಲ್ಲಿರುವ ಕಕ್ಕಸುಗಳೇ ಮುಂತಾದುವುಗಳನ್ನು ಶುದ್ಧಿ ಮಾಡಿಸುವುದಕ್ಕಾಗಿಯೂ ಸಹ ವಿಶೇಷ ವ್ಯವಸ್ಥೆಗಳಿವೆ.

ನಗರದ ಅನೇಕ ಭಾಗಗಳಲ್ಲಿ ಒಳ ಚರಂಡಿಗಳಿದ್ದು ಫ್ಲಷಿಂಗ್ ಕಕ್ಕಸ್ಸುಗಳು ಇರುವುದರಿಂದ ಆಧುನಿಕ ರೀತಿಯಲ್ಲಿ ಈ ನಿರ್ಮಲೀಕರಣವು ಸಾಗಲು ಸಾಧ್ಯವಾಗಿದೆ. ಈ ಕಾರಣಗಳಿಂದ ನಗರದ ಆರೋಗ್ಯವು ಬಹಳ ಮಟ್ಟಿಗೆ ಸುರಕ್ಷಿತವಾಗಿ ಕಾಪಾಡಲ್ಪಟ್ಟಿರುತ್ತದೆ. ಪ್ಲೇಗು, ಕಾಲರಾ ಮುಂತಾದುವುಗಳು ತಡೆಗಟ್ಟಲ್ಪಟ್ಟಿವೆ. ಇವುಗಳಿಗೆಲ್ಲಾ ನಿರ್ಮಲೀಕರಣ ವ್ಯವಸ್ಥೆಯೇ ಮುಖ್ಯ ಕಾರಣ.

ನಿರ್ಮಲೀಕರಣದ ಕಾರ್ಯವು ಯಶಸ್ವಿಯಾಗಿ ಜರುಗಲು ಇತ್ತೀಚೆಗೆ ವಿಶೇಷವಾದ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆ. ಪ್ರತಿ ಶನಿವಾರವೂ ಒಂದೊಂದು ಮೊಹಲ್ಲೆಯಲ್ಲಿ ಪೌರಸಭೆಯ ಇಡೀ ಸಿಬ್ಬಂದಿಯವರೆಲ್ಲರೂ ಕಲೆತು ಈ ಕೆಲಸವನ್ನು ಸಾಮೂಹಿಕವಾಗಿ ನಡೆಸುವರು. ಇದರಲ್ಲಿ ಆರೋಗ್ಯ ಶಾಖೆಯವರೂ, ಇಂಜನಿಯರಿಂಗ್ ಶಾಖೆಯವರೂ ಸೇರಿ ಕೆಲಸ ಮಾಡುವರು. ಮೊಹಲ್ಲೆಯ ಕಶ್ಮಲವನ್ನು ನಿವಾರಿಸುವುದಲ್ಲದೆ ಅಲ್ಲಲ್ಲಿ ಮಾಡಬೇಕಾದ ಸಣ್ಣ ಪುಟ್ಟ ದುರಸ್ತುಗಳನ್ನೂ ಸಹ ಗಮನಿಸುವರು. ಅಲ್ಲದೆ ಮೊಹಲ್ಲೆಯಲ್ಲಿ ಮಾಡಬೇಕಾದ ಇತರ ಏರ್ಪಾಡುಗಳನ್ನೂ ಸಹ ಅರಿತುಕೊಳ್ಳುವರು.

ಮೇಲ್ಕಂಡ ಕಾರ್ಯಕ್ರಮಗಳಲ್ಲಿ ಮೊಹಲ್ಲೆಯ ಪೌರಸಭಾ ಸದಸ್ಯರುಗಳೂ ಸಹ ಭಾಗಿಗಳಾಗಿ ನಿವಾಸಿಗಳ ಕುಂದು ಕೊರತೆಗಳನ್ನು ಪರಿಶೀಲಿಸುವರು. ಈ ಏರ್ಪಾಡು ನಿರ್ಮಲೀಕರಣದ ಕಾರ್ಯಕ್ರಮದ ಮೇಲೆ ಉತ್ತಮವಾದ ಪರಿಣಾಮವನ್ನು ಉಂಟುಮಾಡಿರುತ್ತದೆ. ಈ ಪದ್ಧತಿಯನ್ನು ಈಚೆಗೆ ಬೆಂಗಳೂರು ಪೌರ ಸಭೆಯವರೂ ಸಹ ಜಾರಿಗೆ ತಂದಿರುತ್ತಾರೆ.

ಪ್ರಜೆಗಳ ಪ್ರತಿನಿಧಿಗಳು ಇಲಾಖೆಯ ನೌಕರರ ಕೆಲಸ ಕಾರ್ಯಗಳಲ್ಲಿ ಮೇಲ್ಕಂಡಂತೆ ಭಾಗಿಗಳಾಗುವುದರಿಂದ ಉಂಟಾಗುವ ಸತ್ಪರಿಣಾಮವನ್ನು ಮಹಾಜನರೂ ಸಹ ಮನಗಂಡಿರುವರು. ಕೆಲವು ದಿನಗಳ ಹಿಂದೆ ಕನ್ನೇಗೌಡನ ಕೊಪ್ಪಲಿನಲ್ಲಿ ಪೌರಸಭೆಯ ಸದಸ್ಯರು ನಿರ್ಮಲೀಕರಣ ಕಾರ್ಯವನ್ನು ಕೈಗೊಂಡು ತಾವೇ ಸ್ವತಃ ಅಲ್ಲಿನ ಶುದ್ಧೀಕರಣ ಕಾರ್ಯವನ್ನು ನಡೆಸಿದರು. ಪ್ರಜಾ ಮುಖಂಡರುಗಳಾದ ಪ್ರತಿನಿಧಿಗಳು ತಮ್ಮ ಹಿತ ಸಾಧನೆಗಾಗಿ ಮಾಡುತ್ತಿರುವ ಆದರ್ಶಪ್ರಾಯವಾದ ಇಂತಹ ಕೆಲಸಗಳನ್ನು ಪುರನಿವಾಸಿಗಳು ಬಹಳವಾಗಿ ಮೆಚ್ಚಿ ತಾವೂ ಅವರೊಡನೆ ಸಹಕರಿಸಿದರು. ಈ ರೀತಿಯಲ್ಲಿ ಕಳೆದ ಐದಾರು ವರ್ಷಗಳಿಂದ ಅನೇಕ ಉತ್ತಮವಾದ ಯೋಜನೆಗಳು ಪೌರಸಭೆಯ ಕಾರ್ಯಕ್ರಮಗಳಲ್ಲಿ ಜಾರಿಗೆ ಬಂದಿವೆ. ಪುರನಿವಾಸಿಗಳ ಪುರೋಭಿವೃದ್ಧಿಗೆ ಸಹಕಾರಿಯಾಗುವ ಇಂತಹ ನೀತಿಯನ್ನೇ ಮುಂದುವರಿಸಲು ಮಹಾಜನರು ಉತ್ತೇಜನವೀಯಬೇಕೆಂದು ನಾವು ಕೋರುತ್ತೇವೆ.

ಅಪೂರ್ವ ಸಮಯ

ಬಂಗಾಳ ಮತ್ತು ಮಲಬಾರ್‌ಗಳಲ್ಲಿ ಸುಪ್ರಸಿದ್ಧರಾದ ಶ್ರೀ ಸ್ವಾಮಿ ಸತ್ಯಾನಂದ ಜೀಯವರು ತಾ॥ ೩-೧೧-೪೬ ನೇ ಭಾನುವಾರ ೫ ಗಂಟೆಗೆ ಕುಕ್ಕರಹಳ್ಳಿ ಕೆರೆಯಲ್ಲಿ ತೇಲುವುದೇ ಮುಂತಾದ ಪ್ರದರ್ಶನಗಳನ್ನು ತೋರಿಸುವರು.

ಉತ್ಪತ್ತಿಯಾದ ಹಣವನ್ನು ಆಶ್ರಮ ಕಟ್ಟಲು ಉಪಯೋಗಿಸುವುದರಿಂದ ಮೈಸೂರು ಮಹಾಜನರು ಉದಾರವಾಗಿ ಸ್ಥಳದಲ್ಲೇ ಸಹಾಯ ಮಾಡಬೇಕಾಗಿ ಪ್ರಾರ್ಥನೆ.

ವ್ಯವಸ್ಥಾಪಕರು

ಉಚಿತ ವಿದ್ಯಾಭ್ಯಾಸ

ಸಂಯುಕ್ತ ಪ್ರಾಂತ್ಯದಲ್ಲಿ ೧೦ ... ದ ಒಂದು ಯೋಜನೆಯಂತೆ ಶಾಲೆಗೆ ಹೋಗುವ ೬೬ ಲಕ್ಷ ಮಕ್ಕಳಿಗೂ ಉಚಿತ ವಿದ್ಯಾಭ್ಯಾಸವನ್ನು ಕೊಡಲಾಗುವುದೆಂದು ಗೊತ್ತಾಗಿದೆ. ಈ ಯೋಜನೆಯಂತೆ ಹೊಸದಾಗಿ ೪೩ ಸಾವಿರ ಶಾಲೆಗಳನ್ನು ತೆರೆಯಬೇಕಾಗುವುದು. ೧೯೪೭ನೇ ಜುಲೈ ... ೨೨೦೦ ಶಾಲೆಗಳನ್ನು ತೆರೆಯಲಾಗುವುದು. ಇದಕ್ಕಾಗಿ ಮೊದಲನೇ ವರ್ಷ ... ರೂ ಗಳ ವೆಚ್ಚ ತಗಲುವುದು.

ಷಾಫತ್ ಖಾನರು ಸಿಂಹಳದಲ್ಲಿ ರಾಯಭಾರಿ

ಭಾರತ ತಾತ್ಕಾಲಿಕ ಸರ್ಕಾರದಲ್ಲಿ ಸ... ಗಳಾಗಿದ್ದ ಡಾ॥ ಷಾಫತ್ ಅಹಮದ್ ಖಾನರನ್ನು ಸಿಂಹಳದಲ್ಲಿ ಭಾರತದ ಪ್ರತಿನಿಧಿಗಳನ್ನಾಗಿ ನೇಮಿಸಬೇಕೆಂದು ... ಸ್ ಮಂತ್ರಿಗಳು ನಿರ್ಧರಿಸಿರುವರೆಂದು ವರದಿಯಾಗಿದೆ.

ಜೆರೂಸಲಮಿನಲ್ಲಿ ಕ್ರಾಂ...

ಇದ್ದಕ್ಕಿದ್ದಂತೆಯೇ ಜೆರೂಸಲೇಮಿನಲ್ಲಿ ಕ್ರಾಂತಿಕಾರಕ ಚಟುವಟಿಕೆಗಳು ಪುನಃ ಆರಂಭವಾಗಿವೆ. ಕಿಂಗ್... ಸ್ಟೇಷನ್ನಿಗೆ ಬಾಂಬು ಹಾಕಲಾಗಿದೆ. ಕ್ರಾಂತಿಕಾರರು ಟಾಮಿ ಗನ್ನು ಹಿಡಿದು ಪೋಲೀಸರನ್ನು ಎದುರಿಸಿದರು. ಪರಿಸ್ಥಿತಿ ಉಗ್ರವಾಗಿದೆಯೆಂದು ವರದಿಯಾಗಿದೆ.

Edited, printed and published ... A. R. Nagarajan at the Sadhvi P... D Subbiah Road, Mysore

॥ ವಂದೇಮಾತರಂ ॥

ವಿಲ್ಲೆ ಮತ್ತು ನಜರಬಾದ್ ಮೊಹಲ್ಲಾ ಓಟರು ಮಹಾಶಯರುಗಳಲ್ಲಿ ವಿನಂತಿ

14-11-46 ನೇ ಗುರುವಾರ ನಡೆಯಲಿರುವ ಪೌರಸಭಾ ಚುನಾವಣೆಗಳಲ್ಲಿ ಈ ಕೆಳಗೆ ಕಂಡ ಕಾಂಗ್ರೆಸ್ ಉಮೇದುವಾರರಿಗೆ ಓಟು ಕೊಡಬೇಕಾಗಿ ಪ್ರಾರ್ಥನೆ

ವಿಲ್ಲೆ ಮೊಹಲ್ಲಾ

ಶ್ರೀ ಎ. ಕೃಷ್ಣಮೂರ್ತಿರಾವ್,

ನಜರ್‌ಬಾದ್ ಮೊಹಲ್ಲಾ

ಶ್ರೀ ಟಿ. ವೆಂಕಟರಮಣಯ್ಯಶ್ರೀ,

ನಗರ ಚುನಾವಣಾ ಉಪಸಮಿತಿ

ಮೈಸೂರು ಸಿಟಿ ರೇಷನಿಂಗ್ ಆಫೀಸ್.
ತಾ॥ 26-10-1946

ಪ್ರಕಟಣೆ

ಮೈಸೂರು ಸಿಟಿ ರೇಷನಿಂಗ್ ಇಲಾಖಾ ಗೋಡೌನುಗಳಲ್ಲಿರತಕ್ಕ ಒಟ್ಟು ಸುಮಾರು ಒಂದೂವರೆ ಲಕ್ಷ ಖಾಲಿ ಗೋಣೀ ಚೀಲಗಳು ಈ ಕೆಳಗೆ ನಮೂದಿರುವ ಗೋಡೌನುಗಳ ಬಳಿ ಬೆಳಗ್ಗೆ 9-30 ಘಂಟೆಗೆ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತವೆ. ಈ ಬಗ್ಗೆ ಹೆಚ್ಚು ವಿವರಗಳನ್ನು ಆಫೀಸಿನಲ್ಲಿ ತಿಳಿಯಬಹುದು.

ದೇವನ್ನಾ ಗೋಡೌನ್ K R ಆಸ್ಪತ್ರೆ ರಸ್ತೆ		ತಾ॥ 7-11-46 ನೇ ಗುರುವಾರ
ಲಷ್ಕರ್ ಎಮರ್ಜನ್ಸಿ ಡಿಪೋ		,, 8-11-46 ,, ಶುಕ್ರವಾರ
ದೇವರಾಜ	,,	,, 9-11-46 ,, ಶನಿವಾರ
ಮಂಡಿ	,,	,, 11-11-46 ,, ಸೋಮವಾರ
ನಜರ್‌ಬಾದ್	,,	,, 12-11-46 ,, ಮಂಗಳವಾರ
ಕೃಷ್ಣರಾಜ	,,	,, 13-11-46 ,, ಬುಧವಾರ
ಚಾಮರಾಜ	,,	,, 14 11 46 ,, ಗುರುವಾರ

(ಸಹಿ) ಅಬ್ದುಲ್ ರಜಾಕ್,
ರೇಷನಿಂಗ್ ಆಫೀಸರ್, ಮೈಸೂರು.

ರಣಜಿತ್ ಟಾಕೀಸ್

1-11-46 ರಿಂದ

ಲೋಕ ಪ್ರಸಿದ್ಧವಾದ, ಟಾಜಮಹಲ್ ಭವನದ ನಿರ್ಮಾಣಕ್ಕೆ ಕಾರಣ ಭೂತಳಾದ ಸ್ತ್ರೀಯ ಚರಿತ್ರೆ

ರಣಜಿತ್ ಮೂವಿಟೋನ್ ರವರ

'ಮಮ್ತಾಜ್ ಮಹಲ್'

(ಉರ್ದು)

ಪಾತ್ರ:—ಖುರ್ಷಿದ್, ಚಂದ್ರಮೋಹನ್

ಪ್ರತಿ ದಿನ ಮೂರು ಆಟಗಳು

ಬೆಳಗಿನ ಪ್ರದರ್ಶನ:—ಜವಾಬ್

ರಾಜಕಮಲ್, ಮೈಸೂರು, 31-10-46 ರಿಂ...

★

* ನೂರ್ ಜಹಾನ್,
* ಗೀತಾನಿಜಾಮಿ,
* ರಾಮಕಶ್ಯಪ್

ಮುಂತಾದವರು ನಟಿಸಿರುವ

ವಿಲೇಜ್ ಗರ್ಲ್

(ಹಳ್ಳಿಯ ಹುಡುಗಿ)

ಪ್ರತಿ ದಿನ ಮೂರು ಆಟಗಳು

★

Morning Shows at 10-30 A. M. From 1-11-46 for 4 d...

'The War of the wild Cats'

in old Oklahoma

॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶನಿವಾರ ೨—೧೧—೪೬ [ಸಂಚಿಕೆ ೭೯

ಪ್ರಾಂತ್ಯ ಸರ್ಕಾರದಲ್ಲಿ ಕೇಂದ್ರ ಸರ್ಕಾರದ ಪ್ರವೇಶ?

ಕಾಂಗ್ರೆಸ್ ಮಹಾಧಿವೇಶನದ

ಅಧ್ಯಕ್ಷರ ಮೆರವಣಿಗೆ

[ಟ ಫೋ] ಬೆಂಗಳೂರು ೨

ನಿನ್ನೆ ಸಂಜೆ ಮೈಸೂರು ಕಾಂಗ್ರೆಸ್ಸಿನ ಆರನೇ ಅಧಿವೇಶನದ ಅಂಗವಾಗಿ ಕಾಂಗ್ರೆಸ್ ಅಧ್ಯಕ್ಷರ ಮೆರವಣಿಗೆಯು ವೈಭವದಿಂದ ನಡೆಯಿತು. ಚೆನ್ನಾಗಿ ಅಲಂಕೃತವಾದ ಮೋಟಾರು ಕಾರಿನಲ್ಲಿ ಕಾಂಗ್ರೆಸ್ ಕಛೇರಿಯಿಂದ ಹೊರಟ ಮೆರವಣಿಗೆಯು ನಗರದ ಮುಖ್ಯ ಬೀದಿಗಳಲ್ಲಿ ಹಾಯ್ದು ಆ ಸ್ಥಳಕ್ಕೆ ವಾಪಸು ಬಂದಿತು. ರಸ್ತೆಗಳ ಅಕ್ಕಪಕ್ಕಗಳಲ್ಲಿ ಜನರು ಕಿಕ್ಕಿರಿದು ನೆರೆದಿದ್ದರು. ಅನೇಕ ಪುರಜನರು ಅಧ್ಯಕ್ಷರಿಗೆ ಹಾರತುರಾಯಿಗಳನ್ನು ಅರ್ಪಿಸಿದರು. ಎಲ್ಲೆಲ್ಲಿಯೂ ... ಉತ್ಸಾಹ ... ಎದ್ದುಕಾಣುತ್ತಿತ್ತು.

ನಗರದ ವಾತಾವರಣವು ಮಳೆಯ ದೆಸೆಯಿಂದ ಸ್ವಲ್ಪ ಮಂಕಾಗಿದ್ದರೂ ಉತ್ಸಾಹೀ ತರುಣರಾದ ಸ್ವಯಂಸೇವಕರು ಬಹಳ ದಕ್ಷತೆಯಿಂದಲೂ, ಹುರುಪಿನಿಂದಲೂ ಮತ್ತು ಶ್ರದ್ಧೆಯಿಂದಲೂ ತಮ್ಮ ಕಾರ್ಯೋನ್ಮುಖರಾಗಿದ್ದರು. ಅಧಿವೇಶನಕ್ಕೆ ಸ್ಥಳ ಪರಸ್ಥಳಗಳಿಂದ ... ಸಾವಿರಕ್ಕೂ ಮೇಲ್ಪಟ್ಟು ಪ್ರೇಕ್ಷಕರು ಬಂದಿರುವರೆಂದು ಅಂದಾಜು ಮಾಡಲಾಗಿದೆ. ಸಂಸ್ಥಾನದ ವಿವಿಧ ಭಾಗಗಳಿಂದ ಡೆಲಿಗೇಟುಗಳೂ ಬಂದಿರುವರು. ... ತೋರಣಗಳಿಂದಲೂ, ವಿದ್ಯುದ್ದೀಪಗಳಿಂದಲೂ ಅಲಂಕರಿಸಲ್ಪಟ್ಟಿರುವ ಸುಭಾಷ್ ನಗರದ ಪ್ರದೇಶವು ಪ್ರೇಕ್ಷಕರ ಕಣ್ಣುಗಳಿಗೆ ಮಹದಾನಂದವನ್ನುಂಟುಮಾಡುತ್ತಿದೆ. ನೊದಲೇ ತಿಳಿಸಿದ್ದಂತೆ ಅಂಚೆ ಆಫೀಸ್, ಲೌಡ್ ಸ್ಪೀಕರ್ ವ್ಯವಸ್ಥೆಗಳು ... ಸಕವಾಗಿ ನಡೆದಿವೆ.

... ದಿನ ಬೆಳಗ್ಗೆ ಧ್ವಜಾರೋಹಣ ನಡೆಯಬೇಕಾಗಿತ್ತು. ಬೆಳಗಿನಿಂದ ಒಂದೇ ಸಮನೆ ಮಳೆಯಾಗಿ ಮಂಟಪವೆಲ್ಲವೂ ತೊಯ್ದುಹೋಗಿದೆ. ಬೆಳಗಿನ ಯಾವ ಕಾರ್ಯವೂ ಜರುಗಲಿಲ್ಲ. ವಸ್ತು ಪ್ರದರ್ಶನಕ್ಕೆ ಈ ದಿನ ರಜ ಕೊಟ್ಟಿದೆ. ವಿಷಯನಿರ್ಣಾಯಕ ಸಮಿತಿಯ ಸಭೆಯು ... ಜರುಗುವುದು.

ಜೆರೂಸಲೇಮಿನಲ್ಲಿ ಬಾಂಬುಗಳ ಆಸ್ಫೋಟನೆ

ಜೆರೂಸಲೇಮಿನಲ್ಲಿ ಹೊರಗೆ ಒಂದು ... ಸ್ಟೇಷನಿನ ಕೆಳಗಡೆ ಹೂಳಲ್ಪಟ್ಟಿದ್ದ ಸುರಂಗವು ಸ್ಫೋಟವಾಗಿ ... ಸಿಪಾಯಿ ಸತ್ತು ೧೧ ಮಂದಿ ಬ್ರಿಟಿಷರು ... ಕೆಲವು ಮಂದಿ ಅರಬರೂ ಗಾಯಗೊಂಡಿರುವರೆಂದೂ, ರೈಲ್ವೆ ಸ್ಟೇಷನ್ನಿನ ... ಯಹೂದಿಯವನೊಬ್ಬನು ಬಾಂಬೊಂದನ್ನು ತೆಗೆದುಕೊಂಡು ಹೋಗುತ್ತಿದ್ದಾಗ ಅದು ಆಸ್ಫೋಟಿಸಿ ಅವನು ಮೃತನಾದನೆಂದು ತಿಳಿದುಬಂದಿದೆ. ಈ ಬಗ್ಗೆ ಒಂದು ಮನೆಯಲ್ಲಿ ... ಯಹೂದಿ ಕ್ರಾಂತಿಕಾರಿ ಮತ್ತು ಒಬ್ಬ ಯುವತಿಯು ಬಂಧಿಸಲಾಗಿದೆಯೆಂದು ಹೇಳಲಾಗಿದೆ.

ಮಹಾತ್ಮರ ಪ್ರವಾಸ ಮುಂದೆಹೋಯಿತು

... ರೈಲುಗಾಡಿ ವ್ಯವಸ್ಥೆ ಸಾಧ್ಯವಿಲ್ಲದ್ದರಿಂದ, ಬಂಗಾಳದ ಪ್ರಧಾನರು ... ನಿನ್ನೆ ನೌಖಾಲಿಗೆ ಹೋಗಬೇಕಾಗಿದ್ದ ಮಹಾತ್ಮರ ಪ್ರವಾಸವು ಮುಂದಕ್ಕೆ ಹೋಯಿತು. ಅವರು ಈ ದಿನವೂ ... ಸ್ಪೆಷಲ್ ರೈಲಿನಲ್ಲಿ ಅಲ್ಲಿಗೆ ಭೇಟಿ ...

ಕಲ್ಕತ್ತಾಕ್ಕೆ ಕೇಂದ್ರ ಸರ್ಕಾರದ ಮಂತ್ರಿಗಳ ಭೇಟಿ

ಕೇಂದ್ರ ಸರ್ಕಾರದ ಮಂತ್ರಿಗಳಾದ ಜವಹರಲಾಲ ನೆಹರು, ಸರ್ದಾರ್ ಪಟೇಲ್, ಮಿ॥ ಅಬ್ದುಲ್ ರಬ್ ನಿಶ್ತಾರ್ ಮತ್ತು ಲಿಯಾಖತ್ ಅಲಿಖಾನ್ ಇವರುಗಳು ಬಂಗಾಳದ ಗಲಭೆಗೀಡಾದ ಪ್ರದೇಶಗಳ ಪರಿಸ್ಥಿತಿಯ ವಿಷಯವನ್ನು ಪರಿಶೀಲಿಸಲು ವಿಮಾನದಲ್ಲಿ ತೆರಳುವರು. ಅಲ್ಲಿ ಮಹಾತ್ಮರನ್ನೂ, ವೈಸರಾಯರನ್ನೂ, ಪ್ರಧಾನ ಮಂತ್ರಿ ಸುಹ್ರವರ್ದಿಯವರನ್ನೂ ಮತ್ತು ಬಂಗಾಳ ಸರ್ಕಾರದ ಪ್ರತಿನಿಧಿಗಳನ್ನೂ ಭೇಟಿ ಮಾಡಿ ಸೋಮವಾರದೊಳಗೆ ದೆಹಲಿಗೆ ವಾಪಸು ಬರುವರೆಂದು ಹೇಳಲಾಗಿದೆ.

ಬಂಗಾಳಾ ದುರಂತದ ಬಗ್ಗೆ ಕೇಂದ್ರ ಸರ್ಕಾರದ ಪ್ರವೇಶ

ವೈಸರಾಯರು ಬಂಗಾಳದ ದುರಂತಕ್ಕೀಡಾದ ಪ್ರದೇಶಗಳ ಪ್ರವಾಸವನ್ನು ಮುಗಿಸಿಕೊಂಡು ದೆಹಲಿಗೆ ಹಿಂದಿರುಗಿದನಂತರ ಅವರು ಪ್ರವಾಸದ ಬಗ್ಗೆ ವರದಿಗಳನ್ನು ಸ್ಟೇಟ್ ಸೆಕ್ರೆಟರಿಯವರಿಗೆ ಕಳುಹಿಸಿ ಬಂಗಾಳ ಸರ್ಕಾರದ ಅಸಾಮರ್ಥ್ಯತೆ ಮತ್ತು ಈಚಿನ ದುರಂತದಿಂದ ಉಂಟಾದ ಹಾನಿಗಳನ್ನು ವಿವರಿಸುವರೆಂದು ಗೊತ್ತಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಪ್ರಾಂತ್ಯ ಸರ್ಕಾರಗಳ ಆಡಳಿತದಲ್ಲಿ ಕೇಂದ್ರ ಸರ್ಕಾರವು ಪ್ರವೇಶಿಸುವ ವಿಶೇಷಾಧಿಕಾರವನ್ನು ಕೊಡಬೇಕೆಂದು ಕೇಳಲಿರುವರೆಂದು ವರದಿಯಾಗಿದೆ.

ಭಟ್ಕಳ್ ಬಂದರಿನ ಬಗ್ಗೆ ಚರ್ಚೆ

ಭಟ್ಕಳಿನಲ್ಲಿ ಒಂದು ಬಂದರನ್ನು ಅಭಿವೃದ್ಧಿಪಡಿಸಬೇಕೆಂಬ ಸಿ ಆರ್ ಪ್ರಭುರವರ ... ಕೇಂದ್ರ ಶಾಸನಸಭೆಗೆ ಕಳುಹಿಸಲ್ಪಟ್ಟಿದೆ. ಇದನ್ನು ಇದೇ ೧೬ ನೇ ತಾರೀಖು ಚರ್ಚೆಗೆ ತೆಗೆದುಕೊಳ್ಳುವರೆಂದು ಹೇಳಲಾಗಿದೆ.

ವೈಸರಾಯರ ಪೂರ್ವ ಬಂಗಾಳಾ ಪ್ರವಾಸ

ವೈಸರಾಯ್ ಲಾರ್ಡ್ ವೇವೆಲ್ಲರು ನಿನ್ನೆ ದಿನ, ಪೂರ್ವ ಬಂಗಾಳದ ಗಲಭೆಗೀಡಾದ ಪ್ರದೇಶಗಳನ್ನು ಪರಿಶೀಲಿಸಲು ಬಂಗಾಳದ ಗವರ್ನರೊಡನೆ ವಿಮಾನದಲ್ಲಿ ಹೊರಟು ಹೋದರು. ಬಂಗಾಳ ಸರ್ಕಾರದವರು ಅವರಿಗೆ ಜನಸಂಚಾರದ ಸೌಲಭ್ಯವನ್ನೂ ಸಹ ಒದಗಿಸಲಿದ್ದಾರೆ.

ಬಹಿರಂಗ ಅಧಿವೇಶನ ಸೆಲೆಕ್ಟ್ ಟಾಕೀಸಿನಲ್ಲಿ

[ಸ್ವಂ ಸು ಫೋ] ಬೆಂಗಳೂರು ೨

ಮೈಸೂರು ಕಾಂಗ್ರೆಸ್ ಮಹಾಧಿವೇಶನದ ಆರನೇ ಸಮ್ಮೇಳನವು ಮಳೆಯ ದೆಸೆಯಿಂದ ಸುಭಾಷ್ ನಗರದಲ್ಲಿ ನಡೆಯಲು ಅವಕಾಶವಿಲ್ಲದೆ ಇಂದು ಸಂಜೆ ಸೆಲೆಕ್ಟ್ ಟಾಕೀಸಿನಲ್ಲಿ ಕೂಡಿಸಲು ಯೋಚಿಸಲಾಗಿದೆ.

ಕೇಸ್ಟ್ ಟೆಲಿ ಪಕೋಟಿ ಆಜ್ಞೆ ರದ್ದು

ಮೈಸೂರು ಸರ್ಕಾರದವರು ೧೯೪೫ ನೇ ಇಸವಿಯಲ್ಲಿ ಹೊರಡಿಸಿದ್ದ ... ಆಜ್ಞೆಯನ್ನು ರದ್ದುಗೊಳಿಸಿದ್ದಾರೆ.

ಬೆಂಗಳೂರು ಪೌರಸಭೆಯ ಅವಧಿಯನ್ನು ಬರುವ ಜನವರಿ ಒಂದನೇ ತಾರೀಖಿನಿಂದ ಒಂದು ವರ್ಷ ಕಾಲ ಹೆಚ್ಚಿಸುವ ನಿರೀಕ್ಷಣೆಯಿದೆ.

ಸೈನ್ಯ ಕೇಂದ್ರ ಕಛೇರಿಯ ವರ್ಗ

ದಕ್ಷಿಣ ಭಾರತ ಸೈನ್ಯ ಕೇಂದ್ರದ ಕಛೇರಿಯನ್ನು ಬೆಂಗಳೂರಿನಿಂದ ಪೂನಾಕ್ಕೆ ವರ್ಗಾಯಿಸುವ ... ಉಪಕ್ರಮವಾಗಿದೆ. ಸೈನ್ಯದ ಮೊದಲನೇ ತಂಡವು ಈ ತಿಂಗಳು ೨೬ ನೇ ತಾರೀಖು ಪೂನಾಕ್ಕೆ ಹೊರಟಿತು. ಸೈನ್ಯಾಧಿಕಾರಿಯಾದ ... ಲೆಫ್ಟಿನೆಂಟ್ ಜನರಲ್ ... ನವೆಂಬರ್ ... ನೇ ತಾರೀಖು ಬೆಂಗಳೂರನ್ನು ಬಿಡುವರೆಂದು ಗೊತ್ತಾಗಿದೆ.

ಕಲ್ಕತ್ತಾದಲ್ಲಿ ಹರತಾಳ ಸಪ್ತಾಹ

ಮೊನ್ನೆ ಸಂಜೆ ಕಲ್ಕತ್ತಾದ ನಾಗರಿಕರ ಸಭೆಯೊಂದು ಶ್ರೀ ಶರಚ್ಚಂದ್ರ ಬೋಸರ ಅಧ್ಯಕ್ಷತೆಯಲ್ಲಿ ನಡೆಯಿತು. ಕಲ್ಕತ್ತಾ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಡೆಯುತ್ತಿರುವ ಗಲಭೆ, ದೊಂಬಿ, ಅತ್ಯಾಚಾರ ಮುಂತಾದ ದುಷ್ಕೃತ್ಯಗಳನ್ನು ತಡೆಗಟ್ಟಲು ಅಧಿಕಾರಿಗಳು ಕೂಡಲೇ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದೂ ತಪ್ಪಿದಲ್ಲಿ ಇದೇ ೪ ನೇ ತಾರೀಖಿನಿಂದ ೧೧ ನೇ ತಾ॥ ವರೆಗೆ ಕಲ್ಕತ್ತಾ ನಗರದಲ್ಲಿ ಸಂಚಾರದ ಸೌಕರ್ಯ, ವ್ಯವಹಾರಗಳನ್ನು ನಿಲ್ಲಿಸಿ ಕಾರ್ಖಾನೆಗಳನ್ನು ಮುಚ್ಚಿ ಹರತಾಳವನ್ನಾಚರಿಸುವಂತೆ ಸಭೆಯಲ್ಲಿ ತೀರ್ಮಾನ ಮಾಡಲಾಯಿತೆಂದು ವರದಿಯಾಗಿದೆ.

ಮಹಾತ್ಮರಿಗೆ ... ನೆಗಡಿ

ಗಾಂಧೀಜಿಯವರಿಗೆ ... ನೆಗಡಿಯಾಗಿದೆಯೆಂದು ತಿಳಿದುಬಂದಿದೆ.

ಭಾರತಕ್ಕೆ ಆಹಾರ ತರುತ್ತಿದ್ದ ನೌಕಾ ನಾಶ

ಅಮೆರಿಕಾದ ಇಂಡೊನೇಷಿಯಾ ಲೀಗಿನವರು ಸಂಯುಕ್ತ ರಾಷ್ಟ್ರಗಳಿಗೆ ಒಂದು ಮನವಿಯನ್ನು ಸಲ್ಲಿಸಿ, ಇಂಡೊನೇಷಿಯವು ಭಾರತಕ್ಕೆ ಅಕ್ಕಿ ಸರಬರಾಜು ಮಾಡುವ ಪ್ರಯತ್ನಕ್ಕೆ ಅಡ್ಡಿಪಡಿಸುತ್ತಿರುವರೆಂದು ಆರೋಪಿಸಿರುವರು. ಮುಂದುವರಿದು ಇತ್ತೀಚೆಗೆ ಭಾರತದಕ್ಷಾಮಪೀಡಿತ ಪ್ರದೇಶಗಳಿಗಾಗಿ ೫೫ ಲಕ್ಷ ಟನ್ ಅಕ್ಕಿಯನ್ನು ರವಾನಿಸುತ್ತಿದ್ದ ಇಂಡೊನೇಷಿಯಾ ವರ್ತಕ ಹಡಗುಗಳ ಮೇಲೆ ಡಚ್ ಸೈನ್ಯದವರು ಧಾಳಿ ನಡೆಸಿ ಹಲವು ನೌಕೆಗಳನ್ನೂ ಆಹಾರವನ್ನೂ ವಶಪಡಿಸಿಕೊಂಡುದಲ್ಲದೆ ಹಲವನ್ನು ನಾಶ ಮಾಡಿರುವುದಾಗಿಯೂ ಆರೋಪಿಸಿದೆ.

ಬರ್ಮಾದಿಂದ ಆಂಗ್‌ಸಾನರು ಭಾರತಕ್ಕೆ ಬರುವರು

ಭಾರತದ ತಾತ್ಕಾಲಿಕ ಸರ್ಕಾರದ ಅಧ್ಯಕ್ಷರನ್ನು ತಿಳಿದು ಭಾರತ ಬರ್ಮಾಗಳ ಸಂಬಂಧದ ವಿಷಯವನ್ನು ಜವಹರಲಾಲರೊಡನೆ ಚರ್ಚಿಸಲು ಆಂಗ್‌ಸಾನರು ರಂಗೂನಿನಿಂದ ಭಾರತಕ್ಕೆ ಬರುವ ಸಂಭವವಿದೆ.

... ಸಂಯುಕ್ತ ಸಂಸ್ಥಾನದ ವಾಣಿಜ್ಯ ಸಚಿವರಿಂದ ಮಿ॥ ಹ್ಯಾರಿಮ್ಯಾಕೀಯವರು ನಡೆಸಿದ ಪ್ರಕಾರದ ಮಂಜೂರಾಗಿ ಭಾರತಕ್ಕೆ ೩ ಲಕ್ಷ ಡಾಲರ್ ಬೆಲೆಬಾಳುವ ಆಹಾರ ಸಾಮಗ್ರಿಗಳು ಉಚಿತವಾಗಿ ದೊರೆಯಲಿವೆ.

ಸಂಯುಕ್ತ ರಾಷ್ಟ್ರಸಮ್ಮೇಳನದಲ್ಲಿ ಇಂಡಿಯಾ ದ॥ ಆಫ್ರಿಕ ಪ್ರಶ್ನೆ

ಸಂಯುಕ್ತ ರಾಷ್ಟ್ರಗಳ ಸಮ್ಮೇಳನವು ಒಪ್ಪಿಕೊಂಡ ... ವಿಷಯಗಳಲ್ಲಿ ಇಂಡಿಯಾ ದಕ್ಷಿಣ ಆಫ್ರಿಕಾದ ಬಿಕ್ಕಟ್ಟಿನ ಪ್ರಶ್ನೆಯೂ ಸೇರಿಕೊಂಡಿದೆ.

ಜಿಲ್ಲಾಬೋರ್ಡ್ ಉಪಾಧ್ಯಕ್ಷ ಚುನಾವಣೆ

ಮೈಸೂರು ೨

ಮೈಸೂರು ಜಿಲ್ಲಾಬೋರ್ಡಿನ ಸಭೆಯು ಇಂದು ನಡೆಯಿತು. ಶ್ರೀ ... ರವರಿಗೆ ... ಅವರನ್ನು ಅಭಿನಂದಿಸುವ ... ಅಂಗೀಕರಿಸಲ್ಪಟ್ಟಿತು. ಉಪಾಧ್ಯಕ್ಷರ ಚುನಾವಣೆಗೆ ಶ್ರೀಗಳಾದ ಗುರುಮಲ್ಲಪ್ಪನವರ ಮತ್ತು ... ವೀರಣ್ಣನವರ ಹೆಸರುಗಳನ್ನು ಸೂಚಿಸಲಾಗಿತ್ತು. ಚುನಾವಣೆ ನಡೆದು ಶ್ರೀ ಗುರುಮಲ್ಲಪ್ಪನವರಿಗೆ, ೧೩ ಓಟುಗಳೂ ವೀರಣ್ಣನವರಿಗೆ ೮ ಓಟುಗಳೂ ಬಂದು ಗುರುಮಲ್ಲಪ್ಪನವರು ಉಪಾಧ್ಯಕ್ಷರಾಗಿ ಚುನಾಯಿತರಾದರು.

ಶ್ರೀ ... ರವರು ... ಸಂಸ್ಥಾನದ ... ಮೈಸೂರಿನಿಂದ ನಿನ್ನೆ ... ಸಂಸ್ಥಾನಕ್ಕೆ ಪ್ರಯಾಣ ಬೆಳಸಿದರು.

ಚೀನಾದಲ್ಲಿ ಕಮ್ಯೂನಿಸ್ಟ ಪಕ್ಷದವರಿಗೂ ಸರ್ಕಾರದವರಿಗೂ ... ಮಧ್ಯೆ ... ನಡೆಯುತ್ತಿದ್ದ ಸಂಧಾನ ... ವಿಫಲವಾಯಿತೆಂದು ... ಇನ್ನು ಮುಂದೆ ... ಹೇಳಲಾಗಿದೆ.

ಸಾಧ್ವಿ

ತಾ॥ ೨-೧೧-೪೬ ಶನಿವಾರ

ತೆರಿಗೆಯ ಪ್ರಮಾಣ

ಪ್ರಜೆಗಳ ಮೇಲೆ ಹೊರಿಸತಕ್ಕ ತೆರಿಗೆಯ ಪ್ರಮಾಣವು ಅವರ ಆದಾಯದ ಮತ್ತು ಕೊಡುವ ಶಕ್ತಿಗೆ ಅನುಗುಣವಾಗಿರಬೇಕೆಂಬುದು ಅಂಗೀಕೃತವಾಗಿರುವ ರಾಜಕೀಯ ಸಿದ್ಧಾಂತ. ಮತ್ತು ತಮ್ಮ ಮೇಲೆ ಬೀಳುವ ತೆರಿಗೆಯ ಹೊರೆಯನ್ನು ನಿರ್ಧರಿಸಲು ಪ್ರತಿಯೊಬ್ಬ ಪ್ರಜೆಯ ಅಭಿಪ್ರಾಯಕ್ಕೂ ಅವಕಾಶವಿರಬೇಕೆಂಬುದು ಪ್ರಜಾಪ್ರಭುತ್ವದ ಮುಖ್ಯ ಸೂತ್ರ. ಪ್ರಾತಿನಿಧ್ಯವಿಲ್ಲದ ತೆರಿಗೆಯು ಅಕ್ರಮವಾದ ಸುಲಿಗೆ ಎಂಬ ನಾಣ್ಣುಡಿಯನ್ನು ಎಲ್ಲರೂ ಬಲ್ಲರು. ಆದುದರಿಂದಲೇ ಆಧುನಿಕ ಆಡಳಿತ ಸಂಸ್ಥೆಗಳಲ್ಲಿ ವಿಧಿಸಲಾಗುವ ತೆರಿಗೆಗಳಲ್ಲೆಲ್ಲಾ ಪ್ರಜಾಭಿಪ್ರಾಯವನ್ನು ಮುಂಚಿತವಾಗಿಯೇ ತೆಗೆದುಕೊಳ್ಳಲಾಗುವುದು. ಸಾರ್ವಜನಿಕರಿಗೆ ತಿಳಿಸದೆ ಯಾವ ತೆರಿಗೆಯನ್ನೂ ಹೊರಿಸಲಾಗುವುದಿಲ್ಲ.

ಸ್ಥಳೀಯ ಸಂಸ್ಥೆಗಳಲ್ಲಿ ಈ ಬಗೆಯ ಹೊರೆಗಳ ಮೇಲೆ ಪ್ರಜಾಭಿಪ್ರಾಯವು ಹೆಚ್ಚು ಪ್ರಭಾವವನ್ನು ಬೀರುವುದು ಸಾಧ್ಯ. ಸರ್ಕಾರದ ಆಡಳಿತದಲ್ಲಿ ಪ್ರಭುತ್ವದವರು ಪ್ರಜೆಗಳ ಅಭಿಪ್ರಾಯವನ್ನು ದುರ್ಲಕ್ಷಿಸಿ ಹೆಚ್ಚು ಹೆಚ್ಚಿನ ಹೊರೆಗಳನ್ನು ಹೇರುವ ಸಂಭವಗಳು ಅಧಿಕ. ಆದರೆ ಸ್ಥಳೀಯ ಸಂಸ್ಥೆಗಳಲ್ಲಿ ಇದಕ್ಕೆ ಅವಕಾಶ ಕಡಿಮೆ. ಅವುಗಳಲ್ಲಿ ಪ್ರಜೆಗಳಿಂದ ಚುನಾಯಿತರಾದ ಮತ್ತು ಪ್ರಜಾಹಿತವನ್ನು ಚೆನ್ನಾಗಿ ಅರಿತ ಪ್ರತಿನಿಧಿಗಳು ಇರುತ್ತಾರೆ. ಮುನಿಸಿಪಲ್ ಸಂಸ್ಥೆಗಳು ಜನರು ಹೊರಲು ಸಾಧ್ಯವಿಲ್ಲದ ಭಾರಗಳನ್ನು ಹೊರಿಸಲು ಅವರು ಒಪ್ಪಿಗೆ ಕೊಡುವುದಿಲ್ಲ. ಮೇಲಾಗಿ ಇರುವ ಭಾರವನ್ನೇ ಆದಷ್ಟು ಇಳಿಸಿ ಖರ್ಚುಗಳನ್ನು ಕಡಿಮೆ ಮಾಡಿ ತಮ್ಮಿಂದ ಆದಾಯ ವ್ಯಯಗಳನ್ನು ಸರಿದೂಗಿಸಲು ಪ್ರಯತ್ನಿಸುತ್ತಾರೆ.

ರಾಜಧಾನಿಯ ಪೌರಸಭೆಯಲ್ಲಿ ಈಚೆಗೆ ಅನೇಕ ವರ್ಷಗಳಿಂದ ಪ್ರಜಾನಿವಾಸಿಗಳ ಮೇಲೆ ಹೊಸ ತೆರಿಗೆಗಳನ್ನು ಹಾಕದೆ, ಅಸ್ತವ್ಯಸ್ತವಾದ ರೀತಿಯಲ್ಲಿ ನಡೆಯುತ್ತಿದ್ದ ಆಡಳಿತವನ್ನು ಮೆಚ್ಚಿಸಿ ಆಯವ್ಯಯಗಳನ್ನು ಸರಿದೂಗಿಸಲಾಗುತ್ತಿದೆ. ಅಲ್ಲದೆ ಗಾಡಿಯ ತೆರಿಗೆಯನ್ನು ಆರು ರೂಪಾಯಿನಿಂದ ಐದು ರೂಪಾಯಿಗೆ ಇಳಿಸಿ ಬಡ ನಿವಾಸಿಗಳಿಗೆ ವಿಶೇಷ ಸಹಾಯವನ್ನುಂಟುಮಾಡಲಾಗಿದೆ. ಬೈಸಿಕಲ್ಲುಗಳ ಮೇಲೆ ಇದ್ದ ಮೂರು ರೂಪಾಯಿನ ತೆರಿಗೆಯನ್ನು ಎರಡು ರೂಪಾಯಿಗೆ ಇಳಿಸಿದೆ. ನಲ್ಲಿಗಳಿಲ್ಲದ ಮತ್ತು ಕಕ್ಕಸುಗಳಿಲ್ಲದ ಮನೆಗಳ ಮೇಲೆ ಅನೇಕ ವರ್ಷಗಳಿಂದ ಕಾನೂನಿಗೆ ವಿರುದ್ಧವಾಗಿ ವಸೂಲು ಮಾಡುತ್ತಿದ್ದ ಸಾವಿರಾರು ರೂಪಾಯಿಗಳನ್ನು ಮಾಫಿ ಮಾಡಲಾಗಿದೆ. ಇದಲ್ಲದೆ ಮನೆ ತೆರಿಗೆಗಳನ್ನೂ ಕ್ರಮಬದ್ಧವಾಗಿ ಪುನರ್ವಿಮರ್ಶೆ ಮಾಡಿ ನೂರಾರು ಜನ ನಿವಾಸಿಗಳಿಗೆ ಸೂಕ್ತವಾದ ಪರಿಹಾರವನ್ನು ಒದಗಿಸಿಕೊಡಲಾಗಿದೆ.

ಮೇಲ್ಕಂಡ ಕೆಲಸಗಳನ್ನು ಪೌರಸಭೆಯು ಇದ್ದಕ್ಕಿದ್ದ ಹಾಗೆ ಮಾಡಲಿಲ್ಲ. ಐದಾರು ವರ್ಷಗಳಿಂದ ಹಂತ ಹಂತವಾಗಿ ನಿರ್ವಹಿಸಿದೆ. ಇದರಿಂದ ಸಾವಿರಾರು ಜನ ನಿವಾಸಿಗಳು ಅವರಿಗೆ ಕೃತಜ್ಞರಾಗಿರುವರು.

ಜಾಡಮಾಲಿಗಳ ಮುಷ್ಕರ

ಮೈಸೂರು ೨

ತಮ್ಮ ವಿಚಾರದಲ್ಲಿ ಮೇಲಧಿಕಾರಿಗಳು ಸರಿಯಾಗಿ ವರ್ತಿಸಲಿಲ್ಲವೆಂದು ಅವರ ವರ್ತನೆಯನ್ನು ಖಂಡಿಸುವುದಕ್ಕಾಗಿ ಮುಷ್ಕರ ಹೂಡುವುದೆಂದೂ ನಿರ್ಧರಿಸಿ ದೇವರಾಜ ಮೊಹಲ್ಲೆಯ ಜಾಡಮಾಲಿಗಳು ನಿನ್ನೆಯಿಂದ ಮುಷ್ಕರ ಹೂಡಿದ್ದಾರೆ.

ಉಚಿತ ಶಿಕ್ಷಣ

ದೇಶೀಯ ಸಂಸ್ಕೃತ ಸಂಘದ ಆಶ್ರಯದಲ್ಲಿ ೧೯೪೭ ರ ಇಂಟರ್‌ಮೀಡಿಯೆಟ್, ಎಸ್.ಎಸ್.ಎಲ್.ಸಿ. ಮತ್ತು ಎಂ.ಎಸ್. ಪರೀಕ್ಷೆಗಳಿಗೆ ಸಂಸ್ಕೃತವನ್ನು ಐಚ್ಛಿಕ ಅಥವಾ ದ್ವಿತೀಯ ಭಾಷೆಯಾಗಿ ತೆಗೆದುಕೊಂಡಿರುವ ವಿದ್ಯಾರ್ಥಿ ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ ಉಚಿತ ಶಿಕ್ಷಣವನ್ನು ಕೊಡಲು ಏರ್ಪಡಿಸಲಾಗಿದೆ. ತರಗತಿಗೆ ಸೇರಬಯಸುವ ವಿದ್ಯಾರ್ಥಿನಿಯರು ವನಿತಾಸದನ, ಕೃಷ್ಣನಗರ, ಮಹಿಳಾ ಸದನಗಳಲ್ಲೂ, ವಿದ್ಯಾರ್ಥಿಗಳು ಲಕ್ಷ್ಮೀಪುರಂ ಮಿಡಲ್ ಸ್ಕೂಲ್, ಹಿಂದೀ ಪ್ರಚಾರ ಸಭೆ, ಕೋಆಪರೇಟಿವ್ಸ್ ಹೋಂಗಳಲ್ಲೂ ತಮ್ಮ ಹೆಸರುಗಳನ್ನು ಕೊಡಬೇಕೆಂದು ಕಾರ್ಯದರ್ಶಿಗಳು ಕೋರಿರುತ್ತಾರೆ.

ಪ್ರಜಾನುರಾಗಕ್ಕೆ ಪಾತ್ರರಾದ ಪ್ರತಿನಿಧಿಗಳು ಇದ್ದರೆ ಸಮರ್ಪಕವಾದ ತೆರಿಗೆಯ ನೀತಿಯು ಜಾರಿಗೆ ಬರುತ್ತದೆಂಬುದು ಇದರಿಂದ ವೇದ್ಯವಾಗುತ್ತದೆ. ಇಂತಹ ಪದ್ಧತಿಯು ಮುಂದುವರಿದು ಇಡೀ ನಗರದ ಸಕಲ ವಿಧವಾದ ತೆರಿಗೆಗಳೂ ಪರಿಷ್ಕರಣ ಹೊಂದಿ ಆದಷ್ಟು ಅಲ್ಪ ಪ್ರಮಾಣದ ಹೊರೆಯಿಂದ ಅತ್ಯಂತ ಅಧಿಕ ಪ್ರಮಾಣದ ನಾಗರಿಕ ಸೌಲಭ್ಯಗಳು ತಮಗೆ ದೊರೆಯುವಂತೆ ಮಾಡಿಕೊಳ್ಳಲು ಈ ಸಲ ಯದ್ವಪುರ ನಿವಾಸಿಗಳು ತಮ್ಮ ಪ್ರತಿನಿಧಿಗಳಿಗೆ ಪ್ರೋತ್ಸಾಹವನ್ನೀಯಲೆಂಬುದೇ ನಮ್ಮ ಹಾರೈಕೆ.

CAR FOR SALE

1934 Model MORRIS SALOON in good condition with New Battery and Brand New Tyres Rs 3000/- or nearest offer. Apply in person or write to the undersigned immediately

K. G. KATWEY,
Municipal Engineer,
Mysore City Municipality

ಟಿ. ಸಿ. ನಟರಾಜ್

ಔಷಧಾಲಯ

ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅಗತ್ಯವಾಗಿ ಬೇಕಾದ ಎಲ್ಲಾ ಇಂಗ್ಲಿಷ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.

ಯುನಾನಿ ಆಯುರ್ವೇದೀಯ ಸಿದ್ಧೌಷಧಗಳೆಲ್ಲವೂ ದೊರೆಯುತ್ತವೆ.

ಧಾನ್ಯ ಶೇಖರಣೆ ಬಗ್ಗೆ ದೂರು

ಮೈಸೂರು ತಾಲ್ಲೂಕು ಮಂಡಕಳ್ಳಿ ಗ್ರಾಮದ ಹಲವು ರೈತರು ಜಿಲ್ಲಾಧಿಕಾರಿಗಳಿಗೆ ಒಂದು ಅರ್ಜಿಯನ್ನು ಸಲ್ಲಿಸಿ ತಮ್ಮ ಗ್ರಾಮದ ಸರಹದ್ದಿನಲ್ಲಿ ಮುಂಗಾರು ಮಳೆ ಸಕಾಲದಲ್ಲಿ ಬಾರದೆ ಜೋಳದ ಫಸಲು ಕೆಟ್ಟುಹೋಗಿದ್ದರೂ ಆಹಾರ ಇಲಾಖಾ ಅಧಿಕಾರಿಗಳೊಬ್ಬರು ತಮ್ಮ ಗ್ರಾಮಕ್ಕೆ ಬಂದು ಬಲವಂತದಿಂದ ಗುಳಿಗಳನ್ನು ತೆಗೆಸಿದರೆಂದೂ, ಅದೇ ಸಮಯದಲ್ಲಿ ಮಳೆ ಬಂದು ಗುಳಿಗಳೊಳಕ್ಕೆ ನೀರು ನುಗ್ಗಿ ಬಹು ನಷ್ಟವಾಯಿತೆಂದೂ, ಆದ್ದರಿಂದ ಈ ಬಗ್ಗೆ ಕೂಡಲೇ ತನಿಖೆ ನಡೆಸಿ ತಕ್ಕ ವ್ಯವಸ್ಥೆ ಮಾಡಬೇಕೆಂದೂ, ನಮೂದಿಸಿದ್ದಾರೆಂದೂ ಗೊತ್ತಾಗಿದೆ.

ವಿದ್ಯಾರ್ಥಿಗಳ ಸಂಘ

ನಂಜನಗೂಡು ೧

ಈ ಊರಿನ ಹೈಸ್ಕೂಲು ಹಳೇ ವಿದ್ಯಾರ್ಥಿಗಳ ಸಭೆ ಜರುಗಿ ಡಿಸೆಂಬರ್ ತಿಂಗಳಿನಲ್ಲಿ ವಾರ್ಷಿಕೋತ್ಸವವನ್ನು ನಡೆಸಲು ಒಂದು ಸಮಿತಿಯನ್ನು ರಚಿಸಲಾಯಿತು. ಅದಕ್ಕೆ ಶ್ರೀ ಇ. ಆರ್. ಸೀತಾರಾಂರವರು ಅಧ್ಯಕ್ಷರಾಗಿಯೂ, ಶ್ರೀಗಳಾದ ಎ. ಎಸ್. ಪ್ರಸನ್ನ ಕುಮಾರ್ ಮತ್ತು ಎಚ್. ವಿ. ಶ್ರೀಧರಂರಾವ್‌ರವರು ಕಾರ್ಯದರ್ಶಿಗಳಾಗಿಯೂ, ಶ್ರೀ ಎಸ್. ವಿ. ವೆಂಕಟರಾಮುರು ಕೋಶಾಧಿಕಾರಿಗಳಾಗಿಯೂ ಆರಿಸಲ್ಪಟ್ಟರು.

ಹರಿಕಥೆ

ಮೈಸೂರು ಚಾಮುಂಡಿ ಬೆಟ್ಟದ ಹಿಂಭಾಗದಲ್ಲಿರುವ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿಯವರ ದೇವಸ್ಥಾನದಲ್ಲಿ ... ದಿವಸ ರಾತ್ರಿ ೯ ಗಂಟೆಗೆ ... ಬೀದಿರುವ ಶ್ರೀ ಗಣಪತಿ ಭಾಗವತರು ... ತಮಿಳಿನಲ್ಲಿ 'ವತ್ಸಲಾ ಕಲ್ಯಾಣ' ಎಂಬ ಕಥೆಯು ನಡೆಯುತ್ತದೆ. ಸರ್ವರಿಗೂ ಸ್ವಾಗತವುಂಟು

ಬಹುಮಾನ ವಿನಿಯೋಗ

ರಕ್ಷಣಾ ಕಾನೂನು ಪ್ರಕಾರ ಸಹಾಯಕ್ಕಾಗಿ ಸೇವೆ ಸಲ್ಲಿಸಿದ ಜಿಲ್ಲೆಯ ಪೊಲೀಸ್ ಅಧಿಕಾರಿಗಳಿಗೆ ನಿನ್ನೆ ದಿನ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಬಹುಮಾನ ವಿನಿಯೋಗ ನಡೆಯಿತು. ಪ್ರಜಾ ರಕ್ಷಣೆ, ದರೋಡೆಗಳ ತನಿಖೆಗಳೇ ಪೊಲೀಸರ ಕರ್ತವ್ಯ. ಪ್ರತಿಯೊಬ್ಬ ಪೊಲೀಸ್ ಅಧಿಕಾರಿಯೂ ತಾನು ಪ್ರಜಾಸೇವಕನೆಂಬುದನ್ನು ಮರೆಯಬಾರದು. ಪ್ರಜಾಸೇವೆಯನ್ನೇ ಗುರಿಯಾಗಿಟ್ಟು ಸಾರ್ವಜನಿಕರ ವಿಶ್ವಾಸಗಳನ್ನು ಗಳಿಸಿ- ಎಂದು ಅಧ್ಯಕ್ಷರು ಭಾಷಣದಲ್ಲಿ ತಿಳಿಸಿದರು.

ಉಪನ್ಯಾಸ

ವಾಣೀವಿಲಾಸ ಮೊಹಲ್ಲಾ ಶ್ರೀ ... ಕಷ್ಟಾಶ್ರಮದಲ್ಲಿ ನಾಳೆ ಸಂಜೆ ೬ ... ಸ್ವಾಮಿ ಸೋಮನಾಥನಂದರು ಭಗವದ್ಗೀತೆಯ ಮೇಲೆ ಮಾತನಾಡುವರು.

Edited, printed and published by A. R. Nagarajan at the Sadhvi ... D Subbiah Road, Mysore

ರಾಜಕಮಲ್, ಮೈಸೂರು. 31-10-46ರಿಂ

ನೂರ್‌ಜಹಾನ್,
ಗೀತಾನಿಜಾಮಿ,
ರಾಮಚಕಲ್
ಮುಂತಾದವರು ನಟಿಸಿರುವ
ವಿಲೇಜ್ ಗರ್ಲ್
(ಹಳ್ಳಿಯ ಹುಡುಗಿ)
ಪ್ರತಿ ದಿನ ಮೂರು ಆಟಗಳು

Morning Shows at 10-30 A. M. From 1-11-46 for 4 da

'The War of the wild Cats'
in old Oklahoma

॥ ವಂದೇಮಾತರಂ ॥

ದೇವರಾಜ ಮೊಹಲ್ಲಾ ಓಟರು ಮಹಾಶಯರುಗಳಲ್ಲಿ ವಿನಂತಿ

14-11-46 ನೇ ಗುರುವಾರ ನಡೆಯಲಿರುವ ಪೌರಸಭಾ ಚುನಾವಣೆಗಳಲ್ಲಿ ಈ ಕೆಳಕಂಡ ಕಾಂಗ್ರೆಸ್ ಉಮೇದುವಾರರಿಗೇ ಓಟು ಕೊಡಬೇಕಾಗಿ ಪ್ರಾರ್ಥನೆ

ಶ್ರೀ॥ ಗಳಾದ

ಯು. ಎಲ್. ರಾಮಚಂದ್ರ ರಾವ್,

ಎಸ್. ಲಿಂಗಣ್ಣ,

ಕೆ. ನರಸಿಂಹಯ್ಯಂಗಾರ್ ಮತ್ತು

ಚೌಡಯ್ಯ

ನಗರ ಚುನಾವಣಾ ಉಪಸಮಿ

ಪೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಭಾನುವಾರ ೯—೧೧—೪೭ [ಸಂಚಿಕೆ ೮೦

ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಹೋರಾಟ

ತಿಂಗಳ ಮತ್ತು ಮೊನ್ನಿನ ದಸರಾ ಅಧಿವೇಶನಗಳಲ್ಲಿ ಈ ಉದ್ದಿಶ್ಯದಿಂದಲೇ ಎಲ್ಲಾ ಸರ್ಕಾರೀ ಮಸೂದೆಗಳೂ ತಿರಸ್ಕೃತವಾದುವು ಶಾಸನ ಸಭೆಯಲ್ಲಿ ಹಲವು ಮೋಶಾ ನಿರ್ಣಯಗಳು ಅಂಗೀಕೃತವಾದುವು. ಸರ್ಕಾರವು ಸರ್ಕಾರದ ಅನುಯಾಯಿಗಳೂ ಮಾಡಿದ ಪ್ರಯತ್ನಗಳೆಲ್ಲವೂ ವ್ಯರ್ಥವಾದುವು. ಶಾಸನ ಸಭೆಗಳಲ್ಲಿ ಲೇಶ ಮಾತ್ರವೂ ಬೆಂಬಲವಿಲ್ಲದ ನಿರಂಕುಶ ಸರ್ಕಾರ ಈಗ ಮೈಸೂರಲ್ಲಿ ಆಡಳಿತ ನಡೆಸುತ್ತಿದೆಯೆಂಬುದು ಶಾಸನ ಸಭೆಗಳ ಕಾರ್ಯಕಲಾಪಗಳಿಂದ ನಿಸ್ಸಂದೇಹವಾಗಿ ವ್ಯಕ್ತವಾಗಿದೆ ಆದರೂ ಆದರ ಪತನ ಘೋಷಿಸಲ್ಪಟ್ಟಿಲ್ಲ, ಎಂದಿನಂತೆ ತ್ರೀವಿದಾಗ್ಯಂಭೀರ್ಯದಿಂದ ನಡೆಯುತ್ತಲೇ ಇದೆ

ಆಡಳಿತದಲ್ಲಿ ಪ್ರಜಾ ಸಂಬಂಧ ಹಿಂಪಡೆಯಬಹುದೇ ?

ಶಾಸನ ಒದ್ದವಾದ ಎಲ್ಲ ವಿಧಾನಗಳನ್ನೂ ನಾವು ಮುಗಿಸಿದ್ದೇವೆ; ಅಸಾಧಾರಣ ಸಹನೆಯನ್ನು ತೋರಿಸಿದ್ದೇವೆ ಆದರೂ ನಮ್ಮ ಬೇಡಿಕೆಗಳು ಉಪೇಕ್ಷಿಸಲ್ಪಟ್ಟಿವೆ; ಅಪಹಾಸ್ಯಕ್ಕೀಡಾಗಿವೆ ನರಿಯ ಪ್ರಾಂತ್ಯಗಳ ಪರಿಸ್ಥಿತಿಗೂ ಸಂಸ್ಥಾನಗಳ ಪರಿಸ್ಥಿತಿಗೂ ಅಂತರವಿದೆಯೆಂದು ಹೇಳುತ್ತಿದ್ದಾರೆ ಬ್ರಿಟಿಷ್ ಭಾರತದಲ್ಲಿ ಪ್ರಜಾರದಲ್ಲಿರುವ ಘೋಷಣೆಗಳಿಗೆ ಸಂಸ್ಥಾನಗಳಲ್ಲಿ ಯಾವ ಅರ್ಥವಾಗಲೀ ಶಕ್ತಿಯಾಗಲೀ ಇಲ್ಲವೆಂದು ಹೇಳಲಾಗುತ್ತಿದೆ. ಪ್ರಜೆಗಳು ರಾಜಭಕ್ತರಲ್ಲವೆಂಬುದನ್ನು ಸೂಚಿಸುವಂತೆಯೋ ಏನೋ ರಾಜಭಕ್ತಿ ಘೋಷಿಸಲ್ಪಡುತ್ತಿದೆ. ಆಡಳಿತದೊಡನೆ ಪ್ರಜೆಗಳನ್ನು ಸಮಾವೇಶಗೊಳಿಸುವ ಕಂದಾಚಾರದ ನೀತಿಯನ್ನೇ ಇನ್ನೂ ಎತ್ತಿ ಹಿಡಿಯಲಾಗುತ್ತಿದೆ. ಇನ್ನೇ ಅಲ್ಲ ಹೇಳದ ರೀತಿಯಲ್ಲಿ ನಡೆಯುತ್ತಿದ್ದರೆ ಆಡಳಿತದಲ್ಲಿ ಪ್ರಜೆಗಳ ಸಂಬಂಧ ಇನ್ನೂ ಹಿಂದೆ ಹೋಗಬಹುದೆಂಬ ಬೆದರಿಕೆಯ ನುಡಿಗಳು ಸಹ ಕೇಳಬರುತ್ತಿವೆ ಜವಾಬ್ದಾರಿ ಸರ್ಕಾರದ ಬೇಡಿಕೆಯನ್ನು ನಡೆಸಿಕೊಡುವುದು ಹಾಗಿರಲಿ, ಅದರ ಹೆಸರೂ ಕೂಡ ಕೇಳಬರುತ್ತಿಲ್ಲ.

ನಮ್ಮ ಧ್ಯೇಯ ಸಾಧನೆ

ನಮ್ಮ ಸಂಸ್ಥೆಯ ಘಟನೆಯನ್ನು ಬಲಪಡಿಸುವ ಆವಶ್ಯಕತೆಯನ್ನು ನಾನು ಒತ್ತಿ ಹೇಳಬಯಸುತ್ತೇನೆ ನಿಸ್ವಾರ್ಥವಾದ ಸೇವೆ, ಕಷ್ಟ ಸಹನೆ ಮತ್ತು ತ್ಯಾಗಕ್ಕೆ ಮೈಸೂರು ಕಾಂಗ್ರೆಸ್ ವಿಖ್ಯಾತವಾಗಿದೆ ಈಚೆಗೆ ತಲೆದೋರಿರಬಹುದಾದ ಭಿನ್ನಾಭಿಪ್ರಾಯಗಳನ್ನೂ ಪಕ್ಷೀಯ ಮನೋಭಾವನೆಯನ್ನೂ ಪರಿಹರಿಸಿಕೊಳ್ಳಬೇಕು. ಸಂಸ್ಥೆಯ ಪ್ರತಿಯೊಂದು ಅಂಗವೂ ಬಲವಾಗಬೇಕು. ಪುನಃ ನಾವು ಏಕವಾಕ್ಯದಿಂದ ಏಕೋದ್ದೇಶದಿಂದ ಸಂಘಟಿತರಾಗಬೇಕು ಆಗ ನಮ್ಮ ಆಂದೋಳನ ಜನತೆಯ ಹೃದಯದಲ್ಲಿ ಪ್ರತಿಧ್ವನಿಸಿ ಶೀಘ್ರದಲ್ಲಿ ನಮ್ಮ ಧ್ಯೇಯ ಸಾಧನೆ ಸಫಲವಾಗುವುದು

ಪ್ರತಿಗಾಮಿ ಭಾವನೆಗೆ ಪ್ರತಿಭಟನೆಯೇ ಪರಿಹಾರ ಮಾರ್ಗ

ಅ. ಭಾ. ಸಂಸ್ಥಾನಗಳ ಪ್ರಜಾ ಸಮ್ಮೇಳನದ ಶಕ್ತಿಯೇ ನಮ್ಮ ಶಕ್ತಿಯಾದ್ದರಿಂದ ಆ ಸಮ್ಮೇಳನವನ್ನು ಬಲಪಡಿಸಲು ನಾವು ಶ್ರಮಿಸಬೇಕಾಗಿದೆ ಅದೇ ರೀತಿ ನಮ್ಮ ದೌರ್ಬಲ್ಯ ಅಖಿಲ ಭಾರತದ ಹಿತಗಳಿಗೆ ಹಾನಿಕರವಾಗಬಹುದೆಂಬುದನ್ನು ನಾವು ಮರೆಯಬಾರದು. ಪ್ರತಿಗಾಮಿ ಮನೋಭಾವನೆ ಪ್ರತಿಭಟನೆಯಿಲ್ಲದೆ ನಮ್ಮ ಮಧ್ಯೆ ಅಧಿಕಾರ ನಡೆಸಲು ನಾವು ಅವಕಾಶ ಕೊಟ್ಟರೆ ಅದರ ಕೆಟ್ಟ ಪರಿಣಾಮ ಅಖಿಲ ಭಾರತಕ್ಕೂ ತಗುಲುವುದು. ಪ್ರತಿಗಾಮಿ ಭಾವನೆಗೆ ಪ್ರತಿಭಟನೆಯೇ ಪರಿಹಾರ ಮಾರ್ಗ ನಾವು ಈ ಮಾರ್ಗವನ್ನನುಸರಿಸಬೇಕಾಗಿದೆ. ಎಲ್ಲ ಸಂಸ್ಥೆಗಳೂ ಸಹಜವಾಗಿ ಯಾವ ಒತ್ತಾಯವೂ ಇಲ್ಲದೆ ಸರಿಯಾದ ಮಾರ್ಗಕ್ಕೆ ಬರಬಹುದೆಂಬ ನಿರೀಕ್ಷೆ ಸರಿಯಾದುದಲ್ಲ ವಸ್ತುಸ್ಥಿತಿ ಇದಕ್ಕೆ ಸಮರ್ಥನೆ ಕೊಡುವುದಿಲ್ಲ. ಈ ಕಾರಣದಿಂದ ನಮ್ಮ ಶಕ್ತಿ ಸಂಯಮಗಳಿಂದ ಮಾತ್ರವೇ ಪರಿಮಿತವಾದ ಹೋರಾಟವನ್ನು ಪ್ರಾರಂಭಿಸುವುದು ಈಗ ನಮಗೆ ಅನಿವಾರ್ಯವಾಗಿದೆ.

ಕಡೆಯದಾಗಿ ಮಾನ್ಯ ಅಧ್ಯಕ್ಷರಾದ ಶ್ರೀ ಕೆ. ಸಿ. ರೆಡ್ಡಿಯವರು ಶಾಖಾ ಸಮಿತಿಗಳಲ್ಲಿ ತಿಳಿಸಿದ, "ನಾವು ಕಾಂಗ್ರೆಸ್ ಮಹಾ ಸಭೆಯೊಡನೆ ಮುಂಬರಬೇಕು ಅಥವಾ ತೇಲಬೇಕು." ಎಂಬ ಅಭಿಪ್ರಾಯವನ್ನೇ ಸಮರ್ಥಿಸಿ ತಮ್ಮ ಭಾಷಣವನ್ನು ಪರಿಸಮಾಪ್ತಿ ಮಾಡಿದರು

ಧ್ವಜಾರೋಹಣ

ಬೆಂಗಳೂರು ೩

ಕಾಂಗ್ರೆಸ್ ಅಧಿವೇಶನದ ಅಂಗವಾಗಿ ನಿನ್ನೆ ಮಧ್ಯಾಹ್ನ ಸುಭಾಷ್ ನಗರದಲ್ಲಿ ಧ್ವಜಾರೋಹಣ ಸಮಾರಂಭವು ಜರುಗಿತು. ಶ್ರೀ ಎಸ್ ಸಿದ್ಧಲಿಂಗಪ್ಪನವರು ರಾಷ್ಟ್ರ ಧ್ವಜವನ್ನು ಶ್ರೀ ಕೆ ಚೆಂಗಲರಾಯ ರೆಡ್ಡಿಯವರು ಮೈಸೂರು ಧ್ವಜವನ್ನೂ ಏರಿಸಿದರು [illegible]

ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಟ

ವಿ.ಸು.ಪ್ರೋ] [ಬೆಂಗಳೂರು ೩

ಎ. ಎಂ. ಸಿ. ಸಿ. ಅಧಿವೇಶನದ ಅಂಗವಾಗಿ ಇಂದು ರಾಷ್ಟ್ರ ಧ್ವಜವನ್ನು ಶ್ರೀ॥ ಕೆ ಚೆಂಗಲರಾಯ ರೆಡ್ಡಿಯವರೂ, ಮೈಸೂರು ಧ್ವಜವನ್ನು ಶ್ರೀ॥ ಟಿ. ಸಿದ್ಧಲಿಂಗಯ್ಯನವರೂ ಹಾರಿಸಿದರು. ೧೧ ಗಂಟೆಗೆ ಬಹಿರಂಗಾಧಿವೇಶನ ಜರುಗಿತು ಸಾವಿರಾರು ಜನರು ನೆರೆದಿದ್ದರು. ಶ್ರೀ॥ ಟಿ ಸುಬ್ರಹ್ಮಣ್ಯಂರವರು ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಟ ಹೂಡುವ ನಿರ್ಣಯವನ್ನು ತಂದರು. ಶ್ರೀ॥ ಎಸ್ ಸಿದ್ಧಯ್ಯನವರು ಅನುಮೋದಿಸಿದರು ನಿರ್ಣಯದ ಮೇಲೆ ೧೯ ತಿದ್ದುಪಡಿಗಳು ಬಂದುವು ಕೆಲವು ಅನುಮೋದಿಸಲ್ಪಟ್ಟುವು. ಕೆಲವು ತಿರಸ್ಕೃತವಾದುವು. ನಿರ್ಣಯವು ಬಹುಮತದಿಂದ ಅಂಗೀಕೃತವಾದ ಕಾರ್ಯಕಾರಿ ಸಮಿತಿಯು ಸೂಕ್ತವಾಗಿ ಕಾರ್ಯಕ್ರಮ ಕೈಗೊಳ್ಳುವಂತೆ ಸರ್ವಾನುಮತದಿಂದ ತೀರ್ಮಾನವಾಯಿತು

ಶಾಸನ ಸಭೆಗೆ ರಾಜೀನಾಮೆ

ನೂತನ ಮೈಸೂರು ಕಾಂಗ್ರೆಸ್ ಅಧ್ಯಕ್ಷ ಶ್ರೀ॥ ಕೆ ಚೆಂಗಲರಾಯ ರೆಡ್ಡಿಯವರು ಶಾಸನ ಸಭೆಯ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡುತ್ತಿರುವರೆಂದು ತಿಳಿದುಬಂದಿದೆ

ಕಾಂಗ್ರೆಸ್ ಅಧಿವೇಶನ
ಶ್ರೀ ಥಿಯೇಟರಿನಲ್ಲಿ ಸಮಾರಂಭ

ಬೆಂಗಳೂರು ೩

ವಿಪರೀತವಾದ ಮಳೆಯ ದೆಸೆಯಿಂದ ಸುಭಾಷ್ ನಗರದಲ್ಲಿ ಕಾಂಗ್ರೆಸ್ ಅಧಿವೇಶನಕ್ಕಾಗಿ ಮಾಡಿದ ಮನೋಹರವಾದ ಏರ್ಪಾಡನ್ನು ಉಪಯೋಗಿಸಲು ಆಗದೆ ಕೆಂಪೇಗೌಡರ ರಸ್ತೆಯಲ್ಲಿರುವ ಶ್ರೀ ಥಿಯೇಟರಿನಲ್ಲಿ ಆರನೇ ಮೈಸೂರು ಕಾಂಗ್ರೆಸ್ಸಿನ ಬಹಿರಂಗ ಅಧಿವೇಶನವು ಆ ದಿನ ಸಂಜೆ ನಡೆಯಿತು. ಇದಕ್ಕೆ ಮುಂಚೆ ಶ್ರೀ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಹಳೆಯ ಅಖಿಲ ಮೈಸೂರು ಕಾಂ॥ ಸಮಿತಿಯ ಸಭೆ ನಡೆದು ಹಿಂದಿನ ನಾಲ್ಕು ವರ್ಷಗಳ ವರದಿ ಮತ್ತು ಆಯವ್ಯಯಗಳು ಅಂಗೀಕರಿಸಲ್ಪಟ್ಟವು ಅಧ್ಯಕ್ಷರು ಕಳೆದ ನಾಲ್ಕು ವರ್ಷಗಳ ರಾಜಕೀಯ ಇತಿಹಾಸವನ್ನು ವಿಮರ್ಶಿಸಿ ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ಎಲ್ಲರೂ ಟೊಂಕಕಟ್ಟಿ ನಿಲ್ಲಬೇಕೆಂದು ಹೇಳಿದರು.

ಅನಂತರ ಶ್ರೀ ಕೆ ಚೆಂಗಲರಾಯ ರೆಡ್ಡಿಯವರು ಅಗ್ರಾಸನವನ್ನು ವಹಿಸಿದರು. ಸ್ವಾಗತ ಗೀತೆಗಳೊಡನೆ ಸಮಾರಂಭವು ಉಪಕ್ರಮಿಸಿತು ಊರಿನ ಬಂಧುಗಳ ಪೈಕಿ ಬಹುಗಡೆಯಾಗಿ ಬಂದಿರುವವರನ್ನು ಸಭೆಗೆ ಪರಿಚಯ ಮಾಡಿಕೊಡಲಾಯಿತು. ಸ್ವಾಗತಾಧ್ಯಕ್ಷರಾದ ಶ್ರೀ ಕೆ. ಟಿ. ಭಾಷ್ಯಂರವರು ಎಲ್ಲರಿಗೂ ಸುಸ್ವಾಗತವನ್ನು ಕೋರಿ ಭಾಷಣ ಮಾಡಿದರು. ಅನಂತರ ಅಧ್ಯಕ್ಷರು ತಮ್ಮ ಭಾಷಣವನ್ನು ಓದಿದರು

ಮಹಾತ್ಮ ಗಾಂಧಿ, ಶ್ರೀ [illegible] ಸ [illegible] [illegible] ಸ್ಟರ್ ಲಕ್ಷ್ಮಿ [illegible] ಬಂದಿದ್ದ [illegible] ಸಂದೇಶಗಳನ್ನು ಓದಲಾಯಿತು.

ಆಹಾರದ ಕಟ್ಟುತ್ತಿಗೆ

[illegible]

ಮೈಸೂರು ಕಾಂಗ್ರೆಸ್ ಅಧಿವೇಶನ

(ಹಿಂದಿನ ಪುಟದಿಂದ ಮುಂದುವರಿದುದು)

[illegible]ಯನ್ನು ಕೊಳ್ಳಲು ಶಕ್ತರಾಗಿಲ್ಲ. ಕೊ[illegible]ವ ಶಕ್ತಿಯಿದ್ದರೂ ಬಟ್ಟೆ ದೊರಕುತ್ತಿಲ್ಲ. [illegible]ಕ್ಕೆ ಬೇಕಾದ ಬಟ್ಟೆಯನ್ನು ನಾವೇ ತ[illegible]ಯಾರಿಸಿಕೊಳ್ಳಲು ಪ್ರಯತ್ನ ನಡೆದಿಲ್ಲ. [illegible]ಪ್ರಾಂತರಗಳಲ್ಲಿ ವಸತಿ ಗೃಹಗಳ ಪರಿ[illegible] ಸರಿಯಾಗಿಲ್ಲ ಗ್ರಾಮವಾಸಿಗಳಿಗೆ [illegible] ಮನೆಗಳು ಬೇಕೋ ಎಂಬ ವಿಚಾರ[illegible]ದವರಿಗೆ ಗಮನವೇ ಕೊಡಲ್ಪಟ್ಟಿಲ್ಲ. [illegible]ದಲ್ಲಿ ಅಕ್ಷರಸ್ಥರ ಸಂಖ್ಯೆ ೧೦೦ಕ್ಕೆ ೧೩ [illegible] ಮಾತ್ರ. ಆದಾಗ್ಯೂ ಪ್ರಾಥಮಿಕ [illegible]ಭ್ಯಾಸವನ್ನು ಒತ್ತಾಯಪಡಿಸದೇ [illegible]ಯನ್ನು ಈಡೇರಿಸಿಲ್ಲ ಮೈ[illegible] ಪ್ರಜೆಯ ಸರಾಸರಿ ಸಂಪಾದನೆಯು [illegible] ತೀರಾ ಕಡಿಮೆಯಾಗಿದೆ. ಜ[illegible] ಕಾಲಸೋಲಗಳಲ್ಲಿ ಮುಳುಗಿದ್ದರೂ [illegible] ಸರಕಾರದ ಯಾವ ಸಮರ್ಪಕ [illegible]ಜನೆಯೂ ಇದುವರೆಗೆ ಆಚರಣೆಗೆ [illegible].

[illegible] ಆದಾಯ ಪಾಪಪೂರಿತ ಧನ[illegible]ಸ್ಥಾನದ ಆಬ್ಕಾರಿ ಇಲಾಖೆಯ ಆದಾ[illegible]ಮಿತಕ್ಕೆ ನಾಗಾಲೋಟದಿಂದ ಮೇ[illegible]ತ್ತಿದೆ. ಕ್ರಿಸ್ತ ಶಕ ಈ ಬಾಬಿನಿಂ[illegible]ಕಾರ ಒಂದು ಕೋಟಿ ಎಂಭತ್ತು ಲ[illegible] ರೂಪಾಯಿಗಳನ್ನು ಗಳಿಸುತ್ತಿದೆ. ಈ [illegible] ಬಡವರ ಮತ್ತು ದಲಿತರ ಹಿಂಸೆ[illegible]ಗಳಿಂದ ಬಂದ ಪಾಪಪೂರಿತ ಧನ[illegible] ಸುಪ್ರಸಿದ್ಧ ರಾಜಕಾರಣಿಗಳೊಬ್ಬರು [illegible] ಪಾನನಿರೋಧವನ್ನು ಆಚ[illegible]ಸಬೇಕೆಂದು ಜನ ಎಷ್ಟು ಕಾಲದಿಂದ [illegible]ದ ಮೇಲೆ ಕೇಳಿಕೊಳ್ಳುತ್ತಿದ್ದರೂ [illegible] ಸಭೆಗಳಲ್ಲಿ ಈ ಬಗೆಗೆ ನಿರ್ಣಯಗ[illegible] "[illegible]ಕರಿಸಲ್ಪಟ್ಟಿದ್ದರೂ 'ತೊಂದರೆ' [illegible]' ಎಂಬ ಕಾರಣಗಳನ್ನು ಮುಂ[illegible] ಸರ್ಕಾರ ಈ ಬೇಡಿಕೆಗಳನ್ನು ನಿರಾ[illegible] ಪಾಶ್ಚಾತ್ಯ ದೇಶಗಳ ಮಾತಿರ[illegible] ನೆರೆಯ ಬ್ರಿಟಿಷ್ ಪ್ರಾಂತ್ಯಗಳಲ್ಲಿ [illegible] ನಮ್ಮ ಕಾರ್ಮಿಕ ಶಾಸನದ ಸುಧಾ[illegible] ಕೂಡ ಮೈಸೂರಿನಲ್ಲಿ ನಡೆದಿರು[illegible] ಲಂಚ ಮತ್ತು ಪಕ್ಷಪಾತವಂ[illegible]ತಿಳಿತ ವರ್ಗದವರಲ್ಲಿ ಹರಡಿಯೋ[illegible]

ಬೇಡಿಕೆಗಳಿಗೆ ದೊರೆತ ಪ್ರತಿಫಲ ನಿರಾಶಾಜನಕವಾಗಿಯೂ ಅತೃಪ್ತಿಕರವಾಗಿ ಇದೆ

ಈ ಬೇಡಿಕೆಗೆ ಪ್ರಭು ಮನ್ನಣೆ ಇಲ್ಲ

[illegible]ರಿನ ಪ್ರಜೆಗಳು ಹಿಂದೆ ಅನೇಕ [illegible]ದ ಸಭ್ಯತೆಗಳಿಂದ ತಮ್ಮ ಬೇಡಿ[illegible]ಬುದನ್ನು ತಿಳಿಸಿದ್ದಾರೆ ಆದರೆ [illegible] ಇದುವರೆಗೂ ಏನೂ ಫಲವಾಗಿ[illegible]ಶಾಸನ ಸಭೆಗಳ ಎಲ್ಲ ಚುನಾಯಿ[illegible]ಬಹುಮತ ಸದಸ್ಯರು ಸಹಿ ಮಾಡಿ[illegible]ದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪ[illegible]ಬೇಕೆಂದು ಕೇಳಿಕೊಳ್ಳುವ ಬಿನ್ನ[illegible]ಗಳು ಶ್ರೀಮನ್ಮಹಾರಾಜರವರಿಗೆ [illegible]ಪ್ಪಿವೆ ಅವು ಸೇರಿದ್ದಕ್ಕೆ ಕೂಡ [illegible]ಇಲ್ಲದಿರುವುದು ಅಪಮಾನಕರ. [illegible]ಗಳ ಗಮನಕ್ಕೆ ತರಲ್ಪಟ್ಟವೆಯೆ [illegible] ಕೂಡ ಸಂದಿಗ್ಧವಾಗಿವೆ ಈಗಿ[illegible]ಗ ಘಟನೆಯಂತೆ ಅಧಿಕಾರ ನ[illegible]ದ ಸರ್ಕಾರದಲ್ಲಿ ತಮಗೆ ಸ್ವಲ್ಪ[illegible]ಸವಿಲ್ಲವೆಂಬುದನ್ನು ಶಾಸನ ಸಭೆ[illegible] ರೀತಿಯಲ್ಲಿ ಸಂದೇಹಕ್ಕೆಡೆಯಿ[illegible] ಸ್ಪಷ್ಟಗೊಳಿಸಿವೆ. ಕಳೆದ ಜೂ[illegible]

ಮೈಸೂರು ಕಾಂಗ್ರೆಸ್

ಆರನೇ ಮಹಾಧಿವೇಶನ

(ನಮ್ಮ ವಿಶೇಷ ಪ್ರತಿನಿಧಿಯಿಂದ) [ಬೆಂಗಳೂರು ೩

ಪ್ರಜಾ ಬೇಡಿಕೆಗೆ ಪ್ರಭು ಮನ್ನಣೆಯಿಲ್ಲ, ಅಬ್ಕಾರಿ ಆದಾಯ ಪಾಪ ಪೂರಿತ ಧನ, ಪ್ರತಿಗಾಮೀ ಭಾವನೆಗೆ ಪ್ರತಿಭಟನೆಯೇ ಪರಿಹಾರ ಮಾರ್ಗ

"ಪ್ರತಿಗಾಮಿ ಭಾವನೆಗೆ ಪ್ರತಿಭಟನೆಯೇ ಪರಿಹಾರ ಮಾರ್ಗ, ಎಲ್ಲ ಸಂಸ್ಥೆಗಳೂ ಸಹಜವಾಗಿ ಯಾವ ಒತ್ತಾಯವೂ ಇಲ್ಲದೆ ಸರಿಯಾದ ಮಾರ್ಗಕ್ಕೆ ಒಪ್ಪಬಹುದೆಂಬ ನಿರೀಕ್ಷೆ ಸರಿಯಾದುದಲ್ಲವಾದ್ದರಿಂದ ನಮ್ಮ ಶಕ್ತಿ ಸಂಘಟನೆಗಳಿಂದ ಮಾತ್ರವೇ ಪರಿಮಿತ ಹೋರಾಟವನ್ನು ಪ್ರಾರಂಭಿಸುವುದು ಈಗ ನಮಗೆ ಅನಿವಾರ್ಯವಾಗಿದೆ" ಎಂಬುದಾಗಿ ಶ್ರೀ|| ಕ್ಯಾಸಂಬಳ್ಳಿ ಚೆಂಗಲರಾಯರೆಡ್ಡಿಯವರು ನಿನ್ನೆಯ ದಿನ ಸಂಜೆ ಬೆಂಗಳೂರು ಸುಭಾಷ್ ನಗರದಲ್ಲಿ ನಡೆದ ಮೈಸೂರು ಕಾಂಗ್ರೆಸ್ ಆರನೇ ಅಧಿವೇಶನ ಸಮಾರಂಭದಲ್ಲಿ ತಮ್ಮ ಅಧ್ಯಕ್ಷ ಭಾಷಣದಿಂದ ತಿಳಿಸಿದರು

ಶ್ರೀ|| ಅಧ್ಯಕ್ಷ ರೆಡ್ಡಿಯವರು, ಈ ಮಹಾಧಿವೇಶನದಲ್ಲಿ ಸದಸ್ಯರುಗಳ ಹಾಗೂ ದೇಶಪ್ರೇಮಿಗಳ ಸಹಕಾರ, ಬಾಬು ಸುಭಾಷರವರ ಹಿರಿಮೆ, ಇಹಲೋಕದಿಂದ ಮುಕ್ತರಾದ ಕಾಂಗ್ರೆಸ್ಸಿಗರಿಗಾಗಿ ಸಂತಾಪಗಳನ್ನು ಪ್ರೊಟ್ಟಮೊದಲು ಸೂಚಿಸಿದರು.

ಪ್ರಭುಗಳಿಗೆ ಅಭಿನಂದನಾರ್ಪಣೆ

ರಾಜಮಾತಾ ಶ್ರೀ ಗಾಯತ್ರಿ ದೇವಿಯವರ ಜನನದ ಸಂತೋಷ ವಿಚಾರವನ್ನೆತ್ತಿ ಈ ಶುಭಾವಸರದಲ್ಲಿ ಪ್ರಭುವರ್ಯರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನರ್ಪಿಸಿದರು

ರಾಜ ಬಂದಿಗಳ ಬಿಡುಗಡೆ ಮತ್ತು ಕಾರ್ಮಿಕರ ಪ್ರಶ್ನೆ

ಈಸೂರ, ಶ್ರವಣಬೆಳಗೊಳ ಮತ್ತಿತರ ಘಟನೆಗಳ ೧೧ ರಾಜಬಂದಿಗಳನ್ನು ಈ ಸಂದರ್ಭದಲ್ಲಿ ಬಿಡುಗಡೆ ಮಾಡಿರುವುದು ಸಮಾಧಾನಕರವಾದರೂ ಈ ಘಟನೆಗಳಿಗೆ ಸಂಬಂಧಿಸಿದ ಇನ್ನೂ ೯ ಜನ ಬಂದಿಗಳಾಗಿರುವ ರಂಬುದು ವ್ಯಸನವನ್ನುಂಟು ಮಾಡುವ ವಿಚಾರ ... ಗಳೊಳಗಿನಲ್ಲಿ ಪ್ರಾರಂಭವಾದ ಸ್ವಾತಂತ್ರ್ಯ ಚಳುವಳಿಯನ್ನು ತುಳಿಯುವುದರಲ್ಲಿ ಬ್ರಿಟಿಷ್ ಪ್ರಭುತ್ವದೊಡನೆ ಪೈಪೋಟಿಯಿಂದ ಸಹಕರಿಸಿದ ಮೈಸೂರು ಸರ್ಕಾರ, ಬ್ರಿಟಿಷ್ ಪ್ರಾಂತಗಳಲ್ಲಿ ಕೇವಲರು ಅಷ್ಟು ಬಂದಿಗಳ ಬಿಡುಗಡೆಯಾಗಿ ಅನೇಕ ದಿನಗಳಾದರೂ, ಮೈಸೂರಿನ ರಾಜಬಂದಿಗಳನ್ನು ಬಿಡುಗಡೆ ಮಾಡದಿರುವುದು ಅನೇಕರಿಗೆ ಅರ್ಥವಾಗುವಂತಿಲ್ಲ ಈ ಉಳಿದ ಬಂದಿಗಳನ್ನೂ ಬಿಡುಗಡೆ ಮಾಡಬೇಕೆಂದು ನಾನು ಪ್ರಭುತ್ವವನ್ನು ಒತ್ತಾಯಪಡಿಸುತ್ತೇನೆ. ... ಗಳೊಳಗಿನಲ್ಲಿ ನೂರಾರು ಮಂದಿ ಕಾರ್ಮಿಕರು ವನ್ನು ಇತರರ ಮೇಲೆ ಜಾರಿ ಮಾಡಿದ ಪ್ರತಿಬಂಧಕಾಜ್ಞೆಗಳು ಇನ್ನೂ ಉಳಿದಿರುವುದರಿಂದ ಅನೇಕರು ಕಷ್ಟಕ್ಕೀಡಾಗಿದ್ದಾರೆ ಈ ಪ್ರತಿಬಂಧಕಾಜ್ಞೆಗಳನ್ನು ಇನ್ನಾದರೂ ಪ್ರಭುತ್ವ ಹಿಂದಕ್ಕೆ ತೆಗೆದುಕೊಳ್ಳುವುದು ಒಳ್ಳೆಯದು. ಕಾಲಾತೀತವಾಗಿ ಕೈಗೊಳ್ಳುವ ಕಾರ್ಯಗಳಿಗೆ ಗೌರವವಿಲ್ಲ; ಸೌಹಾರ್ದವೂ ಅವರಿಂದ ಬೆಳೆಯುವುದಿಲ್ಲ

ಸಂಧಾನ ಸಮಿತಿ

ಮೊದಲನೆಯದಾಗಿ ಸಂಧಾನ ಸಮಿತಿ ಶಿಫಾರಸಾದ ರೀತಿಯಲ್ಲಿ ಪುನರ್ಘಟಿತವಾಗಬೇಕು ಸಂಸ್ಥಾನಗಳು ಸಂಯುಕ್ತ ಘಟನೆಗೆ ಸೇರಬೇಕು ಘಟನಾ ಸಭೆಯಲ್ಲಿ ಸಂಸ್ಥಾನ ಚುನಾಯಿತ ಪ್ರಜಾಪ್ರತಿನಿಧಿಗಳು ಭಾಗವಹಿಸಬೇಕು ಘಟನಾ ಸಭೆಯ ಸಂಸ್ಥಾನ ಪ್ರತಿನಿಧಿಗಳನ್ನು ಸಾಧ್ಯವಿದ್ದಷ್ಟು ಬೇಗ ಚುನಾಯಿಸಿ ಕಳುಹಿಸುವುದು ಅನಿವಾರ್ಯವಾಗಿದೆ. ಚುನಾವಣೆಗೆ ಸಂಬಂಧಿಸಿದ ಪ್ರಾರಂಭಿಕ ಕಾರ್ಯಗಳನ್ನು ಬೇಗ ನಡೆಸುವುದು ಈಗ ಅಗತ್ಯ

ಜವಾಬ್ದಾರಿ ಸರ್ಕಾರದ ಪ್ರಾಮುಖ್ಯತೆ

ಸಾರ್ವಭೌಮಾಧಿಕಾರ ಮತ್ತು ಸಂಸ್ಥಾನಗಳು ಮಾಡಿಕೊಂಡಿರುವ ಕೌಲುಕರಾರುಗಳು ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಅಡ್ಡಿಬರುವುವೆಂದು ಹಿಂದೆ ಹೇಳುತ್ತಿದ್ದರು. ಸಾರ್ವಭೌಮ ಸರ್ಕಾರ ಈಗ ತನ್ನ ವಿನಾಶವನ್ನು ತಾನೇ ನಿರ್ಧರಿಸಿಕೊಂಡಿರುವುದರಿಂದ ಹಿಂದಿನ ಕೌಲುಕರಾರುಗಳು ನಾಶವಾಗುವುದರಿಂದ ಮೇಲಿನ ವಾದ ಮುಂದೆ ಸಾಧ್ಯವಲ್ಲ ಸಂಸ್ಥಾನಗಳಲ್ಲಿ ಉತ್ಕೃಷ್ಟಾದರ್ಶಗಳಿಂದ ಕೂಡಿದ ಆಡಳಿತ ಪದ್ಧತಿ ಆಚರಣೆಗೆ ಬರಬೇಕೆಂದು ಸಾರ್ವಭೌಮ ಸರ್ಕಾರ ಸೂಚಿಸಿದೆ ಅಲ್ಲದೆ ಸಾರ್ವಭೌಮಾಧಿಕಾರ ಮಾಯವಾಗುವುದರಿಂದ ಜವಾಬ್ದಾರಿ ಸರ್ಕಾರದ ಪ್ರಶ್ನೆ ಎಂದಿಗಿಂತ ಈಗ ಹೆಚ್ಚು ಪ್ರಾಮುಖ್ಯತೆ ಪಡೆದಿರುತ್ತದೆ

ನರೇಂದ್ರರ ಅಧಿಕಾರ, ವಿಶೇಷ ಹಕ್ಕುಗಳು ಮತ್ತು ವಿಶಿಷ್ಟಾಧಿಕಾರಗಳು ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಅಡ್ಡಿಯಾಗುವುವೆಂಬುದು ಮತ್ತೊಂದು ವಾದ ಆದರೆ ನರೇಂದ್ರರು ಮತ್ತು ಜವಾಬ್ದಾರಿ ಸರ್ಕಾರ—ಒಂದೇ ಕಡೆ ಇರುವುದು ಏಕೆ ಸಾಧ್ಯವಲ್ಲ? ಆಯಾ ಸಂಸ್ಥಾನಗಳ ನರೇಂದ್ರರ ಛತ್ರಛಾಯೆಯಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗಬೇಕೆಂಬುದು ಸಂಸ್ಥಾನ ಪ್ರಜೆಗಳ ಬೇಡಿಕೆ ನರೇಂದ್ರರು ಶಾಸನಬದ್ಧವಾದ ಸಾಂಕೇತಿಕ ರಾಜರಾಗಬೇಕು, ಅಷ್ಟೆ. ಇಂಗ್ಲೆಂಡಿನ ಅರಸರಂತೆ ನಮ್ಮ ನರೇಂದ್ರರೂ ಸಾಂಕೇತಿಕ ಪ್ರಭುಗಳಾಗಿ ಉನ್ನತಿ ಪಡೆಯಬಾರದೇಕೆ? ಇದರಿಂದ ನರೇಂದ್ರರು ಟೀಕಾತೀತರಾಗುವುದಲ್ಲದೆ "ಅರಸು ತಪ್ಪು ಮಾಡುವುದು ಸಾಧ್ಯವಲ್ಲ" ಎಂದು ಹೇಳುವ ಪರಿಸ್ಥಿತಿಯುಂಟಾಗುವುದು; ಸಿಂಹಾಸನದ ಗೌರವಕ್ಕೆ ಯಾವ ಕುಂದಕವೂ ಬಾರದೆ ರಕ್ಷಣೆ ದೊರೆತು ನರೇಂದ್ರರಲ್ಲಿ ಪ್ರಜೆಗಳ ರಾಜಭಕ್ತಿ ವಿಶ್ವಾಸಗಳು ದೃಢವಾಗುವುವು.

ಸಂಸ್ಥಾನಗಳಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆ ತಡವಾದಂತೆಲ್ಲ ಸ್ವೇಚ್ಛಾ ಪ್ರಜಾಪ್ರಭುತ್ವ ರೀತಿಯಂಗಗಳನ್ನಪೇಕ್ಷಿಸುವ ರಾಜಕೀಯ ಸಂಘಗಳು ಬಲಗೊಳ್ಳುವುವು ಈಗಿನ ಮಿತವಾದ ಮತ್ತು ದುಸ್ಸಾಧ್ಯವಲ್ಲದ ರಾಜಕೀಯ ಬೇಡಿಕೆಗಳನ್ನು ನೆರವೇರಿಸುವುದು ಯುಕ್ತವೂ ವಿವೇಕಪೂರ್ಣವೂ ಆದ ಮಾರ್ಗ

ಸಂಸ್ಥಾನಗಳಲ್ಲಿ ನರೇಂದ್ರರ ಮತ್ತು ಪ್ರಜೆಗಳ ಹಿತಗಳು ಒಂದೇ ಆದ್ದರಿಂದ ನರೇಂದ್ರರು ಪ್ರಜೆಗಳಿಗೆ ಅಹಿತವಾದ ಕಾರ್ಯಗಳನ್ನು ಮಾಡುವುದಿಲ್ಲವೆಂದು ನಂಬಬಹುದಾಗಿ ಕೆಲವರು ಹೇಳುತ್ತಾರೆ. ಇದೇ ವಾದದಂತೆ ಪ್ರಜೆಗಳು ರಾಜರಿಗೆ ಅಹಿತವಾದುದನ್ನು ಮಾಡುವುದಿಲ್ಲವೆಂದೂ ನಂಬಬಹುದಾದ್ದರಿಂದ ನರೇಂದ್ರರು ಪ್ರಜೆಗಳಿಗೆ ಅಧಿಕಾರ ವಹಿಸಿಕೊಡುವುದರ ಸಮರ್ಥನೆಗೂ ವಾದ ಉಪಯುಕ್ತವಾದುದು.

ಆಡಳಿತದೊಂದಿಗೆ ಪ್ರಜಾ ಸಮಾವೇ[ಶ]

ಸಂಸ್ಥಾನದ ಪ್ರಜೆಗಳು ಜವಾಬ್ದಾರಿ ಸರ್ಕಾರಕ್ಕೆ ಬೇಕಾದ "ಅರ್ಹತೆ" ಪಡೆದಿಲ್ಲದು ಕೆಲವರ ವಾದ ಇದು ಸಂಪೂರ್ಣವಾಗಿ ನಿರಾಧಾರವಾದುದು. ಬ್ರಿಟಿಷ್ ಪ್ರಾಂತಗಳಂತೆ ಸಂಸ್ಥಾನ ಪ್ರಜೆಗಳಲ್ಲಿಯೂ ಸಾಕಾದಷ್ಟು ರಾಜಕೀಯ ಜಾಗ್ರತಿ ಇರುತ್ತದೆ ಆಡಳಿತದ ಜವಾಬ್ದಾರಿಯರಿಯಲು ಪ್ರಜೆಗಳಿಗೆ ಆಡಳಿತದಲ್ಲಿ ಭಾಗ ಹಿಸುವುದು ಒಂದೇ ದಾರಿ. ಇದಲ್ಲದೆ ಬೇರೆ ಮಾರ್ಗವಿರುವುದಿಲ್ಲ.

ಮೈಸೂರಿನ ಪ್ರಗತಿಸಾಧನೆ

ಮೈಸೂರು ಕೆಲವು ವಿಷಯಗಳಲ್ಲಿ ಪ್ರಗತಿ ಸಾಧಿಸಿದೆಯೆಂಬುದು ನಿಜ... ಹಿಂದಿನಿಂದ ಈಗಿನ ವರೆವಿಗೂ ನೇರವಾಗಿ ಬ್ರಿಟಿಷರು ಸಂಸ್ಥಾನದಲ್ಲಿ ಆಡಳಿತ ನಡೆಸಿದ ಪ್ರಭಾವ ನಮ್ಮ ಮೇಲೆ ಬಿದ್ದಿದೆ. ಆ ಅವಧಿಯಲ್ಲಿ ಆಧುನಿಕ ಆಡಳಿತ ಪದ್ಧತಿಗಳು ಬಳಕೆಗೆ ಬಂದವು ಆ ತರುವಾಯ ಅಧಿಕಾರ ವಹಿಸಿಕೊಂಡ ಸರ್ಕಾರ, ಸಂಸ್ಥಾನವಿದ್ಯುತ್ ನಿರ್ಮಾಣಾನುಕೂಲಗಳನ್ನುಪಯೋಗಿಸಿಕೊಂಡು ಕೈಗಾರಿಕೆಗಳನ್ನು ಬೆಳೆಸಿತು. ಆದರೆ ಜನಸಾಮಾನ್ಯರ, ... ನದಳಿತರ ಹಿತರಕ್ಷಣೆಗೆ ಸಂಬಂಧಿಸಿದ ವಿಷಯದಲ್ಲಿ ಮೈಸೂರು ಸಾಧಿಸಿರುವುದೇನು? ಪುಷ್ಟಿಕರವಾದ ಆಹಾರದ ಅಭಾವದಿಂದ ನಮ್ಮ ದೇಹಶಕ್ತಿ ಕಡಿಮೆಯಾಗಿದೆ ... ಮಾಂತರಗಳಲ್ಲಿ ಜನರು ಸಾಕಾದಷ್ಟು

(ಹಿಂದಿನ ಪುಟದಲ್ಲಿ ಮುಂದುವರಿದಿದೆ)

Edited, printed and published by A. R. Nagarajan at the Sadhvi Press D Subbiah Road, Mysore.

CAR FOR SALE

1931 Model. Morris Saloon in good condition with New Battery and Brand New Tyres. Rs. 3000/- or nearest offer. Apply in person or write to the undersigned immediately

R. G. KATWEY,
Municipal Engineer,
Mysore City Municipality

ರಾಜಕಮಲ್, ಮೈಸೂರು, 31-10-46 ರಿಂದ

* ನೂರ್ ಜಹಾನ್,
* ಶಿಕಾರಿ
* ...

ನಟಿಸಿದ

ವಿಲೇಜ್ ಗರ್ಲ್



Morning Show at 10-30 a.m. From 1-11-46 for 4 days

'The War of the wild Cats'

|| ವಂದೇಮಾತರಂ ||

ಅಗ್ರಹಾರ ಮೊದಲಾದ ಓಟರು ಮಹಾಶಯರುಗಳಲ್ಲಿ ವಿನಂತಿ

14-11-46 ನೇ ಗುರುವಾರ ನಡೆಯಲಿರುವ ಪೌರಸಭಾ ಚುನಾವಣೆಗಳಲ್ಲಿ ಈ ಕೆಳಕಂಡ ಕಾಂಗ್ರೆಸ್ ಅಭ್ಯರ್ಥಿ ವಾರ್ಡಿಗೆ ಓಟು ಕೊಡಬೇಕಾಗಿ ಪ್ರಾರ್ಥನೆ

ಶ್ರೀ|| ಗಳಾದ

ಇ. ಪಿ. ನಂಜಪ್ಪ

ವಿ. ಎಸ್. ದಾಸಪ್ಪ

ಟಿ. ಚಂದ್ರಶೇಖರ ಗೌಡ

ಬಿ. ಎಸ್. ರಾಜಶೇಖರಯ್ಯ ಮತ್ತು

ಪಿ. ಗೋಪಾಲಕೃಷ್ಣ ಶೆಟ್ಟಿ

ನಗರ ಚುನಾವಣಾ ಉಪಸಮಿ[ತಿ]

ರಿ. ನಂ. 392 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೧] ಸೋಮವಾರ ೪—೧೧—೪೬ [ಸಂಚಿಕೆ ೧೪

ಚಿನ್ನದ ಗಣಿಯಲ್ಲಿ ೨ ಪಕ್ಷಗಳಿಗೆ ಘರ್ಷಣೆ

ಸಂಸ್ಥಾನಗಳು ಭಾರತ ಸಂಯುಕ್ತ ವ್ಯವಸ್ಥೆಯನ್ನು ಒಪ್ಪಿಕೊಳ್ಳಲೇ ಬೇಕೆಂದೂ ರಾಜ್ಯಾಂಗದ ರಚನಾ ಸಭೆಯಲ್ಲಿ ಭಾಗವಹಿಸಬೇಕೆಂಬ ಒತ್ತಾಯವಿರಬೇಕೆಂದೂ ಮೈಸೂರು ಕಾಂಗ್ರೆಸ್ ಅಭಿಪ್ರಾಯಪಡುತ್ತದೆ. ಅಲ್ಲದೆ ಪ್ರಜಾ ಸತ್ತಾತ್ಮಕ ವ್ಯಕ್ತಿಯಿಂದ ಸಲಹಾ ಸಮಿತಿಯನ್ನು ಪುನರ್ರಚಿಸಬೇಕೆಂದೂ ರಾಜ್ಯಾಂಗ ರಚನಾ ಸಭೆಗೆ ಸಂಸ್ಥಾನಗಳ ಪ್ರತಿನಿಧಿಗಳಾಗಲೀ, ಶಾಸನ ಸಭೆಗಳಿರುವ ಕಡೆ ಅಂಥ ಸಭೆಗಳ ಚುನಾಯಿತ ಸದಸ್ಯರಿಂದಾಗಲೀ ಚುನಾವಣೆಯಾಗಬೇಕೆಂದೂ ಈ ಅಧಿವೇಶನ ಒತ್ತಾಯಪಡಿಸುತ್ತದೆ.

ಮೇಲೆ ಸೂಚಿಸಿರುವ ಕೋರಿಕೆಗಳಿಗೆ ಯಾವ ಬೆಂಬಲವನ್ನೂ ಕೊಡಲಾಗುವುದೆಂದು ಈ ಅಧಿವೇಶನ ಘೋಷಿಸುತ್ತದೆ.

೪ ಕಲ್ಕತ್ತಾ, ಬೊಂಬಾಯಿ, ಢಾಕ, ಪೂರ್ವ ಬಂಗಾಳ ಇತ್ಯಾದಿ ಸ್ಥಳಗಳಲ್ಲಿ ನಡೆಯುತ್ತಿರುವ ಘೋರ ಸಾವು ನೋವು ಕೊಲೆ, ಬಲಾತ್ಕಾರ ವಿವಾಹ ಮತ್ತು ಬಲವಂತ ಮತಾಂತರ ಮೊದಲಾದ ಇವುಗಳ ಸಮಾಚಾರದಿಂದ ಈ ಅಧಿವೇಶನ ತಲ್ಲಣಗೊಂಡು ವ್ಯಸನಾಕ್ರಾಂತವಾಗಿದೆ. ಸಮಾಜ ಘಾತಕರ ಈ ಕಾರ್ಯಗಳನ್ನು ಎದುರಿಸಿ ಮಾನವ ಹಕ್ಕುಗಳನ್ನೂ ಗೌರವವನ್ನೂ ರಕ್ಷಿಸಲು ಶಕ್ತಿ ಸಿದ್ಧತೆಯನ್ನು ಮಾಡಿಕೊಂಡು ಕಷ್ಟಕ್ಕೂ ತ್ಯಾಗಕ್ಕೂ ಸಿದ್ಧರಾಗಿರಬೇಕೆಂದೂ ಈ ಅಧಿವೇಶನ ಹಾರೈಸುತ್ತದೆ.

೫ ಸ್ವಾತಂತ್ರ್ಯ ಸಾಧನೆಯ ಹೋರಾಟದಲ್ಲಿ ಆಯಾ ಸರ್ಕಾರದ ಕ್ರೂರ ದಬ್ಬಾಳಿಕೆಯಿಂದ ವಿವಿಧ ಕಷ್ಟನಷ್ಟಗಳಿಗೆ ಗುರಿಯಾಗಿರುವ ಬೇರೆ ಬೇರೆ ಸಂಸ್ಥಾನಗಳ ಪ್ರಜಾ ವರ್ಗವನ್ನು ಈ ಅಧಿವೇಶನ ಅಭಿನಂದಿಸುತ್ತದೆ. ಹಾಗೂ ಕಾಶ್ಮೀರದ ಷೇಕ್ ಅಬ್ದುಲ್ಲ ಮತ್ತು ಅವರ ಸಹೋದ್ಯೋಗಿಗಳಿಗೆ ಈ ಅಧಿವೇಶನ ತನ್ನ ಸಹಾನುಭೂತಿಯನ್ನು ತೋರಿಸುತ್ತದೆ.

೬ ಈಸೂರು ಮತ್ತು ಶ್ರವಣಬೆಳಗೊಳ ಮೊಕದ್ದಮೆಗಳಿಗೆ ಸೇರಿದ್ದ ಕೈದಿಗಳ ಪೈಕಿ ಇನ್ನೂ ೮ ಮಂದಿ ಸೆರೆಮನೆಯಲ್ಲಿ ಕೊಳೆಯುತ್ತಿರುವುದು ಈ ಅಧಿವೇಶನಕ್ಕೆ ಕಳವಳವನ್ನುಂಟುಮಾಡಿದೆ. ಈಗಲೂ ಈ ಕೂಡಲೇ ಇವರುಗಳನ್ನು ಬಿಡುಗಡೆಮಾಡಬೇಕೆಂದು ಸರ್ಕಾರವನ್ನು ಈ ಅಧಿವೇಶನ ಒತ್ತಾಯಪಡಿಸುತ್ತದೆ.

ಅಲ್ಲದೆ, ಇನ್ನೂ ಜೈಲಿನಲ್ಲಿರುವ ಕೈದಿಗಳನ್ನು ಬಿಡುಗಡೆ ಮಾಡಬೇಕೆಂದೂ ವಿವಿಧ ಗಡೀಪಾರು ಮತ್ತು ಪ್ರತಿಬಂಧಕಾಜ್ಞೆಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದೂ ಈ ಅಧಿವೇಶನ ಸರ್ಕಾರವನ್ನು ಒತ್ತಾಯಪಡಿಸುತ್ತದೆ.

೭ ಕೇಂದ್ರದಲ್ಲಿ ಸ್ಥಾಪಿತವಾಗಿರುವ ತಾತ್ಕಾಲಿಕ ರಾಷ್ಟ್ರೀಯ ಭಾರತ ಸರ್ಕಾರಕ್ಕೆ ತನ್ನ ಅಭಿನಂದನೆಗಳನ್ನು ಸೂಚಿಸಿ ಅದು ಧೈರ್ಯೋತ್ಸಾಹದಿಂದ ಕೈಗೊಂಡು ನಡೆಸುತ್ತಿರುವ ಕಾರ್ಯಗಳ ಬಗ್ಗೆ ಈ ಅಧಿವೇಶನ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತದೆ. ತಾತ್ಕಾಲಿಕ ಸರ್ಕಾರದಲ್ಲಿ ಭಾಗ ವಹಿಸಲು ಮುಸ್ಲಿಂ ಲೀಗು ನಿರ್ಧರಿಸಿರುವುದು ಈ ಅಧಿವೇಶನಕ್ಕೆ ಸಮಾಧಾನವನ್ನುಂಟುಮಾಡಿದೆ.

೮ ಕೊಚ್ಚಿ, ಸಾಂಗ್ಲಿ ಮೊದಲಾದ ಕೆಲವು ಸಂಸ್ಥಾನಾಧೀಶರು ತಮ್ಮ ಸ್ವಂತ ಸಂಸ್ಥಾನಗಳಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪಿಸಲು ಕಾರ್ಯಕ್ರಮ ಕೈಗೊಂಡಿರುವುದಕ್ಕಾಗಿ ಈ ಅಧಿವೇಶನ ತನ್ನ ಅಭಿನಂದನೆ ಸೂಚಿಸಿ ಈ ಸ್ತುತ್ಯ ಕಾರ್ಯವನ್ನು ಇತರ ಸಂಸ್ಥಾನಾಧೀಶರೂ ತಡ ಮಾಡದೆ ಅನುಸರಿಸಬೇಕೆಂದು ಒತ್ತಾಯಪಡಿಸುತ್ತದೆ.

೯ ವಿವಿಧ ಆಡಳಿತಕ್ಕೆ ಒಳಪಟ್ಟು ಹರಿದು ಹಂಚಿರುವ ಕರ್ನಾಟಕ ಪ್ರದೇಶಗಳೆಲ್ಲಾ ಒಟ್ಟುಗೂಡಿ ಕರ್ನಾಟಕ ಪ್ರಾಂತ್ಯ ನಿರ್ಮಾಣವಾಗಬೇಕಾದ್ದು ಅವಶ್ಯಕವೆಂದು ಈ ಅಧಿವೇಶನ ಭಾವಿಸುತ್ತದೆ. ಮೈಸೂರು ಸಂಸ್ಥಾನದಲ್ಲಿ ಪ್ರಜಾ ಪ್ರಭುತ್ವಕ್ಕೆ ವಿರುದ್ಧವಾದ ಆಡಳಿತ ಇರುವುದು ಕರ್ನಾಟಕ ಪ್ರಾಂತ್ಯ ರಚನೆಗೆ ಅಡ್ಡಿಯಾಗಿದೆಯೆಂಬ ಅಂಶ ಈ ಅಧಿವೇಶನಕ್ಕೆ ಗೊತ್ತಿದೆ. ದಕ್ಷಿಣದಲ್ಲಿ ಸಣ್ಣಪುಟ್ಟ ಸಂಸ್ಥಾನಾಧೀಶರು ತಮ್ಮ ಪ್ರಜೆಗಳ ಅಭಿಮತವನ್ನು ಪಡೆಯದೆ, ದಕ್ಷಿಣ ಸಂಸ್ಥಾನಗಳ ಒಕ್ಕೂಟವನ್ನು ಸ್ಥಾಪಿಸಲು ಮಾಡುತ್ತಿರುವ ಅವಸರದ ಪ್ರಯತ್ನದಿಂದ ಅಖಿಲ ಕರ್ನಾಟಕ ಪ್ರಾಂತ ರಚನೆಗೆ ಅಡಚಣೆಯಾಗುವುದಲ್ಲದೆ ಈ ಸಣ್ಣಪುಟ್ಟ ಸಂಸ್ಥಾನಗಳಲ್ಲಿ ನಿರಂಕುಶಾಧಿಕಾರ ಮುಂದುವರಿಯುವಂತಾಗುತ್ತದೆ. ಭಾಷಾವಾರು ಪ್ರಾಂತ ರಚನೆಯ ಹಿತದೃಷ್ಟಿಯಿಂದ ಈ ಸಣ್ಣ ಸಂಸ್ಥಾನಗಳು ತಮ್ಮ ನೆರೆ

ರಾಜಕಮಲ್
ಮೈಸೂರು
ತಾ|| ೨೧-೧೦-೪೬ ರಿಂದ
* ನೂರ್ ಜಹಾನ್, * ಗೀತಾನಿಜಾಮಿ,
* ರಾಮಕಲ್ ನಟಿಸುವ
ವಿಲೇಜ್ ಗರ್ಲ್
(ಸ್ವಗಿಷ ಹಡ)
ಪ್ರತಿ ದಿನ ಮೂರು ಆಟಗಳು

ಮೈಸೂರು ಕಾಂಗ್ರೆಸ್ ಅಧಿವೇಶನ

(...ಂದಿನ ಪುಟದಿಂದ ಮುಂದುವರಿದುದು)

...ದಲ್ಲಿ ಜನರಿಗೆ ವಿಶ್ವಾಸವಿಲ್ಲವೆಂದೂ ಅದ...ರಿಂದ ಅದನ್ನು ರದ್ದುಗೊಳಿಸಬೇಕೆಂದೂ ...ಂಗ್ರೆಸ್ ಎಷ್ಟೋ ಸಾರಿ ಸ್ಪಷ್ಟಗೊಳಿಸಿದೆ. ...ಪ್ರತಿನಿಧಿ ಸಭೆಯ ಕಳೆದ ಎರಡು ಅ...ವೇಶನಗಳಲ್ಲಿ ಸರ್ಕಾರ ಮಂಡಿಸಿದ ಎಲ್ಲ ...ಸೂದೆಗಳನ್ನೂ ಈ ಸಂಬಂಧವಾಗಿಯೇ ...ಪಕ್ಷ ನಿರಾಕರಿಸಿತು. ಆದರೂ ಪ್ರಜಾ ...ನಿಧಿಗಳ ಅಭಿಪ್ರಾಯ ಸರ್ಕಾರದ ಮೇ... ಯಾವ ಪರಿಣಾಮವನ್ನುಂಟುಮಾ...ದಂತೆ ಕಾಣುವುದಿಲ್ಲ. ಆದುದರಿಂದ, ಇ...ವರೆಗೆ ಶಾಸನ ಬದ್ಧವಾಗಿ ನಡೆದಿರುವ ...ಗಳಿಂದ ಸರ್ಕಾರದ ಮೇಲೆ ಯಾ...ವುದೇ ಪರಿಣಾಮವೂ ಆಗದಿರುವ ಕಾ...ರಣ, ಅಹಿಂಸಾ ತತ್ವಕ್ಕನುಸಾರವಾಗಿ ಎ...ಲ್ಲ ವಿಧದಲ್ಲೂ ಹೋರಾಟವನ್ನು ತೀವ್ರ...ಗೊಳಿಸುವುದು ಅನಿವಾರ್ಯವೂ ಅಗತ್ಯ...ವೂ ಆಗಿದೆಯೆಂದು ಮೈಸೂರು ಕಾಂಗ್ರೆಸ್ ...ನಿಶ್ಚಯಿಸುತ್ತದೆ.

...ದರಿಂದ ಸರ್ಕಾರದೊಂದಿಗೆ ತಕ್ಕ ...ಫಲಕಾರಿಯಾದ ಹಾಗೂ ನ್ಯಾಯವಾದ ...ಸಮಾಧಾನಕ್ಕೆ ಬರಲು ಒದಗಬಹುದಾದ ...ಲ್ಲ ಅವಕಾಶವನ್ನೂ ಉಪಯೋಗಿಸಿಕೊ...ಳ್ಳಲು ಮೈಸೂರು ಕಾಂಗ್ರೆಸ್ ಸದಾ ಸಿದ್ಧ...ವಾಗಿದೆಯೆಂದು ಸಾರಿ, ಜವಾಬ್ದಾರಿ ಸರ್ಕಾ...ರ ಸ್ಥಾಪನೆಗಾಗಿ ಹೋರಾಟ ಹೂಡಲು ...ಕಾರ್ಯಕ್ರಮಗಳನ್ನು ಕೈಗೊಳ್ಳುವು...ದಕ್ಕೂ ಸತ್ಯಾಗ್ರಹ ಪ್ರಾರಂಭಿಸುವುದಕ್ಕೂ ...ಅಧಿವೇಶನ ಕಾರ್ಯಕಾರಿ ಸಮಿತಿಗೆ ಅ...ಧಿಕಾರ ಕೊಡುತ್ತದೆ.

೩ ಭಾರತದ ರಾಜಕೀಯ ಅಭಿವೃದ್ಧಿ...ಗೆ ಬ್ರಿಟಿಷ್ ಮಂತ್ರಿ ಮಂಡಲದ ನಿ...ಯೋಗದವರು ಪ್ರಕಟಿಸಿರುವ ಸಲಹೆಗಳ...ಲ್ಲಿ ಅವರಲ್ಲೂ ಮುಖ್ಯವಾಗಿ 'ಸಂಸ್ಥಾನಗ...ಳ' ಬಾಧಿಸುವ ಅಂಶಗಳನ್ನೂ ಮೈಸೂ...ರು ಕಾಂಗ್ರೆಸ್ ಪರ್ಯಾಲೋಚಿಸಲಿದೆ ...ಬ್ರಿಟಿಷ್ ಮಂತ್ರಿ ಮಂಡಲದವರು ತ...ಮ್ಮ ಸಲಹೆಗಳನ್ನು ಪ್ರಕಟಿಸುವ ಮೊದಲು ...ಯಾವಾಗಲೂ ಸಂಸ್ಥಾನಗಳ ಪ್ರಜಾಪ್ರತಿನಿ...ಧಿಗಳನ್ನು ಕಂಡು ಸಮಾಲೋಚನೆ ನಡೆಸ...ದಿರುವುದರಿಂದ ಈಗ ಪ್ರಕಟವಾಗಿರುವ ಸಲ...ಹೆಗಳಲ್ಲಿ ಅನೇಕ ಮುಖ್ಯ ವಿಚಾರಗಳಲ್ಲಿ ಅ...ಸಂಗತಿ ಇದೆಯೆಂದು ಈ ಅಧಿವೇಶನ ...ದಲ್ಲಿ ಹೇಳಬಯಸುತ್ತದೆ.

...ಸಂಸ್ಥಾನಗಳಲ್ಲೆಲ್ಲಾ ಸಾಮಾನ್ಯವಾಗಿ ...ಸತ್ತಾತ್ಮಕ ಜವಾಬ್ದಾರಿ ಸರ್ಕಾರ ...ಸ್ಥಾಪನೆಯಾಗದಿರುವುದರಿಂದ, ಸಂಯುಕ್ತ ...ರಾಜ್ಯಾಂಗ ವ್ಯವಸ್ಥೆಯನ್ನು ಒಪ್ಪಿಕೊಳ್ಳು... ರಾಜ್ಯಾಂಗ ಘಟನಾ ಸಭೆಯಲ್ಲಿ ಭಾಗ...ವಹಿಸುವ ವಿಚಾರದಲ್ಲಿ ಅವುಗಳಿಗೆ ಸ್ವಾತಂ...ತ್ರ್ಯ ಕೊಟ್ಟಿರುವುದು ಭಾರತದ ಐಕ್ಯತೆಗೆ ...ಧಕವಾದಂತಹ ಒಡಕು ಮನೋಭಾ...ವವನ್ನು ಹುಟ್ಟಿಸುವುದಾಗಿದೆಯೆಂದು ...ಅಧಿವೇಶನ ಅಭಿಪ್ರಾಯ ಪಡುತ್ತದೆ. ...ರಾಜ್ಯಾಂಗ ಘಟನಾ ಸಭೆಗೆ ಸಂಸ್ಥಾನಗ...ಳ ಪ್ರತಿನಿಧಿಗಳನ್ನು ಆರಿಸುವ ವಿಚಾರ ನಿ...ರ್ಧಾರವಾಗಿ ಗೊತ್ತಾಗದೆ ಸಂಬಂಧಪಟ್ಟ ...ಮಂದಿ ಪರಸ್ಪರಾಲೋಚನೆಯಿಂ...ದ ನಿರ್ಧರಿಸಿಕೊಳ್ಳಬೇಕೆಂದು ಹೇಳಲಾಗಿ...ದೆ. ಈ ವಿಚಾರ ಕುರಿತು ಚರ್ಚಿಸಲು ರ...ಚಿಸಿರುವ ಸಂಧಾನ ಸಮಿತಿಯಲ್ಲಿ ಕೇ...ವಲ ರಾಜರೂ ದಿವಾನರೂ ಇರುವರೇ ಹೊ...ರತು ಸಂಸ್ಥಾನಗಳ ಪ್ರಜಾಪ್ರತಿನಿಧಿಗಳಾರೂ

ಚಿನ್ನದ ಗಣಿಯ ಬಳಿ ಘರ್ಷಣೆ

ಸ್ವಂತ ಫೋನ್] ಬೆಂಗಳೂರು ೪

ಕೋಲಾರದ ಚಿನ್ನದ ಗಣಿಯ ಉರಿಗಾಂ ಪೇಟೆಯಲ್ಲಿ ನಿನ್ನೆ ಕಮ್ಯೂನಿಸ್ಟ್ ಪಕ್ಷದವರಿಗೂ ನಿಮ್ನವರ್ಗದ ಫೆಡರೇಷನ್ನಿನವರಿಗೂ ಘರ್ಷಣೆಯುಂಟಾದುದರ ಪರಿಣಾಮವಾಗಿ ಒಬ್ಬ ಸತ್ತನೆಂದೂ, ಅರು ಜನರಿಗೆ ಗಾಯವಾಗಿದೆಯೆಂದೂ ತಿಳಿದು ಬಂದಿದೆ. ಐ ಜಿ ಪಿ ಯವರು ಪೋಲೀಸ್ ದಳದೊಂದಿಗೆ ಆ ಸ್ಥಳಕ್ಕೆ ತೆರಳಿದರು.

* ಬೆಂಗಳೂರಿನ 'ದಿ ಬುಲೆಟಿನ್' ಎಂಬುವರು ಉರ್ದುವಿನಲ್ಲಿ ರಚಿಸಿ ದಿ ಹರ್... ಎಂಬುವರು ಪ್ರಕಟಿಸಿರುವ ಹಲವು ಉರ್ದು ಪತ್ರ ಪತ್ರಿಕೆಗಳಲ್ಲಿ ಕೋಮುವಾರು ಭಿನ್ನಭಾವವನ್ನು ಕಲ್ಪಿಸುವ ವಿಚಾರಗಳಿದ್ದುವೆಂಬ ಕಾರಣದ ಮೇಲೆ ಸರ್ಕಾರದವರು ಸದರಿ ಹಸ್ತ ಪತ್ರಿಕೆಗಳೆಲ್ಲವನ್ನೂ ಸರ್ಕಾರಕ್ಕೆ ವಹಿಸಬೇಕೆಂದು ಅಪ್ಪಣೆ ಮಾಡಿದ್ದಾರೆ.

ವಿದ್ಯಾರ್ಥಿ ಕಾಂಗ್ರೆಸ್ ಅಧಿವೇಶನ

ಈ ದಿನ ಬೆಳಿಗ್ಗೆ ಆರಂಭವಾದ ವಿದ್ಯಾರ್ಥಿ ಕಾಂಗ್ರೆಸ್ಸಿನ ೨ನೇ ಅಧಿವೇಶನದ ಅಂಗವಾಗಿ ಅಖಿಲ ಭಾರತ ವಿದ್ಯಾರ್ಥಿ ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ರವೀಂದ್ರ ವರ್ಮರು ಧ್ವಜಾರೋಹಣ ಮಾಡಿದರು. ಸಂಜೆ ರವೀಂದ್ರ ವರ್ಮರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯುವುದು. ಐ ಎನ್ ಎ ನಾಯಕರಾದ ಕರ್ನಲ್ ಲೋಗನಾಥನ್‌ರವರು ಆರಂಭ ಭಾಷಣ ಮಾಡುವರು. ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರಿಗೆ ಮೊನ್ನೆ ದಿವಾನ ಶ್ರೀನಿವಾಸ... ಭೇಟಿ ಪತ್ರ ಸಲ್ಲಿಸಿದರು.

ವಿದ್ಯಾಧಿಕಾರಿ ಇಲಾಖೆ ಅಸಿಸ್ಟೆಂಟ್ ಸೆಕ್ರಟರಿಯವರಾದ ಶ್ರೀ ಎಚ್. ಎಂ. ಶ್ರೀನಿವಾಸಯ್ಯನವರನ್ನು ಮೆಡಿಕಲ್ ಸ್ಟೋರ್‍ಸ್‌ನ ಸೂಪರಿಂಟೆಂಡೆಂಟಾಗಿ ನೇಮಿಸಲಾಗಿದೆ.

...ನೆರೆ ಪ್ರಾಂತ್ಯಗಳಲ್ಲಿ ಐಕ್ಯವಾಗಬೇಕೆಂದು ಈ ಅಧಿವೇಶನ ಅಭಿಪ್ರಾಯ ಪಡುತ್ತದೆ. ಕರ್ನಾಟಕ ಪ್ರಾಂತ್ಯ ನಿರ್ಮಾಣ ಕಾರ್ಯದಲ್ಲಿ ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿರುವ ಕನ್ನಡಿಗರೆಲ್ಲರೂ ಸಂಪೂರ್ಣ ಬೆಂಬಲ ನೀಡಬೇಕೆಂದು ಈ ಅಧಿವೇಶನ ಪ್ರಾರ್ಥಿಸುತ್ತದೆ.

ಈ ಅಧಿವೇಶನದಲ್ಲಿ ಬಂದ ಎಲ್ಲಾ ನಿರ್ಣಯಗಳೆಲ್ಲವೂ ಮಂಜೂರಾದುವು. ಕಾಂಗ್ರೆಸ್ಸಿನ ಮುಂದಿನ ಅಧಿವೇಶನವನ್ನು ಹಾಸನದಲ್ಲಿ ಕೂಡಿಸುವಂತೆ ತೀರ್ಮಾನಿಸಲಾಯಿತು. ಇಂದು ರಾತ್ರಿ ೮-೩೦ ಗಂಟೆಗೆ ಅಧಿವೇಶನವು ಮುಕ್ತಾಯಗೊಂಡಿತು.

ಹುಡುಗ ತಪ್ಪಿಸಿಕೊಂಡಿದ್ದಾನೆ

12 ವರ್ಷ ವಯಸ್ಸಿನ ...ಅ...ದಾಸ್ ಪುಟ್ಟಣ್ಣ ಎಂಬ ನನ್ನ ಹುಡುಗನು ನೆನ್ನೆ ಮಧ್ಯಾಹ್ನ ತಪ್ಪಿಸಿಕೊಂಡಿದ್ದಾನೆ. ಬಿಳಿ ಷರ್ಟು, ಗೀರಿನ ಚಡ್ಡಿ ಹಾಕಿದ್ದಾನೆ. ... ಬಣ್ಣ ... ಮೈಬಣ್ಣ ... ಎತ್ತರ ... ಪತ್ತೆ ಹಚ್ಚಿಕೊಟ್ಟವರಿಗೆ ಬಹುಮಾನ ಕೊಡಲಾಗುತ್ತದೆ. ಈ ಕೆಳಗಿನ ವಿಳಾಸಕ್ಕೆ ತಿಳಿಸಿ.

ಎಂ. ದಾಸಸ್ವಾಮಯ್ಯ, ಟೈಲರ್,
939 ... ದರ್... ಮೈಸೂರು

ವಾರ ಭವಿಷ್ಯ

೪-೧೧-೪೬ ರಿಂದ ೧೧-೧೧-೪೬ ರವರೆಗೆ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ಮೇಷ—ಆರೋಗ್ಯ ಸಾಧಾರಣ ವ್ಯವಹಾರದಲ್ಲಿ ಸೋಲು, ಬಂಧುಗಳಿಂದ ತಿರಸ್ಕಾರ, ಹಣದ ಅಡಚಣೆ ಜಾಸ್ತಿ ತಾ॥ ೫, ೬, ೮, ೧೦ ಸಾಧಾರಣ ಶಾಂತಿ

ವೃಷಭ ಶಾರೀರಿಕ ಸ್ಥಿತಿ ಉತ್ತಮ. ಉದ್ಯೋಗ ವ್ಯವಹಾರಗಳಲ್ಲಿ ಜಯ ಅನಿರೀಕ್ಷಿತ ಮಿತ್ರ ಸಹಾಯ, ಅಧಿಕ ವ್ಯಯ. ತಾ॥ ೪, ೬, ೧೧, ಧನಾದಾಯ ಪ್ರವಾಸ.

ಮಿಥುನ—ದೈಹಿಕ ಸಾಂಪತ್ತಿಕ ಸ್ಥಿತಿಗಳು ಸಾಧಾರಣ ಅಧಿಕಾರಿಗಳಿಂದ ಸನ್ಮಾನ ಧನಲಾಭ ಚೆನ್ನಾಗಿರುತ್ತದೆ ವ್ಯವಹಾರಗಳಲ್ಲಿ ಜಯ ತಾ॥ ೫, ೮, ೯, ಅಧಿಕ ವ್ಯಯ, ಮಿತ್ರರಿಂದ ತಿರಸ್ಕಾರ, ಮಾನಸಿಕ ಚಿಂತೆ.

ಕಟಕ—ಆರೋಗ್ಯ ಚೆನ್ನಾಗಿರುತ್ತದೆ. ಧನಾದಾಯ ಕಡಿಮೆ. ಖರ್ಚು ಜಾಸ್ತಿ. ಮನೆಯವರಿಗೆ ರೋಗಾದಿಗಳ ತೊಂದರೆಯಾಗಿ ಅಶಾಂತಿ ಹೆಚ್ಚುವುದು ತಾ॥ ೬, ೮, ೧೦ ಸಾಧಾರಣ

ಸಿಂಹ—ರಾಜಕೀಯ, ಆರ್ಥಿಕ ವಿಚಾರಗಳಲ್ಲಿ ಉತ್ಸಾಹ, ಆರೋಗ್ಯ ಸಾಧಾರಣ. ಮಿತ್ರರಿಂದ ಸಹಾಯ. ತಾ॥ ೬, ೮, ೧೧ ಸಂತೋಷ, ಮಿತ್ರ ಭೇಟಿ.

ಕನ್ಯಾ- ಆರೋಗ್ಯ ಚೆನ್ನಾಗಿರುತ್ತದೆ. ಹಿಡಿದ ಕಾರ್ಯಗಳಲ್ಲೆಲ್ಲಾ ಜಯ. ಅಧಿಕಾರಿಗಳಿಂದ ಸನ್ಮಾನ. ಮಿತ್ರರಿಂದ ಮುಖ್ಯ ಸಮಾಚಾರಗಳು ಬರುವುವು. ತಾ॥ ೬, ೮, ೧೧ ಖರ್ಚು ಅಧಿಕ, ಶಾಂತಿ ಸಂತೋಷಕ್ಕಾಗಿ ಖರ್ಚು.

ತುಲಾ— ಆರೋಗ್ಯ ಕೆಡುತ್ತದೆ ಸಾಂಪತ್ತಿಕ ಸ್ಥಿತಿ ಸಾಧಾರಣ ಉದ್ಯೋಗ ವ್ಯವಹಾರಗಳಲ್ಲಿ ಇತರರಿಂದ ತಿರಸ್ಕಾರ-ಖರ್ಚು ಹೆಚ್ಚು. ತಾ॥ ೬, ೯, ಅಶಾಂತಿ-ಅಧಿಕ ವ್ಯಯ. ಮಿತ್ರ ಸಹಾಯ

ವೃಶ್ಚಿಕ—ಆರೋಗ್ಯ ಚೆನ್ನಾಗಿರುತ್ತದೆ ಧನಾದಾಯ, ವ್ಯಯ ಎರಡೂ ಸಮಾನವಾಗಿರುತ್ತವೆ ಅಧಿಕಾರಿ ವರ್ಗದವರಿಂದ ಸನ್ಮಾನ ತಾ॥ ೬, ೭, ೮, ಸನ್ಮಾನ-ಶಾಂತಿ-ಮಿತ್ರ ಭೇಟಿ

ಧನುಸ್ಸು—ಆರೋಗ್ಯ ಸಾಧಾರಣ ಮಾನಸಿಕ ಚಿಂತಾ ನಾಶ ಉದ್ಯೋಗ ವ್ಯವಹಾರಗಳಲ್ಲಿ ಜಯ ಧನಾದಾಯ ಅಧಿಕ ಬಂಧು ಮಿತ್ರರಿಗಾಗಿ ಖರ್ಚು ತಾ॥ ೭, ೧೦, ೧೧ ಸಾಧಾರಣ ಅಶಾಂತಿ. ಅಧಿಕ ವ್ಯಯ.

ಮಕರ—ಆರೋಗ್ಯ ಸಾಧಾರಣ ಸಾಂಪತ್ತಿಕ ಸ್ಥಿತಿ ಚೆನ್ನಾಗಿರುತ್ತದೆ. ಉದ್ಯೋಗ ವ್ಯವಹಾರಗಳಲ್ಲಿ ಅಧಿಕಾರಿ ವರ್ಗದವರಿಂದ ಸನ್ಮಾನ ತಾ॥ ೫, ೬, ೯ ಪ್ರವಾಸ, ಖರ್ಚು.

ಕುಂಭ—ಶಾರೀರಿಕ ಸ್ಥಿತಿ ಕೆಡುವುದು ಧನಾದಾಯ ಚೆನ್ನಾಗಿರುತ್ತದೆ. ಶತ್ರುಗಳ ಕಿರುಕುಳ ಜಾಸ್ತಿ ಮಾನಸಿಕ ಅಶಾಂತಿ ಹೆಚ್ಚುತ್ತದೆ ತಾ॥ ೭, ೮, ೧೦ ಸಾಧಾರಣ ಶಾಂತಿ. ದೂರ ಪ್ರವಾಸ

ಮೀನ—ಮಾನಸಿಕ ಅಶಾಂತಿ ಹೆಚ್ಚು. ಖರ್ಚು ಅಧಿಕ. ಮಿತ್ರರಿಂದಲೂ, ಬಂಧುಗಳಿಂದಲೂ ತಿರಸ್ಕಾರ. ತಾ॥ ೭, ೮, ಸಾಧಾರಣ ಶಾಂತಿ, ಧನಾದಾಯ

ಮೈಸೂರು ಕಾಂಗ್ರೆಸ್

ಆರನೇ ಮಹಾಧಿವೇಶನ

[ನಮ್ಮ ವಿಶೇಷ ಪ್ರತಿನಿಧಿಯಿಂದ] [ಬೆಂಗಳೂರು

ಇಂದು ಮೈಸೂರು ಕಾಂಗ್ರೆಸ್ ಮಹಾಧಿವೇಶನದ ಕಾರ್ಯಕಾರಿ ಸಮಿತಿಯವರು ಮಂಡಿಸಿದ ಕೆಳಕಂಡ ೯ ನಿರ್ಣಯಗಳು ಬಹುಮತದಿಂದ ಅಂಗೀಕರಿಸಲ್ಪಟ್ಟುವು. ಈ ನಿರ್ಣಯಗಳ ಬಗ್ಗೆ ಇದ್ದ ತಿದ್ದುಪಡಿಗಳು ಬಂದು ಕೆಲವು ವಾಪಸು ತೆಗೆದುಕೊಳ್ಳಲ್ಪಟ್ಟು ಕೆಲವು ಬಿದ್ದು ಹೋದವು.

೧ ಶ್ರೀ ಭೂಲಾಭಾಯ್ ದೇಸಾಯಿ, ಕೃಷ್ಣವೇಣ್ ಮತ್ತು ಎಚ್. ಶಿವಪ್ಪ ಇವರ ಅಕಾಲಮರಣಕ್ಕಾಗಿ ಈ ಅಧಿವೇಶನ ತನ್ನ ಶೋಕವನ್ನು ಸೂಚಿಸುತ್ತದೆ, ಮತ್ತು ಶ್ರೀ ಎಚ್. ರಾಮಸ್ವಾಮಿಯವರ ಕ್ರೂರ ಕೊಲೆಯನ್ನು ಈ ಅಧಿವೇಶನ ಖಂಡಿಸುತ್ತದೆ ಮತ್ತು ಈ ಎಲ್ಲ ಮೃತರ ಸಂಸಾರಗಳಿಗೆ ತನ್ನ ಸಂತಾಪ ಸೂಚಿಸುತ್ತದೆ.

೨ ಶ್ರೀಮನ್ ಮಹಾರಾಜರ ಆಶ್ರಯದಲ್ಲಿ ಪೂರ್ಣ ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗಬೇಕೆಂದು ಮೈಸೂರು ಕಾಂಗ್ರೆಸ್ ಇದುವರೆಗೆ ಎಷ್ಟೋ ಸಾರಿ ಒತ್ತಾಯಪಡಿಸುತ್ತಾ ಬಂದಿದೆ. ಈ ಕೋರಿಕೆಯನ್ನು ಈ ಅಧಿವೇಶನದಲ್ಲಿ ಮತ್ತೊಮ್ಮೆ ಸಾರಿ ಹೇಳುತ್ತ, ಇದುವರೆಗಾಗಲೇ ಪೂರೈಕೆಯಾಗಬೇಕಾಗಿದ್ದ ಈ ಕೋರಿಕೆಯನ್ನು ಈಡೇರಿಸಲು ಕಾಲಾವಕಾಶಕ್ಕೆಡೆಗೊಡಲಾಗದೆಂಬ ಅಂಶವನ್ನು ಈ ಅಧಿವೇಶನ ಸ್ಪಷ್ಟಪಡಿಸುತ್ತದೆ.

ಕೇಂದ್ರದಲ್ಲಿ ತಾತ್ಕಾಲಿಕ ರಾಷ್ಟ್ರೀಯ ಸರ್ಕಾರ ಸ್ಥಾಪನೆಯಾಗಿ, ಸ್ವತಂತ್ರ ಭಾರತ ರಾಜ್ಯಾಂಗ ರಚನೆಗಾಗಿ ಘಟನಾ ಸಭೆ ಸೇರಲಿರುವ ಹೊಸ ಸನ್ನಿವೇಶವುಂಟಾಗಿರುವ ಈ ಸಮಯದಲ್ಲಿ, ಮೇಲ್ಕಂಡ ಆಡಳಿತ ಪದ್ಧತಿಗನುಸಾರವಾಗಿರುವ ಜವಾಬ್ದಾರಿ ಸರ್ಕಾರಗಳನ್ನು ದೇಶೀಯ ಸಂಸ್ಥಾನಗಳಲ್ಲಿ ಕೂಡಲೆ ಸ್ಥಾಪಿಸುವುದು ಅವಶ್ಯವಾಗಿದೆ

ಮೈಸೂರು ಸಂಸ್ಥಾನದಲ್ಲಿ ಈ ಬಗೆಯ ಸರ್ಕಾರ ಪದ್ಧತಿಯನ್ನೇರ್ಪಡಿಸಬೇಕೆಂದು ಮೈಸೂರು ಕಾಂಗ್ರೆಸ್ ಆಗಿಂದಾಗ್ಗೆ ಸ್ಫೋಟಕ್ತಿಗಳಿಂದ ಒತ್ತಾಯ ಪಡಿಸುತ್ತಿದೆ ಈಗಿನ ಮೈಸೂರು ರಾಜ್ಯಾಂಗ ಜನತೆ ಸಮರ್ಪಕವಾಗಿಲ್ಲವೆಂದೂ ಅ ರಾಜ್ಯಾಂಗನುಸಾರ ನೇಮಕವಾಗಿರುವ ಮಂತ್ರಿ

(ಹಿಂದಿನ ಪುಟದಲ್ಲಿ ಮುಂದುವರಿದಿದೆ

ಮೈಸೂರು ಸಿಟಿ ರೇಷನಿಂಗ್ ಆಫೀಸ್.

ತಾ। 26-10-1946

ಪ್ರಕಟಣೆ

ಮೈಸೂರು ಸಿಟಿ ರೇಷನಿಂಗ್ ಇಲಾಖೆ ಗೋಡೌನ್‌ಗಳಲ್ಲಿರತಕ್ಕ ಒಟ್ಟು ಸುಮಾರು ಒಂದೂವರೆ ಲಕ್ಷ ಖಾಲಿ ಗೋಣೀ ಚೀಲಗಳು ಈ ಕೆಳಗೆ ನಮೂದಿಸಿರುವ ಗೋಡೌನ್‌ಗಳಲ್ಲಿ ಬೆಳಗ್ಗೆ 11 ಘಂಟೆಗೆ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತವೆ ಈ ಬಗ್ಗೆ ಹೆಚ್ಚು ವಿವರಗಳನ್ನು ಆಫೀಸಿನಲ್ಲಿ ತಿಳಿಯಬಹುದು.

ದೇವಣ್ಣ ಗೋಡೌ K R ಆಸ್ಪತ್ರೆ ರಸ್ತೆ	ತಾ॥ 7-11-46 ನೇ	ಗುರುವಾರ
ಅಸ್ಗರ್ ಎಮರ್ಜನ್ಸಿ ಡಿಪೋ	,, 8-11-46 ,,	ಶುಕ್ರವಾರ
ದೇವರಾಜ ,,	,, 9-11-46 ,,	ಶನಿವಾರ
ಮಂಡಿ ,,	,, 11-11-46 ,,	ಸೋಮವಾರ
ನಜರ್‌ಬಾದ್ ,,	,, 12-11-46 ,,	ಮಂಗಳವಾರ
ಕೃಷ್ಣರಾಜ ,,	,, 13-11-46 ,,	ಬುಧವಾರ
ಚಾಮರಾಜ ,,	,, 14-11-46 ,,	ಗುರುವಾರ

(ಸಹಿ) ಅಬ್ದುಲ್ ರಜಾಕ್,

ರೇಷನಿಂಗ್ ಆಫೀಸರ್, ಮೈಸೂರು.

॥ ವಂದೇಮಾತರಂ ॥

ಮಂಡಿ ಮೊಹಲ್ಲಾ ಓಟರು ಮಹಾಶಯರುಗಳಲ್ಲಿ ವಿನಂತಿ

14-11-46 ನೇ ಗುರುವಾರ ನಡೆಯಲಿರುವ ಪೌರಸಭಾ ಚುನಾವಣೆಗಳಲ್ಲಿ ಈ ಕೆಳಗೆ ಕಂಡ ಕಾಂಗ್ರೆಸ್ ಉಮೇದವಾರರಿಗೇ ಓಟು ಕೊಡಬೇಕಾಗಿ ಪ್ರಾರ್ಥನೆ

ಶ್ರೀ॥ ಗಳಾದ

ಟಿ. ಮರಿಯಪ್ಪನವರು

ಜಿ. ಆರ್. ರಂಗಸ್ವಾಮಯ್ಯನವರು

ಎಂ. ಎಸ್. ನಂಜಪ್ಪನವರು

ಎಚ್. ತಮ್ಮಯ್ಯನವರು ಮತ್ತು

ಕೆ. ಪುಟ್ಟಸ್ವಾಮಿಯವರು

ನಗರ ಚುನಾವಣಾ ಉಪ ಸಮಿತಿ

CAR FOR SALE

1934 Model Morris Saloon in good condition with New Battery and Brand New Tyres. Rs. 3000/- or nearest offer. Apply in person or write to the undersigned immediately

K G. KATWEY,
Municipal Engineer,
Mysore City Municipality

ಘನವಾದ ದ್ವಂದ್ವ ಪಿಟೀಲು ಕಛೇರಿ

೭-೧೧-೪೬ ನೇ ಗುರುವಾರ

ಸಂಜೆ ೬ ಘಂಟೆಗೆ

ಸರಸ್ವತಿ ಸಂಗೀತ ಸಮಾಜದ ಆಶ್ರಯದಲ್ಲಿ ಮೈಸೂರು ಚಾಮರಾಜ ರಸ್ತೆಯಲ್ಲಿರುವ

ಸಹಕಾರ ಭವನದಲ್ಲಿ

ಸುಪ್ರಸಿದ್ಧ ಶ್ರೀ ಟಿ

ಚೌಡಯ್ಯನವರ ಶಿಷ್ಯ

ಕೋಮಲವಲ್ಲಿ ಮತ್ತು

ವಿ॥ ಜಿ. ಶ್ರೀನಿವಾಸನ್ ಬಿ ಎ

ಇವರ ದ್ವಂದ್ವ ಪಿಟೀಲು ಕಛೇರಿಯನ್ನು ನಡೆಸುವರು

ಟಿ. ಆರ್. ಮೂರ್ತಿಯವರ

ಮೃದಂಗದೊಡನೆ ನಡೆಸಲಿರುತ್ತಿ

ಪ್ರವೇಶ ಗ್ಯಾಲರಿಗೆ ರೂ 1, ೮ ೦

ಕುರ್ಚಿಗೆ ರೂ 1, ೮ ೦

ಈ ಐವತ್ತು ವರ್ಷಗಳಿಂದ ಮಾನವ ಲೋಕಕ್ಕೆ ಆರೋಗ್ಯಾನಂದಗಳನ್ನು ನೀಡುತ್ತಾ ಅನರ್ಘವಾಗಿ, ಅವಿಚ್ಛಿನ್ನವಾಗಿ ಸೇವೆ ಮಾಡಿ, ದಿನ ದಿನಾಭಿವೃದ್ಧಿ ಹೊಂದುತ್ತಿರುವ ಪದಕ್ಕೆ ಎಷ್ಟೋ ಗರ್ವಸುತ್ತಿದೆ.

Edited printed and published by A. R. Nagarajan at the Sadhvi Press D Subbiah Road, Mysore

ರಿಜಿ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಮಂಗಳವಾರ ೫—೧೧—೪೭ [ಸಂಚಿಕೆ ೫೧

ಚಿನ್ನದ ಗಣಿಯಲ್ಲಿ ಗುಂಡಿನೇಟು-೪ ಸಾವು

ಮೈಸೂರು ಹೋರಾಟದ ಹೆಬ್ಬಾಗಿಲಿನಲ್ಲಿದೆ

ಪ. ಪ್ರೋ] ಬೆಂಗಳೂರು ೪
ಭಾರತವು ಸ್ವಾತಂತ್ರ್ಯದ ಹೆಬ್ಬಾಗಿಲಿನಲ್ಲಿದೆ, ಮೈಸೂರು ಸಂಸ್ಥಾನವು ಹೋರಾಟದ ಹೆಬ್ಬಾಗಿಲಿನಲ್ಲಿದೆ; ಈ ಹೋರಾಟಕ್ಕಾಗಿ ಸ್ವಾತಂತ್ರ್ಯ ಮತ್ತು ರಾಷ್ಟ್ರ ಪ್ರೇಮಿಗಳ ಪ್ರತಿಯೊಬ್ಬರೂ ಸಿದ್ಧರಾಗಿರಬೇಕು. ... ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ... ಕೆ. ಚೆಂಗಲರಾಯರೆಡ್ಡಿಯವರು ... ಭಾಷಣದಲ್ಲಿ ತಿಳಿಸಿದರು.

... ಗ್ರೇಟ್ ಸೂಪರಿಂಟೆಂಡೆಂಟರಾಗಿ ಶ್ರೀ ... ನಾರಾಯಣರಾವ್ ಮತ್ತು ಎನ್. ಕೃಷ್ಣರಾವ್‌ರವರುಗಳನ್ನು ಆಫಿಸಿಯೇಟಿಂಗ್ ಕಂಟ್ರೋಲರಾಗಿ ನೇಮಿಸಲಾಗಿದೆ.

... ನ್ಯಾಯವಿಧಾಯಕ ಸಭೆಯ ಕಾಂಗ್ರೆಸ್ ಪಾರ್ಟಿಯು ಮುಂದಿನ ಅಧಿವೇಶನಕ್ಕೆ ಒಪ್ಪಬೇಕಾದ ನಿರ್ಣಯಗಳನ್ನು ... ನಿನ್ನೆ ನಿರ್ಧರಿಸಿತು.

...ನ್-ಫ್ರಾನ್ಸ್ ಘರ್ಷಣೆ ?

... ಫ್ರಾಂಕೋರವರು ಫ್ರಾನ್ಸಿನ ಗಡಿ ... ಸೈನ್ಯ ಶೇಖರಣೆ ಮಾಡಿ ಯುದ್ಧ ... ಮಾಡುತ್ತಿರುವುದಾಗಿ ವಾರ್ತೆ ಬಂ... ಉಭಯ ರಾಷ್ಟ್ರಗಳ ಗಡಿ ಪ್ರದೇಶ ... ವೈರಿಯೊಳಗೆ ಯಾವ ಸೈನ್ಯಗ... ಎಂದು ಆಗಿದ್ದ ಒಪ್ಪಂದವನ್ನು ... ಮುರಿದಿದೆಯೆಂದು ಫ್ರೆಂಚ್ ಅಧಿ... ಪ್ರಕಟನೆಯೊಂದು ತಿಳಿಸುತ್ತದೆ.

...ಸರು ಬದುಕಿದ್ದಾರೆ

... ವಿನಾಯಕ ... ಬೋಸರು ಸತ್ತರೆಂಬುದನ್ನು ನಾನು ನಂಬಿಲ್ಲ. ಅವರು ಬದುಕಿದ್ದು ರಷ್ಯಾ ... ರಷ್ಯದ ಪಹರೆಗೊಳಪಟ್ಟ ... ದ್ದಾರೆಂಬುದು ನನ್ನ ನಂಬಿಕೆ; ... ಒಂದೆ ನಾನು ತಿಳಿಸಿರುವಂತೆ ... ಟಿಬೆಟ್ ಅಥವಾ ... ಬುದ್ಧ ದೇವಾಲಯಗಳಲ್ಲಿದ್ದಾರೆ ... ಮೂಲೆಯಿಂದ ಅನೇಕ ಕಡೆಗಳಿಂದ ... ಬದುಕಿರುವ ಬಗ್ಗೆ ವರ್ತಮಾನ ... ಬಂದಿದೆ. ಮುಂದೆ ಆಗಬಹುದಾದ ... ಬದಲಾವಣೆಗಳು ನನ್ನ ... ಯನ್ನು ದೃಢಪಡಿಸುತ್ತವೆ ... ಕಾಂಗ್ರೆಸ್ ಸಂಸ್ಥೆಯ ... ಶ್ರೀ ಪಿ. ಪಿ. ... ತಿಳಿಸಿ...

...ಗಳು ಸ್ವಾವಲಂಬಿಗಳಾಗಬೇಕು

... ಈಗ ಒಂದು ... ಹಿಂದೂಮತ ಮತ್ತು ಸಂಸ್ಕೃತಿ ... ಬೇಕಾದ ಮತ್ತು ... ಸಂಘಟಿಸಲಾಗಿ ... ಕಾಲ ... ಪ. ಕೆ. ... ಪೇರಿದಲ್ಲಿನ ... ಒಂದು ಸಭೆಯಲ್ಲಿ ...

...ಗೆ ಮೆಕ್ಕೆ ಜೋಳ

... ಮೈಸೂರು ಸರ್ಕಾರ ... ಮೆಕ್ಕೆ ... ಸಂದಿದೆ.

ಆರಂಭ ಭಾಷಣ

ಮೈಸೂರು ೫

ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ಸಿನ ಆರಂಭ ಭಾಷಣವನ್ನು ಟೌನ್‌ಹಾಲ್ ಭವನದಲ್ಲಿ ನಾಳೆ ಸಂಜೆ ಆರು ಗಂಟೆಗೆ ಮದ್ರಾಸ್ ಶಾಸನ ಸಭಾ ಸದಸ್ಯರೂ, ಆಂಧ್ರ ದೇಶದ ಕಾಂಗ್ರೆಸ್ ಮುಖಂಡರೂ ಆದ ಶ್ರೀ ಕಲ್ಲೂರು ಸುಬ್ಬರಾಯರು ನೆರವೇರಿಸುವರು. ಮೈಸೂರು ನ್ಯಾಯವಿಧಾಯಕ ಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರಾದ ಶ್ರೀಮತಿ ಕಮಲಾ ದೇವಿಯವರು ಸಭಾಧ್ಯಕ್ಷತೆಯನ್ನು ವಹಿಸುವರು. ಸರ್ವರಿಗೂ ಸ್ವಾಗತವಿದೆ.

ಹರಿಕಥೆ

ಮೈಸೂರು ಚಲುವಾಂಬ ಅಗ್ರಹಾರದ ಹಿಂಭಾಗದಲ್ಲಿರುವ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿಯವರ ದೇವಸ್ಥಾನದಲ್ಲಿ ಏಕಾದಶಿ ಪ್ರಯುಕ್ತ ಈ ದಿನ ರಾತ್ರಿ ೯ ಗಂಟೆಗೆ ಪಾಲ್‌ಘಾಟಿನಿಂದ ಬಂದಿರುವ ಶ್ರೀ ಗಣಪತಿ ಭಗವತರಿಂದ ತಮಿಳಿನಲ್ಲಿ 'ವಳ್ಳಿ ಕಲ್ಯಾಣ' ಎಂಬ ಹರಿಕಥೆಯು ನಡೆಯುವುದು. ಸರ್ವರಿಗೂ ಆಹ್ವಾನವುಂಟು.

• ದೇಶೀಯನಾಟಕ ಮಂಡಲಿಯ ಆಶ್ರಯದಲ್ಲಿ ಮಂಡಿಮೊಹಲ್ಲಾ ಶ್ರೀ ಪಾಂಡುರಂಗ ದೇವಸ್ಥಾನದಲ್ಲಿ ಇದೇ ತಾ॥ ೬ನೇ ಮಂಗಳವಾರದಿಂದ ೧೧ನೇ ಭಾನುವಾರ ಪೂರ್ತಿ ಪ್ರತಿನಿತ್ಯವೂ ಕೆಳಗೆ ಕಂಡಂತೆ ಕ್ರಮವಾಗಿ ಹರಿಕಥೆಗಳು ನಡೆಯುವುವು. ಸರ್ವರಿಗೂ ಸ್ವಾಗತವಿದೆ—ವಿದ್ವಾಂಸರುಗಳಾದ ಸೀತಾರಾಮಾಚಾರ್ಯರು, ಧ್ರುವ ಚರಿತ್ರೆ; ಚನ್ನಬಸಪ್ಪ ಶಾಸ್ತ್ರಿಗಳು ತಿರಿಯಾಳ ಚರಿತ್ರೆ, ವೆಂಕಟ ಸುಬ್ಬರಾಯರು, ಶ್ರೀ ಕೃಷ್ಣಗಾರುಡಿ, ಲಕ್ಷ್ಮೀಪತಿ ಸಹೋದರರು ರುಕ್ಮಿಣೀ ಪತ್ರಿಕಾ, ಕೊಳ್ಳೇಗಾಲದ ಎಂ. ಎಸ್. ನಾಗಲಿಂಗಾಚಾರ್ಯರು, ಸಾಧು ಜನಾಬಾಯಿ, ಬಿ. ಎಸ್. ಕೃಷ್ಣರಾಯರು ಗರುಡಗರ್ವಭಂಗ

ಗೆ ... ಕೃಷ್ಣಸ್ವಾಮಿ ... ಶ್ರೀ ಪ್ರಸನ್ನ ... ದಲ್ಲಿ ... ಪ್ರಯುಕ್ತ ನಾಳೆ ಸಂಜೆ ... ಗಂಟೆಗೆ ... ವಿದ್ವಾನ್ ... 'ಗರುಡಗರ್ವ ಭಂಗ' ಎಂಬ ಹರಿಕಥೆಯು ನಡೆಯುತ್ತದೆ. ಸರ್ವರಿಗೂ ಸ್ವಾಗತವಿದೆ

...ಡುಗ ಸಿಕ್ಕಿದ್ದಾನೆ

... ನಿನ್ನೆ ... ಸಿಕ್ಕ ... ಹುಡುಗನು ... ದಾರೆ.

ಮದ್ರಾಸಿನಲ್ಲಿ ಕುದುರೆ ಜೂಜು ರದ್ದಾಗುವುದು

ಮದ್ರಾಸ್ ಪ್ರಾಂತ್ಯದಲ್ಲಿ ಮುಂದಿನ ಸಾಲಿನಿಂದ ಕುದುರೆ ಜೂಜನ್ನು ರದ್ದುಮಾಡಲು ಮಂತ್ರಿ ಮಂಡಲವು ತೀರ್ಮಾನಿಸಿರುವುದಾಗಿ ವರದಿಯಾಗಿದೆ. ವ್ಯವಸಾಯ ಉತ್ಪನ್ನದ ಮೇಲೆ ತೆರಿಗೆ ವಿಧಿಸಲೂ, ಪೆಟ್ರೋಲ್ ಮೇಲಿನ ತೆರಿಗೆಯನ್ನು ಹೆಚ್ಚಿಸಲೂ, ಜಮೀನ್ದಾರಿ ಪದ್ಧತಿಯನ್ನು ರದ್ದು ಮಾಡಲೂ ಮಂತ್ರಿಮಂಡಲ ಆಲೋಚಿಸುತ್ತಿರುವುದಾಗಿ ಗೊತ್ತಾಗಿದೆ. ಜೂಜಿನ ತೆರಿಗೆ ದರವನ್ನು ಶೇಕಡ ... ಹೆಚ್ಚಿಸಬೇಕೆಂದೂ ನಿರ್ಧಾರವಾಗಿದೆಯೆಂದೂ ಹೇಳಲಾಗಿದೆ.

ಶಾಂತಿ ರಕ್ಷಣೆಗೆ ಗಾಂಧಿಜಿ

ಬಕ್ರೀದ್ ಕಳೆಯುವ ವರೆಗೂ ಕಲ್ಕತ್ತ ನಗರದಲ್ಲೇ ಇದ್ದು ಶಾಂತಿ ರಕ್ಷಣೆಗೆ ನೆರವಾಗುವಂತೆ ವಸಾಹತ ಗಾಂಧಿಯವರನ್ನು ಬಂಗಾಳಾ ಪ್ರಧಾನರಾದ ಮಿ॥ ಸುಹ್ರವರ್ದಿಯವರು ಪ್ರಾರ್ಥಿಸಿದ್ದರಿಂದ ಗಾಂಧಿಜಿಯವರು ತಮ್ಮ ಪ್ರವಾಸವನ್ನು ಮುಂದುವರಿಸಿದ್ದಾರೆ

ಈಸೂರು ದುರಂತ

ಶ್ರೀ ... ಲಕ್ಷ್ಮೀದೇವಿ ... ಮತ್ತು ಶ್ರೀ ಬಿ. ಬಿ. ಗಂಗಾಧರ್‌ರವರು ಬರೆದಿರುವ ಈಸೂರು ದುರಂತದ ಸಂಕ್ಷಿಪ್ತ ವಿವರವನ್ನು ಆದರದಿಂದ ಸ್ವೀಕರಿಸಿದ್ದೇವೆ. ೧೯೪೨ರ ಸ್ವಾತಂತ್ರ್ಯ ಚಳುವಳಿಯಲ್ಲಿ "ಬ್ರಿಟಿಷರೇ ಭಾರತ ಬಿಟ್ಟು ತೊಲಗಿ" ಎಂಬ ಸಂದೇಶ ಸಾರುತ್ತಾ ಗುಲಾಮಗಿರಿಯನ್ನು ಕಿತ್ತೊಗೆಯಲು ಧೈರ್ಯದಿಂದ ಈಸೂರು ಜನರು ನಡೆಸಿದ ಹೋರಾಟ, ಅಲ್ಲಿ ನಡೆದ ದುರಂತದ ಪೂರ್ಣಚಿತ್ರ ಈ ಚಿಕ್ಕ ಓಲೆಯಲ್ಲಿ ಅಡಗಿದೆ.

ಚರ್ಚಾ ಕೂಟ

ಮೈಸೂರು ವಿಶ್ವವಿದ್ಯಾನಿಲಯ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬ ಘಂಟೆಗೆ ... ಚರ್ಚಾಕೂಟ ನಡೆಯುವುದು. ... ಎಲ್ಲರಿಗೂ ಸ್ವಾಗತವುಂಟು.

ಆಕಾಶವಾಣಿಯಲ್ಲಿ ಭಾಷಣ

ಈ ದಿನ ರಾತ್ರಿ ... ಗಂಟೆಗೆ ... ಕಾಲೇಜಿನ ... ಅವರು ... ಭಾಷಣ ಮಾಡುವರು.

ವಿದ್ಯಾರ್ಥಿಗಳ ದಸ್ತಗಿರಿ! ಟಿಕೆಟ್ಟಿಲ್ಲದೆ ಪ್ರಯಾಣ ಮಾಡಿದ ಬಗ್ಗೆ ಮೊಕದ್ದಮೆ

ಮೈಸೂರು ೫

ಬೆಂಗಳೂರಿನಿಂದ ನಿನ್ನೆ ರಾತ್ರಿ ರೈಲಿನಲ್ಲಿ ಆರು ಮಂದಿ ವಿದ್ಯಾರ್ಥಿಗಳು ಮೈಸೂರಿಗೆ ಟಿಕೆಟ್ಟಿಲ್ಲದೆ ಪ್ರಯಾಣ ಮಾಡುತ್ತಿದ್ದಾಗ ಅವರುಗಳನ್ನು ಮೈಸೂರು ನಗರದ 'ಬಿ' ಡಿವಿಜನ್ ಪೋಲೀಸರ ಸಹಾಯದಿಂದ ಶ್ರೀರಂಗಪಟ್ಟಣದ ಬಳಿ ರೈಲಿನಿಂದ ಇಳಿಸಿ ಪೋಲೀಸ್ ವಶಕ್ಕೆ ಒಪ್ಪಿಸಲಾಗಿದೆಯೆಂದು ತಿಳಿದುಬಂದಿದೆ. ರೈಲ್ವೆ ಅಧಿಕಾರಿಗಳ ಮಾತನ್ನು ಉಲ್ಲಂಘಿಸಿ, ಟಿಕೆಟ್ಟಿಲ್ಲದೆ ರೈಲಿನಲ್ಲಿ ಪ್ರಯಾಣ ಮಾಡಿದರೆಂಬ ತಪ್ಪಿತವನ್ನು ಹೊರಿಸಿ ಶ್ರೀರಂಗಪಟ್ಟಣದ ಮ್ಯಾಜಿಸ್ಟ್ರೇಟರ ಮುಂದೆ ಅವರುಗಳನ್ನು ಈ ದಿನ ಹಾಜರ್ಪಡಿಸಲಾಗುವುದೆಂದು ಗೊತ್ತಾಗಿದೆ

ವೀಣಾವಾದನ

ಕೃಷ್ಣರಾಜ ಮೊಹಲ್ಲಾ ನಾರಾ ಬೀದಿಯಲ್ಲಿರುವ ಶ್ರೀ ದೊಡ್ಡ ರಾಮ ದೇವಸ್ಥಾನದಲ್ಲಿ ಪ್ರದೋಷದ ಪ್ರಯುಕ್ತ ಆಸ್ಥಾನ ವೈಣಿಕ ವಿದ್ವಾನ್ ವಿ. ದೊರಸ್ವಾಮಿ ಅಯ್ಯಂಗಾರ್ಯರ ವೀಣಾವಾದನವನ್ನು ವಿದ್ವಾನ್ ಎಸ್. ಗೋಪಾಲರಾಯರ ಮೃದಂಗದೊಡನೆ ಏರ್ಪಡಿಸಿರುತ್ತದೆ. ಸರ್ವರಿಗೂ ಸ್ವಾಗತವಿದೆ.

ಬಲದೇವಸಿಂಗರೂ ಕಲ್ಕತ್ತೆಗೆ

ಕೇಂದ್ರ ಸರ್ಕಾರದ ರಕ್ಷಣಾ ಮಂತ್ರಿಗಳಾದ ಸರ್ದಾರ್ ಬಲದೇವಸಿಂಗರೂ ಪೂರ್ವಬಂಗಾಳದ ಪರಿಸ್ಥಿತಿಯನ್ನು ಪರಿಶೀಲಿಸುವ ಸಲುವಾಗಿ ಕಲ್ಕತ್ತೆಗೆ ವಿಮಾನದಲ್ಲಿ ತೆರಳಿದರು

ಚಿನ್ನದ ಗಣಿಯಲ್ಲಿ ಗುಂಡಿನೇಟಿನಿಂದ ೪ ಮರಣ

ಸಭೆ ಮೆರವಣಿಗೆಗಳಿಗೆ ಪ್ರತಿಬಂಧಕ

ಸ್ವಂ ಸು ಪ್ರೋ] ಬೆಂಗಳೂರು ೫

ಚಿನ್ನದ ಗಣಿಯ ಆಂಡರ್‌ಸನ್ ಪೇಟೆಯ ಬಳಿ ನಿನ್ನೆ ಸಂಜೆ ... ನ್ಯಾಯದ ... ಕಮ್ಯೂನಿಸ್ಟರು, ... ಹೋಗುತ್ತಿದ್ದಾಗ ಪೋಲೀಸಿನವರು ... ರೆಂದೂ, "... " ... ಗಳನ್ನು ... ಎಬ್ಬಿಸಿದರೆಂದೂ. ಪೋಲೀಸಿನವರು ... ಗುಂಡು ಹಾರಿಸಿದರೆಂದೂ ... ಸ್ಥಳದಲ್ಲೇ ನಾಲ್ವರು ಸತ್ತರೆಂದೂ ವರದಿಯಾಗಿದೆ. ಅನೇಕರಿಗೆ ... ಗಾಯಗಳಾಗಿವೆಯೆಂದು ಹೇಳಲಾಗಿದೆ. ... ಜಿ. ಸಿ. ... ಅಲ್ಲಿಗೆ ... ಮಾಡಿದ್ದಾರೆ. ... ಮಂತ್ರಿ ಶ್ರೀ ... ಅಲ್ಲಿಗೆ ಭೇಟಿ ಇತ್ತಿದ್ದರು. ಸಭೆ ಮತ್ತು ಮೆರವಣಿಗೆಗಳನ್ನು, ... ಕೊಂಡು ತಿರುಗಾಡುವುದನ್ನೂ ನಿಷೇಧಿಸಲಾಗಿದೆ. ...

• ಬೆಂಗಳೂರು ವಿದ್ಯಾರ್ಥಿ ಕಾಂಗ್ರೆಸ್ ... ನಿನ್ನೆ ... ಅಂಗೀಕರಿಸಿತು.

ಸಾಧ್ವಿ

ತಾ॥ ೫ ೧೧-೪೬ ಮಂಗಳವಾರ

ಕಾಂಗ್ರೆಸ್ಸಿನ ಸಂದೇಶ

ಮೈಸೂರು ಕಾಂಗ್ರೆಸ್ಸಿನ ೫ನೇ ಅಧಿವೇಶನವು ಬೆಂಗಳೂರಿನಲ್ಲಿ ನಡೆಯಿತಷ್ಟೆ. ಎಷ್ಟು ವೈಭವದಿಂದಲೂ, ಉತ್ಸಾಹದಿಂದಲೂ, ಅದನ್ನು ಜರುಗಿಸಬೇಕೆಂದು ಕಾರ್ಯಕರ್ತರುಗಳು ಅಪೇಕ್ಷಿಸಿದ್ದರೋ, ಅಷ್ಟಕ್ಕೆ ಅವಕಾಶವಾಗಲಿಲ್ಲ. ವಿಪರೀತವಾದ ಮಳೆಯ ದೆಸೆಯಿಂದ ಅಲ್ಲಿ ಮಾಡಿದ್ದ ಏರ್ಪಾಡುಗಳಿಗೆಲ್ಲಾ ಭಂಗ ಉಂಟಾಯಿತು. ಲಕ್ಷಾಂತರ ರೂಪಾಯಿನ ವೆಚ್ಚದಿಂದ ನಿರ್ಮಿಸಲಾಗಿದ್ದ ಸುಭಾಷ್ ನಗರದ ದಿವ್ಯ ದೃಶ್ಯವನ್ನು ನೋಡಿ, ಅದರಲ್ಲಿ ಭಾಗಿಗಳಾಗುವ ಸುಯೋಗವು ಅನೇಕರಿಗೆ ದೊರೆಯಲಿಲ್ಲ. ಇದರಿಂದ, ವ್ಯವಸ್ಥಾಪಕರುಗಳಿಗೆ ಅಪಾರ ದ್ರವ್ಯ ನಷ್ಟವಾಗಿರುವುದು ಮಾತ್ರವೇ ಅಲ್ಲದೆ ಅವರ ಉತ್ಸಾಹಕ್ಕೂ ಸಹ ಭಂಗವುಂಟಾಯಿತು.

ಆದರೂ ಸ್ವಾಗತ ಸಮಿತಿಯವರ ಮತ್ತು ಇತರ ಕೆಲಸಗಾರರ ಮುತುವರ್ಜಿಯಿಂದ ಅಧಿವೇಶನದ ಮುಖ್ಯ ಕಾರ್ಯಕ್ರಮಗಳು ಕ್ರಮಪ್ರಕಾರವಾಗಿ ಜರುಗಿದುದು ಸಮಾಧಾನಕರವಾದ ವಿಷಯ. ಪ್ರತಿನಿಧಿಗಳು ಕಳುಹಿಸಿದ್ದ ಖಾಸಗೀ ನಿರ್ಣಯಗಳಿಗೆ ಅವಕಾಶ ದೊರೆಯಲಿಲ್ಲ. ಆದರೂ ಕಾರ್ಯಕಾರಿ ಮಂಡಲಿಯವರು ಮಂಡಿಸಿದ ಪ್ರಧಾನ ನಿರ್ಣಯದ ಮೇಲೆ ಬಂದ ಹದಿನೈದು ತಿದ್ದುಪಡಿಗಳು ಮಂಜೂರಾಗದೆ ಮೂಲ ನಿರ್ಣಯವು ಅಂಗೀಕರಿಸಲ್ಪಟ್ಟುದರಿಂದ ಕಾಂಗ್ರೆಸ್ಸಿನ ನಾಯಕರಲ್ಲಿ ಮಹಾಸಭೆಗೆ ಇರುವ ಅಚಲ ವಿಶ್ವಾಸವೂ, ಭರವಸೆಯೂ ವೇದ್ಯವಾಗುತ್ತದೆ. ಪ್ರತಿನಿಧಿಗಳು ಕಳುಹಿಸಿದ್ದ ನಿರ್ಣಯಗಳನ್ನು ಚರ್ಚಿಸಲು ಅವಕಾಶ ದೊರೆಯಲಿಲ್ಲವಾದರೂ, ಅವುಗಳ ಅಭಿಪ್ರಾಯವನ್ನು ನಾಯಕರು ಮನಗಂಡು ಸೂಕ್ತವಾದ ಕಾರ್ಯಕ್ರಮಗಳನ್ನು ಕೈಗೊಳ್ಳುವರೆಂದು ಧಾರಾಳವಾಗಿ ನಂಬಬಹುದು. ಕಾಂಗ್ರೆಸ್ ನ. ಹಿಂದೆ ಕೈಕೊಳ್ಳುವ ಎಲ್ಲಾ ದೇಶಹಿತ ಕಾರ್ಯಕ್ರಮಗಳಲ್ಲಿಯೂ ಕೆಲಸಗಾರರ ಮತ್ತು ಕಾಂಗ್ರೆಸ್ ಪ್ರತಿನಿಧಿಗಳ ಸಂಪೂರ್ಣ ಸಹಕಾರವೂ, ಬೆಂಬಲವೂ ಇರುವುದೆಂಬುದು ಅಧಿವೇಶನದಲ್ಲಿ ಎದ್ದು ಕಾಣುತ್ತಿತ್ತು. ದೇಶಾಭಿಮಾನ, ನಿಸ್ವಾರ್ಥತ್ಯಾಗ ಮತ್ತು ಕಷ್ಟ ಸಹಿಷ್ಣುತೆಗಳ ಸಿದ್ಧತೆಯು ಎಲ್ಲೆಲ್ಲಿಯೂ ಕಾಣಬರುತ್ತಿತ್ತು.

ಸಂಸ್ಥಾನದ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಒಂದು ಹೋರಾಟವು ಅನಿವಾರ್ಯವೆಂಬ ಅಂಶದಲ್ಲಿ ಯಾರಲ್ಲಿಯೂ ಭಿನ್ನಾಭಿಪ್ರಾಯವು ಕಾಣಬರುತ್ತಿರಲಿಲ್ಲ. ಇದೇ ಈ ಅಧಿವೇಶನದ ಪ್ರಧಾನ ಚಿಹ್ನೆಯಾಗಿ ಕಾಣಬರುತ್ತಿತ್ತು. ಹೋರಾಟಕ್ಕಾಗಿ ಸಕಲವನ್ನೂ ತ್ಯಾಗಮಾಡಲು ಸಿದ್ಧರಾದ ದೇಶಾಭಿಮಾನಿಗಳ ಉತ್ಸಾಹವು ಉಕ್ಕಿ ಬರುತ್ತಿತ್ತು. ಅದರ ಪರಿಣಾಮವಾಗಿಯೇ ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಗಾಗಿ ಒಂದು ಹೋರಾಟವನ್ನು ಹೂಡಬೇಕೆಂಬ ನಿರ್ಣಯವು ಸರ್ವಾನುಮತದಿಂದ ಮಂಜೂರಾಯಿತು.

ಸಂಸ್ಥಾನದ ರಾಜಕೀಯ ಪರಿಸ್ಥಿತಿಯು, ಇಂದು ಯಾವ ಮಟ್ಟವನ್ನು ಮುಟ್ಟಿರುವುದೆಂಬುದನ್ನು ಅಧ್ಯಕ್ಷರಾದ ಶ್ರೀ ರೆಡ್ಡಿಯವರು ಬಹಳ ಹೃದಯಂಗಮವಾಗಿ ವರ್ಣಿಸಿರುವರು. ಪ್ರಜೆಗಳ ಆಕಾಂಕ್ಷೆಗಳು ಹೆಜ್ಜೆ ಹೆಜ್ಜೆಗೂ ತೃಣೀಕರಿಸಲ್ಪಟ್ಟು ಇನ್ನೊಂದು ಹೋರಾಟವು ಅನಿವಾರ್ಯವೆಂಬುದನ್ನು ಅವರು ಸ್ಪಷ್ಟಪಡಿಸಿರುವರು. ಆದರೂ ಕಾಂಗ್ರೆಸ್ ಸಂಸ್ಥೆಯು ಹೋರಾಟಕ್ಕಾಗಿಯೇ ಕಾಲು ಕೆರೆದು ನಿಂತಿಲ್ಲವೆಂಬುದನ್ನೂ, ವಿಧಿಯಿಲ್ಲದಿದ್ದರೆ ಹೋರಾಟ ಹೂಡಲು ಹಿಂಜರಿಯುವುದಿಲ್ಲವೆಂಬುದನ್ನೂ ಖಚಿತವಾಗಿ ತಿಳಿಸಿರುವರು.

ಸಂಸ್ಥಾನದ ರಾಜಕೀಯ ಸ್ಥಿತಿಯು ಬಿಕ್ಕಟ್ಟಿಗೆ ಬಂದಿರುತ್ತದೆ. ನೆರೆಯ ಪ್ರದೇಶಗಳಲ್ಲಿ ಪ್ರಜೆಗಳ ಇಷ್ಟದಂತೆ ಪ್ರಗತಿಯುಂಟಾಗುತ್ತಿರುವಾಗ, ಮೈಸೂರು ಹಳೆ ಮಾರ್ಗದಂತೆ ಇರುವುದು ಸಾಧ್ಯವಿಲ್ಲ. ಆದ್ದರಿಂದ ಇಂದಿನ ವಿದ್ಯಮಾನಗಳಿಗೆ ಅನುಗುಣವಾಗಿ ಮುಂದಡಿಯಿಡಲೇಬೇಕು. ಸಂಧಾನದ ಬಾಗಿಲನ್ನು ಇನ್ನೂ ತೆರೆದಿಟ್ಟಿರುವುದಾಗಿ ಕಾಂಗ್ರೆಸ್ಸು ಸೂಚಿಸಿದೆ. ಇದನ್ನು ಸರ್ಕಾರದವರು ಉಪಯೋಗಿಸಿಕೊಳ್ಳಬೇಕು.

ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಚಂಗಲರಾಯ ರೆಡ್ಡಿಯವರನ್ನು ದಿವಾನರು ಕೂಡಲೇ ಕರೆಸಿಕೊಂಡು, ಸಂಸ್ಥಾನದಲ್ಲಿ ಪ್ರಜಾ ಸರಾಗಿಯಾದ ಮಂತ್ರಿಮಂಡಲವನ್ನು ಸ್ಥಾಪಿಸುವ ವಿಚಾರವಾಗಿ ಸಮಾಲೋಚನೆ ನಡೆಸಬೇಕೆಂಬುದೇ ನಮ್ಮ ಸಲಹೆ. ಇದರಿಂದ ಕಾಂಗ್ರೆಸ್ಸಿಗೂ, ಸರ್ಕಾರಕ್ಕೂ ಮಧ್ಯೆ ಬಾಂಧವ್ಯವು ಬೆಳೆದು, ದೇಶದಲ್ಲಿ ಶಾಂತಿ ಸಮಾಧಾನಗಳು ನೆಲೆಸಲು ಅವಕಾಶವಾಗುವುದೆಂದು ನಾವು ನಂಬುತ್ತೇವೆ.

॥ ವಂದೇಮಾತರಂ ॥

ಮೈಸೂರು ನಗರ ಪೌರಸಭಾ ಚುನಾವಣೆ

14—11—1946 ಗುರುವಾರ

ಕಾಂಗ್ರೆಸ್ಸಿಗೇ ಓಟು ಕೊಡಿರಿ

ನಿಮ್ಮ ಅಮೂಲ್ಯವಾದ
ಓಟು ಯಾರಿಗೆ?
ಕಾಂಗ್ರೆಸ್ಸಿಗೇ!
ಏಕೆ?

1 ಭಾರತಮಾತೆಯ ಬಂಧವಿಮೋಚನೆಗೆ!
2 ಸಂಪೂರ್ಣ ಸ್ವಾತಂತ್ರ್ಯ ಸಾಧನೆಗೆ!
3. ಸ್ವೇಚ್ಛಾಡಳಿತದ ವಿರೋಧಕ್ಕೆ!
4. ಪ್ರಜೆಗಳ ಕುಂದುಕೊರತೆಗಳ ನಿವಾರಣೆಗೆ!
5. ಪ್ರಜಾ ಹಕ್ಕುಬಾಧ್ಯತೆಗಳ ರಕ್ಷಣೆಗೆ!
6 ಪೌರಾದಾಯದ ಸದ್ವಿನಿಯೋಗಕ್ಕೆ!
7. ಸೇವಾತತ್ಪರತೆ, ಸೇವಾದೀಕ್ಷೆಗೆ!
8. ಶಾಂತಿ ಸೌಖ್ಯಗಳ ಸ್ಥಾಪನೆಗೆ!

ರಾಜಕಮಲ್
ಮೈಸೂರು
ತಾ॥ ೩೧-೧೦-೪೬ ರಿಂದ
"ನೂರ್ ಜಹಾನ್," "ಗೀತಾಬಾಲಿ,"
"ರಾಮಕಮಲ್" ನಟಿಸಿರುವ
ವಿಲೇಜ್ ಗರ್ಲ್
(ಹಳ್ಳಿಯ ಹುಡುಗಿ)
ಪ್ರತಿ ದಿನ ಮೂರು ಆಟಗಳು

OPERA TALKIES
6-11-46 ರಿಂದ
ಮೂರನೇ ವಾರ
ಶ್ರೀ ಮುರುಗನ್
(ತಮಿಳು)
ಪಾತ್ರ:-ಹೊನ್ನಪ್ಪ ಭಾಗವತರ್,
ಜೀವರತ್ನಂ, ಮಾಲತಿ, ರಾಮಚಂದ್ರರ್,

Edited, printed and published by A. R. Nagarajan at the Sadhvi Press D Subbaiah Road Mysore



ಕೆ. ಎಸ್. ರಾಮಯ್ಯ,
ಬ್ರಾಂಚ್ ಮ್ಯಾನೇಜರ್
ಚಂದ್ರೇಗೌಡ ರಸ್ತೆ, :: ಬೆಂಗಳೂರು ಸಿಟಿ
[ವಿಜಯಾ ಏಜನ್ಸೀಸ್, ಮೈಸೂರು]

ತಾ॥ 14—11—46 ನೇ ಗುರುವಾರ ನಡೆಯಲಿರುವ
ಮೈಸೂರು ಪೌರಸಭಾ ಚುನಾವಣೆಗೆ ನಾವುಗಳು ಉಮೇದುವಾರರಾಗಿ ನಿಂತಿದ್ದೇವೆ
ನಮ್ಮಗಳಿಗೆ ತಾವು ದಯವಿಟ್ಟು ತಮ್ಮ ಅಮೂಲ್ಯವಾದ ಓಟನ್ನು ಕೊಟ್ಟು
ತಮ್ಮ ಸೇವೆ ಮಾಡುವ ಅವಕಾಶ ... ಕಲ್ಪಿಸಿಕೊಡಬೇಕೆಂದು ಪ್ರಾರ್ಥಿಸುತ್ತೇವೆ
... ಮತ ನೀಡಬೇಕಾಗಿ ... ವಿನಂತಿಸಿಕೊಳ್ಳುತ್ತೇವೆ

1	ಡಿ. ನಾರಾಯಣ	ಸೂರ್ಯ	X
2	ಟಿ. ಎಸ್. ರಾಜಗೋಪಾಲಯ್ಯಂಗಾರ್	ಕುದುರೆ	X
3	ಎಂ. ರಾಮಸ್ವಾಮಿ	ಆನೆ	X

ಕೋ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಬುಧವಾರ ೬—೧೧—೪೬ [ಸಂಚಿಕೆ ೫೨

ಗಲಭೆ ನಿಲ್ಲದಿದ್ದರೆ ಮಹಾತ್ಮರ ಉಪವಾಸ

ಅರಮನೆ ಸುದ್ದಿ

ಮೈಸೂರು ೬

ಶ್ರೀ ಮನ್ಮಹಾರಾಜರವರು ನಿನ್ನೆ ...ದ ಜಿಲ್ಲಾಧಿಕಾರಿಗಳಾದ ಮಿ|| ಮಹಮದ್, ಕೃಷ್ಣರಾಜನಗರದ ...ಸ್ಪೆಕ್ಟರ್ ಶ್ರೀ ಬಳೆ ಸಿದ್ದಲಿಂಗ ...ಮತ್ತು ದಾವಣಗೆರೆಯ ವಕೀಲರಾದ ವೀರಪ್ಪನವರುಗಳಿಗೆ ಭೇಟಿಯನ್ನು ... ಪಾಲಿಸಿದ್ದರು.

ಯಕ್ಷಗಾನ

ಹನುಮಂತಪ್ಪ ಚಾಮುಂಡೇಶ್ವರಿ ...ಗಾನ ಪುನರುಜ್ಜೀವನ ಸಂಘದವರು ...ಸೂರು ಹಳೇ ಸಂತೇಪೇಟೆಯಲ್ಲಿ ...ಪಿಲಾಸ್ ಹೋಟೆಲಿನಲ್ಲಿ ಈ ...ಗಂಟೆಗೆ 'ವೃಂದಾವನ ಮಹಾ...' ಕಥೆಯು ನಡೆಸಲ್ಪಡುತ್ತಿ. ಕಲಾ...ಸಿಗಳು ಪ್ರೋತ್ಸಾಹಿಸಬೇಕಾಗಿ...ನೆ

...ಲ್ಲಾ ಆಹಾರ ಸಮ್ಮೇಳನ

೧೧ ನೇ ತಾ|| ಮೈಸೂರು ಜಿಲ್ಲಾ ... ಸಮಿತಿಯ ಆಶ್ರಯದಲ್ಲಿ ಟೌ...ಲ್ಲಿ ನಡೆಯಬೇಕಾಗಿದ್ದ ಆಹಾರ ...ಳನವನ್ನು ಮುಂದುವರಿಸಿ ಡಿಸೆಂಬ... ನೇ ಭಾನುವಾರ ಸಂಜನಗೂಡು ...ಗಣ್ಣನವರ ಛತ್ರದಲ್ಲಿ ನಡೆಸಲಾ...ಮ ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ...ತ್ ಕೆ ಕುಮಾರಸ್ವಾಮಿಯವರು ...ತ್ತಾರೆ

...ಗ್ರೆಸ್ಸಿನವರಿಗೇ ಓಟು ಕೊಡಿ

... ತಿಂಗಳು ೧೪ ನೇ ತಾ|| ನಡೆಯು... ಸಭಾ ಚುನಾವಣೆಗೆ ನಿಂತಿರುವ, ...ತ್ತ ಪುರ ಶಿವ-ಸಿಗಳ ವಿಷಯಗಳಲ್ಲಿ ...ಸಿರುವ, ಪ್ರಜಾ ಬೆಂಬಲವನ್ನು ...ಗಿ ಪಡೆದು ಶಾಂತಿ, ಶಿಸ್ತುಗಳಿಂ...ಧ್ಯೇಯ ಪಾಲಿಸುತ್ತ ಬಂದಿರುವ ...ಸ್ ಉಮೇದುವಾರರಿಗೇ ಓಟು ...ಚುನಾಯಿಸಬೇಕೆಂದು ಸಂತೆಪೇಟೆ ...ಬಿ ಕಟ್ಟೆಪ್ಪನವರು ಮೈಸೂರು ...ಯರುಗಳನ್ನು ಪ್ರಾರ್ಥಿಸಿದ್ದಾರೆ.

...ಗ್ರಹ ಪತ್ತೆಯಿಲ್ಲ

...] ಶ್ರೀರಂಗಪಟ್ಟಣ ೫ ...ರಿನ ಶ್ರೀರಂಗನಾಥಸ್ವಾಮಿಯವ...ನದಲ್ಲಿ ಶ್ರೀ ನರಸಿಂಹಸ್ವಾಮಿ ...ಸ್ನಿಧಿಯಲ್ಲಿದ್ದ ಬೆಳ್ಳಿಯ ವಿಗ್ರಹ ...ಲ್ಲವಾಗಿದೆ. ಈ ಬಗ್ಗೆ ದೇವ... ಕೆಲವು ನೌಕರರ ಮನೆಯನ್ನು ಜ...ಲಾಯಿತು. ವಿಗ್ರಹವು ಸಿಕ್ಕಿಲ್ಲ.

...ರೂರವರಿಗೆ ಪ್ರಶಸ್ತಿ

...ರ್ ೧೫ ರಲ್ಲಿ ನಡೆಯುವ ಪದ... ಸಮಾರಂಭದಲ್ಲಿ ಕಾಶಿ ವಿಶ್ವವಿ...ದವರು ಪಂಡಿತ ನೆಹರೂರವರ ...ಆಫ್ ಸೈನ್ಸ್-ಪ್ರಶಸ್ತಿಯನ್ನು ...ರ್ಧರಿಸಿದ್ದಾರೆ. ಡಾ|| ರಾಜೇಂ...ವರು ಘಟಿಕೋತ್ಸವ ...ಭಾಷಣ ಮಾಡುವರು.

...ಮಿಂದರ ಮುಷ್ಕರ

...ತ್ಕಾಲಿಕ ಸರ್ಕಾರದ ಸಚಿವ... ...ಗಳಾದ ನೆಹರು, ಪಟೇಲ್, ...ಅಲಿಖಾನ್ ಮತ್ತು ನಿಷ್ತರ್ ...ಎಂದು. ಸಂಯುಕ್ತ ಮಧ್ಯ... ...ಮಿ, ಕಲ್ಕತ್ತ ನಗರ ಮತ್ತು ...ಪ್ರಾಂತ್ಯದ ಜಮೀನುದಾರರನ್ನು ... ...ಯ ನೀಡಬೇಕೆಂದು ...ದ್ದಾರೆ

ಕೋಮುವಾರು ಗಲಭೆ

೫೦೧೮ ಕೊಲೆ, ೧೩೩೭ ಗಾಯ

ಭಾರತದಲ್ಲಿ ಜುಲೈ ೧ ರಿಂದ ಅಕ್ಟೋಬರ್ ೩೦ ರವರೆವಿಗೆ ಕೋಮುವಾರು ಗಲಭೆಗಳಲ್ಲಿ ೫೦೧೮ ಜನ ಕೊಲ್ಲಲ್ಪಟ್ಟರು, ೧೩೩೭೦ ಮಂದಿ ಗಾಯಗೊಂಡಿದ್ದಾರೆ. ಈ ಅಂಕೆ ಅಂಶಗಳಲ್ಲಿ ಪೂರ್ವ ಬಂಗಾಳಾ ಗಲಭೆಗಳ ಸಾವು ನೋವುಗಳು ಸೇರಿಲ್ಲ-ಎಂದು ನಿನ್ನೆ ಕಾಮನ್ಸ್ ಸಭೆಯಲ್ಲಿ ಭಾರತದ ಅಂಡರ್ ಸೆಕ್ರೆಟರಿ ಮಿ|| ಹೆಂಡರ್‌ಸನ್ನರು ಬಹಿರಂಗ ಪಡಿಸಿದರು. ಪೂರ್ವ ಬಂಗಾಳದಲ್ಲಿ ಸಾವು ನೋವುಗಳು ಸಾವಿರಗಟ್ಟಲೆ ಆಗಿಲ್ಲವೆಂದೂ, ಕೆಲವು ನೂರುಗಳು ಮಾತ್ರ ಇರಬಹುದೆಂದೂ ಹೇಳಿದರು.

ದ|| ಆಫ್ರಿಕ-ಭಾರತದ ಹಳೇ ರೆಕಾರ್ಡುಗಳು

ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರ ಸ್ಥಾನ ಮಾನ ಮತ್ತು ಹಕ್ಕು ಬಾಧ್ಯತೆಗಳ ಬಗ್ಗೆ ಕೇಂದ್ರ ಸರ್ಕಾರದಲ್ಲಿದ್ದ ಬಹಳ ಅಮೂಲ್ಯವಾದ ರೆಕಾರ್ಡುಗಳನ್ನು ೧೧೯೫ ಪ್ರ ರೂಗಳ ವೆಚ್ಚದಿಂದ ಟೈಪ್ಪರ್ ಪ್ರತಿಗಳನ್ನು ವಿಮಾನದ ಮೂಲಕ ವಿಶ್ವಸಂಸ್ಥೆಯಲ್ಲಿ ಭಾಗವಹಿಸುತ್ತಿರುವ ಭಾರತದ ಪ್ರತಿನಿಧಿಗಳಿಗೆ ಮೊನ್ನೆ ಕಳುಹಿಸಲಾಗಿದೆ. ೧೮೫೫ ನೇ ಇಸವಿಗಳ ಹಿಂದಿನ ರೆಕಾರ್ಡುಗಳೂ ಅದರಲ್ಲಿವೆಯೆಂದು ಗೊತ್ತಾಗಿದೆ.

ಅಮೆರಿಕಾ-ಚೀನಾ ಒಪ್ಪಂದ

ಚೀನಾಕ್ಕೂ ಅಮೆರಿಕಾ ಸಂಯುಕ್ತ ಸಂಸ್ಥಾನಕ್ಕೂ ೧೫ ವರ್ಷಗಳ ಸ್ನೇಹ, ವ್ಯಾಪಾರ ಮತ್ತು ನೌಕಾ ಒಪ್ಪಂದವಾಗಿದೆ. ಈ ಒಪ್ಪಂದದಲ್ಲಿ ಕಮ್ಯೂನಿಸ್ಟ್ ವಿರುದ್ಧವಾದ ಅಂಶಗಳಾಗಲೀ, ರಾಜಕೀಯ ವಿಚಾರಗಳಾಗಲೀ ಇಲ್ಲವೆಂದು ಗೊತ್ತಾಗಿದೆ.

ಇನ್ನೆರಡು ತಿಂಗಳು ಮಾತ್ರ ಆಹಾರದ ಬಿಕ್ಕಟ್ಟು

ಈ ಸಂದರ್ಭದಲ್ಲಿ ಮಳೆ ಬೆಳೆಗಳು ಚೆನ್ನಾಗಿರುವುದರಿಂದ ಆಹಾರ ಸ್ಥಿತಿ ಸುಧಾರಿಸುತ್ತ ಬಂದಿದೆ. ಹೊರಗಿನಿಂದ ತರಿಸಿಕೊಳ್ಳುವುದರ ಮೂಲಕವೂ, ದೇಶದ ಆಹಾರದ ಸ್ಥಿತಿಯನ್ನು ಬಹಳ ಮಟ್ಟಿಗೆ ವಿಶೇಷ ಏರ್ಪಾಡು ಮಾಡಲಾಗುತ್ತಿದೆ. ಆದರೆ ಇನ್ನೆರಡು ತಿಂಗಳು ಬಿಕ್ಕಟ್ಟು ಇದ್ದೇ ಇರುತ್ತದೆ-ಎಂದು ಕೇಂದ್ರ ಸರ್ಕಾರದ ಆಹಾರ ಸಚಿವರಾದ ಡಾ|| ರಾಜೇಂದ್ರ ಪ್ರಸಾದರು ತಿಳಿಸಿದ್ದಾರೆ.

ಮಹಾತ್ಮರ ಉಪವಾಸ

ಬಿಹಾರಿನ ಗಲಭೆಗಳು ೨೪ ಗಂಟೆಗಳಲ್ಲಿ ನಿಲ್ಲದಿದ್ದಲ್ಲಿ ಮಹಾತ್ಮ ಗಾಂಧಿಯವರು ಆಮರಣಾಂತ ಉಪವಾಸ ವ್ರತ ಕೈಗೊಳ್ಳಲು ತೀರ್ಮಾನಿಸಿದ್ದಾರೆ- ಎಂದು ಡಾ|| ರಾಜೇಂದ್ರ ಪ್ರಸಾದರು ಪಾಟ್ನಾದಲ್ಲಿ ವಿಮಾನದಿಂದ ಇಳಿದ ಕೂಡಲೇ ಘೋಷಿಸಿದರು. ಗಲಭೆಗಳು ಮುಂದುವರಿದಿದ್ದೇ ಆದರೆ ಮಹಾತ್ಮ ಗಾಂಧಿಯವರು ಪಾಟ್ನಾಕ್ಕೆ ಬಂದು ಇಲ್ಲೇ ಉಪವಾಸವಾರಂಭಿಸಬಹುದು- ಎಂದು ತಿಳಿಸಿದರು. ಇವರ ಕೂಡ ಕಾಂಗ್ರೆಸ್ ಅಧ್ಯಕ್ಷ ಆಚಾರ್ಯ ಕೃಪಲಾನಿಯವರೂ ಪಾಟ್ನಾಕ್ಕೆ ಆಗಮಿಸಿದ್ದಾರೆ.

ಬಾಂಬು ಹಾಕುವುದಾಗಿ ನೆಹರೂರವರ ಎಚ್ಚರಿಕೆ

ಜನರು ಪುಂಡಾಟವನ್ನು ಕೊನೆಗಾಣಿಸದಿದ್ದರೆ ಸರ್ಕಾರದವರು ಕೈ ಮುಗಿದು ಕುಳಿತಿರಲು ಸಾಧ್ಯವೇ ಇಲ್ಲ. ಪರಿಸ್ಥಿತಿ ಹತೋಟಿ ಮೀರಿದರೆ ಗುಂಡು ಹಾರಿಸಲೇಬೇಕಾಗಿದೆ. ಅವಶ್ಯಕವಿದ್ದರೆ ಬಾಂಬುಗಳನ್ನು ಸಹ ಉಪಯೋಗಿಸಬೇಕಾಗುವುದು-ಎಂದು ಪಂ|| ನೆಹರೂರವರು ನಿನ್ನೆ ಪಾಟ್ನಾ ಜಿಲ್ಲೆಯ ತಾರೆಗ್ನ ಎಂಬಲ್ಲಿ ಭಾಷಣ ಮಾಡಿ ಉಗ್ರ ಎಚ್ಚರಿಕೆ ಇತ್ತಿದ್ದಾರೆ.

ಬಿಹಾರಿನಲ್ಲಿ ಭೀಕರ ಪರಿಸ್ಥಿತಿ

ಬಿಹಾರ್ ಪ್ರಾಂತ್ಯದಲ್ಲಿ ಕೋಮುವಾರು ಗಲಭೆ ಭೀಕರ ರೂಪವನ್ನು ತಾಳಿದೆ. ಪಂ|| ನೆಹರೂ ಮತ್ತು ನಿಷ್ತರ್ ಇವರಿಬ್ಬರೂ ಪಾಟ್ನಾ ಜಿಲ್ಲೆಯಲ್ಲಿ ಸಂಚರಿಸುತ್ತಿದ್ದಾರೆ. ಆ ಪ್ರದೇಶದಲ್ಲಿ ೧೦೦೦ ಮಂದಿ ಸತ್ತಿರಬಹುದೆಂದು ಪ್ರಾಂತೀಯ ಲೀಗ್ ಅಧ್ಯಕ್ಷರು ಹೇಳಿಕೆ ಇತ್ತಿದ್ದಾರೆ. ೧೧೧ ಮಂದಿ ಸತ್ತಿರುವುದಾಗಿ ಸರ್ಕಾರ ಪ್ರಕಟಣೆ ಹೊರಬಿದ್ದಿದೆ. ಭಾಗಲ್ಪುರ್ ಮತ್ತು ಮಾಂಘೀರ್ ಜಿಲ್ಲೆಗಳಲ್ಲಿ ಉಗ್ರ ಗಲಭೆ ಆರಂಭವಾಗಿರುವುದಾಗಿ ವರದಿ ಬಂದಿದೆ.

ಇಂಗ್ಲೆಂಡಿನಲ್ಲಿ ಭಾರತೀಯರ ವಿಜಯ

ಬರ್ಮಿಂಗ್‌ಹ್ಯಾಂ ಪುರಸಭಾ ಚುನಾವಣೆಯಲ್ಲಿ ಲೇಬರ್ ಪಕ್ಷದ ಪರವಾಗಿ ಸ್ಪರ್ಧಿಸಿದ್ದ ಭಾರತೀಯರಾದ ಡಾ|| ಶ್ರೀನಿವಾಸರು ತಮ್ಮ ವಿರೋಧಿ ಟೋರಿ ಪಕ್ಷದ ಉಮೇದುವಾರರನ್ನು ೪೫೦೦ ವೋಟುಗಳಿಂದ ಸೋಲಿಸಿದ್ದಾರೆ.

ಕೇಂದ್ರ ಸರ್ಕಾರದ ಆಹಾರ ಸಚಿವರಾದ ಡಾ|| ರಾಜೇಂದ್ರ ಪ್ರಸಾದರು ನಿನ್ನೆ ದಿನ ದೆಹಲಿಯಿಂದ ವಿಮಾನದಲ್ಲಿ ಪಾಟ್ನಾಕ್ಕೆ ತೆರಳಿದರು.

ಕಲ್ಲೂರು ಸುಬ್ಬರಾಯರ ಗಡೀಪಾರು

ಸ್ವಂ. ಸು. ಪ್ರೆ(F] ಬೆಂಗಳೂರು ೬

ರಾಜಧಾನಿಯ ವಿದ್ಯಾರ್ಥಿ ಕಾಂಗ್ರೆಸ್ ಆರಂಭ ಭಾಷಣವನ್ನು ಮಾಡುವುದಕ್ಕಾಗಿ ಹಿಂದೂಪುರದಿಂದ ಇಲ್ಲಿಗೆ ಈ ದಿನ ಬೆಳಗ್ಗೆ ಆಗಮಿಸಿದ ಮದ್ರಾಸ್ ಶಾಸನ ಸಭಾ ಸದಸ್ಯರಾದ ಶ್ರೀ|| ಕಲ್ಲೂರು ಸುಬ್ಬರಾಯರ ಮೇಲೆ ಸಾರ್ವಜನಿಕ ರಕ್ಷಣಾ ಶಾಸನದ ಪ್ರಕಾರ ಸರ್ಕಾರದವರು ಒಂದು ಆಜ್ಞೆಯನ್ನು ಜಾರಿ ಮಾಡಿ ಅವರು ಸಂಸ್ಥಾನದ ಗಡಿಯನ್ನು ಬಿಟ್ಟು ಹೋಗಬೇಕೆಂದು ತಿಳಿಸಿದ್ದರು. ಅವರು ಬೆಂಗಳೂರು ರೈಲ್ವೆ ಸ್ಟೇಷನ್ನಿನಲ್ಲಿ ಇಳಿದನಂತರ ಆಜ್ಞೆಯನ್ನು ಜಾರಿ ಮಾಡಿ ಅವರನ್ನು ಮೋಟಾರಿನಲ್ಲಿ ಗಡಿಯವರೆಗೆ ಕರೆದುಕೊಂಡು ಹೋಗಿ ಬಿಡಲಾಯಿತು.

ಮಂಡಿ ಹರಿಯಣ್ಣನವರ ನಿಧನ

ಸುಪ್ರಸಿದ್ಧ ದಾನಿಗಳೂ ನಗರದ ಗಣ್ಯ ವರ್ತಕರೂ ಆಗಿದ್ದ ಶ್ರೀ ಮಂಡಿ ಹರಿಯಣ್ಣನವರು ನಿನ್ನೆ ರಾತ್ರಿ ತಮ್ಮ ೬೫ ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರ ಗೌರವಾರ್ಥವಾಗಿ ಧಾನ್ಯ ವರ್ತಕರುಗಳ ಮತ್ತು ಇತರ ಹಲವು ಅಂಗಡಿಗಳು ಮುಚ್ಚಲ್ಪಟ್ಟಿದ್ದುವು.

ಕೋಲಾರದಲ್ಲಿ ಶಾಂತಿ

ಚಿನ್ನದ ಗಣಿ ಪ್ರದೇಶದಲ್ಲಿ ಈಗ ಪರಿಸ್ಥಿತಿಯು ಶಾಂತವಾಗಿದೆ. ಗೃಹ ಮಂತ್ರಿಗಳು ವಾಪಸು ಬಂದಿರುವರು. ಮೈಸೂರು ಗಣಿಗಳ ಕೆಲಸಗಾರರು ಕೆಲಸಕ್ಕೆ ಹಿಂತಿರುಗಿರುವರು.

ಶಿವಸ್ವಾಮಯ್ಯಂಗಾರರವರ ನಿಧನ

ಸುಪ್ರಸಿದ್ಧ ದೇಶ ಭಕ್ತರೂ, ಕಾಶೀ ವಿಶ್ವವಿದ್ಯಾಲಯದ ಸ್ಥಾಪಕರುಗಳೂ ಆದ ಸರ್ ಪಿ ಎಸ್ ಶಿವಸ್ವಾಮಿಅಯ್ಯಂಗಾರವರು ನಿನ್ನೆ ಮದ್ರಾಸಿನಲ್ಲಿ ಸ್ವರ್ಗಸ್ಥರಾದರೆಂದು ಸುದ್ದಿ ಬಂದಿದೆ.

೭೪ ವಿದ್ಯಾರ್ಥಿಗಳಿಗೆ ಸಜಾ

ಸ್ವಂ ಸು ಶ್ರೀರಂಗಪಟ್ಟಣ ೬

ಪಿಕೆಟಿಂಗ್ ಮಾಡಿದ ಪ್ರಯುಕ್ತ ಅರೆಸ್ಟ್ ಆಗಿ ಕೈದಿಗಳಾಗಿದ್ದ ೭೪ ನೇ ಕಲಮಿನ ಪ್ರಕಾರ ಮೊದಲನೇ ಮ್ಯಾಜಿಸ್ಟ್ರೇಟರ ಮುಂದೆ ವಿಚಾರಣೆಗೆ ಗುರಿಯಾಗಿದ್ದ ೭೪ ವಿದ್ಯಾರ್ಥಿಗಳಿಗೆ ತಲಾ ಮೂ ೪ ರೂ. ಜುಲ್ಮಾನೆ, ತಪ್ಪಿದರೆ ಒಂದು ವಾರ ಸಾದಾ ಸಜೆಯನ್ನು ವಿಧಿಸಲಾಯಿತು. ಅವರ ಪೈಕಿ ೪ ಜನರು ಜುಲ್ಮಾನೆ ಕೊಟ್ಟು ಬಿಡುಗಡೆಯಾಗಿರು. ಇತರರು ಕಾರಾಗೃಹಕ್ಕೆ ತೆರಳಿದರು. ಅವರೆಲ್ಲರನ್ನೂ ಹಲ್ಲಿನ ಸಬ್ ಜೈಲಿನಲ್ಲಿ ಇಡಲಾಗಿದೆ.

ಚುನಾವಣೆಯಲ್ಲಿ ಸಹಕಾರ

ಮೈಸೂರು ೬

ದೇಶಪ್ರೇಮಿ ಸಂಘದ ಕಾರ್ಯದರ್ಶಿ ಸಮಿತಿಯವರು ಮೊನ್ನೆ ದಿನ ಸಭೆ ಸೇರಿ ಬರಲಿರುವ ಪೌರಸಭಾ ಚುನಾವಣೆಯಲ್ಲಿ ಸಂಘದವರು ಕಾಂಗ್ರೆಸ್ಸಿಗೆ ಬೆಂಬಲ ನೀಡಬೇಕೆಂದು ತೀರ್ಮಾನಿಸಿದರು. ... [illegible]

[illegible]

ಸಾಧ್ವಿ
ತಾ॥ ೬-೧೧-೪೬ ಬುಧವಾರ

ಮೈಸೂರಿನ ಮತದಾರರು ಅಂಧಾನುಕರಣೆಗಳಾಗಲಾರರು

ಇದೇ ೧೪ ನೇ ತಾ॥ ನಡೆಯಲಿರುವ ರಾಜಧಾನಿಯ ಪೌರಸಭಾ ಚುನಾವಣೆಗೆ ಸ್ವತಂತ್ರ ಮತ್ತು ಕಾಂಗ್ರೆಸ್ ಪಕ್ಷದ ಉಮೇದುವಾರರು ನಿಂತಿರುವರು. ಮೈಸೂರು ನಗರದ ಪುರೋಭಿವೃದ್ಧಿಗಾಗಿ ಇದುವರೆಗೆ ನಗರದ ಗಣ್ಯ ಮಹನೀಯರನೇಕರು ಪುರಸಭಾ ಸದಸ್ಯರಾಗಿ ಯಥಾಶಕ್ತಿ ಸೇವೆ ಸಲ್ಲಿಸಿರುತ್ತಾರೆ. ಈಗ ಪೌರಸಭಾ ಸದಸ್ಯತ್ವದ ಎಲ್ಲಾ ಸ್ಥಾನಗಳನ್ನೂ ಸರ್ವಾನುಮತದಿಂದ ಆಕ್ರಮಿಸಿಕೊಂಡಿರುವ ಕಾಂಗ್ರೆಸ್ ಪಕ್ಷದ ಸದಸ್ಯರೂ ಕಳೆದ ಆರು ವರ್ಷಗಳಿಂದ ತಮ್ಮ ಶಕ್ತ್ಯನುಸಾರ ಸೇವೆ ಸಲ್ಲಿಸಿ ಪ್ರಜಾ ಮನ್ನಣೆ ಪಡೆದಿದ್ದಾರೆ. ಇವರು ಪೌರಸಭೆಯ ಮತ್ತು ಪುರಜನರ ಉನ್ನತಿಗಾಗಿ ಸಲ್ಲಿಸಿರುವ ಸೇವೆಗಳನ್ನು ಕುರಿತು ಈಗಾಗಲೇ ವಿವರಿಸಲಾಗಿದೆ. ಕಾಂಗ್ರೆಸ್ ಪಕ್ಷದ ಉಮೇದುವಾರರನ್ನು ಪ್ರತಿಸ್ಪರ್ಧಿಸಿ ಚುನಾವಣೆಗೆ ನಿಂತಿರುವ ಹಲವು ಸ್ವತಂತ್ರ ಉಮೇದುವಾರರ ಧ್ಯೇಯ ಘೋಷಣೆಗಳನ್ನು ವಿಮರ್ಶಿಸೋಣ. ನಗರದ ಹಾಲಿನ ಸರಬರಾಜನ್ನು ಉತ್ತಮಗೊಳಿಸುವುದು, ಈಗ ಇರತಕ್ಕ ನೀರಿನ ಕೊರತೆಯನ್ನು ತಪ್ಪಿಸಿ ಸದಾ ಕಾಲದಲ್ಲಿಯೂ ಎಲ್ಲಾ ಮೊಹಲ್ಲಾಗಳಿಗೂ ನೀರು ಒದಗುವಂತೆ ಮಾಡುವುದು, ಸೌದೆ ಇದ್ದಿಲು ಇತ್ಯಾದಿಗಳ ಅಭಾವವನ್ನು ಹೋಗಲಾಡಿಸಿ ಸುಲಭ ಬೆಲೆಗೆ ಸಿಗುವಂತೆ ಮಾಡುವುದು, ಮನೆ ಇಲ್ಲದ ಬಡಬಗ್ಗರಿಗೆ ಸುಲಭ ದರದಲ್ಲಿ ಗೃಹ ನಿರ್ಮಾಣ ವ್ಯವಸ್ಥೆ ಕಲ್ಪಿಸುವುದು, ಈಗಿರುವ ಆಹಾರ, ಬಟ್ಟೆ ಇವುಗಳ ಅಭಾವವನ್ನು ತಪ್ಪಿಸಲು ಸಾಧ್ಯವಾದ ಉದ್ಯಮ ಕೈಗೊಳ್ಳುವುದು ಮತ್ತು ನಗರ ನಿವಾಸಿಗಳ ಹಿತಸಾಧನೆಯೇ ಪೌರಸಭೆಯ ಮುಖ್ಯ ಕರ್ತವ್ಯವೆಂದು ತಿಳಿದು ಕೆಲಸ ಮಾಡುವುದು" ಎಂದು ಪ್ರಕಟಿಸಿರುವ ಸ್ವತಂತ್ರ ಉಮೇದುವಾರರ ಉನ್ನತ ಧ್ಯೇಯಗಳನ್ನು ಎಲ್ಲರೂ ಸ್ವಾಗತಿಸುವರು. ಕಾಂಗ್ರೆಸ್ ಪಕ್ಷದ ಸದಸ್ಯರೂ ಸಹ ಮೇಲ್ಕಂಡ ಧ್ಯೇಯಗಳನ್ನೇ ಅಲ್ಲದೆ ಬಹು ಮುಖ್ಯವಾದ ನಗರ ನೈರ್ಮಲ್ಯ, ಆರೋಗ್ಯ ಮತ್ತು ಕಂದಾಯವನ್ನು ಕಡಿಮೆ ಮಾಡುವುದೇ ಮುಂತಾದ ಧ್ಯೇಯಗಳನ್ನೂ ಇಟ್ಟುಕೊಂಡು ಇವುಗಳನ್ನು ಕಾರ್ಯತಃ ನಡೆಸಿರುತ್ತಾರೆ.

ಹಾಲು ಸರಬರಾಜಿನ ಬಗ್ಗೆ ಇತ್ತೀಚಿನ ಕ್ಷಾಮಡಾಮರಗಳಿಂದ ಜಾನುವಾರುಗಳಿಗೆ ಮೇವಿಲ್ಲದೆಯೂ ರೋಗ ಬಾಧೆಯಿಂದ ನಷ್ಟ ಸಂಭವಿಸಿರುವುದರಿಂದಲೂ ಈ ಅಭಾವ ತಲೆದೋರಿದೆ. ನಗರದಲ್ಲಿ ಹಾಲು ಸರಬರಾಜಿನ ವ್ಯವಸ್ಥೆಯನ್ನು ಉತ್ತಮಗೊಳಿಸಿ ಒಂದು ಮಾದರಿ ಡೈರಿ ಫಾರಮ್ಮನ್ನು ಸ್ಥಾಪಿಸಲು ಕಾಂಗ್ರೆಸ್ ಪಕ್ಷದವರು ದೊಡ್ಡ ಯೋಜನೆಯೊಂದನ್ನು ಸಿದ್ಧಗೊಳಿಸಿರುವರು.

ಈಗ ಮೈಸೂರು ನಗರವು ಬಹು ಮಟ್ಟಿಗೆ ಬಡಾಯಿಸಿ ಜನ ಸಾಂದ್ರತೆಯೂ ಹೆಚ್ಚುತ್ತಿದೆ. ಆದರೆ ಯಂತ್ರೋಪಕರಣಗಳ ಅಭಾವದಿಂದ ಸರಬರಾಜನ್ನು ಹೆಚ್ಚಿಸಲು ಸಾಧ್ಯವಿಲ್ಲವಾಗಿತ್ತು. ಯಂತ್ರೋಪಕರಣಗಳು ಒದಗಿದ ಕೂಡಲೇ ಈ ವ್ಯವಸ್ಥೆಯನ್ನು ಉತ್ತಮ ಪಡಿಸುವ ಬಗ್ಗೆ ಈಗಿನ ಪೌರಸಭಾ ಪಕ್ಷದವರು ೨೬ ಲಕ್ಷ ರೂಪಾಯಿನ ಒಂದು ಯೋಜನೆಯನ್ನು ತಯಾರಿಸಿರುವರಲ್ಲದೆ ಕ್ಷಿಪ್ರದಲ್ಲಿಯೇ ಅದನ್ನು ಕಾರ್ಯಗತ ಮಾಡಲಿರುವರು.

ಇತ್ತೀಚಿನ ನಗರದಲ್ಲಿಯೂ ಇತರ ಕಡೆಗಳಲ್ಲಿಯೂ ಕೈಗಾರಿಕಾ ಕಾರ್ಖಾನೆಗಳು ಹೆಚ್ಚಿ ಅವುಗಳ ಉಪಯೋಗಕ್ಕೆ ವಿಶೇಷವಾಗಿ ಸೌದೆ ಮತ್ತು ಇದ್ದಿಲಿನ ಸರಬರಾಜಾಗುತ್ತಿರುವುದರಿಂದ ಈ ಅಭಾವಕ್ಕೆ ಕಾರಣವಾಗಿದೆ. ಮುಖ್ಯವಾಗಿ ಮೋಟಾರು ವಾಹನಗಳು ಪೆಟ್ರೋಲಿನ ಅಭಾವದಿಂದ ಇದ್ದಿಲಿನ ಸಹಾಯದಿಂದಲೇ ನಡೆಸಲ್ಪಡುತ್ತಿರುವುದು ಸೌದೆ ಮತ್ತು ಇದ್ದಿಲಿನ ಅಭಾವ ಮತ್ತು ವಿಪರೀತದ ಬೆಲೆಗೆ ಕಾರಣವಾಗಿದೆ.

ಕಾಂಗ್ರೆಸ್ ಪಕ್ಷದ ಸದಸ್ಯರು ಈ ಕೊರತೆಯನ್ನು ನಿವಾರಿಸಲು ಬಹುಮಟ್ಟಿಗೆ ಪ್ರಯತ್ನಿಸಿರುವರು. ಗೃಹ ನಿರ್ಮಾಣದ ಉದ್ಯಮದಲ್ಲಿಯೂ, ಹಾಲಿ ಇರುವ ಸದಸ್ಯರು ಬಹುಮಟ್ಟಿಗೆ ಸ್ವತಃ ಮುತುವರ್ಜಿ ವಹಿಸಿ ಈ ಕೊರತೆಯನ್ನು ನೀಗಿಸುತ್ತಿರುವರು.

ಮೇಲ್ಕಂಡ ಉದಾತ್ತ ಧ್ಯೇಯಗಳಿಂದ ಕೂಡಿದ ಕಾಂಗ್ರೆಸ್ ಉಮೇದುವಾರರು ತಮ್ಮ ಧ್ಯೇಯ ಸಾಧನೆಗಾಗಿ ಸುಸಂಘಟಿತವೂ ಮತ್ತು ಶಿಸ್ತಿನಿಂದಲೂ ಕೂಡಿದ ಕಾಂಗ್ರೆಸ್ ಸಂಸ್ಥೆಯ ನೆರಳಿನಲ್ಲಿ ಮುನ್ನಡಿಯಿಡುತ್ತಿದ್ದಾರೆ. ಮೈಸೂರಿನ ಪುರಜನರು ಇಂತಹ ನಿಸ್ವಾರ್ಥಿಗಳಿಗೆ ತಮ್ಮ ಪ್ರೋತ್ಸಾಹವನ್ನೀಯುವರಲ್ಲದೆ ಅಪಪ್ರಚಾರಗಳಿಗೆ ಕಿವಿಗೊಟ್ಟು ಅಂಧಾನುಕರಣೆಗಳಾಗಲಾರರು ಎಂದು ನಾವು ನಂಬಿದ್ದೇವೆ.

Edited, printed and published by A. R. Nagarajan at the Sadhvi Press D. Subbiah Road, Mysore

ಜಪಾನಿನಲ್ಲಿ ಪ್ರಜಾ ಪ್ರಭುತ್ವ

ಪ್ರಜಾಪ್ರಭುತ್ವ ಸಿದ್ಧಾಂತದ ಪ್ರಕಾರ ಹೊಸ ಸುಧಾರಣೆಗಳನ್ನು ಮೊನ್ನೆ ಜಪಾನ್ ಚಕ್ರವರ್ತಿಗಳು ಘೋಷಿಸಿದರು. ಈ ಸಂಬಂಧದಲ್ಲಿ ೬ ಲಕ್ಷ ರಾಜಕೀಯ ಮತ್ತು ಇತರ ಖೈದಿಗಳ ಬಿಡುಗಡೆಯಾಗಿದೆ.

ತಿದ್ದುಪಡಿ

ಸ್ವಂ ವ] ಚಾಮರಾಜನಗರ ೩
೧ ನೇ ತಾ॥ ನ ಪತ್ರಿಕೆಯಲ್ಲಿ ಪೌರಸಭೆಯ ಅಧ್ಯಕ್ಷರನ್ನು ಸಸ್ಪೆಂಡ್ ಮಾಡಲು ಶಿಫಾರಸ್ಸು ಎಂಬ ಶಿರೋನಾಮೆಯಲ್ಲಿ ಖಾಸಗೀ ಅಧ್ಯಕ್ಷರನ್ನು ಸಸ್ಪೆಂಡ್ ಮಾಡಿ ಮುಂದಿನ ಚುನಾವಣೆವರೆವಿಗೆ ಅಧಿಕಾರಿ ಅಧ್ಯಕ್ಷರನ್ನು ನೇಮಿಸಬೇಕೆಂದು ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದಾರೆ ಎಂದು ಪ್ರಕಟವಾಗಿರುವುದು ಸರಿಯಲ್ಲ. ಆದರೆ ಈಚೆಗೆ ತಿಳಿದುಬಂದಿರುವ ಅಂಶಗಳಿಂದ ೨೫-೧೦-೪೬ ರಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸದಸ್ಯರು ಆರೀತಿ ಸರ್ಕಾರವನ್ನು ಪ್ರಾರ್ಥಿಸುವ ನಿರ್ಣಯ ಮಾಡಿದರೆಂದು ಗೊತ್ತಾಗಿದೆ.

○ ಭಾರತಕ್ಕೆ ೬೦ ಸಾವಿರ ಟನ್ ದ್ವಿದಳ ಧಾನ್ಯಗಳನ್ನು ಸಾಗಿಸಲು [illegible] ಸರ್ಕಾರ ರಹದಾರಿ ಕೊಟ್ಟಿರುವುದಾಗಿ ವರದಿಯಾಗಿದೆ.

ಲಂಡನ್ನಿನಲ್ಲಿ ಉಪವಾಸ

ಲಂಡನ್ನಿನಲ್ಲಿರುವ ಕಾಂಗ್ರೆಸ್ ಪ್ರ
ಖ ಶ್ರೀ ಕೃಷ್ಣಕುಮಾರ ಚಟರ್ಜಿಯ
ಮೊನ್ನೆಯಿಂದ ಉಪವಾಸ ವ್ರತವನ್ನು
ಭಿಸಿದ್ದಾರೆ. ಭಾರತಕ್ಕೆ ಸಂಪೂರ್ಣ
ತಂತ್ರ್ಯ, ಬಂಗಾಳದ ಈಗಿನ ಮಂತ್ರಿ
ಮಂಡಲವನ್ನು ಬದಲಿಸಿ ಕಾಂಗ್ರೆಸ್
ಮಂತ್ರಿಮಂಡಲದ ಸ್ಥಾಪನೆ, ಪೂ
ಬಂಗಾಳದ ದುರಂತದ ಬಗ್ಗೆ ಸರಿಯ
ವಿಚಾರಣೆ-ಇವುಗಳು ಆಗುವ
ಗೆ; ಅಥವಾ ಅಮರಣಾಂತ ಉಪ
ವ್ರತವನ್ನಾಚರಿಸುತ್ತಾರೆ. ಉಪವಾಸ
ಕಾಲದಲ್ಲಿ ಉಪ್ಪಿನ ನೀರಿನ ಹೊರತು ಬೇ
ರೆ ಆಹಾರವನ್ನೂ ತೆಗೆದುಕೊಳ್ಳುವು
ವೆಂದು ಹೇಳಿದ್ದಾರೆ. ಈ ವಿಚಾರದಲ್ಲಿ
ಮಹಾತ್ಮರಾಗಲೀ ಅಥವಾ ಪಂ॥ ನೆಹರೂ
ರವರಾಗಲೀ ಮಧ್ಯೆ ಪ್ರವೇಶಿಸಿದರೆ ಆಗ
ಮಾತ್ರ ಅವರು ತಮ್ಮ ಮುಖಂಡರ ಆಜ್ಞೆ
ಗೆ ನಡೆಯುದೇಕಾಗುತ್ತದೆಂದು ಹೇಳಿದ್ದಾರೆ.

OPERA TALKIES
6-11-46 ರಿಂದ
ಮೂರನೇ ವಾರ
ಶ್ರೀ ಮುರುಗನ್
(ತಮಿಳು)
ಪಾತ್ರ:- ಹೊನ್ನಪ್ಪ ಭಾಗವತರ್, ಜೀವರತ್ನಂ, ಮಾಲತಿ, ರಾಮಚಂದ್ರ

॥ ವಂದೇಮಾತರಂ ॥

ಮೈಸೂರು ನಗರ ಪೌರಸಭಾ ಚುನಾವ

14—11—1946 ಗುರುವಾರ

ಕಾಂಗ್ರೆಸ್ಸಿಗೇ ಓಟು ಕೊಡಿರಿ

ನಿಮ್ಮ ಅಮೂಲ್ಯವಾದ
ಓಟು ಯಾರಿಗೆ?
ಕಾಂಗ್ರೆಸ್ಸಿಗೇ!
ಏಕೆ?

1 ಭಾರತಮಾತೆಯ ಬಂಧವಿಮೋಚನೆಗೆ!
2 ಸಂಪೂರ್ಣ ಸ್ವಾತಂತ್ರ್ಯ ಸಾಧನೆಗೆ!
3. ಸ್ವೇಚ್ಛಾಧಿಕಾರ ವಿರೋಧಕ್ಕೆ!
4. ಪ್ರಜೆಗಳ ಕುಂದುಕೊರತೆಗಳ ನಿವಾರಣೆಗೆ!
5. ಪ್ರಜಾ ಹಕ್ಕುಬಾಧ್ಯತೆಗಳ ರಕ್ಷಣೆಗೆ!
6 ಅಧಿಕಾರದ ಸದ್ವಿನಿಯೋಗಕ್ಕೆ!
7. ಸೇವಾತತ್ಪರತೆ, ಸೇವಾದೀಕ್ಷೆಗೆ!
8. ಶಾಂತಿ ಸೌಖ್ಯಗಳ ಸ್ಥಾಪನೆಗೆ!

॥ ವಂದೇ ಮಾತರಂ ॥

ಚಾಮರಾಜಮೊಹಲ್ಲಾ ಓಟರು ಮಹಾಶಯರುಗಳಲ್ಲಿ ವಿನಂತಿ

ಚುನಾವಣಾ ಸ್ಥಳ:- ಲಕ್ಷ್ಮೀಪುರಂ ಗೌ॥ ಬಾಯ್ಸ್ ಸ್ಕೂಲ್

14—11—46 ನೇ ಗುರುವಾರ ನಡೆಯಲಿರುವ ಪೌರಸಭಾ ಚುನಾವಣೆಗಳಲ್ಲಿ ನಮಗೆ ತಮ್ಮ ಅಮೂಲ್ಯವಾದ ಓಟನ್ನು ಕೊಡಬೇಕಾಗಿ ಪ್ರಾರ್ಥನೆ

1	ಎ. ವೆಂಕಟೇಶಯ್ಯ	ಆನೆ	X
2	ಎ. ಕೆ. ರಂಗರಾವ್	ಹುಲಿ	X
4	ದೀಪ ಪ್ರಕಾಶ	ಸಿಂಹ	X
5	ತಮ್ಮಯ್ಯ	ನೇಗಿಲು	X

ಮೈಸೂರು ಸಿಟಿ ರೇಷನಿಂಗ್ ಆಫೀ
ತಾ॥ 26-10-1946

ಪ್ರಕಟಣೆ

ಮೈಸೂರು ಸಿಟಿ ರೇಷನಿಂಗ್ ಇಲಾಖಾ ಗೋಡೌನ್‌ಗಳಲ್ಲಿರತಕ್ಕ ಒಟ್ಟು ಸುಮಾರು ಒಂದೂವರೆ ಲಕ್ಷ ಖಾಲಿ ಗೋಣೀ ಚೀಲಗಳು ಈ ಕೆಳಗೆ ನಮೂದಿರುವ ಗೋಡೌನ್‌ಗಳ ಬಳಿ ಬೆಳಗ್ಗೆ 9-30 ಘಂಟೆಗೆ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತವೆ. ಈ ಹೆಚ್ಚು ವಿವರಗಳನ್ನು ಆಫೀಸಿನಲ್ಲಿ ತಿಳಿಯಬಹುದು

ದೇವಣ್ಣ ಗೋಡೌನ್ K. R. ಆಸ್ಪತ್ರೆ ರಸ್ತೆ	ತಾ॥ 7-11-46 ನೇ	ಗುರುವಾ
ಲಷ್ಕರ್ ಎಮರ್ಜನ್ಸಿ ಡಿಪೋ	„ 8-11-46 „	ಶುಕ್ರವಾ
ದೇವರಾಜ „	„ 9-11-46 „	ಶನಿವಾ
ಮಂಡಿ „	„ 11-11-46 „	ಸೋಮವಾ
ನಜರ್‌ಬಾದ್ „	„ 12-11-46 „	ಮಂಗಳವಾ
ಕೃಷ್ಣರಾಜ „	„ 13-11-46 „	ಬುಧವಾ
ಚಾಮರಾಜ „	„ 14-11-46 „	ಗುರುವಾ

(ಸಹಿ) ಅಬ್ದುಲ್ ರಜಾ
ರೇಷನಿಂಗ್ ಆಫೀಸರ್, ಮೈಸೂ

ಘೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಗುರುವಾರ ೭—೧೧—೪೬ [ಸಂಚಿಕೆ ೨೬

ಗಲಭೆ ನಿಲ್ಲುವವರೆಗೆ ಬಿಹಾರಿನಲ್ಲಿ ನೆಹರು

ವಿದ್ಯಾರ್ಥಿಗಳು ರಾಜಕೀಯದಲ್ಲಿ ಭಾಗವಹಿಸಬಹುದು

ರಂಗಣ್ಣನವರಿಂದ ವಿದ್ಯಾರ್ಥಿ ಕಾಂಗ್ರೆಸ್ ಆರಂಭ ಭಾಷಣ

ಮೈಸೂರು ೭

ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ಸಿನ ಪ್ರತಿಷ್ಠಾಪನೋತ್ಸವ ಸಮಾರಂಭವು ನಿನ್ನೆ ಸಂಜೆ ಟೌನ್‌ಹಾಲಿನಲ್ಲಿ ನ್ಯಾಯವಿಧಾಯಕ ಸಭಾ ಸದಸ್ಯರಾದ ಶ್ರೀಮತಿ ಕಮಲಮ್ಮ ದೇವಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಮೈಸೂರು ಕಾಂಗ್ರೆಸ್ ಮುಖಂಡರಾದ ಶ್ರೀಯುತ ಎಸ್. ರಂಗಣ್ಣನವರು ಆರಂಭ ಭಾಷಣವನ್ನು ಮಾಡಿದರು. ಪ್ರಾರ್ಥನೆಯಾದನಂತರ ವಿದ್ಯಾರ್ಥಿ ಕಾಂಗ್ರೆಸ್ಸಿನ ಅಧ್ಯಕ್ಷರು ಮುಖ್ಯ ಅತಿಥಿಗಳ ಮತ್ತು ಸಭಿಕರನ್ನು ಆದರದಿಂದ ಸ್ವಾಗತಿಸಿದರು. ಕಾರ್ಯದರ್ಶಿಗಳಾದ ಶ್ರೀ ... ರವರು ವಿದ್ಯಾರ್ಥಿ ಕಾಂಗ್ರೆಸ್ಸಿನ ಧ್ಯೇಯ ಮತ್ತು ಗುರಿಗಳನ್ನು ಸಂಕ್ಷೇಪವಾಗಿ ತಿಳಿಸಿ ದೇಶದ ಸ್ವಾತಂತ್ರ್ಯ ಸಾಧನೆಗೆ ವಿದ್ಯಾರ್ಥಿ ಕಾಂಗ್ರೆಸ್ ಸದಾ ಸಿದ್ಧವಾಗಿದೆ ಎಂದು ಹೇಳಿದರು.

ಶ್ರೀ ರಂಗಣ್ಣನವರು ಮಾತನಾಡುತ್ತಾ ಇಪ್ಪತ್ತು-ಮೂವತ್ತು ವರ್ಷಗಳಹಿಂದಿನ ವಿದ್ಯಾರ್ಥಿಗಳ ಕಾಲಕ್ಕೂ ಈಗಿನ ಕಾಲಕ್ಕೂ ಮಹದಂತರವಿದೆ ಇಂದಿನ ವಿದ್ಯಾರ್ಥಿಗಳಲ್ಲಿ ಸ್ವಾತಂತ್ರ್ಯ ಪ್ರೇಮ ಎದ್ದು ಕಾಣುತ್ತಿದೆ. ಭಾರತ ಸ್ವಾತಂತ್ರ್ಯದ ಸಾಧನೆಗಾಗಿ ದುಡಿಯುವ ಕಾಂಗ್ರೆಸ್ಸಿಗೆ ೧೯೨೦ರಲ್ಲಿ, ಅಂದರೆ ಮಹಾತ್ಮಾ ಗಾಂಧಿಯವರು ಕಾಲಿಟ್ಟಂದಿನಿಂದ ನವ ಚೈತನ್ಯ ಉಂಟಾಗಿ ಸರ್ವತೋಮುಖವಾಗಿ ಬೆಳಗಿಸಿದೆ ಗಾಂಧಿಯವರು ನಡೆಸಿದ ... ಸತ್ಯಾಗ್ರಹ ... ದಿನಗಳಲ್ಲಿ ಅವರಿಗೆ ಸಹಕಾರ ನೀಡಿದವರೆಂದರೆ ... ವಿದ್ಯಾರ್ಥಿಗಳು ಅವರು ತಮ್ಮ ... ಸಾಮರ್ಥ್ಯವನ್ನು ಇಡೀ ವಿಶ್ವಕ್ಕೇ ತೋರಿಸಿ... ಕೊಟ್ಟಿದ್ದಾರೆ ಎಂದು ತಿಳಿಸಿದರು

ವಿದ್ಯಾರ್ಥಿಗಳು ಸಂಪೂರ್ಣ ಶ್ರದ್ಧೆ... ಯಿಂದ ವ್ಯರ್ಥ ಕಾಲಕ್ಷೇಪ ಮಾಡದೆ ... ವಿದ್ಯಾರ್ಜನೆ ಮಾಡುವುದು ... ರ್ಥಿಯ ಮುಖ್ಯ ಕರ್ತವ್ಯವೆಂದು ತಿಳಿ... ಸರ್ಕಾರಿ ನೌಕರಿಯ ಮೋಹವ... ತ್ಯಜಿಸಿ ವಿದ್ಯಾರ್ಥಿಗಳು ಶಿಸ್ತು, ಸಂಯಮ ಸಂಘಟನೆಗಳಿಂದ ಕೂಡಿ ಭಾರತದ ... ವನ್ನು ಅರಿಸುವುದು ಅವರ ಎರಡ... ಗುರಿಯಾಗಿರಬೇಕು ಈಗಿರುವುದಕ್ಕಿಂ... ತನ ಮಟ್ಟ ಏರಬೇಕು, ಇದಕ್ಕೆ ಅನೇ... ಸ್ವಾರ್ಥತೆ ಅಡ್ಡಿಯಾಗುತ್ತದೆ ಅದ್ದ... ಸ್ವಾರ್ಥವನ್ನು ಆದಷ್ಟುಮಟ್ಟಿಗೆ ತ್ಯಜಿ... ದೇಶದ ಹಿತವನ್ನು ಗುರಿಯಾಗಿಟ್ಟುಕೊ... (ರು)

...ದಲ್ಲಿಯೂ ವಿದ್ಯಾರ್ಥಿಗಳು ಇತರ... ತೆ ಹಿಂದೇಟು ಇಲ್ಲವೆಂದು ಅಗಲೇ ... ತೋರಿಸಿಕೊಟ್ಟಿದ್ದಾರೆ. ಇವರ ಬೆಂಬಲ... ಅನೇಕ ಸತ್ಯಾಗ್ರಹ ಚಳುವಳಿಗಳು ... ಯವಾಗಿ ನಡೆದಿವೆ. ವೇದದ ಅಭ್ಯಾ... ಪೂರ್ಣವಾಗಿ ತರುಣರನ್ನೆ ಅವ... ಸಿದೆ ಎಂದು ಹೇಳಿದಲ್ಲಿ ಅದು ತಪ್ಪಲ್ಲ. ...ರ್ಥಿಗಳು ರಾಜಕೀಯ ಶಕ್ತಿಯು ಕಡೆ... ತೋರದಿರುವುದು. ತೀರ ಶೋಚನೀ... ಸಂಗತಿ ವಿದ್ಯಾರ್ಥಿಗಳು ಪೃಥಕ್ಕಾಯು ... ದು ಅವರ ಕರ್ತವ್ಯವಾಗಿದೆ

...ಕ್ಷಿಪ್ರವರೆವಿಗೆ ಸಂಪೂರ್ಣ ಸರ್ಕಾರವು ... ದಲ್ಲಿ ನೆಲೆಸಿದುತ್ತದೆಯೋ ಅಲ್ಲಿವರೆಗೆ ...ರ್ಥಿಗಳು ರಾಜಕೀಯದಲ್ಲಿ ಭಾಗವಹಿ... ಅವಕಾಶವಿದ್ದೇ ಇರುತ್ತದೆ. ಮೈಸೂ...

ರು ಕಾಂಗ್ರೆಸ್ಸಿನ ಮುಖ್ಯ ಕಾರ್ಯಗಳೆಲ್ಲವೂ ಮಹಾತ್ಮ ಗಾಂಧಿಯವರ ಅನುಮತಿಯಂತೆಯೇ ಮುಂದೆ ಸಾಗುತ್ತಾ ಬಂದು ಯಶಸ್ಸನ್ನು ಗಳಿಸಿವೆ ಮತ್ತು ಸಂಸ್ಥೆಯೂ ಸಹ ಬೆಳೆದುಬರುತ್ತಿದೆ ಅದರ ಮಾರ್ಗಗಳು ನ್ಯಾಯಸಮ್ಮತವಾಗಿವೆ ಸಭಾತ್ಯಾಗ, ಸರ್ಕಾರಿ ಮಸೂದೆಗಳನ್ನು ತಿರಸ್ಕರಿಸುವುದು ಮತ್ತು ಪ್ರಭುಗಳಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಮನವಿ ಮಾಡಿಕೊಂಡಿರುವುದು ಇವೆಲ್ಲವೂ ನ್ಯಾಯಬದ್ಧವಾಗಿವೆ. ಆದರೆ ದಿವಾನರ ಈಚಿನ ಅಭಿಪ್ರಾಯಗಳು ಕಾಂಗ್ರೆಸ್ಸನ್ನು ಅಲ್ಲಗಳೆಯುವಂತಿರುವುದರಿಂದ ಪ್ರಕೃತ ಸನ್ನಿವೇಶಗಳಲ್ಲಿ ಧ್ಯೇಯ ಸಾಧನೆಗಾಗಿ ಸತ್ಯಾಗ್ರಹ ಚಳುವಳಿ ಅತ್ಯಗತ್ಯವೆಂದು ತೋರಿಬಂದಿದೆ. ಈ ಚಳುವಳಿಯು ಯಶಸ್ವಿಯಾಗಿ ನಡೆಯ ಬೇಕಾದಲ್ಲಿ ವಿದ್ಯಾರ್ಥಿಗಳ ಬೆಂಬಲವೂ ಆವಶ್ಯಕವೆಂದು ತಿಳಿಸಿ ಭಾಷಣವನ್ನು ಮುಕ್ತಾಯ ಮಾಡಿದರು.

ಅಧ್ಯಕ್ಷರ ಸಮಯೋಚಿತವಾಗಿ ಭಾಷಣ ಮಾಡಿದನಂತರ ವಂದೇ ಮಾತರಂ ಗೀತೆಯೊಡನೆ ಸಮಾರಂಭವು ಪರಿಸಮಾಪ್ತಿಯಾಯಿತು.

ಖಂಡನಾ ಸಭೆ

ಕೋಲಾರದ ಚಿನ್ನದ ಗಣಿಯಲ್ಲಿ ಮೊನ್ನೆ ಗುಂಡು ಹಾರಿಸಿದ್ದನ್ನು ಖಂಡಿಸಲು ರಾಜಧಾನಿಯ ಕಮ್ಯೂನಿಸ್ಟ್ ಪಕ್ಷದವರು ನಿನ್ನೆ ಟರ್ನಹಾಲ್ ಮೈದಾನದಲ್ಲಿ ಸಭೆ ಸೇರಿ, ಆ ಬಗ್ಗೆ ಒಂದು ವಿಚಾರಣಾ ಸಮಿತಿ ನೇಮಿಸಬೇಕೆಂದೂ ನೊಂದವರಿಗೆ ಪರಿಹಾರ ಕೊಡಬೇಕೆಂದೂ ನಿರ್ಣಯಿಸಿದರು ನಮ್ಮ ವಿರೋಧ ವ್ಯಕ್ತಪಡಿಸಲು ಪ್ರದರ್ಶನ ಮತ್ತು ಮೆರವಣಿಗೆಯನ್ನು ನಡೆಸಿದರು

ಸ್ಮಾರಕ ದಿನಾಚರಣೆ

ಬೆಂಗಳೂರಿನ ಬಿ. ಕೆ. ಮರಿಯಪ್ಪನವರ ವಿದ್ಯಾರ್ಥಿ ನಿಲಯದ ಸ್ಥಾಪಕರ ಸ್ಮಾರಕ ದಿನಾಚರಣೆಯನ್ನೂ ಹಾಸ್ಟೆಲಿನ ರಜತ ಮಹೋತ್ಸವವನ್ನೂ ಡಿಸೆಂಬರ್ ೨೨ ನೇ ತಾ॥ ನೆರವೇರಿಸಲು ಧರ್ಮದರ್ಶಿಗಳು ನಿರ್ಧರಿಸಿದ್ದಾರೆ ಎಲ್ಲ ಹಳೇ ವಿದ್ಯಾರ್ಥಿಗಳೂ ಇದರಲ್ಲಿ ಭಾಗ ವಹಿಸಬೇಕಾಗಿ ಕೇಳಲಾಗಿದೆ

ನಿಧನ

ಆಸ್ಥಾನ ಜ್ಯೋತಿಷ ವಿದ್ವಾನ್ ಶ್ರೀ ವೆಂಕಟಾಚಾರ್ಯರವರ ತಂದೆಯವರಾದ ಶ್ರೀ ಬ್ರ॥ ಶ್ರೀ ಶ್ರೀನಿವಾಸ ರಂಗಾಚಾರ್ಯ ಜೋಯಿಸರವರು ನಿನ್ನೆ ರಾತ್ರಿ ೨॥ ಗಂಟೆ ಸಮಯದಲ್ಲಿ ಸನ್ನಿಪಾತ ಜ್ವರದಿಂದ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ ಮೃತರಿಗೆ ೮೦ ವರ್ಷ ವಯಸ್ಸಾಗಿತ್ತು ವಯಸ್ಸು ೭ನ ಗಂಡು ಮಕ್ಕಳೂ, ಇಬ್ಬರು ಹೆಣ್ಣು ಮಕ್ಕ...

ಪ್ರಭುಗಳಿಗೆ ಸಲ್ಲಾವಿನ ಬಂದೂಕದ ಸಮರ್ಪಣೆ

ಸೇನಾಪತಿಗಳ ಕೃತಜ್ಞತಾ ಸೂಚನೆ

ಸ್ವಂ ಸು ವ್ಯೋ] ಬೆಂಗಳೂರು ೭

ನಮ್ಮ ಸಂಸ್ಥಾನದ ಸೈನ್ಯಗಳಿಗೆ ಸೇರಿದ ಅಧಿಕಾರಿಗಳೂ, ಸೈನಿಕರುಗಳೂ, ಪಂದ ಸಾರ್ಜರು. ತಮ್ಮ ಕಾರ್ಯವು ವಿಫಲವಾಗದಂತಹ ಅಮೂಲ್ಯ ಸೇವೆಯನ್ನು ಅವರು ಸಲ್ಲಿಸಿದ್ದಾರೆ. ಅವರ ಸಂತೃಪ್ತಿಯಲ್ಲಿ ನಾವೂ ಭಾಗಿಯಾಗಿದ್ದೇವೆ. ಅವರು ಇಡೀ ವಿಶ್ವದಲ್ಲಿ ಭಯೋತ್ಪಾದನೆಯಿಂದ ವಿಸರ್ಜಿತವಾದ ಭವ್ಯ ವ್ಯವಸ್ಥೆಯನ್ನು ನಿರ್ಮಿಸುವ ಸಲುವಾಗಿ ಮಿತ್ರ ಪಕ್ಷದ ಸೈನಿಕರ ಬೆಂಬಲದೊಡನೆ ಹೋರಾಡಿ ಕೀರ್ತಿಶಾಲಿಗಳಾಗಿದ್ದಾರೆ—ಎಂದು ಶ್ರೀಮನ್ ಮಹಾರಾಜರು ಭಾರತದ ದಂಡನಾಯಕರವರ ಬೆಂಗಳೂರಿನಲ್ಲಿ ಅರ್ಪಿಸಿದ ಬಂದೂಕದ ಗೌರವವನ್ನು ಸ್ವೀಕರಿಸುತ್ತಾ ಆ ದಿನ ಸಂಜೆ ಅಪ್ಪಣೆ ಕೊಡಿಸಿದರು.

ಪ್ರಭುಗಳು ಮಾತನಾಡುತ್ತಾ ತಮ್ಮ ಪೂಜ್ಯ ದೊಡ್ಡಪ್ಪಂದಿರು ಜರ್ಮನಿಯು ಯುದ್ಧ ಘೋಷಿಸಿದಾಗ ಉಂಟಾಗಿದ್ದ ಭೀಕರ ಪರಿಸ್ಥಿತಿಯನ್ನು ಚೆನ್ನಾಗಿ ಮನಗಂಡಿದ್ದರು ನಾಗರಿಕತೆ ಮತ್ತು ಇಡೀ ಜನಾಂಗಗಳ ಮೇಲೆ ಯುದ್ಧ ಘೋಷಿಸಿ ಸರ್ವನಾಶ ಮಾಡಲು ತೊಡಗಿದ್ದ ಜರ್ಮನ್ ಸೈನ್ಯಗಳ ಪಾಶವೀ ಆಕ್ರಮಣ ಸಂಕಲ್ಪವನ್ನು ಅರಿತಿದ್ದರು. ಮಿತ್ರರಿಗೆ ಅಂತಿಮ ವಿಜಯ ದೊರೆಯುವುದೆಂದು ಅವರು ಪೂರ್ಣವಾಗಿ ನಂಬಿದ್ದರು. ಧರ್ಮೋದ್ಧಾರವೂ ಮತ್ತು ಮಾನವ ಸ್ವಾತಂತ್ರ್ಯವೂ ಆ ಜಯದಿಂದಾಗಿ ಶಾಶ್ವತವಾಗಿ ನೆಲೆಸುವುದೆಂದು ನಂಬಿ ಅವರು ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ನಾವೂ ಅನುಸರಿಸಲು ಹಿಂಜರಿಯಲಿಲ್ಲ. ಮೈಸೂರು ಮೊದಲನೇ ಇನ್‌ಫೆಂಟ್ರಿಯವರು ಮಲಯ ಮತ್ತು ಸಿಂಗಪೂರದಲ್ಲಿ ನಡೆಸಿದ ಹೋರಾಟದ ಬಗ್ಗೆ ನಮ್ಮ ವಿಶೇಷ ಮೆಚ್ಚಿಗೆ ಸಲ್ಲತಕ್ಕದ್ದಾಗಿದೆ-ಎಂದರು

ದಕ್ಷಿಣ ಭಾರತ ಸೈನ್ಯಗಳ ಪ್ರಧಾನಾಧಿಕಾರಿಗಳಿಂದ ಜ॥ ಕೊಪ್ಪರ್ಟರ್‌ರವರನ್ನು ಅಭಿನಂದಿಸಿ ಸೈನಿಕರಾದವರೆಲ್ಲರಿಗೆ ತಮ್ಮ ವಂದನೆಗಳನ್ನು ಕಳುಹಿಸುವಂತೆ ಪ್ರಾರ್ಥಿಸಿದರು

ಮೃತರ ಪತ್ನಿ ಮತ್ತು ಪತ್ನಿಯೂ ಇರುವರು ಮೃತರ ಆತ್ಮಕ್ಕೆ ಭಗವಂತನು ಶಾಂತಿಯನ್ನೀಯಲಿ.

ಬಿಹಾರ್ ಗಲಭೆ ನಿಲ್ಲಿಸಲು ನೆಹರೂರವರ ಸಂಕಲ್ಪ

ಮೊಂಘೀರ್ ಮತ್ತು ಭಾಗಲ್ಪುರ ಜಿಲ್ಲೆಗಳ ಪ್ರವಾಸವನ್ನು ಮುಗಿಸಿಕೊಂಡು ಪಂ॥ ನೆಹರೂರವರು ಪಾಟ್ನಾಕ್ಕೆ ಹಿಂತಿರುಗಿದರು. ಬಿಹಾರಿನಲ್ಲಿ ಸಂಪೂರ್ಣ ಶಾಂತಿ ನೆಲೆಸುವವರೆಗೆ ಅಲ್ಲೇ ಇರಲು ನೆಹರೂರವರು ನಿರ್ಧರಿಸಿರುವುದಾಗಿ ವರದಿಯಾಗಿದೆ ಗಲಭೆಯನ್ನು ಸರ್ವ ವಿಧದಿಂದಲೂ ನಿಲ್ಲಿಸುವುದಾಗಿ ಅವರು ಸಂಕಲ್ಪ ಮಾಡಿದ್ದಾರೆಂದೂ ಗೊತ್ತಾಗಿದೆ

ವೈಸರಾಯರಿಗೆ ಮೊದಲೇ ಎಚ್ಚರಿಕೆ ಕೊಡಲಾಗಿದ್ದಿತು

ಬಂಗಾಳದಲ್ಲಿ ನಡೆಯುತ್ತಿರುವ ದುರಂತವನ್ನು ಕೂಡಲೇ ತಪ್ಪಿಸದಿದ್ದರೆ ಬಿಹಾರ್ ಪ್ರತೀಕಾರ ಕೈಗೊಳ್ಳಬಹುದೆಂದೂ, ಅದನ್ನೇ ಭಾರತದ ಇತರ ಪ್ರಾಂತ್ಯಗಳು ಅನುಸರಿಸಿ ಪರಿಸ್ಥಿತಿ ಕೈ ಮೀರಿ ಹೋಗಬಹುದೆಂದೂ, ಸಮಂಜಸವಾಗಿಯೇ ವೈಸರಾಯರಿಗೆ ಎಚ್ಚರಿಕೆ ಕೊಡಲಾಗಿದ್ದಿತು- ಎಂದು ಸ॥ ಪಟೇಲರು ಅಲಹಾಬಾದಿನಲ್ಲಿ ತಿಳಿಸಿದ್ದಾರೆ. ರಾಷ್ಟ್ರೀಯ ಭಾವನೆಯು ಕೋಮುವಾರು ಭಾವನೆಯನ್ನು ಸ್ವಲ್ಪ ಮಟ್ಟಿಗೆ ತಡೆಗಟ್ಟಬಹುದು. ಹಾಗಿಲ್ಲದಿದ್ದರೆ ಕೋಮುವಾರು ಭಾವನೆಯನ್ನು ಕೋಮುವಾರು ದೃಷ್ಟಿಯಿಂದ ಮಾತ್ರ ಎದುರಿಸಲು ಸಾಧ್ಯವೆಂಬ ಭಾವನೆ ಜನರಲ್ಲಿ ಮೂಡುವ ಸಂಭವವುಂಟಾಗುವುದು- ಎಂದು ಅವರು ತಿಳಿಸಿದ್ದಾರೆ.

ಮಹಾತ್ಮರಿಗೆ ಅಲ್ಪಾಹಾರ

ಮಹಾತ್ಮ ಗಾಂಧಿಯವರು ನಿನ್ನೆ ಬೆಳಗ್ಗೆ ಕಲ್ಕತ್ತಾದಿಂದ ನೌಖಾಲಿಗೆ ಸ್ಪೆಷಲ್ ರೈಲಿನ ೩ ನೇ ತರಗತಿ ಗಾಡಿಯಲ್ಲಿ ಪ್ರಯಾಣ ಮಾಡಿದರು ಇವರ ಕೂಡ ಪತ್ರಿಕಾ ಪ್ರತಿನಿಧಿಗಳೂ, ಸರ್ಕಾರೀ ಅಧಿಕಾರಿಗಳೂ ತೆರಳಿದ್ದಾರೆ. ಬಿಹಾರ್ ದುರಂತದ ಬಗ್ಗೆ ಪ್ರಾಯಶ್ಚಿತ್ತ ರೂಪವಾಗಿ ಗಾಂಧೀಜಿಯವರು ಅಲ್ಪಾಹಾರವನ್ನು ಸ್ವೀಕರಿಸುತ್ತಿದ್ದಾರೆ. ಅಲ್ಲಿನ ಪರಿಸ್ಥಿತಿ ಉತ್ತಮಗೊಳ್ಳದಿದ್ದರೆ ಈ ಅಲ್ಪಾಹಾರ ವ್ರತವೇ ಆಮರಣಾಂತ ಉಪವಾಸಕ್ಕೆ ಪರಿವರ್ತಿತವಾಗಬಹುದೆಂದು ಮಹಾತ್ಮರು ಹೇಳಿದ್ದಾರೆ.

ಲೀಗಿನ ನಾಯಕರ ಉಪವಾಸ ವ್ರತ

ಬಿಹಾರಿನ ದುರಂತ ನಿಲ್ಲದಿದ್ದರೆ ಬಂಗಾಳವು ಸೇಡು ತೀರಿಸಿಕೊಳ್ಳಲು ಆರಂಭಿಸಿದರೆ ಗಾಂಧೀಜಿಯವರೂ ಕೂಡ ಆಮರಣಾಂತರ ಉಪವಾಸ ಮಾಡುವುದಾಗಿ ಮುಸ್ಲಿಂ ಲೀಗ್ ಕೌನ್ಸಿಲ್ ಸದಸ್ಯರಾದ ಮೌ॥ ಅಬ್ದುರ್ ರಹೀಂರವರು ಹೇಳಿಕೆ ಇತ್ತಿದ್ದಾರೆ

ಅಂಬೇಡ್ಕರರ ವಿಫಲ ಯತ್ನ

ಭಾರತದ ಭಾವೀ ರಾಜ್ಯಾಂಗದಲ್ಲಿ ನಿಮ್ನವರ್ಗದವರಿಗೆ ಪ್ರತ್ಯೇಕ ಪ್ರಾತಿನಿಧ್ಯವನ್ನು ದೊರಕಿಸಿಕೊಳ್ಳುವ ಸಲುವಾಗಿ ಬ್ರಿಟನ್ನಿಗೆ ನಿಯೋಗ ಹೋಗಿದ್ದ ನಿಮ್ನ ವರ್ಗದ ನಾಯಕರಾದ ಡಾ॥ ಅಂಬೇಡ್ಕರರು ತಮ್ಮ ಪ್ರಯತ್ನದಲ್ಲಿ ಪರಾಜಿತರಾಗಿ ಹಿಂತಿರುಗಿದ್ದಾರೆ ತಮ್ಮ ವಾದವನ್ನು ಸಾವಧಾನದಿಂದ ಬ್ರಿಟಿಷ್ ಜನತೆಯವರು ಆಲಿಸಿದರೆಂದೂ, ಲೇಬರ್ ಸರ್ಕಾರದವರಿಂದ ತಮಗೆ ಪುರಸ್ಕಾರವೇ ಸಿಕ್ಕಲಿಲ್ಲವೆಂದೂ ಅವರು ತಿಳಿಸಿದ್ದಾರೆ ತಾವು ಭಾರತಕ್ಕೆ ಹಿಂತಿರುಗುವ ಮೊದಲೇ ... ಅವರು ಹೇಳಿದ್ದಾರೆ

ಸಾಧ್ವಿ

ತಾ|| ೭-೧೧-೪೬ ಗುರುವಾರ

ನಗರ ವಿಸ್ತರಣ

ಜನಸಂದಣಿಯು ವಿಶೇಷ ಹೆಚ್ಚಿ, ಮನೆಗಳು ಬಹಳ ಇಕ್ಕಟ್ಟಾಗಿದ್ದು, ಕಷ್ಟಗಳಿಗೆ ಕಾರಣವಾಗಿ, ನಿರ್ಮಲೀಕರಣಕ್ಕೆ ತೊಂದರೆಯಾಗಿರುವ ಸ್ಥಳಗಳಲ್ಲಿ ಶಿಥಿಲವಾದ ಮನೆಗಳನ್ನು ಸ್ವಾಧೀನಕ್ಕೆ ತೆಗೆದುಕೊಂಡು ಗಾಳಿ, ಬೆಳಕು, ನೀರು ಮತ್ತು ಚರಂಡಿ ವ್ಯವಸ್ಥೆಗಳಿಗೆ ಸೌಲಭ್ಯಗಳನ್ನು ಕಲ್ಪಿಸುವುದು ಪೌರಸಭೆಗಳ ಮುಖ್ಯ ಕರ್ತವ್ಯ. ಈ ಕೆಲಸವನ್ನು ರಾಜಧಾನಿಯಲ್ಲಿ ಕಳೆದ ಹಲವು ದಿನಗಳಿಂದ ಯಶಸ್ವಿಯಾಗಿ ಜರುಗಿಸಲಾಗುತ್ತಿದೆ. ಕಳೆದ ಮೂರು ವರ್ಷಗಳಿಂದ ನಾಲ್ಕು ಹೊಸ ಬಡಾವಣೆಗಳನ್ನು ಏರ್ಪಡಿಸಲಾಗಿದೆ. ಚನ್ನೀಮಂಟಪ, ಪಡವಾರಹಳ್ಳಿ, ಹೊಸ ಸಂತೇಪೇಟೆ, ಜಲಪುರಿ ಇನ್ನೇ ಮುಂತಾದ ಕಡೆಗಳಲ್ಲಿ ಮನೆಗಳನ್ನು ಕಟ್ಟಲು ಸ್ಥಳಗಳನ್ನು ಕೊಡಲಾಗಿದೆ.

ಮನೆಗಳನ್ನು ಕಳೆದುಕೊಂಡು ಬಡಾವಣೆಗಳಲ್ಲಿ ಹೊಸದಾಗಿ ಮನೆಗಳನ್ನು ಕಟ್ಟಿಕೊಳ್ಳುವವರಿಗೆ ಸಕಲ ವಿಧವಾದ ಸೌಲಭ್ಯಗಳನ್ನೂ ಕಲ್ಪಿಸಿಕೊಡಬೇಕೆಂದು ನಿರ್ಧರಿಸಲಾಗಿದೆ. ಸುಲಭ ದರದಲ್ಲಿ ಸೈಟುಗಳನ್ನೂ ಮತ್ತು ಸಾಧ್ಯವಾದ ಸಂದರ್ಭಗಳಲ್ಲಿ ಹಳೆಯ ಮನೆಗಳ ಸಾಮಾನುಗಳನ್ನೂ ಕೊಡಬೇಕೆಂದೂ ಸಹ ನಿಗದಿಯಾಗಿದೆ. ಇದರಿಂದ ನಗರವು ವಿಸ್ತಾರವಾಗಿರುವುದಲ್ಲದೆ, ನಗರದ ನೈರ್ಮಲ್ಯವೂ, ಅಂದ ಚಂದಗಳೂ ಸಹ ಬೆಳೆಯಲು ಅವಕಾಶವಾಗಿದೆ. ಹೊಸ ಬಡಾವಣೆಗಳನ್ನು ಮಾಡುವುದಕ್ಕೆ ಮೊದಲು ಆ ಪ್ರದೇಶಗಳಲ್ಲಿ ರಸ್ತೆ, ನೀರು, ದೀಪ ಮತ್ತು ಚರಂಡಿ ವ್ಯವಸ್ಥೆಗಳನ್ನು ಮಾಡಬೇಕೆಂಬುದು ಸರ್ಕಾರದವರಿಂದ ವಿಧಾಯಕವಾದ ನೀತಿಯಾಗಿದೆ. ಇದನ್ನೇ ಪೌರಸಭೆಯವರೂ, ನಗರಾಭಿವೃದ್ಧಿ ಸಮಿತಿಯವರೂ ಸಾಧ್ಯವಾದ ಮಟ್ಟಿಗೆ ಅನುಸರಿಸುತ್ತಿರುವರು. ಒಳ ಚರಂಡಿ ವ್ಯವಸ್ಥೆಗಾಗಿ ಕೈಗೊಳ್ಳಲಾಗಿರುವ ಭಾರಿ ಯೋಜನೆಯು ಪೂರೈಸಿದ ನಂತರ ನಗರದ ಎಲ್ಲಾ ಭಾಗಗಳ ಕಶ್ಮಲಗಳೂ ಸುಲಭವಾಗಿ ಹೊರಗೆ ಸಾಗಲು ಅವಕಾಶವಾಗುವುದು. ಇದಕ್ಕಾಗಿ ಈಗಾಗಲೇ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.

ನೀರು ಸರಬರಾಜಿನ ವ್ಯವಸ್ಥೆಯು ನಿರೀಕ್ಷಿಸುವಷ್ಟು ತೃಪ್ತಿಕರವಾಗಿಲ್ಲ. ಆದರೂ ದಿನೇ ದಿನೇ ಇವರ ವಿಷಾರದ ಪರಿಸ್ಥಿತಿಯನ್ನು ಹೋಗಿ ಹೆಚ್ಚು ಹೆಚ್ಚಾಗಿ ಮತ್ತು ಕ್ಲಿಪ್ತ ಕಾಲಗಳಲ್ಲಿ ನೀರನ್ನು ಒದಗಿಸಲು ಏರ್ಪಾಡುಗಳಾಗುತ್ತಿವೆ. ಮೊದಲು ಇಷ್ಟೊಂದು ಫಿರ್ಯಾದುಗಳು ಈಚೆಗೆ ಕೇಳಬರುತ್ತಿಲ್ಲ. ಬಡಾವಣೆಗಳಲ್ಲಿ ನೀರು ಸರಬರಾಜು ಇನ್ನೂ ಉತ್ತಮಗೊಳ್ಳಬೇಕಾಗಿದೆ. ಪೌರಸಭೆಯವರು ತಾತ್ಕಾಲಿಕವಾಗಿ ಕೈಗೊಂಡಿರುವ ಆರು ಲಕ್ಷ ರೂ.ನ ಯೋಜನೆಯು ಮುಗಿದ ನಂತರ ಎಲ್ಲ ಪ್ರದೇಶಗಳಿಗೂ ಸಮೃದ್ಧಿಯಾಗಿ ನೀರು ದೊರಕುವ ಭರವಸೆಯಿದೆ. ಇದಲ್ಲದೆ ಇಪ್ಪತ್ತು ಲಕ್ಷ ರೂ.ನ ದೀರ್ಘ ಕಾಲಾವಧಿಯ ಮತ್ತೊಂದು ಯೋಜನೆಯೂ ಸಹ ಸಿದ್ಧವಾಗಿದೆ. ಇದು ಕಾರ್ಯಗತವಾದ ನಂತರ ರಾಜಧಾನಿಗೆ ಇಪ್ಪತ್ತನಾಲ್ಕು ಗಂಟೆಗಳ ಕಾಲವೂ ಯಥೇಚ್ಛವಾಗಿ ನೀರು ದೊರಕುವಂತಾಗುವುದು.

ನಗರ ಬಡಾವಣೆಯ ಕಾರ್ಯಕ್ರಮದಲ್ಲಿ ಮನೆಗಳಿಲ್ಲದ ಬಡಜನರಿಗೆ ವಿಶೇಷವಾದ ರಿಯಾಯಿತಿ ದರದಲ್ಲಿ ನಿವೇಶನಗಳನ್ನು ಕೊಡಲಾಗುತ್ತಿದೆ. ಕೇವಲ ನೆಲ ಮಾತ್ರದ ಬೆಲೆಗೆ ಸ್ಥಳವನ್ನು ಕೊಡಲಾಗುವುದು. ಇತರ ಸ್ಥಳಗಳನ್ನು ಹರಾಜು ಮೂಲಕ ಮಾರಾಟ ಮಾಡಲಾಗುವುದು. ಮುಖ್ಯವಾಗಿ ನಗರದ ಆರೋಗ್ಯ ಪಾಲನೆ ಮತ್ತು ಧಾರಾಳವಾದ ಗಾಳಿ ಬೆಳಕುಗಳಿಂದ ಕೂಡಿದ ಮನೆಗಳನ್ನು ನಿರ್ಮಿಸುವ ದೃಷ್ಟಿಯಿಂದ ನಗರ ವಿಸ್ತರಣ ಕಾರ್ಯವನ್ನು ಮುಂದುವರಿಸಲಾಗುತ್ತಿದೆ. ಈ ರೀತಿ ನಗರದ ಅಭಿವೃದ್ಧಿಯನ್ನು ಸಾಧಿಸುವ ಕಾರ್ಯಕ್ರಮವು ಮುಂದುವರಿಯಲು ಪುರನಿವಾಸಿಗಳು ಸಹಕಾರ ನೀಡಬೇಕೆಂದು ನಾವು ಕೋರುತ್ತೇವೆ.

OPERA TALKIES
6-11-46 ರಿಂದ
ಮೂರನೇ ವಾರ
ಶ್ರೀ ಮುರುಗನ್
(ತಮಿಳು)
ಪಾತ್ರ:- ಹೊನಪ್ಪ ಭಾಗವತರ್, ಜೀವರತ್ನಂ, ಮಾಲತಿ, ರಾಮಚಂದ್ರನ್,

ಅರಮನೆ ಸುದ್ದಿ

(ಮೈಸೂರು, ಬುಧವಾರ, ೬ನೇ ನವಂಬರ್)

ಶ್ರೀಮನ್ಮಹಾರಾಜರವರು ಈ ದಿನ ಬರ್ಮಾ ಷೆಲ್ ಕಂಪೆನಿಯ ಮೈಸೂರು ಏಜಂಟರಾದ ಶ್ರೀ|| ವಿ. ನಾರಾಯಣರಾಯರಿಗೂ, ಮಹಾರಾಜ ಕಾಲೇಜಿನ ತತ್ವಶಾಸ್ತ್ರದ ಅಸಿಸ್ಟೆಂಟ್ ಪ್ರೊಫೆಸರ್ ಶ್ರೀ|| ಎಚ್. ಎಂ. ರಾಘವೇಂದ್ರಾಚಾರ್ಯರಿಗೂ ಭೇಟಿ ದಯಪಾಲಿಸಿದ್ದರು.

ಸತ್ಕಾರ ಕೂಟ

ತಾಯಿನಾಡು ಪತ್ರಿಕೆ ಸಂಪಾದಕರಾದ ಶ್ರೀ ಪಿ ಬಿ ಶ್ರೀನಿವಾಸರವರನ್ನು ಸತ್ಕರಿಸಲು ರಾಜಧಾನಿಯ ಶ್ರೀ ಬಿ ಎಸ್. ಸುಬ್ಬರಾಯರು ನಿನ್ನೆ ರಾತ್ರಿ ಚಾಮುಂಡೇಶ್ವರಿ ಭವನದಲ್ಲಿ ಒಂದು ಕೂಟವನ್ನು ಏರ್ಪಡಿಸಿದ್ದರು. ಪತ್ರಿಕಾ ಪ್ರತಿನಿಧಿಗಳೂ, ಹಲವು ಗಣ್ಯ ಮಹನೀಯರುಗಳೂ ಆಹ್ವಾನಿತರಾಗಿದ್ದರು. ಭೋಜನವಾದ ನಂತರ ಬೆಂಗಳೂರು ಫೆಡರಲ್ ಇಂಡಿಯಾ ಪತ್ರಿಕೆಯ ಸಂಪಾದಕರಾದ ಶ್ರೀ ಎಚ್. ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಜರುಗಿತು. ವಿ|| ಶ್ರೀನಿವಾಸಮೂರ್ತಿಯವರ ಸಂಗೀತವೂ ವಿ|| ಹೆಚ್. ವಿ. ಕೃಷ್ಣರಾಯರ ಪಿಟೀಲು ಮತ್ತು ವಿ|| ಕಂಠೀರವ ನಾರಾಯಣರಾಯರ ಮೃದಂಗವೂ ನಡೆಯಿತು. ಶ್ರೀ ಸುಬ್ಬರಾಯರು ಮಾತನಾಡಿ ಪತ್ರಿಕೋದ್ಯಮದ ಬಗ್ಗೆ ತಮಗಿರುವ ಆದರ, ವಿಶ್ವಾಸಗಳನ್ನು ತಿಳಿಸಿ ತಾಯಿನಾಡು ಪತ್ರಿಕೆಯ ಸೇವೆಯನ್ನು ಕೊಂಡಾಡಿದರು. ಶ್ರೀ ಶ್ರೀಕಂಠಯ್ಯನವರು ಮಾತನಾಡಿ ಸಂಸ್ಥಾನದ ಪ್ರಮುಖ ಪತ್ರಿಕೆಯೊಂದನ್ನು ಗೌರವಿಸುವ ಉದಾತ್ತ ನೀತಿಯನ್ನು ಅಭಿನಂದಿಸಿದರು. ಅನಿವಾರ್ಯದ ನಿಮಿತ್ತ ಶ್ರೀ|| ಪಿ. ಬಿ. ಶ್ರೀನಿವಾಸರವರು ಈ ಕೂಟಕ್ಕೆ ದಯಮಾಡಿಸಲಿಲ್ಲವಾದ್ದರಿಂದ ಅವರ ಪರವಾಗಿ ಶ್ರೀ ಎಂ ಶ್ರೀನಿವಾಸಮೂರ್ತಿಯವರು ತಮ್ಮ ಪತ್ರಿಕೆಯನ್ನು ಸನ್ಮಾನಿಸಿದ್ದಕ್ಕಾಗಿ ವಂದನೆಗಳನ್ನರ್ಪಿಸಿದರು.

ರಾಜಕಮಲ್
ಮೈಸೂರು
ತಾ|| ೭-೧೧-೪೬ ರಿಂದ
ಎರಡನೆಯ ವಾರ
* ನೂರ್‌ಜಹಾನ್, * ಗೀತಾನಿಜಾಮಿ,
* ರಾಮುಕಕುಲ್ ನಟಿಸಿರುವ
ವಿಲೇಜ್ ಗರ್ಲ್
(ಹಳ್ಳಿಯ ಹುಡುಗಿ)

ಮುಸ್ಲಿಂನನ್ನು ಕೊಲ್ಲಬೇ[ಕೆಂ]ದರೆ ಮೊದಲು ನನ್ನನ್ನು ...

ನೀವು ಮುಸ್ಲಿಮನನ್ನು ಕೊಂ... ವ್ಯ ನೀಡನ್ನು ತೀರಿಸಿಕೊಳ್ಳಬೇಕೆ... ತ್ತಿ ದಾಹದಿಂದ ಹಾತೊರೆಯುತ್ತಿದ್ದ... ದಲು ನನ್ನನ್ನು ಕೊಂದು ನನ್ನ ರ... ನಿಮ್ಮ ದಾಹವನ್ನು ನೆನೆಸಿ, ನನ್ನ ... ನ್ನು ತುಳಿದು ಅನಂತರ ಬೇಕಾದ್ದನ್ನು ... ಡಿರಿ- ಎಂದು ಪಂಡಿತ ನೆಹರೂರವ... ಟ್ನಾ ಜಿಲ್ಲೆಯ ತಾರೆಗ್ನಾ ಎಂಬಲ್ಲಿ ಘೋ... ಸಿದ್ದಾರೆ. ಪಂ|| ನೆಹರೂರವರು ಪಾಟ್ನಾ ... ಲ್ಲೆಯಲ್ಲೆಲ್ಲಾ ದೀರ್ಘ ಪ್ರವಾಸ ಕೈಕೊ... ದ್ದಾರೆ. ಅನೇಕ ಸಭೆಗಳಲ್ಲಿ ಭಾಷಣ ... ಡುತ್ತಿದ್ದಾರೆ. ಜನರ ಆಕ್ರೋಶವನ್ನೂ ... ನ್ಮಾದ ಪ್ರವೃತ್ತಿಯನ್ನೂ ಖಂಡಿಸಿ, ... ಬೇಡವಾದವರ ರಕ್ತನ್ನು ಹುಂಡರಿ... ರಿಂದ ಸ್ವಾತಂತ್ರ್ಯ ಲಭಿಸಲಾರದು. ... ಸಾರ್ವಜನಿಕರಲ್ಲಿ ಎಚ್ಚರಿಕೆಯ ವಿ... ಮಾಡಿಕೊಂಡಿದ್ದಾರೆ.

ಹೇಯ ಕೃತ್ಯಗಳಿಂದ ಸ್ವಾತಂತ್ರ್ಯಕ್ಕೆ ತಿಲಾಂಜ[ಲಿ]

ಗಲಭೆಯನ್ನಡಗಿಸಲು ಬಾಂಬು ... ವುದಾಗಿ ಸರ್ಕಾರದವರು ತಿಳಿಸಿದ್ದಾರೆ ... ರೆ ಅದು ಬ್ರಿಟಿಷರ ನೀತಿ. ಕಾಂಗ್ರೆಸ್ಸಿ... ದೇಶೀಯರ ಮಾರ್ಗ ಅನುಸರಿಸ ಬೇ... ಜನರ ಮೇಲೆ ಕಾಂಗ್ರೆಸ್ಸಿನ ಹತೋಟಿ ... ಹೋಗುವಾಗ ನೆಹರೂ ತಾನೆ ಏನು ... ಡಿಯಾರು? ಆ ಸಮಯದಲ್ಲಿ ಅಧಿಕಾ... ತ್ರವನ್ನು ಬಿಟ್ಟುಕೊಡುವುದೇ ಉತ್ತಮ... ನರು ಇಂತಹ ಹೇಯ ಕೃತ್ಯಗಳನ್ನು ... ಮುಂದುವರಿಸಿದ್ದೇ ಆದರೆ ಸ್ವಾತಂತ್ರ್ಯಕ್ಕೆ ... ನಮಸ್ಕಾರ ಹಾಕಿ ಹೊರಟುಹೋಗುವ... ಮೇಲು- ಎಂದು ಗಾಂಧಿಜಿ ಪ್ರಾರ್ಥನಾ ಸಭೆಯಲ್ಲಿ ತಿಳಿಸಿರುವರು.

|| ವಂದೇಮಾತರಂ ||

ಮೈಸೂರು ನಗರದ ಹೆಮ್ಮೆ!

ನೂರಕ್ಕೆ ನೂರರಷ್ಟು ಕಾಂಗ್ರೆಸ್ ವಿಜಯ!

*ಕಳೆದ ಆರು ವರ್ಷಗಳಿಂದ ಮೈಸೂರು ನಗರ ನಿವಾಸಿಗಳು ಪೌರಸಭೆಗೆ ಎಲ್ಲಾ ಕಾಂಗ್ರೆಸ್ ಪ್ರತಿನಿಧಿಗಳನ್ನೂ ಆರಿಸಿ ಕಳುಹಿಸಿದ್ದಾರೆ.

* ಇದನ್ನು ಕಂಡು ಮಹಾತ್ಮ ಗಾಂಧಿಯವರೂ, ರಾಷ್ಟ್ರನಾಯಕರೂ ಮುಗ್ಧರಾಗಿ ಮೈಸೂರನ್ನು ಕೊಂಡಾಡಿದ್ದಾರೆ.

* ಇಪ್ಪತ್ತನಾಲ್ಕು ಜನ ಕಾಂಗ್ರೆಸ್ ಉಮೇದುವಾರರಿಗೂ ಅಖಂಡ ವಿಜಯವನ್ನು ದೊರಕಿಸಿ ಕೊಟ್ಟಿರುವುದು ಇತಿಹಾಸದಲ್ಲೇ ಅಪೂರ್ವವಾದ ಹೆಮ್ಮೆಯ ಸಂಗತಿ.

* ಈ ಸಾರಿ ಪೌರಸಭಾ ಚುನಾವಣೆಯಲ್ಲಿಯೂ ಮೈಸೂರು ತನ್ನ ಅಪ್ರತಿಮ ಕಾಂಗ್ರೆಸ್ ಪ್ರೇಮವನ್ನು ಪ್ರದರ್ಶಿಸಲಿ!

ಜೈ ಹಿಂದ್!

From Friday the 8-11-46
For 4 days only
at 10-30 A. M.
"BEAD END"
A Samuel Goldwyn
Million-Dollar
Production

ಟಿ. ಸಿ. ನಟರಾಜ್
ಔಷಧಾಲಯ

ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದೀಯ ಔಷಧಿಗಳೆಲ್ಲವೂ ದೊರೆಯುತ್ತವೆ.

ನಿಮ್ಮ ಮೈ ಮೊಗವಲ್ಲಿನಂತೆ ಹೊಳೆಯಬೇಕೆ? ನೀವು ಲಾವಣ್ಯ ಮೂರ್ತಿಗಳಾಗಬೇಕೆ? ಹಾಗಾದರೆ ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

"ಮೈಸೂರು
ಸ್ಯಾಂಡಲ್
ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ.
ಪರೀಕ್ಷಿಸಿ ನೋಡಿರಿ
ಎಲ್ಲೆಲ್ಲಿಯೂ ದೊರೆಯುತ್ತವೆ.
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.

Edited, printed and published A. K. Nagarajan at the Sadhvi ... D. Subbiah Road, Mysore.

ರೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶುಕ್ರವಾರ ೮—೧೧—೪೬ [ಸಂಚಿಕೆ ೨೪೪

ವಿಜಯಲಕ್ಷ್ಮಿ ಪಂಡಿತರು ಅಮೆರಿಕಾ ರಾಯಭಾರಿ

...ದೊಡ್ಡಕೆರೆ ಮೈದಾನದಲ್ಲಿ ಚಿರತೆ ಹಾವಳಿ

ಮೈಸೂರು ೮

...ನ್ನೆ ರಾತ್ರಿ, ಒಂದು ಚಿರತೆಯು ದೊ...ಡ್ಡ ಕೆರೆ ಮೈದಾನದಲ್ಲಿ, ಒಂದು ಹ...ಸುವನ್ನು ಹೊಡೆದು ಹಾಕಿ ಹಾವಳಿ ನಡೆಸಿ...ರುವುದು ಗೊತ್ತಾಗಿದೆ. ಚಿರತೆ ಬಂದ ...ದು ವಿವರ ತಿಳಿದು ಬಂದಿಲ್ಲ. ಸುತ್ತ...ಮುತ್ತಿನ ನಿವಾಸಿಗಳಲ್ಲಿ ಗಾಬರಿ ಉಂಟಾ... ಸಂಬಂಧಪಟ್ಟ ಅಧಿಕಾರಿಗಳು ಚಿರ...ತೆಯನ್ನು ಶಿಕಾರಿ ಮಾಡಿ, ಜನರಿಗೆ ಉಂ...ಟಾದ ಗಾಬರಿಯನ್ನು ಹೋಗಲಾಡಿ...ಸಬೇಕೆಂದು ಆಶಿಸಲಾಗಿದೆ.

ಹರಿಕಥೆ

...ಮೈಸೂರು ಚೆಲುವಾಂಬ ಅಗ್ರಹಾರದ ...ರಸ್ತೆಯಲ್ಲಿರುವ ಶ್ರೀ ಪ್ರಸನ್ನ ವೆಂಕಟರ...ಮಣ ಸ್ವಾಮಿಯವರ ದೇವಸ್ಥಾನದಲ್ಲಿ ...ಪಾಟೀಲಿನಿಂದ ಬಂದಿರುವ ಹರಿಕಥಾ ...ಗಣಪತಿ ಭಾಗವತರು ನಿನ್ನೆಯಿಂ...ದ ದಿನಗಳು ಶ್ರೀಮದ್ರಾಮಾಯಣವ...ನ್ನು ...ನಲ್ಲಿ ಹರಿಕಥೆ ರೂಪದಲ್ಲಿ ನಿರೂ...ಪಣೆ ಮಾಡುತ್ತಿದ್ದಾರೆ. ಮಹಾಜನರು ...ಆಗಮಿಸಬೇಕಾಗಿ ಕೋರಿದೆ

ವಿಜಯಲಕ್ಷ್ಮಿ ಪಂಡಿತರು ಅಮೆರಿಕದಲ್ಲಿ ರಾಯಭಾರಿ

...ಸಂಯುಕ್ತ ರಾಷ್ಟ್ರಗಳ ಸಭೆಗೆ ಭಾರತದ ...ನಿಧಿಯಾಗಿ ತೆರಳಿರುವ ಶ್ರೀಮತಿ ವಿಜ...ಯಲಕ್ಷ್ಮಿ ಪಂಡಿತರು ಭಾರತದ ರಾಯಭಾ...ರಿಯಾಗಿ ಅಮೆರಿಕದಲ್ಲೇ ಉಳಿಯುವರೆಂ...ದು ತಿಳಿಯಾಗಿದೆ. ಬಹುಶಃ ಡಿಸೆಂಬರ್ ...ಯಲ್ಲಿ ಈ ಬಗ್ಗೆ ಅಜ್ಞೆ ಹೊರಬೀಳಲಿ...ದೆ ನಂಬಲಾಗಿದೆ.

...ಭಾರತ ಸ್ವಾತಂತ್ರ್ಯದ ಬಗ್ಗೆ ...ಬ್ರಿಟಿಷ್ ರಾಜರ ಆಶಯ

...ತಾತ್ಕಾಲಿಕ ಸರ್ಕಾರದ ಮಾರ್ಗ ದರ್ಶ...ನದಲ್ಲಿ ಭಾರತವು ಅಭಿವೃದ್ಧಿಯಾಗಲೆಂದು ...ರಾಜರು ಮೊನ್ನೆ ಪಾರ್ಲಿಮೆಂಟ್ ...ಭಾಷಣದ ಮುಕ್ತಾಯದಲ್ಲಿ ತಿಳಿಸಿದರು. ...ಮಂತ್ರಿಗಳೂ ಪಾರ್ಲಿಮೆಂಟೂ ...ಸ್ವಾತಂತ್ರ್ಯಕ್ಕಾಗಿ ಬೆಂಬಲವೀಯು...ವರು ಅದೇ ಸ್ವಾತಂತ್ರ್ಯವನ್ನು ರಾ...ಜ್ಯರಚನಾ ಸಭೆಯು ಕಾರ್ಯಕ್ರಮದ ...ಮೂಲಕ ಭಾರತವು ಸಾಧಿಸಲೆಂದು, ಅವ...ರು ಆಶಿಸುವರು.

...ಟ್ರೂಮನ್ ಪಂಗಡಕ್ಕೆ ಭಾರೀ ಪರಾಜಯ

...ಅಮೆರಿಕದ ಚುನಾವಣೆಗಳಲ್ಲಿ ಅಧ್ಯಕ್ಷ ...ರ ಡೆಮೊಕ್ರಾಟಿಕ್ ಪಕ್ಷಕ್ಕೆ ಭಾರೀ ...ಸೋಲುಂಟಾಗಿದೆ. ಪ್ರತಿನಿಧಿ ಸಭೆ...ಯಲ್ಲಿ ರಿಪಬ್ಲಿಕನ್ ಪಕ್ಷಕ್ಕೆ ೨೪೩ ಸ್ಥಾನಗ...ಳೂ ಡೆಮೊಕ್ರಾಟಿಕ್ ಪಕ್ಷಕ್ಕೆ ೧೮೩ ಸ್ಥಾನ...ಗಳೂ ದೊರೆತಿವೆ. ಸೆನೆಟ್ ಸಭೆಯಲ್ಲಿ ...ಸ್ಥಾನಗಳನ್ನು ರಿಪಬ್ಲಿಕನ್ನರು ಗಳಿಸಿ... ಡೆಮೊಕ್ರಾಟಿಕರಿಗೆ ೪೩ ಸ್ಥಾನಗ...ಳು ಲಭ್ಯವಾಗಿವೆ. ಗವರ್ನರುಗ...ಳ ಚುನಾವಣೆಗಳಲ್ಲೂ ರಿಪಬ್ಲಿಕನ್ನರು ೨೨ ...ಸ್ಥಾನಗಳನ್ನು ಗೆದ್ದಿದ್ದಾರೆ. ಟ್ರೂಮನ್ನರ ...ಪಕ್ಷಕ್ಕೆ ಕೇವಲ ೧೧ ಸ್ಥಾನಗಳು ಸಿಕ್ಕಿವೆ. ...ನ್ಯೂಯಾರ್ಕ್ ನಗರದ ಗವರ್ನರಾಗಿ ಚುನಾ...ಯಿತರಾದ ...ಡ್ಯೂಯಿಯವರು ...ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸುವ ...ರೆಂದು ತಿಳಿದುಬಂದಿದೆ ಈ ...ಚುನಾವಣೆಗಳ ಫಲಿತಾಂಶವನ್ನು ನೋಡಿ ಟ್ರೂಮನ್ನರು ರಾಜೀನಾಮೆ ಕೊಡಬೇಕೆಂದು ರಿಪಬ್ಲಿಕನ್ ಪಕ್ಷದವರು ಸೂಚಿಸಿದ್ದಾರೆ

ಶಾಸನ ಸಭೆ

ಸ್ವಂ.ಸು.ಫೋ.] ಬೆಂಗಳೂರು ೮

ನ್ಯಾಯ ವಿಧಾಯಕ ಸಭೆಯ ಅಧಿವೇಶನವು ಮುಂದಿನ ತಿಂಗಳು ೧೯ ನೇ ತಾ॥ ನಿಂದ ಆರಂಭವಾಗುವುದು

ಕಾಂಗ್ರೆಸ್ ಅಧ್ಯಕ್ಷರ ಪ್ರವಾಸ

ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಚೆಂಗಲ್‌ರಾಯರೆಡ್ಡಿಯವರು ಸುಭಾಸ್ ನಗರದಲ್ಲಿ ಆದ ತೀರ್ಮಾನದಂತೆ ಜವಾಬ್ದಾರೀ ಸರ್ಕಾರದ ಹೋರಾಟದ ಸಿದ್ಧತೆಗಾಗಿ ಸಂಸ್ಥಾನಾದ್ಯಂತ ಪ್ರವಾಸವನ್ನು ೧೧ ನೇ ತಾ॥ ನಿಂದ ಕೈಗೊಳ್ಳುವರು. ಇವರ ಪ್ರವಾಸ ಕಾಲದಲ್ಲಿ ಕಾಂಗ್ರೆಸ್ ಕೆಲಸಗಾರರೆಲ್ಲರೂ ಸಹಕರಿಸಬೇಕೆಂದು ಕಾರ್ಯದರ್ಶಿಯಾದ ಶ್ರೀ ಕೆ. ಆರ್ ಮಾಧವರಾಯರು ತಿಳಿಸುತ್ತಾರೆ

ವೈಸರಾಯರು ಬಿಹಾರಿಗೆ

ವೈಸರಾಯರು ಸರ್ದಾರ್ ನಿಷ್ತಾರ್‌ರವರೊಡನೆ ನಿನ್ನೆ ಬೆಳಿಗ್ಗೆ ವಿಮಾನದಲ್ಲಿ ಪಾಟ್ನಾಕ್ಕೆ ತೆರಳಿದರು. ಬಿಹಾರ್ ಗಲಭೆ ಪ್ರದೇಶಗಳಲ್ಲಿ ಅವರು ಸಂಚರಿಸಲಿದ್ದಾರೆ.

ನೌಖಾಲಿಯಲ್ಲಿ ಗಾಂಧೀಜಿ

ಗಾಂಧಿಜಿಯವರು ಚಾಂದ್ ಪುರದಿಂದ ನೌಖಾಲಿಗೆ ರೈಲಿನಲ್ಲಿ ಆಗಮಿಸಿದ್ದಾರೆ. ನೌಖಾಲಿಯಲ್ಲಿ ಹಿಂದೂಗಳೂ ಮತ್ತು ಮುಸಲ್ಮಾನರೂ ಆಜ್ಞಾ ತಮ್ಮಂದಿರಂತೆ ವಾಸಮಾಡುವ ತನಕ ತಾವು ಅಲ್ಲಿಯೇ ಇದ್ದುಬಿಡುವುದಾಗಿ ಗಾಂಧಿಜೀಯವರು ತಿಳಿಸಿದ್ದಾರೆ.

ಹೋರಾಟಕ್ಕೆ ಸಿದ್ಧತೆ

ಸಾಮ್ರಾಜ್ಯ ಶಾಹಿಯನ್ನು ಭಾರತದಿಂದ ಸಂಪೂರ್ಣವಾಗಿ ತೊಲಗಿಸಲು ಸಧ್ಯದಲ್ಲೇ ಭಾರಿ ಹೋರಾಟ ಅವಶ್ಯಕವೆಂದು ಜೈ ಪ್ರಕಾಶ ನಾರಾಯಣ್‌ರವರು ಲಕ್ನೋ ಬಳಿ ಭಾಷಣ ಮಾಡುತ್ತಾ ತಿಳಿಸಿದ್ದಾರೆ. ಬ್ರಿಟಿಷರ ಕುಯುಕ್ತಿಯಿಂದ ಲೀಗು ಕೇಂದ್ರ ಸರ್ಕಾರಕ್ಕೆ ಸೇರಿಹೋಯಿತೆಂದು ಅವರು ಹೇಳಿದ್ದಾರೆ. ಮುಂದಿನ ಹೋರಾಟದಲ್ಲಿ ೧೯೪೨ ರಲ್ಲಿ ಸತಾರಾದಲ್ಲಿ ಏರ್ಪಟ್ಟಂತೆ ಹಳ್ಳಿಗಳಲ್ಲಿ ಸ್ವತಂತ್ರ ಸರ್ಕಾರಗಳೇರ್ಪಡಬೇಕೆಂದೂ ಪೋಲೀಸ್, ಅಂಚೆ ಮತ್ತು ಸರ್ಕಾರಿ ಅಧಿಕಾರಿಗಳೇ ಮುಂತಾದ ಜನರು, ಸಂಸ್ಥೆಗಳಲ್ಲಿರುವವರು ಸಾರ್ವತ್ರಿಕ ಮುಷ್ಕರದಲ್ಲಿ ಭಾಗವಹಿಸಬೇಕೆಂದೂ, ಅವರು ಹೇಳಿದ್ದಾರೆ

ಆರೋಗ್ಯ ಸಾಧನೆಯಲ್ಲಿ ಪ್ರಭುಗಳ ಆಸಕ್ತಿ

ಕೆಂಪು ಚೆಲುವಾಜಮ್ಮಣ್ಣಿಯವರ ಆಸ್ಪತ್ರೆ ಶಂಕು ಸ್ಥಾಪನೆ

ಸ್ವಂ. ಸು. ಫೋ.] [ಬೆಂಗಳೂರು ೮

ರಾಜಕುಮಾರಿಯು ಜನನವನ್ನು ಸಂಸ್ಥಾನದ ಜನರು ಸಂತೋಷದಿಂದ ಸ್ವಾಗತಿಸುವ ಈ ಸಮಯದಲ್ಲಿ ಗರ್ಭಿಣಿಯರ ಮತ್ತು ನಮ್ಮ ಸಂಸ್ಥಾನದ ಮುಂದಿನ ಪ್ರಜೆಗಳ ಕ್ಷೇಮವನ್ನು ನೋಡಿಕೊಳ್ಳುವಂತಹ ಆಸ್ಪತ್ರೆಯ ಶಂಕು ಸ್ಥಾಪನಾ ಮಹೋತ್ಸವವನ್ನು ನೆರವೇರಿಸಲು ನಮಗೆ ಪರಮಾನಂದವಾಗಿದೆಯಲ್ಲದೆ ಈ ಕಾರ್ಯಕ್ಕೆ ಇದು ಸರಿಯಾದ ಸಮಯವೆಂದು ಭಾವಿಸುತ್ತೇವೆ. ಅನಾರೋಗ್ಯದಿಂದ ಕೂಡಿರುವವರ ಮತ್ತು ಸಂಕಟಕ್ಕೊಳಗಾಗಿರುವವರ, ಅದರಲ್ಲೂ ಮುಖ್ಯವಾಗಿ ಸ್ತ್ರೀಯರ ಮತ್ತು ಮಕ್ಕಳ ಕಷ್ಟ ನಿವಾರಣೆ ಮಾಡುವ ಈ ಕಾರ್ಯವು ನಮ್ಮ ಹೃದಯಕ್ಕೆ ಪ್ರೀತಿಯನ್ನುಂಟುಮಾಡುತ್ತದೆ" ಎಂದು ಶ್ರೀಮನ್ಮಹಾರಾಜರು ಈ ದಿನ ಮಲ್ಲೇಶ್ವರದಲ್ಲಿ ಶ್ರೀ ಕೆಂಪು ಚೆಲುವಾಜಮ್ಮಣ್ಣಿಯವರ ಹೆಸರಿನಲ್ಲಿ ನಿರ್ಮಾಣವಾಗಲಿರುವ ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆಯ ಶಂಕು ಸ್ಥಾಪನಾ ಸಮಾರಂಭವನ್ನು ನೆರವೇರಿಸುತ್ತಾ ಅಪ್ಪಣೆ ಕೊಡಿಸಿದರು

ಮನೆಯಲ್ಲಿ ನಡೆಯುವ ಹೆರಿಗೆಗಳಿಗಿಂತ ಆಸ್ಪತ್ರೆಯಲ್ಲಿ ಹೆರಿಗೆಗಾಗಿ ಜನಗಳು ಹೆಚ್ಚು ಸಂಖ್ಯೆಯಲ್ಲಿ ಬರುತ್ತಿರುವುದನ್ನು ಶ್ರೀ ಪ್ರಭುಗಳು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು

"ನಮ್ಮ ಸಂಸ್ಥಾನದಲ್ಲಿ ಹೆರಿಗೆ ಗೃಹಗಳು, ಮಕ್ಕಳ ಸಂರಕ್ಷಣಾ ನಿಲಯಗಳೂ ದಿನೇ ದಿನೇ ಅಭಿವೃದ್ಧಿ ಹೊಂದಿ ಇತರೆ ಸುತ್ತಮುತ್ತಲಿನ ಪ್ರದೇಶಗಳಿಗಿಂತಲೂ ಮುಂದುವರಿದಿದ್ದರೂ ಸಂಸ್ಥಾನದ ಎಲ್ಲಾ ಭಾಗಗಳಲ್ಲೂ ಅವಶ್ಯಕತೆ ಇರುವಷ್ಟು ಮುಂದಿಗೆ ಸರಿಯಾದ ಪರಿಹಾರ ದೊರೆಯುತ್ತಿಲ್ಲವೆಂಬುದನ್ನು ನಾವು ಒಪ್ಪಿಕೊಳ್ಳಲಿದ್ದೇವೆ" ಎಂದು ಪ್ರಭುಗಳು ತಿಳಿಸಿದರು. ಮಲೆನಾಡು ಪ್ರದೇಶಗಳಲ್ಲಿ ಹೆರಿಗೆ ಸೌಕರ್ಯಗಳನ್ನು ಸಧ್ಯದಲ್ಲೇ ನಮ್ಮ ಸರ್ಕಾರ ಕೈಗೊಳ್ಳಲಿದೆಯೆಂದು ಹೇಳಿ ತಮ್ಮ ಪೂಜ್ಯ ತಾಯಿಯವರ ಹೆಸರಿನಲ್ಲಿ ಆರಂಭವಾಗುವ ಈ ಆಸ್ಪತ್ರೆಯ ಕಟ್ಟಡದ ಶಂಕು ಸ್ಥಾಪನೆಯನ್ನು ನೆರವೇರಿಸಿದರು

ಈ ಸಂದರ್ಭದಲ್ಲಿ ಮಲ್ಲೇಶ್ವರದ ಹೆರಿಗೆ ಆಸ್ಪತ್ರೆಯ ಪರವಾಗಿ ಒಂದು ಬಿನ್ನವತ್ತಳೆಯನ್ನು ಪ್ರಭುಗಳಿಗೆ ಒಪ್ಪಿಸಲಾಯಿತು.

ಚುನಾವಣಾ ಪ್ರಚಾರ ಭಾಷಣ

ಮೈಸೂರು ೮

ಮೈಸೂರು ಕಾಂಗ್ರೆಸ್ ಉಮೇದುವಾರರ ಪರ ಚುನಾವಣಾ ಪ್ರಚಾರ ಭಾಷಣವನ್ನು ನಾಳೆ ಸಂಜೆ ಆರು ಗಂಟೆಗೆ ಸುಬ್ಬರಾಯನಕೆರೆಯಲ್ಲಿ ಏರ್ಪಡಿಸಿದೆ. ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರಾದ ಶ್ರೀ ಟಿ. ಸುಬ್ರಮಣ್ಯಂರವರು ಮತ್ತು ಕಾರ್ಯದರ್ಶಿಗಳಾದ ಶ್ರೀ ಹೆಚ್ ಕೆ. ವೀರಣ್ಣಗೌಡರೂ ಭಾಷಣ ಮಾಡುವರು. ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಚೆಂಗಲ್‌ರಾಯರೆಡ್ಡಿಯವರು ೧೧ ನೇ ತಾ॥ ಸೋಮವಾರ ಭಾಷಣ ಮಾಡುವರು.

ರೈಲ್ವೆ ಗಾಡಿಗಳ ಢಿಕ್ಕಿ

ದೆಹಲಿ ರೈಲ್ವೆ ನಿಲ್ದಾಣಕ್ಕೆ ಬರುತ್ತಿದ್ದ ಫ್ರಾಂಟಿಯರ್ ಮೇಲ್ ಟ್ರೈನಿಗೂ ಮತ್ತು ಅದೇ ನಿಲ್ದಾಣದಿಂದ ಹೊರಟಿದ್ದ ಒನ್ ಅಫ್‌ಮೇಲ್ ಟ್ರೈನಿಗೂ ಮೊನ್ನೆ ದಿನ ಢಿಕ್ಕಿಯಾಗಿ ಒಬ್ಬನು ಮರಣ ಹೊಂದಿ ಹದಿನೇಳು ಜನರಿಗೆ ಗಾಯವಾಗಿದೆಯೆಂದು ವರದಿಯಾಗಿದೆ

ಬಂಗಾಳದಲ್ಲಿ ಪಾನ ನಿರೋಧ

ಬಂಗಾಳದಲ್ಲಿ ಒಂದು ಜಿಲ್ಲೆಯ ನಂತರ ಮತ್ತೊಂದರಂತೆ ಮಧ್ಯಪಾನ ನಿರೋಧವನ್ನು ಜಾರಿಗೆ ತರುವ ಸಲುವಾಗಿ ಒಂದು ಯೋಜನೆಯನ್ನು ಅಲ್ಲಿನ ಸರ್ಕಾರವು ಪರಿಶೀಲಿಸುತ್ತಿದೆ

ಹರಿಜನರಿಗೆ ವಸತಿ ಸೌಕರ್ಯ

ಪ್ರಭುಗಳಿಂದ ಶಂಕುಸ್ಥಾಪನೆ

ಸ್ವಂ. ಸು. ಫೋ.] ಬೆಂಗಳೂರು ೮

"ಹರಿಜನರಿಗಾಗಿ ವಸತಿಯನ್ನು ತಾವು ರಚಿಸುವುದೂ ಪ್ರಜಾ ಸಮುದಾಯದ ಯಾವ ಭಾಗದ ಜನರಿಗೆ ನಮ್ಮ ಗಮನವು ಅತಿ ಜರೂರಾಗಿ ಬೇಕಾಗುವುದೋ ಅಂತಹವರ ವಿಷಯದ ಕಡೆ ನಮ್ಮ ಪ್ರಥಮ ದೃಷ್ಟಿಯು ಹೋಗಿರುವುದೂ ನಮಗೆ ಪೂರ್ಣ ತೃಪ್ತಿಯನ್ನುಂಟುಮಾಡಿದೆ" ಎಂದು ಶ್ರೀಮನ್ಮಹಾರಾಜರವರು ಈ ದಿನ ಸಂಜೆ ಲಾಲ್‌ಬಾಗಿನ ಸಿದ್ದಾಪುರದಲ್ಲಿ ಹರಿಜನರ ವಸತಿಗಳ ಶಂಕುಸ್ಥಾಪನಾ ಮಹೋತ್ಸವವನ್ನು ನೆರವೇರಿಸುತ್ತಾ ಅಪ್ಪಣೆಕೊಡಿಸಿದರು

ಈ ವಸತಿಯು ಹರಿಜನರನ್ನು ಇತರ ಜನಗಳಿಂದ ಪ್ರತ್ಯೇಕಿಸುತ್ತದಿಲ್ಲವೆಂಬ ವಿಚಾರವು ಸಮಾಧಾನಕರವಾಗಿರುವುದಾಗಿ ಹೇಳಿ ಹರಿಜನರ ಉದ್ಧಾರಕ್ಕಾಗಿ ಉಪಕಸುಬನ್ನು ತೆರೆದು ಸೇವಾವೃತ್ತಿಯನ್ನು ಕೈಗೊಂಡಿರುವ ಶ್ರೀ ವೆಂಕಟಪ್ಪನವರನ್ನು ಪ್ರಭುಗಳು ಅಭಿನಂದಿಸಿದರು

"ಈಗ ಅಧಿಕಾರಕ್ಕಿಂತ ಕರ್ತವ್ಯ ಮತ್ತು ಜವಾಬ್ದಾರಿಯ ಅವಶ್ಯಕತೆಯು ಅಧಿಕವಾಗಿದೆ. ಅಧಿಕಾರ ಮತ್ತು ಅಡಳಿತಗಳು ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವ ಸಲುವಾಗಿಯೇ ಆಗಿದೆ" ಎಂದರು

ಪ್ರಭುಗಳು ತಮ್ಮ ಭಾಷಣವನ್ನು ಮುಕ್ತಾಯಗೊಳಿಸುತ್ತಾ ಈ ವಸತಿಯಲ್ಲಿ ವಾಸಿಸುವವರು ಸಂತೋಷದಿಂದಲೂ, ಆರೋಗ್ಯದಿಂದಲೂ, ಇರಲೆಂದು ಹಾರೈಸಿದರು.

ಬೆಂಗಳೂರು ಪುರ ಸಭಾಧ್ಯಕ್ಷರು ಪುರಸಭೆಯ ಪರವಾಗಿ ಪ್ರಭುಗಳಿಗೆ ಒಂದು ಬಿನ್ನವತ್ತಳೆಯನ್ನೊಪ್ಪಿಸಿದರು

...ಸಿಮೆಂಟಿನ ರಂಜಕವನ್ನು ಕೇಳಿ ಮಾಡ... ನವೋದಯ ಮಾಳವಿಮಾನವರು... ಆಗಿದ್ದಾರೆ ... ಅಸ... ಹಿಂ... ಆಗಿರುವುದಾಗಿ ವರದಿ ಬಂದಿದೆ

ಸಾಧ್ವಿ

ತಾ|| ೮-೧೧-೪೬ ಶುಕ್ರವಾರ

ಪೌರಸಭೆಯ ಕಾರ್ಯ ಸಾಧನೆ

ನಗರ ನಿವಾಸಿಗಳ ಪ್ರತಿನಿಧಿಗಳು ಪೌರಸಭೆಯಲ್ಲಿ ಎಸಗಿರುವ ಕಾರ್ಯ ಸಾಧನೆಗಳೇನೆಂಬುದನ್ನು ವಿಮರ್ಶಿಸಲು ಇದು ಸಕಾಲವಾಗಿದೆ. ಮುಂದೆ ತನ್ನ ಹಿತ ಸಾಧನೆಯನ್ನು ಮಾಡಬಲ್ಲ ನಿಜವಾದ ಪ್ರತಿನಿಧಿಗಳನ್ನು ಅವರು ಆರಿಸಲು ಇದು ಸಹಾಯಕವಾಗುವುದು. ಕೆಲವು ಅಂಶಗಳನ್ನು ಮಾತ್ರ ಇಲ್ಲಿ ಪರಿಶೀಲಿಸಲಾಗಿದೆ.

ನಗರದ ಎಲ್ಲಾ ಮೊಹಲ್ಲೆಗಳಲ್ಲಿಯೂ ಸ್ನಾನದ ಮನೆಗಳನ್ನೂ, ಸಾರ್ವಜನಿಕ ಕಕ್ಕಸುಗಳನ್ನೂ ನಿರ್ಮಿಸುವುದು ಪೌರಸಭೆಯ ಬಹಳ ಪ್ರಾಮುಖ್ಯವಾದ ಕಾರ್ಯಕ್ರಮ. ಇವುಗಳಿಂದ ಮೊಹಲ್ಲಾ ನಿವಾಸಿಗಳಿಗೆ ವಿಶೇಷವಾದ ಪ್ರಯೋಜನವಾಗಿರುತ್ತದೆ.

ರಾಜಧಾನಿಯ ಸುಮಾರು ನೂರೈವತ್ತು ಜನ ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ಭೋಜನ ಸೌಕರ್ಯವನ್ನು ಕಲ್ಪಿಸಲಾಗಿದೆ. ಇದಕ್ಕೆ ಪೌರಸಭೆಯವರೂ ಸಾರ್ವಜನಿಕರೂ ಉದಾರವಾಗಿ ಸಹಾಯ ಮಾಡಿರುತ್ತಾರೆ. ನಗರದ ಸುಮಾರು ಆರು ನೂರು ಜನ ಬಡ ಸಂಸಾರಿಗಳಿಗೆ ಅಕ್ಕಿ ಮತ್ತು ರಾಗಿ ಪಡಿತರವನ್ನು ಪ್ರತಿದಿನವೂ ಉಚಿತವಾಗಿ ಕೊಡಲು ಏರ್ಪಾಡು ಮಾಡಲಾಗಿದೆ. ರೇಷನ್ ಪದ್ಧತಿಯಿಂದ ಪವಿತ ಧಾನ್ಯಗಳು ದೊರೆಯದೆ ಬಡಜನರು ಕಷ್ಟಪಡುತ್ತಿರುವ ಈ ಸಮಯದಲ್ಲಿ ಇದರಿಂದ ಬಹಳ ಉಪಕಾರವಾಗಿರುತ್ತದೆ. ಭಿಕ್ಷಾಟನೆಯಿಂದ ಜೀವಿಸುತ್ತಿದ್ದ ಅನೇಕರಿಗೆ ಈ ಏರ್ಪಾಡು ಪರಿಹಾರವನ್ನು ಕಲ್ಪಿಸಿರುತ್ತದೆ.

ಸೌದೆಯ ಅಭಾವವು ವಿಪರೀತವಾಗಿ ರೂ. ಗೆ ಒಂದೂವರೆ ಮಣವೂ ದೊರೆಯದೆ ತೊಂದರೆಯುಂಟಾಗಲು ಪೌರಸಭೆಯವರು ಸರ್ಕಾರದವರ ಸಹಾಯದಿಂದ ಲಾರಿಗಳ ಮೂಲಕ ಸೌದೆಯನ್ನು ತರಿಸಿ ಮೂರು ಡಿಪೋಗಳಲ್ಲಿ ಮಾರಾಟ ಮಾಡುತ್ತಿದ್ದಾರೆ. ರೂ. ಗೆ ನಾಲ್ಕು ಮಣದಂತೆ ಇವುಗಳಲ್ಲಿ ಸೌದೆ ದೊರೆಯುತ್ತದೆ. ಸುಮಾರು ಐವತ್ತು ಮಳಿಗೆಗಳು ಈ ರೀತಿ ನಿರ್ಮಾಣವಾಗಿವೆ. ಈ ಏರ್ಪಾಡಿನಿಂದ ಸೌದೆ ಗಾಡಿಗಳ ಬೆಲೆಯೂ ಸಹ ಬಹಳವಾಗಿ ಇಳಿದಿರುತ್ತದೆ.

ಪ್ರತಿ ಮೊಹಲ್ಲೆಯಲ್ಲಿಯೂ ಮಕ್ಕಳ ಆಟದ ಸಾಮಾನುಗಳನ್ನು, ಪಾರ್ಕುಗಳಲ್ಲಿ ಸ್ಥಾಪಿಸಿ ನಗರದ ಬೆಳೆಯುವ ಹುಡುಗರು ವಿನೋದವಾಗಿ ಕಾಲವನ್ನು ಕಳೆಯಲು ಏರ್ಪಾಡು ಮಾಡಲಾಗಿದೆ.

ಕಸಕಡ್ಡಿಗಳನ್ನು ಹಾಕಲು ಎಲ್ಲಾ ಬೀದಿಗಳಿಗೂ ಕಲ್ಲಿನ ತೊಟ್ಟಿಗಳನ್ನು ಒದಗಿಸಲಾಗಿದೆ. ಮೊದಲು ಇದ್ದ ಕಬ್ಬಿಣದ ತೊಟ್ಟಿಗಳು ಮಾಯವಾಗುತ್ತಲೂ ಮತ್ತು ಬೇರೆ ವಿಧದಲ್ಲಿ ಕೆಟ್ಟು ಹೋಗುತ್ತಲೂ ಇದ್ದುದರಿಂದ ಅವುಗಳಿಗೆ ಪ್ರತಿಯಾಗಿ ಕಲ್ಲಿನ ತೊಟ್ಟಿಗಳನ್ನು ಇಡಲಾಗಿದೆ.

ನಾಗರಿಕರಲ್ಲಿ ಈಚೆಗೆ ವೃದ್ಧಿಯಾಗುತ್ತಿರು ಲೋಕ ವ್ಯವಹಾರ ಜ್ಞಾನವನ್ನು ಇನ್ನೂ ಹೆಚ್ಚಿಸಲು ಸಾರ್ವಜನಿಕ, ವಾಚನಾಲಯ ಮತ್ತು ಪುಸ್ತಕ ಭಂಡಾರಗಳಿಗೆ ಪ್ರೋತ್ಸಾಹವನ್ನೀಯಲಾಗುತ್ತಿದೆ. ಅಲ್ಲದೆ ನೈರ್ಮಲ್ಯ, ಆರೋಗ್ಯ ಮತ್ತು ಪೌರ ಕರ್ತವ್ಯಗಳ ಬಗ್ಗೆ ಆಕಾಶವಾಣಿಯ ಮೂಲವೂ ಭಾಷಣಗಳನ್ನು ನಡೆಸಲಾಗುತ್ತಿದೆ.

ಪ್ಲೇಗು, ಮಲೇರಿಯಾ ಮತ್ತು ಇತರ ಸಾಂಕ್ರಾಮಿಕ ವ್ಯಾಧಿಗಳು ಬಾರದಂತೆ ತಡೆಗಟ್ಟಲು ಸೈನೋಗ್ಯಾಸ್ ಕಾರ್ಯಕ್ರಮವನ್ನು ಕ್ರಮವಾಗಿ ನಡೆಸಲಾಗುತ್ತಿದೆ. ಇದರಿಂದ ಬಹಳ ಮಟ್ಟಿಗೆ ವ್ಯಾಧಿಗಳು ತಡೆಗಟ್ಟಲ್ಪಟ್ಟಿವೆ. ಡಿಫ್ತೀರಿಯಾ ಎಂಬ ಹೊಸ ಗಂಟಲು ವ್ಯಾಧಿಯನ್ನು ತಪ್ಪಿಸಲು ಸುಮಾರು ಹದಿನೈದು ಸಾವಿರ ಜನಕ್ಕೆ ಇನ್‌ಜೆಕ್ಷನ್ ಟ್ಯೂಬುಗಳನ್ನು ಉಚಿತವಾಗಿ ಹಂಚಲಾಗಿದೆ. ಆರೋಗ್ಯಾಧಿಕಾರಿಗಳ ಸಹಾಯಕ್ಕಾಗಿ ಇಬ್ಬರು ವಿಶೇಷ ಅಧಿಕಾರಿಗಳನ್ನೂ ಸಹ ನೇಮಿಸಲಾಗಿದೆ.

ಸಾರ್ವಜನಿಕರಿಂದ ನಡೆಯುತ್ತಿರುವ ಅನೇಕ ಕುಶಲಕಲೆ ಮತ್ತು ಶಿಶು ವಿಹಾರಗಳೇ ಮುಂತಾದ ಸಂಸ್ಥೆಗಳಿಗೆ ಉದಾರವಾದ ಪ್ರೋತ್ಸಾಹವನ್ನು ನೀಡಲಾಗಿದೆ. ಆಯುರ್ವೇದ ವಿದ್ವಾಂಸರುಗಳ ಮತ್ತು ಹಕೀಮರ ಸಂಭಾವನೆಯನ್ನು ಕನಿಷ್ಠಪಕ್ಷ ಇಪ್ಪತ್ತೈದು ರೂ ಗೆ ಹೆಚ್ಚಿಸಿದೆ. ಮೇಲ್ಕಂಡ ರೀತಿಯಲ್ಲಿ ಅನೇಕ ಜನೋಪಯುಕ್ತವಾದ ಕಾರ್ಯಗಳನ್ನು ಇಂದಿನ ಜನಾನುರಾಗಿಗಳಾದ ಪೌರಸಭೆಯ ಸದಸ್ಯರು ನಡೆಸಿರುತ್ತಾರೆ. ಅವರು ನಗರದ ಅಭಿವೃದ್ಧಿಗಾಗಿ ಮಾಡಬೇಕಾದ ಕೆಲಸಗಳು ಇನ್ನೂ ಬಹಳವಾಗಿ ಉಳಿದಿವೆ. ಅಂತಹವರಿಗೆ ಮತದಾ ಜನರು ಬೆಂಬಲವಿತ್ತು ಅವರ ಕಾರ್ಯಕ್ರಮಗಳು ಸಾಂಗವಾಗಿ ಈಡೇರಲು ಸಹಾಯ ಮಾಡಬೇಕಾಗಿ ನಾವು ಕೋರುತ್ತೇವೆ.

ರಾಜಕುಮಾರಿಯ ಜನನದ ಬಗ್ಗೆ ಸಂತೋಷ

ಮೈಸೂರು ತಾಲ್ಲೂಕ, ಹಿನಕಲ್ ಗ್ರಾಮದ ಪ್ರೈಮರಿ ಸ್ಕೂಲಿನಲ್ಲಿ ಶ್ರೀ ಜಯದೇವರಾಜೇ ಅರಸಿನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಶ್ರೀಮನ್ಮಹಾರಾಜರವರಿಗೆ ಪುತ್ರ್ಯೋತ್ಸವವಾದ ಬಗ್ಗೆ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಮಕ್ಕಳಿಗೆ ಸಿಹಿ ತಿಂಡಿಯನ್ನು ಹಂಚಲಾಯಿತು.

ಶಾಲಾ ಕಟ್ಟಡಕ್ಕೆ ಸಹಾಯ

ಸ್ವಂ ವ] ನಂಜನಗೂಡು,

ಈ ತಾಲ್ಲೂಕಿನ ದೇವರಸನಹಳ್ಳಿಯ ಶಾಲಾ ಕಟ್ಟಡವಿಲ್ಲದೆ ಬಹಳ ತೊಂದರೆಯಾಗಿದೆ. ನಂಜನಗೂಡು ಪುರಸಭಾ ಉಪಾಧ್ಯಕ್ಷರಾದ ಶ್ರೀ ವೈ. ಕೆ. ಎಸ್. ಲಕ್ಷ್ಮಿಶೆಟ್ಟರು ಅಲ್ಲಿಗೆ ಭೇಟಿ ಇತ್ತಿದ್ದಾಗ ಜಹಗೀರ್‌ದಾರ್ ಶ್ರೀ ಕೆಂಚೇಗೌಡರು ಕಟ್ಟಡಕ್ಕಾಗಿ ೫೦೦ ರೂ ಗಳನ್ನು ಉದಾರವಾಗಿ ಕೊಡಲು ಒಪ್ಪಿದ್ದಾರೆ. ಗ್ರಾಮಸ್ಥರೆಲ್ಲರೂ ಇದೇ ರೀತಿ ಉದಾರ ದಾನವೀಯಬೇಕೆಂದು ಕೋರಲಾಗಿದೆ.

ನಿನ್ನೆ ದಿನ ನಂಜನಗೂಡಿಗೆ ೧೦ ಸಾವಿರ ರೂ. ಗಳ ಒಟ್ಟೆ ಬಂದಿತು. ನಿನ್ನೆ ದಿನ ಜಿಲ್ಲಾಧಿಕಾರಿಗಳು ಇಲ್ಲಿಗೆ ಆಗಮಿಸಿ ಡಿಪೋಗಳ ತನಿಖೆ ನಡೆಸಿದರು.

ಖಾದಿ ಕೇಂದ್ರಕ್ಕೆ ಭೇಟಿ

ನಂಜನಗೂಡು ಮಾಧ್ಯಮಿಕ ಶಾಲೆಯ ೧೦೦ ವಿದ್ಯಾರ್ಥಿನಿಯರೂ, ಉಪಾಧ್ಯಾಯವರ್ಗದವರೂ, ಮೊನ್ನೆ ದಿನ ಬದನವಾಳು ಖಾದಿ ಕೇಂದ್ರಕ್ಕೆ ಹೋಗಿ ಅಲ್ಲಿ ನಡೆಯುತ್ತಿರುವ ವಿವಿಧ ಕೈಗಾರಿಕೆಗಳ ವಿಷಯವನ್ನು ವಿವರವಾಗಿ ತಿಳಿದು ವಿವಿಧ ವಿನೋದಾವಳಿಯನ್ನು ಪ್ರದರ್ಶಿಸಿ ಹಿಂತಿರುಗಿದರು.

Edited, printed and published by A. R. Nagarajan at the Sadhvi Press, D. Subbiah Road, Mysore.

ರಾಜಕಮಲ್
ಮೈಸೂರು
ತಾ|| ೮-೧೧-೪೬ ರಿಂದ
ಎರಡನೆಯ ವಾರ
* ನೂರ್‌ಜಹಾನ್, * ಗೀತಾನಿಜಾಮಿ, * ರಾಮಶರಣ್ ನಟಿಸಿರುವ
ವಿಲೇಜ್ ಗರ್ಲ್
(ಹಳ್ಳಿಯ ಹುಡುಗಿ)

From Friday the 8-11-46
For 4 days only
at 10-30 A. M.
"DEAD END"
A Samuel Goldwyn
Million-Dollar
Production

|| ವಂದೇಮಾತರಂ ||

ಮೈಸೂರು ನಗರದ ಹೆಮ್ಮೆ

ನೂರಕ್ಕೆ ನೂರರಷ್ಟು ಕಾಂಗ್ರೆಸ್ ವಿಜಯ!

* ಕಳೆದ ಆರು ವರ್ಷಗಳಿಂದ ಮೈಸೂರು ನಗರ ನಿವಾಸಿಗಳು ಪೌರಸಭೆಗೆ ಎಲ್ಲಾ ಕಾಂಗ್ರೆಸ್ ಪ್ರತಿನಿಧಿಗಳನ್ನೂ ಆರಿಸಿ ಕಳುಹಿಸಿದ್ದಾರೆ.
* ಇದನ್ನು ಕಂಡು ಮಹಾತ್ಮ ಗಾಂಧಿಯವರೂ, ರಾ ನಾಯಕರೂ ಮುಗ್ಧರಾಗಿ ಮೈಸೂರನ್ನು ಕೊಂಡಾಡಿದ್ದಾರೆ.
* ಇಪ್ಪತ್ತುನಾಲ್ಕು ಜನ ಕಾಂಗ್ರೆಸ್ ಉಮೇದುವಾರರಿಗೆ ಅಖಂಡ ವಿಜಯವನ್ನು ದೊರಕಿಸಿ ಕೊಟ್ಟಿರುವುದು ಇತಿಹಾಸದಲ್ಲಿ ಅಪೂರ್ವವಾದ ಹೆಮ್ಮೆಯ ಸಂಗತಿ.
* ಈ ಸಾರಿ ಪೌರಸಭಾ ಚುನಾವಣೆಯಲ್ಲಿಯೂ ಮೈಸೂರು ತನ್ನ ಅದ್ಭುತ ಕಾಂಗ್ರೆಸ್ ಪ್ರೇಮವನ್ನು ಪ್ರದರ್ಶಿಸಲಿ!

ಜೈ ಹಿಂದ್!

Mysore City Municipality

Notification No MG. F1 51/46-47 dated 30-10-46

Notice is hereby given that sealed tenders will be received upto 3p m ,on 9-11-46 at the Office of the Preside[nt] City Municipal Council, Mysore, for the right of stock[ing] and distributing about 10000 bags of char-coal per mens[em] in Mysore city for a period of one year from 1-12-19[46]

2. The tender should be accompanied by a depo[sit] of Rs 3000/ (Rs, three thousand) only which should [be] credited to Municipal Funds and the certified chal[lan] enclosed with the tender.

Other details of the contract may be had in the Muni[ci]pal office during office hours on working days.

N Madhava Rao
President

|| ವಂದೇಮಾತರಂ ||

ದೇವರಾಜ ಮೊಹಲ್ಲಾ, ಮಿಲ್ಲೆ ಮೊಹಲ್ಲಾ, ನಜರ್‌ಬಾದ್ ಮೊಹಲ್ಲಾ

ಓಟರು ಮಹಾಶಯರುಗಳಲ್ಲಿ ವಿನಂತಿ

14-11-46 ನೇ ಗುರುವಾರ ನಡೆಯಲಿರುವ ಪೌರಸಭಾ ಚುನಾವಣೆಗಳಲ್ಲಿ ಈ ಕೆಳಗೆ ಕಂಡ ಉಮೇದುವಾರರಿಗೇ ತಮ್ಮ ಅಮೂಲ್ಯವಾದ ಓಟನ್ನು ಕೊಡಬೇಕಾಗಿ ಪ್ರಾರ್ಥನೆ.

ದೇವರಾಜ ಮೊಹಲ್ಲಾ ಚುನಾವಣಾ ಸ್ಥಳ - ನಂಜರಾಜ ಬಹದ್ದೂರ್ ಛತ್ರ

೨. ಎ. ಪಿ. ರಂಗರಾವ್ — ಒಂಟೆ — X

೫. ಬಿ. ಆರ್ ಲಕ್ಷ್ಮಣ ಶೆಟ್ಟಿ — ಹುಲಿ — X

ಎಲ್ಲೆ ಮೊಹಲ್ಲಾ ಚುನಾವಣಾ ಸ್ಥಳ - ಕೃಷ್ಣರಾಜ ಪ್ರೈಮರಿ ಬಾಯ್ಸ್ ಸ್ಕೂಲ್

1. ಎಂ. ಎಸ್. ರಾಮಸ್ವಾಮಿ — ಸೂರ್ಯ — X

ನಜರ್‌ಬಾದ್ ಮೊಹಲ್ಲಾ ಚುನಾವಣಾ ಸ್ಥಳ - ತಾಲ್ಲೂಕು ಕಛೇರಿ

೪. ಎಸ್. ಕೃಷ್ಣಯ್ಯಂಗಾರ್ — ಕುದುರೆ — X

ಸ್ವತಂತ್ರ ಚುನಾವಣಾ ಸಮಿತಿ

ರೋಜಿ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶನಿವಾರ ೯—೧೧—೪೬ [ಸಂಚಿಕೆ ೨೫

ಸರ್ದಾರ್ ಪಟೇಲರಿಗೆ ಸಂಬಳವೇ ತಿಳಿಯದು

ಮತಾಂತರದ ವಿಷಯದಲ್ಲಿ ಅಹೋಬಲ ಸ್ವಾಮಿಗಳ ಅಭಿಪ್ರಾಯ

[illegible]ದಲ್ಲಿ ನಡೆದಿರುವ ಬಲಾತ್ಕಾರ [illegible]ತರ ಮತ್ತು ಅಪಹರಣಗಳನ್ನು [illegible] ಅಹೋಬಲ ಮಠದ ಶ್ರೀ ಜೀಯ [illegible]ಮಿಗಳು ಈ ಕೆಳಗೆ ಕಂಡಂತೆ ಒಂದು [illegible]ಯನ್ನಿತ್ತಿದ್ದಾರೆ:— ಕಾನಾಗಿಯೇ [illegible]ಂತರ ಹೊಂದಿದವನೂ ಸಹ ಶಾಸ್ತ್ರ [illegible]ಗಿ ತಾನು ಹುಟ್ಟಿದ ಮತದಿಂದ [illegible]ರಾಗುವುದಿಲ್ಲ. ಆದ್ದರಿಂದ ಬಲವಂ[illegible], ಪುಂಡುಕೋರರ ಹಾವಳಿ[illegible] ಮತಾಂತರ ಹೊಂದಿದವರನ್ನು [illegible]ಕ್ಕೆ ಸೇರಿದವರೆಂದು ಭಾವಿಸಲಾ[illegible] ಬಲಾತ್ಕಾರದ ಮತಾಂತರ ಹೊಂದಿ[illegible] ಹಿಂದಿನಂತೆ ಆಹಾರ, ಆಚಾರ,[illegible]ಗಳನ್ನು ಅನುಸರಿಸುವುದರಿಂದಲೇ ತ[illegible]ವನ ಮತಕ್ಕೆ ಯೋಗ್ಯನಾಗುವನು. [illegible]ಯಿಂದ ಮತಾಂತರ ಹೊಂದಿದವನ [illegible]ದಲ್ಲಿ ಹುಟ್ಟುವ ಪಶ್ಚಾತ್ತಾಪವೇ [illegible]ನ್ನ ಮತಕ್ಕೆ ಸೇರಲು ಸಾಕಾದ [illegible], ಬಲವಂತ ಮತಾಂತರದ [illegible] ಇಷ್ಟಕ್ಕೆ ವಿರುದ್ಧವಾಗಿ ಮದುವೆ [illegible] ಸಹ ಅದು ಮದುವೆಯೇ [illegible]ವನವರನ್ನು ಮರ್ಯಾದೆಯಿಂದ [illegible] ತಮ್ಮ ಮತಕ್ಕೆ ಸೇರಿಸಿಕೊಳ್ಳಬಹು[illegible] ವಂಚನೆಯಿಂದ ಅಪಹರಿಸಲ್ಪಟ್ಟ [illegible] ಪತಿತರಾಗಲಾರರು. ಅವರುಗಳ [illegible] ಯಾವ ಬಗೆಯ ಅಪವಾದವನ್ನೂ [illegible] ತಿರಸ್ಕರಿಸದೆ ಗೌರವಿಸಬೇಕು. ಅವ[illegible]ಗೆ ವಿಧಿಸಿರುವ ಪುಣ್ಯ ತೀರ್ಥಗಳ [illegible] ಅಪವಿತ್ರದ ಹಸ್ತದಿಂದ ಮುಟ್ಟಿ[illegible]ಪ್ಪಿ ವಿನಃ ಅವರ ಕೆಟ್ಟ ನಡತೆಗೆ [illegible] ಬಲವಂತದ ಸಹಭೋಜನ, ಮದು[illegible] ಮತಾಂತರ, ಅಪಹರಣ ಇವುಗಳಿಗೆ [illegible]ಗಳಲ್ಲಿ ಚಾಂದ್ರಾಯಣ ಮತ್ತು [illegible] ಪ್ರಾಯಶ್ಚಿತ್ತಗಳೇ ಸಾಕೆಂದು [illegible] ಶಾಸ್ತ್ರ ಮತ್ತು ಮನುಸ್ಮೃತಿಗಳಲ್ಲಿ [illegible].

೬ ಗಂಟೆ ಕಾಲ ಸಮಾಧಿ

[illegible] ದಿನಗಳ ಹಿಂದೆ ಸೂರತ್ತಿನಲ್ಲಿ [illegible]ಗಿರಿಜ ಎಂಬ ಯೋಗಿಯು [illegible] [illegible] ಹಳ್ಳದಲ್ಲಿ ಸಮಾಧಿ ಹೊಂದಿದ್ದು [illegible] ಗಂಟೆಗಳ ಮೇಲೆ ಜೀವಂತನಾಗಿ [illegible]ದ್ದಾನೆ. ಇದನ್ನು ಸಾವಿರಾರು ಜನ [illegible]ಸುವರು. ಹಳ್ಳವನ್ನು ಮುಚ್ಚಿ [illegible] ಸಿಮೆಂಟ್ ಹಾಕಲಾಗಿತ್ತು. ತಾನು [illegible] ಸಾರಿ ಸಮಾಧಿ ಹೊಂದಿ[illegible], ಸಮಾಧಿ ಕಾಲದಲ್ಲಿ ಚಿಕ್ಕ ಮಗು[illegible] ಅಥವಾ ಒಂದು ಪ್ರಾಣಿಯನ್ನು [illegible]ದಿಂದ ತನ್ನೊಡನೆ ಇರಿಸಿಕೊಳ್ಳ[illegible] ಆತನು ಹೇಳಿದ್ದಾನೆ.

[illegible] ವ್ಯವಸ್ಥೆ ಕುಸಿದು ಬೀಳುವುದೇ?

[illegible] ಅಂಕ್ಯದೊಳಗೆ ಭಾರತಕ್ಕೆ [illegible] ಆಹಾರ ಒದಗಿದ್ದರೆ ರೇಷನ್ ವ್ಯವ[illegible] ಮುರಿದು ಬೀಳಬಹುದು [illegible] ಸಾಲ್ಕೈದು ವರ್ಷದ ಆಹಾರ [illegible] ಪೂರ್ಣ ಸಮರ್ಪಕವಾಗಿರುವುದ[illegible] ಅದನ್ನು ಎದುರಿಸಲು ದೀರ್ಘಕಾಲ[illegible] ಅವಶ್ಯಕ—ಎಂದು ಅರ್ಜೆಂಟೈ[illegible] ಆಹಾರ ನಿಯೋಗದ [illegible] ತಿಳಿದ್ದ ಡಿ[illegible] ಚಮನಲಾ[illegible] ಕೇಂದ್ರ ಶಾಸನ ಸಭೆಯಲ್ಲಿ ತಿಳಿಸಿ[illegible]

ಸಂಗೀತ

ಮೈಸೂರು [illegible]

ಈ ದಿನ ರಾತ್ರಿ [illegible] ಘಂಟೆಗೆ ೩ ಸುಬ್ಬಯ್ಯ ರಸ್ತೆಯಲ್ಲಿರುವ ಸಾಧ್ವಿ ಆಫೀಸ್ ಮಹಡಿ ಮೇಲೆ, ಪೂರ್ಣಿಮಾ ಪ್ರಯುಕ್ತ ಶ್ರೀ [illegible] ಕುಸುಮ ಮತ್ತು ಜಲಜ ಇವರುಗಳ ಸಂಗೀತವನ್ನೇರ್ಪಡಿಸಿದೆ. ಸರ್ವರಿಗೂ ಆಹ್ವಾನವುಂಟು.

ಕಾಂಗ್ರೆಸ್ಸಿಗೇ ಓಟು ಕೊಡಿ

ಕುಂಚಿಟಿಗರ ವಿದ್ಯಾರ್ಥಿ ನಿಲಯದ ಸ್ಥಾಪಕರಾದ ರಾಜಧಾನಿಯ [illegible] ಹೊಂಬಾಳೆ ರಂಗಯ್ಯನವರು ಒಂದು ಪ್ರಾರ್ಥನೆಯನ್ನು ಹೊರಡಿಸಿ, ರಾಜಧಾನಿಯ ನಿವಾಸಿಗಳು ೧೪ನೇ ತಾ॥ ನಡೆಯುವ ಪ್ರತಿನಿಧಿ ಚುನಾವಣೆಯಲ್ಲಿ ಹಿಂದಿನಂತೆಯೇ ಈ ಸಲವೂ ಕಾಂಗ್ರೆಸ್ ಅಭ್ಯರ್ಥಿ ವರಿಗೇ [illegible] ಕೊಡಬೇಕೆಂದು ವಿನಂತಿ ಮಾಡಿಕೊಂಡಿದ್ದಾರೆ.

ರೆಡ್ ಕ್ರಾಸ್ ಡೈರೆಕ್ಟರ ಭೇಟಿ

ಭಾರತ ರೆಡ್ ಕ್ರಾಸ್ ಸಂಸ್ಥೆಯ ಜೂನಿಯರ್ ಶಾಖೆ ಡೈರೆಕ್ಟರ್ ಶ್ರೀ ಶಂಕರ ನಿಗಂ ರವರು [illegible] ಪ್ರಾಥಮಿಕ ಶಾಲೆಗೆ [illegible]ನೇ ತಾ॥ ಭೇಟಿ ಇತ್ತಿದ್ದರು. ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದಿತು. ಶಾಲೆಯ ರೆಡ್ ಕ್ರಾಸ್ ಚಟುವಟಿಕೆಗಳನ್ನು ವಿವರಿಸಿದ ಮೇಲೆ ಅಧ್ಯಕ್ಷರು ಭಾಷಣ ಮಾಡಿದರು.

ಬಂಗಾಳಾ ಪರಿಹಾರ ನಿಧಿ

ಪೂರ್ವ ಬಂಗಾಳದ ನೌಖಾಲಿ ಮತ್ತು ತಿಪ್ಪೇರಾ ಜಿಲ್ಲೆಗಳಲ್ಲಿ ಇತ್ತೀಚೆಗೆ ನಡೆದ ದೌರ್ಜನ್ಯಗಳಿಂದ ನಿರಾಶ್ರಿತರಾದ ಸಹಸ್ರಾರು ಮಂದಿಗೆ ಪರಿಹಾರ ಒದಗಿಸಲು ಶ್ರೀ ರಾಮಕೃಷ್ಣ ಸಂಘದವರು ಸೇವಾಕೇಂದ್ರಗಳನ್ನು ತೆರೆದಿದ್ದಾರೆ. ಮೈಸೂರು ಮಹಾಜನರು ಉದಾರ ಬುದ್ಧಿಯಿಂದ ಹಣ ಸಹಾಯವನ್ನು ರಾಜಧಾನಿಯ ವಾಣೀವಿಲಾಸಪುರದಲ್ಲಿರುವ ಶ್ರೀ ರಾಮಕೃಷ್ಣಾಶ್ರಮಕ್ಕೆ ಕಳಿಸಿಕೊಡಬೇಕಾಗಿ ಆಶ್ರಮದ ಅಧ್ಯಕ್ಷ ಸ್ವಾಮಿ [illegible]ರು ಪ್ರಾರ್ಥಿಸಿದ್ದಾರೆ.

ಉಪನ್ಯಾಸ

ಶ್ರೀ [illegible] ಜಯಂತೀ ಮಹೋತ್ಸವ ಸಭೆಯ ಆಶ್ರಯದಲ್ಲಿ ೧೦ನೇ ತಾರೀಖಿನ ಸಾಯಂಕಾಲ [illegible] ಗಂಟೆಗೆ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ [illegible] ವಿದ್ವಾನ್ ಶ್ರೀ [illegible] ಶಾಸ್ತ್ರಿಗಳು [illegible] ಅಧ್ಯಾಪಕರು [illegible] ಧ್ಯಾನಯೋಗ ಎಂಬ ವಿಷಯವನ್ನು ಕುರಿತು ಉಪನ್ಯಾಸ ಮಾಡುತ್ತಾರೆ. ಸರ್ವರಿಗೂ ಸ್ವಾಗತವಿದೆ.

ಮಹಾತ್ಮರ ಉಪವಾಸದ ಬಗ್ಗೆ ಅವರ ಮಗನ ಬೇಡಿಕೆ

ಗಾಂಧಿಯವರ ಹಿರಿಯ ಮಕ್ಕಳಾದ ಹೀರಾಲಾಲ್ ಗಾಂಧಿಯವರು ಒಂದು ಹೇಳಿಕೆಯಲ್ಲಿ ತಮ್ಮ ತಂದೆಯವರು ಆಮರಣಾಂತ ಉಪವಾಸ ಮಾಡುವೆನೆಂದು ಹೇಳಿರುವುದಕ್ಕಾಗಿ ವಿಷಾದವನ್ನು ಸೂಚಿಸಿದ್ದಾರೆ. ಇಂತಹ ಆಲೋಚನೆಯ ಮಾರ್ಗವನ್ನು ನಿಲ್ಲಿಸುವಂತೆ ಅವರಿಗೆ ಹೇಳುವುದು ಉತ್ತಮ. ಜೈನ ಹೆಂಗಸರೂ ಆತ್ಮಶುದ್ಧಿಗಾಗಿ ಮೂರು ತಿಂಗಳು ಉಪವಾಸ ಮಾಡುವರು. ಸತೀತ್ವವನ್ನು ಉಳಿಸಿಕೊಳ್ಳುವಂತಹ ರಜಪೂತ ರಮಣಿಯರ ಕಾಲವು ಕಳೆದುಹೋಯಿತು. ಉಪವಾಸ ಮಾಡುವೆನೆಂದು ಬೆದರಿಸುವುದು ಹಿಂದೂಗಳಿಗೂ, ಮುಸ್ಲಿಮರಿಗೂ, ಬ್ರಿಟಿಷ್ ಸರ್ಕಾರಕ್ಕೂ ಮತ್ತು ಇಡೀ ಪ್ರಜಾ ಸಮುದಾಯಕ್ಕೂ ಮಾಡುವ ಒಂದು ಅವಮಾನ. ಇದು ಬಲಾತ್ಕಾರ ಮತ್ತು ಹಿಂಸೆಯೇ ಹೊರತು, ಪರಿವರ್ತನೆ ಅಥವಾ ಅಹಿಂಸೆಯಲ್ಲ—ಎಂದು ಅವರು ಹೇಳಿದ್ದಾರೆ.

ಶಾಸನ ಸಭೆಯಲ್ಲಿ ಮಾರ್ಷಲ ಪ್ರವೇಶ

[illegible]ಯಲ್ಲಿ ನಡೆಯುತ್ತಿರುವ "ವೆಸ್ಟ್ ಲ್ಯಾಂಡ್" ಎನಿಸಿದ ಕೌನ್ಸಿಲ್ ಆಫ್ ಸ್ಟೇಟ್ ಸಭೆಯಲ್ಲಿ ಮೊನ್ನೆ [illegible] ಕೂರುವ ಸ್ಥಳದ ಪರದೆಯೊಳಗಿನಿಂದ ಒಂದು ಬಳೆಯ ಚೆಕ್ಕು ಹಾರಿಬಂದು ಅಧ್ಯಕ್ಷರ ವೇದಿಕೆಯ ಮೂಲಕ ಅವರ ಕಾಲ ಸಂದಿಯಲ್ಲಿ ನುಸುಳು ಸಭಾಂಗಣದಲ್ಲೆಲ್ಲಾ ಮಾರ್ಷಲ್ ಪ್ರದಕ್ಷಿಣೆಗೈದು, ಒಂದು ಸಂದಿಯ ಮೂಲಕ ಹೊರಟುಹೋಯಿತು.

ವಿದ್ಯಾರ್ಥಿಗಳ ಬಿಡುಗಡೆ

ಮೈಸೂರು [illegible]

ಶ್ರೀರಂಗಪಟ್ಟಣದಲ್ಲಿ ಬಂಧಿತರಾಗಿದ್ದ [illegible] ಮಂದಿ ವಿದ್ಯಾರ್ಥಿ ಕಾಂಗ್ರೆಸ್ ಸ್ವಯಂ ಸೇವಕರನ್ನು ನಿನ್ನೆ [illegible] ಗಂಟೆಗೆ ಬಿಡುಗಡೆ ಮಾಡಲಾಯಿತು. ಇವರನ್ನು ಮೈಸೂರು ರೈಲ್ವೆ ನಿಲ್ದಾಣದಲ್ಲಿ ವಿದ್ಯಾರ್ಥಿ ಕಾಂಗ್ರೆಸ್ ಅಧ್ಯಕ್ಷರೂ ಮತ್ತು ಅನೇಕ ವಿದ್ಯಾರ್ಥಿಗಳೂ ಸ್ವಾಗತಿಸಿದರು. ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಹೊರಟು ವಿದ್ಯಾರ್ಥಿ ಕಾಂಗ್ರೆಸ್ ಕಛೇರಿ[illegible] ಸೇರಿದ್ದರು. ವಿದ್ಯಾರ್ಥಿ ಕಾಂಗ್ರೆಸ್ ಪರವಾಗಿ [illegible] ಇವರನ್ನು ಸ್ವಾಗತಿಸಿ ಅಭಿನಂದನೆ ಸಲ್ಲಿಸಿದರು. ಶ್ರೀ [illegible] ಸುಬ್ರಹ್ಮಣ್ಯ [illegible]

ಮಂತ್ರಿಗಳು ದೆಹಲಿಗೆ

ಸ್ವಂ. ವರದಿ [illegible] ಬೆಂಗಳೂರು [illegible]

ಈ ತಿಂಗಳು [illegible] ಮತ್ತು [illegible]ನೇ ತಾ॥ ದೆಹಲಿಯಲ್ಲಿ ನಡೆಯುವ ಸಂಸ್ಥಾನಗಳ [illegible] ಮಂತ್ರಿಗಳ ಸಮ್ಮೇಳನದಲ್ಲಿ ಭಾಗವಹಿಸಲು [illegible]ನೇ ತಾ॥ ಮಿ॥ ಒ. ಎಸ್. [illegible] ಪರೀಕ್ಷರು ವಿಮಾನದಲ್ಲಿ ತೆರಳುವರು.

* ಪೋಲೀಸ್ ಇ. ಜಿ. ಯವರಾದ ಶ್ರೀ [illegible] ಸ್ವಾಮಿರಾಯರಿಗೆ ಡಿಸೆಂಬರ್ [illegible]ರಿಂದ [illegible] ದಿನ ರಜಾ ಕೊಡಲಾಗಿದೆ. ಶ್ರೀ [illegible]ಸ್ವಾಮಿಯವರೇ ಅವರ ಕೆಲಸವನ್ನೂ ನೋಡಿಕೊಳ್ಳುವರು.

* ರಜಿಸ್ಟ್ರಾರರಾದ ಶ್ರೀ॥ ಕೆ. ಆರ್. [illegible] ದೇವೇಗೌಡರನ್ನು [illegible] ಡೈರೆಕ್ಟರ ಕೇಂದ್ರ ಕಚೇರಿಯ ಅಸಿಸ್ಟೆಂಟರನ್ನಾಗಿ ವರ್ಗಾಯಿಸಲಾಗಿದೆ. ಅವರ ಸ್ಥಾನಕ್ಕೆ ಸಿವಿಲ್ ಸಪ್ಲೈ [illegible] ಶ್ರೀ॥ ಸಿ. [illegible]ಸ್ವಾಮಿ [illegible] ಅವರನ್ನು ನೇಮಿಸಲಾಗಿದೆ.

* ಆರ್ಥಿಕ ಸಮ್ಮೇಳನದ ಕೋ ಆರ್ಡಿನೇಷನ್ ಸಮಿತಿಯ ಅಂತಿಮ ಸಭೆಯು ಯುದ್ಧಾನಂತರದ [illegible] ಯೋಜನೆಗಳಲ್ಲಿ [illegible]ನ್ನು ಅಂಗೀಕರಿಸಿದೆ. ಇವುಗಳಲ್ಲಿ ಜೋಗ್ ವಿದ್ಯುಚ್ಛಕ್ತಿಯ ಎರಡನೇ ಯೋಜನೆ, ಬೆಂಗಳೂರು-ಮೈಸೂರು ಟ್ರೈನನ್ನು ವಿದ್ಯುಚ್ಛಕ್ತಿಯಿಂದ ನಡೆಸುವುದು ಮುಂತಾದುವು ಸೇರಿವೆ.

ಅಧಿಕಾರ ಸೂತ್ರವನ್ನು ಗಾಂಧಿಜಿ ವಹಿಸಿಕೊಳ್ಳಬೇಕು

ಬಂಗಾಳದಲ್ಲಿ ನಡೆದ ಗಲಭೆಗಳಿಗಿಂತಲೂ ಹೆಚ್ಚಾಗಿ ಬಿಹಾರಿನ ಬಗ್ಗೆ ಪ್ರಾಶಸ್ತ್ಯವನ್ನು ಕೇಂದ್ರ ಸರ್ಕಾರದ ಮಂತ್ರಿಗಳು [illegible] ಗಾಂಧಿಜೀಯವರು ಉಪವಾಸವನ್ನು ಕೈಕೊಳ್ಳುವುದು ಸರಿಯಲ್ಲವೆಂದೂ ಗಾಂಧಿಜೀಯವರೇ ಕೇಂದ್ರ ಸರ್ಕಾರದ ಅಧಿಕಾರ ಸೂತ್ರವನ್ನು ವಹಿಸಿಕೊಳ್ಳುವುದು ಒಳ್ಳೆಯದೆಂದೂ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರವರು ಒಂದು ಹೇಳಿಕೆಯಲ್ಲಿ ತಿಳಿಸಿರುವರು.

ಪಟೇಲರಿಗೆ ಸಂಬಳವೇ ಗೊತ್ತಿಲ್ಲ

ಕೇಂದ್ರ ಸರ್ಕಾರದ ಮಂತ್ರಿಗಳ ಸಂಬಳದಲ್ಲಿ ಯಾವ ಬದಲಾವಣೆಯೂ ಇಲ್ಲವೆಂದು ಸರ್ದಾರ್ ಪಟೇಲರು ಕೇಂದ್ರ ಶಾಸನ ಸಭೆಯಲ್ಲಿ ಒಂದು ಪ್ರಶ್ನೆಗೆ ಉತ್ತರವಾಗಿ ನಿನ್ನೆ ದಿನ ತಿಳಿಸಿದರು. ಸಂಬಳದ ಮೊಬಲಗೆಷ್ಟೆಂದು ಕೇಳಿದಾಗ ತಮಗೆ ಗೊತ್ತಿಲ್ಲವೆಂದು ತಿಳಿಸಿದರು. ಸಭೆಯವರೆಲ್ಲರೂ ನಕ್ಕರು. ಸರ್ಕಾರದ ಸೂತ್ರಧಾರಿಗಳ ಸಲಹೆಯನ್ನು ತಿಳಿದುಕೊಂಡನಂತರ ಸಂಬಳವು ೫೫೦೦ ರೂ ಎಂದು ಕೇಳುತ್ತೇನೆ ಎಂದು ಅವರು ಹೇಳಿದಾಗ ಸಭೆಯವರು ಇನ್ನೂ ಹೆಚ್ಚಾಗಿ ನಕ್ಕರು.

○ [illegible] ಮುಂತಾದ ಆಯುಧಗಳನ್ನು ಹಿಡಿದು [illegible] ಧರಿಸಿದ [illegible]ನ್ನು ಬೊಂಬಾಯಿಯಲ್ಲಿ ಜಾರಿಗೆ ತರಲಾಗಿದೆ.

[illegible] ಸರ್ಕಾರದ ವರ್ತನೆಯನ್ನು [illegible]

[illegible] ವಿದ್ಯಾರ್ಥಿಗಳು [illegible] ಹೇಳಿಕೆ [illegible] ತಮ್ಮ [illegible] ಬೆಂಗಳೂರಿನಲ್ಲಿ [illegible] ವಿದ್ಯಾರ್ಥಿ ಕಾಂಗ್ರೆಸ್ ಕಛೇರಿ[illegible] [illegible] [illegible] [illegible] ಅಥವಾ [illegible] [illegible] ತಿಳಿಸಿದ್ದಾರೆ.

ಸಾಧ್ವಿ

ತಾ॥ ೯-೧೧-೪೬ ಶನಿವಾರ

ನಾಗರಿಕ ಸೌಲಭ್ಯಗಳು

ಪುರನಿವಾಸಿಗಳ ಆರೋಗ್ಯ ಮತ್ತು ಸ್ವಾಸ್ಥ್ಯ ರಕ್ಷಣೆಗೆ ಅವಶ್ಯಕವಾದ ವ್ಯವಸ್ಥೆಗಳನ್ನು ಮಾತ್ರವೇ ಅಲ್ಲದೆ ನಾಗರಿಕರ ಮನರಂಜನೆ ಮತ್ತು ಮನೋವಿನೋದಗಳಿಗೆ ಸಾಧಕವಾದ ಏರ್ಪಾಡುಗಳನ್ನು ಮಾಡುವುದೂ ಪೌರಸಭೆಗಳ ಕರ್ತವ್ಯವಾಗಿದೆ. ಈ ದೃಷ್ಟಿಯಿಂದಲೂ ಇಲ್ಲಿನ ನಗರ ಸಭೆಯವರು ಪ್ರಜೆಗಳ ಸೌಕರ್ಯಕ್ಕಾಗಿ ಅನೇಕ ವ್ಯವಸ್ಥೆಗಳನ್ನು ಮಾಡಿಸಿರುವುದು ಕಂಡುಬರುತ್ತದೆ.

ಮೈಸೂರು ನಗರವು ದಕ್ಷಿಣ ಭಾರತದ ನಂದನ ವನವೆಂಬ ಹೆಸರನ್ನು ಪಡೆದಿರುತ್ತದೆ. ವಿಶಾಲವಾದ ರಸ್ತೆಗಳೂ, ಮನೋಹರವಾದ ಉದ್ಯಾನ ವನಗಳೂ, ಆಹ್ಲಾದಕರವಾದ ಭವನಗಳೂ ಇಲ್ಲಿ ಕಂಗೊಳಿಸುತ್ತವೆ. ಇಲ್ಲಿನ ಉದ್ಯಾನ ವನಗಳು ಸಕಲರ ಮನಸ್ಸನ್ನೂ ಆಕರ್ಷಿಸುತ್ತವೆ. ಹಗಲೆಲ್ಲಾ ದುಡಿದು ಶ್ರಮಪಟ್ಟಿರುವವರು ಅಲ್ಲಿ ವಿಹಾರಾರ್ಥವಾಗಿ ಕೆಲವು ಕಾಲ ಆಯಾಸ ಪರಿಹಾರ ಮಾಡಿಕೊಳ್ಳಲು ಅನುಕೂಲವಿರುತ್ತದೆ.

ಅನೇಕ ಪಾರ್ಕುಗಳಲ್ಲಿಯೂ, ಅನ್ಯಸ್ಥಾನಗಳಲ್ಲಿಯೂ ರೇಡಿಯೋ ಯಂತ್ರಗಳನ್ನಿರಿಸಿ ನಾಗರಿಕರ ಮನರಂಜನೆಗೆ ಏರ್ಪಾಡು ಮಾಡಲಾಗಿದೆ. ಅಲ್ಲದೆ ಅನೇಕ ಸ್ಥಳಗಳಲ್ಲಿ ಕಲ್ಲು ಬೆಂಚುಗಳನ್ನು ಹಾಕಿಸಿ ವಿಶ್ರಾಂತಿಗೆ ವ್ಯವಸ್ಥೆ ಮಾಡಲಾಗಿದೆ. ಬಸ್ಸುಗಳಲ್ಲಿ ಪ್ರಯಾಣ ಮಾಡುವವರ ಸೌಕರ್ಯಕ್ಕಾಗಿ ವಿಶ್ರಾಂತಿ ಗೃಹಗಳನ್ನು ನಿರ್ಮಿಸಲಾಗಿದೆ. ಬಿಸಿಲು ಮಳೆ, ಗಾಳಿಗಳ ಸಮಯಗಳಲ್ಲಿ ಹೆಂಗಸರು, ಮಕ್ಕಳು, ಮುದುಕರು ಮತ್ತು ಇತರರು ವಿಶ್ರಮಿಸಿಕೊಂಡು ಅನಂತರ ಪ್ರಯಾಣ ಮಾಡಲು ಅವುಗಳಿಂದ ಸೌಕರ್ಯವಿರುತ್ತದೆ.

ನಗರದ ಗಲ್ಲಿಗಳಲ್ಲಿಯೂ, ಇತರ ಕಡೆಗಳಲ್ಲಿಯೂ ಹೇಸಿಗೆ ಮಾಡುವ ಪದ್ಧತಿಯನ್ನು ತಡೆಗಟ್ಟಲು ಈಚೆಗೆ ಸ್ಯಾನಿಟರಿ ಪೋಲೀಸ್ ದಳವೊಂದನ್ನು ನೇಮಕಮಾಡಲಾಗಿದೆ. ಹೋಟೆಲುಗಳಲ್ಲಿ ತಿಂಡಿ ಪದಾರ್ಥಗಳನ್ನು ಕೊಡುವವರು ಆರೋಗ್ಯದಿಂದಲೂ, ಪರಿಶುದ್ಧರಾಗಿಯೂ ಇರುವುದಕ್ಕಾಗಿ ಅವರಿಗೆ ರಹದಾರಿ ಕೊಡುವ ಪದ್ಧತಿಯನ್ನು ಇಡಲಾಗಿದೆ. ಆಗಿಂದಾಗ್ಗೆ ಅವರಿಗೆ ವೈದ್ಯ ಪರೀಕ್ಷೆಯನ್ನು ಕೂಡ ಮಾಡಿಸಲಾಗುತ್ತಿದೆ.

ಮನೆ ಕಟ್ಟಲು ಲೈಸೆನ್ಸುಗಳನ್ನು ಕೊಡುವುದರಲ್ಲಿ ಆಗುತ್ತಿದ್ದ ತಾಮಸವು ನಿವಾರಣೆಯಾಗುತ್ತಿದೆ. ಪ್ರತಿ ತಿಂಗಳಲ್ಲಿಯೂ ಲೈಸೆನ್ಸ್ ಕೊಡಲಾದ ಮತ್ತು ಕೊಡದೆ ಇರುವ ಅರ್ಜಿಗಳನ್ನು ಪೌರಸಭೆಯವರು ಕೂಲಂಕಷವಾಗಿ ಪರಿಶೀಲಿಸಿ ಅವು ಬೇಗನೆ ಇತ್ಯರ್ಥವಾಗುವಂತೆ ಮಾಡುತ್ತಿರುವರು.

ಅನಾಥರೂ, ನಿರಾಶ್ರಿತರೂ ಆದ ಅಬಲೆಯರಿಗೆ ಉದ್ಯೋಗಗಳನ್ನು ಕಲ್ಪಿಸಿ ಜೀವನೋಪಾಯದ ಮಾರ್ಗವನ್ನು ತೋರಿಸಿಕೊಡಲು ರಕ್ಷಣಾಲಯವನ್ನು ನಿರ್ಮಿಸುವ ವ್ಯವಸ್ಥೆಯು ಆಗುತ್ತಿದೆ. ಇದಕ್ಕಾಗಿ ಒಂಟಿಕೊಪ್ಪಲಿನ ಮಾಸ್ತಿ ಮಂಡಳಿಯವರು ತಮ್ಮ ಭಾರಿ ಕಟ್ಟಡವನ್ನು ಪೌರಸಭೆಗೆ ಕೊಟ್ಟಿರುತ್ತಾರೆ. ಸದ್ಯದಲ್ಲಿಯೇ ರಕ್ಷಣಾಲಯವು ನಿರ್ಮಿತವಾಗಲಿದೆ. ಇದಲ್ಲದೆ ಪ್ರೌಢಶಾಲಾ ಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳಿಗಾಗಿ ವಿಶೇಷ ರೀತಿಯ ಪೋಷಣೆಗಳನ್ನು ಕೊಡಲಾಗುತ್ತಿದೆ. ಗೃಹ ಕೈಗಾರಿಕೆಗಳಿಗೂ ಸಹ ಧಾರಾಳವಾದ ಪ್ರೋತ್ಸಾಹವನ್ನೀಯಲಾಗಿದೆ. ವಿದ್ಯಾರ್ಥಿ ನಿಲಯಗಳಲ್ಲಿ ಉಪಯೋಗಿಸುವ ನೀರಿನ ಮೇಲಿನ ತೆರಿಗೆಗೆ ವಿಶೇಷ ರಿಯಾಯಿತಿಗಳನ್ನು ತೋರಿಸಲಾಗುತ್ತಿದೆ.

ಮೇಲ್ಕಂಡ ರೀತಿಯಲ್ಲಿ ಪುರನಿವಾಸಿಗಳ ಸೌಕರ್ಯಕ್ಕಾಗಿ ಏರ್ಪಡಿಸಿರುವ ಅನೇಕ ಯೋಜನೆಗಳನ್ನು ಮುಂದುವರಿಸಿ ಇನ್ನೂ ಹೆಚ್ಚು ಹೆಚ್ಚಿನ ನಾಗರಿಕ ಸೌಲಭ್ಯಗಳನ್ನು ಕಲ್ಪಿಸುವುದು ಅಗತ್ಯವಾಗಿದೆ. ಈ ಬಗೆಯ ಜನೋಪಕಾರಕವಾದ ಕಾರ್ಯಕ್ರಮಗಳಲ್ಲಿ ತೊಡಗಿರುವ ಪ್ರಜಾಪ್ರತಿನಿಧಿಗಳಿಗೆ ಮಹಾಜನರು ಮತ್ತೂ ಹೆಚ್ಚು ಪ್ರೋತ್ಸಾಹವಿತ್ತು ನಾಗರಿಕರ ಸೇವೆಯು ಇನ್ನೂ ಅತಿಶಯವಾಗಿ ನಡೆಯುವಂತೆ ಮಾಡಲೆಂದು ನಾವು ಹಾರೈಸುತ್ತೇವೆ.

ಉಪನ್ಯಾಸ

ನಾಳೆ ಸಾಯಂಕಾಲ ೬ ಗಂಟೆಗೆ ವಾಣೀವಿಲಾಸ ಮೊಹಲ್ಲಾ ಶ್ರೀ ರಾಮಕೃಷ್ಣಾಶ್ರಮದಲ್ಲಿ ಸ್ವಾಮಿ ಸೋಮನಾಥಾನಂದರು ಭಗವದ್ಗೀತೆಯ ಮೇಲೆ ಭಾಷಣ ಮಾಡುವರು.

ಸಗೋತ್ರ ವಿವಾಹ

ಸಗೋತ್ರ ಅಥವಾ ಒಂದೇ ಪ್ರವರದ ಮನೆತನದವರಿಗೆ ವಿವಾಹ ಬಾಂಧವ್ಯ ಬೆಳೆಯಲೂ ಒಂದೇ ಸಂಗಡದ ಉಪಜಾತಿಗಳಿಗೆ ವಿವಾಹ ಸಂಬಂಧ ಉಂಟಾಗಲೂ ಶ್ರೀ ದೇಶಮುಖರವರು ಕೇಂದ್ರ ಶಾಸನ ಸಭೆಯಲ್ಲಿ ಮಂಡಿಸಿದ್ದ ಮಸೂದೆಯು ಅನುಮೋದಿತವಾಗಿದೆ. ಹಿಂದೂ ಸಂಸ್ಕೃತಿಯನ್ನು ಬಲಪಡಿಸಿ ಬೆಳೆಸಿಕೊಂಡು ಹೋಗುವುದಕ್ಕಾಗಿ ಹಿಂದೂ ಧರ್ಮವನ್ನು ಔದಾರ್ಯದಿಂದ ಸದ್ಯದ ಪರಿಸ್ಥಿತಿ ಮತ್ತು ಭಾವನೆಗನುಗುಣವಾಗಿ ಪರಿವರ್ತನೆ ಮಾಡಿಕೊಂಡು ಹೋಗುವುದು ಅವಶ್ಯಕವೆಂದು ಹೇಳಿ ಮಸೂದೆಗೆ ಶ್ರೀ ಸಿ. ರಾಜಗೋಪಾಲಾಚಾರ್ಯರು ಬೆಂಬಲವಿತ್ತರು.

ಹೋಟೆಲುಗಳಲ್ಲಿ ಪೂರಿಗಳ ಆಕಾರ ಹೆಚ್ಚಬೇಕು

ಆಹಾರ ಪ್ರಚಾರ ಸಭೆಯೊಂದರಲ್ಲಿ ಮಾತನಾಡುತ್ತಾ ಮದ್ರಾಸಿನ ಆಹಾರ ಮತ್ತು ಸರಬರಾಜು ಸಚಿವರಾದ ರಾಘವ ಮೆನನ್‌ರವರು ಹೋಟೆಲುಗಳಲ್ಲಿ ಗಿರಾಕಿಗಳಿಗೆ ಕೊಡತಕ್ಕ ಪೂರಿಗಳ ಗಾತ್ರವನ್ನು ಹೆಚ್ಚಿಸದಿದ್ದರೆ ಸರ್ಕಾರದವರು ಅವರ ಮೇಲೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ಹೇಳಿದ್ದಾರೆ. ಗಿರಾಕಿಗಳು ಕೊಡುವ ಬೆಲೆಗೆ ಅನುಗುಣವಾಗಿ ಪದಾರ್ಥಗಳ ಪ್ರಮಾಣವೂ ಇರಬೇಕೆಂದು ಅವರು ಸೂಚಿಸಿರುವರು.

ಬೋಸ್ ರಾಯಭಾರಿಗಳ ಬಿಡುಗಡೆ

೧೯೪೩ ರಲ್ಲಿ ಸುಭಾಷ್‌ಚಂದ್ರ ಬೋಸರಿಂದ ಭಾರತದ ಹಲವು ನಾಯಕರಿಗೆ ಸಂದೇಶವನ್ನು ತಂದಿದ್ದ ಸರ್ದಾರ್ ಗಂಗಾಸಿಂಗ್, ಕಾಫುಸಿಂಗ್ ಇವರುಗಳನ್ನು ಸೆರೆಹಿಡಿದು ೪೦ ವರ್ಷ ಶಿಕ್ಷೆಗೆ ಗುರಿಮಾಡಲಾಗಿತ್ತು. ಕೇಂದ್ರ ತಾತ್ಕಾಲಿಕ ಸರ್ಕಾರದ ಆಜ್ಞೆಯಂತೆ ಮೊನ್ನೆ ಇವರನ್ನೆಲ್ಲಾ ಬಿಡುಗಡೆ ಮಾಡಲಾಗಿದೆ.

-ಇದೇ ತಾನೆ ಬಂದಿವೆ-
ಟಾಂಕಿನ್ಸ್ ಷೂಗಳು
ಮತ್ತು
ರೇಡಿಯಂ ಷೂಗಳು
ಇವುಗಳಲ್ಲದೆ ಬಾಟಾ ಕಂಪೆನಿಯ ಎಲ್ಲಾ ನಮೂನೆಯ ಪಾದರಕ್ಷೆಗಳು ಸಿಕ್ಕುತ್ತವೆ. ಒಮ್ಮೆ ನಮ್ಮ ಅಂಗಡಿಗೆ ಭೇಟಿಕೊಡಿ-
ಗೋಬಿಜ್ ಫುಟ್‌ವೇರ್ ಹೌಸ್
ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

೩೨ ಅಡಿಯ ವಿಗ್ರ

೩೨ ಅಡಿ ಎತ್ತರದ ಒಂದು
ವರ್ಷದ ಹಿಂದಿನದೆಂದು ಅಂದಾಜು
ವಿಷ್ಣುವಿನ ಶಿಲಾ ವಿಗ್ರಹವೊಂದು
ರ್ ಭಂಜ್ ಸಂಸ್ಥಾನದ ಕಲ್ಯಾಣ್
ಸಿಕ್ಕಿರುತ್ತದೆ. ಭೂ ಸಂಶೋಧಕ
ಒರಿಸ್ಸಾ ಪ್ರಾಂತ್ಯದಲ್ಲಿ ಅತ್ಯಂತ
ವಿಗ್ರಹವೆಂದು ಅಭಿಪ್ರಾಯಪಟ್ಟಿರ

ಶ್ರೀರಾಮ ಸಪ್ತಾಹ ವ್ಯಾಸ

ಮಂಡಿ ಮೊಹಲ್ಲಾ ಕೃಷ್ಣರಾ
ಆಸ್ಪತ್ರೆ ರೋಡಿನ ಬಳಿ ಹಾಕಿರುವ
ರದಲ್ಲಿ ನಾಳೆಯಿಂದ ತಾ॥ ೧೭-೧೧
ಭಾನುವಾರದ ವರೆಗೆ ೧೭ನೇ
ರಾಮ ಸಪ್ತಾಹದ ಅಂಗವಾಗಿ ಪ್ರತಿ
ಯಂಕಾಲ ೬.೩೦ಕ್ಕೆ ಶ್ರೀ ಹರಿಹರ
ಭಾರತಿ ಸ್ವಾಮಿಗಳವರಿಂದ ಹರಿಕ
ಪ್ರತಿದಿನ ಪ್ರಾತಃಕಾಲ ಶ್ರೀ ಗೀತಾ
ಣಿ ಸಭೆಯವರಿಂದ ಶ್ರೀ ಗೀತಾ ಪಾ
ರಾಯಣ ನಡೆಸಲ್ಪಡುತ್ತವೆ

ಬಹುಮಾನ ವಿನಿಯೋಗ

ಗಾಂಧಿ ಜಯಂತಿ ಸಂಬಂಧದಲ್ಲಿ
ಸ್ಪರ್ಧೆಯಲ್ಲಿ ಉತ್ತೀರ್ಣರಾದವರಿಗೆ
ಮಾನಗಳನ್ನು ಇದೇ ಮಾಹೆ ವ
ವಾರದ ಅಂತ್ಯದೊಳಗೆ ಮೈಸೂರು
ಸ್ ಅಧ್ಯಕ್ಷರ ಹಸ್ತದಿಂದ ವಿನಿ
ಲು ಏರ್ಪಾಟು ನಡೆಯುತ್ತಿರುವು
ತ್ತಾಗಿದೆ.

ರಾಜಕಮಲ
ಮೈಸೂರು
ತಾ॥ ೭-೧೧-೪೬ ರಿಂ
ಎರಡನೆಯ ವಾರ
"ನೂರ್ ಜಹಾನ್," "ಗೀತಾನಿಜ
"ರಾಮಾಶಂಕರ್" ನಟಿಸ
ವಿಲೇಜ್ ಗರ್ಲ್
(ಹಳ್ಳಿಯ ಹುಡುಗಿ)

From Friday the 8-11
For 4 days only
at 10-30 A. M.
"DEAD END
A Samuel Goldwyn
Million-Dollar
Production

Edited, printed and publish[ed by] A. S. Nagarajan at the Sadhvi [Press,] D. Subbiah Road, Mysore.

॥ ವಂದೇಮಾತರಂ ॥

ಮೈಸೂರು ನಗರದ ಹೆಮ್ಮೆ

ನೂರಕ್ಕೆ ನೂರರಷ್ಟು ಕಾಂಗ್ರೆಸ್ ವಿಜಯ!

* ಕಳೆದ ಆರು ವರ್ಷಗಳಿಂದ ಮೈಸೂರು ನಗರ ನಿವಾಸಿಗಳು ಪೌರಸಭೆಗೆ ಎಲ್ಲಾ ಕಾಂಗ್ರೆಸ್ ಪ್ರತಿನಿಧಿಗಳನ್ನೂ ಆರಿಸಿ ಕಳುಹಿಸಿದ್ದಾರೆ.

* ಇದನ್ನು ಕಂಡು ಮಹಾತ್ಮ ಗಾಂಧೀಜಿಯವರೂ, ರಾಷ್ಟ್ರ ನಾಯಕರೂ ಮುಕ್ತವಾಗಿ ಮೈಸೂರನ್ನು ಕೊಂಡಾಡಿದ್ದಾರೆ.

* [illegible] ಜನ ಕಾಂಗ್ರೆಸ್ ಉಮೇದುವಾರರಿಗೂ ಅಖಂಡ ವಿಜಯವನ್ನು ದೊರಕಿಸಿ ಕೊಟ್ಟಿರುವುದು ಇತಿಹಾಸದಲ್ಲೇ ಅಪೂರ್ವವಾದ ಸನ್ನಿವೇಶ ಸಂಗತಿ.

* ಈ ಸಾರಿ ಪೌರಸಭಾ ಚುನಾವಣೆಯಲ್ಲಿಯೂ ಮೈಸೂರು ತನ್ನ ಅಪ್ಪಟ ಕಾಂಗ್ರೆಸ್ ಪ್ರೇಮವನ್ನು ಪ್ರದರ್ಶಿಸಲಿ!

ಜೈ ಹಿಂದ್!

॥ ವಂದೇಮಾತರಂ ॥

ಲಷ್ಕರ್ ಮೊಹಲ್ಲಾ, ಮಂಡಿ ಮೊಹಲ್ಲಾ

ಓಟರು ಮಹಾಶಯರುಗಳಲ್ಲಿ ವಿನಂತಿ

14—11—46 ನೇ ಗುರುವಾರ ನಡೆಯಲಿರುವ ಪೌರಸಭಾ ಚುನಾವಣೆ
ಈ ಕೆಳಗೆ ಕಂಡ ಉಮೇದುವಾರರಿಗೇ ತಮ್ಮ ಅಮೂಲ್ಯವಾದ ಓಟನ್ನು ಕೊಡಬೇಕಾಗಿ ಪ್ರಾ

ಲಷ್ಕರ್ ಮೊಹಲ್ಲಾ ಚುನಾವಣಾ ಸ್ಥಳ:-ವೆಲ್ಲಿಂಗ್‌ಟನ್ ಲಾಡ್ಜ್.

1.	ಮೀರ್ ನೂರ್ ಹುಸೇನ್	ಕೈ	X
2.	ಸುಬ್ಬಣ್ಣ	ಘಂಟೆ	X

ಮಂಡಿ ಮೊಹಲ್ಲಾ ಚುನಾವಣಾ ಸ್ಥಳ:-ಮಹಾರಾಣಿಸ್ ಪ್ರೈಮರಿ ಸ್ಕೂಲ್ ಬಸ್ ಟರ್ಮಿನಸ್ ಬಳಿ

1.	ಅಬ್ದುಲ್ ಹಬೀಬ್ ಸಾಬ್	ಕೈ	X

ಸ್ವತಂತ್ರ ಚುನಾವಣಾ ಸಮಿ

ಫೋ‌ನ್ ನಂ. 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಭಾನುವಾರ ೧೦—೧೧—೪೬ [ಸಂಚಿಕೆ ೨೬

ಕಾಂಗ್ರೆಸ್ ಅಧಿವೇಶನ ಮುಂದುವರಿವುದೇ ?

ಕಾಂಗ್ರೆಸ್ ಚುನಾವಣಾ ಪ್ರಚಾರ

ಮೈಸೂರು ೧೦

ಮುಂದಿನ ವಾರ ರಾಜಧಾನಿಯಲ್ಲಿ ನಡೆಯುವ ಪುರಸಭಾ ಚುನಾವಣೆ ಸಂಬಂಧ ನಿನ್ನೆ ಸಾಯಂಕಾಲ ಶ್ರೀ ಎಸ್. ಚನ್ನಯ್ಯನವರ ಅಧ್ಯಕ್ಷತೆಯಲ್ಲಿ, ಸುಬ್ಬರಾಯನ ಕೆರೆ ಬಂಗಳದಲ್ಲಿ ಬಹಿರಂಗ ಸಭೆಯು ನಡೆಯಿತು.

ಅಧ್ಯಕ್ಷರು ಮಾತನಾಡಿ ಹೀಗೆ ಹೇಳಿದರು — "ಕಾಂಗ್ರೆಸ್ ಸಂಸ್ಥೆ ಮೈಸೂರಿನಲ್ಲಿ ಬಲವಾಗಿ ತನ್ನ ಪ್ರಭಾವವನ್ನು ಬೀರಿದೆ. ಮಹಾಜನತೆ ಸರಕಾರ ಸಹಾನುಭೂತಿಯಿಂದಲೇ ವಿನಾ ಮತ್ತೆ ಬೇರೆ ಅಲ್ಲ. ...ಗಳು ಹಲವರಲ್ಲಿ ಇರಬಹುದಾದ ಅಲ್ಪ ಲೋಪದೋಷಗಳನ್ನು ನೆನಪಿನಿಂದು ಅವನ್ನೇ ಬೆಟ್ಟದಷ್ಟು ದೊಡ್ಡದಾಗಿ ಸಂಸ್ಥೆಯ ಹೆಸರಿಗೆ ಕಳಂಕ ತರುವುದು ಉತ್ತಮ ನೀತಿಯಲ್ಲ ಮತ್ತು ೧೯೩೮ರಲ್ಲಿ ನಡೆದ ಪುರಸಭಾ ಚುನಾವಣೆಗಳಲ್ಲಿ ಜಯ ಗಳಿಸಿದಂತೆಯೇ ಈ ಚುನಾವಣೆಯಲ್ಲಿಯೂ ಗಳಿಸಬೇಕು.

ಶ್ರೀ ಜೆ. ಕೆ. ವೀರಣ್ಣ ಗೌಡರು ಮಾತನಾಡಿ, ಕಾಂಗ್ರೆಸ್ ಎಷ್ಟು ವರ್ಷಗಳ ... ರಾಜಕೀಯ ಪಕ್ಷವಾಗಿ ಹುಟ್ಟಿ, ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಹೋರಾಟ ನಡೆಸಿ, ಅದು ಎಷ್ಟರ ಮಟ್ಟಿಗೆ ... ನಡೆಸಲು ಸಿದ್ಧವಾಗಿದೆ ಎಂಬ ಅಂಶ ಎಲ್ಲರಿಗೂ ತೋರಿಸಿಕೊಟ್ಟಿದೆ. ಎಂದವರು ತಮ್ಮ ಧ್ಯೇಯ ಸಾಧನೆಗಾಗಿ ... ಸಭೆಗಳಲ್ಲೂ, ಸ್ಥಳೀಯ ಸಂಸ್ಥೆಗಳ ಭಾಗ ... ಸುವುದು ಕಾಂಗ್ರೆಸ್ಸಿನ ... ಕಾರ್ಯಕ್ರಮಗಳಲ್ಲೊಂದಾಗಿದೆ ಎಂದೂ ತಿಳಿಸಿ, ಸ್ವಾರ್ಥ ಸಾಧನೆಗಾಗಿ ಸಂಸ್ಥೆಗೆ ಬಂದಿರುವವರು ಕಾಲಕ್ರಮೇಣ ಹೊರಹೋಗುತ್ತಿರುವರು. ಸ್ವಾರ್ಥತ್ಯಾಗ, ... ಪ್ರಜಾಸೇವೆಗಳನ್ನು ಮಾಡಲು ಕಾತುರರಾಗಿರುವವರು ಮಾತ್ರ ... ಪ್ರಜಾಸೇವೆಯಲ್ಲಿ ನಿರತರಾಗಿರು ... ಬಹುದು. ಇಂಥಾ ಸಂದರ್ಭಗಳಲ್ಲಿ ವ್ಯಕ್ತಿಗಳ ಮೇಲಿನ ... ಗಳನ್ನು ದೂರಮಾಡಿ ಸಂಸ್ಥೆಯ ಹಿತಕ್ಕಾಗಿ ದುಡಿಯುವುದು ಉತ್ತಮ. ... ಎಲ್ಲ ಚುನಾವಣೆಗಳಿಗಿಂತಲೂ ... ದೆಯಲಿರುವ ಚುನಾವಣೆಯು ಅ... ವಾಗಿದೆ. ಶಾಸನಬದ್ಧವಾದ ... ಮೂಲಕ ಹೋರಾಟ ನಡೆಸಿ, ... ಯವನ್ನು ಈಡೇರಿಸಲು ಕಾಂಗ್ರೆಸ್ಸಿನಿಂದ ಮಾತ್ರ ಸಾಧ್ಯವೆಂದು ... ವುದು ಎಲ್ಲರ ಕರ್ತವ್ಯವೆಂದು ... ಕಾಂಗ್ರೆಸ್ ಪರವಾಗಿ ನಿಂತಿರುವವರ ... ಯಿಸಬೇಕೆಂದು ಪ್ರಾರ್ಥಿಸಿದರು.

... ರಂಗರಾಮಯ್ಯನವರು ಇದುವರೆಗೆ ಕಾಂಗ್ರೆಸ್ ಪಕ್ಷದವರು ಪುರಸಭೆಯಲ್ಲಿ ... ನ ಕಾರ್ಯಗಳನ್ನು ವಿವರಿಸಿ, ... ಅಭ್ಯರ್ಥಿಗಳಿಗೇ ಜಯವಾಗುವಂತೆ ಮಾಡಬೇಕೆಂದು ಪ್ರಾರ್ಥಿಸಿದರು. ವಂದೇಮಾತರಂನೊಡನೆ ಸಭೆ ಮುಕ್ತಾಯವಾಯಿತು.

... ಕದಿಂದ ಗೋಧಿ

... ಆಸ್ಟ್ರೇಲಿಯದೊಳಗೆ ಭಾರತಕ್ಕೆ ... ಟನ್ ಗೋಧಿಯನ್ನು ಕಳುಹಿಸ ... ಸಂಯುಕ್ತ ಸಂಸ್ಥಾನವು ನಿಗದಿ ... ಸಿದೆ.

ಪೋಲೀಸ್ ಅಧಿಕಾರಿಯ ಬಲವಂತ ನಿವೃತ್ತಿ

ಸಂಯುಕ್ತ ಪ್ರಾಂತ್ಯದ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರು ಒಂದು ಆಜ್ಞೆ ಹೊರಡಿಸಿ ಮಂತ್ರಿಗಳು ಕೇಳುವ ಪ್ರಶ್ನೆಗೆ ಪೋಲೀಸ್ ಅಧಿಕಾರಿಗಳು ತಮ್ಮ ಮೂಲಕವೇ ಉತ್ತರ ಕಳುಹಿಸಬೇಕೆಂದು ಸೂಚಿಸಿದ್ದರು. ಇದನ್ನು ಒಳಾಡಳಿತ ಸಚಿವರಾದ ಶ್ರೀ ರ. ಫಿ. ಅಹಮದ್ ಕಿದ್ವಾಯಿಯವರು ವಿರೋಧಿಸಿದ್ದರು. ಇ॥ ಜನರಲ್ಲರು ಗವರ್ನರಿಗೆ ಈ ಬಗ್ಗೆ ಅಪೀಲು ಮಾಡಿಕೊಂಡಿದ್ದರು. ಈ ವಿಚಾರ ಕೇಂದ್ರ ಸರ್ಕಾರದ ಮುಂದೆ ಬಂದಾಗ ವೈಸರಾಯರು ಇ॥ ಜನರಲ್ಲರಿಗೆ ಬೆಂಬಲವಿತ್ತರೆಂದೂ, ಆದರೆ ಭಾರತದ ಕಾರ್ಯದರ್ಶಿ ಮಿ॥ ಪೆಥಿಕ್‌ಲಾರೆನ್ಸರು ಪ್ರಾಂತೀಯ ಮಂತ್ರಿಗಳ ಅಭಿಪ್ರಾಯವನ್ನು ಸಮರ್ಥಿಸಿದರೆಂದೂ ಹೇಳಲಾಗಿದೆ. ಆದ್ದರಿಂದ ಇ॥ ಜನರಲ್‌ರವರು ನಿವೃತ್ತರಾಗುವ ಮುನ್ನ ರಜ ಪಡೆಯಲಿದ್ದಾರೆ.

ಕಾಂಗ್ರೆಸ್ ಮಹಾಧಿವೇಶನ ಮುಂದುವರಿಯುವುದೇ ?

ಮೀರತ್ತಿನಲ್ಲಿ ಈ ತಿಂಗಳು ನಡೆಯಬೇಕಾಗಿದ್ದ ಅಖಿಲ ಭಾರತ ಕಾಂಗ್ರೆಸ್ ಮಹಾಧಿವೇಶನವನ್ನು ಮುಂದುವರಿಸುವ ಪ್ರಶ್ನೆಯನ್ನು ಕಾಂಗ್ರೆಸ್ ನಾಯಕರು ಪರಿಶೀಲಿಸುತ್ತಿರುವುದಾಗಿ ವರದಿಯಾಗಿದೆ. ಗಾಂಧಿಜಿಯವರು ಅಧಿವೇಶನಕ್ಕೆ ಬರಲು ಸಾಧ್ಯವಿಲ್ಲವೆಂದು ತಿಳಿಸಿರುವುದೂ, ಕೋಮುವಾರು ಗಲಭೆಗಳ ದೆಸೆಯಿಂದ ಸ್ಥಳೀಯ ನಾಯಕರು ತಮ್ಮ ಪ್ರದೇಶಗಳನ್ನು ಬಿಟ್ಟು ಅಧಿವೇಶನಕ್ಕೆ ಹಾಜರಾಗಲು ತೊಂದರೆಯಾಗಿರುವುದೂ, ಇದಕ್ಕೆ ಕಾರಣವೆಂದು ಹೇಳಲಾಗಿದೆ. ಅಧಿವೇಶನವನ್ನು ಕಡೇ ಪಕ್ಷ ೩ ತಿಂಗಳು ಕಾಲ ಮುಂದುವರಿಸಬಹುದೆಂದು ತಿಳಿದುಬಂದಿದೆ.

ಚಾಮರಾಜ ಮೊಹಲ್ಲಾ

ಮತದಾರರಲ್ಲಿ ವಿನಂತಿ

ವೋಟುಮಾಡು ಗುರ್ತು ನನ್ನ ಹೆಸರಿಗೆ ನಿಮ್ಮ ಘನವಾದ ಒಂದು ಓಟನ್ನು ದಯಮಾಡಿ ಕೊಡುವಂತೆ ಪ್ರಾರ್ಥಿಸುತ್ತೇನೆ.

ಡಿ. ಸುಮಿತ್ರ

ಬಿ ಎ ಬಿ ಎಲ್, ಎಂ ಇ ಡಿ

ಪ್ರಿನ್ಸಿಪಾಲ್, ಮಿರ್ಜಾ ಸ್ಕೂಲ್

ಮೈಸೂರು

ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು

ಈ ದಿನ ಸಂಜೆ ಆರೂವರೆ ಗಂಟೆಗೆ ಇವರು ಸುಬ್ಬರಾಯನ ಕೆರೆ ಮೈದಾನದಲ್ಲಿ ಮೈಸೂರು ಕಾಂಗ್ರೆಸ್ ಆಶ್ರಯದಲ್ಲಿ ಭಾಷಣ ಮಾಡುವರು. ಮಹಿಳೆಯರೂ, ಮಹನೀಯರೂ, ತಂಡೋಪ ತಂಡವಾಗಿ ಬರಬೇಕೆಂದು ಪ್ರಾರ್ಥಿಸಲಾಗಿದೆ.

ಅನೇಕ ವರ್ಷಗಳ ನಂತರ ಶ್ರೀಮತಿಯವರು ರಾಜಧಾನಿಯ ಬಹಿರಂಗ ಸಭೆಯಲ್ಲಿ ಭಾಷಣ ಮಾಡಲು ಈಗ ಒಪ್ಪಿರುವರು. ಸುಮಾರು ಹತ್ತು ವರ್ಷದ ಹಿಂದೆ ಅವರು ಈ ನಗರಕ್ಕೆ ಬಂದು ಟೌನ್‌ಹಾಲ್ ಮೈದಾನದಲ್ಲಿ ಭಾಷಣ ಮಾಡಲಿದ್ದರು. ಭಾಷಣಕ್ಕೆ ಮುಂಚೆ ಶ್ರೀ ಕೃಷ್ಣ ಭವನದಲ್ಲಿ ಒಂದು ಉಪಾಹಾರ ಕೂಟವೂ ಜರುಗಿತು. ಅಷ್ಟು ಹೊತ್ತಿಗೆ ಅಂದಿನ ಜಿಲ್ಲಾಧಿಕಾರಿಗಳು ಅವರ ಮೇಲೆ ಪ್ರತಿಬಂಧಕಾಜ್ಞೆಯನ್ನು ಹೊರಡಿಸಿ ವಾರಂಟನ್ನು ಜಾರಿ ಮಾಡಿದರು. ಹೋಟಲಿನ ಉಪಾಹಾರಕೂಟದಲ್ಲೂ ಮಾತನಾಡದಂತೆ ಪ್ರತಿಬಂಧಿಸಿದ್ದರು.

ಅನಂತರ ಮತ್ತೊಮ್ಮೆ ಶ್ರೀಮತಿಯವರು ಮೈಸೂರಿಗೆ ಬರುತ್ತಿದ್ದಾಗ ಮತ್ತೊಬ್ಬ ಜಿಲ್ಲಾಧಿಕಾರಿಗಳು ಅವರ ನಾಲೆ ಗಡೀಪಾರು ಆಜ್ಞೆ ಮುನ್ನೇ ಜಾರಿಮಾಡಿ ನಗರದೊಳಕ್ಕೆ ಬರಲಾಗದೆಂದು ತಿಳಿಸಿದ್ದರು. ಅದನ್ನು ಜಾರಿಮಾಡಲು ಹುಣಸೂರು ರಸ್ತೆಯ ಟೋಲ್‌ಗೇಟಿನ ಬಳಿ ಪೋಲೀಸ್ ಪಡೆಯೊಂದು ಕಾದಿತ್ತು. ಆದರೂ ಸಹ ಶ್ರೀಮತಿಯವರು ಬೇರೆ ರಸ್ತೆಯ ಮೂಲಕ ನಗರದೊಳಕ್ಕೆ ಬಂದು ಸೇರಿದುದು ಸಕಲರಿಗೂ ಆಶ್ಚರ್ಯಕರವಾಗಿತ್ತು. ಅಂದಿನಿಂದ ಇದುವರೆಗೆ ಅವರ ಮೇಲಿನ ಗಡೀಪಾರು ಆಜ್ಞೆಯು ಜಾರಿಯಲ್ಲಿಯೇ ಇದ್ದಿತು. ಮೊನ್ನೆಮೊನ್ನೆ ಅದನ್ನು ತೆಗೆದುಹಾಕಲಾಯಿತು. ಆದರೂ ಸಹ ಈ ಮಧ್ಯೆ ಇವರು ಅನೇಕಬಾರಿ ಸಂಸ್ಥಾನಕ್ಕೆ ಬಂದು ಹೋಗಿರುವರು.

ಈಗ ಅವರು ಕಾಂಗ್ರೆಸ್ ಸಂಸ್ಥೆಯಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದ್ದಾರೆ. ಕಾರ್ಯಕಾರೀ ಸಮಿತಿಯಲ್ಲಿ ಸದಸ್ಯರಾಗಿದ್ದಾರೆ. ಕರ್ನಾಟಕದ ಮಹಿಳೆಯರಲ್ಲಿ ಈ ಸ್ಥಾನವು ದೊರಕಲು ಇವರಿಗೇ ಮೊದಲಾಗಿತ್ತು. ಅಸಂಖ್ಯ ಅನುಗಾಮಿಗಳು ಕಾಂಗ್ರೆಸ್ಸಿನ ಕಾರ್ಯಕಲಾಪಗಳಲ್ಲಿಯೂ ಭಾಗವಹಿಸುತ್ತಿದ್ದಾರೆ.

ಕೆಲವು ವರ್ಷಗಳ ಹಿಂದೆ ಚೀನಾ, ಜಪಾನ್ ಮತ್ತು ಇಂಗ್ಲೆಂಡ್, ಅಮೆರಿಕಾಗಳಲ್ಲಿ ಪ್ರವಾಸ ಮಾಡಿ ಹಿಂದೂಸ್ಥಾನದ ವಿಷಯವಾಗಿ ವಿದೇಶಗಳ ಪ್ರಚಾರವನ್ನು ಕೈಕೊಂಡಿದ್ದಾರೆ. ಇಂಥವರ ಭಾಷಣವನ್ನು ಕೇಳುವ ... ಸುಯೋಗವೇ ...

ಕಾಂ॥ ಅಧ್ಯಕ್ಷರ ಆಗಮನ

ಮೈಸೂರು ೧೦

ನಾಳೆ ಮಧ್ಯಾಹ್ನ ೧ ಗಂಟೆಗೆ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಚೆಂಗಲರಾಯರೆಡ್ಡಿಯವರೂ, ಮಾಜಿ ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪನವರೂ ಬೆಂಗಳೂರಿನಿಂದ ರಾಜಧಾನಿಗೆ ದಯಮಾಡಿಸುವರು. ನಾಳೆ ಸಂಜೆ ೬-೩೦ ಗಂಟೆಗೆ ಅವರಿಬ್ಬರೂ ಸುಬ್ಬರಾಯನಕೆರೆ ಮೈದಾನದಲ್ಲಿ ಭಾಷಣ ಮಾಡುವರು. ಸರ್ವರಿಗೂ ಸ್ವಾಗತವಿದೆ.

ಕಾಂಗ್ರೆಸ್ ಕೆಲಸಗಾರರ ಸಭೆ

ನಾಳೆ ಸಂಜೆ ನಾಲ್ಕೂವರೆ ಗಂಟೆಗೆ ಸಯ್ಯಾಜಿರಾವ್ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ಕಾಂಗ್ರೆಸ್ ಕೆಲಸಗಾರರ ಸಭೆ ನಡೆಯುತ್ತದೆ. ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಚೆಂಗಲರಾಯರೆಡ್ಡಿಯವರು ಅಗ್ರಾಸನವನ್ನು ವಹಿಸುವರು. ಎಲ್ಲಾ ಕೆಲಸಗಾರರೂ ಬರಬೇಕೆಂದು ನಗರ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್. ಚನ್ನಯ್ಯನವರು ಪ್ರಾರ್ಥಿಸಿದ್ದಾರೆ.

ಮಂಡಿಮೊಹಲ್ಲಾ ಸಭೆ

ಮೊನ್ನೆ ಮಂಡಿಮೊಹಲ್ಲಯಲ್ಲಿ ಸ್ವತಂತ್ರ ಉಮೇದುವಾರರ ಪರವಾಗಿ ಚುನಾವಣಾ ಪ್ರಚಾರ ನಡೆಸಲು ಮಿ॥ ಮಹಮುದ್ ಸೇಟರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಹಲಕೆಲವು ಜನರು ಬಂದಿದ್ದರು. ಮುಸ್ಲಿಂ ಲೀಗಿನವರು ಈ ಚುನಾವಣೆಗಳಲ್ಲಿ ಭಾಗವಹಿಸುವುದಿಲ್ಲವೆಂದು ನಿರ್ಧರಿಸಿರುವುದರಿಂದ ಲೀಗಿನ ಮತ್ತು ಮಿ॥ ಜಿನ್ನಾರವರ ನೀತಿಯ ಬಗ್ಗೆ ಟೀಕಿಸಿ ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್ಯರು ಭಾಷಣ ಮಾಡುತ್ತಿದ್ದಾಗ ಗಲಭೆಯಾಯಿತು. ಪೋಲೀಸಿನವರು ಬಂದು ಆಕ್ಷೇಪ ಮಾತನಾಡದಂತೆ ಬೇಗ ಸಭೆಯನ್ನು ಮುಗಿಸಿದರೆಂದು ವರದಿಯಾಗಿದೆ.

ಸಾಧ್ವಿ

ತಾ॥ ೧೦-೧೧-೪೬ ಭಾನುವಾರ

ಕಾಂಗ್ರೆಸ್ ಉಮೇದುವಾರ ರಿಗೇಕೆ ಓಟುಕೊಡಬೇಕು?

ಲೇಖಕರು:-- ಸಾ॥ ಭದ್ರಯ್ಯ.

ಈ ಗುರುವಾರ ಮೈಸೂರು ಪೌರಸಭೆಗೆ ಚುನಾವಣೆ ನಡೆಯಲಿದೆ.' ಹಿಂದೆ ಹೀಗೆ ನಡೆದ ಚುನಾವಣೆಯಲ್ಲಿ ಪುರನಿವಾಸಿಗಳು ಕಾಂಗ್ರೆಸ್ಸಿಗೆ ಸಂಪೂರ್ಣ ಜಯ ಗಳಿಸಿಕೊಟ್ಟಿದ್ದಾರೆ. ಆದರೆ ಈ ಚುನಾವಣಾ ಕಾಲಕ್ಕೆ ಕಾಂಗ್ರೆಸ್ಸಿನ ಎದುರಾಳಿಗಳು ಜನರ ಮನಸ್ಸನ್ನು ಹಲವು ವಿಧದಲ್ಲಿ ಕಲಕಿ ಬಿಟ್ಟಿದ್ದಾರೆ.

ಈ ಕಾಲದಲ್ಲಿ ಕಾಂಗ್ರೆಸ್ಸಿನ ಹಗೆಗಳು ಹೆಚ್ಚಿದ್ದಾರೆ, ಎಂಬುದರಲ್ಲಿ ಏನೇನೂ ಸಂಶಯವಿಲ್ಲ. ಮೊದಲಿನಿಂದಲೂ ಅದನ್ನು ವಕ್ರದೃಷ್ಟಿಯಿಂದ ನೋಡುತ್ತಿದ್ದವರು ಈಗ ಬಲಗೊಂಡಿದ್ದಾರೆ. ಕಾಂಗ್ರೆಸ್ಸಿನಲ್ಲಿರುವವರೇ ಮಗ್ಗುಲು ಮುಳ್ಳು, ಬೆನ್ನು ಹಿಂದಿನ ಬಾಕು ಆಗಿದ್ದಾರೆ. ಕಾಂಗ್ರೆಸ್ಸಿನಲ್ಲಿ ತಾವು ಬಯಸಿದ ಸ್ಥಾನ ಸಿಗದವರು ಪಕ್ಷದ್ರೋಹ, ಅದರ ಕಾರ್ಯಗಳಿಗೂ ಅಸಹಕಾರ ತೋರಿ, ಜೊತೆಗೆ ಅಲ್ಲಸಲ್ಲದ ಟೀಕೆಗಳಿಂದ ಅದನ್ನು ಗುರಿಮಾಡಿ ಎದುರಾಳಿಗಳು ಕೈ ಹಿರಿಗಿಸುವಂತೆ ಮಾಡಿದ್ದಾರೆ.

ಇಲ್ಲಿ ಸದ್ಯಕ್ಕೆ ಮೈಸೂರು ನಗರದ ಮಾತನ್ನು ಮಾತ್ರ ತೆಗೆದುಕೊಳ್ಳೋಣ. ಮೈಸೂರು ಪೌರಸಭೆಯ ಕಾಂಗ್ರೆಸ್ ಪಕ್ಷದ ಮೇಲೆ, ಆ ಪಕ್ಷದ ಸದಸ್ಯರ ಮೇಲೆ, ಬಹು ದಿನಗಳಿಂದ ಅಪಪ್ರಚಾರ ನಡೆದಿದೆ. ಕೆಲವರ ದಿನದಿನದ ಉಾಜಕೀಯವೆಂದರೆ ಕಾಂಗ್ರೆಸ್ಸಿನ ಮೇಲೆ ದೋಷಾರೋಪಣೆ ಮಾಡುವುದು. ಕಾಂಗ್ರೆಸ್ಸಿನ ಮೇಲೆ ಬೇಕುಬೇಕೆಂದು ಆರೋಪಣೆ ಮಾಡುವವರು ಜನರ ಮನಸ್ಸನ್ನು ಕಾಂಗ್ರೆಸ್ಸಿನ ಪ್ರತಿಕೂಲವಾಗಿ ತಿರುಗಿಸಲು ಜಾಣತನದ ದಾರಿ ಹಿಡಿದಿದ್ದಾರೆ. ಕಾಂಗ್ರೆಸ್ಸಿಗನಾದ ಒಬ್ಬ ವ್ಯಕ್ತಿಯನ್ನು ಆರಿಸಿಕೊಳ್ಳುವುದು, ಅವನಿಗೆ ಒಂದು ಕೆಟ್ಟ ಹೆಸರಿಡುವುದು, ಕಾಂಗ್ರೆಸ್ಸನ್ನು ಬಯ್ಯಲು ಅದನ್ನು ನೆವವಾಗಿ ಮಾಡಿಕೊಳ್ಳುವುದು. ಕಾಂಗ್ರೆಸ್ಸೂ ಅದೇ ಮಟ್ಟಕ್ಕಿಳಿದು ಅದೂ ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳುವುದು ಸರಿಯಲ್ಲ. ಒಬ್ಬರ ಹೊಗಳಿಕೆಗಿಂತಲೂ ಅವರ ತೆಗಳಿಕೆ ಮನಸ್ಸಿಗೆ ಚೆನ್ನಾಗಿ ಹಿಡಿಯುವುದು ಸ್ವಾಭಾವಿಕ. ಈ ಸನ್ನಿವೇಶದಲ್ಲೇ ಮೈಸೂರು ನಗರ ಸಭೆಯ ಕಾಂಗ್ರೆಸ್ ಪಕ್ಷ ಇಂದು ಇರುವುದು. ಇದು ಈ ವರ್ಷಗಳಲ್ಲಿ ಹಲವು ವಿಧದ ದೋಷಾರೋಪಣೆಗಳಿಗೆ ಸಿಕ್ಕಿದೆ. ಉದಾಹರಣೆಗೆ ಒಂದೆರಡು ವಿಷಯಗಳನ್ನು ತೆಗೆದುಕೊಳ್ಳಬಹುದು.

ಪೌರಸಭಾ ಸದಸ್ಯರಲ್ಲಿ ಹಲವರು ನಗರದ ಇತರ ನೂರಾರು ಜನರಂತೆ ಮನೆ ನಿವೇಶನಗಳನ್ನು ಪಡೆದಿದ್ದಾರಂತೆ. ಆ ವಿಷಯದಲ್ಲಿ ಆರೋಪಿಗಳು ಒಂದು ದೊಡ್ಡ ಗೊಂದಲವನ್ನೇ ಎಬ್ಬಿಸಿಬಿಟ್ಟರು. ಗೊಂದಲ ಎಬ್ಬಿಸಿದವರಿಗೆ ತಾವೂ ಹಾಗೆ ನಿವೇಶನ ಪಡೆದಿರುವ ವಿಷಯದ ನೆನಪೇ ಬಂದಿರಲಾರದೇನೊ? ದೇಶಾದಷ್ಟು ಮನೆಗಳಿದ್ದೂ ಮತ್ತೆ ಮತ್ತೆ ನಿವೇಶನಗಳನ್ನು ಪಡೆದ ಅಧಿಕಾರಿ ಮತ್ತು ಇತರರ ವಿಷಯದಲ್ಲಿ ಹಾಗೆಯೇ ಟೀಕೆ ಮಾಡಲು ಅವರಿಗೇಕೆ ಧೈರ್ಯ ಬರಲಿಲ್ಲವೋ? ಹೀಗೆಯೇ ಒಬ್ಬ ಕಾಂಗ್ರೆಸ್ ಸದಸ್ಯನು ಮನೆಗೆ ತರಕಾರಿ ಕೊಂಡು ಹೋದರೆ, ಬಟ್ಟೆಕೊಂಡು ಹೋದರೆ, ಅದನ್ನು ನೋಡಿದವರು ಮಾರನೇ ದಿನ ಪತ್ರಿಕೆಯಲ್ಲಿ ಕಾಂಗ್ರೆಸ್ಸಿನವರು ಮಾರ್ಕೆಟ್ಟನ್ನೆಲ್ಲ ಸೂರೆಮಾಡಿ ತರಕಾರಿ ಮನೆಗೆ ತುಂಬಿಕೊಂಡರು, ಅಂಗಡಿಗಳನ್ನೆಲ್ಲಾ ಲೂಟಿಮಾಡಿ ಮನೆತುಂಬ ಬಟ್ಟೆ ತುಂಬಿಕೊಂಡರು, ಎಂದು ಗುಲ್ಲೆಬ್ಬಿಸಿದರೆ, ತರಕಾರಿ ಧಾರಣೆ ಹೆಚ್ಚಾಯಿತೆಂದೋ, ಬಟ್ಟೆ ಸಿಗಲಿಲ್ಲವೆಂದೋ ನೊಂದ ಜನರು ಆ ಮಾತು ನಿಜವಿರಬೇಕೆಂದು ಅಂದುಕೊಳ್ಳುವುದರಲ್ಲಿ ಆಶ್ಚರ್ಯವಿಲ್ಲ.

ಕಾಂಗ್ರೆಸ್ಸಿನವರಿಂದಲೇ ಮಳೆ ಬೀಳದೆ ಕನ್ನಂಬಾಡಿಕಟ್ಟೆ ಬತ್ತಿತು, ನಲ್ಲಿಗೆ ನೀರನ್ನು ಒತ್ತುವ ಯಂತ್ರದ ಶಕ್ತಿ ಅಳಿಯಿತು, ಎನ್ನೂ ಉತ್ತಮವಾದ ಪಂಪು ಸಿಗದೆ ಜನರಿಗೆ ನೀರು ಸಾಕಾಗದಿರುವುದು ಕಾಂಗ್ರೆಸ್ಸಿನವರಿಂದಲೇ. ಗಾಳಿ ಬೀಸುವಾಗ ರಸ್ತೆಯ ಧೂಳೆಲ್ಲಾ ಮೇಲೆದ್ದು ಕಣ್ಣು ತುಂಬುತ್ತದೆಂದು ಕೆಲವರು ಹೇಳುವರು. ಹಾಲು, ಬೆಣ್ಣೆ, ಮೊಸರುಗಳ ಬೆಲೆ ಏರಿ ಹೋಗಲೂ ಕಾಂಗ್ರೆಸ್ಸಿನವರೇ ಕಾರಣ ಎಂದು ದೊಡ್ಡ ಘೋಷಣ. ರೈಲಿನಿಂದಿಳಿದ ಪ್ರಯಾಣಿಕರೊಬ್ಬರನ್ನು ಸುಂಕದವನೊಬ್ಬ ಸತಾಯಿಸಿದನಂತೆ. ಜಟಕಾ ಗಾಡಿಯವನು ಪ್ರಯಾಣಿಕರೊಬ್ಬರಿಗೆ ತೊಂದರೆ ಕೊಟ್ಟನಂತೆ; ಇದೆಲ್ಲಾ ಕಾಂಗ್ರೆಸ್ಸಿನವರಿಂದಲೇ ಎಂದು ಜಗಳವಾಡುವವರೂ ಇದ್ದಾರೆ. ಪಾಪ! ಇವರೆಲ್ಲರ ಕೋಪ ತಾಪಗಳನ್ನು ಇನ್ನಾರು ಕೇಳುತ್ತಾರೆ? ಬಡಪಾಯಿ ಕಾಂಗ್ರೆಸ್ಸು ಈ ಎಲ್ಲರ ಆಕ್ಷೇಪಣೆಗಳಿಗೂ ಗುರಿ!

ಅಧಿಕಾರಿ ಅಧ್ಯಕ್ಷರಿದ್ದು ಆಡಳಿತ ಸೂತ್ರದಲ್ಲಿ ಪೌರಸಭೆಗೆ ಎಷ್ಟರ ಮಟ್ಟಿಗೆ ಹಿತವಿದೆ ಎಂಬುದನ್ನು ತಿಳಿದಿರುವವರು ಕಾಂಗ್ರೆಸ್ಸನ್ನು ಟೀಕೆ ಮಾಡಲಾರರು. ಹೀಗಾದರೆ ಕಾಂಗ್ರೆಸ್ಸಿನವರೇಕೆ ಪೌರಸಭೆಗೆ ಹೋಗಬೇಕು? ಕಾಂಗ್ರೆಸ್ಸಿನವರು ಹೋಗುವುದು ಒಂದು ಉದ್ದೇಶದಿಂದ; "ಸ್ವತಂತ್ರರು" ಹೋಗಿ ಅಧಿಕಾರಿಗಳ ಕಾಲಕ್ಕೆ ಸರಿಯಾಗಿ ಕುಣಿದು ಪುರನಿವಾಸಿಗಳಿಗೆ ಇನ್ನೂ ತೆರಿಗೆಯ ಭಾರ ಮತ್ತು ಇನ್ನಿತರ ತೊಂದರೆಗಳು ಹೆಚ್ಚದಿರಲೆಂದು, ನ್ಯಾಯವಾದ ಸೇವೆ ಸಲ್ಲಿಸುವ ಸಲುವಾಗಿಯೇ ಕಾಂಗ್ರೆಸ್ಸಿನವರು ಹೋಗುವರು.

ಯಾರು ಏನೇ ಹೇಳಲಿ, ಕಾಂಗ್ರೆಸ್ ಸಂಸ್ಥೆಯೊಂದೇ ಜನತೆಯ ಹಿತದಲ್ಲಿ ಒಂದು ಗೊತ್ತಾದ ಗುರಿ ಇಟ್ಟುಕೊಂಡು ಆ ದಾರಿಯಲ್ಲಿ ನಡೆಯುತ್ತಿರುವುದು. ಹೀಗೆ ಹೇಳಿದರೆ ಕಾಂಗ್ರೆಸ್ಸಿನಲ್ಲಿರುವವರೆಲ್ಲ ಬೃಹಸ್ಪತಿಗಳು, ಎಲ್ಲರೂ ಸಂಪೂರ್ಣರು ಎಂದು ಹೇಳಿದಂತಲ್ಲ. ತಮ್ಮ ಸ್ವಾರ್ಥ ಸಾಧನೆಗಾಗಿ ಆ ಸಂಸ್ಥೆಗೆ ಸೇರಿದವರೂ ಇದ್ದಾರೆ. ಜನತೆಯ ಪೂರ್ಣ ಬೆಂಬಲದಿಂದ ಬೆಳೆದಂತೆಲ್ಲಾ ತಂಗಿನಮರ ಬೆಳೆದು... ಹಯೋಗಕ್ಕೆ ಬರದ ಗರಿ ಇದರಿಂದ ... ರುವಂತೆ, ಈ ಸ್ವಾರ್ಥಪರರು ಕಳಚ... ತ್ತಾರೆ.

ಅಂತೂ ಕಾಂಗ್ರೆಸ್ಸಿನಲ್ಲಿರುವವರ... ಇತರರಲ್ಲಿರುವುದಕ್ಕಿಂತ ಬೇಗನೆ ಗೊ... ತ್ತದೆ. ಅಲ್ಲದೆ ಕಾಂಗ್ರೆಸ್ಸಿನವನು ... ವನೇ ಆಗಲಿ ಇತರ 'ಸ್ವತಂತ್ರ' ... ಜನತೆಗೆ ಹೆದರಿ ನಡೆಯುತ್ತಾನೆ ... ಸ್ಸಿನವನಾದರೆ ಸುಲಭವಾಗಿ ಟೀಕೆಗ... ತ್ತಾನೆ. ಅದರೂ ಒಟ್ಟಿನಲ್ಲಿ ಕಾಂ... ವನು ಏನೇ ಆಗಲಿ 'ಸ್ವತಂತ್ರ' ... ದೇಶದ ಹಿತಸಾಧನೆಯಲ್ಲಿ ಮುಂದು ... ಇರುವನೆಂದು ಧಾರಾಳವಾಗಿ ಹೇ... ಹುದು.

ದೇಶದ ಕಣ್ಣಾಗಿರುವ ಮೈ... ಕಾಂಗ್ರೆಸ್ಸನ್ನು ಬಲಗೊಳಿಸುವುದು, ... ಸ್ ಸದಸ್ಯನಾಗಿರಲಿ, ಇಲ್ಲದಿರಲಿ ಪ್ರ... ಟ್ಟ ಪ್ರಜೆಯ ಕರ್ತವ್ಯ. ಕಾಂಗ್ರೆಸ್ಸು ... ಜನತೆಯ ಸಂಸ್ಥೆ. ಅದರ ಯಾ... ಕಾರ್ಯದಲ್ಲಾಗಲೀ ನಾವು ಸಹ... ಹೋದರೆ ದೇಶದ ಹಿತದೃಷ್ಟಿಯಲ್ಲಿ ... ಯವೆಸಗಿದಂತಾಗುತ್ತದೆ. ನಗರದ ... ದಾರರೆಲ್ಲರೂ ಕಾಂಗ್ರೆಸ್ಸಿಗೇ ಬೆಂಬಲ ಕೆ... ವುದು ನ್ಯಾಯವಾಗಿದೆ. ಅದರಿಂದಲೇ ... ರ ತಪ್ಪು ತಿದ್ದಲು ಅಧಿಕಾರ ಸಿಗುತ್ತ... ಸಂಸ್ಥೆ ಬೆಳೆದು ದೇಶದ ಹಿತಸಾಧನೆಯ... ತ್ತದೆ. ಈಗಲೂ ಹಿಂದಿನಂತೆಯೇ ... ಸ್ ಸದಸ್ಯರೆಲ್ಲ ಚುನಾಯಿತರಾಗಿ ... ಹಿಂದಿನಿಂದಲೂ ಗಳಿಸಿರುವ ಕೀರ್ತಿ... ಮೈಸೂರು ನಗರವು ಈಗಲೂ ಉ... ಳ್ಳಲಿ!

ಚಾಮರಾಜನಗರದ ಟೌನ್ ಮುನಿಸಿಪಾಲಿಟಿ

ಪ್ರಕಟಣೆ

ಚಾಮರಾಜನಗರದ ಟವನ್ನಿನಲ್ಲಿ ಎರಡು ಅಫಿಸಿಯಲ್ಸ್ ಕ್ವಾರ್ಟರ್ಸ್ ಕಟ್ಟಿಸಲು ಸೀಲ್ಡ್ ಟೆಂಡರ್ ಕೊಡಲು ಇಷ್ಟಪಡತಕ್ಕವರು ತಮ್ಮ ಟೆಂಡರನ್ನು 25-11-1946 ನೇ ಸೋಮವಾರ ಮಧ್ಯಾಹ್ನ 3 ಘಂಟೆ ಒಳಗಾಗಿ ತಲುಪುವಂತೆ ಕಳುಹಿಸಬೇಕು. ಪ್ಲಾನ್ ಮತ್ತು ಅಂದಾಜು ತಪಶೀಲನ್ನು ಮುನಿಸಿಪಲ್ ಆಫೀಸಿನಲ್ಲಿ ನೋಡಬಹುದು.

(ಸಹಿ) ಎಂ. ಗುರು ಸಿದ್ದಯ್ಯ,
5-11-1946 ಪ್ರೆಸಿಡೆಂಟರಿಗಾಗಿ.

---

೪೦ ಜನರ ಬಂಧನ

ಕೋಲಾರದ ಚಿನ್ನದ ಗಣಿಯಲ್ಲಿ... ಗಲಭೆ ಸಂಬಂಧವಾಗಿ ಕಾರ್ಮಿಕ ಮ... ಡರಾದ ಶ್ರೀ ವಾಸನ್ ಮತ್ತು ಗೋ... ನ್ ಮುಂತಾದ ೪೦ ಮಂದಿಯನ್ನು ... ಸಲಾಗಿದೆಯೆಂದು ವರದಿಯಾಗಿದೆ

ರಾಜಕಮಲ್

ಮೈಸೂರು

ತಾ|| ೭-೧೧-೪೬ ರಿಂದ

ಎರಡನೆಯ ವಾರ

* ನೂರ್ ಜಹಾನ್, * ಗೀತಾನಿಜಾಮಿ, * ರಾಮತಕುಲ್ ನಟಿಸಿರುವ

ವಿಲೇಜ್ ಗರ್ಲ್

(ಹಳ್ಳಿಯ ಹುಡುಗಿ)

From Friday the 8-11-46
For 4 days only
at 10-30 A. M.

"DEAD END"

A Samuel Goldwyn
Million-Dollar
Production

॥ ವಂದೇಮಾತರಂ ॥

ಮೈಸೂರು ನಗರದ ಹೆಮ್ಮೆ

ನೂರಕ್ಕೆ ನೂರರಷ್ಟು ಕಾಂಗ್ರೆಸ್ ವಿಜಯ!

*ಕಳೆದ ಆರು ವರ್ಷಗಳಿಂದ ಮೈಸೂರು ನಗರ ನಿವಾಸಿಗಳು ಪೌರಸಭೆಗೆ ಎಲ್ಲಾ ಕಾಂಗ್ರೆಸ್ ಪ್ರತಿನಿಧಿಗಳನ್ನೂ ಆರಿಸಿ ಕಳುಹಿಸಿದ್ದಾರೆ.

* ಇದನ್ನು ಕಂಡು ಮಹಾತ್ಮ ಗಾಂಧಿಯವರೂ, ರಾಷ್ಟ್ರ ನಾಯಕರೂ ಮುಗ್ಧರಾಗಿ ಮೈಸೂರನ್ನು ಕೊಂಡಾಡಿದ್ದಾರೆ.

* ಇಪ್ಪತ್ತುನಾಲ್ಕು ಜನ ಕಾಂಗ್ರೆಸ್ ಉಮೇದುವಾರರಿಗೂ ಅಖಂಡ ವಿಜಯವನ್ನು ದೊರಕಿಸಿ ಕೊಟ್ಟಿರುವುದು ಇತಿಹಾಸದಲ್ಲೇ ಅಪೂರ್ವವಾದ ಹೆಮ್ಮೆಯ ಸಂಗತಿ.

* ಈ ಸಾರಿ ಪೌರಸಭಾ ಚುನಾವಣೆಯಲ್ಲಿಯೂ ಮೈಸೂರು ತನ್ನ ಅದ್ಭುತ ಕಾಂಗ್ರೆಸ್ ಪ್ರೇಮವನ್ನು ಪ್ರದರ್ಶಿಸಲಿ!

ಜೈ ಹಿಂದ್!

Edited, printed and published by A. K. Nagarajan at the Sadhvi Press D Subbiah Road, Mysore

ಕೋ. ಕಂ. 392 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೧] ಸೋಮವಾರ ೧೧—೧೧—೪೬ [ಸಂಚಿಕೆ ೧೫

ನಾಗಾ ರಾಣಿಯವರ - - ಬಿಡುಗಡೆಗೆ ಆಜ್ಞೆ

ವಾರ ಭವಿಷ್ಯ

೧೦-೧೧-೪೬ ರಿಂದ ೧೬-೧೧-೪೬ ರ ವರೆಗೆ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ಮೇಷ—ಆರೋಗ್ಯ ಸಾಧಾರಣ. ಧನಾಯ ಚೆನ್ನಾಗಿರುತ್ತದೆ. ಅಧಿಕಾರಿವರ್ಗದಿಂದ ಸನ್ಮಾನ. ಶತ್ರುಗಳಿಂದ ಕಿರುಕುಳ. ತಾ|| ೧೩, ೧೬ ಅಧಿಕ ವ್ಯಯ, ಕ್ಲೇಶ.

ವೃಷಭ—ಪ್ರಕೃತಿ ಸೌಖ್ಯ ಅಷ್ಟೇನೂ ಸರಿಯಿರಲಾರದು. ಧನಾದಾಯ ಕ್ಕಿಂತ ಖರ್ಚು ಅಧಿಕ. ಕೌಟುಂಬಿಕ ಸ್ಥಿತಿ ಚಿಂತಾಜನಕ. ಉದ್ಯೋಗ ವ್ಯವಹಾರಗಳಲ್ಲಿ ನಷ್ಟ. ತಾ|| ೧೩, ೧೬, ೧೬ ಪ್ರವಾಸ, ಲಾಭ.

ಮಿಥುನ—ಶರೀರ ಸೌಖ್ಯ ಉತ್ತಮವಿರದು. ಪ್ರವಾಸ, ವ್ಯವಹಾರಗಳಿಂದ ಲಾಭ. ಮಿತ್ರರಿಂದ ವಿಶೇಷ ಸನ್ಮಾನ. ತಾ|| ೧೬ ಖರ್ಚು. ಅಪಮಾನ-ಚಿಂತೆ.

ಕಟಕ—ಆರೋಗ್ಯ ಉತ್ತಮ. ಖರ್ಚು ವಿಶೇಷ. ಕುಟುಂಬದ ಆರೋಗ್ಯ ಕೆಟ್ಟಿದೆ. ಹಿಡಿದ ಕಾರ್ಯಗಳೆಲ್ಲಾ ಸಫಲ. ತಾ|| ೧೩, ೧೪ ಲಾಭ. ಅಕಸ್ಮಿಕ ಧನ.

ಸಿಂಹ—ಪ್ರಕೃತಿ ಚೆನ್ನಾಗಿರುತ್ತದೆ. ಶತ್ರುಗಳ ಕಿರುಕುಳ. ಮಿತ್ರರ ತಿರಸ್ಕಾರ. ಮಾನಸಿಕ ಚಿಂತೆ ಹೆಚ್ಚುತ್ತದೆ. ಧನಾಯ ಸಾಧಾರಣವಾಗಿರುತ್ತದೆ. ಪ್ರವಾಸ ನಷ್ಟ. ತಾ|| ೧೩, ೧೪ ಸನ್ಮಾನ, ಭೇಟಿ.

ಕನ್ಯಾ—ಆರೋಗ್ಯ ಚೆನ್ನಾಗಿರಲಾರದು. ಖರ್ಚು ಹೆಚ್ಚುತ್ತದೆ. ಖರ್ಚು ಅಧಿಕ. ತಾ|| ೧೩, ೧೫, ೧೬ ಸಾಧಾರಣ.

ತುಲಾ—ಆರೋಗ್ಯ ಕೆಡುವ ಸಂಭವ. ಧನಾದಾಯ ಚೆನ್ನಾಗಿರುತ್ತದೆ. ಉದ್ಯೋಗ ವ್ಯವಹಾರಗಳಲ್ಲಿ ಯಶ. ಪತ್ನೀ ಯಿಂದ ತಿರಸ್ಕಾರ. ತಾ|| ೧೩, ೧೪, ಉತ್ತಮ.

ವೃಶ್ಚಿಕ—ಪ್ರವಾಸ ಒದಗಬಹುದು. ಸರ್ಕಾರ ಉದ್ಯೋಗಗಳಿಂದ ವಿಶೇಷ ಸನ್ಮಾನ ದೊರೆಯುತ್ತದೆ. ಮಹತ್ವ ಕಾರ್ಯ ಸಿದ್ಧಿಯಾಗಬಹುದು. ರಾಜಕೀಯ ಸಂಬಂಧವಾಗಿ ಅಪಮಾನ. ತಾ|| ೧೬, ೧೬ ಚಿಂತೆ. ಖರ್ಚು ಹೆಚ್ಚುವುವು.

ಧನುಸ್ಸು—ಆರೋಗ್ಯ ಉತ್ತಮ. ಧನಾಯ ಸಾಧಾರಣ. ಉದ್ಯೋಗ ವ್ಯವಹಾರ ದಲ್ಲಿ ಮನ್ನಣೆ. ಬಂಧು ಸಹಾಯ. ತಾ|| ೧೩, ೧೪, ೧೬ ಖರ್ಚು ಅಧಿಕ. ಅಕಸ್ಮಿಕ ಪ್ರವಾಸ.

ಮಕರ—ಆರೋಗ್ಯ ಕೆಡುತ್ತದೆ. ವ್ಯವಹಾರಗಳಲ್ಲಿ ನಷ್ಟ. ಬಂಧುಗಳಿಂದ ತೊಂದರೆ. ಖರ್ಚು ಮಿತಿಮೀರುತ್ತದೆ. ಶತ್ರುಗಳ ಬಾಧೆ ಜಾಸ್ತಿಯಾಗುತ್ತದೆ. ತಾ|| ೧೬, ೧೬, ಸಾಧಾರಣ.

ಕುಂಭ—ಆರೋಗ್ಯ ಉತ್ತಮ. ವ್ಯವಹಾರಗಳಲ್ಲಿ ಉನ್ನತಿಯಿರುತ್ತದೆ. ಧನಾಯ ಚೆನ್ನಾಗಿರುತ್ತದೆ. ಪ್ರವಾಸ. ತಾ|| ೧೩, ೧೫, ೧೬ ಚಿಂತೆ. ಮನ್ನಣೆ.

ಮೀನ—ಆರೋಗ್ಯ ಚೆನ್ನಾಗಿರುತ್ತದೆ. ಕಿರುಕುಳ ಇದ್ದೇ ಇರುತ್ತದೆ. ಉದ್ಯೋಗ ವ್ಯವಹಾರಗಳಿಂದ ಮಿತ್ರ ಫಲ ಸಾಧಾರಣವಾಗಿರುತ್ತದೆ. ತಾ|| ೧೩, ೧೬ ಲಾಭ. ಪ್ರವಾಸ, ಸನ್ಮಾನ.

ಗಾಂಧಿಜಿಯವರ ತೂಕ ೫ ಪೌಂಡ್ ಇಳಿದಿದೆ

ಮಹಾತ್ಮ ಗಾಂಧಿಯವರು ಕಳೆದ ೧೦ ದಿನದಿಂದ ಅರ್ಧ ಉಪವಾಸ ವ್ರತವನ್ನು ಆರಂಭಿಸಿದ್ದಾರೆ. ತೂಕದಲ್ಲಿ ೫ ಪೌಂಡ್ ಇಳಿದು ಹೋಗಿದ್ದಾರೆ. ಆರೋಗ್ಯದ ಕಾರಣಕ್ಕಾಗಿ ಮೊದಲನೇ ೬ ದಿನ ಈ ರೀತಿ ಮಾಡಿದರು. ಅನಂತರ ಆತ್ಮಶುದ್ಧಿಗಾಗಿ ಅದನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಅವರು ಈಗ ಒಂದು ಲೋಟ ಎಳನೀರನ್ನು ದಿನಕ್ಕೆ ಎರಡು ಅಥವಾ ಮೂರು ಸಲ ತೆಗೆದುಕೊಳ್ಳುತ್ತಿದ್ದಾರೆ. ೧೦-೧೬ ಔನ್ಸ್ ನಿಂಬೇ ಹಣ್ಣಿನ ರಸ, ೩ ಔನ್ಸ್ ಗ್ಲೂಕೋಸ್, ೧ ಔನ್ಸ್ ಜೇನುತುಪ್ಪ ಮತ್ತು ಬಿಸಿ ನೀರು ಸೇವಿಸುತ್ತಿದ್ದಾರೆ. ಈ ಆಹಾರದಲ್ಲಿ ಸಾಕಾದಷ್ಟು ಪೌಷ್ಟಿಕಾಂಶಗ ಇಲ್ಲವೆಂದು ತಿಳಿದು ಬಂದಿದೆ.

ಒಂದೇ ಸಮಯದಲ್ಲಿ

ಯೂನೈಟೆಡ್ ಸ್ಟೇಟ್ಸಿನಲ್ಲಿ ಫ್ರಾನ್ಸಿಸ್ ಮತ್ತು ಯೂ ವ್ಯಾಂಡರ್ ಎಂಬ ಸಹೋದರಿಯರು ಪಾಲ್ ಮತ್ತು ಮಾರ್ಟಿನ್ ವಾರ್ಕ್ ಎಂಬ ಸಹೋದರರನ್ನು ಒಂದೇ ದಿನ ಮದುವೆಯಾದರು; ಒಂದು ವರ್ಷದ ನಂತರ ಒಂದೇ ದಿನದಲ್ಲಿ ಅವರಿಬ್ಬರೂ ಮಕ್ಕಳನ್ನು ಹೆತ್ತರು; ೯ ವರ್ಷಗಳ ನಂತರ ಇಬ್ಬರೂ ಒಂದೇ ದಿನ ಪುನಃ ಮಕ್ಕಳನ್ನು ಹೆತ್ತರು ಎಂದು ವರದಿಯಾಗಿದೆ.

(ಹಿಂದಿನ ಪುಟದಿಂದ ಮುಂದುವರಿದುದು)

ನಡೆಯಿಸಲು ಏರ್ಪಾಡುಗಳಾಗಿವೆ. ರೈಲು ಯೋ-ವಾಹನ ಸೌಕರ್ಯ—ಹಾಲಿನ ಸರಬರಾಜು-ಶಕ್ತಿಗೆಯ ಸರಬರಾಜು-ಮುಂತಾದ ಅಲೋಚಿತ ಮುಖ್ಯ ಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸಬೇಕಾಗಿದೆ. ಕಾಂಗ್ರೆಸ್ ಪಕ್ಷದ ಸದಸ್ಯರು ನಗರ ಸಂಚಾರ ಕಾಲದಲ್ಲಿ ಅಲ್ಲಲ್ಲಿಯ ನಿವಾಸಿಗಳ ಕೊರತೆಗಳನ್ನು ವಿಚಾರಿಸಿ ಅವುಗಳನ್ನು ನಿವಾರಿಸಲು ಕೈಗೊಂಡಿರುವ ಕ್ರಮವು ವಿಶೇಷ ಫಲಕಾರಿಯಾಗಿದೆ. ಇಂದು ಎಲ್ಲಾ ಮನೆಗಳಿಗೆ ಕಾಂಗ್ರೆಸ್ ಪಕ್ಷದ ಕಾರ್ಯಾಸಕ್ತಿ ಧುರೀಣರು ಕೋರಿ ಬಂದಿರುವ ಕಾರಣ ಈ ಪ್ರಜಾ ಸೇವಾ ಕಾರ್ಯಕ್ಕೆ ಈ ಬಾರಿಯ ಕಾಂಗ್ರೆಸ್ ಪಕ್ಷದ ಸದಸ್ಯರಿಗೆ ಜಯ ಗಳಿಸಿ ಕೊಟ್ಟು ಮಾನದಿಯ ಮೈಸೂರಿನ ಮಾದರಿಯ ಸೌಲಭ್ಯಗಳು ಜನತೆ ಮುಂದಿನ ಯುಗಗಳಲ್ಲಿ ಮುಂದುವರಿಯಲು ಧುರೀಣರು ಸಹಕರಿಸಲೆಂದು ನಾವು ಹಾರೈಸುತ್ತೇವೆ.

ಕಾಂ|| ಅಧ್ಯಕ್ಷರ ಆಗಮನ

ಮೈಸೂರು ೧೧

ಈ ದಿನ ಮಧ್ಯಾಹ್ನ ಒಂದು ಘಂಟೆಗೆ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ|| ಕೆ. ಚೆಂಗಲರಾಯ ರೆಡ್ಡಿಯವರೂ, ಮಾಜಿ ಅಧ್ಯಕ್ಷರಾದ ಶ್ರೀ|| ಎಸ್. ನಿಜಲಿಂಗಪ್ಪನವರೂ ಬೆಂಗಳೂರಿನಿಂದ ಇಲ್ಲಿಗೆ ಆಗಮಿಸಿದರು. ರೈಲ್ವೆ ನಿಲ್ದಾಣದಲ್ಲಿ ಅನೇಕ ಕಾಂಗ್ರೆಸ್ ಮುಖಂಡರುಗಳು ಅವರನ್ನು ಸ್ವಾಗತಿಸಿದರು. ಇದೇ ದಿನ ಅವರಿಬ್ಬರೂ ಸುಬ್ಬರಾಯನ ಕೆರೆ ಮೈದಾನದ ಬದಲು ಟೌನ್ ಹಾಲಿನಲ್ಲಿ ಭಾಷಣ ಮಾಡುವರು. ಸರ್ವರಿಗೂ ಸ್ವಾಗತವಿದೆ.

ವಿದ್ಯಾರ್ಥಿಗಳ ಸಭೆ

ನಾಳೆ ಸಂಜೆ ೬ ಘಂಟೆಗೆ ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ ಆಶ್ರಯದಲ್ಲಿ ಮೈ|| ಕಾಂ|| ಅಧ್ಯಕ್ಷರಾದ ಶ್ರೀ|| ಚೆಂಗಲರಾಯ ರೆಡ್ಡಿಯವರೂ, ಮಾಜಿ ಅಧ್ಯಕ್ಷರಾದ ಶ್ರೀ|| ನಿಜಲಿಂಗಪ್ಪನವರೂ ಟೌನ್ ಹಾಲಿನಲ್ಲಿ ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ ಮಾಡುವರು. ಸರ್ವರಿಗೂ ಸ್ವಾಗತವಿದೆ.

ಪರೀಕ್ಷಾ ಫಲಿತಾಂಶ

೧೯೪೬ ನೇ ಅಕ್ಟೋಬರಿನಲ್ಲಿ ನಡೆದ ಎಲ್. ಎಂ. ಪಿ. ಡಿಪ್ಲೊಮಾ ಪರೀಕ್ಷೆಯಲ್ಲಿ ಈ ಕೆಳಕಂಡ ರಿಜಿಸ್ಟರ್ ನಂಬರುಗಳವರು ತೇರ್ಗಡೆಯಾಗಿದ್ದಾರೆ:- ಮೊದಲನೇ ಪರೀಕ್ಷೆ- ಫಸ್ಟ್ ಕ್ಲಾಸ್ ೬; ಸೆಕೆಂಡ್ ಕ್ಲಾಸ್ ೧, ೩, ೫, ೭, ೮, ೯, ೧೦, ೧೧ ಮತ್ತು ೧೩, ಎರಡನೇ ಪರೀಕ್ಷೆ- ಫಸ್ಟ್ ಕ್ಲಾಸ್ ಇಲ್ಲ, ಸೆಕೆಂಡ್ ಕ್ಲಾಸ್ ೧, ೪, ೫, ೮, ೯, ೧೨, ೧೧, ೧೩, ೧೩, ೧೪, ೧೫, ೨೧, ೨೨, ೨೩, ೨೪, ೨೫ ಮತ್ತು ೨೬, ಮೂರನೇ ಪರೀಕ್ಷೆ- ಫಸ್ಟ್ ಕ್ಲಾಸ್ ಇಲ್ಲ, ಸೆಕೆಂಡ್ ಕ್ಲಾಸ್ ೩, ೪, ೬, ೮, ೧೬, ೧೫, ೧೯, ೨೦, ೨೬ ಮತ್ತು ೨೪. ಫೈನಲ್ ಪರೀಕ್ಷೆ- ಫಸ್ಟ್ ಕ್ಲಾಸ್ ಇಲ್ಲ. ಸೆಕೆಂಡ್ ಕ್ಲಾಸ್ ೨, ೩, ೪, ೬, ೭, ೧೦, ೧೧, ೧೨, ೧೪, ೧೫, ೧೬, ೧೮, ೨೦, ೨೧ ರ ತನಕ ೨೨.

ಅಪಹರಿಸಲ್ಪಟ್ಟ ಮಹಿಳೆ ಯರಿಗೆ ಭೀತಿ

ಮದಲಾಂತರಗೊಳಗಾಗಿ ಮುಸಲ್ಮಾನರ ಮನೆ ಸೇರಿರುವ ಹೆಂಗಸರು ತಮ್ಮ ನಿಜ ಸ್ಥಿತಿಯನ್ನು ಹೇಳುವುದಿಲ್ಲ. ನಿಜಸ್ಥಿತಿಯನ್ನು ಹೇಳಿದರೆ ತಮಗೆ ಅವರ ಮನೆಯವರೆಲ್ಲ ತೊಂದರೆ ಕೊಡುವರೆಂದು ಭಯಪಡುತ್ತಿದ್ದಾರೆ, ಘಟನೆಗಳು ಹೀಗೇ ಇರುವುದಾಗಿ ಸ್ಥಳದ ಅಧಿಕಾರಿಗಳಿಗೆ ತಿಳಿಯುತ್ತಿದ್ದಾರೆ.

ನಾಗಾರಾಣಿಯವರ ಬಿಡುಗಡೆ

ಅಸ್ಸಾಮಿನ ನಾಗ ಗುಡ್ಡಗಾಡಿನ ರಾಣಿಯವರಾದ ಗೈಡಿಲೋ ಎಂಬ ತರುಣಿಯು ಬ್ರಿಟಿಷ್ ಸರ್ಕಾರವನ್ನು ಎದುರಿಸಿದುದಕ್ಕಾಗಿ ೧೫ ವರ್ಷಗಳ ಕಾರಾಗೃಹ ವಾಸಕ್ಕೆ ಗುರಿಯಾಗಿದ್ದು ಕಾಂಗ್ರೆಸ್ ಮಂತ್ರಿಮಂಡಲವು ಬಂದೊಡನೆ ಖುಲಾಸೆ ಹೊಂದಿದ್ದರು. ಆದರೂ ಅಲ್ಲಿನ ಗವರ್ನರರು ಅವರ ಮೇಲೆ ಮತ್ತೆ ಪ್ರತಿಬಂಧಕದ ಆಜ್ಞೆಯನ್ನು ಜಾರಿ ಮಾಡಿದ್ದರು. ಈಗ ಕೇಂದ್ರ ಸರ್ಕಾರದವರ ಪ್ರಯತ್ನದ ಮೇಲೆ ಸದರಿ ಪ್ರತಿಬಂಧಕಗಳು ರದ್ದು ಮಾಡಲ್ಪಟ್ಟು ನಾಗಾರಾಣಿಯವರು ಬಂಧನ ವಿಮೋಚನೆ ಹೊಂದಲಿರುವರೆಂದು ವರದಿಯಾಗಿದೆ.

ಚಿನ್ನದ ಗಣಿಯಲ್ಲಿ ೫೬ ಜನರ ದಸ್ತಗಿರಿ

ಸ್ಪೆಷಲ್ ಫೋ|] ಬೆಂಗಳೂರು ೧೧

ಚಿನ್ನದ ಗಣಿಯಲ್ಲಿ ನಡೆದ ಘರ್ಷಣೆಯ ಫಲವಾಗಿ ೫೬ ಮಂದಿಯ ದಸ್ತಗಿರಿಯಾಗಿದೆ. ಇವರಲ್ಲಿ ೩ ಹೆಂಗಸರೂ ಸೇರಿದವರೂ ಇದ್ದಾರೆ. ಒಟ್ಟು ಇವರ ಮೇಲೆ ಹನ್ನೊಂದು ಮೊಕದ್ದಮೆಗಳನ್ನು ಹಾಕಲಾಗಿದೆ. ಇದಕ್ಕಾಗಿ ಒಬ್ಬ ಸ್ಪೆಷಲ್ ಮ್ಯಾಜಿಸ್ಟ್ರೇಟರನ್ನು ಸಹ ನೇಮಿಸಲಾಗಿದೆ.

ಸ್ಥ ಸರ್ಕಾರದವರು ಭಾರತ ರಕ್ಷಣಾ ಶಾಸನಕ್ಕೆ ಹೈ ಕೋರ್ಟಿನ ಪತಿಕೋಟೆ ಆಜ್ಞೆಯನ್ನು ಜಾರಿಗೆ ತರುವರು. ಇವರಿಂತ ಯಾವ ವ್ಯಾಪಾರಿಯೂ ಶೇ|| ೧೪ ಕ್ಕಿಂತ ಜಾಸ್ತಿಯಾಗಿ ಲಾಭ ಪಡೆಯಕೂಡದೆಂದು ಅದರಲ್ಲಿ ತಿಳಿಸುವರು.

* ಶಾಸನ ಸಭೆಯ ಅಧ್ಯಕ್ಷರು ಒಂದು ಪ್ರೆಸ್ ಗ್ಯಾಲರಿ ಸಮಿತಿಯನ್ನು ಏರ್ಪಡಿಸಿರುವರು. ಇದರಲ್ಲಿ ಶ್ರೀಯುತರಾದ ಎನ್. ಎಸ್. ವಿ. ಶಾಸ್ತ್ರಿ, ನಂಜುಂಡಯ್ಯ, ರಾಮಯ್ಯ, ಎಸ್. ಕೆ. ರಾಮಸ್ವಾಮಿ ಕಂಠಿ ಮತ್ತು ಪಿ. ಶಿವಶಂಕರ ಶಾಸ್ತ್ರಿಗಳು ಇರುವರು. ನ್ಯಾಯವಿಧಾಯಕ ಸಭೆಯ ಕಾರ್ಯದರ್ಶಿಯವರೇ ಈ ಸಮಿತಿಯ ಕಾರ್ಯದರ್ಶಿಗಳಾಗಿರುವರು.

ಸ್ಥ ನಿನ್ನೆಯ ದಿನ ಬೊಂಬಾಯ ಪ್ರಾಂತ ಸಭಾಧ್ಯಕ್ಷರಾದ ಶ್ರೀ|| ಕುಂದನಮಲ್ ಫಿರೋದಿಯಾರವರು, ಗ್ರಾಮ ಕೈಗಾರಿಕೆಯ ಪ್ರೋತ್ಸಾಹ, ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಯ ಅಗತ್ಯ ಮುಂತಾದ ವಿಷಯಗಳ ಬಗ್ಗೆ ಸಭಾ ನಗರದಲ್ಲಿ ಭಾಷಣ ಮಾಡುತ್ತಾ ತಿಳಿಸಿದರು.

ಕದನ ನಿಲ್ಲಿಸಲು ಆಜ್ಞೆ

ಚೀಣಾ ದ ನ್ಯಾಷನಲ್ ಅಸೆಂಬ್ಲಿಯ ಕಾರ್ಯನಿಯೋಜನೆ ನಡೆಯಬೇಕೆಂದು ಕಮ್ಯೂನಿಸ್ಟ್ ಸೇನೆಯ ವಿರುದ್ಧದ ಯುದ್ಧವನ್ನು ಜನರಲ್ ಚಿಯಾಂಗ್ ಕೈ ಶೇಕರು ಚೀಣೀ ಸೈನಿಕರಿಗೆ ಕದನ ನಿಲ್ಲಿಸಬೇಕೆಂದು ಆಜ್ಞೆ ಕೊಟ್ಟಿದ್ದಾರೆ.

ಹೆಣ್ಣುಮಕ್ಕಳು, ಹುಡುಗ ಮಕ್ಕಳು, ದನಗಳೆಲ್ಲಾ ಸಾವಿರದಂತೆ ಹೇಳಬೇಕಾಗಿದೆ, ಬಿಡುಗಡೆ ಮಾಡಲಾಗುತ್ತದೆ ಎಂದು ನಾಥುವ ವರ್ತಮಾನ ಪತ್ರ ಸಹಿಯಿರುವ ಮಿಸ್ ಮ್ಯೂರಿಯಲ್ ಲೆಸ್ಟರ್ ರವರು ತಿಳಿಸಿದ್ದಾರೆ.

ಸಾಧ್ವಿ

ತಾ॥ ೧೧-೧೧-೪೭ ಸೋಮವಾರ

ಕಾಂಗ್ರೆಸ್ಸಿಗೆ ಓಟು ಕೊಡು ವುದು-ಕರ್ತವ್ಯಶೀಲರ ಧರ್ಮ

ಮೈಸೂರು ನಗರದ ಪೌರಸಭೆಯ ಚು ನಾವಣೆಯು ೧೪-೧೧-೪೭ ನೆಯ ಗುರು ವಾರ ನಡೆಯುವುದೆಂದು ನಿಶ್ಚಿತವಾಗಿದೆ. ಈ ಸಂದರ್ಭದಲ್ಲಿ ವಿವಿಧಾಭಿಪ್ರಾಯಗಳು ಳ್ಳ ವಿವಿಧ ಸ್ವಭಾವದ ಜನರು ಪ್ರಜಾ ಪ್ರಾ ತಿನಿಧ್ಯವನ್ನು ನಿರ್ವಹಿಸಲು ತವಕಗೊಳ್ಳು ತ್ತಿದ್ದಾರೆ. ಕಾರ್ಯ ಸಾಧನೆಗಾಗಿ ತಮ್ಮ ಸ್ವಾರ್ಥ ತ್ಯಾಗವನ್ನೂ, ಪರಹಿತಾಕಾಂಕ್ಷೆ ಯನ್ನೂ ಉಗ್ಗಡಿಸುತ್ತಿದ್ದಾರೆ. ಇಷ್ಟೇ ಆ ದರೆ ಅದೊಂದು ಕ್ರಮವೆಂದು ಭಾವಿಸಬಹು ದು. ನಿಜವಾಗಿಯೂ ಕಾರ್ಯ ತತ್ಪರರಾ ಗಿ ಆತ್ಮಶುದ್ಧಿಯಿಂದ ವರ್ತಿಸುವವರನ್ನು ಮನಸ್ವಿಯಾಗಿ ನಿಂದಿಸುತ್ತ ಹೋಗುವುದೂ, ಅಲ್ಲದೆ ಸಲ್ಲದ ಅಪಲಾಪಗಳಿಂದ ಇತ ರರನ್ನು ಅಯೋಗ್ಯರೆಂದು ತೋರ್ಪಡಿಸುವು ದಕ್ಕೆ ಉದ್ಯಮಿಸಿರುವುದೂ ವಿವೇಕಿಗಳ ಲ ಕ್ಷಣವಲ್ಲವೆಂಬುದನ್ನು ಎಲ್ಲರೂ ಮನಗಂಡಿ ರುವರು.

ಪ್ರಕೃತದಲ್ಲಿ ಇಂದಿಗೆ ಆರು ವರ್ಷಗಳಿಂ ದಲೂ ಪೌರಸಭೆಯಲ್ಲಿ ಸ್ಥಾನವನ್ನು ಗಳಿ ಸಿ ಕಾರ್ಯ ನಿರ್ವಾಹ ಮಾಡಿದ ಕಾಂಗ್ರೆಸ್ ಪಕ್ಷವು ನಿರ್ವಹಿಸಿದ ಪ್ರಜಾಹಿತ ಕಾರ್ಯಗ ಳೇನು, ಇವು ಸ್ವಾರ್ಥ ಪ್ರೇರಿತವೇ, ದೇಶ ಹಿತ ಸಾಧಕವೇ? ಎಂಬುದನ್ನು ಮೊದಲು ಎಲ್ಲರೂ ಪರಿಶೀಲಿಸಬೇಕು. ಪೌರಸಭೆಗೆ ಇಂದು ಪ್ರತಿನಿಧಿಗಳಾಗಿ ಪ್ರವೇಶಿಸುವವರು ಬಡವರ ಹಿತೈಷಿಗಳಾಗಿರಬೇಕಲ್ಲದೆ ಬಡವ ರನ್ನು ತಮ್ಮ ಸೇವಕರೆಂದು ಭಾವಿಸುವವರ ಲ್ಲ. ಅಸಹಾಯಕರಿಗೆ ಬಂಧುಗಳಾಗಿರಬೇ ಕಲ್ಲದೆ ಅವರನ್ನು ತಿತ್ತು ತಿನ್ನುವವರಲ್ಲ. ಅಕ್ರಮಗಳನ್ನೂ ಪ್ರಗತಿ ವಿರೋಧ ಭಾವನೆ ಗಳನ್ನೂ ಮೆಚ್ಚಿ ನಡೆಯುವವರಲ್ಲದೆ ಅವು ಗಳನ್ನು ಮೆಚ್ಚಿ ಹೊಗಳುವವರಲ್ಲ. ಪ್ರಜೆ ಗಳ ಹಕ್ಕುಬಾಧ್ಯತೆಗಳನ್ನೂ, ಆಳರಸರ ಅ ಧಿಕಾರ ವರ್ಗದಿಂದ ಆಗಾಗ ಅವುಗಳಿಗೊದ ಗುವ ಅನರ್ಥಗಳನ್ನೂ ಅರಿತು. ಅಲ್ಪಸಿ ದುಂಬ್ಯಗೃಹಿಗಳಿಗೆ ಲಗಾಗಿ ಸಚಿವ ಪದವಿ ಗೇರಬೇಕೆಂದೋ ಸರ್ಕಾರದ ಸಹಾಯದಿಂ ದ ಅವರ್‍ಯಾಟ್ಯರ ಕನಸಿನ ಬಯಕೆಯನ್ನು ಸಾಧಿಸಿಕೊಳ್ಳಬೇಕೆಂದೋ ಹಂಬಲಿಸುವವ ರಲ್ಲ.

ನಾಮಕರಣ ಶಿರಾಗಳಂಗುವವರಲ್ಲಿ ಸಂ ಸ್ಥೆಗಳ ಶಿಸ್ತನ್ನು ಮೀರಿ ನಡೆದು ವಿಧಿ ವಿಹಿ ತವಾಗಿ ಧಿಕ್ಕರಿಸಲ್ಪಟ್ಟವರು ಆಗಾಗ ಹಾ ಕುವ ಪ್ರಸಾದದಿಂದ ಜನ್ಮಾ ಚಾಪಲ್ಯವ ನ್ನು ಕಳೆದುಕೊಂಡು- ಇವರ ವೇಷ, ಇವ ರ ರೂಪು, ಇವರ ನೋಟ, ಅವರ ಸಂಬಂ ಧನ, ಇವರು ಕಿವಿಮಾತ್ಯನ್ನು, ಅವರು ಸೀ ನ್ನು. ಮುಂತಾದ ಅಲ್ಪ ವಿಷಯಗಳನ್ನು ಅವೇ ಮಹತ್ವದವುಗಳೆಂದು ತಿಳಿದೋ ಲೇ ಖನವನ್ನಿತ್ತು, ಒಂದ ಸಾಮರ್ಥ್ಯವಿಲ್ಲದಿದ್ದ ರೂ ಕಾಲ್ಮೆಲೆ ಬರುವ ಸ್ವಭಾವದವರಲ್ಲ ಊರಿಗೆ ಅಪರಿಚಿತವಾದ ಲೇಖನ ವ್ಯಕ್ತಿ ಗೇ ಕೇವಲ ಪ್ರಾಯವಾದ ಯಾವುದೋ ಪತ್ರಿಕೆಯಲ್ಲಿ ಏನೋ ಬರೆಯುವವರಲ್ಲಿ ನ ಮ್ಮ ರಾಜಧಾನಿಯ ನಾಗರಿಕರೆಲ್ಲರೂ ಇಂ ತಹ ಕುಲಿ ಆರ್ಮವನ್ನು ಧರಿಸಿದ ಪಾಶ ವಾಚಾರಿಗಳನ್ನು ಚೆನ್ನಾಗಿ ಬಲ್ಲರಾದುದರಿಂ ದ ಅತಿ ವಿಸ್ತರವು ಅನಾವಶ್ಯಕ.

ಭಾರತದಲ್ಲಿ ಇಂದು ಕಾಂಗ್ರೆಸ್ ಸಂಸ್ಥೆ ಯು ಗಳಿಸಿರುವ ಘನತೆ, ಅದರಿಂದ ದೇಶ ಕ್ಕೆ ಉಂಟಾಗಿರುವ ಕೀರ್ತಿ, ಅಭ್ಯುದಯ- ಇವುಗಳು ಪ್ರಪಂಚದ ಸಕಲ ರಾಷ್ಟ್ರಗಳಲ್ಲಿ ಯೂ ಶ್ಲಾಘನೆಯನ್ನು ಪಡೆದಿವೆ. ನಿಜವಾ ಗಿಯೂ ಅಹಿಂಸಾ ತತ್ವದಲ್ಲಿ ಸಾರವುಂಟೆಂ ಬುದನ್ನು ಲೋಕದಲ್ಲೆಲ್ಲಾ ಸಾರುತ್ತಿ... ಧ್ಯೇಯ ಸಾಧನೆಗಾಗಿ ಅನೇಕರು ತಮ ... ನು, ಮನ, ಧನಗಳನ್ನೆಲ್ಲಾ ಬಲಿಗೈ... ರೆ. ಅವರಆ ಆತ್ಮವು ಸರ್ವ ವ್ಯಾಪಿ... ಹಗಲಿರುಳೂ ರಾಜಕಾರಣ ಪಟು... ಮಾರ್ಗದರ್ಶಕವಾಗಿದೆ ಈ ಸಂಗ... ನಮ್ಮ ಪ್ರಜಾ ಪ್ರತಿನಿಧಿ ಸಭೆ, ನ್ಯಾ... ಧಾಯಕ ಸಭೆ, ಪೌರ ಸಭೆ- ಮುಂತಾ... ಗಳ ಈ ವರೆಗಿನ ನಡವಳಿಕೆಗಳನ್ನು ... ಲಿಸಿರುವ ನಮಗೆಲ್ಲ ಮನವರಿಕೆಯಾಗಿ... ದೆಂದು ನಂಬಿದ್ದೇವೆ.

ಇದರ ಪರಿಣಾಮವಾಗಿ ರಾಜಧಾ... ಪೌರಸಭೆಯಲ್ಲಿ ಬಡ ವಿದ್ಯಾರ್ಥಿ... ಭೋಜನ ಸೌಕರ್ಯ, ನಿರ್ಗತಿಕರಿಗೆ... ರಿಗಗಳನ್ನು ಉಚಿತವಾಗಿ ಹಂಚು... ಜಾಡಮಾಲಿಗಳಿಗೆ ವಾಸ ಗೃಹಗಳ ... ದು, ಈರನಗೆರೆ, ಸರಸ್ವತಿಪುರ, ಮುಂ... ಡೆಗಳಲ್ಲಿ ಒಳಚರಂಡಿ ಮತ್ತು ಆಸ್ಪ... ನ್ನು ಕಲ್ಪಿಸಿರುವುದು, ಕುಡಿಯುವ ... ಅಭಾವವನ್ನು ತಪ್ಪಿಸಲು ಅಲ್ಲಲ್ಲಿ ... ಯರುಗಳನ್ನು ಕಟ್ಟಿಸಿರುವುದು, ಮತ... ಹ ಕೈಗಾರಿಕೆಗಳ ಪ್ರೋತ್ಸಾಹ ಮು... ವುಗಳು ಯಶಸ್ವಿಯಾಗಿ ನಡೆದು ಬರು... ವೆ. ಇನ್ನೂ ಜನಹಿತ ಕಾರ್ಯಗಳ... ನಂತವಾಗಿವೆ ಅವುಗಳನ್ನು ಕೈಗೊ...

(ಹಿಂದಿನ ಪುಟಕ್ಕೆ ಮುಂದುವರಿ...)

Edited, printed and publishe... A. R. Nagaraiac of the Sadhvi ... D-Subbiah Road, Mysore

ಜಾತಿಮನಾಗ್ರಾಜ ನೊದಲ್ಲಾ ಮಹನೀಯರಲ್ಲಿ ವಿನಂತಿ

ಮೋಟಾರು ಗಾರ್ಡ್ಸ್ ನಲ್ಲಿ ಹೆಸರಿಗ ... ಧನವಾದ ಒಂದು ಓಟನ್ನು ದಯ ಮಾಡಿ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಡಿ. ಸುಮಿತ್ರ

ಬಿ ಎ ಬಿ ಎಲ್, ಎಂ ಇಡಿ
ಪ್ರಿನ್ಸಿಪಾಲ್, ವಿ ನ್ ಟ್ರೈನಿಂಗ್
ಮೈಸೂರು

॥ ವಂದೇಮಾತರಂ ॥

ಮೈಸೂರು ನಗರದ ಹೆಮ್ಮೆ

ನೂರಕ್ಕೆ ನೂರರಷ್ಟು ಕಾಂಗ್ರೆಸ್ ವಿಜಯ!

*ಕಳೆದ ಆರು ವರ್ಷಗಳಿಂದ ಮೈಸೂರು ನಗರ ನಿವಾಸಿಗಳು ಪೌರಸಭೆಗೆ ಎಲ್ಲಾ ಕಾಂಗ್ರೆಸ್ ಪ್ರತಿನಿಧಿಗಳನ್ನೂ ಆರಿಸಿ ಕಳುಹಿಸಿದ್ದಾರೆ.

* ಇದನ್ನು ಕಂಡು ಮಹಾತ್ಮ ಗಾಂಧಿಯವರೂ, ರಾಷ್ಟ್ರ ನಾಯಕರೂ ಮುಗ್ಧರಾಗಿ ಮೈಸೂರನ್ನು ಕೊಂಡಾಡಿದ್ದಾರೆ.

* ಇಪ್ಪತ್ತುನಾಲ್ಕು ಜನ ಕಾಂಗ್ರೆಸ್ ಉಮೇದುವಾರರಿಗೂ ಅಖಂಡ ವಿಜಯವನ್ನು ದೊರಕಿಸಿ ಕೊಟ್ಟಿರುವುದು ಇತಿಹಾಸದಲ್ಲೇ ಅಪೂರ್ವವಾದ ಹೆಮ್ಮೆಯ ಸಂಗತಿ.

* ಈ ಸಾರಿ ಪೌರಸಭಾ ಚುನಾವಣೆಯಲ್ಲಿಯೂ ಮೈಸೂರು ತನ್ನ ಅದ್ಭುತ ಕಾಂಗ್ರೆಸ್ ಪ್ರೇಮವನ್ನು ಪ್ರದರ್ಶಿಸಲಿ!

ಜೈ ಹಿಂದ್!



ಕೆ. ಎಸ್. ರಾಮಯ್ಯ
ಬ್ರಾಂಚ್ ಮ್ಯಾನೇಜರ್
ಕೆಂಪೇಗೌಡ ರಸ್ತೆ, : ಬೆಂಗಳೂರು ಸಿಟಿ
[ವಿಜಯಾ ಏಜನ್ಸೀಸ್ ಮೈಸೂರು]

ಉಜ್ವಲ ಸತೀತ್ವಕ್ಕೆ

ಪಂಡಿತ ಡಿ. ಗೋಪಾಲಾಚಾರ್ಲು...
ಅಶೋ...
ಗರ್ಭಾಶಯರೋಗ ನಿವಾ...

ಆರ್ಯುವೇದಾಶ್ರಮಂ ಲಿಮಿಟೆ...
ಟಿ-ನಗರ್, ... ಮದರಾಸ್

ಫೋ. ನಂ. 392   ॥ ವಂದೇ ಮಾತರಂ ॥   ಇಂದಿನ ಪತ್ರಿಕೆ 3 ಕಾಸು

ಸಂಪುಟ ೫]   ಮಂಗಳವಾರ ೧೨—೧೧—೪೬   [ಸಂಚಿಕೆ ೮೭

ಬಿಹಾರಿಗೆ ಹೊರಗಿನ ಮುಸ್ಲಿಮರ ಪ್ರವಾಹ

ಚುನಾವಣಾ ವಿಚಾರ

ಮೈಸೂರು ಮಹಾತ್ಮಾ ಯಳಾಸಿಯನ್ನಿ ... ಕಾರ್ಯದರ್ಶಿಗಳು ಚುನಾವಣಾ ವಿ ... ದವಲ್ಲಿ ಒಂದು ಪತ್ರವನ್ನು ಬರೆದು, ಅ ... ಲ್ಲಿ ಕೆಳಗೆ ಕಂಡ ಕೆಲವು ಅಂಶಗಳನ್ನು ... ಚಿಸಿ ಕಾಂಗ್ರೆಸ್ಸಿಗೇ ಓಟು ಕೊಡಬೇಕೆಂ ಕೋರಿದ್ದಾರೆ:—ನಗರ ನೈರ್ಮಲ್ಯ, ... ರೋಗ ಜಾಡ್ಯಗಳ ನಿವಾರಣೆ, ಆಹಾರಾ ... ದ ಸಂಹಾರ ದಿನದಿನಕ್ಕೆ ಹೆಚ್ಚುತ್ತಿರು ... ಜನ ಸಂಖ್ಯೆಗೆ ತಕ್ಕಂತೆ ಮನೆಗಳನ್ನು ಒ ... ಪ್ಪಡು, ಹಾಲು ಮತ್ತು ಸೌದೆ ಸರಬ ... ರಾ, ನೀರಿನ ವ್ಯವಸ್ಥೆ, ವಿದ್ಯಾಭ್ಯಾಸದ ... ವೃದ್ಧಿ ಮುಂತಾದ ಕಾರ್ಯಕ್ರಮ ... ವನ್ನು ನಡೆಸಬೇಕಾದರೆ ಶಿಸ್ತಿನಿಂದ ಕೂ ... ಕಾಂಗ್ರೆಸ್ಸಿನಿಂದಲೇ ಸಾಧ್ಯ. ಮೇ ... ದ ಕಾರ್ಯಕ್ರಮಗಳನ್ನು ಆಳಿದ ಅರು ... ಗಳಿಂದ ಕಾಂಗ್ರೆಸ್ ಸದಸ್ಯರು ಯಶ ... ಸ್ವಿಯಾಗಿ ನಡೆಸಿಕೊಂಡು ಬಂದಿರುತ್ತಾರೆ ... ಆದುದರಿಂದ ಕಾಂಗ್ರೆಸ್ ಉಮೇದುವಾರ ... ಓಟು ಕೊಡಬೇಕೆಂದು ಪುರನಿವಾಸಿಗ ... ಅವರು ಪ್ರಾರ್ಥಿಸಿದ್ದಾರೆ.

... ತ್ಯಾಗರಾಜ ರಸ್ತೆಯಲ್ಲಿರುವ ಶ್ರೀ ಕೆ. ಸು ... ಎನ್. ಎಂಬುವರು ಬರೆದ ಒಂದು ಪ ... ಲ್ಲಿ ಕಾಂಗ್ರೆಸ್ಸಿಗೆ ಎದುರಾಗಿ ನಿಂತವರು ... ಚುನಾವಣಾ ಪ್ರಚಾರ ಕಾಲದಲ್ಲಿ ಕಾಂಗ್ರೆ ... ಬಗ್ಗೆ ಮಾಡುತ್ತಿರುವ ಅಪಪ್ರಚಾರ ... ಖಂಡಿಸಿದ್ದಾರೆ. ಪ್ರಜಾ ವಿಶ್ವಾಸವ ... ಪಡೆದು ನಿರ್ದಿಷ್ಟ ಧ್ಯೇಯವನ್ನು ಸಾ ... ವ ಸಂಸ್ಥೆ ಕಾಂಗ್ರೆಸ್ಸು. ಆ ಸಂಸ್ಥೆ ... ವ್ಯಕ್ತಿಗಳನ್ನು ಪ್ರಭಾವ ಕಾರ್ಯಕ್ಕಾಗಿ ... ಹೊರಿಸುವ ಇಲ್ಲದ ಆರೋಪಣೆಗಳನ್ನು ... ನಂಬುವ ತರವಲ್ಲವೆಂದು ಸೂಚಿಸಿದ್ದಾ ... ಇವುಗಳನ್ನು ಬದಿಗಿಟ್ಟು ಯೋಚಿಸಿ ... ತ ಓಟನ್ನು ... ಬೇಕೆಂದೂ ... ಜನಪ್ರತಿನಿಧಿ ಸಂಸ್ಥೆಯಾದ ಕಾಂಗ್ರೆಸ್ಸಿ ... ಉಮೇದುವಾರರಿಗೇ ಜಯಗಳಿಸಿಕೊಡ ... ಎಂದು ಓಟರುಗಳನ್ನು ಕೋರಿದ್ದಾರೆ. ... ಈ ಬಗೆಯಾಗಿ ಅನೇಕ ಪತ್ರಗಳು ... ಬಂದಿವೆ.

ಮಂಡಿ ಮೊಹಲ್ಲಾ ಸಭೆ

... ಬೇರೆ ವಿಚಾರವಾಗಿ ನೆನ್ನೆ ನ ... ಪತ್ರಿಕೆಯಲ್ಲಿ ಪ್ರಕಟವಾಗಿರುವ ಬಗ್ಗೆ ... ಟಿ. ಎಸ್. ರಾಜಗೋಪಾಲಯ್ಯಂಗಾ ... ನಮಗೆ ಒಂದು ಪತ್ರ ಬರೆದಿದ್ದಾರೆ. ... ಜಿನ್ನಾರವರ ವಿಚಾರವಾಗಿಯೂ ... ಅಥವಾ ಮುಸ್ಲಿಂಲೀಗಿನ ವಿಚಾರವಾ ... ಗಲೀ ಯಾವ ಬಗೆಯಾಗಿಯೂ ... ಸಲಿಲ್ಲವೆಂದು ತಿಳಿಸಿರುತ್ತಾರೆ. ಚು ... ಈ ಸಂದರ್ಭದಲ್ಲಿ ತಾಟಸ್ಥ್ಯದಿಂದಿರು ... ದುಂಟಾಗುವ ದುಷ್ಪರಿಣಾಮಗಳ ... ವರಿಸುತ್ತಿದ್ದಾಗ ಸಭೆಯಲ್ಲಿದ್ದವರಲ್ಲಿ ... ಮುಸ್ಲಿಂ ಸದಸ್ಯರು ಮಧ್ಯೆ ಕೆಲವು ... ಗಳನ್ನು ಕೇಳಿದರೆಂದೂ, ಆಗ ಹಾಜರಿ ... ಇದ್ದ ಸದಸ್ಯರೂ ಮತ್ತು ... ಇನ್ಸ್‌ಪೆಕ್ಟರೂ ಸಹ ಪ್ರಶ್ನಿಸಿದವ ... ಹಾಗೆ ಪ್ರಶ್ನೆ ಪ್ರಸ್ತಾಪಿಸಬಾರದೆಂ ... ಸಮಿತ್ತ ಮೇಲೆ ಅವರುಗಳು ಸು ... ಮ್ಮನಾದ ಅನಂತರ ಸಭೆ ಮುಂದು ... ದೆಂದೂ ತಿಳಿಸಿರುತ್ತಾರೆ.

ಮಹಾಶ್ಮೀತ್ಸ ನಿಷೇಧ

... ನಗರದಲ್ಲಿ ಒಮ್ಮತ್ತೊಮ್ಮೆ ... ಸ್ಥಾನವು ಗವರ್ನರನ ... ವಿನಿ ... ಪ್ರಾಂತದಲ್ಲಿ ... ಬಂದಿದೆ.

ಕೆಟ್ಟ ಪೂಜಾರಿಗಾಗಿ ದೇವಾಲಯದ ನಾಶವೇ ?

ಚುನಾವಣಾ ಪ್ರಚಾರ ಸಭೆಯಲ್ಲಿ ನಿಜಲಿಂಗಪ್ಪನವರ ಭಾಷಣ

ಮೈಸೂರು ೧೨

ಮೈಸೂರು ನಗರದ ನಿವಾಸಿಗಳು ಏಕೀಭವಾದ ತ್ಯಾಗ ಮತ್ತು ಸೇವೆಗಳನ್ನು ಸಲ್ಲಿಸಿ ಕಾಂಗ್ರೆಸ್ ಉಮೇದುವಾರರಿಗೆ ಅಖಂಡ ವಿಜಯವನ್ನು ಗಳಿಸಿ ಕೊಟ್ಟಿರುತ್ತಾರೆ. ಬರಲಿರುವ ಪೌರ ಚುನಾವಣೆಯಲ್ಲಿ ಕಾಂಗ್ರೆಸ್ಸಿನವರಿಗೇ ಓಟು ಕೊಡಬೇಕೆಂದು ಇಲ್ಲಿನ ನಿವಾಸಿಗಳನ್ನು ಕೇಳುವುದು ಬೆಟ್ಟಕ್ಕೆ ಕಲ್ಲು ಹೊತ್ತಂತೆಯೇ ಸರಿ. ಆದರೆ ಕೆಲ ಕೆಲವರ ಅಪಪ್ರಚಾರದಿಂದ ಸಾರ್ವಜನಿಕರಲ್ಲಿ ಭಿನ್ನಾಭಿಪ್ರಾಯವುಂಟಾಗಲು ಅವಕಾಶವಾಗಿರುತ್ತದೆ. ಇದನ್ನು ಗಮನಿಸಬೇಕಾಗಿದೆ. ಅಪಾರವಾದ ತ್ಯಾಗ ಮತ್ತು ಸೇವೆಗಳಿಂದ ಕಟ್ಟಲಾಗಿರುವ ಪವಿತ್ರ ಸಂಸ್ಥೆ ಕಾಂಗ್ರೆಸ್ಸು ಭಾರತ ಮಾತೆಯನ್ನು ಪ್ರತಿಷ್ಠಿಸಲಾಗಿರುವ ಪರಿಶುದ್ಧವಾದ ದೇವಾಲಯ. ಅದರಲ್ಲಿ ಕೆಟ್ಟ ಪೂಜಾರಿಗಳು ಆಗಾಗ್ಗೆ ಸೇರಬಹುದು. ಅಂದ ಮಾತ್ರಕ್ಕೆ ದೇವಾಲಯವನ್ನೂ, ದೇವರನ್ನೂ ತ್ಯಜಿಸುವುದು ಸರಿಯೇ ಎಂಬ ಪ್ರಶ್ನೆಯನ್ನು ಮೈಸೂರು ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪನವರು ನೆನ್ನೆ ಟೌನ್‌ಹಾಲಿನಲ್ಲಿ ನಡೆದ ಚುನಾವಣಾ ಸಭೆಯಲ್ಲಿ ಎತ್ತಿದರು.

ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಚಂಗಲರಾಯರೆಡ್ಡಿಯವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಇಬ್ಬರು ನಾಗರಿಕರನ್ನೂ ಸ್ವಾಗತಿಸಿ ಶ್ರೀ ಎಸ್. ಚನ್ನಯ್ಯನವರು ಮೊದಲು ಭಾಷಣ ಮಾಡಿದರು.

ಅಧ್ಯಕ್ಷ ಶ್ರೀ ರೆಡ್ಡಿಯವರು ಮಾತನಾಡಿ ಮೈಸೂರು ಸಂಸ್ಥಾನದಲ್ಲಿ ಪ್ರಗತಿಗೆ ಅಡ್ಡಿ ಆತಂಕಗಳು ಬಹಳವಾಗಿವೆಯೆಂದೂ, ಇದಕ್ಕೆ ಸರ್ಕಾರಿ ಅಧಿಕಾರಿ ವರ್ಗದವರು ಬಹುಮಟ್ಟಿಗೆ ಕಾರಣರೆಂದೂ ಹೇಳಿದರು. ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಶಾಸನಬದ್ಧವಾದ ಮಾರ್ಗಗಳನ್ನೆಲ್ಲಾ ಅನುಸರಿಸಿದ್ದಾಗಿದೆ, ಅದರಿಂದ ಏನೂ ಫಲ ದೊರೆಯುತ್ತೆಂದು ಬರುವುದಿಲ್ಲ. ಇನ್ನು ನಮ್ಮ ಮುಂದಿರುವ ಗಂಭೀರವಾದ ಹೋರಾಟವೇ ಆಗಿದೆ. ಇದಕ್ಕೆ ಜನತೆಯಲ್ಲಿ ಬಲ ಅವಶ್ಯಕ ... ಪುರಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದುವಾರರನ್ನು ಜಯಶೀಲರನ್ನಾಗಿ ಮಾಡುವಂತೆ ಮಾತನಾಡಿದ ಸಾರ್ವಜನಿಕರ ಜವಾಬ್ದಾರಿಯೆಂದು ... ದರು

ಗಲಭೆಗಳ ಹಿಂದೆ ಬ್ರಿಟಿಷ್ ಕೈವಾಡ ?

ಕೋಮುವಾರು ಗಲಭೆಗಳನ್ನು ಕುರಿತು ಗಡಿನಾಡಿನ ಗಾಂಧಿ ಅಬ್ದುಲ್ ಗಫಾರ್‌ಖಾನರು ಒಂದು ಹೇಳಿಕೆಯಿತ್ತಿದ್ದಾರೆ. ಇತರ ಕೋಮುಗಳವರನ್ನು ಸೋದರರಂತೆ ಭಾವಿಸುವುದೇ ಇಸ್ಲಾಂ ಮತದ ಧರ್ಮ; ಕೆಲವರು ತಮ್ಮ ಸ್ವಾರ್ಥ ಸಾಧನೆಗಾಗಿ ಧರ್ಮವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ದೇಶದಲ್ಲಿ ನಡೆಯುತ್ತಿರುವ ಕೋಮುವಾರು ಭಾವನೆಗಳ ಹಿಂದೆ ಬ್ರಿಟಿಷರ ಕೈವಾಡವಿದೆಯೆಂದು ಸಂದೇಹಪಡಬೇಕಾಗಿದೆ. ಬ್ರಿಟಿಷರ ಕೈಯಿಂದ ಭಾರತದ ಅಧಿಕಾರವನ್ನು ಕಿತ್ತುಕೊಳ್ಳುವುದೇ ದೇಶದ ಶಾಂತಿಸ್ಥಾಪನೆಗೆ ಸರಿಯಾದ ಮಾರ್ಗ ಎಂದು ಹೇಳುತ್ತಾರೆ.

ಒತ್ತಾಯದ ಮಿಲಿಟರಿ ಶಿಕ್ಷಣ

೧೮ ರಿಂದ ೩೦ ವರ್ಷ ವಯಸ್ಸಿನೊಳಗಿನ ಆರೋಗ್ಯವಂತರಾದ ಯುವಕರಿಗೆ ಒತ್ತಾಯವಾಗಿ ಮಿಲಿಟರಿ ಶಿಕ್ಷಣವನ್ನು ಕೊಡಬೇಕೆಂಬ ಸುಕೀರ್ ರಾಜಾ ಚೌಧರಿಯವರ ಗೊತ್ತುವಳಿಯನ್ನು ಕೇಂದ್ರ ಶಾಸನಸಭೆಯಲ್ಲಿ ಮಂಡಿಸಲು ಅಧ್ಯಕ್ಷರ ಅನುಮತಿ ದೊರೆತಿದೆಯೆಂದು ವರದಿಯಾಗಿದೆ.

ಪೌರಸಭೆಯ ಕಾರ್ಯ ಸಾಧನೆ

ಪತ್ರಿಕೋದ್ಯೋಗಿಗಳಾದ ಶ್ರೀ ಎನ್. ಎಸ್. ಶಾಸ್ತ್ರಿಗಳು ಮೇಲ್ಕಂಡ ವಿಚಾರವಾಗಿ ನಮಗೆ ಒಂದು ದೀರ್ಘವಾದ ಪತ್ರವನ್ನು ಬರೆದು ಕಸದ ತೊಟ್ಟಿಗಳು, ಸೌದೆ ಸರಬರಾಜು, ಹಾಲು ಮೊಸರಿನ ಕಲಬೆರಕೆ, ನೀರು ಸರಬರಾಜಿನ ವ್ಯವಸ್ಥೆ-ಇವೇ ಮುಂತಾದ ವಿಷಯಗಳಲ್ಲಿ ಹಲವು ಅಂತೆ ಅಂಶಗಳನ್ನು ಕೇಳಿರುವರು. ಇವುಗಳನ್ನು ಅವರು ಪೌರಸಭೆಯ ಕಛೇರಿಯಿಂದ ಸುಲಭವಾಗಿ ತಿಳಿದುಕೊಳ್ಳಬಹುದೆಂದು ಸೂಚಿಸುತ್ತೇವೆ.

ಸೇನಾಪತಿಗಳ ಉಪದೇಶ

ಖಾಯಿಷೆ ಉಕ್ತಿ ವಿರೋಧ

ಹಿರಿಸ್ಸಾಪ್ರಾಂತ್ಯದ ಉತ್ಕಲ ವಿಶ್ವವಿದ್ಯಾ ನಿಲಯದ ಘಟಿಕೋತ್ಸವದಲ್ಲಿ ಉಪದೇಶ ಭಾಷಣಮಾಡಲು ಭಾರತದ ಸೇನಾಪತಿ ... ನವರನ್ನು ... ವಿರೋಧಿಸಿದ್ದಾರೆ. ಅದರಿಂದ ಘಟಿಕೋತ್ಸವವನ್ನು ... ಪ್ರಕಟಿಸಲಾಗಿದೆ

ಬಿಹಾರ್ ಪ್ರಾಂತ್ಯದೊಳಕ್ಕೆ ಮುಸ್ಲಿಮರ ಪ್ರವಾಹ

ಬಿಹಾರ್ ಪ್ರಾಂತ್ಯದೊಳಕ್ಕೆ ಹೊರಗಿನಿಂದ ಮುಸ್ಲಿಮರು ಅಸಂಖ್ಯಾತರಾಗಿ ಬರುತ್ತಿದ್ದಾರೆಂದೂ, ಇದರಿಂದ ಶಾಂತಿಗೆ ಭಂಗ ಬರುವುದು ಖಂಡಿತವೆಂದೂ ಹಲವು ಪ್ರಮುಖರು ಗವರ್ನರ್ ಮತ್ತು ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡಿದ್ದಾರೆ. ... ಮಾಡಿಕರನಾಗಿ ಗಯಾ ಮತ್ತು ಪಾಟ್ನಾ ಜಿಲ್ಲೆಯ ರೈತರ ದಸ್ತಗಿರಿಯಾಗಿರುವುದರಿಂದ ಕಟಾವಿಗೆ ತೊಂದರೆಯಾಗಿ ಆಹಾರದ ಕೊರತೆ ಉಂಟಾಗಬಹುದೆಂದೂ ಜನರು ಎಚ್ಚರಿಕೆ ಕೊಟ್ಟಿದ್ದಾರೆ.

ಕೋಯಮುತ್ತೂರಿನಲ್ಲಿ ಗುಂಡಿನೇಟು

ಕೊಯಮುತ್ತೂರಿನ ಪತ್ತಿಗಿರಣಿಯೊಂದರ ಬಳಿ ಕಾಂಗ್ರೆಸ್ ಮತ್ತು ಕಮ್ಯೂನಿಸ್ಟ್ ಕೂಲಿಗಾರರಿಗೆ ಹೊಡೆದಾಟವಾಗಿ ಪೋಲೀಸರು ಮಧ್ಯೆ ಪ್ರವೇಶಿಸಿ ಗುಂಡುಹಾರಿಸಬೇಕಾಯಿತೆಂದೂ ಇದರ ಫಲವಾಗಿ ಆ ಮಂದಿ ಸತ್ತರು ೩೦ ಮಂದಿ ಗಾಯಗೊಂಡಿದ್ದಾರೆಂದೂ ವರದಿಯಾಗಿದೆ.

ರಕ್ಷಣಾ ಸಮಿತಿ

ಅಖಿಲ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರ ... ದುಷ್ಕೃತ್ಯಗಳಿಗೀಡಾದ ಪ್ರದೇಶಗಳಲ್ಲಿನ ಜನರಿಗೆ ಸಹಾಯ ನೀಡುವ ಸಲುವಾಗಿ ... ಸಮಿತಿಯೊಂದು ರಚಿತವಾಗಿದೆ.

ಕಾಂಗ್ರೆಸ್ ಅಧಿವೇಶನ

ಈ ಸಲದ ಅಧಿವೇಶನಕ್ಕೆ ... ಸಂಸ್ಥಾನಗಳ ಪ್ರತಿನಿಧಿಗಳೂ, ... ಸಂಘ ... ನಾಗರೀಕ ಸಂಘ ಮತ್ತು ... ನಿಮಂತ್ರಣ ಕಳುಹಿಸಲಾಗಿದೆ ...

ಮೀರತ್ತಿನಲ್ಲಿ ಗುಂಡಿನೇಟು

ಮೀರತ್ತಿನ ವಾತಾವರಣ ಇನ್ನೂ ಬಿಗಿಯಾಗಿಯೇ ಇದೆ. ... ಪೋಲೀಸ್ ಪಡೆಗಳಿಂದ ... ಮಿಲಿಟರಿಯವರು ... ಗುಂಡುಹಾರಿಸಿದರು. ಗಲಭೆ ... ಕಾಂಗ್ರೆಸ್ ಅಧಿವೇಶನ ಮಂಟಪದ ... ಭಾಗವನ್ನು ... ತಿಳಿದುಬಂದಿದೆ.

ನೌಖಾಲಿಯಲ್ಲಿ ಸ್ಥಿತಿ ಚಿಂತಾಜನಕವಾಗಿದೆ

ಪೀಡಿತ ಪ್ರದೇಶದ ... ಸ್ಥಿತಿ ಕೆಡುತ್ತಿದೆಯೆಂದೂ, ... ನಿರಾಶ್ರಿತರು ... ಹಿಂದಿರುಗಿದ ... ಗಾಂಧೀಜಿಯವರ ... "ರಾಮ್" "ರಹೀಂ" ಎಂದು ... ಮಾಡುತ್ತಿರುವರೆಂದು ... ದು ಬಂದಿದೆ.

ನಾನೂ ಗಾಂಧಿ

... ಗಾಂಧಿ ... ಸ್ವಾತಂತ್ರ್ಯ ... ದಲ್ಲಿ ... ವನ್ನು ... ತಿಳಿಸಿದ್ದಾರೆ

ಸಾಧ್ವಿ

ತಾ|| ೧೨-೧೧-೪೬ ಮಂಗಳವಾರ

ಜನೋಪಕಾರ ಕಾರ್ಯಗಳು

ರಾಜಧಾನಿಯಲ್ಲಿ ಹತ್ತು ವರ್ಷಗಳ ಹಿಂದೆ ಮಾರ್ಕೆಟ್ ಪ್ರದರ್ಶನವು ನಡೆಯುತ್ತಿತ್ತು. ಈಚೆಗೆ ಅದನ್ನು ಪುನರುಜ್ಜೀವನಗೊಳಿಸಲಾಗಿದೆ. ಕಳೆದ ವರ್ಷವೂ, ಈ ವರ್ಷವೂ ಈ ಪ್ರದರ್ಶನವು ಯಶಸ್ವಿಯಾಗಿ ಜರುಗಿತು.

ಟಾಂಗಾ ಮತ್ತು ಕುದುರೆಗಳ ಪ್ರದರ್ಶನವನ್ನೂ ಸಹ ನಡೆಸಿ ಅವುಗಳಲ್ಲಿ ಉತ್ತಮವಾದವುಗಳಿಗೆ ಬಹುಮಾನವನ್ನು ಕೊಡುವ ಪದ್ಧತಿಯು ಈಚೆಗೆ ಜಾರಿಯಲ್ಲಿ ಬಂದಿದೆ; ಅಲ್ಲದೆ ಟಾಂಗಾ ಗಾಡಿಗಳ ಬಾಡಿಗೆ ದರವನ್ನೂ ನಿಗದಿ ಮಾಡಿ ಅವುಗಳನ್ನು ಹತೋಟಿಯಲ್ಲಿಡಲಾಗಿದೆ

ಹೋಟೆಲುಗಳಲ್ಲಿ ವಿಶೇಷವಾಗಿ ವ್ಯಯವಾಗುವ ಹಾಲನ್ನು ಮಕ್ಕಳ ಮತ್ತು ಮನೆಯವರ ಉಪಯೋಗಕ್ಕೆ ದೊರಕಿಸಲು, ಹಾಲಿನಿಂದ ಆಗುವ ತಿಂಡಿ ಪದಾರ್ಥಗಳನ್ನು ತಪ್ಪಿಸಲಾಗಿದೆ; ಮತ್ತು ಹೋಟೆಲುಗಳ ಕಾಲವನ್ನು ನಿಗದಿ ಮಾಡಿರುವುದರಿಂದ ಸಾರ್ವಜನಿಕರಿಗೆ ಹಾಲು, ಮೊಸರು ಮತ್ತು ಇತರ ಪದಾರ್ಥಗಳು ಸುಲಭವಾಗಿ ದೊರೆಯುವಂತೆ ಆಗಿದೆ.

ಮಕ್ಕಳ ಶಿಕ್ಷಣವು, ಪೌರಸಭೆಯು ನಡೆಸುತ್ತಿರುವ ಕಾರ್ಯಗಳಲ್ಲಿ ಅತ್ಯಂತ ಮಹತ್ತರವಾದುದು. ಈಗ ಸಂಸ್ಥಾನದಲ್ಲೆಲ್ಲಾ ವ್ಯಾಪಿಸಿರುವ ಅಕ್ಷರಪ್ರಚಾರ ಕಾರ್ಯಕ್ರಮಕ್ಕೆ ಆಸ್ತಿಭಾರ ಹಾಕಿದವರು ಮೈಸೂರು ಪೌರಸಭೆಯವರೇ. ನಿರಕ್ಷರತೆಯ ನಿವಾರಣೆಗಾಗಿ ಕೈಗೊಂಡಿರುವ ಈ ಕಾರ್ಯವು ಪೌರಸಭೆಗೆ ಅತ್ಯಂತ ಹೆಮ್ಮೆಯನ್ನುಂಟುಮಾಡುತ್ತದೆ

ಅನೇಕ ವರ್ಷಗಳಿಂದ ಸಣ್ಣ ಸಣ್ಣ ಗಲ್ಲಿಗಳ ರಸ್ತೆಗಳ ದುರಸ್ತಿಗೆ ಗಮನವನ್ನು ಕೊಟ್ಟಿರಲಿಲ್ಲ. ಈಗ ಅವುಗಳಿಗೆ ವಿಶೇಷ ಗಮನ ಕೊಟ್ಟು ಸಣ್ಣ ಪುಟ್ಟ ರಸ್ತೆಗಳನ್ನು ಕ್ರಮ ಪಡಿಸಲಾಗುತ್ತಿದೆ

ನಗರದಲ್ಲಿ ಆಹಾರದ ಅಭಾವವು ತಲೆದೋರಿದಾಗ ವಿಶೇಷ ಸಭೆಗಳನ್ನು ನಡೆಸಿ ಸರ್ಕಾರದವರಿಂದ ಪಡಿತರ ಮತ್ತು ಧಾನ್ಯಗಳ ಡಿಪೋ ವ್ಯವಸ್ಥೆ ಮತ್ತು ಹೆಚ್ಚು ಪ್ರಮಾಣದಲ್ಲಿ ಆಹಾರ ಪದಾರ್ಥಗಳನ್ನು ಒದಗಿಸುವುದು, ಬೆಲೆಗಳನ್ನು ನಿಗದಿ ಮಾಡಿಸುವುದು, ಇವೇ ಮುಂತಾದ ಕಾರ್ಯಗಳನ್ನು ಕೈಗೊಳ್ಳಲಾಗಿದೆ.

ನಗರದಲ್ಲಿ ರೂ. ೧ ಕ್ಕೆ ಏರಿಸಲಾಗಿರುವ ವಿದ್ಯಾಭ್ಯಾಸದ ತೆರಿಗೆಯನ್ನು ಸರ್ಕಾರದವರು ಹೇರಲು ಯತ್ನಿಸಿದಾಗ ಪೌರಸಭೆಯವರು ಅದನ್ನು ಬಹಳವಾಗಿ ಪ್ರತಿಭಟಿಸಿದರು. ಈಗಾಗಲೇ ವಿಶೇಷವಾಗಿ ಕಂದಾಯದ ಹೊರೆಯಿಂದ ಬಳಲುತ್ತಿರುವ ಪುರನಿವಾಸಿಗಳ ಮೇಲೆ ಈ ಹೆಚ್ಚಿನ ತೆರಿಗೆಯನ್ನು ವಿಧಿಸಲಾಗದೆಂದು ಒತ್ತಾಯಪಡಿಸಿದರು. ಪ್ರಜೆಗಳ ಮೇಲೆ ಇಷ್ಟು ಮಟ್ಟಿಗೆ ತೆರಿಗೆಯನ್ನು ಹೇರುವ ಬದಲು ಪೌರಸಭೆಯೇ ಎಂದಿನಂತೆ ವಿದ್ಯಾಭ್ಯಾಸದ ಕಂಟ್ರಿಬ್ಯೂಷನನ್ನು ಕೊಡಲು ಸಿದ್ಧವಾಗಿದೆಯೆಂದೂ ಸಹ ವಾದಿಸಿದರು. ಆದರೆ ಸರ್ಕಾರದವರು ಅದಕ್ಕೆ ಒಪ್ಪಲಿಲ್ಲ. ಅದರೂ ಸಹ ಈ ತೆರಿಗೆಯ ವಸೂಲಿಯ ಪ್ರಮಾಣದಲ್ಲಿ ಕೆಲವು ಲೋಪದೋಷಗಳಿದ್ದ ಪ್ರಯುಕ್ತ ಅದರ ವಸೂಲಿ ಕ್ರಮವನ್ನು ಸದ್ಯಕ್ಕೆ ನಿಲ್ಲಿಸಲಾಗಿದೆ. ಈ ತೆರಿಗೆಯ ಪ್ರಮಾಣವು ಬಹಳ ಮಟ್ಟಿಗೆ ಇಳಿಸಲ್ಪಡಬಹುದೆಂಬ ನಿರೀಕ್ಷಣೆಯೂ ಇರುತ್ತದೆ.

ಪೌರಸಭೆಗೆ ಖಾಸಗಿ ಅಧ್ಯಕ್ಷರು ಬೇಕೆಂದು ಏಳೆಂಟು ವರ್ಷಗಳಿಂದಲೂ ಒತ್ತಾಯ ಮಾಡಲಾಗುತ್ತಿದೆ. ಆದರೂ ಸರ್ಕಾರದವರು ಇದಕ್ಕೆ ಅವಕಾಶ ಕೊಟ್ಟಿರುವುದಿಲ್ಲ. ಇದು ಈ ರಾಜಧಾನಿಗೇ ಅಪಮಾನಕರವಾದ ವಿಷಯ. ತಮ್ಮಲ್ಲಿಯೇ ಒಬ್ಬರನ್ನು ಪೌರಸಭೆಯ ಸದಸ್ಯರು ಅಧ್ಯಕ್ಷರನ್ನಾಗಿ ಆರಿಸಿಕೊಳ್ಳಲು ಕಾನೂನಿನಲ್ಲಿ ಅವಕಾಶವಿದ್ದರೂ ಸಹ ನಗರದ ಇಡೀ ಪ್ರಜಾ ಸಮುದಾಯದಿಂದ ಯಾರೊಬ್ಬರನ್ನಾದರೂ ಚುನಾಯಿಸಲು ಅದೇ ಶಾಸನದ ಬೇರೊಂದು ಭಾಗದಲ್ಲಿ ಇರುವ ಅವಕಾಶವನ್ನಾದರೂ ಕೊಡುವಂತೆ ಪೌರಸಭೆಯವರು ಈಚೆಗೆ ಸರಕಾರದವರನ್ನು ಕೇಳಿದ್ದಾರೆ. ಇದಕ್ಕೂ ಸಹ ಸರ್ಕಾರದವರಿಂದ ಇದುವರೆಗೆ ಉತ್ತರವಿಲ್ಲ. ಇಡೀ ನಗರದ ಪ್ರಜಾ ಸಮುದಾಯದಲ್ಲಿ ಖಾಸಗಿ ಅಧ್ಯಕ್ಷತೆಯನ್ನು ನಿರ್ವಹಿಸಲು ಅರ್ಹರಾದವರು ಒಬ್ಬರೂ ಇಲ್ಲವೆಂದು ಸರ್ಕಾರದವರು ಪರಿಗಣಿಸಿರುವುದು ಪುರನಿವಾಸಿಗಳಿಗೆ ಹಾಕಿರುವ ಒಂದು ಸವಾಲಿನಂತಿದೆ

ಈಗ ನಡೆಯಲಿರುವ ಪೌರ ಚುನಾವಣೆಯಲ್ಲಿ ಖಾಸಗೀ ಅಧ್ಯಕ್ಷರ ಅವಶ್ಯಕತೆಯು ಒಂದು ಪ್ರಾಮುಖ್ಯ ಪ್ರಶ್ನೆ; ಇದನ್ನು ಸರ್ಕಾರದ ಮೇಲೆ ಒತ್ತಾಯಪಡಿಸುವುದು ಪುರನಿವಾಸಿಗಳ ಆದ್ಯ ಕರ್ತವ್ಯ. ಕಾಂಗ್ರೆಸ್ ಪಕ್ಷದವರು ಖಾಸಗಿ ಅಧ್ಯಕ್ಷತೆಯ ವಿಷಯವನ್ನು ಪ್ರಾಮುಖ್ಯವಾಗಿ ಎತ್ತಿ ಹಿಡಿದಿದ್ದಾರೆ. ಪೌರಸಭೆಯಲ್ಲಿರುವ ಹಲವು ನಾಮಕರಣದ ಸದಸ್ಯರು ಇದನ್ನು ವಿರೋಧಿಸಿದ್ದಾರೆ. ಈ ಬಗ್ಗೆ ಮಹಾಜನರು ತಮ್ಮ ಖಚಿತವಾದ ಅಭಿಪ್ರಾಯವನ್ನು ಪ್ರಕಟಿಸಬೇಕಾಗಿದೆ. ಕಾಂಗ್ರೆಸ್ ಉಮೇದುವಾರರಿಗೆ ಸಂಪೂರ್ಣ ಬೆಂಬಲವನ್ನು ನೀಡುವುದೇ ಇದಕ್ಕೆ ಸರಿಯಾದ ಮಾರ್ಗ.

ಚಾಮರಾಜ ಮೊಹಲ್ಲಾ

ಮತದಾರರಲ್ಲಿ ವಿನಂತಿ

ವೋಟಾರು ಗುರುತುಳ್ಳ ನನ್ನ ಹೆಸರಿಗೆ ನಿಮ್ಮ ಅಮೂಲ್ಯವಾದ ಒಂದು ಓಟನ್ನು ದಯಮಾಡಿ ಕೊಡುವಂತೆ ಪ್ರಾರ್ಥಿಸುತ್ತೇನೆ.

ಡಿ. ಸುಮಿತ್ರ

ಬಿ ಎ ಬಿ ಎಲ್, ಎಂ. ಇಡಿ
ಪ್ರಿನ್ಸಿಪಾಲ್, ಮಿರ್ಜ ಹೈಸ್ಕೂಲ್
ಮೈಸೂರು

॥ ವಂದೇಮಾತರಂ ॥

ಮೈಸೂರು ನಗರದ ಹೆಮ್ಮೆ

ನೂರಕ್ಕೆ ನೂರರಷ್ಟು ಕಾಂಗ್ರೆಸ್ ವಿಜಯ!

* ಕಳೆದ ಆರು ವರ್ಷಗಳಿಂದ ಮೈಸೂರು ನಗರ ನಿವಾಸಿಗಳು ಪೌರಸಭೆಗೆ ಎಲ್ಲಾ ಕಾಂಗ್ರೆಸ್ ಪ್ರತಿನಿಧಿಗಳನ್ನೂ ಆರಿಸಿ ಕಳುಹಿಸಿದ್ದಾರೆ.

* ಇದನ್ನು ಕಂಡು ಮಹಾತ್ಮಾ ಗಾಂಧಿಯವರೂ, ರಾಷ್ಟ್ರನಾಯಕರೂ ಮುಗ್ಧರಾಗಿ ಮೈಸೂರನ್ನು ಕೊಂಡಾಡಿದ್ದಾರೆ.

* ಇಪ್ಪತ್ತನಾಲ್ಕು ಜನ ಕಾಂಗ್ರೆಸ್ ಉಮೇದುವಾರರಿಗೂ ಅಖಂಡ ವಿಜಯವನ್ನು ದೊರಕಿಸಿ ಕೊಟ್ಟಿರುವುದು ಇತಿಹಾಸದಲ್ಲೇ ಅಪೂರ್ವವಾದ ಹೆಮ್ಮೆಯ ಸಂಗತಿ.

* ಈ ಸಾರಿ ಪೌರಸಭಾ ಚುನಾವಣೆಯಲ್ಲಿಯೂ ಮೈಸೂರು ತನ್ನ ಅದ್ಭುತ ಕಾಂಗ್ರೆಸ್ ಪ್ರೇಮವನ್ನು ಪ್ರದರ್ಶಿಸಲಿ!

ಜೈ ಹಿಂದ್!

ಸಹಾಯಾರ್ಥ ಪ್ರದರ್ಶನ

ಮಾಯಾ ಪ್ರಪಂಚ ಸಾರ್ವಭೌಮ

ಪ್ರೊ|| ಘೋಷ್

ಇವರಿಂದ

ಇದೇ ೧೩ನೇ ತಾ|| ಬುಧವಾರ

ಟೌನ್‌ಹಾಲಿನಲ್ಲಿ ಸಂಜೆ ೭ ಘಂಟೆಗೆ

ಇಂದ್ರ ಜಾಲ ವಿದ್ಯಾ ಪ್ರದರ್ಶನ

-ಇದೇ ಹಾಗೆ ಬಂದಿದೆ-

ಟಾಂಕಿರ್ಸ ಪೂಗಳು
ಮತ್ತು
ರೇಡಿಯಂ ಪೂಗಳು

ಇವುಗಳಲ್ಲದೆ ಬಾಟಾ ಕಂಪೆನಿಯ ಎಲ್ಲಾ ನಮೂನೆಯ ಪಾದರಕ್ಷೆಗಳು ಸಿಕ್ಕುತ್ತವೆ. ಒಮ್ಮೆ ನಮ್ಮ ಅಂಗಡಿಗೆ ಭೇಟಿಕೊಡಿ-

ಗೋಪಿಕೃ ಪ್ರುಟ್‌ವೇರ್ ಹೌಸ್

ಲ್ಯಾನ್ಸ್ ಡೌನ್ ಬಜಾರ್, ಮೈಸೂರು

OPERA TALKIES

13-11-46 ರಿಂದ

ನಾಲ್ಕನೇ ವಾರ

ಶ್ರೀ ಮುರುಗನ್

(ತಮಿಳು)

ಪಾತ್ರ:-ಹೊನ್ನಪ್ಪ ಭಾಗವತರ್,

ಕಾಂಗ್ರೆಸ್ ಅಧಿವೇ[ಶನ]
ಮುಂದುವರಿಯಲಾ[ಗಿದೆ]

ಕಾಂಗ್ರೆಸ್ ಕಾರ್ಯಕಾರಿ ಸಮಿ[ತಿ] ಸ್ಯರಾದ ಶ್ರೀ|| ಗೋವಿಂದ ವಲ್ಲಭ ... ಕಾಂಗ್ರೆಸ್ ಅಧಿವೇಶನದ ಬಗ್ಗೆ ಇ... ಯವರೊಡನೆ ಸಮಾಲೋಚನೆ ... ಧಿವೇಶನವು ನಿಗದಿಯಾದ ದಿನವೇ ... ಬೇಕೆಂದೂ, ಪ್ರೇಕ್ಷಕರಿಗೂ ಅವ... ಕೂಡದೆಂದೂ, ನಿರ್ಧರಿಸಿರುತ್ತಾರೆ

ಭಾರತಕ್ಕೆ ೧೫೦೦೦೦ ... ಧಾನ್ಯ

೭೦ ಲಕ್ಷ ಪೌಂಡಿನ ವೆಚ್ಚದಿಂ... ತಕ್ಕೆ ೧೫೦೦೦೦ ಟನ್ ಧಾನ್ಯ ... ಸಾಗಾಗಿದೆ. ಬ್ರಿಟಿಷ್ ಸರ್ಕಾರಕ್ಕೆ ... ಗೆ ಧಾನ್ಯಕ್ಕೆ ಪ್ರತಿಯಾಗಿ ಉಳುವ ... ಕೈಗಾರಿಕೆಯ ಯಂತ್ರೋಪಕರಣ... ಕೊಡುವಂತೆ ಒಪ್ಪಂದವಾಗಿದೆಯೆಂ... ವರದಿಯಾಗಿದೆ

ಅಮೆರಿಕದಲ್ಲಿ ಪ್ರೇ...
ದಾಂಪತ್ಯ ವಿಚ್ಛೇದ...

ಅಮೆರಿಕ ಸಂಯುಕ್ತ ಸಂಸ್ಥಾ... ಒಕ್ಕೆ ೧ರಂತೆ ದಾಂಪತ್ಯ ವಿಚ್ಛೇ... ಯುತ್ತಿದೆ. ೧೯೪೫ರಲ್ಲಿ ೧೬,... ಮದುವೆಗಳು ನಡೆದು ಅವು... ೫೪,೦೦೦೦ ವಿಚ್ಛೇದನಗಳಾಗಿವೆ ವರದಿಯಾಗಿದೆ

ಸಾಧ್ವಿ

ಅವೆ ರಾಜಧಾನಿಯ ಏಕೈಕ ದಿನ ಪತ್ರಿಕೆ

ಕೂಡಲೇ ಚಂದಾದಾರರಾಗಿ

(ತಿಂಗಳಿಗೆ ಚಂದಾ ಎಂಟಾಣೆ ...

ಟಿ ಸಿ. ನಟರಾಜ

ಔಷಧಾಲಯ

ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅಗತ್ಯವಾಗಿ ಬೇಕಾದ ಎಲ್ಲಾ ... ತ್ತ ಔಷಧಿಗಳೂ ಸದಾ ಕಾಲದ... ದೊರೆಯುವುದಲ್ಲದೆ ಸಮಸ್ತವ್ಯಾಧಿ... ಚಿಕಿತ್ಸೆಯು ಬಹು ಸುಲಭ ಧಾ... ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದಿ... ದ್ಯೌಷಧಗಳೆಲ್ಲವೂ ದೊರೆಯುತ್ತವೆ

ರಾಜಕಮಲ

ಮೈಸೂರು

ತಾ|| ೭-೧೧-೪೬ ರಿಂ...

ಎರಡನೆಯ ವಾರ

* ನೂರ್‌ಜಹಾನ್, * ಗೀತಾನಿ...

* ಉಮಕಶುಲ್ ನಟಿಸಿರು...

ವಿಲೇಜ್ ಗರ್ಲ್

(ಹಳ್ಳಿಯ ಹುಡುಗಿ)

• ೧೯೫೦ ಕ್ಕೆ ಪ್ರಳಯ

೧೯೫೦ರ ವೇಳೆಗೆ ಪ್ರಪಂಚ ... ಯವಾಗುತ್ತದೆಂದು ಬಗ್ದಾಸ್ ವಿ... ಶೋಧನಾಲಯದ ಮಾಜಿ ಸೈ... ಡಿಸೂಟ್‌ಫಾದರ್‌ನ್ಯೂಯಿಗ್‌ರವರ... ದ್ದಾರೆ ಅವರು ರಕ್ತಪಾತ, ಸ್ಫೋ... ಆಸಿಡೇರ, ಅಥವಾ ಅತ್ಯಸ್ತ್ರದಿಂದ ... ಚ ಅಂತ್ಯವಾಗುತ್ತದೆ ಜೂಯಿ... ತವು ಪ್ರಪಂಚವನ್ನು ಕೊನೆಗಾಣಿಸ...

ರೋr. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಬುಧವಾರ ೧೨—೧೧—೪೬ [ಸಂಚಿಕೆ ೮೮

ನಾಳೆ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೇ ಓಟು ಕೊಡಿ

॥ ವಂದೇಮಾತರಂ ॥

ಕಾಂಗ್ರೆಸ್ ಉಮೇದುವಾರರಿಗೇ ಓಟು ಕೊಡಿ !

—

...ಜಾರಿಯನ್ನು ಬಿಟ್ಟರೂ ದೇವರನ್ನು ...ಬಿಡಬೇಕೇ? ಕಾಂಗ್ರೆಸ್ ಸಂಸ್ಥೆಗೇ ...ಕೊಡಿ !

—ಸಿದ್ದವ್ವನಹಳ್ಳಿ ನಿಜಲಿಂಗಪ್ಪ

...ನಗರದ ಪೌರಸಭೆಯ ಕಾರ್ಯಸಾಧ... ಎಲ್ಲ ಪೌರಸಭೆಗಳ ಕಾರ್ಯಸಾಧನೆ... ...ಣಯಿಸುತ್ತದೆ. ಮ್ಯುನಿಸಿಪಲ್ ...ದ ಕಾಂಗ್ರೆಸ್ ವಶವಾಗಲು ಕಾಂಗ್ರೆ... ಓಟು ಕೊಡಿ !

- ಕೆ. ಚೆಂಗಲರಾಯರೆಡ್ಡಿ

...ರತ್ನ ನೂರರನ್ನು ಕಾಂಗ್ರೆಸ್ ಉಮೇ...ದರನ್ನು ಚುನಾಯಿಸುವುದು ಮೈಸೂ...ರಿನ್ನ ಈ ಕೀರ್ತಿಯನ್ನು ಈ ಸಾರಿ ...ಉಳಿಸಿ !

—ಎಸ್. ಚನ್ನಯ್ಯ

...ಘನವಾದ ಓಟಿನ ಸುವರ್ಣ...ದ ಪರಿವಾರಿ ಕಾಂಗ್ರೆಸ್ ಮೇಲೆ...!

— ಎಸ್. ರಂಗರಾಮಯ್ಯ

ಜೈ ಹಿಂದ್ !

...ಮಾಳವೀಯರ ನಿಧನದ ಬಗ್ಗೆ ಹರತಾಳ

...ಪ್ರೆಸ್] ಬೆಂಗಳೂರು ೧೩ ...ಮದನಮೋಹನ ಮಾಳವೀಯ...ರವರ ಬಗ್ಗೆ ಸಂತಾಪ ಸೂಚಿಸಲು ಇ... ...ನಗರದಲ್ಲಿ ಹರತಾಳವನ್ನು ಆಚರಿಸ... ಅನೇಕ ಅಂಗಡಿಗಳು ಮುಚ್ಚಿ... ...ಯ ವಿದ್ಯಾಶಾಲೆ, ಎಸ್ ಎಲ್ ...ಸ್ಕೂಲ್, ಇಂಟರ್ಮೀಡಿಯೆಟ್ ಕಾಲೇಜು, ...ಸೆಂಟ್ ಜೋಸ... ...ದವರು ಮೃತರ ಗೌರವಾರ್ಥ ...ಸಂಸ್ಥೆಗಳನ್ನು ಮುಚ್ಚಿದ್ದರು ...ಲೆ ಮತ್ತು ಕಾಲೇಜುಗಳ ವಿದ್ಯಾ... ಮಾಸ್ತರು ಹೂವಿ ಪರಿಕಾಳದಲ್ಲಿ ...ನಗರದಲ್ಲಿ ಎಲ್ಲೆಲ್ಲಿ ...ದ ಶೋಕದ ವಾತಾವರಣ ಕಂ... ...ತ್ತಿದೆ ಮೈಸೂರು ಕಾಂಗ್ರೆಸ್ ...ರ ಶ್ರೀ ಕೆ. ಸಿ ರೆಡ್ಡಿಯವರು ...ನಿಂದ ಮಾಳವೀಯರಿಗೆ ತಂತಿ... ...ಭಾರತದ ಮಹಾವ್ಯಕ್ತಿ, ಪೂಜ್ಯ ...ಮದನಮೋಹನ ಮಾಳವೀ... ...ನಿಂದ ಮೈಸೂರಿನ ಪ್ರಜಾ ಸ... ...ಗೆ ಅಪಾರ ದುಃಖವಾಗಿದೆಯೆಂ... ...ಅವರ ಆತ್ಮಕ್ಕೆ ಶಾಂತಿಯನ್ನು ...ರಿ

ಉಪಚುನಾವಣೆ

] ಚಾಮರಾಜನಗರ ೧೨ ...ಪುರಸಭೆಯ 'ಬಿ' ಡಿವಿಜನ್ನಿ... ...ನೇ ತಾ॥ ನಡೆಯುವ ಉಪ... ...ನೆಯಲ್ಲಿ ಸ್ಪರ್ಧಿಸಿರುವ ತಾ॥ ಕಾಂ... ...ಅಧ್ಯಕ್ಷರಾದ ಶ್ರೀ ಕೆ ಎ ಕೃಷ್ಣ... ...ರವರ ಪರ ಪ್ರಚಾರ ಭರದಿಂದ ... ಅವರೇ ಜಯಿಸಿ ಬರುವ ಸೂ...ಚನೆ

ಸೂಚನೆ

"ಈ ಚುನಾವಣೆ ಪ್ರಯುಕ್ತ ನಾಳೆ ...ಪತ್ರಿಕೆಗೆ ರಜಾ ಕೊಡ...

—ವ್ಯವಸ್ಥಾಪಕ

ಬೆಲ್ಲದ ಹತೋಟಿ ಆಜ್ಞೆ

ಬೆಂಗಳೂರು ೧೩

ಡಿಸೆಂಬರ್ ೧ ರಿಂದ ಯಾರೂ ಬೆಲ್ಲದ ವ್ಯಾಪಾರವನ್ನು ಸರ್ಕಾರದಿಂದ ಅನುಮತಿ ಪಡೆಯದೆ ಮಾಡಕೂಡದು. ಕಂಟ್ರೋಲ್ ರಿಂದ ರಹದಾರಿ ಇಲ್ಲದೆ ಬೆಲ್ಲವನ್ನು ಸಂಸ್ಥಾನದ ಹೊರಕ್ಕೆ ಸಾಗಿಸಕೂಡದು. ಸಂಸ್ಥಾನದೊಳಗೆ ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೂ ರವಾನಿಸಲಾಗದು ಒಬ್ಬ ವ್ಯಕ್ತಿ ರಹದಾರಿ ಇಲ್ಲದೆ ಎರಡು ಮಣ ಬೆಲ್ಲವನ್ನು ಸ್ವಂತ ಉಪಯೋಗಕ್ಕೆ ಸಾಗಿಸಿಕೊಳ್ಳಬಹುದಾಗಿದೆ ಬೆಲ್ಲ ತಯಾರಿಸಲು ಗೊತ್ತಾಗಿರುವವರಲ್ಲದೆ ಬೇರೆಯಾರೂ ಕಬ್ಬನ್ನು ಜಿಲ್ಲಾಧಿಕಾರಿಗಳ ಅನುಮತಿ ಇಲ್ಲದೆ ಕತ್ತರಿಸಕೂಡದು—ಎಂದು ಸೂಚಿಸಿ ಸರ್ಕಾರದವರು ಆಜ್ಞೆಯೊಂದನ್ನು ಹೊರಡಿಸುವರು ಕಂಟ್ರೋಲರು ಆಗಿಂದಾಗ್ಗೆ ಬೆಲ್ಲದ ಧಾರಣೆಯನ್ನು ಗೊತ್ತುಮಾಡುವರೆಂದೂ ಅದರಲ್ಲಿ ತಿಳಿಸಲಾಗಿದೆ

೩೦ ಲಂಚಕೋರ ಅಧಿಕಾರಿಗಳ ವಜಾ

ಲಂಚನಿರೋಧ ಸಮಿತಿಯ ಕಾರ್ಯಾಚರಣೆ ಫಲವಾಗಿ ಬಿಹಾರಿನಲ್ಲಿ ಸರಬರಾಜು ಇಲಾಖೆಯ ೩೦ ಜನ ಎಬಿ ಅಧಿಕಾರಿಗಳನ್ನು ಕೆಲಸದಿಂದ ವಜಾಮಾಡಲಾಗಿದೆ ಸಾರ್ವಜನಿಕ ಆರೋಗ್ಯ ಇಲಾಖೆಯ ೮ ಕ್ರಮಬದ್ಧ ಅಧಿಕಾರಿಗಳನ್ನೂ ಮನೆಗೆ ಕಳಿಸಲಾಗಿದೆ

ಸೈಟುಗಳ ವಿಚಾರ

ಮೈಸೂರು ೧೩

ರಾಜಧಾನಿಯಲ್ಲಿ ಸೈಟುಗಳ ವಿಲೇವಾರಿ ವಿಚಾರವಾಗಿ ಹಲವು ಇಲ್ಲದ ಸಲ್ಲದ ಗೊಂದಲವನ್ನೆಬ್ಬಿಸಿರುವರಷ್ಟೆ ಈ ವಿಷಯವಾಗಿ ಸಂಬಂಧಪಟ್ಟವರಲ್ಲಿ ವಿಚಾರಿಸಲು ಈ ಕೆಳಗಿನ ಅಂಶಗಳು ತಿಳಿದು ಬಂದಿವೆ

ಸೈಟುಗಳನ್ನು ಕೊಡುವ ಜವಾಬ್ದಾರಿಯು ಟ್ರಸ್ಟುಬೋರ್ಡಿಗೆ ಸೇರಿದ್ದು, ಪೌರಸಭೆಗಲ್ಲ ಬೋರ್ಡಿನಲ್ಲಿ ಅಧ್ಯಕ್ಷರು, ಮುನಿಸಿಪಲ್ ಸೆಕ್ರೆಟರಿಯವರು, ಆರೋಗ್ಯದ ಡೈರೆಕ್ಟರ್ ಮುಂತಾದವರು ಒಡಿಯುತ್ತದಲ್ಲಿ ಸರ್ಕಾರದವರಿಂದ ನಾಮಕರಣಮಾಡಲ್ಪಟ್ಟವರು ಪೌರಸಭೆಯಿಂದ ಚುನಾಯಿತರಾದ ಇಬ್ಬರು ಸದಸ್ಯರೂ, ಒಬ್ಬರು ಉಪಾಧ್ಯಕ್ಷರೂ ಮಾತ್ರ ಇರುತ್ತಾರೆ ಇವರಲ್ಲಿ ಕಾಂಗ್ರೆಸ್ಸಿನವರ ಕೈವಾಡವು ಏನೂ ಇರುವುದಿಲ್ಲ ಸೆಕ್ರೆಟರಿ ದರದಲ್ಲಿ ಸೈಟುಗಳನ್ನು ವಿಲೇಮಾಡುವ ಅಧಿಕಾರವು ಅಧ್ಯಕ್ಷರಿಗೇ ಇರುತ್ತದೆ.

ಕಳೆದ ಮೂರು ವರ್ಷಗಳಲ್ಲಿ ಹರಿಜನ ಏಳಿಗೆ ಅನೇಕ ಸೈಟುಗಳು ಕೊಡಲ್ಪಟ್ಟಿವೆ. ಒಂದಾನೆಯಿಂದ ೧೨ ಆಣೆವರೆಗೆ ಅವುಗಳನ್ನು ಕೊಡಲಾಗಿದೆ ಸುಮಾರು ೨೦೦ ಸೈಟುಗಳು ಹೀಗೆ ಕೊಡಲ್ಪಟ್ಟಿವೆ. ಸೆಕ್ರೆಟರಿ ದರದ ಮಾನಾವಧಿಯನ್ನು ೩॥ ರೂಗೆ ನಿಗದಿಮಾಡಿದೆ

ಮೂರನೇ ಸಾರಿ ಹರಾಜಿನಲ್ಲಿ ಬಿದ್ದ...

ಕಾಂಗ್ರೆಸ್ಸಿನವರು ಸುಹಾ ಜನರಿಗೆ ಜವಾಬ್ದಾರರು

ಮೈಸೂರು ೧೩

ರಾಜಧಾನಿಯ ಪತ್ರಿಕೋದ್ಯೋಗಿ ಸಂಘದವರು ನಿನ್ನೆ ಸಂಜೆ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ ಸಿ ರೆಡ್ಡಿ ಮತ್ತು ಲೆ ಪ್ರಾಂತೀಯ ಕಾರ್ಯ ಸಮಿತಿ ಅಧ್ಯಕ್ಷರಾದ ಶ್ರೀ ಸಿದ್ದವ್ವನಹಳ್ಳಿ ನಿಜಲಿಂಗಪ್ಪನವರನ್ನು ಆಹ್ವಾನಿಸಿ ಸತ್ಕರಿಸಿದರು

ಅಧ್ಯಕ್ಷ ಶ್ರೀ ಆಗಂ ರಂಗಯ್ಯನವರು ಅತಿಥಿಗಳನ್ನು ಸ್ವಾಗತಿಸಿದರು ಶ್ರೀ ನಿಜಲಿಂಗಪ್ಪನವರು ಮಾತನಾಡಿ ದೊಡ್ಡ ಸಂಸ್ಥಾನಗಳಲ್ಲಿ ಕೂಡಲೇ ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗಬೇಕಾಗಿದೆ ಎಂದು ಹೇಳಿದರು ರಾಜ್ಯಾಂಗ ರಚನಾ ಸಮಿತಿಗೆ ದಿವಾನರೂ, ನಾವ ಕರಣ ಜನ ಸ್ವರೂ ಹೋಗುವಂತೆ ನಿರ್ಧರವಾಗಿರುವುದು ತಪ್ಪು ಎಂದು ತಿಳಿಸಿದರು

ಸಂಸ್ಥಾನಾಧಿಪರುಗಳು ರಚಿಸಿರುವ ಸಂಘದ ಸಮಿತಿಯಲ್ಲಿ ಪ್ರಜಾಪ್ರತಿನಿಧಿಗಳೊಬ್ಬರೂ ಇಲ್ಲದಿರುವುದರಿಂದ ಆ ಸಮಿತಿಯನ್ನು ಬಹಿಷ್ಕರಿಸಬೇಕಾಗಿದೆಯೆಂದೂ, ರಾಜ್ಯಾಂಗ ಸಭಾ... ಆ ಸಂಘ ನ ಸಮಿತಿ... ...ದನೆ ಸ್ವತಂತ್ರವಾಗಿ ಪ್ರತಿನಿಧಿಸಲಾಗ... ದಾಗೂ ಶ್ರೀ ಕೆ ಸಿ ರೆಡ್ಡಿ ಹೇಳಿದರು

ಕಾಂಗ್ರೆಸ್ ಪರವಾಗಿ ಉಮೇದುವಾರರಾಗಿ ನಿಂತವರು ಚುನಾಯಿತರಾದರೆ ಅವರು ಒಟುಕೊಟ್ಟವರಿಗೆ ಜವಾಬ್ದಾರರೋ ಅಥವಾ ಕಾಂಗ್ರೆಸ್ಸಿಗೆ ಜವಾಬ್ದಾರರೋ ಎಂದು ಒಬ್ಬರು ಕೇಳಿದ ಪ್ರಶ್ನೆಗೆ, ರೆಡ್ಡಿಯವರು ಉತ್ತರವಿತ್ತು ಕಾಂಗ್ರೆಸ್ ಉಮೇದುವಾರರು, ಸಮಿತಿಯವರೂ ಇಬ್ಬರೂ ಜನರಿಗೆ ಜವಾಬ್ದಾರರು ಎಂದು ತಿಳಿಸಿದರು ಕಾರ್ಯದರ್ಶಿ ಶ್ರೀ ಟಿ. ಕೆ ಕುಮಾರಸ್ವಾಮಿಯವರು ವಂದನೆಗೈಯುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

—

...ಮಾಡ ಪರೇ ... ...ಲ್ ದರದಲ್ಲಿ ... ವಿಲೇವಾರಿ ಅಧಿಕಾರ ಕೊಡಲಾಯಿತು. ಕಾಂಗ್ರೆಸ್ಸಿನವರಲ್ಲದೆ ಇತರ ನಾಗರಿಕರು ಜನರಿಗೆ ಇವುಗಳನ್ನು ಕೊಡಲಾಗಿದೆ ಭಾರಿ ಬೆಲೆಯ ಜಮೀನನ್ನು ಪಡೆದಿರುವುದು ಜಮೀನು ಒದಗಿಸಲಾಗಿ ಶ್ರೀ॥ ಇ ಸಿ ನಂಜಪ್ಪನವರಿಗೆ ಸೆಕ್ರೆಟರಿ ದರದಲ್ಲಿ ಸೈಟು ಕೊಡಲಾಗಿದೆ ಪೌರಸಭೆ ಮುನ್ಸಿಪಲ್ ನೆಲೆ ಪಡೆದಿರುವ ನೌಕರರು ಮತ್ತು ಸದಸ್ಯರಿಗೆ ಒಂದು ರೂಪಾಯಿಗೆ ಒಂದು ಸೈಟಿನಂತೆ ದರದಲ್ಲಿ ಸೈಟುಗಳನ್ನು ಕೊಡಬೇಕೆಂದು ತೀರ್ಮಾನವಾಗಿರುತ್ತದೆ ಅದರಂತೆ ಇಲಾಖೆ ನೌಕರರಿಗೆ ಕೊಡಲಾಗಿದೆ ಅದರ ಕಾಂಗ್ರೆಸ್ಸಿನವರಾಗಲಿ ಯಾವ ವಿಧವಾಯಿತು ಗುಣವನ್ನು ಪಡೆದಿರುವುದಿಲ್ಲ.

ಶ್ರೀ॥ ಟಿ ವೆಂಕಟಪ್ಪನವರ ಸ್ವಕೀಯ ವಿಷಯವಲ್ಲಿ ನಡೆದಿರುವ ಕೋಲಾಹಲವು ಕೇವಲ ನಿರಾಧಾರವಾದುದು ಅವರ ಸೈಟನ್ನು ಸೆಕ್ರೆಟರಿ ದರದಲ್ಲಿಯೇ ಕೊಡಲಾಗಿದೆ ಆ ಸೈಟಿನ ... ಸೈಟುಗಳು ... ...ಇದರಿಂದ ಅವರಿಗಾದ ... ಮುನಿಸಿಪಲ್ ... ...ಲಾಗಿದೆ ಶ್ರೀ॥ ವ... ... ...ಲವರ ... ... ಶ್ರೀ ಮಹ...ದ ... ...ಕೊಡಲಾಗಿದೆ.

॥ವಂದೇ ಮಾತರಂ॥

ಪಂಡಿತ ನೆಹರೂರವರ ಜಯಂತಿ

೧೪-೧೧-೪೬ ನೇ ಗುರುವಾರ

ಮೈಸೂರು ಪೌರ ಸಭೆಯ ಚುನಾವಣೆ

ಇದೂ ೧೪-೧೧-೪೬ ನೇ ಗುರುವಾರವೇ !

ನೆಹರೂರವರ ಜಯಂತಿಯೂ, ಪೌರಸಭೆಯ ಚುನಾವಣೆಯೂ ಏಕ ಕಾಲದಲ್ಲಿ ಸಂಭವಿಸಿವೆ !

ನೆಹರೂರವರಿಗೆ ನಿಮ್ಮ ಕಾಣಿಕೆ ಏನು ?

ವ್ಯಕ್ತಿಗಿಂತಲೂ ಸಂಸ್ಥೆಯೇ ದೊಡ್ಡದೆಂಬುದು ಪಂಡಿತ ಜವಹರಲಾಲರ ಧ್ಯೇಯೋಕ್ತಿ !

ವ್ಯಕ್ತಿಗಳಿಗಿಂತಲೂ ಸಂಸ್ಥೆಗೇ ಬೆಂಬಲ ನೀಡಿರಿ !

ಕಾಂಗ್ರೆಸ್ ಸಂಸ್ಥೆಯ ಉಮೇದುವಾರರಿಗೇ ಓಟು ಕೊಡಿರಿ !

ಜೈ ಹಿಂದ್ !

ಸಾಧ್ವಿ

ತಾ॥ ೧೩-೧೧-೪೬ ಬುಧವಾರ

ದಿವಂಗತ ಮಾಳವೀಯರು

ಭಾರತ ಮಾತೆಯ ಪುತ್ರರತ್ನದಲ್ಲಿ ಅತ್ಯಂತ ಗಣ್ಯ ಸ್ಥಾನವನ್ನು ಪಡೆದಿದ್ದ ಪೂಜ್ಯರಾದ ಪಂಡಿತ ಮದನ ಮೋಹನ ಮಾಳವೀಯರು ನಿನ್ನೆ ಕಾಶಿಯಲ್ಲಿ ದಿವಂಗತರಾದರೆಂಬ ಸುದ್ದಿಯು ಸಕಲ ಭಾರತೀಯರನ್ನೂ ದುಃಖ ಸಾಗರದಲ್ಲಿ ಮುಳುಗಿಸಿದೆ. ಕೆಲವು ದಿವಸಗಳಿಂದಲೂ ಅವರು ವ್ಯಾಧಿಗ್ರಸ್ತರಾಗಿದ್ದರು. ಇದರ ಜೊತೆಗೆ ಬಂಗಾಳ ಮುಂತಾದ ಕಡೆ ನಡೆದ ಅಮಾನುಷ ಅತ್ಯಾಚಾರಗಳು ಅವರ ವ್ಯಾಧಿಯನ್ನು ಉಲ್ಬಣಕ್ಕೆ ತಂದವು. ಹಾಸಿಗೆಯಲ್ಲಿ ಮಲಗಿರುವಾಗಲೂ ಅವರು ನೌಖಾಲಿ ಮತ್ತು ತಿಪ್ಪೆರಾ ಮುಂತಾದ ಸ್ಥಳಗಳ ದುಃಸ್ಥಿತಿಯ ವಿಷಯವಾಗಿ ಕನವರಿಸುತ್ತಿದ್ದರು. ನಿನ್ನೆ ಮಧ್ಯಾಹ್ನ ಪವಿತ್ರ ಕ್ಷೇತ್ರವಾದ ಕಾಶಿ ನಗರದಲ್ಲಿ ಅವರ ಆತ್ಮವು ಪರಮಾತ್ಮನಲ್ಲಿ ಐಕ್ಯಗೊಂಡಿತು.

ಮಾಳವೀಯರ ನಿಧನಕ್ಕಾಗಿ ಇಡೀ ದೇಶವೇ ಕಣ್ಣೀರಿಡುತ್ತಿದೆ. ರಾಷ್ಟ್ರನಾಯಕರೆಲ್ಲರೂ ಕಂಬನಿಗರೆಯುತ್ತಿದ್ದಾರೆ. ದೇಶ ಸೇವೆಯಲ್ಲಿಯೂ, ಪರೋಪಕಾರದಲ್ಲಿಯೂ ಮಹಾತ್ಮ ಗಾಂಧಿಯವರಿಗೆ ಸರಿಸಮಾನರಾಗಿ ಧರ್ಮಾತ್ಮರೆಂಬ ಬಿರುದನ್ನು ಮಾಳವೀಯರು ಪಡೆದಿದ್ದರು. ಕಾಂಗ್ರೆಸ್ ಮಹಾಸಭೆಗೆ ಮೂರು ಬಾರಿ ಅವರು ಅಧ್ಯಕ್ಷರಾಗಿದ್ದರು. ಕಾಶಿ ವಿಶ್ವವಿದ್ಯಾಲಯವು ಮಾಳವೀಯರ ಅದ್ವಿತೀಯವಾದ ಸೇವೆಗೆ ಆಚಂದ್ರಾರ್ಕವಾದ ಸ್ಮಾರಕವಾಗಿರುತ್ತದೆ. ಎರಡು ಕೋಟಿ ರೂ. ಗಳನ್ನು ಇದಕ್ಕಾಗಿ ಅವರು ದೇಶದ ರಾಜ ಮಹಾರಾಜರುಗಳಿಂದಲೂ, ಧನವಂತರಿಂದಲೂ ಸಂಗ್ರಹಿಸಿದರು. ಈ ವಿದ್ಯಾಲಯವು ಭಾರತ ಸಂಸ್ಕೃತಿ ಮತ್ತು ಭವಿಷ್ಯದ ಕಾರ್ಯ ಸಾಧನೆಗೆ ಕೇಂದ್ರಸ್ಥಾನವಾಗಿ ಪರಿಣಮಿಸಿರುತ್ತದೆ. ದೇಶ ಸೇವೆಯಲ್ಲಿ ಅನ್ಯಾದೃಶವಾದ ಪಾತ್ರವನ್ನು ವಹಿಸುವ ಸಹಸ್ರಾರು ಜನ ವೀರ ತರುಣರ ತಂಡವು ಅಲ್ಲಿಂದ ಹೊರಬೀಳುತ್ತಿದೆ.

ಮಾಳವೀಯರು ಭಾರತ ಧರ್ಮದ ಆದರ್ಶ ಮೂರ್ತಿಗಳು. ದರ್ಭಾಂಗ ಮಹಾರಾಜರ ನೇತೃತ್ವದಲ್ಲಿ ಭಾರತ ಧರ್ಮ ಮಹಾಮಂಡಲವನ್ನು ಸ್ಥಾಪಿಸಿ ವೇದಶಾಸ್ತ್ರ ಪುರಾಣಗಳಲ್ಲಿ ಉಕ್ತವಾದ ಧರ್ಮ ಕಾರ್ಯಗಳನ್ನು ಹೇರಳವಾಗಿ ನಡೆಸುತ್ತಿದ್ದರು.

ಕೋಮುವಾರು ಸೌಹಾರ್ದ, ಗೋಸಂರಕ್ಷಣೆ, ದೇಶ ದಾರ್ಢ್ಯದ ಅಭಿವೃದ್ಧಿ ಇವೇ ಮುಂತಾದ ಕಾರ್ಯಗಳಲ್ಲಿ ವಿಶೇಷ ಆಸಕ್ತಿಯನ್ನು ವಹಿಸುತ್ತಿದ್ದರು. ರಾಜಕೀಯದಲ್ಲಿ ಮಧ್ಯ ಮಾರ್ಗಾನುವರ್ತಿಗಳಾಗಿದ್ದರು. ಶಾಸನ ಭಂಗದ ಕಾರ್ಯಕ್ರಮದಲ್ಲಿ ಪ್ರತ್ಯಕ್ಷ ಪಾತ್ರವನ್ನು ಅವರು ವಹಿಸುತ್ತಿರಲಿಲ್ಲವಾದರೂ, ಕಲ್ಕತ್ತೆಯಲ್ಲಿ ನಡೆದ ಒಂದು ಸಮಾರಂಭದ ಸಮಯದಲ್ಲಿ ಅವರು ಅಲ್ಲಿಗೆ ಬರದಂತೆ ಸರ್ಕಾರದವರು ಹಾಕಿದ ಪ್ರತಿಬಂಧಕವು ಆತ್ಮ ಗೌರವಕ್ಕೆ ಹಾನಿಕರವಾಗಿದ್ದುದರಿಂದ ಸದರಿ ಆಜ್ಞೆಯನ್ನು ಉಲ್ಲಂಘಿಸಿ ಅಲ್ಲಿಗೆ ತೆರಳಿದರು.

ಮಾಳವೀಯರಿಗೆ ಮೈಸೂರು ಸಂಸ್ಥಾನದಲ್ಲಿ ವಿಶೇಷ ಪ್ರೀತಿ ಇದ್ದಿತು. ತಾವು ಸ್ಥಾಪಿಸಿದ ಕಾಶಿ ವಿಶ್ವವಿದ್ಯಾಲಯಕ್ಕೆ ದಿವಂಗತ ನಾಲ್ವಡಿ ಕೃಷ್ಣ ಭೂಪಾಲರನ್ನೇ ಪ್ರಥಮ ಛಾನ್ಸಲರನ್ನಾಗಿ ಆರಿಸಿಕೊಂಡಿದ್ದರು. ಮೈಸೂರಿಗೆ ಭೇಟಿ ಕೊಟ್ಟು ಇಲ್ಲಿ ಆರ್ಯ ಸಂಸ್ಕೃತಿಯ ಪುನರುಜ್ಜೀವನಕ್ಕೆ ದೊರೆಯುತ್ತಿರುವ ಪ್ರೋತ್ಸಾಹವನ್ನು ಮನಸಾರ ಮೆಚ್ಚಿದ್ದರು.

ಭರತ ಖಂಡದ ಆಬಾಲವೃದ್ಧರಿಗೂ ಮಾನ್ಯರಾಗಿದ್ದ ಮಾಳವೀಯರು ಇಂದು ಕಣ್ಮರೆಯಾಗಿರುವರು. ಅವರ ಆದರ್ಶ ಜೀವನವು ಸಕಲ ಭಾರತೀಯರ ಮೇಲೆಯೂ ತನ್ನ ಪ್ರಭಾವವನ್ನು ಬೀರಲೆಂಬುದೇ ನಮ್ಮ ಹಾರೈಕೆ. ಮಾಳವೀಯರ ಆತ್ಮಕ್ಕೆ ಭಗವಂತನು ಶಾಶ್ವತ ಶಾಂತಿಯನ್ನೀಯಲಿ!

ತಮಾಷ್ ಕಚೇರಿಯಿಂದ

ನಮ್ಮಲ್ಲಿ ಕೆಲಸ ಮಾಡುತ್ತಿದ್ದು ಬಿಲ್ ಕಲೆಕ್ಷ ವಗೈರೆ ಮಾಡುತ್ತಿದ್ದ ಎಂ. ಆರ್. ರಾಘವೇಂದ್ರರಾವ್ ಎಂಬುವರು ನಮ್ಮಲ್ಲಿ ಕೆಲಸ ಬಿಟ್ಟಿರುತ್ತಾರಾದ್ದರಿಂದ ಅವರೊಡನೆ ನಮ್ಮ ಪರವಾಗಿ ಯಾವ ವ್ಯವಹಾರವೂ ನಮ್ಮ ಹೊಣೆಗಾರಿಕೆಯ ಮೇಲೆ ನಡೆಯುವುದಿಲ್ಲವೆಂಬುದನ್ನು ಈ ಮೂಲಕ ಎಲ್ಲರಿಗೂ ಶೃತಪಡಿಸುತ್ತೇವೆ.

ವ್ಯವಸ್ಥಾಪಕ,
'ತಮಾಷ್'

ಚಾಮರಾಜ ಮೊಹಲ್ಲಾ

ಮತದಾರರಲ್ಲಿ ವಿನಂತಿ

ನೋಟಾರು ಗುರ್ತುಳ್ಳ ನನ್ನ ಹೆಸರಿಗೆ ನಿಮ್ಮ ಫಲವಾದ ಒಂದು ಓಟನ್ನು ದಯಮಾಡಿ ಕೊಡುವಂತೆ ಪ್ರಾರ್ಥಿಸುತ್ತೇನೆ.

ಡಿ. ಸುಮಿತ್ರ

ಬಿ ಎ ಬಿ ಎಲ್, ಎಂ. ಇಡಿ
ಪ್ರಿನ್ಸಿಪಾಲ್, ಮಿಸ್ಟ ಹೈಸ್ಕೂಲ್
ಮೈಸೂರು.

॥ ವಂದೇಮಾತರಂ ॥

ಕಾಂಗ್ರೆಸ್ ಸಾಧಿಸುವುದನ್ನು ಸ್ವತಂತ್ರರು ಸಾಧಿಸಬಲ್ಲರೇ ?

1. ನೀರಿನ ಸರಬರಾಜು ಮತ್ತು ಪಡಿತರ ಪದ್ಧತಿಯ ಸುವ್ಯವಸ್ಥೆ ಏರ್ಪಡಿಸಲು ಸರಕಾರದವರನ್ನು ಒತ್ತಾಯಪಡಿಸಿದವರು ಯಾರು? — ಕಾಂಗ್ರೆಸ್ಸಿನವರು.

2. ಅಧಿಕಾರಿ ಅಧ್ಯಕ್ಷರ ನಿರಂಕುಶ ವರ್ತನೆಯನ್ನು ಪ್ರತಿಭಟಿಸಿದವರು ಯಾರು? —ಕಾಂಗ್ರೆಸ್ಸಿನವರು

3. ಕಲ್ಕತ್ತಾ, ಬೊಂಬಾಯಿ ಮುಂತಾದೆಡೆಗಳ ಗಲಭೆಗೆ ತುತ್ತಾದವರಿಗೆ ಸಹಾನುಭೂತಿ ತೋರುವ ನಿರ್ಣಯವನ್ನು ಅಧ್ಯಕ್ಷರ ವಿರೋಧವಿದ್ದರೂ ಮಂಜೂರುಮಾಡಿದವರು ಯಾರು? —ಕಾಂಗ್ರೆಸ್ಸಿನವರು

4. ಕಾಂಗ್ರೆಸ್ ಅಧ್ಯಕ್ಷರಿಗೆ ಬಿನ್ನವತ್ತಳೆಯನ್ನರ್ಪಿಸಬೇಕೆಂಬ ನಿರ್ಣಯವನ್ನು ಅಧ್ಯಕ್ಷರು ತಳ್ಳಿಹಾಕಿದರೂ ತಮ್ಮ ಅಧಿಕಾರವನ್ನು ಚಲಾಯಿಸಿ ಬಿನ್ನವತ್ತಳೆಯನ್ನು ಒಪ್ಪಿಸಿದವರು ಯಾರು? —ಕಾಂಗ್ರೆಸ್ಸಿನವರು.

5. ಸ್ವತಂತ್ರರಂತೆ ಅಧ್ಯಕ್ಷರ ಕಾಲಿಗೆ ಹಿಮ್ಮೇಳದಂತಿರದೆ ತಮ್ಮ ಹಕ್ಕುಬಾಧ್ಯತೆಗಳನ್ನು ಕಾಪಾಡಿಕೊಂಡವರು ಯಾರು? —ಕಾಂಗ್ರೆಸ್ಸಿನವರು.

6. ನೇತಾಜಿ ಬೋಸರ ನಿಧನದ ಬಗ್ಗೆ ಸಂತಾಪ ಸೂಚಿಸಲು ತಂದ ನಿರ್ಣಯಕ್ಕೆ ಅಧ್ಯಕ್ಷರು ಅವಕಾಶವೀಯದಿರಲು ಸಭೆಯನ್ನು ಮುಂದುವರಿಸಿದವರು ಯಾರು? —ಕಾಂಗ್ರೆಸ್ಸಿನವರು

7. ಪ್ರಜೆಗಳ ಹಕ್ಕುಬಾಧ್ಯತೆಗೆ ಸಂಬಂಧಪಟ್ಟ ಪ್ರಶ್ನೆಗಳು ಬಂದಾಗಲೆಲ್ಲಾ ಅದನ್ನು ಕಾಪಾಡಿದವರಾರು? —ಕಾಂಗ್ರೆಸ್ಸಿನವರು.

8. ಸ್ವತಂತ್ರರ ವಿರೋಧವಿದ್ದಾಗ್ಯೂ ಪೌರಸಭೆಗೆ ಖಾಸಗಿ ಅಧ್ಯಕ್ಷರು ಬೇಕೆಂದು ಒತ್ತಾಯಪಡಿಸಿದವರು ಯಾರು? — ಕಾಂಗ್ರೆಸ್ಸಿನವರು

ಕಾಂಗ್ರೆಸ್ಸಿನವರಿಗೇ ಓಟುಕೊಡಿ!

ಹೋಟೆಲು ಕೆಲಸಗಾರರ ಸ

ರಾಜಧಾನಿಯ ಹೋಟೆಲು ಕೆಲ ರ ಸಂಘವನ್ನು ರಿಜಿಸ್ಟರ್ ಮಾಡಿಸ ಬಾರದಲ್ಲಿ ಸದಸ್ಯರ ಸಭೆಯೊಂದು ಈ ರಾತ್ರಿ ೮ ಗಂಟೆಗೆ ಸಯ್ಯಾಜಿರಾವ್ ಯಲ್ಲಿರುವ ವಿಜಯ ಏಜನ್ಸೀಸ್‌ನಲ್ಲಿ ಯುವುದು. ಕೆಲಸಗಾರರೆಲ್ಲರೂ ಬರ ಗಿ ಕಾರ್ಯದರ್ಶಿಗಳು ಕೋರಿದ್ದಾರೆ.

ಕನ್ನಡ ಟೈಪ್-ರೈಟರ್ ಸಿದ್ಧವಾಗಿದೆ

ನಿಮ್ಮಲ್ಲಿರುವ ಯಾವುದೇ ಮಾದ ಇಂಗ್ಲಿಷ್ ಟೈಪ್ ರೈಟರಿಗೆ ಬೇಕಾದ ನಮ್ಮ ಈ ಅತಿ ಸುಲಭ ಅತಿ ವೇಗದ ಟೈಪ್ ರೈಟರ್ ಸೆಟ್ಟನ್ನು ಜೋಡಿಸ ಡಲಾಗುವುದು. ಒಂದೇ ಯಂತ್ರ ಇಂಗ್ಲೀಷ್, ಕನ್ನಡ ಎರಡನ್ನೂ ಮಾಡಬಹುದು.

ಹೆಚ್ಚಿನ ವಿವರಗಳಿಗೆ ಬಂದು ನೋಡಿ
ಕೆ. ಅನಂತಸುಬ್ಬರಾಯ,
ಕರ್ನಾಟಕ ಮಂದಿರ,
ವಾಣೀವಿಲಾಸ ಮಾರ್ಕೆಟ್, ಮೈಸೂ

OPERA TALKIES
13-11-46 ರಿಂದ
ನಾಲ್ಕನೇ ವಾರ
ಶ್ರೀ ಮುರುಗನ್
(ತಮಿಳು)
ಪಾತ್ರ:-ಹೊನ್ನಪ್ಪ ಭಾಗವತರ್,

ರಣಜಿತ್ ಟಾಕೀಸ್
೧೪-೧೧-೪೬ನೇ ಗುರುವಾ
ದಿಂದ ಪ್ರತಿದಿನ ೩ ಆಟಗ
ಮೈ ಕ್ಯಾ ಕರೂಂ
ಪಾತ್ರ:-ಸೂರಿಯಾ, ಪಹರಿ ಸನ್ಯಾ
ಷಾ ನವಾಜ್.

Edited, printed and published
A. R. Nagarajan at the Sadhvi Pr
D-Subbiah Road, Mysore

॥ ವಂದೇಮಾತರಂ ॥

ಮೈಸೂರು ನಗರದ ಹೆಮ್ಮೆ

ನೂರಕ್ಕೆ ನೂರರಷ್ಟು ಕಾಂಗ್ರೆಸ್ ವಿಜಯ!

*ಕಳೆದ ಆರು ವರ್ಷಗಳಿಂದ ಮೈಸೂರು ನಗರ ನಿವಾಸಿಗ ಪೌರಸಭೆಗೆ ಎಲ್ಲಾ ಕಾಂಗ್ರೆಸ್ ಪ್ರತಿನಿಧಿಗಳನ್ನೂ ಆರಿಸಿ ಕಳುಹಿದ್ದಾರೆ.

* ಇದನ್ನು ಕಂಡು ಮಹಾತ್ಮ ಗಾಂಧಿಯವರೂ, ರಾ ನಾಯಕರೂ ಮುಗ್ಧರಾಗಿ ಮೈಸೂರನ್ನು ಕೊಂಡಾಡಿದ್ದಾರೆ.

* ಇಪ್ಪತ್ತನಾಲ್ಕು ಜನ ಕಾಂಗ್ರೆಸ್ ಉಮೇದುವಾರರಿಗ ಅಖಂಡ ವಿಜಯವನ್ನು ದೊರಕಿಸಿ ಕೊಟ್ಟಿರುವುದು ಇತಿಹಾಸದಲ್ಲಿ ಅಪೂರ್ವವಾದ ಹೆಮ್ಮೆಯ ಸಂಗತಿ.

* ಈ ಸಾರಿ ಪೌರಸಭಾ ಚುನಾವಣೆಯಲ್ಲಿಯೂ ಮೈಸೂ ತನ್ನ ಅದ್ಭುತ ಕಾಂಗ್ರೆಸ್ ಪ್ರೇಮವನ್ನು ಪ್ರದರ್ಶಿಸಲಿ!

ಜೈ ಹಿಂದ್!

॥ ವಂದೇಮಾತರಂ ॥

ಕೃಷ್ಣರಾಜಮೊಹಲ್ಲಾ ಓಟರು ಮಹಾಶಯರಲ್ಲಿ ವಿನಂತಿ.

ಚುನಾವಣಾ ಸ್ಥಳ:—ಮ್ಯುನಿಸಿಪಲ್ ಆಫೀಸ್.

ತಾ॥ 14—11—46 ನೇ ಗುರುವಾರ ನಡೆಯಲಿರುವ ಪೌರಸಭಾ ಚುನಾವಣೆಗಳಲ್ಲಿ ನಮಗೆ ತಮ್ಮ ಫಲವಾದ ಓಟನ್ನು ಕೊಡಬೇಕಾಗಿ ಪ್ರಾರ್ಥನೆ

೧. ಟಿ. ನಾರಾಯಣ	ಸೂರ್ಯ	X
೨. ಟಿ. ಎಸ್ ರಾಜಗೋಪಾಲ ಅಯ್ಯಂಗಾರ್	ಕುದುರೆ	X
೩. ರಾವ್ ಬಹದ್ದೂರ್ ಎಂ. ರಾಮಸ್ವಾಮಿ	ಆನೆ	X
೪. ಬಿ. ಶ್ರೀನಿವಾಸ ಅಯ್ಯಂಗಾರ್	ಒಂಟೆ	X

ಪುರಸಭಾ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಅದ್ಭುತ ಜಯ

ಸ್ವತಂತ್ರರೊಬ್ಬರ ಠೇವಣಿಹೋಯಿತು

ಮೈಸೂರು ೧೫

ನಿನ್ನೆ ನಡೆದ ಪೌರ ಸಭಾ ಚುನಾವಣಾ ಫಲಿತಾಂಶಗಳು ಈ ರೀತಿ ಇವೆ:—

ನಜರ್‌ಬಾದ್ ಮೊಹಲ್ಲ- (೧ ಸ್ಥಾನ) ಶ್ರೀ ವೆಂಕಟರಮಣಯ್ಯ ಕಾಂ ೨೫೩; ಎಂ ಕೃಷ್ಣಯ್ಯಂಗಾರ್ ಸ್ವ ೧೫೫, ವ್ಯರ್ಥವಾದ ಓಟುಗಳು ೧೫

ಪಿಲ್ಲೆ ಮೊಹಲ್ಲ- (೧ ಸ್ಥಾನ) ಶ್ರೀ॥ ಎ. ಕೃಷ್ಣಮೂರ್ತಿ ರಾವ್, ಕಾಂ ೪೧೭; ಶ್ರೀ॥ ಎಂ ರಾಮಸ್ವಾಮಿ, ಸ್ವ. ೧೪೩; ವ್ಯ ೩೦

ದೇವರಾಜ ಮೊಹಲ್ಲ- (೪ ಸ್ಥಾನಗಳು) ಶ್ರೀ॥ ಬಿ ನಾರಾಯಣಸ್ವಾಮಿ ೫೧೩, ಶ್ರೀಮತಿ ಎಂ. ಆರ್ ಲಕ್ಷ್ಮಮ್ಮ ೫೦೪, ಶ್ರೀಗಳಾದ ಜಿ. ರಂಗಯ್ಯ ೪೬೦ ಕಾಂ ; ಶ್ರೀ ಎ ವೆಂಕಟೇಶಯ್ಯ ೪೫೦ ಸ್ವ; ಕೆ. ಸತ್ಯನಾರಾಯಣ ರಾವ್ ೩೮೭ ಕಾಂ ಸಹಿತ್ರ ೩೩೦, ಎ ಕೆ ರಂಗರಾವ್ ಜೀವನ ಪ್ರಕಾಶ್ ೨೦೮, ತಮ್ಮಯ್ಯ ಸ್ವ

ಈ ಮೊಹಲ್ಲಾದಿಂದ ಸ್ವತಂತ್ರ ಉಮೇದುವಾರರಾಗಿದ್ದ ಶ್ರೀ॥ ತಮ್ಮಯ್ಯನವರಿಗೆ ಓಟು ಮಾಡಿದುದರಲ್ಲಿ ಎಂಟನೇ ಒಂದು ಪಾಲಿಗಿಂತಲೂ ಕಡಿಮೆ ಓಟುಗಳು ಬಂದಿದ್ದರಿಂದ ಅವರು ಠೇವಣಿ ಹಣವನ್ನು ಕಳೆದುಕೊಂಡಿರುತ್ತಾರೆ. ಈ ಮೊಹಲ್ಲಾದ ೦ ಓಟುಗಳು ವ್ಯರ್ಥವಾದುವು

ಲಷ್ಕರ್ ಮೊಹಲ್ಲ- ಶ್ರೀಗಳಾದ ಇ. ಪಿ ವೃ ೬೩೩, ಟಿ ಚಂದ್ರಶೇಖರ ಗೌಡ, ಪಿ ಗೋಪಾಲ ಕೃಷ್ಣ ಶೆಟ್ಟಿ ೬೫೩, ಎಸ್. ದಾಸಪ್ಪ ೬೦೩, ಬಿ ಕೆ. ರಾಜರತ್ನಯ್ಯ ೬೦೩ ಕಾಂ ,ಬಿ ಎಸ್. ಸುಬ್ಬಣ್ಣ, ಮೀರ್ ನೂರ್ ಹುಸೇನ್ ೧೮೩ ವ್ಯರ್ಥವಾದುದು ೧೩ ೫ ಸ್ಥಾನಗಳು

ಮಂಡಿ ಮೊಹಲ್ಲ- ಶ್ರೀಗಳಾದ ಟಿ. ಮರಿಶೆಟ್ಟಿ ೬೯೯, ಜಿ. ಆರ್. ರಂಗಸ್ವಾಮಿಶೆಟ್ಟಿ ೬೯೧, ಎಂ ಎಸ್. ನಂ ೬೭೩, ಎಚ್. ತಮ್ಮಯ್ಯ ೬೬೦, ಕೃಷ್ಣಸ್ವಾಮಿ ೬೫೭ ಕಾಂ.; ಅಬ್ದುಲ್ ವಹೀದ್ ೨೦೭ ಸ್ವ (೫ ಸ್ಥಾನಗಳು)

ದೇವರಾಜ ಮೊಹಲ್ಲಾ- ಶ್ರೀ॥ ಗಳಾದ ಎಲ್ ರಾಮಚಂದ್ರರಾವ್ ೯೯೧, ಶ್ರೀನಿವಾಸಯ್ಯಂಗಾರ್ ೮೬೪, ಚೌಡಯ್ಯ, ಎಸ್ ಲಿಂಗಣ್ಣ ೭೨೮, ಕಾಂ ರಾಮರಾವ್ ೪೩೮, ಡಾ॥ ಎ. ವಿ. ರಾವ್ ೪೩೩, ಬಿ ಆರ್. ಲಕ್ಷ್ಮಣ ರಾವ್ ಸ್ವ ವ್ಯರ್ಥ ೩೪ (೪ ಸ್ಥಾನಗಳು)

ಕೃಷ್ಣರಾಜಮೊಹಲ್ಲಾ-ಪಿ ಸೀತಾರಾಮು ೬೮ ಎ ಎನ್. ಸೂರ್‍ಯನಾರಾಯಣ ೬೮೩ ಶ್ರೀಮತಿ ಎಂ. ಎನ್ ಸೀತ ೬೬೮ ಡಾ॥ ಸೂರ್‍ಯನಾರಾಯಣ ೬೫೧, ಕಾಂ ಟಿ. ಎಸ್ ರಾಜಗೋಪಾಲಯ್ಯಂಗಾರ್ ೪೬೪. ರಾವ್ ಬಹದ್ದೂರ್ ಎಂ. ರಾಮಸ್ವಾಮಿ ೪೩೦. ಟಿ. ನಾರಾಯಣ ೩೪೩ ಬಿ ಶ್ರೀನಿವಾಸಯ್ಯಂಗಾರ್ ೧೯೩. ಸ್ವತಂ. (೪ ಸ್ಥಾನಗಳು)

[illegible] ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೫] ಶುಕ್ರವಾರ ೧೫—೧೧—೪೬ [ಸಂಚಿಕೆ ೮೮

ಪುರ ಚುನಾವಣೆಯಲ್ಲಿ ಅದ್ಭುತ ಕಾಂ॥ ವಿಜಯ

ಪೌರಸಭೆಯಿಂದ ಪರಿಹಾರ

ಮೈಸೂರು ೧೫

ನಜರ್‌ಬಾದ್ ನಿವಾಸಿ ಶ್ರೀ ತಮ್ಮಯ್ಯನವರು ದೇವರಾಜ ಮಾರ್ಕೆಟ್ಟಿನಲ್ಲಿ ಜಾರಿ ಬಿದ್ದು ಗಾಯಗೊಂಡು ಮ್ಯುನಿಸಿಪಾಲಿಟಿಯ ಮೇಲೆ ಒಂದನೇ ಮುನ್ಸೀಫರವರ ಕೋರ್ಟಿನಲ್ಲಿ ದಾವಾ ಹೂಡಿದ್ದರು. ಅದರ ಬಗ್ಗೆ ಮುನ್ಸೀಫರು ಮ್ಯುನಿಸಿಪಾಲಿಟಿಯವರು ವಾದಿಗೆ ಪರಿಹಾರವಾಗಿ ೬೫೦ ರೂ ಗಳನ್ನು ಕೊಡಬೇಕೆಂದು ನಿನ್ನೆ ತೀರ್ಪು ಕೊಟ್ಟಿದ್ದಾರೆಂದು ತಿಳಿದು ಬಂದಿದೆ. ವಾದಿ ಪರ ಶ್ರೀ ಎಂ ಎನ್. ಅನಂತರಾಮು ಶಾಸ್ತ್ರಿಗಳು ವಕಾಲತ್ತು ವಹಿಸಿದ್ದರು.

ಶಂಕರಪ್ಪ ಸ್ಮಾರಕ ಚರ್ಚಾ ಸ್ಪರ್ಧೆ

ವಿದ್ಯಾರ್ಥಿ ಕಾಂಗ್ರೆಸ್ ಆಶ್ರಯದಲ್ಲಿ ಶ್ರೀ ಶಂಕರಪ್ಪ ಸ್ಮಾರಕ ಚರ್ಚಾ ಸ್ಪರ್ಧೆಯು ಈ ತಿಂಗಳು ಕೊನೇ ವಾರದಲ್ಲಿ ನಡೆಯುವುದು. ಇದರಲ್ಲಿ ರಾಜಧಾನಿಯ ಎಲ್ಲಾ ಕಾಲೇಜ್ ಮತ್ತು ಹೈಸ್ಕೂಲ್ ವಿದ್ಯಾರ್ಥಿಗಳೂ ಭಾಗ ವಹಿಸಬಹುದು. ಉತ್ತಮ ಭಾಷಣಕಾರರಿಗೆ ಹತ್ತು ಬೆಳ್ಳಿಯ ಕಪ್ಪುಗಳನ್ನು ಬಹುಮಾನವಾಗಿ ಇಟ್ಟಿದೆ. ಹೆಚ್ಚಿಗೆ ವಿವರಗಳನ್ನು ಕಾರ್ಯದರ್ಶಿಗಳಾದ ಶ್ರೀ ಶಂಕರರಾಜ್‌ರವರಿಂದ ತಿಳಿದುಕೊಳ್ಳಬಹುದು

ನೆಹರೂ ಜಯಂತಿ

ಅಖಿಲ ಮೈಸೂರು ಬ್ರಾಹ್ಮಣ ವಿದ್ಯಾರ್ಥಿ ನಿಲಯದ ಆಶ್ರಯದಲ್ಲಿ ನಿನ್ನೆ ಪಂಡಿತ ಜವಹರಲಾಲರ ಜಯಂತಿಯನ್ನು ಆಚರಿಸಲಾಯಿತು ಶ್ರೀ॥ ಡಿ ಎಂ ಸಿದ್ದಯ್ಯನವರು ಅಧ್ಯಕ್ಷತೆ ವಹಿಸಿದ್ದರು ಶ್ರೀಗಳಾದ ನಾರಾಯಣರವರು, ಜಿ ಪಿ ದಾಸೇಗೌಡರು ನೆಹರೂರವರ ದೇಶ ಸೇವೆ, ತ್ಯಾಗ ಮತ್ತು ಜೀವನದ ಚಾರಿತ್ರ್ಯ ವಿಷಯವಾಗಿ ಭಾಷಣ ಮಾಡಿದರು

ಹಳೇ ವಿದ್ಯಾರ್ಥಿಗಳ ಸಂಘ

ನಾಳೆ ಸಂಜೆ ೫॥ ಘಂಟೆಗೆ ಮಹಾಜನ ಹೈಸ್ಕೂಲಿನ ಹೊಸ ಕಟ್ಟಡದಲ್ಲಿ ಶಾಲೆಯ ಹಳೇ ವಿದ್ಯಾರ್ಥಿಗಳ ಜನರಲ್ ಬಾಡಿ ಮೀಟಿಂಗನ್ನು ಸೇರಿಸಲು ಏರ್ಪಾಡಾಗಿದೆ. ಹಳೇ ವಿದ್ಯಾರ್ಥಿಗಳೆಲ್ಲರೂ ಬರಬೇಕೆಂದು ಕೋರಲಾಗಿದೆ

ಬಹಿರಂಗ ಸಭೆ

ಈ ದಿನ ಸಂಜೆ ೭ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ನಗರ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಬಹಿರಂಗ ಸಭೆ ನಡೆಯುತ್ತದೆ ಸರ್ವರಿಗೂ ಸ್ವಾಗತವಿದೆ

ಮೈಸೂರು ಸರ್ಕಾರದ ೯ ಕೋಟಿ ರೂ. ಸಾಲ

ಶೇ ೩ ರೂ ಬಡ್ಡಿದ ವಲ್ಲ ೧೯೫೮ ರಲ್ಲಿ ವಾಪಸ್ ಕೊಡುವ ಕರಾರಿನಮೇಲೆ ಮೈಸೂರು ಸರ್ಕಾರವು ೯ ಕೋಟಿ ರೂ. ಗಳ ಸಾಲವೆತ್ತುವುದೆಂದು ತಿಳಿದು ಬಂದಿದೆ

ಹರತಾಳ

ಮೈಸೂರು ೧೫

ಪಂಡಿತ ಮದನಮೋಹನ ಮಾಳವೀಯರ ನಿಧನದ ಬಗ್ಗೆ ಸಂತಾಪ ಸೂಚಿಸುವ ಸಲುವಾಗಿ ರಾಜಧಾನಿಯ ಸಂತೇಪೇಟೆ, ದೊಡ್ಡ ಪೇಟೆ, ಸಯ್ಯಾಜಿರಾವ್ ರಸ್ತೆ ಮುಂತಾದ ಪ್ರಮುಖ ಪೇಟೆ ಬೀದಿಗಳ ಅಂಗಡಿಗಳನ್ನು ಮುಚ್ಚಿ ಹರತಾಳವನ್ನು ಈ ದಿನ ಆಚರಿಸಲಾಯಿತು.

ಕಸ್ತೂರಿ ಬಾ ಶಿಬಿರದಲ್ಲಿ ಕಮಲಾದೇವಿ

ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರವರು ಕರ್ನಾಟಕದ ಏಜೆಂಟರಾದ ಶ್ರೀಮತಿ ಉಮಾಬಾಯಿ ಕುಂದಾಪುರರೊಡನೆ ಕಳೆದ ಬಾನುವಾರ ಬೇಲೂರಿನ ಸ್ತ್ರೀಯರ ತರಬೇತಿ ಶಿಬಿರಕ್ಕೆ ಭೇಟಿಯಿತ್ತಿದ್ದರು. ಶ್ರೀಮತಿ ಯಶೋಧರಾ ದಾಸಪ್ಪನವರು ಅಲ್ಲಿನ ಕಾರ್ಯಕರ್ತರನ್ನು ಪರಿಚಯ ಮಾಡಿಕೊಟ್ಟರು. ಕಮಲಾದೇವಿಯವರು ಸೇವಕಿಯವರನ್ನು ಉದ್ದೇಶಿಸಿ ಹಿತೋಪದೇಶ ಮಾಡಿದರು. ಈ ಸಂಸ್ಥೆಯು ನಮ್ಮ ರಾಷ್ಟ್ರದ ಮುಂದಿನ ಏಳಿಗೆಗೆ ಉಪಯೋಗವಾಗುವುದೆಂಬುದು ತಮ್ಮ ದೃಢ ನಂಬಿಕೆ ಎಂದು ಶ್ರೀಮತಿಯವರು ತಿಳಿಸಿದರು

ಸಂತಾಪಸೂಚಕ ಸಭೆ

ನಿನ್ನೆ ವಕೀಲರುಗಳ ಸಂಘದ ಆಶ್ರಯದಲ್ಲಿ ಪಂಡಿತ ಮದನಮೋಹನ ಮಾಳವೀಯರ ನಿಧನದ ಬಗ್ಗೆ ಸಂತಾಪ ಸೂಚಕ ಸಭೆ ಸೇರಿದ್ದಿತು. ಸಂಘದ ಅಧ್ಯಕ್ಷರಾದ ಶ್ರೀ ಎಂ. ಲಕ್ಷ್ಮೀನಾರಾಯಣರಾಯರು ಅಧ್ಯಕ್ಷತೆ ವಹಿಸಿದ್ದರು. ಅನೇಕರು ಮಾಳವೀಯರ ಗುಣಗಾನ ಮಾಡಿದರು

ರಾಜಪ್ರಾಂಗಣದಲ್ಲಿ ಡಿಸೆಂಬರ್ ೧೦

ಠೀಗು ರಾಜ್ಯಾಂಗ ಸಭೆಗೆ ಬಹಿಷ್ಕಾರ ಹಾಕಿದ ಪರಿಷತ್ತಿನ ನಿರ್ಣಯವನ್ನು [illegible] ಸಭೆಯ ಭಾಗವಹಿಸುವ ತೀರ್ಮಾನಿಸಿರುವ ಕಾಂಗ್ರೆಸ್ [illegible] ಡಿಸೆಂಬರ್ ೯ನೇ ತಾ॥ ರಾಜಪ್ರಾಂಗಣದಲ್ಲಿ ಸ್ವೀಕರಿಸಬೇಕೆಂದು ಖಚಿತವಾಗಿ ತಿಳಿದು ಬಂದಿದೆ

ಉಪ್ಪಿನ ಸರೋವರದ ಪತ್ತೆ

ಸಿಂಧ್ ಪ್ರಾಂತದ ಕಂಟಾರ್ ಎಂಬಲ್ಲಿ ಒಂದು ಉಪ್ಪಿನ ಸರೋವರ ಪತ್ತೆಯಾಗಿದೆ. ಈಗ ದಿನವೊಂದಕ್ಕೆ ೨೦ ಮಣ ಉಪ್ಪನ್ನು ಗ್ರಾಮಸ್ಥರು ಅದರಿಂದ ತೆಗೆಯುತ್ತಿದ್ದಾರೆ. ಸರಿಯಾದ ಯಂತ್ರೋಪಕರಣಗಳನ್ನೊದಗಿಸಿದಲ್ಲಿ ಪೂರ್ತಿ ಜಿಲ್ಲೆಗೆಲ್ಲಾ ಅದರಿಂದ ಉಪ್ಪನ್ನು ಒದಗಿಸಬಹುದೆಂದು ವರದಿಯಾಗಿದೆ

ಶೋಕ ದಿನಾಚರಣೆ

ನಂಜನಗೂಡು ೧೫

ಪಂಡಿತ ಮದನಮೋಹನ ಮಾಳವೀಯರ ನಿಧನದ ಬಗ್ಗೆ ಗೌರವ ಸೂಚಿಸುವ ಸಲುವಾಗಿ ನಿನ್ನೆಯ ದಿನ ಅನೇಕ ಹಿಂದೂ ಮತ್ತು ಮುಸಲ್ಮಾನ ಸಹೋದರರು ಅಂಗಡಿಯನ್ನು ಮುಚ್ಚಿದ್ದರು. ಹೈಸ್ಕೂಲ್ ಮಿಡಲ್ ಸ್ಕೂಲ್ ಮತ್ತು ಪ್ರೈಮರೀ ಸ್ಕೂಲಿನ ವಿದ್ಯಾರ್ಥಿಗಳು ಶಾಲೆಗೆ ಹೋಗಲಿಲ್ಲ. ಡಾ॥ ಲಿಂಗಣ್ಣನವರ ಛತ್ರದಲ್ಲಿ ರಾಷ್ಟ್ರಧ್ವಜವನ್ನು ಅರ್ಧ ಮಟ್ಟಕ್ಕೆ ಇಳಿಸಲಾಗಿತ್ತು. ಧ್ವಜದ ಅಡಿಯಲ್ಲಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುವ ನಿರ್ಣಯವಾದನಂತರ ಸಭೆಯು ಮುಕ್ತಾಯ ವಾಯಿತು.

ಮಾನ ಪತ್ರ, ಸಲ್ಲಿಕೆ

ಆರ್ಯವೈಶ್ಯ ಮಂಡಲಿಯವರು ಶ್ರೀ ವೈ ಕೆ ಎಸ್ ಲಕ್ಷ್ಮಣಶೆಟ್ಟರಿಗೆ ಸೇವಾ ಪದಕ ದೊರೆತುದಕ್ಕಾಗಿ ಒಂದು ಬಿನ್ನವತ್ತಳೆಯನ್ನು ಶ್ರೀ ಸೀತಾರಾಮಶೆಟ್ಟರ ಛತ್ರದಲ್ಲಿ ನಡೆದ ಸಭೆಯಲ್ಲಿ ಅರ್ಪಿಸಿದರು. ಸಬ್ ಡಿವಿಜನ್ ಆಫೀಸರಾದ ಶ್ರೀ ಜಿ ನರಸಿಂಹಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಅನೇಕರು ಅತಿಥಿಗಳ ಸೇವಾ ಪ್ರಶಂಸೆಯನ್ನು ಮಾಡಿದರು. ಶ್ರೀಮನ್ಮಹಾರಾಜರವರಿಗೆ ಪ್ರತ್ಯೇಕವಾಗಿ ಸಂತೋಷವನ್ನು ಸೂಚಿಸುವ ನಿರ್ಣಯವನ್ನು ಸಭೆಯು ಅಂಗೀಕರಿಸಿತು. ಎಲ್ಲರಿಗೂ ಸಿಹಿ ತಿಂಡಿಯನ್ನು ಹಂಚಲಾಯಿತು.

ನೇತಾಜಿಯವರ ಭಾವಚಿತ್ರ

ಮೈಸೂರು ೧೫

ಕಳೆದ ಮಂಗಳವಾರ ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ಕೆ ಚೆಂಗಲರಾಯರೆಡ್ಡಿಯವರು ನೇತಾಜಿ ಸುಭಾಷ್ ಚಂದ್ರಬೋಸರ ಭಾವಚಿತ್ರವನ್ನು ಸುಳ್ಯದ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಅನಾವರಣ ಮಾಡಿ, ಬೋಸರ ಜೀವನದ ವಿಷಯವಾಗಿ ಭಾಷಣ ಮಾಡಿದರು. ಅಖಿಲ ಕರ್ನಾಟಕ ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರು ಅಧ್ಯಕ್ಷತೆ ವಹಿಸಿದ್ದರು.

ಸಂತಾಪ ಸೂಚನೆ

ಮೊನ್ನೆ ಬೆಂಗ್ಳೂರು ಸಂಸ್ಕೃತ ವಿದ್ಯಾರ್ಥಿ ನಿಲಯದ ಸಂಘದ ಆಶ್ರಯದಲ್ಲಿ ಸಭೆ ಸೇರಿ ಶ್ರೀ ಮದನಮೋಹನ ಮಾಳವೀಯರ ನಿಧನಕ್ಕಾಗಿ ಶ್ರದ್ಧಾಂಜಲಿಯನ್ನು ಅರ್ಪಿ [illegible]

[illegible] ಕೂಟದ ಆಶ್ರಯದಲ್ಲಿ ನಿನ್ನೆ ನೆಹರೂ ಜಯಂತಿಯನ್ನು ಶ್ರೀ [illegible] ಅಧ್ಯಕ್ಷತೆಯಲ್ಲಿ ಆಚರಿಸಿದರು. [illegible]

ಸಾಧ್ವಿ

ತಾ॥ ೧೫-೧೧-೪೬ ಶುಕ್ರವಾರ

ಚುನಾವಣಾ ಫಲಿತಾಂಶ

ನಿನ್ನೆ ರಾಜಧಾನಿಯ ಪೌರಸಭೆಗೆ ನಡೆದ ಚುನಾವಣೆಯ ಫಲಿತಾಂಶವು ಹೊರಬಿದ್ದಿದೆ. ವಿಶೇಷ ಬಹುಮತವು ಕಾಂಗ್ರೆಸ್ಸಿಗೇ ದೊರೆತಿರುತ್ತದೆ. ಒಟ್ಟಿನಲ್ಲಿ ಕಾಂಗ್ರೆಸ್ ವಿರೋಧಿಗಳ ಶ್ರೇಣಿಯು ಮುಟ್ಟುಗೋಲಾಗಿರುತ್ತದೆ. ಪುರನಿವಾಸಿಗಳು ಮತ್ತೊಮ್ಮೆ ಕಾಂಗ್ರೆಸ್ಸಿನಲ್ಲಿ ತಮಗಿರುವ ಪ್ರೇಮವನ್ನು ವ್ಯಕ್ತಪಡಿಸಿದ್ದಾರೆ. ಇದಕ್ಕಾಗಿ ಅವರಿಗೆ ನಮ್ಮ ಹೃತ್ಪೂರ್ವಕವಾದ ಅಭಿನಂದನೆಗಳು. ಕಾಂಗ್ರೆಸ್ಸಿನ ಪರವಾಗಿ ಬೆಂಬಲ ನೀಡಿದ ರಾಜಧಾನಿಯ ಅಬಾಲವೃದ್ಧರಿಗೂ ನಮ್ಮ ಧನ್ಯವಾದವನ್ನು ಸಲ್ಲಿಸುತ್ತೇವೆ

ಚುನಾವಣೆಯಲ್ಲಿ ಜಯಶೀಲರಾಗಿ ಬಂದವರಿಗೆ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಅರ್ಪಿಸುತ್ತೇವೆ. ಅವರು ಪುರನಿವಾಸಿಗಳ ಸೇವೆಯನ್ನು ಉತ್ಸಾಹದಿಂದ ನಡೆಸಿ ಈ ನಗರವು ಇನ್ನೂ ಹೆಚ್ಚು ಹೆಚ್ಚಿನ ಅಭ್ಯುದಯವನ್ನು ಹೊಂದುವಂತೆ ಮಾಡಲು ಪ್ರಯತ್ನಿಸಲೆಂದು ಹಾರೈಸುತ್ತೇವೆ

ಎಲ್ಲ ಕಾಂಗ್ರೆಸ್ ಉಮೇದುವಾರರನ್ನೂ ಚುನಾಯಿಸುವುದು ರಾಜಧಾನಿಯಲ್ಲಿ ಈವರೆಗೆ ಬೆಳೆದಿರುವ ಪದ್ಧತಿ. ಆದರೆ ಈ ಸಾರಿ ಅದಕ್ಕೆ ಸ್ವಲ್ಪ ಕುಂದುಕವುಟಾಗಿರುತ್ತದೆ. ಕಾಂಗ್ರೆಸ್ ಸಂಸ್ಥೆಯ ಮೇಲೆ ನಡೆದ ಅಪಪ್ರಚಾರವೇ ಇದಕ್ಕೆ ಮುಖ್ಯ ಕಾರಣ. ಅಲ್ಲದೆ ಕಾಂಗ್ರೆಸ್ಸಿನವರೆಂದೆನಿಸಿಕೊಂಡ ಹಲ ಕೆಲವರು ಅನುಸರಿಸಿದ ವರ್ತನೆಯೂ ಸಹ ಇದಕ್ಕೆ ವಿಶೇಷ ಸಹಕಾರಿಯಾಯಿತು. ಆದರೂ ಕಾಂಗ್ರೆಸ್ ಸಂಗಡದವರ ಸಂಖ್ಯೆಯೇ ವಿಶೇಷ ಬಹುಮತದಲ್ಲಿರುವುದರಿಂದ ಇದುವರೆಗೆ ನಡೆದು ಬಂದ ಉನ್ನತವಾದ ಕಾರ್ಯನೀತಿಯನ್ನೇ ಇನ್ನು ಮೇಲೆಯೂ ಮುಂದುವರಿಸಲಾಗುವುದೆಂದು ನಂಬಬಹುದು. ಒಟ್ಟಿನಲ್ಲಿ ಚುನಾಯಿತ ಸದಸ್ಯರೆಲ್ಲರೂ ವಿಶಾಲ ಬುದ್ಧಿಯಿಂದ ಪುರನಿವಾಸಿಗಳ ಹಿತಸಾಧನೆಯನ್ನು ಮಾಡಲೆಂಬುದೇ ನಮ್ಮ ಹಾರೈಕೆ

ನಿಮ್ಮ ಮೈ ಮೊಗ್ಗುಮಲ್ಲಿಗೆಯಂತೆ
ಹೊಳೆಯಬೇಕೆ? ನೀವು
ಲಾವಣ್ಯ ಮೂರ್ತಿಗಳಾಗಬೇಕೆ?
ಹಾಗಾದರೆ
ನಮ್ಮ ಮೈಸೂರು ಸ್ಯಾಂಡಲ್
ಸೋಪನ್ನೇ ಉಪಯೋಗಿಸಿ!

ಮೈಸೂರು
ಸ್ಯಾಂಡಲ್
ಸೋಪ್

ಅನೇಕರಿಗೆ ಸೌಂದರ್ಯವನ್ನು
ಸಂಪಾದಿಸಿ ಕೊಟ್ಟಿದೆ. ನಿಮಗೂ
ಸಂಪಾದಿಸಿ ಕೊಡುತ್ತದೆ.
ಪರೀಕ್ಷಿಸಿ ನೋಡಿರಿ
ಎಲ್ಲೆಲ್ಲೂ ದೊರೆಯುತ್ತದೆ.
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.

ವಿದ್ಯಾರ್ಥಿಗಳಿಗೆ ಸಂದೇಶ

ಮೈಸೂರು ೧೪

ಮೈಸೂರು ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರೂ ಮತ್ತು ಅಖಿಲ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರೂ ಆದ ಶ್ರೀ ಎಸ್. ನಿಜಲಿಂಗಪ್ಪನವರು ಬೊಂಬಾಯಿಗೆ ಮೊನ್ನೆ ತೆರಳುವಾಗ ಮೈಸೂರು ವಿದ್ಯಾರ್ಥಿಗಳಿಗೆ ಈ ಸಂದೇಶವನ್ನಿತ್ತಿದ್ದಾರೆ:– ನಾವು ಸರ್ವತೋಮುಖವಾದ ಹೊಸ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ವಿಪರ್ಯಾಸಗಳು ಪ್ರಪಂಚದಲ್ಲಿ ಆಗತಕ್ಕ ಕಾಲ ಇದು. ಇಂತಹ ಸಂದಿಗ್ಧ ಸಮಯದಲ್ಲಿ ನಮ್ಮ ಮಹಾ ನಾಯಕರಾಗಿ ನಮ್ಮ ಸುದೈವದಿಂದ ಪೂಜ್ಯ ಬಾಪೂಜಿ ದೊರೆತಿದ್ದಾರೆ. ಅವರು ಹೇಳಿದ ರೀತಿಯಲ್ಲಿ ತೋರಿಸಿದ ದಾರಿಯಲ್ಲಿ ನಾವೆಲ್ಲರೂ ಕಾರ್ಯದಲ್ಲಿ ತೊಡಗೋಣ. ಸತ್ಯ ಮತ್ತು ಅಹಿಂಸೆಯ ಆಧಾರದ ಮೇಲೆ ಹೊಸ ಸಾಮ್ರಾಜ್ಯವನ್ನು ಕಟ್ಟೋಣ. ಈ ಉದ್ಯಮಕ್ಕೆ ವಿದ್ಯಾರ್ಥಿಗಳೆಲ್ಲರೂ ಸಿದ್ಧರಾಗಬೇಕಾಗಿ ನನ್ನ ಹಾರೈಕೆ.

ಟಿ. ಸಿ. ನಟರಾಜ್
ಔಷಧಾಲಯ

ನೇತ್ರ ಪರೀಕ್ಷೆಯು ಉಚಿತವಾಗಿ
ಮಾಡಲ್ಪಡುತ್ತದೆ.

ಅಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದೀಯ ಔಷಧಗಳೆಲ್ಲವೂ ದೊರೆಯುತ್ತವೆ.

Edited, printed and published by A. S. Nagarajan at the Sadhvi Press D-Subbiah Road, Mysore

ಸಾಂಗ್ಲಿ ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ

ಸಾಂಗ್ಲಿ ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯಾದಂತಾಗಿದೆ. ಅಲ್ಲಿನ ಪ್ರತಿನಿಧಿ ಸಭೆಯ ಬಹುಮತ ಪಕ್ಷವಾದ ಪ್ರಜಾ ಪರಿಷತ್ತಿನ ನಾಲ್ವರು ಪ್ರತಿನಿಧಿಗಳು ಮೊನ್ನೆ ದಿನ ಅಧಿಕಾರ ಸ್ವೀಕರಿಸಿದ್ದಾರೆ.

ನೋಟೀಸ್

ಗುಂಡ್ಲುಪೇಟೆ ತಾಲ್ಲೂಕು ಹೊಂಗಹಳ್ಳಿ ಗ್ರಾಮದಲ್ಲಿರುವ ಮುಸಳ್ಳಿ ಮಾದಮ್ಮನ ಮೊಮ್ಮಕ್ಕಳು ೧ ನೇ ಮಾದಮ್ಮ ೨ ನೇ ಬೋರಮ್ಮ ಇವರಿಗೆ ಬಾಗಾಯ್ತು ಮಾತಾಮಹಿಯ ಸ್ತ್ರೀಧನವಾದ ಆಸ್ತಿ ಹೊಂಗಹಳ್ಳಿ ಗ್ರಾಮದಲ್ಲಿ ೫ ಅಂಕಣ ಹೆಂಚಿನ ಮನೆ ಮತ್ತು ಮುಸಳ್ಳಿ ಗ್ರಾಮದ ಸರ್ವೆ ೪೧-೫೧ ಈ ಎರಡು ಖುಷ್ಕಿ ನಂಬರು ಜಮೀನುಗಳು ಸುಮಾರು ೨೦೦೦ ರೂ ಬೆಲೆಯುಳ್ಳ ಸೊತ್ತುಗಳಿರುತ್ತವೆ. ೧ ನೇ ಮಾದಮ್ಮನಿಗೆ ೨ ಗಂಡು ೨ ಹೆಣ್ಣುಮಕ್ಕಳು ಇದ್ದಾರೆ. ೨ ನೇ ಬೋರಮ್ಮನಿಗೆ ಮಕ್ಕಳೇ ಇಲ್ಲ. ಈಗ ೨ ನೇ ಬೋರಮ್ಮನು ಇತರ ದುರ್ಜನರ ಮಾತಿಗೆ ಒಳಪಟ್ಟು ೧ ನೇ ಮಾದಮ್ಮನಿಗೆ ಸೇರಿದ ಮೇಲೆ ಕಂಡ ಸ್ವತ್ತುಗಳನ್ನು ಆಧಾರ, ಭೋಗ್ಯ, ಕ್ರಯ ಮಾಡಲು ಪ್ರಯತ್ನ ಮಾಡುತ್ತಾಳೆ. ಸದರಿ ಸೊತ್ತುಗಳು ೧ ನೇ ಮಾದಮ್ಮನಿಗೂ ಮತ್ತು ಇವಳ ಮಕ್ಕಳಿಗೂ ಸೇರಿದ್ದು. ಯಾರಾದರೂ ೨ ನೇ ಬೋರಮ್ಮನಿಂದ ಆಧಾರ, ಭೋಗ್ಯ ಯಾ ಕ್ರಯ ಮಾಡಿಸಿ ಕೊಂಡಲ್ಲಿ ಅವರಿಗೆ ಯಾವ ವಿಧವಾಗಿಯೂ ಹೊತ್ತಾಗಲೀ ಅಥವಾ ಸಾಲದ ಮೊಬಲಗಾಗಲೀ ದೊರೆಯಲಾರದೆಂದು ಈ ಮೂಲಕ ತಿಳಿಯಪಡಿಸಿರುತ್ತದೆ

ಮಾದಮ್ಮನ ಹೆಬ್ಬೆಟ್ಟಿನ ರುಜು

ಬ್ರಿಟಿಷ್ ವಿದ್ಯಾರ್ಥಿಗ ಸಂಸ್ಕೃತ ಪಾಠ

ಬ್ರಿಟನ್ನಿನ ವಿಖ್ಯಾತ ತತ್ವಶಾಸ್ತ್ರ ಪ್ರೊ॥ ಸರ್ ಅರ್ನೆಸ್ಟ್ ಬಾರ್ಕರ್ ಕೇಂಬ್ರಿಡ್ಜ್‌ನಲ್ಲಿ ಭಾಷಣ ಮಾಡುತ್ತ ... ಸ್ ಮತ್ತು ಭಾರತದ ಸಂಸ್ಕೃತಿ ನಾಗರೀಕತೆಯನ್ನು ಕೊಂಡಾಡಿದರು ... ಟಿಷ್ ಮತ್ತು ಭಾರತದ ಸಾಂಸ್ಕೃತಿ ... ಧವ್ಯವನ್ನು ಹೆಚ್ಚಿಸಲೂ ಬ್ರಿಟಿಷ್ ... ರ್ಥಿಗಳು ಲ್ಯಾಟಿನ್ ಮತ್ತು ಗ್ರೀಕ್ ... ಸಂಸ್ಕೃತವನ್ನು ಅಭ್ಯಾಸ ಮಾಡಬೇ... ಹೇಳಿದರು.

ನಂ: ಉತ್ತಮ ಸರಕು ... ಉಸ್ತುವಾರಿಯಿಂದ ತಯಾ...
ಲೋಕಲ್ ಮೇಡ್ ಚಪ್ಪಲಿ
ಸುಲಭ ಬೆಲೆಗೆ ಸಿಗುತ್ತೆ.
—: ಅಲ್ಲದೆ :—

ಟಾಂಕಿಸ	D S	16-12-0	C
ಫ್ಲೂರ	,,	16- 4-0	
ಗೋಮಿಕ	,,	17- 8-0	
,,	S S.	13 12-0	
ಕುಮಾರ್	,,	13- 2-0	

ಒಂದು ಸಲ ಭೇಟಿಮಾಡಿ—
ಗೋಬಿನ್ ಫುಟ್‌ವೇರ್ ...
ಲ್ಯಾನ್ಸ್ ಡೌನ್ ಬಜಾರ್, ಮೈಸ...

ರಾಜಕಮಲ್, ಮೈಸೂರು
1946 ನೇ ನವಂಬರ್ 15 ನೇ ಶುಕ್ರವಾರದಿಂದ
ಪ್ರತಿದಿನ ಮೂರು ಆಟಗಳು
'ಡಾಕ್ಟರ್ ಕೊಟ್ನಿಸ್' ಕಿ ಅಮರ್ ಕಹಾನಿ'
ಶ್ರೀ ಶಾಂತಾರಾಂರವರ ದಿಗ್ದರ್ಶಕತ್ವ
ಮುಖ್ಯ ಭೂಮಿಕೆ :– ಶಾಂತಾರಾಂ, ಉಲ್ಲಾಸ್, ಜಯಶ್ರೀ
ಅಪೂರ್ವ ಲಾವಣ್ಯವೂ ರಮಣೀಯವೂ ಆದ "ಭಾರತ ಮಾತೆಯ ಮಾಂಗಲ್ಯ"
ಕ್ಕಾಗಿ, ತನ್ನ ಅಸುವನ್ನೇ ನೀಗಿದ ವೀರನ ತ್ಯಾಗಮಯವನ್ನು ಚಿತ್ರಿಸಿರುವ
ಅಮರ ಚಿತ್ರ. ಈ ಕಥೆಯಲ್ಲಿ ಜಗತ್ತೇ ಅಡಗಿಹೋಗಿದೆ. ವೀರಾ
ಗ್ರಣಿಯ ಮನ ಒಲಿದರೆ ಭಾರತವು ಬೆಳಗುವ ಜ್ಯೋತಿಯಾಗಬ
ಹುದು. ವಿರೋಧವಾದರೆ ವಿಶ್ವವನ್ನೇ ಕಬಳಿಸುವ "ಆಟಂ
ಬಾಂಬ್" ಆಗಬಹುದು. ಇದು ಹೇಗೆ ವರ್ಣಿತವಾಗಿದೆ
ಯೆಂದು ಇಂದೇ ಬಂದು ನೋಡಿ ಆನಂದಪಡಿ!

From Friday the 15th Nov 1946 for 4 days at
10-30 a. m.
'Adventures of Marco-Polo'
the name that spells admiration, the Theme that infuses
admiration and the desire that tempts you
to witness the picture
A SAMUEL GOLDWYN MIGHTY MARVEL!
Advance Booking is accepted between 10 a.m. 12 a.m.

ರಣಜಿತ್ ಟಾಕೀ...
೧೫-೧೧-೪೬ನೇ ಶುಕ್ರವಾ...
ದಿಂದ ಪ್ರತಿದಿನ ೩ ಆಟ...
ಮೈ ಶಾ ಕರೂ...
ಪಾತ್ರ:–ಸೂರಿಯಾ, ಪಹರಿ ಸನ...
ಷಾ ನವಾಬ್.

ಸಾಧ್ವಿ
ಗೆ
ಕೂಡಲೇ ಚಂದಾದಾರರಾಗಿ
(ತಿಂಗಳಿಗೆ ಚಂದಾ ಎಂಟಾಣೆ ಮಾ...



ಎಲ್ಲಾ ಕುಪ್ಪಸಗಿಂತಲ...
ಆರ್. ಜಿ. ಕುಪ್ಪಸ...
ಚನ್ನಾಗಿರುತ್ತದೆ

ರಿಜಿ. ನಂ. ೨೪೭ ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶನಿವಾರ ೧೬—೧೦—೪೬ [ಸಂಚಿಕೆ ೮೮

ಕಮ್ಯೂನಿಸ್ಟರಿಂದ — — ಗ್ರೀಸಿನಲ್ಲಿ ದಂಗೆ

ದಿವಾನರು ದೆಹಲಿಗೆ

ಸು.] ಬೆಂಗಳೂರು ೧೫
ದಿವಾನರಾದ ಸರ್ ಎ. ರಾಮಸ್ವಾಮಿ ಮೊದಲಿಯಾರರು ಮುಂದಿನ ತಿಂಗಳು ಮ ನದಲ್ಲಿ ದೇಶೀಯ ಸಂಸ್ಥಾನಗಳ ಸಂ ಧಿ ಸಭೆಗಳ ಸಂಬಂಧವಲ್ಲಿ ಬೊಂ ಗೆ ತೆರಳುವರೆಂದು ತಿಳಿದುಬಂದಿದೆ. ಲ್ಲಿ ಅವರು ಮುಂದಕ್ಕೆ ದೆಹಲಿಗೂ ಗಿ ರಾಜ್ಯಾಂಗ ರಚನಾ ಸಭೆಗೆ ದೇಶೀ ಸ್ಥಾನಗಳ ಪ್ರಾತಿನಿಧ್ಯದ ವಿಚಾರದ ವಾರ ನಡೆಸಲು ಮುಖ್ಯವಾಗಿ ಇರುವ ಬರಬೇಕಾಗುವುದೆಂದೂ, ಆ ದಲ್ಲಿ ಅವರು ದೆಹಲಿಯಲ್ಲಿ ಸುಮಾ ಮು ತಿಂಗಳು ಇರುವ ಸಂಭವವಿದೆ ನ, ಸಚಿವರಾದ ಡಾ॥ ರಾಯರ ಆ ಕಾಲದಲ್ಲಿ ದಿವಾನರ ಕೆಲಸ ಮಾ ಂದೂ ಅಧಿಕಾರಿ ವರ್ಗಗಳಲ್ಲಿ ಹೇಳ ತ್ತಿದೆ.

ಸಿ. ಪಿ. ಯವರ ಆಗಮನ

ತಿರುವಾಂಕೂರು ದಿವಾನರಾದ ಸರ್ ಸಿ. ರಾಮಸ್ವಾಮಿಅಯ್ಯರ್‌ರವರು ಈ ಬೆಳ ಗ್ಗೆ ೧೧ ಗಂಟೆಗೆ ವಿಮಾನದಲ್ಲಿ ತಿರುವಾಂಕೂರಿನಿಂದ ಇಲ್ಲಿಗೆ ಬಂದರು. ದಂ ಅವರ ಮಳ್ಳವ ಮನೆಯಲ್ಲಿ ಬಿಡಾರ ದ್ದಾರೆ. ನಾಳೆ ಅವರು ಬೊಂಬಾ ಪ್ರಯಾಣ ಮಾಡುವರು.

ಇಂಜನಿಯರುಗಳ ಸಭೆ

ಸ್ ಡಾ॥ ಸಂಸ್ಥಾನದ ಇಂಜನಿಯ ಸಂಘದ ೩೫ ನೇ ವಾರ್ಷಿಕ ಸಭೆ ಲಂಭೋತ್ಸವವನ್ನು ದಿವಾನರು ನೆರ ನರು.

ಸರ್ಕಾರಿ ಸುದ್ದಿ

ಪ್ರವೃತ್ತಿ ಇಲಾಖೆಯ ಆಡಿಟ್ ಭಾ ಕೆಲಸ ನಡೆಸುತ್ತಿರುವ ಅಧಿಕಾರಿಗ ಬಿ. ಶೇಷಗಿರಿರಾವ್, ಎಂ. ಕೆ. ಸ್ಯಂಗಾರ್ ಮತ್ತು ಪಿ. ರಾಜಮ ಮಯ್ಯ, ಇವರುಗಳನ್ನು ಡೆಪ್ಯುಟೀ ಟ್ರಲ್ ದರ್ಜೆಗೆ ಬಡ್ತಿ ಮಾಡಲಾ ಕಿಣಿವಮೆ ಕಚೇರಿಯ ಉಪಕಾರ್ಯ ದಾದ ಶ್ರೀ ಎಂ. ಎಸ್. ನರಸಿಂಹ ನ್ನು ಡೆಪ್ಯುಟೀ ಕಾರ್ಯದರ್ಶಿಗಳ ಬಡ್ತಿ ಮಾಡಲಾಗಿದೆ. ಅದೇ ಕ ಸೂಪರಿಂಟೆಂಡೆಂಟ್ ಶ್ರೀ ಎಂ ನರಸಿಂಹಯ್ಯರನ್ನು ಉಪಕಾರ್ಯ ನ್ನಾಗಿ ನೇಮಿಸಿದೆ. ಹಂಪರ ಟ್ರಾ ಗೆ ಖಾಸಗೀ ಅಧ್ಯಕ್ಷರನ್ನು ಚುನಾ ಹಕ್ಕನ್ನು ಕೊಡಲಾಗಿದೆ. ಮೈ ನಿಸಿಪಾಲಿಟಿಗಳಲ್ಲಿ ಕೆಲವು ರಸ್ತೆ ಕುರಿ ಮತ್ತು ಆಡುಗಳನ್ನು ವಧೆ ಸಬೆಂದು ಆಜ್ಞೆಯಾಗಿದೆ. ಬೆಂ ಲ್ಲಿ ಸ್ಥಾಪಿತವಾಗಿರುವ ಜಯಪುರ ಕಂಪೆನಿಯು ಮೈಸೂರು ಸರ್ಕಾರ ಸಲ್ಪಟ್ಟಿದೆ.

ಶರಕದಂತಕ್ಕೆ ಸುಪ್ರ ವರ್ದಿ ಕಾರಣ

ಗದಲ್ಲಿ ನಡೆದ ಘೋರಕೃತ್ಯಗ ಪ್ರಮುಖರಲ್ಲೊಬ್ಬರು ಬಂಗಾಳದ ಮಾಣದಲ್ಲಿ ಅಂತಹ ದುರಂತವಾ ಅವ್ರರಿಂದ ಬಿಹಾರಿನ ದುರಂ ಸುಪ್ರವರ್ದಿಯವರೇ ಜವಾ ನೊನ್ನೆ ತಾನೆ ಪ್ರಾಂತೀಯ ಅಧ್ಯಕ್ಷತೆಗೆ ರಾಜೀನಾಮೆ ಸಲ್ಲಿಸಿದ ಮಹಮದ್ ಅಕ್ರಮ್‌ಖಾನರವ ಇಷ್ಟು ಬಿಹಾರಿಗೆ ತೆರಳಿದ್ದಾರೆ

ಘೋಷಣೆಗಳು ಸಾಕು

ಸರ್. ಸಿ. ಪಿ. ಯವರ ಭಾಷಣ

ಸ್ವಂ ಸು ಪ್ರೋ॥] ಬೆಂಗಳೂರು ೧೬

ತಿರುವಾಂಕೂರು ದಿವಾನರಾದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರು ೧೬ಟ ರೀ ಸಂಘದವರನ್ನುದ್ದೇಶಿಸಿ ನಿನ್ನೆ ಭಾಷಣ ಮಾಡಿ ಘೋಷಣೆಗಳ ಅನರ್ಥದ ವಿಚಾರ ವನ್ನು ವಿವರಿಸಿದರು. ದೇಶದಲ್ಲಿ ಬಿಕ್ಕಟ್ಟು ಮತ್ತು ಅನಾಹುತಗಳು ಸಂಭವಿಸಿದಾಗ ಘೋಷಣೆಗಳ ಆವಶ್ಯಕತೆ ಇದೆಯೆಂದೂ ಆದರೆ ಈಗ ಅವುಗಳಿಂದ ವಿಶೇಷ ಹಾನಿ ಯುಂಟಾಗುತ್ತಿದೆಯೆಂದೂ ತಿಳಿಸಿದರು. ಘೋಷಣೆಗಳು ಉತ್ತಮ ಸೇವಕರಂತೆ ಇ ರುವುವೇ ವಿನಾ ಒಳ್ಳೆಯ ಯಜಮಾನರಂತೆ ತೆ ಇರಲಾರವು ಎಂಬ ತತ್ವವನ್ನು ನಿರೂಪಿಸಿ ದರು.

ಸ್ವಾತಂತ್ರ್ಯವನ್ನು ಪಡೆದಾಗ ಅವರನ್ನು ಹಿಂದಕ್ಕೆ ಹೋಗಿರೆಂದು ಹೇಳದ ಘೋ ಷಣೆಯು ಉಚಿತವಾಗಿತ್ತು. ಆದರೆ ನಿಮ ರೋಪವರನ್ನು ದೆಹಲಿಗೆ ವಾಪಸ್ಸು ಹೋಗು ವಂತೆ ಮೊನ್ನೆ ಹೇಳಲಾದ ಘೋಷಣೆಯು ಅಭಾಸಕರವಾಗಿರುತ್ತದೆ. ಘೋಷಣೆಗಳಿಗೆ ತಕ್ಕಕಾಲ ಸನ್ನಿವೇಶಗಳಿವೆ. ಘೋಷಣೆಗ ಳು ನಿರ್ನಾಮವಾಗಲೆಂದು ಹೇಳುವ ಕಾಲ ಈಗ ಬಂದಿದೆ.

ಬ್ರಿಟನ್ನಿನ ವಿ ಪ್ಲಗಳಿಗೆ ಪ್ರೋತ್ಸಾಹ ಕೊಡುತ್ತಿದ್ದ ಬ್ರಿಟಿಷರ ತಂತ್ರವನ್ನು ಪ್ರತಿ ಭಟಿಸಲು ಖಾದಿ ಘೋಷಣೆಯನ್ನು ಮಾ ಡತ್ತಿತ್ತು. ಆದರೆ ಈಗ ಕೈಗಾರಿಕೆಯ ಉ ದ್ಯಮದ ಕಾಲ ಬಂದಿದೆ. ಆದದರಿಂದ ಈಗ ಖಾದಿ ಘೋಷಣೆ ಅಗತ್ಯವಿಲ್ಲ.

ಕ್ವಿಟ್ ಇಂಡಿಯಾ ಘೋಷಣೆಯು ಏಕ ಯುವಾಗಿ ಸಭೆಯಲ್ಲಿದ್ದ ಆಂಗ್ಲೇಯರಲ್ಲೊ ಬ್ಬರಿಗೆ ಉತ್ತರಕೊಡುತ್ತಾ ಸರ್ ಸಿ. ಪಿ. ಯವರು ಹೀಗೆ ಹೇಳಿದರು—ಆಂಗ್ಲೇಯ ರು ಶಾಶ್ವತವಾಗಿಯೇ ಭಾರತವನ್ನು ಬಿಟ್ಟು ಹೋಗುವ ದಿವಸ ಅವರು ಹೋಗುವ ಜನಾನುರಾಗವು ಮತ್ತು ವಿನಯವು ಅವ ರಿಗೆ ದೊರೆಯಲಾರದು. ಆರ್ಥಿಕ ಸಹಕಾರ ಕ್ಕಾಗಿ ಅವರಿಗೆ ಇಲ್ಲಿರಲು ಸದಾ ಸ್ವಾಗತವಿ ರುತ್ತದೆ. ರಾಜಕೀಯ ದೃಷ್ಟಿಗೆ ಇರುವು ದಿಲ್ಲ. ಪಾಕಿಸ್ಥಾನವು ಕಾರ್ಯತಃ ಸಾಧ್ಯವ ಲ್ಲದ ವಿಚಾರವೆಂದು ಮತ್ತೊಂದು ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು. ಐ. ಸಿ. ಎಸ್. ಅಧಿಕಾರಿಗಳು ಭಾರತದ ನಿಜವಾದ ಸೇವಕ ರಾಗಬೇಕೆಂದು ಹೇಳಿದರು. ಭಾಷಾವಾರು ಪ್ರಾಂತ ರಚನೆಯೂ ಅಷ್ಟು ಸಾಧ್ಯವಿಲ್ಲವೆಂ ದು ಅವರು ತಿಳಿಸಿದರು.

ವಂದನಾರ್ಪಣೆ

ಪುರಸಭಾ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ಸಿನೊಡನೆ ಸಹಕರಿಸಿದ ಓಟ ರು ಮಹಾಶಯರೆಲ್ಲರಿಗೂ, ಪ್ರಚಾರಕರಿಗೂ ಸ್ವಯಂ ಸೇವಕರಿಗೂ ಪ್ರತ್ಯಕ್ಷ ಮ ತ್ತು ಪರೋಕ್ಷರೀತಿಯಲ್ಲಿ ಸಹಕಾರ ಸಹಾ ಯವನ್ನು ನೀಡಿದ ಸಮಸ್ತರಿಗೂ ಈ ಮೂ ಲಕ ನಮ್ಮ ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸುತ್ತೇವೆ. —ಚುನಾವಣಾ ಸಮಿತಿ.

... ಕಾಂಗ್ರೆಸ್ ಉಮೇದುವಾರರಿಗೆ ಜ ಯ ದೊರಕಿಸಿಕೊಟ್ಟ ಸಾರ್ವಜನಿಕರನ್ನು ಸಾ॥ ಯೊಂಬಾಳೆ ರಂಗಯ್ಯನವರು ಅಭಿ ನಂದಿಸಿದ್ದಾರೆ.

ಹರಿಕಥೆ

ದೊಡ್ಡಪೇಟೆಯ ಕಬೀರ್ ರಸ್ತೆಯಲ್ಲಿ ರುವ ಪಾಂಡುರಂಗ ಸ್ವಾಮಿಯವರ ದೇವ ಸ್ಥಾನದಲ್ಲಿ ತಾ॥ ೧೬ರಿಂದ ೨೦ನೇ ತಾ॥ ವ ರೆಗೆ ಈ ಕೆಳಗೆ ಕಂಡಂತೆ ಕ್ರಮವಾಗಿ ಹರಿ ಕಥೆಗಳು ಕೀರ್ತನಕಾರರ ಮಂಡಲಿಯ ಆ ಶ್ರಯದಲ್ಲಿ ನಡೆಯುತ್ತವೆ. ಶನಿವಾರ ೧೬ನೇ ತಾ॥ ಶ್ರೀ ಗಮಕಿ ರಾಮಕೃಷ್ಣ ಶಾಸ್ತ್ರಿಗಳಿಂದ 'ಸತ್ಯಸಂಧ ಹರಿಶ್ಚಂದ್ರ', ೧೭ನೇ ತಾ॥ ಶ್ರೀ ಅನುಸೂಯಮ್ಮ ಭಾರತೀಯವರಿಂದ 'ಪಾಂಚಾಲಿ ಪ್ರತಾಪ' ೧೮ನೇ ತಾ॥ ಶ್ರೀ ಸಂಬಂದಮೂರ್ತಿಯವರ ರಿಂದ 'ಭಕ್ತ ಚಿಲ ರಾಮ ದಾಸ್' ೧೯ನೇ ತಾ॥ ಶ್ರೀ ಎಸ್. ಕೃಷ್ಣಯ್ಯಂಗಾರ್ಯರವ ರಿಂದ 'ಶ್ರೀನಿವಾಸ ಪರಿಣಯ'.

ಸಂತಾಪ ಸೂಚನೆ

ಪಂ॥ ಮದನಮೋಹನ ಮಾಳವೀಯರ ನಿಧನದ ಬಗ್ಗೆ ಸಂತಾಪ ಸೂಚಿಸಲು ನಿನ್ನೆ ಸಂಜೆ ಪುರಭವನದ ಆವರಣದಲ್ಲಿ ನಗರ ಕಾಂಗ್ರೆಸ್ ಸಮಿತಿಯವರು ಸಭೆ ನಡೆಸಿದ ರು. ಶ್ರೀ॥ ಎಸ್. ಚನ್ನಯ್ಯನವರು ಅ ಧ್ಯಕ್ಷತೆಯನ್ನು ವಹಿಸಿದ್ದರು. ಅಧ್ಯಕ್ಷರೂ ಶ್ರೀ॥ ಪಿ. ಸೀತಾರಾಮಯ್ಯನವರೂ ದಿವಂ ಗತ ಮಾಳವೀಯರು ಸಲ್ಲಿಸಿರುವ ಅಮೂ ಲ್ಯ ಸೇವೆಯನ್ನು ವಿವರಿಸಿ, ಅವರ ನಿಧನ ದಿಂದ ಭಾರತಕ್ಕೆ ಅಪಾರ ನಷ್ಟವಾಗಿದೆಯೆಂ ದರು. ದಿವಂಗತರ ಆತ್ಮಕ್ಕೆ ಶಾಂತಿ ದೊ ರೆಯಲು ಸಭೆಯ ಸ್ಥಿತದವರೆಲ್ಲಾ ಎದ್ದು ನಿಂತು ಮೌನವಾಗಿ ಗೌರವ ಸಲ್ಲಿಸಿದರು.

ಅಂತರ ಹಿಗಳಿಗೆ ಚರ್ಚೆ

ಮಹಾರಾಣಿ ಕಾಲೇಜಿನ ರಾಜ್ಯಶಾಸ್ತ್ರ ಸಂಘದ ಆಶ್ರಯದಲ್ಲಿ ಇದೇ ೧೯ನೇ ತಾ॥ ಸಂಜೆ ಕಾಲೇಜಿನ ಅಂಗಳದಲ್ಲಿ ಚ ರ್ಚಾಸ್ಪರ್ಧೆಯೊಂದು ಜರುಗುವುದು. ಶ್ರೀ ಎಂ. ಶಿವರಾಮಯ್ಯನವರು ಸೂಚಿಸಿದ ವಿಷ್ಯ ಕ್ಕೆ ಪ್ರಶ್ನೆ ವಿಷಯವು ಬರುವುದು. ಪ್ರಶಸ್ತಿ ದೊರೆಯಲು ಅಭ್ಯರ್ಥಿಗಳು ಭಾಷಣ ಮಾಡಲು ವಿದ್ಯಾರ್ಥಿನಿಯರಿಗೆ ಅವಕಾಶವಿರುವುದು.

ಗ್ರೀಸಿನಲ್ಲಿ ಕಮ್ಯೂನಿಸ್ಟರ ಹಾವಳಿ

ಗ್ರೀಸ್ ಗಡಿ ಪ್ರದೇಶದಲ್ಲಿರುವ ಮೆಸಿ ಡೋನಿಯಾದಲ್ಲಿ ಕಮ್ಯೂನಿಸ್ಟರು ದಂಗೆ ಎದ್ದು ಗೆರಿಲ್ಲಾ ಯುದ್ಧ ಹೂಡಿದ್ದಾರೆಂದು ವರದಿಯಾಗಿದೆ. ಪರಿಸ್ಥಿತಿ ಭಯಾನಕವಾ ಗಿದೆಯೆಂದು ಮಿಲಿಟರಿ ಪ್ರಕಟಣೆ ಹೊರ ಬಿದ್ದಿದೆ. ರಾಜಧಾನಿ ಕಡೆಯ ಟೆಲಿಫೋನ್ ತಂತಿಗಳನ್ನೆಲ್ಲಾ ಕತ್ತರಿಸಲಾಗಿದೆ. ರಾಜ ಕೀಯ ಮುಖಂಡರನ್ನು ಪ್ರಧಾನಿಗಳು ಆ ಹ್ವಾನಿಸಿ ಮಾತುಕತೆ ನಡೆಸಲಿದ್ದಾರೆ.

ಶಾಂತಿ ಸ್ಥಾಪನೆಗೆ ಪಾಕಿಸ್ಥಾನವೇ ಮದ್ದು

ಭಾರತದ ಭವಿಷ್ಯ ಆದಳಿತ ಪದ್ಧತಿಯ ನ್ನು ಕುರಿತು ಯಾವ ಕೆಲಸವನ್ನೂ ಕೇಂದ್ರ ತಾತ್ಕಾಲಿಕ ಸರ್ಕಾರವು ಮಾಡಬಾರದು. ದೇಶದಲ್ಲಿ ಶಾಂತಿಸ್ಥಾಪನೆಯಾಗಬೇಕಾದರೆ ಪಾಕೀಸ್ಥಾನ ದೊರೆತರೆ ಮಾತ್ರ ಸಾಧ್ಯ— ಎಂದು ಮಿ॥ ಜಿನ್ನಾರವರು ತಿಳಿಸಿದ್ದಾರೆ. ತಾತ್ಕಾಲಿಕ ಸರ್ಕಾರಕ್ಕೆ ಲೀಗು ಬಲಾತ್ ಪ್ರಯತ್ನದಿಂದ ಸೇರಬೇಕಾಯಿತೆಂದು ಅವ ರು ಹೇಳಿದ್ದಾರೆ. ಬ್ರಿಟಿಷ್ ದುರಂತವಾದ ಮೇಲೆ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಜನರನ್ನು ಬದಲಾಯಿಸಿಕೊ ಳ್ಳುವ ವಿಚಾರವನ್ನು ತೀವ್ರವಾಗಿ ಪರ್ಯಾ ಲೋಚಿಸಬೇಕಾಗಿದೆಯೆಂದೂ ಅವರ ಅಭಿ ಪ್ರಾಯಪಟ್ಟಿದ್ದಾರೆ. ಪಾಕಿಸ್ಥಾನದಲ್ಲಿ ಎಲ್ಲ ಕೋಮಿನವರಿಗೂ ಸಮಾನವಾದ ಹಕ್ಕು ಕೊಡಲ್ಪಡುವುದು; ಪಾಕೀಸ್ಥಾನ, ಹಿಂದೂ ಸ್ಥಾನಗಳು ಬ್ರಿ॥ ಸಾಮ್ರಾಜ್ಯಕ್ಕೆ ಸಂಬಂಧಿಸಿದ್ದು; ಕೆಲಕಾಲಾನಂತರ ಸಂ ಸ್ಥಾನಗಳು ತಮಗಿಷ್ಟಬಂದ ಪ್ರದೇಶಕ್ಕೆ ಸೇರಬಹುದು ಎಂದು ಜಿನ್ನಾರವರು ತಿಳಿ ಸಿದ್ದಾರೆ.

ವಂದನಾ ಸಭೆ

ಮೈಸೂರು ೧೬

ಪುರಸಭಾ ಚುನಾವಣೆಯಲ್ಲಿ ಕಾಂಗ್ರೆಸ್ಸಿ ಗೆ ಅಧಿಕ ಸ್ಥಾನಗಳು ದೊರಕಿಸಿಕೊಟ್ಟದ್ದ ಕ್ಕಾಗಿ ನಾಗರಿಕರಿಗೆ ವಂದನೆಗಳನ್ನರ್ಪಿಸಲು ನಿನ್ನೆ ಸಂಜೆ ಟೌನ್‌ಹಾಲ್ ಮೈದಾನದಲ್ಲಿ ಸಾರ್ವಜನಿಕ ಸಭೆ ಜರುಗಿತು. ಶ್ರೀ ಎಸ್. ಚನ್ನಯ್ಯನವರ ಅಧ್ಯಕ್ಷತೆ ವಹಿಸಿದ್ದ ರು. ಶ್ರೀಗಳಾದ ಎಸ್. ರಂಗರಾಮಯ್ಯ, ಟಿ. ಕೆ. ಕಾಮರಾಜು, ಪಿ. ಸೀತಾರಾ ಮಯ್ಯ ಮತ್ತು ಚಾಮುಂಡಯ್ಯನವರು ಭಾಷಣ ಮಾಡಿ ಕಾಂಗ್ರೆಸ್ಸಿನ ಮೇಲೆ ಪ ವಾದಗಳು ಬಂದುದರಿಂದ ಅಪಪ್ರಚಾರವು ನಾ ಗರೀಕ, ಸಾರ್ವಜನಿಕರು ಅವನ್ನೆಲ್ಲಾ ಲ ಕ್ಷ್ಯದಿಂದ, ಕಾಂಗ್ರೆಸ್ಸಿಗೆ ಅದ್ಭುತ ಜಯಗಳಿಸಿ ಕೊಟ್ಟಿದ್ದಾರೆ. ಮೈಸೂರು ನಾಗರಿಕರಿಗೆ ಕಾಂ ಗ್ರೆಸ್ಸಿನ ಮೇಲಿರುವ ಮಹ ಪ್ರೀತಿಯನ್ನು ತೋ ರಿಸುತ್ತದೆ ಎಂದು ಹೇಳಿದರು.

ಅಧ್ಯಕ್ಷರು ಕೊನೆಯಲ್ಲಿ ಜವಾಬ್ದಾರಿ ಸ ರ್ಕಾರದ ಹೋರಾಟ ಆರಂಭವಾಗಲಿರುವು ದನ್ನು ಪ್ರಸ್ತಾಪಿಸಿ, ಪ್ರಭುಗಳು ಜಾಬಿಸುವಂತೆ ಮತೀಯ ವಿಷಯ ಪ್ರಜಾ ಮುಖಂಡರ ನ್ನು ಕರೆಸಿಕೊಂಡು ಪರಿಸಿದೆಯೆಂದು ಮಾತು ಕತೆ ನಡೆಸಬೇಕು; ಪಿ. ಮ. ಪ್ರಯಾಸಪಡದು ಕಾಂ ಗ್ರೆಸ್ಸಿಗೆ ಬೆಂಬಲಕೊಟ್ಟ ನಾಗರಿಕರನ್ನು ವಂದಿಸಿದರು.

ಕಬೀರ್ ರಸ್ತೆಯಲ್ಲಿ

ಮಹಾರಾಜಾ ಕಾಲೇಜಿನ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ನಿನ್ನೆ ನಾಟಕ ಪ್ರದ ರ್ಶನ ... ... ಪ್ರ ಮುಖ್ಯರು ... ... ಸಹಕರಿಸಿದ್ದರು.

ಸಾಧ್ವಿ
ತಾ|| ೧೬-೧೧-೪೬ ಶನಿವಾರ

ಚುನಾವಣೆಯ ಪಾಠ

ಪೌರಸಭೆಯ ಚುನಾವಣೆಯಲ್ಲಿ ಎಂದಿನಂತೆ ಕಾಂಗ್ರೆಸ್ಸಿಗೆ ಅದ್ಭುತ ವಿಜಯವು ದೊರೆತಿರುತ್ತದೆ. ಒಂದು ಸ್ಥಾನವು ನಷ್ಟವಾಗಿರುವುದೇನೋ ನಿಜ. ಆದರೂ ಇಪ್ಪತ್ತನಾಲ್ಕು ಸ್ಥಾನಗಳಿಗೆ ಇಪ್ಪತ್ತಮೂರು ಜನರು ಆರಿಸಿ ಬಂದಿರುವುದು ಅದ್ಭುತವಾದ ವಿಷಯವೇ ಸರಿ. ರಾಜಧಾನಿಯ ಪುರನಿವಾಸಿಗಳು ಎಂದಿನಂತೆ ಕಾಂಗ್ರೆಸ್ಸಿನಲ್ಲಿ ಇಟ್ಟಿರುವ ಪ್ರೀತಿವಿಶ್ವಾಸಗಳು ಇದರಲ್ಲಿ ಪ್ರತಿಬಿಂಬಿತವಾಗಿವೆ.

ಹಿಂದೆ ಒಬ್ಬೊಬ್ಬ ಮಹಿಳೆಯರು ಮಾತ್ರ ಚುನಾವಣೆಗೆ ನಿಂತು ಜಯಶೀಲರಾಗುತ್ತಿದ್ದರು. ಈ ಸಾರಿ ಇಬ್ಬರು ಆರಿಸಿ ಬಂದಿರುವರು. ಪೌರಸಭೆಯ ಕಾರ್ಯಕಲಾಪಗಳಲ್ಲಿ ಸ್ತ್ರೀಯರು ಹೆಚ್ಚುಹೆಚ್ಚಿನ ಆಸಕ್ತಿಯನ್ನು ವಹಿಸುತ್ತಿರುವುದಕ್ಕೆ ಇದು ನಿದರ್ಶನವಾಗಿದೆ. ಈಸಾರಿ ಅನೇಕ ಜನ ಹೊಸಬರು ಕಾಂಗ್ರೆಸ್ಸಿನ ಪರವಾಗಿ ನಿಂತು ಆರಿಸಿ ಬಂದಿದ್ದಾರೆ. ಇವರಲ್ಲಿ ತರುಣರೂ, ಉತ್ಸಾಹಿಗಳೂ ಆದವರೂ ಬಹಳ ಜನರಿರುವರು. ಶ್ರೀಗಳಾದ ಎಸ್. ಲಿಂಗಣ್ಣ ಮತ್ತು ಟಿ. ಗೋಪಾಲ ಕೃಷ್ಣಶೆಟ್ಟರು ಹಿಂದೆ ಸದಸ್ಯರಾಗಿದ್ದು ವಿಶೇಷ ಅನುಭವವನ್ನು ಪಡೆದಿದ್ದಾರೆ.

ಕಾಂಗ್ರೆಸ್ ಸದಸ್ಯರ ಪೈಕಿ ಇನ್ನು ಮುಂದೆ ತರುಣರೂ, ಉತ್ಸಾಹಿಗಳೂ ಆದ ಶ್ರೀ|| ಕೆ ಎಸ್ ಲಕ್ಷ್ಮೀನಾರಾಯಣರಾಯರ ಸೇವೆಯು ದೊರೆಯದೆ ಇರುವುದು ಒಂದು ದೊಡ್ಡ ನಷ್ಟವೇ ಸರಿ. ಇವರು ಬಡಜನರ ಕುಂದುಕೊರತೆಗಳನ್ನು ಖುದ್ದಾಗಿ ಅರಿತು ಅವುಗಳ ಪರಿಹಾರಕ್ಕಾಗಿ ವಿಶೇಷ ಶ್ರಮವಹಿಸುತ್ತಿದ್ದರು. ವಿದ್ಯಾರ್ಥಿ ವೃಂದದಲ್ಲಿಯೂ ಮತ್ತು ಕಾಂಗ್ರೆಸ್ ಕಾರ್ಯಕರ್ತರುಗಳಲ್ಲಿಯೂ ವಿಶೇಷ ಶ್ರದ್ಧಾಭಕ್ತಿಗಳಿಂದ ಕೆಲಸಮಾಡುತ್ತಿದ್ದರು.

ಚಾಮರಾಜ ಮೊಹಲ್ಲೆಯಲ್ಲಿ ಉಂಟಾದ ಈ ಪರಾಜಯಕ್ಕೆ ಈಸಾರಿ ಇಲ್ಲಿ ಐದು ಜನರು ಕಾಂಗ್ರೆಸ್ ವಿರುದ್ಧವಾಗಿ ನಿಂತಿದ್ದುದು ಮುಖ್ಯಕಾರಣ. ಮತ್ತು ಸ್ವತಂತ್ರರೂ ಅಲ್ಲದೆ ಕಾಂಗ್ರೆಸ್ಸಿನವರೂ ಅಲ್ಲದೆ ವಿದ್ಯಾಶಾಲೆಗಳಿಗೆ ಸಂಬಂಧಪಟ್ಟ ಒಬ್ಬರು ನಿಂತಿದ್ದುದರಿಂದ ಅನೇಕ ಓಟರುಗಳು ವೈಯಕ್ತಿಕ ಕಾರಣಗಳಿಗಾಗಿ ಕೊಟ್ಟ ಓಟುಗಳು ಹಂಚಿಹೋಗಿ ಈ ರೀತಿಯಾಯಿತು. ಅಲ್ಲದೆ ಈಸಾರಿ ಎಂದಿಗಿಂತಲೂ ಓಟರುಗಳ ಸಂಖ್ಯೆಯು ಅತ್ಯಂತ ಕಡಿಮೆಯಾಗಿದ್ದಿತು. ಮತ್ತು ಪ್ರಚ್ಛನ್ನ ರೀತಿಯಲ್ಲಿ ಅಪಪ್ರಚಾರಗಳೂ ಸಹ ನಡೆದಿದ್ದವು. ಈ ಕಾರಣಗಳಿಂದ ಈ ಮೊಹಲ್ಲೆಯಲ್ಲಿ ಉಂಟಾದ ಪರಾಜಯವು ವಿಷಾದಕರವಾದುದು. ವಿದ್ಯಾವಂತರೂ, ಸುಸಂಸ್ಕೃತರೂ ಇರುವ ಈ ಕ್ಷೇತ್ರದಲ್ಲಿ ಕಾಂಗ್ರೆಸ್ಸಿಗೆ ಹೆಚ್ಚಿನ ಬೆಂಬಲವನ್ನು ಮಹಾಜನರು ನಿರೀಕ್ಷಿಸಿದ್ದರು.

ಕಾಂಗ್ರೆಸ್ಸಿನ ಮೇಲೆ ಅಪಪ್ರಚಾರವನ್ನು ಮಾಡಿ ಉಮೇದುವಾರರಾಗಿ ನಿಂತಿದ್ದವರಿಲ್ಲರೂ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಓಟುಗಳನ್ನು ಪಡೆದು, ಪರಾಜಿತರಾಗಿರುವರು. ಕಾಂಗ್ರೆಸ್ಸಿನವರ ಕನಿಷ್ಠ ಓಟುಗಳಿಗಿಂತಲೂ ಅವರ ಹೆಚ್ಚಿನ ಓಟುಗಳು ಅತ್ಯಂತ ಕಡಿಮೆಯಾಗಿದ್ದವು. ಹಲವು ಸಂದರ್ಭಗಳಲ್ಲಿ ನಾನೂರಕ್ಕೆ ಮೇಲ್ಪಟ್ಟ ಓಟುಗಳ ಅಂತರವೂ ಇರುತ್ತದೆ. ಯಾರ ಮೇಲೆ ಅಪಪ್ರಚಾರವು ವಿಶೇಷವಾಗಿ ನಡೆಯಿತೋ ಅವರುಗಳೇ ಎಲ್ಲ ಕಡೆಗಳಲ್ಲಿಯೂ ಅಗ್ರಸ್ಥಾನವನ್ನು ಪಡೆದಿರುತ್ತಾರೆ. ಆದುದರಿಂದ ಮಹಾಜನರು ಈ ಅಪಪ್ರಚಾರಗಳಿಗೆ ಬೆಲೆ ಕೊಡುವುದಿಲ್ಲವೆಂಬುದನ್ನು ಸ್ಪಷ್ಟಪಡಿಸಿರುತ್ತಾರೆ. ಈ ಸಂದರ್ಭದಲ್ಲಿ ಕೆಲವು ಸ್ವತಂತ್ರ ಉಮೇದುವಾರರು ಸಹಕಾರ ಸಂಘಗಳ ಮತ್ತು ವಿದ್ಯಾಶಾಲೆಗಳ ನೌಕರರುಗಳನ್ನು ತಮ್ಮ ಕಡೆ ಪ್ರಚಾರಕ್ಕಾಗಿ ಉಪಯೋಗಿಸಿಕೊಂಡಿದ್ದುದು ಗಮನಾರ್ಹವಾಗಿದೆ.

ಶ್ರೀಗಳಾದ ಬಿ ಸುಬ್ಬಣ್ಣ ಮತ್ತು ಡಾ|| ಎ. ವಿ. ರಂಗರಾಯರು ಇನ್ನೂ ಕಾಂಗ್ರೆಸ್ಸಿನ ಸದಸ್ಯರಾಗಿಯೇ ಇದ್ದುಕೊಂಡು ಸ್ವತಂತ್ರವಾಗಿ ಸ್ಪರ್ಧಿಸಿದ್ದುದು ಒಂದು ವಿಶೇಷ.

ವಿಜ್ಞಪುರಮೊಹಲ್ಲೆಯಲ್ಲಿ ಕಳೆದಸಾರಿ ಕಾಂಗ್ರೆಸ್ ಉಮೇದುವಾರರಿಗೂ, ಸ್ವತಂತ್ರರಿಗೂ ಕೇವಲ ಹದಿನೆಂಟು ಓಟುಗಳು ಮಾತ್ರ ವ್ಯತ್ಯಾಸವಿದ್ದವು. ಈಸಾರಿ ಮುನ್ನೂರಕ್ಕೆ ಮೇಲ್ಪಟ್ಟು ಇರುತ್ತವೆ. ಒಟ್ಟು ನಗರದ ಹದಿನೈದುಸಾವಿರ ಓಟರುಗಳ ಪೈಕಿ ಆರುಸಾವಿರದ ಆರುನೂರು ಜನರು ಓಟು ಕೊಟ್ಟು ಅವುಗಳಲ್ಲಿ ೪೩೭೧ ಓಟುಗಳು ಕಾಂಗ್ರೆಸ್ಸಿನವರಿಗೆ ಬಂದಿವೆ. ಮೂರರಲ್ಲಿ ಎರಡು ಭಾಗದಷ್ಟು ಓಟುಗಳು ಕಾಂಗ್ರೆಸ್ಸಿಗೆ ದೊರೆತಿವೆ.

ಕೆಲವು ದಿನಗಳಿಂದ ನಡೆದ ಅಪಪ್ರಚಾರದ ದೃಷ್ಟಿಯಿಂದ ಕಾಂಗ್ರೆಸ್ಸಿನವರಿಗೆ ಇನ್ನೂ ಹಲಕೆಲವು ಸ್ಥಾನಗಳು ಕೈಬಿಟ್ಟುಹೋಗಬಹುದೆಂಬ ಶಂಕೆಯು ಹಲವರಿಗೆ ಮೂಡಿತ್ತು. ಮಹಾಜನರು ಅದನ್ನು ಸುಳ್ಳುಮಾಡಿದ್ದಾರೆ. ಕಾಂಗ್ರೆಸ್ಸಿನಲ್ಲಿಯೇ ಇದ್ದು, ಬಹಿರಂಗವಾಗಿಯೂ ಅಂತರಂಗವಾಗಿಯೂ, ಶಾಟಿಕೃಷ್ಣದ ಹೆಸರಿನಿಂದಲೂ ಕಾಂಗ್ರೆಸ್, ಉಮೇದುವಾರರಿಗೆ ಓಟುಬಾರದಂತೆ ಮಾಡಿದ ಮಹನೀಯರುಗಳ ಕೈವಾಡವಿಲ್ಲದಿದ್ದರೆ ಕಾಂಗ್ರೆಸ್ಸಿಗೆ ಒಂದು ಸ್ಥಾನವೂ ಸಹ ನಷ್ಟವಾಗುತ್ತಿರಲಿಲ್ಲ. ಮೇಲಾಗಿ ಇನ್ನೂ ಅನೇಕ ವಿರೋಧಿಗಳ ಹಣವು ಮುಟ್ಟುಗೋಲಾಗುತ್ತಿತ್ತು. ಇನ್ನು ಮುಂದಾದರೂ ಕಾಂಗ್ರೆಸ್ಸಿನವರೆಲ್ಲರೂ ತಮ್ಮ ಸಂಸ್ಥೆಯ ಶಿಸ್ತು ಮತ್ತು ವ್ಯವಸ್ಥೆಗಳಿಗೆ ವಿಧೇಯರಾಗಿ ವರ್ತಿಸಿ ದೇಶಸೇವೆಮಾಡಬೇಕೆಂಬುದು ಈ ಚುನಾವಣೆಯ ಅತ್ಯಂತ ಪ್ರಾಮುಖ್ಯವಾದ ಪಾಠವೆಂಬುದನ್ನು ಅರಿತುಕೊಳ್ಳಲೆಂದು ಹಾರೈಸುತ್ತೇವೆ

ನಾಯಿಯ ಹೊಟ್ಟೆಯಲ್ಲಿ ನಾಣ್ಯ

ಸಾನ್‌ಫ್ರಾನ್ಸಿಸ್ಕೊ ಗೋಲ್ಡನ್ ಗೇಟ್ ಪಾರ್ಕಿನಲ್ಲಿದ್ದ ಸಮುದ್ರದ ನಾಯಿಯೊಂದಕ್ಕೆ ನಾಣ್ಯಗಳನ್ನು ನುಂಗುವ ಅಭ್ಯಾಸ ಮಾಡಿತ್ತು. ನಾಣ್ಯಗಳೊಳಗಿನ ಲೋಹದ ವಿಷದಿಂದ ಅದು ಸತ್ತಾಗ ಅದರ ಹೊಟ್ಟೆಯಲ್ಲಿ ೨೧೧ ಪೆನ್ನಿಗಳೂ, ೨೭ ನಿಕ್ಕಲ್ ನಾಣ್ಯಗಳೂ ೮ ಡೈಮುಗಳೂ ಇದ್ದುವೆಂದು ವರದಿಯಾಗಿದೆ.

ಸಂತಾಪ ಸೂಚನೆ

ಸ್ವಂ ಸು.] ಚಿಕ್ಕಮಗಳೂರು ೧೩.

ನನ್ನ ಪಂಡಿತ ಮದನಮೋಹನ ಮಾಳವೀಯರವರ ನಿಧನದ ಬಗ್ಗೆ ಸಂತಾಪ ಸೂಚಿಸುವ ಸಲುವಾಗಿ ಅನೇಕ ಹಿಂದೂ ಮತ್ತು ಮುಸ್ಲಿಮರ ಅಂಗಡಿಗಳು ಮುಚ್ಚಲ್ಪಟ್ಟಿದ್ದುವು. ವಿದ್ಯಾರ್ಥಿಗಳು ಶಾಲೆಗೆ ಹೋಗದೆ, ದುಃಖವನ್ನು ಪ್ರದರ್ಶಿಸಲು ಮೆರವಣಿಗೆ ನಡೆಸಿದರು.

ಬೆಳಸನ್ನು ಕಾಪಾಡಲು ಹಾವುಗಳು

ದಕ್ಷಿಣ ಭಾರತದ ಹಾವಾಡಿಗ... ಧಕ್ಕೆ ಬರುವಂತಿದೆ. ಇಲಿಗಳು ... ಬಹಳವಾಗಿ ತೊಂದರೆಕೊಡುತ್ತಿವೆ, ... ಳನ್ನು ಕೊಲ್ಲಲು ಹಾವುಗಳು ಅವ... ಹಾವಾಡಿಗರು ಹಾವುಗಳನ್ನು ಹಿಡಿದು... ಗಳನ್ನು ಕೊಂದು ಅವುಗಳ ಚರ್ಮ... ಸರಾಸರಿ ತಿಂಗಳಿಗೆ 200 ರೂ, ಗಳನ್ನು ... ಪಾದಿಸುತ್ತಿದ್ದಾರೆ, ಇಲಿಗಳ ಹಾವಳಿ... ತಡೆಗಟ್ಟಲು ಸಿನೋಜನ್ ಅನ್ನುವ... ಯೋಗಿಸಿ ನೋಡಲಾಯಿತು, ಅದು ... ಸ್ವಿಯಾಗಲಿಲ್ಲ, ಎಂದು ಮದ್ರಾಸ್ ... ಸಾಯ ಇಲಾಖೆಯು ಪ್ರಕಟಣೆ ತಿಳಿ...

ಜೂಜಿನ ಹಾವಳಿ

ಸ್ವಂ. ಸು] ಶ್ರೀರಂಗಪಟ್ಟಣ.

ಇಲ್ಲಿನ ಗಂಜಾಂನಲ್ಲಿ ಪ್ರತಿಯೊಂದು ... ಹಲ್ಲಾದಲ್ಲಾ ಜೂಜಿನ ಹಾವಳಿ ... ಅದರ ಪರಿಣಾಮವಾಗಿ ಜಗಳಗಳು ... ಯುತ್ತಲೇ ಇವೆ. ಸಂಬಂಧಪಟ್ಟ ಅ... ಗಳು ನಿಗಾ ಕೊಡಬೇಕು.

ಡಿಪೋ ತೊಂದರೆ

ಗಂಜಾಮಿನ ಧಾನ್ಯದ ಡಿಪೋ ... ಕ್ಕದ ಹೊತ್ತು ತೆಗೆದಿರುವುದಿಲ್ಲವೆಂದು ... ನೇಕರಿಗೆ ರೇಷನ ಕಡಮೆ ಮಾಡಿ ... ಇಷ್ಟಬಂದವರಿಗೆ ಕೊಡುತ್ತಾರೆಂದು ... ಬಂದಿದೆ. ಅಧಿಕಾರಿಗಳು ನಿಗಾಕೊಡ...

ಚಿಕ್ಕಜಾತ್ರೆ

ನಂಜನಗೂಡು ಶ್ರೀಕಂಠೇಶ್ವರಸ್ವಾಮಿಯವರ ಚಿಕ್ಕಜಾತ್ರಾ ಮಹೋತ್ಸವ... ಯುತ್ತ ಮುಂದಿನ ತಿಂಗಳು 1 ನೇ... ಅಂಕುರಾರ್ಪಣವಾಗಿ 8 ನೇ ತಾ|| ... ವಾರ ಕಿರಿಗೆಹ್ಯ ಚಿಕ್ಕಜಾತ್ರೆಯೂ 10 ... ತಾ|| ಮಂಗಳವಾರ ತೆಪ್ಪೋತ್ಸವ ಮ... ಪಲ್ಲಕ್ಕಿ ಉತ್ಸವವೂ ನಡೆಯುವುವು.

ರಾಜಕಮಲ್, ಮೈಸೂರು
1946 ನೇ ನವಂಬರ್ 15 ನೇ ಶುಕ್ರವಾರದಿಂದ
ಪ್ರತಿದಿನ ಮೂರು ಆಟಗಳು
'ಡಾಕ್ಟರ್ ಕೊಟ್ನಿಸ್ ಕಿ ಅಮರ್ ಕಹಾನಿ'
ಮುಖ್ಯ ಭೂಮಿಕೆ:—ಶಾಂತಾರಾಂ, ಉಲ್ಲಾಸ್, ವಿನಾಯಕ್, ಪಂಢರೀಕರ್, ಜಯಶ್ರೀ.
Advance Booking is accepted between 10 and 12 a.m.

From Friday the 15th Nov 1946 for 4 days at 10-30 a. m.
'Adventures of Marco-Polo'
A Samuel Goldyn Mighwty Marvel!

ನಾರ್ಗಾರ್ಡ್ ಫೈರ್ ಮತ್ತು ಜನರಲ್
ಇನ್‌ಷೂರೆನ್ಸ್ ಕಂಪೆನಿ ಲಿಮಿಟೆಡ್,
ಮತ್ತು
ನಾರ್ಗಾರ್ಡ್ ಇನ್‌ಷೂರೆನ್ಸ್ ಕಂಪೆನಿ ಲಿಮಿಟೆಡ್,
ಹೆಡ್ ಆಫೀಸ್ : : ಮದ್ರಾಸು
ಫೈರ್, ಮೋಟಾರ್, ಮೆರೈನ್, ಆಕ್ಸಿಡೆಂಟ್, ವರ್ಕ್‌ಮೆನ್ಸ್ ಕಾಂಪೆನ್ಸೇಷನ್, ಲೈಫ್ ಮತ್ತು ಇನ್ನೂ ಅನೇಕ ತರಹದ ಇನ್‌ಷೂರೆನ್ಸುಗಳನ್ನು ಕೈಗೊಳ್ಳುವ ಕಂಪೆನಿ. ಪಾಲಿಸಿದಾರರುಗಳಿಗೆ ಹೆಚ್ಚಿಗೆ ಬೋನಸ್ಸು ಹಂಚಲ್ಪಟ್ಟಿರುತ್ತೆ
ಏಜೆಂಟರುಗಳಿಗೆ ಧಾರಾಳವಾದ ಕಮಿಷನ್.
ಪಾಲಿಸಿ ತೆಗೆದುಕೊಳ್ಳಲೂ ಮತ್ತು ಏಜೆಂಟರಾಗಲೂ ಇವರಲ್ಲಿ ವಿಚಾರಿಸಿ.
ಎಂ. ಸಿ. ಸಂಪತ್ತಯ್ಯಂಗಾರ್,
ಸ್ಪೆಷಲ್ ರಿಪ್ರೆಸೆಂಟೆಟಿವ್, ನಾರ್ಗಾರ್ಡ್ ಇನ್‌ಷೂರೆನ್ಸ್ ಕಂಪೆನಿ ಲಿಮಿಟೆಡ್,
ಕೆತ್ತಮಾಚಿಪುರ ಅಗ್ರಹಾರ, ಮೈಸೂರು

ಟಿ ಸಿ. ನಟರಾಜ್
ಔಷಧಾಲಯ
ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.
ಅಗತ್ಯವಾಗಿ ಬೇಕಾದ ಎಲ್ಲಾ ... ಕ್ಷ್ ಔಷಧಿಗಳೂ ಸದಾ ಕಾಲದಲ್ಲಿ ದೊರೆಯುವುದಲ್ಲದೆ ಸಮಸ್ತವ್ಯಾಧಿಗಳ ಚಿಕಿತ್ಸೆಯು ಬಹು ಸುಲಭ ಬೆಲೆಗೆ ಮಾಡಲ್ಪಡುತ್ತದೆ.
ಝಂಡೂರವರ ಆಯುರ್ವೇದೀಯ ಔಷಧಗಳೆಲ್ಲವೂ ದೊರೆಯುತ್ತವೆ.

ಸಾಧ್ವಿ
ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ
ಕೂಡಲೇ ಚಂದಾದಾರರಾಗಿ
(ತಿಂಗಳಿಗೆ ಚಂದಾ ಎಂಟಾಣೆ ಮಾ...
ಜಾಹಿರಾತಿನ ದರಗಳ
ವಿಚಾರಿಸಿರಿ

Edited, printed and publish... A. S. Nagarajan at the Sadhvi ... D. Subbiah Road, Mysore

ಫೋ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಭಾನುವಾರ ೧೭—೧೧—೪೬ [ಸಂಚಿಕೆ ೯೦

ಕೊರಿಯಾ ಪ॥ ದ್ವೀಪದಲ್ಲಿ ಯುದ್ಧದ ಕಾರ್ಮೋಡ

ಕಲ್ಕತ್ತಾ ಮುಸ್ಲಿಮರ ಉಪವಾಸ ವ್ರತ

ಬಿಹಾರಿನ ದುರಂತದಲ್ಲಿ ಗತಿಸಿದ ಮುಸ್ಲಿಮರ ಗೌರವಾರ್ಥವಾಗಿ ಈ ದಿನ ಕಲ್ಕತ್ತಾ ನಗರದ ಮುಸ್ಲಿಮರು ಉಪವಾಸವನ್ನು ನಡೆಸುವರು. ಇಂದು ಉಳಿಯುವ ಆಹಾರವನ್ನು ಬಿಹಾರ್ ಮುಸ್ಲಿಂ ನಿರಾಶ್ರಿತರಿಗೆ ಕಳುಹಿಸಿಕೊಡುತ್ತಾರೆಂದು ಗೊತ್ತಾಗಿದೆ.

ಗುಡ್ಡ ಪ್ರದೇಶದಲ್ಲಿ ವೈಸರಾಯರ ಪ್ರವಾಸ

ವೈಸರಾಯ್ ವೇವೆಲ್ಲರು ಗುಡ್ಡಗಾಡು ಪ್ರದೇಶಗಳ ಪ್ರವಾಸ ಕೈಗೊಂಡಿದ್ದಾರೆ. ನಿನ್ನೆ ಖೈಬರ್ ಪಾಸ್ ಕಣಿವೆಗೆ ಭೇಟಿ ಇತ್ತರು. ಅಫ್ರಿದಿ ಮತ್ತು ಶಿನ್ವಾರಿ ಪ್ರತಿನಿಧಿಗಳನ್ನು ಕುರಿತು ನಿನ್ನೆ ಭಾಷಣ ಮಾಡಿದರು. ಪೆಷಾವರ್ ಸ್ಥಾನದಲ್ಲಿ ಈಗ ಪ್ರವಾಸ ಆರಂಭಿಸಿದ್ದಾರೆ.

ವಂದನಾರ್ಪಣೆ

ಪೌರಸಭಾ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಬಿ. ನಾರಾಯಣಸ್ವಾಮಿಯವರು ಹೀಗೆ ಬರೆಯುತ್ತಾರೆ:—

ಮೊನ್ನೆ ನಡೆದ ಪುರಸಭಾ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಅದ್ಭುತ ವಿಜಯವನ್ನು ಗಳಿಸಿಕೊಟ್ಟ ಪುರಸಿವಾಸಿಗಳಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಈ ಮೂಲಕ ಸಮರ್ಪಿಸುತ್ತೇನೆ. ಕಾಂಗ್ರೆಸ್ ವಿರೋಧಿಗಳು, ಅಪಪ್ರಚಾರದ ಧೂಳೆಬ್ಬಿಸಿ ಕಾಂಗ್ರೆಸ್ ಕೀರ್ತಿಗೆ ಕಳಂಕ ತರಲು ವಿಶ್ವಪ್ರಯತ್ನ ಪಟ್ಟರು. ದೈವ ಸಂಕಲ್ಪದಿಂದ ಕಾಂಗ್ರೆಸ್ಸಿನ ಸದಸ್ಯರುಗಳಿಗೇ ಜಯಲಭಿಸಿತು. ಸತ್ಯಕ್ಕೆ ಜಯ. ಪುರನಿವಾಸಿಗಳ ಜಯ. ತನ್ಮೂಲಕ ಕಾಂಗ್ರೆಸ್ ಸದಸ್ಯರುಗಳ ಮೇಲೆ ಹರಡಿದ್ದ ಅಪಪ್ರಚಾರದ ಮೋಡವು ಅಳಿದು ಹೋಗಿ ಕಾಂಗ್ರೆಸ್ ವಿಜಯ ಜ್ಯೋತಿ ಈ ದಿವಸ ನಗರದಲ್ಲಿ ರಾಜಿಸುವಂತಾಗಿದೆ.

ಚುನಾವಣೆಯು ಪೂರೈಸಿರುತ್ತದೆ. ಈಗಲಾದರೂ ವಿರೋಧ ಪ್ರಚಾರದಲ್ಲಿ ತೊಡಗಿದವರು ದಯವಿಟ್ಟು ತಮ್ಮ ವಿಷ ವಾಯುವಿನ ಪ್ರಚಾರವನ್ನು ನಾಶ ಮಾಡಲಿ. ಪರಿಶುದ್ಧರಾಗಿ ಇನ್ನು ಮುಂದೆ ಕಾಂಗ್ರೆಸ್ಸಿನಲ್ಲೇ ನಿಷ್ಠೆ ಅಪಪ್ರಚಾರವೆಸಗಿದ ಕ್ರಿಸ್ಲಿಂಗ್‌ಗಳು ಯಾರೊಬ್ಬರೂ ಇನ್ನು ಮುಂದೆ ಮನಸಾರೆ ನಿಜವಾದ ಕಾಂಗ್ರೆಸ್ ಕೆಲಸದಲ್ಲಿ ತೊಡಗಬೇಕೆಂದು ಕೋರುತ್ತೇನೆ. ಕಾಂಗ್ರೆಸ್ ವಿಜಯಕ್ಕೆ ಶ್ರಮಿಸಿದ ಕಾಂಗ್ರೆಸ್ ಕೆಲಸಗಾರರು, ವಿದ್ಯಾರ್ಥಿಗಳು ಮತ್ತು ಬಾಲಕರುಗಳಿಗೆ ನಾವು ಎಷ್ಟು ಧನ್ಯವಾದವನ್ನು ಸಲ್ಲಿಸಿದರೂ ಸಾಲದು. ಇಂದಿನ ಕಾಂಗ್ರೆಸ್ ಜಯವು ಅವರದು ಮತ್ತು ಮತದಾರರಿಗೆ ಸೇರಿದ್ದು. ಮತ್ತೊಮ್ಮೆ ಸರ್ವರಿಗೂ ವಂದನೆಗಳು. ಜೈ ಹಿಂದ್

ಸಂತಾಪ ಸೂಚನೆ

ಸ್ವಂ ವ.] ಗುಂಡ್ಲುಪೇಟೆ ೧೬

ಪಂಡಿತ ಮದನಮೋಹನ ಮಾಳವೀಯರವರ ಪ್ರಯುಕ್ತ ಅಂಗಡಿಗಳನ್ನು ಮುಚ್ಚಿ ಹರತಾಳವನ್ನಾಚರಿಸಲಾಯಿತು. ವಿದ್ಯಾರ್ಥಿಗಳೂ ಪರ ಸಭೆ ಸೇರಿ ಸಂತಾಪವನ್ನು ಸೂಚಿಸಿದರು. ಹಿಂದೂ ಹಿರಿಯರೆಲ್ಲರೂ ಶ್ರೀ ಬಿ. ಚಂದಾನಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ದುಃಖಸೂಚಕ ನಿರ್ಣಯ ಮಾಡಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿದರು.

ಕೊರಿಯಾ ಪ॥ ದ್ವೀಪದಲ್ಲಿ ಯುದ್ಧದ ಕಾರ್ಮೋಡಗಳು

ಜೇಸಾದ ಈ ಶಾಸ್ತ್ರ ಭಾಗದಲ್ಲಿರುವ ಕೊರಿಯಾ ಪರ್ಯಾಯ ದ್ವೀಪದಲ್ಲಿ ಯುದ್ಧವಾಗುವ ಸನ್ನಿವೇಶಗಳು ಉಂಟಾಗಿರುವುದಾಗಿ ವರದಿ ಬಂದಿದೆ. ದ್ವೀಪವು ಇಬ್ಭಾಗವಾಗಿ ಒಂದು ಕಡೆ ಎರಡೂವರೆ ಲಕ್ಷ ರಷ್ಯಾ ಸೈನಿಕರೂ, ಮತ್ತೊಂದು ಕಡೆ ಸಪ್ತ ಸಹಸ್ರ ಅಮೆರಿಕನ್ ಸೈನಿಕರು ಯುದ್ಧ ಸನ್ನಾಹರಾಗಿ ಕಾದಿದ್ದಾರೆಂದು ಗೊತ್ತಾಗಿದೆ.

ಕರಾಚಿಯಲ್ಲಿ ಕಪ್ಪು ಬಾವುಟ ಪ್ರದರ್ಶನ

ಬಿಹಾರಿನಲ್ಲಿ ಗತಿಸಿದ ಮುಸ್ಲಿಮರ ಗೌರವಾರ್ಥವಾಗಿ ಸಿಂಧ್ ಪ್ರಾಂತ್ಯದಲ್ಲೆಲ್ಲಾ ಮೊನ್ನೆ ಶೋಕ ದಿನವನ್ನು ಆಚರಿಸಲಾಯಿತು. ಕರಾಚಿಯಲ್ಲಿ ಮುಸ್ಲಿಮರು ಕಪ್ಪು ಬಾವುಟ ಪ್ರದರ್ಶನ ನಡೆಸಿದರು. ಕರಾಚಿ ಪುರಸಭೆಯ ಮೇಲೆಯೂ ಕರಿ ಬಾವುಟ ಹಾರಿಸಿದರು. ಮುಸ್ಲಿಂ ಅಂಗಡಿಗಳೆಲ್ಲಾ ಮುಚ್ಚಿದ್ದುವು. ಲೋಕಮಾನ್ಯ ಬಾಲ ಗಂಗಾಧರ ತಿಲಕರ ಪ್ರತಿಮೆಗೆ ಪ್ರದರ್ಶನಕಾರರು ಕಲ್ಲು ಹೊಡೆದು ನಷ್ಟ ಉಂಟುಮಾಡಿದ್ದಾರೆ.

ಭಾರತ ಸರ್ಕಾರಕ್ಕೆ ಆಫ್ರಿಕನ್ನರ ಗೌರವ

ನೈರುತ್ಯ ಆಫ್ರಿಕವನ್ನು ದಕ್ಷಿಣ ಆಫ್ರಿಕಕ್ಕೆ ಸೇರಿಸಿಕೊಳ್ಳುವುದೇ ಮುಂತಾದ ವಿಚಾರಗಳಲ್ಲಿ ಭಾರತ ಸರ್ಕಾರದವರು ಧೈರ್ಯವಾಗಿ ವರ್ತಿಸಿ ದಲಿತ ಜನಾಂಗಗಳಿಗೆಲ್ಲಾ ಅಭಯ ನೀಡ ವ ಸ್ಥಾನ ಗಳಿಸಿಕೊಂಡಿದ್ದಾರೆ ಎಂದು ದ॥ ಆಫ್ರಿಕದ ಸೆನೆಟ್ ಸಭೆಯಲ್ಲಿ ೮೦ ಲಕ್ಷ ದೇಶೀಯ ಪ್ರಜೆಗಳ ಪ್ರತಿನಿಧಿಯಾಗಿರುವ ಮಿ॥ ಬೆಲ್ಲಂ ರವರು ತಿಳಿಸಿ ಭಾರತ ಸರ್ಕಾರಕ್ಕೆ ಗೌರವ ಸಮರ್ಪಿಸಿದ್ದಾರೆ.

ಕಾಂಗ್ರೆಸ್ಸಿಗೆ ಜಯ

ಸ್ವಂ ವ.] ಜನಾರ್ದನಪುರ ೧೬

ಇಲ್ಲಿನ ಪುರಸಭೆಗೆ ಬಿ ಡಿವಿಜನ್ನಿನಲ್ಲಿ ನಡೆದ ಉಪಚುನಾವಣೆಯಲ್ಲಿ ತಾ॥ ಕಾಂ॥ ಉಪಾಧ್ಯಕ್ಷರಾದ ಶ್ರೀ ಕೆ ವಿ ಕೃಷ್ಣಮೂರ್ತಿಯವರು ಬಹುಮತದಿಂದ ಚುನಾಯಿತರಾದರು. ಪ್ರತಿಸ್ಪರ್ಧಿಗಳಲ್ಲೊಬ್ಬರಾದ ಶ್ರೀ ವೆಂಕಟನಾರಾಯಣಸ್ವಾಮಿಯವರು ತಮ್ಮ ಠೇವಣಿಯನ್ನು ಕಳೆದುಕೊಂಡರು. ಸ್ವತಂತ್ರವಾಗಿ ಸ್ಪರ್ಧಿಸಿದ್ದ ಶ್ರೀ ಸ ಸುಬ್ಬಾಶಾಸ್ತ್ರಿಗಳೂ ಸೋಲು ಹೊಂದಿದರು.

ಇಂಡೊನೇಷಿಯನ್ ಸಂಯುಕ್ತ ಸಂಸ್ಥಾನ

ಹಾಲೆಂಡಿನೊಡನೆ ಸಮಾನ ಸ್ಥಾನ ಮತ್ತು ಅಧಿಕಾರವನ್ನು ಪಡೆದ ಇಂಡೊನೇಷಿಯನ್ ಸಂಯುಕ್ತ ಸಂಸ್ಥಾನದ ರಚನೆಯಾಗಬೇಕೆಂದು ಡಚ್-ಇಂಡೊನೇಷಿಯಾ ಕರಾರಾಗಿರುವುದಾಗಿ ವರದಿಯಾಗಿದೆ. ಈ ಒಪ್ಪಂದವನ್ನು ಡಚ್ ಪಾರ್ಲಿಮೆಂಟ್ ಅಂಗೀಕರಿಸಬೇಕಾಗಿದೆ.

ರಾಜ್ಯಾಂಗ ಸಮಿತಿ ಸದಸ್ಯರಿಗೆ ರಕ್ಷಣೆ!

ಭಾರತ ರಾಜ್ಯಾಂಗ ರಚನಾ ಸಭೆಯ ಸದಸ್ಯರುಗಳು ದೆಹಲಿಯಲ್ಲಿ ವಾಸಿಸುವಾಗ್ಯೆ ಅವರ ರಕ್ಷಣೆಗೆ ವಿಶೇಷದ ಗಮನ್ನ ಮಾಡಲಾಗುವುದೆಂದು ಪಂ॥ ನೆಹರೂರವರು ತಿಳಿಸಿದ್ದಾರೆ. ಸದಸ್ಯರುಗಳಿಗೆ ಪಿಸ್ತೂಲುಗಳನ್ನು ಒದಗಿಸಲಾಗುತ್ತದೆಯೇ ಎಂದು ಸದಸ್ಯರೊಬ್ಬರು ಕೇಳಿದ ಪ್ರಶ್ನೆಗೆ ನೆಹರೂರವರು ಉತ್ತರವಿತ್ತು ಆತ್ಮ ರಕ್ಷಣೆಗೆ ಪಿಸ್ತೂಲುಗಳನ್ನು ಪಡೆಯುವುದು ಸರಿಯಾದ ಮಾರ್ಗವಲ್ಲ, ಈ ರೀತಿ ಜನರು ಪಿಸ್ತೂಲನ್ನು ಪಡೆಯುವ ಸಲಹೆಗೆ ಪ್ರೋತ್ಸಾಹ ಕೊಡುವುದು ಅನುಚಿತವೂ, ಅನಿಷ್ಟವಾದದ್ದೂ ಆಗಿದೆ ಎಂದು ತಿಳಿಸಿದರು.

ಗಾಂಧಿಜಿ ಉಪವಾಸ ಕಡು ತ್ರಿ ಪೆ ಯೇ

ಮಹಾತ್ಮ ಗಾಂಧಿಜಿಯವರು ಕಳೆದ ೩ ದಿನಗಳಿಂದ ಗ್ಲೂಕೋಸನ್ನು ತೆಗೆದುಕೊಳ್ಳುತ್ತಿಲ್ಲ. ಈಗ ಅವರು ಕೇವಲ ೨ ಅಥವಾ ೩ ಲೋಟ ಎಳ್ನೀರು ೧ ಔನ್ಸ್ ಜೇನುತುಪ್ಪ, ಬಿಸಿನೀರು, ೧೨ ಔನ್ಸ್ ಕಿತ್ತಲೆ ಹಣ್ಣಿನ ರಸ ಮತ್ತು ೨ ದ್ರಾಕ್ಷಿಗಳನ್ನಾಗಿ ಆಹಾರವನ್ನು ತೆಗೆದುಕೊಳ್ಳುತ್ತಿದ್ದಾರೆ. ಇದೇ ರೀತಿಯ ಆಹಾರವನ್ನು ಮುಂದುವರಿಸಲು ಸಾಧ್ಯವಿಲ್ಲವೆಂದು ಡಾ॥ ಸುಶೀಲಾ ನಾಯರ್‌ರವರು ತಮ್ಮ ಅಭಿಪ್ರಾಯ ಸೂಚಿಸಿದ್ದಾರೆ. ಈಗಾಗಲೇ ಗಾಂಧಿಜೀಯವರಿಗೆ ಉಪವಾಸ ಸಂಬಂಧವಾದ ... ಉಂಟಾಗಿ ಆರೋಗ್ಯ ಕೆಡತ್ತಿರುವುದಾಗಿ ಗೊತ್ತಾಗಿದೆ. ವ ... ಯೋಚಿಸಿರುವ ಉಪವಾಸ ಸ್ವಾವಲಂಬಿ ... ತೆಗಳಿಕೆ ... ಹೇಳಲ್ಪಟ್ಟಿವೆ

ಯಕ್ಷಗಾನ

ಈ ದಿನ ರಾತ್ರಿ ೯ ಗಂಟೆಗೆ ಸಂಗಾಬಾಣ ... ದ ಬಳಿ ಶ್ರೀ ... ಯಕ್ಷಗಾನ ಸಂಘದವರು 'ಲಕ್ಷ್ಮಣ ಸಂಜೀವಿನಿ' ಎಂಬ ಪ್ರಸಂಗವನ್ನು ನಡೆಸುವರು. ಸರ್ವರಿಗೂ ಸ್ವಾಗತವಿದೆ.

ಕಾಶಿ ವಿದ್ಯಾಲಯದಲ್ಲಿ ದೇವಸ್ಥಾನ

ಪಂ॥ ಮದನಮೋಹನ ಮಾಳವೀಯರು ಕಾಶಿ ಹಿಂದೂ ವಿಶ್ವವಿದ್ಯಾಲಯದಲ್ಲಿ ದೇವಸ್ಥಾನವೊಂದನ್ನು ಕಟ್ಟಿಸಲು ಅಭಿಪ್ರಾಯ ಪಟ್ಟಿದ್ದರು. ಅದಕ್ಕೆ ೨೦ ಲಕ್ಷ ರೂಗಳು ತಗಲುವುದೆಂದು ಅಂದಾಜು ಮಾಡಲಾಗಿದೆ. ಶ್ರೀ ಜುಗಲ್‌ಕಿಶೋರ ಬಿರ್ಲಾರವರು ಈ ಕಾರ್ಯವನ್ನು ಪೂರೈಸುವುದಾಗಿ ದಿ॥ ಮಾಳವೀಯರಿಗೆ ಭರವಸೆ ಇತ್ತಿದ್ದರೆಂದು ಗೊತ್ತಾಗಿದೆ

ನಾಖಲಿ ಪರಿಸ್ಥಿತಿ

ಪೂರ್ವ ಬಂಗಾಳದ ದೇವಂಜಬಾರಿ ಎಂಬಲ್ಲಿ ಮಹಾತ್ಮ ಗಾಂಧಿಯವರು ತಂಗಿದ್ದ ಕಡೆ ೫೦ ಸಾವಿರ ನಿರಾಶ್ರಿತರು ವಾಸವಾಗಿದ್ದರು. ಇವರಲ್ಲಿ ಹೆಂಗಸರು ಮತ್ತು ಮಕ್ಕಳೇ ಅಧಿಕ ಸಂಖ್ಯೆಯವರು. ಈ ಶಿಬಿರವನ್ನು ಪತೆರ್‌ಬಿಲ್ ಎಂಬಲ್ಲಿಗೆ ವರ್ಗಾಯಿಸಿ ... ಹೋದರು. ... ನಿರಾಶ್ರಿತರನ್ನು ... ಸ್ವಗ್ರಾಮಗಳಿಗೆ ... ವರದಿಯಾಗಿದೆ.

ಪ್ಯಾಲಸ್ಟೈನಿಗೆ ನುಗ್ಗಲು ಯೆಹೂದ್ಯರ ನಿರ್ಧಾರ

ಪೂರ್ವ ಯೂರೋಪಿನಿಂದ ಆಸ್ಟ್ರಿಯ ಮತ್ತು ಅಮೆರಿಕನ್ ಆಕ್ರಮಿತ ಜರ್ಮನಿಯ ಪ್ರದೇಶಗಳಿಗೆ ಬಹುಸಂಖ್ಯೆಯಲ್ಲಿ ಯಹೂದ್ಯರು ... ಬರುತ್ತಿದ್ದಾರೆ. ... ಇವರು ... ಪ್ಯಾಲಸ್ಟೈನಿಗೆ ನುಗ್ಗಲು ನಿರ್ಧರಿಸಿದ್ದಾರೆಂದು ವರದಿಯಾಗಿದೆ

೫ ಮಕ್ಕಳ ಜನನ

ಬೆಲ್ಜಿಯನ ಜನರಲ್ ಎಂಬಾಕೆ ಏಕಕಾಲದಲ್ಲಿ ೫ ಮಕ್ಕಳನ್ನು ಹೆತ್ತಿರುವ ವಾರ್ತೆ ಬಂದಿದೆ. ಈ ಮಕ್ಕಳಲ್ಲಿ ೩ ಗಂಡು, ೨ ಹೆಣ್ಣು. ಮಕ್ಕಳೂ, ಬಾಣಂತಿ ಆರೋಗ್ಯವಾಗಿರುವುದಾಗಿ ವರದಿಯಾಗಿದೆ

ವಂದನಾರ್ಪಣೆ

ಮೊನ್ನೆ ನಡೆದ ಪೌರಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪರ ನಿಂತಿದ್ದ ಶ್ರೀ ಎ ಕೃಷ್ಣಮೂರ್ತಿಯವರಿಗೆ ಜಯ ಗಳಿಸಿಕೊಟ್ಟ ಜಿಲ್ಲೆಯೊಳಗಿನ ಎಲ್ಲ ಓಟರುಗಳಿಗೂ, ಸ್ವಯಂ ಸೇವಕರಿಗೂ, ಕಾಂಗ್ರೆಸ್ ಕೆಲಸಗಾರರಿಗೂ ಜಿಲ್ಲೆಯೊಳಗಿನ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ ಶ್ರೀ ಎ ಎನ್ ಕೃಷ್ಣಮೂರ್ತಿಯವರು ಈ ಮೂಲಕ ಕೃತಜ್ಞತಾಪೂರ್ವಕವಾದ ವಂದನೆಗಳನ್ನರ್ಪಿಸುತ್ತಾರೆ

ಧನ್ವಂತರಿ ಜಯಂತಿ

ನಂಜನಗೂಡಿನ ... ಶ್ರೀ ಬಿ ಪಿ ... ನಾಳೆ ... ಗಂಟೆಗೆ ಧನ್ವಂತರಿ ... ಶ್ರೀ ಜಿ ಎಸ್ ... ಶ್ರೀ ಎಸ್ ... ಸ್ವಾಗತವಿದೆ

ಸಾಧ್ವಿ

ತಾ॥ ೧೭-೧೧-೪೬ ಭಾನುವಾರ

ಜಿನ್ನಾರವರ ಹೊಸ ರಾಗ

ಹಿಂದೂಸ್ಥಾನದ ರಾಜಕೀಯ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ಹಿಂದೂ-ಮುಸ್ಲಿಂ ಒಪ್ಪಂದವನ್ನು ಏರ್ಪಡಿಸಲು ಹಲವಾರು ಪ್ರಯತ್ನಗಳು ನಡೆದಿವೆ. ಅನೇಕ ಬಾರಿ ಈ ಪ್ರಶ್ನೆಯು ಇತ್ಯರ್ಥವಾದಂತೆ ಕಂಡು ಬಂದಿದೆ. ಮತ್ತೆ ಅದು ಬಗ ಡಾಯಿಸಿಕೊಂಡಿರುತ್ತದೆ. ಇನ್ನೂ ಇದು ಇತ್ಯರ್ಥವಾಗುವ ಸೂಚನೆಗಳೇ ಕಂಡುಬಂದಿಲ್ಲ.

ರಾಜ್ಯಾಂಗ ರಚನಾ ಸಭೆಗೆ ಪೂರ್ವಭಾವಿಯಾಗಿ ಹಂಗಾಮಿ ಸರ್ಕಾರದಲ್ಲಿ ಭಾಗವಹಿಸಲು ತಾತ್ಕಾಲಿಕ ಒಪ್ಪಂದವನ್ನಾದರೂ ಉಂಟುಮಾಡಲು ಅನೇಕ ಪ್ರಯತ್ನಗಳು ನಡೆದುವು. ಅವುಗಳೂ ನಿರರ್ಥಕವಾದುವು. ವೈಸರಾಯರ ಆಹ್ವಾನದಂತೆ ಕೇವಲ ತಮ್ಮ ಪಕ್ಷದ ಆಧಾರದ ಮೇಲೆ ಈಗ ಕೇಂದ್ರ ಸರ್ಕಾರದಲ್ಲಿ ಮುಸ್ಲಿಮರು ಭಾಗವಹಿಸಿರುವುದಾಗಿಯೂ ಸಹ ಅವರು ಹೇಳುತ್ತಿದ್ದಾರೆ. ದೂರಗಾಮಿಯಾದ ರಾಜ್ಯಾಂಗ ರಚನಾ ಸಮಿತಿಯ ಕಾರ್ಯದಲ್ಲಿ ಸಹಕರಿಸುವ ದೃಷ್ಟಿಯಿಂದ ಯಾವುದೇ ರೀತಿಯಲ್ಲಿ ಲೀಗಿನವರು ತಾತ್ಕಾಲಿಕ ಸರ್ಕಾರದಲ್ಲಿ ಭಾಗವಹಿಸಿದರೂ ಸಂತೋಷವೆಂದು ಸಹ ಕೆಲರು ಹೇಳತೊಡಗಿದರು. ಆದರೆ ಅವರು ಮಂತ್ರಿ ಪದವಿಯನ್ನು ಸ್ವೀಕರಿಸಿದ ತರುಣದಲ್ಲಿಯೇ ಸರ್ಕಾರದ ಸ್ವರೂಪದ ವಿಚಾರದಲ್ಲಿ ಜಿಜ್ಞಾಸೆಗಳು ಆರಂಭವಾದುವು. ನೆಹರೂರವರ ನಾಯಕತ್ವವನ್ನು ತಾವು ಅಂಗೀಕರಿಸುವುದಿಲ್ಲವೆಂದು ಲೀಗಿನವರು ಹೇಳತೊಡಗಿದರು. ಮುಸ್ಲಿಮರ ಹಿತಸಾಧನೆಗಾಗಿಯೇ ತಾವು ಬಂದಿರುವುದಾಗಿ ಘೋಷಿಸಿದರು. ತಾತ್ಕಾಲಿಕ ಸರ್ಕಾರದ ಉದ್ದೇಶವು ಎಷ್ಟುಮಟ್ಟಿಗೆ ಸಫಲವಾದೀತೆಂಬ ಶಂಕೆಯೂ ಆಗಲೇ ಎಲ್ಲರಿಗೂ ಉದ್ಭವಿಸಿತು.

ಈಗ ಮಿ॥ ಜಿನ್ನಾರವರು ಕೊಟ್ಟಿರುವ ಹೇಳಿಕೆಯಿಂದ ಈ ಸಂಶಯವು ಇನ್ನೂ ಹೆಚ್ಚಲು ಅವಕಾಶವಾಗಿದೆ. ಕೇಂದ್ರ ಸರ್ಕಾರವು ಮಿಶ್ರ ಮಂತ್ರಿಮಂಡಲವಾಗಲೀ, ಕ್ಯಾಬಿನೆಟ್ ಆಗಲಿ ಅಲ್ಲವೆಂದೂ, ಬಲಾತ್ಕಾರದಿಂದ ತಮ್ಮ ಮೇಲೆ ಹಲವು ಏರ್ಪಾಡುಗಳು ಹೊರಿಸಲ್ಪಟ್ಟಿವೆಯೆಂದೂ ಮಿ॥ ಜಿನ್ನಾರವರು ಹೇಳಿದ್ದಾರೆ. ಪಾಕಿಸ್ಥಾನ ಸಾಧನೆಗಾಗಿಯೇ ತಾವು ಮಂತ್ರಿಮಂಡಲದಲ್ಲಿ ಸೇರಿರುವುದಾಗಿ ತಿಳಿಸಿದ್ದಾರೆ. ಇದರ ಸ್ಥಾಪನೆಯಾಗುವವರೆಗೂ ಇಂದು ದೇಶದಲ್ಲಿ ನಡೆಯುತ್ತಿರುವ ಅನರ್ಥಗಳು ತಪ್ಪುವುದಿಲ್ಲವೆಂದು ಸೂಚಿಸಿದ್ದಾರೆ. [illegible] ಸಮಸ್ಯೆಯ ಪರಿಹಾರಕ್ಕೆ ಹಿಂದೂಸ್ಥಾನ ಮತ್ತು ಪಾಕಿಸ್ಥಾನಗಳ [illegible] ಹೇಳಿದ್ದಾರೆ. ಇದಕ್ಕಾಗಿ [illegible]

[illegible]

ಸ್ಥಿತಿಯು ವ್ಯತ್ಯಸ್ತವಾಗಿಲ್ಲವೆಂಬ ಭೀತಿಗೆ ಅವಕಾಶವಿದೆ. ಭಾರತೀಯರು ತಮ್ಮ ಸ್ವಾತಂತ್ರ್ಯವನ್ನು ಪಡೆಯುವ ಮೊದಲು ಇನ್ನೂ ಘೋರವಾದ ಅಗ್ನಿಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕಾದ ಅವಶ್ಯಕತೆ ಇರುವಂತೆ ಕಾಣುತ್ತದೆ. ಲೀಗಿನವರ ಸ್ನೇಹ ಸೌಹಾರ್ದಗಳು ತೋರಿಕೆ ಅವುಗಳ ಮೂಲಕವಾಗಿಯಾಗಲೀ, ಇಲ್ಲವಾದರೆ ಸಕಲ ವಿಧದ ತ್ಯಾಗಗಳನ್ನು ಮಾಡಿಯಾಗಲೀ ದೇಶದ ಸ್ವಾತಂತ್ರ್ಯವನ್ನು ಗಳಿಸಲು ಭಾರತೀಯರು ಬದ್ಧಕಂಕಣರಾಗಬೇಕಾದ ಕಾಲವು ಒದಗಿದೆ.

ಭಾರತೀಯ ವಿದ್ಯಾರ್ಥಿಗೆ ಗಡೀಪಾರು

ದಕ್ಷಿಣ ಆಫ್ರಿಕಾದ ಕೇಪ್‌ಟೌನ್ ವಿಶ್ವವಿದ್ಯಾನಿಲಯದಲ್ಲಿ ನ್ಯಾಯಶಾಸ್ತ್ರ ಅಭ್ಯಾಸ ಮಾಡುತ್ತಿರುವ ಭಾರತೀಯ ವಿದ್ಯಾರ್ಥಿ ಶ್ರೀ ಕಾಸಿಂ ಅನ್ಸಾರಿಯವರು ಕೇಪ್ ಪ್ರಾಂತ್ಯವನ್ನು ನವಂಬರ್ ೨೩ರ ಒಳಗೆ ಬಿಟ್ಟು ಹೋಗಬೇಕೆಂದೂ, ತಪ್ಪಿದಲ್ಲಿ ಅವರನ್ನು ದಸ್ತಗಿರಿಮಾಡಲಾಗುವುದೆಂದೂ ಅಲ್ಲಿನ ಸರ್ಕಾರವು ಅವರ ಮೇಲೆ ನೋಟೀಸು ಜಾರಿ ಮಾಡಿದೆ ಎಂದು ತಿಳಿದು ಬಂದಿದೆ.

ಮಠಾಧಿಪತಿಗಳಿಗೆ ಕಾಣಿಕೆ

ಭಕ್ತಾದಿಗಳು ಮಠಾಧಿಪತಿಗಳಿಗೆ ಸಲ್ಲಿಸತಕ್ಕ ಕಪ್ಪಕಾಣಿಕೆಗಳನ್ನು ಅವರು ತಮಗೆ ತೋರಿದಂತೆ ಉಪಯೋಗಿಸಲಾಗದೆಂದೂ, ಅವುಗಳ ಮೇಲ್ವಿಚಾರಣೆಗೆ ಸರ್ಕಾರದವರು ಅಧಿಕಾರಿಗಳನ್ನು ನೇಮಿಸುವುದಾಗಿಯೂ ಮದರಾಸಿನಲ್ಲಿ ಜಾರಿಗೆ ಬಂದಿದ್ದ ಶಾಸನವನ್ನು ಬದಲಾಯಿಸಲು ದಿವಾನ್ ಬಹದ್ದೂರ್ ಟಿ.ಎಸ್. ರಾಮಸ್ವಾಮಿ ಶಾಸ್ತ್ರಿಯವರ ನಾಯಕತ್ವದಲ್ಲಿ ಒಂದು ನಿಯೋಗವು ಅಲ್ಲಿನ ಮಂತ್ರಿಗಳಾದ ಶ್ರೀ॥ ಕೋಟಿ ರೆಡ್ಡಿಯವರಲ್ಲಿಗೆ ಹೋಗಿ ಒತ್ತಾಯಿಸಿತು. ಮತ್ತು ಹಿಂದೂ ಧಾರ್ಮಿಕ ಪ್ರದೇಶದ ದೇವಸ್ಥಾನ ನಿಧಿಯನ್ನು ಲೌಕಿಕ ವಿದ್ಯಾಪ್ರಚಾರಕ್ಕೆ ವಿನಿಯೋಗಿಸಲು ಮದರಾಸ್ ಸರ್ಕಾರದವರು ನಿರ್ಧರಿಸಿರುವುದನ್ನೂ ಸಹ ಅವರು ಪ್ರತಿಭಟಿಸಿದರು. ಮಂತ್ರಿಗಳು ಸಾವಧಾನದಿಂದ ಪರ್ಯಾಲೋಚಿಸುವುದಾಗಿ ಭರವಸೆಯಿತ್ತಿರುವರು.

ವಿಂಗಡಣೆ ನೀತಿಗೆ ಸನಾತನಿಗಳ ವಿರೋಧ

ಬ್ರಿ॥ ನಿಯೋಗದವರು ಭಾರತದ ಪ್ರಾಂತ್ಯಗಳನ್ನು ಬೇರೆ ಬೇರೆ ಗುಂಪುಗಳನ್ನಾಗಿ ವಿಂಗಡಿಸಿರುವುದನ್ನು ಗೋರಖಪುರದಲ್ಲಿ ದ್ವಾರಕಾ ಪೀಠದ ಶ್ರೀ॥ ಶ್ರೀ॥ ಜಗದ್ಗುರು ಶ್ರೀ॥ ಶಂಕರಾಚಾರ್ಯರ ಅಧ್ಯಕ್ಷತೆಯಲ್ಲಿ ನಡೆದ ಸನಾತನಿಗಳ ಸಮ್ಮೇಳನದಲ್ಲಿ ಖಂಡಿಸಲಾಯಿತು. ಸ್ಥಾನ ಮತ್ತು ಸಂಖ್ಯಾಬಲಕ್ಕನುಗುಣವಾಗಿ ಹಿಂದುಗಳಿಗೆ ಕೇಂದ್ರದಲ್ಲಿ ಪ್ರಾತಿನಿಧ್ಯ ಕೊಡದಿರುವುದನ್ನು ಕೂಡಲೇ ಸರಿಪಡಿಸಬೇಕೆಂದೂ ಸಹ ನಿರ್ಣಯಿಸಲಾಯಿತು.

ಘಟಿಕೋತ್ಸವಕ್ಕೆ ವಿದ್ಯಾರ್ಥಿಗಳ ಬಹಿಷ್ಕಾರ

ಢಾಕಾ ವಿಶ್ವವಿದ್ಯಾನಿಲಯದ ಪದವೀದಾನ ಸಮಾರಂಭದ ಅಧ್ಯಕ್ಷತೆಯನ್ನು ಬಂಗಾಳದ ಗವರ್ನರರು ವಹಿಸಲಿರುವುದರಿಂದ ಪದವೀದಾನ ಸಮಾರಂಭವನ್ನು ಬಹಿಷ್ಕರಿಸಬೇಕೆಂದು ವಿದ್ಯಾರ್ಥಿಗಳ ಸಂಸ್ಥೆಗಳು ತೀರ್ಮಾನಿಸಿವೆ. ಬಂಗಾಳದ ದುರಂತದಲ್ಲಿ ಗವರ್ನರರು ಸರಿಯಾಗಿ ವರ್ತಿಸಲಿಲ್ಲವಾಗಿ ವಿಶ್ವವಿದ್ಯಾನಿಲಯದಂತಹ ಪವಿತ್ರ ಸಂಸ್ಥೆಯಲ್ಲಿ ಭಾಷಣ ಮಾಡುವ ಅರ್ಹತೆಯನ್ನು ಅವರು ಕಳೆದುಕೊಂಡಿದ್ದಾರೆಂದು ಹೇಳಲಾಗಿದೆ.

ರೈಲಿನಲ್ಲಿ ವಿದ್ಯಾರ್ಥಿಗಳ ತೊಂದರೆ

ಸ್ವಂ ಮು] ಶ್ರೀರಂಗಪಟ್ಟಣ ೧೪

ದಿನವಹಿ ಶ್ರೀರಂಗಪಟ್ಟಣದಿಂದ ಮೈಸೂರಿಗೆ ಸುಮಾರು ೧೫೦ ಜನ ವಿದ್ಯಾರ್ಥಿಗಳು ಬರುತ್ತಾರೆ. ಇವರಿಗಾಗಿ ದಿನವಹಿ ಒಂದು ಗಾಡಿಯೂ ಕೂಡ ಪ್ರತ್ಯೇಕವಾಗಿ ಪಟ್ಟಣದಿಂದ ಬರುತ್ತಿದೆ. ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆ ಎಷ್ಟೋ ಕಡಿಮೆಯಾಗಿದೆ. ಹೀಗೆಯೇ ಮೈಸೂರಿನಿಂದ ಬರುವಾಗಲೂ ಕೂಡ ಪ್ರತ್ಯೇಕ ಗಾಡಿಯೊಂದನ್ನು ಕೊಟ್ಟರೆ ಬಹಳ ಉಪಕಾರವಾಗುತ್ತದೆ. ರೈಲ್ವೆ ಅಧಿಕಾರಿಗಳು ಇದಕ್ಕೆ ಗಮನ ಕೊಡಬೇಕೆಂದು ಕೋರಲಾಗಿದೆ.

Edited, printed and published by A. R. Nagaraja at the Sadhvi Press D. Subbiah Road, Mysore.

ಹಿಂದೂ ಮಹಿಳೆಯರಿಗೆ ಮುಸ್ಲಿಮರ ಗೌರವ

ಪೂರ್ವ ಬಂಗಾಳದಲ್ಲಿ ಹಲವು ಹಿಂ[illegible] ಮಹಿಳೆಯರು ಬಲಾತ್ಕಾರವಾಗಿ ಮ[illegible]ರಗೊಳಿಸಲ್ಪಟ್ಟರಷ್ಟೆ. ಅವರುಗಳನ್ನು [illegible] ಅಪರವರ ಕುಟುಂಬಗಳಿಗೇ ತ[illegible]ರಿಸುವ ಪ್ರಯತ್ನವು ನಡೆಯುತ್ತಿದೆ. [illegible] ಶಂಖಗಳಿಂದ ಕೂಡಿದ ಕರಗ[illegible] ಕುಂಕುಮವನ್ನೂ ಧರಿಸುವುದು [illegible]ದ ಹಿಂದೂ ವಿವಾಹಿತ ಮಹಿಳೆಯ[illegible]ಕೆ. ಅಪಹರಿಸಲ್ಪಟ್ಟು ವಾಪಸ್ಸು ಬ[illegible]ವ ಮೊಲ್ಲಂಡ ಸ್ತ್ರೀಯರಿಗೆ ಕಂಪಡ[illegible]ಳನ್ನೂ, ಕುಂಕುಮವನ್ನೂ ಒದಗಿಸ[illegible]ಕ್ಕಾಗಿ ಸಿಲ್ಹೆಟ್ ಜಿಲ್ಲೆಯ ಹಲವು [illegible]ಲ್ಮಾನರೂ, ಒಬ್ಬ [illegible] [illegible]ರೂಪಾಯಿನ ನಿಧಿಯನ್ನು ಸೇರಿಸಿರು[illegible]

ಕೇಸರಿ

ಬೆಂಗಳೂರಿನ 'ತಾಯಿನಾಡು' ಪ[illegible]ಯ ಮಾಲೀಕರಾದ ಶ್ರೀ ಪಿ. ಆರ್. [illegible]ಮಯ್ಯನವರ ಸೋದರರಾದ ಶ್ರೀ [illegible] ಎಸ್. ನಾರಾಯಣ್‌ರವರು 'ಕೇಸರಿ' [illegible]ಬ ರಾಷ್ಟ್ರೀಯ ಮಾಸ ಪತ್ರಿಕೆಯೊಂದ[illegible] ಹೊರಡಿಸಿರುವುದು ಸ್ವಾಗತಾರ್ಹ[illegible] ಶ್ರೀ ನಾರಾಯಣ್‌ರವರ ಅನೇಕ ವರ್ಷ[illegible] ಪತ್ರಿಕೋದ್ಯಮದ ಅನುಭವವು ಅವ[illegible] ಉದ್ಯಮಕ್ಕೆ ಯಶಸ್ಸು ತರುವುದರಲ್ಲಿ [illegible]ದೇಹವಿಲ್ಲ. ಪತ್ರಿಕೆಗೆ ಉಪಯೋಗಿಸ[illegible] ಕಾಗದ ಮತ್ತು ಮುದ್ರಣ ಸರ್ವರ [illegible]ಗೆಗೂ ಅರ್ಹವಾಗಿವೆ. ಈ ಪ್ರಥಮ [illegible]ಚಿಕೆಯಲ್ಲಿ ಶ್ರೀಗಳಾದ ಎಂ. ಎ. ಗೋ[illegible]ಲಸ್ವಾಮಿ ಅಯ್ಯಂಗಾರ್, ಕೆ. ಹನುಮ[illegible]ಯ್ಯ, ಕುಮಾರ ವೆಂಕಣ್ಣ, ಮುಂ[illegible] ಪ್ರಖ್ಯಾತರ ಲೇಖನಗಳು ಅಡಕವಾ[illegible] ಬೆಲೆ ಕೇವಲ ೪ ಆಣೆಗಳು.

ಭಾರತವು ಸ್ವಾತಂತ್ರ್ಯದ ಹೆಬ್ಬಾಗಿಲ[illegible]ಳ ಸೇರುವ ಈ ಪರ್ವ ಕಾಲದಲ್ಲಿ [illegible] ರಾಷ್ಟ್ರೀಯ ಪತ್ರಿಕೆಗಳು ಅತ್ಯಗತ್ಯ[illegible]ವು. ಶ್ರೀ ನಾರಾಯಣ್‌ರವರ ಈ [illegible]ಮ ಉದ್ಯಮಕ್ಕೆ ಮಹಾಜನರು ಪ್ರೋ[illegible] ಕೊಡಬೇಕೆಂದು ಹಾರೈಸುತ್ತೇ[illegible]

ರಾಜಕಮಲ್, ಮೈಸೂರು

1946 ನೇ ನವಂಬರ್ 15 ನೇ ಶುಕ್ರವಾರದಿಂದ

ಪ್ರತಿದಿನ ಮೂರು ಆಟಗಳು

'ಡಾಕ್ಟರ್ ಕೊಟ್ನಿಸ್ ಕಿ ಅಮರ್ ಕಹಾನಿ'

ಮುಖ್ಯ ಭೂಮಿಕೆ: ಶಾಂತಾರಾಂ, ಉಲ್ಲಾಸ್, ವಿನಾಯಕ್, ದಿವಾನ್‌ಶರ್ಮ, ಜಯಶ್ರೀ.



Advance Booking accepted between 10 a.m. and 12 noon

From Friday the 15th Nov 1946 for 4 days at 10-30 a. m.

'Adventures of Marco-Polo'

A SAMUEL GOLDWYN MIGHTY MARVEL!

ರೀ. ನಂ. 392 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೧] ಸೋಮವಾರ ೧೮—೧೧—೪೬ [ಸಂಚಿಕೆ ೧೬

ಶಾಂತಿಪಾಲನೆಗಾಗಿ ನೈಜಾಮರ ಪ್ರಾರ್ಥನೆ

೩೦ ರೂ. ಗೆ ರೇಡಿಯೊ

ಭಾರತದಲ್ಲಿ ಅಗ್ಗವಾಗಿ ರೇಡಿಯೊ ಸೆಟ್ಟುಗಳನ್ನು ತಯಾರು ಮಾಡುವ ಕಂಪನಿಗೆ ಉತ್ತೇಜನ ಕೊಟ್ಟು ೨೦ ರಿಂದ ೩೦ ರೂಪಾಯಿಯಲ್ಲಿ ರೇಡಿಯೋ ದೊರಕುವಂತೆ ಮಾಡಲಾಗುವುದೇ ಎಂದು ಕೇಂದ್ರ ಶಾಸನಸಭೆಯಲ್ಲಿ ಕೇಳಿದ ಪ್ರಶ್ನೆಗೆ ಸ|| ಪಟೇಲರು ಉತ್ತರವಿತ್ತು ಈಗಾಗಲೇ ಆ ಬಗ್ಗೆ ಹಲವು ಕಂಪನಿಗಳಿಂದ ಲೈಸೆನ್ಸಿಗಾಗಿ ಅರ್ಜಿ ಬಂದಿವೆ ಸರ್ಕಾರದವರು ಈ ವಿಷಯವನ್ನು ಪರಿಶೀಲಿಸುತ್ತಿರುವರು ಎಂದು ಹೇಳಿದರು

ಧರ್ಮಾಧಿಕಾರಿಗಳ ಪರಿಷತ್ತು

ಹಿಂದೂಸ್ಥಾನದ ಮುಂದಿನ ರಾಜ್ಯಾಂಗದಲ್ಲಿ ವೈದಿಕ ಧರ್ಮದ ಸ್ಥಾನ ಮಾನಗಳನ್ನು ಗೊತ್ತು ಮಾಡುವ ಮತ್ತು ಅವುಗಳನ್ನು ಕಾಯ್ದುಕೊಳ್ಳಲು ಬೇಕಾದ ಭದ್ರತೆಗಳನ್ನು ನಿರ್ಧರಿಸಿಕೊಳ್ಳುವ ಸಲುವಾಗಿ ಡಿಸೆಂಬರ್ ಮೊದಲನೇ ವಾರದಲ್ಲಿ ಮದರಾಸಿ ಮೈಲಾಪುರದಲ್ಲಿ ಅಖಿಲ ಭಾರತ ಧರ್ಮಾಚಾರ್ಯರ ಸಭೆ ನಡೆಯುವುದು ಹಿಂದೂಸ್ಥಾನದ ಎಲ್ಲ ಧರ್ಮ ಪೀಠಗಳಿಗೂ ಆಹ್ವಾನವನ್ನು ಕಳುಹಿಸಲಾಗುವುದೆಂದು ವರದಿಯಾಗಿದೆ

ಮಹಿಳೆಯರಿಗೆ ಸರ್ಕಾರಿ ಹುದ್ದೆ

ಒರಿಸ್ಸಾ ಮುಖ್ಯ ಮಂತ್ರಿಯಾದ ಶ್ರೀ|| ಹರೇಕೃಷ್ಣ ಮೆಹತಾಬ್ ರವರು ಮಾಡಿದ ಭಾಷಣವೊಂದರಲ್ಲಿ ಪೋಲೀಸ್ ಇಲಾಖೆಯೊಂದನ್ನು ಬಿಟ್ಟು ಬಾಕಿ ಎಲ್ಲಾ ಸರ್ಕಾರಿ ಹುದ್ದೆಗಳಿಗೂ ಮಹಿಳೆಯರು ಸೇರಬಹುದು ಯಾವ ಅಡಚಣೆಯೂ ಇಲ್ಲವೆಂದು ತಿಳಿಸಿದರು, ವಿದ್ಯಾರ್ಥಿನಿಯರು ಶಾಲೆಗಳಲ್ಲಿ ಕವಾಯಿತು ಮತ್ತು ಆಯುಧಗಳನ್ನು ಉಪಯೋಗಿಸುವುದನ್ನು ಅಭ್ಯಾಸಮಾಡಬೇಕೆಂದೂ ಇದರಿಂದ ಅವರ ಆತ್ಮರಕ್ಷಣೆಯಾಗುವುದೆಂದೂ ಹೇಳಿರುವರು, ಇದರ ಅಭಾವದಿಂದಲೇ ನೌಖಾಲಿ ಮುಂತಾದೆಡೆಗಳಲ್ಲಿ ನೂರಾರು ಮಹಿಳೆಯರು ರಕ್ಷಣೆಯಿಲ್ಲದೆ ದುರವಸ್ಥೆಗೊಳಗಾದರೆಂದೂ ತಿಳಿಸಿರುವರು.

[ಹಿಂದಿನ ಪುಟದಿಂದ ಮುಂದುವರಿದುದು]

ವೃಶ್ಚಿಕ—ಆರೋಗ್ಯ ಸಾಧಾರಣ, ಧಾರ್ಮಿಕ ಕಾರ್ಯಗಳಿಂದ ಖರ್ಚು ಮತ್ತು ಸನ್ಮಾನ, ವಿಶೇಷರೀತಿಯ ವೆಚ್ಚ. ತಾ|| ೧೧-೨೨-೨೪ ಪ್ರವಾಸ, ಮಿತ್ರ ಭೇಟಿ

ಧನುಸ್ಸು—ಆರೋಗ್ಯ ಚೆನ್ನಾಗಿರುತ್ತದೆ ವ್ಯವಹಾರ ಉತ್ತಮ ಮಾನಸಿಕ ಸಂತೋಷಕ್ಕಾಗಿ ಖರ್ಚು, ಬಂಧುಗಳ ಆಗಮನದಿಂದ ಅಧಿಕವ್ಯಯ. ಅನಿರೀಕ್ಷಿತ ಪ್ರವಾಸ

ಮಕರ—ಶತ್ರುಗಳ ಕಿರುಕುಳದಿಂದ ವ್ಯಾಪಾರ ವ್ಯವಹಾರಗಳಲ್ಲಿ ವಿಶೇಷ ನಷ್ಟ ಮಾನಸಿಕ ಕ್ಲೇಶ ಹೆಚ್ಚುವುದು, ಮಿತ್ರರಿಂದ ಸಹಾಯವಾಗುವುದು

ಕುಂಭ—ಆರೋಗ್ಯ ಚೆನ್ನಾಗಿರುತ್ತದೆ ಸಂಬಳ ಹೆಚ್ಚು. ಉದ್ಯೋಗ ವ್ಯವಹಾರಗಳಲ್ಲಿ ವಿಶೇಷ ಆಸಕ್ತಿ. ಅಧಿಕಾರಿಗಳಿಂದ ಮಿತ್ರರಿಂದಲೂ ಸಹಾಯ.

ಮೀನ—ಆರೋಗ್ಯ ಕೆಡುತ್ತದೆ ಖರ್ಚು ಅಧಿಕ ಪ್ರವಾಸದಿಂದ ಕ್ಲೇಶ, ಮನೆಯಲ್ಲಿ ಜಾಯಿಲೆ, ಶತ್ರುಗಳು ವಿಶೇಷ ಕಿರುಕುಳ ಕೊಡುವರು. ತಾ|| ೨೦-೨೧ ರಿಂದ ಪ್ರಶಾಂತಿ, ಸನ್ಮಾನ.

ಸತ್ಯಾಗ್ರಹ ಸಮಿತಿ ನೇಮಕ

ಸ್ವಂ.ಸು.ಪ್ರೋ|] ಬೆಂಗಳೂರು ೧೮

ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನಿನ್ನೆ ಸಭೆ ಸೇರಿ ಹಲವು ನಿರ್ಣಯಗಳನ್ನು ಅಂಗೀಕರಿಸಿತು ಪಂಡಿತ ಮಾಳವೀಯರ ನಿಧನಕ್ಕಾಗಿ ಸಂತಾಪ ಸೂಚನೆ, ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಸತ್ಯಾಗ್ರಹವನ್ನು ಕೈಗೊಳ್ಳಲು ಸಲಹೆಗಳನ್ನು ಕೊಡುವುದಕ್ಕಾಗಿ ಒಂದು ಉಪ ಸಮಿತಿಯ ರಚನೆ, ಚುನ್ನದ ಗಣಿಯ ಪರಿಸ್ಥಿತಿಯನ್ನು ಪರಿಶೀಲಿಸಿ ವರದಿ ಮಾಡಲು ಶ್ರೀ|| ಕೆ. ಎಸ್ ಕುಮಾರರವರ ನೇಮಕ, ಇವೇ ಮುಂತಾದ ಬಗ್ಗೆ ನಿರ್ಣಯಗಳಾದವು. ರಾಜ್ಯಾಂಗ ರಚನಾ ಸಮಿತಿಯೊಡನೆ ಸಂಧಾನ ನಡೆಸಲು ಏರ್ಪಾಡಾಗುವ ಸಮಿತಿಯಲ್ಲಿ ಚುನಾಯಿತ ಸದಸ್ಯರೇ ಬಹು ಸಂಖ್ಯೆಯಲ್ಲಿರಬೇಕು, ಇಲ್ಲವಾದರೆ ಅವರೊಡನೆ. ಇತರ ಸದಸ್ಯರು ಸಹಕರಿಸಬಾರದು- ಎಂಬ ಠರಾವನ್ನೂ ಮಂಜೂರು ಮಾಡಲಾಯಿತು, ಶ್ರೀ|| ಗಳಾದ ಟಿ ಸಿದ್ದಲಿಂಗಯ್ಯ, ಕೆ ಟಿ. ಭಾಷ್ಯಂ ಮತ್ತು ಎಸ್. ಸಿದ್ದಲಿಂಗಪ್ಪನವರನ್ನು ಅಧ್ಯಕ್ಷರು ಕಾರ್ಯಕಾರಿ ಸಮಿತಿಗೆ ನಾಮಕರಣ ಮಾಡಿಕೊಂಡರು ಶ್ರೀ|| ಗಳಾದ ಎ ಜಿ. ರಾಮಚಂದ್ರರಾಯರು, ಪ್ರಧಾನ ಕಾರ್ಯದರ್ಶಿ, ಟಿ. ಸಿದ್ದಲಿಂಗಯ್ಯನವರು ವ್ಯವಸ್ಥಾಪಕ ಕಾರ್ಯದರ್ಶಿ, ಕೆ ಆರ್. ಮಾಧವ ರಾಯರು ಜಂಟಿ ಕಾರ್ಯದರ್ಶಿ, ಎಸ್ ಚನ್ನಯ್ಯನವರು ಖಜಾಂಚಿ, ಎಚ್. ಕೆ. ವೀರಣ್ಣ ಗೌಡರು ಪ್ರಕಟಣಾಧಿಕಾರಿಗಳಾಗಿಯೂ ನೇಮಿಸಲ್ಪಟ್ಟಿರುವರು.

ಪ್ರದರ್ಶನದ ಮುಕ್ತಾಯ

ಕಳೆದ ಹದಿನಾರು ದಿನಗಳಿಂದ ನಡೆಯುತ್ತಿದ್ದ ಕಾಂಗ್ರೆಸ್ಸಿನ ಖಾದಿ ಮತ್ತು ಗ್ರಾಮ ಕೈಗಾರಿಕೆಗಳ ಪ್ರದರ್ಶನವು ನಿನ್ನೆ ಮುಕ್ತಾಯಗೊಂಡಿತು. ಉತ್ತಮ ಪ್ರದರ್ಶನಕಾರರಿಗೆ ಅಧ್ಯಕ್ಷರಾದ ಶ್ರೀ|| ರೆಡ್ಡಿಯವರು ಬಹುಮಾನಗಳನ್ನು ಹಂಚಿದರು. ಹಿಂದೂವರೆ ಲಕ್ಷ ಜನರು ಪ್ರದರ್ಶನವನ್ನು ನೋಡಿದರು. ಒಂದು ಲಕ್ಷ ರೂಪಾಯಿನ ವ್ಯಾಪಾರವು ನಡೆಯಿತು.

ನೇಪಾಳದಿಂದ ಭತ್ತ

ನೇಪಾಳದ ಮಹಾರಾಜರು ಡಾ|| ರಾಜೇಂದ್ರ ಪ್ರಸಾದರಿಗೆ ಸಂದೇಶವೊಂದನ್ನು ಕಳುಹಿ ನೇಪಾಳದ ಭತ್ತವನ್ನು ಭಾರತಕ್ಕೆ ಕೊಡುವುದಾಗಿ ತಿಳಿಸಿದ್ದಾರೆ

ನೈಜಾಮರ ಮನವಿ

ನಿಜಾಮರು ಒಂದು ವಿನಂತಿಮಾಡಿ ಭಾರತದಲ್ಲಿ ಇಂದು ನಡೆಯುತ್ತಿರುವ ಭ್ರಾತೃಹತ್ಯವನ್ನು ಕೊನೆಗಾಣಿಸಿ, ಭಾರತವನ್ನು ಆದರ್ಶಕ್ಕೆ ಗುರಿಮಾಡದಂತೆ ಕಾಪಾಡಬೇಕೆಂದು ಪ್ರಾರ್ಥಿಸಿದ್ದಾರೆ. ಸರ್ಕಾರದ ಮಾರ್ಗ ಸಹ ಏನೇ ಆಗಲಿ ಶಾಂತಿ ಮತ್ತು ಶಿಸ್ತನ್ನು ಪಾಲಿಸುವುದು ಅವರ ಕರ್ತವ್ಯವೆಂದು ಹೈದರಾಬಾದ್ ನಿಜಾಮರು ಹೇಳಿದ್ದಾರೆ

ಆಯುರ್ವೇದ ಸಮ್ಮೇಳನ

ಗದಗಿನಲ್ಲಿ ನಡೆಯುವ 15 ನೆಯ ಸಮಿಕರ್ನಾಟಕ ಆಯುರ್ವೇದ ಸಮ್ಮೇಳನದ ಅಂಗವಾಗಿ ಸಿದ್ಧೌಷಧಿ, ವನಸ್ಪತಿ, ಪುರಾತನ ಅಪ್ರಕಾಶಿತ ಗ್ರಂಥಗಳು, ಶಸ್ತ್ರ ಮತ್ತು ಯಂತ್ರೋಪಕರಣಗಳ ಪ್ರದರ್ಶನವನ್ನೂ, ರಾಜಯಕ್ಷ್ಮ, ಮಧುಮೇಹಗಳ ಅವಸ್ಥಾಭೇದ ಮತ್ತು ಮತ್ತು ಚಿಕಿತ್ಸೆ, ವಸ್ತಿಯ ಪ್ರಭೇದ ಮತ್ತ ಅದರ ಅನುಭವಾತ್ಮಕ ಉಪಯೋಗ, ಮತ ಸಾರ್ವತ್ರಿಕ ಚರ್ಮರೋಗಗಳ ನಿಧಾನ ಮತ್ತು ಚಿಕಿತ್ಸೆಗಳ ನಿಬಂಧವನ್ನೂ ಮತ್ತು ಜನ ನಿಬಿಡವಾದ ಪಟ್ಟಣಗಳಲ್ಲಿ ಸಾಂಕ್ರಾಮಿಕ ರೋಗಗಳ ಪ್ರತಿಬಂಧೋಪಾಯ, ಗ್ರಂಥಸ್ಥವಲ್ಲದ ವನಸ್ಪತಿಗಳನ್ನು ಈಗ ಹೊಸದಾಗಿ ಉಪಲಬ್ಧವಿರುವ ಔಷಧಿಗಳ ಗುಣಧರ್ಮವನ್ನು ಕಂಡುಹಿಡಿಯುವ ಬಗ್ಗೆ ಇವುಗಳ ಮೇಲೆ ಚರ್ಚೆಗಳನ್ನೂ ಏರ್ಪಡಿಸಲಾಗಿದೆ, ವಿವರಗಳಿಗಾಗಿ ಕಾರ್ಯದರ್ಶಿಗಳಿಗೆ ಬರೆದು ತಿಳಿದುಕೊಳ್ಳಬೇಕೆಂದು ಪ್ರದರ್ಶನ ವಿಭಾಗದ ಅಧ್ಯಕ್ಷರು ಕೋರಿರುತ್ತಾರೆ

ಸಂತಾಪ ಸೂಚಕ ಸಭೆ

ಪಂ|| ಮದನಮೋಹನ ಮಾಳವೀಯರ ನಿಧನದ ಬಗ್ಗೆ ಸಂತಾಪ ಸೂಚಿಸಲು ಈ ದಿನ ಸಂಜೆ ೬-೩೦ ಕ್ಕೆ ರಾಜಧಾನಿಯ ಪತ್ರಿಕೋದ್ಯೋಗಿಗಳ ಸಂಘದ ವಿಶೇಷ ಸಭೆ ಜರುಗುವುದು ಸದಸ್ಯರೆಲ್ಲರೂ ತಪ್ಪದೆ ದಯಮಾಡಿಸಬೇಕಾಗಿ ಕೋರಲಾಗಿದೆ

ಆಯುರ್ವೇದ ಮತ್ತು ಯುನಾನೀ ಪದವೀಧರರ ಸಂಘ

ಮೈಸೂರು ಜಿಲ್ಲೆಯ ಮೇಲ್ಕಂಡ ಸಂಘದ ಸಭೆಯು ನೆನ್ನೆ ಸಂಜೆ ಡಾ|| ಟಿ ವಿ ಕಸ್ತೂರಿ ರಂಗಾಚಾರ್ಯರವರ ಅಧ್ಯಕ್ಷತೆಯಲ್ಲಿ ಮೈಸೂರು ಜಿಲ್ಲಾ ಸಮಿತಿಯ ಭವನದಲ್ಲಿ ಸೇರಿ ಹಳ್ಳಿ ಕಾಂ. ಕ. ಕಗಳನ್ನು ನಿವಾರಿಸಬೇಕೆಂದು ಜಿಲ್ಲಾ ಬೋರ್ಡ್ ಅಧಿಕಾರಿಗಳನ್ನು ಪ್ರಾರ್ಥಿಸುವ ನಿರ್ಣಯವನ್ನು ಅಂಗೀಕರಿಸಿತು

ಮಹಿಳೆಯೊಬ್ಬರು ಮಂತ್ರಿಯಾಗಬೇಕು

ಮಹಿಳಾ ಸಮ್ಮೇಳನದ ನಿರ್ಣಯ

ಸ್ವಂ.ಸು ಪ್ರೋ|] ಬೆಂಗಳೂರು ೧೮

ಮೈಸೂರು ಸಂಸ್ಥಾನದ ಮಹಿಳಾ ಸಮ್ಮೇಳನದ ೨೦ ನೇ ಅಧಿವೇಶನವು ನಿನ್ನೆ ಮತ್ತು ಮೊನ್ನೆ ಶಂಕರಪುರದ ಮಹಿಳಾ ಸೇವಾ ಸಮಾಜದಲ್ಲಿ ಲೇಡಿ ರಾಮಸ್ವಾಮಿ ಮೊದಲಿಯಾರ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ಪ್ರಾರಂಭದಲ್ಲಿ ರಾಜಕುಮಾರಿಯ ಜನನಕ್ಕಾಗಿ ಶ್ರೀಮನ್ಮಹಾರಾಜರನ್ನೂ ಮತ್ತು ಮಹಾರಾಣಿಯವರನ್ನೂ ಅಭಿನಂದಿಸಿಯೂ, ಸಂಯುಕ್ತ ರಾಷ್ಟ್ರ ಮಹಾ ಸಮ್ಮೇಳನಕ್ಕೆ ಭಾರತೀಯ ನಿಯೋಗದ ನಾಯಕರಾಗಿರುವ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರನ್ನು ಪ್ರಶಂಸಿಸಿಯೂ, ನಿರ್ಣಯಗಳಾದುವು. ಬಂಗಾಳ ಮತ್ತು ಬಿಹಾರ ದುರಂತದಲ್ಲಿ ನೊಂದವರಿಗೆ ಸಹಾನುಭೂತಿ ತೋರಿಸಲಾಯಿತು. ಕೋಮುವಾರು ಗಲಭೆಗಳನ್ನು ಖಂಡಿಸಿ, ಶಾಂತಿ ಸೌಹಾರ್ದಗಳನ್ನು ಸ್ಥಾಪಿಸಬೇಕೆಂದು ಸಕಲರನ್ನೂ ಪ್ರಾರ್ಥಿಸಲಾಯಿತು. ಮಹಿಳೆಯರ ವಿದ್ಯಾಭ್ಯಾಸ, ಸಾಮಾಜಿಕ ಸುಧಾರಣೆ ಮತ್ತು ವೈದ್ಯ ಸೌಕರ್ಯಗಳನ್ನು ಕುರಿತು ಅನೇಕ ನಿರ್ಣಯಗಳು ಅಂಗೀಕರಿಸಲ್ಪಟ್ಟುವು

ಈಗಿನ ಸರ್ಕಾರದಲ್ಲಿ ಒಬ್ಬ ಮಹಿಳಾ ಮಂತ್ರಿ ಇರಬೇಕೆಂಬ ನಿರ್ಣಯವು ಒಪ್ಪಲ್ಪಟ್ಟಿತು. ಬಾಲಿಕಾ ಶಾಲೆಗಳಲ್ಲಿ ವ್ಯಾಯಾಮ ಶಿಕ್ಷಣ ಕೊಡಬೇಕು; ರೈಲುಗಳಲ್ಲಿ ಮಹಿಳೆಯರಿಗೆ ಹೆಚ್ಚು ಗಾಡಿಗಳನ್ನು ಒದಗಿಸಬೇಕು; ವಿದೇಶಗಳಲ್ಲಿ ಪ್ರೌಢ ವಿದ್ಯಾಭ್ಯಾಸಕ್ಕೆ ಹೆಂಗಸರಿಗೆ ವೇತನಗಳನ್ನು ಹೆಚ್ಚಾಗಿ ಕೊಡಬೇಕು; ಕೋಮುವಾರು ಭೇದವಿಲ್ಲದೆ ಅರ್ಹರಾದ ವಿದ್ಯಾರ್ಥಿನಿಯರಿಗೆಲ್ಲಾ ವಾಸದ ಸೌಕರ್ಯವನ್ನು ಸರ್ಕಾರದವರು ಏರ್ಪಡಿಸಬೇಕು; ಎಲ್ಲಾ ಉಪಾಧ್ಯಾಯರುಗಳಿಗೂ ಸಂಬಳ ಹೆಚ್ಚು ಮಾಡಬೇಕು; ಬಂಗಾಳದಲ್ಲಿ ಬಲವಂತದಿಂದ ಮತಾಂತರ ಹೊಂದಿರುವ ಮಹಿಳೆಯರು ಅವರ ಮೂಲ ಮತಕ್ಕೆ ಸೇರಲು ಅವಕಾಶ ಕಲ್ಪಿಸಬೇಕು; ಮಹಿಳೆಯರ ಹಕ್ಕು ಬಾಧ್ಯತೆಗಳಿಗೆ ಸಂಬಂಧಪಟ್ಟಂತೆ ಈಗಿರುವ ಶಾಸನವನ್ನು ವಿಮರ್ಶಿಸಲು ಗಂಡಸರು ಮತ್ತು ಹೆಂಗಸರ ಸಮ ಸಂಖ್ಯೆಯನ್ನು ಒಳಗೊಂಡ ಒಂದು ಸಮಿತಿಯನ್ನು ಏರ್ಪಡಿಸಬೇಕು — ಇವೇ ಮುಂತಾದ ಅನೇಕ ನಿರ್ಣಯಗಳು ಅಂಗೀಕಾರವಾದುವು.

ಜಿಲ್ಲಾಧಿಕಾರಿಗಳ ಮೇಲೆ ಅರ್ಜಿ

ಹಾಸನ ಜಿಲ್ಲಾಧಿಕಾರಿಗಳ ಮೇಲೆ ಹಲವು ಪ್ರಬಲವಾದ ಆಪಾದನೆಗಳನ್ನು ಮಾಡಿ ಆ ಜಿಲ್ಲಾ ಬೋರ್ಡ್ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಇತರ ಹಲವು ಪ್ರಮುಖರು ದೀರ್ಘವಾದ ಮನವಿಯೊಂದನ್ನು ದಿವಾನರು ಮತ್ತು ಮಂತ್ರಿಗಳಿಗೆ ಸಲ್ಲಿಸಿದರೆಂದೂ, ಈ ಬಗ್ಗೆ ನಿಷ್ಪಕ್ಷಪಾತವಾದ ವಿಚಾರಣೆಯನ್ನು ಏರ್ಪಡಿಸುವುದಾದರೆ ತಕ್ಕ ರುಜುವಾತನ್ನು ಕೊಡಲು ತಾವು ಸಿದ್ಧರಿರುವುದಾಗಿ ಅವರು ನಿವೇದಿಸಿರುವರೆಂದೂ ತಿಳಿದುಬಂದಿದೆ.

ಆನರ್ಸ್ ಪ್ರೊಫೆಸರು

ಮೈಸೂರು ಮಹಾರಾಜಾ ಕಾಲೇಜಿನ ತತ್ವಶಾಸ್ತ್ರದ ಉಪಾಧ್ಯಾಯರಾದ ಶ್ರೀ ಎಂ ಎ ಮಹಾದೇವಾಚಾರ್ಯರನ್ನು ಆನರ್ಸ್ ಪ್ರೊಫೆಸರನ್ನಾಗಿ ನೇಮಿಸಲಾಗಿದೆ

ಸಾಧ್ವಿ

ತಾ|| ೧೮-೧೧-೪೬ ಸೋಮವಾರ

ಪಠ್ಯ ಪುಸ್ತಕಗಳ ತೊಂದರೆ

ಈ ಸೆಪ್ಟಂಬರ್‌ನಲ್ಲಿ ನಡೆದ ಬಿ.ಎ., ಬಿ ಎಸ್ ಸಿ., ಪರೀಕ್ಷೆಗಳಿಗೆ ಕುಳಿತಿದ್ದು ಒಂದು ಮತ್ತು ಎರಡನೇ ಭಾಗಗಳಲ್ಲಿ ತೇರ್ಗಡೆಯಾಗದವರೂ, ಮತ್ತು ಅನಿವಾರ್ಯದಿಂದ ಪರೀಕ್ಷೆಗೆ ಹಾಜರಾಗದಿದ್ದವರೂ ಪುನಃ 1947 ನೇ ಮಾರ್ಚಿಯಲ್ಲಿ ನಡೆಯುವ ಪರೀಕ್ಷೆಗಳಿಗೆ ಕೂರಬೇಕಾದರೆ ಮೈಸೂರು ಗೆಜೆಟ್ಟಿನಲ್ಲಿ ಪ್ರಕಟವಾಗಿರುವಂತೆ 1947 ನೇ ಮಾರ್ಚಿ ಪರೀಕ್ಷೆಗೆ ಇಟ್ಟಿರುವ ಪಠ್ಯಪುಸ್ತಕಗಳನ್ನು ಓದಬೇಕಾಗಿದೆ. ಆದರೆ ಇವೆಲ್ಲವೂ ಅವರಿಗೆ ಹೊಸಪುಸ್ತಕಗಳು. ಪರೀಕ್ಷೆಗೆ ಇನ್ನು ಕೇವಲ ನಾಲ್ಕು ತಿಂಗಳು ಮಾತ್ರ ಇದೆ ಎರಡು ವರ್ಷಗಳಲ್ಲಿ ಓದುವ ಪಠ್ಯ ಪುಸ್ತಕಗಳನ್ನು ನಾಲ್ಕು ತಿಂಗಳುಗಳಲ್ಲಿ ಓದಬೇಕಾಗಿದೆ. ಆದ್ದರಿಂದ ವಿಶ್ವವಿದ್ಯಾನಿಲಯದ ಅಧಿಕಾರಿಗಳು ದಯವಿಟ್ಟು ಇದನ್ನು ಪರಿಶೀಲಿಸಿ ಮೇಲ್ಕಂಡ ವಿದ್ಯಾರ್ಥಿಗಳಿಗೆ 1946 ನೇ ಮಾರ್ಚಿ ಪರೀಕ್ಷೆಗೆ ಇಟ್ಟಿದ್ದ ಪಠ್ಯ ಪುಸ್ತಕಗಳನ್ನೇ 1947ನೇ ಮಾರ್ಚಿ ಪರೀಕ್ಷೆಗೂ ಇಟ್ಟು ಆ ವಿದ್ಯಾರ್ಥಿಗಳಿಗೆ ಇನ್ನೊಂದು ಕೊನೆಯ ಅವಕಾಶವನ್ನು ಕೊಟ್ಟು ಸಹಾಯ ಮಾಡುವುದು ಸೂಕ್ತವಾಗಿದೆ.

ಈ ಪಠ್ಯ ಪುಸ್ತಕಗಳ ಪಾಠಗಳನ್ನು ಹೇಳಿ ಕೊಡಲು ಯಾವ ಏರ್ಪಾಡೂ ನಡೆದಿಲ್ಲ ವಿಶ್ವವಿದ್ಯಾನಿಲಯದ ಕಾಲೇಜುಗಳಲ್ಲಿಯಾಗಲೀ ಅಥವಾ ಇತರ ವಿದ್ಯಾ ಸಂಸ್ಥೆಗಳಲ್ಲಿಯಾಗಲೀ ಮೇಲ್ಕಂಡ ಪುಸ್ತಕಗಳಲ್ಲಿ ಶಿಕ್ಷಣ ಹೊಂದಲು ಯಾವ ಸೌಕರ್ಯವೂ ಇದುವರೆಗೆ ಕಂಡು ಬಂದಿಲ್ಲ ಎರಡು ವರ್ಷಗಳಿಂದ ಅನೇಕ ಉಪಾಧ್ಯಾಯರುಗಳ ಸಹಾಯವಿದ್ದರೂ ಕೆಲವು ಕಾರಣಗಳಿಂದ ತೇರ್ಗಡೆಯಾಗದ ವಿದ್ಯಾರ್ಥಿಗಳು ಈಗ ಹೊಸ ಪುಸ್ತಕಗಳನ್ನು ಕೇವಲ ಮೂರು ನಾಲ್ಕು ತಿಂಗಳುಗಳಲ್ಲಿ ಯಾವ ಶಿಕ್ಷಣದ ಸಹಾಯವೂ ಇಲ್ಲದೆ ಕಲಿಯಲು ಕಷ್ಟಸಾಧ್ಯವೇ ಸರಿ.

ಕೆಲವು ಧನಿಕ ವಿದ್ಯಾರ್ಥಿಗಳು ನೂರಾರು ರೂ ಗಳನ್ನು ವೆಚ್ಚ ಮಾಡಿ ಉಪಾಧ್ಯಾಯರುಗಳಿಂದ ಶಿಕ್ಷಣ ಪಡೆಯಬಹುದು ಆದರೆ ಇಂತಹವರ ಸಂಖ್ಯೆ ಬಹು ಅಲ್ಪ. ವಿಶ್ವವಿದ್ಯಾನಿಲಯದಲ್ಲಿ ಓದುವ ವಿದ್ಯಾರ್ಥಿಗಳಲ್ಲಿ ಬಹು ಮಂದಿ ಮಧ್ಯಮ ತರಗತಿಯವರು ಮತ್ತು ಬಡವರು. ಅಲ್ಲದೆ ಕಾಲೇಜಿಗೆ ಸೇರದೆ ಇರುವ ಇಂತಹ ವಿದ್ಯಾರ್ಥಿಗಳಿಗೆ ಕಾಲೇಜಿನ ಲೈಬ್ರರಿಯಿಂದ ಪುಸ್ತಕಗಳ ಸಹಾಯವೂ ದೊರೆಯುವುದಿಲ್ಲ ಹೀಗೆ ದೀರ್ಘ ಕಾಲಾವಕಾಶ, ಉಪಾಧ್ಯಾಯರುಗಳಿಂದ ಶಿಕ್ಷಣ, ಲೈಬ್ರರಿಗಳಿಂದ ಪುಸ್ತಕಗಳ ಸೌಕರ್ಯ, ಇವೆಲ್ಲವೂ ಇದ್ದು ಪರೀಕ್ಷೆಯಲ್ಲಿ ತೇರ್ಗಡೆಯಾಗದವರು ಈಗ ಇವುಗಳಿಲ್ಲದರ ಅಭಾವದಿಂದ ಹೊಸ ಪುಸ್ತಕಗಳನ್ನು ಓದಿ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದೆಂದರೆ ಬಹಳ ಕಷ್ಟವಾದ ಕೆಲಸ

ಈಗಲೂ ಕಾಲವು ಮಿಂಚಿಲ್ಲ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಈ ತೊಂದರೆಗಳನ್ನೆಲ್ಲಾ ಪರಿಶೀಲಿಸಿ ತಮ್ಮ ಆಜ್ಞೆಯನ್ನು ರದ್ದು ಮಾಡಿ, ೪೬ ನೇ ಮಾರ್ಚಿ ಪರೀಕ್ಷೆಗೆ ಇಟ್ಟಿದ್ದ ಪುಸ್ತಕಗಳನ್ನೇ ಮೇಲಿನ ವಿದ್ಯಾರ್ಥಿಗಳಿಗಾಗಿ 1947 ನೇ ಮಾರ್ಚಿ ಪರೀಕ್ಷೆಗೂ ಇಟ್ಟು ಅವರ ಕಷ್ಟವನ್ನು ನಿವಾರಿಸುವರೆಂದು ನಂಬುತ್ತೇವೆ

ವಾರಗಾರ್ಡ್ ಇನ್ಷೂರೆನ್ಸ್ ಕಂಪೆನಿ ಲಿಮಿಟೆಡ್,

ಮತ್ತು

ವಾರಗಾರ್ಡ್ ಫೈರ್ ಮತ್ತು ಜನರಲ್ ಇನ್ಷೂರೆನ್ಸ್ ಕಂಪೆನಿ ಲಿಮಿಟೆಡ್

ಹೆಡ್ ಆಫೀಸ್ : : ಮದ್ರಾಸು

ಲೈಫ್ ಮತ್ತು ಮೋಟಾರ್, ಫೈರ್, ಮೆರೈನ್, ಆಕ್ಸಿಡೆಂಟ್, ವರ್ಕ್‌ಮೆನ್ಸ್ ಕಾಂಪೆನ್ಸೇಷನ್, ಮತ್ತು ಇನ್ನೂ ಎಲ್ಲಾ ತರಹೆಯ ಇನ್ಷೂರೆನ್ಸುಗಳನ್ನು ಕೈಗೊಳ್ಳುವ ಕಂಪೆನಿ.

ಪಾಲಿಸಿದಾರರುಗಳಿಗೆ ಹೆಚ್ಚಿಗೆ ಬೋನಸ್ಸು ಹಂಚಲ್ಪಟ್ಟಿರುತ್ತೆ

ಏಜೆಂಟರುಗಳಿಗೆ ಧಾರಾಳವಾದ ಕಮಿಷನ್.

ಪಾಲಿಸಿ ತೆಗೆದುಕೊಳ್ಳಲೂ ಮತ್ತು ಏಜೆಂಟಾಗಲೂ ಇವರಲ್ಲಿ ವಿಚಾರಿಸಿ :—

ಎಂ. ಸಿ. ಸಂಪತ್ತಯ್ಯಂಗಾರ್,

ಸ್ಪೆಷಲ್ ರೆಪ್ರೆಸೆಂಟೆಟಿವ್, ವಾರಗಾರ್ಡ್ ಫೈರ್ ಮತ್ತು ಜನರಲ್ ಇನ್ಷೂರೆನ್ಸ್ ಕಂಪೆನಿ ಲಿಮಿಟೆಡ್, ಕೃಷ್ಣವಿಲಾಸ ಅಗ್ರಹಾರ, ಮೈಸೂರು.



ರಾಜಕಮಲ್,

ಮೈಸೂರು.

1946ನೇ ನವಂಬರ್ 15 ನೇ ಶುಕ್ರವಾರದಿಂದ

ಪ್ರತಿದಿನ ಮೂರು ಆಟಗಳು

'ಡಾಕ್ಟರ್ ಕೊಟ್ನಿಸ್ ಕಿ ಅಮರ್ ಕಹಾನಿ'

ಮುಖ್ಯ ಭೂಮಿಕೆ. ಶಾಂತಾರಾಂ, ದಿವಾಕರ್, ವಿನಾಯಕ್, ಪೆಂಢಾರ್ ಕರ್, ಜಯಶ್ರೀ

Advance Booking accepted between 10 a m. and 12 noon

ವಾರ ಭವಿಷ್ಯ

೧೮-೧೧-೪೬ ರಿಂದ ೨೪-೧೧-೪೬ ರ ವರೆಗೆ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ಮೇಷ—ಆರೋಗ್ಯ ಕೆಡುತ್ತದೆ ಧನಾದಾಯ ಕಡಿಮೆ. ಮಾನಸಿಕ ಚಿಂತೆ ಹೆಚ್ಚು ಖರ್ಚು ಅಧಿಕ. ಪ್ರವಾಸದಿಂದ ನಷ್ಟ.

ತಾ|| ೨೦-೨೪ ಸಾಧಾರಣ ಧನಲಾಭ.

ವೃಷಭ—ಆರೋಗ್ಯ ಸಾಧಾರಣ ಧನಾದಾಯ ವ್ಯಯ ಎರಡೂ ಸಮ. ಉದ್ಯೋಗ ವ್ಯವಹಾರಗಳಲ್ಲಿ ಹಾನಿ ಚಿಂತಾಪ್ರದ ಸಮಾಚಾರ

ತಾ|| ೨೪ ಧನಲಾಭ

ಮಿಥುನ—ಆರೋಗ್ಯ ಚೆನ್ನಾಗಿರುತ್ತದೆ ಅಧಿಕಾರಿಗಳಿಂದ ಸನ್ಮಾನ. ಉದ್ಯೋಗ ವ್ಯವಹಾರಗಳಿಂದ ಲಾಭ. ಮಿತ್ರರಿಂದ ಸಹಾಯ.

ತಾ|| ೨೨-೨೫ ಚಿಂತೆ, ದುಷ್ಟವಾರ್ತೆ.

ಕಟಕ – ಆರೋಗ್ಯ ಉತ್ತಮ, ಮಾನಸಿಕ ಕ್ಲೇಶ ಅಧಿಕ, ಬಂಧು ಜನರಿಂದ ತಿರಸ್ಕಾರ, ವೈರಿಗಳ ಕಾಟ ಅಧಿಕ, ವಿದೇಶ ಪ್ರವಾಸ.

ತಾ|| ೨೩-೨೪ ನಷ್ಟ, ಅಪಮಾನ.

ಸಿಂಹ – ದೇಹಸ್ಥಿತಿ ಉತ್ತಮವಾಗಿರುತ್ತದೆ ಧನಾದಾಯ ಚೆನ್ನಾಗಿರುತ್ತದೆ. ನೌಕರಿಯಲ್ಲಿ ಲಾಭ ದೊರೆಯುತ್ತದೆ

ತಾ|| ೨೦-೨೩ ಅಧಿಕ ಸನ್ಮಾನ, ಬಂಧುಭೇಟಿ

ಕನ್ಯಾ—ಶಾರೀರಿಕ ಸ್ಥಿತಿ ಉತ್ತಮ ಮಾನಸಿಕ ಚಿಂತೆ ಅಧಿಕ, ಧನಲಾಭ ಕಮ್ಮಿ, ಖರ್ಚುಹೆಚ್ಚು, ಬಂಧುಗಳಿಂದ ಸ್ನೇಹ.

ತಾ|| ೧೯-೨೧-೨೩ ಸಾಧಾರಣ

ತುಲಾ—ಆದಾಯಕ್ಕಿಂತ ಖರ್ಚು ಹೆಚ್ಚಾಗಿರುತ್ತದೆ ಶತ್ರುಗಳು ತಲೆಬಾಗುರು, ಮಿತ್ರರಿಂದ ವಿಶೇಷ ಸನ್ಮಾನ, ವ್ಯವಹಾರಗಳಲ್ಲಿ ಗೆಲುವು.

ತಾ|| ೨೧-೨೪ ಖರ್ಚು.

[ಮೊದಲನೆ ಪುಟ ನೋಡಿ.]

ಸ್ವಂತ ಉಸ್ತುವಾರಿಯಿಂದ ತಯಾರಾದ

ಲೋಕಲ್ ಮೇಡ್ ಚಪ್ಪಲಿಗಳು

ಸುಲಭ ಬೆಲೆಗೆ ಸಿಗುತ್ತೆ.

—: ಅಲ್ಲದೆ :—

ಟಾಂಕಿಸ್	D S	18-12-0	C L.C
ಪ್ಲೂರ	„	16- 4-0	„
ರೋಮಿಕ	„	17- 8-0	„
„	S S.	13 12-0	„
ಕುಮಾರ್	„	13- .2-0	„

ಒಂದು ಸಲ ಭೇಟಿಮಾಡಿ—

ಗೋಬರ್ ಫುಟ್‌ವೇರ್ ಹೌಸ್

Edited, printed and published by A. R. Nagarajan of the Sadhvi Press D-Subbiah Road, Mysore.

ಐಟಿಯಾಲ್

TRADE ITL MARK

ಅತ್ಯುತ್ತಮವಾದ ಕ್ರಿಮಿ ನಾಶಿನಿ

ಕಾರ್ಬಾಲಿಕ್ ದ್ರಾವಕಕ್ಕಿಂತಲೂ ಆರರಷ್ಟು ಶಕ್ತಿಯುತವಾದದ್ದು ವಿಷಮಿಶ್ರಿತವಲ್ಲದ್ದು, ಸವೆಸದಿರುವುದು, ಕಲೆಯನ್ನು ಉಳಿಸದಿರುವುದು ಮತ್ತು ಆಹ್ಲಾದಕರವಾದ ವಾಸನೆಯುಳ್ಳದ್ದು. ಕ್ರಿಮಿಗಳಿಗೆ ಐಟಿಯಾಲ್ ವ್ಯತ್ಯಸ್ತ್ರವು; ಆದರೆ ಸೂಕ್ಷ್ಮ ಚರ್ಮಕ್ಕೆ ಯಾವ ಬಾಧೆಯನ್ನೂ ಉಂಟು ಮಾಡುವುದಿಲ್ಲ. ಶಸ್ತ್ರ ಮತ್ತು ಇತರ ಚಿಕಿತ್ಸೆಗಳಲ್ಲಿಯೂ ಮನೆ ಮತ್ತು ಸ್ವಂತ ಉಪಯೋಗಕ್ಕೂ ಹಳೇ ಕಾಲದ ಕ್ರಿಮಿನಾಶಕಗಳನ್ನು ಮೀರಿಸುತ್ತದೆ.

೪, ೮, ಮತ್ತು ೧೬ ಔನ್ಸ್ ಸೀಸೆಗಳಲ್ಲಿ ದೊರೆಯುತ್ತದೆ.

ಐ. ಟಿ. ಎಲ್. ತಯಾರಿ

—: ತಯಾರಿಸುವವರು :—

ಮೈಸೂರು ಇಂಡಸ್ಟ್ರಿಯಲ್ ಮತ್ತು ಟೆಸ್ಟಿಂಗ್ ಲ್ಯಾಬೋರೇಟರಿ, ಲಿಮಿಟೆಡ್

ಮಲ್ಲೇಶ್ವರಂ : : ಬೆಂಗಳೂರು.

ಫೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಮಂಗಳವಾರ ೧೯—೧೧—೪೬ [ಸಂಚಿಕೆ ೯೧

ದತಿಯಾ ಸಂಸ್ಥಾನದ ದಿವಾನಗಿರಿ ಗೊಂದಲ

ಟಿಕೆಟ್ಟಿಲ್ಲದ ಪ್ರಯಾಣ ಸೂಕ್ತವಲ್ಲ

ಮೈಸೂರು ೧೯

ಬೆಂಗಳೂರು ಸುಭಾಷ್ ನಗರದಲ್ಲಿ ನಡೆ[illegible] ಕಾಂಗ್ರೆಸ್ ಅಧಿವೇಶನಕ್ಕೆ ವಿದ್ಯಾರ್ಥಿ [illegible]ಗ್ರೆಸ್ ಉಸ್ತುವಾರಿಯಲ್ಲಿ ಕಳಿಸಲ್ಪಟ್ಟ ಸ್ವಯಂಸೇವಕರುಗಳ ಪೈಕಿ ೭೪ ಮಂದಿ [illegible] ಪ್ರಯಾಣಮಾಡಿದ ವಿಷಯ [illegible] ಮೈಸೂರು ನಗರ ವಿದ್ಯಾರ್ಥಿ ಕಾಂಗ್ರೆ[illegible] ಸಮಿತಿಯು ಕಳೆದ ೧೪ನೇ [illegible] ಸಭೆಸೇರಿ ಪರಿಶೀಲಿಸಿತು. ಟಿಕೆಟ್ಟಿಲ್ಲದೆ [illegible] ಮಾಡುವ ನೀತಿಯು ಈ ಸಂದ[illegible] ಸೂಕ್ತವಲ್ಲವೆಂಬ ಅಭಿಪ್ರಾಯದ [illegible] ಅಂಗೀಕರಿಸಲ್ಪಟ್ಟಿತು. ಸಂ॥ [illegible] ಶುಭಾಶಯಗಳನ್ನು ಕಳಿಸು[illegible], ಬೆಂಗಳೂರು ಕಾಂಗ್ರೆಸ್ ಅಧಿವೇ[illegible] ಸೇವೆ ಸಲ್ಲಿಸಿದ ಸ್ವಯಂಸೇವಕರನ್ನು [illegible]ಸುವುದು ಕೋಲಾರದ ಪ್ರೌಢ [illegible] ವಿದ್ಯಾರ್ಥಿಗಳ ಮುಷ್ಕರಕ್ಕೆ ಸಹಾ[illegible] ತೋರಿಸುವುದು ಮುಂತಾದ ನಿರ್ಣ[illegible] ಅಂಗೀಕಾರವಾದುವು.

ಪ್ರಭುಗಳ ಭೇಟಿ

[illegible]ಬಳ್ಳಿಯ ಸಾಹುಕಾರ್ ಶ್ರೀ॥ ಎಸ್ ಬಸವಣ್ಣ ದೇವರವರನ್ನು [illegible] ಮಹಾರಾಜರವರು ನಿನ್ನೆ ಬೆಳಿಗ್ಗೆ [illegible] ದರ್ಶನ ನೀಡಿದರು

ರಾ ಮ ನ ವ ಮಿ ಉ

[illegible] ಸುಬ್ರಹ್ಮಣ್ಯನವರಿಂದ [illegible] ಆಧ್ಯಾತ್ಮ ರಾಮಾಶ್ರಮದಲ್ಲಿ [illegible] ರಾಮನವಮಿ ಉತ್ಸವವು, ಕಳೆದ ೧೩ ನೇ ತಾ॥ ನಿಂ[illegible] ಪ್ರತಿದಿನ ಸಂಜೆ ೫॥ [illegible] ಉಪನ್ಯಾಸಗಳು ಜರು[illegible] ೨೦ನೇ ತಾರೀಖು ಸಮಾಪ್ತವಾ[illegible]ವುದು. ಮಹಾಜನರು [illegible] ಭಾಗಿಗಳಾಗಬೇಕೆಂದು ಕೋರಲಾ[illegible]

ವಂ ದ ನಾ ರ್ಪ ಣೆ

[illegible] ಮೊಹಲ್ಲಾದಿಂದ ಕಾಂ[illegible] ಉಮೇದುವಾರರಾಗಿ ನಿಂ[illegible] ಟಿ. ವೆಂಕಟರಮಣಯ್ಯನವರಿಗೆ [illegible] ದೊರಕಿಸಿಕೊಟ್ಟ ಈ ಮೊಹಲ್ಲಾ [illegible], ಯುವಕ ಸಂಘದವರಿಗೂ [illegible] ಅಭಿಮಾನಿಗಳಿಗೂ, ಸದರಿ [illegible] ಸಮಿತಿ ಕಾರ್ಯದರ್ಶಿಗ[illegible] ಶ್ರೀ॥ ಎಂ. ಪಿ. ಕೃಷ್ಣರವರು ಈ [illegible] ವಂದನೆಗಳನ್ನರ್ಪಿಸಿದ್ದಾರೆ.

ಕಾರ್ಯಕರ್ತರ ಸಭೆ

[illegible] ಸಾವಡೆಯಲ್ಲಿ ಕಾರ್ಯಕರ್ತ[illegible] ಕಾಂಗ್ರೆಸ್ ಕೆಲಸಗಾರರ ಸಭೆಯು [illegible] ದಿನ ಶ್ರೀ ಜೆ. ಎಸ್. [illegible] ಅಧ್ಯಕ್ಷತೆಯಲ್ಲಿ ಸೇರಿ ಸಂ॥ [illegible] ಮಾಳವೀಯರ ನಿಧನ [illegible] ಸೂಚಿಸುವ ನಿರ್ಣಯ[illegible] ಅಂಗೀಕರಿಸಿತು ಪುರಸಭಾ ಕಾಂಗ್ರೆ[illegible] ನಾಯಕರಾದ ಶ್ರೀ ಬಿ ನಾರಾ[illegible]ಯವರು ಇತ್ತೀಚೆಗೆ ಕೊಟ್ಟ [illegible] ಹೇಳಿಕೆಯಲ್ಲಿ 'ಕಾಂಗ್ರೆಸ್ಸಿನ [illegible] ಅಪಪ್ರಚಾರವೆಸಗಿದ [illegible] ಎಂದು ಮುಂತಾಗಿ ತಿಳಿಸಿರು[illegible] ಬಂಧಿಸಿ ಈ ಬಗ್ಗೆ ಕೂಡಲೇ [illegible] ನಗರ ಕಾಂಗ್ರೆಸ್ ಪ[illegible], ಮೈಸೂರು ಕಾಂಗ್ರೆಸ್ ಅ[illegible] ಒತ್ತಾಯ ಪಡಿಸುವ ನಿರ್ಣ[illegible] ಅಂಗೀಕರಿಸಲಾಯಿತು

ಗಾಂಧಿಜಿಯವರನ್ನು ತಡೆಯಲು ಜಿನ್ನರ ಒತ್ತಾಯ

ಗಾಂಧಿಜಿಯವರು ಪೂರ್ವ ಬಂಗಾಳದ ಪ್ರವಾಸವನ್ನು ಕೈಗೊಳ್ಳದಂತೆ ತಡೆಗಟ್ಟಬೇಕೆಂದೂ, ನೌಖಾಲಿಗೆ ತೆರಳಲು ಅನುಕೂಲ ಒದಗಿಸಿಕೊಡದಂತೆಯೂ, ಮಿ॥ ಜಿನ್ನಾರವರು ಬಂಗಾಳಾ ಪ್ರಧಾನಿ ಮಿ॥ ಸುಹ್ರವರ್ದಿಯವರನ್ನು ಒತ್ತಾಯಪಡಿಸಿದ್ದಾರೆಂಬ ಸುದ್ದಿ ಹೊರ ಬಿದ್ದಿದೆ ಆದರೆ ಬಂಗಾಳಾ ಪ್ರಧಾನಿಗಳು ಗಾಂಧಿಜಿಯವರ ಪ್ರವಾಸವನ್ನು ಸ್ವಲ್ಪ ಕಾಲ ಮುಂದೆ ಹಾಕಲು ಮಾತ್ರ ಶಕ್ಯರಾದರೆಂದೂ, ಪ್ರವಾಸ ನಿಲ್ಲಿಸಲು ಅವರಿಂದ ಸಾಧ್ಯವಾಗಲಿಲ್ಲವೆಂದೂ ವರದಿಯಾಗಿದೆ

ಪ್ರದೋಷ ಸಂಗೀತ

ಗಾನ ವಿಶಾರದ ಬಿಡಾರಂ ಕೃಷ್ಣಪ್ಪನವರ ಪ್ರಸನ್ನ ಶ್ರೀ ಸೀತಾರಾಮ ಮಂದಿರದಲ್ಲಿ ಪ್ರದೋಷದ ಪ್ರಯುಕ್ತ ೨೧ ನೇ ತಾ॥ ಸಂಜೆ ೭ ಘಂಟೆಗೆ ಸಂಗೀತ ಭೂಷಣ ಚಲ್ಲಪಿಳ್ಳೆ ಅಯ್ಯಂಗಾರ್ಯರ ಸಂಗೀತ ಕಛೇರಿಯು ಏರ್ಪಾಡಾಗಿದೆ. ಎಲ್ಲರಿಗೂ ಪ್ರವೇಶವುಂಟು

ಗಾಂಧಿ ಜಯಂತಿ ಸ್ಪರ್ಧೆ

ಮಹಾತ್ಮರ ೭೭ ನೇ ಜಯಂತಿ ಮಹೋತ್ಸವದ ಸಂಬಂಧದಲ್ಲಿ ಮೈಸೂರು ವಿ[illegible] ಮೊಹಲ್ಲಾ ಕಾಂಗ್ರೆಸ್ ಸಮಿತಿ ಆಶ್ರಯದಲ್ಲಿ ನಡೆದ ಲೇಖನ ಸ್ಪರ್ಧೆಯಲ್ಲಿ ಬಹುಮಾನ ಪಡೆದ ಲೇಖನಗಳೆರಡನ್ನು ಪುಸ್ತಕರೂಪದಲ್ಲಿ ಪ್ರಕಟಿಸಲಾಗಿದೆ ಈ ಪುಸ್ತಕದ ಮಾರಾಟದಿಂದ ಬರುವ ಆದಾಯವನ್ನು ಹಿಂದಿ ಮತ್ತು ನೂಲುವ ತರಗತಿಗಳಿಗಾಗಿ ಉಪಯೋಗಿಸಲಾಗುವುದು. ಇದರ ಬೆಲೆ ಎರಡಾಣೆ ಮಾತ್ರ

ವಿದ್ಯಾರ್ಥಿಗಳ ಅಸಮಾಧಾನ

ಈ ದಿನ ಬೆಳಿಗ್ಗೆ ಶಾರದವಿಲಾಸ ಶಾಲೆಯಲ್ಲಿ ಒಬ್ಬ ವಿದ್ಯಾರ್ಥಿಯು ಸಕ್ಕರೆನೆಂದೂ ಅವನನ್ನು ಹೊರಗೆ ಹೋಗುವಂತೆ ಅಧ್ಯಾಪಕರು ತಿಳಿಸಲು ವಿದ್ಯಾರ್ಥಿಯು ಹೋಗಲಿಲ್ಲ ಪ್ರಿನ್ಸಿಪಾಲರು ಬಂದು ಹೇಳಿದ ಮೇಲೂ ಆ ವಿದ್ಯಾರ್ಥಿಯು ಹೊರಗೆ ಹೋಗದಿದ್ದುದರಿಂದ ಜವಾನನ್ನು ಕರೆಸಿದರೆಂದೂ ಇದಕ್ಕಾಗಿ ಅಸಮಾಧಾನಗೊಂಡು ಆ ತರಗತಿಯ ಎಲ್ಲ ವಿದ್ಯಾರ್ಥಿಗಳೂ ಹೊರಗೆ ಬಂದರೆಂದೂ ತಿಳಿದುಬಂದಿದೆ

§ ಈ ದಿನ ಬೆಳಿಗ್ಗೆ ದಿವಾನರು ಬಾಲಕಿಯರ ಆಸ್ಪತ್ರೆಗೆ ಭೇಟಿ ಇತ್ತಿದ್ದರು

ವಿಶ್ವೇಶ್ವರಯ್ಯನವರ ಬಗ್ಗೆ ಪ್ರಶಂಸೆ

ಇಂಜನಿಯರ ಸಮ್ಮೇಳನದಲ್ಲಿ ದಿವಾನರ ಭಾಷಣ

ಸ್ವಂ. ಸು ಪ್ರ॥] ಬೆಂಗಳೂರು ೧೯

ಮೈಸೂರು ಸಂಸ್ಥಾನದ ಇಂಜನೀಯರುಗಳ ಸಂಘದ ೩೭ ನೇ ಸಮ್ಮೇಳನವು ಈ ದಿನ ಬೆಳಿಗ್ಗೆ ಸಂಘದ ಆವರಣದಲ್ಲಿ ಜರುಗಿತು. ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸುತ್ತಾ ಸಂಸ್ಥಾನದ ದಿವಾನರಾದ ಸರ್. ರಾಮಸ್ವಾಮಿ ಮೊದಲಿಯಾರರು ಸರ್ ಎಂ ವಿಶ್ವೇಶ್ವರಯ್ಯನವರನ್ನು ಮನಸಾರ ಹೊಗಳಿದರು ಕೃಷ್ಣರಾಜಸಾಗರವೇ ಮುಂತಾದ ಅವರ ಅನೇಕ ಕೃತಿಗಳನ್ನು ಸ್ಮರಿಸಿ ಭಾರತದ ಕೀರ್ತಿ ವಿಶ್ವವ್ಯಾಪಿಯಾಗುವಂತೆ ಮಾಡಿದ ಮಹಾಪುರುಷರೆಂದು ಹೇಳಿ ವಿಶ್ವೇಶ್ವರಯ್ಯನವರನ್ನು ಕೊಂಡಾಡಿದರು. ಇಂಜನೀಯರ್ ವೃತ್ತಿಯ ಬಗ್ಗೆ ತಮ್ಮ ಪ್ರಶಂಸೆಯನ್ನು ವ್ಯಕ್ತಪಡಿಸಿದರು ಮೈಸೂರಿನ ಯುದ್ಧಾನಂತರ ಯೋಜನೆಗಳು ಇಂಜನೀಯರುಗಳ ಸಹಕಾರದಿಂದ ಯಶಸ್ವಿಯಾಗುವ ನಂಬಿಕೆಯನ್ನು ಸೂಚಿಸಿದರು ನಗರ ನಿರ್ಮಾಣ ಯೋಜನೆಗಳ, ಸಂಸ್ಥಾನದಲ್ಲಿ ಹೆಚ್ಚು ವೃದ್ಧಿ ಹೊಂದಬೇಕೆಂದೂ, ಮೈಸೂರು, ಬೆಂಗಳೂರು ನಗರಗಳಲ್ಲದೆ ಇತರ ಪ್ರದೇಶಗಳಲ್ಲಿ ನಗರ ನಿರ್ಮಾಣವು ಸೌಂದರ್ಯವಾಗಿ ವೃದ್ಧಿಯಾಗಬೇಕೆಂದು ತಿಳಿಸಿದರು. ಈ ವೃತ್ತಿಯಲ್ಲಿ ವಿಶೇಷ ಪಾಂಡಿತ್ಯ ಪಡೆದು ಬರಲು ಹೆಚ್ಚು ಮಂದಿಯನ್ನು ವಿದೇಶಕ್ಕೆ ಕಳುಹಿಸಬೇಕೆಂದು ಅಭಿಪ್ರಾಯಪಟ್ಟರು

ಭಾರತ ವಿಜ್ಞಾನ ಸಂಸ್ಥೆಯ ಪ್ರೊ॥ ಜೆ. ಸಿ. ಘೋಷ್‌ರವರು ಭಾಷಣ ಮಾಡಿ ಮೈಸೂರಿನಲ್ಲಿ ಪ್ರಕೃತಿಯ ನೆರವು ಬಹಳವಾಗಿದೆಯೆಂದೂ, ಸಂಸ್ಥಾನದ ಭದ್ರಾ ಯೋಜನೆಯಲ್ಲಿ ೫ ಲಕ್ಷ ಎಕರೆ ಸಾಗುವಳಿಯನ್ನು ಸಾಮೂಹಿಕವಾಗಿ ವ್ಯವಸಾಯ ಮಾಡುವ ಪದ್ಧತಿ ಜಾರಿಗೆ ತರಬೇಕೆಂದೂ ಸೂಚಿಸಿದರು. ಆಸ್ವಾಗತ ಸಮಿತಿ ಕಾರ್ಯದರ್ಶಿ ಶ್ರೀ ಎಂ. [illegible]ನವರು ಪ್ರಾರಂಭದಲ್ಲಿ ಸ್ವಾಗತ ಭಾಷಣ ಮಾಡಿದರು.

§ ಈ॥ [illegible] ವಿದ್ಯಾರ್ಥಿಗಳ [illegible]ವರನ್ನು [illegible], ಡಾ॥ ಕೆ ಎಸ್. ನಾರಾಯಣ [illegible] ದಿವಾನರ ನಿವಾಸದಲ್ಲಿ [illegible] ಎಸ್. ಪಿ. ಪಾರ್ಥಸಾರಥಿಯವರನ್ನು [illegible] ಸನ್ಮಾನಿಸಲಾಗಿದೆ

ರಾಜರಿಗೆ ಬೇಡದ ದಿವಾನರ ನೇಮಕವೇ ?

ಮಧ್ಯ ಇಂಡಿಯಾ ಸಂಸ್ಥಾನಗಳಲ್ಲೊಂದಾದ ದತಿಯಾ ಎಂಬಲ್ಲಿನ ದಿವಾನರಾದ ಮಿ॥ ಐನುದ್ದೀನ್ ಎಂಬುವರು ಸಂಸ್ಥಾನದಲ್ಲಿ ಕೋಮುವಾರು ವಿಷಬೀಜವನ್ನು ಬಿತ್ತಿರುವುದರಿಂದ ಅನೇಕ ದೇವಾಲಯಗಳು ಅಪವಿತ್ರಗೊಳಿಸಲ್ಪಟ್ಟಿವೆಯೆಂದು ಹೇಳಲಾಗಿದೆ ಈ ದಿವಾನರನ್ನು ವಜಾ ಮಾಡಬೇಕೆಂದು ಸೂಚಿಸಿ ೫೦೦ ಮಂದಿ ಸರ್ಕಾರಿ ನೌಕರರು ರಾಜೀನಾಮೆ ಇತ್ತರು ದಿವಾನರ ವಿರುದ್ಧ ಚಳುವಳಿಯು ಬಲವಾಗಿ ಎದ್ದಿತು. ಮಹಾರಾಜರು ಮಧ್ಯೆ ಪ್ರವೇಶಿಸಿ ದಿವಾನರನ್ನು ತೆಗೆದುಹಾಕುತ್ತದಾಗಿ ಘೋಷಿಸಿದರು ಆದರೆ ಬ್ರಿಟಿಷ್ ರೆಸಿಡೆಂಟರು ಆ ದಿವಾನರಿಗೆ ಪುನಃ ಪಟ್ಟ ಕಟ್ಟಿದ್ದಾರೆ. ಇದರಿಂದ ಭಾರಿ ಬಿಕ್ಕಟ್ಟು ತಲೆಗೋರಿದೆ. ರೆಸಿಡೆಂಟರು ತಮ್ಮ ಇಚ್ಛೆಗೆ ವಿರುದ್ಧವಾಗಿ ತಮಗೆ ಬೇಡದ ದಿವಾನರನ್ನು ತಮ್ಮ ಮೇಲೆ ಹೊರಿಸುತ್ತಿರುವುದನ್ನು ಪ್ರತಿಭಟಿಸಿ ಆ [illegible] ರಾಜರು ಪೈಸರಾಯರಿಗೆ ಪತ್ರ ಬರೆದಿದ್ದಾರೆಂದು ಗೊತ್ತಾಗಿದೆ ಪ್ರಜಾ ಮಂಡಲದ [illegible] ನೆಹರೂ ರವರಲ್ಲಿ ಸಹಾಯವನ್ನು ವಿನಂತಿ ಮಾಡಿಕೊಂಡಿದ್ದಾರೆ ಇತ್ತೀಚೆಗೆ ಪ್ರಜಾ ಸಮಿತಿಯ ೨೦ ಮಂದಿಯು ದಸ್ತಗಿರಿ ನಡೆದು ೧೧ನೇ ನೇ ಸೆಕ್ಷನ್ ಜಾರಿಗೆ ತರಲಾಗಿದೆ

ಬಿಹಾರಿನಲ್ಲಿ ಗವರ್ನರ ಆಡಳಿತವೇ ?

ಬಿಹಾರಿನಲ್ಲಿ ಕೋಮುಗಲಭೆ ಗಲಭೆಯು ಕೂಡಲೇ ನಿಲ್ಲದಿದ್ದಲ್ಲಿ ಕಾಂಗ್ರೆಸ್ ಮಂತ್ರಿ ಮಂಡಲವು ರಾಜೀನಾಮೆ ಕೊಡುವುದು ೯೩ ನೇ ಸೆಕ್ಷನ್ ಜಾರಿಗೆ ಬಂದು, ಗವರ್ನರ ಆಡಳಿತ ನಡೆಯುವುದು ಎಂದು ಬಿಹಾರಿನ ಮಂತ್ರಿಗಳಾದ ಶ್ರೀ ರಾಮಚರಿತ್ರ ಸಿಂಗ್ ರವರು ಘೋಷಿಸಿದ್ದಾರೆ ಬಿಹಾರ್ ಮತ್ತು ಬಂಗಾಳಾ ರಾಜಕೀಯರು ಬ್ರಿಟಿಷರನ್ನು ಬಲಪಡಿಸುತ್ತಿದ್ದಾರೆಂದು ಹೇಳಿ ವಿಧಾನ ಆಕ್ರಮಣವನ್ನು ತಡೆಗಟ್ಟಲು, ಸೇನೆವಾಗಿ ಸೈನ್ಯವನ್ನು ಸನ್ನದ್ಧವಾಗಿ ಮೇಲೆಯೇ ಉಪಯೋಗಿಸುವುದು ಅವಮಾನಕರವೆಂದು ಅವರು ತಿಳಿಸಿದ್ದಾರೆ.

ತವನಿಧಿ

ರಾಜಧಾನಿಯಲ್ಲಿ ಶ್ರೀ ಎಂ. ಎಸ್ ನಾರಾಯಣರಿಂದ ಪ್ರಕಟವಾಗುತ್ತಿರುವ 'ತವನಿಧಿ' ಪತ್ರಿಕೆಯು ದೀಪಾವಳಿ ವಿಶೇಷ ಸಂಚಿಕೆ ನಮ್ಮ ಹಸ್ತಗತವಾಗಿದೆ ಎಂದಿನಂತೆ ಈ ಸಂಚಿಕೆಯೂ ಇದರಲ್ಲಿ ಪ್ರಖ್ಯಾತ ಬರಹಗಾರರ ಕಥೆಗಳು, ಕವನಗಳು ಮತ್ತು ವಿಮರ್ಶೆಗಳೂ, ವರ್ಣ ಭಾವ ಸ್ವರೂಪ, ಚಲನ ಚಿತ್ರಕ್ಕೆ ಸಂಬಂಧಪಟ್ಟ ವಿಷಯಗಳೂ ಇವೆ ಅನೇಕ ನಟನಟಿಯರ ಚಿತ್ರಗಳೂ ಇವೆ ಮುಖಪತ್ರದ ಮೇಲೆ ಸುಪ್ರಸಿದ್ಧ ನಟಿಯಾದ [illegible] ಶ್ರೀ ಜಯಮ್ಮನವರ ವರ್ಣ ಚಿತ್ರವಿದ್ದು ಅಂದವಾಗಿ ಮುದ್ರಿತವಾಗಿದೆ. ಬೆಲೆ ನಾಲ್ಕು ಆಣೆ ಮಾತ್ರ

ರಾಜೇಂದ್ರರಿಗೆ ಜನನ ದಿನ ಉತ್ಸವರೂ

[illegible] ವಿಪತ್ತಿಗೊಳಗಾದ ಬಂಗಾಳದ ನಿರಾಶ್ರಿತರ ರಕ್ಷಣಾ ಸಹಾಯ ನಿಧಿಗೆ [illegible] ಸಭೆಯು ಒದಗಿಸಿದೆ.

ಸಾಧ್ವಿ
ತಾ|| ೧೯-೧೧-೪೬ ಮಂಗಳವಾರ

ವಿಶ್ವವಿದ್ಯಾಲಯಕ್ಕೆ ಕಳಂಕ

ದಿವಂಗತ ಮದನಮೋಹನ ಮಾಳವೀಯರ ನಿಧನದ ಬಗ್ಗೆ ನಮ್ಮ ವಿಶ್ವವಿದ್ಯಾನಿಲಯದ ಸೆನೆಟ್ ಸಭೆಯಲ್ಲಿ ಬಂದ ಸಂತಾಪ ನಿರ್ಣಯ-ಪ್ರಸ್ತಾವವನ್ನು ಅಧ್ಯಕ್ಷರಾಗಿದ್ದ ಸ್ಥಾನಪತಿಗಳು ತಳ್ಳಿ ಹಾಕಿದರೆಂಬ ವಾರ್ತೆಯು ನಮಗೆ ಅತ್ಯಂತ ನಾಚಿಕೆಯನ್ನುಂಟು ಮಾಡಿದೆ. ಯಾವ ದೃಷ್ಟಿಯಿಂದ ನೋಡಿದರೂ ಅಧ್ಯಕ್ಷರ ವರ್ತನೆಯನ್ನು ಅನುಮೋದಿಸಲು ಸಾಧ್ಯವಿಲ್ಲ. ನಮ್ಮ ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ವಿಷಯವಿದಲ್ಲವೆಂದು ಅವರು ಹೇಳುವುದು ಒಂದು ಅರ್ಥವಿಲ್ಲದ ಕುಂಟು ನೆಪವೇ ಸರಿ. ಇಂತಹ ನಿರ್ಣಯಗಳನ್ನು ತುಚ್ಛ ಕಾರಣಗಳ ಮೇರೆ ತಳ್ಳಿ ಹಾಕುವುದು ನಿರಂಕುಶಾಡಳಿತದ ರಾಜಕೀಯ ಸಂಸ್ಥೆಗಳಿಗೇ ಮೀಸಲಾಗಿರುವ ಚಾಳಿಯೆಂದು ನಾವು ಭಾವಿಸಿದ್ದೆವು. ದೇಶದ ಮುಂದಿನ ಸತ್ಪ್ರಜೆಗಳ ಸೃಷ್ಟಿಗೆ ಕಾರಣಭೂತವಾದ ವಿದ್ಯಾಸಂಸ್ಥೆಗಳಲ್ಲಿಯೂ ಈ ಬಗೆಯ ದಬ್ಬಾಳಿಕೆಯು ತಲೆದೋರಿರುವುದು ಅಸಹನೀಯವಾಗಿದೆ.

ಭರತಖಂಡದ ನಲವತ್ತುಕೋಟಿ ಜನ ಹೆಂಗಸರೂ, ಗಂಡಸರೂ, ಮಕ್ಕಳೂ, ಮುದುಕರೂ ಯಾವ ಪುಣ್ಯಸ್ಮರಣೀಯನ ನಿಧನಕ್ಕಾಗಿ ಕಣ್ಣೀರಿಡುತ್ತಿರುವರೋ, ಅಂತಹವರ ಸ್ಮರಣೆಯನ್ನು ಮಾಡಲು ನಮ್ಮ ವಿಶ್ವವಿದ್ಯಾಲಯಕ್ಕೆ ಅವಕಾಶ ದೊರೆಯದಿದ್ದುದು ಇಡೀ ಸಂಸ್ಥಾನಕ್ಕೇ ಕಳಂಕಪ್ರಾಯವಾಗಿದೆ. ಹಾದಿಬೀದಿಯಲ್ಲಿ ಹೋಗುವ ಅನಾಮಧೇಯರನ್ನೆಲ್ಲಾ ಪುರಸ್ಕರಿಸಿ ಮನ್ನಣೆ ಮಾಡುವುದರಲ್ಲಿ ತೋರಿಸುವ ಉತ್ಸಾಹವನ್ನು ದೇಶಕ್ಕಾಗಿ ಸರ್ವಸ್ವವನ್ನೂ ತ್ಯಾಗ ಮಾಡಿ ವೀರ ಧರ್ಮಾತ್ಮರಾದ ಇಂತಹ ಮಹನೀಯರ ಪವಿತ್ರ ಸ್ಮರಣೆಯಲ್ಲಿ ತೋರದಿದ್ದುದು ಲಜ್ಜಾಸ್ಪದವಾದ ವಿಷಯ. ಇದನ್ನು ಕೇಳಿದ ಹೆಂಗಸರೂ, ಮಕ್ಕಳೂ ಸಹ ಅಸಮಾಧಾನದಿಂದ ತಮ್ಮ ಅಸಹನೆಯನ್ನು ತೋರುತ್ತಿರುವರು.

ವಿಶ್ವವಿದ್ಯಾಲಯಕ್ಕೂ ಮಾಳವೀಯರಿಗೂ ಸಂಬಂಧವೇನು ?-ಎಂಬ ಪ್ರಶ್ನೆಯನ್ನು ಸ್ಥಾನಪತಿಗಳು ಎತ್ತಿರುವರು. ಮೈಸೂರಿಗೂ ಕಾಶಿಗೂ ಸಂಬಂಧವೇನು ? ಮಾಳವೀಯರಿಗೂ ಮೈಸೂರು ಸಿಂಹಾಸನಕ್ಕೂ ಸಂಬಂಧವೇನು ? ಕೋಟ್ಯಂತರ ರೂ. ಗಳ ಸಂಗ್ರಹದಿಂದ ತಾವು ಸ್ಥಾಪಿಸಿದ ಕಾಶೀ ವಿಶ್ವವಿದ್ಯಾನಿಲಯಕ್ಕೆ ದಿವಂಗತ ನಾಲ್ವಡಿ ಕೃಷ್ಣಭೂಪಾಲರನ್ನು ಪ್ರಥಮ ಛಾನ್ಸಲರಾಗಿ ಮಾಡಿದವರಾರು ? ಮಾಳವೀಯರಲ್ಲವೇ ? ನಮ್ಮ ವಿಶ್ವವಿದ್ಯಾಲಯದ ಸಂಸ್ಥಾಪಕರೂ ಪೋಷಕರೂ ಆದ ದಿವಂಗತ ಮಹಾಪ್ರಭುಗಳನ್ನು ಕಾಶಿಯ ವಿದ್ಯಾಲಯಕ್ಕೆ ಅಧಿಪತಿಯನ್ನಾಗಿ ಮಾಡಿ ತಾವು ಸ್ಥಾನಪತಿಯಾಗಿ ಇಪ್ಪತ್ತು ವರ್ಷ ಸೇವೆ ಮಾಡಿದ ಮಹನೀಯರ ಬಗ್ಗೆ ನಮ್ಮ ಸ್ಥಾನಪತಿಗಳು ತೋರಿರುವ ಅಪಚಾರವು ಮೈಸೂರಿನ ಸಕಲ ಪ್ರಜೆಗಳಿಗೂ ಮಾಡಿದ ಅಪಮಾನವಾಗಿದೆ.

ಕಾಶಿ ವಿಶ್ವವಿದ್ಯಾನಿಲಯಗಳಲ್ಲಿ ನೂರಾರು ಜನ ಮೈಸೂರಿನ ತರುಣರು ವ್ಯಾಸಂಗ ಮಾಡಿ ದೇಶದಲ್ಲೆಲ್ಲಾ ಸೇವೆ ಸಲ್ಲಿಸುತ್ತಿರುವರು. ಮೈಸೂರಿನವರಲ್ಲದೆ ಅನೇಕ ಜನರು ಅಲ್ಲಿ ಪದವಿ ಪಡೆದು ನಮ್ಮ ಸಂಸ್ಥಾನದಲ್ಲಿ ಸೇವೆ ಸಲ್ಲಿಸುತ್ತಿರುವರು. ಇವರೆಲ್ಲರಿಗೂ ಮಾನ್ಯರಾದ ಮಾಳವೀಯರ ಬಗ್ಗೆ ನಮ್ಮ ಸ್ಥಾನಪತಿಗಳು ತೋರಿರುವ ವರ್ತನೆಯು ನಿಂದ್ಯವಾದುದೇ ಸರಿ.

ಮಾಳವೀಯರ ರಾಜಕೀಯ ಸೇವೆಯು ಹಾಗಿರಲಿ. ನಾಡಿನ ತರುಣ, ತರುಣಿಯರ ಜ್ಞಾನಾಭಿವೃದ್ಧಿಗಾಗಿ ಅವರು ಮಾಡಿರುವ ಕಾರ್ಯಸಾಧನೆಯು ಆಚಂದ್ರಾರ್ಕಸ್ಥಾಯಿಯಾದುದು. ಇಡೀ ಭರತಖಂಡದಲ್ಲೇ ಅತ್ಯಂತ ಹಿರಿದಾದ ವಿದ್ಯಾಲಯದ ಸ್ಥಾನಪತಿಗಳೊಬ್ಬರಿಗೆ ಸಲ್ಲುವ ಗೌರವವು ನಮಗೂ ಸಂದಂತೆಯೇ ಎಂದು ನಮ್ಮ ಸ್ಥಾನಪತಿಗಳು ಭಾವಿಸದಿದ್ದುದು ಒಂದು ಕೊರತೆಯೇ ಸರಿ.

ಬೇರೆ ವಿಶ್ವವಿದ್ಯಾಲಯಕ್ಕೆ ಯಾವ ವಿಧದಲ್ಲಿಯೂ ಸಂಬಂಧಪಡದ ಪರ ವಿದೇಶೀಯರನ್ನು ಕರೆದು ಅವರ ಗುಣ ವಿಶೇಷಗಳಿಗಾಗಿ ಅವರುಗಳಿಗೆ ಗೌರವದ ಪ್ರಶಸ್ತಿಗಳನ್ನು ಕೊಡುವ ಪದ್ಧತಿಯು ನಮ್ಮ ಸ್ಥಾನಪತಿಗಳ ಸ್ಮೃತಿಪಥಕ್ಕೆ ಬರಲಿಲ್ಲವೇಕೆ? ಲಂಡನ್, ಆಕ್ಸ್‌ಫರ್ಡ್, ಕೇಂಬ್ರಿಡ್ಜ್ ಮುಂತಾದ ವಿದ್ಯಾಲಯಗಳು, ಡಾ|| ರವೀಂದ್ರನಾಥಟಾಗೂರ್, ಜಗದೀಶ ಚಂದ್ರಬೋಸ್ ಪ್ರಫುಲ್ಲ ಚಂದ್ರರಾಯ್. ಸರ್ ಸಿ. ವಿ. ರಾಮನ್ ಮುಂತಾದವರುಗಳಿಗೆ ಗೌರವದ ಪ್ರಶಸ್ತಿಗಳನ್ನು ಕೊಟ್ಟಿಲ್ಲವೇ? ಹಿಂದೂಸ್ಥಾನದ ಅನೇಕ ವಿಶ್ವವಿದ್ಯಾಲಯಗಳು ವೈಸರಾಯರುಗಳಿಗೂ, ಗೌರ್ನರುಗಳಿಗೂ ಹಾಗೆಯೇ ಗೌರವದ ಪ್ರಶಸ್ತಿಗಳನ್ನು ಕೊಟ್ಟಿಲ್ಲವೇ? ನಮ್ಮ ಮೈಸೂರು ವಿಶ್ವವಿದ್ಯಾಲಯವೂ ಸಹ ಕೊಟ್ಟಿರುವುದಿಲ್ಲವೇ? ವಿಶ್ವವಿದ್ಯಾಲಯಕ್ಕೂ ಅವರುಗಳಿಗೂ ಏನು ಸಂಬಂಧವೆಂಬ ಪ್ರಶ್ನೆಯು ಆಗ ಬಂದಿತ್ತೇ? ಸುಗ್ರಹಣಕ್ಕೆ ಮಾತ್ರ ಪುರಸ್ಕಾರ ದೊರೆಯಲಿಲ್ಲವೇ?

ಮೈಸೂರಿನೊಡನೆ ಇರಬೇಕಾದ ಭೌತಿಕ ಸಂಬಂಧವನ್ನು ಪ್ರಧಾನವಾಗಿಟ್ಟುಕೊಂಡು ಇತರ ಸದ್ಗುಣಗಳನ್ನೆಲ್ಲಾ ಮರೆಮಾಚುವ ಕೂಪಕೂರ್ಮದ ನೀತಿಯು ನಮ್ಮ ವಿಶ್ವವಿದ್ಯಾಲಯಕ್ಕೆ ಹಾನಿಕರವಾದುದು. ಇಂತಹ ಸಂಕುಚಿತ ಪ್ರವೃತ್ತಿಯು ಎಷ್ಟು ಬೇಗ ತೊಲಗಿದರೆ ಅಷ್ಟು ಬೇಗ ನಮ್ಮ ವಿದ್ಯಾಲಯಕ್ಕೆ ಪುರಸ್ಕಾರವು ಹೆಚ್ಚುವುದು. ತಮ್ಮ ವರ್ತನೆಯಿಂದ ಸ್ಥಾನಪತಿಗಳು ನಮ್ಮ ವಿದ್ಯಾಲಯದ ಮಟ್ಟವನ್ನು ಇಡೀ ಭಾರತೀಯರ ದೃಷ್ಟಿಯಲ್ಲಿ ಬಹಳಮಟ್ಟಿಗೆ ಕೆಳಕ್ಕಿಳಿಸಿರುತ್ತಾರೆ.

ವಿಶ್ವವಿದ್ಯಾಲಯಗಳ ಸ್ಥಾನಪತಿಗಳು ಚುನಾಯಿತರಾದವರೇ ಇರಬೇಕೆಂಬ ವಾದವನ್ನು ಈ ಪ್ರಸಂಗವು ಸಂಪೂರ್ಣವಾಗಿ ಸಮರ್ಥಿಸುತ್ತದೆ. ಇನ್ನಾದರೂ ನಮ್ಮ ಸೆನೆಟ್ ಸಭೆಯ ಪ್ರತಿನಿಧಿಗಳು ಚುನಾಯಿತ ಸ್ಥಾನಪತಿಗಳಿಗಾಗಿ ಒತ್ತಾಯಪಡಿಸಿ ಇಂತಹ ಕಳಂಕಗಳಿಗೆ ಆಸ್ಪದ ಕೊಡದಿರಲೆಂದು ನಾವು ಹಾರೈಸುತ್ತೇವೆ.

ಹರಿಜನರಿಗೆ ಸೌಲಭ್ಯಗಳು

ಬೊಂಬಾಯಿ ಕಾಂಗ್ರೆಸ್ ಸರ್ಕಾರದವರು ಹರಿಜನರಿಗೆ ಆ ಜನ್ಮ ಸಿದ್ಧಹಕ್ಕುಗಳು ದೊರಕಿಸಿಕೊಡುವ ಶಾಸನವನ್ನು ಜಾರಿಗೆ ತಂದಿದ್ದಾರೆ. ಇದರಿಂದ ಅವರು ಸಾರ್ವಜನಿಕ ಕೆರೆ, ಬಾವಿಗಳಲ್ಲಿ ನೀರು ತೆಗೆದುಕೊಳ್ಳುವ ಸ್ವಾತಂತ್ರ್ಯ, ಸ್ನಾನಘಟ್ಟಗಳನ್ನು ಉಪಯೋಗಿಸಿಕೊಳ್ಳುವ ಹಕ್ಕು ದೊರಕಿದೆ. ಹರಿಜನರು ಸಾರ್ವಜನಿಕ ಮೆರವಣಿಗೆ ನಡೆಸಬಹುದೆಂದು, ಹೋಟೆಲುಗಳಿಗೆ ಹೋಗಿ ಇತರರಂತೆ ತಿಂಡಿ ತಿನ್ನಬಹುದು. ಒಟ್ಟಿನಲ್ಲಿ ಅವರಿಗೆ ಇತರ ಹಿಂದೂಗಳಂತೆ ಸಮಾನ ಹಕ್ಕು ಸಂದಾಯವಾಗಿದೆ. ಇದನ್ನು ಉಲ್ಲಂಘಿಸಿದವರಿಗೆ ಶಿಕ್ಷೆಯನ್ನು ಸಹ ವಿಧಿಸುವ ಬಗ್ಗೆ ಆಜ್ಞೆ ಮಾಡಲಾಗಿದೆ. ಮದ್ರಾಸಿನಲ್ಲೂ ಇದೇ ಬಗೆಯ ಶಾಸನ ಜಾರಿಗೆ ಬರುವುದೆಂಬುದು ಸಂತೋಷದ ಸಂಗತಿ. ಆದರೆ ಮಾದರೀ ಮೈಸೂರಿನಲ್ಲಿ ಇಂತಹ ಕಾನೂನು ಇಲ್ಲದಿರುವುದು ಕಳಂಕವೇ ಸರಿ. ಇದನ್ನು ಮೈಸೂರಿನ ಸಾರ್ವಜನಿಕರೂ, ಸರ್ಕಾರದವರೂ ಜಾಗ್ರತೆ ಹೋಗಲಾಡಿಸಬೇಕು ಎಂದು ರಾಜಧಾನಿಯ ಹರಿಜನ ವಕೀಲರಾದ ಶ್ರೀ|| ಎಸ್. ಎಂ. ಸಿದ್ದಯ್ಯನವರು ಬರೆದಿರುತ್ತಾರೆ.

ಕೊಚ್ಚಿಯಲ್ಲಿ ಸಂಪೂರ್ಣ ಪಾನ ನಿರೋಧ

ಕೊಚ್ಚಿ ಸಂಸ್ಥಾನದಲ್ಲಿ ಸಂಪೂರ್ಣವಾಗಿ ಪಾನ ನಿರೋಧವನ್ನು ಜಾರಿಗೆ ತರಲು ಅಲ್ಲಿನ ಸರ್ಕಾರವು ಯೋಚಿಸಿರುವುದಾಗಿ ವರದಿಯಾಗಿದೆ. ಇದರಿಂದ ೬೦ ಲಕ್ಷ ರೂಗಳ ವರಮಾನ ಖೋತಾ ಬೀಳಲಿದೆ. ಸಂಪೂರ್ಣ ಪಾನ ನಿರೋಧವನ್ನು ಜಾರಿಗೆ ತರಲು ಸಲಹೆಯೀಯುವುದಕ್ಕಾಗಿ ಒಂದು ಸಮಿತಿಯು ರಚಿತವಾಗಿದೆ.

ಟಿ. ಸಿ. ನಟರಾಜ್
ಔಷಧಾಲಯ
ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.
ಅಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.
ಝಂಡೂರವರ ಆಯುರ್ವೇದೀಯ ಔಷಧಗಳೆಲ್ಲವೂ ದೊರೆಯುತ್ತವೆ.

ಹುಣಿಸೆ ಮರಗಳ ರಕ್ಷ…

ಮದ್ರಾಸ್ ಪ್ರಾಂತ್ಯದಲ್ಲಿ ಸಾರ್ವ… ಪ್ರದೇಶಗಳಲ್ಲಿರುವ ಹುಣಿಸೇ ಮರ… ಕಡಿಯುವುದೇ ಮುಂತಾಗಿ ನಷ್ಟ… ಮಾಡುವವರನ್ನು ಶಿಕ್ಷೆಗೆ ಗುರಿಪ… ಕೆಂದು ಮದ್ರಾಸ್ ಸರ್ಕಾರವು… ಮ್ಯಾಜಿಸ್ಟ್ರೇಟರುಗಳಿಗೆ ಆಜ್ಞೆ… ಈ ಮರಗಳನ್ನು ಬೆಳೆಸಲು 6 ಸಹ… ಗಳನ್ನು ಗ್ರಾಂಟ್ ಕೊಡಲಾಗಿದೆ

ದ|| ಆಫ್ರಿಕದ ಭವಿಷ್ಯ

ವಿಶ್ವ ಸಂಸ್ಥೆಯಲ್ಲಿ ದಕ್ಷಿಣ ಆಫ್ರಿಕ… ಕ್ಕೆ ಭಾರತದ ಪರವಾಗಿಯೇ ಇತ್ಯ… ಗುವುದು, ಎಂದು ಎಲ್ಲೋರಿನ… ಜ್ಯೋತಿಷ್ಯರಾದ ಶ್ರೀ|| ರಾಮಲಿಂಗ… ಗಳು ಭವಿಷ್ಯ ನುಡಿದಿದ್ದಾರೆ.

ವಂದನಾರ್ಪಣೆ

ಸ್ವಂ ಸು] ಚಾಮರಾಜನಗ…

ಇಲ್ಲಿನ ಪುರಸಭಾ ಉಪಚುನಾ…ಯಲ್ಲಿ ಜಯಗಳಿಸಿದ ಶ್ರೀ|| ಕೆ. ವಿ. … ಮೂರ್ತಿಯವರು ತಮಗೆ ನೆರವಾದ… ಸ್ವರಿಗೂ ಈ ಮೂಲಕ ವಂದನೆಗಳನ್ನ… ಸಿರುತ್ತಾರೆ

ಸಂತಾಪ ಸೂಚನೆ

ಪಂಡಿತ ಮದನ ಮೋಹನ ಮಾ… ಯರ ನಿಧನದ ಬಗ್ಗೆ ಸಂತಾಪ ಸೂಚ… ಇದೇ ೨೨ ನೇ ತಾರೀಕು ಬೆಳಗ್ಗೆ ೯… ಘಂಟೆ, ಪೂರ್ಣ ಹರತಾಳ ಮತ್ತು… ಮಾರಿ ಗುಡಿ ಮೈದಾನದಲ್ಲಿ ಸಭೆ… ಕಾಂಗ್ರೆಸ್ ಸಮಿತಿ ಆಶ್ರಯದಲ್ಲಿ… ಡಾಗಿದೆ

ಸಂತಾಪ ಸೂಚನೆ

ಸ್ವಂ ಸು ಶ್ರೀರಂಗಪ…

ಇಲ್ಲಿ ವಿದ್ಯಾರ್ಥಿ ಲೀಗಿನವರು ಶ್ರೀ… ಆರ್. ಶ್ರೀನಿವಾಸ ಅಯ್ಯಂಗಾರ್ ರವ… ಯ್ಯಂಗಾರ್ ರವರ ಅಧ್ಯಕ್ಷತೆಯಲ್ಲಿ ಸ… ಭೆ ಸೇರಿ ಪಂಡಿತ ಮದನ ಮೋಹನ… ಳವೀಯರ ನಿಧನದ ಬಗ್ಗೆ ಸಂತಾಪ ಸ… ಕ ನಿರ್ಣಯ ಮಾಡಿದರು.

ಸಾಧ್ವಿ
ರಾಜಧಾನಿಯ ರಾಷ್ಟ್ರೀಯ
ದಿನ ಪತ್ರಿಕೆ
ಕೂಡಲೇ ಚಂದಾದಾರರಾಗಿರಿ
(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)
ಜಾಹೀರಾತಿನ ದರಗಳಿಗೆ
ವಿಚಾರಿಸಿರಿ

ರಾಜಕಮಲ್,
ಮೈಸೂರು.
1946ನೇ ನವಂಬರ್ 1ನೆ
ಶುಕ್ರವಾರದಿಂದ
ಪ್ರತಿದಿನ ಮೂರು ಆಟಗಳು
'ಡಾಕ್ಟರ್ ಕೋಟ್ನಿಸ್
ಕಿ ಅಮರ್ ಕಹಾನಿ
ಮುಖ್ಯ ಭೂಮಿಕೆ:—ಶಾಂತಾರಾ…
ಉಲ್ಲಾಸ್, ವಿನಾಯಕ್,
ಪೆಂಡಾರ್‌ಕರ್, ಜಯಶ್ರೀ
Advance Booking accepl…
between 10 a m.
and 12 noon

ಶ್ರೀ ಗಣೇಶ ಟಾಕೀಸ್
೧೮-೧೧-೪೬ರಿಂದ ಪ್ರತಿ ದಿನ ೩ ಆಟಗಳು
ಗುಬ್ಬಿ ಫಿಲಂಸ್ ರವರ
ಹೇಮರೆಡ್ಡಿ "ಮಲ್ಲಮ್ಮ" (ಕನ್ನಡ ಚಿತ್ರ)
ಮುಖ್ಯ ಭೂಮಿಕೆ — ಜಯಮ್ಮ, ಹೊನ್ನಪ್ಪ ಭಾಗವತರ್, ಜಿ. ಹೆಚ್. ವೀರಣ್ಣ
ಸಿ. ಬಿ. ಮಲ್ಲಪ್ಪ

Edited, printed and published … A. R. [illegible] at the Sadhvi Pr… D. Subbiah Road, Mysore

ರೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಬುಧವಾರ ೨೦—೧೧—೪೭ [ಸಂಚಿಕೆ ೯೨

— ಫ್ರಾನ್ಸಿನೊಡನೆ — ಸಯ್ಯಾಮಿನ ಒಪ್ಪಂದ

...ಪ ಗಣಿಯಲ್ಲಿ ಮುಷ್ಕರ

ಬೆಂಗಳೂರು ೨೦

...ಗನ ಕೂಲಿಗಾರರ ನಾಯಕರಾದ ...ರ. ಶ್ರೀ ಗೋವಿಂದ ಮತ್ತು ...ಯನಿಯರ್ ಕೆಲಸಗಾರರನ್ನು ಬಂ... ಧವನ್ನು ಪ್ರತಿಭಟಿಸಿ ಮೈಸೂರು ಗಣಿ ...ಪನ್ನ ಕೆಲಸಗಾರರು ೧೧ನೇ ತಾ॥ ...ಚಾಂಪಿಯನ್ ರೀಫ್ಸ್ ಗಣಿಯ ೫ ...ಕೆಲಸಗಾರರು ೧೩ ನೇ ತಾ॥ ನಿಂದ ...ನ್ನ ನೂಡಿದ್ದಾರೆ. ಇದುವರೆವಿಗೆ ...ಗಿದ್ದ ಹೆಂಡದಂಗಡಿಗಳನ್ನು ಪುನಃ ...ಗಿವೆ. ಇದುವರೆಗೆ ೪೦ ಮಂದಿ ...ನಾಡಲ್ಪಟ್ಟಿದ್ದಾರೆ. ಹೀಗಿದ್ದಾಗ್ಯೂ ... ಶಾಂತವಾಗಿದೆ.

...ರ್ ಸರ್ಕಾರದಲ್ಲಿ ಪೂರ್ಣ ವಿಶ್ವಾಸ

...ಬರ್ ಸರ್ಕಾರದ ವಿದೇಶಾಂಗ ನೀತಿ ...ವಿರೋಧಿಸಿ ಹಲವು ಮಂದಿ ಲೇಬ ...ಸ್ಯರು ಸೂಚಿಸಿದ್ದ ತಿದ್ದುಪಡಿಯು ...ನಡೆದ ಕಾಮನ್ಸ್ ಸಭೆಯಲ್ಲಿ ಬಿದ್ದು ...ಯಿತು. ಈ ತಿದ್ದುಪಡಿಯು ಮೇಲಿನ ...ಮಂತ್ರಿಮಂಡಲದಲ್ಲಿ ಸಭೆಗೆ ವಿಶ್ವಾ ...ವೇ ಅಥವಾ ಇಲ್ಲವೇ ಎಂಬುದನ್ನು ...ಸುವುದಾಗಿ ಮಿ॥ ಅಟ್ಲಿಯವರು ತಿಳಿ ... ಈಗ ಲೇಬರ್ ಸರ್ಕಾರದಲ್ಲಿ ಪೂ ...ಶ್ವಾಸ ವ್ಯಕ್ತವಾಗಿದೆ.

...ಸೂರಿಗೆ ಸ್ವಿಟ್ಜರ್ಲೆಂಡ್ ಮುಖ್ಯಗಾರಿಕಾಪ್ರವೀಣರು

...ಸೂರಿನಲ್ಲಿ ಸ್ಥಾಪಿತವಾಗಲಿರುವ ಔ ...ಗಿಕ ಶಿಕ್ಷಣಾಲಯದಲ್ಲಿ ಸ್ವಿಟ್ಜರ್ಲೆಂ ...ನಿಂದಲೂ ಗ್ರಾಮ ಕೈಗಾರಿಕಾ ಶಿಕ್ಷ... ಕೊಡಲಾಗುತ್ತದೆಂದು ಗೊತ್ತಾಗಿ ...ದೆಲ್ಲಾಗಿಯೇ ನೇಮಕವಾಗಿದ್ದ ಉಪ ...ಯು ಅಲ್ಲಿಂದ ಪ್ರವೀಣರನ್ನು ಕರೆಸ ...ರ್ಕಾರಕ್ಕೆ ಸಲಹೆ ಮಾಡಿದೆಯೆಂದು ...ಲಾಗಿದೆ.

...ಲ್ ಸಾಮಾನುಗಳ ಅಭಾವ

...ದ್ಧದ ದೆಸೆಯಿಂದ ಅನೇಕ ಪದಾ ...ರ್ಥಗಳಲ್ಲಿ ಬೈಸಿಕಲ್‌ಗಳ ಬೆಲೆ ...ಮಿತಿಮೀರಿ ಹೆಚ್ಚಿ, ಜನ ಸಾಮಾ ...ಬೈಸಿಕಲ್‌ಗಳಾಗಲೀ ಅದರ ಸಾ ...ನುಗಳಾಗಲೀ ದೊರೆಯುವುದೇ ದು ...ಲಭವಾಗಿದೆ. ಈ ಸಂದರ್ಭದಲ್ಲಿ ಮೈ ... ಜಿಲ್ಲಾಧಿಕಾರಿಗಳು ಒಂದು ಆಜ್ಞೆ ...ಹೊರಡಿಸಿ ಬೈಸಿಕಲ್‌ಗಳಿಗಾಗಲೀ ... ಅದರ ಸಾಮಾನುಗಳಿಗಾಗಲೀ ಆ ...ದ ಅಧ್ಯಕ್ಷ ಚೀಟಿಯನ್ನು ತಂದ ಹೊ ...ರಾರಿಗೂ ಮಾರಲಾಗದೆಂದು ತಿಳಿಸಿ ... ಇದರಂತೆ ಅನೇಕರಿಗೆ ಅಪ್ಪಣೆ ...ಗಳು ಸುಲಭವಾಗಿ ದೊರೆತಾಗ್ಯೂ, ...ಕೆಲು ಅನುಸಾರ ಹೂಡಿ ಅಂಗಡಿ ...ಲು ಮುಚ್ಚುವುದರಿಂದ, ಪದಾರ್ಥ ...ದೊರೆಯದೆ ಹೋಗಿವೆ. ಈ ಸಂದ ...ರ್ಭದಲ್ಲಿ ಬೆಲೆ ಕಡಿಮೆಯಾಗಲು ಜನಗ ...ಳು ಪದಾರ್ಥಗಳು ದೊರೆಯಲು ಸೂ ...ಕ್ತ ಏರ್ಪಾಡುಗಳನ್ನು ಮಾಡಬೇಕು. ...ಲ್ಲಿ ಸುಲಭವಾಗಿ ದೊರೆಯದು ಉ ...ಪಯೋಗಿಸುವ, ಫ್ಲೋರ್ಟಿನ್, ಸಾ ...ನಿಟರಿ, ಗ್ಲಾಕ್ಸೋಸ್, ಓವಲ್ ...ಟೀನ್ ಮುಂತಾದ ಪದಾರ್ಥಗಳ ಮೇಲೂ ...ಯಂತ್ರಣ ಜನಗಳಿಗೆ ಸುಲಭವಾಗಿ ...ಸಲು ಸೂಕ್ತವಾದ ಕಾರ್ಯಕ್ರಮವ ...ನೂ ನಡೆದೆಂದು ನಂಬಲಾಗಿದೆ.

ನಾಗರಿಕ.

ಭಾರತಕ್ಕೆ ಅಕ್ಕಿ ಸಂಗ್ರಹಿಸಲು ಇಂಡೋನೇಷಿಯದ ಸ್ವಯಂ ಸೇವಕ ದಳ

ಇಂಡೋನೇಷಿಯಾದ ಯುವಕ ಸಮ್ಮೇಳನವು ಮ್ಯಾಡಿಯೋನ್ ಎಂಬಲ್ಲಿ ಜರುಗಿ, ಭಾರತಕ್ಕೆ ಅಕ್ಕಿಯನ್ನು ಶೇಖರಿಸಿ ಕಳುಹಿಸಿಕೊಡಬೇಕೆಂದು ತೀರ್ಮಾನಿಸಿತು. ಇದಕ್ಕಾಗಿ ಎಲ್ಲಾ ಪ್ರಾಂತ್ಯಗಳಲ್ಲೂ ಸ್ವಯಂ ಸೇವಕ ದಳಗಳನ್ನು ರಚಿಸಲಾಗಿದೆ. ಇಂಡೋನೇಷಿಯಾ ಸರ್ಕಾರವೂ ಸಹ ಭಾರತಕ್ಕೆ ಕಳುಹಿಸಲಾಗುವ ಅಕ್ಕಿಯ ಪ್ರಮಾಣವನ್ನು ಮೊದಲಿನ ೭೦ ಸಹಸ್ರ ಟನ್ನುಗಳಿಗೆ ಹೆಚ್ಚಿಸಿರುವುದಾಗಿ ವರದಿಯಾಗಿದೆ.

ಸಿಂಧ್ ಪ್ರಾಂತ್ಯದಲ್ಲಿ ಸೈಯದ್ ಪಕ್ಷದವರ ಕೊಲೆ

ಸಿಂಧ್ ಪ್ರಾಂತ್ಯದ ಮುಸ್ಲಿಂ ಲೀಗಿಗೆ ವಿರುದ್ಧ ಪಕ್ಷದ ನಾಯಕರಾದ ಮಿ॥ ಜಿ. ಎಂ. ಸೈಯದ್‌ರವರ ಪರ ಚುನಾವಣಾ ಪ್ರಚಾರ ನಡೆಸುತ್ತಿದ್ದ ಸೈಯದ್ ಮುರ್ತಾಲಿ ಷಾ ಎಂಬುವರನ್ನು ಲೀಗ್ ಪಕ್ಷದವರು ಗುಂಡಿನಿಂದ ಕೊಲೆ ಮಾಡಿದರೆಂದು ಗೊತ್ತಾಗಿದೆ. ಆ ಕ್ಷೇತ್ರದಲ್ಲಿ ೧೪೪ ನೇ ಸೆಕ್ಷನ್ ಜಾರಿ ಮಾಡಿ, ಯಾರೂ ಆಯುಧ ಹಿಡಿದು ಅಲ್ಲಿ ತಿರುಗಾಡಕೂಡದೆಂಬ ಆಜ್ಞೆಯನ್ನು ಸಿಂಧ್ ಸರ್ಕಾರ ವಿಧಿಸಿರುವುದಾಗಿ ವರದಿಯಾಗಿದೆ.

ಕೊಚ್ಚಿ ದಿವಾನರು

ಕೊಚ್ಚಿ ಸಂಸ್ಥಾನದ ದಿವಾನರಾಗಿರುವ ಸರ್ ಜಾರ್ಜ್ ಬೋಗ್‌ರವರು ೪೭ ನೇ ಮಾರ್ಚಿಗೆ ನಿವೃತ್ತರಾಗಲಿದ್ದಾರೆ. ಅವರ ಸ್ಥಾನಕ್ಕೆ ದೆಹಲಿಯಲ್ಲಿ ಮದ್ರಾಸಿನ ವಿಶೇಷ ಕಾರ್ಯ ನಿರ್ವಹಿಸುತ್ತಿರುವ ಶ್ರೀ॥ ಅಪ್ಪುನಾಯರ್ ರವರನ್ನು ನೇಮಿಸಲಾಗುವುದೆಂದು ವಾರ್ತೆ ಹಬ್ಬಿದೆ.

ಕಾಂಗ್ರೆಸ್ ಅಧ್ಯಕ್ಷರಿಗೆ ಮಾನಪತ್ರ

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ ಸಿ ರೆಡ್ಡಿಯವರು ಸಂಸ್ಥಾನಾದ್ಯಂತ ಪ್ರವಾಸವನ್ನು ಆರಂಭಿಸಿ ಮೊನ್ನೆ ತುಮಕೂರಿಗೆ ಆಗಮಿಸಿದರು. ಅಲ್ಲಿ ಪುರಸಭೆಯವರು ಅವರಿಗೆ ಬಿನ್ನವತ್ತಳೆಯೊಂದನ್ನು ಅರ್ಪಿಸಿದರು. ಶ್ರೀ॥ ರೆಡ್ಡಿಯವರು ಅದಕ್ಕೆ ಉತ್ತರವಾಗಿ ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಟ ಆರಂಭವಾಗುವುದೆಂದು ಸೂಚಿಸಿ ಸಾರ್ವಜನಿಕರ ಸಹಕಾರ ಸಹಾನುಭೂತಿ ಅಗತ್ಯವೆಂದು ಹೇಳಿದರು.

ಫ್ರಾನ್ಸ್-ಸಯಾಂ ಒಪ್ಪಂದ

ಫ್ರಾನ್ಸಿಗೂ ಸಯಾಮಿಗೂ ಒಂದು ಒಪ್ಪಂದವಾಗಿ, ಫ್ರೆಂಚ್ ಇಂಡೋಚೀನಾ ಸಮೀಪದಲ್ಲಿರುವ ೨೦ ಸಹಸ್ರ ಚದರ ಮೈಲಿ ಪ್ರದೇಶವಾದ ಕಾಂಬೋಡಿಯಾವನ್ನು ಇಂಡೋಚೈನಾಕ್ಕೆ ಸೇರಿಸಿ ಕೊಡಲು ಒಪ್ಪಲಾಗಿದೆ. ವಿಶ್ವಶಾಂತಿಯನ್ನು ಸ್ಥಾಪಿಸಬೇಕೆಂಬ ವಿಶ್ವಸಂಸ್ಥೆಯ ಉದ್ದೇಶ ಸಾಧನೆಗಾಗಿಯೇ ಉಭಯ ರಾಷ್ಟ್ರಗಳೂ ಈ ಒಪ್ಪಂದಕ್ಕೆ ಬಂದುವೆಂದು ಹೇಳಲಾಗಿದೆ. ಇದರ ಜತೆಗೆ ಸಾಲೊ ಪ್ರನಾಕ್ಕೆ ಬಟೆನ್‌ಬ್ಯಾಂಗ್ ಮತ್ತು ಸೈಯಮ್‌ರೀಪ್, ಕೊಮ್‌ಪಾಂಗ್ ಟಮ್ ಮ್ಲುಸ್‌ಪ್ರಿಗ್ ಪ್ರಾಂತ್ಯಗಳ ಬಹು ಭಾಗವನ್ನು ಸೇರಿಸಿಕೊಡಲು ಫ್ರಾನ್ಸ್ ಒಪ್ಪಿಗೆ ಇತ್ತಿದೆಯೆಂದೂ ಗೊತ್ತಾಗಿದೆ.

ಇಂಡೋನೇಷಿಯಾದ ಸಂಯುಕ್ತ ಸಂಸ್ಥಾನಗಳು

ಇಂಡೋನೇಷಿಯಾ ರಿಪಬ್ಲಿಕ್ ಸರ್ಕಾರವು ಜಾವಾ, ಮದೂರಾ ಮತ್ತು ಸುಮಾತ್ರ ದ್ವೀಪದ ಮೇಲೆ ಅಧಿಕಾರ ನಡೆಸಲು ಡಚ್ ಸರ್ಕಾರವು ಒಪ್ಪಿಗೆ ಇತ್ತಿದೆ. ಇದರಿಂದ ಆ ಮೂರು ದ್ವೀಪಗಳೂ ಸೇರಿ ಇನ್ನು ಮುಂದೆ ಇಂಡೋನೇಷಿಯಾ ಸಂಯುಕ್ತ ಸಂಸ್ಥಾನಗಳೆಂದು ಕರೆಯಲ್ಪಡುವುದು. ಈ ಬಾಗಕ್ಕೆ ಡಚ್ ಈಸ್ಟ್ ಇಂಡೀಸ್ ಪೂರ್ಣವಾಗಿ ಸೇರಿದಂತಾಗಿದೆ. ಈ ಹೊಸ ರಚನೆಯು ನೆದರ್‌ಲ್ಯಾಂಡ್ಸ್-ಇಂಡೋನೇಷಿಯಾ ಯೂನಿಯನ್ನಿನ ಭಾಗವಾಗಿರುತ್ತದೆ. ಇದಕ್ಕೆ ನೆದರ್‌ಲ್ಯಾಂಡ್ಸ್ ರಾಜ್ಯ, ಸುರಿನಾಂ ಮತ್ತು ಕ್ಯುರಾಕೋಗಳು ಸೇರಿರುತ್ತವೆ. ಪರರಾಷ್ಟ್ರ ಧೋರಣೆ, ರಕ್ಷಣೆ ಮತ್ತು ಆರ್ಥಿಕ ಮುಂತಾದ ವಿಷಯಗಳಲ್ಲಿ ಎಲ್ಲಾ ದೇಶಗಳೂ ಒಂದೇ ನೀತಿ ಅನುಸರಿಸುವ ಸಿದ್ಧಾಂತಕ್ಕೆ ಒಪ್ಪಲಾಗಿದೆ. ಇಂಡೋನೇಷಿಯಾ ಸಂಯುಕ್ತ ಸಂಸ್ಥಾನದ ರಾಜ್ಯಾಂಗ ವ್ಯವಸ್ಥೆಯು ಅಲ್ಲಿಯ ರಾಜ್ಯಾಂಗ ರಚನಾ ಸಭೆಯಿಂದ ನಿರ್ಧಾರವಾಗತಕ್ಕದ್ದಾಗಿದೆ.

ಜಿನ್ನಾರವರ ಎಚ್ಚರಿಕೆಯಿಂದ ಗಾಂಧಿಯವರ ಹೊಣೆ

ಪ್ರಾಂತದ ಗೌರ್ನರ್ ... ಎಂಬ ... ಅವರ ... ... ಯುದ್ಧಕ್ಕೆ ... ... ಹೇಳಿದ್ದಾರೆ.

ಮುಸ್ಲಿಮರ ಅಸಹಕಾರದಕ್ಕೆ ಗಾಂಧೀಜಿ ಕಳವಳ

ಮಹಾತ್ಮ ಗಾಂಧಿಯವರು ಬಿಹಾರಿನಲ್ಲಿ ತಂಗಿದ್ದಾರೆ. ಮೊನ್ನೆ ನಡೆದ ಪ್ರಾರ್ಥನಾಸಭೆಗೆ ಮುಸ್ಲಿಮರ್‍ಯಾರೂ ಬಂದಿರಲಿಲ್ಲ. ಗಾಂಧೀಜಿಯವರು ಮುಸಲ್ಮಾನರಿಂದ ತಮ್ಮನ್ನು ದಸ್ತಗಿರಿ ಮಾಡಿಸಬಹುದೆಂಬ ಶಂಕೆ ಅವರಲ್ಲಿ ಮೂಡಿದೆಯೆಂದು ಗೊತ್ತಾಗಿದೆ. ಲೀಗ್ ನಾಯಕರು ಸ್ಪಷ್ಟಪಡಿಸಿದ ಅಂಶಗಳನ್ನೇ ಬಾಪೂ ಹೇಳುವುದಾಗಿ ತಿಳಿಸಿದ್ದಾರೆ.

ಸುಭಾಷ್‌ಬೋಸರ ಬಗ್ಗೆ ಊಹಾಪೋಹ

ಮಲಯದಲ್ಲಿ ಭಾರತೀಯ ಪರಿಹಾರ ಸಮಿತಿ ಉಪಾಧ್ಯಕ್ಷರಾದ ಶ್ರೀ ಎ ... ವರ್ನರ್‌ರವರು ಸುಭಾಷ್‌ಬೋಸರು ಬದುಕಿರುವ ಸಂಭವವೇ ಅಧಿಕವಾಗಿದೆಯೆಂದ ಹೇಳಿದ್ದಾರೆ.

ಮದ್ರಾಸ್ ಮೇಯರ್ ಗಿರಿ

ಮದ್ರಾಸ್ ಮೇಯರ್‌ಗಿರಿಗೆ ಈ ಸಾಲಿನಲ್ಲಿ ಬ್ರಾಹ್ಮಣೇತರರೊಬ್ಬರು ಚುನಾಯಿತರಾಗಬೇಕಾಗಿದೆ. ಆ ಪದವಿಯಲ್ಲಿ ಈಗ ಒಳ ಮಂದಿ ಬ್ರಾಹ್ಮಣೇತರ ಸದಸ್ಯರಿದ್ದಾರೆ. ಆ ಪೈಕಿ ೨೨ ಮಂದಿ ಕಾಂಗ್ರೆಸ್ ಪಕ್ಷದ ಶ್ರೀ ಪಿ. ಎಂ. ಆದಿಕೇಶವಲು ನಾಯಕ್‌ರವರನ್ನು ಸೂಚಿಸಿದ್ದಾರೆ. ಅವರೇ ಆಯ್ಕೆಯಾಗುವ ಸಂಭವವೂ ಇದೆ.

ಮಹಾತ್ಮರಿಗೆ ಸುಹ್ರವರ್ದಿ ಭರವಸೆ

ನಾಶವಾಗಿರುವ ಹಿಂದೂಗಳ ಮನೆಗಳನ್ನು ಪುನಃ ಕಟ್ಟಿಕೊಡುವಂತೆಯೂ, ನಿರಾಶ್ರಿತರಾಗಿರುವ ಹಿಂದೂಗಳು ತಮ್ಮ ಊರುಗಳಿಗೆ ಬಂದು ನೆಲಸಲು ಪೂರ್ಣ ನೆರವು ನೀಡಬೇಕೆಂದೂ ಮುಸ್ಲಿಮರನ್ನು ಪ್ರಾರ್ಥಿಸುವುದಾಗಿ ಬಂಗಾಳಾ ಪ್ರಧಾನಿ ಮಿ॥ ಸುಹ್ರವರ್ದಿಯವರು ಗಾಂಧಿಜಿಯವರಿಗೆ ಭರವಸೆ ಇತ್ತಿದ್ದಾರೆಂದು ವರದಿಯಾಗಿದೆ.

ಇಲಿಗಳಿಗೆ ರೇಷನ್

ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡ ದಾದ ಇಲಿಮರಿ ಮತ್ತು ಇಲಿಗಳನ್ನು ಸಾಕುವ ಕೇಂದ್ರಕ್ಕೆ ವಾರ್ಷಿಕಕ್ಕೆ ೨॥ ಟನ್ ಓಟ್ ಮತ್ತು ೧ ಟನ್ ಬ್ರೆಡ್ ರೇಷನ್ ಒದಗಿಸುವ ಬಗ್ಗೆ ಕಾಮನ್ಸ್ ಸಭೆಯಲ್ಲಿ ಮುಂದಿನ ವಾರ ಪ್ರಶ್ನೆಗಳು ಕೇಳಲ್ಪಡುವುವೆಂದು ಗೊತ್ತಾಗಿದೆ. ಈ ಕೇಂದ್ರದಲ್ಲಿ ಇಲಿಗಳ ಮೇಲೆ ರೋಗ ಪರಿಹಾರ ಪ್ರಯೋಗಗಳನ್ನು ನಡೆಸಲಾಗುತ್ತಿರುವುದಾಗಿ ವರದಿಯಾಗಿದೆ.

ಧನ್ವಂತರಿ ಮತ್ತು ಪೋಸ್ಟ್ ಬುಲೆಟಿನರ ಸಪ್ತಾಹ

ರಾಜಧಾನಿಯ ಆಯುರ್ವೇದ ಕಾಲೇಜ್ ಪದವೀಧರರ ಸಂಘದ ಆಶ್ರಯದಲ್ಲಿ ನಾಳೆಯಿಂದ ಧನ್ವಂತರಿ ಮತ್ತು ಪೋಸ್ಟ್ ಬುಲೆಟಿನರ ಸಪ್ತಾಹವನ್ನು ಆಚರಿಸಲಾಗುವುದು. ನಾಳೆ ಸಂಜೆ ೫-೩೦ಕ್ಕೆ ಡಾ॥ ಎ. ... ಧನ್ವಂತರಿ ... ... ವಿಷಯ ... ...

ಸಾಧ್ವಿ

ತಾ|| ೨೦-೧೧-೪೬ ಬುಧವಾರ

ರಾಜ್ಯಾಂಗ ಸಭೆ ಮುಂದೆ ಹೋಗುವುದೇ?

ಬರುವ ತಿಂಗಳು ಒಂಭತ್ತನೇ ತಾರೀಖು ಭಾರತ ರಾಜ್ಯಾಂಗ ಸಮಿತಿಯು ಆರಂಭವಾಗುವುದೆಂದು ಹಿಂದೆಯೇ ಪ್ರಕಟವಾಗಿತ್ತಷ್ಟೆ. ಆದರೆ ಅದು ಇನ್ನೂ ಮುಂದಕ್ಕೆ ಹಾಕಲ್ಪಡುವ ಸೂಚನೆಗಳು ಕಂಡು ಬರುತ್ತಿವೆ. ಅದರ ಸದಸ್ಯರುಗಳಿಗೆ ಕಳುಹಿಸಲು ಸಿದ್ಧವಾಗಿದ್ದ ಆಹ್ವಾನಗಳನ್ನು ವೈಸರಾಯರು ತಡೆದಿದ್ದಾರೆಂದು ವರದಿಯಾಗಿದೆ. ಸಭೆಯ ಕಾರ್ಯಕಲಾಪಗಳು ಸಾವಕಾಶವಾಗುವಂತೆ ಈ ರೀತಿ ಅಡಚಣೆಯ ಪ್ರಸಂಗವು ಉಂಟಾಗಿರುವುದಕ್ಕಾಗಿ ಪಂಡಿತ ನೆಹರೂರವರು ತಮ್ಮ ಪ್ರತಿಭಟನೆಯನ್ನು ಸೂಚಿಸಿರುವುದಾಗಿಯೂ ಗೊತ್ತಾಗಿದೆ.

ಕೇಂದ್ರ ಶಾಸನ ಸಭೆಯಲ್ಲಿ ಮೇಲ್ಕಂಡ ಸಮಿತಿಯ ಕಾರ್ಯಕಲಾಪಗಳಿಗಾಗಿ ಹಣವೇನೋ ಮಂಜೂರಾಗಿದೆ. ಮುಸ್ಲಿಂ ಲೀಗಿನವರು ಇದರ ಮೇಲೆ ತಂದಿದ್ದ ಕತ್ತರಿ ನಿರ್ಣಯಗಳು ಮಂಡಿಸಲ್ಪಡಲಿಲ್ಲ. ಆದರೂ ಲೀಗಿನವರು ರಾಜ್ಯಾಂಗ ಸಮಿತಿಯಲ್ಲಿ ಭಾಗ ವಹಿಸುವ ವಿಚಾರದಲ್ಲಿ ಇನ್ನೂ ಸಂಶಯವು ಇದ್ದೇ ಇದೆ.

ಮುಸ್ಲಿಂ ಲೀಗಿನ ಕೌನ್ಸಿಲ್ಲಿನವರು ಹಿಂದೆ ರಾಜ್ಯಾಂಗ ಸಮಿತಿಯನ್ನು ಬಹಿಷ್ಕರಿಸಿ ಮಂಜೂರು ಮಾಡಿದ ನಿರ್ಣಯವು ಇನ್ನೂ ಜಾರಿಯಲ್ಲಿಯೇ ಇದೆ. ಇದನ್ನು ಬದಲಾಯಿಸಲು ಕೌನ್ಸಿಲ್ಲಿನವರೇ ಸಮರ್ಥರು. ಆದರೆ ಕೌನ್ಸಿಲಿನ ಸಭೆಯನ್ನು ಸೇರಿಸಲು ಮಿ|| ಜಿನ್ನಾರವರು ಇದುವರೆಗೆ ಯಾವ ಏರ್ಪಾಡನ್ನೂ ಮಾಡಿರುವುದಿಲ್ಲ. ಆದ್ದರಿಂದ ಲೀಗಿನವರು ರಾಜ್ಯಾಂಗ ಸಮಿತಿಯಲ್ಲಿ ಭಾಗ ವಹಿಸುವ ವಿಚಾರವು ಇನ್ನೂ ಸಂದಿಗ್ಧವಾಗಿಯೇ ಇದೆ.

ಆದರೂ ಲೀಗಿನವರು ಇದರಲ್ಲಿ ಭಾಗ ವಹಿಸುವುದೇ ಇಲ್ಲವೆಂದು ಹೇಳಲು ಸಾಧ್ಯವಿಲ್ಲ. ತಾತ್ಕಾಲಿಕ ಸರ್ಕಾರದಲ್ಲಿ ಸಹ ಸೇರುವುದಿಲ್ಲವೆಂಬ ಅವರ ನಿರ್ಧಾರವನ್ನು ಲೀಗಿನ ಕಾರ್ಯಕಾರಿ ಸಮಿತಿಯವರೇ ಬದಲಾಯಿಸಿ ಸರ್ಕಾರದಲ್ಲಿ ಈಗ ಪ್ರವೇಶಿಸಿರುವರು. ಅದರಂತೆ ರಾಜ್ಯಾಂಗ ಸಮಿತಿಯ ವಿಚಾರದಲ್ಲಿಯೂ ಮಾಡಲು ಯಾವ ಅಭ್ಯಂತರವೂ ಇರುವುದಿಲ್ಲ.

ಬ್ರಿಟಿಷ್ ನಿಯೋಗದವರ ಸಲಹೆಯನ್ನು ಮುಂದುವರಿಸಲಾಗುವುದೆಂದು ಚಕ್ರವರ್ತಿ ಸಾರ್ವಭೌಮರು ಮೊನ್ನೆ ಪಾರ್ಲಿಮೆಂಟಿನಲ್ಲಿ ಕೊಟ್ಟ ಭರವಸೆಯು ಈಡೇರಬೇಕಾದರೆ ವೈಸರಾಯರು ಸ್ವಲ್ಪವೂ ತಡ ಮಾಡದೆ ನಿರ್ದಿಷ್ಟ ಕಾಲದಲ್ಲಿ ಸಮಿತಿಯ ಕೆಲಸವು ನಡೆಯುವಂತೆ ಏರ್ಪಡಿಸುವುದು ಯುಕ್ತವಾಗಿದೆ. — —

ವಕೀಲರ ಉಡುಪಿನಲ್ಲಿ ಬದಲಾವಣೆ

ಬಟ್ಟೆ ಅಭಾವವಿರುವುದರಿಂದ ಮದ್ರಾಸ್ ಪ್ರಾಂತ್ಯದ ವಕೀಲರುಗಳು ನಿಯಮಿತ ಉಡುಪುಗಳನ್ನು ಧರಿಸದೆ ಬರಬಹುದೆಂದು ಶ್ರೇಷ್ಠ ನ್ಯಾಯಾಸ್ಥಾನವು ತಿಳಿಸಿರುತ್ತದೆ. ರಾಷ್ಟ್ರೀಯ ಉಡುಪನ್ನು ಧರಿಸಲು ಸೌಲಭ್ಯಗಳನ್ನೊದಗಿಸುವ ಅಂಶವು ಪರಿಶೀಲನೆಯಲ್ಲಿರುತ್ತದೆ.

ಅಣು ಬಾಂಬಿಗೆ ಎದುರೇ ಇಲ್ಲ

ಅಣುಬಾಂಬುಗಳನ್ನು ಸುಲಭ ಬೆಲೆಯಲ್ಲಿ ಶೀಘ್ರವಾಗಿ ತಯಾರಿಸಬಹುದು. ಅವು ಹೆಚ್ಚು ವಿನಾಶಕಾರಿಯಾಗಿರುವುವು. ಅಣು ಬಾಂಬನ್ನು ಯಾವ ಸೈನ್ಯವೂ ಎದುರಿಸಲಾರದು, ಅದನ್ನು ಎದುರಿಸುವವರೇ ನಾಶವಾಗುವರು. ಇತರ ರಾಷ್ಟ್ರಗಳೂ ಇದನ್ನು ತಯಾರಿಸಬಹುದು. ಪುನಃ ಯುದ್ಧ ಆರಂಭವಾದರೆ ಅಣುಬಾಂಬು ಉಪಯೋಗಿಸಲ್ಪಟ್ಟು ನಮ್ಮ ನಾಗರಿಕತೆಯು ನಾಶವಾಗುವುದು ತಪ್ಪಿದ್ದಲ್ಲ. ಈ ಸಮಸ್ಯೆಗೆ ಪರಿಹಾರವೆಂದರೆ ಅಣುಶಕ್ತಿಯನ್ನು ವಿಶ್ವಸಮಿತಿಯ ಹತೋಟಿಗೆ ಒಳಪಡಿಸುವುದೇ ಆಗಿದೆ, ಎಂದು ಪ್ರೊ|| ಅಲ್ಬರ್ಟ್ ಐನ್‌ಸ್ಟೀನ್ ಮತ್ತು ಇತರ ವೈಜ್ಞಾನಿಕರು ತಿಳಿಸಿರುತ್ತಾರೆ.

ಹಿಂದೂ ಮತಕ್ಕೆ ವಾಪಸು

ನೆಹರೂರವರ ೫೭ ನೇ ಜಯಂತಿಯ ದಿನ ತಿರುಚೆಂದೂರಿನ ಶ್ರೀ ಸುಬ್ರಹ್ಮಣ್ಯೇಶ್ವರಸ್ವಾಮಿ ದೇವಸ್ಥಾನವು ಹರಿಜನರಿಗೆ ತೆರೆಯಲ್ಪಟ್ಟಾಗ ಹಿಂದೂ ಮತದಿಂದ ಬೇರೆ ಮತಗಳಿಗೆ ಸೇರಿದ್ದ ಅನೇಕರು ತಮ್ಮನ್ನು ಪುನಃ ತಮ್ಮ ಮತಕ್ಕೆ ಸೇರಿಸಿಕೊಳ್ಳುವುದಾದರೆ ತಾವು ಹಿಂದಕ್ಕೆ ಬರಲು ಸಿದ್ಧರಾಗಿರುವುದಾಗಿ ತಿಳಿಸಿದರೆಂದು ಮದರಾಸಿನ ವಿದ್ಯಾ ಸಚಿವರಾದ ಅವಿನಾಶಿಲಿಂಗಂ ಚೆಟ್ಟಿಯವರು ಹೇಳಿರುತ್ತಾರೆ.

ಟಿ. ಸಿ. ನಟರಾಜ್
ಔಷಧಾಲಯ
ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.
ಆಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುವಲ್ಲದೆ ಸಮಸ್ತವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.
ಝಂಡೂರವರ ಆಯುರ್ವೇದೀಯ ಔಷಧಗಳೆಲ್ಲವೂ ದೊರೆಯುತ್ತವೆ.

ಐ. ಎನ್. ಎ. ನೌಕರರಿಗೆ ಹುದ್ದೆ

ಪಂಜಾಬ್ ಸರ್ಕಾರದ ಅರ್ಥ ಶಾಖಾ ಸಚಿವರಾದ ಭೀಮಸೇನ ಸಾಚಾರ್‌ರವರು ಒಂದು ಹೇಳಿಕೆಯನ್ನಿತ್ತಿದ್ದಾರೆ. ಅವರು ಸರ್ಕಾರಿ ಹುದ್ದೆಗಳಲ್ಲಿ ನಿವೃತ್ತ ಮಿಲಿಟರಿ ಸೈನಿಕರಿಗೂ ಮತ್ತು ಐ. ಎನ್. ಎ. ಸೈನಿಕರಿಗೂ ಸಹ ಭೇದವಿಲ್ಲದೆ ಕೆಲಸ ಕೊಡಲಾಗುವುದೆಂದು ತಿಳಿಸಿರುತ್ತಾರೆ. ಮದ್ರಾಸ್ ಸರ್ಕಾರದವರೂ ಸಹ ಪೋಲೀಸ್ ಇಲಾಖೆಯ ಹೊರತು ಇತರ ಎಲ್ಲ ಶಾಖೆಗಳಲ್ಲೂ ಅವರಿಗೆ ಕೆಲಸ ಕೊಡಲು ನಿರ್ಧರಿಸಿರುತ್ತಾರೆ.

ಟೆಹರಾನಿಗೆ ಭಾರತ ವಿದ್ಯಾರ್ಥಿಗಳು

ಟೆಹರಾನಿನ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಲು ಭಾರತ, ಆಫ್ರಿಕ, ಅಫ್ಘಾನಿಸ್ಥಾನ ಮತ್ತು ಇರಾಕ್‌ಗಳಿಂದ ಹತ್ತು ಮಂದಿ ವಿದ್ಯಾರ್ಥಿಗಳು ಹೋಗುವರೆಂದೂ, ಅವರಿಗೆ ವಿಶ್ವವಿದ್ಯಾಲಯವು ಮುಫತ್ತಾಗಿ ಆಹಾರ, ವಸತಿ ಮತ್ತು ಬಟ್ಟೆಗಳನ್ನೊದಗಿಸುವುದೆಂದೂ ಪ್ರಕಟವಾಗಿದೆ.

ಜಿಲ್ಲಾಬೋರ್ಡು ಸಭೆ

ಮೈಸೂರು ಜಿಲ್ಲಾಬೋರ್ಡಿನ ಸಾಧಾರಣ ಸಭೆಯು ಡಿಸೆಂಬರ್ ೬ ನೇ ಶುಕ್ರವಾರ ಮಧ್ಯಾಹ್ನ ೧ ಗಂಟೆಗೆ ಜಿಲ್ಲಾಬೋರ್ಡ್ ಆಫೀಸ್ ಕಟ್ಟಡದಲ್ಲಿ ಸೇರುತ್ತದೆ.

ಸಾಧ್ವಿ
ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ
ಕೂಡಲೇ ಚಂದಾದಾರರಾಗಿರಿ
(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)
ಜಾಹಿರಾತಿನ ದರಗಳಿಗೆ ವಿಚಾರಿಸಿರಿ

Edited, printed and published by A. H. Nagarajan at the Sadhvi Press, D. Subbiah Road, Mysore

ಶ್ರೀ ಗಣೇಶ ಟಾಕೀಸ್
೧೮-೧೧-೪೬ರಿಂದ ಪ್ರತಿ ದಿನ ೩ ಆಟಗಳು
ಗುಬ್ಬಿ ಫಿಲಿಂಸ್ ರವರ
ಹೇಮರೆಡ್ಡಿ
"ಮಲ್ಲಮ್ಮ" (ಕನ್ನಡ ಚಿತ್ರ)
ಮುಖ್ಯ ಭೂಮಿಕೆ:— ಜಯಮ್ಮ, ಹೊನ್ನಪ್ಪ ಭಾಗವತರ್, ಜಿ. ಹೆಚ್. ವೀರಣ್ಣ
ಸಿ. ಬಿ. ಮಲ್ಲಪ್ಪ

ಅತ್ಯಮೋಘ ಪ್ರಾರಂಭ : : ತಾ|| ೨೧-೧೧-೪೬
ಭಗವಾನ್ ಟಾಕೀಸ್,
ಟಿ. ನರಸೀಪುರ
ಹೊಸ ಮಾದರಿಯ "ಫ್ಲೋರ್ ಸ್ಪೇಸ್" ಮಿರ್ಷ ಮತ್ತು ಅತ್ಯಾಧುನಿಕ ರೀತಿಯ ಅನೇಕ ಸೌಲಭ್ಯಗಳಿಂದ ಕೂಡಿದ ಭವ್ಯ ಚಲನ ಚಿತ್ರ ಮಂದಿರ
—— ಹೇಮರೆಡ್ಡಿ ಮಲ್ಲಮ್ಮ ——
ಎಂಬ ಪೌರಾಣಿಕ ಚಲನ ಚಿತ್ರದೊಡನೆ ಮೈಸೂರು ಜಿಲ್ಲಾಧಿಕಾರಿಗಳಾದ
ಶ್ರೀ|| ಸಿ. ಎಂ. ಎಚ್. ರಣಜೋಧ್‌ಸಿಂಗ್‌ರವರ
ಅಧ್ಯಕ್ಷತೆಯಲ್ಲಿ ಆರಂಭವಾಗುವುದು.

ಇನ್ನು ೨ ವರ್ಷದಲ್ಲಿ [ಇಂಡೋ]ನೇಷಿಯಾಕ್ಕೆ ಸ್ವಾತಂ[ತ್ರ್ಯ]

ಈಗ ರಚಿತವಾಗಿರುವ 'ಡಚ್ ... ನೇಷಿಯಾ ಕರಾರಿಗೆ ಡಚ್ ಸ... ಪ್ಪಿಗೆಯಿತ್ತಲ್ಲಿ ಇಂಡೋನೇಷಿಯಾ... ಎರಡು ವರ್ಷಗಳಲ್ಲೇ ಪೂರ್ಣ ಸ್ವಾ... ವು ದೊರೆಯುವುದು. ಈ ... ಕಮಿಷನ್ ಜನರಲ್ಲರು ರಚಿಸಿದ ... ಳಿಗೆ ಕಡಮೆ ಯಾವುದನ್ನೂ ಇ... ಷಿಯಾದವರು ಒಪ್ಪುವುದಿಲ್ಲವೆ... ವಾದ ಶಿಫಾರಸು ಮಾಡಿರುವುದಾ... ಯಾಗಿದೆ

ಮಹಾತ್ಮರು ಹಾ[ಲು] ತೆಗೆದುಕೊಂಡರು

ಮಹಾತ್ಮಗಾಂಧಿಯವರು ಮೊನ್ನೆ ... ಒಂದು ಲೋಟ ಹಾಲು ಕು... ಗೊತ್ತಾಗಿದೆ. ಬಂಗಾಳಾ ಪ್ರವಾ... ಭವಾದಾಗಿನಿಂದ ಅವರು ಹಾಲಿನ... ಯನ್ನು ಬಿಟ್ಟಿದ್ದರು.

೪೧೭ ಮೈಲಿ ಕಾಲು[ವೆ]

ಏಷ್ಯದ ರಷ್ಯದಲ್ಲಿ ಅತ್ಯಂತ ದ... ವ ೪೧೭ ಮೈಲಿ ಉದ್ದದ ಕಾಲುವೆ... ದ್ಯದಲ್ಲಿಯೇ ಸಿದ್ಧವಾಗಲಿದೆ. ಇ... ೮,೬೫,೦೦೦ ಎಕರೆಯ ಭೂಮಿಗೆ... ಗುವಳಿಯಾಗಬಹುದು.

ಜಿನ್ನಾ-ವೈಸರಾಯ್ ಭೇ[ಟಿ]

ನಿನ್ನೆ ಮಧ್ಯಾಹ್ನ ಮಿ|| ಜಿನ್ನಾ... ವೈಸರಾಯರನ್ನು ನೆಹಲಿಯಲ್ಲಿ ಭೇ... ಡಿ ಭಾರತ ರಾಜ್ಯಾಂಗ ಸಭೆ ಮತ್ತು ... ರಿನ ಪರಿಸ್ಥಿತಿ ... ಕುರಿತು ಸಮಾ... ನಡೆಸಿದರು.

ಅ|| ಕ|| ವಿದ್ಯಾರ್ಥಿ ಸಮ್ಮೇಳ[ನ]

ಇದೇ ೨೪ ನೇ ಭಾನುವಾರ ಶಿವ... ಯಲ್ಲಿ ಅಖಿಲ ಕರ್ನಾಟಕ ಮತ್ತು ... ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ ... ಳ ಜಂಟಿ ಕಾರ್ಯಕಾರಿ ಸಮಿತಿ ಸಭೆ ... ನಡೆಯುತ್ತದೆ. ಮೈಸೂರು ಸಂಸ್ಥಾ... ವಿದ್ಯಾರ್ಥಿ ಕಾಂಗ್ರೆಸ್ ಸಮ್ಮೇಳನ... ವರ್ಷ ನಡೆಯುವುದಿಲ್ಲ. ಡಿಸೆಂಬರ್ ... ಗಳಲ್ಲಿ ಶಿವಮೊಗ್ಗೆಯಲ್ಲಿ ನಡೆಯುವ ... ಲ ಕರ್ನಾಟಕ ವಿದ್ಯಾರ್ಥಿ ಕಾಂಗ್ರೆಸ್ ... ವೇಶನದಲ್ಲಿ ಮೈಸೂರು ವಿದ್ಯಾರ್ಥಿ... ಭಾಗ ವಹಿಸಬೇಕೆಂದು ಸಮ್ಮೇಳನದ ... ರ್ಯದರ್ಶಿಗಳು ಕೋರಿರುತ್ತಾರೆ.

ವೇಣುವಾದನ

ಪ್ರದೋಷದ ಪ್ರಯುಕ್ತ ನಾಳೆ ... ೭ ಗಂಟೆಗೆ ನಾಲ್ಕು ಬೀದಿ ಶ್ರೀ ದೊಡ್ಡ... ಮ ದೇವಸ್ಥಾನದಲ್ಲಿ ವಿದ್ವಾನ್ ವಿ. ದೇ... ಚಾರ್ಯರ ವೇಣುವಾದನವು ಸೂಕ್ತ ... ವಾದ್ಯಗಳೊಡನೆ ನಡೆಯುತ್ತದೆ. ಸ... ಗೂ ಸ್ವಾಗತವಿದೆ.

ಅಪೆರಾ ಟಾಕೀಸ್
೨೦—೧೧—೪೬ರಿಂದ
೫ನೇ ವಾರ!
ಶ್ರೀ ಮುರುಗ[ನ್]
(ತಮಿಳು)
ಪಾತ್ರ:-ಹೊನ್ನಪ್ಪಭಾಗವತ[ರ್]

ರೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು



ಸಂಪುಟ ೫] ಗುರುವಾರ ೨೧—೧೧—೪೬ [ಸಂಚಿಕೆ ೯೩

ಬಂಗಾಳಾ ಅಧಿಕಾರಿಗೆ ಬಿಹಾರಿಂದ ಗಡೀಪಾರು

..ನ ಸಮಿತಿಗೆ ಪ್ರಜಾ ಪ್ರತಿನಿಧಿಗಳು

ಬೆಂಗಳೂರು ೨೦

..ಗ ರಚನಾ ಸಭೆಯಲ್ಲಿ ಸಂಸ್ಥಾ ..ಳು ಭಾಗ ವಹಿಸುವ ಮೊದಲೇ ..ಮುಖದ ಪ್ರಜಾಪ್ರತಿನಿಧಿಗಳು ..ಮಾಡಬೇಕು; ಹಾಗೆ ಮಾಡು ..ಸಂಸ್ಥಾನ ನಡೆಸುವುದಿಲ್ಲವೆಂದು ..ಂಗ್ರೆಸ್ ಸದಸ್ಯರು ನಿರ್ಣಯಿ ..ಸ ಮಾಡಬೇಕು-ಎಂದು ಶ್ರೀ ..ಸ್ವಾಮಿಯವರು ಅ॥ ಭಾ॥ ಕಾಂಗ್ರೆ ..ನೆ ಬರೆದಿದ್ದಾರೆ

..ರು ಸರ್ಕಾರದ ಮೇಲೆ ದೂರು

..ಹಾರದ ಕಾಷೆಯವರು ೨೨ ..ಗಳನ್ನು ಹೊರಡಿಸಿದ್ದು, ಇತರ ..ಗಳಿಗೆ ಆಹಾರದ ಅಂಕಿ ಅಂ ..ಒದಗಿಸಿದ್ದರೂ ಕೂಡ, ಮೈಸೂ ..ರವು ಇನ್ನೂ ಅಂಕಿ ಅಂಶಗಳ ..ಸಿಲ್ಲವೆಂದೂ, ಬಹಳ ನಿಧಾನ ..ಮಾಡುತ್ತಿದೆಯೆಂದೂ ಕೇಂ ..ರದ ಅಧಿಕಾರಿ ವೃತ್ತಗಳಲ್ಲಿ ದೂ ..ದೆಯೆಂದು ವರದಿಯಾಗಿದೆ.

..ರ್ಗದಲ್ಲಿ ಗಂಧಕದ ಗಣಿ

ಭಾರತದಲ್ಲಿ ತಯಾರಾಗುವ ಗಂ ..ಕವೆಲ್ಲಾ ಬೇಕಾಗುವಷ್ಟು ಗಂ ..ದಗಿಸುವ ಪ್ರದೇಶಗಳು ಚಿತ್ರ ..ಲ್ಲಿ ಮೈಸೂರು ಸರ್ಕಾರದ ಭೂ ..ಸ್ತ್ರ ಇಲಾಖೆಯವರಿಂದ ಕಂಡು ..ಸಿರುವುದಾಗಿ ವರದಿಯಾಗಿದೆ ..ಲ್ಲಿ ಬೆಳ್ಳಿ ಮತ್ತು ಚಿನ್ನದ ಅದಿ ..ರು ದೊರೆತಿರುವುದಾಗಿ ಹೇಳ ..ಅಲ್ಲದೆ ಭದ್ರಾವತಿ ಕಬ್ಬಿಣದ ..ಗೆ ಬೇಕಾಗುವ ಕಬ್ಬಿಣದ ಅದಿ ..ವ ಸರಬರಾಜಾಗಬಹುದೆಂದು ..ದೆ.

..ಳಕ್ಕೆ ೨ ಕೋಟಿ ೫೦ ಲಕ್ಷ ರೂ.

..ಸರ್ಕಾರವು ಮಹಾಯುದ್ಧ ..ದ ನೆರವಿಗೆ ಪ್ರತಿಫಲವಾಗಿ ಇಂಡಿ ..ರವು ಪ್ರತಿ ವರ್ಷವೂ ೧೦ ಲ ..ನ್ನು ಕೊಡುತ್ತಿತ್ತು. ೧೯೫ ರಲ್ಲಿ ..ಹೆಚ್ಚು ಮಾಡಬೇಕೆಂದು ನಿ ..ಯಿತು. ಅಲ್ಲಿನ ಕೈಗಾರಿಕೆಯ ..ನೆರವಾಗುವಂತೆ ಭಾರತ ಸರ ..ರೇ ಗಂಟಿನಲ್ಲಿ ೨ ಕೋಟಿ ..ಗಳನ್ನು ಕೊಡಲು ತೀರ್ಮಾ..

..ದಿನದಲ್ಲಿ ೩೦೦೦ ಮೈಲಿಗಳ ನಡೆ

..ನ ಟರ್ಕಿಕಾರ್ನೆಸ್ ಎಂಬಾ ..ದಿನಗಳ ಅವಧಿಯಲ್ಲಿ 3000 ..ಕಾಲುನಡಿಗೆಯಲ್ಲಿ ನಡೆದು ..ಪ್ರಪಂಚದಲ್ಲೇ ಮೊದಲನೆಯವ ..ಈ ಅವಧಿಯಲ್ಲಿ ಅವನು ..ಗಳನ್ನು ಉಪಯೋಗಿಸಿದ್ದಾ ..ರ್ಕಿ ಬೇ ಕುಡಿದಿರ-ಇತ್ತಗೆ ..ಘಂಟೆಗಳ ಕಾಲ ಮಾತ್ರ ವಿ ..ಸಿರುತ್ತಾನೆ ಎಂದು ವರದಿಯಾ..

೩೦೦೦೦ ಉಪಾಧ್ಯಾಯರ ಮುಷ್ಕರ

ಸಂಬಳ ಮತ್ತು ತುಟ್ಟಿ ಭತ್ಯಗಳನ್ನು ಹೆಚ್ಚಿಸಲು ಮಾಡಿಕೊಂಡಿದ್ದ ಮನವಿಯ ನ್ನು ಪಂಜಾಬ್ ಸರ್ಕಾರದ ವಿದ್ಯಾಭ್ಯಾಸ ಬೋರ್ಡಿನವರು ಪರಿಶೀಲಿಸದಿಲ್ಲವಾದ್ದರಿಂ ದ ಅಲ್ಲಿನ ೩೦,೦೦೦ ಕ್ಕೆ ಮೇಲ್ಪಟ್ಟ ಉಪಾ ಧ್ಯಾಯರು ಡಿಸೆಂಬರ್ ೧ ನೇ ತಾ॥ ನಿಂದ ಮುಷ್ಕರ ಹೂಡುವರೆಂದು ಗೊತ್ತಾಗಿದೆ

ಉಪಾಧ್ಯಾಯರ ಸತ್ಯಾಗ್ರಹ

ಉಪಾಧ್ಯಾಯರ ಸಂಬಳ ಸಾರಿಗೆಳನ್ನು ಹೆಚ್ಚಿಸಬೇಕೆಂಬ ಮನವಿ ಮಾಡಿಕೊಂಡಿ ದ್ದುದನ್ನು ಸರ್ಕಾರದವರು ಗಮನಿಸದಿರುವು ದರಿಂದ ಜಮ್ಮು ಪ್ರಾಂತ್ಯ ಉಪಾಧ್ಯಾಯರ ಕಾರ್ಯಕಾರಿ ಸಮಿತಿಯ ೨೦ ಮಂದಿ ಸದ ಸ್ಯರು ಆಮರಣಾಂತ ಉಪವಾಸ ಮಾಡಲು ನಿಶ್ಚಯಿಸಿದ್ದಾರೆ. ಡಿಸೆಂಬರ್ ೫ ರಿಂದ ಉಪಾಧ್ಯಾಯರ ಮುಷ್ಕರವೂ ಆರಂಭವಾ ಗಲಿದೆ

ರಾಜ್ಯಾಂಗ ಸಭೆ ಡಿಸೆಂಬರ್ ೯ ಕ್ಕೆ

ರಾಜ್ಯಾಂಗ ರಚನಾ ಸಭೆಯು ಪೂರ್ವ ಭಾವಿ ಕಾರ್ಯ ಕಲಾಪಗಳನ್ನು ಪರಿಶೀಲಿ ಸಲು ಡಿಸೆಂಬರ್ ೯ ನೇ ತಾ॥ ದೆಹಲಿಯ ಲ್ಲಿ ಸೇರುವುದಾಗಿ ತಿಳಿಸಿ ಸದರಿ ಸಭೆಯ ಸ ದಸ್ಯರಿಗೆಲ್ಲಾ ಆಹ್ವಾನವನ್ನು ಕಳಿಸಲಾಗಿದೆ.

ಬೆಂಗಳೂರಿನಲ್ಲಿ ವಿಮಾನ ರಚನಾ ಕಾರ್ಖಾನೆ

ಭಾರತದಲ್ಲಿ ವಿಮಾನಗಳನ್ನು ರಚಿಸು ವುದಕ್ಕಾಗಿ ಬೆಂಗಳೂರಿನಲ್ಲಿರುವ ಹಿಂದೂ ಸ್ಥಾನ್ ವಿಮಾನ ಕಾರ್ಖಾನೆಯನ್ನು ಆರಿಸ ಲಾಗಿದೆ; ಭಾರತ ಸಂರಕ್ಷಣಾ ಶಾಖೆಯು ೫೦ ವಿಮಾನಗಳ ರಚನೆಗಾಗಿ ಕೇಳಿಕೊಂ ಡಿದ್ದಿತು ಅವುಗಳಲ್ಲಿ ೩೦ ವಿಮಾನಗಳ ನ್ನು ಬೆಂಗಳೂರಿನಲ್ಲಿ ತಯಾರಿಸಲಾಗುವು ದು-ಎಂದು ಕೇಂದ್ರ ಶಾಸನ ಸಭೆ ಯಲ್ಲಿ ಔದ್ಯೋಗಿಕ ಕಾರ್ಯದರ್ಶಿಗಳು ತಿ ಳಿಸಿದ್ದಾರೆ

ಹಿಂದೂಗಳಿಗೆ ಉಚಿತ ಜಮೀನು

ಪೂರ್ವ ಬಂಗಾಳದಲ್ಲಿ ನಿರಾಶ್ರಿತರಾಗಿ ರುವ ಹಿಂದೂಗಳು ಬರ್ದ್ವಾನ್ ಜಿಲ್ಲೆಯಲ್ಲಿ ವಾಸಿಸಲು ಇಷ್ಟಪಡುವುದಾದರೆ ಅವರುಗ ಳಿಗೆ ಉಚಿತವಾಗಿ ಭೂಮಿಕಾಣಿಗಳನ್ನು ಕೊಡಲಾಗುವುದೆಂದು ಅಲ್ಲಿನ ಮಹಾರಾ ಜರು ತಿಳಿಸಿದ್ದಾರೆ

ಪ್ರಭುಗಳಿಂದ ನಗರ ಪರಿಶೀಲನೆ

ಸ್ವಂ.ಸು.ಪ್ರೆ.] ಬೆಂಗಳೂರು ೨೧

ಶ್ರೀಮನ್ ಮಹಾರಾಜರವರು ಈದಿನ ಬೆಳಗ್ಗೆ ೯ ಘಂಟೆಗೆ ಹೊರಟು ನಗರದ ಅನೇಕ ಪ್ರಮುಖ ಸ್ಥಳಗಳಿಗೆ ಭೇಟಿ ಇತ್ತು ೧೨ ಘಂಟೆಗೆ ಹಿಂತಿರುಗಿದರು ಅವರೊಡನೆ ದಿವಾನರೂ ಸರ್ ಟಿ ತಂಬೂಚೆಟ್ಟಿರೂ, ಮಂತ್ರಿಗಳಾದ ಡಾ॥ ರಾಯರವರೂ, ನಗ ರಾಭಿವೃದ್ಧಿ ಸಭೆಯ ಅಧ್ಯಕ್ಷರಾದ ಶ್ರೀ ಸಿ ಎನ್ ನರಸಿಂಗರಾಯರೂ ನಗರಾಧ್ಯಕ್ಷ ರಾದ ಶ್ರೀ ಪಿ. ಎಸ್ ಶಿವಶಂಕರ್‌ರವರೂ ಇದ್ದರು. ನಗರಾಭಿವೃದ್ಧಿ ಸಮಿತಿಯವರು ಕೈಗೊಂಡಿರುವ ಬಡಾವಣೆಗಳ ಯೋಜನೆ ಗಳನ್ನು ಆಸಕ್ತಿಯಿಂದ ಪರಿಶೀಲಿಸಿದರು. ಬಸವನಗುಡಿ ಆಚಾರ್ಯ ಪಾಠಶಾಲೆ ಬಳಿ ಬಾಲಕ ಬಾಲಕಿಯರು ಪ್ರಭುಗಳನ್ನು ಹರ್ಷ ಧ್ವನಿಗಳಿಂದ ಸ್ವಾಗತಿಸಿದರು. ಶ್ರೀಮನ್ ಮ ಹಾರಾಜರು ಪಾಠಶಾಲೆಯ ಪುರೋಭಿ ವೃದ್ಧಿಯ ವಿಷಯವನ್ನು ಕೇಳಿ ತಿಳಿದು ಕೊಂಡರು

ಈ ಮಧ್ಯಾಹ್ನ ಪುರಭವನಕ್ಕೆ ಪ್ರಭು ಗಳು ಭೇಟಿ ಕೊಡುವರು. ನಾಳೆ ದಿವಾನ ರು ಮತ್ತು ಆಹಾರ ಅಧಿಕಾರಿಗಳೊ ಡನೆ ಕ್ಷಾಮಪೀಡಿತ ಪ್ರದೇಶಗಳಿಗೆ ಭೇಟಿ ಕೊಡುವರು

‡ ಸಂತೋಷ್ ಸ್ಮಾರಕ ಫುಟ್‌ಬಾಲ್ ಟೋರ್ನಮೆಂಟನ್ನು ಈಸಾರಿ ಬರುವ ತಿಂಗ ಳಲ್ಲಿ ಬೆಂಗಳೂರಿನಲ್ಲಿ ನಡೆಸಲು ಏರ್ಪಾಡು ಗಳಾಗುತ್ತಿವೆ. ಹೈದರಾಬಾದು, ತಿರುವಾಂ ಕೂರು, ರಾಜಪುಟಾಣ ಮುಂತಾದ ಕಡೆಗಳ ಆಟಗಾರರು ಬರುವ ನಿರೀಕ್ಷೆ ಇದೆ

ಹಿಂದೂ ಮಹಾಸಭೆ

ಚಾಮರಾಜನಗರ ೨೦

ಮೈಸೂರು ಸಂಸ್ಥಾನದ ಹಿಂದೂ ಮ ಹಾಸಭಾ ಕಾರ್ಯಕಾರಿ ಸಮಿತಿ ಸಭೆಯು ಇದೇ ೨೬ ನೇ ತಾ॥ ಮಂಗಳವಾರ ಚಾ ಮರಾಜನಗರದಲ್ಲಿ ನಡೆಯುವುದು. ಅಖಿ ಲ ಭಾರತ ಹಿಂದೂ ಮಹಾಸಭಾ ಕಾರ್ಯ ಕಾರಿ ಸಮಿತಿಯ ಸದಸ್ಯರೂ, ಮದ್ರಾಸ್ ಪ್ರಾಂತೀಯ ಹಿಂದೂ ಮಹಾಸಭಾ ಪ್ರಧಾ ನ ಕಾರ್ಯದರ್ಶಿಯವರೂ ಆದ ಶ್ರೀ ಶಿವ ನಾಂಡಿತೇವರ್‌ರವರೂ ಬರುವರು. ಆ ದಿ ನ ಸಂಜೆ ನಡೆಯುವ ಬಹಿರಂಗ ಸಭೆಯಲ್ಲಿ ಶ್ರೀಗಳಾದ ಭೂಪಾಳಂ ಚನ್ನಕೇಶವ ಪ್ರಭು ಮುಂತಾದವರು ಭಾಷಣ ಮಾಡುವರು. ಸಮಿತಿ ಸದಸ್ಯರುಗಳೆಲ್ಲಾ ದಯಮಾಡಿಸ ಬೇಕೆಂದು ಕೋರಲಾಗಿದೆ

ಬಂಗಾಳಾ ಅಧಿಕಾರಿಗಳು ಹೊರದೂಡಲ್ಪಟ್ಟರು

ಬಿಹಾರಿನಲ್ಲಿ ವಿಶೇಷ ಕೆಲಸಕ್ಕಾಗಿ ನೇ ಮಕವಾಗಿದ್ದ ಬಂಗಾಳದ ಐ. ಸಿ. ಎಸ್. ಅಧಿಕಾರಿಗಳಾದ ಮಿ॥ ಎಸ್ ಎಂ ಘೋ ರ ವರನ್ನು ಕೂಡಲೇ ಬಂಗಾಳಕ್ಕೆ ಹಿಂತಿರು ಗುವಂತೆ ಬಿಹಾರ್ ಸರ್ಕಾರವು ಆಜ್ಞೆ ಇತ್ತಿ ದೆ. ಇವರು ಬಿಹಾರ್ ಸರ್ಕಾರದ ಅನುಮ ತಿಯಿಲ್ಲದೆ ಪಾಟ್ನಾ ಮುಂತಾದ ಜಿಲ್ಲೆಗಳಲ್ಲಿ ಬಂಗಾಳಾ ಸರ್ಕಾರದ ಪರವಾಗಿ ಪ್ರವಾಸ ಮಾಡಿ ಮುಸ್ಲಿಂ ನಿರಾಶ್ರಿತರಿಗೆ ಬಂಗಾಳ ದಲ್ಲಿ ಮನೆ ಮಠಗಳನ್ನು ಒದಗಿಸಿಕೊಡು ವುದಾಗಿ ಭರವಸೆ ಕೊಡುತ್ತಿದ್ದರೆಂದು ವರ ದಿಯಾಗಿದೆ. ಬಿಹಾರಿನ ೨೦೦ ಮುಸ್ಲಿಂ ನಿ ರಾಶ್ರಿತರನ್ನು ಮುಸ್ಲಿಂ ಲೀಗ್ ಸ್ವಯಂ ಸೇ ವಕರು ಕಳೆದ ೧೬ ನೇ ತಾರೀಖು ಪಟ್ನಾದಿಂದ ಬಂಗಾಳಕ್ಕೆ ರಕ್ಷಿಸಿ ಕರೆದುಕೊಂಡು ಹೋ ದರೆಂದೂ ಹೇಳಲಾಗಿದೆ.

ಮಾಳವೀಯರ ಸ್ಥಳಕ್ಕೆ ಗಾಂಧಿಜೀಯವರೇ ?

ಕಾಶಿ ಹಿಂದೂ ವಿಶ್ವವಿದ್ಯಾಲಯದ ಪೋ ಷ್ಯಾಧಿಕಾರಿಣಿಯನ್ನು ನೋಡಿಕೊಳ್ಳುತ್ತಿದ್ದ ಪಂ॥ ಮಾಳವೀಯರು ನಿಧನರಾದ್ದರಿಂದ ಆ ಸ್ಥಾನವನ್ನು ಮಹಾತ್ಮ ಗಾಂಧಿಯವರು ಸ್ವೀಕರಿಸುವಂತೆ ಪ್ರಾರ್ಥಿಸಿಕೊಳ್ಳಬೇಕೆಂಬ ಆಲೋಚನೆ ನಡೆಯುತ್ತಿದೆ ಸ್ಥಾಪಕರಿ ಗಳಾದ ಸರ್ ರಾಧಾಕೃಷ್ಣರು ಯೂರೋ ಪಿನಿಂದ ಹಿಂತಿರುಗಿದ ಮೇಲೆ ಈ ಪ್ರಶ್ನೆ ಬ ಗೆ ಹರಿಯುವುದಾಗಿ ಗೊತ್ತಾಗಿದೆ

೪೧೪ ಸ್ಥಾನಗಳಿಗೆ ೩ ಸಹಸ್ರ ಉಮೇದುವಾರರು

ಕಳೆದ ೯ ವರ್ಷಗಳಿಂದಲೂ ನಡೆಯದೆ ಇದ್ದ ಚುನಾವಣೆಗಳು ರೊಮೇನಿಯಾದಲ್ಲಿ ಆರಂಭವಾಗಿವೆ ೪೧೪ ಸ್ಥಾನಗಳಿಗೆ ೨೦ ರಾಜಕೀಯ ಪಕ್ಷಗಳ ೩ ಸಾವಿರ ಉಮೇ ದುವಾರರು ಸ್ಪರ್ಧಿಸಿದ್ದಾರೆ

ಮದ್ರಾಸ್ ಮೇಯರ್‌ಗಿರಿ

ಮದ್ರಾಸಿನ ಮೇಯರಾಗಿ ಲಿಬರಲ್ ಪಕ್ಷದ ಟಿ ಸುಂದರರಾವ್ ನಾಯ್ಡುರವರು ಆರಿಸಲ್ಪಟ್ಟಿದ್ದಾರೆ

ಭಾರತಕ್ಕೆ ಭದ್ರತಾ ಸಮಿತಿ ಯಲ್ಲಿ ಸ್ಥಾನವಿಲ್ಲ

ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಖಾಲಿಯಿದ್ದ ೩ ಸ್ಥಾನಗಳಿಗೆ ಚುನಾವಣೆ ನಡೆದು. ಕೊಲಂಬಿಯಾಕ್ಕೆ ೫೫ ಸಿರಿಯಾಕ್ಕೆ ೪೫ ಮತ್ತು ಬೆಲ್ಜಿಯಂಗೆ ೪೩ ಓಟುಗಳು ಬಂದು ಆ ಮೂರು ರಾಷ್ಟ್ರಗಳು ಆರಿಸಲ್ಪಟ್ಟವು ಭಾರತಕ್ಕೆ ಕೇವಲ ೧೩ ಓಟುಗ ಳು ಮಾತ್ರ ಬಂದುವು.

LATEST NEWS

ಮಿಲ್ ಮುಷ್ಕರ

ಸ್ವಂ ಸು ಪ್ರೆ.] ಬೆಂಗಳೂರು ೨೧

ಮಹಾರಾಜ ಮಿಲ್ಲಿನ ೩೦೦೦ ಜನ ಕೆಲ ಸಗಾರರು ಈ ದಿನದಿಂದ ಸಂಪೂರ್ಣವಾಗಿ ಮುಷ್ಕರ ಹೂಡಿದ್ದಾರೆ. ಒಬ್ಬ ಕೂಲಿಗಾ ರನನ್ನು ೧೯ ನೇ ತಾ॥ ನಿಂದ ವಜಾ ಮಾಡಿದ ಕಾರಣದ ಮೇಲೆ ಕೆಲಸಗಾರರು ೨ ಷಿಫ್ಟಿನ ಹೋಗಿ ಕೆಲಸ ಮಾಡದೆ ಎರಡು ದಿವಸದಿಂದ ಸ್ಟೇ-ಇನ್-ಸ್ಟ್ರೈಕ್ ಮಾಡುತ್ತಿ ದ್ದರು. .. ದಿನದಿಂದ ಸಂಪೂರ್ಣ ಮ.. ಷ್ಕರವನ್ನು ಹೂಡಿದ್ದಾರೆ.

ಸಾಧ್ವಿ

ತಾ॥ ೨೧-೧೧-೪೬ ಗುರುವಾರ

ಸರ್ಕಾರದ ಕೆಲಸ ನಿಧಾನವೇಕೆ ?

ಮೈಸೂರು ಸರ್ಕಾರದ ಕೆಲಸಕಾರ್ಯಗಳು ಬಹಳ ನಿಧಾನವಾಗಿ ಸಾಗುತ್ತಿವೆಯೆಂದು ದೆಹಲಿಯ ವರದಿಯೊಂದರಿಂದ ವೇದ್ಯವಾಗಿರುತ್ತದೆ. ಅದರಲ್ಲೂ ಅತ್ಯಂತ ಪ್ರಾಮುಖ್ಯವಾದ ಆಹಾರ ಸಂಗ್ರಹದ ವಿಷಯದಲ್ಲಿಯೇ ಈ ನಿಧಾನವು ಉಂಟಾಗಿದೆಯೆಂದೂ ಸಹ ಹೇಳಲಾಗಿದೆ ಇದು ಅತ್ಯಂತ ಶೋಚನೀಯ ವಿಚಾರ.

ಭಾರತ ಸರ್ಕಾರದ ಆಹಾರ ಶಾಖೆಯವರು ಇದುವರೆಗೆ ಇಪ್ಪತ್ತೇಳು ಪ್ರಕಟಣೆಗಳನ್ನು ಹೊರಡಿಸಿರುವರೆಂದೂ, ಆದರೆ ಅವುಗಳಲ್ಲೊಂದರಲ್ಲೂ ಮೈಸೂರಿಗೆ ಸಂಬಂಧಪಟ್ಟ ವಿವರಗಳೇ ಇಲ್ಲವೆಂದೂ ಹೇಳಲಾಗಿದೆ ಮೈಸೂರು ಸರ್ಕಾರದವರಿಂದ ತ್ವರಿತಕಾಲದಲ್ಲಿ ಅಂಕಿ ಅಂಶಗಳು ಬರುತ್ತಿಲ್ಲವೆಂದು ದೆಹಲಿಯ ಅಧಿಕಾರಿ ವರ್ಗದವರು ಅಭಿಪ್ರಾಯ ಪಟ್ಟಿರುವಂತೆ ಗೊತ್ತಾಗಿದೆ. ಇತರ ಪ್ರಾಂತಗಳಿಗಿಂತಲೂ ಮೈಸೂರು ಸಂಸ್ಥಾನವು ಈ ವಿವರಗಳನ್ನು ಒದಗಿಸುವುದರಲ್ಲಿ ನಿಧಾನವಾಗಿ ಕೆಲಸ ಮಾಡುತ್ತಿದೆಯೆಂಬ ಟೀಕೆಯೂ ಸಹ ಬಂದಿರುತ್ತದೆ.

ನಮ್ಮ ಸಂಸ್ಥಾನದ ಆಡಳಿತ ವರ್ಗದ ಕಾರ್ಯ ಚಟುವಟಿಕೆಯು ಬೇರೆ ಯಾವ ವಿಷಯದಲ್ಲಿ ನಿಧಾನವಾಗಿರಬಹುದಾದರೂ, ಪತ್ರ ವ್ಯವಹಾರ ಮತ್ತು ತಪಶೀಲು ವಿವರಣೆಗಳ ಸರಬರಾಜಿನಲ್ಲಿ ಬಹಳ ಚುರುಕಾಗಿರುತ್ತದೆಂದು ನಾವು ಭಾವಿಸಿದ್ದೆವು ನಮ್ಮ ಸರ್ಕಾರದ ಸೆಕ್ರೆಟೇರಿಯಟ್ಟು ಹಿಂದೂಸ್ಥಾನದ ಅತ್ಯಂತ ಮುಂದುವರಿದ ಸೆಕ್ರೆಟೇರಿಯೆಟ್ಟುಗಳಿಗೆ ಸರಿಸಮಾನವಾಗಿದೆಯೆಂಬ ಹೆಸರುವಾಸಿಯೂ ಸಹ ಬಂದಿರುತ್ತದೆ. ಅಲ್ಲದೆ ನಮ್ಮಲ್ಲಿ ಒಂದು ಪ್ರತ್ಯೇಕವಾದ ಪ್ರಕಟಣಾ ಶಾಖೆಯೂ ಇದ್ದು, ಆಡಳಿತದ ಸಮಸ್ತ ಭಾಗಗಳ ಸಂಪೂರ್ಣ ವಿವರಗಳನ್ನೂ ಸಂಗ್ರಹಿಸುತ್ತಿರುತ್ತದೆ.

ಈಗ ಅತ್ಯಂತ ಪ್ರಾಮುಖ್ಯವಾಗಿರುವ ಆಹಾರದ ಸರಬರಾಜಿನ ವಿಷಯದಲ್ಲಿ ಇಲಾಖೆಯ ಮುಖ್ಯಾಧಿಕಾರಿಗಳು ಆಗಿಂದಾಗ್ಯೆ ವಿವರಗಳನ್ನು ಸಂಗ್ರಹಿಸಿ ಪ್ರಕಟಣೆಗಳನ್ನೂ ಸಹ ಹೊರಡಿಸುತ್ತಿದ್ದಾರೆ. ಹೀಗಿರುವಲ್ಲಿ ಇದೇ ಅಂಶಗಳನ್ನು ಭಾರತ ಸರ್ಕಾರದವರಿಗೂ ಒದಗಿಸಲು ಯಾವ ಅಡಚಣೆಯಿದ್ದಿತೋ ನಮಗೆ ಗೊತ್ತಾಗುವುದಿಲ್ಲ.

ಭಾರತ ಸರ್ಕಾರದ ಇಪ್ಪತ್ತೇಳು ಪ್ರಕಟಣೆಗಳ ಪೈಕಿ ಒಂದರಲ್ಲಿಯೂ ಮೈಸೂರಿನ ವಿವರಗಳು ಇಲ್ಲವೆಂಬುದು ತೀರ ಅಸಮಾಧಾನಕರವಾದ ಅಂಶ ಪ್ರಕೃತದ ಅಭಾವ ಪರಿಸ್ಥಿತಿಯಲ್ಲಿ ಎಲ್ಲ ಸರ್ಕಾರಗಳ ಗಮನ ವೂ ಆಹಾರ ಸರಬರಾಜಿನ ಬಗ್ಗೆ ಕೇಂದ್ರೀಕೃತವಾಗಿರುತ್ತದೆ. ನಮ್ಮ ಸರ್ಕಾರದವರೂ ಸಹ ಈ ವಿಷಯದಲ್ಲಿ ಸಂಪೂರ್ಣ ಬದ್ಧಾಧರರಾಗಿರುವರೆಂದೇ ನಾವು ಭಾವಿಸುತ್ತೇವೆ ಆದರೆ ಅಂಕಿ ಅಂಶಗಳನ್ನು ಒದಗಿಸುವುದರಲ್ಲಿ ಉದ್ಭವಿಸಿರುವ ಈ ತಾತ್ಸಾರವು ನಮಗೆ ಅರ್ಥವಾಗುವುದಿಲ್ಲ

ಆಡಳಿತದ ದಕ್ಷತೆಯನ್ನು ತನಿಖೆ ಮಾಡಿ, ಅದನ್ನು ಪರಿಷ್ಕರಿಸುವ ಪ್ರಯತ್ನಗಳು ನಮ್ಮ ಸರ್ಕಾರದಲ್ಲಿ ನಡೆಯುತ್ತಿವೆ. ಇಡೀ ಅಧಿಕಾರಿ ವರ್ಗದ ದಕ್ಷತೆಯನ್ನು ಸಂಪೂರ್ಣವಾಗಿ ಪರಿಷ್ಕರಿಸಲು ಸ್ವಲ್ಪ ಕಾಲ ಹಿಡಿಯಬಹುದು. ಆದರೆ ಆಹಾರದ ವಿಷಯದಲ್ಲಿ ದಕ್ಷತೆಗೆ ಲೋಪ ಬಂದರೆ ಅನರ್ಥ ಪರಂಪರೆಗಳೇ ಉಂಟಾಗುವುವು. ಈ ವಿಷಯದಲ್ಲಿ ತಾತ್ಸಾರಕ್ಕೆ ಸ್ಥಾನವಿಲ್ಲ. ನಮ್ಮ ಸರ್ಕಾರದವರು ಮೇಲ್ಕಂಡ ವರದಿಯ ಪರಿಣಾಮವನ್ನು ಗಮನಿಸಿ, ಮೈಸೂರಿನ ವಾಸ್ತವಿಕ ಸ್ಥಿತಿಗತಿಗಳನ್ನು ಸಕಾಲದಲ್ಲಿ ನಿವೇದಿಸದೆ ಇರುವುದರಿಂದ ಸಂಪ್ರಾಪ್ತವಾಗಬಹುದಾದ ಕಷ್ಟನಷ್ಟಗಳನ್ನು ಕೂಡಲೇ ತಪ್ಪಿಸಲೆಂದು ನಾವು ಹಾರೈಸುತ್ತೇವೆ.

ಆಪೆರಾ ಟಾಕೀಸ್

೨೦—೧೧—೪೬ರಿಂದ

5ನೇ ವಾರ!

ಶ್ರೀ ಮುರುಗನ್

(ತಮಿಳು)

ಪಾತ್ರ:- ಹೊನ್ನಪ್ಪ ಭಾಗವತರ್

ಎಲ್ಲಾ ಹಿಂದುಗಳೂ ಮುಸ್ಲಿಮರಾಗಬೇಕಂತೆ

ಪರಧರ್ಮೀಯರನ್ನು ಇಸ್ಲಾಂ ಮತಕ್ಕೆ ಸ್ವಾಗತಿಸುವುದು ಪ್ರತಿಯೊಬ್ಬ ಮುಸ್ಲಿಮನ ಕರ್ತವ್ಯ. ಅಂದಮೇಲೆ ಪ್ರತಿಯೊಬ್ಬ ಹಿಂದುವೂ ಮುಸ್ಲಿಮನಾಗಬೇಕು— ಎಂದು ಕೇಂದ್ರ ಸರ್ಕಾರದ ಸಚಿವರಾದ ಮಿ॥ ಗಜ್ನಫರ್ ಅಲಿಖಾನರು ದೆಹಲಿಯಲ್ಲಿ ಭಾಷಣ ಮಾಡಿದರೆಂದು ಸ್ಟೇಟ್ಸ್‌ಮನ್ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ವಿಷಯದ ಮೇಲೆ ಕೇಂದ್ರ ಶಾಸನ ಸಭೆಯಲ್ಲಿ ಕೇಳಿದ ಪ್ರಶ್ನೆಗಳಿಗೆ ಮಿ॥ ನಿಷ್ಟಾರ್ರವರು ಉತ್ತರ ಕೊಡುತ್ತ, ಇಂಥಹ ವಿಷಯಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಮಂತ್ರಿಗಳಿಗೆ ಸ್ವತಂತ್ರ್ಯವಿರಬೇಕೆಂದು ಹೇಳಿದರು

ಸ್ವಂತ ಉಸ್ತುವಾರಿಯಿಂದ ತಯಾರಾದ

ಲೋಕಲ್ ಮೇಡ್ ಚಪ್ಪಲಿಗಳು

ಸುಲಭ ಬೆಲೆಗೆ ಸಿಗುತ್ತೆ.

—: ಅಲ್ಲದೆ :—

ಟಾಂಚಿನ್	D S	16-12-0	C L.C
ಫ್ಲೋರ	,,	16- 4-0	,,
ರೋಮಿಕ	,,	17- 8-0	,,
,,	S S.	13 12-0	,,
ಕುಮಾರ್	,,	13- 2-0	,,

ಒಂದು ಸಲ ಭೇಟಿಮಾಡಿ—

ಗೋಬರ್ ಫುಟ್‌ವೇರ್ ಹೌಸ್

ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಭೂಕಂದಾಯದ ಪುನರ್ ವಿಮರ್ಶೆ

ಎಲ್ಲಾ ಪ್ರದೇಶಗಳಲ್ಲೂ ಒಂದೇ ರೀತಿ ಕಂದಾಯ ಅಥವಾ ಗುತ್ತಿಗೆಯನ್ನು ಜಾರಿಗೆ ತರುವುದು, ಸಣ್ಣ ಸಣ್ಣ ಭಾಗಗಳ ಮಾಲೀಕತ್ವವನ್ನು ತಪ್ಪಿಸುವುದು, ಸಾಗುವಳಿಯನ್ನು ಉತ್ತಮಗೊಳಿಸಿ ರೈತನ ಜೀವನದ ಮಟ್ಟವನ್ನು ಹೆಚ್ಚಿಸುವುದು, ಹುಲ್ಲುಗಾವಲುಗಳ ಬಗ್ಗೆ ಸರಿಯಾದ ಏರ್ಪಾಡು ಮಾಡುವುದು, ಸರ್ಕಾರಕ್ಕೂ, ರೈತನಿಗೂ ಮಧ್ಯೆ ಇರುವ ಮಧ್ಯವರ್ತಿಗಳನ್ನು ತಪ್ಪಿಸುವುದು,- ಇವುಗಳ ಪರಿಶೀಲನೆಗಾಗಿ ಒರಿಸ್ಸಾ ಸರ್ಕಾರವು ಒಂದು ಸಮಿತಿಯನ್ನು ರಚಿಸಲು ನಿರ್ಧರಿಸಿದೆ

ಪ್ರಸಿದ್ಧ ಪತ್ರಿಕೆ

ಗುಂಡ್ಲುಪೇಟೆ ತಾಲ್ಲೂಕು ಬೇಗೂರು ಹೋಬಳಿ ಹೊರೆಯಾಲದ ದಾಖಲೆ ರಂಗೂಪುರದಲ್ಲಿರುವ ನಂಜಪ್ಪನ ಮಗ ಸಿದ್ದಪ್ಪ ಮೈನರ್ ಗಾರ್ಡಿಯನ್ ಆದ ಬೋಗಪ್ಪನ ಮಗ ಸಿದ್ದಪ್ಪನು ಈ ಮೂಲಕ ತಿಳಿಯಪಡಿಸುವುದೇನೆಂದರೆ :—

ಮೇಲ್ಕಂಡ ಮೈನರ್ ಸಿದ್ದಪ್ಪನಿಗೆ ಮೇಲ್ಕಂಡ ಹೊರೆಯಾಲದ ದಾಖಲೆ ರಂಗೂಪುರದ ಸರ್ವೆ 219, 269, 288-1 ಮತ್ತು ಸದರಿ ರಂಗೂಪುರಕ್ಕೆ ಸೇರಿದ 11 ಅಂಕಣ ಮನೆ ಮತ್ತು ಹೊಲಗೇರಿ ಹಿತ್ತಲೂ ಸಹ ಸೇರಿರುತ್ತೆ. ಇವುಗಳ ಮೇಲೆ ಮತ್ತಾರಿಗೂ ಯಾವ ವಿಧವಾದ ಹಕ್ಕುಬಾಧ್ಯತೆಯಾಗಲೀ ಸ್ವಾಧೀನವಾಗಲೀ ಯಾವುದೂ ಇರುವುದಿಲ್ಲ ಹಿರೀಕಾಟಿಯಲ್ಲಿರುವ ಬಸಪ್ಪನ ಮಗಳು ಕೆಂಪಮ್ಮ ಎಂಬುವಳು ಈ ಸ್ವತ್ತುಗಳನ್ನು ಕರಭಾರೆಮಾಡಲು ತಕರಾರು ಮಾಡುತ್ತಿರುತ್ತಾಳೆ ಇವಳಿಗೆ ಸದರಿ ಸ್ವತ್ತುಗಳ ಮೇಲೆ ಏನೂ ಹಕ್ಕಿಲ್ಲ ಸ್ವಾಧೀನವೂ ಇಲ್ಲ. ಇವಳಿಂದಾಗಲೀ ಮತ್ತಾರಿಂದಾಗಲೀ ಯಾರೂ ಕ್ರಯ ವಗೈರೆ ಪಡೆಯಕೂಡದು. ಯಾರೇನಾದರೂ ಪರಭಾರೆ ಮಾಡಿಸಿಕೊಂಡಲ್ಲಿ ಅದು ತಿಲಮಾತ್ರವೂ ಊರ್ಜಿತವಾಗತಕ್ಕದ್ದಲ್ಲವೆಂತ ಈ ಮೂಲಕ ತಿಳಿಸಿದೆ

ಸಿದ್ದಪ್ಪ, ಮೈ॥ಗಾ॥ ಬೋಗಪ್ಪನ ಮಗ, ಸಿದ್ದಪ್ಪ,

ಎಂ. ಎಸ್. ಮಹಾಂತದೇವರು, ಅಡ್ವೊಕೇಟ್, ಮೈಸೂರು.

ತಾ॥ 21-11-46.

Edited, printed and published by A.R. Nagarajan at the Sadhvi Press D.Subbiah Road, Mysore

ಶ್ರೀ ಗಣೇಶ ಟಾಕೀಸ್

೧೮-೧೧-೪೬ರಿಂದ ಪ್ರತಿ ದಿನ ೩ ಆಟಗಳು

ಗುಬ್ಬಿ ಫಿಲಿಂಸ್ ರವರ

★ ಹೇಮರೆಡ್ಡಿ ಮಲ್ಲಮ್ಮ ★

ಮುಖ್ಯ ಭೂಮಿಕೆ:— ಜಯಮ್ಮ, ಹೊನ್ನಪ್ಪ ಭಾಗವತರ್, ಜಿ. ಹೆಚ್. ವೀರಣ್ಣ ಸಿ. ಬಿ. ಮಲ್ಲಪ್ಪ

Morning Shows on 22, 23, 24 and 25 at 10-30 a. m.

WE WERE DANCING

Starring:- Norma Shearer.

ರೈಲ್ವೆ ಇಂಜಿನ್ನುಗಳ ತಯಾರಿಕೆ

ಭಾರತದಲ್ಲಿ ಇನ್ನು ರೈಲ್ವೆ ಇಂಜಿನ್ ತಯಾರಿಕೆಯನ್ನು ಇನ್ನುಮೂರು ವರ್ಷಗಳೊಳಗಾಗಿ ತೆಗೆದುಕೊಳ್ಳಲಾಗುವುದು. ಇದು ಒಂದು ಭಾರಿ ಯೋಜನೆಯಿಂದ ಅಷ್ಟು ದೂರದ ಕಾಲ ಬೇಕಾಗುವುದೆಂದೂ ಕೇಂದ್ರ ಸರ್ಕಾರದ ಮಂತ್ರಿಗಳಾದ ಮಿ॥ ಅಸಫ್ ಅಲಿಯವರು ಹೇಳಿರುತ್ತಾರೆ.

ನೂತನ ಶಾಲೆ

ಚಲುವಾಂಬ ಅಗ್ರಹಾರದ ಗಾರ್ಡನ್ ಮಿಕ್ಸೆಡ್ ಪ್ರೈಮರೀ ಶಾಲೆಯು ಬಂಡೀಕೇರಿಯಲ್ಲಿರುವ ಕೊಲ್ಲಾಪುರದಮ್ಮನ ದೇವಸ್ಥಾನದಲ್ಲಿ ಆರಂಭವಾಗಿದೆ. ಈ ಶಾಲೆಗೆ ಸುತ್ತಮುತ್ತಲಿನ ನಿವಾಸಿಗಳು ತಮ್ಮ ಮಕ್ಕಳನ್ನು ಕಳುಹಿಸಿಕೊಡಬೇಕೆಂದು ಅಲ್ಲಿನ ಮುಖ್ಯೋಪಾಧ್ಯಾಯರು ಕೋರಿರುತ್ತಾರೆ.

ನಿಮ್ಮ ಮೈ ಮೊಡವೆಗಳಿಂದ ಹೊಳೆಯಬೇಕೆ ? ನೀವು ಲಾವಣ್ಯ ಮೂರ್ತಿಗಳಾಗಬೇಕೆ? ಹಾಗಾದರೆ ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ. ಪರೀಕ್ಷಿಸಿ ನೋಡಿರಿ ಎಲ್ಲೆಲ್ಲೂ ದೊರೆಯುತ್ತದೆ. ಗವರ್ನಮೆಂಟ್ ಸೋಪ್ ಫ್ಯಾಕ್ಟರಿ ಬೆಂಗಳೂರು.

ಎಲ್ಲಾ ತುಪ್ಪಕ್ಕಿಂತಲೂ ಆರ್.ಜಿ. ತುಪ್ಪವೇ ಚನ್ನಾಗಿರುತ್ತದೆ

ರೋಜಿ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶುಕ್ರವಾರ ೨೨—೧೧—೪೬ [ಸಂಚಿಕೆ ೯೪

ಮಹಾತ್ಮ ಗಾಂಧಿಜಿಗೆ ಬೆದರಿಕೆ ಪತ್ರಗಳು

ಪ್ರಿನ್ಸಿಪಾಲರ ಮೇಲೆ ಚೂರಿ ಪ್ರಯೋಗ

ಪರೀಕ್ಷೆಗೆ ಕಳುಹಿಸದಿದ್ದುದಕ್ಕಾಗಿ ವಿದ್ಯಾರ್ಥಿಯ ಕೃತ್ಯ

ಮೈಸೂರು ೨೨

ಶಾರದಾವಿಲಾಸ ಇಂಟರ್ ಕಾಲೇಜ್‌ನ ಸುಬ್ಬರಾವ್ ಎಂಬ ವಿದ್ಯಾರ್ಥಿಯು ತನ್ನನ್ನು ಪರೀಕ್ಷೆಗೆ ಕಳುಹಿಸದೇ ಇದ್ದುದರಿಂದ ಪ್ರಿನ್ಸಿಪಾಲರ ಬಳಿಗೆ ಹೋಗಿ ಅವರನ್ನು ಚೂರಿಯಿಂದ ತಿವಿಯಲು ಪ್ರಯತ್ನಿಸಿದನೆಂದೂ, ಆ ವೇಳೆಗೆ ವಿದ್ಯಾರ್ಥಿಗಳು ಗುಂಪು ಸೇರಿದ್ದರಿಂದಾಗಿ, ಅತನು ಪರಾರಿಯಾದನೆಂದೂ ಗೊತ್ತಾಗಿದೆ ಪ್ರಿನ್ಸಿಪಾಲರು ಈ ಬಗ್ಗೆ ಪೋಲೀಸರಿಗೆ ದೂರುಕೊಟ್ಟಿರುವರೆಂದು ಹೇಳಲಾಗಿದೆ

ಹೊಡೆದಾಟ

ಮೋತಿಲಾಲ್ ಟಾಕೀಸ್ ಬಳಿ ಬೋಳ ದರಡ್ಡಿ ಮಾಡುತ್ತಿದ್ದಾಗ ಮೈಸೂರು ತಾ॥ ಗೋಪಾಲಪುರದ ಕಾಳೇಗೌಡ ಮತ್ತು ರಂಗಪ್ಪ ಎಂಬುವರಿಗೆ ಹೊಡೆದಾಟವಾಗಿ ರಂಗಪ್ಪನು ಪಕ್ಕದಲ್ಲೇ ಇದ್ದ ಮೋಟಿಯೊಬ್ಬನ ಕತ್ತಿಯನ್ನು ತೆಗೆದುಕೊಂಡು ಕಾಳೇಗೌಡನಿಗೆ ತಲೆಯ ಮೇಲೆ ಬಲವಾಗಿ ಹೊಡೆದನೆಂದೂ, ಇದನ್ನು ಕಂಡ ಜನರು ರಂಗಪ್ಪನನ್ನು ಪೋಲೀಸರ ವಶಪಡಿಸಿದರೆಂದೂ ಕಾಳೇಗೌಡನನ್ನು ಆಸ್ಪತ್ರೆಗೆ ಸೇರಿಸಲಾಗಿದೆಯೆಂದೂ ವರದಿ ಬಂದಿದೆ.

ಚರ್ಚಾಸ್ಪರ್ಧೆಯಲ್ಲಿ ಬಹುಮಾನ

ಮಹಾರಾಜಾ ಕಾಲೇಜಿನ ರಾಜ್ಯನೀತಿ ಶಾಸ್ತ್ರಸಂಘದ ಆಶ್ರಯದಲ್ಲಿ ನಡೆದ ಅಂತರ ತರಗತಿ ಚರ್ಚಾ ಸ್ಪರ್ಧೆಯಲ್ಲಿ ಕೆಳಗೆ ಕಂಡಂತೆ ಬಹುಮಾನವನ್ನು ವಿನಿಯೋಗಿಸಲಾಯಿತು :- ಶ್ರೀಗಳಾದ ಯು. ಎಂ. ಗುರುಮಲ್ಲಪ್ಪನವರ ಪಾರಿತೋಷಕವು ಬಿ ಎಸ್ ವೆಂಕಟರಾಯರಿಗೆ, ಡಾ॥ ಕೃಷ್ಣಯ್ಯಂಗಾರ್‌ರವರ ಪಾರಿತೋಷಕವು ಬಿ. ರುದ್ರಪ್ಪನವರಿಗೆ, ಟಿ. ಸಿ. ಹೊನ್ನಪ್ಪನವರ ಪಾರಿತೋಷಕವು ಎಸ್ ಆರ್ ನಾರಾಯಣ ರಾಯರಿಗೆ, ಎ. ಕೆ ಕೃಷ್ಣಯ್ಯರ್ ರವರ ಪಾರಿತೋಷಕವು ಡಿ ವಿಜಯದೇವರಾಜೇ ಅರಸಿನವರಿಗೆ.

ಸಹಾಯಾರ್ಥ ನಾಟಕ

ಕೃಷ್ಣರಾಜೇಂದ್ರ ಗಿರಣಿಯ ಶ್ರೀ ಮಗಾರ್ಂಟಾ ಪ್ರ್ಯಾ.ಟಿಕ್ ಸಂಘವರು ಗಿರಣಿಯ ಕಾರ್ಮಿಕ ಸಂಘದ ಅಧ್ಯಕ್ಷರಾದ ಶ್ರೀ ಟಿ ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ಪುರಭವನದಲ್ಲಿ ನಾಳೆ ಸಂಜೆ ೭ ಗಂಟೆಗೆ ಭಕ್ತಪ್ರಹ್ಲಾದ ಎಂಬ ನಾಟಕವನ್ನೂ, ಭಾ

ಭಾರತಕ್ಕೆ ಸ್ವತಂತ್ರ ಮತ್ತು ಪರಮಾಧಿಕಾರ ಸರ್ಕಾರ

ಪರಮಾಧಿಕಾರವನ್ನು ಪಡೆದ ಸ್ವತಂತ್ರ ಭಾರತದ ರಿಪಬ್ಲಿಕ್ ಸರ್ಕಾರ ಸ್ಥಾಪನೆಯೇ ಕಾಂಗ್ರೆಸ್ಸಿನ ಗುರಿ ಎಂದು ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ನಿರ್ಣಯಿಸಿದೆ ಇಂಡೊನೇಷಿಯ ಸರ್ಕಾರಕ್ಕೆ ಶುಭಾಶಯ ಕೋರುವ ನಿರ್ಣಯವನ್ನು ಅಂಗೀಕರಿಸಲಾಗಿದೆ ಈ ನಿರ್ಣಯಗಳನ್ನು ಮೀರತ್ ಅಧಿವೇಶನದಲ್ಲಿ ಮಂಡಿಸಲಾಗುವುದು.

ನ-ವಾರ ಸಂಜೆ ೭ ಗಂಟೆಗೆ ಉತ್ತರ ಗೋಗ್ರಹಣ ಎಂಬ ನಾಟಕವನ್ನೂ ಅಭಿನಯಿಸುವರು ಬಂದ ಉತ್ಪತ್ತಿಯು ಕುಮಾರಿ ಕೆ ಕೆ ಜಯಮ್ಮನ ಲಗ್ನಕ್ಕೆ ಬಹುಮಾನವಾಗಿ ಕೊಡಲ್ಪಡುವುದು. ಮಹಾಜನರು ಪ್ರೋತ್ಸಾಹಿಸಬೇಕೆಂದು ಕಾರ್ಯದರ್ಶಿಗಳು ಪ್ರಾರ್ಥಿಸಿರುತ್ತಾರೆ.

ಧನ್ವಂತರಿ ಮತ್ತು ಷೇಕ್‌ಬುಆಲಿ ದಿನಾಚರಣೆ

ಗ॥ ಆಯುರ್ವೇದ ಮತ್ತು ಯುನಾನಿ ಕಾಲೇಜು ಪಧವೀಧರರ ಸಂಘದ ಆಶ್ರಯದಲ್ಲಿ ಧನ್ವಂತರಿ ಮತ್ತು ಷೇಕ್‌ಬುಆಲಿ ದಿನಾಚರಣೆಯು ಪ್ರತ್ಯಕ್ಷ ನಿನ್ನೆ ಬೆಳಗ್ಗೆ ಪೂಜೆ ಮತ್ತು ಸಂಜೆ ಡಾ॥ ಎಸ್. ವೆಂಕಟನಾರಾಯಣರಾಯರ ಅಧ್ಯಕ್ಷತೆಯಲ್ಲಿ ಭಾಷಣಗಳಾದುವು. ಹಿದಿನ ಸಂಜೆ ೫॥ ಘಂಟೆಗೆ ಹಕೀಂ ಕೆ. ಎಂ ರಹೀಂರವರಿಂದ ಷೇಕ್ ಬುಆಲಿಯವರ ಜೀವನ ಚರಿತ್ರೆ ಮತ್ತು ಯುನಾನಿ ಚಿಕಿತ್ಸಾಪ್ರಸಾರ ಎಂಬ ವಿಷಯವಾಗಿಯೂ, ನಾಳೆ ಸಂಜೆ ೬॥ ವಿ॥ ಟಿ. ಕೆ. ರಾಮಾಶಾಸ್ತ್ರಿಯವರಿಂದ ಸಾಂಕ್ರಾಮಿಕ ರೋಗಗಳು ಮತ್ತು ನಿರೋಧಕ ಕ್ರಮ ಎಂಬ ವಿಷಯದ ಮೇಲೂ, ನಾಳಿದ್ದು ಸಂಜೆ ೬॥ ವಿ॥ ಎಸ್. ಎಸ್. ಸುಬ್ರಹ್ಮಣ್ಯಶಾಸ್ತ್ರಿಗಳಿಂದ ಸನ್ನಿಪಾತ ಜ್ವರವಿಮರ್ಶೆ ಎಂಬ ವಿಚಾರದ ಮೇಲೆಯೂ ಭಾಷಣಗಳನ್ನು ಏರ್ಪಡಿಸಿದೆ ಸರ್ವರಿಗೂ ಆಹ್ವಾನವುಂಟು.

ವಿದ್ಯಾ ಪೀಠ

ನಂಜನಗೂಡಿನಲ್ಲಿ ಸ್ಥಾಪಿತವಾಗಿರುವ ವಿದ್ಯಾಪೀಠದಲ್ಲಿ ೧೯೪೭ ನೇ ಜನವರಿಯಿಂದ ಶಿಕ್ಷಣವು ಪ್ರಾರಂಭವಾಗಲಿದೆ ಇದಕ್ಕೆ ಸೇರಿ ಶಿಕ್ಷಣ ಪಡೆಯಲು ಅರ್ಜಿ ಹಾಕಿರೋ ರಿರುವವರೆಲ್ಲರೂ ಮೇಲ್ಕಂಡ ಕಾಲಕ್ಕೆ ಬಂದು ಸೇರಲು ಸಾಧ್ಯವೇ ಎಂಬುದನ್ನು ಕೂಡಲೇ ತಿಳಿಸಬೇಕೆಂದು, ಕಾರ್ಯದರ್ಶಿಗಳು ಕೋರುತ್ತಾರೆ.

ಮಹಾತ್ಮ ಗಾಂಧಿಯವರಿಗೆ ಮುಸ್ಲಿಮರ ಬೆದರಿಕೆ

ತಮ್ಮನ್ನು ಆದುಮಿಡಲು ಗಾಂಧಿಜಿಯವರು ಬಂದಿದ್ದಾರೆಂಬ ಶಂಕೆಯಿಂದ ಕೂಡಿದ ಹಲವು ಮುಸ್ಲಿಮರು, ಮಹಾತ್ಮರಿಗೆ ಬೆದರಿಕೆಯ ಪತ್ರಗಳು ಬರೆದಿರುವುದಾಗಿ ವರದಿಯಾಗಿದೆ. ಬಂಗಾಳದ ದುರಂತಕ್ಕಾಗಿ ಏಕೆ ಉಪವಾಸ ಮಾಡಲಿಲ್ಲವೆಂಬ ಕೋಪೋದ್ರೇಕವಾದ ತಂತಿಗಳನ್ನು ಕೆಲವು ಹಿಂದೂಗಳೂ ಅವರಿಗೆ ಕಳುಹಿಸಿರುವರೆಂದು ಗೊತ್ತಾಗಿದೆ

ಅಹಿಂಸಾ ಪ್ರಯೋಗಕ್ಕೆ ಹೊಸ ವಿಧಾನ

ಉತ್ಪ್ರೇಕ್ಷೆ ಮತ್ತು ಸುಳ್ಳು ಸುದ್ದಿಗಳ ಮಧ್ಯೆ ಇದ್ದೇನೆ. ಉಭಯತ್ರರಲ್ಲೂ ಅಪನಂಬಿಕೆ ಬಲವಾಗಿದೆ. ಹಳೇ ಸ್ನೇಹವೆಲ್ಲಾ ನಾಶವಾಗಿದೆ. ನನಗೆ ಪ್ರಿಯವಾದ ಸತ್ಯ ಮತ್ತು ಅಹಿಂಸೆಗಳು ನನ್ನ ನೆರವಿಗೆ ಬಂದಿಲ್ಲ. ಅವನ್ನು ಪರೀಕ್ಷಿಸಲು ಅಥವಾ ನನ್ನನ್ನೇ ನಾನು ಪರೀಕ್ಷಿಸಲು ಏಕಾಂಗಿಯಾಗಿ ಶ್ರೀ ರಾಮಭೂತಕ್ಕೆ ತೆರಳುತ್ತೇನೆ" ಎಂದು ಹೇಳಿ ಗಾಂಧಿಜಿಯವರು ಅಹಿಂಸಾ ಪ್ರಯೋಗದ ಹೊಸ ವಿಧಾನವನ್ನು ಆರಂಭಿಸಿದ್ದಾರೆ. ಇವರ ಕೂಡ ಇವರ ಪರಿವಾರದವರೊಬ್ಬರೂ ಇರುವುದಿಲ್ಲ

ಚಿನ್ನದ ಗಣಿ ಮುಷ್ಕರ ನ್ಯಾಯಬಾಹಿರ

ಸ್ವಂ ಪ. [ಬೆಂಗಳೂರು ೨೨

ಚಿನ್ನದಗಣಿಯ ಮೈಸೂರು ಮತ್ತು ಛಾಂಪಿಯನ್ ರೀಫ್ ಗಣಿ ಕೂಲಿಗಾರರು ಹೂಡಿರುವ ಮುಷ್ಕರವನ್ನು ಲೇಬರ್ ಶಾಸನದ ೨೮ ವಿಧಿಯ ಮೇರೆ ನ್ಯಾಯಬಾಹಿರವೆಂದು ಸಂಸ್ಥಾನದ ಸಂಘಗಳ ರಿಜಿಸ್ಟ್ರಾರವರು ಘೋಷಿಸಿದ್ದಾರೆ.

ಪರೀಕ್ಷಾ ವಿದ್ಯಾರ್ಥಿಗಳಿಗೆ ವೇತನ

ರಾಜಧಾನಿಯ ಶ್ರೀ ವೈಷ್ಣವ ಸಭೆಯವರು ಪ್ರತಿವರ್ಷದಂತೆ ಈ ವರ್ಷವೂ ಪರೀಕ್ಷೆಗೆ ಹೋಗತಕ್ಕ ಶ್ರೀ ವೈಷ್ಣವ ವಿದ್ಯಾರ್ಥಿಗಳಿಗೆ ದ್ರವ್ಯಸಹಾಯ ಮಾಡುವವರು ಸಹಾಯವನ್ನಪೇಕ್ಷಿಸುವವರು, ತಮ್ಮ ಹೆಸರು, ವಿಳಾಸ ಮೊದಲಾದ ವಿವರ ಮತ್ತು ವಿದ್ಯಾಸಂಸ್ಥೆಯ ಅಧಿಕಾರಿಗಳ ಪ್ರಶಸ್ತಿಪತ್ರಗಳೊಡನೆ ಇದೇ ೩೦ ನೇ ತಾರೀಖಿನೊಳಗೆ ಪರಕಾಲಮಠದ ಬಡಾವಣೆಯ ನರಸಿಂಹ ಪ್ರಾಸಾದದಲ್ಲಿರುವ ಸಭಾ ಕಾರ್ಯದರ್ಶಿ ಶ್ರೀ ಎಸ್. ಅನಂತರಂಗಾಚಾರ್ಯರಿಗೆ ಕಳುಹಿಸಿಕೊಡಬೇಕೆಂದು ಕೋರಿದ್ದಾರೆ.

ಹಿಂದೀ ಪರೀಕ್ಷೆಗಳು

೧೯೪೬ ನೆ ನವಂಬರ್ ತಿಂಗಳಿನಲ್ಲಿ ನಡೆಯುವ ಹಿಂದೀ ಪರೀಕ್ಷೆಗಳು ತಾ॥ ೨೩-೧೧-೪೬ ನೆ ಶನಿವಾರ ಬೆಳಗ್ಗೆ ೧೦-೩೦ ಗಂಟೆಗೆ ಶ್ರೀ ಡಿ ಬನುಮಯ್ಯನವರ ಹೈಸ್ಕೂಲಿನಲ್ಲಿ ನಡೆಯುವುವು. ಪರೀಕ್ಷಾರ್ಥಿಗಳು ಪ್ರವೇಶಪತ್ರಗಳನ್ನು ಹಿಂದೀ ಪ್ರಚಾರ ಸಭೆಯಲ್ಲಿ ಪಡೆಯಬೇಕಾಗಿ ಪ್ರಾರ್ಥಿಸಲಾಗಿದೆ

ಚರ್ಚಾಸ್ಪರ್ಧೆ

ನಾಳೆ ಸಂಜೆ ನಾಲ್ಕುಘಂಟೆಗೆ ಶಾರದಾವಿಲಾಸ ಹೈಸ್ಕೂಲಿನಲ್ಲಿ ರಾಜಕಾರ್ಯಪ್ರವೀಣ ಎನ್ ಎಸ್ ಸುಬ್ಬರಾವ್ ಸ್ಮಾರಕ ಅಂತರ ಪ್ರೌಢಶಾಲಾ ವಿದ್ಯಾರ್ಥಿಗಳ ಚರ್ಚಾಸಭೆ ಸ್ಪರ್ಧೆಯೂ ನಾಳಿದ್ದು ಬೆಳಗ್ಗೆ ೮-೩೦ ಘಂಟೆಗೆ ರಾಜೇಶ ಹಿರಿಯ ವರ್ಗದ ಸಂಘದ ಆಶ್ರಯದಲ್ಲಿ ಅಂತರ ಪ್ರೌಢಶಾಲಾ ವಿದ್ಯಾರ್ಥಿಗಳ ಆಶು ಭಾಷಣ ಸ್ಪರ್ಧೆಯೂ ನಡೆಯುವುವು

ಲಕ್ಷ್ಮಣತೀರ್ಥ ಜಲಾಶಯ

ಸ್ಥಾನದ ಅತ್ಯಂತ ದೊಡ್ಡದಾದ ಲಕ್ಷ್ಮ ಜಲಾಶಯದ ಯೋಜನೆಯನ್ನು ರು ಸರ್ಕಾರದವರು ಒಪ್ಪಿದ್ದಾರೆ. ಶಯದಿಂದ ೧೪೦೦೦ ಎಕರೆಗ ರನ್ನು ಒದಗಿಸಲಾಗುವುದು. ಇದ ಕೋಟಿ ರೂಪಾಯಿಗಳನ್ನು ಸರ್ಕಾ ಮಂಜೂರುಮಾಡಿದೆ

ಸ್ಪರ್ಧಿ ನಿಯೋಗಕ್ಕೆ ಸ್ಥಾನಪತಿಗಳ ತಿರಸ್ಕಾರ

ಗಳೂರಿನಲ್ಲಿರುವ ವಿಶ್ವ ವಿದ್ಯಾ ನಿಲ ಘದ ಕಾರ್ಯಕಾರಿ ಸಮಿತಿ ಸದಸ್ಯ ನ್ನೆ ಸ್ಥಾನಪತಿಗಳಾದ ಮಿ॥ ಸು॥ ಮುದ್ವೀರರವರ ಬಳಿ ನಿಯೋಗ ದ್ದರು. ಸಂಘದ ಅಧ್ಯಕ್ಷರ ಸರ್ವಾ ತಿ, ಚುನಾಯಿತ ಹೊಸ ಸದಸ್ಯ ಧಿಕಾರ ವಹಿಸಿಕೊಡದಿರುವುದು ಇ ಟಾದ ವಿಷಯಗಳನ್ನು ವಿವರಿಸಿ, ಪತಿಗಳು ಮಧ್ಯೆ ಪ್ರವೇಶಿಸಿ, ಸರ್ವ ರ ಸಭೆ ಕರೆಸಿ, ಹೊಸ ಕಾರ್ಯಕಾರಿ ಗೆ ಅಧಿಕಾರ ವಹಿಸಿಕೊಡುವಂತೆ ಬೇಕೆಂದು ಪ್ರಾರ್ಥಿಸಿ ಒಂದು ಮನ ನ್ನು ಮಾಡಲು ಆ ನಿಯೋಗದವರು ದ್ದರು ಸ್ಥಾನಪತಿಗಳು ನಿಯೋಗ ನ್ನು ಸ್ವಲ್ಪಕಾಲ ಕಾಯಿಸಿ ಅನಂತರ ಂದು "ನಿಮ್ಮನ್ನು ನೋಡುವುದ ಉತ್ತಮವಾದ ಬೇರೆ ಕಾರ್ಯವಿದೆ. ಹೋಗಿ" ಎಂದು ಅವಮಾನ ಭೇಟಿಯನ್ನೀಯದೆ ಕಾರಿನಲ್ಲಿ ಹೋದರು. ನಿಯೋಗದವರು ನ್ನು ಕಂಡು ತಮ್ಮ ನಿವೇದನ ಪ ಲ್ಲಿಸಿ ಒಂದು ವಾರದೊಳಗಾಗಿ ಅ ಇತ್ಯರ್ಥವಾಗದಿದ್ದಲ್ಲಿ, ವಿದ್ಯಾ ಮುಷ್ಕರ ಹೂಡಲಿದ್ದಾರೆಂದು ದಿ ಲ್ಲಿ ತಿಳಿಸಿದರು ದಿವಾನರು ವಿದ್ಯಾ ಅಭಿಪ್ರಾಯವನ್ನು ಶಾಂತಿಯಿಂದ ದನ್ನು ಬೇಗನೆ ಇತ್ಯರ್ಥ ಮಾಡು ತಿಳಿಸಿದರು.

ಹುದಲಿನಿಂದ ಆಹಾರ

ಬರ್ಗ್ ಆಸ್ಪತ್ರೆಯಲ್ಲಿರುವ ಜರ್ಮ ಕೂದಲಿನಿಂದ ತಯಾರಿಸಿದ ಹಿಟ್ಟ ಆಹಾರದೊಡನೆ ಕೊಡಲಾಗುತ್ತಿದೆ ಬ್ರಿಟಿಷ್ ಕಾರ್ಮಿಕ ಪಕ್ಷದ ಪ್ರಮು ಮಿ॥ ಫೆನ್ನರ್ ಬ್ರಾಕ್ವೆರವರು ಪ್ರ ದ್ದಾರೆ. ಇದಕ್ಕಾಗಿ ಕ್ಷೌರದ ಅಂಗಡಿ ವ ಕೂದಲನ್ನೆಲ್ಲಾ ಸಂಗ್ರಹಿಸಲು ರುಗಳನ್ನು ಕೈಗೊಂಡಿರುವುದಾಗಿ ಗೊತ್ತಾಗಿದೆ

ಹರಿಕಥೆ

ಮೈಸೂರು ೨೨

ಪೇಟೆಯ ಕಬೀರ್ ರಸ್ತೆಯಲ್ಲಿ ಪಾಂಡುರಂಗ ಸ್ವಾಮಿಯವರ ದೇವ ಲ್ಲಿ ಈ ದಿನದಿಂದ ೨೬ ನೇ ತಾ॥ ರ ಪೂರ್ತಾ ಸಂಜೆ ೭ ಗಂಟೆಯಿಂ ಗಳು ಕೀರ್ತನಕಾರ ಮಂಡಳಿ ದಲ್ಲಿ ನಡೆಯುತ್ತವೆ ಸರ್ವ ಗತವಿದೆ:- ಶ್ರೀ ನದೀಪುರಂ ಶ್ರೀ ಂಗಾಚಾರ್ಯರಿಂದ ಮಯೂರ ಶ್ರೀ ವೆಂಕಟಸುಬ್ಬಶರ್ಮರಿಂದ ಶನಿ ನಂಜನಗೂಡು ಶ್ರೀ ಗಂಗಾಬಾ ಶ್ರೀ ಕನಕದಾಸರು, ಶ್ರೀ ವಿದು ವ ಭಕ್ತ ರಾಮದಾಸರುಂ ಮ ಸಮಾರಾಧನದಾಸರಿಂದ ಶ್ರೀ ರ ಚರಿತ್ರೆಗಳು ಕ್ರಮವಾಗಿ ವೆ

ಸಾಧ್ವಿ

ತಾ|| ೨೨-೧೧-೪೬ ಶುಕ್ರವಾರ

ರಾಜ್ಯಾಂಗ ರಚನಾ ಸಭೆಯ ತೊಡಕುಗಳು

ಬರುವ ತಿಂಗಳು ಒಂಭತ್ತನೇ ತಾರೀಖಿನಿಂದ ಭಾರತ ರಾಜ್ಯಾಂಗ ರಚನಾ ಸಭೆಯ ಕಾರ್ಯಕ್ರಮಗಳು ಆರಂಭವಾಗುವಂತೆ ಈಗ ನಿರ್ಧರವಾಗಿದೆ. ಆಹ್ವಾನಗಳನ್ನೂ ಸಹ ಕಳುಹಿಸಲಾಗುತ್ತಿದೆ. ಆ ದಿವಸ ಸಭೆಯ ಕೆಲಸವು ಆರಂಭವಾಗುವುದೆಂಬ ಭರವಸೆಯಿದೆ. ಆದರೆ ಸಭೆಯ ಕೆಲಸಗಳು ಸುಗಮವಾಗಿ ನಡೆಯುವ ಸೂಚನೆಗಳು ಇನ್ನೂ ಕಂಡು ಬಂದಿರುವುದಿಲ್ಲ.

ಮುಸ್ಲಿಂ ಲೀಗಿನವರು ಸಭೆಯಲ್ಲಿ ಭಾಗವಹಿಸುವಂತೆ ಮಾಡಲು ಇದುವರೆಗೆ ಕೈಗೊಂಡ ರಾಜ, ನಿಯಾಯಿತಿಯ ಪ್ರಯತ್ನಗಳು ಇನ್ನೂ ಸಫಲವಾದಂತೆ ತೋರುವುದಿಲ್ಲ. ಸಭೆಯನ್ನು ಮೊದಲೇ ಗೊತ್ತು ಮಾಡಿದ್ದಂತೆ ಡಿಸೆಂಬರ್ ಒಂಭತ್ತನೇ ತಾರೀಖಿನ ದಿನ ಕರೆಯುವ ವಿಷಯವಾಗಿಯೇ ಹಲವು ಎಡರುತೊಡರುಗಳು ಬಂದಂತೆ ಗೊತ್ತಾಗಿದೆ. ಲೀಗಿನವರು ಈ ಸಭೆಯಲ್ಲಿ ಭಾಗವಹಿಸುವ ಬಗ್ಗೆ ನಿರ್ಣಯವನ್ನು ಮಾಡುವವರೆಗೆ ಸಭೆಯನ್ನು ಮುಂದೆ ಹಾಕಬೇಕೆಂದು ಮಿ|| ಜಿನ್ನಾರವರು ಒತ್ತಾಯಪಡಿಸುತ್ತಿದ್ದರು. ಆದರೆ ಕೇಂದ್ರ ಸರ್ಕಾರದಲ್ಲಿ ಲೀಗಿನವರು ಸೇರಿದಾಗಲೇ ರಾಜ್ಯಾಂಗ ಸಭೆಯಲ್ಲಿ ಭಾಗ ವಹಿಸುವ ಒಪ್ಪಂದವೂ ಆಗಿತ್ತೆಂಬುದು ಪಂಡಿತ ನೆಹರೂರವರ ವಾದ. ಲೀಗಿನವರು ಆಗಿಂದಾಗ್ಗೆ ಎತ್ತಬಹುದಾದ ಆಕ್ಷೇಪಣೆಗಳಿಗೆ ತುದಿಮೊದಲೇ ಇಲ್ಲ. ಆದುದರಿಂದ ನಿಯಮಿತ ಕಾಲಕ್ಕೆ ಸಭೆಯು ಆರಂಭವಾಗಲೇಬೇಕು, ಇಲ್ಲವಾದರೆ ಅದು ಆಗುವಂತೆಯೇ ಇಲ್ಲ-ಎಂದು ನೆಹರೂರವರು ಸ್ಪಷ್ಟಪಡಿಸಿದರು. ಮತ್ತು ಹಾಗೆ ಸಭೆಯನ್ನು ಸಕಾಲದಲ್ಲಿ ಆರಂಭಿಸದಿದ್ದರೆ ಕೇಂದ್ರ ಸರ್ಕಾರದ ಕಾಂಗ್ರೆಸ್ ಪಕ್ಷದ ಮಂತ್ರಿಗಳೆಲ್ಲರೂ ರಾಜೀನಾಮೆ ಕೊಡುವುದಾಗಿಯೂ ತಿಳಿಸಿದರು. ಅದರ ಮೇಲೆ ವೈಸರಾಯರು ಸಭೆಯನ್ನು ಮುಂದೆ ಹಾಕುವ ಅಭಿಪ್ರಾಯವನ್ನು ಬಿಟ್ಟು ಆಹ್ವಾನಗಳನ್ನು ಕಳುಹಿಸಿರುವರು.

ಸಭೆಯೇನೋ ಆರಂಭವಾಗುವುದು ಖಂಡಿತ. ಅದರಲ್ಲಿ ಭಾಗ ವಹಿಸುವುದಿಲ್ಲವೆಂದು ಲೀಗಿನವರು ಹೇಳುತ್ತಿದ್ದಾರೆ. ಆದರೆ ಅವರು ಅಪ್ಪೆರಾಗಿ ಏನು ಮಾಡುವರೆಂಬುದನ್ನು ಹೇಳಲು ಸಾಧ್ಯವಿಲ್ಲ. ತಮ್ಮ ಕೌನ್ಸಿಲ್ಲಿನ ತೀರ್ಮಾನಕ್ಕಾಗಿ ಕಾಯದೆ ಕೇಂದ್ರಸರ್ಕಾರದಲ್ಲಿ ಈಗ ಅವರು ಪ್ರವೇಶಿಸಿರುವರು. ಹಾಗೆಯೇ ರಾಜ್ಯಾಂಗ ಸಭೆಯಲ್ಲಿಯೂ ಪ್ರವೇಶಿಸುವುದಿಲ್ಲವೆಂದು ಹೇಳಲು ಸಾಧ್ಯವಿಲ್ಲ. ಒಂದು ವೇಳೆ ಸಭೆಯಲ್ಲಿ ಭಾಗವಹಿಸಿದ್ದರೂ, ಅದರ ಕಾರ್ಯಕಲಾಪಗಳಲ್ಲಿ ಭಾಗಿಗಳಾಗುವರೆಂಬ ಭರವಸೆಯಿಲ್ಲ. ಅವರ ವರ್ತನೆಯು ಯಾವ ಸ್ವರೂಪವನ್ನು ತಾಳುವುದೆಂಬುದನ್ನು ಈಗಲೇ ಹೇಳುವಂತಿಲ್ಲ.

ಕೇಂದ್ರಶಾಸನ ಸಭೆಯು ಒಂದು ಮಿಶ್ರ ಮಂತ್ರಿ ಮಂಡಲಿಯೂ ಅಲ್ಲ, ಕ್ಯಾಬಿನೆಟ್ಟೂ ಅಲ್ಲ ಎಂಬುದಾಗಿ ಮಿ|| ಜಿನ್ನಾರವರು ಹೇಳತೊಡಗಿದ್ದಾರೆ. ಮಂತ್ರಿಮಂಡಲದಲ್ಲಿ ನೆಹರೂರವರ ನಾಯಕತ್ವವನ್ನು ತಾವು ಅಂ-

ಸಾವು ನೋವುಗಳ ಬಗ್ಗೆ ಮಂತ್ರಿಗಳಲ್ಲೇ ಭಿನ್ನಾಭಿಪ್ರಾಯ

ಕೌನ್ಸಿಲ್ ಆಫ್ ಸ್ಟೇಟ್ ಸಭೆಯಲ್ಲಿ ಬಿಹಾರ ಮತ್ತು ಬಂಗಾಳಾ ದುರಂತದ ಸಾವುನೋವುಗಳ ಬಗ್ಗೆ ಸಭಾನಾಯಕರಿಂದ ಮಿ|| ಅಬ್ದುರ್ ರಬ್ ನಿಷ್ತಾರ್ ರವರೂ, ಬಾಬು ರಾಜೇಂದ್ರ ಪ್ರಸಾದರೂ ಕೊಟ್ಟ ಹೇಳಿಕೆಗಳು ಪರಸ್ಪರ ವಿರುದ್ಧವಾಗಿವೆ. ಮಿ|| ಅಬ್ದುರ್ ರಬ್ ನಿಷ್ತಾರ್‌ರವರು ಅಲ್ಪಾವಧಿ ಪ್ರಶ್ನೆಯೊಂದಕ್ಕೆ ಉತ್ತರ ನೀಡುತ್ತಾ ಬಂಗಾಳದಲ್ಲಿ ಸಾವು ನೋವುಗಳಿಗೀಡಾದವರು ಕೇವಲ ೨೦೦-೩೦೦ ಮಂದಿ ಎಂದೂ ಬಿಹಾರಿನ ಸಾವು ನೋವುಗಳ ಸಂಖ್ಯೆ ಐದು ಅಂಕಿಗಳವರೆಗೂ ಏರಿರುವುದೆಂದೂ, ಕೋಟ್ಯಾಂತರ ರೂಪಾಯಿ ನಷ್ಟವಾಗಿದೆ ಎಂದೂ ತಿಳಿಸಿರುವರು. ಮತ್ತೊಬ್ಬ ಮಂತ್ರಿಯಾದ ಶ್ರೀ|| ಬಾಬೂರಾಜೇಂದ್ರ ಪ್ರಸಾದರೂ ಇನ್ನೊಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಬಿಹಾರಿನ ದುರಂತಕ್ಕೊಳಗಾದವರ ಸಂಖ್ಯೆ ಐದು ಅಂಕಿಗೆ ಏರುವುದಿಲ್ಲವೆಂಬುದು ತಮ್ಮ ಅಭಿಪ್ರಾಯವೆಂದೂ, ಕೆಲವು ಹೇಳಿಕೆ ಮತ್ತು ಪತ್ರಿಕೆಗಳಲ್ಲಿ ಮಾತ್ರ ಇದು ಉತ್ಪ್ರೇಕ್ಷೆಯಾಗಿವೆ ಎಂದೂ ಸೂಚಿಸಿರುವುದಾಗಿ ವರದಿಯಾಗಿದೆ.

ನೀರಿನ ವಿಚಿತ್ರ ಮೃಗ

ಆಲ್ಪ್ಸ್ ಬೆಟ್ಟದ ಬಳಿ ಕೋಮೋ ಸರೋವರದಲ್ಲಿ ಅತ್ಯಂತ ಘೋರ ಪ್ರಾಣಿಯೊಂದು ಬಹಳ ತೊಂದರೆ ಕೊಡುತ್ತಿದ್ದುದು ಪತ್ತೆಯಾಗಿದೆ. ಅದು ಮೀನು ಹಿಡಿಯುವವರಿಗೆ ಬಹಳ ತೊಂದರೆ ಕೊಡುತ್ತಿದೆ. ಅದು ೧೦೦ ಅಡಿಗಿಂತ ಹೆಚ್ಚು ಉದ್ದವಾಗಿದೆ. ಅದರ ತಲೆಯ ಮೇಲೆ ಕೊಂಬುಗಳಿವೆ. ಬೇಟೆಗಾರರು ಅದನ್ನು ಕಂಡಾಗ ರೋಷಗೊಂಡು ಮುನ್ನುಗ್ಗಿದ್ದು ದೋಣಿಗಳನ್ನು ಒಡೆದು ಮುಳುಗಿಸಿತೆಂದು ವರದಿಯಾಗಿದೆ.

ಗೀಕರಿಸುವುದಿಲ್ಲವೆಂದು ತಿಳಿಸಿದ್ದಾರೆ. ಮುಸ್ಲಿಮರು ತಮ್ಮ ಸ್ವಂತ ಪಕ್ಷದ ಮೇಲೆ ಸರ್ಕಾರದಲ್ಲಿ ಪ್ರವೇಶಿಸಿರುವುದಾಗಿಯೂ, ತಮಗೆ ಪ್ರತ್ಯೇಕ ನಾಯಕರೂ, ಸೂತ್ರಧಾರಿಗಳೂ, ಇರುವುದಾಗಿಯೂ ಹೇಳುತ್ತಿದ್ದಾರೆ. ಬಿಹಾರ್ ಮತ್ತು ಬಂಗಾಳಗಳ ದುರಂತಗಳ ವಿಚಾರದಲ್ಲಿ ಕೌನ್ಸಿಲ್ ಆಫ್ ಸ್ಟೇಟ್ ಸಭೆಯ ನಾಯಕರಾದ ಸರ್ದಾರ್ ಅಬ್ದುಲ್ ರಬ್ ನಿಷ್ತಾರ್ ಮತ್ತು ಬಾಬು ರಾಜೇಂದ್ರ ಪ್ರಸಾದರವರು ಕೊಟ್ಟ ಹೇಳಿಕೆಗಳಲ್ಲಿ ಈ ವಿರೋಧಾಭಾಸವು ಎದ್ದು ಕಾಣುತ್ತಿತ್ತು. ಆದುದರಿಂದ ಈಗಿನ ಕೇಂದ್ರಸರ್ಕಾರವು ಒಮ್ಮತಾಭಿಪ್ರಾಯದಿಂದ ಕೂಡಿದ ಮಂತ್ರಿಮಂಡಲವಲ್ಲವೆಂಬುದನ್ನು ಬೇರೆ ಹೇಳಬೇಕಾಗಿಯೇ ಇಲ್ಲ.

ರಾಜ್ಯಾಂಗ ರಚನಾಸಭೆಯ ಕೆಲಸಕಾರ್ಯಗಳಿಗಾಗಿ ಕೇಂದ್ರಶಾಸನ ಸಭೆಯು ಹಣವನ್ನೂ ಸಹ ಮಂಜೂರುಮಾಡಿರುತ್ತದೆ. ಸಭೆಯ ಆರಂಭದ ಕಾಲವೂ ಗೊತ್ತಾಗಿರುತ್ತದೆ. ಲೀಗಿನವರ ಅಡಚಣೆಯಿಂದ ಅಲ್ಪಸ್ವಲ್ಪ ಕಿರುಕುಳ ಉಂಟಾದೀತು, ಆದರೆ ಸಭಾ ಕಾರ್ಯವು ನಿಂತು ಹೋಗುವುದಿಲ್ಲ. ಒಂದು ವೇಳೆ ಇನ್ನೂ ಹಲವು ಸಂಧಾನದ ಪ್ರಕರಣಗಳು ನಡೆದರೂ ನಡೆಯಬಹುದು. ರಾಜ್ಯಾಂಗ ನಿರ್ಮಾಣದ ಕಾರ್ಯಸಂತೂ ಈಗ ಮುಂದೆ ಸಾಗುವುದು ಖಂಡಿತ.

ರಾಜ್ಯಾಂಗ ರಚನಾ ಸಭೆಯನ್ನು ಮುಂದೆ ಹಾಕಲು ಜಿನ್ನಾ ಒತ್ತಾಯ

ಮುಸ್ಲಿಂಲೀಗ್ ಅಧ್ಯಕ್ಷರಾದ ಮಿ|| ಜಿನ್ನಾರವರು ವೈಸರಾಯರಿಗೆ ರಾಜ್ಯಾಂಗ ರಚನಾ ಸಭೆಯನ್ನು ಮುಂದೆ ಹಾಕಬೇಕೆಂದು ಪತ್ರ ಬರೆದಿದ್ದಾರೆ. ಬಿಹಾರಿನ ದುರಂತಗಳಿಂದ ಮುಸ್ಲಿಂಲೀಗ್ ಸಭೆಯನ್ನು ಸೇರಿಸಲಾಗಲಿಲ್ಲ. ಕಾಂಗ್ರೆಸ್ಸು ಮೇ ೧೬ರ ಘೋಷಣೆಯನ್ನು ಒಪ್ಪಿಲ್ಲ. ಪಂಡಿತ ನೆಹರೂರವರೂ ಸಹ ಈ ಘೋಷಣೆಯ ಬಗ್ಗೆ ಫೆಡರಲ್ ಕೋರ್ಟಿನ ತೀರ್ಪಿಗೆ ಮಾತ್ರ ಒಪ್ಪುವುದಾಗಿ ಹೇಳಿದ್ದಾರೆ. ಬಿಹಾರಿನಲ್ಲಿ ಕಾಂಗ್ರೆಸ್ ಸರ್ಕಾರವಿದ್ದೂ ಸಹ ಅಲ್ಪಸಂಖ್ಯಾತರ ಮೇಲೆ ನಡೆದ ಅತ್ಯಾಚಾರಗಳನ್ನು ತಡೆದಿಲ್ಲ; ಈಗ ಕೇಂದ್ರ ಸರ್ಕಾರವೇ ಬಿಹಾರಿನಲ್ಲಿ ಶಾಂತಿ ಸ್ಥಾಪನೆಗಾಗಿ ಹೆಣಗಬೇಕಾಗಿದೆ, ಎಂದು ಬರೆದಿದ್ದಾರೆ. ಲೀಗಿನವರು ರಾಜ್ಯಾಂಗ ಸಭೆಯಲ್ಲಿ ಭಾಗ ವಹಿಸುವುದಿಲ್ಲವೆಂದು ತಿಳಿಸಿದ್ದಾರೆ.

ಕಾಂಗ್ರೆಸ್ ಧ್ವಜಕ್ಕೆ ರೈಲ್ವೆ ಗಾರ್ಡ್ ವಿರೋಧ

ಆಂಧ್ರ ಪ್ರಾಂತ್ಯದಿಂದ ಮೀರತ್ ಕಾಂಗ್ರೆಸ್ ಅಧಿವೇಶನಕ್ಕೆ ತೆರಳುತ್ತಿದ್ದ ಪ್ರತಿನಿಧಿಗಳು ರೈಲಿನಲ್ಲಿ ರಾಷ್ಟ್ರ ಧ್ವಜವನ್ನು ಕಿಟಕಿಯಿಂದ ಹಾರಿಸಿಕೊಂಡು ಹೋಗುತ್ತಿದ್ದಾಗ ಕುರುದ ಎಂಬ ನಿಲ್ದಾಣದಲ್ಲಿ ಗಾರ್ಡ್ ರೈಲನ್ನು ನಿಲ್ಲಿಸಿ, ಕಾಂಗ್ರೆಸ್ ಧ್ವಜವನ್ನು ತೆಗೆದುಹಾಕುವಂತೆ ಸೂಚಿಸಿದನೆಂದೂ, ಮಾತುಕತೆಗಳು ಬೆಳೆದು ರೈಲ್ವೆ ಅಧಿಕಾರಿಗಳು ಮಧ್ಯೆ ಪ್ರವೇಶಿಸಿ ಸಮಾಧಾನಪಡಿಸಿದರೆಂದೂ ರಾಷ್ಟ್ರಧ್ವಜ ಹಾರಾಡುತ್ತಲೇ ಇದ್ದು ರೈಲು ತೆರಳಿತೆಂದೂ ವರದಿ ಬಂದಿದೆ.

ರಾಜಕಮಲ್,

ಮೈಸೂರು

೨೨—೧೧—೪೬ ರಿಂದ

ಅಮೋಘವಾದ ಎರಡನೇ ವಾರ

'ಡಾಕ್ಟರ್ ಕೊಟ್ನಿಸ್ ಕಿ ಅಮರ್ ಕಹಾನಿ'

ಮುಖ್ಯ ಭೂಮಿಕೆ:—ಶಾಂತಾರಾಂ, ಉಲ್ಹಾಸ್, ವಿನಾಯಕ್, ಪೆಂಡಾರ್‌ಕರ್, ಜಯಶ್ರೀ.

From 22-11-46 for 4days, daily at 10-30 a. m.

'THE GHOUL'

Featuring:- BORIS KARLOFF

It's a mighty British Gaumont Picture.

ತಕ್ಷಣ ಬೇಕಾಗಿವೆ

ಜವಳಿ ವ್ಯಾಪಾರದಲ್ಲಿ ಅನುಭವಶಾಲಿಯಾದ ಸೇಲ್ಸ್‌ಮೆನ್ ಬೇಕಾಗಿದ್ದಾರೆ. ಯೋಗ್ಯತಾನುಸಾರ ಸಂಬಳ ಮತ್ತು ಬೋನಸ್ ಕೊಡಲಾಗುತ್ತದೆ.

ಕೆ. ನಾರಾಯಣರಾವ್ ಸನ್ಸ್,

ಕ್ಲಾತ್ ಮರ್ಚೆಂಟ್ಸ್, ಶಿವರಾಂಪೇಟೆ, ಮೈಸೂರು, ಇವರಲ್ಲಿ ಬಂದು ವಿಚಾರಿಸಿ.

ಉದಾರ ದಾನ

ಮೈಸೂರು ಭಾವಸಾರ ಕ್ಷತ್ರಿಯ ಪಿಯಲ್ ಇನ್‌ಸ್ಟಿಟ್ಯೂಟಿನ ಕಟ್ಟಡ
ಗಾಗಿ ಈ ಕೆಳಗೆ ಕಂಡವರು ಧನ ಸ
ಮಾಡಿರುತ್ತಾರೆ:—ಶ್ರೀ ಗ ಆ ಜ
ಎಲ್. ರಾಮಚಂದ್ರರಾಯರು ಧ
ರ್ಮ ಪತ್ನಿ ಶ್ರೀ ಭಾಗೀರಥೀಬಾ
ರ ಹೆಸರಿನಲ್ಲಿ ೧೦೦೧ ರೂ. ಪೂಜ
ಕೆ. ಸೇಟ್‌ಕರ್‌ರವರು ತಮ್ಮ ಧ
ಶ್ರೀಮತಿ ಪಾರ್ವತೀಬಾಯಿಯ
ಸರಿನಲ್ಲಿ ೧೦೦೧ ರೂ. ಪ್ಲಾಜಾ ಟೈ
ಹಾಲಿನ ಮಾಲೀಕರಾದ ಎಂ. ಶ್ರೀ
ರಾಯರು ೨೫೧ ರೂ. ಕ್ಯಾತನಹ
ರುವ ಮಾವುತ್‌ಕರ್ ಶೇಷಗಿರಿ
೨೫೧ ರೂ., ಬಾಂಬೆ ಟೈಲರಿಂಗ್
ಮಾಲೀಕರಾದ ಕೆ. ಹಿರಾಜ್‌ಕರ್
೨೫೧ ರೂ. ಇರ್ವಿನ್ ರಸ್ತೆಯಲ್ಲಿ
ಲರಿಂಗ್ ಹಾಲಿನ ಎಂ. ರಾಮನಾ
ರು ೧೫೧ ರೂ. ಮಹಾಲಕ್ಷ್ಮಿ ಹಾ
ಲೀಕರಾದ ಜಿ. ಕೃಷ್ಣಾಜಿರಾಯರ
ಲ್ಯಾಸ್‌ಡ್ರೆಸ್ ಬಜಾರಿನ. ಜವಳಿ
ಪ್ಯಾಲೇಸ್ ಟೈಲರ್ ವೈ. ರಾಮಕೃ
ಯರು ೧೨೫ ದೊಡ್ಡಪೇಟೆಯಲ್ಲಿರು
ಕರ್ ದಶರಥರಾಯರು ೧೦೧ ರೂ
ಕಟ್ಟಡ ಸಂಘದ ಅಧ್ಯಕ್ಷರಾದ ಶ್ರೀ
ಎಲ್. ರಾಮಚಂದ್ರರಾಯರು ಕೃ
ಜ್ಞತೆಯನ್ನು ಸೂಚಿಸಿರುತ್ತಾರೆ.

ಸಿಂಧ್ ಸರ್ಕಾರದಿಂದ ದೊರ
೧೦೦೦ ಟನ್ ಸುಚ್ಚಕ್ಕಿಯನ್ನು
ರಿಗೆ ಕೇಂದ್ರ ಸರ್ಕಾರವು ಕೊಡಲು

ಸಾಧ್ವಿ

ರಾಜಧಾನಿಯ ರಾಷ್ಟ್ರೀ
ದಿನ ಪತ್ರಿಕೆ

ಕೂಡಲೇ ಚಂದಾದಾರರಾಗಿ
(ತಿಂಗಳಿಗೆ ಚಂದಾ ಎಂಟಾಣೆ ಮ

ಜಾಹಿರಾತಿನ ದರಗಳಿ
ವಿಚಾರಿಸಿರಿ

R S PANDIT'S.

Whooping Cough (Rem

ಆರ್. ಎಸ್. ಪಂಡಿತ

ನಾಯಿಕೆಮ್ಮಿನ ಔಷಧ

7-8 ದಿವಸಗಳಲ್ಲೇ ಖಾತರಿಯಾಗಿ
ಯಾಗುತ್ತೆ.

ಕ್ರಯ ಬಾಟ್ಲಿಗೆ 1-8-0

ಗೂರ್ಲು—ಉಬ್ಬಸಕ್ಕೆ
(Asthma)

ಖಾತರಿಯಾದ ಔಷಧಿ
ಅನೇಕ ದೊಡ್ಡ ಮನುಷ್ಯರು
ಪದಕ ಮತ್ತು ಸರ್ಟಿಫಿಕೇಟ್‌ಗಳನ್ನು
ದ್ದಾರೆ.

(Appendecitis) ಗುಲ್ಮ
ಮತ್ತು (Tonsils) ಗಲಗ್ರಂಥಿ
ಗಳನ್ನು ಆಪರೇಷನ್ ಇಲ್ಲದೆ ಗುಣಪಡಿ
ಖುದ್ದು ಬಂದು ನೋಡಿ.

ಗುಂಡ್ಲುಪೇಟೆ ಆರ್. ಎಸ್. ಪಂ
ದಿವಾನ್ಸ್ ರೋಡ್, ಗೊಲ್ಲಗೇರಿ ಮೈ

Edited, printed and publi
A. R. Nagarajan at the Sadhv
D-Subbiah Road, Mysore

ರೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಭಾನುವಾರ ೨೪—೧೧—೪೬ [ಸಂಚಿಕೆ ೯೬

ಟಿ. ಪಿ. ಕೈಲಾಸಂರವರು ಸ್ವರ್ಗಸ್ಥರಾದರು

ಸಂಪೂರ್ಣ ಸ್ವರಾಜ್ಯವೇ ಕಾಂಗ್ರೆಸ್ಸಿನ ಗುರಿ

ಆಚಾರ್ಯ ಕೃಪಲಾನಿಯವರ ಅಧ್ಯಕ್ಷ ಭಾಷಣ

ನಿನ್ನೆ ಮಧ್ಯಾಹ್ನ ಅಖಿಲ ಭಾರತ ಕಾಂಗ್ರೆಸ್ಸಿನ ೫೪ ನೇ ಮಹಾಧಿವೇಶನವು ಮೀರತ್ ನಗರದಲ್ಲಿ ಆಚಾರ್ಯ ಕೃಪಲಾನಿಯವರ ಅಧ್ಯಕ್ಷತೆಯಲ್ಲಿ ಆರಂಭವಾಯಿತು. ವೇದಿಕೆಯ ಹಿಂಭಾಗದಲ್ಲಿ ಮಹಾತ್ಮರ ದೊಡ್ಡ ಭಾವಚಿತ್ರವೂ, ಮಂಟಪದ ಮುಖ್ಯ ದ್ವಾರಗಳಲ್ಲಿ ಶ್ರೀಮತಿ ಕಸ್ತೂರಿಬಾಯಿ, ನೇತಾಜಿ ಸುಭಾಸ್‌ಚಂದ್ರಬೋಸ್, ಲೋಕಮಾನ್ಯ ತಿಲಕ್, ಝಾನ್ಸಿ ರಾಣಿ ಇವರುಗಳ ಭಾವಚಿತ್ರವೂ ಸುಂದರವಾಗಿ ಅಲಂಕೃತವಾಗಿ ಇಡಲ್ಪಟ್ಟಿದ್ದುವು. ಈ ಅಧಿವೇಶನಕ್ಕೆ ಮಹಾತ್ಮರು ಬಂದಿರಲಿಲ್ಲ.

ಅಧ್ಯಕ್ಷರು ೧೯೪೨ ರ "ಬ್ರಿಟಿಷರು ಭಾರತಬಿಟ್ಟು ತೊಲಗಬೇಕು," ಎಂಬ ನಿರ್ಣಯದ ನಂತರ ನಡೆದಿರುವ ಘಟನೆಗಳನ್ನು ಮೊದಲು ವಿವರಿಸಿದರು. ಈಗ ಸ್ವಾತಂತ್ರ್ಯ ಲಭ್ಯವಾಗುವ ಸೂಚನೆಯಿದೆ. ಸ್ವಾರ್ಥದಿಂದ ನಾವು ವರ್ತಿಸದಿದ್ದರೆ ಆ ಸ್ವಾತಂತ್ರ್ಯವನ್ನು ಕಳೆದುಕೊಳ್ಳಬೇಕಾಗದು. ನಮ್ಮ ಸ್ವಾತಂತ್ರ್ಯವು ಬಹಳ ಹೋರಾಟದ್ದು. ದೇಶದಲ್ಲಿ ಕ್ರಾಂತಿ ಮನೋಭಾವ ಬೆಳೆಯುತ್ತಾ ಬರಬೇಕು. ದೇಶದಲ್ಲಿ ಪ್ರಜಾಪ್ರಭುತ್ವವನ್ನು ಅಹಿಂಸಾತ್ಮಕ ರೀತಿಯಲ್ಲಿ ಸ್ಥಾಪಿಸುವುದು ಆಗ ಕೈಗಾರಿಕೆಗಳನ್ನು ವಿಕೇಂದ್ರೀಕರಣ ಮಾಡಬೇಕು. ವಿದ್ಯುಚ್ಛಕ್ತಿಯ ಉಪಯೋಗ, ಗೃಹ ಕೈಗಾರಿಕೆ, ಆಹಾರ ಪದಾರ್ಥ ಬೆಳೆಗಳನ್ನು ಹೆಚ್ಚಿಸಬೇಕು. ಕೋಮುವಾರು ಭಾವನೆಗಳನ್ನು ತುಳಿದು ಐಕ್ಯವನ್ನು ಸ್ಥಾಪಿಸಬೇಕು. ಹಿಂದುಗಳೂ ಮುಸಲ್ಮಾನರೂ ಬೇರೆ ಬೇರೆ ಜನಾಂಗಗಳೆಂದು ಹೇಳುವುದರಲ್ಲಿ ಅರ್ಥವಿಲ್ಲ. ಸ್ವಾತಂತ್ರ್ಯದ ಏರ್ಪಾಟನ್ನು ಪಡೆಯಬೇಕಾದರೆ ಅಲ್ಪಸಂಖ್ಯಾತರೂ, ಬಹು ಸಂಖ್ಯಾತರಿಂದ ಅಲ್ಪಸಂಖ್ಯಾತರ ರಕ್ಷಣೆಯೂ ಇರಬೇಕು. ಸ್ವಾತಂತ್ರ್ಯಸಾಧನೆಗೆ ಮೊದಲನೆಯ ಅಡ್ಡಿ ಕೋಮುವಾರು ಭಾವನೆ. ಎರಡನೆಯ ಅಡ್ಡಿಯು ಸಂಸ್ಥಾನಗಳ ಸಮಸ್ಯೆ. ಸಂಸ್ಥಾನಗಳು ಪ್ರಜಾಭಿಪ್ರಾಯದಂತೆ ನಡೆಯುವುದರಿಂದ ಈ ಸಮಸ್ಯೆ ಬಗ್ಗೆ ಹರಿಯುವುದು. ಹರಿಜನರ ಸ್ಥಿತಿಗತಿಗಳನ್ನು ಉತ್ತಮಪಡಿಸಿ ಅಸ್ಪೃಶ್ಯತೆಯನ್ನು ಹೋಗಲಾಡಿಸಬೇಕು. ಕಾಂಗ್ರೆಸ್ಸಿನವರು ಅಧಿಕಾರದ ಆಸೆಗೊಳಗಾಗಬಾರದು. ಸಂಪೂರ್ಣ ಸ್ವರಾಜ್ಯ ಸ್ಥಾಪನೆಯೇ ಕಾಂಗ್ರೆಸ್ಸಿನ ಗುರಿ. ಸ್ವತಂತ್ರ ಭಾರತವು ಎಲ್ಲ ರಾಷ್ಟ್ರಗಳೊಡನೆಯೂ ಮೈತ್ರೀಭಾವದಿಂದಿರುವುದು ಎಂದು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹೇಳಿದರು. ನಿನ್ನೆ ಬೆಳಿಗ್ಗೆ ಆಚಾರ್ಯ ಕೃಪಲಾನಿಯವರು ಕಾಂಗ್ರೆಸ್ ನಗರದಲ್ಲಿ ರಾಷ್ಟ್ರಧ್ವಜವನ್ನು ಹಾರಿಸಿ, ಈ ಧ್ವಜದ ಸ್ವಾತಂತ್ರ್ಯ ಸಾಧನೆಯು ಶೀಘ್ರದಲ್ಲಿ ಆಗಲೆಂದು ಹೇಳಿದರು.

ಆರೋಗ್ಯ ಚಿತ್ರ ಪ್ರದರ್ಶನ

ನಗರಸಭೆಯ ಆರೋಗ್ಯ ಶಾಖೆಯವರು ಬರುವ ೨೮ ನೇ ಗುರುವಾರ ಪ್ರಾರಂಭವಾಗಿ ವಾಣಿವಿಲಾಸ ಹಾಲಿನ ಕೇಂದ್ರ ಶಾಲೆ, ಪಡುವಾರಹಳ್ಳಿ, ಕನ್ನೇಗೌಡನ ಕೊಪ್ಪಲು, ನಜರ್‌ಬಾದಿನ ಆದಿಕರ್ನಾಟಕ ಹಾಸ್ಟಲುಗಳಲ್ಲಿ ಉಚಿತ ಆರೋಗ್ಯ ಚಿತ್ರಪ್ರದರ್ಶನವನ್ನು ಮಾಡುತ್ತಿಯವರು ಎಲ್ಲರೂ ಸಹಕರಿಸಬೇಕೆಂದು ಕೋರಲಾಗಿದೆ.

"ನಾಡಿಗೆ ಕೃಷ್ಣಮೂರ್ತಿಯವರಿಗೆ ನೆರವು ನೀಡಿ"

ಮೈಸೂರಿನ ಮುಖಂಡರುಗಳಾದ ಶ್ರೀಗಳು:-ಕೆ. ಚೆಂಗಲರಾಯರೆಡ್ಡಿ, ಹಿರಳ್ಳಿ ದಾಸಪ್ಪ, ಕೆ. ಟಿ. ಭಾಷ್ಯಂ, ಪಿ. ಆರ್. ರಾಮಯ್ಯ, ಸಿದ್ದವನಹಳ್ಳಿ ಕೃಷ್ಣಶರ್ಮರು ಒಂದು ಪ್ರಾರ್ಥನೆ ಹೊರಡಿಸಿ ಅಮೇರಿಕ ದೇಶದಲ್ಲಿ ವೃತ್ತ ಪತ್ರಿಕೋದ್ಯಮದಲ್ಲಿ ವಿಶೇಷ ಶಿಕ್ಷಣ ಪಡೆಯಲು ಮುಂದಿನ ತಿಂಗಳಲ್ಲಿ ತೆರಳಲಿರುವ ಮೈಸೂರು ನಗರದ ಮಹಾಜನರಿಗೆ ಪರಿಚಿತರಾಗಿರುವ ಶ್ರೀ ನಾಡಿಗರಿಗೆ ಕಡಿಮೆ ಬಿದ್ದಿರುವ ೨೦೦೦ ಸಾವಿರ ರೂಗಳನ್ನು ಕೂಡಿಸಿಕೊಡಬೇಕೆಂದು ಸಾರ್ವಜನಿಕರಲ್ಲಿ ಮನವಿಮಾಡಿಕೊಂಡಿದ್ದಾರೆ.

ಸಹಾಯಮಾಡಲಿಚ್ಛಿಸುವವರು ಸಾಧ್ವಿ ಆಫೀಸಿಗೆ ಹಣ ಕಳುಹಿಸಿಕೊಡಬೇಕೆಂದು ಪ್ರಾರ್ಥಿಸಲಾಗಿದೆ.

ಈವರೆಗೆ ಬಂದಿರುವ ಹಣ ರೂ. ೭೫॥

ಶ್ರೀ॥ ಸಾಹುಕಾರ್ ಚನ್ನಯ್ಯನವರು	,, ೧೦೦
ಶ್ರೀ॥ ಸಿ. ಜಿ. ಶಾಸ್ತ್ರಿಗಳು	,, ೧೦೦
ಶ್ರೀ॥ ಎ. ಆರ್. ಬದರೀ ನಾರಾಯಣರವರು	,, ೧೦೦
ಶ್ರೀ॥ ಗೌಸ್ ಮೋಹಿಯುದ್ದೀನ್‌ರವರು	,, ೨೫
ಒಟ್ಟು	೧೦೨೦

ಬಿಹಾರ್ ಗವರ್ನರರ ಪತ್ನೀ ಪ್ರೇಮ

ಬಿಹಾರದಲ್ಲಿ ಅಕ್ಟೋಬರ್ 28 ರಿಂದ ನವಂಬರ್ ೧೧ ರ ವರೆಗೆ ನಡೆದ ಗಲಭೆಯ ಸಮಯದಲ್ಲಿ ಅಲ್ಲಿನ ಗವರ್ನರರು ಬಿಹಾರದಲ್ಲೇ ಇರಲಿಲ್ಲವೆಂದೂ, ವಿದೇಶದಿಂದ ಆಗಮಿಸಿದ ತಮ್ಮ ಪತ್ನಿಯನ್ನು ಸ್ವಾಗತಿಸಲು ಅವರು ತೆರಳಿದ್ದರೆಂದೂ, ಕೇಂದ್ರ ಶಾಸನ ಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವಾಗಿ ನಾಯಕರಾದ ಮಿ॥ ನಿಸ್ತಾರರು ತಿಳಿಸಿದ್ದಾರೆ.

ಪ್ರಕೃತಿ ಚಿಕಿತ್ಸಾ ಉಪನ್ಯಾಸಗಳು

ರಾಜಧಾನಿಯ ಬನುಮಯ್ಯನವರ ಕಾಲೇಜು ಭವನದಲ್ಲಿ ಇದೇ 27, 28, 29 ನೇ ತಾ॥ ಗಳಲ್ಲಿ ಸಂಜೆ 6 ಘಂಟೆಗೆ ಪ್ರಕೃತಿ ಚಿಕಿತ್ಸೆಯ ವಿಷಯಗಳನ್ನು ಕುರಿತು ಡಾ॥ ಎಲ್. ಕಾಮೇಶ ಶರ್ಮರು, ಫ್ರಾನ್ಸಿನ ಮ್ಯಾಡಂವೇ ಎಂಬುವರೂ, ಭಾಷಣ ಮಾಡಲಿದ್ದಾರೆ. ಸರ್ವರಿಗೂ ಸ್ವಾಗತವಿರುವುದಾಗಿ ಸಂಚಾಲಕರಾದ ಶ್ರೀ॥ ಆರ್. ಗೋಪಾಲಕೃಷ್ಣರಾಯರು ತಿಳಿಸುತ್ತಾರೆ.

ಕೈಲಾಸಂರವರ ನಿಧನ

ಸ್ವಂ.ಸು.ಫೋ॥] ಬೆಂಗಳೂರು ೨೪

ಸುಪ್ರಸಿದ್ಧ ಕನ್ನಡ ಸಾಹಿತಿಗಳೂ, ಕಲಾಕೋವಿದರೂ ಆದ ಶ್ರೀ॥ ಟಿ. ಪಿ. ಕೈಲಾಸಂರವರು ಈ ದಿನ ಬೆಳಗಿನ ಝಾವ ಹೃದಯ ಸ್ತಂಭನದಿಂದ ಸ್ವರ್ಗಸ್ಥರಾದರೆಂದು ತಿಳಿಸಲು ಅತ್ಯಂತ ವಿಷಾದಿಸುತ್ತೇವೆ. ಅವರಿಗೆ ೬೧ ವರ್ಷ ವಯಸ್ಸಾಗಿತ್ತು. ಹೈಕೋರ್ಟಿನ ನ್ಯಾಯಾಧೀಶರಾಗಿದ್ದ ಶ್ರೀ॥ಟಿ. ಪರಮಶಿವಯ್ಯರ್‌ರವರು ಅವರ ತಂದೆಯವರು. ಶ್ರೀ॥ ಕೈಲಾಸಂರವರು ಪಾಶ್ಚಾತ್ಯ ದೇಶಗಳಲ್ಲಿ ಸಂಚರಿಸಿ ವಿಶೇಷವಾದ ಪಾಂಡಿತ್ಯವನ್ನು ಪಡೆದಿದ್ದರು. ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿ ಇಡೀ ಕನ್ನಡಿಗರ ಮನ್ನಣೆಗೆ ಪಾತ್ರರಾಗಿದ್ದರು. ಪ್ರಹಸನ ಪಿತಾಮಹರೆಂಬ ಖ್ಯಾತಿಯನ್ನೂ ಗಳಿಸಿದ್ದರು.

ಪ್ರಭುಗಳಿಂದ ನಗರ ಪರೀಕ್ಷೆ

ಸ್ವಂ.ಸು.ಫೋ॥] ಬೆಂಗಳೂರು ೨೪

ಈ ದಿನ ಬೆಳಗ್ಗೆ ಶ್ರೀಮನ್ಮಹಾರಾಜರವರು ನಗರ ಪರಿಶೀಲನೆ ನಡೆಸಿದರು. ಅವರು ಎರಡೂವರೆ ಗಂಟೆ ಕಾಲದಲ್ಲಿ ೨೪ ಮೈಲಿಗಳ ಸಂಚಾರ ಮಾಡಿದರು. ಪೌರಸಭೆ, ಮಾರ್ಕೆಟ್, ನ್ಯಾಷನಲ್ ಹೈಸ್ಕೂಲುಗಳ ಮಾರ್ಗವಾಗಿ ದಯಮಾಡಿಸಿದರು. ಹೈಸ್ಕೂಲು ಸಂಘದ ಅಧ್ಯಕ್ಷರಾದ ಶ್ರೀ॥ ಕೆ. ಸಂಪದ್ಗಿರಿರಾಯರು ಪ್ರಭುಗಳಿಗೆ ಹಾರ ತುರಾಯಿಗಳನ್ನರ್ಪಿಸಿದರು. ನಂತರ ಕಾನ ಕಾನಹಳ್ಳಿ ರಸ್ತೆಯಲ್ಲಿ ಅಹಲ್ಯೋದ್ಧಾರಕ ಸಭೆಗೆ ಭೇಟಿಯಿತ್ತರು. ತರುವಾಯ ವಿಶ್ವೇಶ್ವರಪುರದ ಸಜ್ಜನರಾವ್ ಸರ್ಕಲ್ಲಿನಲ್ಲಿರುವ ದೇವಸ್ಥಾನದಲ್ಲಿ ರಾಜಾಶೀರ್ವಾದ ಮತ್ತು ರಾಜಮರ್ಯಾದೆಯನ್ನಂಗೀಕರಿಸಿದರು.

ಕೈಗಾರಿಕಾ ನಿಯೋಗದ ವಿವರಣೆ

ಆಸ್ಟ್ರೇಲಿಯಾ ಕೈಗಾರಿಕೆ ನಿಯೋಗದ ಮುಖಂಡರಾದ ಮಿ॥ ಬಿ. ವಿಶ್ವಾಸರಾವರು ನಿನ್ನೆ ಸಂಜೆ ಕುಮಾರಾ ಪಾರ್ಕಿನಲ್ಲಿ ಪತ್ರಿಕಾ ಪ್ರತಿನಿಧಿಗಳೊಡನೆ ಮಾತುಕತೆ ನಡೆಸಿದರು. ರಾತ್ರಿ ರೈಲಿನಲ್ಲಿ ಅವರು ಭದ್ರಾವತಿಗೆ ಹೊರಟರು. ಭಾರತಕ್ಕೂ ತಮ್ಮ ದೇಶಕ್ಕೂ ಇರತಕ್ಕ ಬಾಂಧವ್ಯವನ್ನು ಹೆಚ್ಚಿಸಿ, ಕೊಟ್ಟು ತೆಗೆದು ಕೊಳ್ಳುವ ಶಕ್ತಿಯನ್ನು ಪ್ರತಿಪಾದಿಸುವುದೇ ತಮ್ಮ ನಿಯೋಗದ ಗುರಿಯೆಂದು ತಿಳಿಸಿದರು.

ಸ್ವರಾಜ್ಯವೆಂದರೆ ಜನಸಾಮಾನ್ಯರ ರಾಜ್ಯ

ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯು ಮೀರತ್ತಿನಲ್ಲಿ ಮೊನ್ನೆ ನಡೆದು, ಪ್ರಕೃತ ಪರಿಸ್ಥಿತಿಯಲ್ಲಿ ಕಾಂಗ್ರೆಸ್ಸಿನ ಧ್ಯೇಯದ ಬಗ್ಗೆ ನಿರ್ಣಯವನ್ನು ಅಂಗೀಕರಿಸಲಾಯಿತು. ರಾಜಕೀಯಕ್ಕೆ ಮಾತ್ರವಲ್ಲದೆ ಸಾಮಾಜಿಕ ಮತ್ತು ಆರ್ಥಿಕ ವಿಚಾರಗಳಿಗೂ ಅನ್ವಯಿಸುವಂತಹ ಸಮಾಜವನ್ನು ಸ್ಥಾಪಿಸುವ ವರೆಗೆ ಜನ ಸಾಮಾನ್ಯರಿಗೆಲ್ಲಾ ಸ್ವತಂತ್ರ ದೊರೆಯಲಾರದೆಂಬುದೇ ಕಾಂಗ್ರೆಸ್ಸಿನ ಭಾವನೆ. ಅಂತಹ ಸಮಾಜದಲ್ಲಿ ಪ್ರತಿಯೊಬ್ಬನೂ ತನ್ನ ವ್ಯಕ್ತಿತ್ವವನ್ನು ವೃದ್ಧಿಪಡಿಸಿಕೊಳ್ಳಲು ಸಮ ಮತ್ತು ಪೂರ್ಣ ಅವಕಾಶವೂ ಇರಬೇಕೆಂದು ಸದರಿ ನಿರ್ಣಯದಲ್ಲಿ ತಿಳಿಸಲಾಗಿದೆ.

ಕೇಂದ್ರ ಸರ್ಕಾರದಿಂದ ಲೀಗ್ ಉಚ್ಚಾಟನೆ ?

ಮುಸ್ಲಿಂ ಲೀಗಿನವರು ರಾಜ್ಯಾಂಗ ಸಭೆಯಲ್ಲಿ ಭಾಗವಹಿಸುವುದಾಗಿ ಆಶ್ವಾಸನವಿತ್ತು ಕೇಂದ್ರ ಸರ್ಕಾರದಲ್ಲಿ ಮಂತ್ರಿಸ್ಥಾನಗಳನ್ನು ಪಡೆದು, ಈಗ ರಾಜ್ಯಾಂಗ ಸಭೆಗೆ ಬರುವುದಿಲ್ಲವೆಂದು ಘೋಷಿಸಿರುವುದರಿಂದ ಅವರನ್ನು ಕೇಂದ್ರ ಸರ್ಕಾರದಿಂದ ಹೊರದೂಡುವ ಬಗ್ಗೆ ವೇವಲ್ ಮತ್ತು ಬ್ರಿ॥ ಸರ್ಕಾರದೊಡನೆ ವ್ಯವಹಾರವೂ ಆರಂಭವಾಗುವುದೆಂದು ದೆಹಲಿಯಲ್ಲಿ ಹೇಳಲಾಗುತ್ತಿದೆ.

ಜವಾಬ್ದಾರಿ ಸರ್ಕಾರಕ್ಕಾಗಿ ಕಾಂಗ್ರೆಸ್ಸಿನ ಒತ್ತಾಯ

ಸಂಸ್ಥಾನಗಳಲ್ಲಿ ಜವಾಬ್ದಾರಿ ಸರ್ಕಾರ ಮತ್ತು ಪ್ರಜಾ ಸ್ವಾತಂತ್ರ್ಯಗಳಿಗಾಗಿ ನಡೆಸುತ್ತಿರುವ ಚಳುವಳಿಗಳಿಗೆ ಬೆಂಬಲವನ್ನು ಸೂಚಿಸುವ ನಿರ್ಣಯವು ಮೀರತ್ ಕಾಂ॥ ವಿಷಯ ನಿರ್ಧಾರಕ ಸಮಿತಿಯಲ್ಲಿ ಮಂಜೂರಾಯಿತು.

● ನೌಖಾಲಿ ಮತ್ತು ತಿಪ್ಪೇರಾ ಜಿಲ್ಲೆಗಳಲ್ಲಿ ಪೂರ್ಣ ಶಾಂತಿ ಸ್ಥಾಪನೆ ಆಗುವವರೆಗೂ, ಅಲ್ಲಿಯೇ ವಾಸ ಮಾಡುವಂತೆ ಮಂತ್ರಿಗಳಾದ ಮಿ॥ ಷಂಸುದ್ದೀನ್ ಮತ್ತು ಮಿ॥ ಅಬ್ದುಲ್ ಗಫಾರ್‌ರವರಿಗೆ ಬಂಗಾಳದ ಪ್ರಧಾನಿಗಳು ಸೂಚಿಸಿದ್ದಾರೆ.

ದತ್ತೂರಿ ವಿಷ ಪ್ರಯೋಗವೆ ?

ಕ್ಯಾತಮಾರನಹಳ್ಳಿಯ ಮಲ್ಲಯ್ಯ ಮತ್ತು ಅವನ ಹೆಂಡತಿ ಬಸವಿ ಎಂಬುವವರು ನ್ಯೂ ಮೋತೀಲಾಲ್ ಟಾಕೀಸ್ ಬಳಿ ಮಲಗಿದ್ದಾಗ ಬೆಂಗಳೂರಿನ ಕೃಷ್ಣಪ್ಪ ಮತ್ತು ಮೈಸೂರಿನ ಮಲ್ಲಯ್ಯ ಎಂಬ ವರು ಅವರಿಗೆ ದತ್ತೂರಿ ವಿಷದ ಪ್ರಯೋಗವನ್ನು ಮಾಡಿದರೆಂದೂ ಅನಂತರ ಅವರಿಬ್ಬರನ್ನೂ ಆಸ್ಪತ್ರೆಗೆ ದಾಖಲು ಮಾಡಲಾಗಿ ಬಸವಿಯು ಅಲ್ಲಿಯೇ ಸತ್ತುಹೋದಳೆಂದೂ, ಈಗ ಪೋಲೀಸಿನವರು ಮೇಲ್ಕಂಡ ಇಬ್ಬರು ಆಪಾದಿತರನ್ನೂ ದಸ್ತಗಿರಿ ಮಾಡಿರುವುದಾಗಿಯೂ ತಿಳಿದುಬಂದಿದೆ.

ದಸ್ತಗಿರಿ

ಮೊನ್ನೆ ಮೋತೀಲಾಲ್ ಟಾಕೀಸ್ ಬಳಿ ರಂಗಪ್ಪ ಎಂಬುವವನು ಗೋಪಾಲಪುರದ ಕಾಳೇಗೌಡ ಎಂಬುವವನನ್ನು ಹೊಡೆದನೆಂದು ವರದಿಯಾಗಿದೆಯಷ್ಟೆ. ಈ ಸಂಬಂಧದಲ್ಲಿ ರಂಗಪ್ಪ ಮತ್ತು ಅವನ ತಂಗಿ ಮೊನ್ನಮ್ಮಳು ಇವರುಗಳ ಮೇಲೆ ಪೋಲೀಸಿನವರು ದಾವೆ ದಾಖಲ್ ಮಾಡಿಕೊಂಡಿದ್ದಾರೆ. ರಂಗಪ್ಪನ ದಸ್ತಗಿರಿಯಾಗಿದೆ. ಮೊನ್ನಮ್ಮಳು ತಲೆತಪ್ಪಿಸಿಕೊಂಡಿರುವಳೆಂದು ವರದಿ ಬಂದಿದೆ.

ಸಾಧ್ವಿ

ತಾ|| ೨೪-೧೧-೪೬ ಭಾನುವಾರ

ದಿವಂಗತ ಕೈಲಾಸಂ

ಕನ್ನಡ ರಂಗಭೂಮಿಯಲ್ಲಿ ಹೊಸ ಬಗೆಯ ಸೃಷ್ಟಿಗೆ ಕಾರಣಕರ್ತರಾಗಿ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನವನ್ನು ವಹಿಸಿದ್ದ ಶ್ರೀ|| ಟಿ.ಪಿ. ಕೈಲಾಸಂರವರು ಈ ದಿನ ಬೆಳಗ್ಗೆ ಹೃದಯ ಸ್ತಂಭನದಿಂದ ಕೈಲಾಸವಾಸಿಗಳಾದರೆಂಬ ವಾರ್ತೆಯು ಕನ್ನಡಿಗರೆಲ್ಲರಿಗೂ ಸಿಡಿಲು ಬಡಿದಂತೆ ಕೇಳಿಬರುತ್ತಿದೆ. ಅವರ ಐವತ್ತು ವರ್ಷದ ಹಬ್ಬವನ್ನು ಕರ್ನಾಟಕ ಸಂಪತ್ತಿನವರು ಮೊನ್ನೆ ತಾನೆ ನಾಡಹಬ್ಬದಂತೆ ವೈಭವದಿಂದ ಆಚರಿಸಿದರು. ಕೈಲಾಸಂರವರು ಕಳೆದ ವರ್ಷ ಮದರಾಸಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದರು. ಅದರಲ್ಲಿ ಅವರು ಮಾಡಿದ ಭಾಷಣದ ಸರಣಿ, ವಿಚಾರ ವಿಮರ್ಶೆ ಮತ್ತು ಆದರ್ಶಗಳ ನಿರೂಪಣೆಯು ಅವರಂತೆಯೇ ಒಂದು ಪ್ರತ್ಯೇಕವಾದ ವೈಶಿಷ್ಟ್ಯದಿಂದ ಕೂಡಿದ್ದುವು. ಗಹನವಾದ ತತ್ವ ವಿಚಾರಗಳನ್ನೂ ವಿನೋದವಾದ ರೀತಿಯಲ್ಲಿ ಪ್ರತಿಪಾದಿಸುವುದರಲ್ಲಿ ಕೈಲಾಸಂರವರು ಅಗ್ರಗಣ್ಯರಾಗಿದ್ದರು. ಆನಂದವೇ ಜೀವನದ ಪರಮೋದ್ದೇಶವೆಂಬುವನ್ನು ಅವರು ಹೆಜ್ಜೆಹೆಜ್ಜೆಗೂ ಸಾರಿ ಹೇಳುವರು. ಕಠಿಣವಾದ ಶಬ್ದಜಾಲದಲ್ಲಿ ತೊಳಲುವುದಕ್ಕಿಂತಲೂ, ಸುಲಭವೂ, ಸರಳವೂ ಆದ ಮಾರ್ಗದಲ್ಲಿ ಸಕಲ ಜನರನ್ನೂ ಒಲಿಸಿ, ನಲಿಸುವುದಕ್ಕೇ ಅವರು ಹೆಚ್ಚು ಪ್ರಾಮುಖ್ಯತೆಯನ್ನು ಕೊಡುತ್ತಿದ್ದರು.

ವಿನೋದವು ವಿರೋಧದ ರೂಪವನ್ನು ತಾಳದೆ ಸಮಾಜ ಮತ್ತು ವ್ಯಕ್ತಿಯ ಸುಧಾರಣೆಗೆ ಪ್ರಯುಕ್ತವಾಗಬೇಕೆಂಬುದು ಅವರ ಅಭಿಮತವಾಗಿತ್ತು. ದಿನಚರಿಯ ಸಾಮಾನ್ಯ ವಿಷಯಗಳಿಂದ ಮಹತ್ತರವಾದ ನೀತಿಯನ್ನು ಅವರು ತಮ್ಮ ಕೃತಿಗಳ ಮೂಲಕ ಪ್ರತಿಪಾದಿಸಿರುವರು.

ಆಂಗ್ಲೇಯ ಭಾಷೆಯ ಪ್ರಭಾವವು ಅವರ ಲೇಖನಗಳ ಮೇಲೆ ವಿಶೇಷವಾಗಿ ಬೀರಲ್ಪಟ್ಟಿದೆ. ಮತ್ತು ಮಾತನಾಡುವ ಭಾಷೆಯನ್ನೇ ಬರವಣಿಗೆಗೂ ಉಪಯೋಗಿಸಿರುವುದು ಕೈಲಾಸಂರವರ ವೈಶಿಷ್ಟ್ಯ. ಕನ್ನಡದ ಮಧ್ಯೆ ಆಂಗ್ಲ ಪದಗಳನ್ನೂ ಅವರು ಅನೇಕಾವರ್ತಿ ಪ್ರಯೋಗಿಸಿರುವರು. ಇಂದಿನ ಸಮಾಜಕ್ಕೆ ಈ ಬಗೆಯ ಭಾಷಾ ಪ್ರಯೋಗದಿಂದ ಹೆಚ್ಚು ಪರಿಣಾಮ ಉಂಟಾಗುವುದೆಂದು ಅವರು ಭಾವಿಸಿದ್ದರು. ಕೇವಲ ಭಾಷಾ ಪಾರಿಶುದ್ಧತೆಗಿಂತಲೂ, ಭಾವನೆಯ ಉನ್ನತ ಮಟ್ಟವು ಮುಖ್ಯವೆಂಬುದು ಅವರ ಅಭಿಪ್ರಾಯ. ಆದರೂ ಕನ್ನಡ ಭಾಷೆಯಲ್ಲಿ ಅವರು ಕಲ್ಪಿಸಿದ ಅಸಂಖ್ಯಾತ ಶಬ್ದ ಪ್ರಯೋಗಗಳು ದೊಡ್ಡದೊಡ್ಡ ಆಧುನಿಕ ಕವಿಗಳನ್ನೂ ಮೀರಿಸುತ್ತಿದ್ದುವು. ಕುಳಿತಂತೆಯೇ ಸ್ಫೂರ್ತಿಗೊಂಡು ಸೂತ್ರರೂಪದಲ್ಲಿ ಕೈಲಾಸಂರವರು ವಾಕ್ಯಗಳನ್ನು ಹೇಳುತ್ತಿದ್ದುದು ಬಹಳ ಅದ್ಭುತವಾಗಿರುತ್ತಿತ್ತು.

ರಂಗಭೂಮಿ ಮತ್ತು ಸಾಹಿತ್ಯ ಪ್ರಪಂಚದಲ್ಲಿ ಕೈಲಾಸಂರವರು ದೊಡ್ಡ ಕ್ರಾಂತಿಯನ್ನೇ ಉಂಟುಮಾಡಿರುವರು. ಅವರ ನಿಧನದಿಂದ ಕನ್ನಡ ಮಾತೆಯ ಶಿರೋರತ್ನವೊಂದು ಕಳಚಿಬಿದ್ದಂತಾಗಿದೆ. ನಿಸ್ವಾರ್ಥದಿಂದಲೂ, ನಿರಾಡಂಬರವಾಗಿಯೂ, ತಾಯಿನುಡಿಯ ಸೇವೆ ಸಲ್ಲಿಸಿದ ಮಹನೀಯರ ಪಂಕ್ತಿಗೆ ಕೈಲಾಸಂರವರು ಸೇರಿರುವರು. ಅವರ ಉದಾತ್ತವಾದ ಭಾಷಾ, ಕಲಾ ಮತ್ತು ಸಂಸ್ಕೃತಿಯ ಸೇವೆಗಳು ನಾಡಿನ ತರುಣ ತರುಣಿಯರನ್ನು ಪ್ರಚೋದಿಸಲೆಂದು ನಾವು ಪ್ರಾರ್ಥಿಸಿ ಕೈಲಾಸಂರವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇವೆ.

ತಕ್ಷಣ ಬೇಕಾಗಿದೆ

ಜವಳಿ ವ್ಯಾಪಾರದಲ್ಲಿ ಅನುಭವಶಾಲಿಯಾದ ಸೇಲ್ಸ್‌ಮೆನ್ ಬೇಕಾಗಿದ್ದಾರೆ. ಯೋಗ್ಯತಾನುಸಾರ ಸಂಬಳ ಮತ್ತು ಬೋನಸ್ ಕೊಡಲಾಗುತ್ತದೆ.

ಕೆ. ನಾರಾಯಣರಾವ್ ಸನ್ಸ್,
ಕ್ಲಾತ್ ಮರ್ಚೆಂಟ್ಸ್, ಶಿವರಾಂಪೇಟೆ,
ಮೈಸೂರು, ಇವರಲ್ಲಿ ಬಂದು ವಿಚಾರಿಸಿ

ರಾಜಕಮಲ್

ಮೈಸೂರು

೨೨—೧೧—೪೬ ರಿಂದ

ಅಮೋಘವಾದ ಎರಡನೇ ವಾರ

'ಡಾಕ್ಟರ್ ಕೊಟ್ನಿಸ್ ಕಿ ಅಮರ್ ಕಹಾನಿ'

ಮುಖ್ಯ ಭೂಮಿಕೆ:— ಶಾಂತಾರಾಂ, ಉಲ್ಲಾಸ್, ವಿನಾಯಕ್, ಪೆಂಡಾರ್‌ಕರ್, ಜಯಶ್ರೀ.

From 22-11-46 for 4days, daily at 10-30 a. m.

'THE GHOUL'

Featuring:- BORIS KARLOFF
It's a mighty British
Gaumont Picture.

Edited, printed and published by A. R. Nagarajan at the Sadhvi Press D. Subbiah Road, Mysore

ಶ್ರೀ ಗಣೇಶ ಟಾಕೀಸ್

೧೪-೧೧-೪೬ ರಿಂದ ಪ್ರತಿ ದಿನ ೨ ಆಟಗಳು

ಗುಬ್ಬಿ ಫಿಲಂಸ್ ರವರ

★ಹೇಮರೆಡ್ಡಿ ಮಲ್ಲಮ್ಮ★

ಮುಖ್ಯ ಭೂಮಿಕೆ:-- ಜಯಮ್ಮ, ಹೊನ್ನಪ್ಪ ಭಾಗವತರ್, ಜಿ. ಹೆಚ್. ವೀರಣ್ಣ, ಸಿ. ಬಿ. ಮಲ್ಲಪ್ಪ

ಕುದುರೆಗಳ ಮೇಲಿನ ಬಾಜಿ ರದ್ದು

ಬರುವ ಶಾಸನ ಸಭೆಯಲ್ಲಿ ಮದ್ರಾಸ್ ಸರ್ಕಾರವು ಕುದುರೆಗಳ ಮೇಲೆ ಕಟ್ಟುವ ಬಾಜಿಯನ್ನು ಕಾನೂನು ರೀತಿಯಾಗಿ ನಿಲ್ಲಿಸಲು ನಿರ್ಧರಿಸಿದೆ. ಇದರಿಂದ ಪೋಲೀಸ್ ಮತ್ತು ಜೂಜಿನ ಕಾನೂನುಗಳಲ್ಲಿ ಕೆಲವು ತಿದ್ದುಪಡಿಗಳಾಗುವುವು. ಸರ್ಕಾರದವರು ಪಂದ್ಯಗಳೇ ಒಂದು ಕೆಟ್ಟ ಪದ್ಧತಿಯೆಂದೂ ಮತ್ತು ಅದರಿಂದ ಬಹಳ ಜನ ಬಡವರು ತೊಂದರೆಗೀಡಾಗುವರೆಂದೂ ನಿರ್ಧರಿಸಿ, ಇದನ್ನು ಕಾನೂನು ಬದ್ಧವಾಗಿ ಮಾತ್ರವೇ ಸಂಪೂರ್ಣವಾಗಿ ತಡೆಯಲು ಸಾಧ್ಯವೆಂದೂ ತೀರ್ಮಾನಿಸಿರುತ್ತಾರೆ. ವರ್ತಮಾನ ಪತ್ರಿಕೆಗಳಲ್ಲಿ ಬರತಕ್ಕ ಕುದುರೆ ಪಂದ್ಯಗಳ ವಿವರ ಮತ್ತು ಫಲಿತಾಂಶಗಳ ಪ್ರಕಟಣೆಯನ್ನು ಪ್ರತಿಬಂಧಿಸುವುದೂ ಸಹ ಸರ್ಕಾರದವರ ಆಲೋಚನೆಯಲ್ಲಿದೆ. ಇದರಿಂದ ಪೂರ್ಣವಾಗಿ ಜೂಜುಗಳ ವಿವರಗಳನ್ನೇ ಪ್ರಕಟಿಸುತ್ತಿದ್ದ ಪತ್ರಿಕೆಗಳಿಗೆ ಧಕ್ಕೆ ತಗಲುತ್ತದೆ.

ಸ್ವಂತ ಉಸ್ತುವಾರಿಯಿಂದ ತಯಾರಾದ

ಲೋಕಲ್ ಮೇಡ್ ಚಪ್ಪಲಿಗಳು

ಸುಲಭ ಬೆಲೆಗೆ ಸಿಗುತ್ತೆ.

—: ಅಲ್ಲದೆ :—

ಟಾಂಕಿಸ್	D S	13-12-0 C L.C
ಫ್ಲೋರ	,,	10- 4-0 ,,
ರೋಮಿಕ	,,	17- 8-0 ,,
,,	S S.	13 12-0 ,,
ಕುಮಾರ್	,,	13- 2-0 ,,

ಒಂದು ಸಲ ಭೇಟಿಮಾಡಿ—

ಗೋಬರ್ ಫುಟ್‌ವೇರ್ ಹೌಸ್
ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ನೋಟೀಸ್

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:—

ಮೈಸೂರು ಸಿಟಿ ಲಷ್ಕರ್ ಮೊಹಲ್ಲಾ ಕುರುಬಗೇರಿಯಲ್ಲಿ ೧೨೦೫ನೇ ನಂಬರ್ ಮನೆಯಲ್ಲಿ ವಾಸವಾಗಿಸುವ ಫವತಿ ಹಾಳಮ್ಮನ ಸೊಸೆ ಲಕ್ಷ್ಮಮ್ಮನು ತಿಳಿಯಪಡಿಸುವುದೇನೆಂದರೆ:-ಸದರೀ ಸ್ಥಳದಲ್ಲಿ ನಾನು ವಾಸವಾಗಿರುವ ೧೨೦೫ನೇ ನಂಬರ್ ಮನೆಯನ್ನು ಫವತಿ ನನ್ನ ಅತ್ತೆ ಹಾಳಮ್ಮ ಎಂಬುವರು ಈಗ್ಗೆ ಮೂರು ವರ್ಷದಲ್ಲಿ ಅವರ ಮೊಮ್ಮಗ ನನ್ನ ಮಗ ಶಿವಣ್ಣ ಎಂಬುವನ ಹೆಸರಿಗೆ ಮೇಲ್ಕಂಡ ೧೨೦೫ನೇ ನಂಬರ್ ಮನೆಯನ್ನು ವಿಲ್ ಬರೆದು ರಿಜಿಸ್ಟು ಮಾಡಿಸಿರುತ್ತಾರೆ. ಇದನ್ನು ನನ್ನ ಗಂಡ ಮುದಿಲಕ್ಕಯ್ಯ ಎಂಬುವರಿಂದ ಯಾರಾದರು ಕ್ರಯ ವಗೈರೇ ಬರೆಸಿಕೊಂಡಲ್ಲಿ ಸದರಿ ಕ್ರಯವು ಊರ್ಜಿತವಾಗತಕ್ಕದ್ದಲ್ಲಾ ಎಂದು ತಿಳಿಯತಕ್ಕದ್ದಿರುತ್ತೆ.

● ಈ ಎಡಗೈ ಹೆಬ್ಬೆಟ್ಟಿನ ಗುರ್ತು ಲಕ್ಷ್ಮಮ್ಮನು ಹಾಕಿದ್ದು.

ಘಟಿಕೋತ್ಸವಕ್ಕೆ ಪ...

ಇದೇ 30 ನೇ ತಾ|| ನಡೆಯ...ಪುರ ವಿಶ್ವವಿದ್ಯಾನಿಲಯದ ಘಟಿ...ದ ಉಪದೇಶ ಭಾಷಣವನ್ನು ...ಕಾರದ ಗೃಹ ಮಂತ್ರಿಗಳಾದ ವಲ್ಲಭಾಯ್ ಪಟೇಲರು ಮಾಡ...

ನೋಟೀಸ್

ಮೈಸೂರು ಸಿಟಿ ಕೃಷ್ಣರಾಜ ... ಚಾಮರಾಜ ಅಗ್ರಹಾರದಲ್ಲಿ... ನೇ ನಂಬರು ಮನೆಯು ನನ್ನ ... ರಾದ ನೇತ್ರವೈದ್ಯ ನಾಗಾಪಂಡಿತ ಮಾಮ್ಮಡಿ ಶ್ರೀ ಕೃಷ್ಣರಾಜ ಒಡೆಯ ದಾನವಾಗಿ ಬಂದು ಅವರ ಕಾಲಾ ನ್ನ ತಂದೆ ಮತ್ತು ಚಿಕ್ಕಪ್ಪಂದಿರ ನಲ್ಲಿದ್ದು ಹಾಲಿ ನನಗೂ ಮತ್ತು ಕ್ಕಪ್ಪಂದಿರು ಲೇಟ್ ಸುಬ್ಬಾಪಂ... ಗ ರೈಲ್ವೆ ಇಲಾಖೆಯಲ್ಲಿ ವ್ಯಾಕ್ಸಿನ... ಲಸದಲ್ಲಿರುವ ಎಂ ಎಸ್. ರಾ... ಯ್ಯ ಎಂಬುವರಿಗೂ ಸೇರಿರುತ್ತ... ಗಳ ಪಿತ್ರಾರ್ಜಿತವಾದ ಈ ಮನೆ... ನ್ನ ಚಿಕ್ಕಪ್ಪನವರ ಮಕ್ಕಳು ... ಎಂ.ಎಸ್. ರಾಮಸ್ವಾಮಯ್ಯ ಎ... ಇತರರ ದುರ್ಬೋಧನೆಗೆ ಒಳಪ... ಹಕ್ಕಿಗೆ ಧಕ್ಕೆ ತರುವ ರೀತಿಯಲ್ಲಿ ಮಾಡಬೇಕೆಂದು ಪ್ರಯತ್ನ ಪಡ... ತಿ ನನಗೆ ತಿಳಿದು ಬಂದಿರುತ್ತದೆ. ಸದರಿ ಮನೆಯಲ್ಲಿ ಅರ್ಧಹಿಸ್ಸೆ ಹ...ತ್ತದೆ. ಮೇಲ್ಕಂಡ ಎಂ.ಎಸ್. ... ಮಯ್ಯನವರಿಂದ ಪೂರ್ತಾ ... ಯಾರಾದರೂ ಕ್ರಯ, ಭೋಗ್ಯ, ವಗೈರೆ ಪರಭಾರೆ ಮಾಡಿಸಿಕೊಂಡ... ಪರಭಾರೆಗಳು ಊರ್ಜಿತವಾಗತಕ್ಕ...ದು ಈ ಮೂಲಕ ಸರ್ವರಿಗೂ ತಿಳಿ...ಸಿರುತ್ತೇನೆ.

ಮೈಸೂರು, (ಸಹಿ) ಎಂ ಎಸ್. ನ...
೨೪-೧೧-೪೬ ಲಾಯರ್, ಲ್ಯಾ...
ಬಿಲ್ಡಿಂಗ್ಸ್, ಮೈಸೂ...

ಎಲ್ಲಾ ತುಪ್ಪಕ್ಕಿಂತಲೂ ಆರ್.ಜಿ. ತುಪ್ಪವೆ ಚನ್ನಾಗಿರುತ್ತದೆ

ಲೀಗಿನವರ ನೀತಿ

ದೇವರಿಗೇ ಗೊತ್ತು

...ಗ್ರೆಸ್ ಅಧ್ಯಕ್ಷರಾದ ಆಚಾರ್ಯ ಕೃ... ...ನಿಯವರು ತಮ್ಮ ಭಾಷಣದನಂತರ ಲೀಗಿನವರು ರಾಜ್ಯಾಂಗ ಸಭೆಯ... ವಹಿಸುವ ವಿಚಾರವಾಗಿ ಈ ಕೆಳಗೆ ಅಭಿಪ್ರಾಯವನ್ನು ಸೂಚಿಸಿದ... ರಾಜ್ಯಾಂಗ ಸಮಿತಿಯಲ್ಲಿ ಕಡೆಗೂ ಭಾಗವಹಿಸುವುದೇ ಇಲ್ಲವೇ, ಎಂ... ...ಣ್ಣಾರವರಿಗೂ ದೇವರಿಗೂ ಮಾ... ...ತ್ರ ದೇವರಿಗೂ ಗೊತ್ತಿದೆಯೋ ಎಂದು ನನಗೆ ಸಂದೇಹವಾಗುತ್ತ... ...ಣ್ಣಾರವರಿಗಾದರೂ ಅದು ಗೊತ್ತಿದೆ... ...ದೂ ಸಹ ನನಗೆ ಸಂದೇಹವಾಗು... ...ಸಭೆ ಸೇರಲು ಇನ್ನೂ ೧೫ ದಿನಗ... ...ವೆ. ಗಳಿಗೆಗೊಂದು ಬಾರಿ ಬದ... ...ಕೊಂಡುಹ ಜಿನ್ನಾರವರು ಆಗ ...ಬುವನ್ನು ಹೊಂದಿ ಸಭೆಯಲ್ಲಿ ಭಾ... ...ದರೂ ವಹಿಸಬಹುದು.

...ಸ್ತಾನ ವರ್ಗೀಕರಣೆಯು

...ನೆಂದರೆ ಅಂಬೇಡ್ಕರ್

...ಜಿನ್ನಾರವರು ಹೇಳಿರುವಂತೆ ಪ್ರ... ಒಂದು ಕಡೆ ದೇಶದಿಂದ ಮ... ...ದೇಶಕ್ಕೆ ವರ್ಗಾಯಿಸುವ ವಿಚಾ... ...ಧ್ಯವಾದುದೆಂದು ಡಾ॥ ಅಂಬೇ... ...ರು ಹೇಳಿತಿದ್ದಾರೆ.

...ರನ್ನು ಹಿಡಿಯುವ

ಕಿರಣ

...ಕಿಟಕಿಯಿಂದಾಗಲೀ ಬಾಗಿಲ... ...ಂದಾಗಲೀ ಒಳನುಗ್ಗುವಾಗ ಅ... ...ಲೆ ಬಿದ್ದು ಪತ್ತೆ ಹಚ್ಚುವ ಕಿರಣ... ...ಟಿಷ್ ಸೈನ್ಯಕ್ಕೆ ಸೇರಿದ ಕೆ... ...ಗಳು ರಾಡರ್ ಮತ್ತು ಆಲ್ಯ... ...ನಗಳಿಂದ ಪ್ರಯೋಗ ನಡೆಸಿ ಕಂ... ...ದಿದ್ದಾರೆಂದು ವರದಿಯಾಗಿದೆ.

...ಲೋಟರಿ ಅಧ್ಯಕ್ಷರು

ಬೆಂಗಳೂರು ೨೪

...ಕೋಟಿ ಕ್ಲಬ್ಬಿನ ಅಧ್ಯಕ್ಷರಾದ ...ರ್ಷ ಹಾಡಿಯವರು ಬರುವ ೧... ...ನ ದಿನ ಇಲ್ಲಿಗೆ ಬರುವರೆಂದು ತಿ... ...ದೆ. ಅವರು ಇಲ್ಲಿಯ ರೋಟರಿ ...ನ ಆಶ್ರಯದಲ್ಲಿ ಭಾಷಣ ಮಾಡು... ...ಶ್ರೀಮನ್ಮಹಾರಾಜರವರನ್ನು ...ಡುವರೆಂದೂ ಗೊತ್ತಾಗಿದೆ.

ಶಾಖಾ ಉಪಕಾರ್ಯದರ್ಶಿ

...ಬ್ಯಾಂಕ್ ಡೈರೆಕ್ಟರ್ ಅಸಿಸ್ಟೆಂಟ ...ಪಿ ರಾಜವೇಲುರವರನ್ನು ಶ್ರೀ... ...೦ ಶ್ರೀನಿವಾಸಯ್ಯನವರ ಸ್ಥಾನ... ...ಕಾರ್ಯದರ್ಶಿಗಳನ್ನಾಗಿ ನೇಮಿ...

ಕಮೀಷನ್ ನೇಮಕವೇ?

...ಐದನೇ ಗೆಜೆಟೆಡ್ ನೌಕರರು ...ಂಬಳ ಸಾಲದೆಂಬ ಬಗ್ಗೆ ಮಾಡಿ... ...ರುವ ಅಹವಾಲನ್ನು ಪರಿಶೀಲಿಸಿ ...ಂಬಳ ಸಾಧನೆಗಳನ್ನು ಯಾವ ರೀ... ...ಸಬೇಕೆಂಬ ಬಗ್ಗೆ ಶಿಫಾರಸು ಮಾ... ...ುವಾಗಿ ನಮ್ಮ ಸರ್ಕಾರದವರೂ ...ಂದ್ರ ಮತ್ತು ಇತರ ಪ್ರಾಂತ ಸ... ...ರೀತಿಯಲ್ಲಿ ಒಂದು ಪೇ ಕಮಿಷ... ...ರಚಿಸುವ ಬಗ್ಗೆ ತೀವ್ರವಾಗಿ ಪ... ...ಲೋಚಿಸುತ್ತಿರುವರೆಂದು ತಿಳಿದು...

ರೀ. ನಂ. 392 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೧] ಸೋಮವಾರ ೨೫—೧೧—೪೭ [ಸಂಚಿಕೆ ೧೭

ಸಂಸ್ಥಾನಗಳ ಒಕ್ಕೂಟಕ್ಕೆ ಗುಪ್ತ ಪ್ರಯತ್ನ

ರಾಷ್ಟ್ರೀಯ ಐಕ್ಯತೆ ಮತ್ತು ಸ್ವಾತಂತ್ರ್ಯ ಸಾಧನೆ

ಸಾರ್ವಜನಿಕರು ಒಗ್ಗಟ್ಟಾಗಿ ಪರಸ್ಪರ ಕಲಹಗಳನ್ನು ಬಿಟ್ಟು ಒಂದೇ ಜನಾಂಗದಂತೆ ಹೊಂದಿಕೊಂಡು ಭಾರತ ಸ್ವಾತಂತ್ರ್ಯಕ್ಕಾಗಿ ಹಿಂದೆ ಹೋರಾಡಿದಂತೆಯೇ ಈಗಲೂ ಒಳಗಿನ ಮತ್ತು ಹೊರಗಿನ ಆಪತ್ತುಗಳನ್ನು ಎದುರಿಸಿ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಸಿದ್ಧರಾಗಬೇಕು ಎಂದು ಸೂಚಿಸುವ ನಿರ್ಣಯವು ಕಾಂಗ್ರೆಸ್ ಬಹಿರಂಗ ಅಧಿವೇಶನದಲ್ಲಿ ಪಂಡಿತ ನೆಹರೂರವರಿಂದ ಮಂಡಿಸಲ್ಪಟ್ಟು ಮಂಜೂರಾಯಿತು.

ಶ್ರೀ ನಾಡಿಗ ಕೃಷ್ಣಮೂರ್ತಿ



ಪತ್ರಿಕೋದ್ಯಮ ಶಿಕ್ಷಣ ಪಡೆಯಲು ಅಮೆರಿಕಾಕ್ಕೆ ತೆರಳಿರುವವರು.

ಸಿನಿಮಾಗಳಲ್ಲಿ ಸಾಮ್ರಾಜ್ಯ ಗೀತೆಗೆ ಪ್ರತಿಭಟನೆ

ಲಾಹೋರಿನ ಸಿನಿಮಾ ಮಂದಿರಗಳಲ್ಲಿ ಇಂಗ್ಲಿಷ್ ಚಿತ್ರಗಳ ಅಂತ್ಯದಲ್ಲಿ "ಗಾಡ್ ಸೇವ್ ದಿ ಕಿಂಗ್" ಎಂಬ ಬ್ರಿಟಿಷ್ ಸಾಮ್ರಾಜ್ಯ ಗೀತೆಯು ಹಾಡಲ್ಪಡುತ್ತಿತ್ತು. ಮೊನ್ನೆ ಮಂದಿರದವೊಂದರಲ್ಲಿ ವಿದ್ಯಾರ್ಥಿಗಳು ಇದನ್ನು ಪ್ರತಿಭಟಿಸಿದುದರ ಫಲವಾಗಿ ಈ ಗೀತೆಯು ನಿಲ್ಲಿಸಲ್ಪಟ್ಟಿದೆಯೆಂದು ವರದಿಯಾಗಿದೆ.

ರಸ್ತೆ ನಿರ್ಮಾಣಕ್ಕೆ ೩ ಕೋಟಿ ರೂ

ಮೈಸೂರು ಸರ್ಕಾರದವರು ರಸ್ತೆಯ ನಿರ್ಮಾಣಕ್ಕಾಗಿ ೩ ಕೋಟಿ ರೂ ಗಳನ್ನು ಮಂಜೂರ್ಮಾಡಿರುತ್ತಾರೆ. ಇದರಿಂದ ೬೦೦ ಮೈಲಿಯ ಕಾಂಕ್ರೀಟ್ ರಸ್ತೆ, ೨೦೦೦ ಮೈಲಿಗಳ ಗ್ರಾಮ ರಸ್ತೆ, ೫೦೦ ಮೈಲುಗಳ ಗ್ರಾಮಾಂತರ ಪ್ರದೇಶದ ರಸ್ತೆ ಮತ್ತು ೫೦೦ ಮೈಲಿಗಳ ಬೇ ರಸ್ತೆಗಳು ನಿರ್ಮಾಣವಾಗುವುವು.

ಋಣದಮೂಲಿಗಳ ಮುಷ್ಕರ

ಮೈಸೂರು ೨೫

ಪೌರಸಭೆಗೆ ಸೇರಿದ ಸುಮಾರು ಐದು ನೂರು ಋಣದಮೂಲಿಗಳು ತಮಗೆ ೬೦ ರೂ ಸಂಬಳ ಮತ್ತು ೨೦ ರೂ. ತುಟ್ಟಿ ಭತ್ಯ ಕೊಡಬೇಕು ಎಂಬ ಬೇಡಿಕೆಗಳನ್ನು ಮಾಡಿಕೊಂಡು ತಮ್ಮ ಕೆಲಸಕ್ಕೆ ಹೋಗದೆ ಮುಷ್ಕರಹೂಡಿ ಮೆರವಣಿಗೆ ಹೋಗಿದ್ದರು.

ಚಾಮರಾಜಪುರಂ ಕೋ॥ ಸ್ಟೋರ್ಸ್ ಕಮಿಟಿ

ಚಾಮರಾಜಪುರಂ ಕೋ-ಆಪರೇಟಿವ್ ಸ್ಟೋರಿನ ಸಭಾಸದರ ೧೬ ನೇ ಸಾಲಿನ ವಾರ್ಷಿಕ ಸಭೆಯು ಕಳೆದ ೧೬ ನೇ ತಾ॥ ಜರುಗಿ ಮುಂದಿನ ಸಾಲಿಗೆ ಈ ಮುಂದೆ ಕಂಡವರು ಕಾರ್ಯಕಾರಿ ಸಮಿತಿಗೆ ಆರಿಸಲ್ಪಟ್ಟರು:- ಶ್ರೀಗಳು ಎಸ್. ನಾಗೇಂದ್ರರಾವ್, ಸಿ. ಆರ್. ನರಸಿಂಹಶಾಸ್ತ್ರಿ, ವಿ. ಎಸ್. ಸುಬ್ಬರಾವ್, ಎಂ. ಸುಂದರರಾಜಯ್ಯಂಗಾರ್, ಎಲ್. ಶೇಷಗಿರಿರಾವ್, ಎಂ. ಎಸ್ ನಂಜುಂಡಯ್ಯ, ಟಿ. ಎನ್. ರಾಮರಾವ್, ವಿ ರಾಘವೇಂದ್ರರಾವ್, ಟಿ. ಕೃಷ್ಣಮೂರ್ತಿ, ಬಿ ಎಸ್. ರಾಜಯ್ಯಂಗಾರ್, ಕೆ ಕೃಷ್ಣಸ್ವಾಮಿ ನಾ... ...ಕರ್, ಜೆ ಎಸ್. ಕೃಷ್ಣಯ್ಯಂಗಾರ್, ವಿ ಆರ್ ಗುಂಡೂರಾವ್ ಮತ್ತು ಎಸ್. ಶಾಮಣ್ಣ.

ಶಂಕರಪ್ಪ ಸ್ಮಾರಕ ಚರ್ಚೆ

ಬರುವ ೪ ನೇ ಬುಧವಾರ ಸಂಜೆ ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ಸಿನ ಆಶ್ರಯದಲ್ಲಿ ಶಂಕರಪ್ಪ ಸ್ಮಾರಕ ಚರ್ಚಾ ಸ್ಪರ್ಧೆಯು ಏರ್ಪಡಿಸಿರುತ್ತದೆ. ಈ ಚರ್ಚೆಯಲ್ಲಿ ಹೈಸ್ಕೂಲ್, ಕಾಲೇಜ್ ಮತ್ತು ಹಾಸ್ಟಲ್ ಪ್ರತಿನಿಧಿಗಳು ಭಾಗ ವಹಿಸಬಹುದು. ಅವರಿಗೆ ಆಯಾ ಸಂಸ್ಥೆಗಳ ಮುಖ್ಯಾಧಿಕಾರಿಗಳ ಮೂಲಕ ಆಮಂತ್ರಣ ಕಳುಹಿಸಿರುತ್ತದೆ. ಭಾಗ ವಹಿಸತಕ್ಕವರು ಇದೇ ೩೦ ನೇ ತಾ॥ ಯೊಳಗೆ ತಮ್ಮ ಹೆಸರುಗಳನ್ನು, ಕಳುಹಿಸಿ ಕೊಡಬೇಕಾಗಿ ಕಾರ್ಯದರ್ಶಿಗಳು ಕೋರಿರುತ್ತಾರೆ.

ಸಂತಾಪ ಸೂಚನೆ

ಕರ್ನಾಟಕ ಪ್ರಹಸನ ಪಿತಾಮಹರೂ, ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದ ಶ್ರೀ ಟಿ ಪಿ ಕೈಲಾಸಂರವರು ನಿಧನರಾದುದಕ್ಕೆ ಸಂತಾಪವನ್ನು ಸೂಚಿಸಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರುವ ನಿರ್ಣಯವನ್ನು ದೇಶೀಯ ವಿದ್ಯಾಶಾಲೆ, ಶಿಕ್ಷಣ ಪಟ್ಟಿ ವಿದ್ಯಾರ್ಥಿ ಸಂಘ, ಕಲಾಕೂಟ, ಮತ್ತು ಭಾರತೀ ಕಲಾ ಸಂಘಗಳಲ್ಲಿ ನಡೆದ ಸಭೆಗಳಲ್ಲಿ ಮಾಡಲಾಯಿತು.

ದತಿಯಾ ಮಹಾರಾಣಿಯವರ ಉಪವಾಸ

ಮಧ್ಯ ಇಂಡಿಯಾದಲ್ಲಿರುವ ದತಿಯಾ ಸಂಸ್ಥಾನದಲ್ಲಿ ವಿಪರೀತ ಪರಿಸ್ಥಿತಿ ತಲೆದೋರಿದೆ. ಕೋಮುವಾರು ವಿಷವನ್ನು ಹರಡುತ್ತಿದ್ದ ದಿವಾನರಾದ ಖಾ॥ ಐನುದ್ದೀನರವರನ್ನು ಮಹಾರಾಜರ ಅಭಿಪ್ರಾಯಕ್ಕೆ ವಿರುದ್ಧವಾಗಿ ಅಲ್ಲಿನ ರೆಸಿಡೆಂಟರು ಅಧಿಕಾರದಲ್ಲಿ ಇರಿಸಿರುವುದೇ ಇದಕ್ಕೆಲ್ಲಾ ಮೂಲಕಾರಣ. ಇದನ್ನು ಪ್ರತಿಭಟಿಸಿ ಆ ಸಂಸ್ಥಾನದ ಸಭ್ಯರು, ಪುರಸಭೆ, ಕೋರ್ಟು ಮುಂತಾದ ಕಛೇರಿ ನೌಕರರುಗಳೆಲ್ಲರೂ, ಮುಷ್ಕರ ಹೂಡಿದ್ದಾರೆ. ಎಲ್ಲಾ ಸರ್ಕಾರಿ ಕಾಲೇಜುಗಳು, ಶಾಲೆಗಳೂ, ಬಂದಾಗಿವೆ ಅಂಗಡಿಗಳೆಲ್ಲಾ ಮುಚ್ಚಿವೆ. ಆ ದಿವಾನರನ್ನು ಪುನಃ ರೆಸಿಡೆಂಟರು ನೇಮಿಸಿಕೊಂಡಿರುವುದನ್ನು ವಿರೋಧಿಸಿ ಅಲ್ಲಿನ ಮಹಾರಾಣಿಯವರು ಉಪವಾಸ ಮುಷ್ಕರವನ್ನು ಆರಂಭಿಸಿದ್ದಾರೆಂದು ಗೊತ್ತಾಗಿದೆ.

೫೬೨ ಸಂಸ್ಥಾನಗಳ ಸಂಘಟನಾ ಯತ್ನ

ಮುಂದಿನ ಕೇಂದ್ರಸರ್ಕಾರದೊಡನೆ ಸಂಧಾನ ನಡೆಸಲು ೫೬೨ ದೇಶೀಯ ಸಂಸ್ಥಾನಗಳ ಸಂಘಟನಾ ಪ್ರಯತ್ನವೊಂದು ಗುಪ್ತವಾಗಿ ಸಾಗುತ್ತಿರುವ ಬಗ್ಗೆ ಅಧಿಕಾರ ಯೋಗ್ಯದ ಪತ್ರಗಳನ್ನು ತಾವು ಮುದ್ದಾಗಿ ನೋಡಿರುವುದಾಗಿ ಡಾ॥ ಪಟ್ಟಾಭಿ ಸೀತಾರಾಮಯ್ಯನವರು ದೇಶೀಯ ಸಂಸ್ಥಾನಗಳ ಬಗ್ಗೆ ನಿರ್ಣಯವನ್ನು ಕಾಂಗ್ರೆಸ್ ವಿಷಯ ನಿಯಾಮಕ ಸಮಿತಿ ಸಭೆಯಲ್ಲಿ ಮಂಡಿಸುವಾಗ ಬಹಿರಂಗ ಪಡಿಸಿದ್ದಾರೆ.

ಗಾಂಧೀಜಿಯವರು ಬಂಗಾಳಿ ಕಲಿಯುವರು

ಶ್ರೀರಾಮಪುರದಲ್ಲಿರುವ ಮ ಹಾ ತ್ಮ ಗಾಂಧೀಜಿಯವರಿಗೆ ಬಂಗಾಳಿ ಓದುವುದು ಮತ್ತು ಬರೆಯುವುದನ್ನು ತಾವು ಕಲಿಸುತ್ತಿರುವುದಾಗಿ ಶ್ರೀ॥ ನಿರ್ಮಲ ಬೋಸರು ತಿಳಿಸಿರುತ್ತಾರೆ.

ಕೈಲಾಸಂ ರಂಗಮಂಟಪ

ಮೈಸೂರು ೨೫

ರಾಜಧಾನಿಯ ಕಲಾ ಕೂಟದ ಕಾರ್ಯಸಮಿತಿ ೧ ದಿನದ ಹಿಂದೆ ಕೈಲಾಸಂರ ಸ್ವರ್ಗಸ್ಥರಾದ ವಾರ್ತೆ ಬಂದೊಡನೆ ಸಭೆ ಸೇರಿ ಅವರು ತಮ್ಮನ್ನಗಲಿ ಕಲೋಪಾಸಕರನ್ನು ಅಗಲಿದ್ದಕ್ಕಾಗಿ ವ್ಯಥೆಪಟ್ಟಿತು. ಇಲ್ಲದೆ ಶ್ರೀ ಕೈಲಾಸಂರ ಸ್ಮಾರಕವಾಗಿ ಅವರೇ ಹೇಳಿದ ಸಿದ್ಧಾಂತಕ್ಕೆ ತಕ್ಕ ನಾಟಕರಂಗ ಮಂಟಪವೊಂದನ್ನು ನಿರ್ಮಿಸಲು ಸಕಲ ಪ್ರಯತ್ನ ಕೈಗೊಳ್ಳಬೇಕೆಂದೂ ತೀರ್ಮಾನಿಸಿದರು.

ಶಿವಲಿಂಗಕ್ಕೆ ಮುಖವಾಡ

ಶ್ರೀಮನ್ಮಹಾರಾಜಾ ಸಂಸ್ಕೃತ ಮಹಾಪಾಠಶಾಲೆಯಲ್ಲಿರುವ ಶ್ರೀ ಸದ್ಗುರು ಸೇವಾಮಂಡಲದ ಕಾರ್ಯ ನಿರ್ವಾಹಕ ಸಮಿತಿಯ ಸದಸ್ಯರಾದ ಕುಮಾರ ಮಾಧವ ಬ್ರ॥ ಶ್ರೀ॥ ಪಂ॥ ಶ್ರೀ ಶ್ರೀಕಂಠಶಾಸ್ತ್ರಿಗಳವರು ಶ್ರೀಶ್ರೀಗಳವರ ದೇವಾಲಯದಲ್ಲಿ ಪ್ರತಿಷ್ಠಿತವಾಗಿರುವ ಶಿವಲಿಂಗಕ್ಕೆ ಧರಿಸಲು ಮುಖವಾಡವನ್ನು ತಯಾರು ಮಾಡಿಸಿ ಅರ್ಪಿಸಿದ್ದಾರೆ.

— —

ವ ರ್ಕಿಂಗ್ ಲೀಗ್ ಪ್ರತ್ಯೇಕ ಸೇರಿದವರಿಗಾಗಿಯೇ ಪ್ರತ್ಯೇಕ ರಾಜ್ಯಾಂಗ ಸಭೆಯು ಬೇಕೆಂಬ ಸೂಚನೆಯನ್ನು ಪಡ್ಡವಿಸ್ಥೆ ಮಿ॥ ಜಿನ್ನಾರವರು ಮಂಡಿಸುವರಾಗಿ ಕರಾಚಿಯಿಂದ ಸುದ್ದಿ ಬಂದಿದೆ.

ಸಾಧ್ವಿ

ತಾ|| ೨೫-೧೧-೪೬ ಸೋಮವಾರ

ಕಾಂಗ್ರೆಸ್ಸಿನ ನಿರ್ಧಾರಗಳು

ಮೀರತ್ ನಗರದಲ್ಲಿ ನಡೆದ ಕಾಂಗ್ರೆಸ್ ಮಹಾಧಿವೇಶನವು ಮಹತ್ತರವಾದ ಹಲವು ನಿರ್ಣಯಗಳನ್ನು ಮಾಡಿರುತ್ತದೆ. ಹಿಂದೂಸ್ಥಾನದ ಜನರು ಸಂಪೂರ್ಣ ಐಕಮತ್ಯದಿಂದ ಕೋಮುವಾರು ಭಿನ್ನಭಾವಗಳನ್ನು ಹಿಂಬದಿಗಿಟ್ಟು, ಸ್ವಾತಂತ್ರ್ಯ ಸಾಧನೆಯ ಪ್ರಯತ್ನವನ್ನು ಮುಂದುವರಿಸುವುದು; ಪೂರ್ಣ ಸ್ವಾತಂತ್ರ್ಯದಿಂದ ಕೂಡಿದ ಸರ್ವಾಧಿಕಾರವುಳ್ಳ ರಿಪಬ್ಲಿಕ್ ಮಾದರಿಯ ಪ್ರಜಾಪ್ರಭುತ್ವವನ್ನು ಆರ್ಥಿಕ ಮತ್ತು ಸಾಮಾಜಿಕ ಸಮಾನತೆಯ ಆಧಾರದ ಮೇಲೆ ರಚಿಸುವುದು; ತಾತ್ಕಾಲಿಕ ಮಂತ್ರಿಮಂಡಲದಲ್ಲಿ ಕಾಂಗ್ರೆಸ್ ಪ್ರವೇಶಿಸಿರುವುದನ್ನೂ, ರಾಜ್ಯಾಂಗ ರಚನಾ ಸಭೆಯಲ್ಲಿ ಭಾಗ ವಹಿಸುವುದನ್ನೂ ಅನುಮೋದಿಸುವುದು, ಸಂಸ್ಥಾನಗಳ ಸ್ವಾತಂತ್ರ್ಯ ಚಳುವಳಿಗೆ ಬೆಂಬಲ ನೀಡುವುದು; ಇಂಡೊನೇಷಿಯಾ ದೇಶಕ್ಕೆ ಅಭಿನಂದನೆ ಸಲ್ಲಿಸುವುದು-ಇವೇ ಮುಂತಾದ ನಿರ್ಣಯಗಳು ಅಂಗೀಕರಿಸಲ್ಪಟ್ಟವು.

ಸ್ವರಾಜ್ಯವೆಂದರೆ ರೈತನ ರಾಜ್ಯ, ಸ್ವಾತಂತ್ರ್ಯವು ದೇಶದ ಸಕಲ ಪ್ರಜೆಗಳ ಹಕ್ಕು; ದುಡಿಯುವವರ, ಬೆಳೆಯುವವರ ಮತ್ತು ಸಕಲ ಪ್ರಜೆಗಳ ಸ್ವಾತಂತ್ರ್ಯವೇ ಸ್ವರಾಜ್ಯ-ಎಂದು ಕಾಂಗ್ರೆಸ್ಸು ಸಾರುತ್ತಿರುವುದನ್ನು ಕಾರ್ಯ ರೂಪಕ್ಕೆ ತರಲು ಇಂದು ತೊಡಗಿರುತ್ತದೆ.

ಸಂಸ್ಥಾನಗಳ ವಿಷಯದಲ್ಲಿ ಈ ಸಾರಿ ಕಾಂಗ್ರೆಸ್ಸಿನ ನೀತಿಯು ಒಂದು ಹೆಜ್ಜೆ ಮುಂದೆ ಹೋಗಿರುತ್ತದೆ. ಕೇವಲ ಬಾಯಿ ಮಾತ್ರದ ಸಹಾನುಭೂತಿಯನ್ನು ಸೂಚಿಸದೆ, ಸಂಸ್ಥಾನಗಳಲ್ಲಿ ಜವಾಬ್ದಾರಿ ಪ್ರಭುತ್ವಕ್ಕಾಗಿ ನಡೆಯುವ ಹೋರಾಟಗಳಿಗೆ ಬೆಂಬಲ ನೀಡುವುದಾಗಿ ಸೂಚಿಸಿರುತ್ತದೆ. ಸಂಸ್ಥಾನಗಳಲ್ಲಿ ಪ್ರಜಾ ಪ್ರಭುತ್ವಕ್ಕಾಗಿ ನಡೆಯುತ್ತಿರುವ ಚಳುವಳಿಯು ಇಡೀ ಹಿಂದೂಸ್ಥಾನದ ಸ್ವಾತಂತ್ರ್ಯದ ಹೋರಾಟದ ಒಂದು ಅಂಗವೆಂದು ಅಂಗೀಕರಿಸಲಾಗಿದೆ. ಇನ್ನು ಮುಂದೆ ಸಂಸ್ಥಾನಗಳಲ್ಲಿ ನಡೆಯುವ ದಬ್ಬಾಳಿಕೆಗಳನ್ನು ನೋಡಿ ಕೊಂಡು ಕಾಂಗ್ರೆಸ್ಸು ಕಣ್ಣು ಮುಚ್ಚಿ ಕುಳಿತು ಕೊಂಡಿರಲಾರದು. ನೆರೆಯ ಪ್ರಾಂತಗಳಂತೆಯೇ ಸಂಸ್ಥಾನಗಳೂ ರಾಜಕೀಯ ಸುಧಾರಣೆಗಳಲ್ಲಿ ಮುಂದುವರಿಯಲೇ ಬೇಕು; ಇಲ್ಲವಾದರೆ, ಅಲ್ಲಿನ ಪ್ರಜೆಗಳು ಕೈಗೊಳ್ಳುವ ಕಾರ್ಯ ಕ್ರಮಗಳಲ್ಲಿ ಕಾಂಗ್ರೆಸ್ಸು ಕೈ ಹಾಕಬೇಕಾಗುವುದು. ಇದನ್ನು ಸಕಾಲದಲ್ಲಿ ರಾಜರುಗಳು ಅರಿತು ಕಾಲವು ಮಿಂಚಿ ಹೋಗುವ ಮುಂಚೆಯೇ ತಮ್ಮ ಪ್ರಜೆಗಳಿಗೆ ಅಧಿಕಾರವನ್ನು ವಹಿಸುವುದು ಯುಕ್ತವಾಗಿದೆ.

ಆಚಾರ್ಯ ಕೃಪಲಾನಿಯವರ ನೇತೃತ್ವದಲ್ಲಿ ಕಾಂಗ್ರೆಸ್ ಮಹಾ ಸಭೆಯು ಮೇಲ್ಕಂಡ ಪ್ರಾಮುಖ್ಯವಾದ ನಿರ್ಧಾರಗಳನ್ನು ಮಾಡಿರುತ್ತದೆ. ಅವುಗಳನ್ನು ಕೂಡಲೇ ಜಾರಿಗೆ ತಂದು ಸ್ವತಂತ್ರ ಭಾರತದ ಸ್ಥಾಪನೆಯ ಆಚಾರ್ಯ ಬೀರರನ್ನು ಮಹಾಸಭೆಯ ಅಧ್ಯಕ್ಷ ಕೃಪಲಾನಿಯವರಿಗೆ ಭಗವಂತನು ಅನುಗ್ರಹಮಾಡಲೆಂದು ಹಾರೈಸುತ್ತೇವೆ.

ವಾರ ಭವಿಷ್ಯ

(ಶ್ರೀ ಸಚ್ಚಿದಾನಂದಸ್ವಾಮಿಗಳವರಿಂದ)

ತಾ|| ೨೫-೧೧-೪೬ರಿಂದ ೧-೧೨-೪೬ರವರೆಗೆ

ಮೇಷ—ಆರೋಗ್ಯ ಕೆಡುತ್ತದೆ. ನೌಕರಿ ವ್ಯವಹಾರಗಳಲ್ಲಿ ಆಲಸಿಕೆ, ಜೀವನದಲ್ಲಿ ಬೇಸರ. ತಾ|| ೨೫-೨೬ ಭಗು, ಖರ್ಚು.

ವೃಷಭ—ಆರೋಗ್ಯ ಸಾಧಾರಣ. ವ್ಯಾಪಾರ ಉದ್ಯೋಗಗಳಲ್ಲಿ ಮಿಶ್ರ ಫಲ, ನಿರಾಶೆ. ತಾ|| ೨೬-೨೮-೩೦ ಅಧಿಕ ವ್ಯಯ, ತಿರಸ್ಕಾರ.

ಮಿಥುನ—ಆರೋಗ್ಯ ಚೆನ್ನಾಗಿರುತ್ತದೆ. ಆಕಸ್ಮಿಕ ಪ್ರವಾಸ, ಧನ ಲಾಭ ಸಾಧಾರಣ. ವ್ಯಾಪಾರ ಉದ್ಯೋಗಗಳಲ್ಲಿ ಪ್ರಗತಿ. ತಾ|| ೨೮-೩೦ ಖರ್ಚು, ಸಂತೋಷ.

ಕಟಕ—ಆರೋಗ್ಯ ಉತ್ತಮ, ಉದ್ಯೋಗ ವ್ಯವಹಾರಗಳಲ್ಲಿ ಜಯ, ಧನಾದಾಯ ಸಾಧಾರಣ. ತಾ|| ೨೬-೨೭-೩೦ ಖರ್ಚು, ಅವಮಾನ.

ಸಿಂಹ—ಆರೋಗ್ಯ ಕೆಡುತ್ತದೆ. ಮಿತ್ರರೊಡನೆ ಕಲಹ, ಶತ್ರುಗಳಿಂದ ಕಿರುಕುಳ, ಖರ್ಚು ಅಧಿಕ. ತಾ|| ೨೬-೨೯-೧ ಸಾಧಾರಣ.

ಕನ್ಯಾ—ಆರೋಗ್ಯ ಸಾಧಾರಣ. ಉದ್ಯೋಗ ವ್ಯವಹಾರಗಳಲ್ಲಿ ಸನ್ಮಾನ, ಪ್ರವಾಸದಿಂದ ಲಾಭ, ಮಿತ್ರರಿಂದ ಸಹಾಯ. ತಾ|| ೨೬-೨೭-೧ ಲಾಭ, ಮಿತ್ರ ಭೇಟಿ, ಸನ್ಮಾನ.

ತುಲಾ—ಆರೋಗ್ಯಕ್ಕೆ ಧಕ್ಕೆ ತಗಲುತ್ತದೆ. ವ್ಯವಹಾರದಲ್ಲಿ ನಷ್ಟ. ಮಿತ್ರರಿಗಾಗಿ ಅಧಿಕ ಖರ್ಚು. ತಾ|| ೨೭-೩೦ ವಿವಾದ, ಬಂಧು ಭೇಟಿ.

ವೃಶ್ಚಿಕ—ದೇಹಸ್ಥಿತಿ ಸಾಧಾರಣ. ಉದ್ಯೋಗ ವ್ಯವಹಾರಗಳಲ್ಲಿ ಕಿರುಕುಳ, ಪ್ರವಾಸದಿಂದ ತೊಂದರೆ. ತಾ|| ೨೭-೩೦ ಮಿತ್ರ ಸಹಾಯ, ಧನ ಲಾಭ.

ಧನುಸ್ಸು—ಆರೋಗ್ಯ ಕೆಡುತ್ತದೆ. ಹಣದ ಮುಗ್ಗಟ್ಟು ಹೆಚ್ಚುತ್ತದೆ. ಮಿತ್ರರಿಂದ ತಿರಸ್ಕಾರ, ಮಾನಸಿಕ ಅಶಾಂತಿ ಹೆಚ್ಚುತ್ತದೆ. ತಾ|| ೨೫-೨೬ ಖರ್ಚು, ಬೇಸರಿಕೆ, ಪ್ರವಾಸ.

ಮಕರ—ಆರೋಗ್ಯ ಉತ್ತಮ. ಉದ್ಯೋಗ ವ್ಯವಹಾರಗಳಲ್ಲಿ ಜಯ, ಅಧಿಕಾರಿಗಳಿಂದ ಸನ್ಮಾನ, ಪ್ರವಾಸದಿಂದ ಲಾಭ. ತಾ|| ೨೬-೩೦ ಪರೋಪಕಾರ, ಶಾಂತಿ.

ಕುಂಭ—ಆರೋಗ್ಯ ಚೆನ್ನಾಗಿರುತ್ತದೆ. ಧನ ಲಾಭ ಉತ್ತಮ. ಉದ್ಯೋಗ ವ್ಯವಹಾರಗಳಲ್ಲಿ ಉನ್ನತಿ. ಪ್ರವಾಸ. ತಾ|| ೨೮-೨೯ ಮಹತ್ವ ಕಾರ್ಯ ಸಾಧನೆ, ಖರ್ಚು.

ಮೀನ—ಆರೋಗ್ಯ ಸಾಧಾರಣ. ಪ್ರಿಯ ಜನರ ಭೇಟಿ. ಹಣದ ಅಡಚಣೆ ಕಡಿಮೆಯಾಗುತ್ತದೆ. ಉದ್ಯೋಗ ವ್ಯವಹಾರಗಳಲ್ಲಿ ಅನಿರೀಕ್ಷಿತ ಜಯ. ತಾ|| ೨೬-೨೮-೧ ಮಿತ್ರ ಸಹಾಯ, ಧನ ಲಾಭ, ಬಂಧು ಭೇಟಿ.

ಗುಡ್ಡಗಾಡಿನವರು ಕಾಂಗ್ರೆಸ್ಸಿಗೆ

ಪಂಜಾಬಿನ ಸ್ಥಾನದ ರೆಸಿಡೆಂಟರಿಂದ ಲೀಗ್ ಪ್ರಚಾರಕ್ಕಾಗಿ ಕಳುಹಿಸಲ್ಪಟ್ಟಿದ್ದ ಸೂಫಿಯ ಪೀರರನ್ನು ಈಪಿ ಫಕೀರರು ತಿರಸ್ಕರಿಸಿ ಕಳುಹಿಸಿರುತ್ತಾರೆ. ಮೊನ್ನೆ ಮೊನ್ನೆ ಬಾಂಬಿನ ಧಾಳಿಗೆ ಗುರಿಯಾದ ಗುಡ್ಡಗಾಡಿನ ಮಲ್ಲಿಕರ್ ಕಾಂಗ್ರೆಸ್ಸಿಗೆ ಸೇರಲು ಕಾತುರರಾಗಿದ್ದಾರೆಂದು ಗಡಿನಾಡಿನ ಡಾ|| ಖಾನ್ ಸಾಹೇಬರು ತಿಳಿಸಿರುತ್ತಾರೆ.

ವಯಸ್ಕರ ಶಿಕ್ಷಣ

ಸ್ವಂ ಸು] ಯಳಂದೂರು ೨೬

ಇದೇ ೯ ಮತ್ತು ೧೦ ನೇ ತಾ|| ಗಳಲ್ಲಿ ವಯಸ್ಕರ ಶಿಕ್ಷಣ ಶಿಬಿರದ ಆರಂಭೋತ್ಸವವು ಸ್ಕೂಲುಗಳ ಅ|| ಇ|| ಶ್ರೀ ಎ. ಸಿ. ಸುಬ್ಬಪ್ಪನವರ ಅಧ್ಯಕ್ಷತೆಯಲ್ಲಿ ನೆರವೇರಿತು. ವಯಸ್ಕರ ಶಿಕ್ಷಣ ಸಮಿತಿಯ ಅಧಿಕಾರಿಗಳೂ, ಉಪಾಧ್ಯಾಯ ವರ್ಗದವರೂ ಭಾಗ ವಹಿಸಿದ್ದರು.

ಮೈಸೂರ್ ಡಿವಿಜನ್ ಅಸಿಸ್ಟೆಂಟ್ ರಿಜಿಸ್ಟ್ರಾರ್ರವರ ಕೋರ್ಟಿನಲ್ಲಿ

ಮೊಕದ್ದಮೆ ನಂ 216—45-46.

ವಾದಿ:—ಶ್ರೀ ಜಯಚಾಮರಾಜೇಂದ್ರ ಕೋ-ಆಪರೇಟಿವ್ ಸೊಸೈಟಿ, ಲಿಮಿಟೆಡ್.

ಪ್ರತಿವಾದಿ:—ಯಮ್ ಕೃಷ್ಣದಾಸ್ 2556-1 ಚಾಮರಾಜ ಅರಸ್ ರೋಡ್, ಮೈಸೂರು

ಮೊಕದ್ದಮೆ ನಂ 217—45-46.

ವಾದಿ:—ಶ್ರೀ ಜಯಚಾಮರಾಜೇಂದ್ರ ಕೋ-ಆಪರೇಟಿವ್ ಸೊಸೈಟಿ, ಲಿಮಿಟೆಡ್.

ಪ್ರತಿವಾದಿ:—ಎನ್ ವೆಂಕಟರಾವ್ 2556-1 ಚಾಮರಾಜ ಅರಸ್ ರೋಡ್, ಮೈಸೂರು.

ಈ ಪ್ರತಿವಾದಿಗಳಿಂದ ಸೊಸೈಟಿಗೆ ಬರಬೇಕಾದ ಬಾಕಿಗಾಗಿ ಮೇಲ್ಕಂಡ ಕೋರ್ಟಿನಲ್ಲಿ ದಾಖಲ್ಮಾಡಿರುವ ಮೇಲ್ಕಂಡ ಮೊಕದ್ದಮೆಗಳು 30-11-46 ನೇ ತಾ|| 12 ಘಂಟೆಗೆ ಆಖೈರ್ ತೀರ್ಮಾನಕ್ಕಾಗಿ ಹಿಯರಿಂಗ್ ಇರುತ್ತೆ. ಆ ದಿನ ಪ್ರತಿವಾದಿಗಳು ಕೋರ್ಟು ರೂಬರೂ 12 ಘಂಟೆಗೆ ಹಾಜರಾಗದೇ ಇದ್ದಲ್ಲಿ ಅವರುಗಳ ಮೇಲೆ ಏಕಪಕ್ಷೀನಿರ್ಣಯವಾಗುವುದೆಂದು ಇದರಿಂದ ತಿಳಿಯಪಡಿಸಿದೆ.

ಕೆ. ವಿ. ವೆಂಕಟಸುಬ್ಬಯ್ಯ,
ಆನರರಿ ಸೆಕ್ರೆಟರಿ.

Edited, printed and published by A. R. Nagarajan at the Sadhvi Press D. Subbiah Road, Mysore.

ಸಂತಾಪ ಸೂಚನೆ

ಸ್ವಂ. ಸು] ಚಾಮರಾಜನಗ[illegible]

ಇಲ್ಲಿನ ಕಾಂಗ್ರೆಸ್ ಸಮಿತಿಯ [illegible] ದಲ್ಲಿ ಪಂ|| ಮದನಮೋಹನ ಮಾಳವೀಯರ ನಿಧನಕ್ಕಾಗಿ ಸಂತಾಪ ಸೂಚಕ [illegible] ಆಚರಣೆಯು ನಿನ್ನೆ ಜರುಗಿತು. [illegible] ಮುಸ್ಲಿಮರ ಹೊರತಾಗಿ ಎಲ್ಲಾ [illegible]ರೂ, ಅಂಗಡಿ ಮತ್ತು ಹೋಟಲು[illegible] ಮುಚ್ಚಿ ಹರತಾಳವನ್ನು ಆಚರಿ[illegible] ಸಂಜೆ ಪೂಜೀಗುಡಿ ಮೈದಾನದಲ್ಲಿ [illegible] ವಿ. ಕೃಷ್ಣಮೂರ್ತಿಯವರ ಅಧ್ಯಕ್ಷತೆ[illegible] ಬಹಿರಂಗ ಸಭೆ ಜರುಗಿತು. ಶ್ರೀ[illegible] ಸಿ. ಗೋಪಾಲರಾವ್, ಎಸ್. [illegible] ಮತ್ತು ಪುಟ್ಟವೀರಪ್ಪನವರು [illegible] ಜೀವನ ಚರಿತ್ರೆಯ ವಿಷಯವಾಗಿ [illegible] ಮಾಡಿದರು. ಹಿಂದೂ ಮಹಾಸಭೆ[illegible]ರೂ ಕಾರ್ಯಕಲಾಪಗಳಲ್ಲಿ ಭಾಗಿಗ[illegible]ದ್ದರು.

ರಾಜಕಮಲ್
ಮೈಸೂರು
೨೨—೧೧—೪೬ ರಿಂದ
ಅಮೋಘವಾದ ಎರಡನೇ ವಾ[illegible]
'ಡಾಕ್ಟರ್ ಕೊಟ್ನಿ[illegible]
ಕಿ ಅಮರ್ ಕಹಾ[illegible]'
ಮುಖ್ಯ ಭೂಮಿಕೆ:— ಶಾಂತಾ[illegible]
ಉಲ್ಲಾಸ್, ವಿನಾಯಕ್,
ಪೆಂಡಾರ್‌ಕರ್, ಜಯಶ್ರೀ.

ಉಜ್ವಲ ಸತೀತ್ವಕ್ಕೆ

ಪಂಡಿತ ಡಿ. ಗೋಪಾಲಾಚಾರ್ಯ[illegible]
ಅರುಣ[illegible]
ಗರ್ಭಾಶಯರೋಗ ನಿವಾ[illegible]

ಅರುಣ ಸುತು [illegible] ಯನ್ನು ನಿರ್ಮೂಲ[illegible] ಪೂರ್ಣ ಸ್ತ್ರೀತ್ವವ[illegible] ಸಾಧಿಸುವ ಸ್ತ್ರೀಯ[illegible] ರ್ಣವಾದ ದಿವ್ಯೌಷ[illegible] ದನ್ನು ಬಿಡದೆ ಸೇ[illegible] ರಾದರೆ, ನಿಮ್ಮ [illegible] ಪರಮಾವಧಿಯಾ[illegible] ಮಂದಾನಂದವನ್ನು [illegible] ನೆ ಒದಗಿಸಲ್ಪಡುವು[illegible]
ಆಯುರ್ವೇದಾಶ್ರಮಂ ಲಿಮಿಟೆಡ್
[illegible]-ನಗರ್. . . . ಮದರಾ[illegible]

ಶ್ರೀ ಗಣೇಶ ಟಾಕೀಸ್
೧೮-೧೧-೪೬ರಿಂದ ಪ್ರತಿ ದಿನ ೩ ಆಟಗಳು
ಗುಬ್ಬಿ ಫಿಲಂಸ್‌ರವರ
★ಹೇಮರೆಡ್ಡಿ ಮಲ್ಲಮ್ಮ★
ಮುಖ್ಯ ಭೂಮಿಕೆ:— ಜಯಮ್ಮ, ಹೊನ್ನಪ್ಪ ಭಾಗವತರ್, ಜಿ. ಹೆಚ್. ವೀರಣ್ಣ
ಸಿ. ಬಿ. ಮಲ್ಲಪ್ಪ

ಫೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಮಂಗಳವಾರ ೨೬—೧೧—೪೬ [ಸಂಚಿಕೆ ೯೭

ರೈಲ್ವೆ ದರಗಳನ್ನು — — ಹೆಚ್ಚಿಸಲಾಗುವುದು

ಪತ್ರಿಕೋದ್ಯೋಗಿಗೆ ಸಹಾಯ

ಮೈಸೂರು ೨೬

ಪತ್ರಿಕೋದ್ಯಮದಲ್ಲಿ ಉಚ್ಚಶಿಕ್ಷಣವನ್ನು ... ಅಮೇರಿಕದ ಸಿರಾಕ್ಯೂಸ್ ವಿಶ್ವವಿದ್ಯಾಲಯಕ್ಕೆ ತೆರಳಲಿರುವ ಮೈಸೂರಿನ ... ಶ್ರೀ ನಾಡಿಗ ಕೃಷ್ಣಮೂರ್ತಿಯವರಿಗೆ ಮಹಾಜನರು ಉದಾರವಾಗಿ ಸಹಾಯಮಾಡಿ ಅವರು ಕೈಕೊಂಡಿರುವ ಕಾರ್ಯವು ಯಶಸ್ವಿಯಾಗುವಂತೆ ... ನೀಡಬೇಕೆಂದು ಮೈಸೂರು ಪತ್ರಿಕೋದ್ಯೋಗಿಗಳ ಸಂಘದ ಅಧ್ಯಕ್ಷರಾದ ... ಅಗರಂ ರಂಗಯ್ಯನವರು ವಿನಂತಿಯನ್ನು ... ಪ್ರಕಟಿಸಿರುತ್ತಾರೆ

ಸ್ಯಾನಿಟರಿ ಇನ್ಸ್‌ಪೆಕ್ಟರುಗಳ ಸಭೆ

ಮೈಸೂರು ಜಿಲ್ಲಾ ಸ್ಯಾನಿಟರಿ ಇನ್ಸ್‌ಪೆಕ್ಟರುಗಳ ... ಮೊನ್ನೆ ಸಂಜೆ ರಾಜಧಾನಿಯ ... ಕಟ್ಟಡದಲ್ಲಿ ಸಂಸ್ಥಾನದ ಸ್ಯಾ॥ ... ಸಂಘದ ಅಧ್ಯಕ್ಷರಾದ ಶ್ರೀ॥ ಟಿ. ಕೃಷ್ಣಮೂರ್ತಿಯವರ ಅಧ್ಯಕ್ಷತೆಯಲ್ಲಿ ಸಭೆ ... ಮುಂದಿನ ಸಾಲಿಗೆ ಶ್ರೀಗಳಾದ ಎ. ... ಸ್ವಾಮಿಯರನ್ನು ಅಧ್ಯಕ್ಷರನ್ನಾಗಿಯೂ ಎಸ್ ಶ್ರೀನಿವಾಸಯ್ಯಂಗಾರ್‌ರವರನ್ನು ... ಮತ್ತು ಖಜಾಂಚಿಯನ್ನಾಗಿ ... ಶಿವಕುಮಾರ್, ಹಾಲಾರಾಧ್ಯ, ಬಿ ... ನರಸಿಂಹಯ್ಯಂಗಾರ್, ಬಿ ಎಸ್. ಗು ... ಮತ್ತು ಎಸ್. ಶಾಮಣ್ಣನವರ ... ಸಮಿತಿ ಸದಸ್ಯರನ್ನಾಗಿಯೂ ಆರಿಸಿ ... ಶ್ರೀಮನ್ಮಹಾರಾಜರಿಗೆ ಪ್ರಜಾಪ್ರಭುತ್ವ ... ದಕ್ಕೆ ರಾಜಭಕ್ತಿಯುತವಾದ ಅಭಿನಂದನ ನಿರ್ಣಯವನ್ನು ಅಂಗೀಕರಿಸಿದರು

ಮೊಕದ್ದಮೆ ವರ್ಗಾಯಿಸಬೇಕು

ಶ್ರೀಯುತ ಎಂ. ಆರ್. ಸಿ ಬಸಪ್ಪನವರು ಪೌರಸಭೆಯ ಕಾಂಗ್ರೆಸ್ ಸದಸ್ಯರ ... ಒಂದನೇ ಮುನಸೀಫ್ ಕೋರ್ಟಿನಲ್ಲಿ ... ಹೂಡಿದ್ದ ಮೊಕದ್ದಮೆಯನ್ನು ಬೇರೆ ... ಕೋರ್ಟಿಗೆ ವರ್ಗಾಯಿಸಬೇಕೆಂದು ಸೆಷನ್ಸ್ ... ನ್ಯಾಯಾಧೀಶರಲ್ಲಿ ಪೌರಸಭೆಯ ಕೆಲವು ... ಸದಸ್ಯರು ಅರ್ಜಿ ಸಲ್ಲಿಸಿದ್ದರು ನ್ಯಾಯಾಧೀಶರು ಅರ್ಜಿಯನ್ನು ಪರಿಶೀಲಿಸಿ ತೀರ್ಮಾನ ಮಾಡುವ ವರೆಗೆ ಈಗ ನಡೆಯುತ್ತಿರುವ ಮೊಕದ್ದಮೆಯನ್ನು ನಿಲ್ಲಿಸಬೇಕೆಂದು ... ಮಾಡಿರುವರೆಂದೂ, ಅದರಂತೆಯೇ ... ಇದ್ದ ಸದರೀ ಮೊಕದ್ದಮೆಯನ್ನು ... ಮುಂದೂಡಲಾಯಿತೆಂದೂ ಗೊತ್ತಾಗಿದೆ.

ಕೃಷ್ಣರಾಜೇಂದ್ರ ಗಿರಣಿಯ ಕಾರ್ಮಿಕ ಸಂಘ

ಮೇಲ್ಕಂಡ ಸಂಘದ ಕಾರ್ಯಕಾರಿ ಸಮಿತಿ ಸಭೆಯು ಕಳೆದ ೧೭ ನೇ ಭಾನುವಾರ ... ಜರುಗಿ ಶ್ರೀಮನ್ಮಹಾರಾಜರವರಿಗೆ ... ಜನನವಾದುದಕ್ಕಾಗಿ ತನ್ನ ಸಂತೋಷವನ್ನು ವ್ಯಕ್ತಪಡಿಸಿತು.

ದಿವಂಗತ ಪಂ॥ ಮದನಮೋಹನ ಮಾಳವೀಯರ ನಿಧನದ ಬಗ್ಗೆ ಸಂತಾಪ ಸೂಚಿಸಿ ಅವರ ಆತ್ಮಕ್ಕೆ ಚಿರಶಾಂತಿಯನ್ನು ... . ರಾಜ್ಯಾಂಗ ರಚನಾ ಸಮಿತಿ ... ಸೂರಿನ ಪರವಾಗಿ ಚುನಾಯಿತ ಪ್ರ ... ಗಳನ್ನೇ ಕಳುಹಿಸಬೇಕೆಂದೂ ಸಹ ... ಮಾಡಲಾಯಿತು.

... ಮತ್ತು ಅರ್ಥ ಶಾಸ್ತ್ರ ಸಂಘ

... ಫಿಲೋಮಿನಾ ಕಾಲೇಜಿನ ಚರಿತ್ರೆ ... ಅರ್ಥ ಶಾಸ್ತ್ರ ಸಂಘದ ಆರಂಭೋತ್ಸವವನ್ನು ಶ್ರೀಮತಿ ಕಾಮೇಶ್ವರಮ್ಮನವರು ನಾಳೆ ಸಂಜೆ ೪-೩೦ ಗಂಟೆಗೆ ... ನೆರವೇರಿಸುವರು.

ಕಾಂಗ್ರೆಸ್ಸು ರಾಜೀನಾಮೆ ಕೊಡುವುದಿಲ್ಲ

ಈಗ ದೇಶದಾದ್ಯಂತವೂ ನಡೆಯುತ್ತಿರುವ ಗಲಭೆಗಳು ಕಾಂಗ್ರೆಸ್ ಸದಸ್ಯರನ್ನು ಕೇಂದ್ರ ಸರ್ಕಾರದಿಂದ ಹೊರದೂಡುವುದಕ್ಕಾಗಿ ನೇಯ್ದ ಬಲೆ. ಈ ಬಲೆಗೆ ನಮ್ಮನ್ನು ತಳ್ಳುವುದು ಸಾಧ್ಯವಿಲ್ಲ ಕೇಂದ್ರ ಸರ್ಕಾರಕ್ಕೆ ನಾವು ಸೇರಿದಾಗಲೇ ಎಂತಹ ಸಂದಿಗ್ಧ ಸಮಯ ಬಂದರೂ ಮಂತ್ರಿ ಮಂಡಲದಲ್ಲಿರಲು ನಿರ್ಧರಿಸಿಯೇ ತಾತ್ಕಾಲಿಕ ಸರ್ಕಾರದಲ್ಲಿ ಭಾಗವಹಿಸುತ್ತಿದ್ದೇವೆ. ನಮ್ಮಷ್ಟಕ್ಕೆ ನಾವೇ ಅದನ್ನು ಬಿಡುವ ಅಭಿಪ್ರಾಯವಿಲ್ಲ. ಕೇಂದ್ರ ಸರ್ಕಾರದಿಂದ ನಮ್ಮನ್ನು ಹೊರದೂಡಬೇಕಾದರೆ ನಮ್ಮನ್ನು ಡಿಸ್ಮಿಸ್ ಮಾಡಬೇಕು ಅಥವಾ ನಾವು ತಾತ್ಕಾಲಿಕ ಸರ್ಕಾರದಲ್ಲಿದ್ದು ಕೆಲಸಮಾಡುವುದರಿಂದ ಸಾರ್ಥಕವಿಲ್ಲವೆಂದು ತೋರಿಸಬೇಕು. ಎಂದು ಸರ್ದಾರ್ ಪಟೇಲರು ಮೀರತ್ತಿನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಹೇಳಿರುತ್ತಾರೆ.

ನಿವೃತ್ತರಾದವರಿಗೆ ಹೆಚ್ಚಿನ ತುಟ್ಟಿಭತ್ಯ

೪೦೦ ರೂ ಗಳಿಗಿಂತ ಕಡಿಮೆ ಪೆನ್ಷನ್ ಬರತಕ್ಕವರಿಗೆ ೮ ರೂ ೪೦೦ಕ್ಕೆ ಮೇಲ್ಪಟ್ಟು ೧೦೦೦ ರೂ ಗಳೊಳಗೆ ಬರತಕ್ಕವರಿಗೆ ೯ ರೂ ತುಟ್ಟಿಭತ್ಯ ಕೊಡಬೇಕೆಂದು ಮದರಾಸ್ ಸರ್ಕಾರದ ಕ್ಯಾಬಿನೆಟ್ ಉಪಸಮಿತಿಯು ಸರ್ಕಾರಕ್ಕೆ ಶಿಫಾರ್ಸುಮಾಡಿರುತ್ತದೆ.

ಸಂತಾಪ ಸೂಚನೆ

ರಾಜಧಾನಿಯ ಪತ್ರಿಕೋದ್ಯೋಗಿ ಸಂಘದ ವಿಶೇಷ ಸಭೆಯೊಂದು ನಿನ್ನೆ ಸಂಜೆ ಶ್ರೀ ಅಗರಂ ರಂಗಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿ ಶ್ರೀ ಟಿ. ಪಿ ಕೈಲಾಸಂರವರ ನಿಧನದ ಬಗ್ಗೆ ಸಂತಾಪವನ್ನು ವ್ಯಕ್ತಪಡಿಸಿ ದಿವಂಗತರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕರುಣಿಸುವಂತೆ ಪ್ರಾರ್ಥನೆ ನಡೆಸಲಾಯಿತು

ಜಿಲ್ಲಾ ಆಹಾರ ಸಮ್ಮೇಳನ

ಮೈಸೂರು ಜಿಲ್ಲಾ ಆಹಾರ ಸಮ್ಮೇಳನವು ಡಿಸೆಂಬರ್ ೧ ನೆ ತಾ॥ ಭಾನುವಾರ ಮಧ್ಯಾಹ್ನ ೨ ಗಂಟೆಗೆ ನಂಜನಗೂಡಿನಲ್ಲಿ ಸಾ॥ ಲಿಂಗಣ್ಣನವರ ಛತ್ರದಲ್ಲಿ ಜರುಗುವುದು ಜಿಲ್ಲೆಯ ಮಹಾಜನರೆಲ್ಲಾ ಸಮ್ಮೇಳನದಲ್ಲಿ ಭಾಗಿಗಳಾಗಬೇಕೆಂದು ಪ್ರಾರ್ಥಿಸಲಾಗಿದೆ

ಬೋಸರು ಬದುಕಿದ್ದಾರೆ

ಆಚಾರ್ಯ ಕೃಪಲಾನಿಯವರ ಆಶಯ

ಮೀರತ್ತಿನ ಕಾಂಗ್ರೆಸ್ ಅಧಿವೇಶನದಲ್ಲಿ ಸುಭಾಷ್ ಚಂದ್ರಬೋಸರ ನಿಧನದ ಬಗ್ಗೆ ಸಂತಾಪ ಸೂಚಿಸದೇ ಇದ್ದ ಬಗ್ಗೆ ಅಧ್ಯಕ್ಷ ಕೃಪಲಾನಿಯವರು ಮಾತನಾಡಿ ಅಖಿಲ ಭಾರತ ನಾಯಕರಾದ ಅವರನ್ನು ಒಂದು ಪಕ್ಷದ ಮುಖಂಡರನ್ನಾಗಿ ಯಾರೂ ಮಾಡದಿರಲಿ; ಅವರು ಯಾವ ಒಂದು ಪಕ್ಷಕ್ಕೂ ಸೇರಿದವರಲ್ಲ; ಅವರು ಭಾರತಕ್ಕೆ ಸೇರಿದವರು; ಅದಕ್ಕಾಗಿಯೇ ಅವರು ದುಡಿದರು ಮತ್ತು ಅದಕ್ಕಾಗಿಯೇ ಇನ್ನೂ ದುಡಿಯುತ್ತಿರುವರೆಂದು ನಾನು ಆಶಿಸುತ್ತೇನೆ,” ಎಂದು ಹೇಳಿದರು ನೆರೆಮನೆಯಂತಿರುವ ಈ ಭಾರತದಿಂದ ಹೊರ ದೇಶಕ್ಕೆ ಹೋಗಿ ಶಿಸ್ತಿನಿಂದ ಸೈನ್ಯವನ್ನು ಎಬ್ಬಿಸುವುದು ನಿಜವಾದ ರಾಷ್ಟ್ರ ಪ್ರೇಮಿಯು ಮಾಡುವ ಕೆಲಸ ಎಂದು ಹೇಳಿ ಬೋಸರ ಮುತ್ಸದ್ದಿತನಗಳಿಗಾಗಿ ಅವರನ್ನು ಅಭಿನಂದಿಸಿದರು.

ಕೋಮುವಾರು ಗಲಭೆಗೆ ಟೋರಿಗಳ ಧನಸಹಾಯ

ಭಾರತದಲ್ಲಿ ತಲೆಯೆತ್ತಿರುವ ಕೋಮುವಾರು ಗಲಭೆಗೆ ಬ್ರಿಟನ್ನಿನ ಟೋರಿಗಳ ಒಂದು ಗುಂಪು ಪೂರ್ಣ ಬೆಂಬಲವಿತ್ತಿದೆ ಗಲಭೆಕಾರರಿಗೆ ಅವರು ಧನಸಹಾಯ ಮಾಡುತ್ತಿದ್ದಾರೆ. ಈ ಬಗ್ಗೆ ಭಾರತದಲ್ಲಿ ಅವರ ದೂತರು ಇದ್ದಾರೆ ಎಂದು ಲಂಡನ್ನಿನಲ್ಲಿ ಬಲವಾದ ವದಂತಿ ಇರುವುದಾಗಿ ಈಗತಾನೆ ಬ್ರಿಟನ್, ಐರ್ಲೆಂಡ್ ಮತ್ತು ಸ್ವಿಡ್ಜರ್ಲೆಂಡ್ ಪ್ರವಾಸ ಮುಗಿಸಿಕೊಂಡು ನಾಗಪುರಕ್ಕೆ ಆಗಮಿಸಿರುವ ಶಾಸನ ಸಭಾ ಸದಸ್ಯರೂ, ಕಾರ್ಮಿಕ ಮುಖಂಡರೂ ಆದ ಶ್ರೀ॥ ರುಯಿಕರ್‌ರವರು ತಿಳಿಸಿದ್ದಾರೆ.

ಮಹಾತ್ಮರಿಗೆ ನಾಯಿ ದಾರಿ ತೋರಿಸಿತು

ಪೂರ್ವ ಬಂಗಾಳದ ದತ್ತಪಾರದ ಹತ್ತಿರ ... ವ ಹಳ್ಳಿಯೊಂದನ್ನು ಮಹಾತ್ಮ ಗಾಂಧಿಯವರು ಪರಿಶೀಲಿಸುತ್ತಿದ್ದಾಗ ಕರೀ ನಾಯಿಯೊಂದು ಮಹಾತ್ಮರ ಕಾಲಿನ ಬಳಿ ಬಾಲವನ್ನು ಅಲ್ಲಾಡಿಸುತ್ತಾ ಬಂದು ನಿಂತು, ಗಾಂಧೀಜಿಯವರನ್ನು ಬೆಂದ, ಬೂದಿಯಾಗಿದ್ದ ಮನೆಯೊಂದರ ಒಳಗೆ ಕರೆದುಕೊಂಡು ಹೋಯಿತು ಆ ಮನೆಯಲ್ಲಿ ೮ ಮಂದಿಯು ಕೊಲೆಯಾಗಿದ್ದು, ಅವರ ಮೂಳೆಗಳನ್ನು ಮಹಾತ್ಮರು ಅಲ್ಲಿ ಕಂಡರು ಎಂದು ವರದಿಯಾಗಿದೆ

ರೈಲ್ವೆ ದರ ಹೆಚ್ಚುವುದು

ಭಾರತದಲ್ಲಿ ರೈಲ್ವೆ ಪ್ರಯಾಣದ ದರವನ್ನು ಹೆಚ್ಚಿಸುವುದು ಅನಿವಾರ್ಯವಾಗಿದೆ ಎಂದು ಕೇಂದ್ರಸರ್ಕಾರದ ಸಂಚಾರ ಮಂತ್ರಿಗಳಾದ ಮಿ॥ ಅಸಫ್ ಅಲಿಯವರು ದೆಹಲಿಯಲ್ಲಿ ಅಖಿಲಭಾರತ ರೈಲ್ವೆ ಸಮ್ಮೇಳನದ ೨೦ನೇ ಅಧಿವೇಶನದಲ್ಲಿ ನಿನ್ನೆ ತಿಳಿಸಿದ್ದಾರೆ ರೈಲ್ವೆ ಕೆಲಸಗಾರರ ಬೇಡಿಕೆಗಳ ಬಗ್ಗೆ ಪಂಚಾಯಿತಿಯವರೂ, ಪೇ ಕಮಿಷನ್ನಿನವರೂ ಮಾಡಿರುವ ಸಲಹೆಗಳನ್ನು ಕಾರ್ಯರೂಪಕ್ಕೆ ತರಲು ಅವಶ್ಯಕವಾದ ಹಣಕಾಸನ್ನು ಒದಗಿಸಿಕೊಳ್ಳಲು ಈ ನಿರ್ಧಾರಕ್ಕೆ ಬರಬೇಕಾಗಿದೆಯೆಂದು ಅವರು ತಿಳಿಸಿದ್ದಾರೆ

ಮದ್ರಾಸಿನಲ್ಲಿ ನೆಹರು ಕಾಲೇಜ್

ವಿದೇಶಗಳಲ್ಲಿ ಭಾರತದ ಪ್ರತಿನಿಧಿಗಳಾಗಿ ಹೋಗಲು ಅವಶ್ಯಕವಾದ ಮುಖಂಡತ್ವ ಮತ್ತು ರಾಜತಾಂತ್ರಿಕ ಶಿಕ್ಷಣವನ್ನು ಕೊಡಲು ಮದ್ರಾಸಿನಲ್ಲಿ ಪಂಡಿತ ಜವಹರಲಾಲರ ಹೆಸರಿನಲ್ಲಿ ರಾಷ್ಟ್ರೀಯ ಕಾಲೇಜೊಂದನ್ನು ಸ್ಥಾಪಿಸಲಾಗುವುದೆಂದು ಗೊತ್ತಾಗಿದೆ ಮೈಸೂರಿನ ಶ್ರೀ॥ ವೈ ಜಿ. ಕೃಷ್ಣಮೂರ್ತಿಯವರು ಈ ಸಲಹೆ ಇತ್ತವರೆಂದು ವರದಿಯಾಗಿದೆ

ರೈತ ಖೈದಿಗಳಿಗೆ ಪೆರೋಲ್ ಬಿಡುಗಡೆ

ಬೆಳೆಸನ್ನು ಕಟಾವು ಮಾಡುವ ಸಲುವಾಗಿ ಸಂಯುಕ್ತ ಪ್ರಾಂತಗಳ ಸರ್ಕಾರವು ಖೈದಿಗಳನ್ನು ಪೆರೋಲ್ ಮೇಲೆ ಬಿಡುಗಡೆಮಾಡಲಿದೆ ಮೂರು ವರ್ಷಗಳ ಶಿಕ್ಷೆಗಳೊಳಗಾಗಿ ಮೂರು ತಿಂಗಳು ಕಾರಾಗೃಹವಾಸವನ್ನನುಭವಿಸುವ ರೈತ ಖೈದಿಗಳನ್ನು ಮೂರು ವಾರಗಳ ಕಾಲ ಬೆಳೆಸನ್ನು ಕಟಾವು ಮಾಡಲು ಬಿಡಲಿದೆಯೆಂದು ವರದಿಯಾಗಿದೆ.

ಕಾಂಗ್ರೆಸ್ ಅಧಿವೇಶನದ ಮುಕ್ತಾಯ

ಮೀರತ್ತಿನಲ್ಲಿ ಸೇರಿದ್ದ ಕಾಂಗ್ರೆಸ್ ಅಧಿವೇಶನವು ಮೊನ್ನೆ ದಿನ ಮುಕ್ತಾಯಗೊಂಡಿತು. ಆಚಾರ್ಯ ಕೃಪಲಾನಿಯವರು ಭಾಷಣ ಮಾಡಿ, ಕೋಮುವಾರು ಐಕಮತ್ಯಕ್ಕಾಗಿ ಸಾರ್ವಜನಿಕರು ಪ್ರಯತ್ನಿಸಬೇಕೆಂದರು ಇಂದಿನ ಭೀಕರ ಪರಿಸ್ಥಿತಿಯು ಪರಿಹಾರವಾಗಬೇಕಾದರೆ ಅಹಿಂಸಾ ನೀತಿಯ ಅನುಷ್ಠಾನವೇ ಸರಿಯಾದ ಮಾರ್ಗವೆಂದು ಹೇಳಿದರು.

ಮೈಸೂರು ಜಾಡಮಾಲಿಗಳು ಕೆಲಸಕ್ಕೆ ಹಿಂತಿರುಗಿದರು

ನಿನ್ನೆ ಮುಷ್ಕರ ಹೂಡಿದ್ದ ನಗರ ಸಭೆಯ ಜಾಡಮಾಲಿಗಳು ಈ ದಿನ ತಮ್ಮ ಕೆಲಸಗಳ ವೇಳೆ ಈ ದಿನ ಹಾಜರಾಗಿದ್ದಾರೆ.

ದಿವಾನರ ದೆಹಲಿ ಪ್ರಯಾಣ

ಸ್ವಂ. ಸು ಫೋ॥] ಬೆಂಗಳೂರು ೨೬

ದಿವಾನರು ಡಿಸೆಂಬರ್ ೨ ನೇ ತಾ॥ ಮೈಸೂರಿಗೆ ಪ್ರಯಾಣಮಾಡಿ ಶ್ರೀಮನ್ಮಹಾರಾಜರನ್ನು ದರ್ಶಿಸಿ ಅಲ್ಲಿಂದ ಬೊಂಬಾಯಿ ಮೂಲಕ ರೈಲಿನಲ್ಲಿ ದೆಹಲಿಯನ್ನು ಡಿ॥ ೫ ನೇ ತಾರೀಖು ತಲುಪುವರೆಂದು ಗೊತ್ತಾಗಿದೆ ಡಿಸೆಂಬರ್ ಮಧ್ಯಭಾಗದಲ್ಲಿ ಅವರು ಹಿಂದಿರುಗುವ ನಿರೀಕ್ಷೆಯಿದೆ

ಹಣಕಾಸಿನ ಕಾರ್ಯದರ್ಶಿಗಳಾದ ಶ್ರೀ ಬಿ ಎಸ್ ರಾಘವೇಂದ್ರರಾಯರು, ಡಿಸೆಂಬರ್ ೧ನೇ ತಾ॥ ನಿಂದ ಮೂರುವಾರಗಳು ರಜಹೋಗುವರೆಂತಲೂ, ಕಾಲದಲ್ಲಿ ... ಡೆಪ್ಯುಟಿ ಶ್ರೀ ಎಸ್ ... ಣ್ಣನವರು ಹಣ ಕಾಸಿನ ಕಾರ್ಯದರ್ಶಿಗಳ ಕೆಲಸವನ್ನು ನೋಡುವರೆಂದೂ ಗೊತ್ತಾಗಿದೆ

ಸಾಧ್ವಿ

ತಾ|| ೨೬-೧೧-೪೬ ಮಂಗಳವಾರ

ಕೊಚ್ಚಿ ಸಂಸ್ಥಾನದಲ್ಲಿ ಪತ್ರಿಕಾ ಸ್ವಾತಂತ್ರ್ಯ

ರಾಜಕೀಯ ವಿಚಾರಗಳಲ್ಲಿ ಮಾತ್ರವೇ ಅಲ್ಲದೆ ಇತರ ವಿಷಯಗಳಲ್ಲಿಯೂ ಕೊಚ್ಚಿ ಸಂಸ್ಥಾನವು ಮುನ್ನಡೆಯುತ್ತಿರುವುದು ಅಭಿನಂದನೀಯವಾದ ವಿಚಾರವಾಗಿದೆ. ಅಲ್ಲಿ ಈಗ ಇರುವ ಮಂತ್ರಿಮಂಡಲವನ್ನು ಪ್ರಜಾವಿಶ್ವಾಸಕ್ಕೆ ಪಾತ್ರರಾದವರಿಗೆ ಅಲ್ಲಿನ ಪ್ರಭುಗಳು ವಹಿಸಿ ಎಲ್ಲರ ಮೆಚ್ಚಿಗೆಯನ್ನೂ ಪಡೆದರು. ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವುದು ತಮ್ಮ ಗುರಿಯೆಂದು ಸಾರಿದರು. ಇದಕ್ಕಾಗಿ ಸಾರ್ವಜನಿಕ ಮುಖಂಡರ ನೇತೃತ್ವದಲ್ಲಿ ಸಮಿತಿಯನ್ನು ಸ್ಥಾಪಿಸಿದರು. ರಾಜ್ಯಾಂಗ ರಚನಾ ಸಮಿತಿಗೆ ಪ್ರಜೆಗಳಿಂದ ಚುನಾಯಿತರಾದ ಪ್ರತಿನಿಧಿಗಳನ್ನೇ ಕಳುಹಿಸುವುದಾಗಿ ಘೋಷಿಸಿದರು. ಕೇರಳ ಪ್ರಾಂತವನ್ನೆಲ್ಲಾ ಒಂದುಗೂಡಿಸಲು ಬೇಕಾದ ತ್ಯಾಗವನ್ನು ಮಾಡಲು ಸಿದ್ಧರಾಗಿರುವುದಾಗಿ ತಿಳಿಸಿದರು. ಈ ರೀತಿ ಪ್ರಗತಿಪರವಾದ ಮಾರ್ಗವನ್ನು ಅವಲಂಬಿಸಿ ಎಲ್ಲ ಸಂಸ್ಥಾನಗಳಿಗೂ ಮಾದರಿಯನ್ನು ಹಾಕಿ ಸಕಲ ದೇಶಾಭಿಮಾನಿಗಳ ಮನ್ನಣೆಗೂ ಪಾತ್ರರಾಗಿರುವರು.

ಕೊಚ್ಚಿ ಸಂಸ್ಥಾನವು ಪ್ರತಿದಿನವೂ ಇನ್ನೂ ಮುನ್ನಡೆಯುತ್ತಿರುವ ಸಂಗತಿಗಳು ವರದಿಯಾಗುತ್ತಿವೆ. ಅಲ್ಲಿ ಸಂಪೂರ್ಣ ಪಾನನಿರೋಧ ಕಾರ್ಯಕ್ರಮವನ್ನು ಕೈಗೊಳ್ಳಲಾಗುತ್ತಿದೆ. ಶಾಸನ ಸಭೆಗೆ ಖಾಸಗಿ ಚುನಾಯಿತ ಅಧ್ಯಕ್ಷರನ್ನು ಕೊಡಬೇಕೆಂಬ ನಿರ್ಣಯವನ್ನು ಸರ್ಕಾರದವರೇ ಅಂಗೀಕರಿಸಿರುತ್ತಾರೆ. ಎಲ್ಲಕ್ಕಿಂತಲೂ ಮಿಗಿಲಾಗಿ ಇದುವರೆಗೆ ಅಲ್ಲಿ ಜಾರಿಯಲ್ಲಿದ್ದ ಪತ್ರಿಕಾ ಶಾಸನವನ್ನು ರದ್ದುಮಾಡಲು ಅಲ್ಲಿನ ಶಾಸನ ಸಭೆಯಲ್ಲಿ ಬಂದ ಸೂಚನೆಯು ವಿರೋಧವಿಲ್ಲದೆ ಮಂಜೂರಾಗಿರುವುದು ಬಹಳ ಸಂತೋಷದ ಸಂಗತಿ. ನಮ್ಮ ಸಂಸ್ಥಾನದ ಶಾಸನ ಸಭೆಯಲ್ಲಿಯೂ ಇಂತಹುದೊಂದು ನಿರ್ಣಯವು ಒಂದು ಬಹುಮತದಿಂದ ತಿರಸ್ಕೃತವಾದುದನ್ನು ಬಲ್ಲವರೆಲ್ಲರಿಗೂ ಕೊಚ್ಚಿ ಸಂಸ್ಥಾನದ ಪ್ರಗತಿಪರ ಪರಿಸ್ಥಿತಿಯು ವೇದ್ಯವಾಗುವುದು.

ಇನ್ನು ಮುಂದೆ ಕೊಚ್ಚಿ ಸಂಸ್ಥಾನದಲ್ಲಿ ಪತ್ರಿಕೆಗಳನ್ನು ಬಾಧಿಸುವ ಯಾವ ಸಂಕೋಲೆಗಳೂ ಇರುವುದಿಲ್ಲ. ಭರತಖಂಡದಲ್ಲಿ ಮತ್ತೆಲ್ಲಿಯೂ ಇಲ್ಲದ ನಿರಾತಂಕವಾದ ಸ್ವಾತಂತ್ರ್ಯವನ್ನು ಅಲ್ಲಿನ ಪತ್ರಿಕೆಗಳು ಇನ್ನು ಮೇಲೆ ಉಪಭೋಗಿಸುವುವೆಂದು ಹೇಳಲಾಗಿದೆ. ನಾಗರಿಕ ಸ್ವಾತಂತ್ರ್ಯಗಳಲ್ಲಿ ಮೂಲಭೂತವಾದ ಪತ್ರಿಕಾ ಸ್ವಾತಂತ್ರ್ಯಕ್ಕೆ ಇದ್ದ ಅಡಚಣೆಗಳನ್ನು ನಿವಾರಿಸುವುದರಲ್ಲಿ ಅಗ್ರಸ್ಥಾನವನ್ನು ಪಡೆದಿರುವ ಕೊಚ್ಚಿ ಸಂಸ್ಥಾನಕ್ಕೆ ನಾವು ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಪ್ರಜಾನುರಾಗಕ್ಕೆ ಪಾತ್ರರಾಗಿ, ಪ್ರಜಾ ಹಿತ ದೃಷ್ಟಿಯಿಂದ, ಪ್ರಜಾ ಪ್ರಮುಖರ ಅಭಿಪ್ರಾಯದಂತೆ ವರ್ತಿಸಲು ಒಪ್ಪುವ ಅರಸರುಗಳಿಗೆಲ್ಲಾ ಈ ಬಗೆಯ ಉದಾರ ನೀತಿಯು ಸಹಜವಾಗಿಯೇ ಇರುತ್ತದೆ.

ಪತ್ರಿಕೆಗಳನ್ನು ಹೊರಡಿಸುವುದಕ್ಕೆ ಮುಂಚೆ ಸರ್ಕಾರದವರ ಅನುಮತಿಯನ್ನು ಪಡೆಯುವುದು, ಸರ್ಕಾರದವರು ತಮಗೆ ತೋಚಿದಾಗ ಸದರಿ ಅನುಮತಿಯನ್ನು ರದ್ದು ಮಾಡುವುದು-ಇವೇ ಮುಂತಾದುವು ಇದುವರೆಗೆ ಅಲ್ಲಿನ ಪತ್ರಿಕಾ ಶಾಸನದ ಸಂಕೋಲೆಗಳಾಗಿದ್ದುವು. ಇನ್ನು ಮುಂದೆ ಅವುಗಳು ತೊಲಗುವುವು. ಸಾಮಾನ್ಯ ಶಾಸನದ ವಿಧಿಗಳಿಗೆ ವಿನಾ ಬೇರೆ ಯಾವ ಪ್ರತ್ಯೇಕ ಶಾಸನಗಳಿಗೂ ಅಲ್ಲಿನ ಪತ್ರಿಕೆಗಳು ಇನ್ನು ಮೇಲೆ ಒಳಪಟ್ಟಿರುವುದಿಲ್ಲ. ಅಧಿಕಾರಿಗಳ ಆಗ್ರಹ ಮತ್ತು ಅನುಗ್ರಹಗಳಿಂದಲೇ ಪತ್ರಿಕೆಗಳು ಬದುಕಿರಬೇಕಾದ ಪ್ರಸಂಗವು ನಿರ್ನಾಮವಾಗಿರುತ್ತದೆ.

ಭಾರತ ಕೇಂದ್ರ ಸರ್ಕಾರದವರೂ ಸಹ ಪತ್ರಿಕಾ ಶಾಸನವನ್ನು ಸಂಪೂರ್ಣವಾಗಿ ತೊಡೆದು ಹಾಕುವ ವಿಷಯದಲ್ಲಿ ಇನ್ನೂ ಹಿಂದುಮುಂದು ನೋಡುತ್ತಿರುವರು. ಹೀಗಿರುವಲ್ಲಿ ಕೊಚ್ಚಿ ಸಂಸ್ಥಾನವು ಪತ್ರಿಕೆಗಳಿಗಿದ್ದ ಸಕಲ ನಿರ್ಬಂಧಗಳನ್ನೂ ತೆಗೆದುಹಾಕಲು ನಿರ್ಧರಿಸಿರುವುದು ವಿಶೇಷ ಅಭಿಮಾನದ ಸಂಗತಿ. ಆ ಸಂಸ್ಥಾನವು ಕೈಗೊಂಡಿರುವ ಇಂತಹ ಉದಾರ ನೀತಿಯು ಇತರ ಸಂಸ್ಥಾನಗಳ ಮತ್ತು ಕೇಂದ್ರ ಸರ್ಕಾರದ ಮೇಲೆಯೂ ತನ್ನ ಪ್ರಭಾವವನ್ನು ಬೀರಲೆಂದು ನಾವು ಹಾರೈಸುತ್ತೇವೆ.

ಬಹಿಷ್ಕಾರವು ಮುಸ್ಲಿಮರ ಆತ್ಮಹತ್ಯೆ

ಜಿನ್ನಾರವರು ರಾಜ್ಯಾಂಗ ಸಭೆಯನ್ನು ಬಹಿಷ್ಕರಿಸಿರುವುದನ್ನು ಅನುಮೋದಿಸುವುದರ ಮೊದಲು ಪರಿಸ್ಥಿತಿಯನ್ನು ಚೆನ್ನಾಗಿ ವಿಮರ್ಶಿಸಬೇಕೆಂದು ನಾನು ಮುಸ್ಲಿಂ ಮುಖಂಡರನ್ನು ಪ್ರಾರ್ಥಿಸುತ್ತೇನೆ. ಲೀಗು ರಾಜ್ಯಾಂಗ ಸಮಿತಿಯಲ್ಲಿ ಭಾಗ ವಹಿಸಬೇಕು, ಇಲ್ಲವೇ ಕಲ್ಕತ್ತ, ಬಂಗಾಳ, ಬಿಹಾರಿನ ದುರಂತಗಳಿಗೇ ಅವಕಾಶ ಕೊಟ್ಟು ಹಿಂದೂ-ಮುಸ್ಲಿಂ ಸೌಹಾರ್ದಕ್ಕೆ ಕೊಡಲಿ ಪೆಟ್ಟಿಕ್ಕಿ ತನ್ನ ಆತ್ಮಹತ್ಯಕ್ಕೆ ತಾನು ಸಿದ್ಧವಾಗಬೇಕು. ಹಾಗೆ ಮಾಡುವುದರಿಂದ ಬ್ರಿಟಿಷ್ ಅಧಿಕಾರಿಗಳ ರಕ್ಷಣೆಗೊಳಗಾಗದೇ ಹೋಗುತ್ತದೆ-ಎಂದು ಕೇಂದ್ರ ತಾತ್ಕಾಲಿಕ ಸರಕಾರದ ಸಚಿವರಾಗಿದ್ದ ಸೈಯದ್ ಅಲಿ ಜಹೀರರು ಹೇಳಿರುತ್ತಾರೆ

ಹಿಂದೂ-ಮುಸ್ಲಿಂ ಶಾಂತಿ ಸಮಿತಿ

ಮಹಾತ್ಮ ಗಾಂಧಿಯವರ ಪ್ರಯತ್ನದ ಫಲವಾಗಿ ಬಂಗಾಳದ ಮಂತ್ರಿ ಮಿ|| ಶಂಸುದ್ದೀನ್‌ರವರು ಹಿಂದೂ-ಮುಸ್ಲಿಂ ಪ್ರಮುಖರ ಸಭೆಯನ್ನು ಪೂರ್ವ ಬಂಗಾಳದ ರಾಮಗಂಜದಲ್ಲಿ ಮೊನ್ನೆ ಸೇರಿಸಿದ್ದರು. ಉಭಯ ಕೋಮಿನ ಸಮ ಸಂಖ್ಯೆಯ ಪ್ರತಿನಿಧಿಗಳನ್ನೊಳಗೊಂಡ ಶಾಂತಿ ಸಮಿತಿಯ ರಚನೆಯನ್ನು ಪ್ರತಿ ಹಳ್ಳಿಗಳಲ್ಲೂ ರಚಿಸಲು ಒಪ್ಪಲಾಯಿತು

ಗಾಂಧಿ ತತ್ವ ಸ್ಮಾರಕ ಸ್ತಂಭ

ಮಹಾತ್ಮ ಗಾಂಧಿಯವರ ಜನನ ಸ್ಥಾನವಾದ ಪೋರ್ ಬಂದರಿನಲ್ಲಿ ಅವರ ಉಪದೇಶದ ಮೂಲ ತತ್ವಗಳನ್ನು ಕೆತ್ತಿದ ಸ್ಮಾರಕ ಸ್ತಂಭವನ್ನು ನಿರ್ಮಿಸಲು ಏರ್ಪಾಡುಗಳಾಗುತ್ತಿವೆ. ಅವರ ಜನ್ಮ ಗೃಹವನ್ನು ಶಾಶ್ವತವಾಗಿ ರಕ್ಷಿಸುವ ಸಲುವಾಗಿ ಬೊಂಬಾಯಿನ ಸೇಟ್ ನಾಂಜಿಭಾಯಿ ಕಾಳಿದಾಸರು ೧|| ಲಕ್ಷ ರೂ ಗಳ ನಿಧಿಯನ್ನಿತ್ತಿದ್ದಾರೆಂದು ವರದಿಯಾಗಿದೆ.

ಸಿ. ವಿ. ರಾಮನ್‌ರವರ ಭಾಷಣಗಳು

ಮೈಸೂರು ೨೬

ಬೆಂಗಳೂರು ಟಾಟಾ ವಿಜ್ಞಾನ ಮಂದಿರದ ಡೈರೆಕ್ಟರೂ, ಸುಪ್ರಸಿದ್ಧ ವೈಜ್ಞಾನಿಕರೂ ಆದ ಸರ್ ಸಿ. ವಿ. ರಾಮನ್‌ರವರು ನಿನ್ನೆ ರಾಜಧಾನಿಗೆ ಬಂದು ಮೂರು ಕಡೆ ಅಮೋಘವಾದ ಭಾಷಣಗಳನ್ನು ಮಾಡಿದರು. ಲಲಿತಕಲಾ ಸಂಘದ ಆಶ್ರಯದಲ್ಲಿ ಮಹಾರಾಜಾ ಕಾಲೇಜು ಅಂಗಳದಲ್ಲಿ "ಸೌಂದರ್ಯದ ಸ್ವಭಾವ" ಎಂಬ ವಿಚಾರವಾಗಿ ಮಾತನಾಡಿದರು. ಒಂದು ಪದಾರ್ಥದ ಸೌಂದರ್ಯಕ್ಕೂ, ಅದರ ಉಪಯುಕ್ತತೆಗೂ ಇರುವ ಸಂಬಂಧವನ್ನು ಹೃದಯಂಗಮವಾಗಿ ಅವರು ನಿರೂಪಿಸಿದರು. ಮಾನವನ ಸುಗುಣಗಳನ್ನು ಬೆಳೆಸಲು ಸೌಂದರ್ಯವು ಅತ್ಯಂತ ಉಪಯುಕ್ತವಾದ ಸಾಧನವೆಂದು ಹೇಳಿದರು. ಪ್ರಕೃತಿಯು ಸಕಲ ವಸ್ತುಗಳನ್ನೂ ಸುಂದರವಾದ ರೀತಿಯಲ್ಲಿಯೇ ಸೃಷ್ಟಿಸಿದೆಯೆಂಬುದನ್ನು ವಿವರಿಸಿದರು. ಸೌಂದರ್ಯದ ನಿಜವಾದ ಕಲ್ಪನೆಯು ಹರಡಿದಂತೆಲ್ಲಾ ಪ್ರಪಂಚದಲ್ಲಿ ನಡೆಯುವ ಅಮಾನುಷ ಅತ್ಯಾಚಾರಗಳು ಕಡಿಮೆಯಾಗುವುವೆಂದು ತಿಳಿಸಿದರು.

ಸೆಂಟ್ ಫಿಲೋಮಿನಾ ಕಾಲೇಜಿನ ಭೌತಿಕ ಶಾಸ್ತ್ರ ಸಂಘದಲ್ಲಿ ಭಾಷಣ ಮಾಡಿ ಸರ್ ಸಿ. ವಿ. ರಾಮನ್‌ರವರು ವಿಜ್ಞಾನದ ಬೆಳವಣಿಗೆಯ ವಿಷಯವನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು.

ಸಂಜೆ ವಿಶ್ವವಿದ್ಯಾನಿಲಯ ಸಂಘದ ಆಶ್ರಯದಲ್ಲಿ ಆಧುನಿಕ ವಿಜ್ಞಾನದ ಚರಿತ್ರವನ್ನು ಕುರಿತು ಸ್ವಾರಸ್ಯವಾಗಿ ಭಾಷಣ ಮಾಡಿ, ಇಂದಿನ ಕಾಲದ ಸಂಶೋಧನೆಗಳನ್ನೂ ಅವುಗಳ ಪರಿಣಾಮಗಳನ್ನೂ ತಿಳಿಸಿದರು

ದ|| ಆಫ್ರಿಕಾಕ್ಕೆ ಅಮೆರಿಕಾ ಬೆಂಬಲವೇ ?

ದಕ್ಷಿಣ ಆಫ್ರಿಕಾದ ಮೇಲೆ ಭಾರತವು ವಿಶ್ವ ಸಮ್ಮೇಳನದಲ್ಲಿ ಮಂಡಿಸಿರುವ ದೂರನ್ನು ವಿಶ್ವನ್ಯಾಯಸ್ಥಾನಕ್ಕೆ ಹಾಕಬೇಕೆಂಬ ಜ|| ಸ್ಮಟ್ಸರ ಸೂಚನೆಗೆ ಅಮೆರಿಕಾ ಸಂಯುಕ್ತ ಸಂಸ್ಥಾನವು ಬೆಂಬಲ ಕೊಡುವುದೆಂದು ಗೊತ್ತಾಗಿದೆ.

ವಿವಾಹ ಮಹೋತ್ಸವ

ಸ್ವಂ ಸು] ಶ್ರೀರಂಗಪಟ್ಟಣ ೨೫

ಇಲ್ಲಿನ ಪತ್ರಿಕೋದ್ಯೋಗಿಗಳಾದ ಶ್ರೀ|| ಎಸ್. ಸಂಪತ್ಕುಮಾರನ್‌ರವರ ವಿವಾಹವು ತುಮಕೂರು ಶ್ರೀ|| ಎಲ್ ನರಸಿಂಹದೇಶಿಕ್‌ರವರ ಕುಮಾರಿ ಸೌ|| ಜಯಲಕ್ಷ್ಮಮ್ಮರವರೊಡನೆ ಇದೇ ಮಾಹೆ ೨೯ ನೇ ತಾ|| ಶುಕ್ರವಾರ ಪಶ್ಚಿಮವಾಹಿನಿಯಲ್ಲಿ ಜರುಗಲಿದೆ.

ರಾಜಕಮಲ್
ಮೈಸೂರು
೨೨—೧೧—೪೬ ರಿಂದ
ಅಮೋಘವಾದ ಎರಡನೇ ವಾರ
'ಡಾಕ್ಟರ್ ಕೋಟ್ನಿಸ್ ಕಿ ಅಮರ್ ಕಹಾನಿ'
ಮುಖ್ಯ ಭೂಮಿಕೆ: ಶಾಂತಾರಾಂ, ಉಲ್ಹಾಸ್, ವಿನಾಯಕ್, ಪೆಂಡಾರ್‌ಕರ್, ಜಯಶ್ರೀ.

ಮುಸ್ಲಿಂ ಲೀಗಿಗೆ ಪಟೇ ಎಚ್ಚರಿಕೆ

ಕತ್ತಿಯನ್ನು ಕತ್ತಿಯಿಂದಲೇ ಎ
ಬೇಕು-ಎಂದು ಕೋಮುವಾರು ಕಲ
ದ ರಾಜಕೀಯ ಸಿದ್ಧಾಂತ ಸಾಧಿ
ಲು ಪ್ರಯತ್ನಿಸುತ್ತಿರುವವರಿಗೆ ಸ
ರು ಮೀರತ್ ಕಾಂಗ್ರೆಸ್ ಅಧಿವೇ
ನಿನ್ನೆ ದಿನ ಎಚ್ಚರಿಕೆ ಇತ್ತರು.
ಸರ್ಕಾರದಿಂದ ಕಾಂಗ್ರೆಸ್ಸು ರಾಜೀ
ಲ್ಲಿಸಿ ಹೊರಕ್ಕೆ ಬರುವುದಿಲ್ಲವೆಂದು,
ರು ಹೇಳಿ ರಾಜ್ಯಾಂಗ ಸಭೆಯಲ್ಲಿ
ಭಾಗ ವಹಿಸದಿದ್ದಲ್ಲಿ ತಾತ್ಕಾಲಿಕ ಸ
ದಲ್ಲೂ ಲೀಗಿಗೆ ಸ್ಥಾನವಿಲ್ಲವೆಂದು
ಸಾರಿ ಹೇಳಿದರು. ಪುಂಡರುಗಳನ್ನು
ರಿಸಲು ಭಾರತೀಯರು ಆತ್ಮ ರಕ್ಷಣಾ
ತೆಗಳನ್ನು ಮಾಡಿಕೊಳ್ಳಬೇಕೆಂದು,
ಸೂಚಿಸಿದರು

ಅಣುಮಂತ್ರಾಲಯದ ರಾತ್ರಿ ಛತ್ರ

ಮಂತ್ರಾಲಯಕ್ಕೆ ಹೋಗಿ
ಯಾತ್ರಿಕರಿಗೆ ತುಂಗಭದ್ರ ಅಣುಮ
ಯದ ರಾತ್ರಿ ಛತ್ರದಲ್ಲಿ ಊಟದ ವ
ಪೂರ್ವದಿಂದಲೂ ನಡೆಯುತ್ತಿದ್ದು
ಸುಮಾರು ೮-೨ ವರ್ಷಗಳಿಂದ
ಹೋಗಿದ್ದುದನ್ನು ಶ್ರೀ|| ದಾಸ್ ಬ
ಚಾರ್ಯರು ಮತ್ತೆ ಪ್ರಾರಂಭ ಮಾ
ತ್ತಾರೆ. ಇದಕ್ಕೆ ದ್ರವ್ಯ ಮತ್ತು ವ
ಸಹಾಯ ಅಗತ್ಯವಾಗಿರುವುದರಿಂದ
ಜನರು ಅವರಿಗೆ ಮಣಿಯಾರ್ಡರು ಮ
ಕ ಧನ ಸಹಾಯ ಮಾಡಬೇಕೆಂದು
ರಲಾಗಿದೆ.

ಉದಾರ ದಾನ

ಶಿವರಾಮಪೇಟೆ ಶ್ರೀಮತ್ಕೃಷ್ಣ
ಮೇಶ್ವರೀ ವರ್ಧಂತಿ ಮಹೋತ್ಸವ
ಸ ತಮ್ಮ ಮನೆಯಲ್ಲಿ ಸೇವೆ ನಡೆಸಿ
ಬರಲು, ಅಶೋಕ ರಸ್ತೆಯಲ್ಲಿರುವ
ಕೃಷ್ಣಶೆಟ್ಟರು ಸದರಿ ದೇವಸ್ಥಾನದ
ರಕ್ಕೆ ೫೦೦ ರೂ. ಪುದವಟ್ಟನ್ನು
ದ್ದಾರೆ.

ಟಿ ಸಿ. ನಟರಾಜ್
ಔಷಧಾಲಯ
ನೇತ್ರ ಪರೀಕ್ಷೆಯು ಉಚಿತವ
ಮಾಡಲ್ಪಡುತ್ತದೆ.
ಅಗತ್ಯವಾಗಿ ಬೇಕಾದ ಎಲ್ಲಾ
ಕ್ಷ ಔಷಧಿಗಳೂ ಸದಾ ಕಾಲದ
ದೊರೆಯುವುದಲ್ಲದೆ ಸಮಸ್ತವ್ಯಾಧಿ
ಚಿಕಿತ್ಸೆಯು ಬಹು ಸುಲಭ ಭಾ
ಮಾಡಲ್ಪಡುತ್ತದೆ.
ಝಂಡೂರವರ ಆಯುರ್ವೇದಿ
ದ್ಯಾಪಥಗಳೆಲ್ಲವೂ ದೊರೆಯುತ್ತವೆ

ಸಾಧ್ವಿ
ಈ
ರಾಜಧಾನಿಯ ರಾಷ್ಟ್ರೀ
ದಿನ ಪತ್ರಿಕೆ
ಕೂಡಲೇ ಚಂದಾದಾರರಾ
(ತಿಂಗಳಿಗೆ ಚಂದಾ ಎಂಟಾಣೆ ಮ
ಜಾಹೀರಾತಿನ ದರಗಳ
ವಿಚಾರಿಸಿರಿ

Edited, printed and publ
A. R. Nagarajan at the Sadhvi
D Subbiah Road, Mysore

ತ್ತಿನರ ರೇಡಿಯೋ ಭಾಷಣ
[ಸ್ವಂತ ವರದಿಗಾರರಿಂದ] ಬೆಂಗಳೂರು ೨೭
...ನವಾದ ಸರ್ ಆರ್ಕಾಟ್ ರಾಮ
...ಮೊದಲಿಯಾರರು ನಾಳೆ ರಾಜಧಾ
...ವರು. ಅವರು ಅಖಿಲ ಭಾರತ
...ದ ಏರ್ಪಾಟಿನ ಮೇರೆ ನಾಳೆ
...ತ್ರಿ ೮-೪೫ ರಿಂದ ೯ ಗಂಟೆ ವರೆಗೆ
...ವ್ಯ" ಭವನದಿಂದ ರೇಡಿಯೋ
... ಮಾಡುವರು.

...ನೋಗ್ಯ ಸಮ್ಮೇಳನಗಳನ್ನು ಮುಂದೆ ಹಾಕಲು ಸರ್ಕಾರದ ಸೂಚನೆ

...ದಲ್ಲಿಯೇ ಶಿವಮೊಗ್ಗಾದಲ್ಲಿ ಹಲ ...ಸಭೆಗಳು ನಡೆದು, ಹೊರಗಿನಿಂ ...ಸಂಸ್ಥಾನದಿಂದಲೂ ಅನೇಕ ಜನ ...ವಿಷಯವಾಗಿ ಸರ್ಕಾರದ ...ಪ್ರಕಟಣೆಯನ್ನು ಹೊರಡಿಸಿ ...ದ ಅಭಾವವು ವಿಶೇಷವಾಗಿ ಇನ್ನು ...ವೆ ತಿಂಗಳಿಗೆ ಆಗುವಷ್ಟು ಮಾತ್ರ ...ದಸ್ತಾಪವಿರುವುದರಿಂದ ಈ ಬಗೆಯ ...ಗಳಿಗೆ ಧಾನ್ಯ ಸಹಾಯ ಮಾಡ ...ರಿಗಳಿಗೆ ಅಸಾಧ್ಯವಾಗಿರುವುದರ ...ತ್ರ ಸದರಿ ಸಮ್ಮೇಳನಗಳನ್ನು ಆ ...ಕಾರ್ಯವಾಗುವಂತೆಯು ಕಾಲಕ್ಕೆ ...ಟಿ ಅಧಿಕಾರಿಗಳೊಡನೆ ಸಹಕ ...ರು ಕೋರಲಾಗಿದೆ. ಜೋಗ್ ...ತವನ್ನು ನೋಡಲು ಬರುವವರೂ ...ತ್ತು ಪ್ರವಾಸವನ್ನು ಮುಂದೆ ಹಾಕ ...ಸೂಚಿಸಲಾಗಿದೆ.

...ಯಿತಿಗೆ ಪ್ರಯಾಣ

...ತಸ್ತ್ರೀಯಲ್ಲಿ ಹೆಚ್ಚಿನ ತರಪೇತು ...ವುದಕ್ಕಾಗಿ ಸರ್ಕಾರದವರು ಶ್ರೀ ... ಕೆ. ಸಿ. ರೆಡ್ಡಿ ಮತ್ತು ಡಿ ಶ್ರೀಕಂ ...ವರುಗಳನ್ನು ಅಮೆರಿಕಾಕ್ಕೂ ಶ್ರೀ ...ಎ ಡಿ ಉಮಾಪತಿ, ಕರಿಯಪ್ಪ, ...ಯ್ಯ, ಮತ್ತು ಪರ್ಟ್ವಿಲ್ ರವರ ...ಗ್ಲೆಂಡಿಗೂ ಒಂದು ವರ್ಷ ಕಾಲ ...ಕಳುಹಿಸುವುದಾಗಿ ಆಜ್ಞೆ ಮಾಡಿರು

...ಮಿ ಅಮಲ್ದಾರರುಗಳು

...ಗಳಾದ ಸಿ ಪಿ ನಾರಾಯಣಸ್ವಾ ...ಎಚ್ ರಾಮಪ್ಪ, ನಸೀರ್ ಅಹ ... ಡಿ ಸಿ. ಮುನಿಯಣ್ಣ, ಬಿ ಎಸ್. ...ವ್, ಎಸ್. ಪ್ರತಾಪ್ ಸಿಂಗ್ ಮ ...ಕಿಮ್ಮ ರೆಡ್ಡಿಯವರನ್ನು ಹಂಗಾ ...ಮಿಲ್ದಾರರನ್ನಾಗಿ ನೇಮಿಸಿದೆ.

...ವಸಾಯದ ಬಾವಿಗಳು

...ಸಾಯದ ಬಾವಿಗಳಿಗಾಗಿ ಸರ್ಕಾರ ...ನೇ ಸಹಾಯ ಮಾಡುತ್ತಿರುವ ಬ ...ಗಳನ್ನು ಬರುವ ಜನವರಿ ಅಂತ್ಯ ...ಸ್ವೀಕರಿಸಿ, ಬರುವ ಜೂನ್ ಅಂತ್ಯ ...ಸಹಾಯವನ್ನು ನೀಡಲಾಗುವು ...ಪ್ರಕಟಿಸಲಾಗಿದೆ

...ತ್ಸೇಲಿಯದ ನಿಯೋಗ

...ಯ ಸಂಘದವರು ನಿನ್ನೆ ಆಸ್ಟ್ರೇಲಿ ...ವಾರಿಕಾ ನಿಯೋಗದವರನ್ನು ಬರ ...ಮಾಡು ಸತ್ಕರಿಸಿದರು. ಅವರು ...ಆ ಪುರೋಭಿವೃದ್ಧಿಯನ್ನು ಬಹ ...ಪ್ರಶಂಸಿಸಿದರು. ಹಿಂದೂಸ್ಥಾನ ...ಸ್ಟ್ರೇಲಿಯಾಕ್ಕೂ ಇನ್ನು ಮುಂದೆ ...ವ್ಯಾಪಾರ ಸಂಬಂಧವಿರುವುದಾಗಿ ... ಆಹಾರ ಸಾಮಗ್ರಿ ಮತ್ತು ...ಗಳು ಅಲ್ಲಿಂದ ಇಲ್ಲಿಗೆ ಕಳುಹಿಸು ...ವೂ, ಇಲ್ಲಿಂದ ಹತ್ತಿ, ಬಟ್ಟೆ ಮ ...ಮೊದಲಾದ ಸಾಮಗ್ರಿಯನ್ನು ಅವರು ...ಗೆ ಕಳಿಸುವುದಾಗಿಯೂ ತಿಳಿಸಿದರು.

ರಿಜಿ. ನಂ. ೨೪೭ ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಬುಧವಾರ ೨೭—೧೧—೪೭ [ಸಂಚಿಕೆ ೯೮

ಮದ್ರಾಸಿನಲ್ಲಿ ಅಕ್ಕಿ ರೇಷನ್ ಹೆಚ್ಚಿಸಲ್ಪಡುವುದೇ ?

"ಕನ್ನಡಕ್ಕೊಬ್ಬನೇ ಕೈಲಾಸಂ"

ಮುಂದಿನ ರಾಜ್ಯಾಂಗ ಕ್ರಮಗಳಿಗೂ ಲೀಗಿನ ಅಪಚಣೆ

ಮುಸ್ಲಿಂ ಲೀಗಿನ ಅಧ್ಯಕ್ಷರಾದ ಮಿ॥ ಜಿನ್ನಾರವರು ಕರಾಚಿಯಲ್ಲಿ ನಡೆದ ಪತ್ರಿಕಾ ಸಮ್ಮೇಳನವೊಂದರಲ್ಲಿ ಈ ರೀತಿ ಹೇಳಿರುತ್ತಾರೆ:—

ಕೋಮುವಾರು ಗಲಭೆಗಳನ್ನು ತಡೆಗಟ್ಟಲು ಪ್ರಜೆಗಳ ಪರ್ಯಾವಸಾಯು ಅತ್ಯಾವಶ್ಯಕ ಹೀಗೆ ಮಾಡುವುದರಿಂದಲೇ ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ಅತ್ಯಾಚಾರಗಳು ಅಂತ್ಯವಾಗುವುವು. ಈಗಿನ ಪರಿಸ್ಥಿತಿಯಲ್ಲಿ ನ್ಯಾಯ, ನೀತಿಗಳಿಗೆ ಅವಕಾಶವಿಲ್ಲ. ಈಗ ನಡೆಯುತ್ತಿರುವ ಸಂಧಾನಗಳು ಫಲಕಾರಿಯಾಗಿ ಕೊನೆ ಸಾರು ಎಷ್ಟು ಯುಂಟಾಗುವುದಿಲ್ಲ. ಕಾಂಗ್ರೆಸ್ಸಿನ ಕಾರ್ಯ ಸಮಿತಿಯ ದೀರ್ಘಾವಧಿ ಯೋಜನೆಗೆ ಅಂಗೀಕಾರ ಕೊಟ್ಟಿಲ್ಲ ಈಗ ರಾಜ್ಯಾಂಗ ಸಭೆಯನ್ನು ಸೇರಿಸುವುದು ಮುಖ್ಯಾರ್ಥಿಕವ ಮೀರಟ್ಟಿನ ಕಾಂಗ್ರೆಸ್ ಅಧಿವೇಶನವು ಊಯು ಮ ಜೊತೆಗೆ ತಪ್ಪು ಹಚ್ಚುತ್ತಿದೆ. ರಾಜಭಕ್ತಿ ಪ್ರಮಾಣ ವಚನವನ್ನು ಸ್ವೀಕರಿಸಿ, ಎಕ್ಸಿಕ್ಯೂಟಿವ್ ಕೌನ್ಸಿಲಿಂದು ಕರೆಯಲ್ಪಡುವವರ, ತನ್ನನ್ನು ರಾಷ್ಟ್ರೀಯ ಸರ್ಕಾರ, ವಿ ತ್ತ ಮಂತ್ರಿಮಂಡಲವೆಂದು ಕರೆದುಕೊಳ್ಳುವುದು ಬುದ್ಧಿ ಹೀನತನ, ಆ ಕೌನ್ಸಿಲ್ಲಿಗೆ ಮಂತ್ರಿಮಂಡಳದ ಅಧಿಕಾರ ಬರುವವರ ದ ಸಂಪ್ಯ, ಸರ್ಕಾರದಲ್ಲಿರುವ ಲೀಗಿನ ಸದಸ್ಯರು ಕಾಂಗ್ರೆಸ್ಸಿನವರ ಪ್ರತ್ಯೇಕವನ್ನು ಜಟಿಲ ಪ್ರತಿಭಟಿಸುತ್ತಿದ್ದಾರೆ. ಆದರೆ ಅವರ ಆ ರೀತಿ ಪ್ರತಿಭಟಿಸಿದನ್ನು

ಮದ್ರಾಸಿನಲ್ಲಿ ಅಕ್ಕಿ ಪಡಿತರ ಹೆಚ್ಚುವುದು

ಡಿಸೆಂಬರ್ ತಿಂಗಳಿಂದ ಮದ್ರಾಸ್ ಅಧಿಪತ್ಯದಲ್ಲಿ ಅಕ್ಕಿ ಪಡಿತರ ಪ್ರಮಾಣವನ್ನು ಹೆಚ್ಚಿಸಬಹುದೆಂದು ಅಲ್ಲಿನ ಪ್ರಧಾನಿಗಳಾದ ಶ್ರೀ ಟಿ ಪ್ರಕಾಶಂರವರು ಈ ತಿಂಗಳ ಆರಂಭದಲ್ಲಿ ಸೂಚಿಸಿದ್ದರು ಹೊರಗಿನಿಂದ ಮದರಾಸಿಗೆ ಈಗ ೪೦,೦೦೦ ಟನ್ ಅಕ್ಕಿ ಬರಲಿದೆ. ಮತ್ತು ಗೋಧಿ, ಜೋಳ ಮತ್ತು ಹಾಮಯವು ಇರುತ್ತವೆ. ಆದುದರಿಂದ ಅಕ್ಕಿಯ ಪ್ರಮಾಣವನ್ನು ಬರುವ ತಿಂಗಳಿಂದ ಹೆಚ್ಚಿಸಬಹುದೆಂದು ಹೇಳಲಾಗಿದೆ.

೮೦೦ ಮಂದಿ ಅಧಿಕಾರಿಗಳ ರಾಜೀನಾಮೆ

ಮಹಾರಾಜರ ಅಭಿಪ್ರಾಯಕ್ಕೆ ವಿರುದ್ಧವಾಗಿ ಮಿ॥ ಜನುದ್ದೀನನ್ನು ದಿವಾನರನ್ನಾಗಿ ನೇಮಿಸಿದ್ದನ್ನು ಪ್ರತಿಭಟಿಸುವ ಸಲುವಾಗಿ ದತಿಯಾ ಸಂಸ್ಥಾನದ ೮೦೦ ಮಂದಿ ಅಧಿಕಾರಿಗಳು ಕೆಲಸಕ್ಕೆ ರಾಜೀನಾಮೆಯನ್ನಿತ್ತಿದ್ದಾರೆ ಅಲ್ಲಿನ ರೆಸಿಡೆಂಟರು ಆಡಳಿತವನ್ನೆಲ್ಲಾ ತಾವೇ ವಹಿಸಿಕೊಂಡಿರುತ್ತಾರೆ. ಸಶಸ್ತ್ರ ಪೋಲೀಸರು ನಗರ ರಕ್ಷಣೆ ಮಾಡುತ್ತಿದ್ದಾರೆ

ಸಕ್ಕರೆ ಗಿರಣಿ ಕೆಲಸಗಾರರ ಸಂಘ

ಮಂಡ್ಯ ೨೭

ನಿನ್ನೆ ದಿನ ಸಕ್ಕರೆ ಕಾರ್ಖಾನೆ ಸಂಘದ ಸಭೆಯು ಶ್ರೀ ಮರಿಸ್ವಾಮಿಗೌಡರ ಅಧ್ಯಕ್ಷತೆಯಲ್ಲಿ ನಡೆದು ಪಂಡಿತ ಮಾಳವೀಯರ ನಿಧನಕ್ಕಾಗಿ ಸಂತಾಪವನ್ನು ಸೂಚಿಸಲಾಯಿತು ನೆಹರೂರವರ ಜಯಂತಿ ಸಂಬಂಧದಲ್ಲಿ ಅಭಿನಂದನೆಯನ್ನು ಸಲ್ಲಿಸಲಾಯಿತು ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಚಂಗಲರಾಯ ರೆಡ್ಡಿಯವರು ಮಂಡ್ಯಕ್ಕೆ ಬಂದಾಗ ನಿಧಿಯನ್ನು ದಾನಪತ್ರವನ್ನೂ ಅರ್ಪಿಸಲು ನಿರ್ಣಯಿಸಿದ್ದನ್ನು ಅಂಗೀಕರಿಸಲಾಯಿತು

ದಸ್ತಗಿರಿ

ಮೊನ್ನೆ ರಾತ್ರಿ ಕ್ರೈಂ ಬ್ರಾಂಚ್ ಪೋಲೀಸಿನವರು ಮಂಡಿ ಮೊಹಲ್ಲೆಯ ಕಬ್ಬನ್ ಸ್ಟ್ರೀಟಿನಲ್ಲೊಂದರಲ್ಲಿ ಹಳೇ ಕೇಡಿಯಾದ ಶ್ಯಾಮಪರಪ್ಪನೆಂಬ ಕುಂಟ ವೆಂಕಟ ಎಂಬುವನನ್ನು ದಸ್ತಗಿರಿ ಮಾಡಿರುವುದಾಗಿ ಗೊತ್ತಾಗಿದೆ. ಇವನ ಬಳಿ ನಗರದ ಮತ್ತು ಸುತ್ತಮುತ್ತಿನ ಹಳ್ಳಿಗಳ ಕಳವಿನ ಸಾಮಾನುಗಳಿದ್ದುದನ್ನು ಪೋಲೀಸರು ವಶಪಡಿಸಿಕೊಂಡಿದ್ದಾರೆ. ಇವನಿಗೆ ಹಿಂದೆ ಹಲವು ಬಾರಿ ಶಿಕ್ಷೆಯಾಗಿತ್ತೆಂದು ಗೊತ್ತಾಗಿದೆ.

ನವಭಾರತ ಸಂಘ

ನಿನ್ನೆ ದಿನ ನಗರದ ಮೋಹಲ್ಲೆ ಸಂಘದ ವಾರ್ಷಿಕ ಚುನಾವಣೆಯು ನಡೆದು ಬರುವ ಸಾಲಿಗೆ ಶ್ರೀ ಟಿ. ಎಸ್. ಸುಬ್ಬಣ್ಣನವರು ಅಧ್ಯಕ್ಷರಾಗಿಯೂ, ಶ್ರೀ ಕೆ. ಸಿ ಬಂದೀಗೌಡರು ಉಪಾಧ್ಯಕ್ಷರಾಗಿಯೂ, ಶ್ರೀಗಳಾದ ಬಂದೀಗೌಡರ ಮತ್ತು ಕೆ ಎಸ್ ಸುಬ್ರಹ್ಮಣ್ಯರವರುಗಳು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿರುವರು

ಲೀಗ್ ಪ್ರತಿನಿಧಿಗಳು ಅವರ ಮುಂದಿನ ರಾಜ್ಯಾಂಗಕ್ಕೆ ಅಡ್ಡಿ ಮಾಡುವ ಕಾರ್ಯಕ್ರಮವನ್ನೇ ಅನುಸರಿಸಬೇಕಾಗುತ್ತದೆ, ಮುಸ್ಲಿಂ ಲೀಗಿನವರೂ ಲೀಗ್ ಮಂತ್ರಿಗಳೂ ಕಾಂಗ್ರೆಸ್ಸಿನವರ ಅಧೀನದಲ್ಲಿರಲು ಸಾಧ್ಯವಿಲ್ಲ. ಸಮಾನ ಸ್ಥಾನ ಮಾನಗಳನ್ನು ಕೊಡಬೇಕಾದ್ದ ಕಾಂಗ್ರೆಸ್ಸಿನ ಕರ್ತವ್ಯ.

ಸಾಧ್ವಿ

ತಾ|| ೨೭-೧೧-೪೬ ಬುಧವಾರ

ಕುಸಲಕ್ಕಿಯ ಒತ್ತಾಯವೇ ?

ರಾಜಧಾನಿಯ ಹಲವು ರೇಷನ್ ಡಿಪೋಗಳಲ್ಲಿ ಅಕ್ಕಿಯನ್ನು ತೆಗೆದುಕೊಳ್ಳುವವರು ಸ್ವಲ್ಪ ಭಾಗ ಕುಸುಲಕ್ಕಿಯನ್ನೂ ತೆಗೆದುಕೊಳ್ಳಬೇಕೆಂದು ಒತ್ತಾಯಪಡಿಸಲ್ಪಡುತ್ತಿರುವುದಾಗಿ ಫಿರ್ಯಾದುಗಳು ಬರುತ್ತಿವೆ. ಇದರಿಂದ ಅನೇಕರು ಅಕ್ಕಿಯನ್ನು ಕೊಂಡುಕೊಳ್ಳಲು ಅವಕಾಶವಿಲ್ಲದೆ ಉಪವಾಸವಿರಬೇಕಾದ ಸ್ಥಿತಿಯು ಉಂಟಾಗಿರುವುದಾಗಿಯೂ ಹೇಳಲಾಗಿದೆ

ಈ ವಿಷಯವಾಗಿ ನಾವು ರೇಷನ್ ಅಧಿಕಾರಿಗಳೊಡನೆ ಮಾತನಾಡಿದಾಗ ಆ ರೀತಿ ಕುಸಲಕ್ಕಿಯನ್ನು ಕೊಳ್ಳುವಂತೆ ಎಲ್ಲರಿಗೂ ಒತ್ತಾಯ ಮಾಡಲಾಗದೆಂದು ತಿಳುವಳಿಕೆ ಕೊಟ್ಟಿರುವುದಾಗಿ ಅವರು ಹೇಳಿದರು. ಆದರೂ ಸಹ ಇನ್ನೂ ಅನೇಕ ಕಡೆಗಳಿಂದ ದೂರುಗಳು ಬರುತ್ತಲೇ ಇವೆ. ಸಮಯ ಸಂದರ್ಭಗಳನ್ನು ನೋಡಿಕೊಂಡು ಕುಸುಲಕ್ಕಿಯನ್ನು ಒತ್ತಾಯಪಡಿಸದೆ ಸಾದಾ ಅಕ್ಕಿಯನ್ನೇ ಕೊಡುವಂತೆಯೂ ಹಲವು ಡಿಪೋಗಳಿಗೆ ಸೂಚನೆ ಕೊಟ್ಟಿರುವುದಾಗಿ ತಿಳಿದುಬಂದಿದೆ. ಇನ್ನು ಕೆಲವು ಕಡೆಗಳಲ್ಲಿ ಯಾವ ವಿಧವಾದ ತಿಳುವಳಿಕೆಯೂ ಬಂದಿಲ್ಲವೆಂದೂ, ಕುಸಲಕ್ಕಿಯನ್ನು ಒತ್ತಾಯ ಪೂರ್ವಕವಾಗಿ ಕೊಡಲೂ ಗೊತ್ತಿದೆಯೆಂದೂ ಸಹ ಹೇಳಲಾಗುತ್ತಿದೆ

ಪುರನಿವಾಸಿಗಳ ಜೀವನಾಧಾರಕ್ಕೆ ಅತ್ಯವಶ್ಯಕವಾಗಿರುವ ಇಂತಹ ವಿಷಯದಲ್ಲಿ ಈ ಅವ್ಯವಸ್ಥೆಯು ತಲೆದೋರಿರುವುದು ಅತ್ಯಂತ ಶೋಚನೀಯವಾಗಿದೆ. ಕುಸಲಕ್ಕಿಯನ್ನು ಸೇವಿಸುವ ಪದ್ಧತಿಯು ಅನೇಕ ಜನರಿಗೆ ಇರುವುದಿಲ್ಲ. ಬೇಯಿಸಿ ತಯಾರಾಗುವ ಪದಾರ್ಥವೆಲ್ಲಾ ಮಲಿನ ಎಂಬ ಭಾವನೆಯಿಂದ ಅದನ್ನು ಉಪಯೋಗಿಸದವರೂ ಇರುವರು ಅದು ಮೈಲಿಗೆ ಪದಾರ್ಥವೆಂದು ಭಾವಿಸಿ ಸೇವಿಸದಿರುವವರೂ ಇರುವರು ಇನ್ನು ಕೆಲವರಿಗೆ ಅದರ ವಾಸನೆಯೂ ಸಹ ಸೇರುವುದಿಲ್ಲ. ಹೀಗೆ ಅನೇಕ ಕಾರಣಗಳಿಂದ ಈ ಅಕ್ಕಿಯನ್ನು ಉಪಯೋಗಿಸದವರು ಬಹಳ ಮಂದಿ ಇದ್ದಾರೆ. ಮುಖ್ಯವಾಗಿ ಧಾರ್ಮಿಕ ಭಾವನೆಯಿಂದ ಅದನ್ನು ತೆಗೆದುಕೊಳ್ಳದವರು ಹೆಚ್ಚಾಗಿದ್ದಾರೆ. ಇಂತಹವರ ಮೇಲೆ ಅದನ್ನು ತೆಗೆದುಕೊಳ್ಳುವಂತೆ ಒತ್ತಾಯಪಡಿಸುವುದು ಸ್ವಲ್ಪವೂ ಸರಿಯಲ್ಲ.

ಪ್ರಜೆಗಳಿಗೆ ಕೊಡುತ್ತಿರುವ ಆಹಾರದ ಪಡಿತರ ಪ್ರಮಾಣವು ಈಗಾಗಲೇ ಅತ್ಯಲ್ಪ ಮಟ್ಟಕ್ಕೆ ಇಳಿದಿರುತ್ತದೆ. ಹೀಗಿರುವಲ್ಲಿ ಅವರಿಗೆ ಬೇಡದ ಪದಾರ್ಥಗಳನ್ನು ಅವರ ಮೇಲೆ ಹೊರಿಸಲು ಯತ್ನಿಸಿ, ಅವರುಗಳಿಗೆ ಆಹಾರವಿಲ್ಲದಂತೆ ಮಾಡುವುದು ಬಹಳ ಅನುಚಿತವಾಗಿದೆ. ಬೇಯಿಸಿದ ಅಕ್ಕಿಯನ್ನು ತಿನ್ನದವರಿಗೆ ಅದನ್ನು ಒತ್ತಾಯಪಡಿಸಿದರೆ ಇನ್ನು ಮುಂದೆ ಬೇಯಿಸಿದ ಅನ್ನವನ್ನೂ ಸಹ ರೇಷನ್ ಮೂಲಕ ಜನರಿಗೆ ಹಂಚುವ ಕಾಲವು ಬರುವುದೇನೋ ಎಂಬ ಶಂಕೆಯು ಅನೇಕರಿಗೆ ಬಾಧಿಸುತ್ತಿರುವಂತಿದೆ.

ಇಂತಹ ಪ್ರಾಮುಖ್ಯ ವಿಷಯದಲ್ಲಿ ಅಧಿಕಾರಿಗಳು ಡಿಪೋಗಳಲ್ಲಿರುವ ಸಣ್ಣ ನೌಕರರುಗಳಿಗೆ ಸರ್ವಾಧಿಕಾರವನ್ನು ವಹಿಸುವುದು ಅನೇಕ ಗೊಂದಲಗಳಿಗೆ ಕಾರಣವಾಗುತ್ತದೆ. ಬೇಡದವರಿಗೆ ಈ ಅಕ್ಕಿಯನ್ನು ಒತ್ತಾಯಪಡಿಸಲಾಗದೆಂಬುದಾಗಿ ಖಚಿತವಾದ ತಿಳುವಳಿಕೆಯನ್ನು ಎಲ್ಲಾ ಡಿಪೋಗಳಿಗೂ ಕೂಡಲೇ ಕೊಡುವುದಲ್ಲದೆ ಮಹಾಜನರ ಅವಗಾಹನೆಗೂ ಸದರಿ ಅಂಶವನ್ನು ಪ್ರಕಟಣೆಯ ಮೂಲಕ ತಿಳಿಯಪಡಿಸಬೇಕೆಂದು ನಾವು ಕೋರುತ್ತೇವೆ. ಕುಸಲಕ್ಕಿಯನ್ನು ತಿನ್ನುವವರ ಸಂಖ್ಯೆಯೇ ಹೇರಳವಾಗಿದ್ದು, ಅದನ್ನು ಉಪಯೋಗಿಸದವರ ಸಂಖ್ಯೆಯು ಬಹಳ ಕಡಿಮೆಯಿರುವುದರಿಂದ ಇವರ ಬಗ್ಗೆ ಸರಿಯಾದ ವ್ಯವಸ್ಥೆ ಮಾಡುವುದು ಅಷ್ಟೇನೂ ಕಷ್ಟವಾಗಲಾರದೆಂದೂ ಸಹ ಸೂಚಿಸಬಯಸುತ್ತೇವೆ.

ಹೈದರಾಬಾದಿನಲ್ಲಿ ೫೩ ಲಕ್ಷ ರೂ. ಗಳ ಖಾದಿ ಯೋಜನೆ

ಹೈದರಾಬಾದ್ ಸಂಸ್ಥಾನದಲ್ಲಿ ಖಾದಿ ಅಭಿವೃದ್ಧಿಗಾಗಿ ೫೩ ಲಕ್ಷ ರೂ. ಗಳ ಯೋಜನೆಯೊಂದನ್ನು ಅಖಿಲ ಭಾರತ ನೂಲುವರ ಸಂಘದವರು ತಯಾರಿಸಿದ್ದಾರೆ. ಈ ಯೋಜನೆ ೧೦ ವರ್ಷಗಳಲ್ಲಿ ಪೂರ್ಣವಾಗಲಿದೆ ೧೦ ನೇ ವರ್ಷದ ಕೊನೆಯಲ್ಲಿ ೭ ಕೋಟಿ ರೂ. ಗಳು ಖರ್ಚಾಗುವುದಾಗಿ ಹೇಳಲಾಗಿದೆ.

ತಲೆ ಒಂದಕ್ಕೆ ೫ ಗಜ ಬಟ್ಟೆ

ಮದ್ರಾಸ್ ಪ್ರಾಂತ್ಯದಲ್ಲಿ ಮಿಲ್ ಬಟ್ಟೆಯ ಹಂಚಿಕೆಯನ್ನು ಪುನರ್ವ್ಯವಸ್ಥೆಗೊಳಿಸಲಾಗಿದೆ. ಇದರಂತೆ ವರ್ಷ ಒಂದಕ್ಕೆ ವಯಸ್ಕರಿಗೆ ತಲಾ ೫ ಗಜದಂತೆಯೂ, ಮಕ್ಕಳಿಗೆ ತಲಾ ೩ ಗಜದಂತೆಯೂ ಬಟ್ಟೆ ಕೊಡಲಾಗುವುದು.

ಮಹಿಳಾ ಪೋಲೀಸರು

ಬಿಹಾರಿನ ಇತ್ತೀಚಿನ ಗಲಭೆಗಳಲ್ಲಿ ಹಲವು ಕಡೆ ಮಹಿಳೆಯರನ್ನು ಅಪಹರಿಸಿರುವ ದೂರುಗಳು ಬಂದಿರುವುದರಿಂದ ಅವುಗಳ ತನಿಖೆಗಾಗಿ ಮಹಿಳಾ ಪೋಲೀಸರನ್ನು ಬಿಹಾರಿನ ಸರ್ಕಾರವು ನೇಮಿಸಿಕೊಳ್ಳಲಿದೆ.

ಹೊಸ ಟಪಾಲ್ ಆಫೀಸ್

ನಜರ್‌ಬಾದ್ ಮೊಹಲ್ಲಾ ನಿವಾಸಿಗಳ ಪ್ರಾರ್ಥನೆಯಂತೆ ಅಂಚೆ ಇಲಾಖೆಯವರು ಸದರಿ ಮೊಹಲ್ಲಾದ ಪೈರೋಡಿನಲ್ಲಿ ಒಂದು ಅಂಚೆ ಕಛೇರಿಯನ್ನು ಬರುವ ೧ ನೇ ತಾರೀಖಿನಿಂದ ತೆರೆಯುತ್ತಾರೆ. ಈ ಅವಕಾಶವನ್ನು ಅಲ್ಲಿನವರು ಉಪಯೋಗಿಸಿಕೊಳ್ಳಬೇಕೆಂದು ಶ್ರೀ ದುರ್ಗಾಮ್ಮನ ದೇವಸ್ಥಾನದ ಕಾರ್ಯದರ್ಶಿಗಳಾದ ಶ್ರೀ|| ಆರ್. ನಂಜಯ್ಯನವರು ಪ್ರಾರ್ಥಿಸಿರುತ್ತಾರೆ.

ಚರ್ಚಾ ಸ್ಪರ್ಧೆಗೆ ಬಹುಮಾ

ಮೈಸೂ

ಮೈಸೂರು ವಿದ್ಯಾರ್ಥಿ ಕಾಂಗ್ರೆ ಯದಲ್ಲಿ ತಾ|| ೪-೧೨-೪೬ ನೇ ನಡೆಯುವ ಶ್ರೀ ಶಂಕರಪ್ಪಸ್ಮಾರಕ ಚ ಸ್ಪರ್ಧೆಗೆ ಅತ್ಯುತ್ತಮವಾದ ವಕ್ತಾರ ಗಾರರನ್ನು ಪ್ರತಿನಿಧಿಸುವ ಹೈಸ್ಕೂ ಮತ್ತು ಕಾಲೇಜ್ ಸಂಸ್ಥೆಗಳಿಗೆ ಎರಡು ಯ ಷೀಲ್ಡುಗಳನ್ನೂ, ಹೈಸ್ಕೂಲ್, ಕಾ ಜ್ ಮತ್ತು ಹಾಸ್ಟಲುಗಳಿಗೆ ನಾಲ್ಕು ಬೆಳ್ಳಿಯ ಬಟ್ಟಲುಗಳನ್ನೂ ಮತ್ತು ಳಾ ಪ್ರತಿನಿಧಿಗಳಿಗೆ ಮೂರು ಬೆಳ್ಳಿಯ ಲುಗಳನ್ನೂ ಇಡಲಾಗಿದೆ ಎಂದು ಕಾರ್ಯದರ್ಶಿಗಳು ತಿಳಿಸಿರುತ್ತಾರೆ.

ರಣಜಿತ್

೨೮-೧೧-೪೬ ರಿಂದ

ಹುಮಾಯೂನ್

ಅಶೋಕ್ ಕುಮಾರ್

ವೀಣಾ

ಚಂದ್ರಮೋಹನ್

ನಾಗಿಸ್

ಪಾತ್ರ

ಪ್ರತಿದಿನ ಮೂರು ಆಟಗಳು

ಆಪೇರಾ ಟಾಕೀಸ್

೨೯-೧೧-೪೬ ರಿಂದ

ಪ್ರತಿ ದಿನ ಮೂರು ಆಟಗಳು

ಉತ್ತಮಿ

(ತಮಿಳು)

ಕಾಳಿ ಎನ್ ರತ್ನಂ, ಟಿ.ಎಸ್. ದೊರೆರಾಜ್ ಸ್ವಾಮಿನಾಥನ್, ಟಿ.ಎಸ್. ಕೃಷ್ಣವೇಣಿ ಅಭಿನಯಿಸಿರುವ ಚಿತ್ರ ರಾಜಕಾಂತಂ

From 29-11-46
MORNING SHOWS
DILLINGER
With:- Edmund Lowe, Anne Jeffreys, Lawrence Tierney.

Edited, printed and published by A. R. Nagarajan at the Sadhvi Press D. Subbiah Road, Mysore.

M. B. C. 204./9/46-7.

City Municipal Offic[e],
Mysore,
Dated 13th Novr. 194[6]

NOTIFICATION

Notice is hereby given to the public that the Municipal Council have resolved to frame Byelaws under Section 51 (1) a of the Mysore City Municipalities Act, for the grading of eggs before they are offered for sale in the city.

Any person having any objection in respect of the above may prefer the same in writing to the undersigned within one month from this date after which no objection will be received.

Copy of the proposed Byelaws may also be seen in the City Municipal Office, the Vice-President's office during the office hours.

(Sd.) A. Krishnamurthy Rao,
President-in-charge.

DRAFT BYE-LAWS FOR GRADING OF EGGS FOR SALE IN THE SEVERAL MARKETS FRAMED UNDER SECTION 51 (1) a OF THE MYSORE CITY MUNICIPALITIES ACT, 1933

—

1. No person shall sell or offer for sale any egg in any market which has not been examined and graded by the Egg Grading Officer and certified to by him b[y] affixing the seal with th[e] date, as fit for consumption.

2. Every person before offering for sale any egg in the city, shall get it examined and graded by the [Egg] Grading section provided [in] the Market and certif[ied] as fit for human con[sumption], after payment [of] 1½ annas per every hundre[d] or part of hundred eggs.

3. The Officer in charg[e] of the grading station shall after examining the eggs b[y] the process provided for i[n] the Devaraj [M]arket certif[y] them as graded by affixing the prescribed seal with th[e] date of examination and re[ject] such eggs which are either spoiled or unfit for human consumption.

Any infringement of t[he] above bye-laws by a[ny] person shall make him liabl[e] for conviction to a fine no[t] exceeding Rs 20. Beside[s] the market Sergeant wil[l] have the power to seize such eggs and destroy any egg found on examination to be unfit for human consumption.

(Sd.) A. Krishnamurthy Rao,
President-in-charge,
City Municipal Council.

ಫೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಗುರುವಾರ ೨೮—೧೧—೪೬ [ಸಂಚಿಕೆ ೯೯

ಲೀಗಿನ ಲಂಡನ್ ಯಾತ್ರೆ ಕಾಂಗ್ರೆಸ್ಸಿನ ನಿರಾಕರಣೆ

ಕಾಂಗ್ರೆಸ್ಸಿಗೆ ಹಿಂದೂ ಮಹಾ ಸಭೆಯ ಬೆಂಬಲ

ಅಖಿಲ ಭಾರತ ಹಿಂದೂ ಮಹಾಸಭೆ ಅಧ್ಯಕ್ಷರಾದ ಡಾ॥ ಬಿ. ಎಸ್. ಮೂಂಜೆಯವರೂ ಮತ್ತು ಬಂಗಾಳದ ಹಿಂದೂ ಮಹಾ ಸಭಾಧ್ಯಕ್ಷರಾದ ಶ್ರೀ ಕುಮಾರ ಆನಂದ ಸಿಂಗರೂ ಒಂದು ಹೇಳಿಕೆಯಿತ್ತಿ ಅವರು ವೈಸರಾಯರ ಮತ್ತು ... ಯಾವ ಬಗೆಯ ನಡವಳಿಕೆಯಿಂದ ಕಾಂಗ್ರೆಸ್ಸು ಮಂತ್ರಿಮಂಡಲವನ್ನು ತ್ಯಜಿಸದು; ಬ್ರಿಟಿಷರ ಕುತಂತ್ರಗಳನ್ನು ತಿಳಿಯದು ಅವರನ್ನು ಅಂತರ ರಾಷ್ಟ್ರೀಯ ನ್ಯಾಯ ಪರಿಶೀಲನೆಗೆ ಗುರಿ ಮಾಡಬೇಕು. ಕಾಂಗ್ರೆಸ್ಸಿಗೆ ಎಲ್ಲಾ ಹಿಂದೂಗಳ ಬೆಂಬಲವು ಇದೆ; ಸ್ವತಂತ್ರ ಭಾರತ ಸ್ಥಾಪನೆಗೆ ಹಿಂದೂ ಮಹಾಸಭೆಯು ತನುಮನ ಧನವನ್ನೆಲ್ಲಾ ನೀಡಲು ಸಿದ್ಧವಿದೆ, ಎಂದು ಹೇಳಿದ್ದಾರೆ.

ಉಲ್ಕಾಪಾತ

ಆಕಾಶದಲ್ಲಾದ ಉಲ್ಕಾಪಾತದಿಂದ ಬಿದ್ದ ಕಲ್ಲುಗಳು ಕೆನಿಯದ ಅನೇಕ ದನಕರುಗಳ ಮತ್ತು ಮನೆಗಳ ನಾಶಕ್ಕೆ ಕಾರಣವಾಗಿವೆ. ಇದರಿಂದ ೧೦೦ ಅಡಿ ಉದ್ದದ ಸುರಂಗದ ಮಾಯೊಂದು ಕಲ್ಪಿತವಾಗಿದೆ. ಉಲ್ಕಾಪಾತವೆ ಸಿಡಿದ ಸಮಯಕ್ಕೆ ದಿಗಂತದಲ್ಲಿ ಪ್ರಜ್ವಲ್ಯಮಾನವಾದ ಪ್ರಭೆಯು ಅನೇಕ ಮೈಲಿಗಳ ದೂರ ಪ್ರಸರಿಸಿತ್ತು.

ಉಪಾಧ್ಯಾಯರ ವಜಾ

ಕೋಲಾರದ ಹೈಸ್ಕೂಲಿನಲ್ಲಿ ನಡೆಯುತ್ತಿದ್ದ ಮುಷ್ಕರದ ನಂತರ ವಿದ್ಯಾಧಿಕಾರಿಗಳು ಅಲ್ಲಿಗೆ ಭೇಟಿಯಿತ್ತು ಹಿಂದಿರುಗಿದ ಮೇಲೆ ಅಲ್ಲಿನ ಉಪಾಧ್ಯಾಯರಾದ ಶ್ರೀ॥ ಕೃಷ್ಣಮೂರ್ತಿಯವರನ್ನು ಕೆಲಸದಿಂದ ವಜಾಮಾಡಲಾಗಿದೆ. ಇದರಿಂದ ವಿದ್ಯಾರ್ಥಿಗಳಿಗೆ ಅಸಮಾಧಾನವುಂಟಾಗಿ ಮತ್ತೆ ಮುಷ್ಕರ ಹೂಡುವ ಸಂಭವವಿದೆ

ಒಂದು ಕೋತಿಗೆ ೪ ರೂ.

ಕೋತಿಗಳ ಹಾವಳಿಯಿಂದ ಬೆಳಸಿಗೆ ಸಕಲ ಭಂಗವುಂಟಾಗುತ್ತಿರುವುದರಿಂದ ಅವುಗಳನ್ನು ನಾಶಮಾಡುವ ಸಲುವಾಗಿ ಒರಿಸ್ಸಾ ಸರ್ಕಾರವು ಯೋಚಿಸಿ ಗಂಡುಕೋತಿಯೊಂದನ್ನು ಹಿಡಿದುಕೊಟ್ಟರೆ ೩ ರೂ, ಹೆಣ್ಣುಕೋತಿಗೆ ೧ ರೂ ನಂತೆ ಬಹುಮಾನ ಕೊಡುವುದಾಗಿ ಪ್ರಕಟಿಸಿತ್ತು. ಆದರೆ ಯಾರೂ ಮುಂದೆ ಬರಲಿಲ್ಲವಾದ್ದರಿಂದ ಈಗ ಒಂದು ಗಂಡುಕೋತಿಯನ್ನು ಕೊಂದರೆ ೪ ರೂ. ಮತ್ತು ಹೆಣ್ಣುಕೋತಿಗೆ ೨ ರೂ. ಗಳಂತೆ ಬಹುಮಾನ ಕೊಡುವುದಾಗಿ ಅಲ್ಲಿನ ಸರ್ಕಾರ ಪ್ರಕಟಣೆ ತಿಳಿಸಿರುತ್ತದೆ

ಅನಾಥಾಶ್ರಮ

ಸ್ವಂ ಸು.] ಚಿಕ್ಕಮಗಳೂರು ೨೮

ಈ ದಿನ ಟೌನಹಾಲಿನಲ್ಲಿ ಇಲ್ಲಿನ ಪುರಪ್ರಮುಖರು ಅನಾಥಾಶ್ರಮವೊಂದನ್ನು ತೆರೆಯುವ ಬಗ್ಗೆ ಶ್ರೀ ಮರೀಗೌಡರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದರು ಮುಂದಿನ ಕಾರ್ಯಕ್ರಮ ಕೈಗೊಳ್ಳಲು ಶ್ರೀ ಅಣ್ಣಪ್ಪಶೆಟ್ಟರನ್ನು ಸಂಚಾಲಕರನ್ನಾಗಿ ಆರಿಸಿ, ಇತರ ೧೧ ಜನರನ್ನು ಸದಸ್ಯರನ್ನಾಗಿ ನೇಮಿಸಲಾಯಿತು. ಶ್ರೀ ಅಣ್ಣಪ್ಪಶೆಟ್ಟರು ೫೦ ರೂ ಗಳನ್ನು ಕೊಟ್ಟರು ಪುರಜನರೆಲ್ಲರೂ ಉದಾರವಾಗಿ ಸಹಾಯ ಮಾಡಬೇಕೆಂದು ಕೋರಲಾಗಿದೆ.

ಲಂಡನ್ನಿನಲ್ಲಿ ಸಂಧಾನ

ಕಾಂಗ್ರೆಸ್ಸಿನ ತಿರಸ್ಕಾರ; ಲೀಗಿನ ಪುರಸ್ಕಾರ.

ಬ್ರಿಟಿಷ್ ಮಂತ್ರಿಮಂಡಳದ ಘೋಷಣೆಯ ಬಗ್ಗೆ ಉಂಟಾಗಿರುವ ಭಿನ್ನಾಭಿಪ್ರಾಯಗಳನ್ನು ಸರಿಪಡಿಸುವ ಸಲುವಾಗಿ ಮಂತ್ರಿಮಂಡಳವು ವೈಸರಾಯರಿಗೆ ೫ ಜನ ಪ್ರಮುಖ ರಾಜಕೀಯ ಪ್ರತಿನಿಧಿಗಳನ್ನು ಲಂಡನ್ನಿಗೆ ಕರೆದುಕೊಂಡು ಬರಲು ಸೂಚನೆ ಇತ್ತಿದೆ. ಅದರಂತೆ ವೈಸರಾಯರು ನೆಹರೂ, ಪಟೇಲ್, ಬಲದೇವಸಿಂಗ್, ಲಿಯಾಖತ್ ಆಲಿಖಾನ್ ಮತ್ತು ಜಿನ್ನಾರವರನ್ನು ಆಹ್ವಾನಿಸಿರುವರು. ರಾಜ್ಯಾಂಗ ರಚನಾ ಸಮಿತಿಗೆ ಲೀಗು ಬಹಿಷ್ಕಾರ ಹಾಕಿರುವುದೇ ಈ ಸಮ್ಮೇಳನಕ್ಕೆ ಮುಖ್ಯ ಕಾರಣ. ಕಾಂಗ್ರೆಸ್ಸಿನವರೂ ಸಿಖ್ ನಾಯಕರಾದ ಬಲದೇವಸಿಂಗರೂ ಆಹ್ವಾನವನ್ನು ಅಂಗೀಕರಿಸಿರುವುದಿಲ್ಲ ಲೀಗ್ ಪ್ರತಿನಿಧಿಗಳು ಅದನ್ನು ಅಂಗೀಕರಿಸಿರುವರು. ಅವರು ರವಿವಾರ ವೈಸರಾಯರೊಡನೆ ವಿಮಾನದಲ್ಲಿ ಲಂಡನ್ನಿಗೆ ತೆರಳುವರು. ವೈಸರಾಯರು ಲಂಡನ್ನಿನಲ್ಲಿ ೧೦ ದಿನಗಳಿರುವರು. ಆ ಅವಧಿಯಲ್ಲಿ ಬೊಂಬಾಯಿ ಗವರ್ನರಾದ ಸರ್ ಜಾನ್‌ಕಾಲ್‌ವಿಲ್‌ರವರು ವೈಸರಾಯರಾಗಿ ಕೆಲಸ ಮಾಡುವರೆಂದು ಹೇಳಲಾಗಿದೆ

ವಿದ್ಯಾರ್ಥಿಗಳ ಅಸಮಾಧಾನ

ವಿಶ್ವವಿದ್ಯಾಲಯದ ಸ್ನಾತಕರುಗಳು ಬೆಂಗಳೂರು ವಿಶ್ವವಿದ್ಯಾನಿಲಯ ಸಂಘದ ವಿದ್ಯಾರ್ಥಿಗಳಿಗೆ ತೋರಿದ ವರ್ತನೆಯನ್ನು ಸರಿಪಡಿಸಿಕೊಂಡು ರಾಜಿಗೆ ಒಪ್ಪದಿದ್ದಲ್ಲಿ ವಿದ್ಯಾರ್ಥಿಗಳು ಸದರಿ ಸಂಘವನ್ನು ಬಹಿಷ್ಕರಿಸಿ ಪ್ರತಿ ಸಂಘವೊಂದನ್ನು ಆರಂಭಿಸುವುದಾಗಿ ಸಂಘದ ಕ್ರಿಯಾಸಮಿತಿಯವರು ನಿರ್ಧರಿಸಿರುತ್ತಾರೆ.

ವಯಸ್ಕರ ಶಿಕ್ಷಣ

ನಿನ್ನೆ ದಿನ ಮೈಸೂರು ನಗರದ ಚಾಮುಂಡಿ ಬಡಾವಣೆಗೆ ಸೇರಿದ ಮೇದರ ಬೀದಿಯಲ್ಲಿರುವ ಹತ್ತು ಜನರ ರಾಮಮಂದಿರದಲ್ಲಿ ಒಂದು ವಯಸ್ಕರ ರಾತ್ರಿ ಶಾಲೆಯು ತೆರೆಯಲ್ಪಟ್ಟಿತು. ನಗರ ಸಮಿತಿಯ ನೈ॥ ಕಾರ್ಯದರ್ಶಿಯವರಾದ ಮಿ॥ ಜೆ ಎಂ. ಬಾರ್ಫೋರಿಯವರೂ ಮತ್ತು ನಗರದ ಸಂಚಾಲಕರಾದ ಶ್ರೀ॥ ಶ್ರೀಕಂಠಯ್ಯನವರೂ ದಯಮಾಡಿಸಿ ವಯಸ್ಕರ ಶಿಕ್ಷಣದ ಅಗತ್ಯದ ವಿಚಾರವಾಗಿ ಭಾಷಣ ಮಾಡಿದರು

ಪೇ ಕಮೀಷನ್ ನೇಮಕ

ಶಾಸನ ಸಭಾ ಸದಸ್ಯರಿಗೆ ೨೫ ರೂ. ಭತ್ಯ

ಸ್ವಂ ಸು ವೃೋ॥] ಬೆಂಗಳೂರು ೨೮

ರಾಜಧರ್ಮ ಪ್ರವೀಣ ಟಿ. ಸಿಂಗಾರು ವೇಲುಮೊದಲಿಯಾರರ ಅಧ್ಯಕ್ಷತೆಯಲ್ಲಿ ಪೇ ಕಮೀಷನನ್ನು ನೇಮಿಸಿ ಈ ದಿನ ಸರ್ಕಾರದವರು ಆಜ್ಞೆ ಹೊರಡಿಸಿರುವರು. ಸಮಿತಿಯಲ್ಲಿ ಈ ಕೆಳಗೆ ಕಂಡ ಸದಸ್ಯರಿರುವರು— ರೆವಿನ್ಯೂ ಕಮೀಷನರು, ಫೈನಾನ್ಷಿಯಲ್ ಸೆಕ್ರೆಟರಿ, ಪಬ್ಲಿಕ್ ಸರ್ವೀಸ್ ಕಮೀಷನರ್, ಎಂ. ವೀರರಾಘವೇಲರ್, ಶ್ರೀಗಳಾದ ಎಸ್ ಸಿ. ಮಲ್ಲಯ್ಯ, ಪಿ ವೀರಬಸಪ್ಪ, ಎ. ಜಿ. ವಿಲೀಲ್, ಹೆಚ್. ಆರ್. ಗುರುವಾರೆಡ್ಡಿ, ರಾವ್‌ಬಹದ್ದೂರ್ ಎಂ ರಾಮಸ್ವಾಮಿ, ಎಸ್. ಜಿ. ನರಸಿಂಹಯ್ಯ, ಎಸ್ ಎಲ್ ಚನ್ನಪ್ಪ, ಬೇಲೂರು ಶ್ರೀನಿವಾಸ ಅಯ್ಯಂಗಾರ್, ನೇರಳೆ ಮಾದಯ್ಯ ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ, ಮತ್ತು ಸಿ. ಜಿ. ರಾಮಯ್ಯ ಕಾರ್ಯದರ್ಶಿ.

ಸಂಸ್ಥಾನದ ನೌಕರರ ಮಾಸಿಕ ಸಂಬಳಗಳನ್ನು ಪುನರ್ ವಿಮರ್ಶಿಸುವುದು ಅಗತ್ಯವೂ ತ್ವರಿತವೂ ಆಗಿರುವುದೆಂದು ತಿಳಿಸಿ ಈ ಕೂಡಲೇ ನೌಕರರಿಗೆ ತಾತ್ಕಾಲಿಕವಾಗಿ ಏನಾದರೂ ಪರಿಹಾರ ಕೊಡಬೇಕೆ? ಹಾಗಿದ್ದರೆ ಎಷ್ಟು ಎಂಬ ಬಗ್ಗೆಯೂ, ಈ ರೀತಿ ಉಂಟಾಗುವ ಹೆಚ್ಚಿನ ವೆಚ್ಚವನ್ನು ಭರ್ತಿ ಮಾಡುವ ವಿಧಾನವನ್ನೂ ಸೂಚಿಸಬೇಕೆಂದು ಸರ್ಕಾರದವರು ಸಮಿತಿಯನ್ನು ಕೋರಿರುತ್ತಾರೆ.

ಸುಸಮಯ ! ಸುಸಮಯ !

ಬಸ್ಸು ಮಾರಾಟಕ್ಕಿವೆ

ಈ ಕೆಳಗಿನ ಷೆವರ್ಲೆ ಎರಡು ಬಸ್ಸುಗಳು ಮಾರಾಟಕ್ಕಿವೆ. ಕೊಳ್ಳಬಿಚ್ಛಿಸುವವರು ಕೆಳಗೆ ಕಂಡ ವಿಳಾಸದಲ್ಲಿ ಬಂದು ನೋಡಬಹುದು

1. ಮಾಡಲ್ 39. ಚವರ್ಲೆಟ್ ಸೀಟಿಂಗ್ ಕೆಪಾಸಿಟಿ 17+2 ಷೆವರ್,

2 ಮಾಡಲ್ 39 ಬೆಡ್‌ಫೋರ್ಡ್. ಸೀಟಿಂಗ್ ಕೆಪಾಸಿಟಿ 18+2 ಎರಡು ಬಸ್ಸುಗಳೂ ಚೆನ್ನಾಗಿವೆ ಬೆಲೆ ಮಾಫಿ.

ಆಂಜನೇಯಾ ಮೋಟಾರ್ ಕನ್ಸರ್ನ್

ಒಲಂಪಿಯಾ ಟಾಕೀಸ್ ಬಳಿ, ಮೈಸೂರು.

ಕಾಲೇಜು ವಿದ್ಯಾರ್ಥಿಗಳ ಮುಷ್ಕರ

ಸ್ವಂ ಸು.ವೃೋ॥] ಬೆಂಗಳೂರು ೨೮

ವಂದೇ ಮಾತರಂ ಗೀತೆಯನ್ನು ಹಾಡುವ ವಿಚಾರದಲ್ಲಿ ಕಳೆದ ಕೆಲವು ದಿನಗಳಿಂದ ಉಂಟಾದ ಬಿಕ್ಕಟ್ಟಿನ ಫಲವಾಗಿ ವಿಶ್ವ ವಿದ್ಯಾಲಯ ಸಂಘದ ಹೊಸ ಉಪಾಧ್ಯಕ್ಷರು ಮತ್ತು ಕಾರ್ಯದರ್ಶಿಗಳಿಗೆ ಅಧ್ಯಕ್ಷರು ಅಧಿಕಾರವನ್ನು ವಹಿಸದೆ ಅವರುಗಳು ಸ್ನಾತಕರುಗಳೊಡನೆ ಮಾತನಾಡಲು ಹೋಗಿ ವಿಫಲಗೊಂಡಿದ್ದರಷ್ಟೆ. ಈಚೆಗೆ, ಸ್ನಾತಕರುಗಳ ಸೂಚನೆಯಂತೆ ಅಧ್ಯಕ್ಷರು ಮೇಲ್ಕಂಡವರಿಗೆ ಅಧಿಕಾರವನ್ನು ವಹಿಸಲು ತಿಳಿಸಿರುವರು. ಆದರೆ ವಂದೇ ಮಾತರಂ ಹಾಡಲು ವಿಶ್ವ ವಿದ್ಯಾನಿಲಯದ ಕೌನ್ಸಿಲಿನವರು ಆಕ್ಷೇಪಿಸುವುದರಿಂದ ಅದನ್ನು ಹಾಡದೆ ಸಭೆಗಳನ್ನು ನಡಸಬೇಕೆಂದು ಅದರಲ್ಲಿ ನಮೂದಿಸಲಾಗಿದೆ ಇದನ್ನು ಖಂಡಿಸುವುದಕ್ಕಾಗಿ ಈ ದಿನ ಸೆಂಟ್ರಲ್, ಇಂಟರ್ ಮತ್ತು ಕಾಮರ್ಸ್ ಕಾಲೇಜು ವಿದ್ಯಾರ್ಥಿಗಳು ಶಾಲೆಗೆ ಹೋಗದೆ ಮುಷ್ಕರ ಹೂಡಿರುತ್ತಾರೆ. ವಂದೇ ಮಾತರಂ ಬಗ್ಗೆ ಹಾಕಿರುವ ನಿರ್ಬಂಧವನ್ನು ಸೋಮವಾರದೊಳಗೆ ವಾಪಸು ತೆಗೆದುಕೊಳ್ಳಬೇಕು; ಇಲ್ಲದೆ ಹೋದರೆ ವಿಶ್ವ ವಿದ್ಯಾನಿಲಯವನ್ನು ಬಹಿಷ್ಕರಿಸಿ ಅದಕ್ಕೆ ಪ್ರತಿಯಾಗಿ ಬೇರೊಂದು ಸಂಘವನ್ನು ಸ್ಥಾಪಿಸಬೇಕು, ಮತ್ತು ಕಾರ್ಯದರ್ಶಿಗಳೂ, ಉಪಾಧ್ಯಕ್ಷರೂ, ಕಾರ್ಯಕಾರಿ ಮಂಡಲಿಯವರೂ ಸಂಘದ ಮುಂದೆ ಉಪವಾಸ ಮುಷ್ಕರವನ್ನು ಆಚರಿಸಬೇಕು ಎಂಬ ನಿರ್ಣಯವು ವಿದ್ಯಾರ್ಥಿಗಳ ಸಭೆಯಲ್ಲಿ ಅಂಗೀಕರಿಸಲ್ಪಟ್ಟಿತು.

ಸೆನೆಟ್ ಸಭೆಯಲ್ಲಿ ಪಂಡಿತ ಮಾಲವೀಯರ ನಿಧನದ ಬಗ್ಗೆ ಸ್ನಾತಕರುಗಳು ಅಪಚಾರವೆಸಗಿರುವುದನ್ನೂ ಸದಸ್ಯರುಗಳು ಅವರ ಮೇಲೆ ತಪ್ಪುಗಳೆಸಿದ್ದುದನ್ನೂ ಖಂಡಿಸಿ ನಿರ್ಣಯಗಳಾದವು ಸಂಘಕ್ಕೆ ಚುನಾಯಿತ ಅಧ್ಯಕ್ಷರಿರಬೇಕೆಂದು ಒತ್ತಾಯಪಡಿಸುವ ನಿರ್ಣಯವೂ ಮಂಜೂರಾಯಿತು.

ಶಾಸನ ಸಭಾ ಸದಸ್ಯರಿಗೆ ೨೫ ರೂ. ಭತ್ಯ

ಮೈಸೂರು ಶಾಸನ ಸಭೆಯ ಹೌಸ್ ಸಮಿತಿಯು ಶ್ರೀ ನೇರಳೆ ಮಾದಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ಸದರೀ ಸಭೆಯ ಸದಸ್ಯರ ಭತ್ಯವನ್ನು ದಿನಕ್ಕೆ ೨೫ ರೂಪಾಯಿಗಳಿಗೆ ಹೆಚ್ಚಿಸಬೇಕೆಂದು ಸರ್ಕಾರಕ್ಕೆ ಸೂಚಿಸುವಂತೆ ತೀರ್ಮಾನಿಸಲಾಯಿತು.

ಅಪೇರಾ ಟಾಕೀಸ್

೨೯-೧೧-೪೬ ರಿಂದ

ಪ್ರತಿ ದಿನ ಮೂರು ಆಟಗಳು

ಉತ್ತಮಿ

(ತಮಿಳು)

ಕಾಳಿ ಎನ್. ರತ್ನಂ, ಟಿ. ಎಸ್ ದೊರೆರಾಜ್ ಸ್ವಾಮಿನಾಥನ್, ಟಿ ಎಸ್ ಕೃಷ್ಣವೇಣಿ ರಾಜಕಾಂತಂ

From 29-11-46

MORNING SHOWS

DILLINGER

With:- Edmond Lowe, Anne Jeffreys, Lawrence Tierney

ಸಾಧ್ವಿ

ತಾ|| ೨೮-೧೧-೪೬ ಗುರುವಾರ

ಮತ್ತೆ ಸಂಧಾನವೇಕೆ ?

ಭರತಖಂಡದ ರಾಜಕೀಯ ಸಮಸ್ಯೆಯನ್ನು ಪರಿಹರಿಸಲು ಇದುವರೆಗೆ ಅಸಂಖ್ಯಾತವಾದ ಸಂಧಾನಗಳು ನಡೆದಿವೆ. ಖಾಸಗಿ ಮಹನೀಯರುಗಳೂ, ರಾಜ ಮಹಾರಾಜರುಗಳೂ, ವೈಸರಾಯರೂ ಸಂಧಾನಗಳನ್ನು ನಡೆಸಿರುತ್ತಾರೆ. ಈಚೆಗೆ ಬ್ರಿಟಿಷ್ ಮಂತ್ರಿಮಂಡಳದ ನಿಯೋಗವೊಂದು ಬಂದು ಸಂಧಾನವನ್ನು ನಡೆಸಿತು. ಈ ಮಧ್ಯೆ ಕಾಂಗ್ರೆಸ್ ಮತ್ತು ಲೀಗಿನ ನಾಯಕರುಗಳು ತಾವಾಗಿಯೇ ಅನೇಕ ಬಾರಿ ಸಂಧಾನವನ್ನು ಮಾಡಿರುವರು. ಇವೆಲ್ಲಾ ಆದರೂ ಇನ್ನೂ ಒಂದು ಒಪ್ಪಂದಕ್ಕೆ ಬರಲು ಸಾಧ್ಯವಾಗಿಲ್ಲ. ಪರಿಸ್ಥಿತಿಯು ದಿನೇ ದಿನೇ ಹೆಚ್ಚು ಹೆಚ್ಚಾಗಿ ಬಿಗಡಾಯಿಸುತ್ತಿದೆ

ಲೀಗಿನವರು ತಾತ್ಕಾಲಿಕ ಸರ್ಕಾರದಲ್ಲಿ ಪ್ರವೇಶಿಸಿರುವರಾದರೂ, ರಾಜ್ಯಾಂಗ ಸಮಿತಿಯಲ್ಲಿ ಭಾಗ ವಹಿಸುವುದಿಲ್ಲವೆಂದು ಹೇಳತೊಡಗಿದ್ದಾರೆ. ಇಂದಿನ ಸಮಸ್ಯೆಗೆ ಜನಾಂಗಗಳ ವರ್ಗೀಕರಣವೇ ಪರಿಹಾರವೆಂದು ಜಿನ್ನಾರವರು ಹೇಳುತ್ತಿದ್ದಾರೆ. ಮುಸ್ಲಿಂ ಪ್ರದೇಶಗಳಲ್ಲಿರುವ ಹಿಂದೂಗಳನ್ನೂ, ಹಿಂದೂ ಪ್ರದೇಶಗಳಲ್ಲಿರುವ ಮುಸ್ಲಿಮರನ್ನೂ ಅನಾಮತ್ತಾಗಿ ವಿನಿಮಯ ಮಾಡುವ ಸೂಚನೆಯನ್ನು ಮುಂದಿಡುತ್ತಿದ್ದಾರೆ. ಆದುದರಿಂದ ಲಂಡನ್ನಿನಲ್ಲಿ ನಡೆಯಬಹುದಾದ ಸಂಧಾನಗಳಿಂದ ಯಾವ ಪ್ರಯೋಜನವೂ ಉಂಟಾಗಲಾರದೆಂಬ ಶಂಕೆಯು ಸಕಲರಿಗೂ ಸಹಜವಾಗಿಯೇ ಉದ್ಭವಿಸಿರುತ್ತದೆ.

ಕಾಂಗ್ರೆಸ್ಸಿನವರು ಬ್ರಿಟಿಷ್ ನಿಯೋಗದ ಸಲಹೆಗಳನ್ನು ಅಂಗೀಕರಿಸಿ ಕೇಂದ್ರ ಸರಕಾರದಲ್ಲಿ ಈಗಾಗಲೇ ಭಾಗ ವಹಿಸುತ್ತಿದ್ದಾರೆ. ಲೀಗಿನವರಾದರೋ ಅದನ್ನು ಒಪ್ಪುವುದಿಲ್ಲವೆಂದು ಬಾಯಿನಲ್ಲಿ ಹೇಳುತ್ತಿದ್ದರೂ ಸರ್ಕಾರದೊಳಗೆ ಪ್ರವೇಶಿಸಿರುತ್ತಾರೆ. ಆದರೆ ಸರ್ಕಾರ ಯಂತ್ರವು ಸೌಹಾರ್ದದಿಂದ ಮುಂದುವರಿಯಲು ಅವರು ಸಹಕರಿಸುತ್ತಿಲ್ಲ. ಇಷ್ಟೇ ಅಲ್ಲದೆ ರಾಜ್ಯಾಂಗ ಸಮಿತಿಯೊಡನೆ ಅಸಹಕಾರ ಮಾಡುವುದಾಗಿಯೂ ತಿಳಿಸಿದ್ದಾರೆ. ಆದುದರಿಂದ ಪುನಃ ಬಿಕ್ಕಟ್ಟು ಪ್ರಾಪ್ತವಾಗಿದೆ. ಆದರೆ ಇಂದಿನ ಬಿಕ್ಕಟ್ಟಿಗೆ ಕಾಂಗ್ರೆಸ್ಸಿನ ಜವಾಬ್ದಾರಿಯೇನೂ ಇಲ್ಲ. ಕಾಂಗ್ರೆಸ್ಸಿಗೆ ನಿವಾರಣೆಯಾಗಬೇಕಾದ ಸಂಶಯವಾವುದೂ ಇಲ್ಲ. ಲಂಡನ್ನಿಗೆ ಹೋಗಿ ಯಾವುದಾದರೂ ವಿಷಯದಲ್ಲಿ ವಿವರಣೆಯನ್ನು ಪಡೆಯಬೇಕಾದ ಪ್ರಸಕ್ತವಿರುವುದಿಲ್ಲ.

ಸಂಧಾನಗಳ ಕಾಲವು ಮುಗಿಯಿತು. ರಾಜ್ಯಾಂಗ ಸಮಿತಿಯ ಕಾರ್ಯಕ್ರಮವೂ ಗೊತ್ತು ಮಾಡಲ್ಪಟ್ಟಿರುವುದು. ಇನ್ನು ಮುಂದೆ ಯಾವ ವಿಷಯವನ್ನು ಇತ್ಯರ್ಥ ಮಾಡಬೇಕಾದರೂ ಆ ಸಮಿತಿಯೇ ಮಾಡಬೇಕು. ಅದರಲ್ಲಿ ಭಿನ್ನಾಭಿಪ್ರಾಯಗಳು ಬಂದರೆ ಫೆಡರಲ್ ನ್ಯಾಯಾಸ್ಥಾನದ ತೀರ್ಪಿಗೆ ಒಪ್ಪುವುದಾಗಿ ಕಾಂಗ್ರೆಸ್ಸು ಈ ಮೊದಲೇ ತಿಳಿಸಿರುತ್ತದೆ

ಮುಸ್ಲಿಂ ಲೀಗಿನವರಿಗೆ ಇನ್ನೂ ಏನಾದರೂ ಸಂಶಯಗಳಿದ್ದರೆ ಅವರು ಅದನ್ನು ಪರಿಹರಿಸಿಕೊಳ್ಳಲು ಲಂಡನ್ನಿಗೆ ಹೋಗಬಹುದು. ಆದರೆ ಅವರು ಮಾತ್ರ ಹೋದರೆ ಅದು ಸಂಧಾನವೆನಿಸಿಕೊಳ್ಳುವುದಿಲ್ಲ ಕೇವಲ ಏಕಪಕ್ಷದ ಸಂಭಾಷಣೆಯಾಗುವುದು. ಅದನ್ನು ಅವರು ಇಲ್ಲಿಯೇ ವೈಸರಾಯರೊಡನೆ ಮಾತುಕತೆಯಿಂದ ಮುಗಿಸಬಹುದು. ಆದುದರಿಂದ ಈಗ ವೈಸರಾಯರು ಕೈಗೊಂಡಿರುವ ಲಂಡನ್ ಯಾತ್ರೆಯು ಎಷ್ಟು ಮಟ್ಟಿಗೆ ಸಾರ್ಥಕವಾದೀತೆಂಬುದು ಸಂದೇಹಾಸ್ಪದವಾದ ವಿಚಾರವೇ ಆಗಿರುತ್ತದೆ.

ರಣಜಿತ್
೨೯-೧೧-೪೬ ರಿಂದ
ಹುಮಾಯೂನ್
ಅಶೋಕ್ ಕುಮಾರ್
ವೀಣಾ
ಚಂದ್ರಮೋಹನ
ನಾಗಿರ್ಸ್
ಪಾತ್ರ
ಪ್ರತಿ ದಿನವೂ ೩ ಆಟಗಳು

ಮೈಸೂರು ಸಿಟಿ ರೇಷನಿಂಗ್

No. R 6-81-1946-47

1946ನೇ ಇಸವಿ ನವಂಬರ್ ಮಾಹೆ 30ನೇ ತಾ|| ಶನಿವಾರ ದಿವಸ ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ, ಮೊಹಲ್ಲಾ ಸಬ್‌ಗೋಡೌನ್, ಪರ್ಮಿಟ್ ಡಿಪೋ, ಮತ್ತು ಸಹಕಾರ ಸಂಘಗಳಲ್ಲಿರುವ ದಿನಸಿಗಳ ಎಣಿಕೆ ಮಾಡಬೇಕಾಗಿರುವುದರಿಂದ, ಆ ದಿವಸ ಡಿಪೋಗಳು ಮುಚ್ಚಲ್ಪಡುತ್ತವೆ.

(ಸಹಿ) ಅಬ್ದುಲ್ ರಜಾಕ್,
ರೇಷನಿಂಗ್ ಆಫೀಸರ್
ಮೈಸೂರು ಸಿಟಿ

ನಿಮ್ಮ ಮೈ ಹೊಳಮಲ್ಲಿನಂತೆ
ಹೊಳೆಯಬೇಕೆ ? ನೀವು
ಲಾವಣ್ಯ ಮೂರ್ತಿಗಳಾಗಬೇಕೆ ?
ಹಾಗಾದರೆ
ನಮ್ಮ ಮೈಸೂರು ಸ್ಯಾಂಡಲ್
ಸೋಪನ್ನೇ ಉಪಯೋಗಿಸಿ !
ಮೈಸೂರು
ಸ್ಯಾಂಡಲ್
ಶ್ರೀ
ಸೋಪ್
ಅನೇಕರಿಗೆ ಸೌಂದರ್ಯವನ್ನು
ಸಂಪಾದಿಸಿ ಕೊಟ್ಟಿದೆ. ನಿಮಗೂ
ಸಂಪಾದಿಸಿ ಕೊಡುತ್ತದೆ.
ಪರೀಕ್ಷಿಸಿ ನೋಡಿರಿ
ಎಲ್ಲೆಲ್ಲೂ ದೊರೆಯುತ್ತದೆ.
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.



ಎಲ್ಲಾತುಪ್ಪಕ್ಕಿಂತಲೂ
ಆರ್.ಜಿ.ತುಪ್ಪವೇ
ಚನ್ನಾಗಿರುತ್ತದೆ.

Edited, printed and published by A. R. Nagarajan at the Sadhvi Press D. Subbiah Road, Mysore

ರಾಜಕಮಲ್ ಟಾಕೀಸ್, ಮೈಸೂರು



From 29-11-46 for 4 days daily at 10-30 a. m.
WILD WEST DAYS
A thrilling serial to thrill millions.

OPPORTUNITY FOR BUYERS

1. HANSA:- 1938 model. thoroughly re-conditioned with new tyres and battery Price Rs. 5,500 or nearest offer.
2. FORD V 8:- 1942 model, Station Wagon in Show-Room condition. Price Rs. 8,000 or nearest offer.
3. FORD V 8: 1942 model Lorry, Timber body, in good condition. Price Rs 7,000 or nearest offer.
4. A. J. S. Motor Cycle.- 2.5 H. P. in perfect condition. Price Rs 1,150 or nearest offer.

For particulars apply to.

NEO FURNITURE CO.,
Cabinet Makers, Auctioneers and Commission Agents,
Irwin Road, : . Mysore.
Inspection:- 4 to 6 P. M.

ರೋಜಿ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ ೩ ಕಾಸು

ಸಂಪುಟ ೫] ಶುಕ್ರವಾರ ೨೯—೧೧—೪೬ [ಸಂಚಿಕೆ ೧೦೦೦

ಕಾಶ್ಮೀರದಲ್ಲಿ ಗುಂಡು ೯ ಸಾವು ; ೧೨ ನೋವು

ಹೊಸ ಕಾಂಗ್ರೆಸ್ ಕಾರ್ಯಕಾರಿ ಸಮಿತಿ

ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಈ ಮುಂದೆ ಕಂಡವರನ್ನು ಅಧ್ಯಕ್ಷ ಕೃಪಲಾನಿಯವರು ನೇಮಿಸಿಕೊಂಡಿರುವುದು ಗೊತ್ತಾಗಿದೆ:- ಪಂ|| ನೆಹರೂ, ಪಟೇಲ್, ಡಾ|| ರಾಜೇಂದ್ರ ಪ್ರಸಾದ್, ಆಜಾದ್, ಶರತ್‌ಬೋಸ್, ಜೈಪ್ರಕಾಶ್, ಖಾನ್ ಅಬ್ದುಲ್ ಗಫಾರ್ ಖಾನ್, ಸ|| ಪ್ರತಾಪಸಿಂಗ್, ಶಂಕರರಾವ್‌ದೇವ್, ಜುಗಲ್ ಕಿಶೋರ್, ಡಾ|| ಪಟ್ಟಾಭಿಸೀತಾರಾಮಯ್ಯ, ರಫಿ ಅಹಮದ್ ಕಿದ್ವಾಯಿ, ಕಮಲಾದೇವಿ ಮತ್ತು ಸರೋಜಿನಿ ನಾಯ್ಡು. ಶ್ರೀ ಶಂಕರರಾವ್‌ದೇವ್ ಮತ್ತು ಜುಗಲ್ ಕಿಶೋರ್ ರವರು ಕಾರ್ಯದರ್ಶಿಗಳಾಗಿ ನೇಮಿತರಾಗಿದ್ದಾರೆ.

೭೦೦೦ ವಿದ್ಯಾರ್ಥಿಗಳ ಮುಷ್ಕರ

ನೌಖಾಲಿ ಪರಿಹಾರಕ್ಕಾಗಿ ಕಾಲೇಜ್ ಸಮಿತಿಯಿಂದ ಮಂಜೂರಾದ ೫೫೦ ರೂ ಗಳನ್ನು ಪರಿಹಾರ ಸಮಿತಿಗೆ ಕಳುಹಿಸದೆ ಸತಾಯಿಸಿ ಕಾಲೇಜ್ ಅಧಿಕಾರಿಗಳು ತೋರಿದ ವರ್ತನೆಯನ್ನು ವಿರೋಧಿಸುವ ಸಲುವಾಗಿ ಕಲ್ಕತ್ತಾ ಇಂಟರ್‌ಮೀಡಿಯಟ್ ಕಾಲೇಜಿನ ೭೦೦೦ ಮಂದಿ ವಿದ್ಯಾರ್ಥಿಗಳು ಮುಷ್ಕರ ಹೂಡಿದ್ದಾರೆಂದು ಗೊತ್ತಾಗಿದೆ

ಹರಿ ಜನರನ್ನು ಮುಸ್ಲಿಮರನ್ನಾಗಿ ಮಾಡುವ ಪ್ರಯತ್ನ

ರಾಯಚೋಟಿ, ಮದನಪಲ್ಲಿ, ಕೋಸಪಲ್ಲಿ ಮುಂತಾದ ಕಡೆಗಳ ಹಾಡವಾಡಿಗಳನ್ನು ಮುಸ್ಲಿಮರನ್ನಾಗಿ ಮತಾಂತರಗೊಳಿಸಲು ಕೆಲವು ಮುಸ್ಲಿಮರು ಅಲ್ಲಿಗೆ ಬಂದರೂ, ಆ ಪ್ರಾಂತ್ಯದ ನಿಮ್ನವರ್ಗದ ಸಂಘದ ಅಧ್ಯಕ್ಷರಾದ ಶ್ರೀ|| ಗಂಗಾಧರ ತಿವರವರು, ಇನ್ನು ಕೆಲವು ಹಿಂದೂಗಳೂ ಅಲ್ಲಿಗೆ ಹೋಗಿ ಅದನ್ನು ತಪ್ಪಿಸಿದರೆಂದೂ ತಿಳಿದು ಬಂದಿದೆ

ಕೃಪಲಾನಿಯವರು ಮದರಾಸಿಗೆ

ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೃಪಲಾನಿಯವರು ಡಿಸೆಂಬರ್ ತಿಂಗಳಿನ ಮಧ್ಯದಲ್ಲಿ ಮದ್ರಾಸಿಗೆ ಬರುವರು ಮತ್ತು ಅವರು ತಮಿಳುನಾಡು ಕಾಂಗ್ರೆಸ್ ಸಮಿತಿಯವರು ಏರ್ಪಡಿಸಿರುವ ಸ್ವದೇಶಿ ವಸ್ತು ಪ್ರದರ್ಶನದ ಆರಂಭೋತ್ಸವವನ್ನು ನೆರವೇರಿಸುವರು.

ಶಾಸನ ಸಭೆ

ಸ್ವ. ಸು.] ಬೆಂಗಳೂರು ೨೮

ನ್ಯಾಯ ವಿಧಾಯಕ ಸಭೆಯು ಡಿಸೆಂಬರ್ ೯ ನೇ ತಾ|| ಆರಂಭವಾಗಿ ೮ ದಿನಗಳ ಕಾಲ ನಡೆಯುವುದು. ಪ್ರತಿನಿಧಿ ಸಭೆಯಲ್ಲಿ ಒಂದು ಮಂಜೂರಾಗಿದ್ದ ನಾಲ್ಕು ಮಸೂದೆಗಳನ್ನು ಮಾತ್ರ ಸರ್ಕಾರದವರು ಸಭೆಯಲ್ಲಿ ಮಂಡಿಸುವುದಾಗಿ ಗೊತ್ತಾಗಿದೆ.

† ಗಳಿಸಿರುವ ಮಗ್ಗದ ಬಟ್ಟೆ ಹತೋಟಿ ಆಜ್ಞೆಯು ೧೯೪೭ ನೇ ಫೆಬ್ರವರಿ ೧ ರಿಂದ ಜಾರಿಗೆ ಬರುವುದಾಗಿ ಪ್ರಕಟಿಸಲಾಗಿದೆ.

† ರಜದ ಮೇಲೆ ಹೋಗಲಿರುವ ಶ್ರೀ|| ಬಿ. ಎಸ್. ರಾಘವೇಂದ್ರ ರಾಯರ ಅಧಿಕಾರವನ್ನು ಶ್ರೀ|| ಎಸ್. ಶಾಮಣ್ಣನವರು ವಹಿಸಿಕೊಳ್ಳುವುದರಿಂದ, ಹೆಚ್ಚಿನ ವಿಶೇಷ ಸರಬರಾಜಿನ ಕೆಲಸಕ್ಕೆ ಕಮೀಷನರಾದ ಶ್ರೀ|| ಟಿ. ಟಿ. ಶ್ರೀನಿವಾಸ ರವರನ್ನು ಆಕ್ಟಿಂಗ್ ಕಂಟ್ರೋಲರನ್ನಾಗಿ ನೇಮಿಸಲಾಗುವುದೆಂದು ಗೊತ್ತಾಗಿದೆ.

ಕಾಶ್ಮೀರದಲ್ಲಿ ಮಿಲಿಟರಿಯವರಿಂದ ಗುಂಡಿನೇಟು

ಘಟಲನ್ನು ಕಟಾವುಮಾಡುವ ವಿಚಾರವಾಗಿ ಸರ್ಕಾರದವರಿಗೂ ಗ್ರಾಮಸ್ಥರಿಗೂ ಉಂಟಾದ ಭಿನ್ನಾಭಿಪ್ರಾಯದ ಪರಿಣಾಮವಾಗಿ ಕಾಶ್ಮೀರ ಸಂಸ್ಥಾನದ ವಾರಪೋರ್ ಎಂಬ ಹಳ್ಳಿಯಲ್ಲಿ ಮಿಲಿಟರಿಯವರು ಜನರ ಮೇಲೆ ಗುಂಡುಹಾರಿಸಿದುದರಿಂದ ೯ ಜನರು ಮಡಿದು ೧೨ ಜನರಿಗೆ ಗಾಯಗಳಾಗಿವೆಯೆಂದು ವರದಿಯಾಗಿದೆ. ಕಾಶ್ಮೀರದ ಡೆಪ್ಯುಟಿ ಪೊಲಿಟಿಕಲ್ ಸೆಕ್ರೆಟರಿಯವರ ಸಹೋದರರಾದ ಪಂಡಿತ ನಂದಲಾಲ್ ಧಾರ್‌ರವರಿಗೆ ೩ ತಿಂಗಳ ಸಜಾ ೨೦೦ ರೂ. ಜುಲ್ಮಾನೆಯೂ ಸಹ ಆಗಿರುವುದಾಗಿ ತಿಳಿದು ಬಂದಿದೆ

ಬ್ರಿ|| ರಾಜ ದಂಪತಿಗಳ ಕೊಲೆ ಯತ್ನ

೧೯೩೯ ರಲ್ಲಿ ಅಮೆರಿಕದ ಸಂಯುಕ್ತ ಸಂಸ್ಥಾನಕ್ಕೆ ಬಂದಿದ್ದ ಇಬ್ಬರು ಜರ್ಮನರು ಬ್ರಿ|| ಚಕ್ರವರ್ತಿ ಜಾರ್ಜ್ ಪ್ರಭು ಮತ್ತು ಅವರ ಪತ್ನಿ ಎಲಿಜಬೆತ್‌ರವರನ್ನು ಕೊಲೆ ಮಾಡುವ ಸಂಚು ಬಗ್ಗೆ ಮಾತನಾಡಿಕೊಂಡರೆಂದೂ ಆದರೆ ಇದನ್ನು ಕಾರ್ಯರೂಪಕ್ಕೆ ತರಲು ಯಾವ ಪ್ರಯತ್ನವೂ ನಡೆಯಲಿಲ್ಲವೆಂದೂ ಸುದ್ದಿಯೊಂದು ತಿಳಿಸಿರುತ್ತದೆ.

ಸಮುದ್ರ ಪ್ರಾಣಿಯ ಹೊಟ್ಟೆಯಲ್ಲಿ ಮನುಷ್ಯನ ಮೂಳೆ

ಬೊಂಬಾಯಿ ಬಂದರಿಗೆ ಸುಮಾರು ೩೦ ಮೈಲಿ ದೂರದಲ್ಲಿ ಹನ್ನೆರಡು ಅಡಿಯ, ಹುಲಿಯ ಆಕಾರ ಷಾರ್ಕ್ ಎಂಬ ಪ್ರಾಣಿಯನ್ನು ಬೆಸ್ತರು ಹಿಡಿದಿರುವರು. ಅದನ್ನು ಕೊಯ್ದು ನೋಡಲಾಗಿ ಹೊಟ್ಟೆಯಲ್ಲಿ ಮನುಷ್ಯನ ಅಸ್ಥಿ ಪಂಜರವೂ, ವಸ್ತ್ರಗಳೂ ಕಂಡು ಬಂದುವೆಂದೂ, ಅದು ಸುಮಾರು ೩೦೦ ಪೌಂಡ್ ತೂಕವಿರುವುದಾಗಿಯೂ ಹೇಳಲಾಗಿದೆ.

ಪೊಲೀಸರಮೇಲೆ ಮೊಕದ್ದಮೆ

ಮೈಸೂರು ೨೮

ನಗರದ ಕೇಂದ್ರ ಆಹಾರದ ಡಿಪ್ಪೋವಿನಿಂದ ೨೫ ನೇ ತಾ|| ರಾತ್ರಿ ೩ ಮೂಟೆ ಸಣ್ಣಕ್ಕಿಯನ್ನು ಕಳವುಮಾಡಿ ೧೧೦ ರೂ. ಗಳಿಗೆ ಕೃಷ್ಣಮೂರ್ತಿಪುರದ ಶ್ರೀ ಬಸವಯ್ಯನವರಿಗೆ ಮಾರಿದರೆಂಬ ಅಪಾದನೆಮೇಲೆ ದಸ್ತಗಿರಿಯಾಗಿರುವ ಪೋಲೀಸ್ ಕಾನ್ಸ್‌ಟೇಬಲ್ಲುಗಳಾದ ನಂಜುಂಡರಾಜು ಮತ್ತು ರಾಮರಾಜು ಎಂಬುವರನ್ನು ಇದಿನ ನಗರದ ನ್ಯಾಯಾಧೀಶರ ಮುಂದೆ ಹಾಜರ್ಪಡಿಸಿ ಡಿಸೆಂಬರ್ ೨ ರ ತನಕ ರಿಮ್ಯಾಂಡ್ ಪಡೆಯಲಾಗಿದೆ.

ಸೂಚನೆ

ಸುಬ್ಬರಾಯನ ಷಷ್ಠೀ ಪ್ರಯುಕ್ತ ನಾಳೆ ದಿನ "ಸಾಥೀ" ಪತ್ರಿಕೆಗೆ ರಜಾ ಕೊಡಲಾಗಿದೆ.

ವ್ಯವಸ್ಥಾಪಕ.

ವಿದ್ಯಾರ್ಥಿಗಳ ಪ್ರತಿಭಟನೆ

ಮೈಸೂರು ೨೮

ಬೆಂಗಳೂರು ವಿಶ್ವವಿದ್ಯಾನಿಲಯ ಸಂಘದ ಅಧಿಕಾರ ವರ್ಗದವರಿಗೆ ಭೇಟಿಕೊಡದೆ ಅವಮಾನಮಾಡಿರುವ ಮತ್ತು ಪಂಡಿತ ಮದನಮೋಹನ ಮಾಳವೀಯರ ನಿಧನದ ಬಗ್ಗೆ ಶಂದ ಸಂತಾಪ ಸೂಚಕ ನಿರ್ಣಯವನ್ನು ತಳ್ಳಿಹಾಕಿದ ವಿಶ್ವವಿದ್ಯಾನಿಲಯದ ಸ್ಥಾನಪತಿಗಳ ವರ್ತನೆಯನ್ನು ಖಂಡಿಸಿ ಮಹಾರಾಜಾ ಕಾಲೇಜಿನ ಮುಂಭಾಗದಲ್ಲಿ ಮೊನ್ನೆ ನಡೆದ ವಿದ್ಯಾರ್ಥಿಗಳ ಬಹಿರಂಗ ಸಭೆಯಲ್ಲಿ ನಿರ್ಣಯಗಳನ್ನು ಮಾಡಲಾಯಿತು. ಶ್ರೀ ಟಿ. ಪಿ ಕೈಲಾಸಂರವರ ನಿಧನದ ಬಗ್ಗೆ ಸಂತಾಪ ಸೂಚಿಸುವ ನಿರ್ಣಯವನ್ನೂ ಮಾಡಲಾಯಿತು

ಹರಿಕಥೆಗಳು

ರಾಜಧಾನಿಯ ಕಬೀರ್ ರಸ್ತೆಯಲ್ಲಿರುವ ಶ್ರೀ ಪಾಂಡುರಂಗ ಸ್ವಾಮಿ ದೇವಾಲಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಶ್ರೀ|| ಸಿ. ವಿ. ನರಸಿಂಹ ದಾಸ್‌ರಿಂದ 'ಭೂ ಕೈಲಾಸ', ನಾಳಿದ್ದು ಸಂಜೆ ೬ ಕ್ಕೆ ಶ್ರೀ|| ವೆಂಕಟಸುಬ್ಬರಾಯರಿಂದ 'ತುಳಸೀ ದಾಸ್', ಡಿಸೆಂಬರ್ ೧ ನೇ ಮಧ್ಯಾಹ್ನ ೪ ಗಂಟೆಗೆ ಶ್ರೀ|| ಸಂಬಂಧಮೂರ್ತಿಯವರಿಂದ 'ಸೀತಾ ಕಲ್ಯಾಣ' ಮತ್ತು ೨ನೇ ತಾ|| ಸಂಜೆ ೬ಕ್ಕೆ ಶ್ರೀ|| ದಾಸಾಚಾರ್ ರವರಿಂದ 'ಸುಗ್ರೀವ ಸಖ್ಯ' ಎಂಬ ಕೀರ್ತನೆಗಳನ್ನು ಕೀರ್ತನಕಾರ ಮಂಡಲಿಯವರು ಏರ್ಪಡಿಸಿದ್ದಾರೆ.

ಮೈಸೂರು ಚಲುವಾಂಬ ಅಗ್ರಹಾರದ ಹಿಂಭಾಗದ ಬಂಡೀಕೇರಿಯಲ್ಲಿರುವ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿಯವರ ದೇವಸ್ಥಾನದಲ್ಲಿ ನಡೆಯುತ್ತಿದ್ದ ಭಾಗವತರ ಅನಾರೋಗ್ಯದಿಂದ ನಿಲ್ಲಿಸಲ್ಪಟ್ಟಿದ್ದ ರಾಮಾಯಣ ಹರಿಕಥೆಯು ಇಂದಿನಿಂದ ಪ್ರತಿದಿನ ರಾತ್ರಿ ೮ ಘಂಟೆಗೆ ನಡೆಯುವುದು.

ವಾರ್ಷಿಕ ಸಭೆ ಮುಂದುವರಿದಿದೆ

ರಾಜಧಾನಿಯ ಪತ್ರಿಕೋದ್ಯೋಗಿಗಳ ಸಂಘದ ವಾರ್ಷಿಕ ಸಭೆಯು ನಾಳೆ ಬೆಳಗ್ಗೆ ನಡೆಯಬೇಕಾಗಿದ್ದುದನ್ನು ಸುಬ್ಬರಾಯನ ಷಷ್ಠಿ ಪ್ರಯುಕ್ತ ಡಿಸೆಂಬರ್ ೭ನೇ ತಾ| ಶನಿವಾರ ಬೆಳಗ್ಗೆ ೯-೩೦ ಗಂಟೆಗೆ ಮುಂದುವರಿಸಲಾಗಿದೆಯೆಂದು ಕಾರ್ಯದರ್ಶಿಗಳು ತಿಳಿಸಿರುತ್ತಾರೆ.

ನೆಹರೂರವರಿಗೆ ಡಾಕ್ಟರೇಟ್ ಪದವಿ

ಪಾಟ್ನಾ ವಿಶ್ವವಿದ್ಯಾನಿಲಯದ ಸೆನೆಟ್ ಸಭೆಯು ವಾರ್ಷಿಕಾಧಿವೇಶನದಲ್ಲಿ ಪಂಡಿತ್ ಜವಹರಲಾಲ್ ನೆಹರೂರವರಿಗೆ ಡಾಕ್ಟರ್ ಆಫ್ ಸೈನ್ಸ್ ಪ್ರಶಸ್ತಿಯನ್ನು ಕೊಡಲು ತೀರ್ಮಾನಿಸಿದೆ.

ಗುಮಾಸ್ತರುಗಳ ಮೇಲೆ ಟಿಯರ್‌ಗ್ಯಾಸ್ ಪ್ರಯೋಗ

ದೆಹಲಿಯ ಸೆಕ್ರೆಟೇರಿಯಟ್ಟಿನ ಹಂಗಾಮೀ ಗುಮಾಸ್ತರುಗಳಿಗೆ ಮತ್ತೊಂದಾವರ್ತಿ ಪರೀಕ್ಷೆಯನ್ನು ನಡೆಸುವುದಾಗಿ ಸರ್ಕಾರದವರು ಮಾಡಿದ್ದ ಆಜ್ಞೆಯನ್ನು ಪ್ರತಿಭಟಿಸಲು ಅವರು ಮೊನ್ನೆ ಇಂಪೀರಿಯಲ್ ಸೆಕ್ರೆಟೇರಿಯಟ್ ಭವನದ ಮುಂದೆ ಪ್ರದರ್ಶನವನ್ನು ನಡೆಸಿದಾಗ ಅವರುಗಳ ಮೇಲೆ ಅಶ್ರುವಾಯು (ಟಿಯರ್‌ಗ್ಯಾಸ್) ವನ್ನು ಪ್ರಯೋಗಿಸಿ ಚದುರಿಸಲಾಯಿತೆಂದು ತಿಳಿದುಬಂದಿದೆ

ಕೈಲಾಸಂ ಚಿತ್ರಗಳು

ಶ್ರೀ ಕೈಲಾಸಂರವರು ಬರೆದ ನಾಟಕಗಳಲ್ಲಿ ಅವರು ಪಾತ್ರ ವಹಿಸಿದ್ದ ತಿಪ್ಪಾರಳ್ಳಿ ಜೋರ, ಕೋಳಿಕೆ ರಂಗ, ನಾಗತ್ತೆ ಮತ್ತು ಪರ್ಪಸ್ ನಾಟಕದ ಅಭಿನಯ ಇವೇ ಮುಂತಾದ ಛಾಯಾಚಿತ್ರಗಳನ್ನು ಬೆಂಗಳೂರಿನ ಮಾಧವ ಸನ್ಸ್‌ನವರು ದಿವಂಗತರ ಬಗ್ಗೆ ತಮ್ಮ ವಿಶ್ವಾಸವನ್ನು ವ್ಯಕ್ತಪಡಿಸಲು ಅಂದವಾಗಿ ಅಚ್ಚು ಹಾಕಿಸಿರುವರು. ಇದರ ಒಂದು ಪ್ರತಿಯನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ

ಚರಿತ್ರೆ ಮತ್ತು ಅರ್ಥ ಶಾಸ್ತ್ರ ಸಂಘ

ಸೆಂಟ್ ಫಿಲೋಮಿನಾ ಕಾಲೇಜಿನ ಚರಿತ್ರೆ ಮತ್ತು ಇತಿಹಾಸ ಸಂಘದ ಆರಂಭ ಭಾಷಣವನ್ನು ಶ್ರೀಮತಿ ಬಿ ಕಾವೇರಮ್ಮನವರು ಮೊನ್ನೆ ಮಾಡುತ್ತಾ ಎಲ್ಲಾ ವಿದ್ಯಾರ್ಥಿಗಳೂ ದಿನ ದಿನಕ್ಕೂ ನಡೆಯುತ್ತಿರುವ ರಾಜಕೀಯ ಬದಲಾವಣೆಯನ್ನು ಗಮನಿಸಿ ದೇಶದ ಅಭಿವೃದ್ಧಿಗಾಗಿ ಶ್ರಮಿಸಬೇಕೆಂದು ತಿಳಿಸಿದರು.

LATEST NEWS

ಗಡಿಯಾರ

ಸ್ವಂ. ಸು ಪ್ರೆ(ಕ)] ಬೆಂಗಳೂರು ೨೮

ಕಮ್ಯೂನಿಸ್ಟ್ ಪಕ್ಷದ ಕೆಲಸಗಾರರಾದ ಶ್ರೀ|| ಎ ಎಲ್ ಉಪಾಧ್ಯಾಯರನ್ನು ಮೈಸೂರು ಸಂಸ್ಥಾನದಿಂದ ಗಡೀಪಾರು ಮಾಡಿ ಸರ್ಕಾರದವರು ಆಜ್ಞೆ ಇತ್ತಿರುವರು. ಇವರು ಕೋಲಾರದ ಚಿನ್ನದ ಗಣಿಯ ಮುಷ್ಕರಗಳಲ್ಲಿ ವಿಶೇಷವಾಗಿ ಆಸಕ್ತಿ ವಹಿಸುತ್ತಿದ್ದರೆಂದು ಹೇಳಲಾಗಿದೆ. ಅವರು ಈ ದಿನ ಹುಬ್ಬಳ್ಳಿಗೆ ತೆರಳಿದರು.

* ಮೈಸೂರು ಪೌರ ಸಭಾಧ್ಯಕ್ಷರಾದ ಶ್ರೀ|| ಆರ್ ರಾಮಚಂದ್ರ ರಾವ್ ಬೊಂಬೋರೆಯವರಿಗೆ ಈ ತಿಂಗಳು ೨೬ ರಿಂದ ೫ ದಿನ ಹೆಚ್ಚಿನ ರಜ ಮಂಜೂರಾಗಿದೆ. ಆ ಅವಧಿಯಲ್ಲಿ ಅವರು ಅಧ್ಯಕ್ಷತೆಯನ್ನು ವಹಿಸಿಕೊಳ್ಳುವರು ಶ್ರೀ|| ಎಸ್. ಮಾಧವ ರಾಯರು ತಮ್ಮ ಹಿಂದಿನ ಸ್ಥಾನಕ್ಕೆ ತೆರಳುವರು.

† ಇಂಜನಿಯರಿಂಗ್ ಕಾಲೇಜಿನಲ್ಲಿ ಹೊಸದಾಗಿ ಸಿವಿಲ್ ಇಂಜನಿಯರಿಂಗ್ ಪ್ರೊಫೆಸರ್ ಸ್ಥಾನವನ್ನು ಕಲ್ಪಿಸಿ ಶ್ರೀ ಎ. ಎ. ಕೃಷ್ಣಸ್ವಾಮಿಯವರನ್ನು ಆ ಸ್ಥಾನಕ್ಕೆ ನೇಮಿಸಲಾಗಿದೆ

ಸಾಧ್ವಿ

ಶಾ॥ ೨೯ ೧೧-೪೬ ಶುಕ್ರವಾರ

ಬಿಳಿಯರ ಧೂರ್ತತನ

ದಕ್ಷಿಣ ಆಫ್ರಿಕದಲ್ಲಿ ಭಾರತೀಯರಿಗೆ ಆಗುತ್ತಿರುವ ಅನ್ಯಾಯಗಳು ಲೋಕ ವಿಖ್ಯಾತವಾಗಿರುವುದಷ್ಟೆ. ಆ ವಿಷಯವಾಗಿ ಸಂಯುಕ್ತ ರಾಷ್ಟ್ರಗಳ ಸಭೆಯಲ್ಲಿ ಪ್ರಶ್ನೆಯೂ ಎದ್ದಿರುತ್ತದೆ. ಉಭಯ ಪಂಗಡಗಳ ಪ್ರತಿನಿಧಿಗಳೂ ವಾದ ವಿವಾದಗಳನ್ನು ನಡೆಸುತ್ತಿದ್ದಾರೆ. ದಕ್ಷಿಣ ಆಫ್ರಿಕದ ಸರಕಾರದವರು ಭಾರತೀಯರಿಗೆ ಮಾಡುತ್ತಿರುವ ತಿರಸ್ಕಾರವು ಹೇಗೇ ಇರಲಿ, ಅವರ ಪ್ರತಿನಿಧಿಗಳು ಸಂಯುಕ್ತ ರಾಷ್ಟ್ರ ಸಭೆಯಲ್ಲಿ ತೋರುತ್ತಿರುವ ವರ್ತನೆಯು ಧೂರ್ತತನದ ಪರಮಾವಧಿಯನ್ನು ಮುಟ್ಟಿರುತ್ತದೆ. ಇದರಿಂದ ಉರಿಯುವ ಬೆಂಕಿಗೆ ತುಪ್ಪವನ್ನು ಹಾಕಿದಂತಿದೆ.

ತಮ್ಮ ಸರ್ಕಾರದ ಪರವಾಗಿ ವಾದಿಸುತ್ತಾ ದಕ್ಷಿಣ ಆಫ್ರಿಕದ ಪ್ರತಿನಿಧಿ ಮಿ॥ ಹೀಟನ್ ನಿಕಲ್ಸ್ ಎಂಬುವರು ಆಡಿದ ಮಾತುಗಳು ದುರಹಂಕಾರದಿಂದ ಪ್ರೇರಿತವಾಗಿವೆ. ಭಾರತೀಯರ ಪರವಾಗಿ ಕೊಡಲಾಗಿರುವ ಹೇಳಿಕೆಗಳು ತಪ್ಪುಗಳನ್ನು ಕೂಡುವವರಷ್ಟೇ ಅಸತ್ಯದಿಂದ ಕೂಡಿವೆ ಎಂದು ಅವರು ಹೇಳತೊಡಗಿದರು. ಭಾರತ ನಿಯೋಗದ ನಾಯಕರಾದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಕೂಡಲೇ ಎದ್ದು ಅದನ್ನು ಪ್ರತಿಭಟಿಸಿದರು. ಆಗ ಸಭೆಯ ಅಧ್ಯಕ್ಷರಾದ ಡಾ॥ ಪೋನ್ಸ್ಕಲ್ಸ್ಕಿಯವರೂ ಸಹ ಮೇನ್ಸ್ಕಂಡ ಅಪಾದನೆಯನ್ನು ಖಂಡಿಸಿ ಹಾಗೆ ಹೇಳುವುದನ್ನು ತಾವು ಒಪ್ಪುವುದಿಲ್ಲವೆಂದು ತಿಳಿಸಿದರು.

ವರ್ಣದ್ವೇಷದ ಪ್ರಸಂಗದಲ್ಲಿ ಬಿಳಿಯರು ಬಣ್ಣದ ಜನರಿಗೆ ಸಾಮಾಜಿಕ ಕಿರುಕುಳಗಳನ್ನು ಕೊಡುವುದು ಮಾತ್ರವೇ ಅಲ್ಲದೆ ಅವರ ಮೇಲೆ ಅಸಹ್ಯ, ಅಪ್ರಮಾಣಿಕತೆ, ಮುಂತಾದ ಅಪವಾದಗಳನ್ನು ಮಾಡಿ ನಿಂದಿಸುವುದು ಅಲ್ಲಲ್ಲಿ ವಾಡಿಕೆಗೆ ಬಂದಿದೆ. ಪ್ರಪಂಚದ ಜನಾಂಗಗಳಿಗೆಲ್ಲಾ ನ್ಯಾಯವನ್ನು ದೊರಕಿಸಲು ತೊಡಗಿರುವ ವಿಶ್ವಸಂಸ್ಥೆಯ ನ್ಯಾಯಾಸ್ಥಾನದಲ್ಲಿಯೇ ಇಂತಹ ದುರಹಂಕಾರದ ಪ್ರದರ್ಶನಗಳು ನಡೆದ ಮೇಲೆ, ಹೊರಗಡೆ ನಿತ್ಯ ಜೀವನದಲ್ಲಿ ಇಂ

ಶಾಂತಿ ಸಮಿತಿ

ಸ್ವಂ ಸು] ಚಾಮರಾಜನಗರ ೨೬

ಮೊನ್ನೆ ಅಮಲ್ದಾರರಾದ ಶ್ರೀ ಎಚ್. ಪಾಲಪ್ಪನವರು ಸುಮಾರು ೪೨ ಮಂದಿ ಹಿಂದೂ ಮುಸ್ಲಿಂ ಮುಖಂಡರುಗಳನ್ನು ಬರಮಾಡಿಕೊಂಡು, ಕೋಮುವಾರು ಐಕ್ಯತೆಯ ಅವಶ್ಯಕತೆಯನ್ನು ವಿವರಿಸಿ, ಹಿಂದೂ ಮುಸ್ಲಿಮರಿಂದೊಡಗೂಡಿದ ಒಂದು ಶಾಂತಿ ಸಮಿತಿಯನ್ನು ರಚಿಸಿದರು

ಸಂತಾಪ ಸೂಚಕ ಸಭೆ

ಇಂಟರ್ ಮೀಡಿಯೇಟ್ ಕಾಲೇಜಿನ ಕರ್ಣಾಟಕ ಸಂಘದ ಆಶ್ರಯದಲ್ಲಿ ಕಳೆದ ಭಾನುವಾರ ಶ್ರೀ ಕೆ ವಿ ರಾಘವಾಚಾರ್ಯರ ಅಧ್ಯಕ್ಷತೆಯಲ್ಲಿ ಶ್ರೀ ಟಿ. ಪಿ ಕೈಲಾಸಂರವರ ನಿಧನದ ಬಗ್ಗೆ ಸಂತಾಪ ಸೂಚಕ ಸಭೆ ನಡೆದು ಅವರ ಆತ್ಮಕ್ಕೆ ಶಾಂತಿ ಕೋರುವ ನಿರ್ಣಯವನ್ನು ಮಾಡಲಾಯಿತು

ತಹ ಜನರು ಎಷ್ಟು ಸ್ವೇಚ್ಛೆಯಿಂದ ವರ್ತಿಸಬಹುದೆಂಬುದನ್ನು ಊಹಿಸಬೇಕು

ಹಿಂದೊಮ್ಮೆ ಮೈಸೂರಿನ ಹೈಕೋರ್ಟ್ ಶ್ರೇಷ್ಠ ನ್ಯಾಯಾಧೀಶರಾಗಿದ್ದ ಮಿ॥ ಥೈರಿಯವರೂ ಇದೇ ವಿಧವಾಗಿ ಮಾತನಾಡಿದ್ದರು. ಭಾರತೀಯರಿಗೆ ಪ್ರಾಮಾಣಿಕತೆಯೆಂಬುದೇ ಇಲ್ಲವೆಂದು ಅವರು ಸೂಚಿಸಿದ್ದರು. ಇದಕ್ಕಾಗಿ ಹಿಂದೂಸ್ತಾನದ ಸಕಲ ಜನರ ಪ್ರತಿಭಟನೆಗೂ ಅವರು ಪಾತ್ರರಾದರು. ಸತ್ಯ ಮತ್ತು ಪ್ರಾಮಾಣಿಕತೆಗಳು ಬಿಳಿಯ ಜನರ ಪಿತ್ರಾರ್ಜಿತ ಸ್ವತ್ತೆಂದು ಭಾವಿಸಿರುವವರೂ ಹಲವರಿದ್ದಾರೆ. ಇಂತಹ ದುರಭಿಮಾನದ ಭಾವನೆಗಳಿಗೆ ಉಪಚಾರ ಪ್ರಯೋಗವನ್ನು ಮಾಡುವುದು ಇಂದಿನ ಪ್ರಥಮ ಕರ್ತವ್ಯವಾಗಿದೆ

ಜಾತಿ, ಮತ, ಕೋಮು, ವರ್ಣ ಮತ್ತು ರಾಷ್ಟ್ರಗಳ ಭೇದವಿಲ್ಲದೆ ಸಕಲರಿಗೂ ಸಮಾನವಾದ ಹಕ್ಕು ಬಾಧ್ಯತೆಗಳನ್ನು ದೊರಕಿಸಿಕೊಡಲು ವಿಶ್ವ ಸಂಯುಕ್ತ ರಾಷ್ಟ್ರಗಳ ಸಂಘವು ತೊಡಗಿರುವುದಾಗಿ ಹೇಳಲಾಗಿದೆ. ಇದಕ್ಕೆ ದಕ್ಷಿಣ ಆಫ್ರಿಕದ ಭಾರತೀಯರ ಪ್ರಶ್ನೆಯೇ ಒರೆಗಲ್ಲಾಗಿರುತ್ತದೆ. ಈ ಸಮಸ್ಯೆಯನ್ನು ಹೇಗೆ ಆ ಸಂಸ್ಥೆಯು ಬಗೆಹರಿಸುವುದೆಂಬುದರ ಮೇಲೆಯೇ ಅದರ ಅಸ್ತಿತ್ವದ ಸಾರ್ಥಕ್ಯವು ಅವಲಂಬಿಸಿರುತ್ತದೆ.

೩೦೦೦ ಎಕರೆ ಜಮೀನು ಬಂಜರು

ಜಮೀನ್ದಾರರಿಗೂ ಮತ್ತು ರೈತರಿಗೂ ಬೆಳಸಿನ ವಿಭಾಗದ ಜಗಳದಲ್ಲಿ ಮನಸ್ತಾಪ ಹುಟ್ಟಿರುವುದರ ಪರಿಣಾಮವಾಗಿ ರಾಮನಾಡ್ ಜಿಲ್ಲೆಯಲ್ಲಿ ೩೦೦೦ ಎಕರೆ ತರಿ ಜಮೀನು ಬಂಜರು ಬಿದ್ದಿದೆ. ಬೆಳಸಿನಲ್ಲಿ ಅರ್ಧ ಭಾಗ ತಮಗೂ ಅರ್ಧ ಭಾಗ ಜಮೀನ್ದಾರರಿಗೂ ಸಲ್ಲಬೇಕೆಂಬುದು ರೈತರ ವಾದ

ಸುಲಭ ಬೆಲೆ ! ಹೆಚ್ಚು ಬಾಳಿಕೆ !!

ನೆಗೆಯುವ ಮೊದಲು ಮುಂದೆ ನೋಡಿ ನೆಗೆ ಎಂಬ ಆಂಗ್ಲ ನಾಣ್ಣುಡಿಯಂತೆ,

ಪುರುಷರ, ಸ್ತ್ರೀಯರ, ಮತ್ತು ಮಕ್ಕಳ ಯಾವುದೇ ವಿಧವಾದ ಚಪ್ಪಲಿಗಳು, ಬೂಟುಗಳು ಇವುಗಳನ್ನು ಕೊಳ್ಳುವ ಮೊದಲು ನಮ್ಮಲ್ಲಿಗೆ ಬಂದು ವಿಚಾರಿಸಿರಿ

ಕಾನ್ಪುರ್ ಚಪ್ಪಲಿಗಳೂ, ಆಗ್ರಾ ಬೂಟುಗಳೂ ಈಗ ತಾನೆ ಬಂದಿವೆ.

ಗೋಬಿಂದ ಫುಟ್ ವೇರ್ ಹೌಸ್

ಲ್ಯಾನ್ಸ್ ಡೌನ್ ಬಜಾರ್, ಮೈಸೂರು.

Edited, printed and published by A. R. Nagarajan at the Sadhvi Press D Subbiah Road, Mysore

ಉಪನ್ಯಾಸ

ಇಟ್ಟಿಗೆಗೂಡು ಯುವಕರ ಸಂಘದ ಆಶ್ರಯದಲ್ಲಿ ೧-೧೨-೪೬ ನೇ ಭಾನುವಾರ ಸಂಜೆ ೫॥ ಘಂಟೆಗೆ ವಾಗ್ಭೂಷಣ ಆ ರತ್ನಂ ವಿದ್ವಾನ್ ಕೆ. ಆರ್. ವೆಂಕಟೇಶ ಶಾಸ್ತ್ರೀ ಭಾರತೀಯವರು "ಕನ್ನಡ ಕ ಯ ಸೌಂದರ್ಯ" ಎಂಬ ವಿಷಯ ಉಪನ್ಯಾಸ ಮಾಡುವರು ಸರ್ವರಿ ಆಹ್ವಾನವುಂಟು.

ಆಪೇರಾ ಟಾಕೀಸ್

೨೯-೧೧-೪೬ ರಿಂದ

ಪ್ರತಿ ದಿನ ಮೂರು ಆಟಗಳು

ಉತ್ತಮಿ

(ತಮಿಳು)

ಕಾಳಿ ಎನ್ ರತ್ನಂ, ಟಿ.ಎಸ್ ದೊರೆರಾ ಸ್ವಾಮಿನಾಥನ್, ಟಿ ಎಸ್. ಕೃಷ್ಣವೇ ರಾಜಕಾಂತಂ

From 29 11-46
MORNING SHOWS
DILLINGER
With - Edmund Lowe, Anne Jeffreys, Lawrence Tierney.

ರಾಜಕಮಲ್ ಟಾಕೀಸ್, ಮೈಸೂರು

29-11-46 ರಿಂದ 3ನೇ ವಾರ

ಡಾಕ್ಟರ್ ಕೊಟ್ನಿಸ್ ಕಿ ಅಮರ್ - ಕಹಾನಿ

ಭೂಮಿಕೆ:- * ಜಯಶ್ರೀ, * ಶಾಂತಾ ರಾಂ, ಉಲ್ಹಾಸ್

೨೯-೧೧-೪೬ ರಿಂದ ೪ ದಿನಗಳು ಮಾತ್ರ ಪ್ರಾತಃಕಾಲ ೧೦-೩೦ ಕ್ಕೆ

ಬಾಂಬೆ ಟಾಕೀಸಿನವರ "ಜೀವನ್ ನಯ್ಯಾ"

ಪಾತ್ರ —ದೇವಿಕಾ ರಾಣಿ, ಅಶೋಕ್ ಕುಮಾರ್

OPPORTUNITY FOR BUYERS

1 HANSA:- 1938 model, thoroughly re conditioned with new tyres and battery Price Rs 5,500 or nearest offer

2 FORD V8.- 1942 model, Station Wagon in Show-Room condition. Price Rs. 8,000 or nearest offer

3 FORD V8 1943 model Lorry, Timber body, in good condition. Price Rs 7,000 or nearest offer

4 A J.S Motor Cycle - 3.5 H P in perfect condition. Price Rs 1,150 or nearest offer

For particulars apply to

NEO FURNITURE CO.,

Cabinet Makers, Auctioneers and Commission Agents

Irwin Road, .. Mysore

Inspection. 1 to 6 P M

ಪೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಭಾನುವಾರ ೧—೧೨—೪೬ [ಸಂಚಿಕೆ ೧೦೧

ವೈಸ್ರಾಯರನ್ನು ವಾಪಸು ಕರೆಸಲು ಒತ್ತಾಯವೇ?

ಸಂಸ್ಥಾನದ ಮಹಿಳಾ ಸಭೆ

ಮೈಸೂರು ೧

ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ ಆಶ್ರಯದಲ್ಲಿ ಮಹಿಳಾ ಸಮಿತಿ ಸಭೆಯು ಮೊನ್ನೆ ನಡೆಯಿತು ಸಂಸ್ಥಾನದ ಎಲ್ಲಾ ಜಿಲ್ಲೆಗಳಿಂದ ಪ್ರತಿನಿಧಿಗಳು ಸಂದರ್ಶಿಸಿ ಭಾಗವಹಿಸಿದ್ದರು. ಈ ಸಭೆಗೆ ರಾಜಕುಮಾರಿ ಮಹಾರಾಣಿಯವರು ಒಂದು ಸಂದೇಶವನ್ನು ಕಳುಹಿಸಿ ಸಮಿತಿಯ ಪ್ರಯತ್ನದಿಂದ ಸ್ತ್ರೀ ಸಮಾಜಕ್ಕೆ ವಿದ್ಯೆಯು ಹೆಚ್ಚಿನ ರೀತಿಯಲ್ಲಿ ಲಭಿಸಿ ಜ್ಞಾನ ದೇಪವಾಗಲೆಂದು ಹಾರೈಸಿದ್ದರು. ಮಹಿಳೆಯರಲ್ಲಿ ಅಕ್ಷರ ಜ್ಞಾನವನ್ನು ವೃದ್ಧಿಪಡಿಸುವ ಹಲವಾರು ಕಾರ್ಯಕ್ರಮಗಳನ್ನು ಪರ್ಯಾಲೋಚಿಸಲಾಯಿತು.

ಪಂಡಿತ ಪರೀಕ್ಷೆಯಲ್ಲಿ ಸ್ಥಾನ

ಎಸ್. ಎಸ್. ಎಲ್. ಸಿ. ನೇ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಪಂಡಿತ ಪರೀಕ್ಷೆಗೆ ಓದಲು ಸಂಸ್ಥಾನದಲ್ಲಿ ಅರ್ಹರಾದವರು ಅನೇಕರಿದ್ದಾರೆ. ಆದರೆ ಈ ವರೆವಿಗೆ ಒಬ್ಬರಿಗೂ ಕಾಲೇಜಿನ ನೋಟ್ಯಂದ ಪರೀಕ್ಷೆಗೆ ಓದಲು ಅವಕಾಶ ಸಿಕ್ಕಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಈ ವಿಷಯದಲ್ಲಿ ಗಮನ ಕೊಟ್ಟು ಪ್ರತಿ ವರ್ಷವೂ ಕನಿಷ್ಠ ಪಕ್ಷ ಇಬ್ಬರು ಹರಿಜನರಾದರೂ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶ ಕಲ್ಪಿಸಿಕೊಡಬೇಕೆಂದು, ಮೈಸೂರು ಸೀಮೆಯ ಆದಿ ಕರ್ನಾಟಕ ಅಭಿವೃದ್ಧಿ ಸಂಘದ ಕಾರ್ಯದರ್ಶಿಗಳಾದ ಶ್ರೀ ಎಸ್. ಎಂ. ಲಿಂಗಯ್ಯನವರು ಸರ್ಕಾರದಲ್ಲಿ ಮನವಿ ಮಾಡಿಕೊಂಡಿದ್ದಾರೆ.

ಕಂಕೆರಪ್ಪ ಸ್ಮಾರಕ ಚರ್ಚೆ

ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ಸಿನ ಆಶ್ರಯದಲ್ಲಿ ಇದೇ ೪ ನೇ ತಾ॥ ಬುಧವಾರ ನಗರದ ಪುರಭವನದಲ್ಲಿ ಕಂಕೆರಪ್ಪ ಸ್ಮಾರಕ ಚರ್ಚಾ ಸ್ಪರ್ಧೆಯು ನಡೆಯುವುದು. ಮೈಸೂರು ಕಾಂಗ್ರೆಸ್ ಮಾಜಿ ಅಧ್ಯಕ್ಷರಾದ ಶ್ರೀ ಟಿ. ಸಿದ್ದಲಿಂಗಯ್ಯನವರು ಅಧ್ಯಕ್ಷತೆ ವಹಿಸುವರು. ನಗರದ ಎಲ್ಲಾ ಹೈಸ್ಕೂಲು, ಕಾಲೇಜು ಮತ್ತು ಹಾಸ್ಟಲು ವಿದ್ಯಾರ್ಥಿ ಪ್ರತಿನಿಧಿಗಳೂ ಭಾಗ ವಹಿಸುವರು ಸರ್ವರಿಗೂ ಸ್ವಾಗತವಿದೆ. ಚರ್ಚೆಯ ವಿಷಯವು ನಾಳೆ ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯಾಲಯದಲ್ಲಿ ಪ್ರಕಟವಾಗುವುದು

ಸಂತಾಪ ಸೂಚನಾ ಸಭೆ

ಇದೇ ೨ನೇ ತಾ॥ ಮಂಗಳವಾರ ಸಂಜೆ ೬ ಗಂಟೆಗೆ ಬನುಮಯ್ಯನವರ ಶಾಲಾ ಭವನದಲ್ಲಿ ನಗರ ಕರ್ನಾಟಕ ಸಂಘದ ಆಶ್ರಯದಲ್ಲಿ ಶ್ರೀ ಟಿ ಪಿ. ಕೈಲಾಸಂರವರ ನಿಧನದ ಬಗ್ಗೆ ಸಂತಾಪ ಸೂಚಿಸುವ ಸಲುವಾಗಿ ಸಭೆಯೊಂದನ್ನು ಏರ್ಪಡಿಸಲಾಗಿದೆ. ಸರ್ವರೂ ದಯಮಾಡಿಸಬೇಕೆಂದು ಕಾರ್ಯದರ್ಶಿಗಳು ಕೋರಿದ್ದಾರೆ.

ಕಾಂಗ್ರೆಸ್ಸಿಗೆ ಅಖಂಡ ವಿಜಯ

ಅಜ್ಜಂಪುರ ೩೦

ಈ ಊರಿನ ಪೌರಸಭಾ ಚುನಾವಣೆಗೆ ಒಟ್ಟು ೩೩ ಜನಗಳು ಸ್ಪರ್ಧಿಸಿದ್ದರು. ಈ ಪೈಕಿ ಕಾಂಗ್ರೆಸ್ ಪರವಾಗಿ ಈ ಕೆಳಕಂಡ ೮ ಜನಗಳು ನಿಂತಿದ್ದು ಅವರೆಲ್ಲರೂ ಸರ್ವಾನುಮತದಿಂದ ಚುನಾಯಿತರಾದರು—ಶ್ರೀಗಳಾದ ಎಸ್. ಕರಿಸಿದ್ದಪ್ಪ, ಎಸ್. ಸುಬ್ಬಣ್ಣಶೆಟ್ಟಿ, ಮಾಳಿಗೆ ಕರಿಯಪ್ಪ, ಆರ್. ಭದ್ರಪ್ಪ, ಪಿ. ಸಿದ್ದಪ್ಪ, ಜಿ. ಶಿವಣ್ಣಯ್ಯ, ತುಕೋಜಿರಾವ್, ಮತ್ತು ಕೆ. ವೆಂಕೋಜಿರಾವ್.

ತುಮಕೂರು ಜಿಲ್ಲೆಯಲ್ಲಿ ಮದ್ಯ ಪಾನ ನಿರೋಧ

ಸ್ವಂ.ಸು.] ಬೆಂಗಳೂರು ೧

ಬ್ರಿಟಿಷ್ ಭಾರತದ ಸರಹದ್ದಿನಲ್ಲಿರುವ ತುಮಕೂರು ಜಿಲ್ಲೆಯ ತಾಲ್ಲೂಕುಗಳಲ್ಲಿ ಪಾನ ನಿರೋಧವನ್ನು ಜಾರಿಗೆ ತರಲು ಸರ್ಕಾರವು ತೀವ್ರವಾಗಿ ಆಲೋಚಿಸುತ್ತಿರುವುದಾಗಿ ಗೊತ್ತಾಗಿದೆ. ಮೊನ್ನೆ ನಡೆದ ಮಂತ್ರಿಮಂಡಲದ ಸಭೆಯಲ್ಲಿ ಈ ವಿಚಾರವು ಚರ್ಚಿಸಲ್ಪಟ್ಟಿತೆಂದು ಹೇಳಲಾಗಿದೆ

ದಿವಾನರ ಆಪ್ತ ಕಾರ್ಯದರ್ಶಿಗಳು

ಶ್ರೀ ಟಿ. ವೆಂಕಟ ಶಿವರೆಡ್ಡಿಯವರನ್ನು ದಿವಾನರ ಆಪ್ತ ಕಾರ್ಯದರ್ಶಿಗಳನ್ನಾಗಿ ನೇಮಿಸಲಾಗಿದೆ. ಇವರು ಮೈಸೂರು ನಗರದ ರೇಷನಿಂಗ್ ಅಧಿಕಾರಿಗಳಾಗಿದ್ದು, ಈಗ ಎಕ್ಸೈಜ್ ಕಮೀಷನರ್ ಕೇಂದ್ರದ ಸಹಾಯಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಡಿಸೆಂಬರ್ ೧೬ ನೇ ತಾ॥ ನೂತನ ಅಧಿಕಾರ ಸ್ವೀಕರಿಸಲಿದ್ದಾರೆ.

• ಕೈಗಾರಿಕಾ ಕೆಲಸಗಳಿಗೆ ಸಾಲ ಕೇಳುವಂತಹವರು ಇನ್ನು ಮುಂದೆ ನೇರವಾಗಿ ಸರ್ಕಾರಕ್ಕೆ ಅರ್ಜಿ ಹಾಕಿಕೊಳ್ಳಬೇಕೆಂದು ಪ್ರಕಟಿಸಲಾಗಿದೆ.

• ಮೈಸೂರು ಕೈತ್ರಿ ಟ್ರಾ॥ ಮ್ಯಾನೇಜರಾದ ಮಿ॥ ಇನಾಯತ್ ಹುಸೇನ್, ಚೀಫ್ ಇ॥ ಶ್ರೀ ಎಂ. ಎ ರಾಮಾನುಜಂ ಮತ್ತು ಜಿಲ್ಲಾ ಟ್ರಾ॥ ಸೂ॥ ಶ್ರೀ ಬಿ ಜಿ. ಆರ್ ನಾಯ್ಡು ಇವರುಗಳನ್ನು ಆ ಸ್ಥಾನಗಳಲ್ಲಿ ಖಾಯಂ ಮಾಡಲಾಗಿದೆ

ರಾಜ್ಯಾಂಗ ಸಮಿತಿ ಅಧ್ಯಕ್ಷರು

ಅತ್ಯಂತ ಹಿರಿಯ ಸದಸ್ಯರಾದ ಡಾ॥ ಸಚ್ಚಿದಾನಂದ ಸಿಂಹರನ್ನು ಡಿಸೆಂಬರ್ ೯ಕ್ಕೆ ಸೇರುವ ರಾಜ್ಯಾಂಗ ಸಮಿತಿಯ ಪ್ರಥಮಾಧಿವೇಶನಕ್ಕೆ ಅಧ್ಯಕ್ಷರಾಗಿರಲು ಅಧಿಕಾರಿ ವರ್ಗದವರು ನೇಮಿಸುತ್ತಾರೆ. ಅಧ್ಯಕ್ಷರ ಚುನಾವಣೆಯಾಗುವ ವರೆಗೂ ಡಾ॥ ಸಿಂಹರೇ ಅಧ್ಯಕ್ಷರಾಗಿರುವರೆಂದು ಗೊತ್ತಾಗಿದೆ

ಅಖಿಲ ಭಾರತ ವಿ॥ ಕಾಂ॥ ಸಮ್ಮೇಳನ

ಅಖಿಲಭಾರತ ವಿದ್ಯಾರ್ಥಿ ಕಾಂಗ್ರೆಸ್ಸಿನ ಸಮ್ಮೇಳನವು ಈ ತಿಂಗಳು ೨೮, ೨೯ ಮತ್ತು ೩೦ ನೇ ತಾ॥ ಲಾಹೋರಿನಲ್ಲಿ ನಡೆಯುವುದು. ಶ್ರೀ ಜಯಪ್ರಕಾಶ ನಾರಾಯಣ್‌ರವರು ಸಮ್ಮೇಳನದ ಅಧ್ಯಕ್ಷಭಾಷಣವನ್ನು ಮಾಡುವರು.

ಲಂಡನ್ ಯಾತ್ರೆ

ಬ್ರಿಟಿಷ್ ಸರ್ಕಾರದ ಆಹ್ವಾನವನ್ನು ಕಾಂಗ್ರೆಸ್ಸು ತಿರಸ್ಕರಿಸಿದಮೇಲೆ ಪ್ರಧಾನಿ ಮಾತ್ಲಿ ಮಿ॥ ಅಟ್ಲಿಯವರಿಗೂ, ಪಂಡಿತ ನೆಹರೂರವರಿಗೂ ಕೇಬಲ್ ಮೂಲಕ ಅನೇಕ ಪತ್ರ ವಿನಿಮಯಗಳಾದುದರ ಪರಿಣಾಮವಾಗಿ ಪಂಡಿತ ನೆಹರೂರವರೂ ಸರ್ದಾರ್ ಬಲದೇವಸಿಂಗರೂ ಲಂಡನ್ನಿಗೆ ಪ್ರಯಾಣ ಬೆಳೆಸಿರುತ್ತಾರೆ. ಪಂಡಿತ ನೆಹರೂರವರು ಬ್ರಿಟಿಷ್ ಪ್ರಧಾನರಿಗೆ ಈಗ ಕಾಂಗ್ರೆಸ್ಸು ಕೈಗೊಂಡಿರುವ ನಿರ್ಧಾರಗಳನ್ನು ಬದಲಿಸಲು ಸಾಧ್ಯವಿಲ್ಲವೆಂದು ಸೂಚಿಸಿರುತ್ತಾರೆಂದು ಗೊತ್ತಾಗಿದೆ. ರಾಜ್ಯಾಂಗ ರಚನಾ ಸಮಿತಿಯ ಕಾರ್ಯಕ್ರಮಗಳನ್ನು ಮುಂದುವರಿಸುವುದಿಲ್ಲವೆಂದು ಬ್ರಿ॥ ಪ್ರಧಾನರು ಭರವಸೆಯಿತ್ತಿದ್ದಾರೆ. ಪಂಡಿತ ನೆಹರೂರವರು ಡಿಸೆಂಬರ್ ೮ರ ಹೊತ್ತಿಗೆ ದೆಹಲಿಗೆ ವಾಪಸ್ ಬರುವರು. ನಾಳೆ ಮಂಗಳವಾರದಿಂದ ಸಂಧಾನ ಆರಂಭವಾಗುವುದು. ೪ ನೇ ತಾರೀಖು ನೆಹರೂ, ಬಲದೇವಸಿಂಗ್, ಲಿಯಾಖತ್ ಅಲಿಖಾನ್, ಜಿನ್ನಾ ಮತ್ತು ವೈಸರಾಯರು ಉಪಹಾರಕ್ಕಾಗಿ ಬ್ರಿಟಿಷ್ ಸಾಮ್ರಾಟರಿಂದ ಆಹ್ವಾನಿಸಲ್ಪಟ್ಟಿದ್ದಾರೆ

ಸ್ಮಟ್ಸರಿಗೆ ಸೋಲು

ನೈರುತ್ಯ ಆಫ್ರಿಕಾವನ್ನು ದಕ್ಷಿಣ ಆಫ್ರಿಕಾಕ್ಕೆ ಸೇರಿಸಿಕೊಳ್ಳಬೇಕೆಂದು ಜ॥ ಸ್ಮಟ್ಸರು ಸಂಯುಕ್ತರಾಷ್ಟ್ರ ಸಂಘದ ಟ್ರಸ್ಟಿಷಿಪ್ ಕಮಿಟಿಯಲ್ಲಿ ಮಂಡಿಸಿದ್ದ ನಿರ್ಣಯವನ್ನು ೧೬-೬ ವೋಟುಗಳಿಂದ ತಿರಸ್ಕರಿಸಲಾಗಿ ಸ್ಮಟ್ಸರಿಗೆ ಭಾರಿ ಸೋಲು ಪ್ರಾಪ್ತವಾಯಿತು. ನೈರುತ್ಯ ಆಫ್ರಿಕದ ಪ್ರಜಾಬೆಂಬಲವನ್ನು ಪಡೆಯಲಿಲ್ಲವೆಂದು ಈ ರೀತಿ ಮಾಡಲಾಯಿತೆಂದು ಹೇಳಲಾಗಿದೆ.

ಮುಳುಗಿದ್ದ ಹಡಗಿನ ಪತ್ತೆ

ಮೊದಲನೆ ಮಹಾಯುದ್ಧದಲ್ಲಿ ಜರ್ಮನರ ವಶಕ್ಕೆ ಸಿಗದಂತೆ ಮಾಡುವ ಸಲುವಾಗಿ ಕಪ್ಪು ಸಮುದ್ರದಲ್ಲಿ ೨೮ ವರ್ಷಗಳ ಹಿಂದೆ ಮುಳುಗಿಸಿದ್ದ ರಷ್ಯನ್ ಡಿಸ್ಟ್ರಾಯರ್ ಹಡಗನ್ನು ಈಗ ಪತ್ತೆ ಹಚ್ಚಿ ಮೇಲೆತ್ತಲಾಗಿದೆಯೆಂದು ವರದಿಯಾಗಿದೆ

ಗೀತಾ ಜಯಂತಿ

ರಾಜಧಾನಿಯ ಗೀತಾಪ್ರಚಾರಿಣೀ ಸಭೆ ಆಶ್ರಯದಲ್ಲಿ ಇದೇ ... ನೇ ತಾ॥ ... ೧೫ ನೇ ಭಾನುವಾರ ... ಗೀತಾ ಜಯಂತಿ ಮಹೋತ್ಸವವು ಆಶೋಕಾರಣ್ಯದಲ್ಲಿರುವ ಗೀತಾ ಸದನದಲ್ಲಿ ನಡೆಯುವುದು. ಶ್ರೀ ರಾಜಶ್ರೀ ಸುಬ್ರಹ್ಮಣ್ಯಯ್ಯರ್

ಸಂಧಾನ ಸಮಿತಿಯನ್ನು ಕಾಂ॥ ಅಂಗೀಕರಿಸಬಾರದು

ಸ್ವಂ.ಸು.ಪ್ರೋ] ಬೆಂಗಳೂರು ೧

ಸಂಸ್ಥಾನಗಳಿಂದ ರಾಜ್ಯಾಂಗ ರಚನಾ ಸಭೆಗೆ ಪ್ರಜೆಗಳಿಂದ ಚುನಾಯಿತರಾದವರನ್ನೇ ಕಳುಹಿಸಬೇಕು ಇಲ್ಲವಿದ್ದರೆ ಸಂಧಾನ ಸಮಿತಿಯನ್ನು ಕಾಂಗ್ರೆಸ್ಸು ಒಪ್ಪುವುದು ಸಾಧ್ಯವಿಲ್ಲವೆಂದು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ ಚೆಂಗಲರಾಯರೆಡ್ಡಿಯವರ ಮೊನ್ನೆ ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು. ಚಿನ್ನದ ಗಣಿಯಲ್ಲಿ ನಡೆಯುತ್ತಿರುವ ಮುಷ್ಕರವು ಬಹುಶಃ ನಾಳೆಗೆ ಕೊನೆಗಾಣಬಹುದೆಂದೂ, ಸರ್ಕಾರವು ಕಾಲ ವಿಳಂಬ ಮಾಡದೆ ಪ್ರಜೆಗಳ ಅಪೇಕ್ಷಿತವಾದ ಜವಾಬ್ದಾರಿ ಸರ್ಕಾರವನ್ನು ಅವಶ್ಯ ಜಾಗ್ರತೆ ಕೊಡಬೇಕೆಂದೂ ಸಹ ಅವರು ತಿಳಿಸಿದರು.

ಹುಲಿ ವೇಷಕ್ಕೆ ಪ್ರತಿಬಂಧಕ

ಮೊಹರಂ ಕಾಲದಲ್ಲಿ ಹುಲಿ, ಪಾಳೇಗಾರ, ನಾಗರ್, ಬಾಣ ಮುಂತಾದ ವೇಷಗಳನ್ನು ಹಾಕಕೂಡದು ಮತ್ತು ಆ ಕಾಲದಲ್ಲಿ ಭಾರಿ ಕತ್ತಿವರಸೆ ಮುಂತಾದುವುಗಳನ್ನು ನಡೆಸಕೂಡದೆಂದು ಬೆಂಗಳೂರು ಜಿಲ್ಲಾ ಮ್ಯಾಜಿಸ್ಟ್ರೇಟರು ಪೋಲೀಸ್ ಶಾಸನದ ೩೯ ನೇ ವಿಧಿಯಂತೆ ಒಂದು ಪ್ರತಿಬಂಧಕಾಜ್ಞೆಯನ್ನು ಜಾರಿ ಮಾಡಿರುವರು. ಹಿಂದೂ ಹಬ್ಬಗಳ ಕಾಲದ ವಿಷಯದಲ್ಲಿಯೂ ಪ್ರತಿಬಂಧಕವನ್ನು ಹಾಕಲಾಗಿದೆ

ವೈಸರಾಯರನ್ನು ವಾಪಸ್ಸು ಕರೆಸಲು ಒತ್ತಾಯವೇ?

ಲಂಡನ್ನಿನಲ್ಲಿ ಮಾತುಕತೆಗಳು ನಡೆಯುವಾಗ ವೈಸರಾಯರಾದ ಲಾರ್ಡ್ ವೇವೆಲ್ಲರನ್ನು ವಾಪಸ್ಸು ಕರೆಸಿಕೊಳ್ಳುವಂತೆ ಕಾಂಗ್ರೆಸ್ಸಿನ ಪರವಾಗಿ ಪಂಡಿತ ನೆಹರೂರವರು ಒತ್ತಾಯ ಪಡಿಸುವರೆಂದು ದೆಹಲಿಯ ವಾರ್ತೆಯೊಂದು ತಿಳಿಸುತ್ತದೆ. ಮತ್ತು ಕಾಂಗ್ರೆಸ್ಸಿನ ನಿರ್ಧಾರದ ಪರಿಮಿತಿಯೊಳಗೇ ಸಂಧಾನವನ್ನು ನಡೆಸಬೇಕೆಂದು ಪಂಡಿತ ನೆಹರೂ ಮತ್ತು ಬಲದೇವಸಿಂಗರಿಗೆ ಕಾಂಗ್ರೆಸ್ಸಿನ ಅಧ್ಯಕ್ಷರಿಂದ ಸೂಚನೆ ಕೊಡಲ್ಪಟ್ಟಿದೆ. ಮಿ॥ ಲಿಯಾಖತ್ ಅಲೀಖಾನರು ಲಂಡನ್ನಿನಲ್ಲಿರುವಾಗ ಸ್ಟರ್ಲಿಂಗ್ ಸಾಲದ ಬಾಕಿಯ ವಿಷಯವಾಗಿಯೂ ಪಂಡಿತ ನೆಹರೂರವರು ಪೂರ್ವ ಆಫ್ರಿಕಾ, ಪಶ್ಚಿಮ ಇಂಡೀಸ್ ಮತ್ತು ಫಿಜಿ ದ್ವೀಪಗಳಲ್ಲಿ ಭಾರತದ ಪ್ರತಿನಿಧಿಗಳ ನೇಮಕದ ವಿಷಯವಾಗಿಯೂ ಮಾತುಕತೆ ನಡೆಸುವರೆಂದೂ ಹೇಳಲಾಗಿದೆ.

ಇದುವರೆವಿಗೆ ಹರಿಜನರು ತಿರುಪತಿ ಬೆಟ್ಟಕ್ಕೆ ಹತ್ತಲು ಅವಕಾಶವಿರಲಿಲ್ಲ. ಇನ್ನು ಮುಂದೆ ಅವರು ಬೆಟ್ಟವನ್ನು ಹತ್ತಲು ಸೌಲಭ್ಯವನ್ನು ಕಲ್ಪಿಸುವುದಕ್ಕಾಗಿ ಮದ್ರಾಸ್ ಸರ್ಕಾರವು ಯೋಚಿಸುತ್ತಿದೆ. ತಿರುಪತಿ ದೇವಸ್ಥಾನಕ್ಕೆ ಹರಿಜನರನ್ನು ಬಿಡುವ ಮೊದಲು ಈ ಕಾರ್ಯಕ್ರಮವನ್ನು ಕೈಗೊಳ್ಳಲಾಗುವುದೆಂದು ತಿಳಿದುಬಂದಿದೆ

ರವರು ಅಧ್ಯಕ್ಷತೆ ವಹಿಸುವರು. ಪ್ರತಿದಿನವೂ ಸಂಗೀತ, ಉಪನ್ಯಾಸ, ಹರಿಕಥೆ, ಭಾರತ ಪಠಣ ಮತ್ತು ಯೋಗಾಸನ ಪ್ರದರ್ಶನಗಳನ್ನು ಏರ್ಪಡಿಸಲಾಗಿದೆ. ೧೫ ನೇ ತಾ॥ ಭಾನುವಾರ ... ೭ ರಿಂದ ೧೨ ರ ವರೆಗೆ ... ಶ್ರೀ ... ನಗರ ... ಪ್ರಸಾದ ವಿನಿಯೋಗಗಳು ನಡೆಯುವವು.

ಸಾಧ್ವಿ

ತಾ॥ ೧-೧೨-೪೬ ಭಾನುವಾರ

ಲಂಡನ್ ಸಂಧಾನ

ಕಟ್ಟಕಡೆಗೆ ಕಾಂಗ್ರೆಸ್ಸಿನವರೂ, ಲೀಗಿನವರೂ ವೈಸರಾಯರೊಡನೆ ಲಂಡನ್ ಯಾತ್ರೆಗೆ ಹೊರಟಿದ್ದಾರೆ. ಈ ದೇಶ ಉಭಯ ಪಂಗಡಗಳೂ ಕಲೆತು ಬ್ರಿಟಿಷ್ ಆಡಳಿತದ ಮೂಲ ಸ್ಥಾನಕ್ಕೆ ತೆರಳಿ ಮಾತುಕತೆ ನಡೆಸುವುದು ಇದೇ ಮೊದಲು. ಸಂಧಾನಗಳಿಗಾಗಿ ರಂಗಸ್ಥಳವು ಸಿದ್ಧಗೊಳಿಸಲ್ಪಟ್ಟಿದೆ. ಬ್ರಿಟಿಷ್ ಪ್ರಜೆಗಳೆಲ್ಲರೂ ಇದನ್ನು ಸ್ವಾಗತಿಸಿದ್ದಾರೆ. ಸತ್ಕಾರ ಸಮಾರಂಭಗಳ ಏರ್ಪಾಡುಗಳೂ ನಡೆದಿವೆ. ಚಕ್ರವರ್ತಿ ಸಾರ್ವಭೌಮರೊಡನೆ ಉಪಾಹಾರವೂ ಸಹ ಏರ್ಪಾಡಾಗಿರುತ್ತದೆ.

ಮೊದಲು ಈ ಪ್ರವಾಸಕ್ಕೆ ಕಾಂಗ್ರೆಸ್ಸಿನವರು ಒಪ್ಪಲಿಲ್ಲವಾದರೂ, ಬ್ರಿಟಿಷ್ ಪ್ರಧಾನಿಗಳಿಂದ ಬಂದ ಬರವಣಿಗೆಯ ಮೇಲೆ ಅವರು ಆಹ್ವಾನವನ್ನು ಅಂಗೀಕರಿಸಿರುವುದು ಅತ್ಯಂತ ಯುಕ್ತಿ ಯುಕ್ತವಾಗಿದೆ. ಕಾಂಗ್ರೆಸ್ಸಿನವರು ನ್ಯಾಯಸಮ್ಮತವಾದ ಮಾತುಕತೆಗಳಿಗೆ ಸದಾ ಸಿದ್ಧರಾಗಿರುವರೆಂಬುದನ್ನು ಇದು ಮತ್ತೊಮ್ಮೆ ವಿಶದಪಡಿಸುತ್ತದೆ.

ಮಿ॥ಜಿನ್ನಾರವರು ಆಹ್ವಾನವನ್ನು ಮೊದಲು ಅಂಗೀಕರಿಸಿದರು. ಕಾಂಗ್ರೆಸ್ಸು ಅದನ್ನು ನಿರಾಕರಿಸಿದ ಮೇಲೂ ತಾವು ಖಂಡಿತವಾಗಿಯೂ ಲಂಡನ್ನಿಗೆ ತೆರಳುವುದಾಗಿ ತಿಳಿಸಿದರು. ಅವರ ನೆಹರೂರವರು ಲಂಡನ್ನಿಗೆ ಬರಲೇಬೇಕೆಂದು ಬ್ರಿಟಿಷ್ ಪ್ರಧಾನಿಗಳಾದ ಮಿ॥ ಅಟ್ಲಿಯವರು ಅವರಿಗೆ ಮಾಡಿಕೊಂಡ ವಿಶೇಷ ಪ್ರಾರ್ಥನೆಯು ಮಿ॥ಜಿನ್ನಾರವರನ್ನು ಸ್ವಲ್ಪ ಅಲುಗಾಡಿಸಿದಂತಿದೆ. ಆದುದರಿಂದ ಅವರೂ ಸಹ ಲಂಡನ್ನಿನೊಡನೆ ವಿಶೇಷ ಸಮಾಲೋಚನೆಯನ್ನು ನಡೆಸಿದರು. ಅವರಿಗೂ ತಕ್ಕ ಸಮಾಧಾನವೇ ದೊರೆತಿರಬಹುದೆಂದು ಭಾವಿಸಬಹುದು. ಆದುದರಿಂದ ಈ ದಿನ ಎಲ್ಲರೂ ಕಲೆತು ಲಂಡನ್ನಿಗೆ ತೆರಳಿದ್ದಾರೆ.

ಇದೊಂದು ಶುಭದಿನವೆಂದೇ ಭಾವಿಸಬೇಕು. ಜಿನ್ನಾರವರೂ, ನೆಹರೂರವರೂ, ವೈಸರಾಯರೂ ಈಗ ಒಂದೇ ವಿಮಾನದಲ್ಲಿ ಗಗನದಲ್ಲಿ ಸಂಚರಿಸುತ್ತಿದ್ದಾರೆ. ಪರಸ್ಪರ ಭಿನ್ನಾಭಿಪ್ರಾಯಗಳು ಏನೇ ಇರಲಿ, ಭರತಖಂಡದ ಸಮಸ್ಯೆಗೆ ಇವರ ಮುಖ್ಯ ಮೂರು ಮುಖಗಳ ಪ್ರತಿನಿಧಿಗಳಾದ ಈ ತ್ರಿಮೂರ್ತಿಗಳು ಸ್ವಲ್ಪ ಕಾಲವಾದರೂ ದೇಶದೊಳಗಿನ ಗೊಂದಲದಿಂದ ನಿರ್ಲಿಪ್ತರಾಗಿ, ಹೊರಗಿನ ವಾತಾವರಣದಲ್ಲಿ ರಾಷ್ಟ್ರದ ಸಮಸ್ಯೆಯನ್ನು ಬಿಡಿಸುವ ಪ್ರಯತ್ನವು ಫಲಕಾರಿಯಾದೀತೆಂದು ಆಶಿಸಲು ಅವಕಾಶವಿರುತ್ತದೆ. ಬ್ರಿಟಿಷ್ ಆಡಳಿತಗಾರರು ನಿಜವಾದ ಸ್ವಾತಂತ್ರ್ಯ ಪ್ರೇಮವನ್ನೂ, ಪಚನವಾಲನೆಯನ್ನೂ ಅವಲಂಬಿಸಿ ಈ ನೂತನ ಪ್ರಯತ್ನವು ಯಶಸ್ವಿಯಾಗುವಂತೆ ಮಾಡಲೆಂದು ಬಯಸೋಣ.

ಮೈಸೂರಿಗೆ ಸಿಂಧ್ ಅಕ್ಕಿ

ಸಿಂಧ್ ಪ್ರಾಂತದಿಂದ ಮದರಾಸಿಗೆ ಬರತಕ್ಕ ಅಕ್ಕಿಯಲ್ಲಿ ೨೦೦೦ ಟನ್ ಅಕ್ಕಿಯನ್ನು ಮೈಸೂರು ಸಂಸ್ಥಾನಕ್ಕೆ ಕೊಡಲಾಗಿದೆಯೆಂದು ವರದಿಯಾಗಿದೆ

ಪತ್ರಿಕೆಯು ತಿದ್ದುಪಾಟನ್ನು ಮಾಡಬೇಕು

ಪೌರಸಭೆಯ ಮೇಲಿನ ಆರೋಪಣೆ ಬಗ್ಗೆ ನಿರ್ಣಯ

ಮೈಸೂರು ೧

ರಾಜಧಾನಿಯ ಪುರಸಭೆಯ ಅಧಿವೇಶನವು ನಿನ್ನೆ ಸಂಜೆ ಶ್ರೀ ಎನ್. ಮಾಧವರಾಯರ ಅಧ್ಯಕ್ಷತೆಯಲ್ಲಿ ಜರುಗಿತು. ಪಂಡಿತ ಮದನಮೋಹನ ಮಾಳವೀಯ ಮತ್ತು ಕೈಲಾಸಂರವರ ನಿಧನದ ಬಗ್ಗೆ ಸಂತಾಪ ಸೂಚಿಸುವ ನಿರ್ಣಯವನ್ನು ಶ್ರೀ ಬಿ. ನಾರಾಯಣಸ್ವಾಮಿಯವರು ಮಂಡಿಸಿದರು. ಶ್ರೀ ಟಿ. ಮರಿಯಪ್ಪನವರು ಸಮರ್ಥಿಸಿದರು. ನಿರ್ಣಯವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟು, ಗೌರವ ಸೂಚನಾರ್ಥವಾಗಿ ಸಭೆಯನ್ನು ೧೦ ನಿಮಿಷಗಳ ಕಾಲ ಮುಂದುವರಿಸಲಾಯಿತು.

ನಗರದ ಮತ್ತು ಪುರಸಭಾ ಎಲ್ಲೆ ಕಟ್ಟಿನೊಳಗಿರುವ ಹಳ್ಳಿಗಳ ನಿರ್ಮಲೀಕರಣದ ಬಗ್ಗೆ ಕೆಲವು ಸದಸ್ಯರು ಸಲಹೆಗಳನಿತ್ತರು. ಪ್ಲೇಗು ರೋಗ ಹರಡದಂತೆಯೂ, ಕೋತಿಗಳ ಕಾಟ ತಪ್ಪಿಸುವಂತೆಯೂ, ಜನನ ಮರಣಗಳ ಪಟ್ಟಿಯನ್ನು ದಿನವಹಿ ಪ್ರಕಟಿಸುವಂತೆಯೂ, ವ್ಯವಸ್ಥೆಗಳು ಆಗಬೇಕೆಂದು ಸದಸ್ಯರನೇಕರು ತಿಳಿಸಿದರು.

ನರಸಿಂಹರಾಜ ಮೊಹಲ್ಲಾದಲ್ಲಿರುವ ಪೋಸ್ಟ್ಸ್ ಟ್ರಾನ್ಸ್‌ಫಾರ್ಮರ್ ಸ್ಟೇಷನ್ನಿನ ಹಿಂಭಾಗದಲ್ಲಿ ಒಂದು ಉದ್ಯಾನ ವನವನ್ನು ನಿರ್ಮಿಸಿ, ಸಾರ್ವಜನಿಕ ಉಪಯೋಗಕ್ಕಾಗಿ ರೇಡಿಯೋವನ್ನು ಇಡಬೇಕೆಂದು ಶ್ರೀ ಇ. ಪಿ. ನಂಜಪ್ಪನವರು ಸಭೆಯಲ್ಲಿ ಮಂಡಿಸಿದ ನಿರ್ಣಯವು ಅಂಗೀಕಾರವಾಯಿತು.

ನಗರಾಭಿವೃದ್ಧಿ ಸಮಿತಿಯವರು ನರಸಿಂಹರಾಜ ಮೊಹಲ್ಲಾದಲ್ಲಿ ಒಳ ಚರಂಡಿ ವ್ಯವಸ್ಥೆಯನ್ನು ಏರ್ಪಡಿಸದೆ ಆ ಪ್ರದೇಶದಲ್ಲಿ ಮಲೇರಿಯಾ ಜ್ವರವು ಹರಡುತ್ತಿರುವುದರಿಂದ ಮಳೆನೀರು ಹರಿದು ಹೋಗುವಂತೆ ಚಪ್ಪಡಿ ಚರಂಡಿಗಳನ್ನು ಕೂಡಲೇ ಅಲ್ಲಿ ಏರ್ಪಡಿಸುವಂತೆ ನಗರಾಭಿವೃದ್ಧಿ ಸಮಿತಿಯವರನ್ನು ಪ್ರಾರ್ಥಿಸುವ ಶ್ರೀ ಇ. ಪಿ. ನಂಜಪ್ಪನವರ ನಿರ್ಣಯವೂ ಅಂಗೀಕಾರವಾಯಿತು.

ದೆಹಲಿಯಲ್ಲಿ ೪೭ರ ಆದಿಯಲ್ಲಿ ನಡೆಯುವ ಅಖಿಲ ಭಾರತ ಸ್ಥಳೀಯ ಸಂಸ್ಥೆಗಳ ೫ನೇ ಸಮ್ಮೇಳನಕ್ಕೆ ಒಬ್ಬ ಪ್ರತಿನಿಧಿಯನ್ನು ಈ ಸಭೆಯು ಕಳುಹಿಸಿಕೊಡಬೇಕೆಂದೂ, ಆದರ ಬಗ್ಗೆ ಪ್ರತಿನಿಧಿ ಶುಲ್ಕ ೧೫ರೂಗಳನ್ನು ಕೊಡಬಹುದೆಂದೂ ತೀರ್ಮಾನಿಸಲಾಯಿತು.

ಮಹಾರಾಜ ಕುಮಾರಿಯವರ ನಾಮಕರಣದ ದಿನ ಬಡಜನರಿಗಾಗಿ ಊಟದ ಏರ್ಪಾಡು ಮಾಡಿದ್ದ ಸಂಬಂಧದಲ್ಲಿ "ಪುರಸಭೆಯ ಕರ್ತವ್ಯಲೋಪ" ಎಂಬ ಶಿರೋನಾಮೆಯಲ್ಲಿ 'ಮೈಸೂರು ಪತ್ರಿಕೆ' ಯು ಪ್ರಕಟಿಸಿದ್ದ ಲೇಖನಕ್ಕೆ ಆಗ್ಗೆ ಅಧ್ಯಕ್ಷರಾಗಿದ್ದವರು ಪ್ರತಿ ಹೇಳಿಕೆಯೊಂದನ್ನು ಪ್ರಕಟನೆಗಾಗಿ ಕೊಟ್ಟಿದ್ದನ್ನು ಸದರಿ ಪತ್ರಿಕೆಯ ಸಂಪಾದಕರು ಮತ್ತು ಪ್ರಕಾಶಕರು ಪ್ರಕಟಿಸದೆ ಪುರಸಭೆಗೆ ಅವಮಾನವೆಸಗಿರುವುದರಿಂದ ಈ ಪುರಸಭೆಯಿಂದ ಸದರಿ ಪತ್ರಿಕೆಯ ಸಂಪಾದಕರು ಮತ್ತು ಪ್ರಕಾಶಕರಿಗೆ ಇತ್ತಿರುವ ಎಲ್ಲಾ ಸೌಕರ್ಯಗಳನ್ನೂ ವಾಪಸು ತೆಗೆದುಕೊಳ್ಳಬೇಕೆಂದು ಶ್ರೀ ಟಿ. ನರಸಿಂಹಯ್ಯಂಗಾರ್ಯರು ನಿರ್ಣಯವನ್ನು ಮಂಡಿಸಿದರು. ಶ್ರೀಗಳಾದ ಸತ್ಯನಾರಾಯಣರಾವ್ ಮತ್ತು ಬಿ. ನಾರಾಯಣ ಸ್ವಾಮಿಗಳು ನಿರ್ಣಯವನ್ನು ಸಮರ್ಥಿಸಿಯೂ, ಶ್ರೀಗಳಾದ ಎಫ್. ಸಿ. ದೇವರಾಜ ಅರಸ್, ಜನಾರ್ಧನ ನಾಯ್ಡು, ಎಂ. ಆರ್. ಸಿ. ಬಸಪ್ಪನವರು ವಿರೋಧಿಸಿಯೂ ಮಾತನಾಡಿದರು. ಪತ್ರಿಕಾ ಕರ್ತರು ಸರಿಯಾದ ವರದಿಯನ್ನು ಪ್ರಕಟಿಸಲು ಮತ್ತೊಂದು ಅವಕಾಶವನ್ನು ಕೊಡಬಹುದೆಂದು ಅಧ್ಯಕ್ಷರು ಸೂಚಿಸಿದರು. ಶ್ರೀ॥ ಟಿ. ಮರಿಯಪ್ಪನವರು ಒಂದು ತಿದ್ದುಪಡಿಯನ್ನು ಮಂಡಿಸಿ ಸಂಬಂಧಪಟ್ಟ ಸಂಪಾದಕರು ಇನ್ನು ಒಂದು ವಾರದೊಳಗಾಗಿ ಅವಶ್ಯಕವಾದ ತಿದ್ದುಪಡಿಯನ್ನು ಮಾಡದಿದ್ದಲ್ಲಿ ಅವರಿಗೆ ಕೊಡಲ್ಪಟ್ಟಿರುವ ಸೌಕರ್ಯಗಳನ್ನೆಲ್ಲಾ ರದ್ದು ಮಾಡಬೇಕೆಂದು ಸೂಚಿಸಿದರು. ಪತ್ರಿಕಾ ಸ್ವಾತಂತ್ರ್ಯವೇ ತನ್ನ ಪರಮ ಧ್ಯೇಯವೆಂದು ಹೇಳಿ ಪುರಸಭೆಯು ಕೀರ್ತಿ ಗೌರವಗಳನ್ನು ಕಾಯುವ ಜವಾಬ್ದಾರಿ ಪತ್ರಿಕೆಗಳಿಗೂ ಇದೆಯೆಂದು ಅವರು ಹೇಳಿದರು.

ಪ್ರಾರ್ಣಯ್ಯನ ಛತ್ರದ ಊಟದ ವ್ಯವಸ್ಥೆ ಪುರಸಭೆಗೆ ಸೇರಿದ್ದಲ್ಲವೆಂದು ಪತ್ರಿಕಾ ಸಂಪಾದಕರು ಅರಮನೆ ಅಧಿಕಾರಿಗಳಿಗೆ ಫೋನಿನಲ್ಲಿ ಹೇಳುತ್ತಲೇ ಇರಲಿಲ್ಲ. ಅದ್ದರಿಂದ ಪುರಸಭೆಗೂ ಆ ವಿಚಾರಕ್ಕೂ ಸಂಬಂಧವಿಲ್ಲವೆಂದು ತಿಳಿದಿದ್ದೂ ಆ ಲೇಖನ ಪ್ರಕಟಿಸಿರುವುದು ಮತ್ತು ಪುರಸಭೆಯ ಆಗಿನ ಅಧ್ಯಕ್ಷರು ಕೊಟ್ಟ ಹೇಳಿಕೆಯನ್ನು ಪ್ರಕಟಿಸದೇ ಇರುವುದು ಉದ್ದೇಶಪೂರ್ವಕವಾಗಿಯೇ ಮಾಡಿರುವ ಅಪಪ್ರಚಾರವೆಂದು ಶ್ರೀ ಟಿ. ನರಸಿಂಹಯ್ಯಂಗಾರ್ಯರು ತಿಳಿಸಿದರು. ನಿರ್ಣಯವು ೧೫-೪ ಓಟುಗಳಿಂದ ಅಂಗೀಕಾರವಾಯಿತು

ಸಾಧ್ವಿ

ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ

ಕೂಡಲೇ ಚಂದಾದಾರರಾಗಿರಿ

(ತಿಂಗಳಿಗೆ ಚಂದಾ ೧-೮-೦ ಮಾತ್ರ)

ಜಾಹಿರಾತಿನ ದರಗಳಿಗೆ ವಿಚಾರಿಸಿರಿ

ಸ॥ ಪಟೇಲರು ಉಪಾಧ್ಯಕ್ಷ

ಕೇಂದ್ರ ತಾತ್ಕಾಲಿಕ ಸರ್ಕಾರ ಮಂತ್ರಿಮಂಡಳದ ಉಪಾಧ್ಯಕ್ಷರಾದ ಪಂಡಿತ ನೆಹರೂರವರು ಲಂಡನ್ನಿನಿಂದ ವಾಪಸ್ ಬರುವವರೆಗೆ ಕೇಂದ್ರ ಸರ್ಕಾರದ ಗೃಹ ಸಚಿವರಾದ ಸರ್ದಾರ್ ಪಟೇಲರು ತಾತ್ಕಾಲಿಕ ಸರ್ಕಾರದ ಉಪಾಧ್ಯಕ್ಷರಾಗಿರುವರೆಂದು ತಿಳಿದು ಬಂದಿದೆ.

ಅ॥ ಭಾ॥ ಹಿಂದೂ ಮಹಾಸಭೆ

ಅಖಿಲ ಭಾರತ ಹಿಂದೂ ಮಹಾಸಭೆಯ ೨೭ ನೇ ಅಧಿವೇಶನವು ಗೋರಖ್‌ಪುರದಲ್ಲಿ ಡಿಸೆಂಬರ್ ೨೭, ೨೮ ಮತ್ತು ೨೯ನೇ ತಾ॥ ನಲ್ಲಿ ಮಾಳವೀಯ ನಗರದಲ್ಲಿ ನಡೆಯುವುದು. ಇದೇ ಸಮಯದಲ್ಲಿ ಹಿಂದೂ ಮಹಿಳೆಯರ ಮತ್ತು ವಿದ್ಯಾರ್ಥಿಗಳ ಸಮ್ಮೇಳನವೂ ಸಹ ನಡೆಯುವುದು.

ರಸ್ತೆಯಲ್ಲಿ ಅಡಚಣೆ

ಸ್ವಂ ವ] ನಂಜನಗೂಡು ೩೦

ಈ ಊರಿನ ಗೌರೀಘಟ್ಟದ ಬೀದಿಯು ಅನೇಕ ಯಾತ್ರಾರ್ಥಿಗಳು ಹೊಳೆಗೆ ಹೋಗುವ ದಾರಿಯಾಗಿದೆ. ಮೊದಲೇ ಈ ರಸ್ತೆಯು ಬಹಳ ಚಿಕ್ಕದು. ಅದರಮೇಲೆ ದಾರಿ ಸೌದೆ ಡಿಪೋಗಳು, ಮೇಲಾಗಿ ಬೀದಿಯಲ್ಲೇ ಸದಾ ಕಾಲದಲ್ಲಿಯೂ ಸಹ ಸೌದೆ ರಾಶಿಗಳು ಬಿದ್ದೇ ಇರುವುವು. ಮತ್ತು ಸೌದೆಯನ್ನು ನಡುರಸ್ತೆಯಲ್ಲೇ ಒಡೆಯಲಾಗುತ್ತಿದೆ. ಇದರಿಂದ ದಾರಿಯಲ್ಲಿ ತಿರುಗಾಡುವವರಿಗೆ ಬಹಳ ತೊಂದರೆಯಾಗಿದೆ. ಪೌರಸಭೆಯವರು ಇದಕ್ಕೆ ಕೂಡಲೇ ಗಮನ ಕೊಡುವುದು ಮೇಲು.

ಟಿ. ಸಿ. ನಟರಾಜ್

ಔ ಷ ಧಾ ಲ ಯ

ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅಗತ್ಯವಾಗಿ ಬೇಕಾದ ಎಲ್ಲಾ ಇಂಗ್ಲೀಷ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುವಲ್ಲದೆ ಸಮಸ್ತವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದೀಯ ಔಷಧಗಳೆಲ್ಲವೂ ದೊರೆಯುತ್ತವೆ.

ಅಪೇರಾ ಟಾಕೀಸ್

೨೯-೧೧-೪೬ ರಿಂದ

ಪ್ರತಿ ದಿನ ಮೂರು ಆಟಗಳು

ಉತ್ತಮಿ

(ತಮಿಳು)

ತಾರೆ ಎಸ್. ವರಲಕ್ಷ್ಮಿ, ಟಿ. ಎಸ್. ದೊರೆರಾಜ್ ಸ್ವಾಮಿನಾಥನ್, ಟಿ. ಎಸ್. ಕೃಷ್ಣವೇಣಿ ರಾಜಕಾಂತಂ

From 29-11-46
MORNING SHOWS
DILLINGER
With:- Edmund Lowe, Anne Jeffreys, Lawrence Tierney

ರಾಜಕಮಲ್ ಟಾಕೀಸ್, ಮೈಸೂರು

29-11-46 ರಿಂದ 3ನೇ ವಾರ

ಡಾಕ್ಟರ್ ಕೋಟ್ನಿಸ್ ಕಿ ಅಮರ್ - ಕಹಾನಿ

ಭೂಮಿಕೆ:- * ಜಯಶ್ರೀ, \ ಶಾಂತಾರಾಂ, ಉಲ್ಲಾಸ್ *

೨೯-೧೧-೪೬ ರಿಂದ ೪ ದಿನಗಳು ಮಾತ್ರ ಪ್ರಾತಃಕಾಲ ೧೦-೩೦ ಕ್ಕೆ

ಬಾಂಬೆ ಟಾಕೀಸಿನವರ "ಜೀವನ್ ನಯ್ಯ"

ಪಾತ್ರ:- ದೇವಿಕಾ ರಾಣಿ, ಅಶೋಕ್ ಕುಮಾರ್

Edited, printed and published by A. R. Nagarajan at the Sadhvi Press D. Subbiah Road, Mysore.

ರೋ. ನಂ. 392 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೧] ಸೋಮವಾರ ೨—೧೨—೪೬ [ಸಂಚಿಕೆ ೧೮

ದಕ್ಷಿಣ ಆಫ್ರಿಕದ ಮೇಲೆ ಭಾರತದ ವಿಜಯ

ಆಹಾರ ಸಂಗ್ರಹ ಶಾಸನದಲ್ಲಿ ಸುಧಾರಣೆಯಾಗಬೇಕು

ಜಿಲ್ಲಾ ಸಮ್ಮೇಳನದ ನಿರ್ಣಯಗಳು

ಮೈಸೂರು ೨

ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಆಶ್ರಯದಲ್ಲಿ ನಿನ್ನೆ ಮಧ್ಯಾಹ್ನ ನಂಜನಗೂಡಿನಲ್ಲಿ ಜಿಲ್ಲಾ ಆಹಾರ ಸಮ್ಮೇಳನವು ನಡೆಯಿತು. ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಎಂ ಎಲ್. ಜರಾಜೇ ಅರಸಿನವರು ಸಭಾಧ್ಯಕ್ಷತೆಯನ್ನು ವಹಿಸಿದ್ದರು. ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಂದಲೂ ಪ್ರತಿನಿಧಿಗಳು ಆಗಮಿಸಿದ್ದರು. ಸಂಚಾಲಕರಾದ ಶ್ರೀ ಹೆಚ್ ಕೆ. ವೀರಸ್ವಾಮಿಯವರು ಎಲ್ಲರಿಗೂ ಸ್ವಾಗತವನ್ನು ಕೋರಿದರು.

ಈಗ ಜಾರಿಯಲ್ಲಿರುವ ಆಹಾರ ಸಂಗ್ರಹ ಕಾನೂನು ಜನ ಸಾಮಾನ್ಯರ ಹಿತಕ್ಕೂ, ನೆಮ್ಮದಿಗೂ ಭಂಗಕರವಾದುದಾಗಿರುವುದರಿಂದ ಅದನ್ನು ಕೂಡಲೇ ರದ್ದುಮಾಡಬೇಕು, ಸದ್ಯಕ್ಕೆ ಈ ಮುಂದೆ ಕಂಡ ಬದಲಾವಣೆಗಳನ್ನೊಳಗೊಂಡ ಹೊಸ ಕಾನೂನನ್ನು ಶಾಸನ ಸಭೆಗಳ ಅಂಗೀಕಾರದೊಡನೆ ಜಾರಿಗೆ ತರಬೇಕು, ದವಸವನ್ನು ಕೊಳ್ಳುವಾಗ ಪಲ್ಲ ಒಂದಕ್ಕೆ ೩ ರೂಗಳಂತೆ ಹೆಚ್ಚಾಗಿ ಕೊಡಬೇಕು. ಮಾರಾಟದ ಬೆಲೆ ಈಗಿನಂತೆಯೇ ಇರಬೇಕು. ದವಸವನ್ನು ರೈತನ ಮನೆಯಲ್ಲೇ ಅಳಸಿಕೊಂಡು, ಅದರ ಬೆಲೆಯನ್ನು ಅಲ್ಲೇ ಪಾವತಿಮಾಡಬೇಕು. ವ್ಯವಸಾಯಗಾರನಿಗೆ ದಿನ ಒಂದಕ್ಕೆ ತಲಾ ೧ ಸೇರು ರಾಗಿ ಅಥವಾ ಜೋಳ ಅಥವಾ ೨ ಸೇರು ಭತ್ತದಂತೆ ಪಡಿತರ ಬಿಟ್ಟು ಹೆಚ್ಚುವರಿಯನ್ನು ತೆಗೆದುಕೊಳ್ಳಬೇಕು. ಆಹಾರ ಸಂಗ್ರಹ ಕಾನೂನಿನ ೭ನೇ ಕಲಂ ರದ್ದು ಮಾಡಿ ಕ್ರಿಮಿನಲ್ ಮತ್ತು ಸಿವಿಲ್ ನ್ಯಾಯಸ್ಥಾನಗಳಿಗೆ ಅಪೀಲು ಮಾಡಲು ಪ್ರತಿಯೊಬ್ಬರಿಗೂ ಅವಕಾಶ ಕಲ್ಪಿಸಿಕೊಡಬೇಕು. ವ್ಯವಸಾಯದ ಕೂಲಿಗೋಸ್ಕರ ಬಿಡತಕ್ಕ ದವಸವನ್ನು ತರಿ ಎಕರೆ ೧ಕ್ಕೆ ೧ ಪಲ್ಲ ಭತ್ತ, ಖುಷ್ಕಿ ಎಕರೆ ೧ಕ್ಕೆ ೫೦ ಸೇರು ರಾಗಿ ಅಥವಾ ಜೋಳವನ್ನು ಬಿಡತಕ್ಕದ್ದು. ೨ ಎಕರೆ ತರಿ ಅಥವಾ ೪ ಎಕರೆ ಖುಷ್ಕಿ ವಿಸ್ತೀರ್ಣಕ್ಕೆ ಒಳಪಟ್ಟಿರುವ ಹಿಡುವಳಿದಾರರುಗಳಿಂದ ದವಸದ ಕಡ್ಡಾಯ ವಸೂಲಾತಿಯನ್ನು ಮನ್ನಾ ಮಾಡಬೇಕು. ಬೀಜಕ್ಕೆ ಬಿಡುವ ಭತ್ತವನ್ನು ಎಕರೆ ೧ಕ್ಕೆ ೫೦ ಸೇರಿನಂತೆಯೂ, ರಾಗಿ ಮತ್ತು ಜೋಳವನ್ನು ಎಕರೆ ೧ಕ್ಕೆ ಸರಾಸರಿ ೧೫ ಸೇರಿನಂತೆಯೂ ಬಿಡಬೇಕು.

ಆಹಾರ ಮತ್ತು ಸಿವಿಲ್ ಸಪ್ಲೈಸ್ ಇಲಾಖೆಗಳು ಕೇವಲ ವ್ಯಾಪಾರ ಸಂಸ್ಥೆಗಳಾಗಿ ಪರಿಣಮಿಸಿ ಜನರಿಗೆ ಉಪಕಾರಿಯಾಗಿರುವುದಿಲ್ಲ. ಬಡವರ ಬಾಳು ಕಣ್ಣೀರಿನ ಗೋಳಾಗಿದೆ. ಇದನ್ನು ತಡೆಗಟ್ಟಲು ಈಗಿರುವ ಸರ್ಕಾರವು ಅಶಕ್ತವಾಗಿದೆ. ಆದ್ದರಿಂದ ಕೂಡಲೇ ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗಬೇಕಾಗಿದೆ ಎಂಬ ಠರಾವು ಸರ್ವಾನುಮತದಿಂದ ಅಂಗೀಕಾರವಾಯಿತು.

ಸಂಸ್ಥಾನದ ಎಲ್ಲ ಕಡೆಯೂ ಕ್ರಮಬದ್ಧವಾದ ರೇಷನಿಂಗ್ ವ್ಯವಸ್ಥೆ ಜಾರಿಗೆ ಬರತಕ್ಕದ್ದೆಂದು ತೀರ್ಮಾನಿಸಲಾಯಿತು.

ಬಾಜಾರ್ ಮತ್ತು ಗೈರುಬಾಜಾರಿ ಜಮೀನುದಾರರುಗಳಿಗಿರುವ ವ್ಯತ್ಯಾಸವನ್ನು ಮನ್ನಾಮಾಡಬೇಕು. ಕಾಳಸಂತೆಯನ್ನು ತಪ್ಪಿಸಿ ಪಡಿತರವು ಜನಸಾಮಾನ್ಯಕ್ಕೆ ಸರಿಯಾಗಿ ಒದಗುವುದಕ್ಕಾಗಿ ಪ್ರತಿ ಆಹಾರ ಸಂಗ್ರಹಣ ಮತ್ತು ಹಂಚಿಕೆ ಆಫೀಸುಗಳ ಮೇಲ್ವಿಚಾರಣೆಗಾಗಿ ಚುನಾಯಿತ ಪ್ರತಿನಿಧಿಗಳಿಂದ ಕೂಡಿದ ಸಮಿತಿಗಳನ್ನು ನೇಮಿಸತಕ್ಕದ್ದು ಎಂಬ ನಿರ್ಣಯಗಳು ಮಂಜೂರಾದುವು.

ಪಂ|| ಮಾಳವೀಯ ಮತ್ತು ಟಿ. ಪಿ. ಕೈಲಾಸಂರವರ ನಿಧನದ ಬಗ್ಗೆ ಸಂತಾಪ ಸೂಚಿಸಲು ಸಭೆಯವರೆಲ್ಲಾ ೨ ನಿಮಿಷಗಳು ಎದ್ದುನಿಂತು ಗೌರವ ಸಮರ್ಪಿಸಿದರು.

ಸಮ್ಮೇಳನದ ಆರಂಭದಲ್ಲಿ ಶ್ರೀ ತಗಡೂರು ರಾಮಚಂದ್ರರಾಯರಿಂದ ರಾಷ್ಟ್ರಧ್ವಜಾರೋಹಣವು ನಡೆಯಿತು.

ಲಂಡನ್ನಿಗೆ ಭಾರತದ ಮುಖಂಡರು

ಪಂ|| ನೆಹರೂ, ಸ|| ಬಲದೇವಸಿಂಗ್, ಮಿ|| ಲಿಯಾಖತ್ ಆಲಿಖಾನ್, ವೈಸರಾಯ್ ವೇವೆಲ್ ಮತ್ತು ಮಿ|| ಜಿನ್ನಾರವರು ನಿನ್ನೆ ಕರಾಚಿಯಿಂದ ವಿಮಾನದಲ್ಲಿ ಲಂಡನ್ನಿಗೆ ಪ್ರಯಾಣ ಬೆಳೆಸಿದರು. ಅವರುಗಳು ಈ ದಿನ ಲಂಡನ್ ನಗರವನ್ನು ತಲುಪುವರು. ಈ ಮುಖಂಡರುಗಳ ಸಂಗಡ ಬ್ರಿ|| ನಿಯೋಗದ ಲಾರ್ಡ್ ಪೆಥಿಕ್ ಲಾರೆನ್ಸ್, ಮಿ|| ಅಲೆಕ್ಸಾಂಡರ್ ಮತ್ತು ಸರ್ ಕ್ರಿಪ್ಸರು ನಾಳೆಯಿಂದಲೇ ಮಾತುಕತೆ ಆರಂಭಿಸಲಿದ್ದಾರೆ. ಈ ಕಾರ್ಯಕ್ರಮಗಳು ಡಿಸೆಂಬರ್ ೮ ನೇ ತಾ|| ನ ಒಳಗೇ ಮುಗಿಯಬೇಕಾಗಿರುತ್ತವೆ. ಬ್ರಿ|| ಪ್ರಧಾನಿ ಮಿ|| ಅಟ್ಲಿಯವರು ಸಹ ತಮ್ಮ ಪ್ರವಾಸಗಳನ್ನೆಲ್ಲಾ ಮುಂದಕ್ಕೆ ಹಾಕಿ ಈ ಮುಖಂಡರುಗಳೊಡನೆ ನಡೆಯುವ ಸಮಾಲೋಚನೆಯಲ್ಲಿ ಭಾಗಿಗಳಾಗಿರುತ್ತಾರೆ. ಭಾರತದ ಪ್ರಮುಖ ನಾಯಕರುಗಳನ್ನು ಸ್ವಾಗತಿಸಿ ಗೌರವಿಸಲು ಲಂಡನ್ನಿನಲ್ಲಿರುವ ಭಾರತೀಯರು ಅಸಾಧ್ಯ ಸಿದ್ಧತೆಗಳನ್ನು ಮಾಡಿರುವುದಾಗಿ ವರದಿಯಾಗಿದೆ. ಬ್ರಿ|| ಪ್ರಧಾನಿಗಳಿಗೂ, ಪಂ|| ನೆಹರೂರವರಿಗೂ ನಡೆಯಲಿರುವ ಭೇಟಿಯಲ್ಲಿ ಸಹಾಯ ಮಾಡಲು ವಿಶ್ವರಾಷ್ಟ್ರ ಸಮ್ಮೇಳನದಲ್ಲಿ ಭಾಗವಹಿಸುತ್ತಿದ್ದ ಶ್ರೀ ಕೃಷ್ಣಮೆನನ್‌ರವರು ಕೂಡಲೇ ಲಂಡನ್ನಿಗೆ ಹಿಂತಿರುಗಲಿದ್ದಾರೆ.

ಹೈಸ್ಕೂಲಿಗೆ ದಾನ

ನಾಗಮಂಗಲ ತಾ|| ಬೆಳ್ಳೂರಿನಲ್ಲಿ ಹೈಸ್ಕೂಲು ಕಟ್ಟಡವನ್ನು ಕಟ್ಟಲು ಅಂಕನಹಳ್ಳಿ ಶ್ರೀ ಕೆಂಪೇಗೌಡರು ೪೦ ಸಹಸ್ರ ರೂಗಳನ್ನು ಕೊಡುವುದಾಗಿ ವಾಗ್ದಾನ ಮಾಡಿ ಈಗಾಗಲೇ ೨೦ ಸಾವಿರ ರೂಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ.

ಪುರಸಭಾಧ್ಯಕ್ಷ ಚುನಾವಣೆ

ಸ್ವಂ ವ] ಬೆಂಗಳೂರು ೨

ಪುರಸಭೆಯ ಮುಂದಿನ ಸಾಲಿಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯು ಇದೇ ೧೮ನೇ ತಾ|| ಬೆಳಿಗ್ಗೆ ೯ ಗಂಟೆಗೆ ಜರುಗುವುದು.

ಪಾನ ನಿರೋಧ ಸಲಹಾ ಸಮಿತಿ

ಕಳೆದ ಪ್ರ|| ಪ್ರ|| ಸಭೆಯಲ್ಲಿ ಭರವಸೆ ಕೊಟ್ಟ ಪ್ರಕಾರ ಸರ್ಕಾರದವರು ಪಾನ ನಿರೋಧ ನೀತಿಯನ್ನು ಸಂಸ್ಥಾನದ ಯಾವ ಭಾಗಗಳಲ್ಲಿಯೂ ಹೇಗೆ ಜಾರಿಗೆ ತರಬಹುದೆಂಬುದನ್ನೂ ಅದರ ಸಾಧಕ ಬಾಧಕಗಳನ್ನು ಪರಿಶೀಲಿಸಿ ಶಿಫಾರ್ಸು ಮಾಡಲು ಒಂದು ಸಮಿತಿಯನ್ನು ನೇಮಕ ಮಾಡಲಿದ್ದಾರೆ.

* ದ|| ಆಫ್ರಿಕದ ಪಾರ್ಲಿಮೆಂಟ್ ಸದಸ್ಯರಾದ ಮಿ|| ಮತ್ತು ಮಿಸೆಸ್ ಬೆಲಿಂಜರ್ ರವರು ನಿನ್ನೆ ಇಲ್ಲಿಗೆ ಬಂದರು.

* ಅಂತರ ರಾಷ್ಟ್ರೀಯ ರೋಟರಿ ಅಧ್ಯಕ್ಷರಾದ ಮಿ|| ರಿಚರ್ಡ್ ಹೆಡ್ಜೆಯವರು ನಿನ್ನೆ ಇಲ್ಲಿಗೆ ಆಗಮಿಸಿ ವೆಸ್ಟ್‌ಎಂಡ್ ಹೋಟೆಲಿನಲ್ಲಿ ದಿವಾನರ ಅಧ್ಯಕ್ಷತೆಯಲ್ಲಿ ರೋಟರಿ ವಿಚಾರವಾಗಿ ಭಾಷಣ ಮಾಡಿದರು. ಈ ದಿನ ಅವರು ಮೈಸೂರಿಗೆ ಬರುವರು.

* ಕಂಟ್ರೋಲರ ಶಿಫಾರ್ಸನ್ನು ಒಪ್ಪಿ ಸರ್ಕಾರದವರು ಬೆಂಗಳೂರು ಲೋಕಲ್ ಆಡಿಟ್ ಸರ್ಕಲನ್ನು ರದ್ದು ಪಡಿಸಿರುತ್ತಾರೆ.

* ಚನ್ನಪಟ್ಟಣದ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ಜಿ. ವೀರರಾಘವಾಚಾರ್ಯರನ್ನು ಜಿಲ್ಲಾ ವಿದ್ಯಾಧಿಕಾರಿಗಳನ್ನಾಗಿ ಬಡ್ತಿ ಮಾಡಲಾಗಿದೆ.

ಹಂಗಾಮಿ ವೈಸರಾಯರ ಅಧಿಕಾರ ಸ್ವೀಕಾರ

ವೈಸರಾಯ್ ವೇವೆಲ್ಲರು ಲಂಡನ್ ಯಾತ್ರೆ ಕೈಗೊಂಡಿರುವುದರಿಂದ ಬೊಂಬಾಯಿನ ಗವರ್ನರ್ ಆದ ಸರ್ ಜಾನ್ ಕೋಲ್‌ವಿಲ್ ರವರು ನಿನ್ನೆ ಶ್ರೇಷ್ಠ ನ್ಯಾಯಾಧೀಶರು ಮತ್ತು ಮಂತ್ರಿಗಳ ಸಮ್ಮುಖದಲ್ಲಿ ಪ್ರಮಾಣ ವಚನವನ್ನು ಸ್ವೀಕರಿಸಿ, ವೈಸರಾಯ್ ಅಧಿಕಾರವನ್ನು ವಹಿಸಿಕೊಂಡರು.

ವೈಸರಾಯರ ಸಂಗಡ ವಿಸ್ಕಿ ಸೀಸೆಗಳು

ವೈಸರಾಯ್ ವೇವೆಲ್ಲರು ತಮ್ಮ ಜತೆಯಲ್ಲಿ ೯ ಸೀಸೆ ವಿಸ್ಕಿಯನ್ನು ತೆಗೆದುಕೊಂಡು ಹೋಗಿದ್ದಾರೆ. ಲಂಡನ್ನಿನಲ್ಲಿ ವಿಸ್ಕಿ ಅಭಾವವಿರುವುದರಿಂದಲೇ ಅವರು ಭಾರತದಿಂದ ಅದನ್ನು ತೆಗೆದುಕೊಂಡು ಹೋಗಿದ್ದಾರೆಂದು ಹೇಳಲಾಗಿದೆ.

ದಕ್ಷಿಣ ಆಫ್ರಿಕಕ್ಕೆ ಭಾರಿ ಸೋಲು

ದಕ್ಷಿಣ ಆಫ್ರಿಕದ ಮೇಲೆ ಭಾರತವು ವಿಶ್ವಸಂಸ್ಥೆಯಲ್ಲಿ ಮಂಡಿಸಿದ್ದ ದೂರಿನ ಬಗ್ಗೆ ವಿಶ್ವಸಂಸ್ಥೆಯ ಪ್ರನಾಳಿಕೆಗನುಗುಣವಾಗಿ ಸಮಸ್ಯ ಪರಿಹಾರಕ್ಕೆ ಉಭಯ ರಾಷ್ಟ್ರಗಳು ಕೈಗೊಂಡಿರುವ ಕ್ರಮಗಳನ್ನು ಮುಂದಿನ ವಿಶ್ವ ಸಮ್ಮೇಳನದ ವೇಳೆಗೆ ವರದಿ ಮಾಡಬೇಕೆಂಬ ಮೆಕ್ಸಿಕೋ ಮತ್ತು ಫ್ರಾನ್ಸ್ ಪ್ರತಿನಿಧಿಗಳು ಮಂಡಿಸಿದ್ದ ನಿರ್ಣಯವು ೩೨-೧೫ ಓಟುಗಳಿಂದ ಅಂಗೀಕರಿಸಲ್ಪಟ್ಟು, ದಕ್ಷಿಣ ಆಫ್ರಿಕಕ್ಕೆ ಭಾರಿ ಸೋಲು ಪ್ರಾಪ್ತಿಯಾಯಿತು. ಇದಾದನಂತರ ಶ್ರೀಮತಿ ವಿಜಯಲಕ್ಷ್ಮಿಯವರು ಜ|| ಸ್ಮಟ್ಸರ ಬಳಿಗೆ ಹೋಗಿ ಕೈ ಕುಲುಕಿಸಿದರು.

ಕಾಶೀ ವಿಶ್ವವಿದ್ಯಾಲಯದ ಸ್ಥಾನಪತಿಗಳು

ಕಾಶಿಯ ಹಿಂದೂ ವಿಶ್ವವಿದ್ಯಾನಿಲಯದ ಸ್ಥಾನಪತಿಗಳಾದ ಸರ್. ಎಸ್. ರಾಧಾಕೃಷ್ಣನ್‌ರವರು ಆಕ್ಸ್‌ಫರ್ಡ್‌ನಿಂದ ಬರುವವರೆವಿಗೂ ಹಿಂದೂ ಮಹಾಸಭೆಯ ಅಧ್ಯಕ್ಷರಾದ ಡಾ|| ಶ್ಯಾಮಪ್ರಸಾದ ಮುಖರ್ಜಿಯವರು ಸ್ಥಾನಪತಿಗಳಾಗಿ ನೇಮಿಸಲ್ಪಡುವರೆಂದು ವರದಿಯಾಗಿದೆ.

ಬ್ರೆಡ್ ರೇಷನಿಂಗ್ ವಜಾ

ಸಂಸ್ಥಾನದಲ್ಲಿ ಸಾಕಾದಷ್ಟು ಉತ್ತಮ ಬೆಳೆಯಾಗಿರುವುದರಿಂದ ಇದುವರೆವಿಗೂ ಜಾರಿಯಲ್ಲಿದ್ದ ಬ್ರೆಡ್ ರೇಷನಿಂಗ್ ಆಜ್ಞೆಯನ್ನು ವಜಾ ಮಾಡಿ ಬ್ರೆಡ್ ಅಂಗಡಿಗಳವರು ಸಿಹಿಯಿಲ್ಲದ ಬಿಸ್ಕತ್‌ಗಳನ್ನು ತಯಾರಿಸಬಹುದೆಂದು ಸರ್ಕಾರದವರು ಒಂದು ಆಜ್ಞೆಯನ್ನು ನಿನ್ನೆ ದಿನ ಹೊರಡಿಸಿರುವರು. ಹೋಟಲು ಮತ್ತು ರೆಸ್ಟೊರಂಟುಗಳಲ್ಲಿ ಉಪಯೋಗಿಸುತ್ತಿದ್ದ ಆಹಾರಗಳ ಮೇಲೆ ಇದ್ದ ಆಜ್ಞೆಯನ್ನು ಸಹ ತೆಗೆದಿರುವರು. 'ಬಿ' ತರಗತಿ ರೇಷನ್ ಕಾರ್ಡುದಾರರಿಗೆ ಗೋದಿಯನ್ನು ರೂ ೧ಗೆ ನಾಲ್ಕು ಸೇರಿನಂತೆಯೂ, ಹಿಟ್ಟನ್ನು ಒಂದು ರೂ ೧ಗೆ ಒಂಭತ್ತು ಪೌಂಡಿನಂತೆಯೂ 'ಎ' ತರಗತಿಯವರಿಗೆ ರೂ ಒಂದಕ್ಕೆ ಮೂರು ಸೇರು ಗೋಧಿ ಮತ್ತು ಹಿಟ್ಟನ್ನು ಏಳು ಪೌಂಡಿನಂತೆಯೂ ಬ್ರೆಡ್ ಅಂಗಡಿಗಳವರಿಗೆ ಒಂಭತ್ತು ಪೌಂಡ್ ಗೋಧಿ ಹಿಟ್ಟು ಮತ್ತು ಹೋಟೆಲುಗಳಿಗೆ ಮೂರು ಸೇರು ಗೋಧಿ ಮತ್ತು ಆರು ಪೌಂಡು ಗೋಧಿಯ ಹಿಟ್ಟನ್ನು ಕೊಡುವಂತೆಯೂ ಸಹ ಮತ್ತೊಂದು ಆಜ್ಞೆಯನ್ನು ಸರ್ಕಾರದವರು ಹೊರಡಿಸಿರುವರು.

ಪುಂಡಾಟವನ್ನು ಎಲ್ಲ ರೀತಿಯಿಂದಲೂ ಎದುರಿಸಿ

"ಒಂದು ಪ್ರಾಂತ್ಯದಿಂದ ಮತ್ತೊಂದು ಪ್ರಾಂತ್ಯಕ್ಕೆ ಜನಗಳನ್ನು ಸಾಗಿಸುವ ಯೋಜನೆ ಅಸಾಧ್ಯವಾದದ್ದು. ನೂರು ಜಿನ್ನಾಗಳು ಈ ಒಗ್ಗಿ ಪ್ರಯತ್ನಿಸಿದರೂ, ಅದು ನಡೆಯಲು ಸಾಧ್ಯವಿಲ್ಲ"— ಎಂದು ಸರ್ದಾರ್ ಪಟೇಲರು ನಾಗಪುರದಲ್ಲಿ ಭಾಷಣಮಾಡುತ್ತಾ ತಿಳಿಸಿದ್ದಾರೆ. ಹಿಂಸೆಯಿಂದ ಪಾಕೀಸ್ತಾನವನ್ನು ಸಾಧಿಸಿಕೊಳ್ಳುತ್ತೇವೆಂದು ಜಿನ್ನಾರವರೂ ಲೀಗಿನವರೂ ತೊಡಗುವವರೆಗೆ ದೇಶದಲ್ಲಿ ಶಾಂತಿ ನೆಲೆಸುವುದಿಲ್ಲ-ಎಂದು ಅವರು ತಿಳಿಸಿ ದೇಶದಲ್ಲಿರುವವರೆಲ್ಲಾ ಪ್ರತಿಕ್ಷಣವನ್ನೂ ಕೂಡಿದು ಪುಂಡಾಟಗಳನ್ನು ಹಿಂಸೆ ಅಥವಾ ಅಹಿಂಸಾ ರೀತಿಯಿಂದ ಎದುರಿಸಬೇಕೆಂದು ಸರ್ದಾರ್ ಪಟೇಲರು ತಿಳಿಸಿದರು.

ಸಾಧ್ವಿ

ತಾ॥ ೨-೧೨-೪೬ ಸೋಮವಾರ

ಆಹಾರ ಪರಿಸ್ಥಿತಿಯಲ್ಲಿ ಸುಧಾರಣೆ

ಸಂಸ್ಥಾನದಲ್ಲಿ ರಾಗಿ ಮತ್ತು ಭತ್ತದ ಫಸಲು ಸಮರ್ಪಕವಾಗಿ ಬೆಳೆದಿದೆಯೆಂದು ಸರ್ಕಾರದವರು ಒಂದು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ. ಆದುದರಿಂದ ಆಹಾರ ಶಾಸನದ ನಿಯಮಗಳನ್ನು ಸ್ವಲ್ಪ ಮಟ್ಟಿಗೆ ಸಡಿಲಿಸುವುದಾಗಿಯೂ ಸೂಚಿಸಿರುತ್ತಾರೆ. ಇದು ಸಂತೋಷಕರವಾದ ವಿಷಯ.

ಸರ್ಕಾರದವರು ಮುಂದೆ ಮಾಡಲಿರುವ ಆಹಾರ ಶಾಸನದ ಸುಧಾರಣೆಯ ವಿವರಗಳು ಇನ್ನೂ ಗೊತ್ತಾಗಿಲ್ಲ. ಅದರ ಈ ಬಗ್ಗೆ ಕಳೆದ ಎರಡು ಮೂರು ವರ್ಷಗಳಿಂದ ಮಹಾಜನರಿಗೆ ಉಂಟಾಗಿರುವ ಕಷ್ಟ ಸುಖಗಳನ್ನು ಅವರು ಗಣನೆಗೆ ತೆಗೆದುಕೊಂಡು ಸೂಕ್ತವಾದ ಪರಿಹಾರವನ್ನು ಒದಗಿಸುವುದು ಅತ್ಯಗತ್ಯವಾಗಿದೆ.

ಈಗ ಮತ್ತೆ ಸುಗ್ಗಿಯ ಕಾಲವು ಬಂದಿರುತ್ತದೆ ಆಹಾರ ಸಂಗ್ರಹದ ಶಾಸನದ ಪ್ರಕಾರ ಜಮೀನ್ದಾರರೂ, ರೈತರೂ, ವ್ಯವಸಾಯದ ಇತರ ಕೆಲಸಗಾರರೂ, ತಮಗೆ ಕಾನೂನಿನ ಪ್ರಕಾರ ಸಲ್ಲಬೇಕಾದ ದವಸ ಧಾನ್ಯಗಳ ಪ್ರಮಾಣಗಳು ಸರಿಯಾಗಿ, ಸಕಾಲದಲ್ಲಿ ದೊರಕದೆ ಬಹಳವಾಗಿ ತೊಂದರೆ ಪಡುತ್ತಿರುವ ವಿಷಯದಲ್ಲಿ ಅನೇಕ ಪುಕಾರುಗಳು ಬಂದಿರುತ್ತವೆ. ಅವುಗಳನ್ನು ಪರಿಹರಿಸುವುದಕ್ಕಾಗಿ ಪ್ರಜೆಗಳು ಸಭೆಗಳನ್ನೂ, ಸಮ್ಮೇಳನಗಳನ್ನೂ ಮಾಡಿ, ಅಹವಾಲುಗಳನ್ನು ಸಲ್ಲಿಸಿರುತ್ತಾರೆ. ಈ ಸಾರಿ ಸುಗ್ಗಿಯ ಕಾಲದಲ್ಲಿ ಮೇಲ್ಕಂಡ ರೀತಿಯ ಅನಿವಾರ್ಯಗಳಾವುವೂ ಪ್ರಜೆಗಳಿಗೆ ಆಗದಂತೆ ಸರ್ಕಾರದವರು ಈಗಿನಿಂದಲೇ ತಕ್ಕ ತಿಳುವಳಿಕೆ ಕೊಡುವುದು ಅಗತ್ಯವಾಗಿದೆ.

ನಮ್ಮ ಸಂಸ್ಥಾನದಲ್ಲಿ ಮಾತ್ರವೇ ಅಲ್ಲದೆ ಮದರಾಸಿನಲ್ಲಿಯೂ ಸಹ ಹೆಚ್ಚಿನ ಅಕ್ಕಿಯು ಸರಬರಾಜು ಆಗುವ ನಿರೀಕ್ಷಣೆಯ ಮೇಲೆ ಜನರಿಗೆ ಕೊಡುತ್ತಿರುವ ಅಕ್ಕಿ ಪಡಿತರದ ಪ್ರಮಾಣವನ್ನು ಹೆಚ್ಚಿಸಲು ಅಲ್ಲಿನ ಸರ್ಕಾರದವರು ಪರ್ಯಾಲೋಚಿಸುತ್ತಿರುವುದಾಗಿ ವರದಿಯಾಗಿದೆ. ನಮ್ಮ ಸರ್ಕಾರದವರು ಈ ಬಗ್ಗೆ ಯಾವ ರೀತಿ ಏರ್ಪಾಡು ಮಾಡಲಿರುವರೆಂಬುದನ್ನು ತಿಳಿಯಲು ಮಹಾಜನರು ಕಾತುರರಾಗಿದ್ದಾರೆ.

ಹೊಸ ವರ್ಷದಲ್ಲಿ ಅಕ್ಕಿ ರಾಗಿಯ ಬೆಳೆಯು ಉತ್ತಮವಾಗಿರುವ ನಿರೀಕ್ಷಣೆಯನ್ನು ಸರ್ಕಾರದವರು ಸೂಚಿಸಿರುವುದರಿಂದ ಇವುಗಳ ಪಡಿತರದ ಪ್ರಮಾಣವನ್ನೂ ಸಹ ಮೊದಲಿನಂತೆಯೇ ಹೆಚ್ಚಿಸಿ ಪ್ರಜೆಗಳಿಗೆ ಸೌಲಭ್ಯವನ್ನು ಕಲ್ಪಿಸಲು ಸರ್ಕಾರದವರು ತಕ್ಕ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದು ನಾವು ಕೋರುತ್ತೇವೆ

ಕಂಕರಪ್ಪ ಸ್ಮಾರಕ ಚರ್ಚೆ

ಇದೇ 4 ನೇ ಬುಧವಾರ ಟೌನ್‌ಹಾಲಿನಲ್ಲಿ ನಡೆಯಲಿರುವ ಶಂಕರಪ್ಪ ಸ್ಮಾರಕ ಚರ್ಚಾಸ್ಪರ್ಧೆಯಲ್ಲಿ 6 ಕಾಲೇಜ್, 6 ಹೈಸ್ಕೂಲ್, 14 ಹಾಸ್ಟೆಲ್ ಮತ್ತು 5 ಮಹಿಳಾ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸುವರು ಎಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ವಾರ ಭವಿಷ್ಯ

(ಶ್ರೀ ನಿತ್ಯಾನಂದಸ್ವಾಮಿಗಳವರಿಂದ)

ತಾ॥ ೨-೧೨-೪೬ರಿಂದ ೮-೧೨-೪೬ರವರೆಗೆ

ಮೇಷ—ಆರೋಗ್ಯ ಉತ್ತಮ, ಆದಾಯ ವ್ಯಯಗಳು ಸಮ, ಉದ್ಯೋಗ ವ್ಯವಹಾರಗಳಿಂದ ಬೇಸರಿಕೆ. ಮಿತ್ರಸಹಾಯ ತಾ॥ ೨-೪ ಧನಲಾಭ. ಸಂತೋಷ.

ವೃಷಭ—ಆರೋಗ್ಯ ಸಾಧಾರಣ. ಉದ್ಯೋಗ ವ್ಯವಹಾರಗಳಲ್ಲಿ ಕಿರುಕುಳ ಮಾನಸಿಕ ಚಿಂತೆ ಹೆಚ್ಚು, ಧನಾದಾಯ ಕಮ್ಮಿ, ಅಧಿಕಾರಿಗಳಿಂದ ತಿರಸ್ಕಾರ ತಾ॥ ೫-೬ ಸಾಧಾರಣ.

ಮಿಥುನ—ಆರೋಗ್ಯ ಚೆನ್ನಾಗಿರುತ್ತದೆ. ಧನಾದಾಯ ಉತ್ತಮ. ಉದ್ಯೋಗ ವ್ಯವಹಾರಗಳಲ್ಲಿ ಜಯ. ಅಧಿಕಾರಿಗಳಿಂದ ಸನ್ಮಾನ. ಮಿತ್ರರಿಂದ ಸಹಾಯ. ಪ್ರವಾಸದಿಂದ ಮಿತ್ರಭೇಟಿ. ತಾ॥ ೭-೮ ಸಾಧಾರಣ ಖರ್ಚು ಹೆಚ್ಚು

ಕಟಕ—ಆರೋಗ್ಯ ಉತ್ತಮ. ಸಾಂಪತ್ತಿಕ ಸ್ಥಿತಿ ಕೆಡುತ್ತದೆ. ವ್ಯಾಪಾರ ಉದ್ಯೋಗಗಳಲ್ಲಿ ಜಯ ಮಾನಸಿಕ ಚಿಂತೆ ಇದ್ದೇ ಇರುತ್ತದೆ ತಾ॥ ೩-೪ ಖರ್ಚು. ವ್ಯಸನ.

ಸಿಂಹ—ಆರೋಗ್ಯ ಚೆನ್ನಾಗಿರುತ್ತದೆ. ಧನಾದಾಯ ಉತ್ತಮವಿರುತ್ತದೆ. ಖರ್ಚು ಹೆಚ್ಚು. ಉದ್ಯೋಗ ವ್ಯವಹಾರಗಳಿಂದ ಯಶ. ಅಧಿಕಾರಿಗಳಿಂದ ಗೌರವ ದೊರೆಯುತ್ತದೆ. ತಾ॥ ೫-೬ ಧನಲಾಭ, ಮಿತ್ರಾಗಮನ.

ಕನ್ಯಾ—ಆರೋಗ್ಯ ಸಾಧಾರಣ ಧನಾದಾಯ ಕಡಿಮೆ ಮಿತ್ರರಿಂದ ತಿರಸ್ಕಾರ. ಅಧಿಕಾರಿಗಳಿಂದ ತೊಂದರೆ ಶತ್ರುಗಳಿಂದ ವಿಶೇಷ ಕಿರುಕುಳ. ತಾ॥ ೭-೮ ಸಾಧಾರಣ ಶಾಂತಿ, ಸಂತೋಷ.

ತುಲಾ—ಆರೋಗ್ಯ ಉತ್ತಮ, ಧನಾದಾಯ ಸಾಧಾರಣವಿರುತ್ತದೆ, ಪ್ರವಾಸದಿಂದ ಯಶ. ಉದ್ಯೋಗ ವ್ಯವಹಾರಗಳಿಂದ ಲಾಭ. ತಾ॥ ೪-೫ ಖರ್ಚು, ಕಿರುಕುಳ.

ವೃಶ್ಚಿಕ—ಆರೋಗ್ಯ ಕೆಡುತ್ತದೆ ಮಾನಸಿಕ ಚಿಂತೆ ಹೆಚ್ಚು. ಕೆಲಸ ಕಾರ್ಯಗಳಲ್ಲಿ ಅಡಚಣೆ ಪ್ರವಾಸದಿಂದ ಅನಿರೀಕ್ಷಿತ ತೊಂದರೆಗಳೊದಗುವುವು. ಪ್ರಗತಿಗೆ ಧಕ್ಕೆ ತಗುಲುವುದು ಸಹನ ಶಕ್ತಿ ಕಡಿಮೆಯಾಗುವುದು. ಉದ್ಯೋಗ ವ್ಯವಹಾರಗಳಿಂದ ನಷ್ಟ. ತಾ॥ ೪-೬-೭ ಸಾಧಾರಣ.

ಧನುಸ್ಸು—ಆರೋಗ್ಯ ಕೆಡುತ್ತದೆ. ಯುಕ್ತಿಸಿದ ಕೆಲಸ ಕಾರ್ಯಗಳು ಮುಂದೆಹೋಗುವುವು ಧನಾದಾಯ ಕಡಿಮೆಯಾಗುವುದು ಮಿತ್ರರೊಡನೆ ಮನಸ್ತಾಪವುಂಟಾಗುವುದು. ಮಾನಸಿಕ ಚಿಂತೆ ಹೆಚ್ಚುವುದು. ವ್ಯವಹಾರದಿಂದ ವಿಶೇಷ ತೊಂದರೆಯುಂಟಾಗುವುದು ತಾ॥ ೪-೫ ವಿಶೇಷ ಖರ್ಚು, ವ್ಯಸನ

ಮಕರ—ಆರೋಗ್ಯ ಉತ್ತಮವಾಗಿರುತ್ತದೆ, ಉದ್ಯೋಗ ವ್ಯವಹಾರಗಳಿಂದ ಲಾಭ, ಮಿತ್ರರಿಂದ ಸಹಾಯ, ಅಧಿಕಾರಿಗಳಿಂದ ಸನ್ಮಾನ, ಪ್ರವಾಸ. ತಾ॥ ೩-೬ ಮಿತ್ರರಿಂದ ಸಹಾಯ, ಧನಲಾಭ

ಕುಂಭ—ಆರೋಗ್ಯ ಚೆನ್ನಾಗಿರುತ್ತದೆ, ಉದ್ಯೋಗ ವ್ಯವಹಾರಗಳಲ್ಲಿ ಪ್ರಗತಿ, ಸಾಂಪತ್ತಿಕ ಸ್ಥಿತಿ ಉತ್ತಮ, ಪ್ರವಾಸದಿಂದ ಧನಲಾಭ, ಮಿತ್ರರಿಂದ ವಿಶೇಷ ಸಹಾಯ, ಧಾರ್ಮಿಕ ಕಾರ್ಯಗಳಿಂದ ಸನ್ಮಾನ. ತಾ॥ ೩-೪ ಶ್ರಮ, ಖರ್ಚು, ಸಂತೋಷ.

ಮೀನ—ಆರೋಗ್ಯ ಚೆನ್ನಾಗಿರುತ್ತದೆ, ಉತ್ಸಾಹದಿಂದ ಕೆಲಸ ಕಾರ್ಯಗಳು ನಡೆಯುವುವು, ಮಾನಸಿಕ ಚಿಂತೆ ತಪ್ಪುವುದು, ಉದ್ಯೋಗ ವ್ಯವಹಾರಗಳಿಂದ ಧನಲಾಭ, ಸನ್ಮಾನಗಳುಂಟಾಗುವುವು, ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣೆಗಳಿಂದ ಮನ್ನಣೆ ದೊರೆಯುವುದು. ತಾ॥ ೮-೬ ಸಾಧಾರಣ, ವಿಶೇಷ ಧನವ್ಯಯ.

ನ್ಯಾಯಾಧೀಶನಾಗುವ ಹುಚ್ಚು

ಮೊನ್ನೆ ದಿನ ೩೦ ವರ್ಷದ ಒಬ್ಬ ಮುಸ್ಲಿಂ ಯುವಕನು ಪಾಟ್ನಾ ಹೈಕೋರ್ಟಿನಲ್ಲಿ ನ್ಯಾಯಾಧಿಪತಿಗಳು ಬರುವುದಕ್ಕೆ ಮುನ್ನ ನ್ಯಾಯಪೀಠದಲ್ಲಿ ಹೋಗಿ ಕುಳಿತುಬಿಟ್ಟನು. ಪೋಲೀಸರು ಅವನನ್ನು ಬಂಧಿಸಿದರು

ಕ್ವಾಯದೆ ಆಜಮ್ ಜಿನ್ನಾರವರು ನನ್ನನ್ನು ಬಿಹಾರದ ಮುಖ್ಯ ನ್ಯಾಯಾಧೀಶನನ್ನಾಗಿ ನೇಮಿಸಿರುವುದರಿಂದ ನಾನು ಆ ಸ್ಥಳದಲ್ಲಿ ಹೋಗಿ ಕೂಡಲೇ ಬೇಕು—ಎಂದು ಹೇಳಿದನು. ಅವನಿಗೆ ಹುಚ್ಚು ಹಿಡಿದಿರುವುದೆಂದು ತಿಳಿದು ಬಂದಿರುವುದರಿಂದ ಅವನನ್ನು ಲಾಕಪ್ಪಿನಲ್ಲಿಡಲಾಗಿದೆ

ವಿವಿಧ ವಿನೋದಾವಳಿ

ಮೈಸೂರು ೧

ಇಂಟರ್‌ಮೀಡಿಯೆಟ್ ಕಾಲೇಜಿನ ಕರ್ಣಾಟಕ ಸಂಘದಾಶ್ರಯದಲ್ಲಿ ತಾ॥ ೫-೧೨-೪೬ ನೇ ಗುರುವಾರ ಸಂಜೆ ೬ ಘಂಟೆ ರಂಗಾಚಾರ್ಲು ಸ್ಮಾರಕ ಭವನದಲ್ಲಿ ಸಂಘದ ಮೂಲ ಧನಕೋಸ್ಕರ ವಿವಿಧ ವಿನೋದಾವಳಿಯನ್ನು ಏರ್ಪಡಿಸಿದೆ. ನಂಜನಗೂಡು ಮುನ್ಸೀಫರಾದ ಶ್ರೀ ಟಿ ಗುರುನಂಜಯ್ಯನವರು ಅಧ್ಯಕ್ಷತೆ ವಹಿಸುವರು. ಸರ್ವರೂ ದಯಮಾಡಿಸಿ ಸಹಾಯ ಮಾಡಬೇಕೆಂದು ಕೋರಲಾಗಿದೆ.

ರಾಜಕಮಲ್

ಮೈಸೂರು

29-11-46 ರಿಂದ

ಮೂರನೆಯ ವಾರ

ಡಾಕ್ಟರ್ ಕೊಟ್ನೀಸ್ ಕಿ

ಅಮರ್-ಕಹಾನಿ

-: ಭೂಮಿಕೆ :-

ಜಯಶ್ರೀ, ಶಾಂತಾರಾಂ, ಉಲ್ಹಾಸ್

॥ ಜೈ ಹಿಂದ್ ॥

ವಿದ್ಯಾರ್ಥಿಗಳಿಗೆ! ಸುಸಮಯ ॥

ಆನಂದ್ ಟೈಲರಿಂಗ್ ಮಾರ್ಟ್

ಜನಗಳು ಮೆಚ್ಚುವಹಾಗೆ ಉಡುಪುಗಳನ್ನು ಸಾಧಾರಣ ದರದಲ್ಲಿ ನಾಜೂಕಾಗಿ ಕಾಲಕ್ಕೆ ಸರಿಯಾಗಿ ಹೊಲಿಯುತ್ತೇವೆ. ಒಂದು ಸಲ ಬಂದು ಪರೀಕ್ಷಿಸಿರಿ.

ವಿದ್ಯಾರ್ಥಿಗಳಿಗೆ ಮಾತ್ರ ರಿಯಾಯಿತಿ ದರ

ಪ್ರೊ:- ಸಿ. ಎಸ್. ಆನಂದರ್,

ಬೆಂಗಳೂರು ಟೈಲರ್.

573 ಇರ್ವಿನ್‌ರೋಡ್, ಮೈಸೂರು.

Edited, printed and published by A. R. Nagarajan at the Sadhvi Press D. Subbiah Road, Mysore

ಮುಸ್ಲಿಮರೆಲ್ಲಾ ಹಿಂದೂಗಳಾಗ್ಬೇ

ಎಲ್ಲಾ ಹಿಂದೂಗಳೂ ಮುಸ್ಲಿಮರಾಗಬೇಕೆಂದು ಕೇಂದ್ರ ಸರ್ಕಾರದ ಪು... ಸಚಿವರಾದ ಮಿ॥ ಗಝನಫರ್ ಅಲಿ... ರು ಹೇಳಿರುವುದನ್ನು ಡಾ॥ ಖರೆಯವ... ತೀವ್ರವಾಗಿ ವಿರೋಧಿಸಿರುವರು. ಗ... ನಫರರಿಗೆ ಇದುವರೆವಿಗೆ ರಾಜಾ ಎಂಬ... ರುದಿದ್ದಿತು; ಅದು ರಜಪೂತ ವಂಶದ... ನ್ದು; ಆದ್ದರಿಂದ ಅವರು ತಮ್ಮ ಅನು... ಯಾಯಿಗಳೊಡನೆ ಹಿಂದೂ ಧರ್ಮವನ್ನು ಸ್ವೀಕರಿಸಿದರೆ ಆಗ್ಗೆ ಪಾಕಿಸ್ತಾನದ ಪ್ರ... ಯನ್ನು ಅವರೇ ಬಗೆಹರಿಸಿದಂತಾಗುತ್ತದೆ. ಎಂದು ಹೇಳಿದ್ದಾರೆ.

ನೌಖಾಲಿ ಗಲಭೆ ನಿಂತಿಲ್ಲ

ಮಹಾತ್ಮ ಗಾಂಧಿಯವರ ಜೊತೆಯಲ್ಲಿ ನೌಖಾಲಿ ಜಿಲ್ಲೆಯ ಗಲಭೆಗಳ ಪ್ರದೇಶದಲ್ಲಿ ಸಂಚರಿಸುತ್ತಿರುವ ಶ್ರೀ ಜೋಗೇಂದ್ರನಾಥಮಜುಮದಾರ್‌ರವರು ಪಂಚಶಾಪಾರಿಯಾ ಎಂಬಲ್ಲಿ ಇನ್ನೂ ಗಲಭೆ ನಿಂತಿಲ್ಲವೆಂದೂ ಪುಂಡರು ಮನೆ ಸುಡುವುದು ಮುಂತಾದ ದುಷ್ಕೃತ್ಯಗಳನ್ನು ನಿಲ್ಲಿಸಿಲ್ಲವೆಂದೂ ಅವರ ದಸ್ತಗಿರಿ ಸಹ ಆಗಿಲ್ಲವೆಂದೂ ಇದರಿಂದ ಗ್ರಾಮಸ್ಥರು ಊರನ್ನು ಬಿಡುತ್ತಿರುವರೆಂದೂ ತಿಳಿಸಿರುವರು.

EASTERNS 579

ಫೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು



ಸಂಪುಟ ೫] ಮಂಗಳವಾರ ೩—೧೨—೪೬ [ಸಂಚಿಕೆ ೧೦೨

ಭಾರತದ ನಾಯಕರು ಮಾಲ್ಟಾದಲ್ಲಿ ತಂಗಿದರು

ಐನ್ನಾರು ತಿಂಗಳಲ್ಲಿ ನೂತನ ರಾಜ್ಯಾಂಗ

" ಇನ್ನು ಆರು ತಿಂಗಳುಗಳೊಳಗೆ ಹೊಸ ರಾಜ್ಯಾಂಗವನ್ನು ಜಾರಿಗೆ ತರುವಂತೆ ಮಾಡುತ್ತೇವೆ "-ಎಂಬುದಾಗಿ ಸರ್ದಾರ್ ಪಟೇಲರು ಬೊಂಬಾಯಿಯಲ್ಲಿ ಮೊನ್ನೆ ಘೋಷಿಸಿದರು. ಈ ಸಭೆಯಲ್ಲಿ ೩ ಲಕ್ಷ ಮಂದಿ ಸೇರಿದ್ದರು. ಕೇಂದ್ರ ಸರ್ಕಾರದ ಸಚಿವರಾದ ಮೇಲೆ ಬೊಂಬಾಯಿಗೆ ಇದೇ ಮೊದಲನೆಯ ಸಲ ಆಗಮಿಸಿರುವ ಪಟೇಲರಿಗೆ ಅಪೂರ್ವ ಸ್ವಾಗತ ದೊರೆಯಿತು. ಅನೇಕ ಸಂಸ್ಥೆಗಳಿಗೆ ಸೇರಿದ ೧೫೦೦ ಮಂದಿ ಒಟ್ಟಾರೆಯಾಗಿ ಪಟೇಲರಿಗೆ ಹಾರಗಳನ್ನರ್ಪಿಸಿದರು. ಆಕಾಶ ಕಳಚಿಬಿದ್ದರೂ, ಭೂಮಿ ಬಾಯಿ ಬಿಟ್ಟರೂ ರಾಜ್ಯಾಂಗ ಸಭೆ ಡಿಸೆಂಬರ್ ೯ನೇ ತಾ|| ಸೇರಿಯೇ ಸೇರುವುದೆಂದು ಪಟೇಲರು ಹೇಳಿದರು. ಗಾಂಧಿಜಿ ಹಿಂದೂ, ಅವರ ಒಬ್ಬ ಮಗ ಮುಸ್ಲಿಂ, ಹೀಗಿರುವಾಗ ಹಿಂದೂಗಳನ್ನು ಮುಸ್ಲಿಮರನ್ನು ವರ್ಗಾಯಿಸಬೇಕೆಂಬ ಮಿ|| ಜಿನ್ನಾರವರ ವಾದ ಎಷ್ಟು ಘಾತಕವಾದುದೆಂಬುದನ್ನು ವಿವರಿಸಿ, ಬಿಟ್ಟವರನ್ನು ಒತ್ತಾಯಪಡಿಸುವುದು ಹಿಟ್ಲರ ಪಂಥದವನಿಗೇ ಸರಿ ಎಂದು ತಿಳಿಸಿದರು. ತನ್ನ ಕೈಗೆ ಬಂದಿರುವ ಅಧಿಕಾರವನ್ನು ಬಿಟ್ಟುಕೊಡುವುದಿಲ್ಲವೆಂದು ಕಾಂಗ್ರೆಸ್ಸು ನಿರ್ಧರಿಸಿರುವುದಾಗಿ ಅವರು ಕೊನೆಯಲ್ಲಿ ಹೇಳಿದರು

ಗಾಂಧೀಜಿಯವರ ಬಂಗಾಳ ಪ್ರವಾಸ

ಹಿಂದೂ-ಮುಸ್ಲಿಮರ ಹೃದಯಗಳು ಒಟ್ಟಿಗೆ ಬೆಲೆತು ಶಾಂತಿನೆಲೆಸುವ ತನಕ ತಾವು ಬಂಗಾಳವನ್ನು ಬಿಡಲು ಇಷ್ಟಪಟ್ಟಿಲ್ಲವೆಂದು ಗಾಂಧಿಯವರು ತಿಳಿಸಿದ್ದಾರೆ. ಅವಶ್ಯವಿದ್ದರೆ ಈ ಉದ್ದೇಶ ಸಾಧನೆಗಾಗಿ ತಮ್ಮ ಜೀವಮಾನವನ್ನೆಲ್ಲಾ ಬಂಗಾಳದಲ್ಲಿ ಕಳೆಯುವುದಾಗಿಯೂ ಅವರು ಹೇಳಿದ್ದಾರೆ

ವಿದ್ಯಾರ್ಥಿ ಸಮ್ಮೇಳನ ಮುಂದುವರಿಯಿತು

ಶಿವಮೊಗ್ಗೆಯಲ್ಲಿ ಇದೇ ೭ ಮತ್ತು ೮ನೇ ತಾ|| ನಡೆಯಬೇಕಾಗಿದ್ದ ಅಖಿಲ ಕರ್ನಾಟಕ ವಿದ್ಯಾರ್ಥಿ ಸಮ್ಮೇಳನವನ್ನು ಹಲವು ಅನಿವಾರ್ಯಗಳ ಸಲುವಾಗಿ ಸದ್ಯಕ್ಕೆ ಮುಂದುವರಿಸಿರುವುದಾಗಿ ಪ್ರಕಟಿಸಲಾಗಿದೆ.

ಭಾರತದ ವಿಭಜನೆಗೆ ಸಿಕ್ಕರ ಪ್ರತಿಭಟನೆ

" ಭಾರತದ ವಿಭಜನೆಗೆ ನಾನು ಅತ್ಯುಗ್ರವಾಗಿ ಪ್ರತಿಭಟಿಸುತ್ತೇನೆ. ಸಿಕ್ಕರೆಂದಿಗೂ ವಿಭಜನೆಗೆ ಒಪ್ಪುವುದಿಲ್ಲ-"ಎಂದು ಸ|| ಬಲದೇವಸಿಂಗರು ಲಂಡನ್ನಿಗೆ ಗೆರಳುವ ಮುನ್ನ ತಿಳಿಸಿದ್ದಾರೆ.

ಆಟ್ಲಿ ನಿವಾಸದಲ್ಲೇ ಸಂಧಾನಾರಂಭ

ಭಾರತದ ನಾಯಕರುಗಳೂ, ವೈಸರಾಯರೂ, ಈ ದಿನ ಲಂಡನ್ ನಗರವನ್ನು ತಲುಪುವರು. ಇವರು ನಿನ್ನೆಯೇ ಲಂಡನ್ ಸೇರಬೇಕಾಗಿದ್ದಿತು. ಆದರೆ ವಿಮಾನ ಯಂತ್ರದ ತೊಂದರೆಯ ಸಲುವಾಗಿ ಪ್ರವಾಸ ತಡವಾಯಿತೆಂದು ಹೇಳಲಾಗಿದೆ. ಭಾರತದ ನಾಯಕರು ಬ್ರಿ|| ನಿಯೋಗದವರೊಡನೆ ನಡೆಸುವ ಮಾತುಕತೆಗಳು ಬ್ರಿ|| ಪ್ರಧಾನಿಗಳ ನಿವಾಸದಲ್ಲಿಯೇ ಜರುಗುವುದಾಗಿ ನಿರ್ಧರಿಸಲಾಗಿದೆ. ಮಿ|| ಅಟ್ಲಿಯವರು ಮೊದಲು ಪಂ|| ನೆಹರೂರವರ ಸಂಗಡ ಸಂಭಾಷಣೆ ನಡೆಸಿ ಅನಂತರ ಲೀಗ್ ನಾಯಕರಿಗೆ ಭೇಟಿಕೊಡುವುದಾಗಿ ಗೊತ್ತಾಗಿದೆ

ರೆಸಿಡೆಂಟರ ಆಗಮನ

ಮೈಸೂರು ೩.

ಸಂಸ್ಥಾನದ ಹೊಸ ರೆಸಿಡೆಂಟರಾದ ಸರ್ ವಾಲ್ಟರ್ ಕ್ಯಾಂಪ್‌ಬೆಲ್‌ರವರು ಈ ದಿನ ಮಧ್ಯಾಹ್ನ ರಾಜಧಾನಿಗೆ ಆಗಮಿಸಿದರು. ಇವರ ಗೌರವಾರ್ಥವಾಗಿ ಅರಮನೆ ಭತ್ತೇರಿಯಿಂದ ೧೩ ತೋಪುಗಳು ಹಾರಿಸಲ್ಪಟ್ಟವು.

ಹೆಚ್ಚಿನ ರಿಮ್ಯಾಂಡ್

ಕೇರ್ ಕೇಂದ್ರ ಕಛೇರಿಯ ಅಕ್ಕಿ ಮೂಟೆಗಳ ಕಳುವಿನ ಸಂಬಂಧವಾಗಿ ಹೂಡಿದ್ದ ಮೊಕದ್ದಮೆ ವಿಚಾರಣೆ ನೆನ್ನೆ ಸಿಟಿ ಮ್ಯಾಜಿಸ್ಟ್ರೇಟರ ಮುಂದೆ ಬರಬೇಕಾಗಿತ್ತು. ಪೋಲೀಸರು ನಡೆಸುತ್ತಿದ್ದ ತನಿಖೆ ಕಾರ್ಯಕ್ರಮ ಇನ್ನೂ ಪೂರ್ತಿಯಾಗದಿರುವ ಪ್ರಯುಕ್ತ ಇನ್ನೂ ಮೂರು ದಿನದ ರಿಮ್ಯಾಂಡನ್ನು ಪೋಲೀಸರು ಪಡೆದಿರುವರೆಂದು ಗೊತ್ತಾಗಿದೆ

ಶಂಕರಪ್ಪ ಸ್ಮಾರಕ ಚರ್ಚೆ

ನಾಳೆ ಸಂಜೆ ೫ ಗಂಟೆಗೆ ಟೌನಹಾಲಿನಲ್ಲಿ ನಡೆಯಲಿರುವ ಮೇಲ್ಕಂಡ ಸ್ಪರ್ಧೆಗೆ ಶ್ರೀ ಎ ಆರ್ ಕೃಷ್ಣಶಾಸ್ತ್ರಿಗಳಿಂದ ಸೂಚಿತವಾಗಿರುವ " ಈಗಿನ ಕಾಲಕ್ಕೆ ದೇಶವೇ ದೇವರು " ಎಂಬ ವಿಷಯವನ್ನು ಇಡಲಾಗಿದೆ

ವೈಶ್ಯ ಯುವಜನ ಸಂಘ

ಮೇಲ್ಕಂಡ ಸಂಘದ ವಾರ್ಷಿಕ ಸಭೆಯು ಮೊನ್ನೆ ದಿನ ಶ್ರೀ ಘಟ್ಟುಗೋಪಾಲಕೃಷ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ಪಂಡಿತ ಮಾಳವೀಯರು, ಕೈಲಾಸಂ ಮತ್ತು ಘಟ್ಟುವೆಂಕಟರಮಣ ಶೆಟ್ಟರ ನಿಧನದ ಬಗ್ಗೆ ಸಂತಾಪ ಸೂಚಿಸಿದಮೇಲೆ ವಾರ್ಷಿಕವರದಿಯನ್ನು ಪರಿಶೀಲಿಸಲಾಯಿತು. ಈ ವರ್ಷದ ಕಾರ್ಯಕಾರಿ ಸಮಿತಿಗೆ ೧೦ ಜನ ಸದಸ್ಯರು ಚುನಾಯಿಸಲ್ಪಟ್ಟರು.

ಮೌಂಟ್ ಎವರೆಸ್ಟ್ ತಲುಪಲು ಹೊಸಸಾಹಸ

ಹಿಮಾಲಯ ಪರ್ವತಗಳ ಸೃಷ್ಟಿ ಅತ್ಯಂತ ಎತ್ತರವಲ್ಲಿರುವ ಮೌಂಟ್ ಎವರೆಸ್ಟನ್ನು ಕಾಲುನಡಿಗೆಯಿಂದ ತಲುಪುವ ಹೊಸ ಸಾಹಸವನ್ನು ಎ ಎಫ್ ಬ್ಯಾಂಡಿಟ್ ಎಂಬುವರ ನೇತೃತ್ವದಲ್ಲಿ ಕೆಲವು ಜನರು ಕೈಕೊಂಡಿರುವರು. ಇವರ ಪ್ರಯತ್ನಕ್ಕೆ ಎರಡು ವರ್ಷಗಳ ಕಾಲದ ಅವಧಿಯನ್ನು ಕೊಡಲಾಗಿದೆ. ಇವರು ತಮ್ಮ ಪ್ರವಾಸದಲ್ಲಿ ಹೊಸದಾದ ಯಂತ್ರಗಳನ್ನು ಉಪಯೋಗಿಸುವರೆಂದು ಗೊತ್ತಾಗಿದೆ

ಪಾಕೀಸ್ತಾನಕ್ಕೆ ಒಪ್ಪಿದ್ದರೆ ಭೀಕರ ಪರಿಣಾಮ

ಮುಸ್ಲಿಮರ ಪಾಕೀಸ್ತಾನ ಕೋರಿಕೆಯು ಅಂಗೀಕೃತವಾಗದೆ ಹೋದರೆ ಭಾರತದಲ್ಲಿ ಪರಿಸ್ಥಿತಿಯು ಅಪಾಯಕರವೂ ಮತ್ತು ಭೀಕರವೂ ಆಗುತ್ತದೆ—ಎಂದು ಕೇಂದ್ರ ಸರ್ಕಾರದ ಲೀಗಿನ ಮಂತ್ರಿಗಳಾದ ಮಿ|| ಗಝನಫರ್ ಅಲಿಯವರು ಕರಾಚಿಯಲ್ಲಿ ಸೂಚಿಸಿದ್ದಾರೆ.

ದ|| ಆಫ್ರಿಕಾ ಸತ್ಯಾಗ್ರಹ

ವಿಶ್ವ ಸಂಸ್ಥೆ ಯುನೈಟೆಡ್ ಮತ್ತು ನ್ಯಾಯಾಂಗ ಸಮಿತಿಗಳ ತೀರ್ಮಾನವನ್ನು ದಕ್ಷಿಣ ಆಫ್ರಿಕದ ಸತ್ಯಾಗ್ರಹ ಸಮಿತಿಯವರು ಪರಿಶೀಲಿಸಲಿದ್ದಾರೆ. ಹೊಸ ನಿರ್ಧಾರವಾಗುವವರೆಗೆ ಸತ್ಯಾಗ್ರಹ ಚಳುವಳಿಯನ್ನು ನಿಲ್ಲಿಸುವುದಿಲ್ಲ, ಎಂಬುದಾಗಿ ಸಮಿತಿ ಮುಖಂಡರಾದ ಡಾ|| ದಾದೂರವರು ಹೇಳಿಕೆ ಇತ್ತಿದ್ದಾರೆ.

ನೆಹರು-ನವಾಸ್ ಪಾಷಾ ಭೇಟಿ

ಭಾರತದ ನಾಯಕರು ಕೈರೋವಿನಲ್ಲಿ ತಂಗಿದ್ದಾಗ ಈಜಿಪ್ಟಿನ ವಾಫ್ಡ್ ಪಕ್ಷದ ನಾಯಕರಾದ ನಹಾಸ್ ಪಾಷಾರವರನ್ನು ಪಂ|| ನೆಹರೂರವರು ಭೇಟಿ ಮಾಡಿದ್ದರು. ನೆಹರೂರವರು ತಮ್ಮ ಹಳೇ ಮಿತ್ರರೂ, ವಾಫ್ಡ್ ಪಕ್ಷದ ತೀವ್ರಗಾಮಿಗಳೂ ಆದ ಮಕ್ರಮ್ ಪಾಷಾರವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು.

ಸ್ವಾತಂತ್ರ್ಯ ಸಂಗ್ರಾಮ

ಮೈಸೂರಿನ ರಾಜಕೀಯ ಚರಿತ್ರೆಯನ್ನು ಬರೆಯಬಲ್ಲ ಯೋಧಾಪಿಗಳಲ್ಲೊಬ್ಬರಾದ ಶ್ರೀ ತಿರುಮಲೇ ತಾತಾಚಾರ್ಯ ಶರ್ಮರು ಮೈಸೂರು ಸ್ವಾತಂತ್ರ್ಯ ಸಂಗ್ರಾಮದ ಸೂಕ್ಷ್ಮ ಚರಿತ್ರೆಯನ್ನು ಬರೆಯುವುದು ಪ್ರತಿಯೊಬ್ಬರ ಗಮನವನ್ನು ಸೆಳೆಯತಕ್ಕದ್ದಾಗಿದೆ. ಶಿವಪುರದಲ್ಲಿ ಆರಂಭವಾದ ಮೈಸೂರು ರಾಜಕೀಯ ಹೋರಾಟದ ಮೊದಲ ಹಂತದಿಂದ ಹಿಡಿದು ಇತ್ತೀಚೆಗೆ ಜವಾಬ್ದಾರಿ ಸರ್ಕಾರಕ್ಕೆ ಹೋರಾಟ ನಡೆಸಬೇಕಾಗಿದೆಯೆಂದು ತೀರ್ಮಾನಿಸಿರುವ ಸುಭಾಷ್ ನಗರದ ನಿರ್ಧಾರದ ವರೆಗೆ ನಡೆದಿರುವ ಹಲವಾರು ಘಟನೆಗಳನ್ನು ಎತ್ತಿ ಹಿಡಿದ. ಮುಂದೆ ನಡೆಯ ... ಎತ್ತ ಸಾಗಬೇಕಾಗಿದೆಯೆಂಬುದನ್ನು ಗಣನೆಮಾಡಿ ಶ್ರೀ ಶರ್ಮರವರು " ಸ್ವಾತಂತ್ರ್ಯ ಸಂಗ್ರಾಮ ಅಥವಾ ಶಿವಪುರದಿಂದ ಸುಭಾಷ್ ನ

ಮಾಲ್ಟಾದಲ್ಲಿ ಭಾರತದ ನಾಯಕರು

ಲಂಡನ್ನಿಗೆ ತೆರಳಿರುವ ಭಾರತದ ನಾಯಕರೂ, ವೈಸರಾಯರೂ ಕೈರೋವಿನಿಂದ ಹೊರಟಮೇಲೆ ವಿಮಾನದ ಯಂತ್ರವು ತೊಂದರೆಪಡಿಸಿದ್ದರಿಂದ ಮಾಲ್ಟಾ ದ್ವೀಪದಲ್ಲಿ ವಿಮಾನವು ಇಳಿಸಲ್ಪಟ್ಟಿತು. ಪಂ|| ನೆಹರು, ಸ|| ಬಲದೇವಸಿಂಗ್ ಮತ್ತು ಮಿ|| ಲಿಯಾಖತ್ ಅಲಿಖಾನರು ಮಾಲ್ಟಾದ ಗವರ್ನರ್ ಡಗ್ಲಾಸ್‌ರವರನ್ನು ಭೇಟಿಮಾಡಿ ಮಾತುಕತೆ ನಡೆಸಿದರು. ಈ ದಿನ ಮಧ್ಯಾಹ್ನ ನಾಯಕರುಗಳೆಲ್ಲಾ ಲಂಡನ್ ನಗರವನ್ನು ಸೇರುವರು.

೩೬೦೦ ಮಂದಿ ಸೈನ್ಯವನ್ನು ತ್ಯಜಿಸಿದ್ದಾರೆ

ಇಂಡೊನೇಷಿಯಾದವರ ಮೇಲೆ ಯುದ್ಧ ಮಾಡಲು ಇಚ್ಛೆ ಇಲ್ಲದೆ ಇರುವವರಿಗೆ ಇಂಡೊನೇಷಿಯಾದಲ್ಲಿದ್ದ ಭಾರತೀಯ ಸೈನಿಕರಲ್ಲಿ ೩೬೦೦ ಮಂದಿ ಸೈನ್ಯವನ್ನು ತ್ಯಜಿಸಿ ಇಂಡೊನೇಷಿಯನ್ ರಿಪಬ್ಲಿಕ್ ಮತ್ತು ಗೆರಿಲ್ಲಾ ಸೈನ್ಯಕ್ಕೆ ಸೇರಿದ್ದಾರೆಂದು ಗೊತ್ತಾಗಿದೆ

ಢಕ್ಕಾದಲ್ಲಿ ಗಲಭೆ

ಮೊನ್ನೆ ದಿನ ಢಕ್ಕಾದಲ್ಲಿ ಮತ್ತೆ ಗಲಭೆ ತಲೆದೋರಿದ ವರದಿ ಬಂದಿದೆ. ಕೆಲವು ಅಂಗಡಿಗಳನ್ನು ಸುಟ್ಟು ನಾಶ ಪಡಿಸಲಾಗಿದೆ ಅನೇಕರಿಗೆ ಗಾಯಗಳಾಗಿವೆ. ಢಕ್ಕಾ-ನಾರಾಯಣಗಂಜ್ ಪ್ಯಾಸೆಂಜರ್ ರೈಲನ್ನು ಗುಂಪೊಂದು ನಿಲ್ಲಿಸಿ ಒಳಗಿದ್ದ ಪ್ರಯಾಣಿಕರ ಮೇಲೆ ಧಾಳಿ ನಡೆಸಿದೆ. ಪರಿಸ್ಥಿತಿ ಇನ್ನೂ ಹತೋಟಿಗೆ ಬಂದಿಲ್ಲವೆಂದು ಹೇಳಲಾಗಿದೆ.

ಅಲಹಾಬಾದಿನಲ್ಲಿ ಭಾರಿ ಕದನ

ಮೊನ್ನೆ ಸಂಜೆ ಅಲಹಾಬಾದಿನ ಬಹದ್ದೂರ್ ಗಂಜಿನಲ್ಲಿ ಗಲಭೆಯು ಆರಂಭವಾಗಿ ಇತರ ಕಡೆಗೂ ಹಬ್ಬಿ ನಗರದಲ್ಲಿ ಕರ್ಫ್ಯೂ ಆಜ್ಞೆ ಜಾರಿಗೆ ಬಂದಿದೆ. ಪೋಲೀಸರು ಅನೇಕ ಕಡೆ ಗುಂಡು ಹಾರಿಸಿದರು. ಮೊಹರಂ ಮೆರವಣಿಗೆ ನಿನ್ನೆ ನಡೆಯಲಿಲ್ಲ. ಅಲ್ಲಲ್ಲೇ ಹಲವು ಇರಿತಗಳಾದವು. ಮುಠಿಗಂಜ್ ಪ್ರದೇಶದಲ್ಲಿ ಸ್ವಲ್ಪ ಕಾಲ ಒಂದು ಕದನವೇ ನಡೆಯಿತು. ಪೋಲೀಸರು ಗುಂಡು ಹಾರಿಸಿ ಗುಂಪನ್ನು ಚದುರಿಸಿದರೆಂದು ಹೇಳಲಾಗಿದೆ.

ಅಣುಬಾಂಬುಗಳ ತಯಾರಿ

" ಜಪಾನಿನ ಮೇಲೆ ಹಾಕಿದ ಅಣು ಬಾಂಬಿಗಿಂತ ಅನೇಕಪಟ್ಟು ಪ್ರಬಲವಾದ ಬಾಂಬುಗಳನ್ನು ಇಲ್ಲಿ ತಯಾರು ಮಾಡಲಾಗುತ್ತಿದೆ, ೧೪ ಸಹಸ್ರ ಮಂದಿ ಈ ಉದ್ಯಮದಲ್ಲಿ ನಿರತರಾಗಿದ್ದಾರೆ, ಇನ್ನು ೧೮ ತಿಂಗಳೊಳಗಾಗಿ ಇತರ ರಾಷ್ಟ್ರಗಳೂ ಅಣು ಬಾಂಬನ್ನು ತಯಾರಿಸಬಹುದು" ಎಂದು ಅಣು ಶಕ್ತಿ ಸಮಿತಿಯ ಅಧ್ಯಕ್ಷರು ತಿಳಿಸಿದ್ದಾರೆ

○ ಪ್ಯಾಲಸ್ಟೈನಿನ ಬಗ್ಗೆ ಬ್ರಿಟನಿನ ಪ್ರಣಾಳಿಕೆಯನ್ನು ಇನ್ನೂ ೧೫ ವರ್ಷಗಳವರೆಗೆ ಮುಂದುವರಿಸಿ, ಬರುವ ೧೮ ತಿಂಗಳೊಳಗಾಗಿ ೧ ಲಕ್ಷ ಯಹೂದ್ಯರು ಪ್ಯಾಲಸ್ಟೈನಿಗೆ ಬರಲು ಅವಕಾಶಕೊಡುವ ಕಲ್ಪನೆಯನ್ನು ಪ್ಯಾಲಸ್ಟೈನ್ ಸರ್ಕಾರದ ಬ್ರಿಟಿಷ್ ಸರ್ಕಾರಕ್ಕೆ ಸೂಚಿಸಿದೆ.

ರಕ್ಕೆ " ಎಂಬ ಪುಸ್ತಕದಲ್ಲಿ ವಿವರಿಸಿದ್ದಾರೆ. ಬೆಂಗಳೂರಿನ ನವಜೀವನ ಪ್ರಕಟಣಾ ಮಂದಿರದವರು ಇದನ್ನು ಪ್ರಕಟಪಡಿಸಿದ್ದಾರೆ ಬೆಲೆ ಕೇವಲ ಆರಾಣೆ.

ಸಾಧ್ವಿ

ತಾ|| ೩-೧೨-೪೬ ಮಂಗಳವಾರ

ದ|| ಆಫ್ರಿಕ ಸತ್ಯಾಗ್ರಹಕ್ಕೆ ಪ್ರಥಮ ವಿಜಯ

ಸಂಯುಕ್ತ ರಾಷ್ಟ್ರಗಳ ರಾಜಕೀಯ ಮತ್ತು ನ್ಯಾಯಾಂಗ ಸಮಿತಿಯು ಬಹುಮತದಿಂದ ದಕ್ಷಿಣ ಆಫ್ರಿಕದ ಭಾರತೀಯರ ವಾದವನ್ನು ಎತ್ತಿ ಹಿಡಿದಿದೆ. ದಕ್ಷಿಣ ಆಫ್ರಿಕದ ಭಾರತೀಯರಿಗೆ ಅಂತರ ರಾಷ್ಟ್ರೀಯ ಹೊಣೆಗಾರಿಕೆಗೂ ಮತ್ತು ಭಾರತ ದೇಶದೊಡನೆ ಆ ದೇಶವು ಮಾಡಿಕೊಂಡಿರುವ ಒಪ್ಪಂದಗಳಿಗೂ, ಅನುಗುಣವಾದ ಹಕ್ಕು ಬಾಧ್ಯತೆಗಳು ದೊರೆಯಬೇಕೆಂದು ಮೇಲ್ಕಂಡ ಸಮಿತಿಯಲ್ಲಿ ನಿರ್ಣಯವಾಗಿರುತ್ತದೆ ವರ್ಣ ವಿಭೇದದ ನೀತಿಯನ್ನು ಈ ಸಮಿತಿಯು ನಿರಾಕರಿಸಿರುತ್ತದೆ ಇದು ಸತ್ಯಾಗ್ರಹದ ವಿಜಯದ ಪೀಠಿಕಾ ಪ್ರಕರಣ

ಈ ನಿರ್ಣಯವು ಮುಂದೆ ಸಂಯುಕ್ತ ರಾಷ್ಟ್ರ ಸಂಸ್ಥೆಯ ಸರ್ವ ಸದಸ್ಯರ ಸಭೆಯಲ್ಲಿ ಮತ್ತೆ ಅಂಗೀಕೃತವಾಗಬೇಕಾಗಿದೆ. ಅಲ್ಲಿಯೂ ಸಹ ಇದಕ್ಕೆ ಪುರಸ್ಕಾರ ದೊರೆಯುವುದೆಂದು ನಿರೀಕ್ಷಿಸಬಹುದು. ಈ ಮಧ್ಯೆ ಭಾರತ ಮತ್ತು ದಕ್ಷಿಣ ಆಫ್ರಿಕಾ ಸರ್ಕಾರಗಳು ಈ ವಿಚಾರದಲ್ಲಿ ಕೈಗೊಳ್ಳಲಾಗಿರುವ ವಿದ್ಯಮಾನಗಳನ್ನು ಸಂಗ್ರಹಿಸಿ ಸಭೆಯ ಮುಂದಿನ ಅಧಿವೇಶನದಲ್ಲಿ ಮಂಡಿಸಬೇಕೆಂದು ಕೋರಲಾಗಿದೆ.

ದಕ್ಷಿಣ ಆಫ್ರಿಕದ ಭಾರತೀಯರ ಸಮಸ್ಯೆಯು ಈಗಾಗಲೇ ವಿಶ್ವ ವಿಖ್ಯಾತವಾಗಿದೆ. ಪಾಶ್ಚಿಮಾತ್ಯ ನಾಗರಿಕತೆಗೆ ಇದರಿಂದ ದೊಡ್ಡ ಕಳಂಕವೇ ಉಂಟಾಗಿದೆ. ಸಂಯುಕ್ತ ರಾಷ್ಟ್ರಗಳ ಪ್ರಣಾಳಿಕೆಗೆ ಕುಠಾರ ಪ್ರಹಾರವಾದಂತಿದೆ. ಭಾರತ ಸರ್ಕಾರದವರು ಇದಕ್ಕಾಗಿ ದಕ್ಷಿಣ ಆಫ್ರಿಕದ ಮೇಲೆ ಪ್ರತೀಕಾರ ಕಾರ್ಯಕ್ರಮವನ್ನು ಕೈಗೊಂಡಿರುವುದಲ್ಲದೆ ಸಂಯುಕ್ತ ರಾಷ್ಟ್ರ ಸಭೆಗೆ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರ ನೇತೃತ್ವದಲ್ಲಿ ನಿಯೋಗವನ್ನೂ ಕಳುಹಿಸಿದ್ದರು. ಶ್ರೀಮತಿಯವರೂ, ನಿಯೋಗದವರೂ ಸಲ್ಲಿಸಿದ ಸೇವೆಯು ಸಭೆಯ ಸಕಲ ಸದಸ್ಯರ ಮನ್ನಣೆಯನ್ನೂ ಪಡೆಯಿತು, ವಿಷಯವು ನಿರ್ಧಾರವಾದ ಮೇಲೆ ದಕ್ಷಿಣ ಆಫ್ರಿಕದ ನಾಯಕರಾದ ಜನರಲ್ ಸ್ಮಟ್ಸರವರೂ ಸಹ ಶ್ರೀಮತಿಯವರಿಗೆ ತಮ್ಮ ಅಭಿನಂದನೆಯನ್ನು ಸಲ್ಲಿಸಿದರು. ತಮ್ಮ ಉದ್ಯಮದಲ್ಲಿ ನಿಯೋಗದವರು ಪಡೆದಿರುವ ವಿಜಯದ ಪೀಠಿಕಾ ಪ್ರಕರಣಕ್ಕಾಗಿ ಅವರು ಭಾರತೀಯರೆಲ್ಲರ ಕೃತಜ್ಞತೆಗೂ ಪಾತ್ರರು.

ಅತ್ತಲಾಗಿ ಈ ಪ್ರಶ್ನೆಗೆ ಹಲವು ರಾಷ್ಟ್ರಗಳ ವಿರೋಧವು ಇತ್ತೆಂಬುದೂ ಗಮನೀಯವಾದ ಅಂಶ ಮುಖ್ಯವಾಗಿ ಬ್ರಿಟನ್ ಮತ್ತು ಬ್ರಿಟಿಷ್ ಡೊಮಿನಿಯನ್ ರಾಷ್ಟ್ರಗಳೂ, ಅಮೆರಿಕದ ಸಂಯುಕ್ತ ಸಂಸ್ಥಾನವೂ ವಿರೋಧವಾಗಿ ಅಭಿಪ್ರಾಯವನ್ನು ಸೂಚಿಸಿವೆ. ಬ್ರಿಟಿಷ್ ಸಾಮ್ರಾಜ್ಯದೊಳಗೇ ಇರುವ ಎರಡು ರಾಷ್ಟ್ರಗಳಲ್ಲಿ ವರ್ಣದ್ವೇಷದ ಸಮಸ್ಯೆಯು ಹುಟ್ಟಿರುವುದರಿಂದ ಸಾಮ್ರಾಜ್ಯದ ಸಕಲ ಭಾಗಗಳಿಗೂ ಸಮಾನ ಸ್ಥಾನವು ಇರುವುದಿಲ್ಲವೆಂಬುದು ಲೋಕ ವಿಖ್ಯಾತವಾಗಿರುತ್ತದೆ. ಆದರೆ ಸಾಮ್ರಾಜ್ಯವಾದದಿಂದಲೂ, ವರ್ಣ ವಿಭೇದಗಳ ಗೊಂದಲಗಳಿಂದಲೂ ದೂರವಾಗಿ ಸಕಲ ಮಾನವರ ಹಕ್ಕು ಬಾಧ್ಯತೆಗಳ ರಕ್ಷಣೆಗೂ ಎದ್ದು ನಿಂತಿರುವುದಾಗಿ ಹೇಳುತ್ತಿರುವ ಅಮೆರಿಕ ಸಂಯುಕ್ತ ಸಂಸ್ಥಾನವು ವಿರೋಧವಾಗಿ ವರ್ತಿಸಿರುವುದು ಆಶ್ಚರ್ಯಕರವಾಗಿದೆ. ವರ್ಣದ್ವೇಷದ ವ್ಯಾಧಿಯು ನಿರ್ಮೂಲನಕ್ಕೆ ಇನ್ನೂ ಕಾಲವು ಸಂಪೂರ್ಣವಾಗಿ ಪರಿಪಕ್ವವಾಗಿಲ್ಲವೆಂಬ ಶಂಕೆಗೆ ಇದರಿಂದ ಕಾರಣ ಉಂಟಾಗಿರುತ್ತದೆ.

ಇಪ್ಪತ್ತನಾಲ್ಕು ದೇಶಗಳು ಭಾರತೀಯರ ಪ್ರಶ್ನೆಯನ್ನು ತಮ್ಮದೇ ಎಂದು ಭಾವಿಸಿ ಅದಕ್ಕೆ ಬೆಂಬಲವಿತ್ತುವು. ಅದರಲ್ಲಿ ರಷ್ಯದ ಪಾತ್ರವು ಅತ್ಯಂತ ಪ್ರಭಾವಶಾಲಿಯಾದದ್ದು. ಈ ರಾಷ್ಟ್ರಗಳೆಲ್ಲವೂ ಭಾರತೀಯರ ಮತ್ತು ಸಕಲ ವರ್ಣದ ಜನಾಂಗಗಳ ಕೃತಜ್ಞತೆಗೆ ಪಾತ್ರರು. ಭಾರತೀಯರಿಗೆ ಆಗುತ್ತಿರುವ ಅನ್ಯಾಯಗಳ ಬಗ್ಗೆ ಈಗ ಪ್ರಪಂಚದ ಕಣ್ಣು ತೆರೆದಿದೆ. ಮತ್ತೊಮ್ಮೆ ಸಂಯುಕ್ತ ರಾಷ್ಟ್ರ ಸಂಸ್ಥೆಯು ಸೇರುವ ಹೊತ್ತಿಗೆ ಈ ಪ್ರಶ್ನೆಯು ಸಮರ್ಪಕವಾಗಿ ಬಗೆಹರಿದು ಭಾರತೀಯರು ಎಲ್ಲರಂತೆ ತಮಗೆ ಸಹಜವಾಗಿ ಸಲ್ಲಬೇಕಾದ ಸಕಲ ನಾಗರಿಕ ಸೌಲಭ್ಯಗಳನ್ನೂ ಹೊಂದಿ ಇತರ ಪ್ರಜೆಗಳಂತೆ ತಮ್ಮ ಜೀವನವನ್ನು ಸಾಗಿಸುವಂತಾಗಲೆಂದು ಹಾರೈಸೋಣ.

ಕೈರೋವಿನಲ್ಲಿ ನೆಹರೂ

ಲಂಡನ್ನಿಗೆ ತೆರಳುವ ಪಂಡಿತ ನೆಹರೂರವರು ಕೈರೋವಿನಲ್ಲಿ ಪತ್ರಿಕಾ ಪ್ರತಿನಿಧಿಗಳಿಗೆ ಭೇಟಿ ಕೊಟ್ಟಿದ್ದರು. ಭಾರತದಲ್ಲಿ ಹಿಂದೂಗಳಿಗೂ ಮುಸ್ಲಿಮರಿಗೂ ಭಿನ್ನಾಭಿಪ್ರಾಯಗಳೇನೂ ಇಲ್ಲ ರಾಜಕೀಯದ ವಿಚಾರದಲ್ಲಿ ಮಾತ್ರ ಹಿಂದೂ-ಮುಸ್ಲಿಂ ಸಮಸ್ಯೆ ಎದ್ದು ನಿಲ್ಲುತ್ತಿದೆ ರಾಜಕೀಯದಲ್ಲಿ ಆಸೆ ಅಥವಾ ನಿರಾಸೆಗಳೆಂಬುದೇ ಇಲ್ಲ. ಪರಿಸ್ಥಿತಿಗನುಗುಣವಾಗಿ ಸಾಹಸದಿಂದ ಎಲ್ಲವನ್ನೂ ಸಾಧಿಸಬೇಕು-ಎಂದು ಅವರು ಹೇಳಿರುವರು

ಮೈಸೂರಿಗೆ ರಾಜೇಂದ್ರ ಪ್ರಸಾದರು

ದೆಹಲಿಗೆ ತೆರಳಿದ್ದ ಮೈಸೂರಿನ ಸಚಿವರಾದ ಮಿ|| ಓ. ಎಸ್. ಎ. ಪದೇಶರು ಕೇಂದ್ರ ತಾತ್ಕಾಲಿಕ ಸರ್ಕಾರದ ಸಚಿವರುಗಳಾದ ಶ್ರೀ ಜಗಜೀವನರಾಂ ಮತ್ತು ಡಾ|| ರಾಜೇಂದ್ರ ಪ್ರಸಾದರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರೆಂದೂ, ಕೇಂದ್ರ ಸರಕಾರದ ಆಹಾರ ಸಚಿವರಾದ ಡಾ|| ರಾಜೇಂದ್ರ ಪ್ರಸಾದರನ್ನು ಮೈಸೂರಿಗೆ ಆಹ್ವಾನಿಸಲಾಗಿ ಅವರು ಬರುವ ಫೆಬ್ರವರಿ ತಿಂಗಳಿನಲ್ಲಿ ಮೈಸೂರಿಗೆ ಬರುವುದಾಗಿ ತಿಳಿಸಿದರೆಂದೂ ಗೊತ್ತಾಗಿದೆ.

ಲಂಡನ್ನಿನಲ್ಲಿ ಮುಖಂಡರ ರಕ್ಷಣೆಗೆ ಏರ್ಪಾಡು

ವೈಸರಾಯರೊಡನೆ ಲಂಡನ್ನಿಗೆ ಬರತಕ್ಕ ಭಾರತೀಯ ಮುಖಂಡರುಗಳ ರಕ್ಷಣೆಗಾಗಿ ಬ್ರಿಟಿಷ್ ಸರ್ಕಾರವು ಸ್ಕಾಟ್ಲೆಂಡ್ ಯಾರ್ಡ್ ಎಂಬಲ್ಲಿನ ಗೂಢಚಾರರ ವಿಶೇಷ ಇಲಾಖೆಗೆ ಆಜ್ಞೆಯಿತ್ತಿದೆ ಮುಖಂಡರುಗಳು ವಿಮಾನ ನಿಲ್ದಾಣದಲ್ಲಿ ಬಂದು ಇಳಿದ ಘಳಿಗೆಯಿಂದ ಅವರು ಪುನಃ ಹೊರಡುವವರೆಗೆ ೨೪ ಗಂಟೆಗಳ ಕಾಲವೂ ನಂಬಿಕಸ್ಥರಾದ ಸಾಧಾರಣ ಉಡುಪಿನ ಪೋಲೀಸ್ ಅಧಿಕಾರಿಗಳ ರಕ್ಷಣೆಯನ್ನು ಹೊಂದುವರು

೧೦ ಸಾವಿರ ಹಿಂದುಗಳ ಮತಾಂತರ

ಕಲ್ಕತ್ತದ ಭಾರತ ಸೇವಾಶ್ರಮದ ಕಾರ್ಯದರ್ಶಿ ಸ್ವಾಮಿ ಆತ್ಮಾನಂದರು ಪೂರ್ವ ಬಂಗಾಳದ ಪರಿಹಾರ ಕಾರ್ಯಕ್ರಮವನ್ನು ಕುರಿತು ಒಂದು ಹೇಳಿಕೆಯಿತ್ತಿದ್ದಾರೆ.

ಪೂರ್ವ ಬಂಗಾಳ ದುರಂತಕ್ಕೊಳಗಾದ ಹಿಂದುಗಳಿಗೆ ಪರಿಹಾರವನ್ನೊದಗಿಸಲು ಹತ್ತು ಕೇಂದ್ರಗಳಲ್ಲಿ ಸಹಾಯ ಕಾರ್ಯಕ್ರಮ ನಡೆಯುತ್ತಿದೆ. ಬಲಾತ್ಕಾರ ಮತಾಂತರ ಹೊಂದಿದ್ದ ೧೦ ಸಾವಿರ ಮಂದಿ ಹಿಂದುಗಳನ್ನು ಪುನಃ ಹಿಂದೂ ಮತಕ್ಕೆ ಸೇರಿಸಲಾಗಿದೆ ಬಲಾತ್ಕಾರದಿಂದ ಮುಸ್ಲಿಮರು ಮದುವೆಯಾಗಿದ್ದ ೧೦೦ ಮಂದಿ ಮಹಿಳೆಯರನ್ನು ಪುನಃ ಹಿಂದೂ ಮತಕ್ಕೆ ಸೇರಿಸಿಕೊಳ್ಳಲಾಗಿದೆ ಬಲಾತ್ಕಾರ ಮತಾಂತರ ಹೊಂದಿದ್ದ ೫ ಸಾವಿರ ಮಂದಿ ಮಹಿಳೆಯರನ್ನು ಪುನಃ ಹಿಂದೂ ಮತಕ್ಕೆ ಸೇರಿಸಿ ಅವರಿಗೆ ಕುಂಕುಮ ಮತ್ತು ಬಳೆಗಳನ್ನೊದಗಿಸಿಕೊಡಲಾಗಿದೆ. ಇದುವರೆಗೆ ೩೦ ಸಹಸ್ರ ಮಂದಿ ನಿರಾಶ್ರಿತರಿಗೆ ಸಹಾಯ ಮಾಡಲಾಗಿದೆ ಅಪಾಯ ಸ್ಥಿತಿಯಲ್ಲಿದ್ದ ೩ ಸಾವಿರ ಜನರನ್ನು ಕಾಪಾಡಲಾಗಿದೆ. ಎಂದು ಅವರು ತಿಳಿಸಿರುತ್ತಾರೆ

ಕೊಲೆ ಮೊಕದ್ದಮೆಯಲ್ಲಿ ಖುಲಾಸೆ

ಮಳವಳ್ಳಿ ತಾಲ್ಲೂಕು ಯಮದೂರು ಗ್ರಾಮದ ಕೇಡಿ ಕುಳ್ಳ ಎಂಬಾತನು ಕೃಷ್ಣರಾಜಪೇಟೆ ತಾಲ್ಲೂಕು ಆಲಂಬೂರು ಗ್ರಾಮದ ಕುಂಬಳ ಎಂಬುವನನ್ನು ೧೫-೫-೪೬ ರಲ್ಲಿ ಜಾಸನದ ಸಂತೆಯಲ್ಲಿ ಹೊಡೆದು ಕೊಲೆಮಾಡಿದನೆಂಬ ಆಪಾದನೆಯ ಮೇರೆ ಹಾಸನದ ಸ್ಪೆಷಲ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮೊಬದ್ದಮೆ ಹೂಡಲಾಗಿದ್ದಿತು. ಸದರಿ ಮೊಕದ್ದಮೆಯು ಸೆಷನ್ಸಿಗೆ ಕಮಿಟ್ಟಾಗಿದ್ದು ವಿಚಾರಣೆಯಾಗಿ ಅಪರಾಧ ತಪ್ಪಿತಸ್ಥನಲ್ಲವೆಂದು ಸೆಷನ್ಸ್ ಜಡ್ಜರಾದ ಶ್ರೀ ಎ. ಸ್ವಾಮಿಯ್ಯಂಗಾರ್ಯರವರು ತೀರ್ಮಾನಮಾಡಿ ಅವನನ್ನು ಖುಲಾಸೆ ಮಾಡಿರುತ್ತಾರೆ. ಆಪಾದಿತನ ಪರ ಮೈಸೂರಿನ ಅಡ್ವೋಕೇಟರಾದ ಶ್ರೀ|| ಕೆ. ಪುಟ್ಟಸ್ವಾಮಯ್ಯರು ವಕಾಲತ್ತು ವಹಿಸಿದ್ದರು.

ರಾಜಕಮಲ್

ಮೈಸೂರು

29-11-46 ರಿಂದ

ಮುಂದೆಯೂ ವಾರ

ಡಾಕ್ಟರ್ ಕೋಟ್ನಿಸ್ ಕಿ

ಅಮರ್-ಕಹಾನಿ

-: ಭೂಮಿಕೆ :-

ಜಯಶ್ರೀ, ಶಾಂತಾರಾಂ, ಉಲ್ಲಾಸ್

!! ಜೈ ಹಿಂದ್ !!

ವಿದ್ಯಾರ್ಥಿಗಳಿಗೆ! ಸುಸಮಯ!!

ಆನಂದ್ ಟೈಲರಿಂಗ್ ಮಾರ್ಟ್

ಜನಗಳು ಮೆಚ್ಚುವಹಾಗೆ ಉಡುಪುಗಳನ್ನು ಸಾಧಾರಣ ದರದಲ್ಲಿ ನಾಜೂಕಾಗಿ ಕಾಲಕ್ಕೆ ಸರಿಯಾಗಿ ಹೊಲಿಯುತ್ತೇವೆ. ಒಂದು ಸಲ ಬಂದು ಪರೀಕ್ಷಿಸಿರಿ. ವಿದ್ಯಾರ್ಥಿಗಳಿಗೆ ಮಾತ್ರ ರಿಯಾಯಿತಿ ದರ

ಪ್ರೊ:- ಪಿ. ಎಸ್. ಆನಂದ್,
ಬೆಂಗಳೂರು ಟೈಲರ್,
573 ಇರ್ವಿನ್‌ರೋಡ್, ಮೈಸೂರು.

ಸುಭಾಷ್ ಬೋಸರು ಬದುಕಿಯೇ ಇದ್ದಾ

ನೇತಾಜಿ ಬೋಸರು ಬದುಕಿದ್ದಾ
ದೂ, ಅವರು ಸತ್ತುಹೋದರೆಂದು ಪ್ರ
ಾದನಂತರ ಅವರನ್ನು ಚೀನಾಗಡಿಯ
ನೋಡಿದವರಿದ್ದಾರೆಂದೂ ಸಿಂಗಪುರದ
ಕರೊಬ್ಬರು ತಿಳಿಸಿದ್ದಾರೆ. ನೇತಾಜಿಯು
ರು ಆಶ್ಚರ್ಯಕರವಾದ ರೀತಿಯಲ್ಲಿ
ದಲ್ಲಿ ಕಾಣಿಸಿಕೊಳ್ಳುವರೆಂದು ಅವರು
ಸಿದ್ದಾರೆ. ಶಾಂಘಾಯಿಯಲ್ಲಿ ಪತ್ರಿಕಾ ಕ
ಗೆ ಒಬ್ಬ ಆಗಂತುಕರು ಬಂದು ಬೋಸರು
ಮಾನ ಅಪಘಾತದಲ್ಲಿ ಸತ್ತುಹೋದರೆಂ
ಹೇಳಲಾಗುತ್ತಿರುವ ದಿನ ತಾವು ಅವರ
ಮಧ್ಯಾಹ್ನ ೧-೩೦ಕ್ಕೆ ನೋಡಿದ್ದರೆಂದೂ,
ಲ್ಲಿಂದ ಅವರು ಟಿಬೆಟ್ ಕಡೆಗೆ ಹೋಗಿ
ರುದೆಂದೂ, ವಿಮಾನ ಅಪಘಾತದಲ್ಲಿ ಅ
ರು ನಿಧನರಾದರೆಂದು ಹೇಳಲು ಸಾಧ್ಯವಿ
ವೆಂದೂ ತಿಳಿಸಿದ್ದಾರೆ

ವಿವಾಹ ಮಹೋತ್ಸವ

ಮೈಸೂರು:

ಮೈಸೂರು ಬಿಸಿನೆಸ್ ಬ್ಯೂರೋ
ಮಾಲೀಕರಾದ ಶ್ರೀ ಆರ್ ಗುಂಡೂರಾ
ರು ತಮ್ಮ ಮಗಳು ಸೌ|| ಕುಮುದಾ
ಯಿಯನ್ನು ರಿ|| ಹೆಡ್ ಅಕೌಂಟೆಂಟ್ ಶ್ರೀ
ಆರ್. ವೆಂಕೋಬರಾಯರ ಕುಮಾರ ಶ್ರೀ
ಆರ್.ವಿ. ಶ್ರೀನಿವಾಸಮೂರ್ತಿಯವರಿಗೆ ಕೊ
ಟ್ಟು ನಾಳೆ ಬೆಳಗ್ಗೆ ಕೃಷ್ಣಮೂರ್ತಿಪುರದಲ್ಲಿ
ರುವ 'ಭಾನುಬಿಲ್ಡರ್ಸ್' ಬಂಗಲೆಯಲ್ಲಿ ವಿ
ವಾಹವನ್ನು ನೆರವೇರಿಸುವರು

ಸೂರು ಸಿಟಿ ಮುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರವರ ಆಫೀಸ್

ನೋಟಿಫಿಕೇಷನ್

ನಂಬರ್ R8-C 210/46-47

ತಾ|| 20-11-46

ಈ ಮೂಲಕ ಸಮಸ್ತ ಜನಗಳಿಗೂ ತಿ
ಯಪಡಿಸುವುದೇನೆಂದರೆ:- ಮೈಸೂರು ಸಿಟಿ
ಆಸ್ಪತ್ರೆ ಆಫೀಸು ಬಳಿ ಇರುವ ಸಿಟಿ
ಬಸ್ ಸ್ಟ್ಯಾಂಡಿನಲ್ಲಿ ಮುನಿಸಿಪಾಲಿಟಿಯವ
ರು ಕಟ್ಟಿಸಿರುವ ರೆಸ್ಟೋರೆಂಟ್ ಬಿಲ್ಡಿಂಗ
ನ್ನು 1947 ನೇ ಜನವರಿ ಮಾಹೆ ೧ನ
ನೇ ತಾರೀಖು ಆರಾಭ್ಯ ಮೂರು ವರು
ಷಗಳ ಕಾಲ ಅಂದರೆ 1949 ನೇ ಡಿಸೆಂ
ಬರ್ ಮಾಹೆ ಅಖೈರ್‌ವರೆವಿಗೆ ಹೋಟೆ
ಲನ್ನು ಇಟ್ಟುಕೊಂಡು ವ್ಯಾಪಾರ ನಡೆಸು
ವ ಬಗ್ಗಾಗಿ ಮಾಹೆಯಾನ ಬಾಡಿಗೆಗೆ ಪಡೆ
ಯುವ ಹಕ್ಕನ್ನು ಟೆಂಡರ್ ಮೂಲಕ ವಿ
ಲೇವಾರಿ ಮಾಡಲಾಗುತ್ತೆ. ಮೇಲ್ಕಂಡ
ಹಕ್ಕನ್ನು ಪಡೆಯಲು ಇಷ್ಟವುಳ್ಳವರು ೨
ಸೆಂಬರ್ ಮಾಹೆ ತಾರೀಖು 9 ರವೊಳಗಾ
ಗಿ ಟೆಂಡರ್ ದರಖಾಸ್ತುಗಳನ್ನು ಹಾಜರು
ಪಡಿಸಬೇಕಾಗಿರುತ್ತೆ. ಹೆಚ್ಚಿಗೆ ವಿಷಯಗಳನ್ನು
ಮುನಿಸಿಪಲ್ ಆಫೀಸಿನಲ್ಲಿ ಆಫೀಸ್ ನಡೆ
ಯುವ ಕಾಲದಲ್ಲಿ ತಿಳಿಯಬಹುದು.

Sd S. Murughendra Swamy,
For President.

Edited, printed and published by A. R. Nagaraja at the Sadhvi Press D. Subbiah Road, Mysore.

ರೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಬುಧವಾರ ೪—೧೨—೪೬ [ಸಂಚಿಕೆ ೧೦೯

ಬರುವ ವರ್ಷದಿಂದ ಬಿರುದುಗಳ ರದ್ದು

ಆಕಾಶವಾಣಿ ಅ॥ ಡೈರೆಕ್ಟರ್

ಮೈಸೂರು ೪

ಶ್ರೀ ಎ. ಎಂ. ನಟೇಶನವರು ಈ ದಿನ ಆಕಾಶವಾಣಿಯ ಅಸಿಸ್ಟೆಂಟ್ ಡೈರೆಕ್ಟರ ಅಧಿಕಾರವನ್ನು ವಹಿಸಿಕೊಂಡರು. ಶ್ರೀ ಎಂ. ವಿ. ಮೂರ್ತಿರಾಯರು ಮಹಾರಾಜಾ ಕಾಲೇಜಿನಲ್ಲಿ ಸೇರಿಂದಿರುಗಿದರು.

ಆಶ್ರಮಕ್ಕೆ ದಾನ

ಮೈಸೂರು ಮಂಡಿ ಮೊಹಲ್ಲಾ ಆಸ್ಪತ್ರೆಯಲ್ಲಿ ನವಂಬರ್ ೧೧ರಿಂದ ೧೭ರ ವರೆಗೆ ಬೆಂಗಳೂರಿನ ಶ್ರೀ ಹರಿಹರಾನಂದ ಸ್ವಾಮಿಯವರ ನೇತೃತ್ವದಲ್ಲಿ ನಡೆದ ಈ ವರ್ಷದ ಶ್ರೀರಾಮ ಸಪ್ತಾಹದ ಭಕ್ತರಿಂದ ಬಂದ ರೂ ೧೫೭-೧-೪ ಅನ್ನಸಂತರ್ಪಣೆ ವಗೈರೆಗಾಗಿ ರೂ ೧೪೮-೫ ಖರ್ಚು ಹಾಕಿ ಉಳಿಕೆ ಮೊಬಲಗನ್ನು ಮೈಸೂರು ಪಡುವಾರಹಳ್ಳಿ ಹೊಸ ಬಡಾವಣೆಯಲ್ಲಿರುವ ಶ್ರೀ ಅನಂತಸ್ವಾಮಿಗಳ ಆಶ್ರಮಕ್ಕೆ ಕೊಡಲಾಗಿದೆ.

ಪ್ರದೋಷ ಸಂಗೀತ

ಗಾನ ವಿಶಾರದ ಬಿಡಾರದ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮ ಮಂದಿರದಲ್ಲಿ ನಾಳೆ ಶುಕ್ರವಾರ ಸಂಜೆ ೬-೩೦ಕ್ಕೆ ಪ್ರದೋಷದ ಪ್ರಯುಕ್ತ ಮದ್ರಾಸಿನ ವಿದ್ವಾನ್ ಪಿ ಆರ್. ರತ್ನಂರವರ ಸಂಗೀತ ಕಚೇರಿ ನಡೆಯುವುದು. ಸರ್ವರಿಗೂ ಆಹ್ವಾನವುಂಟು

ಲಂಡನ್ನಿನಲ್ಲಿ ದಕ್ಷಿಣ ಆಫ್ರಿಕದ ವಿರುದ್ಧ ಪ್ರದರ್ಶನ

ದಕ್ಷಿಣ ಆಫ್ರಿಕದಲ್ಲಿ ತೋರಿಸಲಾಗುತ್ತಿರುವ ವರ್ಣದ್ವೇಷವನ್ನು ಪ್ರತಿಭಟಿಸಲು ಲಂಡನ್ನಿನಲ್ಲಿರುವ ಭಾರತೀಯ ವಿದ್ಯಾರ್ಥಿಗಳು ಟ್ರಫಾಲ್ಗರ್ ಚೌಕದಲ್ಲಿ ಇದೇ ೮ ನೇ ತಾರೀಖು ಪ್ರದರ್ಶನವನ್ನು ನಡೆಸಲು ಏರ್ಪಾಟುಗಳನ್ನು ಮಾಡುತ್ತಿದ್ದಾರೆ.

ಭಾರತದ ನಾಯಕರು ಲಂಡನ್ ಸೇರಿದರು

ವಿಮಾನದ ತೊಂದರೆಯಿಂದ ಮಾಲ್ಟಾ ದ್ವೀಪದಲ್ಲಿ ಸ್ವಲ್ಪಕಾಲ ತಂಗಿದ್ದ ಭಾರತದ ನಾಯಕರೂ, ವೈಸರಾಯರೂ ಅಲ್ಲಿಂದ ಹೊರಟು ನಿನ್ನೆ ಮಧ್ಯಾಹ್ನ ೨ ಘಂಟೆಗೆ ಲಂಡನ್ ನಗರವನ್ನು ತಲುಪಿದರು. ವೈಸರಾಯ್ ವೇವಲ್ಲರು ಪ್ರಧಾನಿ ಅಟ್ಲಿಯವರೊಡನೆ ಮೊದಲು ಸಂಭಾಷಣೆ ನಡೆಸಿದರು. ಪಂ॥ ನೆಹರೂರವರು ಮಿ॥ ಅಟ್ಲಿಯವರನ್ನೂ, ಜಿನ್ನಾ ಮತ್ತು ಲಿಯಾಕತ್ ಅಲಿಖಾನರು ಲಾರ್ಡ್ ಪೆಥಿಕ್ ಲಾರೆನ್ಸರನ್ನು ಸಂದರ್ಶಿಸಿ ಮಾತುಕತೆ ನಡೆಸಿದರು. ನಿನ್ನೆ ರಾತ್ರಿ ಬ್ರಿ॥ ನಿಯೋಗದ ಸದಸ್ಯರುಗಳು ಪಂ॥ ನೆಹರೂ ಮತ್ತು ಸ॥ ಬಲದೇವಸಿಂಗರನ್ನು ಸತ್ಕರಿಸಿದರು. ಈ ದಿನ ಬ್ರಿಟಿಷ್ ರಕ್ಷಣಾ ಮಂತ್ರಿ ಅಲೆಕ್ಸಾಂಡರ್‌ರು ಜಿನ್ನಾ ಮತ್ತು ಲಿಯಾಕತ್ ಅಲಿಖಾನರನ್ನು ಲಂಕ್ಯಾಸ್ಟರ್ ಭವನದಲ್ಲಿ ಸತ್ಕರಿಸುವರು. ಮುಖ್ಯವಾದ ಸಂಧಾನಗಳು ಇಂದು ಆರಂಭವಾಗಿ ನಾಳೆ ದಿನ ಬ್ರಿಟಿಷ್ ದೊರೆಗಳು ಭಾರತದ ನಾಯಕರನ್ನೂ, ಮಂತ್ರಿಗಳನ್ನೂ ಉಪಾಹಾರದಿಂದ ಸತ್ಕರಿಸುವರು. ವೈಸರಾಯರು ಪ್ರಧಾನಿ ಅಟ್ಲಿಯವರ ಸಂಗಡ ಸಂಭಾಷಣೆ ನಡೆಸಿದಾಗ ಬ್ರಿ॥ ನಿಯೋಗದಲ್ಲಿದ್ದ ಸರ್ ಕ್ರಿಪ್ಸ್, ಅಲೆಕ್ಸಾಂಡರ್ ಮತ್ತು ಪೆಥಿಕ್ ಲಾರೆನ್ಸರೂ ಹಾಜರಿದ್ದು ಚರ್ಚೆಯಲ್ಲಿ ಭಾಗವಹಿಸಿದ್ದರೆಂದು ವರದಿಯಾಗಿದೆ.

ಮದ್ರಾಸಿನಲ್ಲಿ ಅಕ್ಕಿ ಪಡಿತರ ಹೆಚ್ಚಿತು

ಈ ತಿಂಗಳು ೧೫ನೇ ತಾ॥ ನಿಂದ ಮದ್ರಾಸ್ ಪ್ರಾಂತದಲ್ಲಿ ಅಕ್ಕಿ ಪಡಿತರದ ಪ್ರಮಾಣವನ್ನು ೮ ಔನ್ಸುಗಳಿಂದ ೧೦ ಔನ್ಸುಗಳಿಗೆ ಹೆಚ್ಚಿಸಲಾಗುವುದೆಂದು ಸರ್ಕಾರದ ಆಜ್ಞೆಯಾಗಿದೆ. ಒಟ್ಟು ರೇಷನ್ ಪ್ರಮಾಣ ಮೊದಲಿನಂತೆಯೇ ೧೬ ಔನ್ಸುಗಳಿರುತ್ತವೆ. ನವಂಬರ್ ತಿಂಗಳ ಮೊದಲನೇ ೩ ವಾರಗಳಲ್ಲಿ ಕಾರು ಬೆಳೆಯಿಂದ ೧ ಲಕ್ಷ ಟನ್ ಭತ್ತವನ್ನು ಪಡೆದಿರುವುದರಿಂದಲೂ, ಭತ್ತದ ಸರಬರಾಜು ಉತ್ತಮಗೊಂಡಿರುವುದರಿಂದಲೂ, ಈ ರೀತಿ ಪಡಿತರವನ್ನು ಹೆಚ್ಚು ಮಾಡಲಾಗುವುದೆಂದು ಗೊತ್ತಾಗಿದೆ. ಬೆಲೆಯನ್ನು ಸರ್ಕಾರವು ಹೆಚ್ಚಿಸುವುದಿಲ್ಲವೆಂದೂ ಹೇಳಲಾಗಿದೆ

ಸಿವಿಲ್ ಸರ್ವಿಸ್ ವಜಾ

ಇಂಡಿಯಾ ಕಾರ್ಯದರ್ಶಿಗಳ ಅಧೀನದಲ್ಲಿ ಕೆಲಸ ಮಾಡುತ್ತಿರುವ ಇಂಡಿಯನ್ ಸಿವಿಲ್ ಸರ್ವಿಸ್ ಮತ್ತು ಪೋಲೀಸ್ ಸರ್ವೀಸನ್ನು ರದ್ದುಗೊಳಿಸುವ ವಿಚಾರವನ್ನು ಬ್ರಿಟಿಷ್ ಸರ್ಕಾರವು ತೀವ್ರವಾಗಿ ಪರಿಶೀಲಿಸುತ್ತಿದೆಯೆಂದು, ಕಾಮನ್ಸಿನಲ್ಲಿ ತಿಳಿಸಲಾಗಿದೆ

ರಾಜ್ಯಾಂಗ ಸಭಾಧ್ಯಕ್ಷರು

ದೆಹಲಿಯಲ್ಲಿ ಸೇರಲಿರುವ ರಾಜ್ಯಾಂಗ ಸಭೆಗೆ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್‌ರವರನ್ನು ಖಾಯಂ ಅಧ್ಯಕ್ಷರನ್ನಾಗಿ ಚುನಾಯಿಸಬಹುದೆಂದು ಹೇಳಲಾಗಿದೆ. ಸಭೆಯು ಜನವರಿ ೩ನೇ ತಾ॥ ವರೆಗೆ ನಡೆಯಬಹುದು

ಗಡೀಪಾರು ಆಜ್ಞೆ ವಜಾ

ಸಿಕಂದರಾಬಾದಿನ ಪ್ರಮುಖ ವಕೀಲರೂ, ಸಮಾಜ ಸುಧಾರಕರೂ ಆದ ಶ್ರೀ ಕೆ. ಶಾಸ್ತ್ರಾಚಾರಿಯವರ ಮೇಲಿದ್ದ ಗಡೀಪಾರು ಆಜ್ಞೆಯನ್ನು ಹೈದರಾಬಾದ್ ಸರ್ಕಾರದವರು ರದ್ದುಮಾಡಿದ್ದಾರೆ.

ಇಂಡಿಯಾ ಸೆಕ್ರೆಟರಿ ಹುದ್ದೆ ವಜಾ ಆಗುವುದೇ?

ಇಂಡಿಯಾ ಸೆಕ್ರೆಟರಿಯವರ ಹುದ್ದೆಯನ್ನು ಯಾವಾಗ ವಜಾ ಮಾಡಲಾಗುವುದು, ಎಂದು ಕಾಮನ್ಸಿನಲ್ಲಿ ಕೇಳಿದ ಪ್ರಶ್ನೆಗೆ ಭಾರತದ ಅಂಡರ್ ಸೆಕ್ರೆಟರಿಯವರು ಉತ್ತರವಿತ್ತು ಈ ವಿಚಾರವು ಬ್ರಿ॥ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆಯೆಂದು ತಿಳಿಸಿದ್ದಾರೆ

ದಕ್ಷಿಣ ಆಫ್ರಿಕದಲ್ಲಿ ಸಾರ್ವತ್ರಿಕ ಚುನಾವಣೆ?

ಸಂಯುಕ್ತ ರಾಷ್ಟ್ರ ಸಂಸ್ಥೆಯಲ್ಲಿ ದಕ್ಷಿಣ ಆಫ್ರಿಕದ ಮೇಲೆ ಆದ ತೀರ್ಮಾನದ ಒಗ್ಗೆ ಬ್ರಿಟಿಷ್ ರಾಜನೀತಿಜ್ಞರು ಅಲ್ಲಿಗೆ ಭೇಟಿ ಕೊಡುವುದರೊಳಗಾಗಿ ಸಾರ್ವತ್ರಿಕ ಚುನಾವಣೆಯನ್ನು ಜ॥ ಸ್ಮಟ್ಸರು ನಡೆಸಬಹುದೆಂದು ಊಹಿಸಲಾಗಿದೆ. ಹಾಗೆ ಚುನಾವಣೆಗಳು ನಡೆದರೆ ಅವರ ಪಕ್ಷಕ್ಕೆ ಹೆಚ್ಚು ಸಂಖ್ಯೆಯಲ್ಲಿ ಸ್ಥಾನಗಳು ಸಿಕ್ಕುವುವೆಂದು ಹೇಳಲಾಗಿದೆ

ಅರ್ಕಿನ್‌ಲೆಕರ ಜೀವದಾನಕ್ಕೆ ಕಾಂಗ್ರೆಸ್ ಬೆಂಬಲ

ಭಾರತದ ದಂಡನಾಯಕರಾದ ಫೀ॥ ಮಾ॥ ಸರ್ ಅರ್ಕಿನ್‌ಲೆಕರಿಗೆ ಒಂದು ವರ್ಷ ಕಾಲ ಜೀವ ದಾನವನ್ನು ಕೊಡುವಂತೆ ಮಾಡಬೇಕೆಂದು ಕೇಂದ್ರ ಸರ್ಕಾರದ ರಕ್ಷಣಾ ಮಂತ್ರಿ ಸ॥ ಬಲದೇವಸಿಂಗರಿಗೆ ಕಾಂಗ್ರೆಸ್ ಮಂತ್ರಿಗಳು ಸೂಚಿಸಿದ್ದಾರೆಂದು ವರದಿಯಾಗಿದೆ. ಸೈನ್ಯದ ರಾಷ್ಟ್ರೀಕರಣ ಕಾರ್ಯಕ್ರಮವು ನಡೆಯುತ್ತಿರ ವಾಗ ಮಧ್ಯೆ ಅವರ ಬದಲಾವಣೆಯಿಂದ ತೊಂದರೆಯಾಗುವುದೆಂದು ಹೇಳಲಾಗಿದೆ.

ಛಡಿ ಶಿಕ್ಷೆ ವಜಾ

ಜೈಲುಗಳಲ್ಲಿ ಉಪವಾಸಮುಷ್ಕರ ಮುಂತಾದ ಅಪರಾಧಗಳನ್ನು ಮಾಡುವವರಿಗೆ ವಿಧಿಸಲಾಗುತ್ತಿದ್ದ ಛಡಿ ಶಿಕ್ಷೆಯನ್ನು ಮದ್ರಾಸ್ ಸರ್ಕಾರದವರು ರದ್ದುಮಾಡಿರುತ್ತಾರೆ

ಕಬ್ ಮಾಸ್ಟರುಗಳ ಶಿಕ್ಷಣ ಶಿಬಿರ

ಮೈಸೂರು ೪

ಮೈಸೂರು ನಗರದ ಪ್ರೈಮರಿ ಮತ್ತು ಮಿಡಲ್ ಸ್ಕೂಲುಗಳಿಂದ ಆರಿಸಿರುವ ೪೦ ಜನ ಉಪಾಧ್ಯಾಯರುಗಳಿಗಾಗಿ ಏರ್ಪಾಡಾಗಿರುವ ಕಬ್ ಮಾಸ್ಟರ್ ಶಿಕ್ಷಣ ಶಿಬಿರವು ಮೊನ್ನೆ ಗ॥ ಟ್ರೈನಿಂಗ್ ಕಾಲೇಜು ಆವರಣದಲ್ಲಿ ಪುರಸಭಾಧ್ಯಕ್ಷರಾದ ಶ್ರೀ ರಾಮಚಂದ್ರರಾವ್ ಟೊಂಬ್ರೆಯವರಿಂದ ಆರಂಭಿಸಲ್ಪಟ್ಟಿತು

ವಿಶೇಷ ಪೂಜೆ

ಸೀತಾರಾಮಕಲ್ಯಾಣ ೬ನೇ-೮ನೇ ಡಿಸೆಂಬರ್ ಮನೆಯಲ್ಲಿ ಲಾಜರಾಜೇಶ್ವರೀ ಅಮ್ಮನವರ ಸನ್ನಿಧಿಯಲ್ಲಿ ಇದೇ ೬ ನೇ ತಾ॥ ನಿಂದ ಮೂರು ದಿನಗಳು ಧನುರ್ಮಾಸ, ಶ್ರೀ ಶಿವದೀಪ, ವಸ್ತ್ರದೀಪ, ಗ್ರಹಣಗಳ ಪ್ರಯುಕ್ತ ವಿಶೇಷ ಪೂಜೆ ಮತ್ತು ರಾಜಾಶೀರ್ವಾದಗಳು ನಡೆಯುತ್ತವೆ

ರೆಸಿಡೆಂಟರ ಪ್ರಯಾಣ

ಮೈಸೂರು ೪

ನಿನ್ನೆ ರಾಜಧಾನಿಗೆ ಆಗಮಿಸಿದ್ದ ರೆಸಿಡೆಂಟರು ಮಹಾಪ್ರಭುಗಳನ್ನು ಭೇಟಿ ಮಾಡಿ ಈ ದಿನ ಬೆಳಗ್ಗೆ ಬೆಂಗಳೂರಿಗೆ ವಾಪಸು ಪ್ರಯಾಣ ಮಾಡಿದರು. ಆಗ್ಗೆ ಅರಮನೆ ಬತೇರಿಯಿಂದ ೧೩ ಗುಂಡುಗಳು ಹಾರಿಸಲ್ಪಟ್ಟುವು.

ವೈಸರಾಯರು ರಾಜೀನಾಮೆ ಕೊಡುವರೇ?

ಲಂಡನ್ನಿನ ರಾಜಕೀಯ ಆವರಣದಲ್ಲಿ ವೈಸರಾಯ್ ವೇವಲ್ಲರು ರಾಜೀನಾಮೆ ಕೊಡಬಹುದೆಂಬ ಊಹೆ ಬಲವಾಗಿ ಹಬ್ಬಿದೆ. ಭಾರತದ ನಾಯಕರಿಗೂ ಬ್ರಿ॥ ಮಂತ್ರಿ ಮಂಡಲದವರಿಗೂ ನಡೆಯುವ ಸಂಧಾನಗಳೆಲ್ಲಾ ಗುಪ್ತವಾಗಿರುವುವೆಂದು ಹೇಳಲಾಗಿದೆ.

ಫ್ರಾಂಕೋ ಅಧಿಕಾರ ತ್ಯಜಿಸಲಿ

"ಜನರಲ್ ಫ್ರಾಂಕೋ ರಾಜೀನಾಮೆ ಕೊಡಬೇಕು. ತಾತ್ಕಾಲಿಕ ಸರ್ಕಾರವೊಂದು ರಚಿತವಾಗಿ ಹೊಸ ಚುನಾವಣೆಗಳು ನಡೆಯಬೇಕು. ಫ್ರಾಂಕೋ ಸರಕಾರ ಸಂಯುಕ್ತ ರಾಷ್ಟ್ರ ಪರಿಷತ್ತಿನ ಯಾವ ಸಂಘಕ್ಕೂ ಸೇರದಂತೆ ಮಾಡಬೇಕು"— ಎಂಬ ನಿರ್ಣಯವನ್ನು ವಿಶ್ವ ಸಂಸ್ಥೆಯ ಮುಂದೆ ಅಮೆರಿಕಾ ಸಂಯುಕ್ತಸಂಸ್ಥಾನದ ಪ್ರತಿನಿಧಿಗಳು ಮಂಡಿಸಿದ್ದಾರೆ.

ಭಾರತೀಯರಿಗೆ ಬಿರುದು ಬಾವಲಿಗಳು ಬೇಡ

ಭಾರತೀಯರಿಗೆ ಬ್ರಿಟಿಷ್ ದೊರೆಗಳಿಂದ ಕೊಡಲಾಗುತ್ತಿದ್ದ ಬಿರುದು ಬಾವಲಿಗಳನ್ನು ಇನ್ನು ಮೇಲೆ ನಿಲ್ಲಿಸಲಾಗುವುದೆಂದು ಬ್ರಿಟಿಷ್ ಸರ್ಕಾರದ ಪ್ರಕಟಣೆಯಾಗಿದೆ. ಈ ವಿಚಾರದಲ್ಲಿ ಕಾಂಗ್ರೆಸ್ ಮತ್ತು ಲೀಗುಗಳು ಒಂದೇ ಅಭಿಪ್ರಾಯ ಪಟ್ಟು ಸರ್ಕಾರಕ್ಕೆ ತಿಳಿಸಿದ್ದುವೆಂದು ಹೇಳಲಾಗಿದೆ. ಸರ್ಕಾರಿ ಉದ್ಯೋಗದಲ್ಲಿರುವ ಅಥವಾ ಖಾಸಗಿಯಾಗಿರುವ ಎಲ್ಲಾ ಭಾರತೀಯರಿಗೂ ಇದು ಅನ್ವಯಿಸುವುದು. ಬ್ರಿಟಿಷ್ ಅಧಿಕಾರಿಗಳಿಗೂ ಹೊರತು ವಿಶೇಷ ಸಂದರ್ಭಗಳಲ್ಲಿ ವಿನಾ ಬಿರುದುಗಳನ್ನು ಕೊಡಲಾಗುವುದಿಲ್ಲ. ಬರುವ ಹೊಸ ವರ್ಷದಿಂದಲೇ ಈ ನಿರ್ಧಾರವನ್ನು ಜಾರಿಗೆ ತರಲಾಗುವುದು

ಜೋಗೇಂದ್ರಸಿಂಗರ ನಿಧನ

ವೈಸರಾಯರ ಕಾರ್ಯಕಾರಿ ಸಮಿತಿ ಸದಸ್ಯರಾಗಿದ್ದ ಸರ್ ಜೋಗೇಂದ್ರಸಿಂಗರವರು ಮೊನ್ನೆ ಸಂಜೆ ತಮ್ಮ ೭೯ ನೇ ವಯಸ್ಸಿನಲ್ಲಿ ನಿಧನರಾದರು.

ಬಂಗಾಳ ಕೊಲ್ಲಿಯಲ್ಲಿ ಇಳಿತ

ಬಂಗಾಳ ಕೊಲ್ಲಿಯಲ್ಲಿ ಉಂಟಾಗಿರುವ ಇಳಿತದಿಂದ ಅಸಾಧ್ಯ ಮಳೆಗಾಲ ಆರಂಭವಾಗಿದೆ. ಮದ್ರಾಸ್ ತೀರದ ಜಿಲ್ಲೆಗಳಲ್ಲೆಲ್ಲಾ ಮಳೆ ಹಾರ್ದಿಕವಾದ ತರವಾಗಿ ಬರುತ್ತಿರುವುದಾಗಿ ವರದಿಯಾಗಿದೆ. ಕಡಲೂರಿನಲ್ಲಿ ನಿನ್ನೆ ೬ ಅಂಗುಲ ಮಳೆಯಾಗಿದೆ. ತಾಮ್ರಪರ್ಣಿ ನದಿಯಲ್ಲಿ ಪ್ರವಾಹ ಹೆಚ್ಚಿದೆ. ಕೆರೆ ಕಟ್ಟೆಗಳೆಲ್ಲಾ ಕಿತ್ತುಹೋಗಿವೆ. ತಿರುನಲ್ವೇಲಿ ಜಿಲ್ಲೆಯಲ್ಲಿ ಮಳೆ ಹೆಚ್ಚಿನಿಂದ ಊರಿನಲ್ಲೆಲ್ಲಾ ನೀರು ನುಗ್ಗಿ ೧೦೦ ಸಂಸಾರಗಳು ತೊಂದರೆಗೀಡಾಗಿವೆ.

ಸಾಧ್ವಿ

ತಾ|| ೪-೧೨-೪೬ ಬುಧವಾರ

ಬೆಂಕಿ ಪೆಟ್ಟಿಗೆ ಅಭಾವ

ಹೊಸದಾಗಿ ಬೆಲೆಯನ್ನು ನಿಗದಿ ಮಾಡಿದ ಮೇಲೆ ಬೆಂಕಿ ಪೆಟ್ಟಿಗೆಯು ಸರಿಯಾಗಿ ದೊರೆಯುತ್ತಿಲ್ಲವೆಂಬ ಪುಕಾರುಗಳು ಎಲ್ಲ ಕಡೆಗಳಿಂದಲೂ ಬರುತ್ತಿವೆ. ಗ್ರಾಮಾಂತರಗಳಲ್ಲಿ ಮಾತ್ರವೇ ಅಲ್ಲದೆ ಬೆಂಗಳೂರು, ಮೈಸೂರು ಮುಂತಾದ ಕಡೆಗಳಲ್ಲಿಯೂ ಸಹ ಈ ತೊಂದರೆಯು ಕಂಡು ಬರುತ್ತಿರುವುದು ಆಶ್ಚರ್ಯಕರವಾಗಿದೆ.

ನಲವತ್ತು ಕಡ್ಡಿ ಇರುವ ಪೆಟ್ಟಿಗೆಯ ಬೆಲೆಯನ್ನು ಇಂಡಿಯಾ ಸರ್ಕಾರದವರು ಆರು ಕಾಸಿಗೆ ಇಳಿಸಿ ಅನೇಕ ದಿನಗಳಾದವು. ಅದರಂತೆಯೇ ಎಲ್ಲಾ ಪ್ರಾಂತ್ಯಗಳಲ್ಲಿಯೂ ಮತ್ತು ಸಂಸ್ಥಾನಗಳಲ್ಲಿಯೂ ಬೆಲೆಯನ್ನು ಗೊತ್ತು ಮಾಡಲಾಯಿತು. ಇದಕ್ಕಾಗಿ ಮಹಾಜನರೂ ಬಹಳ ಸಮಾಧಾನವುಳ್ಳವರಾಗಿದ್ದರು. ಆದರೆ ಹೊಸ ಧಾರಣೆಯಂತೆ ಒಂದೆರಡು ದಿನಗಳು ಕೂಡ ಮಾರಾಟವಾಗಲಿಲ್ಲ. ಒಂಭತ್ತು ಕಾಸಿಗೆ ಕಡಮೆಯಾಗಿ ಬೆಂಕಿ ಪೆಟ್ಟಿಗೆಯು ಎಲ್ಲಿಯೂ ಸಿಗುತ್ತಲೇ ಇಲ್ಲ. ಸಿಗುವ ಕಡೆಗಳಲ್ಲಿ ಹೊಸ ಬೆಲೆಯ ವಿಚಾರವನ್ನು ತಿಳಿಸಿದರೆ ಬೆಂಕಿ ಪೆಟ್ಟಿಗೆಯೇ ಇಲ್ಲವೆಂದು ಹೇಳುವುದೂ ರೂಢಿಯಲ್ಲಿದೆ. ಆದುದರಿಂದ ಬೆಲೆಯನ್ನು ಇಳಿಸಿದರೂ ಜನರಿಗೆ ಯಾವ ಪ್ರಯೋಜನವೂ ಆದಂತೆ ಕಂಡು ಬರುವುದಿಲ್ಲ.

ಚಿಲ್ಲರೆ ಅಂಗಡಿಯವರನ್ನು ಕೇಳಿದರೆ ಒಟ್ಟು ವ್ಯಾಪಾರದ ಏಜೆಂಟರುಗಳು ತಮಗೆ ಹೊಸ ಬೆಲೆಯಂತೆ ಕೊಡುತ್ತಿಲ್ಲವೆಂದು ಹೇಳುತ್ತಾರೆ. ಏಜೆಂಟರುಗಳು ತಯಾರಿಕಾ ಸಂಸ್ಥೆಗಳ ಮೇಲೆಯೇ ದೂರು ಹೇಳುತ್ತಿರುವಂತಿದೆ. ಹೀಗೆ ಒಬ್ಬರಮೇಲೊಬ್ಬರು ಪುಕಾರು ಮಾಡುವ ಒಂದು ಸರಣಿಯು ಉಂಟಾಗಿರುತ್ತದೆ. ಆದರೆ ಇದಕ್ಕೆ ಯಾರಾದರೊಬ್ಬರು ಜವಾಬ್ದಾರರಾಗಿರಲೇಬೇಕು.

ಸರ್ಕಾರದವರು ಜನರಿಗೆ ಒದಗಿಸಿರುವ ಸೌಲಭ್ಯಗಳು ಅವರಿಗೆ ಲಭಿಸುತ್ತಿಲ್ಲ. ಮಧ್ಯ ವರ್ತಿಗಳು ವಿಶೇಷ ಲಾಭವನ್ನು ಹೊಡೆದುಕೊಳ್ಳುವಂತಾಗಿದೆ. ಅಧಿಕ ಲಾಭ ಮತ್ತು ಕಳ್ಳಪೇಟೆಯ ವಾಸನೆಯು ಇನ್ನೂ ಜಾರಿಯಲ್ಲಿ ಇರುತ್ತದೆ. ಹೀಗಿದ್ದರೂ ಇಂತಹ ಅಗತ್ಯವಾದ ವಿಚಾರದಲ್ಲಿ ಸರ್ಕಾರದ ಆಜ್ಞೆಯು ನಿರ್ಲಕ್ಷಿಸಲ್ಪಡುತ್ತಿರುವುದು ವಿಷಾದಕರವಾಗಿದೆ.

ಪ್ರಜೆಗಳ ದಿನಚರಿಯ ಉಪಯೋಗಕ್ಕೆ ಅತ್ಯಗತ್ಯವಾಗಿ, ಆಧುನಿಕ ನಾಗರಿಕತೆಯ ಕುರುಹುಗಳಲ್ಲಿ ಪ್ರಾಮುಖ್ಯವಾದುದೆಂದು ಹೆಸರುಗೊಂಡಿರುವ ಬೆಂಕಿ ಕಡ್ಡಿ ಬೆಲೆಯ ವಿಷಯವನ್ನು ಅಧಿಕಾರಿಗಳು ಗಮನಿಸದಿರುವುದು ಸರಿಯಲ್ಲ. ಅಧಿಕ ಲಾಭವನ್ನು ಪಡೆದು ಬಡ ಜನರಿಗೆ ತೊಂದರೆ ಕೊಡುತ್ತಿರುವ ಈ ನೂತನ ವ್ಯಾಧಿಯ ಮೂಲವನ್ನು ಅವರು ಕೂಡಲೇ ಪತ್ತೆ ಹಚ್ಚಿ ಅದಕ್ಕೆ ಕಾರಣ ಕರ್ತರಾದವರಿಗೆ ತಕ್ಕ ಬಂದೋಬಸ್ತು ಮಾಡಿ ಸರ್ಕಾರದ ಆಜ್ಞೆಯು ಜಾರಿಗೆ ಬರುವಂತೆ ಮಾಡುವುದು ಅತ್ಯಗತ್ಯವಾಗಿದೆ.

Edited, printed and published by A. R. Nagarajan at the Sadhvi Press D-Subbiah Road, Mysore

ವಿದ್ಯಾ ಸಚಿವರ ಭರವಸೆ

ವಿದ್ಯಾ ಸಚಿವರು ವಿಶ್ವವಿದ್ಯಾಲಯ ಸಂಘದ ಸಮಿತಿಯ ಸದಸ್ಯರನ್ನು ಮೊನ್ನೆ ಕರೆಸಿಕೊಂಡು ಮಾತುಕತೆ ನಡೆಸಿದರು. ಸಂಘದವರು ತಮ್ಮ ಕುಂದುಕೊರತೆಗಳನ್ನೆಲ್ಲಾ ಸಚಿವರಿಗೆ ವಿಶದೀಕರಿಸಿ ಹೇಳಿದರು. ಸಚಿವರು "ವಂದೇ ಮಾತರಂ", ವಿದ್ಯಾರ್ಥಿ ಅಧ್ಯಕ್ಷರ ಆಯ್ಕೆ, ಸರ್ವ ಸದಸ್ಯರ ಸಭೆಯನ್ನು ಯಾವ ಪರಕ್ಕೂ ಇಲ್ಲದೆ ಕರೆಯುವುದು, ಈ ವಿಷಯಗಳನ್ನು ವೈಸ್ ಛಾನ್ಸಲರು ಜಯಪುರದಿಂದ ಹಿಂದಿರುಗಿದ ಕೂಡಲೇ ಸೂಕ್ತ ರೀತಿಯಲ್ಲಿ ತೀರ್ಮಾನಿಸುವುದಾಗಿ ಭರವಸೆಯಿತ್ತಿದ್ದಾರೆ.

ಬಟ್ಟೆ ಹಂಚಿಕೆ

ಒರುವ ಜನವರಿಯಿಂದ ಸಂಸ್ಥಾನದಲ್ಲೆಲ್ಲಾ ಪ್ರತಿಯೊಬ್ಬ ಪ್ರಜೆಗೂ ವರ್ಷವೊಂದಕ್ಕೆ ೫ ಗಜ ಮಿಲ್ ಬಟ್ಟೆ, ೫ ಗಜ ಕೈಮಗ್ಗದ ಒಟ್ಟೆ ಮತ್ತು ಪ್ರತಿಯೊಂದು ಸಂಸಾರಕ್ಕೂ ೧ ಜೊತೆ ಪಂಚೆ ಮತ್ತು ೧ ಜೊತೆ ಸೀರೆಯನ್ನು ಕೊಡಲಾಗುತ್ತದೆಂದು ಸಿವಿಲ್ ಸಪ್ಲೈಸ್ ಮುಖ್ಯಾಧಿಕಾರಿಗಳಾದ ಮಿ|| ಖಲೀಲರು ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿರುತ್ತಾರೆ.

ಸೈಕಲ್ ಮಾರಾಟಕ್ಕೆ ಪರ್ಮಿಟ್

ಸೈಕಲ್ಲುಗಳು ಸಾರ್ವಜನಿಕರಿಗೆ ಸುಲಭವಾಗಿ ದೊರೆಯುತ್ತಿಲ್ಲವಾಗಿ ಸೈಕಲ್ ಹಂಚಿಕೆಗಾಗಿ ಮೊದಲಿನಂತೆ ಒಂದು ರೀತಿಯಾದ ಪರ್ಮಿಟ್ ಹಂಚುವ ಪದ್ಧತಿಯನ್ನು ಜಾರಿಗೆ ತರಲಾಗುತ್ತದೆಂದು ಸಿವಿಲ್ ಸಪ್ಲೈಸ್ ಮುಖ್ಯಾಧಿಕಾರಿಗಳಾದ ಮಿ|| ಖಲೀಲರು ತಿಳಿಸಿರುತ್ತಾರೆ.

ಹಿಂದೂ ಮಹಾಸಭಾಧ್ಯಕ್ಷರು

ಅಖಿಲ ಭಾರತ ಹಿಂದೂ ಮಹಾಸಭೆಯ ೨೭ನೇ ಅಧಿವೇಶನವು ಈ ಮಾಹೆ ೨೭ರಿಂದ ಲಕ್ನೋ ನಗರದಲ್ಲಿ ಆರಂಭವಾಗುತ್ತದೆ. ಡಾ|| ಶ್ಯಾಮಪ್ರಸಾದ ಮುಖರ್ಜಿಯವರು ಅಧ್ಯಕ್ಷರಾಗಿ ಸರ್ವಾನುಮತದಿಂದ ಆರಿಸಲ್ಪಟ್ಟಿದ್ದಾರೆ.

ಗಾಂಧಿಜಿಯವರು ಅಪಾಯದಿಂದ ಪಾರಾದರು

ಮಹಾತ್ಮರು ಮೊನ್ನೆ ಪ್ರಾರ್ಥನಾ ಸಭೆಗೆ ಹೋಗಲು ಒಂದು ಬೊಂಬಿನ ಸೇತುವೆಯನ್ನು ದಾಟುತ್ತಿದ್ದಾಗ ಅಕಸ್ಮಾತ್ ಕಾಲು ನಡುಗಲಾರಂಭಿಸಿ ಸೇತುವೆಯ ಪಕ್ಕದಲ್ಲಿ ಹಾಕಿದ್ದ ಕಂಬಿಗಳಿಂದ ಕೈ ಜಾರಿ ಪಕ್ಕದಲ್ಲಿ ಹರಿಯುತ್ತಿದ್ದ ಕಾಲುವೆಗೆ ಬಿದ್ದು ಬಿಡುವುದರಲ್ಲಿದ್ದರು. ಅಷ್ಟರಲ್ಲಿ ಅವರ ಬಳಿಯಲ್ಲಿದ್ದ ಶ್ರೀ|| ನಿರ್ಮಲಾನಂದ ಬೋಸರು ಗಾಂಧೀಜಿಯವರಿಗೆ ಸಹಾಯ ಮಾಡಿ ಅವರು ಬೀಳುವುದನ್ನು ತಪ್ಪಿಸಿದರು.

ಸಂಯುಕ್ತ ಪ್ರಾಂತ್ಯದಲ್ಲಿ ರಾಜಕೀಯ ರಾಷಿ ಕೈವಾಡ

ದತಿಯಾ ಸಂಸ್ಥಾನದ ಪ್ರಕರಣದ ಬಗ್ಗೆ ಲೇಖನ ಬರೆದ ಝಾನ್ಸಿಯ 'ಪೇಶೀ ದಾಶ್' ಎಂಬ ಪತ್ರಿಕೆಯ ಮೇಲೆ ಕ್ರಮ ತೆಗೆದುಕೊಳ್ಳಲು ಇಂಡಿಯಾ ಸರ್ಕಾರದ ರಾಜಕೀಯ ಇಲಾಖೆಯು ಹೊರಡಿಸಿದ್ದ ವಾರೆಂಟನ್ನು ಜಾರಿಗೆ ತರದೆ ನಿಲ್ಲಿಸಬೇಕೆಂದು ಸಂಯುಕ್ತ ಪ್ರಾಂತ್ಯದ ಸರ್ಕಾರವು ಝಾನ್ಸಿ ಮ್ಯಾಜಿಸ್ಟ್ರೇಟರಿಗೆ ಆಜ್ಞೆ ಇತ್ತಿದೆ.

ಸಂತಾಪ ಸಭೆ

ಮೈಸೂರು ೪

ಶ್ರೀ ಕೈಲಾಸಂರವರ ನಿಧನಕ್ಕಾಗಿ ಸಂತಾಪ ಸೂಚಿಸುವ ಬಗ್ಗೆ ಕರ್ನಾಟಕ ಸಂಘದಾಶ್ರಯದಲ್ಲಿ ನಿನ್ನೆ ಬನುಮಯ್ಯನವರ ಹೈಸ್ಕೂಲಿನಲ್ಲಿ ಸಭೆಯನ್ನು ಏರ್ಪಡಿಸಲಾಗಿತ್ತು. ಶ್ರೀ ಡಿ.ಬಿ ವಿಶ್ವಂಬರಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಎ ಎನ್ ಮೂರ್ತಿರಾಯರು ದಿವಂಗತರ ಗುಣಗಾನ ಮಾಡುತ್ತಾ ಇತಿಹಾಸದ ನಾಟಕಗಳಿಗೂ ಶ್ರೀ ಕೈಲಾಸಂರವರು ಬರೆದಿರುವ ನಾಟಕಗಳಿಗೂ ಇರುವ ಅಂತರವನ್ನು ತಿಳಿಸಿದರು. ಶ್ರೀ ಚಲುವಯ್ಯಂಗಾರ್ಯರು ಕೈಲಾಸಂರವರಿಂದ ರಚಿತವಾದ ಬರ್ಡನ್ ಎಂಬ ಇಂಗ್ಲಿಷ್ ನಾಟಕವನ್ನು ಓದಿದರು. ಶ್ರೀ ಎನ್ ಎಸ್ ನಾರಾಯಣ ಶಾಸ್ತ್ರಿಗಳು ದಿವಂಗತರ ಬಗ್ಗೆ ಮಾತನಾಡುತ್ತಾ ಅವರ ಹಾಸ್ಯಪ್ರವೃತ್ತಿ, ಕಲಾಭಿಮಾನಿಗಳ ಬಗ್ಗೆ ಇಟ್ಟಿದ್ದ ವಿಶ್ವಾಸವನ್ನು ವ್ಯಕ್ತಪಡಿಸಿದರು. ಶ್ರೀಗಳಾದ ಎಂ.ಎನ್ ಕೃಷ್ಣಮೂರ್ತಿ ಮತ್ತು ಎನ್.ಸಿ ಅಣ್ಣಯ್ಯನವರುಗಳು ಭಾಷಣ ಮಾಡಿದಮೇಲೆ ಸಂತಾಪ ಸೂಚನೆಯ ನಿರ್ಣಯವನ್ನು ಅಧ್ಯಕ್ಷರು ಮುಂದಿಸಿದರು. ಎಲ್ಲರೂ ಎದ್ದುನಿಂತು ಅದನ್ನು ಅಂಗೀಕರಿಸಿದರು.

ಕೀರ್ತನೆಗಳು

ರಾಜಧಾನಿಯ ಕಬೀರ್ ರಸ್ತೆಯಲ್ಲಿರುವ ಕೀರ್ತನಕಾರ ಮಂಡಲಿಯಲ್ಲಿ ಈ ದಿನದಿಂದ ಸಂಜೆ ೬ ಘಂಟೆಗೆ ಈ ರೀತಿ ಕೀರ್ತನೆಗಳು ಜರುಗುವುವು. ಮಹಾಜನರು ಭಾಗವಹಿಸಬೇಕಾಗಿ ಕೋರಲಾಗಿದೆ. ಈ ದಿನ ಶ್ರೀ ಹೆಚ್. ಟಿ. ಶಾಮಣ್ಣನವರಿಂದ 'ಭಕ್ತ ಸುಧನ್ವ', ನಾಳೆ ಶ್ರೀ ಮಿರ್ಲೆ ಶ್ರೀನಿವಾಸರಾಯರಿಂದ '...ಆಂಜನೇಯ', ೬ ನೇ ತಾ|| ಶ್ರೀ ಜಿ ಸಂಜೀವ ದಾಸರಿಂದ 'ಹರಿಶ್ಚಂದ್ರ', ೭ ನೇ ತಾ|| ಶ್ರೀ ಸಂಬಂಧ ಮೂರ್ತಿಯವರಿಂದ 'ಸೀತಾ ಕಲ್ಯಾಣ' ಮತ್ತು ೮ ನೇ ತಾ|| ಮಧ್ಯಾಹ್ನ ೪ ಗಂಟೆಗೆ ಶ್ರೀ ಎಗ ನಾರಾಯಣಮೂರ್ತಿ ದಾಸರಿಂದ 'ಸಂತ ಸಖೂ ಬಾಯಿ'

ಬೆಂಕಿ ಪೆಟ್ಟಿಗೆ ಬೆಲೆ ಎಷ್ಟು

ಸ್ವಂ ಸು.] ಚಾಮರಾಜನಗರ ೩

ಬೆಂಕಿ ಪೆಟ್ಟಿಗೆ ಬೆಲೆ ವಿಪರೀತವಾಗಿದೆ. ಕ್ಷಣಕ್ಕೊಂದು ಬೆಲೆ. ಸಿಗುವುದೂ ಕಷ್ಟ. ಹೆಚ್ಚಿಗೆ ಚರ್ಚೆ ಮಾಡಿದರೆ ಬೆಂಕಿ ಪೆಟ್ಟಿಗೆಯೇ ಇಲ್ಲವೆನ್ನುತ್ತಾರೆ. ಬೆಲ್ಲವೂ ಹೀಗೆಯೇ. ಸಂಬಂಧಪಟ್ಟವರು ಗಮನ ಕೊಡಬೇಕು

ಮೈಸೂರು ಸಿಟಿ ರೇಷನಿಂಗ್

ನೋಟಿಫಿಕೇಷನ್ ನಂ. R1.188 46-7

ತಾ|| 3-12-46

ಮೈಸೂರು ಸಿಟಿಯಲ್ಲಿರುವ ಎಲ್ಲಾ ರೇಷನ್ ಡಿಪೋಗಳೂ, ಮತ್ತು ಮೊಹಲ್ಲಾ ಸಬ್ ಗೋಡೌನ್‌ಗಳೂ ಸಹಾ, ಇದೇ ಮಾಹೆ ೮ ನೇ ತಾರೀಖು ಗುರುವಾರ "ಮೊಹರಂ" ಹಬ್ಬದ ಪ್ರಯುಕ್ತ ಪೂರ್ತಿ ಮುಚ್ಚಲ್ಪಡುತ್ತವೆ

(ಸಹಿ) ಅಬ್ದುಲ್ ರಜಾಕ್,
ರೇಷನಿಂಗ್ ಆಫೀಸರ್,
ಮೈಸೂರು

ಕ್ರೈಸ್ತರಿಗೆ ಕ್ರಿಸ್‌ಮಸ್‌ಗೆ ವಿಶೇಷ ಬಟ್ಟೆ

ಸ್ವಂ ಸು.] ಬೆಂಗಳೂರು

ಕ್ರಿಸ್‌ಮಸ್ ಹಬ್ಬದ ಸಂದರ್ಭದಲ್ಲಿ ಸಂಸ್ಥಾನದ ಕ್ರೈಸ್ತ ಕೋಮಿನವರಿಗೆ ದೊರೆಯುವ ವಿಶೇಷ ಕೋಟಾವನ್ನು ಕೊಡಲು ಸರ್ಕಾರದವರು ಏರ್ಪಾಡುಗಳನ್ನು ಮಾಡಿದ್ದಾರೆ.

ಚಿನ್ನದ ಗಣಿಗೆ ವಿಶೇಷ ಮ್ಯಾಜಿಸ್ಟ್ರೇಟರು

ಚಿನ್ನದ ಗಣಿಯಲ್ಲಿ ಈಚೆಗೆ ನಡೆದ ... ಘಟನೆಗಳ ಸಂಬಂಧದಲ್ಲಿ ಹೂಡಲಾಗಿರುವ ... ಕದ್ದಮೆಗಳ ಮತ್ತು ಗಣಿ ಪ್ರದೇಶದಲ್ಲಿ ... ವಾಗಬಹುದಾದ ಕ್ರಿಮಿನಲ್ ಮೊಕದ್ದಮೆಗಳ ವಿಚಾರಣೆ ನಡೆಸಲು ತಾತ್ಕಾಲಿಕ ವ್ಯವಸ್ಥೆಯೊಂದನ್ನು ಮಾಡಿ ಆ|| ಶ್ರೀ ಎಗ ಲಕ್ಷ್ಮಣಾಚಾರ್ಯರನ್ನು ಅ ... ಕ್ಕೆ ನೇಮಕರೂರು ಮಾಡಲಾಗಿದೆ.

* ಕಂಟ್ರೋಲರಾದ ಶ್ರೀ ಎಂ. ... ಣ್ಣನವರು ಹಣಕಾಸಿನ ಕಾರ್ಯದರ್ಶಿ ... ಅಧಿಕಾರ ನೋಡುತ್ತಿರುವುದರಿಂದ ಶ್ರೀ ... ಟಿ. ಶ್ರೀನಿವಾಸನ್‌ರವರನ್ನು ಅಕ್ಟಿಂಗ್ ... ಟ್ರೋಲರನ್ನಾಗಿ ನೇಮಕ ಮಾಡಲಾಗಿ...

ಚಂದ್ರ ಗ್ರಹಣ

ತಾ|| ೮-೧೨-೧೯೪೬ ಮಾರ್ಗಶಿರ ... ಕ್ಲ ಪೂರ್ಣಿಮಾ ಭಾನುವಾರ ರಾತ್ರಿ ರೋಹಿಣಿ ಮತ್ತು ಮೃಗಶಿರಾ ನಕ್ಷತ್ರಗಳ... ಬಿಂಬಾಧಿಕ ಚಂದ್ರಗ್ರಹಣವಾಗುವುದು. ದಿನ ರಾತ್ರಿ ೯-೪೦ ಘಂಟೆಗೆ ಈಶಾನ್ಯ ... ಕ್ಕಿನಲ್ಲಿ ಗ್ರಹಣವಾ ಸ್ಪರ್ಶವಾಗಿ ರಾತ್ರಿ ೧... ೫೬ ಘಂಟೆಗೆ ವಾಯುವ್ಯ ದಿಕ್ಕಿನಲ್ಲಿ ಮೋಕ್ಷವಾಗುವುದು. ಈ ದಿವಸ ಮಧ್ಯಾಹ್ನ ೧... ೧೧ ಘಂಟೆವರಿಗೆ ಭೋಜನವನ್ನು ಮಾಡಬಹುದು. ಗ್ರಹಣ ಪ್ರಯುಕ್ತ ತರ್ಪಣಾದಿಗಳನ್ನು ರಾತ್ರಿ ಘಂಟೆ ೧೧ ಗಳ ಮೇಲೆ ಪ್ರಾರಂಭಿಸಬಹುದು. ರೋಹಿಣಿ-ಮೃಗಶಿರ ನಕ್ಷತ್ರದವರೂ, ವೃಷಭ ರಾಶಿಯವರು ಶಾಂತಿಯನ್ನು ಮಾಡಿಕೊಳ್ಳಬೇಕು, ಎಂದು ಆಸ್ಥಾನ ಜ್ಯೋತಿಷ್ಯ ವಿದ್ವಾನ್ ಶ್ರೀ ಸಿ. ಪತ್ಯಣ್ಣ ಜೋಯಿಸರು ತಿಳಿಸುತ್ತಾರೆ.

ರಾಜಕಮಲ್

ಮೈಸೂರು

29-11-46 ರಿಂದ

ಮೂರನೆಯ ವಾರ

ಡಾಕ್ಟರ್ ಕೊಟ್ನಿಸ್ ಕಿ

ಅಮರ್-ಕಹಾನಿ

-: ಭೂಮಿಕೆ :-

ಜಯಶ್ರೀ, ಶಾಂತಾರಾಂ, ಉಲ್ಲಾಸ್

|| ಜೈ ಹಿಂದ್ ||

ವಿದ್ಯಾರ್ಥಿಗಳಿಗೆ! ಸುಸಮಯ!!

ಆನಂದ್ ಟೈಲರಿಂಗ್ ಮಾರ್ಟ್

ಜನಗಳು ಮೆಚ್ಚುವಹಾಗೆ ಉಡುಪುಗಳನ್ನು

ಸಾಧಾರಣ ದರದಲ್ಲಿ ನಾಜೂಕಾಗಿ

ಕಾಲಕ್ಕೆ ಸರಿಯಾಗಿ ಹೊಲಿಯುತ್ತೇವೆ.

ಒಂದು ಸಲ ಬಂದು ಪರೀಕ್ಷಿಸಿರಿ.

ವಿದ್ಯಾರ್ಥಿಗಳಿಗೆ ಮಾತ್ರ ರಿಯಾಯಿತಿ ದರ

ಪ್ರೊ|:- ಪಿ. ಎಗ. ಆನಂದನ್,

ಬೆಂಗಳೂರು ಟೈಲರ್.

573 ಇರ್ವಿನ್‌ರೋಡ್, ಮೈಸೂರು.

ರೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಗುರುವಾರ ೫—೧೨—೪೬ [ಸಂಚಿಕೆ ೧೦೪

ಲಂಡನ್ನಿನಲ್ಲಿ ಈ ದಿನ ದುಂಡು ಮೇಜಿನ ಸಭೆ

ಶಿಕ್ಷಕರು ಮತ್ತು ಮುನ್ಷಿಗಳ ಸಂಸ್ಥೆ

ಮೈಸೂರು ೫

ಮೈಸೂರು ಸಂಘದ ಸಭೆಯು ೨ ನೇ ...ಗಳ ಟ್ರೈನಿಂಗ್ ಕಾಲೇಜಿನಲ್ಲಿ ಉಪಾಧ್ಯಾಯರಾದ ಶ್ರೀ ಬಿ. ಸಯ್ಯದ್ ಮ...ವರ ಅಧ್ಯಕ್ಷತೆಯಲ್ಲಿ ಸೇರಿ ಕೆಳಗಿನ ನಿರ್ಣಯಗಳನ್ನು ಮಾಡಿತು:- ಪಂಡಿತರು, ಮೌಲ್ವಿ, ಮತ್ತು ಮುನ್ಷಿ ಪರೀಕ್ಷೆಗಳಿಗೆ ... ಕೋರ್ಸನ್ನು ಇತ್ತೀಚೆಗೆ ... ಭಾವಿಸಬೇಕು. ... ವನ್ನು ಪ್ರಾರಂಭಿಸುವುದು, ಕೆಳಗಿನ ನೌಕರರ ಸಂಬಳವನ್ನು ಪರಿಶೀಲಿಸಿ ... ಪಂಡಿತರು ಮತ್ತು ಮುನ್ಷಿಗಳ ... ಗ್ರಾಜುಯೇಟುಗಳಿಗಿರುವ ... ನೀಡಬೇಕೆಂದು ಸರ್ಕಾರವನ್ನು ಪ್ರಾರ್ಥಿಸುವುದು, ಮಿಡಲ್ ಸ್ಕೂಲುಗಳಲ್ಲಿ ಗ್ರಾಜುಯೇಟುಗಳಿಗೆ ಕೊಡುವಂತೆ ... ಮೌಲ್ವಿ ಮತ್ತು ಮುನ್ಷಿಗಳಿಗೂ ... ಮೊದಲನೆ ತರಗತಿಯ ಪ್ರಮಾಣದ ... ಸಂಬಳ ಕೊಡಬೇಕೆಂದು ಪ್ರಾರ್ಥಿಸುವುದು.

ಬಂಗಾಳಾ ನಿರಾಶ್ರಿತರಿಗೆ ಸಹಾಯ

... ಶ್ರೀ ಎಂ. ಮಾಧವರಾವ್ ಮತ್ತು ಮಿತ್ರರು ಟೌನ್‌ಹಾಲಿನಲ್ಲಿ ... ಸಂಜೆ ೬-೩೦ ಕ್ಕೆ 'ಪ್ರೇಮಲೀಲೆ' ... ನೇ ತಾ॥ ಸಂಜೆ ೬-೩೦ ಕ್ಕೆ ... ಮತ್ತು ... ನೇ ತಾ॥ ಸಂಜೆ ೬-೩೦ ಕ್ಕೆ 'ಸಂಸಾರ ನೌಕೆ' ಎಂಬ ನಾಟಕಗಳನ್ನು ಅಭಿನಯಿಸಿ ಅವುಗಳಿಂದ ... ಉತ್ಪತ್ತಿಯೆಲ್ಲವನ್ನೂ ಬಂಗಾಳಾ ... ನಿರಾಶ್ರಿತರ ಸಹಾಯಾರ್ಥವಾಗಿ ಕೊಡಲಿದ್ದಾರೆ. ಮಹಾಜನರು ಉದಾರವಾಗಿ ಪ್ರೋತ್ಸಾಹಿಸಬೇಕೆಂದು ಕೋರಲಾಗಿದೆ.

ಪ್ರದೋಷ ಸಂಗೀತ

ಕೃಷ್ಣರಾಜ ಮೊಹಲ್ಲಾ ನಾಲಾಬೀದಿಯಲ್ಲಿರುವ ಶ್ರೀ ದೊಡ್ಡರಾಮ ದೇವಸ್ಥಾನದಲ್ಲಿ ನಾಳೆ ಸಂಜೆ ೭ ಗಂಟೆಗೆ ಪ್ರದೋಷ ಪ್ರಯುಕ್ತ ವಿದ್ವಾನ್ ಶ್ರೀ ಎ. ಕೇಶವಮೂರ್ತಿ, ಬಿ. ಕೆ. ವಿ. ರಾಜಯ್ಯಂಗಾರ್ಯರುಗಳ ಪಿಟೀಲು ವಾದನವೂ, ಎಂ॥ ಗೋಪಾಲರಾವ್ ಮೃದಂಗವೂ ಜರುಗುವುವು. ಸಜ್ಜನರು ಬರಬೇಕೆಂದು ಕೋರಲಾಗಿದೆ.

ನಿಧನ

... ಪ್ರಮುಖ ವ್ಯಾಪಾರಿಗಳ ... ಸಮಾಜದಲ್ಲಿ ಆದ ಶ್ರೀ ತಿಮ್ಮಾಜಪ್ಪನವರು ... ಹೃದಯದಿಂದ ನರಳುತ್ತಿದ್ದು ಮೊನ್ನೆ ಸಂಜೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರಿಗೆ ೪೫ ವರ್ಷ ವಯಸ್ಸಾಗಿದ್ದಿತು. ದಿವಂಗತರು ಸಾ॥ ಹೋ... ವಿದ್ಯಾರ್ಥಿ ನಿಲಯದ ... ದರ್ಶಿಗಳಾಗಿದ್ದರು. ಇವರ ನಿಧನದ ಬಗ್ಗೆ ಸದರಿ ನಿಲಯದ ವಿದ್ಯಾರ್ಥಿಗಳು ಸಂತಾಪ ಸೂಚನಾ ಸಭೆ ಜರುಗಿಸಿ, ಆತ್ಮಕ್ಕೆ ಶಾಂತಿಯನ್ನು ಕೋರಿದರು.

ಜಿನ್ನಾರವರು ಲಂಡನ್ನಿನಲ್ಲೇ ತಂಗುವರು

ಲಂಡನ್ನಿಗೆ ಹೋಗಿರುವ ಮಿ॥ ಜಿನ್ನಾರವರು ಸ್ವಲ್ಪಕಾಲ ಅಲ್ಲೇ ಇರುವರೆಂದೂ ಸದ್ಯಕ್ಕೆ ಭಾರತಕ್ಕೆ ಆಗಮಿಸುವುದಿಲ್ಲವೆಂದೂ ಹೇಳಲಾಗುತ್ತಿದೆ. ಪಂ॥ ನೆಹರೂ ಮತ್ತು ಇತರ ನಾಯಕರು ಡಿ॥ ... ಸೇರಲಿರುವ ರಾಜ್ಯಾಂಗ ರಚನಾ ಸಮಿತಿಯ ಕಾರ್ಯಕಲಾಪಗಳು ಆರಂಭವಾಗುವ ವೇಳೆಗೆ ಹಿಂದಿರುಗುವರೆಂದು ಹೇಳಲಾಗಿದೆ.

ಲೀಗಿನ ಆಕ್ಷೇಪಣೆಗೆ ನಿಜಾಮರ ಉತ್ತರ

ಜಾತಿಗಿಂತ ರಾಷ್ಟ್ರವೇ ಮುಖ್ಯವಾದದ್ದೆಂದು ಸರ್ ಮಿರ್ಜಾರವರು ಹೇಳಿದ್ದಕ್ಕೆ ಮುಸ್ಲಿಂ ಲೀಗು ಆಕ್ಷೇಪಣೆ ಎತ್ತಿದ್ದಿತು. ಹೈದರಾಬಾದಿನ ನಿಜಾಮರು ಒಂದು ಬಿನ್ನಹವನ್ನು ಹೊರಡಿಸಿ, ಜಾತಿಗಿಂತ ರಾಷ್ಟ್ರವೇ ಹೆಚ್ಚಿನದೆಂಬ ಸರ್ ಮಿರ್ಜಾರವರ ವಾದವನ್ನು ಸಮರ್ಥಿಸಿದ್ದಾರೆ.

ಸಾವಿರ ಕೋಟಿ ಗಜ ಬಟ್ಟೆ ಖೋತಾ

ದೇಶದಲ್ಲಿ ಉಂಟಾಗಿರುವ ಕೋಮುವಾರು ಅಸ್ವಸ್ಥತೆ, ಕೈಗಾರಿಕಾ ಅಶಾಂತಿ, ಮತ್ತು ಕಲ್ಲಿದ್ದಲಿನ ಅಭಾವಗಳ ಪ್ರಯುಕ್ತ ಸಾವಿರ ಕೋಟಿ ಗಜ ಬಟ್ಟೆಯು ಸಾಲದಾಗಬಹುದೆಂಬ ಶಂಕೆ ತಲೆದೋರಿದೆ. ಇಡೀ ದೇಶಕ್ಕೆ ಬೇಕಾಗುವ ಬಟ್ಟೆಯಲ್ಲಿ ಮುಕ್ಕಾಲು ಭಾಗದಷ್ಟು ಬೊಂಬಾಯಿ ಮತ್ತು ಅಹಮದಾಬಾದಿನ ಗಿರಣಿಗಳೇ ಸರಬರಾಜು ಮಾಡುತ್ತಿದ್ದುವು. ಆದರೆ ಆ ಕೈಗಾರಿಕಾ ಕೇಂದ್ರಗಳಲ್ಲಿ ಉದ್ಭವಿಸಿರುವ ಮುಷ್ಕರ ಮತ್ತು ಗಲಭೆಗಳ ಕಾರಣವಾಗಿ ಬಟ್ಟೆ ತಯಾರಿಕೆಯಲ್ಲಿ ಖೋತಾ ಬಿದ್ದಿದೆ. ಮೇಲ್ಕಂಡ ಕಾರಣಗಳಿಂದ ದೇಶದಲ್ಲಿ ಬಟ್ಟೆಯ ಕ್ಷಾಮ ಒದಗಬಹುದೆಂಬ ಭೀತಿಗೆ ಅವಕಾಶವಾಗಿದೆ.

ಪ್ರಭುಗಳ ಭೇಟಿ

ಮೈಸೂರು ೫

ಈ ದಿನ ಬೆಳಗ್ಗೆ ಶ್ರೀಮನ್ಮಹಾರಾಜರವರು ಪೌರಸಭೆ ಮತ್ತು ಪ್ರಜಾಪ್ರತಿನಿಧಿ ಸಭೆಯ ಅಧ್ಯಕ್ಷರಾದ ಶ್ರೀ ಕೆ. ಸಿದ್ದಯ್ಯನವರಿಗೂ ನಿಯುಕ್ತ ಉಪಾಧ್ಯಕ್ಷರಾದ ಶ್ರೀ ಎಸ್. ಕೃಷ್ಣಯ್ಯಂಗಾರ್ಯರವರಿಗೂ ಭೇಟಿ ದಯಪಾಲಿಸಿದರೆಂದು ತಿಳಿದು ಬಂದಿದೆ.

ವಿದ್ಯುಚ್ಛಕ್ತಿಯಿಂದ ಇಬ್ಬರ ಮರಣ

ಮೈಸೂರು ೫

ನಿನ್ನೆ ದಿನ ಸಂಜೆ ೪ ಘಂಟೆ ಸಮಯದಲ್ಲಿ ದೇವರಾಜ ಮಾರ್ಕೆಟ್ಟಿನ ಹೊರಗೆ ಕಟ್ಟಲಾಗುತ್ತಿರುವ ಕಟ್ಟಡವೊಂದರ ಬಳಿ ಕಟ್ಟಡದ ಕಂಟ್ರಾಕ್ಟರ ಕಡೆಯ ಗುಮಾಸ್ತರೂ, ಒಬ್ಬ ಕೆಲಸಗಾರನೂ ವಿದ್ಯುಚ್ಛಕ್ತಿಯ ಸಂಪರ್ಕದಿಂದ ಮೃತರಾದರು. ಅವರು ಹಿಡಿದಿದ್ದ ಕೊಂಡು ಹೋಗುತ್ತಿದ್ದ ಕಬ್ಬಿಣದ ಸಲಾಕಿಯು ವಿದ್ಯುಚ್ಛಕ್ತಿಯ ತಂತಿಗೆ ತಗಲಿದುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ.

ಲಂಡನ್ನಿನಲ್ಲಿ ಈ ದಿನ ದುಂಡುಮೇಜಿನ ಪರಿಷತ್ತು

ಭಾರತದ ನಾಯಕರು ೧೨ ಗಂಟೆಗಳ ಕಾಲ ತಡವಾಗಿ ಲಂಡನ್ ನಗರವನ್ನು ತಲುಪಿದ್ದರಿಂದ ಮಾತುಕತೆಗಳು ತ್ವರಿತವಾಗಿ ಸಾಗುತ್ತಿವೆ. ಈ ದಿನ ಬ್ರಿಟಿಷ್ ಮಂತ್ರಿಗಳೂ ಭಾರತದ ನಾಯಕರೂ ದುಂಡುಮೇಜಿನ ಪರಿಷತ್ತಿನಲ್ಲಿ ಸೇರಿ ಮಾತುಕತೆ ನಡೆಸಲು ಏರ್ಪಾಡಾಗಿದೆ. ಬಕಿಂಗ್‌ಹ್ಯಾಂ ಅರಮನೆಯಲ್ಲಿ ರಾಜರು ಈ ನಾಯಕರಿಗೆ ಇಂದು ಔತಣವನ್ನೇರ್ಪಡಿಸಿದ್ದಾರೆ.

ಪ್ರಧಾನ ಮಂತ್ರಿಗಳು ಭಾರತದ ನಾಯಕರೊಡನೆಯೂ, ವೈಸ್ರಾಯರೊಡನೆಯೂ ವೈಯಕ್ತಿಕವಾಗಿ ನಡೆಸಿದ ಮಾತುಕತೆಗಳ ವಿವರಗಳನ್ನು ದುಂಡುಮೇಜಿನ ಪರಿಷತ್ತಿನ ಮುಂದೆ ಇಟ್ಟು ಉಭಯ ಪಂಗಡಗಳಿಗೆ ಇರುವ ಭಿನ್ನಾಭಿಪ್ರಾಯಗಳನ್ನು ನಿವಾರಿಸಲು ಪ್ರಯತ್ನಿಸುವರೆಂದು ಹೇಳಲಾಗಿದೆ.

ಢಕ್ಕಾದಲ್ಲಿ ಪ್ರಿನ್ಸಿಪಾಲರಿಗೆ ಇರಿತ

ಢಕ್ಕಾದಲ್ಲಿ ಕೋಮುವಾರು ಗಲಭೆ ಹೆಚ್ಚುತ್ತಲಿದೆ. ಕೆಲವು ಪುಂಡರು ಅಲ್ಲಿನ ಇಂಟರ್ ಕಾಲೇಜಿಗೆ ನುಗ್ಗಿ, ಅಲ್ಲಿನ ಪ್ರಿನ್ಸಿಪಾಲರನ್ನೂ ಮತ್ತು ಒಬ್ಬ ಪ್ರೊಫೆಸರನ್ನೂ ಇರಿದರೆಂದೂ ಅನಂತರ ಅವರನ್ನು ಮಿಟ್‌ಫರ್ಡ್ ಆಸ್ಪತ್ರೆಗೆ ದಾಖಲ್ ಮಾಡಲಾಯಿತೆಂದು ವರದಿಯಾಗಿದೆ. ನಗರದ ಪೂರ್ವ ಭಾಗದಲ್ಲಿ ವಾಸಿಸುತ್ತಿರುವ ಕೌನ್ಸಿಲ್ ಆಫ್ ಸ್ಟೇಟ್ ಸದಸ್ಯರ ಮನೆಗೆ ಕೆಲವು ಪುಂಡರು ನುಗ್ಗಿ ಅಲ್ಲಿದ್ದ ಅವರ ತಂಗಿಯನ್ನೂ ಸಹ ಇರಿದು ಕೊಂದರು. ಕರ್ಫ್ಯೂ ಆಜ್ಞೆಯನ್ನು ನಗರದಲ್ಲೆಲ್ಲಾ ಜಾರಿ ಮಾಡಲಾಗಿದೆ.

ಬ್ರಿಟನ್ನಿನ ತೀರ್ಮಾನಕ್ಕಾಗಿ ಜಿನ್ನಾರವರ ನಿರೀಕ್ಷಣೆ

ಭಾರತ ಸಮಸ್ಯೆ ಪರಿಹಾರಕ್ಕಾಗಿ ಬ್ರಿಟನ್ನು ಅನ್ಯರೀತಿ ಏನನ್ನು ಮಾಡುತ್ತದೆಯೆಂದು ಕಾದು ನೋಡಲಾಗುತ್ತಿದೆ. ಬ್ರಿಟಿಷ್ ಸರ್ಕಾರವು ಧೈರ್ಯವಾದ ಮತ್ತು ಗೊತ್ತಾದ ನೀತಿಯನ್ನು ಅನುಸರಿಸದಿದ್ದಲ್ಲಿ, ಭಾರತದ ಪರಿಸ್ಥಿತಿಯು ಕೈಮೀರಿ ಹೋಗಿ, ಅತ್ಯಂತ ಭೀಕರವಾದ ಪರಿಣಾಮವು ಉಂಟಾಗುವುದರಲ್ಲಿ ಸಂದೇಹವಿಲ್ಲ. ಶೀಘ್ರ ಕಾರ್ಯ ಕಾಲ ಮೀರಿಹೋಗಿದೆ ಎಂದು ಮಿ॥ ಜಿನ್ನಾರವರು ಲಂಡನ್ನಿನಲ್ಲಿ ಕೊಟ್ಟ ಹೇಳಿಕೆ ಒಂದರಲ್ಲಿ ತಿಳಿಸಿದ್ದಾರೆ.

ಮದ್ರಾಸ್ ನಗರದಲ್ಲಿ ಮತ್ತೆ ನೀರಿನ ಪ್ರವಾಹ

ಮೊನ್ನೆಯಿಂದ ಧಾರಾಕಾರವಾಗಿ ಮದ್ರಾಸ್ ನಗರದಲ್ಲಿ ಮಳೆ ಹುಯ್ಯುತ್ತಿದೆ. ಸಾವಿರಾರು ಮಂದಿ ಜನರು ಮನೆಮಾರುಗಳನ್ನು ಕಳೆದುಕೊಂಡು ತೊಂದರೆಗೀಡಾಗಿದ್ದಾರೆ. ಅನೇಕ ಮನೆಗಳು ನೆಲಸಮವಾಗಿವೆ. ಗೋಡೆಗಳೂ, ಮರಗಳೂ, ಉರುಳಿದಾಗ ಸಿಕ್ಕಿಕೊಂಡ ಇಬ್ಬರು ಮೃತಪಟ್ಟಿದ್ದಾರೆ. ಅನೇಕರಿಗೆ ಗಾಯಗಳಾಗಿವೆ. ಕೆಲವು ಟ್ರೈಲ್ವೆ ... ಕೊಚ್ಚಿ ಹೋಗಿವೆ. ನಗರದ ತಗ್ಗಿದ ಪ್ರದೇಶಗಳ ರಸ್ತೆಗಳಲ್ಲೆಲ್ಲಾ ಮಂಡಿ ಮಟ್ಟದ ನೀರಿನ ಪ್ರವಾಹ ಹರಿಯುತ್ತಿದೆ.

೩೧ ಸಹಸ್ರ ಉಪಾಧ್ಯಾಯರ ಮುಷ್ಕರ

ಪಂಜಾಬ್ ಪ್ರಾಂತ್ಯದ ಜಿಲ್ಲಾ ಬೋರ್ಡುಗಳಿಗೆ ಸೇರಿದ ೩೧ ಸಹಸ್ರ ಶಾಲಾ ಉಪಾಧ್ಯಾಯರುಗಳು ನಿನ್ನೆಯಿಂದ ಮುಷ್ಕರವನ್ನು ಆರಂಭಿಸಿದ್ದಾರೆ. ಸಂಬಳ ಹೆಚ್ಚಿಸಲು ಸರ್ಕಾರಕ್ಕೆ ಕೊಟ್ಟಿದ್ದ ಅವಧಿ ನಿನ್ನೆಗೆ ಪರಿಸಮಾಪ್ತಿಯಾಯಿತು. ಈ ಮುಷ್ಕರದ ಫಲವಾಗಿ ೧೧೦ ಲಕ್ಷ ವಿದ್ಯಾರ್ಥಿಗಳಿಗೆ ವ್ಯಾಸಂಗವು ನಿಂತಂತಾಗಿದೆ. ಸದರೀ ಉಪಾಧ್ಯಾಯರುಗಳು ಗ್ರಾಮಗಳಿಗೆ ಭೇಟಿಕೊಟ್ಟು ಕೋಮುವಾರು ಸೌಹಾರ್ದವ ಪ್ರಚಾರವನ್ನು ಮಾಡುತ್ತಿರುವರೆಂದು ವರದಿಯಾಗಿದೆ.

ಮದ್ರಾಸಿನ ಶ್ರೀಮಂತರುಗಳ ಮೇಲೆ ಆಪಾದನೆ ಹೊರಿಸಲಾಯಿತು

ರಾಜಾ ಸರ್ ಅಣ್ಣಾಮಲೈ ಚೆಟ್ಟಿಯಾರ್ ಕುಮಾರ ರಾಜ ಮುತ್ತಯ್ಯ ಚೆಟ್ಟಿಯಾರ್, ಮಿ॥ ರಾಮನಾಥನ್ ಚೆಟ್ಟಿಯಾರ್, ... ಚೆಟ್ಟಿಯಾರ್, ... ಚೆಟ್ಟಿಯಾರ್, ಪಳನಿಯಪ್ಪ ಚೆಟ್ಟಿಯಾರ್, ... ಚೆಟ್ಟಿಯಾರ್, ... ಮತ್ತು ನೇಲಿಯಪ್ಪ ಚೆಟ್ಟಿಯಾರ್, ಮುಂತಾದ ಮದ್ರಾಸಿನ ಕೋಟ್ಯಾಧೀಶರು ಹಣದ ಕೊರತೆ ಆಜ್ಞೆಯನ್ನು ವಿರೋಧಿಸಿ ವರ್ತಿಸಿದರೆಂದು ನಡೆಯುತ್ತಿರುವ ಮೊಕದ್ದಮೆಯಲ್ಲಿ ಕೋಯಮತ್ತೂರಿನ ಜಿಲ್ಲಾ ಮ್ಯಾಜಿಸ್ಟ್ರೇಟರು ಅವರುಗಳ ಮೇಲೆ ಮೊನ್ನೆ ದಿವಸ ಆಪಾದನೆಯನ್ನು ಹೊರಿಸಿದರು. ಅವರು ತಾವು ನಿರಪರಾಧಿಗಳೆಂದು ಹೇಳಿಕೊಂಡಿದ್ದಾರೆ. ವಿಚಾರಣೆ ೧೬ ನೇ ತಾ॥ ಮುಂದೂಡಲ್ಪಟ್ಟಿದೆ.

ರಾಜ್ಯಾಂಗ ಸಭೆಯ ಕಾಂಗ್ರೆಸ್ ಸಮ್ಮೇಳನ

ರಾಜ್ಯಾಂಗ ರಚನಾ ಸಮಿತಿಯ ಕಾಂಗ್ರೆಸ್ ಸದಸ್ಯರ ಸಭೆಯನ್ನು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೃಪಲಾನಿಯವರು ಡಿಸೆಂಬರ್ ೮ನೇ ತಾ॥ ಕರೆದಿರುವರು. ಮೇಲ್ಕಂಡ ಸಭೆಯು ಕೌನ್ಸಿಲ್ ಹಾಲಿನಲ್ಲಿ ಜರುಗುವುದು.

ಚಿರತೆ ಹಾವಳಿ

ಚಾಮುಂಡಿ ಬೆಟ್ಟದ ಬಳಿ ಎರಡು ಚಿರತೆಗಳು ಸೇರಿಕೊಂಡು ಮೇಯಲು ಹೋದ ಅನೇಕ ದನಗಳನ್ನು ಕೊಂದಿದ್ದು ಬಹಳ ಹಾವಳಿ ಮಾಡುತ್ತಿವೆಯೆಂದು ವರದಿಗಳು ಬಂದಿವೆ. ... ಚಿರತೆಯು ಬೆಟ್ಟಕ್ಕೆ ... ಜನರು ಚಿರತೆಯ ಹಾವಳಿಯನ್ನು ತಪ್ಪಿಸಬೇಕೆಂದು ... ಇದಕ್ಕೆ ... ಕೋರಲಾಗಿದೆ.

ಸಾಧ್ವಿ

ಶಾ॥ ೫-೧೨-೪೬ ಗುರುವಾರ

ಪಾನ ನಿರೋಧದ ನೀತಿಕೆ

ನಮ್ಮ ಸಂಸ್ಥಾನದಲ್ಲಿ ಸಂಪೂರ್ಣ ಪಾನ ನಿರೋಧವನ್ನು ಜಾರಿಗೆ ತರುವುದಕ್ಕೆ ಪೂರ್ವಸಿದ್ಧತೆಯಾಗಿ ಕೋಲಾರ, ತುಮಕೂರು ಮತ್ತು ಪಾವಗಡ ತಾಲ್ಲೂಕುಗಳಲ್ಲಿ ಮುಂದಿನ ತಿಂಗಳಿಂದ ಸಂಪೂರ್ಣವಾಗಿ ಮದ್ಯಪಾನ ನಿರೋಧವನ್ನು ಜಾರಿಗೆ ತರಬೇಕೆಂದು ಸರ್ಕಾರದವರು ಆಜ್ಞೆ ಮಾಡಿರುತ್ತಾರೆ. ಇದನ್ನು ಸಂಸ್ಥಾನದ ಪ್ರಜೆಗಳೆಲ್ಲರೂ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾರೆ.

ನೆರೆಹೊರೆಯ ಪ್ರಾಂತ್ಯಗಳಲ್ಲಿ ಮದ್ಯಪಾನವನ್ನು ಸಂಪೂರ್ಣವಾಗಿ ತಡೆಗಟ್ಟಿರುವಾಗ ನಮ್ಮಲ್ಲಿಯೂ ಇದರ ಬಗ್ಗೆ ಪ್ರಜೆಗಳಿಂದ ಒತ್ತಾಯವು ಬರುತ್ತಿರುವುದು ಸಹಜವಾಗಿಯೇ ಇದೆ. ನಮ್ಮಲ್ಲಿ ಈ ನಿರ್ಬಂಧವು ಇಲ್ಲದಿರುವುದರಿಂದ ಅಲ್ಲಿನ ಜನರು ನಮ್ಮ ಸಂಸ್ಥಾನದ ಎಲ್ಲೆಯೊಳಕ್ಕೆ ಬಂದು ಪಾನ ಮಾಡಿ ತಮ್ಮ ಊರುಗಳಿಗೆ ಹೋಗುತ್ತಿರುವರೆಂಬ ಫಿರ್ಯಾದುಗಳು ಬರುತ್ತಿವೆ. ಇದನ್ನು ತಪ್ಪಿಸಿ ಅಲ್ಲಿನ ಪಾನನಿರೋಧ ಕಾರ್ಯಕ್ರಮವನ್ನು ಯಶಸ್ವಿಯಾಗಿ ಸಾಗಿಸಲು ತಕ್ಕ ವ್ಯವಸ್ಥೆಗಳನ್ನು ಮಾಡಬೇಕೆಂದು ಅಲ್ಲಿನವರು ನಮ್ಮ ಸರ್ಕಾರದ ಮೇಲೆ ಒತ್ತಾಯವನ್ನೂ ಸಹ ಮಾಡುತ್ತಿರುವರು. ಅಲ್ಲದೆ ಬಡಜನರ ಕಷ್ಟಾರ್ಜಿತ ದ್ರವ್ಯವನ್ನು ಸುಲಿದು ಅವರ ಜೀವನಕ್ಕೆ ಕುಠಾರಪ್ರಾಯವಾಗಿ ಅವರನ್ನು ಅನೀತಿ ಮಾರ್ಗಕ್ಕೆ ಎಳೆಯುತ್ತಿರುವ ಈ ದುಷ್ಟ ಪದ್ಧತಿಯನ್ನು ನಿರ್ಮೂಲಗೊಳಿಸಬೇಕೆಂದೂ ಸಹ ಪ್ರಜೆಗಳು ಬಹಳ ದಿನಗಳಿಂದಲೂ ಬೇಡುತ್ತಿದ್ದಾರೆ.

ಎಂಟು ವರ್ಷಗಳ ಹಿಂದೆ ಮದರಾಸಿನಲ್ಲಿ ಕಾಂಗ್ರೆಸ್ ಮಂತ್ರಿಮಂಡಲವು ಮದ್ಯಪಾನ ನಿರೋಧ ನೀತಿಯನ್ನು ಕೈಗೊಂಡು ಅದನ್ನು ಅತ್ಯಂತ ಯಶಸ್ವಿಯಾಗಿ ನಡೆಸಿತು. ಈಗ ಇಡೀ ಪ್ರಾಂತ್ಯದಲ್ಲೆಲ್ಲಾ ಅದನ್ನು ಜಾರಿಗೆ ತಂದಿರುತ್ತದೆ. ಇದರಿಂದ ಅಲ್ಲಿನ ಪ್ರಜೆಗಳಿಗೆ ವಿಶೇಷವಾದ ಅನುಕೂಲಗಳು ಆಗಿರುವುದಾಗಿ ಈಗಾಗಲೇ ಕಂಡುಬಂದಿದೆ. ಕಳ್ಳತನ, ದರೋಡೆ, ಮೋಸ, ಕದನ ಮತ್ತು ಸಾಲಸೋಲಗಳ ಬಾಧೆಯು ಮೊದಲಿಗಿಂತಲೂ ಬಹಳಮಟ್ಟಿಗೆ ಇಳಿದಿವೆಯೆಂದು ಅಂಕಿ ಅಂಶಗಳಿಂದ ಗೊತ್ತಾಗಿದೆ. ಅಲ್ಲದೆ ಬಡಜನರು ಆಯಾ ಪ್ರಾಂತ್ಯದ ಆರ್ಥಿಕಾಭಿವೃದ್ಧಿಯಲ್ಲಿ ಹೆಚ್ಚುಹೆಚ್ಚಾಗಿ ಸಹಕರಿಸಲು ಅನುಕೂಲವಾಗಿರುವುದಾಗಿಯೂ ತಿಳಿದುಬಂದಿದೆ.

ನಮ್ಮ ಸರ್ಕಾರದವರು ಸಂಪೂರ್ಣ ಪಾನ ನಿರೋಧದ ನೀತಿಯನ್ನು ಇದುವರೆಗೆ ಅಂಗೀಕರಿಸಿರಲಿಲ್ಲ. ಕೇವಲ ಪ್ರಚಾರದಿಂದಲೂ, ಪ್ರೇರೇಪಣೆಯಿಂದಲೂ ಈ ಕಾರ್ಯವನ್ನು ಸಾಧಿಸಬೇಕೇ ಹೊರತು ಬಲವಂತದ ಶಾಸನದಿಂದ ಅಲ್ಲವೆಂದು ಅವರು ಹೇಳುತ್ತಿದ್ದರು. ಮದ್ಯಪಾನವನ್ನು ಪೂರ್ತಿಯಾಗಿ ನಿಲ್ಲಿಸಿದರೆ ಸಂಸ್ಥಾನದ ವರಮಾನವು ಬಹಳವಾಗಿ ಬಿದ್ದುಹೋಗಿ ಆ ನಷ್ಟವನ್ನು ಸರಿದೂಗಿಸುವುದು ಅಸಾಧ್ಯವಾಗುವುದೆಂದೂ ವಾದಿಸುತ್ತಿದ್ದರು. ದಿವಸವೆಲ್ಲಾ ಕಷ್ಟಪಟ್ಟು ದುಡಿದು, ಸಂಜೆಯ ಹೊತ್ತಿಗೆ ಒಂದು ಸೀಸೆ ಮದ್ಯವನ್ನು ಸೇವಿಸುವುದರಿಂದ ದಿನದ ಆಯಾಸವೆಲ್ಲಾ ಪರಿಹಾರವಾಗಿ ಸುಖವಾಗಿ ರಾತ್ರಿಯನ್ನಾದರೂ ಅವರು ಕಳೆಯುವರೆಂದು ವಾದಿಸುವವರೂ ಇದ್ದರು. ಆದ್ದರಿಂದ ಪಾನನಿರೋಧದ ಕಾರ್ಯಕ್ರಮವನ್ನು ನಮ್ಮ ಸರ್ಕಾರದವರು ಇದುವರೆಗೆ ಕೈಗೊಳ್ಳದೆ ಕೇವಲ ಪ್ರಚಾರ ರೂಪದ ಪ್ರಯೋಗದಲ್ಲಿಯೇ ತೊಡಗಿದ್ದರು. ಇದಕ್ಕಾಗಿ ಕ್ಲೋಸ್‌ಪೇಟೆಯಲ್ಲಿ ಒಂದು ಕೇಂದ್ರವನ್ನೂ ತೆರೆದರು. ಆದರೆ ಕುಡಿಯುವವರ ಸಂಖ್ಯೆಯನ್ನು ಸಾರ್ವತ್ರಿಕವಾಗಿ ಕಡಿಮೆ ಮಾಡುವ ವಿಷಯದಲ್ಲಿ ಈ ಬಗೆಯ ಪ್ರಯೋಗಗಳು ಯಾವ ಪರಿಣಾಮವನ್ನೂ ಉಂಟುಮಾಡಲಿಲ್ಲ.

ನೆರೆಯ ಪ್ರಾಂತಗಳಲ್ಲಿ ಈ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯುತ್ತಿರುವುದನ್ನು ಕಂಡು ನಮ್ಮ ಸರ್ಕಾರದವರು ಎರಡು ತಾಲ್ಲೂಕುಗಳಲ್ಲಿ ಈ ಬಗ್ಗೆ ನಿಷೇಧ ಕ್ರಮವನ್ನು ಕೈಗೊಂಡಿರುವುದನ್ನು ನಾವು ಸ್ವಾಗತಿಸುತ್ತೇವೆ. ಇದು ಸಮರ್ಪಕವಾಗಿ ನಡೆದು ಇಡೀ ಸಂಸ್ಥಾನದಲ್ಲೆಲ್ಲಾ ಈ ನಿರ್ಬಂಧವು ಜಾರಿಗೆ ಬರಲು ಮೇಲ್ಪಂಕ್ತಿಯಾಗಲೆಂದು ನಾವು ಕೋರುತ್ತೇವೆ.

ಸಂಸ್ಥಾನದಲ್ಲೆಲ್ಲಾ ಪಾನ ನಿರೋಧವನ್ನು ಆಚರಣೆಗೆ ತರಲು ಡಾ॥ ಮಹಮ್ಮದ್ ಇಮಾಂರವರ ಅಧ್ಯಕ್ಷತೆಯಲ್ಲಿ ಹದಿನಾರು ಜನಗಳನ್ನೊಳಗೊಂಡ ಸಮಿತಿಯೊಂದನ್ನು ಸರ್ಕಾರದವರು ರಚಿಸಿರುತ್ತಾರೆ. ಈ ವಿಷಯವು ಶಾಸನ ಸಭೆಗಳಲ್ಲಿ ಅನೇಕಾವರ್ತಿ ಬಂದು ಕತ್ತರಿ ಪ್ರಯೋಗದ ಮೂಲಕ ನಿರ್ಣಯವೂ ಸಹ ಆಗಿರುತ್ತದೆ. ಈ ಸಮಿತಿಯವರು ಪಾನನಿರೋಧದ ಪೂರ್ವಾಪರಗಳನ್ನು ಪರಿಶೀಲಿಸಿ ಸಲಹೆಗಳನ್ನು ಕೊಡಬೇಕಾಗಿದೆ. ಸಮಿತಿಯವರು ಬೇಗನೆ ಪರಿಶೀಲನೆಗಳನ್ನು ನಡೆಸಿ ಶೀಘ್ರದಲ್ಲಿಯೇ ಸಂಸ್ಥಾನದಲ್ಲೆಲ್ಲಾ ಮದ್ಯಪಾನವು ನಿರ್ಮೂಲವಾಗಲು ಸೂಕ್ತ ಸಲಹೆಗಳನ್ನು ಕೊಡುವರೆಂದು ನಾವು ನಂಬುತ್ತೇವೆ.

ಕೃಪಲಾನಿಯವರಿಗೆ ೨೨,೦೦೦ ರೂ. ನಿಧಿ

ಮೊನ್ನೆ ದೆಹಲಿಯ ಪ್ರಾಜ್ಯ ಪಂಚಾಯತ್ ಮತ್ತು ಸಿಂಧಿ ಸಂಘದವರು ದೆಹಲಿಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಆಚಾರ್ಯ ಕೃಪಲಾನಿಯವರಿಗೆ ಒಂದು ಬೆಳ್ಳಿ ಪೆಟ್ಟಿಗೆಯನ್ನೂ ಮತ್ತು ೨೨ ಸಾವಿರ ರೂಗಳ ನಿಧಿಯನ್ನೂ ಸಮರ್ಪಿಸಿದರು.

"ರಾಜ್ಯಾಂಗ ಸಭೆ"

ಭಾರತದ ಇಂದಿನ ರಾಜನೀತಿಯಲ್ಲಿ ಪ್ರಧಾನವಾಗಿ ಪರಿಗಣಿಸಲ್ಪಟ್ಟಿರುವ ರಾಜ್ಯಾಂಗ ಸಭೆಯ ಬಗ್ಗೆ ಸಾರ್ವಜನಿಕರಿಗೆ ಸೂಕ್ಷ್ಮ ಪರಿಚಯ ಮಾಡಿಕೊಡುವ ಸಲುವಾಗಿ ಮೈಸೂರು ಕಾಂಗ್ರೆಸ್ ಪ್ರಗತಿ ಪಕ್ಷದವರು ಪ್ರಕಟಿಸಿರುವ 'ರಾಜ್ಯಾಂಗ ಸಭೆ' ಎಂಬ ಪುಸ್ತಕವನ್ನು ಆದರದಿಂದ ಸ್ವೀಕರಿಸಿದ್ದೇವೆ. ಮಹಾಜನರು ಈ ಪುಸ್ತಕವನ್ನು ಓದಿ ಗ್ರಹಿಸಬೇಕಾದ ಅಂಶಗಳು ಅಪಾರವಾಗಿವೆ.

ಇಂಗ್ಲೆಂಡಿಗೆ ಭಾರಿ ಸೋಲು

ಇಂಗ್ಲೆಂಡಿನ ಎಂ. ಸಿ. ಸಿ. ಟೀಮಿಗೂ, ಆಸ್ಟ್ರೇಲಿಯಾದವರಿಗೂ ನಡೆದ ಕ್ರಿಕೆಟ್ ಪಂದ್ಯದಲ್ಲಿ ಇಂಗ್ಲೆಂಡಿನವರು ೧ ಇನ್ನಿಂಗ್ಸ್ ಮತ್ತು ೩೩೨ ರನ್ನುಗಳಿಂದ ಸೋತುಹೋದರು. ಆಸ್ಟ್ರೇಲಿಯಾ ೧ ನೇ ಇನ್ನಿಂಗ್ಸ್ ೬೪೫, ಇಂಗ್ಲೆಂಡ್, ೧೪೧, ಮತ್ತು ೧೭೨.

ಶಂಕರಪ್ಪ ಸ್ಮಾರಕ ಚರ್ಚೆ

ಬಹುಮಾನ ಪಡೆದವರು

ಮೈಸೂರು ೫

ದಿವಂಗತ ಶಂಕರಪ್ಪನವರ ಸ್ಮಾರಕಾರ್ಥವಾಗಿ ನಿನ್ನೆ ಸಂಜೆ ಟೌನ್‌ಹಾಲಿನಲ್ಲಿ ಚರ್ಚಾಸ್ಪರ್ಧೆಯೊಂದು ಜರುಗಿತು. ಮೈಸೂರು ಕಾಂಗ್ರೆಸ್ ಮಾಜಿ ಅಧ್ಯಕ್ಷರಾದ ಶ್ರೀ ಟಿ. ಸಿದ್ದಲಿಂಗಯ್ಯನವರು ಅಗ್ರಾಸನವನ್ನು ವಹಿಸಿದ್ದರು. ಈ ಸಮಾರಂಭಕ್ಕೆ ಅನೇಕ ಮುಖಂಡರುಗಳು ಶುಭ ಸಂದೇಶಗಳನ್ನು ಕಳುಹಿಸಿದ್ದರು. ರಾಜಧಾನಿಯ ೯ ಕಾಲೇಜುಗಳೂ, ೮ ಹೈ ಸ್ಕೂಲುಗಳೂ, ಮತ್ತು ೧೯ ವಿದ್ಯಾರ್ಥಿನಿಲಯಗಳೂ ಚರ್ಚೆಯಲ್ಲಿ ಭಾಗವಹಿಸಿದ್ದುವು. 'ಈಗಿನ ಕಾಲಕ್ಕೆ ದೇಶವೇ ದೇವರು' ಎಂಬ ವಿಷಯದ ಮೇಲೆ ಚರ್ಚೆ ನಡೆಯಿತು.

ಮಹಾರಾಜ ಕಾಲೇಜು ಸಂಸ್ಥೆಗೆ ಶ್ರೀ ಟಿ ನಾರಾಯಣರವರ ಪರ್ಯಾಯ ಪಾರಿತೋಷಕವೂ, ಶಾರದಾವಿಲಾಸ ಹೈಸ್ಕೂಲಿಗೆ ಶ್ರೀ ಎಂ. ಆರ್. ಸಿ. ಬಸಪ್ಪನವರ ಪಟ್ಟಿಷ್ಟ ಸಂಸ್ಥಾ ಬಹುಮಾನವೂ ಕೊಡಲ್ಪಟ್ಟವು.

ಕಾಲೇಜುಗಳ ಪೈಕಿ ಪ್ರಥಮ ಬಹುಮಾನವನ್ನು ಮಹಾರಾಣಿ ಕಾಲೇಜಿನ ಶ್ರೀಮತಿ ಎಂ. ಕೆ. ಪಂಕಜರವರು, ೨ ನೇ ಬಹುಮಾನವನ್ನು ಇಂಟರ್‌ಮೀಡಿಯೆಟ್ ಕಾಲೇಜಿನ ಶ್ರೀ ಆರ್. ಗೋವಿಂದಯ್ಯನವರೂ, ೩ ನೇ ಬಹುಮಾನವನ್ನು ಸೆಂಟ್ ಫಿಲೋಮಿನ ಕಾಲೇಜಿನ ಶ್ರೀ ಪ್ರಭಾಕರ ಶರ್ಮರೂ, ೪ ನೇ ಬಹುಮಾನವನ್ನು ವಿಶ್ವವಿದ್ಯಾನಿಲಯ ಸಂಘದ ಶ್ರೀ ಗುರುಮೂರ್ತಯ್ಯನವರೂ ಪಡೆದರು. ಮಹಿಳಾ ಬಹುಮಾನಗಳು ಶ್ರೀಮತಿ ಸತ್ಯವತಿ ಮತ್ತು ಶ್ರೀಮತಿ ವಿ. ಸಾವಿತ್ರಿಯವರಿಗೆ ಕೊಡಲ್ಪಟ್ಟುವು.

ಹೈಸ್ಕೂಲು ಬಹುಮಾನಗಳಲ್ಲಿ ಮೊದಲನೆಯದನ್ನು ಶಾರದಾ ವಿಲಾಸ ಹೈಸ್ಕೂಲಿನ ಶ್ರೀ ವಿ. ಕೃಷ್ಣಮೂರ್ತಿಯವರೂ, ಎರಡನೆಯದನ್ನು ಮಹಾಜನ ಹೈಸ್ಕೂಲ್ ಶ್ರೀ ಎಸ್. ಎಂ. ಕೃಷ್ಣರವರೂ, ಮೂರನೇ ಬಹುಮಾನವನ್ನು ಮಹಾರಾಣಿ ಹೈಸ್ಕೂಲಿನ ಶ್ರೀಮತಿ ಎಚ್. ವೈ. ಕಸ್ತೂರಿಯವರೂ ನಾಲ್ಕನೇ ಬಹುಮಾನವನ್ನು ಶಾರದಾ ವಿಲಾಸ ಹೈಸ್ಕೂಲಿನ ಶ್ರೀ ಎಚ್. ಜಿ. ರಾಮಚಂದ್ರರಾಯರೂ, ಮಹಿಳಾ ಬಹುಮಾನವನ್ನು ಶ್ರೀಮತಿ ಎಂ ವಿ ಸಾವಿತ್ರಿಯವರೂ ಹೊಂದಿದರು.

ವಿದ್ಯಾರ್ಥಿ ನಿಲಯಗಳ ಬಹುಮಾನಗಳಲ್ಲಿ ಮಹಾರಾಣಿ ಕಾಲೇಜ್ ನಿಲಯದ ಶ್ರೀಮತಿ ಎಸ್. ರತ್ನಮ್ಮನವರಿಗೆ ಪ್ರಥಮ ಬಹುಮಾನ, ಶ್ರೀ ಸ್ವಾ . ವಿವೇಕಾನಂದ ನಿಲಯದ ಶ್ರೀ ಸಿ. ಜಿ. ಪುರುಷೋತ್ತಂರವರಿಗೆ ದ್ವಿತೀಯ ಬಹುಮಾನ, ಎಸ್ ಎಸ್. ಮತ್ತು ಯು. ಎಸ್. ನಿಲಯದ ಶ್ರೀ ಅನಂತಕೃಷ್ಣ ಶೆಟ್ಟಿಯವರಿಗೆ ೩ ನೇ ಬಹುಮಾನ, ಜೈನ ಬೋರ್ಡಿಂಗ್ ಹೋಮಿನ ಶ್ರೀ ಎಸ್. ಎಂ. ನೇಮಿರಾಜ್‌ರವರಿಗೆ ೪ ನೇ ಬಹುಮಾನ, ಶ್ರೀ ಶಾರದಾ ನಿಕೇತನ ನಿಲಯದ ಶ್ರೀ ಜಯಶೀಲರಾವ್‌ರವರಿಗೆ ೫ ನೇ ಬಹುಮಾನ, ಮಹಾರಾಣಿ ಕಾಲೇಜ್ ನಿಲಯದ ಶ್ರೀಮತಿ ಬಿ. ವಿ ಕೆ ಸಾಧುರವರಿಗೆ ಮಹಿಳಾ ಬಹುಮಾನಗಳೂ ಕೊಡಲ್ಪಟ್ಟುವು.

Edited, printed and published by A. R. Nagarajan at the Sadhvi Press D-Subbiah Road, Mysore.

ಸಕ್ಕರೆ ಗಿರಣಿ ಕೆಲಸಗಾರರ ಮುಷ್ಕರವೇ?

ಮಂಡ್ಯ ...

ಇಲ್ಲಿನ ಸಕ್ಕರೆ ಗಿರಣಿ ಕೆಲಸಗಾರರ ಸಂಘದ ಕಾರ್ಯ ನಿರ್ವಾಹಕ ಸಮಿತಿ ... ಯು ಮೊನ್ನೆ ದಿನ ಜರುಗಿ ೨೬-೯-೪... ಕೊಟ್ಟ 'ನೋಟೀಸ್ ಆಫ್ ಚೇಂಜ್'... ಗೆ ಎರಡು ತಿಂಗಳಾದರೂ ಲೇಬರ್ ಆ... ಮೀಷನರು ನಿರ್ದಿಷ್ಟವಾದ ತೀರ್ಮಾನ... ಬಾರದಿರುವುದಕ್ಕಾಗಿ ವಿಷಾದ ಸೂಚಿ... ಕಾನೂನಿನ ಪ್ರಕಾರ ಕಾಲಾವಕಾಶ ಮು... ದಿರುವುದರಿಂದ ಮುಷ್ಕರವನ್ನು ಸಾರ... ಅವಕಾಶ ಕೊಡಬೇಕೆಂದು ಲೇಬರ್ ಕಮಿ... ಷನರನ್ನು ಕೇಳಿಕೊಳ್ಳುವ ನಿರ್ಣಯವನ್ನು ಅಂಗೀಕರಿಸಲಾಯಿತು. ಅವರಿಂದ ೧... ೧೨-೪೬ ರ ಒಳಗೆ ಉತ್ತರ ಬಾರದಿದ್ದ... ಮುಷ್ಕರಕ್ಕೆ ಅವರ ಸಮ್ಮತಿ ಇದೆಯೆಂದು ಭಾವಿಸತಕ್ಕದ್ದೆಂದೂ ತೀರ್ಮಾನಿಸಲಾಯಿ...

ಕಾಂಗ್ರೆಸ್ ಅಧ್ಯಕ್ಷರಿಗೆ ಬೆಳ್ಳಿ ಪೆಟ್ಟಿಗೆ

ಇಲ್ಲಿಗೆ ೧೪ ನೇ ತಾ॥ ಶನಿವಾರ ಆಗಮಿಸುವ ಮೈಸೂರು ಕಾಂಗ್ರೆಸ್ ಅಧ್ಯಕ್ಷರಿಗೆ ಬೆಳ್ಳಿ ಪೆಟ್ಟಿಗೆಯನ್ನೂ, ನಿಧಿಯನ್ನೂ ಅರ್ಪಿಸಲು ಸಕ್ಕರೆ ಕಂಪನಿ ಕೆಲಸಗಾರರ ಸಂಘದವರು ತೀರ್ಮಾನಿಸಿದ್ದಾರೆ.

ಬಟ್ಟೆ ಹಂಚಿಕೆ ಕಾಲದಲ್ಲಿ ಗಲಾಟೆ

ಸ್ವಂ ವ.] ನಂಜನಗೂಡು ...

ಪೋಲೀಸ್ ಆಫೀಸ್ ಬಳಿ ಇರುವ ಶ್ರೀನಿವಾಸ ಹಾಲಿನಲ್ಲಿ ಈ ದಿನ ಬೆನ್ನಿ ಮಿಲ್ ಬಟ್ಟೆ ಹಂಚುವ ಕಾಲದಲ್ಲಿ ಗಲಾಟೆ ನಡೆದು ಬಟ್ಟೆಗಾಗಿ ಬಂದಿದ್ದ ಹುಡುಗನೊಬ್ಬನು ಪಕ್ಕದ ಚರಂಡಿಗೆ ನೂಕಲ್ಪಟ್ಟನೆಂದು ಗೊತ್ತಾಗಿದೆ. ಇದೇ ರೀತಿ ಆಗಾಗ್ಗೆ ಗಲಾಟೆಗಳು ನಡೆಯುತ್ತಲೇ ಇರುತ್ತವೆ. ಇದನ್ನು ತಪ್ಪಿಸಲು ಸೂಕ್ತ ವ್ಯವಸ್ಥೆ ಅಗತ್ಯವಾಗಿದೆ.

ರಾಜಕಮಲ್

ಮೈಸೂರು

6-12-46 ರಿಂದ

ನಾಲ್ಕನೆಯ ವಾರ

ಡಾಕ್ಟರ್ ಕೊಟ್ನಿಸ್‌ರ

ಅಮರ್-ಕಹಾನಿ

-: ಭೂಮಿಕೆ :-

ಶಾಂತಾರಾಂ, ಜಯಶ್ರೀ, ಉಲ್ಲಾಸ್

ಬೆಳಗಿನ ಪ್ರದರ್ಶನ **6-12-46** ರಿಂದ ಪ್ರತಿದಿನ **10-30**ಕ್ಕೆ **4** ದಿನಗಳು ಮಾ...

"ಅಚ್ಯುತ್ ಕನ್ಯೆ"

ಪಾತ್ರ:— ದೇವಿಕಾರಾಣಿ, ಅಶೋಕ ಕುಮಾರ್ ಮುಂತಾದವರ

ರಣಜಿತ್

೬-೧೨-೪೬ ರಿಂದ

ಪ್ರತಿದಿನ ೩ ಆಟಗಳು

ಮುಷ್ಕಬಾನು ಯಶವಂತ್ ದವೆ ಪಾತ್ರವಹಿಸಿರುವ

ಅದ್ಭುತ ಸಾಹಸ ಚಿತ್ರ!

ರಾಯಲ್ ಮೇಲ್

(ಹಿಂದಿ)

ರೆಜಿ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶುಕ್ರವಾರ ೬—೧೨—೪೬ [ಸಂಚಿಕೆ ೧೦೫

ಲಂಡನ್ ಸಂಧಾನದಲ್ಲಿ ಬ್ರಿ॥ ರಾಜರ ಪ್ರವೇಶವೇ ?

ಆಹಾರ ಧಾನ್ಯಗಳ ಬೆಲೆ ಹೆಚ್ಚಿಸುವುದಿಲ್ಲ

ಕೇಂದ್ರ ಸರ್ಕಾರದವರು ಆಹಾರ ಧಾನ್ಯದ ಬೆಲೆಯನ್ನು ಹೆಚ್ಚಿಸಬಾರದೆಂದು ಮಾಡಿದ ಸಲಹೆಯಂತೆ ಮದ್ರಾಸ್ ಪ್ರಾಂತ್ಯದ ಧಾನ್ಯಗಳ ಬೆಲೆಯನ್ನು ಹೆಚ್ಚಿಸುವುದಿಲ್ಲವೆಂದು ಪ್ರಕಟವಾಗಿದೆ. ಬೆಳೆಯು ಚೆನ್ನಾಗಿ ಬಂದಿರುವುದರಿಂದ ರೈತರಿಗೆ ಪ್ರೋತ್ಸಾಹದ ಇನಾಮನ್ನೂ ಕೊಡಲಾಗುವುದಿಲ್ಲವೆಂದೂ ಸಹ ತಿಳಿಸಲಾಗಿದೆ.

ಆಯುಧಗಳ ಮೇಲೆ ಪ್ರತಿಬಂಧಕ

೧೯೪೬ರಲ್ಲಿ ನಡೆಯಲಿರುವ ಶಾಸನ ಸಭಾ ಚುನಾವಣೆಗಳಲ್ಲಿ ಉಮೇದುವಾರರಾಗಿರುವ ಮಂದಿಗೆ ಇರುವ ಪರಸ್ಪರ ಕಲಹಗಳು ದಿನೇ ದಿನೇ ಹೆಚ್ಚುತ್ತಿರುವುದರಿಂದ ಡಿಸೆಂಬರ್ ೧೫ರ ವರೆಗೆ ರೈಲು ಬಸ್ಸುಗಳ ಪ್ರಯಾಣ ಕಾಲದಲ್ಲಿ ಯಾರೂ ಆಯುಧಗಳನ್ನು ತೆಗೆದುಕೊಂಡು ಹೋಗಕೂಡದೆಂದು ಬಂಗಾಳದ ಸರ್ಕಾರವು ಆಜ್ಞೆ ಮಾಡಿರುತ್ತದೆ.

೪೦೦೦ ಬಂದಿಗಳ ಬಿಡುಗಡೆ

ಮದ್ಯಪಾನ ನಿರೋಧದ ಆಜ್ಞೆಯನ್ನು ಉಲ್ಲಂಘಿಸಿದವರಿಗೆ ಸ್ಥಳವನ್ನು ಕಲ್ಪಿಸುವ ಸಲುವಾಗಿ ಮದರಾಸ್ ಸರ್ಕಾರವು ಕಾರಾಗೃಹವಾಸಿಗಳಾಗಿರುವ ಇತರ ೪೦೦೦ ಮಂದಿ ಬಂದಿಗಳನ್ನು ಬಿಡುಗಡೆ ಮಾಡಿದೆ. ಇವರುಗಳು ದುರ್ನಡತೆಗೆ ಬೀಳದಂತೆ ನೋಡಿಕೊಳ್ಳಲು ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆ.

ಲಂಡನ್ನಿನ ಸಮ್ಮೇಳನ ಬರೀ ಒಂದು ಸೋಗು

ಲಂಡನ್ನಿನಲ್ಲಿ ನಡೆಯುತ್ತಿರುವ ಸಮ್ಮೇಳನವು ನಿರರ್ಥಕವಾದುದು, ಅದೊಂದು ತಮಾಷೆಯ ಆಟ. ಪ್ರಪಂಚದ ಜನರನ್ನು ಮರುಳುಗೊಳಿಸಲು ಬ್ರಿಟಿಷರು ಹಾಕಿರುವ ಒಂದು ಸೋಗು ಎಂಬುದಾಗಿ ಸ॥ ವಲ್ಲಭಭಾಯಿಯವರು ಬೆಂಬಾಯಿ ವ್ಯಾಪಾರಿಗಳನ್ನುದ್ದೇಶಿಸಿ ಮಾತನಾಡುತ್ತಾ ತಿಳಿಸಿದ್ದಾರೆ. ಕಾಂಗ್ರೆಸ್ಸಿಗೂ ಲೀಗಿಗೂ ನಿಜವಾದ ಒಪ್ಪಂದವಾಗಬೇಕಾಗಿರುವುದು ಭಾರತದಲ್ಲೇ ಎಂದು ಅವರು ಹೇಳಿರುವರು.

ಬಹುಮಾನ !

ಈ ಕೆಳಗೆ ಕಂಡ ತಪ್ಪಿಲೆಯುಳ್ಳ 2 ಪಾರ್ಸೆಲ್ಲುಗಳು ಚಾಮರಾಜನಗರದಲ್ಲಿ ತಾ॥ 1-12-46 ರ ರಾತ್ರಿ ಪೋ॥ ಸ॥ ಇನ್ಸ್‌ಪೆಕ್ಟರವರಿಗೆ ತೋರಿಸಿ ಬರುವಾಗ ಕಳೆದುಹೋಗಿರುತ್ತವೆ. ಸದರಿ ಪರ್ಮಿಟ್ಟುಗಳು ಮೈಸೂರಿನಿಂದ ಮದರಾಸ್ ಪ್ರಾಂತ್ಯಕ್ಕೆ ಹುಣಿಸೆ ಹಣ್ಣು, ಎಳ್ಳು ರವಾನಿಸಲು ಮೈಸೂರು ಜಿಲ್ಲಾ ಡೆಪ್ಯುಟಿ ಕಮಿಷನರವರಿಂದ ಕೊಡಲ್ಪಟ್ಟಿದ್ದಾಗಿರುತ್ತೆ. ಯಾರಾದರೂ ತಂದು ಕೊಟ್ಟರೆ ಹತ್ತು ರೂಪಾಯಿ ಬಹುಮಾನ ಕೊಡಲಾಗುತ್ತದೆ. ತಪಶೀಲು:- 3-12-46 ರಿಂದ 9-12-46 ರ ವರೆಗೆ ವಾಯಿದೆ ನಮೂದಾಗಿರುವ I. C. S. 467ನೇ ನಂಬರು ಪಿ. ವೆಂಕಟರಮಣ ಚೆಟ್ಟಿಯಾರ್, 2 I. C. S. 61. ಎಸ್. ಕೆ. ಮುತ್ತು ಕರಪ್ಪ ಚೆಟ್ಟಿಯಾರ್.

ಎಸ್. ಕೆ. ಮುತ್ತು ಕರಪ್ಪ ಚೆಟ್ಟಿಯಾರ್,
ಪಿ. ವೆಂಕಟರಮಣ ಚೆಟ್ಟಿಯಾರ್,
ಚಾಮರಾಜನಗರ

ಗುಡ್ಸ್ ಗಾಡಿ ಕಂಬಿ ತಪ್ಪಿತು

ಮೈಸೂರು ೬

ನಿನ್ನೆ ಮಧ್ಯಾಹ್ನ ಹಾಸನಕ್ಕೂ ಅರಸೀಕೆರೆಗೂ ಮಧ್ಯೆ ಹೋಗುತ್ತಿದ್ದ ಗುಡ್ಸ್ ಗಾಡಿಯು ಕಂಬಿ ತಪ್ಪಿ ಸುಮಾರು ಹತ್ತು ವ್ಯಾಗನ್ನುಗಳು ಮಗುಚಿಕೊಂಡವೆಂದೂ, ಪ್ರಯಾಣಿಕರನ್ನೂ ಮತ್ತು ಅವರ ಸಾಮಾನುಗಳನ್ನೂ ಟ್ರಾನ್ಸ್‌ಷಿಪ್‌ಮೆಂಟ್ ಮೂಲಕ ಸಾಗಿಸಲಾಯಿತೆಂದೂ ತಿಳಿದುಬಂದಿದೆ. ಈ ದಿನದಿಂದ ರೈಲುಗಳು ನೇರವಾಗಿ ಹೋಗಿ ಬರಲು ಏರ್ಪಾಡಾಗಿದೆ. ಇದರಿಂದ ಯಾರಿಗೂ ಸಾವು ನೋವುಗಳುಂಟಾಗಿಲ್ಲ.

ವಿದ್ಯುಚ್ಛಕ್ತಿಯಿಂದ ಮರಣ

ದೇವರಾಜ ಮಾರ್ಕೆಟ್ ಬಳಿ ನಿನ್ನೆ ವಿದ್ಯುಚ್ಛಕ್ತಿಯು ತಗಲಿ ಇಬ್ಬರು ಮೃತರಾದರೆಂದು ವರದಿಯಾಗಿದೆಯಷ್ಟೆ. ಅಲ್ಲಿ ಕಟ್ಟಲಾಗುತ್ತಿರುವ ಮಿ॥ ಮಹಮದ್ ಯಾಕೂಬ್‌ರವರ ಕಟ್ಟಡದ ಕೆಲಸವನ್ನು ನೋಡಿಕೊಳ್ಳುತ್ತಿದ್ದ ಅವರ ಗುಮಾಸ್ತರಾದ ಶ್ರೀ ಎಂ. ಕೆ. ರಾಮಸ್ವಾಮಿಯವರು ಮೃತಪಟ್ಟವರಲ್ಲಿ ಒಬ್ಬರು. ತಮ್ಮಯ್ಯ ಎಂಬ ಕೆಲಸಗಾರನು ಮತ್ತೊಬ್ಬನು. ಕಟ್ಟಡದ ಮೇಲಿಂದ ಗೋವಿಂದಪ್ಪ ಎಂಬ ಮತ್ತೊಬ್ಬ ಕೆಲಸಗಾರನು ಸಲಾಕಿಗಳನ್ನು ಕೆಳಕ್ಕೆ ತರುತ್ತಿದ್ದಾಗ ಅದನ್ನು ಮೇಲಿನಿಂದಲೇ ಎಸೆಯಲು ಹೋಗಲು ಪಕ್ಕದಲ್ಲಿದ್ದ ವಿದ್ಯುಚ್ಛಕ್ತಿ ತಂತಿಗೆ ಅದು ತಗಲಿ ಅದನ್ನು ಹಿಡಿದಿದ್ದ ರಾಮಸ್ವಾಮಿಯವರು ಕೂಡಲೇ ಮರಣ ಹೊಂದಿದರೆಂದು ತಿಳಿದು ಬಂದಿದೆ. ಅವರನ್ನು ಬಿಡಿಸಿಕೊಳ್ಳಲು ಹೋಗಿ ಅವರನ್ನು ಮುಟ್ಟಿದ ತಮ್ಮಯ್ಯನಿಗೂ ವಿದ್ಯುಚ್ಛಕ್ತಿಯು ತಗಲಿ ಅತನು ಕೂಡಲೇ ಮೃತಪಟ್ಟನೆಂದು ಹೇಳಲಾಗಿದೆ. ಮೂರನೆಯವನಾದ ಗೋವಿಂದಪ್ಪನು ಬೊಂಬಿನ ಮೇಲೆ ನಿಂತಿದ್ದುದರಿಂದ ಅತನಿಗೆ ಅಪಾಯವಾಗಲಿಲ್ಲವೆಂದು ಗೊತ್ತಾಗಿದೆ.

ಪಟೇಲರಿಗೆ ಲಂಡನ್ ಮಾತುಕತೆಗಳ ಸಂಪರ್ಕ

ಲಂಡನ್ ನಗರದಲ್ಲಿ ಪಂ॥ ನೆಹರುರವರು ಬ್ರಿ॥ ಸರ್ಕಾರದೊಡನೆ ನಡೆಸುವ ಮಾತುಕತೆಗಳನ್ನು ಬೊಂಬಾಯಿಯಲ್ಲಿರುವ ಕೇಂದ್ರ ಸರ್ಕಾರದ ಹಂಗಾಮಿ ಉಪಾಧ್ಯಕ್ಷರಾದ ಸ॥ ಪಟೇಲರಿಗೆ ತಿಳಿಸಿ, ಸೂಕ್ತ ವಿಚಾರ ವಿನಿಮಯ ಮಾಡುವ ಸಲುವಾಗಿ ಬೊಂಬಾಯಿ ಲಂಡನ್ ಟೆಲಿಫೋನ್ ಲೈನನ್ನು ಉಪಯೋಗಿಸಿಕೊಳ್ಳಲು ತಕ್ಕ ವಿಶೇಷ ವ್ಯವಸ್ಥೆ ಮಾಡಲಾಗಿದೆಯೆಂದು ವರದಿಯಾಗಿದೆ.

ಲಂಡನ್ ಸಂಧಾನದಲ್ಲಿ ಬ್ರಿ॥ ದೊರೆಗಳ ಪ್ರವೇಶವೇ ?

ಭಾರತದ ನಾಯಕರುಗಳಿಗೆ ನಿನ್ನೆ ದಿನ ಬ್ರಿ॥ ದೊರೆಗಳು ಔತಣವನ್ನೇರ್ಪಡಿಸಿದ್ದರು. ಈವರೆಗಿನ ಚರ್ಚೆಯಿಂದ ಫಲಕಾರಿಯಾದ ಫಲಿತಾಂಶಗಳು ಕಂಡುಬಾರದಿರುವುದರಿಂದ ಬ್ರಿಟಿಷ್ ರಾಜರೇ ಖುದ್ದಾಗಿ ಚರ್ಚೆಯಲ್ಲಿ ಪ್ರವೇಶಿಸಲು ಅನುಮತಿ ಕೊಡಲ್ಪಡಬಹುದೆಂದು ಅಧಿಕಾರಿ ಆವರಣದಲ್ಲಿ ಹೇಳಲಾಗಿದ್ದಿತು. ರಾಜ್ಯಾಂಗ ಸಭೆ ಡಿಸೆಂಬರ್ ೯ಕ್ಕೆ ಸೇರಲೇಬೇಕೆಂದು ಪಂ॥ ನೆಹರೂರವರೂ, ಅನಿರ್ದಿಷ್ಟ ಕಾಲಕ್ಕೆ ಅದನ್ನು ಮುಂದೆ ಹಾಕಬೇಕೆಂದು ಮಿ॥ ಜಿನ್ನಾರವರೂ ಬ್ರಿ॥ ಪ್ರಧಾನಿಗಳನ್ನು ಒತ್ತಾಯಪಡಿಸುತ್ತಿದ್ದಾರೆ. ವೈಸರಾಯರೂ ಸಹ ಸಭೆಯನ್ನು ಮುಂದುವರಿಸಬೇಕೆಂದು ಸಲಹೆಯಿತ್ತಿದ್ದಾರೆ. ಬ್ರಿ॥ ದೊರೆಗಳು ಈ ವಿಚಾರದಲ್ಲಿ ತಮ್ಮ ಅಭಿಪ್ರಾಯ ಕೊಡುವರೇ ಎಂಬುದು ಸಂದೇಹಾಸ್ಪದವಾಗಿದೆ. ಬ್ರಿ॥ ನಿಯೋಗದವರ ಸಲಹೆಗಳ ಬಗ್ಗೆ ಪುನಃ ಹೊಸ ಸಂಧಾನಗಳನ್ನು ಆರಂಭಿಸಲು ಪ್ರಧಾನಿ ಅಟ್ಲಿಯವರು ಖಚಿತವಾಗಿ ನಿರಾಕರಿಸಿದ್ದಾರೆಂದು ವರದಿಯಾಗಿದೆ. ಲೀಗ್ ನಾಯಕರು ಒಪ್ಪಿ ಇಳಿಯುವ ಲಕ್ಷಣವೇ ಕಾಣಬರುತ್ತಿಲ್ಲ. ಪಂ॥ ನೆಹರೂ ಮಾತ್ರ ನಗುಮುಖದಿಂದ ಕಾರ್ಯೋನ್ಮುಖರಾಗಿದ್ದಾರೆ ಎಂದು ಲಂಡನ್ ಸುದ್ದಿಯು ತಿಳಿಸುತ್ತದೆ.

ಒರಿಸ್ಸಾ ಗೌರ್ನರ ಕೊಲೆ ಪ್ರಯತ್ನ

ಸಂಬಲ್‌ಪುರ ಡಿಸ್ಟ್ರಿಕ್ಟಿನಲ್ಲಿ ಪ್ರವಾಸ ಮಾಡುತ್ತಿದ್ದ ಒರಿಸ್ಸಾ ಗೌರ್ನರ ಪ್ರಾತಃ ಉಪಹಾರವನ್ನು ಮಾಡಲು ಅವರು ಇಳಿದಿದ್ದ ಬಂಗಲೆಗೆ ಒಬ್ಬ ಯುವಕನು ಕಠಾರಿಯನ್ನು ಹಿಡಿದುಕೊಂಡು ಪ್ರವೇಶಿಸುತ್ತಿದ್ದಾಗ ಆ ಯುವಕನನ್ನು ಅಲ್ಲಿಯೇ ದಸ್ತಗಿರಿ ಮಾಡಲಾಯಿತೆಂದೂ ಇದರಿಂದ ಆ ಕೃತ್ಯವು ನಡೆಯಲು ಅವಕಾಶವಾಗಲಿಲ್ಲವೆಂದೂ ಗೊತ್ತಾಗಿದೆ.

ಭಾರತ ನಾಯಕರ ವಾಪಸು ಪ್ರಯಾಣ

ಪಂ॥ ನೆಹರು ಮತ್ತು ಸ॥ ಬಲದೇವ ಸಿಂಗರು ೯ನೇ ತಾ॥ ಸೋಮವಾರ ಆರಂಭವಾಗುವ ರಾಜ್ಯಾಂಗ ಸಭೆಯಲ್ಲಿ ಭಾಗವಹಿಸಲು ಲಂಡನ್ನಿನಿಂದ ನಾಳೆ ಹೊರಟು ನಾಳಿದ್ದು ಸಂಜೆ ದೆಹಲಿಯನ್ನು ಸೇರುವರೆಂದು ನಿರೀಕ್ಷಿಸಲಾಗಿದೆ.

ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರ ನಿವೃತ್ತಿ

ಭಾರತದ ಭವಿಷ್ಯ ರಾಜ್ಯಾಂಗ ವಿಷಯದಲ್ಲಿ ನಡೆಯುವ ಚರ್ಚೆಗಳಲ್ಲಿ ಸ್ವತಂತ್ರವಾಗಿ ಪಾಲುಗೊಳ್ಳುವ ಸಲುವಾಗಿ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರು ತಿರುವಾಂಕೂರಿನ ದಿವಾನಗಿರಿಯಿಂದ ನಿವೃತ್ತರಾಗಬಯಸಿ ಅದರಂತೆ ಆ ಸ್ಥಾನವನ್ನು ಬರುವ ತಿಂಗಳು ೧೫ ರಂದ ಖಾಲಿ ಮಾಡುವುದಾಗಿ ಗೊತ್ತಾಗಿದೆ. ಅವರು ಸಂಸ್ಥಾನದಿಂದ ವಿಶ್ರಾಂತಿ ವೇತನವನ್ನು ಪಡೆಯುವುದಿಲ್ಲ. ಇನ್ನು ಮುಂದೆ ಅವರು ಯಾವ ಸಂಬಳದ ಅಥವಾ ಪ್ರತಿಫಲಾಪೇಕ್ಷೆಯ ಕೆಲಸಗಳಿಗೂ ಒಪ್ಪಿಕೊಳ್ಳುವುದಿಲ್ಲವೆಂದು ಹೇಳಲಾಗಿದೆ. ಅವರು ಸಂಸ್ಥಾನಗಳ ಸಂಧಾನ ಸಮಿತಿ ಮತ್ತು ಸಲಹಾ ಸಮಿತಿಗಳಲ್ಲಿ ಇದ್ದೇ ಇರುವರು.

ಲಂಡನ್ ಸಂಧಾನದಲ್ಲಿ ನಿರಾಶೆ

ಭಾರತದ ನಾಯಕರು ಲಂಡನ್ನಿನಲ್ಲಿ ನಡೆಸುತ್ತಿರುವ ಸಂಧಾನಗಳು ಜಯಪ್ರದವಾಗುವ ಚಿಹ್ನೆಗಳೇ ಕಂಡುಬರುತ್ತಿಲ್ಲವೆಂದು ನಿರಾಶಾಜನಕವಾದ ವಾರ್ತೆ ಬರುತ್ತಿದೆ. ಉಭಯಪಕ್ಷದವರಲ್ಲೂ ಒಂದು ಒಡಂಬಡಿಕೆಯನ್ನುಂಟುಮಾಡಲು ಬ್ರಿಟಿಷ್ ಸರ್ಕಾರವು ಅಸಮರ್ಥವಾಗಿದೆಯೆಂದು ಹೇಳಲಾಗಿದೆ. ಬ್ರಿ॥ ಪ್ರಧಾನಿ ಅಟ್ಲಿ ಮತ್ತು ಲಾರ್ಡ್ ಪೆಥಿಕ್ ಲಾರೆನ್ಸರು ಈಗಾಗಲೇ ವಿವಿಧ ಪಕ್ಷಗಳ ಅಭಿಪ್ರಾಯಗಳನ್ನು ಪೂರ್ಣವಾಗಿ ಅರಿತಿದ್ದಾರೆಂದು ವರದಿಯಾಗಿದೆ. ಪಂಡಿತ ನೆಹರೂ ಮತ್ತು ಸ॥ ಬಲದೇವಸಿಂಗರೂ ನಾಳೆ ಬೆಳಗ್ಗೆ ಲಂಡನ್ನಿನಿಂದ ಹೊರಟು ಬಾನುವಾರ ಸಂಜೆ ದೆಹಲಿಗೆ ವಾಪಸು ಬರಲಿದ್ದಾರೆ.

ಪೆಟ್ರೋಲು ರಿಯಾಯಿತಿ

ರಾಜಕೀಯ ಪಕ್ಷಗಳಿಗಿರುವಂತೆಯೇ ಇತರ ಪಕ್ಷಗಳಿಗೂ ಪೆಟ್ರೋಲ್ ಬಿಡುಗಡೆಯ ರಿಯಾಯಿತಿಯನ್ನು ತೋರಿಸಲು ಮದರಾಸ್ ಸರ್ಕಾರವು ಪರ್ಯಾಲೋಚಿಸುತ್ತಿದೆ. ಆ ರೀತಿ ಪೆಟ್ರೋಲ್ ಹೆಚ್ಚಿನ ಬಿಡುಗಡೆ ಮಾಡಿ ಅವರ ಬಂಧುಬಳಗಗಳೊಡನೆಯೂ ಇತರ ಜನರೊಡನೆಯೂ ಅವರು ಕಲೆತು ಓಡಾಡುವುದರಿಂದ ಅವರ ಪ್ರಚಾರ ಸಹಕಾರಿಯಾಗುವುದೆಂದು ಸರ್ಕಾರವು ಯೋಚಿಸುತ್ತದೆ.

ಶ್ರೀಕಂಠೇಶ್ವರಸ್ವಾಮಿ ಜಾತ್ರೆ

ಸ್ವಂ ವ॥ ನಂಜನಗೂಡು :

ಶ್ರೀಯವರ ಚಿಕ್ಕಜಾತ್ರೆ ಪ್ರಯುಕ್ತ ತಾ॥ ೬-೧೨-೪೬ ರಲ್ಲು ಭಾನುವಾರ ಪ್ರಾತಃಕಾಲ ೯-೩೦ ಘಂಟೆಗೆ ಮಕರ ಲಗ್ನದಲ್ಲಿ ರಥೋತ್ಸವವಾಗುತ್ತೆಂದು, ಈ ಮೊದಲೇ ಗೊತ್ತಾಗಿದ್ದು ಅದರಂತೆ ಇಂಟಿಮೇಷನ್ ಕಳುಹಿಸಿ ಕೆಲವು ಕಡೆಗಳಿಗೆ ಪ್ರೋಗ್ರಾಮುಗಳನ್ನೂ ಕಳುಹಿಸಿ ತಿಳಿಸಲಾಗಿದ್ದಿತು. ಅದರೆ ಅಂದು ಚಂದ್ರಗ್ರಹಣವಾಗುವುದರಿಂದ ಶ್ರೀಯವರ ರಥಾರೋಹಣವನ್ನು ಆ ದಿನ ಬೆಳಗ್ಗೆ ೬-೩೦ಕ್ಕೆ ವೃಶ್ಚಿಕ ಲಗ್ನಕ್ಕೆ ಬದಲಾಯಿಸಿರುವುದಾಗಿ ತಿಳಿಸಲಾಗಿದೆ.

ಕಾರ್ತೀಕೋತ್ಸವ

ಮೈಸೂರು

ಶ್ರೀಮನ್ಮಹಾರಾಜ ಸಂಸ್ಕೃತ ಪಾಠಶಾಲೆಯ ಆವರಣದಲ್ಲಿರುವ ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಸನ್ನಿಧಾನದಲ್ಲಿ ನಾಳೆ ಸಂಜೆ ೬ ಘಂಟೆಗೆ ಕಾರ್ತೀಕೋತ್ಸವವು ವೈಭವದಿಂದ ನಡೆಯುವುದು

ಸಾಧ್ವಿ

ತಾ॥ ೬-೧೨-೪೬ ಶುಕ್ರವಾರ

ಅಕ್ಕಿ ಪಡಿತರ ಹೆಚ್ಚಬೇಕು

ಮದರಾಸ್ ಸರ್ಕಾರದವರು ಅಲ್ಲಿನ ಅಕ್ಕಿ ಪಡಿತರವನ್ನು ಎಂಟು ಔನ್ಸಿನಿಂದ ಹತ್ತು ಔನ್ಸಿಗೆ ಹೆಚ್ಚಿಸಿರುತ್ತಾರೆ. ಈ ತಿಂಗಳ ಮಧ್ಯ ಭಾಗದಿಂದಲೇ ಇದು ಜಾರಿಗೆ ಬರುತ್ತದೆ. ಆ ಪ್ರಾಂತದಲ್ಲಿ ಭತ್ತದ ಬೆಳೆಯು ಸಮರ್ಪಕವಾಗಿರುವುದರಿಂದಲೂ, ಹೊರಗಿನಿಂದ ಬರುವ ಧಾನ್ಯದ ಸಹಾಯವು ಸಾಕಾದಷ್ಟು ಪ್ರಮಾಣದಲ್ಲಿ ಇರುವುದರಿಂದಲೂ ಈ ರೀತಿ ಪಡಿತರವನ್ನು ಅಲ್ಲಿ ಹೆಚ್ಚಿಸಲಾಗಿದೆ

ನಮ್ಮ ಸಂಸ್ಥಾನದಲ್ಲಿ ಇರುವಂತೆ ಅಲ್ಲಿಯೂ ತಲೆ ಒಂದಕ್ಕೆ ಒಟ್ಟು ಹನ್ನೆರಡು ಔನ್ಸ್ ಧಾನ್ಯವನ್ನು ಪ್ರತಿ ದಿನವೂ ಕೊಡುತ್ತಿದ್ದಾರೆ. ಅಲ್ಲಿ ಹಿಂದೆ ಹತ್ತು ಔನ್ಸು ಅಕ್ಕಿಯನ್ನೂ, ಉಳಿದ ಭಾಗಕ್ಕೆ ಗೋಧಿ ಮುಂತಾದ ಧಾನ್ಯಗಳನ್ನೂ ಕೊಡುತ್ತಿದ್ದರು. ಕೆಲವು ದಿನಗಳ ಹಿಂದೆ ಅಕ್ಕಿಯ ಸಂಗ್ರಹವು ಕಡಮೆ ಬಿದ್ದಾಗ ಅಕ್ಕಿಯ ಪ್ರಮಾಣವನ್ನು ಎಂಟು ಔನ್ಸಿಗೆ ಇಳಿಸಿದರು. ಆದರೆ ಪರಿಸ್ಥಿತಿಯು ಉತ್ತಮವಾದ ಕೂಡಲೇ ಮೊದಲಿನಂತೆಯೇ ಅಕ್ಕಿಯನ್ನು ಕೊಡುವುದಾಗಿಯೂ ಸೂಚಿಸಿದ್ದರು. ಈಗ ಹೆಚ್ಚಿನ ಧಾನ್ಯದ ಸಂಗ್ರಹವು ಆಗುತ್ತಿರುವುದರಿಂದ ಆದಷ್ಟು ಶೀಘ್ರದಲ್ಲಿಯೇ ಮೊದಲಿನಂತೆ ಅಕ್ಕಿಯನ್ನು ಕೊಡುವುದಾಗಿ ಅವರು ಆಜ್ಞೆ ಮಾಡಿರುತ್ತಾರೆ. ಮದರಾಸಿನಲ್ಲಿ ಈಗ ಇರುವ ಜನಾನುರಾಗಿ ಸರ್ಕಾರವು ಮಾಡಿರುವ ಈ ಉಪಕಾರವನ್ನು ಅಲ್ಲಿನ ಪ್ರಜೆಗಳೆಲ್ಲರೂ ಸಂತೋಷದಿಂದ ಸ್ವಾಗತಿಸುವರು

ನೆರೆಯ ಪ್ರಾಂತದಲ್ಲಿ ಆದ ಈ ಸುಧಾರಣೆಯು ನಮ್ಮ ಸಂಸ್ಥಾನದಲ್ಲಿಯೂ ಆಗಬಾರದೇಕೆಂಬುದೇ ಎಲ್ಲರ ಬಾಯಲ್ಲಿಯೂ ಈಗ ಇರುವ ಪ್ರಶ್ನೆ. ಇಷ್ಟೇ ಅಲ್ಲದೆ ಮದರಾಸಿನವರಿಗಿಂತಲೂ ಮೈಸೂರಿನವರು ಯಾವಾಗಲೂ ಕಡಮೆ ಪಡಿತರವನ್ನು ಏಕೆ ಹೊಂದಬೇಕೆಂದೂ ಸಹ ಎಲ್ಲರೂ ಕೇಳುತ್ತಿರುವರು. ಹಿಂದೆ ಅಲ್ಲಿ ಒಂದೂವರೆ ಪಾವು ಪಡಿತರವಿದ್ದಾಗ ನಮ್ಮಲ್ಲಿ ಒಂದೂಕಾಲು ಪಾವು ಇತ್ತು. ಅಲ್ಲಿ ಒಂದೂಕಾಲು ಪಾವು ಆದಾಗ ನಮ್ಮಲ್ಲಿ ಒಂದು ಪಾವಿಗೆ ಇಳಿಯಿತು. ಅಲ್ಲಿ ಎಂಟು ಔನ್ಸಿಗೆ ಇಳಿದ ಮೇಲೆ ನಮ್ಮಲ್ಲಿ ಮುಕ್ಕಾಲು ಪಾವು ಕೊಡಲು ಆರಂಭವಾಗಿದೆ. ಇದು ಅಲ್ಲಿಗಿಂತಲೂ ಸುಮಾರು ಮೂರನೇ ಎರಡು ಔನ್ಸಿನಷ್ಟು ಕಡಮೆಯಾಗಿರುತ್ತದೆ. ಹೀಗೆ ಕಡಮೆಯಾಗಿಗಲು ಯಾವ ಕಾರಣವೂ ಇರುವುದಿಲ್ಲ

ಈಗ ಆಹಾರದ ಪರಿಸ್ಥಿತಿಯು ಉತ್ತಮಗೊಂಡಿದೆ ಎಂದು ಮದರಾಸ್ ಸರ್ಕಾರದವರು ಪ್ರಕಟಿಸಿರುವಂತೆಯೇ ನಮ್ಮ ಸರ್ಕಾರದವರೂ ಸಹ ಪ್ರಕಟಿಸಿರುತ್ತಾರೆ. ಆದರೆ ಅಲ್ಲಿನವರು ಕಲ್ಪಿಸಿರುವ ಸೌಲಭ್ಯಗಳನ್ನು ಮಾತ್ರ ಇವರು ಕಲ್ಪಿಸಿಲ್ಲ

ಆಹಾರದ ಪರಿಸ್ಥಿತಿಯು ನೆರೆಯ ಪ್ರಾಂತದಂತೆಯೇ ಇಲ್ಲಿಯೂ ಉತ್ತಮಗೊಂಡಿರುವುದೆಂದು ಸರ್ಕಾರದವರೇ ಹೇಳುವಾಗ ಅಲ್ಲಿನಂತೆಯೇ ಇಲ್ಲಿಯೂ ಪಡಿತರವನ್ನು ಹೆಚ್ಚಿಸುವುದು ನ್ಯಾಯವಾಗಿದೆ. ಆದುದರಿಂದ ಕಡೆಯ ಪಕ್ಷ ಮದರಾಸಿನಲ್ಲಿರುವಂತೆಯಾದರೂ ಇಲ್ಲಿಯೂ ಅಕ್ಕಿ ಪಡಿತರವನ್ನು ಹೆಚ್ಚಿಸಿ ಈಗಾಗಲೇ ಅರೆ ಹೊಟ್ಟೆಯಿಂದ ಬಳಲುತ್ತಿರುವ ಬಡ ಪ್ರಜೆಗಳಿಗೆ ನಮ್ಮ ಸರ್ಕಾರದವರೂ ಕೂಡಲೇ ಸೌಲಭ್ಯಗಳನ್ನು ಕಲ್ಪಿಸಬೇಕೆಂದು ನಾವು ಒತ್ತಾಯ ಪೂರ್ವಕವಾಗಿ ಕೋರುತ್ತೇವೆ.

ಕೊಚ್ಚಿಯಲ್ಲಿ ಉಪ್ಪಿನ ತಯಾರಿ

ಈಗಿನವರೆಗೆ ಸರ್ಕಾರದ ಮೂಲಕ ನಡೆಯುತ್ತಿದ್ದ ಉಪ್ಪಿನ ತಯಾರಿಯನ್ನು ಇನ್ನು ಮುಂದೆ ಖಾಸಗಿಯವರ ಅಧೀನಕ್ಕೆ ಬಿಡಲಾಗುವುದೆಂದು ಕೊಚ್ಚಿ ಸರ್ಕಾರವು ಪ್ರಕಟಿಸಿದೆ

ಸಮುದ್ರ ತೀರದ ೩೦ ಎಕರೆಗಳಲ್ಲಿ ಸರ್ಕಾರದವರು ಪ್ರಯೋಗ ನಡೆಸಿದರೆಂದೂ, ಇದರ ಪರಿಣಾಮವಾಗಿ ಎಕರೆಯೊಂದಕ್ಕೆ ೪೫೦ ಮಣ ಉಪ್ಪನ್ನು ತಯಾರಿಸಲಾಯಿತೆಂದೂ, ವಿಜ್ಞಾನದ ಸಹಾಯದಿಂದ ಸೂಕ್ತ ರೀತಿಯಲ್ಲಿ ತಯಾರಿಕಾ ಕಾರ್ಯಕ್ರಮವನ್ನು ಕೈಗೊಂಡರೆ ಎಕರೆಯೊಂದಕ್ಕೆ ವರ್ಷಕ್ಕೆ ೧೮೦೦ ಮಣ ಉಪ್ಪನ್ನು ತಯಾರಿಸಬಹುದೆಂದೂ ಸರ್ಕಾರದವರು ಪ್ರಕಟಿಸಿರುತ್ತಾರೆ

ರಷ್ಯದ ೩೦ ಲಕ್ಷ ಎಕರೆ ಮರುಭೂಮಿಯಲ್ಲಿ ವ್ಯವಸಾಯ

ರಷ್ಯವು ವ್ಯವಸಾಯದಾಭಿವೃದ್ಧಿಗಾಗಿ ಪಾಂಚ ವಾರ್ಷಿಕ ಯೋಜನೆಯೊಂದನ್ನು ತಯಾರಿಸಿದೆ. ಇದರಿಂದ ಮರುಭೂಮಿಗಳಲ್ಲೂ ಸಹ ಸಾಗುವಳಿ ಮಾಡಲಾಗುವುದು. ಸೈಬೀರಿಯಾ, ತುರ್ಕ್ಮೇನಿಯಾಗಳಲ್ಲಿ ದೊಡ್ಡ ದೊಡ್ಡ ಜಲಾಶಯಗಳನ್ನು ಸ್ಥಾಪಿಸಲಾಗುವುದು. ಈ ಕಾರ್ಯಕ್ರಮಗಳಿಂದ ಹಂಗೇರಿ ಬಳಿಯ ಕಜಾಕಿನ ೧ ಲಕ್ಷ ೨೫ ಸಾವಿರ ಎಕರೆ ಮರುಭೂಮಿಯಲ್ಲಿ ಹತ್ತಿ ವ್ಯವಸಾಯವಾಗುವುದು. ಅಲ್ಲದೆ ನೀರಿಲ್ಲದೆ ಬಂಜರು ಬಿದ್ದಿರುವ ೧ ಲಕ್ಷ ೭೫ ಸಹಸ್ರ ಎಕರೆ ಭೂಮಿಯೂ ೨ ಲಕ್ಷ ಎಕರೆ ಮರುಭೂಮಿಯೂ ವ್ಯವಸಾಯಕ್ಕೆ ಸಿದ್ಧವಾಗುವುವು. ಇದಲ್ಲದೆ ಮರುಭೂಮಿಗಳಲ್ಲೆಲ್ಲಾ ಸಹಸ್ರಾರು ಕಿಲೋಮೀಟರ್ ನೀರು ಹಿಡಿಯುವಷ್ಟು ಜಲಾಶಯಗಳನ್ನು ನಿರ್ಮಿಸಿ, ಕಾಲುವೆಗಳನ್ನು ಸಿದ್ಧಮಾಡುವ ಯೋಜನೆಯಿರುವುದರಿಂದ ಬರುವ ೫ ವರ್ಷಗಳಲ್ಲಿ ೩೦ ಲಕ್ಷ ಎಕರೆ ಮರುಭೂಮಿಯು ವ್ಯವಸಾಯಕ್ಕೆ ಸಿದ್ಧವಾಗುವುದು

ಟಿ. ಸಿ. ನಟರಾಜ್

ಔಷಧಾಲಯ

ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದೀಯ ಔಷಧಗಳೆಲ್ಲವೂ ದೊರೆಯುತ್ತವೆ.

ರಣಜಿತ್

೬-೧೨-೪೬ ರಿಂದ

ಪ್ರತಿದಿನ ೩ ಆಟಗಳು

ಪುಷ್ಪರಾಣಿ ಯಶವಂತ್ ದವೆ ಪಾತ್ರವಹಿಸಿರುವ

ಅದ್ಭುತ ಸಾಹಸಿಕ ಚಿತ್ರ!

ರಾಯಲ್ ಮೇಲ್

(ಹಿಂದಿ)

ಆಪೇರಾ ಟಾಕೀಸ್

೬-೧೨-೪೬ ರಿಂದ

ಎರಡನೆಯ ವಾರ

ಉತ್ತಮಿ

(ತಮಿಳು)

ತಾರೆ ಎಂ.ರತ್ನಂ, ಟಿ.ಎಸ್ ದೊರೆರಾಜ್ ಸ್ವಾಮಿನಾಥನ್, ಟಿ.ಎಸ್.ಕೃಷ್ಣವೇಣಿ ರಾಜಕಾಂತಂ

Morning Shows from 6-12-46

MARY BETH HUGES and EDDIE GUILLAN in

MELODY - PARADISE

ರಾಜಕಮಲ್

ಮೈಸೂರು

6-12-46 ರಿಂದ

ನಾಲ್ಕನೆಯ ವಾರ

ಡಾಕ್ಟರ್ ಕೊಟ್ನಿಸ್ ಕಿ

ಅಮರ್-ಕಹಾನಿ

-: ಭೂಮಿಕೆ :-

ಶಾಂತಾ ರಾಂ, ಜಯಶ್ರೀ, ಉಲ್ಲಾಸ್

ಬೆಳಗಿನ ಪ್ರದರ್ಶನ 6-12-46 ರಿಂದ ಪ್ರತಿದಿನ 10-30ಕ್ಕೆ 4 ದಿನಗಳು ಮಾತ್ರ

"ಅಛ್ಯುತ್ ಕನ್ಯೆ"

(Brand New Print)

ಪಾತ್ರ:— ದೇವಿಕಾರಾಣಿ, ಅಶೋಕ ಕುಮಾರ್ ಮುಂತಾದವರು.

ಸಾಧ್ವಿ

ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ

ಕೂಡಲೇ ಚಂದಾದಾರರಾಗಿರಿ

(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ

ನಿಮ್ಮ ಮೈ ಮೊಗ್ಗಮಲ್ಲಿನಂತೆ ಹೊಳೆಯಬೇಕೆ ? ನೀವು ಲಾವಣ್ಯ ಮೂರ್ತಿಗಳಾಗಬೇಕೆ ?

ಹಾಗಾದರೆ

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ.

ಪರೀಕ್ಷಿಸಿ ನೋಡಿರಿ

ಎಲ್ಲೆಲ್ಲೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ಈ ಐವತ್ತು ವರ್ಷಗಳಿಂದ ಮಾನವ ಲೋಕಕ್ಕೆ ಆರೋಗ್ಯಾನಂದಗಳನ್ನು ನೀಡುತ್ತಾ ಅನರ್ಘ್ಯವಾಗಿ, ಅವಿಚ್ಛಿನ್ನವಾಗಿ ಸೇವೆ ಮಾಡಿ, ದಿನ ದಿನಾಭಿವೃದ್ಧಿ ಹೊಂದುತ್ತಿರುವುದಕ್ಕಾಗಿ ಎಷ್ಟೋ ಗರ್ವಪಡುತ್ತದೆ.

ಆಯುರ್ವೇದಾಶ್ರಮಂ ಲಿಮಿಟೆಡ್ ತ್ಯಾಗರಾಯನಗರ್.. ಮದರಾಸು

Edited, printed and published by A R Nagarajan at the Sadhvi Press D Subbiah Road, Mysore

ಫೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೫] ಶನಿವಾರ ೭—೧೨—೪೬ [ಸಂಚಿಕೆ ೧೦೬

ಲಂಡನ್ ಸಂಧಾನ — — ವಿಫಲವಾಯಿತು

...ರ್ಣ ಸಂಧಾನ ಭಗ್ನವಾಯಿತು !

...ಲಂಡನ್ನಿನಲ್ಲಿ ಆರಂಭವಾಗಿದ್ದ ಸಂಧಾನ ...ಫಲವಾದುದೆಂದು ನ್ಯೂಯಾರ್ಕ್ ...ನ ವಿಶೇಷ ಪ್ರತಿನಿಧಿಯ ವರದಿ ತಿಳಿ... ಬ್ರಿ॥ ಮಂತ್ರಿಗಳು ನಿನ್ನೆಯೂ ಭಾ... ನಾಯಕರೊಡನೆ ಬೇರೆ ಬೇರೆಯಾ... ಕತೆ ನಡೆಸಿದರು ಮಿ॥ ಜಿನ್ನಾ... ಬ್ರಿ॥ ಸರ್ಕಾರದ ನೀತಿಯ ...ದಲ್ಲಿ ಅಸಮಾಧಾನವನ್ನೂ, ಹಿಂ... ವಿಚಾರದಲ್ಲಿ ಅಪನಂಬಿಕೆಯ ...ವ್ಯಕ್ತಪಡಿಸುತ್ತಿದ್ದಾರೆಂದು ಲಂಡನ್ನಿ... ವರದಿಯಾಗಿದೆ. ಸದ್ಯದಲ್ಲೇ ಭಾರತದ ...ವಾಗಿ ಬ್ರಿ॥ ಸರ್ಕಾರದ ಹೇಳಿಕೆ ... ಹೊರಬೀಳಲಿದೆಯೆಂದು ಗೊ...ಗಿದೆ.

ಮಹಾತ್ಮ ಗಾಂಧಿಯವರಿಗೆ ಲಂಡನ್ನಿನ ಸಂದೇಶ

ನೌಖಾಲಿಯಲ್ಲಿರುವ ಗಾಂಧಿಜಿಯವರಿ... ಲಂಡನ್ನಿನಿಂದ ಅತಿ ಪ್ರಾಮುಖ್ಯವಾದ ಸಂದೇಶವೊಂದನ್ನು ತಂದುಕೊಟ್ಟು, ಅವ... ಪ್ರತ್ಯುತ್ತರ ಪಡೆದು ಲಂಡನ್ನಿಗೆ ಒಬ್ಬ ...ನ ವಾಯುಭಾರಿಯು ಪ್ರಯಾಣ ಮಾ...ದ್ದಾರೆಂದು ದೆಹಲಿಯಲ್ಲಿ ಹೇಳಲಾಗು...ದೆ.

...ಸ್ತ್ರ ಲಾಘವದಿಂದ ನೆಹರೂ ರವರಿಗೆ ಆಯಾಸ

ಲಂಡನ್ನಿನ ಕಿಂಗ್ಸ್ ವೇ ಹಾಲಿನಲ್ಲಿ ಭಾ...ಣ ಮಾಡಲು ಹೋದ ಪಂಡಿತ ನೆಹರೂ ...ವರನ್ನು ಅವರ ಮಿತ್ರ ವರ್ಗದವರೂ, ಲಂಡನ್ನಿನಲ್ಲಿರುವ ಭಾರತೀಯ ಪ್ರತಿನಿಧಿಗ...ಳು ಸ್ವಾಗತಿಸಿದಾಗ ಪ್ರತಿಯೊಬ್ಬರಿಗೂ ಹ...ಸ್ತಲಾಘವವಿತ್ತು ಪಂಡಿತರು ಆಯಾಸ ...ಗೊಂಡಿರುವರೆಂದು ವರದಿಯಾಗಿದೆ

೧೯೫೩ ರಲ್ಲಿ ಭಾರತಕ್ಕೆ ಅಭ್ಯುದಯ

ಆಂಧ್ರ ದೇಶದ ಸುಪ್ರಸಿದ್ಧ ಭವಿಷ್ಯವಾ...ದಿಗಳಾದ ಶ್ರೀ ರಾಮಲಿಂಗಶಾಸ್ತ್ರಿಗಳು ಭಾರತದ ಭವಿಷ್ಯವನ್ನು ಕುರಿತು ಹೀಗೆ ಹೇಳುತ್ತಿದ್ದಾರೆ ಗ್ರಹಗಳ ಸ್ಥಿತಿಯಿಂದ ೧೯೪೮ ನೇ ಸೆಪ್ಟೆಂಬರ್ ೧೧ ರ ವೇಳೆಗೆ ಸಂಯುಕ್ತ ರಾಷ್ಟ್ರಗಳ ಭದ್ರತಾ ಸಮಿತಿ...ಯಲ್ಲಿ ಭಾರತವು ಒಂದು ಸ್ಥಾನವನ್ನು ಗಳಿಸಿ, ೧೯೫೩ ನೇ ಮಾರ್ಚ್ ೩ ರ ವೇಳೆಗೆ ಪ್ರಪಂಚದ ಶಕ್ತಿಯುತವಾದ ರಾಷ್ಟ್ರಗಳ ಪೈಕಿ ಭಾರತವು ಒಂದು ಸ್ಥಾನವನ್ನು ಹೊಂದುತ್ತದೆ, ೧೯೪೯ ರ ಅಷ್ಟರೊಳಗೆ ಭದ್ರತಾ ಸಮಿತಿಯಲ್ಲಿ ಖಾಯಂ ಸ್ಥಾನವನ್ನು ಭಾರತವು ಪಡೆಯುವುದು; ಈಗಿನ ಕಾರ್ಮಿಕ ಸರ್ಕಾರವು ಭಾರತದ ಮತ್ತು ಸಾರ್ವಭೌಮ ಸರ್ಕಾರದ ಆದೇಶವನ್ನು ಯಥಾ...ಸ್ಥಿತಿಯಾಗಿ ಸಾಗಿಸುವುದು ಎಂದು ಹೇಳಿದ್ದಾರೆ

ಕಾಲು ನಡಗೆಯಲ್ಲೇ ಗಾಂಧಿಜಿ ಪ್ರಯಾಣ

ಗಾಂಧಿಜಿಯವರು ನೌಖಾಲಿ ಜಿಲ್ಲೆಯಲ್ಲಿ ಕಾಲು ನಡಗೆಯಲ್ಲೇ ಪ್ರತಿ ಹಳ್ಳಿಗಳಿಗೂ ಹೋಗಿ ಊರು ಬಿಟ್ಟು ಹೋಗಿರುವವರು ಹಿಂತಿರುಗಬೇಕೆಂದು ಪ್ರೇರೇಪಿಸುತ್ತಿದ್ದಾರೆ ...ನ. ಹೊರುವಷ್ಟು ಸಾಮಾನುಗಳನ್ನು ಗಾಂಧಿಜಿ ತಮ್ಮೊಡನೆ ತೆಗೆದುಕೊಂಡು ಹೋಗುತ್ತಿದ್ದಾರೆ. ೩-೪ ದಿನಗಳಾದ ಮೇಲೆ ಶ್ರೀರಾಮಪುರಕ್ಕೆ ಹಿಂತಿ...ರುಗುವರು

ಶಂಕರಪ್ಪನ ಆದರ್ಶ

ಚರಕಾ ಸ್ಪರ್ಧೆಯಲ್ಲಿ ಅಧ್ಯಕ್ಷರ ಭಾಷಣ

ಮೈಸೂರು ೭

" ಯಾವುದೊಂದು ಕಾರಣಕ್ಕಾಗಿ ಶಂಕರಪ್ಪನವರು ತಮ್ಮ ಪ್ರಾಣವನ್ನು ಬಲಿ ದಾನ ಮಾಡಿದರೋ ಆ ಮಹಾ ಕಾರ್ಯವು ಇನ್ನೂ ಪೂರ್ಣಗೊಂಡಿಲ್ಲ. ಆ ಕಾರ್ಯವನ್ನು ಪೂರೈಸುವುದು ಇಂದಿನ ವಿದ್ಯಾರ್ಥಿಗಳ ಕರ್ತವ್ಯ. ಅವರ ಬಲಿ ದಾನ ವಿದ್ಯಾರ್ಥಿ ಕಾಂಗ್ರೆಸ್ಸಿನ ಸ್ಫೂರ್ತಿಯಾಗಿದೆ ಮತ್ತು ಅವರು ಎಲ್ಲರ ಹೃದಯದಲ್ಲಿಯೂ ಮನೆ ಮಾಡಿಕೊಂಡಿದ್ದಾರೆ " ಎಂದು ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ಸಿನ ಆಶ್ರಯದಲ್ಲಿ ನಡೆದ ಶ್ರೀ ಶಂಕರಪ್ಪ ಸ್ಮಾರಕ ಚರಕಾ ಸ್ಪರ್ಧೆಯಲ್ಲಿ ಅಧ್ಯಕ್ಷತೆ ವಹಿಸಿದ್ದ ಮೈಸೂರು ಕಾಂಗ್ರೆಸ್ ಮಾಜಿ ಅಧ್ಯಕ್ಷರಾದ ಶ್ರೀ ಟಿ. ಸಿದ್ದಲಿಂಗಯ್ಯನವರು ಭಾಷಣ ಮಾಡುತ್ತಾ ಶ್ರೀ ಶಂಕರಪ್ಪನವರ ಅಮರ ಜೀವನವನ್ನು ಕೊಂಡಾಡಿದರು. ಕಾರ್ಯದರ್ಶಿಗಳಾದ ಶ್ರೀ॥ ಶಾಂತರಾಜ್ ರವರು ಈ ಕಾರ್ಯದಲ್ಲಿ ಭಾಗಿಗಳಾದವರಿಗೂ, ಸಹಾಯಕರಾದವರಿಗೂ ವಂದನೆಗಳನ್ನರ್ಪಿಸಿದನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಷಾಫತ್ ಅಹಮದ್ದರ ಇರಿತದ ಮೊಕದ್ದಮೆ

ಕೇಂದ್ರ ಸರ್ಕಾರದ ಮಂತ್ರಿಗಳಾಗಿದ್ದ ಸರ್ ಷಾಫತ್ ಅಹಮದ್ ರವರನ್ನು ಕೊಲೆ ಮಾಡಲು ಪ್ರಯತ್ನಿಸಿದರೆಂದು ಮಹಮದ್ ಸಾದಿಕ್ ಮತ್ತು ಅಬ್ದುಲ್ ಅಜೀಜ್ ಎಂಬುವರ ಮೇಲೆ ದೆಹಲಿ ನ್ಯಾಯಾಸ್ಥಾನದಲ್ಲಿ ಹೂಡಲಾಗಿದ್ದ ಮೊಕದ್ದಮೆಯಲ್ಲಿ ಅಪಾದನೆ ಸ್ಥಿರಪಡದೆ ಅವರಿಬ್ಬರ ಬಿಡುಗಡೆಯಾಗಿದೆ

ಸಿಂಧ್ ಚುನಾವಣೆ

ಸಿಂಧ್ ಶಾಸನ ಸಭಾ ಚುನಾವಣೆಯಲ್ಲಿ ಮುಖ್ಯ ಮಂತ್ರಿಗಳಾಗಿರುವ ಮಿ॥ ಗುಲಾಂ ಹುಸೇನ್ ಹಿದಯತುಲ್ಲಾರವರೂ, ರಾಷ್ಟ್ರೀಯ ಮುಸ್ಲಿಮರಾದ ಮೌಲಾನಾ ಹಾಜಿ ಭಕ್ಷರೂ ಚುನಾಯಿತರಾಗಿದ್ದಾರೆ

ಅಸಫ್ ಅಲಿಯವರು ಅಮೆರಿಕದಲ್ಲಿ ರಾಯಭಾರಿ

ಕೇಂದ್ರ ಸರ್ಕಾರದ ಸಂಚಾರ ಮಂತ್ರಿಗಳಾದ ಮಿ॥ ಅಸಫ್‌ಅಲಿಯವರನ್ನು ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಭಾರತದ ರಾಯಭಾರಿಗಳನ್ನಾಗಿ ನೇಮಿಸಲಾಗಿದೆ.

ಸೂಚನೆ

" ಚಂದ್ರಗ್ರಹಣದ " ಪ್ರಯುಕ್ತ ನಾಳೆ ದಿನ ಸಾಧ್ವೀ ಪತ್ರಿಕೆಗೆ ರಜಾ ಕೊಡಲಾಗಿದೆ.

—ವ್ಯವಸ್ಥಾಪಕ, " ಸಾಧ್ವಿ "

ನೆಹರೂ ರವರು ಇಂದು ಹೊರಡುವರು

ಪಂಡಿತ ನೆಹರು ಮತ್ತು ಸರ್ದಾರ್ ಬಲದೇವ ಸಿಂಗರು ತಮ್ಮ ಪರಿವಾರದೊಡನೆ ಲಂಡನ್ನಿನಿಂದ ಈ ದಿನ ಮಧ್ಯಾಹ್ನ ೧-೪೫ಕ್ಕೆ ಲ್ಯಾಂಕಾಸ್ಟರ್ ವಿಮಾನವೊಂದರಲ್ಲಿ ಭಾರತಕ್ಕೆ ಹೊರಡುವರು. ಅವರ ಪ್ರಯಾಣಕ್ಕಾಗಿ ಆ ವಿಮಾನವನ್ನು ಕಾದಿಡಲಾಗಿದೆ

ಅಮೆರಿಕಾದಲ್ಲಿ ಮಹಾ ಮುಷ್ಕರ

ಅಮೆರಿಕಾ ಸಂಯುಕ್ತ ಸಂಸ್ಥಾನದ ಕಲ್ಲಿದ್ದಲು ಗಣಿಗಳ ಕೆಲಸಗಾರರು ಮುಷ್ಕರ ಹೂಡಿದ್ದಾರೆ ಇದರಿಂದ ಅಲ್ಲಿನ ವ್ಯಾಪಾರ ವ್ಯವಹಾರಾದಿಗಳೆಲ್ಲಾ ತಲೆ ಕೆಳಗಾಗಿವೆ. ಔಷಧಿ ಮತ್ತು ಆಹಾರದ ಹೊರತಾಗಿ ಮಿಕ್ಕ ಯಾವ ಸಾಮಾನನ್ನು ಹೊರ ದೇಶಕ್ಕೆ ರಫ್ತು ಮಾಡುವುದನ್ನು ನಿಲ್ಲಿಸಲಾಗಿದೆ. ರೈಲ್ವೆಗಳಲ್ಲಿ ಹೆಚ್ಚು ಸಾಮಾನುಗಳನ್ನು ಸಾಗಿಸುತ್ತಿಲ್ಲ. ಪ್ಯಾಸೆಂಜರ್ ರೈಲುಗಳನ್ನು ಶೇಕಡ ೫೦ ರಷ್ಟು ನಿಲ್ಲಿಸಲಾಗಿದೆ. ಉಕ್ಕಿನ ಕಾರ್ಖಾನೆಗಳು ಕಲ್ಲಿದ್ದಲಿನ ಅಭಾವದಿಂದ ಮುಚ್ಚಲ್ಪಡಲು ಆರಂಭವಾಗಿವೆ ಈ ಮುಷ್ಕರದಲ್ಲಿ ೪೦ ಲಕ್ಷ ಕೆಲಸಗಾರರು ಭಾಗಿಗಳಾಗಿದ್ದಾರೆ ಸರ್ಕಾರಕ್ಕೂ ಕೂಲಿಗಾರರ ಸಂಘಕ್ಕೂ ಆಗಿದ್ದ ಒಪ್ಪಂದವನ್ನು ಮುರಿದರೆಂಬ ಆಪಾದನೆ ಮೇಲೆ ಕೂಲಿಗಾರರ ಸಂಘಕ್ಕೆ ೩೫ ಲಕ್ಷ ಡಾಲರುಗಳ ದಂಡವನ್ನೂ ನ್ಯಾಯಾಸ್ಥಾನಕ್ಕೆ ಅವಮಾನ ಪಡಿಸಿದರೆಂದು ಕೆಲಸಗಾರರ ಸಂಘದ ಅಧ್ಯಕ್ಷ ಮಿ॥ ಲೂಯಿಸ್‌ರವರಿಗೆ ೧೦ ಸಹಸ್ರ ಡಾಲರು ದಂಡವನ್ನೂ ಅಲ್ಲಿನ ಫೆಡರಲ್ ನ್ಯಾಯಾಸ್ಥಾನ ವಿಧಿಸಿದೆ ಮುಷ್ಕರ ನಡೆಯುತ್ತಲೇ ಇದೆ

ಕೆರೆಹಳ್ಳಿ ರಸ್ತೆ ದುರಸ್ತು

ಚಾಮರಾಜನಗರದ ತಾಲ್ಲೂಕು ಕೆರೆಹಳ್ಳಿ ಗ್ರಾಮಕ್ಕೆ ಆಳದ ಮಹಾಸ್ವಾಮಿಯವರ ಕಾಲದಲ್ಲಿ ಸಾವಿರಾರು ರೂ ವೆಚ್ಚ ಮಾಡಿ ಸರ್ಕಾರದವರು ಒಂದು ಕೆರೆಯನ್ನು ಮಾಡಿಸಿದ್ದರು ಆದರೆ ಅಲ್ಲಿಯ ರಸ್ತೆಯ ಬಗ್ಗೆ ಇದುವರೆವಿಗೂ ಸರ್ಕಾರದವರು ಗಮನ ಕೊಟ್ಟಿಲ್ಲ. ಮಳೆಗಾಲದಲ್ಲಿ ಜನರು

ಆಹಾರ ಶಾಸನ ಮುಂದು ವರಿಯುವುದು

ಸ್ವಂ. ವ. ಫೋ॥] ಬೆಂಗಳೂರು ೭

೫ ವರ್ಷದ ಹಿಂದೆ ಧಾನ್ಯ ಲೇವಿಗೆ ಮತ್ತು ಪಡಿತರಗಳ ಬಗ್ಗೆ ಸರ್ಕಾರದವರು ಹೊರಡಿಸಿದ್ದ ಆಜ್ಞೆಯು ಮುಂದಿನ ವರ್ಷವೂ ಮುಂದುವರಿಯುವುದೆಂದು ಪ್ರಕಟಣೆ ಹೊರಟಿದೆ.

✝ ಕ್ಲಾಸಿಕ ಸಂಗೀತ ಗಮಕ ವಿದ್ವಾನ್ ಶ್ರೀ ಕೆ. ಜಿ ಸಂಪತ್ಕುಮಾರಾಚಾರ್ಯರು ಮೊನ್ನೆ ಸಂಜೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ

✝ ಪ್ರಕೃತದ ಮಳೆಯು ದೆಸೆಯಿಂದ ರಾಗಿ ಬೆಳೆಗೆ ಉಂಟಾಗಿರುವ ನಷ್ಟವನ್ನು ಪರಿಶೀಲಿಸಿ ವರದಿ ಮಾಡಲು ಸರ್ಕಾರದವರು ಒಂದು ಸಮಿತಿಯನ್ನು ನೇಮಿಸಬೇಕೆಂದು ಪ್ರಾರ್ಥಿಸುವ ನಿರ್ಣಯವು ಈ ದಿನ ಜಿಲ್ಲಾ ಬೋರ್ಡ್ ಸಭೆಯಲ್ಲಿ ಅಂಗೀಕರಿಸಲ್ಪಟ್ಟಿತು

• ಶ್ರೀ ಶಂಕರ ರಾವ್ ಓಗಲೆಯವರು ವಾಣಿಜ್ಯ ಸಂಘದ ಅಧ್ಯಕ್ಷರಾಗಿಯೂ, ಶ್ರೀ ಜಿ ಎ ಆಚಾರ್ಯರು ಉಪಾಧ್ಯಕ್ಷರಾಗಿಯೂ ಆರಿಸಲ್ಪಟ್ಟಿದ್ದಾರೆ.

ಕಲ್ಕತ್ತಾದಲ್ಲಿ ಗಲಭೆ

ಮೊಹರಂ ಸಂಬಂಧದಲ್ಲಿ ಮೊನ್ನೆ ದಿನ ಕಲ್ಕತ್ತಾ ನಗರದಲ್ಲಿ ಮತ್ತೆ ಗಲಭೆ ಎದ್ದಿತು. ಮೊಹರಂ ಮೆರವಣಿಗೆಯಲ್ಲಿದ್ದವರಿಗೂ, ಇತರರಿಗೂ ಹೊಡೆದಾಟವಾಗಿ ಮೂವರು ಹತರಾಗಿದ್ದಾರೆ. ಗಾಯಗೊಂಡ ಐವತ್ತು ಮಂದಿಯನ್ನು ಆಸ್ಪತ್ರೆಗೆ ಸಾಗಿಸಲಾಗಿದೆ ಪೋಲೀಸರು ಗುಂಡು ಹಾರಿಸಿ, ಗುಂಪನ್ನು ಚದುರಿಸಿ ಪರಿಸ್ಥಿತಿಯನ್ನು ಹತೋಟಿಗೆ ತಂದಿದ್ದಾರೆ

ನಕಲಿ ಸ್ವಾತಂತ್ರ್ಯ ಬೇಡ

ಮೊನ್ನೆ ಪಂಡಿತ ನೆಹರೂರವರು ಲಂಡನ್ನಿನ ಕಿಂಗ್ಸ್ ವೇ ಹಾಲಿನಲ್ಲಿ ಭಾಷಣ ಮಾಡಿದರು. ಲಂಡನ್ನಿಗೆ ಬರಬೇಕೆಂದು ಆಹ್ವಾನ ಬಂದದ್ದರಿಂದ ಇಲ್ಲಿಗೆ ಬಂದಿದ್ದೇನೆ; ಇಲ್ಲಿನ ಮಾತುಕತೆಗಳ ಫಲಿತಾಂಶವೇನಾಗುವುದೆಂದು ನನಗೆ ಗೊತ್ತಿಲ್ಲ ಆದರೆ ಯಾವ ಒಂದು ಪಂಗಡದ ಹಿತಕ್ಕಾಗಿಯೂ ನಾವು ಹೋರಾಡುತ್ತಿಲ್ಲ ೪೦ ಕೋಟಿ ಭಾರತೀಯರಿಗಾಗಿ ನಾವು ಹೋರಾಡುತ್ತಿದ್ದೇವೆ ಮುಂದೆ ಯುದ್ಧವೊಂದು ಪುನಃ ಒದಗುವುದೆಂದು ಮಾತುಕತೆಗಳು ಕೇಳಿ ಬರುತ್ತಿವೆ ಅದು ಒದಗಲಿ, ಒದಗದಿರಲಿ, ನಾವು ಭಾರತದಲ್ಲಿ ಶಾಂತಿಗಾಗಿ ಹೋರಾಡಲೇಬೇಕಾಗಿದೆ; ನಮಗೆ ಕೃತಕ ಸ್ವಾತಂತ್ರ್ಯ ಬೇಡ ನಮಗೆ ನಕಲಿ ಸ್ವಾತಂತ್ರ್ಯದಲ್ಲಿ ನಂಬಿಕೆಯಿಲ್ಲ. ಭಾರತಕ್ಕೂ, ಸಮಗ್ರ ವಿಶ್ವಕ್ಕೂ ನೈತಿಕ ಸ್ವಾತಂತ್ರ್ಯ ಮತ್ತು ಶಾಂತಿ ಒದಗಬೇಕೆಂದು ನಾವು ಬಯಸುತ್ತೇವೆ ಮತ್ತು ಅದಕ್ಕಾಗಿಯೇ ನಾವು ಹೋರಾಡುತ್ತಿದ್ದೇವೆ-ಎಂದು ನೆಹರೂರವರು ಹೇಳಿದರು.

—

ವಿಶ್ವ ಸಮ್ಮೇಳನದಲ್ಲಿ ಭಾಗ ವಹಿಸುತ್ತಿರುವ ಭಾರತದ ಪ್ರತಿನಿಧಿಗಳ ಗೌರವಾರ್ಥವಾಗಿ ರಷ್ಯದ ನಿಯೋಗವು ಔತಣದ ಕೂಟವನ್ನು ಮೊನ್ನೆ ನ್ಯೂಯಾರ್ಕಿನಲ್ಲಿ ಏರ್ಪಡಿಸಿದ್ದರು

...ತಿರುಗಾಡುವುದು ಬಹಳ ಕಷ್ಟವಾಗಿದೆ. ಈಗಲಾದರೂ ಸರ್ಕಾರದವರು ಗಮನ ಕೊಟ್ಟು ರಸ್ತೆ ಸರಿಪಡಿಸಬೇಕೆಂದು ಅಲ್ಲಿನ ನಿವಾಸಿಗಳು ಕೋರುತ್ತಾರೆ

ಸಾಧ್ವಿ

ತಾ॥ ೭-೧೨-೪೬ ಶನಿವಾರ

ಹೋದ ದಾರಿಗೆ ಸುಂಕವಿಲ್ಲ

ಭಾರತದ ನಾಯಕರೂ, ವೈಸರಾಯರೂ ಲಂಡನ್ನಿಗೆ ಹೋದುದಾಯಿತು. ಇಂದು ಪಂಡಿತ ನೆಹರೂರವರೂ, ಸರ್ದಾರ್ ಬಲದೇವ ಸಿಂಗರೂ ಅಲ್ಲಿಂದ ಹಿಂದಕ್ಕೆ ತೆರಳುವರೆಂದು ತಿಳಿದು ಬಂದಿದೆ. ಅಲ್ಲಿ ನಡೆದ ಮಾತುಕತೆಗಳಿಂದ ಯಾವ ಒಪ್ಪಂದವೂ ಆಗಿಲ್ಲವೆಂದು ವರದಿಯಾಗಿದೆ. ಆದುದರಿಂದ ಹೋದ ದಾರಿಗೆ ಸುಂಕವಿಲ್ಲವೆಂದು ಹೇಳಬಹುದಾಗಿದೆ.

ಈ ಮಾತುಕತೆಗಳಿಂದ ನಿರ್ದಿಷ್ಟವಾದ ಯಾವ ಪ್ರಯೋಜನವಾಗುವುದೆಂಬ ಬಗ್ಗೆ ಯಾರಿಗೂ ಭರವಸೆಯಿರಲಿಲ್ಲ. ಕಾಂಗ್ರೆಸ್ಸಿನವರಿಗಂತೂ ಇರಲೇ ಇಲ್ಲ. ಇದೊಂದು ವ್ಯರ್ಥ ಕಾಲಹರಣದ ನಾಟಕವೆಂದು ಸರ್ದಾರ್ ಪಟೇಲರು ಹೇಳುತ್ತಲೇ ಇದ್ದರು. ಆದುದರಿಂದಲೇ ಆಹ್ವಾನವನ್ನು ಅವರು ಅಂಗೀಕರಿಸಲಿಲ್ಲ. ಆದರೆ ಕಾಂಗ್ರೆಸ್ಸಿನವರು ಯಾವಾಗಲೂ ಸಂಧಾನಕ್ಕೆ ಸಿದ್ಧರಾಗಿರುವುದರಿಂದ ಬ್ರಿಟಿಷ್ ಪ್ರಧಾನಿಗಳ ಒತ್ತಾಯದ ಪ್ರಾರ್ಥನೆಯ ಮೇರೆ ಕಾಂಗ್ರೆಸ್ಸಿನವರು ಪಂಡಿತ ನೆಹರೂರವರನ್ನು ಮಾತ್ರ ತಮ್ಮ ಪ್ರತಿನಿಧಿಯನ್ನಾಗಿ ಕಳುಹಿಸಿ ಕೊಟ್ಟರು.

ಲಂಡನ್ನಿನಲ್ಲಿ ಮಾತುಕತೆಗಳಲ್ಲದೆ ಸತ್ಕಾರ ಸಮಾರಂಭಗಳೂ ವಿಶೇಷವಾಗಿ ಜರುಗಿದುವು. ಚಕ್ರವರ್ತಿ ಸಾರ್ವಭೌಮರೊಡನೆಯೂ ಉಪಾಹಾರ ಕೂಟವು ನಡೆಯಿತು. ಮಂತ್ರಿಮಂಡಲದವರೂ, ಪಾರ್ಲಿಮೆಂಟ್ ಸದಸ್ಯರೂ, ವೈಯಕ್ತಿಕವಾಗಿಯೂ, ಸಾಮೂಹಿಕವಾಗಿಯೂ ಸಮಾರಾಧನೆಗಳನ್ನು ಜರುಗಿಸಿದರು. ಆದರೆ ಲಂಡನ್ ಯಾತ್ರೆಯ ಮುಖ್ಯ ಉದ್ದೇಶವು ಮಾತ್ರ ನೆರವೇರಿರುವುದಿಲ್ಲ.

ಹಿಂದೂಗಳಿಗೂ, ಮುಸ್ಲಿಮರಿಗೂ ಒಪ್ಪಂದವಾಗಬೇಕಾದುದು ಹಿಂದೂಸ್ಥಾನದಲ್ಲಿಯೇ ಹೊರತು ಲಂಡನ್ನಿನಲ್ಲಿ ಅಲ್ಲವೆಂದು ಸರ್ದಾರ್ ಪಟೇಲರು ಹೇಳಿರುವುದು ನಿಜವಾಯಿತು. ಲಂಡನ್ನಿನಲ್ಲಿ ಏನೇ ತೀರ್ಮಾನವಾಗಲಿ, ಅದು ಆಚರಣೆಗೆ ಬರಬೇಕಾದುದು ಭಾರತದಲ್ಲಿ. ಆದುದರಿಂದ ಇನ್ನು ಆತುರದಲ್ಲಿ ಕೈಗೊಂಡ ಸಂಧಾನವು ಯಾವ ಪ್ರತಿಫಲವನ್ನೂ ಹೊಂದದಿದ್ದರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ. ಹಲವಾರು ತಿಂಗಳುಗಳಿಂದ ಭಾರತದ ನಾಯಕರೂ ಬ್ರಿಟಿಷ್ ಸೂತ್ರಧಾರಿಗಳೂ ನಡೆಸಿದ ಪ್ರಯತ್ನಗಳಿಂದ ಕೈಗೂಡದಿರುವ ಕಾರ್ಯಸಾಧನೆಯು, ಇಂದಿನ ಎರಡು ಮೂರು ದಿನಗಳ ಮಾತುಕತೆಗಳಲ್ಲಿ ಈಡೇರುವುದೆಂದು ಭಾವಿಸಲು ಅವಕಾಶವಿಲ್ಲ.

ರಾಜ್ಯಾಂಗ ಸಮಿತಿಯ ಸಮಾರಂಭವನ್ನು ಮುಂದೆ ಹಾಕುವ ಪ್ರಯತ್ನವು ನೆರವೇರಲಿಲ್ಲ. ಬ್ರಿಟಿಷ್ ನಿಯೋಗದವರ ಸಲಹೆಗಳ ಮೇಲಿನ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಲು ಲಂಡನ್ನು ಸರಿಯಾದ ರಂಗಸ್ಥಳವಲ್ಲ. ಅವುಗಳು ಸರಿಯಾದ ನ್ಯಾಯಸ್ಥಾನದಲ್ಲಿ ಇತ್ಯರ್ಥವಾಗಬೇಕಾದುವು. ಹೀಗಿರುವುದರಿಂದ ಸಂಧಾನದ ಹೆಸರಿನ ಮುಕ್ತಾಂಕ ಪ್ರಕರಣವು ಸಂಪೂರ್ಣವಾಗಿ ಹಿಂದೂಸ್ಥಾನದ ರಾಜಕೀಯದಲ್ಲಿ ಕೃತಕವಾಗಿ ಕಲ್ಪಿತವಾಗಿರುವ ಒಂದು ಬಿಕ್ಕಟ್ಟಿನ ಜಾಲವು ಜಗತ್ತಿನ ಮುಂದೆ ಮತ್ತೆ ಭೂತಾಕಾರವಾಗಿ ಪ್ರದರ್ಶಿಸಲ್ಪಡಲು ಅವಕಾಶವಾಗಿರುವುದು.

ರಾಜ್ಯಾಂಗ ಸಭೆಯು ಗೊತ್ತಾಗಿರುವಂತೆ ನಾಳಿದ್ದಿನಿಂದ ತನ್ನ ಕಾರ್ಯವನ್ನು ಆರಂಭಿಸುವುದು. ಸರ್ದಾರ್ ಪಟೇಲರು ಸ್ಪಷ್ಟವಾಗಿ ಹೇಳಿರುವಂತೆ ಆಕಾಶವು ಕಳಚಿ ಬಿದ್ದರೂ, ಭೂಮಿಯು ಬಿರಿದು ಬಿಟ್ಟರೂ, ಅವರ ಕೆಲಸವು ನಿಲ್ಲುವುದಿಲ್ಲ. ಲೀಗಿನವರು ಯಾವ ವರ್ತನೆಯನ್ನು ಅನುಸರಿಸುವರೆಂಬುದನ್ನು ಈಗಲೇ ಹೇಳಲು ಸಾಧ್ಯವಿಲ್ಲ. ಬ್ರಿಟಿಷ್ ಸರ್ಕಾರದವರು ಮಾತ್ರ ತಾವು ಘೋಷಿಸಿರುವ ನೀತಿಗೆ ಅನುಸಾರವಾಗಿ ನಡೆಯಲೆಂದು ಎಲ್ಲರೂ ಹಾರೈಸುತ್ತಾರೆ.

ವಿಜಯಲಕ್ಷ್ಮಿಯವರು ಭಾರತಕ್ಕೆ

ವಿಶ್ವಸಂಸ್ಥೆಯಲ್ಲಿ ಭಾರತ ನಿಯೋಗದ ನಾಯಕರಾದ ಶ್ರೀಮತಿ ಜಯಲಕ್ಷ್ಮಿ ಪಂಡಿತರು ೧೦ ನೇ ತಾ॥ ಮಂಗಳವಾರ ನ್ಯೂಯಾರ್ಕಿನಿಂದ ಹೊರಟು ಭಾರತಕ್ಕೆ ೧೩ ನೇ ಶುಕ್ರವಾರ ತಲಪುವರು. ಅವರ ಗೈರುಹಾಜರಿಯಲ್ಲಿ ಸರ್ ಮಹಾರಾಜ ಸಿಂಗ್ ರವರು ನಾಯಕತ್ವವನ್ನು ವಹಿಸಿಕೊಳ್ಳುವರು.

ರೀವಾ ರಾಜರ ಮೇಲಿನ ಗಡೀಪಾರು ವಜಾ

ಕಳೆದ ಫೆಬ್ರವರಿಯಲ್ಲಿ ಬಿಹಾರ್, ಸಂಯುಕ್ತ ಪ್ರಾಂತ್ಯ, ಮಧ್ಯ ಪ್ರಾಂತ್ಯ ಮತ್ತು ಬೀರಾರುಗಳಿಗೆ ಪ್ರವೇಶಿಸಕೂಡದೆಂದು ರೀವಾ ಸಂಸ್ಥಾನದ ಮಾಜಿ ಮಹಾರಾಜರ ಮೇಲೆ ಪ್ರತಿಬಂಧಕಾಜ್ಞೆಯನ್ನು ಜಾರಿ ಮಾಡಲಾಗಿದ್ದಿತು. ಈಗ ಸದರಿ ಆಜ್ಞೆಯನ್ನು ವಜಾ ಮಾಡಿರುವುದಾಗಿ ವರದಿಯಾಗಿದೆ.

ಗೋವಾ ಕಾಂಗ್ರೆಸ್ ಅಧ್ಯಕ್ಷರಿಗೆ ಕಾಲಾ ಪಾನಿ ಶಿಕ್ಷೆ

ಗೋವಾ ದಂಡಿನ ಕೋರ್ಟಿನವರು, ಅಲ್ಲಿನ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷರಾದ ಡಾ॥ ರಾಮ ಹೆಗ್ಡೆಯವರಿಗೆ ೮ ವರ್ಷಗಳ ಕಾಲಾ ಪಾನಿ ಎಂಬ ಕ್ರೂರ ಶಿಕ್ಷೆ ವಿಧಿಸಿರುವರೆಂದು ವರದಿಯಾಗಿದೆ.

ಲಂಡನ್ನಿನಲ್ಲಿ ನೆಹರೂ ಪ್ರತಿಮೆ ತಯಾರಿ

ಲಂಡನ್ನಿನ ಪ್ರಸಿದ್ಧ ಶಿಲ್ಪಿಗಳಾದ ಮಿ॥ ಎಫ್. ಸ್ಟೀರ ರವರು ಪಂ॥ ನೆಹರೂರವರ ನಡು ಮಟ್ಟದ ಪ್ರತಿಮೆಯನ್ನು ನಿರ್ಮಿಸುತ್ತಿದ್ದಾರೆ. ಮೂರೇ ಮೂರು ಸಿಟಿಂಗುಗಳಲ್ಲಿ ಅವರ ಪ್ರತಿಕೃತಿಯನ್ನು ನಿರ್ಮಿಸಲಾಗುವುದು. ತಮಗಿರುವ ಅತ್ಯಂತ ಅವಸರದ ಕಾರ್ಯಕಲಾಪಗಳಲ್ಲಿಯೂ ಸಹ ಪಂಡಿತರು ಮೂರು ಸಿಟಿಂಗ್ ಕೊಟ್ಟಿದ್ದಾರೆ.

ಈಜಿಪ್ಟಿನಲ್ಲಿ ಸತ್ಯಾಗ್ರಹ

ಆಂಗ್ಲೋ-ಈಜಿಪ್ಟಿನ ನೂತನ ಕರಾರನ್ನು ಪ್ರತಿಭಟಿಸಿ ಅಲ್ಲಿನ ನಹಸ್ ಪಾಷಾರವರ ವಾಫ್ದ್ ಪಂಗಡದವರು ಪ್ರಚಂಡ ಚಳುವಳಿಯನ್ನು ಆರಂಭಿಸಿದ್ದಾರೆ. ಈ ಪಂಗಡದ ಸಭೆಗಳನ್ನು ಸರ್ಕಾರದವರು ನಿಷೇಧಿಸಿದ್ದಾರೆ. ಹೀಗಿದ್ದಾಗ್ಯೂ ಪ್ರತಿಬಂಧಕಾಜ್ಞೆಗಳನ್ನು ಉಲ್ಲಂಘಿಸಿ, ಸತ್ಯಾಗ್ರಹವನ್ನು ಆರಂಭಿಸಲು ವಾಫ್ದ್ ಪಕ್ಷವು ನಿರ್ಧರಿಸಿದೆ.

ಕಾಂಗ್ರೆಸ್ ಭವನದ ಆರಂಭೋತ್ಸವ

ಸ್ವಂ ಸು] ಅರಸೀಕೆರೆ ೫

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಸಿ. ರೆಡ್ಡಿಯವರು ಈ ದಿನ ಬೆಳಗ್ಗೆ ಹಾರನಹಳ್ಳಿಗೆ ದಯಮಾಡಿಸಿ ಅಲ್ಲಿ ನೂತನವಾಗಿ ನಿರ್ಮಿಸಲ್ಪಟ್ಟಿರುವ ಕಾಂಗ್ರೆಸ್ ಭವನದ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಅಧ್ಯಕ್ಷರನ್ನು ಊರಿನಲ್ಲೆಲ್ಲಾ ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು. ಶ್ರೀ ರೆಡ್ಡಿಯವರು ಭವನವನ್ನು ತೆರೆದು ಸಂಸ್ಥಾನದ ಪ್ರತಿ ಸ್ಥಳದಲ್ಲೂ ಕಾಂಗ್ರೆಸ್ ಭವನಗಳು ನಿರ್ಮಾಣವಾಗಬೇಕೆಂದು ತಿಳಿಸಿದರು. ಇದುವರೆಗಿನ ಪ್ರವಾಸದ ಅನುಭವಗಳನ್ನು ವಿವರಿಸಿ ಜವಾಬ್ದಾರಿ ಸರ್ಕಾರದ ಹೋರಾಟಕ್ಕೆ ಪ್ರಜಾಗಣದ ಬೆಂಬಲವು ಪೂರ್ಣವಾಗಿದೆಯೆಂದು ಹೇಳಿದರು.

ರಾಷ್ಟ್ರಕೂಟಕ್ಕೆ ಮೈಸೂ[ರಿನ] ಸಪ್ತರ್ಷಿಗಳು

ಭಾರತ ರಾಜ್ಯಾಂಗ ರಚನಾ ಸಭೆಗೆ ಮೈಸೂರಿನ ಪರವಾಗಿ ಹೋಗಬೇಕಾದ ಪ್ರತಿನಿಧಿಗಳ ಬಗ್ಗೆ ಅಧಿಕಾರಿ ಮತ್ತು ಖಾಸಗಿ ಪರಿಣಗಳಲ್ಲಿ ವಿಪುಲ ಚರ್ಚೆ ಸಾಗುತ್ತ ಬಂದಿದೆ. ಪ್ರಜಾಪ್ರತಿನಿಧಿ ಸಭೆಯ ಸದಸ್ಯರು ವ್ಯಕ್ತಪಡಿಸಿದ ಅಭಿಪ್ರಾಯ, ದಿವಾನರು ಇತ್ತ ಉತ್ತರ ಇವುಗಳ ಮೇಲೆ ಸಂಸ್ಥಾನದ ರಾಜಕೀಯ ತಜ್ಞರು ಜಿಜ್ಞಾಸೆ ನಡೆಸಿ ತಮ್ಮ ತಮ್ಮ ಅಭಿಪ್ರಾಯವನ್ನು ಒಂದಲ್ಲ ಒಂದು ರೀತಿಯಲ್ಲಿ ಬಹಿರಂಗ ಪಡಿಸುತ್ತಿದ್ದಾರೆ. ಸಂಸ್ಥಾನದ ರಾಜಕೀಯ ಜೀವನದಲ್ಲೇ ಮುಳುಗೇಳುತ್ತಿರುವ ಶ್ರೀ ತಿರುಮಲೆ ತಾತಾಚಾರ್ಯರು, ತಮ್ಮ ಅಭಿಪ್ರಾಯವನ್ನು "ರಾಷ್ಟ್ರಕೂಟಕ್ಕೆ ಮೈಸೂರಿನ ಸಪ್ತರ್ಷಿಗಳು" ಎಂಬ ಪುಸ್ತಕದಲ್ಲಿ ಹೊರಡಿಸಿದ್ದಾರೆ. ದಿವಾನರು, ಶ್ರೀಯುತರಾದ ಕೆ. ಚೆಂಗಲರಾಯರೆಡ್ಡಿ, ಡಿ. ಎಚ್. ಚಂದ್ರಶೇಖರಯ್ಯ, ಎ. ಜಿ. ಖಲೀಲ್, ಡಿ. ವಿ. ಗುಂಡಪ್ಪ, ಶ್ರೀಮತಿ ಕಮಲಾಬಾಯಿ ಮತ್ತು ಒಬ್ಬ ಹರಿಜನ ಪ್ರತಿನಿಧಿಯನ್ನು ಆರಿಸಿ ಕಳಿಸಬೇಕೆಂದು ಶ್ರೀ ತಮ್ಮವರು ಸೂಚಿಸಿದ್ದಾರೆ. ಈ ಪುಸ್ತಕವನ್ನು ರಾಜಕೀಯ ವ್ಯಕ್ತಿಗಳೆಲ್ಲಾ ಓದತಕ್ಕದಾಗಿದೆ. ಇದು ನೆಹರೂ ಪ್ರಕಟಣ ಮಂಡಲಿಯಿಂದ ಪ್ರಕಾಶಿತವಾಗಿದೆ. ಬೆಲೆ ನಾಲ್ಕಾಣೆ.

ನಿಮ್ಮ ಮೈ ನೊಕಮಲ್ಲಿನಂತೆ
ಹೊಳೆಯಬೇಕೆ? ನೀವು
ಲಾವಣ್ಯ ಮೂರ್ತಿಗಳಾಗಬೇಕೆ?
ಹಾಗಾದರೆ
ನಮ್ಮ ಮೈಸೂರು ಸ್ಯಾಂಡಲ್
ಸೋಪನ್ನೇ ಉಪಯೋಗಿಸಿ!

ಮೈಸೂರು
ಸ್ಯಾಂಡಲ್
ಸೋಪ್

ಅನೇಕರಿಗೆ ಸೌಂದರ್ಯವನ್ನು
ಸಂಪಾದಿಸಿ ಕೊಟ್ಟಿದೆ. ನಿಮಗೂ
ಸಂಪಾದಿಸಿ ಕೊಡುತ್ತದೆ
ಪರೀಕ್ಷಿಸಿ ನೋಡಿರಿ
ಎಲ್ಲೆಲ್ಲಿಯೂ ದೊರೆಯುತ್ತವೆ.
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.

ಸಾಧ್ವಿ
ಈ
ರಾಜಧಾನಿಯ ರಾಷ್ಟ್ರೀಯ
ದಿನ ಪತ್ರಿಕೆ
ಕೂಡಲೇ ಚಂದಾದಾರರಾಗಿರಿ
(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)
ಜಾಹಿರಾತಿನ ದರಗಳಿಗೆ
ವಿಚಾರಿಸಿರಿ

ರಾಜಕಮಲ್
ಮೈಸೂರು
6-12-46 ರಿಂದ
ನಾಲ್ಕನೆಯ ವಾರ
ಡಾಕ್ಟರ್ ಕೋಟ್ನಿಸ್ ಕಿ
ಅಮರ್-ಕಹಾನಿ
-: ಭೂಮಿಕೆ :-
ಶಾಂತಾ ರಾಂ, ಜಯಶ್ರೀ, ಉಲ್ಲಾಸ್

ಬೆಳಗಿನ ಪ್ರದರ್ಶನ 6-12-46 ರಿಂದ
ಪ್ರತಿದಿನ 10-30ಕ್ಕೆ 4 ದಿನಗಳು ಮಾತ್ರ
"ಅಛ್ಛುತ್ ಕನ್ಯೆ"
(Brand New Print)
ಪಾತ್ರ:— ದೇವಿಕಾರಾಣಿ,
ಅಶೋಕ ಕುಮಾರ್ ಮುಂತಾದವರು.

ಟಿ. ಸಿ. ನಟರಾಜ್
ಔಷಧಾಲಯ
ನೇತ್ರ ಪರೀಕ್ಷೆಯು ಉಚಿತವಾಗಿ
ಮಾಡಲ್ಪಡುತ್ತದೆ.

ಅಗತ್ಯವಾಗಿ ಬೇಕಾದ ಎಲ್ಲಾ ಇಂಗ್ಲಿಷ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಚಾರ್ಜಿನಿಂದ ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದೀಯ ಔಷಧಗಳೆಲ್ಲವೂ ದೊರೆಯುತ್ತವೆ.

ಅಪೇರಾ ಟಾಕೀಸ್
೬-೧೨-೪೬ ರಿಂದ
ಎರಡನೆಯ ವಾರ
ಉತ್ತಮಿ
(ತಮಿಳು)
ಶಾಂತಿ ಎಸ್. ರತ್ನಂ, ಟಿ.ಎಸ್. ದೊರೆರಾಜ್
ಸ್ವಾಮಿನಾಥನ್, ಟಿ.ಎಸ್. ಕೃಷ್ಣವೇಣಿ
ರಾಜಕಾಂತಂ

Morning Shows from 6-12-46
MARY BETH HUGES and
EDDIE GUILLAN in
MELODY - PARADISE

Edited, printed and published by A. K. Nagarajan at the Sadhvi Press D-Subbiah Road, Mysore

ರೆಜಿ. ನಂ. 392 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೧] ಸೋಮವಾರ ೯—೧೨—೪೬ [ಸಂಚಿಕೆ ೧೯

ದೆಹಲಿಯಲ್ಲಿ ರಾಜ್ಯಾಂಗ - ಸಭೆಯು ಆರಂಭ -

ಲಂಡನ್ನಿನಿಂದ ಪಂ|| ನೆಹರೂ ಹಿಂದಿರುಗಿದರು

...ನು, ಬಲದೇವ ಸಿಂಗರ ಆಗಮನ

...ಡನ್ನಿನ ಸಮ್ಮೇಳನಕ್ಕಾಗಿ ತೆರಳಿದ್ದ ...ನವರು ಮತ್ತು ಸ|| ಬಲದೇವ ಸಿಂಗ ...ನ್ನೆ ಬೆಳಿಗ್ಗೆ ೧೧ ಘಂಟೆಗೆ ಕರಾಚಿ ವಿ...ಮಾನ ನಿಲ್ದಾಣದಲ್ಲಿ ಆಗಮಿಸಿದರು ಅ...ಅವರು ನೇರವಾಗಿ ಹೊರಟು ಸಂಜೆ ...ಟೆಗೆ ದೆಹಲಿಯನ್ನು ತಲುಪಿದರು. ವಿ...ಮಾನ ನಿಲ್ದಾಣದಲ್ಲಿ ಸ|| ಪಟೇಲ್ - ಮುಂ...ಪ್ರಮುಖರು ಅವರಿಗೆ ಸ್ವಾಗತ ನೀ...ರು.

...ಜಕೀಯ ಕಾವೆಗೂ ಸರ್ ಸಿ. ಗಳಿಗೂ ತಿಕ್ಕಾಟವೇ?

...ರ್ ಸಿ. ಪಿ. ರಾಮಸ್ವಾಮಿ ಅಯ್ಯರ್ರವ...ತಿರುವಾಂಕೂರು ದಿವಾನಗಿರಿಗೆ ರಾಜೀ...ನಾಮೆ ಕೊಡಲಿರುವುದು ಭಾರತ ಸರ್ಕಾರ ...ರಾಜಕೀಯ ಕಾವೆಯೊಂದಿಗೆ ಯಾವು...ದೋ ಒಂದು ಯೋಜನೆ ಬಗ್ಗೆ ಉಂಟಾದ ...ಭಿಪ್ರಾಯದಿಂದಲೇ ಎಂದು ಅನಧಿ...ಕೃತವಾಗಿ ಲಂಡನ್ನಿನಿಂದ ಸುದ್ದಿ ಬಂ...

...ಗ್ಗದದೇವನ ಕೋಟೆ ಬಳಿ ಹೊಸ ಅಣೆಕಟ್ಟು

...ಹೆಗ್ಗಡದೇವನಕೋಟೆ ತಾಲ್ಲೂಕು ಬೀ...ಚಿಹಳ್ಳಿ ಬಳಿ ನುಗು ನದಿಗೆ ಅಡ್ಡಲಾಗಿ ...ದು ಅಣೆಕಟ್ಟನ್ನು ಸುಮಾರು ೮ ಲಕ್ಷ ...ಗಳ ವೆಚ್ಚದಿಂದ ಕಟ್ಟಬೇಕೆಂದು ಮೈ...ಸೂರು ಸರ್ಕಾರವು ನಿರ್ಧರಿಸಿರುವುದಾಗಿ ತಿ...ಳಿದುಬಂದಿದೆ. ಇಲ್ಲಿಂದ ೫೭ ಮೈಲಿ ಉದ್ದ ...ಕಾಲುವೆಯೊಂದನ್ನು ತೆಗೆಯಲಾಗು...ವುದು. ಇದರಿಂದ ಸುಮಾರು ೨೦ ಸಾವಿರ ...ಕರೆ ಜಾಗವಳಿಗೆ ನೀರನ್ನು ಒದಗಿಸಲಾ...ಗುವುದು.

ವಿವಿಧ ವಿನೋದಾವಳಿ

...ವಿದ್ಯಾ ಸಾಹಿತ್ಯ ಸಂಘದಾಶ್ರಯದಲ್ಲಿ ಪ...ರೀಕ್ಷೆಗೆ ಹೋಗುವ ವಿದ್ಯಾರ್ಥಿಗಳ ಸಹಾ...ಯಾರ್ಥವಾಗಿ ಹಾರ್ಡ್ವಿಕ್ ಹೈಸ್ಕೂಲಿನ ...ಟಕ ಭವನದಲ್ಲಿ ೧೦ ನೇ ತಾ|| ಸಂಜೆ ...ಘಂಟೆಗೆ ವಿವಿಧ ವಿನೋದಾವಳಿಯನ್ನು ...ರ್ಪಡಿಸಿದೆ. ನವಜ್ಯೋತಿ ಸ್ಟುಡಿಯೋದ ಶ್ರೀ ಜಿ ಆರ್. ರಾಮಯ್ಯನವರು ಅ...ಧ್ಯಕ್ಷತೆ ವಹಿಸುವರು ಟಿಕೆಟ್ ಮೂಲಕ ...ವೇಶ. ಮಹಾಜನರು ಪ್ರೋತ್ಸಾಹಿಸ...ಬೇಕೆಂದು ಕಾರ್ಯದರ್ಶಿಗಳು ಕೋರಿರು...ತ್ತಾರೆ.

...ತೈಲ ಚಿತ್ರ ಅನಾವರಣೋತ್ಸವ

ಮೈಸೂರು ಜಮಖಾನದ ಆಶ್ರಯದಲ್ಲಿ ...ನಿನ್ನೆ ಸಂಜೆ ಮಹಾರಾಜಾ ಕಾಲೇಜಿನಲ್ಲಿ ...ಪ್ರೊ|| ಡಿಸೌಜಾ ರವರ ಅಧ್ಯಕ್ಷತೆಯಲ್ಲಿ ದಿ|| ...ಕೈಲಾಸಂ ರವರ ತೈಲ ಚಿತ್ರ ಅನಾವರಣೋ...ತ್ಸವವು ಜರುಗಿತು. ಡಾ|| ನಾರಾಯಣ ಶಾ...ಸ್ತ್ರಿ, ಶ್ರೀಗಳಾದ ಎ ಎನ್ ಮೂರ್ತಿರಾ...ವ್ ಮತ್ತು ಎಂ. ಎನ್ ಪಾರ್ಥಸಾರಥಿಯ...ವರು ದಿವಂಗತರ ಗುಣಗಾನ ಮಾಡಿದರು. ...ಕೈಲಾಸಂ ರವರ "ವೈದ್ಯನ ವ್ಯಾಧಿ" ಎಂಬ ...ನಾಟಕವನ್ನು ಅಭಿನಯಿಸಲಾಯಿತು.

(ಹಿಂದಿನ ಪುಟದಿಂದ ಮುಂದುವರಿದುದು)
...ಉತ್ತಮ ಧನ ಲಾಭ ಉತ್ತಮ ಪ್ರವಾಸ...ದಿಂದ ಮಹತ್ವದ ವ್ಯಕ್ತಿಗಳ ಭೇಟಿ, ಅಧಿ...ಕಾರಿಗಳಿಂದ ಸನ್ಮಾನ. ರಾಜಕೀಯ ವಾ...ತಾವರಣದಲ್ಲಿ ವಿಶೇಷ ಆಸಕ್ತಿ. ಧಾರ್ಮಿಕ ಕಾರ್ಯಗಳು ವಿಶೇಷವಾಗಿ ಜರುಗುವುವು ...ತಾ ೧೩-೧೪ ಸಾಧಾರಣ, ಖರ್ಚು ಅ...ಧಿಕ

ರಾಜ್ಯಾಂಗ ಸಭೆಯ ಆರಂಭ

ಇಂದು ಡಿಸೆಂಬರ್ ೯ ರಾಜ್ಯಾಂಗ ರಚನಾ ಸಭೆಯು ಈ ದಿನ ದೆಹಲಿಯಲ್ಲಿ ಆರಂಭವಾಗುವುದು ಪ್ರಾರಂಭದಲ್ಲಿ ಹಂಗಾಮಿ ಅಧ್ಯಕ್ಷರಾದ ಶ್ರೀ|| ಸಚ್ಚಿದಾನಂದ ಸಿಂಹರು ಅಗ್ರಾಸನ ವಹಿಸುವರು. ನಂತರ ಅವರು ನಾನಾ ದೇಶಗಳ ರಾಜ್ಯಾಂಗ ರಚನಾ ಕ್ರಮದ ಸೂಕ್ಷ್ಮ ಪರಿಚಯವನ್ನು ಸದಸ್ಯರುಗಳಿಗೆ ವಿವರಿಸುವರು ಪ್ರಾಂತ್ಯಗಳಿಂದ ಚುನಾಯಿತರಾಗಿರುವ ಪ್ರತಿನಿಧಿಗಳು ತಮ್ಮ ಪ್ರಾಂತ್ಯದ ಸಂಕೇತವನ್ನು ಹಾಜರು ಮಾಡಿ ಸಭಾ ಪುಸ್ತಕದಲ್ಲಿ ಸಹಿ ಹಾಕುವರು. ಸಭೆಯ ಖಾಯಂ ಅಧ್ಯಕ್ಷರ ಚುನಾವಣೆ ಬಗ್ಗೆ ದಿನ ಮತ್ತು ಕಾಲವನ್ನು ಅಧ್ಯಕ್ಷರು ಪ್ರಕಟಿಸುವರು ಇಂದಿನ ಸಭೆಯ ಕಾರ್ಯಕ್ರಮವನ್ನು ಗೊತ್ತು ಮಾಡಲು ನಿನ್ನೆ ದಿನ ಕಾಂಗ್ರೆಸ್ ಮತ್ತು ಕಾಂಗ್ರೆಸ್ಸೇತರ ಸದಸ್ಯರ ಸಭೆಯೊಂದು ಜರುಗಿತು. ಅದರಲ್ಲಿ ಆಚಾರ್ಯ ಕೃಪಲಾನಿಯವರು ಭಾಷಣ ಮಾಡಿ "ನಾವು ಸತ್ತು ಹೋದವರ ಮತ್ತು ಸಾಯುತ್ತಲಿರುವ ಚಕ್ರಾಧಿಪತ್ಯದ ಸ್ಮಶಾನದಲ್ಲಿ ಸೇರಿದ್ದೇವೆ. ನಾವು ನಮ್ಮ ಕೆಲಸವನ್ನು ಜಾಗ್ರತೆ ಮುಗಿಸದಿದ್ದರೆ, ನಾವು ಅದನ್ನೆಂದಿಗೂ ಮುಗಿಸಲಾರೆವು" ಎಂದು ಹೇಳಿ ಕಾಂಗ್ರೆಸ್ ಮತ್ತು ಕಾಂಗ್ರೆಸ್ ಬೆಂಬಲ ಪಡೆದು ಚುನಾಯಿತರಾಗಿರುವವರೆಲ್ಲಾ ಕಾಂಗ್ರೆಸ್ ಆಜ್ಞೆಯಂತೆ ನಡೆಯಬೇಕೆಂದು ತಿಳಿಸಿದರು.

ರೈತರ ಸಮ್ಮೇಳನ

ಸ್ವಂ ಸು] ನಂಜನಗೂಡು ೭.

ಈ ತಾಲ್ಲೂಕಿನ ಛತ್ರದ ಹೋಬಳಿ ರೈತರ ಸಮ್ಮೇಳನವು ಕೆಂಪಿಸಿದ್ದನ ಹುಂಡಿ ಗ್ರಾಮದಲ್ಲಿ ನ್ಯಾಯ ವಿಧಾಯಕ ಸಭಾ ಸದಸ್ಯರಾದ ಶ್ರೀ|| ಎಚ್. ಎಂ. ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನಿನ್ನೆ ಜರುಗಿತು ಸರ್ಕಾರದವರು ಕೊಳ್ಳುವ ದವಸದ ಬೆಲೆಯನ್ನು ಪಲ್ಲ ಒಂದಕ್ಕೆ ೫|| ರೂ. ಗಳಿಗೆ ಹೆಚ್ಚಿಸಬೇಕೆಂದೂ, ೩ ಎಕರೆ ತರಿ ಇಲ್ಲವೆ ೪ ಎಕರೆ ಖುಷ್ಕಿ ವಿಸ್ತೀರ್ಣಕ್ಕಿಂತ ಕಡಿಮೆ ಇರುವ ಹಿಡುವಳಿದಾರರುಗಳಿಂದ ದವಸವನ್ನು ಕಡ್ಡಾಯವಾಗಿ ವಸೂಲ್ಮಾಡುವ ನೀತಿಯನ್ನು ಮನ್ನಾ ಮಾಡಬೇಕೆಂದೂ ಮುಂತಾಗಿ ನಿರ್ಣಯಗಳಾದುವು.

ಕೇಂದ್ರ ಸರ್ಕಾರಕ್ಕೆ ಅಭಿನಂದನೆ

ಶಾಸನ ಸಭೆಯ ನಿರ್ಣಯ

ಸ್ವಂ. ಸು ವರದಿ] ಬೆಂಗಳೂರು ೯

ಹೊಸ ಸುಧಾರಣೆಗಳ ಪ್ರಕಾರ ರಚಿಸಲಾಗಿರುವ ಶಾಸನ ಸಭೆಯ ನಾಲ್ಕನೇ ಅಧಿವೇಶನವು ಈ ದಿನ ಅಠಾರಾ ಕಛೇರಿಯಲ್ಲಿ ಶ್ರೀ ಹೆಚ್. ಬಿ ಗುಂಡಪ್ಪಗೌಡರ ಅಧ್ಯಕ್ಷತೆಯಲ್ಲಿ ಆರಂಭವಾಯಿತು ಮೊದಲು ಶಾಸನ ಸಭೆಯ ನೂತನ ಸದಸ್ಯರಾದ ಶ್ರೀಗಳಾದ ಜಿ. ಅಪ್ಪಾಜಿಗೌಡ, ಕೆ. ಶಿವವೀರಪ್ಪ, ಕೆ ಶ್ರೀನಿವಾಸನ್, ಎಂ. ಶ್ರೀನಿವಾಸನ್, ಕೆ. ಗುರುದತ್, ಎಂ ನವನೀತಂ, ಕಸೂರಿ ರಾಜಶೆಟ್ಟಿ ಮುಂತಾದವರು ರಾಜಭಕ್ತಿ ಪ್ರಮಾಣವನ್ನು ಸ್ವೀಕರಿಸಿದರು ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ ಸಿ. ರೆಡ್ಡಿಯವರು ಸಭೆಗೆ ಬಂದಿರಲಿಲ್ಲ ಕಾರ್ಯಕ್ರಮಗಳು ಆರಂಭವಾಗುವುದಕ್ಕೆ ಮೊದಲು ಶ್ರೀ ಎಂ ಸಿ ಲಿಂಗೇಗೌಡರು ಶ್ರೀಮನ್ ಮಹಾರಾಜರಿಗೆ ಪುತ್ರೀ ಸಂತಾನವಾದುದಕ್ಕೆ ಸಂತೋಷವನ್ನು ವ್ಯಕ್ತಪಡಿಸುವ ವಿಶೇಷ ನಿರ್ಣಯವನ್ನು ಸಭೆಯಲ್ಲಿ ಮಂಡಿಸಿದರು ಶ್ರೀಗಳಾದ ಟಿ. ಮರಿಯಪ್ಪ, ಎಲ್ ಎಸ್. ವೆಂಕಾಜಿರಾವ್ ಶ್ರೀಮತಿ ಎಂ ಆರ್. ಲಕ್ಷ್ಮಮ್ಮ, ಮಹಮದ್ ಷರೀಫ್ ಮತ್ತು ಡಿ. ಎಸ್. ಮಲ್ಲಪ್ಪ ಮುಂತಾದವರುಗಳು ನಿರ್ಣಯದ ಮೇಲೆ ಮಾತನಾಡಿ ಯುವರಾಣಿ ಸಂತಾನವು ಹೀಗೆಯೇ ಅಭಿವೃದ್ಧಿಯನ್ನು ಹೊಂದಲಿ ಎಂದು ಹಾರೈಸಿದರು.

ಶ್ರೀ ಟಿ ಮರಿಯಪ್ಪನವರು ಕೇಂದ್ರದಲ್ಲಿ ತಾತ್ಕಾಲಿಕ ರಾಷ್ಟ್ರೀಯ ಸರ್ಕಾರವನ್ನು ರಚಿಸಿದ್ದಕ್ಕೆ ನಾಯಕರನ್ನು ಅಭಿನಂದಿಸುವ ನಿರ್ಣಯವನ್ನು ಸಭೆಯ ಮುಂದೆ ಮಂಡಿಸಿದರು. ಈ ನಿರ್ಣಯದ ಮೇಲೆ ಎಲ್ಲಾ ಪಕ್ಷಗಳ ಸದಸ್ಯರೂ ಮತ್ತು ಸ್ವತಂತ್ರರೂ ಸಹ ಮಾತನಾಡಿದರು ಮುಸ್ಲಿಂ ಲೀಗಿನ ಪ್ರತಿನಿಧಿಯಾದ ಮಿ|| ಮಹಮದ್ ಷರೀಫ್ ರವರು ಸಹ ಮಾತನಾಡಿ ರಾಷ್ಟ್ರೀಯ ಸರ್ಕಾರದ ಮಂತ್ರಿಗಳನ್ನು ಅಭಿನಂದಿಸಿ ದೇಶದಲ್ಲಿ ಹಿಂದೂ ಮುಸ್ಲಿಂ ಮೈತ್ರಿಯ ಆವಶ್ಯಕತೆ ವಿಷಯವೆಂದು ಹಾರೈಸಿದರು ನಿರ್ಣಯವು ಸರ್ವಾನುಮತದಿಂದ ಮಂಜೂ...

ಉಪನ್ಯಾಸ

ಮೈಸೂರು ೮

ನಾಳೆ ಸಂಜೆ ೫|| ಘಂಟೆಗೆ ಗೌ|| ಅರಮನೆ ರೋಡಿನ ಮತ್ತು ಯುವರಾಜ ಕಾಲೇಜಿನ ಉಪನ್ಯಾಸ ಮಂದಿರದಲ್ಲಿ ಶ್ರೀ ರಾಮಕೃಷ್ಣಾಶ್ರಮದ ಶ್ರೀ ಸೋಮನಾಥಾನಂದರು "ಜನತಾ ಸೇವೆ" ಎಂಬ ವಿಷಯವಾಗಿ ಭಾಷಣ ಮಾಡುವರು. ಸರ್ವರಿಗೂ ಆಹ್ವಾನವುಂಟು

ಸಹಾಯಾರ್ಥ ಸಂಗೀತ

ಅಯ್ಯನಾರ್ ಕಲಾಶಾಲೆಯ ಸಹಾಯಾರ್ಥವಾಗಿ ಇದೇ ೧೨ ನೇ ತಾ|| ಗುರುವಾರ ಸಂಜೆ ೬-೩೦ ಕ್ಕೆ ಟೌನ್ ಹಾಲಿನಲ್ಲಿ ಶ್ರೀಮತಿ ನೀಲಮ್ಮ ಕಡಾಂಬಿಯವರ ವೀಣಾ ವಾದನ ಕಚೇರಿಯು ಜರುಗುತ್ತದೆ. ಶ್ರೀ|| ರಾಮಚಂದ್ರರಾವ್ ಬೊಂಭೋರೆಯವರು ಅಧ್ಯಕ್ಷತೆ ವಹಿಸುವರು ಟಿಕೆಟ್ ಮೂಲಕ ಪ್ರವೇಶ ರಾಮ ಮಂದಿರದ ಸದಸ್ಯರಿಗೆ ಅರ್ಧ ರಿಯಾಯಿತಿ ಮಹಾಜನರು ಪ್ರೋತ್ಸಾಹಿಸಬೇಕಾಗಿ ಕೋರಲಾಗಿದೆ.

ಮದ್ರಾಸಿನಲ್ಲಿ ಮಳೆ

ನಿನ್ನೆ ಮದ್ರಾಸಿನಲ್ಲಿ ೩.೨೩ ಅಂಗುಲ ಮಳೆಯಾಗಿದೆ ಎನ್ನೋರ್ ಮತ್ತು ಪೂಂದಮಲ್ಲಿ ರಸ್ತೆಗಳೆಲ್ಲಾ ನಾಶವಾಗಿವೆ, ಕೆರೆ ಕಟ್ಟೆಗಳೆಲ್ಲಾ ಕಿತ್ತುಹೋಗಿವೆ, ಸಂಚಾರಗಳೆಲ್ಲಾ ಬಂದಾಗಿವೆ, ನಿನ್ನೆ ರಾತ್ರಿಗೆ ತೆರಳಬೇಕಾಗಿದ್ದ ಮೇಲ್ ಟ್ರೇನು ಹೊರಡಲೇ ಇಲ್ಲ, ಪೆನ್ನಾರ್ ನದಿಯಲ್ಲಿ ಪ್ರವಾಹ ಉಕ್ಕೇರಿ ಬಂದು ಬಹಳ ಅವಾಂತರ ಮಾಡಿದೆಯೆಂದು ವರದಿಯಾಗಿದೆ.

ಅಮೆರಿಕದ ಗಣಿ ಮುಷ್ಕರ ನಿಂತಿತು

ಅಮೆರಿಕಾ ಸಂಯುಕ್ತ ಸಂಸ್ಥಾನದ ಕಲ್ಲಿದ್ದಲಿನ ಗಣಿ ಕೆಲಸಗಾರರು ತಮ್ಮ ೧೭ ದಿನಗಳ ಮುಷ್ಕರವನ್ನು ಮುಕ್ತಾಯಗೊಳಿಸಿ ಕೆಲಸಕ್ಕೆ ಹಿಂತಿರುಗಬೇಕೆಂದು ಕೆಲಸಗಾರರ ಸಂಘದ ಅಧ್ಯಕ್ಷ ಮಿ ಲೂಯಿ ಸ್ ರವರು ಪ್ರಕಟಿಸಿದ್ದಾರೆ ಫೆಡರಲ್ ನ್ಯಾಯಾಸ್ಥಾನದ ತೀರ್ಪನ್ನು ಪ್ರಧಾನ ನ್ಯಾಯಾಸ್ಥಾನ ಪರಿಶೀಲಿಸುತ್ತಿರುವುದರಿಂದ ಈ ರೀತಿ ಮಾಡಲಾಗಿದೆಯೆಂದು ವರದಿಯಾಗಿದೆ,

---

...ಗಾಯಿತು ಅಧಿಕಾರಿ ಸದಸ್ಯರು ಈ ವಿಷಯದಲ್ಲಿ ತಟಸ್ಥ್ಯವನ್ನು ವಹಿಸಿದ್ದರು

ನಂತರ ಅಧ್ಯಕ್ಷರಾದ ಶ್ರೀ ಹೆಚ್. ಬಿ ಗುಂಡಪ್ಪಗೌಡರು ಡಾ|| ರಾಮರಾವರನ್ನು ಸಭೆಯ ಲೀಡರ್ ಆಗಿ ಶ್ರೀಮನ್ ಮಹಾರಾಜರವರು ನೇಮಿಸಿರುವ ವಿಷಯವನ್ನು ತಿಳಿಸಿದರು. ಶ್ರೀ ಜಿ ಬಿ. ಮಲ್ಲಾರಾಧ್ಯರವರನ್ನು ಡೆಪ್ಯೂಟಿ ಲೀಡರ್ ಆಗಿ ನೇಮಿಸಿರುವ ವಿಷಯವನ್ನು ಸಹ ತಿಳಿಸಿದರು ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಟಿ ಮರಿಯಪ್ಪನವರು ಒಂದು ಕ್ರಿಯಾ ಲೋಪವನ್ನು ಎತ್ತಿ ಶಾಸನ ಸಭೆಗೆ ದಿವಾನರು ಸದಸ್ಯರಲ್ಲವೆಂದೂ ಈಗ ಶಾಸನ ಸಭೆಯ ನಾಯಕರಾದ ಡಾ|| ರಾಮರಾಯರು, ದಿವಾನ್ ದಿವಾನರಾಗಿಯೂ, ಅಧಿಕಾರಿ ವರ್ಗದ ನಾಯಕರಾಗಿಯೂ ಇರುವುದರಿಂದ ಈ ವಿಷಯವು ಸಂದೇಹಕ್ಕೆ ಎಡೆಗೊಟ್ಟಿದೆಯೆಂದೂ ಹೇಳಿದರು. ಅಧ್ಯಕ್ಷರು ಈ ವಿಷಯವನ್ನು ಪರಿಶೀಲಿಸಿ ನಾಳೆಯ ದಿನ ಉತ್ತರವನ್ನು ಕೊಡಲಾಗುವುದೆಂದು ತಿಳಿಸಿದರು.

ಸಾಧ್ವಿ

ತಾ॥ ೯-೧೨-೪೬ ಸೋಮವಾರ

ಹೊಸ ತೊಡಕುಗಳು

ರಾಜ್ಯಾಂಗ ಸಭೆಯಲ್ಲಿ ಎಲ್ಲ ಪಂಗಡಗಳವರೂ ಭಾಗವಹಿಸುವಂತೆ ಮಾಡಲು ಬ್ರಿಟಿಷ್ ಸರ್ಕಾರದವರು ಕೈಕೊಂಡ ಇತ್ತೀಚಿನ ಪ್ರಯತ್ನವೂ ವಿಫಲವಾಯಿತು. ಸಂಧಾನಗಳ ವಿಫಲವೆಯು ಪ್ರಕರಣಗಳಲ್ಲಿ ಇದೇ ಕಟ್ಟಕಡೆಯದೆಂದು ಯಾರೂ ಹೇಳಲು ಸಾಧ್ಯವಿಲ್ಲ. ಆದರೆ ಈ ಸಾರಿ ಯಾವುದಾದರೂ ಒಪ್ಪಂದವು ಆಗುವುದೆಂದು ಯಾರೂ ನಂಬಿರಲಿಲ್ಲ. ಲಂಡನ್ನಿನಲ್ಲಿ ಈ ಬಗೆಯ ಒಪ್ಪಂದವಾಗುವುದು ಸಾಧ್ಯವೇ ಇಲ್ಲವೆಂದು ಬ್ರಿಟಿಷ್ ಸರ್ಕಾರದವರು ಮೊನ್ನೆ ಕೊಟ್ಟಿರುವ ಹೇಳಿಕೆಯಿಂದಲೇ ವೇದ್ಯವಾಗುತ್ತದೆ.

ಲಂಡನ್ನಿನಲ್ಲಿ ದುಂಡುಮೇಜಿನ ಪರಿಷತ್ತಿನ ಪಾಸ್ತ್ಯವೂ ಆಯಿತು. ಅದರಿಂದಲೂ ಯಾವ ಪ್ರಯೋಜನವೂ ಆಗಲಿಲ್ಲ. ಅದರಲ್ಲಿ ಇತ್ಯರ್ಥವಾಗಬೇಕಾದ ಯಾವ ಹೊಸ ಪ್ರಶ್ನೆಯೂ ಇರಲಿಲ್ಲವೆಂದೇ ಹೇಳಬಹುದು. ಇಲ್ಲದ ತೊಡಕುಗಳನ್ನು ಕಲ್ಪಿಸಿ, ಅದಕ್ಕೆ ರಾಜಕೀಯ ಬಿಕ್ಕಟ್ಟಿನ ಹೆಸರನ್ನಿಟ್ಟು ಒಂದು ಸಂಧಾನದ ಹೆಸರಿನಲ್ಲಿ ಲಂಡನ್ನಿನ ಯಾತ್ರೆಯನ್ನು ಮಾಡಿದಂತಾಯಿತು. ಅಷ್ಟೇ ಇದರ ಪರಿಣಾಮ. ನಿಜವಾಗಿ ನೋಡಿದರೆ ಈಗ ಹೊಸದಾದ ಯಾವ ಬಿಕ್ಕಟ್ಟೂ ಹಿಂದೂಸ್ಥಾನದಲ್ಲಿ ಉದ್ಭವಿಸಿರಲಿಲ್ಲ. ಅದನ್ನು ಲಂಡನ್ನಿನಲ್ಲಿ ಬಗೆಹರಿಸಬೇಕಾದ ಪ್ರಮೇಯವೂ ಇರಲಿಲ್ಲ.

ಕಾಂಗ್ರೆಸ್ಸಿಗೂ, ಲೀಗಿಗೂ ಪ್ರಾಂತಗಳ ವರ್ಗೀಕರಣದ ವಿಚಾರದಲ್ಲಿ ಮೊದಲಿನಿಂದಲೂ ಭಿನ್ನಾಭಿಪ್ರಾಯವು ಇದ್ದೇ ಇರುತ್ತದೆ. ಬ್ರಿಟಿಷ್ ನಿಯೋಗದವರ ಘೋಷಣೆಯು ಹೊರಟಂದಿನಿಂದಲೂ ಇದು ಉದ್ಭವಿಸಿರುತ್ತದೆ. ಕಾಂಗ್ರೆಸ್ಸಿನವರ ವ್ಯಾಖ್ಯಾನವನ್ನು ಲೀಗಿನವರು ಅಂಗೀಕರಿಸಿರುವುದಿಲ್ಲ. ಆದರೆ ಭಿನ್ನಾಭಿಪ್ರಾಯಗಳನ್ನು ಫೆಡರಲ್ ನ್ಯಾಯಾಸ್ಥಾನದ ತೀರ್ಮಾನಕ್ಕೆ ಬಿಡಬಹುದೆಂದು ಅವರು ಹೇಳುತ್ತಿದ್ದಾರೆ. ಇದು ಸರ್ವರಿಗೂ ಮಾನ್ಯವಾದ ನೀತಿ.

ಆದರೆ ಲಂಡನ್ನಿನ ಸಂಧಾನವು ಮುಗಿದ ನಂತರ ಬ್ರಿಟಿಷ್ ಸರ್ಕಾರದವರು ಹೊರಡಿಸಿರುವ ಪ್ರಕಟಣೆಯಲ್ಲಿ ಹೊಸ ವ್ಯಾಖ್ಯಾನವನ್ನು ಕೊಡಲಾಗಿದೆ. ಇದರಿಂದ ಹೊಸ ಹೊಸ ತೊಡಕುಗಳು ಉದ್ಭವಿಸಲು ಅವಕಾಶವಾಗಿದೆ. ನ್ಯಾಯ ನಿಪುಣರ ಅಭಿಪ್ರಾಯವನ್ನು ತಾವು ತೆಗೆದುಕೊಂಡಿರುವುದಾಗಿಯೂ, ಅದರಂತೆ ಪ್ರಾಂತ್ಯಗಳ ವರ್ಗೀಕರಣದ ವಿಷಯವು ಬ್ರಿಟಿಷ್ ನಿಯೋಗದವರ ಹೇಳಿಕೆಯಲ್ಲಿ ಅಡಕವಾಗಿರುವಂತೆಯೇ ಇರತಕ್ಕದ್ದೆಂದೂ, ಅದನ್ನು ಕಾಂಗ್ರೆಸ್ಸಿನವರೂ, ಲೀಗಿನವರೂ, ಅಂಗೀಕರಿಸಬೇಕೆಂದೂ ಸದರಿ ಪ್ರಕಟಣೆಯಲ್ಲಿ ಕೋರಲಾಗಿದೆ. ಒಂದುವೇಳೆ ಕಾಂಗ್ರೆಸ್ಸಿನವರು ಈ ಅಭಿಪ್ರಾಯವನ್ನು ಅಂಗೀಕರಿಸದಿದ್ದರೆ ಕೂಡಲೇ ಈ ವಿಷಯವನ್ನು ಫೆಡರಲ್ ನ್ಯಾಯಸ್ಥಾನಕ್ಕೆ ಒಪ್ಪಿಸಬೇಕೆಂದೂ ಸೂಚಿಸಲಾಗಿದೆ. ಇವುಗಳು ಸಹಜವಾದ ಸಲಹೆಗಳು.

ದೇಶದ ಬಹು ಭಾಗದ ಜನರು ಒಪ್ಪದಿರುವ ರಾಜ್ಯಾಂಗವನ್ನು ಪಾರ್ಲಿಮೆಂಟಿನ

ಸಿಂಧ್ ಚುನಾವಣೆ

ಸಿಂಧ್ ಶಾಸನ ಸಭೆಯ ಕಾರ್ಮಿಕ ಕ್ಷೇತ್ರದಿಂದ ಲೀಗಿನ ಬೆಂಬಲ ಪಡೆದ ಪಟ್ಟೂನಿಸ್ಟ್ ಮುಸ್ಲಿಂ ಉಮೇದುವಾರರು ಜಯಗಳಿಸಿದ್ದಾರೆ. ಕಳೆದ ಸಲ ಚುನಾಯಿತರಾಗಿದ್ದ ಸ್ವತಂತ್ರ ಹಿಂದೂಗಳಾದ ಶ್ರೀ ಬೇಚಾರ್‌ರವರು ಪರಾಜಿತರಾಗಿದ್ದಾರೆ.

ವರ ಅಂಗೀಕಾರಕ್ಕಾಗಿ ಬ್ರಿಟಿಷ್ ಸರ್ಕಾರದವರು ಬಲವಂತದಿಂದ ಶಿಫಾರಸ್ಸು ಮಾಡಲು ಸಾಧ್ಯವಿಲ್ಲವೆಂದು ಸೂಚಿಸಿರುವುದು ಇನ್ನೂ ತೊಡಕುಗಳ ಪರಂಪರೆಗೆ ಅವಕಾಶವನ್ನು ಕಲ್ಪಿಸುವಂತಿದೆ. ಕಾಂಗ್ರೆಸ್ಸಿನವರ ಅಥವಾ ದೇಶದ ಬಹುಭಾಗದ ಪ್ರತಿನಿಧಿಗಳ ಅಭಿಪ್ರಾಯವನ್ನು ಲೀಗಿನವರು ಮೊದಲಿನಿಂದಲೂ ನಿರಾಕರಿಸುತ್ತಲೇ ಬಂದಿದ್ದಾರೆ. ಈಗ ಅವರು ಬಹುಮತಕ್ಕೆ ಮನ್ನಣೆಕೊಡುರೆಂಬ ಭರವಸೆಯು ಇರುವುದೇ ಇಲ್ಲ. ಆದರೆ ಆ ಕಾರಣದಿಂದ ಇಷ್ಟೊಂದು ಕಷ್ಟಪಟ್ಟು ಸೇರಿಸಿದ ರಾಜ್ಯಾಂಗ ಸಭೆಯು ಸಿದ್ಧಗೊಳಿಸುವ ರಾಜ್ಯಾಂಗ ಸಲಹೆಗಳನ್ನು ಬ್ರಿಟಿಷ್ ಸರ್ಕಾರದವರು ಸ್ವೀಕರಿಸುವುದಿಲ್ಲವೆಂದು ಹೇಳುವುದರಿಂದ ಇದುವರೆಗೆ ಅವರು ಕೊಟ್ಟ ಭರವಸೆಗಳನ್ನೇ ಅಲ್ಲಗಳೆದಂತಾಗುವುದು.

ಅಲ್ಪ ಸಂಖ್ಯಾತರು ಬಹು ಸಂಖ್ಯಾತರ ಪ್ರಗತಿಗೆ ಅಡ್ಡಿ ಹೋಗಲು ಅವಕಾಶಕೊಡಲಾಗದೆಂದು ನಿಯೋಗದವರ ಘೋಷಣೆಯಲ್ಲಿ ಸಾರಲಾಗಿದೆ. ಆದರೆ ಈಗ ಅಲ್ಪಸಂಖ್ಯಾತರ ಭಿನ್ನಾಭಿಪ್ರಾಯಕ್ಕಾಗಿ ಇಡೀ ದೇಶದ ಇತರರೆಲ್ಲರ ಅಭಿಪ್ರಾಯವನ್ನೂ ಮೂಲೆಗೊತ್ತುವ ಸೂಚನೆಯು ಬಂದಿರುತ್ತದೆ. ಹಿಂದೆ ಮಿ॥ ಚರ್ಚಿಲರವರ ಕಾಲದಲ್ಲಿ ಮಿ॥ ಅಮೆರಿಯವರು ಹೇಳುತ್ತಿದ್ದ ಪಲ್ಲವಿಯನ್ನೇ ಈಗಲೂ ಹಾಡುತ್ತಿರುವಂತೆ ಭಾಸವಾಗುತ್ತಿದೆ.

ಇಂದು ರಾಜ್ಯಾಂಗ ಸಭೆಯು ಸೇರಿ ತನ್ನ ಕಾರ್ಯಕ್ರಮವನ್ನು ಉಪಕ್ರಮಿಸುತ್ತದೆ. ಕಾಂಗ್ರೆಸ್ ನಾಯಕರೂ ಲಂಡನ್ನಿನ ವ್ಯವಹಾರಗಳನ್ನು ಕೂಲಂಕಷವಾಗಿ ಪರಿಶೀಲಿಸುತ್ತಾರೆ. ಈ ಪ್ರಕರಣದ ಬಗ್ಗೆ ಅವರು ಕೊಡುವ ಮಾರ್ಗದರ್ಶನವನ್ನು ಇಡೀ ದೇಶವು ಕಾತುರದಿಂದ ಇದಿರುನೋಡುತ್ತಿದೆ.

ಸಾಧ್ವಿ
ಲವ
ರಾಜಧಾನಿಯ ರಾಷ್ಟ್ರೀಯ
ದಿನ ಪತ್ರಿಕೆ
ಕೂಡಲೇ ಚಂದಾದಾರರಾಗಿರಿ
(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)
ಜಾಹಿರಾತಿನ ದರಗಳಿಗೆ
ವಿಚಾರಿಸಿರಿ

ರಾಜಕಮಲ್
ಮೈಸೂರು
6-12-46 ರಿಂದ
ನಾಲ್ಕನೆಯ ವಾರ
ಡಾಕ್ಟರ್ ಕೊಟ್ನಿಸ್ ಕಿ
ಅಮರ್-ಕಹಾನಿ
-: ಭೂಮಿಕೆ :-
ಶಾಂತಾರಾಂ, ಜಯಶ್ರೀ, ಉಲ್ಲಾಸ್

ವಾರ ಭವಿಷ್ಯ

(ಶ್ರೀ ನಿತ್ಯಾನಂದಸ್ವಾಮಿಗಳವರಿಂದ)

ತಾ॥ ೯-೧೨-೪೬ರಿಂದ ೧೫-೧೨-೪೬ರವರೆಗೆ

ಮೇಷ—ಆರೋಗ್ಯ ಚೆನ್ನಾಗಿರುತ್ತದೆ. ವ್ಯಾಪಾರ ಉದ್ಯೋಗಗಳಲ್ಲಿ ತೊಂದರೆ. ಆರ್ಥಿಕ ಸ್ಥಿತಿ ಸಾಧಾರಣವಾಗಿರುತ್ತದೆ. ೯-೧೨ ಚಿಂತಾನಾಶ, ಧನ ಲಾಭ

ವೃಷಭ—ಆರೋಗ್ಯ ಕೆಡುತ್ತದೆ. ಮಾನಸಿಕ ಚಿಂತೆ ಹೆಚ್ಚು, ಕೆಲಸಕಾರ್ಯಗಳಲ್ಲಿ ವಿಘ್ನ - ನೌಕರಿ ಉದ್ಯೋಗಗಳಲ್ಲಿ ಚಿಂತೆ ಮಿತ್ರರಿಂದ ತಿರಸ್ಕಾರ. ತಾ॥ ೧೨-೧೪ ಸಾಧಾರಣ, ಪ್ರವಾಸ

ಮಿಥುನ—ಆರೋಗ್ಯ ಚೆನ್ನಾಗಿರುತ್ತದೆ. ಮಾನಸಿಕ ಚಿಂತೆ ಹೆಚ್ಚು. ಧನಲಾಭ ಸಾಧಾರಣ. ಉದ್ಯೋಗ ವ್ಯವಹಾರಗಳಲ್ಲಿ ತೊಂದರೆ. ಶತ್ರುಗಳ ಕಿರುಕುಳ. ತಾ॥ ೯-೧೨ ಅಧಿಕ ವ್ಯಯ, ಚಿಂತೆ

ಕಟಕ—ಆರೋಗ್ಯ ಉತ್ತಮ. ಧನಲಾಭ ಚೆನ್ನಾಗಿರುತ್ತದೆ. ಖರ್ಚು ಅಧಿಕ. ಮಿತ್ರರಿಂದ ವಿಶೇಷ ಸಹಾಯ, ಧಾರ್ಮಿಕ ಕಾರ್ಯಾಸಕ್ತಿ, ತಾ॥ ೧೨-೧೩-೧೪ ಪ್ರವಾಸ ಖರ್ಚು.

ಸಿಂಹ—ಆರೋಗ್ಯ ಕೆಡುತ್ತದೆ. ಮಾನಸಿಕ ಚಿಂತೆ ಅಧಿಕ. ಖರ್ಚು ವಿಶೇಷವಾಗಿರುತ್ತದೆ. ಶತ್ರುಗಳಿಂದ ಕಿರುಕುಳ ಜಾಸ್ತಿ. ಉದ್ಯೋಗ ವ್ಯವಹಾರಗಳಲ್ಲಿ ಸೋಲು. ತಾ॥ ೮-೧೦-೧೩, ಸಾಧಾರಣ. ಬಂಧು ಭೇಟಿ.

ಕನ್ಯಾ—ಆರೋಗ್ಯ ಸಾಧಾರಣ. ಉದ್ಯೋಗ ವ್ಯವಹಾರಗಳಲ್ಲಿ ವಿಶೇಷ ಆಸಕ್ತಿ, ಅಧಿಕಾರಿಗಳಿಂದ ಸನ್ಮಾನ, ಧನಲಾಭ ಅಧಿಕ. ಪ್ರವಾಸದಿಂದ ಆಯಾಸ ಮತ್ತು ಬೇಸರಿಕೆ. ಮಿತ್ರ ಭೇಟಿ. ತಾ॥ ೯-೧೨-೧೩ ಸಾಧಾರಣ. ಅಧಿಕಾರಿಗಳಿಂದ ಸನ್ಮಾನ.

ತುಲಾ—ಆರೋಗ್ಯ ಚೆನ್ನಾಗಿರುತ್ತ... ಧನಲಾಭ ಉತ್ತಮ, ಉದ್ಯೋಗ ವ್ಯವ... ರಗಳಲ್ಲಿ ಯಶ. ಅಧಿಕಾರಿಗಳಿಂದ ಸನ್ಮಾ... ಮಿತ್ರರಿಂದ ಸಹಾಯ. ರಾಜಕೀಯ... ಕ್ತಿಗಳ ಭೇಟಿ. ತಾ॥ ೧೦-೧೩ ಅಧಿಕ... ಯ, ಪ್ರವಾಸ.

ವೃಶ್ಚಿಕ—ಆರೋಗ್ಯ ಸಾಧಾರಣ ... ನಸಿಕ ಕ್ಲೇಶ ಹೆಚ್ಚು. ಧನಾದಾಯ... ನ್ನಾಗಿರುತ್ತದೆ. ಶತ್ರುಗಳಿಂದ ಕಿರುಕು... ಳು ಸಂಭವಿಸುವುವು. ಅಧಿಕಾರಿಗಳಿಂದ... ನ್ಮಾನ ದೊರೆಯುವುದು. ತಾ॥ ೮-೯-೧... ಸಾಧಾರಣ ಧನಲಾಭ.

ಧನುಸ್ಸು—ಆರೋಗ್ಯ ಕೆಡುತ್ತದೆ... ಲಸಕಾರ್ಯಗಳಲ್ಲಿ ಬೇಸರಿಕೆ, ಅಪ್ತರಿ... ತಿರಸ್ಕಾರ. ಅಧಿಕಾರಿಗಳಿಂದ ಅಪಮಾ... ತಾ॥ ೧೦-೧೪ ಸಾಧಾರಣ.

ಮಕರ—ಆರೋಗ್ಯ ಸಾಮಾನ್ಯವಾ... ತ್ತದೆ. ಖರ್ಚು ಹೆಚ್ಚು. ಧನಾದಾಯ ... ಧಾರಣ. ಅಧಿಕಾರಿ ವರ್ಗದವರಿಂದ ಪ್ರೋ... ತ್ಸಾಹ. ಮಿತ್ರರಿಂದ ಸಹಾಯ, ಬಂ... ದರ್ಶನ. ತಾ॥ ೯-೧೪ ಸಾಧಾರಣ ಲಾ... ಪ್ರವಾಸ

ಕುಂಭ—ಆರೋಗ್ಯ ಕೆಡುತ್ತದೆ. ... ದ್ಯೋಗ ವ್ಯವಹಾರಗಳಲ್ಲಿ ಸೋಲು. ... ರ್ಥಿಕ ಮುಗ್ಗಟ್ಟು ಹೆಚ್ಚುವುದು, ತಾ॥ ೧... ೧೩ ಚಿಂತೆ, ಖರ್ಚು.

(ಹಿಂದಿನ ಪುಟಕ್ಕೆ ಮುಂದುವರಿದಿದೆ)

ಮೀನ—ಆರೋಗ್ಯ ಸಾಧಾರಣವಾ

ಟಿ. ಸಿ. ನಟರಾಜ್
ಔಷಧಾಲಯ
ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.
ಅಗತ್ಯವಾಗಿ ಬೇಕಾದ ಎಲ್ಲಾ ಇಂಗ್ಲಿಷ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುವಲ್ಲದೆ ಸಮಸ್ತವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.
ಝಂಡೂರವರ ಆಯುರ್ವೇದೀಯ ಔಷಧಗಳೆಲ್ಲವೂ ದೊರೆಯುತ್ತವೆ.

ಅಪೇರಾ ಟಾಕೀಸ್
೬-೧೨-೪೬ ರಿಂದ
ಎರಡನೆಯ ವಾರ
ಉತ್ತಮಿ
(ತಮಿಳು)
ಕಾಳಿ ಎನ್. ರತ್ನಂ, ಟಿ. ಎಸ್. ದೊರೆರಾಜ್
ಸ್ವಾಮಿನಾಥನ್, ಟಿ. ಎಸ್. ಕೃಷ್ಣವೇಣಿ
ರಾಜಕಾಂತಂ

Edited, printed and published by A. P. Nagarajan at the Sadhvi Press D. Subbiah Road, Mysore

ಉಜ್ವಲ ಸತೀತ್ವಕ್ಕೆ !

ಪಂಡಿತ ಡಿ. ಗೋಪಾಲಾಚಾರ್ಲುರವರ
ಅರುಣ
ಗರ್ಭಾಶಯರೋಗ ನಿವಾರಿಣಿ

ಅರುಣ ಮುಟ್ಟು ದೋಷ... ಗಳನ್ನು ನಿರ್ಮೂಲಿಸಿ ಪ... ಪೂರ್ಣ ಸ್ತ್ರೀತ್ವವನ್ನು ... ಸಾಧಿಸುವ ಸ್ವಯಂಸಂಪೂ... ರ್ಣವಾದ ದಿವ್ಯೌಷಧ ... ದನ್ನು ಬಿಡದೆ ಸೇವಿಸಿ... ರಾದರೆ, ನಿಮ್ಮ ಜೀವನ... ಪರಮಾವಧಿಯಾದ ... ಮಂದಾನಂದವನ್ನು ತಪ್ಪ... ದೆ ಒದಗಿಸಬಲ್ಲುದು.
ಆಯುರ್ವೇದಾಶ್ರಮಂ ಲಿಮಿಟೆಡ್
ಟಿ-ನಗರ್.... ಮದರಾಸು.
EASTERN 5768

ಕೋ. ನಂ. 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಮಂಗಳವಾರ ೧೦—೧೨—೪೬ [ಸಂಚಿಕೆ ೧೦೭

ರಾಜೇಂದ್ರ ಪ್ರಸಾದರು ರಾಜ್ಯಾಂಗಸಭಾಧ್ಯಕ್ಷರು

...ರಿಕಾ ರಾಜ್ಯಾಂಗವೇ ...ರತದ ಆದರ್ಶವಾಗಿರಲಿ

...ಜ್ಯಾಂಗ ಸಭೆಯಲ್ಲಿ ಡಾ॥ ಸಿನ್ಹರ ಅಧ್ಯಕ್ಷ ಭಾಷಣ

...ನಿಷ್ಯ ಭಾರತದ ರಾಜ್ಯಾಂಗ ನಿರ್ಮಾ..., ನಿಮಗೆ ಸುಸ್ವಾಗತ. ಭಾರತದ ಗ...ನಕ್ಕೆ ಜೀವ ಕೊಟ್ಟು ವಿಶ್ವ ರಾಷ್ಟ್ರ...ಲ್ಲಿ ನಮ್ಮ ಪುರಾತನ ಪವಿತ್ರ ನಾಡು ...ಮಣಿಯಾಗುವಂತೆ ಮಾಡಲು ...ನೆರವಿಸ್ತೀರಿ. ರಾಜ್ಯಾಂಗ ರಚನಾ ಸ...ಕಾರ್ಯಕ್ರಮಗಳು ಸುಲಲಿತವಾಗಿ ...ವರಿಸುವಂತೆ ಅನುಗ್ರಹಿಸುವಂತೆ ...ಮಾತ್ಮನನ್ನು ಪ್ರಾರ್ಥಿಸುತ್ತೇನೆ. ತಾವೆ ...ವಿಚಾರಪೂರಿತರಾಗಲೇಕು, ಸೇವಾ ...ಳಾಗಬೇಕು ತಾಳ್ಮೆ, ದೂರದೃ...ವತ್ತ ಭಾರತದ ಹಿತ, ಇವುಗಳೇ ನಿ...ಆದರ್ಶವಾಗಿರಲಿ'' ಎಂದು ಡಾ॥ ಸ...ನಂದ ಸಿನ್ಹರವರು ನಿನ್ನೆ ದೇಗ್ಲೆ ...ಟಿಗೆ ದೆಹಲಿಯಲ್ಲಿ ಭಾರತ ರಾ...ಗ ರಚನಾ ಸಭೆಯು ಆರಂಭೋತ್ಸವ ... ನೆರವೇರಿಸುತ್ತಾ ತಿಳಿಸಿದರು.

...ಟಿಷ್ ಭಾರತದ ೨೯೬ ಪ್ರತಿನಿಧಿಗಳ ...೨೦೭ ಮಂದಿ ಹಾಜರಿದ್ದರು. ೭೫ ...ಲೀಗಿನವರು ಸಭೆಗೆ ಬಂದಿರಲಿಲ್ಲ. ...ಆಚಾರ್ಯ ಕೃಪಲಾನಿಯವರು ಡಾ॥ ...ನ್ಹಾ ಅಧ್ಯಕ್ಷ ಸ್ಥಾನಕ್ಕೆ ಸೂಚಿಸಿದ ... ಅಧ್ಯಕ್ಷರ ಭಾಷಣವಾದನಂತರ ಸದ...ಗಳು ತಮ್ಮ ಸಹಿ ಹಾಕಿದರು. ಮಿ॥ ...ರ್ ಅಂಗ್ಲೋಇಂಡಿಯನರನ್ನು ಸಭೆಯು ...ಪಾಧ್ಯಕ್ಷರನ್ನಾಗಿ ನೇಮಿಸಿಕೊಳ್ಳಲಾಯಿ...

...ಮವಾಗಿ ಬಾಳುವಂತಹ ರಾಜ್ಯಾಂಗ ರಚಿಸೋಣ

...ರತದ ಶೀಘ್ರ ಚಿರ ಸ್ಥಾಯಿಯಾಗಿ ...ವಂತಹ ರಾಜ್ಯಾಂಗ ಪದ್ಧತಿಯನ್ನು ...ವು ರಚಿಸಬೇಕಾಗಿದೆ. ಒಪ್ಪಂದ-ಸ್ನೇಹ ...ರ್ಣ ಆಧಾರದ ಮೇಲೆ ಬೆಳೆದು ರಚನೆ ...ಗಿರುವ ಅಮೇರಿಕಾ ಸಂಯುಕ್ತ ಸಂಸ್ಥಾ...ನ ರಾಜ್ಯಾಂಗವನ್ನು ನಮ್ಮ ಪರಿಸ್ಥಿತಿಗೆ ...ನುಗುಣವಾಗಿ ಮಾರ್ಪಡಿಸಿಕೊಂಡು ನ...ಮ್ಮ ರಾಜ್ಯಾಂಗವನ್ನು ರಚಿಸುವುದು ಉತ್ತ...ಮ'' ಎಂದು ಅಧ್ಯಕ್ಷ ಡಾ॥ ಸಿನ್ಹರು ತಿಳಿಸಿ...ದ. ಈ ಬಗೆಯ ರಾಜ್ಯಾಂಗ ಸಮಿತಿಯ ...ರಚನೆಯನ್ನು ೧೯೨೨ ರಲ್ಲಿ ಗಾಂಧೀಜಿಯು ...ಸೂಚಿಸಿದ್ದರೆಂದು ಹೇಳಿದರು. ಸ್ವಿಸ್ ...ರಾಜ್ಯಾಂಗ ಗಮನೀಯವಾದುದೆಂದು ಎಂ... ಸೂಚಿಸಿ ಅದರಿಂದ ನಮಗೆ ಅನುಕೂ...ಲವಾಗುವಂತಹ ಸಂಗತಿಗಳನ್ನು ತೆಗೆದು...ಕೊಳ್ಳಬಹುದೆಂದು ಸಲಹೆಯಿತ್ತರು. ರಾ...ಜ್ಯಾಂಗ ಸಭೆಯು ವಿಚಾರ ಭಾರತದಲ್ಲಿ ಬೆ...ಳೆದ ಬಂದ ರೀತಿಯನ್ನು ವಿವರಿಸಿದರು.

...ವಿವೇಚನೆ, ಸರ್ವಮತ ಸಮನ್ವಯ, ...ದೂರದೃಷ್ಟಿ ಭ್ರಾತೃ ಮನೋಧರ್ಮ ಮ...ತ್ತು ಸದ್ಭಾವನೆಗಳನ್ನು ಭಗವಂತನು ಎಲ್ಲ...ರಿಗೂ ಕರುಣಿಸಲಿ; ಈ ಮಹಾ ಸಭೆಯು ...ಯಶಸ್ವಿಯಾಗಿ ಮುಂದುವರಿಯಲೆಂದು ಪ್ರಾ...ರ್ಥಿಸುತ್ತೇನೆ'' ಎಂದು ಹೇಳಿ ಅಧ್ಯಕ್ಷರು ತ...ಮ್ಮ ಭಾಷಣವನ್ನು ಮುಗಿಸಿದರು.

ಸೌದೆ ಅಭಾವ

...] ಚಾಮರಾಜನಗರ ೮

ಸೌದೆ ಸಿಕ್ಕುವುದು ದುರ್ಲಭವಾಗಿದೆ. ...ಳೆ ಪ್ರತ್ಯಕ್ಷ ಅಭಾವ ಕಮ್ಮಿಯಾಗಿ...ದೆ. ಕಾಡು ಹತ್ತಿರವಿದ್ದರೂ ಬೆಲೆ ಮೈಸೂ...ರು ಬೆಂಗಳೂರಿಗಿಂತಲೂ ಅಧಿಕ. ಒಣಗಿದ ಸೌದೆ ದೊರೆಯ ಇಲ್ಲ. ವಿಚಾರಿಸಿದ್ದರಲ್ಲಿ ಒ...ಣಗಿದ ಸೌದೆ ಇರುವ ಸ್ಥಳಕ್ಕೆ ಗಾಡಿಯವರನ್ನು ಬಿಡುವುದಿಲ್ಲವೆಂದು ತಿಳಿದುಬರುತ್ತದೆ. ಇದರಿಂದ ಜನರಿಗೆ ಬಹಳ ತೊಂದರೆಯಾಗುತ್ತಿದೆ.

ಸ್ಟಾಂಡರ್ಡ್ ಟಿಪ್ಪೊ ಡಿಪೋ ಹೆಸರಿಗೆ ಮಾತ್ರ ಇದೆ, ಯಾವಾಗಲೂ ಬಾಗಿಲು ಮುಚ್ಚಿಯೇ ಇರುತ್ತದೆ, ಇದರ ಗೂಢಾರ್ಥವೇನು?

ರಾಜ್ಯಾಂಗ ಸಭೆಯಲ್ಲಿ ಮೈಸೂರು ಪ್ರಾತಿನಿಧ್ಯ

ನ್ಯಾಯವಿಧಾಯಕ ಸಭೆಯಲ್ಲಿ ಪ್ರಶ್ನೋತ್ತರಗಳು

ಸ್ವಂ ಸು.ಪ್ರೋ] ಬೆಂಗಳೂರು ೧೦

ಈ ದಿನ ಶಾಸನ ಸಭೆಯು ಶ್ರೀ ಹೆಚ್. ಬಿ. ಗುಂಡಪ್ಪಗೌಡರ ಅಧ್ಯಕ್ಷತೆಯಲ್ಲಿ ಅ...ರಾರ ಕಛೇರಿಯಲ್ಲಿ ಆರಂಭವಾಯಿತು. ಮಿ॥ ಸೈಯದ್ ಅಬ್ದುಲ್ ರಹಮಾನರವರು ೧೯೪೫ ಮತ್ತು ೧೯೪೬ ನೇ ಸಾಲಿನಲ್ಲಿ ಎಷ್ಟು ನಿರ್ಣಯಗಳು ವೇಳೆಯು ಸಾಲದೆ ನಿಂತು ಹೋದುವು ಎಂದು ಕೇಳಿದಾಗ ಆ...ಸಚಿವರಾದ ಮಿ॥ ಓ ಎಸ್ ಎನ್ ಸರೀಫರು ೪೫ ನೇ ಸಾಲಿನಲ್ಲಿ ೧೨೬, ೪೬ ನೇ ಸಾಲಿನಲ್ಲಿ ೧೪೬, ನಿರ್ಣಯಗಳೆಂದು ತಿಳಿಸಿದರು. ಶ್ರೀ ಕೆ. ಟಿ. ಶ್ರೀನಿವಾಸರು ಚಿಂತಾಮಣಿಯ ತಾಲ್ಲೋಕಿನಿಂದ ೧೯೪೩ ರಿಂದ ಈಚೆಗೆ ಎಷ್ಟು ಕಡೆಗಳಿಂದ ವಿದ್ಯುಚ್ಛಕ್ತಿ ಬೇಕೆಂದು ಅರ್ಜಿಗಳು ಬಂದಿದ್ದುವು ಎಂದು ಕೇಳಿದ ಪ್ರಶ್ನೆಗೆ ೪೫ ನೇ ಸಾಲಿನಲ್ಲಿ ೧೯, ಮತ್ತು ೪೬ ನೇ ಸಾಲಿನಲ್ಲಿ ೬ ಅರ್ಜಿಗಳು ಬಂದಿದ್ದವೆಂದೂ ಒಟ್ಟು ೨೧ ಅರ್ಜಿಗಳನ್ನೂ ಪರಿಶೀಲಿಸಿ ೫ ಪ್ರದೇಶಗಳಿಗೆ ಕೊಡಲಾಯಿತೆಂದೂ ಪಬ್ಲಿಕ್ ವರ್ಕ್ಸ್ ಸಚಿವರಾದ ಶ್ರೀ ಎಲ್. ಸಿದ್ದಪ್ಪನವರು ತಿಳಿಸಿದರು.

ಮಿ॥ ಸೈಯದ್ ಅಬ್ದುಲ್ ರಹಮಾನ್ ರವರು ಬೆಂಗಳೂರಿನ ಬಟ್ಟೆ ವ್ಯಾಪಾರಿಗಳಾದ ಶ್ರೀ ಎ. ಜಿ. ವೆಂಕಟಪ್ಪ ಎಂಬುವರಿಗೆ ನಗರ್ತರ ಪೇಟೆಯಲ್ಲಿ ಸಿನಿಮಾ ಮಂದಿರ ಕಟ್ಟಲು ಲೈಸೆನ್ಸ್ ಕೊಡಲಾಗಿದೆಯೇ ಎಂದು ಕೇಳಿದ ಪ್ರಶ್ನೆಗೆ ಡಾ॥ ಅಯ್ಯರವರು ಬೆಂಗಳೂರು ಜಿಲ್ಲಾಧಿಕಾರಿಗಳ ಶಿಫಾರಸಿನಂತೆ ಕೊಡಲಾಗಿದೆಯೆಂದು ತಿಳಿಸಿದರು. ಶ್ರೀ ಎನ್ ಚನ್ನಪ್ಪನವರು ಸರ್ಕಾರದ ಇತ್ತೀಚಿನ ಆಜ್ಞೆಯಂತೆ ಪೋಲೀಸ್ ಇನ್ಸ್‌ಪೆಕ್ಟರುಗಳಿಗೆ ೧೭೫ ರೂ. ಸಂಬಳವನ್ನು ಕೊಡಲು ನಿರ್ಧರಿಸಲಾಗಿದೆಯೇ ಮತ್ತು ಅನೇಕ ಕಡೆ ಪೋಲೀಸ್ ಇನ್ಸ್‌ಪೆಕ್ಟರುಗಳ ಅಧಿಕಾರಿಗಳಾದ ಅಮಲ್ದಾರರ ಸಂಬಳವನ್ನು ತಗ್ಗಿಸಲಾಗುವುದೇ ಎಂಬ ಪ್ರಶ್ನೆಗೆ ರೆವಿನ್ಯೂ ಮಂತ್ರಿಗಳಾದ ಜಿ. ಅಪ್ಪಾಜಿಗೌಡರು ಇದನ್ನು ಪರಿಶೀಲಿಸಲಾಗುತ್ತಿದೆ ಎಂದು ಹೇಳಿದರು.

ರಾಜ್ಯಾಂಗ ರಚನಾ ಸಮಿತಿಗೆ ಮೈಸೂರಿನಿಂದ ಪ್ರತಿನಿಧಿಗಳನ್ನು ಕಳುಹಿಸುವ ಬಗ್ಗೆ ಶ್ರೀಗಳಾದ ಎಂ. ಮಾದಯ್ಯ, ಎಚ್. ಎಂ. ಗಂಗಾಧರಯ್ಯ ಮತ್ತು ಮಿ॥ ಸಯ್ಯದ್ ಅಬ್ದುಲ್ ರಹಮಾನ್ ರವರುಗಳು ಕೇಳಿದ ಪ್ರಶ್ನೆಗೆ ಪ್ರಧಾನ ಕಾರ್ಯದರ್ಶಿಗಳಾದ ಪಿ. ಮೇದಪ್ಪ ಸಾಹೇಬರವರು ಈ ವಿಷಯವು ಸರ್ಕಾರದ ಗಮನದಲ್ಲಿದೆ ಎಂದು ತಿಳಿಸಿದರು. ಈ ವಿಷಯದ ಮೇಲೆ ಪ್ರಶ್ನೋತ್ತರಗಳ ಸುರಿ ಮಳೆಯಾಯಿತು:-

ಶ್ರೀ ಟಿ. ಮರಿಯಪ್ಪ:-ನಮ್ಮ ಸರ್ಕಾರಕ್ಕೆ ರಾಜ್ಯಾಂಗ ರಚನಾ ಸಮಿತಿ ಬಗ್ಗೆ ಯಾವಾಗ ಕಾಗದ ಬಂದಿತು?

ಪ್ರ. ಕಾರ್ಯದರ್ಶಿ:-ರಾಜ್ಯಾಂಗ ರಚನಾ ಸಮಿತಿಯನ್ನು ರಚಿಸುವುದಕ್ಕೆ ಆರಂಭವಾದಾಗ.

ಪ್ರ:-ಭಾರತ ಸರ್ಕಾರದಿಂದಲೇ ಅಥವಾ ಬ್ರಿಟಿಷ್ ಸರ್ಕಾರದಿಂದಲೇ? ಉ:-ಭಾರತ ಸರ್ಕಾರದಿಂದ.

ಪ್ರ:-ನೆನ್ನೆ ದಿನ ರಾಜ್ಯಾಂಗ ರಚನಾ ಸಭೆ ಆರಂಭವಾಗಿರುವುದು ಗೊತ್ತೇ? ಉ:-ಗಮನಿಸುತ್ತಿದ್ದೇವೆ.

ಪ್ರ:-ದಿವಾನರು ದೆಹಲಿಯಲ್ಲಿ ಮೈಸೂರಿನ ಪ್ರತಿನಿಧಿಗಳ ಬಗ್ಗೆ ಮಾತುಕತೆ ನಡೆಸುವರೇ? ಉ:-ಈ ಸಂಬಂಧದಲ್ಲಿ ಕಲ್ಲ.

ಪ್ರ:-ದಿವಾನರು ಯಾವ ಆಧಾರದ ಮೇಲೆ ಏಳು ಜನ ಎಂದು ಹೇಳಿರುವರು? ಉ:-ಪ್ರಾವಿಷನಲ್ಲಾಗಿ.

ಪ್ರ:-ಪ್ರತಿನಿಧಿಗಳೆಲ್ಲರೂ ಚುನಾಯಿಸಲ್ಪಟ್ಟವರೇ? ಉ:-ಗೊತ್ತಿಲ್ಲ.

ಶ್ರೀ ವೆಂಕಟಜಾವ್:-ಪ್ರತಿನಿಧಿಗಳನ್ನು ಕಳುಹಿಸುವುದು ಚುನಾವಣೆಯಿಂದಲೋ ಅಥವಾ ಆರಿಸಿಯೋ? ಉ:-ಶ್ರೀ ಚೆನ್ನಬಸಪ್ಪ:-ದಿವಾನರು ನಾಯಕರೆಂದು ಅವರೇ ಹೇಳಿಕೊಂಡಿರುವುದೂ ಇಲ್ಲವೇ?

ಡಾ॥ ರಾಯರ್:-ಶ್ರೀಮನ್ ಮಹಾರಾಜರವರು ತಿಳಿಸಿರುವ ಮೇರೆಗೆ ಅವರು ನಾಯಕರಾಗಿ ಹೋಗುವರು.

ಶ್ರೀ॥ ಟಿ. ಮರಿಯಪ್ಪ:-ಪ್ರತಿನಿಧಿಗಳನ್ನು ಬ್ರಿ॥ ಪ್ರಾಂತಗಳಲ್ಲಿ ಕಳುಹಿಸಿದ ಹಾಗೆ ಕಳುಹಿಸಲಾಗುವುದೇ? ಉತ್ತರ:- ಇನ್ನೂ ಅದಕ್ಕೆ ಸಂಬಂಧವಿಲ್ಲ.

ಶ್ರೀ ಕೆ ಮಾದಯ್ಯ ಮತ್ತು ಎಚ್.

ಡಾ॥ ರಾಜೇಂದ್ರ ಪ್ರಸಾದರು ಅಧ್ಯಕ್ಷರಾಗುವರು

ಡಾಕ್ಟರ್ ರಾಜೇಂದ್ರ ಪ್ರಸಾದರವರನ್ನು ಭಾರತ ರಾಜ್ಯಾಂಗ ರಚನಾ ಸಭೆಯ ಖಾಯಂ ಅಧ್ಯಕ್ಷರನ್ನಾಗಿ ಆರಿಸಬೇಕೆಂದು ನಿನ್ನೆ ಮಧ್ಯಾಹ್ನ ನಡೆದ ಕಾಂಗ್ರೆಸ್ ಪಕ್ಷದ ಸದಸ್ಯರ ಪೂರ್ವಭಾವಿ ಸಭೆಯೊಂದರಲ್ಲಿ ತೀರ್ಮಾನಿಸಲಾಗಿದೆಯೆಂದು ವರದಿಯಾಗಿದೆ.

೨೧ ವರ್ಷಕ್ಕೆ ಮೇಲ್ಪಟ್ಟವರಿಗೆಲ್ಲಾ ಓಟಿನ ಹಕ್ಕು

ಸ್ವಂ. ಸು] ಬೆಂಗಳೂರು ೭

ಬೆಂಗಳೂರು ಜಿಲ್ಲಾಬೋರ್ಡಿನ ಸಭೆಯು ಮೊನ್ನೆ ದಿನ ಜರುಗಿ ೨೧ ವರ್ಷ ವಯಸ್ಸಿಗೆ ಮೇಲ್ಪಟ್ಟವರಿಗೆಲ್ಲಾ ಓಟಿನ ಹಕ್ಕನ್ನು ಜಿಲ್ಲಾಬೋರ್ಡ್ ಚುನಾವಣೆಯಲ್ಲಿ ಕೊಡಬೇಕೆಂದು ಸರ್ಕಾರಕ್ಕೆ ಶಿಫಾರಸು ಮಾಡಿತು. ನಾಳವಾಡಿ ಮತ್ತು ಕೈಲಾಸಂರವರ ನಿಧನಕ್ಕೆ ಸಂತಾಪ ಸೂಚಿಸುವ ನಿರ್ಣಯಗಳನ್ನು ಅಂಗೀಕರಿಸಿತು.

ಶ್ರೀ ರಾಮ ಪಟ್ಟಾಭಿಷೇಕ

ಮೈಸೂರು ಚಲುವಾಂಬ ಅಗ್ರಹಾರದ ಹಿಂಭಾಗದಲ್ಲಿರುವ ಶ್ರೀ ಪ್ರಸನ್ನ ವೆಂಕಟರಮಣ ಸ್ವಾಮಿ ದೇವಸ್ಥಾನದಲ್ಲಿ ಪಾಲಘಾಟ್ ಶ್ರೀ ಗಣಪತಿ ಭಾಗವತರಿಂದ ಕಳೆದ ಒಂದು ತಿಂಗಳಿಂದ ನಡೆಯುತ್ತಿರುವ ಶ್ರೀ ರಾಮಾಯಣ ಹರಿಕಥೆಯು ನಾಳೆ ಮುಕ್ತಾಯಗೊಂಡು ಶ್ರೀ ರಾಮ ಪಟ್ಟಾಭಿಷೇಕವು ನಡೆಯುವುದು.

ಸಾಹಿತ್ಯೋತ್ಸವ

ಮಹಾರಾಜಾ ಕಾಲೇಜ್ ಕರ್ನಾಟಕ ಸಂಘದಾಶ್ರಯದಲ್ಲಿ ನಿನ್ನೆ ಸಂಜೆ ಸಾಹಿತ್ಯೋತ್ಸವವು ವೈಭವದಿಂದ ಜರುಗಿತು. ಶ್ರೀ ಕ. ವೆ. ಪುಟ್ಟಪ್ಪನವರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಗ ಸ ಹಾಲಪ್ಪನವರು 'ಕನ್ನಡದ ಕನ್ನಡ ನಾಡು' ಎಂಬ ವಿಚಾರವಾಗಿ ಭಾಷಣ ಮಾಡಿದರು. ದಾರೇಜನ್ನಾರು ಶ್ರೀ ಚನ್ನಪ್ಪನವರು ಹೊಸ ಕನ್ನಡದ ಗೀತೆಗಳನ್ನು ಹಾಡಿದರು.

ಮೈಸೂರು ಸಂಸ್ಥಾನದ ಮಾಜಿ ಮಂತ್ರಿಗಳಾದ ಶ್ರೀ ಎಂ. ಎ. ಶ್ರೀನಿವಾಸನ್‌ರವರು ಗ್ವಾಲಿಯರ್ ಸಂಸ್ಥಾನದ ಒಳಾಡಳಿತ ಸಚಿವರಾಗಿ ನೇಮಕವಾಗಿದ್ದಾರೆ.

...ಎಸ್ ರುದ್ರಪ್ಪನವರುಗಳು ಕಳುಹಿಸಿರುವ ಮಕ್ಕೆ ಹೆಚ್ಚಾಗಿ ಒಂದೂ ಅಹಾರ ಕೆಟ್ಟು ಹೋಗಿರುವುದು ಮತ್ತು ಮೈಸೂರು ಸಂಸ್ಥಾನವು ಇತ್ತೀಚೆಗೆ ಕೇ॥ ೩ ರಂತೆ ಹೊಸ ಸಾಲ ತೆಗೆದಿರುವ ಬಗ್ಗೆ ನಿಲುವಳಿ ನಿರ್ಣಯ ಬಂದಿವೆಯೆಂದು ಅಧ್ಯಕ್ಷರು ಹೇಳಿದರು. ಸಭಾ ನಾಯಕರಾದ ಡಾ॥ ಅಯ್ಯರವರು ಆಹಾರದ ಬಗ್ಗೆ ಸೋಮವಾರ ಚರ್ಚಿಸುವುದಿರುವುದರಿಂದ ನಿರ್ಣಯವನ್ನು ಚರ್ಚಿಸುವುದನವಶ್ಯಕವೆಂದು ತಿಳಿಸಿದರು. ನಂತರ ಶ್ರೀ॥ ರುದ್ರಪ್ಪನವರು ನಿರ್ಣಯದ ಬಗ್ಗೆ ಮೈಸೂರು ಸರ್ಕಾರದ ಶಾಸನ ಸಭೆಯ ಒಪ್ಪಿಗೆ ಮತ್ತು ಅನುಮತಿ ಇಲ್ಲದೇ ನೆಪ್ಪನ್ನಿಸಂತೆ ಚರ್ಚಿಸಲು ಅವಕಾಶವಿದೆಯೋ ಎಂದು ಅಧ್ಯಕ್ಷರು ಕೇಳಲಾಗಿ ಶ್ರೀ॥ ಟಿ. ಮರಿಯಪ್ಪನವರು ಉತ್ತರಿಸುತ್ತಾ ಈಗ ಬಂದಿರುವ ನಿಲುವಳಿ ನಿರ್ಣಯವು ಸರ್ಕಾರದ ನೀತಿಯ ಬಗ್ಗೆ ಆಗಿರುವುದರಿಂದ ಚರ್ಚಿಸಬಹುದು. ಎಂದರು. ನಿಲುವಳಿ ನಿರ್ಣಯವನ್ನು ೪ ಘಂಟೆಗೆ ತೆಗೆದುಕೊಳ್ಳಲಾಗುವುದೆಂದ ಅಧ್ಯಕ್ಷರು ತಿಳಿಸಿದರು.

ಸಾಧ್ವಿ

ತಾ|| ೧೦-೧೨-೪೬ ಮಂಗಳವಾರ

ಮಳೆಯ ಹಾವಳಿ

ಇಡೀ ದಕ್ಷಿಣ ಭಾರತದಲ್ಲೆಲ್ಲಾ ವಿಪರೀತ ಮಳೆಯು ಬಿದ್ದು ಅಪರಿಮಿತವಾದ ಅನರ್ಥವಾಗಿರುವುದಾಗಿ ವರದಿಗಳು ಬಂದಿವೆ. ಬಂಗಾಳಾ ಕೊಲ್ಲಿಯಲ್ಲಿ ಉದ್ಭವಿಸಿದ ಚಂಡಮಾರುತದಿಂದ ಸಮುದ್ರದ ನೀರಿನ ಮಟ್ಟದಲ್ಲಿ ವಿಶೇಷ ಇಳಿತಾಯವಾಗಿ ಅಕಾಲದಲ್ಲಿ ಈ ರೀತಿ ಮಳೆ ಬಂದು ತೊಂದರೆಯುಂಟಾಯಿತು. ಈ ಬಗೆಯ ವಿಪರೀತ ಸನ್ನಿವೇಶವಿಲ್ಲವಿದ್ದರೆ ಈ ಕಾಲದಲ್ಲಿ ಇಷ್ಟು ಘೋರವಾದ ಅತಿವೃಷ್ಟಿಯು ಸಂಭವಿಸುತ್ತಿರಲಿಲ್ಲ.

ಕಳೆದ ಹಲವು ವರ್ಷಗಳಿಂದ ಬೇಕಾದಷ್ಟು ಮಳೆ ಬಾರದೆ ಬೆಳೆಯು ಸರಿಯಾಗಿ ಆಗದೆ, ಬೆಳೆದರೂ ರೈತರ ಕೈ ಹತ್ತದೆ ಅಪಾರವಾದ ಕಷ್ಟ ಪರಂಪರೆಗಳು ಸಂಪ್ರಾಪ್ತವಾಗಿದ್ದವು. ಆದರೆ ಈ ಸಾರಿ ಹಾಗೆ ಆಗದೆ ಸಕಾಲದಲ್ಲಿ ಮಳೆ ಬಂದು ಬೆಳೆಯು ಸಮೃದ್ಧಿಯಾಗಿ ಆಗಿ ಸುಭಿಕ್ಷವು ಬರುವುದೆಂದು ಎಲ್ಲರೂ ನಂಬಿದ್ದರು. ಮೊನ್ನೆ ಮೊನ್ನೆ, ಸರ್ಕಾರದವರು ಹೊರಡಿಸಿದ ಪ್ರಕಟಣೆಯಲ್ಲಿಯೂ ಇದೇ ವಿಧವಾದ ಆಶಾಭಾವನೆಯು ಸೂಚಿಸಲ್ಪಟ್ಟಿತ್ತು. ಆಹಾರ ಧಾನ್ಯದ ಸರಬರಾಜಿನ ಸ್ಥಿತಿಯು ಉತ್ತಮವಾಗುತ್ತಿರುವ ಸೂಚನೆಗಳಿವೆಯೆಂದು ಅವರು ಅದರಲ್ಲಿ ಸ್ಪಷ್ಟವಾಗಿ ಹೇಳಿರುವರು.

ಮದರಾಸು ಸರ್ಕಾರದವರಂತೂ ಈ ಸಾರಿಯ ಬೆಳೆಯ ಬಗ್ಗೆ ಸಂಪೂರ್ಣ ಭರವಸೆಗೊಂಡು ಪಡಿತರವನ್ನು ಸಹ ಹೆಚ್ಚಿಸಿರುವರು. ಆದರೆ ಕಳೆದ ವಾರ ಹಟಾತ್ತಾಗಿ ಸಂಭವಿಸಿದ ಅತಿವೃಷ್ಟಿಯು ಎಲ್ಲರ ಆಶೆಯನ್ನೂ ನಿರಾಶೆಗೊಳಿಸುತ್ತಿದೆ. ಹಲವು ಸಾವಿರ ಎಕರೆ ಭತ್ತ, ಅರವತ್ತು ಮತ್ತು ಎಪ್ಪತ್ತರಷ್ಟು ಸಹ ಬೆಳೆಯು ನಾಶವಾಗಿರುವುದಾಗಿ ಹೇಳಲಾಗಿದೆ. ವಿಪರೀತ ಮಳೆಯಿಂದ ಕಟಾವಿಗೆ ಬಂದಿದ್ದ ಭತ್ತವೆಲ್ಲಾ ಕೊಳೆತು ಹಾಳಾಗಿರುತ್ತದೆ. ಈ ಸಾರಿ ಒಳ್ಳೆಯ ಫಸಲು ಬರುವುದೆಂದು ಆನಂದಪಡುತ್ತಿದ್ದವರ ಕಣ್ಣಿನಲ್ಲಿ ದುಃಖಾಶ್ರುಗಳು ಕಂಡು ಬರುತ್ತಿವೆ. ಆದುದರಿಂದ ಈ ವರ್ಷವೂ ಸಹ ಆಹಾರದ ಸಮಸ್ಯೆಯು ಕಳೆದ ವರ್ಷದಂತೆಯೇ ಕಠಿಣವಾಗಿರುವಂತೆ ಕಾಣುತ್ತದೆ.

ಈ ವಿಷಯವನ್ನು ಸರ್ಕಾರದವರೂ ಸಾರ್ವಜನಿಕ ಮುಖಂಡರೂ ಕೂಲಂಕಷವಾಗಿ ಪರಿಶೀಲಿಸಿ ಇಂತಹ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಬಡ ಪ್ರಜೆಗಳಿಗೆ ತೊಂದರೆಯಾಗದ ಹಾಗೆ ಆಹಾರ ಧಾನ್ಯದ ವಿನಿಯೋಗದ ವ್ಯವಸ್ಥೆಯು ಏರ್ಪಡುವಂತೆ ಮಾಡಬೇಕೆಂದು ನಾವು ಕೋರುತ್ತೇವೆ.

ಈಜಿಪ್ಟ್ ಮುಖ್ಯಮಂತ್ರಿ ರಾಜೀನಾಮೆ

ಈಜಿಪ್ಟಿನ ಪ್ರಧಾನಿ ಮಿ|| ಸಿದ್ದಿಕಿ ಪಾಷಾರವರು ತಮ್ಮ ರಾಜೀನಾಮೆಯನ್ನು ರಾಜರಾದ ಫರೂಕರಿಗೆ ಸಲ್ಲಿಸಿದ್ದಾರೆ. ಸೂಡಾನಿನ ಸಮಸ್ಯೆ ಬಗ್ಗೆ ಉಂಟಾಗಿರುವ ಬಿಕ್ಕಟ್ಟಿನಿಂದಲೇ ಅವರು ರಾಜೀನಾಮೆ ಸಲ್ಲಿಸಿದ್ದಾರೆಂದು ನಂಬಲಾಗಿದೆ. ಅವರು ಕಳೆದ ೬ ವಾರಗಳಿಂದ ಕಾಯಿಲೆಯಿಂದ ನರಳುತ್ತಿದ್ದಾರೆ.

ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಸಭೆ

ಸ್ವಂ.ಸು ವರ್ತ] ಬೆಂಗಳೂರು ೯

ಮೈಸೂರು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭೆಯು ಶ್ರೀ ಕೆ. ಚೆಂಗಲರಾಯರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಿನ್ನೆ ದಿನ ಆರಂಭವಾಯಿತು. ಕೆ ಜಿ. ಎಫ್ ಮುಷ್ಕರದ ಬಗ್ಗೆ ವರದಿಯನ್ನು ಶ್ರೀ ಕೆ. ಎಸ್ ಕುಮಾರನರವರು ಒಪ್ಪಿಸಿದರೆಂದೂ ಇದರ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿಯನ್ನು ಪಡೆಯುವ ಸಲುವಾಗಿ ಶ್ರೀಗಳಾದ ಕೆ. ಸಿ. ರೆಡ್ಡಿ, ಕೆ. ಆರ್. ಮಾಧವರಾವ್ ಮತ್ತು ಕೆ ಎಸ್. ಕುಮಾರನರವರನ್ನೊಳಗೊಂಡ ಉಪಸಮಿತಿಯನ್ನು ರಚಿಸಲಾಯಿತು. ಸತ್ಯಾಗ್ರಹದ ಸಮಿತಿಯವರೂ ಸಹ ತಮ್ಮ ವರದಿಯನ್ನು ಒಪ್ಪಿಸಿರುವರೆಂದೂ ತಿಳಿದು ಬಂದಿದೆ. ಭಾರತ ರಾಜ್ಯಾಂಗ ಸಮಿತಿಗೆ ಮೈಸೂರಿನ ಪ್ರತಿನಿಧಿಗಳನ್ನು ಕಳುಹಿಸುವ ಬಗ್ಗೆ ಶ್ರೀ ರೆಡ್ಡಿಯವರು ಕಾಂಗ್ರೆಸ್ ಅಧ್ಯಕ್ಷ ಆಚಾರ್ಯ ಕೃಪಲಾನಿಯವರಿಗೆ ಬರೆದಿರುವ ಪತ್ರವನ್ನು ಅ|| ಭಾ|| ಕಾಂ|| ಕಾರ್ಯಕಾರಿ ಸಮಿತಿ ಮುಂದೆ ಮಂಡಿಸಲಾಗುವುದೆಂದು ಉತ್ತರ ಬಂದಿದೆ ಎಂದು ಗೊತ್ತಾಗಿದೆ.

ನಿಜಾಮರ ಸಹಾಯ

ಬಂಗಾಳದ ದುರಂತದಲ್ಲಿ ನಿರಾಶ್ರಿತರಾದವರ ಸಹಾಯಾರ್ಥವಾಗಿ ಹೈದರಾಬಾದಿನ ನಿಜಾಮರು ೧ ಲಕ್ಷ ರೂಪಾಯಿಗಳನ್ನು ಇತ್ತಿದ್ದಾರೆ. ಇದೇ ರೀತಿ ಬಿಹಾರಿಗೂ ೧ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ.

ಮುಸ್ಲಿಮರ ಮೇಲೆ ಆರ್ಥಿಕ ಬಹಿಷ್ಕಾರ

ಹಿಂದೂ ವ್ಯಾಪಾರಸ್ಥರು ಮುಸಲ್ಮಾನ್ ವ್ಯಾಪಾರಸ್ಥರ ಮೇಲೆ ಆರ್ಥಿಕ ಬಹಿಷ್ಕಾರ ಹಾಕುತ್ತಿದ್ದಾರೆ ಎಂಬುದಾಗಿ ನನಗೆ ಗೊತ್ತಾಗಿದೆ. ಇದು ಅಖಂಡ ಹಿಂದೂಸ್ಥಾನದ ತತ್ವಕ್ಕೆ ಸರಿಹೋಗುವುದಿಲ್ಲ. ಹಿಂದೂ ಮುಸಲ್ಮಾನರ ಸಮ್ಮಿಶ್ರ ಸರ್ಕಾರವು ಇದನ್ನು ಸಹಿಸಲಾರದು ಎಂದು ಕೇಂದ್ರ ಸರ್ಕಾರದ ಮಂತ್ರಿಗಳು ಮಿ|| ಚುಂದ್ರಿಗರ್ ರವರು ಬೊಂಬಾಯಿಯಲ್ಲಿ ತಿಳಿಸಿದ್ದಾರೆ.

Edited, printed and published by
A. R. Nagarajan at the Sadhvi Press
D. Subbiah Road, Mysore

ಭಾರತದ ಬಗ್ಗೆ ಕಾಮನ್ಸಿನಲ್ಲಿ ಚರ್ಚೆ

ಭಾರತದ ನಾಯಕರೊಡನೆ ನಡೆಸಿದ ಸಂಧಾನದ ವಿವರವನ್ನು ಬ್ರಿ|| ಪ್ರಧಾನಿ ಮಿ|| ಅಟ್ಲಿಯವರು ಮುಂದಿನ ವಾರ ಕಾಮನ್ಸ್ ಸಭೆಯಲ್ಲಿ ಮಂಡಿಸುವರೆಂದು ಗೊತ್ತಾಗಿದೆ. ಅಗ್ಗೆ ಮಿ|| ಚರ್ಚಿಲ್ ಮುಂತಾದವರು ಭಾಷಣ ಮಾಡುವರೆಂದು ವರದಿಯಾಗಿದೆ.

ಹೋಟಲಿಗೆ ಬೆಂಕಿಬಿದ್ದು ೧೧೪ ಜನರ ಮರಣ

ಅಮೇರಿಕಾ ಸಂಯುಕ್ತ ಸಂಸ್ಥಾನದ ಅಟ್ಲಾಂಟಿ ಎಂಬಲ್ಲಿ ಭಾರಿ ಹೋಟಲು ಒಂದಕ್ಕೆ ಬೆಂಕಿ ತಗಲಿ ಒಳಗಿದ್ದವರಲ್ಲಿ ೧೧೪ ಮಂದಿ ಮೃತಪಟ್ಟರೆಂದೂ, ೧೦೦ ಮಂದಿಗೆ ಗಾಯಗಳಾಗಿವೆಯೆಂದೂ ವರದಿಯಾಗಿದೆ.

ವಿಶ್ವ ಸಂಸ್ಥೆಯಲ್ಲಿ ಮತ್ತೆ ಭಾರತಕ್ಕೆ ವಿಜಯ

ದಕ್ಷಿಣ ಆಫ್ರಿಕದ ವಿರುದ್ಧವಾಗಿ ರಾಜಕೀಯ ಮತ್ತು ನ್ಯಾಯಾಂಗ ಸಮಿತಿಯಲ್ಲಿ ಅಂಗೀಕಾರವಾದ ನಿರ್ಣಯವು ಮೊನ್ನೆ ವಿಶ್ವ ಸಂಸ್ಥೆಯ ಜನರಲ್ ಅಸೆಂಬ್ಲಿಯ ಮುಂದೆ ಬಂದು ಮೂರನೇ ಎರಡರಷ್ಟು ಬಹುಮತದಿಂದ ನಿರ್ಣಯವು ಅಂಗೀಕಾರವಾಗಿ ಜ|| ಸ್ಮಟ್ಸ್‌ರಿಗೆ ಪರಾಜಯ ಉಂಟಾಯಿತು.

ಸಾಧ್ವಿ
ವ
ರಾಜಧಾನಿಯ ರಾಷ್ಟ್ರೀಯ
ದಿನ ಪತ್ರಿಕೆ
ಕೂಡಲೇ ಚಂದಾದಾರರಾಗಿರಿ
(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)
ಜಾಹಿರಾತಿನ ದರಗಳಿಗೆ
ವಿಚಾರಿಸಿರಿ

ರಾಜಕಮಲ್
ಮೈಸೂರು
6-12-46 ರಿಂದ
ನಾಲ್ಕನೆಯ ವಾರ
ಡಾಕ್ಟರ್ ಕೊಟ್ನಿಸ್ ಕಿ
ಅಮರ್-ಕಹಾನಿ
-: ಭೂಮಿಕೆ :-
ಶಾಂತಾರಾಂ, ಜಯಶ್ರೀ, ಉಲ್ಲಾಸ್

ಮುಡುಪಿನ ಕಾಣಿಕೆ
ಇನ್ನೂ ಎಷ್ಟೋ ವರ್ಷಗಳು ಬಾಳಿ ಬದುಕುವುದು ಸಾಧ್ಯವಿದ್ದಾಗ ಮೃತ್ಯುವಿನ ಪಾಲಿಯು
ಗಣ್ಯವಾದ ಮತ್ತು ಚರಿತ್ರಾರ್ಹರಾದ
ಡಾಕ್ಟರ್ ದ್ವಾರಕನಾಥ್ ಕೊಟ್ನೀಸ್‌ರವರ
ಜೀವನ ಚಿತ್ರದ ಮೇಲೆ ಅವಲಂಬಿಸಿದೆ. ಅವರು ಕಷ್ಟ ಪರಂಪರೆಗಳಿಂದ
ಪಾರಾಗಲು ಪ್ರಯತ್ನ ಪಡಬಹುದಾದರೂ, ಅವುಗಳಿಗೆ ಎದೆಗೊಡದೆ ತನ್ನ ಸುಖ
ಗಳಿಗೆ ತಿಲಾಂಜಲಿಯನ್ನಿತ್ತರು. ಅವರು ಅನುಭವಿಸಿದ್ದು ಸುಯೋಧ
ಮರಣ. ಅವರು ಹೊಂದಿದುದು ವೀರಸ್ವರ್ಗ. ಅವರು ಪಡೆದುದು
ಅಮರ ಕೀರ್ತಿ. ಅಳಿದ ಅವರ ಆತ್ಮಕ್ಕೆ ಶಾಂತಿ ಇರಲಿ!
ಕಣ್ಮಣಿಯಾದ ಡಾಕ್ಟರ್ ಕೊಟ್ನಿಸ್‌ಗೆ ಇದು
ರಾಜಕಮಲಿನ ಶ್ರದ್ಧಾಂಜಲಿ
ಈ ಚಿತ್ರವು ಹೇಗೆ ವಿವಿತವಾಗಿದೆ ಎಂಬುದನ್ನು ಇಂದು
ರಾಜಕಮಲಿನಲ್ಲಿ ನೋಡಿ
ವಿಜಯಾ ಏಜನ್ಸೀಸ್ ಮೈಸೂರು.

ಹುಣಸೆ ಹಣ್ಣು ರಫ್ತಿಗೆ ಅನುಮತಿ

ಸ್ವ ಸು] ಬೆಂಗಳೂರು

ಸಂಸ್ಥಾನದಲ್ಲಿ ಹುಣಸೆ ಹಣ್ಣಿನ ದಾಸ್ತಾನು ಹೆಚ್ಚಾಗಿರುವುದರಿಂದಲೂ, ಮುಂದಿನ ಫಸಲು ಚೆನ್ನಾಗಿರುವುದರಿಂದಲೂ ಹೊರ ಪ್ರದೇಶಕ್ಕೆ ರಫ್ತು ಮಾಡಲು ಇದ್ದ ನಿರ್ಬಂಧವನ್ನು ಡಿಸೆಂಬರ್ ಅಂತ್ಯದವರೆಗೆ ತೆಗೆದುಹಾಕಲಾಗಿದೆ.

ಗ್ರಾಮ ಪಂಚಾಯಿತಿಗಳ ಅಧಿಕಾರ

ಗ್ರಾಮಾಭಿವೃದ್ಧಿ ಕಾರ್ಯಗಳಿಗಾಗಿ ಗ್ರಾಮ ಪಂಚಾಯಿತಿಗಳು ತಮ್ಮ ನಿಧಿಯನ್ನು ಉಪಯೋಗಿಸುವ ಬಗ್ಗೆ ಖಜಾನೆ ಮತ್ತು ರೆವಿನ್ಯೂ ಅಧಿಕಾರಿಗಳು ಅಡ್ಡಿ ಬರದೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆ.

ಸಂಸ್ಥಾನದಲ್ಲಿ ಬೆಲ್ಲದ ಬೆಲೆ ಹೆಚ್ಚಳ

ಬೆಲ್ಲದ ಬೆಲೆ ನಿಷ್ಕರ್ಷಿಸುವುದಕ್ಕಾಗಿ ನೇಮಕವಾಗಿದ್ದ ಉಪ ಸಮಿತಿಯು ಪೆನ್ನಿ ಮಿ|| ಸರೀಫರ ಅಧ್ಯಕ್ಷತೆಯಲ್ಲಿ ಜರುಗಿ, ಇನ್ನು ಮುಂದೆ ಬೆಲ್ಲವನ್ನು ಮಣ ೧ಕ್ಕೆ ರೂ ೬-೬-೦ ಯಂತೆ ಮಾರಬೇಕೆಂದು ನಿರ್ಧರಿಸಲಾಯಿತು. ಈ ಹೊಸ ದರ ಸಕ್ಕರೆಯ ದರಕ್ಕಿಂತ ಮಣಕ್ಕೆ ಆರು ಆಣೆ ಕಮ್ಮಿಯಾಗುವುದು.

ನೈರುತ್ಯ ಆಫ್ರಿಕ ಟ್ರಸ್ಟಿಷಿಪ್ ಅಧೀನಕ್ಕೆ

ನೈರುತ್ಯ ಆಫ್ರಿಕ ಅಂತರ್‍ರಾಷ್ಟ್ರೀಯ ಟ್ರಸ್ಟೀಷಿಪ್ಪಿಗೆ ಒಳಪಡಬೇಕು— ಎಂಬ ಭಾರತದ ನಿರ್ಣಯವು ವಿಶ್ವ ಸಂಸ್ಥೆಯಲ್ಲಿ ಬಹುಮತದಿಂದ ಅಂಗೀಕಾರವಾಯಿತು. ದಕ್ಷಿಣ ಆಫ್ರಿಕಾಕ್ಕೆ ಆ ಪ್ರದೇಶವನ್ನು ಸೇರಿಸಿಕೊಳ್ಳಬೇಕೆಂಬ ಜ|| ಸ್ಮಟ್ಸ್‌ರ ಯೋಜನೆ ಅಸ್ವೀಕೃತವಾಯಿತು

ಟಿ. ಸಿ. ನಟರಾಜ್
ಔಷಧಾಲಯ
ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.
ಅಗತ್ಯವಾಗಿ ಬೇಕಾದ ಎಲ್ಲಾ ಇಂಗ್ಲೀಷ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.
ಝಂಡೂರವರ ಆಯುರ್ವೇದೀಯ ಔಷಧಗಳೆಲ್ಲವೂ ದೊರೆಯುತ್ತವೆ.

ಆಪೇರಾ ಟಾಕೀಸ್
೭-೧೨-೪೬ ರಿಂದ
ಎರಡನೆಯ ವಾರ
ಉತ್ತಮಿ
(ತಮಿಳು)
ಕಾಳಿ ಎನ್. ರತ್ನಂ, ಟಿ. ಎಸ್. ದೊರೆರಾಜ್
ಸ್ವಾಮಿನಾಥನ್, ಟಿ. ಎಸ್. ಕೃಷ್ಣವೇಣಿ
ರಾಜಕಾಂತಂ

ಫೋ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಬುಧವಾರ ೧೧—೧೨—೪೬ [ಸಂಚಿಕೆ ೧೦೮

ಶಾಸನ ಸಭೆಯಲ್ಲಿ ಕಾಂ॥ ಪಕ್ಷದ ಸಭಾತ್ಯಾಗ

ಸರ್ಕಾರಿ ನೌಕರರ ಸಂಬಳವನ್ನು ಹೆಚ್ಚಿಸುವುದು

ಶಾಸನ ಸಭೆಯಲ್ಲಿ ಪ್ರಶ್ನೋತ್ತರ

[ಸ್ವಂ ಸು ಫೋ] ಬೆಂಗಳೂರು ೧೧

ಈ ದಿನ ಮಧ್ಯಾಹ್ನ ಶಾಸನ ಸಭೆಯಲ್ಲಿ ಸಂಸ್ಥಾನದ ಆರ್ಥಿಕ ಸ್ಥಿತಿಯನ್ನು ಪರಿಶೀಲಿಸಲು ನೇಮಿತರಾಗಿದ್ದ ಶ್ರೀ॥ ಎಂ ಸುಬ್ರಹ್ಮಣ್ಯಂ ಎಂಬ ನಿವೃತ್ತ ಮಿಲಿಟರಿ ಅಧಿಕಾರಿಗಳ ಬಗ್ಗೆ ಶ್ರೀ॥ ಎಂ. ಎ. ಗೋಪಾಲಸ್ವಾಮಿ ಅಯ್ಯಂಗಾರ್ಯರು ಪ್ರಶ್ನೆಗಳನ್ನು ಹಾಕಿದರು. ಶ್ರೀ॥ ಸುಬ್ರಹ್ಮಣ್ಯಂರವರ ನೇಮಕವಾದಂದಿನಿಂದ ಇದುವರೆವಿಗೂ ೨೩,೩೫೫ ರೂ. ವೆಚ್ಚವಾಗಿದೆ; ಅವರು ಇನ್ನೂ ತಮ್ಮ ವರದಿಯನ್ನು ಒಪ್ಪಿಸಿಲ್ಲವೆಂದು ಶಾಸನ ಕಾರ್ಯದರ್ಶಿ ಉತ್ತರಿಸುತ್ತ ಅವರ ವರದಿಯು ಯಾವಾಗ ಬರುವುದೆಂಬುದನ್ನೂ ಸಹ ಹೇಳಲು ಸಾಧ್ಯವಿಲ್ಲವೆಂದು ತಿಳಿಸಲಾಯಿತು.

ಮದ್ರಾಸ್ ಸೆಕ್ರೆಟರಿಯೇಟ್ಟಿನ ಕೆಳ ದರ್ಜೆಯ ಗುಮಾಸ್ತರಿಗೆ ೫೦-೩-೮೦ ರಂತೆಯೂ ಮೇಲ್ದರ್ಜೆಯ ಗುಮಾಸ್ತರಿಗೆ ೮೫-೫- ... ರಂತೆಯೂ ಸಂಬಳವನ್ನು ಹೆಚ್ಚಿಸಿ ಅವರುಗಳಿಗೆ ೧೦ ರೂ. ನಂತೆ ನಗರ ನಿವಾಸದ ಭತ್ಯವನ್ನು ಕೊಡುವ ಅಂಶವು ಸರ್ಕಾರದ ಗಮನಕ್ಕೆ ಗೊತ್ತಿಲ್ಲವೆಂದು ಶ್ರೀ॥ ಎಂ ಸಿ. ಲಿಂಗೇಗೌಡರ ಪ್ರಶ್ನೆಗೆ ಉತ್ತರವಾಗಿ ಪ್ರಧಾನ ಕಾರ್ಯದರ್ಶಿಗಳು ತಿಳಿಸಿದರು.

ನಾನ್ ಗೆಜೆಟೆಡ್ ನೌಕರರಿಗೆ ಸಂಬಳ ಮತ್ತು ಭತ್ಯವನ್ನು ಹೆಚ್ಚಿಸುವ ವಿಚಾರದಲ್ಲಿ ಶ್ರೀ ಸಯ್ಯದ್ ಅಬ್ದುಲ್ ರಹಮಾನ್ ರವರು ಪ್ರಶ್ನೆಗಳನ್ನು ಹಾಕಿದರು. ಈ ಅಧಿಕಾರಿಗಳು ಸರ್ಕಾರದಲ್ಲಿ ಮಾಡಿಕೊಂಡಿರುವ ಅರ್ಜಿಗಳನ್ನು ಪರಿಶೀಲಿಸಿ ಸೂಕ್ತವಾದ ಸಲಹೆಗಳನ್ನು ಒದಗಿಸಲು ಒಂದು ಸಮಿತಿಯನ್ನು ಸರ್ಕಾರದವರು ನೇಮಿಸಿರುವುದಾಗಿ ತಿಳಿಸಲಾಯಿತು.

ನ್ಯಾಯ ಇಲಾಖೆಯ ಕೆಳ ದರ್ಜೆ ಅಧಿಕಾರಿಗಳ ಸಂಬಳಗಳ ಬಗ್ಗೆ ಶ್ರೀ ಹೆಂಜಾರಪ್ಪನವರು ಹಾಕಿದ ಪ್ರಶ್ನೆಗೆ ನ್ಯಾಯಾಂಗ ಕಾರ್ಯದರ್ಶಿಗಳು ಉತ್ತರವಿತ್ತರು ಈ ವಿಚಾರದಲ್ಲಿ ಹೈಕೋರ್ಟಿನವರ ಸಲಹೆಯು ಕಳೆದ ಸೆಪ್ಟಂಬರ್ ತಿಂಗಳಲ್ಲಿ ಬಂದ ಮೇಲೆ ಸರ್ಕಾರದವರು ಆಜ್ಞೆಯೊಂದನ್ನು ಹೊರಡಿಸಿರುವುದಾಗಿ ಅವರು ತಿಳಿಸಿದರು. ಹೈಕೋರ್ಟಿನವರ ಶಿಫಾರಸಿನ ವಿವರಗಳನ್ನು ಬಹಿರಂಗ ಪಡಿಸಲಾಗುವುದಿಲ್ಲವೆಂದು ತಿಳಿಸಲಾಯಿತು. ನ್ಯಾಯಾಂಗ ಇಲಾಖೆಯನ್ನು ಆಡಳಿತಾಂಗದಿಂದ ಬೇರ್ಪಡಿಸುವ ವಿಷಯವಾಗಿ ಶ್ರೀ ಕೆ. ಆರ್. ಶ್ರೀನಿವಾಸನ್ ರವರು ಪ್ರಶ್ನೆಗಳನ್ನು ಹಾಕಿದರು. ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆಯೆಂದೂ ಮದರಾಸಿನಲ್ಲಿ ಇದಕ್ಕಾಗಿ ಒಂದು ಸಮಿತಿಯನ್ನು ನೇಮಿಸಿರುವ ವಿಷಯವು ಸರ್ಕಾರದ ಗಮನದಲ್ಲಿದೆಯೆಂದೂ ನ್ಯಾಯಾಂಗ ಕಾರ್ಯದರ್ಶಿಗಳು ತಿಳಿಸಿದರು ಇನ್ನೂ ಎಷ್ಟು ದಿವಸ ಪರ್ಯಾಲೋಚನೆ ನಡೆಯಬೇಕೆಂದು ಕೇಳಿದಾಗ ಸ್ವಲ್ಪ ದಿನದೊಳಗೆ ಉತ್ತರ ಬಂದಿತು.

ನಿಲುವಳಿ ನಿರ್ಣಯ

ಭಾರತ ರಾಜ್ಯಾಂಗ ಸಭೆಯ ಪ್ರಾರಂಭದಲ್ಲಿ ಮೈಸೂರಿನ ಪ್ರತಿನಿಧಿಗಳು ಭಾಗವಹಿಸಲು ಅವಕಾಶ ಕಲ್ಪಿಸಲ್ಪಡದೆ ಇರುವ ವಿಷಯದಲ್ಲಿ ಶ್ರೀ ಟಿ. ಮರಿಯಪ್ಪನವರು ಒಂದು ನಿಲುವಳಿ ನಿರ್ಣಯವನ್ನು ಮಂಡಿಸಿದರು. ಈ ಸಂಬಂಧವಾಗಿ ನಿರ್ಣಯಗಳು ಬಂದಿವೆಯೆಂದೂ, ಅಲ್ಲದೆ ನಿನ್ನೆ ಪ್ರಶ್ನೋತ್ತರ ಸಮಯದಲ್ಲಿ ಸರ್ಕಾರದವರು ಎಲ್ಲಾ ವಿವರಗಳನ್ನೂ ತಿಳಿಸಿರುವರೆಂದೂ ಆದುದರಿಂದ ಈ ನಿರ್ಣಯಕ್ಕೆ ಅವಕಾಶ ಕೊಡಬಾರದೆಂದು ಪ್ರಧಾನ ಕಾರ್ಯದರ್ಶಿಗಳು ಸೂಚಿಸಿದರು ಸಭೆಗೆ ಇರುವ ಅಲ್ಪ ಕಾಲಾವಧಿಯಲ್ಲಿ ಈ ಬಗ್ಗೆ ಬಂದಿರುವ ಸಾಮಾನ್ಯ ನಿರ್ಣಯವನ್ನು ಚರ್ಚಿಸಲು ಅವಕಾಶ ದೊರೆಯದೇ ಹೋಗಬಹುದೆಂದೂ ಮತ್ತು ಪ್ರಾರಂಭದ ಸಭೆಯಲ್ಲಿ ಮೈಸೂರಿನ ಪ್ರಾತಿನಿಧ್ಯವು ಇಲ್ಲದಿರುವ ರೀತಿಯನ್ನು ಪರಿಶೀಲಿಸುವುದರಿಂದಲೂ ಈ ನಿರ್ಣಯಕ್ಕೆ ಅವಕಾಶವಿತ್ತಿರುವುದಾಗಿ ಅಧ್ಯಕ್ಷರು ತಿಳಿಸಿದರು. ಈ ಸಂಜೆ ನಾಲ್ಕು ಗಂಟೆಗೆ ಅದು ಚರ್ಚೆಗೆ ಬರಲಿದೆ.

ಮಸೂದೆಗಳು

ಅನಂತರ ಸರ್ಕಾರದವರು ತಂದಿದ್ದ ಮಸೂದೆಗಳನ್ನು ತೆಗೆದುಕೊಳ್ಳಲಾಯಿತು ಪವರ್ ಆಲ್ಕೋಹಾಲ್ ತಿದ್ದುಪಡಿ ಮಸೂದೆಯನ್ನು ಡೆವಲಪ್‌ಮೆಂಟ್ ಕಾರ್ಯದರ್ಶಿ ಶ್ರೀ॥ ನರೋನ್ಹಾ ರವರು ಮಂಡಿಸಿದರು. ಶ್ರೀ॥ ಟಿ. ಮರಿಯಪ್ಪನವರು ಅದನ್ನು ಮೊದಲು ವಿರೋಧಿಸಿ ಮಾತನಾಡಿದರು ಇಡೀ ಪ್ರಪಂಚದಲ್ಲೆಲ್ಲಾ ಹೊಸ ಯುಗದ ಬೆಳಕು ಉದಯಿಸುತ್ತಿದೆ ಸ್ವಾತಂತ್ರ್ಯದ ವಾತಾವರಣದಲ್ಲಿ ಎಲ್ಲ ದೇಶಗಳೂ ಮಗ್ನವಾಗಿವೆ ಆದರೆ ನಮ್ಮಲ್ಲಿ ಈ ಪರಿಸ್ಥಿತಿಯು ಉಂಟಾಗಿಲ್ಲ ಪ್ರಜಾ ಪ್ರತಿನಿಧಿ ಸಭೆಯಲ್ಲಿ ನಾಲ್ಕು ಮಸೂದೆಗಳು ಪ್ರಜಾ ಪ್ರಮುಖರ ಬೆಂಬಲವಿಲ್ಲದೆ ಬಿದ್ದುಹೋದುವು ಅವುಗಳನ್ನು ಮತ್ತೆ ಸರ್ಕಾರದವರು ಈ ಸಭೆಯಲ್ಲಿ ತಂದಿದ್ದಾರೆ ಅಧಿಕಾರ ವರ್ಗದ ಗುಂಪಿನವರ ಬೆಂಬಲದಿಂದ ಅವರು ಹೀಗೆ ಮಾಡುವರೆಂದು ಕಾಣುತ್ತದೆ ಆದರೆ ಈ ನೀತಿಯು ಉಚಿತವಾದುದಲ್ಲ- ಎಂದು ಹೇಳಿದರು

ಶ್ರೀ॥ ಓ ಮಹದೇವಯ್ಯನವರು ಇದರ ಮೇಲೆ ಒಂದು ಕ್ರಿಯಾ ಲೋಪವನ್ನೆತ್ತಿದರು. ವಿರೋಧ ಪಕ್ಷದವರು ಸರ್ಕಾರದ ಮೇಲೆ ಟೀಕೆ ಮಾಡುವ ಉದ್ದೇಶದಿಂದ ಸಮಯ ಸಿಕ್ಕಿದಾಗಲೆಲ್ಲಾ ರಾಜಕೀಯ ವ್ಯಾಖ್ಯಾನಗಳನ್ನು ಮಾಡಲು ತೊಡಗುವರೆಂದೂ, ಇದಕ್ಕೆ ಅವಕಾಶ ಕೊಡಕೂಡದೆಂದೂ ಅವರು ತಿಳಿಸಿದರು ಮಸೂದೆಗಳನ್ನು ಇತರ ವಿಷಯಗಳನ್ನು ಪರಿಶೀಲಿಸುವಾಗ ಸರ್ಕಾರದ ರೀತಿ ನೀತಿಗಳನ್ನು ವಿಮರ್ಶಿಸುವುದು ಎಲ್ಲ ದೇಶಗಳಲ್ಲಿಯೂ ಅಂಗೀಕೃತವಾದ ರಾಜನೀತಿಯೆಂದು ಅಧ್ಯಕ್ಷರು ತಿಳಿಸಿ ಕ್ರಿಯಾ ಲೋಪವನ್ನು ತಳ್ಳಿಹಾಕಿದರು

ಹರಿಕಥೆ

ಮೈಸೂರು ೧೧

ನಾಳೆ ರಾತ್ರಿ ಒಂಭತ್ತು ಘಂಟೆಗೆ ಡಿ.ಸುಬ್ಬಯ್ಯ ರೋಡಿನಲ್ಲಿರುವ ಸಾಧ್ವಿ ಆಫೀಸ್ ಮಹಡಿ ಮೇಲೆ ಪಾಲಘಾಟಿನ ಸುಪ್ರಸಿದ್ಧ ಹರಿಕಥಾ ವಿದ್ವಾಂಸರಾದ 'ಕೀರ್ತನ ಪಟು' ವೇ॥ ಬ್ರ॥ ಗಣಪತಿ ಭಾಗವತರು "ದ್ರೌಪದಿ ಮಾನ ಸಂರಕ್ಷಣಂ" ಎಂಬ ಹರಿಕಥೆಯನ್ನು ತಮಿಳಿನಲ್ಲಿ ನಡೆಸುವರು ಸರ್ವರಿಗೂ ಸ್ವಾಗತವಿದೆ.

ಡೆಹಲಿಗೆ ಪ್ರಯಾಣ

ರಾಜಧಾನಿಯ ಶ್ರೀ॥ ಎಸ್ ತಿಮ್ಮರಾಯಪ್ಪನವರು ಸದ್ಯದಲ್ಲಿಯೇ ದೆಹಲಿಗೆ ತೆರಳಿ ತಮ್ಮ ಅಹವಾಲುಗಳನ್ನು ಭಾರತದ ನಾಯಕರುಗಳ ಮುಂದೆ ಇಡಬೇಕೆಂದು ಪ್ರಯತ್ನಪಟ್ಟಿರುತ್ತಾರೆ ಇದಕ್ಕಾಗಿ ಅವರಿಗೆ ಮಹಾ ಜನರು ಉದಾರ ಸಹಾಯ ಮಾಡಬೇಕೆಂದು ಕೋರಲಾಗಿದೆ

ಪೋಲೀಸಿನವರನ್ನು ಜಾಮೀನಿನ ಮೇಲೆ ಬಿಡಲಾಯಿತು

ಸರ್ಕಾರೀ ಆಹಾರ ಡಿಪೋವಿನಿಂದ ಅಕ್ಕಿ ಮೂಟೆಗಳನ್ನು ಅಪಹರಿಸಿದರೆಂದು ಆಪಾದನೆಯಾಗಿದ್ದ ನಾರಾಯಣರಾಜು ಮತ್ತು, ಕೃಷ್ಣರಾಜು ಎಂಬಿಬ್ಬ ಪೋಲೀಸರನ್ನು ನಿನ್ನೆ ದಿನ ಜಾಮೀನಿನ ಮೇಲೆ ಬಿಡಲಾಯಿತು ಕೇಸನ್ನು ೧೮ ನೇ ತಾ॥ ಗೆ ಮುಂದುವರಿಸಿದೆ

ಸ್ಪೇನಿನ ಮೇಲೆ ಬಹಿಷ್ಕಾರ

ಸಂಯುಕ್ತ ರಾಜ್ಯಾಂಗ ಸಭೆಯ ಸದಸ್ಯ ದೇಶಗಳು ಮೆಡ್ರಿಡ್ಡಿನಲ್ಲಿರುವ ತಮ್ಮ ರಾಯಭಾರಿಗಳನ್ನು ಹಿಂದಕ್ಕೆ ಕರೆಸಿಬಿಡಬೇಕೆಂದು ರಾಜಕೀಯ ಸಮಿತಿಯಲ್ಲಿ ಬೆಲ್ಜಿಯಂ ದೇಶವು ತಂದ ಸೂಚನೆಯು ೨೭-೭ ಓಟುಗಳಿಂದ ಅಂಗೀಕೃತವಾಯಿತು.

ಜಗತ್ತನ್ನೆಲ್ಲಾ ಗುಲಾಮಗಿರಿಗೆ ತಳ್ಳುವುದೇ ಸಂಯುಕ್ತ ಜನಾಂಗಗಳ ಸಂಸ್ಥೆಯ ಗುರಿಯೆಂದೂ, ಸ್ಪೇನಿನ ವಿಚಾರದಲ್ಲಿ ವಿದೇಶಿಯರು ಕೈ ಹಾಕುತ್ತಿರುವುದು ಖಂಡನೀಯವಾದುದೆಂದೂ ಜ॥ ಫ್ರಾಂಕೋರವರು ಪ್ರತಿಭಟಿಸಿದ್ದಾರೆ

○ಪಾ॥ ಜಿನ್ನಾರವರು ಇದೇ ೧೫ ನೇ ತಾರೀಕು ಭಾನುವಾರ ಲಂಡನ್ನಿನಿಂದ ಭಾರತಕ್ಕೆ ವಾಪಸು ಆಗಮಿಸುವರು. ಪ್ರಯಾಣ ಕೈಗೊಳ್ಳುವುದಕ್ಕೆ ಪೂರ್ವಭಾವಿಯಾಗಿ ಅವರು ಪತ್ರಿಕಾ ಸಮ್ಮೇಳನವನ್ನು ನಡೆಸುವರು

LATEST NEWS

ಶಾಸನ ಸಭೆಯಲ್ಲಿ ಸಭಾ ಪರಿತ್ಯಾಗ

ಸ್ವಂ ಸು. ಫೋ] ಬೆಂಗಳೂರು ೧೧

ಪ್ರ॥ ಪ್ರ॥ ಸಭೆಯಲ್ಲಿ ಬಹು ಮತದ ವಿರೋಧದಿಂದ ಬಿದ್ದುಹೋದ ಮಸೂದೆಗಳನ್ನು ಶಾಸನ ಸಭೆಯಲ್ಲಿ ಅಧಿಕಾರಿ ವರ್ಗದ ಗುಂಪಿನ ಸಹಾಯದಿಂದ ಮಂಜೂರು ಮಾಡಿಸುವ ಉದ್ದೇಶದಿಂದ ಈ ಸಭೆಯಲ್ಲಿ ತಂದಿರುವುದಕ್ಕಾಗಿ ಪ್ರತಿಭಟನೆಯನ್ನು ಸೂಚಿಸಲು ಈ ದಿನ ಕಾಂಗ್ರೆಸ್ ಪಕ್ಷದವರು ಸಭಾ ಪರಿತ್ಯಾಗ ಮಾಡಿದರು. ಆಡಳಿತ ನೀತಿಯನ್ನು ಪ್ರಜಾಪ್ರಭುತ್ವ ತತ್ವಗಳಿಗೆ ಅನುಗುಣವಾಗಿ ಬೆಳೆಸಲಾಗುವುದೆಂದು ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿರುವ ತತ್ವಕ್ಕೆ ಸರ್ಕಾರದವರ ಇಂದಿನ ನೀತಿಯು ವ್ಯತಿರೇಕವಾಗಿದೆಯೆಂದು ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಟಿ ಮರಿಯಪ್ಪನವರು ತಮ್ಮ ಭಾಷಣದಲ್ಲಿ ಸೂಚಿಸಿ ಇಂತಹ ಮಸೂದೆಗಳಿಗೆ ನಾವು ಸಹಕಾರ ನೀಡುವುದಿಲ್ಲವೆಂದು ಹೇಳಿ ಸಭೆಯನ್ನು ಪರಿತ್ಯಜಿಸಿದರು ಅವರೊಡನೆ ಕಾಂಗ್ರೆಸ್ ಪಕ್ಷದವರೆಲ್ಲರೂ ಸಹ ಹೊರಟರು

ಅನಂತರ ಸರ್ಕಾರದವರು ಮಂಡಿಸಿದ ನಾಲ್ಕು ಮಸೂದೆಗಳೂ ವಿಶೇಷ ಚರ್ಚೆಯಿಲ್ಲದೆ ಸುಮಾರು ಒಂದು ಗಂಟೆ ಕಾಲದೊಳಗೆ ಮಂಜೂರಾದುವು. ೧) ಪವರ್ ಆಲ್ಕೋಹಾಲ್ ತಿದ್ದುಪಡಿ, ೨) ಯುದ್ಧ ಪರಿಸ್ಥಿತಿಯ ಸಂಬಂಧದಿಂದ ಉಂಟಾದ ಖಾಲಿ ಬೇಸಗಳಿಗೆ ವಿನಾಯಿತಿ ಕೊಡುವುದು, ೩) ಎ. ಆರ್ ಪಿ ಮೋಟಾರ್ ಡ್ರೈವರುಗಳು ಮತ್ತು ವಿದೇಶಿಯರುಗಳ ರಿಜಿಸ್ಟ್ರೇಷನ್ ಮುಂತಾದ ಶಾಸನಗಳ ರದ್ದು ಪಡಿ, ೪) ಮೋಟಾರ್ ಶಾಸನ ಮತ್ತು ರಸ್ತೆ ಸಂಚಾರದ ನಾಲ್ಕನೆ ತಿದ್ದುಪಡಿ-ಇವುಗಳಿಗೆ ಸಂಬಂಧಪಟ್ಟ ೪ ಮಸೂದೆಗಳು ಅಂಗೀಕರಿಸಲ್ಪಟ್ಟವು

ಮೈಸೂರು ಸರ್ಕಾರದ ಹೊಸ ಸಾಲ

ಇತ್ತೀಚೆಗೆ ಮೈಸೂರು ಸರ್ಕಾರದವರು ಶೇ॥ ೩ ರಂತೆ ಸಾಲವನ್ನು ತೆಗೆದುಕೊಂಡಿರುವ ನೀತಿಯ ಬಗ್ಗೆ ಚರ್ಚಿಸಲು ಶ್ರೀ ಎಚ್ ಎಸ್. ರುದ್ರಪ್ಪನವರು ಒಂದು ನಿಲುವಳಿ ನಿರ್ಣಯವನ್ನು ನಿನ್ನೆ ದಿನ ಶಾಸನ ಸಭೆಯಲ್ಲಿ ಮಂಡಿಸಿದ್ದರು. ಅದರ ಮೇಲೆ ಚರ್ಚೆ ನಡೆದು ಬ್ಯಾಂಕುಗಳೂ ಮತ್ತು ಸೊಸೈಟಿಗಳೇ ೩ ಕ್ಕಿಂತ ಕಡಿಮೆ ದರದಲ್ಲಿ ಡಿಪಾಜಿಟ್ಟುಗಳನ್ನು ತೆಗೆದುಕೊಳ್ಳುತ್ತಿರುವಾಗ ಸರ್ಕಾರದವರು ಇಷ್ಟು ಹೆಚ್ಚು ಬಡ್ಡಿಯನ್ನು ಕೊಟ್ಟು ಸಾಲ ತೆಗೆದಿರುವುದನ್ನು ಖಂಡಿಸಲಾಯಿತು. ಈ ಸಾಲವನ್ನು ಸಂಗ್ರಹಿಸಲು ದಳ್ಳಾಳಿಗಳನ್ನು ನೇಮಿಸಿರುವುದನ್ನೂ ಸಹ ಖಂಡಿಸಲಾಯಿತು

ಕೇಂದ್ರ ಸರ್ಕಾರದಲ್ಲಿಯೂ ಇತರ ಕಡೆಗಳಲ್ಲಿಯೂ ಇದೇ ತರಹದ ಸಾಲಗಳನ್ನು ಎತ್ತಿದಾಗ ಮಾರ್ಕೆಟಿನಲ್ಲಿ ಧಾರಣೆಯಾಗಿದೆ ರಿಸರ್ವ್ ಬ್ಯಾಂಕಿನವರು ಧಾರಣೆ ಮಾಡಬೇಕಾಯಿತೆಂದೂ ಈಗ ಮೈಸೂರಿನಲ್ಲಿ ಹಾಗೆ ಆಗಲಾರದೆಂಬ ಉದ್ದೇಶದಿಂದ ಈ ಸಾಲವನ್ನು ಎತ್ತಲಾಗಿದೆಯೆಂದು ಉತ್ತರ ಕೊಡಲಾಯಿತು. ಓಟಿನ ಮೇಲೆ ನಿಲುವಳಿ ನಿರ್ಣಯವು ಬಿದ್ದುಹೋಯಿತು

ಸಾಧ್ವಿ

ತಾ|| ೧೧-೧೨-೪೬ ಬುಧವಾರ

ದ|| ಆಫ್ರಿಕದ ಭಾರತೀಯರ ವಿಜಯ

ಸಂಯುಕ್ತ ರಾಷ್ಟ್ರಗಳ ಸಭೆಯಲ್ಲಿ ದಕ್ಷಿಣ ಆಫ್ರಿಕದ ಭಾರತೀಯರ ಪ್ರಶ್ನೆಯು ಕಟ್ಟಕಡೆಯದಾಗಿ ತೀರ್ಮಾನವಾಗಿದೆ. ಹಾಜರಿದ್ದ ಒಟ್ಟು ಸದಸ್ಯರ ಸಂಖ್ಯೆಯಲ್ಲಿ ಮೂರನೇ ಎರಡು ಭಾಗಕ್ಕಿಂತ ಹೆಚ್ಚಿನವರು ಭಾರತದ ಪಕ್ಷವನ್ನೇ ಎತ್ತಿ ಹಿಡಿದರು. ಕೆಲವು ದಿನಗಳ ಹಿಂದೆ ಆ ಸಭೆಯ ರಾಜಕೀಯ ಸಮಿತಿಯವರು ಅಂಗೀಕರಿಸಿದ್ದ ನಿರ್ಣಯವು ಇಡೀ ಸಭೆಯಲ್ಲಿ ಈಗ ಮಂಜೂರಾಗಿರುತ್ತದೆ.

ಭಾರತೀಯರ ಹಕ್ಕುಬಾಧ್ಯತೆಗಾಗಿ ಈಚೆಗೆ ನಡೆದಿರುವ ಪ್ರಯತ್ನಗಳಲ್ಲಿ ಇದು ಬಹಳ ಪ್ರಾಮುಖ್ಯವಾದುದು. ಬ್ರಿಟನ್, ಅಮೆರಿಕ, ಕೆನಡ ಮುಂತಾದ ರಾಷ್ಟ್ರಗಳು ಭಾರತಕ್ಕೆ ವಿರುದ್ಧವಾಗಿ ವರ್ತಿಸಿದರೂ, ರಾಜಕೀಯ ಸಮಿತಿಯಲ್ಲಿ ನಿರ್ಣಯವು ಅಂಗೀಕಾರವಾದುದು ಎಲ್ಲರಿಗೂ ಸಮಾಧಾನವನ್ನುಂಟುಮಾಡಿತ್ತು. ಆದರೆ ಸಂಯುಕ್ತ ರಾಷ್ಟ್ರಗಳ ಸಭೆಯಲ್ಲಿ ಅದು ಮಂಜೂರಾಗಲು ಮೂರನೇ ಎರಡರಷ್ಟು ಬಹುಮತವು ಬೇಕಾಗಿದ್ದುದರಿಂದ ಅದು ಅಂಗೀಕಾರವಾಗುವ ವಿಷಯದಲ್ಲಿ ಅನೇಕರಿಗೆ ಕುತೂಹಲವು ಉಂಟಾಗಿದ್ದಿತು. ಆದರೆ ಭಾರತದ ಪ್ರತಿನಿಧಿಗಳು ಸಭೆಯಲ್ಲಿ ನಡೆಸಿರುವ ಪ್ರಚಾರದ ಪ್ರಭಾವವು ಇಡೀ ಸಭೆಯ ಮೇಲೆ ಒಳ್ಳೆಯ ಪರಿಣಾಮವನ್ನು ಉಂಟುಮಾಡಿತು. ನಿರ್ಣಯವು ಅಂಗೀಕಾರವಾಯಿತು. ಇದು ಭಾರತೀಯರಿಗೆ ಉಂಟಾದ ದ್ವಿತೀಯ ದಿಗ್ವಿಜಯ.

ಹದಿನೈದು ರಾಷ್ಟ್ರಗಳು ಇನ್ನೂ ಭಾರತಕ್ಕೆ ವಿರೋಧವಾಗಿಯೇ ಇವೆಯೆಂಬುದು ವಿಷಾದದ ಸಂಗತಿ. ರಷ್ಯ ಮುತ್ತು ಇತರ ರಾಷ್ಟ್ರಗಳು ಎಂದಿನಂತೆ ವರ್ಣಭೇದದ ನೀತಿಯನ್ನು ಪ್ರತಿಭಟಿಸಿ, ಅದರ ಮೇಲೆ ತಮ್ಮ ಗದಾ ಪ್ರಹಾರವನ್ನು ಮಾಡಿರುವುದು ಪ್ರಶಂಸನೀಯವಾಗಿದೆ. ಅವರೆಲ್ಲರೂ ಭಾರತೀಯರ ಕೃತಜ್ಞತೆಗೆ ಪಾತ್ರರು. ವಿರೋಧಿಗಳೂ ಸಹ ಉತ್ತರೋತ್ತರ ತಮ್ಮ ದೃಷ್ಟಿ ಪಥವನ್ನು ಮಾರ್ಪಡಿಸಿ ಸಂಕುಚಿತ ಮನೋಭಾವನೆಯನ್ನು ತ್ಯಜಿಸಿ ಸಕಲ ಮಾನವರ ಸಮಾನ ಹಕ್ಕು ಬಾಧ್ಯತೆಗಳಿಗಾಗಿ ತಾವೂ ಸಹ ಹೋರಾಡುವರೆಂಬುದನ್ನು ತೋರ್ಪಡಿಸಬೇಕೆಂದು ಆಶಿಸಬೇಕಾಗಿದೆ.

ದಕ್ಷಿಣ ಆಫ್ರಿಕದ ಸರ್ಕಾರದವರು ನಿರ್ಣಯವನ್ನು ಸೋಲಿಸಲು ಮಾಡಿದ ಚತುರೋಪಾಯಗಳೆಲ್ಲವೂ ನಿರರ್ಥಕವಾದುವು. ತಮ್ಮ ವರ್ತನೆಗನ್ನು ಸಭೆಯು ಖಂಡಿಸಿರುವುದು. ಇನ್ನು ಮುಂದಾದರೂ ಜನರಲ್ ಸ್ಮಟ್ಸರವರು, ಅವರ ಮಂತ್ರಿಮಂಡಲದವರೂ, ಭಾರತೀಯರ ಬಗ್ಗೆ ತಮ್ಮ ವರ್ತನೆಯನ್ನು ಸರಿಪಡಿಸಿಕೊಂಡು ಪ್ರಪಂಚದಲ್ಲಿ ಇಂತಹ ವರ್ಣಭೇದದ ಪ್ರಶ್ನೆಯು ಏಳದ ಹಾಗೆ ಮಾಡಲೆಂದು ಹಾರೈಸೋಣ.

Edited, printed and published by A. R. Nagarajan at the Sadhvi Press D. Subbiah Road, Mysore

ಆಜಾದ್, ಶರತ್ ಬೋಸರಿಗೆ ಮಂತ್ರಿ ಪದವಿಯೇ?

ಮಿ|| ಆಸಫ್ಅಲಿಯವರು ಅಮೆರಿಕಾ ಸಂಯುಕ್ತ ಸಂಸ್ಥಾನದ ರಾಯಭಾರಿಗಳಾಗಿ ಹೋಗುವುದರಿಂದ ಅವರ ಸ್ಥಾನದಲ್ಲಿ ಮೌಲಾನಾ ಆಜಾದರೂ, ಡಾ|| ರಾಜೇಂದ್ರ ಪ್ರಸಾದರು ರಾಜ್ಯಾಂಗ ರಚನಾ ಸಭೆಯ ಅಧ್ಯಕ್ಷರಾಗಿ ಚುನಾಯಿತರಾಗಿರುವುದರಿಂದ, ಅವರ ಸ್ಥಾನದಲ್ಲಿ ಶ್ರೀ ಶರತ್‌ಚಂದ್ರ ಬೋಸರೂ ನೇಮಕ ಮಾಡಲ್ಪಡುವ ಸಂಭವಗಳಿವೆಯೆಂದು ವರದಿಯಾಗಿದೆ.

ಬ್ರಿಟಿಷ್ ಹೇಳಿಕೆಯಲ್ಲಿ ವ್ಯತ್ಯಾಸವಿದೆ

" ಬ್ರಿ|| ಸರ್ಕಾರದವರು ಹೊರಡಿಸಿರುವ ಹೇಳಿಕೆಯ ಕರಡು ಪತ್ರಿಕೆಯನ್ನು ಲಂಡನ್ನಿನಲ್ಲಿ ನನಗೆ ಓದಿ ಹೇಳಲಾಯಿತು. ನಾನು ಅದನ್ನು ವಿಮಾನದಲ್ಲಿ ಓದಿದೆ. ಕರಡು ಪ್ರತಿಗೂ ಪ್ರಕಟವಾಗಿದ್ದ ಹೇಳಿಕೆಗೂ ವ್ಯತ್ಯಾಸವಿದೆಯಲ್ಲದೆ ಕೊನೇ ಭಾಗವನ್ನು ಸೇರಿಸಲಾಗಿದೆ. ಈ ವಿಚಾರ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಚರ್ಚೆಗೆ ಬರಲಿದೆ " ಎಂದು ಪಂ|| ನೆಹರೂರವರು ಹೇಳಿಕೆ ಇತ್ತಿದ್ದಾರೆ.

ಪಾಕಿಸ್ತಾನ ದಕ್ಕಿತು

ಬ್ರಿ|| ಸರ್ಕಾರವು ಇತ್ತೀಚೆಗೆ ಕೊಟ್ಟಿರುವ ಹೇಳಿಕೆಯಿಂದ ಪಾಕಿಸ್ಥಾನದ ಹೆಸರೆತ್ತಿಲ್ಲದಿದ್ದರೂ ಅದರ ತಿರುಳು ದಕ್ಕಿದಂತಾಗಿದೆ. ಕಾಂಗ್ರೆಸ್ ಇದಕ್ಕೆ ಒಪ್ಪಿದರೆ ಲೀಗು ಈ ಹೇಳಿಕೆಯನ್ನೇ ಆಧಾರವಾಗಿಟ್ಟುಕೊಂಡು ಬಿ ಮತ್ತು ಸಿ ಭಾಗಗಳು ಪೂರ್ವ ಮತ್ತು ಪಶ್ಚಿಮ ಭಾಗಗಳಾಗಿ ಎರಡು ಪಾಕಿಸ್ಥಾನ ಸ್ಥಾಪನೆಯಾದಂತಾಗುವುದು ಎಂದು ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರು ಹೇಳಿಕೆ ಇತ್ತಿದ್ದಾರೆ.

ರಾಜ್ಯಾಂಗ ಸಭೆಯ ಸಂಖ್ಯೆ

ರಾಜ್ಯಾಂಗ ಸಭೆಯಲ್ಲಿ ೩೦೫ ಸದಸ್ಯರಿದ್ದಾರೆ. ಕಾಂಗ್ರೆಸ್ ಮತ್ತು ಕಾಂಗ್ರೆಸ್ಸಿನಿಂದ ಸೂಚಿತವಾಗಿ ಚುನಾಯಿತರಾಗಿರುವವರ ಸಂಖ್ಯೆ ೨೨೧. ಡಾ|| ಅಂಬೇಡ್ಕರ್ ಮತ್ತು ಕಮ್ಯೂನಿಸ್ಟ್ ಪಕ್ಷದ ಶ್ರೀ ಸೋಮನಾಥಲಹರಿ ಮಾತ್ರ ಸ್ವತಂತ್ರ ಸದಸ್ಯರು. ೭೫ ಮಂದಿ ಲೀಗ್ ಸದಸ್ಯರು. ಸಂಸ್ಥಾನಗಳಿಂದ ೯೩ ಮಂದಿ ಆರಿಸಲ್ಪಡಬೇಕಾಗಿದೆ.

ಈಜಿಪ್ಟಿನಲ್ಲಿ ಹೊಸ ಮಂತ್ರಿಮಂಡಲ

ಪ್ರಧಾನಿ ಸಿದ್ಧಿಕಿ ಪಾಷಾರವರು ರಾಜೀನಾಮೆ ಇತ್ತಿದ್ದರಿಂದ ಸಾದಿಸ್ಟ್ ಪಕ್ಷದ ನಾಯಕರಾದ ಮಿ|| ನಕ್ರೋಷಿ ಪಾಷಾರವರು ಈಜಿಪ್ಟಿನ ಹೊಸ ಮಂತ್ರಿಮಂಡಲವನ್ನು ರಚಿಸಿರುವರು. ಇವರು ಬ್ರಿಟನ್ನಿನೊಡನೆ ಒಪ್ಪಂದ ಮಾಡಿಕೊಳ್ಳುವ ಕಾರ್ಯವನ್ನು ಕೂಡಲೇ ಕೈಗೊಳ್ಳಲಿದ್ದಾರೆಂದು ವರದಿಯಾಗಿದೆ.

ಮುಂದಿನ ತಿಂಗಳಲ್ಲಿ ಸ್ಟ್ಯಾಲಿನ್ ನಿವೃತ್ತರಾಗುವರೇ?

ಕಮ್ಯೂನಿಸ್ಟ್ ಕೇಂದ್ರದಲ್ಲಿ ಉಂಟಾಗಿರುವ ಭಿನ್ನಾಭಿಪ್ರಾಯಗಳ ಫಲವಾಗಿ ಜೆ. ಸ್ಟ್ಯಾಲಿನರವರು ಮುಂದಿನ ತಿಂಗಳಲ್ಲಿ ನಿವೃತ್ತರಾಗಬಹುದೆಂದು ಸುದ್ದಿ ಹೊರಬಿದ್ದಿದೆ.

ಸಹಣಿ ಮಾರ್ಪಾಟಾಗಬೇಕು

ಕಾಂ|| ಕಾರ್ಯಕಾರೀ ಸಮಿತಿಯ ನಿರ್ಣಯ

ಸ್ವಂ. ಸು.] ಬೆಂಗಳೂರು ೧೦

ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಶ್ರೀ ಕೆ. ಚೆಂಗಲರಾಯರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆದು ಈಚೆಗೆ ಹೆಚ್ಚಿಗೆ ಮಳೆ ಉಂಟಾಗಿ ಪೈರುಗಳಿಗೆ ತೊಂದರೆಯಾಗಿರುವುದರಿಂದ ಕ್ಯಾನುಭೋಗರುಗಳು ಬರೆಸಿರುವ ಸಹಣಿ ಲೆಕ್ಕವನ್ನು ಮಾರ್ಪಡಿಸಿ ಬರುವ ವರ್ಷಕ್ಕೆ ಆಹಾರದ ಅಭಾವವು ಉಗ್ರರೂಪವನ್ನು ತಾಳಲಿರುವುದರಿಂದ ಸರ್ಕಾರವು ಎಚ್ಚರಿಕೆಯ ಕಾರ್ಯಕ್ರಮವನ್ನು ತೆಗೆದುಕೊಂಡು ಹೊರಗಡೆಯಿಂದ ಆಹಾರವನ್ನು ಹೆಚ್ಚಿಗೆ ತರಿಸಲು ಏರ್ಪಾಡು ಮಾಡುವುದಲ್ಲದೆ, ನಮ್ಮ ದೇಶದಲ್ಲಿ ಹೆಚ್ಚು ಬೆಳೆ ಬೆಳೆಯುವುದಕ್ಕೆ ಪ್ರೋತ್ಸಾಹ ಕೊಡಬೇಕೆಂದೂ, ಇಂತಹ ಪರಿಸ್ಥಿತಿಯಲ್ಲಿ ಸಾರ್ವಜನಿಕರು ಸಹಕರಿಸಬೇಕೆಂದೂ ಕೋರುವ ನಿರ್ಣಯವನ್ನು ಮಾಡಿರುವರು.

* ಶ್ರೀ ಪಿ. ಹೆಚ್. ನಾಗಪ್ಪನವರನ್ನು ಗಣಿತ ಶಾಸ್ತ್ರದ ಪ್ರೊಫೆಸರನ್ನಾಗಿ ಬಡ್ತಿ ಮಾಡಲಾಗಿದೆ.

ಕಮ್ಯೂನಿಸ್ಟರ ಮೇಲೆ ಪ್ರತಿಬಂಧಕ

ಸಂಸ್ಥಾನದ ಕಮ್ಯೂನಿಸ್ಟ್ ಸಂಘವನ್ನು ನ್ಯಾಯಬಾಹಿರ ಸಂಸ್ಥೆಯೆಂದು ಹೈದರಾಬಾದಿನ ಸರ್ಕಾರವು ಆಜ್ಞೆಯೊಂದನ್ನು ಹೊರಡಿಸಿದೆ.

ಅಟೆಂಡರುಗಳ ಸಂಬಳ ಹೆಚ್ಚಬೇಕು

ತಾಲ್ಲೂಕು ಆಫೀಸಿನಲ್ಲಿ ೧೫ ರೂ. ಸಂಬಳಕ್ಕಿರುವ ಆರ್. ಆರ್. ಅಟೆಂಡರುಗಳೂ ಸಬ್ ರಿಜಿಸ್ಟ್ರಾರರವರ ಆಫೀಸಿನಲ್ಲಿರುವ ೧೫ ರೂ. ಸಂಬಳದ ಅಟೆಂಡರುಗಳೂ ಸಹಾ ಅದೇ ಸಂಬಳದಲ್ಲಿ ೧೦ ವರ್ಷದ ಮೇಲೆ ಸರ್ವಿಸ್ ಮಾಡಿದ್ದಾಗ್ಯೂ ಬಡ್ತಿ ಇಲ್ಲದೆ ಅದೇ ಸಂಬಳದಲ್ಲಿ ಇರುವುದು ಅನ್ಯಾಯವೆಂದು ೧೯೪೧ ನೇ ಸಾಲಿನಲ್ಲಿ ಸರ್ಕಾರದ ಗಮನಕ್ಕೆ ನ್ಯಾಯ ವಿಧಾಯಕ ಸಭೆಯಲ್ಲಿ ತಂದದ್ದರ ಮೇಲೆ ಸರ್ಕಾರದವರು ಅನುಕೂಲವಾದ ವಾಗ್ದಾನವನ್ನು ಮಾಡಿದರು. ಪುನಃ ೧೯೪೩ ನೇ ಸಾಲಿನಲ್ಲಿ ಪ್ರಜಾಪ್ರತಿನಿಧಿಗಳು ಇದೇ ವಿಚಾರವನ್ನು ಪ್ರತಿನಿಧಿ ಸಭೆಯಲ್ಲಿ ಸರ್ಕಾರದ ಗಮನಕ್ಕೆ ತಂದಾಗ ಜಾಗ್ರತೆ ಅನುಕೂಲ ಮಾಡುವುದಾಗಿ ಭರವಸೆ ಕೊಟ್ಟರು. ೪ ವರ್ಷ ಕಳೆಯಿತು, ಏನೂ ಮಾಡಿಲ್ಲ. ೨೦ ರೂ. ನವರಿಗೆಲ್ಲಾ ೩೦ ರೂ. ಆಗಬೇಕೆಂದು ಈಗ ಆರ್ಡರಾಗಿದೆ. ಇದರಲ್ಲಿ ಮೇಲ್ಕಂಡ ಅಟೆಂಡರುಗಳು ಸೇರಿಲ್ಲ. ಇವರನ್ನು ಸರ್ಕಾರದವರು ಮರೆತಂತೆ ಕಾಣುತ್ತೆ. ೨೦ ರೂ. ನವರಂತೆ ಇವರೂ ಬರವಣಿಗೆ ಕೆಲಸ ಮಾಡತಕ್ಕವರಾಗಿಯೂ, ವಿದ್ಯಾಯೋಗ್ಯತೆಯುಳ್ಳವರಾಗಿಯೂ, ಸುಪೀರಿಯರ್ ಸರ್ವಿಸ್ಸಿಗೆ ಸೇರಿದವರಾಗಿಯೂ ಇರುವುದರಿಂದ ಇವರುಗಳಿಗೂ ೩೦ ರೂ. ಮಾಡತಕ್ಕದ್ದು ಅಗತ್ಯವೂ, ನ್ಯಾಯವೂ ಆಗಿರುತ್ತೆ. ಘನ ಸರ್ಕಾರದವರು ಇದಕ್ಕೆ ಗಮನ ಕೊಟ್ಟು ತೀರ್ಮಾನ ಪಡೆಯಬೇಕಾಗಿ ಪ್ರಾರ್ಥನೆ.

ಪಿ. ವೆಂಕಟಸುಬ್ಬಯ್ಯ.

ಹೊಸ ಸಕ್ಕರೆ ಕಾರ್ಖಾನೆ

ನ್ಯಾಯವಿಧಾಯಕ ಸಭೆಯಲ್ಲಿ ಸರ್ಕಾರದ ವಿವರಣೆ

ಸ್ವಂ. ಸು.] ಬೆಂಗಳೂರು,

ಶಿವಮೊಗ್ಗ ಜಿಲ್ಲೆಯಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಬೇಕೆಂದು ಸರ್ಕಾರವು ನಿರ್ಧರಿಸಿದೆ. ಅದಕ್ಕೆ ಬೇಕಾದ ಯಂತ್ರೋಪಕರಣಗಳನ್ನು ಆಮದು ಮಾಡಲು ಇಂಡಿಯಾ ಸರ್ಕಾರದವರಿಂದ ಲೈಸೆನ್ಸ್ ದಾರಿ ಪಡೆಯಬೇಕಾಗಿರುವುದರಿಂದ ಅದಕ್ಕೆ ಪತ್ರ ವ್ಯವಹಾರ ಸಾಗುತ್ತಿದೆ. ಆ ಕಾರ್ಖಾನೆಯನ್ನು ಸರ್ಕಾರವೇ ಸ್ಥಾಪಿಸಬೇಕೆ ಅಥವಾ ಸರ್ಕಾರದ ಸಹಾಯ ಪಡೆದು ನಡೆಸಬೇಕೆ ಎಂಬ ಅಂಶ ಇನ್ನೂ ಸರ್ಕಾರದ ಪರ್ಯಾಲೋಚನೆಯಲ್ಲಿದೆ ಎಂದು ಅಭಿವೃದ್ಧಿ ಕಾರ್ಯದರ್ಶಿಗಳಾದ ಶ್ರೀ ... ರೋನಾರವರು ಶಾಸನ ಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿದರು.

ಬ್ಯಾಂಕಿಂಗ್ ವ್ಯವಸ್ಥೆ ರಾಷ್ಟ್ರೀಯವಾಗಬೇಕು

ವ್ಯವಸಾಯ ಮತ್ತು ಗ್ರಾಮ ಕೈಗಾರಿಕೆಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಹೆಚ್ಚಿನ ಹಣವು ಸುಲಭ ದರದಲ್ಲಿ ದೊರೆಯುವಂತೆ ಮಾಡಲು ಮತ್ತು ಸಂಸ್ಥಾನದ ಸಂಗ್ರಾಮಾನಂತರದ ಯೋಜನೆಗಳನ್ನು ಜಾರಿಗೆ ತರಲು ಅನುಕೂಲಿಸುವಂತೆ ಬ್ಯಾಂಕಿಂಗ್ ವ್ಯವಸ್ಥೆಯನ್ನು ರಾಷ್ಟ್ರೀಯವನ್ನಾಗಿ ಮಾಡಲು ಒಂದು ಸಮಿತಿಯನ್ನು ರಚಿಸಬೇಕೆಂದು ಶ್ರೀ ಹೆಚ್. ಎಂ. ಚನ್ನಬಸಪ್ಪನವರು (ಕಾಂ) ನಿರ್ಣಯ ಒಂದನ್ನು ಮಂಡಿಸಿದ್ದಾರೆ. ಲೀಗ್ ಪಕ್ಷದವರು ನಿರ್ಣಯಕ್ಕೆ ಬೆಂಬಲವಿತ್ತಿದ್ದಾರೆ. ಚರ್ಚೆ ನಡೆಯುತ್ತಿದೆ.

* ಕಾಂ|| ಪಾರ್ಲಿಮೆಂಟರಿ ಸಮಿತಿ ಸಭೆಯು ನಿನ್ನೆ ದಿನ ನಡೆದು ಬರಲಿರುವ ಬೆಂಗಳೂರಿನ ಪೌರಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಚುನಾವಣೆಗಳಲ್ಲಿ ಭಾಗವಹಿಸಕೂಡದೆಂದು ನಿರ್ಧರಿಸಲಾಯಿತು.

ಸಾಧ್ವಿ
ಈ
ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ
ಕೂಡಲೇ ಚಂದಾದಾರರಾಗಿರಿ
(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)
ಜಾಹೀರಾತಿನ ದರಗಳಿಗೆ ವಿಚಾರಿಸಿರಿ

ಟಿ. ಸಿ. ನಟರಾಜ್
ಔಷಧಾಲಯ
ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.
ಅಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.
ಡಾ. ಎಸ್. ಗೋಪಾಲರವರ ಆಯುರ್ವೇದೀಯ ಔಷಧಗಳೆಲ್ಲವೂ ದೊರೆಯುತ್ತವೆ

ಪೋ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಗುರುವಾರ ೧೨—೧೨—೪೬ [ಸಂಚಿಕೆ ೧೦೯

ಮದ್ರಾಸ್ ನಗರದಲ್ಲಿ ಹಾಲಿನ ಅಭಾವ

ರಾಜ್ಯಾಂಗ ಸಭೆಯಲ್ಲಿ ಮೈಸೂರಿನ ಪ್ರಾತಿನಿಧ್ಯ

ನಿರ್ಣಯ ಬಿದ್ದುಹೋಯಿತು

[ಸ್ವಂ ಸು ವರದಿ] ಬೆಂಗಳೂರು ೧೨

...ತ ರಾಜ್ಯಾಂಗ ರಚನಾ ಸಭೆಯಲ್ಲಿ ...ನ ಪ್ರತಿನಿಧಿಗಳು ಇನ್ನೂ ಇಲ್ಲದಿ...ದ ಉಂಟಾಗಿರುವ ಪರಿಸ್ಥಿತಿಯು ...ಶೀಲಿಸಲು ಶ್ರೀ ಟಿ ಮರಿಯಪ್ಪನ ...ದ ನಿಲುವಳಿ ನಿರ್ಣಯವು ನಿನ್ನೆ ...ಸಭೆಯಲ್ಲಿ ಬಹುಮತದಿಂದ ಬಿದ್ದು ...ತು. ಇಡೀ ಹಿಂದೂಸ್ಥಾನದ ಭ...ವ ನಿರ್ಧರಿಸಲ್ಪಡುವ ಈ ಸಮಯದ ...ಸೂರಿನ ಪ್ರತಿನಿಧಿಗಳು ರಾಜ್ಯಾಂಗ ...ಸ್ಥೆ ಇಲ್ಲದಿರುವುದು ಒಂದು ದೊಡ್ಡ ...ವೆಂದು ಶ್ರೀ|| ಮರಿಯಪ್ಪನವರು ತ...ಭಾಷಣದಲ್ಲಿ ತಿಳಿಸಿದರು.

ಶ್ರೀ|| ಗಳಾದ ಎಚ್. ಆರ್. ಗುರುವಾ... ಮಹಮದ್ ಷರೀಫ್, ವೆಂಕಟಗಿರಿ ...ವಾದವರು ನಿರ್ಣಯವನ್ನು ವಿ...ಧಿಸಿದರು. ರಾಜ್ಯಾಂಗ ಸಮಿತಿಯಲ್ಲಿ ...ಸ್ಥಾನಗಳ ಪ್ರಾತಿನಿಧ್ಯದ ಬಗ್ಗೆ ಖಚಿತ...ಗಿ ಇನ್ನೂ ಯಾವ ಏರ್ಪಾಡೂ ಆಗಿಲ್ಲ ...ದುದರಿಂದ ಈಗಲೇ ಅದರಲ್ಲಿ ಮಾಡ...ಬೇಕಾದ ಕೆಲಸವೇನೂ ಇಲ್ಲವೆಂದು ಶ್ರೀ|| ...ಎನ್. ರೆಡ್ಡಿಯವರು ಹೇಳಿದರು. ನೂ...ರಾರು ವರ್ಷಗಳ ಮೇಲೆ ಬ್ರಿಟಿಷರನ್ನು ...ದೇಶದಿಂದ ಹೊರದೂಡುವ ವಿಷ...ಯದಲ್ಲಿ ಎಲ್ಲರೂ ಕಣ್ಣು ತೆರೆಯುವಂತಾಗಿ...ದೆಯೆಂದೂ, ಆದರೆ ಈ ಗುರಿಯ ಸಾಧನೆ...ಯ ವಿಷಯದಲ್ಲಿ ಭಿನ್ನಾಭಿಪ್ರಾಯಗಳು ತ...ಲೆದೋರುವುದರಿಂದ ಸಂಸ್ಥಾನದ ಪ್ರಾತಿ...ನಿಧ್ಯದ ವಿಚಾರವು ಅಷ್ಟೇನೂ ಅವಸರದ ...ದಲ್ಲವೆಂದು ಮಿ|| ಮಹಮದ್ ಷರೀ...ಫ್ ಹೇಳಿದರು. ಶ್ರೀಮತಿ ಎಂ. ಆರ್. ...ಲಕ್ಷ್ಮಮ್ಮನವರು ನಿರ್ಣಯಕ್ಕೆ ಬೆಂಬಲವಿ...ತ್ತು ಸಂಸ್ಥಾನಗಳಿಗಾಗಿ ಕೊಡಲಾಗಿರು...ವ ಸ್ಥಾನಗಳು ಖಾಲಿಯಾಗಿರುವುದು ...ಚಿತವಲ್ಲವೆಂದು ತಿಳಿಸಿದರು.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ನಿರ್ಣಯವನ್ನು ವಿರೋಧಿಸಿ, ಈ ವಿಷಯದಲ್ಲಿ ಸರ್ಕಾರದವರ ಕರ್ತವ್ಯ ಲೋಪವೇನೂ ಇಲ್ಲವೆಂದು ತಿಳಿಸಿದರು. ರಾಜ್ಯಾಂಗ ಸಭೆಯ ಪ್ರಾತಿನಿಧ್ಯಕ್ಕೆ ಪೂರ್ವಭಾವಿಯಾಗಿ ಸಂಧಾನ ಸಮಿತಿಯಲ್ಲಿ ದಿವಾನರವರೇ ಭಾಗ ವಹಿಸುತ್ತಿರುವುದರಿಂದ ಸರ್ಕಾರದವರು ವಹಿಸುತ್ತಿರುವ ಶ್ರದ್ಧೆಯು ವೇದ್ಯವಾಗುತ್ತದೆಯೆಂದು ಹೇಳಿದರು.

ಓಟಿಗೆ ಹಾಕಿದಾಗ ನಿರ್ಣಯವು ಬಹುಮತದಿಂದ ಬಿದ್ದುಹೋಯಿತು.

ಕೇಂದ್ರ ಸರ್ಕಾರದ ಮಂತ್ರಿಗಳು

ವಿದ್ಯಾ ಸಚಿವರಾದ ಶ್ರೀ ರಾಜಗೋಪಾಲಾಚಾರ್ಯರು ಕೇಂದ್ರ ಸರ್ಕಾರದ ರೈಲ್ವೆ ಸಚಿವರಾಗುವರೆಂದೂ, ಡಾ|| ಷಫತ್ ಅಹಮ್ಮದ್ ಖಾನರು ಕೇಂದ್ರ ಸರ್ಕಾರದ ವಿದ್ಯಾ ಸಚಿವರಾಗುವರೆಂದೂ ಗೊತ್ತಾಗಿದೆ. ಡಾ|| ...ಫತ್‌ರವರು ತಮಗಿದ್ದ ಸರ್ ಎಂಬ ಬಿರುದನ್ನು ತ್ಯಜಿಸಿರುವುದಾಗಿ ಹೇಳಿದ್ದಾರೆ. ಮೌಲಾನಾ ಅಬುಲ್ ಕಲಾಂ ಆಜಾದರು ಸರ್ಕಾರಕ್ಕೆ ಸೇರಲು ನಿರಾಕರಿಸಿದ್ದಾರೆ.

ರಾಜೇಂದ್ರ ಪ್ರಸಾದರು ಅಧ್ಯಕ್ಷರಾದರು

ರಾಜ್ಯಾಂಗ ಸಭೆಯ ಖಾಯಂ ಅಧ್ಯಕ್ಷ ಸ್ಥಾನಕ್ಕೆ ಡಾ|| ರಾಜೇಂದ್ರ ಪ್ರಸಾದರೊಬ್ಬರ ಹೆಸರು ಮಾತ್ರ ಸೂಚಿತವಾಗಿದ್ದುದರಿಂದ ಅವರೇ ಅಧ್ಯಕ್ಷರಾಗಿ ಚುನಾಯಿತರಾದರೆಂದು ನಿನ್ನೆ ಘೋಷಿಸಲಾಯಿತು. ಡಾ|| ಪ್ರಸಾದರನ್ನು ಆಚಾರ್ಯ ಕೃಪಲಾನಿ ಮತ್ತು ಮೌಲಾನ ಆಜಾದರು ಕರೆತಂದು ಅಧ್ಯಕ್ಷ ಪೀಠದಲ್ಲಿ ಕುಳ್ಳಿರಿಸಿದರು.

ವಿದ್ಯಾರ್ಥಿ ಸಮ್ಮೇಳನಕ್ಕೆ ಅಡ್ಡಿ

ಡಿಸೆಂಬರ್ ೨೮, ೨೯ ಮತ್ತು ೩೦ ನೇ ತಾ|| ಗಳಲ್ಲಿ ಲಾಹೋರಿನಲ್ಲಿ ನಡೆಯಬೇಕಾಗಿದ್ದ ಅಖಿಲ ಭಾರತ ವಿದ್ಯಾರ್ಥಿ ಕಾಂಗ್ರೆಸ್ಸಿನ ಅಧಿವೇಶನವನ್ನು ಪಂಜಾಬ್ ಸರ್ಕಾರವು ಪ್ರತಿಬಂಧಿಸಿದೆಯೆಂದು ವರದಿಯಾಗಿದೆ. ಅದೇ ದಿನಗಳಲ್ಲಿ ಸಮ್ಮೇಳನವನ್ನು ದೆಹಲಿಯಲ್ಲಿ ನಡೆಸಲು ಏರ್ಪಾಡುಗಳು ಜರುಗುತ್ತಿರುವುವು.

ಹಳೇ ನಾಡು ವಿದ್ಯಾರ್ಥಿಗಳಿಗೆ ಅವಕಾಶ ದೊರೆಯಿತು

ಮೈಸೂರು ೧೨

ಚಾಮರಾಜನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನಕ್ಕೆ ಸೇರಿದ ವೇದ ಪಾಠಶಾಲೆಗೆ ಹಳೇನಾಡು ಕರ್ನಾಟಕ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ಅನುಮತಿ ಇತ್ತಿರುವುದಾಗಿ ಸರ್ಕಾರದ ನ್ಯಾಯಾಂಗ ಕಾರ್ಯದರ್ಶಿಗಳು ಶ್ರೀ ತಗಡೂರು ರಾಮಚಂದ್ರರಾಯರಿಗೂ, ಪ್ರ|| ಪ್ರ|| ಸಭೆಯ ಸದಸ್ಯರಾದ ಶ್ರೀ ಎಲ್. ವೆಂಕಟನಾರಣಪ್ಪನವರಿಗೂ ಪತ್ರವನ್ನು ಬರೆದಿರುತ್ತಾರೆ. ಸದರಿ ವಿದ್ಯಾರ್ಥಿಗಳು ಶಿವಕೂಟದಲ್ಲಿ ಭಾಗವಹಿಸುವ ವಿಚಾರವು ಪ್ರತ್ಯೇಕ ಪರಿಶೀಲನೆ ಮತ್ತು ಒಪ್ಪಿಗೆಗಾಗಿ ಕಾದಿಡಲ್ಪಟ್ಟಿದೆ.

ಉಪನ್ಯಾಸ

ಮೈಸೂರು ಶ್ರೀ ಮಧ್ವ ಸಂಘದಾಶ್ರಯದಲ್ಲಿ ೧೩ ನೇ ತಾ|| ಭಾನುವಾರ ಸಂಜೆ ೬ ಗಂಟೆಗೆ ಕೃಷ್ಣಮೂರ್ತಿಪುರಂ ಶ್ರೀ ವ್ಯಾಸರಾಜ ಮಠದ ಶ್ರೀ ವಿದ್ಯಾ ಪ್ರಸನ್ನ ಮಂದಿರದಲ್ಲಿ ವೇ|| ಅ|| ಪಾ|| ಶ್ರೀ ಮಧುರೆ ಶ್ರೀನಿವಾಸಾಚಾರ್ಯರು ಉಪನ್ಯಾಸದ ವಿಚಾರವಾಗಿ ಉಪನ್ಯಾಸ ಮಾಡುವರು. ಸರ್ವರಿಗೂ ಆಹ್ವಾನವುಂಟು.

* ಶ್ರೀ ಎಂ ಎ ಶ್ರೀನಿವಾಸರವರು ಗ್ವಾಲಿಯರ್ ಸಂಸ್ಥಾನದ ಮುಖ್ಯ ಮಂತ್ರಿಗಳಾಗಿ ಹೋಗಲಿದ್ದಾರೆ.

ಸಿವಿಲ್ ಸರ್ವಿಸ್ ಪರೀಕ್ಷೆ

ಶಾಸನ ಸಭೆಯಲ್ಲಿ ಪ್ರಶ್ನೋತ್ತರ

[ಸ್ವಂ ಸು ವರದಿ] ಬೆಂಗಳೂರು ೧೨

ಲೋಕ ವ್ಯವಹಾರ ಜ್ಞಾನದಲ್ಲಿ ಹೆಚ್ಚಿನ ಅನುಭವವನ್ನೂ, ಆಡಳಿತದಲ್ಲಿ ದಕ್ಷತೆಯನ್ನೂ ಉಂಟುಮಾಡಲು ೧೯೪೨ ರಲ್ಲಿ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ಏರ್ಪಡಿಸಲಾಯಿತು. ಇದುವರೆಗೆ ೧೯ ಸಾರಿ ಪರೀಕ್ಷೆ ನಡೆಸಿದೆ, ವಂಶ ಅಥವಾ ವಿಶೇಷ ಅರ್ಹತೆ ಅಥವಾ ಸುಪ್ರಾತಿನಿಧ್ಯಗಳ ದೃಷ್ಟಿಯಿಂದ ಸಿವಿಲ್ ಸರ್ವಿಸಿಗೆ ನಾಮಕರಣಗಳನ್ನು ಮಾಡಲಾಗುತ್ತಿದೆಯೆಂದು ಪ್ರಧಾನ ಕಾರ್ಯದರ್ಶಿಗಳು ಈ ದಿನ ಶಾಸನ ಸಭೆಯಲ್ಲಿ ಶ್ರೀಮತಿ ಕಮಲಾದೇವಿಯವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

ಬೆಂಗಳೂರಿನ ವೃತ್ತಿ ಕಲಾ ಶಾಲೆಯಂತೆ ಮೈಸೂರು ಮತ್ತು ದಾವಣಗೆರೆಗಳಲ್ಲಿ ಎರಡು ಶಾಲೆಗಳನ್ನು ತೆರೆಯಬೇಕೆಂದಿರುವುದಾಗಿ ಮತ್ತೊಂದು ಪ್ರಶ್ನೆಗೆ ಉತ್ತರ ಬಂದಿತು.

ಒಬ್ಬ ಸೆಷನ್ಸ್ ಜಡ್ಜಿಯವರು ಕ್ರಿಮಿನಲ್ ಮೊಕದ್ದಮೆಯೊಂದರಲ್ಲಿ ಕಾಗದ ಪತ್ರಗಳನ್ನು ಪಾಳು ಮಾಡಿಕೊಂಡು ಬೇರೆ ಕೃತಕ ದಾಖಲಾತುಗಳ ಆಧಾರದಿಂದ ಅಪರಾಧಿಗೆ ಶಿಕ್ಷೆಯನ್ನು ವಿಧಿಸಿದರೆಂಬ ವಿಷಯವಾಗಿ ಶ್ರೀ ಎಚ್. ಆರ್. ಗುರುವಾರೆಡ್ಡಿಯವರು ಹಾಕಿದ ಪ್ರಶ್ನೆಗೆ ಆ ವಿಚಾರವೇ ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಉತ್ತರ ಕೊಡಲಾಯಿತು.

ಕತ್ತರೀ ಪ್ರಯೋಗಗಳ ನಿರಾಕರಣೆ

ಹೆಚ್ಚಿಗೆ ಗ್ರಾಂಟುಗಳಿಗಾಗಿ ಸರ್ಕಾರದವರು ಮಂಡಿಸಿರುವ ಬೇಡಿಕೆಗಳ ಮೇಲೆ ಬಂದಿದ್ದ ಹತ್ತು ಕತ್ತರೀ ಪ್ರಯೋಗಗಳಿಗೆ ದಿವಾನರು ಅವಕಾಶವಿತ್ತಿರುವುದಿಲ್ಲವೆಂದು ತಿಳಿಸಲಾಯಿತು. ಶ್ರೀಗಳಾದ ಟಿ. ಮರಿಯಪ್ಪ, ಕಡಿದಾಳ್ ಮಂಜಪ್ಪ ಮುತ್ತಾಗ...

ಮದ್ರಾಸಿನಲ್ಲಿ ಹಾಲಿನ ಬಿಕ್ಕಟ್ಟು

ಮಳೆಯಿಂದ ಉಂಟಾದ ಪ್ರವಾಹದ ಹಾವಳಿಯ ನಂತರ ಮದ್ರಾಸ್ ಪಟ್ಟಣದಲ್ಲಿ ಹಾಲಿನ ಬಿಕ್ಕಟ್ಟು ಪ್ರಾಪ್ತವಾಗಿರುತ್ತದೆ. ದನಗಳ ಮೇವಿಗೆ ಬೇಕಾದ ಹುಲ್ಲು ದುರ್ಲಭವಾಗಿರುತ್ತದೆ. ಈಗ ಇರುವ ದಾಸ್ತಾನು ೩ ದಿನಗಳಿಗೂ ಸಾಲದಾಗಿದೆ. ಹೊರಗಿನಿಂದ ಹುಲ್ಲು ಬರುವ ಸಂಭವವು ಇರುವುದಿಲ್ಲ. ಹುಲ್ಲಿನ ಬೆಲೆಯು ಒಂದಕ್ಕೆ ನಾಲ್ಕರಷ್ಟು ಏರಿದೆ. ಹುಲ್ಲಿನ ಅಭಾವದಿಂದ ಹಾಲಿನ ಸರಬರಾಜಿನ ಸ್ಥಿತಿಯು ಅತ್ಯಂತ ಘೋರವಾಗಬಹುದೆಂಬ ಕಳವಳವು ಮೂಡಿರುತ್ತದೆ.

ಮಳೆಯಿಂದ ೧೫ ಸಹಸ್ರ ಮಂದಿ ನಿರಾಶ್ರಿತರಾದರು

ಮದ್ರಾಸ್ ನಗರದಲ್ಲಿ ಉಂಟಾದ ಮಳೆಯ ಹಾವಳಿಯಿಂದ ೧೫ ಸಹಸ್ರ ಮಂದಿ ಮನೆ ಮಠಗಳನ್ನು ಕಳೆದುಕೊಂಡು ನಿರಾಶ್ರಿತರಾಗಿದ್ದಾರೆಂದು ವರದಿಯಾಗಿದೆ. ಅವರಿಗೆಲ್ಲಾ ಪುರಸಭೆಯು ವಸತಿಯನ್ನೂ, ಉಚಿತ ಉಪಾಹಾರ ಸೌಕರ್ಯವನ್ನೂ ಒದಗಿಸಿದೆ.

ವಿದ್ಯಾರ್ಥಿಗಳಿಗೆ ಸಹಾಯ

ಮೈಸೂರು ಒಕ್ಕಲಿಗರ ಯುವಜನ ಸಂಘದಿಂದ ಈ ವರ್ಷ ಪರೀಕ್ಷೆಗಳಿಗೆ ಹೋಗುವ ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಏರ್ಪಾಡು ಮಾಡಲಾಗಿದೆ. ಸಹಾಯ ಕೋರುವ ವಿದ್ಯಾರ್ಥಿಗಳು ಈ ಮಾಹೆ ೨೫ ನೇ ತಾ|| ಒಳಗೆ ಚಾಮರಾಜಪುರಂ ೩೦ ನೇ ನಂಬರ್ ಮನೆಯಲ್ಲಿರುವ ಸಂಘದ ಅಧ್ಯಕ್ಷರಿಗೆ ಅರ್ಜಿ ಹಾಕಿಕೊಳ್ಳಬೇಕಾಗಿ ಕೋರಲಾಗಿದೆ.

...ರೆಡ್ಡಿಯವರು ... ಅವರ ಗ್ರಾಂಟನ್ನು ವಿರೋಧಿಸಿ ಮಾತನಾಡಿದರು.

ಅಲ್ಪಾವಧಿ ಪ್ರಶ್ನೆ

ಸರ್ಕಾರದ ಹೊಸ ಸಾಲದ ವಿಚಾರವಾಗಿ ಶ್ರೀ ಕೆ ಆರ್ ಶ್ರೀನಿವಾಸಯ್ಯಂಗಾರ್‌ರವರು ಹಾಕಿದ್ದ ಅಲ್ಪಾವಧಿ ಪ್ರಶ್ನೆಗೆ ಸರ್ಕಾರದವರು ಉತ್ತರಕೊಡುತ್ತಾ, ಈ ಸಾಲಕ್ಕಾಗಿ ಒಟ್ಟು ೪೩.೧೭ ಕೋಟಿ ರೂ ನಷ್ಟು ಮೊಬಲಗಿಗೆ ಅರ್ಜಿಗಳು ಬಂದಿದ್ದುವೆಂದು ತಿಳಿಸಿದರು.

ವಿಶೇಷ ಮಳೆಯಿಂದ ಹೂಗಾರವಳ್ಳಿ ರೈತರಿಗೆ ಉಂಟಾಗಿರುವ ನಷ್ಟದ ಬಗ್ಗೆ ಶ್ರೀ ಕೆ. ಎಂ ಕೃಷ್ಣಪ್ಪ ಗೌಡರು ಪ್ರಶ್ನೆ ಕೇಳಲು ಈ ವಿಷಯವು ಸರ್ಕಾರದವರಿಗೆ ವರದಿಯಾಗಿಲ್ಲವೆಂದು ತಿಳಿಸಲಾಯಿತು.

* ಸಂಸ್ಥಾನದಲ್ಲಿ ಬೆಲ್ಲದ ಧಾರಣೆಯನ್ನು ಮಣ ಒಂದಕ್ಕೆ ೮-೧೨-೯ ರಂತೆ ನಿಗದಿ ಮಾಡಲಾಗಿದೆ. ಕಡೂರು ಮತ್ತು ಶಿವಮೊಗ್ಗ ಜಿಲ್ಲಾ ಕೇಂದ್ರಗಳಲ್ಲಿ ಮಾತ್ರ ೮-೧೪-೦ ಧಾರಣೆಯಂತೆ ಗೊತ್ತು ಮಾಡಲಾಗಿದೆ.

ರಾಜಕಮಲ್, ಮೈಸೂರು

೧೪-೧೨-೪೬ ರಿಂದ ೫ ನೇ ಅಮೋಘವಾದ ವಾರ

ಡಾಕ್ಟರ್ ಕೊಟ್ನಿಸ್ ಕಿ ಅಮರ್ ಕಹಾನಿ

ಮ. ಮೈ ಭೂಮಿಕೆ. ಜಯಶ್ರೀ, ಶಾಂತಾರಾಂ, ಮ...ರಾವವರು

ತಾ|| ೧೯-೧೨-೪೬ ರಿಂದ ೪ ದಿನಗಳು ... ...

ನ್ಯೂಥಿಯೇಟರ್ಸ್‌ರವರ "...ದ್ಯಾಪತಿ"

...ಗಣ. ಕಾನನಬಾಲಾ, ಪಹರಿಸಾನ್ಯಾಲ್, ಕೆ ಸಿ ಡೇ

Edited, printed and published by A. B. Nagarajan at the Sadhvi Press ... Subbiah Road, Mysore

ಸಾಧ್ವಿ

ತಾ|| ೧೨-೧೨-೪೬ ಗುರುವಾರ

ಪ್ರಜಾ ಸರ್ಕಾರದ ಘೋಷಣೆ

ಭಾರತ ರಾಜ್ಯಾಂಗ ಶಾಸನ ಸಭೆಯು ಕಳೆದ ಮೂರು ದಿನಗಳಿಂದ ದೆಹಲಿಯಲ್ಲಿ ನಡೆಯುತ್ತಿದೆಯಷ್ಟೆ. ಪ್ರಾರಂಭದಲ್ಲಿ ಸಭೆಯು ಸಾಂಪ್ರದಾಯಕವಾದ ಹಲವು ನಿಯಮಾವಳಿಗಳ ವಿಷಯಗಳನ್ನು ಇತ್ಯರ್ಥ ಪಡಿಸುತ್ತದೆ. ಸಭೆಯ ಮುಖ್ಯ ಧ್ಯೇಯವಾದ ರಾಜಕೀಯ ಗುರಿಯ ವಿಷಯವನ್ನು ಇಂದು ಅದು ತೀರ್ಮಾನಿಸುತ್ತದೆ. ಈ ಬಗ್ಗೆ ನಿರ್ಣಯವನ್ನು ಪಂಡಿತ ಜವಹರಲಾಲ ನೆಹರೂರವರು ಮಂಡಿಸುವರು. ಮಾರ್ಚ್ ಕಾಂಗ್ರೆಸ್ಸಿನ ಅಧಿವೇಶನದಲ್ಲಿ ಮಂಜೂರಾದ ತೀರ್ಮಾನವನ್ನೇ ಅವರು ಇಲ್ಲಿಯೂ ಸೂಚಿಸುವರು. ಸಂಪೂರ್ಣ ಸ್ವಾತಂತ್ರ್ಯವನ್ನು ಹೊಂದಿರುವ ಪ್ರಜಾ ಸರ್ಕಾರವೇ ರಾಜ್ಯಾಂಗ ಶಾಸನ ಸಭೆಯ ಗುರಿಯೆಂದು ಅವರು ಸಾರುವರು.

ಡಾಕ್ಟರ್ ರಾಜೇಂದ್ರಪ್ರಸಾದರವರು ಸಭೆಗೆ ಅಧ್ಯಕ್ಷರಾಗಿ ಸರ್ವಾನುಮತದಿಂದ ಚುನಾಯಿತರಾಗಿರುವುದು ಅತ್ಯಂತ ಸಮರ್ಪಕವಾದ ಅಂಶ. ಮೇಧಾವಿಗಳೂ, ತ್ಯಾಗಮೂರ್ತಿಗಳೂ, ಸರಳ ಹೃದಯರೂ ಆದ ಬಾಬು ರಾಜೇಂದ್ರರ ನೇತೃತ್ವದಲ್ಲಿ ಸಭೆಯು ತನ್ನ ಉದ್ಯಮದಲ್ಲಿ ಸಂಪೂರ್ಣ ಯಶಸ್ಸನ್ನು ಪಡೆಯುವುದರಲ್ಲಿ ಸಂಶಯವಿಲ್ಲ. ರಾಜ್ಯಾಂಗ ಸಭೆಗಳು ಯಾವಾಗಲೂ ಇಂತಹ ಸನ್ನಿವೇಶಗಳಲ್ಲಿಯೇ ಸೇರಿರುತ್ತವೆ. ಅವುಗಳು ಯಶಸ್ವಿಯಾಗಿ ತಮ್ಮ ಕೆಲಸಕಾರ್ಯಗಳನ್ನು ಜರುಗಿಸಿರುತ್ತವೆ. ಹೀಗಿರುವಲ್ಲಿ ನಮ್ಮ ಸಭೆಯು ತನ್ನ ಕರ್ತವ್ಯವನ್ನು ಸಮರ್ಪಕವಾಗಿ ಈಡೇರಿಸುವುದರಲ್ಲಿ ಸಂಶಯವಿಲ್ಲವೆಂದು ರಾಜೇಂದ್ರಪ್ರಸಾದರು ಹೇಳಿದರು. ಅದು ಈಗಾಗಲೇ ತನ್ನ ಕೆಲಸಕಾರ್ಯಗಳಲ್ಲಿ ತೊಡಗಿರುತ್ತದೆ.

ಸಭೆಯ ಮುಖ್ಯ ಧ್ಯೇಯವನ್ನು ಇಂದು ಸಾರಲಾಗುವುದು. ಪರಕೀಯರ ಹತೋಟಿಗೆ ಒಳಪಡದೆ ದೇಶದ ಪ್ರಜೆಗಳ ವಿಶ್ವಾಸಕ್ಕೆ ಪಾತ್ರರಾದ ನಾಯಕರ ಮೂಲಕ ಪೂರ್ಣ ಸ್ವಾತಂತ್ರ್ಯದಿಂದ ವರ್ತಿಸುವ ಆಡಳಿತದ ಸ್ಥಾಪನೆಯೇ ನಮ್ಮ ಜನಾಂಗದ ಮುಖ್ಯ ಗುರಿಯೆಂದು ಸಕಲ ರೀತಿಗಳಿಂದಲೂ ಸಾರಲ್ಪಟ್ಟಿರುತ್ತದೆ. ಸ್ವತಂತ್ರ ಸಾರ್ವಭೌಮ ಪ್ರಜಾ ಸರ್ಕಾರವೇ ಇಂದು ಎಲ್ಲ ಮುಂದೆಯೂ ಇರುವ ಗುರಿ. ಇದನ್ನೇ ಇಂದು ರಾಜ್ಯಾಂಗ ಸಭೆಯು ಅಧಿಕಾರಯುತವಾಗಿ ಘೋಷಿಸಲಿರುತ್ತದೆ. ಇದಕ್ಕೆ ಭರತಖಂಡದಲ್ಲಿ ವಾಸಿಸುವ ಪ್ರತಿಯೊಬ್ಬ ಪ್ರಜೆಯ ಬೆಂಬಲವೂ ಇರುತ್ತದೆ.

ದೇಶದ ಗುಲಾಮಗಿರಿಯನ್ನು ತಪ್ಪಿಸಿ ಪೂರ್ಣ ಸ್ವರಾಜ್ಯವನ್ನು ಸಾಧಿಸಲು, ರಾಜ್ಯಾಂಗ ಸಭೆಯು ಹೊರಗಿನ ಯಾವ ಬಗೆಯ ಹಂಗಿಗೂ ಒಳಪಡದೆ ಪೂರ್ಣ ಸ್ವಾತಂತ್ರ್ಯದಿಂದ ವರ್ತಿಸುವುದಾಗಿ ಈಗಾಗಲೇ ಪ್ರಕಟವಾಗಿದೆ. ಮುಂದಿನ ಭಾರತ ರಾಜ್ಯಾಂಗ ರಚನೆಯಲ್ಲಿ ಅದು ತನಗೆ ಸೂಕ್ತವೆಂದು ತೋರಿದ ಕ್ರಮವನ್ನು ಅನುಸರಿಸುತ್ತದೆ. ಯಾರೊಬ್ಬರ ಪ್ರೇರೇಪಣೆಗೂ ಅಥವಾ ಸೂಚನೆಗಳಿಗೂ ಅದು ಅಧೀನವಾಗಿ ಕೆಲಸ ಮಾಡುವುದಿಲ್ಲವೆಂದು ತಿಳಿಸಲಾಗಿದೆ. ಮುಂದೆ ಭಾರತವು ಸಾಧಿಸುವ ಸ್ವಾತಂತ್ರ್ಯಕ್ಕೆ ಇದು ಪೀಠಿಕೆಯೆಂದು ಧಾರಾಳವಾಗಿ ಹೇಳಬಹುದು.

ಮುಸ್ಲಿಂ ಲೀಗಿನವರು ಸಭೆಯಲ್ಲಿ ಈಗ ಭಾಗವಹಿಸಿಲ್ಲವೆಂಬುದು ನಿಜ; ಕಾಲಕ್ರಮದಲ್ಲಿ ಅವರೂ ಅದರಲ್ಲಿ ಬಂದು ಸೇರುವರೆಂದು ನಿರೀಕ್ಷಿಸಬಹುದು; ಸಂಸ್ಥಾನಗಳೂ ಸಹ ಇನ್ನೂ ಈ ಸಭೆಯಲ್ಲಿ ಪಾತ್ರ ವಹಿಸಲು ಏರ್ಪಾಡು ಮಾಡದಿರುವುದು ಮತ್ತೊಂದು ಕೊರತೆಯಾಗಿದೆ. ಆದರೂ ಸಭೆಯ ಕೆಲಸಗಳು ಮಾತ್ರ ನಿಲ್ಲುವುದಿಲ್ಲ. ಮುಂದೆ ಬಂದು ಸೇರುವವರು ಇಂದು ಹಾಕಲಾಗುವ ಸೂತ್ರಗಳನ್ನೇ ಅನುಸರಿಸಿ ನಡೆಯಬೇಕಾಗುವುದು.

ನಲವತ್ತು ಕೋಟಿ ಭಾರತೀಯರ ಆಕಾಂಕ್ಷೆಯಾಗಿರುವ ಪೂರ್ಣ ಸ್ವಾತಂತ್ರ್ಯದ ಗುರಿಯನ್ನು ರಾಜ್ಯಾಂಗ ಸಭೆಯು ಘೋಷಿಸಿ ಅದನ್ನು ಶೀಘ್ರದಲ್ಲಿಯೇ ಸಾಧಿಸುವ ಶಕ್ತಿಯನ್ನು ಭಗವಂತನು ಅದಕ್ಕೆ ಅನುಗ್ರಹಿಸಲೆಂದು ನಾವು ಪ್ರಾರ್ಥಿಸುತ್ತೇವೆ

ಬೆಳೆಗಳು ನಾಶವಾಗಿವೆ

ಸ್ವಂ ಸು.] ಗುಂಡ್ಲುಪೇಟೆ ೧೧

ಎರಡು-ಮೂರು ತಿಂಗಳಿಂದ ಎಡೆಬಿಡದೆ ಹೇರಳವಾಗಿ ಸುರಿದ ಮಳೆಯ ದೆಸೆಯಿಂದ, ಹುರುಳಿ ಹಸ್ಸರ ಎರಡನೇ ಫಸಲಿನ ಬೆಳೆಗಳೆಲ್ಲಾ ಸಂಪೂರ್ಣವಾಗಿ ನಾಶ ಹೊಂದಿರುತ್ತವೆ. ಭತ್ತದ ಬೆಳೆಗೆ ಕೊಳವೆ ಹುಳುವಿನಿಂದಲೂ, ಮಳೆಯ ದೆಸೆಯಿಂದಲೂ ... ತಗಲಿರುತ್ತದೆ. ಆಹಾರ ವಶಪಡಿಸಿಕೊ... ವಿಚಾರದಲ್ಲಿ, ಅಧಿಕಾರಿಗಳು ಈ ... ಳನ್ನೆಲ್ಲಾ ಗಮನಿಸಿ ನಿಗದಿ ಮಾಡು... ದು ನಂಬಲಾಗಿದೆ.

ಮೈಸೂರಿಗೆ ೪೦೦೦೦ ಟ... ಧಾನ್ಯ

ಬರಲಿರುವ ಸುಗ್ಗಿ ಆಹಾರ ಧಾ... ಹಂಚಿಕೆಯಲ್ಲಿ ಕೇಂದ್ರ ಸರ್ಕಾರದವ... ಸೂರಿಗೆ ೪೦ ಸಾವಿರ ಟನ್ ಧಾನ್ಯವನ್ನು ... ಡಲು ನಿಗದಿ ಮಾಡಿದ್ದಾರೆಂದು ಗೊ... ದೆ. ಈ ಸಲ ಸಂಸ್ಥಾನದ ಒಟ್ಟು ... ದ ಕೊರತೆ ಸುಮಾರು ೭೦ ಸಾವಿ... ಎಂದು ಅಂದಾಜಾಗಿದೆ.

UNIVERSITY OF MYSORE

No. Ex. 4-787—46-47

Office of the University of Mysore, Mysore, Dated 30-11-19

NOTIFICATION

Some instances have come to the notice of the University where gentlemen interested in the cause of higher education in the State form themselves into Committees and start educational institutions and then apply to the University for affiliation. Such a procedure not only causes embarrassment to the University but italso involves risk to the institutions on behalf of which affiliation is sought and damage to the educational interests of the students admitted into them. It is therefore notified for general information that in all cases where it is proposed to start an institution to be affiliated to the University, the provisions contained in Statute 67-A and Ordinance 53-A, pages 39 and 65 respectively of Calendar Volume I for 1944-45, must be strictly followed:-

Statute 67-A lays down among other things, that there should be a properly constituted Managing Body for the institution. It also states that adequate financial provision should be made for the capital and recurring expenditure in respect of the proposed institution ordinance 53-A lays down in detail the procedure that should be adopted while seeing affiliation for a proposed institution. According to the provisions contained in this Ordinance the following is the procedure to be adopted:-

1 A College applying for affiliation should send a formal application to the Registrar between 1st July and 31st October preceding the academic year in which the institution is proposed to be started.

2 This application should give full information on all matters specified in clauses (a) to (g) of the Ordinance.

(3) All applications for affiliation will be considered by the University Council not later than the month of November.

(4) The University Council may call for any further information which may be necessary before proceeding with the application, or it may advice the management that the application is premature and that it should be submitted in a subsequent year or it may decline to proceed with the application if it is satisfied that the arrangement made or likely to be made, are not sufficient or suitable.

(5) If the University Council decides to proceed with the application it may direct a local enquiry by a competent person or persons appointed in this behalf

(6) After considering the report of the local enquiry and after making further enquiries that may be necessary, the Universi Council will decide, in con sultation with the Acad mic Council, whether af liation should be grant or refused.

(7) Affiliation may provisional; and it is usu ally provisional in the fir instance. Where prov sional affiliation is gra ted it will be for a fixe period, and the length the period as well as th conditions which should fulfilled by the College be fore the expiry of the pe riod will be specified in th order of the Universit Council grating the affi liation. If the conditions are not fulfilled by the en of the period the affiliatio will cease automatically N extension of time will be permitted.

(8) If the conditions ar fulfilled, the Universit Council may, at the en of the period, confirm th affiliation and report th matter to the Academic Council and the Senate.

(9) Affiliation will in no case be granted with re trospective effect. Atten dance at courses of insti ruction provided in a college before affiliation is granted will not qualify for the grant of certificates of attendance. Such atten dance will not entitle any candidate to exemption from the production of cer tificates of attendance.

(Sd.) D. S. GORDON,
Registrar.

ರೋ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶುಕ್ರವಾರ ೧೩—೧೨—೪೬ [ಸಂಚಿಕೆ ೧೧೦

'ಕ್ವಿಟ್ ಇಂಡಿಯಾ' ವಿಗೆ ಚರ್ಚಿಲರ ಒತ್ತಾಯ

...ರುಗಳ ಮೇಲಿನ ಹತೋಟಿ ...ಷ್ಟದಲ್ಲೇ ಹೋಗುವುದು

...ಸನ ಸಭಾ ಕಾರ್ಯ ಕಲಾಪಗಳು

...ಸು ಫೋ(೧)] ಬೆಂಗಳೂರು ೧೩

...ದ ಲ್ಯಾರರುಗಳ ಸಂಬಳವನ್ನು ಹೆಚ್ಚಿ...ದ ಬಗ್ಗೆ ಶ್ರೀ|| ಡಿ. ಎಸ್. ಮಲ್ಲಪ್ಪನವ...ಕೇಳಿದ ಪ್ರಶ್ನೆಗೆ ಶ್ರೀ|| ಜೆ. ಅಪ್ಪಾಜಿ...ನವರು ಈ ದಿನ ನ್ಯಾಯ ವಿಧಾಯಕ ಸ...ಲ್ಲಿ ಉತ್ತರವೀಯುತ್ತಾ, ಆಸ್ಪತ್ರೆಗಳ ...ಗಳ ಸಂಬಳದ ದರ್ಜೆಯನ್ನು ಹೆಚ್ಚಿ...ಸುವ ವಿಚಾರ ಸರ್ಕಾರದ ತೀವ್ರ ಪ...ರ್ಯಾಲೋಚನೆಯಲ್ಲಿರುವುದಾಗಿ ತಿಳಿಸಿದ...

ಜಿಲ್ಲಾ ಬೋರ್ಡ್ ಅಧ್ಯಕ್ಷ ಮತ್ತು ಉ...ಪಾಧ್ಯಕ್ಷರ ಅವಧಿ ಬಗ್ಗೆ ಶ್ರೀ|| ಕೆ. ಸಿ. ಸು...ಬ್ಬಣ್ಣನವರು ಕೇಳಿದ ಪ್ರಶ್ನೆಗೆ ಶ್ರೀ|| ಅ...ಪ್ಪಾಜಿ ಗೌಡರು ಈ ರೀತಿ ಉತ್ತರವಿತ್ತರು:- ೧೯೩೬ ನೇ ಜೂನ್ ತಿಂಗಳಲ್ಲಿ ನಡೆದ ಪ್ರಜಾ...ಪ್ರತಿನಿಧಿ ಸಭಾಧಿವೇಶನದಲ್ಲಿ ಬಂದ ಅರಿಕೆ...ಯನುಗುಣವಾಗಿಯೂ, ಹೆಚ್ಚು ಮಂದಿ ಅ...ಭ್ಯರ್ಥಿಗಳಿಂದ ಸೇವೆ ಸಲ್ಲಿಸಲು ಅವಕಾಶ ಕ...ಲ್ಪಿಸುವ ಉದ್ದೇಶದಿಂದಲೂ ಜಿಲ್ಲಾ ಬೋ...ರ್ಡುಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಅ...ವಧಿಯನ್ನು ಒಂದೇ ಸಮನೆ ೬ ವರ್ಷಗಳಿ...ಗಿಂತ ಹೆಚ್ಚಾಗಿ ಇರಕೂಡದೆಂದು ೧೯೩೭ ...ನೇ ನವಂಬರಿನಲ್ಲಿ ಆಜ್ಞೆ ಮಾಡಲಾಗಿದೆ.

ಭಾರತ ಸರ್ಕಾರದವರು ಮಾಡಿರುವಂತೆ ...ಧಾನ್ಯಗಳನ್ನು ಕೊಳ್ಳಲು ರಹದಾರಿಯನ್ನು ...ಕೊಡುವ ಬಗ್ಗೆ ಶ್ರೀ|| ವೆಂಕಟಾಚ ರಾಯರು ಪ್ರಶ್ನೆ ಕೇಳಿದರು. ಈ ವಿಚಾರವನ್ನು ಸ...ರ್ಕಾರವು ಪರಿಶೀಲಿಸುತ್ತಿರುವುದಾಗಿ ಶ್ರೀ|| ಅಪ್ಪಾಜಿ ಗೌಡರು ಹೇಳಿದರು.

ಉಪ ಪ್ರಶ್ನೆ- ಎಷ್ಟು ದಿನದಲ್ಲಿ ತೆಗೆಯ...ಲಾಗುತ್ತದೆ? ಉ- ಇನ್ನು ಒಂದೆರಡು ತಿಂಗಳಲ್ಲಿ

ಶ್ರೀ|| ಮರಿಯಪ್ಪ- ಇದುವರೆಗೆ ಎಷ್ಟು ...ವರಿಗೆ ಪರ್ಮಿಟ್ ಕೊಡಲಾಗಿದೆ? ಉ- ೧೯೪೦ ರಿಂದ ೩೬ ಕಾರುಗಳನ್ನು ಅಧಿಕಾರಿಗಳಿಗೂ, ೭೪ ನ್ನು ಖಾಸಗಿಯವರಿಗೂ ಕೊಡಲಾಗಿದೆ.

ಅಲ್ಪಾವಧಿ ಪ್ರಶ್ನೆ

ಸರ್ಕಾರದವರು ಎತ್ತಿರುವ ಸಾಲದ ಬಗ್ಗೆ ಅಲ್ಪ ಕಾಲಾವಧಿ ಪ್ರಶ್ನೆಯೊಂದು ಸಭೆಯಲ್ಲಿ ಬಂದು ವಿಪುಲವಾದ ಚರ್ಚೆಗೆ ಗುರಿಯಾಯಿತು.

ಪ್ರ ಮೂರು ಜನ ದಳ್ಳಾಳಿಗಳ ಪ್ರತಿನಿಧಿಗಳಿಗೆ ಎಷ್ಟೆಷ್ಟು ನಿಗದಿ ಮಾಡಲಾಗಿದೆ? ಉ- ಇನ್ನೂ ನಿಗದಿಯಾಗಿಲ್ಲ.

ಪ್ರ ಸ್ವಾಸ್ತಿಕ ಕಂಪೆನಿಯು ಯಾವ ಸಂಸ್ಥೆಗೆ ಸೇರಿದ್ದು? ಉ- ನೋಟೀಸ್.

ಪ್ರ- ಆ ಸಂಸ್ಥೆಯ ಮಾಲೀಕರ್ಯಾರು? ಅವನ್ನು ನೋಡಿ ಅವರಿಗೆ ಅವಕಾಶ ಕೊಡಲಾಯಿತೆ? ಉ- ಅದರ ಮಾಲೀಕರು ಯಾರೇ ಆಗಿರಲಿ ಆ ಸಂಸ್ಥೆಯ ಭದ್ರತೆ ನೋಡಿ ಕೊಡಲಾಯಿತು.

ಪ್ರ- ಇಂದಿನ ವಿನಿಮಯದ ಬೆಲೆ ಎಷ್ಟು? ಉ- ೧೦೭, ೧೦೮ ರೂ. ಇದೆ

ಪ್ರ- ದಳ್ಳಾಳಿಗಳಿಗೆ ಕಮಿಷನ್ ಎಷ್ಟು ಕೊಡಲಾಗುತ್ತಿದೆ? ಉ- ನೂರಕ್ಕೆ ಹನ್ನೆರಡಣೆ ಒಂದು ರೂಪಾಯಿ

ಪ್ರ- ಈ ಸಾಲ ಯಾತಕ್ಕಾಗಿ ಪಡೆಯಲಾಯಿತು? ಉ- ಯುದ್ಧಾನಂತರ ಪುನರ್ರಚನಾ ಕಾರ್ಯಗಳಿಗೆ

ರಾಜ್ಯಾಂಗ ರಚನಾ ಸಭೆ

ಭಾರತವನ್ನು ಸ್ವತಂತ್ರ ರಿಪಬ್ಲಿಕ್ ಆಗಿ ಘೋಷಿಸಬೇಕೆಂಬ ಪಂ|| ನೆಹರೂರವರ ನಿರ್ಣಯವು ಈ ದಿನ ರಾಜ್ಯಾಂಗ ರಚನಾ ಸಭೆಯಲ್ಲಿ ಚರ್ಚೆಗೆ ಬರಲಿದೆ. ಭಾರತವು ಸ್ವತಂತ್ರವೆಂದು ತಾತ್ಕಾಲಿಕ ಸರ್ಕಾರವು ಸ್ವತಂತ್ರ ಸರ್ಕಾರವಾಗಿ, ಇಷ್ಟು ದಿನವೂ ನಡೆಯುತ್ತಿದ್ದಂತೆ ಬ್ರಿಟಿಷ್ ರಾಜರ ಹೆಸರಿನಲ್ಲಿ ನಡೆಯದೆ ಭಾರತದ ಪ್ರಜೆಗಳ ಹೆಸರಿನಲ್ಲಿ ನಡೆಯಬೇಕೆಂದೂ, ಘೋಷಿಸುವಂತೆ ಕಮ್ಯೂನಿಸ್ಟ್ ಸದಸ್ಯರಾದ ಶ್ರೀ ಸೋಮನಾಥ ಲಹರಿಯವರು ತಿದ್ದುಪಡಿ ತಂದಿದ್ದಾರೆ. ಲೀಗು ಮತ್ತು ಸಂಸ್ಥಾನದ ಪ್ರತಿನಿಧಿಗಳು ಬರುವ ವರೆಗೂ ಈ ನಿರ್ಣಯದ ಚರ್ಚೆಯನ್ನು ಮುಂದುವರಿಸಬೇಕೆಂದು ಶ್ರೀ ಜಯಕರ್‌ರವರು ಸೂಚಿಸಿದ್ದಾರೆ

ನಿಲುವಳಿ ಸೂಚನೆಗಳ ತಳ್ಳುಪಡಿ

ಸಿರಾ ತಾ|| ಸಾಗರದ ಕಟ್ಟೆ ನವಂಬರ್ ೩ ರಲ್ಲಿ ಒಡೆದುಹೋದ ಬಗ್ಗೆ ಬಂದಿದ್ದ ನಿಲುವಳಿ ಸೂಚನೆಗೆ ಶ್ರೀ|| ಸಿದ್ದಪ್ಪನವರು ಉತ್ತರವಿತ್ತು ನಾಳೆ ದೆಸೆಯಿಂದ ಅದು ಆ ರೀತಿ ಆಯಿತೆಂದೂ ಇದರಲ್ಲಿ ಅಧಿಕಾರಿಗಳ ಪಾತ್ರವೇನೂ ಇಲ್ಲವೆಂದೂ ಹೇಳಿದರು ನಂತರ ಅಧ್ಯಕ್ಷರು ಇದನ್ನು ತಳ್ಳಿಹಾಕಿದರು

ಇತ್ತೀಚೆಗೆ ವಿಶ್ವ ವಿದ್ಯಾನಿಲಯದ ವಿದ್ಯಾರ್ಥಿಗಳು ನಡೆಸಿದ ಮುಷ್ಕರದ ಬಗ್ಗೆ ಬಂದಿದ್ದ ಸೂಚನೆಯನ್ನು ಅಧ್ಯಕ್ಷರು ತಳ್ಳಿಹಾಕಿದರು. ರಾಗಿ ಬೆಳೆಗೆ ಉಂಟಾಗಿರುವ ನಷ್ಟ ಮತ್ತು ಕೆಲವು ಕಡೆ ಕಟ್ಟೆ ಒಡೆದು ಹಂಚಿಕೆಯಾಗಿರುವ ವಿಚಾರದಲ್ಲಿ ಬಂದಿದ್ದ ನಿಲುವಳಿ ಸೂಚನೆಗಳನ್ನು ಸೋಮವಾರ ಆ ಖಾತೆಯ ಚರ್ಚೆ ದಿನವೇ ಇವೂ ಅಡಕವಾಗಲೆಂದು ಹೇಳಿ ತಳ್ಳಿಹಾಕಿದರು

ಚಿತ್ರದುರ್ಗ ಜಿಲ್ಲಾಧಿಕಾರಿಗಳು ಡಿಸೆಂಬರ್ ೧೫ ರೊಳಗೆ ಹೆಚ್ಚುವರಿ ಜೋಳ ಮತ್ತು ರಾಗಿಯನ್ನು ಸರ್ಕಾರಕ್ಕೆ ವಹಿಸಬೇಕೆಂದು ಮಾಡಿರುವ ಆಜ್ಞೆಯನ್ನು ಕುರಿತು ಕಾಂಗ್ರೆಸ್ ಪಕ್ಷದವರು ತಂದಿರುವ ನಿಲುವಳಿ ಸೂಚನೆಯನ್ನು ಈ ದಿನ ಸಂಜೆ ೪ ಘಂಟೆಗೆ ತೆಗೆದುಕೊಳ್ಳಲು ಅಧ್ಯಕ್ಷರು ಅವಕಾಶ ಕೊಟ್ಟಿದ್ದರು ಆದರೆ ಉಪಾಹಾರದ ವೇಳೆಗೆ ಸದರಿ ಜಿಲ್ಲಾಧಿಕಾರಿಗಳಿಗೆ ತಮ್ಮ ಆಜ್ಞೆಯನ್ನು ವಾಪಸು ತೆಗೆದುಕೊಳ್ಳಬೇಕೆಂದೂ, ಇದೇ ರೀತಿ ಇತರ ಜಿಲ್ಲಾಧಿಕಾರಿಗಳಿಗೂ ಆಜ್ಞೆ ಇತ್ತಿರುವುದಾಗಿಯೂ ಸರ್ಕಾರದ ಪರವಾಗಿ ತಿಳಿಸಲಾಯಿತು ಆದ್ದರಿಂದ ಈ ವಿಷಯವು ಇಂದು ಚರ್ಚೆಗೆ ಬರುವುದಿಲ್ಲ.

೪ ಕೋಟಿ ರೂ. ಲೇವಾದೇವಿ ಮುಳುಗಿ ಹೋಯಿತೇ?

ಸ್ವಂ.ಸು] ಬೆಂಗಳೂರು ೧೩

ಶ್ರೀಮಂತರಾದ ಧರ್ಮರತ್ನಾಕರ ಶ್ರೀ ಬಿ ಎನ್ ಗೋಪಾಲರಾಯರ ಲೇವಾದೇವಿಯ ವಿಚಾರವಾಗಿ ದೊಡ್ಡ ಕೋಲಾಹಲವೆದ್ದಿದೆ. ಅವರ ೪ ಕೋಟಿ ರೂ ಗಳ ಲೇವಾದೇವಿ ಮುಳುಗಿಹೋಯಿತೆಂದು ಜನರು ಹೇಳಿಕೊಳ್ಳುತ್ತಿದ್ದಾರೆ ಅವರ ಮನೆಯ ಮುಂದೆ ಪೋಲೀಸು ರಕ್ಷಣೆಯನ್ನು ಏರ್ಪಡಿಸಲಾಗಿದೆ.

ಭಾರತವನ್ನು ಬಿಟ್ಟು ಹೊರಡಲು ಚರ್ಚಿಲರ ಒತ್ತಾಯ?

ಬ್ರಿಟಿಷರು ಹಿಂದೂಸ್ಥಾನವನ್ನು ಸಂಪೂರ್ಣವಾಗಿ ಬಿಟ್ಟು ಹೋಗುವಂತೆ ಮಾಜಿ ಪ್ರಧಾನ ಮಂತ್ರಿ ಮಿ|| ಚರ್ಚಿಲರೇ ಪಾರ್ಲಿಮೆಂಟಿನಲ್ಲಿ ಒತ್ತಾಯ. ಪಡಿಸ ಬಹುದೆಂದು ಲಂಡನ್ನಿನ ವಾರ್ತೆಯೊಂದು ತಿಳಿಸುತ್ತದೆ ಬ್ರಿಟಿಷರ ಸಹಾಯವಿಲ್ಲದೆ ಆಡಳಿತವನ್ನು ನಡೆಸಲು ಸಾಧ್ಯವಿಲ್ಲವೆಂಬ ಅಭಿಪ್ರಾಯವು ಭಾರತದ ನಾಯಕರಿಗೆ ಉಂಟಾಗುವಂತೆ ಮಾಡುವುದೇ ಇವರ ಉದ್ದೇಶವೆಂದು ಹೇಳಲಾಗಿದೆ

ಅಣು ಬಾಂಬಿಗೆ ಎದುರೇ ಇಲ್ಲ

"ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ೧೦ ಸಹಸ್ರ ಅಣು ಬಾಂಬುಗಳು ಇವೆ. ಅವಕ್ಕೆ ತಲಾ ೨೦ ಲಕ್ಷ ಡಾಲರುಗಳು ತಗಲುವುವು ಪ್ರಪಂಚದಲ್ಲಿರುವ ಮುಖ್ಯವಾದ ನಗರಗಳನ್ನೆಲ್ಲಾ ನಾಶ ಮಾಡಬಹುದಾದಷ್ಟು ಅಧಿಕ ಸಂಖ್ಯೆಯಲ್ಲಿವೆ ಅಣು ಬಾಂಬಿಗೆ ನಿಜವಾಗಿಯೂ ಎದುರಾದ ಅಸ್ತ್ರವೇ ಇಲ್ಲ"-ಎಂದು ಅಣು ಬಾಂಬಿನ ಸಂಶೋಧನಾ ಪ್ರವೀಣರಾದ ಪ್ರೊ|| ಯುರೆಯರವರು ತಿಳಿಸಿದ್ದಾರೆ

ಕ್ಯಾಲೆಂಡರ್ ಸ್ವೀಕಾರ

ರಾಜಧಾನಿಯ ದೇವರಾಜ ಮಾರ್ಕೆಟ್ಟಿನ ಜಯಲಕ್ಷ್ಮಿ ಟ್ಯಾಂಗಲ್ ಸ್ಟೋರಿನವರು ಕಳುಹಿಸಿಕೊಟ್ಟಿರುವ ಸುಭಾಷ್ ಚಂದ್ರಬೋಸರ ಭಾವಚಿತ್ರದಿಂದೊಡಗೂಡಿದ ಸುಂದರವಾದ ೧೯೪೭ ನೇ ಇಸವಿ ಕ್ಯಾಲೆಂಡರನ್ನು ನಾವು ಅತ್ಯಂತ ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ

ಹರಿಕಥೆ

ನಾಳೆ ರಾತ್ರಿ ವಿ. ವಿ ಪುರಂನ ರಸ್ತೆಯಲ್ಲಿರುವ ಪ್ರಜ್ಞಾನಂದಸ್ವಾಮಿಗಳ ಮನೆಯ ಮುಂಭಾಗದಲ್ಲಿ ಶ್ರೀ ಸೀತಾ ಮಹಾಭಾ...

ಪಾರ್ಲಿಮೆಂಟಿನಲ್ಲಿ ಭಾರತದ ಬಗ್ಗೆ ಚರ್ಚೆ

ಭಾರತದ ಬಗ್ಗೆ ಪಾರ್ಲಿಮೆಂಟಿನಲ್ಲಿ ೨ ದಿನಗಳ ಚರ್ಚೆಗೆ ಅವಕಾಶ ಕೊಡಬೇಕೆಂದು ಮಿ|| ಚರ್ಚಿಲ್‌ರವರು ಕರೆ ಕೊಟ್ಟಿದ್ದರಿಂದ ಸಭಾ ನಾಯಕರು ಅದಕ್ಕೆ ಒಪ್ಪಿಗೆ ಇತ್ತಿದ್ದಾರೆ. ನಿನ್ನೆ ಚರ್ಚೆ ಆರಂಭವಾಯಿತು. ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್, ರಾಜಕುಮಾರಿ ಅಮೃತಕೌರ್, ಮಿ|| ಜಿನ್ನಾ, ಮಿ|| ಲಿಯಾಕತ್ ಅಲಿಖಾನರು ಕಾಮನ್ಸ್ ಸಭಾ ಭವನದಲ್ಲಿ ನಿನ್ನೆ ಭಾರತದ ಚರ್ಚೆಯನ್ನು ವೀಕ್ಷಿಸಿದರು.

ಸಿಂಧ್ ಚುನಾವಣೆ

ಸಿಂಧ್ ಶಾಸನ ಸಭಾ ಚುನಾವಣೆಯಲ್ಲಿ ಲೀಗ್ ಅಭ್ಯರ್ಥಿಗಳೇ ಬಹು ಸಂಖ್ಯಾತರಾಗಿ ಚುನಾಯಿತರಾಗುತ್ತಿರುವ ಸುದ್ದಿ ಬರುತ್ತಿದೆ ವಿರೋಧ ಪಕ್ಷದ ನಾಯಕರಾದ ಶ್ರೀ ಜಿ ಎಂ. ಸೈಯದ್‌ರವರು ಪರಾಜಿತರಾಗಿದ್ದಾರೆ ಇದುವರೆಗಿನ ಫಲಿತಾಂಶದಂತೆ ಲೀಗ್ ೩೮, ಕಾಂಗ್ರೆಸ್ ೧೬, ರಾಷ್ಟ್ರೀಯ ಮುಸ್ಲಿಂ ೨, ಯೂರೋಪಿಯನ್ ೩, ಸ್ಥಾನಗಳು ದೊರೆತಿವೆ

ಘನವಾದ ವೀಣಾ ವಾದನ

ರಾಜಧಾನಿಯ ಅಮೆಚೂರ್ ಕಲಾ ಶಾಲೆಯವರು ತಮ್ಮ ಸಂಸ್ಥೆಯ ನಿಧಿಗಾಗಿ ಧನ ಸಂಗ್ರಹಿಸಲು ನಿನ್ನೆ ಸಂಜೆ ಟೌನ್‌ಹಾಲಿನಲ್ಲಿ ಶ್ರೀಮತಿ ಪೀಲಮ್ಮ ಕಡಾಂಬಿಯವರ ವೀಣಾ ವಾದನವನ್ನು ಏರ್ಪಡಿಸಿದ್ದರು. ಶ್ರೀ ರಾಮಚಂದ್ರರಾವ ಘೋರ್ಪಡೆಯವರು ಸಭಾಧ್ಯಕ್ಷತೆಯನ್ನು ವಹಿಸಿ ಕಲಾ ಶಾಲೆಯ ಕಾರ್ಯವನ್ನು ಪ್ರಶಂಸಿಸಿದರು ಸಂಗೀತವು ಅತ್ಯಂತ ಅಮೋಘವಾಗಿದ್ದಿತು.

ಕೆಮಿಕಲ್ ಮತ್ತು ಫರ್ಟಿಲೈಸರ್ಸ್ ಕೆಲಸಗಾರರ ಸಂಘ

ಮೇಲ್ಕಂಡ ಸಂಘದ ಸರ್ವ ಸದಸ್ಯರ ಸಭೆಯು ಕೆಲವು ದಿನಗಳ ಕೆಳಗೆ ನಡೆದು ಶ್ರೀಗಳಾದ ಎಂ. ಎಸ್ ಜೋಸೆಫ್ ಅಧ್ಯಕ್ಷರಾಗಿಯೂ, ಎ. ಪಿ. ಕೃಷ್ಣಸ್ವಾಮಿಯವರು ಉಪಾಧ್ಯಕ್ಷರಾಗಿಯೂ, ವೈ. ಎಲ್ ನಾರಾಯಣರಾಯರು ಕಾರ್ಯದರ್ಶಿಗಳಾಗಿಯೂ, ಆರ್. ಎಸ್ ಸಿಂಗ್ ಸಹ ಕಾರ್ಯದರ್ಶಿಗಳಾಗಿಯೂ, ಕೆ. ರಾಮಚಂದ್ರನ್ ರವರು ಖಜಾಂಚಿಗಳಾಗಿಯೂ, ೫ ಮಂದಿ ಕಾರ್ಯನಿರ್ವಾಹಕ ಸಮಿತಿ ಸದಸ್ಯರಾಗಿಯೂ ಚುನಾಯಿತರಾದರು. ವಿಸ್ತೃತ ವಿಜಯೋತ್ಸವದ ಅಂಗವಾಗಿ ೨ ತಿಂಗಳ ಬೋನಸ್ ಕೊಡಬೇಕೆಂದು ಕೇಳುವ ನಿರ್ಣಯವೂ ಅಂಗೀಕಾರವಾಯಿತು.

ಶಾರದಾ ದೇವಿಯವರ ಜನ್ಮದಿನ

ವಾಣೀ ವಿಲಾಸ ಮೊಹಲ್ಲಾ ಶ್ರೀ ರಾಮಕೃಷ್ಣಾಶ್ರಮದಲ್ಲಿ ನಾಳೆ ಸಂಜೆ ೪ ಗಂಟೆಯಿಂದ ಮಹಾಮಾತೆ ಶ್ರೀ ಶಾರದಾ ದೇವಿಯವರ ಜನ್ಮದಿನವನ್ನು ಆಚರಿಸಲಾಗುವುದು ಆ|| ವಿ|| ಬಿ ದೇವೇಂದ್ರಪ್ಪನವರ ಸಂಗೀತವೂ ಶ್ರೀಮಾತೆಗಳಾದ ಪ ಬೋಧರವರ್ಯ, ಕಮಲಮ್ಮ ಮತ್ತು ಸ್ವಾಮಿ ರಂಗನಾಥಾನಂದರಿಂದ ಉಪನ್ಯಾಸವೂ ಜರಗುವುವು. ಸರ್ವರೂ ದಯಮಾಡಿಸಬೇಕಾಗಿ ಕೋರಲಾಗಿದೆ

ಯಾರಿಂದ "ಸತಿ ಅನಸೂಯಾ" ಎಂಬ ಹರಿಕಥೆಯು ನಡೆಸಲ್ಪಡುತ್ತವೆ ಸರ್ವರಿಗೂ ಸ್ವಾಗತವಿದೆ

ಸಾಧ್ವಿ

ತಾ॥ ೧೩-೧೨-೪೬ ಶುಕ್ರವಾರ

ಬೆಲ್ಲದ ಬೆಲೆ

ಸಕ್ಕರೆಗಿಂತಲೂ ಬೆಲ್ಲವು ಅಧಿಕ ಬೆಲೆಗೆ ಮಾರಾಟವಾಗುತ್ತಿದ್ದ ವಿಷಯವಾಗಿ ಅನೇಕ ಪುಕಾರುಗಳು ಬರುತ್ತಿದ್ದುವು. ಇದರ ಮೇಲೆ ಸರ್ಕಾರದವರು ಬೆಲ್ಲದ ಬೆಲೆಯನ್ನು ನಿಗದಿ ಮಾಡಿ ಆಜ್ಞೆಯೊಂದನ್ನು ಹೊರಡಿಸಿರುತ್ತಾರೆ ಮಣ ಒಂದಕ್ಕೆ ೭ ರೂ. ನಂತೆ ಬೆಲ್ಲವನ್ನು ಮಾರಬೇಕೆಂದು ವಿಧಾಯಕ ಮಾಡಿರುತ್ತಾರೆ. ಇದನ್ನು ಸಕಲರೂ ಸ್ವಾಗತಿಸುವರು.

ಬೆಲೆ ನಿಗದಿ ಮಾಡುವುದು ಒಂದು ಅಗತ್ಯವಾದ ವಿಷಯವೇ ಸರಿ ಆದರೆ ಅದನ್ನು ಜಾರಿಗೆ ಕೊಡುವ ವಿಷಯಕ್ಕೂ ಸಹ ಅಧಿಕಾರಿಗಳು ಪೂರ್ಣ ಗಮನ ಕೊಡಬೇಕು ಬೆಲ್ಲವು ಹತ್ತು ಹನ್ನೆರಡು ರೂ. ನಂತೆ ಮಣ ಒಂದಕ್ಕೆ ಮಾರಾಟವಾಗುತ್ತಿತ್ತು. ಹಬ್ಬ ಹರಿ ದಿನಗಳ ಸಮಯದಲ್ಲಿ ಒಂದೊಂದು ಅಚ್ಚಿಗೆ ಆರಾಣೆ, ಎಳಾಣೆಯಂತೆಯೂ ಮಾರಾಟವಾಗುತ್ತಿತ್ತು. ಸಕ್ಕರೆಗಿಂತಲೂ ಬೆಲ್ಲದ ಬೆಲೆಯೇ ಅಪಾರವಾಗಿ ಹೆಚ್ಚಾಗಿತ್ತು. ಇದರ ಪರಿಣಾಮವಾಗಿ ಸಕ್ಕರೆಗೆ ಗಿರಾಕಿಗಳು ಹೆಚ್ಚಿ ಅದೂ ಕೂಡ ದೊರೆಯುವುದು ದುರ್ಲಭವಾಯಿತು ಆದುದರಿಂದ ಸಾರ್ವಜನಿಕರಲ್ಲಿ ವಿಶೇಷ ಕೋಲಾಹಲವು ಎದ್ದಿತು.

ನ್ಯಾಯವಿಧಾಯಕ ಸಭೆಯಲ್ಲಿಯೂ ಸಹ ಬೆಲ್ಲದ ಬೆಲೆಯ ಹತೋಟಿ ವಿಷಯದಲ್ಲಿ ವಿಶೇಷ ಚರ್ಚೆಗಳು ಬಂದುವು. ಕಬ್ಬನ್ನು ಬೆಳೆಯುತ್ತಿರುವ ರೈತರುಗಳ ಕಷ್ಟಗಳನ್ನೂ ಸಹ ವಿವರಿಸಲಾಯಿತು. ವ್ಯವಸಾಯದ ವೆಚ್ಚಗಳಿಗಾಗಿ ವಿಶೇಷ ಹಣವು ವೆಚ್ಚವಾಗಲಿರುವ ಈ ಸಮಯದಲ್ಲಿ ಬೆಳೆಯುವ ರೈತನಿಗೂ ಸೂಕ್ತವಾದ ಪರಿಹಾರ ದೊರೆಯುವಂತೆ ಮಾಡಬೇಕೆಂದು ಸೂಚಿಸಲಾಯಿತು. ಈ ಅಭಿಪ್ರಾಯವು ಸಕಲರಿಗೂ ಮಾನ್ಯವಾದುದು. ಆದರೆ ಈಗ ಆಗುತ್ತಿರುವುದು ರೈತನ ಹಿತ ಸಾಧನೆಯಲ್ಲ; ಮಧ್ಯವರ್ತಿಗಳಾದ ದಳ್ಳಾಳಿಗಳ ಅಧಿಕ ಲಾಭದ ಸೂರೆ ಇದನ್ನು ತಪ್ಪಿಸಿ ಬಡ ಬೇಸಾಯಗಾರರಿಗೂ, ಬಡ ಜನರಿಗೂ ಸಹಾಯವಾಗುವಂತೆ ಮಾಡುವುದು ಅಗತ್ಯ.

ಬೆಲೆಯನ್ನು ನಿಗದಿ ಮಾಡಿರುವುದು ಯುಕ್ತವಾಗಿದೆ ಆದರೆ ಅಧಿಕ ಲಾಭದ ಮಾರಾಟಗಳ ಸಂಬಂಧದಲ್ಲಿ ಕಲ್ಪಿಸಲಾದ ಬೆಲೆ ಹತೋಟಿಯ ಪ್ರಸಂಗಗಳಲ್ಲೆಲ್ಲಾ ಸದರಿ ಸಾಮಗ್ರಿಗಳಿಗೆ ಅಭಾವವುಂಟಾಗಿ ಅವು ಪೇಟೆಯಿಂದಲೇ ಮಾಯವಾಗುವುದೂ ಉಂಟು; ದೇಶದಿಂದ ಹೊರಕ್ಕೆ ಹೋಗುವುದೂ ಉಂಟು ಇದನ್ನು ತಡೆಗಟ್ಟುವುದು ಆವಶ್ಯಕ ಮುಖ್ಯವಾಗಿ ಬೆಲೆ ಹತೋಟಿಯ ಪ್ರಯೋಜನವು ಮಹಾ ಜನಗಳಿಗೆ ಸಂಪೂರ್ಣವಾಗಿ ದೊರೆತು ತಮ್ಮ ಆಜ್ಞೆಯು ಕಾರ್ಯತಃ ಜಾರಿಗೆ ಬರುವಂತೆ ಸರ್ಕಾರದವರು ಏರ್ಪಡಿಸಬೇಕೆಂದು ನಾವು ಕೋರುತ್ತೇವೆ

Edited, printed and published by
A. N. Nagarajau at the Sadhvi Press
D-Subbiah Road, Mysore.

ಕಾಂಗ್ರೆಸ್ಸೇತರರಿಗೆ ಓಟಿನ ಸ್ವಾತಂತ್ರ್ಯ

ರಾಜ್ಯಾಂಗ ರಚನಾ ಸಭೆಯಲ್ಲಿ ಕಾಂಗ್ರೆಸ್ ಬೆಂಬಲದಿಂದ ಚುನಾಯಿತರಾಗಿರುವ ಸ್ವತಂತ್ರರು ತಮ್ಮ ಇಚ್ಛಾನುಸಾರ ಓಟಿನ ಹಕ್ಕನ್ನು ಚಲಾಯಿಸಲು ಕಾಂಗ್ರೆಸ್ ಪಕ್ಷವು ಅವರಿಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟಿರುವುದಾಗಿ ವರದಿಯಾಗಿದೆ.

ಸ್ಕೌಟುಗಳ ಗುಂಪು ದಿನಾಚರಣೆ

ರಾಜಧಾನಿಯ ಲಕ್ಷ್ಮೀಪುರ ಮಾಧ್ಯಮಿಕ ಶಾಲೆಯ ಸ್ಕೌಟ್ ದಳದವರು ಗುಂಪು ದಿನಾಚರಣೆಯನ್ನು ಇದೇ ೧೪ ನೇ ತಾ॥ ಸಂಜೆ ೪-೩೦ ಕ್ಕೆ ಸದರಿ ಶಾಲೆ ಆವರಣದಲ್ಲಿ ನಡೆಸುವರು. ನಗರಾಧ್ಯಕ್ಷರಾದ ಶ್ರೀ ರಾಮಚಂದ್ರರಾವ್ ಬೊಂಭೋರೆಯವರು ಅಗ್ರಾಸನವನ್ನು ವಹಿಸುವರು.

ರಾಗಿ ಬೆಳೆಗೆ ನಷ್ಟ

ಸ್ವಂ. ಸು] ಬಿಡಿನಾವೆ ೧೧

ರೆವಿನ್ಯೂ ಇನ್ಸ್‌ಪೆಕ್ಟರುಗಳು ಈ ಊರಿನಲ್ಲಿ ಸರಾಸರಿ ಬೆಳೆ, ೧೦, ೧೨, ೧೪ ಆಣೆ ಯಂತೆ ಇದೆಯೆಂದು ಅಂದಾಜು ಹಾಕಿ ವರದಿ ಮಾಡಿದ್ದಾರೆಂದು ತಿಳಿದು ಬಂದಿದೆ. ಇದು ಸರಿಯಲ್ಲ. ಮಳೆ ಇನ್ನೂ ಹುಯ್ಯುತ್ತಲೇ ಇದೆ. ಹೊಲಗಳಲ್ಲಿ ಒಂದು ಗೇಣು ನೀರು ನಿಂತಿದೆ. ಮೊದಲೇ ಮೆದೆ ಹಾಕಿದ್ದವರ ಪಾಡು ಹೇಳತೀರದು, ಅವೆಲ್ಲ ಹುಲು ಬಿದ್ದು ಹಾಳಾಗಿ ಹೋಗಿವೆ.

ಕಂಪಾಜಿಟರು ಬೇಕು

ಕನ್ನಡ ಮತ್ತು ಇಂಗ್ಲಿಷ್ ಬಲ್ಲ ಅನುಭವಸ್ಥರಾದ ಕಂಪಾಜಿಟರು ಬೇಕು ಸಿಲಿಂಡರ್ ಮಿಷನ್ನಿನಲ್ಲಿ ಪ್ರಿಂಟ್ ಮಾಡುವ ಅನುಭವವಿದ್ದರೆ ಉತ್ತಮ ಕೂಡಲೇ ಬಂದು ನೋಡಿರಿ, ವ್ಯವಸ್ಥಾಪಕ, ಸಾಧ್ವಿ.

ಬಡ ವಿದ್ಯಾರ್ಥಿಗಳ ಸಹಾಯಾರ್ಥವಾಗಿ ಮೈಸೂರು ವಿಶ್ವ ವಿದ್ಯಾನಿಲಯ ಸಂಘದ ಆಶ್ರಯದಲ್ಲಿ

ಬೆಂಗಳೂರಿನ

ಛಾಯಾ ಆರ್ಟಿಸ್ಟರುಗಳು

16-12-46 ನೇ ಸೋಮವಾರ

ಸಂಜೆ 6-30 ಘಂಟೆಗೆ

ಗುಂಡಾಡಿ - - ಗುಂಡ

ಎಂಬ ನಾಟಕವನ್ನು

ಟೌನ್ ಹಾಲಿನಲ್ಲಿ

ಪ್ರದರ್ಶಿಸುವರು.

-: ಪ್ರವೇಶ ಧನ :-

ರೂ. 10, 5, 3, 2 ಮತ್ತು 1.

ಸರ್ವರೂ ದಯಮಾಡಿಸಿ ಪ್ರೋತ್ಸಾಹಿಸ ಬೇಕಾಗಿ ಕೋರಲಾಗಿದೆ

ಹಳೇನಾಡು ಕರ್ನಾಟಕರಿಗೆ ಅವಕಾಶ

ಹಳೇನಾಡು ಕರ್ನಾಟಕ ವಿದ್ಯಾರ್ಥಿಗಳನ್ನು ಚಾಮರಾಜನಗರದ ವೇದ ಪಾಠಶಾಲೆಗೆ ಸೇರಿಸಿಕೊಳ್ಳಲು ಅನುಮತಿ ಇತ್ತಿರುವ ಸರ್ಕಾರಿ ಆಜ್ಞೆಯನ್ನು ಸ್ವಾಗತಿಸಿ, ಈ ಕಾರ್ಯದಲ್ಲಿ ಸಹಾಯ ಮಾಡಿದ ಎಲ್ಲಾ ಧರ್ಮದರ್ಶಿಗಳಿಗೂ, ಸ್ಥಳೀಯ ಅಧಿಕಾರಿಗಳಿಗೂ, ಮೈಸೂರು ಜಿಲ್ಲಾಧಿಕಾರಿಗಳಿಗೂ, ಮುಜರಾಯಿ ಕಮೀಷನರಿಗೂ ಮತ್ತು ರೆವಿನ್ಯೂ ಮಂತ್ರಿಗಳಿಗೂ, ಇತರರಿಗೂ ಶ್ರೀ ತಗಡೂರು ರಾಮಚಂದ್ರರಾಯರು ತಮ್ಮ ಹೃತ್ಪೂರ್ವಕ ಧನ್ಯವಾದಗಳನ್ನರ್ಪಿಸಿದ್ದಾರೆ. ಮುಜರಾಯಿ ಇಲಾಖೆಗೆ ಸೇರಿದ ಎಲ್ಲಾ ಪಾಠಶಾಲೆಗಳಿಗೂ, ಮತ್ತು ಮೈಸೂರು ಸಂಸ್ಕೃತ ಪಾಠಶಾಲೆಗೂ, ಇದೇ ಮೇಲ್ಪಂಕ್ತಿಯಾಗಲೆಂದು ಆಶಿಸಿರುತ್ತಾರೆ

ಸಾಧ್ವಿ

ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ

ಕೂಡಲೇ ಚಂದಾದಾರರಾಗಿರಿ

(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)

ಜಾಹಿರಾತಿನ ದರಗಳಿಗೆ

ವಿಚಾರಿಸಿರಿ

ಹರಾಜು ಇಸ್ತಿಹಾರು

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಆಫೀಸ್ ಛೇರ್ಮನ್ ರವರಿಂದ:-

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ —

ಮೈಸೂರು ಸಿಟಿ ದೇವರಾಜ ಮೊಹಲ್ಲಾ ಲ್ಯಾನ್ಸ್‌ಡೌನ್ ಬಿಲ್ಡಿಂಗಿನ ಹಿಂಭಾಗದಲ್ಲಿ ಟ್ರಸ್ಟ್ ಬೋರ್ಡಿನವರು ಅಕ್ವೈರ್ ಮಾಡಿಕೊಂಡಿರುವ ಮನೆಗಳ ಪೈಕಿ ಮುನಿಸಿಪಲ್ ಡೋರ್ ನಂ. ೭೦, ೧೨೩, ೧೨೩-೧ ಮತ್ತು ೧೭೩-೩ ನೇ ಮನೆಗಳನ್ನು ಒಡೆಯಿಸಿರುತ್ತೆ. ಅದರ ಸಾಮಾನುಗಳನ್ನು ತಾ॥ ೧೫-೧೨-೧೯೪೬ ನೇ ತಾರೀಖು ಭಾನುವಾರದ ಲಾಗಾಯಿತು ಪ್ರತಿ ದಿನವೂ ಬೆಳಗ್ಗೆ ೯ ಘಂಟೆಯಿಂದ ಮಧ್ಯಾಹ್ನ ೧ ಘಂಟೆ ವರೆವಿಗೆ ಬಹಿರಂಗವಾಗಿ ಹರಾಜು ಹಾಕಲಾಗುತ್ತೆ. ಇಷ್ಟ ಉಳ್ಳವರು ಖುದ ಹಾಜರಾಗಿ ಕೂಗಿ ಮಾಲುಗಳನ್ನು ಪಡೆಯಬಹುದು.

ಆರ್. ಎಸ್. ರಾಜು,

ಛೇರ್ಮನ್ನರಿಗಾಗಿ

ರಾಜಕಮಲ್, ಮೈಸೂರು

೧೩-೧೨-೪೬ ರಿಂದ ೫ ನೇ ಅಮೋಘವಾದ ವಾರ

ಡಾಕ್ಟರ್ ಕೊಟ್ನಿಸ್ ಕಿ ಅಮರ್ ಕಹಾನಿ

ಮುಖ್ಯ ಭೂಮಿಕೆ:- ಜಯಶ್ರೀ, ಶಾಂತಾರಾಂ, ಮುಂತಾದವರು

ತಾ॥ ೧೬-೧೨-೪೬ ರಿಂದ ೪ ದಿನಗಳು ಪ್ರತಿದಿನ: ಪ್ರಾತಃಕಾಲ, ೧೦-೩೦ ಕ್ಕೆ ನ್ಯೂಥಿಯೇಟರ್ಸ್‌ನವರ “ ವಿದ್ಯಾಪತಿ ”

ತಾರಾಗಣ: ಕಾನನಬಾಲ, ಪಹರಿಸನ್ಯಾಲ್, ಕೆ. ಸಿ. ಡೇ

OPERA TALKIES
Daily 3 Shows
From 13—12—1946
JAMES NEWILL, CAROL HUGHES and LIGHTNING (The wonder dog)
in
RENFREW OF THE ROYAL MOUNTED
and
KILLERS OF THE SEA
With
Capt Wallace Casewell

Morning show from 13-12-46
When Strangers Marry

ಟಿ. ಸಿ. ನಟರಾಜ್
ಔಷಧಾಲಯ

ಚಿಕಿತ್ಸೆ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅಗತ್ಯವಾಗಿ ಬೇಕಾದ ಎಲ್ಲಾ ಇಂಗ್ಲೀಷ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದೀಯ ಔಷಧಗಳೆಲ್ಲವೂ ದೊರೆಯುತ್ತವೆ.

ಸಂಸ್ಸಿನಲ್ಲಿ ಭಾರತದ ಚರ್ಚೆ

...ರತದ ಬಗ್ಗೆ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಮೊನ್ನೆ ಚರ್ಚೆ ಆರಂಭವಾಯಿತು ... ಮತ್ತು ಕಾಂಗ್ರೆಸ್ಸಿನಲ್ಲಿ ಪರಸ್ಪರ ... ಮತ್ತು ಭೀತಿಗಳಿದ್ದರೂ ಮುಂದೆ ...ಲ್ಲೊಂದು ದಿನ ಈ ಸಂಸ್ಥೆಗಳ ಪ್ರತಿನಿಧಿಗಳು ರಾಜ್ಯಾಂಗ ರಚನಾ ಸಭೆಯಲ್ಲಿ ಮ... ಪ್ರಾಂತ್ಯಗಳ ಗುಂಪುಗಳಲ್ಲಿ ಒಟ್ಟಿಗೆ ಸೇ...ರುವ ಆಸೆಯನ್ನು ಸರ್ ಕ್ರಿಪ್ಸರು ಚ...ಯನ್ನು ಆರಂಭಿಸುತ್ತಾ ತಿಳಿಸಿದರು ಇ... ಮುಂದುವರಿಯುತ್ತಾ ಈ ಎರಡು ...ನ ಸಂಸ್ಥೆಗಳು ಪರಸ್ಪರ ಸಹಕರಿಸ...ಂದ ಮಾತ್ರ ಭಾರತದ ಹೊಸ ರಾ...ಗವು ಸಮಾಧಾನಕರವಾಗಿ ತಯಾರಾ...ದೆಂದು ಹೀಗೆಂತಲೂ ಈಗ ಚ...ಗ ದುನವಟ್ಟಾಗಿರುವುದಾಗಿ ತಿಳಿಸಿದರು ...ಥ ಪಕ್ಷದ ನಾಯಕರಾದ ಮಿ|| ಚರ್ಚಿಲ್‌ರವರು ಭಾರತದಲ್ಲಿ ಕೋಮುವಾರು ಕ...ಗಳು ತಲೆ ಎತ್ತಿ ರಕ್ತದ ಕೋಡಿ ಹರಿ...ಲು ಬ್ರಿಟಿಷ್ ಕಾರ್ಮಿಕ ಸರ್ಕಾರವು ...ಗ್ರೆಸ್ಸಿಗೆ ಅಧಿಕಾರ ವಹಿಸಿದ್ದೇ ಕಾರಣ...ತೆಂದು ತಿಳಿಸಿದರು. ಹಿಂದೂಸ್ಥಾನ ಬ್ರಿಟಿಷ್ ಸಾಮ್ರಾಜ್ಯವು ಲಯವಾಗು...ವ ಈ ಕಾಲದಲ್ಲಿ ನಾವು ಸುಮ್ಮನೆ ...ಬಾರದೆಂಬ ಉದ್ದೇಶದಿಂದಲೇ ಈ ಚ... ಅವಶ್ಯಕವಾಗಿತ್ತೆಂದು ಚರ್ಚಿಲರು ಸಾ...ರು

ಸ್ವತಂತ್ರ ಭಾರತದಲ್ಲಿ ಸ್ವಧರ್ಮ ರಕ್ಷಣೆ

ಅಖಿಲ ಭಾರತ ಧರ್ಮ ಪೀಠಗಳ ಪ್ರಥಮ ಸಮ್ಮೇಳನದ ಅಧ್ಯಕ್ಷ ಪೀಠದಿಂದ ಪೂರಿ ಗೋವರ್ಧನ ಪೀಠಾಧ್ಯಕ್ಷರಾದ ಶ್ರೀ ಶಂಕರಾಚಾರ್ಯರವರು ಮೊನ್ನೆ ಮದ್ರಾಸಿನ ಭಾಷಣ ಮಾಡಿ ಹೊಸದಾಗಿ ರಚಿತವಾಗುವ ಹೊಸ ರಾಜ್ಯಾಂಗದಲ್ಲಿಯೇ ಆಗ ಹಿಂದುಗಳು ತಮ್ಮ ಅನೂಚಾನವಾದ ...ಮದಲ್ಲಿ ಸನಾತನ ಧರ್ಮಾಚರಣೆಯ ಕೈಗೊಳ್ಳಲು ಸಂಪೂರ್ಣ ಅಧಿಕಾರವಿರಬೇಕೆಂದು ಪ್ರತಿಪಾದಿಸಿದರು ಸ್ವರಾಜ್ಯಕ್ಕೆ ಸ್ವಧರ್ಮವೇ ಅಡಿಗಲ್ಲೆಂದು ಸಾರಿ ಮತಾಂತರಗೊಳಿಸಲ್ಪಟ್ಟಿರುವ ಪೂ...ಜಾಬಿನ ಹಿಂದುಗಳನ್ನು ಶುದ್ಧಿ ಮಾಡಿ ಸ್ವಧರ್ಮಕ್ಕೆ ಸೇರಲು ಅವಕಾಶಕಲ್ಪಿಸಬೇಕೆಂದೂ ಸೂಚಿಸಿದರು.

ಕಾಂಗ್ರೆಸ್ಸಿಗೆ ಕಮ್ಯೂನಿಸ್ಟರ ಬೆಂಬಲವೇ ?

ಭಾರತದ ಕಮ್ಯೂನಿಸ್ಟ್ ಪಕ್ಷದವರು ಇನ್ನು ಮುಂದೆ ಮಿ|| ಜಿನ್ನಾ ರವರಿಗೆ ಬೆಂಬಲ ಕೊಡದೆ, ಬ್ರಿಟಿಷ್ ಸರ್ಕಾರದ ಮೇಲೆ ಕಾಂಗ್ರೆಸ್ಸು ಚಳುವಳಿ ಹೂಡುವುದಾದರೆ ಅವರ ಜೊತೆಯಲ್ಲಿ ಸೇರಬೇಕೆಂದು ನಿರ್ಧರಿಸಿದ್ದಾರೆಂದು ಗೊತ್ತಾಗಿದೆ. ತಮಗೊದಗಿರುವ ಅಸಮಂಧಾನ ಪರಿಸ್ಥಿತಿಯಿಂದ ಪಾರಾಗಲು ಇದೊಂದೇ ಮಾರ್ಗವೆಂದು ಅವರು ಯೋಚಿಸಿದ್ದಾರೆಂದು ವರದಿಯಾಗಿದೆ

ಉಪನ್ಯಾಸ

ರಾಜಧಾನಿಯ ಶ್ರೀ ಶಂಕರ ಜಯಂತೀ ಮಹೋತ್ಸವ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೬|| ಘಂಟೆಗೆ ಸಂಸ್ಕೃತ ಪಾಠಶಾಲೆಯ ಮಹಾ ವಿದ್ವಾನ್ ಸಾಹಿತ್ಯ ರತ್ನಂ ವೇ|| ಶ|| ಗೋಪಾಲಕೃಷ್ಣ ಶಾಸ್ತ್ರಿಗಳು ದಶ ಶ್ಲೋಕೀ ಗ್ರಂಥದ ಮತ್ತು ೧೦ನೇ ಶ್ಲೋಕಗಳ ಮೇಲೆ ಉಪನ್ಯಾಸ ಮಾಡುವರು

ಪು|| ಸಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೫] ಶನಿವಾರ ೧೪—೧೨—೪೬ [ಸಂಚಿಕೆ ೧೧೧

ದಂಡಿನ ಪೊಲೀಸ್ ಅಧಿಕಾರಿಗಳ ದಸ್ತಗಿರಿ

ಸೂಚನೆ

ಮೈಸೂರು ನಗರದ ಪತ್ರಿಕೋದ್ಯೋಗಿಗಳ ಸಂಘದ ವಾರ್ಷಿಕೋತ್ಸವದ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ — ವ್ಯವಸ್ಥಾಪಕ

ಶ್ರೀ ಬಿ.ಎನ್. ಗೋಪಾಲ ರಾಯರ ಲೇವಾದೇವಿ

ನಿಲುವಳಿ ಸೂಚನೆಗೆ ಅವಕಾಶವಿಲ್ಲ

ಸ್ವಂ ಸು.ಪ್ರೋ|] ಬೆಂಗಳೂರು ೧೪

ಧರ್ಮಪ್ರಕಾಶ ಬಿ ಎನ್ ಗೋಪಾಲರಾಯರ ಲೇವಾದೇವಿ ಮುಳುಗಿಹೋದದ್ದರಿಂದ ಸಂಸ್ಥಾನದ ಮತ್ತು ಹಲವು ಹೊರಗಿನವರಿಗೆ ಉಂಟಾಗಿರುವ ಅಪಾರ ನಷ್ಟವನ್ನು ಪರಿಶೀಲಿಸಲು ಶ್ರೀ ಹೆಚ್.ಆರ್ ಗುರುವಾರೆಡ್ಡಿಯವರು ನಿಲುವಳಿ ಸೂಚನೆಯನ್ನು ತಂದಿದ್ದರು ಸರ್ಕಾರದ ಪರವಾಗಿ ಸಚಿವ ಶ್ರೀ ಶೇಷಾದ್ರಿಯವರು ಮಾತನಾಡಿ, ಈ ಪ್ರಸಂಗದಲ್ಲಿ ಸರ್ಕಾರದ ಕರ್ತವ್ಯಲೋಪವೇನೂ ಇಲ್ಲವೆಂದೂ, ಈ ವಿಚಾರ ಇನ್ನೂ ಊಹಾಪೋಹದ ಹಂತದಲ್ಲೇ ಇರುವುದರಿಂದ ಈ ಬಗ್ಗೆ ಚರ್ಚೆ ನಡೆಸುವುದರಿಂದ ಉಪಯೋಗವೇನೂ ಇಲ್ಲವೆಂದೂ ಆ ವ್ಯವಹಾರಕ್ಕೆ ಸಂಬಂಧಪಟ್ಟವರ ದೃಷ್ಟಿಯಿಂದಲೂ ಚರ್ಚೆ ಹಿತಕಾರಿಯಲ್ಲವೆಂದೂ ಸೂಚಿಸಿ ಸೂಚನೆಯನ್ನು ತಳ್ಳಿಹಾಕಬೇಕೆಂದು ಅಧ್ಯಕ್ಷರನ್ನು ಪ್ರಾರ್ಥಿಸಿದರು ಸಚಿವರ ಅಭಿಪ್ರಾಯವನ್ನು ಎತ್ತಿಹಿಡಿದು ಅಧ್ಯಕ್ಷರು ನಿಲುವಳಿ ಸೂಚನೆಯನ್ನು ತಳ್ಳಿಹಾಕಿದರು.

ಜವಹರರು ಪ್ರಶಸ್ತಿಯನ್ನು ಉಪಯೋಗಿಸುವುದಿಲ್ಲ

ಕಾಶಿ ವಿಶ್ವವಿದ್ಯಾನಿಲಯದವರು ನಾಳೆ ನಡೆಯುವ ಘಟಿಕೋತ್ಸವದಲ್ಲಿ ಪಂ|| ನೆಹರೂರವರಿಗೆ ಡಾಕ್ಟರ್ ಎಂಬ ಗೌರವ ಪ್ರಶಸ್ತಿಯನ್ನು ಕೊಡುವರು. ಇದು ಗೌರವಕ್ಕಾಗಿ ತಮಗೆ ಕೊಡಲ್ಪಡುವುದೇ ಹೊರತು ವಿದ್ವತ್ತಿಗಾಗಿ ಅಲ್ಲವೆಂಬ ಭಾವನೆಯಿಂದ ನೆಹರೂ ವರು ತಮ್ಮ ಹೆಸರಿನ ಹಿಂದೆ ಇದನ್ನು ಉಪಯೋಗಿಸುವುದಿಲ್ಲವೆಂದು ತಿಳಿಸಿದ್ದಾರೆ

ಸ್ಪೇನಿನೊಡನೆ ಸಂಬಂಧತ್ಯಾಗ

ಸ್ಪೇನಿನಲ್ಲಿರುವ ತಮ್ಮ ರಾಯಭಾರಿಗಳನ್ನು ವಿಶ್ವಸಂಸ್ಥೆಯ ಎಲ್ಲ ರಾಷ್ಟ್ರಗಳೂ ತಕ್ಷಣವೇ ವಾಪಸು ಕರೆಸಿಕೊಳ್ಳಬೇಕೆಂದು ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯಲ್ಲಿ ೩೪-೬ ಓಟುಗಳಿಂದ ನಿರ್ಧರಿಸಲಾಗಿದೆ.

ರಾಷ್ಟ್ರದ ತಂದೆ ಗಾಂಧಿಜಿ

“ ಮಹಾತ್ಮಾ ಗಾಂಧಿಯವರು ನಮ್ಮ ರಾಷ್ಟ್ರದ ಪರಮ ಪೂಜ್ಯ ತಂದೆ. ಇವರ ದಿವಿಗೆ ನಾವು ಏನೇನು ಗಳಿಸಿರುವೆವೋ ಅವೆಲ್ಲವುಗಳ ಮಹಾಶಿಲ್ಪಿ ಅವರು—ಎಂಬುದಾಗಿ ಪಂ|| ನೆಹರೂರವರು ರಾಜ್ಯಾಂಗ ಸಭೆಯಲ್ಲಿ ಸ್ವತಂತ್ರ ಭಾರತ ರಿಪಬ್ಲಿಕ್ ರಚನಾ ನಿರ್ಣಯವನ್ನು ಮಂಡಿಸುತ್ತಾ ತಿಳಿಸಿದರು ಈ ನಿರ್ಣಯವು ಭಾರತದ ಪ್ರಜಾಕೋಟಿಯ ಆಶಯಗಳ ಸೂಚಕವಾಗಿದೆ; ಲೀಗು ಈ ಸಭೆಯಲ್ಲಿ ಭಾಗವಹಿಸದಿರುವುದು ವಿಷಾದಕರ; ಇದರಿಂದ ನಮ್ಮ ಜವಾಬ್ದಾರಿ ಹೆಚ್ಚಿದೆ; ಭಾರತದ ೪೦ ಕೋಟಿ ಪ್ರಜೆಗಳ ರಕ್ಷಣಾ ಭಾರವನ್ನು ಕೈಗೊಳ್ಳಬೇಕಾದುದು ನಮ್ಮ ಕರ್ತವ್ಯ ”—ಎಂದು ಅವರು ಹೇಳಿದರು. ಸಂಸ್ಥಾನಗಳ ನಿಜವಾದ ಪ್ರತಿನಿಧಿಗಳ ಸಹಕಾರ ಪಡೆಯಲು ಸರ್ವಪ್ರಯತ್ನಗಳನ್ನೂ ಮಾಡುವುದಾಗಿ ಪಂಡಿತಜೀ ಭರವಸೆಯಿತ್ತರು ನಿರ್ಣಯದ ಮೇಲೆ ಚರ್ಚೆ ನಡೆಯುತ್ತಿದೆ.

ಲೀಗ್ ಕೌನ್ಸಿಲ್ ಸೇರುವುದು

ಬ್ರಿ|| ಸರ್ಕಾರವು ಡಿಸಂಬರ್ ೬ನೇ ತಾ|| ಇತ್ತ ತೀರ್ಮಾನದ ಆಧಾರದ ಮೇಲೆ ರಾಜ್ಯಾಂಗ ರಚನಾ ಸಭೆಯಲ್ಲಿ ಲೀಗು ಭಾಗವಹಿಸಲು ಸಿದ್ಧವಿದೆಯೋ ಎಂಬ ಪ್ರಶ್ನೆಯ ಇತ್ಯರ್ಥಕ್ಕಾಗಿ ಲೀಗ್ ಕೌನ್ಸಿಲ್ ಸಭೆಯನ್ನು ಸೇರಿಸಲು ಜಿನ್ನಾರವರು ಒಪ್ಪಿದ್ದಾರೆಂದು ಸರ್ ಕ್ರಿಪ್ಸರು ಕಾಮನ್ಸ್ ಸಭೆಯಲ್ಲಿ ತಿಳಿಸಿದ್ದಾರೆ

ವಿದ್ಯಾರ್ಥಿ ನಿಲಯಗಳ ಚರ್ಚಾ ಸ್ಪರ್ಧೆ

ರಾಜಧಾನಿಯ ಸುತ್ತೂರು ಶಿವರಾತ್ರೀಶ್ವರ ವಿದ್ಯಾರ್ಥಿ ನಿಲಯ ಸಂಘದಾಶ್ರಯದಲ್ಲಿ ಇದೇ ೧೯ನೇ ತಾ|| ಗುರುವಾರ ನಡೆಯಲಿರುವ ಅಂತರ ವಿದ್ಯಾರ್ಥಿ ನಿಲಯಗಳ ಚರ್ಚಾ ಸ್ಪರ್ಧೆಯಲ್ಲಿ ಭಾಗವಹಿಸಲು ಅಪೇಕ್ಷಿಸುವ ವಿದ್ಯಾರ್ಥಿ ನಿಲಯಗಳು ತಮ್ಮ ಪ್ರತಿನಿಧಿಗಳನ್ನು ನಾಳೆಯೊಳಗೇ ಕಳಿಸಿಕೊಡಬೇಕಾಗಿ ಕೋರಲಾಗಿದೆ. ಚರ್ಚಾ ವಿಷಯವನ್ನು ೧೭ನೇ ತಾ|| ಮಂಗಳವಾರ ಸಂಜೆ ೫ ಗಂಟೆಗೆ ಸಂಘದಲ್ಲಿ ಪ್ರಕಟಿಸಲಾಗುವುದು

ಕಂಪಾಜಿಟರು ಬೇಕು

ಕನ್ನಡ ಮತ್ತು ಇಂಗ್ಲಿಷ್ ಬಲ್ಲ ಅನುಭವಸ್ಥರಾದ ಕಂಪಾಜಿಟರು ಬೇಕು ಸಿಲಿಂಡರ್ ಮಿಷನ್ನಿನಲ್ಲಿ ಪ್ರಿಂಟ್ ಮಾಡುವ ಅನುಭವವಿದ್ದರೆ ಉತ್ತಮ ಕೂಡಲೇ ಬಂದು ನೋಡಿರಿ, ವ್ಯವಸ್ಥಾಪಕ, ಸಾಧ್ವಿ,

ಪ್ರೈಮರಿ ಉಪಾಧ್ಯಾಯರಿಗೆ ೩೦ ರೂ ಸಂಬಳ

ಶಾಸನ ಸಭೆಯಲ್ಲಿ ನಿರ್ಣಯ

ಸ್ವಂ ಸು ಪ್ರೋ|] ಬೆಂಗಳೂರು ೧೪

ಸಂಸ್ಥಾನದ ಪ್ರಾಥಮಿಕ ಶಾಲಾ ಉಪಾಧ್ಯಾಯರುಗಳ ಸಂಬಳವನ್ನು ೩೦ ರೂಗಳಿಂದ ಆರಂಭಿಸತಕ್ಕದ್ದೆಂದು ಶ್ರೀ ಡಿ ಎಸ್. ಮಲ್ಲಪ್ಪನವರು ತಂದಿದ್ದ ನಿರ್ಣಯವು ಈ ದಿನ ಶಾಸನ ಸಭೆಯಲ್ಲಿ ಅಂಗೀಕಾರವಾಯಿತು. ಸರ್ಕಾರಿ ಸದಸ್ಯರು ಮತ ಚಲಾಯಿಸದೆ ತಟಸ್ಥರಾಗಿದ್ದರು ವಿದ್ಯಾಧಿಕಾರಿಗಳಾದ ಶ್ರೀ ಕಸ್ತೂರಿರಾಜ ಚೆಟ್ಟಿಯವರು ತಮ್ಮ ಉತ್ತರದಲ್ಲಿ ಈಗಾಗಲೇ ಸಂಬಳಗಳನ್ನು ಹೆಚ್ಚುಮಾಡುವ ಕಾರ್ಯ ನಡೆದಿದೆ ಮತ್ತು ನಡೆಯಲೂ ಇದೆ. ಅಲ್ಲದೆ ಹೊಸದಾಗಿ ರಚಿತವಾಗಿರುವ ‘ಸಂಬಳ ಸಮಿತಿ’ ಈ ವಿಷಯವನ್ನು ಪರಿಶೀಲಿಸಲಿದೆ ಎಂದು ಹೇಳಿದರು

ಸಂಸ್ಥಾನದಲ್ಲಿ ಕೂಡಲೇ ಮದ್ಯಪಾನ ನಿರೋಧವನ್ನು ಪೂರ್ಣವಾಗಿ ಜಾರಿಗೆ ತರಬೇಕೆಂಬ ಶ್ರೀ ಟಿ ಹನುಮಯ್ಯನವರ ನಿರ್ಣಯವೂ ಸಹ ಸಭೆಯಲ್ಲಿ ಅಂಗೀಕರಿಸಲ್ಪಟ್ಟಿತು.

ಪ್ರಶ್ನೋತ್ತರಗಳು

ಶ್ರೇಷ್ಠ ನ್ಯಾಯಾಸ್ಥಾನದ ನ್ಯಾಯಾಧೀಶರುಗಳ ಬಗ್ಗೆ ಶ್ರೀ ಹೆಚ್.ಆರ್. ಗುರುವಾರೆಡ್ಡಿಯವರು ಕೇಳಿದ ಪ್ರಶ್ನೆಗೆ ಪ್ರಧಾನ ಕಾರ್ಯದರ್ಶಿಗಳು ಉತ್ತರವಿತ್ತು ಅವರ ವಯಸ್ಸಿನ ಪರಿಮಿತಿ ೫೬ ವರ್ಷವೆಂದು ಹೇಳಿದರು.

ಉ ಪ್ರ:- ಈಗಿನ ಶ್ರೇಷ್ಠ ನ್ಯಾಯಾಧೀಶರ ವಯಸ್ಸೆಷ್ಟು? ಉ:- ೬೭

ಪ್ರ:- ಈ ರೀತಿ ಅವಕಾಶ ಕೊಡಲು ಕಾರಣವೇನು? ಇದು ಸರಿಯೇ? ಉ:- ವಿಶೇಷ ಕಾರಣಗಳಿಗಾಗಿ ಆ ರೀತಿ ಅವಕಾಶ ಕೊಡಲಾಯಿತು

ಮತ್ತೆ ಹಲವು ಉಪಪ್ರಶ್ನೆಗಳಿಗೆ ಈ ನೇಮಕ ಶ್ರೀ ವರದರಾಜರವರಿಗೆ ಸಂಬಂಧಪಟ್ಟದ್ದೆಂದು ತಿಳಿಸಲಾಯಿತು

ಕ್ರಿಸ್‌ಮಸ್‌ಗಾಗಿ ಬಟ್ಟೆ

ಕ್ರಿಸ್‌ಮಸ್ ಹಬ್ಬದ ಪ್ರಯುಕ್ತ ಕ್ರೈಸ್ತರಿಗಾಗಿ ಇದೇ ೧೦ನೇ ತಾರೀಖಿನಿಂದ ನಗರದ ಎಲ್ಲ ಮೊಹಲ್ಲಾಗಳ ೧೫ ಅಂಗಡಿಗಳಲ್ಲಿ ಪೈಲ್ ಬಟ್ಟೆಯನ್ನು ಹಂಚಲು ಸರ್ಕಾರದವರು ಏರ್ಪಡಿಸುತ್ತಾರೆ.

LATEST NEWS

ದರೋಡೆಗಾಗಿ ಪೊಲೀಸ್ ಅಧಿಕಾರಿಗಳ ದಸ್ತಗಿರಿ

ಧರ್ಮ ರತ್ನಾಕರ ಗೋಪಾಲರಾಯರ ಫಿರ್ಯಾದಿನ ಮೇರೆ

ಸ್ವಂ.ಸು ಪ್ರೋ|] ಬೆಂಗಳೂರು ೧೪

ತಮ್ಮ ಮೇಲೆ ದರೋಡೆ ಮಾಡಿದರೆಂಬುದಾಗಿ ಧರ್ಮ ರತ್ನಾಕರ ಬಿ ಎನ್ ಗೋಪಾಲರಾಯರು ಬೆಂಗಳೂರು ದಂಡಿನ ಪೊಲೀಸ್ ಅ|| ಕಮಿಷನರಾದ ಸರ್ವೋತ್ತಮರಾವ್ ಮತ್ತು ಮಿ|| ಆರ್ಚ್ ಮೋರ್ಗನ್ ಮತ್ತು ಬೆಳಗಾಂ ವಾಲಾ ಎಂಬುವರ ಮೇಲೆ ತಂದ ಫಿರ್ಯಾದಿನಂತೆ ನಿನ್ನೆ ರಾತ್ರಿ ಬೆಂಗಳೂರು ನಗರದ ಪೊಲೀಸ್ ಸೂಪರಿಂಟೆಂಡೆಂಟರಾದ ಶ್ರೀ|| ಬಾಲಿ ರೆಡ್ಡಿಯವರು ಅವರನ್ನು ದಸ್ತಗಿರಿ ಮಾಡಿದರು. ಮೂವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ.

ಸಾಧ್ವಿ

ತಾ|| ೧೪-೧೨-೪೬ ಶನಿವಾರ

ರೈಲುಗಳಿಗೆ ಅಪಘಾತ

ಇತ್ತೀಚೆಗೆ ನಮ್ಮ ಸಂಸ್ಥಾನದ ಅನೇಕ ಗೂಡ್ಸ್ ರೈಲುಗಾಡಿಗಳಿಗೆ ಅಪಘಾತವು ಸಂಭವಿಸುತ್ತಿರುವ ಅಂಶವು ಮೇಲಿಂದಮೇಲೆ ವರದಿಯಾಗುತ್ತಿದೆ. ಇದು ಮಹಾಜನರಿಗೆ ವಿಶೇಷ ಕಳವಳವನ್ನು ಉಂಟುಮಾಡಿರುವುದಲ್ಲದೆ ಸರ್ಕಾರಕ್ಕೂ ಸಹ ಅಪಾರವಾದ ನಷ್ಟವನ್ನುಂಟುಮಾಡುವ ಅಂಶವಾಗಿದೆ. ಇದರ ಬಗ್ಗೆ ನಮ್ಮ ಸರ್ಕಾರದವರು ವಿಶೇಷವಾದ ಗಮನಕೊಟ್ಟು ತನಿಖೆ ನಡೆಸಿ ಇಂತಹ ಅಪಘಾತಗಳು ಇನ್ನು ಮೇಲೆ ನಡೆಯದಂತೆ ಸೂಕ್ತವಾದ ಕ್ರಮಗಳನ್ನು ಕೈಗೊಳ್ಳುವಂತೆ ಮಾಡುವುದು ಅಗತ್ಯವಾಗಿದೆ.

ಮದರಾಸ್ ಪ್ರಾಂತ್ಯದಲ್ಲಿ ಉಂಟಾದ ವಿಪರೀತ ಮಳೆಯ ದೆಸೆಯಿಂದ ಅಲ್ಲಿ ರೈಲ್ವೆ ಲೈನುಗಳಿಗೆ ತೊಂದರೆಯುಂಟಾಗಿದ್ದಾಗಲೂ ಈ ಬಗೆಯ ಅನಾಹುತಗಳು ಸಂಭವಿಸಲು ಅವಕಾಶ ಕೊಡಲಿಲ್ಲ. ಮುಂಜಾಗ್ರತೆಯಾಗಿಯೇ ಲೈನುಗಳನ್ನು ಆಜಮಾಯಿಷಿ ಮಾಡಿಸಿ ಅಪಾಯಕರವೆಂದು ತೋರಿದಾಗ ರೈಲು ಸಂಚಾರವನ್ನೇ ನಿಲ್ಲಿಸಿದ್ದರು. ಮಳೆಯಿಂದ ಜಲಪ್ರವಾಹ ಅಲ್ಲಿ ರೈಲು ಕಂಬಿಗಳೇ ಕೊಚ್ಚಿಹೋಗಿದ್ದುವು. ನಮ್ಮ ಸಂಸ್ಥಾನದಲ್ಲಿಯೂ ಜೋರಾಗಿ ಮಳೆಬಿದ್ದರೂ ಸಹ ಕಂಬಿಗಳು ಕೊಚ್ಚಿಹೋಗಿರಲಿಲ್ಲ; ಸೇತುವೆಗಳು ಕುಸಿದುಬಿದ್ದಿರಲಿಲ್ಲ; ರೈಲುದಾರಿಯು ನೀರಿನಲ್ಲಿ ಮುಳುಗಿಹೋಗಿರಲಿಲ್ಲ; ಹೀಗಿದ್ದರೂ ಇಂತಹ ಪ್ರಸಂಗಗಳು ನಡೆದಿರುವುದು ವಿಷಾದಕರ.

ಕೆಲವು ತಿಂಗಳ ಹಿಂದೆ ಚಿತ್ರದುರ್ಗದ ಬಳಿ ಮಿಕ್ಸೆಡ್ ರೈಲಿಗೆ ಅಪಘಾತವುಂಟಾಗಿ ಬಹಳ ನಷ್ಟವೂ ಸಂಭವಿಸಿತ್ತು. ಈಚೆಗೆ ಒಂದೆರಡು ವಾರಗಳಲ್ಲಿ ಮೂರುಕಡೆ ಇಂತಹ ಪ್ರಸಂಗಗಳು ನಡೆದಿರುವುದಾಗಿ ಗೊತ್ತಾಗಿದೆ. ಹಾಸನದ ಬಳಿಯೂ, ಮೈಸೂರು ನಗರದ ಹತ್ತಿರವೂ, ಬೆಂಗಳೂರಿನ ಸಮೀಪದಲ್ಲಿಯೂ ಈ ಅಪಘಾತಗಳು ಉಂಟಾಗಿವೆ. ಈ ಅಲ್ಪ ಅವಧಿಯಲ್ಲಿ ಇಷ್ಟು ಹೆಚ್ಚು ಪ್ರಮಾಣದ ಅನರ್ಥಗಳು ಸಂಭವಿಸುವಂತೆ ಇರುವ ಪರಿಸ್ಥಿತಿಯು ಯೋಚನೀಯವಾದುದು. ರೈಲುಬಂಡಿಗಳು ಬಿದ್ದುಹೋಗಿರುವುದರಿಂದ ಇಲಾಖೆಗೆ ಲಕ್ಷಾಂತರ ರೂಪಾಯಿನ ನಷ್ಟವು ಉಂಟಾಗಿರುವುದಲ್ಲದೆ, ಅವುಗಳಲ್ಲಿದ್ದ ಸಾಮಾನುಗಳ ನಾಶದಿಂದಲೂ ಸಾರ್ವಜನಿಕರಿಗೆ ಅಪಾರವಾದ ನಷ್ಟವು ಸಂಭವಿಸಿರುವುದು. ಇದಕ್ಕೆ ಅವಕಾಶವಿಲ್ಲದಂತೆ ಮಾಡುವುದು ಇಲಾಖೆಯವರ ಮುಖ್ಯ ಕರ್ತವ್ಯ.

ಸಂಸ್ಥಾನದ ರೈಲ್ವೆ ಇಲಾಖೆಯ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ವಿಶೇಷವಾದ ವೇತನವನ್ನು ಪಡೆಯುವ ಅಧಿಕಾರಿವರ್ಗದವರೂ, ಅವರಿಗೆ ಸಹಾಯಕವಾಗಿ ಬಹಳವಾದ ಸಿಬ್ಬಂದಿಯೂ ಇರುವರು. ಅವರುಗಳು ಸಕಾಲದಲ್ಲಿ ಮುಂಜಾಗ್ರತೆ ಕ್ರಮಗಳನ್ನು ಕೈಗೊಂಡು ರೈಲ್ವೆ ಸಂಚಾರ ವ್ಯವಸ್ಥೆಯು ಸುಗಮವಾಗಿ ನಡೆಯುವಂತೆ ಮಾಡಬೇಕು. ಅವಶ್ಯಕವಿದ್ದರೆ ಈ ಬಗ್ಗೆ ನಿಪುಣರ ಸಮಿತಿಯೊಂದನ್ನು ರಚಿಸಿ ಅವರ ಸಲಹೆಗಳನ್ನು ತೆಗೆದುಕೊಳ್ಳಬೇಕು. ಮುಖ್ಯವಾಗಿ ಇಂತಹ ದುರಂತಗಳು ನಡೆಯದಂತೆ ಏರ್ಪಡಿಸಬೇಕು. ನಮ್ಮ ಸರ್ಕಾರದವರು ಈ ವಿಷಯದಲ್ಲಿ ಪೂರ್ಣ ಗಮನ ಕೊಟ್ಟು ತಕ್ಕ ಏರ್ಪಾಡುಗಳನ್ನು ಮಾಡುವರೆಂದು ನಾವು ನಂಬುತ್ತೇವೆ.

ಜವಾಬ್ದಾರಿ ಸರ್ಕಾರದ ಮಾತಿಗೇ ಆಕ್ಷೇಪಣೆಯೇ ?

ಬೆಂಗಳೂರಿನಲ್ಲಿ ನಡೆಯುತ್ತಿರುವ ನ್ಯಾಯವಿಧಾಯಕ ಸಭಾಧಿವೇಶನದಲ್ಲಿ ಸ್ವಾರಸ್ಯವಾದ ಕ್ರಿಯಾಲೋಪವೊಂದು ತಲೆಬಿದ್ದಿದೆ. ಪದೇಪದೇ ಜವಾಬ್ದಾರಿ ಸರ್ಕಾರ ಎಂಬ ಪದವನ್ನು ಉಪಯೋಗಿಸುವುದು ಸರಿಯುಲ್ಲವೆಂದು ರಾಜಧರ್ಮ ಪ್ರವೀಣ ದಿವಾನ್‌ಬಹದ್ದೂರ್ ಪಿ ಮಹದೇವಯ್ಯನವರು ಸೂಚಿಸಿರುವರು. ಈ ಬಗ್ಗೆ ನಿರ್ಧಾರವು ಅಗತ್ಯವೆಂದು ಡಾ|| ರಾಯ್‌ರವರು ತಿಳಿಸಿರುವರು. ಸೋಮವಾರ ಚರ್ಚೆ ನಡೆಸಿ ತೀರ್ಪು ಕೊಡುವುದಾಗಿ ಅಧ್ಯಕ್ಷರು ಹೇಳಿರುವರು.

ಜಿನ್ನಾರವರು ಅಪ್ಪಟ ಮುಸಲ್ಮಾನರೇ?

ಮಿ|| ಜಿನ್ನಾರವರು ಅಪ್ಪಟ ಮುಸಲ್ಮಾನರೇ? ಎಂಬ ಪ್ರಶ್ನೆ ಲಂಡನ್ನಿನಲ್ಲಿ ಕೇಳಬರುತ್ತಿದೆ. ಕಳೆದ ೧೦ ದಿನಗಳಿಂದ ಇವರು ಯಾವ ಮಸೀದಿಗೂ ಪ್ರಾರ್ಥನೆಗೆ ಹೋಗಿಲ್ಲ. ಆದರೆ ಮಿ|| ಲಿಯಾಕತ್ ಅಲಿಖಾನರು ಪ್ರತಿ ದಿನ ಮಸೀದಿಗೆ ಹೋಗುತ್ತಿದ್ದಾರೆ ಎಂದು ಹೇಳಲಾಗಿದೆ. ಅದಕ್ಕಾಗಿಯೇ ಬ್ರಿಟನ್ನಿನಲ್ಲಿರುವ ಯಾವ ಇಮಾಮರೂ ಮಿ|| ಜಿನ್ನಾರವರ ಭೇಟಿಮಾಡಿಲ್ಲವೆಂದು ಭಾವಿಸಲಾಗಿದೆ.

೨ ಅಡಿ ಮಳೆ ನೀರಿನಲ್ಲಿ ತಿರುಪತಿ ವೆಂಕಟಾಚಲಪತಿ

ವಿಪರೀತ ಮಳೆಯ ದೆಸೆಯಿಂದ ತಿರುಪತಿ ಬೆಟ್ಟದ ಮೇಲಿರುವ ದೇವಸ್ಥಾನಕ್ಕೆ ಮಳೆಯ ನೀರು ನುಗ್ಗಿ ಶ್ರೀ ವೆಂಕಟಾಚಲಪತಿಯ ಪಾದದ ಬಳಿ ೨ ಅಡಿಯಷ್ಟು ನೀರು ನಿಂತಿದ್ದುದರಿಂದ ಎರಡು ದಿವಸ ಪೂಜೆಗೆ ಅವಕಾಶವಾಗಲಿಲ್ಲವೆಂದು ವರದಿಯಾಗಿದೆ. ಕಳೆದ ಶತಮಾನದಲ್ಲಿಯೇ ಈ ವಿಧವಾದ ಜಲಪ್ರಳಯವು ಆ ಕ್ಷೇತ್ರದಲ್ಲಿ ಸಂಭವಿಸಿಲ್ಲವೆಂದು ಹೇಳಲಾಗಿದೆ.

ಪಾಕೀಸ್ಥಾನಕ್ಕಾಗಿ ಪ್ರತ್ಯೇಕ ರೇಡಿಯೋ

ಮುಸ್ಲಿಮರು ಬಹು ಸಂಖ್ಯಾತರಾಗಿರುವ ಪ್ರಾಂತ್ಯಗಳು ತಮ್ಮದೇ ಆದ ಪ್ರತ್ಯೇಕ ರೇಡಿಯೋವನ್ನು ಪಾಕೀಸ್ಥಾನದ ಪ್ರಚಾರ ಕಾರ್ಯಕ್ಕೆ ಸ್ಥಾಪಿಸಿಕೊಳ್ಳಬೇಕೆಂದು ಬಂಗಾಳಾ ಸರ್ಕಾರದ ಪಾರ್ಲಿಮೆಂಟರಿ ಕಾರ್ಯದರ್ಶಿಗಳು ಪ್ರಾರ್ಥನ ಹೊರಡಿಸಿದ್ದಾರೆ.

ಜೈ ಪ್ರಕಾಶರ ರಾಜೀನಾಮೆ

ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯತ್ವಕ್ಕೆ ಸಮತಾ ವಾದಿ ಪಂಗಡದ ನಾಯಕರಾದ ಶ್ರೀ ಜೈಪ್ರಕಾಶ ನಾರಾಯಣ್‌ರವರು ರಾಜೀನಾಮೆ ಸಲ್ಲಿಸಿದ್ದಾರೆಂದು ತಿಳಿದು ಬಂದಿದೆ

ಮಹಾ ಮಂಗಳ

ಮೈಸೂರು ೧೪

ಮೈಸೂರು ಕಬೀರ್ ರಸ್ತೆಯ ಶ್ರೀ ಪಾಂಡುರಂಗ ದೇವಾಲಯದಲ್ಲಿ ಕೀರ್ತನಕಾರ ಮಂಡಲಿಯವರು ತಾ|| ೨೬-೧೦-೪೬ ರಿಂದ ನಡೆಸುತ್ತಿರುವ ಕೀರ್ತನೆಗಳ ಮಹಾಮಂಗಳವು ಈ ದಿನ ಮೇಲ್ಕಂಡ ಸ್ಥಳದಲ್ಲಿ ನಡೆಯುವುದು. ಬೆಳಗ್ಗೆ ದೇವರಿಗೆ ಅಭಿಷೇಕ ಮತ್ತು ಪ್ರಸಾದವಿನಿಯೋಗವೂ ಸಂಜೆ ಪುರಸಭಾಧ್ಯಕ್ಷರಾದ ಶ್ರೀ ಆರ್. ರಾಮಚಂದ್ರರಾವ್ ಬೊಂಬೋರೆಯವರ ಅಧ್ಯಕ್ಷತೆಯಲ್ಲಿ ಹರಿಭಕ್ತಿಪಾರಾಯಣ ಮತ್ತು ಶ್ರೀ ಆರ್. ಎಸ್. ಶೇಷಗಿರಿದಾಸರಿಂದ ಅಮೃತ ಸಿದ್ಧಿ ಎಂಬ ಹರಿಕಥೆಯೂ ನಡೆಯುವುವು. ಸರ್ವರಿಗೂ ಆಹ್ವಾನವುಂಟು.

ನಿಮ್ಮ ಮೈ ಮೊಕವುಲ್ಲಿನಂತೆ ಹೊಳೆಯಬೇಕೆ ? ನೀವು ಲಾವಣ್ಯ ಮೂರ್ತಿಗಳಾಗಬೇಕೆ ?

ಹಾಗಾದರೆ

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ !

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ

ಪರೀಕ್ಷಿಸಿ ನೋಡಿರಿ

ಎಲ್ಲೆಲ್ಲೂ ದೊರೆಯುತ್ತದೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ಫ್ಯಾಸಿಸಂ ಸತ್ತಿಲ್ಲ

ಬ್ರಿಟಿಷ್ ಫ್ಯಾಸಿಸ್ಟ್ ಯೂನಿ… ಮಾಜಿ ನಾಯಕರಾದ ಸರ್ ಓ… ಮೊಸ್ಲೆಯವರಿಗೆ ಬ್ರಿಟನನ್ನು ಬಿಟ್ಟು… ರ ದೇಶಕ್ಕೆ ಹೋಗಲು ರಹದಾರಿ… ಕೊಡಲು ಬ್ರಿಟಿಷ್ ಸರ್ಕಾರ ನಿರಾಕ… ಫ್ಯಾಸಿಸಂ ಮತ್ತು ತತ್ವಗಳು ಸಂ… ವಾಗಿ ಇನ್ನೂ ನಾಶವಾಗಿಲ್ಲವೆಂದೂ… ರು ಹೊರಗಡೆ ಹೋದರೆ ಏನಾದರೂ… ಷ್ಟೆ ಮಾಡಬಹುದೆಂದೂ ಹೇಳಿ ಅ… ರಾಕರಿಸಲಾಗಿದೆ

OPERA TALKIES

Daily 3 Shows

From 13—12—1946

JAMES NEWILL, CARO… HUGHES and LIGHTNIN…

(The wonder dog)

in

RENREW OF THE

ROYAL MOUNTED

and

KILLERS OF THE S…

With

Capt Wallace Casewel…

Morning show from 13-12-…

When Strangers Marry

ಹರಾಜು ಇಸ್ತಿಹಾರ

ಮೈಸೂರು ಸಿಟಿ ಇಂಪ್ರೂವ್‌ಮೆಂ… ಟ್ರಸ್ಟ್ ಬೋರ್ಡು ಆಫೀಸ್ ಛೇರ್ಮನ್… ರಿಂದ.-

ಇದರಿಂದ ಸಮಸ್ತ ಜನಗಳಿಗೂ ತಿ… ಪಡಿಸುವುದೇನೆಂದರೆ—

ಮೈಸೂರು ಸಿಟಿ ದೇವರಾಜ ಮೊಹ… ಲ್ಯಾನ್ಸ್‌ಡೌನ್ ಬಿಲ್ಡಿಂಗಿನ ಹಿಂಭಾಗದಲ್ಲಿ… ಸ್ಟ್ ಬೋರ್ಡಿನವರು ಆಕ್ವೈರ್ ಮಾ… ಕೊಂಡಿರುವ ಮನೆಗಳ ಪೈಕಿ ಮುನಿಸಿ… ಡೋರ್ ನಂ. ೭೦, ೧೨೪, ೧೨೬-೧ ಮ… ತ್ತು ೧೨೭-೨ ನೇ ಮನೆಗಳನ್ನು ಒಡೆಯು… ರುತ್ತೆ. ಇದರ ಸಾಮಾನುಗಳನ್ನು ತಾ|| ೧೫-೧೨-೧೯೪೬ ನೇ ತಾರೀಖು ಭಾನುವಾರದ ಲಾಗಾಯಿತು ಪ್ರತಿ ದಿನವೂ ಬೆಳಗ್ಗೆ… ಘಂಟೆಯಿಂದ ಮಧ್ಯಾಹ್ನ ೧ ಘಂಟೆ ವರೆ… ಗೆ ಬಹಿರಂಗವಾಗಿ ಹರಾಜು ಹಾಕಲಾಗು… ತ್ತೆ. ಇಷ್ಟ ಉಳ್ಳವರು ಹಾಜರಾಗಿ ಖರೀದಿ… ಮಾಡಿ ಮಾಲುಗಳನ್ನು ಪಡೆಯಬಹುದು.

ಆರ್. ಎಲ್. ರಾಮ…

ಛೇರ್ಮನ್ನರಿಗಾಗಿ

ಬಡ ವಿದ್ಯಾರ್ಥಿಗಳ ಸಹಾಯಾರ್ಥವಾಗಿ ಮೈಸೂರು ವಿಶ್ವವಿದ್ಯಾನಿಲಯ ಸಂಘದ ಆಶ್ರಯದಲ್ಲಿ

ಬೆಂಗಳೂರಿನ

ಛಾಯಾ ಆರ್ಟಿಸ್ಟರುಗಳು

16-12-46 ನೇ ಸೋಮವಾರ

ಸಂಜೆ 6-30 ಘಂಟೆಗೆ

ಉಂಡಾಡಿ - - ಗುಂಡ

ಎಂಬ ನಾಟಕವನ್ನು

ಟೌನ್ ಹಾಲಿನಲ್ಲಿ

ಪ್ರದರ್ಶಿಸುವರು.

-: ಪ್ರವೇಶ ಧನ :-

ರೂ. 10, 5, 3, 2 ಮತ್ತು 1.

ಸರ್ವರೂ ದಯಮಾಡಿಸಿ ಪ್ರೋತ್ಸಾಹಿಸಬೇಕಾಗಿ ಕೋರಲಾಗಿದೆ

ರಾಜಕಮಲ್, ಮೈಸೂರು

೧೪-೧೨-೪೬ ರಿಂದ ೫ ನೇ ಅಮೋಘವಾದ ವಾರ

ಡಾಕ್ಟರ್ ಕೊಟ್ನಿಸ್ ಕಿ ಅಮರ್ ಕಹಾನಿ

ಮುಖ್ಯ ಭೂಮಿಕೆ:- ಜಯಶ್ರೀ, ಶಾಂತಾರಾಂ, ಮುಂತಾದವರು

ತಾ|| ೧೬-೧೨-೪೬ ರಿಂದ ೪ ದಿನಗಳು ಪ್ರತಿದಿನ: ಪ್ರಾತಃಕಾಲ, ೧೦-೩೦ ಕ್ಕೆ ನ್ಯೂಥಿಯೇಟರ್ಸ್‌ರವರ "ವಿದ್ಯಾಪತಿ"

ತಾರಾಗಣ: ಕಾನನಬಾಲ, ಪಹರಿಸನ್ಯಾಲ್, ಕೆ. ಸಿ. ಡೇ

Edited, printed and published by A. R. Nagarajan at the Sadhvi Press D-Subbiah Road, Mysore

ಫೋ. ನಂ. 392 **WEEKLY EDITION** ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೧] ಸೋಮವಾರ ೧೬—೧೨—೪೬ [ಸಂಚಿಕೆ ೫೦

ಧರ್ಮ ರತ್ನಾಕರ

ಗೋಪಾಲರಾಯರು ದಸ್ತಗಿರಿ ಮಾಡಲ್ಪಟ್ಟರು

ಭಾರತೀಯರಿಗೆ ಕೆನಡಾ ಪ್ರವೇಶವಿಲ್ಲ

...ಶಾಸನಯಂತ್ರೋಪಕರಣಗಳ ತಯಾರು ಕಾರ್ಯಕ್ರಮವನ್ನು ಪರಿಶೀಲಿಸ ಕೆನಡಾಕ್ಕೆ ಹೊರಟಿದ್ದ ಬೊಂಬಾಯಿನ ಸಭಾಸದರಾದ ಮಿ॥ ಮಗನ್‌ಲಾಲ್ ಪಂಚಾಂದಪಾರವರನ್ನು ಕೆನಡಾ ಸರ್ಕಾರ ಪ್ರತಿಬಂಧಿಸಿದೆ. ಕೆಲಡವಲ್ಲಿರುವ ...ರ್ ರಾಯಭಾರಿಗೂ ತಮಗೂ ನಡೆದ ...ದದ ಪರಿಣಾಮವಾಗಿ ತಮ್ಮ ಪ್ರತಿ ಪ್ರಾಜ್ಞೆಯನ್ನು ಜಾರಿಮಾಡಲಾಗಿದೆ ...ದು ಅವರು ಹೇಳುವರು. ಮಿ॥ ಪಾ...ರು ಬೊಂಬಾಯಿ ಮತ್ತು ಒಟ್ಟಾವ ಸ...ರಗಳನ್ನು ಈ ಬಗ್ಗೆ ತನಿಖೆ ನಡೆಸಲು ...ರ್ಥಿಸುತ್ತಾರೆಂದು ಗೊತ್ತಾಗಿದೆ.

ಭಾರತಕ್ಕೆ ಹೊರಗಿನವರ ಉಪದೇಶ ಬೇಕಿಲ್ಲ

ರಾಜ್ಯಾಂಗ ಸಭೆಯಲ್ಲಿ ಪಂಡಿತ ನೆಹರೂರವರ ಭಾಷಣ

ರಾಜ್ಯಾಂಗ ರಚನಾ ಸಮಿತಿಯ ಧ್ಯೇಯ ...ಗಳ ಬಗ್ಗೆ ಪಂಡಿತ ನೆಹರೂರವರು ...ಯ ಮಸೂದೆಯನ್ನು ಮಂಡಿಸಿದರು. ...ಸೂದೆಯನ್ನು ಸಮರ್ಥಿಸುತ್ತಾ ಅವರು ...ಗೆ ಎಲ್ಲರ ಸಹಕಾರವೂ ಅವಶ್ಯಕ; ...ರೆ ಅದಕ್ಕಾಗಿ ಸಭೆಯು ಮೂಲತತ್ವಗ...ನ್ನು ಬಲಗೊಡಲಾರಿವು ಎಂದರು. ಕಳೆದ ...ಪ್ಪತ್ತು ವರ್ಷಗಳಿಂದ ಸ್ವಾತಂತ್ರ್ಯ ಸಾಧನೆ...ಗಿ ಅಪಾರ ತ್ಯಾಗಮಾಡಿರುವ ನಾವು ...ಮುಂದೆಯೂ ಸಂದರ್ಭ ಪೊದಗಿದರೆ ...ನ್ನೊಮ್ಮೆ ಹೋರಾಟ ಹೂಡಲು ಸಿದ್ಧ...ಗಿಯೇ ಇದ್ದೇವೆ, ಎಂದು ಅವರು ...ಳಿದರು. ಅಧಿಕಾರಿವರ್ಗದವರು ಎಷ್ಟೇ ...ತುರರಿದ್ದರೂ ಅವರಿಗೆ ಪ್ರಜಾಭಿಪ್ರಾಯ...ವನ್ನು ತಿಳಿಯುವ ಶಕ್ತಿಯಿಲ್ಲ. ...ದು ಭಾರತದಲ್ಲಿ ಅತಿ ವಿಲಕ್ಷಣವಾದ ...ಲ ಶಬ್ದಗಳಿಗೆ ಮಹತ್ವ ಕೊಡದೆ ಅರ್ಥ...ಮಾತ್ರ ಬೆಲೆ ಕೊಡಬೇಕಾಗಿದೆ. ಆ...ಕ್ರಮಗಳನ್ನು ಉಪಕ್ರಮಿಸುವಾಗ ...ನ್ನ, ಫ್ರಾನ್ಸ್, ಅಮೆರಿಕಗಳ ಸಮಿತಿಗಳ ...ತಿಹಾಸವನ್ನು ಗಮನಿಸಿ ಅವರು ಮಾಡಿದ ...ಪ್ಪನ್ನು ನಾವು ಮಾಡದಂತೆ ಎಚ್ಚರಿಕೆಯಿಂ...ರಬೇಕು. ನಮ್ಮ ಭವಿಷ್ಯವನ್ನು ರೂಪಿಸಿ...ಕೊಳ್ಳುವ ಶಕ್ತಿ ನಮಗಿದೆ. ನಮಗೆ ಹೊರ...ಗಿನವರ ಉಪದೇಶದ ಅವಶ್ಯಕತೆ ಬೇಕಿಲ್ಲ ...ಎಂದು ಅವರು ಹೇಳಿರುವರು.

ಹಿಂದಿನ ಪುಟದಿಂದ ಮುಂದುವರಿದುದು]
...ಮಾನಸಿಕ ವ್ಯಥೆ ಹೆಚ್ಚು. ಉದ್ಯೋಗ, ...ವ್ಯವಹಾರಗಳಲ್ಲಿ ನಷ್ಟ. ಶತ್ರುಗಳ ಕಿರು...ಕುಳ. ಜ್ಞಾತಿ ಬಂಧುಗಳಿಂದ ತಿರಸ್ಕಾರ ...ದ, ಮತ್ತು ಅಗ್ನಿ ಭಯ. ತಾ॥ ೧೮. ೨೦ ...ಧಾರಣ ಲಾಭ. ಸಂತೋಷ.

ಕುಂಭ—ಆರೋಗ್ಯ ಕೆಟ್ಟು ಔಷಧೋ...ಪಚಾರಗಳಿಗಾಗಿ ವಿಶೇಷ ಧನವ್ಯಯ ವಾ...ಗುವುದು. ಶತ್ರು ಪುತ್ರರಿಂದ ತಿರಸ್ಕಾರ. ...ವ್ಯಾಪಾರಾದಿಗಳು ಕೆಡೆಗಟ್ಟಲ್ಪಡುವುವು. ...ಮಿತ್ರರು ದೂರವಾಗುವರು. ನಷ್ಟ ಹೆಚ್ಚು...ವುದು. ತಾ॥ ೨೦, ೨೨ ಧನಲಾಭ. ಶಾಂತಿ.

ಮೀನ—ಆರೋಗ್ಯ ಉತ್ತಮ. ವಿನುವು...ದು, ವ್ಯಾಪಾರ ಉದ್ಯೋಗಗಳಲ್ಲಿ ಲಾಭ. ...ಅಧಿಕಾರಿ, ಮಿತ್ರ ವರ್ಗದವರಿಂದ ವಿಶೇಷ ಸನ್ಮಾನ. ಪ್ರವಾಸದಿಂದ ಲಾಭ. ವ್ಯವಹಾ...ರ ನಿಪುಣರ ಭೇಟಿ. ಸಂತೋಷ. ಕಾರ್ಯ...ಗಳು ವಿಶೇಷವಾಗಿ ಜರುಗುವುವು. ತಾ॥ ೧೭, ೨೦ ಧನಲಾಭ. ಪ್ರವಾಸ.

ಬರ್ಮಾವನ್ನು ಸ್ವತಂತ್ರ ರಾಷ್ಟ್ರವೆಂದು ಸಾರಿ

ಬರ್ಮಾದ ಮಂತ್ರಿ, ಮಿ॥ ಆಂಗ್ ಸಾನರ್ ಬ್ರಿಟನಿಗೆ ಒಂದು ಎಚ್ಚರಿಕೆಯಿತ್ತಿದ್ದಾರೆ. ಬ್ರಿಟನರು ಡಿಸೆಂಬರ್ ಅಂತ್ಯದೊಳಗಾಗಿ ಬರ್ಮಾವನ್ನು ಸ್ವತಂತ್ರವೆಂದು ಸಾರಬೇಕೆಂದೂ, ಬರುವ ವರ್ಷ ಬರ್ಮಾವನ್ನು ಬಿಟ್ಟು ಹೊರಡಬೇಕೆಂದೂ ಹೇಳಿರುತ್ತಾರೆ. ಬ್ರಿಟಿಷರು ಬರ್ಮಾವನ್ನು ಸ್ವತಂತ್ರ ರಾಷ್ಟ್ರವೆಂದು ಸಾರದಿದ್ದರೆ ಮಿ॥ ಆಂಗ್‌ಸಾನರು ರಾಜೀನಾಮೆ ಕೊಡಬಹುದೆಂದೂ ಇದರಿಂದ ಒಂದು ದೊಡ್ಡ ಸಾಮೂಹಿಕ ಚಳುವಳಿಯು ಆರಂಭವಾಗಬಹುದೆಂದೂ ಊಹಿಸಲಾಗಿದೆ. ಈ ಬಗ್ಗೆ ಮಿ॥ ಆಂಗ್‌ಸಾನರ್ ನೆಹರೂರವರ ಸಲಹೆ ಪಡೆದಿದ್ದಾರೆಂದೂ ಹೇಳಲಾಗಿದೆ.

ಕಾಶಿಗೆ ಪಂಡಿತ ನೆಹರೂ

ಪಂಡಿತ ಜವಹರಲಾಲ ನೆಹರೂ ರವರೂ, ಡಾ॥ ರಾಜೇಂದ್ರ ಪ್ರಸಾದರೂ ಸಹ ಕಾಶಿ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಭಾಗ ವಹಿಸುವ ಸಲುವಾಗಿ ನೆನ್ನೆ ದಿನ ಕಾಶಿಗೆ ತೆರಳಿದರು. ಪಂ॥ ನೆಹರೂರವರು ಅಲ್ಲಿ ಡಾ॥ ಎಂಬ ಪ್ರಶಸ್ತಿಯನ್ನು ಸ್ವೀಕರಿಸಿದರು. ಅವರು ಮಹಾತ್ಮ ಗಾಂಧಿಯವರನ್ನು ಭೇಟಿಮಾಡುವ ಸಲುವಾಗಿ ಈ ದಿನ ಕಲ್ಕತ್ತೆಗೆ ಪ್ರಯಾಣಮಾಡುವರೆಂದು ವಾರ್ತೆ ಬಂದಿದೆ.

ಭಾಗವತರಿಗೆ ಸತ್ಕಾರ

ಮೈಸೂರು ಚಲುವಾಂಬಾ ಅಗ್ರಹಾರದ ಹಿಂಭಾಗದಲ್ಲಿರುವ ಪ್ರಸನ್ನ ಶ್ರೀ ವೆಂಕಟರಮಣ ಸ್ವಾಮಿ ದೇವಸ್ಥಾನದ ಕೀರ್ತನ ಸಮಾಜದ ಆಶ್ರಯದಲ್ಲಿ ಬಾಲ್ಯಾವಸ್ಥೆಯಿಂದ ಬಂದಿರುವ ಬ್ರ॥ ಶ್ರೀ॥ ಕೆ. ಎಸ್. ಗಣಪತಿ ಭಾಗವತರು ಶ್ರೀಮದ್ರಾಮಾಯಣವನ್ನು ತಮಿಳಿನಲ್ಲಿ ಹರಿಕಥಾ ರೂಪವಾಗಿ ಒಂದೂವರೆ ತಿಂಗಳಿಂದಲೂ ನಡೆಸಿ, ಕಳೆದ ೧೧ನೇ ತಾ॥ ಪಟ್ಟಾಭಿಷೇಕವನ್ನು ನೆರವೇರಿಸಿದರು. ಅವರ ವಿದ್ವತ್ತು, ವ್ಯುತ್ಪತ್ತಿ, ಸಂಗೀತ ಜ್ಞಾನ, ಸರಸವಾಣಿ ಮತ್ತು ಎಲ್ಲರ ಮನಸ್ಸನ್ನೂ ಆಕರ್ಷಿಸುವ ಕಥಾನುವಾದ ಮುಂತಾದುವುಗಳನ್ನು ಮೆಚ್ಚಿ ಕೀರ್ತನ ಸಮಾಜದ ಭಕ್ತ ಮಂಡಲಿಯವರು ಅವರಿಗೆ 'ಕೀರ್ತನ ಪಟು' ಎಂಬ ಪ್ರಶಸ್ತಿಯನ್ನು ಮಾನಪತ್ರ, ಸುವರ್ಣ ಪದಕ ಮತ್ತು ವಸ್ತ್ರ ಭೂಷಣಗಳೊಡನೆ ಕೊಟ್ಟು ಗೌರವಿಸಿದರು. ಭಕ್ತ ಮಹಾ ಜನರೂ ಸಹ ವಿಶೇಷವಾಗಿ ಬಹುಮಾನಗಳನ್ನು ಇತ್ತರು.

ಪತ್ರಿಕೋದ್ಯೋಗಿಗಳ ಸಂಘ

ಮೈಸೂರು ೧೬

ರಾಜಧಾನಿಯ ಪತ್ರಿಕೋದ್ಯೋಗಿಗಳ ಸಂಘದ ವಾರ್ಷಿಕ ಸಭೆಯು ನೆನ್ನೆ ಶ್ರೀರಂಗಪಟ್ಟಣದ ದರಿಯಾದವಲತ್ತಿನಲ್ಲಿ ಶ್ರೀ ಆಗರಂ ರಂಗಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತು.

ಕಾರ್ಯದರ್ಶಿ ಶ್ರೀ ಹೆಚ್. ಕೆ. ಕುಮಾರಸ್ವಾಮಿಯವರು ಕಳೆದ ಸಾಲಿನ ವರದಿ ಮತ್ತು ಜಮಾಖರ್ಚಿನ ತಃಖ್ತೆಯನ್ನು ಮಂಡಿಸಿದರು. ಇದು ಸರ್ವಾನುಮತದಿಂದ ಅಂಗೀಕಾರವಾಯಿತು. ಮುಂದಿನ ಸಾಲಿಗೆ ಶ್ರೀ ಆರ್. ಗೋಪಾಲಕೃಷ್ಣರಾಯರು ಅಧ್ಯಕ್ಷರಾಗಿಯೂ, ಶ್ರೀ ಎಂ.ಎಸ್. ಪೆಣ್ಣರು ಉಪಾಧ್ಯಕ್ಷರಾಗಿಯೂ, ಶ್ರೀ ಜೆ. ಎಲ್. ಸ್ವಾಮಿಯವರು ಕಾರ್ಯದರ್ಶಿಗಳಾಗಿಯೂ, ಶ್ರೀ ಎಸ್. ಶ್ರೀಕಂಠಯ್ಯನವರು ಲೆಕ್ಕ ಪರಿಶೋಧಕರಾಗಿಯೂ ಆರಿಸಲ್ಪಟ್ಟರು.

ಹರಿಕಥೆ

ಡಿ. ಸುಬ್ಬಯ್ಯಾರಸ್ತೆಯಲ್ಲಿರುವ ಶ್ರೀ ಬ್ರಹ್ಮಾನಂದಸ್ವಾಮಿಗಳ ಮನೆ ಮುಂದೆ ಹಾಕಿರುವ ಚಪ್ಪರದಲ್ಲಿ ಬ್ರ॥ ಶ್ರೀ॥ ಹರಿ ಸರ್ವೋತ್ತಮದಾಸರಿಂದ ಈ ದಿನ ರಾತ್ರಿ 'ಇಂದ್ರಕೀಲ', ಎಂಬ ಹರಿಕಥೆ ಜರುಗುವುದು. ಸರ್ವರಿಗೂ ಆಹ್ವಾನವುಂಟು.

ಭಾವಚಿತ್ರ ಅನಾವರಣೋತ್ಸವ

ರಾಜಧಾನಿಯ ಇಂಟರ್‌ಮೀಡಿಯೇಟ್ ಕಾಲೇಜ್ ಕರ್ನಾಟಕ ಸಂಘದಾಶ್ರಯದಲ್ಲಿ ನಾಳೆ ಸಂಜೆ 5॥ ಗಂಟೆಗೆ ದಿವಂಗತ ಬಿ. ಎಂ. ಶ್ರೀಕಂಠಯ್ಯನವರ ಭಾವಚಿತ್ರ ಅನಾವರಣೋತ್ಸವವನ್ನು ಶ್ರೀ ಮಾಸ್ತಿ ವೆಂಕಟೇಶಯ್ಯಂಗಾರ್ಯರು ನೆರವೇರಿಸುವರು. ಸರ್ವರಿಗೂ ಸ್ವಾಗತವಿರುವುದಾಗಿ ಪ್ರಕಟಿಸಲಾಗಿದೆ.

ವಿದ್ಯಾರ್ಥಿ ಕಾಂಗ್ರೆಸ್ ಸಮ್ಮೇಳನಕ್ಕೆ ಪ್ರತಿನಿಧಿಗಳು

ಇದೇ ೨೩, ೨೪ ನೇ ತಾ॥ ಗಳಲ್ಲಿ ಶಿವಮೊಗ್ಗೆಯಲ್ಲಿ ಸೇರಲಿರುವ ಅ॥ ಕರ್ನಾಟಕ ವಿದ್ಯಾರ್ಥಿ ಕಾಂಗ್ರೆಸ್ ಸಮ್ಮೇಳನಕ್ಕೆ ಮೈಸೂರಿನ ಪರವಾಗಿ ೫೦ ಜನ ಪ್ರತಿನಿಧಿಗಳನ್ನು ಕಳುಹಿಸಲು ನಿರ್ಧರಿಸಲಾಗಿದೆ. ಪ್ರತಿನಿಧಿಗಳಾಗಿ ಹೋಗಬಿಚ್ಛಿಸುವವರು ಇದೇ ೧೮ ನೇ ತಾ॥ ನೊಳಗೆ ಮೈಸೂರಿನ ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯಾಲಯಕ್ಕೆ ತಮ್ಮ ಹೆಸರುಗಳನ್ನು ಕೊಡಬೇಕೆಂದು ಕಾರ್ಯದರ್ಶಿಗಳು ಕೋರಿರುತ್ತಾರೆ.

ಗೋಪಾಲರಾಯರ ದಸ್ತಗಿರಿ

ಸ್ವಂ.ವ.ಪ್ರೋ॥] ಬೆಂಗಳೂರು ೧೬

ಧರ್ಮರತ್ನಾಕರ ಬಿ. ಎಸ್. ಗೋಪಾಲರಾಯರನ್ನು ನಗರದ ಪೊಲೀಸರು ನೆನ್ನೆ ರಾತ್ರಿ ಇ॥ ಪಿ॥ ಕೋಡಿನ 420 ನೇ ಸೆಕ್ಷನ್ ಪ್ರಕಾರ (ಮೋಸ) ಕೆಲವು ಲೇವಾದೇವಿಗಾರರಿಂದ ಬಂದ ಫಿರ್ಯಾದಿನ ಮೇರೆ ದಸ್ತಗಿರಿ ಮಾಡಿದ್ದಾರೆ. ಈಗ ಶ್ರೀ ಗೋಪಾಲರಾಯರು ಪೊಲೀಸರ ವಶದಲ್ಲಿದ್ದಾರೆ. ತನಿಖೆ ಕ್ರಮ ಬಿರುಸಿನಿಂದ ಸಾಗುತ್ತಿದೆ.

ವಿದ್ಯಾರ್ಥಿಗಳಿಗೆಲ್ಲಾ ಮಿಲಿಟರಿ ಶಿಕ್ಷಣ

ನ್ಯಾಯವಿಧಾಯಕ ಸಭೆಯಲ್ಲಿ ಅಂಗೀಕಾರವಾದ ನಿರ್ಣಯಗಳು

ಸ್ವಂ ಪ್ರೋ. ಬೆಂಗಳೂರು 15

ಹೈಸ್ಕೂಲಿನಿಂದ ಹಿಡಿದು ಮೇಲ್ಪಟ್ಟ ತರಗತಿಗಳ ವಿದ್ಯಾರ್ಥಿಗಳಿಗೆಲ್ಲಾ ಬಲವಂತವಾಗಿ ಎರಡು ವರ್ಷಗಳಲ್ಲಿ ಮಿಲಿಟರಿ ಶಿಕ್ಷಣ ಕೊಡಬೇಕು ಎಂಬುದಾಗಿ ಮೈಸೂರಿನ ಶ್ರೀ ಎಸ್. ಕೃಷ್ಣಸ್ವಾಮಿ ರಾಯರು ಸೂಚಿಸಿದ ನಿರ್ಣಯವು ನೆನ್ನೆ ಶಾಸನ ಸಭೆಯಲ್ಲಿ ಅಂಗೀಕಾರವಾಯಿತು.

ಕೈಗಾರಿಕಾ ಸಂಸ್ಥೆಗಳಲ್ಲಿ ಕೂಲಿಗಾರರಿಗೆ ಕೊಡುವ ಕೂಲಿ ದರಗಳ ಷೆಡ್ಯೂಲ್ ಮತ್ತು ಗ್ರೇಡುವಾರು ಪಟ್ಟಿಯನ್ನು ಇರುವಂತೆ ಸರ್ಕಾರದವರು ಏರ್ಪಾಡು ಮಾಡಬೇಕು ಎಂಬ ಶ್ರೀ ರಾಮಯ್ಯನವರ ನಿರ್ಣಯವೂ ಸಭೆಯಲ್ಲಿ ಅಂಗೀಕಾರವಾಯಿತು.

• ಸಂಸ್ಥಾನದ ಸಂಸ್ಕೃತ ವಿದ್ಯಾಭ್ಯಾಸ ಮತ್ತು ಪರೀಕ್ಷಾ ಬೋರ್ಡನ್ನು 1947 ನೇ ಜನವರಿ 1ರಿಂದ ಮೂರು ವರ್ಷಗಳ ಕಾಲ ಪುನಸ್ಸಂಘಟಿಸಲಾಗಿದೆ. ಶ್ರೀ ಟಿ. ರಾಮಯ್ಯನವರೇ ಹೊಸ ಬೋರ್ಡಿನ ಅಧ್ಯಕ್ಷರು.

ಬಟ್ಟೆ ಸರಬರಾಜು

ಶಾಸನ ಸಭೆಯಲ್ಲಿ ಪ್ರಶ್ನೋತ್ತರಗಳು

ಸ್ವಂ ವ.ಪ್ರೋ॥) ಬೆಂಗಳೂರು ೧೬

ಕಳೆದ ಮೂರು ವರ್ಷದಿಂದ ಕೇಂದ್ರ ವಸ್ತ್ರ ವಿನಿಯೋಗದ ಸಮಿತಿಯ ಲೆಕ್ಕಪತ್ರಗಳನ್ನು ತನಿಖೆ ಮಾಡಿರುವುದಿಲ್ಲ. ಆದರಿಂದ ಒಟ್ಟಿನಲ್ಲಿ ಮೋಸ ಬಂದಿರಬಹುದಾದ ಪ್ರಶ್ನೆ ಏಳುವುದಿಲ್ಲ ಎಂಬುದಾಗಿ ಮಿ॥ ಒ. ಎಸ್. ಎ. ಪರೀಘರು ಎಂ. ಆರ್. ಲಕ್ಷ್ಮಯ್ಯನವರ ಪ್ರಶ್ನೆಗೆ ಉತ್ತರವಾಗಿ ಈ ದಿನ ಶಾಸನ ಸಭೆಯಲ್ಲಿ ತಿಳಿಸಿದರು.

ಗ್ರಾಮಾಂತರಗಳಿಂದ ಬಟ್ಟೆ ಸರಬರಾಜಿನ ಬಗ್ಗೆ ವಿಶೇಷವಾಗಿ ಪ್ರಕಾರಗಳು ಬರುತ್ತಿವೆ. ಈವರೆಗೆ 1 ಲಕ್ಷ ರೇಷನ್ ಕಾರ್ಡುಗಳನ್ನು ಹಳ್ಳಿಗೆ ಹಂಚಲಾಗಿದೆ. ಇನ್ನು 2-3 ತಿಂಗಳಲ್ಲಿ ಬಟ್ಟೆ ಸರಬರಾಜಿನ ಸ್ಥಿತಿ ಉತ್ತಮಗೊಳ್ಳಬಹುದು ಎಂಬುದಾಗಿ ಶ್ರೀ ಕೆ. ಶ್ರೀನಿವಾಸನವರು ತಿಳಿಸಿದರು.

ಆನೆಯಿಂದ ಮರಣ

ಸ್ವಂ ವ] ನಂಜನಗೂಡು ೧೩

ನಂಜನಗೂಡು ತಾಲ್ಲೂಕು ಹುಲ್ಲಹಳ್ಳಿ ಗ್ರಾಮದಲ್ಲಿ ಆನೆ, ಹುಲಿಗಳ ಕಾಟ ಜಾಸ್ತಿಯಾಗಿದೆ. ನೂರಾರು ಆನೆಗಳು ಬಂದು ಬೆಳೆಸನ್ನೆಲ್ಲಾ ಹಾಳುಮಾಡಿವೆ. ಆನೆಗೆ ಸಿಕ್ಕಿ ಕಟ್ಟೆಕ್ಕಯ್ಯ ಎಂಬುವನೊಬ್ಬನು ಮೃತಪಟ್ಟಿರುವನು. ಗೊತ್ತಾಗಿದೆ. ಹುಲಿಗಳ ಹಾವಳಿಯಿಂದ ಅನೇಕ ದನಕರುಗಳು ಸತ್ತಿವೆ. ಸಂಬಂಧಪಟ್ಟ ಅಧಿಕಾರಿಗಳು ಜಾಗ್ರತೆ ಗಮನ ಕೊಡಬೇಕಾಗಿದೆ.

ಸಾಧ್ವಿ

ತಾ॥ ೧೬-೧೨-೪೬ ಸೋಮವಾರ

ರಾಜ್ಯಾಂಗ ಸಭೆಯೂ ದೇಶೀಯ ಸಂಸ್ಥಾನಗಳೂ

ಪೂರ್ಣ ಸ್ವತಂತ್ರಾಧಿಕಾರವುಳ್ಳ ಸಾರ್ವಭೌಮ ಸರ್ಕಾರವನ್ನು ಸ್ಥಾಪಿಸುವುದೇ ಭಾರತೀಯರ ಗುರಿಯೆಂದು ಘೋಷಿಸುವ ನಿರ್ಣಯವು ರಾಜ್ಯಾಂಗ ರಚನಾ ಸಭೆಯ ಮುಂದೆ ಪಂಡಿತ ನೆಹರೂರವರಿಂದ ಮಂಡಿಸಲ್ಪಟ್ಟಿದೆಯಷ್ಟೆ. ಇದರಲ್ಲಿ ದೇಶೀಯ ಸಂಸ್ಥಾನಗಳಿಗೂ ಸಹ ಸ್ಥಾನವನ್ನು ಕಲ್ಪಿಸಲಾಗಿದೆ. ಬ್ರಿಟಿಷ್ ಭಾರತವೂ, ದೇಶೀಯ ಸಂಸ್ಥಾನಗಳೂ ಮತ್ತು ಹಿಂದೂಸ್ಥಾನದ ಎಲ್ಲೆ ಕಟ್ಟಿನಲ್ಲಿರುವ ಇತರ ವಿಭಾಗಗಳೂ ಈ ನೂತನ ರಾಜ್ಯಾಂಗದಲ್ಲಿ ಒಂದುಗೂಡಿ ಒಂದೇ ಆಡಳಿತದಲ್ಲಿ ಕೆಲಸ ಮಾಡಲು ಅವಕಾಶವನ್ನು ಕಲ್ಪಿಸಲಾಗುವುದು.

ಬ್ರಿಟಿಷರು ತಮ್ಮ ಅಧಿಕಾರವನ್ನು ಭಾರತೀಯರಿಗೆ ವರ್ಗಾಯಿಸಿ ಹೊರಟುಹೋಗುವಾಗ ಸಂಸ್ಥಾನಗಳ ಮೇಲೆ ಯಾವ ಹಿಡಿತವನ್ನೂ ತಾವು ಇಟ್ಟುಕೊಳ್ಳುವುದಿಲ್ಲವೆಂದು ತಿಳಿಸಿದ್ದಾರೆ. ಈಗ ಬ್ರಿಟಿಷ್ ಸಾಮ್ರಾಜ್ಯದೊಡನೆ ಇರುವ ಕೌಲು ಕರಾರುಗಳೆಲ್ಲವೂ ರದ್ದಾಗುವುವು. ಹೊಸ ರಾಜ್ಯಾಂಗದೊಡನೆ ರಾಜರುಗಳು ಹೊಸ ಒಪ್ಪಂದಗಳನ್ನು ಮಾಡಿಕೊಳ್ಳಬೇಕಾಗುವುದು.

ಸಂಸ್ಥಾನಗಳಲ್ಲಿ ಪ್ರಜಾಪ್ರಭುತ್ವ ಕ್ರಮವನ್ನು ಜಾರಿಗೆ ತಂದರೆ ರಾಜರುಗಳ ಅಸ್ತಿತ್ವವನ್ನು ಸರ್ವವಿಧದಲ್ಲಿಯೂ ಸಂರಕ್ಷಿಸುವುದಾಗಿ ಕಾಂಗ್ರೆಸ್ ನಾಯಕರು ಭರವಸೆಯಿತ್ತಿದ್ದಾರೆ. ಸಂಸ್ಥಾನಗಳನ್ನೆಲ್ಲಾ ನಿರ್ಮೂಲ ಮಾಡುವ ಉದ್ದೇಶವು ಕಾಂಗ್ರೆಸ್ಸಿಗೆ ಇರುವುದಿಲ್ಲ. ಆದರೆ ಹಿಂದಿನಂತೆ ರಾಜರುಗಳು ನಿರಂಕುಶಪ್ರಭುಗಳಾಗಿಯೇ ಮುಂದುವರಿಯಲು ಯಾರೂ ಒಪ್ಪುವುದಿಲ್ಲ. ರಾಷ್ಟ್ರದ ಪರಮಾಧಿಕಾರವು ಪ್ರಜಾಗಣದಲ್ಲಿಯೇ ರೂಢಮೂಲವಾಗಬೇಕೆಂಬ ತತ್ವವನ್ನು ಎಲ್ಲರೂ ಅಂಗೀಕರಿಸಿದ್ದಾರೆ. ಈ ತತ್ವದ ಆಧಾರದ ಮೇಲೆಯೇ ಹೊಸ ರಾಜ್ಯಾಂಗವನ್ನು ರಚಿಸಲಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿರುವ ರಾಜರುಗಳೆಲ್ಲರೂ ಇದನ್ನು ಅಂಗೀಕರಿಸಲೇಬೇಕು.

ಅನೇಕ ಸಂಸ್ಥಾನಗಳಲ್ಲಿ ಇದುವರೆಗೆ ನಡೆದಿರುವ ಕ್ರೂರ ದಬ್ಬಾಳಿಕೆ ಮತ್ತು ನಿರಂಕುಶ ಪ್ರವರ್ತನೆಗಳಿಂದ ಅವುಗಳ ಬಗ್ಗೆ ಪ್ರಮುಖ ನಾಯಕರುಗಳಲ್ಲಿ ಜಿಗುಪ್ಸೆ ಉಂಟಾಗಿರುವುದು ನಿಜ. ಆದರೆ ಈಚೆಗೆ ಹಲ ಕೆಲವು ರಾಜರುಗಳು ಉದಾರ ನೀತಿಯನ್ನು ತೋರಿಸುತ್ತಿರುವುದರಿಂದ ಅವರುಗಳ ಸ್ಥಾನಮಾನಗಳನ್ನು ಪುರಸ್ಕರಿಸುವ ಭಾವನೆಗೆ ಇನ್ನೂ ಅವಕಾಶವಿರುತ್ತದೆ. ಭಾರತದ ರಾಜ ಮಹಾರಾಜರುಗಳು ತಮ್ಮ ಸ್ಥಾನಗಳನ್ನೂ ಉಳಿಸಿಕೊಂಡು ದೇಶದ ಸ್ವಾತಂತ್ರ್ಯವನ್ನೂ ಗಳಿಸುವ ಮಾರ್ಗದಲ್ಲಿ ಮುಂದಡಿ ಇಡುವರೆಂದು ಆಶಿಸಲಾಗಿದೆ.

ವಾರ ಭವಿಷ್ಯ

(ಶ್ರೀ ನಿತ್ಯಾನಂದ ಸ್ವಾಮಿಗಳವರಿಂದ)

ತಾ॥ ೧೬-೧೨-೪೬ರಿಂದ ೨೨-೧೨-೪೬ರವರೆಗೆ

ಮೇಷ—ಆರೋಗ್ಯ ಚೆನ್ನಾಗಿರುತ್ತದೆ ಮಾನಸಿಕ ಚಿಂತೆ ಕಡಿಮೆಯಾಗುತ್ತದೆ. ಮಂಗಳ ಕಾರ್ಯಗಳು ಜರುಗುವುವು ಉದ್ಯೋಗ, ವ್ಯವಹಾರಗಳಲ್ಲಿ ಯಶಸ್ಸುಂಟಾಗುವುದು ಆರ್ಥಿಕಸ್ಥಿತಿ ಉತ್ತಮಗೊಳ್ಳುವುದು ತಾ॥ ೧೮, ೧೯, ೨೨. ಶುಭವಾರ್ತೆ, ಧನಲಾಭ.

ವೃಷಭ—ಆರೋಗ್ಯ ಸಾಧಾರಣವಾಗಿರುತ್ತದೆ. ಆರ್ಥಿಕಸ್ಥಿತಿ ಕೆಡುತ್ತದೆ. ಉದ್ಯೋಗ, ವ್ಯವಹಾರಗಳಲ್ಲಿ ಬೇಸರಿಕೆ, ಶತ್ರುಗಳಿಂದ ಕಿರುಕುಳ ಹೆಚ್ಚು. ಅಧಿಕಾರಿ ವರ್ಗದವರ ಮನಸ್ತಾಪ ಹೆಚ್ಚುವುದು, ಮಾನಸಿಕ ಚಿಂತೆಯಿಂದ ಬಹಳ ತೊಂದರೆ. ತಾ॥ ೧೬, ೧೮, ೨೧ ಸಾಧಾರಣ. ಮಿತ್ರಭೇಟಿ.

ಮಿಥುನ—ಆರೋಗ್ಯ ಸಾಧಾರಣವಾಗಿರುತ್ತದೆ. ಧನಾಭಾವ ಹೆಚ್ಚು. ಅನಿರೀಕ್ಷಿತ ಪ್ರವಾಸವೊದಗುವುದು ಶತ್ರುಗಳ ಕಿರುಕುಳದಿಂದ ಉದ್ಯೋಗವ್ಯವಹಾರಗಳಿಗೆ ಧಕ್ಕೆ ತಗಲುವುದು. ಮನೆಯಲ್ಲಿ ರೋಗರುಜಿನಗಳು ಅಧಿಕವಾಗಿ ವೈದ್ಯಕೀಯ ವೆಚ್ಚ ಹೆಚ್ಚುವುದು. ತಾ॥ ೧೯, ೨೨ ಮಿತ್ರಸಹಾಯ ಲಾಭ.

ಕಟಕ—ಆರೋಗ್ಯ ಚೆನ್ನಾಗಿರುತ್ತದೆ. ಅಧಿಕಾರಿ ವರ್ಗದವರ ಮನ್ನಣೆ ಹೆಚ್ಚುವುದು. ವ್ಯಾಪಾರದಿಂದ ವಿಶೇಷ ಲಾಭವುಂಟಾಗುವುದು. ಧಾರ್ಮಿಕ ಕಾರ್ಯಗಳಲ್ಲಿ ವಿಶೇಷವಾದ ಆಸಕ್ತಿಯುಂಟಾಗುವುದು. ಸಮಾಜದಲ್ಲಿ ಬಹಳವಾದ ಸನ್ಮಾನ ದೊರೆಯುವುದು ತಾ॥ ೧೬, ೧೮, ೨೦ ಸಾಧಾರಣ ಲಾಭ. ಪ್ರವಾಸ.

ಸಿಂಹ—ಆರೋಗ್ಯ ಉತ್ತಮವಾಗಿರುತ್ತದೆ. ಕೋರ್ಟು ವ್ಯವಹಾರಗಳಿಂದ ಮಾನಸಿಕ ತೊಂದರೆ. ಪ್ರವಾಸದಿಂದ ಆರೋಗ್ಯ ಕೆಡುತ್ತದೆ ಮತ್ತು ಅಪಘಾತವಾಗುವ ಸಂಭವವಿದೆ. ರಾಜಕೀಯ ವಾತಾವರಣದಿಂದ ನಷ್ಟವೊದಗುತ್ತದೆ; ತಾ॥ ೧೭, ೨೦, ೨೧ ಧನಲಾಭ ಮಿತ್ರಭೇಟಿ.

ಕನ್ಯಾ—ಆರೋಗ್ಯ ಕೆಡುತ್ತದೆ ಮಾನಸಿಕಚಿಂತೆ ಹೆಚ್ಚುತ್ತದೆ. ಸರ್ಕಾರಿ ನೌಕರರಿಗೆ ಅಧಿಕಾರಿಗಳಿಂದ ವಿಪರೀತ ಕಿರುಕುಳ ಪ್ರವಾಸದಿಂದ ಅಧಿಕನಷ್ಟ. ಮನೆಯವರಿಂದ ಮತ್ತು ಮಿತ್ರರಿಂದ ತಿರಸ್ಕಾರ. ತಾ॥ ೧೭, ೧೯, ೨೧ ಸಾಧಾರಣ ಶಾಂತಿ, ಧನಲಾಭ

ತುಲಾ—ಆರೋಗ್ಯ ಉತ್ತಮ. ಉದ್ಯೋಗ ವ್ಯವಹಾರಗಳಲ್ಲಿ ಯಶಸ್ಸು. ಧನಲಾಭ. ಅಧಿಕಾರಿಗಳಿಂದ ಸನ್ಮಾನ. ಮಿತ್ರರಿಂದ ವಿಶೇಷ ಸಹಾಯ. ಮಾನಸಿಕ ಚಿಂತೆ ನಾಶವಾಗುವುದು. ಶತ್ರುಗಳ ಕಾಟ ತಪ್ಪುವುದು ತಾ॥ ೧೭, ೧೮, ೨೦ ಸಾಧಾರಣ ಶಾಂತಿ

ವೃಶ್ಚಿಕ—ಆರೋಗ್ಯ ಸಾಧಾರಣ ಧನಲಾಭ ಕಡಿಮೆ ಖರ್ಚು ಅಧಿಕ. ಯೋಚಿಸಿದ ಕಾರ್ಯಗಳಲ್ಲಿ ಹಾನಿ. ವಿಶೇಷ ಪ್ರವಾಸದಿಂದ ದೈಹಿಕ ತೊಂದರೆ, ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು ಮಿತ್ರರಿಂದ ಸಹಾಯ. ತಾ॥ ೧೭, ೨೦ ನಷ್ಟ ಅಪಮಾನ

ಧನುಸ್ಸು—ಆರೋಗ್ಯ ಚೆನ್ನಾಗಿರುತ್ತದೆ ಮಾನಸಿಕ ಚಿಂತೆ ಹೆಚ್ಚುತ್ತದೆ. ಉದ್ಯೋಗ ವ್ಯವಹಾರಗಳಲ್ಲಿ ಸೋಲು ಅಧಿಕಾರಿ ವರ್ಗದವರೊಡನೆ ಮನಸ್ತಾಪ. ಅಧಿಕವಾದ ಖರ್ಚು ತಾ॥ ೨೦, ೨೨ ಸಾಧಾರಣ ಸಂತೋಷ. ಬಂಧುದರ್ಶನ.

ಮಕರ—ಶಾರೀರಕ ಸ್ಥಿತಿ ಉತ್ತಮ

[ಹಿಂದಿನ ಪುಟಕ್ಕೆ ಮುಂದುವರಿದಿದೆ]

Edited, printed and published by A. N. Nagarajan at the Sadhvi Press, D Subbiah Road, Mysore.

OPERA TALKIES
Daily 3 Shows
From 15—12—1946
JAMES NEWILL, CAROL HUGHES and LIGHTNING
(The wonder dog)
in
RENREW OF THE
ROYAL MOUNTED
and
KILLERS OF THE SEA

ತಾ॥ 20-12-46 ರಿಂದ
ಪ್ರತಿದಿನ ಮೂರು ಆಟಗಳು
ನಾರದ-ನಾರದಿ
(ತೆಲುಗು ಭಾಷೆ)
ಸೂರಿಬಾಬು, ರಾಜ್ಯಂ, ಸೌದಾಮಿಣಿ.



ರಾಜಕಮಲ್, ಮೈಸೂರು
೧೩-೧೨-೪೬ ರಿಂದ ೫ ನೇ ಅಮೋಘವಾದ ವಾರ
ಡಾಕ್ಟರ್ ಕೊಟ್ನಿಸ್ ಕಿ ಅಮರ್ ಕಹಾನಿ
ಮುಖ್ಯ ಭೂಮಿಕೆ:—ಜಯಶ್ರೀ, ಶಾಂತಾರಾಂ, ಮುಂತಾದವರು

ಶೀಘ್ರದಲ್ಲಿಯೇ ನಿಮ್ಮ ಮೆಚ್ಚಿನ ನಿಮ್ಮ ಹತ್ತಿರದ ಟಾಕೀಸಿನಲ್ಲಿ ಬರುವ ತಾರೀಖನ್ನು ಗಮನಿಸಿರಿ
ತಮಿಳುನಾಡು ಟಾಕೀಸ್‌ರವರ
.... ಸುಪ್ರಸಿದ್ಧ ಪೌರಾಣಿಕ ಚಿತ್ರ...........
ಮೋಹಿನಿ ರುಕ್ಮಾಂಗದ
(ತಮಿಳು ಭಾಷೆ)
ಎಮ್. ಎಸ್. ವಿಜಯಾಳ್, ಪಿ. ಬಿ ರಂಗಾಚಾರ್ ಕೆ. ಪಿ. ಶಾರದಾಂಬಾಳ್, ವಿದ್ವಾನ್ ಶ್ರೀನಿವಾಸನ್, ಎಂ ಆರ್. ಸುಬ್ರಹ್ಮಣ್ಯಂ ಮತ್ತು ಇತರರು ನಟಿಸಿರುವರು
ನಿರ್ದೇಶಕರು:-ಎಸ್. ಸೌಂದರ್‌ರಾಜನ್ : ಸ್ಟುಡಿಯೊ:-ರಣಜಿತ್-ಬೊಂಬಾಯಿ
For Bookings to :-Mysore State, South Canara & Coorg
Apply to SRI MAHALAKSHMI PICTURES,
No 8, Hospital Road, Bangalore City.

ವಾನ್‌ಗಾರ್ಡ್ ಫೈರ್ ಮತ್ತು ಜನರಲ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್
ಮತ್ತು ವಾನ್‌ಗಾರ್ಡ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,
ಹೆಡ್ ಆಫೀಸ್ : ಮದ್ರಾಸು
ಸುರಕ್ಷಿತವಾದ ಕಂಪೆನಿ. ಇಂಡಿಯಾ ಮತ್ತು ಸಿಲೋನಿನಲ್ಲೆಲ್ಲಾ ಶಾಖೋಪಶಾಖೆಗಳುಳ್ಳ ಫೈರ್, ಮೋಟಾರ್, ಮೆರೈನ್, ಆಕ್ಸಿಡೆಂಟ್, ವರ್ಕ್‌ಮೆನ್ಸ್ ಕಾಂಪೆನ್ಸೇಷನ್, ಲೈಫ್ ಮತ್ತು ಇನ್ನೂ ಅನೇಕ ತರಹೆಯ ಇನ್ಶೂರೆನ್ಸುಗಳನ್ನು ಕೈಗೊಳ್ಳುವ ಕಂಪೆನಿ ಪಾಲಿಸಿದಾರರುಗಳಿಗೆ ಹೆಚ್ಚಿಗೆ ಬೋನಸ್ಸು ಕೊಡಲ್ಪಟ್ಟಿರುತ್ತೆ
ಏಜೆಂಟರುಗಳಿಗೆ ಧಾರಾಳವಾದ ಕಮಿಷನ್
ಪಾಲಿಸಿ ತೆಗೆದುಕೊಳ್ಳಲೂ ಮತ್ತು ಏಜೆಂಟರಾಗಲೂ ಇವರಲ್ಲಿ ವಿಚಾರಿಸಿ.
ಎಂ. ಸಿ. ಸಂಪತ್ತಯ್ಯಂಗಾರ್,
ಸ್ಪೆಷಲ್ ರೆಪ್ರೆಸೆಂಟೆಟಿವ್, ವಾನ್‌ಗಾರ್ಡ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,
ಲಕ್ಷ್ಮೀಪುರ ಅಗ್ರಹಾರ, ಮೈಸೂರು

ರಿಜಿ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೧ ಕಾಸು

ಸಂಪುಟ ೫] ಮಂಗಳವಾರ ೧೭—೧೨—೪೭ [ಸಂಚಿಕೆ ೧೧೨

ಗೋಪಾಲರಾಯರಿಗೆ ಜಾಮೀನು ಮೇಲೆ ಬಿಡುಗಡೆ

...ಲೀಗಿಗೆ ಸೇರಬೇಕೆಂದು ...ಸರ್ಕಾರದ ಒತ್ತಾಯ

...ಪುರ ಕೇಂದ್ರ ಜೈಲಿನಲ್ಲಿರುವ ಬಜಾ...ಂದ್ ದಳದ ಶ್ರೀ ಖುರ್ಷಿದ್ ಖ...ರವರನ್ನು ಇಂಡಿಯಾ ಸರ್ಕಾರದ ರಾ...ಶಾಖೆಯವರು ಭೇಟಿಮಾಡಿ ಅ...ಮುಸ್ಲಿಂ ಲೀಗಿಗೆ ಸೇರುವುದಾದರೆ ಅ... ಬಿಡುಗಡೆ ಮಾಡಲಾಗುವುದೆಂದು ...ದರೆಂದೂ, ಕೀಲರವರು ಆ ಸೂಚನೆ ...ತಿರಸ್ಕರಿಸಿದರೆಂದೂ ವರದಿಯಾ...ದ ಬಗ್ಗೆ ಅವರು ಪಂ॥ ನೆಹರೂರ ...ತಿಳಿಸಲಾಗಿದೆಯೆಂದೂ ಗೊತ್ತಾಗಿದೆ

...ಡುಗಾಟದ ಪರಿಣಾಮ

...ವ್ವ ಹುಡುಗರು ಸೇರಿ ನೂರೆಂಬರ್ಗಿನ ...ಣೆಯ ಆಟವನ್ನಾಡುತ್ತಿದ್ದಾಗ, ಆಟ ...ಸ್ವೆ ಘಾಸಿಶಿಕ್ಷೆ ವಿಧಿಸಲ್ಪಟ್ಟ ಜರ್ಮನ ...ನ್ವನ್ನೊಂದನ್ನು ಗಲ್ಲಿಗೇರಿಸಲಾಯಿತೆಂದು ...ವರದಿಯಾಗಿದೆ.

ಕೈರೋವಿನಲ್ಲಿ ಜಿನ್ನಾ

...ಜಿನ್ನಾರವರು ಮೊನ್ನೆ ಲಂಡನ್ ...ದಿಂದ ಭಾರತಕ್ಕೆ ವಾಪಸ್ಸು ತೆರಳಿ ಮ...ಮಾಲ್ಟಾ ದ್ವೀಪದಲ್ಲಿ ರಾತ್ರಿ ತಂಗಿದ್ದು ...ನ ಗವರ್ನರರ ಅತಿಥಿಗಳಾಗಿದ್ದರು. ನಿ...ಬೆಳಗ್ಗೆ ಅಲ್ಲಿಂದ ಕೈರೋವನ್ನು ತಲು...ರು ಅಲ್ಲಿ 2-3 ದಿನಗಳು ಇದ್ದು ಅ...ಪ್ರಮುಖರುಗಳನ್ನು ಭೇಟಿಮಾಡಿ ...ಕತೆ ನಡೆಸುವರು. 30ನೇ ತಾ॥ ...ವೇಳೆಗೆ ಅವರು ಭಾರತ ತಲುಪುವ ...ಸ್ತುತೆ ಇದೆ.

ಹರಿಕಥೆ

...ರಾಜಧಾನಿಯ ಕಬೀರ್ ರಸ್ತೆಯಲ್ಲಿರು ...ಕೀರ್ತನಕಾರರ ಮಂಡಲಿಯವರ ಆಶ್ರ...ದಲ್ಲಿ ಪಾಂಡುರಂಗ ಸ್ವಾಮಿಯವರ ...ವ ಮಂಗಳಾರತಿಯು ೧೪ನೇ ಶನಿವಾರ ...ಗಿತು ಪೌರಸಭಾಧ್ಯಕ್ಷರಾದ ಶ್ರೀ॥ ...ರಾಮಚಂದ್ರರಾವ್ ಬೊಂಬೋರೆ...ವರು ಅಧ್ಯಕ್ಷತೆ ವಹಿಸಿದ್ದರು. ಈಗ ...ಪ್ರತಿ ದಿನ ಸಂಜೆ ೬ ಗಂಟೆಗೆ ಕೀರ್ತ...ಗಳು ನಡೆಯುತ್ತವೆ. ಸರ್ವರಿಗೂ ಸ್ವಾ...ಗಿದೆ.

ರಾಷ್ಟ್ರಸೇವಾದಳ ಸಮಿತಿ

ಕರ್ನಾಟಕ ರಾಷ್ಟ್ರ ಸೇವಾದಳದ ಮೈ...ರು ಸೈನಿಕರ ಸಭೆಯು ಮೊನ್ನೆ ದಿನ ಶ್ರೀ ...ಪರನೂರರ ಅಧ್ಯಕ್ಷತೆಯಲ್ಲಿ ಜರುಗಿ ...ಗಳಾದ ದೊಡ್ಡಮಲ್ಲಯ್ಯನವರನ್ನು ...ನ್ವರರನ್ನಾಗಿಯೂ, ರಾ. ಭಟ್ಟೋರಾಯ...ರನ್ನು ಸೇನಾಪತಿಗಳನ್ನಾಗಿಯೂ, ಸ. ಮರಿ...ರವರನ್ನು ಕಾರ್ಯದರ್ಶಿಗಳನ್ನಾಗಿಯೂ ...ಬ್ ಕೆ ಕುಮಾರಸ್ವಾಮಿ, ನ. ಶಿವ...ರಾವ್, ಎಂ. ಪಿ. ಕೃಷ್ಣ, ಕ ಭೂಪಾಲ್ ...ರಪ್ಪ ಮತ್ತು ರಾಮಕೃಷ್ಣ ಬಟ್ಟೆಯವರ... ಸಲಹಾ ಸಮಿತಿ ಸದಸ್ಯರನ್ನಾಗಿಯೂ ...ರಿಸಲಾಯಿತು ದಳದ ಕಛೇರಿಯನ್ನು ...ಚಾಮರಾಜಪುರಂ, ೩೬೧೦ ನೇ ನಂಬರ್ ...ಮನೆಯಲ್ಲಿ ತೆರೆಯಲಾಗಿದೆ

ಭಾಷಣ

ನಾಳೆ ಸಂಜೆ ೫-೩೦ ಗಂಟೆಗೆ ವಿದ್ಯಾರ್ಥಿ ...ಗ್ರೆಸ್ ಆಶ್ರಯದಲ್ಲಿ ಮೈಸೂರು ರಸ್ತೆ...ಯಲ್ಲಿರುವ ಬೆಟ್ಟದ ಪುರದ ವಿದ್ಯಾರ್ಥಿನಿಲ...ಯದ ಮೈದಾನದಲ್ಲಿ ಕಂಪಟಿ ಶ್ರೀ ರಾಮ...ಕೃಷ್ಣಮಠ ಮತ್ತು ಆಶ್ರಮದ ಅಧ್ಯಕ್ಷರಾದ ...ಸ್ವಾಮಿ ರಂಗನಾಥಾನಂದರವರು ಸ್ವ...ತಂತ್ರ ಭಾರತದಲ್ಲಿ ತರುಣರ ಪಾತ್ರ ಎಂಬ ...ವಿಷಯದಲ್ಲಿ ಭಾಷಣ ಮಾಡುವರು ಸರ್ವ...ರಿಗೂ ಸ್ವಾಗತವಿದೆ.

ಚನ್ನಪಟ್ಣದ ಗಲಭೆ

ನಾಲ್ವರ ಮರಣ ಹಲವರಿಗೆ ಗಾಯ

ಸ್ವಂ ಸು ಫೋ॥] ಬೆಂಗಳೂರು ೧೭

ನಿನ್ನೆ ಬೆಳಗ್ಗೆ ಚನ್ನಪಟ್ಣದಲ್ಲಿ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಚೆಂಗಲರಾಯರೆಡ್ಡಿಯವರ ಪ್ರವಾಸದ ಸಂಬಂಧವಾಗಿ ಮೆರವಣಿಗೆ ನಡೆದ ಮೇಲೆ ಸಭೆಯ ಸ್ಥಳಕ್ಕೆ ಎಲ್ಲರೂ ಬಂದು ಸೇರುತ್ತಿದ್ದಾಗ ಹಲವು ಪುಂಡರು ಮೆರವಣಿಗೆಯನ್ನು ತಡೆದರೆಂದೂ, ಮೆರವಣಿಗೆಯ ರಥದ ಒಂದು ಎತ್ತನ್ನು ಕೊಂದು ಹಾಕಿದರೆಂದೂ ಅನಂತರ ಗಲಭೆಯು ಆರಂಭವಾಯಿತೆಂದೂ ವರದಿಯಾಗಿದೆ. ಒಂದು ಅಂಗಡಿಯನ್ನು ಲೂಟಿ ಮಾಡಲಾಯಿತೆಂದೂ ಹೇಳಲಾಗಿದೆ. ಹೈಸ್ಕೂಲು ಹೆಡ್ಮಾಸ್ಟರಾದ ಶ್ರೀ ಎಂಬಾರ ಶ್ರೀನಿವಾಸಾಚಾರ್ಯರನ್ನು ಹಿಡಿದು ಕೊಂಡು ಹಾಕಲಾಯಿತೆಂದೂ ಇಬ್ಬರು ಉಪಾಧ್ಯಾಯರುಗಳಿಗೆ ಮೊಣಕೈ ಮುರಿಯಲಾಯಿತೆಂದೂ ಗೊತ್ತಾಗಿದೆ. ಇಪ್ಪತ್ತೇಳು ಜನರಿಗೆ ಗಾಯವಾಯಿತೆಂದೂ ೧೭ ಜನರನ್ನು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲು ಮಾಡಲಾಗಿದೆಯೆಂದೂ ತಿಳಿದು ಬಂದಿದೆ. ಗಲಭೆಯಾದ ಮೂರು ಜನರು ಮೃತಪಟ್ಟರೆಂದು ವರದಿಯಾಗಿದೆ ಪೊಲೀಸ್ ಮುಖ್ಯಾಧಿಕಾರಿಗಳಾದ ಶ್ರೀ ಸೋಮಪ್ಪನವರು ತಕ್ಕ ಸಿಬ್ಬಂದಿಯೊಡನೆ ಹೋಗಿ ಪರಿಸ್ಥಿತಿಯನ್ನು ಹತೋಟಿಗೆ ತಂದುಕೊಂಡಿರುವರು. ಗಲಭೆಯನ್ನಡಗಿಸಲು ಪೊಲೀಸಿನವರು ನಿನ್ನೆ ಮಧ್ಯಾಹ್ನ ಗುಂಡು ಹಾರಿಸಬೇಕಾಯಿತೆಂದು ತಿಳಿದು ಬಂದಿದೆ.

ಗಾಯಗೊಂಡವರ ಪೈಕಿ ಇಬ್ಬರು ಮುಸಲ್ಮಾನರೂ ಇದ್ದಾರೆ ೧೪ ವರ್ಷದ ವೀರನಗೌಡ ಎಂಬ ಹುಡುಗನು ಈ ದಿನ ಮೃತಪಟ್ಟನೆಂದು ಸುದ್ದಿ ಬಂದಿದೆ.

ಅಮೆರಿಕಾ-ಭಾರತದ ರೇಡಿಯೋ ಫೋನ್

ಯುದ್ಧ ಆರಂಭವಾದಾಗ ನಿಲ್ಲಿಸಲ್ಪಟ್ಟಿದ್ದ ಅಮೆರಿಕಾ ಸಂಯುಕ್ತ ಸಂಸ್ಥಾನದ ಮತ್ತು ಭಾರತದ ರೇಡಿಯೋ ಫೋನ್ ವ್ಯವಸ್ಥೆಯನ್ನು ನಿನ್ನೆಯಿಂದ ಮತ್ತೆ ಆರಂಭಿಸಲಾಗಿದೆ

ಕಾಂ॥ ಅಧ್ಯಕ್ಷರ ಪ್ರವಾಸ

ಸ್ವಂ ಸು] ಶ್ರೀರಂಗಪಟ್ಟಣ ೧೫

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ॥ ಕೆ. ಸಿ ರೆಡ್ಡಿಯವರು ಮಂಡ್ಯ ಜಿಲ್ಲಾ ಪ್ರವಾಸವನ್ನು ೧೩ ನೇ ತಾ॥ ನಿಂದ ೩ ದಿನಗಳ ಕಾಲ ನಡೆಸಿದರು ಶ್ರೀರಂಗಪಟ್ಟಣದ ತಾಲ್ಲೂಕಿನಲ್ಲಿ ಅಧ್ಯಕ್ಷರಿಗೆ ೭೪೭ ರೂ ಗಳ ಕಾಣಿಕೆಯನ್ನು ಅರ್ಪಿಸಲಾಯಿತು.

ವಿಜಯಲಕ್ಷ್ಮಿಯವರ ಆಗಮನ

ಸಂಯುಕ್ತ ರಾಷ್ಟ್ರ ಸಭೆಗೆ ಭಾರತ ನಿಯೋಗದ ನಾಯಕರಾಗಿ ತೆರಳಿದ್ದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಮೊನ್ನೆ ದಿನ ಮಧ್ಯಾಹ್ನ ದೆಹಲಿಗೆ ವಿಮಾನದಲ್ಲಿ ಬಂದಿಳಿದರು. ನಿಯೋಗದ ಇತರ ಸದಸ್ಯರು ನಿನ್ನೆ ಲಂಡನ್ ತಲುಪಿದರು ಅವರೆಲ್ಲರೂ ಗುರುವಾರ ಭಾರತಕ್ಕೆ ಆಗಮಿಸುವರು.

ಲೈಸನ್ಸಿಲ್ಲದ ವ್ಯಾಪಾರಕ್ಕೆ ಶಿಕ್ಷೆ

ಮೈಸೂರು ೧೭

ಲೈಸನ್ಸಿಲ್ಲದೆ ಪುರಿ ವ್ಯಾಪಾರ ಮಾಡುತ್ತಿದ್ದನೆಂಬ ಆಪಾದನೆ ಮೇಲೆ ನಗರ ನ್ಯಾಯಾಧೀಶರು ಪುಟ್ಟಸ್ವಾಮಯ್ಯ ಎಂಬುವನಿಗೆ ೧೫ ರೂ ಜುಲ್ಮಾನೆ ವಿಧಿಸಿರುವರು.

ಭಾವಚಿತ್ರ ಅನಾವರಣ

ಮಹಾರಾಜಾ ಕಾಲೇಜಿನ ಕರ್ನಾಟಕ ಸಂಘದ ಆಶ್ರಯದಲ್ಲ ನಾಳೆ ಸಂಜೆ ೬ ಘಂಟೆಗೆ ದಿವಂಗತ ಶ್ರೀ ಕೈಲಾಸಂ ರವರ ಭಾವ ಚಿತ್ರದ ಅನಾವರಣೋತ್ಸವವು ಜೂನಿಯರ್ ಬಿ ಎ ಮಂದಿರದಲ್ಲಿ ನಡೆಯುವುದು ಶ್ರೀ ಜಿ. ಪಿ ರಾಜರತ್ನಂರವರು ಶ್ರೀ ಕೈಲಾಸಂರವರ ವಿಚಾರವಾಗಿ ಭಾಷಣ ಮಾಡುವರು ಇದೇ ಸಂಧರ್ಭದಲ್ಲಿ ಅನುಕೂಲ ಕಲ್ಯಾಣ" ಎಂಬ ನಾಟಕವು ಅಭಿನಯಿಸಲ್ಪಡುತ್ತದೆ ಸರ್ವರಿಗೂ ಆಹ್ವಾನವುಂಟು.

ಕಂಪಾಚಾರ ತಪ್ಪಿತು

ಕಲ್ಕತ್ತೆಯಲ್ಲಿರುವ ಭಾರತ ಅಸೋಸಿಯೇಟೆಡ್ ವಾಣಿಜ್ಯ ಸಂಸ್ಥೆಯ ವಾರ್ಷಿಕ ಅಧಿವೇಶನದಲ್ಲಿ ಕಳೆದ ೨೫ ವರ್ಷಗಳಿಂದ ಇದುವರೆವಿಗೆ ವೈಸರಾಯರೇ ಭಾಷಣ ಮಾಡುತ್ತಿದ್ದರು. ಆದರೆ ಈ ಬಾರಿ ಕೇಂದ್ರ ಸರ್ಕಾರದ ಉಪಾಧ್ಯಕ್ಷರಾದ ಪಂ॥ ನೆಹರೂರವರು ಭಾಷಣ ಮಾಡಿದ್ದಾರೆ ಈ ಸಂಸ್ಥೆ ೧೯೨೨ ರಲ್ಲಿ ಜನ್ಮ ತಾಳಿದ್ದು ಇದುವರೆವಿಗೆ ವಾರ್ಷಿಕ ಅಧಿವೇಶನದಲ್ಲಿ ಭಾರತೀಯರ್ಯಾರೂ ಭಾಷಣವನ್ನೇ ಮಾಡಿರಲಿಲ್ಲ

ನೆಹರು ವಿಮಾನದಲ್ಲಿ ಬೆಂಕಿ

ಕಾಶಿಯಿಂದ ಕಲ್ಕತ್ತವಿಗೆ ನೆಹರೂರವರು ನಿನ್ನೆ ತೆರಳುವಾಗ್ಗೆ ಅವರ ವಿಮಾನದಲ್ಲಿ ಬೆಂಕಿ ಕಾಣಿಸಿಕೊಂಡು ವಿಮಾನವನ್ನು ಕೆಳಕ್ಕಿಳಿಸಲಾಯಿತು ಪ್ರಮಾದವೇನೂ ಸಂಗಡ ಸ್ವಲ್ಪ ವೇಳೆಯಾದ ನಂತರ ವಿಮಾನ ವು ಮತ್ತೆ ಹೊರಟಿತು

ಗೋಪಾಲರಾಯರನ್ನು ಜಾಮೀನ್ ಮೇಲೆ ಬಿಡಲಾಯಿತು

ಸ್ವಂ.ಸು.ಫೋ॥ ಬೆಂಗಳೂರು ೧೭

ಧರ್ಮಶಿಕ್ಷಾ ಕರ ಬಿ. ಎಸ್ ಗೋಪಾಲರಾಯರನ್ನು ನಗರ ನ್ಯಾಯಾಧೀಶರು ಈ ದಿನ ೫೦೦೦ ರೂ ಗಳ ಸ್ವಂತ ಜಾಮೀನು ಮತ್ತು ಅದೇ ಮೊಬಲಗಿನ ಎರಡು ಪ್ರತ್ಯೇಕ ಜಾಮೀನುಗಳ ಮೇಲೆ ಬಿಡುಗಡೆ ಮಾಡಿದ್ದಾರೆ. ಶ್ರೀ ಗೋಪಾಲರಾಯರ ಮೇಲೆ ಬಂದಿರುವ ಆಪಾದನೆ ಯಾವ ರೀತಿಯಲ್ಲಾದರೂ ಇರಲಿ "ಅವರು ಸಮಾಜದಲ್ಲಿ ಗಣ್ಯವಾದ ಸ್ಥಳವನ್ನು ಪಡೆದಿದ್ದಾರೆ. ನ್ಯಾಯಾಸ್ಥಾನವು ಅಪೇಕ್ಷಿಸಿದಾಗ ಅವರು ಬರಲು ಸಿದ್ಧರಿದ್ದಾರೆ. ಅಲ್ಲದೆ ಪೊಲೀಸ್ ತನಿಖೆಗೆ ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡುವುದರಿಂದ ಯಾವ ಅಡ್ಡಿಯೂ ಒದಗುವುದಿಲ್ಲ" ಎಂದು ನ್ಯಾಯಾಧೀಶರು ಜಾಮೀನು ಅರ್ಜಿಯನ್ನು ಪರಿಶೀಲಿಸಿ ತೀರ್ಮಾನ ತಿಳಿಸಿದರು

ಶಾಸನ ಸಭೆ ಮುಕ್ತಾಯ

ಸ್ವಂ ಸು ಫೋ॥] ಬೆಂಗಳೂರು ೧೭

ನಿನ್ನೆ ಶಾಸನ ಸಭೆ ಅಧಿವೇಶನವು ಮುಕ್ತಾಯವಾಯಿತು ಆಹಾರ ಸಮಸ್ಯೆ ಸಂಬಂಧದಲ್ಲಿ ಖಾಸಗೀ ಸದಸ್ಯರು ೫೪ ನಿರ್ಣಯಗಳನ್ನು ಮಂಡಿಸಿದ್ದರು ಆಹಾರ ಮಂತ್ರಿಗಳೂ, ಡೈರೆಕ್ಟರ್ ಶ್ರೀ॥ ಗುರುದತ್‌ರೂ ಸಂಸ್ಥಾನದ ಆಹಾರ ಪರಿಸ್ಥಿತಿಯನ್ನು ವಿವರಿಸಿದರು. ಅನಂತರ ಖಾಸಗೀ ನಿರ್ಣಯಗಳನ್ನು ಚರ್ಚಿಸಲು ಅವಕಾಶವಿರಲಿಲ್ಲ. ಇನ್ನೊಂದು ದಿನದ ಅಧಿವೇಶನವನ್ನು ಮುಂದುವರಿಸಬೇಕೆಂದು ಸದಸ್ಯರು ಕೊಟ್ಟ ಸಲಹೆಯನ್ನು ಸರ್ಕಾರದವರು ಅಂಗೀಕರಿಸಲಿಲ್ಲ ಆದ್ದರಿಂದ ಯಾವ ನಿರ್ಣಯವೂ ಚರ್ಚೆಗೆ ಬಾರದೇ ಅಧಿವೇಶನವು ಮುಕ್ತಾಯವಾಯಿತು

ಮೈಸೂರು ಎರಡನೇ ಮುನ್ಸೀಫರು ಹೆಚ್ ಆರ್. ಮಹಂತಯ್ಯನವರನ್ನು ಮುಂಡ್ಯಕ್ಕೂ, ತರೀಕೆರೆ ಶ್ರೀ ಟಿ ರಾಮಸ್ವಾಮಿಯವರನ್ನು ಮೈಸೂರಿಗೂ, ಶಿವಮೊಗ್ಗ ಲಾಯರ್ ಶ್ರೀ ಬಿ ಕೆ ನಂಜಪ್ಪನವರನ್ನು ತರೀಕೆರೆಗೂ, ವರ್ಗಾಯಿಸಲಾಗಿದೆ

ಅರಮನೆ ಸುದ್ದಿ

(೧೪ ೧೨-೧೯೪೭ ಶನಿವಾರ)

ಶ್ರೀಮನ್ಮಹಾರಾಜರವರು ಈ ದಿನ ರ್ಯಾಪ್ಟ್ ಟ್ರೈಡಿ ರವರಿಗೆ ಭೇಟಿಯನ್ನು ದಯಪಾಲಿಸಿದ್ದರು.

LATEST NEWS

ಶ್ರೀ॥ ಕೆ ಸಿ. ರೆಡ್ಡಿಯವರ ಆಗಮನ

ಸ್ವಂ ಸು. ಫೋ॥] ಬೆಂಗಳೂರು ೧೭

ಶ್ರೀ॥ ಕೆ ಚೆಂಗಲರಾಯ ರೆಡ್ಡಿಯವರು ಚನ್ನಪಟ್ಟಣದಿಂದ ಸುಖವಾಗಿ ಬಂದು ತಲುಪಿದರು. ಈ ದಿನ ಸಂಜೆ ಪತ್ರಿಕಾ ಸಮ್ಮೇಳನದಲ್ಲಿ ಪರಿಸ್ಥಿತಿಯನ್ನು ವಿವರಿಸುವರು.

ಚನ್ನಪಟ್ಟಣದ ಗಲಭೆಯಲ್ಲಿ ಗಾಯಗೊಂಡವರ ಪೈಕಿ ಮತ್ತಿಬ್ಬರ ಸ್ಥಿತಿ ಚಿಂತಾಜನಕವಾಗಿದೆಯೆಂದು ತಿಳಿದುಬಂದಿದೆ

ಚಾಮರಾಜನಗರಕ್ಕೆ ವಿಶೇಷ ಪೊಲೀಸ್ ದಳ

ಮೈಸೂರು ೧೭

ಚಾಮರಾಜನಗರಕ್ಕೆ ರಿಸರ್ವ್ ಪೊಲೀಸ್ ದಳವೊಂದನ್ನು ಮುಂಜಾಗ್ರತೆ ತೆಗೆದುಕೊಳ್ಳುವ ಸಲುವಾಗಿ ಕಳುಹಿಸಲಾಗಿದೆಯೆಂದು ತಿಳಿದು ಬಂದಿದೆ.

ಸಾಧ್ವಿ

ತಾ|| ೧೭-೧೨-೪೬ ಮಂಗಳವಾರ

ಶಾಸನ ಸಭೆ

ಮೈಸೂರು ಶಾಸನ ಸಭೆಯ ಎಂಟು ದಿನದ ಕಾರ್ಯಕಲಾಪಗಳು ನಿನ್ನೆ ಮುಕ್ತಾಯವಾದುವು. ಬಹಳ ಅಲ್ಪ ಅವಧಿಯಲ್ಲಿ ಮುಗಿದ ಅಧಿವೇಶನಗಳ ಪೈಕಿ ಇದು ಒಂದು. ಎಂಟು ದಿನಗಳಲ್ಲಿ ಈ ಸಭೆಯ ಕೆಲಸಕಾರ್ಯಗಳು ಮುಗಿದಿರುವುದು ಬಹಳ ಅಪೂರ್ವ.

ಕಾರ್ಯಕ್ರಮದ ಪಟ್ಟಿಯಲ್ಲಿ ವಿಶೇಷ ವಿಷಯಗಳೂ ಸಹ ಇರಲಿಲ್ಲ. ಕಳೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ಸರ್ಕಾರದ ಪರವಾಗಿ ನಾಲ್ಕು ಮಸೂದೆಗಳು ಮಾತ್ರ ಮಂಡಿಸಲ್ಪಟ್ಟಿದ್ದುವು. ಅವುಗಳೂ ಸಹ ಪುರಸ್ಕಾರ ಪಡೆಯದೆ ಬಿದ್ದುಹೋಗಿದ್ದುವು. ಆ ನಾಲ್ಕು ಮಸೂದೆಗಳನ್ನು ಮಾತ್ರ ಈ ಸಭೆಯಲ್ಲಿ ಇಡಲಾಗಿತ್ತು. ಶಾಸನ ಸಭೆಯಲ್ಲಿ ಇಷ್ಟು ಅಲ್ಪ ಸಂಖ್ಯೆಯ ಮಸೂದೆಗಳು ಬಂದುದೂ ಇದೇ ಮೊದಲು.

ಪ್ರಜಾಪ್ರತಿನಿಧಿ ಸಭೆಯಲ್ಲಿ ತಿರಸ್ಕೃತವಾದ ಮಸೂದೆಗಳನ್ನು ಶಾಸನ ಸಭೆಯಲ್ಲಿ ತರುವ ರೀತಿಯನ್ನು ಕಾಂಗ್ರೆಸ್ಸಿನವರು ಪ್ರತಿಭಟಿಸಿ ಸಭಾ ಪರಿತ್ಯಾಗ ಮಾಡಿದರು. ಆದುದರಿಂದ ಮಸೂದೆಗಳನ್ನು ವಿಮರ್ಶಿಸುವವರೇ ಇರಲಿಲ್ಲ. ಕೇವಲ ಒಂದೇ ಗಂಟೆಯೊಳಗೆ ನಾಲ್ಕು ಮಸೂದೆಗಳೂ ಮಂಜೂರಾದುವು. ಕಾಲು ಗಂಟೆಗೆ ಒಂದರಂತೆ ಮಸೂದೆಗಳು ಅಂಗೀಕೃತವಾಗಿರುವುದೂ ಶಾಸನ ಸಭೆಯ ಇತಿಹಾಸದಲ್ಲಿ ಹೊಸದೆಂದು ಹೇಳಬಹುದು.

ದಿವಾನರ ಗೈರುಹಾಜರಿಯಲ್ಲಿ ಅವರ ಕೆಲಸ ನೋಡುತ್ತಿರುವ ಮಂತ್ರಿಗಳು ಸಭೆಯ ನಾಯಕರಾಗಿಯೂ ಇರುವುದು ಸರಿಯಲ್ಲವೆಂಬ ವಿಷಯವಾಗಿ ಬಂದ ಕ್ರಿಯಾಲೋಪವು ಇಡೀ ಒಂದು ದಿನವೆಲ್ಲಾ ಚರ್ಚಿಸಲ್ಪಟ್ಟಿತು. ಮೊದಲೇ ಸಂಕುಚಿತವಾಗಿದ್ದ ಕಾರ್ಯಕ್ರಮವನ್ನು ಇನ್ನೂ ಮೊಟಕು ಮಾಡಲು ಇದೇ ಸಹಕಾರಿಯಾಯಿತು. ಆದರೂ ಈ ವಿಷಯದ ಮೇಲೆ ಯಾವ ತೀರ್ಮಾನವೂ ಆಗಿರುವುದಿಲ್ಲ. ಮುಂದಿನ ಅಧಿವೇಶನದಲ್ಲಿ ಅಧ್ಯಕ್ಷರ ತೀರ್ಮಾನವು ಹೊರ ಬೀಳ ಬಹುದು.

ಜವಾಬ್ದಾರಿ ಸರ್ಕಾರದ ಮಾತನ್ನು ಸಭೆಯಲ್ಲಿ ಪದೇ ಪದೇ ಎತ್ತಬಹುದೇ, ಇಲ್ಲವೇ ಎಂಬ ವಿಷಯದಲ್ಲಿ ಶ್ರೀ ಪಿ ಮಹದೇವಯ್ಯನವರು ಎತ್ತಿದ ಕ್ರಿಯಾಲೋಪವೂ ಸಹ ವಿಶೇಷ ಕಾಲವನ್ನು ಆಕ್ರಮಿಸಿತು. ಪೂರ್ಣ ಸ್ವಾತಂತ್ರ್ಯ, ಸಾಮ್ರಾಜ್ಯ ಸಂಬಂಧದ ಪರಿತ್ಯಾಗ, ಸ್ವತಂತ್ರ ಪರಮಾಧಿಕಾರ ಪ್ರಜಾರಾಜ್ಯ ಮುಂತಾದ ಘೋಷಣೆಗಳ ಕಾಲದಲ್ಲಿಯೂ ಜವಾಬ್ದಾರಿ ಸರ್ಕಾರದ ಮಾತನ್ನು ಎತ್ತುವುದಕ್ಕೂ ನಮ್ಮ ಶಾಸನ ಸಭೆಯಲ್ಲಿ ಆಕ್ಷೇಪಣೆ ಮಾಡುವವರು ಇರುವರೆಂದ ಮೇಲೆ ಸಂಸ್ಥಾನದ ರಾಜಕೀಯ ಮಟ್ಟವು ಕೆಲವರ ಮಟ್ಟಿಗಾದರೂ ಎಷ್ಟು ಹಿಂದೆ ಬಿದ್ದಿದೆ ಎಂಬುದನ್ನು ಊಹಿಸಿ ತಿಳಿಯಬೇಕು.

ರಾಜ್ಯಾಂಗ ರಚನಾ ಸಭೆ, ಸರ್ಕಾರದವರ ಹೊಸ ಸಾಲದ ನೀತಿ ಮತ್ತು ಆಹಾರ ಸರಬರಾಜಿನ ವ್ಯವಸ್ಥೆಗಳ ಬಗ್ಗೆ ವಿಶೇಷವಾದ ಚರ್ಚೆಗಳೇನೋ ನಡೆದುವು. ಆದರೆ ಸರ್ಕಾರದವರಿಂದ ಬಂದ ಉತ್ತರಗಳು ಪ್ರಜಾ ವರ್ಗದವರಿಗೆ ಸಮರ್ಪಕವಾಗಿವೆಯೆಂದು ಹೇಳಲು ಸಾಧ್ಯವಿಲ್ಲ. ಇತರ ಹಲವು ನಿರ್ಣಯಗಳೂ ಅವಸರದ ಠರಾವುಗಳೂ ಸಹ ಸರ್ಕಾರದ ಪರವಾಗಿಯೇ ತೀರ್ಮಾನವಾದುವು. ಈ ಸಭೆಯು ಈಗ ರಚಿತವಾಗಿರುವ ರೀತಿಯಂತೆ ಇರುವವರೆಗೂ ಈ ಬಗೆಯಲ್ಲಿಯೇ ನಿರ್ಧಾರಗಳು ಆಗುವುದರಲ್ಲಿ ಆಶ್ಚರ್ಯವಿಲ್ಲ. ಸರ್ಕಾರದವರಿಂದ ನಾಮಕರಣ ಹೊಂದಿದವರೂ, ಸಂಕುಚಿತ ಮತದಾನ ಪದ್ಧತಿಯಿಂದ ಬಂದವರೂ, ಇಲ್ಲದೆ ನೇರವಾಗಿ ಪ್ರಜೆಗಳಿಂದಲೇ ಸಂಪೂರ್ಣವಾಗಿ ಆರಿಸಿ ಬಂದ ಪ್ರತಿನಿಧಿಗಳು ಈ ಸಭೆಯಲ್ಲಿ ಇರುವಂತಾದ ಹೊರತು ಇದು ಸಾರ್ಥಕವಾದ ರೀತಿಯಲ್ಲಿ ಕೆಲಸ ಮಾಡಲು ಸಾಧ್ಯವಾದೀತು.

ಜವಾಬ್ದಾರಿ ಸರ್ಕಾರದ ಪದ ಪ್ರಯೋಗಕ್ಕೆ ಆಕ್ಷೇಪಣೆ

ನ್ಯಾಯವಿಧಾಯಕ ಸಭೆಯಲ್ಲಿ ಚರ್ಚೆ

ಸ್ವಂ ಸು] ಬೆಂಗಳೂರು, ೧೬

ಜವಾಬ್ದಾರಿ ಸರ್ಕಾರದ ಮಾತನ್ನು ಪದೇ ಪದೇ ಈ ಸಭೆಯಲ್ಲಿ ಎತ್ತುವ ವಿಷಯವಾಗಿ ಶ್ರೀ ಪಿ ಮಹದೇವಯ್ಯನವರು ತಂದಿದ್ದ ಲೋಪದ ಮೇಲಿನ ಚರ್ಚೆಯನ್ನು ಅವರು ಈ ದಿನ ಮುಂದುವರಿಸಿದರು. ಬೆರಿಡೇಲ್ ಕೀತ್ ಮುಂತಾದ ಪಾಶ್ಚಿಮಾತ್ಯ ಲೇಖಕರ ಅಭಿಪ್ರಾಯಗಳನ್ನು ಸೂಚಿಸಿ ಈ ಪ್ರಕಾರವಾಗಿ ಚರ್ಚೆ ನಡೆಸಕೂಡದೆಂದು ಅವರು ಹೇಳಿದರು.

ಕಾಲದೇಶ ವಿದ್ಯಮಾನಗಳನ್ನು ಪರಿಗಣಿಸದೆ ಈ 40ನೇ ಸಭೆಯಲ್ಲಿ ಶ್ರೀ ಮಹದೇವಯ್ಯನವರು ಓಬೀರಾಯನಕಾಲದ ಅಭಿಪ್ರಾಯಗಳನ್ನು ಸೂಚಿಸುತ್ತಿರುವುದಕ್ಕಾಗಿ ಶ್ರೀ ಮರಿಯಪ್ಪನವರು ಆಶ್ಚರ್ಯವನ್ನು ವ್ಯಕ್ತ ಪಡಿಸಿದರು.

ನಿವೃತ್ತ ನ್ಯಾಯಾಧೀಶರಾದ ಶ್ರೀ ಸಿ ಸುಬ್ರಹ್ಮಣ್ಯ ಅಯ್ಯರ್‌ರವರು, ಶ್ರೀ ಮರಿಯಪ್ಪನವರ ಅಭಿಪ್ರಾಯವನ್ನೇ ಅನುಮೋದಿಸಿ ಜವಾಬ್ದಾರಿ ಸರ್ಕಾರದ ಮಾತನ್ನು ಎತ್ತಲು ಯಾವ ಅಡ್ಡಿಯೂ ಇಲ್ಲವೆಂದು ಹೇಳಿದರು. ಚರ್ಚೆ ನಡೆಯುತ್ತಿದೆ.

ಸೈನಿಕರ ಅನುಕರಣೆಯಿಂದ ಸಮಸ್ಯಾ ಪರಿಹಾರ

ಕಾಮನ್ಸಿನ ಸಭೆಯಲ್ಲಿ ಚರ್ಚಿಲರ ಭಾಷಣವನ್ನು ವಿರೋಧಿಸಿ ಮಂತ್ರಿ ಮಿ|| ಎ. ವಿ ಅಲೆಕ್ಸಾಂಡರರು ಒಂದು ಹೇಳಿಕೆ ಇತ್ತಿದ್ದಾರೆ. ಚರ್ಚಿಲರು ಕಾರ್ಮಿಕ ಪಕ್ಷದ ಸರ್ಕಾರದ ಮೇಲೆ ದೋಷಾರೋಪಣೆಯನ್ನು ಹೊರಿಸುವುದೇ ತಮ್ಮ ಮುಖ್ಯ ಗುರಿಯೆಂದು ಭಾವಿಸಿರುವಂತೆ ಕಾಣುತ್ತದೆ. ಭಾರತದ ಸಮಸ್ಯಾ ಪರಿಹಾರಕ್ಕೆ ಸೂಕ್ತವಾದ ದಾರಿಯೆಂದರೆ, ಮೊನ್ನೆ ನಡೆದ ಮಹಾಯುದ್ಧ ಕಾಲಗಳಲ್ಲಿ ಭಾರತೀಯ ಸೈನಿಕರು ಅನುಸರಿಸಿದ ನೀತಿಯ ಅನುಕರಣೆ ಮಾಡುವುದೇ ಆಗಿದೆ ಎಂದು ಅವರು ಹೇಳುವರು.

ಕ್ರಿಕೆಟ್ ಪಂದ್ಯ

ಸ್ವಂ ಸು.] ಶ್ರೀರಂಗಪಟ್ಟಣ ೧೬

ನಿನ್ನೆ ದಿನ ಸ್ಟೂಡೆಂಟ್ಸ್ ಲೀಗಿನ ಕ್ರಿಕೆಟ್ ಕ್ಲಬ್ಬಿಗೂ ಮಂಡ್ಯ ಕ್ರಿಕೆಟ್ ಕ್ಲಬ್ಬಿಗೂ ನಡೆದ ಕ್ರಿಕೆಟ್ ಪಂದ್ಯದಲ್ಲಿ ಸ್ಟೂಡೆಂಟ್ಸ್ ಲೀಗಿನವರು ೭ ರನ್ನುಗಳಿಂದ ವಿಜಯ ಹೊಂದಿದರು.

ಜವಾಬ್ದಾರಿ ಸರ್ಕಾರವಿಲ್ಲದೆ ಸಾಲ ಕೊಡಕೂಡದು

ಪಾಟಿಯಾಲದಲ್ಲಿ ಈಚೆಗೆ ನಡೆದ ರಾಜಕೀಯ ಸಮ್ಮೇಳನದಲ್ಲಿ, ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯಾದ ಹೊರತು, ಪಾಟಿಯಾಲ ಸರ್ಕಾರವು ಕೇಂದ್ರ ಸರ್ಕಾರವನ್ನು ಯುದ್ಧಾನಂತರ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಕೇಳಿರುವ ೧೦ ಕೋಟಿ ರೂಪಾಯಿಗಳ ಸಾಲವನ್ನು ಕೊಡಕೂಡದೆಂದು ಕೇಂದ್ರ ಸರ್ಕಾರವನ್ನು ಒತ್ತಾಯ ಪಡಿಸುವ ನಿರ್ಣಯವಾಯಿತೆಂದು ವರದಿಯಾಗಿದೆ.

ಅಂತರ ಪ್ರಾಂತೀಯ ಫುಟ್‌ಬಾಲ್ ಪಂದ್ಯ

ಇದೇ ೨೧ನೇ ತಾರೀಖಿನಿಂದ ಬೆಂಗಳೂರಿನಲ್ಲಿ ಅಂತರ ಪ್ರಾಂತೀಯ ಫುಟ್‌ಬಾಲ್ ಪಂದ್ಯವು ನಡೆಯುವುದು. ಇದರಲ್ಲಿ ವಾಯುವ್ಯ ಪ್ರಾಂತ್ಯ, ಒರಿಸ್ಸ, ದೆಹಲಿ, ತಿರುವಾಂಕೂರು, ಮದರಾಸ್, ಹೈದರಾಬಾದ್, ರಾಜಪುಟಾಣ, ಮೈಸೂರು ಮತ್ತು ಇಂಡಿಯನ್ ಫುಟ್‌ಬಾಲ್ ಸಂಘಗಳ ಟೀಮುಗಳು ಭಾಗವಹಿಸುವುವು.

ಭಾರತದಲ್ಲೇ ಅತ್ಯಂತ ದೊಡ್ಡ ಸಕ್ಕರೆ ಗಿರಣಿ

ಭಾರತದಲ್ಲೇ ಅತ್ಯಂತ ದೊಡ್ಡದಾದ ಸಕ್ಕರೆ ಗಿರಣಿಯು ವಾಯುವ್ಯ ಸರಹದ್ದಿನ ಪ್ರಾಂತ್ಯದಲ್ಲಿ ಸ್ಥಾಪಿಸಲ್ಪಡುವುದೆಂದು ಹೇಳಲಾಗಿದೆ. ಇದರಿಂದ ದಿನ ಒಂದಕ್ಕೆ ೮೦ ಲಕ್ಷ ಮಣ ಕಬ್ಬನ್ನು ಅರೆಯಬಹುದೆಂದೂ, ೪ ಸಾವಿರ ಟನ್ ಸಕ್ಕರೆಯನ್ನು ತಯಾರಿಸಬಹುದೆಂದೂ ಗೊತ್ತಾಗಿದೆ. ಬೇಕಾದಾಗ ಸಕ್ಕರೆ ತಯಾರಿಯನ್ನು ಎರಡರಷ್ಟಕ್ಕೆ ಹೆಚ್ಚಿಸಿಕೊಳ್ಳಲು ಅನುಕೂಲವಾಗುವಂತೆ ಯಂತ್ರೋಪಕರಣಗಳ ವ್ಯವಸ್ಥೆ ಮಾಡಿದೆ ಎಂದು ವರದಿಯಾಗಿದೆ.

ದಕ್ಷಿಣ ಆಫ್ರಿಕಾವಿಗೆ ಮತ್ತೊಂದು ಭಾರಿಸೋಲು

ನೈರುತ್ಯ ಆಫ್ರಿಕವನ್ನು ದಕ್ಷಿಣ ಆಫ್ರಿಕಕ್ಕೆ ಸೇರಿಸದೆ ವಿಶ್ವಸಂಸ್ಥೆಯ ಆಡಳಿತಕ್ಕೊಳಪಡಿಸಬೇಕೆಂಬ ಭಾರತದ ನಿರ್ಣಯವು ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯಲ್ಲಿ 36 ಓಟುಗಳಿಂದ ಅಂಗೀಕಾರವಾಗಿ ದಕ್ಷಿಣ ಆಫ್ರಿಕಾವಿಗೆ ಭಾರಿಸೋಲು ಮತ್ತೊಮ್ಮೆ ಪ್ರಾಪ್ತವಾಯಿತು. ಈ ನಿರ್ಣಯಕ್ಕೆ ವಿರೋಧಿಗಳೇ ಇರಲಿಲ್ಲ.

For Hand spun and Hand-woven Kashmir pure wollen pattoos, Pull-overs and Hand spun saree.

Please visit

Sri Kanyakaparameswari Co-operative Society Ltd. Hanumantha Rao Road, Near Dasaprakash, (Modern cafe) : : Mysore.

ಕೈಗಾರಿಕೆಗಳೆಲ್ಲಾ ರಾಷ್ಟ್ರೀಯವಾಗಬೇಕು

ಬಿನ್ನವತ್ತಳೆಗೆ ಕೆ. ಸಿ ರೆಡ್ಡಿಯವ[ರ] ಉತ್ತರ

ಮಂಡ್ಯ ಡಿ ೧[...]

ಮೈಸೂರು ಸಕ್ಕರೆ ಕಂಪನಿ ಕೆಲಸಗಾ[ರರ] ಸಂಘದವರು ನಿನ್ನೆ ಸಾಯಂಕಾಲ ಕಾ[ರ್ಖಾ]ನೆಯ ಮುಂಭಾಗದ ಮೈದಾನದಲ್ಲಿ ಸ[ಂಘ]ದ ಅಧ್ಯಕ್ಷರಾದ ಶ್ರೀ ಎಂ ವೆಂಕಟಲ[ಿಂಗಯ್ಯ]ನವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಅ[ಧ್ಯ]ಕ್ಷರಾದ ಶ್ರೀ ಕೆ. ಸಿ. ರೆಡ್ಡಿಯವರಿಗೆ ಒ[ಂದು] ಬಿನ್ನವತ್ತಳೆ ಮತ್ತು ೧೦೧ ರೂ. ಗಳ ಥ[ೈಲಿ]ಯನ್ನು ಅರ್ಪಿಸಿದರು. ಸಂಘದ ಉ[ಪಾಧ್ಯ]ಕ್ಷರಾದ ಶ್ರೀ ಹೆಚ್. ಎಸ್. ಮಾಸ್ತಿ[...]ಅವರು ಬಿನ್ನವತ್ತಳೆಯನ್ನು ಶ್ರೀ ರೆಡ್ಡಿಯವರಿಗೆ ಓದಿ ಒಪ್ಪಿಸಿದರು. ಶ್ರೀ ರೆಡ್ಡಿಯವರು ಅನಂತರ ಬಿನ್ನವತ್ತಳೆಗೆ ಉತ್ತರವಿ[ತ್ತು] ದೇಶದ ಕೆಲಸಗಾರರ ಸ್ಥಿತಿ ತುಂಬಾ ಹೀ[ನ]ವಾಗಿದೆಯೆಂದು ಹೇಳಿ ಇದರ ನಿವಾ[ರ]ಣೆಗೆ ಜವಾಬ್ದಾರಿ ಸರ್ಕಾರ ಅತ್ಯಾವ[ಶ್ಯಕ]ವೆಂದು ನುಡಿದರು. ಸಕ್ಕರೆ ಕಾ[ರ್ಖಾನೆ]ಯು ಹೆಚ್ಚಿನ ಲಾಭವನ್ನು ಪಡೆಯು[ತ್ತಿ]ದ್ದು ಶೇ. ೩೦ ಡಿವಿಡೆಂಡು ಕೊಡುತ್ತಿ[ದ್ದಾ]ರೆ. ಕೆಲಸಗಾರರ ಕೂಲಿ ಇನ್ನೂ ಕ[ಡಿಮೆ]ಯಾಗಿರುವುದು ತುಂಬಾ ಶೋಚನೀಯ[ವೆಂ]ದು ಹೇಳಿದರು. ಕಾರ್ಮಿಕರ ಹಿತ[ಕ್ಕಾ]ಗಾಗಿ ಕೈಗಾರಿಕೆಗಳೆಲ್ಲಾ ರಾಷ್ಟ್ರೀಯ[ವಾ]ಗಬೇಕು, ದೇಶದಲ್ಲಿ ಕೂಡಲೇ ಜ[ವಾ]ಬ್ದಾರಿ ಸರ್ಕಾರ ಸ್ಥಾಪನೆಯಾಗಬೇಕು[ಎಂ]ದು ಒತ್ತಿ ಹೇಳಿದರು. ಸಂಘದ ಮ[ಾಜಿ] ಅಧ್ಯಕ್ಷರಾದ ಶ್ರೀ ಹೆಚ್ ಕೆ. ವೀ[ರಣ್ಣ]ಗೌಡರವರು ಮಾತಾಡಿದ ಮೇಲೆ [ಅ]ಧ್ಯಕ್ಷರು ಮುಕ್ತಾಯ ಭಾಷಣ ಮಾಡಿ[ದರು]. ಕಾರ್ಯದರ್ಶಿ ಶ್ರೀ ಎ ರಾಮಣ್ಣನ[ವರ] ವಂದನಾರ್ಪಣೆಯೊಡನೆ ಸಭೆ ಮುಕ್ತಾ[ಯ]ವಾಯಿತು.

OPERA TALKIES

Daily 3 Shows

From 15—12—1946

JAMES NEWILL, CARO[...]
HUGHES and LIGHTNIN[...]
(The wonder dog)
in
RENFREW OF THE
ROYAL MOUNTE[...]
and
KILLERS OF THE S[...]

ತಾ|| 20-12-46 ರಿಂದ

ಪ್ರತಿದಿನ ಮೂರು ಆಟಗಳು

ನಾರದ-ನಾರ[...]

(ತೆಲಗು ಭಾಷೆ)

ಸೂರಿಬಾಬು, ರಾಜ್ಯಂ, ಸೌದಾವ[...]

Edited, printed and publishe[d by] A. R. Nagaraja[...] at the Sadhvi [...] D. Subbiah Road, Mysore.

ರಾಜಕಮಲ್, ಮೈಸೂರು

೧೭-೧೨-೪೬ ರಿಂದ ೫ ನೇ ಅಪೋಘವಾದ ವಾರ

ಡಾಕ್ಟರ್ ಕೋಟ್ನಿಸ್ ಕಿ ಅಮರ್ ಕಹಾನಿ

ಮುಖ್ಯ ಭೂಮಿಕೆ:— ಜಯಶ್ರೀ, ಶಾಂತಾರಾಂ, ಮುಂತಾದವರು

ರೋ. ಸಂ. 392 / || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಬುಧವಾರ ೧೮—೧೨—೪೬ [ಸಂಚಿಕೆ ೧೧೯

ಹೊಸ ಬ್ರಿಟಿಷ್ ಹೇಳಿಕೆಗೆ ಕಾಂಗ್ರೆಸ್ ನಿರಾಕರಣೆ

ಕರ್ನಾಟಕ ತರುಣರ ಮಹಾಸಭೆ

ರ್ನಾಟಕ ಏಕೀಕರಣ ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆ ಇದೇ ಮುಖ್ಯವಾದ ಕಾರ್ಯಗಳಲ್ಲಿ ತೀವ್ರ ಕ್ರಮ ಕೈಗೊಳ್ಳುವ ಬಗ್ಗೆ ಸೂಕ್ತ ಚಳುವಳಿ ನಡೆಸಲು ತರುಣಕಾರ್ಯಕರ್ತರ ಮಹಾಸಭೆಯು ಜನವರಿ ತಿಂಗಳಲ್ಲಿ ಧಾರವಾಡದಲ್ಲಿ ನಡೆಯುವುದು. ತರುಣ ಕಾರ್ಯಕರ್ತರ, ಸಂಘಗಳ ಸಂಚಾಲಕರೂ, ಹಿರಿಯರು ತಮ್ಮ ಸಲಹೆಗಳನ್ನೂ ಪ್ರತಿನಿಧಿಗಳ ಹೆಸರನ್ನೂ ಡಿಸೆಂಬರ್ ಕೊನೆಯ ವಾರದೊಳಗಾಗಿ ಧಾರವಾಡದ ವಿಳಾಸಕ್ಕೆ ಕಳಿಸಬೇಕಾಗಿ ಕೋರಲಾಗಿದೆ.

...ಸಂತೆಯಲ್ಲಿ ಮಕ್ಕಳ ಮಾರಾಟ

...ನ್ ನಗರದಲ್ಲಿ ಮಕ್ಕಳು ಕಾಳಸಂತೆಯಲ್ಲಿ ಮಾರಾಟವಾಗುವುದನ್ನು ತಪ್ಪಿಸಲು ...ನ ಅಧಿಕಾರಿಗಳು ಪರಿಶೀಲನೆ ನಡೆಸುತ್ತಿರುವುದಾಗಿ ವರದಿಯಾಗಿದೆ. ದತ್ತು ತೆಗೆದುಕೊಳ್ಳುವವರಿಗೆ ಮಗು ಒಂದಕ್ಕೆ ...೦೦ ಫ್ರಾಂಕುಗಳಂತೆ ಬೇಡವಾದವನ್ನು ಮಾರಾಟ ಮಾಡುತ್ತಿದ್ದಾರೆ. ...ಸು ಮಕ್ಕಳ ಸಂಖ್ಯೆಯು ದಿನೇ ದಿನೇ ಕಡಿಮೆಯಾಗುತ್ತಿದೆ. ೧೯೪೪ ರಲ್ಲಿ ...ಇದ್ದುದು ಈ ಸಾರಿ ೧೦೦೦೦ ಕ್ಕೆ ...ಇಳಿದಿದೆಯೆಂದು ಗೊತ್ತಾಗಿದೆ

...ರಾಮಯ್ಯನವರ ಸನ್ನದು ವಾಪಸು

ಮೈಸೂರು ೧೮

ಎಸ್. ರಂಗರಾಮಯ್ಯನವರು ತ...ರಿ ಸನ್ನದನ್ನು ವಾಪಸು ತೆಗೆದುಕೊಂಡು ಸುಮಾರು ೨ ವರ್ಷಗಳ ಹೈಕೋರ್ಟಿಗೆ ಹಾಕಿದ್ದ ಅರ್ಜಿಯು ...ದೇ ಮಾಹೆ ೧೦ ನೇ ತಾ|| ಶ್ರೇಷ್ಠ ...ಧಿಕಾರ ಬೆಂಚಿನ ಮುಂದೆ ವಾದ... ಹೋದ ವರ್ಷ ಇದೇ ಮೇರೆ ಅ... ತೆಗೆದುಕೊಂಡಿದ್ದ ಲಾಯರುಗಳಿಗೆ ಸ...ಕೊಟ್ಟಂತೆಯೇ ಇವರ ಸನ್ನದೂ ಸ...ವಾಪಸು ಕೊಡಲ್ಪಟ್ಟಿರುತ್ತದೆ. ಶ್ರೀ ...ರಾಮಯ್ಯನವರು ಸಧ್ಯದಲ್ಲಿಯೇ ತ...ವಕೀಲಿ ವೃತ್ತಿಯನ್ನು ಮುಂದುವರಿ...

ದಿಂಡೀ ಮಹೋತ್ಸವ

ಶ್ರೀಕೃಷ್ಣ ರಾಜನಗರ್‌ನಲ್ಲಿ ಸಮಾಧಿಸ್ಥ... ಶ್ರೀ ಸಂತ್ ಸೋಪಾನ ದೇವರ ಪು...ಣ್ಯ ಮಹೋತ್ಸವವು ಇಂದಿನಿಂದ ೨೨... ಫೋರ್ತ್ ಚರ್ಚ್ ರಸ್ತೆಯ ಬೀದಿ...ಯ ಶ್ರೀ ಪಾಂಡುರಂಗಸ್ವಾಮಿ ದೇ...ವಾಲಯದಲ್ಲಿ ಜರುಗುವುದು. ಈ ದಿನ ...ವಿದ್ವಾನ್ ಎಸ್. ಸಂಬಂಧಮೂರ್ತಿ...ಯವರಿಂದ ರುಕ್ಮಿಣಿ ಕಲ್ಯಾಣ, ನಾಳೆ ...ರಾವ್ ಶ್ರೀ ಜಿ. ಸಂಜೀವದಾಸರಿಂದ ...ಪುರದ ಚಕ್ರವರ್ತಿ, ನಾಳಿದ್ದು ಶ್ರೀ ...ಗುಂಡೂರಾಯರಿಂದ 'ವಿದ್ಯಾಸ್ತ್ರೀ ಕ...ಥೆ', ೨೧ ನೇ ತಾ|| ವ್ಯಾಖ್ಯಾನ, ಸಂತ ...ಸೆ, ಸಾಯಂಕಾಲ ೭ ಗಂಟೆಗೆ ಶ್ರೀ ಸಂತ ಸೋಪಾನ ದೇವರ ದಿಂಡೀ ಉತ್ಸವ, ...ಜರುಗುವುವು. ೨೭ ನೇ ತಾ|| ಭಾನುವಾರ ಸಾಯಂಕಾಲ ೬ ಗಂಟೆಗೆ ಉತ್ತ...ರ್ ಸಹೋದರಿಯವರಿಂದ ವೀಣಾಗಾ...ನ ನಡೆಯುವುವು

ಚನ್ನಪಟ್ಟಣದ ದುರಂತ

ಕಾಂಗ್ರೆಸ್ ಅಧ್ಯಕ್ಷರ ವಿವರಣೆ

ಸ್ವಂ ಸು ಫೋ] ಬೆಂಗಳೂರು ೧೮

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ|| ಕೆ. ಚಂಗಲರಾಯ ರೆಡ್ಡಿಯವರು ನಿನ್ನೆ ಸಂಜೆ ಪತ್ರಿಕಾ ಸಮ್ಮೇಳನವನ್ನು ನಡೆಸಿ ಚನ್ನಪಟ್ಟಣದ ಘಟನೆಗಳನ್ನು ವಿವರಿಸಿದರು. ಇದುವರೆವಿಗೆ ಪತ್ರಿಕೆಗಳಲ್ಲಿ ವರದಿಯಾಗಿರುವ ಅಂಶಗಳನ್ನೇ ಅವರು ಪುಷ್ಟೀಕರಿಸಿರುವರು. ಈ ಪ್ರಕರಣಕ್ಕಾಗಿ ಯಾವ ಒಂದು ಕೋಮಿನವರನ್ನೂ ಉತ್ತರವಾದಿಗಳೆಂದು ಹೇಳಲು ಸಾಧ್ಯವಿಲ್ಲವೆಂದೂ, ಪುಂಡರೇ ಇದಕ್ಕೆ ಕಾರಣಕರ್ತರೆಂದೂ ತಿಳಿಸಿದರು. ನಡೆದ ಕೃತ್ಯಗಳಿಗಾಗಿ ಮುಸಲ್ಮಾನ ಮುಖಂಡರುಗಳು ವ್ಯಸನ ಪಡುತ್ತಿರುವರೆಂದೂ ಸೂಚಿಸಿದರು. ಕಾಂಗ್ರೆಸ್ಸಿನವರು ಏನೇ ಬಂದರೂ ಸಂಪೂರ್ಣ ಅಹಿಂಸೆಯಿಂದಲೇ ವರ್ತಿಸುವುದಾಗಿ ತಿಳಿಸಿದರು. ಗಲಭೆಯಲ್ಲಿ ಮೃತಪಟ್ಟವರು ಮತ್ತು ನೊಂದವರಿಗಾಗಿ ಅನುತಾಪವನ್ನು ವ್ಯಕ್ತಪಡಿಸಿದರು.

ರೀವ್ಹ್ಸ್ ಕಾರ್ಖಾನೆಯ ಕಾರ್ಯದರ್ಶಿಗಳಾಗಿ ಕೆಲಸ ಮಾಡುತ್ತಿರುವ ಅಸಿಸ್ಟೆಂಟ್ ಕಮಿಷನರ್ ಹಾ|| ಅಟೂ ಬೇಕರ್ ರವರ ಮನೆಗೆ ಜನರ ಗುಂಪು ನುಗ್ಗಿದ ಅಂಶವನ್ನು ವಿವರಿಸಿ ಜನರು ಮನೆಯಲ್ಲಿದ್ದ ಸಾಮಾನುಗಳನ್ನೆಲ್ಲಾ ಲೂಟಿ ಮಾಡಿದುದನ್ನು ತಿಳಿಸಿದರು. ಕಾಂಗ್ರೆಸ್ ನಾಯಕರು ಕೂಡಲೇ ಅಲ್ಲಿಗೆ ಹೋಗಿ ಮನೆಯಲ್ಲಿದ್ದ ಹೆಂಗಸರು, ಮಕ್ಕಳಿಗೆ ರಕ್ಷಣೆಯನ್ನು ಕೊಟ್ಟುದಾಗಿಯೂ ಹೇಳಿದರು. ಶಾಂತಿ ಸ್ಥಾಪನೆಗಾಗಿ ಹಿಂದೂ ಮತ್ತು ಮುಸ್ಲಿಂ ಮುಖಂಡರು ಮುಂದೆ ಬಂದುದಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಿದರು.

ಮುಂದಿನ ಕಾರ್ಯ ನೀತಿಯ ವಿಚಾರವಾಗಿ ಮಾತನಾಡುತ್ತಾ, ಶ್ರೀ|| ರೆಡ್ಡಿಯವರು ಈ ರೀತಿಯಲ್ಲಿ ಒಂದು ಗುಂಪಿನವರು ನಡೆಸುವ ಪುಂಡಾಟಕ್ಕೆ ಕಾಂಗ್ರೆಸ್ಸಿನವರು ಜಗ್ಗುವುದಿಲ್ಲವೆಂದೂ, ಕಾಂಗ್ರೆಸ್ಸಿನ ಹೋರಾಟವು ನಿರಾತಂಕವಾಗಿ ಮುಂದುವರಿಯುವುದೆಂದೂ ಸೂಚಿಸಿದರು. ಶಾಂತಿ ಪಾಲನೆಯ ಕರ್ತವ್ಯವನ್ನು ಸರ್ಕಾರದವರು ದಕ್ಷತೆಯಿಂದ ನಿರ್ವಹಿಸಬೇಕೆಂದೂ ಅವರು ಅಭಿಪ್ರಾಯಪಟ್ಟರು.

ಮಹಾತ್ಮರ ಆಶೀರ್ವಾದಕ್ಕೆ ಆಸಫ್‌ಆಲಿಯವರು

ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ ಭಾರತದ ರಾಯಭಾರಿಯಾಗಿ ನೇಮಕವಾಗಿರುವ ಮಿ|| ಅಸಫ್ ಅಲಿಯವರು ಮೊನ್ನೆ ಕಲ್ಕತ್ತಾವಿಗೆ ತೆರಳಿದ್ದರು. ಅವರು ನಿನ್ನೆ ಅಲ್ಲಿಂದ ಶ್ರೀ ರಾಮಪುರಕ್ಕೆ ಹೋಗಿ ಮಹಾತ್ಮ ಗಾಂಧಿಯವರನ್ನು ಭೇಟಿ ಮಾಡಿ ಅವರ ಆಶೀರ್ವಾದವನ್ನು ಪಡೆದರು. ಜನವರಿ ಆದಿಯಲ್ಲಿ ವಾಷಿಂಗ್‌ಟನ್ನಿಗೆ ತೆರಳುವರು

ಸಭೆ, ಮೆರವಣಿಗೆಗೆ ಅಡ್ಡಿ

ಮೈಸೂರು ೧೮

ಮದುವೆ, ಮರಣ ಮತ್ತು ಮತ ಸಂಬಂಧದಲ್ಲಿ ವಿನಾ ಇತರ ಸಭೆ, ಮೆರವಣಿಗೆಗಳು ನಿನ್ನೆಯಿಂದ ಹದಿನೈದು ದಿನಗಳವರೆವಿಗೆ ರಾಜಧಾನಿಯಲ್ಲಿ ತಮ್ಮ ಅನುಮತಿಯಿಲ್ಲದೆ ನಡೆಯಲಾಗದೆಂದು ಮೈಸೂರು ಜಿಲ್ಲಾಧಿಕಾರಿಗಳು ಆಜ್ಞೆ ಹೊರಡಿಸಿರುತ್ತಾರೆ.

ಹೋಟೇಲು ಕೆಲಸಗಾರರ ಸಂಘ

ಈ ದಿನ ರಾತ್ರಿ ೮ ಗಂಟೆಗೆ ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಪೋಲ್ಯಾಂಡ ಸಂಘದಲ್ಲಿ ಕೆಲಸಗಾರರ ಸಭೆಯು ಶ್ರೀ ಕೆ. ಎಲ್. ರಾಮಕೃಷ್ಣರವರ ಅಧ್ಯಕ್ಷತೆಯಲ್ಲಿ ನಡೆಯಲು ಏರ್ಪಡಿಸಿದೆ. ಸಭೆಗೆ ಅಸಿಸ್ಟೆಂಟ್ ಲೇಬರ್ ಕಮೀಷನರ್‌ರವರೂ ಸಹ ಬರಲಿರುವರು. ಎಲ್ಲ ಕೆಲಸಗಾರರು ತಪ್ಪದೆ ಬರಬೇಕೆಂದು ಕಾರ್ಯದರ್ಶಿಗಳು ಕೋರಿರುತ್ತಾರೆ.

ಪ್ರಾಂತ ವರ್ಗದ ವಿಚಾರ ಫೆಡರಲ್ ನ್ಯಾಯಾಸ್ಥಾನಕ್ಕೆ

ಬ್ರಿಟಿಷ ನಿಯೋಗದ ಸೂಚನೆಯಂತೆ ಪ್ರಾಂತ್ಯಗಳನ್ನು ಗುಂಪುಗಳಾಗಿ ವಿಂಗಡಿಸುವ ಬಗ್ಗೆ ಎದ್ದಿರುವ ವಾದವನ್ನು ಫೆಡರಲ್ ನ್ಯಾಯಾಸ್ಥಾನದ ತೀರ್ಮಾನಕ್ಕೆ ಒಪ್ಪಿಸಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ತೀರ್ಮಾನಿಸಿರುವುದಾಗಿ ಗೊತ್ತಾಗಿದೆ. ಕಾಂಗ್ರೆಸ್ ಪರವಾಗಿ ಜಯಕರ್, ಸರ್ ಅಲ್ಲಾಡಿ, ಮುನ್ಷಿ, ಶರತ್ ಬೋಸ್‌ರವರು ವಕಾಲತ್ತು ವಹಿಸುವರೆಂದು ತಿಳಿದು ಬಂದಿದೆ

ಹೊಸ ಬ್ರಿಟಿಷ್ ಹೇಳಿಕೆಗೆ ಕಾಂಗ್ರೆಸ್ ನಿರಾಕರಣೆ

ಬ್ರಿಟಿಷ್ ಸರ್ಕಾರದವರು ಡಿಸೆಂಬರ್ ೬ ನೇ ತಾ|| ಇತ್ತ ಹೇಳಿಕೆಯು ಬ್ರಿಟಿಷ್ ನಿಯೋಗದ ಪ್ರಣಾಳಿಕೆಗೆ ಹೊಸದಾಗಿ ಸೇರಿಸಲ್ಪಟ್ಟಿದೆ ಅಥವಾ ಅದನ್ನು ವಿರೋಧಿಸಿ ವಿವರಣೆ ಕೊಟ್ಟಂತಿದೆ. ನಾವು ಅದನ್ನು ಒಪ್ಪಿಲ್ಲ. ಈ ಸಭೆಯೂ ಸಹ ಹೊಸದಾಗಿ ಏನನ್ನು ಸೇರಿಸುವುದನ್ನೂ ಒಪ್ಪುವುದಿಲ್ಲ—ಎಂದು ಸ|| ಪಟೇಲರು ನಿನ್ನೆ ರಾಜ್ಯಾಂಗ ಸಭೆಯಲ್ಲಿ ಮಾತನಾಡುತ್ತಾ ತಿಳಿಸಿದ್ದಾರೆ.

ಪೌರಸಭಾಧ್ಯಕ್ಷರ ಚುನಾವಣೆ

ಸ್ವಂ ಸು ಫೋ] ಬೆಂಗಳೂರು ೧೮

ಹಾ|| ಎ. ಜೆ. ಖಲೀಲರು ಬಹುಮತದಿಂದ ಪೌರಸಭಾಧ್ಯಕ್ಷರಾಗಿ ಚುನಾಯಿತರಾದರು. ಅವರಿಗೆ ೧೪, ಅವರ ಪ್ರತಿಸ್ಪರ್ಧಿಗಳಾದ ಮಿರ್ಜಾ ಅಜೀಜುಲ್ಲಾ ಬೇಗರಿಗೆ ೧೩ ಓಟುಗಳು ಬಂದುವು. ಶ್ರೀ ಗುಂಡೇನಹಳ್ಳಿ ನಂಜಪ್ಪನವರು ಉಮೇದುವಾರಿಕೆಯನ್ನು ವಾಪಸ್ಸು ತೆಗೆದುಕೊಂಡಿದುದರಿಂದ ಶ್ರೀ ಸಿಂಗಂ ರಾಮಸ್ವಾಮಪ್ಪನವರು ಪ್ರತಿಸ್ಪರ್ಧೆ ಇಲ್ಲದೆ ಉಪಾಧ್ಯಕ್ಷರಾಗಿ ಚುನಾಯಿತರಾದರು.

* ಆಚಾರ್ಯ ಪಾಠಶಾಲೆಯ ಬಾಲಿಕಾ ಶಾಖೆಯ ಆರಂಭೋತ್ಸವವನ್ನು ದಿವಾನರು ಇಂದು ನೆರವೇರಿಸಿ ಶಾಲೆಯ ಪ್ರಗತಿಯನ್ನು ಪ್ರಶಂಸಿಸಿದರು. ಸ್ತ್ರೀ ವಿದ್ಯಾಭ್ಯಾಸವು ಅಭಿವೃದ್ಧಿಯಾಗುತ್ತಿರುವುದಕ್ಕಾಗಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಆಟಪಾಟಗಳೆರಡನ್ನೂ ಶಿಕ್ಷಣದಲ್ಲಿ ಸಮನ್ವಯಗೊಳಿಸಬೇಕೆಂದು ಸೂಚಿಸಿದರು.

ಚನ್ನಪಟ್ಟಣದ ಗಲಭೆ

ಸ್ವಂ ಸು] ಬೆಂಗಳೂರು ೧೭

ಸೋಮವಾರ ಬೆಳಗ್ಗೆ ಮೈಸೂರು ಕಾಂಗ್ರೆಸ್ ಅಧ್ಯಕ್ಷರ ಮೆರವಣಿಗೆ ಚನ್ನಪಟ್ಟಣದಲ್ಲಿ ನಡೆಯಿತು. ಮೆರವಣಿಗೆ ಮಸೀದಿಯ ಹಾಗೆ ಹೋಗುವ ಸಮಯದಲ್ಲಿ ಗುಂಪೊಂದು ಅದನ್ನು ತಡೆದು ಗಲಾಟೆ ಎಬ್ಬಿಸಿತು. ರಥಕ್ಕೆ ಕಟ್ಟಿದ್ದ ಪತಾಕೆಯನ್ನು ಇರಿಯಲಾಯಿತು. ಅದೇ ಸಮಯದಲ್ಲಿ ...೦ ಅಂಗಡಿಗಳ ಲೂಟಿ ನಡೆಯಿತು. ಕೆಲವಕ್ಕೆ ಬೆಂಕಿ ಇಡಲಾಯಿತು. ಈ ವೇಳೆಗೆ ಪೋಲೀಸರು ಎರಡು ಬಾರಿ ಗುಂಡು ಹಾರಿಸಿದರು. ಗಲಭೆ ಸುದ್ದಿ ಕೇಳಿ ಅಕ್ಕಪಕ್ಕದ ಹಳ್ಳಿಗಳಿಂದ ಬರುತ್ತಿದ್ದ ಆಯುಧಪಾಣಿಗಳಾದ ಹಳ್ಳಿ ರೈತರನ್ನು ಪೋಲೀಸರು ತಡೆದರು.

ಹೈಸ್ಕೂಲಿನ ಕಡೆಗೆ ಗುಂಪು ತಿರುಗಿತು. ಮುಖ್ಯೋಪಾಧ್ಯಾಯರ ರಕ್ತವನ್ನು ಕತ್ತರಿಸಲಾಯಿತು. ಮತ್ತಿಬ್ಬರು ಉಪಾಧ್ಯಾಯರಿಗೆ ಕೈಕಾಲು ಮುರಿಯಲಾಯಿತು. ಗಾಯಪಟ್ಟ ೨೧ ಮಂದಿಯನ್ನು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಲಾಯಿತು. ಇವರಲ್ಲಿ ಇಬ್ಬರು ಸ್ತ್ರೀಯರೂ ಇರುವರು. ಚನ್ನಪಟ್ಟಣ, ಕ್ಲೋಸ್‌ಪೇಟೆ, ಕಾನಕಾನಹಳ್ಳಿ ಮತ್ತು ಮಾಗಡಿ ತಾಲ್ಲೂಕುಗಳಲ್ಲಿ ಸಭೆ, ಮೆರವಣಿಗೆ ನಡೆಸಕೂಡದೆಂದೂ ಆಯುಧಪಾಣಿಗಳಾಗಿ ತಿರುಗಾಡಕೂಡದೆಂದೂ ಪ್ರತಿಬಂಧಿಸಲಾಗಿದೆ.

ಚನ್ನಪಟ್ಟಣದಲ್ಲಿ ಶಾಂತಿ ಸಮಿತಿಯೊಂದನ್ನು ರಚಿಸಲಾಗಿದೆ. ಚನ್ನಪಟ್ಟಣ ಸ್ಟೇಷನ್ನಿನಲ್ಲಿ ರೈಲನ್ನು ಸಧ್ಯಕ್ಕೆ ನಿಲ್ಲಿಸುವುದಿಲ್ಲವೆಂದು ಗೊತ್ತಾಗಿದೆ. ಅಲ್ಲಿಗೆ ಟಿಕೆಟ್ ಸಹ ಕೊಡುತ್ತಿಲ್ಲ.

ಸಿಂಧಿನಲ್ಲಿ ಲೀಗ್ ಸರ್ಕಾರ

ಇತ್ತೀಚೆಗೆ ನಡೆದ ಶಾಸನ ಸಭಾ ಚುನಾವಣೆಗಳಲ್ಲಿ ಲೀಗಿಗೆ ಪ್ರತ್ಯಕ್ಷ ಬಹುಮತ ದೊರಕಿದೆ. ಆದ್ದರಿಂದ ಲೀಗಿನವರು ಜನವರಿ ಮೊದಲನೇ ವಾರದಲ್ಲಿ ತಮ್ಮ ಸರ್ಕಾರವನ್ನು ರಚಿಸುವರು. ಶಾಸನ ಸಭೆಯ ೬೦ ಸ್ಥಾನಗಳಲ್ಲಿ ಲೀಗು ೩೪, ಕಾಂಗ್ರೆಸ್ ೨೧, ರಾಷ್ಟ್ರೀಯ ಮುಸ್ಲಿಂ ೩ ಮತ್ತು ಐರೋಪ್ಯರು ೨, ಈ ರೀತಿ ಸ್ಥಾನಗಳನ್ನು ಗಳಿಸಿದ್ದಾರೆ.

ಸಾಧ್ವಿ

ತಾ|| ೧೮-೧೨-೪೬ ಬುಧವಾರ

ಮೊಳಕೆಯಲ್ಲೇ ಚಿವುಟಬೇಕು

ಹಿಂದೂ-ಮುಸ್ಲಿಂ ಹೋರಾಟಗಳು ನೌ ಖಾಲಿ, ಚಾಂದಪುರ ತಿಪ್ಪೆರಾ ಮುಂತಾದ ನಿರ್ಭಾಗ್ಯ ಪ್ರದೇಶಗಳಿಗೆ ಮಾತ್ರ ಮೀಸಲಾಗಿದ್ದ ದುರದೃಷ್ಟಕ ಪ್ರಸಂಗಗಳೆಂದು ನಾವು ನಂಬಿದ್ದೆವು. ನಮ್ಮ ಸಂಸ್ಥಾನವು ಅನೇಕ ವರ್ಷಗಳಿಂದ ಈ ಬಗೆಯ ಘರ್ಷಣೆಗಳಿಲ್ಲದೆ ಪ್ರಶಾಂತವಾಗಿದ್ದಿತು ಬ್ರಿಟಿಷ್ ಇಂಡಿಯಾದಲ್ಲಿರುವ ಕೋಮುವಾರು ರಾಜಕೀಯ ಗೊಂದಲವು ನಮ್ಮ ಸಂಸ್ಥಾನದಲ್ಲಿ ಇರುವುದಿಲ್ಲವೆಂದು ಎಲ್ಲರೂ ಭಾವಿಸಿದ್ದರು. ಆದರೂ ಸಹ ಅಲ್ಲಿನ ಗಾಳಿಯು ಇತ್ತಲಾಗಿಯೂ ಸ್ವಲ್ಪ ಮಟ್ಟಿಗೆ ಬೀಸಿರುವಂತಿದೆ.

ಅನೇಕ ವರ್ಷಗಳಿಂದ ಶಾಂತಿಮಯವಾದ್ದ ಚನ್ನಪಟ್ಟಣದ ವಾತಾವರಣವು ಅಕಾರಣವಾಗಿ ಮೊನ್ನೆ ಕಲಕಿ ಕೋಲಾಹಲಕ್ಕೆ ಕಾರಣವನ್ನುಂಟುಮಾಡಿತು ಇದಕ್ಕೆ ಯಾವ ರಾಜಕೀಯ ಬಣ್ಣವನ್ನೂ ಯಾರೂ ಕಟ್ಟುವಂತಿಲ್ಲ. ಕಾಂಗ್ರೆಸ್ ಅಧ್ಯಕ್ಷರ ಪ್ರವಾಸವು ಈಗಾಗಲೇ ಎರಡು ಬಲ್ಲೆಗಳಲ್ಲಿ ಯಶಸ್ವಿಯಾಗಿ ಜರುಗಿರುತ್ತದೆ ಹಿಂದುಗಳು ಮಾತ್ರವೇ ಅಲ್ಲದೆ ಮುಸಲ್ಮಾನರೂ ಸಹ ಅವರ ಸ್ವಾಗತ ಸಮಾರಂಭಗಳಲ್ಲಿ ಭಾಗಿಗಳಾಗಿದ್ದಾರೆ. ಆದುದರಿಂದ ಚನ್ನಪಟ್ಟಣದ ಪ್ರಕರಣಕ್ಕೆ ರಾಜಕೀಯ ಕಾರಣವು ಆಧಾರವೆಂದು ಹೇಳಲು ಸಾಧ್ಯವಿಲ್ಲ. ಆದರೂ ಕೋಮುವಾರು ಗಲಭೆಗಳಿಗೆ ಯಾವ ಕಾರಣವೂ ಬೇಕಿಲ್ಲ ಇದ್ದಕ್ಕಿದ್ದಂತೆಯೇ ಅವುಗಳು ಹತ್ತಿಕೊಂಡು ದೇಶದಲ್ಲೆಲ್ಲಾ ಅಗ್ನಿ ಪ್ರಳಯವನ್ನು ಉಂಟುಮಾಡುತ್ತವೆ

ಈ ಪ್ರಕರಣದ ವಿವರಗಳು ಇನ್ನೂ ಸರಿಯಾಗಿ ತಿಳಿದು ಬಂದಿಲ್ಲ ಅಧಿಕಾರಿಗಳೂ ಸಾರ್ವಜನಿಕರೂ ಕೂಡಲೇ ಸೂಕ್ತ ಕ್ರಮಗಳನ್ನು ಕೈಗೊಂಡು ಶಾಂತಿ ರಕ್ಷಣೆಯಲ್ಲಿ ತೊಡಗಿರುತ್ತಾರೆ ಇದಕ್ಕೆ ಸಮಸ್ತ ಪ್ರಜೆಗಳೂ ಸಂಪೂರ್ಣವಾದ ನೆರವು ನೀಡಲೇ ಬೇಕೆಂದು ನಾವು ಕೋರುತ್ತೇವೆ.

ನಿರಪರಾಧಿಗಳೂ, ನಿಶ್ಶಸ್ತ್ರ ಪಾಣಿಗಳೂ ಆದ ಸಭ್ಯ ಪ್ರಜೆಗಳು ವಿಪ್ಲಾರಣವಾಗಿ ಮೃತ್ಯುವಿಗೆ ತುತ್ತಾಗುವುದು ಯಾರಿಗೂ ಸಮ್ಮತವಲ್ಲ ಆದರೂ ಇಂತಹ ಪ್ರಸಂಗಗಳು ನಡೆದಿರುವುದು ಒಂದು ದೌರ್ಭಾಗ್ಯವೇ ಸರಿ ಗಲಭೆಗಳಲ್ಲಿ ಮೃತರಾದವರ ಬಂಧುಗಳಿಗೂ, ನೊಂದವರಿಗೂ ನಾವು ಹೃತ್ಪೂರ್ವಕವಾದ ಅನುತಾಪವನ್ನು ಸಲ್ಲಿಸುತ್ತೇವೆ

ಇಂತಹ ಪ್ರಸಂಗಗಳು ಇನ್ನು ಮುಂದೆ ನಡೆಯದಂತೆ ಮಾಡುವುದು ಎಲ್ಲರ ಕರ್ತವ್ಯವಾಗಿದೆ. ಈಗ ಕಾಣಿಸಿಕೊಂಡಿರುವ ಕೋಮುವಾರು ವ್ಯಾಧಿಯನ್ನು ಮೊಳಕೆಯಲ್ಲಿಯೇ ಚಿವುಟ ಹಾಕಬೇಕು ಇದು ದೊಡ್ಡದಾಗಿ ಬೆಳೆದು ವಿಷ ವೃಕ್ಷವಾಗಲು ಅವಕಾಶ ಕೊಡಲಾಗದು ಆ ಕೃತ್ಯಗಳಿಗೆ ಕಾರಣಗಳೇನೆಂಬುದನ್ನು ಕಂಡು ಹಿಡಿದು ಅವುಗಳನ್ನು ನಿರ್ಮೂಲ ಮಾಡಬೇಕು ದುಷ್ಟರಿಗೆ ಸರಿಯಾದ ಬಂದೋಬಸ್ತು ಮಾಡಬೇಕು ಸಭ್ಯ ಪ್ರಜೆಗಳಿಗೆ ಸಂಪೂರ್ಣವಾದ ರಕ್ಷಣೆ ಇರುವುದೆಂಬ ಭರವಸೆಯನ್ನು ಉಂಟು ಮಾಡಬೇಕು ಗಲಭೆಗಳು ಆದ ಮೇಲೆ ಅವುಗಳನ್ನು ಅಡಗಿಸುವುದಕ್ಕಿಂತಲೂ, ಅವುಗಳು ಸಂಭವಿಸದಂತೆ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಬೇಕು ಈ ಬಗ್ಗೆ ಅಧಿಕಾರಿಗಳೂ ಸಾರ್ವಜನಿಕ ಮುಖಂಡರೂ ಕಲೆತು ಶಾಂತಿ ಸ್ಥಾಪನೆಯ ಕಾರ್ಯದಲ್ಲಿ ಉದ್ಯುಕ್ತರಾಗಬೇಕು ಚನ್ನಪಟ್ಟಣವೇ ಕಡೆಯ ಪ್ರಕರಣವಾಗಿ ಇನ್ನು ಮುಂದೆ ಸಂಸ್ಥಾನದಲ್ಲಿ ಯಾವ ಬಗೆಯ ಘರ್ಷಣೆಗಳೂ ಆಗದೆ ಶಾಂತಿ ಸೌಹಾರ್ದಗಳು ಶಾಶ್ವತವಾಗಿ ನೆಲೆಸುವಂತೆ ಮಾಡಬೇಕೆಂದು ನಾವು ಕೋರುತ್ತೇವೆ.

ಇಂಗ್ಲೀಷ್ ಹೆಸರುಗಳ ವಜಾ

ಕೆಲವು ಊರುಗಳು ಮತ್ತು ನದಿಗಳ ಹೆಸರುಗಳನ್ನು ಇಂಗ್ಲೀಷ್ ಭಾಷೆಯನ್ನು ಅನುಸರಿಸಿ ಉಚ್ಚರಿಸುತ್ತಿದ್ದುದನ್ನು ವಜಾ ಮಾಡಿ ಅವುಗಳನ್ನೆಲ್ಲಾ ಹಿಂದೆ ಕರೆಯುತ್ತಿದ್ದಂತೆ ಭಾರತೀಯ ಹೆಸರುಗಳಿಂದಲೇ ಕರೆಯುವ ಬಗ್ಗೆ ಸಂಯುಕ್ತ ಪ್ರಾಂತ್ಯದ ಕಾಂಗ್ರೆಸ್ ಸರ್ಕಾರದವರು ತಕ್ಕ ಶಾಸನವನ್ನು ಜಾರಿಗೆ ತರುವ ಆಲೋಚನೆ ಮಾಡಿದ್ದಾರೆಂದು ವರದಿಯಾಗಿದೆ. ಉದಾಹರಣೆಗಾಗಿ, ಬನಾರಿಸ್, ಮಟ್ರ, ಮೀರತ್, ಮೊರಾದಾಬಾದ್ ಮತ್ತು ಗ್ಯಾಂಜೀಸ್ ಈ ಹೆಸರುಗಳೆಲ್ಲಾ ಮಾಯವಾಗುವುವು.

ಪಾಕೀಸ್ಥಾನಕ್ಕೆ ಅರಬ್ಬರ ಬೆಂಬಲವಿಲ್ಲ

ಅರಬ್ಬಿ ಲೀಗಿನವರ್‍ಯಾರೂ ಭಾರತದ ವಿಭಜನೆಯನ್ನು ಒಪ್ಪುವುದಿಲ್ಲವೆಂದು ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ತಿಳಿಸಿದ್ದಾರೆ

ಹೊಸ ರಾಜ್ಯಾಂಗ ನಿರ್ಣಯಕ್ಕೆ ಸಂಸ್ಥಾನಿಕರ ವಿರೋಧ

ಭಾರತ ರಾಜ್ಯಾಂಗ ಸಭೆಯಲ್ಲಿ ಮಂಡಿತವಾಗಿರುವ ನಿರ್ಣಯದಲ್ಲಿ ಸಂಸ್ಥಾನದ ಪ್ರಶ್ನೆಯನ್ನು ವಿಸ್ತರಿಸಲಾಗಿದೆ. ಸಭೆಯಲ್ಲಿ ಈಗ ಸಂಸ್ಥಾನದ ಪ್ರತಿನಿಧಿಗಳಿರುವುದಿಲ್ಲ. ಸಂಧಾನ ಸಮಿತಿಗಳ ಕಾರ್ಯವೇ ಇನ್ನೂ ಆರಂಭವಾಗಿಲ್ಲ. ಜನಗಳಿಂದಲೇ ಅಧಿಕಾರ ಪಡೆದ ರಿಪಬ್ಲಿಕ್ ಸರ್ಕಾರ ಸ್ಥಾಪನೆಯೇ ಸಭೆಯ ಧ್ಯೇಯವೆಂದು ಘೋಷಿಸಿರುವುದರಿಂದ ಇದರಲ್ಲಿ ಮೂಲಭೂತ ವಿಚಾರಗಳು ಚರ್ಚೆಯಾಗಬೇಕಾಗಿವೆ. ಈಗಲೇ ಸಭೆಯವರು ಸಂಸ್ಥಾನಗಳ ವಿಚಾರ ಪ್ರಸ್ತಾಪಿಸಬಾರದಾಗಿತ್ತು-ಎಂಬುದಾಗಿ ಸಂಸ್ಥಾನಗಳ ಸಂಧಾನ ಸಮಿತಿ ಕಾರ್ಯದರ್ಶಿ ಮೀರ್ ಮಕ್‌ಬೂಲ್ ಮಹಮೂದರು ಹೇಳಿಕೆ ಇತ್ತಿದ್ದಾರೆ ಈ ಹೇಳಿಕೆಗೆ ಸುಲ್ತಾನ್ ಅಹಮದ್, ಡಿ. ಕೆ. ಸೇನ್, ಫಣಿಕ್ಕರ್, ಸರ್ ಸಿ. ಪಿ ರಾಮಸ್ವಾಮಿ ಅಯ್ಯರ್‌ರವರೂ ಸಹಿ ಮಾಡಿದ್ದಾರೆ. ಸರ್ ಮಿರ್ಜಾ ಮತ್ತು ರಾಮಸ್ವಾಮಿ ಮೊದಲಿಯಾರರು ತಮ್ಮ ಒಪ್ಪಿಗೆ ಸೂಚಿಸಿದ್ದಾರೆ.

ಬಂಗಾಳಾ ಪರಿಹಾರ ನಿಧಿ

ಬೆಂಗಳೂರು, ೧೫

ಬಂಗಾಳ ಪರಿಹಾರಕ್ಕಾಗಿ ಸಂಸ್ಥಾನದ ಹಿಂದೂ ಮಹಾಸಭೆಯ ಶಾಖಾ ಸಮಿತಿಗಳು ಸಂಗ್ರಹಿಸಿರುವ ನಿಧಿಯನ್ನು ಕೇಂದ್ರ ಸಮಿತಿ ಖಜಾಂಚಿಗಳಾದ ಭೂಪಾಳಂ ಚಂದ್ರಶೇಖರಯ್ಯನವರಿಗೆ ಕಳುಹಿಕೊಡ ಬೇಕೆಂದು ಹಿಂದೂ ಮಹಾಸಭೆಯ ವ್ಯವಸ್ಥಾಪಕ ಕಾರ್ಯದರ್ಶಿಗಳು ಕೋರಿದ್ದಾರೆ,

ಮನೆ ಖರೀದಿಗಿದೆ.

ನಂಜನಗೂಡು ಶ್ರೀಕಂಠಪುರಿ ಬಡಾವಣೆಯಲ್ಲಿ ನಲ್ಲಿ ಮತ್ತು ದೀಪ ಇರುವ ಮಂಗಳೂರು ಹೆಂಚಿನ ಒಂದು ಮನೆ ಖರೀದಿಗಿದೆ. ಹಾಲಿ 25 ರೂ. ಬಾಡಿಗೆ ಬರುತ್ತಿದೆ. ದೇವಸ್ಥಾನ, ಕೋರ್ಟು, ರೈಲ್ವೆ ಸ್ಟೇಷನ್ನಿಗೆ ಹತ್ತಿರವಿದೆ

ಬೆಲೆ, 5,500 ರೂ

ಇವರಲ್ಲಿ ವಿಚಾರಿಸಿ—

ನ್ಯಾಷನಲ್ ಕಾಫಿ ವರ್ಕ್ಸ್,

ನಂಜನಗೂಡು

ವಿದ್ಯಾರ್ಥಿಗಳಿಗೆ ರೈಲ... ತೊಂದರೆ

ಸ್ವಂ. ವ] ಶ್ರೀರಂಗಪಟ್ಟ...

ಇಲ್ಲಿಂದ ಸುಮಾರು 100 ಮಂ... ಗಳು ವ್ಯಾಸಂಗಕ್ಕಾಗಿ ರೈಲಿನಲ್ಲಿ ಪ್ರ... ಮಾಡುವರು. ಇವರಿಗಾಗಿ ರೈಲಿನ... ರಿಗಳು ಪ್ರತ್ಯೇಕ ಗಾಡಿಯೊಂದನ್ನು... ಸೌಕರ್ಯ ಕಲ್ಪಿಸಿರುವರು. ಆದರೆ... ಡಿಯಲ್ಲಿ ಇತರ ಪ್ರಯಾಣಿಕರು... ಕೊಂಡು ವಿದ್ಯಾರ್ಥಿಗಳಿಗೆ ವಾಸಮ... ವಾಗ ಕೂರಲು ಜಾಗವಿಲ್ಲದೆ ತೊಂದ... ಗುತ್ತಿದೆ, ಕೇವಲ ಕೆಲಮಂದಿ ವಿದ್ಯಾ... ಯರಿಗಾಗಿಯೇ ಒಂದು ಗಾಡಿಯನ್ನು... ರ್ವ್ ಮಾಡಿರುವರು. ಅದರಲ್ಲಿಯಾ... ವಿದ್ಯಾರ್ಥಿಗಳು ಕೂರಲು ಅವಕಾ... ಸಂಬಂಧಪಟ್ಟ ಅಧಿಕಾರಿಗಳು ಗಮ... ದ್ಯಾರ್ಥಿಗಳ ತೊಂದರೆಯನ್ನು ನಿ... ಬೇಕೆಂದು ಕೋರಲಾಗಿದೆ.

NOTICE

The undersigned wi... to inform the public ... follows:-

(1) Attention of the p... lic is drawn to the pu... notice published in "... Nadu" dated 20-11-1946

(2) That he is abso... owner of the properties, ...

(a) House ... Lakshmivilas Agrahar, ... varaja Mohalla Mysore, ... that he is in possession ... the same and

(b) The Land Su... No 49, Hejjige Village, N... jangud Taluk and that ... is in possession of the sa...

A. S. Rangaswamieng...

Edited, printed and publishe... A. R. Nagaraian at the Sadhvi P... D-Subbiah Road, Mysore.

ಶೀಘ್ರದಲ್ಲಿಯೇ ನಿಮ್ಮ ಮೆಚ್ಚಿನ ನ್ಯೂ ಇಂಪೀರ ಟಾಕೀಸಿನಲ್ಲಿ ಬರುವ ಕಾಲವನ್ನು ಗಮನಿಸಿರಿ

ತಮಿಳುನಾಡು ಟಾಕೀಸ್‌ರವರ

..........ಸುಪ್ರಸಿದ್ಧ ಪೌರಾಣಿಕ ಚಿತ್ರ............

ಮೋಹಿನಿ

ರುಕ್ಮಾಂಗದ

(ತಮಿಳು ಭಾಷೆ)

ಎಮ್. ಎಸ್. ವಿಜಯಾಳ್, ಪಿ. ಬಿ. ರಂಗಾಚಾರ್ ಕೆ. ಬಿ. ಶಾರದಾಂಬಾಳ್, ವಿದ್ವಾನ್ ಶ್ರೀನಿವಾಸನ್, ಎಂ ಆರ್. ಸುಬ್ರಹ್ಮಣ್ಯಂ ಮತ್ತು ಇತರರು ನಟಿಸಿರುವರು

ನಿರ್ದೇಶಕರು :-ಎಸ್. ಸೌಂದರ್‌ರಾಜನ್ : ಸ್ಟುಡಿಯೊ :-ರಣಜಿತ್-ಬೊಂಬಾಯಿ

For Bookings to :-Mysore State, South Canara & Coorg

Apply to :-SRI MAHALAKSHMI PICTURES,

No 8, Hospital Road, Bangalore City.

ಐಟಿಯಾಲ್

TRADE ITL MARK

ಅತ್ಯುತ್ತಮವಾದ ಕ್ರಿಮಿ ನಾಶಿನಿ

ಕಾರ್‌ಬಾಲಿಕ್ ದ್ರಾವಕಕ್ಕಿಂತಲೂ ಆರರಷ್ಟು ಶಕ್ತಿಯುತವಾದದ್ದು ಮಿಶ್ರಿತವಲ್ಲದ್ದು, ಸವೆಸದಿರುವುದು, ಕಲೆಯನ್ನು ಉಳಿಸದಿರುವುದು ಮತ್ತು ಬ... ಕರವಾದ ವಾಸನೆಯುಳ್ಳದ್ದು ಕ್ರಿಮಿಗಳಿಗೆ ಐಟಿಯಾಲ್ ಮೃತ್ಯುಪ್ರಾಯ, ... ಸೂಕ್ಷ್ಮಶರೀರಕ್ಕೆ ಯಾವ ಬಾಧೆಯನ್ನೂ ಉಂಟುಮಾಡುವುದಿಲ್ಲ. ಶಸ್ತ್ರ ಚಿ... ತ್ಸ ಚಿಕಿತ್ಸೆಗಳಲ್ಲಿಯೂ ಮನೆ ಮತ್ತು ಸ್ವಂತ ಉಪಯೋಗಕ್ಕೂ ಹಳೇ ಕಾಲದ ಕ್ರಿ... ಕರಗಳನ್ನು ಮಾಣಿಸುತ್ತದೆ.

೪, ೮, ಮತ್ತು ೧೬ ಔನ್ಸ್ ಸೀಸೆಗಳಲ್ಲಿ-ದೊರೆಯುತ್ತದೆ.

ಐ. ಟಿ. ಎಲ್. ತಯಾರಿ

—: ತಯಾರಿಸುವವರು :—

ಮೈಸೂರು ಇಂಡಸ್ಟ್ರಿಯಲ್ ಮತ್ತು ಟೆಸ್ಟಿಂಗ್ ಲ್ಯಾಬೊರೇಟರಿ, ಲಿಮಿಟೆಡ್

ಮಲ್ಲೇಶ್ವರಂ, : : ಬೆಂಗಳೂ...

ಪೋ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಗುರುವಾರ ೧೯—೧೨—೪೬ [ಸಂಚಿಕೆ ೧೧೪

ಅಸ್ಸಾಂ ಗಡಿಯಲ್ಲಿ ತಲೆಕಡುಕರ ಹಾವಳಿ

ಚನ್ನಪಟ್ಟಣದ ಗಲಭೆ

ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆ

ಬೆಂಗಳೂರು ೧೯

ಚನ್ನಪಟ್ಟಣದಲ್ಲಿ ಶಾಂತಿ ನೆಲಸಿದೆ ರಿಜರ್ವ್ ಪೋಲೀಸ್ ಕಾವಲು ಬಲವಾಗಿದೆ ಜನರು ಉದ್ರೇಕಗೊಂಡಿದ್ದರೂ ಕಾಂಗ್ರೆಸ್ ಮುಂದಾಳುಗಳು ಮಾಳಿಗೆ ಬೆಲೆ ಕೊಟ್ಟು ಶಾಂತಿ ಸ್ಥಾಪನಾ ಕಾರ್ಯದಲ್ಲಿ ನೆರವಾಗಿದ್ದಾರೆ. ಮುಸ್ಲಿಂ ಮುಖಂಡರಾದ ಮಿ॥ ಮುಮ್ತಾಜ್‌ರವರೂ ಕಾಂಗ್ರೆಸ್ ನಾಯಕರ ವರ್ತನೆಯನ್ನು ಅಭಿನಂದಿಸಿ ಅವರಲ್ಲಿ ತಮ್ಮ ಸಂಪೂರ್ಣ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ. ಕಾಂಗ್ರೆಸ್ ನಾಯಕರು ತಮ್ಮ ಪ್ರಾಣಹರಣವಾಗುವುದನ್ನೂ ಲಕ್ಷಿಸದೆ ಹಲವು ಮುಸ್ಲಿಮರ ಮನೆಗಳನ್ನು ರಕ್ಷಿಸಿದರು ಅವರು ಆ ಕಾರ್ಯ ಕೈಗೊಳ್ಳದಿದ್ದರೆ ಅನೇಕ ಮುಸ್ಲಿಮರ ಆಸ್ತಿಪಾಸ್ತಿಗಳು ನಾಶವಾಗಿ ಹೋಗುತ್ತಿದ್ದವೆಂದು ವರದಿಯಾಗಿದೆ

ಈ ಗಲಭೆ ಸಂಬಂಧದಲ್ಲಿ ಪೋಲೀಸರು ಎರಡು ದೊಂಬಿ ಮತ್ತು ಒಂದು ಕೊಲೆ ಮೊಕದ್ದಮೆಯನ್ನು ದಾಖಲು ಮಾಡಿಕೊಂಡು ತನಿಖೆ ಕ್ರಮವನ್ನು ಜರುಗಿಸುತ್ತಿರುವರು

ಗೋಪಾಲರಾಯರ ಮೇಲೆ ಮತ್ತೆರಡು ದೂರುಗಳು

ಧರ್ಮರತ್ನಾಕರ ಬಿ ಎ ಗೋಪಾಲರಾಯರು ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರಷ್ಟೆ ಪೋಲೀಸರ ತನಿಖೆ ಕ್ರಮ ಭರದಿಂದ ಸಾಗುತ್ತಿದೆ ಅವರ ಮೇಲೆ ಮತ್ತೆರಡು ದೂರುಗಳು ಬಂದಿರುವುದಾಗಿ ವರದಿಯಾಗಿದೆ

ಪುರಸಭೆಗೆ ನಾಮಕರಣಗಳು

೧೯೪೭ ನೇ ಜನವರಿಯಿಂದ ಪುನರ್ರಚಿತವಾಗಿರುವ ಮೈಸೂರು ಪುರಸಭೆಗೆ ಈ ಮುಂದೆ ಕಂಡವರುಗಳನ್ನು ಸರ್ಕಾರದವರು ನಾಮಕರಣಮಾಡಿದ್ದಾರೆ - ಮಿ॥ಗಳಾದ ಟಿ. ಎಚ್ ಅಕ್ಬರ್, ಮಹಮದ್ ಸೇಟ್ ಮಾನ್‌ಸೂರ್ ಹುಸೇನ್, ಶ್ರೀಗಳಾದ ಎಚ್ ಎ. ದೇವರಾಜೇ ಅರಸ್, ಕೆ. ಸಿದ್ದಯ್ಯ ಮತ್ತು ಮಿ॥ ಡಬ್ಲ್ಯು ಹೆಚ್. ಥಿಯೋಬಾಲ್ಡ್.

ಚಾಮರಾಜನಗರ ೧೮

ದಿನಕ್ಕೆ ೩ ೩ ಬಾರಿಯಾದರೂ ಇದ್ದಕ್ಕಿದ್ದಂತೆಯೇ ವಿದ್ಯುಚ್ಛಕ್ತಿ ದೀಪ ಆರಿಹೋಗುತ್ತಿದೆ. ಈ ದೀಪವನ್ನೇ ನಂಬಿಕೊಂಡಿರುವವರಿಗೆ ಬಹಳ ತೊಂದರೆಯಾಗಿದೆ

ಚರ್ಚಾ ಸ್ಪರ್ಧೆಗೆ ಅನುಮತಿ ಇಲ್ಲ

ಮೈಸೂರು ೧೯

ಸುತ್ತೂರು ಶಿವರಾತ್ರೀಶ್ವರ ವಿದ್ಯಾರ್ಥಿ ನಿಲಯದ ಸಂಭದಾತ್ರಯದಲ್ಲಿ ಈ ದಿನ ಸಂಜೆ ನಡೆಯಬೇಕಾಗಿದ್ದ ಅಂತರ ವಿದ್ಯಾರ್ಥಿ ನಿಲಯಗಳ ಚರ್ಚಾ ಕೂಟಕ್ಕೆ ಜಿಲ್ಲಾಧಿಕಾರಿಗಳ ಅನುಮತಿ ದೊರೆಯದಿದ್ದುದರಿಂದ ಅದನ್ನು ಮುಂದೆ ಹಾಕಲಾಗಿದೆ

ರಾಜಧಾನಿಯ ಜಯ ಮಂಡಲಿಯ ಸಹಾಯಾರ್ಥವಾಗಿ ಟನುಮಯ್ಯನವರ ಹೈಸ್ಕೂಲಿನಲ್ಲಿ ನಡೆಯಬೇಕಾಗಿದ್ದ ವಿವಿಧ ವಿನೋದಾವಳಿಯನ್ನು ನಿಲ್ಲಿಸಲಾಗಿದೆ, ಆದಕ್ಕಾಗಿ ಟಿಕೆಟ್ ಕೊಂಡಿರುವವರು ಅವುಗಳನ್ನು ಚಾಮರಾಜಪುರಂ ೧೧೧೩ನೇ ನಂಬರು ಮನೆಯಲ್ಲಿ ವಾಪಸ್ಸು ಕೊಟ್ಟು ಹಣ ಪಡೆಯಬಹುದೆಂದು ಕಾರ್ಯದರ್ಶಿ ಶ್ರೀ ವ ತಿ ಲೀಲಾರವರು ತಿಳಿಸಿರುತ್ತಾರೆ

ನಿನ್ನೆ ದಿನ ಬೆಟ್ಟದ ಪುರದ ಹಾಸ್ಟೆಲಿನಲ್ಲಿ ಶ್ರೀ ರಂಗನಾಥಾನಂದ ಸ್ವಾಮಿಯವರಿಂದ ನಡೆಯಬೇಕಾಗಿದ್ದ ಉಪನ್ಯಾಸಕ್ಕೂ ಅನುಮತಿ ದೊರಕಲಿಲ್ಲ.

ಹರಿಕಥೆ

ಮೈಸೂರು ಚಾಮರಾಜ ಅಗ್ರಹಾರದ ಹಿಂಭಾಗದಲ್ಲಿರುವ ಪ್ರಸನ್ನ ಶ್ರೀ ವೆಂಕಟರಮಣ ಸ್ವಾಮಿಯವರ ದೇವಸ್ಥಾನದ ಕೀರ್ತನ ಸಮಾಜದ ಆಶ್ರಯದಲ್ಲಿ ಈ ದಿನ ರಾತ್ರಿ ೮-೩೦ ಘಂಟೆಗೆ ಏಕಾದಶಿ ಪ್ರಯುಕ್ತ ಬಾಲ ಘಾಟಿನ ಕೀರ್ತನ ಪಟು ಶ್ರೀ ಗಣಪತಿ ಭಾಗವತರಿಂದ ಅಂಬರೀಷ ಉಪಾಖ್ಯಾನ ಎಂಬ ಹರಿಕಥೆಯು ತಬಲಾ ಸಹಿತ ನಡೆಯುವುದು ಸರ್ವರಿಗೂ ಆಹ್ವಾನವುಂಟು

ಕಾಂಗ್ರೆಸ್ ಪ್ರಗತಿ ಪಕ್ಷ

ಸುಭಾಷ್ ನಗರದಲ್ಲಾದ ಜವಾಬ್ದಾರಿ ಸರ್ಕಾರದ ನಿರ್ಣಯವನ್ನೂ ಕಾಂಗ್ರೆಸ್ ಅಧ್ಯಕ್ಷರ ಕರೆಯನ್ನೂ ಕಾರ್ಯಗತ ಮಾಡಲು ಮೂರು ನಿಯತ ಸ್ವಾಗತ ಸಮಿತಿಯನ್ನು ರಚಿಸಬೇಕೆಂಬುದಾಗಿ ಮೊನ್ನೆ ದಿನ ಮೈಸೂರಿನಲ್ಲಿ ನಡೆದ ಕಾಂಗ್ರೆಸ್ಸಿನ ಪ್ರಗತಿ ಪಕ್ಷದ ಸಭೆಯಲ್ಲಿ ನಿರ್ಣಯಿಸಲಾಯಿತು

ಪ್ರದೋಷ ಸಂಗೀತ

ಬಿಡಾರಂ ಕೃಷ್ಣಪ್ಪನವರ ರಾಮಮಂದಿರದಲ್ಲಿ ನಾಳೆ ಸಂಜೆ ೬॥ ಗಂಟೆಗೆ ಪ್ರದೋಷ ಪ್ರಯುಕ್ತ ವಿದ್ವಾನ್ ವಿ ರಾಜಪ್ಪನವರ ಹಾಡುಗಾರಿಕೆ, ಮಿ॥ ಕೃಷ್ಣ ಅವರ ಪಿಟೀಲು, ಮಿ॥ ನರಸಿಂಹಾಚಾರ್ಯರ ಮೃದಂಗವು ನಡೆಯಲೇರ್ಪಾಟಾಗಿದೆ ಸರ್ವರಿಗೂ ಆಹ್ವಾನವುಂಟು

ಅಸ್ಸಾಂ ಗಡಿಯಲ್ಲಿ ತಲೆಕಡುಕರ ಹಾವಳಿ

ಅಸ್ಸಾಂ ಪ್ರಾಂತ್ಯಕ್ಕೆ ಸೇರಿದ ನಾಗಾ ಪ್ರದೇಶದಲ್ಲಿ ಮೊಕೊಕ್ ಚಾಂಗ್ ಕಣಿವೆಯ ನಾಗಾ ಜನರು ಸಿಕ್ಕಿದ ಜನರ ತಲೆಗಳನ್ನು ಕಡಿದು ಅಸಾಧ್ಯವಾದ ಹಾವಳಿ ಮಾಡುತ್ತಿರುವುದಾಗಿ ವರದಿ ಬಂದಿದೆ ಇದುವರೆವಿಗೆ ಅವರು ೧೪೦೦ ತಲೆಗಳನ್ನು ತುಂಡರಿಸಿ ತೆಗೆದುಕೊಂಡು ಹೋಗಿದ್ದಾರೆ ಸುಗ್ಗಿ ಕಾಲದಲ್ಲಿ ಫಸಲು ಚೆನ್ನಾಗಿ ಕೈ ಹತ್ತಲು ದೇವರಿಗೆ ತಲೆ ಬುರುಡೆಯನ್ನು ಅರ್ಪಿಸುವುದು ಅವರ ಪದ್ಧತಿಯೆಂದೂ ಅದರಲ್ಲೂ ನಾನಾ ಜನರ ತಲೆ ಅವರ ದೇವರಿಗೆ ಬಹಳ ಪ್ರಿಯವೆಂದೂ ಹೇಳಲಾಗಿದೆ ಸಾಮೂಹಿಕವಾಗಿ ಧಾಳಿ ನಡೆಸಿ ತಲೆಗಳನ್ನು ತಂದು ತಮ್ಮ ಊರಿನ ಬಾಗಿಲಲ್ಲಿ ತೋರಣ ಕಟ್ಟಿ ಅವರು ದೇವರ ಪ್ರಾರ್ಥನೆ ನಡೆಸುವರು ಆರಕಾನ್ ಕಣಿವೆಯಲ್ಲಿ ಕಳೆದ ಎರಡು ತಿಂಗಳಿನಿಂದ ಒಂದು ಗುಂಪು ತಮ್ಮದೇ ಆದ ಪ್ರತ್ಯೇಕ ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿ ವ್ಯವಹರಿಸುತ್ತಿದ್ದರೆಂದೂ ಈ ಸಂಬಂಧದಲ್ಲಿ ವರದಿ ಹೊರಬಿದ್ದಿದೆ ಅಸ್ಸಾಂ ಪ್ರಾಂತ್ಯದಲ್ಲಿರುವ ಗಡಿ ಅಧಿಕಾರಿಗಳಾದ ಮಿ॥ಸ್ಟೀವನ್ಸ್ ಎಂಬುವರು ಭಾರತ ಸರ್ಕಾರದ ಆಜ್ಞೆಯಂತೆ ಸೈನ್ಯದ ತುಕ್ಕಡಿಯೊಂದಿಗೆ ಸದ್ಯದಲ್ಲಿ ಆ ಪ್ರದೇಶದ ಮೇಲೆ ಮುತ್ತಿಗೆ ನಡೆಸಲಿದ್ದಾರೆಂದು ಗೊತ್ತಾಗಿದೆ

ವಾಣಿಜ್ಯ ಪ್ರೊಫೆಸರುಗಳು

ಸ್ವಾ. ಸು ಪ್ರೋ] ಬೆಂಗಳೂರು ೧೯

ಈ ಮುಂದೆ ಕಂಡವರುಗಳನ್ನು ವಾಣಿಜ್ಯ ಪ್ರೊಫೆಸರುಗಳನ್ನಾಗಿ ಸರ್ಕಾರದವರು ನೇಮಕ ಮಾಡಿದ್ದಾರೆ ಶ್ರೀಗಳಾದ ಬಿ ಕೆ. ಸಿಂಗಪ್ಪ, ಲೂಯಿ, ಬಾಲಕೃಷ್ಣ, ರಾಮಕೃಷ್ಣಶೆಟ್ಟಿ, ವೆಂಕಟರಮಣ ಅರಸ್, ಕೆಂಪಯ್ಯ, ಕೃಷ್ಣ. ಡಿ ಶ್ರೀಕಂಠಯ್ಯ, ಎಂ ವೆಂಕಟೇಶ್ ಮತ್ತು ಗೋಪಾಲನ್.

• ಮರಾಮತ್ ಶಾಖಾ ಕಾರ್ಯದರ್ಶಿ ಶ್ರೀ ಕೆ ಡಿ ಜೋಯಿಸರವರು ನಾಳೆಯಿಂದ ನಿವೃತ್ತರಾಗುವರು. ಅವರ ಸ್ಥಳಕ್ಕೆ ಮೈಸೂರು ಡಿವಿಜನ್ನಿನಲ್ಲಿರುವ ಶ್ರೀ ಬಿ ಎಸ್. ನರಸಿಂಗರಾಯರು ನೇಮಿಸಲ್ಪಡಬಹುದೆಂದು ಗೊತ್ತಾಗಿದೆ

ಕ್ಷಯ ಹಿಡಿದ ನಾನಾ ಪ್ರದೇಶದಲ್ಲಿ ೧೮೦ ಮೈಲಿ ಫಾಸಲೆಯೊಳಗೊಂಡ ೬ ಹಳ್ಳಿಗಳಲ್ಲಿ ೬ ಆರೋಗ್ಯ ಕೇಂದ್ರಗಳನ್ನು ೧ ಲಕ್ಷ ೧೦ ಸಾವಿರ ರೂಗಳ ಖರ್ಚಿನಲ್ಲಿ ಸ್ಥಾಪಿಸಲಾಗುವುದೆಂದು ಗೊತ್ತಾಗಿದೆ

೨೬ ಮೂಟೆ ಎಳ್ಳು ಪತ್ತೆ

ಸ್ವಂ ಸಾ] ಚಾಮರಾಜನಗರ ೧೮

೧೩ ದಾಟಿ ಹೋಗುತ್ತಿದ್ದ ೨೬ ಮೂಟೆ ಎಳ್ಳು ಮತ್ತು ೧ ಮೂಟೆ ತೊಗರಿಯನ್ನು ಪೋಲೀಸಿನವರು ಪತ್ತೆ ಹಚ್ಚಿ, ಮುಂದಿನ ಕ್ರಮ ಜರುಗಿಸುತ್ತಿರುವುದಾಗಿ ವರದಿಯಾಗಿದೆ

ಮೈಸೂರು ಜಿಲ್ಲಾ ಬೋರ್ಡಿನ ಉಪಾಧ್ಯಕ್ಷರಾಗಿ ಚನಾಯಕರಾದ ಶ್ರೀ ಗರುಡ ಲಕ್ಷ್ಮಣರನ್ನು ಇಲ್ಲಿನ ಮೀಸೈನ ವಿದ್ಯಾರ್ಥಿನಿಯರಲ್ಲಿ ಕಳೆದ ೧೫ನೇ ತಾ॥ ಸತ್ಕರಿಸಲಾಯಿತು

● ಮದ್ರಾಸ್ ಸರ್ಕಾರದ ನಾಗರೀಕ ಸರಬರಾಜು ಶಾಖೆಯ ಪರವಾಗಿ ಒಂದು ಕೋಟಿ ರೂಪಾಯಿಗಳ ಸಾಲವನ್ನು ಎತ್ತಲು ಸರಕಾರದವರು ತೀರ್ಮಾನಿಸಿರುವುದಾಗಿ ಗೊತ್ತಾಗಿದೆ.

ಕಣ್ಮರೆಯಾದ ಭಾರತೀಯ ಮಂತ್ರಿಯ ರಾಜೀನಾಮೆ

ಸ್ವತಂತ್ರವಾದ ಪರಿಸ್ಥಿತಿಯಲ್ಲೂ ಯಾವ ಪರಮ ಸ್ನೇಹಿತರೆಂದು ಭಾವಿಸಲ್ಪಟ್ಟಿದ್ದವರ ವಿಜಯಕ್ಕಾಗಿ ಮುಸಲ್ಮಾನರು ಮಸೀದಿಯಲ್ಲಿ ಪ್ರಾರ್ಥನೆ ಸಲ್ಲಿಸುವುದೇ ಅಲ್ಲದೆ, ರಕ್ತದ ಧಾರೆಯನ್ನು ಎರೆದರೋ, ಅಂತಹ ಬ್ರಿಟಿಷರು ನಮ್ಮ ಶತ್ರುಗಳು, ಎಂದು ಸೂಚಿಸಿ ಒಂದು ಲೇಖನವನ್ನು ಕೆಸಿಯೊದಲ್ಲಿರುವ ಭಾರತೀಯ ಪತ್ರಿಕೆಯೊಂದರಲ್ಲಿ ಅಲ್ಲಿನ ಸರ್ಕಾರದ ಮಂತ್ರಿಗಳಾದ ಮಿ॥ ಶಂಸುದ್ದೀನ್‌ರವರು ಪ್ರಕಟಿಸಿದುದಕ್ಕೆ ಅಲ್ಲಿನ ಗವರ್ನರರು ಆಕ್ಷೇಪಿಸಿದ್ದಾಗಿ ಅವರು ಶಾಸನಸಭೆಯ ಅಧ್ಯಕ್ಷಸ್ಥಾನಕ್ಕೂ, ಮಂತ್ರಿಪದವಿಗೂ ರಾಜೀನಾಮೆ ಸಲ್ಲಿಸಿದ್ದಾರೆ.

ಭಾರತವನ್ನು ತ್ಯಜಿಸಲು ಮಾಜಿ ವೈಸ್‌ರಾಯರ ಸಲಹೆ

ಬ್ರಿಟಿಷ್ ಪ್ರಜೆಗಳ ಸಂಪೂರ್ಣ ಸಮ್ಮತಿಯಿಲ್ಲದೆ ಭಾರತದಲ್ಲಿ ಸ್ವಲ್ಪಕಾಲವೂ ಬ್ರಿಟನ್ ಇರುವುದು ಅಸಾಧ್ಯ. ಬ್ರಿಟನ್ನು ತನ್ನ ನೀತಿಯನ್ನು ವಿವರವಾಗಿ ಪ್ರಕಟಿಸಲಿ. ತನ್ನ ಜವಾಬ್ದಾರಿಯನ್ನು ವಿವರಿಸಲಿ. ಅಧಿಕಾರವನ್ನು ಭಾರತೀಯರಿಗೇ ವಹಿಸಿಕೊಡುವ ದಿನವನ್ನು ಈಗಲೇ ಘೋಷಿಸಿ ಆ ದಿನ ಭಾರತವನ್ನು ಬಿಟ್ಟುಬರಬೇಕು ಅವಶ್ಯಕವಾದ ರಕ್ಷಣೆ ಇಲ್ಲದೆ ಜವಾಬ್ದಾರಿಯನ್ನು ನಿರ್ವಹಿಸಲು ಅಲ್ಲೇ ಉಳಿಯುವುದು ಬ್ರಿಟನ್ ಮತ್ತು ಭಾರತಗಳೆರಡನ್ನೂ ಮೋಸಮಾಡಿದಂತೆ ಎಂಬುದಾಗಿ ಮಾಜಿ ವೈಸ್‌ರಾಯ್ ಲಿನ್‌ಲಿತ್‌ಗೋರವರು ಲಾರ್ಡ್ಸ್ ಸಭೆಯಲ್ಲಿ ತಿಳಿಸಿದ್ದಾರೆ

ಜನರನ್ನು ವರ್ಗಾಯಿಸುವುದಕ್ಕೆ ಪಂಜಾಬ್ ಗವರ್ನರ ವಿರೋಧ

ಭಾರತದಲ್ಲಿ ಒಳದಂಗೆ ಮತ್ತು ಜನರನ್ನು ಒಂದು ಪ್ರಾಂತ್ಯದಿಂದ ಮತ್ತೊಂದು ಕಡೆಗೆ ವರ್ಗಾಯಿಸುವ ಕೀಳ ದರ್ಜೆಯ ಮಾತ್ರ ಆವೇಶದ ಮಾತು ಕತೆಗಳು ಜರುಗುತ್ತಿವೆ. ಪಂಜಾಬಿಗಳಾದ ನಮಗೆ ಯುದ್ಧದ ವಿಚಾರ ಚೆನ್ನಾಗಿ ಗೊತ್ತಿದೆ ತಲೆಮೆಡೆ ನಡೆದ ಕಲಹಗಳು ಕೋಮುವಾರು ಪ್ರಜ್ಞೆಯನ್ನು ಮತ್ತಷ್ಟು ಹದಗೆಡಿಸಿವೆ. ಜನಗಳನ್ನು ಸಾಮೂಹಿಕವಾಗಿ ವರ್ಗಾಯಿಸುವ ವಿಚಾರ ಅಸಾಧ್ಯವಾದದ್ದು. ಹಿಟ್ಲರನು ಇದನ್ನು ಪ್ರಯತ್ನಿಸಿ ವಿಫಲನಾದನು–ಎಂಬುದಾಗಿ ಪಂಜಾಬ್ ಗವರ್ನರ್ ಸರ್ ಇವಾನ್ ಜೆನ್‌ಕಿನ್ಸ್‌ರು ಸಭೆಯೊಂದರಲ್ಲಿ ತಿಳಿಸಿದ್ದಾರೆ

ಬೊಂಬಾಯಿ ಪ್ರಾಂತ್ಯದಲ್ಲಿ ಪಾನನಿರೋಧ ಶಾಸನ

ಬೊಂಬಾಯಿ ಪ್ರಾಂತ್ಯದಲ್ಲೆಲ್ಲಾ ಪಾನನಿರೋಧವನ್ನು ಜಾರಿಗೆ ತರಲು ಒಂದು ಯೋಜನೆಯನ್ನು ಅಲ್ಲಿನ ಸರ್ಕಾರವು ಸಿದ್ಧಗೊಳಿಸಿದೆ. ಈ ಬಗ್ಗೆ ಶಾಸನ ಸಭೆಯ ಮುಂದೆ ಮಸೂದೆಯೊಂದು ಬರಲಿದೆ. ಈ ಕಾರ್ಯವು ಜಯಪ್ರದವಾಗಲು ಗಡಿಯಲ್ಲಿರುವ ಸಂಸ್ಥಾನಗಳ ಸಹಕಾರವನ್ನು ಬೊಂಬಾಯಿನ ಸರ್ಕಾರ ಕೋರಲಿದೆ.

Edited, printed and published by A. R. Nagarajan at the Sadhvi Press D Subbaiah Road, Mysore

ಸಾಧ್ವಿ

ತಾ|| ೧೯-೧೨-೪೬ ಗುರುವಾರ

ಪಡಿತರದ ಖೋತಾ

ಸುಗ್ಗಿ ಆಜ್ಞೆಯ ಪ್ರಕಾರ ಪಡಿತರ ಪ್ರದೇಶಗಳಲ್ಲಿರುವ ಜಮೀನ್ದಾರರುಗಳಿಗೆ ಸಲ್ಲಬೇಕಾದ ಧಾನ್ಯದ ಪ್ರಮಾಣದ ವಿಚಾರದಲ್ಲಿ ಅನೇಕ ಪುಕಾರುಗಳು ಬರುತ್ತಿವೆ. ಕಳೆದ ವರ್ಷವೂ ಈ ಬಗ್ಗೆ ವಿಶೇಷ ಆಕ್ಷೇಪಣೆಗಳು ಕೇಳಿ ಬಂದಿದ್ದುವು. ಈ ಸಾರಿಯೂ ಸಹ ಅವು ನಿವಾರಣೆಯಾದಂತೆ ಕಾಣುವುದಿಲ್ಲ. ಇದರಿಂದ ಅನೇಕ ಜನ ಬಡ ಪ್ರಜೆಗಳು ತೊಂದರೆಗೆ ಈಡಾಗುವಂತಿದೆ

ಇದುವರೆಗೆ ಜಾರಿಯಲ್ಲಿದ್ದ ಸುಗ್ಗಿ ಶಾಸನವೇ ಬರುವ ವರ್ಷದಲ್ಲಿಯೂ ಜಾರಿಯಲ್ಲಿರುವುದೆಂದು ಸರ್ಕಾರದವರು ಪ್ರಕಟಿಸಿರುತ್ತಾರೆ. ಅದರಂತೆಯೇ ಪಡಿತರದ ಪ್ರಮಾಣವನ್ನು ಮುಂದುವರಿಸಲಾಗುವುದು. ಆದರೆ ಧಾನ್ಯ ಶೇಖರಣೆಯ ಸಂಬಂಧದಲ್ಲಿ ರೇಷನ್ ಇಲಾಖೆಯವರು ಅನುಸರಿಸುತ್ತಿರುವ ರೀತಿಯಿಂದ ಬಹಳ ತೊಂದರೆಗೆ ಅವಕಾಶವಾಗಿರುತ್ತದೆ

ಸ್ವಂತ ಜಮೀನಿನಲ್ಲಿ ಬೆಳೆದ ಧಾನ್ಯವನ್ನು ತಂದು ಕೊಳ್ಳುವವರಿಗೆ ಒಂದೂಕಾಲು ಪಾವು ಅಕ್ಕಿಯನ್ನು ಕೊಡುವುದಾಗಿ ವಿಧಾಯಕವಾಗಿದೆ, ಆದರೆ ಕಳೆದ ವರ್ಷ ಇದು ಹಲವಾರು ಬಾರಿ ಮಾರ್ಪಾಡನ್ನು ಹೊಂದಿತು. ವರ್ಷದ ಮಧ್ಯದಲ್ಲಿ ರೇಷನ್ ಕಾರ್ಡುಗಳ ಮೇಲೆ ಮುಕ್ಕಾಲು ಪಾವಿನಂತೆ ಒಂದು ಬಾರಿ ಧಾನ್ಯದ ಲೆಕ್ಕವು ದಾಖಲು ಮಾಡಲ್ಪಟ್ಟಿತು. ಅನಂತರ ಒಂದು ಪಾವಿನಂತೆ ಬರೆಯಲಾಯಿತು. ಈಗ ಬರುವ ವರ್ಷಕ್ಕೆ ಒಂದೂಕಾಲು ಪಾವಿನಂತೆ ಲೆಖ್ಖ ಹಾಕಲಾಗುತ್ತಿದೆ. ಆದರೆ ಕಳೆದ ಸಾಲಿನ ಬಾಬ್ತು ಕಾರ್ಡ್ ಹೋಲ್ಡರುಗಳ ಬಳಿ ಇನ್ನೂ ಉಳಿದಿರಬೇಕೆಂದು ಹೇಳಲಾಗಿರುವ ಧಾನ್ಯದ ಬಗ್ಗೆಯೇ ವಿಶೇಷ ವ್ಯತ್ಯಾಸಗಳು ಉಂಟಾಗುವಂತೆ ಕಂಡುಬರುತ್ತವೆ.

ಇದು ಕೇವಲ ಅಂಕಿ ಅಂಶಗಳ ಲೆಖ್ಖಾಚಾರದ ವಿಷಯವಲ್ಲ. ಪರಮಾವಧಿಯ ಪ್ರಮಾಣದಲ್ಲಿ ಅವಕಾಶ ಕೊಡಲಾಗಿರುವಷ್ಟು ಪಡಿತರವನ್ನು ಜನರು ಉಪಯೋಗಿಸಿಕೊಳ್ಳುವುದು ಸ್ವಾಭಾವಿಕವಾದ ವಿಚಾರ. ಅದರಲ್ಲೂ ಈಗ ಕೊಟ್ಟಿರುವ ಪ್ರಮಾಣವೇ ಸಾಲದೆಂದು ತೊಂದರೆ ಪಡುತ್ತಿರುವಾಗ ಅವಕಾಶವಿರುವಷ್ಟನ್ನು ಅವರು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳುವುದು ಸಹಜವಾಗಿಯೇ ಇದೆ. ಹೀಗಿರುವಲ್ಲಿ ವರ್ಷವು ಮುಗಿದ ಮೇಲೆ ಕಡಮೆ ಪ್ರಮಾಣಕ್ಕೆ ಲೆಖ್ಖ ಹಾಕಿ ಇನ್ನೂ ಹಲವಾರು ತಿಂಗಳ ದಾಸ್ತಾನು ಜನರಲ್ಲಿ ಇರಬೇಕೆಂದು ಹೇಳುವುದು ಅತ್ಯಂತ ತೊಂದರೆಯ ವಿಷಯ.

ಇದ್ದ ಧಾನ್ಯವೆಲ್ಲಾ ಮುಗಿದು ಹೋದರೂ ಇನ್ನೂ ಹಲವಾರು ತಿಂಗಳ ದಾಸ್ತಾನು ಇರಬೇಕೆಂದು ಹೇಳುವುದರಿಂದ ಜನರಿಗೆ ವೃಥಾ ಹಿಂಸೆ ಕೊಟ್ಟಂತಾಗುವುದು. ವರ್ಷದ ಮಧ್ಯದಲ್ಲಿ ಸರ್ಕಾರದವರು ಮಾಡಿದ ಪಡಿತರ ಪ್ರಮಾಣದ ಬದಲಾವಣೆಗಳಿಗೆ ಪ್ರಜೆಗಳು ಉತ್ತರವಾದಿಗಳಲ್ಲ. ವೆಚ್ಚವಾಗಿ ಹೋದ ಧಾನ್ಯವು ಇನ್ನೂ ಉಳಿದಿರುವುದೆಂದ ಹೇಳಿ ಮುಂದೆ ಬರುವ ಹಲವಾರು ತಿಂಗಳುಗಳಿಗೆ ಪಡಿತರವನ್ನು ಖೋತಾ ಮಾಡುವುದಾಗಿ ಹೇಳುವುದು ಸ್ವಲ್ಪವೂ ಸರಿಯಲ್ಲ. ಈ ರೀತಿಯಲ್ಲಿ ಉಳಿದಿರುವ ಧಾನ್ಯವು ಬರುವ ೧೯೪೭ ನೇ ಆಗಸ್ಟ್ ತಿಂಗಳ ವರೆಗೆ ಆಗುವುದೆಂದು ಲೆಖ್ಖ ಹಾಕಿರುವ ಒಂದು ಪ್ರಸಂಗವು ನಮ್ಮ ಗಮನಕ್ಕೆ ಬಂದಿದೆ. ಸದರಿ ಸಂಸಾರದಲ್ಲಿ ಸುಮಾರು ಹದಿನಾಲ್ಕು ಜನರು ಇರುವರು. ಎಂದ ಮೇಲೆ ಅವರು ಇನ್ನು ಎಂಟು ತಿಂಗಳ ಕಾಲ ಏನನ್ನು ತಿನ್ನಬೇಕು? ಅವರಿಗೆ ಬರುವ ವರ್ಷಕ್ಕಾಗಿ ಕೇವಲ ಮೂರು ನಾಲ್ಕು ತಿಂಗಳ ಪಡಿತರವನ್ನು ಕೊಡುವುದು ನ್ಯಾಯವೇ? ಇದೇ ರೀತಿಯಲ್ಲಿ ಇನ್ನೂ ಅನೇಕರಿಗೆ ಪಡಿತರವನ್ನು ಖೋತಾ ಮಾಡಲಾಗಿದೆ ಇದು ಸ್ವಲ್ಪವೂ ಸರಿಯಲ್ಲ. ಹಿಂದಿನ ದಾಸ್ತಾನನ್ನು ಗಣನೆಗೆ ತೆಗೆದುಕೊಳ್ಳುವುದು ಉಚಿತವಲ್ಲ ಈಗ ವಿಧಾಯಕವಾಗಿರುವ ರೇಷನ್ ಪ್ರಮಾಣದಷ್ಟನ್ನಾದರೂ ಪೂರ್ತಿಯಾಗಿ ಕೊಟ್ಟು ಪ್ರಜೆಗಳ ಕಷ್ಟವನ್ನು ತಪ್ಪಿಸುವುದು ಯುಕ್ತವಾಗಿದೆ. ಈ ವಿಷಯಕ್ಕೆ ಆಹಾರ ಮಂತ್ರಿಗಳು ಕೂಡಲೇ ಗಮನ ಕೊಡಲೆಂದು ನಾವು ಹಾರೈಸುತ್ತೇವೆ.

ವಿದ್ಯಾರ್ಥಿ ಕಾಂ|| ಸಮ್ಮೇಳನ

ಇದೇ 22 ಮತ್ತು 23ನೇ ತಾ|| ಗಳಲ್ಲಿ ಅಖಿಲ ಕರ್ನಾಟಕ ವಿದ್ಯಾರ್ಥಿ ಕಾಂಗ್ರೆಸ್ ಸಮ್ಮೇಳನವು ಶಿವಮೊಗ್ಗೆಯಲ್ಲಿ ನಿರ್ಮಿತವಾಗಿರುವ 'ಜಯಪ್ರಕಾಶ ನಗರ'ದಲ್ಲಿ ನಡೆಯಲಿದೆ. ಬೊಂಬಾಯಿ ಕಾಂಗ್ರೆಸ್ ಸಮ್ಯವಾದಿ ಮುಖಂಡರಾದ ಶ್ರೀ ಪುರುಷೋತ್ತಮ ತ್ರಿಕಮ್‌ದಾಸ್‌ರವರು ಅಧ್ಯಕ್ಷತೆ ವಹಿಸುವರು. ಅವರು ಇದೇ 21ನೇ ತಾ|| ಶನಿವಾರ ಬೊಂಬಾಯಿಯಿಂದ ವಿಮಾನದಲ್ಲಿ ಹೊರಟು ಸಂಜೆ 5 ಘಂಟೆಗೆ ಬೆಂಗಳೂರಿಗೆ ಬರುವರು. ಅದೇ ಸಂಜೆ ಪತ್ರಿಕಾ ಸಮ್ಮೇಳನವನ್ನು ಬೆಂಗಳೂರಿನಲ್ಲಿ ನಡೆಸಿ ರಾತ್ರಿ ಶಿವಮೊಗ್ಗೆಗೆ ಪ್ರಯಾಣ ಬೆಳೆಸುವರು.

ಅರುಣಾ ಆಸಫ್ ಆಲಿಯವರಿಗೆ ಕಲ್ಲಿನೇಟು

ಕಾಶ್ಮೀರದ ಶಾಸನ ಸಭಾ ಚುನಾವಣೆಗಳಲ್ಲಿ ಅಲ್ಲಿನ ರಾಷ್ಟ್ರೀಯ ಸಮ್ಮೇಳನದ ಮೂಲಕ ಸ್ಪರ್ಧಿಸಿರುವ ಉಮೇದುವಾರರ ಪ್ರಚಾರಮಾಡುತ್ತಿದ್ದ ಶ್ರೀಮತಿ ಅರುಣ ಆಸಫ್ ಆಲಿಯವರಿಗೆ ಕಲ್ಲಿನೇಟು ಬಿದ್ದಿದೆ. ಮಹಾರಾಜರ ಪಕ್ಷದವರು ಬೇಕೆಂತಲೇ ಅಡ್ಡಿ ಮಾಡುತ್ತಾರೆ. ಆಸ್ಪತ್ರೆಗಳೆಲ್ಲಾ ಮುಚ್ಚಲ್ಪಟ್ಟಿವೆ. ರಾಷ್ಟ್ರೀಯ ಕೆಲಸಗಾರರಿಗೆ ವಿಪರೀತ ಪೆಟ್ಟಾಗಿದೆ

ನೆಹರೂರವರ ನಿರ್ಣ[ಯ] ಗಾಂಧಿಜೀಯವರ ಒ[...]

ಭಾರತವು ಸ್ವತಂತ್ರ ರಿಪಬ್ಲಿಕ್ಕಾ[...] ಬೇಕೆಂದು ರಾಜ್ಯಾಂಗ ಸಭೆಯಲ್ಲಿ [...] ಸುವ ಪಂ|| ನೆಹರೂರವರ ನಿರ್ಣಯ [...] ಹಳ ಜಾಗರೂಕತೆಯಿಂದ ತಯಾ[...] ಯೆಂದೂ, ಎಲ್ಲ ಕೋಮುಗಳ ಹಿತ [...] ಲಕ್ಷ್ಯದಲ್ಲಿರಿಸಿಕೊಂಡು ಆಲೋಚಿಸ[...] ಯೆಂದೂ ಮಹಾತ್ಮ ಗಾಂಧಿಯವ[...] ನ್ನ ಅಭಿಪ್ರಾಯವನ್ನೂ ಸೂಚಿಸಿ, [...] ರ್ಣಯವೇ ಸರಿಯಾದದ್ದೆಂದು ಹೇ[...]

ಬ್ರಿಟನ್-ಸ್ಪೇನ್ ಸಂಬಂ[ಧ] ತ್ಯಾಗ

ವಿಶ್ವ ಸಂಸ್ಥೆಯ ನಿರ್ಣಯದಂತೆ [...] ನ್ನು ಸ್ಪೇನಿನಲ್ಲಿರುವ ರಾಯಭಾರಿ[...] ವಾಪಸು ಕರೆಸಿ ಕೊಳ್ಳಲು ನಿರ್ಧ[...] ಅದೇ ರೀತಿ ಸ್ಪೇನೂ ಸಹ ಲಂಡನ್ನಿನ[...] ತನ್ನ ರಾಯಭಾರಿಯನ್ನು ಹಿಂದಕ್ಕೆ [...] ಕೊಳ್ಳಲು ತೀರ್ಮಾನಿಸಿದೆ

ಜನವರಿಯಲ್ಲಿ ಭಾರತಕ್ಕೆ [...] ಸಾವಿರ ಟನ್ ಆಹಾರ

ಅಮೇರಿಕಾ ಸಂಯುಕ್ತ ಸಂಸ್ಥಾನ[...] ಹರುವ ಜನವರಿ ತಿಂಗಳಲ್ಲಿ 68 [...] ಟನ್ ಆಹಾರ ಧಾನ್ಯವನ್ನು ಭಾರತಕ್ಕೆ [...] ಗಿಸುವುದಾಗಿ ಅಲ್ಲಿನ ವ್ಯವಸಾಯ [...] ಶಾಖೆಯು ಪ್ರಕಟಿಸಿದೆ

ಅಪೆರಾ ಟಾಕೀಸ್

ತಾ|| 20-12-46 ರಿಂದ

ಪ್ರತಿದಿನ ಮೂರು ಆಟಗಳು

ನಾರದ-ನಾರ[ದಿ]

(ತೆಲಗು ಭಾಷೆ)

ಸೂರಿ ಬಾಬು, ಉಮಾ ಮಹೇ[...] ರಾವ್, ಲಕ್ಷ್ಮೀರಾಜ್ಯಂ, ಶಾಂತಾ[...]

Morning shows from 20-12

UTAH

With

Roy Rogers & George Ha[...]

ರಣಜಿತ್

20-12-46 ರಿಂದ

ಅನ್ಮೋಲ್ ಘಡಿ

ಪಾತ್ರ:– ಸುರೇಂದ್ರ, ಸುರಯ್ಯ ಮತ್ತು ನೂರ್‌ಜಹಾನ್,

ಪ್ರತಿ ದಿನ ಮೂರು ಆಟಗಳು

ಮನೆ ಖರೀದಿಗಿದೆ.

ನಂಜನಗೂಡು ಶ್ರೀಕಂಠಪುರಿ ಬಡಾವಣೆಯಲ್ಲಿ ನಲ್ಲಿ ಮತ್ತು ದೀಪ ಇರುವ ಮಂಗಳೂರು ಹೆಂಚಿನ ಒಂದು ಮನೆ ಖರೀದಿಗಿದೆ. ಮಾಹೆ 25 ರೂ. ಬಾಡಿಗೆ ಬರುತ್ತಿದೆ. ದೇವಸ್ಥಾನ, ಕೋರ್ಟು, ರೈಲ್ವೆ ಸ್ಟೇಷನ್ನಿಗೆ ಹತ್ತಿರವಿದೆ

ಬೆಲೆ, 5,500 ರೂ

ಇವರಲ್ಲಿ ವಿಚಾರಿಸಿ—

ನ್ಯಾಷನಲ್ ಕಾಫಿ ವರ್ಕ್ಸ್

ನಂಜನಗೂಡು

ಕೆ ಬಿ. ಮೋಟಾರ್ ಸರ್ವಿ[ಸ್]

ಮೈಸೂರು

ಮೈಸೂರು, ಹುಣಸೂರು, [...] ಚೌಕೂರು ಗೇಟ್, ತಿತಿಮತಿ, ಗೋ[...] ಕೊಪ್ಪಲು, ಪೊನ್ನಂಪೇಟೆ, ಹುದಿಕೇ[...] ಶ್ರೀಮಂಗಲ ಮಾರ್ಗವಾಗಿ ಕುಟ್ಟಕ್ಕೆ [...] ತಿದಿನ ಮಧ್ಯಾಹ್ನ ೧-೪೫ ಘಂಟೆಗೆ ಹೊ[...] ಡುತ್ತದೆ ಮಹಾ ಜನರು ಪ್ರೋತ್ಸಾ[ಹ] ಬೇಕಾಗಿ ಕೋರಿದೆ

ಕೆ. ಬಿ. ಬಿದ್ದ[...]

ಪ್ರೊಪ್ರೈಟರ್

ಬೆಂಗಳೂರು ಸಿಟಿ ಹಾರ್ಡಿಂಜ್ ರಸ್ತೆಯಲ್ಲಿರುವ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಬಿಲ್ಡಿಂಗಿನ ಮಹಡಿ ಮೇಲಿರುವ ಸಿಲ್ಕ್‌ಫಿಲೇಚರ್ ಎಕ್ಸ್‌ಪ್ಯಾಂಷನ್ ಸ್ಕೀಂ ಸ್ಪೆಷಲ್ ಆಫೀಸರವರ ಕಛೇರಿ–

ಬೆಂಗಳೂರು. ತಾ|| ೧೧-೧೨-೪೬

III NOTIFICATION

ಮೈಸೂರು ಸೀಮೆಯ ಸಿಲ್ಕ್‌ಫಿಲೇಚರ್ ಎಕ್ಸ್‌ಪ್ಯಾನ್ಷನ್ ಸ್ಕೀಂ ಸ್ಪೆಷಲ್ ಆಫೀಸಿನಿಂದ:—

ಮೈಸೂರು ಸೀಮೆಯ ರೇಷ್ಮೆಗೂಡು ಬೆಳೆಯುತಕ್ಕವರಿಗೂ, ರೇಷ್ಮೆನೂಲು ಬಿಚ್ಚುವವರಿಗೂ ಈ ಮೂಲಕ ತಿಳಿಯಪಡಿಸುವದೇನೆಂದರೆ—

೧೯೪೩ ನೇ ಇಸ್ವಿಯಲ್ಲಿ ಜಾರಿಯಾದ ರೇಷ್ಮೆಗೂಡು ಮತ್ತು ರೇಷ್ಮೆ ಕಂಟ್ರೋಲ್ ಹುಕುಂ ಪ್ರಕಾರ ಸರ್ಕಾರೀ ರೇಷ್ಮೆಗೂಡ ರೇಷ್ಮೆಗೂಡು ಕೇಂದ್ರಗಳ ಮೂಲಕ ಮಾರಾಟ ಮಾಡಿದ (ಅಂದರೆ 1-10-43 ನೇ ತಾರೀಖಿನಿಂದ 8-8-45 ನೇ ತಾರೀಖಿನ ವರೆವಿಗೆ ರೇಷ್ಮೆಗೂಡಿನ ಬಾಬ್ತು ಬರಬೇಕಾದ ಬೋನಸ್ ಕೆಲವು ರೈತರಿಗೆ ಸರಿಯಾದ ದಾಖಲೆ ಮತ್ತು ಅಡ್ರೆಸ್ಸುಗಳು ಇಲ್ಲದ ಕಾರಣ ಪಾವತಿಯಾಗದೆ ನಿಂತಿರುತ್ತೆ. ಸರ್ಕಾರೀ ರೇಷ್ಮೆ ಡಿಪೋವಿಗೆ ಕಚ್ಚಾ ರೇಷ್ಮೆ ಸರಬರಾಯಿ ಮಾಡಿದ ಬಾಬ್ತು ಬೋನಸ್ ಚೆಕ್ಕುಗಳು ಸಹಾ ಪಾವತಿಯಾಗದೇ ನಿಂತಿರುತ್ತೆ

ಆದಕಾರಣ ರೇಷ್ಮೆಗೂಡು ಬೆಳೆಯುತ್ತಕ್ಕವರೂ ಮತ್ತು ರೇಷ್ಮೆನೂಲು ಬಿಚ್ಚುವವರೂ ತಮಗೆ ಬರಬೇಕಾದ ಬೋನಸ್ ಹಣ ಬಾಕಿಯಿದ್ದಲ್ಲಿ ಪೂರ್ತಿ ದಾಖಲೆಯೊಂದಿಗೆ ಬರಹ ಮೂಲಕವಾಗಿ ತಾ|| 31-12-46 ನೇ ತಾರೀಖಿನ ಒಳಗಾಗಿ ಈ ಆಫೀಸಿಗೆ ತಲುಪುವಂತೆ ತಿಳಿಸತಕ್ಕದ್ದೆಂದು ಈ ಮೂಲಕ ಕೋರಲಾಗಿದೆ

(ಸಹಿ) ಟಿ. ಕೆ. ಕೃಷ್ಣಮೂರ್ತಿ

ಸ್ಪೆಷಲ್ ಆಫೀಸರಿಗಾಗಿ

ರಾಜಕಮಲ್, ಮೈಸೂರು

೨೦-೧೨-೪೬ ರಿಂದ ೬ ನೇ ಮತ್ತು ಕೊನೇ ವಾರ

ಡಾಕ್ಟರ್ ಕೊಟ್ನಿಸ್ ಕಿ ಅಮರ್ ಕಹಾನಿ.

ತಾರಾಗಣ:— ಜಯಶ್ರೀ, ಶಾಂತಾರಾಂ, ಇತರರು.

20-12-46 ರಿಂದ 7 ದಿನಗಳು ಪ್ರಾತಃಕಾಲ 10-30 ಕ್ಕೆ

ಬಾಂಬೆ ಟಾಕೀಸ್ ರವರ 'ಬಂಧನ್'

ಭೂಮಿಕೆ:- ಲೀಲಾ ಚಿಟ್ನಿಸ್, ಅಶೋಕ ಕುಮಾರ್.

(ಹೊಸ ಕಾಪಿ Brand New Print)

ಲೋಕ. ನಂ. 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಆಣೆ

ಸಂಪುಟ ೫] ಶುಕ್ರವಾರ ೨೦—೧೨—೪೬ [ಸಂಚಿಕೆ ೧೧೫

ಗೋವಾ ನಾಯಕರು ಪೋರ್ಚುಗಲ್ಲಿಗೆ ರವಾನೆ

...ಅಂಬೇಡ್ಕರರಿಗೆ ಬುದ್ಧಿ

...ಜಿನ್ನಾರವರ ಕಾಲಕ್ಕೆ ಸರಿಯಾಗಿ ...ಬಾರುತ್ತಿದ್ದ ಡಾ॥ ಅಂಬೇಡ್ಕರರಿಗೆ ...ನೋಡಿಯಬಾಗಿರುವಂತಿದೆ. ರಾ...ಸಭೆಯಲ್ಲಿ ಅವರು ಮಾಡಿರುವ ...ವೇ ಇದಕ್ಕೆ ಸಾಕ್ಷಿಯಾಗಿದೆ ...ರ ಕೊಟ್ಟರೆ ಮತ್ತು ತಕ್ಕ ಸಂದ...ಕಲ್ಪಿಸಿದರೆ ಈ ದೇಶವು ಒಂದಾ...ಉಳಿಯುವುದನ್ನು ಈ ಜಗತ್ತಿನಲ್ಲಿ ...ಶಕ್ತಿಯೂ ತಪ್ಪಿಸಲಾರದು, ನಮ್ಮಲ್ಲಿ ...ಭೇದಗಳಿದ್ದರೂ ಯಾವುದಾದ...ವಿಷಯದಲ್ಲಿ ನಮ್ಮ ಜನರು ಸಂ...ವ್ಯವಸ್ಥೆಯಲ್ಲೇ ಉಳಿಯುವರೆಂದು ...ಖಂಡಿತವಾಗಿ ಹೇಳಬಲ್ಲೆ ಎಂಬುದಾ...ಗಿ ತಿಳಿಸಿದ್ದಾರೆ. ಭಾರತವನ್ನು ವಿ...ಬೇಕೆಂದು ಲೀಗು ವಾದಿಸುತ್ತಿದ್ದ...ರೆ ಒಂದು ದಿನ ಲೀಗಿಗೆ ಜ್ಞಾನೋ...ಗಿ ಅಖಂಡ ಭಾರತವೇ ಮೇಲೆಂ...ರು ಭಾವಿಸುವುದೆಂದು ತಾವು ನಿಶ್ಚಂ...ದ ಹೇಳುವುದಾಗಿ ಅವರು ತಿಳಿಸಿ...

ಪರೂರವರ ಪ್ರಶಸ್ತಿ ಮ್ಯೂಸಿಯಮ್ಮಿಗೆ

...ವಿಶ್ವವಿದ್ಯಾಲಯದವರು ಪಂ॥ ನೆ...ರವರಿಗೆ ಮೊನ್ನೆ ಇತ್ತ ಡಾಕ್ಟರೇಟ್ ...ಯನ್ನು ಅವರು ಅಲ್ಲಿಯ ಕಲಾ ...ಪ್ರದರ್ಶನಾಲಯಕ್ಕೆ ಬಹುಮಾನ...ಇತ್ತಿದ್ದಾರೆ ಇದನ್ನು ನೋಡಲು ...ತಂಡೋಪತಂಡವಾಗಿ ಬರುತ್ತಿದ್ದಾ...ರಿಂದ ಒದಗುವ ಉತ್ಪತ್ತಿಯು ಕ...ಲೆಗೆ ಉಪಯೋಗಿಸಲ್ಪಡುವುದು

...ನೇ ವಿಶ್ವಸಂಗ್ರಾಮಕ್ಕೆ ಚೀಣವೇ ಕ್ಷೇತ್ರ

...ದಲ್ಲಿ ನಡೆಯುತ್ತಿರುವ ಅಂತರ್ಯು...ಕೂಡಲೇ ನಿಂತು ಶಾಂತಿ ನೆಲೆಸಲಿ ...ಮುಂದಿನ ಮೂರನೇ ಮಹಾಯು...ಚೀಣ ಕ್ಷೇತ್ರವಾಗುವುದರಲ್ಲಿ ಸಂದೇ...ವೆಂದು ಬರ್ಮಾ ಸರ್ಕಾರದ ಉ...ಕ್ಷರಾದ ಮಿ॥ ಯು ಅಂಗ್ ಸಾನರು ...ದ್ದಾರೆ

...ಲ್ಲಿ ಬೋರ್ಡ್ ವ್ಯವಹಾರ ತಮಿಳಿನಲ್ಲಿ

...ಂಗಲ್‌ಪಟ್ ಜಿಲ್ಲಾ ಬೋರ್ಡಿನ ಆ...ಪತ್ರ, ವ್ಯವಹಾರ ಮತ್ತು ಕಾರ್ಯ...ಗಳೆಲ್ಲಾ ತಮಿಳು ಭಾಷೆಯಲ್ಲಿಯೇ ...ಯಬೇಕೆಂದು ನಿರ್ಧರಿಸಲಾಗಿದೆ. ಸ...ಸ್ಯರು ಮತ್ತು ಉನ್ನತ ಅಧಿಕಾರಿಗಳಿ...ಬರೆಯುವ ಪತ್ರಗಳಿಗೆ ಈ ಆಜ್ಞೆ ಅ...ಗುವುದಿಲ್ಲವೆಂದು ಹೇಳಲಾಗಿದೆ

...ಂತ್ಯ ವರ್ಗೀಕರಣದ ಬಗ್ಗೆ ಹೊಸ ಸಲಹೆ

...ಪ್ರಾಂತ್ಯಗಳ ವರ್ಗೀಕರಣದ ಬಗ್ಗೆ ಡಿ॥ ...ತಾ॥ ಬ್ರಿಟಿಷ್ ಸರ್ಕಾರವು ಇತ್ತ ...ವಿವರಣೆಯನ್ನು ಕಾಂಗ್ರೆಸ್ಸು ನಿರಾಕ...ರಿಸುವುದು ಸಹಜವಾಗಿಯೇ ಇದೆ, ಈ ...ಯನ್ನು ಫೆಡರಲ್ ಕೋರ್ಟಿಗೆ ಒಪ್ಪಿ...ವಿಚಾರ ಹಾಸ್ಯಾಸ್ಪದವಾದದ್ದು ಆ...ದರಿಂದ ನಿಯೋಗದ ಪ್ರಸ್ತಾವನೆಯ ...(೫) ನೇ ನಿಯಮಕ್ಕೆ ಬದಲಾವಣೆಯ ...ಸೂಚಿಸಿ, ಪ್ರಾಂತ ಗುಂಪುಗಳಲ್ಲಿ ...ಪ್ಯಗಳ ಓಟೇ ಗಣನೆಗೆ ಬರಬೇಕೆಂ...ದ್ದೇಶವನ್ನು ಮಾಡಬೇಕೆಂದು ...ಎಸ್. ಗೋಪಾಲಸ್ವಾಮಯ್ಯಂಗಾರ್ ...ತಿಳಿಸಿದ್ದಾರೆ.

ಅಧೀನರ ಮೇಲೆ ಮೊಕದ್ದಮೆ

ಮೈಸೂರು ೨೦

ಮೈಸೂರು ಮೊದಲನೇ ಮುನಸೀಫ್ ಕೋರ್ಟಿನ ಅಧೀನರುಗಳಾದ ಶ್ರೀ ಕೆ. ವೆಂಕಟಕೃಷ್ಣಯ್ಯ ಮತ್ತು ಎಸ್. ರಂಗಸ್ವಾಮಿ ಅಯ್ಯಂಗಾರ್ ಎಂಬುವರು ಕಳೆದ ೨೫ ನೇ ತಾ॥ ಸಾಯಂಕಾಲ ದಿವಾನ್ ಶಂಕರಪಾಜೇ ಅರಸಿನವರ ಮಕ್ಕಳು ಸರ್ದಾರ್ ನರಸರಾಜೇ ಅರಸಿನವರ ಮನೆಗೆ ಹೋಗಿ ವಾರೆಂಟ್ ಒದಗಿದೆಯೆಂದು ಹೇಳಿ ೫೦ ರೂ ಲಂಚ ಕೇಳಿ ಗಲಾಟೆ ಮಾಡಿದರೆಂದು ನನೂದಿಸಿ ಸರ್ದಾರರು ಆ ಇಬ್ಬರ ಮೇಲೆ ನಗರ ನ್ಯಾಯಾಧೀಶರ ಮುಂದೆ ಮೊಕದ್ದಮೆ ಹೂಡಿದ್ದಾರೆ ಈ ಮೊಕದ್ದಮೆಯು ಇದೇ ೧೬ ನೇ ತಾ॥ ನ್ಯಾಯಾಧೀಶರ ಮುಂದೆ ಬಂದು ಜನವರಿ ೧೩ ನೇ ತಾ॥ ಗೆ ಮುಂದುವರಿಸಲ್ಪಟ್ಟಿದೆಯೆಂದು ತಿಳಿದುಬಂದಿದೆ

ಮಹಾಜನ ಹೈ ಸ್ಕೂಲು

ಮೇಲ್ಕಂಡ ಶಾಲೆಯ ನೂತನ ಕಟ್ಟಡದ ಪ್ರಾರಂಭೋತ್ಸವ ಮತ್ತು ಶಾಲಾ ದಿನೋತ್ಸವಗಳು ಇದೇ ತಿಂಗಳು ೨೧ ನೇ ಶನಿವಾರ ಮತ್ತು ೨೨ ನೇ ಭಾನುವಾರ ಭಾನುವಾರಗಳಲ್ಲಿ ಜರುಗುತ್ತದೆ. ಇದುವರೆಗೆ ಆಹ್ವಾನ ಪತ್ರಿಕೆಗಳು ತಲುಪದೇ ಇರತಕ್ಕ ಹಳೆಯ ವಿದ್ಯಾರ್ಥಿಗಳೂ, ಮತ್ತು ಹಿತೈಷಿಗಳೂ ಇದನ್ನೆ ಆಹ್ವಾನವೆಂದು ತಿಳಿದು ಮೇಲ್ಕಂಡ ಉತ್ಸವಗಳಿಗೆ ಬರಬೇಕಾಗಿ ಈ ಮೂಲಕ ಕೋರಲಾಗಿದೆ

ವಿದ್ಯಾರ್ಥಿ ಸಮ್ಮೇಳನ

ಈ ತಿಂಗಳು ೨೮ ನೇ ತಾ॥ ನಿಂದ ನಾಲ್ಕು ದಿನಗಳು ಅಖಿಲ ಭಾರತ ವಿದ್ಯಾರ್ಥಿ ಕಾಂಗ್ರೆಸ್ಸಿನ ಹತ್ತನೇ ವಾರ್ಷಿಕ ಸಮ್ಮೇಳನವು ದೆಹಲಿಯಲ್ಲಿ ನಡೆಯುತ್ತದೆ ೩೧ ನೇ ತಾ॥ ಸಂಸ್ಥಾನಗಳ ವಿದ್ಯಾರ್ಥಿ ಸಮ್ಮೇಳನವೂ ಅಲ್ಲಿ ನಡೆಯುವುದು ಇದರ ಜೊತೆಯಲ್ಲೇ ಏಷ್ಯಾ ಖಂಡದ ವಿದ್ಯಾರ್ಥಿಗಳ ಸಮ್ಮೇಳನವೂ ನಡೆ ಯುತ್ತದೆ ಪ್ರತಿನಿಧಿಗಳಾಗಿ ಹೋಗ ಬಯಸುವವರು ತಮ್ಮ ಹೆಸರುಗಳನ್ನು ವಿದ್ಯಾರ್ಥಿ ಕಾಂಗ್ರೆಸ್ ಕಛೇರಿಯಲ್ಲಿ ಕೊಡಬೇಕಾಗಿ ಕಾರ್ಯದರ್ಶಿ ಶಿವನಪ್ಪ ಭೂಪಾಲರು ಕೋರಿರುತ್ತಾರೆ

ಪ್ರದೋಷ ಸಂಗೀತ

ನಾಳಾ ಬೀದಿ ಶ್ರೀ ದೊಡ್ಡ ರಾಮ ದೇವಸ್ಥಾನದಲ್ಲಿ ಪ್ರದೋಷ ಪ್ರಯುಕ್ತ ಈ ದಿನ ರಾತ್ರಿ ವಿ॥ ಟಿ ಪುಟ್ಟಸ್ವಾಮಯ್ಯನವರ ಸಂಗೀತ ಕಛೇರಿ ಜರುಗುವುದು ಸರ್ವರಿಗೂ ಆಹ್ವಾನವುಂಟು

ನಾನ್ ಗೆಜೆಟೆಡ್ ನೌಕರರ ಬೇಡಿಕೆ

ಸ್ವಂ ವ ವರದಿಗಾರರಿಂದ] ಬೆಂಗಳೂರು ೨೦

ನಾನ್ ಗೆಜೆಟೆಡ್ ನೌಕರರ ಸಂಘದ ಸದಸ್ಯರು ನಿನ್ನೆ ಸಭೆ ನಡೆಸಿ ತಮ್ಮ ತುಟ್ಟಿ ಭತ್ಯವನ್ನು ಕೇವಲ ೫೦ ರಷ್ಟು ಹೆಚ್ಚಿಸಬೇಕೆಂದೂ, ಒದಗುವ ಜನವರಿಯಿಂದ ಹಂಗಾಮಿಯಾಗಿ ಒಂದೂವರೆಯಷ್ಟು ಪರಿಹಾರವನ್ನು ಕೊಡಬೇಕೆಂದೂ ಪ್ರಾರ್ಥಿಸಿ ನಿರ್ಣಯ ಮಾಡಿದರು.

ನವರತ್ನ ರಾಮರಾಯರ ಅರ್ಜಿ ಹೈಕೋರ್ಟಿನಲ್ಲಿ ವಜಾ

ಮೈಸೂರು ರೇಷ್ಮೆ ಕಾರ್ಖಾನೆಯ ಜನರಲ್ ಮ್ಯಾನೇಜರಾದ ಮಿ॥ ಅಬ್ದುಲ್ಲಾ ಮೆಕ್ಕೆಯವರು ಹೂಡಿರುವ ಮಾನ ನಷ್ಟದ ಮೊಕದ್ದಮೆಯಲ್ಲಿ ನಗರದ ಮೊದಲನೇ ಮ್ಯಾಜಿಸ್ಟ್ರೇಟರು ತಮ್ಮ ಮೇಲೆ ಛಾರ್ಜು ಮಾಡಿರುವುದನ್ನು ರದ್ದು ಮಾಡಬೇಕೆಂದು ಶ್ರೀ ನವರತ್ನ ರಾಮರಾಯರು ಹೈಕೋರ್ಟಿನಲ್ಲಿ ಹಾಕಿಕೊಂಡಿದ್ದ ಅರ್ಜಿಯನ್ನು ಜಸ್ಟಿಸ್ ಮೇದಪ್ಪನವರು ತಿರಸ್ಕರಿಸಿ ಇನ್ನೂ ಯಾವ ತೀರ್ಮಾನವೂ ಆಗಿಲ್ಲದಿರುವಾಗ ಹಾಗೆ ರದ್ದು ಮಾಡಲು ಕಾರಣವಿಲ್ಲವೆಂದು ತಿಳಿಸಿರುತ್ತಾರೆ

ರಾಜ ದಂಪತಿಗಳಿಗೆ ಭಾರತೀಯರ ಸ್ವಾಗತ ರದ್ದು

ದಕ್ಷಿಣ ಆಫ್ರಿಕಕ್ಕೆ ಬ್ರಿಟಿಷ್ ರಾಜ ದಂಪತಿಗಳು ಭೇಟಿ ಕೊಡುವಾಗ ಭಾರತೀಯರು ಜನಾಂಗದವರು ಸ್ವಾಗತಕ್ಕಾಗಿ ಮಾಡಿಕೊಂಡಿದ್ದ ಏರ್ಪಾಡುಗಳನ್ನು ರದ್ದುಗೊಳಿಸಬೇಕೆಂದು ದರ್ಬಾನಿನ ಸತ್ಯಾಗ್ರಹ ಸಮಿತಿಯವರು ಸೂಚಿಸಿದ್ದಾರೆ

ಶಾಲೆಗೆ ರಜಾ

ಮೈಸೂರು ೨೦

ಗಲಭೆಯಾಗಬಹುದೆಂಬ ಶಂಕೆಯಿಂದ ಶಾಲೆಗೆ ರಜ ಕೊಡಬೇಕೆಂದು ವಿದ್ಯಾರ್ಥಿನಿಯರು ಪ್ರಾರ್ಥಿಸಿಕೊಂಡ ಮೇರೆ ಮಹಾರಾಣಿ ಹೈಸ್ಕೂಲ್ ಮತ್ತು ಮಿಡಲ್ ಸ್ಕೂಲುಗಳನ್ನು ಈ ದಿನ ಮಧ್ಯಾಹ್ನ ೧೨-೩೦ ಗಂಟೆ ಮೇಲೆ ಮುಚ್ಚಲಾಯಿತು

ಮೈಸೂರಿಗೆ ಬ್ರೆಜಿಲ್ ಆಕ್ಕಿ

೧೮೭೦ ಟನ್ ಬ್ರೆಜಿಲ್ ಅಕ್ಕಿಯು ನೆಲ್ಲೂರಿನಿಂದ ಒಂದು ಹಡಗು ಮದ್ರಾಸ್ ಬಂದರಿನಲ್ಲಿ ಬಂದಿಳಿದಿದೆ ಈ ಅಕ್ಕಿ ಮೈಸೂರಿಗೆ ವಿನಿಯೋಗಿಸಲಾಗಿದೆ

ಪೋರ್ಚುಗಲ್ಲಿಗೆ ಗೋವಾ ನಾಯಕರ ರವಾನೆ

ನಾಗರಿಕ ಹಕ್ಕು ಬಾಧ್ಯತೆಗಳಿಗಾಗಿ ಗೋವಾದಲ್ಲಿ ನಡೆಯುತ್ತಿರುವ ಸತ್ಯಾಗ್ರಹ ಚಳುವಳಿಯಲ್ಲಿ ಭಾಗ ವಹಿಸಿದ್ದು ಕಠಿಣ ಶಿಕ್ಷೆಗೆ ಗುರಿಯಾಗಿರುವ ಡಾ॥ ರಾಮರಾವ ಹೆಗ್ಗಡೆ, ಕಾಕೋಡಕರ, ಲೊಯೊಲೊ ಮತ್ತು ಚಿಂದ್ರೆಯವರನ್ನು ಬಾರ್ತಲೆವ ಡ್ಯಾ. ಎಂಬ ಹಡಗಿನಲ್ಲಿ ಪೋರ್ಚುಗಲ್ಲಿಗೆ ಕಳಿಹಿಸಲಾಗಿದೆಯೆಂದು ವರದಿಯಾಗಿದೆ. ನಿನ್ನೆಯಿಂದ ಗೋವೆಯ ೨೫ ಹಳ್ಳಿ ಮತ್ತು ಪಟ್ಟಣಗಳಲ್ಲಿ ಸಾಮೂಹಿಕ ಸತ್ಯಾಗ್ರಹವು ಪ್ರಾರಂಭವಾಗಿದೆ

ಚನ್ನಪಟ್ಟಣದಲ್ಲಿ ಹಿಂದೂ-ಮುಸ್ಲಿಂ ಕಲಹ

ಸರ್ಕಾರದ ವಿವರಣೆ

ಬೆಂಗಳೂರು. ೨೦.

ಕಳೆದ ೧೬ನೇ ತಾ॥ ಸೋಮವಾರ ಚನ್ನಪಟ್ಟಣದಲ್ಲಿ ಹಿಂದೂ-ಮುಸ್ಲಿಂ ಕಲಹ ನಡೆದ ಬಗ್ಗೆ ಸರ್ಕಾರ ಪ್ರಕಟಣೆ ಈ ರೀತಿ ಹೊರ ಬಿದ್ದಿದೆ :- ಮೈಸೂರು ಕಾಂಗ್ರೆಸ್ ಅಧ್ಯಕ್ಷರ ಮೆರವಣಿಗೆಯನ್ನು ಮಾಮೂಲಿಗೆ ವಿರೋಧವಾಗಿ ಮುಸ್ಲಿಂ ಕ್ಷೇತ್ರದೊಳಕ್ಕೆ ತೆಗೆದುಕೊಂಡುಹೋಗಕೂಡದೆಂದು ಮುಸ್ಲಿಮರು ತಡೆದರು. ಆದರಂತೆ ಮೆರವಣಿಗೆ ಹಿಂದಿರುಗಿತು.

ಮುಸ್ಲಿಂ ಗುಂಪೊಂದು ಹಿಂತಿರುಗುತ್ತಿದ್ದ ರಥವನ್ನು ತಡೆದು ಅದನ್ನು ನಷ್ಟಪಡಿಸಿತು ಎತ್ತೊಂದನ್ನು ಇರಿಯಿತು, ಹಿಂದೂಗಳು ಮುಸ್ಲಿಂ ಅಂಗಡಿಗಳನ್ನು, ಮುಸ್ಲಿಮರು ಹಿಂದೂ ಅಂಗಡಿಗಳನ್ನು ಲೂಟಿ ಮಾಡಿದರು ಎರಡು ಗುಂಪುಗಳೂ ಕಲ್ಲಿನಲ್ಲಿ ಹೊಡೆದಾಡಿದವು ಪೋಲೀಸರು ಆತ್ಮರಕ್ಷಣೆಗಾಗಿ ಗುಂಡು ಹಾರಿಸಿದರು. ಪೋಲೀಸ್ ಇನ್ಸ್ಪೆಕ್ಟರ ಮತ್ತು ಹಲವು ಪೋಲೀಸರಿಗೆ ಗಾಯಗಳಾದವು ಮತ್ತೊಮ್ಮೆ ಪೋಲೀಸರು ೧೩ ಗುಂಡು ಹಾರಿಸಿದರು ಇದರಿಂದ ಒಬ್ಬನು ಸ್ಥಳದಲ್ಲೇ ಸತ್ತು ಹೋದನು

ಉಭಯ ಕೋಮಿನ ಮುಖಂಡರು ಗುಂಪನ್ನು ತಡೆಯಲು ಪ್ರಯತ್ನ ಪಟ್ಟು ವಿಫಲರಾದರು ಆಗ ಮತ್ತೆ ಪೋಲೀಸರು ಗುಂಡು ಹಾರಿಸಿದರು ಮತ್ತೊಬ್ಬ ಸತ್ತು ಹೋದನು. ಮುಸ್ಲಿಂ ಗುಂಪಿನ ಒಂದು ಭಾಗ ಹೈಸ್ಕೂಲಿಗೆ ನುಗ್ಗಿತು ಶಾಲಾ ವಿದ್ಯಾರ್ಥಿಗಳನ್ನು ರಕ್ಷಿಸಲು ಬಂದ ಮುಖ್ಯೋಪಾಧ್ಯಾಯರು ಕೊಲೆ ಮಾಡಲ್ಪಟ್ಟರು. ಹಿಂದೂಗಳ ಗುಂಪು ಬಡಾವಣೆ ಕಡೆಗೆ ಹೋಗಿ ಮುಸ್ಲಿಂ ಮನೆಗಳ ಲೂಟಿ ನಡೆಸಿತು. ಕೋಟೆ ಬಜಾರಿನಲ್ಲಿ ಮುಸ್ಲಿಂ ಅಂಗಡಿಗಳನ್ನು ಹಿಂದೂಗಳು ಲೂಟಿ ಮಾಡುತ್ತಿದ್ದಾಗ ಪೋಲೀಸರು ಆನೇ ಬಾರಿ ಗುಂಡುಹಾರಿಸಿ ಗುಂಪನ್ನು ಚದುರಿಸಿದರು

ಸುದ್ದಿ ತಿಳಿದ ತಕ್ಷಣವೇ ಪ್ರಮುಖ ಅಧಿಕಾರಿಗಳೆಲ್ಲಾ ಸ್ಥಳಕ್ಕೆ ಧಾವಿಸಿ ಬಂದರು ಶಸ್ತ್ರ ಸೈನಿಕರನ್ನು ಕಳಿಸಲಾಯಿತು. ಒಟ್ಟು ೪ ಮಂದಿ ಸತ್ತಿದ್ದಾರೆ ೧೧ ಮಂದಿ ಪೋಲೀಸ್, ಅಧಿಕಾರಿಗಳೂ ಸೇರಿ ೮೨ ಮಂದಿ ಗಾಯಗೊಂಡಿದ್ದಾರೆ ಶಾಂತಿ ಸಮಿತಿ ರಚನೆಯಾಗಿ ಕಾರ್ಯಾರಂಭವಾಗಿದೆ ಈಗ ಪರಿಸ್ಥಿತಿ ಶಾಂತವಾಗಿದೆ ಅಂಗಡಿ ಬಾಗಿಲು ತೆರೆಯಲ್ಪಡುತ್ತಿವೆ ನಗರದ ೧೧ ಮೈಲಿ ಫಾಸಲೆಯೊಳಗಿರುವ ಎಲ್ಲಾ ಬಂದೂಕ ಮತ್ತು ಪಿಸ್ತೂಲುಗಳ ಲೈಸೆನ್ಸನ್ನು ವಾಪಸು ತೆಗೆದುಕೊಳ್ಳಲಾಗಿದೆ ಪ್ರತಿಬಂಧಕಾಜ್ಞೆ ಜಾರಿಯಲ್ಲಿದೆ

ಸಾಧ್ವಿ

ತಾ|| ೨೦-೧೨-೪೬ ಶುಕ್ರವಾರ

ಪಡಿತರದ ಪ್ರಕರಣ

ರೇಷನ್ ಪ್ರದೇಶಗಳಲ್ಲಿರುವ ಜಮೀನುದಾರರುಗಳ ಕಷ್ಟದ ವಿಚಾರವಾಗಿ ನಿನ್ನೆ ದಿನ ಸ್ವಲ್ಪ ಮಟ್ಟಿಗೆ ಬರೆದಿದ್ದೆವಷ್ಟೆ. ಇದಿಗೆ ಇನ್ನು ಕೆಲವು ತೊಂದರೆಗಳ ವಿವರಗಳು ವರದಿಯಾಗಿವೆ.

ರೇಷನ್ ಕಾರ್ಡುಗಳಲ್ಲಿ ಕಳೆದ ವರ್ಷದ ಲೆಖ್ಖವನ್ನು ದಾಖಲು ಮಾಡಿಸುವುದಕ್ಕಾಗಿ ಅವುಗಳನ್ನು ರೇಷನ್ ಕಛೇರಿಗೆ ಕೊಟ್ಟ ಮೇಲೆ ಒಂದೊಂದು ಕಾರ್ಡಿನಲ್ಲಿ ಒಂದೊಂದು ಬಗೆಯಾಗಿ ಬರೆದಿರುವುದಾಗಿ ತಿಳಿದು ಬಂದಿದೆ. ಹೊಸ ವರ್ಷಕ್ಕೆ ಪಡಿತರವನ್ನು ಕೊಡುವಾಗ ಹಳೆಯ ವರ್ಷದ ಬಾಕಿಯನ್ನು ಗಣನೆಗೆ ತೆಗೆದುಕೊಳ್ಳದೆ ಒಂದೂಕಾಲು ಪಾವು ಅಕ್ಕಿಯಂತೆ ಹಲವು ಸಂದರ್ಭಗಳಲ್ಲಿ ಲೆಖ್ಖ ಹಾಕಲಾಗಿದೆ. ಅದರಂತೆ ಕಾರ್ಡುಗಳನ್ನು ಬರೆದುಕೊಟ್ಟು ಹೊಸ ಫಸಲನ್ನು ತರುವುದಕ್ಕೆ ಬೇಕಾದ ಪರ್ಮಿಟ್ಟಿನ ಬಗ್ಗೆ ಸರ್ಟಿಫಿಕೇಟುಗಾಗಿ ಕಾರ್ಡುಗಳನ್ನು ಮತ್ತೆ ಕೊಟ್ಟಾಗ ಕಳೆದ ಸಾಲಿನ ಲೆಖ್ಖವನ್ನು ಒಂದು ಪಾವಿಗೆ ಇಳಿಸಿರುವುದಾಗಿ ತಿಳಿದು ಬಂದಿದೆ. ಇದರಿಂದ ಒಂದೆರಡು ತಿಂಗಳ ದಾಸ್ತಾನನ್ನು ಹೆಚ್ಚಾಗಿ ಬರೆದಂತಾಗಿದೆ.

ಹಲವು ಸಂದರ್ಭಗಳಲ್ಲಿ ಈ ರೀತಿ ಬದಲಾಯಿಸಿ ಬರೆದಿರುವುದಿಲ್ಲ. ಬೇಗನೆ ಸರ್ಟಿಫಿಕೇಟುಗಳನ್ನು ಪಡೆದವರಿಗೆ ಬದಲಾಯಿಸಿರುವುದಿಲ್ಲ. ಸ್ವಲ್ಪ ನಿಧಾನವಾಗಿ ತೆಗೆದುಕೊಂಡವರಿಗೆ ಬದಲಾಯಿಸಿರುವುದಾಗಿ ತಿಳಿದು ಬಂದಿದೆ. ಕೇವಲ ಎರಡು ಮೂರು ದಿನಗಳಲ್ಲಿ ಇಷ್ಟು ದೊಡ್ಡ ಬದಲಾವಣೆಯನ್ನು ಮಾಡಲು ಕಾರಣವೇನೋ ತಿಳಿಯದು.

ನಿನ್ನೆಯೇ ನಾವು ಬರೆದಿರುವಂತೆ ಎರಡು ಮೂರು ತಿಂಗಳಿಗೆ ಆಗುವಷ್ಟು ಧಾನ್ಯವು ಇರಬೇಕೆಂದು ಕಾರ್ಡಿನಲ್ಲಿ ಬರೆದು ಬಿಟ್ಟರೆ ಇಲ್ಲದ ಧಾನ್ಯವು ಒದಗುವುದಿಲ್ಲ, ಅಥವಾ ಬರೆಯದಿದ್ದರೆ ಇರುವುದು ಹೋಗುವುದಿಲ್ಲ. ಇದರಲ್ಲಿ ಅಧಿಕಾರಿಗಳು ಗಮನಿಸಬೇಕಾದ ಅಂಶವು ಇಷ್ಟೇ. ಮೊದಲು ಒಂದೂಕಾಲು ಪಾವಿನಂತೆ ಅವಕಾಶ ಕೊಟ್ಟಾಗ ಅಷ್ಟನ್ನೂ ಪೂರ್ತಿಯಾಗಿ ಉಪಯೋಗಿಸುವುದು ಜನರಿಗೆ ಸಹಜವಾದ ಕ್ರಮವಾಗಿದೆ. ಅನಂತರ ಒಂದು ಪಾವಿಗೆ ಇಳಿಸಿದಾಗ ಅದಕ್ಕೆ ಅನುಗುಣವಾಗಿ ಅನುಸರಿಸುವುದು ಕಷ್ಟಸಾಧ್ಯವಾದ ಕೆಲಸ. ಒಂದೂಕಾಲು ಪಾವಿನಂತೆ ಉಪಯೋಗಿಸುವ ಅಭ್ಯಾಸ ಹೊಂದಿದ್ದವರು ಮನೆಯಲ್ಲಿ ಧಾನ್ಯದ ದಾಸ್ತಾನು ಇರುವಾಗ ತಮ್ಮ ಊಟದ ಪ್ರಮಾಣವನ್ನು ಹಠಾತ್ತಾಗಿ ಕಡಮೆ ಮಾಡಿಕೊಳ್ಳುವುದು ಅಸಂಭವ. ಎಂದಿನಂತೆಯೇ ಅವರು ಧಾನ್ಯವನ್ನು ಬಳಸಿರುತ್ತಾರೆ.

ಕೆಲವು ದಿನಗಳನಂತರ ಪಡಿತರವು ಮುಕ್ಕಾಲು ಪಾವಿಗೆ ಇಳಿದ ಮೇಲಂತೂ ಪಡಿತರದ ವಿನಿಯೋಗದಲ್ಲಿ ಅಲ್ಲೋಲ ಕಲ್ಲೋಲವೇ ಆಗಿರುತ್ತದೆ. ಪ್ರತಿ ದಿನವೂ ರೇಷನ್ ಅಂಗಡಿಯಿಂದ ಧಾನ್ಯವನ್ನು ತಂದು ಉಪಯೋಗಿಸುವವರ ವಿಷಯವು ಒಂದು ರೀತಿಗೆ ಒಳಪಟ್ಟಿರುತ್ತದೆ. ಮನೆಯಲ್ಲಿ ವರ್ಷಕ್ಕೆ ಆಗುವ ದವಸವನ್ನು ಇಟ್ಟುಕೊಂಡಿರುವವರು ಅಷ್ಟು ಕಟ್ಟುನಿಟ್ಟಾಗಿ ಅದನ್ನು ಉಪಯೋಗಿಸುವುದು ಸಾಧ್ಯವಿಲ್ಲ. ಅದರಲ್ಲಿ ಸ್ವಲ್ಪ ಹೆಚ್ಚು ಕಡಿಮೆಗಳು ಆಗಿಯೇ ಆಗುತ್ತವೆ.

ವೆಚ್ಚವಾಗಿ ಹೋದ ಧಾನ್ಯವನ್ನು ಬರುವ ತಿಂಗಳಿಗೂ ವಜಾ ಹಾಕುವುದಾಗಿ ಹೇಳುವ ನೀತಿಯಿಂದ ಜನರಿಗೆ ಅತ್ಯಂತ ತೊಂದರೆಯುಂಟಾಗುತ್ತಿದೆ. ಕಳೆದು ಹೋದ ಕಾಲದ ಪಡಿತರದ ಪ್ರಮಾಣದ ವಿಷಯದಲ್ಲಿ ಉದಾರವಾದ ನೀತಿಯನ್ನು ಅನುಸರಿಸಬೇಕೆಂಬುದೇ ನಮ್ಮ ಕೋರಿಕೆ. ಅವಶ್ಯವಿದ್ದರೆ ಈಗ ಹಾಲಿ ರೇಷನ್ ಕಾರ್ಡು ಹೋಲ್ಡರುಗಳಲ್ಲಿರುವ ನಿಖರವಾದ ದಾಸ್ತಾನಿನ ಪ್ರಮಾಣವನ್ನು ಅಜಮಾಯಿಷಿ ಮಾಡಲು ಸಕಲ ವ್ಯವಸ್ಥೆಗಳನ್ನೂ ಮಾಡಬಹುದು. ದಾಸ್ತಾನು ಇಲ್ಲದವರಿಗೆ ಮುಂದಿನ ವರ್ಷದ ಪಡಿತರವನ್ನು ಪೂರ್ತಿಯಾಗಿ ಕೊಡುವುದಿಲ್ಲವೆಂದು ಹೇಳುವುದು ಉಚಿತವಲ್ಲ. ಒಂದು ವೇಳೆ ಅಜಾಗರೂಕತೆಯಿಂದಲೂ, ಅನಿವಾರ್ಯವಾಗಿಯೂ ಕಳೆದ ವರ್ಷ ಹೆಚ್ಚು ಧಾನ್ಯವನ್ನು ಉಪಯೋಗಿಸಿದ್ದವರಿಗೂ, ಬರುವ ವರ್ಷದಲ್ಲಿ ಶಿಕ್ಷೆಯ ರೂಪವಾಗಿ ಪಡಿತರದಲ್ಲಿ ಮೋಸ ಮಾಡುವುದು ಸೂಕ್ತವಲ್ಲ. ಆದುದರಿಂದ ಹೊಸ ವರ್ಷಕ್ಕೆ ಪೂರ್ತಿಯಾಗಿ ಎಲ್ಲರಿಗೂ ಪಡಿತರವನ್ನು ಕೊಡುವಂತೆ ಏರ್ಪಡಿಸಬೇಕೆಂದು ನಾವು ಸರ್ಕಾರದವರಲ್ಲಿ ಒತ್ತಾಯ ಪೂರ್ವಕವಾಗಿ ಕೋರುತ್ತೇವೆ.

ಕಾಂಗ್ರೆಸ್ಸಿನ ನಾಲ್ಕಾಣೆ ಸದಸ್ಯತ್ವ ಉಳಿಯುವುದು

ಕಾಂಗ್ರೆಸ್ ಸದಸ್ಯರಾಗಲು ಇನ್ನು ಮುಂದೆ ನಾಲ್ಕಾಣೆಯನ್ನು ಕೊಡಬೇಕಾದ್ದಿಲ್ಲವೆಂದೂ, ಕಾಂಗ್ರೆಸ್ ತತ್ವವನ್ನು ಒಪ್ಪುವ ಪ್ರಾಪ್ತ ವಯಸ್ಕರೆಲ್ಲರೂ ಸದಸ್ಯರಾಗಬಹುದೆಂದೂ ಕಾಂಗ್ರೆಸ್ ರಚನಾವಳಿಯ ಉಪಸಮಿತಿಯು ಈ ಹಿಂದೆ ಶಿಫಾರಸು ಮಾಡಿದ್ದಿತು. ಆದರೆ ಸದರಿ ಸಮಿತಿಯು ಸಭೆಯು ಮೊನ್ನೆ ದಿನ ದೆಹಲಿಯಲ್ಲಿ ಜರುಗಿ, ಈಗಿರುವಂತೆಯೇ ಕಾಂಗ್ರೆಸ್ ಸದಸ್ಯರಾಗಿ ಬರುವವರು ನಾಲ್ಕಾಣೆ ಶುಲ್ಕ ಕೊಡಬೇಕೆಂದು ನಿರ್ಧರಿಸಿದೆ.

ನೌಖಾಲಿಗೆ ವೈದ್ಯರು

ಪೂರ್ವ ಬಂಗಾಳದ ನೌಖಾಲಿ ನಿರಾಶ್ರಿತರಿಗೆ ವೈದ್ಯ ಸಹಾಯ ನೀಡಲು ಬೊಂಬಾಯಿ ನಾಲ್ವರು ಡಾಕ್ಟರುಗಳು ಮಾರ್ವಾಡಿ ಪರಿಹಾರ ಸಮಿತಿ ಆಶ್ರಯದಲ್ಲಿ ಅಲ್ಲಿಗೆ ತೆರಳಿದ್ದಾರೆ.

ವರ್ಗೀಕರಣಕ್ಕೆ ಅಸ್ಸಾಂ ಒಪ್ಪಕೂಡದು

ರಾಜ್ಯಾಂಗ ಸಭೆಯು ೩ ಗುಂಪುಗಳಾಗಿ ಸೇರಿ ಪ್ರಾಂತ್ಯಗಳ ವರ್ಗೀಕರಣಕ್ಕೆ ತೊಡಗುವ ವೇಳೆಗೆ ಅ[illegible] ಪ್ರಾಂತ್ಯವು ಆ ಸಭೆಗೆ ನಮಸ್ಕಾರ ಹೊಡೆದು ಬರಬೇಕೆಂದು ಗಾಂಧಿಜಿ[illegible] ಸಲಹೆ ಇತ್ತಿದ್ದಾರೆ. ಗಾಂಧಿಜಿಯವ[illegible] ಬಗ್ಗೆ ೪ ಪುಟಗಳುಳ್ಳ ದೀರ್ಘವಾದ [illegible]ವನ್ನು ಅಸ್ಸಾಂ ಪ್ರಧಾನಿ ಶ್ರೀ ಬಾರ್ಡೊಲಾಯ್‌ರವರಿಗೆ ಕಳುಹಿಸಿದ್ದಾರೆ.

ಇಂಗ್ಲೆಂಡಿಗೆ ಎರಡನೇ ಭಾರಿ ಸೋಲು

ಆಸ್ಟ್ರೇಲಿಯಾವು ಇಂಗ್ಲೆಂಡನ್ನು ೨ನೇ ಟೆಸ್ಟ್ ಪಂದ್ಯದಲ್ಲಿ ನಿನ್ನೆ ದಿನ ಒಂದು ಇನ್ನಿಂಗ್ಸ್ ಮತ್ತು ೩೩ ರನ್ನುಗಳಿಂದ ಸೋಲಿಸಿತು. ಮೊದಲನೆ ಟೆಸ್ಟ್ ಪಂದ್ಯದಲ್ಲೂ ಇಂಗ್ಲೆಂಡಿಗೆ ಭಾರಿ ಸೋಲು ಉಂಟಾಯಿತು. ೩ನೇ ಟೆಸ್ಟ್ ಪಂದ್ಯವು ಮೆಲ್ಬೋರ್ನಿನಲ್ಲಿ ಜನವರಿ ೧ ರಿಂದ ಆರಂಭವಾಗುವುದು.

ಆಪೆರಾ ಟಾಕೀಸ್

ತಾ|| 20-12-46 ರಿಂದ

ಪ್ರತಿದಿನ ಮೂರು ಆಟಗಳು

ನಾರದ-ನಾರದಿ

(ತೆಲುಗು ಭಾಷೆ)

ಸೂರಿ ಬಾಬು, ಉಮಾ ಮಹೇಶ್ವರ ರಾವ್, ಲಕ್ಷ್ಮೀರಾಜ್ಯಂ, ಸೌದಾಮಿಣಿ.

Morning shows from 20-12-46

UTAH

With

Roy Rogers & George Hayer

Edited, printed and published by A. R. Nagarajan at the Sadhvi Press, D Subbiah Road, Mysore.

NOTICE

The undersigned wishes to inform the public as follows:-

(1) Attention of the public is drawn to the public notice published in "Tamil Nadu," dated 26-11-1946.

(2) That he is absolute owner of the properties, i

(a) House No. 3 Lakshmivilas, Agrahar, Devaraja Mohalla Mysore, and that he is in possession of the same and

(b) The Land Survey No 40, Hejjige Village, Nanjangud Taluk and that he is in possession of the same.

A. S. Rangaswamiengar

ರಣಜಿತ್

20-12-46 ರಿಂದ

ಅನ್ಮೋಲ್ ಘಡಿ

ಪಾತ್ರ:- ಸುರೇಂದ್ರ, ಸುರಯ್ಯ ಮತ್ತು ನೂರ್‌ಜಹಾನ್

ಪ್ರತಿ ದಿನ ಮೂರು ಆಟಗಳು

ರಾಜಕಮಲ್, ಮೈಸೂರು

೨೦-೧೨-೪೬ ರಿಂದ ೬ ನೇ ಮತ್ತು ಕೊನೇ ವಾರ

ಡಾಕ್ಟರ್ ಕೊಟ್ನಿಸ್ ಕಿ ಅಮರ್ ಕಹಾನಿ

ತಾರಾಗಣ:— ಜಯಶ್ರೀ, ಶಾಂತಾರಾಂ, ಇತರರು.

20-12-46 ರಿಂದ 7 ದಿನಗಳು ಪ್ರಾತಃಕಾಲ 10-30ಕ್ಕೆ

ಬಾಂಬೆ ಟಾಕೀಸ್ ರವರ "ಬಂಧನ್"

ಭೂಮಿಕೆ:- ಲೀಲಾ ಚಿಟ್ನಿಸ್, ಅಶೋಕ್ ಕುಮಾರ್.

(ಹೊಸ ಕಾಪಿ, Brand New Print)

ಶೀಘ್ರದಲ್ಲಿಯೇ ನಿಮ್ಮ ಮೆಚ್ಚಿನ ನ್ಯೂ ಇಂಪೀರಿಯಲ್ ಟಾಕೀಸಿನಲ್ಲಿ ಬರುವ ತಾರೀಖನ್ನು ಗಮನಿಸಿರಿ

ತಮಿಳುನಾಡು ಟಾಕೀಸ್‌ರವರ

...........ಸುಪ್ರಸಿದ್ಧ ಪೌರಾಣಿಕ ಚಿತ್ರ...........

ಮೋಹಿನಿ

ರುಕ್ಮಾಂಗದ

(ತಮಿಳು ಭಾಷೆ)

ಎಸ್. ಎಸ್. ವಿಜಯಾಳ್, ಸಿ. ಬಿ. ರಂಗಾಚಾರ್ ಕೆ. ಬಿ. ಶಾರದಾಂಬಾಳ್, ವಿದ್ವಾನ್ ಶ್ರೀನಿವಾಸನ್, ಎಂ. ಆರ್. ಸುಬ್ರಹ್ಮಣ್ಯಂ ಮತ್ತು ಇತರರು ನಟಿಸಿರುವರು

ನಿರ್ದೇಶಕರು:- ಎಸ್. ಸೌಂದರ್‌ರಾಜನ್ : ಸ್ಟುಡಿಯೋ:- ರಣಜಿತ್-ಬೊಂಬಾಯಿ

For Bookings to :- Mysore State, South Canara & Coorg

Apply to :- SRI MAHALAKSHMI PICTURES,

No 8, Hospital Road, Bangalore City.

ನಾರ್ಗಾರ್ಡ್ ಫೈರ್ ಮತ್ತು ಜನರಲ್

ಇನ್ಷೂರೆನ್ಸ್ ಕಂ. ಲಿ., ಹೆಡ್ ಆಫೀಸ್: ಮದ್ರಾಸು

ಇಂಡಿಯಾ ಮತ್ತು ಸಿಲೋನಿನಲ್ಲೆಲ್ಲಾ ಶಾಖೆಗಳಿವೆ.

ಸರ್ವ ವ್ಯಾಪಾರಸ್ಥರೇ,

ದರೋಡೆ, ಲೂಟಿ, ಕಳ್ಳತನಗಳಿಂದ ಪಾರಾಗಬೇಕೇನು?

ಈ ಕೂಡಲೇ ಅದರ ಬಗ್ಗೆ ನಮ್ಮಲ್ಲೊಂದು ಪಾಲಿಸಿ ಪಡೆಯಿರಿ.

ವಿವರಗಳಿಗೆ:- ಎಂ. ಸಿ. ಸಂಪತ್ತಯ್ಯಂಗಾರ್,

ಸ್ಪೆಷಲ್ ರೆಪ್ರೆಸೆಂಟೆಟಿವ್, ನಾರ್ಗಾರ್ಡ್ ಫೈರ್ ಮತ್ತು ಜನರಲ್ ಇನ್ಷೂರೆನ್ಸ್ ಕಂ. ಲಿಮಿಟೆಡ್, ಲಕ್ಷ್ಮೀಪುರ ಅಗ್ರಹಾರ, ಮೈಸೂರು.

ಕೋ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶನಿವಾರ ೨೧—೧೨—೪೬ [ಸಂಚಿಕೆ ೧೧೬

ಮಿತ್ರ ಸೈನಿಕರು ಬೋಸರನ್ನು ಕೊಂದರೆ?

ಚನ್ನಪಟ್ಟಣದ ಬಗ್ಗೆ ಪೌರಸಭೆಯ ಸಂತಾಪ

ಮೈಸೂರು ೨೧

ನಿನ್ನೆ ನಡೆದ ಪೌರಸಭೆಯ ವಿಶೇಷ ಅಧಿವೇಶನದಲ್ಲಿ ಚನ್ನಪಟ್ಟಣದ ದುರಂತದ ಬಗ್ಗೆ ಸಂತಾಪ ಸೂಚಿಸುವ ನಿರ್ಣಯವನ್ನು ಮಾಡಿ ಆ ದಿನ ಪರಿಶೀಲಿಸಬೇಕಾಗಿದ್ದ ಪೌರಸಭೆಯ ಆಡಳಿತ ವರದಿಯ ವಿಚಾರವನ್ನು ೨೬ನೇ ತಾ॥ಗೆ ಮುಂದುವರಿಸಲಾಯಿತು. ಚನ್ನಪಟ್ಟಣದಲ್ಲಿ ನಡೆದ ಗಲಭೆಯಲ್ಲಿ ತೊಂದರೆಗಾಗಿ ಸಭೆಯು ತನ್ನ ಸಂತಾಪವನ್ನು ವ್ಯಕ್ತಪಡಿಸುವುದಲ್ಲದೆ ಅವರ ಬಂಧುವರ್ಗದವರಿಗೆ ಅನುತಾಪವನ್ನು ಸೂಚಿಸಿ ಇನ್ನು ಮುಂದೆ ಇಂತಹ ಗಲಭೆಗಳು ಸಂಭವಿಸದೆ ಸಂಸ್ಥಾನದಲ್ಲಿ ಶಾಂತಿ ಸೌಹಾರ್ದ ನೆಲೆಸ ನಂತೆ ಅನುಗ್ರಹಿಸಲೆಂದು ಪರಮಾತ್ಮನನ್ನು ಪ್ರಾರ್ಥಿಸುವ ನಿರ್ಣಯವನ್ನು ಶ್ರೀ ಅಗರಂ ರಂಗಯ್ಯನವರು ಮಂಡಿಸಿದರು. ಶ್ರೀ ಪಿ. ಸೀತಾರಾಮಯ್ಯನವರು ಅನುಮೋದಿಸಿದರು. ಶ್ರೀ ಜನಾರ್ದನ ಅಯ್ಯಂಗಾರರು ಬೆಂಬಲಿಸಿದರು. ಎಲ್ಲರೂ ಎದ್ದುನಿಂತು ನಿರ್ಣಯವನ್ನು ಅಂಗೀಕರಿಸಿದರು. ಈ ಸಭೆಯಲ್ಲಿ ಹಿಂದೆಯೇ ನಿರ್ಣಯ ಮಾಡಿರುವಂತೆ ರಾಜಧಾನಿಯಲ್ಲಿ ಕೋಮುವಾರು ಶಾಂತಿಯನ್ನು ಸ್ಥಾಪಿಸಲು ಶಾಂತಿ ಸಮಿತಿಗಳನ್ನು ರಚಿಸಬೇಕೆಂದು ಸದಸ್ಯರು ಸೂಚಿಸಿದರು.

ಶಾಂತಿ ಸೇನೆ

ನಿನ್ನೆ ಸಂಜೆ ವಿದ್ಯಾರ್ಥಿ ಕಾಂಗ್ರೆಸ್ ಕಚೇರಿಯಲ್ಲಿ ರಾಷ್ಟ್ರಸೇವಾ ದಲದ ಸಲಹಾ ಸಮಿತಿಯು ಸಭೆಸೇರಿ ಮೈಸೂರು ನಗರದಲ್ಲಿ ಕರ್ನಾಟಕ ರಾಷ್ಟ್ರಸೇವಾ ದಲದ ಆಶ್ರಯದಲ್ಲಿ ಒಂದು ಶಾಂತಿ ಸೇನೆಯನ್ನು ಸ್ಥಾಪಿಸಬೇಕೆಂದೂ, ಅದಕ್ಕೆ ನಾಗರಿಕರ, ಸಂಘ, ಸಂಸ್ಥೆಗಳ ಮತ್ತು ವೈದ್ಯರುಗಳ ಸಹಕಾರ ಕೋರಬೇಕೆಂದೂ ನಿರ್ಣಯವನ್ನು ಮಾಡಿತು. ಶಾಂತಿ ಸೇನೆಗೆ ಸೇರಲಿಚ್ಛಿಸುವವರು ತಮ್ಮ ಹೆಸರುಗಳನ್ನು ವಿದ್ಯಾರ್ಥಿ ಕಾಂಗ್ರೆಸ್ ಕಚೇರಿಯಲ್ಲಿ ಕೊಡಬೇಕೆಂದು ಕೋರಲಾಗಿದೆ.

ಟಾಂಗಾ, ಪೋನಿ ಪ್ರದರ್ಶನ

ನಿನ್ನೆ ಸಂಜೆ ಪೌರಸಭಾ ಆವರಣದಲ್ಲಿ ನಗರದ ಟಾಂಗ ಮತ್ತು ಪೋನಿಗಳ ಪ್ರದರ್ಶನವು ನಡೆಯಿತು. ಪುರಸಭಾಧ್ಯಕ್ಷರಾದ ಆರ್. ರಾಮಚಂದ್ರರಾವ್ ಬೋರ್ಪೋರ್ಕರ್ ಅವರು ಉತ್ತಮವಾದ ಕುದುರೆ ಮತ್ತು ಟಾಂಗಗಳಿಗೆ ಬೆಳ್ಳಿಯ ಬಟ್ಟಲು, ಪದಕ ಮುಂತಾದ ಬಹುಮಾನಗಳನ್ನು ವಿನಿಯೋಗ ಮಾಡಿದರು.

ಹಿಂದೀ ಕಾರ್ಯಕರ್ತರ ಸಭೆ

ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯವರು ೧೯೪೭ನೇ ಫೆಬ್ರವರಿಯಿಂದ ನಡೆಸುವ ಪ್ರಾಥಮಿಕ, ಮಧ್ಯಮಾ ಮತ್ತು ರಾಷ್ಟ್ರಭಾಷಾ ಪರೀಕ್ಷೆಗಳಲ್ಲಿ ಉರ್ದೂಲಿಪಿ ಪರಿಚಯವನ್ನು ಕಡ್ಡಾಯಪಡಿಸಿರುವ ಬಗ್ಗೆ ಚರ್ಚಿಸಿ, ನಗರ ಹಿಂದೀ ಕಾರ್ಯಕರ್ತರ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕಾಗಿ ಏರ್ಪಡಿಸಿರುವ ಸಭೆಯು ನಾಳೆ ಬೆಳಿಗ್ಗೆ ೯ ಘಂಟೆಗೆ ಚಾಮರಾಜ ರೋಡಿನಲ್ಲಿರುವ ಪರಕಾಲ ಭವನದಲ್ಲಿ ನಡೆಯುವುದು. ಹಿಂದೀ ಕಾರ್ಯಕರ್ತರು ಮತ್ತು ಪ್ರೇಮಿಗಳು ಸಭೆಸೇರಿ ಆ ದಿನ ದಯಮಾಡಿಸಬೇಕೆಂದು ನಗರ ಸಂಚಾಲಕರಾದ ಶ್ರೀ ಕೆ. ಆರ್. ರಾಯರು ಪ್ರಾರ್ಥಿಸುತ್ತಾರೆ.

ಚಿಯಾಂಗ್ ಕೈ ಷೇಕರಿಗೆ ಟ್ರೂಮನ್ನರ ಬೆಂಬಲ

ಚೀಣದಲ್ಲಿ ಇನ್ನೂ ಒಗ್ಗಟ್ಟು ಉಂಟಾಗದಿರುವುದು ವಿಷಾದಕರ. ಅಮೇರಿಕವು ಚೀಣದ ಒಳವ್ಯವಹಾರದಲ್ಲಿ ಪ್ರವೇಶಿಸದಿದ್ದರೂ ಅಲ್ಲಿ ಶಾಂತಿಯನ್ನು ಆರ್ಥಿಕ ವ್ಯವಸ್ಥೆಯನ್ನು ಸ್ಥಾಪಿಸುವಬಗ್ಗೆ ಎಲ್ಲ ಪಕ್ಷಗಳೊಡನೆ ಸಹಕರಿಸಲು ಸಿದ್ಧವಾಗಿದೆ. ಚಿಯಾಂಗ್ ಕೈ ಷೇಕರ ಸರ್ಕಾರಕ್ಕೆ ನಮ್ಮ ಪೂರ್ಣ ಬೆಂಬಲವಿದೆ—ಎಂಬುದಾಗಿ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷ ಮಿ॥ ಟ್ರೂಮನ್ನರು ಪ್ರಕಟಿಸಿದ್ದಾರೆ.

ರಾಜರುಗಳಿಗೆ ಅಧಿಕಾರ ಪ್ರಜೆಗಳಿಂದಲೇ

ರಾಜರುಗಳ ಸಾರ್ವಭೌಮತ್ವವು ಪ್ರಜೆಗಳಿಂದಲೇ ದೊರೆತದ್ದು. ರಾಜರುಗಳು ದೈವಾಂಶಸಂಭೂತರಾದ್ದರಿಂದ ಅಧಿಕಾರದ ಹಕ್ಕು ಈಗಿನ ಆಧುನಿಕ ಪ್ರಪಂಚದಲ್ಲಿ ಸ್ಥಾನವಿಲ್ಲ ಎಂಬುದಾಗಿ ಸರ್ ಅಲ್ಲಾಡಿ ಕೃಷ್ಣಸ್ವಾಮಯ್ಯರ್‌ವರು ರಾಜ್ಯಾಂಗ ಸಭೆಯಲ್ಲಿ ಪಂ॥ ನೆಹರೂರವರ ನಿರ್ಣಯವನ್ನು ಸಮರ್ಥಿಸುತ್ತಾ ತಿಳಿಸಿದ್ದಾರೆ. ಅಖಂಡ ಭಾರತವನ್ನು ಬ್ರಿಟಿಷ್ ನಿಯೋಗದವರು ಒಪ್ಪಿದ್ದಾರೆ. ಅಗುಂಪಿಯನ್ನು ನಿರಾಕರಿಸುವವರಿಗೆ ಈ ಸಭೆಯಲ್ಲಿ ಸ್ಥಾನವಿಲ್ಲ. ಲೀಗ್ ಮತ್ತು ಸಂಸ್ಥಾನಗಳು ಸಭೆಗೆ ಬಾರದಿದ್ದಲ್ಲಿ ಅದು ರಾಜ್ಯಾಂಗ ಸಭೆಯ ತಪ್ಪಲ್ಲ. ಲೀಗಿನ ಅಥವ ಸಂಸ್ಥಾನಗಳ ಹಿತಕ್ಕೆ ವಿರೋಧವಾಗಿ ಇಲ್ಲಿ ಏನನ್ನೂ ಮಾಡುತ್ತಿಲ್ಲ. ಅವರುಗಳು ಸಭೆಗೆಬರಲು ಯಾವ ಪ್ರತಿಬಂಧಕವೂ ಇಲ್ಲ—ಎಂಬುದಾಗಿ ಅವರು ಹೇಳಿದ್ದಾರೆ.

ಶಾಂತಿ ಸಮ್ಮೇಳನ

ನಂಜನಗೂಡು ೨೦

ನಿನ್ನೆದಿನ ರಾಣಪ್ಪನವರ ಛತ್ರದಲ್ಲಿ ಪುರಪ್ರಮುಖರು ಸಭೆ ಸೇರಿದ್ದರು. ಜನರಲ್ಲಿರುವ ಕೋಮುವಾರು ಗಲಭೆಯ ಗಾಬರಿಯನ್ನು ಪರಿಹರಿಸಲು ಎಲ್ಲರೂ ಸೌಹಾರ್ದ ಭಾವವುಳ್ಳವರಾಗಿರಬೇಕೆಂದು ಕೋರಲಾಯಿತು. ಸಮಿತಿಗೆ ಶ್ರೀ ಆರ್. ಕಾಳೇಗೌಡರು ಅಧ್ಯಕ್ಷರಾಗಿಯೂ, ಶ್ರೀ ರಹಿಮಾನ್ ಸಾಹೇಬರು ಕಾರ್ಯದರ್ಶಿಯಾಗಿಯೂ ಶ್ರೀ ನಂಜುಂಡಪ್ಪನವರು ಜಂಟಿ ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು.

ಕಳ್ಳತನ

ಒಂದು ವಾರದಿಂದ ಆಗಾಗ್ಗೆ ಕೆಲವರ ಮನೆಗಳಲ್ಲಿ ಬೀಗ ಮುರಿದು ಕಳ್ಳತನಗಳು ಆಗುತ್ತಿವೆ. ಸಂಬಂಧಪಟ್ಟವರು ಗಮನ ಕೊಡಬೇಕೆಂದು ಕೋರಲಾಗಿದೆ.

ಪಡಿತರದ ಪ್ರಮಾಣ

ಮೈಸೂರು ೨೧

ರೇಷನ್ ಪ್ರದೇಶದಲ್ಲಿರುವ ಜಮೀನುದಾರರುಗಳಿಗೆ ಹೋದ ಸುಗ್ಗಿಕಾಲದಲ್ಲಿ ಕೊಟ್ಟಿದ್ದ ಧಾನ್ಯಗಳ ಪೈಕಿ ಕೆಲವು ಭಾಗವನ್ನು ಆಗಿಂದಾಗ್ಗೆ ಆಗಿದ್ದ ಪಡಿತರದ ಬದಲಾವಣೆಗೆ ಅನುಸಾರವಾಗಿ ಈ ಸಾರಿ ಆಗಿರುವ ಫಸಲಿನಲ್ಲಿ ಮೋತಾ ಹಾಕುವುದನ್ನು ತಪ್ಪಿಸಬೇಕೆಂದು ಕಳೆದ ಶಾಸನ ಸಭೆಯಲ್ಲಿ ಶ್ರೀ ಎಸ್. ಕೃಷ್ಣಸ್ವಾಮಿಯವರು ತಂದಿದ್ದ ನಿರ್ಣಯವು ನ್ಯಾಯವಾದುದೆಂದೂ ಅದರಲ್ಲಿ ವಿಶೇಷ ಪಕ್ಷಾಂತರವಿದೆಯೆಂದೂ ಆಹಾರ ಇಲಾಖೆಯ ಕಂಟ್ರೋಲರವರು ತಿಳಿಸಿದರು. ಆದ್ದರಿಂದ ಸರ್ಕಾರದವರು ಬೇಗನೆ ಆಜ್ಞೆ ಹೊರಡಿಸುವರೆಂದು ನಿರೀಕ್ಷಿಸಲಾಗಿದೆ.

ಹಾಕಿ ಪಂದ್ಯ

ಸಿಲ್ವರ್ ಜ್ಯೂಬಿಲಿ ಹಾಕಿ ಫೈನಲ್ಸ್ ಪಂದ್ಯವು ಮೊನ್ನೆ ಸಂಜೆ ಮಹಾರಾಜಾ ಹೈಸ್ಕೂಲಿಗೂ, ಡಿ. ಬನುಮಯ್ಯನವರ ಹೈಸ್ಕೂಲಿಗೂ ನಡೆದು ಡಿ. ಬನುಮಯ್ಯ ಹೈಸ್ಕೂಲಿನವರು ೩—೦ ಗೋಲುಗಳಿಂದ ಜಯಗಳಿಸಿದರು.

ಬಹುಮಾನ ವಿನಿಯೋಗ ಮುಂದುವರಿಯಿತು

ಮೈಸೂರು ಸಂಸ್ಥಾನದ ಸಂಗೀತ ಉಪಾಧ್ಯಾಯರುಗಳ ಸಂಘದ ಆಶ್ರಯದಲ್ಲಿ ಸಂಗೀತ ಸ್ಪರ್ಧೆ ನಡೆದು ಜಯಶೀಲರಾದವರಿಗೆ ಇದೇ ತಿಂಗಳು ೧೮ ನೇ ತಾ॥ ನಡೆಯಬೇಕಾಗಿದ್ದ ಬಹುಮಾನದ ಸಂಚಿಕೆಯನ್ನು ಜಿಲ್ಲಾಧಿಕಾರಿಗಳ ಅನುಮತಿ ದೊರೆಯದಿದ್ದುದರಿಂದ ಜನವರಿ ತಿಂಗಳಿಗೆ ಮುಂದುವರಿಸಲಾಗಿದೆ. ಅದು ನಡೆಯುವ ತಾರೀಖನ್ನು ಮುಂದೆ ಪ್ರಕಟಿಸುವುದಾಗಿ ಸಂಘದ ಕಾರ್ಯದರ್ಶಿಗಳಾದ ಶ್ರೀ ಚಂದ್ರಶೇಖರಯ್ಯನವರು ತಿಳಿಸಿರುತ್ತಾರೆ.

ಜನವರಿ ಅಂತ್ಯದೊಳಗೆ ಬರ್ಮ ಸ್ವತಂತ್ರವಾಗಬೇಕು

ಜನವರಿ ೩೧ನೇ ತಾ॥ ಯೊಳಗಾಗಿ ಬರ್ಮ ಸ್ವತಂತ್ರವೆಂದು ಬ್ರಿಟಿಷ್ ಸರ್ಕಾರವು ಘೋಷಿಸಬೇಕು. ನಿಜವಾದ ರಾಷ್ಟ್ರೀಯ ಸರ್ಕಾರದ ರಚನೆ ಆಗಬೇಕು—ಎಂಬ ನಿರ್ಧಾರವನ್ನು ಮಾಡಿ ಬರ್ಮದ ಫ್ಯಾಸಿಸ್ಟ್ ವಿರೋಧಿ ಪಕ್ಷದವರು ಬ್ರಿಟಿಷ್ ಸರ್ಕಾರಕ್ಕೆ ಕಳುಹಿಸಿದ್ದಾರೆ. ಅದು ನಿರಾಕರಿಸಲ್ಪಟ್ಟರೆ ಬರಲಿರುವ ಆರು ವಾರಗಳಲ್ಲಿ ಬರ್ಮದಲ್ಲಿ ಕ್ರಾಂತಿ ಚಳವಳಿಯ ಆಂದೋಳನವು ಆಗುವುದಾಗಿ ಬರ್ಮ ಸರ್ಕಾರದ ಉಪಾಧ್ಯಕ್ಷರಾದ ಯು ಆಂಗ್ ಸಾನ್‌ರವರು ತಿಳಿಸಿದ್ದಾರೆ.

ಸೆಂಟ್ರಲ್ ಕಾಲೇಜ್ ದಿನಾಚರಣೆ

ಸ್ವ. ಪ್ರ. ಪ್ರೋ[ ] ಬೆಂಗಳೂರು ೨೧

ಈ ದಿನ ಸಂಜೆ ಸೆಂಟ್ರಲ್ ಕಾಲೇಜಿನ ವಾರ್ಷಿಕೋತ್ಸವವು ಆಹಾರ ಶಿರೋಮಣಿ ಸರ್ ಟಿ. ತಂಬೂಚೆಟ್ಟಿರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಅವರು ಭಾಷಣ ಮಾಡಿ ಸದರೀ ಕಾಲೇಜಿನ ಹಳೆಯ ನೆನಪುಗಳನ್ನೂ ಅದು ಮಾಡಿರುವ ಕಾರ್ಯ ಸಾಧನೆಯನ್ನೂ ಪ್ರಶಂಸಿಸಿದರು. ವಿದ್ಯಾರ್ಥಿಗಳು ವೈಜ್ಞಾನಿಕ ಶಿಕ್ಷಣವನ್ನು ಪಡೆಯಲು ಮುಂದೆ ಬರುತ್ತಿರುವುದಾಗಿ ಸಂತೋಷವನ್ನು ಸೂಚಿಸಿದರು. ವಿಜ್ಞಾನವನ್ನು ಓದಿ ಗುಮಾಸ್ತಗಿರಿಗೆ ಹೋಗುವ ಬದಲು ಅದನ್ನು ದೇಶದ ಕೈಗಾರಿಕೆಯ ಬೆಳವಣಿಗೆಗೆ ಉಪಯೋಗಿಸಬೇಕೆಂದು ಸೂಚಿಸಿದರು. ವಿದ್ಯೆಯು ನೌಕರಿಗಾಗಿ ಅಲ್ಲವೆಂದೂ ಜ್ಞಾನಾರ್ಜನೆಯೇ ಅದರ ಗುರಿಯೆಂದ ತಿಳಿಸಿದರು. ಜಗತ್ತಿನ ಭವಿಷ್ಯವು ವಿಜ್ಞಾನಿಗಳು ಮತ್ತು ಕಲಾಕೌಶಲ ನಿಪುಣರ ಕೈಯಲ್ಲಿದೆಯೆಂದೂ ತಿಳಿಸಿ ಪ್ರಪಂಚಕ್ಕೆ ಈಗ ಅತ್ಯಗತ್ಯವಾಗಿ ಬೇಕಾಗಿರುವ ಆಹಾರ ಸಂಗ್ರಹವನ್ನು ಆಧುನಿಕ ರೀತಿಯಲ್ಲಿ ಅಭಿವೃದ್ಧಿಪಡಿಸಲು ವಿಜ್ಞಾನ ಸಾಧನಗಳನ್ನು ವಿಶೇಷವಾಗಿ ಉಪಯೋಗಿಸಬೇಕೆಂದು ಸೂಚಿಸಿದರು.

ಬ್ರಿಟಿಷ್ ಸರ್ಕಾರದಲ್ಲಿ ಅವಿಶ್ವಾಸ

ಬರುವ ತಿಂಗಳಿನಲ್ಲಿ ಇಂದಿನ ಬ್ರಿಟಿಷ್ ಲೇಬರ್ ಸರ್ಕಾರದ ಮೇಲೆ ಅವಿಶ್ವಾಸದ ನಿರ್ಣಯವನ್ನು ಮಂಡಿಸುವುದಾಗಿ ವಿರೋಧ ಪಕ್ಷದ ನಾಯಕರಾದ ಮಿ॥ ಚರ್ಚಿಲ್‌ರವರು ತಿಳಿಸಿದ್ದಾರೆ. ಸ್ವಾರ್ಥತನ, ಜಂಭ ಮತ್ತು ಅಸಮರ್ಥತೆಗಳೇ ಅವರು ಮಾಡಲಿರುವ ಆಪಾದನೆಗಳು.

ಮಿತ್ರಸೈನಿಕರು ಬೋಸರನ್ನು ಗುಂಡಿನಿಂದ ಕೊಂದರೇ?

ಜಪಾನಿನ ಸರ್ಕಾರದ ಮಂತ್ರಿಗಳೊಬ್ಬರು ತಮಗೆ ತಿಳಿಸಿದ ಮೇರೆಗೆ ಬಾಬು ಸುಭಾಷರನ್ನು ಚೈನಾ ರಸ್ತಾ ಗಡಿಯಲ್ಲಿ ಮಿತ್ರಸೈನಿಕರು ಗುಂಡಿನಿಂದ ಹೊಡೆದು ಕೊಂದಿರುವರೆಂದೂ, ಅವರು ವಿಮಾನದ ಅಪಘಾತದಲ್ಲಿ ಸಾಯಲಿಲ್ಲವೆಂದೂ ಅಖಿಲ ಭಾರತ ಫಾರ್ವರ್ಡ್ ಬ್ಲಾಕ್ ಅಧ್ಯಕ್ಷರಾದ ಸರ್ದಾರ್ ಶಾರ್ದೂಲಸಿಂಗ್ ಕವೀಶ್ವರರವರು ಜಬ್ಬಲ್‌ಪುರದಲ್ಲಿ ಭಾಷಣಮಾಡುತ್ತಾ ತಿಳಿಸಿರುವರು. ಬೋಸರು ವಿಮಾನದ ಅಪಘಾತವಾದಮೇಲೆ ಒಂದು ತಿಂಗಳ ಕಾಲ ಬದುಕಿದ್ದರೆಂದೂ ಅವರು ಹೇಳಿದರು.

ಸರ್ ಸಿ. ಪಿ. ಯವರ ರಾಜೀನಾಮೆ ವದಂತಿ ಸುಳ್ಳೋ?

ತಿರುವಾಂಕೂರು ಮಹಾರಾಜರ ಅಪೇಕ್ಷೆಯಂತೆ ಅಲ್ಲಿನ ದಿವಾನರಾದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರು ತಮ್ಮ ಕೆಲಸದಿಂದ ನಿವೃತ್ತರಾಗುವುದನ್ನು ಮುಂದೆ ಹಾಕಿರುವುದಾಗಿ ತಿಳಿದುಬಂದಿದೆ.

ಕನ್ನಡ ಸುದ್ದಿ ಪ್ರಸಾರ

ಮದ್ರಾಸ್ ಮತ್ತು ಬೊಂಬಾಯಿ ಬ್ರಾಡ್‌ಕಾಸ್ಟಿಂಗ್ ನಿಲ್ದಾಣಗಳಿಂದ ದಿನನಿತ್ಯ ಕನ್ನಡದಲ್ಲಿ ಸುದ್ದಿ ಪ್ರಸಾರ ಮಾಡುವಂತೆ ಏರ್ಪಾಡು ಮಾಡಬೇಕೆಂಬ ಒತ್ತಾಯವನ್ನು ಶ್ರೀಗಳಾದ ಸಿದ್ದಲಿಂಗಪ್ಪ, ದಿವಾಕರ್, ಕರಮರ್‌ಕರ್ ಮತ್ತು ಜನಾಬ್ ಜೀಗ್ಲೂರ್ ಅವರು ಸಮಾಚಾರ ಸಚಿವರಾದ ಸರ್ದಾರ್ ಪಟೇಲರನ್ನು ದೆಹಲಿಯಲ್ಲಿ ಕಂಡು ಮಾತುಕತೆ ನಡೆಸಿದರೆಂದು ಗೊತ್ತಾಗಿದೆ.

ಸಾಧ್ವಿ

ತಾ॥ ೨೧-೧೨-೪೬ ಶನಿವಾರ

ಶಾಂತಿ ಪಾಲನೆ

ಈಗ ಸಾರ್ವಜನಿಕ ಶಾಂತಿ ಸಂರಕ್ಷಣೆಯು ಎಲ್ಲಕ್ಕಿಂತಲೂ ಮಿಗಿಲಾದ ಕರ್ತವ್ಯವಾಗಿ ಪರಿಣಮಿಸಿದೆ. ಚನ್ನಪಟ್ಟಣದ ದುರಂತ ಪ್ರಕರಣವು ನಡೆದ ಮೇಲೆ ಸಂಸ್ಥಾನದ ಅನೇಕ ಕಡೆಗಳಲ್ಲಿ ಬಗೆ ಬಗೆಯ ವದಂತಿಗಳು ಹರಡಿದುವು. ಇದರ ಪರಿಣಾಮವಾಗಿ ಆಡಳಿತ ವರ್ಗದವರಿಗೂ ಸಾರ್ವಜನಿಕ ಮುಖಂಡರಿಗೂ ಕಳವಳವುಂಟಾಯಿತು. ಎಲ್ಲೆಲ್ಲೂ ಮುಂಜಾಗ್ರತೆ ಕಾರ್ಯಕ್ರಮಗಳು ಕೈಗೊಳ್ಳಲ್ಪಟ್ಟವು. ಚನ್ನಪಟ್ಟಣದ ಅಧ್ಯಾಯವು ಮತ್ತೆಲ್ಲಿಯೂ ಪುನರಾವರ್ತಿಯಾಗದಿರಲೆಂದು ಸಕಲರೂ ಹಾರೈಸುತ್ತಾರೆ.

ಕಳವಳಕ್ಕೆ ಮೂಲಕಾರಣ ನಿರಾಧಾರವಾದ ವದಂತಿಗಳ ಪ್ರಸಾರವೇ. ಆದುದರಿಂದ ಬುಡವಿಲ್ಲದ ಸುದ್ದಿಗಳನ್ನು ತಡೆಗಟ್ಟಲು ಎಲ್ಲರೂ ಸಹಕರಿಸಬೇಕು. ಅದರಲ್ಲೂ ಕೋಮುವಾರು ವಿಷಯಗಳನ್ನು ಹರಡುವಾಗ ವಿಶೇಷ ಜಾಗರೂಕತೆಯಿಂದಿರಬೇಕು. ಪರಸ್ಪರ ಭೀತಿ, ವೈಮನಸ್ಯಗಳಿಗೆ ಕಾರಣವಾಗಬಹುದಾದ ವಿಚಾರಗಳನ್ನು ಅಲ್ಲೇ ತಡೆಗಟ್ಟಬೇಕು. ಅವರ ವಾಸ್ತವವಾದಂಶಗಳು ತಿಳಿದು ಬಂದರೆ ಅವುಗಳನ್ನು ಸರಿಯಾಗಿ ಪರಿಶೀಲಿಸಿ ತಿಳಿದುಕೊಂಡು ಎಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು.

ಸಾರ್ವಜನಿಕ ಶಾಂತಿ ರಕ್ಷಣೆಯು ಕೇವಲ ಸರ್ಕಾರದವರ ಕರ್ತವ್ಯ ಮಾತ್ರವೇ ಅಲ್ಲ. ಮಹಾಜನರೂ ಇದರಲ್ಲಿ ಸಂಪೂರ್ಣ ಭಾಗಿಗಳು. ಆದುದರಿಂದ ಈ ಕಾರ್ಯದಲ್ಲಿ ಅಧಿಕಾರಿಗಳೂ ಪ್ರಜಾಮುಖಂಡರೂ ಪರಸ್ಪರ ಕಲೆತು ಸಹಕರಿಸಿ ಕೆಲಸಮಾಡಬೇಕು. ಎಲ್ಲಾ ಕೋಮು, ಸಂಗಡ ಮತ್ತು ಪಕ್ಷಗಳ ಜನರೂ ತಮ್ಮ ಭಿನ್ನಭಾವಗಳನ್ನು ಬದಿಗಿಟ್ಟು ಈ ಕಾರ್ಯದಲ್ಲಿ ನೆರವಾಗುವುದು ಅವರ ಆದ್ಯಕರ್ತವ್ಯ.

ಅಶಾಂತಿಯು ಅನೇಕ ಕಾರಣಗಳಿಂದ ಉದ್ಭವಿಸುವುದು. ವ್ಯಕ್ತಿದ್ವೇಷ, ಗುಂಪಿನ ಅಸೂಯೆ, ಸಮೂಹಗಳ ಮಾತ್ಸರ್ಯ- ಇವುಗಳಿಂದ ಗಲಭೆಗಳು ಸಂಭವಿಸುವುದುಂಟು. ಇವುಗಳನ್ನು ತಡೆಗಟ್ಟುವುದು ಬಹಳ ಸುಲಭ. ಆದರೆ ಇವು ಕೋಮುವಾರು ಸ್ವರೂಪವನ್ನು ಹೊಂದಿದರೆ ಅವುಗಳನ್ನು ತಪ್ಪಿಸುವುದು ಸ್ವಲ್ಪ ಕಠಿಣವಾಗುವುದು. ಆದುದರಿಂದ ಯಾವ ಅಶಾಂತಿಗಳಿಗೇ ಆಗಲಿ ಕೋಮುವಾರು ಬಣ್ಣವು ಬಾರದಂತೆ ನೋಡಿಕೊಳ್ಳುವುದು ಅತ್ಯಗತ್ಯ.

ದೇಶದಲ್ಲಿ ನಡೆಯುವ ಗಲಭೆಗಳಿಗೆ ಕೋಮುವಾರು ಬಣ್ಣವು ಬಂದಿರುವುದು ನಮ್ಮ ಭರತ ಖಂಡದ ಒಂದು ದೌರ್ಭಾಗ್ಯ. ಇತರ ದೇಶಗಳಲ್ಲಿ ಎಷ್ಟೋ ವಿಪ್ಲವಗಳು ನಡೆಯುತ್ತವೆ. ಅವು ರಾಜಕೀಯ, ಆರ್ಥಿಕ ಮತ್ತು ವಾಣಿಜ್ಯ ವ್ಯವಹಾರಗಳಿಗೆ ಸಂಬಂಧಪಟ್ಟ ಕೋಲಾಹಲಗಳು. ಜಾತಿ, ಮತ, ಕೋಮುಗಳ ಹೆಸರಿನಲ್ಲಿ ಎಲ್ಲಿಯೂ ಗಲಭೆಗಳು ನಡೆಯುವುದಿಲ್ಲ. ಜಪಾನ್ ಚೀನಾ ಮುಂತಾದ ಕಡೆಗಳಲ್ಲಿ ಒಂದೇ ಕುಟುಂಬದಲ್ಲಿ ಮೂರು ನಾಲ್ಕು ಮತಾನುಯಾಯಿಗಳು ಶಾಂತಿ ಸೌಹಾರ್ದದಿಂದ ಜೀವನ ಯಾತ್ರೆಯನ್ನು ನಡೆಸುವ ನಿದರ್ಶನಗಳು ಹೇರಳವಾಗಿವೆ. ಹೊಡೆದಾಟಗಳಿಗೆ ಜಾತಿ ಮತಗಳು ಕಾರಣವಲ್ಲ. ಮನುಷ್ಯನು ತನ್ನ ಸಹೋದರನನ್ನು ಹೊಡೆದು ಕೊಲ್ಲುವಂತೆ ಯಾವ ಮತವೂ ಹೇಳುವುದಿಲ್ಲ. ಹಾಗೆ ಹೇಳಿದರೆ ಅದು ನಿಜವಾದ ಧರ್ಮವೇ ಆಗುವುದಿಲ್ಲ. ಈಶ್ವರನನ್ನು ಮಾನವ ಸ್ವರೂಪದಲ್ಲಿ ಆರಾಧಿಸಬೇಕೆಂದೇ ಸಕಲ ಮತಗಳೂ ಸಾರುತ್ತವೆ. ನಿಜವಾದ ಮತತತ್ವಗಳ ನಿರಾಕರಣೆಯೇ ಇಂದಿನ ಅನರ್ಥಗಳಿಗೆ ಮೂಲ ಕಾರಣ.

ಸಮಾಜದ ಮುಖಂಡರುಗಳೂ, ಆಡಳಿತದ ಸೂತ್ರಧಾರಿಗಳೂ ಈ ಉದಾತ್ತ ಧ್ಯೇಯಗಳನ್ನು ಸಾರ್ವಜನಿಕರಲ್ಲಿ ಆಗಿಂದಾಗ್ಗೆ ಸಾರಿ ಹೇಳಿ ನಿರಾಧಾರವಾದ ಊಹೆಗಳಿಗೆ ಆಸ್ಪದವಿಲ್ಲದಂತೆ ಮಾಡಿ, ಸಕಲರಿಗೂ ಪ್ರಾಣ, ಮಾನ, ಧನಗಳ ರಕ್ಷಣೆಯನ್ನು ನೀಡಿ, ಸ್ನೇಹ ಸೌಹಾರ್ದಗಳಿಂದ ಬಾಳುವಂತೆ ಮಾಡಲು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಈಗ ಅತ್ಯವಶ್ಯಕವಾಗಿದೆ.

ಲೀಗು ಮದುವಣಗಿತ್ತಿಯೇ ?

ಚರ್ಚಿಲರು ರಾಜ್ಯಾಂಗ ಸಭೆಯನ್ನು ಒಂದು ಮದುವೆಗೆ ಹೋಲಿಸಿ ಲೀಗು ಭಾಗವಹಿಸದಿರುವುದರಿಂದ ಅದರಲ್ಲಿ ಮದುವೆ ಹುಡುಗಿಯೇ ಇಲ್ಲದಂತಾಗಿದೆ ಎಂದು ಹೇಳಿದ್ದಾರೆ. ರಾಜ್ಯಾಂಗ ಸಭೆಯಲ್ಲಿ ಇಬ್ಬರು ಹುಡುಗಿಯರು ಇದ್ದಂತಾಯಿತು. ಒಂದು ಲೀಗು, ಇನ್ನೊಂದು ದೇಶೀಯ ಸಂಸ್ಥಾನಗಳು. ಲೀಗು ಮದುವಣಗಿತ್ತಿಯಾಗಿದ್ದರೆ ಅದು ಸಭೆಗೆ ಬಂದು ಮದುವೆ ಸುಸೂತ್ರವಾಗಿ ನೆರವೇರಿಸುವಂತೆ ಹೇಳದೆ ಚರ್ಚಿಲರು ಲೀಗಿಗೆ ದುರಾಸೆ ತೋರಿಸಿ ಮೋಸ ಮಾಡಿದ್ದಾರೆ - ಎಂದು ಡಾ॥ ಶ್ಯಾಮಪ್ರಸಾದ ಮುಖರ್ಜಿಯವರು ರಾಜ್ಯಾಂಗ ಸಭೆಯಲ್ಲಿ ಭಾಷಣ ಮಾಡುತ್ತಾ ತಿಳಿಸಿದ್ದಾರೆ.

ಅಮೆರಿಕಾದಿಂದ ಚಿನ್ನ

ಈ ತಿಂಗಳ ಅಂತ್ಯದೊಳಗಾಗಿ ಭಾರತಕ್ಕೆ ಅಮೆರಿಕಾ ಸಂಯುಕ್ತ ಸಂಸ್ಥಾನದಿಂದ ೧ ಲಕ್ಷ ತೊಲ ಚಿನ್ನವನ್ನು ತರಿಸಲಾಗುವುದೆಂದು ಗೊತ್ತಾಗಿದೆ.

'ಬರ್ಮಾ ರಾಜಕುಮಾರನ' ದಸ್ತಗಿರಿ

ಬರ್ಮಾದ ರಾಜಕುಮಾರನೆಂದು ಹೇಳಿಕೊಂಡು ೨೨೦೦ ರೂ. ಗಳಿಗೆ ಮೋಸದ ಚೆಕ್ಕನ್ನು ಕೊಟ್ಟು, ಹಲವು ಸಾಮಾನು ಕೊಳ್ಳುತ್ತಿದ್ದ ಮಧ್ಯ ವಯಸ್ಸಿನ ಯುವಕನೊಬ್ಬನನ್ನು ಮದ್ರಾಸ್ ಪೋಲೀಸರು ದಸ್ತಗಿರಿ ಮಾಡಿ ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಶಾಲಾ ವಾರ್ಷಿಕೋತ್ಸವ

ನಂಜನಗೂಡು ೧೯

ಇಲ್ಲಿನ ಹೈಸ್ಕೂಲ್ ಹಳೇ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಇದೇ ಮಾಹೆ ೨೯ ನೇ ತಾ॥ ಶ್ರೀ ಎಂ. ರಾಮನಾಥಾರ್‍ಯರ ಅಧ್ಯಕ್ಷತೆಯಲ್ಲಿ ಜರುಗುತ್ತದೆ. ಇದರ ಅಂಗವಾಗಿ ೨೮ ನೇ ತಾ॥ ಶನಿವಾರ ಚರ್ಚಾಕೂಟವೊಂದು ಜರುಗುವುದು. ಭಾಗವಹಿಸುವ ಹಳೇ ವಿದ್ಯಾರ್ಥಿಗಳು ಮುಂಚಿತವಾಗಿ ಕಾರ್ಯದರ್ಶಿಗಳಿಗೆ ತಿಳಿಸಬೇಕಾಗಿ ಕೋರಲಾಗಿದೆ.

ಬಸ್ ಅಪಘಾತ

ಕೊಳ್ಳೇಗಾಲಕ್ಕೆ ಹೋಗುತ್ತಿದ್ದ ಕೆ. ಎ. ಬಸ್ಸು ನಿನ್ನೆ ಹೊರಳವಾಡಿ ಬಳಿ ಸ್ಟಿಯರಿಂಗ್‌ನ ವ್ಯತ್ಯಾಸದಿಂದ ಹಳ್ಳಕ್ಕೆ ಜಾರಿತೆಂದೂ ಇದರಿಂದ ಇಬ್ಬರಿಗೆ ಜಖಂ ಆಗಿದೆ ಎಂದೂ ತಿಳಿದು ಬಂದಿದೆ.

ಬ್ರಿ॥ ದೊರೆಗಳ ಅರಮನೆಗೆ ಬಾಂಬಿನ ಭೀತಿ

ಇಂಗ್ಲೆಂಡ್ ದೊರೆಗಳ ನಿವಾಸ ಸ್ಥಳವಾದ ಬಕಿಂಗ್‌ಹ್ಯಾಮ್ ಅರಮನೆ ಮೇಲೆ ಬಾಂಬು ಧಾಳಿ ಮಾಡುವುದಾಗಿ ಕಳೆದ ಶುಕ್ರವಾರದಿಂದ ಇದುವರೆವಿಗೆ ೨೩ ಸಲ ಟೆಲಿಫೋನ್ ಮೂಲಕ ಬೆದರಿಸಲಾಯಿತೆಂದು ವರದಿಯಾಗಿದೆ. ಲಂಡನ್ನಿನ ವಿಕ್ಟೋರಿಯಾ ನಿಲ್ದಾಣವನ್ನು ಬಾಂಬು ಹಾಕಿ ನಾಶಗೊಳಿಸಲಾಗುವುದೆಂದು ಮತ್ತೊಂದು ಬೆದರಿಕೆ ಸಹ ಬಂದಿದ್ದಿತೆಂದು ವರದಿಯಾಗಿದೆ. ಅರಮನೆಯನ್ನು ವಿಶೇಷ ರಕ್ಷಣೆಗೆ ಒಳಪಡಿಸಿದೆ.

ಮೈಸೂರು ಸಿಟಿ ಮುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರವರ ಆಫೀಸಿನಿಂದ

ಹರಾಜು ಇಸ್ತಿಹಾರ

ಮೈಸೂರು ಸಿಟಿ ವಿಲ್ಲೆ ಮೊಹಲ್ಲಾ ರಾಮಾನುಜಾ ರಸ್ತೆಯಲ್ಲಿರುವ ಮೈಸೂರು ಸಿಟಿ ಮುನಿಸಿಪಾಲಿಟಿಯವರು ಕಟ್ಟಿಸಿರುವ ಏಳು ಮಾದರಿ ಮನೆಗಳನ್ನು ತಾರೀಖು ೨೦-೧-೧೯೪೭ ನೇ ಸೋಮವಾರ ದಿನ ಹತ್ತು ಘಂಟೆಗೆ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ಇಷ್ಟವುಳ್ಳವರು ಖುದ್ದು ಹಾಜರಾಗಿ ಹರಾಜಿನಲ್ಲಿ ಭಾಗ ಸವಾಲ್ ಮಾಡಿ ಸದರಿ ಮನೆಗಳನ್ನು ಪಡೆಯಬಹುದು. ಹೆಚ್ಚಿಗೆ ವಿವರಗಳನ್ನು ತಿಳಿಯ ಅಪೇಕ್ಷೆಯುಳ್ಳವರು ಮೈಸೂರು ಸಿಟಿ ಮುನಿಸಿಪಾಲ್ ಇಂಜನಿಯರವರ ಆಫೀಸಿನಲ್ಲಿ ಮಧ್ಯಾಹ್ನ ಮೂರು ಘಂಟೆಯಿಂದ ಐದು ಘಂಟೆಯವರೆಗೆ ಆಫೀಸು ದಿವಸಗಳಲ್ಲಿ ತಿಳಿದುಕೊಳ್ಳಬಹುದು.

(ಸಹಿ) ಕೆ. ಜಿ. ಕಾಳಪ್ಪ,
ಪ್ರೆಸಿಡೆಂಟರಿಗಾಗಿ

ಕಾಶ್ಮೀರಕ್ಕೆ ಗಡಿನಾಡಿನ ನಿರಾಶ್ರಿತರು

ಗಡಿನಾಡಿನಲ್ಲಿ ಇತ್ತೀಚೆಗೆ ಗುಡ್ಡಗಾಡು ಪ್ರದೇಶದವರಿಂದ ಧಾಳಿ, ದರೋಡೆ ನಡೆದ ಊರಿನ ಜನಗಳು ದಿಕ್ಕಾಪಾಲಾಗಿ ರಕ್ಷಣೆಗಾಗಿ ತೆರಳುತ್ತಿದ್ದಾರೆ. ೧೨೦೦ ಮಂದಿ ನಿರಾಶ್ರಿತರು ಕಾಶ್ಮೀರ ಸಂಸ್ಥಾನದೊಳಕ್ಕೆ ಬಂದಿದ್ದಾರೆ. ಅವರಿಗೆಲ್ಲಾ ಪರಿಹಾರ ಪ್ರ... ದೊರಕಿಸಿ ಕೊಡಲು ಕಾಶ್ಮೀರದ ಸರ್ಕಾರ ಏರ್ಪಾಟು ಮಾಡಿದೆ. ಗುಡ್ಡಗಾಡಿನ ಗುಂಪುಗಳು ಸಂಸ್ಥಾನದೊಳಕ್ಕೆ ಬರದಂತೆ ಸಂಸ್ಥಾನದ ಗಡಿಯಲ್ಲಿ ಸೈನಿಕರನ್ನು ಇಡಲು ಹಾಕಲಾಗಿದೆ.

ಬಹುಪತ್ನೀತ್ವ ವಾದಿಗಳಿಗೆ ಜೈಲು ವಾಸ

ಬಹು ಪತ್ನೀತ್ವವು ದೈವನಿಯಮವಾದದ್ದೆಂದು ಹೇಳಿಕೊಂಡು ಆ ಹವ್ಯಾಸದಲ್ಲಿ ತೊಡಗಿದ್ದ ೫೦ ಮಂದಿಯನ್ನು (ಇವರಲ್ಲಿ ೧೨ ಮಂದಿ ಹೆಂಗಸರು) ದಸ್ತಗಿರಿ ಮಾಡಿ ಅಮೇರಿಕಾ ಸುಪ್ರೀಂ ನ್ಯಾಯಸ್ಥಾನದಲ್ಲಿ ವಿಚಾರಣೆ ನಡೆಸಲಾಯಿತು. ಇವರಲ್ಲಿ ೬ ಮಂದಿಗೆ ತಲಾ ೪ ವರ್ಷಗಳ ಸಜಾ ಶಿಕ್ಷೆ ವಿಧಿಸಿದೆ.

ಅಪೆರಾ ಟಾಕೀಸ್
ತಾ॥ 20-12-46 ರಿಂದ
ಪ್ರತಿದಿನ ಮೂರು ಆಟಗಳು
ನಾರದ-ನಾರದಿ
(ತೆಲುಗು ಭಾಷೆ)
ಸೂರಿ ಬಾಬು, ಉಮಾ ಮಹೇಶ್ವರ ರಾವ್, ಲಕ್ಷ್ಮೀರಾಜ್ಯಂ, ಸೌದಾಮಿನಿ.

Morning shows from 20-12-46
UTAH
With
Roy Rogers & George Hayes

ನಿಮ್ಮ ಮೈ ಮೋಹಕವಾಗಿರುವಂತೆ ಹೊಳೆಯಬೇಕೆ ? ನೀವು ಲಾವಣ್ಯ ಮೂರ್ತಿಗಳಾಗಬೇಕೆ ?
ಹಾಗಾದರೆ
ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ !
ಮೈಸೂರು ಸ್ಯಾಂಡಲ್ ಸೋಪ್
ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ.
ಪರೀಕ್ಷಿಸಿ ನೋಡಿರಿ
ಎಲ್ಲೆಲ್ಲೂ ದೊರೆಯುತ್ತವೆ.
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.

ರಾಜಕಮಲ್, ಮೈಸೂರು
೨೦-೧೨-೪೬ ರಿಂದ ೬ ನೇ ಮತ್ತು ಕೊನೇ ವಾರ
ಡಾಕ್ಟರ್ ಕೋಟ್ನಿಸ್ ಕಿ ಅಮರ್ ಕಹಾನಿ
ತಾರಾಗಣ: ಜಯಶ್ರೀ, ಶಾಂತಾರಾಂ, ಇತರರು.

20-12-46 ರಿಂದ 7 ದಿನಗಳು ಪ್ರಾತಃಕಾಲ 10-30 ಕ್ಕೆ
ಬಾಂಬೆ ಟಾಕೀಸ್ ರವರ 'ಬಂಧನ್'
ಭೂಮಿಕೆ:- ಲೀಲಾ ಚಿಟ್ನಿಸ್, ಅಶೋಕ ಕುಮಾರ್.
(ಹೊಸ ಕಾಪಿ, Brand New Print)

Edited printed and published by A. R. Nagaraja at the Sadhvi Press D Subbiah Road, Mysore

ಫೋನ್ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೨ ಕಾಸು

ಸಂಪುಟ ೫] ಭಾನುವಾರ ೨೨—೧೨—೪೬ [ಸಂಚಿಕೆ ೧೧೭

ಜಪಾನಿನಲ್ಲಿ ಭೂಕಂಪ ಸಾವಿರಾರು ಮರಣಗಳು

ಸ್ವಾತಂತ್ರ್ಯಕ್ಕೆ ಕ್ರಾಂತಿ ಅನಿವಾರ್ಯ

...ಯಲ್ಲಿ ಜಯಪ್ರಕಾಶ ನಾರಾಯಣ ...ಸ್ಲಿಮರ ಸಭೆಯೊಂದರಲ್ಲಿ ಮಾತ ...ಸ್ತಾ ಹಿಂದೂದೇಶದ ಸ್ವಾತಂತ್ರ್ಯಕ್ಕೆ ...ಯು ಅನಿವಾರ್ಯವೆಂದೂ ಈ ಸ್ವಾ ...ದ ಕ್ರಾಂತಿಗೆ ಮುಸ್ಲಿಮರನ್ನು ಕರೆ ...ತಾವು ಬಂದಿರುವುದಾಗಿಯೂ ತಿಳಿ ... ಸಭೆಯು ಕೋಮುವಾರು ಗಲ ...ಆರಂಭವಾದ ಮೈದಾನದಲ್ಲೇ ಸೇ...

...ಟ್ಟೆ ಬೆಲೆ ಹೆಚ್ಚುವುದೇ?

...ರ್ವಜನಿಕರ ಉಪಯೋಗಕ್ಕಾಗಿ ಕೊ...ಗುವ ಬಟ್ಟೆಗಳ ಬೆಲೆಯನ್ನು ಹೆಚ್ಚಿ...ವಿಚಾರವು ದೆಹಲಿಯಲ್ಲಿ ಸರದಾರಾಜು ...ರುವ ಡಾ॥ ಜಾನ್ ಮಥಾಯ್‌ರವ ...ಬಟ್ಟೆ ಮಿಲ್ಲುಗಳ ಪ್ರತಿನಿಧಿಗಳಿಗೂ ...ುವ ಸಮ್ಮೇಳನದಲ್ಲಿ ಪರಿಶೀಲಿಸಲ್ಪ...ವು

೭ ಮಕ್ಕಳ ಜನನ

...ಬ್ರಿಟಿಷ್ ಪಶ್ಚಿಮ ಆಫ್ರಿಕದ ಸಿರಾಲಿ...ಯೊನ್ ಒಂದು ಹಳ್ಳಿಯಲ್ಲಿ ಮ್ಯಾಡಂ ...ಎಂಬುವಳು ಒಂದೇ ಗಂಟೆಯಲ್ಲಿ ಏಳು ...ನ್ನು ಹಡೆದಳೆಂದೂ, ಅವುಗಳಲ್ಲಿ ಕೆ...ಗಂಡು ಮತ್ತು ನಾಲ್ಕು ಹೆಣ್ಣೆಂ ...ಅವುಗಳೆಲ್ಲವೂ ಅದೇ ರಾತ್ರಿ ಸತ್ತು...ದುವೆಂದೂ ವರದಿಯಾಗಿದೆ

...ಯುರ್ವೇದ ಸಮ್ಮೇಳನ

...ದಿನವಲ್ಲಿ ಸೇರಲಿರುವ ಗಣನೇಯ ...ಕರ್ನಾಟಕ ಆಯುರ್ವೇದ ಸಮ್ಮೇಳ ...ಈ ತಿಂಗಳ ೨೮ನೇಯ ತಾರೀಖಿನಲ್ಲಿ ...ವುದೆಂದು ಈ ಮೊದಲು ಪ್ರಕಟಿಸಲಾ...ಪ್ಪೆ ಇದನ್ನು ೬ರುವ ಜನವರಿ ೩ಂ ...ಮತ್ತು ೩ನೆಯ ತಾರೀಖುಗಳಲ್ಲಿ ...ವಂತೆ ನಿಶ್ಚಯಿಸಿರುತ್ತದೆ.

ಬರ್ಮಾ ಪ್ರತಿನಿಧಿಗಳು ಲಂಡನ್ನಿಗೆ

...ಬ್ರಿಟಿಷ್ ಸರ್ಕಾರದವರು ಬರ್ಮಾ ದೇ...ಶಕ್ಕೆ ಮಾಡಿರುವ ವಾಗ್ದಾನವನ್ನು ಈ...ಡೇರಿಸಲು ಸಂಧಾನ ನಡೆಸುವುದಕ್ಕಾಗಿ ...ರ್ಮಾ ಸರ್ಕಾರದ ಪ್ರತಿನಿಧಿಗಳನ್ನು ಲಂ...ಡನ್ನಿಗೆ ಆಹ್ವಾನಿಸುವುದಾಗಿ ಗೊತ್ತಾಗಿದೆ.

...ಚ್ಚಿ ಅರಮನೆ ಸಂಸ್ಥಾನ ಪ್ರಜಾಸಮ್ಮೇಳನಕ್ಕೆ

...ಹರಿ ನಗರದಲ್ಲಿರುವ ಕೊಚ್ಚಿ ಸಂಸ್ಥಾ...ನ ಅರಮನೆಯನ್ನು ಅಖಿಲ ಭಾರತ ಸಂ...ಸ್ಥಾನ ಪ್ರಜಾ ಸಮ್ಮೇಳನದ ಕೇಂದ್ರ ಕ...ಚೇರಿಗಾಗಿ ಉಪಯೋಗಿಸಿಕೊಳ್ಳಲು ಕೊಟ್ಟಿ...ರುವುದಾಗಿ ತಿಳಿದುಬಂದಿದೆ

ಕುರುಬರ ವಿದ್ಯಾರ್ಥಿನಿಲಯ

...ಂಜನ ಗೂಡು ತಾಲ್ಲೂಕು ಮತ್ತು ...ಕುರುಬ ಜನಾಂಗದವರು ಕಳೆದ ಗು... ಸಭೆ ಸೇರಿ ಶ್ರೀಮನ್ಮಹಾರಾಜರ ...ವರಿಗೆ ಪ್ರತ್ಯೇಕ್ಷವಾದುದಕ್ಕೆ ಸಂ...ಷ ಸೂಚಿಸಿದರು. ಆಸ್ಥಾನ ವಿದ್ವಾ...ಟಿ ಎಂ. ಪುಟ್ಟಸ್ವಾಮಯ್ಯನವರು ಅಧ್ಯ...ವಹಿಸಿದ್ದರು. ಕುರುಬರ ಹಾಸ್ಟಲು ಒಂ...ದು ಕಟ್ಟಬೇಕೆಂದು ತೀರ್ಮಾನಿಸಿ ಅದ...ಕ್ಕಾಗಿ ರಚಿತವಾದ ಒಂದು ಸಮಿತಿಗೆ ಶ್ರೀ ಟಿ. ...ಪುಟ್ಟಸ್ವಾಮಯ್ಯನವರನ್ನು ಅಧ್ಯ...ಕ್ಷರನ್ನಾಗಿಯೂ, ಶ್ರೀ ಆರಮುಂಗಡಿ ರಾಚ...ಪ್ಪನವರನ್ನು ಕಾರ್ಯದರ್ಶಿಯನ್ನಾಗಿಯೂ, ...ಕೌನ್ಸಿಲರ್ ಶ್ರೀ ಮಾಲಯ್ಯನವರನ್ನು ...ಖಜಾಂಚಿಗಳನ್ನಾಗಿಯೂ ಆರಿಸಲಾಯಿತು.

ಭಾವಚಿತ್ರ ಅನಾವರಣ

ಮೈಸೂರು ೨೨

ಮೈಸೂರು ಇಂಟರ್‌ಮೀಡಿಯಟ್ ಕಾಲೇಜಿನ ಕರ್ನಾಟಕ ಸಂಘದಾಶ್ರಯದಲ್ಲಿ ಸಂಘದ ಮೂಲಧನಕ್ಕೆ ಸಹಾಯ ಮಾಡಿದವರಿಗೆ ಒಂದು ಸತ್ಕಾರ ಕೂಟವನ್ನು ಕಳೆದ ಮಂಗಳವಾರ ಏರ್ಪಡಿಸಲಾಗಿತ್ತು. ರಾಜಸೇವಾಸಕ್ತ ಶ್ರೀ ಶಾಸ್ತ್ರಿ ವೆಂಕಟೇಶ ಅಯ್ಯಂಗಾರ್ಯರು ಅಧ್ಯಕ್ಷತೆ ವಹಿಸಿದ್ದರು. ಸಂಜೆ ಶ್ರೀ ಶಾಸ್ತ್ರಿಯವರು ದಿವಂಗತ ಬಿ. ಎಂ. ಶ್ರೀಕಂಠಯ್ಯನವರ ಭಾವಚಿತ್ರವನ್ನು ಅನಾವರಣ ಮಾಡಿದರು. ಶ್ರೀ ವೆಂಕಟರಾಮಪ್ಪನವರೂ, ಶ್ರೀ ಶಿವರಾಮಯ್ಯನವರೂ ದಿವಂಗತರ ಜೀವನ ಪರಿಚಯ ಮಾಡಿಕೊಟ್ಟರು. ಶ್ರೀಯುತರ ಕನ್ನಡ ತಾಯಿಯ ನೋಟದಲ್ಲಿನ ಒಂದು ದೃಶ್ಯವನ್ನು ಏರ್ಪಡಿಸಲಾಗಿತ್ತು.

ಸ್ಪರ್ಧಾ ಬಹುಮಾನ

ಇಂಟರ್ ಕಾಲೇಜಿನ ಕರ್ನಾಟಕ ಸಂಘದಾಶ್ರಯದಲ್ಲಿ ಮೊನ್ನೆ ಅಂತರ ಕರ್ನಾಟಕ ಸಂಘಗಳ ಸ್ಪರ್ಧೆಯು ಶ್ರೀ॥ ಎ. ವೆಂಕಟೇಶಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಅನೇಕ ಸಂಘಗಳು ಭಾಗ ವಹಿಸಿದ್ದವು. ತಿಲಕ್ ಸಂಘದ ಶ್ರೀ ಎಚ್. ಡಿ. ತುಳಸೀದಾಸರಿಗೂ, ಶ್ರೀ ಬಿ. ವೆಂಕಟಾಚಾರ್ಯರಿಗೂ, ಮಹಾರಾಣಿ ಕಾಲೇಜಿನ ಮಹಿಳಾ ಶಾಖೆಯ ಶ್ರೀಮತಿ ಎಸ್. ಇಂದಿರಾರವರಿಗೂ, ಟ್ರೈನಿಂಗ್ ಕಾಲೇಜು ಕರ್ನಾಟಕ ಸಂಘದ ಅಬ್ದುಲ್ ಜಬ್ಬಾರ್‌ರವರಿಗೂ, ಸೆಂಟ್ ಫಿಲೋಮಿನಾ ಕಾಲೇಜಿನ ಶ್ರೀ ಎಸ್. ಕೃಷ್ಣಪ್ಪನವರಿಗೂ ಕ್ರಮವಾಗಿ ಐದು ಬಹುಮಾನಗಳು ದೊರಕಿದುವು.

ಕೀರ್ತನಕಾರ ಮಂಡಲಿ

ನೋಟ್ಸ್‌ಂಡ ಮಂಡಳಿಯ ಸಾಮಾನ್ಯ ಸಭೆಯು ಮಂಗಲೋತ್ಸವದ ಲೆಕ್ಕದ ಪರಿಶೀಲನೆ ಮತ್ತು ಸಂಘಾಭಿವೃದ್ಧಿಯ ವಿಚಾರ ವಿಮರ್ಶೆಗಾಗಿ ನಾಳೆ ಸಂಜೆ ೪ ಗಂಟೆಗೆ ಕಬೀರ್ ರಸ್ತೆಯಲ್ಲಿರುವ ಶ್ರೀ ಪಾಂಡುರಂಗಸ್ವಾಮಿ ದೇವಸ್ಥಾನದಲ್ಲಿ ನಡೆಯುವುದು. ಕೀರ್ತನಕಾರರೆಲ್ಲರೂ ಸಕಾಲಕ್ಕೆ ಬರಬೇಕೆಂದು ಕೋರಲಾಗಿದೆ. ಸಂಜೆ ೬ ಘಂಟೆಗೆ ಶ್ರೀ ಎಸ್. ಸಂಬಂಧಮೂರ್ತಿದಾಸರವರಿಂದ "ಸತಿಸುಲೋಚನ" ಎಂಬ ಹರಿಕಥೆಯು ನಡೆಯುವುದು.

ಲಂಡನ್ನಿಗೆ ಸಂಧಾನಕ್ಕಾಗಿ ತೆರಳಿದ್ದ ಮಿ॥ ಜಿನ್ನಾರವರೂ, ಲಿಯಾಖತ್ ಅಲಿ ಖಾನರೂ ನಿನ್ನೆ ಬೆಳಗ್ಗೆ ಕರಾಚಿಗೆ ಆಗಮಿಸಿದರು

ಲಕ್ಷ್ಮೀಕಾಂತಂ ಕೊಲೆ ಅಪೀಲು

ಲಕ್ಷ್ಮೀಕಾಂತಂ ಕೊಲೆ ಮೊಕದ್ದಮೆಯಲ್ಲಿ ಅಪಾದಿತರಾಗಿರುವ ಸುಪ್ರಸಿದ್ಧ ಸಿನಿಮಾ ನಟರಾದ ಎನ್. ಎಸ್. ಕೃಷ್ಣನ್ ಮತ್ತು ಎಂ. ಕೆ. ತ್ಯಾಗರಾಜ ಭಾಗವತರು ಸಲ್ಲಿಸಿರುವ ಅಪೀಲು ಕ್ರಿಸ್‌ಮಸ್ ಮುಗಿದನಂತರ ಪ್ರಿವಿ ಕೌನ್ಸಿಲಿನಲ್ಲಿ ಪರಿಶೀಲನೆಗೆ ಬರುವುದಾಗಿ ವರದಿಯಾಗಿದೆ

ವಿಜ್ಞಾನ ಸಮ್ಮೇಳನ

ಅಖಿಲ ಭಾರತ ವಿಜ್ಞಾನ ಸಮ್ಮೇಳನದ ೩೪ನೆ ಅಧಿವೇಶನವು ಬರುವ ಜನವರಿ ೨ನೇ ತಾ॥ ನಿಂದ ೮ನೇ ತಾ॥ ವರೆವಿಗೆ ದೆಹಲಿಯ ವಿಶ್ವವಿದ್ಯಾನಿಲಯದ ಆವರಣದಲ್ಲಿ ನಡೆಯುವುದು. ಪಂಡಿತ ಜವಹರಲಾಲ ನೆಹರೂರವರು ಅಧ್ಯಕ್ಷತೆ ವಹಿಸುವರು. ಸಮ್ಮೇಳನಕ್ಕೆ ಪ್ರಖ್ಯಾತ ವೈಜ್ಞಾನಿಕರೂ, ರಾಯಲ್ ಸೊಸೈಟಿಯ ಅಧ್ಯಕ್ಷರೂ ಆದ ಸರ್ ರಾಬರ್ಟ್ ರಾಬಿನ್ಸನ್ ಮತ್ತು ರಷ್ಯದ ವಿಜ್ಞಾನ ಸಮ್ಮೇಳನದ ಅಧ್ಯಕ್ಷ ವಾವಿಲಾವ್ ರವರೂ ಬರುವರೆಂದು ಹೇಳಲಾಗಿದೆ

ಗಂಟೆಗೆ ೩೦೦೦ ಮೈಲಿ ರಾಕೆಟ್

ಲಂಡನ್ನಿನಿಂದ ಬೂಟಾವಿಗೆ ಒಂದೇ ಗಂಟೆಯಲ್ಲಿ ಹಾರಿ ಬರಬಲ್ಲ ರಾಕೆಟ್ ವಿಮಾನದ ಪ್ರಯೋಗವನ್ನು ಅಮೆರಿಕದ ಸೈನ್ಯ ಶಾಖೆಯವರು ಈಗ ತಾನೇ ನಡೆಸಿದ್ದಾರೆ. ಭೂಮಿಯಿಂದ ೧೧೪ ಮೈಲಿ ಎತ್ತರದಲ್ಲಿ ಇದು ಹಾರಾಡುವುದು. ಜರ್ಮನಿಯವರು ಕಂಡು ಹಿಡಿದಿದ್ದ ವಿ-೨ ಅಸ್ತ್ರದ ಮಾದರಿಯಲ್ಲಿಯೇ ಇದು ತಯಾರಾಗಿರುವುದು. ಅದರ ರಚನೆಯ ವಿವರಗಳನ್ನು ಗುಪ್ತವಾಗಿಡಲಾಗಿದೆ

ಬಿಹಾರ್ ಪ್ರಧಾನಿಗಳ ಆಗಮನ

ಬಿಹಾರ್ ಪ್ರಾಂತದ ಪ್ರಧಾನ ಮಂತ್ರಿಗಳಾದ ಶ್ರೀ ಹರಿಕೃಷ್ಣ ಸಿಂಹರವರು ಈ ತಿಂಗಳ ಅಂತ್ಯದಲ್ಲಿ ಬೆಂಗಳೂರಿಗೆ ಭೇಟಿ ಕೊಡುವರೆಂದು ಗೊತ್ತಾಗಿದೆ.

ಪ್ರತಿಬಂಧಕಾಜ್ಞೆ

ಸ್ವಂ. ವ] ಚಾಮರಾಜನಗರ ೨೧

ಇಲ್ಲಿನ ಡಿಸ್ಟ್ರಿಕ್ಟ್-ಮ್ಯಾಜಿಸ್ಟ್ರೇಟರು ಕ್ರಿ॥ ಪ್ರೊ॥ ಕಾನೂನಿನ ೧೪೪ ನೇ ಸೆಕ್ಷನ್ ಪ್ರಕಾರ ಇದೇ ೧೯ ನೇ ತಾ॥ ನಿಂದ ಎರಡು ತಿಂಗಳ ಕಾಲ ಇಲ್ಲಿ ಯಾವ ಸಾರ್ವಜನಿಕ ಸಭೆ ಮತ್ತು ಮೆರವಣಿಗೆಗಳೂ ನಡೆಯಕೂಡದೆಂದು ಪ್ರತಿಬಂಧಕಾಜ್ಞೆ ಹೊರಡಿಸಿದ್ದಾರೆ

ಜಪಾನಿನಲ್ಲಿ ಭಾರಿ ಭೂಕಂಪ

೧೯೨೩ ನೇ ಇಸವಿಯಿಂದ ಇದುವರೆವಿಗೆ ಆಗದಿದ್ದ ಭಾರೀ ಭೂಕಂಪವು ಒಸಾಕ ದ್ವೀಪದ ಬಳಿ ಪ್ರಾರಂಭವಾಗಿ ಕಡೆಯ ಪಕ್ಷ ಸಾವಿರ ಮಂದಿ ಮಡಿದಿರುವರೆಂದು ವರದಿಯಾಗಿದೆ. ಏಳು ಅಡಿ ಎತ್ತರದ ಸಮುದ್ರದ ಅಲೆಗಳು ದ್ವೀಪದ ನಗರಗಳೊಳಕ್ಕೆ ನುಗ್ಗಿ ಸುಮಾರು ಸಾವಿರ ಮನೆಗಳನ್ನು ಮುಳುಗಿಸಿವೆ. ಅನೇಕ ಸಾವಿರ ಮನೆಗಳೂ ಮುಳುಗಿ ಸಹಸ್ರಾರು ಜನ ಮರಣ ಹೊಂದಿರಬೇಕೆಂದು ಮಧ್ಯ ಜಪಾನ್ ದ್ವೀಪಗಳಾದ ಹಾನ್‌ಶು ಮತ್ತು ಷಿಕೋಕುಗಳಿಂದ ವಾರ್ತೆ ಬಂದಿದೆ. ಕ್ಯೋಟೋ ನಗರ, ಕೋಬೆ ಮತ್ತು ನಾಗೋಯ ಪಟ್ಟಣಗಳೂ ನಡುಗಿದವೆಂದು ತಿಳಿದುಬಂದಿದೆ. ಆದರೆ ಅಲ್ಲಿ ನಷ್ಟವೇನೂ ಸಂಭವಿಸಿಲ್ಲ.

ಇಂಡೋ-ಚೀಣಾದಲ್ಲಿ ಕದನ

ವೈಯಟ್‌ನಾಮ್ ಇಂಡೋ-ಚೀಣಾ ಸರ್ಕಾರದ ಆರ್ಥಿಕ ಮತ್ತು ಮಾರ್ಗಾನು ಕೂಲ ಕಚೇರಿಗಳನ್ನು ಫ್ರೆಂಚ್ ಸೈನ್ಯಗಳು ಹಿಡಿದುಕೊಂಡಿವೆ. ವೈಯಟ್‌ನಾಂ ಸರ್ಕಾರವು ತನ್ನ ಕೇಂದ್ರ ಸ್ಥಾನವನ್ನು ಬಿಟ್ಟು ಬೇರೆ ಕಡೆಗೆ ವರ್ಗಾಯಿಸಿದೆ

ಗಂಟೆಗೆ ೫೭೦ ಮೈಲಿ ವಿಮಾನ ಯಾನ

ಬ್ರಿಟಿಷ್ ವಿಮಾನವೊಂದನ್ನು ನಡೆಸುತ್ತಿದ್ದ ಜೆ. ಪ್ರೈಸ್ ಎಂಬ ವೈಮಾನಿಕನು ವಿಮಾನ ವೇಗದ ಹೊಸ ರೆಕಾರ್ಡನ್ನು ಸ್ಥಾಪಿಸಿರುವುದಾಗಿ ಹೇಳಲಾಗಿದೆ. ಈತನು ಲಿಟಲ್‌ಸ್ಟೋನಿನಿಂದ ಕ್ಲಾಯ್‌ಡನ್ ಏರೋಡ್ರಮಿಗೆ ಇರುವ ೬೦೦ ಮೈಲಿ ದೂರವನ್ನು ೫೩ ನಿಮಿಷ ೩೭ ಸೆಕೆಂಡುಗಳಲ್ಲಿ ಸಂಚರಿಸಿ ಮುಗಿಸಿದ್ದಾನೆ. ಇದರಿಂದ ವಿಮಾನ ವೇಗದ ಪ್ರಮಾಣ ಗಂಟೆಗೆ ೫೭೦ ಮೈಲಿಗಳಾಗುವುದು.

ರಾ॥ ಸಭೆಯಲ್ಲಿ ನಿರ್ಣಯದ ಚರ್ಚೆ ಮುಂದೆ ಹೋಯಿತು

ರಾಜ್ಯಾಂಗ ಸಭೆಯಲ್ಲಿ ಸಭೆಯ ಉದ್ದೇಶಗಳನ್ನು ವಿವರಿಸುವ ನಿರ್ಣಯವು ಜನವರಿಯಲ್ಲಿ ಚರ್ಚೆಗೆ ಬರುವುದೆಂದೂ ಈ ರೀತಿ ಮುಂದುವರಿಸಿರುವುದರಿಂದ ಈಗ ಹಾಜರಾಗಿರುವ ಸದಸ್ಯರೂ ಅದರಲ್ಲಿ ಭಾಗಿಗಳಾಗಬಹುದೆಂದೂ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರು ಹೇಳಿರುವರು

ಸಂಧಾನ ಸಮಿತಿ

ಪಂ॥ ನೆಹರೂ, ಮೌ॥ ಆಜಾದ್, ಸ॥ ಪಟೇಲ್, ಡಾ॥ ಪಟ್ಟಾಭಿ, ಶಂಕರರಾವ್ ದೇವ್ ಮತ್ತು ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ಯ ರೊಡಗೂಡಿದ ಸಮಿತಿಯು ರಾಜರುಗಳು ಸ್ಥಾಪಿಸಿರುವ ಸಂಧಾನ ಸಮಿತಿಯೊಡನೆ ವ್ಯವಹಾರ ನಡೆಸಿ ಸಂಸ್ಥಾನಗಳಿಂದ ರಾಜ್ಯಾಂಗ ಸಭೆಗೆ ಬರುವ ಪ್ರತಿನಿಧಿಗಳ ವಿಚಾರವನ್ನು ನಿರ್ಧರಿಸಬೇಕೆಂದು ಶ್ರೀ ಕೆ. ಎಂ. ಮುನ್ಷಿಯವರು ತಂದ ನಿರ್ಣಯವು ರಾಜ್ಯಾಂಗ ಸಭೆಯಲ್ಲಿ ಅಂಗೀಕರಿಸಲ್ಪಟ್ಟಿದೆ.

ವಾರ್ಷಿಕೋತ್ಸವ

ಚಾಮುಂಡಿಪುರದಲ್ಲಿರುವ ಯಂಗ್ ಬಾಯ್ಸ್ ಅಸೋಸಿಯೇಷನ್ನಿನ ನಾಲ್ಕನೇ ವಾರ್ಷಿಕೋತ್ಸವವು ನಿನ್ನೆ ದಿನ ಡಿ. ಬನುಮಯ್ಯನವರ ಹೈಸ್ಕೂಲಿನಲ್ಲಿ ನಡೆಯಿತು. ಶ್ರೀ ವಿದ್ಯಾವಿಲಾಸ ಸ್ಕೂಲಿನ ಭೌತಶಾಸ್ತ್ರದ ಪ್ರಾಧ್ಯಾಪಕರಾದ ಶ್ರೀ ... ರವರು ಅಧ್ಯಕ್ಷತೆ ವಹಿಸಿದ್ದರು.

ಸಾಧ್ವಿ

ತಾ|| ೨೨-೧೨-೪೬ ಭಾನುವಾರ

ಪರಮಾಧಿಕಾರದ ಗೊಂದಲ

ಬ್ರಿಟಿಷರು ಭಾರತವನ್ನು ಬಿಟ್ಟು ಹೊರಡುವುದಾಗಿ ಬಾಯಿಮಾತಿನಲ್ಲಿ ಹೇಳುವುದೇ ತಡ, ಅನೇಕ ರಾಜಕೀಯ ಮತ್ತು ಇತರ ಕ್ಷೇತ್ರಗಳಲ್ಲಿ ಅಧಿಕಾರದ ಸಂಚಿಕೆಯ ಜಿಜ್ಞಾಸೆಯು ಹರಡಿರುತ್ತದೆ. ಮುಸ್ಲಿಂ ಲೀಗಿಗೂ ಕಾಂಗ್ರೆಸ್ಸಿಗೂ ಈ ವಿಷಯದಲ್ಲಿ ಅಪರಿಹಾರ್ಯವಾದ ಭಿನ್ನಾಭಿಪ್ರಾಯವೇ ಹುಟ್ಟಿಕೊಂಡಿರುತ್ತದೆ. ದಿನೇ ದಿನೇ ಇದು ಹೆಚ್ಚುತ್ತಲೂ ಇದೆ. ಹಿಂದೂ ಮಹಾಸಭೆ, ಸಿಕ್ ಜನಾಂಗ, ನಿಮ್ನ ಪಕ್ಷ ಮುಂತಾದ ಕೋಮುವಾರು ವರ್ಗಗಳೂ ತಮ್ಮ ತಮ್ಮ ಬೇಡಿಕೆಗಳನ್ನು ಬಗೆಬಗೆಯಾಗಿ ಒತ್ತಾಯಪಡಿಸುತ್ತಿವೆ.

ಬ್ರಿಟಿಷರು ತಮ್ಮ ಅಧಿಕಾರವನ್ನು ಎಂದಿಗೆ ಸಂಪೂರ್ಣವಾಗಿ ಬಿಟ್ಟುಕೊಟ್ಟು ಹಿಂತಿರುಗುವರೋ, ಯಾವ ರೀತಿಯಲ್ಲಿ ಹೋಗುವರೋ, ಅಷ್ಟರೊಳಗೇ ಇನ್ನೂ ಏನೇನು ಅವಸ್ಥೆಗಳು ನಡೆಯಬೇಕೋ ಖಚಿತವಾಗಿ ಗೊತ್ತಾಗಿರುವುದಿಲ್ಲ. ಹೊರಟು ಹೋಗುವುದಾಗಿ ಮಾತ್ರ ಅವರು ಹೇಳುತ್ತಾರೆ. ಮತ್ತು ತಾವು ಹೋದ ಮೇಲೆ ತಮ್ಮ ಅಧಿಕಾರವು ಈ ದೇಶದ ಪ್ರಜಾಕೋಟಿಗೆ ವರ್ಗಾಯಿಸಲ್ಪಡುವುದೆಂದೂ ಸೂಚಿಸುತ್ತಾರೆ. ಹಿಂದೂಸ್ಥಾನದಲ್ಲಿರುವ ನಲವತ್ತು ಕೋಟಿ ಭಾರತೀಯರೇ ತಮ್ಮ ಭವಿಷ್ಯವನ್ನು ನಿರ್ಧರಿಸಿಕೊಳ್ಳಬೇಕೆಂದು ತಿಳಿಸಿದ್ದಾರೆ.

ಸಂಸ್ಥಾನಗಳಿಗೆ ಸಂಬಂಧಪಟ್ಟಂತೆ ಈ ಅಂತರದಲ್ಲಿ ಹುಟ್ಟಿಕೊಂಡಿರುವ ಒಂದು ವಾದವು ವಿನೋದಕರವಾಗಿ ಪರಿಣಮಿಸಿರುತ್ತದೆ. ಬ್ರಿಟಿಷರು ಹೋದಮೇಲೆ ಈ ದೇಶದ ಪರಮಾಧಿಕಾರವು ಇಲ್ಲಿನ ಪ್ರಜೆಗಳಿಗೆ ವರ್ಗವಾಗುವುದೆಂದು ಅವರೇ ಹೇಳಿರುವರು. ಇದನ್ನು ಪುಷ್ಟೀಕರಿಸಿ ತಾತ್ಕಾಲಿಕದ ಮಾಜಿ ದಿವಾನರಾದ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ಯರವರು ರಾಜ್ಯಾಂಗ ಸಭೆಯಲ್ಲಿ ಭಾಷಣಮಾಡಿ ಪ್ರಜೆಗಳಿಂದ ಚುನಾಯಿತರಾದ ಪ್ರತಿನಿಧಿಗಳೇ ಸಂಸ್ಥಾನಗಳ ಪರವಾಗಿ ರಾಜ್ಯಾಂಗ ಸಭೆಗೆ ಕಳುಹಿಸಲ್ಪಡಬೇಕೆಂದು ತಿಳಿಸಿರುವರು. ರಾಜರುಗಳ ಸಾರ್ವಭೌಮತ್ವವು ಪ್ರಜೆಗಳಿಂದಲೇ ಬಂದುದಾಗಿದೆಯೆಂದೂ, ಪ್ರಜೆಗಳೇ ಮೂಲತಃ ರಾಜ್ಯದ ಪರಮಾಧಿಕಾರಿಗಳೆಂದೂ ಅವರು ಹೇಳಿರುವರು. ಮದರಾಸಿನ ಮಾಜಿ ಅಡ್ವೊಕೇಟ್ ಜನರಲ್ಲರಾದ ಸರ್ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರವರು ಇದನ್ನೇ ಪುಷ್ಟೀಕರಿಸಿರುವರು. ರಾಜರುಗಳೇ ಸರ್ವಾಧಿಕಾರಿಗಳೆಂದು ಹೇಳುವ ಅಭಿಪ್ರಾಯವು ಓಬೀರಾಯನ ಕಾಲಕ್ಕೆ ಸೇರಿದುದೆಂದು ಅವರು ತಿಳಿಸಿರುವರು.

ಈ ಅಭಿಪ್ರಾಯವು ತಿರುವಾಂಕೂರು ದಿವಾನರಾದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರವರಿಗೆ ವಿರೋಧವಾಗಿ ಕಂಡು ಬಂದಿರುತ್ತದೆ. ಪರಮಾಧಿಕಾರವು ಅಲ್ಲಿನ ರಾಜರಿಗೆ ತಾನಾಗಿಯೇ ಬಂದಿರುತ್ತದೆಯೆಂದೂ, ಅವರು ರಾಜ್ಯವನ್ನು ಜಯಿಸಿ ಗಳಿಸಿರುವುದೇ ಇದಕ್ಕೆ ಕಾರಣವೆಂದೂ ಅವರು ಹೇಳುವರು. ನಮ್ಮ ಸಂಸ್ಥಾನದ ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ರವರೂ ಸಹ ಪ್ರಜೆಗಳ ಪರಮಾಧಿಕಾರದ ತತ್ವವನ್ನು ವಿರೋಧಿಸಿರುವರು. ಇಲ್ಲಿನ ಪ್ರಜೆಗಳಿಗಿರುವ ರಾಜಭಕ್ತಿ ಭಾವನೆಗೆ ಇದು ವ್ಯತಿರೇಕವಾಗಿರುವುದೆಂದೂ ಸೂಚಿಸಿರುವರು.

ಈಚೆಗೆ ಇನ್ನೊಬ್ಬ ಮಹನೀಯರು ಈ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು. ಅವರು ನಮ್ಮ ಸಂಸ್ಥಾನದ ಮಾಜಿ ಮಂತ್ರಿಗಳೂ, ಗ್ವಾಲಿಯರ್ ಸಂಸ್ಥಾನದ ಇಂದಿನ ಮಂತ್ರಿಗಳೂ ಆದ ಸರ್ ರಾಜಮಂತ್ರಪ್ರವೀಣ ಎಸ್. ಪಿ. ರಾಜಗೋಪಾಲಾಚಾರಿಯವರು. ರಾಜ್ಯದ ಮೂಲಭೂತ ಅಧಿಕಾರವು ಪ್ರಜೆಗಳಲ್ಲಿಯೇ ಇರುವುದೆಂದೂ, ರಾಜರುಗಳಲ್ಲಿ ಅದು ಇರುವುದೆಂದು ಹೇಳುವುದು ಸರಿಯಲ್ಲವೆಂದೂ, ಹಾಗೆ ಹೇಳುವುದರಿಂದಲೇ ಇಲ್ಲದ ಸಲ್ಲದ ಭಿನ್ನಾಭಿಪ್ರಾಯಗಳಿಗೆ ಕಾರಣವಾಗಿರುವುದೆಂದೂ ಅವರು ತಿಳಿಸಿರುವರು.

ಹೀಗೆ ಮಾಜಿ ದಿವಾನರುಗಳೂ, ಇಂದಿನ ಸಚಿವ ಶ್ರೇಷ್ಠರುಗಳೂ ಈ ವಿಷಯದಲ್ಲಿ ಪರಸ್ಪರ ವಿರುದ್ಧವಾದ ಅಭಿಪ್ರಾಯಗಳನ್ನು ಸೂಚಿಸುತ್ತಿರುವುದು ವಿಚಾರಾಸ್ಪದವಾದ ವಿಷಯವಾಗಿದೆ. ಈಗಿರುವಂತೆಯೂ ಸಂಸ್ಥಾನಗಳು ಒಂದೇ ಬಗೆಯ ಸ್ಥಾನಮಾನವನ್ನು ಹೊಂದದಿರುವುದು ಇದಕ್ಕೆ ಒಂದು ಪ್ರಬಲವಾದ ಕಾರಣ. ಸ್ವತಂತ್ರ ಸಂಸ್ಥಾನಗಳೆಂದೂ, ಸಣ್ಣದು ಸಂಸ್ಥಾನಗಳೆಂದೂ, ಕೌಲು ಕರಾರುಗಳ ಸಂಸ್ಥಾನಗಳೆಂದೂ, ಕುಟಿಲ ಕೋಷ್ಠಗಳ ಸಂಸ್ಥಾನಗಳೆಂದೂ ಬಗೆಬಗೆಯಾಗಿ ಕರೆಯಲ್ಪಡುವ ಪ್ರದೇಶಗಳು ಇರುತ್ತವೆ. ಅವುಗಳೆಲ್ಲಕ್ಕೂ ಒಂದೇ ರೀತಿಯ ಸಾರ್ವಭೌಮತ್ವವನ್ನು ಬ್ರಿಟಿಷರೂ ಅಂಗೀಕರಿಸಿರುವುದಿಲ್ಲ. ರಾಜರುಗಳೆಲ್ಲರೂ ಸಾರ್ವಭೌಮತ್ವವನ್ನು ಹೊಂದಿರುವರೆಂದು ಬಳಕೆಯಲ್ಲಿ ಹೇಳಲ್ಪಡುತ್ತಿದೆಯಾದರೂ ಅನೇಕ ರಾಜರ ಸಾರ್ವಭೌಮತ್ವವು ಪರಿಮಿತವಾದದ್ದು. ಪರಿಮಿತ ಸಾರ್ವಭೌಮತ್ವವನ್ನು ಪರಮಾಧಿಕಾರದೊಡನೆ ಹೋಲಿಸಿ ತಪ್ಪು ತಿಳುವಳಿಕೆಯನ್ನು ಉಂಟುಮಾಡಿಕೊಂಡಿರುವುದೇ ಇಂದಿನ ಗೊಂದಲಕ್ಕೆ ಮುಖ್ಯ ಕಾರಣ.

ನೂತನ ರಾಜ್ಯಾಂಗದಲ್ಲಿ ದೇಶೀಯ ರಾಜರುಗಳಿಗೂ ಸ್ಥಾನಮಾನಗಳನ್ನು ಕಲ್ಪಿಸಿಕೊಡಬೇಕೆಂದು ರಾಷ್ಟ್ರನಾಯಕರು ಅಭಿಪ್ರಾಯಪಟ್ಟಿದ್ದಾರೆ. ಅವರುಗಳು ನಿಜವಾದ ಸಾರ್ವಭೌಮತ್ವವನ್ನು ಹೊಂದಿರಬೇಕಲ್ಲದೆ ಪರಕೀಯರಿಂದ ದತ್ತವಾದ ಅಧಿಕಾರವನ್ನು ಹೊಂದಿರಬಾರದೆಂಬುದೇ ಎಲ್ಲರ ಆಶಯವಾಗಿದೆ. ಹೀಗೆ ಹೇಳುವುದರಿಂದ ಪ್ರಜೆಗಳ ರಾಜಭಕ್ತಿಗೆ ಕುಂದಕವುಂಟಾಗುವುದೆಂಬ ಸೂಚನೆಯು ನಿರಾಧಾರವಾದುದು. ಇಂಗ್ಲೆಂಡಿನಲ್ಲಿ ಬ್ರಿಟಿಷ್ ಸಾರ್ವಭೌಮರು ಸಾಂಕೇತಿಕ ಪ್ರಭುಗಳಾಗಿ ಆಡಳಿತ ನಡೆಸುತ್ತಿದ್ದಾರೆ. ರಾಷ್ಟ್ರಕ್ಕೆ ಅವರೇ ಸಾರ್ವಭೌಮರು. ಆದರೆ ರಾಜ್ಯದ ಪರಮಾಧಿಕಾರವು ಬ್ರಿಟನ್ನಿನ ಪ್ರಜೆಗಳಲ್ಲಿಯೇ ಅಂತರ್ಗತವಾಗಿದೆಯೆಂಬುದು ಪ್ರತಿಯೊಬ್ಬ ಬ್ರಿಟಿಷ್ ಪ್ರಜೆಯು ಹೆಮ್ಮೆಯ ಭಾವನೆ. ಪ್ರಜೆಗಳ ಪರಮಾಧಿಕಾರಕ್ಕೂ ರಾಜರ ಸಾರ್ವಭೌಮತ್ವಕ್ಕೂ ಪರಸ್ಪರ ವಿರೋಧವಿರಬೇಕಾದ್ದಿಲ್ಲವೆಂಬುದನ್ನು ಮನಗಂಡರೆ ಇಂಥ ಜಿಜ್ಞಾಸೆಯು ಬಗೆಹರಿಯುವುದರಲ್ಲಿ ಸಂಶಯವಿಲ್ಲ.

ಅಪೆರಾ ಟಾಕೀಸ್

ತಾ|| 20-12-46 ರಿಂದ

ಪ್ರತಿದಿನ ಮೂರು ಆಟಗಳು

ನಾರದ ನಾರದಿ

ನಾರದ ನಾರದಿ

(ತೆಲುಗು ಭಾಷೆ)

ಸೂರಿ ಬಾಬು, ಉಮಾ ಮಹೇಶ್ವರ ರಾವ್, ಲಕ್ಷ್ಮೀರಾಜ್ಯಂ, ಸೌದಾಮಿಣಿ

ಶೀಘ್ರದಲ್ಲಿಯೇ ನಿಮ್ಮ ಮೆಚ್ಚಿನ ನ್ಯೂ ಅಪೆರಾ ಟಾಕೀಸಿನಲ್ಲಿ ಬರುವ ತಾರೀಖನ್ನು ಗಮನಿಸಿರಿ

ತಮಿಳುನಾಡು ಟಾಕೀಸ್‌ರವರ

............ಸುಪ್ರಸಿದ್ಧ ಪೌರಾಣಿಕ ಚಿತ್ರ............

ಮೋಹಿನಿ

ರುಕ್ಮಾಂಗದ

(ತಮಿಳು ಭಾಷೆ)

ಎಮ್. ಎಸ್. ವಿಜಯಾಳ್, ಪಿ. ಬಿ. ರಂಗಾಚಾರ್ ಕೆ. ಬಿ. ಶಾರದಾಂಬಾಳ್, ವಿದ್ವಾನ್ ಶ್ರೀನಿವಾಸನ್, ಎಂ. ಆರ್. ಸುಬ್ರಹ್ಮಣ್ಯಂ ಮತ್ತು ಇತರರು ನಟಿಸಿರುವರು

ನಿರ್ದೇಶಕರು :- ಎಸ್. ಸೌಂದರ್‌ರಾಜನ್ : ಸ್ಟುಡಿಯೊ :- ರಣಜಿತ್-ಬೊಂಬಾಯಿ

For Bookings to :-Mysore State, South Canara & Coorg
Apply to :-SRI MAHALAKSHMI PICTURES,
No 8, Hospital Road, Bangalore City.

ರಾಜಕಮಲ್, ಮೈಸೂರು

೨೦-೧೨-೪೬ ರಿಂದ ೭ ನೇ ಮತ್ತು ಕೊನೇ ವಾರ

ಡಾಕ್ಟರ್ ಕೋಟ್ನಿಸ್ ಕಿ ಅಮರ್ ಕಹಾನಿ

ತಾರಾಗಣ: — ಜಯಶ್ರೀ, ಶಾಂತಾರಾಂ, ಇತರರು.

20-12-46 ರಿಂದ 7 ದಿನಗಳು ಪ್ರಾತಃಕಾಲ 10-30 ಕ್ಕೆ

ಬಾಂಬೆ ಟಾಕೀಸ್ ರವರ ' ಬಂಧನ್ '

ಭೂಮಿಕೆ:- ಲೀಲಾ ಚಿಟ್ನಿಸ್, ಅಶೋಕ ಕುಮಾರ್.

(ಹೊಸ ಕಾಪಿ, Brand New Print)

ಕೊಲ್ಲಾಪುರದಲ್ಲಿ ಸತ್ಯಾಗ್ರ

ಕೊಲ್ಲಾಪುರದ ಪ್ರಜಾಮಂಡಲದ ... ದ್ರ ಸಮಿತಿಯವರು ತಮ್ಮ ಸಂಸ್ಥಾ... ಸತ್ಯಾಗ್ರಹಕ್ರಮ ಕೈಗೊಳ್ಳಲು ಅಪ್ಪಣೆ... ಯುವುದಕ್ಕಾಗಿ ಅಖಿಲ ಭಾರತ ಸಂ... ಪ್ರಜಾಸಮ್ಮೇಳನದ ಅಧ್ಯಕ್ಷರಾದ ಡಾ... ಟ್ಟಾಭಿ ಸೀತಾರಾಮಯ್ಯನವರನ್ನು ... ದ್ದರು. ಸಂಸ್ಥಾನದ ಪ್ರಜೆಗಳಿಗೆ ಅಧಿ... ವಹಿಸಿಕೊಡುವುದು ಮತ್ತು ಜನಾಸ... ಸರ್ಕಾರ ಸ್ಥಾಪನೆಗಾಗಿ ಒತ್ತಾಯ... ವುದೇ ಸತ್ಯಾಗ್ರಹದ ಉದ್ದೇಶ. ಸಂ... ಪ್ರಜಾಮಂಡಲದ ನಾಯಕರಾದ ಮಿ... ಕೆ. ಬಾಗಲ್‌ರವರು ಡಾ|| ಪಟ್ಟಾಭಿ... ರಿಗೆ ಅಲ್ಲಿನ ಸ್ಥಿತಿಗತಿಗಳನ್ನು ವಿವ... ಮಾಡಿಕೊಡಲು ದೆಹಲಿಗೆ ಹೊರಟಿರುವ...

ನಂಜನಗೂಡು ಆರ್ಯವೈಶ್ಯ ಕ್ಷತ್ರಿಯ ಮಂಡಲಿಯವರ

ಸಿದ್ಧಪ್ಪಾಜಿ ಉತ್ಸ...

೨೩-೧೨-೪೬ನೇ ಸೋಮವಾ...

ಈ ಉತ್ಸವಕ್ಕೆ ಅಖಿಲ ಇಂಡಿಯಾ ರೇಡಿಯೋ ನಾಗಸ್ವರ

ವಿದ್ವಾನ್ ಕೃಷ್ಣನ್, ನಾಮಗಿರಿಪೇಟೆ, ಸುಬ್ರಹ್ಮಣ್ಯಂ, ರಾಮನಾಥಪುರ.

ತವಿಲ್

ಅರ್ಮುಗಂ, ಸಿರಿಚಿಕೋವಿಲ್, ಆಲಂಗುಡಿ ದಕ್ಷಿಣಾಮೂರ್ತಿ.

ತನಿ: ವಿಲ್

ರಂಗಾಪುರಂ ವೆಂಕಟಪ್ಪ, ಬೆಂಗಳೂರು

ಕಾರ್ಯದರ್ಶಿ-ಮಹದೇವಪ್ಪ, ನಂಜನಗೂಡು.

ಮೈಸೂರು ಸಿಟಿ ಮುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರವರ ಆಫೀಸಿನಿಂದ

ಹರಾಜು ಇಸ್ತಿಹಾರ

ಮೈಸೂರು ಸಿಟಿ ಬಿಲ್ಲೆ ಮೊಹಲ್ಲಾ ಇ... ಮಾನಾಜಿ ರಸ್ತೆಯಲ್ಲಿರುವ ಮೈಸೂರು ಸಿಟಿ ಮುನಿಸಿಪಾಲಿಟಿಯವರು ಕಟ್ಟಿಸಿರು... ಏಳು ಮಾದರಿ ಮನೆಗಳನ್ನು ತಾರೀ... ೨೦-೧-೧೯೪೭ ನೇ ಸೋಮವಾರ ದಿನ ... ತ್ತು ಘಂಟೆಗೆ ಬಹಿರಂಗವಾಗಿ ಹರಾಜು ಮಾ... ಡಲಾಗುತ್ತೆ. ಇಷ್ಟವುಳ್ಳವರು ಖುದ್ದಾಗಿ ಹರಾಜಿನಲ್ಲಿ ಭಾಗ ವಹಿಸಿ ಮಾಡಿ ಸದರಿ ಮನೆಗಳನ್ನು ಪಡೆಯಬಹುದು. ಹೆಚ್ಚಿಗೆ ವಿವರಗಳನ್ನು ತಿಳಿಯಲಪೇಕ್ಷೆಯುಳ್ಳವರು ಮೈಸೂರು ಸಿಟಿ ಮುನಿಸಿಪಲ್ ಇಂಜನಿಯರವರ ಆಫೀಸಿನ... ಮಧ್ಯಾಹ್ನ ಮೂರು ಘಂಟೆಯಿಂದ ಐದು ಘಂಟೆಯವರೆಗೆ ಆಫೀಸು ದಿವಸಗಳಲ್ಲಿ ತಿಳಿದುಕೊಳ್ಳಬಹುದು.

(ಸಹಿ) ಕೆ. ಜಿ. ಶಾಸ್ತ್ರಿ,
ಪ್ರೆಸಿಡೆಂಟರಿಗಾಗಿ

Edited, printed and published by A. R. Nagarajan at the Sadhvi Press D-Subbiah Road, Mysore

ರೀ. ನಂ. 392 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೧] ಸೋಮವಾರ ೨೩—೧೨—೪೬ [ಸಂಚಿಕೆ ೨೧

ಫೆಡರಲ್ ಕೋರ್ಟಿಗೆ ಕಾಂಗ್ರೆಸ್ಸು ಒಪ್ಪುವುದಿಲ್ಲ

ಮಹಾರಾಜರಿಂದ ಮಹಾತ್ಮರ ಪ್ರಶಂಸೆ.

ಪ್ರಪಂಚದ ಎಲ್ಲ ಜನರ ಬಾಯಲ್ಲಿಯೂ ಮಹಾತ್ಮ ಗಾಂಧಿಯವರ ಪವಿತ್ರ ನಾಮವು ಸ್ಮರಿಸಲ್ಪಡುತ್ತಿದೆ. ಅವರ ಮಹಿಮೆಯನ್ನು ಎಷ್ಟು ಹೊಗಳಿದರೂ ಸಾಲದು ಎಂಬುದಾಗಿ ಪೋರ್ ಬಂದರಿನ ಮಹಾರಾಜರವರು ಹೇಳಿರುವರು. ಗಾಂಧಿಯವರು ಹುಟ್ಟಿದ್ದು ಅವರ ದೇಶದಲ್ಲೇ. ಅವರು ಹುಟ್ಟಿದ ಮನೆಯ ಬಳಿ ಒಂದು ರಾಷ್ಟ್ರೀಯ ಭವನವನ್ನು ಕಟ್ಟಲು ಪ್ರಯತ್ನ ನಡೆಯುತ್ತಿವೆ. ಇದಕ್ಕಾಗಿ ಸೇರಿದ್ದ ಸಭೆಯಲ್ಲಿ ರಾಜರು ಮೇಲ್ಕಂಡಂತೆ ಭಾಷಣ ಮಾಡಿದರು.

ಪಾರ್ಲಿಮೆಂಟನ್ನೂ ಎದುರಿಸಬಹುದು

ಅಸ್ಸಾಮಿನ ಕಾಂಗ್ರೆಸ್ಸಿನವರೊಡನೆ ಮಾತನಾಡುತ್ತ ಗಾಂಧಿಜಿಯವರು ಅಸ್ಸಾಂನ ಯೋಗಕ್ಷೇಮವನ್ನು ತಾನೇ ನೋಡಿಕೊಂಡು ತನ್ನ ರಾಜ್ಯಾಂಗವನ್ನು ತಾನೇ ರಚಿಸಿಕೊಳ್ಳಬೇಕೆಂದು ಹೇಳಿರುವರು. ಮುಸ್ಲಿಮರೇ ಅಲ್ಲದೆ ಇತರರೂ ಬಹು ಸಂಖ್ಯೆಯಲ್ಲಿ ಸೇರಿ ಒಂದು ರಾಜ್ಯಾಂಗವನ್ನು ರಚಿಸಿದಲ್ಲಿ ಬ್ರಿಟಿಷರು ಮಧ್ಯೆ ಪ್ರವೇಶಿಸಿದರೆ ಪಾರ್ಲಿಮೆಂಟನ್ನೂ ಸಹ ನೀವು ಎದುರಿಸಿ ನಿಮ್ಮ ಗುರಿಯನ್ನು ಸಾಧಿಸಬಹುದು. ಆಗ ನಿಮ್ಮ ಅಧಿಕಾರವು ನಿಮ್ಮ ಕೈಯಲ್ಲಿಯೇ ಇರುತ್ತದೆ, ಎಂದು ಅವರು ತಿಳಿಸಿರುವರು.

ಫೆಡರಲ್ ಕೋರ್ಟಿಗೆ ಒಪ್ಪಿಸುವುದಿಲ್ಲ

ಬ್ರಿಟಿಷ್ ನಿಯೋಗದವರ ಹೇಳಿಕೆಯಲ್ಲಿ ಪ್ರಾಂತಗಳ ವರ್ಗೀಕರಣದ ವಿಷಯವಾಗಿ ಕೊಡಲಾಗಿರುವ ಅಧ್ಯಾಯದ ಅರ್ಥ ವಿವರಣೆಯನ್ನು ಫೆಡರಲ್ ನ್ಯಾಯಾಸ್ಥಾನದಿಂದ ಪಡೆಯುವ ಅಗತ್ಯವಿಲ್ಲವೆಂದು ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನಿರ್ಧರಿಸಿರುತ್ತದೆ. ಈ ತಿಂಗಳು ೬ನೇ ತಾ|| ಬ್ರಿಟಿಷ್ ಮಂತ್ರಿಮಂಡಲದವರು ಈ ಬಗ್ಗೆ ತಮ್ಮದೇ ಆದ ವಿವರಣೆಯನ್ನು ಕೊಟ್ಟಿರುವರು. ಇದು ಮೊದಲನೆಯ ಘೋಷಣೆಯನ್ನು ಹೆಚ್ಚಿಸಿದಂತೆಯೂ ಮಾರ್ಪಡಿಸಿದಂತೆಯೂ ಇರುವುದಾಗಿ ಕಾಂಗ್ರೆಸ್ ನಾಯಕರು ಅಭಿಪ್ರಾಯ ಪಟ್ಟಿರುವರು. ಲೀಗಿನವರು ರಾಜ್ಯಾಂಗ ಸಭೆಯನ್ನೇ ತ್ಯಜಿಸಿರುವುದರಿಂದಲೂ ಬ್ರಿಟಿಷ್ ಸರ್ಕಾರದವರು ಫೆಡರಲ್ ಕೋರ್ಟಿನ ತೀರ್ಮಾನಕ್ಕೆ ಬದ್ಧರಾಗುವುದಿಲ್ಲವೆಂದು ಸೂಚಿಸಿರುವುದರಿಂದಲೂ ಈ ವಿಷಯವನ್ನು ಫೆಡರಲ್ ಕೋರ್ಟಿಗೆ ಹಾಕುವುದಿಲ್ಲವೆಂದು ನಿರ್ಧರಿಸಲಾಗಿದೆ.

(ಹಿಂದಿನ ಪುಟದಿಂದ ಮುಂದುವರಿದುದು)

ಕುಂಭ— ನೀವು ನಿರ್ಭಯವಾಗಿರಿ, ಫಲದಾಯಕ ಉತ್ತಮ ಶತ್ರುಗಳಿಗೆ ಸೋಲು, ದರೆ ವ್ಯಾಪಾರ ವ್ಯವಹಾರಗಳಲ್ಲಿ ಯಶ ಪುಣ್ಯ ಕ್ಷೇತ್ರಗಳ ಪ್ರವಾಸ ತಾ|| ೨೫-೨೬ ಮಿಶ್ರ ಪರೋಪಕಾರ

ಮೀನ ಯುಕ್ತಿ ಮಾರ್ಗದಿಂದ ನಿಮ್ಮ ಕಾರ್ಯಗಳು ಕೈ ಗೂಡುವವು ಆರೋಗ್ಯ ಉತ್ತಮ, ಆರ್ಥಿಕ ಸ್ಥಿತಿ ಉತ್ತಮ ಯೋಜನೆ ಪರಿಹಾರ ಪ್ರವಾಸದಲ್ಲಿ ಯಶ ಉದ್ಯೋಗಗಳಲ್ಲಿ ಯಶ ವಿದ್ಯೆಯಲ್ಲಿ ಅಭಿರುಚಿ ಕೋರ್ಟು ವ್ಯವಹಾರಗಳ ಜಯ, ಮಿತ್ರರಿಂದ ಲಾಭ, ೨೫-೨೬ ಸುವಾರ್ತೆ ಆದಾಯ

ಧನ್ವಂತರೀ ಜಯಂತಿ

ಮೈಸೂರು ೨೩

ಕೃಷ್ಣರಾಜ ಮೊಹಲ್ಲಿಯ ಆಯುರ್ವೇದ ಆಸ್ಪತ್ರೆಯಲ್ಲಿ ನಿನ್ನೆ ಧನ್ವಂತರೀ ಜಯಂತಿಯನ್ನು ಆಚರಿಸಲಾಯಿತು. ಶ್ರೀ|| ಪಿ. ಸೀತಾರಾಮಯ್ಯನವರು ಶ್ರೀಮನ್ಮಹಾರಾಜರವರ ಭಾವ ಚಿತ್ರದ ಅನಾವರಣ ಮಹೋತ್ಸವವನ್ನು ನೆರವೇರಿಸಿದರು. ನಗರ ಶಾಸನಸಭೆಯ ನಂತರ ಪೌರ ಸಭೆಯ ಆರೋಗ್ಯಾಧಿಕಾರಿಗಳು ವೈದ್ಯ ಶಾಲೆಯ ವರದಿಯನ್ನು ಒಪ್ಪಿಸಿದರು. ಆಯುರ್ವೇದ ಶಾಸ್ತ್ರದ ವಿಚಾರವಾಗಿ ಡಾ|| ಎಸ್. ಎಸ್. ಸುಬ್ರಹ್ಮಣ್ಯ ಶಾಸ್ತ್ರಿಗಳವರು ಸ್ವಾರಸ್ಯವಾದ ಭಾಷಣವನ್ನು ಮಾಡಿದರು. ಅನಂತರ ಯೋಗ ಶಾಲೆಯ ಅಧ್ಯಾಪಕರಾದ ಶ್ರೀ|| ತಿರುಮಲೆ ಕೃಷ್ಣಮಾಚಾರ್ಯರು ಮತ್ತು ಅವರ ಶಿಷ್ಯಂದಿರಿಂದ ಯೋಗಾಸನ ಪ್ರದರ್ಶನ ನಡೆಯಿತು. ಗಾನ ಕೋಕಿಲ ಶ್ರೀಮತಿ ಎಸ್. ರತ್ನಮ್ಮನವರು ಸುಶ್ರಾವ್ಯವಾಗಿ ಗಾಯನವನ್ನು ಮಾಡಿದರು.

ಶ್ರೀ|| ಸೀತಾರಾಮಯ್ಯನವರು ತಮ್ಮ ಭಾಷಣದಲ್ಲಿ ರಾಜ ಭಕ್ತಿಯನ್ನು ವಿವರಿಸಿದರು. ರಾಜ ಭಕ್ತಿಯು ಹೊರಗಿನವರ ಬೋಧನೆಯಿಂದ ಬರುವುದಲ್ಲವೆಂದೂ, ತಾನಾಗಿಯೇ ಪ್ರತಿಯೊಬ್ಬರ ಹೃದಯದಲ್ಲೂ ಉದ್ಭವಿಸುವುದೆಂದೂ ಹೇಳಿದರು. ಪ್ರಭುಗಳಿಗೆ ಇರುವ ಸಕಲ ಅಧಿಕಾರವೂ ಪ್ರಜೆಗಳಿಂದಲೇ ಬಂದಿರುವುದೆಂದೂ, ರಾಮಾಯಣದ ಕಾಲದಿಂದಲೂ ಪ್ರಜಾ ಪ್ರಭುತ್ವ ಪದ್ಧತಿಯು ಜಾರಿಗೆ ಬಂದಿದೆಯೆಂದೂ, ನಮ್ಮ ಮಹಾ ಪ್ರಭುಗಳೂ ಮೊದಲೇ ಘೋಷಿಸಿರುವಂತೆ ಪ್ರಜಾ ಪ್ರಭುತ್ವವನ್ನು ಜಾರಿಗೆ ತಂದು ಸಾಂಕುಶ ಪ್ರಭುಗಳಾಗಿ ಇತೋಧಿಕವಾದ ಪ್ರಜಾ ವಾತ್ಸಲ್ಯವನ್ನು ಹೊಂದಿ ಸಕಲರ ಮೆಚ್ಚಿಗೆಗೂ ಪಾತ್ರರಾಗಲೆಂದು ಪ್ರಾರ್ಥಿಸಿದರು. ಜಯಕಾರದೊಡನೆ ಸಭೆಯು ಮುಕ್ತಾಯವಾಯಿತು.

ಗೋಧಿ ಬೆಲೆ ಬದಲಾವಣೆ

ಗೋಧಿ ಮತ್ತು ಹಿಟ್ಟಿನ ಮಾರಾಟದ ಬೆಲೆಯನ್ನು ಸರ್ಕಾರದವರು ಪುನಃ ನಿಗದಿ ಮಾಡಿದ್ದಾರೆ "ಬಿ" ತರಗತಿಯ ರೇಷನ್ ಹೋಲ್ಡರುಗಳಿಗೂ "ಎ" ತರಗತಿಯವರಿಗೆ ಕೊಡುವಂತೆಯೂ ೩ ಸೇರು ಗೋಧಿ ಮತ್ತು ೩ ಪೌಂ ಹಿಟ್ಟನ್ನು ಮಾರಬೇಕೆಂದು ಗೊತ್ತು ಮಾಡಿದ್ದಾರೆ "ಬಿ" ತರಗತಿಗೆ ಸೇರಿದವರು ತಮಗೆ ಗೋಧಿ, ಹಿಟ್ಟು ಬೇಡವಾದಲ್ಲಿ ಇತರ ಧಾನ್ಯಗಳನ್ನು ಪಡೆಯಬಹುದೆಂದು ಆಜ್ಞೆ ಮಾಡಿರುತ್ತಾರೆ

ಚೆನ್ನಪಟ್ಟಣಕ್ಕೆ ಸಹಾನುಭೂತಿ

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ನಿರ್ಣಯ

ಸ್ವಂ. ವಾ. ಫೋ.] ಬೆಂಗಳೂರು ೨೩

ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಚೆನ್ನಪಟ್ಟಣದ ದುರಂತಕ್ಕಾಗಿ ವಿಷಾದವನ್ನು ಸೂಚಿಸಿ ನಿರ್ಣಯ ಮಾಡಿರುತ್ತದೆ. ಎಲ್ಲ ಕೋಮಿನ ಜನರೂ ಪರಸ್ಪರ ಸ್ನೇಹ ಸೌಹಾರ್ದದಿಂದ ವರ್ತಿಸಬೇಕೆಂದು ಪ್ರಾರ್ಥಿಸಿರುತ್ತದೆ. ಬಹು ಸಂಖ್ಯಾತರು ಅಲ್ಪ ಸಂಖ್ಯಾತರ ರಕ್ಷಣೆಯನ್ನು ಮಾಡಬೇಕೆಂದು ಕೋರಿರುತ್ತದೆ. ಜವಾಬ್ದಾರಿ ಸರ್ಕಾರದ ಸ್ಥಾಪನೆಯಾದ ನಂತರ ಎಲ್ಲಾ ಅಲ್ಪ ಸಂಖ್ಯಾತರಿಗೂ ರಕ್ಷಣೆಯನ್ನು ಕೊಡುವುದಾಗಿ ಭರವಸೆ ಕೊಟ್ಟಿರುತ್ತದೆ.

ಭಾರತ ರಾಜ್ಯಾಂಗ ರಚನಾ ಸಭೆಗೆ ಸಂಸ್ಥಾನದಿಂದ ಚುನಾಯಿತ ಪ್ರತಿನಿಧಿಗಳನ್ನೇ ಕಳುಹಿಸಬೇಕೆಂದು ಮತ್ತೊಂದು ನಿರ್ಣಯದಲ್ಲಿ ಒತ್ತಾಯ ಪಡಿಸಿರುತ್ತದೆ. ಹಾಗೆ ಆಗುವವರೆಗೂ ನರೇಂದ್ರರ ಸಂಘಾಸ ಸಮಿತಿಯನ್ನು ರಚಿಸುವುದು ಸರಿಯಲ್ಲವೆಂದೂ ಅಭಿಪ್ರಾಯಪಟ್ಟಿದೆ ಶ್ರದ್ಧೆ

ಸರ್ಕಾರ ಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರಾಗಿದ್ದ ಶ್ರೀ|| ಪಾಪಯ್ಯ ರಾಜು ಎಂಬುವವರು ಮೊನ್ನೆ ನಿಧನರಾದ ಪ್ರಯುಕ್ತ ಸಂತಾಪವನ್ನು ಸೂಚಿಸಿ ನಿರ್ಣಯ ಮಾಡಲಾಗಿದೆ.

ಮಾರ್ಕೆಟ್ ಪ್ರದರ್ಶನ

ನಿನ್ನೆ ದಿನ ದಿವಾನರು ಮಾರ್ಕೆಟ್ ಪ್ರದರ್ಶನವನ್ನು ಆರಂಭಿಸಿದರು. ಬೆಂಗಳೂರಿನ ಹಣ್ಣು ಹಂಪಲು, ತರಕಾರಿಗಳು ಪರದೇಶಗಳಲ್ಲಿಯೂ ಪ್ರಖ್ಯಾತಿ ಹೊಂದಿರುವುದನ್ನು ತಿಳಿಸಿ ಮುಂದೆ ಅವುಗಳನ್ನು ವಿಜ್ಞಾನ ಕ್ರಮದಲ್ಲಿ ಹೆಚ್ಚು ಹೆಚ್ಚಾಗಿ ಬೆಳೆಸಲು ಫಲಪುಷ್ಪಗಳ ನಿಪುಣರೊಬ್ಬರನ್ನು ಸರ್ಕಾರದವರು ನೇಮಿಸಬೇಕೆಂದಿರುವುದಾಗಿ ಸೂಚಿಸಿದರು.

ನೆಹರೂರವರಿಗೆ ಚಿನ್ನದ ತಕ್ಕಡಿ

ಇದೇ ೨೮ ನೇ ತಾ|| ದೆಹಲಿಯಲ್ಲಿ ನಡೆಯುವ ಅಖಿಲ ಭಾರತ ವಿದ್ಯಾರ್ಥಿ ಕಾಂಗ್ರೆಸ್ಸಿನ ಹತ್ತನೇ ಸಮ್ಮೇಳನದ ಸಂಬಂಧದಲ್ಲಿ ಪಂಡಿತ ಜವಹರಲಾಲ ನೆಹರೂ ರವರಿಗೆ ಬಹಿರಂಗ ಸಭೆಯಲ್ಲಿ ೨೮ ತೊಲ ತೂಕದ ಚಿನ್ನದ ತಕ್ಕಡಿಯನ್ನು ಅರ್ಪಿಸಲಾಗುವುದೆಂದು ತಿಳಿದು ಬಂದಿದೆ

ಐ. ಸಿ. ಎಸ್. ಅಧಿಕಾರಿಗಳಿಗೆ ಪರಿಹಾರ ದ್ರವ್ಯ

ಭಾರತ ಸರ್ಕಾರವು ಐ ಸಿ ಎಸ್ ಮತ್ತು ಐ. ಪಿ. ಎಸ್ ಸ್ಥಾನಗಳ ಹುದ್ದೆಯನ್ನು ರದ್ದು ಮಾಡಲು ನಿಶ್ಚಯಿಸಿ ಸದರೀ ಅಧಿಕಾರಗಳಲ್ಲಿರುವವರಿಗೆ ಪರಿಹಾರ ದ್ರವ್ಯವನ್ನು ಕೊಡಲು ಯೋಚಿಸಿರುವ ಯೋಜನೆಯನ್ನು ಪರಿಶೀಲಿಸಲು ಭಾರತ ಸರ್ಕಾರದ ಮಂತ್ರಿಗಳಾದ ಮಿ|| ಹೆಂಡರ್ ಸನ್ ಮತ್ತು ಜೆ ಎಚ್ ಬ್ಯಾಕ್ಸ್ಟರ್ ರವರುಗಳು ಹಿಂದೂ ಸ್ಥಾನಕ್ಕೆ ಬರುವರು ಈಗಾಗಲೇ ಈ ಬಗ್ಗೆ ಒಂದು ಯೋಜನೆಯನ್ನು ಸಿದ್ಧಗೊಳಿಸಲಾಗಿದೆಯೆಂದೂ ಅದರ ವಿಷಯವಾಗಿ ಪತ್ರ ವ್ಯವಹಾರವು ನಡೆಯುತ್ತಿದೆಯೆಂದೂ ಈಗ ಹೇಳಲಾಗಿದೆ.

ಕಾಲು ನಡಿಗೆಯಲ್ಲೇ ಮಹಾತ್ಮರ ಸಂಚಾರ

ಪಂಡಿತ ಜವಹರಲಾಲರು ಮಹಾತ್ಮ ಗಾಂಧಿಜಿಯವರನ್ನು ಭೇಟಿ ಮಾಡಿದ ಮೇಲೆಯೇ ಮಹಾತ್ಮರು ಹಳ್ಳಿಗಳ ಸಂಚಾರವನ್ನು ಪಾದಚಾರಿಯಾಗಿ ನಡೆಸುವರೆಂದು ವರದಿಯಾಗಿದೆ. ಅವರ ಜೊತೆಯಲ್ಲಿ ಶ್ರೀ ನಿರ್ಮಲ ಬೋಸರೊಬ್ಬರು ಮಾತ್ರ ಹೋಗುವರು. ಪತ್ರಿಕೋದ್ಯೋಗಿಗಳು ಸಂಗಡ ಹೋಗಲು ಅವಕಾಶವಿಲ್ಲ. ತಮ್ಮ ಅಹಿಂಸಾ ಸಂದೇಶವನ್ನು ಬೀರಲು ಮಹಾತ್ಮರು ಪ್ರತಿದಿನವೂ ಕಾಲು ನಡಿಗೆಯಲ್ಲೇ ಐದು ಮೈಲಿಗಳಂತೆ ಸಂಚಾರ ಮಾಡುವರೆಂದು ಹೇಳಲಾಗಿದೆ

ಅಖಿಲ ಭಾರತ ಕಾಂಗ್ರೆಸ್ ಸಮಿತಿ

ಲಂಡನ್ನಿನಲ್ಲಿ ಇತ್ತೀಚೆಗೆ ಭಾರತದ ಬಗ್ಗೆ ನಡೆದ ಸಂಧಾನವನ್ನೂ ಅದಾದ ನಂತರ ದೇಶದಲ್ಲಿ ಉಂಟಾಗಿರುವ ಪರಿಸ್ಥಿತಿಯನ್ನೂ ಚರ್ಚಿಸಿ ಮುಂದಿನ ಕಾರ್ಯವನ್ನು ನಿರ್ಧರಿಸುವ ಸಲುವಾಗಿ ದೆಹಲಿಯಲ್ಲಿ ಜನವರಿ ೫ನೇ ತಾರೀಖು ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಭೆಯು ಸೇರುವುದು.

ಶ್ರೀರಾಮ ಲೀಗ್

ಮೈಸೂರು ಬಿ ದೀಕ್ಷಿತರ ಛತ್ರದ ಶ್ರೀ ರಾಮ ಲೀಗಿನ ೧೭ ನೇ ವಾರ್ಷಿಕೋತ್ಸವವು ಮಿ|| ಗ್ರೀಸ್ ಪಿಟ್ಮನ್ ರವರ ಅಧ್ಯಕ್ಷತೆಯಲ್ಲಿಯೂ, ೨೨ ನೇ ತಾ|| ಸಿಲ್ಕ್ ಫಿಲೇಚರಿನ ಮ್ಯಾನೇಜಿಂಗ್ ಏಜೆಂಟರಾದ ಶ್ರೀ ಜಿ ಕೃಷ್ಣಸ್ವಾಮಿಯವರ ಅಧ್ಯಕ್ಷತೆಯಲ್ಲೂ ನಡೆಯಿತು. ಲೀಗಿನ ಸದಸ್ಯರಿಂದ ನಾಟಕ, ನೃತ್ಯ ಮತ್ತು ಹರಿಕಥೆಗಳು ಏರ್ಪಾಡಾಗಿದ್ದವು. ಅಧ್ಯಕ್ಷರು ಲೀಗಿನ ವಿದ್ಯಾರ್ಥಿ ವಿದ್ಯಾರ್ಥಿನಿಯರ ಪ್ರಗತಿಯನ್ನು ಮೆಚ್ಚಿ ಪ್ರೋತ್ಸಾಹಕರವಾದ ಭಾಷಣ ಮಾಡಿದರು. ಮಹಾಜನರು ಇಂತಹ ಲೀಗುಗಳಿಗೆ ಸಹಾಯ ಮಾಡಬೇಕೆಂದು ಕೋರಲಾಯಿತು. ಆ|| ವಿ|| ದೇವೇಂದ್ರಪ್ಪನವರಿಂದ ಸಂಗೀತವು ವಿ|| ತಾತಾಚಾರ್ಯರ ಪಿಟೀಲು ಮತ್ತು ವಿ|| ರಂಗನಾಥರವರ ಮೃದಂಗಗಳೊಡನೆ ನಡೆಯಿತು

ಕ್ರಿಕೆಟ್ ಪಂದ್ಯ

ನೆನ್ನೆ ನಡೆದ ಕ್ರಿಕೆಟ್ ಪಂದ್ಯದಲ್ಲಿ ನೆಹರೂ ಯೂನಿಯರ್ ಕ್ರಿಕೆಟ್ ಕ್ಲಬ್ಬಿನವರು ಮೈ ಹಿಂದ್ ಕ್ರಿಕೆಟ್ ಕ್ಲಬ್ಬಿನವರನ್ನು ೮ ರನ್ನುಗಳಿಂದ ಸೋಲಿಸಿ ಜಯಶೀಲರಾಗಿದ್ದಾರೆ. ನೆಹರೂ ಟೀಮಿನ ಪರವಾಗಿ ನಾರಾಯಣ್ ರವರು ಎರಡು ರನ್ನುಗಳಿಗೆ ೬ ವಿಕೆಟ್ಟುಗಳನ್ನು ಪಡೆದಿದ್ದಾರೆ

ಸಾಧ್ವಿ

ತಾ|| ೨೩-೧೨-೪೬ ಸೋಮವಾರ

ಹೆಸರುಗಳ ರಾಷ್ಟ್ರೀಕರಣ

ಪಾಶ್ಚಿಮಾತ್ಯ ಸಂಪರ್ಕದಿಂದ ನಮ್ಮ ಅನೇಕ ಆಚಾರ ವ್ಯವಹಾರಗಳು ವಿದೇಶೀಯರ ಅನುಕರಣವನ್ನೇ ಹೊಂದಿರುತ್ತವೆ ವೇಷ, ಭೂಷಣ, ಮಾತು ಕತೆ, ಉಡಿಗೆ ತೊಡಿಗೆ ಮುಂತಾದುವುಗಳಲ್ಲಿ ಪರದೇಶೀಯರ ಕ್ರಮವೇ ಜಾರಿಗೆ ಬಂದಿರುತ್ತದೆ ಇವುಗಳನ್ನು ತಪ್ಪಿಸಿ ನಮ್ಮ ದೇಶಕ್ಕೂ, ಸಂಸ್ಕೃತಿಗೂ ಅನುಗುಣವಾದ ಪದ್ಧತಿಗಳನ್ನೇ ಅನುಸರಿಸಬೇಕೆಂದು ರಾಷ್ಟ್ರನಾಯಕರು ಹೇಳುತ್ತಿದ್ದಾರೆ ಎಲ್ಲ ವಿಚಾರಗಳಲ್ಲಿಯೂ ಸ್ವದೇಶಿ ಭಾವನೆಯು ರೂಢಮೂಲವಾಗುತ್ತಿದೆ. ಕಾಂಗ್ರೆಸ್ ಮಂತ್ರಿ ಮಂಡಳಗಳಿರುವ ಪ್ರಾಂತ್ಯಗಳಲ್ಲಿ ಈ ರಾಷ್ಟ್ರೀಕರಣ ಕಾರ್ಯವು ಭರದಿಂದ ಸಾಗುತ್ತಿದೆ.

ನಮ್ಮ ದೇಶದ ಊರುಗಳಿಗೆ ಪರಕೀಯರು ಇಟ್ಟಿರುವ ಹೆಸರುಗಳನ್ನೇ ಉಚ್ಚರಿಸುತ್ತಿರುವುದು ನಮ್ಮ ಪರಾವಲಂಬನೆಯ ಕುರುಹುಗಳಲ್ಲಿ ಒಂದಾಗಿದೆ ಅವರ ಬಾಯಲ್ಲಿ ಉಚ್ಚರಿಸಲು ಆಗದೆಯೋ ಅಥವಾ ಬೇರಾವ ಕಾರಣದಿಂದಲೋ ಅವರು ನಮ್ಮ ದೇಶದ ಅಂಕಿತ ನಾಮಗಳನ್ನು ಅಪಸ್ವರದಿಂದ ಉಚ್ಚರಿಸಿರುತ್ತಾರೆ ಅಂಧಾನುಕರಣೆಯಿಂದ ಅದನ್ನೇ ನಾವೂ ಅನುಸರಿಸುತ್ತ ಬಂದಿರುತ್ತೇವೆ ಅವರಂತೆಯೇ ನಾವೂ ಉಚ್ಚರಿಸಿದರೆ ಅವರ ಮೆಚ್ಚಿಗೆಗೆ ಪಾತ್ರರಾಗುವೆವೆಂಬ ಭ್ರಾಂತಿಯೂ ಕೆಲವರಿಗೆ ಇದ್ದಿತು. ಅಥವಾ ಹಾಗೆ ಮಾಡುವುದೇ ನವನಾಗರಿಕತೆಯ ಮುಂದುವರಿದ ಚಿಹ್ನೆಯೆಂದೂ ಕೆಲವರು ಬಗೆದಿದ್ದರು. ಈಗ ಅದೆಲ್ಲಾ ಮಾಯವಾಗುತ್ತಿದೆ ನಮ್ಮ ದೇಶದ ಹೆಸರುಗಳೂ, ವೇಷ ಭೂಷಣಗಳೂ, ಆಚಾರ ವ್ಯವಹಾರಗಳೇ ನಮಗೆ ಪ್ರಿಯವಾಗಿ ಕಂಡು ಬರುತ್ತಿವೆ

ಸೋಲೆ ಕಂದಾ-ತೆ ಜಾರಿಗೆ ಬಂದಿರುವ ಅಪಸ್ವರದ ಹೆಸರುಗಳನ್ನು ಹಿಂದಿನ ರೀತಿಯಂತೆ ಬದಲಾಯಿಸಲು ಸಂಯುಕ್ತ ಪ್ರಾಂತ ಸರ್ಕಾರದವರು ಏರ್ಪಾಡು ಮಾಡಿದ್ದಾರೆ ಗಂಗಾ ನದಿಯನ್ನು ಗ್ಯಾಂಜೆಸ್ ಎಂದು ಕರೆಯಲಾಗುತ್ತಿದೆ ಮಥುರಾ ಪಟ್ಟಣವನ್ನು ಮುಟ್ರಾ ಎಂದು ಹೇಳಲಾಗುತ್ತಿದೆ. ಪವಿತ್ರವಾದ ವಾರಣಾಸಿ ಕ್ಷೇತ್ರವನ್ನು ಬೆನಾರಿಸ್ ಎಂದು ಕರೆಯಲಾಗುತ್ತಿದೆ. ಹೀಗೆಯೇ ಇನ್ನೂ ಅನೇಕ ಹೆಸರುಗಳಿಗೆ ಅಪ ಶಬ್ದಗಳ ಪ್ರಯೋಗಗಳಾಗುತ್ತಿವೆ. ಇವುಗಳನ್ನು ಬದಲಾಯಿಸಿ ಮೊದಲಿನ ಹೆಸರುಗಳನ್ನೇ ಕೊಡುವಂತೆ ಏರ್ಪಾಡು ಮಾಡಲಾಗುತ್ತಿದೆ ಈ ಪ್ರಯತ್ನಕ್ಕೆ ಎಲ್ಲ ರಾಷ್ಟ್ರಾಭಿಮಾನಿಗಳ ಮೆಚ್ಚುಗೆಯೂ ಇರುತ್ತದೆ.

ನಮ್ಮ ಸಂಸ್ಥಾನದಲ್ಲಿಯೂ, ಇಂತಹ ಪ್ರಸಂಗಗಳು ಅನೇಕವಾಗಿ ಇರುತ್ತವೆ ಶ್ರೀರಂಗ ಪಟ್ಟಣವನ್ನು ಸೆರಿಂಗಪಟಾಂ ಎಂದೂ, ಬೆಂಗಳೂರನ್ನು ಬ್ಯಾಂಗಲೋರ್ ಎಂದೂ, ಶಿವಮೊಗ್ಗೆಯನ್ನು ಷಿಮೊಗಾ ಎಂದೂ ಚಿತ್ರದುರ್ಗವನ್ನು ಚಿಟಲ್‌ಡ್ರುಗ್ ಎಂಬುದಾಗಿಯೂ ಕರೆಯಲಾಗುತ್ತಿದೆ ಇದೇ ರೀತಿಯಲ್ಲಿ ಇನ್ನೂ ಎಷ್ಟು ಹೆಸರುಗಳು ಅಕ್ರಮವಾಗಿ ಉಚ್ಚರಿಸಲ್ಪಡುತ್ತಿವೆಯೋ ತಿಳಿಯದು ಅವುಗಳನ್ನೆಲ್ಲಾ ಪರಿಶೀಲಿಸಿ ವರದಿಯನ್ನೊಪ್ಪಿಸಲು ಒಂದು ಸಂಶೋಧನಾ ಮಂಡಲಿಯು ಏರ್ಪಾಡಾದರೂ ಅದು ಸಾರ್ಥಕವೇ ಆಗುವುದು.

ಭರತ ಖಂಡದ ರಾಷ್ಟ್ರೀಯ ಜಾಗೃತಿಯಲ್ಲಿ ಈ ಬಗೆಯ ಪುನರುಜ್ಜೀವನ ಕಾರ್ಯ ಕ್ರಮಗಳು ಹೇರಳವಾಗಿ ನಡೆಯಬೇಕಾಗಿವೆ ಅವುಗಳಲ್ಲಿ ರಾಷ್ಟ್ರಾಭಿಮಾನಿಗಳೆಲ್ಲರೂ ಆಸಕ್ತಿವಹಿಸಿ ಪುರಸ್ಕರಿಸಲು ಈಗಿನಿಂದಲೇ ಉದ್ಯುಕ್ತರಾಗುವುದು ಉತ್ತಮ

ಜಪಾನಿನಲ್ಲಿ ಗಲಭೆ

ಜಪಾನಿನ ಟೋಕಿಯೋ ನಗರದಲ್ಲಿ ಕೊರಿಯನ್ನರಿಂದ ಗಲಭೆಯಾಗಿರುವುದಾಗಿ ಹೇಳಲಾಗಿದೆ. ಸಾವಿರಾರು ಕೊರಿಯನ್ನರು ಪ್ರಧಾನಿಗಳ ಮನೆ ಮುಂದೆ ಪ್ರದರ್ಶನ ನಡೆಸಿದರೆಂದೂ ಅಮೆರಿಕ ಪೋಲೀಸಿನವರು ಸಭೆಯನ್ನು ಚದುರಿಸಿದರೆಂದೂ ವರದಿಯಾಗಿದೆ ಜಪಾನಿ ಪೋಲೀಸರಿಗೂ ಪ್ರದರ್ಶನಕಾರರಿಗೂ ಘರ್ಷಣೆಯಾಯಿತು

ವಾರ ಭವಿಷ್ಯ

ಶ್ರೀ

ತಾ|| ೨೩-೧೨-೪೬ ರಿಂದ ೩೦-೧೨-೪೬ ರ ವರೆಗೆ

(ಶ್ರೀ ಸಿಕ್ಕಾನಂದ ಸ್ವಾಮಿಗಳವರಿಂದ)

ಮೇಷ—ಗ್ರಹಮಾನಗಳು ಈ ವಾರ ನಿಮಗೆ ಉತ್ತಮವಾಗಿರುವುವು ಆರೋಗ್ಯ ಉತ್ತಮ. ಕಳತ್ರ ಸೌಖ್ಯ ವಿದ್ವಜ್ಜನರ ಭೇಟಿ, ತಾ|| ೨೩-೨೬ ಖರ್ಚು. ಚಿಂತೆ ನೌಕರಿ ದಂಧೆಗಳಲ್ಲಿ ಉತ್ತಮ ಫಲ.

ವೃಷಭ—ದುಃಖದಾಯಕ ಕಾರ್ಯಗಳಿಂದ ಮನಸ್ಸಿಗೆ ಕ್ಲೇಶ ಪ್ರವಾಸದಲ್ಲಿ ಸಂಕಟ ಸಂಸಾರದಲ್ಲಿ ಕಲಹ ಸಂಭವ ಆರೋಗ್ಯ ಚನ್ನಾಗಿರಲಾರದು ವಿದ್ಯಾಭ್ಯಾಸದಲ್ಲಿ ತೊಂದರೆ ತಾ|| ೨೬-೨೮ ಭಯ. ಕಲಹ ಖರ್ಚು

ಮಿಥುನ—ಆಲಸ್ಯವು ಹೆಚ್ಚುವುದು. ಆರ್ಥಿಕ ಖರ್ಚು ಹೆಚ್ಚು. ಆರೋಗ್ಯ ಚನ್ನಾಗಿರುವುದು ಮಾನಸಿಕ ಕ್ಲೇಶ, ತಾ||೨೫-೨೭ ಆಪ್ತರಿಂದ ಪತ್ರ. ಚಿಂತೆ. ಖರ್ಚು

ಕಟಕ—ಧನ ಸ್ಥಿತಿಯು ಚನ್ನಾಗಿರುವುದು. ಸಜ್ಜನರ ಸಹವಾಸ ಆರೋಗ್ಯ ಉತ್ತಮ. ಆನಂದದಾಯಕ ಯೋಚನೆ ಮಾಡುವಿರಿ ವ್ಯಾಪಾರ ಉದ್ಯೋಗಗಳಲ್ಲಿ ಪ್ರಗತಿ ಧರ್ಮ ಕಾರ್ಯಗಳು ಜರುಗುವುವು. ಲೇಖಕ ಲೇಖಕಿಯರಿಗೆ ಈ ವಾರ ಉತ್ತಮವಾಗಿರುವುದು. ತಾ|| ೨೬-೨೮ ಚಂಚಲತೆ. ಖರ್ಚು.

ಸಿಂಹ—ಆರೋಗ್ಯ ಉತ್ತಮ. ಅಶಕ್ತಿ ಅಸಮಾಧಾನ. ವಿದ್ಯಾಭ್ಯಾಸದಲ್ಲಿ ಅಡಚಣೆ ನೌಕರಿ ದಂಧೆಗಳಲ್ಲಿ ಯುಕ್ತ. ಮಕ್ಕಳ ಅನಾರೋಗ್ಯ ತಾ|| ೨೫-೨೭ ಪ್ರವಾಸ ಖರ್ಚು.

ಕನ್ಯಾ—ಅಧಿಕ ಕೆಲಸದಿಂದ ತೊಂದರೆ. ಮನೆಯವರಿಗೆ ಅನಾರೋಗ್ಯ. ಮಕ್ಕಳಿಗೆ ವ್ಯಾಧಿ. ಪ್ರವಾಸದಲ್ಲಿ ತೊಂದರೆ ತಾ|| ೨೬-೨೮ ಖರ್ಚು ಚಿಂತಾ ವಾರ್ತೆ.

ತುಲಾ ನವಚೈತನ್ಯ ಉಂಟಾದು. ವ್ಯಾಪಾರ ವ್ಯವಹಾರಗಳಲ್ಲಿ ಸ್ತ್ರೀ ಪ್ರವಾಸದಲ್ಲಿ ಯುಕ ವಿದ್ಯಾರ್ಥಿಗಳಿಗೆ ಶ್ರಮ. ಆರ್ಥಿಕ ಪರಿಸ್ಥಿತಿ ಉತ್ತಮ ೨೫-೨೬-೨೭ ಖರ್ಚು ಆಯಾಸ.

ವೃಶ್ಚಿಕ—ಶತ್ರುಗಳಿಂದ ಕಷ್ಟ ಸದನದಲ್ಲಿ ಸುಖ. ಧನ ಸ್ಥಿತಿ ಸಾಮಾನ್ಯ. ವಿದ್ಯಾಭ್ಯಾಸದಲ್ಲಿ ತೊಂದರೆ ಅವಿಶ್ರಾಂತ. ಶಾಂತಿ, ಧನಾದಾಯ, ಪ್ರಗಮನ.

ಧನುಸ್ಸು—ಕೈಗೊಂಡ ಕಾರ್ಯ ಮುಗಿಯುವುದಿಲ್ಲ ಆರೋಗ್ಯ ಉತ್ತಮ ಧನಾದಾಯ ಕಡಮೆ. ಖರ್ಚು ಹೆ ವ್ಯಾಪಾರದಲ್ಲಿ ತೊಂದರೆ ಪ್ರವಾಸದಲ್ಲಿ ತಾ|| ೨೬-೨೮ ಕಲಹ, ಭಯ, ಖರ್ಚು ಚಿಂತೆ.

ಮಕರ—ಎಲ್ಲ ಬಗೆಯಿಂದಲೂ ಚರ್ಚೆ ವಿಪರೀತ ಆರೋಗ್ಯ ಉತ್ತಮ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಅಲ್ಪ ವ್ಯಥಾವಾದ ವಿವಾದ, ಅಪ್ರಿಯ ವಾರ್ತೆ

(ಹಿಂದಿನ ಪುಟಕ್ಕೆ ಮುಂದುವರಿದಿದೆ)

ನಾರ್ಥ್ ಗಾರ್ಡ್ ಫೈರ್ ಮತ್ತು ಜನರಲ್ ಇನ್ಷೂರೆನ್ಸ ಕಂಪೆನಿ ಲಿಮಿಟೆಡ್
ಮತ್ತು ನಾರ್ಥ್ ಗಾರ್ಡ್ ಇನ್ಷೂರೆನ್ಸ್ ಕಂಪೆನಿ ಲಿಮಿಟೆಡ್,
ಹೆಡ್ ಆಫೀಸ್:- ಮದ್ರಾಸು
ಸುರಕ್ಷಿತವಾದ ಕಂಪೆನಿ. ಇಂಡಿಯಾ ಮತ್ತು ಸಿಲೋನಿನಲ್ಲೆಲ್ಲಾ ಶಾಖೋಪಶಾಖೆಗಳಿವೆ.
ಫೈರ್, ಮೋಟಾರ್, ಮೆರೀನ್, ಆಕ್ಸಿಡೆಂಟ್, ವರ್ಕ್‌ಮೆನ್ಸ್ ಕಂಪೆನ್ಸೇಷನ್, ಲೈಫ್ ಮತ್ತು ಇನ್ನೂ ಅನೇಕ ತರಹೆಯ ಇನ್ಷೂರೆನ್ಸುಗಳನ್ನು ಕೈಗೊಳ್ಳುವ ಕಂಪೆನಿ.
ಪಾಲಿಸಿದಾರರುಗಳಿಗೆ ಹೆಚ್ಚಿಗೆ ಬೋನಸ್ಸು ಹಂಚಲ್ಪಟ್ಟಿರುತ್ತೆ
ಏಜೆಂಟರುಗಳಿಗೆ ಧಾರಾಳವಾದ ಕಮೀಷನ್.
ಪಾಲಿಸಿ ತೆಗೆದುಕೊಳ್ಳಲೂ ಮತ್ತು ಏಜೆಂಟರುಗಳೂ ಇವರಲ್ಲಿ ವಿಚಾರಿಸಿ:-
ಎಂ. ಸಿ. ಸಂಪತ್ಕುಮಾರಯ್ಯಂಗಾರ್,
ಸ್ಪೆಷಲ್ ರೆಪ್ರೆಸೆಂಟೆಟಿವ್, (ನಾರ್ಥ್ ಗಾರ್ಡ್ ಇನ್ಷೂರೆನ್ಸ್ ಕಂಪೆನಿ ಲಿಮಿಟೆಡ್)- ಲಕ್ಷ್ಮೀಪುರ ಅಗ್ರಹಾರ, ಮೈಸೂರು

ರಾಜಕಮಲ್, ಮೈಸೂರು
೨೦-೧೨-೪೬ ರಿಂದ ೬ ನೇ ಮತ್ತು ಕೊನೇ ವಾರ
ಡಾಕ್ಟರ್ ಕೊಟ್ನಿಸ್ ಕಿ ಅಮರ್ ಕಹಾನಿ
ತಾರಾಗಣ:— ಜಯಶ್ರೀ, ಶಾಂತಾರಾಂ, ಇತರರು.
20-12-46 ರಿಂದ 7 ದಿನಗಳು ಪ್ರಾತಃಕಾಲ 10—30 ಕ್ಕೆ
ಬಾಂಬೆ ಟಾಕೀಸ್ ರವರ ' ಬಂಧನ್ '
ಭೂಮಿಕೆ:- ಲೀಲಾ ಚಿಟ್ನಿಸ್, ಅಶೋಕ ಕುಮಾರ್.
(ಹೊಸ ಕಾಪಿ. Brand New Print)

ಒಪೆರಾ ಟಾಕೀಸ್
ತಾ|| ೨೦-೧೨-೪೬ ರಿಂದ
ಪ್ರತಿದಿನ ಮೂರು ಆಟಗಳು
ನಾರದ

ನಾರದಿ
(ತೆಲುಗು ಭಾಷೆ)
ಸೂರಿ ಬಾಬು, ಉಮಾ ಮಹೇಶ್ವರ ರಾವ್, ಲಕ್ಷ್ಮೀರಾಜ್ಯಂ, ಸೌದಾಮಿನಿ.

ಕ್ರಿಸ್ಮಸ್ ಹಬ್ಬಕ್ಕಾಗಿ
ಹೊಸ ನಮೂನೆ
ಜವಳಿಗಳು
ಬಂದಿವೆ ಇಂದೇ ಭೇಟಿ ಕೊಡಿರಿ.
ಬಿ. ಕೆಂಚಪ್ಪ ಸನ್ಸ್,
ಜವಳಿ ಅಂಗಡಿ,
ದೊಡ್ಡ ಪೇಟೆ, ಮೈಸೂರು

ಉಜ್ವಲ ಸತೀತ್ವಕ್ಕೆ

ಪಂಡಿತ ಡಿ. ಗೋಪಾಲಾಚಾರ್ಲುರವರ
ಅಶೋಕಾ
ಗರ್ಭಾಶಯರೋಗ ನಿವಾರಿಣಿ

ಅಶೋಕಾ ಋತು ದೋಷಗಳನ್ನು ನಿರ್ಮೂಲಿಸಿ ಸಂಪೂರ್ಣ ಸ್ತ್ರೀತ್ವವನ್ನು ಪ್ರಸಾದಿಸುವ ಪ್ರಯೋಜನಕಾರಿಯಾದ ದಿವ್ಯೌಷಧ ಇದನ್ನು ಬಿಡದೆ ಸೇವಿಸಿದರೆ, ನಿಮ್ಮ ಜೀವನ ಪರಮಾವಧಿಯಾದ ಆನಂದವನ್ನು ತಪ್ಪದೆ ಒದಗಿಸಬಲ್ಲುದು.
ಆಯುರ್ವೇದಾಶ್ರಮಂ ಲಿಮಿಟೆಡ್
ಟಿ-ನಗರ್.... ಮದರಾಸು.

Edited, printed and published by A. R. Nagarajan at the Sadhvi Press D. Subbiah Road, Mysore

ಸಂಪುಟ ೫] ಮಂಗಳವಾರ ೨೪—೧೨—೪೬ [ಸಂಚಿಕೆ ೧೧೮

ಮಹಾ ಪ್ರಭುಗಳಿಗೆ ಮೈ॥ಕಾಂಗ್ರೆಸ್ಸಿನ ಮೊರೆ ?

ಜಪಾನಿನಲ್ಲಿ ಮತ್ತೆ ಭೂಕಂಪ

ಮೊನ್ನೆ ಬೆಳಗ್ಗೆ ಜಪಾನಿನಲ್ಲಿ ಮತ್ತೆ ಭಾರಿ ಭೂಕಂಪವುಂಟಾಯಿತು ೫ ಪರಿಣಾಮವಾಗಿ ೬೩೭ ಮಂದಿ ಮರಣ ಹೊಂದಿದ್ದಾರೆ. ೬೪೭ ಜನರಿಗೆ ಘಾಸಿಯಾಗಿದೆ. ೪೩೬೩ ಮನೆಗಳು ನಾಶವಾಗಿವೆ

ಲೀಗಿನವರ ಮೇಲೆ ತಕರಾರು ಅರ್ಜಿ

ಸಿಂಧ್ ಪ್ರಾಂತ್ಯದ ಶಾಸನ ಸಭೆಗೆ ಚುನಾಯಿತರಾಗಿರುವ ೩೪ ಮಂದಿ ಲೀಗ್ ಸದಸ್ಯರ ಮೇಲೆಯೂ ತಕರಾರು ಅರ್ಜಿಗಳನ್ನು ಹೂಡಲು ಅಲ್ಲಿನ ಜಮಯುತ್ ಸಂಸ್ಥೆಯು ನಿರ್ಧರಿಸಿರುತ್ತದೆ. ಗಡಿಪ್ರಾಂತ್ಯದಲ್ಲಿರುವ ಖುದಾಯಿ ಖಿದ್ಮತ್‌ಗಾರ್ ಸಂಸ್ಥೆಯಂತೆ ಸಿಂಧೂ ಪ್ರಾಂತ್ಯದಲ್ಲೂ ಸಂಸ್ಥೆಯೊಂದನ್ನು ಸ್ಥಾಪಿಸಲು ಸಮ್ಮೇಳನವು ಸದ್ಯದಲ್ಲೇ ಕರಾಚಿಯಲ್ಲಿ ಸೇರುವುದೆಂದು ವರದಿಯಾಗಿದೆ

ಪಟಿಯಾಲಾ ಸಂಸ್ಥಾನದಲ್ಲಿ ರಾಜ್ಯಾಂಗ ಸುಧಾರಣೆ

ಆರು ತಿಂಗಳ ಕಾಲದೊಳಗಾಗಿ, ತಮ್ಮ ಸಂಸ್ಥಾನದ ರಾಜ್ಯಾಂಗ ವ್ಯವಸ್ಥೆಯನ್ನು ಪರಿಶೀಲಿಸಿ ವರದಿ ಮಾಡುವ ಸಲುವಾಗಿ ಪಟಿಯಾಲಾ ಸಂಸ್ಥಾನಾಧೀಶ್ವರರು ಸಮಿತಿಯೊಂದನ್ನು ರಚಿಸಿರುತ್ತಾರೆ. ಆರಸರ ಆ ಶಿಫಾರಸ್ಸುಗಳೆಲ್ಲವೂ ಶಾಸನ ಬದ್ಧವಾಗಿ ಚಲಾಯಿಸಲ್ಪಡಲಾಗುವುದೆಂದು ಅವರು ಪ್ರಕಟಿಸಿದ್ದಾರೆ

ಕೋಣನ ವಧೆ ನಿಲ್ಲಬೇಕು

ಮೈಸೂರು ೨೪

ಹತ್ತು ಮತ್ತು ಹತ್ತು ವರ್ಷದೊಳಗಿನ ಕೋಣಗಳನ್ನು ಮಾರಿ ಜಾತ್ರೆ, ಗ್ರಾಮದೇವತೆಯ ಪೂಜೆ, ಅಥವಾ ಇತರ ಯಾವ ಕಾರಣದಿಂದಾಗಲೀ ಸರ್ಕಾರದ ಕಾನೂನಿಗೆ ವಿರುದ್ಧವಾಗಿ ವಧೆ ಮಾಡಿದರೆ ಅಂತಹವರು ಶಿಕ್ಷೆಗೆ ಒಳಪಡುತ್ತಾರೆ ಈ ವಿಚಾರದಲ್ಲಿ ಸಂಸ್ಥಾನದ ಪಟೇಲರು ಮತ್ತು ಶಾನುಭೋಗರುಗಳು ತಮ್ಮ ತಮ್ಮ ಗ್ರಾಮಸ್ಥರಿಗೆ ಸರಿಯಾದ ತಿಳುವಳಿಕೆ ಕೊಡಬೇಕೆಂಬುದಾಗಿ ಮೈಸೂರು ಬಾಡೀಗಾರ್ಡ್ ಗೋವು ಪ್ರಚಾರಕರಾದ ಹಾ॥ ಮಹಮದ್ ಪಾಷೀರವರು ಪ್ರಾರ್ಥಿಸಿರುತ್ತಾರೆ

ಸಂತಾಪ ಸೂಚನೆ

ಶಾಸನದಲ್ಲಿ ವಿದ್ಯಾಭ್ಯಾಸದ ಅ॥ ಅಧಿಕಾರಿಗಳಾಗಿದ್ದು ಆದಿಕರ್ನಾಟಕ ಬೋರ್ಡಿಂಗ್ ಹೋಮಿನ ಮೇಲ್ವಿಚಾರಕರಾಗಿದ್ದ ಶ್ರೀ ಎಸ್ ದೊರೆರಾಜ್‌ರವರು ಕಳೆದ ೨೦ನೇ ತಾರೀಖು ಮೃತರಾದ ಬಗ್ಗೆ ಶ್ರೀ ಚಾಮುಂಡೇಶ್ವರೀ ಆದಿಕರ್ನಾಟಕ ಹಾಸ್ಟಲಿನ ವಿದ್ಯಾರ್ಥಿಗಳು ಸಭೆ ಸೇರಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿದರು

ಬಂಸು ಯಂಗ್‌ಮೆನ್ಸ್ ಅಸೋಸಿಯೇಷನ್

ಮೇಟ್ಟಂಡ ಸಂಘದವರು ಕಳೆದ ೨೧, ೨೨ ನೇ ತಾ॥ ಗಳಲ್ಲಿ ಆರಸಲಗೂಡು ಶಾಲೆಯಲ್ಲಿ ಸಂಘಟಿಸಿ, ರಾಮನಾಥಪುರದ ಪ್ರಜಾಪ್ರತಿನಿಧಿ ಸಭಾ ಸದಸ್ಯರಾದ ಶ್ರೀ ಪಿ ಎಚ್. ಬಿ ಚಿಕ್ಕೇ ಅರಸರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದರು ಅಧ್ಯಕ್ಷರು ತಮ್ಮ ಕಡೆಯಿಂದ ಬಾಂಗದವರ ಒಗ್ಗಟ್ಟಿಗೆ ಎಲ್ಲರ ಸಹಕಾರವನ್ನು ಕೋರಿ ಸಂಘಕ್ಕೆ ೨೫೦ ರೂ ಗಳನ್ನು ಕೊಟ್ಟರು ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆಯೊಡನೆ ಸಭೆ ಮುಕ್ತಾಯವಾಯಿತು.

ಪ್ರಭುಗಳಲ್ಲಿ ಕಾಂಗ್ರೆಸ್ಸಿನ ಮೊರೆ

ಸ್ವ. ಸು. ಪ್ರೋ] ಬೆಂಗಳೂರು ೨೪

ಪ್ರಜಾಪ್ರತಿನಿಧಿ ಸಭೆಯ ಸದಸ್ಯರು ಶ್ರೀಮನ್ಮಹಾರಾಜರವರಿಗೆ ಒಪ್ಪಿಸಿದ್ದ ಮನವಿಗೆ ಇದುವರೆವಿಗೆ ಯಾವ ಉತ್ತರವೂ ಬಾರದಿರುವುದರಿಂದ ಜವಾಬ್ದಾರಿ ಸರ್ಕಾರ ಸ್ಥಾಪನೆ ಮತ್ತು ರಾಜ್ಯಾಂಗ ಶಾಸನ ಸಭೆಯಲ್ಲಿ ಪ್ರಜೆಗಳ ಪ್ರಾತಿನಿಧ್ಯದ ಬಗ್ಗೆ ಶ್ರೀಮನ್ಮಹಾರಾಜರವರಲ್ಲಿಯೇ ನೇರವಾದ ಅರಿಕೆಯನ್ನು ಸಲ್ಲಿಸಬೇಕೆಂದು ಮೈಸೂರು ಕಾಂಗ್ರೆಸ್ಸಿನ ಕಾರ್ಯಕಾರಿ ಮಂಡಲಿಯವರು ನಿರ್ಧರಿಸಿರುವುದಾಗಿ ತಿಳಿದುಬಂದಿದೆ

ಉಪಾಧ್ಯಾಯರಿಗೆ ಹೆಚ್ಚಿನ ಸಂಬಳ

ಹೈಸ್ಕೂಲು ಉಪಾಧ್ಯಾಯರ ಸಂಬಳವನ್ನು ಸರ್ಕಾರದವರು ೪೦ ರಿಂದ ೫೮ ರೂ. ಗಳಿಗೆ ಹೆಚ್ಚಿಸುವಂತೆ ನಿರ್ಧರಿಸಿರುವುದಾಗಿ ವರದಿಯಾಗಿದೆ. ಲೆಕ್ಚರರುಗಳ ಸಂಬಳವನ್ನು ೭೫-೧೩೫ ರಿಂದ ೧೦೦-೨೫೦ ಕ್ಕೂ ಅಸಿಸ್ಟೆಂಟ್ ಪ್ರೊಫೆಸರುಗಳ ಕನಿಷ್ಠ ಸಂಬಳವನ್ನು ೩೫೦ ರಿಂದ ೪೦೦ ಕ್ಕೂ ಹೆಚ್ಚಿಸಿರುವುದಾಗಿ ತಿಳಿದುಬಂದಿದೆ

ಸತ್ಯಮಂಗಲ ರೈಲ್ವೆ

ಎಂ ಎಸ್ ಎಂ ರೈಲ್ವೆಯವರಿಗೆ ತಗಲುವ ನಷ್ಟವು ಮೈಸೂರು ಸರ್ಕಾರದವರ ಮೇಲೆ ಬೀಳಬಹುದಾದರೂ ಸಹ ಅದಕ್ಕೆ ಒಪ್ಪಿ ಚಾಮರಾಜನಗರ-ಸತ್ಯಮಂಗಲ ರೈಲ್ವೆ ಕೆಲಸವನ್ನು ಮುಂದುವರಿಸಬೇಕೆಂಬ ನಿರ್ಣಯವು ಮಿ॥ ಮಹಮದ್ ಇಮಾಂರವರ ಅಧ್ಯಕ್ಷತೆಯಲ್ಲಿ ನಡೆದ ಮರಾಮತ್ತು ಮತ್ತು ಸಂಚಾರ ಸಮಿತಿಯಲ್ಲಿ ಮಂಜೂರಾಯಿತು. ಎಲ್ಲಾ ತಾಲ್ಲೂಕು ಕೇಂದ್ರಗಳಿಗೂ ರೈಲ್ವೆ ಸಂಬಂಧವನ್ನು ಕಲ್ಪಿಸುವಂತೆ ಯೋಜನೆಯನ್ನು ಸಿದ್ಧಗೊಳಿಸಬೇಕೆಂದೂ ತೀರ್ಮಾನಿಸಲಾಯಿತು

ಸಾಮುಲ ನರಸಯ್ಯನವರ ನಿಧನ

ಹಾವಿನ ಕಡಿತಕ್ಕೆ ಇದ್ದ ಕಡೆಯಿಂದಲೇ ಮಂತ್ರ ಚಿಕಿತ್ಸೆ ನಡೆಸುವುದರಲ್ಲಿ ಸುಪ್ರಸಿದ್ಧರಾಗಿದ್ದ ಶ್ರೀ॥ ಸಾಮುಲ ನರಸಯ್ಯನವರು ತಿರುಪಳ್ಳೂರಿನಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ ಇವರು ಆಂಧ್ರ ದೇಶದ ಬೋಲಿರೆಡ್ಡಿ ಪಾಳ್ಯಂ ಎಂಬಲ್ಲಿ ಅನೇಕ ವರ್ಷ ಕಾಲ ರೈಲ್ವೆ ಸ್ಟೇಷನ್ ಮಾಸ್ಟರಾಗಿ ನಿವೃತ್ತರಾಗಿದ್ದರು ಹಾವು ಕಡಿದೊಡನೆ ಅವರಿಗೆ ತಂತಿ ಮೂಲಕ ಸಮಾಚಾರವನ್ನು ಕಳುಹಿಸಿದರೆ ಅವರು ಒಂದು ಬಟ್ಟೆಯ ಚೂರನ್ನು ಹರಿದು ಗಿಡಕ್ಕೆ ಗಂಟು ಹಾಕಿ ಹಾವಿನಿಂದ ಕಡಿಯಲ್ಪಟ್ಟವರ ಹೆಸರನ್ನು ಉಚ್ಚರಿಸುತ್ತಿದ್ದರು. ಒಡನೆಯೇ ವಿಷವು ಇಳಿದುಹೋಗುತ್ತಿತ್ತು. ಹೀಗೆ ತಂತಿ ಸಮಾಚಾರವನ್ನು ಅವರಿಗೆ ಕಳುಹಿಸಲು ಸರ್ಕಾರದವರು ಎಲ್ಲಾ ಸೌಲಭ್ಯವನ್ನೂ ಕಲ್ಪಿಸಿದ್ದರು ತಿರುವಳ್ಳೂರಿನಲ್ಲಿ ಸಿಗ್ನಲರ್ ಆಗಿರುವ ಅವರ ಅಳಿಯಂದಿರಾದ ಶ್ರೀ॥ ವರದ ರಾಜರವರೂ ಇದೇ ರೀತಿಯಲ್ಲಿ ಚಿಕಿತ್ಸೆ ಮಾಡುವರೆಂದು ತಿಳಿದು ಬಂದಿದೆ.

ನಗರ ಪರಿಶೀಲನೆ

ಮೈಸೂರು ೨೪

ಜಿಲ್ಲಾಧಿಕಾರಿಗಳಾದ ಶ್ರೀ ಸಿ ಎಸ್ ಎಚ್ ರಣಜೋಧಸಿಂಗ್, ಡಿ॥ ಪೊ॥ ಸೂ॥ ರಾದ ಶ್ರೀ ಹೆಬ್ಳೀಕರ್ ಮತ್ತು ಮೂರನೆ ಕಾಲುಬಲದ ಕಮ್ಯಾಂಡೆಂಟ್ ಶ್ರೀ ನಂಜರಾಜ ಬಹದ್ದೂರ್‌ರವರುಗಳು ಈ ದಿನ ಕುಸುರಿ ವೇಳೆ ನಗರದ ಎಲ್ಲಾ ಮೊಹಲ್ಲೆಗಳಲ್ಲಿಯೂ ಪರಿಶೀಲನೆ ನಡೆಸಿ ಮುಂಜಾಗ್ರತೆ ಕ್ರಮಗಳ ಬಗ್ಗೆ ಸಮಾಲೋಚನೆ ನಡೆಸಿದರೆಂದು ತಿಳಿದುಬಂದಿದೆ

ಕ್ರಿಸ್‌ಮಸ್ ಶುಭಾಶಯಗಳು

ಬೆಂಗಳೂರಿನ ಟಿಂಬರ್ ವ್ಯಾಪಾರಿಗಳೂ ಪ್ರಜಾಪ್ರತಿನಿಧಿ ಸಭಾ ಸದಸ್ಯರೂ ಆದ ಶ್ರೀ ಜಿ ಯಸ್. ದೇವದಾಸರಿಂದಲೂ, ಮೈಸೂರಿನ ಕಸಾಬಾ ಗೋಪಾಲಯ್ಯನವರ ವಸ್ತ್ರದಲ್ಲಿರುವ ಶ್ರೀ ಎಚ್. ಕೃಷ್ಣಮೂರ್ತಿಯವರಿಂದಲೂ ಬಂದಿರುವ ಕ್ರಿಸ್‌ಮಸ್ ಶುಭಾಶಯಗಳನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ.

ಹರಿಕಥೆ

ಈ ದಿವ ರಾತ್ರಿ ೯ ಗಂಟೆಗೆ ಧಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಬ್ರಹ್ಮಾನಂದ ಸ್ವಾಮಿಗಳವರ ಮನೆಯ ಮುಂಭಾಗದಲ್ಲಿ ಶ್ರೀ॥ ಕೇಶವ ಮಾಧವ ದಾಸರಿಂದ ಶ್ರೀನಿವಾಸ ಕಲ್ಯಾಣವೆಂಬ ಹರಿಕಥೆಯು ನಡೆಯುತ್ತದೆ ಸರ್ವರಿಗೂ ಸ್ವಾಗತವಿದೆ.

ನಾಲ್ಕು ಮಕ್ಕಳ ಜನನ

ಯುದ್ಧದ ಕಾಲದ ಅವಸರದಲ್ಲಿ ಮದುವೆಯಾದ ಲಂಡನ್ನಿನ ಮಿ॥ ಚಾರಲ್ಸ್ ಎಂಬ ಬಾಕ್ ಬೈಂಡರಿನ ಹೆಂಡತಿಯು ಒಂದೇ ಬಾರಿಗೆ ನಾಲ್ಕು ಮಕ್ಕಳನ್ನು ಹೆತ್ತಿರುವಳು. ಇವುಗಳಲ್ಲಿ ಮೂರು ಗಂಡು ಮತ್ತು ಒಂದು ಹೆಣ್ಣು. ಇವರಿಗೆ ಮೊದಲು ಒಂದು ಗಂಡು ಮಗುವಾಗಿದ್ದಿತು. ಡಾಕ್ಟರು ಎಲ್ಲ ಮಕ್ಕಳೂ ಸಲಕ್ಷಣವಾಗಿವೆಯೆಂದು ತಿಳಿಸಿರುವರು.

ಪೌರಸಭೆಗೆ ಚುನಾಯಿತ ಅಧ್ಯಕ್ಷರು ಬೇಕು

ಮೈಸೂರು ೨೪

ರಾಜಧಾನಿಯ ಪೌರಸಭೆಯ ಸದಸ್ಯರಾಗಲೀ ಅಥವಾ ಮತದಾರರಾಗಲಿ ಪೌರಸಭಾಧ್ಯಕ್ಷರನ್ನು ಚುನಾಯಿಸಲು ಕಾನೂನಿನ ಪ್ರಕಾರ ಅವಕಾಶ ಕೊಡುವಂತೆ ಸರ್ಕಾರವನ್ನು ಕೋರುವ ನಿರ್ಣಯವು ನಿನ್ನೆ ನಡೆದ ಪೌರಸಭೆಯ ಅಧಿವೇಶನದಲ್ಲಿ ಅಂಗೀಕರಿಸಲ್ಪಟ್ಟಿತು ಈಗ ರಚಿತವಾಗಿರುವ ಪೌರಸಭೆಗೆ ಇದೇ ಕಡೆಯ ಅಧಿವೇಶನ ಪೌರಸಭೆಯವರೇ ತಮ್ಮ ಅಧ್ಯಕ್ಷರನ್ನು ಚುನಾಯಿಸಿಕೊಳ್ಳಲು ಅವಕಾಶ ಕೊಡಬೇಕೆಂಬ ನಿರ್ಣಯವನ್ನು ಶ್ರೀ ಜನಾರ್ಧನ ನಾಯ್ಡುರವರು ಮಂಡಿಸಿದರು ಶ್ರೀ ಎಂ. ಆರ್. ಸಿ. ಬಸಪ್ಪನವರು ಅನುಮೋದಿಸಿದರು. ಪೌರಸಭೆಯವರಾಗಲೀ, ಅಥವಾ ರಾಜಧಾನಿಯ ಮತದಾರರೇ ಆಗಲೀ, ನೇರವಾಗಿ ಅಧ್ಯಕ್ಷರನ್ನು ಚುನಾಯಿಸಲು ಕಾನೂನಿನಲ್ಲಿ ಇರುವ ಅವಕಾಶವನ್ನು ಉಪಯೋಗಿಸಲು ಅನುಮತಿ ಕೊಡಬೇಕೆಂದು ಕಳೆದ ವರ್ಷ ಈ ಸಭೆಯಲ್ಲಿ ನಿರ್ಣಯ ಮಾಡಿದ್ದಂತೆ ಈಗಲೂ ಮಾಡಬಹುದೆಂಬ ತಿದ್ದುಪಡಿಯನ್ನು ಶ್ರೀ ಬಿ ನಾರಾಯಣಸ್ವಾಮಿಯವರು ಸೂಚಿಸಿದರು ಅದನ್ನು ಶ್ರೀ ನಾಯ್ಡುರವರು ಅಂಗೀಕರಿಸಿದರು

ಶ್ರೀ ಎಫ್. ಸಿ ದೇವರಾಜೇ ಅರಸಿನವರು ನಿರ್ಣಯವನ್ನು ವಿರೋಧಿಸಿ ಪಾಸಗೀ ಅಧ್ಯಕ್ಷರಿಗಿಂತಲೂ ಸರ್ಕಾರೀ ಅಧ್ಯಕ್ಷರಿರುವುದರಿಂದಲೇ ಎಷ್ಟೋ ಅನುಕೂಲಗಳು ಆಗುವುವೆಂದೂ ವಾಸಗಿಯವರಿಂದ ಅದು ಆಗುವುದಿಲ್ಲವೆಂದೂ ಹೇಳಿದರು. ಶ್ರೀಗಳಾದ ಪಿ ಸೀತಾರಾಮಯ್ಯ, ಇ. ಸಿ ನಂಜಪ್ಪ ಮುಂತಾದವರ ನಿರ್ಣಯವನ್ನು ಸ್ವೀಕರಿಸಿ ಮಾತನಾಡಿದರು ಇದುವರೆವಿಗೆ ಅನೇಕ ವರ್ಷ ಇದೇ ರೀತಿ ನಿರ್ಣಯಗಳನ್ನು ಪಾಸುಮಾಡಿ ಸರ್ಕಾರವನ್ನು ಪ್ರಾರ್ಥಿಸಲಾಗಿದೆಯೆಂದೂ ಆದರೂ ಅವರು ನಿಷ್ಕರುಣವಾಗಿ ಇದನ್ನು ನಿರಾಕರಿಸುತ್ತಾ ಬಂದಿರುವುದರಿಂದ ಪೌರಸಭೆಯವರಿಗೆ ಬೇಸರವಾಗಿದೆಯೆಂದೂ ಈ ರೀತಿ ಸರ್ಕಾರವನ್ನು ಬೇಡುವುದು ಇದೇ ಕೊನೆಯ ಬಾರಿಯೆಂದೂ, ಈಗಲೂ ಅವರು ಇದಕ್ಕೆ ಮನ್ನಣೆ ಕೊಡದಿದ್ದರೆ ಮುಂದೆ ಪ್ರಭುಗಳಲ್ಲೇ ನೇರವಾಗಿ ಮೊರೆಯಿಡಬೇಕೆಂದೂ ಶ್ರೀ ಬಿ ನಾರಾಯಣಸ್ವಾಮಿಯವರು ಹೇಳಿದರು ಶ್ರೀ ಎಫ್ ಸಿ. ದೇವರಾಜೇ ಅರಸು ಮತ್ತು ಮಿಸಸ್ ಫಯೋಬ್ರಾಂಗ್ ವಿನಾ ಉಳಿದವರೆಲ್ಲರೂ ಈ ನಿರ್ಣಯವನ್ನು ಅನುಮೋದಿಸಿದರು.

ಕೈಗಾರಿಕೆಗಳ ಅಭಿವೃದ್ಧಿ

ದಿವಾನರ ಭಾಷಣ

ಸ್ವಂ ಸು ಪ್ರೋ] ಬೆಂಗಳೂರು ೨೪

ವಾಣಿಜ್ಯ ಭವನದ ಮೂವತ್ತನೇ ವಾರ್ಷಿಕ ಸಮಾರಂಭದಲ್ಲಿ ದಿವಾನರಾದ ಸರ್ ರಾಮಸ್ವಾಮಿ ಮೊದಲಿಯಾರರು ನಿನ್ನೆ ಭಾಷಣ ಮಾಡಿ, ಕೈಗಾರಿಕೆಗಳ ಬೆಳವಣಿಗೆಯ ವಿಷಯದಲ್ಲಿ ಸರ್ಕಾರದ ನೀತಿಯನ್ನು ವಿವರಿಸಿದರು ಕೈಗಾರಿಕೆಗಳನ್ನು ಸ್ವಲ್ಪ ಮಟ್ಟಿಗೆ ಸರ್ಕಾರದವರೇ ನಡೆಸುವುದು ಯುಕ್ತವಾಗಿದ್ದರೂ ಖಾಸಗೀ ಜನರ ಉದ್ಯಮಗಳಿಗೆ ಪ್ರೋತ್ಸಾಹ ನೀಡುವುದು ಉಚಿತವೆಂದೂ ಅವರು ತಿಳಿಸಿದರು.

ಸಾಧ್ವಿ

ಶಾ|| ೨೪-೧೨-೪೬ ಮಂಗಳವಾರ

ಅಭಿವೃದ್ಧಿ ಯೋಜನೆಗಳು

ಸಂಸ್ಥಾನದ ಆರ್ಥಿಕ ಸಮ್ಮೇಳನದ ಕೋ-ಆರ್ಡಿನೇಷನ್ ಮತ್ತು ಫೈನಾನ್ಸ್ ಸಮಿತಿಯ ವರದಿಯು ನಮ್ಮ ಹಸ್ತಗತವಾಗಿದೆ. ಯುದ್ಧಾನಂತರದ ಪುನರ್ರಚನಾ ಕಾರ್ಯಗಳಲ್ಲಿ ನಮ್ಮ ಸಂಸ್ಥಾನಕ್ಕೆ ಅತ್ಯಗತ್ಯವಾಗಿ ಆಗಬೇಕಾಗಿರುವ ಯೋಜನೆಗಳನ್ನು ಈ ಸಮಿತಿಯವರು ಸೂಚಿಸಿರುತ್ತಾರೆ. ಒಂದು ವರ್ಷಕಾಲ ಇವರುಗಳು ವಿಶೇಷ ಶ್ರದ್ಧೆಯಿಂದ ಹಲವಾರು ಯೋಜನೆಗಳನ್ನು ಪರಿಶೀಲಿಸಿ ತಮ್ಮ ಶಿಫಾರಸುಗಳನ್ನು ಮಾಡಿರುತ್ತಾರೆ. ನಿವೃತ್ತ ದಿವಾನರಾದ ಸರ್ ಎ. ಆರ್. ಬ್ಯಾನರ್ಜಿಯವರು ಇದರ ಅಧ್ಯಕ್ಷರಾಗಿದ್ದರು. ಇವರಲ್ಲದೆ ೧೪ ಜನ ಖಾಸಗಿ ಮತ್ತು ಅಧಿಕಾರಿ ಸದಸ್ಯರೂ ಇದ್ದರು.

ಇನ್ನೂರು ಪುಟಗಳಿಗೆ ಮೀರಿದ ಈ ವರದಿಯಲ್ಲಿ ಸಂಸ್ಥಾನದ ಅಭ್ಯುದಯಕ್ಕೆ ಸಾಧಕವಾದ ಅನೇಕ ಸಲಹೆಗಳು ಇರುತ್ತವೆ. ಇವುಗಳಲ್ಲಿ ತ್ವರಿತವಾಗಿ ಆಗಬೇಕಾದ ಕೆಲಸಗಳೂ ಇವೆ. ಸ್ವಲ್ಪ ಸಾವಕಾಶವಾಗಿ ಆಗತಕ್ಕವುಗಳೂ ಇವೆ. ಈ ಯೋಜನೆಗಳನ್ನು ಕಾರ್ಯಗತ ಮಾಡಲು ಮೊನ್ನೆ ತಾನೆ ಭಾರಿ ಸಾಲವೊಂದನ್ನೂ ಸಹ ತೆಗೆದಿರುತ್ತಾರೆ. ಈ ಸಾಲದ ಹಣವು ವಿಶೇಷ ದುಬಾರಿ ಬಡ್ಡಿಯ ಮೇಲೆ ತೆಗೆದುಕೊಳ್ಳಲ್ಪಟ್ಟಿದೆಯೆಂಬ ಅಪವಾದನೆಯೂ ಬಂದಿರುತ್ತದೆ. ಆದುದರಿಂದ ಇದು ಆದಷ್ಟು ಹೆಚ್ಚು ಪ್ರಮಾಣದಲ್ಲಿ ಸದ್ವಿನಿಯೋಗವಾಗಿ ವಿಶೇಷ ಪ್ರತಿಫಲವನ್ನು ಉಂಟು ಮಾಡುವಂತೆ ಮಾಡುವುದು ಸರ್ಕಾರದವರ ಮುಖ್ಯ ಕರ್ತವ್ಯವಾಗಿದೆ.

ಸಂಸ್ಥಾನದ ಆರ್ಥಿಕ ಪುನರುಜ್ಜೀವನಕ್ಕೆ ಸಾಧಕವಾದ ಎಲ್ಲಾ ಕಾರ್ಯಕ್ರಮಗಳಿಗೂ ಸಕಲರ ಸ್ವಾಗತವೂ ಇದ್ದೇ ಇರುತ್ತದೆ. ಆದರೆ ಅವುಗಳನ್ನು ಸಾಧಿಸಲು ಸರ್ಕಾರದವರು ಉಚಿತವಾದ ಆರ್ಥಿಕ ತತ್ವಗಳ ಆಧಾರದ ಮೇಲೆಯೇ ಮುನ್ನಡೆಯಬೇಕು. ಕೈಗಾರಿಕೆಗಳ ಉನ್ನತಿಯ ಸಂಪೂರ್ಣವಾಗಿ ಆಗಬೇಕಾದರೆ ಅವುಗಳನ್ನು ರಾಷ್ಟ್ರೀಕರಣ ಮಾಡಬೇಕೆಂಬ ತತ್ವವು ಎಲ್ಲರಿಂದಲೂ ಅಂಗೀಕರಿಸಲ್ಪಟ್ಟಿದೆ. ಇದು ಸಾಧ್ಯವಾಗಬೇಕಾದರೆ ಆಡಳಿತವೂ ರಾಷ್ಟ್ರೀಕರಿಸಲ್ಪಡಬೇಕು. ಜವಾಬ್ದಾರಿ ಸರ್ಕಾರದ ಸ್ಥಾಪನೆಯಿಂದಲೇ ಸಂಪೂರ್ಣವಾದ ಕೈಗಾರಿಕೆಗಳ ಬೆಳವಣಿಗೆಯು ಸಾಧ್ಯ.

ನಮ್ಮ ಸಂಸ್ಥಾನದ ಕೈಗಾರಿಕೆ ಮತ್ತು ವ್ಯಾಪಾರಗಳ ಬೆಳವಣಿಗೆಗಾಗಿ ಭಟ್ಕಳ್ ಬಂದರಿನ ಸಾಧನೆ, ತಳ್ಳಮಂಗಲದ ರೈಲಿನ ಸ್ಥಾಪನೆ, ಇವುಗಳು ಅತ್ಯಂತ ಅಗತ್ಯವಾಗಿವೆ. ಇವುಗಳು ಬೇಗನೆ ಕೈ ಗೂಡುವಂತೆ ಮಾಡುವುದು ಅತ್ಯವಶ್ಯಕ.

ಹೊಸ ಯೋಜನೆಗಳನ್ನು ಸಾಧಿಸಲು ಸಮಿತಿಯವರು ಕೆಲವು ಹೊಸ ರೀತಿಯ ತೆರಿಗೆಗಳನ್ನು ಸೂಚಿಸಿರುತ್ತಾರೆ. ಇವುಗಳ ಬಗ್ಗೆ ಸಮಿತಿಯ ಸದಸ್ಯರುಗಳಲ್ಲಿ ಭಿನ್ನಾಭಿಪ್ರಾಯಗಳು ಕಂಡು ಬರುತ್ತವೆ. ಈಗಾಗಲೇ ವಿಶೇಷವಾಗಿ ಕಂದಾಯದ ಹೊರೆಗೆ ಈಡಾಗಿರುವ ಮೈಸೂರಿನ ಪ್ರಜೆಗಳ ಮೇಲೆ ಇನ್ನೂ ಹೆಚ್ಚಿನ ಭಾರವನ್ನು ಹಾಕಲು ಅನೇಕ ಸದಸ್ಯರು ಇಷ್ಟಪಟ್ಟಿರುವುದಿಲ್ಲ. ಆದುದರಿಂದ ಸಾರ್ವತ್ರಿಕವಾದ ಕಂದಾಯದ ಹೊರೆಯನ್ನು ಹಾಕುವಾಗ ಸರ್ಕಾರದವರು ವಿಶೇಷ ಎಚ್ಚರಿಕೆಯಿಂದ ಮುಂದುವರಿಯಬೇಕು.

ಸಮಿತಿಯ ಸಲಹೆಗಳು ಸಂಸ್ಥಾನದ ಪುರೋಭಿವೃದ್ಧಿಗಾಗಿ ಅನೇಕ ಉಪಯುಕ್ತ ಅಂಶಗಳನ್ನು ಒಳಗೊಂಡಿವೆ. ಅವುಗಳು ಬೇಗನೆ ಕಾರ್ಯರೂಪಕ್ಕೆ ಬಂದು ಪ್ರಜೆಗಳ ಹಿತಸಾಧನೆಗೆ ಸಹಾಯಕವಾಗಲೆಂದು ನಾವು ಹಾರೈಸುತ್ತೇವೆ.

ಹಿರಿಯೂರು ತಾಲ್ಲೂಕು ಕಸ್ತೂರನಹಳ್ಳಿಯ ಪುಟ್ಟಪ್ಪಗೌಡ ಎಂಬಾತನು ಗ್ರಾಮದ ಅಂಕಕಲಹದ ಪರಿಣಾಮವಾಗಿ ಕೊಲೆ ಮಾಡಲ್ಪಟ್ಟಿರುವನೆಂದು ತಿಳಿದುಬಂದಿದೆ.

ಅಖಿಲ ಕರ್ನಾಟಕ ವಿದ್ಯಾರ್ಥಿ ಕಾಂಗ್ರೆಸ್ ಸಮ್ಮೇಳನ

ಶಿವಮೊಗ್ಗೆಯಲ್ಲಿ ಸಮಾರಂಭ

ಸ್ವಂ. ಸು. ಹಂಚಿ] ಶಿವಮೊಗ್ಗೆ ೨೩

ಇಲ್ಲಿನ ಜಯ ಪ್ರಕಾಶ ನಗರದಲ್ಲಿ ಅ|| ಕ|| ವಿದ್ಯಾರ್ಥಿ ಕಾಂಗ್ರೆಸ್ ಸಮ್ಮೇಳವು ನಿನ್ನೆ ಮತ್ತು ಈ ದಿನ ಅತ್ಯಂತ ವೈಭವದಿಂದ ನಡೆಯಿತು. ಮೂಲ ಶಿಕ್ಷಣದ ಸಂಚಾಲಕರಾದ ತಿರುವಾಂಕೂರಿನ ಶ್ರೀ|| ಜಿ. ರಾಮಚಂದ್ರನ್‌ರವರು ಅಧ್ಯಕ್ಷತೆ ವಹಿಸಿದ್ದರು. ಅವರು ನಿನ್ನೆ ಬೆಳಗ್ಗೆ ರಾಷ್ಟ್ರೀಯ ಧ್ವಜಾರೋಹಣವನ್ನು ಮಾಡಿ ವಿದ್ಯಾರ್ಥಿಗಳು ಈ ಧ್ವಜದ ಪವಿತ್ರತೆಯನ್ನು ಅರಿಯಬೇಕೆಂದು ಹೇಳಿದರು. ಎಲ್ಲಾ ರಾಜರುಗಳೂ ಈ ಧ್ವಜಕ್ಕೆ ಮನ್ನಣೆಯೀಯುವ ಕಾಲವು ಬೇಗನೆ ಬರುವುದೆಂದೂ ತಿಳಿಸಿದರು. ಶ್ರೀಮತಿ ವಿಜಯ ಲಕ್ಷ್ಮಿ ಪಂಡಿತರು ಇಡೀ ವಿಶ್ವದ ಮುಂದೆ ಈ ಧ್ವಜದ ಗೌರವವನ್ನು ಎತ್ತಿ ಹಿಡಿದಂತೆ ವಿದ್ಯಾರ್ಥಿಗಳೂ ಅದರ ಗೌರವವನ್ನು ಕಾಪಾಡಬೇಕೆಂದು ಹೇಳಿದರು.

ಶ್ರೀ ರಾಮಚಂದ್ರನ್‌ರವರ ಅಧ್ಯಕ್ಷತೆಯಲ್ಲಿ ವಿಷಯ ನಿರೂಪಕ ಸಮಿತಿ ಸೇರಿದ್ದಿತು. ಇಂದಿನ ರಾಜಕೀಯ ಪರಿಸ್ಥಿತಿ, ಬರುವ ಹೋರಾಟಕ್ಕೆ ವಿದ್ಯಾರ್ಥಿಗಳ ಸಿದ್ಧತೆ, ಸ್ವತಂತ್ರ ಪ್ರಜಾ ಪ್ರಭುತ್ವವುಳ್ಳ ಅಖಂಡ ಕರ್ನಾಟಕ ಪ್ರಾಂತ ನಿರ್ಮಾಣ, ಗೋವಾ ಸತ್ಯಾಗ್ರಹಕ್ಕೆ ಸಹಾನುಭೂತಿ- ಇವೇ ಮುಂತಾದ ನಿರ್ಣಯಗಳು ಮಂಡಿತವಾದುವು.

ಮೈಸೂರು ಕಾಂಗ್ರೆಸ್ ಮಾಜಿ ಅಧ್ಯಕ್ಷರಾದ ಶ್ರೀ ಟಿ. ಸಿದ್ಧಲಿಂಗಯ್ಯನವರು ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸಿದರು. ಇತರ ದೇಶಗಳು ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಿದ್ಯಾರ್ಥಿಗಳು ವಹಿಸಿದ್ದ ಅಮೋಘ ಪಾತ್ರವನ್ನು ಅವರು ವಿವರಿಸಿದರು. ೧೯೪೨ನೇ ಇಸವಿಯಲ್ಲಿ ವೀರ ದೇಶ ಭಕ್ತರು ತೋರಿದ ಉದಾತ್ತ ಧೈರ್ಯ ಸಾಹಸಗಳನ್ನು ವಿದ್ಯಾರ್ಥಿಗಳು ಇನ್ನೂ ಸಾವಿರಪಾಲಿನಷ್ಟು ಅನುಸರಿಸಬೇಕೆಂದು ತಿಳಿಸಿದರು. ಅಧ್ಯಕ್ಷರಾದ ಶ್ರೀ|| ಜಿ. ರಾಮಚಂದ್ರನ್‌ರವರು ನಾಲ್ಕು ವರ್ಷಗಳ ಹಿಂದೆ ವಿದ್ಯಾರ್ಥಿಗಳು ತೋರಿದ ಸಾಹಸ ಮತ್ತು ದೇಶಾಭಿಮಾನಗಳಿಗಾಗಿ ಮೆಚ್ಚಿಗೆಯನ್ನು ಸೂಚಿಸಿ ಮುಂದೆ ಬರುವ ಕ್ರಾಂತಿಗೆ ಎಲ್ಲರೂ ಸಿದ್ಧರಾಗಿರಬೇಕೆಂದು ತಿಳಿಸಿದರು. ರಾಜರುಗಳ ಅಧಿಕಾರದ ವಾದವನ್ನು ಖಂಡಿಸಿದರು. ಪ್ರಜೆಗಳೇ ಒಂದು ರಾಷ್ಟ್ರದ ಪರಮಾಧಿಕಾರಿಗಳೆಂದು ಸಾರಿದರು. ಈಚೆಗೆ ಬ್ರಿಟಿಷ್ ಸರ್ಕಾರದವರು ಕೊಟ್ಟಿರುವ ವಿವರಣೆಯ ವಿಷಯದಲ್ಲಿ ಅಸಮಾಧಾನವನ್ನು ಸೂಚಿಸಿದರು. ಅವರ ಸವಾಲಿಗೆ ವಿದ್ಯಾರ್ಥಿಗಳು ತಕ್ಕ ಉತ್ತರವನ್ನು ಕೊಡಬೇಕೆಂದು ಬೋಧಿಸಿದರು. ಪರಿಣಾಮಕಾರಿಯಾದ ರಚನಾತ್ಮಕ ಕಾರ್ಯದಲ್ಲಿ ವಿದ್ಯಾರ್ಥಿಗಳು ತೊಡಗಬೇಕೆಂದು ಪ್ರೇರೇಪಿಸಿದರು. ಕೋಮುವಾರು ವಿಷ ಬೀಜವನ್ನು ನಿರ್ಮೂಲಗೊಳಿಸಲು ಟೊಂಕ ಕಟ್ಟಿ ನಿಲ್ಲಬೇಕೆಂದು ಒತ್ತಾಯ ಪಡಿಸಿದರು. ಸಮ್ಮೇಳನದ ಅಂಗರಚನಾ ನಿಯಮಗಳು ಬಹಿರಂಗ ಅಧಿವೇಶನದಲ್ಲಿ ಅಂಗೀಕರಿಸಲ್ಪಟ್ಟವು.

ಈ ದಿನ ಬೆಳಗ್ಗೆ ಶ್ರೀ|| ಸಿದ್ಧವ್ವನಹಳ್ಳಿ ಕೃಷ್ಣ ಶರ್ಮರು ಧ್ವಜಾರೋಹಣ ಮಾಡಿದರು. ವಿಷಯ ನಿರೂಪಕ ಸಮಿತಿಯಲ್ಲಿ ಖಾಸಗಿ ನಿರ್ಣಯಗಳನ್ನು ಪರಿಶೀಲಿಸಲಾಯಿತು.

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಚೆಂಗಲರಾಯ ರೆಡ್ಡಿಯವರು ಈ ದಿನ ಬೆಳಗ್ಗೆ ಇಲ್ಲಿಗೆ ಆಗಮಿಸಿದರು. ಅವರಿಗೆ ಅಭ್ಯುಚಿತವಾದ ಸ್ವಾಗತವನ್ನು ನೀಡಲಾಯಿತು. ಬಹಿರಂಗ ಅಧಿವೇಶನದಲ್ಲಿ ಈ ದಿನ ಸಂಜೆ ಅವರು ಭಾಷಣ ಮಾಡುವರು.

ಮತ್ತೊಂದು ಮಹಾ ಯುದ್ಧ

ಅಮೆರಿಕ ಸಂಯುಕ್ತ ಸಂಸ್ಥಾನಗಳ ಮುಕ್ಕಾಲು ಭಾಗದ ಜನರು ಪುನಃ ಇನ್ನು ೨೫ ವರ್ಷಗಳಲ್ಲಿ ಮಹಾಯುದ್ಧವು ಅನಿವಾರ್ಯವಾಗುವುದೆಂದು ಅಭಿಪ್ರಾಯಪಡುತ್ತಿದ್ದಾರೆ. ಕಾಲು ಭಾಗದ ಜನರು ಇನ್ನು ೫ ವರ್ಷಗಳಲ್ಲೇ ಮತ್ತೊಂದು ಮಹಾಯುದ್ಧವು ನಡೆಯುವುದೆಂದು ಹೇಳುತ್ತಿದ್ದಾರೆ.

ಸ್ವಾತಂತ್ರ್ಯ ದಿನದ ಕಾಣಿಕೆ!

26-1-1947 ರಂದು ಪ್ರದರ್ಶಿತವಾಗಲಿದೆ

ಮಹಾತ್ಮಾರವರ ಅತ್ಯಮೋಘ ಕನ್ನಡ ಚಿತ್ರ

" ಕೃಷ್ಣಲೀಲಾ "

ಕೆಂಪರಾಜ್, ರತ್ನಮಾಲಾ, ಬಳ್ಳಾರಿ ಲಲಿತ, ಕುಮಾರಿ ಉಷಾ, ಕಾಂತಾ, ರಾಜಕುಮಾರಿ, ಪ್ರತಿಮಾ ಮೊದಲಾದವರ ಅಭಿನಯ

—:: ಇದೀಗ ಸಿದ್ಧವಾಗುತ್ತಿವೆ. ::—

ಭಕ್ತ ರಾಮದಾಸ್ ಮತ್ತು ಪತಿವ್ರತಾ

ಮಹಾತ್ಮಾ ಪಿಕ್ಚರ್ಸ್, ಮೈಸೂರು.

ಶೀಘ್ರದಲ್ಲಿಯೇ ನಿಮ್ಮ ಮೆಚ್ಚಿನ ನ್ಯೂ ಇಂಪೀರಿಯಲ್ ಟಾಕೀಸಿನಲ್ಲಿ ಬರುವ ತಾರೀಖನ್ನು ಗಮನಿಸಿರಿ

ತಮಿಳುನಾಡು ಟಾಕೀಸ್‌ರವರ

..........ಸುಪ್ರಸಿದ್ಧ ಪೌರಾಣಿಕ ಚಿತ್ರ..........

ಮೋಹಿನಿ

ರುಕ್ಮಾಂಗದ (ತಮಿಳು ಭಾಷೆ)

ಎಮ್. ಎಸ್. ವಿಜಯಾಳ್, ಪಿ. ಬಿ. ರಂಗಾಚಾರ್ ಕೆ. ಬಿ. ಶಾರದಾಂಬಾಳ್, ವಿದ್ವಾನ್ ಶ್ರೀನಿವಾಸನ್, ಎಂ. ಆರ್. ಸುಬ್ರಹ್ಮಣ್ಯಂ ಮತ್ತು ಇತರರು ನಟಿಸಿರುವರು

ನಿರ್ದೇಶಕರು:-ಎಸ್. ಸೌಂದರ್‌ರಾಜ್ : ಸ್ಟುಡಿಯೋ:-ರಣಜಿತ್-ಬೊಂಬಾಯಿ

For Bookings to :-Mysore State, South Canara & Coorg

Apply to :-SRI MAHALAKSHMI PICTURES,

No 8, Hospital Road, Bangalore City.

Edited, printed and published by A. R. Nagarajan at the Sadhvi Press D'Subbiah Road, Mysore.

ರಾಜಕಮಲ್, ಮೈಸೂರು

೨೦-೧೨-೪೬ ರಿಂದ ೬ ನೇ ಮತ್ತು ಕೊನೇ ವಾರ

ಡಾಕ್ಟರ್ ಕೊಟ್ನಿಸ್ ಕಿ ಅಮರ್ ಕಹಾನಿ

ತಾರಾಗಣ:- ಜಯಶ್ರೀ, ಶಾಂತಾರಾಂ, ಇತರರು.

20-12-46 ರಿಂದ 7 ದಿನಗಳು ಪ್ರಾತಃಕಾಲ 10-30 ಕ್ಕೆ

ಬಾಂಬೆ ಟಾಕೀಸ್ ರವರ ' ಬಂಧನ್ '

ಭೂಮಿಕೆ:- ಲೀಲಾ ಚಿಟ್ನಿಸ್, ಅಶೋಕ ಕುಮಾರ್.

(ಹೊಸ ಕಾಪಿ, Brand New Print)

ರೋ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಬುಧವಾರ ೨೫—೧೨—೪೬ [ಸಂಚಿಕೆ ೧೧೯

ಸಧ್ಯದಲ್ಲೇ ಮತ್ತೊಂದು ದುಂಡು ಮೇಜಿನ ಸಭೆ

ನೆಹರೂರವರ ಕನ್ನಡಕದ ಕಳುವು

...ನು ಘಟಕೋತ್ಸವಕ್ಕೆ ತೆರಳಿದ್ದ ...ತ ನೆಹರೂರವರು ಡಾಕ್ಟರೇಟ್ ...ಯನ್ನು ಪಡೆದ ದಿನವೇ ತಮ್ಮ ...ಡಕವನ್ನು ಕಳೆದುಕೊಂಡರೆಂದು ಹೇಳ ...ಗಿದೆ ಅವರು ತಂಗಿದ್ದ ಜಾಗವನ್ನು ...ಧಿಸಲಾಯಿತೆಂದೂ, ಆದರೆ ಅದು ದೊ ...ಲಿಲ್ಲವೆಂದೂ, ಅದನ್ನು ಯಾರೋ ಕ ...ರೆಂದೂ ಹೇಳಲಾಗಿದೆ

ಮೊಲಟೋವ್ ಸ್ಟಾಲಿನ್ನರ ಉತ್ತರಾಧಿಕಾರಿ

...ಕಾಲಸ್ಯದ ನಿಮಿತ್ತ ರಷ್ಯಾನಾಯಕ ...ಲ್ ಸ್ಟಾಲಿನ್ನರು ಬರುವವರ್ಷ ... ಅಧಿಕಾರದಿಂದ ನಿವೃತ್ತರಾಗುವರು. ...ನಂತರ ಮಿ॥ ಮೊಲೋಟೋವ್‌ರವರು ...ದ ನಾಯಕತ್ವವನ್ನು ವಹಿಸಬೇಕೆಂದು ...ವ ಹೇಳಿರುವರು ಮಿ॥ ಮೊಲೋಟೋವ್ ...ವ ನಾಯಕತ್ವದಲ್ಲಿ ಆಡಳಿತವನ್ನು ನಡೆ ...ಮಂತ್ರಿಮಂಡಳಿಯ ಸದಸ್ಯರ ಹೆಸರು ...ನ್ನು ಅವರ ಅಧಿಕಾರಗಳನ್ನೂ ಸಹ ಅ ...ರೇ ತಿಳಿಸುವರು.

ಕಾಶ್ಮೀರದಲ್ಲಿ ಚುನಾವಣೆಗಳಿಗೆ ಬಹಿಷ್ಕಾರ

ಸರ್ಕಾರಿ ಅಧಿಕಾರಿಗಳು ಚುನಾವಣೆಗಳ ...ಕ್ಕೆ ಜಾತಿ ಪ್ರಜೆಗಳ ಹಕ್ಕುಬಾಧ್ಯತೆಗಳಿಗೆ ...ತ ತರುತ್ತಿರುವುದರಿಂದ ಬರುವ ಜನ ...ಯಲ್ಲಿ ನಡೆಯಬೇಕಾಗಿರುವ ಚುನಾವ ...ನ್ನು ಕಾಶ್ಮೀರದ ಕಾಂಗ್ರೆಸ್ ಪಕ್ಷವು ...ಷ್ಕರಿಸಿದೆ ಈ ಅಂಶವನ್ನು ಪಂಡಿತ ...ರು ಮತ್ತು ಡಾ॥ ಪಟ್ಟಾಭಿಸೀತಾರಾ ...ಮಯ್ಯನವರಿಗೆ ಕಾಶ್ಮೀರದ ಹಂಗಾಮಿ ಅ ...ಕ್ಷರಾದ ಮಿ॥ ಬಕ್ಷಿಗುಲಾಂ ಅಹಮ್ಮದರು ...ಳಿಸಿರುತ್ತಾರೆ.

ಕಲ್ಕತ್ತೆಗೆ ಕಾಂಗ್ರೆಸ್ ಪ್ರಮುಖರು

...ಷ್ಟ್ರಪತಿ ಆಚಾರ್ಯ ಕೃಪಲಾನಿ, ...ಡಿತ ಜವಹರಲಾಲ್‌ನೆಹರೂ ಮತ್ತು ...ಕರರಾವ್ ದೇವ್‌ರವರುಗಳು ಪೂರ್ವ ...ಂಗಾಳದಲ್ಲಿರುವ ಮಹಾತ್ಮ ಗಾಂಧಿಯವ ...ನ್ನು ಭೇಟಿ ಮಾಡಿ ಈಗಿನ ರಾಜಕೀಯ ...ಸ್ಥಿತಿಯ ಬಗ್ಗೆ ಚರ್ಚೆ ನಡಸುವ ಸಲು ...ಗಿ ಇದೇ ೨೭ ನೇ ತಾರೀಕು ಕಲ್ಕತ್ತೆಗೆ ...ರಳಿರುವರು.

ಪೌರಸಭೆಯ ಆಡಳಿತ

ಮೈಸೂರು ೨೪

...ಜಧಾನಿಯ ಪೌರಸಭೆಯ ಆಡಳಿತ ದ ವರದಿಯನ್ನು ಪರಿಶೀಲಿಸಲು ಸಭೆಯ ...ಶೇಷ ಅಧಿವೇಶನವು ನಿನ್ನೆ ನಡೆಯಿತು ...ಧ್ಯಕ್ಷರು ತಯಾರಿಸಿದ್ದ ವರದಿಯನ್ನು ವಿ ...ಮರ್ಶಿಸಿ ಸದಸ್ಯರುಗಳು ತಮ್ಮ ಅಭಿಪ್ರಾ ...ಯವನ್ನು ಸೂಚಿಸಿದರು ಪುರವಾಸಿಗ ...ಳ ಹಿತಸಾಧನೆಗಾಗಿ ಮಾಡಬೇಕಾದ ಏರ್ಪಾ ...ಡುಗಳ ಬಗ್ಗೆ ಅನೇಕ ಸಲಹೆಗಳನ್ನಿತ್ತರು

ನಗರದಲ್ಲಿ ಬಸ್ ಸರ್ವಿಸ್, ಪೌರಸಭೆಯ ...ಸ್ಟೋರ್ ಮತ್ತು ಇತರ ಪುನರ್ರಚನಾ ಕಾರ್ಯ ...ಗಳಿಗಾಗಿ ಕೋರಲಾಗಿದ್ದ ಸಾಲವನ್ನು ಸರ್ಕಾ ...ರದವರು ಬೇಗ ಮಂಜೂರ್ಮಾಡಬೇಕೆಂ ...ದು ಪ್ರಾರ್ಥಿಸಲಾಯಿತು

"ಎಗ್ಸಿಕ್ಯೂಟಿವ್ ಇಂಜನಿಯರ್ ಶ್ರೀ ಕೆ ಎಸ್ ವೆಂಕಟರಮಣನ್‌ರವರನ್ನು ...ರಿನ ಡಿವಿಜನ್ನಿಗೆ ವರ್ಗಾಯಿಸಲಾ ...ಗಿದೆ

ಜವಾಬ್ದಾರಿ ಸರ್ಕಾರ ಶತಸ್ಸಿದ್ಧ

ಶಿವಮೊಗ್ಗೆಯಲ್ಲಿ ಚೆಂಗಲರಾಯ ರೆಡ್ಡಿಯವರ ಭಾಷಣ

ಸ್ವಂ. ನು] ಶಿವಮೊಗ್ಗ ೨೪

"ಭಾರತವು ಕ್ರಾಂತಿಪರ್ವದ ಅಂತಿಮ ಹೊಸಲಿನಲ್ಲಿದೆ. ಸ್ವತಂತ್ರ ಭಾರತದ ಅ ರುಣೋದಯದ ಈ ಸನ್ನಿವೇಶದಲ್ಲಿ ಆಂತ ರಿಕ ಅಡಚಣೆಗಳು ಉದ್ಭವಿಸಿರುವುದು ನ ಮ್ಮ ದುರ್ದೈವ ಆದರೆ ಈ ಕುಂತ್ರತದ ಅವಕಾಶವನ್ನು ಉಪಯೋಗಿಸಿಕೊಂಡು ಬ್ರಿ ಟಿಷ್ ಅಥವಾ ಮೈಸೂರು ಸರ್ಕಾರವು, ಭಾ ರತದ ಸ್ವಾತಂತ್ರ್ಯ ಮತ್ತು ಇಲ್ಲಿ ಜವಾಬ್ದಾ ರಿ ಸರ್ಕಾರಕ್ಕೆ ನಡೆಯುತ್ತಿರುವ ಚಳುವಳಿ ಯನ್ನು ಅದುಮಿಡಲು ಪ್ರಯತ್ನಿಸಿದರೆ, ಅ ದನ್ನು ಜನರು ಎಲ್ಲ ಮಾರ್ಗಗಳಿಂದಲೂ ಎ ದುರಿಸಲು ತಯಾರಾಗಿದ್ದಾರೆ ಕಾಲ ಬ ದಲಾವಣೆಯ ಮಹತ್ವವನ್ನು ಅರಿತು ರಾಜ ನೀತಿ ವೈಶಾಲ್ಯತೆಯಿಂದ ವರ್ತಿಸುವುದು ಸ ರ್ಕಾರದ ಕರ್ತವ್ಯವಾಗಿದೆ" ಎಂದು ಮೈ ಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ ಸಿ. ರೆಡ್ಡಿಯವರು ನಿನ್ನೆ ಸಂಜೆ ಕರ್ನಾಟಕ ವಿ ದ್ಯಾರ್ಥಿ ಕಾಂಗ್ರೆಸ್ ಸಮ್ಮೇಳನದ ಬಹಿರಂ ಗ ಸಭೆಯಲ್ಲಿ ಭಾಷಣಮಾಡುತ್ತ ತಿಳಿಸಿ ದರು

"ಮೈಸೂರಿನಲ್ಲಿ ಅಲ್ಪ ಸಂಖ್ಯಾತರನ್ನು ಬಹುಸಂಖ್ಯಾತರ ಮೇಲೆ ಎತ್ತಿಕಟ್ಟಿ ಜವಾ ಬ್ದಾರಿ ಸರ್ಕಾರದ ಚಳುವಳಿಯನ್ನು ನಿರ್ಮೂ ಲೋತ್ಪಾಟನ ಮಾಡಲು ಹವಣಿಕೆಯಾಗು ತ್ತಿರುವಂತೆ ಕೆಲವರು ಹೇಳುತ್ತಿದ್ದಾರೆ ಅ ದರ ಸತ್ಯತೆ ಹೇಗೇ ಇರಲಿ, ಸರ್ಕಾರವು ಜನರ ಆಕೋಶ್ರಗಳನ್ನು ಉಪೇಕ್ಷಿಸಿಕೊ ಡದಿದ್ದರೆ ಹೋರಾಟವು ಈ ಸಾರಿ ಭಾರಿ ಪ್ರ ಮಾಣದಲ್ಲಿ ಜರುಗಿಯೇ ತೀರುತ್ತದೆ ಅ ಕಾಶ ಕಳಚಿಬಿದ್ದರೂ, ಭೂಮಿ ಬಿರುಕು ಬಿ ಟ್ಟರೂ ಈ ಸಲ ನಾವು ಜವಾಬ್ದಾರಿ ಸರ್ಕಾ ರ ಸ್ಥಾಪನೆ ಮಾಡುವುದಂತೂ ಶತಸ್ಸಿದ್ಧ" ಎಂದು ಶ್ರೀ ರೆಡ್ಡಿಯವರು ಘೋಷಿಸಿದರು.

"ನನ್ನ ವೈಯುಕ್ತಿಕ ಅಭಿಪ್ರಾಯದಲ್ಲಿ ಜಾತಿಗಳೆಲ್ಲಾ ಹೊರಟುಹೋಗಿ, ಈ ಗೊಂ ದಲ ನಿಲ್ಲಬೇಕು ಈ ವಿಚಾರ ಯುವಕರಲ್ಲಿ ಹೇಳಲು ನನಗೆ ಹಕ್ಕು ಇದೆ: ಅಂತರ್ಜಾ ತೀಯ ವಿವಾಹದಿಂದ ಈ ಪ್ರಶ್ನೆ ಬಗೆಹರಿ ಯಬಹುದೆಂದು ತೋರುತ್ತದೆ

"ಯುವಕರು ದಿನದಿನಕ್ಕೆ ಮುಂದುವ ರಿಯುತ್ತಿದ್ದಾರೆ ರಾಜಪ್ರಮುಖ್ಯರಿಗೇ ಇ ರಬಾರದೆ ಇದು ಅವರ ಛಲ. ಆದರೆ ನಾ ವು, ಮೈಸೂರು ಕಾಂಗ್ರೆಸ್ಸಿನವರು ರಾಜರ ಆಶ್ರಯದಲ್ಲಿ ಜವಾಬ್ದಾರಿ ಸರ್ಕಾರ ಕೇಳು

ತಾತಯ್ಯನವರ ದಿನಾಚರಣೆ

ಮೈಸೂರು ೨೬

ಮೈಸೂರು ಅನಾಥಾಲಯದ ಸಾಹಿತ್ಯ ಸಂಘದವರು ವೃದ್ಧಪಿತಾಮಹ, ದಯಾ ಸಾಗರ, ಎಂ ವೆಂಕಟಕೃಷ್ಣಯ್ಯನವರ ದಿ ನಾಚರಣೆಯನ್ನು ನಿನ್ನೆ ವೈಭವದಿಂದ ನೆರ ವೇರಿಸಿದರು ಶ್ರೀ ಸಿ ಕೆ. ನರಸಿಂಹ ಶಾಸ್ತ್ರಿಗಳು ಅಧ್ಯಕ್ಷತೆ ವಹಿಸಿದ್ದರು ಪ್ರಾ ರ್ಥನೆಯನಂತರ ಶ್ರೀಗಳಾದ ಡಾ. ಶ್ರೀನಿ ವಾಸಯ್ಯ, ಅಗರಂ ರಂಗಯ್ಯ ಮತ್ತು ಸಿ. ನರಸಿಂಹಯ್ಯನವರುಗಳು ತಾತಯ್ಯನವರ ಜೀವನಚರಿತ್ರೆ ಮತ್ತು ಅವರ ಗುಣವಿಶೇ ಷಗಳ ವಿಷಯವಾಗಿ ಭಾಷಣಮಾಡಿದರು ವಿದ್ವಾನ್, ಪಾಲಘಾಟ್ ಸುಬ್ರಹ್ಮಣ್ಯ ಅ ಯ್ಯರ್ ಮತ್ತು ಮಂಡಲಿಯವರ ಸಶ್ರಾ ವ್ಯವಾದ ಸಂಗೀತವಾದನಂತರ ಅಧ್ಯಕ್ಷರು ವಿದ್ಯಾರ್ಥಿಗಳಿಗೆ ಹಿತೋಪದೇಶ ಮಾಡಿದ ಮೇಲೆ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ರಾಜ್ಯಾಂಗ ಸಭೆ ಮುಂದೆ ಹೋಯಿತು

ಭಾರತ ರಾಜ್ಯಾಂಗ ಸಭೆಯು ಎರಡು ವಾರಕಾಲ ಕೆಲಸಮಾಡಿ ಜನವರಿ ೨೦ನೇ ತಾರೀಕಿಗೆ ಮುಂದುವರಿಸಲ್ಪಟ್ಟಿತು ಸಭ್ಯ ತ್ರಿಮದ ನಿಯಮಗಳನ್ನು ಅಂಗೀಕರಿಸಿದು ದಲ್ಲದೆ ಹಲವು ಉಪಸಮಿತಿಗಳನ್ನು ರಚಿಸ ಲಾಯಿತು.

...ಶ್ರೀದ್ವೇವೆ ಇದು ದೊರೆಯದಿದ್ದರೆ ರಾಜ ತ್ವವನ್ನು ವಿರೋಧಿಸುವವರ ತಂಡ ಬಲಗೊ ಳ್ಳುತ್ತದೆ. ಆದ್ದರಿಂದ ಮಹಾರಾಜರು ಸಲ ಹೆಗಾರರು ದೂರದೃಷ್ಟಿಯಿಂದಲೂ, ರಾಜ ವಂಶದ ಚಿರಸ್ಥಾಯೀ ದೃಷ್ಟಿಯಿಂದಲೂ, ಈಗಲೇ ಎಚ್ಚೆತ್ತು, ಪ್ರಜೆಗಳ ಪ್ರತಿನಿಧಿಗಳ ಗೆ ಅಧಿಕಾರ ವರ್ಗಾಯಿಸಿಕೊಡುವಂತೆ ಪ್ರ ಭುಗಳಿಗೆ ಸೂಚಿಸಬೇಕು ಕಾಲ ಮಿಂಚಿ ಹೋದಮೇಲೆ ಫಲವಿಲ್ಲ ಯುವಕರೇ ನೀ ವು ರಾಜರಿಲ್ಲದ ರಾಜ್ಯ ನಿರ್ಮಾಣವಾಗಬೇ ಕೆಂದು ನಿರ್ಣಯಿಸಿದ್ದೀರಿ ಆದರೆ ಈಗ ರಾಜಕೀಯ ಕ್ಷೇತ್ರದಲ್ಲಿರುವ ಮೈಸೂರು ಕಾಂಗ್ರೆಸ್ ಅದಕ್ಕೆ ಸಮ್ಮತಿಸುತ್ತಿಲ್ಲ ಕಾಂ ಗ್ರೆಸ್ಸಿಗೆ ಸ್ವಲ್ಪ ಅವಕಾಶ ಕೊಡಿ, ನಮ್ಮ ಶಕ್ತಿ ಯ ಅಳತೆಯ ಸಾಧ್ಯವಾಗದಿದ್ದರೆ ನಾವೇ ನಿಜವಾಗಿ ಹೇಳಿಬಿಡುತ್ತೇವೆ ಆಗ ನಾವೂ ನೀವೂ ಒಟ್ಟಿಗೆ ಸೇರಿ ಹೋರಾಡೋಣ ಅ ಲ್ಲಿಯವರೆಗೆ ನೀವು ಕಾಯಬೇಕಾದದ್ದು ನಿ ಮ್ಮ ಕರ್ತವ್ಯ"—ಎಂದು ಹೇಳಿದರು

ದೆಹಲಿಯಲ್ಲಿ ಮತ್ತೊಂದು ದುಂಡುಮೇಜಿನ ಪರಿಷತ್ತು

ಭಾರತ ರಾಜ್ಯಾಂಗ ಸಭೆಯು ಬರುವ ತಿಂಗಳು ಸೇರುವುದಕ್ಕೆ ಮೊದಲು ದೆಹಲಿ ಯಲ್ಲಿ ಮತ್ತೊಂದು ದುಂಡುಮೇಜಿನ ಪರಿ ಷತ್ತು ನಡೆಯಬಹುದೆಂದು ಲಂಡನ್ನಿನ ಭಾ ರತೀಯ ರಾಜಕೀಯ ಕ್ಷೇತ್ರಗಳಲ್ಲಿ ಹೇಳ ಲಾಗುತ್ತಿದೆ ಈ ಪರಿಷತ್ತಿನಲ್ಲಿ ರಾಜರುಗ ಳೂ, ರಾಜಕೀಯ ಮತ್ತು ಕೋಮುವಾರು ಮುಖಂಡರುಗಳು ಭಾಗವಹಿಸಬಹುದೆಂದು ಊಹಿಸಲಾಗಿದೆ

ರಾಜ್ಯಾಂಗ ರಚನಾ ಸಭೆಯ ಕಾರ್ಯ ಕಲಾಪಗಳಲ್ಲಿ ಲೀಗು ಭಾಗವಹಿಸುವುದಿಲ್ಲ ವೆಂದು ಜಿನ್ನಾರವರು ತಿಳಿಸಿದ್ದರೂ ಅವರು ಈ ಪರಿಷತ್ತಿನಲ್ಲಿ ಭಾಗವಹಿಸುವರೆಂದೂ ಸ ಹ ಹೇಳಲಾಗಿದೆ

ಶಾಂತಿರಕ್ಷಣಾ ಸಭೆ

ಮೈಸೂರು ೨೫

ಈ ದಿನ ಬೆಳಗ್ಗೆ ಜಿಲ್ಲಾಧಿಕಾರಿಗಳು ಹಿಂದೂ ಮುಸ್ಲಿಂ ಪ್ರಮುಖರನ್ನು ಕರೆಸಿ ಕೊಂಡು ಕೋಮುವಾರು ಶಾಂತಿರಕ್ಷಣೆ ಯನ್ನು ಕಾಪಾಡುವ ಬಗ್ಗೆ ಸಮಾಲೋಚನೆ ಯನ್ನು ನಡೆಸಿದರು ಬಂದಿದ್ದ ಸದಸ್ಯರು ಸೂಕ್ತವಾದ ಸಲಹೆಯನ್ನಿತ್ತರು ಸಧ್ಯದ ಲ್ಲಿಯೇ ಟೌನ್ ಹಾಲಿನಲ್ಲಿ ಪುರವಾಸಿಗಳ ಸಭೆಯೊಂದನ್ನು ಕರೆದು ಶಾಂತಿಸಮಿತಿಗ ಳನ್ನು ಸ್ಥಾಪಿಸಿ ತನ್ಮೂಲಕ ಕೋಮುವಾರು ಸೌಹಾರ್ದವನ್ನು ಬೆಳಸಬೇಕೆಂದು ನಿರ್ಧರಿ ಸಲಾಯಿತು

ಹರಿಕಥೆಗಳು

ಮೈಸೂರು ಚಾಮುಂಡಿ ಪುರದ ... ಭಾಗದ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನದ ಕೀರ್ತನ ಮಾಲಿಕೆಯ ಆಶ್ರ ಯದಲ್ಲಿ ನಾಳೆ ಸಂಜೆ ೭ ಗಂಟೆಗೆ ... ಟನ ಶ್ರೀ ಗಣಪತಿಭಾಗವತರಿಂದ ತಮಿಳಿ ನಲ್ಲಿ 'ಕುಚೇಲೋಪಾಖ್ಯಾನ' ಎಂಬ ಹರಿ ಕಥೆಯು ನಡೆಯುವುದು ಸರ್ವರಿಗೂ ಆಹ್ವಾನವುಂಟು

ಕಬೀರ್ ರಸ್ತೆಯಲ್ಲಿರುವ ಶ್ರೀ ಪಾಂಡು ರಂಗಸ್ವಾಮಿ ದೇವಾಲಯದಲ್ಲಿ ನಾಳೆಯಿಂ ದ ಪ್ರತಿದಿನ ಸಂಜೆ ೫ ಗಂಟೆಗೆ ಕೀರ್ತನಕಾ ರ ಮಂಡಲಿಯ ಆಶ್ರಯದಲ್ಲಿ ಶ್ರೀ॥ ಹರಿ ಸರ್ವೋತ್ತಮದಾಸರಿಂದ ಕೀರ್ತನರೂಪವಾ ದ ಶ್ರೀಮದ್ರಾಮಾಯಣವು ಮತ್ತು ಶ್ರೀ ಆರ್ ಎಸ್ ಕೇಶವದಾಸರಿಂದ ಶ್ರೀಮ ದ್ಭಾಗವತದ ಹರಿಕಥೆಯೂ ನಡೆಯು ವುದು ಸರ್ವರಿಗೂ ಸ್ವಾಗತವಿದೆ

ಲಂಡನ್ನಿನಲ್ಲಿ ಬರ್ಮಾ ಸಂಧಾನ

ಬರ್ಮಾದ ರಾಜಕೀಯ ಪರಿಸ್ಥಿತಿಯನ್ನು ಪರಿಶೀಲಿಸಿ ಮುಂದಿನ ಕ್ರಮಗಳನ್ನು ಗೊ ತ್ತುಮಾಡಲು ಬ್ರಿಟಿಷ್ ಸರ್ಕಾರದವರು ಬ ರ್ಮಾದ ಪ್ರಮುಖ ನಾಯಕರುಗಳನ್ನು ಲಂ ಡನ್ನಿಗೆ ಕರೆದಿದ್ದಾರೆ ಬರ್ಮಾದ ಪ್ರಧಾನಿ ಯಾದ ಆಂಗ್‌ಸಾನರೂ ಇತರ ಪ್ರತಿನಿಧಿಗ ಳೂ ಇದಕ್ಕಾಗಿ ಲಂಡನ್ನಿಗೆ ಹೋಗಲು ಒಪ್ಪಿದ್ದಾರೆ ದಾರಿಯಲ್ಲಿ ... ಹಿಂದೂ ಸ್ಥಾನಕ್ಕೆ ಬಂದು ಪಂಡಿತ ನೆ... ಮಿ॥ ಜಿನ್ನಾರವರನ್ನು ಭೇಟಿ ಮಾಡುವ...

"...ರುವ ತಿಂಗಳಿನಿಂದ ... ಶ್ರೀ ... ಮೊನಸೀಫ್ ಕೋರ್ಟಿನ... ಇದ ಪತೆ ಆಜ್ಞೆಯಾಗಿದೆ

ಸಾಧ್ವಿ

ತಾ|| ೨೫-೧೨-೪೬ ಬುಧವಾರ

ಪೌರಸಭಾಧ್ಯಕ್ಷತೆ

ರಾಜಧಾನಿಯ ಪೌರಸಭೆಯ ಅಧ್ಯಕ್ಷತೆಯ ಪ್ರಶ್ನೆಯು ಮತ್ತೆ ಎದ್ದಿರುತ್ತದೆ ಚುನಾಯಿತ ಅಧ್ಯಕ್ಷರನ್ನು ಇಟ್ಟುಕೊಳ್ಳುವ ಅವಕಾಶವನ್ನು ಕೊಡಬೇಕೆಂದು ಸರ್ಕಾರದವರನ್ನು ಪುನಃ ಪ್ರಾರ್ಥಿಸಲಾಗಿದೆ ಈ ವಿಷಯವು ಕಳೆದ ಎಂಟು ಹತ್ತು ವರ್ಷಗಳಿಂದಲೂ ಬರುತ್ತಲೇ ಇರುವುದು ಆದರೆ ಸರ್ಕಾರದವರು ಯಾವ ಕಾರಣವನ್ನೂ ಕೊಡದೆ ಇದನ್ನು ನಿರಾಕರಿಸುತ್ತಾ ಬಂದಿರುವರು ಹಳೆಯ ಪೌರಸಭೆಯು ಹೋಗಿ ಹೊಸದು ಬರುವ ಈ ಸಮಯದಲ್ಲಿ ಚುನಾಯಿತ ಅಧ್ಯಕ್ಷರಿರಬೇಕೆಂದು ಪೌರಸಭೆಯು ಮತ್ತೊಮ್ಮೆ ನಿರ್ಣಯ ಮಾಡಿರುವುದು ಸಹಜವೂ ಸಮಯೋಚಿತವೂ ಆದದ್ದಾಗಿರುತ್ತದೆ

ಪೌರಸಭೆಯು ಇದೇ ಬಗೆಯ ನಿರ್ಣಯವನ್ನು ಹಿಂದೆ ಮಾಡಿ ಒಂದು ವರ್ಷ ಸ್ವಲ್ಪಕಾಲ ಕಳೆದ್ದಾಯಿತು. ಆದರೂ ಇದುವರೆಗೆ ಸರ್ಕಾರದವರು ಅದಕ್ಕೆ ಯಾವ ಉತ್ತರವನ್ನೂ ಕೊಡದಿರುವುದು ಆಶ್ಚರ್ಯವೂ, ಅಸಮಾಧಾನಕರವೂ ಆಗಿರುತ್ತದೆ. ಹಲವಾರು ವರ್ಷಗಳಿಂದ ಬರುತ್ತಿರುವ ಈ ವಿಷಯದಲ್ಲಿ ಪೌರಸಭೆಯವರು ತಮಗೆ ಮಾತ್ರವೇ ಅಲ್ಲದೆ ಇಡೀ ನಗರದ ಪ್ರಜೆಗಳಿಗಾದರೂ ಅಧ್ಯಕ್ಷರನ್ನು ಚುನಾಯಿಸುವ ಅವಕಾಶವನ್ನು ಕೊಡಬೇಕೆಂದು ಕೋರಿರುವುದಕ್ಕೆ ಒಂದು ವರ್ಷವಾದರೂ ಸರ್ಕಾರದವರಿಂದ ಉತ್ತರವಿಲ್ಲದಿರುವುದು ಕೇವಲ ಅಸ್ಪಷ್ಟಿಕರವಾದ ವಿಷಯ

ಪೌರಸಭಾಧ್ಯಕ್ಷತೆಯು ಸರ್ಕಾರದವರಿಂದ ಬರುವ ಒಂದು ವರಪ್ರಸಾದವಲ್ಲ ಚುನಾಯಿತ ಅಧ್ಯಕ್ಷರನ್ನು ಹೊಂದಲು ಕಾನೂನಿನಲ್ಲಿಯೇ ಅವಕಾಶವು ಕಲ್ಪಿಸಲ್ಪಟ್ಟಿದೆ. ಪೌರಸಭೆಯೇ ಆಗಲಿ, ನಗರದ ಮತದಾರರುಗಳೇ ಆಗಲಿ ಅಧ್ಯಕ್ಷರನ್ನು ಚುನಾಯಿಸಬಹುದೆಂದು ತಿಳಿಸಲಾಗಿದೆ ಇದಕ್ಕೆ ಪೂರ್ವಭಾವಿಯಾಗಿ ಸರ್ಕಾರದವರ ಅನುಮತಿಯು ಮಾತ್ರ ಬೇಕು ಈ ಅನುಮತಿಯನ್ನು ಪದೇ ಪದೇ ಸರ್ಕಾರದವರು ನಿರಾಕರಿಸುತ್ತ ಬಂದಿರುವುದು ಸಂಸ್ಥಾನದ ಪ್ರಮುಖ ಪಟ್ಟಣವಾದ ಈ ರಾಜಧಾನಿಗೇ ಕಳಂಕಪ್ರಾಯವಾಗಿದೆ. ನಗರದ ಎರಡು ಲಕ್ಷ ಪ್ರಜೆಗಳಲ್ಲಿ ಯಾರೊಬ್ಬರೂ ಪೌರಸಭಾಧ್ಯಕ್ಷತೆಯನ್ನು ನಿರ್ವಹಿಸಬಲ್ಲವರಿಲ್ಲವೆಂಬ ಅಭಿಪ್ರಾಯವು ಸರ್ಕಾರದವರಿಗಿದೆಯೆಂಬ ಭಾವನೆಗೆ ಅವಕಾಶ ಕೊಡುತ್ತದೆ. ಇದಕ್ಕೆ ಅಸ್ಪದವೀಯುವುದು ಸರಿಯಲ್ಲ

ಪೌರಸಭೆಯವರು ತಮ್ಮವರನ್ನೇ ಒಬ್ಬರನ್ನು ಅಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ಈಗ ಒತ್ತಾಯಪಡಿಸುತ್ತಿಲ್ಲ. ನಗರದ ಯಾವ ಪ್ರಜೆಯನ್ನಾದರೂ ಚುನಾಯಿಸಲು ಅವಕಾಶ ಬೇಕೆಂದು ಕೇಳುತ್ತಿರುವರು ಈ ಎರಡು ಮಾರ್ಗಗಳನ್ನೂ ಬಿಟ್ಟು ಸರ್ಕಾರದವರು ತಮಗೆ ತೋಚಿದವರನ್ನು ಅಧ್ಯಕ್ಷರನ್ನಾಗಿ ನೇಮಿಸುತ್ತಿದ್ದಾರೆ. ಸ್ಥಳೀಯ ಸಂಸ್ಥೆಯಾದ ಈ ಪೌರಸಭೆಗೆ ಚುನಾಯಿತ ಅಧ್ಯಕ್ಷರಿಲ್ಲದಿರುವ ವಿಷಯದಲ್ಲಿ ಸ್ಥಳಪರಸ್ಥಳಗಳ ಮಹನೀಯರೆಲ್ಲರೂ ತಮ್ಮ ಆಶ್ಚರ್ಯವನ್ನು ವ್ಯಕ್ತಪಡಿಸಿರುತ್ತಾರೆ. ಖಾಸಗಿ ಅಧ್ಯಕ್ಷರಿದ್ದರೆ ಯಾವ ಅಲ್ಲಕಲ್ಲೋಲವಾಗಿ ಬಿಡುವುದೆಂದು ಕೇಳುತ್ತಿದ್ದಾರೆ ಸಂಸ್ಥಾನದ ಶಾಸನಸಭೆಗಳಲ್ಲಿಯೂ ಈ ಬಗ್ಗೆ ಅನೇಕಬಾರಿ ಪ್ರಶ್ನೋತ್ತರಗಳು ನಡೆದಿವೆ ಆದರೆ ಸರ್ಕಾರದವರು ತಮ್ಮ ವರ್ತನೆಗೆ ಯಾವ ಕಾರಣವನ್ನೂ ಕೊಟ್ಟಿರುವುದಿಲ್ಲ

ನಮ್ಮ ಸಂಸ್ಥಾನದಲ್ಲಿ ಇರುವುದು ಕೇವಲ ಎರಡು ನಗರ ಪೌರಸಭೆಗಳು. ಉಳಿದವು ಟೌನ್ ಮತ್ತು ಮೈನರ್ ಪೌರಸಭೆಗಳು. ಮೈಸೂರಿಗಿಂತ ಅತ್ಯಂತ ಹಿರಿದಾದ ಬೆಂಗಳೂರು ನಗರಕ್ಕೆ ಚುನಾಯಿತ ಅಧ್ಯಕ್ಷರನ್ನು ಕೊಟ್ಟು ಅನೇಕ ವರ್ಷಗಳಾದುವು. ಅಲ್ಲಿ ಕೆಲಸಕಾರ್ಯಗಳಿಗೆ ಇದರಿಂದ ಯಾವ ಚ್ಯುತಿಯೂ ಬಂದಿರುವುದಿಲ್ಲ. ಅಲ್ಲಿ ಅಧ್ಯಕ್ಷರಾಗಿದ್ದವರು ಇಂದು ಸರ್ಕಾರದಲ್ಲಿ ಮಂತ್ರಿ ಪದವಿಯನ್ನೂ ಸಹ ನಿರ್ವಹಿಸುತ್ತಿದ್ದಾರೆ. ರಾಜಧಾನಿಯ ಪೌರಸಭೆಯಲ್ಲಿಯೂ ಮತ್ತು ಸಾರ್ವಜನಿಕ ಕ್ಷೇತ್ರದಲ್ಲಿಯೂ ಅತ್ಯಂತ ದಕ್ಷರೂ, ಮೇಧಾವಿಗಳೂ, ಕಾರ್ಯ ತತ್ಪರರೂ ಆದ ಅನೇಕ ಮಹನೀಯರುಗಳು ಇರುತ್ತಾರೆ. ಇವರುಗಳು ಪೌರಸಭೆಯ ಅಧ್ಯಕ್ಷತೆಯನ್ನು ಯಶಸ್ವಿಯಾಗಿ ನಿರ್ವಹಿಸಲು ಯಾವ ಅಡ್ಡಿಯೂ ಇರುವುದಿಲ್ಲ.

ಪೌರಸಭೆಯವರು ಈ ಬೇಡಿಕೆಯನ್ನು ಸರ್ಕಾರದವರಲ್ಲಿ ಅನೇಕ ಬಾರಿ ಮಂಡಿಸಿ ಬೇಸತ್ತಿರುವಂತೆ ಕಂಡು ಬರುತ್ತದೆ ಶ್ರೀ ಬಿ. ನಾರಾಯಣಸ್ವಾಮಿಯವರು ಮೊನ್ನೆಯ ಸಭೆಯಲ್ಲಿ ಇದನ್ನು ಸ್ಪಷ್ಟವಾಗಿ ಸೂಚಿಸಿದರು. ಇಂತಹ ಸಣ್ಣ ವಿಚಾರದಲ್ಲಿ ಸರ್ಕಾರದವರು ಸಹಕರಿಸದಿರುವುದಕ್ಕಾಗಿ ವಿಷಾದವನ್ನು ಸೂಚಿಸಿದರು. ಇನ್ನು ಮೇಲೆ ಸರ್ಕಾರದವರನ್ನು ಬೇಡಲು ಸಾಧ್ಯವಿಲ್ಲವೆಂದೂ, ಇದೇ ಕಡೆಯ ಸಾರಿಯೆಂದೂ, ಈಗಲೂ ಅವರು ಪ್ರಸನ್ನರಾಗದಿದ್ದರೆ ಪೌರಸಭೆಯವರು ನೇರವಾಗಿ ಪ್ರಭುಗಳಲ್ಲೇ ಮೊರೆಯಿಡಬೇಕಾಗುವುದೆಂದೂ ತಿಳಿಸಿದರು.

ನಿಜವಾಗಿ ನೋಡಿದರೆ ಮೈಸೂರಿನ ಪೌರಸಭಾಧ್ಯಕ್ಷತೆಯ ವಿಷಯವು ಬಹಳ ಸಣ್ಣ ವಿಚಾರ ಆದರೂ ಅದಕ್ಕೆ ಸರ್ಕಾರದವರು ನಿಷ್ಕಾರಣವಾಗಿ ಅವಕಾಶ ಕೊಡದೆ ಇದು ಮಹತ್ತರವಾದ ಪ್ರಮಾಣವನ್ನು ತಾಳಿರುತ್ತದೆ ಈ ಅಲ್ಪ ವಿಷಯವು ಪ್ರಭುಗಳ ವರೆಗೂ ಮುಟ್ಟಲು ಸರ್ಕಾರದವರು ಅವಕಾಶ ಕೊಡುವುದು ಸರಿಯಲ್ಲ. ಕಾನೂನಿನಲ್ಲಿರುವ ಅವಕಾಶಕ್ಕೆ ಸಮ್ಮತಿಯನ್ನು ಮಾತ್ರ ಸರ್ಕಾರದವರು ಕೊಡಬೇಕಾಗಿದೆ. ಅವರು ಇದಕ್ಕೆ ಕೂಡಲೇ ಸಮ್ಮತಿಸಿ ಬಹಳ ದಿನಗಳಿಂದ ಸಕಲರ ಮನಸ್ಸಿಗೂ ಅಸಮಾಧಾನವುಂಟುಮಾಡುತ್ತಿರುವ ಈ ಪ್ರಕರಣವನ್ನು ಸಮರ್ಪಕವಾಗಿ ಕೂಡಲೇ ಬಗೆಹರಿಸಬೇಕೆಂದು ನಾವು ಕೋರುತ್ತೇವೆ.

೨೦೦ ಮಂದಿ ಖಾಕ್ಸಾರರ ಬಿಡುಗಡೆ

ಸಿಂಧ್‌ನಲ್ಲಿ ಆಯುಧಗಳನ್ನು ಹಿಡಿದು ತಿರುಗಾಡಕೂಡದೆಂಬ ಆಜ್ಞೆಯನ್ನು ವಿರೋಧಿಸಿ ವರ್ತಿಸಿದರೆಂದು ದಸ್ತಗಿರಿ ಮಾಡಲ್ಪಟ್ಟ ೨೦೦ ಮಂದಿ ಖಾಕ್ಸಾರರನ್ನು ಬಿಡುಗಡೆ ಮಾಡುವುದಾಗಿ ಹೇಳಲಾಗಿದೆ. ಇವರು ರಾಜ್ಯಾಂಗ ಸಭೆಗೆ ನಡೆದ ಚುನಾವಣಾ ಕಾಲದಲ್ಲಿ ಬಂದಿದ್ದವರು. ಇವರೆಲ್ಲರನ್ನೂ ಪಂಜಾಬು ಮತ್ತು ವಾಯುವ್ಯ ಗಡಿನಾಡು ಪ್ರಾಂತ್ಯಕ್ಕೆ ಕಳುಹಿಸಲು ಸ್ಪೆಷಲ್ ರೈಲಿನ ವ್ಯವಸ್ಥೆಯೂ ಏರ್ಪಾಡಾಗಿರುವುದು

ಸಿಖ್ಖರ ಹಕ್ಕಿಗೆ ಲೋಪ

ಇದೇ ೨೮ನೇ ತಾ|| ಗುರು ಗೋವಿಂದ್ ವರ್ಧಂತ್ಯುತ್ಸವದ ಸಂಬಂಧದಲ್ಲಿ ಕಲ್ಕತ್ತಾದ ಸಿಖ್ಖರಾರೂ ಮೆರವಣಿಗೆಯಲ್ಲಿ ಕುಟಗಳನ್ನು ತೆಗೆದುಕೊಂಡು ಹೋಗಬಾರದೆಂದು ಬಂಗಾಳಾ ಸರ್ಕಾರವು ಒಂದು ಆಜ್ಞೆ ಹೊರಡಿಸಿರುವುದಾಗಿ ವರದಿಯಾಗಿದೆ. ಕಳೆದ ೨೫ ವರ್ಷಗಳಿಂದಲೂ ಇಂತಹ ಸಂದರ್ಭಗಳಲ್ಲಿ ಅಧಿಕಾರಿಗಳು ಹೀಗೆ ಪ್ರವರ್ತಿಸಿರಲಿಲ್ಲವೆಂದು ಹೇಳಲಾಗಿದೆ

ಸಂಚಾರ ಮಾರ್ಗಗಳ ರಾಷ್ಟ್ರೀಕರಣ

ಕೊಚ್ಚಿ ಸರ್ಕಾರವು ಸದ್ಯದಲ್ಲೇ ಸಂಚಾರ ಮಾರ್ಗಗಳನ್ನೆಲ್ಲಾ ರಾಷ್ಟ್ರೀಕರಿಸಲು ಸೂಕ್ತಕಾರ್ಯಕ್ರಮ ಕೈಗೊಳ್ಳಲಿದೆ ಎಂಬುದಾಗಿ ಕೊಚ್ಚಿಯ ಮಂತ್ರಿಗಳಾದ ಮಿ|| ಗೋವಿಂದಮೇನನ್ನರು ಅಖಿಲ ಕೊಚ್ಚಿ ಮೋಟಾರ್ ಕೆಲಸಗಾರರ ನಿಯೋಗದವರಿಗೆ ಹೇಳಿರುತ್ತಾರೆ.

ಸಂಸ್ಥಾನಗಳಿಂದ ಸ್ವಾತಂತ್ರ್ಯಕ್ಕೆ ಅಡ್ಡಿ

ದೇಶೀಯ ಸಂಸ್ಥಾನಗಳು ಭಾರತ ಸ್ವಾತಂತ್ರ್ಯದ ಮಾರ್ಗದಲ್ಲಿ ಅಡ್ಡಿಯಾಗಿವೆ. ಬ್ರಿಟಿಷರು ತಮ್ಮ ಭದ್ರತೆಗಾಗಿ ರಾಜರುಗಳನ್ನು ನಿಯಮಿಸಿ ಅವರಿಗೆ ಅಧಿಕಾರವಿತ್ತಿರುವರೇ ವಿನಃ ಅವರಿಗೆ ಇತರರಿಗಿಲ್ಲದ ದೈವದತ್ತವಾದ ಯಾವ ಅಧಿಕಾರವೂ ಇಲ್ಲ. ರಾಜರುಗಳ ಆಳ್ವಿಕೆಯು ಈಗಿನ ರಾಜಕೀಯ ಪರಿಸ್ಥಿತಿಗೆ ತಕ್ಕದಾಗಿಲ್ಲ ರಾಜರುಗಳ ಅಧಿಕಾರ ಇನ್ನೂ ಮುಂದುವರಿಯುವುದು ನ್ಯಾಯವಲ್ಲ— ಎಂದು ಶ್ರೀಮತಿ ಅರುಣಾ ಅಸಫ್ ಅಲಿಯವರು 'ಹೈದರಾಬಾದಿನ ಸಭೆಯೊಂದರಲ್ಲಿ ಹೇಳಿರುತ್ತಾರೆ

ದೇವಾಲಯ ಪ್ರವೇಶಕ್ಕೆ ಸತ್ಯಾಗ್ರಹ

ಮಲಬಾರಿನ ಹರಿಜನದೇವಾಲಯ ಪ್ರವೇಶ ಸಮಿತಿಯು ಬರುವ ಜನವರಿ ೧ನೇ ತಾರೀಖಿನಿಂದ ಗುರುವಾಯೂರ್ ದೇವಾಲಯದ ಬಳಿ ಸತ್ಯಾಗ್ರಹ ನಡೆಸಲು ತೀರ್ಮಾನಿಸಿರುತ್ತದೆ. ಇದಕ್ಕೆ ಮುಂಚೆ ಮದರಾಸಿನ ಮಂತ್ರಿಗಳ ಬಳಿಗೆ ನಿಯೋಗವೊಂದು ಹೋಗಿ ಅವರನ್ನು ಕೂಡಲೇ ಹರಿಜನ ದೇವಾಲಯ ಪ್ರವೇಶದ ಕಾನೂನನ್ನು ಜಾರಿಗೆ ತರುವ ವಿಚಾರದಲ್ಲಿ ಒತ್ತಾಯಪಡಿಸುತ್ತದೆ

ಟೆಂಡರ್ ನೋಟೀಸು

ಮೈಸೂರು ಅರಮನೆಗೆ ಬೇಕಾದ ಸುಮಾರು ಮೂರು ಸಾವಿರದ ಮೂರು ನೂರು ಪಲ್ಲಾ ಹುರುಳಿಗಾಗಿ ಮೊಹರು ಮಾಡಲ್ಪಟ್ಟ ಟೆಂಡರುಗಳನ್ನು ಈ ಕೆಳಗೆ ರುಜುಮಾಡಿರುವವರಲ್ಲಿ ೧೧-೧-೧೯೪೭ ನೇ ಶನಿವಾರ ಕೊಡಬಹುದು.

ಮೋತೀಖಾನೆ ಮುನೀಬರಿಂದ ಹೆಚ್ಚು ವಿಷಯಗಳನ್ನು ತಿಳಿದುಕೊಳ್ಳಬಹುದು.

ಟಿ. ರಾಮಯ್ಯ,
ಹುಜೂರು ಸೆಕ್ರೆಟರಿಯವರು

ಮೈಸೂರು,
೨೩-೧೧-೪೬.

ಭಾರತದಲ್ಲಿ ಮೋಟಾ[ರು] ತಯಾರಿ

ಭಾರತದ ಮೋಟಾರ್ ಕೈಗಾ[ರಿಕಾ] ಪ್ರವೀಣರೊಬ್ಬರು ೨೧೧ ಮಿಲಿಯ[ನ್ ಪೌಂ]ಡ್ ಸ್ಟರ್ಲಿಂಗ್ ಬೆಲೆ ಬಾಳುವ [...] ಯೊಂದನ್ನು ಕೊಂಡುಕೊಂಡಿದ್ದಾರೆ. ಕಂಪೆನಿಯು ಭಾರತದಲ್ಲಿ ಸ್ಥಾಪಿತವಾ[ಗಿ ವ]ರ್ಷಕ್ಕೆ ಸುಮಾರು ೧೦೦೦೦ ಕಾರುಗ[ಳನ್ನು] ತಯಾರಿಸುವುದೆಂದು ಹೇಳಲಾಗಿದೆ. [...]ಕ್ಕಾಗಿ ಬ್ರಿಟಿಷ್ ಪ್ರವೀಣರು ಸ[...] ಭಾರತಕ್ಕೆ ಬರಲಿರುವರು ಕಂಪನಿಯ [...] ವ್ಯವಹಾರಣೆ ಮತ್ತು ಹಣಕಾಸಿನ ವ್ಯ[ವಹಾರ]ಗಳು ಭಾರತೀಯರ ಅಧೀನದಲ್ಲೇ ಇ[ರುವು]ವೆಂದು ಹೇಳಲಾಗಿದೆ.

* ಓರಿಯಂಟಲ್ ಲೈಬ್ರರಿಗೆ ಶ್ರೀ ಪ[...] ಆರ್. ರಂಗಸ್ವಾಮಿ ಅಯ್ಯಂಗಾರ್ಯರ[ನ್ನು] ಸೂಪರಿಂಟೆಂಡೆಂಟರನ್ನಾಗಿ ನೇಮಿಸ[ಲಾ]ಗಿದೆ

* ಕೇಂದ್ರ ಅಸೆಂಬ್ಲಿಯಲ್ಲಿ ಶ್ರೀ ಶ[ರತ್] ಚಂದ್ರಬೋಸರ ರಾಜೀನಾಮೆಯಿಂದ ಖ[ಾಲಿ]ಯಾದ ಸ್ಥಾನಕ್ಕೆ ನಡೆದ ಉಪಚುನಾ[ವಣೆ]ಯಲ್ಲಿ ಪಂ|| ಲಕ್ಷ್ಮೀಕಾಂತ ಮೈತ್ರರು [...]ಸಿ ಬಂದಿದ್ದಾರೆ.

ಕ್ರಿಸ್ಮಸ್ ಹಬ್ಬಕ್ಕಾಗಿ
ಹೊಸ ನಮೂನೆ
ಜವಳಿಗಳು
ಬಂದಿವೆ ಇಂದೇ ಭೇಟಿ ಕೊಡಿರಿ.
ಒ. ಕೆಂಚಪ್ಪ ಸನ್ಸ್,
ಜವಳಿ ಅಂಗಡಿ,
ದೊಡ್ಡಪೇಟೆ, ಮೈಸೂರು

ಆರ್. ಎಸ್. ಪಂಡಿತರ
ನಾಯಿಕೆಮ್ಮಿನ ಔಷಧಿ
7–8 ದಿವಸಗಳಲ್ಲೇ ಖಾತರಿಯಾ[ಗಿ ವ]ಾಸಿಯಾಗುತ್ತೆ.
ಕ್ರಯ ಬಾಟ್ಲಿಗೆ 1-8-0
ಗೂರ್ಲು—ಉಬ್ಬಸಕ್ಕೆ
(Asthma)
ಖಾತರಿಯಾದ ಔಷಧಿ ದೊರೆಯುತ್ತೆ. ಅನೇಕ ದೊಡ್ಡ ಮನುಷ್ಯರು ಬಂಗಾರದ ಪದಕ ಮತ್ತು ಸರ್ಟಿಫಿಕೇಟ್‌ಗಳನ್ನು ಕೊಟ್ಟಿದ್ದಾರೆ.
(Appendecitis) ಗುಲ್ಮ ಶೂಲೆ ಮತ್ತು (Tonsils) ಗಲಾಯಿಳ ಊತಗಳನ್ನು ಆಪರೇಷನ್ ಇಲ್ಲದೆ ಗುಣಪಡಿಸುತ್ತೆ. ಖುದ್ದು ಬಂದು ನೋಡಿ.
ಗುಂಡ್ಲುಪೇಟೆ ಆರ್. ಎಸ್. ಪಂಡಿತರು
ದಿವಾನ್ಸ್‌ರೋಡ್, ಗೊಲ್ಲಗೇರಿ ಮೈಸೂರು.

RAJAKAMAL,
Mysore.
Dr. KOTNIS
Last 2 Days

-: Next Change :-
HAMARA
SANSAR
From 27—12—46
-: Daily 3 Shows : -

Edited, printed and published by A. R. Nagarajan at the Sadhvi Press D-Subbiah Road, Mysore.

ರೇ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಗುರುವಾರ ೨೬—೧೨—೪೬ [ಸಂಚಿಕೆ ೧೨೦

ಸೈಗಾನಿನಲ್ಲಿ ಬೋಸರು ಕಾಣಿಸಿಕೊಂಡರು

ಬರ್ಮಾ ಉಪಾಧ್ಯಕ್ಷರು ನೆಹರೂ ಅತಿಥಿಗಳು

ಬರ್ಮಾ ರಾಷ್ಟ್ರೀಯ ಸರ್ಕಾರದ ಉಪಾಧ್ಯಕ್ಷ ಯು ಆಂಗ್ ಸಾನ್‌ರವರು ಜನವರಿ ೫ನೇ ದೆಹಲಿಗೆ ಆಗಮಿಸಿ ೫ ನೇ ವರೆಗೆ ಪಂ॥ ನೆಹರೂರವರ ಅತಿಥಿಗಳಾಗಿರುವರು. ಅನಂತರ ಅವರು ಬರ್ಮಾ ನಿಯೋಗ ಮಂಡಲಿಯವರೊಡನೆ ಲಂಡನ್ನಿಗೆ ಪ್ರಯಾಣಕ್ಕೆ ತೆರಳುವರು

ಲೀಗ್ ವಿರುದ್ಧ ದಂಗೆ

ಲೀಗಿನ ಧೋರಣೆಯು ಹಿಂದೂಸ್ಥಾನವನ್ನು ಏಷ್ಯಾ ಖಂಡವನ್ನೂ ಸದಾಕಾಲ ಯಾದವೀ ಕಲಹದಲ್ಲಿ ಕೆಡಹುತ್ತಿದೆ. ಆ ನೀತಿಯನ್ನು ಬದಲಾಯಿಸಲು ಮುಸಲ್ಮಾನರಿಗೆ ಸಾಧ್ಯವಾಗಿಲ್ಲ ಅದರ ವಿರುದ್ಧವಾಗಿ ಬಹಿರಂಗ ದಂಗೆ ಏಳುವುದೇ ಉಳಿದಿರುವ ಮಾರ್ಗ. ಆದುದರಿಂದ ಹಿಂದೂಸ್ಥಾನವನ್ನೂ ಸಗೊಂಡ ಏಷ್ಯಾ ಖಂಡದ ಹಿತಕ್ಕಾಗಿ ಟೊಂಕ ಕಟ್ಟಿರುವ ಕಾಂಗ್ರೆಸ್ಸಿಗೇ ನಾವು ಬೆಂಬಲ ಕೊಡಬೇಕು ಎಂಬುದಾಗಿ ಸಿಂಧ್ ಮುಸ್ಲಿಂ ಜಮಾತ್ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಕೇಂದ್ರ ಸರ್ಕಾರದೊಡನೆ ಬಂಗಾಳದ ಅಸಹಕಾರ

ಸಿವಿಲ್ ಸರ್ವೀಸ್ ಮುಂತಾದ ಕೆಲಸಗಳಿಗೆ ಜನರನ್ನು ನೇಮಿಸಿಕೊಳ್ಳುವ ಬಗ್ಗೆ ಕೇಂದ್ರ ಸರ್ಕಾರದವರು ಮಾಡಿರುವ ಯೋಜನೆಯನ್ನು ಬಂಗಾಳ ಸರ್ಕಾರವು ಸೇರಿಸದೆ ತಾ ನೇ ಪ್ರತ್ಯೇಕವಾದ ಯೋಜನೆಯನ್ನು ಸಿದ್ಧಗೊಳಿಸಿರುತ್ತದೆ.

ಪ್ರತಿಬಂಧಕಾಜ್ಞೆಗಳು

ಕತಗಿರಿ ಮತ್ತು ನರಸಿಂಹರಾಜಪುರಗಳ ಅಧಿಕಾರಿಗಳು ೧೪ನೇ ಸೆಕ್ಷನ್ ಜಾರಿ ಮಾಡಿ ಸಭೆ, ಮೆರವಣಿಗೆಗಳನ್ನು ಪ್ರತಿಬಂಧಿಸಿದ್ದಾರೆ. ಬೇಲೂರಿನಲ್ಲಿ ಪೊಲೀಸ್ ಅಧಿಕಾರಿ ಮತ್ತು ೩೯ ರಂತೆ ಅಜ್ಞೆ ಹೊರಡಿಸಿ ೫ ಜನ ಸೇರ ಕೂಡದೆಂದು, ಆಯುಧಗಳನ್ನು ಹಿಡಿದು ತಿರುಗಾಡ ಕೂಡದೆಂದು ಆಜ್ಞಾಪಿಸಲಾಗಿದೆ.

ಇಂಡೋ ಚೀನಾದಲ್ಲಿ ಕದನ

ಇಂಡೋ ಚೀನಾದಲ್ಲಿ ಫ್ರಾನ್ಸಿನ ಮತ್ತು ವಿಯಟ್‌ನಾಮ್ ರಿಪಬ್ಲಿಕ್ಕಿನ ದಳಗಳಿಗೆ ಕದನಗಳು ಮುಂದುವರಿಯುತ್ತಿವೆ ಅಲ್ಲಿ ಸ್ಥಿತಿಯು ಬಹಳ ವಿಷಮಿಸಿದೆಯೆಂದು ಮುಖ್ಯ ಮಂತ್ರಿಗಳಾದ ಮಿ॥ ಬ್ಲೂಮ್‌ರವರು ಫ್ರಾನ್ಸಿನ ರಾಷ್ಟ್ರೀಯ ಸಭೆಯಲ್ಲಿ ತಿಳಿಸಿದರು. ಅಲ್ಲಿನ ಪರಿಸ್ಥಿತಿಯನ್ನು ಹದಕ್ಕೆ ತರುವ ಸಲುವಾಗಿ ಫಿಲಿಪ್ ಲಿಕ್ಲರ್ಕ್ ಎಂಬುವರ ನಾಯಕತ್ವದಲ್ಲಿ ಒಂದು ಸೈನ್ಯವನ್ನು ಇಂಡೋ ಚೀನಾಕ್ಕೆ ಕಳುಹಿಸುವುದಾಗಿಯೂ ಅವರು ಹೇಳಿದರು. ಹನಾಯ್ ನಗರದಲ್ಲಿ ನಡೆಯುತ್ತಿರುವ ಕದನವು ಬಹು ವಿರಸದಿಂದ ಮುಂದುವರಿಯುತ್ತಿದೆಯೆಂದು ಅವರು ಸೂಚಿಸಿದರು

ಬಸ್ ತೊಂದರೆ

ಮೈಸೂರಿನಿಂದ ಬನ್ನೂರು ಹೊಳೇನರಸೀಪುರಕ್ಕೆ ಹೋಗುತ್ತಿದ್ದ ಸಂಗಮೇಶ್ವರ ಮತ್ತು ನಾರ್ದನ್ ಮೋಟಾರ್ ಸರ್ವಿಸ್ಸುಗಳು ಸುಮಾರು ೧೫ ದಿನಗಳಿಂದ ಅಲ್ಲಿಗೆ ಹೋಗುತ್ತಿಲ್ಲ. ಪ್ರಯಾಣಿಕರಿಗೆ ಬಹಳ ತೊಂದರೆಯಾಗಿದೆ. ಸಂಬಂಧಪಟ್ಟವರು ಗಮನಿಸಿ ಕೂಡಲೇ ಬಸ್ ಸೌಕರ್ಯವನ್ನೇರ್ಪಡಿಸಿ ಕೊಡಬೇಕೆಂದು ಕೋರಲಾಗಿದೆ

ಪಾನ ನಿರೋಧ ಸಮಿತಿ ಕಾರ್ಯದರ್ಶಿ

ಸ್ವ ಸು. ಪ್ರೆ] ಬೆಂಗಳೂರು ೨೬

ದಿವಾನರ ಆಪ್ತ ಕಾರ್ಯದರ್ಶಿಗಳಾಗಿದ್ದ ಶ್ರೀ ಸಿ. ನರಸಿಂಹ ಮೂರ್ತಿಯವರನ್ನು ಹೊಸದಾಗಿ ರಚಿಸಲ್ಪಟ್ಟಿರುವ ಪಾನ ನಿರೋಧ ಸಮಿತಿಯ ಕಾರ್ಯದರ್ಶಿಗಳನ್ನಾಗಿ ನೇಮಿಸಲಾಗಿದೆ.

‡ ಶ್ರೀ ಎಂ. ಎ ಶ್ರೀನಿವಾಸನ್‌ರವರು ನಾಳೆ ಗ್ವಾಲಿಯರಿಗೆ ವಿಮಾನದಲ್ಲಿ ಪ್ರಯಾಣ ಬೆಳೆಸುವರು ೩೦೦೦ ರೂ ಸಂಬಳದ ಮೇಲೆ ಐದು ವರ್ಷಕಾಲ ಅಲ್ಲಿನ ಮುಖ್ಯ ಮಂತ್ರಿಗಳಾಗಿರುವರು

• ಮೈಸೂರಿನಲ್ಲಿರುವ ಶ್ರೀ ಬಿ. ಎಸ್. ನರಸಿಂಗರಾಯರನ್ನು ನಿವೃತ್ತರಾದ ಶ್ರೀ ಕೆ ಡಿ. ಜೋಷಿಯವರ ಸ್ಥಾನದಲ್ಲಿ ಮರಾ ಮತ್ತು ಕಾರ್ಯದರ್ಶಿಗಳನ್ನಾಗಿ ನೇಮಿಸಲಾಗಿದೆ.

• ಪೌರ ಸರಬರಾಜು ಅಧಿಕಾರಿಗಳಾದ ಶ್ರೀ ಸಿ ಮಾಚಯ್ಯನವರನ್ನು ದಕ್ಷತೆಯ ಶಾಖೆ ಡೆಪ್ಯುಟಿ ಡೈರೆಕ್ಟರನ್ನಾಗಿ ನೇಮಿಸಲಾಗಿದೆ.

• ಲಂಡನ್ನಿನಲ್ಲಿ ಹಿಂದೂ ಪತ್ರಿಕೆಯ ಸುದ್ದಿಗಾರರಾದ ಮಿ॥ ಲಿಯೊನಾರ್ಡ್ ಮ್ಯಾಟರ್‌ರವರು ಪತ್ನೀಸಮೇತರಾಗಿ ಈ ದಿನ ಆಗಮಿಸಿ ಸರ್ಕಾರದ ಅತಿಥಿಗಳಾಗಿ ಇರುವರು. ನಾಳಿದ್ದು ರಾಜಧಾನಿಗೆ ಭೇಟಿಯಿತ್ತು ಕೂನೂರಿಗೆ ತೆರಳುವರು.

• ಸಂತೋಷ್ ಫುಟ್‌ಬಾಲ್ ಟೋರ್ನಮೆಂಟಿನಲ್ಲಿ ನಿನ್ನೆ ಮೈಸೂರಿನವರು ನಾರ್ತ್ ವೆಸ್ಟ್ ಇಂಡಿಯನ್ ಫುಟ್‌ಬಾಲ್ ಅಸೋಸಿಯೇಷನ್‌ರವರನ್ನು ೬–೧ ಗೋಲುಗಳಿಂದ ಸೋಲಿಸಿದರು ಮತ್ತು ಕೇವಲ ೨೮ ನಿಮಿಷಗಳಲ್ಲಿ ನಾಲ್ಕು ಗೋಲುಗಳನ್ನು ಹೊಡೆದರು.

ನೆಹರೂರವರಿಗೆ ಬ್ರಿಟಿಷ್ ಚಕ್ರವರ್ತಿನಿಯವರ ಪ್ರಶ್ನೆ

ಲಂಡನ್ನಿಗೆ ತೆರಳಿದ್ದ ಪಂಡಿತ ನೆಹರೂರವರು ಬಕಿಂಗ್‌ಹ್ಯಾಂ ಅರಮನೆಯಲ್ಲಿ ಬ್ರಿ॥ ಸಾಮ್ರಾಟರೊಡನೆ ಉಪಾಹಾರವಾಡುತ್ತಿದ್ದಾಗ ಚಕ್ರವರ್ತಿನಿಯವರು ಪಂಡಿತರನ್ನು ಕುರಿತು ಭಾರತವು ಸ್ವತಂತ್ರ ಪ್ರಜಾಪ್ರಭುತ್ವ (ರಿಪಬ್ಲಿಕ್) ವಾಗಬೇಕೆಂದು ಕಾಂಗ್ರೆಸ್ಸು ತೀರ್ಮಾನಿಸಿರುವುದೇ ಎಂದು ಪ್ರಶ್ನಿಸಿದಾಗ ನೆಹರೂರವರು ಹೌದೆಂದು ಉತ್ತರವಿತ್ತರೆಂದೂ, ಚಕ್ರವರ್ತಿನಿಯವರು ಏನ್ಯಾಯ! ಎಂದು ಹೇಳಿ ಪಂತಾಪಪಟ್ಟರೆಂದೂ ವರದಿಯಾಗಿದೆ

೨೦೦ ಜನರನ್ನು ಕೊಂದ ಚಿರತೆ

ಮಧ್ಯ ಪ್ರಾಂತ್ಯಗಳಲ್ಲಿ ಒಂದು ಚಿರತೆಯು ಅನೇಕ ದಿವಸಗಳಿಂದ ಸೇರಿಕೊಂಡು ಬಹಳವಾಗಿ ಹಾವಳಿಮಾಡುತ್ತಿದ್ದು ಈಗ ೬ ತಿಂಗಳುಗಳಲ್ಲಿ ಸುಮಾರು ಇನ್ನೂರು ಮಂದಿಯನ್ನು ಕೊಂದಿರುತ್ತದೆಂದು ವರದಿಯಾಗಿದೆ ಇದನ್ನು ಕೊಲ್ಲಲು ಮಾಡಿದ ಪ್ರಯತ್ನಗಳೆಲ್ಲಾ ನಿಷ್ಫಲವಾಗಿವೆ. ಇದರ ಹಾವಳಿಯನ್ನು ತಡೆಯಲಾರದೆ ಜನಗಳು ದೂರುಮಾಡಿದ ಪರಿಣಾಮವಾಗಿ ಅಲ್ಲಿನ ಸರ್ಕಾರವು ಇದನ್ನು ಕೊಲ್ಲುವ ಸಲುವಾಗಿ ೪ ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿರುತ್ತದೆ

ವಿದೇಶಗಳಿಗೆ ರಾಯಭಾರಿಗಳು

ಭಾರತ ಸರ್ಕಾರದ ವಿದೇಶಾಂಗ ಶಾಖೆಯು ಪರದೇಶಗಳಿಗೆ ೩೦೦ ಜನ ಭಾರತೀಯರನ್ನು ರಾಯಭಾರಿಗಳನ್ನಾಗಿ ಕಳುಹಿಸಲು ನಿರ್ಧರಿಸಿದೆ ಜನವರಿಯಲ್ಲಿ ನಡೆಯುವ ಕೇಂದ್ರಶಾಸನ ಸಭೆಯ ಬಜೆಟ್ ಅಧಿವೇಶನದ ವೇಳೆಗೆ ವಿದೇಶಾಂಗ ನೀತಿಯ ದಿಕ್ಸಾಧಿಕಾರಿಗಳಾದ ಸರ್ ಆಕ್ಬರ್ ಹೈದರಿ ಯವರು ಇವರ ವಿವರಗಳನ್ನು ಸಿದ್ಧಗೊಳಿಸುವರೆಂದು ಹೇಳಲಾಗಿದೆ

ಮಾಳವೀಯರ ಪ್ರತಿಮೆ

ಗೋರಖ್‌ಪುರದಲ್ಲಿ ನಡೆಯಲಿರುವ ಅಖಿಲ ಭಾರತ ಹಿಂದೂ ಮಹಾಸಭೆಯು ಅಧಿವೇಶನವು ಸೇರುವ ಮೈದಾನಕ್ಕೆ ಮಾಳವೀಯ ನಗರವೆಂದು ನಾಮಕರಣ ಮಾಡಲಾಗಿದೆ. ಈ ನಗರದಲ್ಲಿ ೬೦ ಸಾವಿರ ಮಂದಿ ಪ್ರೇಕ್ಷಕರು ಕೂಡಬಹುದು ಅದರ ಮುಂಭಾಗದಲ್ಲಿ ಪಂಡಿತ ಮದನಮೋಹನ ಮಾಳವೀಯರ ಎತ್ತರದ ಪ್ರತಿಮೆಯೊಂದನ್ನು ನಿಲ್ಲಿಸಲು ಏರ್ಪಾಡುಗಳಾಗುತ್ತಿವೆ. ಕಾಶಿಯ ಸುಪ್ರಸಿದ್ಧ ಶಿಲ್ಪಿಗಳೊಬ್ಬರು ಪ್ರತಿಮೆಯನ್ನು ಕೆತ್ತುತ್ತಿದ್ದಾರೆ

ಭಾರತಕ್ಕೆ ಸರ್ದಾರ್ ಅಜಿತ ಸಿಂಗರು

ಪ್ರಾಚ್ಯ ದೇಶಗಳಲ್ಲಿ ಆಜಾದ್ ಹಿಂದ್ ಸರ್ಕಾರದ ಅಮಾತ್ಯರಾಗಿದ್ದು, ಬರ್ಲಿನ್ನಿನಲ್ಲಿ ಪ್ರಾಯಿಟ್ ಮಾಳಿಗಿದ್ದ ಸರ್ದಾರ್ ಅಜಿತ ಸಿಂಗರು ಬರುವ ಜನವರಿ ೩ನೇ ತಾರೀಖು ಲಂಡನ್ನಿನಿಂದ ಭಾರತಕ್ಕೆ ಪ್ರಯಾಣ ಬೆಳಸುವರು

ನೇತಾಜಿ ಬೋಸರು ಸೈಗಾನಿನಲ್ಲಿ ಕಂಡುಬಂದರು

"ನೇತಾಜಿ ಸುಭಾಷ್ ಚಂದ್ರಬೋಸರು ಸೈಗಾನಿನಲ್ಲಿ ಕಂಡುಬಂದರು" ಎಂಬುದಾಗಿ ಫ್ರೆಂಚ್ ಪತ್ರಿಕೆಗಳಲ್ಲಿ ಪ್ರಾಮುಖ್ಯವಾಗಿ ಪ್ರಕಟಿಸಲಾಗಿದೆಯೆಂದು ಲಂಡನ್ನಿನಲ್ಲಿ ನಡೆದ ಕಾರ್ಮಿಕ ಸಮ್ಮೇಳನಕ್ಕೆ ತೆರಳಿದ್ದ ಬೊಂಬಾಯಿನ ಶ್ರೀ॥ ಬೋಗ್ಲೇಕರ್‌ರವರು ಡಿಸೆಂಬರ್ ೧೮ ನೇ ತಾರೀಖು ಲಂಡನ್ನಿನಿಂದ ಫಾರ್ವರ್ಡ್ ಬ್ಲಾಕ್ ನಾಯಕರಾದ ಶ್ರೀ ರುಯಿಕರ್‌ರವರಿಗೆ ಪತ್ರ ಬರೆದಿದ್ದಾರೆ. ನೇತಾಜಿಯ ಪರ ವಿಚಾರದಲ್ಲಿ ಇಲ್ಲಿ ಅತ್ಯಂತ ಆಸಕ್ತಿಯು ಮೂಡಿದೆ ಎಂಬುದಾಗಿಯೂ ಆ ಪತ್ರದಲ್ಲಿ ನಮೂದಿಸಲಾಗಿದೆ

ರಾಜರುಗಳು ಹಳೆಯ ಬೆಳ್ಳಿ ಪಾತ್ರೆಗಳಂತೆ

ಕೇಂದ್ರ ಸರ್ಕಾರದ ಸಚಿವರಾದ ಶ್ರೀ ಸಿ ರಾಜಗೋಪಾಲಾಚಾರಿಯವರು ಇಂದೂರಿನಲ್ಲಿ ಭಾಷಣ ಮಾಡುತ್ತ, ದೇಶೀಯ ರಾಜರುಗಳನ್ನು ಮಲಿನವಾದ ಹಳೆಯ ಬೆಳ್ಳಿಪಾತ್ರೆಗಳಿಗೆ ಹೋಲಿಸಿರುವರು ಬೆಳ್ಳಿಯ ಪಾತ್ರೆಗಳು ಹಳೆಯದಾಗುತ್ತಾ ಬಂದು ನೋಡಲು ವಿಕಾರವಾಗಿ ಕಂಡಾಗರೆಲ್ಲಾ ಅವುಗಳಿಗೆ ಒಪ್ಪ ಕೊಡುತ್ತಿರಬೇಕಾಗುತ್ತದೆ ತೀರಾ ಕೆಟ್ಟುಹೋದಾಗ ಅವುಗಳನ್ನು ಕುಲುಮೆಗೆ ಹಾಕಿ ಕರಗಿಸಿ ಪುನಃ ಹೊಸ ಪಾತ್ರೆಗಳನ್ನು ನಿರ್ಮಿಸಬೇಕಾಗುತ್ತದೆ. ಈಗಿನ ಸಂಸ್ಥಾನಾಧೀಶ್ವರರೂ ಸಹ ಬಹಳ ಹಿಂದಿನಿಂದಲೂ ನಡೆದುಬರುತಿರುವ ನೀತಿಗಳನ್ನೇ ಅನುಸರಿಸಿಕೊಂಡು ಬರುತ್ತಿದ್ದು ಈಗಿನ ರಾಜಕೀಯ ಪರಿಸ್ಥಿತಿಗೂ, ಅವರುಗಳ ನಡವಳಿಕೆಗೂ ಬಹಳ ವ್ಯತ್ಯಾಸವಿರುತ್ತದೆ ಆದ ದರಿಂದ ಹಳೆಯ ಬೆಳ್ಳಿಪಾತ್ರೆಗಳನ್ನು ಕರಗಿಸಿ ಹೊಸ ಪಾತ್ರೆಗಳನ್ನು ಮಾಡುವಂತೆ ಸಂಸ್ಥಾನಾಧೀಶ್ವರರನ್ನು ಆಧುನಿಕ ರೀತಿಯಲ್ಲಿ ತಿದ್ದಿ ... ಮಾಡಬೇಕು ಎಂದು ಅವರು ಹೇಳಿದರು.

ಸಕ್ಕರೆ ಗಿರಣಿ ಕೆಲಸಗಾರರ ಮುಷ್ಕರ?

ಸ್ವಂ ಸ] ಮಂಡ್ಯ, ೨೫

ಒಂದು ತಿಂಗಳ ಸಂಬಳ ಬೋನಸ್ ಕೊಡಬೇಕು; ದಿನಗೂಲಿಯವರಿಗೆ ಹಬ್ಬದ ಸಂಬಳ ದೊರೆಯಬೇಕು; ತ್ರೈಮಾಸಿಕ ರಜೆ ಮತ್ತೆ ಕೆಲಸಕ್ಕೆ ಸೇರಿಸಿಕೊಳ್ಳಬೇಕು; ಕನಿಷ್ಠ ದರದ ಪಟ್ಟಿ ಇತ್ಯಾದಿಗಳನ್ನು ೧-೬-೪೭ ರಿಂದ ಜಾರಿಗೆ ತರಬೇಕು– ಈ ನಾಲ್ಕು ಬೇಡಿಕೆಗಳನ್ನು ಡಿಸೆಂಬರ್ ೩೧ರ ಒಳಗೆ ಸರ್ಕಾರವು ಒಪ್ಪದಿದ್ದಲ್ಲಿ ಜನವರಿಯಿಂದ ಮುಷ್ಕರ ಹೂಡಬೇಕೆಂದು ಮಂಡ್ಯದ ಸಕ್ಕರೆ ಗಿರಣಿ ಕೆಲಸಗಾರರ ಸಂಘದವರು ತೀರ್ಮಾನಿಸಿದ್ದಾರೆ. ಈ ಬಗ್ಗೆ ಒಂದು ಕಾರ್ಯ ಸಮಿತಿಯನ್ನು ರಚಿಸಲಾಗಿದೆ ಇದಕ್ಕೆ ಶ್ರೀ॥ ಎ ರಾಮಣ್ಣನವರು ಸಂಚಾಲಕರಾಗಿದ್ದಾರೆ.

ವಂದನೆಗಳು

ರಾಜಧಾನಿಯ ಒಕ್ಕಲಿಗರ ಯುವಜನ ಸಂಘದ ಪರವಾಗಿ ಒಕ್ಕಲಿಗರ ಬಡವಿದ್ಯಾರ್ಥಿಗಳ ಪರೀಕ್ಷಾ ಪ್ರವೇಶ ಶುಲ್ಕಕ್ಕಾಗಿ ಉದಾರ ಸಹಾಯ ಮಾಡಿದ ... ಸಂಘದವರು ಕೃತಜ್ಞತಾಪೂರ್ವಕವಾಗಿ ವಂದನೆಗಳನ್ನರ್ಪಿಸಿದ್ದಾರೆ ... ದಿ, ..., ಕೈಗಾರಿಕೆ ಮುಂತಾದ ... ವಿದ್ಯಾರ್ಥಿಗಳು ಸಹಾಯ ಪಡೆದಿರುತ್ತಾರೆ.

ಸಾಧ್ವಿ

ತಾ|| ೨೬-೧೨-೪೬ ಗುರುವಾರ

ಶಾಂತಿ ರಕ್ಷಣೆ

ಸಾರ್ವಜನಿಕ ಶಾಂತಿಯನ್ನು ಕಾಪಾಡುವುದಕ್ಕಾಗಿ ನಿನ್ನೆ ಜಿಲ್ಲಾಧಿಕಾರಿಗಳು ಪುರಪ್ರಮುಖರ ಸಭೆಯೊಂದನ್ನು ನಡೆಸಿದರಷ್ಟೆ. ಅದರಲ್ಲಿ ಎಲ್ಲಾ ಪಂಗಡಗಳ ಪ್ರತಿನಿಧಿಗಳೂ ತಮಗೆ ಸೂಕ್ತವಾದ ಸಲಹೆಗಳನ್ನು ಮುಂದಿಟ್ಟರು. ಈಗ ಜನರಲ್ಲಿ ಹರಡಿರುವ ಅಶಾಂತಿಯನ್ನು ತೊಲಗಿಸಿ ಎಲ್ಲರಿಗೂ ರಕ್ಷಣೆಯ ಭರವಸೆಯನ್ನು ಉಂಟುಮಾಡಬೇಕೆಂದು ಸೂಚಿಸಲಾಯಿತು. ಪ್ರತಿನಿವಾಸಿಗಳಲ್ಲಿ ಎಲ್ಲಾ ವಿಚಾರಗಳನ್ನೂ ಅಂಕೆಮಾಡಿ ಶಾಂತಿಪಾಲನಾಕಾರ್ಯದಲ್ಲಿ ಸಕಲರ ಸಹಕಾರವನ್ನೂ ಪಡೆಯಲು ಮಹಾಜನರ ಸಭೆಯೊಂದನ್ನು ಸೇರಿಸಬೇಕೆಂದೂ ತಾತ್ಪರ್ಯವಾಯಿತು. ಈ ಕಾರ್ಯದಲ್ಲಿ ಎಲ್ಲಾ ಪ್ರಜೆಗಳೂ ಯಾವ ಭಿನ್ನಭಾವಗಳೂ ಇಲ್ಲದೆ ಮನಃಪೂರ್ವಕವಾಗಿ ಸಹಾಯ ನೀಡುವರೆಂದು ನಂಬಲಾಗಿದೆ.

ಚನ್ನಪಟ್ಟಣದ ದುರಂತವು ನಡೆದನಂತರ ಸಂಸ್ಥಾನದ ಅನೇಕ ಕಡೆಗಳಲ್ಲಿ ವಾತಾವರಣವು ಕಲಕಿತು. ಇಲದಸಲ್ಲದ ವದಂತಿಗಳು ಕಾಡ ಕಿಚ್ಚಿನಂತೆ ಹಬ್ಬಿದವು. ಜನರ ಮನಸ್ಸಿನಲ್ಲಿ ಸಂಶಯ, ಭೀತಿ, ಉದ್ರೇಕ ಮತ್ತು ಅಸಮಾಧಾನಗಳಿಗೆ ಆಸ್ಪದವಾಯಿತು. ಅದರ ಮತ್ತೆಲ್ಲಿಯೂ ಕೋಮುವಾರು ಘರ್ಷಣೆಯು ನಡೆಯದೆ ಕೇವಲ ಅಶಾಂತಿ ಮತ್ತು ಅಸಮಾಧಾನಗಳಲ್ಲಿಯೇ ಪರ್ಯವಸಾನಗೊಂಡಿರುತ್ತದೆ.

ಇಂತಹ ಪ್ರಸಂಗಗಳಲ್ಲಿ ನಿರಾಧಾರವಾದ ಸುದ್ದಿಗಳಿಂದ ಆಗುವ ಅನರ್ಥಗಳಿಗೆ ಮಿತಿಯೇ ಇರುವುದಿಲ್ಲ. ಏನೂ ಇಲ್ಲದಿರುವ ಕಡೆಗಳಲ್ಲಿ ದೊಡ್ಡ ಪಿತೂರಿ, ಮಸಲತ್ತು ಮತ್ತು ಶಸ್ತ್ರ ಪಾಸೆಯುವಿಕೆಯು ನಡೆಯುತ್ತಿರುವುದಾಗಿ ಸುದ್ದಿಗಳು ಹರಡಿಕೊಳ್ಳುತ್ತವೆ. ಅತ್ತಲಾಗಿ ನಿಜವಾಗಿಯೂ ಏನಾದರೂ ಗಲಭೆಯ ಸಿದ್ಧತೆಗಳು ಆಗುತ್ತಿದ್ದರೂ ಅದು ಯಾರಿಗೂ ಗೋಚರವಾಗದೆ ಹೋಗುವ ಸಂಭವವೂ ಉಂಟು. ಚನ್ನಪಟ್ಟಣದಲ್ಲಿ ಇದೇ ರೀತಿ ನಡೆದಿರಬೇಕು. ಪೂರ್ವ ಸಿದ್ಧತೆಗಳಿಲ್ಲದೆ ಇಷ್ಟೊಂದು ಅನಾಹುತವು ಸಂಭವಿಸಲು ಸಾಧ್ಯವಿಲ್ಲ. ಅದರೆ ಅಧಿಕಾರಿಗಳಿಗಾಗಲಿ, ಸಾರ್ವಜನಿಕರಿಗಾಗಲಿ ಅದರ ಸುಳಿವು ಗೋಚರವಾಗಿರಲಿಕ್ಕಿಲ್ಲ. ಇದ್ದಿದ್ದರೆ ಅವರು ಅದನ್ನು ತಡೆಗಟ್ಟುವ ಏರ್ಪಾಟು ಜರುಗದೆ ಇರುತ್ತಿರಲಿಲ್ಲ. ಆದುದರಿಂದ ಎಲ್ಲೆಲ್ಲಿ ಏನೇನು ಸಂಧಾನಗಳೂ, ಸಿದ್ಧತೆಗಳೂ ನಡೆಯುತ್ತಿವೆಯೆಂಬುದನ್ನು ವಾಸ್ತವವಾಗಿ ತಿಳಿದು ಕೊಂಡಿರ ಬೇಕಾದುದು ಎಲ್ಲರ ಕರ್ತವ್ಯವಾಗಿದೆ.

ಚೆನ್ನಪಟ್ಟಣವು ಎಲ್ಲರ ಕಣ್ಣನ್ನೂ ತೆರೆದಿರುತ್ತದೆ. ರೋಗವು ಬಂದಮೇಲೆ ನಿವಾರಿಸುವುದಕ್ಕಿಂತಲೂ ಬಾರದಂತೆ ಮಾಡುವುದೇ ಶ್ರೇಯಸ್ಕರ. ಗಲಭೆಯು ಸಂಭವಿಸಲಿ, ಇಲ್ಲದಿರಲಿ ಮುಂಜಾಗ್ರತೆಯ ಕ್ರಮಗಳನ್ನು ತೆಗೆದು ಕೊಳ್ಳುವುದರಿಂದ ಬಾಧಕವೇನೂ ಇರುವುದಿಲ್ಲ. ಆದುದರಿಂದ ಪುರಪ್ರಮುಖರು ಈ ವಿಷಯದಲ್ಲಿ ಕೈಗೊಳ್ಳುವ ಸಕಲ ಏರ್ಪಾಡುಗಳಿಗೂ ನಮ್ಮ ಸ್ವಾಗತವು ಇದ್ದೇ ಇರುತ್ತದೆ.

ಗಲಭೆಗಳಿಗೆ ಇಂತಹ ಕೋಮಿನವರೇ ಕಾರಣಕರ್ತರಾಗುವರೆಂದು ಹೇಳಲು ಸಾಧ್ಯವಿಲ್ಲ. ಅದಷ್ಟುಮಟ್ಟಿಗೆ ಅವುಗಳಿಗೆ ಕೋಮುವಾರು ಬಣ್ಣವನ್ನು ಕಟ್ಟದಿರುವುದೇ ಮೇಲು. ಪುಂಡರು ಯಾವುದೊಂದು ಜಾತಿಗೂ ಮೀಸಲಾದವರಲ್ಲ. ಎಲ್ಲಾ ಪಂಗಡಗಳಲ್ಲಿಯೂ ಅವರು ಇರುವರು. ಗಲಭೆಯನ್ನು ಎಬ್ಬಿಸಿ ಅಲ್ಲೋಲಕಲ್ಲೋಲವುಂಟುಮಾಡುವುದೇ ಅವರ ಚೇಷ್ಟೆ. ಯಾವ ಮತ ಅಥವಾ ಕೋಮಿನ ಉದ್ಧಾರವೂ ಅವರ ಧ್ಯೇಯವಲ್ಲ.

ಈಗ ಮಹಾಜನರ ಮುಂದಿರುವ ಮಾರ್ಗಗಳು ಇಷ್ಟೇ: ಸುಳ್ಳುವದಂತಿಗಳನ್ನು ಆದಷ್ಟು ಮಟ್ಟಿಗೆ ಹರಡದಂತೆ ತಡೆಗಟ್ಟುವುದು; ಪುಂಡುಪೋಕರಿಗಳನ್ನು ಪತ್ತೆಹಚ್ಚಿ ಅವರು ಹಾವಳಿ ಮಾಡದಂತೆ ಬಂದೋಬಸ್ತು ಮಾಡುವುದು ಮತ್ತು ಎಂತಹ ಪರಿಸ್ಥಿತಿಯಲ್ಲಾದರೂ ಎದೆಗುಂದದೆ ದುಷ್ಟರ ಧಾಳಿಗೆ ತುತ್ತಾಗುವ ಭೀತಿಯನ್ನು ತೊಲಗಿಸಿ ಆತ್ಮರಕ್ಷಣೆ ಮಾಡಿಕೊಳ್ಳಬಲ್ಲೆವೆಂಬ ದೃಢಸಂಕಲ್ಪವನ್ನು ಮಾಡಿಕೊಳ್ಳುವುದು. ಈ ಬಗ್ಗೆ ಪ್ರಜಾನಾಯಕರೂ, ಆಡಳಿತ ವರ್ಗದವರೂ ಸೂಕ್ತವಾದ ಕಾರ್ಯಕ್ರಮಗಳನ್ನು ಕೈಗೊಳ್ಳಲೆಂದು ನಾವು ಹಾರೈಸುತ್ತೇವೆ.

ಬಟ್ಟೆ ಹಂಚಿಕೆ

ಮಿಲ್ ಬಟ್ಟೆಯ ಹಂಚಿಕೆಯ ಬಗ್ಗೆ ಮದರಾಸ್ ಸರ್ಕಾರದವರು ಒಂದು ಪ್ರಕಟಣೆ ಹೊರಡಿಸಿದ್ದಾರೆ. ಅದರಲ್ಲಿ ಬಟ್ಟೆ ಕೂಪನ್ ಹೊಂದಿರುವ ಯಾರೇ ಆಗಲಿ ಒಂದೇ ಬಾರಿ ಒಂದು ವರ್ಷದ ಪೂರ್ತಾ ಬಟ್ಟೆಯನ್ನು ಪಡೆಯಬಹುದೆಂದು ಹೇಳಿದ್ದಾರೆ.

ದನಕರುಗಳ ಜೀವವಿಮೆ

ಲಕ್ನೋದಲ್ಲಿ ನಡೆದ ಅಖಿಲಭಾರತ ವ್ಯವಸಾಯ ಮತ್ತು ಪ್ರಾಣಿರಕ್ಷಣಾ ಕಾಪಿಯ ಸಭೆಯಲ್ಲಿ ದನಕರುಗಳನ್ನು ವಿಮೆಮಾಡಿಸಬೇಕೆಂತಲೂ ಇದಕ್ಕಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಗೋಶಾಲೆಗಳನ್ನು ತೆರೆದು ವಿಜ್ಞಾನರೀತ್ಯಾ ಅವುಗಳನ್ನು ಸಾಕಿ ವಿಮೆ ಮಾಡಬೇಕೆಂದೂ ತೀರ್ಮಾನಿಸಿದ್ದಾರೆ.

ಹೆರಿಗೆ ಆಸ್ಪತ್ರೆ

ಸ್ವಿ ಸು.] ಶ್ರೀರಂಗಪಟ್ಟಣ, ೨೬.

ಪಾಂಡವಪುರ ಶ್ರೀ ಚೌಬೀನೆ ಸಿದ್ದಪ್ಪ ಉರುಫ್ ಪುಟ್ಟಸ್ವಾಮಯ್ಯನವರು ಈ ಊರಿನಲ್ಲಿ ಒಂದು ಹೆರಿಗೆ ಆಸ್ಪತ್ರೆಯನ್ನು ಸ್ಥಾಪಿಸಲು ಅನುಕೂಲವಾದ ಕಟ್ಟಡವನ್ನೂ ಮತ್ತು ೧೦ ಸಹಸ್ರ ರೂಗಳ ಸಹಾಯವನ್ನೂ ಮಾಡುವುದಾಗಿ ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದರ ಮೇಲೆ ಸದರಿ ಜಿಲ್ಲಾಧಿಕಾರಿಗಳು ಕಳೆದ ಅನೇ ತಾ|| ಇಲ್ಲಿಗೆ ಆಗಮಿಸಿ ದಾನಕರ್ತರು ಕೊಡಲು ಉದ್ದೇಶಿಸಿರುವ ಕಟ್ಟಡವನ್ನೂ, ಸ್ಥಳವನ್ನೂ ಪುರ ಪ್ರಮುಖರೊಡನೆ ಪರಿಶೀಲಿಸಿ ತಮ್ಮ ಒಪ್ಪಿಗೆಯನ್ನು ಇತ್ತಿದ್ದಾರೆ. ಈ ಕಾರ್ಯ ಬೇಗ ನೆರವೇರಲೆಂದು ಸಾರ್ವಜನಿಕರೆಲ್ಲರೂ ಹಾರೈಸುತ್ತಿದ್ದಾರೆ.

ಬೀಹಾರ್ ಮುಸ್ಲಿಮರ ರಕ್ಷಣೆಗೆ ಷರತ್ತುಗಳು

೫ ಸಾವಿರದಿಂದ ಹತ್ತು ಸಾವಿರ ಪ್ರಜಾಸಂಖ್ಯೆಯಿರುವ ಗ್ರಾಮಗಳನ್ನು ಗುಂಪುಮಾಡಬೇಕು; ಶಸ್ತ್ರಸಜ್ಜಿತ ಪೋಲೀಸರಲ್ಲಿ ಶೇ|| ೪೦ ರಷ್ಟು ಜನ ಮುಸ್ಲಿಮರಿರಬೇಕು ಮತ್ತು ಗ್ರಾಮಗಳಲ್ಲಿರುವ ಸ್ಥಳೀಯ ಪ್ರಜೆಗಳಲ್ಲಿ ಶೇ|| ೧೦ ರಷ್ಟು ಜನ ಶಸ್ತ್ರ ಧರಿಸಲು ಆಸ್ಪದವಿರಬೇಕು. ಪ್ರಾಂತೀಯ ಸರ್ಕಾರವು ಮುಸ್ಲಿಮರಿಗೆ ಈ ಅನುಕೂಲಗಳನ್ನೊದಗಿಸಿಕೊಟ್ಟರೆ ಮಾತ್ರ ನಿರಾಶ್ರಿತರಾದ ಮುಸ್ಲಿಮರು ಪುನಃ ಶಾಂತಿಯಿಂದ ಬೀಹಾರಿನಲ್ಲಿ ನೆಲಸಲು ಸಾಧ್ಯ—ಎಂದು ಬಂಗಾಳಾ ಮಾಜಿ ಪ್ರಧಾನಿ ಖ್ವಾಜಾ ನಜೀಮುದ್ದೀನರು ಹೇಳಿರುತ್ತಾರೆ.

ನಾಜಿಗಳಿಗೆ ಕ್ಷಮಾದಾನ

ಅಮೇರಿಕ ಆಕ್ರಮಿತ ಜರ್ಮನಿಯಲ್ಲಿ ೮ ಲಕ್ಷ ಮಂದಿ ನಾಜೀ ಪಕ್ಷದ ಜನರಿಗೆ ಕ್ಷಮೆಯನ್ನು ತೋರಿ ಅವರ ಅಪರಾಧವನ್ನು ಮನ್ನಿಸಲಾಗಿದೆಯೆಂದು ಅಲ್ಲಿನ ಕಮ್ಯಾಂಡರಾದ ಜನರಲ್ ಮ್ಯಾಕ್ ನಾರ್ನಿಯವರು ಪ್ರಕಟಿಸಿದ್ದಾರೆ.

Edited, printed and published by A. R. Nagarajan at the Sadhvi Press D-Subbiah Road, Mysore.

ಶ್ರೀ

ಗಣೇಶಾ ಟಾಕೀಸ್

ತಾ|| 27-12-46 ರಿಂದ

ಪ್ರತಿ ದಿನ ಮೂರು ಆಟಗಳು

ರುಕ್ಮಾಂಗದ

(ತಮಿಳು)

ಪ್ರಸಿದ್ಧ ಪೌರಾಣಿಕ ಚಿತ್ರ

ಪಾತ್ರ:- ಜಿ. ಎನ್. ಬಾಲ ಸುಬ್ರಹ್ಮಣ್ಯಂ, ಯೋಗ ಮಂಗಳಂ, ಪೆರಿಯನಾಯಕಿ

ಆಪೆರಾ ಟಾಕೀಸ್



ನಾರದ-ನಾರದಿ

(ತೆಲುಗು ಭಾಷೆ)

27-12-46ರಿಂದ ಎರಡನೇ ವಾರ

Morningshows from 26-12-46

Bridge of the

SAN LUIS REY

—: Stars :—

Lynn Bari, Akimtami Roif, Francis Lederer.

ಶೀಘ್ರದಲ್ಲಿಯೇ ನಿಮ್ಮ ಮೆಚ್ಚಿನ ನ್ಯೂ ಆಪೆರ ಟಾಕೀಸಿನಲ್ಲಿ ಬರುವ ಕಾಲಕ್ಕಾಗಿ ಗಮನಿಸಿರಿ

ತಮಿಳುನಾಡು ಟಾಕೀಸ್‌ರವರ

.........ಸುಪ್ರಸಿದ್ಧ ಪೌರಾಣಿಕ ಚಿತ್ರ.........

ಮೋಹಿನಿ

ರುಕ್ಮಾಂಗದ

(ತಮಿಳು ಭಾಷೆ)

ಎಸ್. ಎಸ್. ವಿಜಯಾಳ್, ಸಿ. ಬಿ. ರಂಗಾಚಾರ್ ಕೆ. ಬಿ. ಶಾರದಾಂಬಾಳ್, ವಿದ್ವಾನ್ ಶ್ರೀನಿವಾಸನ್, ಎಂ. ಆರ್. ಸುಬ್ರಹ್ಮಣ್ಯಂ ಮತ್ತು ಇತರರು ನಟಿಸಿರುವರು

ನಿರ್ದೇಶಕರು:-ಎಸ್. ಸೌಂದರ್‌ರಾಜನ್ : ಸ್ಟುಡಿಯೋ:-ರಣಜಿತ್-ಬೊಂಬಾಯಿ

For Bookings to :-Mysore State, South Canara & Coorg

Apply to :-SRI MAHALAKSHMI PICTURES,

No. 8, Hospital Road, Bangalore City.

ರಾಜಕಮಲ್, ಮೈಸೂರು

೨೭-೧೨-೪೬ ರಿಂದ ಪ್ರತಿ ದಿನ ೩ ಆಟಗಳು

ವಿಶ್ವಕರ್ನಾಟಕ, ಪ್ರಜಾಮತ, ಜನವಾಣಿ, ದೇಶಬಂಧು ಮುಂತಾದ ಮೈಸೂರು ಪತ್ರಿಕೆಗಳು ಪ್ರಶಂಸಿಸಿದ ಮ ರಾಮರಾಜ್ಯದ ಮಧುರಗಾಯಕಿ ರಂಜನಾ ನಟಿಸಿರುವ

ಪ್ರಕಾಶ್ ಪಿಕ್ಚರ್ಸ್‌ರವರ

ಅತ್ಯಂತ ಆಮೋದವಾದ

ಹಮಾರ ಸಂಸಾರ್

ಭೂಮಿಕೆ:-ಉಮಾಕಾಂತ್, ಜಿಲ್ಲಾ ಮುಂತಾದವರು

From 27-12-46 for 7 days, Daily at 10-30 a.m.

Alexander Korda's "Elephant Boy"

With:— Mysore Sabu and others.

ರಿ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶುಕ್ರವಾರ ೨೭—೧೨—೪೬ [ಸಂಚಿಕೆ ೧೨೧

ಇಂಡೋಚೀಣೀಯರಿಗೆ ಜಪಾನರ ಸಹಾಯ

...ರತದಲ್ಲಿರುವ ಬ್ರಿಟಿಷರಿಗೆ ...ದೇ ಕಡೆಯ ಕ್ರಿಸ್‌ಮಸ್

...ದೂಸ್ಥಾನದಲ್ಲಿರುವ ಬ್ರಿಟಿಷರಿಗೆ ಇ...ಕಡೆಯ ಕ್ರಿಸ್‌ಮಸ್ ಆಗಬಹುದೆಂದು ...ಡೈಲಿ ಎಕ್ಸ್‌ಪ್ರೆಸ್ ಪತ್ರಿಕೆಯ ...ತ್ತ ಮುದ್ದಿಗಾರರು ಬರೆದಿರುತ್ತಾರೆ. ...ಷ್ ನೌಕರರು ತಮಗೆ ಬರಬೇಕಾದ ...ಹಾರ ದ್ರವ್ಯವನ್ನು ತೆಗೆದುಕೊಂಡು ತ...ಸ್ವದೇಶಗಳಿಗೆ ವಾಪಸು ಹೋಗುವರೇ ಅ...ಹೊಸ ಸರ್ಕಾರದ ಸೇವಕರಾಗಿ ಇಲ್ಲಿ ...ಉಳಿಯುವರೇ ಎಂಬುದನ್ನು ಈ ತಿಂ...ಗಳೊಳಗೆ ಅವರು ನಿರ್ಧರಿಸಬೇ... ...ಬಹು ಸಂಖ್ಯಾತ ಬ್ರಿಟಿಷ್ ಅಧಿಕಾ...ರಿ, ವರ್ತಕರೂ ವಾಪಸು ಹೊರಟು ...ಗಲು ನಿರ್ಧರಿಸಿರುವುದಾಗಿ ತಿಳಿದುಬಂ...ದೆ

ಗಾಂಧಿಜಿಯವರ ದಿನಚರಿ

...ರ್ವಬಂಗಾಳದ ನೌಖಾಲಿಯಲ್ಲಿರುವ ...ಮಾತ್ಮ ಗಾಂಧಿಯವರು ದಿನವೊಂದಕ್ಕೆ ...ದ ೨೦ ಗಂಟೆಗಳ ಕಾಲ ಕೆಲಸಮಾ...ಡುವರು. ಮಧ್ಯಾಹ್ನ ಅರ್ಧ ಗಂಟೆ ...ವಿಶ್ರಾಂತಿ ಮತ್ತು ರಾತ್ರಿ ೧೧ರಿಂದ ೨...ರವರೆಗೆ ನಿದ್ರೆ. ಕಿತ್ತಳೆ ಹಣ್ಣಿನ ರಸ ಮ...ತ್ತು ಕೊಂಚ ಚಪಾತಿ, ಎಳನೀರುಗಳನ್ನು ...ಹಾರವಾಗಿ ತೆಗೆದುಕೊಳ್ಳುವರು. ನೂ...ಲುವುದು, ಕಷ್ಟಕ್ಕೀಡಾಗಿರುವ ಮಹಿಳೆಯ...ರು ಮತ್ತು ಳಿಗೂ ಭೇಟಿಕೊಡುವುದು, ಬ...ರೆಯುವುದು ಮತ್ತು ತಿರುಗಾಡುವುದು ಅ...ವರ ದಿನಚರಿಯಾಗಿದೆ.

ರಾಜಕೀಯ ಶಾಖೆಯನ್ನು ಭಾರತೀಯರಿಗೆ ವಹಿಸಬೇಕು

ಭಾರತೀಯರಿಗೆ ಅಧಿಕಾರವನ್ನು ಬಿಟ್ಟು...ಕೊಡುವುದಾಗಿ ಬ್ರಿಟಿಷರು ಹೇಳುತ್ತಲೇ ಇ...ದ್ದಾರೆ. ಆದರೆ ಆದು ಕಾರ್ಯ ರೂಪಕ್ಕೆ ...ಬರಲು ಅವರೇ ಅಡ್ಡಿ ಆತಂಕಗಳನ್ನು ಒ...ಡ್ಡುತ್ತಿದ್ದಾರೆ. ಗುಡ್ಡಗಾಡಿನಲ್ಲಿ ರಾಜಕೀ...ಯ ಶಾಖೆಯವರ ಕೈವಾಡ ಪರಮಾವಧಿ ...ಮಿಸ್ಸೀರಿದೆ ಗವರ್ನರ್ ಜನರಲ್ಲಿಗೆ ಇ...ರುವ ಈ ಅಧಿಕಾರವನ್ನು ಭಾರತೀಯ ಪ್ರ...ತಿನಿಧಿಗಳಿಗೆ ಕೂಡಲೇ ವರ್ಗಾಯಿಸಬೇಕು...ಎಂದು ಗಡಿನಾಡಿನ ಗಾಂಧಿ ಗಫಾರ್‌ಖಾನ...ರು ಸೂಚಿಸಿದ್ದಾರೆ

ವಿಭಜನೆಯಿಂದ ಹಾನಿ

ಭಾರತವನ್ನು ಹಿಂದೂಸ್ಥಾನ, ಪಾಕಿ...ಸ್ಥಾನಗಳೆಂದು ವಿಭಾಗಿಸುವುದರಿಂದ ಕೋ...ಮುವಾರು ವಿದ್ವೇಷ ಹೋಗುವುದೇ ಇಲ್ಲ. ವಿಭಜನೆಯಿಂದ ಪರಿಸ್ಥಿತಿ ಇನ್ನೂ ಹದಗೆ...ಡುತ್ತದೆ ಬ್ರಿಟಿಷರು ಯಾವುದಾದರೊಂದು ...ಸುಧಾರಣೆ ಜಾರಿಗೆ ತರಲು ಯತ್ನಿಸಿದಾಗಲೆ...ಲ್ಲಾ ಕೋಮುವಾರು ಕಲಹಗಳು ಉತ್ಪ...ನ್ನವಾಗಿವೆ. ಹಿಂದೂ-ಮುಸ್ಲಿಂ ಸಂಸ್ಕೃತಿ...ಯ ಭಿನ್ನತೆಯೇ ಇದಕ್ಕೆ ಮೂಲಕಾರಣ...ವೆಂದು ಬ್ರಿಟಿಷರು ವಾದಿಸುತ್ತಾರೆ. ಭಾರತ...ದಲ್ಲಿ ಬ್ರಿಟಿಷರ ಆಳ್ವಿಕೆ ತಲೆದೋರಿದ ಮೇ...ಲೆಯೇ ಈ ಕೋಮುವಾರು ವಿದ್ವೇಷಗಳು ಎದ್ದು ಕಾಣುತ್ತಿವೆ ಈಗಿನ ಪರಿಸ್ಥಿತಿಗೆ ಬ್ರಿಟಿಷರ ನೀತಿಯೇ ಕಾರಣ. ಅವರು ಭಾರತದ ಮೇಲಿರುವ ತಮ್ಮ ಹಿಡಿತವ...ನ್ನು ಬಲಗೊಳಿಸಲು ಯತ್ನಿಸುತ್ತಿರುವರೇ ಹೊರತು ಭಾರತವು ಸ್ವತಂತ್ರವಾಗ ಬೇಕೆಂ...ದು ಅವರು ಇಚ್ಛಿಸುವುದಿಲ್ಲ- ಎಂದು ಮಾ...ಸ್ಕೋ ರೇಡಿಯೋದಿಂದ ಮಿ॥ ಡ್ಯಾಕೊವ್ ಎಂಬುವರು ಪ್ರಕಟಿಸಿದ್ದಾರೆ.

ಮಿತ್ರ ರಾಷ್ಟ್ರಗಳಿಗೆ ಜ॥ ಸ್ಮಟ್ಸರ ತಿರಸ್ಕಾರ

ದಕ್ಷಿಣ ಆಫ್ರಿಕದಲ್ಲಿ ಬಣ್ಣದ ಜನರ ವಿರೋಧವಾಗಿ ತಾವು ನಡೆಸುತ್ತಿರುವ ಅಪ...ಚಾರವನ್ನು ಖಂಡಿಸಿ ಸಂಯುಕ್ತ ರಾಷ್ಟ್ರ ಸಂಘದವರು ಮಾಡಿರುವ ನಿರ್ಣಯವನ್ನು ಜನರಲ್ ಸ್ಮಟ್ಸರು ತಿರಸ್ಕರಿಸಿ ತಾವು ಬಿಳಿಯ ನಾಗರೀಕತೆಯ ಉದ್ಧಾರಕರೆಂದು ವಿಜೃಂಭಿಸುತ್ತಿದ್ದಾರೆ. ಮೇಲ್ಕಂಡ ಸಭೆಯ ಮುಂದಿನ ಅಧಿವೇಶನದಲ್ಲಿ ಸದರಿ ನಿರ್ಣಯವನ್ನು ಬದಲಾಯಿಸಲು ಅವರು ಪ್ರಯತ್ನಿಸುವರೆಂದೂ ಹೇಳಲಾಗಿದೆ. ವಿಶೇಷವಾಗಿ ಬಣ್ಣದ ಜನರಿಂದಲೇ ತುಂಬಿರುವ ಸಂಯುಕ್ತರಾಷ್ಟ್ರ ಸಂಸ್ಥೆಯಲ್ಲಿ ಬಿಳಿಯರ ಹಕ್ಕುಬಾಧ್ಯತೆಗೆ ರಕ್ಷಣೆ ದೊರೆಯುವುದಿಲ್ಲವೆಂದು ಅವರು ಪ್ರತಿಪಾದಿಸುತ್ತಿದ್ದಾರೆ.

ಅಮೇರಿಕದಲ್ಲಿ ವರ್ಣದ್ವೇಷ

ಸಕಲ ಮಾನವರ ಸಮಾನತೆಯನ್ನು ಪ್ರಸಾರಮಾಡುವುದಾಗಿ ಹೇಳುತ್ತಿರುವ ಅಮೇರಿಕಾದಲ್ಲಿ ಇನ್ನೂ ವರ್ಣದ್ವೇಷವು ಎಷ್ಟು ಪ್ರಬಲವಾಗಿದೆಯೆಂಬುದನ್ನು ಸಂಯುಕ್ತ ರಾಷ್ಟ್ರ ಸಭೆಗೆ ಭಾರತೀಯ ನಿಯೋಗದವರ ಸಲಹೆಗಾರರಾಗಿ ಹೋಗಿದ್ದ ಡಾ॥ ಲಂಕಾಸುಂದರಂರವರು ವರ್ಣಿಸಿರುವರು. ಅವರು ರೈಲಿನಲ್ಲಿ ಪ್ರಯಾಣ ಮಾಡಿದ ೨೪ ಘಂಟೆ ಕಾಲ ಯಾರೊಬ್ಬರೂ ಅವರೊಡನೆ ಮಾತನಾಡಲಿಲ್ಲ. ಮತ್ತು ರೈಲಿನಲ್ಲಿ ಬಣ್ಣದ ಜನರ ಭೋಜನಕ್ಕಾಗಿಯೇ ತೆರೆಯ ಮರೆಯಲ್ಲಿ ಪ್ರತ್ಯೇಕ ಸ್ಥಾನವನ್ನು ಏರ್ಪಡಿಸಲಾಗಿತ್ತು.—ಎಂದು ಅವರು ತಿಳಿಸಿರುತ್ತಾರೆ

ಒಳ ಪಂಗಡಗಳು ಹೋಗಬೇಕು

ಪೂರಿಯ ಗೋವರ್ಧನ ಮಠಾಧ್ಯಕ್ಷರಾದ ಶ್ರೀ ಶಂಕರಾಚಾರ್ಯ ಸ್ವಾಮಿಗಳವರು ಚೆನ್ನೈ ಮದರಾಸಿನಲ್ಲಿ ಭಾಷಣ ಮಾಡಿ ಹಿಂದೂ ಜನಾಂಗದಲ್ಲಿ ಜಾತಿ ವರ್ಣದೊಳಗೆ ಇರುವ ಒಳ ಪಂಗಡಗಳನ್ನು ನಿವಾರಿಸುವುದರಿಂದಲೇ ಹಿಂದುಗಳು ಸುಸಂಘಟಿತರಾಗಲು ಸಾಧ್ಯವೆಂದು ಅವರು ತಿಳಿಸಿದರು. ಹಿಂದೂಗಳು ಮುಂದೆ ಗಾಮಗಳಂತೆ ಹಿಂದೆಯೇ ಉಳಿಯಬಾರದೆಂದೂ, ಮುಂದೆ ನುಗ್ಗಬೇಕೆಂದೂ ತಿಳಿಸಿದರು. ಬಲವಂತದಿಂದ ಮತಾಂತರ ಹೊಂದಿರುವವರನ್ನು ಶುದ್ಧಿಮಾಡಿ ವಾಪಸು ತೆಗೆದುಕೊಳ್ಳಬೇಕೆಂದೂ ಸಹ ಸೂಚಿಸಿದರು.

ರೈಲ್ವೆ ಅಪಘಾತ

ಮೈಸೂರು ೨೭

ನಿನ್ನೆ ಮಧ್ಯಾಹ್ನ ೧೧-೩೦ ಘಂಟೆಗೆ ಮೈಸೂರಿನಿಂದ ಹೊರಟ ಪಟೇಲ್ ರೈಲುಗಾಡಿಯ ಒಂದು ವ್ಯಾಗನ್ನು ಬಂಡಿಯ ಕಡಕೊಳದ ಬಳಿ ಸುಮಾರು ೧೨ ಘಂಟೆಗೆ ಕಂಬಿ ಕಳಚಿ ಬಿದ್ದಿತು. ಇದರಿಂದ ರೈಲು ಸಂಚಾರಕ್ಕೆ ಸ್ವಲ್ಪ ಅಡಚಣೆಯಾಗಿ ಪ್ರಯಾಣೀಕರನ್ನು ಟ್ರಾನ್‌ಷಿಪ್‌ಮೆಂಟ್ ಮೂಲಕ ಕಳುಹಿಸಬೇಕಾಯಿತು. ಸಂಜೆ ಹೊತ್ತಿಗೆ ಎಲ್ಲವನ್ನೂ ಸರಿಪಡಿಸಲಾಯಿತು. ಯಾರಿಗೂ ಯಾವ ಅಪಾಯವೂ ಆಗಿರುವುದಿಲ್ಲ

ಪುರಸಭೆಯ ಕೆಲಸಗಾರರ ಮುಷ್ಕರವೇ ?

ಮೈಸೂರು ಪುರಸಭೆಯ ಕೆಲಸಗಾರರ ಬೇಡಿಕೆಗಳು ಸಲ್ಲಿಸಲ್ಪಡದಿರುವುದರಿಂದ ಅವರು ಇಂದಿನಿಂದ ಮುಷ್ಕರ ಹೂಡಬೇಕಾಗಿತ್ತು. ಆದರೆ ಎಲ್ಲ ರೀತಿಯ ಪ್ರದರ್ಶನ ಮತ್ತು ಸಭೆಗಳ ಮೇಲೆ ಪ್ರತಿಬಂಧಕವಿರುವುದರಿಂದ ಮುಷ್ಕರವು ಮುಂದೆ ಹೋಗಿದೆ. ಆದರೂ ಕೆಲಸಗಾರರು ತಮ್ಮ ನ್ಯಾಯವಾದ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಹೋರಾಟ ನಡೆಸಿಯೇ ತೀರುವರು. ಈ ಬಗ್ಗೆ ಕಾರ್ಯ ಕ್ರಮಗಳು ಆರಂಭವಾಗುವುದರೊಳಗಾಗಿ ನಗರಸಭೆಯವರೂ ಮುಂದೆ ಬರುವ ಪುರಸಭಾಸದರೂ ಕೆಲಸಗಾರರ ನ್ಯಾಯ ಸಮ್ಮತವಾದ ಬೇಡಿಕೆಗಳನ್ನು ಈಡೇರಿಸಿ ಕೊಡಬೇಕು ಎಂಬುದಾಗಿ ಸಮಿತಿ ಅಧ್ಯಕ್ಷರಾದ ಶ್ರೀ॥ ಬಿ. ಎಲ್. ರಾಮನಾಥನ್ ರವರು ಒಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ

ನೌಖಾಲಿಯಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ?

ಬಂಗಾಳದ ದುರಂತದಿಂದ ಭಯಭೀತರಾಗಿರುವ ಹಿಂದುಗಳನ್ನು ಪುನಃ ವಾಪಸ್ ಬರಮಾಡಿಕೊಳ್ಳಲು ಅ॥ ಭಾ॥ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆಯು ನವಾಖಲಿಯಲ್ಲಿ ಸೇರುವುದರಿಂದ ಅನುಕೂಲವಾಗುವುದು ತಮ್ಮ ನಾಯಕರುಗಳನ್ನೆಲ್ಲಾ ನೋಡಿದರೆ ಜನರು ಧೈರ್ಯವಾಗಿ ಪುನಃ ಹಿಂದಿರುಗುವರು. ಮುಂದೆ ನಡೆಯುವ ಕಾರ್ಯಕಾರಿ ಸಮಿತಿಯ ಸಭೆಯನ್ನು ನವಾಖಲಿಯಲ್ಲೇ ನಡೆಸಿ-ಎಂದು ನವಾಖಲಿಯ ಪರಿಹಾರ ಸಮಿತಿಯವರು ರಾಷ್ಟ್ರಪತಿ ಆಚಾರ್ಯ ಕೃಪಲಾನಿಯವರಿಗೆ ತಂತಿ ಕಳುಹಿಸಿದ್ದಾರೆ.

ಇಂಡೋ ಚೈನೀಯರಿಗೆ ಜಪಾನರ ಸಹಾಯ

ಸಂಪೂರ್ಣವಾದ ಮತ್ತು ಯಾವ ಪರಿಮಿತಿಯೂ ಇಲ್ಲದ ಸ್ವಾತಂತ್ರ್ಯವನ್ನು ಇಂಡೋ ಚೀಣೀಯರಿಗೆ ಕೂಡಲೇ ಕೊಡಲು ಫ್ರೆಂಚ್ ಸರ್ಕಾರವು ತಯಾರಿಲ್ಲವೆಂದು ಫ್ರಾನ್ಸಿನ ಮುಖ್ಯ ಮಂತ್ರಿಗಳು ಪ್ರಕಟಣೆಯನ್ನು ಹೊರಡಿಸಿದ್ದಾರೆ. ಇಂಡೋ ಚೀನಾ ರಿಪಬ್ಲಿಕ್ಕಿನ ಸೈನ್ಯಗಳು ಫ್ರೆಂಚ್ ಸೈನ್ಯಗಳನ್ನು ಎದುರಿಸಿ ಹೋರಾಟ ನಡೆಸುತ್ತಲೇ ಇವೆ ಫ್ರೆಂಚರ ವಿರುದ್ಧವಾಗಿ ಇಂಡೋ ಚೈನಾ ಸೈನ್ಯಕ್ಕೆ ಜಪಾನರು ಅಧಿಕ ಸಂಖ್ಯೆಯಲ್ಲಿ ಸೇರಿ ಹೋರಾಡುತ್ತಿದ್ದಾರೆಂದೂ ವರದಿಯಾಗಿದೆ

ಸಿಂಧ್ ಲೀಗ್ ನಾಯಕತ್ವ

ಸಿಂಧ್ ಶಾಸನ ಸಭೆಯ ಮುಸ್ಲಿಂ ಲೀಗ್ ಪಕ್ಷದ ನಾಯಕರಾದ ಮಿ॥ ಗುಲಾಂ ಹುಸೇನ್ ಹಿದಾಯತುಲ್ಲಾರವರಲ್ಲಿ ವಿಶ್ವಾಸವಿಲ್ಲವೆಂದೂ ಅವರು ಲೀಗಿನ ನೀತಿಗೆ ವಿರೋಧವಾಗಿ ವರ್ತಿಸಿರುವುದರಿಂದ ಅವರನ್ನು ಮತ್ತೆ ಚುನಾಯಿಸಕೂಡದೆಂದೂ ಪ್ರಾಂತೀಯ ಲೀಗು ನಿರ್ಧರಿಸಿದ್ದಿತು ಆದರೆ ಮಿ॥ ಜಿನ್ನಾರವರ ಮಧ್ಯಸ್ಥಿಕೆಯಿಂದ ಅವರನ್ನೇ ಪಕ್ಷದ ನಾಯಕರನ್ನಾಗಿ ಅವಿರೋಧವಾಗಿ ಆರಿಸಲಾಗಿದೆ.

ರಷ್ಯದಲ್ಲಿ ವಿದ್ಯುಚ್ಛಕ್ತಿ ರಸ್ತೆ

ರಸ್ತೆಗಳ ಕೆಳಗೆ ವಿದ್ಯುಚ್ಛಕ್ತಿಯ ತಂತಿಗಳನ್ನು ಹಾಕಿ ಮೇಲ್ಭಾಗದಲ್ಲಿ ಸಂಚರಿಸತಕ್ಕ ಮೋಟಾರು ಕಾರುಗಳ ವೇಗವನ್ನು ಹೆಚ್ಚಿಸುವ ಕಾರ್ಯಕ್ರಮವು ಮಾಸ್ಕೋವಿನಲ್ಲಿ ಪ್ರಾರಂಭವಾಗಿದೆ. ಇದರಿಂದ ಕಾರಿನ ವೇಗವು ಗಂಟೆ ಒಂದಕ್ಕೆ ೧೨೫ ಮೈಲಿಗಳಿಗಿಂತ ಹೆಚ್ಚುವುದು ಈ ರಸ್ತೆಯ ನಿರ್ಮಾಣದ ವೆಚ್ಚವು ಸಾಧಾರಣ ಟ್ರಾಲಿ ಬಸ್ ಸಂಚಾರ ಮಾರ್ಗದ ತಯಾರಿಕೆಗೆ ಆಗುವ ವೆಚ್ಚಕ್ಕಿಂತ ಕಡಿಮೆ ಯಾಗುವುದೆಂದು ಹೇಳಲಾಗಿದೆ

ಸಾರ್ವಜನಿಕ ಸಭೆ

ಮೈಸೂರು ೨೭

ಕೋಮುವಾರು ಸೌಹಾರ್ದವನ್ನು ಕಾಪಾಡಿಕೊಂಡು ಬರಲು ಕೈಗೊಳ್ಳಬೇಕಾದ ಕಾರ್ಯಕ್ರಮಗಳನ್ನು ಪರ್ಯಾಲೋಚಿಸುವುದಕ್ಕಾಗಿ ಇದೇ ೨೯ ನೇ ತಾ॥ ಭಾನುವಾರ ಸಾಯಂಕಾಲ ೪ ಗಂಟೆಗೆ ಟೌನ್‌ಹಾಲಿನಲ್ಲಿ ಮೈಸೂರು ಜಿಲ್ಲಾಧಿಕಾರಿಗಳಾದ ಶ್ರೀ ಸಿ. ಎಂ. ಹುಚ್ ರಾಜಬೋಧರಂಗ್‌ರವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯನ್ನು ಏರ್ಪಡಿಸಲಾಗಿದೆ ಸರ್ವರೂ ದಯಮಾಡಿಸಬೇಕಾಗಿ ಕೋರಲಾಗಿದೆ

ಜಯಪುರದಲ್ಲಿ ೩ ಕಾಸಿನ ಪೋಸ್ಟು ಕಾರ್ಡ್

ಜಯಪುರ ಸಂಸ್ಥಾನದಲ್ಲಿ ಜನವರಿ ೧ ರಿಂದ ಪೋಸ್ಟ್ ಕಾರ್ಡಿನ ಬೆಲೆಯನ್ನು ಅರ್ಧಾಣೆಯಿಂದ ೩ ಕಾಸಿಗೂ, ಕವರಿನ ಬೆಲೆಯನ್ನು ಒಂದಾಣೆಯಿಂದ ಒಂಬತ್ತು ಕಾಸಿಗೂ ಇಳಿಸಲಾಗುವುದೆಂದು ಅಲ್ಲಿನ ಸರ್ಕಾರವು ಪ್ರಕಟಿಸಿದೆ.

ಒಂದು ಹಾವು ಅಸ್ತಿ

ಮೈಸೂರು ೨೭

ಎ. ಕರಗಂಡ ಮನೆ ಸಮೀಪದಲ್ಲಿ ಹಾವಿನ ಬದಲು ಒಂದು ಹಾವು ಅಸ್ಥಿಯನ್ನು ಮೊಸ್ತೆಯಿಂದ ಕೊಡಲು ಸರ್ಕಾರದ ಆಜ್ಞೆಯಾಗಿದೆ

ಸಾಧ್ವಿ

ತಾ|| ೨೭-೧೨-೪೬ ಶುಕ್ರವಾರ

ವಿರೋಧಾಭಾಸಗಳು

ಚನ್ನಪಟ್ಟಣದ ಗಲಭೆಯನಂತರ ಹಲವು ಬಗೆಯ ಅಭಿಪ್ರಾಯಗಳು ಹೊರಬೀಳುತ್ತಿವೆ. ಇವುಗಳಲ್ಲಿ ಪರಸ್ಪರ ವಿರೋಧಾಭಾಸಗಳು ಎದ್ದು ಕಾಣುತ್ತಿವೆ. ವಿದ್ಯಮಾನಗಳನ್ನು ಸ್ವತಃ ಕಂಡು ಅದರ ಪರಿಣಾಮಕ್ಕೆ ಗುರಿಯಾಗಿದ್ದ ಕಾಂಗ್ರೆಸ್ ನಾಯಕರು ತಮ್ಮ ಅನುಭವಗಳನ್ನು ವಿವರಿಸಿದ್ದಾರೆ. ಸರ್ಕಾರದವರು ಅಧಿಕಾರಯುತವಾದ ಪ್ರಕಟಣೆಯನ್ನು ಹೊರಡಿಸಿದ್ದಾರೆ. ಪತ್ರಿಕೆಗಳ ಸುದ್ದಿಗಾರರೂ ಸಹ ಪ್ರತ್ಯಕ್ಷವಾಗಿ ಪರಿಶೀಲನೆಗಳನ್ನು ಮಾಡಿ ವೃತ್ತಾಂತಗಳನ್ನು ವರದಿ ಮಾಡಿರುತ್ತಾರೆ. ಈ ವರದಿಗಳೆಲ್ಲವೂ ಸಾಮಾನ್ಯವಾಗಿ ಒಂದೇ ಮುಖವಾಗಿವೆಯೆಂದು ಹೇಳಬಹುದು.

ಈ ಪ್ರಕರಣವು ನಡೆದ ಅನೇಕ ದಿನಗಳ ಮೇಲೆ ಮುಸ್ಲಿಂ ಲೀಗಿನ ಸೂತ್ರಧಾರಿಗಳು ಹೊರಡಿಸಿರುವ ಪ್ರಕಟಣೆಯು ವಿರೋಧಾಭಾಸಗಳೆಡೆ ತುಂಬಿ ತುಳುಕುತ್ತಿದೆ. ಗಲಭೆಗಳಿಗಾಗಿ ಮೊದಲೇ ಸಿದ್ಧತೆ ಮಾಡಿಕೊಳ್ಳಲಾಗಿತ್ತೆಂದು ಈ ಪ್ರಕಟಣೆಯು ಸೂಚಿಸುತ್ತದೆ. ಕಾಂಗ್ರೆಸ್ಸಿನವರು ಈ ಸಿದ್ಧತೆಗಳಿಗಾಗಿ ಮೊದಲೇ ಏರ್ಪಾಡು ಮಾಡಿದ್ದರೆಂದೂ ಒಂದು ಅಭಿಪ್ರಾಯಪಟ್ಟಿರುತ್ತದೆ. ಆದುದರಿಂದ ಕಾಂಗ್ರೆಸ್ಸಿನವರು ಮಾಡಬೇಕೆಂದಿರುವ ಹೋರಾಟದ ಪರಿಣಾಮವು ಈಗ ಆಗಿರುವುದಾಗಿಯೂ ಅಭಿಪ್ರಾಯಪಟ್ಟಿರುತ್ತದೆ.

ಕಾಂಗ್ರೆಸ್ ನಾಯಕರುಗಳಾಗಲೀ, ಸರ್ಕಾರದವರಾಗಲೀ ಈ ಗಲಭೆಗಳನ್ನು ಯಾವ ಒಂದು ಕೋಮಿನವರ ಮೇಲೆಯೂ ಹೊರಿಸುವುದಿಲ್ಲ. ಗುಪ್ತವಾಗಿ ಅಡಗಿರುವ ಸಮಾಜದಲ್ಲಿ ಕೋಲಾಹಲವನ್ನೆಬ್ಬಿಸುವ ತುಂಟರ ತಂಡವೇ ಇದಕ್ಕೆ ಕಾರಣವೆಂದು ತಿಳಿಸಿರುತ್ತಾರೆ. ಇಂತಹ ಗಲಭೆಗಳಿಗೆ ಕೋಮುವಾರು ಬಣ್ಣವನ್ನು ಕಟ್ಟುವ ಪ್ರವರ್ತನೆಯನ್ನು ಮೇಲ್ಕಂಡವರು ತೋರಿಸದಿರುವುದು ಒಳ್ಳೆಯದೇ ಸರಿ. ಗಲಭೆ ಮಾಡುವ ಪುಂಡರು ಯಾವುದಾದರೊಂದು ಜಾತಿಗೆ ಸೇರಿದವರಾಗಿರಲೇಬೇಕು. ಆದರೆ ಅವರ ಕೃತ್ಯವನ್ನು ಅವರ ಜನಾಂಗಕ್ಕೆಲ್ಲಾ ಅನ್ವಯಿಸುವುದು ಉಚಿತವಲ್ಲ.

ಲೀಗಿನವರು ತಮ್ಮ ಪ್ರಕಟಣೆಯನ್ನು ಹೊರಡಿಸಲು ಇಷ್ಟು ಕಾಲವಿಳಂಬ ಮಾಡಿರುವುದು ಅರ್ಥವಿಲ್ಲದ ಅಂಶವಾಗಿದೆ. ಅವರು ಸ್ಥಳಕ್ಕೆ ಹೋಗಿ ವಿದ್ಯಮಾನಗಳನ್ನು ಅರಿತು ಪ್ರಕಟಣೆ ಹೊರಡಿಸಿದಂತೆ ಕಾಣುವುದಿಲ್ಲ. ಹಾಗಿಲ್ಲದಿದ್ದರೆ ಇತರರಂತೆ ಇವರೂ ಸಹ ಕೂಡಲೆ ಅಲ್ಲಿಗೆ ಹೋಗಿ ವಿಚಾರಗಳನ್ನು ತಿಳಿದು ವಾಸ್ತವಾಂಶಗಳನ್ನು ಜನರ ಮುಂದೆ ಇಡಬೇಕಾಗಿತ್ತು.

ಲೀಗಿನ ಮೇಲಾಗಲೀ, ಅದರ ನಾಯಕರುಗಳ ಮೇಲಾಗಲೀ ಇದುವರೆಗೆ ಯಾರೂ ಯಾವ ಆಪಾದನೆಯನ್ನೂ ಮಾಡಿರುವುದಿಲ್ಲ. ಹೀಗಿದ್ದರೂ ಕಾಂಗ್ರೆಸ್ಸಿನ ಮೇಲೆ ಅವರು ಆರೋಪಣೆಗಳನ್ನು ಮಾಡಿರುವುದು ಕೇವಲ ಅನುಚಿತವಾಗಿದೆ. ಕಾಂಗ್ರೆಸ್ಸಿನ ಧ್ಯೇಯ, ಧೋರಣೆಗಳೇನೆಂಬುದು ಎಲ್ಲರಿಗೂ ಗೊತ್ತು. ಹಿಂಸಾ ಕೃತ್ಯಗಳಿಗೆ ಕಾಂಗ್ರೆಸ್ಸಿನವರು ಉತ್ತೇಜನವೀಯುವುದಿಲ್ಲವೆಂಬುದನ್ನು ಸಕಲರೂ ಬಲ್ಲರು. ಅಹಿಂಸೆಯೇ ಕಾಂಗ್ರೆಸ್ಸಿನ ಕಾರ್ಯಸಾಧನಾ ಕ್ರಮವೆಂಬುದು ಲೀಗಿಗೂ ಗೊತ್ತು. ಹೀಗಿರುವಲ್ಲಿ ಕಾಂಗ್ರೆಸ್ಸಿನವರು ಗಲಭೆಗಾಗಿ ಪೂರ್ವಸಿದ್ಧತೆಗಳನ್ನು ಮಾಡಿಕೊಂಡಿದ್ದರೆಂದು ಹೇಳುವುದು ಅಕ್ಷಮ್ಯವಾದ ಅಪರಾಧ.

ಕಾಂಗ್ರೆಸ್ಸಿನವರು ಮಾಡುವ ಕೆಲಸಗಳನ್ನೆಲ್ಲಾ ಬಹಿರಂಗವಾಗಿ ಸಕಲರಿಗೂ ತಿಳಿಸಿ ಅನಂತರ ಮಾಡುತ್ತಾರೆ. ಯಾರಿಗೂ ತಿಳಿಯದೆ ಸಂದಿಯಲ್ಲಿ ಯಾವ ಕೆಲಸವನ್ನೂ ಮಾಡುವುದಿಲ್ಲ. ಶಾಂತಿಯಿಂದಲೂ, ಶಿಸ್ತಿನಿಂದಲೂ, ಅಹಿಂಸೆಯಿಂದಲೂ ಎಲ್ಲ ಕಾರ್ಯಕ್ರಮಗಳನ್ನೂ ಜರುಗಿಸಬೇಕೆಂದು ಅವರು ಸಾರುತ್ತಿದ್ದಾರೆ. ಹೀಗಿರುವಾಗ ಗಲಭೆಗೆ ಅವರು ಸಿದ್ಧತೆಗಳನ್ನು ಮಾಡಿದ್ದರೆಂದು ಹೇಳುವುದು ಅಕ್ರಮವಾದ ದೋಷಾರೋಪಣೆ. ಕಾಂಗ್ರೆಸ್ ನಾಯಕರುಗಳು ಮಾತಿನಲ್ಲಿಯಾಗಲೀ, ಬರವಣಿಗೆಯಲ್ಲಿಯಾಗಲೀ, ಅಥವಾ ಕಾರ್ಯದಲ್ಲಿಯಾಗಲೀ ಹಿಂಸಾ ಕೃತ್ಯಗಳಿಗೆ ಉತ್ತೇಜನವಿತ್ತಿರುವ ಒಂದು ಉದಾಹರಣೆಯನ್ನಾದರೂ ಲೀಗಿನವರು ಕೊಡಲು ಸಮರ್ಥರಾಗಿಲ್ಲವೆಂದು ನಾವು ಧಾರಾಳವಾಗಿ ಹೇಳಬಲ್ಲೆವು. ಪರಸ್ಪರ ದ್ವೇಷಾಸೂಯೆಗಳನ್ನು ಹೆಚ್ಚಿಸುವ ಈ ಬಗೆಯ ಪ್ರಕಟಣೆಗಳನ್ನು ನಿಲ್ಲಿಸಿ ಇನ್ನು ಮುಂದೆ ಎಲ್ಲರೂ ಕಲೆತು ಸಾರ್ವಜನಿಕ ಶಾಂತಿಯನ್ನು ಸಂರಕ್ಷಿಸುವುದರಲ್ಲಿ ಬದ್ಧಕಂಕಣರಾಗುವುದು ಮೇಲು.

ಅ|| ಪೋಲೀಸ್ ಕಮಿಷನರ ಮೇಲೆ ಮೊಕದ್ದಮೆ

ಸ್ವ. ಸು.] ಬೆಂಗಳೂರು. ೨೬

ಧರ್ಮರತ್ನಾಕರ ಬಿ ಎಸ್. ಗೋಪಾಲರಾಯರಿಗೆ ಮೋಸ ಪಡಿಸಿದರೆಂಬ ಆಪಾದನೆ ಮೇಲೆ ದಸ್ತಗಿರಿ ಮಾಡಲ್ಪಟ್ಟಿದ್ದ ದಂಡಿನ ಅಸಿಸ್ಟೆಂಟ್ ಪೋಲೀಸ್ ಕಮಿಷನರಾದ ಎಸ್. ಸರ್ವೋತ್ತಮರಾವ್, ಆರ್. ಮೋಸೆಸ್ ಮತ್ತು ಬೆಳಗಾಂವಾಲಾ ಇವರುಗಳ ಮೇಲೆ ಸಿಟಿ ಪೋಲೀಸರು ನಗರದ ನ್ಯಾಯಾಧೀಶರ ಕೋರ್ಟಿನಲ್ಲಿ ಛಾರ್ಜ್ ಷೀಟ್ ದಾಖಲು ಮಾಡಿರುತ್ತಾರೆ. ಆಪಾದಿತರುಗಳೂ ಗೋಪಾಲರಾಯರೂ, ದಂಡಿನ ಮನೆಯೊಂದರಲ್ಲಿ ೭-೧೨-೪೬ರ ದಿನ ಸಭೆ ಸೇರಿದ್ದರು; ಅಲ್ಲಿಂದ ಅವರನ್ನು ಸರ್ವೋತ್ತಮರಾಯರ ಮನೆಗೆ ಕರೆದುಕೊಂಡು ಹೋಗಿ, ಅವರನ್ನು ಕೊಲೆ ಮಾಡುವುದಾಗಿ ಹೆದರಿಸಿ ಅವರಿಂದ ಒಂದು ಕಾಗದವನ್ನು ಬರೆಸಿಕೊಂಡು ಕೆಲವು ಖಾಲಿ ಕಾಗದಗಳಲ್ಲಿ ಅವರ ಸಹಿ ಹಾಕಿಸಿಕೊಂಡರು. ಅದೇ ದಿನ ಅವರಿಗೆ ಹೆದರಿಕೆ ತೋರಿಸಿ ಅವರ ಮನೆಯಿಂದ ೧ ಲಕ್ಷ ರೂ. ಬಾಳುವ ನಗನಾಣ್ಯಗಳನ್ನು ಕಸಿದು ಕೊಂಡರು. ಗೋಪಾಲರಾಯರಿಂದ ಒತ್ತಾಯ ಪೂರ್ವಕವಾಗಿ ಬರೆಸಿ ಕೊಂಡ ಖಾಲಿ ಕಾಗದದಲ್ಲಿ ನಗನಾಣ್ಯಗಳ ವಿವರಗಳನ್ನೆಲ್ಲಾ ವಿವರವಾಗಿ ಬರೆದಿರುತ್ತಾರೆ ಎಂದು ಆಪಾದಿಸಲಾಗಿದೆ. ಆಪಾದಿತರುಗಳು ಜಾಮೀನಿನ ಮೇಲೆ ಬಿಡುಗಡೆ ಮಾಡಲ್ಪಟ್ಟಿದ್ದಾರೆ. ಮೊಕದ್ದಮೆಯನ್ನು ಬರುವ ಜನವರಿ ೨ನೇ ತಾರೀಖಿಗೆ ಹಾಕಲಾಗಿದೆ.

ಕಾನೂನಿಗೆ ವಿರೋಧವಾ ಪಶುವಧೆ

ಮೈಸೂರು ಸ್ಲಾಟರ್ ಹೌಸಿನಲ್ಲಿ ಚ ವಯಸ್ಸಿನ ಹಸು, ಎತ್ತು, ಎಮ್ಮೆ, ಕೋ ಇವುಗಳನ್ನು ವಧೆಮಾಡುತ್ತಿದ್ದಾರೆ. ಅಲ್ಲ ಆದಿಕರ್ನಾಟಕಪುರಂ ಹತ್ತಿರವಿರುವ ಆ ದ್ರಾವಿಡರ ಕೇರಿಗಳಲ್ಲೂ, ರೈಲ್ವೆ ವರ್ಕ್ ಷಾಪ್ ಹತ್ತಿರವಿರುವ ಆದಿದ್ರಾವಿಡರ ಕೇ ಯಲ್ಲೂ, ದೊಡ್ಡ ಜೈಲ್ ಹಿಂಭಾಗದ ರುವ ಆದಿದ್ರಾವಿಡರ ಕೇರಿಯಲ್ಲೂ ಕಾನೂ ನಿಗೆ ವಿರೋಧವಾಗಿ ಪಶುವಧೆ ನಡೆಯು ತ್ತಿದೆ. ಮೇಲ್ಕಂಡ ಕೇರಿಗಳಲ್ಲಿ ಸುಮಾ ಆರವತ್ತು ಕೋಣಗಳ ಬಲಿಯು ಜ ೧-೪೭ ರಲ್ಲಿ ನಡೆಯಲಿದೆ. ಇಂತ ಕೃತ್ಯಗಳನ್ನು ಸರ್ಕಾರದವರೂ ಸಾರ್ವಜ ಕರೂ ಗಮನ ಕೊಟ್ಟು ತಪ್ಪಿಸಬೇಕಾ ವಿನಂತಿ

ಬಿ. ಎಂ. ಎ. ಖಾದರ್,
ದೇವ್ರಾ

ಬೊಂಬಾಯಿನಲ್ಲಿ ವಸತಿ ಸೌಕರ್ಯ

ಮನೆಗಳ ಅಭಾವವನ್ನು ತಪ್ಪಿಸುವ ಸ ಲುವಾಗಿ ಬೊಂಬಾಯಿ ಸರ್ಕಾರವು ಕೈಗಾರಿಕಾ ಸಂಸ್ಥೆಗಳಲ್ಲಿ ಕೆಲಸ ಮಾಡುವ ನೌಕರರಿಗೆಲ್ಲಾ ಮನೆಗಳನ್ನು ನಿರ್ಮಿಸಿಕೊಡಲು ಆಜ್ಞೆಯಿತ್ತಿರುತ್ತದೆ. ಸರ್ಕಾರಿ ನೌಕರಿಯಲ್ಲಿರುವವರಿಗೆ ಸರ್ಕಾರದವರೇ ವಸತಿಗೃಹಗಳನ್ನು ನಿರ್ಮಿಸುವರು. ಗೃಹನಿರ್ಮಾಣಕ್ಕಾಗಿ ಮಿಲಿಟರಿಯವರಲ್ಲಿದ್ದ ಸಾಮಾನುಗಳನ್ನೆಲ್ಲಾ ಸರ್ಕಾರವು ಪಡೆದಿರುತ್ತದೆ.

ಶ್ವಾಸಕೋಶದಲ್ಲಿ ಮೊಳೆ

ಮೆಲ್‌ಬೋರ್ನಿನ ಮಿಸ್ ಶಿರ್ಲಿ ಕ್ನೈರ್ ಎಂಬ ೧೬ ವರ್ಷದ ಹುಡುಗಿಯು ಹದಿಮೂರು ವರ್ಷಗಳ ಹಿಂದೆ ತನ್ನ ಚಿಕ್ಕ ವಯಸ್ಸಿನಲ್ಲಿ ಒಂದು ಮೊಳೆಯನ್ನು ನುಂಗಿದುದಾಗಿಯೂ ಇದುವರೆವಿಗೂ ಅದು ಕಂಡುಹಿಡಿಯಲ್ಪಟ್ಟಿರಲಿಲ್ಲವೆಂದೂ ವರದಿಯಾಗಿದೆ. ಅಮೇರಿಕಕ್ಕೆ ಹೋಗಿ ಅಲ್ಲಿನ ಸುಪ್ರಸಿದ್ಧ ವೈದ್ಯರೊಬ್ಬರಿಂದ ಆಪರೇಷನ್ ಮಾಡಿಸಿ ಶ್ವಾಸಕೋಶದಲ್ಲಿ ಸೇರಿರುವ ಈ ಮೊಳೆಯನ್ನು ತೆಗೆಸಿಕೊಳ್ಳಲು ಆಕೆಗೆ ೨೫೦೦ ಸ್ಟರ್ಲಿಂಗುಗಳನ್ನು ಚಂದಾ ಎತ್ತಿ ಕೊಡಲಾಗಿದೆ.

Edited, printed and published by A. R. Nagarajan at the Sadhvi Press D Subbiah Road, Mysore.

ಅಪೆರಾ ಟಾಕೀಸ್

ನಾರದ-ನಾರದಿ
(ತೆಲುಗು ಚಿತ್ರ)
27-12-46ರಿಂದ ಎರಡನೇ ವಾರ

lorningshows from 26-12-46
he Bridge of
SAN LUIS REY
—: Stars :—
ynn Bari, Akim, Tami Roff
Francis Lederer

ಕ್ರಿಸ್ಮಸ್ ಹಬ್ಬಕ್ಕಾಗಿ
ಹೊಸ ನಮೂನೆ
ಜವಳಿಗಳು
ಬಂದಿವೆ ಇಂದೇ ಭೇಟಿ ಕೊಡಿ.
ಬಿ. ಕೆಂಚಪ್ಪ ಸನ್ಸ್,
ಜವಳಿ ಅಂಗಡಿ,
ದೊಡ್ಡಪೇಟೆ, ಮೈಸೂರು

WANTED

Wanted Financial partner for a well-reputed firm in Mysore City. The firm is a running concern

Apply to Box no 5,
C/o "SADHVI,"
Mysore

ರಾಜಕಮಲ್, ಮೈಸೂರು

೨೭-೧೨-೪೬ ರಿಂದ ಪ್ರತಿ ದಿನ ೩ ಆಟಗಳು

ವಿಶ್ವಕರ್ನಾಟಕ, ಪ್ರಜಾಮತ, ಜನವಾಣಿ, ದೇಶಬಂಧು ಮುಂತಾದ ಮೈಸೂರು ಪತ್ರಿಕೆಗಳು ಪ್ರಶಂಸಿಸಿರುವ ರಾಮರಾಜ್ಯದ ಮಧುರಗಾಯಕಿ
ರಂಜನಾ ನಟಿಸಿರುವ
ಪ್ರಕಾಶ್ ಪಿಕ್ಚರ್ಸ್‌ರವರ
ಅತ್ಯಂತ ಅಮೋಘವಾದ
ಹಮಾರ ಸಂಸಾರ್
ಭೂಮಿಕೆ:-ಉಮಾಕಾಂತ್, ಜಿಲ್ಲು ಮುಂತಾದವರು

From 27-12-46 for 7 days. Daily at 10-30 a.m.
Alexander Korda's "Elephant Boy"
With:— Mysore Sabu and others.

ರೀ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶನಿವಾರ ೨೮—೧೨—೪೬ [ಸಂಚಿಕೆ ೧೫೨

ಕೆ. ಹನುಮಂತಯ್ಯನವರು ದಸ್ತಗಿರಿ ಮಾಡಲ್ಪಟ್ಟರು

ಚೀಣಾದಲ್ಲಿ ಹೊಸ ರಾಜ್ಯಾಂಗ ವ್ಯವಸ್ಥೆ

ಚೀಣಾ ದೇಶದ ರಾಜ್ಯಾಂಗ ರಚನಾ ಸಭೆಯು ಪಾಶ್ಚಿಮಾತ್ಯ ಪ್ರಜಾಪ್ರಭುತ್ವ ಮತ್ತು ಡಾ|| ಸನ್‌ಯಾತ್ ಸೇನರ ತತ್ವಗಳನ್ನೊಳಗೊಂಡ ಹೊಸ ರಾಜ್ಯಾಂಗ ವ್ಯವಸ್ಥೆಯನ್ನು ಸರ್ವಾನುಮತದಿಂದ ಅಂಗೀಕರಿಸಿತು. ಸಭೆಯಲ್ಲಿ ೧೪೮೫ ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಹೊಸ ರಾಜ್ಯಾಂಗ ೧೯೪೭ನೇ ಡಿಸೆಂಬರ್ ೨೫ರಿಂದ ಜಾರಿಗೆ ಬರುವುದು. ಈ ಮಧ್ಯೆ ಚುನಾವಣೆಗಳು ನಡೆಯಲಿವೆ. ಇದನ್ನು ಜಾರಿಗೆ ತಪ್ಪದೆ ನಡೆಸಿಕೊಂಡು ಬರುವುದಾಗಿ ಚಿಯಾಂಗ್ ಕೈಷೇಕರು ಭರವಸೆ ಇತ್ತಿದ್ದಾರೆ.

ಆಜ್ಮೋಲ್ಲಂಖಾನನಿಗೆ ಒಂದಾಣೆ ದಂಡ

ಫಿರೋಜ್‌ಪುರದಲ್ಲಿ ೧೪೪ನೇ ಕಲಮಿನ ಪ್ರಕಾರ ಹಾಕಲಾಗಿದ್ದ ಪ್ರತಿಬಂಧಕಾಜ್ಞೆಯನ್ನು ವಿರೋಧಿಸಿ ನಗರ ಕಾಂಗ್ರೆಸ್ ಸಮಿತಿಯವರು ಕಳೆದ ನವಂಬರ್ ೧೩ನೇ ತಾ|| ಪಂ|| ಮದನಮೋಹನ ಮಾಳವೀಯರ ನಿಧನದ ಬಗ್ಗೆ ಸಂತಾಪ ಸೂಚನಾ ಸಭೆಯನ್ನು ಜರುಗಿಸಿದರೆಂದು ಅಲ್ಲಿನ ಸ್ಪೆಷಲ್ ಮ್ಯಾಜಿಸ್ಟ್ರೇಟರು ೭ ಮಂದಿ ಕಾಂಗ್ರೆಸ್ಸಿಗರಿಗೆ ತಲಾ ಒಂದಾಣೆ ದಂಡವನ್ನು ವಿಧಿಸಿದ್ದಾರೆ.

ಚನ್ನಪಟ್ಟಣದಲ್ಲಿ ೪೨ ಜನರ ದಸ್ತಗಿರಿ

ಚನ್ನಪಟ್ಟಣದಲ್ಲಿ ಈಗ ಶಾಂತಿ ನೆಲೆಸಿದೆ. ಯಾವ ವಿಧವಾದ ಗಾಬರಿಗೂ ಎಡೆ ಇಲ್ಲ. ಕೆಲವು ದಿನಗಳ ಹಿಂದೆ ನಡೆದ ಘಟನೆ ಬಗ್ಗೆ ಇದುವರೆವಿಗೆ ೪೨ ಜನರ ದಸ್ತಗಿರಿಯಾಗಿರುವುದಾಗಿ ತಿಳಿದುಬಂದಿದೆ.

ಆಂಗ್ಲೇಯನು ಮುಸ್ಲಿಂ ಪಾದ್ರಿಯಾದನು

ಬ್ರಿಸ್ಟಲಿನಲ್ಲಿ ಗುಮಾಸ್ತೆಯಾಗಿದ್ದು ನಂತರ ಜಾರರ್ರೇಯ ಸೈನ್ಯದಲ್ಲಿ ಲೆಫ್ಟಿನೆಂಟ್ ಆಗಿದ್ದ ಬ್ರಿಯಾನ್ ಆರ್ಚರ್ಡ್ ಎಂಬ ಆಂಗ್ಲೇಯನು ಮುಸ್ಲಿಂ ಪಾದ್ರಿಯಾಗಿ ಪರಿವರ್ತಿತನಾಗಿದ್ದಾನೆ. ಇವನ ಹೊಸ ಹೆಸರು ಬಶೀರ್ ಅಹಮದ್ ಆರ್ಚರ್ಡ್.

ಭದ್ರಣ್ಣನವರ ನಿಧನ

ಸ್ವಂ. ಸು. ಫೋ] ಬೆಂಗಳೂರು ೨೮

ಪೌರವಾಣಿ ಪತ್ರಿಕೆಯ ಸಂಪಾದಕರೂ, ಸುಪ್ರಸಿದ್ಧ ಕಾಂಗ್ರೆಸ್ ಕೆಲಸಗಾರರೂ ಆಗಿದ್ದ ಶ್ರೀ ಆರ್. ವಿ. ಭದ್ರಣ್ಣನವರು ಈ ದಿನ ಸಾಂಕ್ರಾಮಿಕ ರೋಗಗಳ ಆಸ್ಪತ್ರೆಯಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ಅತ್ಯಂತ ವಿಷಾದಿಸುತ್ತೇವೆ. ಇವರು ಕೆಲವು ದಿನಗಳ ಕೆಳಗೆ ಮುಚ್ಚುನಾಯಿಯಿಂದ ಕಡಿಯಲ್ಪಟ್ಟು ಚಿಕಿತ್ಸೆಯಲ್ಲಿದ್ದರು. ಇವರು ಪ್ರಗತಿಗಾಮಿಗಳೂ, ನಿಸ್ವಾರ್ಥ ದೇಶಸೇವಕರೂ ಆಗಿದ್ದರು. ಇವರ ನಿಧನದಿಂದ ಕಾಂಗ್ರೆಸ್ಸಿಗೂ, ದೇಶಕ್ಕೂ ಅಪಾರ ನಷ್ಟವುಂಟಾಗಿರುತ್ತದೆ. ಅವರ ಕಳೇಬರವನ್ನು ದೊಡ್ಡ ಮೆರವಣಿಗೆಯಲ್ಲಿ ಸ್ಮಶಾನಕ್ಕೆ ಕೊಂಡೊಯ್ಯಲಾಯಿತು.

ಶ್ರೀ ಭದ್ರಣ್ಣನವರ ಬಂಧುವರ್ಗದವರಿಗೆ ನಮ್ಮ ಹೃತ್ಪೂರ್ವಕವಾದ ಅನುತಾಪಗಳು. ಮೃತರ ಆತ್ಮಕ್ಕೆ ಶಾಂತಿ ದೊರೆಯಲೆಂದು ಭಗವಂತನನ್ನು ನಾವು ಪ್ರಾರ್ಥಿಸುತ್ತೇವೆ.

ರಾಜದ್ರೋಹಕ್ಕಾಗಿ ಶ್ರೀ ಹನುಮಂತಯ್ಯನವರ ದಸ್ತಗಿರಿ

ಸ್ವಂ. ಸು. ಫೋ] ಬೆಂಗಳೂರು ೨೮

ಗುಂಜೂರಿನಲ್ಲಿ ಮಾಡಿದ ಭಾಷಣವು ರಾಜದ್ರೋಹಕರವಾಗಿತ್ತೆಂಬ ಆಪಾದನೆಯ ಮೇಲೆ ಪ್ರ|| ಪ್ರ|| ಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಕೆ. ಹನುಮಂತಯ್ಯನವರನ್ನು ನಿನ್ನೆ ರಾತ್ರಿ ಡಿ.ಎಸ್.ಪಿ. ಯವರು ದಸ್ತಗಿರಿ ಮಾಡಿ ಸೆಂಟ್ರಲ್ ಜೈಲಿಗೆ ಕೊಂಡೊಯ್ದರು. ನಾಲ್ಕನೇ ತಾ|| ಗೆ ಅವರ ಮೇಲಿನ ಮೊಕದ್ದಮೆ ವಿಚಾರಣೆಗಿದೆ.

ಉಪಾಧ್ಯಕ್ಷರ ಚುನಾವಣೆ

ಮೈಸೂರು ೨೮

ಜನವರಿ ೩ರಿಂದ ಪುನರ್ರಚಿತವಾಗಲಿರುವ ಪ್ರಜಾಸಭಾ ಉಪಾಧ್ಯಕ್ಷ ಸ್ಥಾನಕ್ಕೆ ಜನವರಿ ೧೩ನೇ ತಾ|| ಪ್ರಜಾಸಭಾ ವಿಶೇಷ ಅಧಿವೇಶನದಲ್ಲಿ ಚುನಾವಣೆಯು ನಡೆಯಲಿದೆ. ಉಮೇದುವಾರಿಕೆ ಸೂಚಿಸಲು ಜನವರಿ ೯ನೇ ತಾ|| ೫ ಗಂಟೆಯೇ ಅಖೈರು ದಿನ.

ಆತ್ಮಹತ್ಯೆ

ಅಮೃತಮಹಲ್ ಸೂಪರಿಂಟೆಂಡೆಂಟರಾಗಿದ್ದ ದಿ|| ಸಿ. ವೆಂಕಟರಾವ್‌ರವರ ಪತ್ನಿ ಶ್ರೀಮತಿ ಭಾರತಿಬಾಯಿಯವರು ಈ ದಿನ ಇಲನಾಲ ರಸ್ತೆಯಲ್ಲಿರುವ ತಮ್ಮ ಮನೆಯ ಕೊಠಡಿಯಲ್ಲಿ ನೇಣುಹಾಕಿಕೊಂಡು ಪ್ರಾಣ ಬಿಟ್ಟರೆಂದೂ, ದೇವನಾಜ ಪೊಲೀಸರು ಮಹಜರ್ ನಡೆಸಿ ಮೃತ ದೇಹವನ್ನು ಪೋಸ್ಟ್ ಮಾರ್ಟಂ ಮಾಡಲು ಕಳುಹಿಸಿದ್ದರೆಂದೂ ತಿಳಿದುಬಂದಿದೆ. ಮೃತರಿಗೆ ೪೮ ವರ್ಷ ವಯಸ್ಸಾಗಿತ್ತು. ಅವರಿಗೆ ಸ್ವಲ್ಪ ಬುದ್ಧಿ ಭ್ರಮಣೆಯಾಗಿತ್ತೆಂದೂ ಹೇಳಲಾಗಿದೆ.

ಮೌ|| ಆಜಾದರು ಕೇಂದ್ರ ಸರ್ಕಾರದ ಮಂತ್ರಿಗಳು

ಮಿ|| ಅಸಫ್ ಅಲಿಯವರ ಸ್ಥಾನದಲ್ಲಿ ಕೇಂದ್ರ ಸರ್ಕಾರದ ಮಂತ್ರಿಗಳಾಗಿ ಮೌಲಾನಾ ಆಜಾದರು ನೇಮಕ ಮಾಡಲ್ಪಟ್ಟಿದ್ದಾರೆಂದು ಪ್ರಕಟಿಸಲಾಗಿದೆ.

ಗಂಟೆಗೆ ೧೭೦೦ ಮೈಲಿ ಹೋಗುವ ರಾಕೆಟ್ ವಿಮಾನ

ಅಮೇರಿಕ ಸೈನ್ಯದ ವೈಮಾನಿಕ ಶಾಖೆಯವರು ಹೊಸ ರಾಕೆಟ್ ವಿಮಾನವೊಂದನ್ನು ಕಂಡು ಹಿಡಿದಿದ್ದಾರೆ. ಇದರಲ್ಲಿ ೧೧೦೦ ಪೌಂಡು ಪೆಟ್ರೋಲ್ ಇಟ್ಟುಕೊಳ್ಳಬಹುದು. ಇದು ೩೧ ಅಡಿ ಉದ್ದವಾಗಿದೆ. ರೆಕ್ಕೆಗಳು ೨೮ ಅಡಿ ಉದ್ದವಾಗಿವೆ. ಗಂಟೆಗೆ ೧೭೦೦ ಮೈಲಿ ವೇಗದಲ್ಲಿ ಹೋಗುತ್ತದೆ— ಎಂದು ವರದಿಯಾಗಿದೆ.

ದೌಲತ್

ಭಾರತದ ಬಂಧ ವಿಮೋಚನೆಯ ಮಹಾಯುದ್ಧದಲ್ಲಿ ಪ್ರಥಮ ತರಗತಿಗೆ ಸೇರಿದ ಪರಾಕ್ರಮಶಾಲಿಯೊಂದು ಆಧುನಿಕ ರಾಜಕೀಯವಾದಿಗಳು ಮುಕ್ತ ಕಂಠದಿಂದ ಹೊಗಳುತ್ತಿರುವ ವೀರ ಟಿಪ್ಪುಸುಲ್ತಾನನನ್ನು ಕಥಾನಾಯಕನನ್ನಾಗಿ ಆರಿಸಿಕೊಂಡು ರಚಿತವಾಗಿರುವ 'ದೌಲತ್' ಎಂಬ ಕನ್ನಡ ಪುಸ್ತಕದ ೩ನೇ ಭಾಗವನ್ನು ಆದರದಿಂದ ಸ್ವೀಕರಿಸಿದ್ದೇವೆ.

ಇದೇ ಕಥೆಯು ಸಂಗ್ರಾಮ ಜೀವನದ ವೀರ ವರ್ಣನೆಯಿಂದ ತುಂಬಿ ತುಳುಕುತ್ತಿದೆ. ರಣಕ್ಕಾಗಿಯೇ ಹುಟ್ಟಿ, ರಣೋತ್ಸಾಹದಿಂದ ಬದುಕಿ, ರಣಕ್ಷೇತ್ರದಲ್ಲಿ ಪರಾಕ್ರಮದಿಂದ ಹೋರಾಡಿ ವೀರಸ್ವರ್ಗವನ್ನೇರಿದ ಮೈಸೂರಿನ ವೀರ ಮಣಿಗಳ ಕಥೆಯೇ ಇದಾಗಿದೆ.

ವಿಶ್ವವಿಖ್ಯಾತ ನೇತಾಜಿ ಸುಭಾಷ್ ಚಂದ್ರಬೋಸರೂ ಕೂಡ ಟಿಪ್ಪುಸುಲ್ತಾನನಿಗೆ ಅಗ್ರಸ್ಥಾನವನ್ನಿತ್ತು ಅವನನ್ನು ಮನಸಾರ ಹೊಗಳಿದ್ದಾರೆ. ಅಂತಹವನ ಜೀವನ ಚರಿತ್ರೆಯನ್ನು ರಚಿಸುವ ಕಾರ್ಯ ಸುಲಭಸಾಧ್ಯವಲ್ಲ. ಶ್ರೀ ವೀರಕೇಸರಿ ಸೀತಾರಾಮ ಶಾಸ್ತ್ರಿಗಳ ಅವಿಶ್ರಾಂತ ದುಡಿಮೆಯ ಫಲವಾಗಿ ಈ ಕಾರ್ಯವು ಸಫಲವಾಗಿದೆ. ಶ್ರೀ ವೀರಕೇಸರಿಯವರ ಪ್ರತಿಭೆ, ಪಾಂಡಿತ್ಯ, ಅನುಭವಗಳು ಸಕಲರಿಗೂ ವೇದ್ಯವಾಗಿಯೇ ಇವೆ.

ಈ ಪುಸ್ತಕದ ಮೊದಲನೇ ಎರಡು ಭಾಗಗಳು ಈಗಾಗಲೇ ಹೊರಬಿದ್ದು ಪ್ರಖ್ಯಾತವಾಗಿವೆ. ಮೂರನೇ ಭಾಗವು ಈಗತಾನೇ ಪ್ರಕಟವಾಗಿದೆ. ಕಥಾಭಾಗ, ಭಾಷಾ ಶೈಲಿ ಇವುಗಳನ್ನು ವಾಚಕರೇ ಓದಿ ಆದರಿಸತಕ್ಕದ್ದು. ಅವ್ಯಕ್ತವಾದ ಮಾಡಬೇಕಾಗಿ ನಮ್ಮ ಪ್ರಾರ್ಥನೆ. ಬೆಂಗಳೂರು ಬಸವನಗುಡಿ ವೀರಕೇಸರಿ ಪ್ರಕಟಣಾಲಯದಿಂದ ಹೊರಬಿದ್ದಿದೆ. ೨೫೦ ಪುಟಗಳಿಂದ ಕೂಡಿದೆ. ಬೆಲೆ ಕೇವಲ ೨-೮-೦ ರೂ

ಬ್ರಿಟಿಷರು ಭಾರತವನ್ನು ಬಿಟ್ಟುಹೋಗಲು ಯೋಚಿಸುತ್ತಿರುವಾಗ ಆ ಮಹತ್ಕಾರ್ಯಕ್ಕೆ ಅಂಕುರಾರ್ಪಣ ಮಾಡಿದ ವೀರನ ಕಥಾಭಾಗವನ್ನು ಪ್ರತಿ ಭಾರತೀಯನೂ ಓದಲೇಬೇಕು.

ಮಹಾತ್ಮರ ರಕ್ಷಣೆಗೆ ಬಂಗಾಳ ಸರ್ಕಾರದ ಏರ್ಪಾಡು

ನೌಖಾಲಿ ಜಿಲ್ಲೆಯ ಗಲಭೆಗೊಳಗಾದ ಪ್ರದೇಶಗಳಲ್ಲಿ ಮಹಾತ್ಮ ಗಾಂಧಿಯವರು ಕೈಗೊಳ್ಳುವ ಕಾಲ್ನಡಿಗೆಯ ಪ್ರವಾಸಕಾಲದಲ್ಲಿ ಅವರ ರಕ್ಷಣೆಗಾಗಿ ಬಂಗಾಳ ಸರ್ಕಾರದವರು ವಿಶೇಷ ಏರ್ಪಾಡುಗಳನ್ನು ಕೈಗೊಳ್ಳುವರು. ಈ ಎಚ್ಚರಿಕೆ ಕ್ರಮಗಳಿಂದ ಗಾಂಧಿಜಿಯವರು ಅನ್ಯಥಾ ಭಾವಿಸುವುದಿಲ್ಲವೆಂಬ ನಂಬಿಕೆ ತಮಗಿರುವುದಾಗಿ ಪ್ರಧಾನಿ ಸುಹ್ರವರ್ದಿಯವರು ತಿಳಿಸಿದ್ದಾರೆ. ಹಿಂದೂಗಳಿಗೂ, ಮುಸ್ಲಿಮರಿಗೂ ಅಭಯವನ್ನು ಕಲ್ಪಿಸಬೇಕೆಂದು ಮಹಾತ್ಮರಂತೆಯೇ ಬಂಗಾಳ ಸರ್ಕಾರವೂ ಕಾತುರಗೊಂಡಿದೆ ಎಂದೂ ಅವರು ಹೇಳಿದ್ದಾರೆ.

ಮೂಗೂರು ಕರ್ಣಾಟಕ ಬ್ರಾಹ್ಮಣರ ಸಭೆ

ಚಾಮರಾಜ ನಗರದ ತಾ|| ಬದನಗುಪ್ಪೆಯಲ್ಲಿ ಮೂಗೂರು ಕರ್ಣಾಟಕ ಬ್ರಾಹ್ಮಣರು ಪ್ರಜಾ ಪ್ರತಿನಿಧಿ ಸಭಾ ಸದಸ್ಯರಾದ ಶ್ರೀ ಎಲ್. ವೆಂಕಟನಾರಣಪ್ಪನವರ ಅಧ್ಯಕ್ಷತೆಯಲ್ಲಿ ಮೊನ್ನೆ ಸಭೆ ಸೇರಿ ಚಾಮರಾಜನಗರದ ವೇದ ಪಾಠಶಾಲೆಗೆ ಹಳೇ ನಾಡು ಕರ್ಣಾಟಕ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ಆಜ್ಞೆ ಮಾಡಿರುವ ಸರ್ಕಾರದವರನ್ನೂ ಸಂಬಂಧಪಟ್ಟ ಇತರರನ್ನೂ ವಂದಿಸಿದ್ದಾರೆ.

೮ ಸಾವಿರ ವಿವಾಹ ವಿಚ್ಛೇದನಗಳು

ಕಳೆದ ಹತ್ತು ವಾರಗಳಲ್ಲಿ ೮ ಸಾವಿರ ವಿವಾಹವಿಚ್ಛೇದನದ ಅರ್ಜಿಗಳು ಲಂಡನ್ನಿನ ಕೋರ್ಟಿನಲ್ಲಿ ದಾಖಲಾಗಿವೆ. ಪ್ರತಿ ವಿಚ್ಛೇದನದ ಅವಧಿಯು ಸರಾಸರಿ ೧೦ ನಿಮಿಷಗಳೆಂದು ಹೇಳಲಾಗಿದೆ.

ಮೈಸೂರು ಸಿಟಿ ರೇಷನಿಂಗ್

No R 6-81—46 and R 1-188—46-47

ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ ಮೊದಲ್ಗೊಂಡು ಸಬ್ ಗೋಡೌನ್, ಪರ್ಮಿಟ್‌ದಾರರ ಡಿಪೋ ಮತ್ತು ಸಹಕಾರ ಸಂಘಗಳು ಸಹಾ ಈ ಕೆಳಗೆ ಕಂಡ ತಾರೀಖಿನಲ್ಲಿ ನಮೂದಿಸಿರುವ ಕಾರಣಗಳ ಪ್ರಯುಕ್ತ ಡಿಪೋಗಳು ಮುಚ್ಚಲ್ಪಡುತ್ತವೆ.

ತಾ|| 31-12-46 ನೇ ಮಂಗಳವಾರ ದಿನಸಿಗಳ ಎಣಿಕೆಗಾಗಿ

ತಾ|| 1-1-47 ನೇ ಬುಧವಾರ ನೂತನ ವರ್ಷಾರಂಭ ದಿವಸಕ್ಕಾಗಿ

(ಸಹಿ) ಅಬ್ದುಲ್ ರಜಾಕ್,
ರೇಷನಿಂಗ್ ಆಫೀಸರ್,
ಮೈಸೂರು.

ಮೈಸೂರು.
22-12-946.

ಅಪೆರಾ ಟಾಕೀಸ್
ನಾರದ-ನಾರದಿ

(ತೆಲುಗು ಭಾಷೆ)

27-12-46ರಿಂದ ಎರಡನೇ ವಾರ

Morningshows from 26-12-46

the Bridge of

SAN LUIS REY

:: Stars :—

Lynn Bari, Akim, Tami Roff
Francis Lederer

ಸಾಧ್ವಿ

ತಾ|| ೨೮-೧೨-೪೬ ಶನಿವಾರ

ಬಂಗಾಳದ ವಕ್ರ ಮಾರ್ಗ

ಈಗ ರಚಿತವಾಗಿರುವ ಭಾರತ ಕೇಂದ್ರ ಸರ್ಕಾರವು ಒಂದು ಸುಸಂಘಟಿತವಾದ ಮಿಶ್ರ ಮಂತ್ರಿಮಂಡಲವಲ್ಲವೆಂಬುದು ಜಗತ್ತಿಗೆ ಸಾರಲು ಮುಸ್ಲಿಂ ಲೀಗಿನವರು ಸರ್ವಪ್ರಯತ್ನಗಳನ್ನೂ ಮಾಡುತ್ತಿರುವರು. ಈ ವರ್ತನೆಯಿಂದ ತಮ್ಮ ಜನರಿಗೂ, ಇತರ ಪ್ರಜೆಗಳಿಗೂ ಎಷ್ಟು ಹಾನಿಯು ಉಂಟಾಗುತ್ತಿರುವುದೆಂಬುದನ್ನು ಸಹ ಅವರು ಲೆಕ್ಕಿಸುತ್ತಿಲ್ಲ. ಬಂಗಾಳ ಮತ್ತು ಬಿಹಾರ್ ಪ್ರಾಂತಗಳ ವಿಷಯದಲ್ಲಿ ಕೇಂದ್ರ ಸರ್ಕಾರದ ಮಂತ್ರಿಗಳಿಗಿರುವ ವಿಶೇಷವಾದ ಭಿನ್ನಾಭಿಪ್ರಾಯಗಳು ಶಾಸನ ಸಭೆಗಳ ವೇದಿಕೆಗಳಿಂದಲೂ ಹೊರಬಿದ್ದುವು. ಜೊತೆಗಂತೂ ಲೀಗಿನ ಮಂತ್ರಿಗಳು ಕಾಂಗ್ರೆಸ್ಸಿನವರ ಕಾರ್ಯಕ್ರಮಗಳಿಗೆ ಸಂಪೂರ್ಣ ವ್ಯತಿರೇಕವಾಗಿ ಹೋಗುತ್ತಿರುವುದೇ ಎದ್ದು ಕಾಣುತ್ತಿದೆ.

ಬಂಗಾಳಾ ಪ್ರಾಂತ್ಯವು ಈಗಲೇ ಸ್ವೇಚ್ಛೆಯಿಂದ ವರ್ತಿಸುವ ಸೂಚನೆಯನ್ನು ಕೊಟ್ಟಿರುತ್ತದೆ. ಹಿಂದೂಸ್ಥಾನದಲ್ಲಿರುವ ಬಿಳಿಯ ಸಿವಿಲ್ ಸರ್ವಿಸ್ ಅಧಿಕಾರಿಗಳನ್ನು ನಿವೃತ್ತಿಮಾಡಿ ಪರಿಹಾರವನ್ನು ಕೊಟ್ಟು ಮನೆಗೆ ಕಳುಹಿಸುವ ಕಾರ್ಯಕ್ರಮವನ್ನು ಗೃಹಸಚಿವರಾದ ಸರ್ದಾರ್ ಪಟೇಲರು ಕೈಗೊಂಡಿರುವರಷ್ಟೆ. ಅವರು ವಿಶೇಷ ಸಾಹಸದಿಂದ ಈ ಪ್ರಯತ್ನವನ್ನು ಮಾಡಿ ಅದಕ್ಕೆ ಬ್ರಿಟಿಷ್ ಸರ್ಕಾರದವರ ಒಪ್ಪಿಗೆಯನ್ನೂ ಸಹ ಪಡೆದಿರುವರು.

ಇಂತಹ ಪರಿಸ್ಥಿತಿಯಲ್ಲಿ ಬಂಗಾಳಾ ಪ್ರಾಂತ್ಯವು ಈ ಪ್ರಯತ್ನಕ್ಕೆ ವಿರುದ್ಧವಾಗಿ ದಂಗೆ ಎದ್ದಿರುವಂತಿದೆ. ಕೇಂದ್ರ ಸರ್ಕಾರದವರ ಈ ಏರ್ಪಾಡಿನಲ್ಲಿ ತಾವು ಭಾಗವಹಿಸುವುದಿಲ್ಲವೆಂದೂ, ಸಿವಿಲ್ ಸರ್ವಿಸ್ ಬಗ್ಗೆ ತಾವೇ ಸ್ವಂತ ವ್ಯವಸ್ಥೆಗಳನ್ನು ಮಾಡಿಕೊಳ್ಳುವರೆಂದೂ ಅವರು ಸೂಚಿಸಿರುತ್ತಾರೆ. ಪ್ರಾಂತಗಳು ಕೇಂದ್ರ ಸರ್ಕಾರದ ಆಡಳಿತ ನೀತಿಗೆ ವ್ಯತಿರೇಕವಾಗಿ ಹೋಗಿ ಅಖಿಲ ಭಾರತದ ಯೋಜನೆಗಳನ್ನು ನಿರರ್ಥಕಗೊಳಿಸುವ ಪ್ರಸಂಗದ ಅಂಕುರವು ಇದರಲ್ಲಿ ಅಡಗಿರುತ್ತದೆ. ಇದನ್ನು ಈಗಲೇ ತಡೆಗಟ್ಟದಿದ್ದರೆ ಪ್ರತಿಯೊಂದು ಪ್ರಾಂತವೂ ಸಕಲ ವಿಧಗಳಲ್ಲಿಯೂ ಸ್ವೇಚ್ಛೆಯಿಂದ ವರ್ತಿಸಿ, ವ್ಯವಸ್ಥಿತವಾದ ಸಂಯುಕ್ತ ಭಾರತದ ಆಡಳಿತಕ್ಕೇ ಅಡಚಣೆಯುಂಟುಮಾಡುವ ಅಪಾಯವು ಬಂದೊದಗಬಹುದು.

ಸಿವಿಲ್ ಸರ್ವಿಸ್ ಮತ್ತು ಇಂಡಿಯನ್ ಪೋಲೀಸ್ ಸರ್ವಿಸ್ ಶಾಖೆಗಳು ತಮ್ಮ ಹೆಸರಿಗೆ ಅನುಗುಣವಾಗಿ ಕೇಂದ್ರ ಆಡಳಿತಕ್ಕೆ ಸಂಬಂಧಪಟ್ಟ ಅಂಶಗಳು. ಪ್ರಾಂತಗಳು ಅವುಗಳಲ್ಲಿ ಕೈಹಾಕಲು ಅವಕಾಶವಿಲ್ಲ. ಆದುದರಿಂದ ಬಂಗಾಳಾ ಪ್ರಾಂತ್ಯವು ಇವುಗಳ ಬಗ್ಗೆ ಪ್ರತ್ಯೇಕ ವ್ಯವಸ್ಥೆ ಮಾಡಿಕೊಳ್ಳಲು ಅಸ್ಪದ ಕೊಡಲಾಗದು.

ಪರದೇಶೀಯರಿಗೇ ಮೀಸಲಾಗಿದ್ದ ಮೇಲ್ಮಟ್ಟದ ಹುದ್ದೆಗಳನ್ನು ಭಾರತೀಯರಿಗೆ ವರ್ಗಾಯಿಸಿ, ನಮ್ಮ ದೇಶದ ಜನರೇ ಈ ಕೆಲಸಗಳನ್ನು ನಿರ್ವಹಿಸಲು ಅವಕಾಶ ಕಲ್ಪಿಸುವ ಪ್ರಯತ್ನವನ್ನೂ ಬಂಗಾಳ ಸರ್ಕಾರವು ವಿರೋಧಿಸುತ್ತಿರುವುದು ಆಶ್ಚರ್ಯಕರವಾಗಿದೆ. ಪ್ರಜೆಗಳ ಹಿತಕ್ಕೆ ಸಾಧಕವಾದ ಇನ್ನೂ ಯಾವಯಾವ ಇತರ ಕಾರ್ಯಕ್ರಮಗಳನ್ನು ಇವರು ಹೀಗೆಯೇ ಪ್ರತಿಭಟಿಸುವರೋ ಎಂಬ ಶಂಕೆಗೂ ಅಸ್ಪದವಾಗಿರುತ್ತದೆ.

ಶುಭಾಶಯ

ರಾಜಧಾನಿಯ ಧರ್ಮಪ್ರವರ್ತ ಶ್ರೀ|| ಎ ಎಸ್ ರಂಗಸ್ವಾಮಯ್ಯಂಗಾರ್ಯರು ನಮಗೆ ಕಳುಹಿಸಿರತಕ್ಕ ಕ್ರಿಸ್‌ಮಸ್ ಶುಭಾಶಯವನ್ನು ನಾವು ಅತ್ಯಂತ ಕೃತಜ್ಞತೆಯಿಂದ ಸ್ವೀಕರಿಸಿರುತ್ತೇವೆ

Mysore City Municipality.

NOTIFICATION

No M6-F1. 51-46 47
Dated 16th December, 1946

Notice is hereby given that sealed tenders will be received up to 3 p.m., on 13-1-1947 at the Office of the President, City Municipal Council, Mysore, for the right of Stocking and distributing about 10,000 Bags of Char-coal per mensem in Mysore City for a period of one year from 1-2-1947.

2 The tender should be accompanied by a deposit of Rs. 3000 (Rs Three Thousand only) which should be credited to Municipal Funds and the certified challan enclosed with the tender.

3. No tender embodying modified or fresh conditions will be considered.

Other details of the contract may be ascertained in the Municipal Office during office hours on working days.

R. RAMACHANDRA RAO
BHOMBORE,
President

ಶ್ರೀ
ಗಣೇಶಾ ಟಾಕೀಸ್
ತಾ|| 27-12-46ರಿಂದ
ಪ್ರತಿ ದಿನ ಮೂರು ಆಟಗಳು
ರುಕ್ಮಾಂಗದ (ತಮಿಳು)
ಪ್ರಸಿದ್ಧ ಪೌರಾಣಿಕ ಚಿತ್ರ
ಪಾತ್ರ:- ಜಿ ಎಸ್. ಬಾಲ ಸುಬ್ರಹ್ಮಣ್ಯಂ, ಯೋಗ ಮಂಗಲಂ, ಪೆರಿಯನಾಯಕಿ

WANTED

Wanted Financial partn[er] for a well-reputed firm Mysore City The firm i[s] running concern.
Apply to Box no 5,
C/o "SADHVI,"
Mysore

ನಿಮ್ಮ ಮೈ ಮೊಕಮಲ್ಲಿನಂತೆ ಹೊಳೆಯಬೇಕೆ ? ನೀವು ಲಾವಣ್ಯ ಮೂರ್ತಿಗಳಾಗಬೇಕೆ ?
ಹಾಗಾದರೆ
ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!
ಮೈಸೂರು ಸ್ಯಾಂಡಲ್ ಸೋಪ್
ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ
ಪರೀಕ್ಷಿಸಿ ನೋಡಿರಿ
ಎಲ್ಲೆಲ್ಲೂ ದೊರೆಯುತ್ತವೆ.
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ
ಬೆಂಗಳೂರು

Edited, printed and published [by] A. R. Nagarajan at the Sadhvi P[ress], D Subbiah Road, Mysore

ರಾಜಕಮಲ್, ಮೈಸೂರು
೨೭-೧೨-೪೬ ರಿಂದ ಪ್ರತಿ ದಿನ ೩ ಆಟಗಳು
ವಿಶ್ವಕರ್ನಾಟಕ, ಪ್ರಜಾಮತ, ಜನವಾಣಿ, ದೇಶಬಂಧು ಮುಂತಾದ ಮೈಸೂರು ಪತ್ರಿಕೆಗಳು ಪ್ರಶಂಸಿಸಿರುವ ರಾಮರಾಜ್ಯದ ಮಧುರ ಗಾಯಕಿ ಶೋಭನಾ ನಟಿಸಿರುವ
ಪ್ರಕಾಶ್ ಪಿಕ್ಚರ್ಸ್‌ರವರ ಅತ್ಯಂತ ಅಮೋಘವಾದ
★ ಹಮಾರ ಸಂಸಾರ್ ★
ಭೂಮಿಕೆ:- ಉಮಾ ಕಾಂತ್, ಬಿಲ್ಲು ಮುಂತಾದವರು

From 27-12-46 for 7 days, Daily at 10-30 a m
Alexander Korda's "Elephant Boy"
With'— Mysore Sabu and others

ಸ್ವಾತಂತ್ರ್ಯ ದಿನದ ಕಾಣಿಕೆ!
26-1-1947 ರಂದು ಪ್ರದರ್ಶಿತವಾಗಲಿದೆ
ಮಹಾತ್ಮಾರವರ ಅತ್ಯಮೋಘ ಕನ್ನಡ ಚಿತ್ರ.
"ಕೃಷ್ಣಲೀಲಾ"
ಕೆಂಪರಾಜ್, ರತ್ನಮಾಲಾ, ಬಳ್ಳಾರಿ ಲಲಿತ, ಕುಮಾರಿ ಉಷಾ, ಕಾಂತಾ, ರಾಜಕುಮಾರಿ, ಪ್ರತಿಮಾ ಮೊದಲಾದವರ ಅಭಿನಯ
—: ಇದೀಗ ಸಿದ್ಧವಾಗುತ್ತಿವೆ. :—
ಭಕ್ತ ರಾಮದಾಸ್ ಮತ್ತು ಪತಿವ್ರತಾ
ಮಹಾತ್ಮಾ ಪಿಕ್ಚರ್ಸ್, ಮೈಸೂರು.

ಶೀಘ್ರದಲ್ಲಿಯೇ ನಿಮ್ಮ ಮೆಚ್ಚಿನ ನ್ಯೂ ಅಪೆರ ಟಾಕೀಸಿನಲ್ಲಿ ಬರುವ ತಾರೀಖನ್ನು ಗಮನಿಸಿರಿ
ತಮಿಳುನಾಡು ಟಾಕೀಸ್‌ರವರ
…………ಸುಪ್ರಸಿದ್ಧ ಪೌರಾಣಿಕ ಚಿತ್ರ…………
ಮೋಹಿನಿ
ರುಕ್ಮಾಂಗದ (ತಮಿಳು ಭಾಷೆ
ಎಮ್. ಎಸ್. ವಿಜಯಾಳ್, ಪಿ. ಬಿ ರಂಗಾಚಾರ್ ಕೆ. ಬಿ. ಶಾರದಾಂಬಾಳ್ ವಿದ್ವಾನ್ ಶ್ರೀನಿವಾಸನ್, ಎಂ ಆರ್. ಸುಬ್ರಹ್ಮಣ್ಯಂ ಮತ್ತು ಇತರರು ನಟಿಸಿರು
ನಿರ್ದೇಶಕರು :- ಎಸ್ ಸೌಂದರ್‌ರಾಜನ್ : ಸ್ಟುಡಿಯೊ :- ರಣಜಿತ್-ಬೊಂಬಾ
For Bookings to :-Mysore State, South Canara & Coo
Apply to :-SRI MAHALAKSHMI PICTURES,
No. 8, Hospital Road, Bangalore City

ಕೋ. ಸಂ. 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಭಾನುವಾರ ೨೯—೧೨—೪೬ [ಸಂಚಿಕೆ ೧೫೩

ಪಾಟಿಯಾಲಾ ಪ್ರಜಾ ನಾಯಕರ ದಸ್ತಗಿರಿ

...ನಿಸ್ಥಾನದಲ್ಲಿ ಬಿಳಿಯರಿಗೆ ಸ್ಥಾನವಿರುವುದಿಲ್ಲ

...ಯ ಜನರು ಬಣ್ಣದ ಜನಾಂಗ ...ನೆ ಸಮಾನಭಾವನೆಯಿಂದ ವರ್ತಿ ...ದರೆ ಏಷ್ಯ ಮತ್ತು ಆಫ್ರಿಕಾದಲ್ಲಿ ... ಜನರಿಗೆ ಸ್ಥಾನವೇ ಇಲ್ಲದಂತಾಗು ...ಮೆರಿಕಸಾಮ್ರಾಜ್ಯ ಶಾಹಿಗಿಂತ, ಜನಾಂಗ ಸಾಮ್ರಾಜ್ಯ ಶಾಹಿಯು ...ಘೋರತರ "ಸ್ಮಟ್ಸ್‌ರನಾದವು ಹಿ... ವಾದಕ್ಕಿಂತ ಘಾತುಕವಾದುದು" ...ದಾಗಿ ಆಚಾರ್ಯ ಕೃಪಲಾನಿಯ... ಮಿ॥ ಸ್ಮಟ್ಸರು ಪ್ರಿಟೋರಿಯಾದಲ್ಲಿ ...ದ ಭಾಷಣವನ್ನು ಖಂಡಿಸಿದ್ದಾರೆ.

ಪ್ರತಿಬಂಧಕಾಜ್ಞೆಗಳು

ಶಿವಮೊಗ್ಗ, ಹಾರನಹಳ್ಳಿ, ಬೀರೂರು, ...ನರಸೀಪುರ, ಪಾಲೂರುಗಳಲ್ಲಿ ...ಬಂಧಕಾಜ್ಞೆಗಳನ್ನು ಜಾರಿ ಮಾಡಿ ...ರವಣಿಗೆ ಮತ್ತು ೫ ಮಂದಿ ಸೇ... ...ದನ್ನು ಸಹ ನಿಷೇಧಿಸಲಾಗಿದೆ.

ಹಿಂದೂಗಳು ಕೂಡಲೇ ಸಂಘಟಿತರಾಗಬೇಕು

...ಖಿಲಭಾರತ ಹಿಂದೂಮಹಾಸಭೆಯ ...ನೇ ಅಧಿವೇಶನವು ಮೊನ್ನೆ ಗೋರಖ್‌... ...ದಲ್ಲಿ ಆರಂಭವಾಯಿತು. ಭಾರತದ ...ಭಾಗಗಳ ೫ ಸಹಸ್ರ ಪ್ರತಿನಿಧಿಗಳು ...ಹಾಜರಿದ್ದರು. ಡಾ॥ ಶ್ಯಾಮ ಪ್ರಸಾದ ...ಖರ್ಜಿಯವರು ಆರಂಭೋತ್ಸವವನ್ನು ...ನೆರವೇರಿಸಿದರು. ಯಾದವೀ ಕಲಹದಿಂ... ...ಕ್ಷಣ ಸಂಭವಿಸಿರುವ ಅಲ್ಪ ಸಂಖ್ಯಾತ... ...ಹೆಚ್ಚು ಹಾನಿಯೆಂಬುದನ್ನು ಮಿ॥ ಜಿ... ...ರವರು ಕೂಡಲೇ ಅರಿಯಬೇಕೆಂದು ...ಳಿಸಿದರು. ಭಾರತವು ಪೂರ್ಣ ಸ್ವಾ... ...ತ್ರ್ಯವನ್ನು ಪಡೆಯುವ ಮುನ್ನ ಇನ್ನೊಂ... ...ಘೋರವಾದ ಹೋರಾಟವನ್ನು ಹೂ... ...ಬೇಕಾಗಬಹುದೆಂದು ಹೇಳಿದರು. ...ಯ ಸಮಸ್ಯಾ ಪರಿಹಾರಕ್ಕೆ ಬ್ರಿಟಿಷರು ...ದೇಶವನ್ನು ಬಿಟ್ಟು ಹೊರಡುವುದೇ ಸರಿ... ...ದ ಉಪಾಯವೆಂದರು. ... ...ಸಾಧಿಸುವ ಹವ್ಯಾಸವನ್ನು ತೊರೆದು ... ...ದ ಸ್ವಾತಂತ್ರ್ಯ ಸಾಧನೆಗಾಗಿ ಮು... ...ದರೆ, ಜಗತ್ತಿನಲ್ಲಿರುವ ಶಕ್ತಿಯೂ ನ... ...ನ್ನು ತಡೆಗಟ್ಟಲಾರದು—ಎಂದು ಅವ... ...ಹೇಳಿದರು.

ಅಧ್ಯಕ್ಷ ಶ್ರೀ ಭೋಪಟಕರ್‌ರವರು ಭಾ... ...ಮಾಡುತ್ತಾ ಪಾಕೀಸ್ತಾನವು ಬ್ರಿಟಿಷ... ...ತಂತ್ರ, ಅವರು ಹೋದೊಡನೆಯೇ ...ರ ಬಲ್ಲಿಗಾ ಇರುವುದಿಲ್ಲ. ಖಡ್ಗವನ್ನು ...ವಿಂದಲೇ ಎದುರಿಸಲಾದೀತೆಂದು ಕಾಂ... ...ಸ್ ಮುಖಂಡರೇ ಹೇಳಿದ್ದಾರೆ. ಈಗ... ...ಗಳಿಗೆ ಉಳಿದಿರುವ ಮಾರ್ಗ ಒಂ... ... ಅವರು ಕೂಡಲೇ ತಮ್ಮ ಭಿನ್ನಾಭಿ... ...ಪ್ರಾಯಗಳನ್ನು ಮರೆತು ಹಿಂದೂ ಸಂಸ್ಕೃ... ...ಮತ್ತು ಹಿಂದೂಸ್ಥಾನದ ರಕ್ಷಣೆಗಾಗಿ ...ಸಂಘಟಿತರಾಗಬೇಕು—ಎಂದು ಹೇಳಿದರು.

ಪ್ರಜಾ ಸಂಧಾನ ಸಮಿತಿ

ಶ್ರೀಯುತರಾದ ಸಿದ್ಧವನಹಳ್ಳಿ ನಿಜಲಿಂಗ... ...ಪ್ಪ, ...ಯಣ ಮ್ಯಾಸ್, ದ್ವಾರಕಾನಾ... ...ಥ ಮತ್ತು, ಕೆ॥ ಬಿಜಾಜ್, ಹೀರಾಲಾಲ್ ...ಸ್ಟಿ, ಬಲವಂತರಾಯ ಮೆಹ್ತಾ ಮತ್ತು ...ಗಂಗಾಧರರಾವ್ ಇವರುಗಳನ್ನು ಅಖಿಲ ...ಭಾರತ ಪ್ರಜಾಪರಿಷತ್ತಿನ ಸ್ಥಾಯೀ ಸಮಿ... ...ತಿಯವರು ಪ್ರಜಾ ಸಂಧಾನ ಸಮಿತಿಗೆ ನೇ... ...ಮಿಸಿದ್ದಾರೆ.

ಅಕ್ಕಿ, ರಾಗಿ ಪ್ರಮಾಣ ಹೆಚ್ಚುವುದು

ಬೆಂಗಳೂರು ೨೯

ಜನವರಿ ೧ರಿಂದ 'ಎ' ತರಗತಿ ರೇಷನ್ ಕಾರ್ಡುದಾರರಿಗೆ ಅಕ್ಕಿ ಪ್ರಮಾಣವನ್ನು ೬ ಔನ್ಸುಗಳಿಂದ ೯ ಔನ್ಸುಗಳಿಗೆ ಹೆಚ್ಚಿಸಲಾಗುವುದು. ಹೆಚ್ಚುವರಿ ಪ್ರಮಾಣದಷ್ಟು ಗೋಧಿಯನ್ನು ಕಡಮೆ ಮಾಡಲಾಗುವುದು. 'ಬಿ' ತರಗತಿ ರೇಷನ್‌ದಾರರಿಗೆ ಗೋಧಿ ಪ್ರಮಾಣವನ್ನು ೨ ೪ ಔನ್ಸುಗಳಷ್ಟು ಕಡಮೆಮಾಡಿ ಅಷ್ಟು ರಾಗಿ ಅಥವಾ ಜೋಳವನ್ನು ಕೊಡಲಾಗುವುದು.

ಸತ್ಯಾಗ್ರಹವಿಲ್ಲದೆ ಸ್ವಾತಂತ್ರ್ಯ ಸಿಗುವುದಿಲ್ಲ

ಮೊನ್ನೆ ರಾತ್ರಿ ದಸ್ತಗಿರಿಯಾದ ಶ್ರೀ ಕೆ. ಹನುಮಂತಯ್ಯನವರು ಈ ರೀತಿ ಹೇಳಿಕೆಯೊಂದನ್ನಿತ್ತಿದ್ದಾರೆ:—"ನಾನು ದಸ್ತಗಿರಿಯಾಗಿರುವುದು ನನಗೆ ಸಂತೋಷವನ್ನುಂಟುಮಾಡಿದೆ. ಸತ್ಯಾಗ್ರಹವಿಲ್ಲದೆ ಸ್ವಾತಂತ್ರ್ಯ ಸಿಗುವುದಿಲ್ಲ. ಮೈಸೂರು ಕಾಂಗ್ರೆಸ್ ಸತ್ಯಾಗ್ರಹ ನಿರ್ಣಯವನ್ನು ಮಾಡಿದೆ. ಅದರ ಮೇಲೆ ಸರ್ಕಾರದ ಪ್ರಥಮ ಕೋಪದ ದೃಷ್ಟಿ ನನ್ನ ಮೇಲೆ ಬಿದ್ದಿದೆ. ಸರ್ಕಾರದ ಸೌಜನ್ಯದಲ್ಲಿ ನಂಬಿಕೆಯನ್ನು ಇನ್ನೂ ಇಟ್ಟಿರುವವರಿಗೆ ಇದು ಸರಿಯಾದ ಉತ್ತರ. ಕಾಂಗ್ರೆಸ್ಸು ಸತ್ಯಾಗ್ರಹ ಹೂಡಲು ಸರ್ಕಾರವೇ ಆಹ್ವಾನವಿತ್ತಂತಾಗಿದೆ. ದೇಶವು ಇದಕ್ಕೆ ಸರಿಯಾದ ಉತ್ತರವಿತ್ತು ಜವಾಬ್ದಾರಿ ಸರ್ಕಾರವನ್ನು ಕೂಡಲೇ ಗಳಿಸುತ್ತದೆಂಬ ದೃಢನಂಬಿಕೆಯಿಂದ ಸೆರೆಮನೆಗೆ ನಾನು ತೆರಳುತ್ತೇನೆ."

ಪರ್ಷಿಯ ಕೊಲ್ಲಿಯಿಂದ ಮೆಡಿಟರೇನಿಯನ್‌ಗೆ ಎಣ್ಣೆ ಕೊಳಾಯಿ

ಆಂಗ್ಲೋ-ಇರಾನಿಯನ್ ಸ್ಟ್ಯಾಂಡರ್ಡ್ ಎಣ್ಣೆ ಕಂಪನಿಗಳು ಪರ್ಷಿಯ ಕೊಲ್ಲಿಯಿಂದ ಮೆಡಿಟರೇನಿಯನ್ ಪ್ರದೇಶಕ್ಕೆ ಎಣ್ಣೆ ಕೊಳಾಯಿ ಮಾರ್ಗವನ್ನು ನಿರ್ಮಿಸುವ ಬಗ್ಗೆ ಆಲೋಚನೆ ನಡೆಸುತ್ತಿರುವುದಾಗಿ ವರದಿಯಾಗಿದೆ. ಈ ಪ್ರಯತ್ನವು ಪೂರ್ಣವಾದಲ್ಲಿ ಬ್ರಿಟನ್ ಮತ್ತು ಯೂರೋಪ್ ಖಂಡಕ್ಕೆ ಎಣ್ಣೆಯು ಸಮೃದ್ಧಿಯಾಗಿ ದೊರೆಯುವುದು. ಆದರೆ ಅಮೆರಿಕೆಯು ಎಣ್ಣೆಯ ಆವಶ್ಯಕತೆಯನ್ನು ಗಳಿಸುವವರೆಗೆ ಆಮ ಎಣ್ಣೆ ಕಯಾರಿಕೆಗೆ ತೊಂದರೆ ಉಂಟಾಗುತ್ತದೆ. ಈ ಕೊಳಾಯಿ ಮಾರ್ಗಕ್ಕೆ ೫೦ ಕೋಟಿ ಪೌಂಡುಗಳು ವೆಚ್ಚವಾಗುವುದಾಗಿ ಹೇಳಲಾಗಿದೆ.

ಲಂಡನ್ ಪತ್ರಿಕೋದ್ಯೋಗಿಗಳಿಗೆ ಸತ್ಕಾರ

ಮೈಸೂರು, ೨೯

ಲಂಡನ್ ನಗರದಲ್ಲಿ ಮದ್ರಾಸಿನ ಹಿಂದೂ ಪತ್ರಿಕಾ ಪ್ರತಿನಿಧಿಗಳಾದ ಮಿ॥ ಲಿನಾರ್ಡ್ ಡಬ್ಲ್ಯು. ಮ್ಯಾಟರ್ಸ್ ಮತ್ತು ಅವರ ಪತ್ನಿಯವರನ್ನು ಸತ್ಕರಿಸಲು ರಾಜಧಾನಿಯ ಪತ್ರಿಕೋದ್ಯೋಗಿ ಸಂಘದವರು ನಿನ್ನೆ ಒಂದು ಸಂತೋಷಕೂಟವನ್ನು ಶ್ರೀ॥ ಚಾಮುಂಡೇಶ್ವರಿ ಭವನದಲ್ಲಿ ಏರ್ಪಡಿಸಿದ್ದರು. ಉಪಾಹಾರವಾದ ನಂತರ ಸಂಘದ ಅಧ್ಯಕ್ಷರಾದ ಶ್ರೀ॥ ಗೋಪಾಲಕೃಷ್ಣರಾಯರು ಪ್ರಧಾನ ಅತಿಥಿಗಳನ್ನು ಸ್ವಾಗತಿಸಿ, ಸದಸ್ಯರ ಪರಿಚಯ ಮಾಡಿಕೊಟ್ಟರು.

ಮಿ॥ ಮ್ಯಾಟರ್ಸ್ ಮಾತನಾಡುತ್ತಾ, ಪಾಶ್ಚಿಮಾತ್ಯ ದೇಶಗಳಲ್ಲಿ ಪತ್ರಿಕೆಗಳು ನಡೆಸುತ್ತಿರುವ ಸೇವೆಯನ್ನು ಸೂಕ್ಷ್ಮವಾಗಿ ತಿಳಿಸಿದರು.

ಈಗಿನ ಪತ್ರಿಕೆಗಳು ತಮ್ಮ ಕರ್ತವ್ಯವನ್ನು ಸರಿಯಾಗಿ ಪಾಲನೆ ಮಾಡದೆ, ಲಾಭ ಮತ್ತು ವ್ಯಾಪಾರೀ ದೃಷ್ಟಿಯನ್ನೇ ಇಟ್ಟು ಕೆಲಸ ಮಾಡುತ್ತಿರುವುದು ಶೋಚನೀಯವೆಂದು ಹೇಳಿದರು. ಭಾರತದ ನಿರಂತರವಾಗಿ ಮಾತನಾಡುತ್ತಾ, ತಾವು ಭಾರತದ ಪ್ರಿಯರೆಂದೂ, ಭಾರತದ ಪ್ರಗತಿಗಾಗಿ ತಮ್ಮ ಪೂರ್ಣ ಸಹಾನುಭೂತಿ ಇರುವುದೆಂದೂ ಹೇಳಿದರು. ಮಾತೃಭೂಮಿಯ ಅಭ್ಯುದಯದಲ್ಲಿ ಪತ್ರಿಕೆಗಳು ಮುಖ್ಯ ಪಾತ್ರ ವಹಿಸಬೇಕಾಗಿದೆ. ಸಣ್ಣ ಪುಟ್ಟ ಭಿನ್ನಾಭಿಪ್ರಾಯಗಳನ್ನು ತ್ಯಜಿಸಿ, ಪತ್ರಿಕಾಕರ್ತರು ಮತ್ತು ಪತ್ರಿಕೋದ್ಯೋಗಿಗಳು ಒಟ್ಟುಗೂಡಿ ಕೆಲಸಮಾಡಿ, ಭಾರತದ ಏಳಿಗೆಗೆ ದುಡಿಯುವುದು ಅವರ ಕರ್ತವ್ಯವೆಂದು ತಿಳಿಸಿದರು. ವಂದನಾರ್ಪಣೆಯೊಡನೆ ಸಮಾರಂಭವು ಮುಗಿಯಿತು.

ಕ್ರಿಕೆಟ್ ಪಂದ್ಯ

ಜೈಹಿಂದ್ ಕ್ರಿಕೆಟ್ ಕ್ಲಬ್ಬಿನವರು, ಫ್ರೆಂಡ್ಸ್ ಯೂನಿಯನ್ ಕ್ರಿಕೆಟ್ ಕ್ಲಬ್ಬಿನವರನ್ನು ಮೊನ್ನೆ ದಿನ ೨೦ ರನ್ನುಗಳಿಂದ ಸೋಲಿಸಿದರು.

ಲೆಫ್ಟಿನೆಂಟ್ ಮಂತ್ರಿಗಳಿಗೆ ಜಯ

—

ಮಂಡ್ಯದ ಇರ್ವಿನ್ ನಾಲಾ ಫಾರಂ ಟಿಕೆಟನ್ನು ಸಚಿವರಾದ ಶ್ರೀ ತಮ್ಮಣ್ಣಗೌಡರ ಕಾಲಿಗೆ ನಿನ್ನೆ ದಿನ ಅಪಘಾತವಾಗಿ ಶ್ರೀ ಗೌಡರಿಗೂ ಗಾಯವಾಗಿರುವುದಾಗಿ ಸುದ್ದಿ ಬಂದಿದೆ.

ಪಾಟಿಯಾಲಾದಲ್ಲಿ ದಸ್ತಗಿರಿಗಳು

ಫತೇಘರ್ ಸಾಹಿಬ್‌ನಲ್ಲಿ ಜಾರಿಯಲ್ಲಿದ್ದ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಸಭೆಯನ್ನು ನಡೆಸಿದರೆಂದು ಪಾಟಿಯಾಲಾ ಪ್ರಜಾಮಂಡಲದ ಅಧ್ಯಕ್ಷರೇ ಆದಿಯಾಗಿ ಎಂಟು ಮಂದಿ ಮುಖಂಡರನ್ನು ಅಲ್ಲಿನ ಪೊಲೀಸ್ ಅಧಿಕಾರಿಗಳು ದಸ್ತಗಿರಿ ಮಾಡಿದ್ದಾರೆ. ಅವರುಗಳಿಗೆಲ್ಲಾ ಕೈಕೋಳವನ್ನು ಹಾಕಿ ಒಯ್ಯಲಾಯಿತೆಂದೂ ವರದಿಯಾಗಿದೆ.

ಭಾರತ ಸ್ವಾತಂತ್ರ್ಯಕ್ಕೆ ಬಿಷಪ್ಪರ ಬೆಂಬಲ

ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡುವುದರಿಂದ ಚರ್ಚ್‌ಗಳಿಗೇ ಅನುಕೂಲವಾಗುತ್ತದೆ. ಕ್ರೈಸ್ತ ಮತವು ರಾಜರ ಮತ್ತು ಯೂರೋಪಿಯನ್ನರ ಪಕ್ಷಪಾತಿಯೆಂಬ ಸಂದೇಹವು ಅಧಿಕಾರವನ್ನು ಭಾರತೀಯರಿಗೆ ವಹಿಸುವುದರಿಂದ ಮಾಯವಾಗುತ್ತದೆ. ಹುಟ್ಟಿನ ವಿದ್ಯಾರ್ಹತೆಯನ್ನು ಪಡೆದಿರುವ ಭಾರತೀಯರು ತಮ್ಮ ಹಳೇ ಸಂಪ್ರದಾಯದಲ್ಲಿ ನಂಬಿಕೆಯನ್ನು ತೊರೆದಿದ್ದಾರೆ. ಅವರ ಪುರಾತನ ಸಂಸ್ಕೃತಿಯಲ್ಲಿ ಅವರಿಗೆ ಹೆಮ್ಮೆಯಿದೆ. ಮತ್ತು ಕ್ರೈಸ್ತಮತದಿಂದ ಕಲಿಯಬೇಕಾದದ್ದೇನೂ ಇಲ್ಲವೆಂದು ಅವರು ಭಾವಿಸಿದ್ದಾರೆ ಎಂದು ಬೆಂಗಳೂರಿನ ಕ್ಯಾಥೊಲಿಕ್ ಬಿಷಪ್ಪರು ವ್ಯಾಟಿಕನ್ (ರೋಂ) ರೇಡಿಯೋದಿಂದ ಭಾಷಣ ಮಾಡುತ್ತಾ ತಿಳಿಸಿದ್ದಾರೆ.

ಕಾಂಗ್ರೆಸ್ ಮಂತ್ರಿಗಳ ರಾಜೀನಾಮೆಯೇ?

ಬ್ರಿಟಿಷ್ ಸರ್ಕಾರದ ಡಿಸೆಂಬರ್ ೬ ನೇ ತಾರೀಖಿನ ಪ್ರಕಟಣೆಯನ್ನು ಪ್ರತಿಭಟಿಸಿ ಕೇಂದ್ರ ಸರ್ಕಾರದ ಕಾಂಗ್ರೆಸ್ ಮಂತ್ರಿಗಳು ರಾಜೀನಾಮೆ ಕೊಡಬೇಕೇ ಅಥವಾ ಕೊಡಬಾರದೋ ಎಂಬ ಪ್ರಶ್ನೆ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ನಿರ್ಣಯವನ್ನು ಅವಲಂಬಿಸಿರುತ್ತದೆ—ಎಂಬುದಾಗಿ ಶ್ರೀ ಜಗಜೀವನರಾಮರವರು ತಿಳಿಸಿದ್ದಾರೆ.

ಪ್ರಪಂಚ ಸಂಸ್ಥೆಗೆ ಭಾರತವು ಒಪ್ಪಿಸಲ್ಪಡಬಹುದು

"ಬ್ರಿಟನ್ನು ಭಾರತವನ್ನು ಬಿಟ್ಟು ಹೋಗಲು ಆಲೋಚಿಸುತ್ತಿರುವಾಗ ತಮ್ಮ ತನ್ನತ್ತಿನಿಂದ ಇಲ್ಲಿಗೆ ... ಬಂದಲ್ಲಿ ಭಾರತವು ಪ್ರಪಂಚ ಸಂಸ್ಥೆಯ ಹಸ್ತಕ್ಕೆ ಹೋಗಬೇಕಾಗುತ್ತದೆ. ಹಾಗಾದಲ್ಲಿ ಭಾರತಕ್ಕೆ ಸ್ವಾತಂತ್ರ್ಯವೇ ಇಲ್ಲದ ಹಾಗಾಗುತ್ತದೆ. ಭಾರತಕ್ಕೆ ಒಟ್ಟು ... ಬಹುಮಾನವಾಗುತ್ತದೆ"—ಎಂಬುದಾಗಿ ಮಹಾತ್ಮಾ ಗಾಂಧಿಯವರು ಶ್ರೀರಾಮಪುರದ ಪ್ರಾರ್ಥನಾ ಸಭೆಯಲ್ಲಿ ಮಾತನಾಡಿ ಎಚ್ಚರಿಕೆ ಕೊಟ್ಟಿದ್ದಾರೆ.

ಗೋಪಾಲರಾಯರು ಮತ್ತೆ ಕೋರ್ಟಿನಲ್ಲಿ ಹಾಜರು

ಸ್ಪೆಷಲ್ ಫೋನ್] ಬೆಂಗಳೂರು, ೨೯

ಕಾವೇರಿ ೫ ಲಕ್ಷ ರೂಗಳ ಸ್ವಸರಕಾರದ ಜನ್ಯ ... ಧರ್ಮರಕ್ಷಕರ ಬಿ. ಎನ್. ಗೋಪಾಲರಾಯರ ಮೇಲೆ ದೂರುಗಳು ಬಂದಿದ್ದರಿಂದ ಅವರನ್ನು ಪೊಲೀಸರು ನ್ಯಾಯಾಧಿಕಾರರ ಮುಂದೆ ನಿನ್ನೆ ಪುನಃ ಹಾಜರುಪಡಿಸಿದರು. ... ಸರ್ಕಾರದ ... ... ಎಂದು ಜಾಮೀನು ... ಬಿಡುಗಡೆಯಾದ ಗೋಪಾಲರಾಯರನ್ನು ಬಂಧನದಲ್ಲಿಡಲು ... ನ್ಯಾಯಾಧಿಕಾರಿಗಳು ಆಜ್ಞೆ ಮಾಡಿದ್ದಾರೆ.

ಸಾಧ್ವಿ

ತಾ|| ೨೯-೧೨-೪೬ ಭಾನುವಾರ

ಇಂಡೋ-ಚೀನಾ ಪ್ರಕರಣ

ಮಹಾಯುದ್ಧವು ಮುಗಿದನಂತರ ಇಂಡೋನೇಷ್ಯದಲ್ಲಿ ಡಚ್ ಸರ್ಕಾರದವರು ನಡೆಸಿದ ದುರಾಕ್ರಮಣ ವರ್ತನೆಯನ್ನು ಪ್ರತಿಭಟಿಸಿ ಅಲ್ಲಿನ ರಾಷ್ಟ್ರೀಯ ಸರ್ಕಾರದವರು ತಮ್ಮ ಸ್ವತಂತ್ರಾಧಿಕಾರವನ್ನು ಚಲಾಯಿಸಿರುವರು. ಡಚ್ಚರು ಇತರ ಹಲವು ಮಿತ್ರ ವರ್ಗದವರ ಸಹಾಯದಿಂದ ಪ್ರಜಾಸರ್ಕಾರವನ್ನು ಎದುರಿಸಿ ಸ್ವಾತಂತ್ರ್ಯ ಹೋರಾಟವನ್ನು ತುಳಿಯಲು ಪ್ರಯತ್ನಿಸಿದರು. ಆದರೆ ಅವರ ವರ್ತನೆಗೆ ನೈತಿಕ ಬೆಂಬಲವಿಲ್ಲವೆ ಅದು ವಿಫಲವಾಯಿತು. ಕಡೆಗೆ ಪ್ರಜಾನಾಯಕರುಗಳಿಂದ ಸ್ಥಾಪಿತವಾಗಿರುವ ಸರ್ಕಾರವನ್ನೇ ಅಂಗೀಕರಿಸಿ ಅವರೊಡನೆ ಒಪ್ಪಂದಕ್ಕೆ ಬರಲು ಡಚ್ ಸರ್ಕಾರವು ಈಗ ಸಿದ್ಧವಾಗಿರುತ್ತದೆ.

ಇಂಡೊನೇಷ್ಯದ ನಂತರ ದುರಾಕ್ರಮಣ ನೀತಿಯು ಫ್ರಾನ್ಸಿನ ಪಾಲಿಗೆ ಬಂದಿರುವಂತಿದೆ. ಕಳೆದ ಮಹಾಯುದ್ಧದಲ್ಲಿ ಫ್ರಾನ್ಸ್ ತ್ರಿಶಂಕು ಸ್ವರ್ಗದಲ್ಲಿ ಸಿಲುಕಿ ಒಳಗಿನ ಮತ್ತು ಹೊರಗಿನ ಗೊಂದಲಗಳಿಗೆ ತುತ್ತಾಗಿ ವಿಶ್ವವಿಖ್ಯಾತವಾದ ತನ್ನ ಸ್ವಾತಂತ್ರ್ಯ ಪದವಿಯನ್ನು ಕಳೆದುಕೊಂಡಿತು. ಯುದ್ಧವು ನಿಂತ ಮೇಲೆ ಈಗ ಅದು ... ಬಿಟ್ಟು ತನ್ನ ಎಲ್ಲೆಕಟ್ಟಿನೊಳಗೆ ಒಂದು ಪವಿತ್ರ ಆದರ್ಶತನವನ್ನು ಸ್ಥಾಪಿಸಲು ಹವಣಿಸುತ್ತದೆ. ಹೀಗಿರುವಲ್ಲಿ ಇಂಡೋ-ಚೀನಾದಲ್ಲಿ ಅದು ಇಂದು ಅನುಸರಿಸುತ್ತಿರುವ ನೀತಿಯು ಕೇವಲ ಖಂಡನೀಯವಾಗಿದೆ. ಜಪಾನಿನ ಆಕ್ರಮಣಕ್ಕೆ ಅಲ್ಲಿನ ಪ್ರದೇಶಗಳು ತುತ್ತಾದ ಮೇಲೆ ಅವನ್ನು ತ್ಯಜಿಸಿ ಹೊರಟುಹೋಗಿದ್ದ ಪ್ರದೇಶಗಳಲ್ಲಿ ಈಗ ಅಲ್ಲಿನ ಜನರೇ ತಮ್ಮ ಪ್ರಭುತ್ವವನ್ನು ಸ್ಥಾಪಿಸಲು ತೊಡಗಿರುವಾಗ, ಫ್ರಾನ್ಸ್ ಮಧ್ಯೆ ಪ್ರವೇಶಿಸಿ ತನ್ನ ಅಧಿಕಾರವನ್ನು ಸ್ಥಾಪಿಸಲು ಪ್ರಯತ್ನಿಸುತ್ತಿದೆ. ಇದನ್ನು ಅಲ್ಲಿನ ಪ್ರಜಾಪ್ರಭುತ್ವ ಸರ್ಕಾರದವರು ಪ್ರತಿಭಟಿಸಿ, ಘೋರ ಹೋರಾಟವನ್ನು ನಡೆಸುತ್ತಿದ್ದಾರೆ.

ಇಂಡೋ-ಚೀಣರೊಡನೆ ತಾವು ಮಾಡಿಕೊಂಡ ಒಪ್ಪಂದವನ್ನು ಅವರು ಪಾಲಿಸಿಲ್ಲವೆಂಬ ನೆಪವನ್ನು ಫ್ರಾನ್ಸ್ ಮುಂದಿಡುತ್ತಿದೆ. ಇಂದಿನ ಸ್ಥಿತಿಯಲ್ಲಿ ಇಂಡೊ-ಚೀಣರಿಗೆ ಯಾವ ಪರತನ್ತ್ರ ಇಲ್ಲದೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಡಲು ಸಾಧ್ಯವಿಲ್ಲವೆಂದೂ ಹೇಳಿರುತ್ತದೆ. ಇದು ಕೇವಲ ದುರಹಂಕಾರದ ಮಾತು. ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ-ಎಂಬ ಯಾವ ಉದಾತ್ತ ಧ್ಯೇಯಗಳು ಫ್ರಾನ್ಸಿನ ಆದರ್ಶಜೀವನದ ಪ್ರತಿಬಿಂಬಗಳಾಗಿದ್ದುವೋ, ಅವು ಇಂದು ನುಚ್ಚುನೂರಾಗಿರುತ್ತವೆ. ಇತರ ಪ್ರದೇಶಗಳ ಮೇಲೆ ಆಕ್ರಮಣವನ್ನು ಮಾಡುವ ಸಾಮ್ರಾಜ್ಯಶಾಹಿ ನೀತಿಯು ಫ್ರಾನ್ಸಿನ ಅನಗಿನವಾದ ಸಂಸ್ಕೃತಿ ಮತ್ತು ಆದರ್ಶಗಳಿಗೆ ... ದು ಹೀಗಿದ್ದರೆ ... ತಿಯಲ್ಲಿ ವರ್ತಿಸುವುದರಿಂದ ಅದರ ನೈತಿಕ ಪತನವು ಎಷ್ಟುಮಟ್ಟಿಗೆ ಆಗಿರುವುದೆಂಬುದು ವೇದ್ಯವಾಗುವುದು.

ಇಂಡೊ-ಚೀಣದಲ್ಲಿ ಫ್ರಾನ್ಸಿನ ನಾಯಕತ್ವಕ್ಕೆ ಅಸ್ಪದವೇ ಇಲ್ಲದಿರುವಾಗ, ಸಂಪೂರ್ಣ

ಕೋರ್ಟಿನಲ್ಲಿ ಭಾರಿ ಕಳುವು

ಕರಾಚಿಯ ಕೋರ್ಟಿನಲ್ಲಿ ಒಂದು ಅತ್ಯಂತ ಭಾರಿ ಕಳ್ಳತನ ನಡೆದಿದೆ. ಮೊಕದ್ದಮೆಯಲ್ಲಿ ತೀರ್ಮಾನವಾಗಿ ವಾರಸುದಾರರಿಗೆ ವಾಪಸ್ ಕೊಡಬೇಕಾಗಿದ್ದ ೫೦ ಸಾವಿರ ರೂ ನಗದು ಮತ್ತು ೩೯ ಸಾವಿರ ರೂ ಬೆಲೆಬಾಳುವ ನಗಗಳು, ಒಟ್ಟು ಅರವತ್ತು ಸಾವಿರ ರೂಪಾಯಿನ ಪದಾರ್ಥಗಳು ಕಳುವುಮಾಡಲ್ಪಟ್ಟಿವೆ.

ಸ್ವಾತಂತ್ರ್ಯವನ್ನು ಅದಕ್ಕೆ ಕೊಡಲು ಸಾಧ್ಯವಿಲ್ಲವೆಂದು ಹೇಳಲು ಫ್ರಾನ್ಸಿಗೆ ಅಧಿಕಾರವೆಲ್ಲಿಂದ ಬಂತು ? ಇಂತಹ ನಡತೆಗಳಿಂದಲೇ ಇಲ್ಲದ ಸಲ್ಲದ ಘರ್ಷಣೆಗಳು ಬೆಳೆಯುವುವು. ಇಂಡೊ-ಚೀಣದ ಪ್ರಜಾಸರ್ಕಾರವು ಫ್ರೆಂಚ್ ಸೈನ್ಯಗಳ ಮೇಲೆ ಭಾರಿ ದಾಳಿಯನ್ನೇ ನಡೆಸುತ್ತಿದೆ. ಫ್ರೆಂಚರೂ ಸಹ ತಮ್ಮ ಸರ್ವಶಕ್ತಿಯನ್ನೂ ಪ್ರಯೋಗಿಸಲು ತೊಡಗಿದ್ದಾರೆ. ಪರಿಸ್ಥಿತಿಯು ಬಹಳ ಬಿಕ್ಕಟ್ಟಿನಿಂದ ಕೂಡಿರುತ್ತದೆ. ಫ್ರೆಂಚ್ ಸರ್ಕಾರದವರು ವಿವೇಕದಿಂದ ವರ್ತಿಸದಿದ್ದರೆ ಇಂಡೊನೇಷ್ಯಕ್ಕಿಂತಲೂ ಮಿಗಿಲಾದ ಘೋರ ಕದನವು ಅಲ್ಲಿ ನಡೆಯುವ ಸಂಭವವಿದೆ.

ಫ್ರೆಂಚರ ದಬ್ಬಾಳಿಕೆಯ ನೀತಿಯನ್ನು ಪ್ರತಿಭಟಿಸಿ ಇಂಡೊ-ಚೀಣದವರಿಗೆ ಭಾರತೀಯರೆಲ್ಲರೂ ನೆರವು ನೀಡಬೇಕೆಂದು ಅಲ್ಲಿನ ರಾಯಭಾರಿಗಳು ಕೋರಿದ್ದಾರೆ. ಭಾರತದ ನಾಯಕರು ಈ ಬಗ್ಗೆ ಹಿಂದೆಯೇ ಭರವಸೆ ನೀಡಿದ್ದಾರೆ. ಬಿಳಿಯ ಜನಾಂಗದವರು ಏಷ್ಯಾಖಂಡದವರ ಮೇಲೆ ನಡೆಸುತ್ತಿರುವ ದಾಳಿಗಳನ್ನು ಎದುರಿಸುವ ಮಹಾಕಾರ್ಯಕ್ರಮದ ಅಂಗವಾಗಿರುವ ಈ ಪ್ರಸಂಗದಲ್ಲಿಯೂ ಸಹ ಸಕಲ ಭಾರತೀಯರೂ ತನ್ನ ನೆರೆಯ ಸೋದರರಿಗೆ ಹೃತ್ಪೂರ್ವಕವಾದ ಸಹಾನುಭೂತಿಯನ್ನು ನೀಡುವರೆಂದು ನಾವು ನಂಬುತ್ತೇವೆ.

ಕ್ರಿಸ್ಮಸ್ ಹಬ್ಬಕ್ಕಾಗಿ
ಹೊಸ ಸಮೂನೆ
ಜವಳಿಗಳು
ಬಂದಿವೆ ಇಂದೇ ಭೇಟಿ ಕೊಡಿರಿ.
ಬಿ. ಕೆಂಚಪ್ಪ ಸನ್ಸ್,
ಜವಳಿ ಅಂಗಡಿ,
ದೊಡ್ಡಪೇಟೆ, ಮೈಸೂರು
ಶುಭಾಶಯ

ಸಂಸ್ಥಾನ ಪ್ರಜಾಪರಿಷತ್ತು

ಸಂಸ್ಥಾನ ಪ್ರಜಾಸಮ್ಮೇಳನದ ಸ್ಥಾಯಿ ಸಮಿತಿ ಸಭೆಯು ಡಾ|| ಪಟ್ಟಾಭಿಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಮೊನ್ನೆ ದೆಹಲಿಯಲ್ಲಿ ನಡೆಯಿತು. ರಾಜತ್ವ ಮತ್ತು ಪರಮಾಧಿಕಾರಗಳು ಪ್ರಜೆಗಳಿಂದಲೇ ದೊರೆಯತಕ್ಕದ್ದು ; ಸಂಸ್ಥಾನಗಳಿಗಾಗಿ ನಿಗದಿ ಮಾಡಿರತಕ್ಕ ಪ್ರತಿನಿಧಿಗಳು ರಾಜ್ಯಾಂಗ ಸಮಿತಿಯಲ್ಲಿ ಬೇಗನೇ ಬಂದು ಭಾಗವಹಿಸಲು ತಕ್ಕ ಏರ್ಪಾಡುಗಳಾಗಬೇಕು ; ದೇಶೀಯ ಸಂಸ್ಥಾನಗಳಿಗೆ ಸಂಬಂಧಪಟ್ಟ ವಿಚಾರಗಳನ್ನು ಚರ್ಚಿಸಿ ಸಂಸ್ಥಾನಗಳ ಪ್ರತಿನಿಧಿಗಳೊಡನೆಯೂ ರಾಜ್ಯಾಂಗ ಸಭೆಯ ಸಂಧಾನ ಸಮಿತಿಯೊಡನೆಯೂ ಸಂಧಾನ ನಡೆಸಲು ಒಂದು ಉಪಸಮಿತಿಯನ್ನು ರಚಿಸಬೇಕು, ಕೊಲ್ಹಾಪುರ ಮತ್ತು ಗ್ವಾಲಿಯರ್‌ದಲ್ಲಿ ಸದ್ಯಕ್ಕೆ ಸತ್ಯಾಗ್ರಹವನ್ನು ಆರಂಭಿಸುವುದನ್ನು ನಿಲ್ಲಿಸಬೇಕು ; ಕೊಲ್ಹಾಪುರದ ಪರಿಸ್ಥಿತಿಯನ್ನು ಪರಿಶೀಲಿಸಿ ಅಲ್ಲಿನ ವಿದ್ಯಮಾನಗಳನ್ನು ವರದಿ ಮಾಡಲು ಅ|| ಭಾ|| ಸಂಸ್ಥಾನಗಳ ಪ್ರಜಾಪರಿಷತ್ತಿನ ಪ್ರತಿನಿಧಿಯೊಬ್ಬರನ್ನು ಕಳುಹಿಸಬೇಕು : — ಮುಂತಾದ ನಿರ್ಣಯಗಳಾದುವು

ಷಾಫತ್ ಅಹಮದ್ದರು ಕೆನಡ ರಾಯಭಾರಿಗಳೇ ?

ಭಾರತ ಕೇಂದ್ರ ಸರ್ಕಾರದಲ್ಲಿ ಲೀಗು ಭಾಗವಹಿಸುವವರೆಗೆ ಮಂತ್ರಿಗಳಾಗಿದ್ದ ಡಾ|| ಷಾಫತ್ ಅಹಮದ್‌ರವರನ್ನು ಕೆನಡಾದಲ್ಲಿ ಭಾರತದ ರಾಯಭಾರಿಗಳನ್ನಾಗಿ ನೇಮಕ ಮಾಡಲಾಗುವುದೆಂದು ಹೇಳಲಾಗಿದೆ. ಈ ಬಗ್ಗೆ ಸರ್ಕಾರಿ ಪ್ರಕಟಣೆ ಸದ್ಯದಲ್ಲೇ ಹೊರಬೀಳಲಿದೆ

ಮಹಾತ್ಮಾ ಕಾಫಿ ಮತ್ತು ಬಿಸ್ಕತ್ ಫ್ಯಾಕ್ಟರಿ, ಮೈಸೂರು.

ನಮ್ಮಲ್ಲಿ ಹಸನಾದ ಕಾಫಿಪುಡಿ ಮತ್ತು ಎಲ್ಲಾ ವಿಧವಾದ ಸಪ್ಪೆ ಬಿಸ್ಕತ್ತುಗಳು ಅಂದರೆ ಸಾಲ್ಟ್, ಖಾರ, ಜಿಂಜರ್ ಮೊದಲಾದ ಬಿಸ್ಕತ್ತುಗಳು ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್ ಮೇರೆ ಕೊಡಲ್ಪಡುತ್ತವೆ. ಸಿಹಿ ಬಿಸ್ಕತ್‌ಗಳು ತಯಾರಾಗುವುದಿಲ್ಲ

ಎ ಎಸ್. ಕೃಷ್ಣಮೂರ್ತಿ,
ಪ್ರೊಪ್ರೈಟರ್.

Edited, printed and published by A. R. Nagarajan at the Sadhvi Press D. Subbiah Road, Mysore

ರಾಜಕಮಲ್, ಮೈಸೂರು

೨೭-೧೨-೪೬ ರಿಂದ ಪ್ರತಿ ದಿನ ೩ ಆಟಗಳು

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಸಿ. ರೆಡ್ಡಿಯವರೂ, ನ್ಯಾಯಾಂಗ ಸಚಿವರಾದ ಶ್ರೀ ಓ. ಎಸ್. ಎ. ಪರೀಘ್‌ರವರೂ ಪ್ರಶಂಸಿಸಿರುವ ರಾಮರಾಜ್ಯದ ಮಧುರ ಗಾಯಕಿ ರಂಜನಾ ನಟಿಸಿರುವ

ಪ್ರಕಾಶ್ ಪಿಕ್ಚರ್ಸ್‌ರವರ ಅತ್ಯಂತ ಅಮೋಘವಾದ

ಹಮಾರ ಸಂಸಾರ್

ಭೂಮಿಕೆ:- ಉಮಾ ಕಾಂತ್, ಜಿಲ್ಲು ಮುಂತಾದವರು

From 27-12-46 for 7 days, Daily at 10-30 a.m.
Alexander Korda's "Elephant Boy"
With:— Mysore Sabu and others

ಹೊರಗಿನಿಂದ ಕುಡಿದು ಬಂದವರಿಗೂ ಶಿಕ್ಷೆ

ಮದ್ರಾಸ್ ಪ್ರಾಂತ್ಯದಲ್ಲಿ ಮದ್ಯನಿರೋಧವನ್ನು ಜಾರಿಗೆ ತರಲು ... ನಾಲ್ಕು ಜಿಲ್ಲೆಗಳ ಪೋಲೀಸ್ ಮು... ಕಾರಿಗಳು ಸಭೆ ಸೇರಿ ಹೊರಗಡೆ... ಕುಡಿದು ಪಾನನಿರೋಧ ಜಾರಿಯ... ಪ್ರದೇಶಕ್ಕೆ ಪ್ರವೇಶಿಸುವವರ ಮೇ... ಕ್ರಮ ಜರುಗಿಸಲು ಕಾನೂನನ್ನು ... ಪಾಟು ಮಾಡಬೇಕೆಂದು ಮದ್ರಾಸ್ ಸ... ರಕ್ಕೆ ಸಲಹೆ ಮಾಡಿದ್ದಾರೆ.

ಪ್ರಸಿದ್ಧ ಪತ್ರಿಕೆ...

ಗುಂಡ್ಲುಪೇಟೆ ತಾಲ್ಲೂಕು ಹಿರೀ... ಹಳೆ ದೊಡ್ಡಹುಂಡಿಯಲ್ಲಿರುವ ವೀ... ಮತದ ರಂಗೂಪುರದ ನಂಜಪ್ಪನ ಹೆಂಡತಿ ... ಕೆಂಪಮ್ಮನು ಈ ಮೂಲಕ ತಿಳಿಯಪಡಿಸು... ವುದೇನೆಂದರೆ:—

೨೧-೧೧-೪೬ರಲ್ಲು ಸಾಧ್ವಿ ಪತ್ರಿಕೆ... ರಂಗೂಪುರದ ಬೋಗಪ್ಪನ ಮಗ ಸಿದ್ದ... ನೆಂಬುವನು ನನ್ನ ವಿಚಾರದಲ್ಲಿ ನಮೂ... ಸಿರುವ ಸಂಗತಿಗಳ್ಯಾವುದೂ ನಿಜವಲ್ಲ... ಮತಿ ನಂಜಪ್ಪನ ಬಾಬ್ತು ರಂಗೂಪು... ಸೇರಿದ ಸರ್ವೆ ೨೧೯, ೨೬೯, ೨೮೯-೧ ನಂಬರುಗಳ ಜಮೀನುಗಳೂ, ಹಸ್ಸಿ... ಅಂಗಳ ಮನೆಯೂ, ಹೊಲಗೇರಿ ಹಿತ್ತಲು ಮತ್ತು ಸದರಿಯವನ ಬಾಬ್ತು ಇನ್ನಿ... ತರ ಚರಸ್ಥಿರ ಸ್ವತ್ತುಗಳಲ್ಲಿ ನನಗೂ ... ಮೈನರ್ ಮಗಳು ಪುಟ್ಟನಂಜಮ್ಮನಿ... ವಳಿಗೂ ಆ ಪ್ರಕಾರ ಹಿಸ್ಸೆಯು ಹಕ್ಕಿರು... ನಾನು ಸ್ವತ್ತುಗಳನ್ನು ಪರಭಾರೆ ಮಾ... ತರಮೂದಿಸಲ್ಲಿರುವುದೂ ನಿಜವಲ್ಲ. ಇವೆ... ನನಗೂ ನನ್ನ ಮೈನರ್ ಮಗಳಿಗೂ ... ದ ಹಕ್ಕಿಗೆ ಕುಂದುತರುವ ದುರುದ್ದೇಶ... ದ ಮೈನರ್ ಗಾರ್ಡಿಯನ್ ಆದ ಮೇಲ್ಕ... ಸಿದ್ದಪ್ಪನೆಂಬುವನು ನಡೆಸಿರುವ ಕುತಂ... ವಾಗಿರುತ್ತೆ.

ಸದರಿ ಸಿದ್ದಪ್ಪನಾಗಲಿ, ಮತ್ತ್ಯಾರಾ... ಲಿ, ಮೇಲ್ಕಂಡ ಸ್ವತ್ತುಗಳನ್ನು ಕ್ರಯ, ... ನ ವಗೈರೆ ಯಾವ ಮೂಲ್ಯವೂ ಪರಭಾ... ಮಾಡಿದಲ್ಲಿ ಸದರಿ ಪರಭಾರೆಗಳು ನನ್ನ ... ತ್ತು ನನ್ನ ಮೈನರ್ ಮಗಳ ಹಕ್ಕನ್ನು ... ಸ್ವಮಾತ್ರವೂ ಬದ್ಧಪಡಿಸತಕ್ಕದ್ದಲ್ಲವೆಂ... ಸಂಗತಿ ಈ ಮೂಲಕ ತಿಳಿಯಪಡಿಸಿರುತ್ತೆ.

ನಂಜನಗೂಡು ● ಈ ಎಡಗೈ ಹೆಬ್ಬೆ...
೨೭-೧೨-೪೬ ನ ಗುರುತು ಕೆಂಪಮ್ಮ
ಹಾಕಿದ್ದು

N. L. Subbirayappa, B.A. B.L.
Lawyer, Nanjangud

WANTED

Wanted Financial partner for a well reputed firm in Mysore City. The firm is a running concern.

Apply to Box no 5,
C/o "SADHVI,"
Mysore.

ರಿ. ನಂ. 392 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೧] ಸೋಮವಾರ ೩೦—೧೨—೪೬ [ಸಂಚಿಕೆ ೨೨

ದಕ್ಷಿಣ ಇಂಡೋಚೀಣದ ಕದನ ನಿಲ್ಲಿಸಲು ಆಜ್ಞೆ

ಶಾಂತಿ ಪಾಲನಾ ಸಮಿತಿ

ಟೌನ್‌ಹಾಲಿನಲ್ಲಿ ಬಹಿರಂಗ ಸಭೆ

ಮೈಸೂರು ೩೦

ಚನ್ನಪಟ್ಟಣದಲ್ಲಿ ನಡೆದ ದುರ್ಘಟನೆಗಳು ಮೈಸೂರಿಗೂ ತಗಲಿ, ಅಂತಹ ಸನ್ನಿವೇಶಗಳು ಒದಗಬಾರದೆಂದೂ, ಮೈಸೂರಲ್ಲಿ ಶಾಂತಿ ನೆಲಸಿ, ಜನರಲ್ಲಿ ಮೂಡಿರುವ ಶಂಕೆ, ಆತಂಕಗಳನ್ನು ಹೋಗಲಾಡಿಸುವ ಉದ್ದೇಶದಿಂದಲೂ ಮುಂಜಾಗ್ರತೆ ಕಾರ್ಯಕ್ರಮನಾಗಿ, ನೆನ್ನೆ ಸಾಯಂಕಾಲ, ಮೈಸೂರು ಟೌನ್‌ಹಾಲಿನಲ್ಲಿ, ಜಿಲ್ಲಾಧಿಕಾರಿಗಳಾದ ಶ್ರೀ ಸಿ.ಯಂ ಹೆಚ್ ರಣಜೋಧರವರು ಒಂದು ಬಹಿರಂಗ ಸಭೆಯನ್ನು ತಮ್ಮ ಅಧ್ಯಕ್ಷತೆಯಲ್ಲಿ ಕೂಡಿಸಿದ್ದರು. ಹಿಂದೂ ಮುಸಲ್ಮಾನ ಸಂಗಡಗಳಲ್ಲಿ ಗಣ್ಯರೆನಿಸಿದ ಹಲವಾರು ಮಹನೀಯರು ಮಾತನಾಡಿದರು.

ಅನೇಕ ವರ್ಷಗಳಿಂದ ಹಿಂದೂ-ಮುಸಲ್ಮಾನರು ಮೈಸೂರಿನಲ್ಲಿ ಭ್ರಾತೃಭಾವದಿಂದ ಬಾಳಿಕೊಂಡುಬರುತ್ತಿದ್ದರು. ಮಹಾಪ್ರಭುಗಳೂ ಸಹ ಹಿಂದೂ-ಮುಸಲ್ಮಾನರೆಂಬ ಭಾವನೆ ಇಡದೆ ಸಮಸಮಾನವಾದ ಸ್ವಾತಂತ್ರ್ಯತೆಗಳನ್ನೂ, ನೌಕರಿ, ವಿದ್ಯಾಭ್ಯಾಸ ಮತ್ತು ಇತರೇ ಸೌಕರ್ಯಗಳನ್ನೂ ಇಬ್ಬರಿಗೂ ನೀಡುತ್ತಿದ್ದರು. ಆದಕಾರಣ ಇವರಿಬ್ಬರಲ್ಲಿ ವಿದ್ವೇಷವುಂಟಾಗಲು ಅವಕಾಶವೇ ಇರುವುದಿಲ್ಲ. ಯಾವ ಬಗೆಯ ಸಮಾಚಾರಗಳು ಆಗಬೇಕಾದರೂ ಹೊರಗಿನಿಂದ ಬರಬಹುದಾದ ಹಲವಾರು ಪುಂಡರು ತಮ್ಮ ಸ್ವಾರ್ಥಸಾಧನೆಗಾಗಿ ದ್ವೇಷಬೀಜವ ಬಿತ್ತಿ ಜನರ ಮನಸ್ಸನ್ನು ಕಲಕಲು ಯತ್ನಿಸುತ್ತಿರುವುದೇ ಕಾರಣ. ಶಾಂತಿಯನ್ನು ಬಯಸುವ ಮೈಸೂರು ನಿವಾಸಿಗಳು ಅಂತಹವರ ಪ್ರೇರಣೆಗೆ ಮನಗೊಡಬಾರದು. ಮೇಲು ಕೀಳು ಎಂಬ ಭಾವನೆ ಇಡದೆ, ಅನ್ಯಮತ ಸಹಿಷ್ಣುತೆಯಿಂದ ಇತರರನ್ನು ಗೌರವಿಸುವುದು ಎಲ್ಲರ ಕರ್ತವ್ಯ. ಮುಸಲ್ಮಾನರು ಹೆಚ್ಚಾಗಿ ಇರುವೆಕಡೆ ಅವರು ಅಲ್ಪಸಂಖ್ಯಾತರಾದ ಹಿಂದೂಗಳನ್ನು ರಕ್ಷಿಸುವುದು ಅವರ ಧರ್ಮ. ಅದರಂತೆ ಮುಸಲ್ಮಾನರಿಗೆ ಹಿಂದೂಸೋದರರು ರಕ್ಷಣೆ ಕೊಡುವುದು ಅಗತ್ಯ. ಜನರಲ್ಲಿ ತಲೆದೋರಿರುವ ಶಂಕೆಯು ಮಾಯವಾಗುವವರೆಗೆ ಸಿನಿಮಾ ಎರಡನೆ ಪ್ರದರ್ಶನ ಮತ್ತು ಹೋಟೆಲು ಅಂಗಡಿಗಳನ್ನು ಮುಚ್ಚಬೇಕು. ಬಿತ್ತುವವರು ವಿದ್ವೇಷ ಬೀಜವನ್ನು ಬಿತ್ತಲು ಯತ್ನಿಸುವವರನ್ನು ಸರ್ಕಾರದವರು ಹುಡುಕಿ ಹಿಡಿದು ಉಗ್ರಕಾರ್ಯಕ್ರಮ ನಡೆಸಬೇಕು. ಇದಕ್ಕೂ ಮೇಲಾಗಿ ಪ್ರಚಾರ ಕಾರ್ಯಕ್ರಮವು ಚುರುಕಾಗಿ ನಡೆಯಬೇಕು ಎಂದು ಭಾಷಣಕಾರರು ತಿಳಿಸಿದರು.

ಶ್ರೀಗಳಾದ ಟಾಜ್ ಪಿರಾ, ಹಾಜಿ ಗುಲಾಂ ಹುಸೇನ್, ಅಬ್ದುಲ್ ಕರೀಂ, ಡಾ|| ಷರೀಫ್, ಶ್ರೀಗಳಾದ ರಾವ್‌ಬಹದ್ದೂರ್ ರಾಮಸ್ವಾಮಿ, ಪಿ ಸೀತಾರಾಮಯ್ಯ, ಕೆ.ಪಿ. ಪುಟ್ಟಣ್ಣ, ಸಿ. ನರಸಿಂಹಯ್ಯ, ಬಿ ಎಸ್ ಸುಬ್ಬರಾವ್, ಎ. ರಾಮಣ್ಣ, ಎಫ್ ಸಿ ದೇವರಾಜ ಅರಸ್ ಇವರುಗಳು ಭಾಷಣಗಳನ್ನು ಮಾಡಿದರು.

ನಗರದಲ್ಲಿ ಶಾಂತಿಪಾಲನೆ ಮಾಡಲು ಮತ್ತು ಪ್ರಚಾರ ಕಾರ್ಯಗಳನ್ನು ತೀವ್ರವಾಗಿ ನಡೆಸಲು ಶಾಂತಿಸಮಿತಿಯೊಂದನ್ನು ರಚಿಸಲಾಯಿತು. ಅನೇಕ ಮುಸಲ್ಮಾನ ಮಹನೀಯರು ಮತ್ತು ಹಿಂದೂ ಮಹನೀಯರನ್ನು ಈ ಸಮಿತಿಯಲ್ಲಿ ಸೇರಿಸಲಾಗಿದೆ

ವಿಯಟ್ ನಾಂ ಸ್ವಾತಂತ್ರ್ಯಕ್ಕೆ ಭಾರತದ ಬೆಂಬಲ ಬೇಕು

ಭಾರತದಲ್ಲಿ ವಿಯಟ್‌ನಾಮ್ ಪ್ರಜಾರಾಜ್ಯದ ಪ್ರತಿನಿಧಿಯಾಗಿರುವ ವಾಯುಧಿ ಚಾವ್ ಅವರು ಒಂದು ಪ್ರಕಟಣೆಯನ್ನು ಹೊರಡಿಸಿ ವಿಯಟ್‌ನಾಂ ಪ್ರಜೆಗಳ ಸ್ವಾತಂತ್ರ್ಯ ಹೋರಾಟಕ್ಕೆ ಹಿಂದೂಸ್ಥಾನದವರು ಪೂರ್ಣ ಬೆಂಬಲ ಕೊಡಬೇಕೆಂದು ಪ್ರಾರ್ಥಿಸಿದ್ದಾರೆ. ಫ್ರೆಂಚರು ವಿಮಾನಗಳನ್ನೂ, ಟ್ಯಾಂಕುಗಳನ್ನೂ, ಯುದ್ಧ ಹಡಗುಗಳನ್ನೂ ಕಳುಹಿಸಿ ವಿಯಟ್ ನಾಂ ಪ್ರಜಾ ರಾಜ್ಯದ ಮೇಲೆ ಯುದ್ಧ ಹೂಡಿದ್ದಾರೆ. ಏಷ್ಯಾ ಖಂಡದ ಸ್ವಾತಂತ್ರ್ಯವನ್ನೇ ಧ್ಯೇಯವನ್ನಾಗಿಟ್ಟುಕೊಂಡಿರುವ ಭಾರತ ಮತ್ತು ವಿಯಟ್‌ನಾಂಗಳು ಪರಸ್ಪರ ಸಹಕರಿಸಿ ಈ ಗಂಡಾಂತರದಿಂದ ಪಾರಾಗಬೇಕು - ಎಂದು ವಿಯಟ್‌ನಾಂ ಪ್ರತಿನಿಧಿ ಬಿನ್ನವಿಸಿಕೊಂಡಿದ್ದಾರೆ

ಮಹಾತ್ಮರಿಗೆ ವಿಚಿತ್ರ ಕಾಣಿಕೆ

ಶ್ರೀರಾಮಪುರದಲ್ಲಿರುವ ಮಹಾತ್ಮ ಗಾಂಧಿಯವರಿಗೆ ಬ್ರಹ್ಮ ಸಮಾಜದ ಪತ್ರಿಕೆಯು ಕ್ರೈಸ್ತ ಸಂಪಾದಕರೊಬ್ಬರು ಕ್ರಿಸ್‌ಮಸ್ ಕಾಣಿಕೆಯನ್ನು ಒಪ್ಪಿಸಿದ್ದಾರೆ. ಅದರಲ್ಲಿ ಸಿಗರೇಟುಗಳು, ಇಸ್ಪೀಟು ಪ್ಯಾಕು, ಕ್ಷೌರದ ಸಾಮಾನು, ಬಾಚಣಿಗೆ, ಟವಲ್‌ಗಳು ಮತ್ತು ಕಾಲುಚೀಲ ಮೊದಲಾದುವುಗಳಿದ್ದವು. ಗಾಂಧಿಜಿಯವರು ಕ್ಷೌರದ ಸಾಮಾನುಗಳನ್ನು ಮಾತ್ರ ತಾವು ತೆಗೆದು ಕೊಂಡರು. ಪಂಡಿತ ನೆಹರೂರವರಿಗಾಗಿ ಸಿಗರೇಟನ್ನು ಕಾದಿರಿಸಿದ್ದಾರೆ. ಇಸ್ಪೀಟು ಆಡಬೇಕೆನ್ನಿಸುತ್ತದೆ, ಆದರೆ ಆಡುವುದೇ ಗೊತ್ತಿಲ್ಲ, ಎಂದು ಗಾಂಧಿಜಿಯವರು ಹಾಸ್ಯದ ಮುಗುಳ್ನಗೆಯನ್ನು ಬೀರಿದರು. ಎಲ್ಲ ಕಾಣಿಕೆಗಳನ್ನು ಗಾಂಧೀಜಿಯವರು ಸಂತೋಷದಿಂದ ಸ್ವೀಕರಿಸಿದ್ದಾರೆ

ಪುರಸಭಾ ಪ್ರಕರಣ

ಸ್ವಂ ಸು.] ಚಾಮರಾಜನಗರ ೨೮

ಇಲ್ಲಿನ ಪುರಸಭೆಯ ಅಧಿವೇಶನವು ನೆನ್ನೆದಿನ ೬ ಗಂಟೆಗಳ ಕಾಲ ಜರುಗಿತು. ಸದಸ್ಯರುಗಳಲ್ಲಿ ಸೌಹಾರ್ದ ಕಂಡುಬರದೆ ತಮ್ಮ ತಮ್ಮಲ್ಲಿರುವ ವೈಯಕ್ತಿಕ ವೈಷಮ್ಯಗಳನ್ನು ಹೊರಚೆಲ್ಲುತ್ತಿದ್ದರು. ಚರ್ಚೆಗಳು ವಿರಸಗೊಂಡ ಸಂದರ್ಭಗಳೂ ಒದಗಿದುವು. ಆದರೆ ವಿಶೇಷವೇನೂ ಸಂಭವಿಸಲಿಲ್ಲ. ಸದಸ್ಯರುಗಳು ಉಪಯೋಗಿಸುತ್ತಿದ್ದ ಭಾಷೆಗಳು ಅನಾಗರಿಕವಾಗಿದ್ದುವು

ಶರತ್‌ಬೋಸರಿಂದ ತಿರುವಾಂಕೂರು ಕಾಂಗ್ರೆಸ್ ಆರಂಭ

ಜನವರಿ ೧೯, ೨೦ ಮತ್ತು ೨೧ರಲ್ಲಿ ನಾಗರ್ ಕೋಯಿಲಿನಲ್ಲಿ ಜರುಗುವ ತಿರುವಾಂಕೂರು ಕಾಂಗ್ರೆಸ್ ಅಧಿವೇಶನದ ಆರಂಭೋತ್ಸವವನ್ನು ಶ್ರೀ ಶರತ್ ಚಂದ್ರಬೋಸರು ನೆರವೇರಿಸುವರೆಂದು ಗೊತ್ತಾಗಿದೆ. ಶ್ರೀ ಜೈಪ್ರಕಾಶ ನಾರಾಯಣ್, ಡಾ|| ಪಟ್ಟಾಭಿಗಳೂ, ಶ್ರೀಮತಿ ಸರೋಜಿನಿ ನಾಯ್ಡುರವರೂ ಅಧಿವೇಶನದಲ್ಲಿ ಭಾಗ ವಹಿಸುವರೆಂದೂ ಹೇಳಲಾಗಿದೆ.

ಇನ್ನು ೧೮ ತಿಂಗಳೊಳಗೆ ಭಾರತದಲ್ಲಿ ಶಾಂತಿ

" ಭಾರತದಲ್ಲಿರುವ ರಾಜಕೀಯ ಗೊಂದಲಗಳು ತಮ್ಮಷ್ಟಕ್ಕೆ ತಾವೇ ಶಮನಗೊಂಡು ಇನ್ನು ೧೮ ತಿಂಗಳೊಳಗಾಗಿ ಶಾಂತಿ ನೆಲಸುತ್ತದೆ "—ಎಂಬುದಾಗಿ ಕಲ್ಕತ್ತದ ಭಾರತೀ ತಮಿಳು ಸಂಘದಲ್ಲಿ ಭಾಷಣ ಮಾಡುತ್ತಾ ರಾಜಾಜಿಯವರು ತಿಳಿಸಿದ್ದಾರೆ

ಲಂಡನ್ನಿಗೆ ಕೋತಿ ಮರಿಗಳು ಬೇಕು

ಕ್ರಿಸ್‌ಮಸ್ಸಿನಲ್ಲಿ ಬಹುಮಾನವಾಗಿ ಕೊಡಲು ಸಣ್ಣ ಕೋತಿಗಳು ಬೇಕೆಂದೂ ಇವುಗಳಿಗೆ ಒಂದು ಪೆನ್ನಿ ತೂಕಕ್ಕೆ ಒಂದು ಪೌಂಡಿನಂತೆ ಕೊಡುವುದಾಗಿಯೂ ಅಲ್ಲಿಯ ವ್ಯಾಪಾರಿಯೊಬ್ಬನು ತಿಳಿಸಿರುವುದ್ದಾಗಿ ವರದಿಯಾಗಿದೆ. ಅಲ್ಲದೆ ಮಾತನಾಡುವ ಗಿಳಿಗಳೂ ಬೇಕಂತೆ. ಅವುಗಳು ಆಡುವ ಒಂದೊಂದು ಮಾತಿಗೂ ಒಂದು ಪೌಂಡ್ ಬೆಲೆ ಕೊಡಲಾಗುವುದು.

ಜವಹರಲಾಲರ ಗಡ್ಡಕ್ಕೆ ಕಲ್ಲಿನ ಏಟು

ನುಖಾಲ್ಲಿ ಭೇಟಿಗಾಗಿ ತೆರಳಿದ್ದ ಪಂ|| ಜವಹರಲಾಲ ನೆಹರೂರವರು ನೌಖಾಲಿ ಜಿಲ್ಲೆಯ ಚೌಮುಹನಿ ಎಂಬಲ್ಲಿ ಭಾಷಣ ಮಾಡುತ್ತಿದ್ದಾಗ ಯಾರೋ ದುಷ್ಕರ್ಮಿ ಕಲ್ಲನ್ನು ಬೀರಿ ಅವರ ಗಡ್ಡಕ್ಕೆ ಪೆಟ್ಟನ್ನುಂಟುಮಾಡಿದರೆಂದು ವರದಿಯಾಗಿದೆ. ಈ ಬಗ್ಗೆ ನೆಹರೂರವರು ಮಾತನಾಡಿ ಕಲ್ಲು, ಲಾಠಿ, ಅಥವಾ ಗುಂಡುಗಳಿಗೆ ನಾನು ಹೆದರಿ ಓಡತಕ್ಕವನಲ್ಲ. ಜನರೂ ಸಹ ಹೆದರದೆ ಈ ಪುಂಡರನ್ನು ಎದುರಿಸಬೇಕು ಮತ್ತು ಮನೆಮಠಗಳನ್ನು ಬಿಟ್ಟು ಹೋಗಬಾರದು—ಎಂದು ಹೇಳಿದರು

ದಬ್ಬಾಳಿಕಾ ನೀತಿಯ ಅಂಕುರಾರ್ಪಣ

ಮೈಸೂರು ೩೦

ಶ್ರೀ ಕೆ ಹನುಮಂತಯ್ಯನವರನ್ನು ರಾಜದ್ರೋಹಕರವಾದ ಭಾಷಣ ಮಾಡಿದರೆಂಬ ಆಪಾದನೆ ಮಾಡಿ ಸರ್ಕಾರದವರು ದಸ್ತಗಿರಿ ಮಾಡಿರುವುದು ಇಂದಿನ ವಾತಾವರಣದಲ್ಲಿ ಅನುಚಿತ ಮತ್ತು ಖಂಡನೀಯವಾಗಿರುತ್ತದೆ. ಭಾರತ ಸ್ವಾತಂತ್ರ್ಯದ ಹೆಬ್ಬಾಗಿಲಿನಲ್ಲಿ ನಿಂತು ದಾಸ್ಯತ್ವದ ಸಂಕೋಲೆಯಿಂದ ಪಾರಾಗುವ ಕಾಲದಲ್ಲಿ ಮೈಸೂರು ಸರ್ಕಾರದ ದಬ್ಬಾಳಿಕಾ ನೀತಿಯ ಅಂಕುರಾರ್ಪಣವು ಪ್ರಾರಂಭವಾಗಿರುತ್ತದೆಂದು ಬೇರೆ ಹೇಳಬೇಕಾಗಿಲ್ಲ. ಕಾಂಗ್ರೆಸ್ಸಿನವರು ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಲು ಹೂಡಬೇಕೆಂದಿರುವ ಸತ್ಯಾಗ್ರಹಕ್ಕೆ ಸರ್ಕಾರದವರೇ ಸ್ವಾಗತ ನೀಡಿರುತ್ತಾರೆ. ಜವಾಬ್ದಾರಿ ಸರ್ಕಾರವನ್ನು ಕೂಡಲೇ ಸ್ಥಾಪಿಸಲು ಕಾಂಗ್ರೆಸ್ಸಿನವರು ಕಂಕಣಬದ್ಧರಾಗಿರುವಾಗ ಯಾರೊಬ್ಬರೂ ಹಿಮ್ಮೆಟ್ಟುವುದಿಲ್ಲ. ಅಂತಹ ಸತ್ಯಾಗ್ರಹ ಚಳುವಳಿ ಆರಂಭವಾಗಲು ಶ್ರೀ ಹನುಮಂತಯ್ಯನವರ ದಸ್ತಗಿರಿಯು ಪ್ರೋತ್ಸಾಹಕರವಾಗಿರುತ್ತೆಂದು ಹೇಳಬಯಸುತ್ತೇನೆ—ಎಂಬುದಾಗಿ ಸೂಚಿಸಿ ಮೈಸೂರು ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷರೂ, ಕಾರ್ಯಕಾರಿ ಸಮಿತಿ ಸದಸ್ಯರೂ ಆದ ಶ್ರೀ ಎಸ್. ಚನ್ನಯ್ಯನವರು ಹೇಳಿಕೆಯನ್ನಿತ್ತಿದ್ದಾರೆ.

ವಿದ್ಯಾರ್ಥಿ ಚುನಾವಣೆ

ಕರ್ನಾಟಕ ಪ್ರಾಂತ ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಮೈಸೂರು ಜಿಲ್ಲೆಯಿಂದ ಒಬ್ಬರನ್ನು ಆರಿಸಿ ಕಳಿಸಬೇಕಾಗಿದೆ. ಉಮೇದುವಾರರಾಗಿ ನಿಲ್ಲಬಯಸುವವರು ಜನವರಿ ೧ ರೊಳಗೆ ನಗರ ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯದರ್ಶಿಗಳಿಗೆ ಅರ್ಜಿ ಕಳಿಸಿಕೊಡಬೇಕಾಗಿ ಪ್ರಕಟಿಸಲಾಗಿದೆ.

ಬ್ರಿಟಿಷ್ ಹೇಳಿಕೆಗೆ ಕಾಂಗ್ರೆಸ ಒಪ್ಪಿಗೆಯೇ ?

ಲೀಗನ್ನು ಭಾರತ ರಾಜ್ಯಾಂಗ ಸಭೆಗೆ ಬರಮಾಡಲು ಇರುವ ಮಾರ್ಗವೆಂದರೆ ಡಿ|| ೬ ರಲ್ಲಿ ಬ್ರಿಟಿಷ್ ಸರ್ಕಾರವು ಇತ್ತಿರುವ ಹೇಳಿಕೆಯನ್ನು ಕಾಂಗ್ರೆಸ್ ಒಪ್ಪಿದರೆ ಮಾತ್ರ ಸಾಧ್ಯವೆಂದು ಶ್ರೀರಾಮಪುರದಲ್ಲಿ ಗಾಂಧೀಜಿಯವರೊಡನೆ ನಾಯಕರು ನಡೆಸುತ್ತಿರುವ ಸಂಧಾನದಲ್ಲಿ ಅಭಿಪ್ರಾಯ ಪಡಲಾಗಿದೆಯೆಂದು ಗೊತ್ತಾಗಿದೆ. ಈ ಬಗ್ಗೆ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಕ್ಷಿ ನಿರ್ಧಾರಕ್ಕೆ ಬಿಡಲಾಗುವುದು

ದಕ್ಷಿಣ ಇಂಡೋಚೀಣಾದಲ್ಲಿ ಕದನ ನಿಂತಿತು

ಸೈಗಾನಿನಲ್ಲಿ ಬಂದಿರುವ ಫ್ರಾನ್ಸಿನ ವಸಾಹತು ಮಂತ್ರಿಗಳು, ಪರಿಸ್ಥಿತಿಯನ್ನೂ ವಿಯಟ್‌ನಾಮ್ ರಿಪಬ್ಲಿಕ್ಕಿನವರ ಬೇಡಿಕೆಗಳನ್ನು ಅರಿಯುವ ಸಲುವಾಗಿ ಕೈಗೊಂಡಿರುವ ಪ್ರವಾಸದಲ್ಲಿ ಅಡಚಣೆಯಾಗಬಾರದೆಂಬ ದೃಷ್ಟಿಯಿಂದ ಇಂಡೋಚೀಣದ ದಕ್ಷಿಣ ಭಾಗದಲ್ಲಿ ಕೂಡಲೇ ಕದನವನ್ನು ನಿಲ್ಲಿಸಬೇಕೆಂದು ವಿಯಟ್‌ನಾಮ್ ರಿಪಬ್ಲಿಕ್‌ನ ಮಿಲಿಟರಿ ಅಧಿಕಾರಿಗಳು ನಾಟೊಂಗೆ ಪಡೆಗೆ ಆಜ್ಞೆ ಇತ್ತಿದ್ದಾರೆ. ಕದನವನ್ನು ಮಾತ್ರ ನಿಲ್ಲಿಸಬೇಕೆಂದೂ, ತಾವು ಹಿಡಿದಿರುವ ಪ್ರದೇಶಗಳನ್ನು ಬಿಟ್ಟು ಕೊಡಬಾರದೆಂದೂ ಅವರಿಗೆ ಸೂಚಿಸಲಾಗಿದೆ. ಅಲ್ಲದೆ ವಿಯಟ್‌ನಾಮ್ ರಿಪಬ್ಲಿಕ್ಕಿನವರು ಒಪ್ಪಂದಕ್ಕೆ ಬರಲು ಪ್ರಯತ್ನಿಸುತ್ತಿದ್ದಾರೆಂದೂ ಹೇಳಲಾಗಿದೆ.

ಸಾಧ್ವಿ

ತಾ॥ ೩೦-೧೨-೪೬ ಸೋಮವಾರ

ಗ್ವಾಲಿಯರ್ ಮಹಾರಾಜರ ಘೋಷಣೆ

ತಮ್ಮ ಆಶ್ರಯದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವುದೇ ತಮ್ಮ ಸರ್ಕಾರದ ಗುರಿಯೆಂದು ಗ್ವಾಲಿಯರ್ ಸಂಸ್ಥಾನದ ಮಹಾರಾಜರವರು ಘೋಷಿಸಿದ್ದಾರೆ. ಇದನ್ನು ಎಲ್ಲ ಸಂಸ್ಥಾನಗಳ ಪ್ರಜೆಗಳೂ, ಓತ್ತೈಸಿಗಳೂ ಸಂತೋಷದಿಂದ ಸ್ವಾಗತಿಸುವರು. ಸಂಸ್ಥಾನಗಳ ಸಮಸ್ಯೆಯು ದೊಡ್ಡ ಸಮುದ್ರಮಥನದಂತೆ ಪರಿಣಮಿಸಿರುವ ಈ ಸಮಯದಲ್ಲಿ ಈ ಘೋಷಣೆಗೆ ವಿಶೇಷವಾದ ಮುಖ್ಯತೆಯುಂಟಾಗುತ್ತದೆ. ರಾಜ-ಪ್ರಜೆಗಳ ಬಾಂಧವ್ಯವನ್ನು ಮಧುರಗೊಳಿಸಲು ಗ್ವಾಲಿಯರ್ ಪ್ರಭುಗಳು ಕೈಗೊಂಡಿರುವ ಪ್ರಯತ್ನಕ್ಕಾಗಿ ಅವರು ಅಭಿನಂದನಾರ್ಹರು.

ಗ್ವಾಲಿಯರ್ ಸಂಸ್ಥಾನದ ಪ್ರಗತಿಯು, ಮೈಸೂರಿನವರಾದ ನಮ್ಮ ಮೇಲೆಯೂ ಪರೋಕ್ಷವಾದ ಪ್ರತಿಕ್ರಿಯೆಯನ್ನು ಉಂಟುಮಾಡದಿರದು. ಹಿಂದೆ ನಮ್ಮ ಸಂಸ್ಥಾನದ ಸಚಿವರಾಗಿ ನಿವೃತ್ತರಾಗಿದ್ದ ರಾಜಮಂತ್ರಪ್ರವೀಣ ಶ್ರೀ ಎಸ್. ವಿ. ರಾಜಗೋಪಾಲಾಚಾರಿಯವರು ಮೊನ್ನೆ ಮೊನ್ನೆಯವರೆಗೆ ಅಲ್ಲಿನ ಮುಖ್ಯಮಂತ್ರಿಗಳಾಗಿದ್ದರು. ಅವರ ಅನುಭವ, ಮೇಧಾಶಕ್ತಿ ಮತ್ತು ರಾಜನೀತಿ ನೈಪುಣ್ಯಗಳು ಆ ಸಂಸ್ಥಾನದ ಆಡಳಿತ ಮತ್ತು ಆರ್ಥಿಕ ಮೇಲೆ ವಿಶೇಷವಾದ ಪ್ರಭಾವವನ್ನು ಬೀರಿರಬೇಕು. ಈಗ ಮತ್ತೊಬ್ಬ ಮೈಸೂರಿನ ನಿವೃತ್ತ ಮಂತ್ರಿಗಳು ಆ ಸಂಸ್ಥಾನದ ಆಡಳಿತ ಸೂತ್ರವನ್ನು ವಹಿಸಲು ಹೊರಟಿದ್ದಾರೆ. ಇಂತಹ ಸಮಯದಲ್ಲಿ ಮೇಲ್ಕಂಡ ಘೋಷಣೆಯು ಮತ್ತಷ್ಟು ಪ್ರಾಮುಖ್ಯತೆಯನ್ನು ಹೊಂದಿರುತ್ತದೆ. ಈ ಹೊಸ ವಾತಾವರಣದಲ್ಲಿ ಆಡಳಿತವನ್ನು ನಿರ್ವಹಿಸಲು ಹೊರಟಿರುವ ಶ್ರೀ॥ ಎಂ. ಎ. ಶ್ರೀನಿವಾಸನ್‌ರವರ ಮಾರ್ಗವು ಬಹಳ ಸುಗಮವಾಗುವುದರಲ್ಲಿ ಸಂದೇಹವಿಲ್ಲ.

ಸಾರ್ವಭೌಮತ್ವವು ರಾಜರುಗಳಲ್ಲಿ ಐಕ್ಯವಾಗಿದೆಯೋ, ಪ್ರಜೆಗಳಲ್ಲಿ ಅಂತರ್ಗತವಾಗಿದೆಯೋ ಎಂಬ ಪ್ರಶ್ನೆಯು ಈಗ ಬಹಳವಾಗಿ ಚರ್ಚಿಸಲ್ಪಡುತ್ತಿದೆ. ಈ ಬಗ್ಗೆ ಯೂ ಗ್ವಾಲಿಯರಿನ ನಿವೃತ್ತ ಸಚಿವರಾದ ಶ್ರೀ॥ ಎಸ್. ವಿ. ರಾಜಗೋಪಾಲಾಚಾರಿಯವರು ಕೊಟ್ಟಿರುವ ಹೇಳಿಕೆಯು ಅತ್ಯಂತ ಹೃದಯಂಗಮವಾಗಿ ಇತ್ತದೆ. ಮತ್ತು ಆ ಸಂಸ್ಥಾನದ ಪ್ರಗತಿ ಪರವಾದ ಮುನ್ನಡೆಗೆ ಇದು ಕುರುಹಾಗುತ್ತದೆ.

ಸಾರ್ವಭೌಮಾಧಿಕಾರದ ಮಾತು ಹಾಗಿರಲಿ, ಜವಾಬ್ದಾರಿ ಸರ್ಕಾರದ ಮಾತನ್ನೇ ಎತ್ತದಿರುವ ಸಂಸ್ಥಾನಗಳೂ ಅನೇಕವಿವೆ. ಜವಾಬ್ದಾರಿ ಸರ್ಕಾರದ ಮಾತನ್ನು ಶಾಸನ ಸಭೆಗಳಲ್ಲಿ ಪದೇ ಪದೇ ಆಡುವುದಕ್ಕೆ ಆಕ್ಷೇಪಿಸುವ ತಿರುಮಣಿಗಳೂ ಇದ್ದಾರೆ. ಈಗಾಗಲೇ ಹಲವಾರು ಸಂಸ್ಥಾನಗಳು ತಮ್ಮ ಪ್ರಜೆಗಳಿಗೆ ಜವಾಬ್ದಾರಿ ಸರ್ಕಾರವನ್ನು ಕೊಟ್ಟಿರುತ್ತವೆ. ಹೀಗೆ ಒಂದೊಂದು ಸಂಸ್ಥಾನದ ರೀತಿಯೂ ಒಂದೊಂದು ಬಗೆಯಾಗಿ ಅವ್ಯವಸ್ಥೆಗೊಳ್ಳುತ್ತಿದೆ.

ಮಾದರಿ ಸಂಸ್ಥಾನವೆನಿಸಿದ ನಮ್ಮ ಮೈಸೂರಿನಲ್ಲಿಯೂ ಸಹ ಇದುವರೆಗೆ ಜವಾಬ್ದಾರಿ ಸರ್ಕಾರದ ಧ್ಯೇಯವನ್ನು ಪ್ರಭುತ್ವನವರು ಅಂಗೀಕರಿಸಿರುವುದಿಲ್ಲ. ನಮ್ಮ ಸರ್ಕಾರದ ರಾಜಕೀಯ ಗುರಿ ಏನೆಂಬುದೇ ಇದುವರೆಗೆ ವ್ಯಕ್ತಪಟ್ಟಿರುವುದಿಲ್ಲ. ಕಾಂಗ್ರೆಸ್ಸಿಗೂ, ಸರ್ಕಾರದವರಿಗೂ ಹಿಂದೆ ಏರ್ಪಟ್ಟ ಒಪ್ಪಂದದಲ್ಲಿಯೂ ಸಹ ಜವಾಬ್ದಾರಿ ಸರ್ಕಾರದ ಗುರಿಯನ್ನು ಅವರು ಅಂಗೀಕರಿಸಿರುವುದಿಲ್ಲ. ಅದನ್ನು ಪ್ರಚಾರ ಮಾಡಲು ಯಾವ ಅಡ್ಡಿಯೂ ಇಲ್ಲವೆಂದು ಮಾತ್ರ ಒಪ್ಪಿರುತ್ತಾರೆ.

ಈಗ ನಮ್ಮ ಸಂಸ್ಥಾನದಲ್ಲಿ ಉಂಟಾಗಿರುವ ಬಿಕ್ಕಟ್ಟನ್ನು ಬಗೆಹರಿಸಲು ನಮ್ಮ ಮಹಾಪ್ರಭುಗಳವರು ನೂತನ ವರ್ಷದಲ್ಲಿ ಮೇಲ್ಕಂಡರೀತಿಯ ಘೋಷಣೆಯೊಂದನ್ನು ಹೊರಡಿಸುವುದರಿಂದ ವಿಶೇಷವಾದ ಪರಿಣಾಮವುಂಟಾಗುವುದೆಂದು ನಾವು ನಂಬಿರುತ್ತೇವೆ. ಜವಾಬ್ದಾರಿ ಸರ್ಕಾರದ ಸ್ಥಾಪನೆಯ ಗುರಿಯನ್ನು ಸಂಸ್ಥಾನದ ಸಕಲ ಪಂಗಡಗಳೂ ಅಂಗೀಕರಿಸಿವೆ. ಇದಕ್ಕಾಗಿ ಅನೇಕ ವಿಧವಾದ ಪ್ರಯತ್ನಗಳನ್ನು ಮಾಡುತ್ತಿವೆ. ಈ ಕೂಡಲೇ ಅದನ್ನು ಸ್ಥಾಪಿಸಬೇಕೆಂದು ಕಾಂಗ್ರೆಸ್ಸಿನವರು ಕೇಳುತ್ತಿದ್ದಾರೆ.

ಈಗಿನ ನಿರಂಕುಶ ಆಡಳಿತ ಕ್ರಮವನ್ನು ಬಿಟ್ಟು ಸಾಂಘಿಕ ಪದ್ಧತಿಯನ್ನು ಕೂಡಲೇ ಜಾರಿಗೆ ತಂದು ಮುಂದಿನ ಗುರಿಯನ್ನು ಸಾಧಿಸುವುದಕ್ಕೆ ಪೂರ್ವಭಾವಿಯಾಗಿ ಕೂಡಲೇ ಪ್ರಧಾನಾಂಗವನ್ನು ಪಡೆದ ಒಂದು ಮಿಶ್ರ ಮಂತ್ರಿಮಂಡಲವನ್ನಾದರೂ ಸ್ಥಾಪಿಸಬೇಕೆಂದು ಎಲ್ಲರೂ ಕೇಳುತ್ತಿದ್ದಾರೆ. ಆದರೆ ಇದಕ್ಕೆ ಪುರಸ್ಕಾರವು ದೊರೆತಿರುವುದಿಲ್ಲ. ಮೊನ್ನೆ ನಡೆದ ಶ್ರೀ ಹನುಮಂತಯ್ಯನವರ ದಸ್ತಗಿರಿಯಿಂದ ವಿದ್ಯಮಾನಗಳು ಪ್ರತಿಗಾಮಿ ರೂಪವನ್ನು ತಾಳುವಂತೆ ಕಂಡು ಬರುತ್ತಿವೆ. ಇದು ಇಂದಿನ ಪರಿಸ್ಥಿತಿಯಲ್ಲಿ ಸ್ವಲ್ಪವೂ ಸಮಾಧಾನಕರವಾದ ವಿಷಯವಲ್ಲ.

ಸಂಸ್ಥಾನದ ಆಡಳಿತದ ಗುರಿಯು ಜವಾಬ್ದಾರಿ ಸರ್ಕಾರ ಸ್ಥಾಪನೆಯೇ-ಎಂದು ನಮ್ಮ ಪ್ರಭುಗಳು ಘೋಷಣೆಯನ್ನು ಹೊರಡಿಸಿ, ಅದರ ಸಾಧನೆಗೆ ಸೂಕ್ತವಾದ ಕಾರ್ಯಕ್ರಮಗಳನ್ನು ಕೈಗೊಳ್ಳುವುದರಿಂದ ಇಂದಿನ ವಾತಾವರಣವು ಬಹಳ ಮಟ್ಟಿಗೆ ಸುಧಾರಿಸಬಹುದೆಂದು ನಾವು ಮತ್ತೊಮ್ಮೆ ಅರಿಕೆ ಮಾಡಿಕೊಳ್ಳುತ್ತೇವೆ.

Edited, printed and published by A. R. Nagarajua of the Sadhvi Press D Subbiah Road, Mysore.

ವಾರ ಭವಿಷ್ಯ

ತಾ॥ ೩೦-೧೨-೪೬ ರಿಂದ ೬-೧-೪೭ರ ವರೆಗೆ
(ಶ್ರೀ ನಿತ್ಯಾನಂದಸ್ವಾಮಿಗಳಿಂದ)

ಮೇಷ—ಆರೋಗ್ಯ ಚೆನ್ನಾಗಿರುತ್ತದೆ ಆರ್ಥಿಕ ಸ್ಥಿತಿ ಉತ್ತಮ ವ್ಯಾಪಾರ ಉದ್ಯೋಗಗಳಲ್ಲಿ ಪ್ರಗತಿ. ಅಧಿಕಾರಿಗಳಿಂದಲೂ ಮಿತ್ರ ವರ್ಗದಿಂದಲೂ ವಿಶೇಷ ಸಹಾಯ. ಎಲ್ಲಾ ಭಾಗದಲ್ಲೂ ಪ್ರಗತಿ. ತಾ॥ ೩೧, ೧, ೪ ಖರ್ಚು, ಪರೋಪಕಾರ.

ವೃಷಭ—ಆರೋಗ್ಯ ಕೆಡುತ್ತದೆ. ಧನಾದಾಯ ಕಡಿಮೆ ಉದ್ಯೋಗ ವ್ಯವಹಾರಗಳಲ್ಲಿ ಕಿರುಕುಳ, ಮಿತ್ರರಿಂದ ತಿರಸ್ಕಾರ, ಪ್ರವಾಸದಿಂದ ಅಪಾಯ. ವಿಶೇಷವಾದ ಖರ್ಚು. ತಾ॥ ೩೧, ೨, ೩ ಸಾಧಾರಣ ಶಾಂತಿ ಮಿತ್ರರ ಭೇಟಿ.

ಮಿಥುನ—ಆರೋಗ್ಯ ಸಾಧಾರಣ. ಮಾನಸಿಕ ಚಿಂತೆ ಹೆಚ್ಚು. ಉದ್ಯೋಗ ವ್ಯವಹಾರಗಳಲ್ಲಿ ಶತ್ರುಗಳಿಂದ ವಿಶೇಷ ಕಿರುಕುಳ. ಅಧಿಕಾರ ವರ್ಗದವರಿಂದ ಅಪಮಾನ. ಪ್ರವಾಸದಿಂದ ಆಲಸ್ಯ ಮತ್ತು ಅಧಿಕ ವ್ಯಯ. ತಾ॥ ೨, ೪, ೫ ಸಾಧಾರಣ ಖರ್ಚು ಮಿತ್ರರ ಭೇಟಿ.

ಕಟಕ—ಆರೋಗ್ಯ ಚೆನ್ನಾಗಿರುತ್ತದೆ. ಉದ್ಯೋಗ ವ್ಯವಹಾರಗಳಲ್ಲಿ ಹೊಸ ಪ್ರವಾಸದಿಂದ ಲಾಭ. ಅಧಿಕಾರಿ ವರ್ಗದವರಿಂದ ವ್ಯವಹಾರಗಳಲ್ಲಿ ಸಹಾಯ. ಧಾರ್ಮಿಕ ಕಾರ್ಯಗಳಿಂದ ಮನ್ನಣೆ ಸಂತೋಷ ಕೂಟಗಳಲ್ಲಿ ವಿಶೇಷ ಆಸಕ್ತಿ, ತಾ॥ ೩೦, ೧, ೪ ಜಗಳ. ಖರ್ಚು

ಸಿಂಹ—ಆರೋಗ್ಯ ಸಾಧಾರಣ ಆರ್ಥಿಕ ಮುಗ್ಗಟ್ಟು ಹೆಚ್ಚುವುದು. ವ್ಯವಹಾರಗಳು ಮುಂದೆ ಹೋಗುವುವು ಮಾನಸಿಕ ಚಿಂತೆ ಹೆಚ್ಚುವುದು ಬಂಧುಗಳಿಂದ ಅಪಮಾನ ಶತ್ರುಗಳಿಂದ ಕಿರುಕುಳ. ತಾ॥ ೩೧, ೧, ೩ ಸಾಧಾರಣ ಲಾಭ. ಮಿತ್ರ ಭೇಟಿ.

ಕನ್ಯಾ—ಮಾನಸಿಕ ಚಿಂತೆ ಬಹಳ ಹೆಚ್ಚುವುದು. ಹಣದ ಅಡಚಣೆ ವಿಪರೀತವಾಗಿರುವುದು ಆರೋಗ್ಯ ಉತ್ತಮ. ಆಪ್ತರಿಂದ ಸಹಾಯ. ಉದ್ಯೋಗ ವ್ಯವಹಾರಗಳಿಂದ ನಷ್ಟ ತಾ॥ ೩, ೪ ಸಾಧಾರಣ ಲಾಭ. ಬಂಧು ದರ್ಶನ.

ತುಲಾ—ಆರೋಗ್ಯ ಚೆನ್ನಾಗಿರುತ್ತದೆ. ಧನಲಾಭ ಉತ್ತಮ ವ್ಯಾಪಾರ, ಉದ್ಯೋಗಗಳಿಂದ ಲಾಭ. ಅಧಿಕಾರಿಗಳಿಂದ ಸನ್ಮಾನ. ರಾಜಕೀಯ ಕ್ಷೇತ್ರದಲ್ಲಿ ವಿಶೇಷ ಚಟುವಟಿಕೆ. ತಾ॥ ೩೦, ೩೧, ೪ ಸಂತೋಷ ಕೂಟಗಳಿಗಾಗಿ ಖರ್ಚು. ಪ್ರವಾಸ.

ವೃಶ್ಚಿಕ—ಆರೋಗ್ಯ ಉತ್ತಮ. ಧನಲಾಭ ಸಾಧಾರಣ ಕುಟುಂಬದ ಆರೋಗ್ಯ ಕೆಟ್ಟು ವೈದ್ಯಕೀಯ ವೆಚ್ಚ ಹೆಚ್ಚುವುದು.

ಉದ್ಯೋಗ ವ್ಯವಹಾರಗಳಲ್ಲಿ ಯಶ... ಕಾರಿಗಳಿಂದಲೂ ಮಿತ್ರರಿಂದಲೂ ಸ... ತಾ॥ ೨, ೩, ೪ ಖರ್ಚು. ಬ... ಆಗಮನ

ಧನುಸ್ಸು—ಆರೋಗ್ಯ ಚೆನ್ನಾ... ದೆ ಉದ್ಯೋಗ ವ್ಯವಹಾರಗಳಲ್ಲಿ ... ಗಳಿಂದ ಕಿರುಕುಳ. ಧನಾದಾಯ... ಮ ಅನಿರೀಕ್ಷಿತ ಪ್ರವಾಸವೊದಗು... ಧಾರ್ಮಿಕ ಕಾರ್ಯಗಳಲ್ಲಿ ಆಸಕ್ತಿ ... ವುದು. ತಾ॥ ೧, ೨ ಕ್ಲೇಶ. ... ಅಪಘಾತ.

ಮಕರ—ಆರೋಗ್ಯ ಕೆಡುತ್ತದೆ. ... ನಸಿಕ ಅಶಾಂತಿ ಹೆಚ್ಚುವುದು. ಉದ್ಯೋಗ ವ್ಯವಹಾರಗಳಲ್ಲಿ ಭಕ್ಕೆ ತಗಲುವುದು ... ವಾಸದಿಂದ ನಷ್ಟ ಧಾರ್ಮಿಕ ಕಾ... ಗಳಿಂದ ಖರ್ಚು ಅಧಿಕ. ತಾ॥ ೩೧, ೨ ... ಸಾಧಾರಣ. ಮಿತ್ರಸಹಾಯ, ಧನಲಾ...

ಕುಂಭ—ಆರೋಗ್ಯ ಚೆನ್ನಾಗಿರು... ಧನಲಾಭ ಉತ್ತಮ. ಉದ್ಯೋಗ ... ಹಾರಗಳಿಂದ ಸನ್ಮಾನ. ಪ್ರವಾಸದಿಂದ ... ಮುಖ ವ್ಯಕ್ತಿಗಳ ಮೈತ್ರಿಯುಂಟಾ... ವುದು ಬಂಧುಜನರ ಆಗಮನದಿಂದ ... ಸವಾದ ವೆಚ್ಚ ತಾ॥ ೩, ೪, ... ಖರ್ಚು.

ಮೀನ—ಆರೋಗ್ಯ ಉತ್ತಮವಾಗಿ... ತ್ತದೆ. ಧನಾದಾಯ ಚೆನ್ನಾಗಿರುತ್ತದೆ. ... ಧಿಕಾರಿಗಳಿಂದ ವಿಶೇಷ ಸನ್ಮಾನ ದೊ... ಯುತ್ತದೆ. ಪರೋಪಕಾರಕ್ಕಾಗಿ ಹೆಚ್ಚು ... ಖರ್ಚು ಶುಭ ಕಾರ್ಯಗಳಿಗಾಗಿ ಪ್ರವಾ... ತಾ॥ ೨, ೪, ೫ ಖರ್ಚು. ಕಲಹ.

ರಾಜಕಮಲ್, ಮೈಸೂರು.

೨೭-೧೨-೪೬ ರಿಂದ ಪ್ರತಿ ದಿನ ೩ ಆಟಗಳು

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಸಿ. ರೆಡ್ಡಿಯವರೂ, ನ್ಯಾಯಾಂಗ ಸಚಿವರಾದ ಶ್ರೀ ಓ. ಎಸ್. ಎಂ. ಷರೀಫ್‌ರವರೂ ಪ್ರಶಂಸಿಸಿರುವ ರಾಮರಾಜ್ಯದ ಮಧುರ ಗಾಯಕಿ ರೇಣುಕಾ ನಟಿಸಿರುವ

ಪ್ರಕಾಶ್ ಪಿಕ್ಚರ್ಸ್‌ರವರ ಅತ್ಯಂತ ಅಮೋಘವಾದ

★ ಹಮಾರ ಸಂಸಾರ್ ★

ಭೂಮಿಕೆ:- ಉಮಾ ಕಾಂತ್, ಜಿಲ್ಲು ಮುಂತಾದವರು

ಸ್ವಾತಂತ್ರ್ಯೋತ್ಸವವು ಸಮೀಪಿಸುತ್ತಿರಲು

ಪಂಡಿತ ಡಿ. ಗೋಪಾಲಾಚಾರ್ಯರವರ ಜೀವಾಮೃತವು

ಈ ಐವತ್ತು ವರ್ಷಗಳಿಂದ ಮಾನವ ಲೋಕಕ್ಕೆ ಆರೋಗ್ಯಾನಂದಗಳನ್ನು ನೀಡುತ್ತಾ ಅನರ್ಗಳವಾಗಿ, ಅವಿಚ್ಛಿನ್ನವಾಗಿ ಸೇವೆ ಮಾಡಿ, ದಿನ ದಿನಾಭಿವೃದ್ಧಿಹೊಂದುತ್ತಿರುವುದಕ್ಕಾಗಿ ಹೆಮ್ಮೆ ಗರ್ವಿಸುತ್ತಿದೆ.

EASTERN 379.

ಸೋ॥. ಶಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಮಂಗಳವಾರ ೩೧—೧೨—೪೬ [ಸಂಚಿಕೆ ೧೨೪

ರಷ್ಯದ ಮೇಲೆ ಭಾರಿ - ಆಪಾದನೆಗಳು -

ಗೋಪಾಲರಾಯರ ಜಾಮೀನು ಪ್ರಕರಣ

ಬೆಂಗಳೂರು, ೩೦

ಸ್ವರ್ಣ ರತ್ನಾಕರ ಶ್ರೀ ಬಿ. ಎಸ್. ಗೋಪಾಲರಾಯರು ನಿನ್ನೆ ಪುನಃ ನಗರ ಮ್ಯಾಜಿಸ್ಟ್ರೇಟರ ಮುಂದೆ ಹಾಜರಾದರು. ೬೫ ಸಾವಿರ ರೂ. ಗಳ ಸ್ವಂತ ಮುಚ್ಚಳಿಕೆ ಮತ್ತು ಅದೇ ಮೊತ್ತದ ಎರಡು ಜಾಮೀನನ್ನು ಅವರು ಈ ದಿನ ಸಲ್ಲಿಸಬೇಕಾಗಿತ್ತು. ಆದರೆ ಅವರ ಪರ ವಕೀಲರು ಈ ಜಾಮೀನು ಬಹಳ ದುಬಾರಿಯೆಂದೂ, ಮ್ಯಾಜಿಸ್ಟ್ರೇಟರು ತಮ್ಮ ಆಜ್ಞೆಯನ್ನು ಬದಲಾಯಿಸಬೇಕೆಂದೂ, ಪ್ರಾರ್ಥಿಸಿ ೫ ಸಾವಿರ ರೂ. ಗಳ ಜಾಮೀನು ಸರಿಯಾಗಿದೆಯೆಂದರು. ಶ್ರೀ ಗೋಪಾಲರಾಯರಿಗೆ ಸಾರ್ವಜನಿಕ ಕ್ಷೇತ್ರದಲ್ಲಿರುವ ಸ್ಥಾನ ಮತ್ತು ಅವರ ಮನೆಯ ಮುಂದೆ ಇಟ್ಟಿರುವ ಪೋಲೀಸ್ ಕಾವಲು ಇವುಗಳ ದೃಷ್ಟಿಯಿಂದ ಅವರ ದಸ್ತಗಿರಿಗೆ ವಾರಂಟು ಹೊರಡಿಸಬೇಕಾಗಿರುವುದು ಸೂಕ್ತವಲ್ಲವೆಂದೂ ಹೇಳಿದರು. ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರು ಜಿಲ್ಲಾ ನ್ಯಾಯಾಧೀಶರು ಕೇಳಿರುವ ಜಾಮೀನು ಮೊತ್ತವು ಸರಿಯಾಗಿದೆಯೆಂದರು. ನಂತರ ನ್ಯಾಯಾಧೀಶರು ಆಜ್ಞೆ ಮಾಡುತ್ತಾ ತಾವು ಸೂಚಿಸಿರುವ ಜಾಮೀನು ಮುಚ್ಚಳಿಕೆ ಮೊಬಲಗನ್ನು ಬದಲಾಯಿಸಲು ಕಾರಣಗಳಾವುವೂ ಇಲ್ಲವೆಂದು ಹೇಳಿ ಜಾಮೀನು ಕೊಡುವ ಅವಧಿಯನ್ನು ಮಾತ್ರ ಜನವರಿ ೩ ತಾ॥ ವರೆಗೆ ಹೆಚ್ಚಿಸಿರುವುದಾಗಿ ತಿಳಿಸಿದರು.

ಕೈಲಾಸಂ ಸ್ಮಾರಕ ನಾಟಕಗಳ ಸ್ಪರ್ಧೆ

ಜನವರಿ ೧೭ ಮತ್ತು ೧೮ ನೇ ತಾರೀಖುಗಳಲ್ಲಿ ಮೈಸೂರು ಇಂಟರ್ ಕಾಲೇಜಿನ ಕರ್ನಾಟಕ ಸಂಘದ ಆಶ್ರಯದಲ್ಲಿ ದಿವಂಗತ ಟಿ. ಪಿ. ಕೈಲಾಸಂರವರ ಸ್ಮಾರಕಕ್ಕಾಗಿ ಒಂದು ಅಂಕ ನಾಟಕ ಸ್ಪರ್ಧೆಯನ್ನು ಏರ್ಪಡಿಸಿದೆ. ಇದರಲ್ಲಿ ಭಾಗವಹಿಸಲು ಇಷ್ಟಪಡುವ ನಾಟಕ ಸಂಘಗಳು ೫ ರೂಪಾಯಿ ಪ್ರವೇಶ ಧನದೊಡನೆ ಜನವರಿ ೧೦ ನೇ ತಾರೀಖಿನೊಳಗಾಗಿ ಸಂಘದ ಕಾರ್ಯದರ್ಶಿಯವರಿಗೆ ತಿಳಿಸಬೇಕಾಗಿ ಕೋರಲಾಗಿದೆ. ವಿಜಯಿಸಿದ ಸಂಘಗಳಿಗೆ ೧೦೦ ರೂಪಾಯಿ ಮತ್ತು ೫೦ ರೂಪಾಯಿಗಳ ಎರಡು ಪಾರಿತೋಷಕಗಳನ್ನು ಇಟ್ಟಿರುತ್ತಾರೆ.

ಬಿರುದು ರದ್ದಾಯಿತು

ಬಂಗಾಳದ ಢಾಕಾ ಜಿಲ್ಲೆಯ ನಾರಾಯಣಗಂಜಿನಲ್ಲಿ ಇದುವರೆಗೆ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರಾಗಿದ್ದ ಖಾನ್ ಸಾಹೇಬ್ ಮೌಲ್ವಿ ಮಹಮುದ್ ಅಬ್ದುಲ್ ವಹಾಬರವರ ಖಾನ್ ಸಾಹೇಬ್ ಬಿರುದನ್ನು ರದ್ದುಗೊಳಿಸಲಾಗಿದೆ ಮತ್ತು ಅವರಿಗೆ ಇತ್ತಿದ್ದ ಕೈಸರ್-ಹಿಂದ್ ಪದಕವನ್ನು ಅವರಿಂದ ಕಸಿದುಕೊಳ್ಳಲಾಗಿದೆಯೆಂದು ಹಿಂದೂಸ್ಥಾನದ ಗೆಜೆಟ್ಟಿನಲ್ಲಿ ಪ್ರಕಟವಾಗಿದೆ.

ಒಂದು ಗಂಟೆಗೆ ಒಂದು ವಿಮಾನ

ಪ್ರತಿಯೊಂದು ಘಂಟೆಗೂ ಒಂದೊಂದು ಸಂಪೂರ್ಣವಾದ ವಿಮಾನವನ್ನು ಬ್ರಿಟಿಷ್ ವಿಮಾನ ತಯಾರಿಕೆಯೊಟ್ಟನು ಸಿದ್ಧಪಡಿಸುವುದಾಗಿ ತಿಳಿದು ಬಂದಿದೆ. ಎಂದರೆ ಆ ಕಾಲದಲ್ಲಿ ವಿಮಾನದ ಸುಮಾರು ೨೫೦೦೦ ಭಾಗಗಳನ್ನು ತಯಾರಿಸಿ, ಜೋಡಿಸಿ, ಪರೀಕ್ಷಿಸುವ ಕೆಲಸಗಳು ನಡೆಯುತ್ತವೆ ಎಂದು ಹೇಳಲಾಗಿದೆ.

ಕೋಮುವಾರು ಶಾಂತಿಗೆ ಬೀರಾರ್ ರಾಜಕುಮಾರಿಯವರ ಮನವಿ

ಭಾರತದಲ್ಲಿ ನಡೆಯುತ್ತಿರುವ ಕೋಮುವಾರು ಕಲಹವು ಕೂಡಲೇ ನಿಲ್ಲಬೇಕು. ಈ ಸಂಹಾರದ ಭೀಕರತೆಯನ್ನು ಭಾರತದ ಮಹಿಳೆಯರೆಲ್ಲರೂ ಮನಗೊಂಡು ಕೋಮುವಾರು ಸಾಮರಸ್ಯಕ್ಕೆ ಪ್ರಯತ್ನ ಪಡಬೇಕು ಮತ್ತು ತಮ್ಮ ಮಕ್ಕಳನ್ನು ಆ ಬಗ್ಗೆ ತಯಾರುಮಾಡಬೇಕು ಎಂಬುದಾಗಿ ಬೀರಾರಿನ ರಾಜಕುಮಾರಿಯವರು ಅಕೋಲಾ ನಗರದಲ್ಲಿ ನಡೆದ ಸಭೆಯೊಂದರಲ್ಲಿ ತಿಳಿಸಿದ್ದಾರೆ. ಭಾರತವು ಸ್ವಾತಂತ್ರ್ಯದ ಹೊಸಿಲಿನಲ್ಲಿ ನಿಂತು ತನ್ನ ಉನ್ನತವಾದ ಭವಿಷ್ಯವನ್ನು ನಿರ್ಧರಿಸಿ ಕೊಳ್ಳುವ ಸಮಯದಲ್ಲಿ ಈ ಕೋಮುವಾರು ಕಲಹಗಳು ನಮ್ಮ ಕೀರ್ತಿಗೆ ಕಳಂಕ ಪ್ರಾಯವಾಗಿವೆ ಎಂದೂ ಅವರು ಹೇಳಿದ್ದಾರೆ.

ಕರುಣೆಯ ಕೊಲೆ

೨೧ ವರ್ಷಕ್ಕೆ ಮೇಲ್ಪಟ್ಟು ಗುಣವಾಗಲು ಸಾಧ್ಯವೇ ಇಲ್ಲದ ವ್ಯಾಧಿಯಿಂದ ಅಥವಾ ಇತರ ತೊಂದರೆಗೊಳಗಾಗಿರುವವರನ್ನು ಅವರ ಇಚ್ಛೆಯಂತೆ ಸಾಯಿಸಲು ಅವಕಾಶವಾದ ಕಾನೂನನ್ನು ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ಜಾರಿಗೆ ತರಲು ಆಲೋಚನೆ ನಡೆಯುತ್ತಿದೆ. ನ್ಯೂಯಾರ್ಕಿನ ೧೫೦೦ ಮಂದಿ ವೈದ್ಯರೂ, ೫೪ ಜನ ಪಾದ್ರಿಗಳೂ ಇದರ ವಿಚಾರದಲ್ಲಿ ಒಂದು ಮಸೂದೆಯನ್ನು ಅಲ್ಲಿನ ಕಾಂಗ್ರೆಸ್ಸಿನಲ್ಲಿ ಮಂಡಿಸಲಿದ್ದಾರೆ. ಜೀವನ ಸಾಗಿಸುವುದು ಅಸಾಧ್ಯವೆಂದು ಮನವರಿಕೆಯಾಗಿರುವ ರೋಗಿಯು ತಾನು ಸಾವನ್ನು ಬಯಸುವುದಾಗಿ ನ್ಯಾಯಸ್ಥಾನಕ್ಕೆ ಅರ್ಜಿ ಹಾಕಿಕೊಂಡರೆ ಆಗ ಒಂದು ಪರಿಶೀಲನಾ ಸಮಿತಿಯನ್ನು ನೇಮಿಸಲಾಗುವುದು. ಆ ಸಮಿತಿ ಸಲಹೆ ಇತ್ತರೆ ವೈದ್ಯರು ಅಪೇಕ್ಷಿತನಿಗೆ ವಿಷವನ್ನಿತ್ತು ಕೊಲ್ಲುವರು. ಇದು ಈಗ ಶಾಸನ ಬಾಹಿರವಾಗಿದೆ. ಈ ಹೊಸ ಮಸೂದೆಯು ೨೧ ವರ್ಷಕ್ಕೆ ಕೆಳಪಟ್ಟವರಿಗೆ ಅನ್ವಯಿಸುವುದಿಲ್ಲ.

ಅಲಹಾಬಾದಿನಲ್ಲಿ ಗುಂಡು

ಗುರು ಗೋವಿಂದಸಿಂಗರ ಜನ್ಮೋತ್ಸವದ ಸಂದರ್ಭದಲ್ಲಿ ಮೊನ್ನೆ ಅಲಹಾಬಾದಿನಲ್ಲಿ ಗಲಭೆ ಉಂಟಾಗಿ ಪೋಲೀಸರು ಗುಂಡು ಹಾರಿಸಿದರು. ೪ ಮಂದಿ ಸತ್ತು ಅನೇಕರಿಗೆ ಗಾಯಗಳಾಗಿವೆ. ನಗರದಲ್ಲೆಲ್ಲಾ ಕರ್ಫ್ಯೂ ಆಜ್ಞೆ ಜಾರಿಗೆ ಬಂದಿದೆ.

ಸೂಚನೆ

ಹೊಸ ವರ್ಷದ ಆರಂಭದ ಪ್ರಯುಕ್ತ ನಾಳೆ ದಿನ "ಸಾಧ್ವಿ" ಪತ್ರಿಕೆಗೆ ರಜಾ ಕೊಡಲಾಗಿದೆ.

ವ್ಯವಸ್ಥಾಪಕ, "ಸಾಧ್ವಿ"

ಬಲವಂತ ವರ್ಗೀಕರಣಕ್ಕೆ ಕಾಂಗ್ರೆಸ್ಸಿನ ವಿರೋಧ

ಪ್ರಾಂತ್ಯಗಳನ್ನು ಬಲವಂತವಾಗಿ ವಿಂಗಡಿಸುವ ಡಿ॥ ೬ ರ ಬ್ರಿಟಿಷ್ ಹೇಳಿಕೆಯನ್ನು ಕಾಂಗ್ರೆಸ್ಸು ಒಪ್ಪುವುದಿಲ್ಲವೆಂದು ತಿಳಿದುಬಂದಿದೆ. ಮುಖಂಡರು ಗಾಂಧಿಜೀಯವರೊಡನೆ ಮಾತುಕತೆ ನಡೆಸಿದ ಮೇಲೆ ಈ ನಿರ್ಧಾರಕ್ಕೆ ಬರಲಾಯಿತೆಂದು ಹೇಳಲಾಗಿದೆ. ವರ್ಗಗಳಲ್ಲಿ ಪ್ರಾಂತ್ಯಗಳು ಮೊದಲು ಸೇರುವುವೆಂದೂ ಆದರೆ ವೈಯುಕ್ತಿಕ ಮತ ಚಲಾವಣೆಗೆ ಒಪ್ಪದೆ ಪ್ರಾಂತೀಯವಾಗಿ ಮತ ಚಲಾವಣಾ ಕ್ರಮವನ್ನು ಒಪ್ಪಬೇಕೆಂದೂ ಕಾಂಗ್ರೆಸ್ಸು ಹೇಳುತ್ತಿದೆ. ಈ ವಿಚಾರದಲ್ಲಿ ಕಾಂಗ್ರೆಸ್ ಕಾರ್ಯನಿರ್ವಾಹಕ ಸಮಿತಿಯು ಅಧಿಕೃತ ನಿರ್ಣಯವನ್ನು ತಯಾರು ಮಾಡಿ ಜ॥ ೫ ರಲ್ಲಿ ಸೇರುವ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಒಪ್ಪಿಗೆಗಾಗಿ ಮಂಡಿಸುವುದೆಂದೂ ಗೊತ್ತಾಗಿದೆ.

ಆಂಗ್ಲೋ-ಅಮೆರಿಕನ್ ಗುಪ್ತ ರಕ್ಷಣಾ ಒಪ್ಪಂದ

ಇಂಗ್ಲೆಂಡ್ ಮತ್ತು ಅಮೇರಿಕಾಗಳ ರಕ್ಷಣೆ ವಿಚಾರದಲ್ಲಿ ಆ ಎರಡು ರಾಷ್ಟ್ರಗಳಿಗೆ ಮಾತ್ರ ಗುಪ್ತವಾದ ಒಪ್ಪಂದವಾಗಿತ್ತೆಂದು ಫ್ರೆಂಚ್ ಪತ್ರಿಕೆಯೊಂದರಲ್ಲಿ ಪ್ರಕಟವಾಗಿದೆ. ಈ ಒಪ್ಪಂದಕ್ಕೆ ಅಧಿಕೃತವಾದ ಸಹಿಯು ವಾಷಿಂಗ್ಟನ್ನಲ್ಲಿ ಬೀಳಲಿರುವುದೆಂದು ಹೇಳಲಾಗಿದೆ. ಆರ್ಥಿಕ, ಮತ್ತು ಮಿಲಿಟರಿ ವಿಚಾರಗಳೂ ಈ ಒಪ್ಪಂದದಲ್ಲಿ ಅಡಕವಾಗಿವೆಯೆಂದೂ ವರದಿಯಾಗಿದೆ.

ಹಸುವಿನ ದಸ್ತಗಿರಿ ಮತ್ತು ಜುಲ್ಮಾನೆ

ಪಶ್ಚಿಮ ವರ್ಜೀನಿಯಾದ ಮಂಟ್ಗೊಮೇರಿಯೊಂದರಲ್ಲಿ ಒಂದು ಹಸುವು ತಪ್ಪಿದಾರಿಯಲ್ಲಿ ನಡೆಯುತ್ತಿದ್ದುದರಿಂದ ಅಲ್ಲಿನ ಟ್ರಾಫಿಕ್ ಪೋಲೀಸ್‌ನವರು ಆ ಹಸುವನ್ನು ದಸ್ತಗಿರಿಮಾಡಿ ನ್ಯಾಯಾಸ್ಥಾನಕ್ಕೆ ಒಯ್ದರು. ನ್ಯಾಯಾಧಿಪತಿಗಳು ತಪ್ಪು ಮಾಡಿದ್ದರಿಂದ ೫ ಗ್ಯಾಲನ್ ಹಾಲು ಕೊಡಬೇಕೆಂದು ಹಸುವಿಗೆ ಜುಲ್ಮಾನೆ ವಿಧಿಸಿದರು.

ಸ್ವಾಮಿ ಸಿದ್ಧೇಶ್ವರಾನಂದರವರ ಆಗಮನ

ಮೈಸೂರು, ೩೦

ರಾಜಧಾನಿಯ ಶ್ರೀ ರಾಮಕೃಷ್ಣಾಶ್ರಮದ ಸಂಸ್ಥಾಪಕರಾದ ಶ್ರೀ ಸ್ವಾಮಿ ಸಿದ್ಧೇಶ್ವರಾನಂದಜೀ ಯವರು ಈ ದಿನ ಸಂಜೆ ಬೆಂಗಳೂರಿನಿಂದ ಇಲ್ಲಿಗೆ ದಯಮಾಡಿಸುವರು. ಇಲ್ಲಿ ನಾಲ್ಕೈದು ದಿನಗಳ ಕಾಲ ಇರುವರು. ಪ್ಯಾರಿಸ್ ನಗರದಲ್ಲಿ ಇವರು ಕಳೆದ ಎಂಟು ವರ್ಷಗಳಿಂದ ವೇದಾಂತ ತತ್ವ ಪ್ರಚಾರ ಮಾಡಿ ವಿದೇಶ ಪ್ರಜಾನುರಾಗಿಗಳಾಗಿರುವರು.

ಚಿರತೆ ಶಿಕಾರಿ

ಚಾಮುಂಡಿ ಪುರಂ ಮತ್ತು ಅದರ ಸುತ್ತ ಮುತ್ತಲಿನ ಪ್ರದೇಶಗಳಿಂದಲೂ ಹಾವಳಿ ಮಾಡುತ್ತಿದ್ದ ಭಾರಿ ಚಿರತೆಯೊಂದನ್ನು ಅರಮನೆ ಇಲಾಖೆಯ ಶ್ರೀ ಗಳಾದ ರಾಮರಾಜು, ಲಕ್ಷ್ಮಣ ರಾಜು ಮತ್ತು ಜಂಗಲ ರಾಜು ಎಂಬುವರು ಬಹಳ ಸಾಹಸ ಪಟ್ಟು ನಿನ್ನೆ ರಾತ್ರಿ ಹೊಡೆದುಹಾಕಿದ್ದಾರೆ.

ವಿಯಟ್ನಾಮಿಗೆ ಫ್ರೆಂಚ್ ಪ್ರಧಾನಿಯ ಅರಿಕೆ

ಫ್ರಾನ್ಸಿನ ಮುಖ್ಯ ಮಂತ್ರಿ ಮಿ॥ ಬ್ಲೂಮ್‌ರವರು ಇಂಡೋ ಚೀನಾದ ವಿಯಟ್ನಾಮ್ ರಿಪಬ್ಲಿಕ್ ಅಧ್ಯಕ್ಷರಿಗೆ ಬಂದಿಸ ಫ್ರಾಂಕೋ-ವಿಯಟ್ ನಾಮ್ ಒಪ್ಪಂದದ ಆಧಾರದ ಮೇಲೆ ಇಂಡೋ ಚೀನಾದಲ್ಲಿ ಶಾಂತಿ ನೆಲಸುವಂತೆ ಮಾಡಬೇಕೆಂದು ತಂತಿ ಕಳುಹಿಸಿದ್ದಾರೆಂದು ಗೊತ್ತಾಗಿದೆ. ಇದಕ್ಕೆ ಉತ್ತರವಾಗಿ ರಿಪಬ್ಲಿಕ್ಕಿನ ಅಧ್ಯಕ್ಷರು ಕದನ ನಿಲ್ಲಿಸುವಂತೆ ತಮ್ಮ ಸೈನ್ಯಗಳಿಗೆ ತಿಳಿಸಿ ಫ್ರೆಂಚ್ ಸೈನ್ಯಗಳು ನ॥ ೧೯ ರಲ್ಲಿದ್ದ ಸ್ಥಳಗಳಿಗೆ ವಾಪಸು ಹೋಗಬೇಕೆಂದು ಸೂಚಿಸಿದ್ದಾರೆಂದು ತಿಳಿದು ಬಂದಿದೆ.

ರಷ್ಯದ ಮೇಲೆ ಆರೋಪಣೆ

ಆಕ್ರಮಿತ ಜರ್ಮನಿಯಲ್ಲಿ ಉಳಿದಿದ್ದ ಯುದ್ಧ ಸಾಮಗ್ರಿಗಳನ್ನು ರಷ್ಯವು ಉಪಯೋಗಿಸಿಕೊಂಡು ಅಸಾಧ್ಯ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆಯೆಂದು ವಾಷಿಂಗ್ಟನ್ನಿನ ಪ್ರತಿನಿಧಿ ಸಭಾ ಸಮಿತಿಯು ಆಪಾದನೆ ಮಾಡಿದೆ. ಇದು ನಿಜವಾಗಿದ್ದ ಪಕ್ಷದಲ್ಲಿ ಪಾಟ್ಸ್‌ಡಾಂ ಒಪ್ಪಂದವನ್ನು ಮುರಿದಿರುವುದರಿಂದ ಆಕ್ರಮಿತ ಜರ್ಮನಿಯನ್ನು ಬಿಟ್ಟು ರಷ್ಯ ಹೊರಡಬೇಕೆಂದು ಮತ್ತು ಅದು ಒಪ್ಪಿ ನಡೆಸಬೇಕೆಂದೂ ಆ ಸಮಿತಿಯು ಹೇಳುತ್ತದೆ. ಬರ್ಲಿನ್, ಸ್ಟೆಟಿನ್, ಸ್ಟಾರ್ಗಾರ್ಡ್ ಮತ್ತು ಪ್ರಾಂತ್ಯಗಳು ರಷ್ಯದ ಕೈಗಾರಿಕಾ ಅಭಿವೃದ್ಧಿಗಾಗಿ ಕೆಲಸ ಮಾಡುತ್ತಿದ್ದನ್ನು ತಡೆಗಟ್ಟಲು ಅನೇಕ ಸ್ಟೇಟ್ ಇಲಾಖೆಯು ಒತ್ತಾಯಪಡಿಸಬೇಕೆಂದೂ ಆ ಸಮಿತಿಯು ಸೂಚಿಸಿದೆ.

WANTED

An accountant on Rs. 40-4-60 with Rs. 10 D A and a Typist clerk on Rs. 25-2-35 with Rs. 8 as D A Pay in both cases being according to qualifications and experience.

Supported by Testimonials apply sharp to:

MANAGING DIRECTOR,
Nikila Karnataka Central
Ayurvedic Pharmacies Ltd.,
V... Road,
Mysore.

ಸಾಧ್ವಿ

ತಾ॥ ೩೧-೧೨-೪೬ ಮಂಗಳವಾರ

ಪಾಟಿಯಾಲಾದಲ್ಲಿ ಬಿಡುಗಡೆ

ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಸಭೆಯನ್ನು ನಡೆಸಿದರೆಂಬ ಕಾರಣದ ಮೇಲೆ ಪಾಟಿಯಾಲಾ ಸಂಸ್ಥಾನದ ಪ್ರಜಾ ಮಂಡಲದ ನಾಯಕರುಗಳನ್ನು ಅಲ್ಲಿನ ಅಧಿಕಾರಿಗಳು ಬಂಧಿಸಿದ್ದರಷ್ಟೆ. ಈ ವಿಷಯದಲ್ಲಿ ಅಲ್ಲಿನ ಪ್ರಭುಗಳು ಉದಾರ ಮನಸ್ಸನ್ನು ತೋರಿ ದಸ್ತಗಿರಿಯಾಗಿರುವ ಮುಖಂಡರೆಲ್ಲರನ್ನೂ ಬಿಡುಗಡೆ ಮಾಡಬೇಕೆಂದು ಆಜ್ಞೆಯಿತ್ತಿದ್ದಾರೆ. ಅಲ್ಲಿನ ದಿವಾನರು ಆದರಂತೆ ಮುಖಂಡರುಗಳನ್ನು ಖುಲಾಸೆ ಮಾಡಿಸಿದ್ದಾರೆ.

ಅಲ್ಪ ವಿಷಯಗಳಿಗಾಗಿ ಅಧಿಕಾರಿಗಳು ತೋರಿಸುವ ಅತ್ಯುತ್ಸಾಹದ ಪ್ರದರ್ಶನಗಳಿಂದ ಅನೇಕ ಅನರ್ಥ ಪರಂಪರೆಗಳು ಸಂಭವಿಸುವುವು. ಸಣ್ಣ ಪುಟ್ಟ ಪ್ರಸಂಗಗಳೇ ಭೂಕಾರವನ್ನು ತಾಳಿ ದೇಶದಲ್ಲೆಲ್ಲಾ ಅಲ್ಲೋಲಕಲ್ಲೋಲವನ್ನುಂಟು ಮಾಡುವುವು. ಆದುದರಿಂದ ಇಂತಹ ಪ್ರಸಂಗಗಳನ್ನು ಮೊಳಕೆಯಲ್ಲಿಯೇ ಚಿವುಟಿ ಹಾಕುವುದು ರಾಜನೀತಿ ಲಕ್ಷಣ. ಪಾಟಿಯಾಲದ ಅರಸರು ಅನುಸರಿಸುವ ಈ ವರ್ತನೆಯು ಎಲ್ಲರ ಅಭಿನಂದನೆಗೂ ಪಾತ್ರವಾಗುವುದರಲ್ಲಿ ಸಂದೇಹವಿಲ್ಲ.

ಅನೇಕ ದೇಶೀಯ ಸಂಸ್ಥಾನಗಳಲ್ಲಿ ಈಗ ಪ್ರಜಾ ಸ್ವಾತಂತ್ರ್ಯಕ್ಕಾಗಿ ಚಳುವಳಿಯು ನಡೆಯುತ್ತಿರುವುದು ಇಡೀ ಹಿಂದೂಸ್ಥಾನವು ಸ್ವತಂತ್ರ ರಾಜ್ಯಾಂಗ ರಚನೆಯಲ್ಲಿ ತೊಡಗಿರುವಾಗ ಸಂಸ್ಥಾನ ಪ್ರಜೆಗಳೂ ತಮ್ಮ ಹಕ್ಕು ಬಾಧ್ಯತೆಗಳಿಗಾಗಿ ಪ್ರಯತ್ನಿಸುವುದು ಸಹಜವಾಗಿಯೇ ಇದೆ. ಆದರೆ ದೇಶೀಯ ಸಂಸ್ಥಾನಗಳ ಪೈಕಿ ಒಂದೊಂದರಲ್ಲಿ ಒಂದೊಂದು ಪದ್ಧತಿಯ ರಾಜಕೀಯ ಪ್ರಗತಿಯು ಕಂಡು ಬರುತ್ತಿದೆ. ಎಲ್ಲವೂ ಒಂದೇ ಅಂತಸ್ತಿನಲ್ಲಿ ಮುಂದುವರೆದಿರುವುದಿಲ್ಲ. ಸಂಸ್ಥಾನಗಳ ಪ್ರಜೆಗಳಾದರೂ ಇಂದಿನ ವಿದ್ಯಮಾನಗಳಿಗೆ ಅನುಗುಣವಾಗಿ ತಮ್ಮ ರಾಜಕೀಯ ಅಭಿಲಾಷೆಗಳನ್ನು ಒಂದೇ ರೀತಿಯಲ್ಲಿ ಮುಂದಿಡುತ್ತಿದ್ದಾರೆ. ಇದರಿಂದ ಅಲ್ಲಲ್ಲಿ ಸ್ವಲ್ಪ ಘರ್ಷಣೆಗಳು ಕಂಡು ಬರುತ್ತಿವೆ. ಇದು ಅತ್ಯಂತ ಅನುಚಿತವಾದ ಪರಿಸ್ಥಿತಿ.

ಬ್ರಿಟಿಷ್ ಹಿಂದೂಸ್ಥಾನವು ಹಲವು ಮೂಲಭೂತ ರಾಜಕೀಯ ವಿಷಯಗಳಲ್ಲಿ ಖಚಿತವಾದ ಮಟ್ಟವನ್ನು ಮುಟ್ಟಿರುವಂತೆ ಸಂಸ್ಥಾನಗಳೂ ಮಾಡಿದರೆ ಇಂದಿನ ಅನೇಕ ತೊಂದರೆಗಳು ಪರಿಹಾರವಾಗುವುವು. ಪೂರ್ಣ ಸ್ವಾತಂತ್ರ್ಯವೇ ಭರತಖಂಡದ ರಾಜಕೀಯ ಗುರಿಯೆಂದು ದೇಶದ ನಾಯಕರುಗಳು ಮಾತ್ರವೇ ಅಲ್ಲದೆ ಬ್ರಿಟಿಷ್ ಅರಸರೂ ಅಂಗೀಕರಿಸಿರುವರು. ಅದರ ಜವಾಬ್ದಾರಿಕೆಯ ಸರ್ಕಾರದ ಗುರಿಯನ್ನೇ ಒಪ್ಪಿದರೆ ಸಂಸ್ಥಾನಗಳೂ ಹೇರಳವಾಗಿವೆ. ಇನ್ನು ಪೂರ್ಣ ಪ್ರಜಾಧಿಕಾರ, ಸಾರ್ವಭೌಮತ್ವ, ಶಾಸನ ಒಪ್ಪಿಗೆ ... ಮುಂತಾದವುಗಳ ...ವನ್ನು ಹೇಳಬೇಕಾಗಿಲ್ಲ.

ಈ ವಿಭಾಗದ ಪ್ರಕ್ರಿಯೆಗಳನ್ನು ನಿವಾರಿಸಿ ಸಂಸ್ಥಾನಗಳ ಅರಸರುಗಳ ಗುರಿಯನ್ನೂ, ನಾಗರಿಕ ಹಕ್ಕುಗಳ ಭರವಸೆಯನ್ನೂ ಮೊದಲು ಘೋಷಿಸಬೇಕಾದದ್ದು. ಹಲಕೆಲವು ಸಂಸ್ಥಾನಗಳಾದರೂ ಈ ಬಗ್ಗೆ ಮುನ್ನಡಿಯಿಡುತ್ತಿರುವುದಕ್ಕಾಗಿ ನಾವು ಸಂತೋಷಿಸುತ್ತೇವೆ. ಉಳಿದವುಗಳೂ ಬೇಗನೆ ಅವುಗಳನ್ನು ಹಿಂಬಾಲಿಸಬೇಕಾಗುವುದೆಂದು ನಾವು ನಂಬುತ್ತೇವೆ.

ಮೈಸೂರಿನಲ್ಲಿಯೂ ಈಗ ಪರಿಸ್ಥಿತಿಯು ಶಾಂತವಾಗಿರುವುದಿಲ್ಲ. ಮೊನ್ನೆ ತಾನೆ ಶ್ರೀ ಹನುಮಂತಯ್ಯನವರನ್ನು ದಸ್ತಗಿರಿ ಮಾಡಲಾಗಿದೆ. ಸೌಹಾರ್ದ ವಾತಾವರಣಕ್ಕೆ ಇಂತಹ ದಸ್ತಗಿರಿಗಳು ಸಹಕಾರಿಗಳಲ್ಲ. ಆದುದರಿಂದ ನಮ್ಮ ದಿವಾನರವರೂ ಸಹ ಪಾಟಿಯಾಲದಂತೆ ಇಲ್ಲಿಯೂ ಬಂಧನದಲ್ಲಿರುವ ಶ್ರೀ ಹನುಮಂತಯ್ಯನವರನ್ನು ಬಿಡುಗಡೆ ಮಾಡಿಸಿ ಕಾಂಗ್ರೆಸ್ ನಾಯಕರುಗಳೊಡನೆ ಸಂಧಾನ ನಡೆಸಿ ಕೂಡಲೇ ಪ್ರಜೆಗಳ ವಿಶ್ವಾಸಕ್ಕೆ ಪಾತ್ರವಾದ ಆಡಳಿತ ಪದ್ಧತಿಯನ್ನು ಜಾರಿಗೆ ತರುವ ಕಾರ್ಯಕ್ರಮವನ್ನು ಕೈಗೊಳ್ಳಲೆಂದು ನಾವು ಹಾರೈಸುತ್ತೇವೆ.

ನೌಕಾಲಿ ನಿರಾಶ್ರಿತರಿಗೆ ಸರ್ಕಾರದ ಎಚ್ಚರಿಕೆ

ಗೋಮಿಲ್ಲಾ ನಿರಾಶ್ರಿತ ಕೇಂದ್ರದಲ್ಲಿರುವ ನೌಕಾಲಿಯವರೆಲ್ಲ ೭ ದಿನಗಳೊಳಗಾಗಿ ವಾಪಸು ನೌಕಾಲಿಯ ತಮ್ಮ ತಮ್ಮ ಊರುಗಳಿಗೆ ತೆರಳ ಬೇಕೆಂದು ತಿಪ್ಪೇರಾ ಜಿಲ್ಲಾ ನ್ಯಾಯಾಧೀಶರು ಒಂದು ಎಚ್ಚರಿಕೆ ನೋಟೀಸನ್ನು ಪ್ರಕಟಿಸಿದ್ದಾರೆ; ಈ ಆಜ್ಞೆಯನ್ನು ವಿರೋಧಿಸುವವರಿಗೆ ಗೋಮಿಲ್ಲಾದಲ್ಲಿರಲು ಅವಕಾಶ ಕೊಡುವುದಿಲ್ಲ. ಅವರಿಗೆ ಕೊಡುತ್ತಿರುವ ಪಡಿತರವನ್ನು ನಿಲ್ಲಿಸಲಾಗುವುದು. ಈ ರೀತಿ ವಾಪಸು ತೆರಳುವ ನಿರಾಶ್ರಿತರಿಗೆ ಅವರುಗಳು ತಮ್ಮ ಸ್ಥಳವನ್ನು ಸೇರಿ ನೆಲೆಸಲು ತಕ್ಕ ಏರ್ಪಾಡನ್ನೂ, ೧೪ ದಿನಗಳ ರೇಷನ್ನನ್ನು ಒದಗಿಸಲು ಸರ್ಕಾರವು ವ್ಯವಸ್ಥೆ ಮಾಡಿದೆ-ಎಂದು ಪ್ರಕಟಿಸಲಾಗಿದೆ.

ವಿದ್ಯಾರ್ಥಿಗಳಿಗೆ ಉಪಾಹಾರ

ಸ್ವಂ ಸು] ನಂಜನಗೂಡು ೨೮

ಇಲ್ಲಿನ ಸರ್ಕಾರಿ ಕನ್ನಡ ಮಾಧ್ಯಮಿಕ ಶಾಲಾ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ವೇಳೆಯಲ್ಲಿ ಉಚಿತ ಉಪಾಹಾರವನ್ನು ಜನವರಿ ತಿಂಗಳಿಂದ ಏರ್ಪಡಿಸಲು ಪುರಸಭಾಧ್ಯಕ್ಷರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಲಾಗಿದೆ. ಶಾಲಾ ಮುಖ್ಯೋಪಾಧ್ಯಾಯರೇ ಇದರ ಕಾರ್ಯದರ್ಶಿಗಳು. ಮಹಾಜನರು ಉದಾರವಾಗಿ ಸಹಾಯ ಮಾಡಬೇಕಾಗಿ ಸಮಿತಿಯವರು ಪ್ರಾರ್ಥಿಸಿದ್ದಾರೆ.

ಮತ್ತೆ ಅಂಚೆ ನೌಕರರ ಮುಷ್ಕರವೇ ?

ಪೇ ಕಮಿಷನ್ನಿನವರ ಶಿಫಾರಸುಗಳು ತಮಗೆ ಅನುಕೂಲವಾಗಿಲ್ಲದಿದ್ದರೆ ತಾವು ನೇರವಾದ ಕಾರ್ಯಕ್ರಮಗಳನ್ನು ಕೈಗೊಂಡು ಮುಷ್ಕರವನ್ನು ಆರಂಭಿಸುವುದಾಗಿ ಅಖಿಲ ಭಾರತ ಅಂಚೆ ಮತ್ತು ಆರ್. ಎಂ. ಎಸ್. ನೌಕರರ ಯೂನಿಯನ್ನಿನವರು ನಿರ್ಣಯಿಸಿರುತ್ತಾರೆ.

ದನಗಳ ಪ್ರದರ್ಶನ

ಸ್ವ. ಸು] ಹಿರೀಸಾವೆ ೨೮

ಈ ಹೋಬಳಿಯಲ್ಲಿ ಬೆಂಗಳೂರು ಮಂಗಳೂರು ರಸ್ತೆ ... ಮೈಲಿ ಕಲ್ಲಿಗೆ ೧ ಫರ್ಲಾಂಗ್ ದೂರದಲ್ಲಿ ಮಾಮೂಲಿನಂತೆ ಬೆಟ್ಟದ ಆವರಣದಲ್ಲಿ ಬೂಕದ ಶ್ರೀ ರಂಗನಾಥ ಸ್ವಾಮಿ ಜಾತ್ರೆ ಅಂಗವಾಗಿ ದನಗಳ ಪ್ರದರ್ಶನವನ್ನು ಜನವರಿ ೧೩ರಿಂದ ೩೦ರವರೆಗೆ ನಡೆಸಲಾಗುತ್ತದೆ. ದನಗಳ ಸೌಕರ್ಯಕ್ಕಾಗಿ ಏರ್ಪಾಡುಗಳನ್ನೆಲ್ಲಾ ಮಾಡಲಾಗಿದೆ. ಉತ್ತಮ ರಾಸುಗಳಿಗೆ ಬಹುಮಾನ ಹಂಚಲಾಗುವುದು. ೩೦ ಸಾವಿರದವರೆಗೆ ದನಗಳು ಸೇರುವ ನಿರೀಕ್ಷೆ ಸಹ ಇದೆ.

ಕಳ್ಳರ ಹಾವಳಿ

ಸ್ವಂ. ಸು] ಶ್ರೀರಂಗಪಟ್ಟಣ ೨೮

ಈ ಊರಿನಲ್ಲಿ ಕಳ್ಳರ ಹಾವಳಿ ಅಧಿಕವಾಗುತ್ತಿದೆ. ಗಂಜಾಮಿನಲ್ಲಿ ಬಾಳೆ ಗೊನೆ, ತರಕಾರಿಗಳು ದಿನವಹಿ ಕಳುವಾಗುತ್ತಲೇ ಇವೆ. ಮೊನ್ನೆ ದಿನ ರಾತ್ರಿ ೫-೬ ಮನೆಗಳ ಬೀಗವನ್ನು ಮುರಿದು ಒಂದು ಮನೆಯಲ್ಲಿ ಕಳವು ನಡೆದಿದೆ. ಪೋಲೀಸಿನವರು ಏನು ಮಾಡುತ್ತಿರುವರೋ ಗೊತ್ತಿಲ್ಲ.

ಕ್ರಯಕ್ಕಿವೆ

೧ ಮೈಸೂರು ಸಿಟಿ ಸಿಮೆಂಟ್ ಬ್ಲಾಕಿನಲ್ಲಿ ಡೋರ್ ನಂಬರು ೯೫೦ ಉಳ್ಳ ಸಿಮೆಂಟ್ ತಾರಸಿ ಹೊಸ ಕಟ್ಟಡ, ಕಾಂಪೌಂಡು, ನಲ್ಲಿ, ದೀಪ ಉಳ್ಳ ಮನೆ ಕ್ರಯ-೧೪೦೦೦ ರೂಪಾಯಿಗಳು.

೨ ಶ್ರೀರಂಗಪಟ್ಟಣದ ತಾಲ್ಲೂಕು ಬೆಳಗೊಳ ಗ್ರಾಮ ವಿರಜಾ ನದಿ ನಾಲಾ ಕೆಳಗೆ ಫಲವತ್ತಾದ ೧ ಎಕರೆ ೨೮ ಗುಂಟೆ ಗದ್ದೆ, ಸರ್ವೆ ನಂ ೫೨೮ ಮತ್ತು ೫೩೯. ಕ್ರಯ-೩೦೦೦ ರೂಪಾಯಿಗಳು.

ವಿವರಗಳಿಗೆ:- ಆರ್. ಗುಂಡೂರಾವ್, ಮೈಸೂರು ಬ್ಯಾಂಕ್ ಬಿಲ್ಡಿಂಗ್, ಮೈಸೂರು.

೨೩೦ ಕೋಣಗಳ ಬಲಿಯೇ

ಚಾಮರಾಜ ನಗರದ ತಾಲ್ಲೋಕು ...ಸೂರು ಗ್ರಾಮದ ಶ್ರೀ ಕಸ್ತೂರಮ್ಮನ ಜಾತ್ರೆಯು ೫-೧-೪೭ ನೇ ಭಾನುವಾರ ನಡೆಯಲಿದೆ. ಈ ಸಮಯದಲ್ಲಿ ಸುಮಾರು ಮೂವತ್ತು ಕೋಣಗಳನ್ನು ಬಲಿಕೊಡಲು ಸಿದ್ಧತೆಗಳಾಗುತ್ತಿವೆ. ಮತ್ತು ೨೮-೧-೪೭ ರಲ್ಲಿ ಯಳಂದೂರು ತಾಲ್ಲೂಕಿನಲ್ಲಿರುವ ಹೊನ್ನೂರು ಗ್ರಾಮದಲ್ಲಿ ಸುಮಾರು ಇನ್ನೂರು ಕೋಣಗಳ ಬಲಿ ನಡೆಯಲಿದೆ. ಸರ್ಕಾರದವರೂ, ಸಾರ್ವಜನಿಕರೂ ಇದನ್ನೆ ನಿಗಾ ಕೊಟ್ಟು ಮೇಲ್ಕಂಡ ಕೃತ್ಯವನ್ನು ನಿಲ್ಲಿಸಿ ಪುಣ್ಯಭಾಗಿಗಳಾಗಬೇಕಾಗಿ ವಿನಂತಿ. ಕಳೆದ ಮಾರೀ ಜಾತ್ರೆಗಳ ಸಮಯದಲ್ಲಿ ಸಂಸ್ಥಾನಾದ್ಯಂತ ಸುಮಾರು ಪ್ರತಿನ್ನಾರು ಸಾವಿರ ಕೋಣಗಳು ಬಲಿ ...ವೆ. ಶೇಕಡ ೮೦ ರಷ್ಟು ಜನರು ಪ್ರಾಣಿ ಬಲಿ ನಿಲ್ಲಿಸಿ, ಶ್ರೀ ಅಮ್ಮನವರ ಹೆಸರಿನಲ್ಲಿ ಅನ್ನದಾನ, ವಸ್ತ್ರದಾನ, ಫಲದಾನ ಇತ್ಯಾದಿಗಳನ್ನು ದಾನಮಾಡುತ್ತಿದ್ದಾರೆ.

ಬಿ ಎಂ. ಎ ಖಾದರ್, ಬೆಂಗ್ಳೂರು

ಮೈಸೂರಿಗೆ ಅದ್ಭುತ ವಿಜಯ

ಸಂತೋಷ್ ಟ್ರೋಫಿಯ ಸೆಮಿ-ಫೈನಲ್ ಪಂದ್ಯದಲ್ಲಿ ಮೈಸೂರಿನವರು ಡೆಲ್ಲಿಯವರನ್ನು ೫-೨ ಗೋಲುಗಳಿಂದ ಸೋಲಿಸಿದರು. ಹೈದರಾಬಾದಿನವರು ಮದ್ರಾಸಿನವರನ್ನು ೩ ಗೋಲುಗಳಿಂದ ಸೋಲಿಸಿದ್ದಾರೆ. ಹೈದರಾಬಾದಿನವರು ಬಂಗಾಳದವರೊಡನೆ ಸೆಮಿಫೈನಲ್‌ನಲ್ಲಿ ಆಡಲಿರುವರು.

ಆರ್. ಎಸ್. ಪಂಡಿತರ
ನಾಯಿಕೆಮ್ಮಿನ ಔಷಧಿ
7-8 ದಿವಸಗಳಲ್ಲೇ ವಾಸಿಯಾಗುತ್ತೆ.
ಕ್ರಯ ಬಾಟ್ಲಿಗೆ 1-8-0
ಗೂರ್ಲು—ಉಬ್ಬಸಕ್ಕೆ
(Asthma)
ಖಾತರಿಯಾದ ಔಷಧಿ ದೊರೆಯುತ್ತೆ. ಅನೇಕ ದೊಡ್ಡ ಮನುಷ್ಯರು ಬಂಗಾರದ ಪದಕ ಮತ್ತು ಸರ್ಟಿಫಿಕೇಟ್‌ಗಳನ್ನು ಕೊಟ್ಟಿದ್ದಾರೆ.
Appendecitis) ಗುಲ್ಮ ... ಮತ್ತು (Tonsils) ಗಲಾಯಿಲ್ ಅವುಗಳನ್ನು ಆಪರೇಷನ್ ಇಲ್ಲದೆ ಗುಣಪಡಿಸುತ್ತೆ ಖುದ್ದು ಬಂದು ನೋಡಿ.
ಗುಂಡ್ಲುಪೇಟೆ ಆರ್. ಎಸ್. ಪಂಡಿತರು
ದಿವಾನ್ಸ್‌ರೋಡ್, ಗೊಲ್ಲಗೇರಿ ಮೈಸೂರು

ರಾಜ್‌ಕಮಲ್, ಮೈಸೂರು.
27-12-46 ರಿಂದ ಪ್ರತಿ ದಿನ ೩ ಆಟಗಳು
ರಾಮರಾಜ್ಯದ ಮಧುರ ಗಾಯಕಿ ರಂಜನಾ ನಟಿಸಿರುವ
ಪ್ರಕಾಶ್ ಪಿಕ್ಚರ್ಸ್‌ರವರ ಅತ್ಯಂತ ಅಮೋಘವಾದ
ಹಮಾರಾ ಸಂಸಾರ್
ಭೂಮಿಕೆ:- ಉಷಾ ಕಿರಣ್, ಚಿಲ್ಲಾ ಮುಂತಾದವರು
From 27-12-46 for 7 days, Daily at 10-30 a.m.
Alexander Korda's "Elephant Boy"
With:— Mysore Sabu and others.

ಅಪೆರಾ ಟಾಕೀಸ್
ನಾರದ-ನಾರದಿ
(ತೆಲುಗು ಭಾಷೆ)
27-12-46ರಿಂದ ಎರಡನೇ ವಾರ
Next Change
The Great Magician
With
Bela Lugosi, Maria Albe.
Lucian Preijal.

Edited, printed and published by A. R. Nagarajan at the Sadhvi Press D Subbiah Road, Mysore.